



ನಂದನವನ

(ಮಲ್ಲಾಡಿಹಳ್ಳಿಯ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳ
ಅಭಿನಂದನಾ ಗ್ರಂಥ)

ಪ್ರಧಾನ ಸಂಪಾದಕರು

ಪ್ರೊ. ತ. ಸು. ಶಾಮರಾಯ, ಎಂ. ಎ.

ಸಂಪಾದಕರು

ಪ್ರೊ. ರಾ. ಸತ್ಯನಾರಾಯಣ
ಟಿ. ಎಸ್. ರಾಮಚಂದ್ರಮೂರ್ತಿ

ಶ್ರೀ ಶ್ರೀ ರಾಘವೇಂದ್ರಸ್ವಾಮಿಗಳವರ ಅಭಿನಂದನಾ ಸಮಿತಿ

NANDANAVANA—Sri Sri Raghavendraswamiji Felicitation volume, Published by Bala Belaku Sahitya Male on behalf of Sri Sri Raghavendraswamiji felicitation Committee.

ಪ್ರಥಮ ಮುದ್ರಣ—1978

ಅಧಿಕೃತ ಮಾರಾಟಗಾರರು

ಬಾಳಬೆಳಕು ಸಾಹಿತ್ಯ ಮಾಲೆ
ಅನಾಥಸೇವಾಶ್ರಮ ವಿಶ್ವಸ್ತ ಸಮಿತಿ
ಮಲ್ಲಾಡಿಹಳ್ಳಿ

ಬೆಲೆ : ಅರವತ್ತು ರೂಪಾಯಿಗಳು

ಮುದ್ರಕರು
ಶ್ರೀ ಸದ್ಗುರು ಪ್ರಿಂಟರ್ಸ್, ರಾಮಾನುಜ ರಸ್ತೆ, ಮೈಸೂರು–570 004

ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳ ಅಭಿನಂದನಾ ಸಮಿತಿ

ಅಧ್ಯಕ್ಷರು : ಶ್ರೀ ಶ್ರೀ ಸೂರುದಾಸಜೀ
ಅನಾಥಸೇವಾಶ್ರಮದ ಸ್ಥಾಪಕ ಕಾರ್ಯದರ್ಶಿಗಳು

ಮಹಾಪೋಷಕರು : ಸನ್ಮಾನ್ಯ ಶ್ರೀ ಡಿ. ದೇವರಾಜ ಅರಸು
ಕರ್ಣಾಟಕದ ಮುಖ್ಯ ಮಂತ್ರಿಗಳು

ಪೋಷಕರು : ಸನ್ಮಾನ್ಯ ಶ್ರೀ ಕೆ. ಎಚ್. ರಂಗನಾಥ್
ಕರ್ಣಾಟಕದ ವ್ಯವಸಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ಪ್ರಧಾನ ಸಂಪಾದಕರು : ಪ್ರೊ. ತ. ಸು. ಶಾಮರಾಯ

ಸಂಪಾದಕರು : ಪ್ರೊ. ರಾ. ಸತ್ಯನಾರಾಯಣ
ಶ್ರೀ ಟಿ. ಎಸ್. ರಾಮಚಂದ್ರಮೂರ್ತಿ

ಸಂಪಾದಕ-ಮಂಡಲಿಯ ಸದಸ್ಯರು : ಶ್ರೀ ದೇಶನಹಳ್ಳಿ ಜಿ. ನಾರಾಯಣ
ಡಾ. ಜಿ. ಎಸ್. ಶಿವರುದ್ರಪ್ಪ
ಡಾ. ಹಾ. ಮಾ. ನಾಯಕ್
ಶ್ರೀ ಸುಬ್ರಹ್ಮಣ್ಯರಾಜೇ ಅರಸು (ಚದುರಂಗ)
ಪ್ರೊ. ಎಸ್. ಕೆ. ರಾಮಚಂದ್ರರಾವ್
ಶ್ರೀ ಬಿ. ವಿ. ವೈಕುಂಠರಾಜು

ಸ್ವಾಗತ ಸಮಿತಿ

ಅಧ್ಯಕ್ಷರು : ಡಾ. ಕೆ. ಎಸ್. ರಾಮೇಗೌಡ

ಉಪಾಧ್ಯಕ್ಷರು : ಶ್ರೀ ಗಂಜಾಂ ಎಸ್. ಭೀಮಾಜಿ

ಕಾರ್ಯದರ್ಶಿ : ಶ್ರೀ ಕೆ. ಅನಂತನಾಗರಾಜ್

ಸದಸ್ಯರು : ಶ್ರೀ ವೈ. ವಿ. ತಿಮ್ಮಯ್ಯ
ಶ್ರೀ ಎಂ. ಸಿ. ರಾಮಯ್ಯ ಶೆಟ್ಟಿ
ಶ್ರೀ ಡಿ. ಹನುಮಂತಪ್ಪ
ಶ್ರೀ ಎನ್. ಡಿ. ಹನುಮಂತರಾಯಪ್ಪ
ಶ್ರೀ ಪುಟ್ಟಣ್ಣ ಶೆಟ್ಟಿ
ಶ್ರೀ ವೈ. ವಿ. ವೆಂಕಟಪ್ಪ

ವಿಶೇಷ ಆಹ್ವಾನಿತರು : ಶ್ರೀ ಶ್ರೀ ಸೂರುದಾಸಜೀ
ಶ್ರೀ ಆರ್. ವಿ. ಸದಾಶಿವಮೂರ್ತಿ
ಶ್ರೀ ಎಸ್. ಸಿ. ಬೋರೇಗೌಡ



ಆತ್ಮವಿದ್ಯೆ: ಸ್ವಾಮೀ ನಿತ್ಯಾನಂದರಲ್ಲಿ



ಅಂಗವಿದ್ಯೆ—ಯೋಗವಿದ್ಯೆ: ಪಳನೀ ಸ್ವಾಮಿಗಳಲ್ಲಿ



ಯೋಗಮಾರ್ಗ—ಮೋಕ್ಷಮಾರ್ಗ :
ವರೂಥದ ಸ್ವಾಮೀ ಶಿವಾನಂದರಲ್ಲಿ



ಮಲ್ಲವಿದ್ಯೆ: ಬರೋಡದ ರಾಜರತ್ನ
ಪ್ರೊ. ಮಾಣಿಕ್ಯರಾಯರಲ್ಲಿ




ಶ್ರೀ ಶ್ರೀ ಸೂರುದಾಸಜೀ : ಅನಾಥಸೇವಾಶ್ರಮದ
ಸ್ಥಾಪಕ ಕಾರ್ಯದರ್ಶಿಗಳು (ಅಧ್ಯಕ್ಷರು)




ಸನ್ಮಾನ್ಯ ಶ್ರೀ ಡಿ. ದೇವರಾಜ ಅರಸುರವರು
ಕರ್ನಾಟಕದ ಮುಖ್ಯ ಮಂತ್ರಿಗಳು (ಮಹಾಪೋಷಕರು)



ಸನ್ಮಾನ್ಯ ಶ್ರೀ ಕೆ. ಎಚ್. ರಂಗನಾಥ್‌ರವರು
ಕರ್ನಾಟಕದ ವ್ಯವಸಾಯ ಮತ್ತು ಸಂಸದೀಯ
ವ್ಯವಹಾರಗಳ ಸಚಿವರು, (ಪೋಷಕರು)



ಪ್ರೊ. ತ. ಸು. ಶಾಮರಾಯರು
ಪ್ರಧಾನ ಸಂಪಾದಕರು



ಸಂಗೀತಶಾಸ್ತ್ರಸರಸ್ವತಿ, ಸಂಗೀತಸುಧಾಕರ
ಪ್ರೊ. ರಾ. ಸತ್ಯನಾರಾಯಣ, ಸಂಪಾದಕರು



ಶ್ರೀ ಟಿ. ಎಸ್. ರಾಮಚಂದ್ರಮೂರ್ತಿ
ಸಂಪಾದಕರು



ಶ್ರೀ ದೇಶನಹಳ್ಳಿ ಜಿ. ನಾರಾಯಣ
ಸಂಪಾದಕಮಂಡಲಿಯ ಸದಸ್ಯರು



ಡಾ. ಹಾ. ಮಾ. ನಾಯಕ
ಸಂಪಾದಕಮಂಡಲಿಯ ಸದಸ್ಯರು



ಶ್ರೀ ಸುಬ್ರಹ್ಮಣ್ಯರಾಜ ಅರಸ್ (ಚದುರಂಗ)
ಸಂಪಾದಕಮಂಡಲಿಯ ಸದಸ್ಯರು



ವಿದ್ಯಾಲಂಕಾರ ಪ್ರೊ. ಎಸ್. ಕೆ. ರಾಮಚಂದ್ರರಾವ್
ಸಂಪಾದಕಮಂಡಲಿಯ ಸದಸ್ಯರು



ಡಾ. ಜಿ. ಎಸ್. ಶಿವರುದ್ರಪ್ಪ
ಸಂಪಾದಕಮಂಡಲಿಯ ಸದಸ್ಯರು



ಶ್ರೀ ಬಿ. ವಿ. ವೈಕುಂಠರಾಜು
ಸಂಪಾದಕಮಂಡಲಿಯ ಸದಸ್ಯರು

ನಿವೇದನ

ಶ್ರೀರಾಮಚಂದ್ರನ ಪದಕಮಲ ಸೋಂಕುತ್ತಲೆ ಗೌತಮಾಶ್ರಮದ ಕಲ್ಲರಳಿ ಕೋಮಲೆಯ ಆಕಾರವನ್ನು ತಳೆಯಿತಂತೆ! ಅದು ತ್ರೇತೆಯ ಕಥೆ. ಇದೇ ಬಗೆಯ ಒಂದು ಪವಾಡ ನಮ್ಮ ಕಲಿಯುಗದಲ್ಲಿ, ಅದರಲ್ಲಿಯೂ ನಮ್ಮ ಕನ್ನಡನಾಡಿನ ನೆಲದ ಮೇಲೆ, ಈಗ ಮುಪ್ಪತ್ತೈದು ವರ್ಷಗಳ ಕೆಳಗೆ ನಡೆದುದನ್ನು ನೆನೆಯುವುದು ನಮಗೊಂದು ಹೆಮ್ಮೆ. ಕಲ್ಲಾಗಿದ್ದ ಅಹಲ್ಯೆಯನ್ನು ಶಾಪದಿಂದ ಉದ್ಧರಿಸಿದ ರಾಮಚಂದ್ರನು ಸಾಕ್ಷಾತ್ ಮಹಾವಿಷ್ಣುವಿನ ಅಂಶಸಂಭೂತ. ಆದರೆ ನಮ್ಮ ಕಾಲದಲ್ಲಿ, ನಮ್ಮ ದೇಶದಲ್ಲಿ ಅಂತಹುದೇ—ಅಥವಾ ಅದಕ್ಕಿಂತಲೂ ಹೆಚ್ಚು ಸಹಜವಾದ—ಒಂದು ಪವಾಡವನ್ನು ಮೆರೆದ ಮಹಾನುಭಾವ ನಮ್ಮಂತೆಯೆ ಒಬ್ಬ ಶ್ರೀಸಾಮಾನ್ಯ. ಯಾವ ಮಹಾಪುರುಷನ ಅಭಿಶಾಪದಿಂದಲೊ, ಶತ ಶತಮಾನಗಳಿಂದ ಸಕಲ ತಾಮಸಗುಣಗಳಿಗೂ ನೆಲೆವನೆಯೆನಿಸಿದ್ದ ಒಂದು ಕುಗ್ರಾಮ—ಮಲ್ಲಾಡಿಹಳ್ಳಿ—ಈಗ ಮುಪ್ಪತ್ತೈದು ವರ್ಷಗಳ ಕೆಳಗೆ ಶ್ರೀ ರಾಘವೇಂದ್ರಸ್ವಾಮಿಜಿಯವರ ಸಿರಿಯಡಿಗಳ ಸೋಂಕಿನಿಂದ ನಂದನವನದಂತಹ ಸುಂದರ ತಾಣವಾಯಿತು. ಅಲ್ಲಿ ಅವರು ಸ್ಥಾಪಿಸಿದ 'ಅನಾಥಸೇವಾಶ್ರಮ' ಸತ್ವ ಗುಣಪ್ರಧಾನವಾದ ಪವಿತ್ರಕ್ಷೇತ್ರವಾಯಿತು. ಅಹಲ್ಯೆಯ ಉದ್ಧಾರಕರ್ತೃ ದಿವದಿಂದ ಬುವಿಗೆ ಇಳಿತಂದ ದೇವದೇವ. ಆದರೆ ಅನಾಥಸೇವಾಶ್ರಮದ ಸೃಷ್ಟಿಕರ್ತ ತನ್ನ ಮಹತ್ಕಾರ್ಯದ ಸೋಪಾನಗಳಿಂದ ದಿವ್ಯತ್ವವನ್ನು ಸಾಧಿಸಿದ ದೇವಮಾನವ. ಕಳೆದ ಅರ್ಧ ಶತಮಾನದಿಂದ ಕನ್ನಡನಾಡಿನ ನೆಲದ ಮೇಲೆ ಬೆಳೆಬೆಳೆದು, ಮಹಾ ವಟವೃಕ್ಷದಂತೆ ಎತ್ತರ ಬಿತ್ತರಗಳನ್ನು ಸಾಧಿಸಿರುವ ಆತನ ವ್ಯಕ್ತಿತ್ವ ಕನ್ನಡ ಕುಲಕೋಟಿಗೆ ಒಂದು ಹಿರಿಯ ಆಶ್ರಯಸ್ಥಾನವಾಗಿದೆ. ಅದರ ತಂಪು ನೆರಳಿನಲ್ಲಿ ವಿಶ್ರಾಂತಿ ಸುಖವನ್ನು ಕಂಡುಕೊಂಡಿರುವ ಸಜ್ಜನ ಸಮುದಾಯ ಸಂಭಾವನಾಗ್ರಂಥ ರೂಪದ ಈ ಭಕ್ತಿ ಕುಸುಮಾಂಜಲಿ, ನಂದನವನವನ್ನು, ಶ್ರೀಯವರಿಗೆ ಅರ್ಪಿಸಲು ಬಯಸುತ್ತಿದೆ. ಅವರೆಲ್ಲರ ಪರವಾಗಿ ಶ್ರೀ ಶ್ರೀಯವರನ್ನು ನಮಿಸಿ (ಶ್ರೀ ಕುವೆಂಪುರವರ ಕ್ಷಮೆಯನ್ನು ಯಾಚಿಸುತ್ತಾ)

> 'ಇದೊ ಮುಗಿಸಿ ತಂದಿಹೆನ್ ಈ ಬೃಹದ್ ಗ್ರಂಥಮಂ
> ನಿಮ್ಮ ಸಿರಿಯಡಿಗೊಪ್ಪಿಸಲ್ಕೆ ಓ ಪ್ರಿಯ ಗುರುವೆ
> ಕರುಣಿಸಿಂ ನಿಮ್ಮ ಹರಕೆಯ ಬಲದ ಶಿಷ್ಯನಂ'

ಎಂದು ಅತಿ ವಿನಯ ವಿನಮ್ರತೆಯಿಂದ ಪ್ರಾರ್ಥಿಸಿ ಅವರ ಪದತಲದಲ್ಲಿ ಅರ್ಪಿಸುತ್ತಿದ್ದೇನೆ. ಈ ಸಂದರ್ಭದಲ್ಲಿ ಅಪ್ರಸ್ತುತವಾದರೂ ಒಂದು ಮಾತನ್ನು ಹೇಳುವುದು ಸೂಕ್ತವೆನಿಸುತ್ತದೆ. ಶ್ರೀ ರಾಘವೇಂದ್ರಸ್ವಾಮಿಜಿಯವರು ಸ್ವಭಾವತಃ ಬಿರುದು ಬಾವಲಿಗಳ ವಿರೋಧಿಗಳು; ಮನ್ನಣೆ ಸನ್ಮಾನಗಳನ್ನು ಮೈಲಿಗಳಾಚೆ ಇಟ್ಟಿರುವವರು. ಸರ್ಕಾರದವರು ಸ್ವಪ್ರೇರಣೆಯಿಂದ ನೀಡಿದ ಪ್ರಶಸ್ತಿಯನ್ನು ಒರ್ಮೆಯಲ್ಲ, ಇರ್ಮೆಯಲ್ಲ; ಐದುಬಾರಿ ನಿರ್ದಾಕ್ಷಿಣ್ಯವಾಗಿ ನಿರಾಕರಿಸಿದವರು. ಈ ನಿರ್ಭಯ, ನಿರಾಡಂಬರ, ನಿಸ್ವಾರ್ಥದ ಮೂರ್ತಿಯನ್ನು— ಈ ನಿರಂಕುಶಮತಿಯನ್ನು—ಈ ಸಂಭಾವನಾಗ್ರಂಥದ ಸ್ವೀಕರಣಕ್ಕೆ ಒಪ್ಪಿಸಿದುದು ಸಂಪಾದಕ ಸಮಿತಿಯ ಒಂದು ಮಹಾ ಸಾಹಸ ಮತ್ತು ಸಾಧನೆಯೆಂದು ಹೇಳಿದರೆ ತಪ್ಪಾಗದು. ಇದಕ್ಕಾಗಿ ಸಮಿತಿ ತನಗೆ ತಾನೆ ಅಭಿನಂದಿಸಿಕೊಂಡರೂ ಅನ್ಯಾಯವೇನೂ ಅಲ್ಲ.

ಭರತಖಂಡದ ಈ ನಮ್ಮ ಪುಣ್ಯಭೂಮಿಯಲ್ಲಿ ಆಶ್ರಮ, ಮಠಗಳಿಗಾಗಲಿ ಸ್ವಾಮಿ, ಗುರುಗಳಿಗಾಗಲಿ ಅಭಾವವೇನೂ ಇಲ್ಲ. ಇಲ್ಲಿ ಸುಮಾರು ಐವತ್ತಾರು ಲಕ್ಷ ಸನ್ಯಾಸಿಗಳಿರುವರೆಂದು ಲೆಕ್ಕ ಹಾಕಿದ್ದಾರೆ. ಇವರಲ್ಲಿ ಬಹುಮಂದಿ 'ಉದರ ನಿಮಿತ್ತಂ ಬಹುಕೃತವೇಷಃ' ಧಾರಿಗಳು. ಮಳೆಗಾಲದ ನಾಯಿಕೊಡೆಗಳಂತೆ ನಾಡಿನ ಉದ್ದಗಲಕ್ಕೂ ಹಬ್ಬಿ ಹರಡಿರುವ ಇವರಲ್ಲಿ ಹಲವರು ರಾಜಕಾರಣಿಗಳು, ಮತ್ತೆ ಕೆಲವರು ಜಾತಿವಾದಿಗಳು; ಕಿರೀಟವನ್ನು ಧರಿಸಿ ಸಿಂಹಾಸನವೇರುವ, ಹಣದ ಹೊಳೆ ಹರಿಸುವ; ತಮ್ಮ ಇಂದ್ರಜಾಲದಿಂದ, ಪಂಚರಂಗಿತನದಿಂದ, ಪವಾಡಗಳಿಂದ ಜನಜಂಗುಳಿಯನ್ನು ದಂಗುಬಡಿಸುವ ಜರತಾರಿ ಜಗದ್ಗುರುಗಳೂ ಇದ್ದಾರೆ. ಹುಲುಸಾದ ಈ ಕಳೆಯಿಂದ ನಿಜವಾದ ಸದ್ಗುರುಗಳ ಬೆಳೆ ಮುಚ್ಚಿಹೋಗಿದೆ. ನಾವೀಗ ಈ ಸಂಭಾವನಾ ಗ್ರಂಥವನ್ನು ಅರ್ಪಿಸುತ್ತಿರುವ ಶ್ರೀ ರಾಘವೇಂದ್ರಸ್ವಾಮಿಗಳು ಹೊರನೋಟಕ್ಕೆ ಸ್ವಾಮಿಗಳ ಜಾತಿಗೆ ಸೇರಿದವರೇ ಅಲ್ಲ. ಅಸಲಿಗೆ ಅವರು ಸನ್ಯಾಸಿಯೇ ಅಲ್ಲ, ಕೇವಲ ಬ್ರಹ್ಮಚಾರಿ; ಇವರ ತಲೆ ಬೋಳಲ್ಲ, ಕ್ರಾಪಿದೆ; ಇವರು ಧರಿಸಿರುವುದು ಕಾವಿಯಲ್ಲ, ಶುದ್ಧ ಖಾದಿಯ ಜುಬ್ಬ, ನಿಕ್ಕರು; ಇವರ ತಲೆಯ ಮೇಲೆ ಕಿರೀಟವಾಗಲಿ, ಕೈಲಿ ದಂಡ ಕಮಂಡಲಗಳಾಗಲಿ ಇಲ್ಲ. ಪಾರುಪತ್ತೇಕಾರರ, ಸರ್ವಾಧಿಕಾರಿಗಳ, ಕೈವಾರಿಗಳ ಅಬ್ಬರವಿಲ್ಲ; ಇವರ ಸುತ್ತ ದೀನವದನರಾಗಿ, ಮುಗಿದ ಕೈಗಳಿಂದ, ಹೊಗಳಿಕೆಗೆ ಅವಕಾಶವನ್ನು ಕಾಯುತ್ತಿರುವ ಭಕ್ತ ಸಮೂಹವಿಲ್ಲ. ವೇಷಭೂಷಣಗಳಂತೆ ಇವರ ನಡೆ ನುಡಿಗಳಲ್ಲಿಯೂ ಯಾವ ಕೃತಕತೆಯೂ ಕಾಣುವುದಿಲ್ಲ. ಅವರೂ ನಮ್ಮಂತೆಯೆ ಒಬ್ಬ ಶ್ರೀಸಾಮಾನ್ಯರಾಗಿ ಕಾಣಿಸುತ್ತಾರೆ. ಅನೇಕವೇಳೆ ನಮಗಿಂತಲೂ ಹೆಚ್ಚು ನಮ್ರರಾಗಿ ಕಾಣಿಸುತ್ತಾರೆ. ಮೊದಲ ನೋಟಕ್ಕೆ ಅವರನ್ನು ಸ್ವಾಮಿಗಳೆಂದು ತಿಳಿಯುವುದಿರಲಿ, 'ಸ್ವಾಮಿಗಳು ಎಲ್ಲಿದ್ದಾರೆ?' ಎಂದು ಅವರನ್ನೇ ಕೇಳಿರುವುದೂ ಉಂಟು. ಇನ್ನೂ ಅನೇಕ ವೇಳೆ ಅವರನ್ನು ಆಶ್ರಮದ ಒಬ್ಬ ಸಾಮಾನ್ಯ ಸೇವಕನಂತೆ ಬಳಸಿಕೊಂಡವರೂ ಉಂಟು. (ಸತ್ಯ ಸಂಗತಿ ವೇದ್ಯವಾದಾಗ ಗಲ್ಲಗಲ್ಲ ಬಡಿದುಕೊಂಡುದು ಬೇರೆ ವಿಷಯ)

ಶ್ರೀ ರಾಘವೇಂದ್ರಸ್ವಾಮಿಜಿ ಹೊರನೋಟಕ್ಕೆ ಹಾಗೆ ಕಾಣಿಸಿದರೂ ನಮ್ಮಿಂದ ಸಂಪೂರ್ಣ ಭಿನ್ನರಾದವರು. ಮೊದಲನೆಯದಾಗಿ, ಅವರು ನಮ್ಮಂತೆ ಸ್ವಾರ್ಥಪರರಲ್ಲ. ಅವರಿಗೆ ತಮ್ಮದೆಂದು ಕರೆದುಕೊಳ್ಳಬಹುದಾದ ಯಾವ ವಸ್ತುವೂ ಇಲ್ಲ. ಲೋಕಸೇವೆಯೆ ಅವರ ಜೀವನದ ಹೆಗ್ಗುರಿ; ಅದೇ ಅವರ ಉಸಿರು, ಸಂದೇಶ. ಅವರು ತಮಗೆ 'ತಿರುಕ' ಎಂದು ನೂತನ ನಾಮಕರಣ ಮಾಡಿಕೊಂಡಿದ್ದಾರೆ. ಮಹಾತ್ಮಾ ಗಾಂಧಿ, ಪೂಜ್ಯ ಮದನ ಮೋಹನ ಮಾಳವೀಯ–ಇವರಿಗೂ ಅದೇ ಬಿರುದಿತ್ತು. ಪರಶಿವನ ಪೀಳಿಗೆಗೆ ಸೇರಿದ ಇವರೆಲ್ಲ ಒಂದೇ ಗೋತ್ರಕ್ಕೆ ಸೇರಿದವರು. ಈ ಮೂವರೂ ಕಣಸುಗಾರರೇ. ಮಹಾತ್ಮರಿಗೆ ಸ್ವರಾಜ್ಯದ ಕಣಸು, ಮಾಳವೀಯರಿಗೆ ಕಾಶಿ ವಿಶ್ವವಿದ್ಯಾನಿಲಯದ ಕಣಸು, ರಾಘವೇಂದ್ರರಿಗೆ ಅನಾಥಸೇವಾಶ್ರಮದ ಕಣಸು. ಮೂವರೂ 'ಕೆರೆಯ ನೀರನು ಕೆರೆಗೆ ಚೆಲ್ಲಿ ವರವಪಡೆ'ಯಲು ಹೊರಟ ಕರ್ಮಯೋಗಿಗಳೇ. ಸ್ವಾರ್ಥದ ಲವಲೇಶವೂ ಇಲ್ಲದ ಈ 'ತಿರುಕ ರಾಜ'ರು ಅಕ್ಷಯ ಶಕ್ತಿಯುಳ್ಳ ಭಿಕ್ಷಾಪಾತ್ರೆಯನ್ನು ಹಿಡಿದಿರುವವರು. ಇವರ ತಿರಿಕೆಯು ವಾಮನಕೃತಿ ತ್ರಿವಿಕ್ರಮಕರ್ಮವಾಗಿ, ಜಗತ್ತಿನ ಬೆಕ್ಕಸಕ್ಕೆ ವಸ್ತುವನ್ನು ಒದಗಿಸುತ್ತದೆ. ಹಿಂಸೆ ದ್ವೇಷಗಳ ಸೋಂಕಿಲ್ಲದ ಸೌಹಾರ್ದ ಸಾಮರಸ್ಯಗಳೇ ಇವರ ಬಂಡವಾಳ; ಆತ್ಮಯಜ್ಞದ ಬಲಿದಾನದಿಂದ ಲೋಕ ಕಲ್ಯಾಣದ ಸಿದ್ಧಿಯನ್ನು ಸಾಧಿಸುತ್ತಾರೆ. ಅಗತ್ಯವೆನಿಸಿದಾಗ ಹಾಲಾಹಲವನ್ನು ಕುಡಿದು ಲೋಕಕ್ಕೆ ಅಮೃತವನ್ನು ಹಂಚಬಲ್ಲ ಈ ನೂತನ ನೀಲಕಂಠರು ಸಿಂಧುವಿನಲ್ಲಿ ಬಿಂದುವಾಗಬಯಸುವವರು. ಇಂದ್ರಿಯ ಮನಸ್ಸು ಬುದ್ಧಿಗಳ ಮೇಲೆ ಒಡೆತನವನ್ನು ಸ್ಥಾಪಿಸಿಕೊಂಡಿರುವ ಇಂತಹ ಉದಾರಚೇತನರೇ ನಿಜವಾದ ಗುರುಗಳು, ಲೋಕ ಗುರುಗಳು.

ಇಂದು ಕರ್ನಾಟಕದ ಉದ್ದಗಲಕ್ಕೂ ಜನಜನಿತವಾಗಿ ಮನೆ ಮಾತಾಗಿರುವ ಶ್ರೀ ರಾಘವೇಂದ್ರಸ್ವಾಮಿಜಿ ಈಗ ಸುಮಾರು ಅರ್ಧಶತಮಾನದ ಕೆಳಗೆ (೧೯೩೪–೩೫) ಇದ್ದಕ್ಕಿದ್ದಂತೆ ಆಕಾಶದಿಂದ ಉದುರಿಬಿದ್ದ ಹಾಗೆ ಕನ್ನಡ ನಾಡಿನ ನೆಲದ ಮೇಲೆ ಕಾಣಿಸಿಕೊಂಡರು. ಅಂದು ಅವರು ಮಹಾತ್ಮಾ ಗಾಂಧೀಜಿಯವರ ಸ್ವಾತಂತ್ರ್ಯಸಮರದ

ಒಬ್ಬ ಸೇನಾನಿಯಾಗಿದ್ದರು. ರಾಷ್ಟ್ರದ ಯುವ ಜನಾಂಗಕ್ಕೆ ದೈಹಿಕ ಶಿಕ್ಷಣವನ್ನು ನೀಡಿ, ಅವರ ಬಿಸಿನೆತ್ತರಿನಲ್ಲಿ ರಾಷ್ಟ್ರಪ್ರೇಮದ ನವ ಚೈತನ್ಯವನ್ನು ಹರಿಸುವ ಪವಿತ್ರ ಕಾಯಕ ಅವರದು. ಅಂದು ಅವರೊಬ್ಬ 'ವ್ಯಾಯಾಮ ಮಾಸ್ತರ'. ಅವರು ತಮ್ಮ ಸೇವಾಚಕ್ರವನ್ನು ಮೊಟ್ಟಮೊದಲು ಹರಿಯಬಿಟ್ಟುದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ. ಅಲ್ಲಿಂದ ಮುಂದೆ ಸುಮಾರು ಎಂಟು ವರ್ಷಗಳಷ್ಟು ದೀರ್ಘಕಾಲ ಅವರು ತಮ್ಮ ಬಾಳನ್ನು ಈ ರಾಷ್ಟ್ರಸೇವೆಗಾಗಿ ಮೀಸಲಾಗಿಟ್ಟರು. ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳು ಅವರ ಕಾರ್ಯರಂಗ ವಾಗಿದ್ದವು. ಸ್ವೇಚ್ಛೆಯಿಂದ ಸೇವಾದೀಕ್ಷೆಯನ್ನು ಕೈಕೊಂಡಿದ್ದ ಈ ಸಿಡಿಲಮರಿ ಹಾದಿಕೊಂಡೊಯ್ದ ಹಳ್ಳಿ ಯೊಂದಕ್ಕೆ ಹೋಗಿ ಅಲ್ಲಿನ ಹಿರಿಯರಲ್ಲಿ ದೇಶಪ್ರೇಮದ ಬೀಜವನ್ನು ಬಿತ್ತುವರು ; ಅಲ್ಲಿನ ಶಾಲಾ ಉಪಾಧ್ಯಾಯರ ಗೆಳೆತನವನ್ನು ಬೆಳಸುವರು. ಅವರುಗಳ ಸಹಾಯ ಸಹಕಾರಗಳೊಡನೆ ತಮ್ಮ ವ್ಯಾಯಾಮ ಪ್ರದರ್ಶನವೊಂದನ್ನು ಏರ್ಪಡಿಸುವರು. ಹೊರನೋಟಕ್ಕೆ ಕೇವಲ ಸಾಮಾನ್ಯನಂತೆ ಕಾಣಿಸುತ್ತಿದ್ದ ಈ ವ್ಯಕ್ತಿ ಕಾಚವನ್ನು ಕಟ್ಟಿ ಕಣಕ್ಕಿಳಿದವರೇ ಒಮ್ಮೆ ಮೈಕೈಗಳನ್ನು ಕೊಡವಿ 'ಜೈ ಮಾರುತಿ ! ಜೈ ಬಲಭೀಮ' ಎಂಬ ಅಬ್ಬರದೊಡನೆ ಮಾಂಸಖಂಡಗಳನ್ನು ಉಬ್ಬಿಸಹೊರಟರೆಂದರೆ ಸಾಕ್ಷಾತ್ ಮಾರುತಿ ಅಥವಾ ಬಲಭೀಮನೇ ಅಲ್ಲಿ ಪ್ರತ್ಯಕ್ಷ ವಾದಂತೆ ಭಾಸವಾಗುವುದು. ದಂಗು ಬಡಿದ ಜನ ಉಸಿರುಕಟ್ಟಿ ನೋಡುತ್ತಿರುವಂತೆಯೆ ಹಲವರು ಉರುಳಿಸಿ ಕೊಂಡು ಬಂದ ರಸ್ತೆಯ ರೋಣಗಲ್ಲನ್ನು ತಮ್ಮ ಎದೆಯ ಮೇಲೆ ಉರುಳಿಸಿಕೊಳ್ಳುವರು ; ಅದು ಎದೆಯಮೇಲೆ ಕುಳಿತಿರುವಂತೆಯೆ ದೇಹವನ್ನು ಬಿಲ್ಲಿನಂತೆ ಬಾಗಿಸಿ ಮೇಲಕ್ಕೆದ್ದು, ಆ ರೋಣುಗಲ್ಲನ್ನು ಕೆಳಕ್ಕೆ ಕೊಡಹುವರು ; ಭಾರಿಯ ಕಲ್ಲುಗುಂಡಿಗೆ ಹಗ್ಗವನ್ನು ಕಟ್ಟಿ, ಹಲ್ಲಿನಿಂದ ಅದನ್ನು ಕಚ್ಚಿ ದೂರಕ್ಕೆ ಎಸೆಯುವರು ; ಎದೆಯ ಮೇಲೆ ಆನೆಯನ್ನು ನಿಲ್ಲಿಸಿಕೊಳ್ಳುವರು ; ಕೈಯಿಂದ ಲಾರಿಯನ್ನು ದರದರ ಎಳೆದುಕೊಂಡು ಹೋಗುವರು ; ಸುತ್ತಲೂ ಹತ್ತು ಜನ ನಿಂತು ಏಕಕಾಲದಲ್ಲಿ ತನ್ನತ್ತ ಕಲ್ಲುಗಳ ಮಳೆ ಸುರಿಸುತ್ತಿರಲು, ಪ್ರತಿಯೊಂದು ಏಟೂ ಎಸೆದವರತ್ತ ಹೋಗುವಂತೆ ಲಾಠಿಯನ್ನು ತಿರುಗಿಸುವರು. ಅಸಾಧಾರಣವಾದ ಆತನ ದೈಹಿಕ ಶಕ್ತಿ ಕೈ ಚಳಕಗಳನ್ನು ಕಂಡು ಬೆಕ್ಕಸ ಬೆರಗಾದ ತರುಣವೃಂದ ಅವನ್ನು ತಮಗೂ ಕಲಿಸುವಂತೆ ಪ್ರಾರ್ಥಿಸುವರು. ಅದಕ್ಕಾಗಿಯೆ ಬಂದಿರುವ ಈ ಯುವಕ, ತನ್ನ ರೊಟ್ಟಿ ಜಾರಿ ತುಪ್ಪದಲ್ಲಿ ಬಿದ್ದುದನ್ನು ಕಂಡು, ಅತ್ಯಂತ ಸಂತೋಷದಿಂದ ತಮ್ಮ ಶಿಕ್ಷಣ ಶಿಬಿರವನ್ನು ಪ್ರಾರಂಭಿಸುವರು.

ಅಂದು 'ವ್ಯಾಯಾಮ ಮಾಸ್ತರ' ನಡೆಸುತ್ತಿದ್ದ 'ವ್ಯಾಯಾಮಶಿಬಿರ'ಗಳ ಇತಿಹಾಸ ಸಾಕಷ್ಟು ರೋಮಾಂಚಕಾರಿಯಾಗಿದೆ. ಶ್ರೀ ಚಡ್ಡಿಬಾಬು–ಅಂದು ಶ್ರೀರಾಘವೇಂದ್ರ ಸ್ವಾಮಿಯವರಿಗೆ ಜನರಿಟ್ಟ ಹೆಸರು–ಬೆಳಗಿನ ನಾಲ್ಕು ಗಂಟೆಗೆ ಸೀಟಿಯನ್ನು ಊದುತ್ತಾ ಊರೊಳಗೆ ನಡೆದು ಶಿಬಿರದ ತಾಣವನ್ನು ಸೇರು ವರು. ಆ ವೇಳೆಗೆ ಯುವಕ–ಯುವತಿಯರ ತಂಡ ಮೈಕೊಡವಿಕೊಂಡು ಮೇಲಕ್ಕೆದ್ದು, ಮುಖ ತೊಳೆದು, ಶಿಬಿರದ ಬಳಿಗೆ ಧಾವಿಸುವರು. 'ಮನೋಜವಂ ಮಾರುತತುಲ್ಯವೇಗಂ' ಎಂಬ ಪ್ರಾರ್ಥನೆಯೊಡನೆ ಶಿಬಿರದ ಕಾರ್ಯ ಪ್ರಾರಂಭವಾಗುತ್ತಿತ್ತು. ಬಾಬುರವರ ಶಿಕ್ಷಣವೆಂದರೆ ಕೇವಲ ದೈಹಿಕ ಶಿಕ್ಷಣ ಮಾತ್ರವೇ ಅಲ್ಲ, ಮಾನಸಿಕ ಮತ್ತು ಆಧ್ಯಾತ್ಮಿಕ ಬೆಳವಣಿಗೆಗೂ ಅಲ್ಲಿ ಅವಕಾಶವಿತ್ತು. ಲಾಠಿ ತಿರುಗಿಸುವುದು, ಕುಸ್ತಿಮಾಡಿಸು ವುದು, ಕತ್ತಿ ಬಾಕು ಭರ್ಚಿಗಳ ಸಮರವಿದ್ಯೆಯನ್ನು ಹೇಳಿಕೊಡುವುದು–ಇವುಗಳಿಂದ ಅಭ್ಯರ್ಥಿಯನ್ನು ನಲವತ್ತು ದಿನಗಳೊಳಗಾಗಿ ಶಿಸ್ತಿನ ಸಿಪಾಯಿಯನ್ನಾಗಿ ಸಜ್ಜುಗೊಳಿಸುತ್ತಿದ್ದುದರ ಜೊತೆಜೊತೆಯಲ್ಲಿಯೆ ಅವನ ನಡತೆಯನ್ನು ತಿದ್ದಿ ಉತ್ತಮ ಪೌರನನ್ನಾಗಿ ರೂಪಿಸುವ ಕಾರ್ಯವೂ ನಡೆಯುತ್ತಿತ್ತು. ಅಷ್ಟೇ ಅಲ್ಲ ; ಆಸನ, ಪ್ರಾಣಾಯಾಮಗಳನ್ನು ಕಲಿಸಿ ಅವನ ಆಧ್ಯಾತ್ಮ ಉನ್ನತಿಯನ್ನೂ ಸಾಧಿಸುತ್ತಿದ್ದರು. ಶಿಬಿರ ಮುಗಿಯುವಷ್ಟರಲ್ಲಿ ತರಬಿಯತ್ತನ್ನು ಪಡೆದ ತರುಣಜನಾಂಗ ಉತ್ಸಾಹದ ಬುಗ್ಗೆಯಾಗುವುದು. ಕಡೆಯ ದಿನ ಆ ಯುವಕ–ಯುವತಿ ಯರ ಶಕ್ತಿ ಪ್ರದರ್ಶನ ನಡೆಯುವುದು. ಅದನ್ನು ಕಂಡ ಊರ ಜನರ ಹೃದಯ ಉಕ್ಕೇರುವುದು. ಆ

ಪ್ರದರ್ಶನವನ್ನು ನೋಡಲೆಂದು ಸುತ್ತುಮುತ್ತಿನ ಹತ್ತಾರು ಊರುಗಳಿಂದ ಬಂದ ಜನರ ಜಾತ್ರೆಯೇ ಅಲ್ಲಿ ನೆರೆಯುವುದು. ಆ ಜನ ತಮ್ಮ ಊರಿನಲ್ಲಿಯೂ ಅಂತಹ ಶಿಬಿರವೊಂದನ್ನು ಏರ್ಪಡಿಸುವಂತೆ ಚಿಕ್ಕಿಬಾಬುರವರನ್ನು ಪ್ರಾರ್ಥಿಸುವರು. ಮರುದಿನದಿಂದ ಅಲ್ಲಿ 'ವ್ಯಾಯಾಮಶಿಬಿರ'. ಚಿಕ್ಕಿಬಾಬುವಿನ ಕೀರ್ತಿಯಿಂದ ಕಸಿವಿಸಿಗೊಂಡ ಪೈಲ್ವಾನರನೇಕರು ಆತನನ್ನು ಕೆಣಕಲೆಂದು ಬಂದು, ಆತನ ಶಕ್ತಿಪ್ರದರ್ಶನವನ್ನು ಕಂಡಮೇಲೆ ಹೇಳದೆ ಕೇಳದೆ ಪಲಾಯನ ಮಂತ್ರವನ್ನು ಪಠಿಸಿದುದೂ ಉಂಟು. ಇಂದು ಎಂಬತ್ತಾರರ ಹರೆಯದಲ್ಲಿರುವ ಶ್ರೀ ರಾಘವೇಂದ್ರ ಸ್ವಾಮಿಜಿಯವರಲ್ಲಿಯೂ ಅಂದಿನ ಉಕ್ಕಿನಂತಹ ನರಮಂಡಲ, ಕಬ್ಬಿಣದಂತಹ ಮಾಂಸಖಂಡಗಳು ಅಚ್ಚಳಿಯದೆ ಉಳಿದುಕೊಂಡು ಬಂದಿರುವುದನ್ನು ಕಾಣಬಹುದು. ಈ 'ವ್ಯಾಯಾಮ ಮಾಸ್ತ'ರು ತಮ್ಮ ಮಾಸ್ತರಗಿರಿಯಿಂದ ವಿರಮಿಸುವಷ್ಟರಲ್ಲಿ 5162 ಜನ ಸ್ವಯಂ ಸೇವಕ-ಸೇವಕಿಯರ ದೊಡ್ಡ ಪಡೆಯನ್ನು ಸಂಘಟಿಸಿ, ಸತ್ಯಾಗ್ರಹದ ರಣಕಣಕ್ಕೆ ಇಳಿಸಿದ್ದರು !

ಕಾಲಚಕ್ರ ಉರುಳಿತು. ಶತಶತಮಾನಗಳಿಂದ ಭಾರತಮಾತೆಯನ್ನು ಬಂಧಿಸಿದ್ದ ದಾಸ್ಯಶೃಂಖಲೆ ಕಡೆಗೊಮ್ಮೆ ಕಳಚಿಬಿತ್ತು. ಅದಕ್ಕಾಗಿ ನಡೆಯುತ್ತಿದ್ದ ಸತ್ಯಾಗ್ರಹ ಸಮರ ಕೊನೆಗೊಂಡಿತು. ರಾಷ್ಟ್ರಪಿತ ಗಾಂಧೀಜಿ ಕಾಂಗ್ರೆಸ್ಸನ್ನು ವಿಸರ್ಜಿಸಿ, ಅದರ ಕಾರ್ಯಕರ್ತರು ದೇಶೋನ್ನತಿಯನ್ನು ಸಾಧಿಸಬಲ್ಲ ರಚನಾತ್ಮಕ ಕಾರ್ಯಕ್ರಮದತ್ತ ತಮ್ಮ ಗಮನವನ್ನು ಹರಿಸುವಂತೆ ಸಂದೇಶವನ್ನು ನೀಡಿದರು. ಆದರೆ ಅವರ ಕರೆಗೆ ಓಗೊಟ್ಟವರು ಎಲ್ಲೋ ಕೆಲವರು ಮಾತ್ರ; ಒಬ್ಬ ವಿನೋಬಭಾವೆ, ಒಬ್ಬ ಜಯಪ್ರಕಾಶನಾರಾಯಣ ಮತ್ತು ಅವರ ಅನುಯಾಯಿಗಳು ಸ್ವಲ್ಪ ಮಂದಿ, ಅಷ್ಟೆ. ಉಳಿದವರೆಲ್ಲ ಹೊಸದಾಗಿ ಬಂದ ಸ್ವಾತಂತ್ರ್ಯದ ಕೊಳ್ಳೆಯನ್ನು ಹಂಚಿಕೊಳ್ಳುವ ರಾಜಕೀಯ ಕಣಕ್ಕೆ ಮುತ್ತಿಗೆ ಹಾಕಿದರು. ಸ್ವಾತಂತ್ರ್ಯ ಸಮರದ ಕಾಲದಲ್ಲಿ ತಳಕ್ಕಿಳಿದು ಕುಳಿತಿದ್ದ ಜಾತೀಯತೆ, ಅಧಿಕಾರಲಾಲಸೆ, ಗುಂಪುಗುಳಿತನ, ಸ್ವಾರ್ಥ, ದುರಾಸೆ-ಇತ್ಯಾದಿ ಸ್ವಾಭಾವಿಕ ಗುಣಗಳು ಈಗ ಪುಟನೆಗೆದು ಮೇಲಕ್ಕೆದ್ದವು. ಬಡ ಎತ್ತುಗಳು ಹುರುಳಿಯ ಹೊಟ್ಟನ್ನು ಕಂಡಾಗ ಧಾವಿಸುವಂತೆ ಈ ರಾಜಕೀಯ ಮುಖಂಡರು ಆಡಳಿತಾಧಿಕಾರದತ್ತ ನುಗ್ಗಿಹೋದರು. ಇಂತಹ ಪರ್ವಕಾಲದಲ್ಲಿ ನಮ್ಮ ವ್ಯಾಯಾಮ ಮಾಸ್ತರು ಮಹಾತ್ಮರ ವಾಣಿಯನ್ನು ಶಿರಸಾಧರಿಸಿ, ಸಮಾಜಸೇವೆಯತ್ತ ತಮ್ಮ ದೃಷ್ಟಿಯನ್ನು ಹೊರಳಿಸಿದರು. ಸನಾತನದೊಡನೆ ಆಧುನಿಕತೆಯನ್ನು ಸಮನ್ವಯಗೊಳಿಸಿ, ಸರ್ವಸಮತೆಯ ವಿಶ್ವಧರ್ಮವನ್ನು ಪುನರುಜ್ಜೀವನಗೊಳಿಸುವಂತಹ ಕಾಯಕಲ್ಪದಿಂದ ನಮ್ಮ ಸಮಾಜಜೀವನವನ್ನು ಸಚೇತನಗೊಳಿಸಬೇಕೆಂದು ಅವರು ನಿಶ್ಚಯಿಸಿದರು. 'ವ್ಯಾಯಾಮ ಮಾಸ್ತರ'ರಾಗಿ ಅವರು ಸಾಧಿಸಿದ್ದ ಲೋಕಸಂಗ್ರಹಕಾರ್ಯವೇನೂ ಸಾಧಾರಣವಾದುದಾಗಿರಲಿಲ್ಲ. ಅವರು ನಾಡಿನ ಜನಜಂಗುಳಿಯಲ್ಲಿ ಸಮರಸವಾಗಿ ಬೆರೆತು ಅವರ ಆತ್ಮೀಯತೆಗೆ ಪಾತ್ರರಾಗಿದ್ದರು. ಅವರಿಗಿದ್ದ ವೈದ್ಯಕೀಯ ಜ್ಞಾನ ಅವರ ಜನಾನುರಾಗವನ್ನು ಇಮ್ಮಡಿಗೊಳಿಸಿತೆಂದು ತೋರುತ್ತದೆ. ಸುತ್ತುಮುತ್ತಿನ ನಾರು ಬೇರು ಗಿಡ ಮೂಲಿಕೆಗಳಿಂದ ಈ ಚಿಕ್ಕಿಬಾಬು ತಯಾರಿಸಿ ಕೊಡುತ್ತಿದ್ದ ಔಷಧ ಎಂತೆಂತಹ ಇಂಗ್ಲಿಷ್ ಡಾಕ್ಟರುಗಳಿಗೂ ಮಣಿಯದ ರೋಗಗಳನ್ನು ಗುಣಪಡಿಸುತ್ತಿದ್ದುದನ್ನು ಕಂಡು ಮುಗ್ಧಜನ ಆತನಿಗೆ ಮಾರುಹೋದರು. ಉಪ್ಪು ಹುಳಿ ಖಾರಗಳಿಲ್ಲದ ಆತನ ಊಟ, ಅಸಾಧಾರಣವಾದ ಆತನ ದೇಹಶಕ್ತಿ, ಮುಖದಲ್ಲಿ ಮಿನುಗುತ್ತಿದ್ದ ಬ್ರಹ್ಮತೇಜಸ್ಸು, ಆಚರಿಸುತ್ತಿದ್ದ ಆಸನ ಪ್ರಾಣಾಯಾಮಗಳು, ನಡೆನುಡಿಗಳಲ್ಲಿದ್ದ ತಾರ್ಕಣೆ, ಪಾದರಸದಂತಹ ಕಾರ್ಯಚಟುವಟಿಕೆ, ಮುಗುಳ್ನಗೆಯನ್ನು ಚೆಲ್ಲುತ್ತಿರುವ ಮಗುವಿನಂತಹ ಮನಸ್ಸು, ಅವ್ಯಾಜವಾದ ಪ್ರೇಮ, ನಿಷ್ಕಾಮವಾದ ಕರ್ಮ-ಇವುಗಳಿಂದ ಆತನ ಸುತ್ತ ಆಧ್ಯಾತ್ಮಿಕ ಪ್ರಭಾವಲಯವೊಂದು ಸೃಷ್ಟಿಯಾದಂತಿತ್ತು. ಆತನ ಮದ್ದಿನಿಂದ ರೋಗಮುಕ್ತರಾದವರು ಆತನನ್ನು ದೇವವೈದ್ಯ ಧನ್ವಂತರಿಯೆಂದುಕೊಂಡರು; ಆತನ ಬುದ್ಧಿವಾದದಂತೆ ನಡೆದು ಸಂಸಾರಕ್ಲೇಶದಿಂದ ಪಾರಾದವರು ಆತನನ್ನು ಭವರೋಗ ವೈದ್ಯನೆಂದರು. ದಿನಗಳೆದಂತೆ ಚಿಕ್ಕಿಬಾಬು ಪವಾಡಪುರುಷನಾಗಿ ಕಾಣಿಸಿದರು; ಜನ ಅವರನ್ನು 'ಸ್ವಾಮಿ'

ಪಟ್ಟಕ್ಕೇರಿಸಿದರು. (ಸಮಾಜಸೇವೆಗೆ ಕಂಕಣ ಕಟ್ಟಿಕೊಳ್ಳಹೊರಟಾಗ ಶ್ರೀ ರಾಘವೇಂದ್ರಸ್ವಾಮಿಗಳಿಗಿದ್ದ ಸಾಮಾಜಿಕ ಮತ್ತು ಧಾರ್ಮಿಕ ಹಿನ್ನೆಲೆ ಇದು.)

ನಿಸ್ವಾರ್ಥಿಗಳಾದ ಸತ್ವಸಂಪನ್ನರ ಕನಸು ನನಸಾಗಿಯೇ ಆಗುತ್ತವೆ. ಶ್ರೀ ರಾಘವೇಂದ್ರಸ್ವಾಮಿಜಿ ಸುತ್ತುಮುತ್ತಿನ ಸಮಾಜಜೀವನದ ಸಂಸ್ಕರಣಕ್ಕಾಗಿ ತಮ್ಮ ಬಾಳನ್ನು ವಿನಿಯೋಗಿಸಬೇಕೆಂದು ಬಯಸಿದಾಗ ತಾನಾಗಿಯೇ ಅಂತಹ ಸನ್ನಿವೇಶವೊಂದು ಹುಟ್ಟಿಕೊಂಡಿತು. ಅವರು ಗೊಡಬನಹಾಳು-ಎಂಬ ಹಳ್ಳಿಯೊಂದರಲ್ಲಿ ನಲವತ್ತು ದಿನಗಳ ವ್ಯಾಯಾಮಶಿಬಿರವನ್ನು ಯಶಸ್ವಿಯಾಗಿ ನಡೆಸಿದರು. ಅದರ ಮುಕ್ತಾಯ ಸಮಾರಂಭಕ್ಕಾಗಿ ಬಂದಿದ್ದ ಸುತ್ತುಮುತ್ತಿನ ನಾಲ್ಕಾರು ಹಳ್ಳಿಗಳ ಜನ ಮುಂದಿನ ಶಿಬಿರ ತಮ್ಮ ಊರಲ್ಲಿ ನಡೆಯಬೇಕೆಂದು ಬಯಸಿದರು. ಅವರವರಲ್ಲೇ ಸ್ಪರ್ಧೆ ಹುಟ್ಟಿಕೊಂಡಿತು. ಇದರ ಗಂಧವೇ ಇಲ್ಲದ ಬಾಬು ಆಯಾಸನಿವಾರಣೆಗಾಗಿ ಸ್ನಾನಮಾಡುತ್ತಾ ಕುಳಿತಿದ್ದರು. ಸ್ಪರ್ಧಿಗಳಲ್ಲಿ ಒಬ್ಬರಾದ ಮಲ್ಲಾಡಿಹಳ್ಳಿಯ ಮುಖಂಡ ಅಲ್ಲಿಗೆ ನುಗ್ಗಿಹೋದ. ಬಾಬುಗಳನ್ನು ತನ್ನ ಊರಿಗೆ ಬರುವಂತೆ ಆಹ್ವಾನಿಸಿದ. ಅವರಿಂದ 'ಅಸ್ತು' ಎನಿಸಿಕೊಂಡೂ ಬಂದ. ಬಾಬುಗಳು ಜಳಕವನ್ನು ಮುಗಿಸಿ ಹೊರಕ್ಕೆ ಬಂದಾಗ ನಾಲ್ಕೂ ಹಳ್ಳಿಗಳ ಮುಖಂಡರೂ ಅವರಿಗೆ ಮುತ್ತಿಗೆ ಹಾಕಿ ತಮ್ಮ ಊರಿಗೆ ಬರುವಂತೆ ಆಹ್ವಾನಿಸಿದರು. ಆದರೆ ಬಾಬು ಆಗಲೆ ಮಾತುಕೊಟ್ಟು ಆಗಿತ್ತು. ಮುಂದಿನ ಶಿಬಿರ ಮಲ್ಲಾಡಿಹಳ್ಳಿಯಲ್ಲಿ. ಇದನ್ನು ಕೇಳಿ ಆ ಮುಖಂಡರುಗಳು ಹೌಹಾರಿದರು. ತಮ್ಮ ಊರಿಗೆ ಬರದಿದ್ದರೂ ಚಿಂತೆಯಿಲ್ಲ, ಮಲ್ಲಾಡಿಹಳ್ಳಿಗೆ ಹೋಗುವುದು ಬೇಡ-ಎಂದು ಅವರು ಬಾಬುಗಳಲ್ಲಿ ಬಿನ್ನವಿಸಿಕೊಂಡರು. 'ಮಲ್ಲಾಡಿಹಳ್ಳಿ ಎಂದರೆ ಅದೊಂದು ಪುಂಡರ ಕೊಂಪೆ; ನೀವು ಅಲ್ಲಿಂದ ಮರ್ಯಾದೆಯಾಗಿ ಹಿಂದಿರುಗುವುದೇ ಅಸಾಧ್ಯ; ನಿಮ್ಮ ಜೀವಕ್ಕೂ ಅಪಾಯ ತಪ್ಪೇತು.' ಎಂದು ಮುಂತಾಗಿ ತಿಳಿಸಿದರು. ಎಲ್ಲಕ್ಕೂ ಬಾಬುಗಳ ಉತ್ತರ ಒಂದೇ 'ಮಾತು ಕೊಟ್ಟು ಆಗಿದೆ.' ತಾವು ಅವರ ಮನಸ್ಸನ್ನು ತಿದ್ದುವುದು ಅಸಾಧ್ಯವೆನಿಸಿದಾಗ, ಆ ಮುಖಂಡರು ಶ್ರೀ ಶಂಕರಲಿಂಗ ಭಗವಾನರಲ್ಲಿಗೆ ಹೋದರು. ಮಲೇನೂರಿನ ಶ್ರೀ ಶಂಕರಲಿಂಗ ಭಗವಾನರಿಗೆ ಶ್ರೀ ರಾಘವೇಂದ್ರರಲ್ಲಿ ಅಪಾರವಾದ ಪ್ರೀತಿ, ವಾತ್ಸಲ್ಯ, ಸಲಿಗೆ. ಶ್ರೀ ರಾಘವೇಂದ್ರರಿಗೂ ಭಗವಾನರಲ್ಲಿ ಅಷ್ಟೇ ಆದರ, ಭಕ್ತಿ, ಗೌರವ; ತಮ್ಮ ಮಮತೆಯ ಕೂಸು ಮಲ್ಲಾಡಿಹಳ್ಳಿಗೆ ಹೋಗಲು ನಿಶ್ಚಯಿಸಿರುವುದನ್ನು ಕೇಳಿ ಅವರಿಗೆ ದಿಗ್ಭ್ರಮೆಯಾಯಿತು. ಅವರು ಶ್ರೀ ರಾಘವೇಂದ್ರರನ್ನು ತಮ್ಮ ಬಳಿಗೆ ಕರೆಸಿಕೊಂಡರು.

'ಏ ಹನುಮಂತರಾಯ (ಕೋತಿ, ಕಪಿ, ಹನುಮಂತರಾಯ-ಇತ್ಯಾದಿ ಹೆಸರುಗಳಿಂದ ಕೂಗಿ ರಾಘವೇಂದ್ರರನ್ನು ಗೇಲಿಮಾಡುತ್ತಿದ್ದ ಭಗವಾನರಿಗೆ ಅವರು ಮಾರುತಿಯ ಅಪರಾವತಾರ ಎಂಬ ಭಾವನೆ ಇತ್ತು) ಏನದು ಕಪಿಮುಷ್ಟಿ ? ನೀನು ಮಲ್ಲಾಡಿಹಳ್ಳಿಗೆ ಹೋಗಕೂಡದು'

'ಅಪ್ಪಯ್ಯ—(ಭಗವಾನರನ್ನು ರಾಘವೇಂದ್ರರು ಕರೆಯುತ್ತಿದ್ದ ರೀತಿ)—ನಾನು ಅವರಿಗೆ ಮಾತು ಕೊಟ್ಟಿದ್ದೇನೆ.'

'ಚಿಂತೆಯಿಲ್ಲ. ಪದವಾಕ್ಯ ಪ್ರಮಾಣಜ್ಞನೆಂದು ನಿನ್ನನ್ನು ಯಾರೂ ಕರೆಯಬೇಕಾದುದಿಲ್ಲ. ನೀನು ಹೋಗಕೂಡದು.'

'ಇಲ್ಲ ಅಪ್ಪಯ್ಯ, ನಾನು ಹೋಗಲೇ ಬೇಕು'

'ನೀನು ರಾಮದೂತನಯ್ಯ, ನನಗೆ ಗೊತ್ತು. ಕೊಟ್ಟಮಾತು, ಇಟ್ಟ ಗುರಿ ತಪ್ಪಕೂಡದು. ಆದರೂ ಹೋಗುವುದು ಬೇಡ.'

'ಇಲ್ಲ ಅಪ್ಪಯ್ಯ, ನನ್ನ ನಾಲಿಗೆಯನ್ನು ನಾನು ಕತ್ತರಿಸಿಕೊಳ್ಳಲಾರೆ.'

'ನನ್ನ ಮಾತನ್ನು ಮೀರುವೆಯೇನು ?'

'ಮೀರುವುದಕ್ಕೆ ಅವಕಾಶ ಕಲ್ಪಿಸಬೇಡಿ. ಮಾತು ಆಡಿದರೆ ಆಯಿತು, ಮುತ್ತು ಒಡೆದರೆ ಮುಗಿಯಿತು.'

ಭಗವಾನರ ಬಾಯಿಕಟ್ಟಿತು. ಅವರು ಶಿಷ್ಯನ ತಲೆಯ ಮೇಲೆ ಕೈಯಿಟ್ಟು 'ಬಾಬು, ನೀನೊಂದು ಸ್ವಯಂ ಪ್ರಕಾಶವಾದ ರತ್ನ! ಗುರುದೇವನು ನಿನ್ನನ್ನು ಕಾಪಾಡಲಿ, ಹೋಗಿ ಬಾ! ಮರೆಯದಿರು–ನಮ್ಮ ದೇಶ ನಮ್ಮ ಮನೆ. ಅದು ನಿರ್ಮಲವಾಗಿರಬೇಕು. ನಮ್ಮ ನಾಗರಿಕತೆ ಸಂಸ್ಕೃತಿಗಳು ಕಳಚಿ ಕೆಳಕ್ಕೆ ಬೀಳುತ್ತಾ ಇವೆ. ಅವುಗಳ ಪುನರುದ್ಧಾರವಾಗಬೇಕು. ನಿನ್ನ ಬಾಳು ಜನತಾ ಜನಾರ್ಧನನ ಸೇವೆಗೆ ಮೀಸಲಾದುದು. ನಿನ್ನಿಂದ ಮಹತ್ಕಾರ್ಯವೊಂದು ಸಾಧನೆಯಾಗುವುದೆಂದು ನನ್ನ ಅಂತರ್ವಾಣಿ ಹೇಳುತ್ತಿದೆ. ಅದು ಜಗತ್ತಿಗೊಂದು ಮಾದರಿಯಾಗಲಿ' ಎಂದು ಹರಸಿದರು. ಚಡ್ಡಿಬಾಬು ಅವರಿಗೆ ನಮಸ್ಕರಿಸಿ, ಅಂದೇ ರಾತ್ರಿ ಮಲ್ಲಾಡಿಹಳ್ಳಿಗೆ ಪ್ರಯಾಣ ಬೆಳೆಸಿದರು.

ಇಲ್ಲಿ ಕ್ಷಣಕಾಲ ನಿಂತು ಈ ರಾಘವೇಂದ್ರ ಸ್ವಾಮಿಜಿ ಯಾರು? ಎಲ್ಲಿಂದ ಇಲ್ಲಿಗೆ ಬಂದರು? ಇವರ ಪೂರ್ವೋತ್ತರವೇನು? ಎಂಬುದನ್ನೂ ಸ್ವಲ್ಪ ಆಲೋಚಿಸೋಣ. ಬಹುಕಾಲ ಈ ಪ್ರಶ್ನಾರ್ಥಕ ಚಿಹ್ನೆಗಳು ಪ್ರತ್ಯುತ್ತರವಿಲ್ಲದೆ ವಿಕಟಾಟ್ಟಹಾಸ ಮಾಡುತ್ತಾ ನಮ್ಮ ಕಣ್ಣೆದುರಿಗೆ ನಿಲ್ಲುತ್ತಿದ್ದುವು. ಅವರು ಆಶ್ರಮವನ್ನು ಸ್ಥಾಪಿಸಿದ ಕಾಲುಶತಮಾನದವರೆಗೂ ಅವರ ಇತಿಹಾಸ ನಿಗೂಢವಾಗಿತ್ತು. ಇದಕ್ಕೆ ನಿರ್ದಿಷ್ಟವಾದ ಉತ್ತರ ಒಬ್ಬರಿಗೆ ಮಾತ್ರ ಗೊತ್ತಿರಲು ಸಾಧ್ಯ. ಅವರು ಶ್ರೀ ಶ್ರೀ ರಾಘವೇಂದ್ರಸ್ವಾಮಿಜಿ. ಅವರು ಈ ವಿಚಾರದಲ್ಲಿ ಮೌನಿ. ಋಷಿ ಮೂಲ, ನದೀ ಮೂಲಗಳನ್ನು ಕೆದಕಿ ನೋಡಬಾರದೆಂದೋ, ಅಥವಾ ಶ್ರೀರಾಮಕೃಷ್ಣ ಪರಮ ಹಂಸರು ಹೇಳುವ ದೃಷ್ಟಾಂತದ ಕಥೆಯಂತೆ ಕೈಗೆ ಸಿಕ್ಕಿರುವ ಸ್ವಾದು ಫಲವನ್ನು ಸವಿಯುವುದಕ್ಕೆ ಬದಲಾಗಿ 'ಇದು ಯಾವ ಮರದ ಫಲ? ಇದನ್ನು ನಾಟಿದವರಾರು? ಅದಕ್ಕೀಗ ವಯಸ್ಸೆಷ್ಟು? ಇದು ಯಾವ ಜಾತಿಯದು–ಇತ್ಯಾದಿ ವ್ಯರ್ಥಪ್ರಶ್ನೆಗಳನ್ನು ಕೇಳುವುದು ವ್ಯರ್ಥವೆಂದೊ ಭಾವಿಸಿ ಜನ ತೆಪ್ಪಗಾಗುತ್ತಿದ್ದರು. ಆದರೆ ಇತ್ತೀಚಿನ ದಿನಗಳಲ್ಲಿ ಶ್ರೀ ಶ್ರೀಯವರು ಬರೆದಿರುವ 'ಸೂರ್ಯನಮಸ್ಕಾರ–ತತ್ವ ಮತ್ತು ಆಚರಣೆ', 'ಯೋಗಾಸನಗಳು', 'ಷಟ್ಕರ್ಮವಿಧಿ', 'ಗುರು ನಮಸ್ಕಾರ'–ಇತ್ಯಾದಿ ಶಾಸ್ತ್ರಗ್ರಂಥಗಳಲ್ಲಿ ಮುನ್ನುಡಿಗಳನ್ನು ಬರೆಯುವಾಗ ಆನುಷಂಗಿಕವಾಗಿ ತಮ್ಮ ಬಾಲ್ಯಸ್ಥಿತಿಯನ್ನೂ ಗುರುಚರಿತೆಯನ್ನೂ ಸ್ಥೂಲವಾಗಿ ಕೊಟ್ಟಿದ್ದಾರೆ. ತಿಳಿಯಲಾಗದ ವಿಷಯಗಳಲ್ಲಿ ಯಾವಾಗಲೂ ಕುತೂಹಲ ಹೆಚ್ಚಲ್ಲವೆ? 'ತಿನ್ನಲಾಗದ ಹಣ್ಣು ಬಲುರುಚಿ' ಆದ್ದರಿಂದ ಶ್ರೀಯವರ ಜೀವನ ಚರಿತ್ರೆಯನ್ನು ಆಮೂಲಾಗ್ರವಾಗಿ ಅರಿಯಬೇಕೆಂಬ ನಮ್ಮ ಪ್ರಯತ್ನವೂ ಸ್ವಲ್ಪಮಟ್ಟಿಗೆ ಸಫಲವಾಗಿ, ಅವರ ಜೀವನ ಚರಿತ್ರೆಯ ಸ್ಥೂಲರೇಖೆಗಳನ್ನು ಮೂಡಿಸಲು ಇಲ್ಲಿ ಸಾಧ್ಯವಾಗಿದೆ.

ಪ್ರತಿಯೊಬ್ಬನ ಜೀವನವೂ ಒಂದು ಕಾದಂಬರಿ–ಎಂದು ಹೇಳುವುದುಂಟು. ಆದರೆ ಶ್ರೀ ರಾಘವೇಂದ್ರ ಸ್ವಾಮಿಯವರ ಜೀವನ ಚರಿತ್ರೆ ಕಾದಂಬರಿಯಲ್ಲ, ಅದೊಂದು ಮಹಾಕಾವ್ಯ. ಅವರು ಜನಿಸಿದುದು ದಕ್ಷಿಣ ಕನ್ನಡ ಜಿಲ್ಲೆಯ ಬಾರಕೂರಿನಲ್ಲಿ.* ತಂದೆ ನರಸಿಂಹಯ್ಯ ತಾಳಮದ್ದಲೆ ಅಥವಾ ಯಕ್ಷಗಾನದಲ್ಲಿ ಪಾತ್ರಧಾರಿಗಳಾಗಿದ್ದುದಲ್ಲದೆ, ಸುಪ್ರಸಿದ್ಧ ಅರ್ಥಧಾರಿಗಳಾಗಿದ್ದರು. ಅವರ ಸಮಯಸ್ಫೂರ್ತಿ, ವಾಕ್ಚಾತುರ್ಯಗಳು ಅಸದೃಶವಾದುವು. ಶ್ರೀಯವರ ತಾಯಿ ಪುತ್ತಲೀ ಬಾಯಿ. ಔದಾರ್ಯಕ್ಕೆ, ಸೌಜನ್ಯಕ್ಕೆ ಮತ್ತೊಂದು ಹೆಸರು, ಆಕೆ. ಅವರ ಪುಣ್ಯಗರ್ಭಸುಧಾಂಬುಧಿಯಲ್ಲಿ ಮೂಡಿದ ಮೂರು ಪುತ್ರರತ್ನಗಳಲ್ಲಿ ರಾಘವೇಂದ್ರರು ಮಧ್ಯದ ನಾಯಕರತ್ನ. ಮಗು

---

* ಶ್ರೀ ರಾಘವೇಂದ್ರರು ಮಳಿಯಾಳದಲ್ಲಿ ಹುಟ್ಟಿದವರೆಂದೂ, ತಂದೆ ಶ್ರೀರಾಮಪುರದ ಜ್ಯೋತಿಷಿ ಶ್ರೀ ಅನಂತ ಪದ್ಮನಾಭ, ತಾಯಿ ಪದ್ಮಾವತಿಯೆಂದೂ ಯಾತ್ರೆಗೆಂದು ಹೊರಟಿದ್ದ ಆತನ ತಾಯ್ತಂದೆಗಳು ರೋಗದಿಂದ ಜೀವಚ್ಛವವಾಗಿದ್ದ ಈ ಮಗುವನ್ನು,ಹಾದಿಯಲ್ಲಿ ತಂಗಿದ್ದ ಬಾರಕೂರಿನಲ್ಲಿ ಶ್ರೀ ನರಸಿಂಹಯ್ಯ ಮತ್ತು ಪುತ್ತಲೀಬಾಯಿಯರಿಗೆ ಒಪ್ಪಿಸಿ ಹೋದವರು ಒಂದಕ್ಕೆ ಹಿರುಗಲೇ ಇಲ್ಲವೆಂದೂ, ಮಗು ಈ ಸಾಕು ತಂದೆತಾಯಿಯರನ್ನೇ ತನ್ನ ಜನ್ಮದಾತರೆಂದು ತಿಳಿದು ಬೆಳೆಯಿತೆಂದೂ ಒಂದು ಕಥೆ ಪ್ರಚಲಿತವಾಗಿದೆ. ಇರಬಹುದೋ ಏನೊ!

ಹಾಗೆಯೇ ಆತನ ತಾಯಿತಂದೆಗಳಿಟ್ಟ ಹೆಸರು 'ರಾಘವೇಂದ್ರ'ಎಂದಲ್ಲ; ಕುಮಾರಸ್ವಾಮಿ ಎಂದೂ, ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ಮೇಲಿನ ಭಕ್ತಿಯಿಂದ ಈ ಹೊಸ ನಾಮಕರಣವಾಗಿರಬೇಕೆಂದೂ ಊಹೆ.

ಮಾಟವಾಗಿ ನೋಡಲು ತುಂಬ ಮುದ್ದಾಗಿತ್ತು. ಆದರೆ ರೋಗದ ಕೋಳಿ. ಅದು ಬೆಳೆಯುತ್ತಾ ಹೋದಂತೆ ಅದರ ರೋಗವೂ ಬೆಳೆಯುತ್ತಾ ಹೋಯಿತು. ತಾಯ್ತಂದೆಗಳು ಈ ಮಗುವನ್ನು ಉಳಿಸಿಕೊಳ್ಳಬೇಕೆಂದು ಮಲೆಯಾಳಿ ಪಂಡಿತರನ್ನು ಆಶ್ರಯಿಸಿದರು. ಔಷಧೋಪಚಾರಕ್ಕೆ ಸಗ್ಗದೆ ಹೋದುದರಿಂದ ಮಂತ್ರ, ತಂತ್ರ, ದೇವರ ಹರಕೆಗಳಿಗೆ ಶರಣುಹೋದರು. ಏನು ಮಾಡಿದರೂ ಏನೂ ಪ್ರಯೋಜನವಾಗಲಿಲ್ಲ. ಅತ್ತ ಸತ್ತಂತಲ್ಲ, ಇತ್ತ ಬದುಕಿ ಬಾಳಿದಂತೆಯೂ ಅಲ್ಲ, ಸಜೀವವಾದ ಹೆಣ. ದೇಹ ರೋಗಗ್ರಸ್ತವಾಗಿದ್ದರೂ ಬುದ್ಧಿ ಮಾತ್ರ ಪಾದರಸದಂತಿತ್ತು. ಹುಡುಗ ಹೆಚ್ಚು ಕಷ್ಟಪಡದೆ ಪ್ರಾಥಮಿಕ ಮಾಧ್ಯಮಿಕ, ಶಿಕ್ಷಣವನ್ನು ಮುಗಿಸಿ ಕುಂದಾಪುರದ ಪ್ರೌಢಶಾಲೆಯನ್ನು ಪ್ರವೇಶಿಸಿದನು. ಅಲ್ಲಿಯೂ ಆತನ ದೇಹಸ್ಥಿತಿ ಸುಧಾರಿಸಲಿಲ್ಲ; ಹಿಂದಿನ ರೋಗಗಳ ಸರಮಾಲೆಯಲ್ಲಿ ನಾಯಕರತ್ನದಂತೆ ಅಪಸ್ಮಾರಿ ರೋಗ ಗಂಟುಬಿತ್ತು. ಅವನು ಯಾರ ತಂಟೆಗೂ ಹೋಗುತ್ತಿರಲಿಲ್ಲ; ಯಾರೂ ಅವನ ತಂಟೆಗೂ ಹೋಗುತ್ತಿರಲಿಲ್ಲ. ಅವನಿಗೆ ಜೀವನವೊಂದು ಹೊರೆಯೆನಿಸಿತು. ಅವನು ಹುಟ್ಟಿದುದು ಯುಗಾದಿಯ ಹಿಂದಿನ ದಿನವಂತೆ! ಮರುದಿನದ ಬೇವು-ಬೆಲ್ಲಗಳಲ್ಲಿ ಮೊದಲದನ್ನೆ ಆಯ್ದುಕೊಂಡು ಹುಟ್ಟಿದ್ದನೊ ಏನೊ! ಮುಂದಿನದು ಉಳಿದವರಿಗಿರಲೆಂದು ಭಾವಿಸಿರಬೇಕು. ಮೂಳೆಯ ಹಂದರದಂತಿದ್ದ ಈ ಪ್ರಾಣಿ ಒಂಟಿಬಡುಕನಾಗಿದ್ದರೂ ಶಾಲೆಯ ಶಿಕ್ಷಕರಿಗೆ ಮಾತ್ರ ಅಚ್ಚುಮೆಚ್ಚು. ಅದಕ್ಕೆ ಕಾರಣ ಅವನ ಸೂಕ್ಷ್ಮಬುದ್ಧಿ. ಅದಕ್ಕೂ ಹೆಚ್ಚಾಗಿ ಅವನ ಅಂಗಸೌಷ್ಠವ, ಮುಖಸೌಂದರ್ಯ, ಕಂಠಶ್ರೀ. ತಂದೆಯ ಯಕ್ಷಗಾನ ಕಲೆ–ನರ್ತನ, ಅಭಿನಯ, ಭಾವಮುದ್ರಿಕೆ–ಮಗನಲ್ಲಿ ರಕ್ತಗತವಾಗಿ ಇಳಿದು ಬಂದಿತ್ತೆಂದು ತೋರುತ್ತದೆ. ಇದರಿಂದ ಶಾಲೆಯ ರಂಗಸ್ಥಳದಲ್ಲಿ ಆತನಿಗೆ ಮುಖ್ಯವಾದ ಸ್ಥಾನ ಮೀಸಲು. ವೇಷಧಾರಿಯಾದಾಗ ಉತ್ಸಾಹದ ಬುಗ್ಗೆಯಾಗಿರುತ್ತಿದ್ದ ಈ ವಿಲಕ್ಷಣ ಹುಡುಗ ಬಣ್ಣ ಅಳಿಸುತ್ತಲೆ ಬಣ್ಣಗೆಟ್ಟುಹೋಗುತ್ತಿದ್ದ.

ಹೊರಲಾರದ ಹೊರೆಹೊತ್ತು ಸಾಗುವ ಪಯಣಿಕನಂತೆ ಈ ನಿತ್ಯರೋಗಿ ರಾಘವೇಂದ್ರ ಬಾಳಪಯಣವನ್ನು ಬಲವಂತವಾಗಿ ಮುಂದುವರಿಸುತ್ತಿದ್ದಾಗ ಒಂದುದಿನ ಅಕಸ್ಮಾತ್ತಾಗಿ ಪರಮಪೂಜ್ಯ ನಿತ್ಯಾನಂದಜೀಯವರ ದರ್ಶನಲಾಭ ದೊರೆಯಿತು. ಅವರು ಬಾಲಕನ ತಲೆ ಸವರಿ ಧ್ಯಾನಯೋಗದ ಮಾರ್ಗವನ್ನು ಉಪದೇಶಿಸಿದರು. ಇದರಿಂದ ಬಾಲಕನಲ್ಲಿ ನೆಲೆಸಿದ್ದ ನಿರಾಶಾಭಾವನೆ ತೊಲಗಿತು. ಅದರೊಡನೆ ಓದಿನ ಮೇಲಿದ್ದ ಅಲ್ಪಸ್ವಲ್ಪ ಆಸಕ್ತಿಯೂ ಸತ್ತುಹೋಯಿತು. ಬರಬರುತ್ತಾ ಅವನು ಏಕಾಂತಪ್ರಿಯನಾಗಿಹೋದ. ಕಾಲ ಉರುಳಿತು. ಹುಡುಗ ಹೈಸ್ಕೂಲಿನ ಕಡೆಯ ತರಗತಿಯಲ್ಲಿ ಹನ್ನೆರಡು ರೂಪಾಯಿ ಪರೀಕ್ಷೆಗೆ ಕಟ್ಟುವ ಕಾಲ ಸನ್ನಿಹಿತವಾಯಿತು. ಈ ಪರೀಕ್ಷೆಯಲ್ಲಿ ತೇರ್ಗಡೆಯಾಗುತ್ತಲೆ ಮಗನನ್ನು ವೈದ್ಯಕೀಯ ಶಿಕ್ಷಣಕ್ಕೆ ಕಳುಹಿಸಬೇಕೆಂದು ತಂದೆಯ ಸನ್ನಾಹ. ಇತ್ತ ಮಗ ಕುಂದಾಪುರದಿಂದ ತಂದೆಗೊಂದು ಪತ್ರಬರೆದ–'ನನಗೆ ಲೌಕಿಕ ಜೀವನದಲ್ಲಿ ಜಿಹಾಸೆ ಹುಟ್ಟಿದೆ; ನಾನು ಸತ್ಯವನ್ನು ಅರಸಿಕೊಂಡು ಹೊರಟಿದ್ದೇನೆ; ದಯವಿಟ್ಟು ನನ್ನನ್ನು ಹುಡುಕಬೇಡಿ ; ನನ್ನ ಹಾದಿಗೆ ಅಡ್ಡಿಯಾಗಬೇಡಿ.'

ರಾಘವೇಂದ್ರ ಗೃಹತ್ಯಾಗಿಯಾದುದು ಯುಗಾದಿಯ ದಿನ. ಕೈಲಿ ಕಾಸಿಲ್ಲದೆ ಉಟ್ಟಬಟ್ಟೆಯಲ್ಲಿ ಹೊರಟ ಈ ಹುಡುಗ ಹೆದ್ದಾರಿಯನ್ನು ಹಿಡಿದು ನಡೆದ, ನಡೆದ, ಸಂಜೆಯವರೆಗೂ ನಡೆದ. ಹಾದಿಯಲ್ಲಿ ಸಿಕ್ಕಿದ ಹಳ್ಳಿಯೊಂದರಲ್ಲಿ, ಯಾರೋ ಕರುಣೆಯಿಂದ ನೀಡಿದ ಆಹಾರವನ್ನು ತಿಂದು, ಗುಡಿಯ ಮುಂದಿನ ಬಂಡೆಯ ಮೇಲೆ ಇರುಳನ್ನು ನೂಕಿ, ಬೆಳಕು ಹರಿಯುತ್ತಲೆ ಪ್ರಯಾಣ ಮುಂದುವರಿಸಿದ. ನಿತ್ಯರೋಗಿಯಾದ ಈ ಹೆಣವತ್ತ ಅದು ಹೇಗೆ ಕಾಲ್ನಡಗೆಯಿಂದ ಮಾರ್ಗಕ್ರಮಣ ಮಾಡುತ್ತಾ ಹೋದನೆಂಬುದೇ ಒಂದು ಅಚ್ಚರಿ. ಒಂದು ದಿನವಲ್ಲ, ಎರಡಲ್ಲ; ತಿಂಗಳುಗಟ್ಟಲೆ ನಡೆನಡೆದು ಹುಬ್ಬಳ್ಳಿಯನ್ನು ಸೇರಿದ. ಅಲ್ಲಿನ ಸಿದ್ಧಾರೂಢಸ್ವಾಮಿಗಳು ದೇವಾಂಶಸಂಭೂತರೆಂದು ಪ್ರಸಿದ್ಧರಾಗಿದ್ದ ಪರಮಜ್ಞಾನಿಗಳು. ಹುಡುಗ ಅವರನ್ನು ಕಂಡು ಅಡ್ಡಬಿದ್ದ. ಅವರು ಹೇಳಿದರು–'ಏನಲೇ, ಏನು ಬೇಕು?' ಎಂದರು. ಬಂದೂಕದ ಬಾಯಿಂದ ಗುಂಡು ಹಾರುವಂತೆ ಹುಡುಗನ ಬಾಯಿಂದ ಮಾತು ಹೊರಟಿತು–'ದೇವರು'. ಸಿದ್ಧಾರೂಢರು ಮೌನವಾಗಿದ್ದರು. ಹುಡುಗ ಅಲ್ಲಿಂದ ಕದಲಲಿಲ್ಲ. ನಾಲ್ಕು ದಿನಗಳಾದ ಮೇಲೆ ಅವರು

ಹೇಳಿದರು–'ಎಲೆ ಹುಡುಗ, ನಿನ್ನ ಗುರು ಬೇರೆ ಇದ್ದಾನೆ ಕಣಲೆ. ಅವನನ್ನು ಹುಡುಕಿಕೊಂಡು ಹೋಗು' ಎಂದರು. ತಕ್ಷಣವೇ ಹುಡುಗ ಅಲ್ಲಿಂದ ಹೊರಟ. ಸನ್ಯಾಸಿಗಳನ್ನು ಸಾಧುಸಂತರನ್ನು ಕಂಡಕೂಡಲೆ ಅವರಿಗೆ ಅಡ್ಡಬಿದ್ದು 'ನೀವು ದೇವರನ್ನು ನೋಡಿದ್ದೀರಾ? ನನಗೆ ತೋರಿಸುತ್ತೀರಾ?' ಎಂದು ಪ್ರಶ್ನಿಸುವನು. ಇದನ್ನು ಕೇಳಿ ಕೆಲವರು ನಗುವರು, ಕೆಲವರು ಗಂಭೀರ ಭಾವವನ್ನು ತಳೆಯುವರು, ಮತ್ತೆ ಕೆಲವರು 'ಇದು ಮದ್ದಿಲ್ಲದ ರೋಗ' ಎಂದು ಛೀಗುಟ್ಟುವರು. ಹುಡುಗ ಯಾವುದರಿಂದಲೂ ಅಧೀರನಾಗಲಿಲ್ಲ. ತನ್ನ ಪರ್ಯಟನೆಯನ್ನು ಮುಂದುವರಿಸಿ ಸುಮಾರು ಎರಡು ವರ್ಷಗಳ ಕಾಲ ಇಡೀ ಕರ್ಣಾಟಕವನ್ನೆಲ್ಲ ಸುತ್ತಿದನು.

ತಾರುಣ್ಯದ ಹೊಸಲಿನಲ್ಲಿ ಬಂದು ನಿಂತಿದ್ದ ರಾಘವೇಂದ್ರನಿಗೆ ತನ್ನ ಬಾಳಗುರಿ ಎಲ್ಲೋ ಹಳಿತಪ್ಪಿದೆ ಎನ್ನಿಸಿತು. ಸಾಕಷ್ಟು ವಯಸ್ಸಾದ ತಾನು ಕಾಯಕವಾವುದೂ ಇಲ್ಲದೆ, ತಿರಿದು ತಿನ್ನುತ್ತಾ ದಿಕ್ಕೆಟ್ಟು ಅಲೆಯುವುದು ಅಕ್ಷಮ್ಯ ಅಪರಾಧ; ಯಾವುದಾದರೊಂದು ಉದ್ಯೋಗವನ್ನು ಹಿಡಿದು, ಸ್ವಯಾರ್ಜಿತದಿಂದ ಹೊಟ್ಟೆಹೊರೆಯುತ್ತಾ ತನ್ನ ಹೆಗ್ಗುರಿಯತ್ತ ದೃಷ್ಟಿ ಹಾಯಿಸಬೇಕೆಂದು ಆತ ನಿಶ್ಚಯಿಸಿದ. 'ಅಂಬಾಪ್ರಸಾದಿತ ನಾಟಕ ಮಂಡಲಿ' ಅಲ್ಲೇ ಸಮೀಪದಲ್ಲೆಲ್ಲೋ ಬಿಡಾರ ಹೂಡಿದೆಯೆಂದು ತಿಳಿದುಬಂತು. ಅದರ ಮಾಲಿಕರಾದ ರಂಗನಾಥಭಟ್ ಮುಂಡಾಜೆ ದಕ್ಷಿಣಕನ್ನಡ ಜಿಲ್ಲೆಯವರು, ಸಜ್ಜನರು, ಗುಣಗ್ರಾಹಿಗಳು, ಉದಾರಚರಿತರು. ಯುವಕ ರಾಘವೇಂದ್ರ ಅವರ ಬಳಿಗೆ ಹೋದ. ಒಡನೆಯೆ ಆಶ್ರಯ ದೊರೆಯಿತು. ರಾಘವೇಂದ್ರನ ಒಂದೆ ಗುರಿಗೆ ಎರಡು ಹಕ್ಕಿಗಳು ಬಿದ್ದಂತಾಯಿತು–ಇತ್ತ ಉದ್ಯೋಗಶೀಲನಾದಂತಾಯಿತು,ಅತ್ತ ಕಲಾಸೇವೆ ಮಾಡಿದಂತೆಯೂ ಆಯಿತು. ತನ್ನ ನಡತೆ ನಡವಳಿಕೆಗಳಿಂದ ಆತ ಮಾಲಿಯಿಂದ ಹಿಡಿದು ಮಾಲಿಕನವರೆಗೆ ನಾಟಕ ಮಂಡಲಿಯವರಿಗೆಲ್ಲ ಅಚ್ಚುಮೆಚ್ಚಿನವನಾದ; ತನ್ನ ಅಭಿನಯ ಕಲೆಯಿಂದ ನಾಟಕದ ಪ್ರೇಕ್ಷಕರಿಗೂ ಪ್ರಿಯನಾದ. ಆತನ ಕಾರ್ಯನಿಷ್ಠೆ, ಪ್ರಾಮಾಣಿಕತನ, ವ್ಯವಹಾರ ದಕ್ಷತೆಗಳನ್ನು ಕಂಡ ಮಾಲಿಕರು ಮಂಡಳಿಯ ಆರ್ಥಿಕ ವ್ಯವಹಾರವನ್ನೆಲ್ಲ ಆತನಿಗೇ ವಹಿಸಿದರು. ಮಂಡಳಿಯಲ್ಲಿ ಆತನೊಂದು ಅನಿವಾರ್ಯವಾದ ಅಂಗವಾದ. ಏನಾದರೇನು? ಬೆನ್ನುಹತ್ತಿದ ಬೇತಾಳದಂತೆ ಆತನಿಗೆ ಗಂಟುಬಿದ್ದಿದ್ದ ಅಪಸ್ಮಾರರೋಗ ದಿನದಿನಕ್ಕೂ ಪ್ರಬಲಿಸಿ,ಆತನ ನೆತ್ತರನ್ನು ಹೀರುತ್ತಾಹೋಯಿತು. ಆತನನ್ನು ಪರೀಕ್ಷಿಸಿದ ವೈದ್ಯರು ಆ ರೋಗವೇ ಆತನಿಗೆ ಮಾರಕವೆಂದೂ, ಆತನ ಕಡೆಯದಿನ ಹೆಚ್ಚು ದೂರವಿಲ್ಲವೆಂದೂ ತಿಳಿಸಿದರು. ಇದನ್ನು ಕೇಳಿ ನಾಟಕ ಮಂಡಲಿ ನಿಟ್ಟುಸಿರಿಟ್ಟಿತು.

'ಕಲಿಯುಗ ಭೀಮ' ಎಂದು ಪ್ರಖ್ಯಾತರಾಗಿದ್ದ ಪಳನೀಸ್ವಾಮಿಗಳು ಆಗಾಗ ಅಂಬಾಪ್ರಸಾದಿತ ನಾಟಕ ಮಂಡಲಿಗೆ ಭೇಟಿಕೊಡುತ್ತಿದ್ದ ರೂಢಿ. ಅವರು ತಮಿಳರು. ಉತ್ತರ ಕರ್ಣಾಟಕದ ಗೋಕಾಕಿನಲ್ಲಿ ಅವರು ಒಂದು ದೈಹಿಕಶಿಕ್ಷಣ ಸಂಸ್ಥೆಯನ್ನು ನಡೆಸುತ್ತಿದ್ದರು. ಪ್ರಾಚ್ಯ, ಪಾಶ್ಚಾತ್ಯ ಅಂಗಸಾಧನೆಯಲ್ಲಿ ನಿಪುಣರಾಗಿದ್ದ ಅವರು ಯೋಗವಿದ್ಯೆಯಲ್ಲಿಯೂ ಆಳವಾದ ಪರಿಶ್ರಮ ಪಡೆದಿದ್ದರು. ಅವರು ನಿತ್ಯರೋಗಿಯಾದ ರಾಘವೇಂದ್ರನನ್ನು ಕಂಡು 'ಇವನ ರೋಗಕ್ಕೆ ಯೋಗಸಾಧನೆಯೆ ಸರಿಯಾದ ಮದ್ದು' ಎಂದರು. ತಾವು ಅವನನ್ನು ನಿರೋಗಿಯಾಗಿ ಮಾಡುವುದಾಗಿಯೂ ಹೇಳಿದರು. ರಾಘವೇಂದ್ರ ಅವರ ಶಿಷ್ಯನಾದ. ಕೂಲಿಯ ಹೆಣದಂತಿದ್ದರೂ ಆಸಾಮಿ ತುಂಬ ಜಿಗುಟು; ಪ್ರಾಣವನ್ನು ಪಣವಾಗಿ ಒಡ್ಡಿ ಅಭ್ಯಾಸಮಾಡಿದ. ಇದರ ಫಲವಾಗಿ ಆತನ ಬಡಕಲ ಮೈ ದಿನದಿನಕ್ಕೆ ತುಂಬಿಕೊಳ್ಳುತ್ತಾ ಹೋಯಿತು. ಹೀಗಿರಲು, ಒಂದು ದಿನ ಅಂಗಸಾಧನೆ ಮಾಡುತ್ತಿರುವಾಗ ಇದ್ದಕ್ಕಿದ್ದಂತೆಯೆ ಆತನ ಉಸಿರು ಕಟ್ಟಿತು. ಇನ್ನೇನು ಆತನ ಕಥೆಯೆ ಮುಗಿದುಹೋಗುವಂತೆ ಕಾಣಿಸಿತು. ಆಗ ಗುರುಗಳು ಆತನ ಎದೆಯನ್ನು ಮೃದುವಾಗಿ ಸವರುತ್ತಾ ಹೋದರು. ಮರು ನಿಮಿಷದಲ್ಲಿ ಆತ ಚೇತರಿಸಿಕೊಂಡ. ಏನಿದ್ ಪವಾಡ? ಆರಿಹೋಗಲಿದ್ದ ಜೀವವನ್ನು ಪುನರುಜ್ಜೀವನಗೊಳಿಸಿತ್ತು, ಗುರುಗಳ ಅಂಗಮರ್ದನ ಕಲೆ. ರಾಘವೇಂದ್ರನ ಜ್ಞಾನಪಿಪಾಸೆ ಗುರುಗಳಿಂದ ಆ ಕಲೆಯನ್ನು ಕುಡಿದು ತೃಪ್ತಿಹೊಂದಿತು. ಆತನ ಅಪಸ್ಮಾರರೋಗ ಸಂಪೂರ್ಣವಾಗಿ ಗುಣವಾಗದಿದ್ದರೂ ಆತನ ಶಕ್ತಿ ವೃದ್ಧಿಯಾಯಿತು, ದೇಹ ಮಾಂಸಲವಾಯಿತು. ಆದರೆ ಆತನ ಹೆಗ್ಗುರಿ

ದೈವಸಾಕ್ಷಾತ್ಕಾರದಷ್ಟೆ ? ಈ ಪ್ರಶ್ನೆಯನ್ನು ಎತ್ತುತ್ತಲೆ ಸ್ವಾಮಿಗಳು ನಗುತ್ತಾ ಹಾರಿಕೆಯ ಉತ್ತರಕೊಟ್ಟರು— 'ದೇವರು ಬಯಸಿದೊಡನೆಯೆ ಸಿಕ್ಕುವುದಿಲ್ಲ, ಅದಕ್ಕೆ ಸಾಧನೆ ಬೇಕು. ಶರೀರಮಾದ್ಯಂ ಖಲು ಧರ್ಮಸಾಧನಂ ? ವಜ್ರಕಾಯವನ್ನು ಮೊದಲು ಸಂಪಾದಿಸಿ.' ನೊಂದ ರಾಘವೇಂದ್ರ, ತಮ್ಮ ಹುಟ್ಟು ಹಬ್ಬದ ದಿನ (ಯುಗಾದಿಯ ಹಿಂದಿನ ದಿನ) ಬೆಳಗು ಮುಂಜಾನೆ ಯಾರಿಗೂ ಹೇಳದೆ ಕೇಳದೆ ಮತ್ತೊಮ್ಮೆ ವಿಶಾಲಜಗತ್ತಿನಲ್ಲಿ ಸತ್ಯಾನ್ವೇಷಣೆ ಮಾಡುತ್ತಾ ಹೊರಟರು.

ಮಹಾರಾಷ್ಟ್ರದ ಶಿವಾನಂದರು ಸಂತಸಾರ್ವಭೌಮರೆಂದು ಲೋಕ ಕೀರ್ತಿಸುತ್ತಿದ್ದುದನ್ನು ರಾಘವೇಂದ್ರ ಕೇಳಿದ್ದ. ಅವರಿಂದ ತನ್ನ ಆಸೆ ನೆರವೇರುವುದೆಂದು ಆತನ ಅಂತರಂಗ ಹೇಳುತ್ತಿತ್ತು. ಅವರು ಸುಪ್ರಸಿದ್ಧ ಯಾತ್ರಾಸ್ಥಳವಾದ ಫಂಡರಾಪುರದಲ್ಲಿ ಬೀಡುಬಿಟ್ಟಿರುವರೆಂದು ತಿಳಿದು ಬಂತು. ಅವರನ್ನು ಕಾಣಬೇಕೆಂಬ ಹೆಬ್ಬಯಕೆಯಿಂದ ರಾಘವೇಂದ್ರ ಹಲವಾರು ದಿನಗಳವರೆಗೆ ನಡೆನಡೆದು, ನಡುನಡುವೆ ಅಪಸ್ಮಾರರೋಗದಿಂದ ಪ್ರಜ್ಞೆಯಿಲ್ಲದೆ ಬಿದ್ದಿದ್ದು, ಅಂತೂ ಹೇಗೋ ಫಂಡರ ಪುರವನ್ನು ಸೇರಿದನು. ಆದರೆ ಅವನ ಪಾಲಿಗೆ ಅಲ್ಲಿ ಸಿಕ್ಕಿದುದು ನಿರಾಶೆ ಮಾತ್ರ. ಶ್ರೀ ಶಿವಾನಂದರು ಹಿಂದಿನ ದಿನವೇ ಅಲ್ಲಿಂದ ಪುಣೆಗೆ ಪ್ರಯಾಣ ಬೆಳಸಿದ್ದರು. ಹತಾಶನಾದ ರಾಘವೇಂದ್ರ ಚಂದ್ರಭಾಗಾ ನದಿಯಲ್ಲಿ ಸ್ನಾನಮಾಡಿ, ವಿಠೋಬ ರಕುಮಾಯಿಯರ ದರ್ಶನ ಮಾಡಿದ. ಯಾರೋ ಭಕ್ತರು ನೀಡಿದ ಒಣಕಲು ರೊಟ್ಟಿಯನ್ನು ತಿಂದು ಮರವೊಂದರ ಕೆಳಗೆ ವಿಶ್ರಾಂತಿಯನ್ನು ಪಡೆದ. ಫಂಡರಪುರದಂತಹ ಜಾಗ್ರತ ಸ್ಥಳದಲ್ಲಿ ಸಾಧು ಸಂತರಿಗೆ ಕೊರತೆಯೆ ? ಕಾವಿಯುಟ್ಟವರನ್ನು, ಬೂದಿ ಬಳಿದವರನ್ನು ಪ್ರಶ್ನಿಸಿದ 'ನೀವು ದೇವರನ್ನು ಕಂಡಿರುವಿರಾ ? ನನಗೆ ತೋರಿಸುವಿರಾ ?' ಎಂದು. ಆದರೆ ಈ ಅಭಿನವ ವಿವೇಕಾನಂದನಿಗೆ ದೇವರನ್ನು ತೋರಿಸುವೆನೆನ್ನುವ ರಾಮಕೃಷ್ಣರಾರೂ ಅಲ್ಲಿ ಸಿಕ್ಕಲಿಲ್ಲ. ಒಂದು ತಿಂಗಳು ಕಾಲ ಆ ಪುಣ್ಯ ಕ್ಷೇತ್ರದಲ್ಲಿ ಅಲೆಯುತ್ತಿದ್ದ ಈ ಅನ್ವೇಷಕ ಬಂದದಾರಿಗೆ ಸುಂಕವಿಲ್ಲವೆಂದುಕೊಂಡು ತನ್ನ ಕಾಲುಗಳನ್ನು ಪುಣೆಯತ್ತ ತಿರುಗಿಸಿದ.

ಮತ್ತೊಮ್ಮೆ ಹಲವಾರು ದಿನಗಳವರೆಗೆ ಬರಿಗಾಲಲ್ಲಿ ಮಾರ್ಗಕ್ರಮಣ. ಸತ್ತು ಸುಣ್ಣವಾಗಿ ಪುಣೆಯನ್ನು ಸೇರಿದುದಾಯಿತು. ಆದರೆ ಮೊರಡಿಯಲ್ಲಿ ಮಾದಲ ಫಲ ಸಿಕ್ಕುವುದು ಹೇಗೆ ? ಆ ಮಹಾನಗರದಲ್ಲಿ ಮರಾಠಿಭಾಷೆ ಬರದ ತಾನು ಶಿವಾನಂದರನ್ನು ಪತ್ತೆ ಮಾಡುವುದು ಹೇಗೆ ? ಕಲಾಜಗತ್ತಿನಲ್ಲಿ ತಾನು ಸಾಧಿಸಿದ್ದ ಹಾವ ಭಾವ ವಿಲಾಸ ವಿಭ್ರಮಗಳಿಂದ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ ಬೆಳಗಿನಿಂದ ಸಂಜೆಯವರೆಗೆ ಅಲೆದು ಬಹು ಕಷ್ಟದಿಂದ ಅವರ ನೆಲೆಯನ್ನು ಗೊತ್ತುಮಾಡಿಕೊಂಡು ಅಲ್ಲಿಗೆ ಹೋಗುವಷ್ಟರಲ್ಲಿ ಅವರು ಮತ್ತಾವುದೋ ಬಡಾವಣೆಯಲ್ಲಿರುವ ಭಕ್ತರ ಮನೆಗೆ ಹೋಗಿರುವರು ; ಮತ್ತೆ ಅದನ್ನು ಅರಸಿಕೊಂಡು ಅಲೆಯುವುದು ; ಪುನಃ ಆಶಾಭಂಗ. ಹೀಗೆಯೇ ಸುಮಾರು ಇಪ್ಪತ್ತು ದಿನಗಳು ಉರುಳಿ ಹೋದವು. ಹೊಟ್ಟೆಗೆ ಹಿಟ್ಟಿಲ್ಲದೆ ಅಲೆದಲೆದು ಆತ ಕಂಗಾಲಾಗಿಹೋದ. ಇಪ್ಪತ್ತೊಂದನೆಯ ದಿನ ಹೀಗೆಯೆ ಅಲೆಯುತ್ತಾ ಸಂಜೆಯವೇಳೆಗೆ ಸುಸ್ತಾಗಿ ಬವಳಿ ಬಂದಂತಾಗಲು ಒಂದು ಅಂಗಡಿಯ ಮುಂದೆ ನೆರಳಿನಲ್ಲಿ ಕೂತ. ಅದರ ಇದಿರಿನಲ್ಲಿ ಒಂದು ಪುಸ್ತಕದ ಅಂಗಡಿ. ಆಜಾನುಬಾಹುವಾದ ಮಹಾಪುರುಷನೊಬ್ಬನು ಅಲ್ಲಿ ಪುಸ್ತಕಗಳ ವ್ಯಾಪಾರ ಮಾಡುತ್ತಿದ್ದ. ಆತನ ತಲೆಯ ಕೂದಲು, ಉದ್ದವಾದ ಗಡ್ಡ, ಹೊಳೆಯುವ ಕಣ್ಣುಗಳು, ತೇಜಃಪುಂಜವಾದ ಮುಖ–ಇವುಗಳೆಲ್ಲ ತನಗೆ ಪರಿಚಿತವಾದುವೆನ್ನಿಸಿತು. ಆತನ ಸುತ್ತ ನಾಲ್ಕಾರುಜನ ನಿಂತು ಆತನ ಆಜ್ಞಾಧಾರಕರಂತೆ ನಡೆದುಕೊಳ್ಳುತ್ತಿದ್ದರು. ರಾಘವೇಂದ್ರ ಅವರಲ್ಲಿ ಒಬ್ಬರನ್ನು ಕುರಿತು 'ಇವರು ಯಾರು ?' ಎಂದು ಕೇಳಿದ. ಅವರೇ ಶಿವಾನಂದರು ! ತೊಳಲುತರಸುವ ಬಳ್ಳಿ ಕಾಲ್ತುಡುಕಿದಂತಾಯಿತು. ಹರ್ಷ ಪುಳಕಿತನಾದ ಆತ ಆನಂದ ಬಾಷ್ಪಗಳನ್ನು ಸುರಿಸುತ್ತಾ ಆ ಸಂತನ ಪಾದಗಳ ಬಳಿ ಕುಸಿದ. ಆತನನ್ನು ಮೇಲಕ್ಕೆತ್ತಿ ಮೈ ಕೈಗಳನ್ನು ಸವರುತ್ತಾ ಅವನ ಕಥೆಯನ್ನೆಲ್ಲ ಆಮೂಲಾಗ್ರವಾಗಿ ಅರಿತುಕೊಂಡ ಶ್ರೀ ಶಿವಾನಂದರು ಒಡನೆಯೆ ಆತನನ್ನು ಒಂದು ಜಟಕಾಗಾಡಿಯಲ್ಲಿ ಕೂಡಿಸಿಕೊಂಡು ತಮ್ಮ ಬಿಡಾರಕ್ಕೆ ಕರೆದೊಯ್ದರು.

ಶ್ರೀ ಶಿವಾನಂದ ತೀರ್ಥಸ್ವಾಮಿಜಿಯವರು ಉಜ್ವಲ ರಾಷ್ಟ್ರಾಭಿಮಾನಿ ; ಹಿಂದೂ ಧರ್ಮ, ಸಂಸ್ಕೃತಿಗಳಲ್ಲಿ ಅವರಿಗೆ ಅಪಾರವಾದ ಅಭಿಮಾನ. ಅಂಗಸಾಧನೆಯಿಂದ ದೇಹವನ್ನು ಬೆಳೆಸಿದಂತೆಯೆ ಅಧ್ಯಾತ್ಮ ಸಾಧನೆಯಿಂದ ಆತ್ಮಜ್ಞಾನವನ್ನು ಗಳಿಸಿಕೊಂಡಿದ್ದವರು. ಯೋಗಶಾಸ್ತ್ರದಲ್ಲಿ ಅವರಿಗಿದ್ದ ಅನುಭವ ಅಪಾರ, ಅದ್ವಿತೀಯ, ಅಸದೃಶ. ಅಗಾಧವಾದ ಶಿಷ್ಯಸಂಪತ್ತು ಅವರದು. ಅವರೊಬ್ಬ ಆದರ್ಶಪುರುಷ. ಆತ ರಾಘವೇಂದ್ರನನ್ನು ಶಿಷ್ಯನನ್ನಾಗಿ ಸ್ವೀಕರಿಸಲು ಮೊದಲು ಒಪ್ಪಲಿಲ್ಲ. ಆದರೆ ರಾಘವೇಂದ್ರನ ಹಟದ ಮುಂದೆ ಅವರ ನಿಶ್ಚಯ ನಿಲ್ಲಲಿಲ್ಲ. ಅವರು ಒಡ್ಡಿದ ಪರೀಕ್ಷೆಯ ಒರೆಗಲ್ಲಮೇಲೆ ಹದಿನಾರಾಣೆಯ ಬಣ್ಣವನ್ನು ಬಿಟ್ಟ ಈ ಚಿನ್ನವನ್ನು ಅವರು ಸ್ವೀಕರಿಸಿದರು. ತಮ್ಮೊಡನೆ ಈ ಹೊಸಶಿಷ್ಯನನ್ನು ಕಟ್ಟಿಕೊಂಡು ನಾಡುಗಳನ್ನು ಸುತ್ತುತ್ತಾ ತಮ್ಮಜ್ಞಾನ ಭಂಡಾರವನ್ನೆಲ್ಲ ಅವನಿಗೆ ಧಾರೆಯೆರೆದರು. ಅಷ್ಟೇ ಅಲ್ಲ, ಈ ತಮ್ಮ ಮಮತೆಯ ಕೂಸನ್ನು ತಮ್ಮ ಗೆಳೆಯರಾದ ಬರೋಡದ ಮಾಣಿಕ್ಯರಾಯರಲ್ಲಿಗೆ ಕರೆದೊಯ್ದು, ಈ ಅಮೂಲ್ಯರತ್ನವನ್ನು ಸಾಣೆ ಹಿಡಿಯುವಂತೆ ಹೇಳಿ ಒಪ್ಪಿಸಿದರು.

ಪ್ರೊಫೆಸರ್ ಮಾಣಿಕ್ಯರಾಯರು ಶಿವಾನಂದರಂತೆಯೆ ಉಜ್ವಲ ರಾಷ್ಟ್ರಪ್ರೇಮಿಗಳು. ಆದರೆ ಕ್ರಾಂತಿಕಾರಿಗಳು. ಬ್ರಿಟಿಷರನ್ನು ಭಾರತದಿಂದ ಓಡಿಸಲು ಸತ್ಯಾಗ್ರಹಕ್ಕಿಂತ ಶಕ್ತಿಪ್ರದರ್ಶನವೇ ಸರಿಯಾದ ಮಾರ್ಗವೆಂದು ನಂಬಿದ್ದವರು. ಅವರು ಬರೋಡಾದಲ್ಲಿ 'ಜುಮ್ಮಾದಾದಾ ವ್ಯಾಯಾಮಶಾಲೆ'ಯನ್ನು ಸ್ಥಾಪಿಸಿ, ವ್ಯಾಯಾಮವ್ಯಾಜದಿಂದ ಯುವಕರಿಗೆ ಯುದ್ಧವಿದ್ಯೆಯನ್ನು ಬೋಧಿಸುತ್ತಿದ್ದರು. ನೈಷ್ಠಿಕ ಬ್ರಹ್ಮಚಾರಿಯಾದ ಈ ಅಭಿನವ ಭೀಷ್ಮನಿಗೆ ಈ ಹೊಸ ಶಿಷ್ಯನಲ್ಲಿ ತುಂಬ ಮಮತೆ ಬೆಳೆಯಿತು. ಅವನು ಅವರ ಪ್ರೀತಿಯ 'ಕರ್ಣಾಟಕಿ'ಯಾದ. ಶ್ರೀ ರಾಘವೇಂದ್ರಸ್ವಾಮಿಜಿ ಹೇಳುತ್ತಾರೆ–'ಅವರಲ್ಲಿ ನಾನು ಲಾಠಿ, ಕಾಟಿ, ಭರ್ಚಿ, ಪಟ್ಟಾ, ತಲವಾರ್, ಬನ್‌ದೇಶ, ಡ್ಯಾಗರ್-ಫೈಟಿಂಗ್, ಜಿಜುಟ್ಸು, ಕುಸ್ತಿ ಮೊದಲಾದ ವೀರವ್ಯಾಯಾಮಗಳನ್ನು; ದಂಡ, ಬೈಠಕ್, ಕರೇಲ್, ಜೋಡಿ, ಮಲ್ಲಕಂಭ್, ಸ್ಪ್ರಿಂಗ್ ಡಂಬೆಲ್ಸ್, ವೆಯ್ಟ್ ಡಂಬೆಲ್ಸ್, ವೈಟ್ ಲಿಫ್ಟಿಂಗ್, ರೋಮನ್‌ರಿಂಗ್ಸ್ ಮೊದಲಾದ ದೈಹಿಕಶಕ್ತಿಯ ಬೆಳವಣಿಗೆಗೆ ಸಂಬಂಧಪಟ್ಟ ವ್ಯಾಯಾಮಗಳನ್ನೂ ಅಲ್ಲದೆ ಲೇಜೀಂ, ಡಂಬೆಲ್ಸ್, ಬಾಲ ಕವಾಯತ್, ಬೋಥಾಟಿ, ಸರ್ವಾಂಗ ಸುಂದರವ್ಯಾಯಾಮ–ಮುಂತಾದ ಕ್ರೀಡಾವ್ಯಾಯಾಮಗಳ ಶಿಕ್ಷಣವನ್ನೂ ಪಡೆದೆನು'. ಇವುಗಳಲ್ಲಿ ಉತ್ತೀರ್ಣನಾದನೆಂಬುದಕ್ಕೆ ಬಿ. ಪಿ. ಸಿ. (ಬ್ಯಾಚಲರ್ ಆಫ್ ಫಿಸಿಕಲ್ ಕಲ್ಚರ್) ಡಿಗ್ರಿಯನ್ನೊಳಗೊಂಡ ಶಿಫಾರಸುಪತ್ರವೂ ದೊರೆಯಿತು.

ಆಸನ ಪ್ರಾಣಾಯಾಮಾದಿ ಯೋಗವಿದ್ಯೆಯನ್ನೂ ದಂಡ, ಬೈಠಕ್ ಮೊದಲಾದ ವೀರವ್ಯಾಯಾಮಗಳನ್ನೂ ಕಲಿಯುವಾಗ ಅವುಗಳಿಂದ ಸಾಧಿಸಬಹುದಾದ ರೋಗನಿವಾರಕ ಶಕ್ತಿಯನ್ನು ಗುರು ಮುಖದಿಂದಲೂ, ಸ್ವಾನುಭವದಿಂದಲೂ ಅರಿತುಕೊಂಡಿದ್ದ ರಾಘವೇಂದ್ರನಿಗೆ (ಈ ವೇಳೆಗೆ ಆತನ ಅಪಸ್ಮಾರರೋಗ ಹೋಗಿ ಆತನ ದೇಹ ಅಪರಂಜಿಯಾಗಿತ್ತು.)ವೈದ್ಯವಿದ್ಯೆಯತ್ತ ಗಮನ ಹರಿಯಿತು. ಅಲ್ಲದೆ 'ದೇಶಸೇವೆಯೆ ಈಶ ಸೇವೆ, ಜನರ ಸೇವೆಯೆ ಜನಾರ್ದನ ಸೇವೆ. ತನ್ನೊಬ್ಬನ ಉದ್ಧಾರಕ್ಕಿಂತ ಲೋಕೋದ್ಧಾರ ದೊಡ್ಡದು' ಎಂಬ ಮಹಾಸತ್ಯ ಗೋಚರವಾಯಿತೆಂದು ತೋರುತ್ತದೆ. ಆತನು ತನ್ನ ಅಪೇಕ್ಷೆಯನ್ನು ಪೂಜ್ಯ ಗುರುಗಳಾದ ಶಿವಾನಂದರಲ್ಲಿ ನಿವೇದಿಸಿದ. ಇದನ್ನು ಕೇಳಿ ಅವರಿಗ ಪರಮಸಂತೋಷವಾಯಿತು. ಕಬ್ಬಿಣ ಕಾದಿರುವಾಗಲೇ ಅದನ್ನು ಸಾಗಬಡಿಯಬೇಕೆಂದು ಒಡನೆಯೆ ಆತನನ್ನು ಲಾಹೋರಿನ ಬಾಬಾ ಲಕ್ಷ್ಮಣದಾಸ ಸಾಧು ಎಂಬುವರಲ್ಲಿಗೆ ಕರೆದೊಯ್ದರು. ಬಾಬಾರವರು ಒಬ್ಬ ಜೈನ ಮುನಿಗಳು, ಅವರಿಗೆ ಆಯುರ್ವೇದದಲ್ಲಿ ಅಪಾರವಾದ ಅನುಭವ, ಆಳವಾದ ಜ್ಞಾನ ಇದ್ದವು. ಯೋಗ ವಿದ್ಯೆಯೂ ಅವರಿಗೆ ಕರತಲಾಮಲಕವಾಗಿತ್ತು. ಆದರೆ ಶಿವಾನಂದರಿಗೂ ಈ ಬಾಬಾರವರಿಗೂ, ಏಕೋ ಏನೋ, ಅಷ್ಟು ಹೊಂದಿಕೆ ಇರಲಿಲ್ಲ ಎಂದು ತೋರುತ್ತದೆ. ಶಿವಾನಂದರು ಶಿಷ್ಯನನ್ನು ಬಾಬಾರವರ ಕುಟೀರದ ಬಳಿ ಬಿಟ್ಟು ಹೊರಟುಹೋದರು. ರಾಘವೇಂದ್ರ ಎರಡುವರ್ಷಗಳ ಕಾಲ ಅವರ ಅಚ್ಚುಮೆಚ್ಚಿನ ಶಿಷ್ಯನಾಗಿದ್ದು ಆಯುರ್ವೇದದಲ್ಲಿ ಪಾರಂಗತನಾದ. ಅವರಿಂದ ಭಕ್ತಿ, ಜ್ಞಾನ, ರಾಜ-ಕರ್ಮಯೋಗಗಳ ಸಮನ್ವಯಯೋಗವನ್ನು ಆತ

ಅರ್ಥಮಾಡಿಕೊಂಡ. 'ಭಗವಂತ ಎಲ್ಲೆಲ್ಲಿಯೂ ಇದ್ದಾನೆ, ನನ್ನೊಳಗೆ ಇದ್ದಾನೆ, ನಾನೇ ಅವನಾಗಿದ್ದೇನೆ' ಎಂಬ ನಿತ್ಯಸತ್ಯದ ಅರಿವೂ ಆತನಿಗುಂಟಾಯಿತು. ಆತ ಇನ್ನೂ ಕೆಲದಿನ ಅಲ್ಲಿಯೆ ಇದ್ದು ತನ್ನ ಶಿಷ್ಯವೃತ್ತಿಯನ್ನು ಮುಂದುವರಿಸಬಹುದಾಗಿತ್ತೋ ಏನೊ ! ಹಾಗಾಗಲಿಲ್ಲ. ಒಂದು ದಿನ ಮಾತಿನ ಮಧ್ಯದಲ್ಲಿ ಬಾಬಾ ಶಿಷ್ಯನೊಡನೆ 'ಮಗು, ನೀನು ಶಿವಾನಂದರಿಗೆ ಬದಲಾಗಿ ನನ್ನನ್ನು ನಿನ್ನ ಗುರುವೆಂದು ಸ್ವೀಕರಿಸು, ನಾನು ನನ್ನ ಸರ್ವಶಕ್ತಿಯನ್ನೂ ನಿನಗೆ ಧಾರೆಯೆರೆದುಕೊಡುತ್ತೇನೆ' ಎಂದರು. ರಾಘವೇಂದ್ರ ಪ್ರತ್ಯುತ್ತರ ನೀಡಲಿಲ್ಲ. ಆ ಕ್ಷಣದಲ್ಲಿಯೆ ಬಾಬಾರವರ ಕುಟೀರವನ್ನು ತ್ಯಜಿಸಿ ಹೊರಟುಹೋದನು. ಈ ಸುದ್ದಿಯನ್ನು ಕೇಳಿದಾಗ ಶ್ರೀ ಶಿವಾನಂದರು ಶಿಷ್ಯನನ್ನು ಲಘುವಾಗಿ ಟೀಕಿಸಿದರಾದರೂ ಆತನ ನಿಷ್ಠೆಯನ್ನು ಮನಸ್ಸಿನಲ್ಲಿಯೆ ಮೆಚ್ಚಿಕೊಂಡರು.

ಇಲ್ಲಿಗೆ ಶ್ರೀ ರಾಘವೇಂದ್ರರ ಪಠ್ಯಪುಸ್ತಕ ಶಿಕ್ಷಣ ಮುಗಿದಂತಾಯಿತು. ಆದರೆ ಜ್ಞಾನವೆಂಬುದು ಪ್ರತಿಭೆ ಪಾಂಡಿತ್ಯ, ಲೋಕಾನುಭವಗಳೆಂಬ ತ್ರಿವೇಣಿ ಸಂಗಮದಿಂದ ಉದಿಸುವ ದೇವಗಂಗೆ. ಬಾಬಾ ಲಕ್ಷ್ಮಣದಾಸರಿಂದ ಹೊರಹೊರಟ ರಾಘವೇಂದ್ರರು ಭಾರತದ ಉದ್ದಗಲಕ್ಕೂ ಸಂಚರಿಸಿ, ಮಾನವ ಸ್ವಭಾವವನ್ನು ಆಳವಾಗಿ ಅಭ್ಯಸಿಸಿ ತಮ್ಮ ಬುದ್ಧಿ ಭಾವಗಳ ಕೋಶವನ್ನು ಶ್ರೀಮಂತಗೊಳಿಸಿಕೊಂಡರು. ಆ ಕಾಲದಲ್ಲಿ ಅನೇಕ ಸಾಧುಸತ್ಪುರುಷರ ದರ್ಶನವಾಯಿತು, ಅವರಿಗೆ. ಹೃಷೀಕೇಶದ ಶಿವಾನಂದರು, ಲೋನಾವಲಯದ ಕುವಲಯಾನಂದರು, ಮಥುರೆಯ ಭಗವಾನ್‌ಜೀ, ಪುರಿಯ ಓಂಕಾರನಾಥಜೀ, ಕೇದಾರದ ಶಾಂತಿನಾಥ ಆನಂದಜೀ, ಔಂಧ್‌ಸಂಸ್ಥಾನದ ಬಾಬಾ ಸಾಹೇಬ್ ಪಂತ್, ಯೋಗಾನಂದ-ಮೊದಲಾದ ಆಧ್ಯಾತ್ಮ ಜಗಜ್ಯೋತಿಗಳನ್ನು ಸಂದರ್ಶಿಸಿ, ಅವರೊಡನೆ ಲೌಕಿಕ ಪಾರಲೌಕಿಕ ವಿಚಾರಗಳನ್ನು ಚರ್ಚಿಸಿದರು ; ತಮ್ಮ ಅನುಭವಗಳನ್ನು ಅವರ ಅನುಭವಗಳ ಒರೆಗಲ್ಲಮೇಲೆ ಉಜ್ಜಿನೋಡಿ ತೃಪ್ತಿಯನ್ನು ಹೊಂದಿದರು.

ಸಹಸ್ರ ಉಳಿಯಪೆಟ್ಟಿಗೆ ಸಿಕ್ಕಿ ಕಗ್ಗಲ್ಲು ದಿವ್ಯ ಸುಂದರ ವಿಗ್ರಹವಾಯಿತು. ಇದನ್ನು ಕಂಡು ಸಂತೃಪ್ತಿಗೊಂಡ ಶಿವಾನಂದರು 'ಕರ್ಣಾಟಕೀ ! ನೀನು ಇದುವರೆಗೆ ಸಂಪಾದಿಸಿದುದನ್ನು ಸದ್ವಿನಿಯೋಗಮಾಡು. ಯೋಗಶಾಸ್ತ್ರವನ್ನು ನಿನ್ನ ತಾಯ್ನಾಡಿನಲ್ಲಿ ಪ್ರಚಾರಮಾಡುತ್ತಾ, ಅದರ ಜೊತೆಯಲ್ಲಿಯೆ ನಮ್ಮ ರಾಷ್ಟ್ರದ ಸ್ವಾತಂತ್ರ್ಯ ಸಮರಕ್ಕೆ ಅಗತ್ಯವಾದ ಸತ್ಯಾಗ್ರಹಿಗಳ ತಂಡವನ್ನು ನಿರ್ಮಾಣಮಾಡು. ದೈವಶಕ್ತಿ ನಿನ್ನ ಬೆಂಬಲಕ್ಕಿದೆ' ಎಂದು ಅಪ್ಪಣೆ ಮಾಡಿದರು. ಅಷ್ಟರಲ್ಲಿ ರಾಘವೇಂದ್ರರೂ ಕರ್ಣಾಟಕಕ್ಕೆ ಹೋಗಲೇಬೇಕಾದ ಸನ್ನಿವೇಶವೊಂದು ತಾನಾಗಿಯೇ ಒದಗಿ ಬಂತು. ೧೯೩೪ನೇ ಇಸವಿ, ಕಾರವಾರ ಜಿಲ್ಲೆಯ ಭಟ್ಕಳದಲ್ಲಿ 'ಹನುಮಾನ್ ವ್ಯಾಯಾಮ ಶಾಲೆ'ಯ ಉದ್ಘಾಟನಾ ಸಮಾರಂಭವನ್ನು ನಡೆಸಿಕೊಡುವಂತೆ ಪ್ರೊಫೆಸರ್ ಮಾಣಿಕ್ಯರಾಯರಿಗೆ ಕರೆ ಬಂತು. ಅವರು ತಮ್ಮ ಪಟ್ಟ ಶಿಷ್ಯ ರಾಘವೇಂದ್ರರಾಯರನ್ನು ಆ ಕಾರ್ಯಕ್ಕೆ ನೇಮಿಸಿದರು. ಸಮಾರಂಭದ ಆಹ್ವಾನ ಪತ್ರಿಕೆಗಳಲ್ಲಿ ರಾಘವೇಂದ್ರರಾವ್ ಬಿ.ಪಿ.ಸಿ. ಅವರು ಮುಖ್ಯ ಅತಿಥಿಗಳೆಂದು ಸೂಚಿಸಲಾಗಿತ್ತು. ಅವರು ಬಸ್ಸಿನಿಂದ ಇಳಿಯುತ್ತಿದ್ದಂತೆಯೆ ವ್ಯಾಯಾಮ ಶಾಲೆಯವರಿಗಿಂತ ಮುಂಚೆ ಪೋಲೀಸಿನವರು ಅವರನ್ನು ಎದುರುಗಂಡು ವಾರಂಟ್ ಜಾರಿ ಮಾಡಿದರು. ಇದೇಕೆ ಹೀಗೆ ? ಎಂದು ವಿಚಾರಿಸಿದಾಗ ರಾಘವೇಂದ್ರರಾವ್‌ರವರ ಬಿ.ಪಿ.ಸಿ. ಡಿಗ್ರಿ ಇದಕ್ಕೆ ಕಾರಣ ಎಂದು ಗೊತ್ತಾಯಿತು. ಆ ಅಕ್ಷರಗಳಿಗೆ ಬೊಂಬಾಯಿ ಪ್ರೊವಿನ್ಷಿಯಲ್ ಕಾಂಗ್ರೆಸ್‌ಗೆ ಸೇರಿದವರು ಎಂದು ಪೋಲೀಸರು ಅರ್ಥಮಾಡಿಕೊಂಡಿದ್ದರು. ನಿಜಸಂಗತಿ ಗೊತ್ತಾದಮೇಲೆ ಸಮನ್ಸ್‌ನ್ನು ಹಿಂದಕ್ಕೆ ತೆಗೆದುಕೊಂಡರು. ಇದಾದ ನಂತರ ಅವರು ವ್ಯಾಯಾಮಶಾಲೆಯ ಉದ್ಘಾಟನೆಯನ್ನು ವಿಜೃಂಭಣೆಯಿಂದ ನಡೆಸಿ, ಬರೋಡಾಕ್ಕೆ ಹಿಂದಿರುಗಿದರು. ಅದರ ಮರುವರುಷ ಅವರು ಗುರುತರವಾದ ಕಾರ್ಯಭಾರವನ್ನು ಹೊತ್ತು, ಗುರುಗಳ ಆಣತಿಯನ್ನು ನಡೆಸುವುದಕ್ಕೆಂದೇ ಕರ್ಣಾಟಕಕ್ಕೆ ಬಂದರು.

* * * *

ಮಲ್ಲಾಡಿ ಹಳ್ಳಿಯಲ್ಲಿದ್ದ ‘ಬಣ್ಣದ ಮನೆ’ಯೊಂದು ‘ವ್ಯಾಯಾಮ ಮಾಸ್ತರ’ ವಸತಿಗೃಹವಾಯಿತು. ನೇಯ್ಗೆಯವರೆ ಮುಖ್ಯನಿವಾಸಿಗಳಾಗಿರುವ ಆ ಹಳ್ಳಿಯಲ್ಲಿ ನೂಲಿಗೆ ಬಣ್ಣ ಹಾಕಲೆಂದು ನಿರ್ಮಾಣವಾಗಿದ್ದ ಎರಡು ಚಿಕ್ಕ ಕೊಠಡಿಗಳ ಕೊಂಪೆ ಅದು. ಗಾಳಿ ಬೆಳಕುಗಳಿಗೆ ಅದರಲ್ಲಿ ಪ್ರವೇಶವಿಲ್ಲ. ಆದರೆ ವ್ಯಾಯಾಮ ಮಾಸ್ತರ ವಸತಿಗೆ ಎಲ್ಲಿಯ ಅಡ್ಡಿ ಆತಂಕ? ಅವರು ಅದರಲ್ಲಿ ಠಿಕಾಣಿ ಹಾಕಿ ತಮ್ಮ ಕಾರ್ಯ ಚಟುವಟಿಕೆಗಳಿಗೆಲ್ಲ ಅದನ್ನು ಕೇಂದ್ರವಾಗಿ ಮಾಡಿಕೊಂಡರು. ಮರುದಿನದಿಂದ ಅವರ ಶಿಬಿರ ಪ್ರಾರಂಭವಾಯಿತು. ಅದರ ಜೊತೆಯಲ್ಲಿಯೇ ಹಳ್ಳಿಯ ಜನಜೀವನದ ಕಾಯಕಲ್ಪವೂ ಪ್ರಾರಂಭವಾಯಿತು. ಮಲ್ಲಾಡಿಹಳ್ಳಿಯೆಂದರೆ ಕೊಳಕಿಗೆ ಮತ್ತೊಂದು ಹೆಸರು. ಮನೆ ಮನೆಯ ಮುಂದೆಯೂ ಕಸದ ರಾಶಿ, ಬೀದಿಗಳಲ್ಲಿ ಕಾಲಿಡುವುದೇ ಕಷ್ಟವೆನ್ನುವಷ್ಟು ಹೇಸಿಗೆ, ಬಚ್ಚಲ ರೊಚ್ಚು ಅಲ್ಲಲ್ಲೇ ನಿಂತು ದುರ್ವಾಸನೆ, ಮನೆಯ ಪಕ್ಕದಲ್ಲೇ ಗೊಬ್ಬರದ ಗುಂಡಿ. ಊರಿನ ಪರಿಸರದಂತೆ ಅಲ್ಲಿನ ಜನರ ದೇಹ, ಬುದ್ಧಿ, ಮನಸ್ಸು—ಎಲ್ಲವೂ ಕೊಳಕೆ. ಶ್ರೀ ರಾಘವೇಂದ್ರರು ಈ ಕೊಳಕನ್ನೆಲ್ಲ ನಿರ್ಮೂಲ ಮಾಡುವ ಸ್ಯಾನಿಟರಿ ಇನ್‌ಸ್ಪೆಕ್ಟರರಾಗಲು ನಿರ್ಧರಿಸಿದರು. ತಮ್ಮ ಸ್ವಭಾವಕ್ಕೆ ತಕ್ಕಂತೆ ಅವರು ಅಲ್ಲಿನ ಜನರಲ್ಲಿ ಸಮರಸವಾಗಿ ಬೆರೆತರು. ಮನೆ ಮನೆಗೂ ಪಾದಯಾತ್ರೆ ಬೆಳೆಸಿ, ಅವರ ಮನೆ ಮನಗಳ ಒಳಗೂ ಹೊರಗೂ ಶುದ್ಧವಾಗಿರಬೇಕೆಂದು ಬೋಧಿಸಿದರು. ಆದರೆ ತಲೆಮಾರುಗಳಿಂದ ಬೆಳೆದು ಬಂದಿರುವ ತಮ್ಮ ಶೀಲ ಸ್ವಭಾವಗಳನ್ನು ಅವರು ಒಂದೇ ದಿನಕ್ಕೆ ಬದಲಾಯಿಸಲು, ಪಾಪ, ಹೇಗೆ ಸಾಧ್ಯ? ಶ್ರೀ ರಾಘವೇಂದ್ರರ ಬೋಧನೆ ಗೋರ್ಕಲ್ಲ ಮೇಲೆ ಮಳೆಗರೆದಂತಾಯಿತು. ಇದನ್ನು ಕಂಡು ಆ ಚಡ್ಡಿ ಬಾಬುವೇನೂ ಧೃತಿಗೆಡಲಿಲ್ಲ. ಅಸಾಧ್ಯ ಎಂಬುದು ಆತನ ಕೋಶದಲ್ಲಿಲ್ಲ. ಆತ ಮತ್ತೊಮ್ಮೆ ಆ ಜನಕ್ಕೆ ಬೋಧಿಸುವುದಕ್ಕೂ ಹೋಗಲಿಲ್ಲ. ಮರುದಿನ ಬೆಳಗಿನ ಝಾವ ಮೂರು ಗಂಟೆಗೆ ಮೇಲಕ್ಕೆದ್ದವರೇ ಕೈಲಿ ಪೊರಕೆಯನ್ನು ಹಿಡಿದು ಜಲಗಾರನ ಕರ್ಮವನ್ನು ಕೈಕೊಂಡರು. ಬೀದಿಯೆಲ್ಲ ಚೊಕ್ಕಟವಾಯಿತು, ಮನೆ ಮನೆಯ ಮುಂದೆ ಸೆಗಣಿ ನೀರನ್ನು ಹಾಕಿ ರಂಗೋಲೆಯ ಎಳೆಯನ್ನು ಬಿಡಿಸಿದ್ದಾಯಿತು. ಬೆಳಗ್ಗೆ ಎದ್ದು ಜನ ಬಾಗಿಲನ್ನು ತೆರೆದಾಗ ಇದೆಂತಹ ಇಂದ್ರಜಾಲ! ಜನರು ಇನ್ನೂ ಕನಸನ್ನು ಕಾಣುತ್ತಿರುವೆಂದು ಭಾವಿಸಿ ಕಣ್ಣುಜ್ಜಿಕೊಂಡರು. ಅಲ್ಲ, ಕನಸಲ್ಲ; ಇದು ಚಡ್ಡಿ ಬಾಬುವಿನ ಕೆಲಸ! ಕಣ್ಣಿಗೆ ಇಂಪನ್ನು, ಹೃದಯಕ್ಕೆ ತಂಪನ್ನು ನೀಡುತ್ತಿದ್ದ ಈ ದೃಶ್ಯವನ್ನು ಕಂಡು, ಅದುವರೆಗೂ ಕತ್ತೆಯಂತೆ ಬಿದ್ದಿರುತ್ತಿದ್ದ ಜನರಲ್ಲಿ ಕರ್ತವ್ಯಪ್ರಜ್ಞೆ ಮೂಡಿತು. ಅವರು ಒಬ್ಬೊಬ್ಬರಾಗಿ, ಒಟ್ಟೊಟ್ಟಾಗಿ ಶ್ರೀ ರಾಘವೇಂದ್ರರ ಬಳಿಗೆ ಹೋಗಿ ಕ್ಷಮೆಯನ್ನು ಯಾಚಿಸಿದರು; ಇನ್ನು ಮುಂದೆ ಚೊಕ್ಕಟವಾಗಿರುವುದಾಗಿ ಮಾತುಕೊಟ್ಟರು, ತಮ್ಮ ಮಾತಿನಂತೆ ನಡೆದುಕೊಂಡರು. ಇದು ಪರಿಷ್ಕರಣದ ಮೊದಲ ಘಟ್ಟ.

ತರಲೆಯ ತೌರುಮನೆಯಾಗಿದ್ದ ಮಲ್ಲಾಡಿಹಳ್ಳಿಯಲ್ಲಿ ಜಗಳ ಕದನಗಳಿಗೆ ಕೊರತೆಯೆ? ಅದರಲ್ಲಿಯೂ ಕುಡಿತ, ಜೂಜುಗಳು ತಾಂಡವನೃತ್ಯ ಮಾಡುತ್ತಿರುವಾಗ? ದಿನ ಬೆಳಗಾದರೆ ಹೊಡೆದಾಟ, ಬಡಿದಾಟ, ಮಾರಾಮಾರಿ. ಶ್ರೀ ರಾಘವೇಂದ್ರರ ಪ್ರಭಾವದಿಂದ ಇದು ಬಹು ಬೇಗ ಹತೋಟಿಗೆ ಬಂತು. ವ್ಯಾಯಾಮ ಮಾಸ್ತರ ಶಿಷ್ಯವರ್ಗಕ್ಕೆ ಗುರುಗಳಲ್ಲಿ ಅಪಾರವಾದ ಭಕ್ತಿ, ಗೌರವ, ಅಭಿಮಾನ. ಅವರು ಮಾಡುತ್ತಿದ್ದ ಬೋಧನೆ, ಕಲಿಸುತ್ತಿದ್ದ ಆಸನ, ಪ್ರಾಣಾಯಾಮಗಳು ಆ ಯುವಕರ ತಂಡದಲ್ಲಿ ಸಂಸ್ಕೃತಿ ನಾಗರಿಕತೆಗಳನ್ನು ಬಿತ್ತಿ ಬೆಳೆಸುತ್ತಿದ್ದುವು. ಈ ಯುವಕರ ಪರಿವರ್ತನೆಯನ್ನು ಕಂಡು ಊರಿನ ಹಿರಿಯರಲ್ಲಿಯೂ ಸೌಜನ್ಯ ಸಜ್ಜನಿಕೆಗಳು ಅಂಕುರಿಸಿದುವು. ತಮ್ಮ ಜಗಳಗಳನ್ನು ನೆತ್ತರು ಹರಿಸಿ ನಿರ್ಧರಿಸುವುದಕ್ಕೆ ಬದಲಾಗಿ ಶ್ರೀ ರಾಘವೇಂದ್ರರ ತೀರ್ಮಾನಕ್ಕೆ ಒಪ್ಪಿಸಲು ನಿರ್ಧರಿಸಿದರು. ನಿಷ್ಪಕ್ಷಪಾತವಾದ ಅವರ ತೀರ್ಮಾನಕ್ಕೆ ವಾದಿ ಪ್ರತಿವಾದಿಗಳಿಬ್ಬರೂ ತಲೆ ಬಾಗಿದರು. ಊರಿನ ರೋಗರುಜಿನಗಳಿಗಂತೂ ಅವರು ಧನ್ವಂತರಿಯಾಗಿದ್ದರಲ್ಲ! ಆದ್ದರಿಂದ ಅವರಲ್ಲಿದ್ದ ಆದರ ಗೌರವಗಳು ಒಂದಕ್ಕೆ ಹತ್ತಾಗಿ ಬೆಳೆದುವು. ಎಲ್ಲ ವಿಷಯಗಳಲ್ಲಿಯೂ ಶ್ರೀರಾಘವೇಂದ್ರರ ಸಲಹೆಯನ್ನು ಪಡೆಯುವುದು, ಅದರಂತೆ ನಡೆಯುವುದು ಪ್ರಾರಂಭವಾಯಿತು. ಅವರು ಊರವರೆಲ್ಲರ ‘ಅಪ್ಪಯ್ಯ’ ಆದರು. ಅವರು ಹಾಕಿದ ಗೆರೆ

ಯನ್ನು ಯಾರೂ ದಾಟುತ್ತಿರಲಿಲ್ಲ. ದಿನದಿನವೂ ಸಂಜೆ ಒಂದು ಗಂಟೆಯ ಕಾಲ ಭಜನೆ ನಡೆಯುವುದು. 'ಅಪ್ಪಯ್ಯ' ಅದರ ಮುಂದಾಳು. ಅವರೇ ಹಾರ್ಮೋನಿಯಂ ಬಾರಿಸಿಕೊಂಡು ದೇವರ ನಾಮವನ್ನು ಹೇಳಿಕೊಡುವುದು. ಆಗ್ಗೆ ಕೆಲವು ವರ್ಷಗಳ ಹಿಂದೆ ಪರಪ್ಪಸ್ವಾಮಿ ಎಂಬ ಸಂತನೊಬ್ಬ ಆ ಪ್ರಾಂತ್ಯದಲ್ಲಿ ಮನೆಮಾತಾಗಿದ್ದ. ಪವಾಡಪುರುಷ ನಾದ ಆತನಲ್ಲಿ ಊರವರಿಗೆಲ್ಲ ಪರಮಭಕ್ತಿ. ಆತನ ಚಿತ್ರಪಟವನ್ನು ಇಟ್ಟುಕೊಂಡು ಭಜನೆ ಮಾಡುತ್ತಿದ್ದರು. ವಾರಕ್ಕೊಮ್ಮೆ ಅದನ್ನು ಪಲ್ಲಕ್ಕಿಯಲ್ಲಿಟ್ಟುಕೊಂಡು ಊರಲ್ಲೆಲ್ಲ ಉತ್ಸವ ಹೋಗುತ್ತಿದ್ದುದೂ ಉಂಟು. ಯಾರಿ ಗಾದರೂ ಅನುವು ಆಪತ್ತುಗಳಾದರೆ ಆತನಿಗೆ ಹರಸಿಕೊಳ್ಳುತ್ತಿದ್ದರು. 'ನಂಬಿಕೆಟ್ಟವರಿಲ್ಲವೊ' ಅಲ್ಲವೆ? ಆ ನಂಬಿಕೆ ಅವರಿಗೆ ಫಲವನ್ನೂ ಕೊಡುತ್ತಿತ್ತು. ಅವಧೂತನಾಗಿದ್ದ ಆ ಸಂತನ ಪೂಜೆಯನ್ನು ಮನೆಯಲ್ಲಿ ನಡೆಸುವುದಕ್ಕಿಂತ ಪ್ರತ್ಯೇಕವಾದ ಮಠವೊಂದನ್ನು ಕಟ್ಟುವಂತೆ ಶ್ರೀ ರಾಘವೇಂದ್ರರು ಸಲಹೆಯಿತ್ತರು. ಅದು ಎಲ್ಲರಿಗೂ ಒಪ್ಪಿಗೆ ಯಾಯಿತು. ಆ ಕಾರ್ಯವನ್ನು ತಾವೇ ನಿಂತು ನಡೆಸಿಕೊಡುವಂತೆ ಅವರನ್ನು ಊರವರು ಪ್ರಾರ್ಥಿಸಿದರು. ಆದರೆ ಅವರು ಅದಕ್ಕೆ ಒಪ್ಪಲಿಲ್ಲ. ಶಿಬಿರ ಮುಗಿಯುತ್ತಲೆ ತಾವು ಅಲ್ಲಿಂದ ಹೊರಡುವುದಾಗಿ ತಿಳಿಸಿದರು.

ಸತ್ಯಸಂಗತಿ ಅನೇಕ ವೇಳೆ ಕಟ್ಟುಕಥೆಗಿಂತಲೂ ಹೆಚ್ಚು ರಮ್ಯ, ರೋಮಾಂಚಕರ. ಶ್ರೀ ರಾಘವೇಂದ್ರರು ಮಲ್ಲಾಡಿಹಳ್ಳಿಯಲ್ಲಿ ಸ್ಥಾಪಿಸಿದ 'ಅನಾಥ ಸೇವಾಶ್ರಮ'ದ ಇತಿಹಾಸ ಅದಕ್ಕೊಂದು ಉತ್ತಮವಾದ ಉದಾಹರಣೆ. ಅದರ ಜೊತೆಜೊತೆಯಲ್ಲಿಯೆ ಅವರ 'ವ್ಯಾಯಾಮ ಮಾಸ್ತರ'ತನ ಮುಗಿದು 'ಸ್ವಾಮಿ' ಪಟ್ಟವೂ, ಬಾಲ್ಯ ಕಳೆದು ಯೌವನ ಮೂಡುವಷ್ಟು ಸ್ವಾಭಾವಿಕವಾಗಿ, ಮೈವೆತ್ತು ನಿಲ್ಲುತ್ತದೆ. ಮಲ್ಲಾಡಿಹಳ್ಳಿಯ ನಲವತ್ತು ದಿನಗಳ ಶಿಬಿರ ಸಾಂಗವಾಗಿ ನೆರವೇರಿತು. ಮರುದಿನ ಶ್ರೀ ರಾಘವೇಂದ್ರರು ತಮ್ಮ ಪ್ರಯಾಣಕ್ಕಾಗಿ ಸಿದ್ಧತೆಗಳನ್ನು ಮಾಡಿಕೊಳ್ಳು ತ್ತಿದ್ದಾರೆ. ಬಾಗಿಲು ಹೊರಗೆ ಯಾರೊ ಗುಸುಗುಸು ಮಾತಾಡುತ್ತಿದ್ದುದು ಕೇಳಿಸಿತು. 'ಯಾರದು?' ಎಂಬ ಅವರ ಪ್ರಶ್ನೆಗೆ ಉತ್ತರವಾಗಿ ಮುದುಕಿಯೊಬ್ಬಳು ಫಲತಾಂಬೂಲದ ತಟ್ಟೆಯೊಡನೆ ಒಳಕ್ಕೆ ಪ್ರವೇಶಿಸಿದಳು. ಹಳೆಯ ಕಾಲದ ಇಪ್ಪತ್ತೈದು ಬೆಳ್ಳಿರೂಪಾಯಿಗಳೊಡನೆ ಆ ತಟ್ಟೆಯನ್ನು ಅವರ ಮುಂದೆ ಇಟ್ಟು ಆಕೆ ದೀರ್ಘದಂಡ ನಮಸ್ಕಾರ ಹಾಕಿದಳು. ಶ್ರೀ ರಾಘವೇಂದ್ರರು ಅಪ್ರತಿಭರಾಗಿ 'ಏನಿದು ಸಂಕಜ್ಜಿ?' ಎಂದು ಕೇಳಿದರು. ಸಂಕಜ್ಜಿ ಎದ್ದು ನಿಂತು ಕೈಮುಗಿದುಕೊಂಡು 'ಅಪ್ಪಯ್ಯ, ನಾನು ಗಂಡ, ಮಕ್ಕಳು ಒಂದೂ ಇಲ್ಲದ ಮುಪ್ಪಿನ ಮುದುಕಿ. ನನ್ನ ಜೀವನದಲ್ಲಿ ಉಳಿಸಿರುವ ನಾಲಕ್ಕು ಕಾಸನ್ನು ನಿನ್ನ ಪಾದಕ್ಕೆ ಒಪ್ಪಿಸುತ್ತೀನಿ. ಪರಪ್ಪಸ್ವಾಮಿ ಮಠ ಕಟ್ಟಿಸಬೇಕು ಅಂದೆಲ್ಲ, ನೀನು ನಿಂತು ಆ ಕೆಲಸ ಮಾಡು' ಎಂದಳು. ಆಕೆಯ ಮಾತುಗಳನ್ನು ಕೇಳಿ ನಕ್ಕ ರಾಘವೇಂದ್ರರು 'ಅಮ್ಮ, ಇಪ್ಪತ್ತೈದಕ್ಕೆ ಮಠ ಕಟ್ಟಿಸಲು ಸಾಧ್ಯವೆ?' ಎಂದರು. ಆಕೆ ಮಡಿಲಿನಿಂದ ಮತ್ತೆ ಇಪ್ಪತ್ತೈದನ್ನು ತೆಗೆದು ಮುಂದಿಟ್ಟಳು. ಅವರು 'ಸಾಧ್ಯವಿಲ್ಲ' ಎಂದುದನ್ನು ಕೇಳಿ ಮತ್ತೆ ಐವತ್ತನ್ನು ಹೊರತೆಗೆದು ಅವರ ಮುಂದಿಟ್ಟಳು. ರಾಘವೇಂದ್ರರು ಮುಖವನ್ನು ಗಂಟುಹಾಕಿಕೊಂಡು 'ಇಷ್ಟರಿಂದ ಮಠಕಟ್ಟುವುದಕ್ಕೂ ಸಾಧ್ಯವಿಲ್ಲ, ಅದಕ್ಕಾಗಿ ನಾನು ಇಲ್ಲಿ ನಿಲ್ಲುವುದೂ ಸಾಧ್ಯವಿಲ್ಲ. ನೀನು ಇಲ್ಲಿಂದ ಹೊರಡು' ಎಂದು ಗದರಿಸಿದರು. ನಡುಗಿಹೋದ ಮುದುಕಿ ತಟ್ಟೆಯನ್ನು ಎತ್ತಿಕೊಂಡು ಹೊರಗೆ ಬಂದಳು. ಮನೆಯ ಹೊರಗೆ ಮತ್ತೆ ಗುಸುಗುಸು. ಸ್ವಲ್ಪ ಹೊತ್ತು ನಿಶ್ಶಬ್ದ, ಮತ್ತೆ ಗುಸುಗುಸು. ಸಂಕಜ್ಜಿ ತಟ್ಟೆಯನ್ನು ಹಿಡಿದು ಮತ್ತೆ ಒಳಗೆ ಬಂದಳು. ನಡುಗುವ ದನಿಯಲ್ಲಿ ಆಕೆ 'ಅಪ್ಪಯ್ಯ ಸಿಟ್ಟಾಗಬೇಡಿ. ಇಗೋ ನನ್ನ ಜೀವಮಾನದಲ್ಲಿ ಕೂಡಿಟ್ಟಿರುವ ಈ ಐದುನೂರು ರೂಪಾಯಿಗಳನ್ನೂ ನಿಮ್ಮ ಪಾದಕ್ಕೆ ಒಪ್ಪಿಸುತ್ತಿದ್ದೇನೆ. ಇಷ್ಟೇ ಅಲ್ಲ. ನನ್ನ ಮನೆ, ನನ್ನ ಒಡವೆ ವಸ್ತ್ರ, ಸಾಮಾನು ಸರಂಜಾಮು–ಎಲ್ಲವನ್ನೂ ನಿಮಗೆ ಒಪ್ಪಿಸುತ್ತೇನೆ. ನೀವು ಇಲ್ಲಿಂದ ಹೋಗಬೇಡಿ. ಇಲ್ಲೆ ಇದ್ದು ಮಠ ಕಟ್ಟಿಸಿರಿ' ಎಂದು ಹೇಳಿ ಮತ್ತೊಮ್ಮೆ ಅಡ್ಡಬಿದ್ದಳು. ಆಕೆಯ ದೃಢಭಕ್ತಿ, ಔದಾರ್ಯ, ತ್ಯಾಗಗಳನ್ನು ಕಂಡು ಶ್ರೀ ರಾಘವೇಂದ್ರರ ಹೃದಯ ಕರಗಿತು. ಅವರು 'ಆಗಲಿ ತಾಯಿ' ಎಂದರು.

ಶ್ರೀ ರಾಘವೇಂದ್ರರ ಬಾಯಿಂದ 'ಆಗಲಿ' ಎಂಬ ಮಾತು ಹೊರ ಬರುತ್ತಿದ್ದಂತೆಯೆ ಹೊರಗಡೆ ದೊಡ್ಡ

*

ಕೋಲಾಹಲ. ತಾವು ಮುಂದೆ ಬಂದು ಅವರ ಪ್ರಯಾಣವನ್ನು ನಿಲ್ಲಿಸಲು ಹೆದರಿದ್ದ ಊರ ಪ್ರಮುಖರು ಸಂಕಜ್ಜಿಯನ್ನು ಹುರಿದುಂಬಿಸಿ ಮುಂದೆ ಬಿಟ್ಟಿದ್ದರು. ತಮ್ಮ ಕಾರಸ್ಥಾನ ಸಫಲವಾಗುತ್ತಲೆ ಅವರು ಹಿಗ್ಗಿನಿಂದ ಬೊಬ್ಬಿರಿದರು. ಮುಂದೆ ಹತ್ತು ನಿಮಿಷಗಳು ಕಳೆಯುವಷ್ಟರಲ್ಲಿ ಅವರು ಮಂಗಳ ವಾದ್ಯಗಳೊಡನೆ ವರಪ್ಪಸ್ವಾಮಿಯ ಪಲ್ಲಕ್ಕಿಯನ್ನು ಅಲ್ಲಿಗೆ ತಂದರು. ತಮ್ಮ ಮೆಚ್ಚಿನ 'ಅಪ್ಪಯ್ಯ' ನನ್ನು ಮುಂದೆ ಮಾಡಿಕೊಂಡು ಊರಲ್ಲೆಲ್ಲ ಮೆರವಣಿಗೆ ನಡೆಸಿದರು. ತಮ್ಮ ಪಾಲಿನ ಭಾಗ್ಯದೇವತೆಯಂತೆ ಇದ್ದ 'ಜಡ್ಡಿಬಾಬು' ಮಲ್ಲಾಡಿಹಳ್ಳಿಯಲ್ಲಿಯೇ ಇನ್ನು ಕೆಲವು ಕಾಲ ನಿಲ್ಲುವಂತಾದುದಕ್ಕಾಗಿ ಅವರಿಗೆ ಹಿಗ್ಗೋ ಹಿಗ್ಗು.

ಶ್ರೀ ರಾಘವೇಂದ್ರರು ವರಪ್ಪಸ್ವಾಮಿಯ ಮಠವನ್ನು ಕಟ್ಟಿಸುವುದಾಗಿ ಸಂಕಜ್ಜಿಗೆ ಮಾತುಕೊಟ್ಟು ಮಲ್ಲಾಡಿಹಳ್ಳಿಯಲ್ಲಿ ಉಳಿದುದು ಆ ಊರಿನ ಅದೃಷ್ಟ. ಅವರು ಆ ಕಾರ್ಯವನ್ನು ಸಾಂಗಗೊಳಿಸಲೆಂದು ಹಂಚಿಕೆಯನ್ನು ಹಾಕಿಕೊಳ್ಳುವಷ್ಟರಲ್ಲಿ ಕಾಲರಾ ಕಾಣಿಸಿಕೊಂಡಿತು, ಅಲ್ಲಿ. ಒಡನೆಯೆ ಶ್ರೀ ರಾಘವೇಂದ್ರರ ವೈದ್ಯವಿದ್ಯೆ ಊರಿನ ರಕ್ಷಣೆಗಾಗಿ ಮೈಕೊಡವಿಕೊಂಡು ಮೇಲೆದ್ದಿತು. ಅಂಟುರೋಗಕ್ಕೆ ಹೆದರಿ ಹತ್ತಿರದ ನೆಂಟರು ಕೂಡ ದೂರ ಸರಿಯುತ್ತಿದ್ದರು. ಊರಿನ ಹರಿಜನರ ಸ್ಥಿತಿಯಂತೂ ತುಂಬ ಕರುಣಾಜನಕವಾಗಿದ್ದಿತು. ಸವರ್ಣೀಯರಾರೂ ಅವರ ಕೇರಿಗೆ ಹೋಗರು, ರೋಗ ಶಮನಕ್ಕೆ ಅಗತ್ಯವೆನಿಸಿದ ಮಜ್ಜಿಗೆಯನ್ನು ಅವರಿಗೆ ಕೊಡರು. ಇದನ್ನು ಕಂಡು ಶ್ರೀ ರಾಘವೇಂದ್ರರು ಕಂಗಾಲಾದರು. ಅವರು ರೋಗನಿದಾನಕ್ಕೆಂದು ಹೋದ ಮನೆಗಳಲ್ಲೆಲ್ಲ ಮಜ್ಜಿಗೆಯನ್ನು ಸಂಗ್ರಹಿಸಿದರು, ದೊಡ್ಡದೊಂದು ಡಬ್ಬದಲ್ಲಿ ಅದನ್ನು ತುಂಬಿಕೊಂಡು ತಾವೆ ಹರಿಜನರ ಕೇರಿಗೆ ಹೋದರು, ಎಲ್ಲರಿಗೂ ಅಲ್ಲಿ ಅದನ್ನು ಹಂಚಿದರು, ದಿಕ್ಕಿಲ್ಲದೆ ಬಿದ್ದಿದ್ದ ರೋಗಿಗಳನ್ನು ತೊಡೆಯ ಮೇಲೆ ಹಾಕಿಕೊಂಡು ಔಷಧವನ್ನು ಕುಡಿಸಿದರು, ಅಕ್ಕಪಕ್ಕದಲ್ಲಿ ಅವರು ಮಾಡಿಕೊಂಡಿದ್ದ ವಾಂತಿ, ಭೇದಿಗಳನ್ನು ಎತ್ತಿಹಾಕಿ ಶುದ್ಧಿಗೊಳಿಸಿದರು, ಅವರಿಗೆ ಪಥ್ಯ ಪಾನೀಯಗಳನ್ನು ಒದಗಿಸಿದರು. ಆ ಸಮಯದಲ್ಲಿ ವಿರಾಟ್ ರೂಪವನ್ನು ಧರಿಸಿದವರಂತೆ ಎಲ್ಲೆಲ್ಲಿಯೂ ಶ್ರೀ ರಾಘವೇಂದ್ರರೇ. ಸವರ್ಣೀಯರಿಗೆ ಅಪ್ಪಯ್ಯ, ಹರಿಜನರಿಗೆ ಸಾಕ್ಷಾತ್ ದೇವರು, ಮಹಮದೀಯರಿಗೆ 'ಮುಲ್ಲ'. ಅಂದು ಅವರು ಮಾಡಿದ ಜನಸೇವೆ ಇಂದಿಗೂ ಜನರ ಬಾಯಲ್ಲಿ ಕಥೆಯ ರೂಪವನ್ನು ತಾಳಿ ಉಳಿದಿದೆ.

ಈ ಸುಮಾರಿನ ದಿನಗಳಲ್ಲಿಯೆ ಶ್ರೀ ರಾಘವೇಂದ್ರಸ್ವಾಮಿಜಿಯವರ ಪಟ್ಟ ಶಿಷ್ಯರಾದ ಶ್ರೀ ಸೂರದಾಸಜಿಯವರು ತಮ್ಮ ವ್ಯಕ್ತಿತ್ವವನ್ನೆ ಗುರುಗಳ ಧರ್ಮಯಜ್ಞಕ್ಕಾಗಿ ಸಮರ್ಪಿಸಿದುದು. ಗಂಗೆಯೊಡನೆ ಯಮುನೆಯ ಸಂಗಮವಾಗಿ ಹೋಯಿತು. ಬಡಕುಟುಂಬವೊಂದರಲ್ಲಿ ಹಿರಿಯ ಮಗನಾಗಿ ಹುಟ್ಟಿದ್ದ ಸೂರಪ್ಪ ಬಾಲ್ಯದಿಂದಲೂ ಅಧ್ಯಾತ್ಮದತ್ತ ಒಲವನ್ನು ಬೆಳೆಸಿಕೊಂಡಿದ್ದವನು. ವಿದ್ಯಾರ್ಥಿದೆಸೆಯಿಂದಲೂ ಯೋಗಾಸನ, ಪ್ರಾಣಾಯಾಮ, ಜಪ, ತಪ, ಧ್ಯಾನಗಳಲ್ಲಿ ಮುಳುಗಿರುತ್ತಿದ್ದವನು ; ಸಂತರು, ಸಾಧು ಸಜ್ಜನರಲ್ಲಿ ಭಕ್ತಿಯುಕ್ತನಾಗಿರುತ್ತಿದ್ದವನು. ಸಂಸಾರ ತಾಪತ್ರಯಕ್ಕೆ ಸಿಕ್ಕಿ ಹೈಸ್ಕೂಲು ವಿದ್ಯಾಭ್ಯಾಸ ಮುಗಿಯುತ್ತಲೆ ಉಪಾಧ್ಯಾಯ ವೃತ್ತಿಯನ್ನು ಕೈಕೊಂಡಿದ್ದವನು. ಆತ ಶ್ರೀ ರಾಘವೇಂದ್ರರ ಪ್ರದರ್ಶನವೊಂದರಲ್ಲಿ, ಅವರ ಅಸಾಧಾರಣವಾದ ದೇಹಶಕ್ತಿ, ಅಧ್ಯಾತ್ಮಶಕ್ತಿ, ಲೋಕಸೇವಾಸಕ್ತಿಗಳನ್ನು ಕಂಡು ಮಾರುಹೋದನು. ಹೇಗಾದರೂ ಮಾಡಿ ಅವರ ಶಿಷ್ಯವೃತ್ತಿಯನ್ನು ಸಂಪಾದಿಸಬೇಕು, ಅವರ ಅನುಗ್ರಹದಿಂದ ಅವರ ವಿದ್ಯೆಯನ್ನೆಲ್ಲ ತಾನು ಹೀರಿಕೊಳ್ಳಬೇಕು—ಎಂಬ ಗೀಳು ಹಿಡಿಯಿತು. ಎಲ್ಲಿ ಅವರ ಪ್ರದರ್ಶನ ನಡೆದರೂ ಅಲ್ಲಿಗೆಲ್ಲ ತಪ್ಪದೆ ಹಾಜರಾಗುತ್ತಿದ್ದನು. ಶ್ರೀ ರಾಘವೇಂದ್ರರನ್ನು ಮಲ್ಲಾಡಿಹಳ್ಳಿಗೆ ಬರಮಾಡಿಕೊಳ್ಳುವುದರಲ್ಲಿ ಆತನ ಕೈವಾಡವೂ ಇತ್ತು. ಆಗ ಆತ ನೆಲಸಿದ್ದುದೂ ಅಲ್ಲಿಯೆ. ಆತ ಆಗಾಗ ಅವರ ಬಳಿಗೆ ಹೋಗಿ ಸಾಧ್ಯವಾದಷ್ಟು ಅವರ ಸಹವಾಸದಲ್ಲಿ ಕಾಲ ಕಳೆಯುತ್ತಿದ್ದನು. ಅವರ ಸೇವೆ ಮಾಡುವುದಕ್ಕೆ, ಅವರನ್ನು ಸಂತೋಷಪಡಿಸುವುದಕ್ಕೆ ಅವಕಾಶ ಕಲ್ಪಿಸಿಕೊಳ್ಳುತ್ತಿದ್ದನು. ಹೀಗೆಯೆ ಬರಬರುತ್ತಾ ಆತನು ಅವರ ಛಾಯಾನುವರ್ತಿಯಾದನು, ಪವಿತ್ರವಾದ ಛಾಯೆಯೆ ಆಗಿಹೋದನು. ಮನೆ, ಮಠ, ಬಂಧು, ಬಳಗ, ನೌಕರಿ ಎಲ್ಲವೂ ಇದ್ದೂ ಇಲ್ಲದಂತಾದವು. ಇದರಲ್ಲಿ ಆಶ್ಚರ್ಯಕ್ಕೆ ಕಾರಣವೇನೂ ಇಲ್ಲ. ಈ ಗುರು-

-ಶಿಷ್ಯರ ಸಂಬಂಧ ಒಂದು ಅಲೌಕಿಕವಾದ ಅವಿನಾ ಸಂಬಂಧ. ಇದು ಕೇವಲ ಈ ಜನ್ಮದ್ದು ಮಾತ್ರವಲ್ಲ; ಬಹುಶಃ ಅನಾದಿ, ಅನಂತ. ಯಾವ ಸತ್‌ಚಿತ್ ಆನಂದ ಶಕ್ತಿ ಶ್ರೀ ರಾಮಾವತಾರಿಯಾದಾಗ ತನ್ನ ಕಾರ್ಯಪೂರ್ಣತೆಗಾಗಿ ಆಂಜನೇಯನನ್ನು ಪಡೆಯಿತೋ, ಶ್ರೀ ಕೃಷ್ಣರೂಪವನ್ನು ಧರಿಸಿದಾಗ ಅರ್ಜುನನನ್ನು ಅಳವಡಿಸಿಕೊಂಡಿತೋ, ಶ್ರೀ ರಾಮಕೃಷ್ಣ ಪರಮಹಂಸರಾಗಿ ಜನಿಸಿದಾಗ ಶ್ರೀ ವಿವೇಕಾನಂದರನ್ನು ಆಯ್ದುಕೊಂಡಿತೋ ಅದೇ ವಿಶ್ವಶಕ್ತಿ ಶ್ರೀ ರಾಘವೇಂದ್ರರೂಪಿಯಾಗಿರುವಾಗ ಶ್ರೀ ಸೂರದಾಸಜೀಯವರನ್ನು ವರಿಸಿತೆಂದು ತೋರುತ್ತದೆ. ಇಲ್ಲದಿದ್ದರೆ ಈ ಎರಡು ಚೇತನಗಳಿಗೆ ಇಂತಹ ಏಕತಾನತೆ ಹೇಗೆ ಸಾಧ್ಯ ? ಒಂದು ಮೂಲಮೂರ್ತಿ, ಮತ್ತೊಂದು ಉತ್ಸವ ಮೂರ್ತಿ. ಬೆಳಕು ಕಾವುಗಳು ಸೇರಿ ಸೂರ್ಯಕಾಂತಿಯಾಗುವಂತೆ, ಸತ್ವ-ಕ್ಷಾತ್ರಗುಣಗಳು ಸೇರಿ ಕ್ರತುಶಕ್ತಿ ಉದಿಸುವಂತೆ ಈ ಮಹಾಪುರುಷರಿಬ್ಬರ ಸಮ್ಮಿಳನದಿಂದ ಮಹತ್ಕಾರ್ಯವೊಂದು ನೆರವೇರುತ್ತಿದೆ. ಭಗವತ್ ಸಂಕಲ್ಪದಿಂದ ಈಗ ಮುವ್ವತ್ತೈದು ವರ್ಷಗಳ ಕೆಳಗೆ ಅನಾಥ ಸೇವಾಶ್ರಮ ಅಂಕುರಿಸಿದಾಗ ಶ್ರೀ ಶ್ರೀ ರಾಘವೇಂದ್ರರು ಅದರ ಸಂಸ್ಥಾಪಕ ಅಧ್ಯಕ್ಷರಾದರು ; ಶ್ರೀ ಸೂರದಾಸರು ಅದರ ಸಂಸ್ಥಾಪಕ ಕಾರ್ಯದರ್ಶಿಯಾದರು.

ಕಾಲರ ರೋಗ ನಿಂತು ಶ್ರೀ ರಾಘವೇಂದ್ರರ ದೃಷ್ಟಿ ಪರಪ್ಪಸ್ವಾಮಿಯ ಮಠದತ್ತ ಹೊರಳುವಷ್ಟರಲ್ಲಿ ಶಿವರಾತ್ರಿ ಸನ್ನಿಹಿತವಾಯಿತು. ಮೃತ್ಯುವಿನಿಂದ ತಮ್ಮನ್ನು ಉದ್ಧರಿಸಿದ ಮೃತ್ಯುಂಜಯನನ್ನು ಭಕ್ತಿಯಿಂದ ಪೂಜಿಸಲು ಊರಿಗೆ ಊರೆ ಅಣಿಯಾಯಿತು. ಶ್ರೀರಾಘವೇಂದ್ರರೆ ಅದರ ಅಧ್ವರ್ಯುವಾಗಿ ನಿಂತರು. ಅವರ ಪ್ರಾರ್ಥನೆಯನ್ನು ನಿರಾಕರಿಸಲಾರದೆ ಶ್ರೀ ಶಂಕರಲಿಂಗ ಭಗವಾನರೂ ಆ ಉತ್ಸವಕ್ಕೆ ದಯಮಾಡಿಸಿದರು. ಅವರ ನಿರ್ದೇಶನದಂತೆ ಶಿವರಾತ್ರಿಯ ಸಪ್ತಾಹ ಸಾಂಗವಾಗಿ ನೆರವೇರಿತು. ಹಿಂದೆಂದೂ ಅಂತಹ ವೈಭವವನ್ನು ಕಾಣದಿದ್ದ ಜನ ವರ್ಷವರ್ಷವೂ ಇಂತಹ ಉತ್ಸವ ನಡೆದರೆ ಎಷ್ಟು ಚೆನ್ನ ಎಂದುಕೊಂಡರು. ಬಗೆ ಬಗೆಯ ಬಿಡಿಹೂಗಳನ್ನು ಹೊಂದಿಕೆಯಾಗಿ ಜೋಡಿಸುವ ಕಲಾವಿದನಿದ್ದರೆ ತಾನೆ ಸುಂದರವಾದ ತುರಾಯಿಯಾಗುವುದು ? ಊರ ಜನ ಶಂಕರಲಿಂಗ ಭಗವಾನರಲ್ಲಿ ತಮ್ಮ ಆಶೆಯನ್ನು ನಿವೇದಿಸಿಕೊಂಡರು. ಅವರು ತಮ್ಮ 'ಹನುಮಂತರಾಯ'ನನ್ನು ಕೇಳಿದರು—'ಏನಯ್ಯಾ ಕಪಿರಾಯ, ಈ ಸಪ್ತಾಹವನ್ನು ಇಲ್ಲಿಗೆ ಮುಗಿಸುತ್ತೀಯೋ, ಮುಂದುವರಿಸುತ್ತೀಯೊ?' ಆತ ತಮ್ಮ 'ಅಪ್ಪಯ್ಯ'ನಿಗೆ ಹೇಳಿದರು—'ಏನು ನಿಮ್ಮ ಮಾತಿನ ಅರ್ಥ? ಸಪ್ತಾಹ ಎಂದರೆ ಏಳು ದಿನಗಳ ಆಚರಣೆ. ಅದು ಮುಗಿಯಿತಲ್ಲ!' ಗುರುಗಳು ಹೇಳಿದರು—'ನಿನ್ನ ತಲೆ! ಸಪ್ತಾಹ ಎಂದರೆ ಏಳು ವರ್ಷಗಳ ಕಾಲ ಏಳೇಳು ದಿನಗಳು ಆಚರಿಸಬೇಕು. ನೀನು ನನಗಿನ್ನು ಎದುರು ಉತ್ತರ ಕೊಡಬೇಡ. ಇನ್ನು ಏಳು ವರ್ಷ ನೀನು ಇಲ್ಲಿಯೆ ಇರು. ಆಮೇಲೆ ಏನಾಗುತ್ತದೊ ನೋಡೋಣ' ಎಂದರು. ಶ್ರೀ ರಾಘವೇಂದ್ರರ ಪುಂಗಿ ಬಂದಾಗಬೇಕಾಯಿತು. ಅವರು ಕೈಕೊಳ್ಳಬೇಕೆಂದಿದ್ದ ಹಿಮಾಲಯ ಯಾತ್ರೆ ಅನಿರ್ದಿಷ್ಟಕಾಲಕ್ಕೆ ಮುಂದುವರಿಯಿತು.

ಈ ಶಿವರಾತ್ರಿಯ ಕಾಲದಲ್ಲಿಯೆ, ಎಂದರೆ ಶಾಲಿವಾಹನ ಶಕ 1864ನೆ ಚಿತ್ರಭಾನು ಸಂವತ್ಸರ (ಕ್ರಿ. ಶ. 1943)ದ ಶಿವರಾತ್ರಿಯ ದಿನ ಪರಪ್ಪಸ್ವಾಮಿಯ ಮಠಕ್ಕೆ ಗುದ್ದಲಿ ಪೂಜೆ ನಡೆಯಿತು. ಅಂದೆ ಕನ್ನಡನಾಡಿನ ಅದೃಷ್ಟದೇವತೆ ಅನಾಥ ಸೇವಾಶ್ರಮದ ಸ್ಥಾಪನೆಗೂ ಸ್ವಸ್ತಿ ವಾಚನವನ್ನು ಹಾಡಿದಳೆಂದು ತೋರುತ್ತದೆ. ಅದರ ಜೊತೆಯಲ್ಲಿಯೆ 'ಅಕ್ಷಯಮಸ್ತು' ಎಂದೂ ಹರಸಿರಬೇಕು. ಅವರು ಕಾರ್ಯರಂಗಕ್ಕೆ ಇಳಿದಂದು ಅವರಿಗಿದ್ದ ಭೌತಿಕ ಆಸ್ತಿಯೆಂದರೆ ಕೇವಲ ಒಂದು ಜೋಳಿಗೆ, ಮೊಟ್ಟ ಮೊದಲ ಬಾರಿಗೆ ಅದನ್ನು ಕೈಲಿ ಹಿಡಿದು 'ಸಪ್ತಾಕ್ಷರೀ ಮಂತ್ರ'ವನ್ನು ಜಪಿಸುತ್ತಾ ಸುತ್ತು ಮುತ್ತಿನ ಹತ್ತಾರು ಹಳ್ಳಿಗಳಲ್ಲಿ ತಿರುಗಿದರು. ತಕ್ಕಷ್ಟು ಧನಸಂಗ್ರಹವಾಯಿತು. ಮಲ್ಲಾಡಿಹಳ್ಳಿಯು ಜನಬಲವನ್ನು ಒದಗಿಸಿತು. ಹೆಣ್ಣು-ಗಂಡುಗಳೊಂದಾಗಿ ಶ್ರೀ ರಾಘವೇಂದ್ರರೊಡನೆ ಭಜನೆ ಮಾಡುತ್ತಾ ಹತ್ತಿರದ ಹಳ್ಳದಿಂದ ನೀರು ಹೊತ್ತರು ; ಹಾಗೆಯೆ ಭಜನೆ ಮಾಡುತ್ತಾ ಮಾಡುತ್ತಾ ಕಲ್ಲು ಇಟ್ಟಿಗೆಗಳನ್ನು ಹೊತ್ತು ಸಾಗಿಸಿದರು ; ಗಾರೆಯನ್ನು ಕಲಸಿದರು, ಕಟ್ಟಡ ಕಟ್ಟಲು ಸಹಾಯ ಮಾಡಿದರು.

ನೋಡು ನೋಡುತ್ತಿರುವಂತೆ ಕಟ್ಟಡ ಮೇಲೆದ್ದು ಮಠ ಸಿದ್ಧವಾಯಿತು. ಶುಭದಿನ ಶುಭ ಮುಹೂರ್ತದಲ್ಲಿ ಪರಪ್ಪ ಸ್ವಾಮಿಯ ಗದ್ದುಗೆ, ಅದರ ಮೇಲೆ ಅವರ ಚಿತ್ರಪಟ ಸ್ಥಾಪನೆಯಾದವು.

ಇಲ್ಲಿಂದ ಮುಂದೆ ಪ್ರತಿವರ್ಷವೂ ನಡೆಯುತ್ತಿದ್ದ ಶಿವರಾತ್ರಿ ಉತ್ಸವದ ವರ್ಣನೆ ಕೇಳಿದವರ ಬಾಯಲ್ಲಿ ನೀರೂರುವಷ್ಟು ರಸವತ್ತಾಗಿದೆ. ಹಬ್ಬ ಇನ್ನೂ ಹದಿನೈದು ದಿನಗಳಿರುವಾಗಲೆ ಊರಿನಲ್ಲೆಲ್ಲ ಸಡಗರವೋ ಸಡಗರ. ಆಗಿನ್ನೂ ಈಗಿರುವಂತೆ ಆಶ್ರಮ ಬೆಳೆದು ಎಲ್ಲೆಲ್ಲೂ ಕಟ್ಟಡಗಳಾಗಿರಲಿಲ್ಲ. ಸುಮಾರು ಹತ್ತು ಎಕರೆಗಳಷ್ಟು ವಿಸ್ತಾರವಾದ ಜಾಗ ಬಟಾ ಬಯಲಾಗಿತ್ತು. ಊರಿನ ಗಂಡಸರೆಲ್ಲ ಗುದ್ದಲಿ ಸಲಿಕೆಗಳನ್ನು ಹಿಡಿದು, ಆ ಬಯಲಿನಲ್ಲಿದ್ದ ಮುಳ್ಳು ಗಿಡಗಳನ್ನೆಲ್ಲ ಸವರಿ, ತಗ್ಗು ದಿನ್ನೆಗಳನ್ನು ಸಮಮಾಡಿದರು ; ವಿಸ್ತಾರವಾದ ಆ ಬಯಲೆಲ್ಲ ಮುಚ್ಚಿಹೋಗುವಂತೆ ಹಸಿರುವಾಣಿಯ ಚಪ್ಪರವನ್ನು ನಿರ್ಮಿಸಿ, ಅದನ್ನು ತಳಿರು ತೋರಣಗಳಿಂದ ಅಲಂಕರಿಸಿದರು. ಹೆಂಗಸರು ನೆಲವನ್ನೆಲ್ಲ ಸ್ವಚ್ಛವಾಗಿ ಗುಡಿಸಿ, ಸೆಗಣಿ ಹಚ್ಚಿ ಸಾರಿಸಿ, ರಂಗವಲ್ಲಿಯನ್ನು ಇಕ್ಕಿದರು. ಬಿದಿರು ತಟ್ಟಿಗಳನ್ನು ಕಟ್ಟಿದ ಹತ್ತಾರು ಪಾಕಶಾಲೆಗಳೂ, ಅವುಗಳಿಗೆ ಹೊಂದಿಕೊಂಡಂತೆ ಭೋಜನಶಾಲೆಗಳೂ ನಿರ್ಮಾಣವಾದವು. ಸುತ್ತುಮುತ್ತಿನ ಗ್ರಾಮಗಳಿಗೆಲ್ಲ ಉತ್ಸವಕ್ಕೆ ಬರುವಂತೆ ಆಹ್ವಾನ ಹೋಯಿತು. ಈ ಆಹ್ವಾನವನ್ನು ಸ್ವೀಕರಿಸಿದವರು ಧನ, ಧಾನ್ಯ, ತೆಂಗಿನಕಾಯಿ ತರ್ಕಾರಿ, ಬೆಲ್ಲ ಬೇಳೆಗಳು, ಹಣ್ಣು ಹಂಪಲು, ಹಾಲು ಮೊಸರು-ಇತ್ಯಾದಿಗಳನ್ನು ಗಾಡಿಗಳಲ್ಲಿ ತುಂಬಿ ಕಳುಹಿಸಿದರು. ಇದರಿಂದ ಉಗ್ರಾಣ ತುಂಬಿ ತುಳುಕಿತು. ನೂರಾರು ಜನ ಕೈಗೆ ಸಿಕ್ಕು ಪಾತ್ರೆ ಪರಡಿಗಳನ್ನು ಹಿಡಿದು, ಹತ್ತಿರದ ಹಳ್ಳಕ್ಕೆ ಹೋಗಿ, ವರತೆಗಳನ್ನು ತೋಡಿ, ನೀರನ್ನು ತುಂಬಿ ತಂದು ಹತ್ತಿರದಲ್ಲಿದ್ದ ಬಾವಿಯನ್ನು ತುಂಬಿಸಿದರು. ಅದೇ ನೀರನ್ನು ಶೇಖರಿಸುವ ತೊಟ್ಟಿ. ಇಗೋ ಎನ್ನುವಷ್ಟರಲ್ಲಿ ಶಿವರಾತ್ರಿ ಬಂದೇ ಬಿಟ್ಟಿತು. ಅಂದು ಮುಂಜಾನೆಯ ಹೊತ್ತಿಗೆ ಹಳ್ಳಿ ಹಳ್ಳಿಯಿಂದಲೂ ತಾಳ ಮೇಳಗಳೊಡನೆ ಭಜನೆಯ ತಂಡಗಳು ಆಗಮಿಸಿದವು. ಶ್ರೀ ರಾಘವೇಂದ್ರರು ಅವರನ್ನು ಇದಿರುಗೊಂಡು, ಪರಪ್ಪಸ್ವಾಮಿಯ ಮಠದ ಬಳಿಗೆ ಕರೆದೊಯ್ದರು. ಶ್ರೀ ಶಂಕರಲಿಂಗ ಭಗವಾನರ ನೇತೃತ್ವದಲ್ಲಿ ಆ ತಂಡದವರು ಏಳು ದಿನಗಳ ಅಖಂಡ ಭಜನೆಯನ್ನು ಮೊದಲು ಮಾಡಿದರು. ಜನರು ಊರೂರುಗಳಿಂದ ಗಾಡಿಗಳಲ್ಲಿ, ಕಾಲ್ನಡಿಗೆಯಲ್ಲಿ ತಂಡತಂಡವಾಗಿ ಬಂದು ಸೇರಲು ಪ್ರಾರಂಭವಾಯಿತು. ಸಾವಿರ, ಎರಡು ಸಾವಿರ, ಹತ್ತುಸಾವಿರ, ಇಪ್ಪತ್ತು ಸಾವಿರ, ಮುವ್ವತ್ತು ಸಾವಿರ, ಇನ್ನೂ ಬರುತ್ತಲೆ ಇದ್ದಾರೆ. ಬಯಲೆಲ್ಲವೂ ಜನ ಸಮುದ್ರ. ಅಗೋ ಸಿರಿಗೆರೆ ಮಠದ ಆನೆ ಬಂದಿತು ; ಮುರುಗಿ ಮಠದಿಂದ ಒಂಟಿ ಕುದುರೆಗಳು ಬಂದವು. ಬಯಲ ಕೊನೆಯಲ್ಲಿ ಅಂಗಡಿಗಳ ಸಾಲು; ಆ ಮೂಲೆಯಲ್ಲಿ ರಂಕಲ ರಾಟೆ, ಇನ್ನೊಂದು ಕೊನೆಯಲ್ಲಿ ಹಾವಾಡಿಗರ ಆಟ,ಮತ್ತೊಂದು ಕಡೆ ಡೊಂಬರ ಕುಣಿತ, ಅಗೋ ಅಲ್ಲಿ ಜಟ್ಟಿಗಳ ಕಾಳಗಕ್ಕಾಗಿ ವಿಸ್ತಾರವಾದ ಅಖಾಡ. ಅಡಿಗೆಯ ಮನೆ ಕಡೆ ಸ್ವಲ್ಪ ತಿರುಗಿ. ಯಾವ ಕೆಲಸಕ್ಕೂ ಯಾರನ್ನೂ ದುಡ್ಡುಕೊಟ್ಟು ನೇಮಿಸಿಲ್ಲ. ಯಾರಿಗೂ ಯಾವ ಬಲವಂತವೂ ಇಲ್ಲ. ತಾವಾಗಿಯೇ ಅಹಮಹಮಿಕೆಯಿಂದ ಮುಂದೆ ಬಿದ್ದು ಸೇವೆಗಾಗಿ ಸೊಂಟ ಕಟ್ಟಿ ನಿಂತಿರುವ ಜನ, ಅಲ್ಲಿ. ಅದೊಂದು ಜೇನುಗೂಡು ; ಯಾರೋ ಹತ್ತು ಜನ ಒಲೆ ಹಚ್ಚಿದರು, ಮತ್ತಾರೋ ಹತ್ತು ಜನ ನೀರು ತಂದು ಕೊಪ್ಪರಿಗೆಗಳಲ್ಲಿ ಸುರಿದರು, ಇನ್ನಾರೋ ಹಲವರು ಸೌಟುಗಳನ್ನು ಹಿಡಿದು ನಿಂತರು, ಹಲವಾರು ಜನ ಗಂಡು ಹೆಣ್ಣುಗಳು ತರಕಾರಿ ಹೆಚ್ಚಿದರು, ಕಾಯಿ ತುರಿದರು, ಖಾರ ರುಬ್ಬಿದರು. ಎಲ್ಲರ ಮುಖದಲ್ಲಿಯೂ ಮಗನ ಮದುವೆ ಮಾಡುತ್ತಿರುವಷ್ಟು ಉತ್ಸಾಹ,ಲವಲವಿಕೆ. ಈ ಜನ ಜಂಗುಳಿಯಲ್ಲಿ ಶ್ರೀ ರಾಘವೇಂದ್ರರು ಎಲ್ಲಿ ? ಎಲ್ಲಿಯೆ ? ಎಲ್ಲೆಲ್ಲಿಯೂ ಅವರೆ. ಏಕ ವಸ್ತ್ರಧಾರಿಯಾದ ಅವರು ಈಗ ಉಗ್ರಾಣದಲ್ಲಿ, ಮರು ನಿಮಿಷ ಪಾಕಶಾಲೆಯಲ್ಲಿ; ಅಗೋ ಯಾರೋ ಅತಿಥಿಗಳು ಬಂದರೆಂದು ಕಾಣುತ್ತದೆ, ಅವರ ಕ್ಷೇಮ ಸಮಾಚಾರವನ್ನು ವಿಚಾರಿಸುತ್ತಿದ್ದಾರೆ ; ಇದೇನು, ಈ ಮನುಷ್ಯನಿಗೆ ರೆಕ್ಕೆಗಳೇನಾದರೂ ಇವೆಯೋ ? ಆ ಅಖಾಡದ ಬಳಿಯಲ್ಲಿ ಯಾವನೋ ಜಟ್ಟಿಯೊಡನೆ ಏನೋ ಮಾತಾಡುತ್ತಿದ್ದಾರೆಯಲ್ಲ, ಬಹುಶಃ ಯಾವುದೋ ಕುಸ್ತಿಯ ಪಟ್ಟನ್ನು ಅವನಿಗೆ ಹೇಳಿ

ಕೊಡುತ್ತಿರಬಹುದು ; ಈಗ ಶಿಷ್ಯ ಸೂರದಾಸಜಿಯವರಿಗೆ ಏನೋ ಹೇಳುತ್ತಿದ್ದಾರೆ ; ಎಲೆಗಳ ಕಟ್ಟನ್ನು ತರುತ್ತಿದ್ದಾರೆ, ಬಡಿಸಲು ಹೊರಟಿದ್ದಾರೆ, ಚಪ್ಪಾಳೆ ತಟ್ಟುತ್ತಾ ಭಜನೆಯ ಗುಂಪಿನಲ್ಲಿ ಸೇರಿಕೊಂಡಿದ್ದಾರೆ,ಕೌರವನ ಆಸ್ಥಾನದಲ್ಲಿ ಕಾಣಿಸಿಕೊಂಡ ಶ್ರೀಕೃಷ್ಣನಂತೆ ಅವರು ಹಲವು ರಾಘವೇಂದ್ರರ ರೂಪವನ್ನು ತಳೆದಿದ್ದರೊ ಏನೊ ! ಶಿವರಾತ್ರಿಯ ಉತ್ಸವವೆಂದರೆ ಈ ಊಟ, ತಿಂಡಿ, ವಿನೋದ–ಇಷ್ಟೇನೆ ? ಎಂದು ಭಾವಿಸುವುದು ಬೇಡ. ಸಪ್ತಾಹದ ಒಂದೊಂದು ದಿನವೂ ಒಬ್ಬೊಬ್ಬ ಮಠಾಧೀಶರು ಬಂದು ಜನರನ್ನು ಆಶೀರ್ವದಿಸುತ್ತಿದ್ದರು. ಏಳು ದಿನಗಳೂ ಪರಪ್ಪಸ್ವಾಮಿಯ ಪೂಜೆ, ಮಂಗಳಾರತಿ, ಅಖಂಡ ಭಜನೆಗಳ ಜೊತೆಗೆ ಬೆಳಗಿನ ಹೊತ್ತು ವಿದ್ವಾಂಸರಿಂದ ಪುರಾಣ ಶ್ರವಣ, ಮಧ್ಯಾಹ್ನ ಸಾಧು ಸಜ್ಜನರಿಂದ ಧರ್ಮಪ್ರವಚನ, ಸಂಜೆ ಕೀರ್ತನಕಾರರಿಂದ ಹರಿಕಥೆ, ಶಿವಕಥೆಗಳು, ರಾತ್ರಿ ಶ್ರೀ ರಾಘವೇಂದ್ರ ರಚಿತವಾದ ಪೌರಾಣಿಕ ಮತ್ತು ಧಾರ್ಮಿಕ ನಾಟಕಗಳ ಪ್ರದರ್ಶನ. ಇವುಗಳ ಮಧ್ಯೆ ಕೋಲಾಟ, ಕುಸ್ತಿ, ವ್ಯಾಯಾಮ ಪ್ರದರ್ಶನ ; ಏಳು ದಿನಗಳು ಏಳು ಘಳಿಗೆಗಳಂತೆ ಕಳೆದುಹೋಗುತ್ತಿದ್ದವು. ಈ ಜಾತ್ರೆಯ ಒಂದು ವಿಶೇಷವೆಂದರೆ ಅಷ್ಟು ಸಹಸ್ರ ಸಹಸ್ರ ಸಂಖ್ಯೆಯ ಜನ ಸೇರಿದರೂ ಯಾವುದೊಂದು ಗಲಭೆಯೂ ನಡೆಯುತ್ತಿರಲಿಲ್ಲ, ಯಾರ ಒಂದು ಕಾಸಿನ ವಸ್ತುವೂ ಕಳವಾಗುತ್ತಿರಲಿಲ್ಲ, ಎಲ್ಲರೂ ಬಯಲಿನಲ್ಲಿಯೆ ಬಿಡಾರ ಹೂಡಿದ್ದರು.

ಮಲ್ಲಾಡಿಹಳ್ಳಿಯಲ್ಲಿ ಏಳು ವರ್ಷ ನಿಲ್ಲಬೇಕೆಂದಾಗ 'ನಿಂತೇನು ಮಾಡುವುದು?'ಎಂಬ ಪ್ರಶ್ನೆ (ವಿಕಟಾಟ್ಟಹಾಸಮಾಡುತ್ತಾ) ಶ್ರೀರಾಘವೇಂದ್ರರ ಇದಿರಿನಲ್ಲಿ ಬಂದು ನಿಂತಿತು. ಮಹಾತ್ಮಾ ಗಾಂಧಿಯವರ ಕರೆಯಂತೆ ದೇಶೋನ್ನತಿಗೆ ಸಾಧಕವಾದ ರಚನಾತ್ಮಕ ಕಾರ್ಯದತ್ತ ಅವರ ಗಮನ ಹರಿಯಿತು. ಸಪ್ತವಾರ್ಷಿಕ ಯೋಜನೆಯೊಂದನ್ನು ಕೈಕೊಳ್ಳಬೇಕೆಂದು ಅವರು ನಿಶ್ಚಯಿಸಿದರು. ಅವರಿಗೆ ಮೊಟ್ಟಮೊದಲು ಹೊಳೆದುದು ಒಂದು ವೈದ್ಯಶಾಲೆಯ ಸ್ಥಾಪನೆ. ನಾಡಿನ ಬಡಬಗ್ಗರಿಗೆಲ್ಲ ಉಚಿತವಾಗಿ ವೈದ್ಯಸಹಾಯವನ್ನು ಒದಗಿಸಬೇಕು. ಅನಾಥರಾದವರಿಗೆ ಇಲ್ಲಿ ಸೇವೆ ಸಲ್ಲಬೇಕು. ಇದೊಂದು ಅನಾಥಸೇವಾಶ್ರಮವಾಗಬೇಕು. ಅಹುದು ಇಂದಿನಿಂದ ಇದು 'ಅನಾಥ ಸೇವಾಶ್ರಮ.' ಇದಕ್ಕೊಂದು ಕಟ್ಟಡವಾಗಬೇಕು. ಅಲ್ಲಿ ಉಚಿತವಾಗಿ ಔಷಧೋಪಚಾರಗಳಾಗಬೇಕು, ಇದಕ್ಕೆ ಸೇರಿದಂತೆ ಒಂದು ಖಗ್ನಾಲಯವಿರಬೇಕು, ಬಂದವರ ಊಟ ಉಪಚಾರಕ್ಕಾಗಿ ಒಂದು ಧರ್ಮಶಾಲೆಯಾಗಬೇಕು. ಇದಕ್ಕೆಲ್ಲ ಹಣಬೇಕು. ಹಣಕ್ಕೆ ದಾರಿ ? ಭಿಕ್ಷಾಪಾತ್ರೆಯೊಂದೇ. ಹಾಗೆ ಭಿಕ್ಷೆಗೆ ಹೊರಡುವುದು ಅಪಮಾನವಲ್ಲವೆ ? ಎಂತಹ ಅಪಮಾನ ? ತಾನೇನು ಸ್ವಾರ್ಥಕ್ಕಾಗಿ ಬೇಡುತ್ತೇನೆಯೆ ? ಜನತಾಜನಾರ್ದನನ ಸೇವೆಗೆಂದು ಹೊರಡುವವನಿಗೆ ಅಹಂಕಾರ ಮಮಕಾರಗಳೇಕೆ ? 'ಅಭೀಃ' ಎಂಬ ಮಂತ್ರವನ್ನು ಜಪಿಸುತ್ತಾ, ಅವರು 'ನಡೆ ಮುಂದೆ, ನಡೆ ಮುಂದೆ, ನುಗ್ಗಿ ನಡೆಮುಂದೆ' ಎಂಬ ಆದರ್ಶವನ್ನು ಸ್ವೀಕರಿಸಿ, ಕಾರ್ಯರಂಗಕ್ಕಿಳಿದರು. ಒಂದು ವರ್ಷದೊಳಗಾಗಿ ಚಿಕಿತ್ಸಾಲಯದ ನಿರ್ಮಾಣವಾಯಿತು.(1945) ಶ್ರೀರಾಘವೇಂದ್ರರು ಶಿಷ್ಯ ಸೂರ್‌ದಾಸರೊಡನೆ ಆಸ್ಪತ್ರೆಯ ಕಟ್ಟಡದಲ್ಲಿ ಬಂದು ನೆಲಸಿದರು. ಅಂದು ಅದೇ ಅವರ ವಸತಿ ಗೃಹ, ಅದೇ ಚಿಕಿತ್ಸಾಲಯ, ಅದೇ ಔಷಧಿಗಳ ಕಾರ್ಖಾನೆ, ಅದೇ ಧರ್ಮಶಾಲೆ. ಇಂದು ಚಿಕಿತ್ಸಾಲಯಕ್ಕೆ ಬರುವ ರೋಗಿಗಳ ಸಂಖ್ಯೆ ವರ್ಷಕ್ಕೆ ಮೂವತ್ತು ಸಾವಿರಕ್ಕೂ ಮಿಕ್ಕಿದೆ. ಔಷಧದ ಮೂಲಿಕೆಗಳಿಗಾಗಿ ಮಾಡುವ ವೆಚ್ಚ ಒಂದು ಲಕ್ಷ ರೂಪಾಯಿಗಳಷ್ಟಾಗುತ್ತದೆ. ಪಾಶ್ಚಾತ್ಯ ವೈದ್ಯವಿದ್ಯೆಗೆ ಎಟುಕದ ಎಷ್ಟೋ ರೋಗಗಳಿಗೆ ಇಲ್ಲಿ ಪರಿಹಾರ ದೊರೆಯುವುದರಿಂದ ಬೊಂಬಾಯಿ, ಪೂನ, ಮದರಾಸು, ದೆಹಲಿ-ಇತ್ಯಾದಿ ದೂರದ ಸ್ಥಳಗಳಿಂದಲೂ ರೋಗಿಗಳು ಇಲ್ಲಿಗೆ ಬರುತ್ತಾರೆ.

ಚಿಕಿತ್ಸಾಲಯ ಸ್ಥಾಪನೆಯಾದ ಮರುವರ್ಷ ಧರ್ಮಶಾಲೆ(1946)ನಿರ್ಮಾಣವಾಯಿತು. ಅದರ ಮರುವರ್ಷ (1947) ಖಗ್ನಾಲಯ ಕಾಣಿಸಿಕೊಂಡಿತು. ರೋಗಿಗಳು ಕಾಲ ಕಳೆಯುವುದಕ್ಕಾಗಿ ಒಂದು ಪುಟ್ಟವಾಚನಾಲಯವೂ ಹುಟ್ಟಿಕೊಂಡಿತು. ಶ್ರೀ ರಾಘವೇಂದ್ರರಿಗೆ ದೈಹಿಕ ವ್ಯಾಯಾಮದಲ್ಲಿ ತುಂಬ ಮಮತೆ. ಇದಕ್ಕೆ ತಕ್ಕಂತೆ ಅನೇಕ

ಜಟ್ಟಿಗಳುಇವರ ಶಿಷ್ಯರಾಗಲು ಬಯಸುತ್ತಿದ್ದರು. ಶಿವರಾತ್ರಿಯ ಉತ್ಸವಕಾಲದಲ್ಲಿ ಕುಸ್ತಿಯ ಕಣಕ್ಕಿಳಿಯುತ್ತಿದ್ದ ಅನೇಕ ಜಟ್ಟಿಗಳು ಒಂದು ಒಳ್ಳೆಯ 'ಮಟ್ಟಿ'ಯನ್ನೊಳಗೊಂಡ ವ್ಯಾಯಾಮಶಾಲೆ ಬೇಕೆಂದು ಬಯಸುತ್ತಿದ್ದರು. ಆದ್ದರಿಂದ 1949ರ ಹೊತ್ತಿಗೆ ಶ್ರೀ ರಾಘವೇಂದ್ರರು ಅತ್ಯಾಧುನಿಕನಾದ ಒಂದು ವ್ಯಾಯಾಮಶಾಲೆಯನ್ನು ಕಟ್ಟಿಸಿದರು. ಇಲ್ಲಿನ ಮಟ್ಟಿಯಲ್ಲಿ (ಕೆಮ್ಮಣ್ಣು) ಸುಮಾರು ಮೂರು ಸಹಸ್ರ ರೂಪಾಯಿಗಳ ಔಷಧ ಸಾಮಗ್ರಿಯನ್ನು ಸೇರಿಸ ಲಾಗಿದೆ. ನೂರಾರು ಕೊಡ ಆಕಳ ಹಾಲು, ಮೊಸರು, ಬೆಣ್ಣೆ, ಜೇನುತುಪ್ಪಗಳಿಂದ ಹದಗೊಳಿಸಿರುವ ಈ ಮಟ್ಟಿ ಚರ್ಮ ರೋಗಗಳಿಗೆ ರಾಮಬಾಣವಾಗಿರುವುದಲ್ಲದೆ ವಾಯುರೋಗ (ರುಮ್ಯಾಟಿಸಂ) ಹರವಾಗಿದೆ. ಆ ಸುಭಿಕ್ಷದ ಕಾಲದಲ್ಲಿ ಇದಕ್ಕಾಗಿ ವೆಚ್ಚಮಾಡಿದ ಹಣ ಹತ್ತು ಸಹಸ್ರರೂಪಾಯಿಗಳು; ಈಗ ಬಹುಶಃ ಒಂದು ಲಕ್ಷ ರೂಪಾಯಿ ಗಳಾದೀತು!

1950ರ ವೇಳೆಗೆ ಶ್ರೀ ರಾಘವೇಂದ್ರರು ತಮ್ಮ ಸಪ್ತವಾರ್ಷಿಕ ಯೋಜನೆಯ ಜೊತೆಯಲ್ಲಿ ತಾವು ಅಲ್ಲಿ ನಿಲ್ಲಬೇಕಾದ ಅವಧಿಯೂ ಮುಗಿದುದರಿಂದ ಯಾವುದೊಂದು ಮಮಕಾರವೂ ಇಲ್ಲದೆ 'ಅನಾಥಸೇವಾಶ್ರಮ'ದಿಂದ ನಿರ್ಗಮಿಸಲು ಸಿದ್ಧರಾದರು. ಆದರೆ ಈ ಕರೆಯುವ ಹಸುವನ್ನು ಕಳೆದುಕೊಳ್ಳಲು ಯಾರು ಒಪ್ಪಿಯಾರು? ಈಗ ಮಲ್ಲಾಡಿಹಳ್ಳಿಯವರು ಮಾತ್ರವೇ ಅಲ್ಲ, ಬೇರೆ ಬೇರೆ ಊರಿನವರೂ ಅದನ್ನು ಪ್ರತಿಭಟಿಸಿದರು. ಅವರ ಪ್ರಾರ್ಥನೆ ಕಣ್ಣೀರುಗಳು 'ವಜ್ರಾದಪಿ ಕಠೋರಾಣಿ' ಆದ ರಾಘವೇಂದ್ರರ ನಿಶ್ಚಯವನ್ನು 'ಮೃದೂನಿ ಕುಸುಮಾದಪಿ'ಯಾಗಿ ಮಾಡಿದವು. ಇಲ್ಲಿಂದ ಮುಂದೆ 'ಶ್ರೀ ರಾಘವೇಂದ್ರಸ್ವಾಮಿಜಿ' ಆದ ಅವರು ಇಲ್ಲಿಯೆ ನೆಲೆಸಿ ಅನಾಥಸೇವಾಶ್ರಮ ವನ್ನು ಸರ್ವತೋಮುಖವಾಗಿ ಬೆಳೆಸಿರುವುದು ಪ್ರತ್ಯಕ್ಷ ಪ್ರಮಾಣವಾಗಿ ಗೋಚರಿಸುತ್ತಿದೆ ಆಶ್ರಮದ ಆವರಣಕ್ಕೆ ಬಂದಾಗ ಎಲ್ಲೆಲ್ಲೂ ಕಟ್ಟಡಗಳೇ. ಪರಮ್ಮಸ್ವಾಮಿಯ ಮಠ (1944), ಆಸ್ಪತ್ರೆ (1945), ಧರ್ಮಶಾಲೆ (1946), ಖಿಸ್ತಾಲಯ (1947), ವಾಚನಾಲಯ (1948), ವ್ಯಾಯಾಮಶಾಲೆ (1949), ಪ್ರೌಢಶಾಲೆ, ಮುದ್ರಣಶಾಲೆ, ಆಶ್ರಮದ ಕಾರ್ಯಸೌಧ (1950–1951), ಉಪಾಧ್ಯಾಯರ ವಸತಿಗೃಹಗಳು (1952–1953), ಪರಸ್ಪರ ಸಹಾಯ ಸಂಘ, ಅಂಚೆಯ ಕಛೇರಿ (1953), ಅನ್ನಪೂರ್ಣ ಮಂದಿರ (1954), ವಿದ್ಯಾರ್ಥಿವಸತಿಗೃಹ (1958), ವಿವಿಧೋದ್ದೇಶ ಪ್ರೌಢಶಾಲೆ (1959–1960), ಶಿಶುವಿಹಾರ, ಗೋಶಾಲೆ (1960), ವ್ಯಾಸಪೀಠ (1961), ಅಡಿಗೆಯ ಮನೆ (1962), ತಪೋವನ ಮತ್ತು ಅದರಲ್ಲಿನ ಧ್ಯಾನಮಂದಿರಗಳು (1963), ಅತಿಥಿ ಮಂದಿರ (1964), ದೈಹಿಕ ಶಿಕ್ಷಣ ಕಾಲೇಜ್ (1968), ಜೂನಿಯರ್ ಕಾಲೇಜ್ (1972), ಬನಶಂಕರಿ ದೇವಸ್ಥಾನ (1973), ಹೊಸ ಅತಿಥಿಮಂದಿರಗಳು (1975–76), ಉಪಾಧ್ಯಾಯರ ಶಿಕ್ಷಣಸಂಸ್ಥೆ ಮತ್ತು ದೈಹಿಕ ಶಿಕ್ಷಣ ಕಾಲೇಜು (1977), ಯೋಗಶಿಕ್ಷಣಕೇಂದ್ರ, ಪಾಕಶಾಲೆ (1978). ಈ ಎಲ್ಲ ಕಟ್ಟಡಗಳೂ ನೀರು, ಬೆಳಕಿನ ಸೌಲಭ್ಯವನ್ನು ಹೊಂದಿವೆ. ಇಷ್ಟೇ ಅಲ್ಲ; ದುಮ್ಮಿ (1968), ದೇವರಹಳ್ಳಿ (1969), ಸೆಟ್ಟಿಹಳ್ಳಿ (1971)ಗಳಲ್ಲಿ ಪ್ರೌಢಶಾಲೆಗಳೂ ಉಪಾಧ್ಯಾರ ವಸತಿ ಗೃಹಗಳೂ ಎದ್ದು ನಿಂತಿವೆ. ದೂರದೃಷ್ಟಿಯುಳ್ಳ ಶ್ರೀ ಸ್ವಾಮಿಜಿಯವರು ಆಶ್ರಮವು ಸ್ವಾವಲಂಬನೆಯಿಂದ ನಡೆದುಕೊಂಡು ಹೋಗುವಂತೆ ಸಾಕಷ್ಟು ಜಮೀನನ್ನು ಆಶ್ರಮಕ್ಕಾಗಿ ಕೊಂಡಿರುವುದಲ್ಲದೆ ಸಹಸ್ರ ತೆಂಗಿನ ಮರಗಳ ತೋಟ ವೊಂದನ್ನು ಬೆಳೆಸಿ, ಅದರ ಮಧ್ಯದಲ್ಲಿ ತಮ್ಮ ಗುರುಗಳಾದ ಶಿವಾನಂದಸ್ವಾಮಿಯವರ ವೃಂದಾವನವನ್ನೂ, ತೋಟದ ಆರೈಕೆಗಾಗಿ ಅಗತ್ಯವಾದ ಸಿಬ್ಬಂದಿಗೆ ಮನೆಗಳನ್ನೂ ನಿರ್ಮಿಸಿದ್ದಾರೆ. ಸುಮಾರು ಒಂದು ಕೋಟಿ ರೂಪಾಯಿಗಳ ಆಶ್ರಮದ ಆಸ್ತಿ ಈಗ ಬೆಳೆದು ನಿಂತಿದೆ.

ಶ್ರೀ ರಾಘವೇಂದ್ರಸ್ವಾಮಿಜಿ ಇಹವನ್ನು ದೂರುವುದಿಲ್ಲ, ಪರವನ್ನು ದೂರಮಾಡಿಕೊಳ್ಳುವುದಿಲ್ಲ; ಇಹ-ಪರಗಳ ಸಮನ್ವಯ ತತ್ತ್ವ ಅವರದು. ಪರಮಾರ್ಥವನ್ನು ಜೀವನಪರಿಷ್ಕರಣದಲ್ಲಿ ಕಂಡುಕೊಂಡಿದ್ದಾರೆ, ಈ ಮಹಾಯೋಗಿ. ಅನಾಥ ಸೇವಾಶ್ರಮದಲ್ಲಿ ನಡೆಯುವ ಮುಖ್ಯ ಕಾರ್ಯಗಳೆಂದರೆ ವೈದ್ಯ, ಶಿಕ್ಷಣ, ಯೋಗಾಭ್ಯಾಸ;

ಈ ಮೂರರಲ್ಲಿಯೂ ಅವರ ಆ ಸಮನ್ವಯ ತತ್ತ್ವವನ್ನು ಕಾಣಬಹುದು. ಮಾನವನಿಗೆ ಮೊತ್ತಮೊದಲ ಆವಶ್ಯಕತೆಯೆಂದರೆ ದೇಹಾರೋಗ್ಯ.'ಶರೀರ ಮಾದ್ಯಂ ಖಲು ಧರ್ಮ ಸಾಧನಂ?' ಶರೀರ ಆರೋಗ್ಯವಾಗಿದ್ದರೆ ತಾನೆ ಮನಸ್ಸು, ಬುದ್ಧಿ, ಚೇತನಗಳ ವಿಚಾರ ? ಇದನ್ನು ಅರ್ಥಮಾಡಿಕೊಂಡೇ ಅಲ್ಲವೆ ಶ್ರೀಸ್ವಾಮಿಜಿ ವೈದ್ಯಶಾಲೆಯನ್ನು ಮೊಟ್ಟಮೊದಲು ಇಲ್ಲಿ ಸ್ಥಾಪಿಸಿದುದು? ಇದರ ವಿಚಾರವನ್ನು ಹಿಂದೆಯೆ ಪ್ರಸ್ತಾಪಿಸಿದೆ. ಶ್ರೀಯವರು ತಾವೆ ಸ್ವತಃ ರೋಗಿಗಳನ್ನು ಪರೀಕ್ಷಿಸಿ, ತಮ್ಮ ನಿರ್ದೇಶನದಲ್ಲಿಯೆ ತಯಾರಾದ ಅರಿಷ್ಟ, ಆಸವ, ಕಷಾಯ, ಭಸ್ಮಾದಿಗಳನ್ನು ಬಂದ ರೋಗಿಗಳಿಗೆ ಉಚಿತವಾಗಿ ಹಂಚುತ್ತಾರೆ. ರೋಗ ನಿವಾರಣೆಗಾಗಿ ಆಸನ ಪ್ರಾಣಾಯಾಮಾದಿ ಯೋಗವಿದ್ಯೆಯನ್ನೂ ಉಪದೇಶಿಸುತ್ತಾರೆ. ಅವರು ರೋಗಿಗಳಲ್ಲಿ ತೋರುವ ಪ್ರೀತಿ, ಆದರ, ಆತ್ಮೀಯತೆಯೊಡನೆ ಅವರ ಅಧ್ಯಾತ್ಮ ಶಕ್ತಿಯೂ ಸೇರಿ ಔಷಧದ ರೋಗನಿವಾರಣಾಶಕ್ತಿ ದ್ವಿಗುಣಗೊಳ್ಳುತ್ತದೆ. ಇದರಿಂದಲೆ ಪಾಶ್ಚಾತ್ಯ ವೈದ್ಯವಿದ್ಯೆಗೆ ಮಣಿಯದ ಗೂರಲು, ರಾಜಯಕ್ಷ್ಮ, ಮಧುಮೇಹ, ಕ್ಯಾನ್ಸರ್ ಮೊದಲಾದ ಭಯಂಕರ ರೋಗಗಳು ಇಲ್ಲಿ ಪಲಾಯನಮಂತ್ರವನ್ನು ಪಠಿಸಬೇಕಾಗುತ್ತದೆ.

ಶಿಕ್ಷಣಕ್ಷೇತ್ರದಲ್ಲಿ ಅನಾಥ ಸೇವಾಶ್ರಮ ಸಾಧಿಸಿರುವ ಪ್ರಗತಿ ಅದ್ವಿತೀಯವಾದುದು. ಶಿಶುವಿಹಾರದಿಂದ ಹಿಡಿದು ಜೂನಿಯರ್ ಕಾಲೇಜಿನವರೆಗೆ ನಡೆಯುವ ಇಲ್ಲಿನ ಶಿಕ್ಷಣವಿಧಾನ ಪೂರ್ವಕಾಲದ ನಮ್ಮ ಗುರುಕುಲವಾಸಗಳನ್ನು ನೆನಪಿಗೆ ತರುತ್ತದೆ. ಆಶ್ರಮದ ವಿದ್ಯಾರ್ಥಿನಿಲಯ ನೂರಾರು ಜನ ವಿದ್ಯಾರ್ಥಿಗಳಿಗೆ ಉಚಿತವಾದ ಅಶನ ವಸತಿಗಳನ್ನು ಒದಗಿಸುತ್ತದೆ. ಅಧ್ಯಾಪಕವರ್ಗದವರೂ ಆಶ್ರಮದ ಆವರಣದಲ್ಲಿಯೆ ಇರುವುದರಿಂದ ಗುರು–ಶಿಷ್ಯ ಬಾಂಧವ್ಯ ಸಾಕಷ್ಟು ನಿಕಟವಾಗಿರಲು ಸಾಧ್ಯವಾಗಿದೆ. ಇದರಿಂದ ವಿದ್ಯಾರ್ಥಿಗಳಿಂದ ನಾವು ನಿರೀಕ್ಷಿಸುವ ಶಿಸ್ತು ಸಂಯಮ, ಸೌಶೀಲ್ಯಗಳು ಮೂಡಿ ಬೆಳೆಯಲು ಸಹಾಯಕವಾಗಿದೆ. ಬೆಳಗ್ಗೆ 5 ಘಂಟೆಗೆ ಪ್ರಾರಂಭವಾಗುವ ವಿದ್ಯಾರ್ಥಿಗಳ ಸಂಯಮ, ಚಟುವಟಿಕೆ ರಾತ್ರಿ ಹತ್ತು ಘಂಟೆಯವರೆಗೆ ಕ್ರಮಬದ್ಧವಾಗಿ ನಡೆಯುತ್ತದೆ. ಬೆಳಗಿನ ಐದು ಘಂಟೆಗೆ ಸರಿಯಾಗಿ ಸಮವಸ್ತ್ರವನ್ನು ಧರಿಸಿದ ಬಾಲಕ–ಬಾಲಕಿಯರು ಸಾಮೂಹಿಕ ಪ್ರಾರ್ಥನೆಯನ್ನು ಮಾಡಿ, ಸೂರ್ಯನಮಸ್ಕಾರವನ್ನೂ ಹಲವು ಆಸನಗಳನ್ನೂ ಆಚರಿಸುತ್ತಾರೆ. ಇದು ನಿಜವಾಗಿಯೂ ಕಣ್ಣಿಗೊಂದು ಹಬ್ಬ. ದೈಹಿಕ ಶಿಕ್ಷಣದೊಡನೆ ಅಧ್ಯಾತ್ಮ ಸಾಧನೆಯೂ ಇದರಲ್ಲಿ ಸಮನ್ವಯಗೊಂಡಿದೆ. ಇಲ್ಲಿನ ವಿದ್ಯಾರ್ಥಿಗಳು ಪ್ರಾಚ್ಯ ಮತ್ತು ಪಾಶ್ಚಾತ್ಯ ಅಂಗಸಾಧನೆಗಳಲ್ಲಿ ಪ್ರವೀಣರಾಗುತ್ತಾರೆ. ಸ್ವಾಮಿ ಶ್ರೀ ವಿವೇಕಾನಂದರು ಹೇಳುವಂತೆ 'ಕಬ್ಬಿಣದಂತಹ ಮಾಂಸಖಂಡ, ಉಕ್ಕಿನಂತಹ ನರಮಂಡಲವುಳ್ಳ ಪುರುಷಸಿಂಹ'ರು ಇಲ್ಲಿ ತಯಾರಾಗುತ್ತಾರೆ. ದೇಹ, ಬುದ್ಧಿ, ಮನಸ್ಸುಗಳು ಏಕಕಾಲದಲ್ಲಿಯೆ ವಿಕಾಸಗೊಂಡು ಭಾರತದ ಭವ್ಯ ಭವಿಷ್ಯತ್ ಪ್ರಜೆಗಳನ್ನು ಸೃಷ್ಟಿಸುವ ಪವಿತ್ರ ಕಾರ್ಯ ಇಲ್ಲಿ ನಡೆಯುತ್ತಿದೆಯೆಂದು ಹೇಳಿದರೆ ತಪ್ಪಾಗದು. ಆಶ್ರಮದ ದೈನಂದಿನ ಕಾರ್ಯಗಳಲ್ಲಿ ಗುರು–ಶಿಷ್ಯರು ಸಮರಸವಾಗಿ ಬೆರೆಯುತ್ತಾರೆ. ಇಲ್ಲಿ ಜಾತಿ, ಮತ, ಪಂಥಗಳ ಭೇದವಿಲ್ಲ. ಭಜನೆ, ಪ್ರಾರ್ಥನೆ, ದೈಹಿಕ ಸಾಧನೆಗಳಂತೆ ಅಶನ, ವಸನ, ವಸತಿಗಳಲ್ಲಿ ಯಾವುದೊಂದು ತಾರತಮ್ಯವೂ ಇಲ್ಲಿ ಕಂಡುಬರುವುದಿಲ್ಲ. 'ಹರಿಜನರಿಂದ' ಬ್ರಾಹ್ಮಣನವರೆಗೆ ಇರುವ ಹಿಂದುಗಳು ಮಾತ್ರವೇ ? ಅಲ್ಲ; ಕ್ರೈಸ್ತ ಮಹಮದೀಯರಿಗೂ ಇಲ್ಲಿ ಸಮಾನವಾದ ಅವಕಾಶ ದೊರೆತಿದೆ.

ಅಧ್ಯಾತ್ಮದಲ್ಲಿ ತುಂಬ ಮುಂದುವರಿದಿರುವ ಶ್ರೀ ರಾಘವೇಂದ್ರಸ್ವಾಮಿಜಿ ಯೋಗವಿದ್ಯಾ ಪಾರಂಗತರು, ಮಹಾ ತಪಸ್ವಿಗಳು, ಸಿದ್ಧಪುರುಷರು. ವರ್ಷದಲ್ಲಿ ಒಂದು ತಿಂಗಳು ಕಾಲ–ಶ್ರಾವಣ ಮಾಸದಲ್ಲಿ–ಅವರು ಹೊರ ಜಗತ್ತಿನಿಂದ ವಿಮುಖರಾಗಿ ಏಕಾಂತವಾಸಿಗಳಾಗುತ್ತಾರೆ ; ಗಾಂಧಿಕುಟೀರದಲ್ಲಿ ಅವರು ನಿರ್ಮಿಸಿಕೊಂಡಿರುವ ನೆಲಮಾಳಿಗೆಯ ಪೂಜಾಗೃಹವೇ ಅವರ ವಾಸಸ್ಥಾನ. ಅಲ್ಪಾಹಾರವನ್ನು ಸೇವಿಸುತ್ತಾ ಅಲ್ಲಿಯೇ ಆತ್ಮಾರಾಮ ಪರಾಯಣರಾಗಿರುತ್ತಾರೆ. ಆಗ ಅಲ್ಲಿ ತುಂಬಿಕೊಂಡುಬಂದ ಆಧ್ಯಾತ್ಮಶಕ್ತಿಯನ್ನು ಉಳಿದ ಹನ್ನೊಂದು ತಿಂಗಳು

ಲೋಕಕಲ್ಯಾಣಕ್ಕಾಗಿ ಬಳಸುತ್ತಾರೆ. ಜ್ಞಾನದಾಹದಿಂದ ಆಶ್ರಮಕ್ಕೆ ಬರುವವರಿಗೆಲ್ಲ ನಿರ್ವಂಚನೆಯಾಗಿ ಅದನ್ನು ದಾನಮಾಡುತ್ತಾರೆ. ಅವರ ಆಶ್ರಮವೆಂಬುದು ಒಂದು ಯೋಗಶಿಕ್ಷಣ ಕೇಂದ್ರ. ಅದನ್ನು ಬಯಸಿ ಬಂದವರೆಲ್ಲ ತೃಪ್ತಿಯಿಂದ ಹಿಂದಿರುಗುತ್ತಾರೆ. ಪ್ರತಿವರ್ಷವೂ ನವರಾತ್ರಿಯ ಕಾಲದಲ್ಲಿ ಯೋಗಶಿಕ್ಷಣ ಶಿಬಿರವೊಂದನ್ನು ಏರ್ಪಡಿಸಿ, ಇಪ್ಪತ್ತೊಂದು ದಿನಗಳ ಕಾಲ ಉಚಿತವಾದ ಊಟವಸತಿಗಳೊಡನೆ ನಾಡಿನ ತರುಣ ತರುಣಿಯರಿಗೆ ಯೋಗಶಿಕ್ಷಣವನ್ನು ನೀಡುತ್ತಾರೆ. ವರ್ಷಕ್ಕೆ ಎರಡು ಬಾರಿ—ಶಿವರಾತ್ರಿ ಮತ್ತು ಗಣೇಶನ ಹಬ್ಬಗಳಲ್ಲಿ—ಸಪ್ತಾಹಗಳನ್ನು ಏರ್ಪಡಿಸಿ, ಯಥೇಚ್ಛವಾಗಿ ಅನ್ನದಾನ ಮಾಡುವುದರ ಜೊತೆಗೆ ಉದ್ದಾಮ ಸಾಹಿತಿಗಳ ಮತ್ತು ಸಾಧುಸಂತರ ಭಾಷಣ ಪ್ರವಚನಗಳ ಮೂಲಕ ಜ್ಞಾನದಾಸೋಹವನ್ನೂ ನಡೆಸುತ್ತಾರೆ. ಆ ಕಾಲದಲ್ಲಿ ನಾಡಿನ ಶ್ರೇಷ್ಠ ಸಾಹಿತಿಗಳನ್ನೂ ಲೋಕೋಪಕಾರಿಗಳಾದ ಉದಾರಿಗಳನ್ನೂ ಸನ್ಮಾನಿಸುವುದೂ ಉಂಟು.

ಆಶ್ರಮವೇನೋ ಲೋಕೋವಿಶಾಲವಾಗಿ ಬೆಳೆದು ನಿಂತಿದೆ; ನೋಡುವವರ ಕಣ್ಣಹಬ್ಬವಾಗಿದೆ. ಇದಕ್ಕೆ ಭೇಟಿಯಿತ್ತ ದೇಶವಿದೇಶಗಳ ಮಹನೀಯರು ಇದನ್ನು ಮುಕ್ತಕಂಠರಾಗಿ ಹೊಗಳಿದ್ದಾರೆ. ಆದರೆ ಈ ನಂದನವನ ಸೃಷ್ಟಿಯ ಬೆನ್ನ ಹಿಂದೆ ಎಂತಹ ಭಯಂಕರವಾದ ಕಷ್ಟಕಾರ್ಪಣ್ಯಗಳು ಕಾಣಿಸಿಕೊಂಡು ಮರೆಯಾಗಿವೆ ಎಂಬುದು ಊಹಾತೀತ. ಇದನ್ನು ಕಟ್ಟಿದವರು ಹೊಟ್ಟೆಗೆ ಹಿಟ್ಟಿಲ್ಲದೆ ಹಿಡಿ ಮಂಡಕ್ಕಿಯಿಂದ ದಿನಗಳನ್ನು ನೂಕಿದುದುಂಟು; 'ಒಂದು ಬೊಗಸೆ ಕಾಳಿಗಾಗಿ, ಒಂದು ಕಾಸಿಗಾಗಿ ದಿನಗಟ್ಟಲೆ ಜೋಳಿಗೆ ಹಿಡಿದು ನಿಂತು ಪರದಾಡಿದ ದುರ್ದಿನಗಳುಂಟು.' ಆಶ್ರಮವನ್ನು ಬೆಳಸುತ್ತಹೋದಂತೆ ಲೆಕ್ಕವಿಲ್ಲದಷ್ಟು ತೊಡಕುಗಳು, ಕಟುಟೀಕೆಗಳು, ವಿಘ್ನಗಳು, ಕೊನೆಗೆ 'ಈ ವ್ಯಕಿಯನ್ನೆ ನಿರ್ನಾಮ ಮಾಡ'ಬೇಕೆಂಬ ಅಕಾರಣ ದ್ವೇಷ ಕೂಡ ಎದುರಾದುದುಂಟು. ಹೀಗಾಗಿ, ಮನಸ್ಸಿನ ನೆಮ್ಮದಿ, ಶಾಂತಿ, ಗೌರವಗಳು ಹಾಳಾದುದುಂಟು. ಆದರೆ ಸಾಮಾನ್ಯರಂತೆ ಅದನ್ನೆ ಹಚ್ಚಿಕೊಂಡು ಕೊರಗಿದುದಿಲ್ಲ. 'ಅವುಗಳ ಸ್ಮರಣೆಯೂ ಒಂದು ಸ್ಫೂರ್ತಿ' ಎನ್ನುತ್ತಾರೆ, ಶ್ರೀ ರಾಘವೇಂದ್ರ ಸ್ವಾಮಿಜಿ. ತ್ಯಾಗಸೇವೆಗಳ ಈ ತ್ರಿವಿಕ್ರಮ ಮೂರ್ತಿಗೆ, ಹಗಲಿರುಳು ನಿಸ್ವಾರ್ಥದಿಂದ ದುಡಿಯುವ ಈ ಕರ್ಮಯೋಗಿಗೆ 'ಅನ್ಯಮಿಂದ್ರಂ ಕರಿಷ್ಯಾಮಿ' ಎನ್ನುವಂತಹ ಆತ್ಮಪ್ರತ್ಯಯವಿದೆ. 'ಅಭೀಃ' ಎಂಬ ವೇದೋಕ್ತಿಯನ್ನು ಮೂಲಮಂತ್ರವನ್ನಾಗಿ ಮಾಡಿಕೊಂಡು, ಅದಮ್ಯವಾದ ಸೇವಾಭಿಲಾಷೆಯಿಂದ ಕಾರ್ಯರಂಗಕ್ಕಿಳಿದಿರುವ ಈ ಕರ್ಮಯೋಗಿಗೆ 'ಅಸಾಧ್ಯ' ಎಂಬುದು ಎಂದೂ ಎದುರಾಗಿಲ್ಲ. 'ಕ್ರಿಯಾಸಿದ್ಧಿಃ ಸತ್ವೇ ಭವತಿ; ನ ಉಪಕರಣೆ' ಎಂಬ ಸೂಕ್ತಿಗೆ ಶ್ರೀ ರಾಘವೇಂದ್ರ ಸ್ವಾಮಿಜಿ ಒಂದು ಜ್ವಲಂತ ಉದಾಹರಣೆ. ಅವಿರಳವಾಗಿ, ಅವಿಶ್ರಾಂತವಾಗಿ, ನಿಷ್ಕಾಮ ಬುದ್ಧಿಯಿಂದ ದುಡಿದರೆ ಸಿದ್ಧಿ ತನಗೆ ತಾನೆ ಬರುತ್ತದೆ-ಎಂಬುದು ಅವರ ಸಿದ್ಧಾಂತ. 'ನಿಷ್ಕಾಮಕರ್ಮ' ಎಂಬುದಕ್ಕೆ ಮತ್ತೊಂದು ಹೆಸರೇ 'ಶ್ರೀ ರಾಘವೇಂದ್ರ'.

ನೈಷ್ಠಿಕ ಬ್ರಹ್ಮಚಾರಿಯಾದ ಶ್ರೀ ರಾಘವೇಂದ್ರಸ್ವಾಮಿಜಿ ತಮ್ಮ ಈ ಎಂಬತ್ತೇಳರ ಹರಯದಲ್ಲಿಯೂ ತರುಣರನ್ನು ನಾಚಿಸುವಷ್ಟು ಉತ್ಸಾಹದ ಬುಗ್ಗೆಯಾಗಿದ್ದಾರೆ. ಈ ಸಿಡಿಲಮರಿ ಒಂದು ವ್ಯಕ್ತಿಯಲ್ಲ, ಮಂತ್ರಪೂತವಾದ ಒಂದು ಮಹಾಶಕ್ತಿ. ಅವರನ್ನು ಕುರಿತು ಹಲವು ಪವಾಡಗಳನ್ನು ಜನ ಹೇಳುತ್ತಾರೆ. ಅವರ ಒಂದೊಂದು ಕಾರ್ಯವೇ ಒಂದೊಂದು ಪವಾಡದಂತೆ ಇರುವಾಗ, ಪವಾಡವನ್ನು ಮೀರಿಸಿರುವಾಗ-ಇವುಗಳ ಮುಂದೆ ಆ ಪವಾಡಗಳು ನೀರಸ. ಸನ್ಯಾಸಿಯಾದರೂ ವಿಶ್ವಕುಟುಂಬಿಯಾಗಿರುವ ಈ ಮಹಾ ತಿರುಕರ ಕಾರ್ಯಕ್ಷೇತ್ರ ವಿಶಾಲವಾಗಿರುವಷ್ಟೆ ವೈವಿಧ್ಯಪೂರ್ಣವಾಗಿದೆ. ವಾರದ ಆರು ದಿನಗಳೂ ಅಕ್ಷಯವಾದ ತಮ್ಮ ಭಿಕ್ಷಾಪಾತ್ರೆಯೊಡನೆ ಊರೂರು ಅಲೆಯುತ್ತಿರುವ ಈ ಅಸಾಧಾರಣಪುರುಷ ಬಿಡುವಿಲ್ಲದ ತಮ್ಮ ಕಾರ್ಯಕ್ರಮಗಳ ಮಧ್ಯದಲ್ಲಿ ಸಾಹಿತ್ಯಸೃಷ್ಟಿಗೂ ಕೈಹಾಕಿದ್ದಾರೆ. 'ತಿರುಕ' ಎಂಬ ಕಾವ್ಯನಾಮದಿಂದ ಕೃತಿ ರಚನೆಗೆ ಕೈಯಿಕ್ಕಿ ಕನ್ನಡಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಕಥೆ, ಕಾದಂಬರಿ, ಭಾವಗೀತೆ, ಪ್ರಬಂಧ, ನಾಟಕ, ವಚನ, ಶಾಸ್ತ್ರಗ್ರಂಥ-ಇತ್ಯಾದಿ ಸಾಹಿತ್ಯದ

ಯಾವ ಮುಖವೂ ಇವರ ಲೇಖಣಿಯಿಂದ ವಂಚಿತವಾಗಿಲ್ಲ. ಸಾಹಿತ್ಯಸೃಷ್ಟಿಗೆ ಅಗತ್ಯವಾದ ಮನಶ್ಶಾಂತಿ, ಕಾಲಾವಕಾಶಗಳು ಈ ಮಹಾನುಭಾವರಿಗೆ ಹೇಗೆ ದೊರೆಯುತ್ತವೆಯೋ, ಅವರ ಉಪಾಸನಾದೈವವಾದ ಆ ಮಾರುತಿಗೇ ವೇದ್ಯ.

ತ್ಯಾಗ,ಸೇವೆಗಳ ತ್ರಿವಿಕ್ರಮನಂತಿರುವ ಶ್ರೀರಾಘವೇಂದ್ರರು ಅಲ್ಪತೃಪ್ತರಲ್ಲ.ಅವರ ಆಸೆ ಅಪಾರವಾದರೂ ಅಲ್ಪವಾದುದಲ್ಲ, ಭೂಮವಾದುದು. ವಿಶ್ವಭ್ರಾತೃತ್ವ, ವಿಶ್ವಪ್ರೇಮ, ವಿಶ್ವಕಲ್ಯಾಣಗಳ ಹೆಬ್ಬಯಕೆಯನ್ನು ಹೊತ್ತು, ತಾವು ನಿಂತ ನೆಲವನ್ನು ವಿಶ್ವದ ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಬೇಕೆಂಬುದು ಅವರ ಹೆಬ್ಬಯಕೆ. ತಾವೀಗ ಆಶ್ರಮದಲ್ಲಿ ಸಾಧಿಸಿರುವುದೆಲ್ಲವೂ ಇನ್ನೂ ಪ್ರಾರಂಭ ಮಾತ್ರ. ಲೋಕಕಲ್ಯಾಣವನ್ನು ತುಂಬಿಕೊಂಡಿರುವ ಅವರ ಕಣ್ಣುಗಳಿಗೆ ಭಿಕ್ಷುಕರ ಸಮಸ್ಯೆ, ಅನಾಥ ಮಹಿಳೆಯರ ಮತ್ತು ಅನಾಥಶಿಶುಗಳ ಸಮಸ್ಯೆ, ವಿಧವಾಸಮಸ್ಯೆ, ಧಾರ್ಮಿಕ ಅಭಾವದ ಸಮಸ್ಯೆ, ಇತ್ಯಾದಿ ಹಲವಾರು ಸಮಸ್ಯೆಗಳು ಎದ್ದು ಕಾಣುತ್ತವೆ. ಅವುಗಳ ನಿವಾರಣೆಗಾಗಿ ಎಪ್ಪತ್ತೆಂಟು ಲಕ್ಷ ರೂಪಾಯಿಗಳ ಯೋಜನೆಯೊಂದನ್ನು ಹೊಮ್ಮಿಕೊಂಡಿದ್ದಾರೆ. ಇದಕ್ಕೆ ಉದಾರಿಗಳಾದವರ ಧನಸಹಾಯ ಬೇಕು ; ಅದಕ್ಕೂ ಹೆಚ್ಚಾಗಿ ನಿಸ್ವಾರ್ಥವಾಗಿ ದುಡಿಯಬಲ್ಲ ತ್ಯಾಗಿಗಳ ತಂಡವೊಂದು ಬೇಕು. ಅನಾಥಸೇವಾಶ್ರಮ 'ಉಂಡಾಡಿಗಳ ಧರ್ಮಶಾಲೆಯಲ್ಲ; ಕಾಯಕದ ಕರ್ಮಾಗಾರ'-ಎಂಬುದನ್ನು ಮಾತ್ರ ಮರೆಯದಿದ್ದರೆ ಸಾಕು.

ಅನಾಥಸೇವಾಶ್ರಮಕ್ಕೆ ಕೋಟಿಹಣದ ಆಸ್ತಿಯಿದ್ದರೂ ಶ್ರೀರಾಘವೇಂದ್ರರಿಗೆ ಗೋಷ್ಪಾದದಷ್ಟು ಆಸ್ತಿಯೂ ಇಲ್ಲ. ಆಶ್ರಮದ ವ್ಯವಹಾರ ಲಕ್ಷಗಟ್ಟಲೆಯಲ್ಲಿ ನಡೆಯುತ್ತಿದ್ದರೂ ಅದನ್ನು ತಂದು ಹಾಕುವವರ ಬಳಿ ಒಂದು ನಯಾಪೈಸೆಯೂ ಇಲ್ಲ ; ಅದರ ವಹಿವಾಟವೆಲ್ಲ ಕಾರ್ಯದರ್ಶಿಯವರದು. ಆಶ್ರಮಕ್ಕೆ ಬಂದ ಅತಿಥಿಗಳಿಗೆ ರಸಕವಳ ಸಿಕ್ಕಿದರೂ ಆಶ್ರಮದ ಯಜಮಾನರಿಗೆ ಮಾತ್ರ ಉಪ್ಪು ಹುಳಿ ಕಾರಗಳಿಲ್ಲದ ಸಪ್ಪೆಯೂಟ. ಭಕ್ತಾದಿಗಳಿಂದ ಬಗೆ ಬಗೆಯ ಹಣ್ಣು ಹಂಪಲುಗಳು ಯಥೇಚ್ಛವಾಗಿ ಬಂದು ಬಿದ್ದರೂ ಸ್ವಾಮಿಗಳು ತಿನ್ನುವುದು ಮಾತ್ರ ಬಡವರಿಗೆ ಸಾಧ್ಯವಾಗಬಹುದಾದ ಬಾಳೆಯ ಹಣ್ಣು, ಪರಂಗೀ ಹಣ್ಣು. ಶ್ರೀಸಾಮಾನ್ಯನಿಗೆ ಎಟುಕದ ಯಾವ ವಸ್ತುವೂ ತನಗೆ ಬೇಡವೆಂಬುದು ಶ್ರೀ ರಾಘವೇಂದ್ರರ ಸತ್ ಸಂಕಲ್ಪ. ಲೋಕಸೇವೆಯಲ್ಲಿ ಈ ದೇಹ ಸವೆಯಲೆಂಬುದು ದಿನ ದಿನವೂ ದೇವರ ಮುಂದೆ ಪ್ರಾರ್ಥನೆ. ಈ ಆದರ್ಶ ಎಷ್ಟು ದೂರ ಹೋಗಿದೆಯೆಂದರೆ, ಸತ್ತಮೇಲೆ ತನ್ನ ದೇಹವನ್ನು ಸುಡುವುದೂ ಬೇಡ, ಹೂಳುವುದೂ ಬೇಡ ; ಯಾವುದಾದರೂ ಪ್ರಾಣಿಗಳ ಆಹಾರವಾಗುವಂತೆ ವಿನಿಯೋಗವಾಗಲಿ-ಎನ್ನುತ್ತಾರೆ, ಈ ತ್ಯಾಗಮೂರ್ತಿ. ಆಶ್ರಮದ ಆಡಳಿತವನ್ನು ನಿರ್ವಹಿಸಲು ದಕ್ಷರಾದ ಮತ್ತು ಯೋಗ್ಯರಾದ ಮಹನೀಯರನ್ನು ಒಳಗೊಂಡ ಒಂದು ವಿಶ್ವಸ್ತ ಸಮಿತಿಯನ್ನು ಏರ್ಪಡಿಸಿ, ಅದನ್ನು ರಿಜಿಸ್ಟರ್ ಮಾಡಿಸಲಾಗಿದೆ. ಶ್ರೀ ಸ್ವಾಮಿಜಿಯವರ ಅಭಿಪ್ರಾಯದಂತೆ 'ಜಗ ಎಂದರೆ ಜನಿಸಿ ಗಮಿಸುವ ಕ್ರಿಯಾವಿಲಾಸ. ಜನನ-ಗಮನಗಳ ಮಧ್ಯದ ಪಯಣವೇ ಬಾಳು ಆ ಬಾಳು ಆದರ್ಶವಾದರೆ ಜಗತ್ತನ್ನೇ ಉದ್ಧಾರ ಮಾಡಿದಂತೆ !' ಶ್ರೀರಾಘವೇಂದ್ರರು ಲೋಕೋದ್ಧಾರವನ್ನು ಸಾಧಿಸಿದ ಧನ್ಯಜೀವಿಗಳಾಗಿದ್ದಾರೆ. ಅವರು ಮುಕ್ಕೋಟಿ ಕನ್ನಡಿಗರ ಹಿರಿಯ ಆಸ್ತಿ. ಇಂತಹ ದೇವಮಾನವರಲ್ಲದೆ ಮತ್ತಾರು ಸಂಭಾವನಾರ್ಹರು ? ಈ ಗ್ರಂಥದ ಸರ್ವಸ್ವವೂ ಆಶ್ರಮದ ಹಿತಕ್ಕೆ ವಿನಿಯೋಗವಾಗಿ ಸಾರ್ಥಕವಾಗುವುದರಿಂದ ನಿಜವಾದ ಅರ್ಥದಲ್ಲಿ ಇದು 'ಶ್ರೀಕೃಷ್ಣಾರ್ಪಣಮಸ್ತು' ಆಗುತ್ತದೆ.

ಶ್ರೀ ಗುರುದೇವನಿಗೆ ಅರ್ಪಿಸುತ್ತಿರುವ ಈ ಸುದೀರ್ಘ ದಂಡನಮನದಿಂದ ಮೇಲೇಳುವ ಮುನ್ನ ಈ 'ನಂದನವನ'ವನ್ನು ಇಷ್ಟು ಭವ್ಯವಾಗಿ ಬೆಳೆಸಲು ಸಹಾಯಕರಾದವರನ್ನೆಲ್ಲ ಕೃತಜ್ಞತೆಯಿಂದ ನೆನೆಯುವುದು ಅತ್ಯಂತ ಆದಂದದಾಯಕವಾಗಿರುವಂತೆ ನನ್ನ ಪವಿತ್ರ ಕರ್ತವ್ಯವೂ ಆಗಿದೆ. ಇದರ ಬೃಹತ್ತಿಗೆ ತಕ್ಕಂತೆ ಈ ಹುಲುಸಾದ ಬೆಳೆಗೆ ನೆರವಾದವರ ಸಂಖ್ಯೆಯೂ ಮಹತ್ತಾಗಿಯೇ ಇದೆ. ಇಂತಹ ಕೊಡುಗೆಯೊಂದನ್ನು ಶ್ರೀಯುವರಿಗೆ

ಅರ್ಪಿಸಬೇಕೆಂಬ ಪ್ರೇರಣೆ ಅಂಕುರಿಸಿದುದು ಅವರ ಪಟ್ಟಶಿಷ್ಯರಾದ ಪೂಜ್ಯ ಶ್ರೀ ಸೂರದಾಸಜಿಯವರ ಮನೋಭೂಮಿಕೆಯಲ್ಲಿ. ಅವರು ಪ್ರೇರಕಶಕ್ತಿಯಾದರೆ ನನ್ನ ಮಾನ್ಯಮಿತ್ರರಾದ ಶ್ರೀಮಾನ್ ಟಿ. ಎಸ್. ರಾಮಚಂದ್ರ ಮೂರ್ತಿಯವರು ಕಾರಕಶಕ್ತಿ. ಅವರು ನಂದನವನಕ್ಕೆ ಅಗತ್ಯವಾದ ಲೇಖನರೂಪೀ ಫಲಪುಷ್ಪ ವೃಕ್ಷಗಳು ಕನ್ನಡನಾಡಿನ ಮೂಲೆಮೂಲೆಗಳಿಂದಲೂ ಬಂದೊದಗಲು ಸಹಾಯಕರಾದರು. ನನ್ನ ಇನ್ನೊಬ್ಬ ಮಿತ್ರರಾದ ಪ್ರೊ. ರಾ. ಸತ್ಯನಾರಾಯಣರು ನಂದನವನಕ್ಕೆ ತಕ್ಕ ಕ್ಷೇತ್ರವನ್ನು ಆಯ್ದು ಹದಗೊಳಿಸಿದರು. ಡಾ. ಶಿವರುದ್ರಪ್ಪ, ಡಾ. ಹಾ. ಮಾ. ನಾಯಕ, ಪ್ರೊ. ರಾಮಚಂದ್ರರಾವ್, ಶ್ರೀ ನಾರಾಯಣ, ಶ್ರೀ ವೈಕುಂಠರಾಜು—ಇವರು ಅದರ ರಕ್ಷಕ ಶಕ್ತಿಯಾಗಿ ನಿಂತರು. ಇಲ್ಲಿಗೆ ಪುರುಷಾರ್ಥಗಳಲ್ಲಿ ಮೊದಲನೆಯದನ್ನು ಸಾಧಿಸಿದಂತಾಯಿತು. ನಮಗೆ ಮೂರು, ನಾಲ್ಕರ ಅಗತ್ಯ ಇಲ್ಲಿ ಅಷ್ಟಾಗಿ ಇಲ್ಲವಾದರೂ ಎರಡನೆಯದು? ನಂದನವನದ ಬೆಳವಣಿಗೆಗೆ ಅಗತ್ಯವಾದ ಜೀವನವೇ ಅರ್ಥ ಅಥವಾ ಹಣ. ನಮ್ಮ ಸಂಭಾವನಾ ಗ್ರಂಥವನ್ನು ಸ್ವೀಕರಿಸುತ್ತಿರುವ ಮಹಾನುಭಾವರು 'ತಿರುಕ'ರಾದರೆ, ಅರ್ಪಿಸುತ್ತಿರುವ ನಾವು ಅವರ ಶಿಷ್ಯರಾದ 'ಮರಿ ತಿರುಕರು'. ನಮ್ಮ ಯೋಜನೆಯಾದರೋ ಒಂದು ಲಕ್ಷಕ್ಕೂ ಮೀರಿದುದು. ಇದನ್ನು ಕಾರ್ಯಗತಗೊಳಿಸುವ ಬಗೆ ಹೇಗೆಂದು ತಲೆ ಕೆಡಿಸಿಕೊಳ್ಳುತ್ತಾ ಆಕಾಶದತ್ತ ನೋಡಿದಾಗ ನಮ್ಮ ಸಮಸ್ಯೆ ಬಗೆಹರಿಯಿತು. ಸ್ವರ್ಗಾಧಿಪತಿ ದೇವರಾಜ–ಆತನೇ ಜೀವನಕ್ಕೆ, ಮಳೆಗೆ ಅಧಿದೇವತೆ–ಮತ್ತು ಸಂಕಟನಿವಾರಕ ರಂಗನಾಥ–ಈ ಹೆಸರುಗಳು ಹೊಳೆದವು. ಆ ಹೆಸರಿನವರು ನಮ್ಮ ಮಂತ್ರಿ ಮಂಡಲದಲ್ಲಿಯೆ ಇದ್ದುದು ಒಂದು ಸೋಜಿಗ. ನಾವು ಅವರಿಬ್ಬರನ್ನೂ ಪ್ರಾರ್ಥಿಸಿಕೊಂಡೆವು. ನಮ್ಮ ಪ್ರಾರ್ಥನೆಯನ್ನು ಮನ್ನಿಸಿ, ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ದೇವರಾಜ ಅರಸರವರು ಮಹಾಪೋಷಕರಾಗಿಯೂ, ಮಾನ್ಯಮಂತ್ರಿ ಶ್ರೀ ರಂಗನಾಥರು ಪೋಷಕರಾಗಿಯೂ ನಮ್ಮ ಬೆಂಬಲಕ್ಕೆ ನಿಂತರು. ಆದರೇನು? 'ಸಮುದ್ರದ ನೆಂಟಸ್ತನ, ಉಪ್ಪಿಗೆ ಬಡತನ'. ನಾವು ಕೆಲಸ ಮಾಡಿ ಮುಗಿಸದೆ ದೊಡ್ಡವರನ್ನು ಯಾಚಿಸುವುದೆಂತು? ಆದರೆ ಯಾಚನೆಯಿಲ್ಲದೆ ನಮ್ಮ ಕೆಲಸ ಮುಂದುವರಿಸುವುದೆಂತು? ಈ ಬೀಜವೃಕ್ಷ ನ್ಯಾಯವನ್ನು ಭೇದಿಸಲು ನಾವು ನಾಡಿನ ದಾನಿಗಳನ್ನು ಆಶ್ರಯಿಸಬೇಕಾಯಿತು. ಸಹಸ್ರ ರೂಪಾಯಿಗಳನ್ನು ನೀಡಿದ ಮಹಾದಾನಿಗಳೂ, ನೂರು ರೂಪಾಯಿಗಳನ್ನು ಕೊಟ್ಟ ದಾನಿಗಳೂ ನಂದನವನದ ಒಂದು ಪ್ರತಿಗಾಗಿ ಐವತ್ತು ರೂಪಾಯಿ ಮುಂಗಡವಾಗಿ ನೀಡಿದ ಉದಾರಿಗಳೂ ನಮ್ಮ ಸಹಾಯಕ್ಕೆ ಬಂದರು. ಇವರೆಲ್ಲರ ನೆರವೂ ವ್ಯರ್ಥವಾಗುವುದಿಲ್ಲ ಎಂಬುದೊಂದು ಸಮಾಧಾನ; ಏಕೆಂದರೆ ನಂದನವನದಿಂದ ಬರುವ ನಿವ್ವಳ ಆದಾಯವೆಲ್ಲ ಅನಾಥಸೇವಾಶ್ರಮದ ರಚನಾತ್ಮಕ ಕಾರ್ಯಕ್ರಮಗಳಿಗಾಗಿಯೇ ಸಮರ್ಪಿತವಾಗುವುದು.

ಬೆಂಗಳೂರಿನ ನಾಗರಿಕರಿಂದ ಆಯ್ಕೆಯಾದ ಶ್ರೀ ರಾಮೇಗೌಡರೇ ಮೊದಲಾದ ಸ್ವಾಗತ ಸಮಿತಿಯೊಂದರ ಸದಸ್ಯರು ತಲಾ ಸಹಸ್ರ ರೂಪಾಯಿಗಳನ್ನು ನೀಡಿದರು. ಇವುಗಳಿಂದ ನಮ್ಮ ತಾತ್ಕಾಲಿಕ ತಗಾದೆ ನೀಗಲು ಸಾಧ್ಯವಾಯಿತು. ಇವರೆಲ್ಲರನ್ನೂ ನಾನು ಕೃತಜ್ಞತೆಯಿಂದ ನೆನೆದು ವಂದಿಸುತ್ತೇನೆ. ಕರ್ಣಾಟಕ ಪ್ರಕಾಶನ ಮತ್ತು ಪುಸ್ತಕ ವ್ಯಾಪಾರಿಗಳ ಸಂಘದ ಅಧ್ಯಕ್ಷರಾದ ಶ್ರೀಮಾನ್ ಕಮಲಾನಾಥರು 'ನಂದನವನ'ಕ್ಕೆ ಅಗತ್ಯವಾದಷ್ಟು ಸುಲಭ ಬೆಲೆಯ ಕಾಗದವನ್ನು ಭದ್ರಾವತಿಯ ಕಾಗದದ ಕಾರ್ಖಾನೆಯಿಂದ ಕೊಡಿಸಿಕೊಟ್ಟರು; ಆ ಕಾರ್ಖಾನೆಯವರು ಹಣಸಂದಾಯದಲ್ಲಿ ನಮ್ಮಿಂದ ಆದ ವಿಳಂಬವನ್ನು ತಾಳ್ಮೆಯಿಂದ ಸಹಿಸಿ ಸಹಾಯ ಮಾಡಿದರು. ಕನ್ನಡನಾಡಿನ ನೂರಾರು ಜನ ಹೆಸರಾಂತ ಬರೆಹಗಾರರು ತಮ್ಮ ಅಮೂಲ್ಯವಾದ ಲೇಖನಗಳಿಂದ ನಮ್ಮನ್ನು ಕೃತಕೃತ್ಯರನ್ನಾಗಿ ಮಾಡಿದ್ದಾರೆ. ನನ್ನ ಮಾನ್ಯ ಮಿತ್ರರಾದ ಶ್ರೀ ಎ. ಕೃಷ್ಣಮೂರ್ತಿಯವರು ಲೇಖನಗಳನ್ನು ವಿಂಗಡಿಸಿ, ಪರಿವಿಡಿಯನ್ನು ನಿರ್ಧರಿಸುವಲ್ಲಿ ನನಗೆ ಸಹಾಯವನ್ನು ನೀಡಿದ್ದಾರೆ. ಕಲಾವಿದ ಶ್ರೀ ನರಸಿಂಹನ್ ಅವರು ರಕ್ಷಾಕವಚದ ವರ್ಣಚಿತ್ರವನ್ನು ಬರೆದುಕೊಟ್ಟಿದ್ದಾರೆ; ಗೆಳೆಯ ಕಲಾವಿದ ಶ್ರೀ ಪಿ. ಆರ್. ತಿಪ್ಪೇಸ್ವಾಮಿ

ಯವರು ಲೇಖನಗಳನ್ನು ಒದಗಿಸುವುದರಲ್ಲಿ, ಗ್ರಂಥವನ್ನು ಕಲಾತ್ಮಕವಾಗಿ ಹೊರತರುವುದರಲ್ಲಿ ಸಹಾಯ ಸಹಕಾರಗಳನ್ನು ನೀಡಿದ್ದಾರೆ. ಶ್ರೀ ಗಂಗಾಧರ ಆಚಾರ್ಯರು ಆಶ್ರಮದ ಮತ್ತು ಶ್ರೀ ಶ್ರೀ ಸ್ವಾಮಿಜಿಯವರ ಛಾಯಾ ಚಿತ್ರಗಳನ್ನು ಒದಗಿಸಿದ್ದಾರೆ. ಇವರೆಲ್ಲರಿಗೂ ನಾನು ಚಿರಋಣಿ. ಕಾಲಮೀರಿ ಬಂದ ಕೆಲವು ಲೇಖನಗಳನ್ನು ಸ್ವೀಕರಿಸಲಾಗದಿದ್ದುದಕ್ಕಾಗಿಯೂ, ಕೆಲವು ಲೇಖನಗಳಲ್ಲಿ ಅನಿವಾರ್ಯವಾಗಿ ಸಂಪಾದಕನ ಕತ್ತರಿಯನ್ನು ಬಳಸಬೇಕಾಗಿ ಬಂದುದಕ್ಕಾಗಿಯೂ ನಾನು ಆಯಾ ಲೇಖಕರ ಕ್ಷಮೆಯನ್ನು ಯಾಚಿಸುತ್ತೇನೆ. ಕಡೆಯದಾಗಿ 'ಶ್ರೀ ಸದ್ಗುರು ಪ್ರಿಂಟರ್ಸ್' ಮಾಲೀಕರಾದ ಶ್ರೀ ಆರ್ .ವಿ. ಸದಾಶಿವಮೂರ್ತಿ ಮತ್ತು ಆರ್. ಎಸ್. ವಾಸು ಅವರಿಂದ ಆಗಿರುವ ಉಪಕಾರ ಮಾತಿಗೆ ಮೀರಿದುದು. ಪುಸ್ತಕವನ್ನು ಸಕಾಲಕ್ಕೆ ಅಂದವಾಗಿ ಮುದ್ರಿಸಿಕೊಟ್ಟುದು ಮಾತ್ರವೇ ಅಲ್ಲ; ಲೇಖನ ಸಂಗ್ರಹದಿಂದ ಹಿಡಿದು ಅರ್ಥ ಸಂಗ್ರಹದವರೆಗೆ ಎಲ್ಲದರಲ್ಲಿಯೂ ಅವರು ನಮ್ಮೊಡನೆ ಸಮಭಾಗಿಗಳಾಗಿ ಶ್ರಮಿಸಿದ್ದಾರೆ. ಅವರನ್ನು ಹೃತ್ಪೂರ್ವಕವಾಗಿ ವಂದಿಸಿ, 'ಶ್ರೀ ಸದ್ಗುರು ಪ್ರಿಂಟರ್ಸ್'ನ ಕಾರ್ಮಿಕ ವರ್ಗದವರನ್ನು ಅಭಿನಂದಿಸುತ್ತೇನೆ.

ಮೈಸೂರು
೫–೫–೧೯೭೮

ತ. ಸು. ಶಾಮರಾಯ
ಪ್ರಧಾನ ಸಂಪಾದಕ

ಪರಿವಿಡಿ

ಭಾಗ ೧

ಭಾಗ ೨

ಭಾಗ ೩

ನಂದನವನ



ಮಹಾದ್ವಾರ : " ರಾಜಕೀಯಕ್ಕೆ ಪ್ರವೇಶವಿಲ್ಲ "



ಆಶ್ರಮವು ಅಂಕುರಿಸಿದ್ದು ಇಲ್ಲಿ: ಪರಪ್ಪಸ್ವಾಮಿಗಳ ಹಳೆಯ ಮಠ



ವಾಮನಾವತಾರದ " ತಿರುಕ "ರಿಗೆ ಮೊದಲ ಭಿಕ್ಷೆ: ಸಂಕಜ್ಜಿ



ಆಯುಸ್ಸು ಆರೋಗ್ಯಗಳ ತೀರ್ಥಕ್ಷೇತ್ರ :
ಆಯುರ್ವೇದ ವೈದ್ಯ ಶಾಲೆ



ರುಗ್ಣಾಲಯ : ವಾಚನಾಲಯ



ಶೀಲ, ವಿದ್ಯೆ, ಬುದ್ಧಿಗಳನ್ನು ಬೆಳೆಸುತ್ತಿರುವ ವಿದ್ಯಾರ್ಥಿನಿಲಯ



ಗಾಂಧಿ ಸ್ಮಾರಕ ಮಂದಿರ : ಶಿರಕರ ಅಧ್ಯಾತ್ಮ ಕುಟೀರ




ಒಣಗಿದ ನೆಲ ಹಸಿರು ಸಂಪತ್ತಿನಿಂದ ಸೊಂಪಾಗುತ್ತಿದೆ : ತಪೋವನದಲ್ಲಿ




ರಾಷ್ಟ್ರೀಯತೆಯನ್ನೂ ಸಂಸ್ಕೃತಿಯನ್ನೂ ವಿದ್ಯೆಯ ಹಂದರದಲ್ಲಿ ಮೈಗೂಡಿಸಲೆಂದು
'ರಾಷ್ಟ್ರೀಯ ಪ್ರೌಢಶಾಲೆ' ಹುಟ್ಟಿಕೊಂಡ ಹೊಸತರಲ್ಲಿ



ತಪೋವನ—ನಂದನವನ



" ಅನ್ನಂ ಬಹು ಕುರ್ವೀತ "—ಶಿವರಾತ್ರಿಯ ದಾಸೋಹ



ಆಶ್ರಮದ ಗೋಧನ



ರೋಗ ನಿರ್ಮೂಲನಕ್ಕೆ ಮದ್ದು ಹುಟ್ಟುತ್ತಿದೆ, ಇಲ್ಲಿ



ಚರಖಾ: ರಾಷ್ಟ್ರೀಯ ಉದ್ದಿಮೆಯಲ್ಲಿ ಶಿಕ್ಷಣ



ಅಂಗವಿದ್ಯೆಯಲ್ಲಿ ಶಿಕ್ಷಣ—ಸಾಮೂಹಿಕ ಸೂರ್ಯನಮಸ್ಕಾರ



ಜಾನಪದ ಕಲೆಯಲ್ಲ ಶಿಕ್ಷಣ—ಲೇಜೀಂ




ಆಶ್ರಮವು ಬೆಳೆಯುವ ಧಾನ್ಯಶ್ರೀ



ವೃತ್ತಿ ಶಿಕ್ಷಣ: ಅಚ್ಚುಕೂಟದಲ್ಲಿ



ವೃತ್ತಿ ಶಿಕ್ಷಣ: ಯಂತ್ರ ವಿದ್ಯೆಯಲ್ಲಿ



ಮುಂದಿನ ವಿಜ್ಞಾನಿಗಳು: ರಾಸಾಯನಿಕ ಪ್ರಯೋಗಶಾಲೆಯಲ್ಲಿ



ಬೆಳೆಯುತ್ತಿರುವ ವಿಜ್ಞಾನಿಗಳು: ಭೌತ ಪ್ರಯೋಗ ಶಾಲೆಯಲ್ಲಿ



"ಲೋಕಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ "—ವಾಚನಾಲಯ



" ಲೋಕ ಸಂಗ್ರಹ "—ಉಪಾಧ್ಯಾಯರ ವಾಚನಾಲಯ



ದಿನನಿತ್ಯದ ಉಪಾಹಾರ: ಶಿಸ್ತಿನ ಸಿಪಾಯಿಗಳು



ಗಾಯಕ—ಕವಿ ಸಮಾಗಮ : ಪ್ರಸಿದ್ಧ ಗಾಯಕ ಅಥಣೀಕರ್ ಮಾಸ್ತರರಿಗೆ ಸನ್ಮಾನ



ಆತ್ಮದ ಏಕಾಂತತೆಯಲ್ಲಿ




ಆಸನಸಿದ್ಧಿ : ವಜ್ರಾಸನದಲ್ಲಿ ಚಿನ್ಮುದ್ರೆ



ಉಪಾಧ್ಯಾಯರ ವಸತಿಗೃಹಗಳು



ವಿದ್ಯಾರ್ಥಿಗಳ ಭೋಜನಶಾಲೆ




ಸ್ವಾವಲಂಬನದ ಪ್ರತೀಕ : ಆಶ್ರಮದ ಸ್ವಂತ ಅಚ್ಚುಕೂಟ



" ಗೋಕುಲ "—ಆಶ್ರಮದ ಗೋವರ್ಧನ ಕ್ಷೇತ್ರ



ವ್ಯಾಸಪೀಠ—" ದೇವರಿದ್ದಾನೆ, ಎಚ್ಚರಿಕೆ !"




ಬೃಹತ್ತು ಮಹತ್ತುಗಳಲ್ಲಿ ಹಬ್ಬಿ ಹರಡಿದ ಪ್ರೌಢಶಾಲೆ ಮತ್ತು ಜೂನಿಯರ್ ಕಾಲೇಜು




ಭವ್ಯ ವಿದ್ಯಾರ್ಥಿನಿಲಯ




ಭಜನೆ ಮತ್ತು ಸತ್ಸಂಗ ಗೋಷ್ಠಿ : ಪರಪ್ಪಸ್ವಾಮಿ ಮಂಠ (ಈಗ)



"ಕೈಮುಗಿದು ಒಳಗೆ ಬಾ ಯಾತ್ರಿಕನೆ"—ಅತಿಥಿಗೃಹ



ಊರ್ಧ್ವಗಮನ ಸಾಹಸದ ಸಂಕೇತ: ಸ್ನಾತಕಪದವಿ ಕಾಲೇಜು, ದೈಹಿಕ ಶಿಕ್ಷಣ ಕಾಲೇಜುಗಳ ಕಟ್ಟಡ



ಹಠಯೋಗಿ ಸ್ವಾಮಿಜೀ: ಮಧ್ಯಮನೌಲಿ



ಉಡ್ಡೀಯಾನ ಬಂಧದಲ್ಲಿ ಸ್ವಾಮಿಜೀ



ಮಲ್ಲವಿದ್ಯೆಯ ವೀರ: ಸ್ವಾಮೀಜೀ



ಮಲ್ಲರ ಗಂಡ: ಸ್ವಾಮೀಜೀ



ಕರುಣಾಳು, ಬಾ ಬೆಳಕೆ

ಭಾಗ ೧

ಕೆ. ಎಸ್. ನ.

ಎಲ್ಲರಿಗೊಳಿತನು ಬಯಸಲಿ ಕವನ

ಭೇದವನರಿಯದು ನೀಲಿಯ ಗಗನ
ಒಂದೆ ಮಣ್ಣಿನಿಂದೆಲ್ಲರ ಜನನ
ಒಂದೆ ದಿಕ್ಕಿನಲಿ ಎಲ್ಲರ ಪಯಣ
ನೋವು ನಲಿವು ಬಂದರೆ ಬರಲೆಂದು
ಎಲ್ಲರಿಗೊಳಿತನು ಬಯಸಲಿ ಕವನ ॥ ೧ ॥

ಅಡ್ಡಗೋಡೆಗಳನೊಡೆಯುತ ನಡೆದು
ಬಡವ ಬಲ್ಲಿದರು ಹಿತದಲಿ ಕಲೆತು
ಸೋದರರೆಲ್ಲರು ಒಟ್ಟಿಗೆ ದುಡಿದು
ಗಳಿಕೆಯನೆಲ್ಲರು ಸವಿಯಲಿ ಎಂದು
ಎಲ್ಲರಿಗೊಳಿತನು ಬಯಸಲಿ ಕವನ ॥ ೨ ॥

ಲಭಿಸಲೆಲ್ಲರಿಗು ನಿಲ್ಲಲು ನೆರಳು
ಎಲ್ಲ ಮಕ್ಕಳಿಗು ಒಳ್ಳೆಯ ಹಾಲು
ಹೊಂಬಿಸಿಲಿಳಿಯಲಿ ಎಲ್ಲರ ಮೇಲು
ನೆಮ್ಮದಿಯುಕ್ಕಲಿ ಎಲ್ಲರಿಗೆಂದು
ಎಲ್ಲರಿಗೊಳಿತನು ಬಯಸಲಿ ಕವನ ॥ ೩ ॥

ಭೂಮಿಯ ಕರುಣೆಗೆ ಮಿತಿಯಿರದೆಂದು
ಎಲ್ಲರ ದುಡಿಮೆಗೆ ಫಲವಿಹುದೆಂದು
ನಾಳೆಯ ಬಾಗಿಲು ನಂದನವೆಂದು
ಪ್ರೀತಿಗೆ ಶಾಂತಿಗೆ ಜಯವಿರಲೆಂದು
ಎಲ್ಲರಿಗೊಳಿತನು ಬಯಸಲಿ ಕವನ ॥ ೪ ॥

'ಓ !' ಎನ್ನಿ

ಊರಿಗೊಬ್ಬ, ಬೀದಿ ಬೀದಿಗೂ ಒಬ್ಬ,
ಬಾಬಾ ಸ್ವಾಮಿ ಗುರು ಜಗದ್ಗುರುಗಳಲ್ಲಿ
ಇವನಲ್ಲ ;
ಬೂದಿ ಕುಂಕುಮ ವಿಗ್ರಹ ಉಂಗುರ ಗಡಿಯಾರ
ಅಗ್ನಿಸ್ತಂಭನ ಚಮತ್ಕಾರ
ಒಂದೂ ಇಲ್ಲ ;
ಸುತ್ತ ಮುತ್ತ ಹಿಂಡುಹಿಂಡು ಹಿಂ-ಬಾಲಕರು
ಭಜಕ ಪೂಜಕ ಪ್ರಚಾರಕರೂ
ಇಲ್ಲ ;
ಸಭೆ ಸಂತೆ ಉತ್ಸವ ಆರಾಧನೆ ಗಂಟೆ ಜಾಗಟೆ ನಗಾರಿ
ಸದ್ದು ಗದ್ದಲ ಗಲಭೆಯೂ
ಇಲ್ಲ ;
ವಾಗ್ವಾದ ಪತ್ರಿಕಾಯುದ್ಧ ರಹಸ್ಯ ಶೋಧಗಳ
ತಂಟೆತಕರಾರೂ
ಇಲ್ಲ.

ರಾಜಕಾರಣಿಯಲ್ಲ, ಮಂತ್ರಿಮಹೋದಯನೂ ಅಲ್ಲ,
ಕಡೆಗೆ ಪುಡಾರಿಯೂ ಕೂಡ
ಅಲ್ಲವೇ ಅಲ್ಲ ;
ಕೂಗಾಟ ಕಿರಿಚಾಟ ಸಿರಿಗರೀಬಿಗಳಾಟ
ಚುನಾವಣೆ ಬನಾವಣೆಗಳೂ
ಇಲ್ಲ ;
ಇವನ ಹಿಂದಿಲ್ಲ ಮುಂದಿಲ್ಲ ಸುತ್ತಿಲ್ಲ,

ಪೋಲೀಸು ಸೈನ್ಯ ಕಾರು ಜೀಪುಗಳ ಸಾಲು ಸಾಲು
ದಾರಿಯುದ್ದಕ್ಕೂ ತಳಿರು ತೋರಣ ಹಾರ
ವಂದಿಮಾಗಧ ಘೋಷ ಧ್ವನಿವರ್ಧಕ
ಸರ್ವಜ್ಞ ಒಣ ಭಾಷಣ.
ಅಸ್ತು ಅನ್ನುವುದಕ್ಕೆ ಸಂಸತ್ತು ವಿಧಾನ ಸಭೆಗಳೂ
ಇಲ್ಲ ;
ಇನ್ನು ಕಾನೂನಿನ ಮೇಲೆ ಕಾನೂನೇ, ತೆರಿಗೆಯ ಮೇಲೆ ತೆರಿಗೆಯೇ
ಹೆದರಿಕೆಯೆ ಬೆದರಿಕೆಯೆ ಕತ್ತು ಹಿಸುಕೆ,
ಬೆತ್ತ ಬಂದೂಕಗಳೆ, ಜೈಲೆ, ಗಲ್ಲೆ,
ಉಹುಂ, ಯಾವುದೂ ಇಲ್ಲ ಇವನ ಕೈಯಲ್ಲಿ,
ಮನದಲ್ಲೂ.

ಹೋಗಲಿ,
ಕ್ಷಣಕ್ಷಣವು ಹಣ ಟಂಕಿಸುವ ಪ್ರಚಂಡ ಪ್ರವೀಣ
ತೆರೆಮರೆಯ ಕೃಷಿಭೂಪ, ಕೈಗಾರಿಕಾ ಸಾಮ್ರಾಟ,
ವ್ಯಾಪಾರಸಾಪಾರ ಕುಬೇರ,
ಭೂಸ್ವರ್ಗ ಸುಖ ಭೋಗಿ ಇಂದ್ರ ಚಂದ್ರ ದೇವೇಂದ್ರ,
ಸಿರಿಗಡಲ ಶಯನ ಅಗಣಿತ ಕೋಟಿ ನಾರಾಯಣ....
ಅಲ್ಲ ಅಲ್ಲ ಅಲ್ಲಾ,
ಇವನದೆಂದೆಂಬೊಂದು ಕುರುಡು ಕಾಸೂ ಇಲ್ಲ
ಈ ಲೋಕದಲ್ಲೇ-ಮತ್ತಾವ ಲೋಕದಲೆ ;
ಅಷ್ಟೇಕೆ,
ಅವನ ತನುವು ಮನವೂ ಕೂಡ ಅವನವಲ್ಲ !
-ಅಂದ ಮೇಲೆ ?

ಮತ್ತಾವನಿವನು ? ಯಾವೂರ ದಾಸಯ್ಯ ?
ಮಾಡುವವನೇನನ್ನು ?
ಮಹಾ ;

ಇವನೆ ?
ಎಲ್ಲಿಯೋ ಹುಟ್ಟಿದವ, ಎಲ್ಲೆಲ್ಲೊ ಅಲೆದವನು,
ಯಾರುಯಾರನೊ ಹಿಡಿದು, ಯಾವುದರದೋ ಬೆನ್ನಹತ್ತಿ,
ತುಂಬಿಕೊಂಡವ ದೊಡ್ಡ ಬಾಳ ಭಂಡಾರವನೆ,

ಕಡೆಗೆ ನೆಲೆಸಿದವನೊಂದು ಬೆಂದ ಕಾಡಿನಲೆ,
ಮಲ್ಲಾಡಿ ನಾಡ ಮಾಡೆ.
ಈ ಪವಾಡಕ್ಕವನು ಕಂಡುಹಿಡಿದ ರಹಸ್ಯ ?

ಏನಿಲ್ಲ, ಬಲು ಸುಲಭ ;
ಮಾಯೆಯಿಲ್ಲ, ಮಾಟವಿಲ್ಲ,
ಈ ಪವಾಡ ಮರೆಮರೆಯದಲ್ಲ,
ತೆರೆದ ಸೃಷ್ಟಿ ;
ಯಾವ ವಿಜ್ಞಾನಿಯೂ ಹುಡುಕಬೇಕಿಲ್ಲ,
ಸಾಮಾನ್ಯ ಮಾನವನಿಗೇ ಕಾಣುವುದು ಸುಸ್ಪಷ್ಟ,
ತಂತ್ರವೇ ಇಲ್ಲ ಅಂದ ಮೇಲೆ,
ಸಣ್ಣದೊಂದೇ ಮಂತ್ರ ಗಾಯತ್ರಿ—
'ತನ್ನ ತಾ ಮರೆಯುವುದು'
ಅಷ್ಟೆ.
ಹಿಂದೆ ತಾವಾಗಿಯೇ ಬಂದಿವೆ, ಸಾಲಾಗಿ ಕೈಕಟ್ಟಿ ನಿಂದಿವೆ,
ಅನ್ಯರ ಸ್ಮರಣೆ, ಸಂಕಲ್ಪ, ಸಶ್ರಮ, ಸಮರ್ಪಣ, ಸಾಫಲ್ಯ,
ಈ ಬ್ರಹ್ಮ-ಚಾರಿ, ಅದರಿಂದ ಬ್ರಹ್ಮಾಂಡ ಸಂಸಾರಿ, ಆದವನ ಮುಂದೆ.

ಕಣ್ವರಿದ್ದರಂತೆ, ವಸಿಷ್ಠರಿದ್ದರಂತೆ, ಮಹರ್ಷಿಗಳಂತೆ,
ಆಶ್ರಮ ಕಟ್ಟಿದ್ದರಂತೆ,
ಮಾತವರದ್ದು ವರವಂತೆ, ಆಗುತ್ತಿತ್ತಂತೆ ಅವರ ಇಚ್ಛೆ,
ಅಂತೆ ಅಂತೆ.........
ಇದ್ದ ಕಾಶಿಯ ಪೂಜ್ಯ ಮಾಳವೀಯ, ಇದ್ದ ಶಾಂತಿನಿಕೇತನದ ಗುರುದೇವ ಠಾಕೂರ,
ವಿದ್ಯಾಶ್ರಮಗಳ ಅಮರರು ;
ಗಾಂಧಿ ಅಂತ ತಿರುಕರಾಜ ಒಬ್ಬ ಎಲ್ಲೋ ಇದ್ದನೆಂದು
ಹೇಳುತ್ತಾರೆ ಯಾರುಯಾರೋ ಒಬ್ಬರಿಬ್ಬರು ;
ಸಿರಿ ತಿರುಕಿ ತಾಯಿ ಥೆರೀಸಾ ಇದ್ದೇ ಇದ್ದಾಳೆ ಇನ್ನೂ,
ಜಗತ್ತಿಗೇ ಗೊತ್ತಾಗಿ ;

ಈತನೂ ಇದ್ದಾನೆ, ಅವರ ಗೋತ್ರದವನು,
ಎಂಬತ್ತು ತೊಂಬತ್ತರ ಯುವಕ-ಭೀಷ್ಮಾಚಾರ್ಯ,
(ಶತಮಾನಂ ಭವತಿ ಎನ್ನೋಣ ; ಊಹುಂ, ಸಾಲದು,ಸಾಲದು.)
ದೊಡ್ಡ ಕನಸಿನ ಮಹಾತಿರುಕ-ತಿರುಕರಾಜಕುಮಾರ ;

ತಕ್ಷಶಿಲ ನಲಂದಗಳ ನೆನೆಯುತ್ತಾನೆ ;
ತೊಟ್ಟಿಕ್ಕಿಸುತ್ತಾನೆ, ಸುರಿಸುತ್ತಾನೆ, ತನ್ನ ಬೆವರು ರಕ್ತವನ್ನು
ಹಿಡಿಯದೆ ಧಾರಾಳವಾಗಿ, ಧಾರಾಕಾರವಾಗಿ, ಅಭಿಷೇಕಮಾಡಿ
ತೀಡುತ್ತಾನೆ ತೀಡುತ್ತಾನೆ ತನ್ನ ಶ್ರೀಗಂಧ ಚಕ್ಕೆಯನ್ನು,
ಚೆನ್ನಾಗಿ ಎತ್ತೆತ್ತಲೂ ;
ಉರಿಸುತ್ತಾನೆ ಉರಿಸುತ್ತಾನೆ ತನ್ನ ಮಂಗಳ ಬತ್ತಿಯನ್ನು ;
ಎರಡು ಕಡೆಯಿಂದಲೂ ;
ತನ್ನನ್ನೇ ಇಟ್ಟುಬಿಟ್ಟಿದ್ದಾನೆ ಮಹಾನೈವೇದ್ಯಕ್ಕೆ.

ಹಿಡಿಯುತ್ತಾನೆ ಹಿಡಿಯುತ್ತಾನೆ ತನ್ನ ಜೋಳಿಗೆಯನ್ನೂ,
ದ್ರೌಪದಿಯ ಅಕ್ಷಯ ಪಾತ್ರೆಯನ್ನು ;
ಬೀಳುತ್ತದೆ ಬೀಳುತ್ತದೆ ಅದರೊಳಗೆ
ಸಂಕಮ್ಮನ ಹಿಡಿಯಕ್ಕಿ ಪುಡಿಗಾಸು ಭಿಕ್ಷೆ—
ಅಂಟಿದೊಂದು ಅನ್ನದಗುಳು ;
ಮಾಡುತ್ತಾನೆ ಮಾಡುತ್ತಾನೆ ಕೃಷ್ಣಾರ್ಪಣ,
ಆಗುತ್ತದೆ, ಆಗುತ್ತದೆ, ಹೊಸರೀತಿ ದೂರ್ವಾಸಾತಿಥ್ಯ ನಿತ್ಯ,
ಸಹಸ್ರಾರು ಜೀವಿಗಳಿಗೆ, ಸಾಧಕರಿಗೆ, ಜನತಾರ್ಪಣ,
ತನುವಿಗನ್ನ, ಔಷಧಿ, ಮನಕೆ ಬೆಳಕು,
ಯೋಗಶಕ್ತಿ ಆತ್ಮಶಾಂತಿ.

ನಡೆಯುತ್ತಿದೆ ಈ ವಾಮನನ ತಿರಿಕೆಯಿಂದ,
ಬಲಿಗೊಡದ ತ್ರಿವಿಕ್ರಮ ಕರ್ಮ ;
ಕಲ್ಲು ಕಲ್ಲಾಗಿ, ಗುಡ್ಡ ಗುಡ್ಡವಾಗಿ, ಬೆಟ್ಟಬೆಟ್ಟವಾಗಿ
—ಮಲ್ಲಾಟಬೆಟ್ಟ ;
ಕತ್ತಲಲಿ ಮಿಣುಕು ಮೋಂಬತ್ತಿ,
ಆಗುತ್ತಿದೆ ಬೆಳಬೆಳಗಿ ಬೆಳೆಬೆಳೆದು ಸಂಕಲ್ಪದಿಂದ,
ಹಲವಾಗಿ, ಹಲವು ವಿಧವಾಗಿ, ದಿವ್ಯ ದಿನ ಜ್ಯೋತಿ,
ಅಜಾಯಮಾನೋ ಬಹುಧಾ ವಿಜಾಯತೇ
ಸೂರ್ಯನಾಗಿರುವುದೂ ತುಣುಕು ಬೆಳಕುಗಳಿಂದಲೇ.
ಸಾಧನೆಯ ದಾರಿಯೋ ?
ಅಲ್ಲ, ತೊಡೆಯಲೊಂದನ್ಯಾಯ ಮತ್ತೊಂದ ಮಾಡುವುದು !
ಸಮತೆಗಾಗಿಯೆ ಮತ್ತೆ ವಿಷಮತೆಯ ಬಿತ್ತುವುದು ಬೆಳೆಸುವುದು

ಉಹುಂ, ಉಹುಂ,
(ಪದವಿಯಧಿಕಾರಿಗಳ ಅಮಲಿಲ್ಲವಲ್ಲ !)
ಇವನ ಗುರಿದಾರಿ
ಹಿಂಸೆ ವೈಷಮ್ಯ ದ್ವೇಷ ಸೋಂಕಿರದ ಸೌಹಾರ್ದ, ಸಾಮರಸ್ಯ,
ಅದಕಾಗಿ ಮಾಡುತ್ತಾನೆ ಹೃದಯ ಯುದ್ಧ—
    ಒಂದೇ ಯುದ್ಧ, ನಿರ್ಮಲ, ಸಫಲ, ನಾಗರಿಕ.

ಅಂತೆಯೇ,
ಕೆಣಕಿ ಮಣಿದಿವೆ ಕೆಡುಕು ಶಕ್ತಿಗಳು ನಿತ್ರಾಣವಾಗಿ,
ಶರಣು ಹೊಡೆದೂ ಎಷ್ಟೊ ನಡೆಯುತಿವೆ ಹೊಣೆಹೊತ್ತು ಒಡನೆ ;
ನಿಂದಿಸಲು ಬಂದವರು, ನಗಲೆಂದು ಬಂದವರೂ
ನೆಲೆಸಬಹುದಿಲ್ಲಿಯೇ ಮೌನವಾಗಿ ;
ಅಂಥ ಕ್ಷೇತ್ರ-ಧರ್ಮ ಕ್ಷೇತ್ರೇ ಕುರುಕ್ಷೇತ್ರೇ......
ನಿಷ್ಕಾಮ ಕರ್ಮಕ್ಷೇತ್ರ.

ಹಳ್ಳಿ ಬೆಟ್ಟದ ಬೆಳಕು, ಇದು, ಕಾಣಬಹುದು
    ದೂರದ ದಿಳ್ಳಿಗೂ,
ಇಂದಲ್ಲ, ನಾಳೆ;
ಆದರಿವನಿಗೆ ಇಲ್ಲ ಆ ಆಸೆ ಹಂಬಲ ಹುಚ್ಚು,
ಬಿರುದು ಬಾವಲಿ ಖಾಲಿ ಒಲ್ಲ ಇವನು,
ಸಕಲ ಸನ್ಮಾನವೂ ಶೂನ್ಯ ಇವಗೆ,
ಆತ್ಮಬಲವೊಂದನೇ ನಂಬಿದವನು.

ಬೇಕೆಂದರೊಂದೆ—
ಧರ್ಮಯಜ್ಞಕ್ಕೆ ಕರ್ಮಹೋಮಕ್ಕೆ
    ಕಾಣ್ಕೆ ಕಾಣ್ಕೆ ಮತ್ತೂ ಕಾಣ್ಕೆ,
ತನು ಮನ ಧನ ಸಮರ್ಪಣ ಪೂರ್ಣಾಹುತಿ ;
ತೆತ್ತು ಪಡೆಯಿರಿ, ಸತ್ತು ಬದುಕಿರಿ,
    ಇಗೊ, ತೃಪ್ತಿಯಮರತ್ವ ಮುಕ್ತಿ,
    ಎನ್ನುತ್ತಾನೆ,
ಕೆರೆಯ ನೀರನು ಕೆರೆಗೆ ಚೆಲ್ಲಿ,
    ವರವ ಪಡೆವಾಹ್ವಾನ

ಎಲ್ಲರಿಗು ! ಎಲ್ಲರಿಗು !—ದೀನ ದಾನಿ ಎನ್ನದೆ,
ಹೋತೃ ಹೋತ್ರ ಮಹಾತ್ಮ-ಇವನಿಂದ.

ಓಗೊಡುವುವೇ ನಾವು ?

ಸರ್ವಸ್ವ ಕೊಟ್ಟರೂ ಬೇಕು,
ಇಲ್ಲಾ,
ಹಿಡಿಯಕ್ಕಿ—ಕುಚೇಲನವಲಕ್ಕಿ !
ಹಾಕಿದರೂ ಸಾಕು,
ಅಳಿಲ ಮಳಲಾದರೂ ಸರಿಯೆ
ಜನತಾರ್ಪಣಾ ಎಂದು.

ಶ್ರೀ ರಾಘವೇಂದ್ರರಾಯರ ವ್ರತಚರ್ಯೆಯಿಂದ ನಿತ್ಯೋತ್ಸಾಹದಿಂದ ಈ ಸಂಸ್ಥೆ ಮಹತ್ವನ್ನು ಗಳಿಸಿದೆ. ಒಬ್ಬ ವ್ಯಕ್ತಿ ಒಂದು ಶಕ್ತಿಯಾಗಿ ಬದುಕಿದರೆ ಸುತ್ತಣ ಲೋಕವನ್ನು ಹೇಗೆ ಬದುಕಿಸಬಲ್ಲ; ಎಂಥ ಸಾಧನೆಯನ್ನು ಗಳಿಸಿ ಕೃತಾರ್ಥನಾಗಬಲ್ಲ ಎಂಬುದು ಇಲ್ಲಿನ ಪ್ರತ್ಯಂಶದಲ್ಲಿಯೂ ಕಾಣಬರುತ್ತದೆ. ನಿಜವಾದ ರಾಷ್ಟ್ರನಿರ್ಮಾಣ ಕಾರ್ಯವಿದು.

—ವಿ. ಸೀತಾರಾಮಯ್ಯ

ನನ್ನ ಗುರುದೇವ

1940, ಹೊಳಲ್ಕೆರೆ ಟೌನಿನಲ್ಲಿ ನೂರಾರು ಜನರು ಕುತೂಹಲದಿಂದ ಸೇರಿ. ವಿಸ್ಮಯಾನಂದದಿಂದ ನೋಡುತ್ತಿರುವ ಒಂದು ಅಭೂತಪೂರ್ವವಾದ ಸಂಭ್ರಮ ಸಮಾರಂಭ ! ಸುತ್ತಲೂ ನಿಬಿಡವಾದ ಜನಸಂದಣಿಯು ಒತ್ತಡದಿಂದ ಸೇರಿದ್ದರೂ ಯಾವುದೊಂದು ವ್ಯಕ್ತಿಯ ಮಹತ್‌ಪ್ರಭಾವದಿಂದ ಮೂಕವಾಗಿರುವಂತೆ, ನಿಶ್ಶಬ್ದವಾಗಿರುವ ವಿಶಾಲವೃತ್ತದ ಮಧ್ಯರಂಗದಲ್ಲಿ ಬಲದಲ್ಲಿ ಭೀಮನನ್ನೋ, ಅಥಟಿನಲ್ಲಿ (ಶೌರ್ಯದಲ್ಲಿ) (in heroism) ಅರ್ಜುನನನ್ನೋ ಉಕ್ಕುತ್ತಿರುವ ಹುಚ್ಚು ಹುಮ್ಮಸ್ಸಿನಲ್ಲಿ ಭೀಮಾಗ್ರಜನಾದ ಹನುಮನನ್ನೋ ನೆನಪು ಕೊಡುತ್ತಾ ಗೌರವಾದರಗಳನ್ನು (in spirit) ಉಕ್ಕೇರಿಸುತ್ತಿರುವ, ಗೌರವರ್ಣದ ಮೈಬಣ್ಣವುಳ್ಳ, ನಡುನಿಲುವಿನ, ಅಸಾಧಾರಣವಾದೊಂದು ವ್ಯಕ್ತಿಯು ಚಮತ್ಕಾರವಾದ ವೇಗ ವರಸೆಗಳಿಂದ ತನ್ನ ಕೈಗಳಲ್ಲಿ 'ಜೋಡಿ'ಗಳನ್ನು ತಿರುಗಿಸುತ್ತಾ ಧೀರೋದಾತ್ತವಾಗಿ ನಿಂತಿದೆ ! ಸರ್ಕಸ್ ಸ್ಯಾಂಡೋಗಳಂತೆ ಹೊಳಪಿನ ಕಪ್ಪು ಬಣ್ಣದ ನುಣುಪಾದ ಸ್ಯಾಂಡೋ ಉಡುಪನ್ನು ತೊಟ್ಟಿದೆ. ತಾನು ಸಾಧಿಸಿರುವ ದೇಹಬಲವರ್ಧನ ಕಲಾಪರಿಣತಿಗೆ ಮಾನ್ಯರಿಂದ ದೊರಕಿರುವ ಬಂಗಾರದ ಪದಕಗಳ ಮಾಲೆಯನ್ನೇ ಎದೆಯ ಮೇಲೆ ಯಜ್ಞೋಪವೀತದಂತೆ ಧರಿಸಿದೆ. ಬೇರೆ ಕೆಲವು ವಿಶಿಷ್ಟ ಸಾಧನೆಗಳನ್ನು ತೋರಿಸಿದ ಮೇಲೆ ಆ ವೀರ ವ್ಯಕ್ತಿಯು ತಮ್ಮ ಸ್ವರ್ಣ ಪದಕಗಳ ಮಾಲೆಯನ್ನು ತೆಗೆದಿಟ್ಟು ತಮ್ಮ ತೋಳು ತೊಡೆಗಳ ಮತ್ತು ವಕ್ಷಃಸ್ಥಲದ ಮಾಂಸಖಂಡಗಳ ಹಾಗೂ ಸ್ನಾಯುಗಳ ಬಲಿಷ್ಠವಾದ ಪರಿಪುಷ್ಟತೆಯನ್ನು ಪ್ರದರ್ಶಿಸಿದರು. ಅವರು ತಮ್ಮ ಉಬ್ಬಿದ ಎದೆಯ ಮೇಲೆ ಭಾರವಾದ ರೋಣಗಲ್ಲನ್ನು ಎಳೆಸಿಕೊಂಡು ಆ ನಂತರ ತಮ್ಮ ಹೊಟ್ಟೆಯ ಮೇಲೆ ದಪ್ಪವಾದ ಕಬ್ಬಿಣದ ಹಳಿಪಟ್ಟಿಯನ್ನು ಇಟ್ಟುಕೊಂಡು, ಬೇರೊಬ್ಬರಿಂದ ಭಾರವಾದ ಚಮ್ಮಟಿಗೆಯ ಹೊಡೆತದಿಂದ ಉಳಿಯ ಮೂಲಕ ಆ ಹಳಿಪಟ್ಟಿಯನ್ನು ಕತ್ತರಿಸಿ ತೋರಿಸಿದರು. ಅವರು ಎರಡು ಇಸ್ಪೀಟ್‌ಪ್ಯಾಕ್‌ಗಳನ್ನು ಕೂಡಿಸಿ, ಕೈಯಿಂದ ಹರಿದು ಒಗೆದರು. ಕೊನೆಯಲ್ಲಿ ಬಾಲಕಿಯರಿಂದ ವ್ಯಾಯಾಮವಾದ ಮೇಲೆ ಲೇಜಿಂ, ಕೋಲಾಟ ಮೊದಲಾದವುಗಳನ್ನು ಹಾರ್ಮೋನಿಯಂ ವಾದನದೊಡನೆ ವೀರಗೀತೆಗಳ ಗಾನಕ್ಕೂ ತಾಳಕ್ಕೂ ಮೇಳಯಿಸಿ ಲಯಬದ್ಧವಾಗಿ ನಡೆಸಿದರು.

ಅಪರೂಪವಾದ ಇವರ ಶಿಸ್ತಿನ ಶಿಕ್ಷಣಕ್ರಮವನ್ನೂ, ಸುವ್ಯವಸ್ಥಿತವಾದ ಬಗೆಬಗೆಯ ಶಕ್ತಿಪ್ರದರ್ಶನಗಳನ್ನೂ ಅಪೂರ್ವವಾದ ಇವರ ವ್ಯಕ್ತಿತ್ವವನ್ನೂ ನೋಡಿ ಅಲ್ಲಿ ಸೇರಿದ್ದ ಸಹಸ್ರಾರು ಜನರೆಲ್ಲಾ ಬೆಚ್ಚಿಬೆರಗಾಗಿ ಹೋಗಿದ್ದರು. ಮನೆಗೆ ಹಿಂದಿರುಗುತ್ತಿದ್ದ ಜನರೆಲ್ಲಾ ಮೆಚ್ಚುಗೆಯ ಮಾತಿನ ಸುರಿಮಳೆಯನ್ನೇ ಸುರಿಸುತ್ತಾ ಹೋಗುತ್ತಿದ್ದರು. ನಾನಾದರೋ ದೈವವಶಾತ್ ವೀರಕನ್ಯಾಮಣಿ ಆಗಿದ್ದಿದ್ದರೆ ತಾರುಣ್ಯ ಪೂರ್ಣನಾದ

ಈ ಶೂರ ಪುರುಷಸಿಂಹನನ್ನೇ ಲಗ್ನವಾಗಲು ಎಂಥಾ ತ್ಯಾಗವನ್ನಾದರೂ ಸಾಹಸವನ್ನಾದರೂ ನಿಶ್ಚಿತವಾಗಿಯೂ ಮಾಡುತ್ತಿದ್ದೆನೆಂದು ಹಂಬಲಿಸುವಷ್ಟು ನನ್ನ ಮನಸ್ಸು ಮರುಳಾಗಿತ್ತು.

ಈ ಅದ್ಭುತ ಪ್ರದರ್ಶನ ಮುಗಿದ ಮೇಲೆ ಆ ಪುರುಷ ಶಾರ್ದೂಲನು, ಆ ಸಂಜೆ ನನ್ನ ಮಿತ್ರ ಅಚ್ಚಣ್ಣ (ಲಕ್ಷ್ಮಣರಾಯ)ನೊಡನೆ ದೈವಾನುಗ್ರಹದ ಋಣಾನುಬಂಧವೋ ಎನ್ನುವಂತೆ, ತಮ್ಮ ಶಿಷ್ಯಮಂಡಳಿ ಬಾಲಕಿಯರೊಡನೆ ನಮ್ಮ ಮನೆಗೇ ಬಿಜಯಮಾಡಿಸಿದರು. ಅವರು ಸರಳವಾದ ಖಾದಿ ಜುಬ್ಬ, ಖಾದಿ ಪೈಜಾಮುಗಳನ್ನು ಹಾಕಿಕೊಂಡು, ಹೆಗಲ ಮೇಲೆ ಖಾದಿ ಶಾಲನ್ನು ಹೊದೆದಿದ್ದರು. ಸ್ವಭಾವದಿಂದ ಅವರು ಬಿಚ್ಚು ಮನಸ್ಸಿನ ಸ್ನೇಹಪರರರೂ, ರಸಿಕರೂ, ನಿತ್ಯೋತ್ಸಾಹಿಗಳೂ, ಸ್ವಾಭಿಮಾನಿಗಳೂ, ಶಿಸ್ತಿನ ಸಿಪಾಯಿಗಳೂ, ಆದರ್ಶ ಜೀವಿಗಳೂ ಆಗಿರುವಂತೆ ತೋರಿದರು. ಅವರೆಲ್ಲರೂ ನನ್ನ ತಂದೆಯವರು ಮುಖ್ಯೋಪಾಧ್ಯಾಯರಾಗಿದ್ದ ಶಾಲೆಯಲ್ಲಿಯೇ ಬಿಡಾರ ಮಾಡಿದರು.

ಅವರು ಬ್ರಹ್ಮಚಾರಿಗಳೆಂದೂ, ಉತ್ತರ ಹಿಂದೂಸ್ಥಾನದಲ್ಲಿ ಯೋಗ ಮತ್ತು ವ್ಯಾಯಾಮ ಮೊದಲಾದ ಶಿಕ್ಷಣಗಳನ್ನು ಪಡೆದು ಬಂದಿದ್ದ ಮಂಗಳೂರಿನ ಕಡೆಯವರೆಂದೂ ಈ ಪ್ರಾಂತ್ಯದ ಹಳ್ಳಿಗಳಲ್ಲಿ ಸಂಚರಿಸಿ ಕೆಲವೊಂದು ಹಳ್ಳಿಗಳಲ್ಲಿ ವಿದ್ಯಾರ್ಥಿಗಳನ್ನು ಸೇರಿಸಿ ಅವರಿಗೆ ಉಚಿತವಾಗಿ ವ್ಯಾಯಾಮ ಮತ್ತು ಯೋಗಶಿಕ್ಷಣಗಳನ್ನು ಕೊಡುತ್ತಾರೆಂದೂ ತಿಳಿಯಿತು.

ಮರುದಿನವೂ ಆ ಹೊಳಲ್ಕೆರೆ ಟೌನಿನಲ್ಲಿಯೇ ಅವರ ಪ್ರದರ್ಶನವೇರ್ಪಟ್ಟಿತ್ತು. ಕಾಲಕ್ಕೆ ಸರಿಯಾಗಿ ಪ್ರಾರಂಭಿಸಿ ಮುಖ್ಯವಾದ ಬಗೆಬಗೆಯ ಯೋಗಾಸನಗಳನ್ನೂ ನೇತಿ, ಧೌತಿ ಮೊದಲಾದ ಯೌಗಿಕ ಷಟ್ಕರ್ಮ ವಿಧಿಗಳನ್ನೂ ಮಾಂಸಖಂಡಗಳ ಸಂಕೋಚನ, ವಿಕಾಸನ ನರ್ತನಾದಿಗಳನ್ನೂ ಬೇರೆ ಕೆಲವು ಸಾಹಸ ಕಾರ್ಯಗಳನ್ನೂ ತೋರಿಸಿ, ಬಾಲಕಿಯರಿಂದ ಲೇಜಿಂ, ಕೋಲಾಟ ಮೊದಲಾದವುಗಳನ್ನು ಆಡಿಸಿದರು. ಆ ದಿನವೂ ಸೇರಿದ್ದ ನೂರಾರು ಜನರು ಈ ಶೂರ ಯೋಗಿಗಳ ದೈಹಿಕ ಸಾಧನೆಗಳನ್ನು ನೋಡಿ ಬೆರಗಾಗಿ ಹೋದರು. ಅವರು ಬೇರೆ ಲೋಕದಿಂದ ಈ ಲೋಕಕ್ಕೆ ಬಂದಿಳಿದಿರುವ ಅತಿಮಾನವರೆಂದು ಸಹ ಕೆಲವು ಭಾವುಕರಿಗೆ ಕಲ್ಪನೆಯಾಗಿದ್ದರೆ ಆಶ್ಚರ್ಯವಲ್ಲ. ಅಷ್ಟು ಗೌರವದಿಂದ ಜನರು ಅವರನ್ನು ಕಾಣುತ್ತಿದ್ದರು.

ಮಿತ್ರ ಅಚ್ಚಣ್ಣನೊಡನೆ ಬಹಳ ವರ್ಷಗಳಿಂದ ಆ ಊರ ತೋಟದ ಭಾವಿಗೆ, ಬೆಳಗಿನ ಜಾವ ಸ್ನಾನಕ್ಕೆ ಹೋಗುವ ಅಭ್ಯಾಸವಿದ್ದುದರಿಂದ ಜನತೆಯಲ್ಲಿ "ವ್ಯಾಯಾಮ ಮೇಷ್ಟ್ರು" "ಲೇಜಿಂ ಮೇಷ್ಟ್ರು" ಎಂಬ ಪ್ರೀತಿನಾಮದಿಂದ ಪ್ರಸಿದ್ಧರಾಗಿದ್ದ ಆ ರಾಘವೇಂದ್ರಸ್ವಾಮೀಜಿಯವರೂ ಆ ಹೊಳಲ್ಕೆರೆಯಲ್ಲಿ ಇರುವಷ್ಟು ದಿನವೂ ನಮ್ಮ ಜೊತೆಗೇ ತೋಟದ ಭಾವಿಗೆ ಸ್ನಾನಕ್ಕೆ ಬರುತ್ತಿದ್ದರು. ಅವರಿಗೆ ಈಜಲು ಬರುತ್ತಿರಲಿಲ್ಲ. ಅವರು ಬಹಳ ಪ್ರೇಮಳ ಸ್ವಭಾವದವರೆಂದೂ, ಕೋಮಲಹೃದಯವುಳ್ಳವರೆಂದೂ, ಮಾತಿನಲ್ಲಿ ಸರಸಿಗಳಾದರೂ ಶಿಸ್ತಿನಲ್ಲಿಯೂ ಶೀಲದಲ್ಲಿಯೂ, ಅಷ್ಟೇ ಕಠಿಣವರ್ತನೆ ಉಳ್ಳವರೆಂದೂ, ಅವರ ಎರಡು ಮೂರು ದಿನಗಳ ನಿಕಟ ಸಹವಾಸದಿಂದ ಪರಿಚಯವಾಯಿತು. "ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ" ಎಂಬ ಸುಭಾಷಿತವು ಅವರ ಸಹವಾಸದಲ್ಲಿ ಆಗಾಗ ನೆನಪಾಗುತ್ತಿದ್ದಿತು.

ವಿದ್ಯಾರ್ಥಿ ದೆಶೆಯಲ್ಲಿಯೂ, ಅನೇಕ ವರ್ಷಗಳಿಂದ ಯೋಗಾಸನ, ಪ್ರಾಣಾಯಾಮ, ಜಪ, ಧ್ಯಾನ, ಪರೋಪಕಾರ, ಸಜ್ಜನರ ಮತ್ತು ಹಿರಿಯರ ಸೇವೆ ಮೊದಲಾದ ಸತ್ಕರ್ಮಗಳಲ್ಲಿ ದೈವಾನುಗ್ರಹದಿಂದ ಆಸಕ್ತಿಯೂ ಅಭ್ಯಾಸವೂ ಇದ್ದುದರಿಂದ, ಈ ಮಹಾಪುರುಷರ ಸಮಾಗಮ ಲಭಿಸಿದುದು ನನಗೆ ಮಹಾ ಸೌಭಾಗ್ಯವೇ ದೊರಕಿದಂತೆ ಸಂತೋಷವಾಯಿತು. ಶಿಷ್ಯವೃತ್ತಿಯಿಂದ ಇವರ ಸೇವೆಯನ್ನು ಮಾಡಿ, ಇವರ ಅನುಗ್ರಹವನ್ನು ಸಂಪಾದಿಸಿ ಇವರಲ್ಲಿರುವ ಎಲ್ಲಾ ವಿದ್ಯೆಯನ್ನೂ ನಾನು ಸಂಪಾದಿಸಬೇಕೆಂಬ ಹಂಬಲವುಂಟಾಯಿತು.

ಆದರೆ, ದೊಡ್ಡ ಕುಟುಂಬಿಗಳಾದ ವೃದ್ಧ ತಂದೆಯವರಿಗೆ ನಾನೇ ಜ್ಯೇಷ್ಠಪುತ್ರನಾಗಿದ್ದುದರಿಂದ 1939 ರಲ್ಲಿ ನನ್ನ ಶಾಲಾ ವಿದ್ಯಾವ್ಯಾಸಂಗ ಮುಕ್ತಾಯಗೊಂಡಾಗ, ತಂದೆಯವರ ಕುಟುಂಬಭರಣದ ಭಾರವನ್ನು ಸಾಧ್ಯವಾದಷ್ಟು ಕಡಮೆ ಮಾಡುವುದಕ್ಕಾಗಿ ಯಾವುದಾದರೂ ಉದ್ಯೋಗಕ್ಕೆ ಸೇರಬೇಕೆಂಬ ಪ್ರಯತ್ನ ನಡೆಯು ತ್ತಿತ್ತು. ವ್ಯವಹಾರ ಜೀವನಕ್ಕೆ ಅತ್ಯಗತ್ಯವಾದ ಈ ಲೌಕಿಕ ಪ್ರವೃತ್ತಿಗಿಂತಲೂ ಆಧ್ಯಾತ್ಮಿಕ ಪ್ರವೃತ್ತಿಯು ನನ್ನ ಹೃದಯದ ಆಳದಲ್ಲಿ ಹೆಚ್ಚು ಪ್ರಬಲವಾಗಿ ಮೊರೆಯುತ್ತಿತ್ತು. ಏಕೆಂದರೆ 1931 ರ ಮತ್ತು 1933 ರ ಕಾರ್ತೀಕ ಮಾಸಗಳಲ್ಲಿ ಬನವಾಸಿಯ ಪೂಜ್ಯ ಶ್ರೀ ಶ್ರೀ ದತ್ತಾತ್ರೇಯ ಯೋಗೀಂದ್ರರು ನಮ್ಮ ಹೊಳಲ್ಕೆರೆಗೆ ದಯಮಾಡಿಸಿ, ಗೋಪಾಲಕೃಷ್ಣ ದೇವಾಲಯದಲ್ಲಿ ಅಖಂಡ ಭಜನಾ ಪ್ರವಚನಾದಿಗಳ ಎರಡು ದೊಡ್ಡ ಸಪ್ತಾಹ ಗಳನ್ನು ನಡೆಸಿದ್ದರು. ಅವರ ಶಿಷ್ಯರಲ್ಲಿ ಮುಂದೆ ಶ್ರೀ ಶಂಕರಲಿಂಗ ಭಗವಾನರೆಂದು ಪ್ರಸಿದ್ಧರಾದ ಶ್ರೀನುಲೇ ನೂರ ರಂಗಪ್ಪನವರೂ, ಶ್ರೀನಿವಾಸಮೂರ್ತಿಗಳೂ ಪ್ರಮುಖರಾಗಿದ್ದರು. ಆ ಶ್ರೀರಂಗಪ್ಪನವರ ಮಗನಾದ ಅಚ್ಚಣ್ಣನೊಡನೆ ನಾನು ಆ ಎರಡು ಸಪ್ತಾಹಗಳ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸಿ, ಸೇವೆಸಲ್ಲಿಸಿ, ಆ ಸದ್ಗುರುಗಳ ಉಪದೇಶವನ್ನು ಶ್ರವಣ ಮಾಡಿದ್ದುದರ ಪ್ರಭಾವದಿಂದಲೂ ನನ್ನ ತಾತಂದಿರಾದ ಶ್ರೀ ಶಂಕರಪ್ಪನವರು ಮತ್ತು ಶ್ರೀ ಶಿವರಾಮಯ್ಯನವರ ತಪೋಜೀವನ ನಿರ್ದೇಶನದಿಂದಲೂ ನನ್ನಲ್ಲಿ ಸುಪ್ತವಾಗಿದ್ದ ಜನ್ಮಾಂತರ ಪುಣ್ಯಫಲವಾದ ದೈವೀಸಂಪತ್ತಿನ ಸಂಸ್ಕಾರವು ಜಾಗೃತವಾಗಿದ್ದಿತು. ಮುಂದೆ 1934 ರ ಡಿಸೆಂಬರ್ ತಿಂಗಳಲ್ಲಿ (ಮಾರ್ಗಶಿರ ಪೂರ್ಣಿಮಾ) ದತ್ತಜಯಂತಿಯ ದಿನವೇ ನುಲೇನೂರಿನಲ್ಲಿ ಆ ಬನವಾಸಿಯ ದತ್ತಾತ್ರೇಯ ಯೋಗೀಂದ್ರರು ಮಹಾಸಮಾಧಿಯನ್ನು ಹೊಂದಿದರು. ಶ್ರೀ ಶಂಕರಲಿಂಗ ಭಗವಾನರು ಆ ಸಮಾಧಿಯ ಮೇಲೆ ದೇವಾಲಯವನ್ನು ನಿರ್ಮಿಸಿ ದತ್ತಾತ್ರೇಯ ಮೂರ್ತಿಯ ಪ್ರತಿಷ್ಠಾಪನೆ ಮಾಡಿ, ದೊಡ್ಡ ಆಶ್ರಮವನ್ನೇ ಸ್ಥಾಪನೆ ಮಾಡಿದರು. ಅವರು ಅಲ್ಲಿ ನಿರಂತರ ಪ್ರವಚನ ಭಜನಾದಿಗಳನ್ನು ನಡೆಸುತ್ತಾ ಪವಾಡ ಪುರುಷರೂ ಆಗಿ ನೂರಾರು ಭಕ್ತರಿಗೆ ಶಾಂತಿಪ್ರದರಾಗಿದ್ದುದರಿಂದ ಅವರ ಮಗನಾದ ಮಿತ್ರ ಅಚ್ಚಣ್ಣ ನೊಡನೆ ಆಗಾಗ ನಾನೂ ನುಲೇನೂರಿಗೆ ಹೋಗಿ ಆ ಭಗವಾನರ ಪ್ರೇಮಕ್ಕೆ ಪಾತ್ರನಾದೆನಲ್ಲದೆ, ತತ್ತ್ವ ವಿಚಾರ ಪ್ರವೃತ್ತಿಯೂ ಬೆಳೆದುವು. ನನ್ನಲ್ಲಿ ಭಕ್ತಿಯೂ ವಿರಕ್ತಿಯೂ ಬೆಳೆದವು.

ಈ ಎಲ್ಲ ಸಜ್ಜನಸೇವೆಯ ಮತ್ತು ಸದ್ಗುರುಗಳ ಅನುಗ್ರಹದ ಫಲವೋ ಎನ್ನುವಂತೆ ನನಗೆ ನನ್ನ ಗುರು ದೇವನ ಪ್ರಾಪ್ತಿಯಾಯಿತು.

ಹೊಳಲ್ಕೆರೆಯಲ್ಲಿ ಪ್ರದರ್ಶನಗಳಾದ ಕೆಲವು ದಿನಗಳ ಮೇಲೆ ಹೊಳಲ್ಕೆರೆ ರೈಲ್ವೆಸ್ಟೇಷನ್ ಬಳಿ ಇರುವ ಕುಣಿಗಲಿ ಎಂಬ ಗ್ರಾಮದಲ್ಲಿಯೂ ಪ್ರದರ್ಶನವಾಗಿ, ಕೆಲವು ದಿನಗಳ ಮೇಲೆ ಶ್ರೀ ಸ್ವಾಮೀಜಿಯವರು ರಂಗಾ ಪುರದಲ್ಲಿ ಶಿಕ್ಷಣ ಶಿಬಿರವನ್ನು ನಡೆಸಿದರು. ಗೆಳೆಯ ಅಚ್ಚಣ್ಣನೊಡನೆ ಕುಣಿಗಲಿಯ ಪ್ರದರ್ಶನಕ್ಕೂ ರಂಗಾಪುರದ ಶಿಬಿರಕ್ಕೂ ಹೋಗಿ ಸ್ವಾಮೀಜಿಯವರೊಡನೆ ಹೆಚ್ಚು ಪರಿಚಯವನ್ನೂ ಪ್ರೇಮವನ್ನೂ ಬೆಳೆಸಿಕೊಂಡೆ. ಅವ ರಲ್ಲಿದ್ದ 'ಬ್ರಹ್ಮಚರ್ಯವೇ ಜೀವನ', 'ಉದರದ ಆರೋಗ್ಯ', 'ಸ್ನಾಯುಬಲಸಂವರ್ಧನ' ಮೊದಲಾದ ಪುಸ್ತಕ ಗಳನ್ನೂ ತೆಗೆದುಕೊಂಡು ಬಂದು ಆ ಪದ್ಧತಿಯ ವ್ಯಾಯಾಮವನ್ನು ಅಚ್ಚಣ್ಣನೊಡನೆ ಪ್ರಾರಂಭಿಸಿದೆ.

ಅವರು ಶಿಕ್ಷಣವಿತ್ತ ಯಾವ ಊರಲ್ಲೇ ಆಗಲಿ, ಆ ಶಿಬಿರದ ಅವಧಿ ಮುಗಿದ ಮೇಲೆ ಗಣ್ಯವ್ಯಕ್ತಿ ಯೊಬ್ಬರ ಅಥವಾ ಸರಕಾರಿ ಅಧಿಕಾರಿಯೊಬ್ಬರ ಅಧ್ಯಕ್ಷತೆಯಲ್ಲಿ ಪ್ರದರ್ಶನ ನಡೆಸುತ್ತಿದ್ದರು. ಆ ಪ್ರದರ್ಶನ ವನ್ನು ನೋಡಲು ಬಂದ ಹಲವು ಹಳ್ಳಿಗರಲ್ಲಿ ಯಾವುದಾದರೊಂದು ಹಳ್ಳಿಯವರು, ಸ್ವಾಮೀಜಿಯವರು ಮುಂದಿನ ಶಿಬಿರವನ್ನು ತಮ್ಮ ಊರಲ್ಲಿ ಏರ್ಪಡಿಸಿ, ತಮ್ಮೂರ ಬಾಲಕರಿಗೆ ಶಿಕ್ಷಣವೀಯಬೇಕೆಂದೂ ತಾವು ಎಲ್ಲಾ ಬಗೆಯ ಸಹಕಾರವನ್ನೂ, ಸೇವೆಯನ್ನೂ ಸಲ್ಲಿಸುವುದಾಗಿಯೂ ಅವರನ್ನು ಪ್ರಾರ್ಥಿಸಿ, ಒಪ್ಪಿಸಿ, ಆ 'ವ್ಯಾಯಾಮ ಮೇಷ್ಟರನ್ನು' ತಮ್ಮ ಊರಿಗೆ ಕರೆದುಕೊಂಡು ಹೋಗುತ್ತಿದ್ದರು.

ಸ್ವಾಮೀಜಿಯವರು ಯಾವ ಊರಲ್ಲಿ ಶಿಕ್ಷಣವಿತ್ತರೂ ಆ ಊರ ಜನರಲ್ಲಿ ದೈವಭಕ್ತಿಯನ್ನೂ, ದೇಶ ಭಕ್ತಿಯನ್ನೂ, ತ್ಯಾಗಗುಣವನ್ನೂ, ಸೇವಾ ಮನೋಭಾವವನ್ನೂ, ಸಾಮಾಜಿಕ ಸಮಷ್ಟಿಜೀವನದ ಸಹಕಾರ ಪ್ರಜ್ಞೆಯನ್ನೂ ಬೆಳಸುತ್ತಿದ್ದರು. ಅವರು ಬ್ರಹ್ಮಚರ್ಯದ ಮಹತ್ವವನ್ನೂ ನಿಯಮಶೀಲತೆಯ ಅಗತ್ಯವನ್ನೂ ಜನರಿಗೆ ತಿಳಿಸಿ, ಜೀವನದಲ್ಲಿ ಶಿಸ್ತನ್ನೂ ಸಂಯಮವನ್ನೂ ಸುಧಾರಣೆಯನ್ನೂ ಕಲಿಸುತ್ತಿದ್ದರು. ಇದಲ್ಲದೆ ಅವರು ಸಂಗೀತ–ಸಾಹಿತ್ಯ–ನೃತ್ಯ ಮೊದಲಾದ ಲಲಿತಕಲೆಗಳಲ್ಲಿಯೂ ತಮ್ಮ ವಿದ್ಯಾರ್ಥಿಗಳಿಗೆ ಅಭಿರುಚಿಯನ್ನು ಹುಟ್ಟಿಸುತ್ತಿದ್ದರು. ನಾಗರಹಾವು ಕಡಿದ ಎಷ್ಟೋ ಜನರನ್ನು ಅವರು ತಮ್ಮ ಔಷಧ ಮಂತ್ರಗಳ ಚಿಕಿತ್ಸೆಯಿಂದ ಬದುಕಿಸುತ್ತಿದ್ದರು. ಉಬ್ಬಸ ಮೂರ್ಛೆ ಮೊದಲಾದ ಕೆಲವು ದುರ್ಧರ ರೋಗಗಳಿಗೆ ಆಯುರ್ವೇದ ಪದ್ಧತಿ ಯಿಂದ ಚಿಕಿತ್ಸೆ ಮಾಡಿ ಹಲವರಿಗೆ ಗುಣಪಡಿಸಿದ್ದಾರೆ. ಅವರ ಆಹಾರವು ಹುಳಿ, ಖಾರ, ಒಗ್ಗರಣೆ ಯಾವುದೂ ಇಲ್ಲದ ಬರೀ ಬೋಳು ಸಪ್ಪೆಯದಾಗಿತ್ತು. ಅವರು ಹಾಲನ್ನು ಹೆಚ್ಚಾಗಿ ಸೇವಿಸುತ್ತಿದ್ದರು. ನಿತ್ಯವೂ ಬೆಳಗಿನ ಜಾವ 4–4.30 ಘಂಟೆಗೆ ಎದ್ದು ಅವರು ಸ್ನಾನ ಧ್ಯಾನಾದಿಗಳನ್ನು ತೀರಿಸಿ ಯೋಗಾಸನಗಳ ಸಹಿತವಾಗಿ ಒಂದು ಸಾವಿರ ಸೂರ್ಯನಮಸ್ಕಾರ ಮಾಡುತ್ತಿದ್ದರು. ತಮ್ಮ ವಿದ್ಯಾರ್ಥಿಗಳಿಂದಲೂ ಸೂರ್ಯನಮಸ್ಕಾರ ಮಾಡಿಸುತ್ತಿದ್ದರು. ಸಂಜೆಯಲ್ಲಿ ಪುನಃ ವ್ಯಾಯಾಮವನ್ನು ಮಾಡಿ ಸ್ನಾನಾನಂತರ ತಾಳ, ಮೇಳ ಹಾರ್ಮೋನಿಯಂ ವಾದನ ಸಹಿತವಾಗಿ ಭಕ್ತರೊಡನೆ ಸೇರಿ ಒಂದು ಘಂಟೆ ಭಜನೆ ಮಾಡಿ ಮಂಗಳಾರತಿ ಮಾಡಿಸುತ್ತಿದ್ದರು. ಅವರು ಸ್ವತಃ ಮಾಡಿದ ಕೆಲವು ಕೀರ್ತನೆಗಳನ್ನೂ, ಕವಿತೆಗಳನ್ನೂ ಇಂಪಾಗಿ ಹಾಡು ತ್ತಿದ್ದರು. ಅವರು ಕೆಲವು ಕಾದಂಬರಿಗಳನ್ನೂ, ನಾಟಕಗಳನ್ನೂ ಬರೆದಿದ್ದರು ; ಅವರು ತಾವು ಬರೆದ ಸಾಮಾಜಿಕ ನಾಟಕಗಳನ್ನು ಹುಡುಗರಿಗೆ ಕಲಿಸಿ ಆಡಿಸುತ್ತಿದ್ದರಲ್ಲದೆ, ಅದರಲ್ಲಿ ತಾವೇ ಮುಖ್ಯ ಪಾತ್ರವನ್ನು ವಹಿಸಿ, ಉತ್ತಮವಾಗಿ ಅಭಿನಯಿಸುತ್ತಿದ್ದರು. ಹೀಗೆ ನನ್ನ ದೇವರು ಬಹುಮುಖ ಪ್ರಜ್ಞಾಕೌಶಲದಿಂದ, ಭೂಮಿಗಿಂತ ಹದಿಮೂರುಲಕ್ಷ ಪಾಲು ದೊಡ್ಡದಾದ ಸೂರ್ಯನು ಕನ್ನಡಿಯಲ್ಲಿ ಪ್ರತಿಫಲನವಾಗುವಂತೆ ಎಲ್ಲರ ಹೃದಯದಲ್ಲಿರುವ ಆತ್ಮನ ಸರ್ವಜ್ಞತ್ವದ ಪ್ರತಿಬಿಂಬದಂತಿದ್ದರು. ಕಾಮಿನೀಕಾಂಚನಾದಿ ವಿಷಯಭೋಗಗಳಲ್ಲಿ ಅಕಾಮಹತನಾದ ಈ ಶಿವನ ಸನ್ನಿಧಿಯ ಕೈಲಾಸದಲ್ಲಿ, ನಾನೂ ನಿರಂತರ ಸಹಜೀವಿಯಾಗಿ, ನಂದೀಶ್ವರ ನಂತೆಯೋ ಅಥವಾ ಒಬ್ಬ ಸಾಮಾನ್ಯ ಪ್ರಮಥನಂತೆಯೋ ಸದಾ ಸೇವೆ ಸಲ್ಲಿಸುವುದರಲ್ಲಿ ಧನ್ಯತೆಪಡೆಯ ಬೇಕೆಂಬ ತೀವ್ರೇಚ್ಛೆಯು ನನ್ನ ಹೃದಯಲ್ಲಿ ರಾತ್ರಿ ಹಗಲೂ ಮೊರೆಯುತ್ತಿದ್ದಿತು.

ನನ್ನ ಚಿತ್ತಾಪಹಾರಿಯಾದ ಆ ಕಳ್ಳಕೃಷ್ಣನು ರಂಗಾಪುರದಿಂದ ಗುಂಡೇರಿಗೂ, ಚಿತ್ರಹಳ್ಳಿಗೂ ಹೋಗಿ, ಎರಡು ವರ್ಷಗಳ ಕಾಲ ಹೇಳ ಹೆಸರಿಲ್ಲದಂತೆ ಅಂತರ್ಧಾನನಾದನು. ಆದರೆ ನನ್ನ ಹೃದಯವು ವಿರಹವ್ಯಥೆ ಯಿಂದ ಪುನರ್ಮಿಲನ ಕಾತರೆಯಾದ ರಾಧೆಯಂತಾಯಿತು. ಅವರು ಕಾರಣಾಂತರದಿಂದ ಈ ಲೋಕವನ್ನೇ ಬಿಟ್ಟ ರೆಂಬ ಅತೀವ ದುಃಖಪ್ರದವಾದ ಸುದ್ದಿಯೂ ಅಲ್ಲಲ್ಲಿ ಹಬ್ಬಿತ್ತು. ಆದರೆ ಅಮರನಾದ ಕೃಷ್ಣ ಚೈತನ್ಯನು ಮೃತನಾಗುವುದು ಎಂದಿಗೂ ಸಾಧ್ಯವಿಲ್ಲವೆಂದು ನನ್ನ ಹೃದಯವಾಣಿ ಸ್ಪಷ್ಟವಾಗಿ ನುಡಿಯು ತ್ತಿತ್ತು.

ಕೆಲವು ದಿನಗಳ ಮೇಲೆ, ಆ ನನ್ನ ಸ್ವಾಮಿ, "ವ್ಯಾಯಾಮಮೇಷ್ಟ್ರು" ಚಿತ್ರದುರ್ಗ ತಾಲ್ಲೂಕಿನ ಗೊಡಬನಹಾಳಿನಲ್ಲಿ ಶಿಕ್ಷಣಶಿಬಿರ ನಡೆಸುತ್ತಿದ್ದಾರೆಂಬ ಶುಭಕರವಾದ ವರ್ತಮಾನವನ್ನು ಕೇಳಿ, ಕಳೆದು ಕೊಂಡಿದ್ದ ಭಾಗ್ಯವನ್ನು ಪುನಃ ಪಡೆದಂತೆ ಸಂತೋಷಗೊಂಡೆನು. ಮಲ್ಲಾಡಿಹಳ್ಳಿಯಲ್ಲಿ ಮಾಧ್ಯಮಿಕ ಶಾಲಾ ಮುಖ್ಯೋಪಾಧ್ಯಾಯರೂ ನನ್ನ ಪ್ರಿಯಬಂಧುಗಳೂ ಆಗಿದ್ದ ಶ್ರೀ ಎಸ್. ಎನ್. ಅತ್ರಿಯವರೊಡನೆ ಆಲೋಚಿಸಿ ಆಗ ಮಲ್ಲಾಡಿಹಳ್ಳಿಯಲ್ಲಿ ಗ್ರಾಮಪಂಚಾಯಿತಿ ಛೇರ್‌ಮನ್‌ರಾಗಿದ್ದ ಶ್ರೀ ಎಂ. ತಿಮ್ಮಪ್ಪ, ಶ್ರೀ ಗೌಡೀಹಳ್ಳಿ ಹನುಮಂತಪ್ಪ, ಶ್ರೀ ಅಂದಾನಪ್ಪ, ಪಟೇಲ ಲಿಂಗಪ್ಪ, ಶ್ರೀ ದೊಡ್ಡರಂಗಪ್ಪ ಮೊದಲಾದ ಮುಖ್ಯಸ್ಥ

ರೊಡನೆಯೂ ಸಮಾಲೋಚನೆ ಮಾಡಿ, ಆ ವ್ಯಾಯಾಮ ಮೇಷ್ಟರನ್ನು ಗೊಡಬನಹಾಳಿನಿಂದ ಮಲ್ಲಾಡಿಹಳ್ಳಿಗೆ ಕರೆಸಬೇಕೆಂದು ತೀರ್ಮಾನಿಸಿದೆವು. ಆ ಗುರುಗಳ ಶಿಷ್ಯನಾಗಿ, ಅವರ ವಿದ್ಯೆಗಳನ್ನೆಲ್ಲಾ ಕಲಿಯಬೇಕೆಂಬ ನನ್ನ ತೀವ್ರೇಚ್ಛೆಯೊಡನೆ, ಮನೋವೈಕಲ್ಯದಿಂದ ನರಳುತ್ತಿದ್ದ ಅತ್ರಿಯವರ ಪತ್ನಿಗೆ ವ್ಯಾಯಾಮ ಮತ್ತು ವೈದ್ಯ ಪಟುಗಳಾದ ಆ ಯೋಗಿಗಳಿಂದ ಚಿಕಿತ್ಸೆ ಮಾಡಿಸಬೇಕೆಂಬ ಹಂಬಲವೂ ನಮಗೆ ಅಂತರಂಗದಲ್ಲಿದ್ದಿತು. ಆದರೆ ನಡೆನುಡಿಗಳಲ್ಲಿ ಸ್ವಲ್ಪ ಹೆಚ್ಚು ಕಡಮೆಯಾದರೂ ಸಹಿಸದಿರುವ ಆ ಶಿಸ್ತಿನ ಯೋಧರಿಗೆ ಮೆಚ್ಚಾಗುವಂತೆ ನಡೆದು ಕೊಳ್ಳುವುದು ಸುಲಭವಲ್ಲವೆಂಬ ಭಯವೂ ನಮಗಿದ್ದಿತು.

ಊರ ಪ್ರಮುಖರ ತೀರ್ಮಾನದಂತೆ ಶ್ರೀ ದಿ|| ಅತ್ರಿಯವರ ಮುಖಂಡತ್ವದಲ್ಲಿ ಕೆಲವು ಯುವಕರು ಗೊಡಬನಹಾಳಿಗೆ ಹೋಗಿ ವ್ಯಾಯಾಮ ಮೇಷ್ಟರನ್ನು ಕಂಡು, ನಮಸ್ಕರಿಸಿ, ಅವರು ಮಲ್ಲಾಡಿಹಳ್ಳಿಗೆ ದಯಮಾಡಿಸಿ ಅಲ್ಲಿಯ ಜನರಿಗೆ ಶಿಕ್ಷಣವನ್ನು ಕೊಡಬೇಕೆಂದು ಅವರನ್ನು ಪ್ರಾರ್ಥಿಸಿದರು. ಮಲ್ಲಾಡಿಹಳ್ಳಿ ಯವರು ಪುಂಡಜನರೆಂದೂ ಅಲ್ಲಿಗೆ ಹೋಗುವುದು ಸರಿಯಲ್ಲವೆಂದೂ, ಸುತ್ತಲ ಕೆಲ ಜನರು ಹೇಳಿದರೂ ಸ್ವಾಮಿ ಗಳು ಅದಕ್ಕೆ ಲಕ್ಷ್ಯ ಕೊಡದೆ, ಒಂದು ಗೊತ್ತಾದ ದಿನ ಹೊಳಲ್ಕೆರೆ ತಾಲ್ಲೂಕು ಮಾಳೇನಹಳ್ಳಿಯ ಶ್ರೀ ರಂಗನಾಥಾಶ್ರಮದಲ್ಲಿ ತಾವಿರುವುದಾಗಿಯೂ ಅಲ್ಲಿಗೆ ಇಂಥಾ ದಿನ ಗಾಡಿಯನ್ನು ತಂದು ತಮ್ಮನ್ನು ಮಲ್ಲಾಡಿ ಹಳ್ಳಿಗೆ ಕರೆದುಕೊಂಡು ಹೋಗಬೇಕೆಂದೂ ಹೇಳಿ ಆ ಜನರನ್ನು ಕಳುಹಿಸಿಕೊಟ್ಟರು.

ಆ ಗೊತ್ತಾದ ದಿನ, ಮಲ್ಲಾಡಿಹಳ್ಳಿಯ ಜನರು, ತಮ್ಮ ಬೇಶಿಸ್ತಿಗೆ ಮೊದಲನೆಯ ಉದಾಹರಣೆಯಾಗಿ, ರಾತ್ರಿ ಎರಡುಗಂಟೆಗೆ ಮಾಳೇನಹಳ್ಳಿಗೆ ಗಾಡಿಯನ್ನು ತೆಗೆದುಕೊಂಡು ಹೋಗಿ, ಕ್ಷಮೆಯನ್ನು ಬೇಡಿ, ವ್ಯಾಯಾಮ ಮೇಷ್ಟ್ರನ್ನು ಮಲ್ಲಾಡಿಹಳ್ಳಿಗೆ ಕರೆದುಕೊಂಡುಬಂದರು.

ಈ ಮಲ್ಲಾಡಿಹಳ್ಳಿಯಲ್ಲಿ ನನ್ನ ಅತ್ಯಂತ ಪ್ರಿಯ ಗುರುಗಳಾದ ಶ್ರೀ ಶ್ರೀ ರಾಘವೇಂದ್ರಸ್ವಾಮಿಗಳು 1943ನೇ ವರ್ಷದಲ್ಲಿ ಈ ಅನಾಥಸೇವಾಶ್ರಮವನ್ನು ಸ್ಥಾಪಿಸಿದರು. ಅಂದಿನಿಂದ ಇಂದಿನವರೆಗೆ ನಮ್ಮ ಈ ಸೇವಾಶ್ರಮವು ಪ್ರತಿವರ್ಷವೂ, ಪ್ರತಿಮಾಸವೂ, ಪ್ರತಿದಿನವೂ, ಪ್ರತಿ ಕ್ಷಣವೂ, ಸರ್ವಾಂಗ ಪರಿಪೂರ್ಣ ವಾಗಿಯೂ, ಸುಂದರವಾಗಿಯೂ, ಬೃಹತ್ತಾಗಿಯೂ, ಮಹತ್ತಾಗಿಯೂ, ನನ್ನ ಗುರುವರ್ಯರ ಶ್ರದ್ಧಾದರ ಗಳಿಂದಲೂ, ಪ್ರತಿ ಕ್ಷಣದ ಶ್ರಮದಿಂದಲೂ, ಸಾಹಸದಿಂದಲೂ, ತ್ಯಾಗದಿಂದಲೂ, ಜನತೆಯ ಮತ್ತು ಸರ್ಕಾರದ ಸಹಕಾರದಿಂದಲೂ ಭಗವದನುಗ್ರಹದಿಂದಲೂ ಹೇಗೆ ಬೆಳೆಯುತ್ತಾ ಬಂದಿದೆ ಎಂಬುದು ಲೋಕಪ್ರಸಿದ್ಧವಾಗಿರು ವುದರಿಂದ ಪ್ರತ್ಯೇಕ ವರ್ಣಿಸಬೇಕಾಗಿಲ್ಲ. ನನ್ನ ಗುರುದೇವರ ಜೊತೆ ಜೊತೆಗೆ ಅವರ ಪವಿತ್ರ ನೆರಳಾಗಿ ಕಿಂಚಿತ್ ಸೇವೆ ಸಲ್ಲಿಸುವ ಸೌಭಾಗ್ಯವನ್ನು ಅನುಗ್ರಹಿಸಿರುವ ಪರಮೇಶ್ವರನಿಗೂ ಗುರುವಿಗೂ ಸಂಪೂರ್ಣ ಶರಣಾಗತಿಯ ಹೃತ್ಪೂರ್ವಕ ಕೃತಜ್ಞತೆಯನ್ನು ಅರ್ಪಿಸಿ ವಿರಮಿಸುತ್ತೇನೆ.

ಹೆಚ್ಚಿನ ವಿವರಗಳನ್ನು ತಿಳಿಯಬೇಕೆಂಬ ಕುತೂಹಲವುಳ್ಳವರು "ತಿರುಕ" ಎಂಬ ಕಾವ್ಯನಾಮದಿಂದ ನಮ್ಮ ಗುರುಗಳು ಬರೆದಿರುವ "ಅನಾಥಸೇವಾಶ್ರಮದ ಪೂರ್ವೋತ್ತರ ಇತಿಹಾಸ" ಎಂಬ ಸಣ್ಣ ಪುಸ್ತಕವನ್ನೂ ಅವರ ಬೇರೆ ಕಾದಂಬರಿಗಳನ್ನೂ, ಲೇಖನಗಳನ್ನೂ ಗ್ರಂಥಗಳನ್ನೂ ಓದಿಕೊಳ್ಳಬಹುದು.

ಓಂ ತತ್ ಸತ್ !

ತ. ಸು. ಶಾಮರಾಯ

ಒಂದು ಸತ್ಯಕಥೆ

"ಸತ್ಯ ಕಾಲ್ಪನಿಕ ಕಥೆಗಿಂತಲೂ ಹೆಚ್ಚು ರಮ್ಯ" ಎಂಬ ಒಂದು ಆಂಗ್ಲ ಸೂಕ್ತಿ ಇದೆ. ನನ್ನ ಮಾನ್ಯ ಮಿತ್ರರಾಗಿದ್ದು ಈಗ ದಿವಂಗತರಾಗಿರುವ ಶ್ರೀಮಾನ್ ಎಂ. ಯಾಮುನಾಚಾರ್ಯರು ನನಗೊಮ್ಮೆ ಹೇಳಿದ ಕಥೆ ಆ ಜಾತಿಗೆ ಸೇರಿದುದು. ಅವರು ಒಮ್ಮೆ ಮಲ್ಲಾಡಿಹಳ್ಳಿಯ ಅನಾಥಸೇವಾಶ್ರಮದಲ್ಲಿ ಭಾಷಣ ಮಾಡಲು ಆಹ್ವಾನಿತರಾಗಿದ್ದರಂತೆ ! ಅವರು ಅಲ್ಲಿಗೆ ಹೋಗಿಬಂದ ಕಥೆಯನ್ನು ವರ್ಣಿಸಿ ಹೇಳಿದರು. ಅದನ್ನು ನಾನಿಲ್ಲಿ ಅವರ ಮಾತಿನಲ್ಲಿಯೇ ಬರೆಯುತ್ತಿದ್ದೇನೆ.

"ನಾನು ಮಲ್ಲಾಡಿಹಳ್ಳಿಗೆ ಸಂಜೆಯ ರೈಲಿನಲ್ಲಿ ಹೊರಟೆ. ಆಗ ನನ್ನ ಆರೋಗ್ಯ ಅಷ್ಟೇನೂ ಸಮರ್ಪಕವಾಗಿರಲಿಲ್ಲ, ಅಲ್ಲದೆ ಅದು ಚಳಿಗಾಲ. ಆದ್ದರಿಂದ ನಾನು ಸಾಕಷ್ಟು ಉಣ್ಣೆಯ ಬಟ್ಟೆಗಳನ್ನು ಹೋಲ್ಡಾಲಿಗೆ ಹಾಕಿ ಭರ್ತಿಮಾಡಿದ್ದೆ. ನಾನು ಅಲ್ಲಿಗೆ ಹೋಗುತ್ತಿದ್ದುದು ಅದೇ ಮೊದಲ ಸಲ. ಆದ್ದರಿಂದ ಭಾಷಣ ಮಾಡುವಾಗ ಧರಿಸಲೆಂದು ಕೋಟು, ಪ್ಯಾಂಟು, ಶರಟು ಇತ್ಯಾದಿಗಳನ್ನು ಒಂದು ಕೈ ಪೆಟ್ಟಿಗೆಯ ತುಂಬಾ ತುಂಬಿಕೊಂಡೆ. ಸಂಜೆ ಏಳು ಗಂಟೆಗೆ ಮೈಸೂರನ್ನು ಬಿಟ್ಟ ರೈಲು ಮರುದಿನ ಬೆಳಗ್ಗೆ ಐದೂವರೆಗೆ ಹೊಳಲ್ಕೆರೆಯ ನಿಲ್ದಾಣವನ್ನು ಮುಟ್ಟಿತು. ನಾನು ಮೊದಲೇ ತಿಳಿಸಿದ್ದುದರಿಂದ ರೈಲ್ವೆಗಾರ್ಡು ಅಲ್ಲಿ ಬಂದು ನನ್ನನ್ನು ಎಬ್ಬಿಸಿದ. ರೈಲು ಆ ನಿಲ್ದಾಣದಲ್ಲಿ ಕೇವಲ ಎರಡು ನಿಮಿಷಗಳು ಮಾತ್ರ ನಿಲ್ಲುವುದೆಂದು ಗೊತ್ತಿದ್ದುದರಿಂದ ನಾನು ಬೇಗ ಬೇಗ ಹಾಸಿಗೆ ಸುತ್ತಿದ ಶಾಸ್ತ್ರ ಮಾಡಿ,ಹೋಲ್ಡಾಲನ್ನು ಕೆಳಕ್ಕೆ ಎಸೆದೆ, ಕೈ ಪೆಟ್ಟಿಗೆಯನ್ನು ಹಿಡಿದು ರೈಲಿನಿಂದ ಇಳಿದೆ. ಮರು ನಿಮಿಷ ರೈಲು ಮುಂದಕ್ಕೆ ಹೊರಟು ಹೋಯಿತು.

"ನಿಲ್ದಾಣಲ್ಲಿದ್ದ ಮಿಣುಕು ದೀಪಗಳ ಬೆಳಕಿನಲ್ಲಿ ಹಾಸಿಗೆಯನ್ನು ಬಿಗಿದುಕಟ್ಟಿ ಸುತ್ತಲೂ ಕಣ್ಣು ಹಾಯಿಸಿದೆ. ನನ್ನ ಗ್ರಹಚಾರಕ್ಕೆ ಅಂದು ಯಾವೊಬ್ಬ ನರಪ್ರಾಣಿಯ ಸುಳಿವೂ ಅಲ್ಲಿರಲಿಲ್ಲ. ಆ ನಿಲ್ದಾಣದಿಂದ ಮಲ್ಲಾಡಿಹಳ್ಳಿಯ ಆಶ್ರಮ ಕೇವಲ ಮೂರು ಮೈಲಿ ಎಂದು ಕೇಳಿದ್ದೆ. ಆದರೆ ಅದು ಯಾವ ದಿಕ್ಕಿನಲ್ಲಿದೆಯೋ ? ದಿಕ್ಕು ಗೊತ್ತಾದರೆ ತಾನೆ ಹೆಣಭಾರದ ನನ್ನ ಹೋಲ್ಡಾಲನ್ನು ಹೊತ್ತು ಅಲ್ಲಿಗೆ ನಡೆಯಲು ಸಾಧ್ಯವೆ ? ಬಸ್ಸುಗಳೇನೊ ಹೋಗುತ್ತವೆಯಂತೆ. ಆದರೆ ಬಸ್ ನಿಲ್ದಾಣವೆಲ್ಲಿದೆಯೋ ಅವು ಯಾವಾಗ ಹೋಗುತ್ತವೆಯೋ ? ನಾನು ಮುಂದೋರದೆ ಮೂಢನಂತೆ ಕ್ಷಣ ಕಾಲ ನಿಂತಿದ್ದೆ. ಸ್ಟೇಷನ್‌ಮಾಸ್ಟರನ್ನಾದರೂ ವಿಚಾರಿಸೋಣವೆಂದುಕೊಂಡು ಸ್ಟೇಷನ್ನಿನತ್ತ ಹೆಜ್ಜೆ ಇಡುವಷ್ಟರಲ್ಲಿ ಯಾರೋ ಒಬ್ಬನು ಕೈಲಿ ಬ್ಯಾಟರಿಯನ್ನು ಹಿಡಿದು ನನ್ನ ಕಡೆಗೇ ಬರುತ್ತಿದ್ದಂತೆ ಕಾಣಿಸಿತು. ಅವನು ತೊಟ್ಟಿದ್ದ ಮೋಟಂಗಿ, ಹಾಕಿಕೊಂಡಿದ್ದ ಚಲ್ಲಣ ಇವುಗಳನ್ನು ನೋಡಿ ನನ್ನ ಸಾಮಾನು ಹೊರುವ ಬಂಟನೊಬ್ಬನು ಸಿಕ್ಕಿದನಲ್ಲಾ ಎಂದು ನನಗೆ ಎಷ್ಟೋ ಧೈರ್ಯ ಬಂದಂತಾಯಿತು. ನಾನು ಅವನನ್ನು ಕುರಿತು "ಅಯ್ಯಾ, ನಾನು ಮಲ್ಲಾಡಿಹಳ್ಳಿಯ ಆಶ್ರಮಕ್ಕೆ ಹೋಗಬೇಕು. ಈ ಸಾಮಾನನ್ನು ಸ್ವಲ್ಪ

ಬಸ್ಸಿಗೆ ಸಾಗಿಸಿ ಕೊಡುತ್ತೀಯಾ ? ನಿನಗೊಂದು ರೂಪಾಯಿಕೊಡುತ್ತೇನೆ" ಎಂದು ಕೇಳಿದೆ. ಆಗಂತುಕ ನಗುತ್ತಾ "ಸ್ವಾಮಿ, ತಾವು ಮೈಸೂರಿನಿಂದ ಬಂದವರು ತಾನೆ? ತಮ್ಮನ್ನು ಆಶ್ರಮಕ್ಕೆ ಕರೆದೊಯ್ಯಲು ಕಾರು ಬಂದಿದೆ. ನಾನು ಅದಕ್ಕಾಗಿಯೇ ಬಂದಿದ್ದೇನೆ. ದಯಮಾಡಿಸಬೇಕು" ಎಂದು ಹೇಳಿ ನನ್ನ ಸಾಮಾನನ್ನು ಹೊತ್ತು ಸ್ಟೇಷನ್ನಿನಿಂದ ಹೊರಕ್ಕೆ ಹೊರಟ. ಹೆಣಭಾರದ ನನ್ನ ಹೋಲ್ಡಾಲನ್ನು ಒಂದೇ ಕೈಲಿ ಲೀಲಾಜಾಲವಾಗಿ ಎತ್ತಿ ಹೆಗಲ ಮೇಲೆ ಇಟ್ಟುಕೊಂಡ ಅವನನ್ನು ಕಂಡು ನನಗೆ ಆಶ್ಚರ್ಯವಾಯಿತು. ಆದ್ದರಿಂದಲೇ ಆ ಮನುಷ್ಯ ಮತ್ತೊಂದು ಕೈಲಿ ನನ್ನ ಪೆಟ್ಟಿಗೆಯನ್ನು ಎತ್ತಿಕೊಂಡಾಗ ನಾನೇ ಅದನ್ನು ತರುತ್ತೇನೆಂದು ಉಪಚಾರ ಹೇಳುವುದು ಅನವಶ್ಯವೆನಿಸಿತು. ನಾನು ಮೌನವಾಗಿ ಆತನನ್ನು ಹಿಂಬಾಲಿಸಿದೆ.

"ನಿಲ್ದಾಣದ ಹೊರಗೆ ಕಾರು ನಿಂತಿತ್ತು. ನಮ್ಮನ್ನು ಕಾಣುತ್ತಲೇ ಡ್ರೈವರ್ ಓಡಿ ಬಂದು, ಆಳಿನ ಕೈಲಿದ್ದ ಸಾಮಾನನ್ನು ಬಹುಕಷ್ಟದಿಂದ ಎತ್ತಿಕೊಂಡು ಡಿಕ್ಕಿಗೆ ಹಾಕಿದ. ಆಮೇಲೆ ಅವನು ಕಾರಿನ ಬಾಗಿಲನ್ನು ತೆಗೆಯುತ್ತಲೇ ನಾನು ಒಳಗೆ ಹೋಗಿ ಕುಳಿತೆ. ಆಳು ಡ್ರೈವರ್ ಪಕ್ಕದಲ್ಲಿ ಕುಳಿತುಕೊಂಡ. ಮರುನಿಮಿಷದಲ್ಲಿ ಕಾರು ಚಲಿಸಿತು. ಡ್ರೈವರ್ ಮಂಕು ಬಡಿದವನಂತೆ ಮೌನವಾಗಿ ಕಾರು ನಡೆಸುತ್ತಿದ್ದ. ಪಕ್ಕದಲ್ಲಿ ಕುಳಿತಿದ್ದ ಆಳಾದರೋ ಪಾದರಸದಂತೆ ಚುರುಕಾಗಿ ಮಾತನಾಡುತ್ತಿದ್ದ. ಅವನು ನನ್ನನ್ನು ಕುರಿತು "ಏನು ಸ್ವಾಮಿ, ರಾತ್ರಿಯ ಪ್ರಯಾಣ ಸುಖಕರವಾಗಿತ್ತೇ ? ನಿದ್ದೆ ಚೆನ್ನಾಗಿ ಬಂತೆ ? ಇನ್ನೇನು ವಿಶೇಷ ? ನಿಮ್ಮ ಮನೆ .." ಇತ್ಯಾದಿಯಾಗಿ ಪ್ರಶ್ನಿಸುತ್ತಾ ನನ್ನನ್ನು ಮಾತಿಗೆಳೆಯಲು ಪ್ರಯತ್ನಿಸುತ್ತಿದ್ದ. ನಾನು ಶ್ರೀಮದ್‌ಗಾಂಭೀರ್ಯದಿಂದ "ನಿನ್ನ ಹೆಸರೇನಪ್ಪ ? ಸ್ವಾಮಿಗಳು ಆರೋಗ್ಯವಾಗಿದ್ದಾರೆಯೇ ? ಅವರು ಯಾವಾಗಲೂ ಹೊರಗೆ ತಿರುಗಾಡುತ್ತಿರುತ್ತಾರಂತೆ ! ಅವರು ಈಗ ಆಶ್ರಮದಲ್ಲಿ ಇದ್ದಾರೆಯೇ, ಅವರು ಪೂಜಾದಿಗಳನ್ನು ಮುಗಿಸಿ ಭಕ್ತರಿಗೆ ದರ್ಶನಕೊಡುವ ವೇಳೆ ಯಾವುದು ? ಈಗ ಆಶ್ರಮಕ್ಕೆ ಹೋದೊಡನೆಯೇ ಅವರನ್ನು ಕಾಣಲು ಸಾಧ್ಯವೇ ?" ಇತ್ಯಾದಿ ಪ್ರಶ್ನೆಗಳನ್ನು ಅವನ ಮೇಲೆ ಪ್ರಯೋಗಿಸಿದೆ. ಅವನ ಹೆಸರು ತಿರುಕಪ್ಪನಂತೆ. ಅವನು ನಗುತ್ತಾ "ಸ್ವಾಮಿಗಳು ಬೆಳಗ್ಗೆ ಮೂರು ಗಂಟೆಗೆ ಎದ್ದು ಐದು ಗಂಟೆಗೆಲ್ಲಾ ಹೊರಕ್ಕೆ ಬರುತ್ತಾರೆ. ನೀವು ಆಶ್ರಮಕ್ಕೆ ಹೋಗುತ್ತಲೇ ಅವರು ನಿಮ್ಮ ಮುಂದೆ ಪ್ರತ್ಯಕ್ಷರಾಗುತ್ತಾರೆ" ಎಂದು ಉತ್ತರಿಸಿದ. ಆ ವೇಳೆಗೆ ಕಾರು ಆಶ್ರಮದಲ್ಲಿದ್ದ ಅತಿಥಿ ಮಂದಿರದ ಮುಂದೆ ಬಂದು ನಿಂತಿತು. ಒಡನೆಯೇ ತಿರುಕಪ್ಪ ಮಂಗನಂತೆ ಛಂಗನೆ ಕಾರಿನಿಂದ ಕೆಳಕ್ಕೆ ನೆಗೆದು, ಅತಿಥಿಮಂದಿರದ ಬೀಗವನ್ನು ತೆಗೆದ. ನಾನು ಅದನ್ನು ಪ್ರವೇಶಿಸಿದೆ. ನನಗಿಂತಲೂ ಮೊದಲೇ ಒಳಕ್ಕೆ ಹೋದ ತಿರುಕಪ್ಪ ನೀರು ಮನೆಯೊಳಕ್ಕೆ ಹೋಗಿ ಬಂದು "ಸ್ವಾಮಿ, ನೀರು ಕಾದಿದೆ, ಮುಖ ತೊಳೆದುಕೊಳ್ಳಿ, ಈಗಲೇ ಇಲ್ಲಿಗೆ ಕಾಫಿ ಕಳಿಸಿ ಕೊಡುತ್ತೇನೆ" ಎಂದ "ಅಯ್ಯಾ ನಾನು ಮೊದಲು ಸ್ವಾಮಿಗಳನ್ನು ದರ್ಶನ ಮಾಡಬೇಕು" ಎಂದು ನಾನು ಹೇಳುತ್ತಿರುವಂತೆಯೇ ಅವನು ನಗುತ್ತಾ ಅಲ್ಲಿಂದ ಹೊರಟೇ ಹೋದ. ಬೇರೆ ಮಾರ್ಗ ತೋರದೆ ನಾನು ಪ್ರಾತಃಕೃತ್ಯಗಳನ್ನು ತೀರಿಸಲೆಂದು ನೀರು ಮನೆಯನ್ನು ಪ್ರವೇಶಿಸಿದೆ.

"ಘಮ ಘಮ ಸುವಾಸನೆಯನ್ನು ಬೀರುತ್ತಿದ್ದ ಕಾಫಿಯನ್ನು ನಾನು ಕುಡಿದು ಮುಗಿಸುವ ವೇಳೆಗೆ ತಿರುಕಪ್ಪ ಮತ್ತೆ ಅಲ್ಲಿ ಕಾಣಿಸಿಕೊಂಡ "ಕಾಫಿ ಆಯ್ತೇ ಸ್ವಾಮಿ ?" ಎಂಬ ಆತನ ಪ್ರಶ್ನೆಗೆ ನಾನು ಸ್ವಲ್ಪ ಅಸಹನೆಯಿಂದಲೇ "ಆಯಿತು ಮಹರಾಯ, ನಾನು ಸ್ವಾಮಿಗಳನ್ನು ಕಾಣುವ ತನಕ ಕಾಫಿ ಕುಡಿಯಬಾರದೆಂದಿದ್ದೆ. ನೀನು ಒಳ್ಳೆ ಜಿಗುಟು ಆಸಾಮಿ. ಕುಡಿಸಿಯೇ ಬಿಟ್ಟೆ, ಹೋಗಲಿ ಈಗಲಾದರೂ ನನಗೆ ಸ್ವಾಮಿಗಳ ದರ್ಶನ ಮಾಡಿಸುತ್ತೀಯಾ ?" ಎಂದೆ ಅವನು ನನ್ನ ಅಸಹನೆಯನ್ನು ಅರ್ಥಮಾಡಿಕೊಳ್ಳಲಿಲ್ಲವೋ ಅಥವಾ ಲೆಕ್ಕಿಸಲೇ ಇಲ್ಲವೊ ! ಮಾತು ಮಾತಿಗೂ ನಗುವುದೊಂದು ಅವನ ವಿಲಕ್ಷಣ ಸ್ವಭಾವ. ಅವನು ಗಟ್ಟಿಯಾಗಿ ನಗುತ್ತಾ "ನೀವು ಮುಖ ಕ್ಷೌರಮಾಡಿಕೊಳ್ಳಬೇಕೇನೋ. ಅದನ್ನೂ ಸ್ನಾನವನ್ನೂ ಮಾಡಿ ಮುಗಿಸಿ ; ಆ ವೇಳೆಗೆ ಬೆಳಗಿನ ಫಲಹಾರ ಬರುತ್ತದೆ. ನಿಮಗೆ ಯಾವ ತಿಂಡಿ ಇಷ್ಟ ? ಉಪ್ಪಿಟ್ಟೋ, ದೋಸೆಯೋ, ಇಡ್ಲಿಯೋ?" ಎಂದ. ನನಗೆ ಮೈಯೆಲ್ಲ ಪರಚಿ

ಕೊಳ್ಳುವಷ್ಟುಕೋಪ ಬಂತು. ಆದರೂ ಅದನ್ನು ತೋರಿಸಿಕೊಳ್ಳದೆ"ಅಯ್ಯಾ ದಯವಿಟ್ಟು ನನಗೆ ಸ್ವಾಮಿಗಳ ದರ್ಶನ ಮಾಡಿಸು" ಎಂದೆ. ಅವನು–ಪುನಃ ಅದೇ ರೋಗ–ಗಟ್ಟಿಯಾಗಿ ನಗುತ್ತಾ "ಸ್ವಾಮಿ ನಾನು ಈಗ ಸ್ವಾಮಿಗಳ ಬಳಿಯಿಂದಲೇ ಬರುತ್ತಿದ್ದೇನೆ. ತಾವು ಬೆಳಗಿನ ಉಪಹಾರ ಮುಗಿಸಿದ ಮೇಲೆ ಅವರೇ ಇಲ್ಲಿಗೆ ಬಂದು ತಮ್ಮನ್ನು ಕಾಣುತ್ತಾರಂತೆ!"ನಾನು ನಿಷ್ಠುರಧ್ವನಿಯಲ್ಲಿ "ನೋಡಪ್ಪ. ನಾನು ಈಗ ಸ್ನಾನವನ್ನೇನೋ ಮಾಡುತ್ತೇನೆ, ಆದರೆ ಸ್ವಾಮಿಗಳನ್ನುಕಾಣದ ಹೊರತು ತಿಂಡಿತೀರ್ಥಗಳನ್ನೇನೂ ತೆಗೆದುಕೊಳ್ಳುವುದಿಲ್ಲ"ವೆಂದೆ. ಅವನು ಯಥಾಪ್ರಕಾರ ನಗುತ್ತಾ. "ಸರಿ ಸ್ವಾಮಿ" ಎಂದು ಹೇಳಿ ಹೊರಟುಹೋದ.

"ನಾನು ಮಿಂದು ಮಡಿಯುಟ್ಟು ಸ್ವಾಮಿಗಳ ದರ್ಶನಕ್ಕಾಗಿ ಕಾಯುತ್ತಾ ಕುಳಿತೆ. ಅವರು ಬರಲಿಲ್ಲ. ಅವರಿಗೆ ಬದಲಾಗಿ ನನ್ನಅದೇ ಹಳೆಯ ಗೆಳೆಯ "ಹ್ಹಿ....ಹ್ಹಿ ...ಎನ್ನುತ್ತಾ ಬಾಗಿಲಲ್ಲಿ ಕಾಣಿಸಿಕೊಂಡ. "ಏನಪ್ಪಾ, ಸ್ವಾಮಿಗಳು...." ಎಂದು ನಾನು ಬಾಯಿ ಬಿಡುತ್ತಿದ್ದಂತೆಯೇ ಅವನು ಮಂದಹಾಸದೊಡನೆ "ಬನ್ನಿ ಸ್ವಾಮಿ. ತೋರಿಸುತ್ತೇನೆ" ಎಂದು ಹೊರಟ. ಬಸವನ ಹಿಂದಿನ ಬಾಲದಂತೆ ನಾನೂ ಅವನನ್ನು ಹಿಂಬಾಲಿಸಿದೆ. ಅತಿಥಿ ಮಂದಿರದಿಂದ ಹೊರಕ್ಕೆ ಬರುತ್ತಲೇ ಅವನು "ಅಲ್ಲಿ ನೋಡಿ, ಅದೇ ನಮ್ಮ ಶಾಲೆ, ಕಾಲೇಜು; ಅದರ ಪಕ್ಕದಲ್ಲಿರುವುದೇ ದೈಹಿಕ ಶಿಕ್ಷಣ ಶಾಲೆ. ಅದರ ಪಕ್ಕದಲ್ಲಿರುವುದು ಶಿಕ್ಷಕರ ಶಿಕ್ಷಣ ಶಾಲೆ. ಎಡಗಡೆಯ ಸಾಲಿನಲ್ಲಿ ಕಾಣುವ ಮನೆಗಳೆಲ್ಲಾ ಶಿಕ್ಷಕರ ಮನೆಗಳು" ಎಂದ. ನಾನು 'ಹೂಂ' ಗುಟ್ಟಿ "ಮುಂದಕ್ಕೆ ನಡೆಯಪ್ಪ" ಎಂದೆ. ಹತ್ತು ಹೆಜ್ಜೆ ನಡೆದುಬಂದಮೇಲೆ ಅವನು "ಇಗೋ ಇದು ಗೋಶಾಲೆ" ಎಂದ. ಹತ್ತಾರು ಗೋವುಗಳೂ ಕರುಗಳೂ ಇದ್ದ ಆ ಸ್ಥಳದ ಅಚ್ಚುಕಟ್ಟು, ನೈರ್ಮಲ್ಯಗಳನ್ನು ಕಂಡು ನನ್ನ ಹೃದಯ ಸೂರೆಯಾಯಿತು. ಅಲ್ಲಿಂದ ಮುಂದಿನದೇ 'ತಪೋವನ'. ಅದರ ಅಂಚಿನಲ್ಲಿ ಸ್ವಾಮಿಗಳು ವಾಸಿಸುತ್ತಿರುವ ಕುಟೀರ. ತಿರುಕಪ್ಪ ನನ್ನನ್ನು ಅದರೊಳಗೆ ಕರೆದೊಯ್ದ. ಪ್ರವೇಶಿಸುತ್ತಿರುವಂತೆಯೇ ದೊಡ್ಡದೊಂದು ಮಾರುತಿಯ ಚಿತ್ರಪಟ. ಅದರ ಪಕ್ಕದಲ್ಲಿ ಇರುವ ಮೆಟ್ಟಲುಗಳನ್ನು ಇಳಿದು ಕೆಳಗಿನ ನೆಲಮಾಳಿಗೆಗೆ ಹೋದರೆ ಅಲ್ಲಿ ಶ್ರೀ ಶ್ರೀ ಸ್ವಾಮಿಗಳ ಪಾರಾಯಣ ಗ್ರಂಥಗಳು, ಅವರ ಆರಾಧ್ಯದೈವ! ಇವುಗಳನ್ನು ನೋಡುತ್ತಿದ್ದಂತೆ ನನ್ನ ಮನಸ್ಸಿನಲ್ಲಿ ಭಕ್ತಿಯ ತರಂಗಗಳು ಏಳತೊಡಗಿದವು. ತಿರುಕಪ್ಪ ಸ್ವಾಮಿಗಳು ಕೂಡುವ, ಮಲಗುವ, ಊಟ ಮಾಡುವ ಕೊಠಡಿಗಳನ್ನೆಲ್ಲಾ ತೋರಿಸಿದ. ಆಧ್ಯಾತ್ಮಿಕ ವಾತಾವರಣವೊಂದು ಆ ಕುಟೀರವನ್ನೆಲ್ಲಾ ತುಂಬಿರುವಂತೆ ನನಗೆ ಭಾಸವಾಯಿತು. ನಾನು ಪರವಶನಾಗಿ "ಸ್ವಾಮಿಗಳು? ಅವರೆಲ್ಲಿ?" ಎಂದೆ. "ಅವರು ಈಗ ತಾನೆ ಇಲ್ಲಿಂದ ಆಫೀಸಿಗೆ ಹೋಗುವ ಸಮಯ" ಎಂದು ಹೇಳಿದ ತಿರುಕಪ್ಪ ನನ್ನನ್ನು ಅಲ್ಲಿಂದ ಮುಂದಕ್ಕೆ ಕರೆದೊಯ್ದ. ಓ.... ತಪೋವನವೆಂದರೆ ಅದು ತಪೋವನವೆ. ಮರ ಗಿಡ ಬಳ್ಳಿಗಳಿಂದ ತುಂಬಿ ಕಣ್ಮನಗಳನ್ನು ಸೂರೆಗೊಳ್ಳುವ ಆ ವನದಲ್ಲಿ ಸಾಕಿದ ಜಿಂಕೆ, ಮೊಲ, ಕೋತಿ ಮೊದಲಾದ ಪ್ರಾಣಿಗಳೂ ಗಿಳಿ, ಕೋಗಿಲೆ ಪಾರಿವಾಳ ಮೊದಲಾದ ಹಕ್ಕಿಗಳೂ ತುಂಬಿದ್ದವು. ತಪೋವನದ ಇಕ್ಕೆಲಗಳಲ್ಲೂ ಧ್ಯಾನ ಮಂದಿರಗಳು! ಅವನ್ನು ನೋಡುತ್ತಾ ಕೊನೆಯನ್ನು ಮುಟ್ಟಿದಾಗ ಅಲ್ಲೊಂದು ಗರಡಿಯ ಮನೆ. ತಿರುಕಪ್ಪ ಗರಡಿ ಮನೆಯ ಇತಿಹಾಸವನ್ನು ಹೇಳುತ್ತಾ ಹೋದಂತೆ ನಾನು ಉಳಿದೆಲ್ಲವನ್ನು ಮರೆತು ಅದನ್ನೇ ಬಾಯಿ ಬಿಟ್ಟುಕೊಂಡು ಕೇಳುತ್ತಿದ್ದೆ. ಅಲ್ಲಿನ ಮಟ್ಟಿಯ ಕಥೆ ರೋಮಾಂಚಕರವಾಗಿದೆ. ಅದಕ್ಕೆ ಸಹಸ್ರಾರು ಕೊಡಗಳಷ್ಟು ಹಾಲು ಬೆಣ್ಣೆ ತುಪ್ಪ ಜೇನುತುಪ್ಪಗಳನ್ನು ಸುರಿದು ಹದಗೊಳಿಸಿದ್ದಾರಂತೆ! ಸಹಸ್ರಾರು ರೂಪಾಯಿಗಳ ಔಷಧ ಸಾಮಗ್ರಿಗಳನ್ನುಸೇರಿಸಿದ್ದಾರಂತೆ. ಬರಿ ಮೈಲಿ ಅದರ ಮೇಲೆ ಉರುಳಾಡಿದರೆ ಎಷ್ಟೋ ಕಾಯಿಲೆಗಳು ವಾಸಿಯಾಗುತ್ತವಂತೆ! ನೂರಾರು ಜಟ್ಟಿಗಳ ಕಾಳಗ ಆಶ್ರಮದಲ್ಲಿ ನಡೆದಿದೆಯಂತೆ! ಗರಡಿ ಮನೆಯಲ್ಲಿದ್ದ ನಾನಾ ಪ್ರಮಾಣದ ಗದೆಗಳನ್ನು ನೋಡಿ ನನಗೆ ಆಶ್ಚರ್ಯವಾಯಿತು. ಅದರಲ್ಲಿ ಅತ್ಯಂತ ದೊಡ್ಡದಾದುದನ್ನು ನಾನು ಎತ್ತ ಹೊರಟು ತಿಣುಕಾಡಿದೆ. ತಿರುಕಪ್ಪನಿಗೆ ಅದನ್ನು ತೋರಿಸಿ "ಇದನ್ನು ಯಾರಾದರೂ ಎತ್ತುತ್ತಾರೇನಯ್ಯ?" ಎಂದೆ. ಒಡನೆಯೇ ಆ ಮಹರಾಯ ಅದನ್ನು ಲೀಲಾಜಾಲವಾಗಿ ಮೇಲೆತ್ತಿ ತನ್ನ ತಲೆಯ ಸುತ್ತ ಗರಗರ ತಿರುಗಿಸಿದ. ನಾನು ಅವನಿಗೆ ಶಹಬಾಸ್

ಗಿರಿ ಕೊಟ್ಟು "ನಡೆಯಪ್ಪ" ಸ್ವಾಮಿಗಳನ್ನು ಕಾಣೋಣ', ಎಂದೆ. ಅವ ನಗುತ್ತಾ ಗರುಡಿಮನೆ ಪಕ್ಕದಲ್ಲಿದ್ದ ಅನ್ನಪೂರ್ಣಾಲಯ, ಗ್ರಂಥಾಲಯಗಳನ್ನು ತೋರಿಸಿ ವಿಸ್ತಾರವಾಗಿದ್ದ ವ್ಯಾಸಪೀಠಕ್ಕೆ ನನ್ನನ್ನು ಕರೆತಂದ. "ನೋಡಿ ಸ್ವಾಮಿ, ಇಲ್ಲಿಯೇ ಸಂಜೆ ನಿಮ್ಮ ಭಾಷಣ" ಎಂದ. ವಿಸ್ತಾರವಾಗಿದ್ದ ಆ ಪ್ರಾಂಗಣ, ಅದರ ಮುಂದೆ ಸಹಸ್ರಾರು ಜನ ಪ್ರೇಕ್ಷಕರು ಕುಳಿತುಕೊಳ್ಳಲು ಅನುಕೂಲಕರವಾದ ಬಯಲನ್ನು ನೋಡಿ ನಾನು ಬೆರಗಾದೆ. ಆ ಬಯಲಿನ ಇಕ್ಕೆಲಗಳಲ್ಲಿಯೂ ವಿದ್ಯಾರ್ಥಿಗಳ ವಸತಿಗೃಹಗಳು. "ಎಷ್ಟು ಜನ ವಿದ್ಯಾರ್ಥಿಗಳಿದ್ದಾರೆ?" ಎಂಬ ನನ್ನ ಪ್ರಶ್ನೆಗೆ "ಇದ್ದಾರೆ ಒಂದು ಮುನ್ನೂರು ನಾನೂರು ಜನ" ಎಂಬ ಆ ಪುಣ್ಯಾತ್ಮ ಮುನ್ನೂರಕ್ಕೂ ನಾನೂರಕ್ಕೂ ಅವನಿಗೆ ಹೆಚ್ಚು ವ್ಯತ್ಯಾಸ ಕಾಣಿಸಲಿಲ್ಲವೇನೋ. ಅಷ್ಟು ಜನಕ್ಕೂ ಉಚಿತವಾದ ಅಶನ, ವಸನ ವಸತಿಗಳು. ಇಲ್ಲಿ ಎಲ್ಲವೂ ಭೂಮ, ಅಲ್ಪತೆಗೆ ಎಡೆಯಿಲ್ಲ ಎಂದುಕೊಂಡೆ.

"ನನಗೆ ಸ್ವಾಮಿಗಳನ್ನು ಕಾಣಬೇಕೆಂಬ ಗೀಳು. ತಿರುಕಪ್ಪನಿಗಾದರೋ ಅದರ ಪರಿವೆಯೇ ಇಲ್ಲ. ಅವನು ಅಲ್ಲಿಯೇ ಇದ್ದ ಅಮ್ಮನವರ ಗುಡಿಯನ್ನು ತೋರಿಸಿದ. ಪರಪ್ಪ ಸ್ವಾಮಿಯ ಗುಡಿಯನ್ನು ತೋರಿಸಿದ. ಅದರ ಪಕ್ಕದಲ್ಲಿದ್ದ ವೈದ್ಯಾಲಯವನ್ನು ಪ್ರವೇಶಿಸಿದ. ನನ್ನ ತಾಳ್ಮೆ ತಪ್ಪುತ್ತಿದ್ದರೂ ಹೇಗೋ ಸಾವರಿಸಿ ಕೊಂಡು ಅವನನ್ನು ಹಿಂಬಾಲಿಸಿದೆ. ಅವನು ವೈದ್ಯಾಲಯವನ್ನು ಪ್ರವೇಶಿಸುತ್ತಿದ್ದಂತೆಯೇ ಅಲ್ಲಿ ಕೆಲಸದಲ್ಲಿ ತೊಡಗಿದ್ದ ನಾಲ್ಕಾರು ಜನ ಇದ್ದುದನ್ನು ಇದ್ದಂತೆ ಬಿಟ್ಟು ಎದ್ದು ನಿಂತರು. ನನಗೆ ಆಶ್ಚರ್ಯವಾಯಿತು. ಇವರು ಎಂತಹ ಸುಸಂಸ್ಕೃತರು. ಹೊಸಬರನ್ನು ಕಂಡರೆ ಎಷ್ಟು ಗೌರವ—ಎಂದು ಕೊಂಡು ಅವರು ತೋರಿದ ಗೌರವವನ್ನು ನನಗೆ ಆರೋಪಿಸಿಕೊಂಡೆ. ಅಷ್ಟರಲ್ಲಿ ಯಾರೋ ಒಬ್ಬ ಹೆಂಗಸು ಅಲ್ಲಿಗೆ ಧಾವಿಸಿ ಬಂದು "ಯಪ್ಪೋ, ಸ್ವಾಮಿ, ನಿನ್ನಿಂದ ನನ್ನ ಮಾಂಗಲ್ಯ ಉಳಿಯಿತು" ಎಂದು ಅಡ್ಡಬಿದ್ದಳು. ತಿರುಕಪ್ಪ ಕೈಮುಗಿದು ಕೊಂಡು 'ಮಾರುತಿ ಮಾರುತಿ' ಎಂದು ಹೇಳುತ್ತ "ಉಳಿಸೋನು ಅಳಿಸೋನು ನಾನಲ್ಲಮ್ಮ, ದೇವರು" ಎಂದು ಹೇಳಿ ಅಲ್ಲಿಂದ ಹೊರಟ. ಇದನ್ನು ಕಂಡು ನನಗೆ ಸ್ವಲ್ಪ ಗಾಬರಿಯಾಯಿತು. ಯಾರು ಈ ಮನುಷ್ಯ? ಬಹುಶಃ ಇಲ್ಲಿನ ವೈದ್ಯನಿರಬೇಕು ಎಂದುಕೊಂಡು ಆತನನ್ನು ಹಿಂಬಾಲಿಸಿದೆ. ಅಲ್ಲಿಂದ ಎರಡು ಹೆಜ್ಜೆ ಇಟ್ಟರೆ ಅದೇ ಆಶ್ರಮದ ಕಚೇರಿ. ಆತ ಕಚೇರಿಯನ್ನು ಪ್ರವೇಶಿಸಿದ. ನಾನೂ ಒಳಗೆ ಹೋದೆ. ಅಲ್ಲಿದ್ದ ಎಲ್ಲರೂ ಎದ್ದು ನಿಂತರು. ಆ ಮಹರಾಯ ತಿರುಕಪ್ಪ ನೇರವಾಗಿ ಹೋಗಿ ಎದುರಿಗಿದ್ದ ಒಂದು ಕುರ್ಚಿಯ ಮೇಲೆ ಕುಳಿತ. ಅಲ್ಲಿನ ಕಾರಕೂನನು ಕಾಗದಗಳ ಕಟ್ಟೊಂದನ್ನು ಆತನ ಇದಿರಿಗಿಟ್ಟ. ಆತ ಅವುಗಳನ್ನು ಒಂದೊಂದನ್ನಾಗಿ ನೋಡಿ ಏನೋ ಬರೆಯಲು ಪ್ರಾರಂಭಿಸಿದ. ನನ್ನ ಉದ್ವಿಗ್ನತೆ ಮತ್ತಷ್ಟು ಹೆಚ್ಚಾಯಿತು. "ಬಹುಶಃ ಈತ ಇಲ್ಲಿನ ಮ್ಯಾನೇಜರು" ಎಂದುಕೊಂಡೆ. ನನಗೆ ಗರಬಡಿದಂತಾಗಿತ್ತು. ಬೆಳಗಿನಿಂದ ನಡೆದುದೆಲ್ಲ ನನ್ನ ಕಣ್ಣೆದುರಿಗೆ ಕಟ್ಟಿತ್ತು. ನಾನು ಮುಂದೋರದೆ ಆ ಗುಮಾಸ್ತರನ್ನ "ಸರ್, ನಾನು ಸ್ವಾಮಿಗಳನ್ನು ಕಾಣಬೇಕಲ್ಲ?" ಎಂದೆ. ಆತ ಮೂಢನಂತೆ ನನ್ನ ಕಡೆ ನೋಡುತ್ತಾ ತಗ್ಗಿದ ದನಿಯಲ್ಲಿ "ಏನು ಸ್ವಾಮಿ, ನೀವಿಬ್ಬರೂ ಜೊತೆಗೇ ಬಂದಿರಲ್ಲ" ಎಂದ ನಾನು "ಅಂದರೆ?" ಎಂದೆ. ಆತ "ಅಂದರೆ? ಅವರೇ ಸ್ವಾಮಿಗಳು ಅಂತ."

"ಗುಮಾಸ್ತರ ಮಾತು ಕೇಳಿ ನನ್ನ ಎದೆ ಒಡೆಯಿತು. ನಾನೆಂತಹ ಅಪಚಾರ ಮಾಡಿದ್ದೇನೆ! ಇದಕ್ಕೆ ಪರಿಹಾರ ಹೇಗೆ? ನಾನು ಆ ಮೋಟಂಗಿ ಚೆಲ್ಲಾಣದ ಮುಂದೆ ದೀರ್ಘದಂಡ ನಮಸ್ಕಾರ ಹಾಕಿದೆ. ಆತನು ನಗುತ್ತಾ "ಇನ್ನು ನೀವು ನಿಮ್ಮ ಬೆಳಗಿನ ಉಪಹಾರ ಸ್ವೀಕರಿಸಬಹುದಲ್ಲವೇ? ಆಶ್ರಮವನ್ನೆಲ್ಲಾ ತಿರುಗಿ ಸಾಕಷ್ಟು ಆಯಾಸವಾಗಿರಬೇಕು, ಬನ್ನಿ ಹೋಗೋಣ" ಎಂದು ನನ್ನ ಕರೆದುಕೊಂಡು ಅತಿಥಿ ಮಂದಿರಕ್ಕೆ ಬಂದರು. ನಾನು ಅಲ್ಲಿ ಮತ್ತೊಮ್ಮೆ ಅವರಿಗೆ ಅಡ್ಡ ಬಿದ್ದು "ನನ್ನದು ಮಹಾಪರಾಧವಾಯಿತು. ಹೊರ ರೂಪದಿಂದ ನಾನು ಮೋಸ ಹೋದೆ. ನೀವು ಹೇಳಿದುದನ್ನೆಲ್ಲಾ ಸತ್ಯವೆಂದೇ ಭ್ರಮಿಸಿದೆ" ಎಂದೆ. ಅವರು "ನೀವೊಬ್ಬರೇನು ನಾವೆಲ್ಲರೂ ಅಷ್ಟೆ, ಕಣ್ಣಿಗೆ ಕಾಣುವಷ್ಟೇ ಸತ್ಯ" ಎಂದರು. ಹೀಗೆ ಹೇಳಿ ಯಾಮುನಾಚಾರ್ಯರು "ನೀವೇನಾದರೂ ಆಶ್ರಮಕ್ಕೆ ಹೋದರೆ ನನ್ನ ಹಾಗೆಯೇ ಪಿಗ್ಗಿ ಬಿದ್ದೀರಿ, ಎಚ್ಚರಿಕೆ" ಎಂದರು.

ಶ್ರೀ ರಾಘವೇಂದ್ರಸ್ವಾಮಿಗಳ ನಿಸ್ವಾರ್ಥ ಸೇವೆಯನ್ನು ಕುರಿತು ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಯು. ಎನ್. ದೇಭರ್ ಅವರ ಪ್ರಶಂಸೆ

ಅಖಿಲಭಾರತ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಶ್ರೀ ಯು. ಎನ್. ದೇಭರ್ ಅವರು ಮೈಸೂರು ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀ ಎಸ್. ಚೆನ್ನಯ್ಯನವರು ಮತ್ತು ಮೈಸೂರಿನ ವಿದ್ಯಾಮಂತ್ರಿಗಳಾಗಿದ್ದ ಶ್ರೀ ಎ. ಜಿ. ರಾಮಚಂದ್ರರಾಯರೊಡನೆ 29, ಅಕ್ಟೋಬರ್ 1955 ರಲ್ಲಿ ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮಕ್ಕೆ ಭೇಟಿಯಿತ್ತರು. ಆಗ ತಮ್ಮ ಅಭಿಪ್ರಾಯವನ್ನು ಅಭ್ಯಾಗತರ ಪುಸ್ತಕದಲ್ಲಿ (visitors'book) ಹೀಗೆ ಬರೆದಿದ್ದಾರೆ.

"ಇಂದು ಆಶ್ರಮಕ್ಕೆ ಭೇಟಿ ಕೊಟ್ಟೆ. ಮಕ್ಕಳಿಗೆ ಸಮಗ್ರವಾದ ಶಿಕ್ಷಣ ನೀಡಲು ಇಲ್ಲಿ ಮಾಡುತ್ತಿರುವ ಪ್ರಯತ್ನವನ್ನು ನೋಡಿದೆ. ಈ ಪ್ರಯತ್ನ ಅಭಿವೃದ್ಧಿಯಾಗಲಿ ಮತ್ತು ವಿಸ್ತಾರಗೊಳ್ಳಲಿ ಎಂದು ಮಾತ್ರ ನಾನು ಆಶಿಸುತ್ತೇನೆ."

ಅನಂತರ ವ್ಯಾಸಪೀಠ (ಸಭಾಂಗಣ)ದಲ್ಲಿ ನೆರೆದಿದ್ದ ದೊಡ್ಡ ಸಭೆಯಲ್ಲಿ ಮಾತನಾಡುತ್ತಾ ಶ್ರೀ ದೇಭರ್ ಅವರು ಸ್ವಾಮಿಗಳ ಕಾರ್ಯವನ್ನು ಕುರಿತು ಈ ಮಾತುಗಳನ್ನಾಡಿದರು :

"ಬೇರೆ ಸಂಸ್ಥೆಗಳು ಉತ್ಸಾಹದಿಂದ ಅನುಕರಿಸಬೇಕಾದಂತಹ ರಚನಾತ್ಮಕ ಕಾರ್ಯವನ್ನು ನಾನು ಪ್ರತ್ಯಕ್ಷವಾಗಿ ಇಲ್ಲಿ ನೋಡುತ್ತಿದ್ದೇನೆ. ಸ್ವಾಮಿಗಳಾದವರಿಂದ ಇದಕ್ಕಿಂತಲೂ ಉತ್ತಮವಾದ ರಚನಾತ್ಮಕ ಕಾರ್ಯಕ್ರಮದ ಪ್ರದರ್ಶನವನ್ನು ನಿರೀಕ್ಷಿಸುವುದು ಸರಿಯಲ್ಲ. ನೀರು ದೇಹದ ಕೊಳಕನ್ನೂ ಪ್ರಾರ್ಥನೆಯು ಮನಸ್ಸಿನ ಕೊಳಕನ್ನೂ ನಿರ್ಮೂಲಮಾಡುವಂತೆ, ರಚನಾತ್ಮಕ ಕಾರ್ಯಕ್ರಮವು ಸಮಾಜದ ಕೊಳಕನ್ನು ನಿರ್ಮೂಲ ಮಾಡಬೇಕು.

"ಭಾರತವು ಅತ್ಯಂತ ಪುರಾತನವಾದ ದೇಶ. ನಾವು ಬೇರೆ ದೇಶಗಳಿಂದ ಕಲಿಯಬೇಕಾದ ಅನೇಕ ವಿಷಯಗಳಿವೆ. ಆದರೆ ನಾವು ನಮ್ಮ ಪೂರ್ವಿಕರು ಸಂಗ್ರಹಿಸಿರುವ ಜ್ಞಾನರಾಶಿಯಿಂದಲೂ ಕಲಿಯಬೇಕಾದ್ದಿದೆ. ಪ್ರತಿದಿನವೂ ಚೊಕ್ಕಟ ಮಾಡದಿದ್ದರೆ ಹೇಗೆ ಸುಂದರಭವನವು ಕೊಳಕಾಗುವುದೊ, ಅಷ್ಟೆ ಅಲ್ಲ, ಮನುಷ್ಯರ ಬದಲು ಇಲಿ, ಮತ್ತು ಹಲ್ಲಿ ಹಾವುಗಳ ಆವಾಸಸ್ಥಾನವಾಗುವುದೋ ಹಾಗೆಯೆ ಸಮಾಜವೂ ಕೂಡ ಆಗುವುದು. ತಮ್ಮ ಮನೆಗಳನ್ನು ಚೊಕ್ಕಟವಾಗಿಟ್ಟುಕೊಳ್ಳದವರನ್ನು ಕಂಡರೆ ನಿಮಗೇನನ್ನಿಸುವುದು ? ಗೊಬ್ಬರ ರಾಶಿಯನ್ನು ಗುಡ್ಡೆಹಾಕಿಕೊಳ್ಳುವುದು ನಿಮಗಿಷ್ಟವೆ ? ಯಾರಿಗೂ ಅದು ಸರಿಯೆನ್ನಿಸುವುದಿಲ್ಲ. ಆದರೆ ಕಳೆದ ನೂರು ವರ್ಷಗಳಿಂದ ನಾವು ಇದನ್ನೇ ಮಾಡುತ್ತಿದ್ದೇವೆ. ನಮ್ಮ ದೇಶವೇ ನಮ್ಮ ಮನೆ. ನಾವು ಅದನ್ನು ನಿರ್ಲಕ್ಷಿಸಿದ್ದೇವೆ. ಅದನ್ನು ನಿರ್ಮಲಗೊಳಿಸಬೇಕು. ಅದರ ಗಾರೆ ಕಳಚಿ ಬೀಳುತ್ತಿದೆ, ಇಟ್ಟಿಗೆಗಳು ಕರಗಿ

ಹೋಗುತ್ತಿವೆ, ಸೂರು ಅಸ್ತವ್ಯಸ್ತವಾಗಿದೆ. ಈಗ ನಾವು ಇದನ್ನೆಲ್ಲ ರಿಪೇರಿ ಮಾಡಿಕೊಳ್ಳಬೇಕು. ಒಬ್ಬ ವ್ಯಕ್ತಿಯ ಮನೆಯಾದರೆ ಅವನ ಕುಟುಂಬಕ್ಕೆ ಸೇರಿದ ಜನರಿಂದ ರಿಪೇರಿ ಕೆಲಸ ನಡೆಯುತ್ತದೆ. ಆದರೆ ಈ ದೊಡ್ಡ ಮನೆಯ ರಿಪೇರಿ ಕೆಲಸಕ್ಕೆ ರಚನಾತ್ಮಕ ಕಾರ್ಯಕ್ರಮವೇ ಬೇಕು. ಪ್ರತಿಯೊಬ್ಬರೂ ರಚನಾತ್ಮಕ ಕಾರ್ಯಕ್ರಮವನ್ನು ಕೈಗೊಳ್ಳಬೇಕು. ನಮ್ಮ ಸ್ವಾಮಿಗಳು ಈ ಹಳ್ಳಿಯಲ್ಲಿ ಒಂದು ಪವಾಡವನ್ನು ಮಾಡಬಹು ದಾದರೆ, ನೀವೂ ಇಂತಹ ಪವಾಡಗಳನ್ನು ಮಾಡುವುದು ಸಾಧ್ಯ. ಹೀಗೆಯೇ ಬೇರೆ ಬೇರೆ ಕಡೆಗಳಲ್ಲಿಯೂ ಜನರು ದೇಶಭಕ್ತಿಯಿಂದ, ಆತ್ಮಸಂತೋಷದಿಂದ ಕೆಲಸ ಮಾಡಲು ಪ್ರಾರಂಭಿಸಿದರೆ ಬಹುಬೇಗ ನಮ್ಮ ದೊಡ್ಡ ಮನೆಯನ್ನು ರಿಪೇರಿ ಮಾಡಿಕೊಳ್ಳಬಹುದು. ಶ್ರೀ ರಾಘವೇಂದ್ರಸ್ವಾಮಿಯವರ ಮೇಲ್ಪಂಕ್ತಿಯನ್ನನುಸರಿಸಿರಿ; ನಮ್ಮ ದೇಶದ ಪುನರುದ್ಧಾರ ಕಾರ್ಯದಲ್ಲಿ ನೆರವಾಗಿ.

"ಜೀವನವು ಏತಕ್ಕೋಸ್ಕರ ಇದೆ? ದೇವರು ನಮಗೆ ಕಣ್ಣು ಕೊಟ್ಟಿದ್ದಾನೆ. ಒಂದು ಒಳ್ಳೆಯ ಕ್ಯಾಮೆರಾದ ಬೆಲೆ 100 ರೂಪಾಯಿಗಳು. ಆದರೆ ಅತ್ಯುತ್ತಮ ಕ್ಯಾಮೆರಾ ಕೂಡ ಕಣ್ಣಿನ ಸಮ ಬರಲಾರದು. ನಮಗೆ ದೇವರು ಕಣ್ಣುಗಳನ್ನು ವ್ಯರ್ಥವಾಗಿ ಕೊಟ್ಟಿದ್ದಾನೆಯೆ? ನಿಮ್ಮ ಕಾಲುಗಳ ಮೇಲೆ ಸ್ವತಂತ್ರವಾಗಿ ನಿಲ್ಲಿ; ದನ ಕುರಿಗಳಂತಾಗಬೇಡಿ. ಕೈಗಳಿರುವುದು ಕೆಲಸ ಮಾಡುವುದಕ್ಕೆ. ಕೈಬೆರಳುಗಳೊಂದು ಅಮೋಘವಾದ ಆಸ್ತಿ. ಅವುಗಳಿಂದ ಒಳ್ಳೆಯ ಕೆಲಸ ಮಾಡಬಹುದು. ಒಂದು ರೇಡಿಯೊ ಕೊಳ್ಳಲು ಹಣ ಕೊಡಬೇಕು. ದೇವರು ನಮಗೆ ಕಿವಿಗಳನ್ನು ಕೊಟ್ಟಿದ್ದಾನೆ. ಅವನ್ನು ಹಣ ಕೊಟ್ಟು ಕೊಂಡುಕೊಂಡಿದ್ದೇವೆಯೆ? ದೇವರು ನಮಗಿದನ್ನೆಲ್ಲ ಉಚಿತವಾಗಿ ಕೊಟ್ಟಿದ್ದಾನೆ. ಆದರೆ ನಮ್ಮ ಆಲೋಚನೆಗಳಲ್ಲಿ ಪ್ರತಿಯೊಂದಕ್ಕೂ ಹಣ ಹಣ. ಮರಗಳಿವೆ, ಮನೆಯಲ್ಲಿ ದನ ಕರುಗಳಿವೆ; ಮರವು ಪ್ರತಿಯೊಂದು ಬಾರಿ ಹಣ್ಣು ಬಿಟ್ಟಾಗಲೂ, ಹಸುಗಳು ಹಾಲು ಕೊಟ್ಟಾಗಲೂ ನೀವು ಗಳಿಸಿದ ಲಾಭದಲ್ಲಿ ಅವು ಒಂದು ಪಾಲು ಕೇಳಿದರೆ ನಿಮ್ಮ ಗತಿಯೇನು?

"ಹೌದು, ನಾವು ಹಣವಿಲ್ಲದೆ ಏನೂ ಮಾಡಲಾಗುವುದಿಲ್ಲ, ನಿಜ. ನಾವು ಲಾಭಗಳಿಸುವುದೊಂದನ್ನೇ ಯೋಚನೆ ಮಾಡುವುದು ಬೇಡ. ನಾವು ಹಣ ಬೇಕು, ಇನ್ನೂ ಹಣಬೇಕು ಎಂದುಕೊಳ್ಳುತ್ತಾ ಹೋದರೆ, ನಮಗೆ ಹಣದ ಹುಚ್ಚು ಹಿಡಿಯಬಹುದು. ಅದಕ್ಕೇ ನಮ್ಮ ಸಂಸ್ಕೃತಿಯು ಹಣವನ್ನು ದಾನ ಮಾಡುವುದನ್ನು ಕಲಿಸಿತೇ ಹೊರತು ಹಣವನ್ನು ತೆಗೆದುಕೊಳ್ಳುವುದನ್ನು ಕಲಿಸಲಿಲ್ಲ. ನಿಮ್ಮ ದೇಹ ಬುದ್ಧಿ ಮತ್ತು ಹಣವನ್ನು ಸಮಾಜಕ್ಕಾಗಿ ವಿನಿಯೋಗಿಸಿ. ಜೀವನವಿರುವುದು ಪರೋಪಕಾರಕ್ಕಾಗಿ. ಸೇವೆಗೆ ಪೂಜ್ಯಸ್ಥಾನವನ್ನೂ ಮತ್ತು ಪ್ರಾಮುಖ್ಯವನ್ನೂ ಕೊಟ್ಟಿರುವುದು ನಮ್ಮ ದೇಶವೊಂದರಲ್ಲಿಯೇ. ನಾವು ತೀರ್ಥಯಾತ್ರೆ ಹೋಗುತ್ತೇವೆ. ಈಚೆಗೆ ಪರದೇಶಗಳವರು ನಮ್ಮ ದೇಶಕ್ಕೆ ತೀರ್ಥಯಾತ್ರೆಗೆಂದು ಬರುತ್ತಾರೆ. ಭಗೀರಥನು ಗಂಗೆಯನ್ನು ಸ್ವರ್ಗದಿಂದ ತಂದನು. ಅದೇ ರೀತಿ ಗಾಂಧೀಜೀ ದರಿದ್ರ ನಾರಾಯಣನನ್ನು ತಂದರು. ಗಾಂಧೀಜೀಯವರು ಸೇವೆಯ ಸಂದೇಶ ಸಾರಿದರು, ಸೇವೆಯ ಅವಕಾಶಗಳಿಗೆ ಕೊನೆಯೇ ಇಲ್ಲ.

"ನಿಸ್ವಾರ್ಥ ಸೇವೆಗೆ ಪ್ರಮುಖ ಸ್ಥಾನ ಕೊಟ್ಟಿರುವುದಕ್ಕಾಗಿ ಸ್ವಾಮಿಜೀಯವರನ್ನೂ ಅವರ ಜೊತೆಯ ಕೆಲಸಗಾರರನ್ನೂ ನಾನು ಅಭಿನಂದಿಸುತ್ತೇನೆ. ತ್ಯಾಗ ಮತ್ತು ಸೇವೆಗಳ ಪ್ರಭಾವದಲ್ಲಿ ಶಿಕ್ಷಣ ಪಡೆದ ಹುಡುಗರು ನಿಜವಾಗಿಯೂ ದೇಶದ ಆಸ್ತಿ. ನಿಮ್ಮ ಬುದ್ಧಿ ಬೆಳೆದ ಹಾಗೆಲ್ಲ ನಿಮ್ಮ ಸೇವೆಯೂ ಬೆಳೆಯಬೇಕು. ಹಾಗಾದರೆ ಸಮಸ್ಥಿತಿ ಸಾಧ್ಯ. ಇದಕ್ಕೊಂದು ಉದಾಹರಣೆ: ಆಯುರ್ವೇದದ ಔಷಧವನ್ನು ಅನುಪಾನದೊಂದಿಗೆ ಸೇವಿಸುವುದರಿಂದಲೆ ನಾವು ಅಪೇಕ್ಷಿಸಿದ ಗುಣ ದೊರಕುವುದು. ಇದಕ್ಕೆ ಪ್ರತಿಯಾಗಿ ಸರಿಯಾದ ಅನುಪಾನವಿಲ್ಲದೆ ಔಷಧವನ್ನು ಸೇವಿಸಿದರೆ, ಅದರಿಂದ ಗುಣಕ್ಕಿಂತಲೂ ಹಾನಿಯೇ ಹೆಚ್ಚು. ಇದರಂತೆಯೇ ಸರಿಯಾಗಿ ಬುದ್ಧಿಯನ್ನು ಉಪಯೋಗಿಸಿಕೊಳ್ಳದಿದ್ದರೆ ಅದರಿಂದ ಅಪಾಯವೇ ಹೆಚ್ಚು. ಆದುದರಿಂದ ನಮ್ಮ ದೇಹಶಕ್ತಿಯನ್ನೂ ಬುದ್ಧಿಯನ್ನೂ ಆರ್ಥಿಕ ಸಂಪತ್ತನ್ನೂ ಸರಿಯಾಗಿಯೂ ಪ್ರಯೋಜನಕಾರಿಯೂ ಆದ ರೀತಿಯಲ್ಲಿಯೂ ನಿಯೋಜಿಸಬೇಕು.

ನಂದನವನ

ಮಾನವನು ಹುಟ್ಟಿದುದು ನಂದನವನದಲ್ಲಿ; ಆನಂದದಿಂದ ಜೀವಿಸಲಿಕ್ಕಾಗಿ, ಮೋದಾಮೋದ ಪ್ರಮೋದಗಳನ್ನು ಅನುಭವಿಸಲಿಕ್ಕಾಗಿ. ಆದರೆ ವಾಸ್ತವ ಪರಿಸ್ಥಿತಿ ಏನಿದೆ ? ಈ ಲೋಕವು ನಿಜವಾಗಿಯೂ ಒಂದು ನಂದನವನವು, ಆನಂದ ವನವು. ಶ್ರೀ ರಾಮದಾಸ ಸ್ವಾಮಿಗಳು ಇದಕ್ಕೆ ಒಮ್ಮೆ "ಆನಂದ ವನ ಭುವನ" ಎಂದಿದ್ದಾರೆ. ತಾಯಿಯ ಗರ್ಭವೆಂಬ ಏಳು ಸುತ್ತಿನ ಕೋಟೆಯಲ್ಲಿ ಸುಖವಾಗಿ ನಿದ್ದೆಗೆಯ್ದ ಕೂಸು ಈ ಲೋಕದ ಸೋಂಕು ತಟ್ಟಿದ ಕೂಡಲೇ ಚಿಟ್ಟನೇ ಚೀರಲಾರಂಭಿಸುವುದು. ನಂದನವನದ ಕಟುಅನುಭವ ಆ ಕ್ಷಣದಿಂದಲೇ ಪ್ರಾರಂಭ ! ಮಾತೆಯ ಮಡಿಲಲ್ಲಿ ಸನಾಥವಿದ್ದ ಮಗು ಅನಾಥವಾಗುವುದು. ಅನಾಥಾಶ್ರಮಗಳ ಹಾಗೂ ಅನಾಥ ಸೇವಾಶ್ರಮಗಳ ಆವಶ್ಯಕತೆ ಆ ಕ್ಷಣದಿಂದಲೇ ಪ್ರಾರಂಭ ! ಅನಾಥಾಶ್ರಮಗಳ ಆವಶ್ಯಕತೆಯೇ ಇಲ್ಲದಂಥ ದಿನಗಳು ಈ ಭೂಲೋಕದಲ್ಲಿ ಉದಯಿಸಬಹುದೆ ? ಈ ಆಶೆ ಮಾನವನ ಅಂತರ ಹೃದಯದಲ್ಲಿ ಇದ್ದೇ ಇದೆ ಅಲ್ಲವೇ ? ಆದರೆ ಆ ಆಶೆ ಈಡೇರುವವರೆಗೆ, ಮಾನವ ಮಾನವನನ್ನು ಮಾನವನಂತೆ ನಡೆಸಿಕೊಳ್ಳಲಾರಂಭಿಸುವವರೆಗೆ, ಆತ್ಮೋಪಮ್ಯವೇ ಮಾನವೀಯ ಸಂಬಂಧಗಳ ತಳಹದಿ ಆಗುವವರೆಗೆ ಮಾನವನು ಮಾನವನನ್ನು ತನ್ನ ಸ್ವಾರ್ಥಕ್ಕಾಗಿ, ತನ್ನ ಗೌರವಕ್ಕಾಗಿ, ತನ್ನ ಅಧಿಕಾರದಾಹಕ್ಕಾಗಿ ಬಳಸಿಕೊಳ್ಳುವುದು ನಿಲ್ಲುವವರೆಗೆ, ಮಾನವನು ಮಾನವನಿಗೆ ಕೊಡುವ ಪೀಡೆ,ದುಃಖ ಪೂರ್ಣನಿಲ್ಲುವವರೆಗೆ ಅನಾಥಾಶ್ರಮಗಳು ಬೇಕೇ ಬೇಕು, ಸೇವಾಶ್ರಮಗಳೂ ಬೇಕು. ಆದರೆ 'ಸೇವಾಧರ್ಮಃ ಪರಮಗಹನೋ ಯೋಗಿನಾಮಪ್ಯಗಮ್ಯಃ' ಎಂದು ಹೇಳಿದ್ದರಿಂದ ಆ ಸೇವಾಧರ್ಮವನ್ನು ಅಂಗೀಕರಿಸುವವರು ಎಷ್ಟು ಜನ ! ಅತಿ ವಿರಳ. ಸಂನ್ಯಾಸಧರ್ಮವನ್ನು ಸ್ವೀಕರಿಸುವವರು ಸಾವಿರ. ಸೇವಾಧರ್ಮವನ್ನು ಪತಿಕರಿಸಿ. ಆ ಸೇವೆಯೇ ಸರ್ವಸ್ವ, ಅದೇ ಸ್ವರ್ಗ, ಅದೇ ಮುಕ್ತಿ ಮಾರ್ಗ ಎಂದು ಸಾಧನೆ ಮಾಡುವವರು ಲಕ್ಷಾಂತರದಲ್ಲಿ ಒಬ್ಬರು. ಅದೊಂದು ಕಠೋರ ತಪ. ಅವರಿಗೆ ನಮೋ ನಮೋ ಎನ್ನುವೆ.

ಎಸ್. ನಿಜಲಿಂಗಪ್ಪ

ವಿಶ್ವ ಸಂಸಾರಿಯಾದ ಸನ್ಯಾಸಿ

ಸುಮಾರು 25 ವರ್ಷಗಳಾಯಿತು. ಕಾಲ ಓಡುತ್ತಲೇ ಇದೆ. ಬೆಳಗಿನ ಹತ್ತುಘಂಟೆ ಸಮಯ ವಿರಬಹುದು. ಜೋಗಿಯೊಬ್ಬ ಬಾಗಿಲಲ್ಲಿ ನಿಂತು ನನ್ನನ್ನು ವಿಚಾರಿಸಿದಾಗ ತಲೆ ಎತ್ತಿ ನೋಡಿದೆ. ಜೋಗಿ ಅಥವಾ ಆ ವರ್ಗದವರನ್ನೂ ಕಾವೀ ಬಟ್ಟೆಯವರನ್ನೂ ಕಂಡರೆ ನನಗೆ ಅಷ್ಟಕಷ್ಟೆ. ಆದರೆ ಈ ಜೋಗಿ ಹಾಕಿದ್ದುದು ಖಾದಿಯಬಟ್ಟೆ–ಭುಜದ ಮೇಲಿನಿಂದ ಮೊಳಕಾಲಿನ ಕೆಳಗಿರುವರೆಗೆ ಒಂದೇ ಒಂದು ಜೋಲು ಜುಬ್ಬ. ಕೈಯಲ್ಲಿ ಅದೇ ಖಾದಿಯ ಚೀಲ. ಖಾದಿ ನನ್ನ ಮನಸ್ಸನ್ನೆಳೆದು ಅವರನ್ನು ಒಳಗೆ ಬರಮಾಡಿಕೊಂಡಿತು. ವಿಚಾರಿಸಲಾಗಿ ತಾವು ಮಲ್ಲಾಡಿಹಳ್ಳಿಯಲ್ಲಿ ಒಂದು ಅನಾಥಾಶ್ರಮ ಸ್ಥಾಪಿಸಿರುವುದಾಗಿಯೂ ಮಕ್ಕಳಿಗೆ ಬರೀ ಓದುಬರಹವಲ್ಲದೆ ವ್ಯಕ್ತಿತ್ವದ ಪೂರ್ಣ ಅಭಿವೃದ್ಧಿಗೆ ಗಮನಕೊಟ್ಟು ಹಾಗೆಯೇ ಅವರನ್ನು ಧೃಢಕಾಯರನ್ನಾಗಿ ಮಾಡುವುದೇ ಮುಂತಾದ ಕಾರ್ಯಗಳನ್ನೂ ಆಶ್ರಮದಲ್ಲಿಟ್ಟುಕೊಂಡಿದ್ದು, ಪರಿಪೂರ್ಣತೆಯ ವಿದ್ಯಾಭ್ಯಾಸಕ್ಕೆ ಆದ್ಯತೆ ನೀಡುವುದಾಗಿಯೂ ಹೇಳುತ್ತಾ ಹೋದರು. ಮಾತಿನಲ್ಲಿದ್ದ ಗಾಂಭೀರ್ಯ, ಮಾಧುರ್ಯ, ಸ್ಪಷ್ಟ ಅಭಿಪ್ರಾಯಗಳು, ಅವರು ಇಟ್ಟುಕೊಂಡ ಉದಾತ್ತ ಧ್ಯೇಯಗಳು ವ್ಯಾಯಾಮದ ಆವಶ್ಯಕತೆ, ರಾಷ್ಟ್ರಭಕ್ತಿ, ರಾಷ್ಟ್ರದ ಏಕತ್ವದ ಕಡೆ ಮಕ್ಕಳ ಮನಸ್ಸನ್ನು ಸೆಳೆಯಲು ಅನಿವಾರ್ಯವಾಗಿರುವುದು–ಇವೇ ಮೊದಲಾದವುಗಳ ವಿಚಾರವಿನಿಮಯ ಮಾಡುತ್ತಾ ಹೋದಂತೆಲ್ಲಾ ಈ ವ್ಯಕ್ತಿ ಜೋಗಿ ಅಲ್ಲ ಆದರೆ ಮಹಾಯೋಗಿ ಇರಬೇಕೆಂದು ನನಗೆ ಹೊಳೆಯಿತು. ಆಳು ಎತ್ತರವಲ್ಲದಿದ್ದರೂ ಅವರ ಮೈಕಟ್ಟು, ಅಂಗಸೌಷ್ಠವ ಮೆಚ್ಚತಕ್ಕಂಥಾದ್ದು. ಅಂದಾಜು ಅಳತೆಯ ಆಧಾರವ ಆ ಜುಬ್ಬದಲ್ಲಿ ಅದು ಕಾಣುವುದಿಲ್ಲ. ಅಂತೂ ಆ ದಿನ ಆ ಜೋಗಿ ನನಗೆ ಯೋಗಿಯಾದರು. ಅಲ್ಲಿಂದ ಅವರ ವಿಚಾರದಲ್ಲಿ ನನ್ನ ಮೆಚ್ಚುಗೆ, ನಂಬಿಕೆ, ವಿಶ್ವಾಸ, ಅಭಿಮಾನ ಬೆಳೆಯುತ್ತಾ ನಡೆದು ಭಕ್ತಿಯಾಗಿ ನಿಂತಿದೆ.

ಎಲ್ಲಿ ಹುಟ್ಟಿದರೇನು, ಯಾವ ಮತ ಜಾತಿ ಆದರೇನು, ದೇಶದ ಯಾವ ಮೂಲೆಯಿಂದ ಬಂದರೇನು? ವಿಶ್ವಪ್ರೇಮವಿದ್ದರೆ, ಸೇವಾಕಾಂಕ್ಷೆ ಇದ್ದರೆ, ಎಲ್ಲದೂ ನನ್ನದು ಎಲ್ಲರೂ ನನ್ನವರು ಎಂಬ ಮನೋವೈಶಾಲ್ಯವಿದ್ದರೆ, ನಿಷ್ಕಾಮ ಸೇವಾಕಾಂಕ್ಷೆ ಇದ್ದರೆ, ಕರ್ತವ್ಯನಿಷ್ಠೆ ಇದ್ದರೆ, ಈಸಿ ಜೈಸಬೇಕೆಂಬ ದೃಢ ಸಂಕಲ್ಪವಿದ್ದರೆ, ಆಸೆ ಅಂಜಿಕೆಗಳ ಸೋಂಕು ಎಳ್ಳಷ್ಟೂ ಇಲ್ಲದಿದ್ದರೆ, ಸಾಹಸಿಯ ಕೆಚ್ಚು ಇದ್ದರೆ, ಸಾಧಕನ ಅಚಲವಾದ ನಂಬಿಕೆ ಇದ್ದರೆ, ತನ್ನನ್ನು ತಾನು ತಿಳಿದಿದ್ದರೆ ಇವು ಒಂದೊಂದೂ ಒಬ್ಬ ವ್ಯಕ್ತಿಯನ್ನು ಮೇಲ್ಮಟ್ಟಕ್ಕೆ ಕೊಂಡೊಯ್ಯುತ್ತವೆ. ಇವೆಲ್ಲವೂ ಒಬ್ಬನಲ್ಲಿದ್ದರೆ ಪುರುಷಶ್ರೇಷ್ಠನಾಗುತ್ತಾನೆ. ಮಲ್ಲಾಡಿಹಳ್ಳಿಯ ಶ್ರೀ ರಾಘವೇಂದ್ರಸ್ವಾಮಿಗಳು ನಾನು ನೋಡಿದ ಕೈಬೆರಳಿನಲ್ಲಿ ಎಣಿಸುವಷ್ಟು ಅಂತಹ ಮಹನೀಯರಲ್ಲಿ ಒಬ್ಬರು.

ಆಶ್ರಮ ಕೇವಲ ಚಿಕ್ಕದಾಗಿ ಪ್ರಾರಂಭವಾದದ್ದು ಈ ದಿನ ಬೃಹದಾಕಾರದ ಸಂಸ್ಥೆಯಾಗಿದೆ. ಕೇವಲ

ಪ್ರಾಥಮಿಕ ತರಗತಿಯಿಂದ ಹಿಡಿದು ಕಾಲೇಜುವರೆವಿಗೂ ಪಾಠಪ್ರವಚನಗಳು ನಡೆಯುತ್ತಿವೆ. ಇನ್ನೂ ಬೆಳೆಯುತ್ತಲೇ ನಡೆದಿದೆ. ಹಾಗಾಗಲೆಂದೇ ಶ್ರೀ ಸ್ವಾಮಿಗಳನ್ನು ಬಲ್ಲ ಎಲ್ಲರ ಇಚ್ಛೆ. ಅಲ್ಲಿಂದ ಬರುವ ವಿದ್ಯಾರ್ಥಿಗಳು ಬರೀ ಓದುಬರಹಗಳಲ್ಲಿ ಮಾತ್ರ ತೇರ್ಗಡೆ ಹೊಂದಿದವರಲ್ಲ; ಆರೋಗ್ಯವಂತರು, ಧೃಢಕಾಯರು ನಿರಾಡಂಬರದ ಜೀವನದಲ್ಲಿ ನಂಬಿಕೆ ಉಳ್ಳವರು, ಜಾತ್ಯಾತೀತ ಮನೋಭಾವನೆ ಉಳ್ಳವರು. ರಾಷ್ಟ್ರದ ಐಕ್ಯತೆಯಲ್ಲಿ ಭಕ್ತಿಯುಳ್ಳವರು, ಎಲ್ಲಾ ದೃಷ್ಟಿಯಿಂದಲೂ ಯೋಗ್ಯ ನಾಗರಿಕನ ಹೊಣೆಗಳನ್ನರಿತವರಾಗಿ ಹೊರಗೆ ಬರುತ್ತಾರೆಂಬುದನ್ನೂ ನಾನು ಬಲ್ಲೆ. ಇದಕ್ಕೆಲ್ಲಾ ಸ್ಫೂರ್ತಿ ಶ್ರೀ ರಾಘವೇಂದ್ರಸ್ವಾಮಿಗಳು.

ಎಂಭತ್ತೈದು ವರ್ಷಗಳ ಹತ್ತಿರದ ವಯಸ್ಸಾದರೂ ಅವರ ಮೈಕಟ್ಟು, ಮಾಂಸಖಂಡಗಳ ಹೊಂದಾಣಿಕೆ ನೋಡಿದವರನ್ನು ಆಶ್ಚರ್ಯಪಡಿಸುತ್ತವೆ. ಅವರ ಯೋಗಾಸನಗಳು ನೋಡಿದಂತೆಲ್ಲಾ ಮತ್ತೆ ನೋಡಬೇಕೆನಿಸುತ್ತದೆ. ಎಲ್ಲರೂ–ನಮ್ಮನ್ನೂ ಸೇರಿಸಿಕೊಂಡು–ಹಾಗಿರಬಾರದೇ ಎನಿಸುತ್ತದೆ. ಅವರ ಶಿಷ್ಯರನೇಕರೂ ಅವರಂತೆಯೇ.

ಶ್ರೀ ಸ್ವಾಮಿಗಳು ಮಲ್ಲಾಡಿಹಳ್ಳಿಯನ್ನು ಯಾವ ಕಾರಣಕ್ಕಾಗಿ ತಮ್ಮ ಈ ಮಹಾ ಪ್ರಯೋಗಕ್ಕೆ ಆರಿಸಿಕೊಂಡರೊ ತಿಳಿಯದು. ಅದು ಹೆಸರು ಕೇಳದೆ ಇದ್ದ ಒಂದು ಸಣ್ಣ ಹಳ್ಳಿ, ಈಗ ಸಾಕಷ್ಟು ಹೆಸರುವಾಸಿಯಾಗಿ ನಮ್ಮ ದೇಶದ ಮಕ್ಕಳ ಕಲ್ಯಾಣಕ್ಕಾಗಿ ದುಡಿಯುವ ಸಂಸ್ಥೆಯ ಕೇಂದ್ರಸ್ಥಾನವಾಗಿದೆ. ಈ ಸಂಸ್ಥೆ ಇಷ್ಟು ಪ್ರಮಾಣದಲ್ಲಿ ಬೆಳೆಯಬೇಕಾದರೆ ಸ್ವಾಮಿಗಳ ತಪಸ್ಸಿನ ಪ್ರಭಾವ ಒಂದೇ ಕಾರಣ. ಆದರೆ ಈ ಸ್ಥಿತಿಗೆ ಈ ಸಂಸ್ಥೆ ಬರಬೇಕಾದರೆ ಸಾಕಷ್ಟು ಪ್ರಯತ್ನಪಟ್ಟಿದ್ದಾರೆ. ಎಡರುತೊಡರುಗಳೂ ಸಾಕಷ್ಟು ಬಂದವು. ನನಗೆ ಜ್ಞಾಪಕವಿದ್ದಂತೆ ಕೆಲವು ಕಿಡಿಗೇಡಿಗಳಿಂದ ಅವರನ್ನು ಹೊಡೆದು ಹಾಕುವ ಪ್ರಯತ್ನಗಳೂ ಒಂದೆರಡು ಬಾರಿ ನಡೆದವು. ಸ್ವಾಮಿಗಳು 4–5 ಜನರೊಂದಿಗೆ ಒಬ್ಬರೇ ಕಾದಾಡಿ ತುಂಟರನ್ನು ಎದುರಿಸಿ ಓಡಿಸಿದರು. ಆ ಶಕ್ತಿ ಅವರಲ್ಲಿದೆ.

ಈ ಸಂಸ್ಥೆಗೆ ಕೇವಲ ಜನಸಾಮಾನ್ಯರೇ, ಸ್ವಾಮಿಗಳವರ ಭಕ್ತರೇ ಸಹಾಯಮಾಡಿರುತ್ತಾರೆ. ಸರ್ಕಾರದ ಸಹಾಯ ಎಷ್ಟಿದೆಯೋ ನನಗೆ ತಿಳಿಯದು. ಸರ್ಕಾರದಿಂದ ಇನ್ನೂ ಹೆಚ್ಚಿನ ಸಹಾಯ ದೊರೆಯಬೇಕು. ದೊರೆಯಲಿ.

ಈ ಸ್ವಾಮಿಗಳಿಗೆ ಯಾವ ಮಠವೂ ಇಲ್ಲ, ಮಾನ್ಯವೂ ಇಲ್ಲ, ಸಿಂಹಾಸನವೂ ಇಲ್ಲ, ಪದಾಧಿಕಾರವೂ ಇಲ್ಲ, ಆದರ ವಿಶ್ವಬಂಧುತ್ವವಿದೆ, ಜೋಳಿಗೆ ಇದೆ, ದೊಡ್ಡ ಜೋಳಿಗೆ, ಅದು ತುಂಬುವಷ್ಟು ಇವರು ಭಿಕ್ಷಕ್ಕೆ ಹೊರಟರೆ ತುಂಬುತ್ತದೆ. ಶ್ರೀ ಸ್ವಾಮಿಗಳು ತಿರುಕರೂ ಹೌದು ಸಮಾಜದ ಅನೇಕ ಕುಂದುಕೊರತೆಗಳನ್ನೂ ಆಗುಹೋಗುಗಳನ್ನೂ ಆಸೆನಿರಾಸೆಗಳನ್ನೂ ಹಿಂಸೆ ಅಹಿಂಸೆಗಳನ್ನೂ ಶ್ರೀಮಂತಿಕೆ ದಾರಿದ್ರ್ಯಗಳನ್ನೂ ಧಾರಾಳತನ ಕೃಪಣತೆಗಳನ್ನೂ ಶುಚಿತ್ವ ಹೊಲಸುಗಳನ್ನೂ ಧೈರ್ಯ ಹೇಡಿತನಗಳನ್ನೂ ತಮ್ಮ ಭಿಕ್ಷಾಟಣೆಯಲ್ಲಿ ಅನುಭವಿಸಿದ್ದಾರೆ. ಮನಸ್ಸು ಹಿಗ್ಗಿದೆ, ಕೊರಗಿದೆ, ಮರುಗಿದೆ. ಇದರ ಪರಿಣಾಮ ಅನೇಕ ಕತೆ ವಗ್ಗೈರೆಗಳ ರೂಪದಲ್ಲಿ ಶ್ರೇಷ್ಠ ತರದ ಸಾಹಿತ್ಯವಾಗಿ ಹರಡಿದೆ, ಈ "ತಿರುಕ"ನಿಂದ.

ನಿಷ್ಕಾಮಕರ್ಮಿಗಳೂ ಜಿತೇಂದ್ರಿಯರೂ ಸಮಾಜೋದ್ಧಾರಕರೂ ಆದ ಮಲ್ಲಾಡಿಹಳ್ಳಿ ಶ್ರೀ ರಾಘವೇಂದ್ರ ಸ್ವಾಮಿಗಳು ಬದುಕಲಿ. ಅವರ ಶುದ್ಧ, ನಿಷ್ಕಳಂಕ ಜೀವನದ ನಂದನವನದಲ್ಲಿ ಸಮಾಜದವರೆಲ್ಲರೂ ಮೇಲಾಗಿ ಮುಂದೆ ರಾಷ್ಟ್ರ ನಾಯಕರಾಗುವ ತರುಣರು ವಿಹರಿಸಲಿ. ಅದರಲ್ಲಿಯ ಫಲಪುಷ್ಪಗಳನ್ನು ಆಸ್ವಾದಿಸೋಣ. ಅವರು ಬಹುಕಾಲ ಬಾಳಲಿ.

ಎಚ್. ವಿ. ಶ್ರೀರಂಗರಾಜ್

ಮಲ್ಲಾಡಿಹಳ್ಳಿಯಲ್ಲಿ ಕೆಲವು ಅನುಭವಗಳು

ಒಬ್ಬ ವ್ಯಕ್ತಿ ಒಂದು ಸಂಸ್ಥೆಯನ್ನು ಸ್ಥಾಪಿಸಿ, ಆಮೇಲೆ ಅವರ ಉಸಿರು ಕಣ್ಣಾಗಿ ನಿಂತು, ಅನಂತರ ಆ ಸಂಸ್ಥೆಯನ್ನು ಮೀರಿ ಬೆಳೆದು, ತಾನೇ ಒಂದು ಸಂಸ್ಥೆಯಾದಂಥ ಪುಣ್ಯಪುರುಷರ ಸಂಖ್ಯೆ ಈ ನಮ್ಮ ನಾಡಿನಲ್ಲಿ, ಈ ಶತಮಾನದಲ್ಲಿ ತುಂಬ ಕಡಮೆ. ಇಂಥ ಕೆಲವೇ ವ್ಯಕ್ತಿಗಳಲ್ಲಿ ಮಲ್ಲಾಡಿ ಹಳ್ಳಿಯ ಅನಾಥಾಶ್ರಮದ ಶ್ರೀ ರಾಘವೇಂದ್ರಸ್ವಾಮಿಗಳು ಒಬ್ಬರು. ಅನಾಥಾಶ್ರಮ ಅವರು ಸ್ಥಾಪಿಸಿದ ಸಂಸ್ಥೆ. ಬಹುಮುಖವಾಗಿ ಬೆಳೆದಿರುವ ಅದರ ಚಟುವಟಿಕೆಗಳಿಗೂ ಅವರೇ ಕಾರಣ. ಇಂದು ಅದನ್ನು ಪೋಷಿಸಿ ನಡೆಸಿಕೊಂಡು ಬರುತ್ತಿರುವವರು ಅವರು ಆದರೂ ಶ್ರೀ ರಾಘವೇಂದ್ರ ಸ್ವಾಮಿಗಳು ಆ ಸಂಸ್ಥೆಗೂ ದೊಡ್ಡದಾಗಿ ಬೆಳೆದಿದ್ದಾರೆ. ಅವರಿಂದ ಅನೇಕ ಜನ ಪ್ರಭಾವಿತರಾಗಿದ್ದಾರೆ. ತಮ್ಮ ಜೀವನದ ಅಂಕು ಡೊಂಕುಗಳನ್ನು ಸರಿಮಾಡಿಕೊಂಡಿದ್ದಾರೆ. ಅಥವಾ ಸರಿಮಾಡಿಕೊಳ್ಳಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದಾರೆ. ಒಬ್ಬಿಬ್ಬರಂತೂ ಅವರ ಮೇಲ್ಪಂಕ್ತಿಗಳಲ್ಲಿಯೇ ಸಂಸ್ಥೆಗಳನ್ನು ಸ್ಥಾಪಿಸಿ ಜನರ ದುಃಖ ಸಂಕಟಗಳನ್ನು ಕಡಮೆ ಮಾಡಲು ಪ್ರಯತ್ನಿಸುತ್ತಿದ್ದಾರೆ. ಈ ಲೇಖನದಲ್ಲಿ ನಾನು ಕಂಡ ಮಲ್ಲಾಡಿ ಹಳ್ಳಿ ಸಂಸ್ಥೆಯ ವಿಚಾರವನ್ನು ಬರೆಯುತ್ತಿದ್ದೇನೆ. ಇದು ಸಂಸ್ಥೆಯ ಪೂರ್ಣ ಪರಿಚಯ ಅಲ್ಲ. ಪೂಜ್ಯ ಶ್ರೀ ರಾಘವೇಂದ್ರ ಸ್ವಾಮಿಗಳಂತೂ ಅದಕ್ಕೂ ದೊಡ್ಡವರಾದುದರಿಂದ ಅವರ ವ್ಯಕ್ತಿತ್ವ ಈ ಲೇಖನವನ್ನು ಓದಿದಾಗ ಮೂಡುವುದಕ್ಕಿಂತ ದೊಡ್ಡದು. ಆದುದರಿಂದ ಇಲ್ಲಿ ಕಂಡು ಬಂದ ವಿಷಯಗಳಿಂದಲೇ ಮಲ್ಲಾಡಿ ಹಳ್ಳಿಯ ಆಶ್ರಮದ ಘನತೆಯನ್ನಾಗಲೀ ಶ್ರೀ ರಾಘವೇಂದ್ರ ಸ್ವಾಮಿಗಳನ್ನಾಗಲೀ ಅಳೆಯಬಾರದೆಂದು ಬಿನ್ನವಿಸಿಕೊಳ್ಳುತ್ತೇನೆ.

ಮಲ್ಲಾಡಿಹಳ್ಳಿ ಸಂಸ್ಥೆಯ ವಿಷಯವನ್ನು ನಾನು ಮೊಟ್ಟಮೊದಲು ಕೇಳಿದುದು 1948–49ರ ಸುಮಾರಿನಲ್ಲಿ. ಆಗ ನಾನು ಹಾಸನದ ಹೈಸ್ಕೂಲಿನ ಹೆಡ್ಮಾಸ್ಟರ್ ಆಗಿದ್ದೆ. ಆ ಸ್ಕೂಲಿನಲ್ಲಿ ನಮ್ಮ ಸ್ನೇಹಿತರೊಬ್ಬರ ಸೋದರಳಿಯ ಓದುತ್ತಿದ್ದ. ಸ್ಕೂಲು ತುಂಬಾ ದೊಡ್ಡದಾದುದರಿಂದ ಆ ವಿದ್ಯಾರ್ಥಿಯ ಪರಿಚಯ ನನಗೇನೇನೂ ಇರಲಿಲ್ಲ. ಆ ನನ್ನ ಗೆಳೆಯರು ಆ ಹುಡುಗನ ವಿಷಯದಲ್ಲಿ ಹೆಚ್ಚುಗಮನವಿಡಬೇಕೆಂದು ಕೇಳಿಕೊಂಡಮೇಲೆ ಅವನ ಬಗೆಗೆ ವಿವರಗಳನ್ನು ಪಡೆದೆ. ಅವನು ಶಾಲೆಗೆ ಬರುತ್ತಿರಲಿಲ್ಲ. ಬಂದರೂ ಸರಿಯಾಗಿ ಪಾಠ ಕೇಳುತ್ತಿರಲಿಲ್ಲ. ಬೇರೆ ಹುಡುಗರಿಗೆ ಪೀಡೆಕೊಟ್ಟು ತನ್ನಂತೆ ನಡೆಯುವವರ ಗುಂಪನ್ನು ಕಟ್ಟಿಕೊಂಡು ಶಿಕ್ಷಕರಿಗೆ ತಲೆನೋವಾಗಿದ್ದ. ನಮ್ಮ ಅಷ್ಟಿಷ್ಟು ಪ್ರಯತ್ನದಿಂದ ಅವನು ಸರಿಹೋಗಲಿಲ್ಲ.

ಮನೆಯಲ್ಲಿಯೂ ಅವನು ತಂಟೆಕೋರನೆ. ತಾಯಿ ಮತ್ತು ಸೋದರ ಮಾವ—ಅವರೇ ನನ್ನ ಸ್ನೇಹಿತರು—ಇವರ ಮಾತಂತೂ ಅವನಿಗೆ ಲೆಕ್ಕಕ್ಕೂ ಇಲ್ಲ. ಆಗ ಅವನು ಓದುತ್ತಿದ್ದುದು ಹೈಸ್ಕೂಲ್ ಮೊದಲ ತರಗತಿಯಲ್ಲಿ. ಅಂದರೆ ಈಗಿನ VIIIth ಸ್ಟಾಂಡರ್ಡಿನಲ್ಲಿ. ಇಂಥ ಹುಡುಗರು ಕೆಲವರು ದೊಡ್ಡ ಶಾಲೆಗಳಲ್ಲಿ ಇದ್ದೇ ಇರು

ತ್ತಾರೆ. ಇವನೂ ಅಂಥ ಒಬ್ಬ ಹದಕ್ಕೆ ಬಾರದ incorrigible ವಿದ್ಯಾರ್ಥಿ ಎಂದುಕೊಂಡು ಅವನನ್ನು ಕಡೆಗಣಿಸಿದೆ. ನಾವು ನಿರೀಕ್ಷಿಸಿದಂತಹ ವಿದ್ಯಾರ್ಥಿಯು ಮೇಲೂ ಆದ.

ಬೇಸಿಗೆ ರಜಾ ಮುಗಿದಮೇಲೆ ನನ್ನ ಸ್ನೇಹಿತರು ನನ್ನನ್ನು ಮತ್ತೆ ಭೇಟಿ ಮಾಡಿದರು. ತಮ್ಮ ಹುಡುಗನ T.C. ಯನ್ನು ಕೇಳಿದರು. ತಾವು ಆ ಹುಡುಗನನ್ನು ಮಲ್ಲಾಡಿಹಳ್ಳಿಯ ಶಾಲೆಗೆ ಸೇರಿಸುವುದಾಗಿಯೂ ಅಲ್ಲಿ ವಿದ್ಯಾರ್ಥಿಯು ಸರಿಹೋಗುತ್ತಾನೆಂದೂ ತಿಳಿಸಿದರು. ಅವರು ಹಾಗೆ ಭಾವಿಸಲು ಕಾರಣವನ್ನು ಕೇಳಿದೆ.ಆ ಶಾಲೆಯಲ್ಲಿ ವಸತಿಯ ವ್ಯವಸ್ಥೆ ಇರುವುದರಿಂದ ವಿದ್ಯಾರ್ಥಿ ಯಾವಾಗಲೂ ಶಾಲೆಯ ಆವರಣದೊಳಗೇ ಇರಬೇಕಾಗಿರುವುದರಿಂದಲೂ ಶಾಲೆಯ ಶಿಸ್ತು ಬಿಗಿಯಾಗಿರುವುದರಿಂದಲೂ ಹುಡುಗ ಸರಿಹೋಗುತ್ತಾನೆಂಬ ಭರವಸೆ ತಮಗಿದೆ ಎಂದು ನನ್ನ ಗೆಳೆಯರು ಹೇಳಿದರು. ಹುಡುಗನಿಗೆ ಒಳ್ಳೆಯದಾಗಲೆಂದು ಹೇಳಿ T.C. ಯನ್ನು ಕೊಟ್ಟು ಕಳುಹಿಸಿದೆ.

ಸ್ವಲ್ಪ ಕಾಲದಮೇಲೆ ನನ್ನ ಸ್ನೇಹಿತರು ನನಗೆ ಭೆಟ್ಟಿಯಾದರು. ನಾನೇ ಅವರ ಹುಡುಗನ ವಿಚಾರವನ್ನು ಕೇಳಿದೆ. ಅವನು ಸಾಕಷ್ಟು ಸುಧಾರಿಸಿರುವನೆಂದೂ, ಮಲ್ಲಾಡಿಹಳ್ಳಿಯ ಸ್ಕೂಲಿಗೆ ಅವನನ್ನು ಸೇರಿಸದಿದ್ದಿದ್ದರೆ ಅವನು ಈಗಾಗಲೇ ಜೈಲಿನಲ್ಲಿರುತ್ತಿದ್ದನೆಂದೂ, ಆದುದರಿಂದ ಮಲ್ಲಾಡಿಹಳ್ಳಿಯ ಗುರುಗಳಿಗೆ ಕೃತಜ್ಞರಾಗಿರುವುದಾಗಿಯೂ ತಿಳಿಸಿದರು. ಆಮೇಲೆ ಹುಡುಗನ ವಿಚಾರ ತಿಳಿಯಲಾಗಲಿಲ್ಲ. ಪ್ರಾಯಶಃ ಅವನು ಸರಿಹೋಗಿ ಯೋಗ್ಯ ಮನುಷ್ಯನಾಗಿ ಬಾಳುತ್ತಿದ್ದಾನೆಂದು ನಂಬಿದ್ದೇನೆ. ಅವನಂತೆ ಇನ್ನೂ ಅನೇಕರು ಮಲ್ಲಾಡಿಹಳ್ಳಿಯಲ್ಲಿ ತಮ್ಮ ಜೀವನವನ್ನು ಸರಿಪಡಿಸಿಕೊಂಡಿರುವರೆಂದು ತಿಳಿದಿದ್ದೇನೆ.

ಮೇಲೆ ಹೇಳಿದಂಥ ಸಮಸ್ಯಾತ್ಮಕ ಹುಡುಗನನ್ನು — problem child — ದಾರಿಗೆ ತರಲು ಮಲ್ಲಾಡಿಹಳ್ಳಿಯಲ್ಲಿ ಯಾವ ಮಾರ್ಗವನ್ನು ಅನುಸರಿಸುತ್ತಾರೆ ಎನ್ನುವುದನ್ನು ತಿಳಿಯುವ ತವಕ, ಅವರ ಹೆಸರನ್ನು ಕೇಳಿದಾಗಲೇ ಉಂಟಾಗಿತ್ತು. ಕೇವಲ ಶಿಸ್ತು ಮತ್ತು ವಸತಿ ಸೌಕರ್ಯಗಳಿಂದಲೇ ಇಂಥ ವಿದ್ಯಾರ್ಥಿಗಳನ್ನು ತಿದ್ದುವುದು ಸಾಧ್ಯವಿಲ್ಲವೆಂದು ನನಗಾಗಲೇ ಮನವರಿಕೆಯಾಗಿತ್ತು. ಆದರೂ ಆ ಸಂಸ್ಥೆಯನ್ನು ನೋಡಲು ಅವಕಾಶವಾದುದು ಸುಮಾರು 15–16 ವರ್ಷಗಳಾದಮೇಲೆ. ಆಗಾಗ ನನ್ನ ಸ್ನೇಹಿತ ಅಧಿಕಾರಿಗಳು ಸಂಸ್ಥೆಯ ಬಗೆಗೆ, ಸಂಸ್ಥಾಪಕರ ಬಗೆಗೆ ಒಳ್ಳೆಯ ಮಾತುಗಳನ್ನು ಹೇಳುತ್ತಿದ್ದರು.

ನಾನು ಸಂಸ್ಥೆಯನ್ನು ನೋಡಿದಾಗ ಬೇರೆ ಸಂಸ್ಥೆಗಳಲ್ಲಿ ಅಪರೂಪವಾಗಿ ಕಾಣಬಹುದಾದ ವೈಶಿಷ್ಟ್ಯತೆಯನ್ನು ಕಂಡೆ. ಆ ವೈಶಿಷ್ಟ್ಯತೆಯೇ ಮೇಲೆ ಹೇಳಿದಂಥ ಹುಡುಗ ಸರಿಹೋಗಲು ಕಾರಣ.

ನಮ್ಮ ರಾಜ್ಯದಲ್ಲಿ ಸುಮಾರು 2500 ಹೈಸ್ಕೂಲುಗಳಿವೆ. ಬಹುಮಟ್ಟಿಗೆ ಅವುಗಳ ಉದ್ದೇಶ ವಿದ್ಯಾರ್ಥಿಗಳಲ್ಲಿ S.S.L.C. ಪರೀಕ್ಷೆಯಲ್ಲಿ ಪಾಸಾಗುವಂಥ ಸಾಮರ್ಥ್ಯವನ್ನು ಬೆಳೆಸುವುದು. ಈ ಒಂದು ಸಣ್ಣ ಉದ್ದೇಶವನ್ನು ಸಾಧಿಸುವುದೂ ಅನೇಕ ಸಂಸ್ಥೆಗಳಿಗೆ ಕಷ್ಟವಾಗಿದೆ ; ಮತ್ತು ಕೆಲವು ಶಾಲೆಗಳಿಗೆ ವಿದ್ಯಾರ್ಥಿ ನಿಲಯದ ಸೌಕರ್ಯಗಳಿವೆ. ಕೆಲವು ವಿದ್ಯಾರ್ಥಿಗಳು ಅಲ್ಲಿಯೇ ಊಟ ಉಪಚಾರಗಳನ್ನು ಮಾಡಿಕೊಂಡು ತಮ್ಮ ವ್ಯಾಸಂಗವನ್ನು ಮುಗಿಸುತ್ತಾರೆ. ಈ ಎಲ್ಲ ವಿದ್ಯಾರ್ಥಿಗಳನ್ನು ಶಾಲಾವಾತಾವರಣದಲ್ಲೇ ಉಳಿಸಿಕೊಂಡು ಅವರ ಸರ್ವಾಂಗೀಣ ಶಿಕ್ಷಣವನ್ನು ಗುರಿಯಾಗಿಟ್ಟುಕೊಂಡಿರುವ 'ರೆಸಿಡೆನ್ಷಿಯಲ್ ಸ್ಕೂಲು'ಗಳೂ ನಾಲ್ಕಾರಿವೆ. ಇಂಥ ಶಾಲೆಗಳಲ್ಲಿ ವಿದ್ಯಾರ್ಥಿಯ ವ್ಯಕ್ತಿತ್ವವನ್ನು ಬೆಳೆಸುವ ನೈತಿಕ ಮತ್ತು ದೈಹಿಕ ಶಿಕ್ಷಣಕ್ಕೆ ವಿಶೇಷವಾದ ವ್ಯವಸ್ಥೆ ಇರುತ್ತದೆ. ಆದರೆ ಇಂಥ ಶಾಲೆಗಳಿಗೆ ಪ್ರವೇಶ ಕಷ್ಟ. ಸಾಕಷ್ಟು ದುಡ್ಡು ಇರಬೇಕು. ಪರೀಕ್ಷೆಗಳಲ್ಲಿಯೂ ಚೆನ್ನಾಗಿ ಪಾಸು ಮಾಡಿರಬೇಕು. ಕೆಲವು ಪೋಷಕರು ಮೇಲೆ ಹೇಳಿದಂಥ ಸಮಸ್ಯಾತ್ಮಕ ವಿದ್ಯಾರ್ಥಿಗಳನ್ನು ಆ ಶಾಲೆಗಳಿಗೆ ಸೇರಿಸುತ್ತಾರೆ. ಆದರೆ ಫಲ ಸಂದೇಹಾಸ್ಪದ.

ಮಲ್ಲಾಡಿ ಹಳ್ಳಿಯ ಶಾಲೆ ಒಂದು ರೀತಿಯಲ್ಲಿ ಮೇಲೆ ಹೇಳಿದ ಎಲ್ಲ ವರ್ಗಗಳಿಗೂ ಸೇರಿದೆ. ಅಲ್ಲಿ ಮನೆಯಿಂದ ಹೋಗಿ ಬರುವ ವಿದ್ಯಾರ್ಥಿಗಳಿದ್ದಾರೆ. ಅಲ್ಲಿಯ ವಿದ್ಯಾರ್ಥಿ ನಿಲಯದಲ್ಲಿ ನಿಂತು ಓದುವ ವಿದ್ಯಾರ್ಥಿ

ಗಳೂ ಇದ್ದಾರೆ. ರೆಸಿಡೆನ್ಷಿಯಲ್ ಸ್ಕೂಲಿನಲ್ಲಿನ ಗುರಿಯಂತೆ ಶಾಲೆಯ ಗುರಿಯೂ 'ಸರ್ವಾಂಗೀಣ ಶಿಕ್ಷಣವೇ' ಆಗಿದೆ. ಒಂದು ರೀತಿಯಲ್ಲಿ ಇದು ಬಡವರ ರೆಸಿಡೆನ್ಶಿಯಲ್‌ಸ್ಕೂಲ್. ಸರ್ವಾಂಗೀಣ ಶಿಕ್ಷಣ ಎಂದರೆ ಏನು ? ಸ್ಥೂಲವಾಗಿ ಹೀಗೆ ಹೇಳಬಹುದು. ಮಗುವಿನ ಮನಸ್ಸು ಶರೀರ ಮತ್ತು ಹೃದಯಗಳೆಲ್ಲವನ್ನೂ ಆರೋಗ್ಯಕರ ರೀತಿಯಲ್ಲಿ ಬೆಳೆಸುವ ರೀತಿಯೇ ಸರ್ವಾಂಗೀಣ ಶಿಕ್ಷಣ. ಹೈಸ್ಕೂಲಿನಲ್ಲಿ ಓದುತ್ತಿರುವ 12–16 ರ ವಿದ್ಯಾರ್ಥಿಗಳಿಗೆ ಇಂಥ ಶಿಕ್ಷಣ ಕೊಡುವುದು ತುಂಬ ಕಷ್ಟ. ಶಿಕ್ಷಣ ಸರಿಯಾಗಿದ್ದರೆ ವಿದ್ಯಾರ್ಥಿಯ ಜೀವನದ ಮೇಲೆ ಶಾಶ್ವತವಾದ ಪರಿಣಾಮವಾಗುತ್ತದೆ. ಆದರೆ ಅಂಥ ಶಿಕ್ಷಣ ಒಳ್ಳೆಯ ಪ್ರಯೋಗ ಶಾಲೆಗಳು, ಉತ್ತಮವಾದ ಪುಸ್ತಕ ಭಂಡಾರಗಳು, ನುರಿತ ಮತ್ತು ಹೆಚ್ಚು ವಿದ್ಯಾರ್ಹತೆಯನ್ನು ಪಡೆದ ಶಿಕ್ಷಕರು—ಇಷ್ಟರಿಂದಲೇ ಸಾಧ್ಯವಿಲ್ಲ. ಒಬ್ಬ ವಿದ್ಯಾರ್ಥಿ ತನ್ನ ದೇಹಾರೋಗ್ಯವನ್ನು ಬೆಳೆಸಿಕೊಂಡು, ಸಮಾಜಕ್ಕೆ ಸಹಾಯಕವಾಗುವಂತಹ ಪ್ರಜೆಯಾಗಬೇಕಾದರೆ ಅವನಿಗೆ ತಕ್ಕ ಶಾರೀರಕ ಶಿಕ್ಷಣವೂ ಬೇಕು. ಅವನ ಮನಸ್ಸಿಗೆ ಹಿಡಿಯುವಂಥ ನೈತಿಕ ಶಿಕ್ಷಣವೂ ಬೇಕು. ಈ ಕೆಲಸವನ್ನು ಪ್ರಯೋಗಶಾಲೆಗಳಾಗಲೀ, ಪುಸ್ತಕಭಂಡಾರಗಳಾಗಲೀ ಮಾಡಲಾರವು. ಶಿಕ್ಷಕರ ಅನುಭವ ವಿದ್ಯಾರ್ಹತೆಗಳಷ್ಟೇ ಸಾಲದು. ಅಂಥ ಶಿಕ್ಷಣಕ್ಕೆ ಬೇಕಾದುದು ಗುರು–ಶಿಷ್ಯ ಸಂಬಂಧ, ಗುರುಗಳು ವಿದ್ಯಾರ್ಥಿಗಳ ಬಗೆಗೆ ತೋರುವ ವಾತ್ಸಲ್ಯ. ಇತ್ತೀಚೆಗೆ ಅಪರೂಪವಾಗುತ್ತಿರುವುದು ಈ ಶಿಷ್ಯ ವಾತ್ಸಲ್ಯ ; ನಾನು ಮಲ್ಲಾಡಿ ಹಳ್ಳಿಯಲ್ಲಿ ಕಂಡದ್ದು ಈ ಅಪರೂಪ ವಸ್ತುವನ್ನು.

ಶ್ರೀ ರಾಘವೇಂದ್ರ ಸ್ವಾಮಿಗಳು ಆದರ್ಶ ಶಾರೀರಿಕಶಿಕ್ಷಣ ತಜ್ಞರು. ಶರೀರದ ಮೇಲೆ ಅವರಿಗಿರುವ ಹತೋಟಿ ಅದ್ಭುತ. ತಮ್ಮ ನಿರಂತರವಾದ ಯೋಗಾಭ್ಯಾಸದಿಂದ ವಜ್ರಶರೀರವನ್ನು ಸಂಪಾದಿಸಿದ್ದಾರೆ. ಜೊತೆಗೆ ಶುದ್ಧವೂ, ಸರಳವೂ, ಅನುಕಂಪಪೂರಿತವೂ ಆದ ಹೃದಯವನ್ನು ಹೊಂದಿದ್ದಾರೆ. ಹೀಗ ಶರೀರ ಮತ್ತು ಹೃದಯಗಳೆರಡೂ ವಿಕಾಸವನ್ನು ಪಡೆದಿವೆ. ಒಳ್ಳೆಯ ನೈತಿಕಶಿಕ್ಷಣ ಏನು ಎಂದು ಕೇಳಿದರೆ ಅದಕ್ಕೊಂದು ಮಾದರಿಯಾಗಿದ್ದಾರೆ, ಅವರು. ಮಲ್ಲಾಡಿಹಳ್ಳಿಯ ಬಾಲಕ–ಬಾಲಕಿಯರಿಗೆ ಇವರ ನೇತೃತ್ವದಲ್ಲಿಯೇ ಶಿಕ್ಷಣ ದೊರಕುತ್ತದೆ. ಸಂಸ್ಥೆಯ ಯಶಸ್ಸಿಗೆ ಇದೇ ಕಾರಣ. ಜೊತೆಗೆ ಸ್ವಾಮಿಗಳು ವಿದ್ಯಾರ್ಥಿಗಳ ಚಟುವಟಿಕೆಗಳಲ್ಲಿ ಭಾಗವಹಿಸುತ್ತಾರೆ ಅವರ ಜೊತೆಗೆ ವ್ಯಾಯಾಮ ಮಾಡುತ್ತಾರೆ, ಆಟ ಆಡುತ್ತಾರೆ. ಅವರ ಈ ವಾತ್ಸಲ್ಯ ವಿದ್ಯಾರ್ಥಿಗಳಿಗೆ ದೊರಕುವ ಶಾರೀರಕ, ನೈತಿಕ ಶಿಕ್ಷಣವನ್ನು ಸತ್ವಪೂರ್ಣವಾಗಿ ಮಾಡಿದೆ.

ಒಬ್ಬ ವಿದ್ಯಾರ್ಥಿಯ ಶೀಲ ಬೆಳೆಯಬೇಕಾದರೆ ಅವನಿಗೆ ಒಳ್ಳೆಯ ಉದಾಹರಣೆ ಬೇಕು. ಸಮರ್ಪಕವಾದ ನೈತಿಕ, ಶಾರೀರಕ ಶಿಕ್ಷಣ ಬೇಕು. ಒಳ್ಳೆಯ ಉದಾಹರಣೆಗಳು, ಶಿಕ್ಷಕರ ಉತ್ತಮ ಜೀವನದಿಂದ ದೊರಕಬೇಕು. ಶಾರೀರಕ—ನೈತಿಕ ಶಿಕ್ಷಣ ವಾತ್ಸಲ್ಯಪೂರಿತವಾಗಿರಬೇಕು. ಸ್ವಾಮೀಜಿಯವರ ಜೀವನ, ಅವರ ಯೋಗಾಭ್ಯಾಸ, ಮತ್ತು ಅವರ ವಾತ್ಸಲ್ಯಗಳಿಂದ ಮಲ್ಲಾಡಿಹಳ್ಳಿಯಲ್ಲಿ ಇಂದಿನ ವಿದ್ಯಾರ್ಥಿಗಳಿಗೆ ಅಗತ್ಯವಾಗಿ ಬೇಕಾದ ಶಿಕ್ಷಣ ದೊರಕುತ್ತದೆ. ಶಾರೀರಕ, ನೈತಿಕ ಶಿಕ್ಷಣಗಳು ಒಂದೇ ಮುಖದ ಎರಡು ನಾಣ್ಯಗಳು ಮತ್ತು ಅವು ಸಫಲವಾಗಬೇಕಾದರೆ ವಾತ್ಸಲ್ಯ ಅವಶ್ಯಕ ಎಂಬುದನ್ನು ಮಲ್ಲಾಡಿಹಳ್ಳಿಯ ಸಂಸ್ಥೆ ತೋರಿಸುತ್ತದೆ. ಶಿಕ್ಷಣದಿಂದ ವ್ಯಕ್ತಿಯನ್ನು ಯೋಗ್ಯವನ್ನಾಗಿ ಮಾಡಬಹುದು ಎಂಬುದನ್ನು ಆ ಸಂಸ್ಥೆ ಸ್ಪಷ್ಟಪಡಿಸುತ್ತದೆ.

ಜಿ. ವಿ. ನಾರಾಯಣಮೂರ್ತಿ

"ಮಲ್ಲಾಡಿಹಳ್ಳಿಯ ಮಹಾತಿರುಕ"

ದಿವಂಗತ ಮದನಮೋಹನ ಮಾಲವೀಯರನ್ನು ಕುರಿತು, 'ಇವರು ತಿರುಕರ ರಾಜ' ಎಂದು ಗಾಂಧೀಜಿ ಒಮ್ಮೆ ಕರೆದಿದ್ದರು. ಅವರು ತಾವೇ ಸ್ವತಃ 'ಇಚ್ಛಾಪ್ರೇರಿತ ದಾರಿದ್ರ್ಯ'ವನ್ನು ಸ್ವೀಕರಿಸಿದ್ದರು. ಇಬ್ಬರೂ ತಿರುಕರು, ಭಿಕ್ಷುಕರು ; ನಿಜಕ್ಕೂ 'ಭಿಕ್ಷು'ಗಳೇ. ಇವರು ಬೇಡಿದ ಬಿಕ್ಕೆ ಲೋಕಸಂಗ್ರಹಕ್ಕಾಗಿ. ತಮ್ಮ ತಿರುಕತನದಿಂದ ತಾವು ಆತ್ಮೋದ್ಧಾರ ಕಂಡುಕೊಂಡರು ; ಆತ್ಮೋದ್ಧಾರದಿಂದ ಜಗತ್ತಿನ ಉದ್ಧಾರ, ಜಗತ್ತಿನ ಹಿತ ಇವುಗಳನ್ನು ಸಾಧಿಸಬಯಸಿದರು. 'ಆತ್ಮನೋ ಮೋಕ್ಷಾರ್ಥಂ, ಜಗದ್ ಹಿತಾಯಚ' ಎಂಬ ಋಷಿವಾಣಿಯನ್ನು ತಮ್ಮ ಹಾಗೂ ರಾಷ್ಟ್ರದ ಬದುಕಿನಲ್ಲಿ ಸಾಕಾರಗೊಳಿಸಲು ತನುವನ್ನು ಚಂದನದಂತೆ ತೇದರು. ಮಲ್ಲಾಡಿಹಳ್ಳಿಯ ಶ್ರೀರಾಘವೇಂದ್ರ ಸ್ವಾಮೀಜಿಯರ ಜೀವನವೂ, ಸಾಧನ–ಸಿದ್ಧಿಗಳೂ ಇಂಥ ಅಮರ ಪಂಕ್ತಿಗೆ ಸೇರುವಂಥದು. ಇವರೊಬ್ಬ 'ಮಹಾ ತಿರುಕ'

ಈ ಮಹಾತಿರುಕ, ಮಹಾ ಕನಸುಗಾರ. ಕನಸುಗಾರರಲ್ಲಿ ನಾನಾ ಬಗೆ. ಕನಸು ಸಾಮಾನ್ಯವಾಗಿ ಸ್ವಪ್ನದಲ್ಲಿ ಬರುವಂಥದು. ನಿತ್ಯದ ಬಾಳಿನಲ್ಲಿ ಹುಟ್ಟಿದ ಸಿದ್ಧಿಸದ ಎಷ್ಟೋ ಕಾಮನೆಗಳು ಸ್ವಪ್ನಾವಸ್ಥೆಯಲ್ಲಿ ಸಿದ್ಧಿ ಕಂಡು ಮನಸ್ಸಿಗೆ ಆಪ್ಯಾಯಮಾನ ತರಬಹುದು ; ಇಲ್ಲವೇ ಮನಸ್ಸಿಗೆ ಹೆಚ್ಚಿನ ವ್ಯಥೆತರಬಹುದು. ಮತ್ತೆ ಕೆಲವು ಸಂದರ್ಭಗಳಲ್ಲಿ ಕೆಲವು ಕನಸುಗಳು ಹಗಲುಗನಸುಗಳಾಗಬಹುದು. ಇವುಗಳನ್ನು ಬಿಟ್ಟು ಇನ್ನೊಂದು ಬಗೆಯ ಕನಸುಗಾರರುಂಟು. ಇವರ ಗುಂಪಿಗೆ ಸೇರುವವರು ಮಲ್ಲಾಡಿಹಳ್ಳಿಯ ಮಹಾತಿರುಕ, ಮಹಾಕನಸುಗಾರ. ಈ ಗುಂಪಿನ ರೀತಿ ಹೀಗುಂಟು : ಅವರಿಗೆ ಹಗಲು, ರಾತ್ರಿ ಎರಡೂ ಒಂದೇ. ಜಾಗ್ರತ, ಸ್ವಪ್ನ, ಸುಷುಪ್ತಿ ಈ ಮೂರು ಸ್ಥಿತ್ಯಂತರಗಳು ಒಂದೇ. ಅವರು ಸತ್‌ಸಂಕಲ್ಪನಿಷ್ಠರು. 'ಸಂಕಲ್ಪಃ ಪ್ರಭವಾನ್ ಕಾಮಾನ್'ಅಲ್ಲವೇ? ಸಂಕಲ್ಪವೇ ಎಲ್ಲ ಕಾಮನೆಗಳ ಸೃಷ್ಟಿಗೆ ಮೂಲ. ಬ್ರಹ್ಮದೇವನೂ ಸೃಷ್ಟಿಗೆ ಮುನ್ನ ಮಹಾಸಂಕಲ್ಪ ಮಾಡಿದ ; ತನ್ನ ತಪಸ್ಸಿನಲ್ಲಿ ಲೀನನಾದ. ಲೋಕ, ಪರಲೋಕ ಎಲ್ಲ ಸೃಷ್ಟಿಯಾಯಿತು. ಮಹಾ ಸಂಕಲ್ಪವೇ ಮಹಾ ಕನಸು; ನಿತ್ಯ ಕನಸು; ನಿತ್ಯಸತ್ಯವಾಗುವ ಕನಸು. ಮನಸ್ಸಿನ ಮೂರೂ ಸ್ತರಗಳಲ್ಲಿ ಜಾಗ್ರತವಿದ್ದು ಸಾಕಾರವಾಗುವ ಕನಸು.

ಮಾನವ ಜೀವಿಗಳಲ್ಲಿ ಎಲ್ಲೋ ಕೆಲವು ಮಂದಿ ಮಾತ್ರ ಇಂಥ ಸಂಕಲ್ಪನಿಷ್ಠ ಮಹಾತಿರುಕರೂ ಮಹಾ ಕನಸುಗಾರರೂ ಆಗುತ್ತಾರೆ. ಮದನಮೋಹನ ಮಾಲವೀಯರಿಗೆ ಕಾಶೀ ವಿಶ್ವವಿದ್ಯಾನಿಲಯದ ಕಾರ್ಯ ಮಹಾ ಕನಸಾಯಿತು. ಗಾಂಧೀಜಿಗೆ ಸ್ವರಾಜ್ಯ-ಸುರಾಜ್ಯ–ಸರ್ವೋದಯಸಮಾಜ–ಇವು ಮಹಾಕನಸಿನ ಅಂಶಗಳಾದುವು. ಮಲ್ಲಾಡಿಹಳ್ಳಿಯ ಮಹಾತಿರುಕನಿಗೆ 'ಅನಾಥ ಸೇವಾಶ್ರಮ' ಮಹಾಕನಸಿನ ಅಂಶವಾಯಿತು. ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟಕ್ಕೆ ಹರಣ ಅರ್ಪಿಸಲು ಸಿದ್ಧರಾಗುವ ಸ್ವಯಂಸೇವಕರನ್ನು ತಯಾರಿಸುವ ಸಂಕಲ್ಪದಿಂದ ಮಲ್ಲಾಡಿಹಳ್ಳಿಗೆ ಬಂದ 'ವ್ಯಾಯಮದ ಮೇಷ್ಟ್ರು' ಅಲ್ಲೇ ನೆಲಸುವಂತಾಯಿತು. ಅದೆಂಥ ಪುಣ್ಯತಾಣವೋ ! ಆ ಪುಣ್ಯಜೀವಿಗೆ ತಪಸ್ಸೆಸಗಲು ಇಂದು ನೀಡಿತು.

ಏಳು-ಏಳು ವರ್ಷಗಳ ಕಾಲ ಒಂದೊಂದು ಸಂಕಲ್ಪ, ಒಂದೊಂದು ಕಾರ್ಯಾಚರಣೆ. ಅಲ್ಲಲ್ಲಿಗೆ ಅವುಗಳ ಸಿದ್ಧಿ, ಆದರೂ ಮುಂದೊಂದು ಕನಸು, ಆದರ ಸಿದ್ಧಿಗಾಗಿ ಮತ್ತೆ ಸಂಕಲ್ಪ, ತಿರುಕನ ಪ್ರವಾಸ, ಜನತೆಯ ಕೊಡುಗೈ ದಾನ, ಕನಸು ನನಸು ; ಕಾರ್ಯಸಿದ್ಧಿ, ಹೀಗೆ ಸಾಗುತ್ತ ಬಂದಿದೆ, ಈ ತಿರುಕನ ಮಹಾಕನಸು.

ಈ ಸಂಕಲ್ಪಗಳ, ಕನಸುಗಳ ಈಡೇರಿಕೆ ಒಂದು ಪವಾಡವೇ. ಪವಾಡವೆಂದರೆ ಅಘಟನ ಘಟನೆ. ಇಂಥ ಪವಾಡವೇ ಸೃಷ್ಟಿಯಾಗಿದೆ ಮಲ್ಲಾಡಿಹಳ್ಳಿಯಲ್ಲಿ. ಇದನ್ನೆಲ್ಲ ನೋಡಿದ ಸಾಮಾನ್ಯ ಭಾವುಕವ್ಯಕ್ತಿಗೆ ಬೆಜ್ಜರ ಬೆರಗು ; ಇಷ್ಟೆಲ್ಲ ಸಾಧನೆಯ ಹಿಂದೆ ಜನಪ್ರೇಮದ, ಸಹಕಾರದ, ಬೃಹತ್‌ಶಕ್ತಿ ಅಗೋಚರವಾಗಿ ಅಡಗಿದೆ ; ಭಿಕ್ಷಾ ಪಾತ್ರೆಯ ಅಕ್ಷಯ ಶಕ್ತಿಯ ದ್ಯೋತಕವಾಗಿದೆ.

ಶ್ರೀ ರಾಘವೇಂದ್ರರಾಯರು ಇಂದು 'ಸ್ವಾಮಿ', 'ಶ್ರೀ, ಶ್ರೀ' ಎನಿಸಿಕೊಂಡಿದ್ದಾರೆ. ಸಾಮಾನ್ಯವ್ಯಕ್ತಿ 'ಶ್ರೀ' ಮಾತ್ರ. ಅಸಾಮಾನ್ಯನಾಗಿ, ಅಸಾಧಾರಣ ಕೆಲಸ ಮಾಡಿದ ಮಹಾ ವ್ಯಕ್ತಿ, ಮಹಾನುಭಾವ ; ಸ್ವಾರ್ಥದ ಲೇಶಭಾವವಿಲ್ಲದೆ, ಸಕಲವನ್ನೂ ಈಶ್ವರಾರ್ಪಣ ಬುದ್ಧಿಯಿಂದ, ಸಮಾಜಾರ್ಪಣ ರೀತಿಯಿಂದ,ಕಜ್ಜ ವೆಸಗುವ ವ್ಯಕ್ತಿ 'ಶ್ರೀ, ಶ್ರೀ'. ಇವರಲ್ಲಿ ಈಶ್ವರೀಯ ಸಂಪತ್ತು ಪ್ರಧಾನ, ಅದೇ ಅವರ ಶುದ್ಧ ಸತ್ವ.

ಶ್ರೀ ಶ್ರೀಗಳವರ ಅನಾಥಾಶ್ರಮದ ಕನಸೇ ಅವರ ಜೀವನದ ಜೀವಾಳ, ಶಿಕ್ಷಣಸಂಸ್ಥೆಗಳ ಮೂಲಕ ಎಂದೂ ನಂದದ ಜ್ಞಾನದೀವಿಗೆ ಹಚ್ಚಿದ್ದಾರೆ ಅವರು. ಈ ಜ್ಞಾನದೀವಿಗೆ ಅಧ್ಯಾತ್ಮ ಜ್ಞಾನವನ್ನು ಹರಡಲಿ ; ವಿಶಿಷ್ಟ ಜ್ಞಾನವನ್ನು, ವಿಚಾರಯುತ ಜ್ಞಾನವನ್ನು, ವಿಜ್ಞಾನದ ಸುಜ್ಞಾನವನ್ನು ಹರಡಲಿ. ದಾರಿದ್ರ್ಯ, ಮೌಢ್ಯ ಇವು ಗಳನ್ನು ಹರಿಸುವ ಶಕ್ತಿಯಾಗಲಿ.

ಊರ ಮುಂದಿನ ಮುರುಕು ಧರ್ಮಶಾಲೆಯಲ್ಲಿ ಮಲಗಿ, ಕನಸುಕಂಡು, ಸಿರಿತನಕ್ಕೆ ಹಿರಿಹಿಗ್ಗಿ, ಕನಸೊಡೆದು ಖಿನ್ನನಾದ ತಿರುಕನಲ್ಲ ಈ ಮಹಾ ತಿರುಕ. ಕವನಗಳಲ್ಲಿ, ನಾಟಕಗಳಲ್ಲಿ, ಪ್ರತ್ಯಕ್ಷ ಕ್ರಿಯೆಯಲ್ಲಿ ತನ್ನ ಕನಸಿನ ಸಾಕಾರ ಕಂಡು, ಶ್ರೀಮಂತರ-ಬಡವರ-ಪಂಡಿತರ-ಪಾಮರರ-ಹೀಗೆ ಎಲ್ಲ ವೃತ್ತಿಗಳ, ವೃತ್ತಗಳ ಜನಮಾನಸದಲ್ಲಿ ಆದರದ ಸಿಂಹಪೀಠವನ್ನು ಗಳಿಸಿಕೊಂಡ ಕೃತಕೃತ್ಯ-ಧನ್ಯ ಮಾನವ ! ರೋಗತಪ್ತರಿಗೆ ಆದರಣೆಯಿಂದ ಔಷಧ ನೀಡಿ, ಅವರ ಕದಪುಗಳ ಮೇಲೆ ಆಶಾಂಕುರದ ರಕ್ತರೇಖೆ ಮೂಡಿಸಿ ತನ್ನ ಆತ್ಮ ಸಾಕ್ಷಾತ್ಕಾರ ಕಂಡುಕೊಂಡ, ಅನಾಥ ಮಕ್ಕಳಿಗೆ ಅನ್ನನೀಡಿ, ಜ್ಞಾನ ಹಂಚಿ, ಶಾಂತಿ-ಪುಷ್ಟಿ-ತುಷ್ಟಿ ತುಂಬಿಸಲು ಯತ್ನಿಸುತ್ತಿರುವ ವಿಶಾಲ ಮನಸ್ಸಿನ ದೇವಸದೃಶ ಮಾನವ !

ಶ್ರೀ ಶ್ರೀ ಗಳವರ ಸಂಯಕ್ ಭಾವನೆ, ಸಮೀಚೀನ ಭಾವನೆ ಇವುಗಳ 'ಸಂಭಾವನೆ'ಯಲ್ಲಿ ಮುಳುಗಿ, ಮಿಂದು, ಪಾವನನೆನಿಸಿಕೊಂಡ ಶ್ರೀಸಾಮಾನ್ಯ ಕೊಡುವ 'ಸಂಭಾವನೆ' ಯಾದರೂ ಯಾವುದು ? 'ಸಂಭಾವನೆಯ ಸಂಪುಟ' ಕೇವಲ ನಮನದ ಸಂಕೇತ ; ಶುದ್ಧ ವಿಚಾರ-ವಿಶ್ವಾಸಗಳ ದ್ಯೋತಕ.

ಭಗವದ್ಗೀತೆಯಲ್ಲಿ 'ಸತ್' ಶಬ್ದದ ಅರ್ಥವನ್ನು ಹೀಗೆ ಹೇಳಲಾಗಿದೆ :

> ಸದ್ಭಾವೇ ಸಾಧು ಭಾವೇಚ ಸದಿತ್ಯೇತತ್ ಪ್ರಯುಜ್ಯತೇ ।
> ಪ್ರಶಸ್ತೇ ಕರ್ಮಣಿ ತಥಾ ಸತ್ ಶಬ್ದಃ ಪಾರ್ಥ ಯುಜ್ಯತೇ ॥

೧) ಸದ್ಭಾವ, ೨) ಸಾಧು ಭಾವ, ೩) ಪ್ರಶಸ್ತಿ ಕರ್ಮ. ಈ ಮೂರು ಪದಗಳು ಸಾಂಖ್ಯಯೋಗ, ಧ್ಯಾನಯೋಗ, ಕರ್ಮಯೋಗ ಇವುಗಳನ್ನು ಅಂತರ್ಭಾವಗೊಳ್ಳುತ್ತವೆ ಎನ್ನುತ್ತಾರೆ, ಆಚಾರ್ಯ ವಿನೋಬಾ, ತಮ್ಮ ವ್ಯಾಖ್ಯಾನದಲ್ಲಿ. ಈ ಮೂರೂ ಒಂದೇ ಮಾರ್ಗದ ಅವಶ್ಯಕ, ಅಪರಿಹಾರ್ಯ ಅಂಗಗಳು. ಅದು ಪರಮಾತ್ಮ ಸಿದ್ಧಿ-ಅಧ್ಯಾತ್ಮ ಸಿದ್ಧಿ. ಮೊದಲು ಕರ್ಮ ಮಾಡಬೇಕು. ಕರ್ಮದಿಂದ ಉಪಾಸನೆ. ಉಪಾಸನೆಯಿಂದ ಜ್ಞಾನ. ಜ್ಞಾನ ಪಡೆಯುವುದೇ ಮೋಕ್ಷ.

ಹೀಗೆ, ಸದ್ಭಾವ-ಸಾಧುಭಾವ ಮತ್ತು ಪ್ರಶಸ್ತ ಕರ್ಮ ಇವುಗಳಲ್ಲಿ ಸದಾ ನಿರತರಾಗಿರುವ ಮಹಾ ಕನಸುಗಾರ, ಮಹಾತಿರುಕ ಶ್ರೀ ಶ್ರೀ ಅವರಿಗೆ ಸಂಯಕ್ ಭಾವನೆಯ ಈ ಪುಷ್ಪಾಂಜಲಿ ವಿನಮ್ರ ಭಾವದಿಂದ ಸಮರ್ಪಿತ.

ಕೆ. ವೆಂಕಟರಾಮಪ್ಪ

ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮದ ಶ್ರೀ ಶ್ರೀ ರಾಘವೇಂದ್ರಸ್ವಾಮಿಗಳು

ಮಲ್ಲಾಡಿಹಳ್ಳಿಯ ತನಕ ಪ್ರಯಾಣಮಾಡಿ 'ಸ್ವಾಮಿ'ಗಳ 'ಸಂದರ್ಶನ' ಪಡೆಯಬೇಕೆಂಬ ಉತ್ಸುಕತೆಯಿಂದ ಹೋದ ಅನೇಕ ಭಕ್ತಜನಕ್ಕೆ ತೀವ್ರ ನಿರಾಸೆಯುಂಟಾಗಿದೆ. ಇವರು ಎಲ್ಲ ಸ್ವಾಮಿಗಳಂತೆ ಅಲ್ಲ. ಇವರು ಕಿರೀಟ ಧರಿಸುವುದಿಲ್ಲ. ಜರತಾರಿ ಬಟ್ಟೆಗಳ ವೈಭವವೂ ಇಲ್ಲ. ಸಾಮಾನ್ಯವಾಗಿ ಸ್ವಾಮಿಗಳ ಸುತ್ತಲೂ ಇರುವ ಸರ್ವಾಧಿಕಾರಿ, ಪಾರುಪತ್ತೇಗಾರ, ಏಜಂಟ್ ಮೊದಲಾದ ಅಧಿಕಾರಿ ವರ್ಗದ ಓಡಾಟಗಳೂ ಇಲ್ಲ. ಈ ಸ್ವಾಮಿಗಳದು 'ಆಶ್ರಮ'ವೇ ಹೊರತು 'ಮಠ'ವಲ್ಲ—'ಸಂಸ್ಥಾನ'ವಂತೂ ಅಲ್ಲವೇ ಅಲ್ಲ. ಇದು ಸೇವಾಶ್ರಮ. 'ಸೇವೆ–ಸೇವೆ–ಸೇವೆ' ಎಂಬುದೇ ಸ್ವಾಮಿಗಳ ಬದುಕಿನ ಮಹಾ ಸಂದೇಶ. 'ಅನಾಥ ಸೇವಾಶ್ರಮ' ಎಂದು ಹೆಸರಾಗಿರುವ ಈ ಮಹಾಸಂಸ್ಥೆ ನಾಡಿನ ಜನತೆಗೆ ಬಹು ಮುಖವಾದ ಸೇವೆಯನ್ನು ಸಲ್ಲಿಸುತ್ತಿದೆ.

'ಅನಾಥ ಸೇವಾಶ್ರಮ'ವನ್ನು ಪ್ರವೇಶಿಸುತ್ತಿದ್ದಂತೆಯೇ ಎಡಗಡೆ ಮೊದಲು ಕಾಣಿಸುವುದು ಅನಾಥ ಸೇವಾಶ್ರಮದ ವಿಶ್ವಸ್ತಸಮಿತಿಯ ಸಂಸ್ಥಾಪಕ ಅಧ್ಯಕ್ಷರ ಕಚೇರಿ. ಆಶ್ರಮದ ಎಲ್ಲ ವ್ಯವಹಾರಗಳ ಮೇಲ್ವಿಚಾರಣೆಗೆ ಶ್ರೀಸ್ವಾಮಿಗಳು ಒಂದು 'ಟ್ರಸ್ಟ್' ವಿಶ್ವಸ್ಥ ಸಮಿತಿಯನ್ನು ಏರ್ಪಡಿಸಿದ್ದಾರೆ. ಅದರಲ್ಲಿ ಜಿಲ್ಲೆಯ ಹಲವರು ಗಣ್ಯರು ಸದಸ್ಯರಾಗಿದ್ದಾರೆ. ಈ ಕಚೇರಿಯ ಪಕ್ಕದಲ್ಲಿಯೇ ಒಂದು ಸಣ್ಣ ಮುದ್ರಣಾಲಯವನ್ನು ಕಾಣಬಹುದು. ಆಶ್ರಮದ ಹುಡುಗರಲ್ಲಿ ಉತ್ಸುಕರಾದವರಿಗೆ ಮುದ್ರಣ ಕಲೆಯನ್ನು ಕಲಿಸಲು ಅವಕಾಶವುಂಟು. ಆಶ್ರಮಕ್ಕೆ ಸಂಬಂಧಪಟ್ಟ ಹಲವು ಪುಸ್ತಿಕೆ, ಪ್ರಕಟನೆ, ಮೊದಲಾದವನ್ನು ಇಲ್ಲಿಯೇ ಅಚ್ಚು ಮಾಡುತ್ತಾರೆ. ಶ್ರೀ ಸ್ವಾಮಿಗಳು ಸ್ವಂತವಾಗಿ ರಚಿಸಿದ ಹಲವು ನಾಟಕಗಳನ್ನೂ ಕಥೆಗಳನ್ನೂ ಈ ಮುದ್ರಣಾಲಯವೇ ಅಚ್ಚುಮಾಡಿ ಬೆಳಕಿಗೆ ತಂದಿದೆ.

ಮುದ್ರಣಾಲಯದ ಪಕ್ಕದಲ್ಲಿಯೇ ಒಂದು ಆಯುರ್ವೇದ ಚಿಕಿತ್ಸಾಲಯವಿದೆ. ಶ್ರೀಸ್ವಾಮಿಗಳು ಈ ಆಸ್ಪತ್ರೆಗೆ ಅಗತ್ಯವಾದ ಎಲ್ಲ ಔಷಧಿಗಳನ್ನು ಇಲ್ಲಿಯೇ ತಯಾರುಮಾಡುತ್ತಾರೆ. ಬೇಕಾದ ಮೂಲಿಕೆಗಳೇ ಮೊದಲಾದ ಸಾಮಗ್ರಿಗಳನ್ನು ಬೆಲೆಕೊಟ್ಟು ದೂರದ ಊರುಗಳಿಂದ ತರಿಸಿಕೊಂಡು ಅವುಗಳನ್ನು ಉಚಿತರೀತಿಯಲ್ಲಿ ಸಂಸ್ಕರಿಸಿ ಔಷಧಗಳನ್ನು ತಮ್ಮ ಸ್ವಂತ ಮೇಲ್ವಿಚಾರಣೆಯಲ್ಲಿ ತಯಾರುಮಾಡಿಸುತ್ತಾರೆ. ಶ್ರೀಸ್ವಾಮಿಗಳು ಸ್ವಯಂ ಆಯುರ್ವೇದ ಪಂಡಿತರು ; ಗುರುಕುಲ ವಾಸಮಾಡಿ ದೀರ್ಘಕಾಲದ ಶಿಕ್ಷಣಪಡೆದು ಆ ವಿದ್ಯೆಯನ್ನು ಕರಗತ ಮಾಡಿಕೊಂಡಿದ್ದಾರೆ. ಅವರಿಗೆ ತಾವು ಸಿದ್ಧಪಡಿಸುವ ಔಷಧಗಳ ಗುಣಾವಗುಣಗಳು ಚೆನ್ನಾಗಿ ತಿಳಿದಿರುವುದರಿಂದ ರೋಗಿಗಳಿಗೆ ಸೂಕ್ತವಾದ ಔಷಧವನ್ನು ಸರಿಯಾದ ಪ್ರಮಾಣದಲ್ಲಿ ನೀಡಿದರೆ ರೋಗ ನಿವೃತ್ತಿಯಾಗುವುದು ಖಂಡಿತ. ವ್ಯಾಪಾರೀಸಂಸ್ಥೆಗಳು ಲಾಭಸಂಪಾದನೆಯ ದೃಷ್ಟಿಯಿಂದ ತಯಾರುಮಾಡಿ ಮಾರುವ ಸಿದ್ಧೌಷಧಿಗಳಲ್ಲಿ ಅಗತ್ಯವಾದ ಭಸ್ಮ, ಸಿಂದೂರ, ಮಂಡೂರಾದಿಗಳು ಸೂಕ್ತ ಪ್ರಮಾಣದಲ್ಲಿ ಇರದಿದ್ದರೆ ಅವುಗಳಿಂದ ರೋಗ ನಿವಾರಣೆ ಹೇಗಾದೀತು ? ಅಂಥ ಔಷಧಿಗಳನ್ನು ಬಳಸಿ ರೋಗಿಗಳ ಮೇಲೆ ಪ್ರಯೋಗ ನಡೆಸುವುದನ್ನು ಶ್ರೀಸ್ವಾಮಿಗಳು ಒಪ್ಪರು.

ಆಸ್ಪತ್ರೆಯಲ್ಲಿ ಪೂರ್ಣಕಾಲದ ವೈದ್ಯರೊಬ್ಬರನ್ನು ನೇಮಿಸಲಾಗಿದ್ದು ಅವರು ಅನುದಿನದ ರೋಗಿಗಳನ್ನು ಉಪಚರಿಸುತ್ತಾರೆ. ಶ್ರೀ ರಾಘವೇಂದ್ರಸ್ವಾಮಿಗಳು ಪ್ರತಿಸೋಮವಾರ ಬೆಳಿಗ್ಗೆ ಐದು ಗಂಟೆಯಿಂದ ಆರಂಭಿಸಿ ಮಧ್ಯಾಹ್ನದವರೆಗೂ ಸ್ವಂತವಾಗಿ ರೋಗಿಗಳ ಪರೀಕ್ಷೆನಾಡಿ ಔಷಧಿಕೊಡಿಸುತ್ತಾರೆ. ಇವಕ್ಕಾಗಿ ರೋಗಿಗಳು ಭಾನುವಾರ ಸಂಜೆಯೇ ಆಶ್ರಮವನ್ನು ಸೇರುತ್ತಾರೆ. ಆ ರಾತ್ರಿ ರೋಗಿ ಮತ್ತು ಅವನ ಸಂಗಡ ಬಂದ ಒಬ್ಬ ಅನುಬಂಧಿಗಳಿಗೆ ಉಚಿತ ಊಟ ನಡೆಯುತ್ತದೆ. ಮಾರನೆಯ ದಿನ ಔಷಧಿ ದೊರೆತ ಮೇಲೆ ಅವರವರ ಸ್ಥಳಗಳಿಗೆ ರೋಗಿಗಳು ಪ್ರಯಾಣ ಮಾಡುತ್ತಾರೆ. ಮಧ್ಯಾಹ್ನದ ಮೇಲೆ ಉಳಿಯಬೇಕಾದವರಿಗೆ ಸೋಮವಾರವೂ ಅನ್ನದಾನ ನಡೆಯುತ್ತದೆ. ಪ್ರತಿ ಸೋಮವಾರ ನಡೆಯುವ ಈ ಔಷಧ ವಿತರಣೆಗಾಗಿ ನೂರಾರು ಜನ ಬರುತ್ತಾರೆ. ಆಶ್ರಮ ಆರಂಭವಾದಂದಿನಿಂದ ಇಂದಿನವರೆಗೆ ಅವಿಚ್ಛಿನ್ನವಾಗಿ ಈ ಔಷಧ ಯಜ್ಞ ನಡೆಯುತ್ತ ಬಂದಿದೆ. ಶ್ರೀ ಸ್ವಾಮಿಗಳು ಧನಧಾನ್ಯ ಸಂಗ್ರಹಕ್ಕಾಗಿ ಸದಾ ಸಂಚರಿಸುತ್ತಲೇ ಇರಬೇಕಾಗುತ್ತದೆ. ಹಾಗೆ ಪರಸ್ಥಳ ಹೋದರೂ ಭಾನುವಾರ ಸಂಜೆ ಹೊತ್ತಿಗೆ ಶ್ರೀ ಸ್ವಾಮಿಗಳು ತಪ್ಪದೆ ಆಶ್ರಮವನ್ನು ಸೇರಿಕೊಳ್ಳುತ್ತಾರೆ. ಅದು ಅವರ ಸತ್ಯವ್ರತ. ದೀರ್ಘಕಾಲದ ದುರ್ವ್ಯಾಧಿಗಳಿಗೂ ಇಲ್ಲಿ ಫಲಪ್ರದವಾದ ಚಿಕಿತ್ಸೆ ನಡೆಯುತ್ತದೆ. ಆಸ್ತಮಾ, ಡಯಾಬಿಟೀಸ್ ಮೊದಲಾದ ರೋಗಗಳಿಗೂ ಶ್ರೀ ಸ್ವಾಮಿಗಳು ಮದ್ದು ಕೊಡುತ್ತಾರೆ. ಆದರೆ ಮದ್ದು ಸಾಲದೆ ಹೋದರೆ–ಅವರಿಂದ ನಿರೀಕ್ಷಿಸಿದಷ್ಟು ಬೇಗ ಫಲ ದೊರೆಯದಿದ್ದರೆ, ಅಂಥವರಿಗೆ ಯೋಗಾಸನ ಕಲಿಸಿ ಆ ಮೂಲಕ ರೋಗನಿವಾರಣೆಗೆ ದಾರಿ ತೋರಿಸುತ್ತಾರೆ. ಹಾವು ಕಚ್ಚಿದವರನ್ನು ಕೂಡಲೆ ಕರೆತಂದರೆ ಶ್ರೀ ಸ್ವಾಮಿಗಳು ಅತ್ಯಂತ ಯಶಸ್ವಿಯಾದ ಚಿಕಿತ್ಸೆ ನಡೆಸುತ್ತಾರೆ. ಅಂಥ ಒಬ್ಬ ರೋಗಿ ಸ್ವಾಮಿಗಳಿಂದ ಔಷಧಿ ಹಾಕಿಸಿಕೊಂಡು ಎರಡು ಗಂಟೆಗಳ ಹೊತ್ತಿನಲ್ಲಿ ಪೂರ್ಣಗುಣ ಹೊಂದಿದುದನ್ನು ನಾನೇ ಕಣ್ಣಾರೆ ಕಂಡಿದ್ದೇನೆ. ಅಳುತ್ತ ಬಂದ ರೋಗಿ ಮತ್ತು ಅವನ ಬಂಧುಗಳು ನಗುತ್ತಮನೆಗೆ ಹೋದ ಅಂದಿನ ರಮಣೀಯ ದೃಶ್ಯ ಅವಿಸ್ಮರಣೀಯವಾದದ್ದು.

ಆಸ್ಪತ್ರೆಯಿಂದ ಇನ್ನು ಕೊಂಚ ಮುಂದೆ ಹೋದರೆ ಆಶ್ರಮದ ಪಾಕಶಾಲೆ ಸಿಕ್ಕುತ್ತದೆ. ಇದರ ಬಲಗಡೆಯೇ ಉಗ್ರಾಣ. ಉಗ್ರಾಣದ ಮುಂದುಗಡೆ-ಆಶ್ರಮದ ಮಹಾದ್ವಾರಕ್ಕೆ ಎದುರಾಗಿ–'ವ್ಯಾಸ ಪೀಠ' ಇದೆ. ಇದೇ ಅನಾಥಸೇವಾಶ್ರಮದ ಪ್ರವಚನ ಮಂದಿರ.ಅದರ ಮುಂದಿನ ಬಯಲೇ ಉತ್ಸವ ಕಾಲಗಳಲ್ಲಿ ನಡೆಯುವ ವ್ಯಾಯಾಮ ಪ್ರದರ್ಶನದ ಅಂಗಳ. ಪ್ರತಿ ವರ್ಷ ವಿನಾಯಕ ಚತುರ್ಥಿಯಿಂದ ನಡೆಯುವ 'ಗಜಾನನ ಸಪ್ತಾಹ'ದಲ್ಲಿ ಪ್ರತಿ ಸಂಜೆ ಈ ಅಂಗಳದಲ್ಲಿ ವ್ಯಾಯಮ ಮತ್ತು ಕ್ರೀಡೆಗಳ ಅದ್ಭುತ ಪ್ರದರ್ಶನವೇ ನಡೆಯುತ್ತದೆ. ಹೈಸ್ಕೂಲು ವಿದ್ಯಾರ್ಥಿಗಳು, ದೈಹಿಕ ಶಿಕ್ಷಣ ಕಾಲೇಜಿನ ವಿದ್ಯಾರ್ಥಿಗಳು ಆ ಸಮಯದಲ್ಲಿ ತಮ್ಮ ವ್ಯಾಯಾಮಕೌಶಲವನ್ನು ಮೆರೆಸುತ್ತಾರೆ. ಆಗಾಗ ಶ್ರೀ ಸ್ವಾಮಿಗಳೂ ಯೋಗಾಸನ ಪ್ರದರ್ಶನ, ವ್ಯಾಯಾಮ ಪ್ರದರ್ಶನಗಳನ್ನೂ ನೀಡುವರು. ಉತ್ಸವದ ಪ್ರತಿದಿನ ಆರಂಭದಲ್ಲಿ ಎರಡುಗಂಟೆಗಳ ಕಾಲ ನಡೆಯುವ ಈ ಪ್ರದರ್ಶನ ಅತ್ಯಂತ ಆಕರ್ಷಕವಾಗಿದ್ದು ಎಲ್ಲರ ಮೆಚ್ಚಿಗೆಯನ್ನೂ ಗಳಿಸಿಕೊಂಡಿದೆ. ಇದರಿಂದ ಆಶ್ರಮದ ಶಾಲೆಗಳ ವಿದ್ಯಾರ್ಥಿಗಳಿಗೆ ಶಿಸ್ತು, ಸಂಯಮ, ಕಷ್ಟ ಸಹಿಷ್ಣುತೆ ಮತ್ತು ನಿಯಮಪಾಲನೆಗಳ ಉತ್ತಮ ಶಿಕ್ಷಣ ದೊರೆಯಲು ಅವಕಾಶವಾಗಿದೆ

ಆಶ್ರಮದ ಹಿಂಭಾಗದಲ್ಲಿ–ಪಾಕಶಾಲೆ, ಉಗ್ರಾಣಗಳನ್ನು ದಾಟಿ ಹೋದರೆ–ತಪೋವನವಿದೆ. ಇಲ್ಲಿ ಹಲವು ಯೋಗಮಂಟಪಗಳಿವೆ. ಒಂದೊಂದರಲ್ಲಿಯೂ ಒಬ್ಬ ಸಾಧಕ ಯೋಗಾಸನಗಳನ್ನು ಅಭ್ಯಾಸ ಮಾಡಬಹುದು. ಪ್ರತಿವರ್ಷ ಶರನ್ನವರಾತ್ರಿಯ ಕಾಲದಲ್ಲಿ ಈ ಸ್ವಾಮಿಗಳು 'ಯೋಗ ಶಿಬಿರ'ಗಳನ್ನು ನಡೆಸುತ್ತಾರೆ. ಆಗ ಬರುವ ಶಿಕ್ಷಣಾರ್ಥಿಗಳಿಗೆ ಉಚಿತ ವಸತಿ, ಭೋಜನಗಳನ್ನು ಕಲ್ಪಿಸಿ ಧರ್ಮಾರ್ಥವಾಗಿ ಯೋಗಶಿಕ್ಷಣವನ್ನು ನೀಡುತ್ತಾರೆ. ಅದಕ್ಕೆ ಸ್ವಾಮಿಗಳು ವಿಧಿಸುವ ಷರತ್ತು ಒಂದೇ ; ಶಿಬಿರಕ್ಕೆ ಬಂದವರು ಮಧ್ಯದಲ್ಲಿ ಬಿಟ್ಟುಹೋಗಬಾರದು !

ಇದಿಷ್ಟು ಆಶ್ರಮದ ಒಂದು ಭಾಗ. ಮಹಾದ್ವಾರದಿಂದ ಬಲಕ್ಕೆ ಹೊರಟರೆ ಮೊದಲು ಉಪಾಧ್ಯಾಯರ

ವಾಸಗೃಹಗಳು ಸಿಕ್ಕುತ್ತವೆ. ಇಲ್ಲಿ ಪ್ರೌಢಶಾಲೆಯನ್ನು ಆರಂಭಿಸುವಾಗಲೇ ಉಪಾಧ್ಯಾಯರಿಗೆ ವಸತಿಯನ್ನೂ ಕಲ್ಪಿಸಲಾಯಿತು. ಸರ್ಕಾರದವರು 'ಉಪಾಧ್ಯಾಯರಿಗೆ ಚೆಕ್ಕು ಮೂಲಕ ಸಂಬಳ'ದ ವಿಧಿಯನ್ನು ಯೋಚಿಸುವುದಕ್ಕೂ ಮುಂಚೆಯೇ ಶ್ರೀಸ್ವಾಮಿಗಳವರು ಪ್ರತಿ ತಿಂಗಳು ಕೊನೆಯ ದಿನ ಎಲ್ಲ ಉಪಾಧ್ಯಾಯರಿಗೂ ನೌಕರರಿಗೂ ಪೂರ್ತಿ ಸಂಬಳವನ್ನು ಒಂದೇ ಕಂತಿನಲ್ಲಿ ನಗದಾಗಿ ಕೊಡುತ್ತಿದ್ದರು. ಅಲ್ಲಿಂದ ಇನ್ನು ಕೊಂಚ ಮುಂದೆ ಹೋದರೆ ಹೊಸದಾಗಿ ನಿರ್ಮಿಸಿದ ಒಂದು ಭವ್ಯವಾದ ಅತಿಥಿಗೃಹವಿದೆ. ಉತ್ಸವಕಾಲಗಳಲ್ಲಿಯೂ ಇತರ ದಿನಗಳಲ್ಲಿಯೂ ಆಶ್ರಮಕ್ಕೆ ಬರುವ ಸಂದರ್ಶಕರನ್ನೂ ಅತಿಥಿ ಅಭ್ಯಾಗತರನ್ನೂ ಇಲ್ಲಿ ಸತ್ಕರಿಸುತ್ತಾರೆ. ಇನ್ನು ಕೊಂಚದೂರ ಹೋದರೆ ಆಶ್ರಮದ ಪ್ರೌಢಶಾಲೆಯ ಕಟ್ಟಡ ಸಿಕ್ಕುತ್ತದೆ. ಇಲ್ಲಿ ಐನೂರಕ್ಕಿಂತ ಹೆಚ್ಚು ಸಂಖ್ಯೆಯ ವಿದ್ಯಾರ್ಥಿಗಳು ಶಿಕ್ಷಣ ಲಾಭ ಹೊಂದುತ್ತಾರೆ. ಸಮರ್ಥರಾದ ಉಪಾಧ್ಯಾಯರು ಇಲ್ಲಿ ಉತ್ಸಾಹದಿಂದ ಪಾಠಹೇಳಿ, ಪಠ್ಯೇತರ ಚಟುವಟಿಕೆಗಳಲ್ಲಿಯೂ ಮಾರ್ಗದರ್ಶನ ಮಾಡಿ ಬಾಲಕರ ಸರ್ವತೋಮುಖವಾದ ಅಭಿವೃದ್ಧಿಗೆ ಕಾರಕರಾಗಿ ದುಡಿಯುತ್ತಿದ್ದಾರೆ.

ಈಗ ಆಶ್ರಮದ ಪ್ರೌಢಶಾಲೆಯ ಜತೆಗೆ ಜ್ಯೂನಿಯರ್ ಕಾಲೇಜನ್ನೂ ಸ್ಥಾಪಿಸಲಾಗಿದೆ. ಇಲ್ಲಿ ಪ್ರೀ ಯೂನಿವರ್ಸಿಟಿ ಪರೀಕ್ಷೆಯ ಪ್ರಥಮ ದ್ವಿತೀಯ ಹಂತಗಳಿಗೆ ವಿದ್ಯಾರ್ಥಿಗಳನ್ನು ತರಬೇತು ಮಾಡಲಾಗುತ್ತಿದೆ.

ಕಾಲೇಜಿನ ಪಕ್ಕದಲ್ಲಿಯೇ ವಿದ್ಯಾರ್ಥಿನಿಲಯದ ಒಂದು ಭವ್ಯ ಕಟ್ಟಡವಿದೆ. ಇದರಲ್ಲಿ ಹೈಸ್ಕೂಲು, ಕಾಲೇಜುಗಳ ವಿದ್ಯಾರ್ಥಿಗಳು ಉಚಿತ ವಸತಿ ಮತ್ತು ಊಟದ ಸಹಾಯವನ್ನು ಪಡೆದು ವಿದ್ಯಾರ್ಜನೆಯಲ್ಲಿ ತೊಡಗಿದ್ದಾರೆ. ಈ ಕಟ್ಟಡದ ಮುಂಭಾಗದಲ್ಲಿ ವಿಸ್ತಾರವಾದ ಬಯಲು ಪ್ರದೇಶವಿದ್ದು ಬಾಲಕರ ನಾನಾ ಕ್ರೀಡೆಗಳಿಗೆ ಯಥೇಷ್ಟವಾದ ಸ್ಥಳ ಸೌಕರ್ಯ ಲಭಿಸಿದೆ. ಈ ಬಯಲಿನ ಇನ್ನೊಂದು ಅಂಚಿನಲ್ಲಿ ಒಂದು ಶಿಶುವಿಹಾರ ನಡೆಯುತ್ತಿದೆ. ಇದಕ್ಕೆ ಮಲ್ಲಾಡಿಹಳ್ಳಿಯ ಜನ ತಮ್ಮ ಮಕ್ಕಳನ್ನು ಕಳುಹಿಸುತ್ತಾರೆ. ಶಿಶುವಿಹಾರ ಶಾಲೆಯ ಶಿಕ್ಷಣ ಪಡೆದ ಮಹಿಳೆಯರು ಇಲ್ಲಿ ಈ ಹಸುಳೆಗಳ ಯೋಗಕ್ಷೇಮ ನೋಡಿಕೊಳ್ಳುತ್ತ ಉತ್ತಮ ಶಿಕ್ಷಣ ನೀಡುತ್ತಿದ್ದಾರೆ. ಈ ಆವರಣವನ್ನು ದಾಟಿ ಇನ್ನು ಕೊಂಚ ಮುಂದೆ ಹೋದರೆ ನೂತನವಾಗಿ ನಿರ್ಮಿಸಿದ ದೈಹಿಕ ಶಿಕ್ಷಣ ಕಾಲೇಜಿನ ಕಟ್ಟಡವನ್ನು ಕಾಣಬಹುದು. ಇಲ್ಲಿ ತರಬಿಯತ್ತು ಪಡೆದ ತರುಣರನೇಕರು ಹಲವು ಪ್ರೌಢಶಾಲೆ, ಕಾಲೇಜುಗಳಲ್ಲಿ ದೈಹಿಕ ಶಿಕ್ಷಣ ನೀಡುವ ಉತ್ತಮ ಉಪಾಧ್ಯಾಯರಾಗಿ ಹೆಸರುಗಳಿಸಿಕೊಂಡಿದ್ದಾರೆ. ಈ ಕಟ್ಟಡದ ಒಂದು ಭಾಗದಲ್ಲಿ ಉಪಾಧ್ಯಾಯರ ಶಿಕ್ಷಣ (T.C.H.) ಸಂಸ್ಥೆ ನಡೆಯುತ್ತಿದೆ. ಸಾಮಾನ್ಯವಾಗಿ ಇಲ್ಲಿ ಶಿಕ್ಷಣ ಪಡೆದು ಉತ್ತೀರ್ಣರಾದವರು ಯಾರೂ ನಿರುದ್ಯೋಗಿಗಳಾಗಿ ಉಳಿದಿಲ್ಲವೆಂದು ಕೇಳಿದ್ದೇವೆ. ಅವರು ಉದ್ಯೋಗಕ್ಕೆ ಸೇರಿದ ಶಾಲೆಗಳಲ್ಲಿ ಶಕ್ತ ಉಪಾಧ್ಯಾಯರೆಂಬ ಪ್ರಶಸ್ತಿ ಗಳಿಸಿಕೊಂಡಿದ್ದಾರೆ.

ಅಂತೂ ಮಲ್ಲಾಡಿಹಳ್ಳಿಯ ಅನಾಥಸೇವಾಶ್ರಮ ಶಿಶುವಿಹಾರದಿಂದ ತೊಡಗಿ ಬಾಲಕ ಬಾಲಕಿಯರ ಶಿಕ್ಷಣಕ್ಕೆ ಬೇಕಾದ ಸಕಲ ಸೌಲಭ್ಯಗಳನ್ನು ಕಲ್ಪಿಸಿ ಒಂದು ಪುಟ್ಟ ವಿಶ್ವವಿದ್ಯಾಲಯದಂತೆ ಶೋಭಿಸುತ್ತಿದೆ. ವಿದ್ಯೆ–ವೈದ್ಯ–ಇವೆರಡು ಕ್ಷೇತ್ರಗಳಲ್ಲಿ ಶ್ರೀ ಶ್ರೀ ರಾಘವೇಂದ್ರಸ್ವಾಮಿಗಳು ಅಸಾಧಾರಣವಾದ ಸಾಧನೆ ಮಾಡಿದ್ದಾರೆ. ಶ್ರೀ ಸ್ವಾಮಿಗಳಿಗೆ ಕೊಟ್ಟ ಒಂದೊಂದು ರೂಪಾಯಿಯೂ ರೋಗಿಗೆ ಔಷಧವಾಗಿ ವಿದ್ಯಾರ್ಥಿಗೆ ಅನ್ನವಾಗಿ, ಮಾರ್ಪಡುತ್ತದೆ ; ಸಾರ್ಥಕ ದಾನವಾಗುತ್ತದೆ.

ಇಷ್ಟೆಲ್ಲ ಸುಸಜ್ಜಿತವಾದ ವಿದ್ಯಾಸಂಸ್ಥೆ ವೈದ್ಯಸಂಸ್ಥೆಗಳನ್ನು ಸ್ಥಾಪಿಸಿ ಪೋಷಿಸಿಕೊಂಡು ಬರುತ್ತಿರುವ ಆಶ್ರಮದ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳ ವಾಸದ ಕೋಣೆ–ಅವರು ಅದರಲ್ಲಿ 'ವಾಸ' ಮಾಡುವುದು ಯಾವಾಗಲೋ—ಆಶ್ರಮದ ಹಿಂದುಗಡೆ ಇದೆ. ಇದರಲ್ಲಿ ಅವರ ಧ್ಯಾನ, ಜಪ, ಸಾಧನೆಗಳಿಗೆ ಬಳಸುವ ನೆಲಮಾಳಿಗೆ ಮುಖ್ಯವಾದದ್ದು. ಇದರಲ್ಲಿ ಅವರು ಅನುದಿನ ಬ್ರಾಹ್ಮೀಮುಹೂರ್ತದಲ್ಲಿಯೇ ಸೂರ್ಯ ನಮಸ್ಕಾರ ಪ್ರಾಣಾಯಾಮಾದಿಗಳನ್ನು ಮಾಡಿ ಹೊರಬಿದ್ದರೆ ಆಶ್ರಮದಲ್ಲೆಲ್ಲ ಓಡಾಡಿ ಎಲ್ಲ ಕಾರ್ಯ

ಕ್ರಮಗಳನ್ನು ಗಮನಿಸಿ ಅಧ್ಯಕ್ಷರ ಕಛೇರಿಯಲ್ಲಿ ಕೊಂಚ ಹೊತ್ತಿದ್ದು ಕಾಗದಪತ್ರಗಳನ್ನು ನೋಡಿ ಮಧ್ಯಾಹ್ನಕ್ಕೆ ತಮ್ಮ ಕೋಣೆಗೆ ಹೋಗಿ ಸ್ವಯಂಪಾಕ ನಡೆಸಿ ಊಟಮಾಡುವರು. ಯಾರಾದರೂ ಸ್ವಾಮಿಗಳ ಜತೆಯಲ್ಲಿ 'ಅಲಂಕಾರ ಪಂಕ್ತಿ'ಯ ಊಟ ಬಯಸಿದರೆ, ದೇವರೇ ಗತಿ. ಶ್ರೀ ಸ್ವಾಮಿಗಳು 'ಊಟವೆಂಬುದೊಂದು ಕಾಟ' ವೆಂದು ಭಾವಿಸಿದಂತೆ ತೋರುತ್ತದೆ. ಅದು ದೇಹಪೋಷಣೆಗೆ ಅನುವಾದ ಊಟವಲ್ಲ—ಅದು ಜೀವಧಾರಣೆಗೆ ಸಾಕಾಗುವಷ್ಟು ಊಟ. ಅವರಲ್ಲಿ ಸಿಹಿ, ಹುಳಿ, ಖಾರಗಳೇನೂ ಇಲ್ಲದ ಅಕ್ಕಿ, ಬೇಳೆ, ಕಾಯಿಪಲ್ಲೆಗಳೆಲ್ಲ ವನ್ನೂ ಒಟ್ಟಿಗೆ ಬೇಯಿಸಿದ–ಒಂದಿಷ್ಟು ಉಪ್ಪು ಮಾತ್ರ ಸೇರಿರುವ ಆಹಾರ. ಅದನ್ನಿಷ್ಟು ತಿಂದು ಸ್ವಲ್ಪ ಹಾಲು ಕುಡಿದುಬಿಟ್ಟರೆ ಸ್ವಾಮಿಗಳು ಧನ್ಯರು—ತಿರುಗಿ ನಾಳೆ ಮಧ್ಯಾಹ್ನದವರೆಗೆ ಈ ರಗಳೆ ಇಲ್ಲ. "ಮಿಕ್ಕೆಲ್ಲ ರುಚಿ ಗಳನ್ನೂ ಬಿಟ್ಟೆ–ಉಪ್ಪು ಬಿಡಲು ಸಾಧ್ಯವಾಗಿಲ್ಲ" ಎಂದು ಒಮ್ಮೆ ಸ್ವಾಮಿಗಳವರು ಆಪ್ತಸಂಭಾಷಣೆಯಲ್ಲಿ ಹೇಳಿದ್ದುಂಟು. ಇಷ್ಟು ಅಲ್ಪ ಆಹಾರವನ್ನೇ ತೆಗೆದುಕೊಂಡರೂ ಸ್ವಾಮಿಗಳು ತಮ್ಮ ಕಾರ್ಯ ಚಟುವಟಿಕೆ ಗಳನ್ನು ಸ್ವಲ್ಪವೂ ತಗ್ಗಿಸಿಲ್ಲ. ಅವರಿಗೆ ಎಂಬತ್ತು ವರ್ಷ ವಯಸ್ಸಿಗೆ ಮೀರಿದ್ದರೂ ಆಶ್ರಮದಲ್ಲಿ ಸಂಚರಿಸು ವಾಗ ಓಡುವುದೇ ಹೆಚ್ಚು, ನಡೆಯುವುದು ಕಡಮೆ.

ಶ್ರೀ ರಾಘವೇಂದ್ರ ಸ್ವಾಮಿಗಳು ತಮ್ಮ ಕೋಣೆಯಲ್ಲಿ ಒಂದು ಚಿಕ್ಕ ಮೇಜು ಕುರ್ಚಿಗಳನ್ನಿಟ್ಟು ಕೊಂಡು ತಮ್ಮ ಬರವಣಿಗೆಯ ಕೆಲಸವನ್ನು ನಿರಂತರವಾಗಿ ಸಾಗಿಸುತ್ತಿದ್ದಾರೆ. ಅವರು ಓದಬಯಸುವ ಕೆಲವೇ ಗ್ರಂಥಗಳನ್ನು ಒಂದು ಷೆಲ್ಫಿನಲ್ಲಿ ಓರಣವಾಗಿ ಅಳವಡಿಸಿಕೊಂಡಿರುತ್ತಾರೆ. ಇದು ಅವರ ಅನೇಕ ಗ್ರಂಥ ಗಳ ಜನ್ಮಸ್ಥಾನ. ಒಮ್ಮೆ ಬಂದು ಹೋಗುವವರ ಸಂಖ್ಯೆ ಹೆಚ್ಚಾದ್ದರಿಂದ ಸ್ವಾಮಿಗಳು ಆಶ್ರಮಕ್ಕೆ ಸೇರಿದ ತೆಂಗಿನ ತೋಟದ ಒಂದು ಷೆಡ್ಡಿನ ಮುಂಭಾಗದಲ್ಲಿ ಕುಳಿತು ಒಂದು ಗ್ರಂಥ ಬರೆದದ್ದೂ ಉಂಟು. ಈ ಸ್ವಾಮಿಗಳಿಗೆ ಓದಿ ಬರೆಯುವುದಕ್ಕೆ ವಿರಾಮ ಯಾವಾಗ ದೊರೆಯುವುದೋ ತಿಳಿಯದು. ಬೆಳಗಿನ ಜಾವ ಎದ್ದ ಕ್ಷಣದಿಂದ ರಾತ್ರಿ ಮಲಗುವವರೆಗೆ ಅವರಿಗೆ ಓಡಾಟದ ಕೆಲಸವೇ ಇರುತ್ತದೆ. ವಿದ್ಯಾರ್ಥಿನಿಲಯ, ಆಶ್ರಮದ ಕೆಲಸಗಾರರು, ಆಶ್ರಮಕ್ಕೆ ಸೇರಿದ ತೋಟ ಹೊಲಗಳಲ್ಲಿ ಕೃಷಿಕರ್ಮ ನಡೆಸುವ ಬೇಸಾಯಗಾರರು—ಇವರಿಗೆಲ್ಲ ಎರಡು ಹೊತ್ತೂ ಪುಷ್ಕಳವಾದ ಭೋಜನ ನಡೆಯಬೇಕು. ಅದಕ್ಕೆ ತಕ್ಕ ಉಗ್ರಾಣದ ವ್ಯವಸ್ಥೆಯಾಗಬೇಕು. ಆ ಉಗ್ರಾಣ ವಿವಿಧ ಸಾಮಗ್ರಿಗಳಿಂದ ಸದಾ ತುಂಬಿರಬೇಕು. ಇದಕ್ಕೆ ಅಗತ್ಯವಾದ ಹಣದ ವ್ಯವಸ್ಥೆ, ವ್ಯಾಪಾರ ಮಾಡಿದ ದಿನಸಿಗಳನ್ನು ಆಶ್ರಮಕ್ಕೆ ತರಿಸಿಕೊಳ್ಳುವುದು, ತರಿಸಿಕೊಂಡಾದ ಮೇಲೆ ಅವುಗಳ ರಕ್ಷಣೆ—ಸೂಕ್ತ ವಿತರಣೆ! ಇದೇನು ಸ್ವಲ್ಪ ಕೆಲಸವೆ? ಔಷಧಶಾಲೆಯ ಕೆಲಸವೇನು ಸಣ್ಣದೆ? ಭಾರತವರ್ಷದ ನಾನಾ ಕಡೆಗಳಿಂದ ಮೂಲಿಕಾದಿ ಸಾಮಗ್ರಿಗಳನ್ನು ತರಿಸಿಕೊಳ್ಳಬೇಕು. ಅದಕ್ಕೆ ಅಗತ್ಯವಾದ ಪತ್ರವ್ಯವಹಾರ ವನ್ನು ಸಕಾಲದಲ್ಲಿ ನಡೆಸಬೇಕು. ಇನ್ನು ಮುದ್ರಣಾಲಯ–'A printing office is a wanting office' ಎಂಬುದು ಗಾದೆಯ ಮಾತು. ಅದರ 'ಬೇಕು'ಗಳನ್ನು ಸದಾ ಪೂರೈಸಬೇಕು. ಇವೆಲ್ಲದರ ಜತೆಗೆ ಆಶ್ರಮದ ಗೋವುಗಳ ಪೋಷಣೆ. ವ್ಯವಸಾಯಕ್ಕೆ (tractor) ಟ್ರಾಕ್ಟರ್ ಇಟ್ಟಿದ್ದರೂ ಎತ್ತುಗಳನ್ನು ಕೈಬಿಡುವಂತಿಲ್ಲ. ಅನಿರೀಕ್ಷಿತವಾಗಿ ಯಂತ್ರಕ್ಕೆ ಖಾಯಿಲೆ ಬಂದಾಗ ಒಡನೆಯೇ ಕೆಲಸ ಮುಂದುವರಿಸಲು ಬಸವಣ್ಣ ಸಿದ್ಧನಾಗಿರ ಬೇಕು! ಆ ಎತ್ತುಗಳಿಗೆ ಬೇಕಾದ ಹುಲ್ಲು ಹುರುಳಿಗಳನ್ನು ಸಿದ್ಧವಾಗಿಟ್ಟುಕೊಂಡಿರಬೇಕು. ಆ ಮೂಕಜಂತು ಗಳನ್ನು ಉಪವಾಸ, ಅರೆಹೊಟ್ಟೆಗಳಿಗೆ ಗುರಿಪಡಿಸುವುದು ಪಾತಕ. ಅವಕ್ಕೆ 'ಪ್ಲೇಟ್‌ಮಿಲ್ಸ್' ಒದಗಿಸಿದರೆ ಕೆಲಸ ನಡೆಯದು. ಈ ಬೃಹತ್ಸಂಸಾರ ನಿರ್ವಹಣೆಗೆ ಸ್ವಾಮಿಗಳು ನಿರಂತರವಾಗಿ ಗಮನಕೊಡಬೇಕು. ಇವಕ್ಕೆ ಇಲ್ಲಿ ಜನ ಇದ್ದಾರೆ, ನಿಜ. ಆದರೆ ಸಮರ್ಥವಾದ ನಿರ್ದೇಶನ, ಮೇಲ್ವಿಚಾರಣೆಗಳು ನಡೆಯಲೇ ಬೇಕು. ಈ ಎಲ್ಲ ಕೆಲಸಗಳ ನಡುವೆ ಸ್ವಾಮಿಗಳು ವ್ಯಾಸಂಗ ಚಿಂತನಗಳನ್ನು ನಡೆಸಿ ಗ್ರಂಥಗಳನ್ನು ರಚಿಸಿದ್ದಾರೆ!

ಇಂದು ಅನಾಥಸೇವಾಶ್ರಮವನ್ನು ಸಂದರ್ಶಿಸುವವರಿಗೆ ಬಹಳ ಹರ್ಷವೇ ಆಗುತ್ತದೆ. ಇಂಥ

ಅಪೂರ್ವವಾದ ಸೇವಾಸಂಸ್ಥೆಯನ್ನು ಏಕಾಂಗ ಸಾಹಸದಿಂದ ಸ್ಥಾಪಿಸಿ ಬೆಳೆಸಿಕೊಂಡು ಬಂದಿರುವ ಸ್ವಾಮಿಗಳ ಸಾಧನೆಯನ್ನು ಕಂಡು ಬೆರಗೂ ಹುಟ್ಟುತ್ತದೆ. ಆದರೆ ಈ ಆಶ್ರಮ ಹುಟ್ಟಿದಾಗ ಏನು ಸೌಲಭ್ಯಗಳಿದ್ದುವು? ಯಾವ ಸ್ಥಿತಿಯಲ್ಲಿ ಶ್ರೀ ಸ್ವಾಮಿಗಳು ಕೆಲಸ ಮಾಡಿಕೊಂಡು ಬಂದರು ? ಈ ಕೆಲಸಕ್ಕೆ ಒದಗಿದ ವಿಘ್ನಗಳೆಷ್ಟು ? ಅವುಗಳನ್ನು ಗೆದ್ದ ಬಗೆ—ಇವನ್ನೆಲ್ಲ ಯೋಚಿಸಿದರೆ ಶ್ರೀ ಸ್ವಾಮಿಗಳವರು ಮೂವತ್ತು ವರ್ಷಗಳಿಂದ ಏನು ತಪಸ್ಸು ಮಾಡಿದರು ; ಎಷ್ಟು ಕಷ್ಟದಿಂದ ಈ ಭವ್ಯ ಸ್ಥಿತಿಯನ್ನು ಸಾಧಿಸಿದರು–ಎಂಬುದು ಅರಿವಾಗಿ ಈ ಆಶ್ರಮ ನಡೆದು ಬಂದ ದಾರಿ ಸುಲಭವಾದದ್ದಲ್ಲ, ಸುಖಮಯವಾದದ್ದಲ್ಲ, ಎಂಬುದು ಮನವರಿಕೆಯಾಗುತ್ತದೆ. ಮೈಯೆಲ್ಲ ಕಣ್ಣಾಗಿ ಎಲ್ಲ ವ್ಯವಹಾರಗಳನ್ನೂ ಗಮನಿಸುತ್ತ ಆಶ್ರಮದ ಹಿತಸಾಧನೆಗೆ ಸ್ವಲ್ಪವೂ ಧಕ್ಕೆ ಬರದಂತೆ ನಿರಂತರ ಜಾಗ್ರತಿಯನ್ನು ವಹಿಸಬೇಕು. ಸ್ವಾಮಿಗಳೇ ಹೇಳಿದ ಒಂದು ಚಿಕ್ಕ ಘಟನೆ ಇದಕ್ಕೆ ಉತ್ತಮ ನಿದರ್ಶನವಾಗಿದೆ. ಆಶ್ರಮದ ಹಿತಚಿಂತಕರೇ ಆದ ಒಬ್ಬ ಶ್ರೀಮಂತರಿಗೆ ಸ್ವಲ್ಪ ಆರ್ಥಿಕಕ್ಲೇಶ ಒದಗಿತು. ಆಗ ಅವರು ಬಂದು "ಸ್ವಾಮಿಗಳೆ, ಈಗ ಸ್ವಲ್ಪ ಮೊತ್ತ ಸಾಲಕೊಡಿ. ಇನ್ನೆರಡು ತಿಂಗಳಲ್ಲಿ ಬಡ್ಡಿ ಸಮೇತ ಹಿಂತಿರುಗಿಸುತ್ತೇನೆ" ಎಂದು ಕೇಳಿದರಂತೆ. ಮೇಲು ನೋಟಕ್ಕೆ ಇದರಲ್ಲೇನು ದೋಷ ಕಾಣದು. ಹಣಕ್ಕೆ ಮೋಸವಿಲ್ಲ, ಬಡ್ಡಿ ಬೇರೆ ಬರುತ್ತದೆ. ಕೇಳುತ್ತಿರುವವರು ಆಶ್ರಮದ ಅಭಿಮಾನಿಗಳು. ಆದರೆ ಶ್ರೀ ಸ್ವಾಮಿಗಳ ಉತ್ತರ ಬೇರೆಯೇ ಆಗಿತ್ತು. "ನೋಡಪ್ಪಾ, ನನಗೆ ಹಣಬೇಡಿತರುವ ಸ್ವಾತಂತ್ರ್ಯ ಉಂಟು. ತಂದ ಮೇಲೆ ಆಶ್ರಮಕ್ಕೆ ವೆಚ್ಚವಾಗಬೇಕು. ಅದನ್ನು ಬೇರೆಯವರಿಗೆ ಕೊಡಲು ನನಗೆ ಅಧಿಕಾರವಿಲ್ಲ. ಲೇವಾದೇವಿಗೆ ಈ ಆಶ್ರಮದಲ್ಲಿ ಅವಕಾಶವಿಲ್ಲ" ಎಂದು ಸ್ವಾಮಿಗಳು ಅವರ ಪ್ರಾರ್ಥನೆಯನ್ನು ಖಂಡತುಂಡವಾಗಿ ನಿರಾಕರಿಸಿ ಬಿಟ್ಟರು. ಇದರಿಂದ ಆ ಕ್ಷಣದಲ್ಲಿ ಆ ಅಭಿಮಾನಿಗೆ ಅಸಮಾಧಾನವಾದರೂ ಸ್ವಾಮಿಗಳ ವಾದದ ಹುರುಳು ಗೋಚರವಾದ ಮೇಲೆ ಅವರು ಮೊದಲಿಗಿಂತ ಹೆಚ್ಚಿನ ಅಭಿಮಾನಿಗಳೇ ಆಗಿದ್ದಾರೆ. ಒಬ್ಬರಿಗೆ ಸಾಲ ಕೊಟ್ಟರೆ ಇನ್ನು ಹತ್ತು ಜನ ಕೇಳುತ್ತಾರೆ. ಎಲ್ಲರಿಗೂ ಸಾಲ ಕೊಡತೊಡಗಿದರೆ ಅನಾಥಸೇವೆಗೆ ಅವಕಾಶವೆಲ್ಲಿ ? 'ಹಣವೂ ಹೋಯಿತು ಜನವಿಶ್ವಾಸವೂ ಹೋಯಿತು' ಎಂದಾದರೆ ಹೇಗೆ ? ಶ್ರೀ ರಾಘವೇಂದ್ರಸ್ವಾಮಿಗಳು ಪರಮವಿರಕ್ತರು. ಅವರಿಗೆ ಯಾವ ಲೌಕಿಕ ಅಪೇಕ್ಷೆಯೂ ಇಲ್ಲ. ಅವರು ದೈವಭಕ್ತರು, ಲೋಕಸೇವಾನಿರತರು. ಆದರೆ ಲೌಕಿಕ ವ್ಯವಹಾರದಲ್ಲಿಯೂ ಅಷ್ಟೇ ದಕ್ಷರು, ದೂರ ದೃಷ್ಟಿಯುಳ್ಳವರು! ಆದ್ದರಿಂದಲೇ ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮ ಅಕುಂಠಿತವಾಗಿ ಬೆಳೆಯುತ್ತ ಬಂದಿದೆ.

ಶ್ರೀ ಶ್ರೀ ರಾಘವೇಂದ್ರಸ್ವಾಮಿಗಳಿಗೆ, ಜೈ!

ಶಿವರಾತ್ರಿ

ನಾನು ಹುಟ್ಟಿದ್ದು 1911 ನೆ ಇಸವಿ. ವರ್ಷವರ್ಷವೂ ತಪ್ಪದೆ ಬರುತ್ತಲೇ ಇತ್ತು, ಹೋಗುತ್ತಲೇ ಇತ್ತು, ಶಿವರಾತ್ರಿ. ವೈಷ್ಣವ ಮತದಲ್ಲಿ ಹುಟ್ಟಿದಷ್ಟೇ ಕಾರಣದಿಂದ, ಹಗಲು ಹೋಳಿಗೆ ಪಾಯಿಸ ಹಬ್ಬದ ಊಟ ಗಡದ್ದಾಗಿ ಹೊಡೆದು, ಸಂಜೆ ಈಶ್ವರನ ಗುಡಿಗೆ ಹೋಗಿ, ಪ್ರದಕ್ಷಿಣೆ ನಮಸ್ಕಾರ ಹಾಕಿ ಹಿಂತಿರುಗಿ, ಮತ್ತೆ ಮೈಮರೆತು ನಿದ್ರೆ ಹೋಗುತ್ತಿದ್ದೆ.

ಅರವತ್ತೆರಡು ವರ್ಷಗಳು ಹೀಗೇ ಕಳೆದಿದ್ದವು.

ಮರುವರ್ಷ, ನನಗೆ ತುಂಬ ಆತ್ಮೀಯರಾದ ಶ್ರೀ ತ. ಸು. ಶಾಮರಾಯರು—"ನೀನು ಮಲ್ಲಾಡಿಹಳ್ಳಿ ನೋಡಿಲ್ಲ, ಸ್ವಾಮಿಯವರ ದರ್ಶನ ಮಾಡಿಲ್ಲ, ಅವರ ಆಶೀರ್ವಾದ ಪಡೆದಿಲ್ಲ ; ಇಷ್ಟರಲ್ಲೇ ಅಲ್ಲಿಂದ ಆಹ್ವಾನ ಬರುತ್ತದೆ. ಬಿಡುವಿಲ್ಲವೆಂದು ಮಾಮೂಲು ಬುರುಡೆಹೊಡೆಯದೆ ಹೋಗು ಸಭೆ ತುಂಬಿರುತ್ತದೆ. ನಿನಗೆ ತೋಚಿದ ನಾಲ್ಕು ಮಾತಾಡು" ಎಂದು....ಎಂದು....ಹುಂ, ಆಜ್ಞೆ ಮಾಡಿದರು.

ಕೆಲವು ವೇಳೆ ಹಿರಿಯರು ಹೇಳಿದ್ದನ್ನು ನಾನು ಕೇಳುವುದು ಉಂಟು.

ಕೇಳಿದೆ. ರೈಲು ಹತ್ತಿದೆ. ಒಂದು ತಗಣೆಯೂ ಕಚ್ಚಲಿಲ್ಲ. ಬೆಚ್ಚನೆ ಮಲಗಿದೆ.

ಎದ್ದೆ, ಇಳಿದೆ. ಟಿಕೆಟ್ಟು ಕಲೆಕ್ಟರನನ್ನು ಹುಡುಕಿ, ಅವನ ಕೈಲಿಟ್ಟು, ಸ್ಟೇಷನ್ನಿನ ಗೇಟು ದಾಟಿದೆ. ಕಗ್ಗತ್ತಲು. ಮುಖಕ್ಕೆ ತಣ್ಣನೆಯ ಗಾಳಿ ಸ್ವಾಗತ ನೀಡಿತು. ಸ್ಟೇಷನ್ನಿಗೆ ಯಾವುದಾದರೂ ನರಪ್ರಾಣಿ ಬರಬೇಕಿತ್ತಲ್ಲವೇ ಎನ್ನುವ ನನ್ನ ಸ್ವಗತ ಪ್ರಶ್ನೆ ಪ್ರಾಂಪ್ಟ್ ಮಾಡಿಸಿಕೊಳ್ಳುತ್ತಿರುವಂತೆಯೇ ಕಾಣಿಸಿದವು, ಕಾರಿನ ದೀಪಗಳು ; ಕತ್ತಲನ್ನು ಸೀಳಿಕೊಂಡು ದೂರದಿಂದ ಸಮೀಪಿಸುತ್ತಿದ್ದವು, ವೇಗವಾಗಿ.

ಕಾರು ಬಂತು. ನಿಂತಿತು. ಇಬ್ಬರು ದಡಬಡಲಾಗಿ ಇಳಿದರು.

"ರೈಲು ಬಂದ್ಬಿಡ್ತೇ, ಸಾರ್ ?"

"ಬಂತು. ಹೋಯಿತು."

"ಅಂ....ಉಂ....ತಾವು....ಪರ್ವತವಾಣಿಯವರಲ್ಲವೇ ?"

"ಯಾಕಲ್ಲ ? ಅಲ್ಲ ಅಂದವರನ್ನ ಕೋರ್ಟಿಗೆಳೆದು ಹರಾಜು ಹಾಕಿಸಿ ಬಿಟ್ಟೇನು—"

ಅವರು ಒಬ್ಬರನ್ನೊಬ್ಬರು ನೋಡಿಕೊಂಡರು. ಪಾಪ, ಆಶ್ರಮವಾಸಿಗಳು. ವಕ್ರ ಮಾತುಗಳ ಪರಿಚಯವಿಲ್ಲದಿದ್ದವರು ಅಂತ ನಾನು ತಿಳಿದುಕೊಂಡದ್ದು ತಪ್ಪು ಅಂತ ಆಮೇಲೆ ಗೊತ್ತಾಯಿತು.

ಕಾರು ಹೊರಟಿತು. ಮಲ್ಲಾಡಿಹಳ್ಳಿ ಸೇರಿತು.

"ಇದೇ, ಸಾರ್, ತಮ್ಮ ಬಿಡಾರ" ಅಂದರು.

ಕುರ್ಚಿ, ಮೇಜು, ಮಂಚ, ಹಾಸಿಗೆ, ದೀಪ, ನಲ್ಲಿ, ಎಲ್ಲವನ್ನು ಒಂದೊಂದಾಗಿ ನೋಡಿ ಮೂಗಿನ ಮೇಲೆ ಬೆರಳು ಇಟ್ಟೆ–ಕನ್ವೆನ್ಷನಲ್ ನಟನ ಥರಾ. ಬೋರೆಗೌಡ ಬೆಂಗಳೂರಿಗೆ ಬಂದು ಬೆರಗಾದದ್ದು ಸಹಜ ! ಆದರೆ ಈ ನಾನು, ಬೆಂಗಳೂರಿನಿಂದ ಅಲ್ಲಿ ಹೋಗಿ "ಹಳ್ಳಿ" ಹಾಗಾಡಿದ್ದು ನನ್ನ ಕರೆತಂದವರಿಗೆ ಹೇಗನ್ನಿಸಿತೋ !

ಆಶ್ರಮವೆಂದರೆ ನಮಗೆ ಕಾವ್ಯಗಳಿಂದ, ನಾಟಕಗಳಿಂದ ಚಲನ ಚಿತ್ರಗಳಿಂದ, ಒಂದು ಸಾಮಾನ್ಯ ಕಲ್ಪನೆ–ಹುಲ್ಲಿನ ಗುಡಿಸಲು, ಗಡ್ಡದ ಋಷಿ, ಅಹಲ್ಯೆಯಂಥ ಎಕ್ಸೆಪ್ಷನ್ಸ್ ಬಿಟ್ಟರೆ ಸರ್ವಸಾಮಾನ್ಯವಾಗಿ ಪತಿವ್ರತೆ ಗೊಡ್ಡು ಪತ್ನಿಯರು. ಲಂಗೋಟಿ–ಪಿಳ್ಳುಜುಟ್ಟುಗಳ ಶಿಷ್ಯರು, ಕಟ್ಟಿಗೆ ಹೊರೆ, ಆಕಳು, ಕರು, ಹುಲ್ಲು, ಸಗಣಿ, ಬಾಳೆಗಿಡ, ಸಂಸ್ಕೃತ, ಹೋಮ, ಹೊಗೆ ಇತ್ಯಾದಿ ಇತ್ಯಾದಿ. ಇಲ್ಲಿ—

ಯಾವ ಪಟ್ಟಣದ ಪ್ರವಾಸಿ ಮಂದಿರಕ್ಕೂ ಕಡಮೆ ಅನ್ನಿಸದ ಸೌಕರ್ಯಗಳು....ಹಲ್ಲುಜ್ಜಿ, ಮುಖ ಗಲ ಬರಿಸಿದೆ, ಬಿಸಿ ಬಿಸಿ ಕಾಫಿ ಹಬೆ ಹಾರಿಸುತ್ತ ನನ್ನ ಉದರಪ್ರವೇಶಕ್ಕಾಗಿ ಹಾತೊರೆಯುತ್ತಿದ್ದುದನ್ನು ಕಂಡೆ. ಪ್ರಾತರ್ವಿಧಿ ಮುಗಿಸಿ ಹೊರಗೆ ಕಾಲಿಟ್ಟೆ.

ಬೆಳಕು ಹರಿಯುತ್ತಿತ್ತು. ಯುವಕರು ಸಾಮೂಹಿಕ ಸೂರ್ಯನಮಸ್ಕಾರ ಹಾಕುತ್ತಿದ್ದರು. ಬಲಗೈ ಯನ್ನು—ಮುಂಗೈಯನ್ನು–ಎತ್ತಿ ಹಣೆಗೆ ಬಡಿದು "ಗುಡ್ ಮಾರ್ನಿಂಗ್" ಎನ್ನುವ ಫ್ಯಾಷನ್ನಿನ ಯುಗದಲ್ಲಿ, ಪಾಪ,ಈ ತರುಣರು, ಇಡೀ ಮೈಮುರಿದು ಸೂರ್ಯನಿಗೆ ನಮಸ್ಕಾರ ಹಾಕುವುದು ನನಗೆ ತುಂಬ ಸೋಜಿಗವೆನಿಸಿತು. —ಬಿಡಾರದ ನವ್ಯತೆಗೂ ಈ ಹಳೆ ನಮಸ್ಕಾರ ಪದ್ಧತಿಗೂ ಎಂಥ ಒಳ್ಳೆ ಮದುವೆ ಎನ್ನಿಸಿತು.

ಚಿಕ್ಕ ಸ್ವಾಮಿಯವರು ಆಫೀಸು ಕೊಠಡಿಯಲ್ಲಿ ಕಾರ್ಯಮಗ್ನರಾಗಿದ್ದರು. ಕೈ ಮುಗಿದೆ. ಕುಶಲ ಪ್ರಶ್ನೆ–ಉತ್ತರ ಮುಗಿದವು.

"ಉಪಾಹಾರ ಇನ್ನು ಸ್ವಲ್ಪ ಹೊತ್ತಿನಲ್ಲೆ ಸಿದ್ಧವಾಗುತ್ತೆ. ಅಷ್ಟರಲ್ಲಿ ನಮ್ಮ ಆಶ್ರಮ ನೋಡಿಬರೋಣ" ಎಂದು, ಎದ್ದರು.

ನೋಡಿಸಿದರು. ನೋಡಿದೆ. ವಿದ್ಯಾರ್ಥಿಗಳ ವಸತಿಗೃಹ, ರಾಷ್ಟ್ರೀಯ ವಿವಿಧ ಉದ್ದೇಶಗಳನ್ನೊಳಗೊಂಡ ಪ್ರೌಢಶಾಲಾ, ಸರ್ವಸೇವಾ ಬೋಧಕ ಶಿಕ್ಷಣಾಲಯ, ವೃತ್ತಿ ಶಿಕ್ಷಣ ಶಾಲಾ, ವಾಚನಾಲಯ ಹಾಗೂ ಪುಸ್ತಕ ಭಂಡಾರ, ಧರ್ಮಶಾಲೆ, ಅನ್ನಪೂರ್ಣ ಮಂದಿರ, ವಿವಾಹ ಮಂಟಪ, ಅಂಚೆ ಮನೆ, ಉಪಾಧ್ಯಾಯರುಗಳ ವಸತಿ ಗೃಹಗಳು, ಗೋಶಾಲೆ–ಎಲ್ಲವನ್ನೂ ತೋರಿಸುತ್ತಾ ಅಲ್ಲಲ್ಲಿ ನಡೆಯುವ ಕಾರ್ಯ ವಿವರಗಳ ಮಾಹಿತಿ ಕೊಟ್ಟರು. ನನಗೆ ತುಂಬ ಪ್ರಿಯವಾದ ಮತ್ತೊಂದು ಸ್ಥಳ ತೋರಿಸಿದರು. ಅದೇ ಆಶ್ರಮದ ವ್ಯಾಯಾಮಶಾಲೆ. ಕುಸ್ತಿಯ ಮಟ್ಟಿ ನೋಡಿದೆ. ನನ್ನ ಮಹಾರಾಜಾ ಕಾಲೇಜಿನ ವಿದ್ಯಾರ್ಥಿ ಕಾಲ–ಕಾಲೇಜಿನ ಮಟ್ಟಿ, ಕೆಮ್ಮಣ್ಣು ವಾಸನೆ–ನೆನಪಿಗೆ ಬಂದವು. ಅಷ್ಟು ಹೊತ್ತಿಗೆ ರಾಘವೇಂದ್ರ ಸ್ವಾಮಿಯವರೇ ದಯಮಾಡಿಸುತ್ತಿದ್ದರು. ಚಿಕ್ಕ ಸ್ವಾಮಿಯವರು ಪರಿ ಚಯ ಮಾಡಿಸಿಕೊಡುವ ಅಗತ್ಯವೇ ಇರಲಿಲ್ಲ.

"ನಿಮ್ಮ ಪರಿಚಯ ನನಗುಂಟು. ನಾನು ಬೆಂಗಳೂರಿನಲ್ಲಿ ನಿಮ್ಮನ್ನು ನೋಡಿದ್ದೇನೆ–ಒಂದು ನಾಟಕದಲ್ಲಿ" ಎಂದು ಅಪ್ಪಣೆ ಕೊಡಿಸಿದರು. ನಾಟಕ ಬರೆದು, ಆಡಿದ್ದು ಸಾರ್ಥಕವೆಂದು ಅನ್ನಿಸಿತು. ಮುಂದೆ, ಸ್ವಾಮಿಗಳವರು ಮುಂದೆ, ನಾನು ಹಿಂದೆ.

ಆಯುರ್ವೇದ ಚಿಕಿತ್ಸಾಲಯದ ಕಡೆ ಕರೆದೊಯ್ದರು. ರೋಗಿಗಳಿಗೆ ವಸತಿಸೌಕರ್ಯ, ಪರೀಕ್ಷಾ ಕೊಠಡಿ, ಔಷಧಿಗಳನ್ನು ತಯಾರಿಸುವ ಗೃಹ, ಕ್ರಮ ಎಲ್ಲವನ್ನೂ ತೋರಿಸಿ ವಿವರಿಸಿದರು. ಡಾ. ಪಾರ್ಥನಾರಾಯಣ ಪಂಡಿತರು ಹೇಗೆ ಆಯುರ್ವೇದ ಪದ್ಧತಿಯಿಂದ ನನ್ನತಂಗಿ ಹಾಗೂ ಭಾವ ಮೈದುನರ ಕರಳು ಕಾಲುಗಳನ್ನುಉಳಿಸಿ ಕೊಟ್ಟ ಕತೆ ಹೇಳಿದೆ. ತಲೆದೂಗಿ, ಆಯುರ್ವೇದದಲ್ಲಿ ನಂಬಿಕೆ ಅಗತ್ಯವೆಂದು ಹೇಳಿ ತಾವು ಹೇಗೆ ತಮ್ಮ ಚಿಕಿತ್ಸೆಯಿಂದ ನಾಲ್ಕು ರೋಗಿಗಳು ಗಂಟಲು ಕ್ಯಾನ್ಸರಿನಿಂದ ನರಳುತ್ತಾ ಯಮನ ದವಡೆ ಹೊಗುತ್ತಿದ್ದವರು ಈಗಲೂ ಬದುಕಿ

ಬಾಳುತ್ತಿದ್ದಾರೆಂದೂ, ಕ್ಯಾನ್ಸರನ್ನು ನಿಜಕ್ಕೂ ಜಯಿಸಬಹುದೆಂದೂ ಹೇಳಿ ರಿಜಿಸ್ಟರಿನ ದಾಖಲೆ ಸಾಕ್ಷಿ ತೋರಿಸಿದರು. ಬಿಟ್ಟಿ ವಸತಿ, ಬಿಟ್ಟಿ ಊಟ, ಬಿಟ್ಟಿ ಚಿಕಿತ್ಸೆ—ರೋಗಿಗೆ ಇದಕ್ಕಿಂತ ಇನ್ನೇನು ಬೇಕು? ಆದರೆ ವೈದ್ಯನಿಗೆ? ಉಚಿತವಾಗಿ ನಾರು ಬೇರು ಮೂಲಿಕೆಗಳನ್ನು ಮಲ್ಲಾಡಿಹಳ್ಳಿಗೆ ಬಿಟ್ಟಿ ಕೊಡುವವರು ಯಾರು ? ಹಣಕ್ಕೆ–ಭಿಕ್ಷಾ ಪಾತ್ರೆ !

ಉಪಾಹಾರದ ನಂತರ ಸ್ವಾಮಿಯವರ ವಸತಿ, ನೆಲಮಾಳಿಗೆಯಲ್ಲಿ ಧ್ಯಾನಮಂದಿರ ನೋಡಿದಾಗ–ಇದು ಕಲಿಗಾಲವಾದರೂ, ಅವನ ಆಟ ಸಾಗದ ಸ್ಥಳಗಳೂ ಉಂಟೆಂದೆನಿಸಿತು.

ಪ್ರಿನ್ಸಿಪಾಲರ ಭೆಟ್ಟಿಯಾಯಿತು. ವಿದ್ವಾಂಸ ಸತ್ಯನಾರಾಯಣ ಅವರ ಪರಿಚಯವೂ ಆಯಿತು. ಶಿವರಾತ್ರಿ, ಪಾನಕ ಕೋಸಂಬ್ರಿ ಹೊಟ್ಟೆಗೆ ಸೇರಿಸುತ್ತ ಮಾತಾಡಿದೆವು—ಲೋಕದ ಮಾತೆಲ್ಲ ಆಡಿದೆವು.

ಭರ್ಜರಿ ಭೋಜನವೂ ಆಯಿತು. ದೊಡ್ಡ ಸಮಾರಾಧನೆ ! ಸ್ವಾಮಿಯವರೇ ಖುದ್ದಾಗಿ ನಿಂತು, ಓಡಾಡುತ್ತ, ನಮಗೆ ಸಿಹಿಯೂಟ ಉಣಿಸಿದರು— ತಾವೂ, ಚಿಕ್ಕ ಸ್ವಾಮಿಯವರೂ ಉಪವಾಸವಿದ್ದರೂ ! ಶಿವರಾತ್ರಿಯ ಮೂರು ದಿನಗಳೂ ಅವರು ಉಪವಾಸ ಮಾಡುವರಂತೆ !

ಸಂಜೆ, ಎಂಥ ಸಂಜೆ ಅದು ! ಸುಮಾರು 200ಕ್ಕೂ ಹೆಚ್ಚಿನ ಸಂಖ್ಯೆಯ ತರುಣ ತರುಣಿಯರು ವ್ಯಾಯಾಮದಲ್ಲಿ ಸಮವಸ್ತ್ರ ತೊಟ್ಟು–ನೀಡಿದರು ವ್ಯಾಯಾಮ ಕ್ರೀಡಾಪ್ರದರ್ಶನ–ಆರೋಗ್ಯಭಾಗ್ಯದ ಪ್ರದರ್ಶನ. ನಂತರ ಯೋಗಾಸನ ಪ್ರದರ್ಶನ ! ಯೋಗಾಸನ ಪ್ರಾಣಾಯಾಮಗಳಿಂದ ನಾನು 4 ಅಡಿ $10\frac{1}{2}$ ಅಂಗುಲಗಳಿಂದ ಕೇವಲ ಮೂರು ವರ್ಷಗಳಲ್ಲಿ 5 ಅಡಿ $7\frac{3}{4}$ ಅಂಗುಲಗಳಿಗೆ ಬೆಳೆದಿದ್ದು ಜ್ಞಾಪಕಕ್ಕೆ ಬಂದು, ನನ್ನ ಪ್ರಿಯ ಆಸನಗಳನ್ನು ಇತರರು ಹಾಕುತ್ತಿರುವುದನ್ನು ಕಂಡು ಹರ್ಷಿಸಿದೆ. 82–83 ವರ್ಷ ದಾಟಿದ ಸ್ವಾಮಿಯವರೇ ಚಡ್ಡಿ ಬನಿಯನ್ ತೊಟ್ಟು ಜಿಂಕೆ ಮರಿಯಂತೆ ವೇದಿಕೆಗೆ ಹಾರಿ ಅತಿ ಕಷ್ಟ ಆಸನಗಳನ್ನು ಅತಿ ಸುಲಭವಾಗಿ ಹಾಕುತ್ತಿದ್ದುದು ಈಗಲೂ ನನ್ನ ಕಣ್ಣಿಗೆ ಕಾಣಿಸುತ್ತಿದೆ. ಹಬ್ಬ. ಕಣ್ಣಿಗೆ ಹಬ್ಬ.

ಕಿವಿಗೆ ಹಬ್ಬ. ಸ್ವಾಮಿಗಳೊಬ್ಬರು ಗೀತಾ ಪ್ರವಚನ ಮಾಡಿದರು. ದೀರ್ಘಪ್ರವಚನ.

ತುಂಬಿದ ಸಭೆ ಮುಂದೆ ನನ್ನನ್ನು ನಿಲ್ಲಿಸಿದರು. ಇಂಥ ಸ್ಥಳದಲ್ಲಿ ನಾನು ಯಾವ ವಿಷಯ ಕುರಿತು ಮಾತಾಡಬೇಕು ? ಬರುವುದು ಒಂದೇ ವಿದ್ಯೆ–ನಾಟಕ ವಿದ್ಯೆ. ಷೇಕ್ಸ್‌ಪಿಯರನನ್ನು ಸ್ಮರಿಸಿದೆ. ಶಂಕರಾಚಾರ್ಯರನ್ನು ನೆನೆಸಿಕೊಂಡೆ. ಮಧ್ವಾಚಾರ್ಯರು ಮಾತಾಡು ಎಂದಂತಾಯಿತು. ಬಾಯಿ ಬಿಟ್ಟೆ.

ಈ ಜಗತ್ತೇ ನಾಟಕ ರಂಗ, ಇಲ್ಲಿ ಗಂಡಸರೂ ಹೆಂಗಸರೂ ಎಲ್ಲ ನಟ ನಟಿಯರಷ್ಟೇ ಎಂದು ಷೇಕ್ಸ್‌ಪಿಯರ್ ನುಡಿದ ಮಾತುಗಳನ್ನು ಆಧಾರವಾಗಿಟ್ಟುಕೊಂಡು ಮಾತು ಬೆಳೆಸಿದೆ. ನಾಟಕರಂಗ ಮತ್ತು ಜಗತ್ತು ಯಾವ ಯಾವ ಎಷ್ಟೆಷ್ಟು ಅಂಶಗಳಿಂದ ಮಿಥ್ಯ, ಸತ್ಯ ವಿವರಿಸುತ್ತಾ ನಾವು ಈ ಜಗತ್ತಿನಲ್ಲಿರುವ ತನಕ ಇದು ಸತ್ಯವೆಂದು ಒಪ್ಪಿ ಹೇಗೆ ಬಾಳಬೇಕು, ಆದರೆ ಇದೇ ಎಲ್ಲವೂ ಅಲ್ಲ, ಬೇರೊಂದು ಸತ್ಯವಿದೆ. ಅದಕ್ಕೆ ಬೆಲೆಕೊಟ್ಟರೆ ಮಾತ್ರ ಈ ನಾಟಕದಲ್ಲೂ ನಾವು ನಟರಾದದ್ದು ಸಾರ್ಥಕವೆಂದು, ಪ್ರೇಕ್ಷಕರು ಚಪ್ಪಾಳೆ ತಟ್ಟುತ್ತಾರೆ–ಎಂದು–ನನ್ನ ವಿಚಿತ್ರಭಾವನಾ ಪ್ರವಚನ ಮುಗಿಸಿದೆ.

ಉತ್ಸವಗಳು, ವೈಭವ, ಅಲ್ಲಿ ನೋಡಲು ರಾಮ. ಇಲ್ಲಿ ನೋಡಲು ರಾಮ ಎಂಬಂತೆ ಅಲ್ಲಿ ನೋಡಲು ಸ್ವಾಮಿಯವರು, ಇಲ್ಲಿ ನೋಡಲು ಸ್ವಾಮಿಯವರು. ಎಲ್ಲೆಲ್ಲೂ ಸ್ವಾಮಿಯವರೇ ! ಉಪವಾಸವಿದ್ದರೂ ಎಂಥ ಲವಲವಿಕೆ ! ಉಪವಾಸದ ಮಾತಾಡುವಾಗ ಊಟದ ಮಾತೂ ಆಡಲೇಬೇಕು. ಸ್ವಾಮಿಯವರುಗಳು ಊಟವೇನೋ ಮಾಡುತ್ತಾರಂತೆ–ಉಪ್ಪಿಲ್ಲ, ಕಾರವಿಲ್ಲ, ಹುಳಿಯಿಲ್ಲ–ಮೂರೂ ಇಲ್ಲದ ಊಟ ಎಂಥ ಊಟವಿರಬಹುದು ? ಒಗ್ಗರಣೆಯ ವಾಸನೆಯೇ ಕೂಡದಂತೆ. ಸಾಸಿವೆ ಕ್ರಿಮಿನಾಶಕವಾದರೂ ಕರುಳನ್ನು ಬಾಧಿಸುತ್ತದಂತೆ ! ಸಾಸಿವೆ

ಇಂಗು ವಗ್ಗರಣೆ ಹಾಕಿದರೆ ಎಂಥ ಕೆಟ್ಟ ಅಡಿಗೆಯೂ ಸೊಗಸೆನ್ನಿಕೊಳ್ಳುತ್ತದೆ. ಈ ಸೊಗಸು ಅವರ ನಾಲಗೆಗಳನ್ನು ಕೆಡಿಸಿಯೇ ಇಲ್ಲವಂತೆ !

ರಾತ್ರಿ, ಅವರಿಗೆ ಜಾಗರಣೆ.

ನನಗೆ ನಿದ್ದೆ.

ಬೆಳಗ್ಗೆ ಎದ್ದೆ. ಸರ್ವರಿಗೂ ನಮಸ್ಕಾರ ಹಾಕಿದೆ, ಸವಿನೆನಪುಗಳನ್ನು ಮೆಲುಕುಹಾಕುತ್ತಾ ಬೆಂಗಳೂರಿಗೆ ಹಿಂತಿರುಗಿದೆ.

ಮಲ್ಲಾಡಿಹಳ್ಳಿ ಒಂದು ಪುಟ್ಟ ಪಟ್ಟಣವೇ ! ಆಶ್ರಮದಲ್ಲಿ ಏನಿಲ್ಲ ? ಎಲ್ಲ ಉಂಟು. ಇವೆಲ್ಲ ಹೇಗೆ ಬಂದವು ? ಸ್ವಾಮಿಯವರೊಬ್ಬರ ಶ್ರಮದಿಂದ.

ಆಳು ಅಂಥ ಎತ್ತರವಿಲ್ಲ ಸುತ್ತಳತೆಯೂ ಸ್ವಲ್ಪವೇ. ಮೂರ್ತಿ ಚಿಕ್ಕದೇ. ಆದರೆ–ಸಂಗೀತಪ್ರಿಯರಾಗಿ, ಪೂರ್ವಾಶ್ರಮದಲ್ಲಿ ನಟರಾಗಿ, ವೈದ್ಯರಾಗಿ, ಶಿಕ್ಷಕರಾಗಿ, ದಕ್ಷ ಆಡಳಿತಗಾರರಾಗಿ, ಮಕ್ಕಳೊಂದಿಗೆ ಮಕ್ಕಳಾಗಿ, ಹಿರಿಯರಿಗೆ ಹಿರಿಯರಾಗಿ ಭಿಕ್ಷಕ್ಕೆ ರಾಗಿತಂದು ಆಶ್ರಮ ಕಟ್ಟಿದ್ದಾರೆ. ಈ ಆಶ್ರಮದಲ್ಲಿ, ಹೊರಗೆ ಎಲ್ಲೆಲ್ಲೂ ಹೊಲಸೆಬ್ಬಿಸುವ ಜಾತಿನಾತವಿಲ್ಲ, 'ನೀನಾವ ಜಾತಿ ?' ಎನ್ನುವ ಪ್ರಶ್ನೆಯೇ ಹುಟ್ಟಲು ಬಿಟ್ಟಿಲ್ಲ. ಧಾರ್ಮಿಕ ಲೌಕಿಕ ಕುದುರೆಗಳನ್ನು ಆಶ್ರಮದ ರಥಕ್ಕೆ ಕಟ್ಟಿ ಗಜಾನನ ಉತ್ಸವ, ಶಿವರಾತ್ರಿ ಉತ್ಸವ,ಗಣರಾಜ್ಯ ಹಾಗೂ ಸ್ವಾತಂತ್ರ್ಯ ದಿನಾಚರಣೆ-ಎಲ್ಲವನ್ನೂ ಉತ್ಸಾಹದಿಂದ ಓಡಿಸಿಕೊಂಡು ಹೋಗುತ್ತಿರುವ ಇಂಥ "ತಿರುಕ"ರು ನಮಗೆ ಅಗತ್ಯ, ಆದರ್ಶ. ಎಲ್ಲ ಮಠಗಳೂ, ಎಲ್ಲ ಮಠಾಧಿಪತಿಗಳೂ ಒಮ್ಮೆ ಈ ಅನಾಥಾಶ್ರಮವನ್ನು ಹೊಕ್ಕು ಕಾರ್ಯಕ್ರಮಗಳನ್ನು ಗಮನಿಸಿದರೆ, ಸಾಮಾನ್ಯ ಮನುಷ್ಯನಿಗೆ ಹೆಚ್ಚು ಸೌಖ್ಯಲಭಿಸುವುದರಲ್ಲಿ ಸಂದೇಹವಿಲ್ಲವೆಂಬುದು ನನ್ನ ನಂಬಿಕೆ.

ಅತ್ಯದ್ಭುತವಾದ ಚುರುಕಿನಿಂದ ಅಣುಶಕ್ತಿಯಂತೆ ಇರುವ ಶ್ರೀ ಸ್ವಾಮೀಜಿಯವರು ಸಾಂಸ್ಕೃತಿಕ ಮತ್ತು ಆರ್ಥಿಕ ಪ್ರಚಾರ ಪ್ರಸಾರದಲ್ಲಿ ಅದಮ್ಯವಾದ ಶಕ್ತಿಯನ್ನು ತೋರಿಸಿದ್ದಾರೆ.

—ಎನ್. ಎಸ್. ವೆಂಕಣ್ಣಯ್ಯ

ಜಿ. ಕೆ. ಶೇಷಾಚಲರಾವ್

ನಾ ಕಂಡ ತಿರುಕ

ತಿರುಕರೆಂದರೆ ತಲೆತಿರುಗುತ್ತದೆ, ದುರ್ಭಿಕ್ಷದ ಈ ಕಾಲದಲ್ಲಿ ! ಒಂದು ತರಹೆ ತಿರುಕರಲ್ಲ, ನಾನಾ ತರಹೆ. ನಾನಾ ವೇಷ. ಹೊಟ್ಟೆಗೆ ಹಿಡಿ ಹಿಟ್ಟಿಲ್ಲದೆ ತಿರುಗಿ ತಿರಿದುಣ್ಣುವ ತಿರುಕರು ! ರಟ್ಟೆಯಲ್ಲಿ ಬಲವಿದ್ದೂ, ಮೈಯಲ್ಲಿ ಕಸುವಿದ್ದೂ ತಿರುಕರ ಸೋಗು ಹಾಕಿ ಹಾಳು ಹೊಟ್ಟೆ ಹೊರೆಯುವ ಸೋಮಾರಿಗಳು ಕೆಲವರು. ಚಿತ್ರಲಿ ಬೈರಾಗಿಗಳ ವೇಷ ತೊಟ್ಟು ಬೇಡುವ ತಿರುಕರು ಹಲವರು ಇನ್ನು ಕಣ್ಣಿಲ್ಲದ, ಕಾಲಿಲ್ಲದ, ಕಿವಿ ಇಲ್ಲದ ತಿರುಕರಿಗೂ ಕೊರತೆ ಇಲ್ಲ. ದುರ್ದೈವಿ ಭಾರತದಲ್ಲಿ ಎಲ್ಲೆಲ್ಲೂ ತಿರುಕರ ಪಿಡುಗೇ ಕಾಣಬರುತ್ತದೆ. ಅವರ ಹಾವಳಿ, ಧಾಳಿ ಅಷ್ಟಿಷ್ಟಲ್ಲ. ತಿರುಕನೆಂದರೆ ಏಕೋ ಏನೋ ಜಿಗುಪ್ಸೆಯಾಗುತ್ತದೆ. ಕಳ್ಳ ತಿರುಕರ ಬಗ್ಗೆ ಸ್ವಲ್ಪವೂ ಕರುಣೆಯಾಗಲೀ, ಮಮತೆಯಾಗಲಿ ಮೂಡುವುದೇ ಇಲ್ಲ. ಆದರೆ ನಾ ಕಂಡ ತಿರುಕನ ಕಥೆಯೇ ಬೇರೆ. ಅವನೊಬ್ಬ ವಿಚಿತ್ರ ತಿರುಕ.

ಸುಮಾರು ಮೂರು ತಿಂಗಳ ಹಿಂದೆ ದಾವಣಗೆರೆಗೆ ಹೋಗಿದ್ದೆ. ಅಂದು ಸಂಜೆ ರಾಜನಹಳ್ಳಿ ಹನುಮಂತಪ್ಪನವರ ಧರ್ಮಛತ್ರದ ಮುಂದೆ ಹಾದು ಹೋಗುವಾಗ ಛತ್ರದಲ್ಲಿ ಕಿಕ್ಕಿರಿದ ಜನಸಂದಣಿ ಕಾಣ ಬಂದಿತು. ಕುತೂಹಲ ಕೆರಳಿ ಹತ್ತಿರ ಹೋದೆ. ಏನೆಂದು ಕೇಳಿದೆ. "ಯಾರೋ ತಿರುಕನಂತೆ ಯೋಗಾಸನ ಪ್ರದರ್ಶನವಂತೆ" ಎಂದರು. ತಿರುಕ ! ಯೋಗಾಸನ ಪ್ರದರ್ಶನ ! ಎಲಾ, ಇವನು ಯಾರೋ ಕಳ್ಳ ತಿರುಕನೇ ಇರಬೇಕು. ಜನಗಳಿಗೆ ಮೋಡಿ ಹಾಕಿ ಹೊಟ್ಟೆ ಹೊರೆದುಕೊಳ್ಳಲು ಹೂಡಿರುವ ಹೊಂಚು ಎನ್ನಿಸಿತು. ಇರಲಿ, ನೋಡುವ ಎಂದು ಒಳನುಗ್ಗಿದೆ. ಜನಸಂದಣಿ ದಟ್ಟವಾಗಿದ್ದುದರಿಂದ ಕೊಕ್ಕರೆ ಕತ್ತು ಮಾಡಿಕೊಂಡು ನೋಡಿದೆ. ಪೈಜಾಮ ಜುಬ್ಬ, ಮೇಲೊಂದು ಕೆಂಪು ವಸ್ತ್ರ, ತಲೆಯಲ್ಲಿ ಕ್ರಾಪು ಧರಿಸಿದ್ದ ವ್ಯಕ್ತಿಯೊಂದು ಮಾತನಾಡು ತ್ತಿರುವುದನ್ನು ಕಂಡೆ. ಆಸಾಮಿ ಧಾರಾಕಾರವಾಗಿ ಮಾತನಾಡುತ್ತಿದ್ದಾನೆ, ಯೋಗಾಸನಗಳ ವಿಚಾರವಾಗಿ. ಅಲ್ಲೇ ಪಕ್ಕದಲ್ಲೇ ನಿಂತಿದ್ದವರೊಬ್ಬರನ್ನು ಈತನಾರೆಂದು ಕೇಳಿದೆ. "ಮಲ್ಲಾಡಿ ರಾಘವೇಂದ್ರಸ್ವಾಮಿಗಳು" ಅಂದರು. ಮಲ್ಲಾಡಿಹಳ್ಳಿಯ ಸ್ವಾಮಿ ! ಹೆಸರು ಕೇಳಿದ್ದೆ, ಆದರೆ ನೋಡಿರಲಿಲ್ಲ ಕಂಡಿರಲಿಲ್ಲ ಆತನ ರೂಪು ನೋಡಿದಾಗ ಇದೆಂತಹ ಸ್ವಾಮಿ ಎನ್ನಿಸಿತು. ತಲೆ ಬೋಳಿಸಿಲ್ಲ ! ಕಾವಿ ಹೊದ್ದಿಲ್ಲ !! ದಂಡ ಕಮಂಡಲಗಳಿಲ್ಲ !! ಮಾತು ಮುಗಿದೊಡನೆ ಯೋಗಾಸನ ಪ್ರದರ್ಶನ ಪ್ರಾರಂಭವಾಯಿತು.

ಖಾದಿಯ ಜುಬ್ಬ, ಪೈಜಾಮ ಧರಿಸಿ ಬಡಕಲಂತಿದ್ದ ವ್ಯಕ್ತಿ ಈಗ ಕಾಚಾ ಕಟ್ಟಿ ನಿಂತಿದ್ದಾನೆ. ಏನು ಆ ನಿಲುವು! ಏನು ಆ ಭಂಗಿ! ಮೊದಲಿನ ರೂಪವೇ ಬೇರೆ, ಈ ರೂಪವೇ ಬೇರೆ. "ಜೈ ಬಲಭೀಮ" ಎಂದು ಗಡರು ಹಾಕಿ ಗದೆಯನ್ನು ತಿರುಗಿಸಲು ಪ್ರಾರಂಭಿಸಿದಾಗ ಮೈ ಜುಮ್ಮೆಂದಿತು. ವಾಯುವಿನ ಅಂಶವೇ ಸರಿ ಈತ ಎನ್ನಿಸಿತು. ವರ್ಷ ಅರವತ್ತುನಾಲ್ಕು ಆದರೂ ಹರೆಯದ ಹುಡುಗ ಇದ್ದ ಹಾಗೆ ಇದ್ದಾನೆ. ಆಣೆ ಮಾಡಿ

ಹೇಳಬೇಕು ಈತನಿಗೆ ಅರವತ್ತುನಾಲ್ಕು ವರ್ಷ ಎಂದು. ಅದೆಂತಹ ಯೋಗಾಸನದ ಮಹತ್ವವೋ ಬಲ್ಲವರಾರು ? ಪ್ರದರ್ಶನ ಆಯಿತು ಮತ್ತೆ ಮೊದಲಿನ ಉಡುಪೆ? ಕೈಯಲ್ಲಿ ಪುಸ್ತಕ, ಕಾವ್ಯ ಅನ್ನಲು ತೊಡಗಿದ್ದಾನೆ. ಅದೂ ತಾನೇ ರಚಿಸಿದ್ದು ! ತಿರುಕನೆಂಬ ಅಂಕಿತದಿಂದ. ಎಂತಹ ತಿರುಕನಪ್ಪ ಈತ ಎನ್ನಿಸಿತು. ಕವಿಯೂ ಹೌದು. ಕಲಿಯೂ ಹೌದು. "ವಹ್ವಾ" ಎಂದೆ. ಈತನನ್ನು ನೋಡಿದಷ್ಟೂ ಪೂಜ್ಯ ಭಾವನೆ ಬೆಳೆಯತೊಡಗಿತು. ಅಂದಿನಿಂದಲೂ ಮಲ್ಲಾಡಿಹಳ್ಳಿಗೆ ಹೋಗಬೇಕೆಂಬ ತೀವ್ರಾಭಿಲಾಷೆ ಮನದಲ್ಲಿ ಮನೆಮಾಡಿಕೊಂಡಿತು. ಯಾವುದಕ್ಕೂ ಯೋಗಬೇಕು, ಈಶ್ವರ ಕೃಪೆ ಬೇಕು. ಕಳೆದ ತಿಂಗಳು "23–24 ಶಿವರಾತ್ರಿಯ ಉತ್ಸವ, ಪ್ರೌಢಶಾಲೆಯ ವಾರ್ಷಿಕೋತ್ಸವ ಬರಬೇಕು" ಎಂಬ ಆಹ್ವಾನಪತ್ರಿಕೆ ಬಂದಿತು. ಮೊದಲೇ ಹುದುಗಿದ್ದ ಆಶೆ ಹೊರಹೊಮ್ಮಿತು. ಪ್ರೌಢಶಾಲೆಯ ಸೇವಕನಾದ ನನಗೆ ಅದೊಂದು ಸುಯೋಗವೆಂದುಕೊಂಡು ಮಿಕ್ಕ ಸಹೋಪಾಧ್ಯಾಯರೊಡನೆ 24ರ ಬೆಳಗ್ಗೆ ಹೊರಡುವದೆಂದು ನಿಶ್ಚಯಿಸಿದೆ. ಅದರಂತೆ ಬೆಳಗಿನ ಗಾಡಿಗೆ ಹೊರಟೆವು. ಮಲ್ಲಾಡಿಹಳ್ಳಿ ಹೊಳಲ್ಕೆರ ರೈಲ್ವೆಸ್ಟೇಶನ್ನಿಗೆ ಮೂರುವರೆ ಮೈಲಿ ದೂರದಲ್ಲಿ ಇದೆ. ಆಶ್ರಮದ ಮುಕ್ತದ್ವಾರವನ್ನು ದಾಟಿದೊಡನೆ ಸ್ವಾಮೀಜಿಯವರ ದರ್ಶನವಾಯಿತು. ಈಗಿನ ಅವರ ರೂಪವೇ ಬೇರೆ. ಪೈಜಾಮವೂ ಇಲ್ಲ. ಕಾಚವೂ ಇಲ್ಲ. ಬಿಗಿದ ದಟ್ಟಿ ಪಂಚೆ, ತಾವೇ ಸ್ವತಃ ಕೆಲಸಮಾಡುತ್ತಿದ್ದಾರೆ. ದುಡಿಯುತ್ತಿದ್ದಾರೆ. ಅಲ್ಲೂ ಇಲ್ಲೂ ಎಲ್ಲೆಲ್ಲೂ ತಾವೇ ಆಗಿದ್ದಾರೆ. ಉಗ್ರಾಣದಲ್ಲಿ ಅವರೇ, ಪಾಕಶಾಲೆಯಲ್ಲೂ ಅವರೇ, ಬಾ ಅನ್ನುವವರೂ ಅವರೇ, ಬಡಿಸುವವರೂ ಅವರೇ, ಬಂದ ಭಕ್ತಾದಿಗಳಿಗೆ ಎಲ್ಲಿ ತೊಂದರೆಯಾಗುವುದೋ ಎಂದು ಬಡಬಡಿಸುವವರೂ ಅವರೆ. ಈಗ ಇಲ್ಲಿದ್ದರು, ಆಗಲೇ ಅಲ್ಲಿ. ಅಲ್ಲಿದ್ದವರು ಹಾರಿದರು ಹಕ್ಕಿಯಂತೆ, ಬಂದಿದ್ದ ಅಂದಿನ ಮುಖ್ಯ ಅತಿಥಿಗಳನ್ನು ಸ್ವಾಗತಿಸಲು ಮುಖ್ಯದ್ವಾರದೆಡೆಗೆ. ಬಡಿಸುವಾಗ ಕಾಲಿಗೆ ಬಟ್ಟೆ ಬಿಗಿದು,ಕುಂಟುತ್ತಿದ್ದರು. "ಅದೇನು ಸ್ವಾಮೀಜಿ" ಎಂದಾಗ "ಮುಂಡೇದು ಚೂಪು ಕಲ್ಲೊಂದು ಮುತ್ತುಕೊಟ್ಟಿತು" ಎಂದು ನಗುತ್ತ ನುಡಿದರು. ಅದನ್ನು ಕಂಡು "ಎಂತಹ ಸಹನೆಯ ಶೀಲ" ಇವರದು ಎನ್ನಿಸಿತು. ನೋವಿನಲ್ಲೂ ನಗುವನ್ನು ಕಾಣುವ ಮನೋಧರ್ಮ ನೋಡಿ ಬೆರಗಾದೆ. ಆಗ ಅನ್ನಿಸಿತು ನೋವು ನಲಿವುಗಳಿಗೆ ನಾವೇ ಕಾರಣರು ಎಂದು.

ಊಟ ಉಪಚಾರದ ನಂತರ ಸಭೆ. ಕಾಕಿ ನಿಕ್ಕರು, ಬಿಳಿ ಬನಿಯನ್ನು, ಕರೀಟೊಪ್ಪಿಗೆ ಧರಿಸಿ ಸ್ವಯಂಸೇವಕರಾಗಿದ್ದರು ಸ್ವಾಮೀಜಿ. ಪ್ರಾರ್ಥನೆ ಹಾಡುವವರು ಬೇರೆ, ಆದರೆ ಅದಕ್ಕೆ ಶೃತಿ ಕೂಡಿಸಿ ಹಾರ್ಮೋನಿಯಂ ನುಡಿಸುವ ವ್ಯಕ್ತಿ ಬೇರೆ ಯಾರೂ ಅಲ್ಲ, "ಅದೇ ಸ್ವಾಮೀಜಿ". 'ಅಬ್ಬಾ' ಎಂದೆ. ಈ ವ್ಯಕ್ತಿಯಲ್ಲಿ ಇನ್ನೂ ಏನೇನು ಶಕ್ತಿಗಳು ಹುದುಗಿಕೊಂಡಿವೆಯೋ ಬಲ್ಲವರಾರು? ಸ್ವಾಗತ ಗೀತೆಯ ನಂತರ ವ್ಯಾಯಾಮ ಪ್ರದರ್ಶನ. ಅಲ್ಲಿಯೂ ಸ್ವಾಮೀಜಿಯೇ ಶಿಕ್ಷಕರು. ಅದೋ ಹೆಣ್ಣುಮಕ್ಕಳ ಕೋಲಾಟ! ಅವರ ಮಧ್ಯ ನಿಂತು ಹಾಡುತ್ತಾ, ಕುಣಿಯುತ್ತ, ನಲಿಯುತ್ತ ಮಕ್ಕಳೊಂದಿಗೆ ಮಗುವಾಗಿ ಆಡುತ್ತಿರುವವರೂ ಅವರೇ. ಯೋಗಾಸನ ಪ್ರದರ್ಶನ! 'ಜೈ ಭೀಮಬಲ' ಎಂದು ತೊಡೆ ತಟ್ಟಿ ಹಾರಿದ ಹನುಮಂತನೂ ಅವರೇ! "ಎಲ್ಲದರಲ್ಲೂ ಅವರೇ ; ಎಲ್ಲವೂ ಅವರಲ್ಲೇ" ಎನ್ನಬಹುದು. ಅಲ್ಲಿಯ ಮಕ್ಕಳ ಶಿಸ್ತು, ಸಂಯಮ, ದೇಹದಾರ್ಢ್ಯ, ಹೊಳೆಯುವ ಕಣ್ಣುಗಳನ್ನು ನೋಡಿ ಆನಂದವಾಯಿತು ಇಂತಹ ವಿದ್ಯಾರ್ಥಿಗಳಿಗೆ ಪಾಠ ಪ್ರವಚನಗಳನ್ನು ಹೇಳುವ ಉಪಾಧ್ಯಾಯರೇ ಪುಣ್ಯವಂತರು.

ಮುಕ್ತದ್ವಾರದ ಎಡಗಡೆಯಲ್ಲಿ ಭಾವಿ. ಹಾಗೇ ಒಳಹೊಕ್ಕರೆ ಸಪ್ತಾಹಕ್ಕಾಗಿ ಹಾಕಿದ ಭಜನೆಯ ಮಂದಿರ. ಅಲ್ಲಿಂದ ಮುಂದಕ್ಕೆ ಆಯುರ್ವೇದ ಚಿಕಿತ್ಸಾಲಯ, ಅದರ ಪಕ್ಕದಲ್ಲೇ ಪರಮಹಂಸ ಪರಪ್ಪಸ್ವಾಮಿಗಳ ಮಠ, ಮುಂದಕ್ಕೆ ಉಗ್ರಾಣಲಯ, ವಾಚನಾಲಯ, ಬಲಕ್ಕೆ ತಿರುಗಿದರೆ ವ್ಯಾಯಾಮಶಾಲೆ, ಅದಕ್ಕೆ ಹೊಂದಿಕೊಂಡಿರುವ ಅನಾಥಾಶ್ರಮ, ಹಾಗೆಯೇ ಹಾದು ಹೋದರೆ ಊಟದ ಮನೆ. ಮತ್ತೆ ಬಲಕ್ಕೆ ತಿರುಗಿದರೆ ರಾಷ್ಟ್ರೀಯ

ಪ್ರೌಢಶಾಲೆ. ಅದಕ್ಕೆ ಸ್ವಲ್ಪ ದೂರದಲ್ಲಿಯೇ ಈಗ ತಾನೇ ಕಟ್ಟಿರುವ ಉಪಾಧ್ಯಾಯರ ವಸತಿ ಗೃಹಗಳು ಆರು. ಮಧ್ಯ ಅಂಗಳದಲ್ಲಿ ಪೂರೈಸಲು ಬಂದಿರುವ ಸುಂದರವಾದ ಕಲ್ಲಿನ ದೇವಾಲಯ, ವ್ಯಾಯಾಮಶಾಲೆ ಮತ್ತು ಅನಾಥಾಶ್ರಮದ ಹಿಂದುಗಡೆಯೇ ತಪೋವನ. ತಪೋವನದಲ್ಲಿ ಅರ್ಧ ಫರ್ಲಾಂಗ್ ಹೋದರೆ ಪೂಜ್ಯ ಪಿತ ಗಾಂಧೀಜಿಯವರ ಸ್ಮಾರಕಮಂದಿರ. ಸ್ಮಾರಕ ಮಂದಿರದಲ್ಲೇ ಒಂದು ಕೆಳಮನೆ, ನೆಲಮನೆ, ಅಲ್ಲಿಯೇ ಸ್ವಾಮೀಜಿಯವರು ತಮ್ಮ ಧ್ಯೇಯಸಾಧನೆಯ ಸಿದ್ಧಿಗಾಗಿ ತಪಸ್ಸನ್ನಾಚರಿಸುವುದು. ಅಲ್ಲಿ ಹೋದಾಗ ಏನೋ ಒಂದು ಅಪೂರ್ವವಾದ ಆನಂದವಾಗುತ್ತದೆ, ಅನುಭವವಾಗುತ್ತದೆ. ಅಂತಹ ಅಪೂರ್ವ ಪ್ರಶಾಂತ ಶಾಂತಿ ಅಲ್ಲಿ ತಾಂಡವವಾಡುತ್ತದೆ. ಇದೆಲ್ಲದರ ಮೂರ್ತಿಸ್ವರೂಪವಾಗಿ ಚೈತನ್ಯಸ್ವರೂಪವಾಗಿ ಕಾಣುವ ಪ್ರಸನ್ನ ಮೂರ್ತಿ ಸ್ವಾಮೀಜಿ, ತಿರುಕ ಸ್ವಾಮೀಜಿ! ಇದು ಆಶ್ರಮದ ತಿರುಕನ ಸೂಕ್ಷ್ಮ ರೇಖಾಚಿತ್ರ. ಬಣ್ಣ ಕೊಟ್ಟು, ಮೆರಗುಕೊಟ್ಟು ಬರೆಯುವ ಶಕ್ತಿ ನನಗಿಲ್ಲ. ಕಲಾವಂತನ ಕಡ್ಡಿಯಲ್ಲಿ, ಸ್ವಾಮೀಜಿ ಹಾಗೂ ಆಶ್ರಮ ಇದಕ್ಕಿಂತ ಹತ್ತುಪಟ್ಟು ಮಿಗಿಲಾಗಿ ಹೊಳೆದೀತು! ಆದರೇನಂತೆ ಅಲ್ಲಿ ಹೋಗಿ ನೋಡಿದ ಹಾಗೆ ಮಾತ್ರ ಆಗುವುದಿಲ್ಲ.

ಕುಲಗೆಟ್ಟ ನೀತಿ, ಕುರುಡಾದ ಧರ್ಮ, ಹಾಳುಬಿದ್ದ ನೆಲ, ಆಯ ತಪ್ಪಿದ ಮಾನವ, ಸಮಾಜವನ್ನು ಕಟ್ಟುನಿಟ್ಟಿಗೆ ತರಲು ಹೆಗಲಿಗೆ ಜೋಳಿಗೆ ಹಾಕಿ, ಕೈಯಲ್ಲಿ ಭಿಕ್ಷಾಪಾತ್ರೆ ಹಿಡಿದು, ಅನಾಥರ ಸೇವೆಯೇ ಅನಂತ ಸ್ವರೂಪನಾದ ಪರಬ್ರಹ್ಮನ ಸೇವೆ ಎಂದರಿತು, ಊರೂರು, ಕೇರಿ, ಕೇರಿ, ಮನೆ ಮನೆ ತಿರುಗುವ ತಿರುಕ ವೇಷದ ಸ್ವಾಮೀಜಿಯನ್ನು ನಾನು ಕಂಡದ್ದು. ಅವರೊಬ್ಬ ವಿಚಿತ್ರ ವ್ಯಕ್ತಿ ಅಲ್ಲ. ವಿಪರೀತ ಶಕ್ತಿ.

"ವಿಶ್ವವನೆ ಕರಗಿಸುವ, ಬಡತನದ ಕುಲುಮೆಯಲಿ, ನಿನ್ನ ಶಕ್ತಿಯನೆಲ್ಲ ಪುಟವಿಟ್ಟು ಹಳೆ ಕಂತೆಗಳ ಸುಟ್ಟು ಜಗದ ಸಂತೆಯ ಜನದ ಸೇವೆಯಲಿ ಬದ್ಧಕಂಕಣನಾಗಿ, ಬಾ ಹೊರಗೆ ಸನ್ಯಾಸಿ" ಎಂಬುದಾಗಿ ಕವಿಯೊಬ್ಬರು ಹಾಡಿರುವುದು ಮಲ್ಲಾಡಿಹಳ್ಳಿಯ ಸ್ವಾಮೀಜಿಯವರನ್ನು ನೋಡಿದಾಗ ಜ್ಞಾಪಕ ಬರುತ್ತದೆ. ಇಂತಹ ತಿರುಕರು ದೇಶಕ್ಕೆ ಪೀಡೆಯಲ್ಲ, ಪಿಡುಗಲ್ಲ, "ದೇಶೋದ್ಧಾರಕರು."

ಜಾತಿ, ಮತ, ಪಂಥಗಳ ಭೇದಭಾವನೆಯೇ ಇಲ್ಲದೆ ಸರ್ವರಿಗೂ ಆಶ್ರಮದಲ್ಲಿ ಆಶ್ರಯ ದೊರೆಯುವುದು ಸಾಧ್ಯವಾಗಿದೆ. ಪೂಜ್ಯ ಸ್ವಾಮೀಜಿಯವರ ಸರಳತೆ, ಶಕ್ತಿ, ಸಾಮರ್ಥ್ಯ, ವಿದ್ವತ್ತು, ಸೌಜನ್ಯ, ಸೌಹಾರ್ದಗಳನ್ನು ಎಷ್ಟು ಕೊಂಡಾಡಿದರೂ ಸಾಲದು. ಇಂತಹ ಮಹಾ ಪುರುಷರು ನಮ್ಮ ನಾಡಿನಲ್ಲಿರುವುದು ನಮ್ಮ ಪುಣ್ಯ.

—ಸಿ. ಕೆ. ವೆಂಕಟರಾಮಯ್ಯ

ಬೆಳಗೆರೆ ಕೃಷ್ಣಶಾಸ್ತ್ರಿ

ಪ್ರಿಯದರ್ಶಿ–ಸಮದರ್ಶಿ

ಬುವಿಯ ತಿಂದು ದಿವಿಯ ತಣಿಸ
ತಿರುಕನಿದೋ ಬಂದು ನಿಂದ
ಏನ ತಿರಿಯಲೆಂದು ಬಂದ ?
ಅನ್ನ ವಸ್ತ್ರ ದವಸ ಧಾನ್ಯ ?
ಅಷ್ಟು ಮಾತ್ರ ತಿರಿವನಲ್ಲ
ಎಲ್ಲರ ಪರಿ ತಿರುಕನಲ್ಲ
ಕೆರೆಯ ನೀರ ಕೆರೆಗೆ ಚೆಲ್ಲಿ
ತ್ಯಾಗ ಯೋಗಿ ನಮ್ಮ ತಿರುಕ
ನರಳುವವರ ನೆರವಿಗಾದ
ಮರುಕದೆರಕ ನಮ್ಮ ತಿರುಕ
'ವಸುಧೈವ ಕುಟುಂಬಕಂ'.

ಭಿಕ್ಷಾಟನಕೆಂದು ಸುತ್ತಿ
ಬಂದನಂತೆ ಅಂದಾ ಶಿವ
ಅವನೆ ಇವನೊ ಎನಿಸುತಿಹುದು
ಅವಲೋಕಿಸಲಿವನ ನಿಜವ ;
ಸ್ವಾರ್ಥರಹಿತ ಘನಪ್ರವೃತ್ತಿ
ಸಾರ್ಥಕತೆಯ ಮಹಾಸಕ್ತಿ
ಮುಗಿಲೆತ್ತರದೀ ವ್ಯಕ್ತಿ
ಸುರಲೋಕದ ಚಿಚ್ಛಕ್ತಿ
ನರಲೋಕದ ಚರಮೂರ್ತಿ.

'ಈಶನ ಸೊತ್ತೀ ಜಗತ್ತು'
'ಕೂಡಿ ಬಾಳಿ ಕೂಡಿಯುಂಡು
ಕೂಡಿ ದುಡಿದು ಕೂಡಿ ಮೆರೆವ

ದೂಡಿ ಭಿನ್ನ ಭೇದ ಕಳೆವ'
ಉಪನಿಷತ್ತು ಇವನ ಗೊತ್ತು
ಅದಕಾಗಿಯೆ ಶಿಸ್ತು ಗಸ್ತು:
ಜನದ ಮನದ ಪ್ರೀತಿ ಕರುಣೆ
ಶಮೆ ದಮೆ ಸುಹೃದಯ ಸಹನೆ
ಕ್ಷಾಂತಿ ದಾಂತಿ ಸತ್ಯ ಶಾಂತಿ
ಭೃತ್ಯಕೃತ್ಯದವಿಶ್ರಾಂತಿ
ನಿರ್ಭಯ ನಿರ್ಮೋಹದೇಳಿಗೆ
ತುಂಬಿತಿವನ ಜೋಳಿಗೆ
ತಿರಿವನಲ್ಲ ಕೂಳಿಗೆ.

ತಿರಿದು ತಂದ ಸರಕನೊಡನೆ
ತನ್ನ ಓಜ ತೇಜದೊಡನೆ
ಮೃದುಮಧುರದ ಹವವಾಗಿಸಿ
ಅಮೃತತ್ವವನದಕೆ ಬರಿಸಿ
ಜಗದಗಲಕೆ ಕಣ್ಣರಳಿಸಿ
ಆರಾಧಿಪ ಪ್ರಿಯದರ್ಶಿ
ಸರ್ವರಿಗಿವ ಸಮದರ್ಶಿ

ನಮ್ಮದೇನು ಭಿಕ್ಷೆ ಇವಗೆ
ಸುಮ್ಮನಾಡಿ ನಡೆವುದೆ ?
ಇವಗೆ ಭಿಕ್ಷೆ ನಮ್ಮೊಳಿಲ್ಲ
ಇನ್ನು ಬೆಳೆದು ನೀಡಬಲ್ಲ
ಮನವ ಮಾಡಿ ದುಡಿಯುವ
ಧನ್ಯರಾಗಿ ನಡೆಯುವ
ಇಂದು ನಮನ ಮಾಡುವ.

ಪ್ರೊ। ಎಸ್. ಕೆ. ರಾಮಚಂದ್ರರಾವ್

'ತಿರುಕರ', 'ಅನಾಥ ಸೇವಾಶ್ರಮ'

ಮಲ್ಲಾಡಿಹಳ್ಳಿಯಲ್ಲಿರುವ ಸಂಸ್ಥೆಯ ಹೆಸರನ್ನೂ ಅದರ ಕಾರಣಪುರುಷರಾದ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳ ಹೆಸರನ್ನೂ ಅರಿಯದಿದ್ದವರು ಕನ್ನಡನಾಡಿನಲ್ಲಿ ವಿರಳ. ಸಂಸ್ಥೆಯ ಹಿರಿಮೆಯೂ, ಸ್ವಾಮಿಗಳ ಸಾಧನೆಯೂ ನಾಡಿನ ಸತ್ತ್ವವನ್ನು ಎತ್ತಿ ತೋರಿಸತಕ್ಕವೇ. ಊರಿನ ಹೆಸರು ಮಲ್ಲಾಡಿಹಳ್ಳಿ, ಸಂಸ್ಥೆಯ ಹೆಸರು 'ಅನಾಥಸೇವಾಶ್ರಮ', ಸ್ವಾಮಿಗಳ ಹೆಸರು 'ತಿರುಕ'. ಮೂರರಲ್ಲಿಯೂ ಸ್ವಾರಸ್ಯವಿಲ್ಲದೆ ಇಲ್ಲ.

ಮಲ್ಲಾಡಿಹಳ್ಳಿಯ ಹೆಸರನ್ನು ಊರ ಹಿರಿಯರು ಮಲ್ಲನಾದ ಭೀಮನು ಆಡಿದ ಹಳ್ಳಿಯೆಂದು ವಿವರಿಸುವುದುಂಟು. ಈ ಹಿನ್ನೆಲೆಯ ತಥ್ಯಾಂಶವೇನೋ ತಿಳಿಯದು. ಪಾಂಡವರ ಪ್ರಖ್ಯಾತಿ ಊರಿನ ಹಿರಿಮೆಗೆ ಊರುಗೋಲಾಗಿರಬೇಕು. ಆದರೆ ಈ ಯುಗದ ಮಲ್ಲನೊಬ್ಬ ಆಡಿಸುತ್ತಿರುವ ಹಳ್ಳಿ ಅದು ಎಂಬುದಂತು ದಿಟ. ಈ ಮಲ್ಲನೂ ಪಾಂಡವ ಭೀಮನಂತೆಯೇ ಸತ್ತ್ವಪ್ರಧಾನವಾದ ಸಾಹಸವುಳ್ಳವನು ; ಅವನಂತೆಯೇ ಈ ಮಲ್ಲನೂ ಜಗಜಟ್ಟಿ, ವಜ್ರಕಾಯ, ಸ್ಥಿರಚಿತ್ತ. ಅವನಂತೆಯೇ ಇವನೂ ಭಗವತ್ಕಾರ್ಯಕ್ಕೆ ನೆರವಾಗುವ ಕ್ರಿಯಾಶಕ್ತಿ. ಶ್ರೀ ರಾಘವೇಂದ್ರಸ್ವಾಮಿಗಳ ಮಲ್ಲತನ ಮೈ, ಮಾತು, ಮನಸ್ಸು ಮೂರನ್ನು ಒಳಗೊಳ್ಳುತ್ತದೆ. ಸಾವಿಗೆ ಅಂಜದೆ, ಸೋಲನ್ನೊಪ್ಪದೆ, ಸಾಹಸಕ್ಕೆ ಹಿಂಜರಿಯದ ಪ್ರವೃತ್ತಿ ಅವರದ್ದು. ಅವರು ಅಲ್ಲಿ ಬೇರೂರಿಸಿರುವ ಸಂಸ್ಥೆ ಅವರ ಆಟವೆ ; ಎಂದರೆ, ಅವರಿಗೆ ಅದರಿಂದ ಆಗಬೇಕಾದ ಸ್ವಂತ ಪ್ರಯೋಜನ ಏನೂ ಇಲ್ಲ, ತಮ್ಮ ಮಟ್ಟಿಗೆ ತಾವು ಆಪ್ತಕಾಮರೇ, ಕೃತಕೃತ್ಯರೇ. ಇನ್ನೂ ಮುಟ್ಟಬೇಕಾದ ವೈಯುಕ್ತಿಕ ಅಭೀಷ್ಟಗಳು ಅವರ ಪಾಲಿಗೆ ಇಲ್ಲ. ಹಿರಿಯರು "ಪ್ರಪಂಚವೇ ಭಗವಂತನ ಆಟ" (ಲೋಕವತ್ತು ಲೀಲಾಕೈವಲ್ಯಂ) ಎಂದದ್ದು ಇದೇ ಅರ್ಥದಲ್ಲಿಯೇ ಅಲ್ಲವೆ? ಆ ಆಟದ ನಡುವೆ ಈ ಆಟವೂ ಸಾಗಿದೆ ! ಮಲ್ಲನ ಆಟವೆಂದರೆ ಅದು ವಿಶೇಷವೇ. ಮಲ್ಲನಾಡುವ ಹಳ್ಳಿಗೆ ಹಿರಿಮೆ ತಪ್ಪುತ್ತದೆಯೆ ? ಎಲ್ಲಿಯೋ ಮೈದುಂಬಿ, ಎಲ್ಲಿಯೋ ಮುಗಿಲುದ್ದ ಬೆಳೆದು, ಎಲ್ಲಿಯೋ ಸಿದ್ಧಿ ಪಡೆದ ಅವರು ಕಡೆಗೆ ಇಲ್ಲಿ ಕಾಲೂರಿ ನಿಲ್ಲಲು ನಿಶ್ಚಯಿಸಿದ್ದು ಆ ಹಳ್ಳಿಯ ಭಾಗ್ಯ.

ಸ್ವಾಮಿಗಳು ಹೊರನೋಟಕ್ಕಾಗಲೀ ಬಟ್ಟೆಬರೆಯಲ್ಲಾಗಲೀ 'ಸ್ವಾಮಿ'ಗಳಲ್ಲ. ಭಾಷೆಯ ಎಡ್ಡಾದಿಡ್ಡಿ ಅಲೆದಾಟದಲ್ಲಿ ಪದಗಳ ಅರ್ಥ ಮಾರ್ಪಡುತ್ತದೆ, ಕುಲಗೆಡುತ್ತದೆ, ಕಲಬೆರಕೆಯಾಗುತ್ತದೆ. 'ಸ್ವಾಮಿ' ಎಂದರೆ ಸಂನ್ಯಾಸಿ ಎಂದಾಗಿರುವುದು ಯಾವ ನ್ಯಾಯ ? ಸ್ವಾಮಿ ಎಂದರೆ ಒಡೆಯ ; ಸಂನ್ಯಾಸಿಯಾದವನು ಪದದ ಅರ್ಥದಲ್ಲಿಯಾದರೂ ಎಲ್ಲವನ್ನೂ ಬಿಟ್ಟವನು, ಅವನಿಗೆ ಯಾತರ ಒಡೆತನ ? ಹೋಗಲಿ, ತನ್ನ ಮೇಲೇ ತಾನು ಒಡೆತನವನ್ನು ಗಳಿಸಿಕೊಂಡರೆ 'ಸ್ವಾಮಿ' ಪದ ಸಾರ್ಥಕವಾಯಿತು. ಈ ಗಳಿಕೆ ವಿರಳವೇ ! ನಮ್ಮ ಶ್ರೀ ರಾಘವೇಂದ್ರಸ್ವಾಮಿಗಳ ಸ್ವಾಮಿತನ ಸಾಂಪ್ರದಾಯಿಕ ಸಂನ್ಯಾಸದಲ್ಲಂತೂ ಇಲ್ಲ ; ಅವರೇನು ಕಾವಿಬಟ್ಟೆ

ಉಡುವವರಲ್ಲ, ಜುಟ್ಟು ಜನಿವಾರ ತೆಗೆದವರಲ್ಲ, ಜನರಿಂದ ದೂರಾಗಿ ಇರುವವರಲ್ಲ, ಆತ್ಮಶ್ರಾದ್ಧ ಮಾಡಿಕೊಂಡವರಲ್ಲ. ಅವರೇನೋ ವಿರಕ್ತರೇ, ಬ್ರಹ್ಮಚಾರಿಗಳೇ. ಆದರೆ ಇವರ ವಿರಕ್ತಿ ವೈರಾಗ್ಯದ ವಿರಕ್ತಿಯಲ್ಲ. ಬ್ರಹ್ಮಚಾರಿಗಳೆಂದರೆ ಸಂಯಮಿಗಳು, ನಿಷ್ಠರು. ಅವರ ಬ್ರಹ್ಮಚರ್ಯ ಜಗತ್ತಿನ ಹಿತಕ್ಕಾಗಿ ತಮ್ಮ ಸುಖವನ್ನು ಬದಿಗೊತ್ತಿದ ಸಂಯಮ, ನಿಷ್ಠೆ. ಈ ದೃಷ್ಟಿಯಿಂದ, ತಮ್ಮ ಪ್ರವೃತ್ತಿಗಳ ಮೇಲೆ, ಪ್ರಭುತ್ವವನ್ನು ಪಡೆದುಕೊಂಡು, ತಮ್ಮ ಆಲೋಚನೆಗಳನ್ನು ಇಂದ್ರಿಯಗಳಿಗೆ ಪರಾಧೀನ ಮಾಡದೆ, ಮನಸ್ಸಿನ ಮೇಲೆ ಹೃದಯದ ಮೇಲೆ ಒಡೆತನವನ್ನು ಗಳಿಸಿಕೊಂಡಿರುವ ಇವರು ದಿಟವಾಗಿ ಸ್ವಾಮಿಗಳೇ ; ಔಪಚಾರಿಕವಾಗಿ ಅಲ್ಲ.

ಆದರೆ ಇವರು ತಮ್ಮನ್ನು ತಾವು ಸ್ವಾಮಿಗಳೆಂದು ಕರೆದುಕೊಳ್ಳುವುದಿಲ್ಲ ; ಬೇರೆಯವರು ಹಾಗೆ ಕರೆದಾಗಲೂ ಬೇಡವೆನ್ನುತ್ತಾರೆ. ಅವರು ಬದುಕುವ ಬಗೆಯನ್ನು ನೋಡಿ, ಅವರ ವ್ಯಕ್ತಿತ್ವದ ಪಾರಮ್ಯವನ್ನು ಕಂಡು, ಅವರ ಹೃದಯದ ವೈಶಾಲ್ಯವನ್ನೂ ಶುದ್ಧಿಯನ್ನೂ ಅರಿತು ಜನ ಅವರನ್ನು ಸ್ವಾಮಿಗಳೆಂದು ಕರೆದಿದ್ದಾರೆ. ಇದರಲ್ಲಿ ಅಬದ್ಧವಾದುದೇನೂ ಇರದು. ಇವರು ತಮ್ಮನ್ನು ತಾವು ಕರೆದುಕೊಂಡಿರುವುದು 'ತಿರುಕ'ನೆಂದು ; ಅವರ ಸಾರಸ್ವತ ವ್ಯವಸಾಯ ಪ್ರಕಟವಾಗಿರುವುದು ಇದೇ ಹೆಸರಿನಲ್ಲಿಯೇ. ತಿರುಕನೆಂಬ ಕನ್ನಡ ಪದ ಸಂಸ್ಕೃತದ 'ಭಿಕ್ಷು' ಎಂಬುದಕ್ಕೆ ಸಮಾನವಾದುದು. ತನ್ನದೇ ಸಂಪತ್ತು ಇಲ್ಲದೆ ಸತ್ಕಾರ್ಯಕ್ಕಾಗಿ ಅವರಿವರು ಸುಮುಖರಾಗಿ ದಾನವಾಗಿ ಕೊಡುವ ಸಾಮಗ್ರಿಯನ್ನು ಅವಲಂಬಿಸಿ, ನಾಲ್ಕಾರು ಜನರಿಗೆ ಹಿತವೆನಿಸುವ ಕೆಲಸವನ್ನು ಯಾವ ಪ್ರತಿಫಲಾಪೇಕ್ಷೆಯಿಲ್ಲದೆ ಮಾಡತೊಡಗುವುದು ಭಿಕ್ಷುವಿನ ಪ್ರವೃತ್ತಿ. ತಾನೇ ಧನಾರ್ಜನೆಯ ಸಾಧನೆಯೊಂದನ್ನು ಹಿಡಿದು ತನ್ನ ವೈಯಕ್ತಿಕ ಸುಖವನ್ನು ಸಾಧಿಸಿಕೊಳ್ಳುವುದು ಸಾಮಾನ್ಯನ ದಾರಿ ; ಲೋಕ ಸಂಗ್ರಹವನ್ನು ಸಾಧಿಸಬಯಸುವವರು ತಮ್ಮ ದೈಹಿಕ ಸುಖವನ್ನಾಗಲೀ, ಗೃಹಕೃತ್ಯದ ಸುಭದ್ರತೆಯನ್ನಾಗಲೀ, ತಮ್ಮ ಪೀಳಿಗೆಯ ಉಳಿಕೆಯನ್ನಾಗಲೀ ಪರಿಗಣಿಸದೆ ತಮಗೆ ಸರಿಯೆಂದು, ಲೋಕಕ್ಕೆ ಅಗತ್ಯವೆಂದು ಕಂಡುದನ್ನು ಮಾಡುವರು. ಮಲ್ಲಾಡಿಹಳ್ಳಿ ಸ್ವಾಮಿಗಳು ಹೀಗೆ 'ತಿರುಕರು.' ಅವರು ಈ ಸಂಸ್ಥೆಯನ್ನು ಕಟ್ಟಲು ಉದ್ಯೋಗವನ್ನು ಹಿಡಿದು, ಮನೆ ಕಟ್ಟಿಕೊಂಡು ದುಡಿಯಲಿಲ್ಲ; ಸಂಸ್ಥೆ ಅವರ ಬದುಕಿನ ಗೌಣವಾದ ಸಾಧನೆಯಾಗಲಿಲ್ಲ ; 'ತಾನು ಮೊದಲು ಸುಖವಾಗಿದ್ದರೆ, ಅನಂತರ ಇತರರ ಸುಖದ ಗೊಡವೆ ನನಗೆ' ಎನ್ನುವುದು ಅವರ ಬಾಳ ಸೂತ್ರವಾಗಲಿಲ್ಲ. ತಾನು, ತನ್ನದು, ತನ್ನವರು ಎನ್ನುವ ಮಮಕಾರಕ್ಕೆ ಅವರ ಬದುಕಿನಲ್ಲಿ ಆಸರೆಯೇ ಇಲ್ಲ. ದಿಟವಾಗಿ ಅವರು ವಿರಕ್ತರೆ; ವಿರಜಾಹೋಮ ಮಾಡದೆ ಇದ್ದರೂ, ಆತ್ಮಶ್ರಾದ್ಧ ಮಾಡಿಕೊಳ್ಳದೆ ಇದ್ದರೂ ಅವರು ವಾಸ್ತವವಾಗಿ ಸಂನ್ಯಾಸಿಗಳೇ.

ಈ ಸಂಸ್ಥೆಯನ್ನು ಕಟ್ಟಲು ಅವರು ಅಲ್ಲಿ, ಇಲ್ಲಿ, ಎಲ್ಲೆಲ್ಲೂ, ಬಿಡುವಿಲ್ಲದೆ ಅಡ್ಡಾಡಬೇಕಾಯಿತು, ಜೋಳಿಗೆಯನ್ನು ಹಿಡಿದು ಎಲ್ಲರ ಮುಂದೊಡ್ಡಿ, ಆದರೂ ಕಾಡದೆ ಬೇಡದೆ, ಸಂತೋಷವಾಗಿ ನೀಡಿದುದನ್ನು ಇನ್ನಷ್ಟು ಸಂತೋಷದಿಂದ ಸ್ವೀಕರಿಸಿ ಅದರಲ್ಲಿ ತಮ್ಮ ವೆಚ್ಚಕ್ಕೆಂದು ಪುಡಿಗಾಸನ್ನೂ ಉಳಿಸಿಕೊಳ್ಳದೆ, ಎಲ್ಲವನ್ನೂ ಸಂಸ್ಥೆಗಾಗಿ ವಿನಿಯೋಗಿಸುತ್ತಾರೆ. ಕೈಕೊಂಡ, ಕಟ್ಟಿದ ಸಂಸ್ಥೆಯಿಂದ ತಮಗೆ ಏನೊಂದೂ ಲೌಕಿಕ ಲಾಭವನ್ನು ಬಯಸಿಲ್ಲ ಅವರು. 'ತಿರಿಪೆ' ನಮ್ರತೆಯ ವೃತ್ತಿ ; 'ತಿರುಕ' ನಮ್ರ ವ್ಯಕ್ತಿ. ತನ್ನ ಹಣವೆಂಬ ಅಭಿಮಾನಕ್ಕೆ ಆಸ್ಪದವಿಲ್ಲ; ತನ್ನ ದುಡಿಮೆಯೆಂಬ ದೊಡ್ಡಸ್ತಿಕೆಗೆ ಎಡೆಯಿಲ್ಲ. ಅವರ 'ತಿರಿಪೆ' ಅವರಿಗೆ ಒದಗಿಸುವುದು ಹಣವನ್ನು ಮಾತ್ರವಲ್ಲ; ಹಣಕ್ಕಿಂತ ಹಲವಾರು ಪಟ್ಟು ಹೆಚ್ಚಾಗಿ ಜನರ ವಿಶ್ವಾಸ ಒದಗುತ್ತದೆ. ಸಂಸ್ಥೆಗೆ ಇದೇ ಭದ್ರವಾದ ಬುನಾದಿ. ಸಂಸ್ಥೆಯ ಹಿನ್ನೆಲೆಯಲ್ಲಿರುವ ಲೋಕಸಂಗ್ರಹಬುದ್ಧಿ ಜನರಲ್ಲಿ ಹರಡುತ್ತದೆ. ಸಂಸ್ಥೆಯ ಭೌತಿಕ ರೂಪ ಮಲ್ಲಾಡಿಹಳ್ಳಿಯಲ್ಲಿದ್ದರೂ ಅದರ ಪಾರಮಾರ್ಥಿಕ ನೆಲೆ ನಾಡಿನಲ್ಲೆಲ್ಲ ಹರಿದಾಡುತ್ತದೆ. ಈ 'ತಿರುಕ'ನ 'ತಿರಿಪೆ'ಯ ಪ್ರಭಾವ ಅದು !

ಸಂಸ್ಥೆಗೆ ಅವರಿಟ್ಟಿರುವ ಹೆಸರು 'ಅನಾಥಸೇವಾಶ್ರಮ'. ಅನಾಥರೆಂದರೆ ಒಡೆಯರಿಲ್ಲದವರು, ಗತಿ ಇಲ್ಲ

ದವರು, ದಿಕ್ಕುಕೆಟ್ಟವರು. ನೋಡಿಕೊಳ್ಳುವ ಹಿರಿಯರು ತೀರಿಕೊಂಡರೆ ಬೆಳೆಯುವ ಮಕ್ಕಳು ಅನಾಥರಾಗುತ್ತಾರೆ. ಬದುಕಿನಲ್ಲಿ ಅವರು ಮುಂದೆ ತಮ್ಮ ಕಾಲಮೇಲೆ ನಿಲ್ಲುವ ವ್ಯವಧಾನವನ್ನು ಅವರಿಗೆ ಒದಗಿಸುವುದು ಹಿರಿಯರ ಕರ್ತವ್ಯವಷ್ಟೆ ? ಈ ವ್ಯವಧಾನವೆಂದರೆ ಓದು, ಉದ್ಯೋಗ, ಸಂಪತ್ತು ಎಂದಷ್ಟೇ ಸಾಮಾನ್ಯವಾಗಿ ಕಲ್ಪನೆ. ಓದಿನಿಂದ ಅಷ್ಟಿಷ್ಟು ಬುದ್ಧಿಶಕ್ತಿ ಬೆಳೆದೀತು, ಕೊಂಚಮಟ್ಟಿಗೆ ಹರಿತವಾದೀತು, ಲೋಕಪ್ರಜ್ಞೆ ಸುಮಾರಾಗಿ ವಿಸ್ತರಿಸೀತು. ಉದ್ಯೋಗದಿಂದ ಸಾಮರ್ಥ್ಯ, ಕೌಶಲ, ಲೋಕಾನುಭವ ಇವು ಬಂದಾವು. ಸಂಪತ್ತಿನಿಂದ ವ್ಯವಹಾರಶಕ್ತಿ, ಸ್ವತಂತ್ರಮನೋವೃತ್ತಿ, ಆತ್ಮವಿಶ್ವಾಸ ಇವು ಮೂಡಿಯಾವು. ಆದರೆ ಬದುಕು ಚೊಕ್ಕವಾಗಲು ಇಷ್ಟೇ ಸಾಕೆ ? ತಮ್ಮ ಕಾಲಮೇಲೆ ತಾವು ದಿಟವಾಗಿ ನಿಲ್ಲುವ ಬಲ ಬರುವುದು ಓದಿನಿಂದಲೂ ಅಲ್ಲ, ಉದ್ಯೋಗದಿಂದಲೂ ಅಲ್ಲ, ಸಂಪತ್ತಿನಿಂದ ಮೊದಲೇ ಅಲ್ಲ ; ಶೀಲದಿಂದ. ಬೇರೆ ಎಲ್ಲ ಸೌಲಭ್ಯಗಳಿದ್ದರೂ, ಸಾಮಗ್ರಿಗಳಿದ್ದರೂ ಎಳೆತನದಲ್ಲಿ ದಾರಿದೀವಿಗೆಯಾಗಿ ಮೂಡಿ ಬಾಳಿನುದ್ದಕ್ಕೂ ನಡೆಸುವುದು ಶೀಲ. ಶೀಲವೇ ಗತಿ, ಅದೇ ದಿಕ್ಕು. ಅದು ಕೆಟ್ಟರೆ, ಬದುಕಿನ ಹದವೇ ಕೆಟ್ಟಿತು ; ಅದು ಉಳಿದರೆ, ಎಷ್ಟೇ ಕಷ್ಟವಾದರೂ ಬದುಕು ಹಿತವೇ. ಹೀಗೆ ಶೀಲದ ಲಾಭವಿಲ್ಲದವರು ಅನಾಥರು.

ಮಲ್ಲಾಡಿಹಳ್ಳಿಯ ಸಂಸ್ಥೆ ಇಂಥ ಅನಾಥರನ್ನು ದೃಷ್ಟಿಯಲ್ಲಿರಿಸಿಕೊಂಡಿದೆ. ಎಳೆತನದಲ್ಲಿ ಶಿಕ್ಷಣ ಶೀಲಪ್ರಮುಖವಾಗಿರಬೇಕು ಎಂಬ ಸೂತ್ರ ಸಂಸ್ಥೆಯನ್ನು ನಡೆಸುತ್ತಿದೆ. ಸರಿಯಾದ ದಾರಿಯಲ್ಲಿ ಸಮನಾಗಿ ನಡೆಸುವವರು ಇಲ್ಲದಿದ್ದರೆ ಯಾವ ಮಗುವಾದರೂ ಅನಾಥವೆ ; ಇಲ್ಲಿ ಬಡವ-ಭಾಗ್ಯವಂತ ಎನ್ನುವ ಭೇದವಿಲ್ಲ. ಬದುಕನ್ನು ಸಾರ್ಥಕವಾಗಿ ನಡೆಸಲು ಅಗತ್ಯವಾದ ಶೀಲ ಎಳೆತನದಲ್ಲಿಯೇ ಒದಗಿಬಂದರೆ ಹಿತ. ಆದುದರಿಂದ ಮಲ್ಲಾಡಿಹಳ್ಳಿಯ ಸಂಸ್ಥೆಯಲ್ಲಿ ಸಾಂಪ್ರದಾಯಿಕವಾದ, ಪಠ್ಯಕ್ರಮದ ಮತ್ತು ಪರೀಕ್ಷಾಭಿಮುಖವಾದ ಶಿಕ್ಷಣವೇ ವ್ಯವಸ್ಥಿತವಾಗಿದ್ದರೂ, ಶೀಲಸಂಪಾದನೆಗೆ ಹೆಚ್ಚಿನ ಮಹತ್ತ್ವವನ್ನು ಕೊಡಲಾಗಿದೆ. ಈ ಶೀಲಶಿಕ್ಷಣದಲ್ಲಿ ಅಧ್ಯಾಪಕರೂ, ವಿದ್ಯಾರ್ಥಿಗಳೂ, ಊರಹಿರಿಯರೂ ಪಾಲುಗೊಳ್ಳುವರು.

ಅನಾಥರಿಗೆ ಸಂಸ್ಥೆ ನೀಡುವುದು 'ಸೇವೆ'ಯೆಂದು ಸ್ವಾಮಿಗಳ ಎಣಿಕೆ. ಶೀಲ ಇರುವವರು ಶೀಲ ಇರಬೇಕಾದವರಿಗೆ ಕೊಡುವ ಕೊಡುಗೆ ಸೇವೆಯೆಂಬ ಭಾವನೆ ಅವರ ನಮ್ರತೆಗೆ ಮತ್ತೊಂದು ನಿದರ್ಶನ. ಅದನ್ನು ಒದಗಿಸುವಲ್ಲಿ, ಅದು ನಮ್ಮ ಅಗತ್ಯ ಕರ್ತವ್ಯವೆಂಬ ನಿಶ್ಚಯ ಇರುವುದಾದರೆ, ನಮ್ಮ ಹೊಣೆಯನ್ನು ನಿರ್ವಹಿಸುತ್ತಿದ್ದೇವೆ ಅಷ್ಟೆ ಎಂಬ ಅರಿವು ಇರುವುದಾದರೆ, ವಿತರಣೆಯಲ್ಲಿ ಸ್ವಾಭಿಮಾನವಾಗಲೀ, ದುರಹಂಕಾರವಾಗಲೀ, ಲೋಭ ಬುದ್ಧಿಯಾಗಲೀ ಏಳುವುದು ಸಾಧ್ಯವಿಲ್ಲ. ಈ ದೃಷ್ಟಿಯಿಂದ ಈ ಸಂಸ್ಥೆಯಲ್ಲಿ ನಡೆಯಬೇಕೆಂದು ಗೊತ್ತುಪಡಿಸಿರುವುದು 'ಅನಾಥ ಸೇವೆ.' ಈ ಹೆಸರಿನಿಂದ ಯಾರಿಗೂ ಯಾವ ಬಗೆಯ ಮುಜುಗರವೂ, ಕಸಿವಿಸಿಯೂ ಆಗುವ ಕಾರಣವಿಲ್ಲ. ಸಂಸ್ಥೆಯ ಸ್ಥಾಪಕರೇ ತಿರುಕರಾದರೆ, ಅವರ ಚಿಂತನೆ ಅನಾಥರ ಬಗ್ಗೆ ಇರುವುದು ಆಶ್ಚರ್ಯವಲ್ಲ. ತಾವು ತಿರುಕರಲ್ಲವೆಂದು ಹೆಮ್ಮೆಪಡುವವರಿಗೆ ಅನಾಥರೆಂದರೆ ಹೀನಾಯವಷ್ಟೆ. 'ತಿರುಕ'ರನ್ನು ಸ್ವಾಮಿಗಳೆಂದು ಗೌರವಿಸುವ ನಮ್ಮ ಸಂಸ್ಕೃತಿಯಲ್ಲಿ ಅನಾಥರೆಂದರೆ ಹೀನಾಯವಲ್ಲ. ಬುದ್ಧ ಹೇಳಿದ ಮಾತು —"ಅತ್ತಾ ಹಿ ಅತ್ತನೋ ನಾಥೋ, ಕೋ ಹಿ ನಾಥೋ ಪರೋ ಸಿಯಾ ?" —"ತನಗೆ ತಾನೇ ಒಡೆಯ, ತನ್ನ ಮೇಲೆ ಬೇರೆ ಯಾರು ಒಡೆತನ ಮಾಡಿಯಾರು ?" ಈ ಸಂದರ್ಭದಲ್ಲಿ ನೆನಪಿಗೆ ತಂದುಕೊಳ್ಳತಕ್ಕದ್ದು. ನಾವೆಲ್ಲ ನಮ್ಮ ಮೇಲೆ ಒಡೆತನ ಗಳಿಸಿಕೊಂಡಿದ್ದೇವೆಯೆ ? ನಮ್ಮಲ್ಲಿ ಸಂಪತ್ತಿದ್ದರೂ ಎಷ್ಟು ಮಂದಿ ಅನಾಥರಾಗಿಲ್ಲ ? ಸ್ವಾಮಿಗಳ ಸೇವೆ ಅವರಿಗೆ ಸಲ್ಲುತ್ತದೆ.

ಮಲ್ಲಾಡಿಹಳ್ಳಿಯ ಸಂಸ್ಥೆ ವಾಸ್ತವವಾಗಿ ಒಂದು ಆಶ್ರಮವೇ. 'ಆಶ್ರಮ'ವೆಂದರೆ ದುಡಿಯುವ ಎಡೆ, ನಿಲ್ಲುವ ಬೀಡು. ಸ್ವಾಮಿಗಳ ದುಡಿಮೆ ಅಲ್ಲಿ ನಡೆದಿದೆ ; ಸ್ವಾಮಿಗಳನ್ನು ಮೆಚ್ಚಿಕೊಂಡವರ ದುಡಿಮೆಯೂ ಸೇರಿಬಂದಿದೆ. ಅನಾಥರು ನಿಲ್ಲುವ ಬೀಡು ಅದೇ ; ಅನಾಥರೊಂದಿಗೆ ಸಹಾನುಭೂತಿ ತಳೆದವರೂ ನಿಲ್ಲುವುದು ಅಲ್ಲಿಯೇ.

ಶಿಕ್ಷಣಸಂಸ್ಥೆಯೆಂದರೆ ಸಾಧಾರಣವಾಗಿ ವ್ಯವಹಾರಕೇಂದ್ರ; ರಾಜಕಾರಣಿಗಳೂ, ವ್ಯವಹಾರಕುಶಲರೂ, ಅರ್ಥಾರ್ಥಿಗಳೂ, ಖ್ಯಾತಿಲೋಭಿಗಳೂ ಸೇರಿಯುವ ಸ್ಥಳ ಅದು. ಆದರೆ ಮಲ್ಲಾಡಿಹಳ್ಳಿಯ ಶಿಕ್ಷಣಸಂಸ್ಥೆ ಈ ನಿಯಮಕ್ಕೊಂದು ಅಪವಾದ ಎನ್ನುವಂತಿದೆ. ಅಲ್ಲಿ ಸ್ವಾಮಿಗಳ ವರ್ಚಸ್ಸು ಒಂದೇ ಕಾರ್ಯಕಾರಿಯಾಗಿ, ಪ್ರಭಾವಶಾಲಿಯಾಗಿ ನಿಂತಿರುವುದು. ಈ ವರ್ಚಸ್ಸು ಸಂಪೂರ್ಣವಾಗಿ ಸಾತ್ತ್ವಿಕ ಕಳೆಯಿಂದ ಕೂಡಿದ್ದು. ಸ್ವಾಮಿಗಳ ಕ್ರಿಯಾಶಕ್ತಿಯಿರುವುದು ಆಧ್ಯಾತ್ಮಿಕ ನೆಲೆಯಲ್ಲಿ. ಆಧ್ಯಾತ್ಮವು ನಿತ್ಯವ್ಯವಹಾರದಲ್ಲಿ ಬೆರೆತು ಬಂದರೆ ಹಿತವೆನ್ನುವ ಅವರ ದೃಷ್ಟಿಯನ್ನು ಈ ಸಂಸ್ಥೆ ಕಾರ್ಯಗತ ಮಾಡುತ್ತಿದೆ.

ಸ್ವಾಮಿಗಳ ಸಾರ್ಥಕ ಸೇವೆಗೆ ವಿಧಿ ತೃಪ್ತಿಗೊಂಡು ಅವರ ನೆರವಿಗೆಂದು ಸೂರದಾಸರನ್ನು ಒದಗಿಸಿರುವುದು ನಮ್ಮ ಪುಣ್ಯ. ಹಿರಿಯ ಸ್ವಾಮಿಗಳ ದಾರಿಯಲ್ಲೇ ನಡೆಯುತ್ತ, ಅವರ ಪಡಿಯಚ್ಚಾಗಿ ವ್ಯವಹಾರ ಮಗ್ನರಾಗಿರುವ ಆಧ್ಯಾತ್ಮಿಕ ಸಾಧಕ ಸೂರದಾಸರು ಇನ್ನೊಬ್ಬ 'ತಿರುಕ'. ಈ ತಿರುಕರಿಬ್ಬರಿಂದ ನಾಡಿನ ಭಾಗ್ಯ ಬೆಳೆಯುತ್ತಲಿದೆ: ಸದ್ದು ಗದ್ದಲವಿಲ್ಲದೆ, ಅಬ್ಬರ–ಆಡಂಬರಗಳಿಲ್ಲದೆ, ಸೋಗು–ವೈಭವಗಳಿಲ್ಲದೆ ಮಲ್ಲಾಡಿಹಳ್ಳಿಯಲ್ಲಿ ಕ್ರಾಂತಿಯೊಂದು ಜರುಗುತ್ತಿದೆ.

ಜಗಜಟ್ಟಿ ಹನುಮಂತರಾದಿ ಜಟ್ಟಿಗಳು ಆಡಿದಹಳ್ಳಿ ಮಲ್ಲಾಡಿಹಳ್ಳಿ ಇಲ್ಲಿನ ಆಶ್ರಮ ಕನ್ನಡನಾಡಿನ ತಾಳಗುಂದ, ಬೆಳಗಾವಿ, ತಲಕಾಡು ವಿಶ್ವವಿದ್ಯಾನಿಲಯಗಳನ್ನು ಸ್ಮರಣೆಗೆ ತರುತ್ತದೆ. ತಕ್ಷಶಿಲಾ, ನಲಂದಾ ಕಾಂಚಿ. ವಿಶ್ವವಿದ್ಯಾನಿಲಯಗಳಂತೆ ಶೋಭಿಸುವ ಕಾಲ ಸಮೀಪಿಸಲಿ.

—ಹುಲ್ಲೂರು ಶ್ರೀನಿವಾಸ ಜೋಯಿಸರು.

ತ. ರಾ. ಸು.

ಮಾನವೀಯತೆಯ ಮೂರ್ತಿ

ಮಲ್ಲಾಡಿಹಳ್ಳಿಯ ಸ್ವಾಮಿಗಳನ್ನು—ಮಲ್ಲಾಡಿಹಳ್ಳಿಯ ಅನಾಥಸೇವಾಶ್ರಮದ ಜೀವ ಜೀವಾಳವಾದ ಶ್ರೀ ಶ್ರೀ ರಾಘವೇಂದ್ರಸ್ವಾಮಿಗಳನ್ನು ಜನ ಕರೆಯುವುದು, ಗುರುತಿಸುವುದು ಈ ಹೆಸರಿನಿಂದಲೇ. ಅದನ್ನು ಬಿಟ್ಟು ಬೇರೆ ಹೆಸರನ್ನು ಉಪಯೋಗಿಸಿದರೆ ಆ ವ್ಯಕ್ತಿಯೇ ಬೇರೆಯೇನೋ ಎಂದು ಭ್ರಮಿಸುವ ಸಂಭವವೂ ಉಂಟು—ನಾನು ಕಣ್ಣಾರೆ ಕಂಡದ್ದು, ಅವರ ಹೆಸರು, ಕಾರ್ಯ ಸಾಕಷ್ಟು ಚಿರಪರಿಚಿತವಾದ ಎಷ್ಟೋ ವರ್ಷಗಳ ಬಳಿಕ. ಅವರನ್ನು ನಾನು ಕಾಣುವ ಬದಲು ಅವರ ಯೋಗಾಭ್ಯಾಸ, ಮಲ್ಲಾಡಿಹಳ್ಳಿಯ ಅನಾಥಸೇವಾಶ್ರಮವನ್ನು ನಡೆಸುವ ಸಲುವಾಗಿ ಒಂದು ಖಾದಿ ಬನೀನು, ಒಂದು ಚಡ್ಡಿ ತೊಟ್ಟು ಊರೂರು ಅಲೆದಾಡುವ ನಿಸ್ವಾರ್ಥ ಜೀವಿಯ ಬಗ್ಗೆ ಹಿರಿಯರಿಂದ, ಗೆಳೆಯರಿಂದ ಕೇಳಿದ್ದೆ. ಪ್ರಾಯಶಃ ಚಿತ್ರದುರ್ಗಕ್ಕೆ ಅವರು ಬಂದಾಗ ಆಗಿನ್ನೂ ಹುಡುಗನಾಗಿದ್ದ ನಾನು ಒಂದೆರಡು ಬಾರಿ ನೋಡಿದ ನೆನಪು ಮಸಕು ಮಸಕಾಗಿ ನನ್ನ ಮನಸ್ಸಿನಲ್ಲಿ ಇಂದೂ ಉಳಿದಿದೆ. ಆದರೆ ಹಾಗೆ ಅವರನ್ನು ಕಂಡಾಗ, ಅವರ ಹೆಸರನ್ನು ಕೇಳಿದಾಗ ನನಗೆ ಸಾಧು-ಸಂತರಲ್ಲಿ ಸಂಬಿಕೆಯಾಗಲೀ, ವಿಶ್ವಾಸವಾಗಲೀ ಅಷ್ಟಾಗಿ ಇರಲಿಲ್ಲ. ವಿಶ್ವಾಸವೇನು ? ಅಂಥವರ ಬಗ್ಗೆ ಒಂದು ಬಗೆಯ ತಾತ್ಸಾರದ ಧೋರಣೆಯೇ ನನ್ನ ಜೀವನದ ದೃಷ್ಟಿಯಾಗಿತ್ತು. ಆ ಕಾರಣಕ್ಕಾಗಿಯೇ ಏನೋ ನನ್ನ ಹುಟ್ಟೂರಾದ ಚಿತ್ರದುರ್ಗಕ್ಕೆ ಬಹಳಷ್ಟು ಹತ್ತಿರವಾದ ಮಲ್ಲಾಡಿಹಳ್ಳಿಯಲ್ಲಿ ಅವರಿದ್ದರೂ ಅವರನ್ನು ಕಾಣಬೇಕು ಎಂದಾಗಲೀ, ಅವರ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕು ಎಂದಾಗಲೀ ನನಗೆ ಆಸಕ್ತಿಯೇ ಇರಲಿಲ್ಲ.

ನನಗೇನೋ ಅವರ ಬಗ್ಗೆ ಆಸಕ್ತಿಯಿರಲಿಲ್ಲ. ಪ್ರಾಯಶಃ ಆ ಕಾಲಕ್ಕೆ ಅನಾಮಧೇಯನಾಗಿದ್ದ ನನ್ನ ಹೆಸರನ್ನೂ ಅವರೂ ಕೇಳದೆ ಇದ್ದಿರಬೇಕು. ಏಕೆಂದರೆ ಮಲ್ಲಾಡಿಹಳ್ಳಿಯಲ್ಲಿ ಅವರು ತಮ್ಮ ಕಾರ್ಯ ಚಟುವಟಿಕೆಯನ್ನು ಆರಂಭಿಸಿದ 1943-44ರ ಕಾಲ—ನಾನು ವಿಶ್ವಕರ್ನಾಟಕದ ಮೂಲಕ ಪತ್ರಿಕಾರಂಗವನ್ನು ಪ್ರವೇಶಿಸಿ ಒಂದು ಕಡೆ ಸಿದ್ಧವನಹಳ್ಳಿ ಕೃಷ್ಣಶರ್ಮರು, ಮತ್ತೊಂದು ಕಡೆ ಅ. ನ. ಕೃ. ಅವರು ಈ ಎರಡೂ ಗರಡಿಗಳಲ್ಲಿ ಸಾಹಿತ್ಯದ ಕಸರತ್ತನ್ನು ಕಲಿಯುತ್ತಿದ್ದ ಕಾಲ. ಹೀಗಾಗಿ ನನ್ನ ಹುಟ್ಟಿದ ಊರಿಗೆ ಮೂವತ್ತು ಮೈಲಿಗಳಷ್ಟು ದೂರವಲ್ಲಿದ್ದ ಮಲ್ಲಾಡಿಹಳ್ಳಿಯ ಸ್ವಾಮಿಗಳನ್ನು ನಾನು ಮೊದಲು ಕಂಡಿದ್ದು ಚಿತ್ರದುರ್ಗದಲ್ಲೂ ಅಲ್ಲ, ಮಲ್ಲಾಡಿಹಳ್ಳಿಯಲ್ಲೂ ಅಲ್ಲ. ಎಲ್ಲದರಿಂದಲೂ ಬಹುದೂರವಾದ ಬಳ್ಳಾರಿಯಲ್ಲಿ ; 1957-58ನೇ ಇಸವಿಯಲ್ಲಿರಬೇಕು.

ನಾನಾಗ ಬಳ್ಳಾರಿಗೆ ದಿ. ನಾಟಕರತ್ನ ಜಿ. ವಿ. ವೀರಣ್ಣನವರಿಗೆ ಒಂದು ನಾಟಕವನ್ನು ಬರೆದು ಕೊಡುವ ಸಲುವಾಗಿ ನನ್ನ ಮಡದಿಯ ಸಮೇತ ಒಂದೆರಡು ತಿಂಗಳ ಕಾಲ ಬಳ್ಳಾರಿಯಲ್ಲಿ ಬಿಡಾರ ಮಾಡಿದ್ದೆ.

ಈ ವೇಳೆಗೆ 1949ರಲ್ಲಿ ಸಾಹಿತಿಯಾಗಿಯೇ ಬದುಕಬೇಕು ಎಂದು ನಿಶ್ಚಯಮಾಡಿ ಪತ್ರಿಕೋದ್ಯಮಕ್ಕೆ ಶರಣು ಹೊಡೆದು, ಮೈಸೂರಿನಲ್ಲಿ ಸಂಸಾರ ಹೂಡಿ ಜೀವನದ ನಿಷ್ಠುರ ಗಾಣಕ್ಕೆ ನನ್ನ ಮೈಯನ್ನು ಒಪ್ಪಿಸಿದ್ದೆ. ಈ ಸಮಯದ ಘಟ್ಟದಲ್ಲಿ ನನ್ನ ಜೀವನದಲ್ಲಿ ಪ್ರವೇಶಮಾಡಿದ ದಿ. ವೇದಬ್ರಹ್ಮ ನರಸಿಂಹಶಾಸ್ತ್ರಿಗಳು, ಒಕ್ಕಲಿಗರ ಭಾಸ್ಕರಾಚಾರ್ಯ ರಾಮಚಂದ್ರ ಪಂತಲು ಅವರು ಭಾರತೀಯ ಧರ್ಮ, ಆಧ್ಯಾತ್ಮಿಕಗಳ ಕಡೆಗೆ ಕುರುಡಾಗಿದ್ದ ನನ್ನ ಕಣ್ಣನ್ನು ತೆರೆಯಿಸಿ ಅವುಗಳ ಅಭ್ಯಾಸದತ್ತ ನನ್ನ ಅಂತಃಕರಣವನ್ನು ಪ್ರಚೋದಿಸಿದ್ದರು. ಸಾಧು–ಸಂತರು ಎಂದರೆ ಬಿಟ್ಟಿ ಊಟ ತಿಂದು, ಹಾಯಾಗಿ ಅಲೆಯುವ ಪೋಲಿಯ ಜನಗಳು ಎನ್ನುವ ನನ್ನ ಭಾವನೆ ಬದಲಾಗಿ ಯಾರನ್ನೇ ಆಗಲಿ ತಾತ್ಸಾರದಿಂದ ಕಾಣುವ ಮೊದಲು ಅವರನ್ನು ಅಳೆಯುವ ನನ್ನ ಶಕ್ತಿಯನ್ನೇ ತೂಗಿನೋಡಿ ಕೊಳ್ಳಬೇಕು ಎನ್ನುವ ವಿವೇಚನೆ ಅಂಕುರಿಸಿತ್ತು. ಅಂತಹ ಸಮಯದಲ್ಲಿ ನನ್ನ ಜೀವನದಲ್ಲಿ ಮೊಟ್ಟ ಮೊದಲ ಬಾರಿಗೆ ನಾನು ಮುಲ್ಲಾಡಿಹಳ್ಳಿಯ ರಾಘವೇಂದ್ರಸ್ವಾಮಿಗಳನ್ನು ಕಂಡೆ. ಅವರಾಗ ತಮ್ಮ ಅನಾಥ ಸೇವಾಶ್ರಮಕ್ಕೆ ಗುಬ್ಬಿ ವೀರಣ್ಣನವರಿಂದ ನೆರವನ್ನು ಪಡೆಯಲು ಬಂದಿದ್ದರು. ಅವರನ್ನು ನಾನು ಕಾಣುವ ಮೊದಲು ನನಗೆ ಅವರ ಪರಿಚಯ ಮಾಡಿಕೊಟ್ಟ ಗುಬ್ಬಿ ವೀರಣ್ಣನವರು "ಮುಲ್ಲಾಡಿಹಳ್ಳಿಯ ಸ್ವಾಮಿಗಳು, ಅವರ ಸೇವಾಶ್ರಮ, ಅವರ ನಿಷ್ಕಾಮಕರ್ಮ ತತ್ಪರತೆ ಇವುಗಳ ಬಗ್ಗೆ ಸಾಕಷ್ಟು ಹೇಳಿ ಅವರ ಬಗ್ಗೆ ನನ್ನಲ್ಲಿ ಪೂಜ್ಯ ಭಾವನೆ ಮೂಡುವಂತೆ ಮಾಡಿದ್ದರು. ಹಾಗಾಗಿ ಅವರನ್ನು ಕಾಣುವ ಕುತೂಹಲ ನನ್ನಲ್ಲಿ ಪ್ರಬಲವಾಗಿತ್ತು. ಆ ದಿನ ನನ್ನ ಮಡದಿಯೊಂದಿಗೆ ನಾನು ಅವರ ದರ್ಶನ ಮಾಡಿದೆ. ಆ ಕಾಲದಲ್ಲಿ ನಮ್ಮಿಬ್ಬರ ನಡುವೆ ಏನು ಮಾತುಕತೆ ನಡೆಯಿತು ಎನ್ನುವುದು ಈಗ ನನಗೆ ಖಚಿತವಾಗಿ ನೆನಪಿಲ್ಲ. ಆದರೂ ಆ ದಿನ ಅವರ ತೇಜಃಪುಂಜ ವಾದ ವ್ಯಕ್ತಿತ್ವ ನನ್ನ ಮನಸ್ಸಿನ ಮೇಲೆ ಮೂಡಿಸಿದ ಪ್ರಭಾವಮುದ್ರೆ ಇನ್ನೂ ಅಚ್ಚಳಿಯದೆ ಹಾಗೇ ಉಳಿದಿದೆ. ಅವರನ್ನು ಮೊದಲು ಕಂಡಾಗ ನನಗೆ ಅನಿಸಿದ ಮೊದಲ ಭಾವನೆ—ಆ ಮುಖದಲ್ಲಿ ಲಾಸ್ಯವಾಡುತ್ತಿದ್ದ ಪ್ರಶಾಂತ ತೇಜಸ್ಸಿಗೆ ನಮಸ್ಕರಿಸಬೇಕು ಎಂದು. ಯಾವ ಸಂಕೋಚವೂ ಇಲ್ಲದೆ ನಮಸ್ಕಾರಮಾಡಿದೆ. ಆ ವೇಳೆಗೆ ನನ್ನ ಹೆಸರು ಸಾಕಷ್ಟು ಪ್ರಖ್ಯಾತವೋ, ಕುಖ್ಯಾತವೋ ಏನೋ ಒಂದು ಆಗಿತ್ತು. ಹಾಗಾಗಿ ನನ್ನ ಹೆಸರಿನ ಪರಿಚಯ ಸ್ವಾಮೀಜಿ ಅವರಿಗಿತ್ತು. ಅಂದು ಅವರ ಆಶ್ರಮದ ಬಗ್ಗೆ ಎಷ್ಟೋ ಮಾತನಾಡಿದೆವು.

ಆ ಬಳಿಕ—

"ಒಮ್ಮೆ ಅನಾಥಸೇವಾಶ್ರಮಕ್ಕೆ ಬಂದು ಭಾಷಣ ಮಾಡಬೇಕು."—ಎಂದು ಸ್ವಾಮೀಜಿ ಕರೆ ಕೊಟ್ಟರು.

"ಖಂಡಿತವಾಗಿ ಬರುತ್ತೇನೆ." —ಎಂದು ನಾನು ಮಾತು ಕೊಟ್ಟೆ.

ಅದಾದ ಬಳಿಕ ಮೈಸೂರಿಗೆ ಬಂದಿದ್ದ ಸ್ವಾಮೀಜಿ ಅವರು ನಾನು ಊರಿನಲ್ಲಿಲ್ಲದಿದ್ದಾಗ ನಮ್ಮ ಮನೆಗೆ ಬಂದು ನನ್ನ ಯೋಗಕ್ಷೇಮವನ್ನು ವಿಚಾರಿಸಿಕೊಂಡು ಹೋಗಿದ್ದರಂತೆ. ಅದಾದ ಸ್ವಲ್ಪ ದಿವಸಗಳ ಮೇಲೆ ಒಮ್ಮೆ ಅವರ ಆಶ್ರಮದಲ್ಲಿ ನಡೆಯುವ ವಿನಾಯಕನ ಚತುರ್ಥಿಯ ಕಾರ್ಯಕ್ರಮಕ್ಕೆ ಬರಬೇಕು-ಭಾಷಣಕ್ಕೆ ಬರ ಬೇಕೆಂದು ಸ್ವಾಮೀಜಿಯವರಿಂದ ಕರೆಬಂತು. ಆ ಕರೆಯಂತೆ ಆಶ್ರಮಕ್ಕೆ ಹೋದೆ. ಆದಿನ ಸ್ವಾಮೀಜಿ ಅವರು ಮುಲ್ಲಾಡಿಹಳ್ಳಿಯಂತಹ ಕುಗ್ರಾಮದಲ್ಲಿ ಸಾಧಿಸಿದ ಪವಾಡದಂತಹ ಕಾರ್ಯಕ್ರಮವನ್ನು ಕಂಡು ಮೂಕನಾದೆ. ಒಬ್ಬ ವ್ಯಕ್ತಿ ಜೋಳಿಗೆ ಹಿಡಿದು ಮನೆ ಮನೆ ತಿರುಗಿ ಇಂತಹದೊಂದು ಬೃಹತ್ ಸಂಸ್ಥೆಯನ್ನು ಕಟ್ಟಬಲ್ಲರು ಸಾಧ್ಯ ಎಂದು ಗಾಂಧೀಜಿಯವರೊಬ್ಬರನ್ನು ಬಿಟ್ಟು ಬೇರೆ ಯಾರ ಬಗ್ಗೆ ಹೇಳಿದ್ದರೂ ನಾನು ನಂಬುತ್ತಿರಲಿಲ್ಲ. ಆದರೆ ಕಣ್ಣು ಕಂಡದ್ದನ್ನು ನಂಬದಿರಲು ಸಾಧ್ಯವೇ ? ಅವರ ಅಂದಿನ ಸಾಧನೆಯ ಮಹತ್ತೇ ನನ್ನ ಭಾಷಣಕ್ಕೆ ಸ್ಫೂರ್ತಿ ಯಾಗಿರಬೇಕು. ಎಂತಲೇ, ಯಾವ ಪೂರ್ವ ಸಿದ್ಧತೆಯೂ ಇಲ್ಲದೆ ಮಾಡಿದ ಭಾಷಣ ಚೆನ್ನಾಗಿತ್ತು ಎಂದು ಎಲ್ಲರೂ ಹೇಳಿದರು. ಆದರೆ ಇಲ್ಲಿ ನನ್ನ ಭಾಷಣದ ವಿಷಯ ಅಪ್ರಸ್ತುತ.

ಭಾಷಣ ಮುಗಿದ ಬಳಿಕ, ಊಟ ಮುಗಿಸಿ ಬೇರೆಯವರೊಂದಿಗೆ ಮಾತನಾಡುತ್ತ ಕುಳಿತಿದ್ದಾಗ,

ಸ್ವಾಮೀಜಿಯವರ ಕಡೆಯವರೊಬ್ಬರು ಬಂದು, "ಸ್ವಾಮೀಜಿ ನಿಮ್ಮನ್ನು ನೋಡಬಯಸುತ್ತಾರೆ ಬನ್ನಿ" ಎಂದು ಕರೆದರು. ಆ ದಿನ ಭಾಷಣದಲ್ಲಿ ನಾನು ಕೆಲವು ಕಟುವಾದ ಮಾತುಗಳನ್ನಾಡಿದ್ದೆ. ಆ ಬಗ್ಗೆ ಸ್ವಾಮೀಜಿ ಅವರಿಗೆ ಏನಾದರೂ ಅಸಮಾಧಾನವಾಯಿತೇನೋ ಎಂದು ಅಳುಕುತ್ತಲೇ ಅವರನ್ನು ಕಾಣಲು ಹೋದೆ.

ಸಭಾಂಗಣದ ಹಿಂಭಾಗಕ್ಕೆ ಸ್ವಲ್ಪ ದೂರದಲ್ಲಿ ಸ್ವಾಮಿಗಳು ಏಕಾಂತವಾಗಿ ವಾಸಮಾಡುವ ಕುಟೀರವಿದೆ. ಅಲ್ಲಿಗೆ ನನ್ನನ್ನು ಕರೆದೊಯ್ದರು. ನನಗಾಗಿ ಕಾದಿದ್ದ ಸ್ವಾಮೀಜಿ ಅವರು ನನ್ನನ್ನು ತುಂಬಾ ಪ್ರೀತಿಯಿಂದ ಕರೆದು, ಹತ್ತಿರ ಕೂಡಿಸಿಕೊಂಡು, ನನ್ನ ಮನದ ಅಳುಕನ್ನೆಲ್ಲಾ ನಿವಾರಿಸಿ, ಅನಾಥ ಸೇವಾಶ್ರಮದ ಬಗ್ಗೆ ಮಾತನಾಡುತ್ತಾ—"ನಿಮ್ಮಂತಹ ಸ್ಫೂರ್ತಿಯುಳ್ಳವರು, ಜನತೆಯಲ್ಲಿ ಸ್ಫೂರ್ತಿಯನ್ನು ತುಂಬಬಲ್ಲವರು ಈ ಆಶ್ರಮಕ್ಕೆ ಬೆಂಬಲವಾಗಿ ನಿಲ್ಲಬೇಕು"—ಎಂದರು ಅವರ ಮಾತು ಕೇಳಿ ನನಗೆ ಆಶ್ಚರ್ಯವಾಯಿತು.

"ನಾವೆಲ್ಲ ಮಾತಿನ ಮಲ್ಲರು. ಏನೋ ದೇವರು ಶಕ್ತಿ ಕೊಟ್ಟಿದ್ದಾನೆ, ಅಷ್ಟಿಷ್ಟು ಬರೆಯಬಲ್ಲೆ; ಒಂದೆರಡು ಮಾತಾಡಬಲ್ಲೆ. ಅಷ್ಟು ವಿನಾ ಇಂತಹ ಸಾಹಸ ಕಾರ್ಯಕ್ಕೆ ನನ್ನಿಂದ ಏನು ತಾನೇ ಆದೀತು. ಎಲ್ಲಕ್ಕಿಂತ ಹೆಚ್ಚಾಗಿ ಚೈತನ್ಯ ಸ್ವರೂಪರಾದ ನೀವೇ ಇರುವಾಗ ನನ್ನಂತಹವರ ಅಗತ್ಯ ಏನಿದೆ ?"—ಎಂದು ಕೇಳಿದೆ, ಅದಕ್ಕೆ

"ನಾನಿರುವವರೆಗೂ ನನ್ನಿಂದ ಆದಷ್ಟು ಕೆಲಸವನ್ನೇನೋ ಮಾಡುತ್ತೇನೆ. ಆದರೆ ನನ್ನಂತಹವನು ಬಹಳ ದಿನ ಬದುಕಲು ಬಿಡುವುದಿಲ್ಲ."

—ಎಂದರು ಸ್ವಾಮೀಜಿ.

ಆ ಮಾತನಾಡುವಾಗ ಅವರ ಧ್ವನಿಯಲ್ಲಿ ಹೃದಯದ ನರನರವನ್ನೂ ಮೀಟುವ ವಿಚಿತ್ರ ಉದ್ವಿಗ್ನತೆ ಇತ್ತು. ಅದು ಅರಿವಾಗಿ ಕಾಣದೆ ಕೆಂಡವನ್ನು ತುಳಿದ ಹಾಗಾಯಿತು ನನಗೆ.

"ಇದೇನು ಮಾತು ಸ್ವಾಮೀಜಿ—ನೀವು ಆಡುತ್ತಿರುವುದು ? ನಿಮ್ಮ ಮಾತೇ ನನಗೆ ಅರ್ಥವಾಗುತ್ತಿಲ್ಲ."

—ಎಂದೆ.

"ನಿಜ, ಇಲ್ಲಿಯ ಪರಿಸ್ಥಿತಿ ನಿಮಗೆ ಗೊತ್ತಿಲ್ಲ. ನಾನಿಲ್ಲಿ ಈ ಆಶ್ರಮ ಸ್ಥಾಪಿಸಿರುವುದು ಬಹಳ ಜನಕ್ಕೆ ಕಣ್ಣುಬೇನೆಯಾಗಿದೆ. ಕೆಲವರಿಗೆ ಸ್ವಾರ್ಥಕಾರಣಕ್ಕಾಗಿ, ಕೆಲವರಿಗೆ ಜಾತಿಕಾರಣಕ್ಕಾಗಿ, ಕೆಲವರಿಗೆ ನನ್ನಬರಿಗೈಯ ಸಾಹಸವೇ ಅಸೂಯೆಯಾಗಿ ಆದಷ್ಟು ಬೇಗ ನನ್ನನ್ನು ಮುಗಿಸಿಬಿಡಲು ಯತ್ನಿಸುತ್ತಿದ್ದಾರೆ."

—ಎಂದು ಹೇಳಿ, ತಮ್ಮ ಮೇಲೆ ಹಲವಾರು ಬಾರಿ ನಡೆದ ವಿಷಪ್ರಯೋಗ, ಅಭಿಚಾರ, ಕೊಲೆಯ ಪ್ರಯತ್ನ–ಈ ಘಟನೆಗಳನ್ನು ವಿವರಿಸಿ—

"ಈ ಬಿರುಗಾಳಿಯ ಮಧ್ಯೆ ಒಂಟಿ ದೀಪದ ಕುಡಿಯಾಗಿ ನಿಮ್ಮಂತಹವರ ಬೆಂಬಲವಿಲ್ಲದೆ ಈ ಕನಸು ನನಸಾದೀತೇ ?"

—ಎಂದರು.

"ಅವರು ಹೇಳಿದ ಮಾತುಗಳನ್ನುಕೇಳಿ ನನ್ನ ಮೇಲಾದ ಪರಿಣಾಮ ಹೀಗೆಂದು ಹೇಳಲಾರೆ. ಅವರೇನೋ ಎಲ್ಲವನ್ನೂ ನಿರುದ್ವೇಗದ ಶಾಂತತೆಯಿದ್ದ ಧ್ವನಿಯಲ್ಲೇ ಹೇಳಿದರು. ಆದರೆ ಅವರು ಆಡಿದ ಒಂದೊಂದು ಮಾತೂ ನನ್ನ ಮೈಯ ರಕ್ತವನ್ನು ಕುದಿಸಿದಂತೆಯೇ, ನನ್ನ ಹೃದಯದಲ್ಲಿ ಭಯದ ಬಿರುಗಾಳಿಯನ್ನೂ ಬೀಸಿತು. ಅಷ್ಟು ಹೊತ್ತು ಏನೊಂದೂ ಮಾತನಾಡಲಾಗದೆ ಸುಮ್ಮನೆ ಕುಳಿತುಬಿಟ್ಟೆ. ಒಂದು ಕಡೆ ಅವರು ಹೇಳಿದ ಜನರ ಹೇಸಿತನದ ಬಗ್ಗೆ ಮೈ ಕುದಿಯುತ್ತಿದ್ದರೂ, ಅವರನ್ನು ಏನೂ ಮಾಡಲಾಗದ ಅಸಹಾಯಕತೆಯ ಮಂಜು ನನ್ನ ಮೈಯನ್ನು ಹೆಪ್ಪುಗಟ್ಟಿಸಿತ್ತು. ಅವರ ಮಾತನ್ನು ಕೇಳಿ ನನಗೆ 'ಗಾಂಧೀಜಿಯನ್ನು ಗುಂಡಿಟ್ಟು ಕೊಂದ ಜನ ನಮ್ಮವರು. ಅಂತಹವರು ಇಲ್ಲಿಯೂ ಇರಬಾರದೇಕೆ ?" ಎನಿಸಿ ಎಂತಹುದೋ ವಿಷಗಾಳಿ ತುಂಬಿದ, ಉಸಿರು ಕಟ್ಟಿಸುವ ಕಗ್ಗವಿಯಲ್ಲಿ ಸಿಕ್ಕಿ ಬಿದ್ದವನ ಹಾಗಾಗಿತ್ತು ನನ್ನ ಸ್ಥಿತಿ. ಆ ಸ್ಥಿತಿಯಲ್ಲಿ ಅವರ ಮಾತಿಗೆ ಏನು ಉತ್ತರ ಹೇಳಲಿ ?

ಏನು ಆಶ್ವಾಸನೆ ಕೊಡಲಿ ? ನನ್ನ ಅಸಹಾಯಕ ಪರಿಸ್ಥಿತಿಯಿಂದ ನನ್ನ ಬಗ್ಗೆ ನಾನೇ ಅಸಹ್ಯ ಪಟ್ಟುಕೊಳ್ಳುವ ಹಾಗಾಯಿತು. ಆ ಭಾವನೆ ತುಂಬಿದ ಧ್ವನಿಯಲ್ಲೇ—"ನಾನೇನು ಮಾಡಲಿ ಸ್ವಾಮೀಜಿ, ನನ್ನ ಕೈಯಲ್ಲಿ ಬಂದೂಕವಿಲ್ಲ ; ಬರೀ ಲೇಖನಿ ಮಾತ್ರ"—ಎಂದು ಹೇಳಿದೆ. ಸ್ವಾಮೀಜಿ ಅವರಿಗೆ ನನ್ನ ಮನಸ್ಸಿನ ಹೋಯ್ದಾಟ ಅರ್ಥವಾಗಿದ್ದಿರಬೇಕು. "ನಿಮ್ಮ ಕೈಯಲ್ಲಿ ಬರೀ ಲೇಖನಿ ಇರುವುದು ನನಗೂ ಗೊತ್ತು. ನಿಮ್ಮ ಕಂಠಬಲವನ್ನೂ ನಾನು ಬಲ್ಲೆ. ಆ ಎರಡರ ಶಕ್ತಿ ನನಗೆ ಗೊತ್ತಿದೆ. ಅಗತ್ಯಬಿದ್ದಾಗ ಈ 'ತಿರುಕ'ನ ಜೋಳಿಗೆಗೆ ಆ ಎರಡನ್ನೂ ಕೊಡಲು ಸಿದ್ಧವಾಗಿರಿ"—ಎಂದರು. "ಅಗತ್ಯವಾಗಿ ಎಂದು ಕರೆ ಬಂದರೂ ಬರುತ್ತೇನೆ"—ಎಂದು ಮಾತು ಕೊಟ್ಟೆ. ಸ್ವಾಮೀಜಿಯವರು ನನ್ನ ಮಾತು ಕೇಳಿ ನನ್ನನ್ನು ಬಾಚಿಬಿಗಿದಪ್ಪಿ "ನಿಮ್ಮ ಹೃದಯ ನನಗೆ ಗೊತ್ತು" —ಎಂದರು, ಹೆದರಿದ ಮಗುವನ್ನು ಸಂತೈಸುವ ತಾಯಿಯ ಧ್ವನಿಯಲ್ಲಿ. ಅವರ ಮಾತು, ಅವರ ದೇಹ ಸಾಮೀಪ್ಯ ಅದರಿಂದ ನನಗಾದ ಶಕ್ತಿಸಂಚಾರದ ಅನುಭವ ಈಗಲೂ ನೆನೆದಾಗ ನನ್ನನ್ನು ರೋಮಾಂಚಗೊಳಿಸುತ್ತದೆ.

ನಮ್ಮಿಬ್ಬರ ನಡುವೆ ಈ ಮಾತು ನಡೆದು ಎಷ್ಟೋ ವರ್ಷಗಳಾಗಿವೆ. ಸ್ವಾಮೀಜಿಯವರಿಗೆ ಇನ್ನೂ ಸುತ್ತಲ ಪರೊಂದಿಗೆ ಸೆಣಸುವ ನಿತ್ಯ ಹೋರಾಟ ತಪ್ಪಿಲ್ಲ. ಆ ಹೋರಾಟದ ನಡುವೆಯೇ ಹಂತಹಂತವಾಗಿ ಅವರ ಕನಸು ತನ್ನ ಗುರಿಯತ್ತ ದೃಢವಾಗಿ ಹೆಜ್ಜೆಯನ್ನಿಡುತ್ತಾ ನಡೆದಿದೆ. ಅಸಹಾಯಶೂರರಾಗಿ ತಮ್ಮ ತ್ಯಾಗ, ಯೋಗಗಳಿಂದ ಸತ್ತ ನಾಡಿನಲ್ಲೂ ಜೀವರಸವನ್ನು ಚಿಮ್ಮಿಸುತ್ತಾ, ಮುಟ್ಟಿದ ಮಣ್ಣು ಗೊಂಬೆಗಳನ್ನೆಲ್ಲಾ ಚೈತನ್ಯ ಮೂರ್ತಿಗಳನ್ನಾಗಿ ಮಾಡಿ ನಾಡನ್ನು ಸಂಚರಿಸುತ್ತಿದ್ದಾರೆ, ಮಲ್ಲಾಡಿಹಳ್ಳಿಯ ಸ್ವಾಮಿಗಳು.

ಆ ಘಟನೆಯಾದ ಬಳಿಕ ಮೈಸೂರಿನಲ್ಲಿ ಹಲವಾರು ಬಾರಿ ಸ್ವಾಮೀಜಿ ಅವರನ್ನು ಕಂಡಿದ್ದೇನೆ. ಎಷ್ಟೋ ಬಾರಿ ಅವರಾಗಿಯೇ ಬಂದು ನನ್ನನ್ನು ಮಾತನಾಡಿಸಿ ಒಮ್ಮೊಮ್ಮೆಯೂ ನನ್ನಲ್ಲಿ ಹೊಸ ಚೈತನ್ಯವನ್ನು ಮೂಡಿಸಿ ಹೋಗಿದ್ದಾರೆ. ಆ ಒಂದೊಂದು ಬಾರಿಯ ದರ್ಶನದ ಬಗ್ಗೆಯೂ ನಡೆದ ಸಂಭಾಷಣೆಯ ಬಗ್ಗೆಯೂ ಬರೆಯುವಷ್ಟು ದೀರ್ಘ ಸ್ಥಳಾವಕಾಶ ಇಲ್ಲಿಲ್ಲ. ಆದರೆ ಒಂದು ಘಟನೆಯನ್ನು ಮಾತ್ರ ಬರೆಯದೆ ಈ ಲೇಖನವನ್ನು ನಾನು ಮುಗಿಸ ಲಾರೆ.

ಸ್ವಾಮೀಜಿ ಅವರದು ಬಹಳ ಕಟ್ಟುನಿಟ್ಟಾದ ಜೀವನ. ಯೋಗದಿಂದ ಅವರ ಮೈ ಹೇಗೆ ವಜ್ರಕಾಯ ವಾಗಿದೆಯೋ ಹಾಗೆಯೇ ತಾವು ಹಾಕಿದ ನಿಯಮಗಳನ್ನುತಿಲಮಾತ್ರವೂ ಮೀರದೆ ನಡೆಯುವುದು ಅವರ ಜೀವನದ ವ್ರತವೇ ಆಗಿದೆ. ರೋಗಿಗಳಾಗಿ ಅವರನ್ನು ನೋಡಬೇಕೆಂದರೆ ಸೋಮವಾರ ಒಂದೇ ದಿನ, ಅದೂ ಬೆಳಗಿನ ಹೊತ್ತು ಮಾತ್ರ.ನೋಡುವಾಗಲೂ ಯಾರು ಮೊದಲು ಬಂದರೆ ಅವರು.ಅದರಲ್ಲಿ ಬಂದವರ ಸ್ಥಾನ,ಅಂತಸ್ತು ಯಾವುದನ್ನೂ ಸ್ವಾಮೀಜಿ ಲೆಕ್ಕಕ್ಕೆತೆಗೆದುಕೊಳ್ಳುವುದಿಲ್ಲ. ಎಲ್ಲರಿಗೂ ಒಂದೇ ನಿಯಮ.ಅವರ ಈ ನಿಯಮ ನಿಷ್ಠುರತೆಯನ್ನುನಾನು ಕೇಳಿದ್ದೆ. ಆದ್ದರಿಂದಲೇ ಎಷ್ಟೋ ಬಾರಿ ನನ್ನ ಆರೋಗ್ಯಕ್ಕೆ ಅವರ ಸಲಹೆಯನ್ನು ಪಡೆಯಬೇಕು ಎನಿಸಿದರೂ ಆ ನಿಯಮ ನಿಷ್ಠುರತೆಗೆ ಅಂಜಿ ದೂರವೇ ಇರುತ್ತಿದ್ದೆ. ಅವರ ಜೀವನಕ್ಕೆ ಕ್ರಮ ಎಷ್ಟು ಅನಿವಾರ್ಯವೋ ನನ್ನಜೀವನ ಅದಕ್ಕೆ ತದ್ವಿರುದ್ಧ. ಯಾವ ನಿಯಮವನ್ನೂ ಪಾಲಿಸದೆಯೇ ಕಟ್ಟುಹರಿದ ಪಂಜಿನಂತೆ ಬದುಕಿದವನು ನಾನು. ಆದರೂ ಒಮ್ಮೆ ಅವರನ್ನು ನಾನು ನೋಡಲೇಬೇಕಾಗಿ ಬಂತು, ನನ್ನ ಕೈಹಿಡಿದಾಕೆಯ ಒತ್ತಾಯದಿಂದಾಗಿ.

1970 ಅಥವಾ 71ರಲ್ಲಿ ಇರಬೇಕು. ನಾನು ವಿದೇಶ ಪ್ರವಾಸ ಮುಗಿಸಿ ಬಂದ ಬಳಿಕ, ನನ್ನ ಮುಷ್ಕಟ ಗಳಿಂದಾಗಿ ಖಾಯಿಲೆ ಬಿದ್ದು ಹೇಗೋ ಬದುಕಿಬಂದಿದ್ದೆ. ಅದಾದ ಬಳಿಕ ಕಿವಿಯಲ್ಲಿ 'ಸರ್ಪಸುತ್ತು' ಎನ್ನುವ ವ್ಯಾಧಿ ಸುಮಾರು ಒಂದು ವರ್ಷಕಾಲ ನನ್ನನ್ನು ಕಾಡಿಸಿ, ನನ್ನನ್ನು ಎಲುಬಿನ ಗೂಡಾಗಿ ಮಾಡಿಹೋಗಿತ್ತು. ಈ ವ್ಯಾಧಿ ಗಳ ಮಧ್ಯದಲ್ಲಿ ಅತ್ಯಂತ ಆತ್ಮೀಯರಾಗಿದ್ದ ಅ. ನ. ಕೃ. ಅಗಲಿಹೋಗಿ ನನಗೂ ಬದುಕು ಭಾರವಾಗಿತ್ತು. ಆ ಸ್ಥಿತಿ ಯಲ್ಲೇ ಒಮ್ಮೆ ಚಿತ್ರದುರ್ಗಕ್ಕೆ ಹೋಗಬೇಕಾಗಿ ಬಂದಿತು. ನಾನು, ನನ್ನ ಹೆಂಡತಿ ಇಬ್ಬರೂ ಹೋಗಿದ್ದೆವು. ಆಗ ನನ್ನ ಹೆಂಡತಿ. ನನ್ನನ್ನು ಒತ್ತಾಯಮಾಡಿ ಒಂದು ಸೋಮವಾರದ ದಿನ ಬೆಳಗ್ಗೆ ಮಲ್ಲಾಡಿಹಳ್ಳಿಗೆ ಹೊರಡಿಸಿ

ಕೊಂಡು ಹೊರಟಳು. ನಾವು ಮಲ್ಲಾಡಿಹಳ್ಳಿ ತಲುಪುವ ವೇಳೆಗೆ ಹತ್ತು ಘಂಟೆಯ ಸಮಯವಾಗಿತ್ತು. ಸಾಕಷ್ಟು ಜನ ರೋಗಿಗಳು ಸ್ವಾಮೀಜಿಯವರ ಸಲಹೆಗಾಗಿ ಕಾಯುತ್ತಿದ್ದರು. ಆ ವೇಳೆಗಾಗಲೇ ನನಗೆ ನಿಲ್ಲುವುದು ಸಾಧ್ಯವಿಲ್ಲದಷ್ಟು ಆಯಾಸವಾಗಿತ್ತು. ನಮ್ಮನ್ನು ನೋಡಿದ ಸೂರ್‌ದಾಸ್‌ಜೀ ಅವರು ನಮ್ಮಿಬ್ಬರನ್ನು ಒಂದುಕಡೆ ಕೂಡಿಸಿ—

"ಇದೇನು, ಹೀಗಾಗಿ ಹೋಗಿದ್ದೀರಾ ? ಸ್ವಾಮೀಜಿ ಯಾರನ್ನೋ ನೋಡುತ್ತಿದ್ದಾರೆ. ಅದು ಮುಗಿದ ಕೂಡಲೇ ಅವರಿಗೆ ನೀವು ಬಂದಿರುವುದನ್ನು ಹೇಳುತ್ತೇನೆ." —ಎಂದು ಹೇಳಿದರು. ನನಗಿಂತಲೂ ಮುಂಚೆ ಅಲ್ಲಿದ್ದ ಜನಗಳನ್ನು ನೋಡಿ— "ಇನ್ನೂ ಬಹಳ ಜನ ಕಾದಿದ್ದಾರೆ. ಸ್ವಾಮೀಜಿಗೆ ತೊಂದರೆ ಕೊಡಬೇಡಿ. ಅವರಿಗೆ ಬಿಡುವಾದಾಗ ನೋಡಲಿ. ಮೊದಲು ಕುಡಿಯಲು ಒಂದು ಲೋಟ ನೀರು ಕೊಡಿ."—ಎಂದೆ. ನನಗೆ 'ಸ್ವಾಮೀಜಿಗಳು ನನ್ನನ್ನು ನೋಡಿ ಏನು ತಾನೇ ಮಾಡಿಯಾರು?'ಎಂಬ ನಿರಾಶೆಯಿತ್ತು. ನನ್ನ ಬದುಕಿನ ಬಗ್ಗೆ ನನಗೆ ಆಸೆಯೇ ಇರಲಿಲ್ಲ. ಸೂರ್‌ದಾಸ್‌ಜೀ ಕುಡಿಯಲು ನೀರು ತಂದುಕೊಟ್ಟರು. ಒಂದುಗುಳಿಗೆ ನುಂಗಿ, ನೀರು ಕುಡಿದು ಕುದಿಯುತ್ತಿದ್ದ ಹೊಟ್ಟೆನೋವನ್ನು ಉಪಶಮನ ಮಾಡಿಕೊಂಡು ಕಾಯುತ್ತಾ ಕುಳಿತೆ.

ನನ್ನ ಸುದ್ದಿಯನ್ನು ತಿಳಿಸಿಬರಲು ಹೋದ ಸೂರ್‌ದಾಸ್‌ಜೀ ಎರಡೇ ನಿಮಿಷದಲ್ಲಿ ಹೊರಬಂದು—

"ಸ್ವಾಮೀಜಿ ನಿಮ್ಮನ್ನು ಕರೆಯುತ್ತಾರೆ ಬನ್ನಿ"

—ಎಂದರು.

ಅಷ್ಟು ಬೇಗ ಕರೆ ಬಂದದ್ದು ಕೇಳಿ ನನಗೆ ಆಶ್ಚರ್ಯವಾಯಿತು. ಹಾಗೆಯೇ ನನ್ನ ಹೆಂಡತಿಯ ಜತೆಗೆ ಸ್ವಾಮೀಜಿಯವರನ್ನು ನೋಡಲು ಹೋದೆ. ನಾನು ಅವರನ್ನು ನೋಡಿ ನಮಸ್ಕಾರ ಮಾಡಿದೆ. ಅವರೂ ನನ್ನನ್ನು ನೋಡಿದರು. ನೋಡುತ್ತಲೇ ಕಾತರರಾಗಿ–"ಇದೇನು ? ! ಹೀಗಾಗಿ ಬಿಟ್ಟದ್ದೀರಾ ?"—ಎಂದು ಕೇಳಿದರು.

"ಹೇಗಾಗಿದ್ದೇನೋ ನೀವೇ ನೋಡಿ. ಗಾಡಿಯನ್ನೇನೋ ಗ್ಯಾರೇಜಿಗೆ ತಂದಿದ್ದೇನೆ. ಸಾಧ್ಯವಾದರೆ ರಿಪೇರಿ ಮಾಡಿ ; ಇಲ್ಲವಾದರೆ ಗುಜರಿಗೆ ಕಳಿಸಿಬಿಟ್ಟರಾಯಿತು" —ಎಂದೆ. ನನ್ನ ಮಾತು ಕೇಳಿ ಸ್ವಾಮೀಜಿಯವರ ಕಣ್ಣಿನಲ್ಲಿ ತಟಕ್ಕನೆ ನೀರಾಡಿತು. "ಛಿ . ಛಿ....ಇದೇನು ಮಾತು. ಈಗ ತಾನೇ ಅ. ನ. ಕೃ. ಹೋಗಿ ಒಂದು ಕಣ್ಣು ಹೋಗಿದೆ. ಇನ್ನೊಂದು ಕಣ್ಣನ್ನೂ ಕಳೆದುಕೊಳ್ಳುವುದಕ್ಕೆ ನಾನು ತಯಾರಾಗಿಲ್ಲ."—ಎಂದು ಹೇಳಿ, ಬಲವಂತವಾಗಿ ನನ್ನನ್ನುರೋಗಿಗಳು ಮಲಗುವ ಸ್ಥಳದಲ್ಲಿ ಮಲಗಿಸಿ, ಪರೀಕ್ಷೆಮಾಡಿ,ನನ್ನ ಹೆಂಡತಿಯಿಂದ ನನ್ನ ರೋಗದ ವಿವರಗಳನ್ನೆಲ್ಲಾ ತಿಳಿದು–"ಏನೂ ಭಯವಿಲ್ಲ. ನಾನೆಲ್ಲಾ ನೋಡಿಕೊಳ್ಳುತ್ತೇನೆ. ನೀವೀಗ ಹೋಗಿ ವಿಶ್ರಾಂತಿ ಗೃಹದಲ್ಲಿ ವಿಶ್ರಾಂತಿ ತೆಗೆದುಕೊಳ್ಳಿ. ಸೂರ್‌ದಾಸ್‌ಜೀ ನಿಮ್ಮ ಊಟ-ತಿಂಡಿಯ ವ್ಯವಸ್ಥೆ ಮಾಡುತ್ತಾರೆ."—ಎಂದರು. ನಾನು ಹೆಚ್ಚೇನೂ ಮಾತನಾಡದೆ ಹೊರಗೆ ಬಂದೆ.ಸೂರ್‌ದಾಸ್‌ಜೀ ತೋರಿಸಿದ ವಿಶ್ರಾಂತಿಗೃಹದಲ್ಲಿಳಿದುಕೊಂಡೆ.

ನಮ್ಮ ಊಟ ಮುಗಿದು, ವಿಶ್ರಾಂತಿ ತೆಗೆದುಕೊಂಡು, ಸ್ವಲ್ಪ ಹೊತ್ತಿನ ಮೇಲೆ, 'ಸ್ವಾಮೀಜಿ ಅವರನ್ನು ಕಾಣಲು ಹೋಗಬೇಕು ಎಂದು ಮಾತನಾಡಿಕೊಳ್ಳುತ್ತಿರುವಾಗ ಸ್ವಾಮೀಜಿಯವರೇ ನಾವಿದ್ದ ಕಡೆಗೆ ಬಂದರು.ನನ್ನ ರೋಗದ ಬಗ್ಗೆ ನಾನಾಗ ಅನಿವಾರ್ಯವಾಗಿ ಸೇವಿಸುತ್ತಿದ್ದ ನಿದ್ರೆಯ ಮಾತ್ರೆಗಳ ಅಭ್ಯಾಸ, ನನ್ನ ಬೆನ್ನು ಹತ್ತಿದ ಸಿಗರೇಟಿನ ಚಟ ಎಲ್ಲವನ್ನೂ ವಿಚಾರಿಸಿ–

"ಒಂದೆರಡುವಾರ ಇಲ್ಲಿ ಬಂದಿರಿ. ನಿಮಗೇನೂ ತೊಂದರೆ ಆಗದ ಹಾಗೆ ನೋಡಿಕೊಂಡು ಔಷಧೋಪಚಾರ ಮಾಡಿ ಮೈಗಟ್ಟಿ ಮಾಡಿ ಕಳುಹಿಸಿಕೊಡುತ್ತೇನೆ."—ಎಂದು ಹೇಳಿದರು.ಅವರು ಹೇಳಿದುದನ್ನೆಲ್ಲಾ ಕೇಳಿದ ನಾನು ಅವರು ವಿವರಿಸಿದ ಔಷಧ ಸೇವನೆಯ ಕಟ್ಟು ಪಾಡುಗಳನ್ನು ಕೇಳಿ, ಅವುಗಳನ್ನು ಪಾಲಿಸುವ ಬಗ್ಗೆ ನನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿದೆ. ನನ್ನ ಮಾತು ಕೇಳಿದ ಸ್ವಾಮೀಜಿ—"ಹಾಗಿದ್ದರೆ ನಿಮ್ಮ ಬದಲು ನಾನೇ

ಪಥ್ಯ ಮಾಡಿ, ಔಷಧ ಕುಡಿದು ನಿಮ್ಮನ್ನು ಗುಣ ಪಡಿಸಬೇಕೇ ? ನಿನ್ನ ಗಂಡನ ಮಾತು ಕೇಳಿದೆಯಾ ಅಂಬಕ್ಕ?" —ಎಂದರು. ಸ್ವಾಮೀಜಿಯವರು ನಗುತ್ತಾ ಆ ಮಾತು ಹೇಳಿದರೂ, ಆ ಮಾತಿನ ಅಂತರಾಳದಲ್ಲಿ ಅಪಾರ ವ್ಯಥೆ ಮಿಡಿಯುತ್ತಿತ್ತು. ಅದರ ನೋವನ್ನು ತಾಳಲಾಗದೆ ನಾನು—"ಆಯಿತು ಸ್ವಾಮೀಜಿ. ನನ್ನ ಖಾಯಿಲೆಗೆ ನಾನೇ ಔಷಧಿ ಕುಡಿಯುತ್ತೇನೆ. ಅದೇನೇನು ಮಾಡುತ್ತೀರೋ ಮಾಡಿ"—ಎಂದೆ.

"ಅಷ್ಟು ಹೇಳಿ ಓಡಿ ಹೋಗಿಬಿಡುವುದಿಲ್ಲ ತಾನೇ, ಖಂಡಿತ ಬರಬೇಕು."—ಎಂದು ನನ್ನ ಎರಡೂ ಕೈ ಹಿಡಿದು ಕೇಳಿದರು ಸ್ವಾಮೀಜಿ. ನನ್ನ ಹುಲುಜೀವ ಅವರ ಪಾಲಿಗೆ ಅಪಾರಆಸ್ತಿ ಇದ್ದಂತೆ.

"ಬರುತ್ತೇನೆ–"ಎಂದು ನಾನು ಹೇಳಿದೆ."ಅವರನ್ನು ನಂಬಬೇಡಿ"—ಎಂದು ನನ್ನ ಹೆಂಡತಿ ಅಂಜೇ ಸ್ವಾಮೀಜಿಗೆ ಹೇಳಿದಳು. ಇವತ್ತಿನವರೆಗೂ ಅವಳ ಮಾತೇ ನಿಜವಾಗಿದೆ. ನಾನಂತೂ ಅಲ್ಲಿಗೆ ಹೋಗುವುದು ಆಗಿಲ್ಲ. ರೋಗವೂ ನನ್ನನ್ನು ಬಿಟ್ಟಿಲ್ಲ. ಈಚೆಗೆ ಹೃದಯಾಘಾತವಾದ ಮೇಲಂತೂ ಎಷ್ಟೋ ನೂರು ಬಾರಿ ಮಲ್ಲಾಡಿಹಳ್ಳಿ ನನ್ನನ್ನು ತನ್ನತ್ತ ಕೈಬೀಸಿ ಕರೆದಿದೆ. ನೆನೆದಾಗಲೆಲ್ಲ ಕಣ್ಣೆದುರು ಸ್ವಾಮೀಜಿ ಅವರ ಅಭಯ ಹಸ್ತ ಕಾಣುತ್ತದೆ. ಅದರೊಂದಿಗೆ ನನ್ನ ಜೀವನದಲ್ಲಿ ನಿರಾಶೆಯ ಮೋಡ ಕವಿದಾಗ ಆ ದಿನ ಅವರ ಕಣ್ಣಲ್ಲಿ ಕಂಡ ಕಣ್ಣೀರು ನೆನಪಾಗಿ, 'ಛಿ, ಅವರು ಏನು ಕನಸಿಗಾಗಿ ನಾನು ಬದುಕಲು ಬಯಸಿದ್ದಾರೋ, ಸುತ್ತಲೂ ಕವಿದ ಶತ್ರು ಪಾಳೆಯದ ಕಗ್ಗತ್ತಲೆಯಲ್ಲೂ ಹೋರಾಡುತ್ತಿರುವ ಅವರ ಭುಜದ ಮೇಲೆ ನನ್ನ ನಿರಾಶೆಯ ಭಾರ ಹೊರಿಸ ಬಾರದು' ಎನಿಸಿ ಮತ್ತೆ ಬದುಕುವ ಬಯಕೆ ಕುಡಿವಡೆಯುತ್ತದೆ.

"ವಜ್ರದಷ್ಟು ಕಠಿಣ, ಕುಸುಮದಷ್ಟು ಕೋಮಲ"—ಈ ಮಾತನ್ನಾಡಿದ ಕವಿ ಮಲ್ಲಾಡಿಹಳ್ಳಿಯ ಸ್ವಾಮಿಗಳಂತಹವರನ್ನು ಕಂಡಿದ್ದಿರಬೇಕು. ಇಲ್ಲದಿದ್ದರೆ ಅಂತಹ ಮಾತು ಬರೆಯುತ್ತಿರಲಿಲ್ಲ.

'ಸೇವೆ' ಎಂಬ ಪದಕ್ಕೆ ಕಣ್ಣಾರೆ ಅರ್ಥ ಕಾಣಬೇಕಾದರೆ ಮನುಷ್ಯನು ಜೀವಮಾನದಲ್ಲಿ ಒಮ್ಮೆಯಾದರೂ ಈ ಆಶ್ರಮದ ನಿರ್ಮಲ ವಾತಾವರಣದಲ್ಲಿ ಕೆಲಕಾಲ ನಿಂತು ಅನುಭವಿಸಬೇಕು—ಈ ಆಶ್ರಮದ ಮೂರ್ತಿವೆತ್ತ ಮೂಲ ಶಕ್ತಿಯನ್ನು ಕಾಣಬೇಕು.

—ಎನ್. ಸೂರಪ್ಪ

ನಾ. ಡಿಸೋಜ

ಮೂರು ಮುಖಗಳು

ರಾಘವ

ಶ್ರೀ ಅಂಬಾ ಪ್ರಸಾದಿತ ನಾಟಕ ಮಂಡಳಿ ಈ ಶತಕದ ಎರಡು–ಮೂರನೇ ದಶಕಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿತವಾಗಿ ನಾಟಕ ರಂಗದಲ್ಲಿ ಬಹಳಷ್ಟು ಸೇವೆಯನ್ನು ಮಾಡಿದ ಒಂದು ವ್ಯಾಪಾರ ಕಲಾಮೇಳ. ಇದರ ಮಾಲಿಕರು ದಿವಂಗತ ರಂಗನಾಥ ಭಟ್ ಮುಂಡಾಜೆ. ಶಿವರಾಮ ಕಾರಂತರು ಈ ಕಂಪನಿಯೊಡನೆ ಸಂಪರ್ಕ ವಿರಿಸಿಕೊಂಡಿದ್ದಲ್ಲದೆ "ಏಕಚ್ ಪ್ಯಾಲಾ" ಮರಾಠಿ ನಾಟಕದ ಕನ್ನಡ ಅನುವಾದವನ್ನು "ನಿಷಾಮಹಿಮೆ" ಎಂಬ ಹೆಸರಿನಲ್ಲಿ ಮಾಡಿಕೊಟ್ಟು ಈ ಕಂಪನಿಯವರಿಂದ ಆಡಿಸಿದರು. ಕಾರಂತರ "ಸತೀ ಸಂಯುಕ್ತೆ"ಯನ್ನು ಕೂಡ ಇವರು ಅಭಿನಯಿಸುತ್ತಿದ್ದರು. ಕಾಳಿಂಗರಾಯರು ಕೂಡ ಈ ಕಂಪನಿಯ ಮೂಲಕವೇ ರಂಗಪ್ರವೇಶ ಮಾಡಿದ್ದು.

ಶ್ರೀ ಅಂಬಾ ಪ್ರಸಾದಿತ ನಾಟಕ ಮಂಡಳಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರವಲ್ಲದೆ ಉತ್ತರ ಕನ್ನಡ ಜಿಲ್ಲೆ, ಸಾಗರ, ಶಿವಮೊಗ್ಗ, ಕೊಳ್ಳೇಗಾಲ, ಚನ್ನಪಟ್ಟಣ, ಚಿಕ್ಕನಾಯಕನಹಳ್ಳಿ, ಮಹಾರಾಷ್ಟ್ರದಲ್ಲೂ ಹಲವು ನಾಟಕಗಳನ್ನು ಅಭಿನಯಿಸಿತ್ತು. ರಾಘವ ಈ ಕಂಪನಿಯ ಒಳಗಿನ ವ್ಯವಹಾರಗಳನ್ನು ನೋಡಿಕೊಂಡು ಕೆಲ ವರುಷಗಳನ್ನು ಕಳೆದದ್ದುಂಟು. ಅಲ್ಲದೆ ಈತನ ಕಿರಿಯ ಸೋದರಕೂಡ ಈ ಕಂಪನಿಯಲ್ಲಿದ್ದ.

ಬಾರಕೂರಿನಲ್ಲಿ ಪ್ರೈಮರಿ ಹಾಗು ಮಾಧ್ಯಮಿಕ ಶಾಲೆಗಳನ್ನು ಮುಗಿಸಿಕೊಂಡು ಕುಂದಾಪುರಕ್ಕೆ ಹೈಸ್ಕೂಲು ಕಲಿಯಲು ಬಂದಾತ, ಹೈಸ್ಕೂಲಿನ ವಿದ್ಯಾಭ್ಯಾಸವನ್ನು ಪೂರ್ಣಗೊಳಿಸಲಾಗದೆ ಒಂದು ಮುದ್ರಣಾಲಯದಲ್ಲಿ ಸೇರಿಕೊಂಡ. ಚಿಕ್ಕಂದಿನಿಂದಲೂ ಗಂಟುಬಿದ್ದ ಅಪಸ್ಮಾರ ರೋಗದಿಂದಾಗಿ ರಾಘವ ಪೂರ್ಣ ಜರ್ಜರಿತನಾಗಿಹೋಗಿದ್ದ. ಈತನ ತಂದೆ ತಾಯಿಗೂ ಮಗನ ಕಾಯಿಲೆಯದೇ ಚಿಂತೆಯಾಗಿತ್ತು. ಅವರು ಕಂಡ ದೇವರಿಗೆಲ್ಲ ಹರಕೆ ಹೇಳಿಕೊಂಡಿದ್ದರು. ಹಾದಿಬೀದಿಯ ಪಂಡಿತರಿಂದೆಲ್ಲ ಔಷಧಿ ಕೊಡಿಸಿದ್ದರು. ಆದರೆ ರಾಘವನ ಕಾಯಿಲೆ ಮಾತ್ರ ವಾಸಿಯಾಗಿರಲಿಲ್ಲ.

ಇದೇ ಒಂದು ಬಗೆಯ ಮಾನಸಿಕ ತೊಳಲಾಟವಾಗಿ ರಾಘವ ಮನಶ್ಶಾಂತಿಯನ್ನು ಹುಡುಕಿಕೊಂಡು ಮನೆಬಿಡಲು ಕಾರಣವಾಯಿತು. ಹೀಗೆ ಯಾತ್ರೆ ಹೊರಟ ರಾಘವ ಅಂಬಾ ಪ್ರಸಾದಿತ ನಾಟಕ ಮಂಡಳಿಗೆ ಬಂದು ಸೇರಿಕೊಂಡ.

ರಾಘವನ ತಂದೆ ನರಸಿಂಹಯ್ಯನವರು ಬಾರಕೂರಿನ ಸುತ್ತಮುತ್ತ ಒಳ್ಳೆಯ ಯಕ್ಷಗಾನ ಅರ್ಥಧಾರಿಗಳೆಂದು ಪ್ರಸಿದ್ಧಿಯನ್ನು ಪಡೆದವರು. ತಾಳಮದ್ದಲೆಯಲ್ಲಿ ಇವರು ಅರ್ಥಧಾರಿಗಳಾಗಿ ಕುಳಿತರೆಂದರೆ ಭಾಗವಹಿಸಿದ ಇತರರು ಸಹಜವಾಗಿ ಅಂಜುತ್ತಿದ್ದರು. ಅಷ್ಟೊಂದು ವಾಕ್‌ಚಾತುರ್ಯ. ವೇಷ ಕಟ್ಟಿ ಆಟದಲ್ಲಿ ಕುಣಿದದ್ದೂ

ಉಂಟು ಇವರು. ರಾಘವ ನಾಟಕದತ್ತ ಆಕರ್ಷಿಸಲ್ಪಡಲು ಇದೂ ಒಂದು ಕಾರಣವಿರಬಹುದು. ಅಂತು ರಾಘವ ನಾಟಕ ಕಂಪನಿಯ ಓರ್ವ ನಟನಾದ. ಚಿಕ್ಕ ಪುಟ್ಟ ಪಾತ್ರಗಳನ್ನು ವಹಿಸಲಾರಂಭಿಸಿದ.

ಆದರೆ ನಾಟಕ ಕಂಪನಿಗೆ ಒಳಗಿನ ವಹಿವಾಟನ್ನು ನೋಡಿಕೊಳ್ಳುವ ಓರ್ವರ ಆವಶ್ಯಕತೆ ಬಹಳವಿತ್ತು. ನಟರಿಗೆ ಹೊಸ ನಾಟಕಗಳನ್ನು ಕಲಿಸಲು, ಲೆಕ್ಕ ಪತ್ರಗಳನ್ನು ನೋಡಿಕೊಳ್ಳಲು ಒಂದು ಜನ ಬೇಕಿತ್ತು. ಆ ಜವಾಬ್ದಾರಿಯೂ ರಾಘವನ ಮೇಲೇ ಬಿದ್ದಿತ್ತು. ಕಂಪನಿಯ ಮ್ಯಾನೇಜರ್ ಶಾಮರಾಯರು ಹೊರಗಿನ ವ್ಯವಹಾರಗಳಲ್ಲಿ ನಿರತರಾಗಿದ್ದರೆ, ರಾಘವ ಒಳಗಿನ ವಹಿವಾಟನ್ನು ನೋಡಿಕೊಳ್ಳುತ್ತಿದ್ದ. ಈತನ ಸ್ವಭಾವಮಾತ್ರ ಎಲ್ಲರಿಗೂ ಹಿಡಿಸುವಂತಿತ್ತು. ಆದರೆ ಕೆಲವಿಷಯಗಳಲ್ಲಿ ಎಷ್ಟು ಬಿಗಿಯೋ, ಇನ್ನು ಕೆಲವಿಷಯಗಳಲ್ಲಿ ಅಷ್ಟೇ ಮೆದು. ಹಣಕಾಸಿನ ವಿಷಯದಲ್ಲಿ ಒಂದು ಕಾಸು ಪೋಲಾಗಬಾರದು. ಪ್ರತಿಕಾಸಿಗೂ ಲೆಕ್ಕ ಕೊಡಬೇಕು. ಮಾಲಿಕರಿಗೆ ಲೆಕ್ಕಪತ್ರ ಒಪ್ಪಿಸುವ ವಿಷಯದಲ್ಲಿ ತುಂಬಾ ನಿಷ್ಠೆ, ಪ್ರಾಮಾಣಿಕತೆ. ಕಂಪನಿಯ ಚಿಕ್ಕ ಪುಟ್ಟ ನೌಕರ, ಆಳುಗಳಿಂದ ಹಿಡಿದು ದೊಡ್ಡ ನಟರವರೆಗೆ ಎಲ್ಲರಲ್ಲೂ ಒಂದೇ ಪ್ರೀತಿ, ವಿಶ್ವಾಸ

ಈ ವಿಷಯದಲ್ಲಿ ರಾಘವನ ಮೇಲೆ ತನ್ನ ತಾಯಿಯ ಪ್ರಭಾವ ಹೆಚ್ಚು. ಈತನ ತಾಯಿ ಪುತಲಿಬಾಯಿ ಕೂಡ ಕುಟುಂಬದ ಎಲ್ಲರೊಡನೆ ತುಂಬಾ ವಿಶ್ವಾಸದಿಂದ ಪ್ರೀತಿಯಿಂದ ಹೊಂದಿಕೊಂಡು ಹೋಗುತ್ತಿದ್ದಾಕೆ. ತುಂಬಾ ದಿಟ್ಟತನದ ಹೆಣ್ಣು. ರುಚಿಕರವಾದ ಅಡಿಗೆ ಮಾಡುವುದರಲ್ಲಂತೂ ಎತ್ತಿದ ಕೈ. ಅನಿರೀಕ್ಷಿತವಾಗಿ ಊಟಕ್ಕೆ ನೂರು ಜನ ಬಂದರೂ ಕೊಂಚವೂ ಗಡಿಬಿಡಿ ಮಾಡಿಕೊಳ್ಳದೆ ಅಷ್ಟು ಜನಕ್ಕೆ ಊಟಮಾಡಿ ಹಾಕುವ ಛಲಗಾತಿ. ಮಗನಲ್ಲೂ ಆ ಸ್ವಭಾವ ಸಾಕಷ್ಟಿತ್ತು. ಇದು ಕಂಪನಿಯ ಜನ ಕಂಡುಕೊಂಡ ಸತ್ಯ. ಜೊತೆಗೆ ರಾಘವನಿಗೆ ತಂದೆಯ ಬಳುವಳಿಯಾಗಿ ಬಂದ ಸಿಟ್ಟು. ಇದರ ಅನುಭವವೂ ಕಂಪನಿಯ ಜನಕ್ಕಿತ್ತು.

ಆದರೆ ರಾಘವನಿಗೆ ಅಂಟಿಕೊಂಡು ಬಂದ ಅಪಸ್ಮಾರಕಾಯಿಲೆ ಶೃಂಗೇರಿ ಕ್ಯಾಂಪಿನಲ್ಲಿ ವಿಕೋಪಕ್ಕೆ ಹೋಯಿತು. ವೈದ್ಯರು ಪರೀಕ್ಷೆಮಾಡಿ ತರುಣನ ಜೀವಕ್ಕೆ ಅಪಾಯವಿದೆ ಎಂದೂ, ಕೂಡಲೇ ಚಿಕಿತ್ಸೆ ಮಾಡಿಸದಿದ್ದರೆ ತರುಣ ಬದುಕಿ ಉಳಿಯುವ ಸಂಭವವಿಲ್ಲವೆಂದೂ ಹೇಳಿದಾಗ ಎಲ್ಲರಿಗೂ ದಿಗಿಲು.

ಈ ಸಮಯದಲ್ಲಿ ಕಂಪನಿಯಲ್ಲಿ ಒಂದು ಪದ್ಧತಿಯಿತ್ತು. ಎರಡು ಮೂರು ತಿಂಗಳಿಗೊಂದು ಬಾರಿ "ಕಲಿಯುಗದ ಭೀಮ" ಎಂದು ಪ್ರಸಿದ್ಧರಾಗಿದ್ದ ಪಳನಿಸ್ವಾಮಿ ಎಂಬುವವರು ನಾಟಕ ಕಂಪನಿಗೆ ಬಂದು, ನಾಟಕ ಮುಗಿದ ನಂತರ ಕೆಲವೊಂದು ಯೋಗಪ್ರದರ್ಶನಗಳನ್ನು ನೀಡುತ್ತಿದ್ದರು. ನಾಟಕದ ಹಾಗೆಯೇ ಈ ಪ್ರದರ್ಶನಗಳೂ ಜನಪ್ರಿಯವಾಗಿದ್ದವು.

ಪಾಶ್ಚಾತ್ಯ ಹಾಗು ಪೌರ್ವಾತ್ಯ ಪದ್ಧತಿಗಳೆರಡರಲ್ಲೂ ಪಳಗಿದ್ದ ಪಳನಿಸ್ವಾಮಿಯವರು 'ಸ್ಯಾಂಡೋ' ಎಂಬ ಹೆಸರಿನ ಜೊತೆಗೆ 'ಯೋಗಿ' ಎಂದು ಕೂಡ ಪ್ರಖ್ಯಾತರಾಗಿದ್ದರು. ರಾಘವನ ಕಾಯಿಲೆಗೆ ಯೋಗ ಒಂದೇ ಔಷಧಿ ಎಂಬುದು ಅವರಿಗೆ ತಿಳಿದು ಹೋಯಿತು. ಅವರು ರಾಘವನಿಗೆ ಯೋಗಶಿಕ್ಷಣವನ್ನು ನೀಡಲಾರಂಭಿಸಿದರು. ರಾಘವ ಕ್ರಮೇಣ ಯೋಗಾಭ್ಯಾಸದಿಂದ ರೋಗಮುಕ್ತನಾಗ ತೊಡಗಿದ. ಬಡಕಲಾಗಿದ್ದ ಅವನ ದೇಹ ತುಂಬಿಕೊಳ್ಳಲಾರಂಬಿಸಿತು.

ಕ್ರಮೇಣ ರಾಘವ ನಾಟಕದ ಅಂತ್ಯದಲ್ಲಿ ಕೆಲ ಯೋಗಪ್ರದರ್ಶನಗಳನ್ನೂ ನೀಡಲಾರಂಭಿಸಿದ.

ಕಂಪನಿ ಚಿಕ್ಕನಾಯಕನ ಹಳ್ಳಿಗೆ ಬಂದಾಗ ನಡೆದ ಒಂದು ಘಟನೆ ಇಲ್ಲಿ ಉಲ್ಲೇಖನಾರ್ಹ. ಇವರ ಕಂಪನಿ ಈ ಊರಿಗೆ ಬಂದಾಗ ಬೇರೊಂದು ಕಂಪನಿ ಇಲ್ಲಿ ವಾಸ್ತವ್ಯವನ್ನು ಹೂಡಿತ್ತು. ಊರಿನಲ್ಲಿ ಮೂರು ಪ್ರಬಲವಾದ ಪಕ್ಷಗಳಿದ್ದವು. ಒಂದು ಕಂಪನಿಯ ಕಡೆ ವಾಲಿಕೊಂಡಿತ್ತು. ಈ ಕಂಪನಿ ಅಲ್ಲಿಗೆ ಬಂದದ್ದು ಆ ಪಕ್ಷಕ್ಕೆ ಹಿಡಿಸಲಿಲ್ಲ. ಹೀಗಾಗಿ ಈ ಕಂಪನಿಯ ಬಗ್ಗೆ ಆ ಜನರಲ್ಲಿ ಒಂದು ಬಗೆಯ ಅತೃಪ್ತಿ ಹೊಗೆಯಾಡುತ್ತಲೇ ಇತ್ತು.

ಅಂದು ನಾಟಕ ಪ್ರಾರಂಭವಾಗಬೇಕು. ಗೇಟಿನಲ್ಲಿ ಟೀಕೇಟು ಹರಿದುಕೊಡಲು ನಿಂತಾತ ರಾಘವ. ಮೂರುನಾಲ್ಕು ಜನ ಬಂದು, ಹಿಂದಿನಿಂದ ಬರುವವರು ತಮ್ಮ ಟಿಕೇಟು ಕೊಡುವುದಾಗಿ ಹೇಳಿ ಒಳಹೋದರು. ಮತ್ತೂ ಒಂದು ಗುಂಪು ಬಂದು ಹೀಗೆಯೇ ಹೇಳಿ ಒಳಗೆ ತೂರಿಕೊಂಡಿತು. ಆದರೆ ಟಿಕೇಟು ಹಿಡಿದುಕೊಂಡು ಯಾರೂ ಬರಲಿಲ್ಲ. ರಾಘವ ಒಳಹೋಗಿ ಸಾಲುಗಟ್ಟಿ ಕುಳಿತ ಅವರನ್ನು ಕೇಳಿದಾಗ ಮಾತು ಮೇರೆ ಮೀರಿತು ಪೋಲೀಸರ ಆಗಮನವಾಯಿತು. ಕುರ್ಚಿಗಳು ತೂರಾಡಿ ಪೋಲೀಸರಿಗೆ ಏಟುಬಿದ್ದಿತು. ಕೂಡಲೇ ಆ ಗುಂಪನ್ನು ಪೋಲೀಸರು ಸ್ಟೇಷನ್ನಿಗೆ ಎಳೆದೊಯ್ದರು. ಸುದ್ದಿ ಊರಲ್ಲಿ ಹರಡಿದ್ದೇ ಸುಮಾರು ಐನೂರು ಜನ ಕಂಪನಿ ಮನೆ ಯತ್ತ ನುಗ್ಗಿ ಬಂದರು. ನಾಟಕ ಮಂದಿರ ಬರಿದಾಯಿತು. ಪಾತ್ರಧಾರಿಗಳೆಲ್ಲ ಹೆದರಿ ಕಂಗಾಲಾಗಿ ಪರದೆಯ ಹಿಂದೆ ರಕ್ಷಣೆ ಪಡೆದರು. ಆದರೆ ಮತ್ತೆ ಪೋಲೀಸರ ಆಗಮನವಾಗುವವರೆಗೂ ಆ ಗುಂಪನ್ನು ಎದುರಿಸಿ ನಿಂತವನೆಂದರೆ ರಾಘವ ಓರ್ವನೆ.

ಹಿಂದಿನಿಂದಲೂ ರಾಘವನಲ್ಲಿ ದೈವ ಭಕ್ತಿಯೊಂದು ಮನೆಮಾಡಿಕೊಂಡಿತ್ತು. ದೇವರ ಪೂಜೆ ಎಂದರೆ ಎಲ್ಲ ವನ್ನೂಮರೆತು ಅದರಲ್ಲೇ ಆತ ತಲ್ಲೀನನಾಗುತ್ತಿದ್ದ.ಒಂದೇ ನಿಮಿಷದ ದೈವ ಪೂಜೆಯಾದರೂ ಆತ ಅದರಲ್ಲಿ ಮಗ್ನ. ಯೋಗಭ್ಯಾಸದೊಡನೆ ಈ ದೈವಭಕ್ತಿಯೂ ಹೆಚ್ಚತೊಡಗಿ ರಾಘವ ನಾಟಕ ಕಂಪೆನಿಯನ್ನು ಬಿಟ್ಟ. ಯೋಗವಿದ್ಯೆ ಯಲ್ಲಿ, ಆಧ್ಯಾತ್ಮದಲ್ಲಿ ಹೆಚ್ಚಿನ ಅರಿವನ್ನು ಪಡೆಯಲು ರಾಘವ ಕರ್ನಾಟಕದಿಂದ ಮಹಾರಾಷ್ಟ್ರದತ್ತ ನಡೆದ.

ವ್ಯಾಯಾಮದ ಮೇಷ್ಟ್ರು

ಇಂದಿಗೆ ನಲವತ್ತು ವರ್ಷಗಳ ಹಿಂದೆ, ಸುಮಾರು 1935ರಲ್ಲಿ ಕರ್ನಾಟಕದಲ್ಲಿ ಎಲ್ಲೆಲ್ಲೂ ಓರ್ವ ವ್ಯಾಯಾ ಮದ ಮೇಷ್ಟ್ರು ವಾಯಾಮ ಶಿಬಿರಗಳನ್ನು ಏರ್ಪಡಿಸುತ್ತಿದ್ದರು. ಗುರುತು ಪರಿಚಯವಿಲ್ಲದ ಒಂದು ಹಳ್ಳಿಗೆ ಹೋಗುವುದು, ಅಲ್ಲಿಯ ಮುಖಂಡರನ್ನೋ ಹಿರಿಯರನ್ನೋ ಭೇಟಿಯಾಗುವುದು, ಅವರ ಮನಸ್ಸನ್ನು ಒಲಿಸಿ ಕೊಂಡು ಆ ಹಳ್ಳಿಯ ಮಕ್ಕಳನ್ನು, ಯುವಕ–ಯುವತಿಯರನ್ನು ಕಲೆಹಾಕುವುದು, ಪ್ರತಿನಿತ್ಯ ಅವರಿಗೆ ಯೋಗ ಶಿಕ್ಷಣ ನೀಡುವುದು. ಈ ಶಿಬರ ನಲವತ್ತು ದಿನ, ಎರಡು ತಿಂಗಳು, ಮೂರು ತಿಂಗಳು. ಈ ಮೇಷ್ಟ್ರ ಊಟ ವಸತಿಯ ಏರ್ಪಾಡನ್ನು ಹಳ್ಳಿಯವರೇ ಮಾಡಿದರಾಯಿತು. ಊಟ–ಸಪ್ಪೆ ತೊವ್ವೆ, ಒಂದಿಷ್ಟು ಅನ್ನ. ವಸತಿ ಶಾಲಾ ಆವರಣ, ಊರ ಚಾವಡಿ. ಇನ್ನೇನೂ ಕೊಡಬೇಕಾಗಿಲ್ಲ. ಬಯಸುವುದೂ ಇಲ್ಲ.

ವ್ಯಾಯಾಮದ ಮೇಷ್ಟ್ರು ಯೋಗಾಸನಗಳನ್ನು ಕಲಿಸುವುದರ ಜೊತೆಗೆ ಲಾಠಿ ಬೀಸುವುದು, ಡ್ಯಾಗರ್ ಫೈಟಿಂಗ್, ಕುಸ್ತಿ, ಕಾಟಿ, ಭರ್ಜಿ, ತಲವಾರ್ ಮುಂತಾದ ರಣವಿದ್ಯೆಗಳನ್ನು ಕಲಿಸುತ್ತಿದ್ದರು. ನಾಡಿನ ತರುಣ–ತರುಣಿಯರೆಲ್ಲ ಸದಾ ಉತ್ಸಾಹಶಾಲಿಗಳಾಗಿರಬೇಕು. ಬಿಸಿರಕ್ತದ, ಹುಮ್ಮಸ್ಸಿನ ಚೇತನದ, ಕೆಂಪು ಕುದಿಯುವ ಹುರುಪಿನ ಬುಗ್ಗೆಗಳಾಗಬೇಕು ಎಂಬುದೇ ಇವರ ಆಸೆ. ಈ ಉದ್ದೇಶಕ್ಕಾಗಿ ಈ ಶಿಬಿರ, ಈ ಪುಕ್ಕಟೆ ಶಿಕ್ಷಣ.

ಶಿಬಿರದ ಕೊನೆಯ ದಿನ ಹಳ್ಳಿಗರ ಎದಿರು ಮಕ್ಕಳ ಪ್ರದರ್ಶನ. ನೋಡಿ, ನಿಮ್ಮೂರ ಮಕ್ಕಳು ಏನೆಲ್ಲಾ ಕಲಿತಿದ್ದಾರೆ ನೋಡಿ ಎಂಬುದನ್ನು ಜನರಿಗೆ ತೋರಿಸಲು ಈ ಪ್ರದರ್ಶನ. ನಂತರ ವ್ಯಾಯಾಮದ ಮೇಷ್ಟ್ರಿಂದ ಪ್ರದರ್ಶನ.

ಈ ಪ್ರದರ್ಶನಕ್ಕೆ ಸೇರುತ್ತಿದ್ದ ಜನ ಸಾವಿರ. ಈ ಹಳ್ಳಿಯವರು ಮಾತ್ರವಲ್ಲ, ಅಕ್ಕ ಪಕ್ಕದ ಹಳ್ಳಿ ಊರು ಗಳ ಜನರೂ ಹಿಂಡುಗಟ್ಟಿ ಬರುತ್ತಿದ್ದರು. ಏಕೆಂದರೆ ಆ ಪ್ರದರ್ಶನ ಅಷ್ಟೊಂದು ಅದ್ಭುತ! ರೋಮಾಂಚಕ!

ಹದಡಿ ದಾವಣಗೆರೆಗೆ ಹತ್ತಿರದ ಒಂದು ಸಣ್ಣ ಹಳ್ಳಿ. ಅಲ್ಲಿ ವ್ಯಾಯಾಮದ ಮೇಷ್ಟ್ರು ಪ್ರದರ್ಶನ.

ಮೊದಲು ಯೋಗಾಸನಗಳು. ನಂತರ ದೊಣ್ಣೆವರಸೆ. ಮತ್ತಿತರ ರಣವಿದ್ಯೆಗಳ ಪ್ರದರ್ಶನ.

ಈ ಪ್ರದರ್ಶನ ನೋಡಲೆಂದೇ ಗರಡೀ ಮನೆಯೊಂದರ ತರುಣರ ಗುಂಪು ಬಂದು ಮೊದಲ ಸಾಲಲ್ಲಿ ಕುಳಿತಿದೆ. ಅವರಿಗೆ ಇದೆಲ್ಲಾ ಏನು ಮಹಾ ಎಂಬ ತಾತ್ಸಾರ. ಏಕೆಂದರೆ ಇದನ್ನೆಲ್ಲಾ ಮಾಡುತ್ತಿರುವಾತ ಅಷ್ಟೇನೂ ಬಲಾಢ್ಯನಂತೆ ಕಾಣುತ್ತಿಲ್ಲ. ಗರಡಿ ಪೈಲ್ವಾನರ ಹಾಗೆ ಈತನ ದೇಹದ ಮಾಂಸಖಂಡಗಳು ಕೊಬ್ಬಿ ಹುರಿಗಟ್ಟಿಲ್ಲ. ಹಾಗೆಂದೇ ಆ ಗರಡಿಯಾಳುಗಳು ನಗುವುದು, ಕುಚೋದ್ಯ ಮಾಡುವುದು ನಡೆಸಿದ್ದರು. ವ್ಯಾಯಾಮದ ಮೇಷ್ಟ್ರ ಕಿವಿಗೆ ಇದೆಲ್ಲ ಬೀಳುತ್ತಲೇ ಇತ್ತು. ಕೊನೆಯ ಒಂದೆರಡು ಪ್ರದರ್ಶನಗಳಿವೆ ಅನ್ನುವಾಗ ಮೇಷ್ಟ್ರು ಗರಡಿಯಾಳುಗಳ ಗುಂಪಿನತ್ತ ತಿರುಗಿ ನಿಂತರು. ಮುಂದಿನ ತಮ್ಮ ಪ್ರದರ್ಶನಗಳ ಬಗ್ಗೆ ಎರಡು ಮಾತು ಹೇಳಿ, ನಂತರ ಗರಡಿಯಾಳುಗಳನ್ನುದ್ದೇಶಿಸಿ-ಕುಸ್ತಿ ಮಾಡಿ ಗೆಲ್ಲುವುದೇ ಆದರೆ ಐದು ಜನ ಪೈಲ್ವಾನರ ಹತ್ತಿರ ಕುಸ್ತಿ ಮಾಡಿ ಗೆಲ್ಲುವುದು ತಮ್ಮ ಶಪಥವೆಂದೂ, ನಿಮ್ಮಲ್ಲಿ ಐವರು ಸಿದ್ಧರಾಗಿರಬೇಕೆಂದೂ ಸವಾಲು ಒಡ್ಡಿದರು. ಗರಡಿಯಾಳುಗಳ ಗುಂಪು ಕೂಡ ಈ ಸವಾಲಿಗೆ ಕೆರಳಿ ನಿಂತಿತು. ಇತ್ತ ಮೇಷ್ಟ್ರ ಪ್ರದರ್ಶನ ಮುಂದುವರಿಯಿತು.

ಉರುಳಿಸಿ ತಂದು ಇರಿಸಿದ ರೋಣ್‌ಗಲ್ಲನ್ನು ಹನ್ನೆರಡು ಜನಸೇರಿ ಎತ್ತಿ ಹಿಡಿದರು. ಮೇಷ್ಟ್ರು ಅಂಗಾತ ಮಲಗಿದರು. ಎದೆಯ ಮೇಲೆ ಒಂದು ಮೆದು ದಿಂಬನ್ನಿರಿಸಿದರು. ಅದರ ಮೇಲೆ ಆ ಭಾರಿ ರೋಣ್‌ಗಲ್ಲನ್ನು ಹನ್ನೆರಡು ಜನ ಪ್ರಯಾಸದಿಂದೆತ್ತಿ ಇರಿಸಿದರು. ಮೇಷ್ಟ್ರ ಮೈ ನರಗಳು, ಮಾಂಸಖಂಡಗಳು ಉಕ್ಕಾದವು. ಅವರ ಬೆನ್ನು ನೆಲದಿಂದ ಮೇಲೆದ್ದು ಕಮಾನಿನಂತೆ ಬಾಗಿತು. ಅವರ ಇಡೀ ಬೆನ್ನು ನೆಲಕ್ಕೆ ತಾಗದೆ ರೋಣ್‌ಕಲ್ಲನ್ನೆತ್ತಿಕೊಂಡು ಮೇಲೆ ಎದ್ದಿತು. ಮರುಕ್ಷಣದಲ್ಲಿ ರೋಣ್‌ಗಲ್ಲನ್ನು ಅವರು ಪಕ್ಕಕ್ಕೆ ಉರುಳಿಸಿ ಚಿಮ್ಮಿ ನಿಂತರು. ಜನ ಉತ್ಸಾಹದಿಂದ ಚೀರಿಟ್ಟರು. ಈ ಗದ್ದಲದಲ್ಲಿ ಮೊದಲ ಸಾಲಿನಲ್ಲಿ ಕುಳಿತ ಗರಡಿಯಾಳುಗಳು ಮಾಯವಾಗಿದ್ದರು. ಭಾರಿ ರೋಣ್‌ಗಲ್ಲನ್ನು ಎದೆಯ ಮೇಲೆ ಹೊತ್ತೂ ಬೆನ್ನನ್ನು ನೆಲಕ್ಕೆ ತಾಗಿಸದೆ ಹೋದ ಈತನನ್ನು ಯಾವ ಪಟ್ಟಿನಿಂದಲೂ ಕೆಳಗೆ ಬೀಳಿಸಲಾಗುವುದಿಲ್ಲ ಅನ್ನುವುದು ಅವರಿಗೆ ಖಚಿತವಾಗಿ ಹೋಗಿತ್ತು.

ಹೀಗೆ ಈ ವ್ಯಾಯಾಮದ ಮೇಷ್ಟ್ರು ಲಾರಿಯನ್ನು ಎಳೆದರು. ಎದೆಯ ಮೇಲೆ ಆನೆಯನ್ನು ನಿಲ್ಲಿಸಿಕೊಂಡರು. ಹೊಟ್ಟೆಯ ಮೇಲೆ ಕಲ್ಲನ್ನಿರಿಸಿಕೊಂಡು ಅದು ತುಂಡಾಗುವಂತೆ ಸುತ್ತಿಗೆಯಿಂದ ಹೊಡೆಸಿಕೊಂಡರು.

ಶಿಬಿರದಿಂದ ಶಿಬಿರಕ್ಕೆ ವ್ಯಾಯಾಮದ ಮೇಷ್ಟ್ರ ಖ್ಯಾತಿ ಹೆಚ್ಚತೊಡಗಿತು. ಆದರೆ ಇವರ ಪ್ರದರ್ಶನ, ಶಕ್ತಿಯ ಬಗ್ಗೆ ಅನುಮಾನ ಪಡುವ, ಅದನ್ನು ಪರೀಕ್ಷಿಸ ಬಯಸುವ ಜನ ಇದ್ದೇ ಇದ್ದರು.

ಚಿರ್ಡೋಣಿ ಇನ್ನೊಂದು ಹಳ್ಳಿ.

ಅಲ್ಲಿಯೂ ಒಂದು ಯೋಗ ಶಿಕ್ಷಣ ಶಿಬಿರ ಆರಂಭವಾಯಿತು. ಕೊನೆಯದಿನ ಮಕ್ಕಳ ಪ್ರದರ್ಶನ: ನಂತರ ಮೇಷ್ಟ್ರಿಂದ ಪ್ರದರ್ಶನ.

ಮೇಷ್ಟ್ರು ಲಾರಿ ಹಿಡಿದು ನಿಂತರು. ಎಂಟೂ ದಿಕ್ಕುಗಳಿಂದ ಎಷ್ಟು ಜನ ಬೇಕಾದರೂ ತಮ್ಮತ್ತ ಕಲ್ಲುಗಳನ್ನು ಬೀರಿರಿ ಆ ಯಾವ ಕಲ್ಲುಗಳೂ ತಮಗೆ ತಾಗದ ಹಾಗೆ ತಾವು ಈ ಲಾರಿಯಿಂದ ತಮ್ಮ ರಕ್ಷಣೆ ಮಾಡಿಕೊಳ್ಳುವುದಾಗಿ ನುಡಿದರು ಆದರೆ ಒಂದು ಎಚ್ಚರಿಕೆ. ಎಂಟೂ ದಿಕ್ಕುಗಳಿಂದ ಎಸೆಯಲ್ಪಟ್ಟ ಕಲ್ಲುಗಳು ಲಾರಿಗೆ ತಗುಲಿ ಹಿಂದಕ್ಕೆ ಸಿಡಿಯುತ್ತವೆ. ಸುತ್ತ ನಿಂತ ಜನಕ್ಕೇನೆ ಹೋಗಿ ಅಪ್ಪಳಿಸುವ ಸಾಧ್ಯತೆ ಇದೆ. ಹಾಗೆಂದೇ ಮೇಷ್ಟ್ರು ಸುತ್ತೂ ನಿಂತ ಜನರಿಗೆ ಲಿಂಬೆ ಹಣ್ಣುಗಳನ್ನೇ ಹಂಚಿದರು. ನಡುವೆ ನಿಂತು ಲಾರಿಯನ್ನು ತಿರುಗಿಸಿದರು. ವ್ಯಾಯಾಮದ ಮೇಷ್ಟ್ರತ್ತ ಲಿಂಬೆಹಣ್ಣುಗಳ ವೃಷ್ಟಿಯಾಯಿತು. ಹೌದು. ಯಾವ ಲಿಂಬೆಹಣ್ಣೂ ಅವರ ಮೈಗೆ ತಾಗಲಿಲ್ಲ. ಮೊಣ್ಣೆಗೆ ತಗುಲಿ ಜಜ್ಜಿ ಹೋಗಿ ಅವರ ಕಾಲ ಬಳಿಯೇ ರಸಕಾರುತ್ತಾ ಬಿದ್ದವು. ಜನರ ಮನಸ್ಸಿನಲ್ಲಿದ್ದ ಸಂಶಯ ದೂರವಾಗಿ ಜನ ಜೈಕಾರ ಮಾಡಿತು.

ಈ ಶಿಬಿರಗಳು ಸುಮಾರು ಏಳು ವರ್ಷಗಳವರೆಗೆ ನಡೆದವು. ಐದು ಸಾವಿರಕ್ಕೂ ಹೆಚ್ಚು ಯುವಕ-ಯುವತಿಯರು ಈ ಶಿಬಿರಗಳಿಂದಾಗಿ ಉಚಿತ ಯೋಗ ಶಿಕ್ಷಣ ಪಡೆದರು. ಈ ಶಿಬಿರಗಳು ಮುಕ್ತಾಯವಾಗುತ್ತಿದ್ದಂತೆಯೇ, ಏಳು ವರ್ಷಗಳಲ್ಲಿ "ವ್ಯಾಯಾಮದ ಮೇಷ್ಟ್ರು" ಜನರ ಪಾಲಿಗೆ ಶ್ರೀ ರಾಘವೇಂದ್ರಸ್ವಾಮೀಜಿಗಳಾದರು.

ಸ್ವಾಮೀಜಿ

ದೇವರು, ಧರ್ಮದ ಹೆಸರಿನಲ್ಲಿ ಈ ದೇಶದಲ್ಲಿ ಬಹಳಷ್ಟು ವಂಚನೆಗಳು ನಡೆದೇ ಇವೆ. ಜನರಿಗೆ ನೇರವಾಗಿ ಯಾವುದೇ ಬಗೆಯ ಉಪಯೋಗವಾಗದಿದ್ದರೂ, ತಮ್ಮ ಪ್ರತಿಷ್ಠೆಗಾಗಿ, ಕೀರ್ತಿಗಾಗಿ, ವಿಹಾರಕ್ಕಾಗಿ ದೇವರನ್ನು, ಧರ್ಮವನ್ನು ದುರುಪಯೋಗಮಾಡಿಕೊಳ್ಳುವ ಪ್ರವೃತ್ತಿ ಹಲವರಲ್ಲಿ ಕಂಡುಬರುತ್ತದೆ. ಜನರನ್ನು ಅಜ್ಞಾನದಲ್ಲೇ ಇರಿಸಿ, ಅವರ 'ಸೋಮಾರಿತನ, ಬಡತನ, ಇತ್ಯಾದಿಗಳನ್ನು ಹೋಗಲಾಡಿಸಲು ಏನೇನೂ ಪ್ರಯತ್ನ ಪಡದೆ, ತಾವು ಮಾತ್ರ ಧರ್ಮಗುರುಗಳಾಗಿ, ಮಠಾಧಿಪತಿಗಳಾಗಿ, ಪಲ್ಲಕ್ಕಿಯ ಮೇಲೆ ಮೆರೆಯುವವರೇ ಇಂದು ಎಲ್ಲೆಲ್ಲೂ ಕಂಡು ಬರುತ್ತಿರುವಾಗ; ಕೇವಲ ಪೌರಾಣಿಕ ಕತೆ, ಸಂಸ್ಕೃತ ಶ್ಲೋಕ, ಆಡಂಬರಗಳ ಬಲದಿಂದಲೇ ದೇವಾಂಶ ಸಂಭೂತರೆಂದು ಹೆಸರುಗಳಿಸಿ, ತೊಟ್ಟು ಬೆವರು ಸುರಿಸದೆ, ಮೈಮುರಿದು ದುಡಿಯದೆ ಸುಖದ ಪಲ್ಲಂಗದ ಮೇಲೆ ಕುಳಿತು ಸಾವಿರ ಜನರಿಗೆ ಉಪದೇಶನೀಡುವ ಸ್ವಾಮೀಜಿಗಳೇ ಎಲ್ಲೆಲ್ಲೂ ಕಂಡುಬಂದಾಗ ಇಂತಹಾ ಜನರ ಬಗ್ಗೆಯೇ ಒಂದು ಬಗೆಯ ಹೇಸಿಗೆ, ತಿರಸ್ಕಾರ, ಧಿಕ್ಕಾರ ಮೂಡಿಬಂದು, ಈ ದೇವರು ಧರ್ಮವನ್ನು ಮುಂದೆ ಮಾಡಿಕೊಂಡು ಬರುವ ಜನರ ಸಹವಾಸ ದರ್ಶನವೇ ಬೇಡವೆಂದು ದೂರಸರಿದವರು ಹಲವರಿದ್ದಾರೆ. ಅವರಲ್ಲಿ ನಾನೂ ಓರ್ವ.

ಆದರೆ ಶ್ರೀ ರಾಘವೇಂದ್ರ ಸ್ವಾಮಿಗಳ ವಿಷಯ ಬಂದಾಗ, ಮಲ್ಲಾಡಿಹಳ್ಳಿಯ ವಿಷಯ ಕೇಳಿದಾಗ, ಅಲ್ಲಿ ಶಿಕ್ಷಣ ಪಡೆದು ಬಂದವರೊಡನೆ ಒಡನಾಡಿದಾಗ ನಾನು ಮುಗ್ಧನಾಗಿದ್ದೇನೆ. ಕತ್ತಲಲ್ಲೂ ಮಿಂಚಿನ ಬೆಳಕು ಕಂಡಿದೆ ನನಗೆ.

ಹಿಂದುಳಿದ ಜನ ಶುಚಿಯಾಗಿರಬೇಕು ಎಂದು ಭಾಷಣ ಬಿಗಿಯುವವರು ಬಹಳ. ಗಾಂಧೀ ಜಯಂತಿಯ ದಿನ ಮಾತ್ರ ಹಿಂದುಳಿದವರ ಕೇರಿಗಳನ್ನು ಶುಚಿ ಮಾಡಲೆಂದು ಪತ್ರಿಕಾ ವರದಿಗಾರರೊಡನೆ ಹೋಗುವವರೂ ಬಹಳ ಮಂದಿ. ಆದರೆ ಹಳ್ಳಿಯ ಓರ್ವ ಹಿಂದುಳಿದವನ ಮನೆ ಅಂಗಳ ಸಾರಿಸಿ, ಅಲ್ಲಿಯ ಹೊಲಸನ್ನೆಲ್ಲ ಎತ್ತಿ ಹಾಕಿ, ರಂಗೋಲಿ ಎಳೆಹಾಕಿ ಬರುವವರು ಎಷ್ಟು ಜನ ಇದ್ದಾರೆ? 'ಇದನ್ನೇ ದಿನ ನಿತ್ಯದ ಕರ್ತವ್ಯ ಮಾಡಿಕೊಂಡು, ಸ್ವಾಮಿಗಳೇ ದಿನಾ ಬಂದು ಈ ಕೆಲಸವನ್ನು ಮಾಡುತ್ತಿದ್ದಾರೆ. ನಾಳೆಯಿಂದ ಅವರಿಗೆ ಬಿಡಬಾರದು, ತಾನೇ ಆ ಕೆಲಸ ಮುಗಿಸಬೇಕು' ಎಂಬ ಪ್ರಜ್ಞೆ ಆ ಹಿಂದುಳಿದವನ ಮನಸ್ಸಿನಲ್ಲಿ ಮೂಡುವಂತೆ ಮಾಡುವುದರ ಜೊತೆಗೆ ಒಂದು ಸತ್ಯವನ್ನು ಅವನಿಗೆ ಮನದಟ್ಟಾಗಿಸಿ ಕೊಟ್ಟವರು ಎಷ್ಟು ಜನರಿದ್ದಾರೆ?

ರಾಜಕೀಯವನ್ನೇ ಬಂಡವಾಳವನ್ನಾಗಿ ಮಾಡಿಕೊಂಡು, ಮಂತ್ರಿಗಳನ್ನ ಬರಮಾಡಿಕೊಂಡು ಹೊಗಳಿ ಹಾರ ಹಾಕಿ ತಮ್ಮ ಬೇಳೆ ಬೇಯಿಸಿಕೊಳ್ಳುವ, ಪ್ರಶಸ್ತಿಗಳನ್ನು ಪಡೆಯುವ, ಜಾತಿ ಪಂಥ ಪಾರ್ಟಿಕಟ್ಟುವ ಮಠಾಧಿಪತಿಗಳೇ ಎಲ್ಲೆಲ್ಲೂ ಕಾಣುವಾಗ, ಅನಾಥಶ್ರಮದ ಬಾಗಿಲಲ್ಲೇ ರಾಜಕೀಯಕ್ಕೆ ಪ್ರವೇಶವಿಲ್ಲ ಎಂದು ಬೋರ್ಡುಹಚ್ಚಿ, ಸರಕಾರ ಕೊಟ್ಟ ಪ್ರಶಸ್ತಿಗಳನ್ನು ಸ್ವೀಕರಿಸದೆ, ತಿರಸ್ಕರಿಸಿ, ಜಾತಿ, ಬಂಧು, ಬಳಗ ಇತ್ಯಾದಿ ಎಲ್ಲ ಬಂಧನಗಳಿಂದ ಮುಕ್ತರಾಗಿ, ಸೇವೆ ಸೇವೆ ಸೇವೆ ಎಂದು ಸದಾ ಹಂಬಲಿಸುವ ಜನ ಎಷ್ಟಿದ್ದಾರೆ?

ಮೂವತ್ತಮೂರು ವರ್ಷಗಳ ಅವಧಿಯಲ್ಲಿ ಮಲ್ಲಾಡಿಹಳ್ಳಿಯ ಒಂದು ಚಿಕ್ಕ ಗುಡಿಸಲು ಬೃಹದಾಕಾರವಾಗಿ ಬೆಳೆದು ಶಿಶುವಿಹಾರ, ನಾಲ್ಕು ಪ್ರೌಢಶಾಲೆಗಳು, ಶಿಕ್ಷಕರ ತರಬೇತಿ ಕೇಂದ್ರ, ದೈಹಿಕ ಶಿಕ್ಷಣ ಕಾಲೇಜು, ಮುದ್ರಣಾಲಯ, ವಿದ್ಯಾರ್ಥಿ ನಿಲಯಗಳು, ಶಿಕ್ಷಕರ ವಸತಿ ಗೃಹಗಳು–ಸುಮಾರು 50 ಲಕ್ಷ ರೂಪಾಯಿಯ ಆಸ್ತಿಯಾಗಿ ಮೈತಳೆದು ನಿಂತಿರುವುದು ಒಂದು ಪವಾಡವಲ್ಲದೆ, ಇದನ್ನೂ ಮೀರಿಸುವ ಇನ್ನೊಂದು ಪವಾಡ ನನ್ನ ದೃಷ್ಟಿಯಲ್ಲಂತೂ ಖಂಡಿತ ಇಲ್ಲ. ಇದೆಲ್ಲವನ್ನೂ ಕೇವಲ ಜೋಳಿಗೆ ಹಿಡಿದು ಭಿಕ್ಷೆಬೇಡಿ, ಬರಿಗಾಲಲ್ಲಿ ತಿರುಗಿ ತಿರುಪೆ ಎತ್ತಿ ಓರ್ವ ವ್ಯಕ್ತಿ, ಮಾಡಿದನೆಂದರೆ, ಇಷ್ಟೆಲ್ಲ ಮಾಡಿಯೂ "ಅಶ್ರಮದಲ್ಲಿರುವುದೆಲ್ಲಾ ನಿಮ್ಮ ಆಸ್ತಿ. ನೆಲಮಾಳಿಗೆಯ

ಧ್ಯಾನಪೀಠವಷ್ಟೇ ನನ್ನ ಆಸ್ತಿ" ಎಂದು ಈ ವ್ಯಕ್ತಿ ಹೇಳುತ್ತಾರೆಂದರೆ ವ್ಯಕ್ತಿಯ ಮನೋಭಾವದ ಹಿಂದೆ ಏನಿದೆ ಅನ್ನುವುದು ಸುಲಭವಾಗಿ ಅರ್ಥವಾಗುತ್ತದೆ.

ಮಲ್ಲಾಡಿಹಳ್ಳಿಯ ಆಶ್ರಮದಲ್ಲಿ ಶಿಕ್ಷಣ ಪಡೆದ, ಸ್ವಾಮಿಗಳ ಪ್ರಭಾವಕ್ಕೆ ಒಳಗಾಗಿ ಬೆಳೆದ ಹಲವರನ್ನು ತೀರ ಹತ್ತಿರದಿಂದ ನಾನು ನೋಡಿದ್ದೇನೆ. ಅವರ ಜೀವನಕ್ರಮವನ್ನು ಅಭ್ಯಾಸಮಾಡಿದ್ದೇನೆ.

"ಅಂದು...ಆಶ್ರಮದಲ್ಲಿರುವಾಗ ಆ ಶಿಸ್ತು, ಕಟ್ಟುನಿಟ್ಟು ನಮಗೆ ಹಿಂಸೆಯಹಾಗೆ, ಕಾಟದಹಾಗೆ ಕಾಣ್ತಿತ್ತು....ಆದರೆ ಇವತ್ತು ಅದರಿಂದ ಎಷ್ಟೊಂದು ಉಪಯೋಗ, ಅನುಕೂಲ ಆಗ್ತಿದೆ ಅಂದ್ರೆ ಅದನ್ನು ಬಿಡಿಸಿ ಹೇಳೋದಕ್ಕೆ ನಮಗೆ ಆಗೋಲ್ಲ...."

ಎಂದು ಆಶ್ರಮದಲ್ಲಿ ಶಿಕ್ಷಣ ಪಡೆದವರ ಬಾಯಿಂದ ಕೇಳಿದ್ದೇನೆ.

ಅವರ ಜೀವನದಲ್ಲಿ ಒಂದು ಕ್ರಮ, ಅಚ್ಚುಕಟ್ಟು, ಅವರ ಶಾಂತ ಸರಳ ಸ್ವಭಾವ, ಅವರ ಸದಭಿರುಚಿ, ಧಾರ್ಮಿಕಪ್ರಜ್ಞೆ ಇವುಗಳೆಲ್ಲಕ್ಕೂ ಆಶ್ರಮದ ಶಿಕ್ಷಣವೇ ಕಾರಣ ಎಂದು ತಿಳಿದಾಗ ಆಚ್ಚರಿಪಟ್ಟಿದ್ದೇನೆ.

ಬಡತನದಿಂದ, ರೋಗದಿಂದ, ಅಜ್ಞಾನದಿಂದ ನರಳುತ್ತಿರುವ ಕಟ್ಟಕಡೆಯ ವ್ಯಕ್ತಿ ಇರುವವರೆಗೆ, ಧರ್ಮದೇವರುಗಳ ಹೆಸರಿನಲ್ಲಿ ಮೆರೆದಾಡುವ, ತಮ್ಮನ್ನೇ ದೇವರ ಅವತಾರವೆಂದು ಕರೆಸಿಕೊಳ್ಳುವ ಎಲ್ಲ ಜನ ವಂಚಕರೆಂದೇ ನನ್ನ ಅನಿಸಿಕೆ. ಸ್ವಾಮಿ ವಿವೇಕಾನಂದರು ಕೂಡ ಈ ಮಾತನ್ನು ಬಹಳ ಹಿಂದೆಯೇ ಹೇಳಿಬಿಟ್ಟಿದ್ದಾರೆ. ಆದರೆ ನಮ್ಮ ಯಾವ ಧರ್ಮಗುರುಗಳೂ, ಪಾದರಿ, ಮೌಲ್ವಿಗಳೂ ಈ ಸತ್ಯವನ್ನು ಅರಿಯದಿರುವುದು ನಮ್ಮ ದುರಾದೃಷ್ಟ.

ಪೂಜ್ಯರಾದ ಶ್ರೀ ರಾಘವೇಂದ್ರ ಸ್ವಾಮಿಗಳು ಈ ಮಾತಿಗೆ ಹೊರತಾಗಿದ್ದಾರೆ ಎಂಬುದೊಂದೇ ಸಂತಸದ, ಸಮಾಧಾನದ ವಿಷಯ.

ಜನಜೀವನ ಸೇವೆಯ ಅಂಗಗಳಾದ ಅನ್ನ, ವಿದ್ಯೆ, ವೈದ್ಯದ ಸೇವಾತ್ರಯ ಭಾವನೆಯಿಂದ ಪರಿಪುಷ್ಟವಾಗಿ ಬೆಳೆಯುತ್ತಿರುವ ಈ ಸಂಸ್ಥೆಯನ್ನು ನನ್ನ ಆತ್ಮವೆಂದೇ ತಿಳಿಯುತ್ತೇನೆ.

—ಶ್ರೀ ಚಿದಂಬರ

ಅರ್ಚಕ ವೆಂಕಟೇಶ

ನಿಷ್ಕಾಮ ಕರ್ಮಯೋಗಿ

> "ಪ್ರತಿಯೊಬ್ಬ ಮಾನವನ ಹೃದಯದಲ್ಲಿಯೂ
> ಭಗವಂತನ ದಿವ್ಯಪೀಠವಿರುತ್ತದೆ; ಆದರೆ, ಆದರ
> ಅರಿವು ಮಾತ್ರ ಕೋಟಿ ಕೋಟಿ ಜನರಲ್ಲಿ ಎಲ್ಲೋ
> ಒಬ್ಬರಿಗೆ ಮಾತ್ರವೇ ಆಗುತ್ತದೆ !"

ಸುಮಾರು 23-24ವರ್ಷಗಳಷ್ಟು ಹಿಂದಿನ ಮಾತು.ಆಗ ಜರ್ನಲಿಸ್ಟ್ ಕಾಲನಿ(ಬೆಂಗಳೂರು)ಯಲ್ಲಿನ ಓರ್ವ ಮಹನೀಯರು ಮಲ್ಲಾಡಿಹಳ್ಳಿಯ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಜಿಯವರನ್ನು ಕುರಿತು ಪ್ರಸ್ತಾಪಿಸಿದಾಗಲೆಲ್ಲ ಮೈದುಂಬಿ ಮಾತನಾಡುತ್ತಿದ್ದರು. ಅವರ ಆವೇಶಕ್ಕೆ ಇತಿ-ಮಿತಿ ಇರುತ್ತಿರಲಿಲ್ಲ. ಪ್ರಶಂಸೆಯ ಸುರಿಮಳೆಯನ್ನೇ ಸುರಿಸಿಬಿಡುತ್ತಿದ್ದರು ಎನ್ನಲೇ ? ಅಷ್ಟರಿಂದ ನನ್ನ ಚೇತನಕ್ಕೆ ಸಾಕಷ್ಟು ಸಮಾಧಾನ ಖಂಡಿತ ಆಗದು. ಅವರು ಕವಿಯಾಗಿದ್ದರೆ ತಮ್ಮ ಆರಾಧ್ಯ ದೈವವಾದ ಶ್ರೀರಾಘವೇಂದ್ರಸ್ವಾಮಿಗಳನ್ನು ಕುರಿತು ಮಹಾಕಾವ್ಯವೊಂದನ್ನೇ ಸೃಷ್ಟಿಸಿ ಬಿಡುತ್ತಿದ್ದರು. ಆದರೆ, ಅವರು ಲೌಕಿಕ ಪ್ರಪಂಚದ ವ್ಯವಹಾರಗಳಿಗೆ ಸಿಕ್ಕಿ ಹಾಕಿಕೊಂಡವರು. ಆದ್ದರಿಂದ ಅವರು ಮಾಡುತ್ತಿದ್ದ ಪ್ರಶಂಸೆಗಿಂತ ಹೆಚ್ಚಿಗೆ ಇನ್ನು ಏನನ್ನೂ ಅವರಿಂದ ನಿರೀಕ್ಷಿಸಲು ಸಾಧ್ಯವಿರಲಿಲ್ಲ.

ಈ ರೀತಿಯ ಪ್ರಶಂಸೆಯ ಮಾತುಗಳನ್ನು ಕೇಳಿದಾಗಲೆಲ್ಲ 'ಈ ಮಹನೀಯರನ್ನೊಮ್ಮೆ ನೋಡಬೇಕು' ಎಂಬ ಬಯಕೆ ನನ್ನಲ್ಲಿ ಉಂಟಾಗುತ್ತಿತ್ತು. ನನ್ನದು ಪವಿತ್ರ ಬಯಕೆಯಾದುದರಿಂದ ಒಂದು ಅಪೂರ್ವ ಪ್ರಸಂಗದಲ್ಲಿಯೇ ಅವರನ್ನು ಕಾಣುವ, ಅವರ ಪುಣ್ಯಪ್ರದವಾದ ಆತಿಥ್ಯ ಸ್ವೀಕರಿಸುವ, ಜೊತೆಗೆ ಅವರ ದಿವ್ಯಾಶ್ರಮದಲ್ಲಿ ಸಹಸ್ರ-ಸಹಸ್ರ ಸಂಖ್ಯೆಯಲ್ಲಿ ಸೇರಿದ್ದ ಭಕ್ತವೃಂದವನ್ನು ಕುರಿತು ಪೂಜ್ಯ ಶ್ರೀಗಳ ದಿವ್ಯ ಸಮ್ಮುಖದಲ್ಲೇ ಉಪನ್ಯಾಸ ಮಾಡಿ, ಸರ್ವರ ಪ್ರೀತ್ಯಾದರಗಳಿಗೂ, ಅನಂತಾಭಿಮಾನಕ್ಕೂ ಪಾತ್ರನಾಗುವ ಭಾಗ್ಯವೂ ನನಗೆ ಪ್ರಾಪ್ತವಾಯಿತು.

ಮಲ್ಲಾಡಿಹಳ್ಳಿಯಲ್ಲಿನ 'ಅನಾಥಸೇವಾಶ್ರಮ'ದಲ್ಲಿನ ಒಂದು ಭಾರೀ ಉತ್ಸವಕ್ಕೆ—ಅದು ವಾರ್ಷಿಕೋತ್ಸವವೇ ಎಂದು ತೋರುತ್ತದೆ—ಬೆಂಗಳೂರಿನ ಕೆಲವು ಜನ ಹಿರಿಯಸಾಹಿತಿಗಳು, ಇನ್ನು ಕೆಲವು ಗಣ್ಯವ್ಯಕ್ತಿಗಳು ಆಹ್ವಾನಿಸಲ್ಪಟ್ಟಿದ್ದರು. ಹೀಗೆ ಆಹ್ವಾನಿತರಾದವರಲ್ಲಿ ನಾನೂ ಒಬ್ಬ. ನನಗಂತೂ ಸ್ವರ್ಗವೇ ಕೈಗೆ ಸಿಕ್ಕಂತಾಗಿತ್ತು. ಇನ್ನೂ ತಾರುಣ್ಯದ ಉತ್ಸಾಹವೇ ನನ್ನಲ್ಲಿ ನಖ-ಶಿಖಾಂತ ತುಂಬಿ ಹರಿಯುತ್ತಿತ್ತು. ಜೊತೆಗೆ, ಆಗಲೇ ನೂರಾರು ಸಭೆಗಳಲ್ಲಿ ವಿವಿಧ ವಿಷಯಗಳ ಮೇಲೆ ಉಪನ್ಯಾಸ ಮಾಡಿ ಜನಪ್ರಿಯತೆಯನ್ನು ಗಳಿಸಿದ್ದರಿಂದ ಈಗ ಮಹಾಯೋಗಿವರೇಣ್ಯರ ಸಮ್ಮುಖದಲ್ಲಿ ಮಾತನಾಡುವ ಸದವಕಾಶ ಸಂಪ್ರಾಪ್ತವಾಗಿದೆ ಎಂಬ

ಆತ್ಮತೃಪ್ತಿಯೇ ನನ್ನನ್ನು ಭೀಮಬಲ ಹೊಂದಿದವನನ್ನಾಗಿ ಮಾಡಿತ್ತು. ಮಲ್ಲಾಡಿಹಳ್ಳಿಗೆ ಹೋಗುವ ದಿನ ಎಂದು ಬಂದೀತೋ ಎಂದು ಚಾತಕ ಪಕ್ಷಿಯಂತೆ ಕಾಯುತ್ತಿದ್ದೆ.

ನಾನು ನಿರೀಕ್ಷಿಸುತ್ತಿದ್ದ ಪರಮ ಮಂಗಳಕರವಾದ ದಿನ ಬಂದೇ ಬಂದಿತು. ಅಂದಂತೂ ನಾನು ವರ್ಣಿಸಲಸದಳವಾದ ಆನಂದದಿಂದ ತುಂಬಿ ತುಳುಕುತ್ತಿದ್ದೆ. ಆಹ್ವಾನಿತರೆಲ್ಲರ ಜೊತೆಗೆ ನಾನೂ ಮಲ್ಲಾಡಿಹಳ್ಳಿಗೆ ಪ್ರಯಾಣ ಬೆಳೆಸಿದೆ. ಹೊಳಲ್ಕೆರೆ ರೈಲ್ವೆಸಿಲ್ದಾಣದವರೆಗೆ ರೈಲು ಯಾತ್ರೆ; ಆ ನಂತರ ಮಲ್ಲಾಡಿಹಳ್ಳಿಗೆ ಪ್ರಯಾಣ. ನಮ್ಮನ್ನು ಆಶ್ರಮವಾಸಿಗಳು ಬಹು ವಿಶ್ವಾಸದಿಂದ ಸ್ವಾಗತಿಸಿ ನಮಗೆ ಬಿಡಾರದ ವ್ಯವಸ್ಥೆ ಮಾಡಿದರು. ನನಗೋ ಸ್ವಾಮಿಗಳನ್ನು ಮೊದಲು ನೋಡುವ ತವಕ. ಆದರೆ ಸಮೂಹದಲ್ಲಿದ್ದಾಗ ಎಲ್ಲರಂತೆ ತಾನೆ ನಾನೂ ಇರಬೇಕು, ಇದ್ದೆ. ಇಷ್ಟರಲ್ಲೇ ಓರ್ವ ವ್ಯಕ್ತಿ ಒಂದು ಕಡೆಯಿಂದ ಇನ್ನೊಂದು ಮೂಲೆಗೆ ರಾಮಾಯಣದ ಮಾರುತಿಯಂತೆ, (ಜಿಂಕೆಯಂತೆ) ಜಿಗಿಯುತ್ತ ಹೋಗುತ್ತಿದ್ದುದನ್ನು ಕಂಡು ವಿಸ್ಮಿತನಾದೆ. ಜೊತೆಗಿದ್ದವರೊಬ್ಬರು "ಅದೋ ನೋಡಿ! ನೀವು ನೋಡಬೇಕೆಂದು ಹಾತೊರೆಯುತ್ತಿರುವ ಸ್ವಾಮಿಜಿ ಅವರೇ! ಅವರಿಗೆ ಅರವತ್ತಕ್ಕೂ ಹೆಚ್ಚಿನ ವಯಸ್ಸಾಗಿದೆ; ಆದರೆ, ಹದಿನೆಂಟರ ಹರೆಯದ ತರುಣನೂ ಅವರ ಜೊತೆಗೆ ನಡೆಯಲಾರ, ಇನ್ನು ಓಡುವುದೆಲ್ಲಿಂದ ಬಂತು!" ಎಂದರು.

"ಅಷ್ಟು ಅಸಾಧಾರಣ ಶಕ್ತಿ ಅವರಿಗೆ ಹೇಗೆ ಬಂತು?" ಎಂದು ಪ್ರಶ್ನಿಸಿದೆ.

"ಅವರು ಶ್ರೀ ರಾಮದೂತನಾದ ಶ್ರೀ ಮಾರುತಿಯ ಮಹೋಪಾಸಕರು. ಜೊತೆಗೆ ಮಹಾಯೋಗ ಸಿದ್ಧರು. ಅಂಥ ಮಹಾಮಹಿಮರಿಗೆ ಯಾವುದು ತಾನೇ ಅಸಾಧ್ಯ?" ಎಂದು ನನ್ನ ಬಳಿ ಇದ್ದವರು ಉತ್ತರವಿತ್ತರು.

"ನಿಜಕ್ಕೂ ಇದೊಂದು ಅದ್ಭುತ. ಇವರು ಪವಾಡಪುರುಷರೇ ಇರಬೇಕು" ಎಂದು ನನ್ನ ಅಂತರಂಗದ ಧ್ವನಿ ಹೇಳುತ್ತಿತ್ತು.

ನನಗೆ ಮೊದಲಿನಿಂದಲೂ ಸಾಧು-ಸಂತರ, ಯೋಗಿವರೇಣ್ಯರ, ತ್ಯಾಗಜೀವಿಗಳ, ಕವಿ-ವಿಭೂತಿಗಳ ಜೀವನಚರಿತ್ರೆಯೆಂದರೆ ಪಂಚಪ್ರಾಣ. ವಿದ್ಯಾರ್ಥಿಯಾಗಿರುವಾಗಲೇ ಅಗಡಿ ಶ್ರೀ ಶ್ರೀ ಶೇಷಾಚಲ ಸದ್ಗುರುಗಳ, ಅವರ ಕರ ಕಮಲಸಂಜಾತರಾದ ಶ್ರೀ ಶ್ರೀ ನಾರಾಯಣ ಭಗವಾನರ ಮಹಾಮಹಿಮೆಗಳನ್ನು ಕೇಳಿ, ತಿಳಿದುಕೊಂಡು ಅವರ ಸೇವೆಮಾಡಬೇಕೆಂದು ಹಾತೊರೆಯುತ್ತಿದ್ದೆ. ನನ್ನ ಸಹಪಾಠಿಗಳಲ್ಲಿ ಕೆಲವರು ಅಗಡಿಯವರೇ ಆಗಿದ್ದರು. ಹೀಗಾಗಿ ಅಗಡಿ ಆನಂದವನಕ್ಕೆ ಹೋಗುವುದು, ಚೈತ್ರಮಾಸದಲ್ಲಿ ಅಲ್ಲಿ ನಡೆಯುವ ಮಹೋತ್ಸವದಲ್ಲಿ ಭಾಗಿಯಾಗಿ ನೀರು ಸೇದುವುದು, ಬಡಿಸುವುದು, ಎಂಜಲೆಲೆ ಎತ್ತುವುದೇ ಮೊದಲಾದ ಸೇವೆಗಳನ್ನು ಸಲ್ಲಿಸುವ ಸದವಕಾಶ ನನಗೆ ಸದ್ಗುರುವಿನ ಕೃಪೆಯಿಂದಲೇ ಪ್ರಾಪ್ತವಾಯಿತು. ನನ್ನ ಕವಿಚೇತನಕ್ಕೆ ಪ್ರೋತ್ಸಾಹ ದೊರೆತದ್ದೂ ಆನಂದವನದಲ್ಲಿ ಪ್ರಕಟವಾಗುತ್ತಿದ್ದ "ಸದ್ಬೋಧಚಂದ್ರಿಕೆ" ಎಂಬ ಮಾಸಪತ್ರಿಕೆಯಿಂದಲೇ! ಹೀಗಾಗಿ ನನಗೆ ಗೋಚರವಾಗದಂತೆಯೇ ರೂಪುಗೊಳ್ಳುತ್ತಿದ್ದ ನನ್ನ ಅಂತರಂಗದ ವ್ಯಕ್ತಿತ್ವ ಆನಂತರದಲ್ಲಿ ನಾನು ಓದಿದ ಶ್ರೀರಾಮಕೃಷ್ಣ ಪರಮಹಂಸರ, ಶ್ರೀ ಸ್ವಾಮಿ ವಿವೇಕಾನಂದರ, ಮಹಾಮಾತೆ ಶಾರದಾದೇವಿಯವರ ಚರಿತ್ರೆಗಳೂ, ಯೋಗಿವರೇಣ್ಯರೊಬ್ಬರ ಆತ್ಮಚರಿತ್ರೆ An autobiography of a yogi—by Yogananda Paramahamsa! ಮೇರಿಬೇಕರ್ ಎಡ್ಡಿ ಅವರ ಜೀವನಚರಿತ್ರೆ, ರಮಣ ಮಹರ್ಷಿಗಳ ಜೀವನ ಚರಿತ್ರೆ ಇತ್ಯಾದಿಗಳು ನನ್ನ ಆಧ್ಯಾತ್ಮಿಕ ಬಲವನ್ನು ಇನ್ನಷ್ಟು ಬಲಪಡಿಸಿದ್ದವು, ಬೆಂಗಳೂರಿನಲ್ಲಿನ ಶ್ರೀ ರಾಮಕೃಷ್ಣಾಶ್ರಮದ ಸಂಪರ್ಕವೂ ನನಗೆ ನವಚೇತನವನ್ನಿತ್ತಿತು. ಇವುಗಳ ಜೊತೆಗೆ ಥಿಯಾಸಾಫಿಕಲ್ ಲಾಡ್ಜಿನ ಜೊತೆಗೆ ನಾನು ಪಡೆದುಕೊಂಡ ಸಂಬಂಧ, ಗ್ರಂಥಾಧ್ಯಯನ ನನ್ನ ಜೀವನ ರೂಪಿಸಿ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳಂಥವರನ್ನು ಅರಿತುಕೊಳ್ಳಲು ನನಗೆ ಶಕ್ತಿಯನ್ನಿತ್ತವು.

ಅಂದಿನ ಸಂಜೆ ಭವ್ಯವಾದ ಸಭಾಮಂಟಪದಲ್ಲಿ ಬೃಹತ್ಸಭೆ ಸೇರಿತ್ತು. ಬೆಂಗಳೂರಿಂದ ಬಂದ ನಾವೆಲ್ಲರೂ ವೇದಿಕೆಯನ್ನು ಅಲಂಕರಿಸಿದ್ದೆವು. ಪ್ರಾರ್ಥನೆ, ಸ್ವಾಗತ, ಪರಿಚಯ ಇತ್ಯಾದಿಗಳಾದ ಮೇಲೆ ಅಂದಿನ ಅಧ್ಯಕ್ಷರು ಒಬ್ಬೊಬ್ಬರನ್ನಾಗಿ ಉಪನ್ಯಾಸಕ್ಕೆ ಕರೆದರು. ನಾನಿನ್ನೂ ಚಿಕ್ಕವನಂತೆ ಕಾಣಿಸುತ್ತಿದ್ದುದರಿಂದ "ಈ ಹುಡುಗ ಕೊನೆಗೆ ಮಾತಾಡಲಿ" ಎಂದರು. ಸರಿ, ಉಪನ್ಯಾಸಕರು ಉಪನ್ಯಾಸಗಳನ್ನು ಮಾಡಿದರು. ಭಾರಿ ಜನಸ್ತೋಮ ಸೇರಿದಾಗ 'ಕ್ಲಾಸ್ ರೂಮಿನ ಪಾಠ'ದಂತೆ ಮಾತಾಡಿದರೆ ಯಾರಿಗೂ ಹಿಡಿಸದೇ ಇರುವುದು ಅಸ್ವಾಭಾವಿಕವೇನೂ ಅಲ್ಲ. ಆ ಉಪನ್ಯಾಸಕರೆಲ್ಲರೂ ಇದೇ ರೀತಿ ಮಾತನಾಡಿದ್ದರಿಂದ ಜನಸ್ತೋಮ ಬೇಸತ್ತಿತ್ತು. ಕೊನೆಯವನಾದ ನನ್ನ ಸರತಿ ಬಂದಾಗ ಅಧ್ಯಕ್ಷರು 5 ನಿಮಿಷ ಮಾತಾಡಲು ಸೂಚಿಸಿದರು. ನಾನು ಎದ್ದು ನಿಂತು ಅಸ್ಖಲಿತವಾದ ವಾಣಿಯಲ್ಲಿ ಶ್ರೀ ಸರಸ್ವತಿ ಸ್ತೋತ್ರವನ್ನು ಹೇಳುವುದೊಂದೇ ತಡ ಸಭೆ ಕರತಾಡನಮಾಡಿ ಅಪೂರ್ವ ಸ್ವಾಗತಕೋರಿ ನನಗೆ ಪ್ರೋತ್ಸಾಹವಿತ್ತಿತು. ಆದರೆ ನಾನು ಸಭಾಗೌರವಕ್ಕೆ ಬದ್ಧನಾಗಿ ಕೇವಲ 5 ನಿಮಿಷವೇ ಮಾತಾಡಿದೆ. ಜನಕ್ಕೆ ನಿರಾಶೆಯಾಯಿತು. ಆನಂತರ ಜನವೆಲ್ಲ ಸ್ವಾಮಿಜಿಗೆ ನನ್ನ ಭಾಷಣ ಪ್ರತ್ಯೇಕವಾಗಿ ಏರ್ಪಡಿಸುವಂತೆ ಒತ್ತಾಯಪಡಿಸಿದರು. ಆಗ ಸ್ವಾಮಿಜಿಯವರು "ವೆಂಕಟೇಶ, ನೀವು ನಮ್ಮ ಜನತೆಯ ಹೃದಯವನ್ನು ಗೆದ್ದಿದ್ದೀರಿ. ನೀವು ಪೂರ್ತಿ ಅವಕಾಶ ಪಡೆದು ಒಂದು ಉಪನ್ಯಾಸ ಮಾಡಬೇಕೆಂಬುದು ಜನತೆಯ ಮತ್ತು ನನ್ನ ಅಪೇಕ್ಷೆ. ಈ ರಾತ್ರಿ ಹೇಗೂ ನೀವು ಇಲ್ಲಿ ತಂಗುತ್ತೀರಿ ಈ ರಾತ್ರಿಯೇ ಉಪನ್ಯಾಸ ಮಾಡಿದರೆ ತುಂಬ ಚೆನ್ನ" ಎಂದು ಹೇಳಿದರು.

"ಆಗಬಹುದು !" ಎಂದು ನಾನು ಸಂತೋಷದಿಂದ ಹೇಳಿದೆ.

"ಯಾವ ವಿಷಯ ಕುರಿತು ಮಾತಾಡುತ್ತೀರಿ ?" ಎಂದು ಸ್ವಾಮಿಜಿ ಪ್ರಶ್ನಿಸಿದರು.

"ರಾಮಾಯಣದಲ್ಲಿ ಯಾವುದಾದರೊಂದು ವಿಷಯ ಆಗಬಹುದಲ್ಲವೆ ?" ಎಂದು ನಾನೆಂದೆ.

"ಶ್ರೀ ರಾಮಾಯಣದ ಯಾವುದೇ ವಿಷಯವಾದರೂ ಚೆನ್ನಾಗಿದ್ದೇ ಇರುತ್ತದೆ" ಎಂದರು ಸ್ವಾಮಿಜಿ.

"'ಶ್ರೀ ರಾಮಾಯಣದ ಕೀರ್ತಿ ಕಲಶ' ಎಂಬ ಬಗ್ಗೆ ನಾನು ಮಾತನಾಡುತ್ತೇನೆ" ಎಂದೆ.

ಸ್ವಾಮಿಜಿಯವರ ಮುಖಮಂಡಲದಲ್ಲಿ ತೇಜಸ್ಸಿನ ಕಿಡಿಯೊಂದು ಚಿಮ್ಮಿ ಬಂದಿತು. ಅವರ ಆನಂದಕ್ಕೆ ಪಾರವೇ ಇಲ್ಲ. ಸಾಕ್ಷಾತ್ ಶ್ರೀ ಮಾರುತಿಯಂತೆಯೇ ಸಿಡಿದೆದ್ದು ರಾತ್ರಿ ಉಪನ್ಯಾಸ ಕುರಿತು ಡಂಗುರ ಹೊಡೆಯಲು ಏರ್ಪಡಿಸಿದರು. ಇತರ ಎಲ್ಲ ಏರ್ಪಾಟುಗಳನ್ನು ಸ್ವತಃ ನಿಂತು ಮಾಡಿದರು.

ಸರಿ ! ಭೋಜನಾನಂತರ ಸಭೆ ಭವ್ಯವಾದ ವ್ಯಾಸಪೀಠದಲ್ಲಿ ಸೇರಿತು. ಈಗಂತೂ ಜನ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸೇರಿದರು. ಬೃಹದಾಕಾರದ ಆ ಸಂಖ್ಯೆಯನ್ನು ನೋಡಿ ನಾನು ಮಂತ್ರಮುಗ್ಧನಾಗಿದ್ದೆ. ನನ್ನ ಎದುರುಗಡೆಗೆ ಶ್ರೀ ಕೆ. ಟಿ. ಅಪ್ಪಣ್ಣನವರು (ಮಾಡರ್ನ್ ಹಿಂದೂ ಹೋಟೆಲಿನ ಮಾಲೀಕರು) ಮಂಡಿಸಿದರು. ಅವರಿಗೆ ರಾಮಾಯಣವೆಂದರೆ ಪಂಚಪ್ರಾಣ. ಮದ್ರಾಸಿನಿಂದ ಡಾ. ದೊರೆಸ್ವಾಮಿಶಾಸ್ತ್ರಿಗಳನ್ನು ಕರೆಯಿಸಿ ರಾಮಾಯಣದ ಬಗ್ಗೆ ಉಪನ್ಯಾಸ ಏರ್ಪಡಿಸಿ ಜನತೆಯಲ್ಲಿ ದೈವಭಕ್ತಿ ಪ್ರಚೋದಿಸಲು ಶ್ರಮಿಸಿದ ಪುಣ್ಯಜೀವಿ ಅವರು. ಅಂಥ ರಾಮಭಕ್ತರು ನನ್ನೆದುರಿಗೆ ಕುಳಿತಿದ್ದುದು ನನಗೆ ಹೆಮ್ಮೆಯನ್ನುಂಟು ಮಾಡಿತ್ತು.

ನಾನು ಪ್ರಾರ್ಥನೆ, ಸ್ವಾಗತ, ಪರಿಚಯಗಳಾದನಂತರ ಶ್ರೀ ಸರಸ್ವತಿ ಪ್ರಾರ್ಥನೆಯಿಂದ ಉಪನ್ಯಾಸವನ್ನು ಆರಂಭಿಸಿದೆ. ಈಗ ನನಗೆ ಕಾಲದ ಪರಿಮಿತಿ ಇಲ್ಲವೆಂದು ಮೊದಲೇ ಹೇಳಲಾಗಿತ್ತು. ಸುಮಾರು 3 ಘಂಟೆ ಮಾತನಾಡಲೂ ಸಹ ಈಗ ನನಗೆ ಅವಕಾಶ ಕೊಡಲಾಗಿತ್ತು.

ನಾನು ಶ್ರೀ ರಾಮಾಯಣದ ಮಹತಿಯನ್ನು ಪ್ರಸ್ತಾಪಿಸಿ "ರಾಮಾಯಣದ ಕೀರ್ತಿ ಕಲಶ"ವನ್ನು ಯಾರ ತಲೆಯ ಮೇಲೆ ಇರಿಸಬೇಕು? ಎಂಬ ಪ್ರಶ್ನೆ ಹಾಕಿಕೊಂಡು ವಿಷಯವನ್ನು ಸೋದಾಹರಣವಾಗಿ ವಿಸ್ತರಿಸುತ್ತ ಕೊನೆಗೆ ಮಹಾ ಮಾತೆಯಾದ ಕೈಕೇಯಿದೇವಿಯ ತಲೆಯ ಮೇಲೆಯೇ ಆ ಕಲಶವನ್ನಿಟ್ಟೆ. ಕೈಕೇಯಿದೇವಿ ಅರಿತೋ-ಅರಿಯದೆಯೋ ಶ್ರೀರಾಮ-ಶ್ರೀರಾಮಚಂದ್ರಪ್ರಭುವಾಗಲು-ಕಾರಣಭೂತಳು ಎಂದು ವಾಲ್ಮೀಕಿ ಮಹರ್ಷಿಗಳ ಮಾತಿನಿಂದಲೇ ಸಿದ್ಧಮಾಡಿದೆ. ಹತ್ತಿರ ಹತ್ತಿರ 3 ಘಂಟೆ ಕಾಲ ಹರಿದು ಕಾವ್ಯ ಸಾಹಿತ್ಯ ಮಿಶ್ರಿತ ಗಂಗಾಪ್ರವಾಹ ಶ್ರೋತೃಗಳನ್ನು ಪಾವನರನ್ನಾಗಿಸಿತ್ತು. ಪ್ರತಿಯೊಬ್ಬ ಶ್ರೋತೃವೂ ತನ್ನ ಅಂತರಂಗದಲ್ಲಾದ ಮಹದಾನಂದವನ್ನು ಕರತಾಡನದ ಮೂಲಕ ವ್ಯಕ್ತಪಡಿಸಿ ಧನ್ಯತೆಯ ಭಾವವನ್ನು ಹೊಂದಿದ್ದ. ನಾನಂತೂ ಆನಂದ ಸಾಗರದಲ್ಲೇ ತೇಲಿ ಮುಳುಗುತ್ತಿದ್ದೆ. ಎಂಥ ಅಪೂರ್ವ ಅವಕಾಶ! ನನ್ನ ಜೀವಮಾನದಲ್ಲೇ ಅದೊಂದು ಎಂದೂ ಮರೆಯಲಾಗದ ದಿವ್ಯವೂ ಭವ್ಯವೂ ಆದ ಅನುಪಮ ಅನುಭವ. ಸ್ವಾಮಿಜಿಯವರಂತೂ ಮೈ ಮರೆತು ಹೋಗಿದ್ದರು. ಎಲ್ಲೆಲ್ಲೂ ಮುಕ್ತಕಂಠದ ಪ್ರಶಂಸೆಯ ಸುರಿಮಳೆ! ಶ್ರೀ ಮಾರುತಿಯ ಪರಮೋಪಾಸಕರಾದ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಜಿ ಅವರಿಗೆ ಶ್ರೀಮದ್ರಾಮಾಯಣದಲ್ಲಿನ ಮಹಾವ್ಯಕ್ತಿಗಳ ಪೂಜೆ ನನ್ನ ಉಪನ್ಯಾಸ ರೂಪದಲ್ಲಿ ನಡೆದುದು ದಿವ್ಯಾನಂದವನ್ನುಂಟು ಮಾಡಿತ್ತು. ಅವರ ವದನವೆ ಅದನ್ನು ಸೂಚಿಸುತ್ತಿತ್ತು. ಎಷ್ಟೋ ಜನ ಬಂದು ನನ್ನನ್ನು ವಂದಿಸಿ ಪ್ರಶಂಸೆಯ ನುಡಿ ಮುತ್ತುಗಳಿಂದ ನನ್ನನ್ನು ಅಲಂಕರಿಸಿದರು. ನಾನು ಆಗ ನಿಜಕ್ಕೂ ನಾನಾಗಿರಲಿಲ್ಲ. ಮಹದಾನಂದದಲ್ಲಿ ಲೀನನಾಗಿ ಹೋಗಿ ಇಹದ ಪರಿವೆಯನ್ನೇ ಕ್ಷಣಕಾಲ ಮರೆತಿದ್ದೆ! ಮಹಾಮಹಿಮರ ಸಂಪರ್ಕ ಮಹತ್ತನ್ನೇ ನನಗೆ ತಂದಿತ್ತಿತ್ತು. ಇಂದಿಗೂ ನಾನು ಅಂದಿನ ಘಟನೆಯನ್ನು ಅತ್ಯಂತ ಹೆಮ್ಮೆಯಿಂದ ನೆನೆದುಕೊಳ್ಳುತ್ತೇನೆ. ಅದನ್ನು ನೆನೆದಾಗಲೆಲ್ಲ ನನಗೆ ಇಂದಿಗೂ ರೋಮಾಂಚನವಾಗುತ್ತದೆ.

ವ್ಯಕ್ತಿಯಲ್ಲ-ಮಹಾಶಕ್ತಿ! ದೈವ ಕೃಪೆಯೊಂದಿದ್ದರೆ ಸಾಕು! ಅದು ಏನೆಲ್ಲ ಅದ್ಭುತಗಳನ್ನು ಮಾಡಿಸಬಲ್ಲದು. ಇದಕ್ಕೆ ಮಲ್ಲಾಡಿಹಳ್ಳಿಯ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಜಿಯವರೇ ಜೀವಂತ ಸಾಕ್ಷಿ! ಜೀವನದಲ್ಲಿ ಕೆಲವೊಂದು ಮಹದಾದರ್ಶಗಳನ್ನು ಇರಿಸಿಕೊಂಡು 'ಜನತಾ ಸೇವೆಯೇ ಜನಾರ್ದನನ ಸೇವೆ!' ಎಂದು ನಂಬಿ ಅದನ್ನು ಅನನ್ಯ ಸಾಧಾರಣವಾದ ತ್ಯಾಗ-ಸೇವೆಗಳಿಂದ ಸಾಧಿಸಿದ ಪುರುಷೋತ್ತಮರು ಈ ಸ್ವಾಮಿಗಳು. ಭಾರತ ಪರದಾಸ್ಯವನ್ನು ಕಿತ್ತೊಗೆದ ಮೇಲೆ ದೇಶೋನ್ನತಿಯನ್ನು ರಚನಾತ್ಮಕ ಕಾರ್ಯ ಸಾಧನೆಯ ಮೂಲಕ ಸಾಧಿಸಬೇಕೆಂದು ಸತ್ಯಸಂಕಲ್ಪ ಮಾಡಿದ ಈ ಯೋಗಿವರೇಣ್ಯರು ಕಳೆದ ೫೦ ವರ್ಷಗಳಲ್ಲಿ 'ನುಡಿದಂತೆ ನಡೆದು ತೋರಿಸಿದುದು' ಅಪಾರ. ಅಂದು ಕುಗ್ರಾಮವಾಗಿದ್ದ ಮಲ್ಲಾಡಿಹಳ್ಳಿ ಇಂದು ಇಡೀ ಪ್ರಪಂಚವೇ ಹೆಮ್ಮೆ ಪಡುವಂಥ ಒಂದು ಜೀವಂತ ವಿಶ್ವವಿದ್ಯಾನಿಲಯವಾಗಿದೆ. 'ಕಸರತ್ತಿನ ಮೇಷ್ಟ್ರು ಇಷ್ಟೆಲ್ಲ ಸಾಧಿಸಿದ್ದಾರೆಯೇ?' ಎಂಬ ಪ್ರಶ್ನೆಗೆ ಮಲ್ಲಾಡಿಹಳ್ಳಿಗೆ ಹೋಗಿ, ಪ್ರತ್ಯಕ್ಷವಾಗಿ ನೋಡಿಯೇ ಉತ್ತರ ಪಡೆಯಬೇಕು.

ಶ್ರೀ ಸ್ವಾಮಿಜಿ ಬರಿಯ ವ್ಯಾಯಾಮಪಟುಗಳಲ್ಲ; ಅವರು ಮಹಾ ಯೋಗಸಾಧಕರು; ಆಸನ, ಪ್ರಾಣಾಯಾಮ ಮೊದಲಾದವುಗಳಲ್ಲಿ ಸಿದ್ಧರು, ಆಯುರ್ವೇದ ವೈದ್ಯಪರಿಣತರು, ಸಾಹಿತಿಗಳು, ಕಾಯಕದಲ್ಲಿ ಕೈಲಾಸವನ್ನು ಕಂಡ ಕರ್ಮಯೋಗಿಗಳು. ಅವರ ಜೀವನ ಸಾಧನೆಯೇ ಒಂದು ಮಹಾಕಾವ್ಯ! ಸಾಸಿವೆಯಷ್ಟು ಮಾಡಿ ಹಿಮಾಚಲದಷ್ಟು ಮಾಡಿರುವೆನೆಂದು ತೋರಿಸಿಕೊಳ್ಳುವವರ ಸಾಲಿಗೆ ಸೇರದ ಈ ಮಹಾ ಕಾರಣಪುರುಷರು ಮಾಡಿರುವುದು ನಿಜಕ್ಕೂ ಹಿಮಾಚಲದಷ್ಟು. ಆದರೇನು? ಅವರು ಮಗುವಿನಂತೆ ನಿರಹಂಕಾರಿಗಳು. ಪದ್ಮಪತ್ರ ಮಿವಾಂಭಸದಂತೆ ಯಾವುದಕ್ಕೂ ಅಂಟಿಯೂ ಅಂಟದಂತೆ ಇರುವ ಮಹಾನುಭಾವರು.

ನಮ್ಮ ನಾಡಿನ ಎಲ್ಲ ಭಾಗದ ವಿದ್ಯಾರ್ಥಿ-ವಿದ್ಯಾರ್ಥಿನಿಯರನ್ನು ಮಲ್ಲಾಡಿಹಳ್ಳಿಗೆ ಕರೆದೊಯ್ದು 'ಸೇವೆ' ಎಂದರೇನೆಂಬುದನ್ನು ಪ್ರತ್ಯಕ್ಷದಲ್ಲಿ ತೋರಿಸಬೇಕು. ಆಗ ಎಷ್ಟೋ ಜನ ತರುಣ-ತರುಣಿಯರಲ್ಲಿ ಅಗಾಧ ಸೇವೆಯ ಕಿಡಿ ಹೊತ್ತೀತು. ಅದರಿಂದ ನಾಡಿಗೆ ಅಪಾರ ಉಪಕಾರವಾದೀತು.

ಇಷ್ಟೆಲ್ಲವನ್ನೂ ಶ್ರೀ ರಾಘವೇಂದ್ರ ಸ್ವಾಮಿಜಿ ಹೇಗೆ ಸಾಧಿಸಿದರು ? ಅವರ ಅದಮ್ಯ ಆತ್ಮ ವಿಶ್ವಾಸ ! ಅನ್ಯಮಿಂದ್ರಂ ಕರಿಷ್ಯಾಮಿ ! ಎಂಬ ಆತ್ಮ ಪ್ರತ್ಯಯ, ಇವುಗಳ ಜೊತೆಗೆ ಸಂಪೂರ್ಣ ನಿಸ್ವಾರ್ಥ ಮನೋಧರ್ಮ, ಸಾಮಾನ್ಯ ಜನತೆಯಲ್ಲಿ ಭಗವಂತನನ್ನು ಕಾಣುವ ದಿವ್ಯದೃಷ್ಟಿ, ವಿಶ್ವವಿಶಾಲವಾದ ಹೃದಯ ಮನಸ್ಸುಗಳು. ಅಭೂತಪೂರ್ವವಾದ ತ್ಯಾಗಶೀಲತೆ, ಅಪರಿಮಿತ ಔದಾರ್ಯಾದಿ ಸದ್ಗುಣಗಳು ಅವರಿಗೆ ಭೀಮಬಲವನ್ನಿತ್ತು ಇಷ್ಟು ಸಾಧನೆ ಮಾಡಿಸಿವೆ. ಇಷ್ಟು ಹೊತ್ತಿಗೆ ಅವರು ವಿಶ್ವದ ಮಹಾವ್ಯಕ್ತಿ ಎನಿಸಬೇಕಾಗಿತ್ತು. ಆದರೆ ಕರ್ಣಾಟಕದಲ್ಲಿ ಅವರ ಕಾರ್ಯರಂಗವಿರುವುದರಿಂದ ಅದು ಸಾಧ್ಯವಾಗಿಲ್ಲ.

ಸ್ವಾಮಿಜಿ 86ರಗಡಿ ಮುಟ್ಟಿದ್ದಾರೆ. ಆದರೆ ಅವರಿಗಿರುವ ಉತ್ಸಾಹ, ಕಾರ್ಯಶ್ರದ್ಧೆ ಇಂದಿನ 20ರ ತರುಣರಲ್ಲಿ ಖಂಡಿತ ಇಲ್ಲ. ಅವರು ಮಂತ್ರಪೂತ ಮಹಾಶಕ್ತಿ ಸಂಪನ್ನರು. ಇಂಥ ವಿಭೂತಿ ಪುರುಷರು ನಮ್ಮ ನಾಡಿನಲ್ಲಿದ್ದಾರೆಂದು ಹೇಳುವಲ್ಲಿ ಪ್ರತಿಯೊಬ್ಬನೂ ಹೆಮ್ಮೆ ಪಡಬೇಕು. ನಾನಂತೂ ತೆರೆದ ಹೃದಯದಿಂದ ಶ್ರೀಯುತರ ಪುಣ್ಯ ಪಾದಪದ್ಮಂಗಳಿಗೆ ಅನಂತಕೋಟಿ ಭಕ್ತಿಪುಷ್ಪಗಳನ್ನು ಅರ್ಪಿಸಿ ಕೃತಾರ್ಥನಾಗುತ್ತೇನೆ.

ಯೋಗಿ ವರ್ಯನ ಪಾದಕಿದೊ ಕಪಿಯ ನಮನ
ಚಿಗಿತು ಮಲ ಮಲವೆನಲಿ ನಂದನವನ !

ಈ ಆಶ್ರಮದ ಪ್ರಥಮ ದರ್ಶನದಿಂದ ಪಾರಮಾರ್ಥಿಕ ವಿಚಾರ ಮೂಡಿ ಬರುತ್ತದೆ. ಅಜ್ಞಾನಿಗೆ ಜ್ಞಾನೋದಯವಾಗುತ್ತದೆ. ಆಲಸಿಗೆ ಸ್ವಾವಲಂಬನೆಯ ಅರಿವು ಉಂಟಾಗುತ್ತದೆ. ಜಿಪುಣನಿಗೆ ದಾನ ಪ್ರವೃತ್ತಿ ಲಭಿಸುತ್ತದೆ.

—ಪ್ರಮಿಳಾ. ಬಿ. ದೇಶಪಾಂಡೆ, ಪಿ. ಆರ್. ಜಯಲಕ್ಷಮ್ಮ.

ಬೇವುಂಡು ಬೆಲ್ಲವನ್ನುಣಿಸುತ್ತಿರುವ ತಿರುಕ

ಮಾತಿನ ಮಲ್ಲರಿಗೂ ಕಾರ್ಯಪಟುಗಳಿಗೂ ಇರುವ ವ್ಯತ್ಯಾಸವನ್ನು ಸಂದರ್ಭೋಚಿತವಾಗಿ ತಿಳಿಸ ಬೇಕಿತ್ತು. ಆಗ ದಿವಂಗತ ಸಿ. ರಾಜಗೋಪಾಲಾಚಾರಿಯವರು ಕಾಲೇಜಿನ ತರುಣ ತರುಣಿಯರನ್ನು ಕುರಿತು ಹೇಳಿದ್ದರು. "ಅಂತರಾಷ್ಟ್ರೀಯ ಸಹ ಬಾಳ್ವೆಯನ್ನು ಕುರಿತು ಮಾತನಾಡುವುದು ಸುಲಭ. ಭ್ರಾತೃಭಾವವನ್ನು ಕುರಿತು ಪುಟಗಟ್ಟಲೆ ಬರೆಯಲೂಬಹುದು. ಅವುಗಳಿಂದ ಕೀರ್ತಿ ಸಿದ್ಧ, ಕಷ್ಟ ಕಿಂಚಿತ್ತು ಇಲ್ಲ. ಅದೇ ತಮ್ಮನೊಡನೆ ಹೊಂದಿಕೊಂಡು ಬಾಳುವುದು ಕಷ್ಟ. ಆದರ್ಶ ಸಹೋದರರೆನ್ನಿಸಿಕೊಂಡು ಜೀವನ ನಡೆಸುವುದು ಸುಲಭವಲ್ಲ. ಅದಕ್ಕೆ ಉದಾರವಾದ ಅಂತಃಕರಣವೂ, ತ್ಯಾಗ ಮನೋಧರ್ಮವೂ ಅತ್ಯಗತ್ಯ." ಎಂಬುದಾಗಿ ಹೇಳಿದ್ದರು. ಸಾಮಾನ್ಯವಾಗಿ ನಾವು ಆದರ್ಶಗಳನ್ನು ಕುರಿತು ಮಾತನಾಡುವ ಜನರನ್ನು ನೋಡುತ್ತೇವೆ. ಆದರೆ ಆದರ್ಶವನ್ನು ನಿಷ್ಠೆಯಿಂದ ಪಾಲಿಸುವ ಜನ ಮಾತ್ರ ವಿರಳ. ಹಾಗೆ ತಾವು ಕೈಗೊಂಡ ವ್ರತವನ್ನು ಪಾಲಿಸುವ ಮತ್ತು ಒಪ್ಪಿಕೊಂಡ ಆದರ್ಶವನ್ನು ಅನುಷ್ಠಾನದಲ್ಲಿಟ್ಟುಕೊಂಡಿರುವ ವಿರಳ ವ್ಯಕ್ತಿಗಳಲ್ಲಿ ಒಬ್ಬರು ಮಲ್ಲಾಡಿ ಹಳ್ಳಿಯ ರಾಘವೇಂದ್ರ ಸ್ವಾಮಿಗಳು.

1965 ಅಥವಾ 66ನೇ ಇಸ್ವಿಯ ಶಿವರಾತ್ರಿಯ ಸಂದರ್ಭ. ಮಲ್ಲಾಡಿ ಹಳ್ಳಿಯಲ್ಲಿ ನಡೆಯುವ ಈ ಸಮಾರಂಭದಲ್ಲಿ ಉಪನ್ಯಾಸ ಮಾಡಲು ನನಗೆ ಕರೆ ಬಂತು. ನಾನು ಶಿವಮೊಗ್ಗದವನಾದರೂ, ಶಿವಮೊಗ್ಗದಲ್ಲಿ 1957 ರಿಂದ 62 ರವರೆಗೆ ಕಾಲೇಜಿನಲ್ಲಿ ಪ್ರಾಧ್ಯಾಪಕನಾಗಿದ್ದರೂ ಮಲ್ಲಾಡಿ ಹಳ್ಳಿಗೆ ಹೋಗಿರಲಿಲ್ಲ. ನಮ್ಮ ಸಹೋದ್ಯೋಗಿಗಳಾದ ಶ್ರೀ ಡಿ. ಟಿ. ರಂಗಸ್ವಾಮಿ ಎಂಬುವರು ಆ ಆಶ್ರಮದ ವಿಷಯವನ್ನು ಆಗಾಗ್ಗೆ ಹೇಳುತ್ತಿದ್ದರು. ಅವರು ಅದೇ ಆಶ್ರಮದಲ್ಲಿ ಓದಿದವರಂತೆ. ಅವರ ಬಾಯಿಯಲ್ಲಿ ಸ್ವಾಮಿಗಳ ಸಾಧನೆಗಳೇನೆಂಬುದನ್ನು ಕೇಳಿದಾಗ ಏನೇನೋ ಕಲ್ಪನೆಗಳು ಬಂದಿದ್ದವು. ಆ ಕಲ್ಪನೆಗಳು ಕುತೂಹಲವನ್ನು ಕೆರಳಿಸಿದವು. ಆ ಕುತೂಹಲವು ಸಿಕ್ಕ ಅವಕಾಶವನ್ನು ಬಿಡದಂತೆ ಬಂದ ಕರೆಯನ್ನು ಒಪ್ಪಿಕೊಳ್ಳಲು ಪ್ರೇರೇಪಿಸಿತು. ಬೆಂಗಳೂರಿನಿಂದ ನಾನು ಮತ್ತು ನನ್ನ ಧರ್ಮಪತ್ನಿ ಇಬ್ಬರೂ ರೈಲಿನಲ್ಲಿ ಹೊರಟೆವು.

ರೈಲ್ವೆ ಸ್ಟೇಷನ್ನಿನಲ್ಲಿಳಿಯುವುದರೊಳಗಾಗಿ ನಮ್ಮ ಪರಿಚಿತರು ಕೃಷ್ಣಮೂರ್ತಿ ಎಂಬುವರು ನಮ್ಮನ್ನು ಸ್ವಾಗತಿಸಿದರು. ಕಾರಿನಲ್ಲಿ ಆಶ್ರಮವನ್ನು ತಲುಪಿದೆವು. ನಮಗೆ ಅತಿಥಿಗೃಹವನ್ನು ತೋರಿಸಿದರು. ಊಟಕ್ಕೆ ಕೃಷ್ಣಮೂರ್ತಿಯವರಲ್ಲಿ ಸಿದ್ಧತೆಗಳಾಗಿದ್ದವು. ಒಬ್ಬ ಸ್ವಯಂಸೇವಕ ನಮ್ಮ ಯೋಗಕ್ಷೇಮವನ್ನು ನೋಡಿಕೊಳ್ಳಲು ಮೀಸಲು.

ನಾವು ಇಲ್ಲಿಗೆ ಹೋಗುವಾಗ ಸ್ವಾಮಿಗಳ ಬಗ್ಗೆ—ಆಶ್ರಮದ ಬಗ್ಗೆ ಒಂದು ಕಲ್ಪನೆಯನ್ನಿಟ್ಟುಕೊಂಡಿದ್ದೆ ಎಂದೆನಲ್ಲ, ಅದು ಅಲ್ಲಿ ಬಯಲಾಯಿತು. ನಾನೂ ವಿದ್ಯಾರ್ಥಿಯಾಗಿದ್ದಾಗ ಒಂದು ಆಶ್ರಮದಲ್ಲಿ ಇದ್ದವನು.

ಅಲ್ಲಿಯೂ ಒಬ್ಬ ಸ್ವಾಮಿಗಳಿದ್ದರು. ಅಲ್ಲಿಯೂ ಶಿಸ್ತಿನ ಜೀವನವಿತ್ತು. ಬೆಳಗಿನ ಜಾವ 4½ ಇಂದ ರಾತ್ರಿ 9½ ಘಂಟೆಯವರೆಗೆ ವ್ಯವಸ್ಥಿತವಾಗಿ ಕಾರ್ಯಕ್ರಮವಿರುತ್ತಿತ್ತು. ಅಲ್ಲಿನ ಸಂನ್ಯಾಸಿಗಳು–ಸ್ವಾಮಿಗಳು, ಪರಂಪರಾನುಗತವಾಗಿ ಬಂದ ದಂಡ ಕಮಂಡಲುಧಾರಿಗಳು. ಪೂಜೆ–ಪಾರಾಯಣ - ಪಾಠ, ಪುರಾಣ- ಇವುಗಳಿಗೆ ಅಲ್ಲಿ ಯಾವಾಗಲೂ ಮಹತ್ವ. ಅಲ್ಲಿನ ಪಾದಪೂಜೆ–ಭಿಕ್ಷಗಳ ವಾತಾರಣಕ್ಕೂ ಅನಾಥಾಶ್ರಮದ ವಾತಾವರಣಕ್ಕೂ ಅಜಗಜಾಂತರ. ನನ್ನ ಬಾಲ್ಯಜೀವನದ ಅನುಭವವನ್ನಾಧಾರಿಸಿದ್ದ ಕಲ್ಪನೆ ಈ ಆಶ್ರಮದ ಬಗ್ಗೆ ಏನೊಂದು ಯಥಾರ್ಥವನ್ನು ಊಹಿಸಲಾರದಿತ್ತು.

ಬೆಳಗಿನಝಾವ ಸೂರ್ಯನಮಸ್ಕಾರಕ್ಕೆ ಎಲ್ಲ ವಿದ್ಯಾರ್ಥಿಗಳೂ ಶಿಸ್ತಿನಿಂದ ಬಂದು ನಿಂತು ಶಾಸ್ತ್ರೀಯವಾಗಿ ಸೂರ್ಯೋಪಾಸನೆಯನ್ನು ಮಾಡುವ ದೃಶ್ಯ ನೋಡಿದಾಗ ಇಲ್ಲಿ ದೇಹಕ್ಕೂ ಆತ್ಮಕ್ಕೂ ಏಕಕಾಲದಲ್ಲಿ ಸಂಸ್ಕಾರ ಒದಗುತ್ತಿದೆಯಲ್ಲ ಎಂದು ಪುಳಕಿಕನಾದೆ. ಅನಂತರ ಅವಕಾಶ ಸಿಕ್ಕಾಗ ಸ್ವಾಮಿಗಳೊಡನೆ ಸೂರ್ಯನಮಸ್ಕಾರವನ್ನು ಯಾರು ಮಾಡಬೇಕು? ಏಕೆ ಮಾಡಬೇಕು? ಮಾಡಿದರೆ ಏನಾಗುತ್ತದೆ? ಇತ್ಯಾದಿ ಪ್ರಶ್ನೆಗಳನ್ನುಕೇಳಿದಾಗ ಸ್ವಾಮಿಗಳು ನನ್ನ ಮೌಢ್ಯಕ್ಕೆ ಮನಸ್ಸಿನಲ್ಲಿ ನಕ್ಕಿದ್ದರೂ ನಕ್ಕಿರಬಹುದು. ಆದರೆ ಸೌಜನ್ಯಮೂರ್ತಿಯಾದ ಅವರು ಸುಲಭವೂ, ನೇರವೂ, ಅಸಂದಿಗ್ಧವೂ ಆದ ತಿಳಿಗನ್ನಡವಲ್ಲಿ ಶಾಸ್ತ್ರೀಯವಾಗಿ ಎಲ್ಲವನ್ನೂ ವಿವರಿಸಿದರು. ಹಾಗೆಯೇ ಆಶ್ರಮದ ಸುತ್ತಲೂ ಕರೆದೊಯ್ದರು.

ಅಲ್ಲಿ ತಪೋವನ, ಅಲ್ಲಿನ ಅಚ್ಚುಕಟ್ಟುತನ, ಆಧ್ಯಾತ್ಮ ಸಾಧನೆಯಲ್ಲಿ ತೊಡಗಬೇಕೆಂಬುವರಿಗಾಗಿ ಸಣ್ಣ ಸಣ್ಣ ಏಕಾಂತ ವಾಸಗೃಹ–ಇವುಗಳನ್ನು ನೋಡಿ ಅನಂತರ ಸ್ವಾಮಿಗಳ ಖಾಸಾ ತಂಗುತಾಣಕ್ಕೆ ಹೋಗುವ ದಾರಿಯಲ್ಲಿ ಮಲ್ಲಭೂಮಿಯನ್ನು ನೋಡಿದ್ದಾಯಿತು. ಅಲ್ಲಿ ಕುಂಕುಮದ ಬಣ್ಣದ ಅತ್ಯಂತ ನಯವಾದ ಮಣ್ಣು ಆಕರ್ಷಕವಾಗಿತ್ತು. ಸಹಜವಾಗಿ ಇದೇನು ಎಂದಾಗ ಸ್ವಾಮಿಗಳು ಅಷ್ಟೇ ನೇರವಾಗಿ–ಇದು ಔಷಧಗಳಿಂದ ತಯಾರಿಸಿದ ಮಟ್ಟಿ. ಇಲ್ಲಿ ಕುಸ್ತಿಯನ್ನು ಕಲಿಸಲಾಗುವುದು. ಈ ಮಣ್ಣಿನಲ್ಲಿ ಮೈ ಕೈ ನೋವನ್ನು ಹೋಗಲಾಡಿಸುವ ರಸವಿಶೇಷವನ್ನು ವೈಜ್ಞಾನಿಕವಾಗಿ ಸೇರಿಸಲಾಗಿದೆ ಇತ್ಯಾದಿ. ಅನಂತರ ಅಲ್ಲಿಯೆ ಇದ್ದ ಎರಡು ಮರದ ಮುದ್ಗರಗಳನ್ನು ನೋಡಿದೆವು. ನಮ್ಮೊಡನಿದ್ದ ಒಬ್ಬರು ಅದನ್ನುಎತ್ತಲು ಹೋದರು. ಅದು ಮಿಸುಗಲಿಲ್ಲ. ನನಗೂ ಕುತೂಹಲವಾಯಿತು. ಎತ್ತಲು ತಿಣುಕಿದೆ. ಆದರೆ ನೆಲದಿಂದ ಒಂದೆರಡಿಂಚು ಮೇಲೆತ್ತುವುದರಲ್ಲಿ ಮೈ ಬೆವರಿತು. ಅದೇ ಸ್ವಾಮಿಗಳು ಲೀಲಾಜಾಲವಾಗಿ ಅದನ್ನೆತ್ತಿಕೊಂಡರು. ಒಂದೇ ರಟ್ಟೆಯ ಮೇಲೆ ಕೈ ಚಾಚಿ ಮೇಲೆತ್ತಿ ಹಿಡಿದು ನಿಂತರು. ಅದನ್ನು ಅನಾಯಾಸವಾಗಿ ಹಿಂದೆ ಮುಂದೆ ಬೀಸಿ ಕೆಳಗಿಳಿಸಿದರು ಆಶ್ಚರ್ಯವಾಯಿತು."ಸ್ವಾಮೀಜೀ, ನಿಮ್ಮ ವಯಸ್ಸೆಷ್ಟು?"ಎಂದು ಕೇಳಿದೆ, "ಎಪ್ಪತ್ತೈದು ವರ್ಷವಾಯಿತು ಈ ಯುಗಾದಿಗೆ" ಅಂದಂತೆ ಜ್ಞಾಪಕ, ಆಗ ನನಗಾದ ನಾಚಿಕೆ ಅಷ್ಟಿಷ್ಟಲ್ಲ. ಮುಂದೆ ಸ್ವಾಮಿಗಳ ಜೊತೆ ಮಾತನಾಡುವ ಸಾಹಸ ಮಾಡಲಾರದೆ ಹೋದೆ. ಆ ಎಪ್ಪತ್ತೈದರ ತಾರುಣ್ಯವನ್ನು ನೋಡಿದಾಗ ಅಕಾಲ ವೃದ್ಧನಾದ ನಾನು ಮಾತಿನ ಚಾಪಲ್ಯವನ್ನು ಬಿಟ್ಟೆ. ಮೌನವೇ ಭೂಷಣವೆಂದು ಬಗೆದೆ.

ಅನಂತರ ಆಯುರ್ವೇದ ವೈದ್ಯಶಾಲೆ–ಇತರೆ ಶಾಲೆಗಳು, ಆಶ್ರಮದ ಅಧ್ಯಾಪಕರಿಗಾಗಿ, ವಿದ್ಯಾರ್ಥಿಗಳಿಗಾಗಿ ಕಟ್ಟಿರುವ ಕಟ್ಟಡಗಳು, ಪ್ರಯೋಗಶಾಲೆ, ಅಲ್ಲಿನ ಯಂತ್ರೋಪಕರಣಗಳು ಇತ್ಯಾದಿ ಎಲ್ಲವನ್ನೂ ನೋಡಿ ಅಂದಿನ ರಾತ್ರಿ ವಿಶ್ರಮಿಸಿಕೊಳ್ಳುವಾಗ ಅನ್ನಿಸಿತು–ಒಂದು ಕಾಚಾ, ಅದರ ಮೇಲೆ ನಿಕ್ಕರ್, ಒಂದು ಬನಿಯನ್ ಇಷ್ಟೇ ಉಡುಪುಧರಿಸಿ ಎಲ್ಲಿ ನೋಡಿದರೂ ಕೆಲಸಕ್ಕೆ ಹಾಜರಿದ್ದು, ಎಲ್ಲ ವ್ಯವಸ್ಥೆಯನ್ನೂ ನೋಡಿಕೊಳ್ಳುತ್ತಿದ್ದ ಆ ವ್ಯಕ್ತಿ ಹೇಗೆ ಇಷ್ಟನ್ನು ಸಾಧಿಸಿದ್ದು ? ಈ ಮಲ್ಲಾಡಿಹಳ್ಳಿಯ ಹಳೆಯ ಕತೆಯನ್ನು ಕೇಳಿದವರು ಅಲ್ಲಿ ಈ ಸ್ವಾಮಿಗಳಿಂದಾಗಿರುವ ಹೊರಮಾರ್ಪಾಟನ್ನು ನೋಡಿದರೇ ಅಚ್ಚರಿ ಪಡಬೇಕಾಗುತ್ತದೆ. ಅಂಥದರಲ್ಲಿ ಇಲ್ಲಿನ ಜನರ ಮನಸ್ಸನ್ನು ತಿದ್ದಿ, ಹೃದಯನ್ನು ಪರಿವರ್ತನಗೊಳಿಸಿ, ಆದರ್ಶ ಸುಸಂಸ್ಕೃತರ ಬೀಡನ್ನಾಗಿ ಮಾಡಿದ್ದಾರಲ್ಲ ! ಹೇಗೆ

ಸಾಧ್ಯ ? ನೂರಾರು ರೋಗಿಗಳಿಗೆ ಔಷಧೋಪಚಾರಗಳು ನಿಶ್ಶುಲ್ಕವಾಗಿ. ಸಹಸ್ರಾರು ವಿದ್ಯಾರ್ಥಿಗಳಿಗೆ ಅನ್ನದಾನ ವಿದ್ಯಾದಾನ ಅದು ಉಚಿತವಾಗಿ–ಇದೇನು ಸಾಮಾನ್ಯ ಸಾಧನೆಯೆ ? ಇಷ್ಟೆಲ್ಲಾ ಕಲ್ಪನೆ ಈ ವ್ಯಕ್ತಿಗೆ ಬಂದುದಾದರೂ ಹೇಗೆ ! ಒಬ್ಬನೇ ಸಾಧಿಸಿರುವುದಾದರೂ ಹೇಗೆ ? ಅದೇನು ಈತನಲ್ಲಿರುವ ಸಂಘಟನಾ ಪಟುತ್ವದ ಫಲವೆ? ಆದರೆ ಈ ವಾತಾವರಣ ಶುಷ್ಕ ಸಂಘಟನೆಗಿಂತ ಭಿನ್ನವಾಗಿದೆಯಲ್ಲ ! ಈ ವ್ಯಕ್ತಿಯನ್ನು ನೋಡಿದಾಗ ಮೊದಲಾಗುವುದು ನಿರಾಶೆ. ವೇಷಭೂಷಣಗಳಿಂದಲಾಗಲೀ, ಘನತೆಗಾಂಭೀರ್ಯದಿಂದಾಗಲೀ, ಶಿಷ್ಯ ಪ್ರಶಿಷ್ಯರ ಮೇಳದಲ್ಲಿದ್ದು ಮೆರೆಯುವ ರೀತಿಯಿಂದಾಗಲೀ, ಯಾವೊಂದು ಆಡಂಬರದಿಂದಾಗಲೀ ಗೌರವವನ್ನು ತೋರಿಸಬೇಕೆಂಬ ಬುದ್ಧಿ ಪ್ರಚೋದಿಸುವ ವ್ಯಕ್ತಿತ್ವವಲ್ಲ. ಅಲ್ಲಿ ಸರಳತೆ, ಹಸುಳೆಯ ಮುಗ್ಧತೆ, ಆತ್ಮೀಯ ಬಂಧುತ್ವ, ಸಹಜಸೌಜನ್ಯ–ಇವು ಮಾತ್ರ ಪ್ರಭಾವ ಬೀರುತ್ತವೆ. ಈ ಸದ್ಗುಣಗಳಿಂದ ಈ ದಿನಗಳಲ್ಲಿ ಹಿರಿಯತನವನ್ನು ಪಡೆಯುವುದು ಕಷ್ಟಸಾಧ್ಯ, ಇವಕ್ಕೆ ಕಿಮ್ಮತ್ತಿಲ್ಲ.

ಆದರೆ ಸ್ವಾಮಿಗಳ ಸಾಧನೆ ಅಗಾಧವಾದುದು, ಇದನ್ನೊಪ್ಪಿಕೊಳ್ಳಲೇ ಬೇಕು. ಅದೂ ಅವರ ಬಗ್ಗೆ ಆಶ್ರಮವಾಸಿಗಳಲ್ಲಿ ವಿಚಾರ ವಿನಿಮಯ ಮಾಡಿಕೊಂಡ ಹಿನ್ನೆಲೆಯಲ್ಲಿ ಮನಸ್ಸಿನಲ್ಲೇ ವಿಚಾರಮಥನ ಮಾಡಿದಾಗ ಅನ್ನಿಸಿದ್ದು ಇದೆಂಥ ವ್ಯಕ್ತಿತ್ವ ! ಈ ವ್ಯಕ್ತಿತ್ವದ ಹಿನ್ನೆಲೆಯನ್ನು ಅರಿತರೆ ಇದೊಂದು ಪವಾಡ ಎನ್ನದೆ ಗತ್ಯಂತರವಿಲ್ಲ. ಈ ಸ್ವಾಮಿಗಳ ಬಾಲ್ಯ ರೋಗರುಜಿನಗಳಲ್ಲಿ ಕಳೆಯಿತಂತೆ. ಹಡೆದ ತಂದೆ ತಾಯಿಯರಿಗೆ ಸಮಸ್ಯೆಯ ಶಿಶುವಾಗಿ ಬೆಳೆದದ್ದು. ಹುಟ್ಟಿನಿಂದಲೇ ಹಾದಿ ಬೀದಿಯ ಮಂತ್ರವಾದಿಗಳ, ಮಲೆಯಾಳಿ ಪಂಡಿತರುಗಳ, ಊರುಕೇರಿಯಲ್ಲಿನ ಮೈಮೇಲೆ ಬರುವ ಗಣದೇವತೆಗಳ ಹೇಳಿಕೆ ಕೇಳಿಕೆಯಂತೆ ತಾಯಿತ, ಔಷಧ ಸೇವೆಸೂತ್ರಗಳನ್ನು ಮಾಡಿದರೂ ಬಗೆಹರಿಯದ ಕಾಹಿಲೆ. ಎಲುಬಿನ ಹಂದರದಂತಿದ್ದ ಆಳುತನ. ಮೇಲಾಗಿ ಅಪಸ್ಮಾರ ರೋಗ–ಇಂಥ ವ್ಯಕ್ತಿ ಇಂದು ಬದುಕಿದ್ದರೂ ಆಶ್ಚರ್ಯ ಪಡಬೇಕು. ಅಂಥದರಲ್ಲಿ ಎಪ್ಪತ್ತೈದರಲ್ಲೂ ಇಪ್ಪತ್ತೈದರ ತರುಣರನ್ನು ನಾಚಿಸುವ ಮೈಬಲವಿದೆಯಲ್ಲ–ಇದೆಂಥ ಪವಾಡ ಎಂದು ಮೆಲುಕು ಹಾಕಿದೆ.

ಮಾರನೆಯ ದಿನ ಸ್ವಾಮಿಗಳ ಬಗ್ಗೆ ಮತ್ತಷ್ಟು ಜಿಜ್ಞಾಸೆ ನಡೆಯಿತು. ಆಗ ಆಶ್ರಮವಾಸಿ ನನ್ನ ಮಿತ್ರರು ಸ್ವಾಮಿಗಳ ಬಗ್ಗೆ ವ್ಯಕ್ತಪಡಿಸಿದ ಭಾವವನ್ನು ನೋಡಿದಾಗ ಇವರ ಮಾತಿನಲ್ಲಿ ಯಥಾರ್ಥಕ್ಕಿಂತ ಅನುಯಾಯಿಗಳಲ್ಲಿರುವ ಅತಿಶ್ರದ್ಧೆ ಅತಿಶಯೋಕ್ತಿಯಾಗಿರಬಹುದೆಂದುಕೊಂಡಿದ್ದೆ. ಆದರೆ ಅವರ ತೋಟದಲ್ಲಿ–ಆಗ ತಾನೆ ಒಂದೆರಡು ವರ್ಷಗಳಾಗಿದ್ದವು ಸಸಿಗಳನ್ನು ನೆಟ್ಟು–-ಸ್ವಾಮಿಗಳೊಂದಿಗೆ ಅಡ್ಡಾಡುವಾಗ ನಡೆಸಿದ ಸಂಭಾಷಣೆ ನನ್ನ ಅನ್ನಿಸಿಕೆಯನ್ನು ಅಳಿಸಿಹಾಕಿತು.

"ಸ್ವಾಮಿಜೀ, ತಾವು ಬಾಲ್ಯದಲ್ಲಿ ಬಹಳ ರೋಗ ರುಜಿನಗಳನ್ನು ಅನುಭವಿಸಿದಿರಂತೆ ನಿಜವೆ ?"—ನನ್ನ ಪ್ರಶ್ನೆ.

"ಯಾರು ಹೇಳಿದರು ? ರೋಗ ರುಜಿನಗಳನ್ನು ಅನುಪಿಸಲಿಲ್ಲ. ಅವು ನನ್ನ ಈ ದೇಹದಲ್ಲಿ ಬಿಡಾರ ಬಿಟ್ಟಿದ್ದವು !"—ಗಹಗಹಿಸಿ ನಕ್ಕರು ನಿಷ್ಕಪಟಿ.

"ಮತ್ತೆ ?"—ಜಿಜ್ಞಾಸೆ.

"ಮತ್ತೇನು ?—ಅದರಿಂದ ಹಟಮಾರಿತನ ಮೊಂಡಾಟ ಇಂಥ ದುರ್ಗುಣಗಳು ಬೆಳೆದವು."

ಸ್ವಾಮಿಗಳು ಹೇಳುವ ಸರಳ ಆತ್ಮಚರಿತ್ರೆಯನ್ನು ಕಿವಿಗಳು ಕೇಳುತ್ತಿದ್ದರೆ ಮನಸ್ಸು ನಿಜ ಆ ಹಟಮಾರಿತನವೇ ಇಂದು ಇಷ್ಟು ಸಾಧಿಸಲು ಕಾರಣವಾಯಿತು. ಆ ಮೊಂಡಾಟವೇ ಹಿಡಿದ ಕಾರ್ಯವನ್ನು ಪೂರೈಸುವವರೆಗೆ ಬಿಡದ ದೃಢ ಸಂಕಲ್ಪವಾಯಿತು. ಯಾವುದೂ ಉಪಯೋಗದಲ್ಲಿ ಸಾರ್ಥಕ್ಯವನ್ನು ಪಡೆಯಬಹುದಲ್ಲವೆ ? ಎಂದು ಮೆಲುಕು ಹಾಕುತ್ತಿತ್ತು.

ಈ ಮಧ್ಯೆ ಏನು ಪ್ರಶ್ನೆ ಕೇಳಿದೆನೊ ಮರೆತು ಹೋಗಿದೆ. ಆದರೆ ಸ್ವಾಮಿಗಳು ಹೇಳಿದ್ದು 'ನನ್ನಲ್ಲಿ ಮರಭಿ

ಮಾನ ತುಂಬಿತ್ತು. ನಾನೊಬ್ಬ ದುರಹಂಕಾರಿ" ಎಂದು ನಕ್ಕರು. ಸ್ವಾಮಿಗಳ ಮಾತಿನಲ್ಲಿ 'ದುರ್' ಎಂಬುದು ಎದುರಿನಲ್ಲಿ ನಿಂತು ನಮ್ಮನ್ನು ದುರುಗುಟ್ಟಿ ನೋಡುವಂತೆ ಕಲ್ಪನೆ ತೋರಿಸಿತು. ತನ್ನ ಸಾಧನೆಗೆ ತಾನು ಹಿಗ್ಗಿದರೆ ದುರಭಿಮಾನವೆ ? ಲೋಕ ಕಲ್ಯಾಣಕ್ಕಾಗಿ, ನಿಸ್ಸ್ವಾರ್ಥ ಬುದ್ಧಿಯಿಂದ, ಜನಸೇವೆಯ ಮೂಲಕ ಜನಾರ್ದನನ ಸೇವೆಯನ್ನು ಮಾಡುತ್ತಿರುವ ವ್ಯಕ್ತಿ 'ಸ್ವಾಮಿ' ಎಂದು ಕರೆಸಿಕೊಳ್ಳುವುದು, ಆಶ್ರಮ ಎಂದು ಹೆಸರಿಟ್ಟಿರುವುದು ಅಹಂಕಾರದ ಕುರುಹೆ ? ಎಂದು ಪ್ರಶ್ನಿಸುವಂತೆ ಮಾಡಿತು.

ಈ ಮಧ್ಯೆ ಸ್ವಾಮಿಗಳ ಮೇಲೆ ಪ್ರಭಾವ ಬೀರಿದ ವ್ಯಕ್ತಿಗಳಾರು ? ಅವರೆಂಥ ಮಹಾತ್ಮರಿರಬೇಕು ಎಂಬ ಕುತೂಹಲ ಪ್ರಶ್ನೆಯಾಗಿ ಮೂಡಿತು.

ಸ್ವಾಮಿಗಳು ಹೇಳಿದ ಉತ್ತರದ ಸಾರವನ್ನಿಲ್ಲಿ ಹೇಳಬಲ್ಲೆ: ಆ ಮಾತುಗಳನ್ನು ಹಾಗೆಯೇ ಹೇಳುವ, ಆ ಮಾತುಗಳನ್ನು ತಿಳಿಸುವಾಗ ಅವರ ಹೃದಯದಿಂದ ಹೊರ ಹೊಮ್ಮುತ್ತಿದ್ದ ಗುರುಭಕ್ತಿ, ರಸಸಿಂಚಿತ ಮಾತಿನ ಮೃದುತ್ವವನ್ನು ಯಥಾವತ್ತಾಗಿ ತಿಳಿಸುವ ಶಕ್ತಿ ನನಗಿಲ್ಲ–"ನನ್ನ ಮೇಲೆ ಕೈಯಿಟ್ಟು ನನ್ನ ಜೀವನಕ್ಕೆ ತಿರುವು ತಂದವರು ಪೂಜ್ಯ ಶ್ರೀ ನಿತ್ಯಾನಂದ ಸ್ವಾಮಿಗಳು. ಅವರನ್ನು ನಾನು ಹುಡುಕಿಕೊಂಡು ಹೋಗಿರಲಿಲ್ಲ. ಅವರೇ ನನ್ನನ್ನು ಹುಡುಕಿಕೊಂಡು ಬಂದಿದ್ದರೆಂದರೂ ತಪ್ಪಿಲ್ಲ ! ಅದೇನು ಕರುಣಾಮೂರ್ತಿ. ಅವರು ನನಗೆ ಧ್ಯಾನಯೋಗ ಮಾರ್ಗವನ್ನು ತಿಳಿಸಿದರು. ಆಗ ಡಾಕ್ಟರ್ ಪರೀಕ್ಷೆಯನ್ನು ಗುರಿಯಾಗಿಟ್ಟುಕೊಂಡು ಪ್ರೌಢ ಶಾಲೆಯಲ್ಲಿ ಶಿಕ್ಷಣ ವನ್ನು ಪಡೆಯುತ್ತಿದ್ದ ನನ್ನ ಜೀವನ ದೇವರನ್ನು ಕಾಣುವ ಹಂಬಲದಲ್ಲಿ ಮನೆಮಠವನ್ನು ತೊರೆದು 'ತಿರುಕ' ನನ್ನಾಗಿ ಮಾಡಿತು. ಆ ಮುಹೂರ್ತ ಒಳ್ಳೆಯದು. ಅಂದೂ ಒಂದು ಯುಗಾದಿ. ನನ್ನ ಮಹಾಯಾತ್ರೆ ಪ್ರಾರಂಭ ವಾಯಿತು. ಆ ಸ್ವಾಮಿಗಳು ಯಾರು, ಎಲ್ಲಿಯವರು ಇತ್ಯಾದಿ ವಿವರಗಳು ತಿಳಿಯದಿದ್ದರೂ ಅವರನ್ನು ಹುಡುಕಿ ಕೊಂಡು ಹೊರಟೆದ್ದೆ. ಅನಂತರ ಯಾವ ಯಾವದೋ ಮಠ ಆಶ್ರಮಗಳನ್ನು ಸುತ್ತಿದೆ. ದೊಡ್ಡವರ ಜೀವನವನ್ನು ಅತೀ ಹತ್ತಿರದಿಂದ ನೋಡಿದೆ. ಎಷ್ಟೋ ಸಲ ನೋಡದಿದ್ದರೆ ಚೆನ್ನಾಗಿರುತ್ತಿತ್ತು. ನನ್ನಲ್ಲಿ ಇವರ ಬಗ್ಗೆ ಇದ್ದ ಗೌರವ ಭಾವವಾದರೂ ಮುಕ್ಕಾಗದೆ ಇರುತ್ತಿತ್ತು ಅಂದುಕೊಂಡು ದಾರಿ ಹಿಡಿಯುತ್ತಿದ್ದೆ. ಈ ಮಧ್ಯೆ ಕೆಲವುದಿನ ಈ ದಾರಿ ಯನ್ನು ಬಿಟ್ಟು ನಾಟಕ ಕಂಪನಿ ಸೇರಿದೆ"—

ಸ್ವಾಮಿಗಳ ಈ ಕೊನೆಯ ಮಾತನ್ನು ಕೇಳಿದಾಗ ಮೈ ಎಲ್ಲ ಕಿವಿಯಾಯಿತು. 'ನಾಟಕವೆ ?' ನಿಮಗೆ ಈ ಕಲೆಯಲ್ಲಿ–ಮಾತು ಮುಗಿಯುವ ಮುನ್ನವೇ ಸ್ವಾಮಿಗಳು 'ಬಾಲ್ಯದಲ್ಲಿ ಆ ಕಲೆ ಇದ್ದುದರಿಂದಲೇ ನಾನು ನನ್ನ ಶಾಲಾ ಮಾಸ್ತರುಗಳಿಗೆ ಅಚ್ಚು ಮೆಚ್ಚಿನವನಾಗಿದ್ದೆ. ಮುದ್ದಾದ ನನ್ನ ಮುಖ, ರೋಗದಿಂದ ಕ್ಷೀಣವಾದ ದೇಹ, ಯಕ್ಷಗಾನ ಬಯಲಾಟದ ಕುಣಿತದ ಅನುಕರಣೆಯ ಚಾಪಲ್ಯ–ಇವುಗಳಿಂದಾಗಿ ನನ್ನಲ್ಲಿ ಏನೊ ಕಲೆ ಇದೆ ಎಂದು ನನಗೆ ಸ್ತ್ರೀ ಪಾತ್ರವನ್ನು ಕೊಡುತ್ತಿದ್ದರು. ನಾನು ಅಭಿನಯಿಸಿದ ನಾಟಕಗಳಿಗೆ ಇಟ್ಟ ಬಹುಮಾನ ನನ್ನ ಪಾಲಿಗೆ ಮೀಸಲೆನ್ನುವಂತಿತ್ತು !" ಅಂದಾಗ ನಂಬುವುದು ಕಷ್ಟ ಅನ್ನಿಸುತ್ತಿತ್ತು.

ಅನಂತರ "ಅದನ್ನೇಕೆ ಬಿಟ್ಟಿರಿ?" ಎಂಬ ಪ್ರಶ್ನೆ ಸಹಜವಾಗಿ ಮೂಡಿತು.

ನಾನು ಯಾವುದನ್ನೂ ಹಿಡಿದವನಲ್ಲ, ಬಿಟ್ಟವನಲ್ಲ. ನನ್ನಲ್ಲಿದ್ದ ಆ ಆಧ್ಯಾತ್ಮದ ಹುಚ್ಚು ನನ್ನ ಜೀವನ ತರಂಗಿಣಿಯನ್ನು ಭಗೀರಥನು ಗಂಗೆಯನ್ನು ಕರೆದೊಯ್ಯುವಂತೆ ಕರೆದೊಯ್ಯುತ್ತಿತ್ತು. ಆ ನಾಟಕ ಕಂಪನಿಯಲ್ಲಿ ದ್ದಾಗಲೇ ಶ್ರೀ ಪಳನೀ ಸ್ವಾಮಿಾಜಿಯವರ ದರ್ಶನವಾಯಿತು. ಅವರು ವ್ಯಾಯಾಮ ಪಟುಗಳು–ತಮಿಳರು. ಅವರ ಸಹವಾಸದಿಂದ ನಾನು ದೇಹದಾರ್ಢ್ಯವನ್ನು ಪಡೆದೆ. ಅವರು ಹಠಯೋಗಿಗಳು. ಅವರಲ್ಲಿ ನಾನು ಪ್ರಾಣಾಯಾಮ, ಯೋಗಾಸನ, ಸೂರ್ಯನಮಸ್ಕಾರಗಳ ಶಾಸ್ತ್ರೀಯ ಶಿಕ್ಷಣವನ್ನು ಪಡೆದೆ. ಆದರೆ ಅಲ್ಲಿ ನನಗೆ ದೇವರು ಸಿಗಲಿಲ್ಲ. ಕೆಲವು ವರ್ಷಗಳು ಕಾದು ಬೇಸತ್ತು ಮುಂದೆ ಸಾಗಿದೆ.'

"ಮುಂದೆ ?"

"ಮುಂದೇನು ಮೂರ್ಖ ಅನ್ನಿಕೊಳ್ಳುತ್ತಾ ಸಂನ್ಯಾಸಿಗಳನ್ನು, ಪಂಡಿತರನ್ನು ಪರಮಾತ್ಮ, ಪರಮಾರ್ಥ–ಇತ್ಯಾದಿಯಾಗಿ ಅಧಿಕಾರ ವಾಣಿಯಿಂದ ಗಂಟಲು ಗಟ್ಟಿಲೆ ಭಾಷಣ ಬಿಗಿಯುವ, ಸಿದ್ಧಾಂತ ಮಾಡುವವರನ್ನು ನೇರವಾಗಿ 'ನೀವು ನಿಮ್ಮ ಮಾತನ್ನು ನಂಬಿದ್ದೀರಾ? ನೀವು ಪರಬ್ರಹ್ಮ ವಸ್ತುವನ್ನು ಸಾಕ್ಷಾತ್ಕರಿಸಿ ಕೊಂಡಿರುವಿರಾ?' ಎಂದು ಪ್ರಶ್ನೆ ಕೇಳಿ ವಾಚಾಮ ಗೋಚರವಾಗಿ ಬೈಸಿಕೊಂಡು ಆಶ್ರಮದಿಂದ ಹೊರಬೀಳುತ್ತಿದ್ದೆ.

ಆಗ ಒಮ್ಮೆ ಪೂನಾದಲ್ಲಿ ನಿತ್ಯಾನಂದ ಸ್ವಾಮಿಗಳ ಪೂಜ್ಯ ಶಿವಾನಂದ ಸ್ವಾಮಿಗಳು ದೊರೆತರು. ಅವರೊಂದಿಗೆ ಯಾತ್ರೆ ಯೋಗಸಾಧನೆ. ಅವರಿಂದಲೇ ಈ ರಾಷ್ಟ್ರಭಕ್ತಿಯ ಶಿಕ್ಷಣ ದೊರೆತದ್ದು. ಅವರು ಉಜ್ವಲ ರಾಷ್ಟ್ರ ಭಕ್ತಿಯನ್ನು ಹೊಂದಿದ್ದ ಧಾರ್ಮಿಕ ಪುರುಷರು."

"ಅವರು ನಿಮಗೆ ದೇವರನ್ನು ತೋರಿಸಿದರೆ ?"

"ಇಲ್ಲ. ಅವರು ನನ್ನನ್ನು ಒಬ್ಬ ಕ್ರಾಂತಿ ಪುರುಷನ ಬಳಿಗೆ ಕಳಿಸಿದರು"

"ಯಾರ ಬಳಿಗೆ ?"

"ಕ್ರಾಂತಿ ಪುರುಷನ ಬಳಿಗೆ. ದೇಶದ ಸ್ವಾತಂತ್ರ್ಯವನ್ನು ಬಲದಿಂದ ಗಳಿಸಲು ಸಾಧ್ಯ ಎಂದು ನಂಬಿಕೆಯನ್ನಿಟ್ಟಿದ್ದ ಉಜ್ವಲ ರಾಷ್ಟ್ರ ಪ್ರೇಮಿ–ರಣಪಂಡಿತ ಶ್ರೀರಾಜರತ್ನ ಪ್ರೊಫೆಸರ್ ಮಾಣಿಕ್ಯರಾಯರು. ಅವರು ಮಹಾಯೋಧರ ಪಡೆಯನ್ನು ಕಟ್ಟುವ ಕನಸು ಕಾಣುತ್ತಿದ್ದವರು"

"ಅವರ ಬಳಿ ಏನು ಕಲಿತಿರಿ ?"

"ಅವರ ಬಳಿ ಲಾಠಿ, ತಲವಾರ್, ಕುಸ್ತಿ ಇತ್ಯಾದಿ ಪೌರ್ವಾತ್ಯ ಪಾಶ್ಚಾತ್ಯ ಅಂಗಸಾಧನೆಯ ವಿಧಿ ವಿಧಾನವನ್ನು ಕಲಿತೆ. ದೈಹಿಕ ಶಕ್ತಿಯನ್ನು ಹೆಚ್ಚಿಸಿ ಕೊಂಡೆ."

"ಅನಂತರ ನಿಮ್ಮ ಹಂಬಲವೇನಾಯಿತು ?"

"ಏನೆ ? ಅಲ್ಲಿಂದ ವ್ಯಾಯಾಮ ಶಿಕ್ಷಣವನ್ನು ಸಾಂಗವಾಗಿ ಪಡೆದರೂ ತೃಪ್ತಿ ಇಲ್ಲದೆ ಒಬ್ಬ ಜೈನಮುನಿ ಕಡೆ ಹೋದೆ. ಅವರ ಹೆಸರು ಬಾಬಾ ಲಕ್ಷ್ಮಣದಾಸ ಸಾಧು. ಅವರು ಯೋಗಿಗಳು. ಯೋಗಾಸನದ ಶಿಕ್ಷಣ ಅವರಿಂದಾಯಿತು. ಅವರೇ ಋಷಿಪ್ರಣೀತವಾದ, ಲೋಕೋಪಕಾರಕವಾದ ಆಯುರ್ವೇದ ಶಿಕ್ಷಣವನ್ನೂ ಇತ್ತರು."

"ನಿಮ್ಮ ಹಂಬಲವೇನಾಯಿತು ?"

"ದೇವರನ್ನು ಕಾಣುವ ಹಂಬಲವೆ ? – ಅದು ನನ್ನನ್ನು ಅನೇಕ ಸಾಧುಸಂತರ ಬಳಿ ಕರೆದೊಯ್ಯಿತು. ಆದ್ದರಿಂದ ನಾನು ಅನೇಕ ಸತ್ಪುರುಷರ ಸಹವಾಸ ಮಾಡಲು, ಅವರಿಂದ ಸುಶಿಕ್ಷಿತನಾಗಲು ಕಾರಣವಾಯಿತು."

"ಯಾರ್ಯಾರನ್ನು ಕಂಡಿರಿ ? ಯಾರ ಬಳಿ ಇದ್ದಿರಿ ?"

"ಅದೊಂದು ದೊಡ್ಡ ಕತೆ – ಶಿವಾನಂದ ಸರಸ್ವತೀ ಎಂಬುವರನ್ನು ಹೃಷೀಕೇಶದಲ್ಲಿ ಕಂಡಿದ್ದೆ. ಅಂತೆಯೇ ಜೋನಾವಲಕ ಕುವಲಯಾನಂದ ಸ್ವಾಮಿಗಳ ಸತ್ಸಂಗಲಾಭ ಕೆಲವುದಿನವಾಯಿತು. ಮಥುರಾದ ಶ್ರೀ ಭಗವಾನ್ ಜೀಯವರನ್ನು ಕಂಡಿದ್ದೆ. ಪುರಿಯ ಶ್ರೀ ಓಂಕಾರನಾಥಜೀಯವರನ್ನೂ ಭೇಟಿಮಾಡಿದ್ದೆ. ಹೀಗೇ ಯೋಗಾನಂದಜೀ ಮುಂತಾದ ಅನೇಕ ಸತ್ಪುರುಷರನ್ನು ಕಂಡಿದ್ದೇನೆ. ಅವರಿಂದ ಸಾಕಷ್ಟು ಕಲಿತಿದ್ದೇನೆ."

"ಎಲ್ಲೆಲ್ಲೋ ಹೀಗೆ ಮನೆ ಬಿಟ್ಟು ಅಲೆಯುತ್ತಿದ್ದ ನೀವು ಕರ್ಣಾಟಕಕ್ಕೆ ಬಂದದ್ದು ನಮ್ಮ ಪುಣ್ಯ...."

"ಪುಣ್ಯವೇ ? ಅದಕ್ಕೆ ಕಾರಣ ನನ್ನಲ್ಲಿದ್ದ ದೇಶಪ್ರೇಮದ ಕಿಡಿಯನ್ನು ಹೊತ್ತಿಸಿ ಉರಿಯುವಂತೆ ಮಾಡಿದ ಶ್ರೀಮತ್ ಸ್ವಾಮೀ ಶಿವಾನಂದ ತೀರ್ಥರು ಮತ್ತು ನೈಷ್ಠಿಕ ಬಾಲಬ್ರಹ್ಮಚಾರಿ ಪ್ರೊಫೆಸರ್ ಮಾಣಿಕ್ಯ ರಾಯರು."

"ನಮ್ಮ ನಾಡು ಅವರಿಗೂ ಚಿರಋಣಿ ಅನ್ನಿ....ಒಟ್ಟನಲ್ಲಿ ನೀವು ಬಂದು ಇಲ್ಲಿ ನೆಲಸಿದಿರಿ ?...."

"ಇಲ್ಲ. ಇಲ್ಲಿಗೆ ಬಂದದ್ದು ಒಂದು ಕತೆ. ಕರ್ಣಾಟಕಕ್ಕೆ ಬಂದದ್ದು ಮೂವತ್ತೈದನೆ ಇಸ್ವಿಯ ಅಂದಾಜಿ

ನಲ್ಲಿ. ಇಲ್ಲಿ ಯೋಗಾಭ್ಯಾಸ ಪ್ರದರ್ಶನ ಮಾಡುತ್ತಾ ದುರ್ಬಲ ದೇಹ ಮನಗಳುಳ್ಳ ಯುವಕರಲ್ಲಿ ದೇಹಧಾರ್ಢ್ಯವನ್ನು ಹೊಂದಲು ಮನೋಬಲವನ್ನು ರೂಢಿಸಿಕೊಳ್ಳಲು ಅತ್ಯಗತ್ಯವಾದ ವ್ಯಾಯಾಮ, ಯೋಗಸಾಧನೆ ಇವುಗಳ ಬಗ್ಗೆ ಪ್ರಚಾರ ಮಾಡಿದೆ. ಏಳು ವರ್ಷಕಾಲ ಹೀಗೆ ಕಳೆದು ಆನಂತರ ಈ ಮಲ್ಲಾಡಿಹಳ್ಳಿಗೆ–ಅಂದರೆ ಮಲ್ಲರು ಆಡಿದ ಹಳ್ಳಿಗೆ ಬಂದು ನೆಲೆಸಿದೆ."

"ಒಳ್ಳೆಯದಾಯಿತು. ನೀವು ಇಲ್ಲಿ ನೆಲಸಿ ಅದೆಷ್ಟು ಕೆಲಸ ಮಾಡಿದ್ದೀರಿ. "ಕ್ರಿಯಾಶಕ್ತಿಃ ಸತ್ತ್ವೇ ಭವತಿ ನೋಪಕರಣೇ" ಎಂಬ ಮಾತನ್ನು ಪ್ರತ್ಯಕ್ಷ ತೋರಿಸಿದ್ದೀರಿ. ನಿಮ್ಮ ಆಶ್ರಮದ ಸೇವಾರಂಗಗಳ ಪರಿಚಯ ಕಿಂಚಿತ್ತಾದರೂ ಸಾಕು, ನೀವೊಬ್ಬ ಪವಾಡ ಪುರುಷರೆಂದು ಭಾವಿಸಬೇಕಾಗುತ್ತದೆ....."

ಸ್ವಾಮಿಗಳಿಗೆ ಈ ಮಾತು ಬೇಸರಿಕೆಯನ್ನುಂಟು ಮಾಡಿದಂತೆ ಅವರ ಮುಖಭಾವ ತೋರುತ್ತಿತ್ತು.

"ಹೊತ್ತಾಯಿತು. ಆಶ್ರಮಕ್ಕೆ ಹೋಗೋಣ, ಗಾಡಿ ಹತ್ತಿ" ಅಂದರು. ಅವರೊಡನೆ ನಡೆಯಬೇಕೆಂಬ ಹಂಬಲ. ಅವರು ಗಾಡಿಯಲ್ಲಿ ಬರುವಾಗಲೂ ಬಂದಿರಲಿಲ್ಲ. ಹೋಗುವಾಗಲಾದರೂ ಬರುವರೆ ಅಂದರೆ ಉಹ್ಞೂಂ. ಚಿಗುರಿಯ ಮರಿಯಂತೆ ನಾಗಾಲೋಟ ಸ್ವಾಮಿಗಳದ್ದು. ಅವರನ್ನು ನಡಗೆಯಲ್ಲೇನು, ಯಾವ ರಂಗದಲ್ಲೂ ನಾವು ಸೋಲಿಸುವಂತಿಲ್ಲ.

ಈಗ 85 ವರ್ಷದ ಸ್ವಾಮಿಗಳು ದೀನದಲಿತರ ಸೇವೆಗಾಗಿ, ನಾಡು ನುಡಿಯ ಏಳಿಗೆಗಾಗಿ ಮಾಡಿರುವ ವ್ಯವಸ್ಥೆ, ಅದರಲ್ಲಿನ ಅಚ್ಚುಕಟ್ಟುತನ, ಅಲ್ಲಿನ ನಿಸ್ಸ್ವಾರ್ಥ ನಿಷ್ಕಳಂಕ ಪವಿತ್ರ ವಾತಾವರಣ. ಒಂದೊಂದನ್ನೂ ಈಗ ನಾನು ಮೆಲುಕು ಹಾಕಿದಾಗ ಸ್ವಾಮಿಗಳ ಬಗ್ಗೆ ಭಕ್ತಿ ಉಕ್ಕಿ ಬರುತ್ತದೆ.

ಅವರು ಮಲ್ಲರು. ಮಾತಿನ ಮಲ್ಲರಲ್ಲ. ಅವರು ಯೋಗಿಗಳು, ಢೋಂಗಿಗಳಲ್ಲ. ಅವರು ಸಾಧಕರು–ಪವಾಡವನ್ನು ತೋರಿಸುವ ಚಾಪಲ್ಯ ಅವರಿಗಿಲ್ಲ. ಅವರು ಕಾರ್ಯದಕ್ಷರು–ಆದರೆ ಕಿಂಚಿತ್ತೂ ಅಹಂಕಾರವಿಲ್ಲ. ಅವರು ದೊಡ್ಡ ವಿದ್ವಾಂಸರು. ವೇದ, ಉಪನಿಷತ್ತು, ಆಯುರ್ವೇದ, ಯೋಗ ಮುಂತಾದ ಹಲವು ಹತ್ತು ವಿಷಯಗಳಲ್ಲಿ ಆಳವಾದ ಅಭ್ಯಾಸವನ್ನು ಮಾಡಿರುವ, ಪ್ರಯೋಗ ಪರೀಕ್ಷೆಗಳಿಂದ ತಥ್ಯದ ನೆಲೆಯನ್ನು ಕಂಡುಕೊಂಡಿರುವ ಜ್ಞಾನಿಗಳು. ಆದರೆ ಹಸುಳೆಯ ಮುಗ್ಧತೆಯನ್ನು ಮೆರೆಯುವ ಸಹಜ ವಿನಯಸಂಪನ್ನರು, ಒಳ್ಳೆಯ ಬರಹಗಾರರು. ಕನ್ನಡ ಭಾಷೆಯಲ್ಲಿ ಗಹನ ಗಂಭೀರವಾದ, ಶಾಸ್ತ್ರೀಯವಾದ ಮೈಮನಗಳನ್ನು ಸಂವರ್ಧಿಸಲು ಅತ್ಯಗತ್ಯವಾದ ವಿಷಯಗಳನ್ನು ಕುರಿತು ಗ್ರಂಥರಚನೆ ಮಾಡಿ ಕನ್ನಡ ಸಾಮರ್ಥ್ಯವನ್ನು ತೋರಿಸಿರುವ ಉದ್ದಾಮ ಬರಹಗಾರರು. ಆದರೆ ಸಂಕೋಚ ಸ್ವಭಾವದ ಸರಳ ವ್ಯಕ್ತಿ. ಕೀರ್ತಿಶನಿಯಿಂದ ದೂರವಾಗಿರುವವರು. ಮನರಂಜಕವೂ, ಬೋಧಪ್ರದವೂ ಆದ ಅರ್ಧಶತಕದಷ್ಟು ಹೊತ್ತಿಗೆಗಳನ್ನು ಹೊರತಂದು ಬಾಳಿಗೆ ಬೆಳಕನ್ನೂ ಮನಸ್ಸಿಗೆ ಆನಂದವನ್ನೂ ಕೊಟ್ಟವರು. ಇವರು ಹುಟ್ಟಿದ್ದು ಯುಗಾದಿಯಂತೆ. ಯುಗಪುರುಷರಾಗಿದ್ದಾರೆ. ಜೀವನದಲ್ಲಿ ಬೇವನ್ನೂ ಬೆಲ್ಲವನ್ನೂ ಮೆದ್ದಿದ್ದಾರೆ. ಬೇವಿನ ಕಹಿಯು ಇಂದಿನ ಜನರ–ಯುವಜನರ ಜೀವನದಲ್ಲಿ ಸುತರಾಂ ಇಲ್ಲದೇ ಹೋಗಲಿ ಎಂಬ ಹಂಬಲದಿಂದ ವ್ಯಾಯಾಮದ ಮಹತ್ತ್ವವನ್ನೂ ಯೋಗದ ಹಿರಿಮೆ ಗರಿಮೆಗಳನ್ನು ಸಾಧಿಸಿ ತೋರಿಸಿರುವ ಜೀವನ್ಮೂರ್ತಿಗಳಾಗಿದ್ದಾರೆ. ಬೆಲ್ಲದ ಸವಿಯನ್ನು ಬಾಳಿನಲ್ಲಿ ಹೆಚ್ಚಿಸುವ ಸಾಧನೆಯಲ್ಲಿ ತೊಡಗಿದ್ದಾರೆ. "ಸಂತೋಷಂ ಜನಯೇತ್ ಪ್ರಾಜ್ಞಃ ತದೇವ ಈಶ್ವರ ಪೂಜನಂ" ಎಂಬುದನ್ನು ಅಕ್ಷರಶಃ ಪಾಲಿಸಿಕೊಂಡು ಬಂದಿದ್ದಾರೆ.

ಇವರ ಮೇಲೂ ದೈವಪ್ರೇರಣೆಯಿಂದ ಅನೇಕ ಆಕ್ರಮಣಗಳು ನಡೆದಿವೆಯಂತೆ. ಅನೇಕ ಸಲ ವಿಷ ಪ್ರಯೋಗವಾಗಿದೆಯಂತೆ. ಅಸೂಯೆಯ ಕಿಚ್ಚಿಗೆ ಪರರಲ್ಲಿರುವ ಸದ್ಗುಣಗಳು ಕಾರಣವಾಗುವುದಲ್ಲ ! ಇದೊಂದು ದೈವೀ ವಿಚಿತ್ರ ! ಆದರೆ ಬಾಲ್ಯದ ರೋಗಿ ತಾರುಣ್ಯದ ಅಂಗಸಾಧನೆಯಿಂದ ವಾರ್ಧಕ್ಯದಲ್ಲಿ ಎಂಥ ವಜ್ರಾಂಗನಾಗಿರುವನೆಂಬುದನ್ನು ಜಗತ್ತಿಗೆ ತೋರಿಸಲು ದೈವ ಹಾಗೆ ಎದುರಾಳಿಗಳನ್ನು ಪ್ರೇರೇಪಿಸಿರಬೇಕು! ಜಗತ್ತಿನ ಕಲ್ಯಾಣಕ್ಕಾಗಿ ಜೀವನವನ್ನು ಮುಡುಪಾಗಿಟ್ಟು ರಾಷ್ಟ್ರ ನಿಷ್ಠೆಯನ್ನು ಸೇವಾರಂಗದಲ್ಲಿ ತೋರುತ್ತಿರುವ ಈ "ತಿರುಕನ ಆತ್ಮ

ಬಲವೂ, ದೇಹಬಲವೂ ಈ ಕ್ಷುಲ್ಲಕ ಯತ್ನಗಳಿಂದ ಕುಗ್ಗುವುದಿಲ್ಲವೆಂದು ತೋರಿಸಿಕೊಟ್ಟಿದೆ, ಈ ಜಗತ್ತನ್ನು ನಡೆಸುತ್ತಿರುವ ಆ ಕರುಣಾಶಕ್ತಿ.

ಸ್ವಾಮಿಗಳವರು ಅಪೇಕ್ಷೆ ಪಟ್ಟಿದ್ದರೆ ಇಂದು ಅವರು ಪವಾಡ ಪುರುಷರೆನ್ನಿಸಿಕೊಂಡು ಐಶ್ವರ್ಯದಲ್ಲಿ ಮೆರೆಯಬಹುದಿತ್ತು. ಹಿಡಿಹಿಟ್ಟು–ಸೊಪ್ಪುತಿಂದು ಬಾಳಬೇಕಾಗಿರಲಿಲ್ಲ. ಆದರೆ ಆ ಬಾಳಿನ ಗುರಿಯೇ ಬೇರೆ. ನನಗೆ ರಾಜ್ಯ ಬೇಕಿಲ್ಲ–ಸ್ವರ್ಗದಾಸೆ ಇಲ್ಲ. ಮುಕ್ತಿಯೂ ಬೇಕಿಲ್ಲ. ಕಣ್ಣೀರಿನಲ್ಲಿ ಕೈತೊಳೆಯುತ್ತಿರುವ ದುಃಖಸಂತಪ್ತ ಜೀವಿಗಳ ಕಣ್ಣೀರೊರೆಸುವ ಶಕ್ತಿಯನ್ನು ಗಳಿಸಿ ಉಳಿಸಿಕೊಂಡರೆ ಸಾಕೆಂದು ಕಳಕಳಿಹೊಂದಿರುವ ಚೇತನ ಅದು. ಉದಾರ ಚೇತನ. ವಸುಧೆಯನ್ನೇ ಕುಟುಂಬವೆಂದು ಭಾವಿಸಿರುವ ಉದಾರ ಚರಿತವದು.

ಅದು ತನ್ನ ಆ ಆಧ್ಯಾತ್ಮ ಜ್ಯೋತಿಯನ್ನು ಬೆಳಗಿಸುತ್ತಾ ನಮ್ಮೊಡನೆ ಚಿರಕಾಲ ಬಾಳಲಿ ಎಂದು ಆ ಜಗನ್ನಿಯಾಮಕನಲ್ಲಿ ಮೊರೆ ಇಡುವುದು ಅವರಿಗಿಂತಲೂ ಹೆಚ್ಚಾಗಿ ನಮ್ಮ ಸ್ವಾರ್ಥದಿಂದ. ಅವರಿಗೆ ನಮ್ಮ ಹರಕೆ ಬೇಕಿಲ್ಲ. ಆದರೆ ಅವರ ರಕ್ಷೆ ನಮಗಿರಬೇಕಾಗಿದೆ.

ಇಂದಿನ ಸ್ವಾರ್ಥ ಕಲುಷಿತ ಕಗ್ಗತ್ತಲಲ್ಲಿ ನಿಸ್ವಾರ್ಥದ ಕಿಡಿ ಬೆಳಗುತ್ತಿದೆ. ಅದು ಪ್ರಜ್ವಲಿಸಿ ದಾರಿಗೆ ಬೆಳಕನ್ನಿತ್ತು ಬಾಳನ್ನು ಬೆಳಗುವಂತಾಗಲಿ.

ಈ ಮಠವು ಈ ಪ್ರಾಂತ್ಯಕ್ಕೆ ಬೆಳಕು ಮತ್ತು ಭರವಸೆಯನ್ನು ನೀಡುವಂತಿದೆ. ರಾಷ್ಟ್ರದ ಮೂರು ಶತ್ರುಗಳಲ್ಲಿ ಅಜ್ಞಾನ ಮತ್ತು ರೋಗ ಎರಡನ್ನು ನಿವಾರಿಸಲು ಮಹತ್ತಾದ ಸೇವೆ ಇಲ್ಲಿ ನಡೆಯುತ್ತಿದೆ.

—ಎಂ. ಕೆ. ವೆಂಕಟೇಶನ್ ಡಿ. ಸಿ. ಚಿತ್ರದುರ್ಗ

ಬಿ. ಎಚ್. ಶ್ರೀಧರ

"ತತೋಯುದ್ಧಾಯ ಯುಜ್ಯಸ್ವ"

ಸಂನ್ಯಾಸದಲ್ಲಿರುವಷ್ಟು ಸಂಸಾರದ ಜವಾಬುದಾರಿ, ಕುಟುಂಬಭರಣದ ಹೊಣೆ, ಸಂಸಾರದಲ್ಲಿಲ್ಲ. ಜಗತ್ತೇ ಸಂನ್ಯಾಸಿಯ ಸಂಸಾರ; ನಾಲ್ಕಾರು ಅಥವಾ ಹತ್ತಿಪ್ಪತ್ತು ಜನರಲ್ಲ. ಅವನದು ನಿವೃತ್ತಿಧರ್ಮ, ನಿಷ್ಕಾಮಕರ್ಮ ಅಥವಾ ಲೋಕಸಂಗ್ರಹ. ಅವನು ಜೀವನ್ಮುಕ್ತ ಅಥವಾ ಸ್ವಮುಕ್ತ್ಯಾಕಾಂಕ್ಷೆಯು ಅವನಲ್ಲಿ ಗೂಢ ಮತ್ತು ಲೋಕಕ್ಷೇಮವನ್ನು ಸಾಧನವನ್ನಾಗಿ ಉಳ್ಳದ್ದು. ಈಶನ ಸಂಕಲ್ಪಕ್ಕೆ ಭವ್ಯ ಫಲಗಳೆಲ್ಲವನ್ನೂ ಅರ್ಪಿಸಿ ಅಹಂಕಾರವನ್ನು ನಿರ್ಮೂಲನಗೊಳಿಸುತ್ತ ಹೋಗುವವನಾಗಿರಬಹುದು ಸಂನ್ಯಾಸವ್ರತಿ.

ಅಕರ್ತೃತ್ವಪ್ರಜ್ಞೆಯನ್ನು ಆಧರಿಸಿ ಮಾಡುವ ಕರ್ಮ ಅಕರ್ಮ—ಎಂಬುದು ಭಾರತೀಯ ಸದಾಚಾರ ಪರಂಪರೆಯ ನಂಬಿಗೆ. ಅಕರ್ಮಫಲಗಳು ಲೋಕಹಿತಸಾಧಕಗಳು. ಸಾಹಂಕಾರ ಸತ್ಕರ್ಮವು ಒಮ್ಮೆ ಲೋಕ ಪ್ರಿಯವೆನ್ನಿಸಿದರೂ ಲೋಕಹಿತಕರವಾಗಲಾರದು. ಆದುದರಿಂದ ಸರ್ವೋದಯವ್ರತಿಗಳು ದೇಹಾದಿ ವೈಯಕ್ತಿಕ ಅಭಿಮಾನಗಳನ್ನು ಹುಲ್ಲುಕಸಕ್ಕಿಂತ ಕಡಮೆಯೆಂದು ಭಾವಿಸಿ ಅಂತರ್ವಾಣಿಯ ಪ್ರೇರಣೆಯಂತೆ ನಡೆಯುತ್ತಾರೆ. ಇದು ವ್ಯಾಕರಣ ಹಾಗೂ ತರ್ಕಪ್ರಜ್ಞೆಗಳ ಕಕ್ಷೆಯಿಂದ ಹೊರಗೆಹೋದ ಆತ್ಮಾರ್ಥಿಕ ವಿಚಾರ. ಇಂಥ ಸ್ಥಿರವಿಚಾರವು ಆತ್ಮ; ಇದಕ್ಕಾಗಿ ಪೃಥಿವಿಯನ್ನಾದರೂ ತ್ಯಜಿಸಬೇಕು ! ಏಕೆಂದರೆ, ಪೃಥಿವಿ ಕೂಡ ಇಷ್ಟು ದೊಡ್ಡದಲ್ಲ, ವ್ಯಾಪಕ ವಾದುದಲ್ಲ !

ಮಲ್ಲಾರವೊಂದು ಗೊಂಚಲು, ಸರಮಾಲೆ, ಬಲೆ, ಓತಪ್ರೋತ ಸಾತತ್ಯವುಳ್ಳ ಉಂಗುರ ಅಥವಾ ಬಳೆಗಳ ಮಾಲೆ. ಇದು web of life ಜೀವನದ ಸಾಪೇಕ್ಷ ಸಮನ್ವಯ. ಸಮನ್ವಯ ಯೋಜನೆಗಳು ಧರ್ಮಗಳು. ಅನಾಥ ಸೇವಾಶ್ರಮವನ್ನು ಸನಾಥೀಕರಿಸಿದ ಚೇತನೆಯ ಶುದ್ಧತೆಯೇ ಅದರ ಶಕ್ತಿ. ಷಟ್ಕಲ್ಮಷಮುಕ್ತವಾದ ಜೀವವು ಶುದ್ಧ. ಶುದ್ಧಾತ್ಮನು "ಮಲ್ಲಾರೀ" (ರಡಯೋರಭೇದಃ). ಅಂಥ ಹೆಸರಿನ ಹಳ್ಳಿಗೆ ಶ್ರೀ ರಾಘವೇಂದ್ರಸ್ವಾಮಿಗಳು ಆತ್ಮ. ರಘುವಿಗೆ ಗುರುತರ ಕಾರ್ಯಗಳ ಸಾಧನೆ ಲಘುತರ, ಲೀಲಾಮಾತ್ರ ಯತ್ನಸಾಧ್ಯ. ವಿದ್ಯಾಶಾಲೆ, ವೈದ್ಯ ಶಾಲೆ, ಯೋಗಶಾಲೆ, ವ್ಯಾಯಾಮಶಾಲೆ, ಮುದ್ರಣಶಾಲೆ, ಶಿಶುಶಾಲೆ, ಅನ್ನಶಾಲೆ, ವಾಸಶಾಲೆಗಳನ್ನು ನಿರ್ಮಿಸಿ ಅವುಗಳ ಮೂಲಕ ದೀನೋದ್ಧಾರವೆಂಬ ಅಭಿವೃದ್ಧಿಯನ್ನು, ಪ್ರಗತಿಯನ್ನು, ಜಯವನ್ನು, ಸಿದ್ಧಿಯನ್ನು ಅಥವಾ ರಾಷ್ಟ್ರೋತ್ಥಾನವನ್ನು ಸಾಧಿಸುತ್ತಿರುವುದು ಮಹಾಮಲ್ಲತನ.

ಸಮ್ಯಕ್ (ಚೆನ್ನಾಗಿ), ನ್ಯಾಸ (ವ್ಯವಸ್ಥಾಪಿಸುವುದು) ಸಂನ್ಯಾಸ. ಅವ್ಯವಸ್ಥಿತವಾದುವುಗಳನ್ನು ಸುವ್ಯವಸ್ಥೆಗೊಳಪಡಿಸುವುದು ಸಂನ್ಯಾಸಯೋಗ ; ಯುಕ್ತಯೋಜನೆಯು ಯೋಗ. ಗಾಂಧಿಯವರು ಯೋಜನಾ ನಿಪುಣರಾದ ಯೋಗಿಗಳಾಗಿದ್ದರು. ಅವರ ಅನಂತರ ಅವರಂಥ ಲೋಕಜೀವನಯೋಜಕರು ದುರ್ಲಭರಾದರು. ಅಂಥ ಮರುಭೂಮಿಯಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳು ಚಿಲುಮೆಯ ಪ್ರದೇಶವೆನ್ನಿಸಿದರು. ಈ ನಾಯಕರ

ಅನುಯಾಯಿಗಳು, ಶಿಷ್ಯರು "ಶಿಷ್ಯಾದಿಚ್ಛೇತ್ ಪರಾಜಯಂ" ಎಂಬ ಅನುಭವವನ್ನು ಸ್ವಾಮಿಗಳಿಗೆ ಕೊಡಿಸದಿರರು.

ಮಲ್ಲಾಡಿಹಳ್ಳಿಯ ಸಕರ್ಮಕ ಜ್ಞಾನಪೀಠವು ಸಾಟೋಪಕೂಟಕಪಟಾಸ್ವತಗಳ ಜನ್ಮಭೂಮಿಯಾಗಿ ಬಪಲಾಯಿಸುತ್ತಿರುವ ಭಾರತವನ್ನು ಸಾಧುತ್ವಕ್ಕೆ ತಿರುಗಿಸುವಲ್ಲಿ ಸಮರ್ಥವಾದೀತೆಂಬುದೊಂದೇ ಪ್ರಾಮಾಣಿಕರ ಆಶಾಬಂಧು. ಶ್ರೀ ಅರವಿಂದಾಶ್ರಮವು iron curtain ಪ್ರಚ್ಛನ್ನವಾಗುತ್ತಿರುವ ಹಾಗೆ ತೋರುತ್ತಿದೆ. ಶ್ರೀ ರಾಮಕೃಷ್ಣ ಮಿಶನ್ನೂ ರಾಷ್ಟ್ರಜೀವನದ ಮಹೌಘಕ್ಕೆ ದಕ್ಷ ದಿಗ್ದರ್ಶಿಯಾಗಲಿಲ್ಲ. ಎಲೆಮರೆಯ ಕಾಯಿಗಳು ಕಡೆಯ ತನಕ ಎಲೆಮರೆಯಲ್ಲಿಯೇ ಉಳಿದಿರುವುದು ರಾಷ್ಟ್ರೀಯ ಚೈತನ್ಯವನ್ನು ಕಣ್ಣು ಕೋರೈಸುವಂತೆ (ಸಾರ್ವಜನಿಕವಾಗಿ ಪ್ರಜ್ವಲಿಸುವಂತೆ) ಮಾಡದು, ಉತ್ಥಾನದ ಪಾಂಚಜನ್ಯವನ್ನು ಘೋಷಿಸದು. ವಸುಧಾಧರಕಂದರಾಭಿ ಸರ್ಪಿಣಿಗಳಾದ ನಾಗಗಳನ್ನೂ ಎಚ್ಚರಿಸಬಲ್ಲ ಮಹಾಧ್ವನಿಯುಳ್ಳ ಕಾವ್ಯವೇ ಮಹಾಕಾವ್ಯ. ಮಹಾಭಾರತವು ಭಾರತವನ್ನು ಎಚ್ಚರಿಸಿದಂತೆ ಮಹಾಮಲ್ಲಪುರದ ಈ ತಿರುಕ ವಿಭೂತಿಯು ನಮ್ಮ ದೇಶದಲ್ಲಿ ಪುನಶ್ಚೇತನೆಯನ್ನು, ಪುನರ್ಜಾಗರವನ್ನು, ಧರ್ಮಾಭ್ಯುತ್ಥಾನವನ್ನು, ಅಧರ್ಮವಧೆಯನ್ನು ಪ್ರಣವಧನುವಿಗೆ ಜೋಡಿಸಿದ ಆತ್ಮಬಾಣದ ಮೂಲಕ ಸಾಧಿಸುವುದನ್ನು ನಾವು ಕಣ್ಣಾರೆ ಕಂಡೇವು. ಶ್ರೀ ಸತ್ಯಸಾಯಿ(ಸ್ವಾಮಿ)ಬಾಬರು moral re-armament ನೈತಿಕ ಪುನರುಜ್ಜೀವನಕ್ಕೆ ಯೋಜಿಸುವರೆಂದೊಮ್ಮೆ ಸುದ್ದಿಯೆದ್ದಿತ್ತು. ಅದಿನ್ನೂ ಸುದ್ದಿಯಾಗಿಯೇ ಉಳಿದಿದೆ. ಭಾರತಮಾತೆಯಾದ ಭಾರತೀದೇವಿಯು ವಿಭೂತಿ ಮತ್ ಸತ್ವಗಳ ಮೂಲಕ ದೇಶದ ಎಲ್ಲೆಡೆಗಳಲ್ಲಿಯೂ ಸಾಂಸ್ಕೃತಿಕ ಜಾಗರವನ್ನು ಮಾಡಲು ಯತ್ನಿಸುತ್ತಿರುವಂತೆ ತೋರುತ್ತದೆ. ಆದರಿನ್ನೂ ಅದು feeble voice ದುರ್ಬಲಸ್ವರವಾಗಿಯೇ ಉಳಿದಿದೆ ಎಂಬುದಕ್ಕೆ ಆಪತ್ಕಾಲ ಘೋಷಣೆಯು ಪ್ರಮಾಣ. ಮೋಷವೇಷಗಳ ದರ್ಶನ ರಾಜ್ಯದ ಪ್ರಾಣಸ್ಥಾನಗಳಲ್ಲಿ ಪದೇಪದೇ ಆಗುತ್ತಿರುವುದು ಅಶುಭಕಾಲದ ಲಕ್ಷಣ. ಅಧಿಕಾರ (ಶಕ್ತಿ) ಮತ್ತು ಅಶುಭ ದೃಷ್ಟಿಗಳ ಸಂಮಿಲನ ಕಡಮೆಯಾಗಲು ಜನರು ಶ್ರೀ ರಾಘವೇಂದ್ರಸ್ವಾಮಿಗಳಂಥ ವಿಭೂತಿಪುರುಷರ ಸರ್ವಾಧಿಕ ಪೂಜ್ಯತೆಯನ್ನು ಆಧರಿಸಿ ಆರು ಹಗೆಗಳ ಆಳುಗಳಾದ ಅವರಿವರ ದಾಕ್ಷಿಣ್ಯಕ್ಕೆ, ಪ್ರಚಾರಕ್ಕೆ, ಒತ್ತಾಯಕ್ಕೆ, ಪ್ರಭಾವಕ್ಕೆ, ಆಮಿಷದಾನಕ್ಕೆ, ವಾಗ್‌ಜಾಲಕ್ಕೆ ವಶವರ್ತಿಗಳಾಗುವ ಪತಂಗಬುದ್ಧಿಯನ್ನು ಬಿಡಬೇಕು. ಈ ಜ್ಞಾನ ಮೂಡದೆ ಮುಕ್ತಿಯಿಲ್ಲ, ಸ್ವಾತಂತ್ರ್ಯವಿಲ್ಲ, ಬಿಡುಗಡೆಯಿಲ್ಲ. ಈ ಜ್ಞಾನದ ಪ್ರಸಾರವೇ ನಿಜವಾದ ಜ್ಞಾನ ಪ್ರಸಾರ, ವಿದ್ಯಾಪ್ರಸಾರ. 'ಸಾ ವಿದ್ಯಾ ಯಾ ವಿಮುಕ್ತಯೇ' ಎಂಬುದಿಲ್ಲಿ ಮಾತ್ರ ಸಾರ್ಥಕ.

ಕೇವಲೀಕರಣವು ಕೈವಲ್ಯ ; ಅದೇ ನಿರ್ಮಲೀಕರಣ, ಶುದ್ಧೀಕರಣ. ಅಹಮಿಕಾಮುಕ್ತಿಯೇ ಮುಕ್ತಿ. ಷಡ್ವೈರಿಗಳು ಅಹಂಕಾರದ ಮಕ್ಕಳು. ಅವೇ ಮಲಗಳು. ಕಾಮಕ್ರೋಧಾದಿಗಳನ್ನು ಜಯಿಸದವರ ನೇತೃತ್ವಕ್ಕೆ ಬೆಲೆಕೊಡುವ ದುರ್ಬುದ್ಧಿಯೇ ಪಾಪ. ಅದರಿಂದಲೇ ವ್ಯವಹಾರಜೀವನ ಕಲಂಕಿತವೂ ರಾಷ್ಟ್ರಮಾರಕವೂ ಸಮಾಜ ಘಾತಕವೂ ಆಗುತ್ತದೆ. ವಿದ್ಯಾಸಂಸ್ಥೆಗಳಿಂದ ಇಂದು ಕೇವಲ "ರಾಶಿವರ್ಧನರು" ತಯಾರಾಗುತ್ತ ಬರಲು ಆಚಾರ್ಯ ನಿಯೋಜಕರ ಅನರ್ಹತೆಯೇ ಕಾರಣ. ಭೀಷ್ಮನು ಪಾಂಡವ–ಕೌರವರಿಗೆ ಧನುರ್ವಿದ್ಯೆ ಕಲಿಸಲು ದ್ರೋಣನಂತಹ ಅತ್ಯರ್ಹ ಆಚಾರ್ಯನನ್ನು ನಿಯಮಿಸಿದ್ದು ಉದಾಹರಣೆ. ಹಾಗಲ್ಲದೆ ಹಿಟ್ಟು, ಬೂದಿ, ಮಣ್ಣು ಎಲ್ಲ ಒಂದೇ ಎಂಬ ಬುದ್ಧಿಯುಳ್ಳ ಯೋಜಕರು ಇಂದಾಗುತ್ತಿರುವಂತಹ ರಾಷ್ಟ್ರಶಕ್ತಿಹ್ರಾಸಕ್ಕೆ ಕಾರಣರಾಗುತ್ತಾರೆ. ಅದರಿಂದಲೇ ಕಾಳಿದಾಸನು "ಪೂಜ್ಯಪೂಜಾವ್ಯತಿಕ್ರಮ" ವನ್ನು ಮಹಾಪರಾಧನೆಂದಿದ್ದಾನೆ. ಈಗ ಹೆಚ್ಚುತ್ತಿರುವುದು ಈ ವ್ಯತಿಕ್ರಮ. ಇದು ಶೋಚನೀಯ.

ಶೋಚ್ಯತೆ ಹೆಚ್ಚಾದ ಕಾಲಾವಧಿಯಲ್ಲಿ ಶೋಚಕರು ಶೋಚನ ಪರಿಹಾರಶೋಧವೂ ಹೆಚ್ಚಾಗುವುದು ಸಹಜ. ಆದರೆ ನಮ್ಮಲ್ಲಿಂದು ಅಷ್ಟು ಜಾಗರ ಕೂಡ ಉಂಟಾಗಿಲ್ಲ. ಶೋಚ್ಯತೆಯನ್ನೇ ಶ್ಲಾಘ್ಯತೆ ಎಂಬ ಅಯಥಾರ್ಥಜ್ಞಾನದ ಮಬ್ಬನ್ನು ಹಸರಿಸುತ್ತಿರುವ ಧಾವಕ–ಸೌಚಿಕಬ್ರಹ್ಮರ ಮಕ್ಕಳ ಮುಂದಾಳ್ತನ ಹರಡುತ್ತಿದೆ.

ಮಲ್ಲಾಡಿಹಳ್ಳಿಯ ಮಹಾಪುರುಷರಿಗಿದು ಅರಿಯದ ಸಂಗತಿಯಲ್ಲ. ಅವರ ಅಂತಃಶಕ್ತಿ—ಅಂತರ್‌ದೃಷ್ಟಿ, ಅಂತಃ ಸಂಕಲ್ಪಗಳ ಲೋಕಾನುಗ್ರಹ ಕಾರಕತೆ "ನಿಧಾನ ಸೌಧ" ಸ್ಥಿತಿಯಲ್ಲಿನ್ನು ಸಾಗದು. ಕಾಲದ ಲೋಕಭಕ್ಷಕತೆಗೀಗ ತಡೆಹಾಕದೆ ಗತ್ಯಂತರವಿಲ್ಲ. ಆದುದರಿಂದ ಇಡೀ ಭಾರತವನ್ನು ವಿಜ್ಞಾನಾಭಾಸದ ಮಂಕುಬೂದಿಯಿಂದ, ವ್ಯಾಪಾರದ ದ್ರೋಹಚಿಂತನದಿಂದ, ಅಧಿಕಾರ ಮದ್ಯಮತ್ತತೆಯಿಂದ ಮುಕ್ತಗೊಳಿಸಲು ಶ್ರೀ ಸ್ವಾಮಿಗಳ ಮೇಲಿನ ಶ್ರದ್ಧಾಭಕ್ತಿಗಳು ನಮಗೆ ಚೇತನೆಯನ್ನು ನೀಡಬೇಕು. ಅರ್ಥಕ್ರಿಯಾಕಾರಿತವಿಲ್ಲದ ವಾಗ್‌ವರ್ಷಣರೂಪದ ಪೂಜ್ಯಪೂಜೆ ಕೇವಲ ಆಡಂಬರವಲ್ಲವೇ ? ಆದುದರಿಂದ ರಾಘವೇಂದ್ರರ ಬುದ್ಧಿಬಲ, ಬಾಹುಬಲಗಳಿಂದ ಆವಿಷ್ಟರಾಗಿ, "ತತೋಯುದ್ಧಾಯ ಯುಜ್ಯಸ್ವ" ಎಂಬ ಪ್ರೇರಣೆ ಪಡೆದು ನಮ್ಮ ಜನ ಜಾಗರಾಂದೋಲನವನ್ನು ನಡೆಸಲಿ !

|| ಓಂ ತತ್ ಸತ್ ||

ಯಾವುದು ಸರ್ವಜೀವಿಗಳಿಗೆ ಶುಭ ತರುವುದೋ ಯಾವುದರಿಂದ ವ್ಯಕ್ತಿ ಸಮಾಧಾನ ಕಾಣುತ್ತಾನೋ ಯಾವುದರಿಂದ ಜಗತ್ತು ಪ್ರಗತಿ ಹೊಂದಬಲ್ಲದೋ ಅಂತಹ ಗುಣಶೀಲಗಳನ್ನು ಇತರ ಚಟುವಟಿಕೆಗಳನ್ನು ವ್ಯವಸ್ಥೆಮಾಡಿರುವ ಈ ಸಂಸ್ಥೆಯು ಎಲ್ಲ ರೀತಿಯಲ್ಲಿಯೂ ವಿಶಿಷ್ಟವಾದುದು.

—ಎಚ್. ವಿ. ರಂಗರಾಜು. ಜೆ. ಡಿ. ಆಫ್ ಡಿ.ಪಿ.ಐ.

ಎಚ್. ಜಿ. ಸೂರ್ಯನಾರಾಯಣರಾವ್

ಚೈತನ್ಯದ ಚಿಲುಮೆ

ನಾನು ಮೊದಲ ಬಾರಿಗೆ ಮಲ್ಲಾಡಿಹಳ್ಳಿಗೆ ಹೋಗಿದ್ದು ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ. ನಾನು ಮೈಸೂರಿನಿಂದ ಹೊಸದಾಗಿ ಧ. ರ. ಮ. ಕಾಲೇಜಿಗೆ ಇಂಗ್ಲಿಷ್ ಅಧ್ಯಾಪಕನಾಗಿ ಹೋಗಿದ್ದೆ. ಹೋದ ಕೆಲವು ದಿನಗಳ ನಂತರ ಶ್ರೀ ನಾ. ಕಸ್ತೂರಿ ಅವರು ಕಾಲೇಜಿನ ಮುಖ್ಯಾಧಿಕಾರಿಗಳಾಗಿ ಬಂದರು. ಅಧ್ಯಾಪಕರ ಒಂದು ತಂಡವನ್ನೇ ಕಟ್ಟಿಕೊಂಡು ಸುತ್ತಮುತ್ತಲ ಸ್ಥಳಗಳಿಗೆ ಹೋಗಿ ಭಾಷಣಗಳನ್ನು ಮಾಡುವುದು, ಹಳ್ಳಿಗಳಿಗೆ ಹೋಗಿ ನಮಗೆ ತಿಳಿದಿದ್ದನ್ನು ಗ್ರಾಮಾಂತರ ಜನಕ್ಕೆ ಹೇಳಿ ಅವರ ಚಟುವಟಿಕೆಗಳನ್ನು ನೋಡಿ ಆನಂದಿಸುವ ರೂಢಿಯಾಯಿತು. ನಾನು ಚಿತ್ರದುರ್ಗದಲ್ಲೇ ಹುಟ್ಟಿ ಬೆಳೆದವನಾದರೂ ಅಲ್ಲಿಯವರೆಗೂ ಮಲ್ಲಾಡಿಹಳ್ಳಿಗೆ ಹೋಗಿರಲಿಲ್ಲ. ಮಲ್ಲಾಡಿಹಳ್ಳಿಯಂತಹ ಕುಗ್ರಾಮದಲ್ಲಿ ಓರ್ವ ಸ್ವಾಮಿಜಿ ಹೊಸ ಸೇವಾಕೇಂದ್ರವನ್ನು ಸ್ಥಾಪಿಸಿ ವಿದ್ಯಾಕ್ಷೇತ್ರದಲ್ಲಿ ಒಂದು ಪವಾಡವನ್ನೇ ಸಾಧಿಸಿದ್ದಾರೆಂಬ ವರ್ತಮಾನ ಕೇಳಿದೆವು. ಇಂಥ ವಿಷಯಗಳಲ್ಲಿ ತುಂಬ ಆಸಕ್ತಿ ವಹಿಸುತ್ತಿದ್ದ ಶ್ರೀ ಕಸ್ತೂರಿ ಅವರು ಕೆಲವು ಅಧ್ಯಾಪಕ ಮಿತ್ರರೊಡನೆ ಅಲ್ಲಿಗೆ ಭೇಟಿಯಿತ್ತರು.

ಶ್ರೀ ರಾಘವೇಂದ್ರಸ್ವಾಮಿಗಳ ವ್ಯಕ್ತಿತ್ವದ ಬಗ್ಗೆ ನಾನಾ ಬಗೆಯ ಮೆಚ್ಚಿಗೆಯನ್ನು ಕೇಳಿದ್ದ ನಾನು ಅವರನ್ನು ನೋಡಲು ಅತ್ಯಂತ ಕುತೂಹಲಿಯಾಗಿದ್ದೆ. ನಾವು ಆಶ್ರಮದ ದ್ವಾರವನ್ನು ಪ್ರವೇಶಿಸುವ ಮುನ್ನವೇ ನಮ್ಮ ಕಣ್ಣಿಗೆ ಬಿದ್ದದ್ದು ಎರಡು ಎಚ್ಚರಿಕೆಯ ನುಡಿಯ ಫಲಕಗಳು : 'ಇಲ್ಲಿ ರಾಜಕೀಯಕ್ಕೆ ಪ್ರವೇಶವಿಲ್ಲ', 'ದಯವಿಟ್ಟು ಹೊಗಳಬೇಡಿ : ಬದಲಿಗೆ ಆಶ್ರಮದ ಸೇವೆಗೆ ಕಾರ್ಯತಃ ನೆರವಾಗಿ'. ಅಕ್ಷರಶಃ ಆ ಪದಗಳನ್ನೇ ನಾನು ಇಲ್ಲಿ ಉಲ್ಲೇಖಿಸದಿದ್ದರೂ ಈ ಅರ್ಥ ಬರುವ ನುಡಿಗಳು ನಮ್ಮನ್ನು ಚಕಿತಗೊಳಿಸಿದುವು. ಎಲ್ಲ ಸೇವಾಕ್ಷೇತ್ರಗಳನ್ನೂ ಹೊಕ್ಕಿರುವ 'ರಾಜಕೀಯ' ಹಾಗೂ 'ಹೊಗಳಿಕೆ' ಎಂಬ ಎರಡು ಪಿಡುಗುಗಳಿಂದ ಮುಕ್ತವಾಗಿರುವ ಒಂದು ಸಂಸ್ಥೆ ಅಸ್ತಿತ್ವದಲ್ಲಿರಲು ಸಾಧ್ಯವೇ ಎಂದು ಆಶ್ಚರ್ಯವಾಯಿತು ನಮಗೆ. ಆದರೆ ನಾವು ಆಶ್ರಮದ ಚೇತನ ಸ್ವರೂಪರಾದ ಪೂಜ್ಯ ಶ್ರೀ ರಾಘವೇಂದ್ರಸ್ವಾಮಿಗಳನ್ನೂ ಅವರ ಕಾರ್ಯಚಟುವಟಿಕೆಗಳನ್ನೂ ನೋಡುತ್ತಾ ಹೋದಂತೆಲ್ಲ ನಮಗೆ ಆಶ್ಚರ್ಯಗಳ ಸುರಿಮಳೆಯೇ ಆಯಿತು.

ಯಾವ ಚಿನ್ನದ ಗದ್ದುಗೆಯನ್ನೇರಿ ಕುಳಿತ, ಯಾವ ಶಿಷ್ಯರಿಂದ ಸುತ್ತುವರಿದ ಸ್ವಾಮಿಜಿಯೋ ಇವರು ಎಂದು ನಾವು ಸುತ್ತಲೂ ನೋಡುತ್ತಿದ್ದಾಗ ವಿದ್ಯಾರ್ಥಿಯೊಬ್ಬ ನಮ್ಮನ್ನು ಸ್ವಾಮಿಗಳ ಬಳಿಗೆ ಕರೆದೊಯ್ದನು. ಅಲ್ಲಿ ನಾವು ಕಂಡದ್ದೇನು ? ಹತ್ತಾರು ಜನರೊಂದಿಗೆ ಒಬ್ಬ ತೇಜಸ್ವಿಯಾದ ವ್ಯಕ್ತಿ ಇಟ್ಟಿಗೆ ಗೋಡೆಯನ್ನು ಕಟ್ಟುತ್ತಿದ್ದರು. ಅಲ್ಲಿಯ ಶಾಲೆಯ ಉಪಾಧ್ಯಾಯರಿಗೆ ತಮ್ಮ ಕೈಗಳಿಂದಲೇ ವಸತಿಗೃಹಗಳನ್ನು ಕಟ್ಟುತ್ತಿದ್ದರು. ಕೈಯಲ್ಲಿ ಇಟ್ಟಿಗೆಯನ್ನು ಹಿಡಿದುಕೊಂಡೇ ಅವರು ನಗುನಗುತ್ತಾ ನಮ್ಮನ್ನು ಸ್ವಾಗತಿಸಿದರು. ಭಕ್ತ ಪುಂಡರೀಕ ತಾಯಿ ತಂದೆಗಳ ಸೇವೆ ಮಾಡುತ್ತಿದ್ದಾಗ ಸಾಕ್ಷಾತ್ ವಿಠಲನೇ ಬಂದರೂ ತಾನು ಮಾಡುತ್ತಿದ್ದ ಕರ್ತವ್ಯವನ್ನು

ನಿಲ್ಲಿಸದೆ ದೇವರ ಕಡೆ ಒಂದು ಇಟ್ಟಿಗೆ ಎಸೆದು ಸ್ವಲ್ಪ ನಿಂತುಕೊಳ್ಳುವಂತೆ ಹೇಳಿದನಂತೆ. ಹಾಗೆಯೇ ಸ್ವಾಮೀಜಿ ಮಾಡುತ್ತಿದ್ದ ಇಟ್ಟಿಗೆ–ಗಾರೆ ಕೆಲಸವನ್ನು ಬೇಗ ಮುಗಿಸಿದ ನಂತರವೇ ಅಭ್ಯಾಗತರನ್ನು ಅಂತಃಕರಣಪೂರ್ವಕವಾಗಿ ಸ್ವಾಗತಿಸಿದರು. ಅವರು ಸ್ವಾಮಿಗಳೆಂದು ನಾವು ಕನಸಿನಲ್ಲೂ ಎಣಿಸಲು ಸಾಧ್ಯವಿರಲಿಲ್ಲ. ಕಾನಿಬಣ್ಣದ ಚಡ್ಡಿಯನ್ನೂ ಪುಟ್ಟ ಬನಿಯನನ್ನೂ ಧರಿಸಿದ್ದ ಆ ವ್ಯಕ್ತಿ ಕೂಡಲೇ ನಮ್ಮನ್ನೆಲ್ಲ ಪರಿಚಯ ಮಾಡಿಕೊಂಡರು. ಅವರ ಕಣ್ಣುಗಳು ತೇಜೋಮಯ. ಅವರ ಮುಖದಲ್ಲಿ ವರ್ಚಸ್ಸು, ಮುಗುಳ್ನಗೆ, ತೆಳ್ಳಗಿದ್ದರೂ ಉತ್ತಮ ಅಂಗಸೌಷ್ಠವದಿಂದ ಕೂಡಿದ ನಿಲುವು, ಒಡನೆಯೇ ಆತ್ಮೀಯರನ್ನಾಗಿ ಮಾಡಿಕೊಳ್ಳುವಂಥ ಪ್ರೀತಿಯ ಮಾತು. ಮಾತಿನಲ್ಲಿ ಚುರುಕುಹಾಸ್ಯ. ಹಾಸ್ಯದಲ್ಲೂ ಒಂದು ಹದ. ನಿಂತಲ್ಲೇ ಸುತ್ತಲೂ ನಡೆಯುತ್ತಿದ್ದ ನಾಲ್ಕಾರು ಕೆಲಸಗಳ ಕಡೆ ಗಮನ ಮತ್ತು ನಿರ್ದೇಶನ. ಬಂದವರು ಪರಮಭಕ್ತಿಯಿಂದ ಅವರಿಗೆ ಪ್ರಣಾಮ ಸಲ್ಲಿಸುತ್ತಿದ್ದುದರಿಂದ ಇವರೇ ಸ್ವಾಮಿಗಳಿರಬಹುದೇನೋ ಎಂಬ ಶಂಕೆ ಬಂತು ನಮಗೆ.

ನಾವು ಮನಸ್ಸಿನಲ್ಲಿ ಕಲ್ಪಿಸಿಕೊಂಡಿದ್ದ ಸ್ವಾಮೀಜಿಯ ಚಿತ್ರಕ್ಕೂ ಪ್ರತ್ಯಕ್ಷವಾಗಿ ಕಂಡ ಸ್ವಾಮೀಜಿಗೂ ಏನೇನೂ ಸಂಬಂಧವಿರಲಿಲ್ಲ. ನಾವು ಆಶ್ಚರ್ಯಚಕಿತರಾಗಿದ್ದುದು ಸ್ವಾಮೀಜಿಗೆ ತಕ್ಷಣವೇ ಗೊತ್ತಾಗದೆ ಹೋಗಲಿಲ್ಲ. ಅವರದೇ ಆದ ಹಾಸ್ಯದ ಶೈಲಿಯಲ್ಲಿ "ಮೊದಲು ಸ್ವಲ್ಪ ಉಪಾಹಾರ ತೆಗೆದುಕೊಳ್ಳಿ. ಅನಂತರ ಸ್ವಾಮೀಜಿಯನ್ನು ತೋರಿಸುತ್ತೇನೆ, ಬನ್ನಿ" ಎಂದರು. ಉಪಾಹಾರದ ನಂತರ ನಮಗೆ ಸಂಸ್ಥೆಯ ಚಟುವಟಿಕೆಗಳನ್ನೆಲ್ಲಾ ತೋರಿಸಿಕೊಂಡು ಬಂದರು. ಅವರು ಪ್ರಾರಂಭದಲ್ಲೇ ಹೇಳಿದ ಮಾತು ನನಗೆ ಇನ್ನೂ ಚೆನ್ನಾಗಿ ನೆನಪಿದೆ. "ಆಧ್ಯಾತ್ಮದ ತಳಹದಿಯ ಮೇಲೆ ಈ ಸಂಸ್ಥೆಯನ್ನು ಕಟ್ಟಿದೆ. ಬೇರು ಆಧ್ಯಾತ್ಮ, ಹೂವು, ಹಣ್ಣು ಎಲ್ಲ ಜನತಾಸೇವೆ." ಆಮೇಲೆ ಅವರು ಪ್ರೌಢಶಾಲೆ, ಪ್ರಾಂಗಣ, ಆಯುರ್ವೇದ ವೈದ್ಯಶಾಲೆ, ವ್ಯಾಯಾಮಶಾಲೆಗಳನ್ನು ತೋರಿಸಿದರು. ದೇಹವನ್ನು ಆರೋಗ್ಯವಾಗಿಯೂ ದೃಢವಾಗಿಯೂ ಕಾಪಾಡಿಕೊಳ್ಳಬೇಕು. ಇದಕ್ಕೆ ಸಾಧನವಾಗಿ ಆಶ್ರಮವಾಸಿಗಳಾದ ಆಬಾಲವೃದ್ಧರೆಲ್ಲರೂ ಕಡ್ಡಾಯವಾಗಿ ಯೋಗಾಸನ ಮಾಡಬೇಕು. ಅದಕ್ಕಾಗಿ ಒಂದು ವ್ಯಾಯಾಮಶಾಲೆ ಇದೆ. ದೇಹದಲ್ಲಿ ಕಸುವಿದ್ದರೆ ತಾನೆ ದೊಡ್ಡ ದೊಡ್ಡ ಸಾಹಸ ಮಾಡಲು ಚೇತನ ಮೂಡುವುದು ? ಸ್ವಾಮೀಜಿಯೇ ಪ್ರತಿನಿತ್ಯವೂ ನೂರಾರು ಸೂರ್ಯನಮಸ್ಕಾರ ಮಾಡುವರೆಂದು ಅಲ್ಲಿನವರಿಂದ ತಿಳಿದುಬಂದಿತು.

ಬುದ್ಧಿಯ ವಿಕಾಸಕ್ಕೆ ಅಗತ್ಯವಾದ, ಲೌಕಿಕ ಪ್ರಪಂಚದಲ್ಲೂ ಸಮರ್ಥವಾಗಿರಲು ನೆರವಾಗುವಂಥದೇ ಸ್ವಾವಲಂಬನೆಯ ಶಿಕ್ಷಣ. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಚೇತನಕ್ಕೆ ಪುಷ್ಟಿಯನ್ನೂ ತುಷ್ಟಿಯನ್ನೂ ನೀಡುವುದು ಪ್ರಾರ್ಥನೆ, ಧ್ಯಾನ, ಜಪತಪಾದಿಗಳು. ಹೀಗೆ ಮಾನವನ ಪೂರ್ಣ ವಿಕಾಸದ ದರ್ಶನದಿಂದ ಸ್ಫೂರ್ತಿಗೊಂಡು ಸ್ವಾಮಿಗಳು ಗ್ರಾಮಸೇವೆಗೆ, ಶಿಕ್ಷಣಕ್ಷೇತ್ರಕ್ಕೆ ತಮ್ಮ ಜೀವನವನ್ನೇ ಮುಡುಪಾಗಿಟ್ಟರು ನಾವು ಇಡೀ ದಿವಸ ಶಾಲೆಯ ಚಟುವಟಿಕೆಗಳಲ್ಲಿ ಕಂಡದ್ದು ಪ್ರೇಮದ ಮೇಲೆ ಆಧರಿಸಿದ ಶಿಸ್ತು. ಎಲ್ಲ ಬಾಲಕರೂ ತಮ್ಮ ವ್ಯಾಸಂಗ, ವ್ಯಾಯಾಮ ಹಾಗೂ ಆಶ್ರಮದ ಚಟುವಟಿಕೆಗಳಲ್ಲಿ ಶ್ರದ್ಧೆಯಿಂದ ನಿರತರಾಗಿರುತ್ತಿದ್ದುದು ಕಂಡು ಬಂದಿತು. ಅವರಿಗೆ ನಿರಂತರ ಸ್ಫೂರ್ತಿಯೆಂದರೆ ಶ್ರೀ ಸ್ವಾಮೀಜಿಯವರ ಬದುಕು. ನಮ್ಮನ್ನು ಕರೆದೊಯ್ಯುತ್ತಾ ಕಾರ್ಯಚಟುವಟಿಕೆಗಳನ್ನು ವಿವರಿಸುತ್ತಾ ಅವರು ಆಗಾಗ್ಗೆ 'ಮಾರುತಿ', 'ಮಾರುತಿ' ಎನ್ನುತ್ತಾ ಮೇಲಕ್ಕೆ ನೆಗೆಯುತ್ತಿದ್ದರು. ಈ ದೃಶ್ಯ ಮೊದಲು ನಮಗೆ ವಿಚಿತ್ರವಾಗಿ ಕಂಡರೂ ಅದು ಹೊರಹೊಮ್ಮುತ್ತಿದ್ದ ಅವರ ಚೈತನ್ಯದ ಪ್ರಕಟಣೆಯೆಂದು ತಿಳಿಯಲು ತಡವಾಗಲಿಲ್ಲ.

ಅಂದು ಸಂಜೆ ನಾವು ಕಂಡದ್ದು ಸ್ವಾಮೀಜಿಯ ಪ್ರತಿಭೆಯ ಇನ್ನೊಂದು ಮುಖವನ್ನು. ಅವರು ನೀಡಿದ ಯೋಗಾಸನ ಪ್ರದರ್ಶನ ತರುಣರನ್ನೂ ನಾಚಿಸುವಂಥದ್ದಾಗಿದ್ದಿತು. ಎಪ್ಪತ್ತು ದಾಟಿದರೂ ಅವರಲ್ಲಿ ಈ ವರ್ಚಸ್ಸು, ತಾರುಣ್ಯ, ಚಟುವಟಿಕೆ, ಚುರುಕು ಎಲ್ಲಿಂದ ಬಂತು ? ಅದರ ರಹಸ್ಯವೇನು ? ಅವರ

ಯೋಗಾಸನವೇ ? ಲಾಠಿ ಪ್ರಯೋಗವೇ ? ಕುಸ್ತಿಯ ವರಿಸೆಗಳೇ ? ಯಾವುದೆಂದು ಹೇಳೋಣ ? 'ಶರೀರ ಮಾದ್ಯಂ ಖಲು ಧರ್ಮಸಾಧನಮ್' ಎಂಬ ಮಾತಿಗೆ ಸ್ವಾಮಿಜಿ ಜ್ವಲಂತ ನಿದರ್ಶನವಾಗಿದ್ದರು. ಕೆಲವೇ ನಿಮಿಷಗಳ ನಂತರ ಬಾಲಕರ ಕೋಲಾಟಕ್ಕೂ, ನೃತ್ಯಕ್ಕೂ ಹಾರ್ಮೋನಿಯಂ ನುಡಿಸುತ್ತಿದ್ದ ಕೈಗಳೂ ಸ್ವಾಮಿಜಿಯವರದ್ದೇ. ಅನಂತರ ಹಾಡು ಹೇಳುತ್ತಾ ಬಾಲಕರೊಡನೆ ಕುಣಿಯುತ್ತಿದ್ದವರೂ ಇದೇ ವ್ಯಕ್ತಿಯೇ. ನಮ್ಮ ಕಣ್ಣುಗಳು ಇವನ್ನೆಲ್ಲಾ ನಂಬಲಾರದೆ ಹೋದುವು.

ಅಂದು ಯಾವುದೋ ಒಂದು ವಿಶೇಷ ಸಮಾರಂಭವಿದ್ದುದರಿಂದ ಬಹಳ ಜನರಿಗೆ ಭೋಜನ ವೇರ್ಪಟ್ಟಿತ್ತು. ಅಡಿಗೆಯನ್ನು ಬಡಿಸಿದವರೆಲ್ಲಾ ಸ್ವಯಂಸೇವಕ ವಿದ್ಯಾರ್ಥಿಗಳೇ. ಬಡಿಸುವ ಏರ್ಪಾಡುಗಳನ್ನೆಲ್ಲಾ ವಿಚಕ್ಷಣೆಯಿಂದ ನೋಡಿಕೊಳ್ಳುತ್ತಾ ಪ್ರತಿಯೊಬ್ಬರ ಬಳಿಯೂ ಬಂದು ವಿಚಾರಿಸಿಕೊಳ್ಳುತ್ತಿದ್ದವರೂ ಸ್ವಾಮಿಗಳೇ. ನಮ್ಮಲ್ಲೊಬ್ಬರು "ಸ್ವಾಮಿಗಳನ್ನು ಕೇಳಿದರು : "ನೀವು ನಮ್ಮೊಡನೆ ಕುಳಿತು ಊಟ ಮಾಡುವುದಿಲ್ಲವೆ?" ಅದಕ್ಕೆ ಅವರು ಕೊಟ್ಟ ಉತ್ತರ? "ನೀವೆಲ್ಲಾ ಊಟವಮಾಡಿದ್ದು ನೋಡಿಯೇ ನನಗೆ ಹೊಟ್ಟೆ ತುಂಬಿದೆ." ಆಮೇಲೆ ನಮಗೆ ಗೊತ್ತಾಯಿತು, ಸ್ವಾಮಿಜಿ ಆಹಾರದ ವಿಷಯದಲ್ಲಿ ಬಹಳ ಕಟ್ಟುನಿಟ್ಟು ಎಂದು. ಎಲ್ಲರ ಊಟ ಮುಗಿಯುವುದನ್ನೇ ಕಾಯುತ್ತಿದ್ದ ಸ್ವಾಮಿಗಳು ಸ್ವತಃ ಎಲೆಗಳನ್ನು ಎತ್ತಿಹಾಕುತ್ತಿದ್ದುದನ್ನು ನೋಡಿ ಎಲ್ಲರೂ ದಿಗ್ಭ್ರಮೆಗೊಂಡರು. ಎಲೆ ಎತ್ತುವುದೂ ಒಂದು ಸೇವೆ. ಆ ಸೇವೆಗೆ ಸ್ವಾಮಿಜಿಯೇ ಆತುರದಿಂದ ಕಾದಿದ್ದುದಲ್ಲದೆ, ಆ ಸೇವೆಯಲ್ಲಿ ಸ್ವಾಮಿಜಿಗೂ ಸ್ವಯಂಸೇವಕರಿಗೂ ಒಂದು ಸ್ಪರ್ಧೆಯಂತೆ ಕಾಣುತ್ತಿತ್ತು. ಹೊಟ್ಟೆ ತುಂಬ ಉಂಡ ನಾವು ನಿಂತಿರುವಂತೆಯೇ ನೆಲವೆಲ್ಲ ಶುಭ್ರವಾಯಿತು. ಶಾಲಾ ಮಕ್ಕಳ ಊಟಕ್ಕೆ ಸಿದ್ಧತೆ ಆಯಿತು. ಅದಾದ ಮೇಲೆ ಮಲಗಿಕೊಳ್ಳಲು ಎಲ್ಲರಿಗೂ ಹಾಸಿಗೆಯನ್ನು ಹಾಸುವ ವ್ಯವಸ್ಥೆ ಸ್ವಾಮಿಜಿಯ ನೇತೃತ್ವದಲ್ಲೆ ನಡೆಯಿತು. ಪ್ರತಿಯೊಬ್ಬರ ಹತ್ತಿರವೂ ಬಂದು ಅವರು ಸರಸವಾಗಿ ಮಾತನಾಡಿ ಹಾಸ್ಯದ ಚಟಾಕಿಗಳನ್ನು ಹಾರಿಸುತ್ತಿದ್ದರು. ಕಾಫಿ ಚಟವುಳ್ಳ ಪಟ್ಟಣವಾಸಿಗಳಾದ ನಮಗೆ ಬೆಳಗಿನ ಮೊದಲ ಚಿಂತೆ ಏನೆಂದು ಸ್ವಾಮಿಜಿಗೆ ಗೊತ್ತು ! ಮರುದಿನ ಬೆಳಗ್ಗೆ ಕಾಫಿ ವ್ಯವಸ್ಥೆ ಮಾಡಲಾಗಿದೆಯೆಂದು ನಮಗೆ ಭರವಸೆ ಕೊಟ್ಟು, 'ನಿಮಗೆ ಆಯಾಸವಾಗಿದೆ, ಮಲಗಿಕೊಳ್ಳಿ' ಎಂದು ಹೇಳಿ ಅವರು ಹೊರಟರು.

ಅಲ್ಲಿಂದ ಅವರು ತಮ್ಮ ಧ್ಯಾನಮಂಟಪಕ್ಕೆ ತೆರಳಿದರು. ಮರುದಿನ ಬ್ರಾಹ್ಮೀ ಮುಹೂರ್ತದಲ್ಲೇ ಎದ್ದು ಅವರು ಓಡಾಡುತ್ತಿದ್ದುದು ಕಾಣಿಸಿತು. ಐದುಗಂಟೆಗೆ ಸರಿಯಾಗಿ ವಿದ್ಯಾರ್ಥಿಗಳಿಂದ ಸೂರ್ಯನಮಸ್ಕಾರ ಮತ್ತು ವ್ಯಾಯಾಮಗಳು ನಡೆದುವು. ಆ ವೇಳೆಗಾಗಲೇ ಸ್ವಾಮಿಜಿ ತಮ್ಮ ಧ್ಯಾನ; ವ್ಯಾಯಾಮ, ಯೋಗ, ಜಪತಪಗಳನ್ನು ಮುಗಿಸಿದ್ದರಂತೆ ! ಅವರು ಎಷ್ಟು ಹೊತ್ತು ಮಲಗಿದ್ದರೆಂಬುದೇ ಯಾರಿಗೂ ಬಗೆಹರಿಯದ ಸಮಸ್ಯೆಯಾಯಿತು. ಮತ್ತೆ ಬೆಳಗ್ಗೆ ಅದೇ ಹಸನ್ಮುಖದ ಸುಪ್ರಭಾತ ಹೇಳಿ ಸ್ವಾಮಿಜಿ ಎಲ್ಲರನ್ನು ಎಬ್ಬಿಸಿದರು. ಆಗಲೇ ಕಾಫಿ ಸಿದ್ಧ ! ಬೆಳಗ್ಗೆ ಅವರ ಆಯುರ್ವೇದ ಮಂದಿರದಲ್ಲಿ ಅನೇಕರಿಗೆ ಔಷಧಿ ಕೊಡುತ್ತಿದ್ದುದನ್ನು ನಾವು ನೋಡಿದೆವು. ಅವರು ಸೂರ್ಯೋದಯಕ್ಕೆ ಮುಂಚೆಯೇ ನಾಡಿ ಪರೀಕ್ಷೆ ಮಾಡಿ ಔಷಧಿಯನ್ನೂ ಸಲಹೆಗಳನ್ನೂ ನೀಡುತ್ತಿದ್ದರು. ಅವರೇ ಸ್ವತಃ ಆಯುರ್ವೇದ ಔಷಧಿಗಳನ್ನು ತಯಾರುಮಾಡುತ್ತಾರೆ. ಎಂಥ ಉಗ್ರವಾದ ರೋಗಗಳಿಗೂ ರಾಮಬಾಣದಂತಹ ಔಷಧ ಅವರಲ್ಲಿ. ಬಡವರಾಗಲಿ ಬಲ್ಲಿದರಾಗಲಿ ಎಲ್ಲರಿಗೂ ಒಂದೇ ರೀತಿಯ ಪ್ರೀತಿಯ ಆದರದ ಸೇವೆ. ಸೇವೆಗೆ ಮೀಸಲಾಗಿಟ್ಟ ಈ ಕರ್ಮಯೋಗಿಗೆ ದಿವಸಕ್ಕೆ ಇಪ್ಪತ್ತು ನಾಲ್ಕು ಗಂಟೆಗಳು ಸಾಲದೆ ಹೋಗುವುದು ಆಶ್ಚರ್ಯವೇನಲ್ಲ.

ಸ್ವಾಮಿಜಿ ಸ್ವಯಂ ಪ್ರತಿಭಾಶಾಲಿ ಸಾಹಿತಿಗಳೆಂಬುದು ಅವರ ಗ್ರಂಥಗಳಿಂದ ಗೊತ್ತಾಯಿತು. 'ತಿರುಕ' ಎಂಬ ಅಂಕಿತದಲ್ಲಿ ಅವರು ಅನೇಕ ಆಧ್ಯಾತ್ಮಿಕ, ಸಾಮಾಜಿಕ, ಧಾರ್ಮಿಕ ವಿಷಯಗಳನ್ನು ಕುರಿತು ಬರೆದಿರುವುದಲ್ಲದೆ ಕತೆ, ನಾಟಕಗಳನ್ನೂ ಬರೆದಿದ್ದಾರೆ. ಆಶ್ರಮದ ಸಾಹಿತ್ಯವನ್ನು ಪ್ರಕಟಿಸುವುದಕ್ಕೊಂದು ಅಚ್ಚುಕೂಟವೂ

ಅಲ್ಲಿದೆ. ಈ ಚಟುವಟಿಕೆಗಳನ್ನೆಲ್ಲಾ ನೋಡಿದ ನಮ್ಮ ಮಿತ್ರರೊಬ್ಬರು ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದಾಗ ಸ್ವಾಮಿಜಿ, ಇನ್ನೂ ಸಾಧಿಸಬೇಕಾದದ್ದು ಬಹಳ ಇದೆಯೆಂದು ಹೇಳಿದರು. ತಾವು ಕಾಣುತ್ತಿರುವ ಭಾರಿ ಭಾರಿ ಯೋಜನೆಗಳ ಕನಸುಗಳು ಇನ್ನೂ ಇವೆಯೆಂದು ಸ್ವಾಮಿಜಿಯವರು ಹೇಳಿದಾಗ 'ಏರು ಮಾನವ ಅಗಸದೆತ್ತರ, ಏಳು' ಎಂಬ ವೀ. ಸೀ. ಅವರ ಮಾತು ಜ್ಞಾಪಕಕ್ಕೆ ಬಂತು. ಸ್ವಾಮಿಜಿ ದಿವ್ಯ ಕನಸುಗಾರರೂ ಹೌದು. ಶ್ರೇಷ್ಠ ಕರ್ಮಯೋಗಿಯೂ ಹೌದು. ಸ್ವಾಮಿಜಿ ಜನಸೇವೆಯೇ ಜನಾರ್ದನ ಸೇವೆಯೆಂದು ಅದರಲ್ಲಿ ಸಂಪೂರ್ಣ ತೃಪ್ತಿಯನ್ನೂ ಸಾರ್ಥಕ್ಯವನ್ನೂ ಕಾಣುವವರು. ನಿಜವಾದ ಆಧ್ಯಾತ್ಮದ ನೆಲಗಟ್ಟಿನ ಮೇಲೆ ಎಂಥ ಸುಭದ್ರವಾದ ಸಂಸ್ಥೆಯನ್ನು ಕಟ್ಟಬಹುದೆಂಬುದಕ್ಕೆ ಸ್ವಾಮಿಜಿ ದೇಶಕ್ಕೆ ಒಳ್ಳೆಯ ಮೇಲ್ಪಂಕ್ತಿಯನ್ನು ಹಾಕಿದ್ದಾರೆ. ಗ್ರಾಮೋದ್ಧಾರವನ್ನು ಹೇಗೆ ಮಾಡಬೇಕೆಂಬ ಪ್ರಯೋಗವನ್ನು ಅವರು ಯಶಸ್ವಿಯಾಗಿ ತೋರಿಸಿಕೊಟ್ಟಿದ್ದಾರೆ.

ಆಶ್ರಮದ ಉಪಾಧ್ಯಾಯರನ್ನು ಕಂಡರೆ ಸ್ವಾಮಿಜಿಗೆ ತುಂಬಾ ಪ್ರೀತಿ, ಗೌರವ. ಅವರು ನೆಮ್ಮದಿಯಿಂದ ತಮ್ಮ ಅಧ್ಯಾಪನ—ಅಧ್ಯಯನ ಕಾರ್ಯವನ್ನು ಮಾಡಿಕೊಂಡು ಹೋಗಬೇಕೆಂಬುದೇ ಸ್ವಾಮಿಜಿಯ ಅಪೇಕ್ಷೆ. ಸರ್ಕಾರಿ ಶಾಲಾ ಕಾಲೇಜುಗಳಲ್ಲಿ ಉಪಾಧ್ಯಾಯರಿಗೆ ಸಂಬಳ ಕೊಡುವುದು ತಿಂಗಳ ಮೊದಲನೆಯ ತಾರೀಕು ತಾನೆ. ಆದರೆ ಆಶ್ರಮದ ಉಪಾಧ್ಯಾಯರಿಗೆ ಸಂಬಳ ದೊರೆಯುವುದು ಒಂದು ದಿನ ಮುಂಚೆಯೇ—ಅಂದರೆ ಆಯಾ ತಿಂಗಳ ಕೊನೆಯ ದಿವಸ, 30 ಅಥವಾ 31 ನೆಯ ತಾರೀಕಿಗೇ ! ಉಪಾಧ್ಯಾಯರುಗಳಿಗೆ ನ್ಯಾಯವಾಗಿ, ಸಲ್ಲಬೇಕಾದ ಸಂಬಳಗಳನ್ನು ಯಾವುದಾದರೂ ನೆಪಹೂಡಿಯೋ ಬೆದರಿಕೆ ಹಾಕಿಯೋ ಅವನ್ನು ಆಡಳಿತವರ್ಗ ಖೋತಾ ಮಾಡುವುದು, ಇಲ್ಲವೇ ನುಂಗಿಹಾಕುವುದು ಸಾಮಾನ್ಯ ಘಟನೆ. ಆದರೆ ಈ 'ಬಡ' ಸ್ವಾಮಿಜಿ ವಾರಕ್ಕೆ ಆರುದಿನಗಳೂ ಊರೂರು ಅಲೆದು, ಭಿಕ್ಷೆ ಎತ್ತಿ, ಆಶ್ರಮದ 'ಜೋಳಿಗೆ'ಯನ್ನು ತುಂಬಿಕೊಂಡು ಬರುತ್ತಾರೆ ; ಅಲ್ಲಿಯ ಅಧ್ಯಾಪಕರಿಗೆ ಪೂರ್ತಿ ಸಂಬಳವನ್ನು ಒಂದನೇ ತಾರೀಕೆಗೆ ಕಾಯದೆ ಒಂದುದಿನ ಮೊದಲೇ—ಪಾವತಿ ಮಾಡುವುದು ಒಂದು ಪವಾಡವಲ್ಲವೆ ! ಈ ಪವಾಡವನ್ನು ಸಾಧಿಸುತ್ತಿರುವುದು ಅಧ್ಯಾಪಕರ ಯೋಗಕ್ಷೇಮದ ಬಗ್ಗೆ ಸ್ವಾಮಿಜಿಗಿರುವ ಆಸಕ್ತಿ.

ಸುಮಾರು ಹತ್ತುಹನ್ನೆರಡು ವರ್ಷಗಳ ಹಿಂದೆ ವಜ್ರಕಾಯರಾದ ಸ್ವಾಮಿಜಿಗೆ ಒಂದು ವಿಚಿತ್ರರೀತಿಯ 'ಇನ್‌ಫೆಕ್ಷನ್' (ಸೋಂಕು) ತಟ್ಟಿ ಪ್ರತಿದಿನವೂ ಸಣ್ಣ ಜ್ವರ ಬರುವುದಕ್ಕೆ ಶುರುವಾಯಿತು. ಇವರನ್ನು ಪರೀಕ್ಷಿಸಿದ ವೈದ್ಯ ಪರಿಣತರು ಸ್ವಾಮಿಜಿಗೆ ತುರ್ತುಚಿಕಿತ್ಸೆಯೂ ವಿಶ್ರಾಂತಿಯೂ ಅಗತ್ಯವೆಂದು ಅಭಿಪ್ರಾಯಪಟ್ಟರು. ಆಗ ಸ್ವಾಮಿಜಿಯನ್ನು ಒತ್ತಾಯಪೂರ್ವಕವಾಗಿ ಬೆಂಗಳೂರಿನ ಒಂದು ಪ್ರಸಿದ್ಧ ಆಸ್ಪತ್ರೆಗೆ ಕರೆದೊಯ್ದರು. ಈ ಸುದ್ದಿ ಕೇಳಿ ನಮ್ಮ ತಂದೆ, ಅಣ್ಣ ಮತ್ತು ನಾನು ಸ್ವಾಮಿಜಿಯನ್ನು ನೋಡಿಕೊಂಡು ಬರಲು ಹೊರಟೆವು. ಸ್ವಾಮಿಜಿಯಿದ್ದ 'ಸ್ಪೆಷಲ್ ವಾರ್ಡಿ'ಗೆ ಹೋದಾಗ ಅವರು ಹಾಸಿಗೆಯ ಮೇಲೆ ಮಲಗಿದ್ದುದ್ದು ನೋಡಿ ನಮ್ಮ ಕಣ್ಣುಗಳು ಹನಿಗೂಡಿದವು. ನಮ್ಮ ಹೃದಯದ ಭಾವನೆಗಳನ್ನು ತಿಳಿದುಕೊಂಡ ಸ್ವಾಮಿಜಿ—ಸ್ವಲ್ಪ ಸೊರಗಿದಂತೆ ಕಂಡುಬಂದರೂ—ನಗುನಗುತ್ತಲೇ ಕೇಳಿದರು : "ನೋಡಿದಿರಾ, ಡಾಕ್ಟರುಗಳು ನನಗೆ ವಿಧಿಸಿರುವ ಕಠಿಣ ಶಿಕ್ಷೆಯನ್ನು? ಡಾಕ್ಟರ್ ಬರುವ ಸಮಯವಾದ್ದರಿಂದ ಹಾಸಿಗೆಮೇಲೆ ಮಲಗಿದ್ದರಂತೆ! ಆಸ್ಪತ್ರೆಯಲ್ಲಿದ್ದಾಗಲಾದರೂ ಸುಮ್ಮನೆ ಇರುವ ಚೈತನ್ಯವೇ ? ಡಾಕ್ಟರ್‌ಗಳು ಬಂದು ಹೋದಮೇಲೆ ಜನರಲ್ ವಾರ್ಡ್‌ಗೆ ಹೋಗಿ ತಮಗೆ ಭಕ್ತಾದಿಗಳು ತಂದುಕೊಟ್ಟ ಹಣ್ಣುಗಳನ್ನೆಲ್ಲಾ ಹಂಚಿಬಿಟ್ಟು ಬಂದು ಮಲಗಿಬಿಡುತ್ತಿದ್ದರು

ಅಷ್ಟೇ ಅಲ್ಲದೆ ರೋಗಿಗಳನ್ನು ಆದಷ್ಟು ಮೃದುವಾಗಿ ದಯೆಯಿಂದ ಉಪಚರಿಸಬೇಕೆಂದು ವಾರ್ಡಿನ ದಾದಿಯರಿಗೆ ಬುದ್ಧಿವಾದವನ್ನು ನೀಡುತ್ತಿದ್ದರು. ತಾನೇ ಜ್ವರದಿಂದ ನರಳುತ್ತಿದ್ದ ಸ್ವಾಮಿಜಿಯ ಚಿಂತೆ ಆಸ್ಪತ್ರೆಯಲ್ಲಿದ್ದ ರೋಗಿಗಳ ಶುಶ್ರೂಷೆ ಹಾಗೂ ಚಿಕಿತ್ಸೆಯ ಬಗ್ಗೆ ! ಹೀಗೆ ಸದಾಸರ್ವಕಾಲವೂ ಸ್ವಾಮಿಜಿಯ

ಹೃದಯ ಮಿಡಿಯುವುದು ಜನಸೇವೆಗಾಗಿ. ಸೇವೆ, ಸೇವೆ, ಸೇವೆ—ಇದೇ ಅವರ ಜೀವನದ ತಾರಕಮಂತ್ರ. ಪ್ರಬಲವಾದ ಸೇವಾಕಾಂಕ್ಷೆಯೇ ಸ್ವಾಮೀಜಿಯ ನಿರಂತರ ಚೈತನ್ಯದ ಗುಟ್ಟು.

ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀ ಢೇಬರ್ ಒಮ್ಮೆ ಮಲ್ಲಾಡಿಹಳ್ಳಿಗೆ ಬಂದಿದ್ದಾಗ ಆಶ್ರಮದ ಸುತ್ತ ಎಲ್ಲ ನೋಡಿಕೊಂಡು ಬಂದು ಕೊನೆಗೆ ಸ್ವಾಮೀಜಿ ಎಲ್ಲಿ ಎಂದು ಕೇಳಿದರಂತೆ. ಢೇಬರ್‌ರವರನ್ನು ಎಲ್ಲ ಕಡೆ ಕರೆದುಕೊಂಡು ಹೋಗಿ ತೋರಿಸಿದ ಸ್ವಾಮೀಜಿ ಎದುರಿನಲ್ಲೇ ನಿಂತಿದ್ದರು, ಶುಭ್ರ ಖಾದಿಯನ್ನು ಧರಿಸಿ ! ಅಂದು ಶ್ರೀ ಢೇಬರ್ ಹೇಳಿದ ಮಾತು ಆಶ್ರಮಕ್ಕೆ ಭೇಟಿಯಿತ್ತವರೆಲ್ಲರ ಭಾವನೆಗಳನ್ನೇ ವ್ಯಕ್ತಪಡಿಸುತ್ತದೆ : “ಇಂದು ನನ್ನ ಜೀವನದಲ್ಲಿ ಒಂದು ಪವಾಡವನ್ನೇ ನೋಡಿದ ಹಾಗಾಯಿತು” ಅಷ್ಟೇ ಅಲ್ಲದೆ ಢೇಬರ್ ಅವರು ಮಲ್ಲಾಡಿಹಳ್ಳಿ ಆಶ್ರಮವನ್ನು ನೋಡಿದಾಗ ಅವರಿಗೆ ಶಾಂತಿನಿಕೇತನವನ್ನು ನೋಡಿದ ಹಾಗಾಯಿತೆಂದೂ, ಇದನ್ನು ‘ದಕ್ಷಿಣದ ಶಾಂತಿನಿಕೇತನ’ವೆಂದು ಕರೆಯಬಹುದೆಂದೂ ತಿಳಿಸಿದರಂತೆ. ಉತ್ತರದ ಶಾಂತಿನಿಕೇತನವನ್ನು ರೂಪಿಸಿದವರು ಸೌಂದರ್ಯೋಪಾಸಕ, ಕವಿಸಾರ್ವಭೌಮ ರವೀಂದ್ರರು. ದಕ್ಷಿಣದ ಶಾಂತಿನಿಕೇತನವಾದ ಮಲ್ಲಾಡಿಹಳ್ಳಿಯ ಅನಾಥಸೇವಾಶ್ರಮವನ್ನು ಸ್ಥಾಪಿಸಿದವರು ದಿವ್ಯಯೋಗಿ, ದಿವ್ಯ‘ತಿರುಕ’ ಶ್ರೀ ರಾಘವೇಂದ್ರ ಸ್ವಾಮಿಗಳು.

ಈಚೆಗೆ ನನಗೆ ಎರಡುಮೂರು ಬಾರಿ ಈ ಆಶ್ರಮಕ್ಕೆ ಹೋಗಿಬರುವ ಸದವಕಾಶ ದೊರೆತಿತ್ತು. ಪ್ರತಿ ಸಲವೂ ಸ್ವಾಮೀಜಿಯವರಲ್ಲಿ ನಾನು ಕಂಡದ್ದು ಹೆಚ್ಚಿನ ತಾರುಣ್ಯ, ಉಕ್ಕುತ್ತಿರುವ ಉತ್ಸಾಹ, ಅಧಿಕಾಧಿಕ ಸೇವಾಮನೋಭಾವ. ತಮ್ಮ ತಪಸ್ಸಿನಿಂದಲೂ ತ್ಯಾಗಮಯ ಜೀವನದಿಂದಲೂ ಸಮರ್ಪಣ ಬುದ್ಧಿಯ ಸೇವೆಯಿಂದಲೂ ಅವರು ನಾಡಿನ ಮೂಲೆಯಲ್ಲಿರುವ ಮಲ್ಲಾಡಿಹಳ್ಳಿಯನ್ನು ಒಂದು ಪವಿತ್ರ ಸೇವಾಕ್ಷೇತ್ರವಾಗಿ ಪರಿವರ್ತಿಸಿದ್ದಾರೆ. ಹೀಗೆ ತ್ರಿಕರಣಶುದ್ಧಿಯಿಂದ ದುಡಿದವರ ಸೇವೆಯಿಂದಲೇ ನಾಡಿಗೆ ಶ್ರೇಯಸ್ಸು. ಎಷ್ಟು ಸೇವೆ ಮಾಡಿದರೂ ತೃಪ್ತಿಯಾಗದ ಈ ದಿವ್ಯಚೇತನಕ್ಕೆ ನಮ್ಮೆಲ್ಲರ ಕೃತಜ್ಞತಾಪೂರ್ವಕ ಪ್ರಣಾಮಗಳು.

ಶ್ರೀ ರಾಘವೇಂದ್ರ ಸ್ವಾಮಿಗಳು ಪರಮಾರ್ಥವನ್ನು ಜೀವನವ್ಯವಹಾರಗಳ ಪರಿಷ್ಕರಣದಲ್ಲಿ ಕಂಡುಕೊಂಡಿದ್ದಾರೆ. ಅನ್ಯರಿಗೂ ಆ ಮಾರ್ಗವನ್ನು ತೋರಿಸಿಕೊಟ್ಟಿದ್ದಾರೆ. ಆಧುನಿಕತೆಯನ್ನೂ ಸನಾತನತೆಯನ್ನೂ ಸರ್ವಜನೋಪಯುಕ್ತವಾಗಿ ನಿಯೋಜಿಸಿದ್ದಾರೆ.

—ಸೀತಾರಾಮಶಾಸ್ತ್ರಿ. ಸಂಪಾದಕ. ಜನಪ್ರಗತಿ

ಎಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ

ಅಪೂರ್ವ ತ್ಯಾಗಜೀವಿ

ವೇದೋಕ್ತವಾದ ಪ್ರವೃತ್ತಿನಿವೃತ್ತಿಧರ್ಮಗಳಲ್ಲಿ ಜ್ಞಾನವೈರಾಗ್ಯಸಂನ್ಯಾಸರೂಪವಾದ ನಿವೃತ್ತಿ ಧರ್ಮವು ಜಗತ್ತಿನಲ್ಲೆಲ್ಲ ಪೂಜ್ಯವಾದುದು. ಶುಕಮಹಾಮುನಿಗಳಿಂದಾರಂಭಿಸಿ ಶ್ರೀ ಶಂಕರಾಚಾರ್ಯರು, ರಾಮಾನುಜರು, ಮಧ್ವರೇ ಮುಂತಾದ ಆಚಾರ್ಯ ಪುರುಷರುಗಳೂ ಮತ್ತು ಇತ್ತೀಚಿನವರಾದ ಶ್ರೀ ರಾಮಕೃಷ್ಣ ಪರಮಹಂಸರು, ವಿವೇಕಾನಂದರು, ರಾಮತೀರ್ಥರು, ಅರವಿಂದಘೋಷರು, ಆಚಾರ್ಯ ವಿನೋಬಾಭಾವೆಯವರು, ಮಹಾತ್ಮಾಗಾಂಧಿಯವರು—ಮುಂತಾದವರೆಲ್ಲ ತಮ್ಮತಮ್ಮ ಜೀವನಾದರ್ಶನಗಳಲ್ಲಿ ನಿವೃತ್ತಿಧರ್ಮವನ್ನೇ ಆರಿಸಿ ಕೊಂಡದ್ದರ ಫಲವಾಗಿ ಮಹಾತ್ಮರೂ ಲೋಕವಂದ್ಯರೂ ಆಗಿರುತ್ತಾರೆ. ಇಂದಿಗೂ ಭರತಖಂಡದಲ್ಲಿ ಇಂಥ ನಿವೃತ್ತಿ ಧರ್ಮನಿಷ್ಠರ ಸಂಖ್ಯೆಗೇನೂ ಕಡಿಮೆ ಇಲ್ಲ. ಆದರೆ ಎಲೆ ಮರೆಯ ಕಾಯಿಯಂತೆ ಯಾರ ಕಣ್ಣಿಗೂ ಹೆಚ್ಚಾಗಿ ಬೀಳದೆ ಖ್ಯಾತಿ ಲಾಭ ಪೂಜಾದಿಗಳನ್ನು ಬಯಸದೆ ತಮ್ಮ ಜೀವಮಾನವನ್ನೆಲ್ಲ ಜನತಾಜನಾರ್ದನನ ಸೇವೆಯಲ್ಲಿಯೇ ಕಳೆಯುತ್ತಾ ಗಂಧದ ಮರದ ತುಂಡು ತಾನು ಸವೆಯುತ್ತಾ ಇರುವಾಗಲೇ ಸುತ್ತಲೂ ಸುವಾಸನೆಯನ್ನು ಹರಡುತ್ತಾ ತನ್ನ ಹುಟ್ಟನ್ನು ಸಾರ್ಥಕಗೊಳಿಸಿಕೊಳ್ಳುವಂತೆ–ಜೀವನವನ್ನು ಸಾರ್ಥಕಗೊಳಿಸಿಕೊಳ್ಳುತ್ತಿರುವ ಜೀವನ್ಮುಕ್ತರಾದ ತ್ಯಾಗಜೀವಿಗಳನ್ನು ಈಗಿನ ಜನತೆಯು ಅರ್ಥಮಾಡಿಕೊಳ್ಳುವುದರೊಳಗಾಗಿಯೇ ಬಹು ಕಾಲವು ಕಳೆದು ಹೋಗಿರುತ್ತದೆ. ಅಂಥ ಅಪೂರ್ವ ತ್ಯಾಗಜೀವಿಗಳಲ್ಲಿ ಮಲ್ಲಾಡಿಹಳ್ಳಿಯ ಅನಾಥಸೇವಾಶ್ರಮದ ಪೂಜ್ಯ ಶ್ರೀ ರಾಘವೇಂದ್ರಸ್ವಾಮಿಗಳವರೂ ಒಬ್ಬರು ಎಂದರೆ ಅತಿಶಯೋಕ್ತಿಯಾಗಲಾರದು.

ಶ್ರೀ ಸ್ವಾಮಿಗಳು ತಮ್ಮ ಜೀವನದಲ್ಲಿ ಸ್ವೀಕರಿಸಿದ ನಿಯಮಗಳೂ ಸೇವಾ ಮನೋಭಾವವೂ, ತ್ಯಾಗವೂ ತುಂಬ ಕಠಿನವಾದವುಗಳೆಂಬುದರಲ್ಲಿ ಸಂಶಯವಿಲ್ಲ. ಆದರೆ ಧೀರರಾದವರು ಎಂಥ ಸಂದರ್ಭಗಳಲ್ಲಿಯೂ ನ್ಯಾಯ್ಯಪಥದಿಂದ ಹಿಮ್ಮೆಟ್ಟಲಾರರು – ಎಂಬ ಭರ್ತೃಹರಿಯ ಉಕ್ತಿಯಂತೆ ಶ್ರೀ ಸ್ವಾಮಿಗಳು ಏಕಾಂಗವೀರರಾಗಿ ತಮ್ಮ ಧ್ಯೇಯೋದ್ದೇಶಗಳನ್ನು ಸಾಧಿಸಿರುತ್ತಾರೆ. ಮತ್ತು ಇನ್ನೂ ಸಾಧಿಸಲಿದ್ದಾರೆ. ಈ ತಮ್ಮ ಧ್ಯೇಯ ಸಾಧನೆಗಾಗಿ ಅವರು ಆರಿಸಿಕೊಂಡಿರುವದು ಅತ್ಯಂತ ಶ್ರೇಷ್ಠವಾದ, ಆದರೆ ಸಾಮಾನ್ಯಜನರ ದೃಷ್ಟಿಯಲ್ಲಿ ತೀರ ಕೀಳೆಂದು ಭಾವಿಸಲ್ಪಟ್ಟಿರುವ ಭಿಕ್ಷಾವೃತ್ತಿ. ಕೇವಲ ಭಿಕ್ಷಾವೃತ್ತಿ ಮಾತ್ರದಿಂದಲೇ ಅತ್ಯುನ್ನತವಾದ ಕಾರ್ಯ ಸಾಧನೆಗಳನ್ನು ಮಾಡಿ ತೋರಿಸಿರುವ ಶ್ರೀ ಸ್ವಾಮಿಜಿಯವರ ಕಾಯಕವು ಒಂದು ಪವಾಡವೇ ಆಗಿದೆ ಎನ್ನಬಹುದು. 'ಶಾಂತಾ ವಿದ್ವಾಂಸೋಭೈಕ್ಷ್ಯಚರ್ಯಾಂ ಚರಂತಃ' ಎಂದು ಉಪನಿಷತ್ತಿನಲ್ಲಿ ಭಿಕ್ಷಾವೃತ್ತಿಯೆಂಬುದು ಜ್ಞಾನಿಗಳ ಗುರುತು ಎಂದೇ ತಿಳಿಸಿದೆ. ಇದನ್ನು ಪರ್ಯಾಲೋಚಿಸಿದರೆ ಸ್ವಾಮಿಜಿಯವರು ಸ್ಥಿತಪ್ರಜ್ಞರೂ, ಲೋಕ ಸಂಗ್ರಹಕ್ಕಾಗಿ ಕರ್ಮಗಳನ್ನು ಕೈಗೊಂಡಿರುವ ಜ್ಞಾನಿಗಳೂ ಆಗಿರುತ್ತಾರೆಂಬುದು ಸ್ಪಷ್ಟ.

ಶ್ರೀ ಸ್ವಾಮಿಜಿಯವರು ತಮ್ಮ ಈ ತ್ಯಾಗ ಜೀವನವನ್ನು ಸೇವಾರೂಪವಾಗಿ ಮಾರ್ಪಡಿಸಿಕೊಂಡಿರುವದೊಂದು

ಅಪೂರ್ವ ಸನ್ನಿವೇಶವೆಂದೇ ಹೇಳಬೇಕು. ಸಾಮಾನ್ಯವಾಗಿ ತ್ಯಾಗಿಗಳೆಂದರೆ ಪ್ರಪಂಚವನ್ನೆಲ್ಲ ಬಿಟ್ಟು ಎಲ್ಲಿಯೋ ಹಿಮಾಲಯದಲ್ಲಿ ಒಂದು ಕಡೆ ಕುಳಿತಿರುವವರು ಎಂಬ ಭಾವನೆ ತಟ್ಟನೆ ಬರುತ್ತದೆ. ಆದರೆ ಸ್ವಾಮಿಯವರ ತ್ಯಾಗವು ಅಂಥದ್ದಲ್ಲ. ಜನರ ಮಧ್ಯದಲ್ಲಿದ್ದುಕೊಂಡು ಅಹಂಕಾರ ಮಮಕಾರಗಳನ್ನು ಮಾತ್ರ ತ್ಯಾಗಮಾಡಿ ಅದರಿಂದ ದೊರೆತ ಆತ್ಮಬಲವನ್ನು ಜನತಾ ರೂಪಿಯಾದ ಜನಾರ್ದನನ ಸೇವೆಗೆ ವಿನಿಯೋಗ ಮಾಡಿರುವ ಅವರ ಅಸಾಧಾರಣವಾದ ಧ್ಯೇಯವನ್ನು ನೋಡಿದರೆ ಅವರನ್ನು ಯಾರಿಗೆ ಹೋಲಿಸಬೇಕೆಂಬುದೇ ತಿಳಿಯದಾಗಿದೆ. ಹೀಗೆ ನಿರೂಪಮಾನರೂ ನಿರಭಿಮಾನಿಗಳೂ ನಿರ್ವಿಷಯರೂ ನಿಸ್ಸಂಗರೂ ನಿತ್ಯಸೇವಾನಿರತರೂ ನಿಸ್ವಾರ್ಥಜೀವಿಗಳೂ ಆದ ಸ್ವಾಮಿಗಳು ಈ ಕಲಿಯುಗದಲ್ಲಿ ಮತ್ತೊಮ್ಮೆ ತ್ಯಾಗ ಜೀವನದ ಆದರ್ಶವನ್ನು ಪರಿಪಾಲಿಸಿ ತೋರಿಸಿರುವ ಮಹಾತ್ಮರಾಗಿರುತ್ತಾರೆ.

ಶ್ರೀ ಸ್ವಾಮಿಯವರ ವ್ಯಕ್ತಿತ್ವವು ನಾನಾ ಮುಖವಾದುದೆಂದು ಅವರನ್ನು ಚೆನ್ನಾಗಿ ಬಲ್ಲವರು ಹೇಳುತ್ತಾರೆ. ಆದರೆ ನಾನು ಅಷ್ಟು ಸಮೀಪವರ್ತಿಯಲ್ಲವಾದ್ದರಿಂದ ದೂರದಿಂದಲೇ ನೋಡಿದಾಗ ಅವರಲ್ಲಿ ಕಂಡುಬಂದ ಒಂದೆರಡು ಆದರ್ಶಗಳನ್ನು ಮಾತ್ರ ಇಲ್ಲಿ ಪ್ರಸ್ತಾಪಿಸಿರುತ್ತೇನೆ. ಶ್ರೀ ಸ್ವಾಮಿಗಳವರು ದೈಹಿಕ ಮಾನಸಿಕ ಎರಡೂ ಪ್ರಪಂಚಗಳನ್ನೂ ಗೆದ್ದಿರುವ ವೀರಪುರುಷರು. ಅವರು ತಮ್ಮ ಯೋಗಾಸನಾದಿ ಸಾಧನಗಳಿಂದ ಶರೀರವನ್ನು ಅತ್ಯಂತ ಹದವಾಗಿಟ್ಟುಕೊಂಡು 'ಶರೀರಂ ಮೇ ವಿಚಕ್ಷಣಮ್' ಎಂಬ ಉಪನಿಷದುಕ್ತಿಯನ್ನು ಸಾರ್ಥಕಗೊಳಿಸಿರುತ್ತಾರೆ. ಹಾಗೆಯೇ ಶರೀರ ಜಯದಿಂದ ಲಭಿಸಿರುವ ಮನೋ ಜಯವನ್ನು ಅವಲಂಬಿಸಿ ತಮ್ಮ ತನುಮನಗಳನ್ನು ಅವರು ಸೇವಾ ಧರ್ಮರೂಪದಲ್ಲಿ ಜಗತ್ತಿಗೆ ಹಂಚುತ್ತಿರುವುದು ಹೆಚ್ಚಿನ ಆದರ್ಶವೆಂಬುದರಲ್ಲಿ ಸಂಶಯವಿಲ್ಲ.

ಭಗವಂತನು ಗೀತೆಯಲ್ಲಿ 'ನಮೇಪಾರ್ಥಾಸ್ತಿ ಕರ್ತವ್ಯಮ್' ಎಂದು ತಿಳಿಸಿ, ಆದರೂ ಕರ್ಮನಿರತನಾಗಿರುತ್ತೇನೆ' ಎಂದು ಹೇಳಿಕೊಂಡಿರುವಂತೆ ಸ್ವಾಮಿಯವರಿಗೂ ಸ್ವಂತವಾದ ಕರ್ತವ್ಯಗಳೇನೂ ಇಲ್ಲ. ಆದರೂ ಲೋಕಾನುಗ್ರಹಕ್ಕಾಗಿ ಅವರು ಸ್ಥಾಪಿಸಿರುವ ಅನಾಥಸೇವಾಶ್ರಮವೂ ಅದರ ಅಂಗಸಂಸ್ಥೆಗಳೂ ಶ್ರೀಸ್ವಾಮಿಗಳವರ ಮಹಿಮಾದ್ಯೋತಕವಾಗಿವೆ. ಎಲ್ಲವನ್ನೂ ತ್ಯಾಗಮಾಡಿದವನಿಗೆ ಪ್ರಶಸ್ತಿಗಳ ಆಶೆ–ಆಕಾಂಕ್ಷೆಗಳಾದರೂ ಇರಲು ಹೇಗೆ ಸಾಧ್ಯ ? ಅದಕ್ಕೆ ತಕ್ಕಂತೆ ಅವರು ತಮಗೆ ರಾಜ್ಯಸರ್ಕಾರದವರು ಕೊಟ್ಟ ಪ್ರಶಸ್ತಿಯನ್ನೂ ವಿನಯದಿಂದಲೇ ತ್ಯಾಗಮಾಡಿದರು. ಹೀಗೆ ಯಾವ ಸ್ಥಾನಮಾನಗಳನ್ನು ಬಯಸದೆ 'ವಿಶ್ವಪ್ರೇಮ'ವೆಂಬ ಭಗವಂತನ ವಿಭೂತ್ಯುಪಾಸನೆಯನ್ನು ಕೈಗೊಂಡು ಎಲ್ಲೆಲ್ಲೂ ತಮ್ಮ ಆತ್ಮಾನಂದವನ್ನು ಕಂಡುಕೊಳ್ಳುತ್ತಾ ಅದರಲ್ಲಿಯೇ ನಿರತರಾಗಿ ಬಾಳುತ್ತಿರುವ ಶ್ರೀ ಸ್ವಾಮಿಗಳವರಿಗೆ ನನ್ನ ಭಕ್ತಿಪೂರ್ವಕವಾದ ಪ್ರಣಾಮಗಳನ್ನು ಸಮರ್ಪಿಸಿ ಅವರ ಲೋಕಸಂಗ್ರಹ ಕಾರ್ಯವು ನಿರಂತರವಾಗಿ ನಡೆಯುತ್ತಿರಲೆಂದು ಭಗವಂತನಲ್ಲಿ ಬೇಡುತ್ತೇನೆ.

ಮರಳು ಗಾಡಿನ ಮಧ್ಯೆ ಇರುವ ಜಲವಸತಿಯಂತೆ ಆಶಾದಾಯಕವಾಗಿದೆ ಈ ಆಶ್ರಮ.

—ಸಿ. ವಿ. ರಾಜಗೋಪಾಲ್

ಬೀಡರೆಡ್ಡಿಹಳ್ಳಿ ಪಂಪಣ್ಣ

ಜ್ಞಾನ ಬೆಳಗುವ ದೀವಿಗೆ

ಜ್ಞಾನದಾನಕೆ, ಯೋಗ ವಿದ್ಯೆಗೆ ದೀನ ದಲಿತರ ಸೇವೆಗೆ,
ವಿಶ್ವಶಾಂತಿಗೆ, ವಿಶ್ವಸೇವೆಗೆ, ವಿಶ್ವಸ್ನೇಹದ ಬೆಸುಗೆಗೆ,
ಮುಡುಪಿದೋ ! ಮಲ್ಲಾಡಿ ಹಳ್ಳಿಯ ಜ್ಞಾನ ಬೆಳಗುವ ದೀವಿಗೆ ||

ಬಡವ, ಬಲ್ಲಿದ, ಉತ್ತಮಾಧಮ, ಮೇಲು ಕೀಳೆನುವಹಮಿಕೆ
ರಾಜಕೀಯತೆ, ಜಾತಿಮತ, ಒಳ ಭೇದ, ಒಣ ಬೂಟಾಟಿಕೆ,
ಇಲ್ಲವೋ, ಇಲ್ಲಿಲ್ಲ !—ಇದು ನಿಜ ಪಾರಮಾರ್ಥಿಕ ವೇದಿಕೆ ||

ಶ್ರಾಂತ, ಸಂತ, ಮಹಂತ, ಸಾತ್ವಿಕ, ಸೂರಿ, ಸೇವ್ಯ, ಸಮರ್ಥಕ
ಪರಮ 'ತಿರುಕ', ಪ್ರಸಿದ್ಧ ವೈದ್ಯ, ಪ್ರಬುದ್ಧಮಲ್ಲ, ಪ್ರಯೋಜಕ,
ಇವರೆ ನೋಡೀಂ ! 'ರಾಘವೇಂದ್ರಜಿ'–ಆಶ್ರಮದ ಸಂಸ್ಥಾಪಕ ||

ಓ ರಾಘವೇಂದ್ರ !

ನಿಮ್ಮ ತವದೊಣಿಯಲ್ಲಿನೆಲ್ಲಾ ಬಾಣಗಳು ಗುರಿಮುಟ್ಟಲಿ,
ನಿಮ್ಮಭೀಷ್ಟಗಳೆಲ್ಲ ನಿಮ್ಮೀ ಜೀವಿತದಿ ನೆರವೇರಲಿ,
ನಿಮ್ಮ ಆಶ್ರಮ ಬೆಳೆದು ನಿಲ್ಲಲಿ, ವಿಶ್ವಶ್ರೇಷ್ಠತೆ ಪಡೆಯಲಿ, ||

* * * *

ಜೈವಾತೃಕಾ, ! ಜೇತಾರ, ! ನಿನಗಿದೋ, ನನ್ನನಂತ ಪ್ರಣಾಮಗಳ್ !

"ನಾ ಕಂಡಂತೆ ನನ್ನ ತಾತನವರು"

ನನಗೆ ತಾತನವರ ಪರಿಚಯವಾದದ್ದು ಆಕಸ್ಮಿಕವೇ. ತಾತನವರ ಪರಿಚಯವಾಗುವ ಮುಂಚೆ ನನಗೆ ಯಾವ ಸ್ವಾಮಿಗಳಿಗೂ ಕೈಮುಗಿದು ಗೊತ್ತಿರಲಿಲ್ಲ. ಹೀಗಿರುವಾಗ ನಾನು ಕಾಲೇಜಿನಲ್ಲಿ ಓದುತ್ತಿರುವಾಗ ನನಗೆ ಶ್ರೀರಾಮಕೃಷ್ಣರಿಗೆ ಸಂಬಂಧಪಟ್ಟ ಕೆಲವು ಗ್ರಂಥಗಳು ದೊರೆತವು. ಅವುಗಳು ನನ್ನ ಮೇಲೆ ಬಹಳ ಪರಿಣಾಮ ಬೀರಿದವು. ಶ್ರೀ ಗುರುಮಹಾಶಯರ ನಿಷ್ಕಪಟಪ್ರೇಮ, ಮಗುವಿನ ಮುಗ್ಧತೆ-ಸರಳತೆ, ಅವರಿಗೆ ಶಿಷ್ಯರಲ್ಲಿರುವ ಅಖಂಡ ಪ್ರೇಮ-ಇವೆಲ್ಲ ನನ್ನನ್ನು ಬಹಳಷ್ಟು ಆಕರ್ಷಿಸಿತು. ಅವರೇ ನನ್ನ ಆಂತರಿಕ ಗುರುವಾದರು. ಅಂದಿನಿಂದ ನಾನು ಗುರುವಿನಲ್ಲಿ ಪ್ರಾರ್ಥಿಸತೊಡಗಿದೆ — "ಗುರುದೇವ ನನಗೆ ಮಾರ್ಗದರ್ಶನ ನೀಡಲು ನಿನ್ನ ಸ್ವಭಾವದ ಗುರುವನ್ನೇ ಕೊಡು"—ಎಂದು. ಕಾರಣ ನನಗೆ ಜಾತಿರೋಗನಿರತಕ್ಕ ಆಡಂಬರದ, ಉತ್ಸವದ, ಕಪಟಸ್ವಾಮಿಗಳು ಹಿಡಿಸುತ್ತಿರಲಿಲ್ಲ. ಅಲ್ಲದೇ ಈಗಿನ ಕಾಲದಲ್ಲಿ ನಿಜವಾದ ಗುರುಗಳನ್ನು ಹುಡುಕುವುದೇ ಕಠಿಣ. ಹೀಗೆಯೇ ಒಂದೆರಡು ಮಾಸಗಳು ಕಳೆದ ಬಳಿಕ—ಶ್ರೀ ಗುರುದೇವರು ಸ್ವಪ್ನದಲ್ಲಿ ಈ ಆಶ್ರಮಕ್ಕೆ ಹೋಗುವಂತೆ ನಿರ್ದೇಶಿಸಿದರು. ಆ ಸ್ವಪ್ನ ಬಿದ್ದ ಒಂದು ವಾರಕ್ಕೇ ನಾನು ನನ್ನ 'ಗುರುದೇವನ', ತಾತನ ದರ್ಶನ ಪಡೆದೆ. ಮೊದಲನೇ ನೋಟಕ್ಕೆ ನನ್ನ ತನುಮನವೆರಡೂ ಅವರಿಗೆ ಶರಣಾಯ್ತು. ಅವರ ಸರಳತೆ, ಕರುಣೆ, ನಿಷ್ಕಲ್ಮಷಪ್ರೇಮ ನನ್ನನ್ನು ಮುಗ್ಧಗೊಳಿಸಿತು. ಪ್ರಥಮದಿನ ನಾನು ಆಧ್ಯಾತ್ಮಿಕ ವಿಷಯದ ಬಗ್ಗೆ ಕೆಲವು ವಿಚಾರಗಳನ್ನು ಅವರಲ್ಲಿ ಕೇಳಿ ತಿಳಿದುಕೊಂಡೆ—ಮಾತನಾಡುತ್ತ ಅವರು "ನೋಡಮ್ಮಾ ಪಟ್ಟಣಗಳಲ್ಲಿರುವ ಬಂಗಲೆಗಳಿಗೆ ಕಾರ್ಖಾನೆಗಳಿಗೆ ದೀಪ ಹಚ್ಚುವ ಆವಶ್ಯಕತೆ ನಮಗೀಗಿಲ್ಲ-.ಗುಡಿಸಲುಗಳಿಗೆ ಹೋಗಿ ಪ್ರಣತೆ ಬೆಳಗಿಸುವ ಆವಶ್ಯಕತೆ ಬಹಳವಿದೆ—"ಎಂದರು. ಮತ್ತು ನನ್ನ ಮನದಲ್ಲಿ ಆಶ್ರಮವೆಂದರೆ—ಮತ್ತು ಅಲ್ಲಿಯ ಜನಗಳ ಬಗ್ಗೆ ಏನೇನೂ ಕಲ್ಪನೆಗಳನ್ನು ಬೆಳೆಯಿಸಿಕೊಂಡಿದ್ದೆ. ಇವನ್ನು ಉದ್ದೇಶಿಸಿ ತಾತನವರೆಂದರು—"ನೋಡೂ ಬೆಳ್ಳಗಿರುವುದೆಲ್ಲ ಹಾಲಲ್ಲ—ಸಮುದ್ರ ಮೇಲ್ನೋಟಕ್ಕೆ ಎಷ್ಟು ಪ್ರಶಾಂತವಾಗಿರುತ್ತದೆ. ಆದರೆ ಒಳಗಡೆ ಎಷ್ಟು ವಿಷಜಂತುಗಳಿರುತ್ತವೆಯೋ ಯಾರು ಬಲ್ಲರು ? ಹೀಗೆಯೇ ಈ ಪ್ರಪಂಚದ ವಿಷಯವೂ"—ಎಂದರು. ನಾನು ಅಲ್ಲಿಂದ ಹೊರಡುವಾಗ 'ಆಗಾಗ್ಗೆ ಬರುತ್ತಾ ಇರು' ಎಂದು ತಲೆಯ ಮೇಲೆ ಕೈಇರಿಸಿ ಹರಸಿ ಕಳುಹಿದರು. ನನ್ನೂರಿಗೆ ಮರಳಿದ ಬಳಿಕ—ತಾತ ಹೇಳಿದ್ದ ವಿಷಯಗಳನ್ನು ಚೆನ್ನಾಗಿ ಮನನಮಾಡಿದೆ—ನಂತರ ನಾನು ಸರ್ವಸ್ವವನ್ನೂ ತ್ಯಾಗಮಾಡಿ ಆಶ್ರಮಕ್ಕೇ ಸೇರುವೆನೆಂದು ಪತ್ರಬರೆದೆ—ಆದರೆ ಆರು ತಿಂಗಳು ಕಾಲ ಬೇಡವೆಂದು ಸತಾಯಿಸಿ ಕಟ್ಟಕಡೆಯಲ್ಲಿ ತಂದೆಯ ಅಪ್ಪಣೆ ಚೀಟಿ ಪಡೆದು ಬಂದನಂತರ ತಮ್ಮಲ್ಲಿ ನನ್ನನ್ನು ಸೇರಿಸಿಕೊಂಡರು. ಆದರೂ ನನಗೆ ಅನುಮಾನವಿತ್ತು—ನನ್ನನ್ನು ಇಟ್ಟುಕೊಳ್ಳುವರೋ ಅಥವಾ ಎರಡೇ ದಿನಕ್ಕೇ ಕಳುಹಿಸುವರೋ ಎಂದು. ಯಾಕೆಂದರೆ ತಾತ ನಿಂತರೆ ಕುಳಿತರೆ ಶಿಸ್ತಿನವರು ಆ ಅನುಮಾನ ಒಂದು

ವಾರ ಕಳೆದ ಬಳಿಕ ಪರಿಹಾರವಾಯ್ತು. ಅಂದಿನಿಂದಲೇ ನನಗೆ ಅವರು ಯೋಗಸಾಧನೆಗಳನ್ನು ಕಲಿಸಲು ಪ್ರಾರಂಭಮಾಡಿದರು. ಈ ರೀತಿ ನನ್ನ ಹೊಸ ಜೀವನ ಆರಂಭವಾಯ್ತು. ಹೆಜ್ಜೆಹೆಜ್ಜೆಗೂ ಅವರು ನನ್ನನ್ನು ತಿದ್ದುತ್ತಾ ಹೊಸರೂಪವನ್ನು ಕೊಡಲು ಶ್ರಮಿಸುತ್ತಿದ್ದರು. ಅವರಿರುವ ಮಂದಿರವನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ನನಗೆ ವಹಿಸಿದರು. ಈ ಅವಕಾಶ ನನಗೆ ದೊರಕಿದ್ದು ನನ್ನ ಎಷ್ಟೋ ಜನ್ಮದ ಪುಣ್ಯವೇ ಸರಿ. ಇದರಿಂದ ನನಗೆ ತಾತನವರ ಸಾಮೀಪ್ಯ ಬೆಳಿಗ್ಗೆ $3\frac{1}{2}$ ಘಂಟೆಯಿಂದ ರಾತ್ರಿ 10 ಘಂಟೆಯವರೆವಿಗೂ ದೊರಕಲು ಸಾಧ್ಯವಾಯ್ತು. ಅವರ ನಡುವಳಿಕೆಯಿಂದಲೂ—ಒಂದೊಂದು ಮಾತಿನಿಂದಲೂ ಎಷ್ಟೋ ಹೊಸ ವಿಷಯಗಳು ತಿಳಿಯುವಂತಾಯ್ತು. ಅದನ್ನು ನಾನೊಬ್ಬಳೇ ಅನುಭವಿಸಿ ಆನಂದಿಸದೇ ನನ್ನ ಉಳಿದೆಲ್ಲ ಸೋದರ ಸೋದರಿಯರೂ ಇದರಲ್ಲಿ ಪಾಲ್ಗೊಳ್ಳಲೆಂಬ ಆಶೆಯಿಂದ ನನ್ನ ಅನುಭವಕ್ಕೆ ಬಂದ ಕೆಲವು ಘಟನೆಗಳನ್ನೂ ಮತ್ತು ನಾನು ತಿಳಿದ ಇವರ ಕೆಲವು ವಿಚಾರಗಳನ್ನೂ ಬರೆಯುತ್ತಿದ್ದೇನೆ—

ವಜ್ರಾದಪಿ ಕಠಿಣ, ಕುಸುಮಾದಪಿ ಮೃದು ಎಂಬ ಮಾತು ನಮ್ಮ ತಾತನಿಗೆ ಚೆನ್ನಾಗಿ ಒಪ್ಪಿಗೆಯಾಗುತ್ತದೆ. ಶಿಸ್ತು ಮೀರಿದರೆ, ತಪ್ಪು ಮಾಡಿದರೆ, ಅನೃತವಾಡಿದರೆ, ಅವರು ವಜ್ರಕ್ಕಿಂತಲೂ ಕಠಿಣರಾಗುತ್ತಾರೆ; ಉಳಿದ ಸಮಯದಲ್ಲಿ ಅವರ ಹೃದಯ ಹೂವಿಗಿಂತಲೂ ಮೃದುವಾಗಿರುತ್ತದೆ. ಮಕ್ಕಳೊಡನೆ ಮಕ್ಕಳಾಗಿ ಕಿಲಿಕಿಲಿ ನಗುತ್ತಿರುತ್ತಾರೆ. ಕುಣಿದು ಕುಪ್ಪಳಿಸುತ್ತಿರುತ್ತಾರೆ. ಯಾರೇನಾದರೂ ತಪ್ಪು ಮಾಡಿದರೆ—ತಾತನವರು ದೂರ್ವಾಸಮಹರ್ಷಿಗಳೇ ಆಗುತ್ತಾರೆ—ಇನ್ನೊಂದು ನಿಮಿಷಕ್ಕೇ ಅವರು ಆ ವ್ಯಕ್ತಿಯ ಬಳಿ ನಗುನಗುತ್ತಾ ಮಾತನಾಡುತ್ತಿರುತ್ತಾರೆ. ನನಗಿದು ವಿಚಿತ್ರವೆನಿಸಿ ಒಮ್ಮೆ ಅವರನ್ನು ಪ್ರಶ್ನಿಸಿದೆ—ತಾತ ನೀವು ಅಷ್ಟೊಂದು ಕೋಪ ಮಾಡಿಕೊಳ್ಳುವಿರಲ್ಲಾ—ನಿಮ್ಮ ದೇಹಕ್ಕೆ ಮನಸ್ಸಿಗೆ ತೊಂದರೆಯಾಗುವುದಿಲ್ಲವೆ? ಅಲ್ಲದೇ ಮರುಕ್ಷಣದಲ್ಲೇ ನೀವು ಮೊದಲಿನಂತೆ ಶಾಂತಚಿತ್ತರಾಗಿ ಆ ವ್ಯಕ್ತಿಯ ಬಳಿ ಏನೂ ನಡೆದೇ ಇಲ್ಲವೋ ಎಂಬಂತೆ ಪ್ರೇಮದಿಂದ ವರ್ತಿಸುವಿರಲ್ಲಾ, ಅದು ಹೇಗೆ? ಎಂದು ಕೇಳಿದೆ. ಆಗವರು "ನೋಡು ಮಗು ಇದೇ ನನಗೂ ಇತರರಿಗೂ ಇರುವ ಭೇದ. ನಾನೆಷ್ಟು ಕೋಪ ಮಾಡಿಕೊಂಡರೂ ಅದು ಹೊರಗಷ್ಟೇ, ಒಳಗೇನೂ ಇರದು ಅಲ್ಲದೆ ನಾನು ಯಾವ ವ್ಯಕ್ತಿಯನ್ನೂ ದ್ವೇಷಿಸುವುದಿಲ್ಲ—ಆ ವ್ಯಕ್ತಿಯಲ್ಲಿರತಕ್ಕ ದೋಷವನ್ನು ದ್ವೇಷಿಸುವೆನಷ್ಟೆ—ಆ ದೋಷ ದೂರಾಯಿತೆಂದರೆ ಆ ವ್ಯಕ್ತಿ ನನಗೆ ಹತ್ತಿರದವನೇ ಆಗುವನು; ಉದಾಹರಣೆಗೆ ನಿನ್ನ ಬಳಿಯಿರುವ ಒಂದು ಚಿನ್ನದ ತಟ್ಟೆ ಬಹಳ ಕೊಳೆಯಾಗಿದ್ದರೆ ಅದನ್ನು ಬಿಸಾಡುವೆಯೋ ಅಥವಾ ಚೆನ್ನಾಗಿ ತೊಳೆದು ಅದನ್ನು ಪುನಃ ಉಪಯೋಗಿಸುವೆಯೋ" ಎಂದು ನನ್ನನ್ನೇ ಪ್ರಶ್ನಿಸಿದರು. ಆಗ ನನಗೆ ಅವರ ಈ ವಿಚಾರ ಚೆನ್ನಾಗಿ ಅರ್ಥವಾಯ್ತು.

ತಾತನವರ ಶಿಸ್ತು ಎಂದರೆ ಎಂಥವರೂ ನಡುಗಬೇಕು. ಕುಳಿತರೆ, ನಿಂತರೆ ಶಿಸ್ತು ಅವರದು. ಶಿಸ್ತೇ ನನ್ನ ಆಸ್ತಿ ಎನ್ನುತ್ತಾರೆ ಅವರು. ನಾನು ಆರೇಳು ವರ್ಷಗಳಿಂದ ಅವರನ್ನು ನೋಡಿದ್ದೇನೆ—ಏಳುವುದರಲ್ಲಿ, ಸಾಧನೆಯಲ್ಲಿ, ಪೂಜೆಯಲ್ಲಿ, ಕೆಲಸದಲ್ಲಿ, ಮಲಗುವುದರಲ್ಲಿ ಎಲ್ಲದರಲ್ಲೂ ಶಿಸ್ತೇ. ಬೆಳಗಿನ ಜಾವ 3-30 ಘಂಟೆಗೆ, ಧ್ಯಾನಕ್ಕೆ ಕುಳಿತವರು ನಿತ್ಯ ಸರಿಯಾಗಿ 5-15 ಘಂಟೆಗೆ ಸೂರ್ಯ ನಮಸ್ಕಾರ ಮಾಡಲು ಮೇಲೆ ಬರುವರು. ಒಂದು ಸೆಕೆಂಡು ಕೂಡಾ ವ್ಯತ್ಯಾಸವಿರುವುದಿಲ್ಲ. ಒಂದು ವೇಳೆ ಗಡಿಯಾರದಲ್ಲಿ ವ್ಯತ್ಯಾಸವಿದ್ದರೆ, ಅದು ನಂತರ ಕಾಲವನ್ನು ಸರಿಪಡಿಸುವಾಗ (Time set) ನಮಗೆ ತಿಳಿಯುತ್ತದೆ- ಆ ತಾತನವರು ಸಮಯ ತಪ್ಪಿಲ್ಲ, ಗಡಿಯಾರ ತಪ್ಪಿದೆ-ಎಂದು. ಒಮ್ಮೆ ನಾನೀ ಬಗ್ಗೆ ಚಕಿತಗೊಂಡು ಕೇಳಿದಾಗ, ಅವರು ತಮ್ಮ ಶಿರವನ್ನು ತೋರಿಸುತ್ತಾ "ಇದರಲ್ಲಿ ನನ್ನ ಗಡಿಯಾರವಿದೆ ಇದು ಯಾವತ್ತೂ ನಿಲ್ಲುವುದಿಲ್ಲ, ಹಿಂದುಮುಂದಾಗುವುದಿಲ್ಲ" ಎಂದರು. ಸಾಮಾನ್ಯರಿಗೆ ಇವರ ಶಿಸ್ತನ್ನು ಅನುಸರಿಸುವುದು ಬಹಳ ಕಷ್ಟ. ನಾನಂತೂ ದಿನ ನಿತ್ಯ ಯಾವುದಕ್ಕಾದರೂ ಬೈಸಿಕೊಳ್ಳುತ್ತಲೇ ಇರುತ್ತೇನೆ. ಸಾಮಾನುಗಳನ್ನಾದರೂ ಅಷ್ಟೇ. ಅದು ಎಲ್ಲಿರಬೇಕೋ ಅಲ್ಲೇ ಇಡಬೇಕು.

ಅವರು ಹೇಳುವುದು ಕತ್ತಲಲ್ಲಿ ಹುಡುಕಿದರೂ ಯಾವ ವಸ್ತುವಾದರೂ ಸಿಗಬೇಕು ಎಂದು. ಒಮ್ಮೆ ಆತ್ಮೀಯ ಡಾಕ್ಟರ್ ಒಬ್ಬರು ಬಂದು, ತಾತನವರ ಕನ್ನಡಕದ ಹರಳನ್ನುಬದಲಾಯಿಸದೆ ಬಹಳ ವರ್ಷಗಳಾಯ್ತು, ಅದನ್ನೀಗ ಬದಲಾಯಿಸಬೇಕೆಂದರು. ಅದಕ್ಕಾಗಿ ಅವರು ಹಳೆಯ ಪ್ರಿಸ್ಕ್ರಿಪ್‌ಶನ್ ಕೇಳಿದರು. ನಾನೂ ಹತ್ತಿರದಲ್ಲೇ ಇದ್ದೆ. ತಾತನವರು ನನ್ನೆಡೆಗೆ ಬೀಗದಕೈಕೊಟ್ಟು "ನೋಡು ಬೀರುವಿನಲ್ಲಿ ಮೂರನೆಯ ಕಪಾಟಿನಲ್ಲಿರುವ ಸಣ್ಣ ಕಪಾಟಿನ ಬಲ ಭಾಗದಲ್ಲಿ, ಹಸಿರು ರೊಟ್ಟಿನ ಡಬ್ಬದ ಕೆಳಗಡೆ ಕಣ್ಣಿನ ಪ್ರಿಸ್ಕ್ರಿಪ್‌ಶನ್ ಪತ್ರವಿಟ್ಟಿರುವೆ. ತೆಗೆದುಕೊಂಡು ಬಾ" ಎಂದರು. ನಾನು ಹೋಗಿ ನೋಡಿದರೆ ಕಿಂಚಿತ್ತೂ ವ್ಯತ್ಯಾಸವಿಲ್ಲದೇ ಅವರು ಹೇಳಿದಲ್ಲೇ ಇತ್ತು. ಇದು ಸುಮಾರು 5 ವರ್ಷಗಳ ಹಿಂದೆ ಇಟ್ಟದ್ದು. ನಂತರ ಹೇಳಿದರು "ನೋಡಿದೆಯಾ ವಸ್ತುಗಳನ್ನು ಆಯಾ ಸ್ಥಳದಲ್ಲಿ ಇಟ್ಟರೆ ಎಷ್ಟು ಉಪಯೋಗ. ಹುಡುಕಾಟದ ಸಮಯವನ್ನು ಉಳಿಸುತ್ತದೆ. ಸಮಯಕ್ಕೆ ಬೇಕೆಂದಾಗ ಕೂಡಲೇ ಸಿಗುತ್ತದೆ. ಮನಸ್ಸಿನ ಕಳವಳಕ್ಕೆ ಇದು ಆಸ್ಪದಕೊಡುವುದಿಲ್ಲ"ವೆಂದು ತಿಳಿಸಿದರು.

ತಾತನವರಿಗೆ ಅಗಾಧವಾದ ನೆನಪಿನ ಶಕ್ತಿ ಇದೆ. ನಾಲ್ಕಾರು ದಶಕಗಳ ಹಿಂದೆ ಯಾರೊಡನೆ ಎಲ್ಲಿ ಏನು ಮಾತನಾಡಿದ್ದೆ–ಎಂಬುದನ್ನು ಅಕ್ಷರಶಃ ಹೇಳುತ್ತಿರುತ್ತಾರೆ ; ಆಗವರು ಯಾವ ಬಟ್ಟೆ ತೊಟ್ಟಿದ್ದರು, ಯಾವ ವಾರವಾಗಿತ್ತು, ಪಕ್ಕದಲ್ಲಿ ಯಾರಿದ್ದರು–ಎಂಬೆಲ್ಲ ವಿಷಯಗಳನ್ನೂ ತಪ್ಪದೇ ಹೇಳುತ್ತಾರೆ. ಎಷ್ಟೋ ಜನ ಆತ್ಮೀಯರು ತಾತನವರ ಈ ನೆನಪಿನ ಶಕ್ತಿ ಬಗ್ಗೆ ಆಶ್ಚರ್ಯ ವ್ಯಕ್ತಪಡಿಸಿ ಕೇಳುತ್ತಿರುತ್ತಾರೆ—"ಸ್ವಾಮೀಜಿ ವಯಸ್ಸಾದಂತೆ ನೆನಪಿನ ಶಕ್ತಿ ಕಮ್ಮಿಯಾಗುತ್ತದೆ ಎನ್ನುವರು. ಆದರೆ ತಮಗೆ ವಯಸ್ಸಾದಂತೆಲ್ಲಾ ಅದು ಜಾಸ್ತಿ ಯಾಗುತ್ತಲೇ ಹೋಗುತ್ತಿರುವಂತೆ ತೋರುತ್ತದೆ. ನಮಗಂತೂ, ದಿನೇ ದಿನೇ ನೆನಪಿನ ಶಕ್ತಿ ಕಮ್ಮಿಯಾಗುತ್ತಲೇ ಇದೆ. ಆದ್ದರಿಂದ ನಿಮ್ಮ ನೆನಪಿನ ಶಕ್ತಿಯ ಗುಟ್ಟೇನು" ಎಂದು ಕೇಳುವರು. ಆಗ ತಾತನವರು ಮುಗ್ಧವಾಗಿ ನಗುತ್ತಾ "ಇದರಲ್ಲಿ ಗುಟ್ಟಿನ ವಿಷಯ ಏನೂ ಇಲ್ಲ, ಚೆನ್ನಾಗಿ ಧ್ಯಾನ ಮಾಡಿದರೆ ನೆನಪಿನ ಶಕ್ತಿ ತಾನಾಗಿ ಹೆಚ್ಚುತ್ತದೆ" ಎನ್ನುವರು.

ತಾತನವರು ಭಾಷಣಕಾರರಲ್ಲ. ಆದರೆ ಅಂದವಾಗಿ–ಸರಳವಾಗಿ–ಹೃದಯಕ್ಕೆ ನಾಟುವಂತೆ ಬರೆಯ ಬಲ್ಲರು. ಭಾಷಣ ಮಾಡಬೇಕಾದರೆ ಅವರಿಗೆ ತಲೆನೋವು ; ಅವರೂ ಮಾತನಾಡಿದರೆ ಅಚ್ಚುಕಟ್ಟು, ವಿಷಯಕ್ಕೆ ತಕ್ಕಂತೆ ನಾಲ್ಕೇ ನಾಲ್ಕು ಮಾತನಾಡಿ ಮುಗಿಸಿಬಿಡುವುದು ಅವರ ಸ್ವಭಾವ. ಒಮ್ಮೆ ಒಬ್ಬರು ಭಾಷಣ ಮಾಡಿ ಎಂದು ಕೇಳಿಕೊಂಡಾಗ ತಾತನವರು–"ಕೈಮುಗಿದು ಕೇಳಿಕೊಳ್ಳುತ್ತೇನೆ–ಭಾಷಣಕ್ಕೆ ಮಾತ್ರ ಕರೆಯಬೇಡಿ. ಬೇಕಾದರೆ ಒಂದು ಕಸಬರಿಕೆ ಕೊಟ್ಟು ಈ ಅಂಗಳವನ್ನೆಲ್ಲ ಸ್ವಚ್ಛಮಾಡು ಎಂದರೆ ಸಂತೋಷವಾಗಿ ಆ ಕೆಲಸ ಮಾಡ್ತೇನೆ" ಎಂದು ಹೇಳಿದರು.

ನಾನೊಮ್ಮೆ ಕೇಳಿದೆ, "ತಾತ ನಿಮ್ಮಲ್ಲಿ ದೇಹಬಲವಿದೆ, ದೈವಬಲವಿದೆ, ನಿಮಗೆ ಕೇಡಕು ಮಾಡಿದವರನ್ನು ಬಗ್ಗುಬಡಿಯಬಾರದೇಕೆ" ಎಂದು ; ಆಗವರೆಂದರು–"ಅವರ ಮಟ್ಟಕ್ಕೆ ನಾನಿಳಿಯಬೇಕೇ? ಪ್ರತಿ ಕ್ಷಣಕ್ಷಣಕ್ಕೂ ನಾವು ಮೇಲೇರಲು ಪ್ರಯತ್ನಿಸಬೇಕು. ಅಂತಲ್ಲಿ ಗಳಿಸಿದ ತಪಸ್ಸಿನ ಬಲವನ್ನು ದುರ್ವಿನಿಯೋಗ ಮಾಡಬೇಕೆ?" ಎಂದರು.

"ಹಾಗಾದರೆ ವಿರೋಧಿಗಳ ದುರ್ವರ್ತನೆಯನ್ನು ಹೇಗೆ ಸಹಿಸಿಕೊಂಡಿರುತ್ತೀರಾ ?" ಎಂದೆ. ಅದಕ್ಕವರು "ಅವರಿಗೆ ಸದ್ಬುದ್ಧಿ ಕೊಡು ಎಂದು ದೇವರಲ್ಲಿ ಪ್ರಾರ್ಥಿಸುತ್ತೇನೆ" ಎಂದರು. ಆಗ ನಾನು "ನೀನು ಸುತ್ತಿಗೆಯಾಗು, ಅಡಿಗಲ್ಲಾಗಬೇಡ ಎಂದು ಚೀನದ ರಾಷ್ಟ್ರಶಿಲ್ಪಿ ಮಾವೋ ಹೇಳಿದ್ದಾರೆ–ಹಾಗೆಯೇ ನೀವೂ ಏಕೆ ವರ್ತಿಸ ಬಾರದು ಎಂದೇ. ಆಗ ಒಮ್ಮೆಗೆ ತಾತನವರ ಮುಖ ಕೆಂಪಾಯಿತು ಅವರು ಬೆಂಕಿಕಾರುತ್ತಿರುವ ಅಗ್ನಿಕುಂಡ ದಂತಾದರು, ಮರುಕ್ಷಣವೇ–"ಅಮ್ಮಾ ಮಾವೋ ಭೌತಿಕವಾದಿ,ನಾಸ್ತಿಕ–ನನ್ನ ವಿರೋಧಿಗಳು ಅವರ ಅಣ್ಣಂದಿರು. ಅವರಿಗೆ ಯಾವ ಗುರುತೂ ಇಲ್ಲ. ಆದರೆ ನಾನು ದೈವವಾದಿ. ನಾನು ಸಂಪೂರ್ಣ ಪರಮಾತ್ಮನಲ್ಲಿ ಶರಣಾಗತ

ನಾಗಿದ್ದೇನೆ"—ಎಂದರು. ಅಷ್ಟಕ್ಕೇ ನಾನು ಸುಮ್ಮನಾಗದೇ (ವಾದಕ್ಕಾಗಿ) ಪುನಃ ನಾನು "ರಾಮ ರಾಮ ಎನ್ನುತ್ತಿದ್ದ ಗಾಂಧೀಜಿ-ಹರಾಮನೊಬ್ಬನಿಂದ ಹತರಾದರು" ಎಂದೆ. ಆಗ ತಾತನೆಂದರು "ಹಾಗಾದರೆ ಗಾಂಧೀಜಿ ಆಗ ಸತ್ತರೂ ಎನ್ನುತ್ತೀಯಾ ನೀನು ?" ಎಂದರು. ನಾನು "ಸತ್ತಿಲ್ಲವೇ" ಎಂದೆ ಕುತೂಹಲದಿಂದ. ಆಗ ತಾತ ವ್ಯಂಗ್ಯವಾಗಿ "ಗಾಂಧೀಜಿ ಸಾಯಲಿಲ್ಲ ಈಗ ಅವರ ಕೊಲೆಯಾಗುತ್ತಿದೆ ನಮ್ಮಂಥ ರಾಷ್ಟ್ರಪ್ರೇಮಿಗಳಿಂದ" ಎಂದರು. ಇದನ್ನವರು ಬಹಳ ನೊಂದುಕೊಂಡು ಹೇಳಿದಂತಿತ್ತು.

ತಾತನಿಗೆ ಜಾತಿದ್ವೇಷವಿಲ್ಲ. ಅವರೆಂದೂ ಯಾವ ಜಾತಿಯನ್ನೂ ದೂಷಿಸಿದುದನ್ನು ನಾನು ಕಂಡಿಲ್ಲ, ಕೇಳಿಲ್ಲ. ಎಲ್ಲ ಜನಾಂಗದವರಲ್ಲಿಯೂ ಒಳ್ಳೆಯವರೂ ಇದ್ದಾರೆ, ಕೆಟ್ಟವರೂ ಇದ್ದಾರೆ ಎಂಬುದೇ ಅವರ ವಾದ. ಶುಚಿಯಾಗಿದ್ದಲ್ಲಿ-ನಿರ್ಮಲ ಪ್ರೇಮವಿದ್ದಲ್ಲಿ ಅವರು ಯಾವ ಜನಾಂಗದ ಮನೆಗಾದರೂ-ಅಂತಸ್ತಿನ ಭೇದವಿಲ್ಲದೆ-ಹೋಗಿ ಪ್ರಸಾದ ಸ್ವೀಕರಿಸುತ್ತಾರೆ.

ಹಾಗೆಯೇ ತಾತನವರು-ತನ್ನ ಊರು, ತನ್ನ ಜನ ಎಂಬ ವಿಷಯವನ್ನು ಸ್ವಪ್ನದಲ್ಲೂ ಚಿಂತಿಸರು. ಒಮ್ಮೆ ಗೌವರ್ನರ್ ಸುಖಾಡಿಯಾ ಅವರು ಆಶ್ರಮಕ್ಕೆ ಬಂದಾಗ ತಾತನವರಿಗೆ ಅವರು ಕೇಳಿದ ಪ್ರಶ್ನೆ— "ಸ್ವಾಮೀಜಿ, ಆಪ್ ಕಹಾ ರಹನೆವಾಲೇ?" (ಸ್ವಾಮೀಜಿ ತಾವು ಯಾವ ಸ್ಥಳದವರು)-ಎಂದು. ಆಗ ತಾತನವರು "ಹಿಂದೂಸ್ಥಾನ್"=(ಹಿಂದೂಸ್ಥಾನ)-ಎಂದರು. ಆಗ ಗೌವರ್ನರ್ ಮನದಲ್ಲೆಂದುಕೊಂಡರು, ಬಹುಶಃ ತಾತ ನವರಿಗೆ ಸರಿಯಾಗಿ ಹಿಂದಿ ಅರ್ಥವಾಗದೆಂದುಕೊಂಡು ಪುನಃ "ಸ್ವಾಮೀಜಿ, ಐಸಾ ನಹೀ ಮೈ ಪೂಚ್‌ತಾಹೂಂ-ಆಪ್ ಕಾ ಜನ್ಮಸ್ಥಾನ್ ಕೌನ್‌ಸಾ ಹೈ" (ಆ ರೀತಿ ನಾನು ಕೇಳುತ್ತಿಲ್ಲ-ತಮ್ಮ ಜನ್ಮಸ್ಥಳ ಯಾವುದು? ಎಂದು) ಆಗ ತಾತನವರು —ವಹೀ ಮೈ ಜಾನ್ ಬೂಜ್‌ಕೇ ಬೋಲ್‌ತಾ ಹೂಂ-ಮೇರಾ ಜನ್ಮಸ್ಥಾನ್ ಹಿಂದೂಸ್ಥಾನ್ ಹೈ; ಔರ್ ಜಾನೇಕಾಸ್ಥಾನ್ ಖಬರ್‌ಸ್ಥಾನ್ ಹೈ" (ಅದನ್ನು ತಿಳಿದೇ ನಾನು ಹೇಳುತ್ತಿರುವೆ-ಹುಟ್ಟಿದ್ದು ಹಿಂದೂಸ್ಥಾನ, ಹೋಗುವುದು ಖಬರಸ್ಥಾನಕ್ಕೆ ಎಂದರೆ ಮಸಣಕ್ಕೆ ಎಂದು.) ಆಗವರು ಪೆಚ್ಚಾಗಿ "ಸ್ವಾಮೀಜಿ ದಯವಿಟ್ಟು ಕ್ಷಮಿಸಿ-ತಮ್ಮಂಥವರನ್ನು ನಾನು ಹೀಗೆ ಪ್ರಶ್ನಿಸಬಾರದಿತ್ತು" ಎಂದರು. ಹೀಗೆಯೇ ಒಮ್ಮೆ ಒಬ್ಬ ಮಠಾಧೀಶರು ಆಶ್ರಮಕ್ಕೆ ಬಂದಾಗ ತಾತನವರನ್ನು ಕೇಳಿದರು-"ಸ್ವಾಮೀಜಿ, ಆಶ್ರಮವನ್ನು ಬಹಳ ವೈಭವದಿಂದ ಕಟ್ಟಿದ್ದೀರಿ. ಆದರೆ ನನಗೆ ಅದೆಲ್ಲದಕ್ಕಿಂತ ಮುಖ್ಯ ನಿಮ್ಮ ಬಳಿ ಒಂದೆರಡು ಮಾತನಾಡುವುದಿದೆ-" ಎಂದರು ತಾತ ನವರು 'ಆಗಲಿ' ಎಂದರು. ಆಗವರು "ಸ್ವಾಮೀಜಿ ನಿಮ್ಮ ಜನ್ಮಸ್ಥಳ ಯಾವುದು" ಎಂದು ಕೇಳಿದರು. ತಾತ ನವರು ಕೂಡಲೇ "ಅದನ್ನೇ ನಾನು ಹುಡುಕುತ್ತಲಿರುವೆ" ಎಂದರು. ಮಠಾಧೀಶರ ಮುಖ ಕಪ್ಪಿಟ್ಟಿತು. "ನಾನು ಸನ್ಯಾಸಿಯಾಗಿ ಎಲ್ಲ ಕಟ್ಟಿಕೊಂಡಿದ್ದೇನೆ, ಇವರು ಎಲ್ಲವನ್ನೂ ಕಟ್ಟಿಕೊಂಡು ವಿರಕ್ತರಾಗಿದ್ದಾರೆ" ಎಂದು ತಿಳಿದು- "ಹೌದು ಸ್ವಾಮೀಜಿ, ನಾನೀ ಪ್ರಶ್ನೆ ನಿಮಗೆ ಮಾಡಬಾರದಾಗಿತ್ತು ಕ್ಷಮಿಸಿ" ಎಂದರು.

ಮೂರು ವರ್ಷಗಳ ಹಿಂದೆ ಒಬ್ಬ ಸುಪ್ರಸಿದ್ಧ ಯೋಗಿಗಳು ಆಶ್ರಮಕ್ಕೆ ಬಂದಿದ್ದರು. ಅವರು ತಾತ ನವರ ಧ್ಯಾನಮಂದಿರದಲ್ಲಿ ಸ್ವಲ್ಪ ಕಾಲ ಧ್ಯಾನಮಾಡಿ ನಂತರ ತಾತನವರಿಗೆ ಕೇಳಿದರು-"ನಿಮಗೆ ಕೆಲವರು ಪ್ರಾಪಂಚಿಕವಾಗಿಯೂ ಆಧ್ಯಾತ್ಮಿಕವಾಗಿಯೂ ತೊಂದರೆ ಕೊಡುತ್ತಿದ್ದಾರಲ್ಲವೆ ?" ಎಂದು. ತಾತನವರು ಹೌದೆಂದರು. ಆಗ ಆ ಯೋಗಿಗಳು-"ಆ ಕೆಡಕನ್ನು ಅವರಿಗೇ ತಿರುಗುವಂತೆ ಮಾಡಲೇ" ಎಂದರು. ತಾತನವ ರೆಂದರು-"ದಯವಿಟ್ಟು ಹಾಗೆ ಮಾಡಬೇಡಿ. ನಾನು ನನ್ನ ವಿರೋಧಿಗಳಿಗೆ, ಅವರು ಕಲ್ಲಿನಿಂದ ಹೊಡೆದರೆ ನಾನು ಹೂವಿನಿಂದ ಕೂಡಾ ಹಿಂಸಿಸುವುದಕ್ಕೆ ಇಚ್ಛಿಸುವುದಿಲ್ಲ"-ಎಂದರು. ನಾನಲ್ಲೇ ಇದ್ದವಳು ಇದನ್ನು ಕೇಳಿ 'ಅಬ್ಬಾ', ತಾತನವರದ್ದು ಎಷ್ಟು ದೊಡ್ಡ ಗುಣ' ಎಂದು ಮನದ ತುಂಬ ಪ್ರಶಂಸಿಸಿದೆ.

ಆಶ್ರಮಕ್ಕೆ ಬಂದ ಹೊಸದರಲ್ಲಿ ನನಗೆ ಅಡಿಗೆ ಮಾಡುವುದರ ಬಗ್ಗೆ ಹೆಚ್ಚಿನ ಮಾಹಿತಿ ಇರಲಿಲ್ಲ. ಶಾಲೆ ಮುಗಿಸಿ ಬಂದ ಬಳಿಕ (11 ಘಂ,ಗೆ) ಅಡಿಗೆ ಮಾಡುವ ಕ್ರಮವನ್ನಿಟ್ಟಿದ್ದೆ. ತಾತನವರು ಆಶ್ರಮದಲ್ಲೇ ಇದ್ದರೆ

ನಿತ್ಯ 12 ಗಂಟೆಗೆ ಊಟ ಮಾಡುವರು. ಅವರ ಶಿಸ್ತನ್ನು ಮೊದಲೇ ನಿಮಗೆ ತಿಳಿಸಿರುವೆ. 12 ಗಂಟೆಆಗುತ್ತಿದ್ದಂತೆಯೇ "ಆಯ್ತೇನಮ್ಮಾ" ಎಂದು ಕೇಳುತ್ತಿದ್ದರು. ನಾನು ಕೂಡಲೇ ಗಾಭರಿಯಿಂದ ಹೂಂ ಎಂದು ಹೇಳಿ ಕುಕ್ಕರ್‌ಪಾತ್ರೆ ತಣ್ಣಗಾಗುವ ಮೊದಲೇ ಒಲೆ ಮೇಲಿದ್ದಂತೆಯೇ ಅವರ ಮುಚ್ಚಳ ತೆಗೆದುಬಿಡುತ್ತಿದ್ದೆ–ಆಗ ಅಲ್ಲಿಯ ಸಂಭ್ರಮದ ನೋಟ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತಿತ್ತು. ಅನ್ನ–ಬೇಳೆ–ತರಕಾರಿಗಳೆಲ್ಲಾ ಅವಿಯ ಜೊತೆಗೆ ಮೇಲೇರಿ ಗೋಡೆಯ ಮೇಲೆ ವಿವಿಧ ಚಿತ್ರಗಳಿಂದ ಅಲಂಕೃತವಾಗಿರುತ್ತಿದ್ದವು. ನಂತರ ಸ್ವಲ್ಪ ತಣ್ಣಗಾದ ಬಳಿಕ ನೋಡಿದರೆ ಅರೆಬೆಂದ ಅನ್ನ, ಬೇಳೆ, ತರಕಾರಿ, ನೀರು ಎಲ್ಲಾಸೇರಿ ಆ ಪಾತ್ರೆಯ ತುಂಬ ತುಂಬಿರುತ್ತಿತ್ತು. ಅದೊಂದು ವಿಶಿಷ್ಟವಾದ ಅಡಿಗೆಯಾಗುತ್ತಿತ್ತು. ಈ ಎಲ್ಲ ದೃಶ್ಯವನ್ನು ನೋಡಿದರೂ ತಾತನವರು ಸ್ವಲ್ಪವೂ ಬೇಸರ ಪಡುತ್ತಿರಲಿಲ್ಲ–ಅಥವಾ ಕೋಪಗೊಳ್ಳುತ್ತಿರಲಿಲ್ಲ. ಅವರು ಸಂತೋಷವಾಗಿಯೇ ಆ ಪಾಯಸವನ್ನು ತೆಗೆದುಕೊಳ್ಳುತ್ತಿದ್ದರು. ನಾನೇನಾದರೂ ಈ ಬಗ್ಗೆ ಬೇಸರಪಟ್ಟುಕೊಂಡರೆ "ಮಾರುತಿಗೆ ಇಂದು ಇದೇ ಬೇಕಿತ್ತು" ಎಂದು ಪ್ರೇಮದಿಂದ ಉಣ್ಣುತ್ತಿದ್ದರು. ಈ ರೀತಿ ಎಷ್ಟೋ ವೇಳೆ ಆಗುತ್ತಿತ್ತು. ಹೀಗೆಲ್ಲ ಆಗಿದ್ದಾಗ ಆ ಪಾತ್ರೆಗಳನ್ನು ಶುಚಿ ಮಾಡುವುದು ಬಹಳ ಕಷ್ಟವಾಗುತ್ತಿತೆಂದು–ಅವುಗಳ ತುಂಬ ನೀರು ತುಂಬಿಸಿಟ್ಟು ಮಾರನೇ ದಿವಸ ಅಡಿಗೆ ಮಾಡುವ ಸಮಯದಲ್ಲಿ ಅವುಗಳನ್ನು ಸುಲಭವಾಗಿ ತೊಳೆದು ಇಡುತ್ತಿದ್ದೆ. ಒಂದು ದಿನ ಶಾಲೆಯಿಂದ ಬರುವುದು 25 ನಿಮಿಷ ತಡವಾಯ್ತು. ನಾನು ತಡವಾಯ್ತೆಂದು ಬೇಗನೆ ಮಂದಿರದ ಕಡೆ ಹೆಜ್ಜೆ ಹಾಕುತ್ತಿದ್ದೆ. ಹತ್ತಿರ ಬರುತ್ತಿದ್ದಂತೆಯೇ ನನಗೆ ಕೈ ಕಾಲೆಲ್ಲ ನಡುಕ ಶುರುವಾಯ್ತು. ಎದೆ ಬಡಿತ ಜೋರಾಯ್ತು--ಕಾರಣ ತಾತನವರು ಮರದ ಕೆಳಗೆ ಕುಳಿತುಕೊಂಡು ಅಡಿಗೆ ಪಾತ್ರೆಗಳನ್ನೆಲ್ಲ ತೊಳೆಯುತ್ತಿದ್ದರು.ಆಗ ನನಗೇನೂ ತೋಚಲಿಲ್ಲ–ಏನು ಗಲಾಟೆ ಮಾಡುತ್ತಾರೋ ಎಂಬ ಭಯದಿಂದ ತಲ್ಲಣಿಸಿದೆ. ಆದರೆ ಅವರು ಶಾಂತವಾಗಿಯೇ ಇದ್ದರು. ಪಾತ್ರೆಗಳನ್ನೆಲ್ಲ ತೊಳೆದು ಒಳಗೆ ತಂದು "ಯಾಕಮ್ಮಾ ಬರುವುದು ತಡವಾಯ್ತು ?–ನೀನು ಬರುವುದು ತಡವಾಯ್ತಲ್ಲ ಎಂದು ನಾನೇ ಅಡುಗೆ ಮಾಡುವ ಎಂದು ಪಾತ್ರೆತೊಳೆದೆ" ಎಂದರು ಶಾಂತವಾಗಿಯೇ. ನಾನು ತಡವರಿಸುತ್ತಲೇ ಉತ್ತರಿಸಿದೆ. ನಂತರ "ತರಕಾರಿ ಹೆಚ್ಚಿ ಕೊಡಲೇ ?" ಎಂದು ಕೇಳಿದರು. ನಾನು ಬೇಡವೆಂದು ಹೇಳಿ ಕೂಡಲೇ ಕೆಲಸವನ್ನು ಜಾಗ್ರತೆಯಾಗಿ ಆರಂಭಿಸಿದೆ. ಮನದಲ್ಲೇ ಗುರುವಿಗೆ ಲಕ್ಷಬಾರಿ ಪ್ರಣಾಮ ಸಲ್ಲಿಸಿದೆ. ಅಂದಿನಿಂದ ನಾನು ಯಾವತ್ತೂ ಈ ರೀತಿಯ ಕೆಲಸಗಳಿಗೆ ಅವಕಾಶಕೊಡುತ್ತಿರಲಿಲ್ಲ. ಅವರು ಎಂದೂ ಅಡುಗೆ ಬಗ್ಗೆ ಟೀಕೆ ಮಾಡಿದವರಲ್ಲ. "ಇದು ಕೇವಲ ಅನ್ನವಲ್ಲ-ಇದು ದೇವರ ಪ್ರಸಾದವೆಂದು ತೆಗೆದುಕೊಂಡರೆ ಆಗ ಎಲ್ಲವೂ ರುಚಿಯಾಗಿರುತ್ತದೆ" ಎನ್ನುತ್ತಾರೆ.

ತಾತನವರಿಗೆ ಪ್ರಾಣಿಗಳನ್ನು ಕಂಡರೆ ಅತಿ ಮಮತೆ. ಯಾವುದಾದರೂ ಪ್ರಾಣಿ ಹಸಿವೆಯಿಂದ ಅಥವಾ ನೋವಿನಿಂದ ನರಳುತ್ತಿದ್ದರೆ ಅವರು ಕಣ್ಣೀರಿಡುತ್ತಾರೆ. ಕೂಡಲೇ ಅದರ ಪರಿಹಾರಕ್ಕೆ ಏರ್ಪಾಟು ಮಾಡುವರು. ಅವರೇ ಹೇಳುವಂತೆ ಅವರಿಗೆ ಪ್ರಾಣಿಗಳಲ್ಲೆಲ್ಲ ಹಸು ಮತ್ತು ಕುದುರೆಯನ್ನು ಕಂಡರೆ ಅತಿ ಪ್ರೇಮವಂತೆ. ಎರಡನೆಯದಾಗಿ ನಾಯಿಯನ್ನು ಕಂಡರೆ ಇಷ್ಟವಂತೆ. ಪ್ರಾಣಿಗಳನ್ನು ಅವರು ಮನುಷ್ಯರನ್ನು ಮಾತನಾಡಿಸುವ ರೀತಿಯೇ ಮಾತನಾಡಿಸುವರು. ಅವುಗಳಿಗೆಲ್ಲ ವಿಶೇಷವಾಗಿ ಬೆಳಗ್ಗೆ ಮತ್ತು ಸಂಜೆ ಆಹಾರ ಕೊಡುವುದು ಅವರ ದೈನಂದಿನ ಕಾರ್ಯಕ್ರಮದಲ್ಲಿ ಒಂದು. ನಮ್ಮಲ್ಲಿಯ ಒಂದು ನಾಯಿಗೆ ಅವರೇ ಸಮಯಕ್ಕೆ ಸರಿಯಾಗಿ ಆಹಾರ ಕೊಡುವರು. ಎಂದಾದರೂ ಸ್ವಲ್ಪ ತಡವಾದರೆ ಅವರು ತಪ್ಪಾಯ್ತೆಂದು ತಮ್ಮ ಕೆನ್ನೆಗೆ ಹೊಡೆದುಕೊಂಡು–"ಅಮ್ಮಾ ತಪ್ಪಾಯ್ತಮ್ಮಾ–ನಿನ್ನನ್ನು ಎಷ್ಟು ಕಾಯಿಸಿದೆ"–ಎಂದು ನೆಲಮುಟ್ಟಿ ನಮಸ್ಕಾರ ಮಾಡುತ್ತಾರೆ. ಈ ದೃಶ್ಯವನ್ನು ಎಷ್ಟೋ ಬಾರಿ ನಾನು ಕಂಡಿರುವೆ.

ತಾತನ ರಾಷ್ಟ್ರಪ್ರೇಮ–ಅದು ಅವರ್ಣನೀಯ ; ತಾತನೇ ರಾಷ್ಟ್ರ–ರಾಷ್ಟ್ರವೇ ಅವರು. ಹೀಗೆ ರಾಷ್ಟ್ರ

ಪ್ರೇಮುವನ್ನು ತಮ್ಮ ಜೀವನದಲ್ಲಿ ಬೆಳೆಯಿಸಿಕೊಂಡಿದ್ದಾರೆ. ರಾಷ್ಟ್ರ ! ರಾಷ್ಟ್ರ ! ರಾಷ್ಟ್ರ ! ಇದವರ ಕನಸುಮನಸಿನ ಪಲ್ಲವಿ ; ರಾಷ್ಟ್ರಸೇವೆಗಾಗಿಯೇ ತನ್ನ ಜೀವನ ಮುಡಿಪು ಎಂಬುದು ಅವರ ಹೃದಯದ ಪಲ್ಲವಿ.

ಹಣಕಾಸಿನ ವ್ಯವಹಾರದಲ್ಲಿ ತಾತ ಬಹು ಕಟ್ಟುನಿಟ್ಟು ; ಅಗತ್ಯ ಬಿದ್ದಾಗ ಅವರು ಎಲ್ಲರಿಂದಲೂ ಸಾಲ ತರುತ್ತಿರುತ್ತಾರೆ. ಆದರೆ ಹೇಳಿದ ವಾಯಿದೆಗೆ ಒಂದು ಗಳಿಗೆಯೂ ತಡವಾಗದಂತೆ ಹಿಂದಿರುಗಿಸುತ್ತಾರೆ. ಆದರೆ ಅವರು ಯಾರಿಗೂ ಸಾಲ ಕೊಡುವುದಿಲ್ಲ. "ಸಂಸ್ಥೆಗಾಗಿ ಸಾಲ ತರಲು ನನಗೆ ಹಕ್ಕಿದೆಯೇ ಹೊರತು ಕೊಡುವುದಕ್ಕೆ ಹಕ್ಕಿಲ್ಲ" ಇದು ಅವರ ನಿಸ್ಪೃಹ ಸತ್ಯನುಡಿ.

ಭಿಕ್ಷೆಯಿಂದ ತಂದ ಒಂದು ಪೈಸವನ್ನಾದರೂ ಅವರು ತಮ್ಮ ಸ್ವಂತ ಖರ್ಚಿಗೆ ಉಪಯೋಗಿಸುವುದಿಲ್ಲ. "ಇದು ಸಮಾಜದ ಹಣ. ನನಗೆ ಉಪಯೋಗಿಸಲು ಹಕ್ಕೇನಿದೆ ?" ಎನ್ನುತ್ತಾರೆ. ಉಡುವ ಬಟ್ಟೆ ಹರಿದು ಚಿಂದಿ ಯಾದರೂ ಅದನ್ನು ಆತ್ಮೀಯ ಭಕ್ತಾದಿಗಳ್ಯಾರಾದರೂ ಹೊಲಿಸಿ ಕೊಡಬೇಕೇ ವಿನಃ ತನಗಾಗಿ ಏನನ್ನೂ ಕೊಳ್ಳುವುದಿಲ್ಲ. ಅವರೇ ಹೇಳುವಂತೆ-"ಸಮಾಜವು ಸನ್ಯಾಸಿಗೆ ಮಾನಮುಚ್ಚುವಷ್ಟು ಬಟ್ಟೆ, ಹೊಟ್ಟೆ ತುಂಬು ವಷ್ಟು ಆಹಾರವನ್ನು ಕೊಡಬೇಕು-ಅದು ಹೆಚ್ಚಾದರೆ ಸನ್ಯಾಸಿಗೂ ಕೇಡು-ಸಮಾಜಕ್ಕೂ ಕೇಡು"—ಎನ್ನುವರು. ಕೆಲವುವೇಳೆ ಹೇಳುತ್ತಿರುತ್ತಾರೆ-"ನಾನು ಸತ್ತರೆ ನನಗೆ ಹೂವಿನಹಾರ ಹಾಕಿ ಮೆರವಣಿಗೆ ಮಾಡುವುದು ಬೇಡ. ಆ ದೇಹವನ್ನು ಎಲ್ಲಾದರೂ ದೂರ ಬಿಸಾಡಿ-ನಾಲ್ಕಾರು ಕಾಗೆ ಹದ್ದುಗಳಿಗಾದರೂ ಅದು ಆಹಾರವಾಗಲಿ"-ಎಂದು. ಬ್ಯಾಂಕಿನ ಅನೇಕ ದೊಡ್ಡದೊಡ್ಡ ಅಧಿಕಾರಿಗಳು ತಾತನವರ ಬಳಿಗೆ ಬಂದು ನಮ್ಮ ಬ್ಯಾಂಕಿನಲ್ಲಿ ನಿಮ್ಮದೊಂದು ಖಾತೆ ತೆಗೆಯಿರಿ ಎಂದು ಕೇಳಿಕೊಂಡಾಗ-ತಾತನವರು ಒಪ್ಪಲಿಲ್ಲ. ಆಗವರು ಮೊದಲಿನ ಠೇವಣಿ ಹಣವನ್ನು ನಾವು ಇಡುತ್ತೇವೆ, ಮುಂದೆ ಬೇಕಾದಲ್ಲಿ ನೀವು ಹೆಚ್ಚಿಸಿಕೊಳ್ಳಬಹುದೆಂದು ಕೇಳಿಕೊಂಡಾಗಲೂ ತಾತನವರು ನಿರಾಕರಿಸಿ ಹೇಳಿದರು "ನೋಡಿ ನೀವು ಈಗ 1000-00 ರೂಗಳನ್ನು ಇಡುವಿರೆಂದು ಇಟ್ಟುಕೊಳ್ಳಿ. ನಂತರ ಅದನ್ನು ಹೆಚ್ಚಿಸ ಬೇಕೆಂಬ ಹಂಬಲವುಂಟಾಗುತ್ತದೆ. ಆಮೇಲೆ ಲಕ್ಷ ಮಾಡುವುದು ಹೇಗೆಂದು. ಅನಂತರ ಅದು ಆಶ್ರಮದ್ದಲ್ಲ ನನ್ನದೇ ಎಂಬ ಸ್ವಾರ್ಥ ಬುದ್ಧಿ ಬರುತ್ತದೆ-ಆದ್ದರಿಂದ ಯಾವುದೂ ಬೇಡ"ವೆಂದರು.

ತಾತನವರಿಗೆ ಬಡಮಕ್ಕಳನ್ನು ಕಂಡರೆ ಬಹಳ ಕನಿಕರ. ಕೆಲವುವೇಳೆ ಹೊರಗೆ ಒರಟಾಗಿ ಮಾತನಾಡಿ ದರೂ ಹೃದಯ ಅತಿ ಮೃದು. ಯಾವ ಮಕ್ಕಳೇ ಆಗಲಿ-ಯಾರೇ ಆಗಲಿ ತನಗೆ ಬಹಳ ಕಷ್ಟವಿದೆಯೆಂದು ತಾತನವರ ಬಳಿ ಬಂದು ಹೇಳಿದರೆ ಅವರು ಕೂಡಲೇ ಅವರಿಗೆ ಬೇಕಾಗಿರುವ ವಸ್ತುವನ್ನೋ-ಹಣವನ್ನೋ ಕೊಟ್ಟು, ನಾನು ಕೊಟ್ಟೆನೆಂದು ಯಾರಿಗೂ ಹೇಳಬೇಡ ಎನ್ನುವರು. ಕೆಲವುವೇಳೆ ಅವರಾಗೇ ಕೇಳದಿದ್ದರೂ, ತಾತ ನವರು ಮಕ್ಕಳ ಕಷ್ಟನೋಡಿ ತಾವೇ ಅವರಿಗೆ ತಿಳಿಯದಂತೆ ಅವರ ಫೀಸು ಮತ್ತು ಇತರ ಖರ್ಚನ್ನು ಶಾಲೆಗೆ ಹೋಗಿ ತುಂಬಿಬರುತ್ತಾರೆ. ಆದರೆ ಅದೇ ಮಕ್ಕಳು ನನ್ನ ಬಳಿ ಬಂದು ಕೇಳಲು ಹಿಂಜರಿಯುತ್ತಾರೆ. ಏಕೆಂದರೆ ನಾನು ಯಾವಾಗಲೂ ಹಣ ಏಕೆಬೇಕು-ಎಷ್ಟುಬೇಕು ? ಇಷ್ಟೇ ಏಕೆಬೇಕು ? ಹಿಂದೆ ಕೊಟ್ಟದ್ದನ್ನು ಹೇಗೆ ಖರ್ಚುಮಾಡಿದೆ-ಎಂಬೆಲ್ಲ ಪ್ರಶ್ನೆಮಾಡುವೆ, ಮತ್ತು ಅಗತ್ಯ ಇದ್ದರೆ ಮಾತ್ರ ಕೊಡುತ್ತೇನೆ. ಕಾರಣ ಕೆಲವರು ಕೊಡುವ ಸ್ವಭಾವವನ್ನು ದುರುಪಯೋಗಮಾಡಿಕೊಳ್ಳುತ್ತಾರೆ. ಕೆಲವು ಮಕ್ಕಳು ಅನುಕೂಲವಿದ್ದರೂ ತೆಗೆದು ಕೊಂಡ ಹಣವನ್ನು ತಿರುಗಿಕೊಡದೇ ಪುನಃ ಕೇಳುತ್ತಾರೆ. ನಾನಾಗ ತಾತನವರಿಗೆ ಸುಮ್ಮನೆ ಕೊಡಬೇಡಿ-ಹೀಗೆ ಎಲ್ಲರಿಗೆ ಕೊಡುತ್ತಾಹೋದರೆ ಅದು ವಾಪಾಸು ಬರುವುದು ಯಾವಾಗ ಎಂದು. ಆಗ ತಾತನವರು ಹೋಗಲಿ ಬಿಡಮ್ಮಾ-ಓದುವ ಮಕ್ಕಳು ನೊಂದುಕೊಳ್ಳಬಾರದು-ಅಲ್ಲದೆ ಆ ಹಣ ಮಕ್ಕಳಿಗಾಗೇ ಇಟ್ಟದ್ದು" ಎಂದರು. ನಂತರ ಆ ಹಣ ಇಟ್ಟಿರುವ ಜಾಗವನ್ನು ತೋರಿಸಿ ನಾನಿಲ್ಲದಾಗ ಮಕ್ಕಳು ಯಾರಾದರೂ ಕೇಳಿದರೆ ಕೊಡು ಎಂದರು. ಒಂದೆರಡುವಾರಗಳ ನಂತರ ನಾನು ಹಣ ಕೊಡಬೇಕಾದ ಸಂದರ್ಭ ಬಂದಾಗ-ಕುತೂಹಲವೆನಿಸಿ ಹಣ ವಿಟ್ಟ ಲಕೋಟೆಯನ್ನು ಪರಿಶೀಲಿಸಿದೆ. ಆಗ ನನಗರಿಯದೇ ಕಣ್ಣಾಲಿಗಳು ತುಂಬಿಬಂದವು. ಹೃದಯ ಭಾರವಾ

ಯಿತು. ಆ ಲಕೋಟೆಯ ಮೇಲೆ ತಾತನವರು ಹೀಗೆಂದು ಬರೆದಿದ್ದರು—"ಇದು ನನ್ನ ಸ್ವಂತದ್ದಲ್ಲ-ಆಶ್ರಮದ್ದೇ. ಆಶ್ರಮದಲ್ಲಿ ನನ್ನದೆನ್ನುವುದು ಏನೂ ಇಲ್ಲ-ಎಲ್ಲ ಆಶ್ರಮಕ್ಕೇ ಸೇರಿದುದು-ಸಾರ್ವಜನಿಕರದ್ದು. ಇದು ಆಗಾಗ ಬಂದ ಭಕ್ತರು ಕೊಟ್ಟ ಚಿಕ್ಕಪುಟ್ಟ ಪೂಜಾಕಾಣಿಕೆಯಲ್ಲಿ ಬಡಮಕ್ಕಳಿಗೆ ಆಗಾಗ ತೊಂದರೆ ಇರುವಾಗ ಕೊಡಲು ಇಟ್ಟ ಅಲ್ಪನಿಧಿ. ನಿತ್ಯವೂ ಈ ಕಾರ್ಯ ನಡೆಯುತ್ತಿರುವುದರಿಂದ ಇದರ ಲೆಕ್ಕ ಇಟ್ಟಿಲ್ಲ". (ಆಶ್ರಮದಲ್ಲಿ ಒಂದು ಸಾಸಿವೆಕಾಳು ಖರ್ಚಾದರೂ ಅದಕ್ಕೆ ಲೆಕ್ಕ ಇಟ್ಟಿರುತ್ತಾರೆ-ಇದು ತಾತನ ವ್ಯವಹಾರದ ಶಿಸ್ತು) ಮತ್ತು ಆ ಹಣದ ಲಕೋಟೆಯ ಒಳಗೆ ಒಂದು ಪತ್ರವಿತ್ತು. ಅದರಲ್ಲಿ ಈ ರೀತಿ ಬರೆದಿತ್ತು—"ಹಣ ! ಹಣ ! ಹಣ ! ನನಗ್ಯಾಕೆ ಬೇಕಯ್ಯ ಹಣ ? ರಾಷ್ಟ್ರಕ್ಕಾಗಿ ದುಡಿದುಡಿದು ಆಗಬೇಕಯ್ಯ ಹೆಣ. ಆಗ ತೀರುವುದು ರಾಷ್ಟ್ರಮಾತೆಯ ಋಣ. ನನಗಾಗಿ ಹಣ ಕೂಡಿಡಲು ನಾನೇನು ಭಿಕನಾಸಿಯೆ ? ನನಗಾಗಿ ಕೂಡಿಟ್ಟಿದ್ದೇನೆ-ಇಲ್ಲಲ್ಲಾ ಅಲ್ಲಿ—" ಇದನ್ನು ಓದಿದರೆ ಎಂಥವರಿಗೂ ಅರಿವಾಗುತ್ತದೆ ಅವರೆಷ್ಟು ನಿಸ್ವಾರ್ಥಿಗಳು ಎಂದು. ತ್ಯಾಗವು ಅವರ ರೋಮ ರೋಮಗಳಲ್ಲೂ ಅಡಕವಾಗಿದೆ. ಕಾಂಚನದ ವ್ಯಾಮೋಹವನ್ನು ಸಂಪೂರ್ಣವಾಗಿ ತ್ಯಜಿಸಿರುವುದು ಈ ಶಬ್ದಗಳಿಂದಲೇ ಉಲ್ಲೇಖಿತವಾಗುತ್ತದೆ. ಇದನ್ನವರು ಯಾರಾದರೂ ನೋಡಲೆಂದು ಬರೆದದ್ದಲ್ಲ-ಅವರ ಮನದ ಭಾವನೆಯನ್ನು ಹೊರಗೆಡಹಿದ್ದು. ಆದರೆ ಅದು ಆಕಸ್ಮಿಕವಾಗಿ ನನ್ನ ಕಣ್ಣಿಗೆ ಬಿತ್ತು.

ತಾತನವರಿಗೆ ಯಾರಾದರೂ—ಸ್ವಾಮೀಜಿ, ನೀವು ದೇವರನ್ನು ಕಂಡಿರುವಿರಾ ? ಎಂದು ಪ್ರಶ್ನಿಸಿದರೆ-ತಾತನವರು—ದೃಢವಾಗಿ ಹೌದು ಎನ್ನುವರು—ನಂತರ "ನಾನು ನಿಮ್ಮನ್ನು ಎಷ್ಟು ಸ್ಪಷ್ಟವಾಗಿ ಕಾಣುತ್ತಿರುವೆನೋ-ಅಂತೆಯೇ ಪರಮಾತ್ಮನನ್ನೂ ಜನತೆಯಲ್ಲಿ—ದೀನರಲ್ಲಿ—ರೋಗಿಗಳಲ್ಲಿ—ಮಕ್ಕಳಲ್ಲಿ—ಪ್ರಾಣಿಗಳಲ್ಲಿ ನಾನು ಸ್ಪಷ್ಟವಾಗಿ ನೋಡುತ್ತಿದ್ದೇನೆ" ಎನ್ನುತ್ತಾರೆ. ರಾತ್ರಿ 12 ಘಂಟೆಗೆ ಬಂದು ಎಬ್ಬಿಸಿದರೂ ತಾತನವರು ಸ್ವಲ್ಪವೂ ಬೇಸರವಿಲ್ಲದೆ ರೋಗಿಗಳಿಗೆ ಚಿಕಿತ್ಸೆ ನೀಡುತ್ತಾರೆ. ಅವರೇ ಆಗಾಗ್ಗೆ ಹೇಳುತ್ತಿರುತ್ತಾರೆ-"ನೀವೆಲ್ಲಾದರೂ ಯೋಗ ಕಲಿಯಬೇಕೆಂಬ ಆಸಕ್ತಿ ಇದ್ದು—ಅದರಲ್ಲಿ ಏನಾದರೂ ಸಂಶಯ ಬಂದರೆ—ನೀವು ಅರ್ಧರಾತ್ರಿಯಲ್ಲಿ ಬಂದು ಎಬ್ಬಿಸಿ ಕೇಳಿದರೂ ನಾನು ಹೇಳಿಕೊಡುತ್ತೇನೆ. ನನಗೆ ಯೋಗವನ್ನು ಆಸಕ್ತಿಯಿಂದ ಕಲಿಯುವವರ ಬಗ್ಗೆ ಅತಿ ಮಮತೆ ಇದೆ" ಎನ್ನುವರು. "ಡಾಕ್ಟರರು ರೋಗಿಗಳಲ್ಲಿ—ಹುಚ್ಚರಲ್ಲಿ ದೇವರನ್ನು ಕಾಣಬೇಕು—ಆದರೆ ದುರ್ದೈವದಿಂದ ಅವರು ರೋಗಿಯ ಜೇಬನ್ನು ನೋಡುತ್ತಾರೆ" ಎನ್ನುತ್ತಾರೆ ತಾತ. "ಉಪಾಧ್ಯಾಯರು-ವಿದ್ಯಾರ್ಥಿಗಳಲ್ಲಿ ದೇವರನ್ನು ಕಾಣಬೇಕು,—ವ್ಯಾಪಾರಿ ಗ್ರಾಹಕರಲ್ಲಿ ದೇವರನ್ನು ಕಾಣಬೇಕು. ವಕೀಲ-ಕಕ್ಷಿಗಾರರಲ್ಲಿ ದೇವರನ್ನು ಕಾಣಬೇಕು, ಅಧಿಕಾರಿ—ಪ್ರಜೆಗಳಲ್ಲಿ ದೇವರನ್ನು ಕಾಣಬೇಕು" ಎಂಬುದು ತಾತನ ಅಮೃತವಾಣಿ.

ತಾತನವರಿಗೆ ಯಾವ ಕೆಲಸವಾದರೂ ಹೇಳಿದಾಕ್ಷಣವೇ ಮಾಡಬೇಕು. ಇಲ್ಲವಾದರೆ ಯಾವ ಭಾವವಿಲ್ಲದೇ ತಾವೇ ಹೋಗಿ ಮುಗಿಸಿಬಿಡುವರು. ಅವರು ಆಶ್ರಮದ ಮೈನ್‌ಸ್ವಿಚ್ ಇದ್ದಂತೆ. ಅವರು ಆಶ್ರಮದಲ್ಲಿದ್ದರೆ—ಮೈನ್‌ಸ್ವಿಚ್ ಆನ್ ಮಾಡಿದಂತೆ ಎಲ್ಲ ಕೆಲಸಗಳೂ ಸುಸೂತ್ರವಾಗಿ ಯಾಂತ್ರಿಕವಾಗಿ ಶಾಂತರೀತಿಯಿಂದ ನಡೆಯುತ್ತಿರುತ್ತದೆ. ಅವರು ನಿತ್ಯವೂ ಬೆಳಿಗ್ಗೆ ಪೂಜೆ ಉಪಹಾರದ ನಂತರ 7–30 ಘಂ. ಗೆ ಆಶ್ರಮವನ್ನೆಲ್ಲ ಸುತ್ತುತ್ತಾರೆ—ಅಂದರೆ ಎಲ್ಲಾ ಕೆಲಸದ ಕ್ಷೇತ್ರಗಳಿಗೂ ಹೋಗಿ ಇಂಥಿಂಥ ಕೆಲಸಗಳನ್ನು ಹೀಗೆಹೀಗೆ ಮಾಡಬೇಕೆಂದು ಸಲಹೆನೀಡಿ— ವಿಚಾರ ವಿನಿಮಯ ಮಾಡುವರು. ನಂತರ ಕಛೇರಿಯಲ್ಲಿ ಲೆಕ್ಕಪತ್ರಗಳನ್ನೆಲ್ಲ ಪರಿಶೀಲಿಸುವರು. ಸಂಜೆ ಪುನಃ ಪೂಜೆಯ ನಂತರ 6–30 ಘಂಟೆಗೆ ಭಜನೆಗೆ ಹೋಗುತ್ತ, ಬೆಳಿಗ್ಗೆ ಹೇಳಿದ್ದ ಕೆಲಸಗಳು ಎಷ್ಟು ಆಗಿವೆ—ಎಂದು ಎಲ್ಲಕಡೆ ವಿಚಾರಿಸಿ ಭಜನೆಗೆ ಹೋಗುವ ಕ್ರಮ ಅವರದ್ದು. ರಾತ್ರಿ—ಮತ್ತು ಬೆಳಿಗ್ಗೆ 8 ಘಂಟೆಗೆ ಆಶ್ರಮದ ಎಲ್ಲ ಮನೆಗಳಿಗೆ ಭೇಟಿಕೊಟ್ಟು, ಆರೋಗ್ಯದ ಬಗ್ಗೆ ವಿಚಾರಿಸಿ, ನಂತರ ಕಛೇರಿಗೆ ಹೋಗುವುದು ಅವರ ದಿನದ ರೂಢಿ. ಒಂದುದಿನ ಹೀಗೆಯೇ ಬೆಳಿಗ್ಗೆ ಹೋದಾಗ ಆಶ್ರಮದ ಒಂದು ಸಂಸ್ಥೆಗೆ ಸಂಬಂಧಪಟ್ಟ ಶೌಚಗೃಹಗಳು ಬಹಳ ಕೊಳಕಾಗಿದ್ದವೆಂದು ಅವರು ಅವಕ್ಕೆ ಸಂಬಂಧಪಟ್ಟವರಿಗೆ ಶುಚಿಯಾಗಿಟ್ಟುಕೊಳ್ಳಲು ತಿಳಿಸಿ

ದರು–ಆದರೆ ಮಾರನೇ ದಿನವೂ ಅದು ಹಾಗೆಯೇ ಇದ್ದುದರಿಂದ ತಾತನವರೇ ಸೊಂಟಕ್ಕೆ ಪಂಚೆಸುತ್ತಿ ತಾವೇ 25–30 ಕೊಡ ನೀರುಹಾಕಿ 10–15 ಶೌಚಗೃಹಗಳನ್ನು ಶುಚಿಮಾಡಿದರು. ಆಗ ಆ ಸಂಸ್ಥೆಗೆ ಸಂಬಂಧಪಟ್ಟ ಅಧಿಕಾರಿಗಳಿಗೆ, ಮತ್ತು ಸಿಬ್ಬಂದಿಗಳಿಗೆ ಏನು ಮಾಡಲೂ ತೋಚಲಿಲ್ಲ. ಬೆಪ್ಪಾಗಿ ದೂರನಿಂತು ನೋಡುತ್ತಿದ್ದರು. ಅಂದು ಮಧ್ಯಾಹ್ನ ಆ ವೇಳೆಯಲ್ಲಿ ಸ್ನಾನ ಮಾಡುತ್ತಿರುವುದು ನೋಡಿ ನಾನು ಪ್ರಶ್ನಿಸಿದಾಗ, ತಾತನವರು ಈ ಮೇಲಿನ ವಿಷಯ ತಿಳಿಸಿದರು. ನಂತರ "ನೋಡಮ್ಮಾ ನನಗೆ ಕೇವಲ ಬಾಯಲ್ಲಿ ಹೇಳಿ ಅಭ್ಯಾಸವಿಲ್ಲ, ಕೈಯಲ್ಲಿ ಜನಗಳಿಗೆ ತಿಳಿಯಪಡಿಸುವೆ; ನಾನು ನನ್ನ ಜೀವನದ ಉದ್ದಕ್ಕೂ ಹೀಗೇ ನಡೆದು ಬಂದದ್ದೇನೆ" ಎಂದರು. ನಾನೂ ಕೂಡಾ ಇಲ್ಲಿನ ಜನಗಳ ಬಾಯಲ್ಲಿ ಕೇಳಿದ್ದೇನೆ–ಮೊದಲು ಈ ಊರಿನಲ್ಲಿ ತಾತನವರು 2 ಘಂಟೆಗೇ ಎದ್ದು ಮನೆ ಮನೇ ಮುಂದೆ ಕಸಗುಡಿಸಿ, ಸಾರಿಸಿ, ರಂಗವಲ್ಲಿ ಇಟ್ಟು, ಹೂವಿಟ್ಟು ಬರುತ್ತಿದ್ದರಂತೆ. ಮೊಟ್ಟಮೊದಲು ಏಳು ವರ್ಷ ಅವರು ಯೋಗಪ್ರಚಾರಕರಾಗಿ ಹಳ್ಳಿಗಳಿಗೆ ಸಂಚರಿಸುತ್ತಿದ್ದಾಗ ಅವರ ಮೊಟ್ಟಮೊದಲ ಕೆಲಸವೆಂದರೆ–ಹಳ್ಳಿಗಳ ಕೇರಿಗಳನ್ನು, ಶೌಚಗೃಹಗಳನ್ನು ಸ್ವಚ್ಛಮಾಡುವುದಂತೆ. ಈಗಲೂ ಆ ಹಳ್ಳಿಗಳ ಜನರು ಬಂದಾಗ ತಾತನವರ ಕೆಲಸಗಳನ್ನು ನೆನಪಿಸಿಕೊಂಡು ಹೇಳುತ್ತಿರುತ್ತಾರೆ. ಆಶ್ರಮದಲ್ಲಿ ಯಾರಾದರೂ ಮನೆಗೆ ಬೀಗಹಾಕಿ ಊರಿಗೆ ಹೋದರೆ, ತಾತನವರು ರಾತ್ರಿ ಒಂದೆರಡು ಬಾರಿ ಎದ್ದು, ಆ ಮನೆಗಳಿಗೆ ಹೋಗಿ ಬೀಗ ಎಳೆದು ನೋಡುವರು; ಇದು ಅವರ ರೂಢಿ. ಯಾರಾದರೂ ಊರಿಗೆ ಹೊರಡುವವರಿದ್ದರೆ, ಅವರಿಗೆ ತಾತನವರು ಮುನ್ನೆಚ್ಚರಿಕೆ ನೀಡುವರು–"ಬೆಲೆಬಾಳುವ ಸಾಮಾನುಗಳಿದ್ದರೆ ಭದ್ರವಾಗಿರಿಸಿರಿ; ಅಲ್ಲವಾದರೆ ನನ್ನ ಬಳಿ ಕೊಡಿ" ಎಂದು. ತಾತನವರಿಗೆ ಎಲ್ಲರ ಬಗ್ಗೆಯೂ ಇಷ್ಟೊಂದು ನಿಗವಿದೆ.

"ನಾನಿಲ್ಲಿಗೆ ಬರುವಾಗ ಇಷ್ಟರಲ್ಲೇ ಬಂದೆ, ಹೋಗುವಾಗ ಇದನ್ನೂ ಬಿಟ್ಟು ಹೋಗುತ್ತೇನೆ. (ಅಂಗಿ–ನಿಕ್ಕರು) ಆದರೆ ನಾನು ಮಾಡಿದ ಒಳ್ಳೆಯ ಅಥವಾ ಕೆಟ್ಟಕೆಲಸ ಮಾತ್ರ ಸಮಾಜದಲ್ಲಿ ಮುದ್ರೆಯೊತ್ತಿ ನಿಲ್ಲುತ್ತದೆ" ಎಂಬುದು ಅವರ ತತ್ತ್ವ. "ಅಮಿಜಾತೋ ಅಮ್ಹಾಗಾಂವಾ–ಅಮಾಚಾರಾಮಾ ರಾಮಾ ಗ್ಯಾವಾ" ಎಂಬ ಅಭಂಗದ ಸಾಲನ್ನೇ–"ಸುತ್ತಿ ನಡೆದು ನಡೆದು ಸುತ್ತಿ ಬಂದೆ ನಾನು ಇಲ್ಲಿಗೆ; ಬುತ್ತಿಗಂಟು ತೀರಿ ಬಂತು ಹೊರಟೆ ನನ್ನ ಊರಿಗೆ—" ಎಂದು ತಾತನವರು ಆಗ್ಗಾಗ್ಗೆ ಹೇಳುತ್ತಿರುತ್ತಾರೆ.

ಹೀಗೆಯೇ ತಾತನ ಬಗ್ಗೆ ಎಷ್ಟು ಬರೆದರೂ ಕಮ್ಮಿ ಎನಿಸುತ್ತದೆ. ನಮ್ಮ ತಾತ ಹೊರಗಿನ ವೇಷದಿಂದ ತೀರ ಸಾಮಾನ್ಯರಂತೆಯೇ ಕಾಣುತ್ತಾರೆ. ಅವರು ತಾವು ದೊಡ್ಡವರೆಂದು ಹೇಳಿಕೊಳ್ಳುವುದೂ ಇಲ್ಲ; ಆದರೆ ಅದೊಂದು ಬೂದಿಮುಚ್ಚಿದ ಕೆಂಡ. ಅವರ ಆಳವನ್ನು ಅರಿಯುವುದು ತೀರ ಕಷ್ಟ. ಅವರು ತಪಸ್ವಿಗಳು, ಯೋಗಿಗಳು, ದ್ರಷ್ಟಾರರು, ಕುಶಲಕರ್ಮಿಗಳು, ದೀನದಲಿತರಲ್ಲೇ, ಸಮಾಜದಲ್ಲೇ ದೇವರನ್ನು ಕಂಡ ಸಾಕ್ಷಾತ್ಕಾರಿಗಳು. ತಮ್ಮ ತ್ಯಾಗಜೀವನದಿಂದ ಯೋಗದ ಮಹಾಸಿದ್ಧಿಗೆ ಏರಿದ್ದಾರೆ. ಆದರೆ ಅವರು ಸಮಾಜಕ್ಕೆ, ಲೋಕಕ್ಕೆ ಏನೇ ಆಗಿರಲಿ ನನಗೆ ಮಾತ್ರ ಮಮತೆಯ ತಾತನೇ ಆಗಿರಲಿ ಎಂದು ಪರಮಾತ್ಮನನ್ನು ನಮ್ರತೆಯಿಂದ ಪ್ರಾರ್ಥಿಸುತ್ತೇನೆ.

ಎಂ. ಕೆ. ಇಂದಿರಾ

ಕರ್ಮಯೋಗಿಗೆ ನಮನ

ಮಾನ್ಯ ಸಂಪಾದಕರಲ್ಲಿ ಸವಿನಯ ವಿನಂತಿ

ಮಹಾಶಯರೆ, ಶ್ರೀ ಶ್ರೀ ರಾಘವೇಂದ್ರ ಸ್ವಾಮೀಜಿಯವರ ಅಸೀಮ, ನಿಸ್ವಾರ್ಥ ಸೇವೆಯ ಬಗೆಯನ್ನು ಅರಿಯದವರು ಕರ್ನಾಟಕದಲ್ಲಿ ವಿರಳ ಅನ್ನಬಹುದು. ಈಗ್ಯೆ ಇಪ್ಪತ್ತು ವರ್ಷಗಳ ಹಿಂದೆಯೇ ನಮ್ಮ ಯಜಮಾನರು ಯಾರೋ ಶ್ರೀಮಂತ ರೋಗಿಯೊಬ್ಬರನ್ನು ಮಲ್ಲಾಡಿಹಳ್ಳಿಯ ಸೇವಾಶ್ರಮಕ್ಕೆ ಕರೆದೊಯ್ದಿದ್ದರು. ಆ ಶ್ರೀಮಂತರ ಘನ ರೋಗ ಕೇವಲ ಇಪ್ಪತ್ತು ದಿನದೊಳಗೆ ವಾಸಿಯಾಗಿ ಅವರು ಹಿಂದಿರುಗಿದಾಗ ನನ್ನ ಯಜಮಾನರು ಮಲ್ಲಾಡಿಹಳ್ಳಿಯ ಮುಖ್ಯ ವೈಶಿಷ್ಟ್ಯವೆಲ್ಲವನ್ನು ಹೇಳಿದ್ದರು. ಅಲ್ಲದೆ ನಾನೂ ಆಗಾಗ ಪತ್ರಿಕೆಗಳಲ್ಲಿ ಓದುತ್ತಿದ್ದೆ ಮತ್ತು ಒಂದು ಬಾರಿ ಮಲ್ಲಾಡಿಹಳ್ಳಿಯನ್ನು ಪ್ರತ್ಯಕ್ಷ ನೋಡಬೇಕೆಂಬ ಬಲವಾದ ಆಸೆಯೂ ನನಗಿತ್ತು. ಆದರೆ ಸಂಸಾರಿಕ ತಾಪ ಅನೇಕ ತೊಂದರೆಗಳಿಂದ ಅತ್ತ ಬರಲು ಸಾಧ್ಯವೇ ಆಗಲಿಲ್ಲ. ಇತ್ತಲಿನ ಇಪ್ಪತ್ತು ವರ್ಷಗಳಲ್ಲಿ ಸೇವಾಶ್ರಮವು ಎಷ್ಟರ ಮಟ್ಟಿಗೆ ಬೆಳೆದು ಬೆಳಗುತ್ತಿರಬಹುದೆಂದು ಊಹಿಸಿಯೇ ತಿಳಿಯಬಹುದು. ಈಗ ತಾವು ಕಳಿಸಿರುವ ಅಲ್ಲಿಯ ವಿವರ ಪತ್ರಿಕೆ ನೋಡಿ ತುಂಬಾ ಸಂತೋಷವಾಗುತ್ತದೆ. ಅಲ್ಲಿಯ ಪ್ರತ್ಯಕ್ಷ ದರ್ಶನ ಪಡೆಯುವ ಭಾಗ್ಯ ನನ್ನ ಪಾಲಿಗೆ ಜಾಗ್ರತೆ ಬರಲಿ ಎಂದು ಹಂಬಲಿಸುತ್ತಿದ್ದೇನೆ. ಅದೂ ಇತ್ತೀಚೆ ನನ್ನ ಜೀವನದಲ್ಲಿ ಘಟಿಸಿದ ಅತ್ಯಂತ ದುಃಖಕರ ಸಂಗತಿಯೊಂದರಿಂದ ಜೀವ ಶಾಂತಿಯನ್ನು, ಸಮಾಧಾನವನ್ನು, ಏಕಾಂತವನ್ನು ಮತ್ತು ನಿಸರ್ಗರಮ್ಯ ವನಾಂತರದಲ್ಲಿ ದೀನದಲಿತರಿಂದ ತುಂಬಿ ಋಷ್ಯಾಶ್ರಮದಂತಿರುವ ಆ ಪುಣ್ಯ ಕ್ಷೇತ್ರವನ್ನು ಕಾಣಲು ಬಯಸುತ್ತಿದೆ.

ನಾನಾವಿಧವಾದ ವ್ಯವಹಾರ, ವ್ಯಾಪಾರಗಳಿಂದ ಹಣ ಸಂಪಾದಿಸಿ ದಾನ, ಧರ್ಮ, ಪರೋಪಕಾರ ಮಾಡುವ ಮಹಾನುಭಾವರೂ ಇದ್ದಾರೆ. ಆದರೆ ಅದರಲ್ಲಿ ಮೆಚ್ಚುವಂತಹ ಮಹತ್ವವಿರುವದಿಲ್ಲ. ಹಣ ಇರುತ್ತದೆ ; ಜೊತೆಗೆ ಉದಾರ ಮನವಿರುವುದೂ ಪಡೆಯುವವರ ಒಂದು ಪುಣ್ಯವೆಂದು ಭಾವಿಸೋಣ. ಆದರೂ ಆ ದಾನದ ಹಿಂದೆ ಕಂಡೂ ಕಾಣದಂತೆ ಹೆಸರಿನ ಹಂಬಲವಿರುವುದನ್ನು ನಾವು ಕಾಣುತ್ತೇವೆ. ಆದರೆ ಇದು ಆಕ್ಷೇಪಿಸುವ ವಿಷಯವಲ್ಲ. ತಾವು ಕಷ್ಟಪಟ್ಟು ಸಂಪಾದಿಸಿದ್ದನ್ನು ಸಿಕ್ಕಸಿಕ್ಕವರಿಗೆ ದಾನಮಾಡಬೇಕೆಂಬ ಕಾನೂನಂತೂ ಇಲ್ಲವಲ್ಲ. ಇಂತಹ ಕಾಲದಲ್ಲಿ, ಪರಿಸ್ಥಿತಿಯಲ್ಲಿ ಸರ್ವಸಂಗ ಪರಿತ್ಯಾಗಿಯಾಗಿ, ಆಜನ್ಮ ಬ್ರಹ್ಮಚಾರಿಯಾಗಿ, ಏಕಾಂಗಿಯಾಗಿರುವ ಶ್ರೀ ರಾಘವೇಂದ್ರಸ್ವಾಮಿಗಳು ದೀನರು, ದಲಿತರು, ರೋಗಿಗಳು, ಅನಾಥರು ಇಂಥವರದೇ ಇಷ್ಟು ದೊಡ್ಡ ಪರಿವಾರ ಕಟ್ಟಿಕೊಂಡು ಎಂಭತ್ತಾರು ವರ್ಷಗಳಿಂದ ನಿರ್ವಹಿಸುತ್ತ ಬಂದಿರುವ, ಆ ನೈದಿಲೆಯ ಮೇಲಿನ ಹಿಮಮಣಿಯಂತೆ ಪರಮ ಪವಿತ್ರರಾಗಿ ಜಗತ್ತಿಗೆ ಅಂಟಿಯೂ ಅಂಟದಂತೆ ಇರುವ ಆ ಕರ್ಮಯೋಗಿಗೆ ಇದೋ ನನ್ನ ವಿನಮ್ರ ನಮಸ್ಕಾರಗಳು.

ಇಂದಿನ ದಿನಗಳಲ್ಲಿ ನಮ್ಮ ನಾಡಿನಲ್ಲಿ ಸಾಧುಸಂತರಿಗೆ ಕಡಮೆ ಇಲ್ಲ. ಪವಾಡಪುರುಷರಿಗೆ ಬರವಿಲ್ಲ.

ದೇವಾಲಯಗಳು. ತೀರ್ಥಕ್ಷೇತ್ರಗಳು, ವಿದ್ಯಾಮಂದಿಗಳಿಗೆ ಕೊರತೆಯಿಲ್ಲ. ನನಗೆ ತಿಳಿವಳಿಕೆ ಬಂದ ಐವತ್ತಾರು ವರ್ಷಗಳಿಂದ ಈ ಜಗತ್ತಿನ ಆಗುಹೋಗುಗಳನ್ನ ಕಾಣುತ್ತ ಬಂದಿದ್ದೇನೆ. ಈ ಎಲ್ಲ ಕ್ಷೇತ್ರಗಳಲ್ಲಿ ನಾನು ಕಂಡದ್ದು ಸಂತೋಷಕ್ಕಿಂತ ಸಂತಾಪ ಹೆಚ್ಚು. ಇವೆಲ್ಲದರ ಒಳ ತಿರುಳು ಅರ್ಥವಾದಂತೆ ಮನಸ್ಸಿಗೆ ಜಿಗುಪ್ಸೆ,ಹೇಸಿಕೆ, ಹೆದರಿಕೆ ಆತಂಕ, ಕಳವಳ ದಾನ-ಧರ್ಮ, ಉಪಕಾರಗಳ ಹೆಸರಿನಲ್ಲಿ ನಡೆಯುತ್ತಿರುವ ಅತ್ಯಾಚಾರ, ಅನಾಚಾರಗಳನ್ನು ನೆನೆದರೆ ಜೀವ ಝಲ್ಲೆನ್ನುತ್ತದೆ. ಬಡಬಗ್ಗರು ಮಕ್ಕಳಿಗೆ ವಿದ್ಯೆ ಕಲಿಸಲು ಸಾಧ್ಯವಿಲ್ಲ.ಕಲಿಸದೇ ಇರಲೂ ಸಾಧ್ಯವಿಲ್ಲ. ಜೀವದ ರಕ್ತಕೊಟ್ಟು ಮಕ್ಕಳಿಗೆ ವಿದ್ಯೆ ಕಲಿಸಿದರೂ ಮುಂದೆ ಉದ್ಯೋಗ ಸಮಸ್ಯೆಯು ಪೆಡಂಭೂತ ಎದುರು ನಿಲ್ಲುತ್ತದೆ. ಜೀವನದ ಎಲ್ಲಾ ಕ್ಷೇತ್ರಗಳೂ ತಲ್ಲಣಗೊಂಡಿದೆ! ಕ್ಷೋಭೆಗೊಂಡಿದೆ. ರಾಜಕೀಯ ಕ್ಷೇತ್ರವಂತೂ ಕಲ್ಲೋಲ ಕಲ್ಲೋಲವಾಗಿದೆ. ದೇಶದಲ್ಲಿ ಕೊಲೆ–ಸುಲಿಗೆ, ದರೋಡೆ, ಅಪಘಾತ, ಆತ್ಮಹತ್ಯೆಗಳೆಂಬುದು ಅನುದಿನದ ಒಂದು ಕಾರ್ಯಕ್ರಮ ಎಂಬಂತೇ ಆಗಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಇಂದು ಜಗತ್ತು, ಅದರಲ್ಲೂ ನಮ್ಮ ಭಾರತ ಒಂದು ಕುರುಕ್ಷೇತ್ರವಾಗಿದೆ.

"ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ"–ಎಂದು ಶ್ರೀ ಕೃಷ್ಣ ಪರಮಾತ್ಮ ಹೇಳಿದ್ದಾನೆ. ಆ ಮಹಾಪುರುಷ ಯಾವ ಸಮಯದಲ್ಲಿ, ಯಾವ ರೂಪದಲ್ಲಿ ಬಂದು ಈ ಮಹಾಕಲಿಯ ತಾಂಡವನೃತ್ಯವನ್ನು ಸ್ವಲ್ಪಮಟ್ಟಿಗಾದರೂ ತಣಿಸಿ–ಮಣಿಸುತ್ತಾನೊ ಆತನಿಗೇ ವೇದ್ಯ.

ಮಹನೀಯರೇ, ನಿಜ ಹೇಳಬೇಕೆಂದರೆ ಅನುದಿನವೂ ಈ ಭಯಂಕರ ಪರಿಣಾಮವನ್ನು ಕಣ್ಣಾರೆ ಕಂಡು ನಾನು ದೇವರು, ದೇವಾಲಯ, ಪುಣ್ಯ ಕ್ಷೇತ್ರ, ಸ್ವರ್ಗ, ನರಕ, ಪುಣ್ಯ-ಪಾಪ, ದಾನ–ಧರ್ಮ, ಅದರ ಪ್ರತಿಫಲಾಪೇಕ್ಷೆ ಎಲ್ಲದರಲ್ಲೂ ನಂಬಿಕೆಯನ್ನು ಕಳೆದುಕೊಂಡಿದ್ದೇನೆ. ನಮಗೀಗ ಬೇಕಾಗಿರುವುದು ನಿರ್ಮಲಹೃದಯದ ಅಂತಃಕರಣ, ದಯೆ, ಕರುಣೆ, ಅನುಕಂಪ, ಸಾಂತ್ವನ ಅಷ್ಟೆ 'ದಯೆಗಿಂತ ಧರ್ಮವಿಲ್ಲ' ಎಂದು ಹಿರಿಯ ಮಹಾನುಭಾವರು ಹೇಳಿದ್ದಾರೆ.

'ದೇವ ಮಂದಿರ ಭಜನೆ, ಪೂಜೆ ಪ್ರಸಾದಗಳು
ಜೀವನದಲಂಕಾರ ಮನಸಿನುದ್ಧಾರ
ಭಾವವಂ ಕ್ಷುಲ್ಲ ಜಗದಿಂ ಬಿಡಿಸಿ ಮೇಲೊಯ್ದು
ದಾಡೊಡವೊಳಿತು–ಮಂಕುತಿಮ್ಮ !

—ಎಂದು ನಮ್ಮ ಋಷಿವರ್ಯ ಡಿ. ವಿ. ಜಿ. ಯವರು ರತ್ನದಂಥ ಮಾತು ಹೇಳಿದ್ದಾರೆ. ಆದರೆ ಈಗ ನಮ್ಮ ಪಾಲಿಗೆ–ದೇವಮಂದಿರ ಭಜನೆ ಪೂಜೆ ಪ್ರಸಾದಗಳು ಜೀವನದ ಅಲಂಕಾರಗಳಾಗಿರುವುದು ನಿಜ. ಆದರೆ ಮನಸಿನುದ್ಧಾರ ಮಾತ್ರ ಆಗುತ್ತಿಲ್ಲ. ಇದಕ್ಕಾಗಿ ನಾವು ಯಾರನ್ನೂ ಆಕ್ಷೇಪಿಸುವಂತಿಲ್ಲ. ಜಗತ್ತೇ ಅಂಧಕಾರದ ಕ್ಷೋಭೆಯಲ್ಲಿ ತಡಕಾಡುತ್ತಿದೆ. ನಮ್ಮನ್ನೇ ನಾವು ನಂಬುವಂತಿಲ್ಲ. ಅಂತಹ ಪರಿಸ್ಥಿತಿ ಬಂದಿದೆ.

ಇಂತಹ ಕ್ರಾಂತಿಯುಗದಲ್ಲಿ ಸತತ ಎಂಭತ್ತಾರು ವರ್ಷಗಳ ಕಾಲ ಏಕಾಗ್ರಚಿತ್ತದಿಂದ, ಶ್ರದ್ಧೆ ಧೀಮಂತಿಕೆಗಳಿಂದ ತನ್ನದಲ್ಲದ ರೋಗ, ರುಜಿನ, ಕಂಗಾಲ, ಅನಾಥ, ದೀನ-ದಲಿತರ ಅಖಂಡ ಸಂಸಾರವನ್ನು ಜೀವನವಿಡೀ ಕೊರಳಿಗೆ ಕಟ್ಟಿಕೊಂಡು ದಿಟ್ಟ ಶಾಂತಿಯಿಂದ ನಿರ್ವಹಿಸುತ್ತಿರುವ ತಮ್ಮ ಈ ಬರಿಗೈಯ ಪರಮಾತ್ಮ ಶ್ರೀ ರಾಘವೇಂದ್ರಯತಿಯನ್ನೇ ನಾನು ಪ್ರತ್ಯಕ್ಷ ದೇವರೆಂದು ನಂಬುತ್ತೇನೆ. ದೇವರೇ ಇಲ್ಲವೆನ್ನುವಂಥ ನಾಸ್ತಿಕಳು ನಾನು. ಕೈಗೆ ಸಿಕ್ಕದ, ಕಣ್ಣಿಗೆ ಕಾಣದ ಯಾವುದೋ ಅಗೋಚರ ದೈವೀಕ ಶಕ್ತಿಯೊಂದು ತನಗೆ ಪವಿತ್ರವೆನಿಸಿದ ಪಾತ್ರ ಒಂದರಲ್ಲಿ ಪ್ರಾಯೋಪವೇಶಮಾಡಿ ಆ ಮೂಲಕ ಜಗತ್ತಿಗೆ ಒಳಿತು ಮಾಡುತ್ತದೆ. ಇಂತಹ ಅನೇಕ ಉದಾಹರಣೆಗಳನ್ನು ನಾವು ನಮ್ಮ ಬದುಕಿನಲ್ಲಿ ಕಾಣುತ್ತೇವೆ. ಅದೇ ರೀತಿ ಅಗೋಚರ ದೈವೀಕ ಶಕ್ತಿಯೊಂದು ಈ ಕಲಿಯುಗದಲ್ಲೂ ನಮ್ಮ ಶ್ರೀ ರಾಘವೇಂದ್ರಗುರುಗಳಲ್ಲಿ ಆವಿರ್ಭವಿಸಿ ಧರ್ಮ ಸಂಸ್ಥಾಪನೆ ಮಾಡುತ್ತಿದೆ. ಅಂದರೆ

ಅವರ ಸಂದರ್ಶನವಾದ ಮೇಲೆ ಮಲ್ಲಾಡಿಹಳ್ಳಿಗೆ ಹೋಗಿಬರಬೇಕು ಅನ್ನಿಸುವ ಆಸೆ ತೀವ್ರವಾಯಿತು. ನಮ್ಮ ಪರಿಚಿತರಲ್ಲಿ ಕೆಲವರು ಶ್ರೀಗಳವರಲ್ಲಿ ಔಷಧಿ ತೆಗೆದುಕೊಳ್ಳಲೆಂದು ಹೊರಟಾಗ, ನಾನೂ ಅವರೊಂದಿಗೆ ಹೊರಟೆ. ಅಂದು ಭಾನುವಾರ. ಸಂಜೆಯವೇಳೆಗೆ ಪ್ರಕೃತಿಸೌಂದರ್ಯದ ಮಡಿಲಲ್ಲಿ ಮುದ್ದಾಗಿ ಮಲಗಿದ್ದ, ಅಲ್ಲ, ಚೈತನ್ಯಪೂರ್ಣವಾದ, ಮಲ್ಲಾಡಿಹಳ್ಳಿಯನ್ನು ಮುಟ್ಟಿದೆವು. ಎಂಟು ದಿಕ್ಕುಗಳಿಂದಲೂ ಜನ ಸೇರುತ್ತಿದ್ದರು ಎಂಬ ಹಿಂದಿನಕಾಲದ ಉತ್ಪ್ರೇಕ್ಷೆಯ ಮಾತು, ಅಂದು ಅಲ್ಲಿ ಮಲ್ಲಾಡಿಹಳ್ಳಿಯಲ್ಲಿ, ಆ ಮಾತು ಉತ್ಪ್ರೇಕ್ಷೆಗಿಂತ ಸತ್ಯದ ಮಾತು ಎಂದು ಅನುಭವ ಸಿದ್ಧವಾಯಿತು. ರೈಲು, ಬಸ್ಸು, ಕಾರು, ಗಾಡಿ, ಕಾಲ್ನಡಿಗೆ–ಹೀಗೆ ಎಲ್ಲ ದಿಕ್ಕುಗಳಿಂದಲೂ, ಜನವಾಹಿನಿ ಮಲ್ಲಾಡಿಹಳ್ಳಿಯತ್ತ ಧಾವಿಸುತ್ತಿರುವಾಗ, ಅಲ್ಲಿ ತಂಗುತ್ತಿರುವಾಗ, "ಇಲ್ಲೇನು ಜಾತ್ರೆಯೇ ?" ಎನ್ನುವಂತಾಯ್ತು. ಆದರೆ ಅದು ಜಾತ್ರೆಯಲ್ಲ ; ಕರ್ಮಯೋಗಿಯ ಕಾರ್ಯಾಗಾರಕ್ಕೆ ಪ್ರತಿಭಾನುವಾರ ದೂರದೂರದಿಂದ ಶ್ರೀಸ್ವಾಮೀಜಿಯವರಲ್ಲಿ ಔಷಧಿಗಾಗಿ ಬರುತ್ತಿರುವವರ ಕ್ಷೇತ್ರಯಾತ್ರೆ ಅದು ! ಮರುದಿನ ಸೋಮವಾರ ಸೂರ್ಯೋದಯದ ವೇಳೆಗೆ ರೋಗಪರಿಧಾನ, ಚಿಕಿತ್ಸಾವಿಧಾನ, ಔಷಧವಿತರಣೆ,–ಎಲ್ಲವೂ ಉಚಿತ. ಎಲ್ಲವೂ ಪ್ರಾರಂಭವಾಗುತ್ತದೆ, ಸಂಜೆಯವರೆಗೆ.

ಹಾಗೆ ಬಂದು ಉಳಿದುಕೊಳ್ಳುವವರಿಗೆ ಊಟ, ವಸತಿ ? ಅದೆಷ್ಟು ಜನ ಆಶ್ರಮದ ಸ್ವಯಂಸೇವಕರು ಅತಿಥಿಗಳ, ರೋಗಿಗಳ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುವವರು ? ಎಲ್ಲರಲ್ಲೂ ಸೇವಾನಿಷ್ಠತೆ : ಶ್ರಮ ಬದ್ಧತೆ ! ಎಲ್ಲಕ್ಕಿಂತ ಮಿಗಿಲಾಗಿ ನಾನು ಶ್ರೀ ಸ್ವಾಮೀಜಿಯವರ ಬಹುಮುಖ ವ್ಯಕ್ತಿತ್ವದ ದರ್ಶನವನ್ನು ಅಂದು ಮಾಡಿದೆ. "ಸರ್ವತಃ ಪಾಣಿ ಪಾದಂ, ಸರ್ವತಃ ಶೃತಿಮಲ್ಲೋಕೇ...."—ಗೀತಾ ವಾಕ್ಯದಂತೆ, ಶ್ರೀ ಸ್ವಾಮೀಜಿಯವರ ಸರ್ವವ್ಯಾಪೀ ವ್ಯಕ್ತಿತ್ವವನ್ನು. ಅಂದು ಅವರು ಅಲ್ಲಿ ಬಂದು ಸೇರಿದ್ದ ಸಹಸ್ರಾರು ಅತಿಥಿವೃಂದದ ಸೇವೆಯಲ್ಲಿ ದರ್ಶನಮಾಡಿದೆ. ಬಂದು ಬಂದು ತಂಗುತ್ತಿದ್ದ ಆ ಅಗಣಿತ ಜನಸಮೂಹದಲ್ಲಿ ಎಲ್ಲೆಡೆಯಲ್ಲೂ ಶ್ರೀಗಳು ಕಾಣುತ್ತಿದ್ದರು ; ವಿಚಾರಿಸುತ್ತಿದ್ದರು ; ಅವರಿಗೆ ತಕ್ಕ ಅನುಕೂಲಗಳನ್ನು ಕಲ್ಪಿಸಿಕೊಡಲು ಸ್ವಯಂಸೇವಕರಿಗೆ ಸೂಚನೆ ಕೊಡುತ್ತಿದ್ದರು. ಅವರ ಊಟೋಪಚಾರಗಳ ಕಡೆ ಗಮನವೀಯುತ್ತಿದ್ದರು ; ವಸತಿ ಸೌಕರ್ಯದತ್ತ ಲಕ್ಷ್ಯ ನೀಡುತ್ತಿದ್ದರು. ಈ ದೃಶ್ಯವನ್ನು ನೋಡು ನೋಡುತ್ತಿದ್ದ ನನಗೆ ಶ್ರೀಗಳೊಬ್ಬರೇ ವ್ಯಕ್ತಿಯಾಗಿ ಕಾಣಲಿಲ್ಲ ; ಅನಂತರೂಪಿಯಾಗಿ, ಅನಂತಶಕ್ತಿಯಾಗಿ, ಎಲ್ಲೆಂದರಲ್ಲಿ ಸೇವೆಗಾಗಿ ಸಿದ್ಧವಾಗಿ, ಸೇವೆಯೇ ಭಗವದರ್ಚನೆ ಎನ್ನುವ ತಾದಾತ್ಮ್ಯ ಭಾವದಲ್ಲಿ ದೃಗ್ಗೋಚರವಾಗುತ್ತಿದ್ದಾರೆ ಎನ್ನಿಸಿತು. ಅನಂತಬಾಹುಗಳಿಂದ, ಸಹಸ್ರ ನೇತ್ರಗಳಿಂದ, ಅಂದಿನ ಅತಿಥಿಸೇವೆಯತ್ತ ಅವರ ಗಮನ ಕೇಂದ್ರೀಕೃತವಾಗಿತ್ತು. ನನಗೋ, ಪ್ರಯಾಣದ ಆಲಸ್ಯ, ತಲೆನೋವು, ಆಲಸಿಕೆ. ದಾಂತಿ,— ನಮಗಾಗಿ ಕೊಟ್ಟ ಸ್ಥಳದಲ್ಲಿ ಸುಮ್ಮನೆ ಮಲಗಿದ್ದೆ. ನಿದ್ರೆಯಿಲ್ಲದಿದ್ದರೂ, ಆ ಅನವರತ, ಅವಿಶ್ರಾಂತ ಚೇತನವ್ಯಾಪಕವಾಗಿದ್ದ ಆಶ್ರಮದ ವಾತಾವರಣದ ಗುಂಗಿನಲ್ಲಿರುವಾಗಲೇ—ಅದೆಷ್ಟು ಹೊತ್ತಾಗಿತ್ತೊ ತಿಳಿಯದು–ವಾತ್ಸಲ್ಯದ ಮಧುರವಾಣಿ ನನ್ನನ್ನು ಇಳೆಗಿಳಿದು ತಂದಿತು. ಕಣ್ತೆರೆದು ನೋಡಿದರೆ ಶ್ರೀಗಳವರು. ಬಿಸಿಯಾದ ಹಾಲನ್ನು ಕೈಗಿತ್ತು ನುಡಿದರು.

"ತಲೆನೋವೆಂದು ಮೊದಲೇ ಹೇಳಬಾರದಾಗಿತ್ತೇನವ್ವ, ಹು, ಈಗ ಬಿಸಿ ಹಾಲನ್ನು ಕುಡಿದು ಹಾಯಾಗಿ ಮಲಗಿಕೊ ತಾಯಿ : ನಿಮಿಷದಲ್ಲಿ ತಲೆನೋವು ಮಾಯವಾಗಿಬಿಡುತ್ತೆ !"

ಓಃ ! ಅಷ್ಟೊಂದು ಅಗಣಿತ ಜನಸಾಂದ್ರತೆಯಲ್ಲೂ, ಈ ಬಡಪಾಯಿ ಊಟಮಾಡದೆ ಅಸ್ವಸ್ಥಳಾಗಿ ಮಲಗಿದ್ದಾಳೆ ಎಂಬುದನ್ನರಿತು ಅಮೃತ ತಂದಿದ್ದಾರಲ್ಲ ಎನ್ನಿಸಿತು. ಭಾಷೆಯ ಮೂಲಕ ವಂದನೆ ಸಲ್ಲಿಸುವುದು ಸಾಧ್ಯವೇ ? ಹೃದಯ ತುಂಬಿಬಂತು ; ಕಂಬನಿ ಕಾಣಿಕೆಯಾಯಿತು !

ಆಮೇಲೂ ಕೆಲವಾರು ಬಾರಿ ನಾನು ಮಲ್ಲಾಡಿಹಳ್ಳಿಗೆ ಹೋಗಿಬಂದಿದ್ದೇನೆ. ಅಲ್ಲಿಗೆ ಹೋದಾಗಲೆಲ್ಲ, ಅಲ್ಲಿನ ಶಿಸ್ತು, ನೀತಿನಿಯಮ, ಪ್ರಶಾಂತಿ, ತಪೋವನ—ನಡೆಯುತ್ತಿರುವ ಕಾರ್ಯಕಲಾಪಗಳು ಎಲ್ಲವನ್ನೂ

ನೋಡಿದಾಗ, ನಾವು ಬಹು ಹಿಂದಿನಕಾಲದ ತಪೋವನ, ಋಷ್ಯಾಶ್ರಮ, ಪವಿತ್ರ ಗುರುಕುಲಗಳನ್ನು ನೋಡು ತ್ತಿದ್ದೇವೆಯೇ ಎನಿಸುತ್ತದೆ. ಪಾವಿತ್ರ್ಯತೆ ಮಲ್ಲಾಡಿಹಳ್ಳಿಯ ಆಶ್ರಮದ ಸತ್ವ, ಅದೇ ತತ್ತ್ವ. ಜ್ಞಾನ, ಭಕ್ತಿ, ಕರ್ಮ—ಈ ಮೂರೂ ಈ ತತ್ತ್ವ ಪ್ರಣಾಲಿಯೊಂದಿಗೆ ಈ ಮಲ್ಲಾಡಿಹಳ್ಳಿಯ ಆಶ್ರಮ ಪ್ರಗತಿಗೆ, ಶ್ರೇಷ್ಠತೆಗೆ ಕಾರಣವಾಗಿದೆ.

ಮಲ್ಲಾಡಿಹಳ್ಳಿ ! ಮಲ್ಲನಾಡಿದ, ಮಲ್ಲನಾಡುವ (ಶ್ರೀಗಳು ಮಲ್ಲರೂ ಹೌದು) ಮಲ್ಲರಾಡುವ (ಇಲ್ಲಿ ಕುಸ್ತಿ ಯನ್ನು ಕಲಿಸಲಾಗುತ್ತದೆ) ಹಳ್ಳಿ. ಅನ್ವರ್ಥನಾಮದ ಮುದ್ದಾದ ಹಳ್ಳಿ. "ಅನಾಥ ಸೇವಾಶ್ರಮ"–ಇದೊಂದು ಹೆಸರುಮಾತ್ರ. ನಡೆಯುವ ಕಾರ್ಯಕಲಾಪಗಳ ವೈವಿಧ್ಯತೆಯನ್ನು, ವೈಶಿಷ್ಟ್ಯತೆಯನ್ನು ಅಲ್ಲಿ ಸಂದರ್ಶಿಸಿಯೇ ತಿಳಿಯ ಬೇಕು. ಹಿಂದೆ, ಅದೊಂದು ಸಮಯದಲ್ಲಿ ತುಂಬುಹೃದಯದ ತಾಯಿಯೊಬ್ಬಳು ಶ್ರೀಗಳವರ ಜೋಳಿಗೆಗೆ ನೀಡಿದ ಭಿಕ್ಷೆ, ಶ್ರೀಕೃಷ್ಣ ದ್ರೌಪದಿಗೆ ಇತ್ತ ಅಕ್ಷಯಪಾತ್ರೆಯಂತಾಯಿತು ! ಜೋಳಿಗೆ ಎಂದೂ ಬರಿದಾಗಲಿಲ್ಲ ; ಬರಡಾ ಗಲಿಲ್ಲ. ತುಂಬಿತು, ತುಂಬಿತು, ತುಂಬಿ ತುಂಬುತ್ತಲೇ ಇದೆ. ಹಾಗೆ ತುಂಬಿಬಂದ ಕಣಕಣವೂ, ಕಾಸು ಕಾಸೂ ವ್ಯರ್ಥವೆನಿಸಲಿಲ್ಲ. ಸಾರ್ಥಕವಾಗಿದೆ, ಸಾರ್ಥಕವಾಗುತ್ತಿದೆ ಎಂಬುದು ಶ್ರೀಗಳವರು ಸಾಧಿಸಿರುವ ರಚನಾತ್ಮಕವಾದ, ಭಾವೈಕ್ಯತೆಯಿಂದ ಕೂಡಿದ, ರಾಷ್ಟ್ರಕಲ್ಯಾಣಕ್ಕೆ ಸೋಪಾನ ಪ್ರಾಯವಾಗಿರುವ, ಒಂದೊಂದು ಕೆಲಸವನ್ನೂ ಅದರ ಪ್ರಗತಿಯನ್ನೂ ನೋಡಿದಾಗ ಅರ್ಥವಾಗುತ್ತದೆ.

ಪುಣ್ಯಕ್ಷೇತ್ರ ಯಾತ್ರೆಮಾಡಿ ಮಾಡಿದ ಪಾಪವನ್ನು ಕಳೆದುಕೊಳ್ಳುವುದು ಎಂದು ಕೆಲವರ ಭಾವನೆ. ಗಂಗಾಸ್ನಾನ, ತೀರ್ಥಸ್ನಾನಗಳೂ ಇದೇ ಉದ್ದೇಶಿತಗಳೇ ! ಮಲ್ಲಾಡಿಹಳ್ಳಿ ಯಾವ ಪುಣ್ಯಕ್ಷೇತ್ರದ, ತೀರ್ಥಕ್ಷೇತ್ರದ ಮಹಿಮೆಗೂ ಹೊರತಾಗಿಲ್ಲ ! ಭಿಕ್ಷೆಯಿಂದ ಇಂದು ಲಕ್ಷಲಕ್ಷದ ಯೋಜನೆಗಳು ರೂಪುಗೊಂಡು ಕಾರ್ಯಕ್ಷೇತ್ರವಾಗಿವೆ. ಕಾರ್ಯ ನಿರತವಾಗಿದೆ. ಅಂತೆಯೇ ಲಕ್ಷ ಲಕ್ಷಗಳ ಬಂಡವಾಳದ, ಮತ್ತಷ್ಟು ರಾಷ್ಟ್ರೀಯ ಭಾವನೆಯ, ರಾಷ್ಟ್ರದ ಕಲ್ಯಾಣದ ವಿಶಾಲ ತತ್ತ್ವದಲ್ಲಿ, ನಿಸ್ಪೃಹತೆಯ, ನಿರ್ವಂಚನೆಯ ಸತ್ವದಲ್ಲಿ ಮತ್ತಷ್ಟು ರೂಪುಗೊಳ್ಳಲಿವೆ ! ಆ ಯೋಜನೆಗಳೂ ಶ್ರೀಗಳ ಸಾಧನೆಯಲ್ಲಿ ಲಕ್ಷದ ಲಕ್ಷ್ಯವಿಲ್ಲದೆ ಸಿದ್ಧಿಗೊಳ್ಳುವುದೂ ಸವಾಲನೇ! ಅಂದರೆ ಅದು ಯಂತ್ರ ಮಂತ್ರಗಳ ತಂತ್ರ ಸಿದ್ಧಿಯಿಂದಲ್ಲ ! ಯುಕ್ತಾಯುಕ್ತ ಶೇಖರಣೆಯ ಯುಕ್ತಿಯಿಂದಲ್ಲ ! ನಿಜವಾದ ಕರ್ಮ ಯೋಗಿಯ, ನಿಷ್ಕಾಮಕರ್ಮದ ಸಾಧನೆಯ ಸಿದ್ಧಿ ಅದು ಎಂದರೆ ಅತಿಶಯೋಕ್ತಿಯಲ್ಲ.

ಶ್ರೀಗಳವರು ಕಾಷಾಯವಸ್ತ್ರವನ್ನುಟ್ಟು ಮನಃಕಷಾಯವನ್ನು ಕಟ್ಟಿಕೊಂಡವರಲ್ಲ. ವಿಷವೂಡಿದವರಿಗೆ ಯಶಸ್ಸನ್ನು ಕೋರಿದರು ; ಸ್ವಾರ್ಥಿಗಳಿಗೆ ನಿಸ್ವಾರ್ಥದ ಸತ್ವ, ತತ್ತ್ವ, ಎಷ್ಟು ಒಳ್ಳೆಯುತವಾದುದು, ಎಂತಹ ಮಹತ್ತರವಾದುದು ಎಂಬುದಕ್ಕೆ ತಾವೇ ಮಹತ್ಸಾಕ್ಷಿಯಾಗಿದ್ದಾರೆ ! ಪರಹಿತಸಾಧನೆ ಅವರ ತಪಸ್ಸು. ರಾಷ್ಟ್ರ ಕಲ್ಯಾಣ ಅವರ ಸಾಧನೆ. ದೇವರು, ರಾಷ್ಟ್ರ—ಎರಡರಲ್ಲೂ ಅವರಿಗೆ ಒಂದೇ ಭಕ್ತಿ ! ಒಂದೇ ದೈವೀಭಾವನೆ.

ಹೌದು, ಅವರು ಜಗದ್ಗುರುಗಳಲ್ಲ, ಮಠಾಧೀಶರಲ್ಲ, ಪೀಠಾಧಿಪತಿಗಳಲ್ಲ ; ಬಿರುದುಬಾವಲಿಗಳ, ಡಿಂಗರಿಗರ ಸೇವೆ ಮೆರವಣಿಗೆಗಳ ಆಡಂಬರವಿಲ್ಲ. ಮದಮಾತ್ಸರ್ಯಗಳ ಹಿಂಬಾಲಕರೂ, ಲೋಭಮೋಹಗಳ ಸ್ತುತಿಪಾಠಕರೂ ಅವರಿಗಿಲ್ಲವೇ ಇಲ್ಲ. ಇಲ್ಲ....ಅವರಿಗೇನೂ ಇಲ್ಲ! ಶ್ರೀ ಸ್ವಾಮೀಜಿ ಬರಿ "ತಿರುಕ" ಮಾತ್ರ. ಆದರೂ ಅವರು ಎಲ್ಲ ಜಗದ್ಗುರುಗಳಿಗಿಂತ, ಎಲ್ಲ ಪೀಠಾಧಿಪತಿಗಳಿಗಿಂತ, ಮೇಲ್ಮಟ್ಟದಲ್ಲಿದ್ದಾರೆ ! ಯಾರು ಮತೀಯ ಸಂಕುಚಿತ ಭಾವನೆಯಿಂದ ಸಿಡಿದು ದೂರವಾಗಿ, ಸೇವೆಯೇ ಸರ್ವಸ್ವವೆಂಬ ಮಂತ್ರವೊಂದೇ ಅವರ ಗಾಯತ್ರಿಯಾಗಿದೆಯೋ, ಅವರು ಗೀತೆಯಲ್ಲಿನ ಭಗವದ್ವಾಕ್ಯದಂತೆ—ಅಂತಹವರು ಭಗವಂತನನ್ನು ಎಲ್ಲರಲ್ಲೂ ಕಾಣುತ್ತಾರೆ. ಸೇವೆ ಸರ್ವಸ್ವ ಎನ್ನುವವರಿಗೆ ಈ ವಿಶಾಲ ಭಾವನೆ ಬಂದಾಗ ಮಾತ್ರ ಜನತಾಜನಾರ್ದನನ ಸೇವೆ ಸಾರ್ಥಕವಾಗುತ್ತದೆ, ಸಾಧನೆ ಸಿದ್ಧಿಯಾಗುತ್ತದೆ. ಆ ಸಾಧನೆ, ಆ ಸಿದ್ಧಿಗಳು ಸೇವೆಯಲ್ಲಿ ತೊಡಗುವವರಿಗೆ ಎಂದಿಗೂ ನಂದದ ದಾರಿ ದೀವಿಗೆಗಳಾಗುತ್ತವೆ.

ಕೀರ್ತಿಗಾಗಿ ಆಸೆಪಡಲಿಲ್ಲ; ಕೀರ್ತಿಗಾಗಿ ಸೇವೆಮಾಡಲಿಲ್ಲ. ಆದರೂ ರಾಷ್ಟ್ರಪ್ರಶಸ್ತಿ ಐದುಸಾರಿ ಶ್ರೀಗಳಿಗೆ ಒಲಿದುಬಂತು! ಆದರೆ ಶ್ರೀಗಳು ಒಲಿದುಬಂದ ಪ್ರಶಸ್ತಿಯನ್ನು ನಮ್ರತೆಯಿಂದ ತಿರಸ್ಕರಿಸಿ, ತಮ್ಮ ಜೋಳಿಗೆಯನ್ನು ಸರ್ಕಾರದ ಮುಂದೆ ಒಡ್ಡಿದರು. "ಬಿರುದಿನಿಂದ ಬಡಜನರ ಉದ್ಧಾರವಾಗುವುದಿಲ್ಲ, ಭಾಷಣ ಗಳಿಂದ ರಾಷ್ಟ್ರಕಲ್ಯಾಣವಾಗುವುದಿಲ್ಲ; ಮಾತಿಗಿಂತ ಕೃತಿ ಲೇಸು. ರಾಷ್ಟ್ರಕಲ್ಯಾಣದ ಹಲವಾರು ಯೋಜನೆ ಗಳಿವೆ. ಬರಡು ಬಿರುದಿಗಿಂತ, ಜೋಳಿಗೆಗೆಲಕ್ಷದ ಭಿಕ್ಷೆ ನೀಡಿ, ಸಹಕಾರ ಕೊಡಿ. ರಾಷ್ಟ್ರಸೇವೆಯನ್ನು, ಕಲ್ಯಾಣ ಕಾರ್ಯವನ್ನು ಮುಂದುವರಿಸುವೆ"! ಎಂದರು, ಶ್ರೀಗಳು. ಹಲವಾರು ರಾಷ್ಟ್ರನಾಯಕರು, ಪ್ರಮುಖರು, ಧೀಮಂತರು, ಶ್ರೀಮಂತರು—ಎಲ್ಲ, ಎಲ್ಲಬಗೆಯ ಜನರೂ ಮಲ್ಲಾಡಿಹಳ್ಳಿಯ ಹಲವಾರು ರಚನಾತ್ಮಕ ಕಾರ್ಯಗಳನ್ನು ಮುಕ್ತ ಕಂಠದಲ್ಲಿ ಪ್ರಶಂಸಿದ್ದಾರೆ. ಪ್ರಶಂಸಿಸುತ್ತಲೂ ಇದ್ದಾರೆ. ನಿಜ! ಎಲ್ಲವೂ ನಿಜ. ಆದರೆ ಆ ಪ್ರಶಂಸೆಗೆ ಬದಲು ಹಣಸಹಾಯ ಮಾಡಿ ಕಾರ್ಯನಿರ್ವಹಣೆಗೆ ಪ್ರಚೋದನೆ ನೀಡಿದ್ದರೆ...? ಶ್ರೀಮಂತರು ತಿರುಪತಿಯ ಹುಂಡಿಗೆ ಹೆಸರಿಲ್ಲದೆ, ಲಕ್ಷಗಟ್ಟಲೆ ಹಣವನ್ನು 'ನೀಡುವ ಶ್ರೀಮಂತರು'—ಇಂತಹ ಸೇವಾಸಂಸ್ಥೆಗಳಿಗೆ ಅದೇ ಹಣವನ್ನು ನೀಡಿದ್ದರೆ....? ತಿರುಪತಿಯ ತಿಮ್ಮಪ್ಪ ಖಂಡಿತ ಮುನಿಯುವುದಿಲ್ಲ!

ಶ್ರೀಗಳವರ ಕಾರ್ಯವಿಸ್ತಾರವನ್ನು, ಕಾರ್ಯತತ್ಪರತೆಯನ್ನು ಈ ಇಳಿವಯಸ್ಸಿನಲ್ಲೂ ಹರಯದ ಹುರುಪಿ ನಿಂದ ಮಾಡುತ್ತಿರುವ ಸೇವೆಯನ್ನು, ಅವರ ವಿಶಾಲವಾದ ಮನೋಭಾವನೆಯನ್ನು, ಅವರ ರಾಷ್ಟ್ರೀಯ ಅಭಿಮಾನ ವನ್ನು ನೋಡಿದ ವಿದೇಶೀ ಗಣ್ಯವ್ಯಕ್ತಿಗಳು—ನಮ್ಮಲ್ಲಿ ಇಂತಹವರಿದ್ದರೆ ತಲೆಯಮೇಲೆ ಹೊತ್ತು ಮೆರೆಸುತ್ತಿ ದ್ದೆವು", "ರಾಷ್ಟ್ರಕ್ಕೆ ಇವರೊಂದು ಅನರ್ಘ್ಯ ರತ್ನ", "ಇವರ ಸೇವಾಸಂಸ್ಥೆ ರಾಷ್ಟ್ರಕ್ಕೆ ಅಮೂಲ್ಯ ಕೊಡುಗೆ!" ಎಂದೆಲ್ಲ ಹಾಡಿ ಹೊಗಳಿದ್ದಾರೆ. ಆದರೆ ನಾವು ಇದನ್ನು ಅರ್ಥಮಾಡಿಕೊಳ್ಳುವುದು ಎಂದಿಗೆ?

ನಮ್ಮಲ್ಲಿ ಒಂದು "ನೀತಿ". ಅದನ್ನು ಸಂಕಟದಿಂದ ಹೇಳಬೇಕಾಗಿದೆ! ಬದುಕಿನಲ್ಲಿ ಬವಣೆಪಟ್ಟು, ಬದುಕಿರುವಾಗ ಮಹಾವ್ಯಕ್ತಿಯಾಗಿದ್ದರೂ, ಆತನ ಕೃತಿಗಾಗಿ ನಮ್ಮ ಮೆಚ್ಚುಗೆಯಾಗಲೀ, ಪ್ರೋತ್ಸಾಹವಾಗಲೀ, ಕೊನೆಗೆ ಒಂದು ಒಳ್ಳೆಯ ಮಾತಾಗಲೀ ಲಭ್ಯವಾಗುವುದು ಅಲಭ್ಯ! ಆಗ ಅವೆಲ್ಲ ನಮ್ಮ ನರನಾಡಿಗಳಲ್ಲಿ ಸತ್ತು ಹೋಗಿರುತ್ತವೆ. ಅಥವಾ ಎಲ್ಲೋ ಮೂಲೆಗುಂಪಾಗಿರುತ್ತವೆ. ಉತ್ತಮ ವ್ಯಕ್ತಿಯ ಕಾರ್ಯಕ್ರಮಗಳಿಗೆ ಉತ್ತೇಜನ ಕೊಡದಿದ್ದರೂ ಮೂಲೋತ್ಪಾಟನ ಮಾಡುವ ಹಂತಕರೂ ಇಲ್ಲದಿಲ್ಲ; ಆದರೆ ಆ ಮಹಾವ್ಯಕ್ತಿ ನಮ್ಮಿಂದ, ನಮ್ಮ ಪಂಚಕ ಲೋಕದಿಂದ ಮಿಂಚಿ ಮರೆಯಾದಾಗ,-ಓಹ್! ಆಗ ಎಲ್ಲಿಲ್ಲದ ಶ್ರದ್ಧಾಸಕ್ತಿಗಳು ಒಮ್ಮಿಂದೊಮ್ಮೆಲೇ ಮೂಡುತ್ತವೆ! ಸ್ಮಾರಕದ ಕಂಭ ನೆಡುವುದಕ್ಕಾಗಿ ಬೀದಿಗೊಂದು, ಗಲ್ಲಿಗೊಂದು ಹೆಸರಿಡುವುದಕ್ಕಾಗಿ, ಆ ವ್ಯಕ್ತಿಯ ಹೆಸರಿನಲ್ಲಿ ಚಂದಾ ಎತ್ತುವುದಕ್ಕೆ ನಾಯಿಕೊಡೆಗಳಂತೆ ಗುಂಪು ಹುಟ್ಟುತ್ತವೆ! ನಾಚಿಗೆಗೇಡು!

ಮಲ್ಲಾಡಿಹಳ್ಳಿಯ ಸಂಸ್ಥೆ ಶ್ರೀಗಳು ಬರಿಗಾಲಲ್ಲಿ ತಿರುತಿರುಗಿ, ತಿರುಕನಂತೆ ಜೋಳಿಗೆಹಿಡಿದು, ಧನ ಧಾನ್ಯಗಳನ್ನು ಸಂಗ್ರಹಿಸಿ, ಕಟ್ಟಿದ, ಬೆಳೆಸಿದ ಸಂಸ್ಥೆ. "ಕಾಯಕವೇ ಕೈಲಾಸ'—ನುಡಿಯ ಸತ್ಯವನ್ನು ಇಲ್ಲಿ ನೋಡಬಹುದು. ಈ ಸಂಸ್ಥೆಯನ್ನು ಇಷ್ಟು ದೊಡ್ಡದಾಗಿ, ಇಷ್ಟು ಭವ್ಯವಾಗಿ, ಇಷ್ಟು ಸರ್ವಜನ ಹಿತಸಾಧನೆ ಗಾಗಿ,—ಎಷ್ಟು ಬವಣೆಪಟ್ಟು ಬೆವರಿಳಿಸಿ ಬೆಳೆಸಿದ್ದಾರೋ ಅದು ಭಗವಂತನಿಗೇ ಗೊತ್ತು. ಶ್ರೀಗಳವರ ಮಹದಾ ಶಯದಂತೆ ಅದು ಮತ್ತು ಮತ್ತೂ ಬೆಳೆಯಬೇಕು. ಕರ್ನಾಟಕದ "ಶಾಂತಿನಿಕೇತನ"ವಾಗಬೇಕು. ತ್ರಿವಿಕ್ರಮ ನಂತೆ ವಿರಾಡ್ರೂಪಿಯಾಗಿ, ವಿರಾಟ್‌ಶಕ್ತಿಯಾಗಿ, ಬೆಳೆಯಬೇಕು. ರಾಷ್ಟ್ರಕಲ್ಯಾಣದಲ್ಲಿ ಮಹಾಶಕ್ತಿಯಾಗಿ, ಆಶ್ರಮದಲ್ಲಿ ಬೆಳೆದು ಸಂಘಟಿತರಾಗುತ್ತಿರುವ ಬಾಲಕ ಬಾಲಕಿಯರು ರಾಷ್ಟ್ರದ ಮಹಾಪ್ರಜೆಗಳಾಗಲು ಪ್ರಚೋದನೆ ಯಾಗಬೇಕು. ಸಂಸ್ಥೆಯ ಕೀರ್ತಿ ಸರ್ವಕಾಲಿಕವಾಗಿ ಸರ್ವವ್ಯಾಪಿಯಾಗಬೇಕು. ರಾಷ್ಟ್ರಕ್ಕೆ ಮಾತ್ರವಲ್ಲ, ವಿಶ್ವಕ್ಕೆ ಗೌರವ ತರುವಂತಹ, ಮಾದರಿಯಾದ ಈ ಮಹಾಸಂಸ್ಥೆಯ ಸಂಸ್ಥಾಪಕರಾದ ಶ್ರೀ ಶ್ರೀ ಸ್ವಾಮೀಜಿ ಯವರು ತಾವು ಕಟ್ಟಿ ಬೆಳೆಸುತ್ತಿರುವ ಈ ಮಹಾಸಂಸ್ಥೆಯ ವಿರಾಟ್‌ಸ್ವರೂಪವನ್ನು ನೋಡಿ ತೃಪ್ತರಾಗುವಂತೆ, ಅವರಿಗೆ ಭಗವಂತನು ದೀರ್ಘಾಯುರಾರೋಗ್ಯಭಾಗ್ಯಗಳನ್ನು ಅನುಗ್ರಹಿಸಲಿ—ಎಂದು ನನ್ನ ಅನನ್ಯ ಪ್ರಾರ್ಥನೆ.

ಆರ್. ಬಿ. ಪಾಟೀಲ್

ಪೂಜ್ಯ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳಿಗೆ ನಮನಗಳು

ಇದು ವಿಹಂಗಮ ನೋಟ
ಇದು ವಿನಮ್ರ ನೋಟ
ಇದು ಶಿಷ್ಯ ಕಂಡರಿತ
ದೇವ ಮಾನವನ ದಿವ್ಯ ನೋಟ

ಮಗುವಿನೊಲು ನೆಗೆಯುತಲಿ, ಹಾಡುತಲಿ ನಲಿಯುತಲಿ
ಕಷ್ಟ ಕಡಲನು ಕಷ್ಟವಿಲ್ಲದಲೆ ದಾಟುತಲಿ
ತನ್ನನ್ನು ಕೆಡಿಸದಲೆ ಮಣ್ಣಿನೊಳು ಬೆರೆಸದಲೆ
ಎಲ್ಲ ಸರಿಮಾಡುವನು ಜ್ಯೋತಿಯಂದದಲಿ.

ಬಾಲ್ಯವನು ತಲುಪದಾ ಎಂಬ–
ತ್ತಾರರಾ ಶೈಶವವು
ಮಾನವಗೆ ಮೀರಿದ
ದೈವದಂತಸ್ತನರಿತವನು.

ಕಷ್ಟ ಕಾರ್ಪಣ್ಯಗಳ ಜಂಜಡದ
ಜೀವನವನರ್ಪಿಸಲಿವಗೆ
ಮುಕ್ತಿ ಸ್ಥಿರವಿಹುದು, ಇದು ಸಹಜ
ಎಲ್ಲರಿಗು, ನನಗೊಬ್ಬಗಲ್ಲ.

ವ್ಯಕ್ತಿತ್ವವಿಲ್ಲದಲೆ ನಾನು ಬಂದೆ
ವ್ಯಕ್ತಿತ್ವವಿಲ್ಲದಲೆ ನಾನು ಪೋಪೆ,
ಆದರೀ ಸೂರ್ಯನಾ ಆಧ್ಯಾತ್ಮ ಬಿಸಿಲಿನಿಂ
ನನಗಿಲ್ಲದಾ ಮೈಯು ಪುಲಕಗೊಂಡಿಹುದು.

ಅರುಣ ಮೂಡುವ ಮುನ್ನ
ಬೆಳಕು ಹರಿಯುವ ಮುನ್ನ
ಹರಿಸುತಲಿ ತಾ ಬಂದ
ನನ್ನ ಗುರುದೇವ.

ನಮ್ಮ ತಲೆ ಬಾಗಿಹವು ನಿಮ್ಮ ಸತ್ಕಾರಕ್ಕೆ
ನಮ್ಮ ಕೈ ಮುಗಿದಿಹವು ನಿಮ್ಮ ಪ್ರೀತಿಯನುಂಡು
ಬುದ್ಧಿ ಹುಡುಕಿತು ಶಬ್ದಗಳ
ನಿಮ್ಮ ಸ್ನೇಹವನು ಬಂಧಿಸಲು ಎಂದು.

ನಿಮ್ಮ ಪಾದಕೆ ಮಣಿವೆ
ಅರಿವ ಮೂಡಲು ಹರಸು
ಹುಟ್ಟು-ಸಾವನು ಮೀರಿದೌನ್ನತ್ಯ ಸಾಧಿಸಲು
ನಿಮ್ಮ ಪಾದಕೆ ಮಣಿವೆ ಎಲ್ಲವನು ಕಲಿಸು.

ಸ್ವಾಮಿಗಳ ಪಾದದಡಿಯಲಿ ಇದು ಒಂದು ದಿನ
ಅವರನರಿಯಲು ಇನ್ನು ಬರಬೇಕು ನೂರುದಿನ
ಅವರ ಹೃದಯದಿ ಹರಿವ ಧಾರೆ ಎನ್ನೆದೆಯ ತುಂಬುತಲಿ
ಬೆಳೆಯಿತೆನ್ನಯ ಧೈರ್ಯ
ಅವರ ಕೆಚ್ಚನರಿಯಲಿಕೆ.

ನಿನ್ನೊಡನೆ ಇಹ ಬಯಕೆ,
ಬಯಕೆ ನಿನ್ನೊಡನಾಡಲ್ಕೆ
ಇರಬಲ್ಲನಾಗಿದ್ದೆ, ಹಾರಿಬಂದಿಹೆನಿಂದು,
ನಿನ್ನ ನೆರಳಿನ ತಡಿಗೆ,
ನನ್ನ ಚಿಂತೆಯು ಅಲ್ಲಿ ಒತ್ತಟ್ಟಿಗಿರಲಿ.

ನಿನ್ನ ಸನಿಹಕೆ ಇರಲು ಎತ್ತಣದು ಭಯವೆನಗೆ
ನೀನು ಸನಿಹಕೆ ಬರಲು ಎತ್ತಣದು ನೋವು ?
ದುರ್ಬಲರ ಕಂಬನಿಯ ತೊಡೆಯುತಲಿ ಕೈಯಿಂದ
ಎಲ್ಲರನು ಕಾಣುತಿಹೆ ನಿನ್ನಲ್ಲೆ ನೀನು !

ಪೂರ್ಣ ಆಳಕೆ ಇಳಿದು ಇವನ ನೋಡುವ ಬಯಕೆ
ಅಂತಾದರೇನಂತೆ,
ಇವನ ಆಳದ ಪೂರ್ಣ ತತ್ತ್ವ ಸತ್ಯ

ಆದರೂ ಬಡವನಾ ಶಬ್ದ ಸಂಪತ್ತಿನಲಿ
ಬಿಂಬಿಸಲು ಸಾಲವವು ಸತ್ಯರೂಪವನು.

ನನ್ನ ಅನಿಸಿಕೆಯಂತೆ,
ಯೋಗ, ಸತ್ಯ, ಪ್ರೀತಿ ಸೇವೆಗಳು
ನಿನ್ನ ಉಸಿರಿನ ಗುಣವು
ಭೋಗ ದ್ವೇಷಾಸೂಯೆ
ನಿನಗೆ ಗಾವುದ ದೂರ.

ಮತ್ತೇನು ನನ್ನಾಸೆ
ಮತ್ತಷ್ಟು ಜನಸೇರಿ
ಇವನ ಹೆಜ್ಜೆಗೆ ಕೂಡಿ ಹೆಜ್ಜೆಯನು ಹಾಕುತ್ತ
ತೂರಿ ಹರಡಲಿ ಇವನ ಬೆಳಕ ಎಲ್ಲ ಕಡೆಗೂ.

ಲಕ್ಷವಾಗಲಿ ಇವನ ಶಿಷ್ಯ ವರ್ಗ
ಕೋಟಿಯಾಗಲಿ ಅವರ ಜ್ಞಾನ ರತ್ನ
ಇವನ ಸಂದೇಶವದು ಅವರ ಉಸಿರಾಗಿರಲಿ
ಬೆಳೆದು ಹರಡಲಿ ಸತ್ಯ ಸಾಧುವರ್ಗ.

ಎಷ್ಟು ಹಾಡಿದರೇನು ತೃಪ್ತಿ ಕಾಣದು ಹೃದಯ
ಭಾವನೆಯ ಹಂದರಕೆ ತರಗೆಲೆಯ ತೋರಣವು
ನನ್ನ ಶಬ್ದದ ತೊರೆಯು ಬತ್ತಿಹೋಗುವ ಮುನ್ನ
ನನ್ನ ಮೊರೆ ಸಲ್ಲಿಸುವೆ ನಿತ್ಯ ಚೇತನಗೆ.

"ಓ ! ನಿತ್ಯ ಚೇತನ ಸದಾನಂದ
ನಮ್ಮೆಲ್ಲರನು ಹರಸಿ ಕೃತಕೃತ್ಯರಾಗಿಸು"

ಲೀಲಾ ನಾರಾಯಣ

ಈ ಹನುಮಭಂಟ ಚಿರಾಯುವಾಗಲಿ

ಮಲ್ಲಾಡಿಹಳ್ಳಿ ಎಂಬ ಹೆಸರು ಕಿವಿಗೆ ಬಿದ್ದಕೂಡಲೇ ನಮ್ಮ ಕಣ್ಣೆದುರಿಗೆ ಸಜ್ಜನಿಕೆಯ ಸಾಕಾರ ಮೂರ್ತಿಯೊಂದು ಎದ್ದುನಿಲ್ಲುತ್ತದೆ. ಆ ಮಹಾ ಮೂರ್ತಿಯೇ ಶ್ರೀ ಶ್ರೀ ರಾಘವೇಂದ್ರಸ್ವಾಮೀಜಿ. ಸಾಹಿತ್ಯ ಲೋಕದಲ್ಲಿ ಸುಪರಿಚಿತವಾಗಿರುವ "ತಿರುಕ".

ಸುಮಾರು ಏಳೆಂಟು ವರ್ಷಗಳ ಹಿಂದಿನ ಮಾತು. ನನ್ನವರು ಆಗ ಚನ್ನಗಿರಿ ಅಭಿವೃದ್ಧಿಕ್ಷೇತ್ರದ ಅಧಿಕಾರಿಗಳಾಗಿ ಕೆಲಸ ಮಾಡುತ್ತಿದ್ದರು. ಆಗ ನಮಗೆ ಅಲ್ಲಿನ ತಾಲ್ಲೂಕು ಅಭಿವೃದ್ಧಿ ಮಂಡಳಿ ಪ್ರೌಢಶಾಲಾ ಮುಖ್ಯೋಪಾಧ್ಯಾಯ ಶ್ರೀ ಶೇಷಾಚಲರಾಯರ ಪರಿಚಯವಾಯಿತು. ಅವರ ಶಾಲೆಯ ಯಾವುದೇ ಸಮಾರಂಭಕ್ಕೆ ನಮಗೆ ತಪ್ಪದೆ ಆಹ್ವಾನ ಬರುತ್ತಿತ್ತು. ಆಸ್ತಮಾ ಪೀಡಿತರಾಗಿದ್ದ ನನ್ನವರನ್ನು ಕಂಡು ಒಮ್ಮೆ ಶ್ರೀ ಶೇಷಾಚಲರಾಯರು "ತಾವು ಮಲ್ಲಾಡಿಹಳ್ಳಿ ಸ್ವಾಮಿಗಳಲ್ಲಿ ಔಷಧಿಯನ್ನೇಕೆ ತೆಗೆದುಕೊಳ್ಳಬಾರದು ?" ಎಂದು ಕೇಳಿದರು. ಸ್ವಾಮಿಗಳ ಚಿಕಿತ್ಸೆಯ ಬಗ್ಗೆ ಅವರಿವರು ಹೇಳಿದ್ದರೂ ಕಾಲ ಕೂಡಿಬಂದಿರಲಿಲ್ಲ. ಈಗಲಾದರೂ ಅಲ್ಲಿಗೆ ಹೋಗಲೇಬೇಕೆಂದು ನಿರ್ಧರಿಸಿ ಹೊರಟೆವು. ಅದೇ ಸಮಯಕ್ಕೆ ಸರಿಯಾಗಿ ಮಲ್ಲಾಡಿಹಳ್ಳಿಯಲ್ಲಿ ಪ್ರಸಿದ್ಧ ಗಜಾನನ ಸಪ್ತಾಹ ನಡೆಯುತ್ತಿತ್ತು. ನಮ್ಮ ಜೊತೆಗೆ ಇನ್ನೂ ನಾಲ್ಕೈದು ಜನ ಪರಿಚಿತರು ಸೇರಿಕೊಂಡರು. ನಮ್ಮದೊಂದು ಚಿಕ್ಕ ಗುಂಪೇ ಆಯಿತು.

ನಾವು ಮಲ್ಲಾಡಿಹಳ್ಳಿ ಮುಟ್ಟುವಷ್ಟರಲ್ಲಿ ಕಾರ್ಯಕ್ರಮ ಆರಂಭವಾಗಿತ್ತು. ಮಹಾದ್ವಾರದ ಬಳಿ ಓರ್ವ ವ್ಯಕ್ತಿ 'ಬಂದೀಖಾನೆಯ ಕೈದಿ'ಯಂತೆ (ಟೊಪ್ಪಿಗೆ ಬಿಟ್ಟು) ಉಡುಪು ಧರಿಸಿ, ಕೈಯಲ್ಲೊಂದು ಕೋಲು ಹಿಡಿದು ಓಡಿ ಬಂದು 'ಇವರು ಯಾರೂ' ಎಂದು ನಮ್ಮನ್ನು ಕೇಳುತ್ತಲೇ ಮತ್ತೊಂದು ಕಡೆ ಓಡಿದರು. ಅಲ್ಲಿದ್ದವರ ಬಗ್ಗೆ ವಿಚಾರಿಸಿ ಮತ್ತೆ ನಮ್ಮಲ್ಲಿಗೆ ಬಂದು ಮಾತನಾಡಿಸಿದರು. ಅವರೇ 'ಸ್ವಾಮೀಜಿ' ಎಂದು ತಿಳಿದಾಗ ನನಗಾದ ಆಶ್ಚರ್ಯ ಅಷ್ಟಿಷ್ಟಲ್ಲ. ಇದು ಮಲ್ಲಾಡಿಹಳ್ಳಿಗೆ ಹೋದ ಅನೇಕರಿಗಾದ ಅನುಭವ. ಒಮ್ಮೆ ಪ್ರಸಿದ್ಧ ಸಾಹಿತಿಗಳಾದ ಶ್ರೀ ವಿ. ಸೀ. ಅವರು ಕಾರಿನಿಂದಿಳಿದು ಈ 'ಬಂದಿಖಾನೆಯ ಕೈದಿ'ಯನ್ನೇ 'ಸ್ವಾಮೀಜಿ' ಎಲ್ಲಿದ್ದಾರೆ ಎಂದು ಕೇಳಿದ್ದರಂತೆ. 'ಸ್ವಾಮೀಜಿ ಪೂಜೆಯಲ್ಲಿದ್ದಾರೆ' ಎಂಬ ಉತ್ತರ ಬಂತು ಅವರಿಗೆ. 'ಎಲ್ಲಿ ಪೂಜೆ ಮಾಡುತ್ತಿದ್ದಾರೆ' ಎಂದಾಗ 'ಇಲ್ಲೇ' ಎಂಬ ಉತ್ತರ. ವಿ. ಸೀ. ಅವರಿಗೆ ಅರ್ಥವಾಗಲು ತಡವಾಗಲಿಲ್ಲ ; ಸ್ವಾಮೀಜಿ ತೊಡಗಿದ್ದುದು ಅತಿಥಿಸೇವೆಯ ಪೂಜೆಯಲ್ಲಿ ಎಂಬುದು.

ಆವಜನ್ಮದ ಸುಕೃತವೋ, ಆ ಮಹಾ ಮೂರ್ತಿಯನ್ನು ಕಂಡಂತಾಯಿತು. ಅವರ ದರ್ಶನದಿಂದ ನಮಗಾದ ಆನಂದ ಅಪೂರ್ವ. ಅವರು ನಮ್ಮನ್ನು ಆತ್ಮೀಯತೆಯಿಂದ ಮಾತನಾಡಿಸಿದಾಗ, ಅವರ ಕರುಣೆಯ ದೃಷ್ಟಿ ನಮ್ಮ ಮೇಲೆ ಹರಿದಾಗ ನಮಗಾದ ತೃಪ್ತಿಯ ಅನುಭವ ಅಷ್ಟಿಷ್ಟಲ್ಲ. ನನ್ನ ಮಾತಿನ ಧಾಟಿ ಕಂಡು

'ಓಹೋ, ನೀವು ದಕ್ಷಿಣ ಕನ್ನಡದವರೋ ?... ಹೆಸರೇನು ? ಎಂದು ಕೇಳಿದರು. 'ಲೀಲಾ' ಎಂದೆ. ಸ್ವಾಮೀಜಿ ಅಷ್ಟರಲ್ಲಿ ಮತ್ತೆಲ್ಲಿಗೋ ಹೋಗಿದ್ದರು.

ಸೊಗಸಾದ ಕಾರ್ಯಕ್ರಮ ಮುಗಿಸಿಕೊಂಡು ಪುಷ್ಕಳವಾದ ಭೋಜನ ತಾಂಬೂಲ ಸಹಿತ, ಸ್ವಾಮೀಜಿಯವರನ್ನು ಕಂಡು ಹೊರಡಬೇಕೆನ್ನುವಷ್ಟರಲ್ಲೇ ಸ್ವಾಮಿಗಳು ಸುಯ್ಯನೆ ಪ್ರತ್ಯಕ್ಷರಾದರು. ಎಲ್ಲರ ಊಟೋಪಚಾರದ ಬಗ್ಗೆ ವಿಚಾರಿಸಿ, 'ಎಲ್ಲಿ ಲೀಲಕ್ಕ ?' ಎಂದರು. ಅಷ್ಟೊಂದು ಕಾರ್ಯ ಗೊಂದಲದಲ್ಲೂ ಬಂದು ಹೋಗುವವರ ಹೆಸರಿನ ನೆನಪೆಂದರೆ ? ಬೆಳಿಗ್ಗೆ ತಿಂದ ತಿಂಡಿಯ ನೆನಪೇ ಇರದ ನಮಗೆ ಸ್ವಾಮೀಜಿಯವರ ನೆನಪಿನ ಶಕ್ತಿ ಕಂಡು ಸೋಜಿಗವೆನಿಸಿತು. ಎಲ್ಲಕ್ಕಿಂತ ಮಿಗಿಲಾದುದು ಅವರ ಮಾತಿನಲ್ಲಿ ತುಂಬಿದ್ದ ವಾತ್ಸಲ್ಯಪೂರ್ಣ ಆತ್ಮೀಯತೆ.

ನಾನು ನನ್ನವರ ಕಾಯಿಲೆ ವಿಚಾರ ನಿವೇದಿಸಿಕೊಂಡಾಗ 'ಸೋಮವಾರ ಮಾತ್ರ ಔಷಧಿ ಕೊಡುವ ದಿನ' ಎಂದರು. ಮಾರನೆಯ ಸೋಮವಾರವೇ ನನ್ನವರಿಗೆ ಔಷಧೋಪಚಾರ ಆರಂಭವಾಯಿತು. ಸ್ವಾಮೀಜಿಯವರಲ್ಲಿಗೆ ಬರುವ ರೋಗಿಗಳ ಸಂಖ್ಯೆಗೆ ಲೆಕ್ಕವಿಲ್ಲ. ರೋಗಗಳೂ ನೂರಾರು ಬಗೆ. ರೋಗಿಗಳು ಭಾನುವಾರ ರಾತ್ರಿಯೇ ಅಲ್ಲಿಗೆ ಬಂದು ತಂಗುತ್ತಾರೆ. ಮಾರನೆಯ ಬೆಳಗಿನಜಾವವೇ ಔಷಧ ನೀಡಿಕೆ ಆರಂಭವಾಗುತ್ತದೆ. ಸ್ವಾಮಿಗಳು ಸಾಲುಗಟ್ಟಿ ನಿಂತ ಸಾವಿರಾರು ರೋಗಿಗಳನ್ನು ಹಗಲೆಲ್ಲ ಎಡೆಬಿಡದೆ ಪರೀಕ್ಷಿಸಿ ಔಷಧಿ ಕೊಟ್ಟು ಕಳುಹಿಸುತ್ತಾರೆ. ಪರೀಕ್ಷೆ, ಸಲಹೆ, ಔಷಧಿ—ಎಲ್ಲ ಉಚಿತ. ಸ್ವಾಮೀಜಿಯವರು ರೋಗಿಗಳಿಗೆ ಕಟ್ಟುನಿಟ್ಟಿನ ಪಥ್ಯ ಹೇಳುತ್ತಾರೆ. ಅವರ ಸೂಚನೆಯಂತೆ ಪಥ್ಯಪಾಲನೆ ಔಷಧಿ ಸೇವಿಸಿದರೆ ಕಾಯಿಲೆ ಕಾಲಿಗೆ ಬುದ್ಧಿ ಹೇಳುವುದು ಖಂಡಿತ.

ನನ್ನವರ 'ಅಸ್ತಮಾ' ತೊಂದರೆಯ ಕಾರಣದಿಂದ ಆದ ಪರಿಚಯ ನಾವು ಆಗಾಗ ಮಲ್ಲಾಡಿಹಳ್ಳಿಗೆ ಹೋಗಿಬರುವಂತೆ ಮಾಡಿತು. ತಿಂಗಳಿಗೊಮ್ಮೆಯಾದರೂ ಸ್ವಾಮಿಗಳ ಸಾನಿಧ್ಯಕ್ಕೆ ಹೋಗಿ ಬರದಿದ್ದರೆ ಸಮಾಧಾನವೆನಿಸುತ್ತಿರಲಿಲ್ಲ. ಕುರುಚಲ ಗಿಡಗಳ ಮಧ್ಯೆ ಫಲಭರಿತ ಕಲ್ಪವೃಕ್ಷದಂತೆ ಕಂಗೊಳಿಸುವ ಆ ಆಶ್ರಮಕ್ಕೆ ಹೋಗಿ ಬಂದರೆ ನನಗೆ ತೌರಿಗೆ ಹೋಗಿಬಂದಷ್ಟು ತೃಪ್ತಿಯಾಗುತ್ತಿತ್ತು. ನಮಗೆ ಹತ್ತಿರವಿದ್ದುದರಿಂದ ಶನಿವಾರ ಅಥವಾ ಭಾನುವಾರ ಬಿಡುವು ಮಾಡಿಕೊಂಡು ನಾವು ಅಲ್ಲಿಗೆ ಹೋಗಿಬರುತ್ತಿದ್ದೆವು. ಅವರಿಂದಾಗಿ ಆಶ್ರಮದ ಸೇವೆಯ ದಿವ್ಯದರ್ಶನ ನಮಗಾಗಲು ಅವಕಾಶವಾಯಿತು.

ಸ್ವಾಮೀಜಿ ಕಡಲ ತಡಿಯಲ್ಲಿ ಜನಿಸಿ ಇನ್ನೊಂದೆಡೆಯಲ್ಲಿ ಬೆಳೆದವರು. ಹುಟ್ಟಿದ ಕಡೆ, ಬೆಳೆದ ಕಡೆ, 'ಹಿತ್ತಲಗಿಡ ಮದ್ದಾಗಲಿಲ್ಲ.' ಆಪರೆ ಜಟ್ಟಿ ಕುಣಿದೂರು ಅಥವಾ ಮಲ್ಲಾಡಿಹಳ್ಳಿಯ ಪುಣ್ಯ. ಬಡಹಳ್ಳಿಯೊಂದು ಭವ್ಯ ಪುಣ್ಯಧಾಮವಾಗಬೇಕೆಂದು ಭಗವಂತನ ಸಂಕಲ್ಪವಿದ್ದಿರಬೇಕು. ಸ್ವಾಮೀಜಿ ಅವರನ್ನು ಆಕಸ್ಮಿಕವಾಗಿ ಇಲ್ಲಿಗೆ ಕರೆತಂದಿತು. ಆಶ್ರಮ ಸ್ಥಾಪನೆಗೆ ಅಗತ್ಯವಾದ ಪರಿಸರವೇನೂ ಅಲ್ಲಿರಲಿಲ್ಲ. ಆದರೂ ಸ್ವಾಮೀಜಿ ಅಂತರಾತ್ಮನ ಪ್ರೇರಣೆಯಂತೆ ಆ ನೆಲವನ್ನೇ ತಮ್ಮ ಸೇವಾ ತಪಸ್ಸಿನ ನೆಲೆಯನ್ನಾಗಿ ಮಾಡಿಕೊಂಡರು ಶತಶತಮಾನಗಳಿಂದ ಮೃತಾವಸ್ಥೆಯಲ್ಲಿದ್ದ ಹಳ್ಳಿಯ ಜನತೆಗೆ ಹೊಸಚೇತನ ನೀಡಿದರು. ಅವರಿಗೆ ಹೊತ್ತು ಹುಟ್ಟುವ ಮುನ್ನ ಹಾಸಿಗೆಯಿಂದ ಎದ್ದು ಕೆಲಸಮಾಡುವ ಗುಟ್ಟು ಹೇಳಿಕೊಟ್ಟರು. ಕೆಲವೇ ದಿನಗಳಲ್ಲಿ ಮಲ್ಲಾಡಿಹಳ್ಳಿ ಕಾಯಕದ ದೇಗುಲವಾಗತೊಡಗಿತು.

ಮಲ್ಲಾಡಿಹಳ್ಳಿಯ ಭವಿಷ್ಯದ ಬಗ್ಗೆ ಸ್ವಾಮೀಜಿ ಅವರ ಕಲ್ಪನೆಯೇ ಬೇರೆ ಇತ್ತು. ಅದೊಂದು ಮಾನವಸೇವೆಯ ಮಹಾಕೇಂದ್ರವಾಗಬೇಕೆಂದು ಅವರು ಸಂಕಲ್ಪ ಮಾಡಿದರು. ಆ ಸಂಕಲ್ಪದ ಸಿದ್ಧಿಯೇ ಇಂದು ನಾವು ಕಾಣುತ್ತಿರುವ ಮಹಾಮನೆ 'ಅನಾಥ ಸೇವಾಶ್ರಮ' ! ಈ ಮಹಾಮನೆಯ ನಿರ್ಮಾಣಕ್ಕೆ ಬೇಕಾದ ಸಾಧನ ಸಂಪತ್ತನ್ನೆಲ್ಲ ಸಂಗ್ರಹಿಸಿದುದು "ತಿರುಕ"ನ ನಿಷ್ಠಾ ಜೋಳಿಗೆಯೆಂದರೆ ಆಶ್ಚರ್ಯವಾಗಬಹುದು. ಅವರ

ಜೋಳಿಗೆ ಸ್ವಂತ ತುತ್ತಿಗಲ್ಲ, ಸಚೇಲ ತುಂಬಿಸಲು ಬೇಡುವ ಭಿಕ್ಷೆಯ ಕಾಳಿಗಲ್ಲ, ಅದೊಂದು ಅನುಪಮ ಮಹಿಮೆ ಜೋಳಿಗೆ. ಜಿಪುಣನ ಮನಸ್ಸನ್ನು ಪರಿವರ್ತಿಸಿ ಉದಾರಿಯನ್ನಾಗಿ ಮಾಡುವ ಉದಾತ್ತ ಜೋಳಿಗೆ. ಇಂದು ಬೆಳೆದು ನಿಂತಿರುವ ಸುಮಾರು 50 ಲಕ್ಷಕ್ಕೂ ಹೆಚ್ಚು ಬೆಲೆಬಾಳುವ ಆಶ್ರಮದ ಆಸ್ತಿಗೆ ಅಧಿಕಾರಿಯೆಂದರೆ ಆ ಜೋಳಿಗೆಯೇ ಎಂದು ಹೇಳಬೇಕು.

ಆಶ್ರಮದ ಆವರಣ, ಸರಳತೆ, ಸ್ವಚ್ಛತೆಯ ಪ್ರತೀಕ. ರಾಜಕೀಯ ಸ್ವಾಮೀಜಿಯವರಿಗೆ ಆಗದ ವಿಷಯ. ಮಹಾದ್ವಾರದಲ್ಲಿ ಮೊದಲು ಕಾಣುವ ಫಲಕ 'ರಾಜಕೀಯಕ್ಕೆ ಪ್ರವೇಶವಿಲ್ಲ' ಎನ್ನುವುದು. ಸೇವೆ ಸತ್ಯಸಂಧತೆಗಳು ಅವರಿಗೆ ಎಷ್ಟು ಪ್ರಿಯವೋ, ಸೋಮಾರಿತನ, ಸುಳ್ಳು ಅಷ್ಟೇ ಬದ್ಧವೈರಿಗಳು. 'ಮಾರುತಿ, ಮಾರುತಿ' ಎಂದು ಬಾರಿ ಬಾರಿಗೂ ಜಪಿಸುವ ಸ್ವಾಮಿಗಳ ಮೈಯಲ್ಲಿ ಮಾರುತಿಯೇ ಮನೆಮಾಡಿಕೊಂಡಿರುವನೋ ಎಂದೆನಿಸುತ್ತದೆ—ಅಷ್ಟು ಚುರುಕು, ಅಷ್ಟು ಲವಲವಿಕೆ. ಮಾರುತಿ ಶ್ರೀರಾಮನ ಮಹಾಭಂಟ, ಅಪ್ರತಿಮ ನಿಷ್ಠಾಭಕ್ತ. ಮಹಾ ಸಂಕಲ್ಪಸಿದ್ಧಿ. ಅವನ ಗುಣ ಮಹಿಮೆಯೆಲ್ಲ ಸ್ವಾಮಿಜಿಯವರಲ್ಲಿ ತುಂಬಿಕೊಂಡಿದೆಯೆಂದರೆ ಅತಿಶಯೋಕ್ತಿಯಲ್ಲ.

ಕಾರ್ಯನಿಮಿತ್ತರಾಗಿ ನಮ್ಮಲ್ಲಿಗೆ ಒಂದೆರಡು ಬಾರಿ ಬಂದಾಗ ಸ್ವಾಮೀಜಿ ಅವರನ್ನು ನಮ್ಮ ಮನೆಯಲ್ಲಿ ಉಳಿಸಿಕೊಳ್ಳುವ ಭಾಗ್ಯ ನಮಗೊದಗಿತ್ತು. ದಿನದಲ್ಲಿ ನಾಲ್ಕು ಘಂಟೆ ಮಾತ್ರ ಅವರ ನಿದ್ರೆಯ ಕಾಲ. ಬೆಳಗಿನ ಝಾವ ಮೂರುವರೆ ಘಂಟೆಗೇ ಅವರ ನಿತ್ಯಕ್ರಿಯಾದಿಗಳು ಆರಂಭವಾಗುತ್ತವೆ. ಅವರಿಗೀಗ 86 ವರ್ಷ. ಈ ವಯಸ್ಸಿನಲ್ಲೂ ಸಾವಿರದೊಂದು ಸೂರ್ಯನಮಸ್ಕಾರ ಹಾಕುತ್ತಾರೆಂದರೆ ಯುವಕಯುವತಿಯರಿಗೂ ನಾಚಿಕೆಯೆನಿಸುತ್ತದೆ. ಸುಮಾರು ಬೆಳಗಿನ ಆರೂವರೆ ಘಂಟೆಯ ವೇಳೆಗೆ ಪ್ರಾಣಾಯಾಮ, ಪೂಜೆ, ಧ್ಯಾನಗಳು ಮುಗಿಯುತ್ತವೆ. ಅಲ್ಪ ಉಪಹಾರ ಸೇವಿಸಿ ಏಳು ಘಂಟೆಗೆ ಮತ್ತೆ ಜೋಳಿಗೆ ಹಿಡಿದು ಹೊರಡುತ್ತಾರೆ. ಸಂಜೆಯವರೆಗೆ ಜನರಿಂದ ಬರುವ ಸಿಹಿ-ಕಹಿಗಳನ್ನು ಜೋಳಿಗೆಯಲ್ಲಿ ತುಂಬಿಕೊಂಡು ಬಂದು ಆಶ್ರಮದ ಪೋಷಣೆ ನಡೆಸುತ್ತಾರೆ. ಅವರ ಆಶ್ರಮದಲ್ಲಿ ಆಶ್ರಯ ಪಡೆದ ಅನಾಥಮಕ್ಕಳು ಮತ್ತು ದೀನದಲಿತ ಮಕ್ಕಳ ಸಂಖ್ಯೆಗೆ ಲೆಕ್ಕವಿಲ್ಲ. ಆ ಮಕ್ಕಳ ಬದುಕಿನ ನೆಮ್ಮದಿಯೇ ಸ್ವಾಮಿಜಿ ಅವರ ತೃಪ್ತಿ.

ಸ್ವಾಮೀಜಿ ಅವರ ವಿದ್ಯಾಸಂಸ್ಥೆಗಳಲ್ಲಿ ಕಲಿತ ಎಷ್ಟೋ ಜನ ಇಂದು ದೇಶವಿದೇಶಗಳಲ್ಲಿ ಉನ್ನತ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅದು "ತಿರುಕ"ನಿಗೆ ನಿಜಕ್ಕೂ ಸಮಾಧಾನ ತಂದುಕೊಟ್ಟಿದೆ. ಆದರೆ ಅಷ್ಟೇ ಸಾಲದು. ಆಶ್ರಮದ ಆಶ್ರಯ ಪಡೆದ ಎಲ್ಲರೂ ತಮ್ಮ ಪಾಲಿನ ಋಣ ಸಲ್ಲಿಸುವಂತೆ ಆದರೆ, ಸ್ವಾಮೀಜಿ ಅವರ ಮತ್ತಷ್ಟು ಯೋಜನೆಗಳು ಕಾರ್ಯರೂಪಕ್ಕೆ ಬರಲು ಸಹಾಯವಾದೀತು.

ಮಲ್ಲಾಡಿಹಳ್ಳಿ ಆಶ್ರಮ ಇಂದು ಬೃಹತ್ ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಕೇಂದ್ರವಾಗಿ ಬೆಳೆದಿದೆ ; ಇನ್ನೂ ಬೆಳೆಯುತ್ತಿದೆ ದೀನದಲಿತರ ಸೇವೆಯಲ್ಲಿ ದೇವರನ್ನು ಕಾಣುವ ಸ್ವಾಮೀಜಿ ತಮ್ಮ ದುಡಿಮೆಯಲ್ಲಿ ಎಂದೂ ನಿರಾಸೆಗೊಂಡವರಲ್ಲ. ಸದಾ ಉತ್ಸಾಹ ಹಸನ್ಮುಖಗಳಿಂದಲೇ ಸೇವೆ ಸಲ್ಲಿಸುತ್ತಾರೆ. ಅವರ ಕಾರುಣ್ಯದ ನುಡಿಗಳು ನೊಂದ ಜೀವಿಗಳಿಗೆ ಅನಿರ್ವಚನೀಯ ಪರಿಹಾರನೀಡುತ್ತವೆ. ಆಧುನಿಕ ಸಮಾಜದ ನೋವು-ನಲಿವುಗಳ ಪೂರ್ಣ ಪರಿಚಯ ಸ್ವಾಮೀಜಿ ಅವರಿಗಿದೆ.

ಸಾವಿರದಲ್ಲಿ ಒಂದಾಗಿದ್ದ ಮಲ್ಲಾಡಿಹಳ್ಳಿಗೆ ಸ್ವಾಮೀಜಿಯವರಿಂದಾಗಿ ಈಗ ಶ್ರೇಷ್ಠತೆ ಬಂದಿದೆ. ಒಮ್ಮೆ ಮಲ್ಲಾಡಿಹಳ್ಳಿಗೆ ಹೋಗಿ ಬಂದವರು ಎಂದಿಗೂ ಮರೆಯುವುದಿಲ್ಲ. ಸ್ವಾಮೀಜಿ ಅವರ ಪ್ರಭಾವಮುದ್ರೆ ಅಂತಹುದು ಅವರ ದಿವ್ಯ ಮಾರ್ಗದರ್ಶನ ಮತ್ತು ಆಶೀರ್ವಾದ ಪಡೆದ ಭಾಗ್ಯ ನಮ್ಮದು. ಕಷ್ಟಸುಖಗಳನ್ನು ಅವರಲ್ಲಿ ನಿವೇದಿಸಿಕೊಂಡರೆ ಏನೋ ಒಂದು ಬಗೆಯ ಸಮಾಧಾನ. ಈ ಹನುಮಭಂಟ ಚಿರಾಯುವಾಗಲಿ. ನಮ್ಮನ್ನು ಸದಾ ಕಾಪಾಡಲಿ. ಅವರ ವಿಶ್ವಪ್ರೇಮ ನಮ್ಮಲ್ಲೂ ಮೈಗೂಡಲಿ.

ಪ್ರಭಾ ಪಾಟೀಲ

ನಾ ಕಂಡ ಅನಾಥ ಸೇವಾಶ್ರಮ

ಮಲ್ಲಾಡಿಹಳ್ಳಿ ಅನಾಥ ಸೇವಾಶ್ರಮದ ಪರಿಚಯ ಮತ್ತು ಅಲ್ಲಿಯ ಜಗದೇಕಮಲ್ಲ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳ ದರ್ಶನದ ಸಂಯೋಗ ನಮಗಾದುದು ಶ್ರೀ ಜಯತೀರ್ಥ ರಾಜಪುರೋಹಿತರ ದಯೆಯಿಂದ. ಶ್ರೀ ಜಯತೀರ್ಥ ರಾಜಪುರೋಹಿತರು ಮೈಸೂರಿನಲ್ಲಿರುವಾಗ ಅವರು ನಮ್ಮ 'ನೃಪತುಂಗ ಸಾಂಸ್ಕೃತಿಕ ಸಂಘದ'–ಸದಸ್ಯರಾಗಿದ್ದರಲ್ಲದೇ ಅವರು ನಮ್ಮ ಸಂಘವು ಮುಂದೆ ಬರಲಿ, ಉತ್ತರ ಕರ್ನಾಟಕ ಸಂಸ್ಕೃತಿಯ ಪರಿಚಯ ಇಲ್ಲಿಯ, ಎಂದರೆ ಮೈಸೂರಿನ ಜನರಿಗೆ ಆಗಲಿ ಎಂಬ ಮಹೋದ್ದೇಶವನ್ನು ಇಟ್ಟುಕೊಂಡು, ಆ ಬಗ್ಗೆ ಪರಿಶ್ರಮಿಸಿದ ಒಬ್ಬ ಸದಸ್ಯರಾಗಿದ್ದರು. 'ನೃಪತುಂಗ ಸಾಂಸ್ಕೃತಿಕ ಸಂಘ'ವು ಪ್ರತಿ ವರುಷ ಡಿಸೆಂಬರಿನಲ್ಲಿ ಒಂದು ದೊಡ್ಡ ಅಂದರೆ ಎರಡು ಘಂಟೆ–ಕಾಲಾವಧಿಯ–ಉತ್ತರ ಕರ್ನಾಟಕ ಭಾಷೆಯ ಒರಟುತನ, ಜೋರು, ಹುಮ್ಮಸ್ಸನ್ನು ತೋರಿಸುವಂತಹ–ಜನಮನ ಸೆಳೆಯುವಂತಹ–ನಾಟಕವನ್ನು ಪ್ರಯೋಗಿಸುತ್ತಾರೆ. ಇಂದಿಗೆ ಎರಡು ವರುಷಗಳ ಹಿಂದೆ, ನಾವು 'ಶ್ರೀ ರಂಗರ'–"ಪ್ರಪಂಚ ಪಾಣಿಪತ್ತು" ಎಂಬ ನಾಟಕವನ್ನು ಪ್ರಯೋಗಿಸಿ ಜನಮೆಚ್ಚುಗೆಯನ್ನು ಪಡೆದೆವು. ಅದೇ ಸಮಯದಲ್ಲಿ ಶ್ರೀ ಜಯತೀರ್ಥ ರಾಜಪುರೋಹಿತರು ಮೈಸೂರಿನಿಂದ ಚಿತ್ರದುರ್ಗಕ್ಕೆ ವಿಶೇಷ ಜಿಲ್ಲಾಧಿಕಾರಿಯವರ ಹುದ್ದೆಗೆ ವರ್ಗವಾಗಿ ಹೋದರು. ಅವರಿಗೂ ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮದ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಯವರಿಗೂ ತುಂಬಾ ಪರಿಚಯ ಇದ್ದುದರಿಂದ ಶ್ರೀ ರಾಜಪುರೋಹಿತರು, ಅನಾಥ ಸೇವಾಶ್ರಮಕ್ಕೆ ಸ್ವಾಮೀಜಿಯವರನ್ನು ಕಾಣಲು ಹೋದರಂತೆ. ಆ ಸಮಯದಲ್ಲಿ ಅವರಿಬ್ಬರೂ ಸಹಜವಾಗಿ ಮಾತುಕತೆ ಆಡುತ್ತಿರುವಾಗ, ಸ್ವಾಮೀಜಿಯವರು ತಮ್ಮದೊಂದು ಸಮಸ್ಯೆ ಇದೆ, ಅದನ್ನು ಪರಿಹರಿಸಲು ಸಾಧ್ಯವೆ–ಎಂದು ಅವರನ್ನು ಕೇಳಿದರಂತೆ—'ಇದೇನು ಅಂತಹ ಕಠಿಣವಾದ ಸಮಸ್ಯೆಯಲ್ಲ, ನಮ್ಮ ಆಶ್ರಮಕ್ಕೆ ಧನ, ಧಾನ್ಯ ರೂಪವಾಗಿ ಕಾಣಿಕೆಗಳನ್ನು ಇತ್ತ ಮಹನೀಯರಿಗೆ ಪ್ರತಿವರುಷವೂ ಒಂದು ಮನರಂಜನಾ ಕಾರ್ಯಕ್ರಮ ಏರ್ಪಾಡಾಗಬೇಕಾಗಿದೆ, ಆ ವಿಷಯದಲ್ಲಿ ತಮ್ಮಿಂದ ಸಲಹೆ ಅಥವಾ ಸಹಾಯವಾಗಬೇಕಾಗಿದೆ" ಎಂದರಂತೆ. ತಕ್ಷಣವೇ ಶ್ರೀ ರಾಜಪುರೋಹಿತರು 'ಓಹೋ, ಅದೇನು ಅಂತಹ ಮಹಾ ವಿಷಯ, ಹೋದವಾರವೇ ನಮ್ಮ ನೃಪತುಂಗ ಸಾಂಸ್ಕೃತಿಕ ಸಂಘದವರು ಒಂದು ಒಳ್ಳೆ ನಾಟಕ 'ಪ್ರಪಂಚ ಪಾಣಿಪತ್" ಪ್ರಯೋಗಿಸಿ ಮೈಸೂರಿನ ಜನರ ಮೆಚ್ಚುಗೆಯನ್ನು ಪಡೆದರು. ಅವರನ್ನೇ ನಾವು ಕೇಳಿಕೊಳ್ಳಬಹುದು–ಎಂದು ಸೂಚನೆ ನೀಡಿದರಂತೆ! ಅನಾಥ ಸೇವಾಶ್ರಮದ ಶ್ರೀ ಶ್ರೀ ರಾಘವೇಂದ್ರ ಸ್ವಾಮೀಜಿಯವರು ಅದನ್ನು ಸ್ವೀಕರಿಸಿ, ನಾಟಕವನ್ನಾಡಲು ಬರಬೇಕೆಂದು ನಮ್ಮ ಸಂಘಕ್ಕೆ ಆಮಂತ್ರಣ ಕಳುಹಿಸಿದರು. ನಾವು ನಮಗೆಲ್ಲ ನಾಟಕವಾಡಲು ಅನುಕೂಲವಾದ ದಿನವನ್ನು ಗೊತ್ತುಮಾಡಿ, ಶ್ರೀ ಸ್ವಾಮೀಜಿಯವರಿಗೆ ಒಪ್ಪಿಗೆಯ ಕಾಗದ ಕಳುಹಿಸಿದೆವು. ನಮ್ಮಗಳಿಗೆ ಈ ಅನಾಥ ಸೇವಾಶ್ರಮದ ಬಗ್ಗೆಯಾಗಲಿ ಅಥವಾ ಆಶ್ರಮದ ಸ್ವಾಮಿಗಳ ವಿಷಯವಾಗಿಯಾಗಲಿ ಯಾವದೇ ಸವಿಸ್ತಾರ ಮಾಹಿತಿ ಇರ

ಲಿಲ್ಲ ; ಅಲ್ಲಿ ನಡೆಯುತ್ತಿರುವ ಚಟುವಟಿಕೆಗಳ ಪೂರ್ಣ ಜ್ಞಾನವೂ ಇರಲಿಲ್ಲ. ಆದರೆ ಇಷ್ಟು ಮಾತ್ರ ಗೊತ್ತಿತ್ತು–ಈ ಆಶ್ರಮವನ್ನು ನಡೆಸಿಕೊಂಡು ಹೋಗುತ್ತಿರುವ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳು ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಭಕ್ತರೇ ಆಗಿರುವರು ಎಂದು. ನಾವೂ ಶ್ರೀ ರಾಘವೇಂದ್ರ ಸ್ವಾಮಿಗಳಿಗೆ ಅಪರೋಕ್ಷವಾಗಿ ನಮ್ಮ ಅಲ್ಪಸೇವೆ ಸಲ್ಲಿಸಿದ ಹಾಗಾಗುತ್ತದೆ ಎಂಬ ತೃಪ್ತಿಯನ್ನೂ, ಸಮಾಧಾನವನ್ನೂ ಹೊಂದಿ ಅಲ್ಲಿಗೆ ಹೋಗಲು, ನಾವು ಮಹಿಳೆಯರು ಒಪ್ಪಿಕೊಂಡದ್ದಾಗಿತ್ತು. ಒಟ್ಟಿನಲ್ಲಿ ನಾವು ಹನ್ನೆರಡು ಜನ ಹೊರಡುವದು, ನಾವು ಮಲ್ಲಾಡಿಹಳ್ಳಿಯನ್ನು ಸೇರುವದರಲ್ಲಿ ಚಿತ್ರದುರ್ಗದ ಶ್ರೀ ರಾಜಪುರೋಹಿತರು ಅಲ್ಲಿಗೆ ಬಂದಿರಬೇಕು ಎಂದು ಪತ್ರದಮೂಲಕ ನಿರ್ಧರಿಸಿದೆವು. ಆ ಪ್ರಕಾರ ನಮ್ಮ ನಾಟಕದ ಗುಂಪು ನಾಟಕದ ಎಲ್ಲ ಸಾಮಾನುಗಳ ಜೊತೆಗೆ ನಮ್ಮ ಸಾಮಾನುಗಳನ್ನೂ ಕಟ್ಟಿಕೊಂಡು ರೈಲಿನಲ್ಲಿ ಪ್ರಯಾಣ ಬೆಳೆಸಿದೆವು. ಬೆಳಗಿನ ಜಾವ ನಾಲ್ಕು ಘಂಟೆಗೆ ರೈಲು ಚಿಕ್ಕಜಾಜೂರನ್ನು ಸೇರಿತು. ನಾವೆಲ್ಲ ಅಲ್ಲಿ ರೈಲಿನಿಂದ ಇಳಿದು, ಅತ್ತ ಇತ್ತ ನೋಡುತ್ತಿದ್ದಂತೆಯೇ, ಅನಾಥ ಸೇವಾಶ್ರಮದ ವ್ಯಾನು ನಮ್ಮನ್ನು ಮಲ್ಲಾಡಿಹಳ್ಳಿಗೆ ಕರೆದೊಯ್ಯಲು ಸ್ಟೇಶನ್ ಹೊರಗಡೆ ಕಾದುನಿಂತಿರುವ ಸಂಗತಿ ತಿಳಿಯಿತು. ಎಲ್ಲರೂ ವ್ಯಾನಿನಲ್ಲಿ ಆಶ್ರಮಕ್ಕೆ ಪ್ರಯಾಣ ಬೆಳೆಸಿದೆವು. ಆಶ್ರಮದ ದಾರಿಯುದ್ದಕ್ಕೂ ನಾವು, ಅನಾಥಾಶ್ರಮಕ್ಕೆ ಹೋದಮೇಲೆ ನಮ್ಮ ಮೊದಲ ಕರ್ತವ್ಯವೆಂದರೆ ಸ್ವಾಮಿಗಳ ದರ್ಶನ ಪಡೆಯುವದು ; ಅಲ್ಲಿಯ ಮಡಿ ಮೈಲಿಗೆಗಳ ಕಾಯದೆ ಕಟ್ಟಳೆಗಳ ಪ್ರಕಾರ ಎಲ್ಲರೂ ನಡೆದುಕೊಳ್ಳುವದು ; ಧೂಮಪಾನ ಮಾಡುವಂತಹ ಮಹನೀಯರಿಗೆ ಎರಡು ದಿನಗಳ ಮಟ್ಟಿಗೆ ಅದನ್ನು ಬಿಟ್ಟುಕೊಡಬೇಕೆಂದು ಕೇಳಿಕೊಳ್ಳುವದು—ಹೀಗೆ ಮಾತನಾಡುತ್ತಾ ಹೊರಟೆವು.ಅಲ್ಲಿ ಎಷ್ಟು ಮಡಿಯೋ, ಯಾವ ತರಹದ ಡಾಂಭಿಕಮಡಿಯ ಸೋಗನ್ನು ಹಾಕಿಕೊಂಡು ಗೋಳಾಡಬೇಕಾಗುತ್ತದೆಯೋ ಎಂಬ ಭಯದಿಂದ ನಾವು ಚಿಂತಾಕ್ರಾಂತರಾಗಿದ್ದೆವು. ಒಂದು ತರಹದ ಅಂಜಿಕೆ ಎಲ್ಲರನ್ನೂ ಆವರಿಸಿತ್ತು. ಆದರೂ ನಾವು ಮಾಡುತ್ತಿರುವ ಕೆಲಸ ಒಂದು ಸತ್ಕಾರ್ಯಕ್ಕಾಗಿದೆ ; ಆದ್ದರಿಂದ ಯಾವ ರೀತಿಯ ಅನಾನುಕೂಲತೆಗಳನ್ನಾಗಲಿ,ತೊಂದರೆಗಳನ್ನಾಗಲಿ ಅನುಭವಿಸಿದರೂ ಸಾರ್ಥಕವಾಗಿದೆ ಎಂಬ ಒಂದು ಸಮಾಧಾನವಿತ್ತು. ಆಶ್ರಮವು ಸಮೀಪಿಸಿದಂತೆ ಇನ್ನು ಬಹುಶಃ ಕಾವಿ ಬಟ್ಟೆಯನ್ನು ಧರಿಸಿದಂತಹ ಮಧ್ಯಮ ವಯಸ್ಸಿನ ಮತ್ತು ಚಿಕ್ಕಪ್ರಾಯದವರನ್ನು—(ಅಂದರೆ ಗುರುಗಳ ಉಪದೇಶ ಹೊಂದಿ ಮುಂದೆ ಧರ್ಮೋಪದೇಶಕರಾಗುವಂತಹವರನ್ನು) ಸ್ವಾಮಿಗಳು ದೇವರ ಪೂಜೆಗೆಂದು ತಮ್ಮ ಪೀಠಕ್ಕೆ ಬರುವ ಮೊದಲು ಸ್ವಾಮಿಗಳ ಸ್ನಾನದ ಮತ್ತು ಪೂಜೆಯ ಸಾಮಾನುಗಳನ್ನು ಅಣಿಮಾಡುವದರಲ್ಲಿ ನಿರತರಾದಂತಹವರನ್ನು–ನೋಡಬಹುದಲ್ಲವೆ? ಅವರೊಂದಿಗೆ ಮಂತ್ರೋಚ್ಚಾರಣೆಯ ಗಲಾಟೆಯನ್ನೂ ಕೇಳಬಹುದಲ್ಲವೆ ಎಂದು ಆಶ್ರಮಕ್ಕೆ ಬಂದು ತಲುಪಿದೆವು. ಒಬ್ಬೊಬ್ಬರಾಗಿ ವ್ಯಾನಿನಿಂದ ಮೆತ್ತಗೆ, ಮೆಲ್ಲಗೆ ಅಳುಕುತ್ತ ಕೆಳಗೆ ಇಳಿದು ದೊಡ್ಡ ಗೇಟಿನಲ್ಲಿ ನಿಂತುಕೊಂಡು ಇನ್ನೇನು ಸ್ವಲ್ಪ ಸುತ್ತುಮುತ್ತ ನಮ್ಮ ಕಣ್ಣನ್ನು ಸುತ್ತಿಸಬೇಕೆನ್ನುವದರಲ್ಲಿ ಒಬ್ಬ ವ್ಯಕ್ತಿ ನಮ್ಮನ್ನು ಸ್ವಾಗತಿಸಲು ಮುಂದೆ ಬರುತ್ತಿದ್ದುದನ್ನು ಕಂಡೆವು. ಬಹುಶಃ ಆಶ್ರಮದ ಕಾರಕೂನನಿರಬಹುದು ; ಶ್ರೀ ರಾಜಪುರೋಹಿತರು ಮತ್ತು ಸ್ವಾಮೀಜಿಯವರು ನಮ್ಮನ್ನು ಬರಮಾಡಿಕೊಳ್ಳಲು ಹೇಳಿರಬಹುದೆಂದು ನಮ್ಮಲ್ಲಿಯವರು 'ರಾಜಪುರೋಹಿತರು ಬಂದಿರುವರೇ ?' ಎಂಬ ಪ್ರಶ್ನೆ ಮಾಡುತ್ತಿದ್ದಂತೆಯೇ ಅವರು 'ನಿನ್ನೆ ರಾತ್ರಿಯೇ ಬಂದರು, ಅತಿಥಿ ಮಂದಿರದಲ್ಲಿ ತಮಗಾಗಿ ಕಾಯುತ್ತಿದ್ದಾರೆ, ನಾನು ತಮ್ಮನ್ನೆಲ್ಲಾ ಅಲ್ಲಿಗೆಯೇ ಕರೆದುಕೊಂಡು ಹೋಗುವೆನು. ಅವರನ್ನು ಭೇಟಿಯಾಗಿ, ಕೈ ಕಾಲು ಮುಖ ತೊಳೆದು ಕಾಫಿ ತಿಂಡಿಗೆ ಬರಬೇಕು', ಎಂದರು. ಮುಂದೆ ಆ ಮಹನೀಯ–'ತಮ್ಮ ಪ್ರವಾಸ ಹೇಗಿತ್ತು ? ರೈಲಿನಲ್ಲಿ ಮಲಗಲು ಜಾಗವಿತ್ತೆ ? ತಾವೆಲ್ಲ ಇಡೀ ರಾತ್ರಿ ಪ್ರವಾಸಮಾಡಿ ಬಂದಿರುವದರಿಂದ ದಣಿದಿರುವಂತೆ ಕಾಣುತ್ತದೆ'–ಎಂದು ಮಾತನಾಡುತ್ತ ಹೆಜ್ಜೆ ಹಾಕುತ್ತಿದ್ದ ಹಾಗೆಯೇ ಅತಿಥಿ ಮಂದಿರಕ್ಕೆ ಬಂದೆವು. ಅದನ್ನು ನೋಡಿದರೆ ಅನಾಥಾಶ್ರಮದ ಅತಿಥಿ ಮಂದಿರ ಎಂದು ಹೇಳಲು ಸ್ವಲ್ಪ ಸಂದೇಹ ಬರುವ ಹಾಗಿತ್ತು. ಅದು ಒಂದು ಸರಕಾರಿ ಪ್ರವಾಸಮಂದಿರಕ್ಕಿಂತಲೂ ಹೆಚ್ಚಿನ ದರ್ಜೆಯದಾಗಿತ್ತು. ಅಲ್ಲಿಗೆ

ಹೋಗುವ ದಾರಿಯ ಉದ್ದಕ್ಕೂ ನಾವು ಕಂಡದ್ದು ಅಲ್ಲಿಯ ಜನರ ಸಹಜತೆಯೊಂದಿಗೆ ಬೆರೆತ ಸಹಜ ವಾತಾವರಣ. ಅದರಲ್ಲಿಯೂ ಬೆಳಗಿನ ಸೂರ್ಯನ ಸೌಮ್ಯ ಕಿರಣಗಳಿಂದ ಹವೆಯು ಶುದ್ಧಿಯನ್ನು ಹೊಂದಿರುವ ಸಂಯೋಜನೆಯೊಂದಿಗೆ ಅಲ್ಲಿ ಆಶ್ರಮದ ನೈರ್ಮಲ್ಯದ ಕೆಲಸದಲ್ಲಿ ತೊಡಗಿದ ಮೂರು ವರ್ಷದ ಮಗುವಿನಿಂದ ಇಪ್ಪತ್ತೈದು ವರ್ಷದ ತರುಣರ ವರೆಗೆ (ತಾವು ಮಾಡುತ್ತಿರುವ ಕೆಲಸದಲ್ಲಿ ಏಕರೂಪತೆ ಹೊಂದಿ) ಎಲ್ಲರೂ ಆಶ್ರಮದಲ್ಲಿ ಮನಶುದ್ಧಿಯನ್ನು ಹೊಂದುತ್ತಿರುವರೇನೋ ಎನಿಸುವಷ್ಟು ಅವರ ಕೆಲಸದಲ್ಲಿ ಶಿಸ್ತು, ಭಕ್ತಿ, ಕರ್ತವ್ಯ ಪಾಲನೆ ಎದ್ದು ಕಾಣುತ್ತಿದ್ದವು. ಅತಿಥಿ ಮಂದಿರದಲ್ಲಿ ನಮಗಾಗಿ ಕಾಯುತ್ತಿದ್ದ ರಾಜಪುರೋಹಿತ ದಂಪತಿಗಳು ನಮ್ಮನ್ನೆಲ್ಲಾ ಬರಮಾಡಿಕೊಂಡು, ನಮ್ಮೊಂದಿಗೆ ಮಾರ್ಗದರ್ಶನ ಮಾಡಿಸಲು ಬಂದಿದ್ದ ಆ ಮಹನೀಯರನ್ನು ನಮಗೆಲ್ಲ ಪರಿಚಯ ಮಾಡಿಕೊಟ್ಟರು. "ಇವರೇ ನಮ್ಮ ಮತ್ತು ಈ ಅನಾಥಾಶ್ರಮದ ಶ್ರೀ ಶ್ರೀ ರಾಘವೇಂದ್ರ ಸ್ವಾಮೀಜಿಯವರು ಇವರ ಇನ್ನೊಂದು ಹೆಸರು "ತಿರುಕ," ಒಳ್ಳೆ ಮೋಜಿನದಾಗಿದೆಯಲ್ಲವೆ ?" ಎಂದು ನಮ್ಮನ್ನು ನಗಿಸಿ ತಾವು ನಗಲು ಆರಂಭಿಸಿದರು. ಅವರೇನೋ ನಗುತ್ತಿದ್ದರು. ಆದರೆ ನಮ್ಮಲ್ಲಿ ಒಬ್ಬರಕ್ಕಿಂತ ಒಬ್ಬರ ಮುಖ ಬಿಳುಪೇರಿ ಪೆಚ್ಚುಪೆಚ್ಚಾದವು. ನಾವು ಆಶ್ರಮದ ಸ್ವಾಮಿಯ ಬಗ್ಗೆ ತಿಳಿದುಕೊಂಡ ಆ ರೂಪ ಅಂದರೆ-'ಕಾವಿ ಬಟ್ಟೆಯನ್ನು ಧರಿಸಿದ, ಗಂಭೀರ ನಡುಗೆಯ, ಮಂದಸ್ಮಿತ ಮುಖ, ಬಲಗೈಯಲ್ಲಿ ಜಪಮಾಲೆ ಹಿಡಿದು 'ಪೂಜ್ಯಾಯ ರಾಘವೇಂದ್ರಾಯ' ಎಂದು ಜಪಿಸುತ್ತ, ಉದ್ದನ್ನ ಬಿಳಿ ಗಡ್ಡವನ್ನು ಬಿಟ್ಟುಕೊಂಡು ಅದಾವದೋ ಆಶ್ರಮದ ಮೂಲೆಯ ಕೋಣೆಯಲ್ಲಿ ಸಮಾಧಿ ಅವಸ್ಥೆಯಲ್ಲಿರಬೇಕಾದುದು. ಇಂತಹ ಸಾದಾ ಉಡುಪು-ಅಂದರೆ ಪ್ರಾಥಮಿಕ ಶಾಲೆಗೆ ಹೋಗುವ ಮಕ್ಕಳು ಧರಿಸಿದ ಒಂದು ಚೆಣ್ಣ ಮತ್ತು ತುಂಡು ತೋಳಿನ ಅಂಗಿ ಧರಿಸಿದ, ಬರಿಗಾಲಿನಲ್ಲಿರುವ, ತೀರ ಸಾದಾ ವ್ಯಕ್ತಿತ್ವವಿದ್ದಂತಹ, ಎಲ್ಲರಕ್ಕಿಂತಲೂ ತಾನೆ ನಾಲ್ಕು ಹೆಜ್ಜೆ ಮುಂದೆ ಮುಂದೆ ಜಿಗಿಯುತ್ತಿರುವಂತಹ ಈ ಮಹನೀಯರನ್ನು ಸ್ವಾಮಿಜಿಯವರು ಎಂದು ಹೇಗೆ ನಂಬುವದು ? ಮನಸ್ಸು ವಿಚಾರಗಳ ದ್ವಂದ್ವ ಯುದ್ಧವನ್ನೇ ಮಾಡಿತು. ನಾವು ಒಬ್ಬೊಬ್ಬರಾಗಿ ಅವರಿಗೆ ನಮಸ್ಕರಿಸಿ ಅವರಿಂದ ಆಶೀರ್ವಾದಗಳನ್ನು ಪಡೆಯುವ ಮುಂದೆ ಶ್ರೀ ರಾಜಪುರೋಹಿತರು ನಮ್ಮೊಂದಿಗೆ ತಮಾಷೆ ಮಾಡುತ್ತಿರಬಹುದೇ ಎಂಬ ಅನುಮಾನ. ಶ್ರಾವಣ ಶುಕ್ರವಾರದ ಗೌರಿಯ ಹಾಡಿನಲ್ಲಿ ಬರುವ, "ನಿದ್ರೆ, ಕನಸು, ಎಚ್ಚರ ನಾವೊಂದು ಅರಿಯೆ," ಎನ್ನುವಂತೆ ನಮ್ಮ ಅವಸ್ಥೆಗಳಾದವು.

ಅನಾಥ ಸೇವಾಶ್ರಮದಲ್ಲಿ ಈ ತಿರುಕ ಸಾಧಿಸಿರುವ ಕಾರ್ಯಗಳು ಅಷ್ಟಿಷ್ಟಲ್ಲ. ಹೆಸರಿಗೆ ತಕ್ಕಂತೆ ಈ ತಿರುಕ ಕೈಯಲ್ಲಿ ಒಂದು ಜೋಳಿಗೆ ಹಾಕಿಕೊಂಡು ಊರು ಊರಿಗೆ, ಹಳ್ಳಿ ಹಳ್ಳಿಗೆ, ಮನೆ ಮನೆಗಳಿಗೆ ಹೋಗಿ "ಭವತಿ ಭಿಕ್ಷಾಂ ದೇಹಿ" ಎಂಬ ತನ್ನ ಮೂಲಮಂತ್ರದೊಂದಿಗೆ ಸಂಪಾದಿಸಿ ತಂದ ಧನ, ಧಾನ್ಯಗಳಿಂದ ಈ ಅನಾಥ ಸೇವಾಶ್ರಮವನ್ನು ಆರಂಭಿಸಿದರು. ಅಂದಿನ ಆ ತಿರುಕನ ಸಂಸ್ಥೆ ಇಂದು, ಹಿಂದಿನ ಕಾಲದಲ್ಲಿ ಪ್ರಸಿದ್ಧಿಯನ್ನು ಹೊಂದಿದಂತಹ ತಕ್ಷಶಿಲೆ, ನಲಂದಾಗಳಂತಹ ಗುರುಕುಲ ಪಂಕ್ತಿಯಲ್ಲಿ ವಿರಾಜಿಸುತ್ತಿದೆ. ಅಂದು ಜೋಳಿಗೆ ಹಿಡಿದು ಐದು ಕಾಸಿನಿಂದ ಆರಂಭಿಸಿದ ಸಂಸ್ಥೆ ಇಂದು ಐವತ್ತು ಲಕ್ಷ ರೂಪಾಯಿಗಳ ಬೆಲೆ ಬಾಳುವ ಅಮೂಲ್ಯ ಆಸ್ತಿಯಾಗಿ ಆ ಕಗ್ಗಾಡಿನಲ್ಲಿ ಇಂದು ಒಂದು ನಂದನವನವಾಗಿ, ನೋಡುವವರ ಕಣ್ಣಿಗೆ ರಮಣೀಯವಾಗಿ ಕಂಗೊಳಿಸುತ್ತಿದೆ ; ಅಲ್ಲಿ ಇರುವ ಎಲ್ಲ ವಯಸ್ಸಿನ ವಿದ್ಯಾರ್ಥಿಗಳಿಗೆ ಜೀವನದ ಸನ್ಮಾರ್ಗತೋರಿಸುವ 'ಜೀವನ ಜ್ಯೋತಿ' ಯಾಗಿ ಪ್ರಕಾಶಿಸುತ್ತಿದೆ.

ಅನಾಥ ಸೇವಾಶ್ರಮದಲ್ಲಿ ಸುತ್ತಲೂ ಕಣ್ಣೋಡಿಸಿದಾಗ ಕಾಣಬರುವ ಸಂಸ್ಥೆಗಳು ಒಂದೆ ಎರಡೇ ? ಶಿಶು ವಿಹಾರ, ಪ್ರಾಥಮಿಕ ಶಾಲೆ, ಹಾಯರ್ ಸೆಕಂಡರಿ ಶಾಲೆ, ಜ್ಯೂನಿಯರ್ ಕಾಲೇಜು, ವೃತ್ತಿ ಶಿಕ್ಷಣ ಶಾಲೆ, ಪ್ರೌಢ ಶಾಲೆ, ದೈಹಿಕ ಶಿಕ್ಷಣ ಶಾಲೆ, ಮುದ್ರಣಾಲಯ, ಚಿಕಿತ್ಸಾಲಯ, ರುಗ್ಣಾಲಯ, ವಸತಿಗೃಹ, ವ್ಯಾಯಾಮ ಶಾಲೆ, ಸಹಕಾರ ಸಂಘ, ವ್ಯಾಸಪೀಠ, ಯೋಗಮಂದಿರ, ಅನ್ನಪೂರ್ಣ ಮಂದಿರ, ಸಾರ್ವಜನಿಕ ವಿದ್ಯಾರ್ಥಿನಿಲಯ! ಇವೆಲ್ಲ

ಮಾನವನ ದೈಹಿಕ ಬೆಳವಣಿಗೆ ಮತ್ತು ಬುದ್ಧಿ ವಿಕಾಸದ ಸಂಸ್ಥೆಗಳಾದರೆ, ಇನ್ನು ಆತ್ಮ ವಿಕಾಸದ ಸಲುವಾಗಿ ತಪೋವನ, ಸಾಧನಾ ಮಂಟಪಗಳು ಇವೆ. ಇಲ್ಲಿನ ದಿನಚರಿ ನಸುಕಿನ ನಾಲ್ಕು ಘಂಟೆಗೆ, ಸಾಮೂಹಿಕ ಪ್ರಾರ್ಥನೆ ಮತ್ತು ಸೂರ್ಯನಮಸ್ಕಾರಗಳೊಂದಿಗೆ ಆರಂಭವಾಗುತ್ತದೆ. ಅದಾದ ಮೇಲೆ ಮಕ್ಕಳು ಆಶ್ರಮದ ಸ್ವಚ್ಛತೆಯ ಕೆಲಸವನ್ನು ಮಾಡಿಕೊಂಡು ಪಾಠಗಳನ್ನು ಕಲಿಯಲು ತಮ್ಮ ತಮ್ಮ ಶಾಲೆಗಳಿಗೆ ಹೋಗುತ್ತಾರೆ. ಇಲ್ಲಿ ಮಕ್ಕಳ ಬೌದ್ಧಿಕ ವಿಕಾಸಕ್ಕೆ ಕೊಡುವ ಮಹತ್ವವನ್ನೇ ದೈಹಿಕ ವಿಕಾಸಕ್ಕೂ ಸಹ ಕೊಡಲಾಗುತ್ತದೆ. ಇಲ್ಲಿನ ವ್ಯಾಯಾಮ ಶಾಲೆಯಲ್ಲಿ, ಗರಡಿಮನೆಯಲ್ಲಿ ದೈಹಿಕ ತರಬೇತಿಯನ್ನು ಕೊಟ್ಟು ರಾಷ್ಟ್ರ ರಕ್ಷಣೆಗೆ ಒಬ್ಬ ವೀರ ಯೋಧನನ್ನಾಗಿ ಅಥವಾ ತನ್ನ ಜೀವನದ ಕಷ್ಟನಷ್ಟಗಳನ್ನು ಎದುರಿಸಲು ಒಬ್ಬ ಧೈರ್ಯಶಾಲಿಯನ್ನಾಗಿ ತಯಾರು ಮಾಡುತ್ತಾರೆ. ಇಲ್ಲಿ ನಿತ್ಯ ೪೦೦ ವಿದ್ಯಾರ್ಥಿಗಳಿಗೆ ಅನ್ನದಾನ, ವಿದ್ಯಾದಾನ ನಡೆಯುತ್ತದೆ. ಅದಲ್ಲದೆ ತಮ್ಮ ರೋಗಗಳಿಗೆ ಚಿಕಿತ್ಸೆಯನ್ನು ಪಡೆದು ಗುಣಮುಖರಾಗಲು ಸಹಸ್ರಾರು ರೋಗಿಗಳು ಬರುತ್ತಾರೆ. ಪಾಶ್ಚಾತ್ಯ ವೈದ್ಯ ವಿದ್ಯೆಗೆ ನಿಲುಕದ ಎಷ್ಟೋ ರೋಗಗಳಿಂದ ಬಳಲುತ್ತಿರುವ ರೋಗಿಗಳಿಗೆ ಸ್ವತಃ ಸ್ವಾಮೀಜಿಯವರೇ ಔಷಧಿ ಮಾಡಿ ಗುಣಮುಖರನ್ನಾಗಿ ಮಾಡಿದ್ದಾರೆ. ಇವರ ಹಸ್ತಗುಣವೇ ಅಪ್ರತಿಮ, ಅಗೋಚರವಾದ ದೈವಿಶಕ್ತಿ ಪಡೆದಿದೆ. ಅದರೊಂದಿಗೆ ಪ್ರಯತ್ನವೂ ಇದೆ. ಇವರದೇ ಅಂದರೆ ಆಶ್ರಮದ್ದೇ ಆದ ಔಷಧಿಗಳನ್ನು ತಯಾರಿಸುವ ಪ್ರಯೋಗ ಶಾಲೆಗಳಿವೆ. ಅವೆಲ್ಲವೂ ಆಯುರ್ವೇದದ ಔಷಧಿಗಳ ಮೂಲಿಕೆಯಿಂದ ತಯಾರಾದವು. ಪ್ರತಿ ಸೋಮವಾರ ಆಶ್ರಮದ ಮುಂದಿನ ಒಳಅಂಗಳ ಆಸ್ಪತ್ರೆಯಾಗಿ ಮಾರ್ಪಟ್ಟಿರುತ್ತದೆ. ದೂರದಿಂದ ಬರುವ ರೋಗಿಗಳಿಗೆ ವಸತಿ ಸೌಕರ್ಯ ಮತ್ತು ಭೋಜನ ವ್ಯವಸ್ಥೆಯು ನಡೆಯುತ್ತದೆ. ಕುಸ್ತಿಯ ಜಟ್ಟಿಗಳನ್ನು ತರಬೇತುಗೊಳಿಸುವುದಕ್ಕೋಸ್ಕರವೇ ಒಂದು ವಿಶಿಷ್ಟ ರೀತಿಯ ಮಟ್ಟಿಯನ್ನು ತಯಾರು ಮಾಡಿದ್ದಾರೆ. ಆ ಮಟ್ಟಿಯ ಮಣ್ಣು ರೋಗನಿವಾರಕವಾದುದು. ಅದನ್ನು ತುಪ್ಪ, ಜೇನುತುಪ್ಪ ಮತ್ತು ಕೆಲವು ವನಸ್ಪತಿಗಳ ಔಷಧಿಯ ಮಿಶ್ರಣದಲ್ಲಿ ಚೆನ್ನಾಗಿ ನೆನೆಸಿದ್ದಾರೆ. ಅದಕ್ಕೆ ಎಷ್ಟೋ ಸಾವಿರ ರೂಪಾಯಿ ಖರ್ಚುಮಾಡಿದ್ದಾರೆ, ಎಷ್ಟೋ ಚರ್ಮ ರೋಗಗಳು ಅದರಿಂದ ವಾಸಿಯಾಗುತ್ತವೆ. ಅದರಿಂದ ಪ್ರಯೋಜನ ಪಡೆದ ಭಾಗ್ಯವಂತರೂ ತುಂಬಾ ಜನರಿದ್ದಾರೆ. ಅನ್ನಪೂರ್ಣ ಮಂದಿರದಲ್ಲಿ ಸೇವೆ ಸಲ್ಲಿಸುವ ಜನರು ಸಹ ಸದಾಕಾಲ ಹಸನ್ಮುಖರಾಗಿದ್ದು ಆದರಾತಿಥ್ಯಗಳಲ್ಲಿ ಎತ್ತಿದ ಕೈಯೆಂದು ಹೇಳಬಹುದು. ಇಲ್ಲಿಯ ಅಡಿಗೆಯಲ್ಲಿ ಈರುಳ್ಳಿಯನ್ನು ಉಪಯೋಗಿಸುತ್ತಾರೆ. ಸ್ವಾಮೀಜಿಯವರಿಂದ ಹಿಡಿದು, ಅಲ್ಲಿಯ ವಿದ್ಯಾರ್ಥಿಗಳು ಬಂದು ಹೋಗುವ ಅತಿಥಿಗಳು ಎಲ್ಲರಿಗೂ ಒಂದೇ ಅಡಿಗೆ ತಯಾರು ಆಗುತ್ತದೆ.

ಶ್ರೀ ಶ್ರೀ ರಾಘವೇಂದ್ರ ಸ್ವಾಮೀಜಿಯವರು ಸಾಹಿತ್ಯ ಕ್ಷೇತ್ರದಲ್ಲಿಯೂ ಸಹ ಅಸದೃಶವಾದ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಅನೇಕ ಕತೆ, ಕಾದಂಬರಿ, ನಾಟಕ, ಪ್ರಬಂಧ, ಶಾಸ್ತ್ರಗ್ರಂಥಗಳನ್ನು ಬರೆದಿದ್ದಾರೆ. ಈ ವರೆಗೆ ಅವರು ಬರೆದಿರುವ ಗ್ರಂಥಗಳ ಸಂಖ್ಯೆ ಸುಮಾರು 50. ಈ ಎಲ್ಲ ಕರ್ತವ್ಯಕರ್ಮಗಳ ಜೊತೆಗೆ ಅವರು ವಾರದಲ್ಲಿ ಆರು ದಿನಗಳು ತಮ್ಮ 'ತಿರುಕ' ಎಂಬ ಹೆಸರಿಗೆ ತಕ್ಕಂತೆ ಕೈಗೆ ಜೋಳಿಗೆಯನ್ನು ಹಾಕಿಕೊಂಡು ಊರೂರು ಅಲೆಯುತ್ತಾರೆ! ತಮ್ಮ ಸಂಸ್ಥೆಯ ಕಾರಭಾರಗಳನ್ನು ಸಾಗಿಸಲು ಭಿಕ್ಷೆ ಬೇಡುತ್ತಾರೆ. ಈ ತಿರುಕ ಬ್ರಹ್ಮಚಾರಿ, ಜಾತಿ, ಮತ, ಪಂಥವೆಂಬ ವಿಷವೃಕ್ಷದ ಬೇರನ್ನೇ ಬುಡದಿಂದ ಕಿತ್ತೆಸೆದೊಗೆದು ಮಾನವಕುಲ ಒಂದೇ ಎಂದು ಸಾರುತ್ತಿದ್ದಾರೆ. ಸ್ತ್ರೀ ಪುರುಷರೆಂಬ ಭೇದಭಾವಗಳನ್ನು ಅಳಿಸಿ, ಸರ್ವಸಮಾನತೆಯನ್ನು ನಾಡಿನ ಉದ್ದಗಲಕ್ಕೆ ಸಾರುತ್ತ ಸದಾ ಸಮಾಜೋದ್ಧಾರಕ್ಕಾಗಿ, ಲೋಕೋದ್ಧಾರಕ್ಕಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟು ದುಡಿಯುತ್ತಿದ್ದಾರೆ. ತ್ಯಾಗ ಮತ್ತು ಸೇವೆಯ ಪ್ರತಿರೂಪವಾದಂತಹ ಈ ಎಂಬತ್ತಾರು ವರ್ಷ ಹರೆಯದ ಸ್ವಾಮೀಜಿ ತಾವು ಕಟ್ಟಿದ ಈ ಸಂಸ್ಥೆಯನ್ನು ವಿಶ್ವದ ಸಾಂಸ್ಕೃತಿಕ ಕೇಂದ್ರವನ್ನಾಗಿ ಮಾಡಬೇಕೆಂದು ಎಪ್ಪತ್ತೈದು ಲಕ್ಷ ರೂಪಾಯಿಗಳ ಯೋಜನೆಯೊಂದನ್ನು ಹಾಕಿಕೊಂಡಿದ್ದಾರೆ.

ಶ್ರೀ ಶ್ರೀ ರಾಘವೇಂದ್ರ ಸ್ವಾಮೀಜಿಯವರು ಅಲ್ಲಿ ಸಾಧಿಸುತ್ತಿರುವಂತಹ ಕಾರ್ಯಸಾಧನೆ ಅಂತಿಂ

ತಹ ಸಾಮಾನ್ಯ ಸಾಧನೆಯಲ್ಲ, ಅಂತಹ ಕಾರ್ಯ ಸಾಧನೆ....ಒಬ್ಬ ಸಾಮಾನ್ಯ ಪುರುಷನಿಂದ ನಡೆಯಬೇಕಾದ ವಿಷಯವಲ್ಲ. ಅವರಲ್ಲಿ, ಅವರ ಆತ್ಮದಲ್ಲಿ ಹುದುಗಿದಂತಹ 'ದೈವಿ' ಶಕ್ತಿ ಅವರನ್ನು ಈ ಕಾರ್ಯ ಕರ್ತವ್ಯ ಸಾಧನೆಯಲ್ಲಿ ಮುಂದೆ ನಡೆಸಿಕೊಂಡು ಬರುತ್ತಿದೆ. ಇದ್ದಲ್ಲಿಯೇ ತನ್ನ ಪ್ರಪಂಚವೇ ಬೇರೆ ಎಂದು ತಿಳಿದು ತಾನು ಸಾಧಿಸಬೇಕಾದ ಗುರಿಯನ್ನು ತಲುಪಲು ಪ್ರಯತ್ನಿಸಿ, ದೀನ ದಲಿತರ ಉದ್ಧಾರಕ್ಕಾಗಿಯೇ ತನ್ನ ಜನ್ಮ ಎಂದು ತಿಳಿದು, ಆ ಕಾರ್ಯ ಸಾಧನೆಯಲ್ಲಿ ಮಗ್ನನಾದ ಈ 'ತಿರುಕ'ನೇ ಧನ್ಯನು. ಅವರ ದರ್ಶನ ಪಡೆದ ನಾವೇ ಧನ್ಯರು.

ಹಿಂದಿನ ಕಾಲದಲ್ಲಿ ಅಂದರೆ ಪೌರಾಣಿಕ ಅಥವಾ ಐತಿಹಾಸಿಕ ಕಾಲದಲ್ಲಿ ಧರ್ಮಗುರುಗಳಿಗೆ, ಸಮಾಜೋದ್ಧಾರಕರಿಗೆ ರಾಜಾಶ್ರಯವಿರುತ್ತಿತ್ತು, ಪ್ರೋತ್ಸಾಹವಿರುತ್ತಿತ್ತು. ಆದರೆ ಇಂದಿನ ಈ ಸಮಾಜೋದ್ಧಾರಕನಿಗೆ ಪ್ರಜಾಸತ್ತಾತ್ಮಕ ಸರ್ಕಾರದ ಆಶ್ರಯ ಹಾಗಿರಲಿ, ಸಹಾನುಭೂತಿಯೂ ದುರ್ಲಭವಾಗಿದೆ. ಆದರೇನು? ಸುತ್ತು-ಮುತ್ತಲಿನ ಊರುಗಳ, ಹಳ್ಳಿಗಳ ಜನರ ಆಶ್ರಯ ಮಾತ್ರ ಈ ತಿರುಕನಿಗೆ ಲಭಿಸಿದುದು ಒಂದು ಸೌಭಾಗ್ಯದ ಸಂಗತಿಯಾಗಿದೆ.

ಶ್ರೀ ಶ್ರೀ ರಾಘವೇಂದ್ರ ಸ್ವಾಮೀಜಿಯವರ ಆಶ್ರಮವನ್ನು ನೋಡಿ ಅವರ ದರ್ಶನ ಮತ್ತು ಉಪದೇಶ ಪಡೆದಂಥವರಲ್ಲಿ ನಾನು ಒಬ್ಬ ಪುಣ್ಯವಂತಳಾಗಿದ್ದೇನೆ. ಆ ದರ್ಶನ ಭಾಗ್ಯದ ಫಲದಿಂದ ಬಂದ ನನ್ನ ಅನುಭವದ ಈ ನಾಲ್ಕು ಮಾತುಗಳನ್ನು ಬರೆಹರೂಪದ ಪುಷ್ಪಾಂಜಲಿಯಾಗಿ ಆ ದೇವ ಮಾನವನಿಗೆ ಅರ್ಪಿಸುತ್ತಿದ್ದೇನೆ.

> ಇಲ್ಲಿ ನಡೆದಿರುವ ಪ್ರತಿಯೊಂದು ಕೆಲಸವೂ ಆಶ್ಚರ್ಯವನ್ನುಂಟುಮಾಡುವಷ್ಟು ಮಹತ್ವದ್ದಾಗಿದೆ. ನಮ್ಮ ದೇಶದ ಪುರೋಭಿವೃದ್ಧಿಗೆ ಏನೇನು ಮಾಡಬೇಕೆಂಬುದಕ್ಕೆ ಕೈಪಿಡಿಯಂತಿದೆ. ಬೇಸತ್ತ ಮನಕ್ಕೆ ನೆಮ್ಮದಿ ಬೇಕಾದಾಗ, ಸದಾ ಚೈತನ್ಯದಾತೃವಾಗಬಲ್ಲ ವಾತಾವರಣವನ್ನು ನಾನಿಲ್ಲಿ ಕಂಡಿದ್ದೇನೆ.
>
> —ಎಂ. ರಾಮರಾವ್

ಎಚ್. ಎಸ್. ಹರಿಶಂಕರ

ಕರ್ಮಯೋಗಿ ಶ್ರೀ ಸ್ವಾಮಿಜಿಯವರು

ಮಲ್ಲಾಡಿಹಳ್ಳಿ ಪರಮಪೂಜ್ಯ ಶ್ರೀ ರಾಘವೇಂದ್ರಸ್ವಾಮಿಗಳನ್ನು ನಾನು ಮೊದಲಿಗೆ ಕಂಡಾಗ ನನಗಿನ್ನೂ ಚಿಕ್ಕವಯಸ್ಸು. ನಾನು ಬೇಸಗೆ ರಜೆಯಲ್ಲಿ ನನ್ನ ತಾಯಿಯ ತೌರೂರಾದ ಹದಡಿಗೆ ಹೋಗುತ್ತಿದ್ದೆ. ಒಮ್ಮೆ ಹೀಗೆ ಅಲ್ಲಿಗೆ ಹೋದಾಗ ಸ್ವಾಮಿಜಿಯವರು ಬಂದಿರುವ ಸಂಗತಿ ತಿಳಿಯಿತು. ನಮ್ಮ ಚಿಕ್ಕಪ್ಪ ಎಚ್. ಎಸ್. ಕೃಷ್ಣಮೂರ್ತಿರಾಯರ ಮನೆಯಲ್ಲಿ ಗುರುಗಳ ದರ್ಶನವಾದಾಗ ಸ್ವಾಮಿಜಿಗಳ ಬಗ್ಗೆ ನಾನು ಇಟ್ಟುಕೊಂಡಿದ್ದ ಕಲ್ಪನೆಯೇ ಬೇರೆಯಾಗಿತ್ತು. ಸ್ವಾಮಿಗಳೆಂದರೆ ಅದುವರೆಗೆ ನನಗಿದ್ದ ಕಲ್ಪನೆಯೆಂದರೆ ಕಾವಿಬಟ್ಟೆಯುಟ್ಟ, ರುದ್ರಾಕ್ಷಿ ಕಮಂಡಲುಧಾರಿಗಳಾದ, ನೊಸಲಲ್ಲಿ ವಿಭೂತಿ ಧರಿಸಿರುವಂಥವರೇ ಸ್ವಾಮಿಗಳು. ಆದರೆ ಈ ಸ್ವಾಮಿಗಳೋ, ಇವರ ಪರಿಯೇ ಬೇರೆ ! ಇನಾವ ಪರಿಕರಗಳೂ ಇಲ್ಲದಂಥ ಶುಭ್ರಶ್ವೇತವಸ್ತ್ರಧಾರಿಗಳಾದ ಈ ಸ್ವಾಮಿಗಳನ್ನು ಕಂಡಾಗಲಂತೂ ನನಗೆ ಪರಮಾಶ್ಚರ್ಯ. ನನ್ನ ಪರಿಚಯ ಸ್ವಾಮಿಜಿಗೆ ಆದ ಮೇಲೆ ಅವರು 'ಬಾಪ್ಪ, ನೀನು ನಮ್ಮ ಲಕ್ಷ್ಮಕ್ಕನ ಮಗನಲ್ಲವೆ ?' ಎಂದು ಪ್ರೀತ್ಯಾದರದಿಂದ ಹತ್ತಿರ ಕರೆದು ಮೈದಡವಿದಾಗಲಂತೂ, ಪ್ರಥಮದರ್ಶನದಲ್ಲಿಯೇ, ಈ ಪೂಜ್ಯರ ಬಗೆಗಿದ್ದ ನನ್ನ ಗೌರವಭಾವಗಳು ಇಮ್ಮಡಿಯಾದವು. ಆ ದಿನಗಳಲ್ಲಿ ಆದೇ ತಾನೆ ಮಲ್ಲಾಡಿಹಳ್ಳಿಯಲ್ಲಿ ಶ್ರೀ ಸ್ವಾಮಿಜಿಯವರು ಆಶ್ರಮವನ್ನು ಸ್ಥಾಪಿಸಿದ್ದರು. ಹಳ್ಳಿಹಳ್ಳಿಗಳಲ್ಲಿ ಸಂಚರಿಸಿ ಆಯುರ್ವೇದದ ಔಷಧಿಗಳನ್ನು ಜನರಿಗೆ ನೀಡಿ, ಜನ ಕೊಟ್ಟಷ್ಟು ಕಾಣಿಕೆಯಿಂದ ತೃಪ್ತರಾಗಿ ತಮ್ಮ ಬಡ ಜೋಳಿಗೆಯನ್ನು ತುಂಬಿಸಿ ಮತ್ತೆ ಆ ಹಣವನ್ನು ಆಶ್ರಮದ ಕೆಲಸ ಕಾರ್ಯಗಳಿಗೇ ವಿನಿಯೋಗಿಸುತ್ತಿದ್ದರು. ಆ ದಿನಗಳಲ್ಲಿ ಅವರಲ್ಲಿ ಕಂಡುಬರುತ್ತಿದ್ದ ಆ ಹುಮ್ಮಸ್ಸು ಇಂದಿಗೂ ಹಾಗೆಯೇ ಉಳಿದುಕೊಂಡುಬಂದಿದೆ.

ನಾನು ಹರಿಹರದಲ್ಲಿ ಹೈಸ್ಕೂಲಿನಲ್ಲಿ ಅಭ್ಯಾಸಮಾಡುತ್ತಿದ್ದ ತರುಣದಲ್ಲಿ (1953-54) ಶ್ರೀ ಸ್ವಾಮಿಜಿಯವರು ಒಮ್ಮೆ ಯೋಗಾಸನ ಪ್ರದರ್ಶನವನ್ನು ನೀಡಿದ್ದರು. ಅಂದು ಅವರು ಪ್ರದರ್ಶಿಸಿದ ಯೋಗಾಸನಗಳು ವಿದ್ಯಾರ್ಥಿಗಳ, ಉಪಾಧ್ಯಾಯರ ಗಮನ ಸೆಳೆದದ್ದುಂಟು. ಪ್ರದರ್ಶನ ಮುಗಿದ ತರುವಾಯ ಶ್ರೀ ಸ್ವಾಮಿಜಿಯವರನ್ನು ಕಂಡು ನನ್ನ ಪ್ರವರವನ್ನು ಒಪ್ಪಿಸಿದಾಗ 'ಗೊತ್ತಪ್ಪ, ನಿನ್ನನ್ನು ನಾನು ಹದಡಿಯಲ್ಲಿ ನೋಡಿದ್ದೆನಲ್ಲ, ಎಂದು ಹೇಳಿ ನನ್ನ ಆಶ್ಚರ್ಯವನ್ನು ದ್ವಿಗುಣಗೊಳಿಸಿದ್ದುಂಟು. ಒಮ್ಮೆ ಅವರ ದೃಷ್ಟಿಗೆ ಬಿದ್ದವರನ್ನು ಆ ಕೂಡಲೇ ಮರೆಯುವಂಥವರ ಗುಂಪಿಗೆ ಇವರು ಸೇರಿದವರಲ್ಲ.

ಆನಂತರ ಬಹಳ ವರ್ಷಗಳವರೆಗೆ ಶ್ರೀ ಸ್ವಾಮಿಜಿಯವರನ್ನು ಕಾಣುವ ಸುಯೋಗ ಒದಗಿಬರಲಿಲ್ಲ. ಆದರೆ ಅವರ ನಿಷ್ಕಾಮ ಸೇವೆಯನ್ನು ಕುರಿತಂತೆ ಅವರಿವರಿಂದ ಸುದ್ದಿಗಳನ್ನು ಕೇಳುತ್ತಲಿದ್ದೆ. ಸುಮಾರು 1964ರಲ್ಲಿ ಮಲ್ಲಾಡಿಹಳ್ಳಿಗೆ ಹೋಗುವ ಅವಕಾಶ ತಾನೇತಾನಾಗಿ ಒದಗಿಬಂದಾಗ ಆ ಸದವಕಾಶ ಕಳೆದು

ಕೊಳ್ಳಲಿಲ್ಲ. ಮಹಾಗಣಪತಿಯ ಉತ್ಸವಕ್ಕೆ ಹೋದಾಗ ಆಗ ಮಲ್ಲಾಡಿಹಳ್ಳಿಯ ನಿಜವಾದ ಸ್ವರೂಪವೇನನ್ನುವುದು ಮನದಟ್ಟಾಯಿತು. ಅಲ್ಲಿಯ ಸರ್ವತೋಮುಖ ಬೆಳವಣಿಗೆಯನ್ನು ಕಂಡಾಗ ಈ ಏಕಾಂಗಸಾಹಸಿ ಎಷ್ಟೊಂದು ಅಭೂತಪೂರ್ವ ಕೆಲಸವನ್ನು ಮಾಡಿದ್ದಾರೆ, ಎಷ್ಟೊಂದು ತ್ಯಾಗವನ್ನು ಮಾಡಿದ್ದಾರೆ ಎನ್ನುವುದು ಅರಿವಾಯಿತು. ಆ ವಿವರಗಳನ್ನು ನಾನಿಲ್ಲಿ ಹೇಳಬಯಸುವುದಿಲ್ಲ. ಅಲ್ಲಿಗೆ ಒಮ್ಮೆ ಹೋಗಿಬಂದರೆ ಆ ಕರ್ಮಯೋಗದ ಸಾಕ್ಷಾತ್ಕಾರವಾಗುತ್ತದೆ. ಗಾಂಧೀಜಿ ಹೇಳಿದಂಥ ರಾಮರಾಜ್ಯ ಇದೇ ಎಂಬ ಕಲ್ಪನೆ ಮೂಡಿಬರುತ್ತದೆ. ಆ ದಿನ ಶ್ರೀ ಸ್ವಾಮೀಜಿಯವರ ದರ್ಶನಕ್ಕೆ ಹೋದಾಗ ಅವರು ಮೌನವ್ರತವನ್ನು ಅಂಗೀಕರಿಸಿದ್ದರು. ಅವರ ದರ್ಶನ ಮಾತ್ರ ಸಾಧ್ಯವಾಯಿತು. ಆದರೆ ಅವರು ಸೂಸಿದ ಮುಗುಳ್ನಗೆಯಿಂದ ಅವರಿನ್ನೂ ನನ್ನನ್ನು ಮರೆತಿಲ್ಲವೆನ್ನುವುದು ಸ್ಪಷ್ಟವಾಗಿಹೋಯಿತು !

ಕಳೆದ ವರ್ಷ ನಾನು ಹೊಳಲಕೆರೆಗೆ ಹೋಗುವ ಸಂದರ್ಭ ಒದಗಿದಾಗ, ಮಲ್ಲಾಡಿಹಳ್ಳಿ ಅಷ್ಟೊಂದು ಹತ್ತಿರವಿದ್ದರೂ ಅಲ್ಲಿಗೆ ಹೋಗಲಾಗಲಿಲ್ಲ. ಬೇರಾವುದೋ ಕೆಲಸದ ನಿಮಿತ್ತ ಇನ್ನೆಲ್ಲಿಗೋ ಹೋಗಬೇಕಾದ್ದರಿಂದ ಶ್ರೀ ಸ್ವಾಮೀಜಿಯವರ ದರ್ಶನವನ್ನು ಪಡೆಯಲಾಗಲಿಲ್ಲ. ಆದರೆ ನನ್ನ ನಾದಿನಿ ಅಲ್ಲಿಗೆ ಹೋಗಿದ್ದಾಗ ನಾನು ಬಂದಿರುವ ಸಂಗತಿಯನ್ನು ಕೇಳಿ 'ನಿಮ್ಮ ಭಾವ ಬಂದಿದ್ದಾರೆಯೆ ? ಹಾಗಾದರೆ ಇಲ್ಲಿಗೇಕೆ ಬರಲಿಲ್ಲ ?' ಎಂದು ಪ್ರಶ್ನಿಸಿದರಂತೆ. ಇದು ಅವರ ಔದಾರ್ಯವನ್ನು ಸೂಚಿಸುತ್ತದಷ್ಟೆ.

ಶ್ರೀ ಸ್ವಾಮೀಜಿಯವರು ನಿಜವಾದ ಅರ್ಥದಲ್ಲಿ ಕರ್ಮಯೋಗಿಗಳು. 'ಕರ್ಮಣ್ಯೇವಾಧಿಕಾರ'ದಲ್ಲಿ ನಂಬುಗೆಯಿಟ್ಟವರು. ಆದರ್ಶ ಬೋಧನೆಯೊಂದೇ ಅವರ ಗುರಿಯಲ್ಲ. ಅದನ್ನು ಸಾಧಿಸಿ ತೋರಿಸಿರುವುದು ಅವರ ಗುರಿ. ಈ ಇಳಿವಯಸ್ಸಿನಲ್ಲಿಯೂ ಅವರು ಹರೆಯದ ಯುವಕರನ್ನು ನಾಚಿಸುವಂತಿದ್ದಾರೆ. ಕರ್ಮಯೋಗ, ಯೋಗಬಲಗಳನ್ನು ಸಾಕ್ಷಾತ್ಕರಿಸಿಕೊಂಡಂಥವರು. ಯಾರ ಟೀಕೆಗೂ ಕಿವಿಗೊಡದೆ ತಮಗೆ ಸರಿಕಂಡುಬಂದದ್ದನ್ನು ನಿರ್ಭೀತಿಯಿಂದ ಮಾಡುವ ಎದೆಗಾರಿಕೆ ಅವರದು. ಹಿಂದೆ ಒಂದೆರಡು ಬಾರಿ ರಾಜ್ಯಸರ್ಕಾರದ ಪ್ರಶಸ್ತಿ ಬಂದಾಗ ಇವರು ನಮ್ರರಾಗಿ, ಆದರೆ ದೃಢರಾಗಿ ನಿರಾಕರಿಸಿದಂಥವರು. 'ನನಗೆ ಪ್ರಶಸ್ತಿಪತ್ರ ಬೇಡ, ಜೋಳಿಗೆ ತುಂಬಿ' ಎಂಬಂಥ ಎದೆಗಾರಿಕೆಯನ್ನು ತೋರಿದಂಥವರು.

ಇಷ್ಟೆಲ್ಲ ಸದ್ದುಗದ್ದಲಗಳಿಲ್ಲದೆ ಶ್ರಮಜೀವಿಗಳಾಗಿ ದುಡಿಯುತ್ತಿರುವ ಶ್ರೀ ಸ್ವಾಮೀಜಿಯವರು ಸಾಹಿತ್ಯ ರಚನೆಯಲ್ಲೂ ಮುಂದಿದ್ದಾರೆ ಎಂದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ. ಆದರೆ ಇವರಿಗೆ ಸಾಹಿತ್ಯರಚನೆಗೆ ಯಾವಾಗ ಬಿಡುವು ಸಿಗುತ್ತದೆ ಎಂದು ಆಶ್ಚರ್ಯಪಡಬೇಕಾಗುತ್ತದೆ. 'ತಿರುಕ' ಎಂಬ ಕಾವ್ಯನಾಮದಿಂದ ಇವರು ರಚಿಸಿರುವ ಕೃತಿಗಳು ಅಪಾರ. ಇದು ಕನ್ನಡ ಸಾಹಿತ್ಯಲೋಕಕ್ಕೂ ಹೆಮ್ಮೆ ತರುವಂಥ ಸಂಗತಿ.

ಇಂಥ ಕರ್ಮಯೋಗಿಗಳನ್ನು ಪಡೆದ ಕನ್ನಡ ನೆಲ ಧನ್ಯವಾಗಿದೆ ಶ್ರೀ ಸ್ವಾಮೀಜಿಯವರು ನಮ್ಮೊಡನೆ ಇನ್ನೂ ಹಲವಾರು ದಶಕಗಳಿದ್ದು ಗ್ರಾಮರಾಜ್ಯವನ್ನು ಸುಖೀರಾಜ್ಯದತ್ತ ಕೊಂಡೊಯ್ಯುವಲ್ಲಿ ನಮಗೆ ಮಾರ್ಗದರ್ಶಕರಾಗಿರಲಿ ಎಂಬುದೇ ಈ ನಾಡಿನ ಜನರೆಲ್ಲರ ಆಶಯವಾಗಿದೆ.

ನಾ. ಪ್ರಭಾಕರ್

ನಿಜವಾದ ಸ್ವಾಮಿಗಳು

ಮಲ್ಲಾಡಿಹಳ್ಳಿ ಸ್ವಾಮಿಗಳನ್ನು ನಾನು ಕಂಡಿರುವುದು ಕೇವಲ ಎರಡು ಬಾರಿ–ಅದೂ ಇತ್ತೀಚೆಗೆ. ಅವರನ್ನು ನೋಡಬೇಕು. ಅವರೊಡನೆ ಮಾತನಾಡಬೇಕು, ಅವರ ಕರ್ಮಭೂಮಿ ಮಲ್ಲಾಡಿಹಳ್ಳಿಯ ಆಶ್ರಮ ವನ್ನು ಕಾಣಬೇಕು ಎಂಬ ಬಯಕೆ ಈಗ್ಗೆ ಏಳೆಂಟು ವರ್ಷಗಳಿಂದ ಅವರ ಬಗ್ಗೆ ಹೆಚ್ಚು ಹೆಚ್ಚು ತಿಳಿದಷ್ಟು ನನ್ನ ಹೃದಯ ಭೂಮಿಯಲ್ಲಿ ಗಿಡವಾಗಿ, ಹೆಮ್ಮರವಾಗಿ ಬೆಳೆಯುತ್ತಿತ್ತು.

ಈಗ್ಗೆ ಏಳೆಂಟು ವರ್ಷಗಳ ಹಿಂದೆ—

ಡಾ. ಅ. ನ. ಕೃ. ಮತ್ತು ತ. ರಾ. ಸು. ಅವರ ಅಭಿನಂದನ ಗ್ರಂಥಗಳನ್ನು ಸಂಪಾದಿಸ ಹೊರಟು ಎಲ್ಲ ಲೇಖಕರಿಗೆ ಬರೆದಂತೆ ಮಲ್ಲಾಡಿಹಳ್ಳಿಯ ಸ್ವಾಮಿಗಳಿಗೂ ಲೇಖನಕ್ಕಾಗಿ ಪತ್ರ ಬರೆದೆ. ಪತ್ರ ಬರೆದ ಸ್ವಲ್ಪದಿನ ಗಳಲ್ಲಿಯೇ ಒಂದು ಗುರುವಾರ ಮೊದಲ ಲೇಖನವಾಗಿ –ಅವರು ಅ. ನ. ಕೃ., ತ. ರಾ. ಸು. ಅವರನ್ನು ಕುರಿತು ಬರೆದ ಲೇಖನಗಳು—ನನ್ನ ಕೈಸೇರಿತು. 'ಇದು ಗುರುಗಳ ಆಶೀರ್ವಾದ' ಎಂದು ಭಾವಿಸಿ ಇದ್ದಲ್ಲಿಂದಲೇ ಅವರ ಶ್ರೀಚರಣಕ್ಕೆ ನಮಿಸಿದೆ.

ದಿ| ಅ. ನ. ಕೃ. ಅವರ ಬಗ್ಗೆ ಗೋವಾದ ಮಿತ್ರರಾದ ಶಾ. ಮಂ. ಕೃಷ್ಣರಾಯರು 'ರಸಚೇತನ' ಎಂಬ ಅಭಿನಂದನ ಗ್ರಂಥ ಹೊರತರುವ ಸಿದ್ಧತೆಯಲ್ಲಿದ್ದಾಗ 'ಅವರೂ, ನೀವು ಇಬ್ಬರೂ ನನ್ನ ಬಗ್ಗೆ ಅಭಿನಂದನ ಗ್ರಂಥ ತರುವ ಔಚಿತ್ಯ ಅರ್ಥವಾಗುತ್ತಿಲ್ಲ.' ಎಂದು ಅ. ನ. ಕೃ. ಅವರು ಪತ್ರ ಬರೆದಾಗ, ನನ್ನಲ್ಲಿದ್ದ ಲೇಖನಗಳನ್ನು ಗೋವಾದ ಮಿತ್ರರಿಗೆ ಕೊಟ್ಟುಬಿಟ್ಟೆ. ಆದರೆ ಮಲ್ಲಾಡಿಹಳ್ಳಿಯಸ್ವಾಮಿಗಳ ಲೇಖನ ಹೇಗೆ ನನ್ನ ಬಳಿ ಉಳಿ ಯಿತೋ ತಿಳಿಯದು. ಅವರು ಬರೆದ ಲೇಖನ ವ್ಯರ್ಥವಾಯಿತಲ್ಲ ಎಂದು ಕೊರಗುತ್ತಿದ್ದೆ. ಸ್ವಲ್ಪ ಕಾಲ ಬಿಟ್ಟು "ಅಮರಚೇತನ ಅ. ನ. ಕೃ." ಎಂಬ ಜೀವನಚರಿತ್ರೆ ಬರೆದೆ. ಅದರ ಅನುಬಂಧದಲ್ಲಿ ಅವರ ಲೇಖನ ವನ್ನು ಉಪಯೋಗಿಸಿಕೊಳ್ಳಲು ಮತ್ತೆ ಅನುಮತಿಗಾಗಿ ಪತ್ರ ಬರೆದಾಗ ಅನುಮತಿಯು ಆಶೀರ್ವಾದದೊಂದಿಗೆ ಮರು ಟಪಾಲಿಗೆ ಅವರಿಂದ ಪತ್ರ ಬಂದಿತು.

ಈ ಎಲ್ಲ ಘಟನೆಗಳಿಂದ ಅವರನ್ನು ಕಾಣಬೇಕೆಂಬ ಬಯಕೆ ಹುಚ್ಚಾಗಿ ಕಾಡುತ್ತಿತ್ತು.

ಹಲವಾರು ಬಾರಿ ಚಿತ್ರದುರ್ಗದ ಪ್ರಾಂತ್ಯದಲ್ಲಿ ಕೆಲವಾರು ತಿಂಗಳುಗಳೇ ಕಳೆದರೂ ಏಕೋ ಮಲ್ಲಾಡಿ ಹಳ್ಳಿಗೆ ಹೋಗಲಾಗಲಿಲ್ಲ. ಕಾಲ ಕೂಡಿಬಂದಿರಲಿಲ್ಲವೇನೋ.

ನನ್ನ ಭಾವನವರಿಗೆ ಹೊಳಲ್ಕೆರೆಗೆ ವರ್ಗವಾಗಿ ಅಲ್ಲಿಗೆ ನಾನು ಹೋಗಿದ್ದಾಗ, ಅಲ್ಲಿಗೆ ತೀರಾ ಸಮೀಪದ ಮಲ್ಲಾಡಿಹಳ್ಳಿಗೆ ಹೋಗಲೇಬೇಕೆಂದು ದೃಢ ನಿರ್ಧಾರ ಮಾಡಿ ಕಳೆದ ವರ್ಷ (1976) ನವೆಂಬರ್ ತಿಂಗಳಲ್ಲಿ ಒಂದು ಸೋಮವಾರ ಆಶ್ರಮಕ್ಕೆ ಹೋದೆ ; ಮಧ್ಯಾಹ್ನ ಮೂರು ಗಂಟೆಯ ಹೊತ್ತಿಗೆ.

ಆಶ್ರಮದ ನೀರವ ಪ್ರಶಾಂತ ವಾತಾವರಣ ಅಲ್ಲಿಗೆ ಬಂದವರ ಮನಸ್ಸಿನ ತುಮುಲಗಳನ್ನೆಲ್ಲಾ ಕಳೆದು, ಅಪೂರ್ವ ಶಾಂತಿಯನ್ನು ಹಂಚುತ್ತಿದೆಯೇನೋ ಎನಿಸುವಂತಿತ್ತು. ಅಲ್ಲೆಲ್ಲಾ ಒಬ್ಬನೇ ಸುತ್ತಾಡಿದೆ. ಎಲ್ಲೂ ಸ್ವಾಮಿಗಳು ಕಣ್ಣಿಗೆ ಬೀಳಲಿಲ್ಲ. ಅವರು ಇಲ್ಲೋ ಎಲ್ಲೋ ಓಡಾಡುತ್ತಿದ್ದರೇನೋ ಎಂದೆನಿಸುತ್ತಿದ್ದಂತೆ ತಟಕ್ಕನೆ ಚಿತ್ರದುರ್ಗದಲ್ಲಿರುವ ಶ್ರೀ ತ. ರಾ. ಸು. ಅವರ ತಂದೆ ಶ್ರೀ ಟಿ.ಎಸ್. ರಾಮಸ್ವಾಮಯ್ಯನವರು ಹೇಳಿದ ತಮ್ಮ ಅನುಭವ ನೆನಪಿಗೆ ಬಂದಿತು.

ಒಮ್ಮೆ ಅವರೊಡನೆ ಮಲ್ಲಾಡಿಹಳ್ಳಿ ಸ್ವಾಮಿಗಳ ಬಗ್ಗೆ ಮಾತನಾಡುತ್ತಿದ್ದಾಗ "ಸ್ವಾಮಿಗಳಿಗೆ ತುಂಬ ವಯಸ್ಸಾಗಿದೆಯೆ ?" ಎಂದು ಕೇಳಿದೆ.

"ಅವರಿಗೀಗ 86 ವರ್ಷ. ಆದರೂ ಹುಡುಗರು. ನಿಮ್ಮನ್ನೂ ನಾಚಿಸುತ್ತಾರೆ. ನೀವು ಅವರ ಮುಂದೆ ಮುದುಕರು. ಒಂದು ಸಾರಿ ಹೀಗಾಯಿತು"—ಎಂದು ಹೇಳಿದ ಅವರು.

"ಒಂದು ಸಾರಿ ನನ್ನ ತಮ್ಮ ಶಾಮಣ್ಣ ಮಲ್ಲಾಡಿಹಳ್ಳಿಯ ಆಶ್ರಮಕ್ಕೆ ಬಂದು ಅಲ್ಲಿ ಇಳಿದಿದ್ದ. ಅವ ನನ್ನು ಕಾಣಲು ನಾನು ಮಲ್ಲಾಡಿಹಳ್ಳಿಗೆ ಹೋದೆ. ಆಶ್ರಮದಲ್ಲಿ ಹುಡುಗರು ಓಡಾಡುತ್ತಿದ್ದರು. ಒಬ್ಬ ಯುವಕ ಒಂದು ಚಡ್ಡಿ, ಒಂದು ಬನೀನು ಹಾಕಿಕೊಂಡು ನನ್ನ ಬಳಿ ಬಂದು 'ಯಾರು ಬೇಕಾಗಿತ್ತು ?' ಎಂದು ಹೇಳಿದ. ನನ್ನ ತಮ್ಮನ ಹೆಸರು ಹೇಳಿ 'ಅವರೆಲ್ಲಿ ಇಳಿದುಕೊಂಡಿದ್ದಾರೆ ?' ಎಂದು ಕೇಳಿದೆ. 'ಬನ್ನಿ ನಾನು ತೋರಿಸುತ್ತೇನೆ' ಎಂದು ನನ್ನ ತಮ್ಮನಿದ್ದ ರೂಮಿಗೆ ನನ್ನನ್ನು ಕರೆದೊಯ್ದ ಯುವಕ. ಆ ಯುವಕನನ್ನು ನೋಡಿದ ತಕ್ಷಣ ನನ್ನ ತಮ್ಮ ಅವರಿಗೆ ನಮಸ್ಕರಿಸಿದ. ನನಗೆ ಕಕ್ಕಾವಿಕ್ಕಿಯಾಯಿತು. ಆ ನಂತರ ಅವರೇ ಸ್ವಾಮಿಗಳೆಂದು ನನ್ನ ತಮ್ಮ ಪರಿಚಯ ಮಾಡಿಕೊಟ್ಟ. ನಿಜ, ಅವರು 86 ವರ್ಷದ ಯುವಕರು."—ಎಂದು ಹೇಳಿದ್ದರು.

ಅವರ ಅನುಭವ ನೆನಪಿಗೆ ಬಂದು, ನಾನೂ ಎಲ್ಲಿ ಅವರ ಹಾಗೆ ಎಂದೂ ನೋಡದ ಸ್ವಾಮಿಗಳಿಂದ ಮೋಸಹೋಗುತ್ತೇನೋ ಎಂದುಕೊಂಡಿದ್ದೆ. ಆ ವೇಳೆಗೆ ಆಶ್ರಮದ ಒಬ್ಬ ಹುಡುಗನನ್ನು ವಿಚಾರಿಸಿ, ತಪೋ ವನದಲ್ಲಿರುವ ಅವರ ಕುಟೀರಕ್ಕೆ ಹೋದೆ.

ಸ್ವಾಮೀಜಿ ಅವರು ಹೃದ್ರೋಗಕ್ಕೆ ಪಕ್ಕಾಗಿ, ಯೋಗಾಭ್ಯಾಸದಿಂದ ಗುಣ ಹೊಂದಲು ಬಂದಿದ್ದ ವಿದೇಶಿ ಮಹಿಳೆಯೊಬ್ಬಳಿಗೆ ಯೋಗಾಭ್ಯಾಸ, ಸೂರ್ಯನಮಸ್ಕಾರಗಳನ್ನು ವಿವರಿಸುತ್ತಿದ್ದರು. ನಾನು ಕುಟೀರದ ಹೊರಗೆ ಇರುವ ವರಾಂಡದಲ್ಲಿ ನಿಂತಿದ್ದೆ. ಹೊರಗೆ ಬಂದ ಆಶ್ರಮದ ಸೇವಾಸಕ್ತೆ ಕು. ವನಿತಾ ಅವರು ನಾನು ಬಂದಿರುವ ಸುದ್ದಿ ತಿಳಿಸಿದರು. ಸ್ವಲ್ಪ ಹೊತ್ತಿನ ಮೇಲೆ ಹೊರಬಂದು, ಕುಶಲಪ್ರಶ್ನೆ ಮಾಡಿ ಏನೆಲ್ಲ ವಿಚಾರಿಸಿ—

"ತಪ್ಪು ತಿಳಿಯಬೇಡಿ, ದೂರ ದೇಶದಿಂದ ಬಂದಿರುವ ಅವರಿಗೆ ಸ್ವಲ್ಪ ಗೈಡ್ ಮಾಡಬೇಕಿದೆ. ನನ್ನನ್ನೆ ಹುಡುಕಿಕೊಂಡು ಬಂದಿದ್ದಾರೆ. ಅವರು ಇಂದು ರಾತ್ರಿ ಹೊರಟುಬಿಡುತ್ತಾರೆ. ನಾನು ಸರಿಯಾಗಿ ಟ್ರೀಟ್ ಮಾಡದಿದ್ದರೆ ನಮ್ಮ ದೇಶಕ್ಕೇ ಕೆಟ್ಟ ಹೆಸರು ಬರುತ್ತೆ. ಇನ್ನೊಮ್ಮೆ ಬನ್ನಿ"—ಎಂದು ಹೇಳಿದರು ಸ್ವಾಮೀಜಿ.

ನಾನು ಅವರೊಡನೆ ಏನೆಲ್ಲ ಮಾತನಾಡಬೇಕೆಂದು ಹೋಗಿದ್ದೆ. ಅವರನ್ನು ಕಂಡಾಗ, ಸದಾ ಅವರಿಗಿರುವ ಗುರುತರ ಕೆಲಸ ಕಾರ್ಯಗಳನ್ನು ಅರಿತಾಗ, ನನ್ನ ಮಾತಿನಿಂದ ಅವರಿಗೆ ತೊಂದರೆಯಾಗುತ್ತದೆ ಎನಿಸಿ, ಹೆಚ್ಚು ಮಾತನಾಡಲಾಗದಿದ್ದರೂ ಆ ಹತ್ತಾರು ನಿಮಿಷಗಳಲ್ಲಿ ಅವರು ಆಡಿದ್ದ ಮಾತಿನಿಂದ ಎಷ್ಟೋ ವರ್ಷಗಳಿಂದ ನನ್ನನ್ನಾಳುತ್ತಿದ್ದ ಸೋಮಾರಿತನ ಬೆಳಕನ್ನು ಕಂಡು ಕತ್ತಲೆ ಹೆದರಿ ಓಡುವಂತೆ ನನ್ನಿಂದ ದೂರವಾಗಿ, ಇಂತಹು ದೆಂದು ಹೇಳಲಾಗದ ಶಕ್ತಿ-ಉತ್ಸಾಹಗಳು ಮೈಯ ನರನರದಲ್ಲೂ ಪ್ರವಹಿಸಿದಂತಾಯಿತು.

ಆ ದಿನ, ಆ ಸ್ವಲ್ಪಹೊತ್ತಿನಲ್ಲೇ ಕೆಲವಾರು ಪ್ರಶ್ನೆಗಳನ್ನು ಕೇಳಿದೆ. ಅವರೂ ಬಿಡುವಿಲ್ಲದಿದ್ದರೂ ನನ್ನೆಲ್ಲ ಸಂಶಯುಗಳನ್ನು ನಿವಾರಿಸಿದರು.

"ನಿಮ್ಮಂತಹ ತರುಣರು ಇಲ್ಲಿ ಬರಬಾರದೇಕೆ ? ನಿಮ್ಮಂತಹ ಯುವಕರನ್ನು ಕಂಡರೆ ನನಗೆ ಸಿಟ್ಟಾಗುತ್ತದೆ—ನಿಮ್ಮ ಅಮೂಲ್ಯ ಸಮಯುವನ್ನೆಲ್ಲ ವ್ಯರ್ಥವಾಗಿ ಕಳೆಯುವಿರಲ್ಲ ಎಂದು."

"ಸ್ವಾಮೀಜಿ, ನಿಮ್ಮ ಆಶ್ರಮಕ್ಕೆ ಬಂದುಬಿಡಬೇಕೆಂದು ಎಷ್ಟೋ ಬಾರಿ ಯೋಚಿಸಿದ್ದೆನೆ. ಹಲವಾರು ಕಾರಣಗಳಿಂದ ಆಗುತ್ತಿಲ್ಲ."

"ಯಾವಾಗ ಬೇಕಾದರೂ ಬನ್ನಿ. ನೋಡಿ, ಇಲ್ಲಿ ಬರುವವರು ಮೊದಲು ತಮ್ಮ ಸ್ವಾರ್ಥತ್ಯಾಗ ಮಾಡಬೇಕು. ಸೋಮಾರಿಗಳಿಗೆ ಇಲ್ಲಿ ಸ್ಥಳವಿಲ್ಲ. ಆಶ್ರಮದಿಂದ ನನಗೇನು ಉಪಯೋಗ ಎಂಬುದಕ್ಕಿಂತ ಆಶ್ರಮಕ್ಕೆ ನನ್ನಿಂದೇನು ಸೇವೆ ಸಲ್ಲಿಸಲು ಸಾಧ್ಯ ಎಂಬುದನ್ನು ಯೋಚಿಸಿ ಬರುವ, ಸೇವಾಮನೋಭಾವದವರಿಗೆ ಮಾತ್ರ ಇಲ್ಲಿ ಸದಾ ಸ್ವಾಗತ"—ಎಂದು ಹೇಳಿದರು.

ಹೀಗೆ ಮಾತನಾಡುತ್ತಾ ಮಾತು ಮಠಾಧೀಶರ ಬಗ್ಗೆ ಬಂದಾಗ—

"ಇಂದು ಸಮಾಜದಲ್ಲಿ, ರಾಷ್ಟ್ರದಲ್ಲಿ ನಡೆಯುತ್ತಿರುವುದೆಲ್ಲ ನಾಟಕವೇ ! ಹಳ್ಳಿಯಿಂದ ದಿಳ್ಳಿಯವರೆಗೆ, ಜವಾನನಿಂದ ರಾಷ್ಟ್ರಾಧ್ಯಕ್ಷರವರೆಗೆ ಎಲ್ಲರದೂ ನಾಟಕವೇ. ಜೀವನದಲ್ಲಿ ಅಂತರ್ಬಾಹ್ಯಶುದ್ಧಿ ಯಾರದೂ ಇಲ್ಲ. ಹೀಗೆ ಇಂತಹ ವಿಷವೃತ್ತ ಸಮಾಜದಿಂದಲೇ ಆಯ್ಕೆಯಾಗಿ ಬಂದು ಪಟ್ಟಾಭಿಷಿಕ್ತರಾಗಿ ಕುಳಿತಿರುವವರೂ ಅದೇ ಮಠಾಧೀಶರಲ್ಲವೇ ? ಇಂತಹವರಿಂದ ಭಾರತದ ನೈತಿಕತೆಯ, ಆಧ್ಯಾತ್ಮಿಕತೆಯ ಚೌಕಟ್ಟು ಭದ್ರವಾಗಿರಲು ಸಾಧ್ಯವೇ ? ಎಂಬೊಂದು ಪ್ರಶ್ನೆ ಸದಾ ನನ್ನ ತಲೆಯನ್ನು ಕೊರೆಯುತ್ತಿದೆ"—ಎಂದು ನುಡಿದು ನಿಟ್ಟುಸಿರು ಬಿಟ್ಟ ಸ್ವಾಮೀಜಿ—

"ಭಾರತ ನೆಲೆ ನಿಂತಿರುವುದೇ ಆಧ್ಯಾತ್ಮದ ತಳಹದಿಯ ಮೇಲೆ ; ಧರ್ಮ ಅದರ ಮೂಲ ಚೈತನ್ಯ ; ನೀತಿ ಅದರ ಒಳತಿರುಳು. ಆದರೆ ಇಂದದರ ಸ್ಥಿತಿ ಏನಾಗಿದೆ ?"—ಎಂದು ಪ್ರಶ್ನಿಸಿದ ಅವರೇ—

"ನಮ್ಮ ಧಾರ್ಮಿಕತೆಯು ಎಂದೋ ನಶಿಸಿ ಹೋಗಿದೆ ; ಆಧ್ಯಾತ್ಮಿಕ ಮನೋಭಾವವು ಲುಪ್ತವಾಗಿದೆ : ನೈತಿಕ ಮಟ್ಟವೂ ಕುಸಿದು ಬಿದ್ದಿದೆ. ಹೀಗಾಗಿ ಎಲ್ಲೆಲ್ಲೂ ಅಂಧಕಾರ, ಅಜ್ಞಾನ, ಸ್ವಾರ್ಥ, ಭೋಗಲಾಲಸೆ, ಅನೀತಿ ತಾಂಡವವಾಡುತ್ತಿದೆ. ಆದರೂ ನಾವು ನಮ್ಮ ತಾತ ಮುತ್ತಾತಂದಿರಿಗಿಂತ ನಾಗರೀಕರು, ಸುಧಾರಕರು ಎಂಬ ಹೆಮ್ಮೆಯಿಂದ ಬೀಗುತ್ತಿದ್ದೇವೆ. ಅವರೆಲ್ಲ ನಮ್ಮ ದೃಷ್ಟಿಯಲ್ಲಿ ಕಾಡುಪಶುಗಳು 'ತೋಟ ಶೃಂಗಾರ ಒಳಗೆ ಗೋಣಿಸೊಪ್ಪು' ಎಂಬಂತಾಗಿದೆ ನಮ್ಮ ನಾಗರೀಕತೆಯ ಒಣವಾದ"—ಎಂದು ನಾಗರೀಕತೆಯ ಹೆಸರಿನಲ್ಲಿ ಸಮಾಜದಲ್ಲಾಗುತ್ತಿರುವ ನೈತಿಕ ಮಟ್ಟದ ಅಧೋಗತಿಯನ್ನು ವಿವರಿಸಿದರು.

"ಹೀಗಿರುವಾಗ ರಾಷ್ಟ್ರದ, ಸಮಾಜದ ಉದ್ಧಾರ ಹೇಗೆ ಸಾಧ್ಯ ? ಧಾರ್ಮಿಕ, ಆಧ್ಯಾತ್ಮಿಕ, ನೈತಿಕವಾಗಿ ಉನ್ನತಿ ಹೊಂದುವುದು ಹೇಗೆ ?"—ನಾನು ಕೇಳಿದೆ.

"ಸಮಾಜದಲ್ಲಿ, ರಾಷ್ಟ್ರದಲ್ಲಿ ಯಾರೇ ಕೆಟ್ಟರೂ, ಜನಜೀವನ ಎಷ್ಟೇ ಅಧಃಪತನಕ್ಕಿಳಿದರೂ ಎಲ್ಲರನ್ನೂ ತಮ್ಮ ಆಧ್ಯಾತ್ಮಿಕ, ಧಾರ್ಮಿಕ, ನೈತಿಕ ಬಲದಿಂದ, ತಪಃಶಕ್ತಿಯಿಂದ ದಾರಿಗೆ ತರತಕ್ಕ ಹೊಣೆ ಇರುವುದು—ಮಠಾಧೀಶರಿಗೆ, ಸನ್ಯಾಸಿಗಳಿಗೆ, ಸಾಧುಸಂತರಿಗೆ. ಅಂತಹವರು ಈಗ ನಮ್ಮಲ್ಲಿಲ್ಲವೇ ?....ಇದ್ದಾರೆ, ನಮ್ಮಲ್ಲಿರುವ ಕಾವೀಶಾಟಿಯವರ ಸಂಖ್ಯೆ, ಸಾಧು-ಸಂತರ ಸಂಖ್ಯೆ ಎಷ್ಟು ಗೊತ್ತೆ ?-ಅರವತ್ತೆಂಟು ಲಕ್ಷ. ಇಷ್ಟು ಜನರಿದ್ದೂ ಈ ಧಾರ್ಮಿಕ, ನೈತಿಕ, ಆಧ್ಯಾತ್ಮಿಕ ಅವನತಿ ಏಕೆ ? ರಾಷ್ಟ್ರದ ದುರ್ದೆಶೆ ಏಕೆ ?....ಏಕೆಂದರೆ ನಿಜವಾದ ಕಳಕಳಿಯಿಲ್ಲದ ನಾಟಕೀಯ ಜೀವನವೇ ಇದಕ್ಕೆ ಕಾರಣ. ಅವರ ನಿಷ್ಕ್ರಿಯತೆ, ತಪಃಶಕ್ತಿಯ ಕೊರತೆಯೇ ಇದಕ್ಕೆ ಕಾರಣ.

"ಇಂದು ಎಷ್ಟೋ ಮಂದಿ ಮಠಾಧೀಶರು, ಸನ್ಯಾಸಿಗಳು ಮತ್ತು ಯತಿಗಳಿಗೆ ಉಟ್ಟ ಕಾವಿಯು ಲಾಂಛನವೇ ಅವರು ನಡೆಸುವ ಭೋಗಜೀವನಕ್ಕೆ, ಅತ್ಯಾಚಾರಕ್ಕೆ ಸಮಾಜ ಕೊಟ್ಟ ಲೈಸನ್ಸ್. ಇಂತಹವರನ್ನು 'ಮೆರವಣಿಗೆ ಸ್ವಾಮಿಗಳು' ಎಂದರೂ ಸಲ್ಲುತ್ತದೆ. ಇವರು ತಮ್ಮ ಹಣವನ್ನೇ ಕೊಟ್ಟು, ಮೆರವಣಿಗೆಯ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಇವರು ನಡೆಸುವ ಅನ್ಯಾಯ, ಭ್ರಷ್ಟಾಚಾರಗಳಿಗೆ ತುದಿ ಮೊದಲೇ ಇಲ್ಲ. ಆದರೆ ವೇದಿಕೆಯ ಮೇಲೆ ಹೊರಗೆ ಇವರು ಮಾಡುವ ಉಪದೇಶಗಳಿಗೆ ಪರಿಮಿತಿಯೇ ಇಲ್ಲ. ಸ್ವತಃ ತಾವೇ ಅವಿಚಾರಿಗಳಾಗಿ, ಅಧ್ಯಾತ್ಮಿಕ ಜೀವನಕ್ಕೆ ಪಕ್ಕಾಗದ ಇಂತಹವರ ಭಾಷಣದಿಂದ ಆಗುವ ಉಪಯೋಗವೇನು ? ಇನ್ನು ಕೆಲವರು ತೀರ ಮಡಿವಂತರು. ಇವರ ಮನಸ್ಸು ಮಡಿ ಇಲ್ಲದಿದ್ದರೂ ಇವರು ಮಾಡುವ ತ್ರಿಕಾಲಸ್ನಾನ, ಮಂತ್ರ ಘೋಷಣೆ, ಆಡಂಬರದ ಪೂಜೆಗಳಲ್ಲಷ್ಟೇ ಇವರು ಮಗ್ನರಾಗಿ ಇತರೆಯವರನ್ನೆಲ್ಲಾ ಅಸ್ಪೃಶ್ಯರೆಂದೇ ಭಾವಿಸುವವರು ; ಇವರಿಗೆ ರಾಷ್ಟ್ರಪ್ರಜ್ಞೆ ಇಲ್ಲ—ಆಧ್ಯಾತ್ಮಿಕ ಜ್ಞಾನವೂ ಇಲ್ಲ. ಕೇವಲ ಮಡಿವಂತಿಕೆಯೊಂದೇ ಇವರಿಗೆ ಆಧಾರ. ಇನ್ನು ಕೆಲವರು ಸಮಾಜದ ಈ ದುರ್ದಶೆ, ಧಾರ್ಮಿಕ, ನೈತಿಕ, ಆಧ್ಯಾತ್ಮಿಕದ ಅವನತಿಯನ್ನು ಕಂಡು ಇದರ ಪರಿಹಾರಕ್ಕೆ ಯತ್ನಿಸದೆ ಕೇವಲ ಕಣ್ಣೀರಿಡುತ್ತಿರುತ್ತಾರೆ."

"ಈ ಸನ್ನಿವೇಶದ ನಿವಾರಣೆಗಾಗಿ ಪ್ರಯತ್ನಿಸುವವರು ಯಾರೂ ಇಲ್ಲವೇ ?

"ಇದ್ದಾರೆ–ಕೈ ಬೆರಳಿನಿಂದ ಎಣಿಸುವಷ್ಟು ಮಂದಿ. ಆದರೆ ಕೋಟಿ ಕೋಟಿ ಜೀವರುಗಳು ಅಜ್ಞಾನಾಂಧಕಾರದಲ್ಲಿ ತೊಳಲಾಡುತ್ತಿರುವಾಗ, ಇಡಿಯ ರಾಷ್ಟ್ರವೇ ಅಂಧಕಾರದಲ್ಲಿ ಮುಸುಕಿರುವಾಗ ಅಲ್ಲೊಬ್ಬರು, ಇಲ್ಲೊಬ್ಬರು ಕಣ್ಣೀರಿಟ್ಟರೆ–ಕೆಲವೊಂದು ಮಂದಿ ತಪಸ್ವಿಗಳು ಯತ್ನಿಸಿದರೆ–ರಾಷ್ಟ್ರದಲ್ಲಿ ಶಾಂತಿ ನೆಲಸೀತೇ ? ಸಮಾಜದಲ್ಲಿ ನೈತಿಕ, ಆಧ್ಯಾತ್ಮಿಕ ಉನ್ನತಿಯ ಸಾಧನೆಯಾದೀತೇ ? ಇಲ್ಲ ...ಎಂದೂ ಸಾಧ್ಯವಿಲ್ಲ...."—ಎಂದು ಆವೇಶದಿಂದ ನುಡಿದ ಅವರಿಗೆ—

"ಸಮಾಜದ ನೈತಿಕ, ಆಧ್ಯಾತ್ಮಿಕ, ಧಾರ್ಮಿಕ ಉನ್ನತಿ ಹೇಗೆ ಸಾಧ್ಯ? ಇದನ್ನು ಯಾರು ಮಾಡಬೇಕು ?" —ಎಂದು ಕೇಳಿದೆ.

"ನಮ್ಮ ದೇಶದಲ್ಲಿ ಅರವತ್ತೆಂಟು ಲಕ್ಷ ಕಾವಿ ತೊಟ್ಟವರಿದ್ದಾರೆ ಎಂದೆನಲ್ಲ. ಅವರುಗಳು ತಮ್ಮ ನಾಟಕ ಜೀವನವನ್ನು ಕೊನೆಗಾಣಿಸಿ, ತಮ್ಮ ವಯುಕ್ತಿಕ ತಪಃಶಕ್ತಿಯನ್ನು ಬಲಪಡಿಸಿಕೊಂಡು ಅನಂತರ ಆಧ್ಯಾತ್ಮಿಕ ಚೌಕಟ್ಟಿನಲ್ಲಿ ರಾಷ್ಟ್ರದ ನೈತಿಕ ಪುನುರುತ್ಥಾನಕ್ಕೆ ನಿಲ್ಲಬೇಕು. ಆಗ ಮಾತ್ರ ರಾಷ್ಟ್ರೋತ್ಥಾನವಾದೀತು ; ರಾಷ್ಟ್ರದಲ್ಲಿ ಸುಖ ಸಮೃದ್ಧಿ ನೆಲಸೀತು....ಭಾರತದ ಕೀರ್ತಿ ದಶದಿಶೆಯಲ್ಲೂ ಹರಡೀತು....ಆದರೆ ನಮ್ಮ ಮಠಾಧೀಶರು, ಸನ್ಯಾಸಿಗಳು, ಯತಿಗಳು,ಸಾಧುಸಂತರು ಹಾಗೆ ಮಾಡಲು ಮುಂದಾಗುವರೇ ?"—ಸವಾಲು ಹಾಕಿದಂತೆ ನನ್ನನ್ನೇ ಪ್ರಶ್ನಿಸಿದ ಸ್ವಾಮಿಜಿ ಅವರಿಗೆ—

"ಕಾವಿ ತೊಟ್ಟವರು ನಮ್ಮ ದೇಶಕ್ಕೆ ಅಗತ್ಯವೇ ?"—ಎಂದು ಕೇಳಿದಾಗ ಅವರು—

"ಅಗತ್ಯವಿಲ್ಲವೆಂದು ನಾನು ಹೇಳುವುದಿಲ್ಲ. ತಮ್ಮ ನಾಟಕ ಜೀವನವನ್ನು ಬದಿಗೊತ್ತಿ, ಆ ಜಾತಿ–ಈ ಜಾತಿ, ಮೇಲ್ಜಾತಿ–ಕೀಳ್ಜಾತಿ ಎಂಬ ದುರಭಿಮಾನವನ್ನು ಬಿಟ್ಟು ಒಗ್ಗಟ್ಟಿನಿಂದ ನೈತಿಕತೆಯನ್ನು, ಆಧ್ಯಾತ್ಮಿಕತೆಯನ್ನು ಉನ್ನತ ಸ್ಥಿತಿಗೆ ತರುವ ಆದರ್ಶ ಮಠಾಧೀಶರು, ಸನ್ಯಾಸಿಗಳು ಇಂದು ಬೇಕಾಗಿದೆ. ಆಗಲೇ ಸಮಾಜದ ಉದ್ಧಾರ."–ಎಂದು ಹೇಳಿದರು.

ಅವರ ಮಾತಿನಲ್ಲಿ ರಾಷ್ಟ್ರೀಯಪ್ರಜ್ಞೆ, ದೇಶಭಕ್ತಿ ಎದ್ದುಕಾಣುತಿತ್ತು. ಸಮಾಜದ ಉದ್ಧಾರಕ್ಕಾಗಿ ಅವರಿಗಿದ್ದ ಕಳವಳಿ ಎಂತಹವರನ್ನೂ ನಾಚಿಸುವಂತಿತ್ತು. (ಹೊರದೇಶದಿಂದ ಬಂದ ಮಹಿಳೆಗೆ ಭಾರತದ ಬಗ್ಗೆತಪ್ಪು ಕಲ್ಪನೆ ಬಾರದಿರಲೆಂದೇ ಇಡೀ ದಿನವನ್ನೆಲ್ಲಾ ಆಕೆಯ ಸಂಶಯನಿವಾರಣೆಗೆ ಮೀಸಲಾಗಿಟ್ಟಿದ್ದ ಅವರ ಅಂದಿನ ನಿಲುವು, ಅವರಾಡುತ್ತಿದ್ದ 'ರಾಷ್ಟ್ರಪ್ರಜ್ಞೆ, ದೇಶಭಕ್ತಿ'ಗೆ ವಾಗ್ರೂಪ ಕೊಟ್ಟಂತಿತ್ತು.)

"ಜೀವನವನ್ನೇ ಮುಡುಪಾಗಿಟ್ಟು ಸೇವೆ ಸಲ್ಲಿಸುವಂತಹ ಯುವಕ ಯುವತಿಯರು ಬೇಕು. ರಾಷ್ಟ್ರಕ್ಕಾಗಿ ನನ್ನ ಮಗ, ರಾಷ್ಟ್ರಕ್ಕಾಗಿ ನನ್ನ ಮಗಳು ಎನ್ನುವಂತಹ ವೀರ ಮಾತೆಯರು ಬೇಕು". ಎಂದು 'ಜೀವದಾನಪಡೆ'ಗೆ ಕರೆಕೊಟ್ಟ ಅವರು—

"ನಮ್ಮ ಸಮಾಜಸುಧಾರಕರು, ವರಿಷ್ಟನಾಯಕರು, ಹಳ್ಳಿಗಳನ್ನು ಆರಿಸಿ ಅಲ್ಲಿ ರಚನಾತ್ಮಕ ಕಾರ್ಯ ಮಾಡಬೇಕು. ಮಠಾಧೀಶರು ತಮ್ಮ ತಪಶ್ಶಕ್ತಿ ಬೆಳಸಿಕೊಂಡು ಹಳ್ಳಿಗಳಲ್ಲಿ ಮಾರ್ಗದರ್ಶಿಗಳಾಗಬೇಕು. ಆಗಲೇ ಹಳ್ಳಿಗಳ ನಾಡಾದ ನಮ್ಮ ದೇಶದ ನಿಜವಾದ ಉದ್ಧಾರ ಸಾಧ್ಯ. ಬರೀ ಘೋಷಣೆ, ಭಾಷಣ, ಆಡಂಬರದ ಪ್ರಾಜೆಗಳಿಂದೇನೂ ಸಾಧ್ಯವಿಲ್ಲ—"ಎಂದು ನುಡಿದರು.

ಇನ್ನೂ ಮಾತನಾಡುತ್ತಾ ಕುಳಿತಿದ್ದರೆ ಮುಗಿಯುವುದೇ ಇಲ್ಲವೇನೋ ಎನಿಸಿ ಅವರ ಅಮೌಲ್ಯ ವೇಳೆಯ ಕಡೆ ಗಮನವಿಟ್ಟಿದ್ದ ನಾನು ಹೆಚ್ಚು ಮಾತು ಬೆಳೆಸದೆ ಸ್ವಾಮಿಜಿಯವರ ಶ್ರೀ ಚರಣಕ್ಕೆ ನಮಿಸಿ, ಆಶೀರ್ವಾದ ಪಡೆದು, ಅವರಿಂದ ಬೀಳ್ಕೊಂಡು, ಆಶ್ರಮದಲ್ಲೆಲ್ಲಾ ಸುತ್ತಾಡಿ ಹೊಳಲ್ಕೆರೆಗೆ ಬಂದುಬಿಟ್ಟೆ.

ಆ ಮಹಾತ್ಮರ ದರ್ಶನ ಮಾಡಿದ ದಿನ ಆ ಸಂಜೆ—

ಮಳೆಇಲ್ಲದೆ, ಕುಡಿಯಲು ನೀರಿಲ್ಲದೆ, ದನಕರುಗಳ ಪರದಾಟ ನೋಡಲಾಗದೆ ಜನ ಪರದಾಡುತ್ತಿದ್ದ ಆ ಪ್ರಾಂತ್ಯದಲ್ಲಿ ಯಾವ ಮುನ್ಸೂಚನೆಯೂ ಇಲ್ಲದೆ ಕುಂಭದ್ರೋಣ ಮಳೆ ಸುರಿಯಿತು.

ಹರಿದ್ವರ್ಣದಿಂದ ಸದಾ ತುಂಬಿ ತುಳುಕಾಡುವ ಸಸ್ಯಶ್ರೀಯ ನಡುವೆ ಹುಟ್ಟಿ ಬೆಳೆದ ನನಗೆ, ನೀರಿಲ್ಲದೆ ಜನ ಪರಿತಪಿಸುತ್ತಿದ್ದ ಆ ಪ್ರಾಂತ್ಯದಲ್ಲಿ ಕಾಲ ಕಳೆಯುವಾಗ ಹೃದಯ ಹಿಂಡಿದಂತಾಗುತ್ತಿತ್ತು. ಅಂದು ಮಳೆ ಸುರಿಯುತ್ತಿದ್ದುದನ್ನು ಬಸ್ಸಿನಲ್ಲಿ ಬರುವಾಗ ಕಣ್ಣಾರೆ ಕಂಡು ಬೆಂದ ಹೃದಯಕ್ಕೆ ಹಾಲೆರೆದಂತಾಯಿತು. ಇದು ಮಹಾತ್ಮರ ದರ್ಶನದ ಫಲ ಎಂದು ನನ್ನ ಅಂತರಾತ್ಮ ಹೇಳುತ್ತಿತ್ತು.

ಅದಾದ ಒಂದು ವಾರದ ಮೇಲೆ ನನ್ನ ಅಕ್ಕ, ಭಾವ, ಅವರ ಮಕ್ಕಳೊಡನೆ ಆಶ್ರಮಕ್ಕೆ ಹೋದೆ. ಬನಶಂಕರಿ ದೇವರ ಪೂಜೆಮಾಡಿಸಿ, ಔಷಧ ಕೊಡುತ್ತಿದ್ದ ಸ್ವಾಮಿಗಳ ದರ್ಶನ ಮಾಡಲು ಹೋದೆ.—

ನಿಶ್ಶಕ್ತಿಯಿಂದ ನರಳುತ್ತಿದ್ದ ನಾನು ಅವರ ಪರೀಕ್ಷೆಗೆ ಒಳಪಟ್ಟಾಗ, ಅವರು ನನ್ನ ಕೈಹಿಡಿದು—

"ನನಗೆ ನಾಚಿಕೆಯಾಗುತ್ತೆ ಕಣೋ ಅಣ್ಣ"-ಎಂದು ವಿಷಾದದಿಂದ ನುಡಿದರು.

ನಿಜ, ನನ್ನಂತಹ ತರುಣನನ್ನು ಕಂಡು ಅವರಿಗೆ ನಾಚಿಕೆಯಾಯಿತು. ಅವರಿಗೆ ಬೇಕಾಗಿರುವುದು ನನ್ನಂತಹ ನಿಶ್ಶಕ್ತ, ನಿರಾಶಾ, ಭಾವಜೀವಿಯಲ್ಲ ಅವರಿಗೆ—

"ಜೀವನವನ್ನೇ ಮುಡುಪಾಗಿಟ್ಟು ಸೇವೆಸಲ್ಲಿಸುವಂತಹ ಯುವಕ ಯುವತಿಯರು ಬೇಕು. ರಾಷ್ಟ್ರಕ್ಕಾಗಿ ನನ್ನ ಮಗಳು ಎನ್ನುವಂತಹ ವೀರಮಾತೆಯರು ಬೇಕು."

ತಮ್ಮ ನಿಸ್ವಾರ್ಥ ಸೇವೆಯಿಂದ ಕಟ್ಟಿದ ಆಶ್ರಮವನ್ನು, ಆಶ್ರಮದ ಕೆಲಸ ಕಾರ್ಯಗಳನ್ನು ಮುಂದುವರಿಸಲು ಸ್ವಾಮಿಜಿ ಕಟ್ಟುತ್ತಿರುವ 'ಜೀವದಾನಪಡೆ'ಗೆ ತ್ಯಾಗ, ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಬೇಕು.

ಇಂತಹ ನಿಜವಾದ ಸ್ವಾಮಿಗಳಿಗೆ ಅಂತಹ ಯುವಕರು ಎಲ್ಲಿದ್ದಾರೆ ?

ಜಿ. ಗೋವಿಂದರಾಜು

ಸಾಮಾನ್ಯ ಸನ್ಯಾಸಿಯ ಅಸಾಮಾನ್ಯ ವ್ಯಕ್ತಿತ್ವ

ಇತಿಹಾಸದ ಸಂಪುಟಗಳಲ್ಲಿ ಅಚ್ಚಳಿಯದೆ ಉಳಿದಿರುವ ಗಂಡುಜಿಲ್ಲೆ ಚಿತ್ರದುರ್ಗ ಜಿಲ್ಲೆ. ಮದಕರಿ ನಾಯಕನಂತಹ ಗಂಡುಗಲಿ, ಓಬವ್ವೆಯಂತಹ ಕೆಚ್ಚೆದೆಯ ರಮಣಿ, ಭೈರವಿ ವೆಂಕಟಸುಬ್ಬಯ್ಯನಂತಹ ಗಾನ ಯೋಗಿ ಮುಂತಾದ ಸಾರ್ಥಕ ಪುತ್ರ ಪುತ್ರಿಯರನ್ನಿತ್ತ ಈ ಜಿಲ್ಲೆಯು ಪೌರಾಣಿಕವಾಗಿಯೂ ಪ್ರಸಿದ್ಧಿ ಪಡೆದಿರ ವುದು ಗಮನಾರ್ಹವಾದುದು. ಚಿತ್ರದುರ್ಗ ಜಿಲ್ಲೆಯಲ್ಲಿಯೇ ಭೀಮಸೇನ ಹಿಡಿಂಬಾಸುರರನ್ನು ಸಂಹರಿಸಿ ಹಿಡಿಂಬೆ ಯನ್ನು ಪಾಣಿಗ್ರಹಣ ಮಾಡಿಕೊಂಡನೆಂಬ ವಿಚಾರ, ದಶಕಂಠನು ಸೀತಾಮಾತೆಯನ್ನು ಅಪಹರಿಸುವಾಗ ದಿಟ್ಟ ತನದ ಹೋರಾಟ ನಡೆಸಿ ಅಸುನೀಗಿದ ಜಟಾಯುವಿದ್ದದ್ದು ಇಲ್ಲಿನ ಜಟಂಗಿರಾಮೇಶ್ವರದಲ್ಲಿ ಎಂಬ ವಿಚಾರ ಇವೆಲ್ಲವೂ ಈ ಜಿಲ್ಲೆಯ ಮಹತ್ವವನ್ನು ಸಾರಿ ಹೇಳುತ್ತವೆ. ಈ ಜಿಲ್ಲೆಯು ಸಹಸ್ರ ಸಹಸ್ರ ವರ್ಷಗಳಿಂದಲೂ ತನ್ನ ರತ್ನಗರ್ಭ ದಿಂದ ಬಹುಮುಖವಾಗಿ ಅನರ್ಘ್ಯ ರತ್ನಗಳನ್ನು ಕರ್ನಾಟಕಕ್ಕೆ ಕೊಡುಗೆಯಾಗಿ ಕೊಡುತ್ತ ಬಂದಿದೆ.ಇಷ್ಟು ಮಾತ್ರ ವಲ್ಲ, ಕರ್ನಾಟಕದ ಮೂಲೆ ಮೂಲೆಗಳಲ್ಲಿ ಅಡಗಿದ್ದ ರತ್ನಗಳನ್ನೂ ತನ್ನೆಡೆಗೆ ಸೆಳೆದುತಂದು ಅವುಗಳ ಪ್ರಭೆ ನಾಡಿಗೆ ದೊರಕುವಂತೆ ಮಾಡಿದೆ. ಅಂತಹ ಒಂದು ಅನರ್ಘ್ಯ ರತ್ನಗಳಲ್ಲಿ ಶ್ರೀ ರಾಘವೇಂದ್ರಸ್ವಾಮೀಜಿಯವರೂ ಒಬ್ಬರು.

ಶ್ರೀ ರಾಘವೇಂದ್ರ ಸ್ವಾಮೀಜಿಯವರು ಈ ಶತಮಾನದ ಒಬ್ಬ ಪವಾಡ ಪುರುಷ ಎಂಬುದರಲ್ಲಿ ಸಂದೇಹ ವಿಲ್ಲ. ಆದರೆ ಇವರ ಪವಾಡ ಅಂಗೈಯಲ್ಲಿ ಬೂದಿ ತರುವುದಲ್ಲ, ಚಿತ್ರಗಳನ್ನು ಸೃಷ್ಟಿಸಿ ಮರುಳು ಮಾಡುವುದಲ್ಲ, ಫೋಟೋಗಳಲ್ಲಿ ಬೂದಿ ಸುರಿಸುವುದಲ್ಲ, ಮಣ್ಣನ್ನು ಮಂಡಕ್ಕಿ ಮಾಡುವುದಲ್ಲ; ಅಥವಾ ಇವರ ಸನ್ಯಾಸ ಬರಿಯ ಮೂಗು ಹಿಡಿದು ಮೂಲೆಯಲ್ಲಿ ಕೂರುವುದಲ್ಲ, ಗಡ್ಡ ಬೆಳಸಿ ನೀವಿಕೊಳ್ಳುವುದಲ್ಲ, ಅಡ್ಡಪಲ್ಲಕ್ಕಿಯಲ್ಲಿ ಕುಳಿತು ಉತ್ಸವ ಮಾಡಿಸಿಕೊಳ್ಳುವುದಲ್ಲ, ಭಂಗಾರದ ನಿಲುವಾಭರಣಕ್ಕೆ ದೇಹವನ್ನು ಜೋಲು ಬೀಳಿಸುವುದಲ್ಲ. ಹಾಗಾ ದರೆ ಈ ಸನ್ಯಾಸಿಯ ಪವಾಡ ಎಂಥಾದ್ದು ? ಇವರ ಸನ್ಯಾಸ ಎಂಥಾದ್ದು ? ಈ ಪ್ರಶ್ನೆಗಳಿಗೆ ಉತ್ತರ ಮಲ್ಲಾಡಿ ಹಳ್ಳಿಗೆ ಹೋಗಿ ನೋಡಿದವರಿಗೆ ಮಾತ್ರ ದೊರಕುತ್ತದೆ.

ಮಲ್ಲಾಡಿಹಳ್ಳಿ ಕರ್ನಾಟಕ ರಾಜ್ಯದ ಒಂದು ಪ್ರಮುಖ ಹಳ್ಳಿ, ಈಗ ಮಾತ್ರ. ಆದರೆ ಈಗ ಮೂರು ದಶಕಗಳ ಹಿಂದೆ ಅದೊಂದು ಕುಗ್ರಾಮ.ಸುತ್ತಲೂ ಗುಡ್ಡಗಾಡು, ಅವುಗಳ ಮಧ್ಯೆ ಏಕೈಕವಾಗಿ ನಿಂತಿದ್ದ ಹತ್ತಾರು ಮನೆಗಳ ಅತಂತ್ರ ಹಳ್ಳಿ. ಸಾಮ್ರಾಜ್ಯಶಾಹೀ ಬ್ರಿಟಿಷರ ಕಪಿಮುಷ್ಠಿಗೆ ಸಿಕ್ಕಿ ನಿರಕ್ಷರತೆ, ಅಜ್ಞಾನದ ಅಂಧಕಾರ ದಲ್ಲಿ ತೊಳಲಾಡುತ್ತಿದ್ದ ಲಕ್ಷಾಂತರ ಹಳ್ಳಿಗಳಲ್ಲಿ ಅದೂ ಒಂದು. ಆ ಹಳ್ಳಿಯ ಹೆಸರಿನಲ್ಲಿ ಅಡಗಿದ್ದ ಮಹತ್ವದ ಇತಿ ಹಾಸವನ್ನು ಆ ಹಳ್ಳಿಯವರೇ ತಿಳಿಯದಿರುವಂತಹ ಮುಗ್ಧತೆಯ ಕಾಲ. ಆದರೆ ಆ ನೆಲದ ಮಹಿಮೆಯೇ ಇರಬೇಕು ಈ ಸ್ವಾಮೀಜಿಯವರನ್ನು ಸೆಳೆದು ತಂದುದು. ಆ ನೆಲ ಸಾಮಾನ್ಯವಲ್ಲ, 'ಮಲ್ಲನು ಆಡಿದ ಹಳ್ಳಿ'. ಪಾಂಡವ ಮಲ್ಲರಲ್ಲಿ ಮಹಾಮಲ್ಲ ಭೀಮಸೇನ, ವಾಯುಪುತ್ರ ಅಂಧಸಮಾಜದಲ್ಲಿನ ದ್ವೇಷಾಸೂಯೆಗಳ ಕಹಿ ಫಲ ಅವನಿಗೂ

ಆಗದಿರಲಿಲ್ಲ. ವನವಾಸ ಒದಗಿ ಬಂತು. ವನವಾಸವಲ್ಲಿಯೂ ತನ್ನ ನಿತ್ಯ ಕರ್ಮಗಳನ್ನು ಮಾತ್ರ ಬಿಡಲಿಲ್ಲ. ಅವನ ವ್ಯಾಯಾಮ ಸಾಧನೆಗೆ ಏಕಾಂತ ಸ್ಥಳ ಅವನಿಗೆ ಬೇಕಿತ್ತು. ಆಗ ಅವನು ಆರಿಸಿಕೊಂಡದ್ದೇ ಈಗಿನ ಮಲ್ಲಾಡಿಹಳ್ಳಿ ಹೆಸರನ್ನು ಹೊತ್ತಿರುವ ಗಂಡುತಾಣವನ್ನು. ಇಲ್ಲಿ ವಾಯುಪುತ್ರ ಓಡಿದ, ಆಡಿದ, ಗುಡುಗಿದ. ಆ ಮಲ್ಲ ಆಡಿದ ಹಳ್ಳಿಯ ನೆಲ—ನೆಲವಲ್ಲಿ ಆ ವಜ್ರದೇಹಿಯ ಬೆವರಿನ ಹಸಿ ಬೆರೆಯಿತು. ಭೀಮ ಇಲ್ಲಿದ್ದನು ಎಂಬುದಕ್ಕೆ ಪೋಷಕವಾಗಿ ಈ ಹಳ್ಳಿಯ ಸುತ್ತಲೂ ಇರುವ ಬೂದಿಹಾಳು, ದೊಗ್ಗನಾಳು, ದುಮ್ಮಿ ಮುಂತಾದ ಗ್ರಾಮಗಳೇ ಸಾಕ್ಷಿ. ಕಾಡನ್ನೇ ನಾಡನ್ನಾಗಿ ಮಾಡಿಕೊಂಡು,ಪರ್ಣಕುಟಿಯನ್ನೇ ಅರಮನೆಯನ್ನಾಗಿ ಮಾಡಿಕೊಂಡು ಪೂಜೆ-ಪುರಸ್ಕಾರಗಳನ್ನು ಎಡೆ ಬಿಡದೆ ಮಾಡುತ್ತಿದ್ದ ಧರ್ಮರಾಯನ ಹೋಮಧೂಮಗಳಿಂದ ಸುತ್ತಲಿನ ಪ್ರದೇಶಗಳಲ್ಲಿ ಬೂದಿ ಬೆಟ್ಟದಂತೆ ಬಿದ್ದಿತಂತೆ, ಧೂಮ ವ್ಯೋಮವನ್ನು ಆವರಿಸಿತಂತೆ. ಆ ಸ್ಥಳಗಳೇ ಬೂದೀಹಳ್ಳಿ, ಧೂಮದ ಹಳ್ಳಿಯೆನಿಸಿ ಕ್ರಮೇಣ ಬೂದಿಹಾಳ, ದುಮ್ಮಿಯಾಗಿ ಅಪಭ್ರಂಶಗೊಂಡವು. ನಕುಲ-ಸಹದೇವರ ಕಸುಬು ಪಶುಪಾಲನೆ. ಅವರು ಇದ್ದ ಸ್ಥಳವೆಲ್ಲಾ ದುಗ್ಧಮಯವಾಯಿತಂತೆ. ಅದೇ ದೊಗ್ಗನಾಳು ಆಯಿತು.

ಇಂತಹ ಅದ್ಭುತ, ಪವಿತ್ರ ಹಿನ್ನೆಲೆಯನ್ನು ಹೊಂದಿದ ಮಲ್ಲಾಡಿಹಳ್ಳಿ ರಾಘವೇಂದ್ರರಂತಹ ಕಿತ್ತಡಿಯನ್ನು ಆಕರ್ಷಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಸುಮಾರು ಐದೂವರೆ ಅಡಿ ಎತ್ತರದ, ಬರಿಯ ಕೌಪೀನ ಧರಿಸಿದ, ಎಡ ಭುಜದ ಮೇಲೆ ಕಂಬಳಿಯನ್ನಿಳಿಟ್ಟು ಬಲಗೈಯಲ್ಲಿ ಕೋಲು ಹಿಡಿದ, ಗಂಭೀರವಾಗಿ ನಡೆದು ಬಂದ ಈ ಬೈರಾಗಿಯನ್ನು ನೋಡಿದ ಅಂದಿನ ಜನತೆ ಬೆರಗಾದ್ದುಂಟು. ಸಂಶಯಪಟ್ಟದ್ದೂ ಉಂಟು. ಮೀಸೆ ದಾಡಿಗಳಿಲ್ಲದ ಆ ದಿವ್ಯ ಮುಖದಲ್ಲಿನ ತೇಜಸ್ಸು, ದಷ್ಟಪುಷ್ಟವಾದ ದೇಹವನ್ನು ಹೊಂದಿದ್ದ ಆ ವ್ಯಕ್ತಿ ನಲವತ್ತರ ಹರೆಯದವನಾಗಿದ್ದರೂ ಇಪ್ಪತ್ತರ ತರುಣನಂತೆ ಕಾಣುತ್ತಿದ್ದುದು ಹಲವರನ್ನು ಆಕರ್ಷಿಸಿದ್ದೂ ಉಂಟು. ಆಗ ಈ ಗೊರವನನ್ನು ನಂಬಿದವರು-ನಂಬದವರು ಎಲ್ಲರ ಹೃದಯದಲ್ಲೂ ಮೂಡಿದ್ದ ಪ್ರಶ್ನೆ ಒಂದೇ–'ಯಾರಿವನು ? !' ಎಂಬುದು.

ನೀವು ಯಾರು ? ಎಲ್ಲಿಯವರು ? ಏನು ಕೆಲಸ ನಿಮ್ಮದು ? ಎಂದು ಕೇಳಿದವರಿಗೆ ಸ್ವಾಮಿಜಿಯವರು ನೀಡುವ ಉತ್ತರ 'ನಾನು ಭಾರತದವನು, ನನ್ನ ಹುಟ್ಟೂರು ತಾಯಿ ಗರ್ಭ, ನನ್ನ ಕೆಲಸ ಸೇವೆ' ಈ ಉತ್ತರದಲ್ಲಿ ಸ್ವಾಮಿಜಿಯವರ ದೇಶಪ್ರೇಮ, ಮಾತೃಪ್ರೇಮ, ಸಮಾಜ ಸೇವಾಭಾವ ಇವೆಲ್ಲವೂ ವ್ಯಕ್ತವಾಗಿ ಅದರ ಉದಾತ್ತ ವ್ಯಕ್ತಿತ್ವವನ್ನು ಪ್ರತಿಬಿಂಬಿಸಿದರೂ ಅವರ ಪೂರ್ವೋತ್ತರಗಳನ್ನು ತಿಳಿಯಬಯಸುವವರಿಗೆ ಸಮಾಧಾನವಾಗಲಾರದು. ಅಂತೆಯೇ ಸ್ವಾಮಿಜಿಯವರ ಜೀವನ ಚರಿತ್ರೆಯನ್ನು ಅವಲೋಕಿಸಲು ಶ್ರಮವಹಿಸುವವರಿಗೆ ಕೆಲವು ವಿಶಿಷ್ಟ ಸಂಗತಿಗಳು ದೊರಕುತ್ತವೆ.

19ನೇ ಶತಮಾನದ ಅಂತ್ಯದ ಸುಮಾರಿನಲ್ಲಿ ಅಂದರೆ 1890ರ ಹೊತ್ತಿಗೆ ರಾಘವೇಂದ್ರರು ಹುಟ್ಟಿದ್ದು ಕೇರಳ ರಾಜ್ಯದ ಯಾವುದೋ ಊರಿನ ನಂಬೂದರೀ ಬ್ರಾಹ್ಮಣ ಮನೆತನದಲ್ಲಿ. ತಾಯ್ತಂದೆಯರ ಕಾರಣಾಂತರದಿಂದ ಕೊಲ್ಲೂರಿನ ಕಡೆ ಪ್ರಯಾಣಿಸುತ್ತಿದ್ದಾಗ ರಾಘವೇಂದ್ರರ ತಾಯಿ ರಾಜಯಕ್ಷ್ಮ ರೋಗದಿಂದ ಸ್ವರ್ಗಸ್ಥರಾದಾಗ ಮಗು ಸೇರಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಮಹಾತಾಯಿಯೊಬ್ಬಳ ಮಡಿಲನ್ನು. ಬಾರಕೂರಿನ ಆ ಸಾಕು ತಾಯಿ ರಾಘವೇಂದ್ರರನ್ನು ಅನನ್ಯ ವಾತ್ಸಲ್ಯದಿಂದ ಸಾಕಿ ಬೆಳೆಸಿದರು. ರಾಘವೇಂದ್ರರ ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು ಇವರೆಲ್ಲರ ವಿಷಯ ಅಸ್ಪಷ್ಟ.

ರಾಘವೇಂದ್ರರ ಈಗಿನ ವಜ್ರದೇಹವನ್ನು ಕಂಡರೆ ಬಾಲ್ಯದಲ್ಲಿ ಹೇಗಿದ್ದಿರಬೇಕು ಎಂದು ನಮ್ಮನೇ ಆದ ಕಲ್ಪನೆ ಮಾಡುವುದು ಸಹಜ. ಆದರೆ ನಿಜಕ್ಕೂ ಆ ಕಲ್ಪನೆ ಸುಳ್ಳಾಗುತ್ತದೆ. ಏಕೆಂದರೆ ರಾಘವೇಂದ್ರರು ಬಾಲ್ಯದಲ್ಲಿ ರೋಗದ ಮುದ್ದೆ. ದೇಹ ಎಲುಬಿನ ಗೂಡು! ಜೊತೆಗೆ ಬಾಲಗ್ರಹ ಪೀಡೆ. ಹುಡುಗನು ಹೊಡೆದರೆ ಅಥವಾ ಹೆದರಿಸಿದರೆ ಎಲ್ಲಿ ಪ್ರಾಣ ಬಿಡುತ್ತಾನೋ ಎಂಬ ಭಯ ಮನೆಯವರಿಗೆ. ಏಕೋ ಏನೋ ಹುಡುಗನಿಗೆ ಭವಬಂಧನವನ್ನು ಕಳಚಿಕೊಂಡು ಹೊರಹೊರಡಬೇಕೆಂಬ ಬಯಕೆ. ವಾಯುವನ್ನು ಕಟ್ಟಿ ಹಿಡಿಯುವ ಸಾಹಸದ ಭ್ರಮೆಯಲ್ಲಿ

ತಾಯ್ತಂದೆಯರು ಕೆಲಕಾಲ ಪರದಾಡಿದ್ದೂ ಉಂಟು. ಮಲೆಯಾಳಿ ಪಂಡಿತರ ಔಷಧ, ಹಾದಿ ಬೀದಿಯ ಮಂತ್ರವಾದಿಗಳ ಚಿಕಿತ್ಸೆ, ಕೇರಿ ಕೇರಿಗಳ ದೇವರುಗಳ ಹರಕೆ ಎಲ್ಲವೂ ಅವಿಚ್ಛಿನ್ನವಾಗಿ ನಡೆದವು ಆದರೇನು? ದೇವಧನ್ವಂತ್ರಿಯ ಆಧ್ಯಾತ್ಮಿಕ ಚಿಕಿತ್ಸೆ ರಾಘವೇಂದ್ರರಿಗೆ ಬೇಕಾಗಿದ್ದಾಗ ಇಲ್ಲಿನ ಯಾವ ಧನ್ವಂತ್ರಿ ಎಷ್ಟು ಮದ್ದು ಹೊಯ್ದರೇನು? ರೋಗ ವಾಸಿಯಾಗುವ ಬದಲು ರೋಗದ ಜತೆಗೆ ಮತ್ತಷ್ಟು ರೋಗಗಳು ಬಂದು ಸೇರಿಕೊಂಡವು. ಪ್ರಾಥಮಿಕ ಶಾಲೆಯಿಂದ ಪ್ರೌಢಶಾಲೆಗೆ ಬರುವ ಹೊತ್ತಿಗೆ ಅಂಟಿಕೊಂಡ ಮತ್ತೊಂದು ರೋಗ ಅಪಸ್ಮಾರ. ಅದರೊಂದಿಗೇ ಗೆಳೆಯನಾಗಿ ಬಂದದ್ದು ಹೃದಯ ವೇದನೆ. ಹೀಗೆ ಸಕಲರೋಗಗಳಿಗೆ ಆಗರವಾಗಿಯೇ ರೂಪು ತಾಳಿ ಬಂದ ರಾಘವೇಂದ್ರ ತಾಯಿ ತಂದೆಯರಿಗೆ ಮಾತ್ರ 'ವೀರ ರಾಘವೇಂದ್ರ' ಮತ್ತು ಮುದ್ದಿನ 'ಬಾಬು'. ಈ ಮುದ್ದಿನ ಬಾಬು ರೋಗದ ಮುದ್ದೆಯಾಗಿದ್ದರೂ ಶಾಲೆಯಲ್ಲಿ ವಿದ್ಯಾರ್ಥಿಗಳ ಮೆಚ್ಚಿನ ಸ್ನೇಹಿತ, ಉಪಾಧ್ಯಾಯರ ನೆಚ್ಚಿನ ಶಿಷ್ಯ. ಬಡಕಲು ಶರೀರದ ಬಾಬುವಿಗೆ ಶಾರೀರ ಮಾತ್ರ ಸೊಗಸಾಗಿತ್ತು. ಬಾಬು ತನ್ನ ಮನಮೋಹಕ ಕಂಠಶ್ರೀಯಿಂದ ಎಲ್ಲರ ಮನವನ್ನು ಸೆಳೆದುದಲ್ಲದೆ ಯಕ್ಷಗಾನ ಪ್ರಸಂಗಗಳು ಮತ್ತು ನಾಟಕಗಳಲ್ಲಿ ಹೆಣ್ಣು ಪಾತ್ರ ಅಭಿನಯಿಸಿ ಹೆಸರು ಪಡೆದಿದ್ದರು.

ಬಾಬುವಿನ ಜೀವನಕ್ಕೆ ಸನ್ಮಾರ್ಗ ಸೂಚಿಯಾಗಿ ಬಂದವರು ಶ್ರೀ ನಿತ್ಯಾನಂದ ಸ್ವಾಮಿಜಿಯವರು. ಅವರು ಬಾಬುವಿನ ಪಾಲಿಗೆ ಶ್ರೀ ರಾಮಕೃಷ್ಣ ಪರಮಹಂಸರಂತೆ ಬಂದವರು. ಅವರ ಪಾಲಿಗೆ ಬಾಬು ಸ್ವಾಮಿ ವಿವೇಕಾನಂದರು. ವಿವೇಕಾನಂದರ ವ್ಯಕ್ತಿತ್ವವನ್ನೇ ಹೊಂದಿದ್ದ ರಾಘವೇಂದ್ರರು 'ದೇವರೆಲ್ಲಿ ?' ಎಂಬ ಪ್ರಶ್ನೆಯನ್ನು ಗುರುವಿಗೆ ಹಾಕಿದಾಗ ನಿತ್ಯಾನಂದರು ನಗುತ್ತ ತಮ್ಮ ಹಸ್ತವನ್ನು ರಾಘವೇಂದ್ರರ ಮಸ್ತಕದ ಮೇಲಿಡುತ್ತಾರೆ. ಕೂಡಲೇ ಬಾಬುವಿಗೆ ಇಹಲೋಕದ ಪ್ರಜ್ಞೆ ಹಾರಿ ಹೋಯಿತು. ಆ ಸುಪ್ತಾವಸ್ಥೆಯಲ್ಲಿ ಅವರು ಕಂಡ ದೃಶ್ಯಗಳು, ಪಡೆದ ಅನುಭವಗಳು ಎಷ್ಟು ಬಗೆಯವೋ, ಎಂಥ ಬಗೆಯವೋ! ಅವರಿಗೆ ಪ್ರಜ್ಞೆ ಮರಳಿದಾಗ ಮಧ್ಯರಾತ್ರಿ ಮೂರೂವರೆ ಗಂಟೆಯ ಸಮಯ. ಸಿದ್ಧಾರ್ಥನಿಗೆ ಬೋಧಿ ವೃಕ್ಷದ ಕೆಳಗೆ ಜ್ಞಾನೋದಯವಾದಾಗ ಅವನಿಗಾದ ಅನುಭವದಂತೆಯೇ ರಾಘವೇಂದ್ರರಿಗೂ ಆಗಿತ್ತು. ಜಗತ್ತೇ ಹೊಸತಾಗಿ, ಸರ್ವವೂ ಶಿವಮಯವಾಗಿ ಕಾಣ ತೊಡಗಿತು. ದಿವ್ಯ ಜ್ಞಾನವನ್ನಿತ್ತ ಗುರು ಎಲ್ಲಿಯೂ ಕಾಣಲಿಲ್ಲ. ಅಂದಿನಿಂದ ರಾಘವೇಂದ್ರರ ಜೀವನದ ಗತಿಯೇ ಬದಲಾಯಿಸಿತು. ತಮಗೆ ಜ್ಞಾನೋದಯವಾದ ಸಮಯ ಮೂರೂವರೇ ಗಂಟೆಗೇ ಅವರು ನಿತ್ಯವೂ ಏಳತೊಡಗಿದರು. ಆದರೆ ಎದ್ದು ಏನು ಮಾಡಬೇಕು ? ಊರ ಹೊರಗಿನ ಪಾಳುಗುಡಿ, ಮುರುಕು ಮಂಟಪ, ಅರಣ್ಯದ ಮರದ ಟೊಂಗೆಗಳು, ಅವರ ಜೊತೆಗೆ ಬೆರೆತವು, ಶಾಂತಿ ಪೀಯೂಷವನ್ನೊದಗಿಸಿದವು. ದೈಹಿಕವಾಗಿ, ಮಾನಸಿಕವಾಗಿ ರೋಗಿಯಾಗಿದ್ದ ಅವರಿಗೆ ಭವರೋಗವೈದ್ಯನ ಚಿಂತನೆ ಹೆಚ್ಚಾಗುತ್ತ ಹೋಯಿತು. ಆದರೂ ಶ್ರೀ ಗುರುವಿನ ದಿವ್ಯ ಹಸ್ತದ ಸ್ಪರ್ಶದಿಂದುಂಟಾದ ಬ್ರಹ್ಮಾನಂದ ಇವುಗಳಾವುದರಿಂದಲೂ ಆಗುತ್ತಿರಲಿಲ್ಲ. ಆ ಗುರುವಿನ ಪುನರ್ ಸಂದರ್ಶನಕ್ಕಾಗಿ ಹಾತೊರೆದರು, ಹಂಬಲಿಸಿದರು, ಅಲೆದಾಡಿದರು. ಆದರೂ ಗುರುವಿನ ಸುಳಿವು ಹತ್ತಲಿಲ್ಲ. ರಾಘವೇಂದ್ರರಿಗನ್ನಿಸಿತು—ತಾನು, ತನ್ನವರು, ತನ್ನದು ಎಂಬ ವ್ಯಾಮೋಹವನ್ನು ಕಿತ್ತೊಗೆಯದೆಯೇ ಗುರು ಲಭಿಸುವುದಿಲ್ಲವೆಂದು. ಬುದ್ಧನ ಮಾರ್ಗವೇ ಅವರದಾಯಿತು. "ಜಗವೆಲ್ಲ ಮಲಗಿರಲು ಇವನೊಬ್ಬನೆದ್ದ, ಮನೆ ಮಾರು, ರಾಜ್ಯ—ಗೀಜ್ಯ, ಹೊತ್ತಿರುವ ಉರಿಯಲ್ಲಿ ಆಯಿತಾಜ್ಯ"—ಈ ಮಾತು ರಾಘವೇಂದ್ರರ ಪಾಲಿಗೂ ಸತ್ಯವಾಯಿತು. "ತಂದೆಯೇ ನೀವು ನನ್ನನ್ನು ಡಾಕ್ಟರರನ್ನಾಗಿ ಮಾಡಬೇಕೆಂದು ಓದಲು ಕಳಿಸಿದಿರಿ, ಆದರೆ ನನಗೆ ಓದುವ ಇಚ್ಛೆ ಇಲ್ಲ. ನಾನೀಗ ನನ್ನ ಅಂತರಾತ್ಮನ ಪ್ರೇರಣೆಯಂತೆ ದೇವರನ್ನರಸಿಕೊಂಡು ಹೊರಟಿದ್ದೇನೆ. ಆದ್ದರಿಂದ ನೀವೀಗ ನನ್ನನ್ನು ಇಲ್ಲಿ ಹುಡುಕುವ ಗೊಡವೆಗೆ ಹೋಗಬೇಡಿ. ನನಗೆ ಶ್ರೀ ಗುರುವಿನ ರಕ್ಷೆಯಿರುವುದರಿಂದ ನನ್ನ ವಿಷಯದಲ್ಲಿ ನೀವು ಭಯಪಡಬೇಡಿ" ಎಂದು ರಾಘವೇಂದ್ರರು ವಯಸ್ಸಿಗೆ ಮೀರಿದ ತಾತ್ವಿಕ ಪತ್ರ ಬರೆದು ಅಂಚೆಗೆ ಹಾಕಿ ನಡೆದೇಬಿಟ್ಟರು. ಪುರಂದರ ದಾಸರು ತಮ್ಮ ಭವ್ಯ ಭವನದಿಂದ ಹೊರಬಂದು ತುಳಸೀದಳವನ್ನು ಕೈಲಿ ಹಿಡಿದು 'ಕೃಷ್ಣಾರ್ಪಣ ಮಸ್ತು'

ಎಂದು ನವಕೋಟಿ ಸಂಪತ್ತು ತುಂಬಿದ ಮನೆಯ ಮೇಲೆ ಒಗೆದು ಜೋಳಿಗೆ ಹಿಡಿದು ತಿರುಗಿ ನೋಡದೆ ಹೊರಟು ಹೋದಂತೆಯೇ ಈ 'ಪರಮೇಶ ದಾಸ'ರೂ ಜೋಳಿಗೆ ಹಿಡಿದು ಆಧ್ಯಾತ್ಮಿಕ ಭಿಕ್ಷೆ ಬೇಡುತ್ತ ಹೊರಟೇ ಬಿಟ್ಟರು. ವಿಶೇಷವೆಂದರೆ ರಾಘವೇಂದ್ರರು ಹುಟ್ಟಿದ್ದು ಯುಗಾದಿಯ ಹಿಂದಿನ ಅಥವಾ ಮುಂದಿನ ದಿನ; ವೈರಾಗ್ಯ ತಾಳಿ ಮನೆಯಿಂದ ಹೊರಬಿದ್ದದ್ದು ಯುಗಾದಿಯ ದಿನ. ನಿಮಿತ್ತ ಮಾತ್ರವಾಗಿ ರಾಘವೇಂದ್ರರನ್ನು ಹೆತ್ತ ತಾಯ್ತಂದೆ ಯರಿಗೆ, ಸಾಕು ತಾಯ್ತಂದೆಯರಿಗೆ ಆ ಹಬ್ಬದ ದಿನ ಗೋಳಿನ ದಿನವಾದರೆ ರಾಘವೇಂದ್ರರ ಪಾಲಿಗೆ ಆ ದಿನ ಅವರ ಬಾಳಿನ ಯುಗಾದಿಗೆ ನಾಂದಿಯಾದ ಶುಭ ದಿನವಾಯಿತು.

ಇಲ್ಲಿಂದ ಮುಂದಿನ ರಾಘವೇಂದ್ರರ ಬಾಳಿನ ವೀರಗಾಥೆಯನ್ನು ಚಿತ್ರಿಸಲು ಸಹಸ್ರ ಪುಟಗಳಾದರೂ ಸಾಲದು–ಅಥವಾ ಆ ಭವ್ಯ ಬಾಳಿನ ಸಾಹಸಮಯ ಇತಿಹಾಸವನ್ನು ಹೊಕ್ಕು ನೋಡುವಂತಹ ಅಂಜನಾಸುತನ ಶಕ್ತಿ ನನ್ನಲ್ಲಿಲ್ಲ. ಸಂಕ್ಷಿಪ್ತವಾಗಿ ತಿಳಿದುಬಂದ ವಿಷಯವನ್ನು ಹೇಳುವುದಾದರೆ ರಾಘವೇಂದ್ರರು ಸಂದರ್ಶಿಸಿದ ಗುರುವೃಂದ ಅಸಂಖ್ಯಾತ. ಹುಬ್ಬಳ್ಳಿಯ ಶ್ರೀ ಸಿದ್ಧಾರೂಢಸ್ವಾಮಿಗಳು ರಾಘವೇಂದ್ರರ ಪ್ರಥಮ ದರ್ಶನ. ಪ್ರಯಾಸದಿಂದ ಸ್ವಾಮಿಗಳನ್ನು ಕಂಡು ರಾಘವೇಂದ್ರರು ಹಾಕಿದ ಪ್ರಥಮ ಪ್ರಶ್ನೆ "ದೇವರೆಲ್ಲಿ ?" ಎಂಬುದು. ಸ್ವಲ್ಪ ಕೋಪಗೊಂಡು ಸ್ವಾಮಿಯವರು "ಪುರಾಣಪುಣ್ಯಕತೆ ನಡೆಯುತ್ತವೆ, ಕೇಳು ಹೋಗು" ಎಂದು ಆಜ್ಞಾಪಿಸಿ ದರೆ "ಈ ತರ್ಕ ಈ ಶಾಸ್ತ್ರಗಳಲ್ಲೆಲ್ಲಾ ದೇವರು ಸಿಕ್ಕುತ್ತಾನೇನು ?" ಎಂಬ ದಿಟ್ಟತನದ ಪ್ರಶ್ನೆ ರಾಘವೇಂದ್ರರಿಂದ. ಅವರ ಪ್ರಶ್ನೆಯಿಂದ ಮೂಕವಿಸ್ಮಿತರಾದ ಸ್ವಾಮಿಜಿಯವರು ಈ ರಾಘವೇಂದ್ರನ ವ್ಯಕ್ತಿತ್ವ ಅಸಾಮಾನ್ಯ ವಾದುದು ಎಂದರಿತು "ನಿನಗೆ ನಾನು ಗುರುವಲ್ಲ, ಬೇರೆ ಗುರು ಇದ್ದಾನೆ ಹೋಗು" ಎಂದು ಆಜ್ಞಾಪಿಸಿದಾಗ ಮತ್ತೆ ಮುನ್ನಡೆದ ರಾಘವೇಂದ್ರರಿಗೆ ಅಸಂಖ್ಯಾತ ಸನ್ಯಾಸಿಗಳ ಸಂಪರ್ಕ. ಅವರಲ್ಲಿ ಮಾರ್ಜಾಲ ಸನ್ಯಾಸಿಗಳು, ಅರ್ಜುನ ಸನ್ಯಾಸಿಗಳು ಅಗಣಿತ ಎಂದು ಬೇರೆ ಹೇಳಬೇಕಾಗಿಲ್ಲ. ನಿಷ್ಕಲ್ಮಷ ಹೃದಯದ ರಾಘವೇಂದ್ರರಿಗೆ ಅವರೆಲ್ಲರ ದರ್ಶನವಾಯಿತು, ಅವರೆಲ್ಲರ ಉದರವೈರಾಗ್ಯ ಅಸಹ್ಯವುಂಟುಮಾಡಿತು. ಸನ್ಯಾಸಿಗಳೆಂದು ಕಂಡ ಕಂಡ ವರ ಕಾಲಿಗೆ ಬಿದ್ದಾಯಿತು. ಗೋಸಾಯಿಗಳ ಜೊತೆಗೆ ಅಲೆದಾಯಿತು. ಆಶ್ರಮ, ಮಠ, ಗುರುಪೀಠಗಳಲ್ಲಿನ ಹೊಲಸನ್ನು ಮೂಸಿಯಾಯಿತು. ಎಲ್ಲದರಿಂದ ನಿರಾಸೆಗೊಂಡ ರಾಘವೇಂದ್ರರು ನಾಟಕದ ಕಂಪನಿಗೆ ಕಾಲಿಟ್ಟ ದ್ದಾಯಿತು. ಅಪಸ್ಮಾರದ ಬಾಧೆ ಹೆಚ್ಚಾಗಿ ಧೂಳಿನಲ್ಲಿ ಬಿದ್ದು ಹೊರಳಿಯಾಯಿತು. ನಾಟಕದ ರಂಗಮಂದಿರ ದಲ್ಲೇ ಕುಸಿದುಬಿದ್ದು ಕಂಪನಿಯಿಂದ ಹೊರಬಂದಾಯಿತು. ವಿಧಿ ನಡೆಸಿದ ಸಂಚು ವರವೇ ಆಯಿತು.

'ಕಲಿಯುಗದ ಭೀಮ'ನೆಂದು ಖ್ಯಾತಿ ಪಡೆದಿದ್ದ ನಿಜಗುರು ಪಳನೀ ಸ್ವಾಮಿಜಿಯವರ ದರ್ಶನಲಾಭ ವಾಯಿತು. ಪಳನೀ ಸ್ವಾಮಿಜಿಯವರಿಂದ ರಾಘವೇಂದ್ರರಿಗೆ ಯೋಗಾಭ್ಯಾಸದ ತರಬೇತಿ ದೊರೆಯಿತು. ಅವರು ಕಲಿಸಿದ ಯೋಗ ಸಂಜೀವಿನಿಯಾಯಿತು. ರಾಘವೇಂದ್ರರ ದೇಹ ಬಲಿತು ಬಲಿಷ್ಠವಾಯಿತು, ಶಕ್ತಿ ವೃದ್ಧಿ ಯಾಯಿತು, ರೋಗ ಮಾಯವಾಗತೊಡಗಿತು. ಅನಂತರ ರಾಘವೇಂದ್ರರು ಪೂನಾದ ಸ್ವಾಮಿ ಶಿವಾನಂದ ತೀರ್ಥರ ಮಡಿಲಿನ ಮಗುವಾದರು. ಅಲ್ಲಿ ಯೋಗಾಭ್ಯಾಸ ಮುಂದುವರೆಸಿದರು. ಸ್ವಾಮಿಜಿಯವರ ದೃಷ್ಟಿಗೆ 'ಕರ್ನಾಟಕಿ'ಯಾದರು. ದೇಶಸೇವೆ ಮಾಡಿದರೆ ದೇವರು ಕಾಣುತ್ತಾನೆ ಎಂಬ ಸ್ವಾಮಿ ಶಿವಾನಂದರ ಮಾತು ರಾಘವೇಂದ್ರರ ಹೃದಯದಲ್ಲಿ ರಾಷ್ಟ್ರಾಭಿಮಾನದ ಬೀಜವನ್ನು ಬಿತ್ತಿತು. ಆ ಬೀಜ ಬೆಳೆಯಿತು. ಬೆಳೆದು ಹೆಮ್ಮರವಾಯಿತು. ಅನಂತರ ಬರೋಡಾದ ಶ್ರೀ ರಾಜರತ್ನ ಪ್ರೊ. ಮಾಣಿಕ್ಯರಾವ್‌ರವರಲ್ಲಿ ರಣವಿದ್ಯೆ ಕರಗತವಾಯಿತು. "ಕೊಲ್ಲುವ ವಿದ್ಯೆ ಕಲಿತಾಯಿತು, ಇನ್ನು ಬದುಕಿಸುವ ವಿದ್ಯೆ ಕಲಿ" ಎಂದು ಮಾಣಿಕ್ಯರಾವ್ ರವರು ಆಜ್ಞಾಪಿಸಿ ಲಾಹೋರಿನ ಬಾಬಾ ಲಕ್ಷ್ಮಣದಾಸರಲ್ಲಿ ರಾಘವೇಂದ್ರರು ಹೋಗಲು ಕೈಮರವಾದರು. ಬಾಬಾರವರಿಂದ ವೈದ್ಯಶಿಕ್ಷಣದಲ್ಲಿ ಪಾಂಡಿತ್ಯ ಪಡೆದನಂತರ ರಾಘವೇಂದ್ರರು ಹೃಷಿಕೇಶದ ಸ್ವಾಮಿ ಶಿವಾನಂದ ಸರಸ್ವತಿಯವರು, ಲೋನಾವಲದ ಕುವಲಯಾನಂದರು, ಮಥುರಾದ ಭಗವಾನಜಿಯವರು, ಪುರಿಯ ಓಂಕಾರ

ನಾಥಜಿಯವರು ಕೇಥಾರದ ಶಾಂತಿನಾಥ ಆನಂದಜೀಯವರು ಮುಂತಾದವರನ್ನು ಸಂದರ್ಶಿಸಿದರು. 'ಸರ್ವರೊಳೊಂದೊಂದು ನುಡಿಗಲಿತು' ವಿದ್ಯೆಯ ಪರ್ವತವೆ ಆದರು.

ಇಷ್ಟೆಲ್ಲ ಪರಿಪೂರ್ಣ ವ್ಯಕ್ತಿತ್ವವನ್ನು ಬೆಳಸಿಕೊಂಡ ರಾಘವೇಂದ್ರರು ಮತ್ತೆ ಕರ್ನಾಟಕಕ್ಕೆ ಕಾಲಿಟ್ಟದ್ದು 1935ರಲ್ಲಿ. 1943ರವರೆಗೆ ನಾಡಿನ ಯುವ-ಯುವತಿಯರಿಗೆ ಯೋಗಾಭ್ಯಾಸ, ರಣವಿದ್ಯೆಯ ತರಬೇತಿ ನೀಡುತ್ತ 5130 ಯುವ ಯುವತಿಯರ ಒಂದು ಪಡೆಯನ್ನೇ ಸಿದ್ಧಗೊಳಿಸಿದ್ದರು. ರಾಘವೇಂದ್ರರ ಹಠಯೋಗ ಪ್ರದರ್ಶನ ನಾಡಿನಾದ್ಯಂತ ಹಳ್ಳಿಹಳ್ಳಿಗಳಿಂದ ತಂಡೋಪತಂಡವಾಗಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಜನರನ್ನು ಸೆಳೆದು ತರುತ್ತಿತ್ತು. ಈ ರೀತಿಯಲ್ಲಿ ಏಳು ವರ್ಷಗಳ ಕಾಲ ಕಿತ್ತಡಿಯಾಗಿ ಸಂಚರಿಸಿದ ರಾಘವೇಂದ್ರರನ್ನು ಮಹಾತ್ಮ ಗಾಂಧೀಜಿಯವರ ಕರೆ ಸೆಳೆಯಿತು. ರಾಜಕೀಯ ಕಣಕ್ಕೆ ರಾಘವೇಂದ್ರರು ತಿಲಾಂಜಲಿಯಿತ್ತರು. ವಿದ್ಯಾವಂತರು ಹಳ್ಳಿಗಳಲ್ಲಿ ಹೋಗಿ ರಚನಾತ್ಮಕ ಕಾರ್ಯವನ್ನೂ ಕೈಗೊಳ್ಳಬೇಕೆಂದು ಗಾಂಧೀಜಿಯವರು ಕರೆಯಿತ್ತಿದ್ದರು. ರಾಘವೇಂದ್ರರು ತಮ್ಮ ರಚನಾತ್ಮಕ ಕಾರ್ಯಕ್ಕೆ ಕ್ಷೇತ್ರವನ್ನರಸುತ್ತ ಹೊರಟು ಬಂದದ್ದು ಮಲ್ಲಾಡಿಹಳ್ಳಿಗೆ.

ಮಲ್ಲಾಡಿಹಳ್ಳಿಯಲ್ಲಿ ಸ್ವಾಮಿಜಿಯವರ ಜೋಳಿಗೆಗೆ ಬಿದ್ದ ಪ್ರಥಮ ಭಿಕ್ಷೆ ಹರಿಜನದಾಸಿ ಸಂಕಮ್ಮನವರದು. ಆ ತಾಯಿಯ ಭಿಕ್ಷೆ ಅಕ್ಷಯವಾಗಿ ಅನಾಥಾಶ್ರಮ ಸ್ಥಾಪನೆಯಾದದ್ದು 1943ನೇ ಇಸವಿಯ ಶಿವರಾತ್ರಿಯ ಶುಭದಿನದಂದು. ಅಲ್ಲಿಂದ ಇಲ್ಲಿಯವರೆಗೆ ಮಲ್ಲಾಡಿಹಳ್ಳಿಯಲ್ಲಿ ನಡೆದಿರುವ ಕಾರ್ಯ ಅನನ್ಯ, ಅದ್ಭುತ.

ಮಲ್ಲಾಡಿಹಳ್ಳಿ ರಾಘವೇಂದ್ರಸ್ವಾಮಿಜಿಯವರ ಪ್ರಥಮ ದರ್ಶನ ನನಗಾದದ್ದು 1948 ಅಥವಾ 49ರ ಸುಮಾರಿನಲ್ಲಿ, ಅಂದರೆ ನಾನು ಹತ್ತು ವರ್ಷದ ಬಾಲಕನಾಗಿದ್ದಾಗ; ನನ್ನ ಹುಟ್ಟೂರಾದ ಚನ್ನಗಿರಿಯ ತಾಲ್ಲೂಕು ಕಛೇರಿಯ ಮುಂಭಾಗದಲ್ಲಿ ಸ್ವಾಮಿಜಿಯವರ ಮತ್ತು ಶಿಷ್ಯ ಸಮೂಹದವರ ಯೋಗಪ್ರದರ್ಶನವೇರ್ಪಟ್ಟಿದ್ದಾಗ, ನಾನು ಅದನ್ನು ಕಂಡು ಮಂತ್ರಮುಗ್ಧನಾಗಿದ್ದೆ. ಅವರ ಆ ಭೀಮಬಲದ ಪ್ರದರ್ಶನ ನನ್ನ ಹೃದಯದಲ್ಲಿ ಅಚ್ಚಳಿಯದೇ ಉಳಿದಿತ್ತು. ಆಶ್ರಮವನ್ನು ಸಂದರ್ಶಿಸಬೇಕೆಂಬ ಬಲುದಿನದ ಬಯಕೆ ಫಲಿಸಿದ್ದು 1963-64ರ ಸುಮಾರಿನಲ್ಲಿ. ಉಪಾಧ್ಯಾಯವೃತ್ತಿ ಕೈಕೊಂಡಿದ್ದ ನಾನು ನನ್ನ ಸಹೋದ್ಯೋಗಿಗಳೊಂದಿಗೆ ಆಶ್ರಮಕ್ಕೆ ಭೇಟಿ ಕೊಟ್ಟಿದ್ದಾಗ ಮಧ್ಯಾಹ್ನ ಹನ್ನೆರಡು ಘಂಟೆಯ ಸಮಯ. ಸ್ವಾಮಿಜಿಯವರು ಕಣದಲ್ಲಿ ಹುಲ್ಲನ್ನು ಎತ್ತಿ ಹಾಕುತ್ತ ಎತ್ತುಗಳೊಂದಿಗೆ, ಒಬ್ಬಿಬ್ಬರು ಕೆಲಸಗಾರರೊಂದಿಗೆ ದುಡಿಯುತ್ತಿದ್ದುದು ನಮಗೆ ಆಶ್ಚರ್ಯವುಂಟು ಮಾಡಿತು. ನಮ್ಮನ್ನು ನೋಡಿದ ಕೂಡಲೇ ಸ್ವಾಮಿಜಿಯವರು ಜಿಂಕೆಯಂತೆ ಓಡಿಬಂದರು. ಆ ನೇಗಿಲ ಯೋಗಿಯ ಬೆವರ ಮೈ ಶೈಲವನ್ನು ಕಂಡ ನಾವು ಮಂತ್ರಮುಗ್ಧರಾದೆವು. ಅವರ ಶ್ರಮಕ್ಕೆ ಸಹಾನುಭೂತಿ ತೋರಬೇಕೆಂಬ ದೊಡ್ಡಸ್ಥಿಕೆಯಿಂದ "ಸ್ವಾಮಿಜಿ ವಿಪರೀತ ಬಿಸಿಲು....ತಾವು ಈ ಬಿಸಿಲಲ್ಲೇ...." ಎನ್ನುತ್ತಿದ್ದ ಹಾಗೆ ಸ್ವಾಮಿಜಿಯವರು "ಹ್ಞಾ...ನನಗೊಬ್ಬನಿಗೆ ಬಿಸಿಲೆ ? ನೋಡಿ ಆ ಬಸವಣ್ಣಗಳು ಬಿಸಿಲಿನಲ್ಲಿ ದುಡಿಯುತ್ತಿಲ್ಲವೆ ? ಎಂದು ಪ್ರಶ್ನಿಸಿ ನಮ್ಮ ಸಣ್ಣತನದ ಅರಿವನ್ನು ನಮಗುಂಟುಮಾಡಿದರು. ನಾವು ಮರುಮಾತಾಡದೆ ಸುಮ್ಮನಾದೆವು. ಸ್ವಾಮಿಜಿಯವರ ಹಿರಿದಾದ ವ್ಯಕ್ತಿತ್ವಕ್ಕೆ ಇದಕ್ಕಿಂತ ಉದಾಹರಣೆ ಬೇಕೆ ?

ಮತ್ತೊಮ್ಮೆ ಸ್ವಾಮಿಜಿಯವರನ್ನು ಭೇಟಿ ಮಾಡಬೇಕಾಗಿ ಬಂದದ್ದು ಶಿವಮೊಗ್ಗೆಯ ಮೆಗ್ಗಾನ್ ಆಸ್ಪತ್ರೆಯಲ್ಲಿ. ಸ್ವಾಮಿಜಿಯವರಿಗೆ ತೀವ್ರ ಕಾಹಿಲೆಯಾಗಿದೆ, ಅವರು ಆಸ್ಪತ್ರೆ ಸೇರಿದ್ದಾರೆ ಎಂಬ ಸುದ್ದಿ ತಿಳಿದು ಬಂದದ್ದು 1966ರಲ್ಲಿ. ನಾನು ನನ್ನ ಸ್ನೇಹಿತರು ಆಸ್ಪತ್ರೆಗೆ ಹೋಗಿ ಸ್ವಾಮಿಜಿಯವರು ವಿಶೇಷ ವಾರ್ಡಿನಲ್ಲಿದ್ದಾರೆಂದು ತಿಳಿದು ಅಲ್ಲಿಗೆ ಧಾವಿಸಿದೆವು. ಸ್ವಾಮಿಜಿಯವರು ಪದ್ಮಾಸನ ಹಾಕಿ ಕಣ್ಣು ಮುಚ್ಚಿಕೊಂಡು ಧ್ಯಾನಿಸುತ್ತ ಕುಳಿತಿದ್ದರು. ಅವರ ರೂಮಿನ ತುಂಬ ಊದುಬತ್ತಿಯ ಕಂಪು ತುಂಬಿತ್ತು. ಸ್ವಲ್ಪ ಹೊತ್ತಿನನಂತರ ಕಣ್ಣು ತೆರೆದ ಸ್ವಾಮಿಜಿಯವರು ನಗುಮೊಗದಿಂದ ಮಾತನಾಡಿದಾಗ "ಸ್ವಾಮಿ ತಮಗೆ ತೀವ್ರ ಕಾಹಿಲೆಯಾಗಿದ್ದರೂ ಧ್ಯಾನದ ಚಿಂತೆಯೆ ?" ಎಂದು ಕೇಳಿದೆವು. ಅವರು ಮುಗುಳ್ನಗುತ್ತ "ಇಲ್ಲ, ಪಕ್ಕದ

ಕೊಠಡಿಯಲ್ಲಿ ಒಂದು ಹೆಣ್ಣು ಮಗು ಹೊಟ್ಟೆನೋವಿನಿಂದ ವಿಪರೀತ ಒದ್ದಾಡುತ್ತಿದೆ. ಇದೀಗ ನೋಡಿಬಂದೆ. ಆ ಮಗುವಿನ ಸಂಕಟ ದೂರ ಮಾಡಲೆಂದು ಪರಮೇಶನನ್ನು ಧ್ಯಾನಿಸುತ್ತ ಕುಳಿತಿದ್ದೆ" ಎಂದು ಉತ್ತರಿಸಿದರು ! ಇಂತಹ ಮಾನವೀಯ ಅನುಕಂಪವುಳ್ಳ, ನಿಸ್ವಾರ್ಥ ವ್ಯಕ್ತಿಗಳು ಈಗಿನ ಕಾಲದಲ್ಲೂ ಇದ್ದಾರಲ್ಲಾ ಎಂದು ಚಿಂತಿಸುತ್ತ ಸ್ವಾಮೀಜಿಯವರಿಂದ ಬೀಳ್ಕೊಂಡೆವು.

ಇಂತಹ ಅಜಾತಶತ್ರುವಿಗೂ ವಿಷಪ್ರಾಶನ ನಡೆದಿತ್ತೆಂದರೆ ಯಾರಿಗೆ ನಂಬಲು ಸಾಧ್ಯ ? ಆದರೆ ಒಂದಲ್ಲ ಎರಡು ಬಾರಿ ಸ್ವಾಮೀಜಿಯವರಿಗೆ ನಂಜುಣಿಸಲಾಗಿತ್ತು ಎಂಬ ವಿಷಯ ಬೇರೆ ಮೂಲಗಳಿಂದ ತಿಳಿದು ಬಂದಿದ್ದ ನನಗೆ ನಂಬಿಕೆ ಬಂದಿರಲಿಲ್ಲ. 1973ರಲ್ಲಿ ಸ್ವಾಮೀಜಿಯವರ ಆಶ್ರಮದಲ್ಲಿ ಎರಡು ದಿನಗಳು ಉಳಿದು ಅವರ ದಿವ್ಯ ಜೀವನದ ವಿಷಯಗಳನ್ನೆಲ್ಲ ಸಂಗ್ರಹಿಸಲು ಪ್ರಯತ್ನಿಸಿದ ನನಗೆ ಸ್ವಾಮೀಜಿಯವರ ಬಾಯಿಂದಲೇ ಆ ವಿಷಯವನ್ನು ಕೇಳಿದಾಗ ಅಚ್ಚರಿಯಾಯಿತು.

ಅದೊಂದು ದಿನ ಮಧ್ಯಾಹ್ನ ....ನಮ್ರ ಸೇವಕನು ಇತ್ತ ಊಟವನ್ನು ಸ್ವಾಮೀಜಿಯವರು ಭುಂಜಿಸಿದರು. ಕೆಲವೇ ಹೊತ್ತಿನಲ್ಲಿ ಸ್ವಾಮೀಜಿಯವರು ಕುಸಿದು ಬಿದ್ದರು. ಮತ್ತೆ ಸ್ವಾಮೀಜಿಯವರಿಗೆ ಎಚ್ಚರವಾದದ್ದು ಎರಡು ದಿನಗಳ ನಂತರ, ಚಿತ್ರದುರ್ಗದ ಆಸ್ಪತ್ರೆಯಲ್ಲಿ. ಆ ವಿಷಪ್ರಾಶನ ಸೇವಕನ ಸ್ವಂತ ಬುದ್ಧಿಯಿಂದಾದುದಲ್ಲ. ಸ್ವಾಮೀಜಿಯವರ ಸಂಸ್ಥೆಯ ಏಳ್ಗೆಯನ್ನು ಕಂಡು ಕರುಬಿ ಅವರನ್ನು ಮೂಲೋತ್ಪಾಟನೆ ಮಾಡಬೇಕೆಂದು ದೊಡ್ಡವರು ಮಾಡಿದ್ದ ಸಣ್ಣ ಕೆಲಸ.

ಮತ್ತೊಮ್ಮೆ ಸೇವಕನು ತಂದಿತ್ತ ಬಿಸಿ ಹಾಲನ್ನು ಹಸುಗೂಸಿನಂತೆ ಕುಡಿದ ಸ್ವಾಮೀಜಿಯವರಿಗೆ ಸ್ವಲ್ಪ ಹೊತ್ತಿನಲ್ಲೇ ಹಿಂದಿನ ಅನುಭವವಾಗತೊಡಗಿದಾಗ ಅವರು ತಮ್ಮ ಯೋಗವಿದ್ಯೆಯ ಸಹಾಯದಿಂದ ಅಂದರೆ 22-23 ಅಡಿ ಉದ್ದದ ಬಟ್ಟೆಯನ್ನು ನುಂಗಿ ವಿಷವನ್ನು ಹೊರತೆಗೆದು ನಂತರದ ಚಿಕಿತ್ಸೆಯನ್ನು ಪಡೆದು ಉಳಿದರು. ವಿಷದ ಲಡ್ಡುಗೆ ತಿಂದರೂ, ವಿಷಸರ್ಪಗಳ ದಂತಕ್ಕೆ ಸಿಲುಕಿದರೂ ಬದುಕಿಬಂದ ಭೀಮನಂತಿದ್ದ ಸ್ವಾಮೀಜಿಯವರ ಭೀಮದೇಹವನ್ನು ಗಾಡಿಯ ಕಣಗೆಗಳಿಂದ ಜಜ್ಜಿಹಾಕಬೇಕೆಂಬ ಪ್ರಯತ್ನವೂ ನಡೆಯದಿರಲಿಲ್ಲ. ಆದರೇನು ? ಯಾವ ದುಷ್ಟ ಶಕ್ತಿಗೂ ಈ ಭೀಮಶಕ್ತಿ ಬಗ್ಗಲಿಲ್ಲ.

ಸ್ವಾಮೀಜಿಯವರ ಪ್ರತಿಕ್ರಿಯೆಯೇನು ಇಂತಹ ವಿಷ ಜೀವಿಗಳ ಬಗ್ಗೆ? ಎಂದು ಕೇಳಿದಾಗ ಅವರಿತ್ತ ಉತ್ತರ ಅವರ ಉನ್ನತ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ—

"ಈ ತಿರುಕ ಕಳ್ಳನಲ್ಲ, ಸುಳ್ಳನಲ್ಲ, ಮನೆ ಮುರುಕನಲ್ಲ, ಸ್ವಾರ್ಥಿಯಲ್ಲ, ದುರಾಚಾರಿಯಲ್ಲ, ರಾಷ್ಟ್ರದ ನಮ್ರ ಸೇವಕನೆಂಬುದು ಮಾತ್ರ ಸತ್ಯ. ಬನ್ನಿ. ದ್ವೇಷಾಸೂಯೆಗಳನ್ನು ಬದಿಗೊತ್ತಿ ನಿರ್ಮಲ ಪ್ರೇಮದಿಂದ ಬನ್ನಿ. ಇಲ್ಲೂ ನಿಮಗೆ ಸ್ಥಾನವಿದೆ. ಆಶ್ರಮವನ್ನೇ ನಿಮ್ಮದಾಗಿಸುವ, ನನ್ನನ್ನು ನಿಮ್ಮ ಅಂಕಿತಕ್ಕೊಳಪಡಿಸುವ ಈ ಸುಲಭಮಾರ್ಗವನ್ನು ಬಿಟ್ಟು ಈ ಅಪಮಾರ್ಗವನ್ನನುಸರಿಸುವಿರೇಕೆ ? ಇದು ಮನುಷ್ಯ ಧರ್ಮವೆ ? ಸಾವು ನೋವುಗಳ ಭಯ ನಾನೆಂದೂ ಕಂಡೇ ಇಲ್ಲ. ಪ್ರತ್ಯಕ್ಷ ಯಮನೇ ಬಂದು ನಿಂತರೂ 'ಅದ್ಯಾಕಪ್ಪಾ ಇಷ್ಟು ತಡ ಮಾಡಿದೆ? ನಾನು ನನ್ನ ಗಂಟುಮೂಟೆಯನ್ನು ಕಟ್ಟಿಕೊಂಡು ಎಂದೋ ನಿನಗಾಗಿಯೇ ಕಾದಿದ್ದೆ' ಎನ್ನುತ್ತೇನೆ"

"ಸ್ವಾಮೀಜಿ....ತಾವು ತುಂಡು ಪಂಚೆಯುಟ್ಟು ಜೋಳಿಗೆ ಹಿಡಿದು ಭಿಕ್ಷೆ ಬೇಡುತ್ತೀರಲ್ಲಾ....ನಿಮಗೆ ಏನೂ ಸಂಕೋಚವಾಗುವುದಿಲ್ಲವೆ ?" ಎಂಬ ನನ್ನ ಪ್ರಶ್ನೆಗೆ ಸ್ವಾಮೀಜಿಯವರು "ತನ್ನ ಹೊಟ್ಟೆಗಾಗಿ, ತನ್ನ ಜೀವನಕ್ಕಾಗಿ ಭಿಕ್ಷೆ ಬೇಡುವುದು ನಾಚಿಕೆ, ಆದರೆ ಜನತೆಗಾಗಿ ಬೇಡುವುದು ಹೆಮ್ಮೆ. ಜನತೆಗಾಗಿ ಬೇಡುವಾಗ 'ನಾನು' ಇಲ್ಲವಾಗುತ್ತೇನೆ. ನೀಡುವ ಜನತೆಯಲ್ಲೂ ಆ 'ನಾನು' ಇಲ್ಲ. ಈ 'ನಾನು' ಹೋದಾಗಲೇ ನಿತ್ಯಾನಂದ" ಎಂದು ಉತ್ತರಿಸಿದರು. ಈ ಅಸಾಮಾನ್ಯ ಪವಾಡ ಪುರುಷನ ಜೀವಂತ ಪವಾಡಗಳನ್ನು ಮಲ್ಲಾಡಿ ಹಳ್ಳಿಗೆ ಹೋಗಿ ನೋಡಿ ನಮ್ಮ ನಮನಗಳನ್ನು ಸಲ್ಲಿಸಬೇಕಲ್ಲವೆ ?

ಕರುಣಿಗಳರಸ ರಾಘವೇಂದ್ರ

ಗುಡ್ಡಗಾಡಿನ ಸುತ್ತು ಕಾಪಾಲಿಕರ ನಾಡ
ಕತ್ತಲೆಯು ಬತ್ತಲೆಯು ಎನಿಸಿತ್ತು ಪೂಜಾಂಗ
ಅಡ್ಡ ಎಳೆ ಉದ್ದ ಎಳೆ ಅಂಚು ಸೆರಗೂ ಕೂಡ
ಸರಿಯಾದರಷ್ಟೆ ಆ ಪಟ ತಾನೆ ದೇವಾಂಗ

ಕಾಲ ಹರಿಯುವದು ತಾ ಇತಿಹಾಸ ಬರೆಯುವುದು
ಲೆಕ್ಕಣಿಕೆ ಹಳತು. ಆ ಒಕ್ಕಣಿಕೆ ತಾ ಹೊಸದು
ನೆರೆಯುವದು ಮರೆಯಾಗಿ ಹೃದಯ ಹಾತೊರೆಯುವದು
ತನುಮನದ ಹೊಂದಿಕೆಗೆ ಬಸಿಯುವದು ರಸ ಒಸೆದು

ರಾಮ ವಂಶಿಗಳಲ್ಲಿ ರಾಘವನು ಕಾಲಿಡಲು
ರಾಗಿ ಮುದ್ದೆಗೆ ಬಂತು ತಾ ಪ್ರಸಾದದ ಬೆಲೆಯು
ಕೆಮ್ಮಣ್ಣು, ಕರಿಮಣ್ಣು ಕೂಡಿಯೇ ಚಿಗುರಿಡಲು
ಹಳ್ಳಿಯಾದಳಹಲ್ಳಿ ಇದುವೆ ಯಜ್ಞದ ನೆಲೆಯು

ದೇಶಕಾಲಕೆ ತಕ್ಕವಾದಾವು ಬಹು ಪಾತ್ರ
ಮಲ್ಲಾಡಿಹಳ್ಳಿಯೋ ಅಹುದು ವಿದ್ಯಾಕ್ಷೇತ್ರ !

ಎ. ಆರ್. ಶಂಕರಯ್ಯ

ಕರುಣೆ-ಒಂದು ಸ್ಮರಣೆ

“ಅವರು ಶಿಸ್ತಿನ ಸಿಪಾಯಿಗಳು. ನಿಯಮ ಮೀರುವುದು ಅಸಾಧ್ಯ ಮಾತು. ಅವರಿಗೆ ಎಲ್ಲರೂ ಒಂದೇ. ಯಾರಲ್ಲೂ ದಯಾ ದಾಕ್ಷಿಣ್ಯದ ಮಾತೇ ಇಲ್ಲ” ಈ ವಿಷಯವನ್ನು ನಾನು ಸ್ವತಃ ತಿಳಿದಿದ್ದೆ. ಅವರ ಬಳಿ ವ್ಯಾಯಾಮ ಶಿಕ್ಷಣವೂ ಅಲ್ಪ ಸ್ವಲ್ಪ ಆಗಿತ್ತು. ಅವರಿಂದ ಔಷಧವನ್ನೂ ತೆಗೆದುಕೊಂಡಿದ್ದೆ. ವ್ಯಾಯಾಮದ ಮೇಷ್ಟ್ರು, ರಾಘವೇಂದ್ರ ರಾಯರು, ತಿರುಕ, ರಾಘವೇಂದ್ರಸ್ವಾಮಿಗಳು—ಎಲ್ಲರ ಪರಿಚಯವೂ ನನಗಿತ್ತು. ನಾನು ಅವರಿಗೆ ಯಾವಾಗಲೂ ‘ಶಂಕರ’ನೇ ಆಗಿದ್ದೆ. ಈ ಸಾರಿ ಅವರ ಯಥಾರ್ಥ ಹೃದಯದ, ಮಾನವೀಯತೆಯ, ವೈದ್ಯ ಸಹಜವಾದ ಗುಣಗಳ ಪರಿಚಯವಾದುದು ನನ್ನ ಅದೃಷ್ಟ. ಆ ಸಂದರ್ಭವೂ ವಿಚಿತ್ರವಾಗಿ ಒದಗಿಬಂದಿತ್ತು.

ನಮ್ಮ ಶಾಲೆಯ ಬಾಲಕರನ್ನು ಮಲ್ಲಾಡಿಹಳ್ಳಿಗೆ ಆಟಪಾಟಗಳಿಗೆಂದು ಕರೆದುಕೊಂಡು ಹೋಗಿದ್ದೆವು. ನನ್ನ ಜೊತೆ ಇನ್ನಿಬ್ಬರು ಅಧ್ಯಾಪಕರಿದ್ದರು. ನಾಲ್ವತ್ತು ಹುಡುಗರಿದ್ದರು. ನಾನು ಅಸ್ತಮಾ ರೋಗಿ, ಬ್ರೊಪೆನ್ ಇನ್‌ಹೇಲರನ್ನು ಉಪಯೋಗಿಸುತ್ತಿದ್ದೆ. ಆಗ ನವೆಂಬರ್ ತಿಂಗಳು ಛಳಿ ಪ್ರಾರಂಭವಾಗಿಲ್ಲ. ಮಳೆ ಬರುವ ಕಾಲದಲ್ಲಿ ನನಗೆ ತೊಂದರೆಯಾಗದೆಂದು ಹೋಗಿದ್ದೆ. ಸಾಕಷ್ಟು ಔಷಧವೂ ಇದ್ದವು. ಧನ್ವಂತರಿಗಳ ಸ್ಥಳ ಬೇರೆ.

ಸಂಜೆ ಧೋ ಧೋ ಎಂದು ಮಳೆ ಸುರಿಯಿತು. ನಿಲ್ಲುವ ಸ್ಥಿತಿಯೇ ಕಾಣಲಿಲ್ಲ. ಆಶ್ರಮದ ಮುಂದೆ ಬಸ್ ಇಳಿದರೂ ಒಳಗೆ ಹೋಗುವಾಗ ನೆನೆದಿದ್ದೆವು. ವಿಶಾಲವಾದ ಕೊಠಡಿಗಳು. ಎಲ್ಲರೂ ಬೆಂಚುಗಳನ್ನು ಜೋಡಿಸಿಕೊಂಡೇ ಮಲಗಿದೆವು. ನಾನು ನನ್ನ ಪಂಪೇಶ್ವರನನ್ನು ಪಕ್ಕದಲ್ಲಿಟ್ಟುಕೊಂಡು ಮಲಗಿದೆ. ಹೊರಳಾಡುವಾಗ ಪಂಪೇಶ್ವರ ಜಾರಿಬಿದ್ದು ಗಾಜು ಒಡೆದುಹೋಯ್ತು. ನನಗೆ ಆಸ್ತಮಾ ಪ್ರಾರಂಭವಾಗುವುದಕ್ಕೆ ತಡವಾದರೂ ಹೆದರಿಕೆಯಿಂದ ಬೆಳಗಾಗುವುದರಲ್ಲಿ ಆಸ್ತಮಾ ಪ್ರಾರಂಭವಾಗಿಯೇ ಬಿಟ್ಟಿತು. ಕಾಫಿ ಕುಡಿದು ಔಷಧಿ ನುಂಗಿ ಆ ದಿನದ ಕಾರ್ಯಕ್ರಮ ಮುಗಿಸಿದೆವು.

ಸಂಜೆಯಾಯ್ತು. ಸೂರ್ಯ ಮುಳುಗಿದೊಡನೇ, ಪೋಲೀಸರ ಹೆದರಿಕೆ ಇಲ್ಲದ ಕಳ್ಳರಂತೆ ಗುಯ್, ಗುಯ್ ಸಿಳ್ ಶಬ್ದ ಪ್ರಾರಂಭವಾಯ್ತು. ಔಷಧಿ ನುಂಗಿದುದಾಯ್ತು. ರಾತ್ರಿ ಹತ್ತು ಗಂಟೆಗೆ ಸಿಳ್— ಸಿಳ್—ಶಬ್ದ ಹೆಚ್ಚಾಗಿ ಉಸಿರು ಕಟ್ಟಿ ಪ್ರಾಣಾಂತಿಕವಾದ ವೇದನೆಯಾಗಲಾರಂಭಿಸಿತ್ತು. ಸ್ನೇಹಿತರೊಬ್ಬರು ಒಂದಿಬ್ಬರು ಹುಡುಗರೂ ನನಗೆ ಉಪಚರಿಸಲು ನಿಂತರು. ಅಮೃತಾಂಜನ, ನೀಲಗಿರಿ ಎಣ್ಣೆ ಮುಗಿದವು. ಕಾಫಿ ಒಳಗೆ ಹೋಗದಾಯಿತು. ಮೈ ಬೆವರಲಾರಂಭಿಸಿತು. ಕಿಟಕಿಗೆ ಮುಖವಿಟ್ಟರೂ ಗಾಳಿ ಸಾಲದಾಯಿತು. ಗಾಳಿ ಹಾಕುವವರು. ಒಂದೇ ಸಮನೆ ಬೀಸಲಾರಂಭಿಸಿದರೂ ಪ್ರಯೋಜನವಿಲ್ಲವಾಯ್ತು. ನಾನು ಹೊರಳಾಡಿ ಕೂಗಾಡಿ ಅಂತೂ ಇಂತೂ ಬದುಕಿದ್ದೆ. ವೈದ್ಯರ ಆಗಮನವಾಯ್ತು. ನಾಡಿನೋಡಿದರು. ರೋಗದ ಭಯಾನಕ ಸ್ಥಿತಿ ಅವರಿಗೆ ಅರಿವಾಗಿದ್ದಿರಬೇಕು. ಭೇದಿ ಮಾಡಿಸಿ ಕಫ ತೆಗೆಯಲು ಮಾತ್ರೆಕೊಟ್ಟರು. ತಮ್ಮ ಶಿಷ್ಯರೊಬ್ಬರನ್ನು ನನ್ನ ಉಪಚಾರಕ್ಕೆ ಕಳುಹಿಸಿದರು.

ಆ ಭೇದಿ ಮಾತ್ರೆ ಒಂದು ಜೋಳದ ಕಾಳಷ್ಟು ತೆಗೆದುಕೊಂಡರೆ ಹೊಟ್ಟೆಯಲ್ಲಿರುವುದೆಲ್ಲವನ್ನೂ ಹೊರ ಹಾಕುವುದು ನನಗೆ ಗೊತ್ತಿತ್ತು. ಅಂತಹ ಔಷಧ ಆ ದಿನ ಕೆಸರಲ್ಲಿ ಕೊಳ್ಳಿ ಚುಚ್ಚಿದಂತೆ ಸುಮ್ಮನಾಗಿ ಹೋಯಿತು. ಶ್ರೀಗಳು ಒಂದು ಘಂಟೆ ಸಮಯದಲ್ಲಿ ನನ್ನನ್ನು ಪರೀಕ್ಷಿಸಿದರು, ನಿರಾಶರಾದರು. ಕರುಣೆ ತುಂಬಿದ ಹೃದಯದಿಂದ ವಿಚಾರಿಸಿ ಔಷಧಿಕೊಟ್ಟರು. ಇಲ್ಲೇ ಕುರ್ಚಿ ಹಾಕು ಎಂದು ಎದುರಿಗೇ ಕುಳಿತರು. ಅವರು ರಾಮಬಾಣದಂತಹ ಔಷಧ ಹೊಳೆಯಲ್ಲಿ ಹುಣಿಸೆ ಹಣ್ಣು ಕದರಿದಂತಾಗಿತ್ತು. ಸಿಳ್, ಸಿಳ್, ಕುಯ್ ಶಬ್ದ, ಉಸಿರಾಟದ ಕಷ್ಟ, ಕೂಗಾಟ ಎಲ್ಲ ನಡೆದಿದ್ದವು.'ಸ್ವಾಮೀ ನಾನು ಸಹಿಸಲಾರೆ, ಸಾಯಿಸಿ' ಎಂದು ಕೂಗುತ್ತಿದ್ದೆ. ಅವರು ಮತ್ತೆ ಮತ್ತೆ ಪರೀಕ್ಷಿಸುತ್ತಾ, ಔಷಧ ಬದಲಾಯಿಸುತ್ತಾ ಬಂದರು. ಜುಪ್ ಎನ್ನಲಿಲ್ಲ ಉಸಿರಾಟ ಕಷ್ಟವಾಗತೊಡಗಿತು. ಭೇದಿ ಶಾಂತಿ ಏನೂ ಆಗಲಿಲ್ಲ. ಎಚ್ಚರ ತಪ್ಪಿದ ಸ್ಥಿತಿಯಲ್ಲಿ ತಿದಿಯಂತೆ ನಿಧಾನವಾಗಿ ಉಸಿರು ತಡೆ ತಡೆದು ಬರುತ್ತಿತ್ತು. ಒಮ್ಮೆ ಉಸಿರಾಡುವಾಗ ಯಮಯಾತನೆ. ಸುಮಾರು ಮೂರು ಘಂಟೆ. ಆಗ ಅಸ್ತಮಕ್ಕೆ ಎಲ್ಲಿಲ್ಲದ ಬಲ.

ಸ್ವಾಮಿಗಳು ಪರೀಕ್ಷಿಸಿದರು. "ಎಲೇ ಶಂಕರ, ನೀನು ಸಾಯುತ್ತಿ.ನನ್ನ ಗುರುಗಳ ಶಿಷ್ಯ ನೀನು; ನಿನ್ನನ್ನು ಸಾಯಗೊಡುವುದಿಲ್ಲ" ಎಂದು ಎಲ್ಲರೂ ಕೇಳುವಂತೆ ಹೇಳಿ ಕಣ್ಣುಮುಚ್ಚಿ ಕುಳಿತರು. ಮನಸ್ಸಿನ ಆಳದಲ್ಲಿ ಏನೆಲ್ಲ ತುಮುಲ ನಡೆಯಿತೋ ದೇವರೇ ಬಲ್ಲ. ನಂತರ ಕಣ್ಣು ಬಿಟ್ಟ ಅವರು "ನನ್ನ ಪ್ರತಿಜ್ಞೆ ಮುರಿಯುವೆ. 18 ವರ್ಷದ ಪದ್ಧತಿಗೆ ತಿಲಾಂಜಲಿ ಕೊಡುವೆ. ಇವನನ್ನು ಬದುಕಿಸಲೇಬೇಕು–ಇನ್ನು ಮೂರು ನಿಮಿಷದಲ್ಲಿ ಡಾಕ್ಟರನ್ನು ಕರೆ ತರುವೆ. ಅಲ್ಲಿಯವರೆಗೆ ಗಾಳಿ ಹಾಕುತ್ತಿರಿ–ಎಂದು ಹೇಳಿ ಜಿಂಕೆಯಂತೆ ನೆಗೆದು ಜಂಪರ್ ಹಾಕಿದಂತೆಯೇ ಓಡಿದರು. ಇತರರು ಕಣ್ಣು ಬಿಟ್ಟು ಮಾತಾಡದೇ ನನ್ನ ಆ ಕಠಿಣ ಪರಿಸ್ಥಿತಿಯನ್ನು ನೋಡಿ ಮರುಗುತ್ತಿದ್ದರು. ಹೆದರುತ್ತಿದ್ದರು. ನನಗೆ ಎಚ್ಚರ ಪೂರ್ತಿ ಹೋಗಿತ್ತು.

ಸ್ವಲ್ಪ ಎಚ್ಚರ ಬಂದಿತು. ದೀಪಗಳು, ಡಾಕ್ಟರ್, ಡ್ರಿಪ್,ಪೆಟ್ರೋಮ್ಯಾಕ್ಸ್, ಸ್ಪಿರಿಟ್‌ಲ್ಯಾಂಪ್, ಸ್ಟ್ಯಾಂಡು, ಡಾಕ್ಟರ್ ಕಿಟ್, ಏನೇನೋ ಕಣ್ಣಿಗೆ ಕಂಡಿತು. ಬೆನ್ನು ಹಿಂದೆ ಕೈಕಟ್ಟಿ ಕಾಲು ಅಗಲಿಸಿ ನಿಂತ ಆ ಮಾನವತೆಯ ಮೂರ್ತಿ, ಡಾಕ್ಟರ್ ಕಡೆ ಒಮ್ಮೆ, ನನ್ನ ಕಡೆ ಒಮ್ಮೆ ನೋಡುತ್ತಿದೆ. ತಲೆಯಾಡಿಸುತ್ತಿದೆ.ಆ ಹಳ್ಳಿಯಲ್ಲಿ ಒಳ್ಳೆಯ ಔಷಧಿ ಎಲ್ಲಿ? ಆದರೂ ಆ ಇಬ್ಬರು ವೈದ್ಯರು ಯಮನ ಎರಡೂ ಕೈಗಳನ್ನುಹಿಡಿದೆಳದು ನನ್ನನ್ನುಉಳಿಸಿದರು. ರಾಘವೇಂದ್ರ ಸ್ವಾಮಿಗಳು ಅದೇ ಕುರ್ಚಿಯ ಮೇಲೆ ಬೆಳಕು ಹರಿಸಿದರು. ನನ್ನ ಸ್ನೇಹಿತರು, ಇಬ್ಬರು ಶಿಷ್ಯರು ಹೊಸ ವಾಯುದೇವನನ್ನೇ ಸೃಷ್ಟಿಸಿ ನನಗೆ ಜೀವಕೊಡಿಸಿದರು.ಸುಮಾರು ಬೆಳಗಿನ ಆರು ಘಂಟೆಗೆ ನನಗೆ ಭೇದಿಯಾಯಿತು. 'ಅವರೂ ಅವರ ಶಿಷ್ಯನೂ' ದೀರ್ಘ ಉಸಿರಾಡಿ "ಅಯ್ಯಾ ಶಂಕರಾ ಬದುಕಿದೆಯೋ. ನಾವೂ ಬದುಕಿದೆವು. ನನ್ನ ಪಣ ಪ್ರತಿಜ್ಞೆಯನ್ನು ಮುರಿದರೂ ಚಿಂತೆಯಿಲ್ಲ, ಐದುಜನ ಮಕ್ಕಳ ತಂದೆಯನ್ನು ಬದುಕಿಸಿ ಧನ್ಯನಾದೆ ಕಣಯ್ಯಾ; ನಮಸ್ಕಾರ" ಎಂದು ಹೇಳುತ್ತಾ ಹೊರಕ್ಕೆ ಹೋದ ಅವರ ಮುಖ ಬಾಲಸೂರ್ಯನಂತೆಯೇ ಹೊಳೆಯುತ್ತಿತ್ತು.

ಮೇಲಿನ ಮಾತು, ಕರ್ತವ್ಯ, ಗಡುಸು, ಶಿಸ್ತು ಇವುಗಳ ಅಡಿಯಲ್ಲಿ ತೆಂಗಿನಕಾಯೊಳಗಿನ ಸಿಹಿ ಕೊಬ್ಬರಿಯಂತೆ ಕರುಣಾಪೂರ್ಣ ಹೃದಯದ ಪರಿಚಯ ನನಗಾಯಿತು–ಅಂತಹ ಕರುಣಾಪೂರ್ಣ ಹೃದಯವಿರುವುದರಿಂದಲೇ ಮೇಲಿನ ಜುಂಗು, ಚಿಪ್ಪು ಇವೆಲ್ಲವನ್ನೂ ಲೆಕ್ಕಿಸದೆ ಕೋಟಿ ಜನ ಅವರಿಗೆ ನೆರವಾಗುವರು.ಅವರ ಆಶ್ರಮದ ಸೇವೆ ಅನವರತವಾಗಿ ನಡೆಯಲಿ.

ಎ. ವಿ. ಸೂರ್ಯನಾರಾಯಣಸ್ವಾಮಿ

ಮಲ್ಲಾಡಿ ಹಳ್ಳಿಯ 'ನಿಷ್ಕಾಮ ಕರ್ಮಯೋಗಿ'

ಈ ಜಗದ್ರಂಗದಲ್ಲಿ ನಿತ್ಯನೂತನವಾದ ತೇಜಸ್ಸನ್ನು ಪಡೆದವರು ಕರ್ಮಯೋಗಿಗಳು. ಕರ್ಮಯೋಗಿಗಳ ವರ್ಚಸ್ಸು ಅವರ ವದನಮಂಡಲದಲ್ಲಿಯೇ ಅಲ್ಲದೆ ಅವರ ಒಂದೊಂದು ಕೃತಿಯಲ್ಲಿಯೂ, ಶ್ರುತಿಯಲ್ಲಿಯೂ ಮೂರ್ತೀಭವಿಸಿ ಲೋಕಕ್ಕೆ ಶಾಶ್ವತವಾದ ಬೆಳಕಾಗಿ ನಿಲ್ಲುತ್ತದೆ. ಇಂತಹ ಬೆಳಕನ್ನು ಸದಾಕಾಲವೂ ನೀಡುತ್ತಿರುವ ಮಲ್ಲಾಡಿಹಳ್ಳಿಯ ಯತೀಂದ್ರರಾದ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಜಿಯವರನ್ನು ದರ್ಶನ ಮಾಡುವುದೇ ಜೀವನದ ಪರಮ ಸೌಭಾಗ್ಯಗಳಲ್ಲೊಂದು. ಯತೀಂದ್ರರು, ಸ್ವಾಮಿಗಳು, ಸಾಧುಗಳು ಎಂದೊಡನೆಯೇ ಎಲ್ಲರಿಗೂ ನೆನಪಿಗೆ ಬರುವ ಸಲಕರಣೆಗಳೆಂದರೆ ಕಾವಿ, ಕಮಂಡಲ, ರುದ್ರಾಕ್ಷಿ ಸರ, ಶ್ರೀಗಂಧ ಇತ್ಯಾದಿ ಇತ್ಯಾದಿಗಳು ; ಈ ಸಲಕರಣೆಗಳಾವುದೂ ಇಲ್ಲದೆ ಜನತೆಯ ಹೃದಯ ದೇಗುಲದಲ್ಲಿ 'ಸ್ವಾಮಿಜಿ' ಯವರಾಗಿ ಉಳಿದಿರುವವರೆಂದರೆ ಶ್ರೀ ಶ್ರೀ ರಾಘವೇಂದ್ರ ಜೀ ಅವರು ; ಮಲ್ಲಾಡಿಹಳ್ಳಿ ಸ್ವಾಮಿಜಿಯವರನ್ನು ಪ್ರಥಮ ಭೇಟಿ ಮಾಡಲು ಹೋದಾಗ ಆಗುವ ಅನುಭವ ಬಹುಶಃ ಮತ್ತಾವ ಸ್ವಾಮಿಜಿಯವರನ್ನು ಕಾಣಲು ಹೋದಾಗಲೂ ಆಗುವುದಿಲ್ಲ. ಜನತೆಗೆ ಇದೊಂದು ವಿಚಿತ್ರವಾದ ಅನಿರೀಕ್ಷಿತ ವಿಶೇಷ ಅನುಭವ ; ಆ ಅನುಭವವಾವುದೆಂದರೆ ಪ್ರಪ್ರಥಮವಾಗಿ ಮಲ್ಲಾಡಿಹಳ್ಳಿಗೆ ಹೋಗಿ ಎದುರಿಗೆ ನಿಂತಿರುವ ಅಥವಾ ಆಗಮಿಸುತ್ತಿರುವ ಶ್ರೀ ಶ್ರೀ ಸ್ವಾಮಿಜಿಯವರನ್ನೇ ದರ್ಶನ ಮಾಡಿದರೂ ಇವರು ಸ್ವಾಮಿಜಿಯವರೆಂದು ತಿಳಿಯದೆ ಸ್ವಾಮಿಜಿಯವರನ್ನೇ 'ನಾವು ಸ್ವಾಮಿಜಿಯವರ ದರ್ಶನಕ್ಕೆ ಬಂದಿದ್ದೇವೆ ; ಅವರ ದರ್ಶನ ಮಾಡಿಸಿರೆ'ಂದು ಕೇಳುವುದು. ನಮ್ಮ ಕಲ್ಪನೆಯ ಅಪೂರ್ವ ಸಲಕರಣೆಗಳಾದ ಕಮಂಡಲ, ರುದ್ರಾಕ್ಷಿ ಸರ, ಕಾವಿ ಇವುಗಳಿಲ್ಲದ ಒಂದು ಸಾಮಾನ್ಯ ಚಡ್ಡಿ, ಮತ್ತು ಅಂಗಿಯನ್ನು ಧರಿಸಿರುವ ವ್ಯಕ್ತಿಯನ್ನು ಕಂಡಾಗ ಆಗುವ ಅನುಭವ ನೂತನ ಮಾರ್ಗವನ್ನು ಜನತೆಗೆ ಕರುಣಿಸುತ್ತದೆ.

ಭಾರತ ಮಾತೆಯ ತನುಜಾತೆಯಾದ ಕನ್ನಡ ಮಾತೆಯ ಬಡ ಕಂದಮ್ಮಗಳಿಗೆ ಅನ್ನದಾನ ಮತ್ತು ವಿದ್ಯಾದಾನಗಳನ್ನು ಅಹರ್ನಿಶಿ ಮಾಡುತ್ತಿರುವ ನಮ್ಮ ಪೂಜ್ಯ ಸ್ವಾಮಿಜಿಯವರ ಕಾವ್ಯನಾಮ "ತಿರುಕ". ನಮ್ಮ ಸಮಾಜ ಚೆಲುವಿನ ನಂದನವನವಾಗಬೇಕೆಂಬ ಹೆಬ್ಬಯಕೆಯಿಂದ ಜೋಳಿಗೆಯನ್ನು ಹಿಡಿದು ಊರಿಂದೂರಿಗೆ ಹೋಗಿ ತಿರಿದು ತಂದ ಹಣವನ್ನು ಸ್ವಾಮಿಜಿಯವರು ಮುಟ್ಟದೆ 'ಕೆರೆಯನೀರನು ಕೆರೆಗೆ ಚೆಲ್ಲುವಂತೆ' ಸಂಪೂರ್ಣವಾಗಿ ವಿನಿಯೋಗಿಸಿ ತಮ್ಮದೇ ಆದ ಅಪೂರ್ವ ವ್ಯಕ್ತಿತ್ವವನ್ನು ಪಡೆದಿರುತ್ತಾರೆ. ಆಸೆಗಳ ಇಳಿಜಾರಿನಲ್ಲಿ ಜಾರದೆ, ಕಷ್ಟಗಳ ಬೆಟ್ಟಗಳನ್ನು ಕಂಡು ಬೆದರದೆ, ಅಂತರಂಗವನ್ನು ಅಸಂತೋಷದ ಅಗ್ನಿಪರ್ವತವನ್ನಾಗಿಮಾಡಿಕೊಳ್ಳದೆ ಲೋಕಕ್ಕೆ ಕಣ್ಣಾಗಿದ್ದಾರೆ ಸ್ವಾಮಿಜಿಯವರು ; ಸ್ವಾಮಿಜಿಯವರ ಕಣ್ಣಿನಲ್ಲಿ ಕರುಣೆಯ ಕಡಲು ಉಕ್ಕುತ್ತದೆ ; ಅದರಲ್ಲಿ ದೀನರು, ದರಿದ್ರರು, ದುರ್ಬಲರು, ಅನಾಥರು ಮಿಂದು ಮಡಿಯುಟ್ಟು ಪಾವನರಾಗುತ್ತಿದ್ದಾರೆ. ಅವರ ವದನಮಂಡಲದಲ್ಲಿ ಯಾವುದೋ ಒಂದು ಅಪೂರ್ವವಾದ ಮಿಂಚಿನ ಲೋಕ ಅರಳುತ್ತಿದೆ; ಅದನ್ನು ಕಾಣುವ ಕಣ್ಣನ್ನು ಪಡೆದಿರುವ ಜನತೆ ನೆಮ್ಮದಿಯ ನವನೀತವನ್ನು ಅನುಭವಿಸಿ, ಉಪಮೆಗೆ ನಿಲುಕದ ಸಂತೋಷದ ಸಂತರ್ಪಣೆಯಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಎನ್. ಭೀಮಪ್ಪ

ಷಿಕಾರಿಪುರ ಸೊರಬ ಪ್ರಾಂತ್ಯದಲ್ಲಿ ತಿರುಕನ ಕೊಡುಗೆ

ತಮ್ಮ ಕ್ರಿಯಾಸಿದ್ಧಿಯಿಂದ ಇಂದು ಅಖಿಲ ವಿಶ್ವದಲ್ಲಿ ಆದರ್ಶಯುತವಾದ ಆಶ್ರಮವನ್ನು ಸ್ಥಾಪಿಸಿ ಯೋಗಾಭ್ಯಾಸ, ರೋಗ ನಿವಾರಣೆ ಮಾಡುತ್ತಾ ಅನೇಕ ವಿದ್ಯಾ ಸಂಸ್ಥೆಗಳನ್ನು ನಡೆಸುತ್ತಿರುವ ಧೀ ಶಕ್ತಿ ಸಚೇತನ ಸ್ವಾಮಿ ಮಲ್ಲಾಡಿಹಳ್ಳಿ ಶ್ರೀ ರಾಘವೇಂದ್ರ ಗುರೂಜಿಯವರು. ಅವರನ್ನು ಕುರಿತು ನಾಲ್ಕು ಮಾತು ಬರೆಯುವ ಸೌಭಾಗ್ಯವನ್ನು ಒದಗಿಸಿ ನನ್ನ ಬರವಣಿಗೆ ಸಾರ್ಥಕವಾಗುವಂತೆ ಕೃಪೆ ಮಾಡಿದವರನ್ನು ನಾನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ನನ್ನ ಹುಟ್ಟೂರಾದ ಶಿರಾಳಕೊಪ್ಪ ಮತ್ತು ಪಕ್ಕದ ಆನವಟ್ಟಿ-ಸೊರಬಗಳಲ್ಲಿ ಅವರು ಸ್ಥಾಪಿಸಿದ ಶಿಬಿರಗಳ ಕಾರ್ಯಕ್ರಮದ ಸಂಕ್ಷಿಪ್ತ ವಿವರಣೆಯನ್ನು ಲೇಖನ ರೂಪದಲ್ಲಿ ಬರೆದು ನನ್ನ ಈ ಅಲ್ಪ ಕಾಣಿಕೆಯನ್ನು ಗುರು ಪದದಲ್ಲಿ ಅರ್ಪಿಸುತ್ತಿದ್ದೇನೆ. ಹಾಗೆ ಮಾಡುವ ಮುನ್ನ ನನ್ನ ಸ್ವಂತ ಕಥೆಯನ್ನೂ ಸೇರಿಸಬೇಕೆಂಬ ಚಪಲ ನನಗೆ. ನನ್ನ ಧರ್ಮಪತ್ನಿ ಹೊನ್ನಾಳಿ ತಾಲ್ಲೂಕಿನ ಕುಂದೂರಿನವಳು. ಶ್ರೀ ಗುರೂಜಿಯವರು ಅಲ್ಲಿ ವ್ಯಾಯಾಮ ಶಿಬಿರವನ್ನು ನಡೆಸಿದಾಗ ಆಕೆ ಅವರ ಶಿಷ್ಯಳಾಗಿದ್ದು, ಅವರ ಪಾದಸೇವೆಯನ್ನು ಮಾಡುವ ಸೌಭಾಗ್ಯವನ್ನು ಪಡೆದಿದ್ದಳು; ಕಮಲವ್ವ ಎಂಬ ಹೆಸರಿನಿಂದ ಅವರ ಮಗಳಂತಿದ್ದಳು. ಹೀಗೆ ಯೋಗಾಯೋಗದಿಂದ ದಂಪತಿಗಳಾದ ನಮ್ಮಿಬ್ಬರಿಗೂ ಗುರುಗಳಾಗಿದ್ದ ಮಹಾತ್ಯಾಗಿ ಗುರೂಜಿಯವರು ನಮ್ಮ ಪ್ರಾಂತ್ಯದಲ್ಲಿ ಜನತೆಗೆ ನೀಡಿದ ಕೊಡುಗೆಯನ್ನು ಕುರಿತು ಬರೆಯುವುದು ನನ್ನ ಭಾಗ್ಯ.

ಷಿಕಾರಿಪುರ ತಾಲ್ಲೂಕು ಶಿರಾಳಕೊಪ್ಪವು ಈಗ ಸುಮಾರು 40 ವರ್ಷಗಳಕೆಳಗೆ (1936-37) ಪಳನಿ ವ್ಯಾಯಾಮ ಶಿಬಿರದ ಕೇಂದ್ರವಾಗಿತ್ತು. ಬೆಳಗಿನ ಜಾವ ನಾಲ್ಕು ಗಂಟೆಗೆ ಶಿಳ್ಳುಹಾಕುತ್ತಾ ಕೇರಿ ಕೇರಿ ತಿರುಗುತ್ತಿದ್ದ ಚಡ್ಡಿಬಾಬುವಿನ ವಿಸಲ್ ನಾದಕ್ಕೆ ಹನ್ನೆರಡು ವರ್ಷದ ಬಾಲಕರಿಂದ ಮೂವತ್ತು ವರ್ಷದ ಯುವಕರವರೆಗೆ ಊರಿನವರೆಲ್ಲಾ ಎದ್ದು ಊರಿನ ಮುಂದಿನ ವಿಶಾಲವಾದ ಮೈದಾನಕ್ಕೆ ಓಡುತ್ತಿದ್ದರು. ಇಂದು ಅದಕ್ಕೆ ಇಂದಿರಾಗಾಂಧಿ ಕ್ರೀಡಾಂಗಣವೆಂದು ಹೆಸರು. ಸಾಮೂಹಿಕ ಪ್ರಾರ್ಥನೆ 'ಮನೋಜವಂ ಮಾರುತ ತುಲ್ಯವೇಗಂ' ಶ್ಲೋಕ ಪ್ರಾರಂಭವಾಗುತ್ತಿತ್ತು. ದೈಹಿಕ ವ್ಯಾಯಾಮ, ಸೂರ್ಯನ ದ್ವಾದಶನಾಮ ಸಂಕೀರ್ತನೆಗಳೊಡನೆ ಸೂರ್ಯನಮಸ್ಕಾರ ಬಗೆಬಗೆಯ ಆಸನಗಳು, ಲಾಟೀ ಲಡತ್, ಲಜೀಂ, ಡಂಬಲ್ಸ್ ಮುಂತಾದ ಅಂಗ ಸಾಧನೆಗಳಾದ ಮೇಲೆ ಮಾಂಸ ಖಂಡಗಳ ಮಾಲಿಷ್ ನಡೆಯುತ್ತಿತ್ತು. ಇವು ಶಿಬಿರದಲ್ಲಿ ಅಭ್ಯರ್ಥಿಗಳಿಗೆ ನಿತ್ಯ ಕಾರ್ಯಕ್ರಮಗಳಾಗಿದ್ದವು.

ಚಡ್ಡಿ ಬಾಬು – ಶ್ರೀ ಸ್ವಾಮೀಜಿಯವರನ್ನು ಅಂದು ಕರೆಯುತ್ತಿದ್ದುದು ಹಾಗೆ—ಶಿರಾಳ ಕೊಪ್ಪಕ್ಕೆ ಬಂದಾಗ ಅಂದಿನ ಮಾಧ್ಯಮಿಕ ಶಾಲೆ ರಂಗಮಂಟಪದಲ್ಲಿ ಮೊಟ್ಟಮೊದಲು ಇವರ ವ್ಯಾಯಾಮ ಪ್ರದರ್ಶನ ಏರ್ಪಾಡಾಗಿತ್ತು. ಅಂದಿನ ಮುಖ್ಯೋಪಾಧ್ಯಾಯರಾದ ಸೊರಬದ ಸುಬ್ಬರಾಯರು ಇದನ್ನು ಏರ್ಪಡಿಸಿದ್ದರು. ಅಂದು

ಅವರು ಯೋಗಾಸನ, ನೇತಿಧ್ಯೋತಿ, ಬಸ್ತಿಕ್ರಮ ನವಲಿ, ಉಡ್ಯಾನ, ಉಷಃಪಾನ, ಮೊದಲಾದ ಅಸಾಧಾರಣ ಪ್ರದರ್ಶನಗಳನ್ನು ನೀಡಿ ಜನತೆಯನ್ನು ತಮ್ಮ ಸಾಹಸದ ಸಮ್ಮೋಹನಾಸ್ತ್ರದಿಂದ ಆಕರ್ಷಣೆ ಮಾಡಿಕೊಂಡರು. ಆಗ ಅವರಿಗೆ ಸುಮಾರು ನಲವತ್ತೈದು ವರ್ಷ ವಯಸ್ಸು. ಬ್ರಹ್ಮಚರ್ಯದ ತೇಜಸ್ಸಿನಿಂದ ವಜ್ರಕಾಯರಾಗಿದ್ದ ಅವರ ಪ್ರದರ್ಶನಕ್ಕೆ ಜನ ಮಾರುಹೋದುದು ಆಶ್ಚರ್ಯವೇನೂ ಅಲ್ಲ. ಅದನ್ನು ಕಂಡು ತಾವೂ ಅದನ್ನೆ ಕಲಿಯಬೇಕೆಂಬ ಆಸೆ ಯುವಕರಲ್ಲಿ ಅಂಕುರಿಸಿದುದು ಆಶ್ಚರ್ಯವೇನೂ ಅಲ್ಲ. ಅವರ ಪ್ರಾರ್ಥನೆಯನ್ನು ಕೇಳಿದ ಗುರೂಜಿಯವರು ಮರುದಿನವೇ 'ಪಳನಿ ವ್ಯಾಯಾಮ ಶಿಬಿರ' ವನ್ನು ಸ್ಥಾಪಿಸಿದರು. ಸುಮಾರು ನೂರೈವತ್ತು ಜನ ಅಭ್ಯರ್ಥಿಗಳು ಶಿಬಿರಕ್ಕೆ ಸೇರಿದರು. ಅಂದು ಅವರು ನೀಡಿದ ತರಬೇತಿಯಲ್ಲಿ ಪ್ರತಿಯೊಬ್ಬ ಅಭ್ಯರ್ಥಿಗೂ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಪ್ರಗತಿ ನಿಚ್ಚಳವಾಗಿ ಕಾಣಬಂತು. ಶ್ರೀ ಚಡ್ಡಿಬಾಬು ಅಂದಿಗೆ ಮಾಧ್ಯಮಿಕ ಶಾಲೆಯ ಒಂದು ಕೋಣೆಯಲ್ಲಿ ಬಿಡಾರ ಹೂಡಿದ್ದರು. ಬೆಳಗಿನ ಶಿಬಿರ ಮುಗಿದ ಮೇಲೆ ಸ್ನಾನ ಸಂಧ್ಯಾದಿಗಳನ್ನು ಮುಗಿಸಿ ಒಂದು ಚಪಾತಿಯನ್ನು ಮಾತ್ರ ಆಹಾರವಾಗಿ ಸ್ವೀಕರಿಸುತ್ತಿದ್ದರು. ಮಧ್ಯಾಹ್ನ ಸ್ವಲ್ಪ ಹಾಲು, ಅನ್ನ. ರಾತ್ರಿ ಹಾಲು. ಹಣ್ಣು, ಇಷ್ಟೇ ಅವರ ಆಹಾರ. ಬ್ರಹ್ಮಚರ್ಯದ ಅಧಿದೇವತೆ ಆಂಜನೇಯ ಇವರ ಆರಾಧ್ಯದೇವ. 'ಜೈ ಭಜರಂಗ ಬಲಿ' ಎಂಬ ನಾಮಸ್ಮರಣೆಯೊಡನೆ ಇವರ ದಿನದಿನದ ಕಾರ್ಯ ಪ್ರಾರಂಭ.

'ನಂದನವನ'ಕ್ಕೆ ಲೇಖನ ಕಳಿಸುವಂತೆ ಪತ್ರ ಬಂದೊಡನೆಯೇ ನಾನು ನನ್ನ ಮಾನ್ಯ ಮಿತ್ರರಾದ ಶ್ರೀ ಬಿ. ಎಂ. ಮಹದೇವಯ್ಯ, ಶ್ರೀ ನಾಗೇಂದ್ರಯ್ಯ, ಶ್ರೀ ರಂಗಪ್ಪ ಮೊದಲಾದವರನ್ನು ಭೇಟಿಯಾದೆ. ಈಗ ಸುಮಾರು ಐವತ್ನಾಲ್ಕು ವಯಸ್ಸಿನ ಶ್ರೀ ಬಿ. ಎಂ. ಮಹದೇವಯ್ಯನವರು ಶ್ರೀ ಗುರೂಜಿಯವರ ಶಿಷ್ಯಶ್ರೇಷ್ಠರಲ್ಲಿ ಒಬ್ಬರು. ಶ್ರೀ ಶ್ರೀಯವರ ಶಿಬಿರದ ಕಾರ್ಯಕ್ರಮಗಳಲ್ಲಿ ಅವರ ಬಲಗೈಯ್ಯಂತಿದ್ದವರು. ನಮ್ಮ ಪ್ರಾಂತದಲ್ಲಿ ಗುರೂಜಿಯವರು ನಡೆಸಿದ ಶಿಬಿರಗಳ ವಿವರಣೆಯನ್ನು ನೀಡುವಂತೆ ಅವರನ್ನು ಕೇಳಿಕೊಂಡಾಗ ಅವರು ಕ್ಷಣಕಾಲ ಮೌನಧಾರಿಗಳಾದರು. ಗುರುಗಳನ್ನು ನೆನೆದು ಕೃತಜ್ಞತೆಯಿಂದ ಆನಂದಭಾಷ್ಪ ಸುರಿಯಿತು. ಅವರು ಹೇಳಿದರು. "ಮೇಷ್ಟ್ರೆ, ಇಂದಿನ ನಮ್ಮ ಜೀವನದ ಮಟ್ಟ ಉನ್ನತವಾಗಿದೆಯೆಂದು ಹೇಳುವುದಾದರೆ ಅದಕ್ಕೆ ಕಾರಣ ಶ್ರೀ ಶ್ರೀಯವರು ಅಂದು ನಡೆಸಿದ ಶಿಬಿರ. ಶ್ರೀ ರಾಘವೇಂದ್ರ ಗುರೂಜಿಯವರ ದರ್ಶನ ಲಾಭ ನನಗಾದುದು ನಮ್ಮ ಪೂಜ್ಯ ಗುರುಗಳಾದ ಶ್ರೀ ಸುಬ್ಬರಾಯರ ದಯೆಯಿಂದ. ಅಂದು ಶ್ರೀ ಶ್ರೀಯವರು ನಡೆಸಿದ ಪ್ರದರ್ಶನ ನನ್ನನ್ನು ಆಕರ್ಷಿಸಿತು. ನಾವು ಸುಮಾರು ನೂರೈವತ್ತು ಮಂದಿ ಅಂದಿನ ಶಿಬಿರಕ್ಕೆ ದಾಖಲಾದೆವು. ಶ್ರೀ ಸ್ವಾಮೀಜಿ ನನಗೊಂದು ವಿಷಲ್ ಕೊಟ್ಟು ಬೆಳಗಿನ ಝಾವ ನಾಲ್ಕು ಘಂಟೆಗೆ ತನ್ಮೊಡನೆ ಊರನ್ನೆಲ್ಲಾ ವಿಷಲ್ ಊದುತ್ತಾ ಗಸ್ತು ತಿರುಗಬೇಕೆಂದು ಆಜ್ಞೆ ಮಾಡಿದರು. ಮಾಧ್ಯಮಿಕಶಾಲೆಯ ಕೊಠಡಿಯಿಂದ ಅವರ ವಿಷಲ್‌ನಾದ ಕೇಳುತ್ತಲೇ ನಾನು ಚಡಪಡಿಸಿ ಮೇಲಕ್ಕೆದ್ದು, ಮುಖ ತೊಳೆದು ಚಡ್ಡಿಧಾರಿಯಾಗಿ ಬಾಗಿಲಲ್ಲಿ ಸಿದ್ಧನಾಗಿರುತ್ತಿದ್ದೆ. ಅವರು ನನ್ನೊಡನೆ ಅರ್ಧ ಘಂಟೆಯೊಳಗೆ ಊರನ್ನೆಲ್ಲಾ ಸುತ್ತಿ ಜನರನ್ನು ಎಚ್ಚರಿಸುತ್ತಿದ್ದರು. ನನ್ನೊಡನೆ ಇತರರು ಸೇರಿಕೊಂಡೊಡನೆಯೇ ಅವರು ಮೈದಾನಕ್ಕೆ ಓಡಿ ನಾವು ಅಲ್ಲಿಗೆ ಹೋಗುವುದರೊಳಗೆ ಪ್ರಾರ್ಥನೆ ಮಾಡಲು ಸಜ್ಜಾಗಿರುತ್ತಿದ್ದರು. 'ಮನೋಜವಂ ಮಾರುತ ತುಲ್ಯವೇಗಂ' ಎಂಬ ಪ್ರಾರ್ಥನೆಯೊಡನೆ ವ್ಯಾಯಾಮ ಪ್ರಾರಂಭವಾಗುತ್ತಿತ್ತು. 'ಜೈ, ಭಜರಂಗಬಲಿ' ಭಾರತಮಾತಾಕಿ ಜೈ' ಎಂಬ ಘೋಷಣೆಯನ್ನು ಮಾಡಿ ಸೂರ್ಯನಮಸ್ಕಾರ ಮಾಡಿಸುತ್ತಿದ್ದರು. ಒಂದುವಾರ ದೈಹಿಕ ವ್ಯಾಯಾಮ, ಎರಡನೆ ವಾರ ಲಜೀಂ ಡಂಬಲ್ಸ್‌ಗಳ ತಾಳಬದ್ಧ ತರಬೇತಿ, ಮೂರನೆಯ ವಾರ ಲಾಟೀ ಲಡತ್‌ಗಳು ನಡೆಯುತ್ತಿದ್ದವು

'ಗುರೂಜಿಯವರೇ ಹೇಳುತ್ತಿದ್ದಂತೆಯೇ ಚಿಕ್ಕಂದಿನಿಂದಲೂ ಅವರು ಉಜ್ವಲ ರಾಷ್ಟ್ರಾಭಿಮಾನಿಗಳು. ಶ್ರೀ ಶಿವಾನಂದತೀರ್ಥರು ಮತ್ತು ಪ್ರೊ|| ಮಾಣಿಕ್ಯರಾಯರ ಪ್ರೇರಣೆಯಿಂದ ಈ ಚಿನ್ನಕ್ಕೆ ಪುಟವಿಟ್ಟಂತಾ

ಯಿತು. ಅವರು ಸ್ವಾತಂತ್ರ್ಯ ಹೋರಾಟಕ್ಕೆ ಕರ್ನಾಟಕದಲ್ಲಿ ಶಿಸ್ತಿನ ಸಿಪಾಯಿಗಳನ್ನು ಕೂಡಿಸಲು ಮನಸ್ಸು ಮಾಡಿದರು. ಏಳು ವರ್ಷಗಳ ಕಾಲ ಕರ್ನಾಟಕದ ನೂರಾರು ಹಳ್ಳಿಗಳನ್ನು ಸುತ್ತಿ, ಸುಮಾರು ಐದು ಸಾವಿರಕ್ಕೂ ಹೆಚ್ಚು ಯುವಕರಿಗೆ ವಿವಿಧ ರೀತಿಯ ಅಂಗಸಾಧನೆಗಳನ್ನು ಹೇಳಿಕೊಟ್ಟು ಸ್ವಯಂಸೇವಕರನ್ನು ಸಿದ್ಧಪಡಿಸಿದರು.

ಸೊರಬದಲ್ಲಿ ಶಿಬಿರವನ್ನು ನಡೆಸಿದ ಮೇಲೆ ಆನವಟ್ಟಿಯಲ್ಲಿ ಶಿಬಿರ ನಡೆಯಿತು. ಶ್ರೀ ಸ್ವಾಮೀಜಿ ಅಲ್ಲಿಗೂ ನನ್ನನ್ನು ಕರೆದೊಯ್ದುದು ನನ್ನ ಸೌಭಾಗ್ಯ. ಅವರ ನಿತ್ಯದ ವ್ಯಾಯಾಮ, ಅದರಲ್ಲಿಯೂ ವಜ್ರೋಲಿ ಸಾಧನೆಯು ಮಹತ್ವಪೂರ್ಣವಾಗಿತ್ತು. ಅವರು ತಮ್ಮ ಪ್ರದರ್ಶನದಲ್ಲಿ ಅಂಗಾತ ಮಲಗಿ, ಎದೆಯ ಮೇಲೆ ಹಾಸುಗಲ್ಲನ್ನು ಹಾಕಿಸಿಕೊಂಡು ಅವರ ಮೇಲೆ ಗಾಡಿಯನ್ನು ಎಳೆಸಿಕೊಳ್ಳುತ್ತಿದ್ದರು. ಡ್ಯಾಗರ್ ಫೈಟಿಂಗ್, ಲಾಟೀ ಲಡತ್, ಮಗರ್ ಪಕಡ್‌ಗಳ ಪ್ರದರ್ಶನ ಅದ್ಭುತವಾಗಿರುತ್ತಿತ್ತು. ಅವರು ಲಾಟಿ ತಿರುಗಿಸುವಾಗ ಸುತ್ತಲೂ ಜನ ನಿಂತು ಅವರ ಮೇಲೆ ಕಲ್ಲಿನ ಮಳೆಗರೆದರೂ ಆ ಕಲ್ಲುಗಳೆಲ್ಲ ನಮ್ಮ ಕಡೆಗೆ ಹಿಂದಿರುಗುತ್ತಿದ್ದವು, ಅವರ ಕೈಚಳಕ ಮನೋಹರವಾಗಿರುವಷ್ಟೇ ಸಾಹಸಪೂರ್ಣವಾಗಿರುತ್ತಿತ್ತು. ಅವರು ಶಿಕಾರಿಪುರ–ಸೊರಬ ತಾಲ್ಲೂಕಿನಲ್ಲಿ 300ಕ್ಕೂ ಹೆಚ್ಚು ಜನರಿಗೆ ತರಬೇತಿ ನೀಡಿದ್ದಾರೆ. ಅವರು ಅಂದು ಹೇಳಿಕೊಟ್ಟ ಆಸನ, ಪ್ರಾಣಾಯಾಮ, ಸೂರ್ಯನಮಸ್ಕಾರ ಮೊದಲಾದವುಗಳನ್ನು ಇಂದೂ ನಾವು ಆಚರಣೆಯಲ್ಲಿಟ್ಟುಕೊಂಡಿದ್ದೇವೆ. ಲೌಕಿಕ ಜಂಜಾಟದಲ್ಲಿ ಬಿದ್ದ ನನ್ನ ಮನಸ್ಸನ್ನು ಆ ಪುಣ್ಯ ಪುರುಷನ ಬಗೆಗೆ ಚಿಂತಿಸುವಂತೆ ಆತನ ಪವಿತ್ರ ನಾಮವನ್ನು ಸ್ಮರಣೆಗೆ ಬರುವಂತೆ ಮಾಡಿದ ನಿಮಗೆ ನಾನು ಕೃತಜ್ಞನಾಗಿದ್ದೇನೆ" ಶ್ರೀ ಮಹಾದೇವಯ್ಯನವರು ಎರಡು ಕೈಗಳನ್ನೂ ಮೇಲಕ್ಕೆತ್ತಿ ಕೈಮುಗಿಯುತ್ತಾ "ಶ್ರೀ ಶ್ರೀಯವರ ಪಾದಪದ್ಮಗಳಿಗೆ ಇಲ್ಲಿಂದಲೇ ಶರಣಾರ್ಥಿ ಅರ್ಪಿಸುತ್ತೇನೆ. ಅವರು ನಮ್ಮ ತಾಲ್ಲೂಕಿನ ಕಪ್ಪನಹಳ್ಳಿಯಲ್ಲಿ 'ಶ್ರೀ ವೀರಾಂಜನೇಯ ಪ್ರೌಢಶಾಲೆ'ಯನ್ನು ಸ್ಥಾಪಿಸಿ ನಮ್ಮ ತಾಲ್ಲೂಕಿನ ಅಭಿವೃದ್ಧಿಗೆ ಕೃಪಾಶೀರ್ವಾದ ಮಾಡುತ್ತಿದ್ದಾರೆ" ಎಂದರು.

ಶಿವಶರಣರಾದ ಅಲ್ಲಮ, ಅಕ್ಕಮಹಾದೇವಿಯರ ನಾಡು ನಮ್ಮ ಪ್ರಾಂತ. ಅವರಂತೆಯೇ ಶ್ರೀ ಶ್ರೀ ಸ್ವಾಮೀಜಿಯವರು ಕಾಯಕದ ಕಲ್ಪತರುವಾಗಿದ್ದಾರೆ. ಅಪಮಾನ ನಿಂದನೆಗಳನ್ನು ಮೈಗೂಡಿಸಿಕೊಂಡು ಮಲ್ಲಾಡಿಹಳ್ಳಿಯ ಆಶ್ರಮವನ್ನು ಬೃಹದಾಕಾರವಾಗಿ ಬೆಳೆಸಿದ್ದಾರೆ. ಜಾತಿ, ಮತ, ರಾಜಕೀಯದ ಯಾವ ಬಾಲಗ್ರಹಗಳಿಗೂ ತುತ್ತಾಗದೆ ತನ್ನದೇ ಆದ ವೈಶಿಷ್ಟವನ್ನು ಉಳಿಸಿಕೊಂಡು ಬೆಳೆಯುತ್ತಿರುವ ಈ ಸಂಸ್ಥೆ ಇಂದಿನ ಪೀಳಿಗೆಯ ಪ್ರಗತಿಗೆ ಒಂದು ಮೈಲಿಗಲ್ಲಾಗಿದೆ. ನಿಷ್ಕಾಮ ಸೇವೆಯನ್ನು ಮಾಡುತ್ತಾ ರಾಷ್ಟ್ರದ ಮಹಾಶಿಲ್ಪಿಗಳಲ್ಲಿ ಒಬ್ಬರಾಗಿದ್ದು ನಮ್ಮ ಕಣ್ಣ ಮುಂದೆಯೇ ಪ್ರತ್ಯಕ್ಷ ನಡೆದಾಡುವ ಪರಮಾತ್ಮನಂತಿರುವ ಈ ತ್ಯಾಗಜೀವಿಗೆ ನನ್ನ ನಮನ. ಈ ಮಹಾಚೇತನ ಭಾರತೀಯ ಸಂಸ್ಕೃತಿಯ ನಂದಾದೀವಿಗೆಯಾಗಿ ಬಹುಕಾಲ ಬೆಳಗಲೆಂದು, ಅದಕ್ಕೆ ತಕ್ಕ ಆಯುಷ್ಯ ಆರೋಗ್ಯಭಾಗ್ಯಗಳನ್ನು ಭಗವಂತನು ನೀಡಲೆಂದು ನಾನು ದೇವದೇವನಲ್ಲಿ ಪ್ರಾರ್ಥಿಸುತ್ತೇನೆ. ಈ ಕಾಯಕದ ಕಲ್ಪತರುವಿಗೆ ನಮ್ಮೆರಡು ತಾಲ್ಲೂಕು ಪರವಾಗಿ ಶರಣು ಶರಣಾರ್ಥಿ.

ಮಲ್ಲಿಕಾರ್ಜುನಪ್ಪ

ಮಹಾಶರಣ "ತಿರುಕ"

ಸತ್ತ ಬಳಿಕ ಮುಕ್ತಿಯ ಹಡೆದಿಹೆನೆಂದು
ಪೂಜಿಸ ಹೋದರೆ ಆ ದೇವರೇನ ಕೊಡುವರೋ
ಸಾಯದೇ ನೋಯದೇ ಸ್ವತಂತ್ರನಾಗಿ ಸಂದು
ಭೇದವಿಲ್ಲದಿರ್ಪ ಗುಹೇಶ್ವರಾ ನಿಮ ಶರಣ

ಅನುಭಾವವೆಂಬುದು ಮರಣದ ನಂತರ ಪಡೆಯುವ ಮುಕ್ತಿಯಲ್ಲ, ಅದು ಸಾಯದೆ ನೋಯದೆ ಸ್ವತಂತ್ರವಾಗಿರುವ ನಿರ್ಲಿಪ್ತ ಮನೋಧರ್ಮ. ಈ ಲೋಕದಲ್ಲಿ ಇದ್ದು ಇಲ್ಲದ ಹಾಗೆ ಬಾಳುವ ರೀತಿ, ಜೀವನ್ಮುಕ್ತಸ್ಥಿತಿ. ಈ ಅನುಭಾವದ ಮಟ್ಟಕ್ಕೇರಲು 'ಬಾಗಿದ ತಲೆ ಮುಗಿದ ಹಸ್ತನಾಗಿ' ತನ್ನನ್ನು ಶೂನ್ಯನನ್ನಾಗಿ ಮಾಡಿಕೊಳ್ಳುವ, ಸೇವೆಯಲ್ಲಿ ತನ್ಮಯತೆಯಲ್ಲಿರುವ ವ್ಯಕ್ತಿಶಕ್ತಿ ಮಲ್ಲಾಡಿಹಳ್ಳಿಯ ಅನಾಥಸೇವಾಶ್ರಮದ 'ತಿರುಕ'.

ಭೂಮಿ ನಿನ್ನದಲ್ಲ, ಹೇಮ ನಿನ್ನದಲ್ಲ, ಕಾಮಿನಿ ನಿನ್ನವಳಲ್ಲ
ಅದು ಜಗಕ್ಕಿಕ್ಕಿದ ವಿಧಿ
ನಿನ್ನೊಡವೆಯೆಂಬುದು ಜ್ಞಾನರತ್ನ
ಅಂತಪ್ಪ ದಿವ್ಯರತ್ನವ ಕೆಡುಗುಡದೆ
ಆ ರತ್ನವ ನೀನಲಂಕರಿಸಿದೆಯಾದಡೆ
ನಮ್ಮ ಗುಹೇಶ್ವರ ಲಿಂಗದಲ್ಲಿ ನಿನ್ನಿಂದ ಬಿಟ್ಟು
ಸಿರಿವಂತರಿಲ್ಲ ಕಾಣಾ, ಎಲೆ ಮಾನವ !

ಆ ಜ್ಞಾನರತ್ನವನ್ನು ತಾವೂ ಅಲಂಕರಿಸಿಕೊಳ್ಳುವುದಲ್ಲದೆ ಎಲ್ಲರಿಗೂ ದೊರಕಿಸಿಕೊಡಲು ಅಹರ್ನಿಶಿ ಶ್ರಮಿಸುತ್ತಿರುವ ಈ 'ತಿರುಕ' 'ಅರಿದಡೆ ಶರಣ, ಮರೆದಡೆ ಮಾನವ' ಎಂಬ ಅಣ್ಣನವರ ಅಮರ ಸಂದೇಶದ ಕೈದೀವಿಗೆಯನ್ನು ಹಿಡಿದು, ಅಂಧಕಾರದಲ್ಲಿ ತೊಳಲುತ್ತಿರುವವರಿಗೆ ದಾರಿತೋರಿಸುವ ದೇವದೂತನಾಗಿ ತಿರುಗುತ್ತಿದ್ದಾರೆ. ಈಗಾಗಲೇ ಈ ಭಿಕ್ಷುಕ ಭಿಕ್ಷೆಗಾಗಿ ನಡೆದದ್ದು ನಾಲ್ಕು ಲಕ್ಷಕ್ಕೂ ಹೆಚ್ಚು ಮೈಲುಗಳು.

"ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ" ಎಂದು ತಿಳಿದು ಆಶ್ರಮವನ್ನು ಕಮ್ಮಟಶಾಲೆಯನ್ನಾಗಿ ಮಾಡಿ 'ಅಲ್ಲಿಯೂ ಸಲ್ಲುವವರನ್ನು' ತಯಾರುಮಾಡುತ್ತಿರುವ ಕರ್ಮಯೋಗಿ ಈ 'ತಿರುಕ'. 'ರಾಘವೇಂದ್ರನಾಗಿ', 'ಬಾಪು'ವಾಗಿ, 'ಕರ್ನಾಟಕಿ'ಯಾಗಿ, 'ಮಾಸ್ತರ'ರಾಗಿ ಈಗ 'ತಿರುಕ'ರಾಗಿದ್ದಾರೆ ಈ ಯೋಗಿ.

ಇವರು ಧನ್ವಂತರಿಯ, ವ್ಯಾಸರ, ಮಾರುತಿಯ, ಶಾರದೆಯ, ಅನ್ನಪೂರ್ಣೆಯ, ಕಪಾಲಧಾರಿ ಶಿವನ ಎಲ್ಲರ ಕರುಣೆಯ ಕಂದ; ಬಹುಮುಖಿ.

"ಅಲ್ರಿ, ಹೋಗಿ ಹೋಗಿ ಆ ಬ್ರಾಹ್ಮಣ ಸ್ವಾಮಿಗಳಿಗೆ ಹಣ ಕೂಡಿಸಿ ಕೊಡಲು ಬರುತ್ತೀರಲ್ಲ, ಯಾಕೆ ನಮ್ಮಲ್ಲಿ ಯಾರೂ ಸ್ವಾಮಿಗಳಿಲ್ಲವೆ" ಎಂದು ಹಲವರು,ನಾನು ಭಿಕ್ಷೆ ಕೇಳಲು ಹೋದಾಗ ಅಂದದ್ದುಂಟು.ಆಶ್ರಮದ ಚಟುವಟಿಕೆಗಳ ಪರಿಚಯವಾದ ಮೇಲೆ ತಮ್ಮ ಮೇಲಿನ ಮಾತುಗಳನ್ನು ಅವರು ವಾಪಸ್ಸು ಪಡೆದದ್ದೂ ಉಂಟು

ಬೆಂಗಾಡಾಗಿದ್ದ ಮಲ್ಲಾಡಿಹಳ್ಳಿ ಈಗ ನಂದನವನವಾಗಿದೆ; ಸೇವೆ, ವಿದ್ಯೆ, ಆರೋಗ್ಯಗಳ ಕೇಂದ್ರವಾಗಿದೆ; ಮರುಭೂಮಿಯಲ್ಲಿ ಓಯಸಿಸ್ ಬಂದಂತಾಗಿದೆ.ಇದು ಈ 'ತಿರುಕ'ರ ಅಹರ್ನಿಶ ಶ್ರಮದ ಫಲ.ಇದು ಪವಾಡ'ವೇ ಸರಿ. ಇವರ ಬಹುಮುಖ ಪ್ರತಿಭೆಗೆ ಮೋಹಿತರಾದ ಜನ ಅಭಿಮಾನದಿಂದ 'ಸ್ವಾಮಿಜಿ' ಎಂದೇ ಸಂಬೋಧಿಸುತ್ತಿದ್ದಾರೆ, ಈ 'ತಿರುಕ'ರನ್ನು. ಬ್ರಹ್ಮಚರ್ಯವನ್ನು ಕಟ್ಟುನಿಟ್ಟಾಗಿ ಆಚರಿಸಿಕೊಂಡು ಬಂದಿರುವ, 87 ವರ್ಷಗಳ ಯುವಕ, ಈ ಸ್ವಾಮಿಜಿಯ ಉಡುಪು ಮೊಣಕಾಲವರೆಗೆ ಬರುವ ಮೊಗಲಿನ ಖಾದಿ ಚಡ್ಡಿ ಹಾಗು ಖಾದಿ ಜುಬ್ಬ. ಈ ಆಶ್ರಮ ಜಾತ್ಯಾತೀತ, ಸಮತಾವಾದಿ ಆಶ್ರಮ, ಅನಾಥರ ಸೇವೆಗೇ ಮುಡಿಪಾದ ವಿದ್ಯಾಪೀಠ. ಪುಣ್ಯಕ್ಷೇತ್ರ. ಹೊಸದಾಗಿ ಬಂದ ಯಾತ್ರಿಕನನ್ನು ಕೂಗಿ ಕರೆಯುತ್ತದೆ—ಅವರ ಕರಕಮಂಡಲ, ಭಿಕ್ಷಾಪಾತ್ರೆ. "ಎಪ್ಪತ್ತು ಆಯಿತು, ಇನ್ನು ಮೂವತ್ತು ಬೇಕು, ಮೂವತ್ತು ಬೇಕು, ಬೇಕು, ಬೇಕು–ಎಂದು. ಯಾತ್ರಿಕ ತಬ್ಬಿಬ್ಬಾಗುತ್ತಾನೆ.'ತಮ್ಮ ಎಪ್ಪತ್ತು ಎಂದರೆ ಈಗಾಗಲೆ ಈ ಸೇವಾ ಕೇಂದ್ರಕ್ಕೆ 70 ಲಕ್ಷ ರೂಪಾಯಿ ಖರ್ಚಾಗಿದೆ.ನೋಡು ಅಲ್ಲಿ, ಎಡಗಡೆ ಕಾಣುವುದೇ ಸರ್ವೋದಯ ಮುದ್ರಣಾಲಯ, ಅತ್ತ ಮಗ್ಗುಲಿಗೆ ಆಯುರ್ವೇದ ಚಿಕಿತ್ಸಾಲಯ, ರುಗ್ಣಾಲಯ, ಪರಪ್ಪಸ್ವಾಮಿಗಳ ಗುಡಿ. ಎದುರಿಗಿರುವುದೇ ಉಪನ್ಯಾಸ ಮಂದಿರ ಹಾಗೂ ವ್ಯಾಸಪೀಠ, ಅತ್ತ ಅನ್ನಪೂರ್ಣ ಭೋಜನ ಶಾಲೆ,ಇತ್ತ ವ್ಯಾಯಾಮ ಶಾಲೆ, ವ್ಯಾಯಾಮ ಶಿಕ್ಷಣ ಶಾಲೆ.ಹಿಂದೆ ತಪೋವನ, ಗೋಶಾಲೆ;ಅದೋ ಅತ್ತ ಬಲಗಡೆ ಸರ್ವಸೇವಾ ಭೋದಕ ಶಿಕ್ಷಣಾಲಯ, ವೃತ್ತಿ ಶಿಕ್ಷಣ ಶಾಲೆ, ರಾಷ್ಟ್ರೀಯ ವಿವಿಧೋದ್ದೇಶ ಉನ್ನತ ಪ್ರೌಢಶಾಲೆ ಹಾಗೂ ಜೂನಿಯರ್ ಕಾಲೇಜ್, ವಾಚನಾಲಯ, ವಿದ್ಯಾರ್ಥಿ ವಸತಿಗೃಹ, ಉಪಾಧ್ಯಾಯರ ವಸತಿಗೃಹ, ಅತಿಥಿಗೃಹ, ಧರ್ಮಶಾಲೆ, ಶಿಶುವಿಹಾರ ಮತ್ತು ಮಹಿಳಾ ಸಮಾಜ. ಅಲ್ಲದೆ ದೇವರಹಳ್ಳಿ, ದುಮ್ಮಿ, ಶೆಟ್ಟಿಹಳ್ಳಿಗಳಲ್ಲಿ ಪ್ರೌಢ ಶಾಲೆಯನ್ನು ತೆರೆಯಲಾಗಿದೆ. ಇವುಗಳಿಗೆ ಈಗಾಗಲೇ 70 ಲಕ್ಷಕ್ಕೆ ಮೀರಿ ಹಣ ಖರ್ಚಾಗಿದೆ" ಎಂದಿತು. ಮೂಕನಾಗಿ ನಿಂತಿದ್ದ ಯಾತ್ರಿಕನನ್ನು ಅಲ್ಲಾಡಿಸಿ, ಸ್ವಾಮಿಜಿಯವರ ಪರಿಚಯ ಮಾಡಿಸಿ ಅನ್ನಪೂರ್ಣ ಭೋಜನ ಶಾಲೆಗೆ ಊಟಕ್ಕೆ ಕರೆದುಕೊಂಡು ಹೋಯಿತು. ಊಟವಾದ ಮೇಲೆ ಆ ಯಾತ್ರಿಕನ ತಲೆ ಸವರುತ್ತ ಹೇಳಿತು ನೋಡು, ಇನ್ನು ಮೂವತ್ತು ಬೇಕು, ಬೇಕು ಎಂದೆನಲ್ಲ; ಅಂದರೆ ಮುಂದಿನ ಯೋಜನಾ ಕಾರ್ಯಗಳಿಗೆ ಇನ್ನೂ 30 ಲಕ್ಷ ರೂಪಾಯಿ ಬೇಕಾಗಿದೆ–ಸರ್ವಸೇವಾ ಭೋಧಕ ಶಿಕ್ಷಣಾಲಯ ಕಟ್ಟಡ, ದೈಹಿಕ ಶಿಕ್ಷಣ ಕಾಲೇಜಿನ ಕಟ್ಟಡ, ಆಯುರ್ವೇದ ಆಸ್ಪತ್ರೆ, ರುಗ್ಣಾಲಯದ ಹೊಸ ಕಟ್ಟಡ, ಅನಾಥ ಸ್ತ್ರೀ ಸಂರಕ್ಷಣಾಲಯ, ಉಪಾಧ್ಯಾಯಿನಿಯರ ಶಿಕ್ಷಣ ತರಬೇತಿ ಕೇಂದ್ರ, ಭಜನ ಮಂದಿರ, ನಾಟಕ ಮಂದಿರ, ತೋಟದಲ್ಲಿ ಆರೋಗ್ಯ ಧಾಮಗಳು, ದುಮ್ಮಿ, ದೇವರಹಳ್ಳಿಗಳ ಪ್ರೌಢ ಶಾಲೆಗಳಿಗೆ ಸಂಭಂದಿಸಿದಂತೆ ಬಡಾವಣೆ ಕಟ್ಟಡಗಳು; ಇನ್ನೂ ಇನ್ನೂ ಬೇಕು ಹಣ, ಹಣ, ಹಣ' ಎಂದಿತು. ಯಾತ್ರಿಕ ಮಂತ್ರಮುಗ್ಧನಾಗಿ 100 ರೂ ನೋಟು ಭಿಕ್ಷಾಪಾತ್ರೆಯಲ್ಲಿ ಹಾಕಿ, ನಮಸ್ಕರಿಸಿ ಸ್ವಾಮಿಜಿ ಬಳಿ ಹೋದ. ಹಿಂದೆಯೇ ಭಿಕ್ಷಾಪಾತ್ರೆಯೂ ಬಂದಿತು. ಅಲ್ಲಿ ಕೆಲವರು ಹಿರಿಯರು ಚರ್ಚೆಯಲ್ಲಿದ್ದರು. ಮುಂದಿನ ಕೆಲಸಗಳಿಗೆ ಹಣ ಬಹಳ ಬೇಕು, ಕಾಲ ಬಹಳ ಬದಲಾಯಿಸಿದೆ ಎಂದು ಹೇಳುತ್ತಿದ್ದರು. ಸ್ವಾಮಿಜಿಯವರು ಕರ ಕಮಂಡಲವನ್ನು ತೋರಿಸಿ 'ಈ ವಟುವಿನ ಹೊಟ್ಟೆ ತುಂಬಾ ದೊಡ್ಡದು. ಎಷ್ಟು ಹಾಕಿದರೂ ಹಸಿವು, ಹಣ, ಹಣ ಅಂತಲೇ ಕೇಳುತ್ತಿರುತ್ತಾನೆ. ಇದುವರೆಗೆ ನಡೆಸಿದವರು ನೀವು; ನಾನು ಕೇವಲ ನಿಮಿತ್ತ ಮಾತ್ರ' ಎಂದು ಹೇಳಿ 12ನೇ ಶತಮಾನದ ಮಹಾ ಶಿವಶರಣ ಆಯ್ದಕ್ಕಿ ಮಾರಯ್ಯನ ಧರ್ಮಪತ್ನಿ ಲಕ್ಕಮ್ಮನ ವಚನ

ವನ್ನು ಸಮ್ಮತಿಯಿಂದ ಭಕ್ತಿ ಪರವಶರಾಗಿ ಹಾಡಿದರು. "ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ? ಬೆಟ್ಟ ಬಲ್ಲಿತ್ತೆಂದರೆ ಉಳಿಯ ಮೊನೆಯಲ್ಲಿ ಬಡತನವಿದ್ದರೆ ಒಡೆಯದೆ? ಘನ ಶಿವಭಕ್ತರಿಗೆ ಬಡತನವಿಲ್ಲ. ಸತ್ಯರಿಗೆ ದುಷ್ಕರ್ಮವಿಲ್ಲ. ಎನಗೆ ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವುಳ್ಳನ್ನಕ್ಕರ ಘನ ನಿಲುವುಳ್ಳ ಶಿವಭಕ್ತರಿಗೆ ಬಡತನವಿರದು. ಬಡತನವು ಕಷ್ಟದಾಗರ, ತಳಮಳದ ತವರು ಎಂದು ಭಾವಿಸಿದಾಗ ಬಡತನದ ಹೊರೆ ಹಿರಿದಾಗಿ ಕಂಡೀತು. ಆದರೆ ಅದುವೆ ಶಿವನ ಪ್ರಸಾದವೆಂದು ಆಧ್ಯಾತ್ಮಕ್ಕೆ ಸಾಧನ ಮಾಡಿಕೊಂಡಾಗ ಬಾಳೆ ಸಂತೃಪ್ತಿಯಾಗರವಾಗುವುದು. ಭಕ್ತನಾದವನಿಗೆಂದೂ ಬಡತನವಿಲ್ಲ. ಪರಮಾತ್ಮನಿರುವ ತನಕ ಬಡತನವಿಲ್ಲ" ಎಂದು ಹೇಳಿ ನಕ್ಕರು. ಯಾತ್ರಿಕನಿಗೆ ಚೇತನಶಕ್ತಿಯ ಮಹಾ ಬೆಳಗಿನ ಅರಿವಾಯಿತು. ಸ್ವಾಮೀಜಿಯವರಿಗೆ ದೀನದಲಿತರನ್ನು ಕಂಡರೆ ತುಂಬ ಅನುಕಂಪ, ಕರಗಿ ಹೋಗುತ್ತಾರೆ. ಮಕ್ಕಳ ಮನಸ್ಸು ಅವರದು. ಆದರೆ ಅಶಿಸ್ತನ್ನು ಕಂಡಲ್ಲಿ ಉಕ್ಕಿನಷ್ಟು ಕಠಿಣವಾಗುವುದು ಅವರ ಮನಸ್ಸು.

ಗೃಹಕೈಗಾರಿಕೆ, ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸುವವರಿಗೆ ಸ್ವಾಮೀಜಿಯವರ ಅಭಯ ಹಸ್ತ ಇದ್ದೇ ಇದೆ. ಆ ಕೈಗಾರಿಕೆಗಳಲ್ಲಿ ತಯಾರಾದ ವಸ್ತುಗಳನ್ನು ಮೊದಲು ತಮ್ಮ ಆಶ್ರಮಕ್ಕೆ ಕೊಳ್ಳುವುದರ ಮೂಲಕ ಪ್ರೋತ್ಸಾಹ ಕೊಡುತ್ತಾರೆ, ಧೈರ್ಯ ಹೇಳುತ್ತಾರೆ. ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯವರಿಗೆ ಬೇಡವಾದ ಕಿಟ್ಟ (slag) ಕ್ಲಿಂಕರ್‌ಗಳನ್ನು ಸಿಮೆಂಟಿನ ಜೊತೆಗೆ ಮಿಶ್ರಮಾಡಿ ನಮ್ಮ 'ಮೈಸೂರು ಲೈಟ್‌ವೈಟ್ ಕಾಂಕ್ರೀಟ್'ಸಂಸ್ಥೆ'ಯಲ್ಲಿನ ಹೊಸ ಯಂತ್ರಗಳಲ್ಲಿ ತಯಾರಾದ ಕಟ್ಟಡಕ್ಕೆ ಬೇಕಾಗುವ ಹಗುರು ಸಾಮಾನುಗಳನ್ನು ಮೊದಲಿಗೆ, ತಮ್ಮ ಆಶ್ರಮದಲ್ಲಿ ಕಟ್ಟುವ ಕಟ್ಟಡಗಳಿಗೆ ಉಪಯೋಗಿಸಲು ಅವಕಾಶ ಮಾಡಿಕೊಟ್ಟು ಉತ್ತೇಜನ ಕೊಟ್ಟಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಈ ಹಗುರ ಕಟ್ಟಡ ಸಾಮಾನುಗಳನ್ನು ಉಪಯೋಗಿಸಿದ ಕಟ್ಟಡ ಪೂರ್ಣಭದ್ರ, ಹಾಗು ಕಡಿಮೆ ಖರ್ಚಿನಲ್ಲಿ ಆಗುತ್ತದೆಯೆಂಬುದನ್ನು ಮನಗಂಡು ಎಲ್ಲ ರೀತಿಯ ಪ್ರೋತ್ಸಾಹ ಕೊಡುತ್ತಿದ್ದಾರೆ. ಹೆಜ್ಜೆ ಹೆಜ್ಜೆಗೂ ಮಾರ್ಗದರ್ಶಕರಾಗಿದ್ದಾರೆ. ಹೀಗೆಯೇ ಇನ್ನೂ ಅನೇಕ ಹೊಸ ಸಂಸ್ಥೆಗಳಿಗೆ ಸ್ವಾಮೀಜಿಯವರ ಅಭಯ ಹಸ್ತ ಇದ್ದೇ ಇದೆ. ಯಾವಾಗಲೂ ಹೊಸ ದೃಷ್ಟಿ, ಸೃಷ್ಟಿ ಇರಲೇಬೇಕೆಂದು ಎಚ್ಚರಿಸುತ್ತಿರುತ್ತಾರೆ.

ಸ್ವಾಮೀಜಿಯವರ ದಿನಚರಿ ಶುರುವಾಗುವುದು ಬೆಳಗಿನ ಝಾವ $3\frac{1}{2}$ ಗಂಟೆಗೆ. 5 ಗಂಟೆವರೆಗೆ ಅಂಗಸಾಧನೆ, ಪ್ರಾಣಾಯಾಮ, ಯೋಗಾಸನಗಳು. ಸ್ನಾನವಾದ ಮೇಲೆ $6\frac{1}{2}$ ಗಂಟೆವರೆಗೆ ಪೂಜೆ, ಧ್ಯಾನ. ಅನಂತರ ಮಿತ, ಶುಚಿ (ಖಾರ, ಹುಳಿ ಇಲ್ಲದ) ಆಹಾರ. ರಾತ್ರಿ ಊಟದವರೆಗೂ ಮಧ್ಯೆ ಏನೂ ಇಲ್ಲ. ಆಶ್ರಮದಲ್ಲಿದ್ದರೆ ಸಂಜೆ 5 ರಿಂದ $6\frac{1}{2}$ ವರೆಗೆ ಭಜನೆ ಇತ್ಯಾದಿ. ಶ್ರಾವಣ ಮಾಸದ ಒಂದು ತಿಂಗಳ ಕಾಲದಲ್ಲಿ ಮೌನವ್ರತ. ಪ್ರಾರ್ಥನೆ, ಬರಹ. ಶಕ್ತಿಸಂಚಯನಕ್ಕೆ ವಿರಾಮಕಾಲದಲ್ಲಿ ಲಕ್ಷಗಟ್ಟಲೆ 'ಓಂಕಾರ' ನಾಮ ಬರಹ. ಈ ನಿಯತ ಜೀವನದಿಂದಾಗಿ ಚಿರ ಚಿರಂಜೀವಿ. ಸ್ವಾಮೀಜಿಯವರ ಜ್ಞಾಪಕಶಕ್ತಿ ಅಪಾರವಾದುದು.

ದೇಶದ ದೊಡ್ಡ ಸಾಂಕ್ರಾಮಿಕ ರೋಗ ಜಾತ್ಯಾಂಧತೆ ಎಂಬುದು ಸ್ವಾಮೀಜಿಯವರ ದೃಢ ಅಭಿಪ್ರಾಯ. ಸರ್ವ ಧರ್ಮೀಯರು ಅವರವರ ಧರ್ಮದಲ್ಲೇ ಇದ್ದು ಸಾಕ್ಷಾತ್ಕಾರ ಪಡೆಯಬೇಕೆಂಬುದು ಅವರ ಸಂದೇಶ. ಅಂತರ್ಜಾತೀಯ ವಿವಾಹಕ್ಕೆ ಪ್ರೋತ್ಸಾಹ ಕೊಡಬೇಕು ಎಂಬುದು ಅವರ ಅಭಿಮತ. ಎಲ್ಲ ಶಾಲೆಗಳಲ್ಲೂ ಯೋಗಾಭ್ಯಾಸ, ಅಂಗಸಾಧನೆ ಕಡ್ಡಾಯವಾಗಿ ಹೇಳಿಕೊಡಬೇಕೆಂಬುದು ಅವರ ಅಭಿಪ್ರಾಯ. ಇತ್ತೀಚೆಗೆ ಪ್ರಧಾನ ಮಂತ್ರಿಗಳೂ ಸಹ ಇದೇ ಮಾತು ಹೇಳಿದ್ದು ಇಲ್ಲಿ ಸ್ಮರಿಸಿಕೊಳ್ಳಬಹುದಾಗಿದೆ.

ಶ್ರೀಮಂತರಾಷ್ಟ್ರವಾದ ಅಮೆರಿಕದಲ್ಲೂ, ಕಮ್ಯೂನಿಸ್ಟ ರಾಷ್ಟ್ರವಾದ ರಷ್ಯದಲ್ಲೂ ಯೋಗಭ್ಯಾಸದ ವಿಚಾರವಾಗಿ ತಿಳಿಯಲು ಕುತೂಹಲ ಕೆರಳಿದೆ. ಶ್ರೀ ಸ್ವಾಮೀಜಿಯವರ ಯೋಗಪ್ರದರ್ಶನ, ಅವರ ನೂರಾರು ಆಸನಗಳು ಪ್ರತಿ ಊರಿನಲ್ಲೂ ಸಾವಿರಾರು ಜನರನ್ನು ಆಕರ್ಷಿಸಿದೆ. ಪ್ರದರ್ಶನ ಎಲ್ಲ ಆದಮೇಲೆ ಆಶ್ರಮದ ಮಹಾ

ಯೋಜನೆಗೆ ಹಣಬೇಕು ಎಂದಾಗ ಭಿಕ್ಷೆ ಕೊಡಲು ಜನ ಮುಂದಾಗುತ್ತಾರೆ. ಮಾರನೆಯ ದಿನ ಮನೆಮನೆಗೆ ಭಿಕ್ಷೆ ಬೇಡಲು ಹೋದಾಗ ಗೌರವದಿಂದ ಅವರ ಜೋಳಿಗೆ ಭರ್ತಿ.

ನಾಟಕವಾಡಿ ಹಣ ದುಡಿಯುವುದು ಸರ್ವೆ ಸಾಮಾನ್ಯ. ಆದರೆ ಶ್ರೀಗಳವರು ನಾಟಕದ ಕಂಪನಿ ಕಟ್ಟಿ, ಅವರೇ ಅದರಲ್ಲಿ ಪಾತ್ರವಹಿಸಿ ಜನಕ್ಕೆಮನರಂಜನೆಕೊಟ್ಟು ಆಶ್ರಮಕ್ಕೆ ಹಣ ವಸೂಲಿ ಮಾಡುವುದು ಒಂದು ವಿಧಾನ.

ಶ್ರೀ ಸ್ವಾಮಿಜಿಯವರು ಮಹಾ ಆಯುರ್ವೇದ ಪಂಡಿತರು. ಅವರು ಭಿಕ್ಷಾಟನೆಗೆ ಎಲ್ಲಿಯೆ ಹೋಗಿರಲಿ, ಭಾನುವಾರ ಮಧ್ಯಾಹ್ನ ಆಶ್ರಮಕ್ಕೆ ವಾಪಸಾಗಲೆ ಬೇಕು. ಅಂದು ಸಂಜೆ ಬರುವ ನೂರಾರು ರೋಗಿಗಳಿಗೆ, ಅವರ ಜತೆ ಬರುವ ಸಂಗಾತಿಗಳಿಗೆ ಸಂಗೀತದ ರಸದೌತಣ. ಅಲ್ಲಿ ಹಾಡುವ ಭಕ್ತಿಗೀತೆಗಳು, ಹೊರಗಡೆಯಿಂದ ಬಂದವರಲ್ಲೇ ಸಂಗೀತ ಹಾಡಿಸುವುದು ಇತ್ಯಾದಿ ಕಾರ್ಯಕ್ರಮಗಳಿಂದಲೆ ರೋಗಿಗಳ ಮನಸ್ಸಿನ ಮೇಲೆ ಅಪರೋಕ್ಷವಾಗಿ ಪರಿಣಾಮ ಆಗಿರುತ್ತೆ. ಆಶ್ರಮದ ಭವ್ಯ ಕಟ್ಟಡಗಳು, ಅಲ್ಲಿಯ ಪರಿಸರ, ಆತಿಥ್ಯ ಇತ್ಯಾದಿ ದುಡ್ಡಿದ್ದವರ ಮೇಲೆ ಪರಿಣಾಮ ಮಾಡುವುದು ಖಂಡಿತ. ಇಂತಹ ಒಳ್ಳೆಯ ಸಾಮಾಜಿಕ ರಚನಾತ್ಮಕ ಕಾರ್ಯಗಳಲ್ಲಿ ನನ್ನ ಅಳಿಲು ಸೇವೆ ಯಾಕೆ ಆಗಬಾರದು? ಮನಸ್ಸಿನ ಪರಿವರ್ತನೆಗೆ ಆಗಲೆ ಆರಂಭ. ಕೊನೆಗೆ ಏನಿಲ್ಲ ಎಂದರೂ ಅವರ ಸಾಹಿತ್ಯ ಕೃತಿಗಳನ್ನಾದರೂ ಕೊಂಡು ಓದುವ ಹವ್ಯಾಸ ಪ್ರಾರಂಭ.

ಆಶ್ರಮಕ್ಕೆ ಒಮ್ಮೆ ಬಂದು ಅಲ್ಲಿಯ ಕೆಲಸಕಾರ್ಯಗಳನ್ನು ನೋಡಿದರೆ ಸಾಕು, ಆಶ್ರಮದ ಅಭಿಮಾನಿಗಳಾಗಿ ಹೋಗುತ್ತಾರೆ. ಅವರ ಯೋಗ ಶಿಕ್ಷಣಕ್ಕೆ ದೇಶಾದ್ಯಂತ ಸಮಾಜದ ವಿವಿಧ ಅಂತಸ್ತಿನ, ವರ್ಗಗಳ ಜನ ಬಂದು ತರಬೇತಿಹೊಂದುತ್ತಾರೆ. ಅವರುಗಳು ಸ್ವಾಮಿಜಿಯವರ ಲಕ್ಷಾಂತರ ಶಿಷ್ಯವರ್ಗಕ್ಕೆ ಸೇರಿಹೋಗಿ ಅವರುಗಳೆ ಬೇರೆ ಊರಿನಲ್ಲಿ ಆಶ್ರಮದ ಜೋಳಿಗೆ ತುಂಬಲು ನೆರವಾಗುತ್ತಾರೆ.

ಶ್ರೀ ರಾಘವೇಂದ್ರ ಸ್ವಾಮಿಜಿಯವರು ಭಿಕ್ಷುಕರೇನೊ ನಿಜ. ಆದರೆ ಇವರು ಅಸಮಾನ್ಯ ಭಿಕ್ಷುಕರು. ಅವರ ಭಿಕ್ಷೆ ತಮಗಲ್ಲ, ಆಶ್ರಮಕ್ಕೆ. ಆಶ್ರಮಕ್ಕಲ್ಲ ಸಮಾಜಕ್ಕೆ. ಸಮಾಜಕ್ಕಲ್ಲ ನಮಗೆ. ಆದ್ದರಿಂದಲೆ ಅವರು ಮಾಡುವ ತಿರುಪೆ ನಮಗೋಸ್ಕರ. ಅವರ ಭಿಕ್ಷೆಯ ನವ್ಯ ವಿಧಾನಗಳಿಂದ, ಅವರ ಬಹುಮುಖ ಪ್ರತಿಭೆಯ ಕಾರ್ಯ ವಿಧಾನಗಳಿಂದ ಅವರು ತಿರುಕರ ದೊರೆಯಾಗಿದ್ದಾರೆ. ಸರಕಾರ, ಅನೇಕ ಸಂಘಸಂಸ್ಥೆಗಳು ಕೋಟ್ಯಾಂತರ ರೂಪಾಯಿ ಖರ್ಚುಮಾಡಿ ಸಾಧಿಸಲಾರದುದನ್ನು ಸಾಧಿಸಿದ್ದಾರೆ. ಈ ತಿರುಕರ ಪವಾಡ ನೋಡಿದರೆ ಅವರೊಂದು ವ್ಯಕ್ತಿಯಲ್ಲ ಒಂದು ಸಂಸ್ಥೆ ಈ 'ತಿರುಕ'ರ ಕನಸುಗಳು ಇನ್ನೂ ಎಷ್ಟೋ! ಕನಸು ಕಾಣದೆ ಯಾರೂ ಮಹಾಸಾಧನೆ ಮಾಡಲಾರರು!

ಶರಣರ ವಿಚಾರ ಬರೆಯುತ್ತಒಂದು ಕಡೆ ಡಾ ಹೆಚ್. ತಿಪ್ಪೇರುದ್ರಸ್ವಾಮಿಯವರು ಹೀಗೆ ಹೇಳಿದ್ದಾರೆ– "ಶರಣರ ಜೀವನ ಬಹುಮುಖವಾದದ್ದು. ಕೆಲವರಂತೂ ಒಂದು ಕಡೆ ಸಾಧಕರು, ಇನ್ನೊಂದು ಕಡೆ ಸಮಾಜ ಸೇವಕರು; ಮತ್ತೊಂದು ಕಡೆ ಧರ್ಮದ ಬೆಳಕನ್ನು ಹೊತ್ತ ದೀವಟಿಗರು, ಕ್ರಾಂತಿಕಾರರು. ಆದರೂ ತಮ್ಮ ನಿತ್ಯಜೀವನದ ಕಾಯಕವನ್ನು ನಮ್ರಭಾವದಿಂದ ಮಾಡುವ ಕರ್ಮಕುಶಲಿಗಳು, ಜೀವನವನ್ನು ತೆರೆದ ಕಣ್ಣಿನಿಂದ ನೋಡಿದವರು. ಲೋಕದ ಕಷ್ಟಕಾರ್ಪಣ್ಯಗಳನ್ನು ಕಂಡು ಕನಿಕರಗೊಂಡವರು. ಕಷ್ಟಸುಖಗಳನ್ನು ತಾವೂ ಉಂಡವರು, ಈ ಎಲ್ಲ ಮುಖಗಳಿಂದ ನೂರಾರು ಅನುಭವಗಳನ್ನು ಪಡೆದ ಅವರ ಚೇತನ ಶ್ರೀಮಂತವಾಗಿದೆ; ಗಗನಗಾಮಿಯಾಗಿ ಮೇಲೇರಿದೆ"–ಈ ಅಭಿಪ್ರಾಯಗಳೆಲ್ಲವೂ ಪೂಜ್ಯ 'ತಿರುಕ'ರಿಗೂ ಒಪ್ಪುತ್ತವೆ ಎಂದರೆ ಅತಿಶಯೋಕ್ತಿಯಾಗಲಾರದು.

ಇಂತಹ ತಿರುಕರು ಪ್ರತಿಹಳ್ಳಿ, ಪ್ರತಿ ಊರಿನಲ್ಲಿದ್ದಿದ್ದರೆ ಗಾಂಧೀಜಿಯವರ 'ರಾಮರಾಜ್ಯ'ದ ಕನಸು ನನಸಾಗುತ್ತಿತ್ತೇನೋ. ಈ 'ಮಹಾ ತಿರುಕ'ರ ಭಿಕ್ಷಾಪಾತ್ರೆ ಅಕ್ಷಯಪಾತ್ರೆ ಆಗಿ ಅವರ ಹತ್ತಾರು ಯೋಜನೆಗಳು ಕಾರ್ಯಗತವಾಗಿ 'ತಿರುಕರ ದೊರೆ'ಯ ಕನಸೆಲ್ಲ ನನಸಾಗಲಿ ಎಂದು ನಮ್ಮೆಲ್ಲರ ಹಾರೈಕೆ.

ನೀ. ಕೃ. ರಾಮಶೇಷನ್

'ಜಟ್ಟಿ ಕುಣಿದೂರಿನ ಜಟ್ಟಿ'

ಸುಮಾರು 1938–42ರ ಮಾತು. ಆಗ ಭಾರತದಲ್ಲಿ ಬ್ರಿಟಿಷರ ಆಳ್ವಿಕೆ, ದಾಸ್ಯ ಇದ್ದ ಕಾಲ. ಭಾರತ ಅಶಾಂತಿಯ ಬೀಡು ಆಗ. ಗಾಂಧೀಜಿಯ ನೇತೃತ್ವದಲ್ಲಿ ನಡೆಯುತ್ತಿದ್ದ ರಾಜಕೀಯ ಚಳುವಳಿ, ಸತ್ಯಾಗ್ರಹ, ಉಪವಾಸ ಸತ್ಯಾಗ್ರಹ, ಮುಷ್ಕರ, ಶಾಂತಿಯುತ ಹೋರಾಟ, ಅಲ್ಲಲ್ಲಿ ಕ್ರಾಂತಿಕಾರಿಗಳ ಚಟುವಟಿಕೆ, ಸ್ವದೇಶೀ ಭಾವ ಮೂಡಿಸೋ ಹಾಗೆ ಹಳ್ಳಿಹಳ್ಳೀಗೂ ಯುವಜನರು ಹೋಗಿ ನಡೆಸುತ್ತಿದ್ದ ಚಟುವಟಿಕೆ, 'ಕ್ವಿಟ್ ಇಂಡಿಯ!' ಕೂಗು!! ಒಂದೆ ? ಎರಡೆ ? ಆಗ್ಗೆ ಹಿಮಾಲಯದೆಡೆಯಿಂದ ಸಾಧಕರೊಬ್ಬರು, ದಕ್ಷಿಣ ಭಾರತದತ್ತ ಬಂದರು. ತಮ್ಮ ಗುರುಗಳಿಂದ ಎರಡು ಅದೇಶ ಅವರಿಗೆ ಬಂದಿದ್ದವು. ಒಂದನೆಯದು, ತಾವು ಕಲಿತ ಯೋಗವಿದ್ಯೆಯನ್ನು ಮೂಲೆ ಮೂಲೆಗೂ ಪ್ರಚಾರಮಾಡಿ, ತಿಳಿಸಿ, ಆಚರಿಸುವಹಾಗೆ ಮಾಡುವುದು. ಎರಡನೆಯದಾಗಿ, ಅಂಗಸಾಧನೆ, ಇವುಗಳ ಹಿನ್ನಲೆಯಲ್ಲಿ ಆಗ್ಗೆ ಭಾರತದ ದಾಸ್ಯ ಬಿಡಿಸಲು ಅಗತ್ಯವಾಗಿದ್ದ ಸತ್ಯಾಗ್ರಹಿಗಳನ್ನು ಸಿದ್ಧಗೊಳಿಸುವುದು. ಅರ್ಥಾತ್ ಸಮರಕ್ಕೆ ಯೋಧರನ್ನು ನಿರ್ಮಾಣ ಮಾಡುವುದು. ಮೊದಲನೆಯದು, ಭಾರತದಂಥ ತಪೋಭೂಮಿ–ಯೋಗಭೂಮಿಯಲ್ಲಿ ಪಾಶ್ಚಾತ್ಯರ ದಬ್ಬಾಳಿಕೆ, ಆಕ್ರಮಣ, ಅನುಕರಣೆ ಇವುಗಳಿಂದ ಮರೆಯಾಗುತ್ತಿರುವ ಜೀವಂತ ವಿದ್ಯೆ, ಯೋಗವಿದ್ಯೆಯನ್ನು ಪ್ರಚುರಪಡಿಸುವುದು. ಅದು, ಆಗ್ಗೆ ಮಾತ್ರ ಅಲ್ಲ, ಅನುಕರಣೆ ಬಲವಾಗಿ, ನಿರ್ವೀರ್ಯ ಆಗುತ್ತಿರುವ ಇಂದಿನ ಯುವಜನ ಸಮಾಜಕ್ಕೂ ಅತ್ಯಗತ್ಯ, ಹಾಗೂ ಯುವಜನರ ವೀರ್ಯವತ್ತ್ವದ, ಧೀಶಕ್ತಿಯ ಪುರೋಭಿವೃದ್ಧಿಗೆ ಅದು ಸಾಧಕ. ವ್ಯಕ್ತಿ ಸಮುದಾಯ ಆದ ಸಮಾಜದ ಹಿತ, ಆರೋಗ್ಯ ಸಾಧಿಸಲು ನಿಷ್ಕಾಮಕರ್ಮದಿಂದ ಯತ್ನಿಸುವ ವ್ಯಕ್ತಿಯೊಬ್ಬನನ್ನು ಸನ್ಯಾಸಿ ಅನ್ನೋಣವೇ, ಸಾಧಕ ಅನ್ನೋಣವೆ ? ಸನ್ಯಾಸಿ ತನ್ನನ್ನೆ ನ್ಯಾಸವಾಗಿ ನಾಡಿನ ಏಳ್ಗೆಗೋಸುಗ ಇಟ್ಟುಕೊಂಡಿರುವುದರಿಂದ, ಸಾಧಕ–ತನ್ನ ಮಾರ್ಗದಲ್ಲಿ ತಾನು ತನ್ನ ಗುರುಗಳಿಂದ ನಿಷ್ಠೆಯಿಂದ ಕಲಿತದ್ದನ್ನು ಬಾಳಿನ ನಿತ್ಯ ಬದುಕಲ್ಲಿ ಅಳವಡಿಸಿ ನಡೆಯುತ್ತಿರುವುದರಿಂದ, ಹೀಗೆ ಆ ವ್ಯಕ್ತಿಗೆ ಎರಡೂ ರೀತಿ ಕರೆದರೂ ತಪ್ಪಿಲ್ಲ. ಎರಡನೆಯದು, ಆಗ್ಗೆ ಬೇಕಾಗಿದ್ದ ರಾಜಕೀಯ ಹೋರಾಟ. ಅದೂ ಶಾಂತಿಯುತ, ರಚನಾತ್ಮಕ, ಶಕ್ತಿಯುತ ಹೋರಾಟ. ಅಂಥ ಜ್ವಲಂತಪ್ರಯತ್ನ ಇವರು ನಡೆಸಬೇಕಿದ್ದದ್ದು. ಅದು ದೇಶ ಸೇವೆ. ಹಾಗಾದರೆ, ಸಮಾಜದ ಉದ್ಧಾರಕ್ಕೆ ದುಡಿಯೋದು, ಸಮಾಜದ ಚಾರಿತ್ರ್ಯ, ಶಕ್ತಿ, ಆರೋಗ್ಯ, ಚೈತನ್ಯ, ಇವುಗಳೆಲ್ಲವನ್ನೂ ಕಾಪಾಡೋ ದಿಸೆಯಲ್ಲಿ ದುಡಿಯೋದು, ಅದೂ ದೇಶಸೇವೆಯೇ ಅಲ್ಲವೇ? ಮಹಾರಾಷ್ಟ್ರದ ಕಡೆ ಸಹ ಆಗ್ಗೆ ಹೀಗೇ ಒಬ್ಬ ವ್ಯಕ್ತಿ–ಆತ ಯೋಗಿಯಲ್ಲ, ಸಂಸಾರಿ,—ದುಡಿದವರು. ಸಹಕಾರಸಂಘ ಸ್ಥಾಪಿಸುವುದು, ಬಡ ಹೆಂಗಸರು, ಅನಾಥ ಮಕ್ಕಳನ್ನು ರಕ್ಷಿಸಲೆಂದು ದುಡಿದವರು. ದೇಶದ ಜನತೆ ಸ್ವಾವಲಂಬಿ ಆಗಬೇಕು ಸತ್–ಚಾರಿತ್ರ್ಯವುಳಿಸಿಕೊಳ್ಳಬೇಕು. ಇದು ಅವರ ಬಯಕೆ. ಕುತ್ಸಿತ ಭಾವನೆ, ಕಂದಾಚಾರ, ಮೂಢನಂಬಿಕೆ ಅವರು ದ್ವೇಷಿಸುತ್ತಾ ಇದ್ದರು, ಗೋಪಾಲಕೃಷ್ಣ ದೇವಧರ್ ಅಂತ. ಗೋಖಲೆಯವರ

ಸಮಸಮಕ್ಕೂ ಹೆಗಲು ಹಚ್ಚಿ ದುಡಿದಾತ. "ಭಾರತ ಸೇವಕ ಸಮಾಜ"ದ (Sevants of India Society) ಅಧ್ಯಕ್ಷರೂ ಆಗಿದ್ದರು. "ಸೇವಾಸದನ" ಅಂತ ಪೂನಾದಲ್ಲಿ ಸಂಸ್ಥೆಯನ್ನು ಕುರಿತು ಪ್ರಸ್ತಾಪಿಸಿದರೆ, ಅದರ ಬೆನ್ನಿಗೇ ದೇವಧರ್ ಅವರನ್ನೂ ಜನ ನೆನಪು ಮಾಡಿಕೊಳ್ಳುತ್ತಾರೆ. ಅನೇಕ ಬಡಜನರ ಗುಡಿಸಲುಗಳಲ್ಲಿ ಬಾಳಿನ ಹಣತೆ ಕೊಟ್ಟು, ಅವರ ಬಡತನದ ಕತ್ತಲನ್ನು ತಕ್ಕ ಮಟ್ಟಿಗೆ ನಿವಾರಿಸಲು ಯತ್ನಿಸಿ, ಆ ದಿಸೆಯಲ್ಲಿ ದುಡಿದ ವ್ಯಕ್ತಿ ಅಂತ ನೆನೆಯುತ್ತಾರೆ.

ಈಗ ಪ್ರಸ್ತಾಪಿಸುತ್ತಾ ಇರುವ ಸಾಧಕನೂ ಅಷ್ಟೆ. ವಿಶ್ವ ಕುಟುಂಬಿ. ತಾನು ಯೋಗಿ, ಕರ್ಮ ಅಂಟಿಸಿಕೊಳ್ಳ, ಕರ್ಮ ಮಾಡುವುದು ಬಿಡ. ತಾನಾಯಿತು, ತನ್ನ ಯೋಗಸಾಧನೆಯಾಯಿತು. ಹಾಗಂತ, ಮೂಗು ಹಿಡಕೊಂಡು ಮಟಮಟ ಮಂತ್ರ ಉಚ್ಚರಿಸಿ ಸದಾ, ಮಡಿ, ಮಡಿ ಅಂತ ಹಾರಾಡೋ ಮಠಾಧಿಪತಿ ಅಲ್ಲ. ರಾಜಕೀಯದ ಸ್ವಾಮಿಯೂ ಅಲ್ಲ. ಬರಿಯ ಸನ್ಯಾಸಿ, ಪರಿವ್ರಾಜಕ, ವೇದ ವಿದ್ಯೆಯ ಜತೆಗೆ ಸಮಾಜೋದ್ಧಾರಕ್ಕೆ ತನ್ನ ಕೈಲಾದ ಪ್ರಯತ್ನ ಶ್ರಮದಿಂದ ಸಾಧಿಸೋಣ ಅಂತ ಹೊರಟ ಸಾಧಕ. ದಕ್ಷಿಣ ಭಾರತಕ್ಕೆ ಬಂದಾತ ಇಲ್ಲಿಯೆ ನೆಲಸಿದರು. ಕಾರ್ಯ, ಕಾರ್ಯ- ಯಾವಾಗಲೂ ದುಡಿಮೆಯೆ ಹೊರತು ಮಾತು ತುಂಬ ಕಡಿಮೆ. ಎಷ್ಟು ಬೇಕೋ ಅಷ್ಟೆ. ಮಾತು ಕಿರಿದು-ಕೃತಿಹಿರಿದು.ವ್ಯಕ್ತಿಯೂ ಅಷ್ಟೆ. ವಾಮನ. ಮಾಡಿರೋ ಕೆಲಸ ತ್ರಿವಿಕ್ರಮ 'ಕಾಯಕವೇ ಕೈಲಾಸ' ಅಂಬೋ ಮಾತಿಗೆ ಸತ್-ಉದಾಹರಣೆ. ಒಬ್ಬನೇ ದುಡಿದದ್ದು. ಅವರ ವೇಷವೂ ಇಷ್ಟೆ: ಒಂದು ಕಾವಿಚಡ್ಡಿ, ಒಳಗೆ ಬಿಗಿದು ಕಟ್ಟಿದ ಲಂಗೋಟಿ, ದಪ್ಪ,ಒರಟು ಖಾದಿಯ, ಕಾವಿ ಮೋಟಂಗಿ, ಹೆಗಲಿನಿಂದ ಇಳಬಿಟ್ಟ ದಪ್ಪ ಖಾದಿಬಟ್ಟೆಯ ಚೀಲ, ಕೈಯಲ್ಲೊಂದು ಹೊಳೆಯುವ ಹಿತ್ತಾಳೆಗಿಂಡಿ, ಕ್ರಾಪುತಲೆ. ಈತ ಸನ್ಯಾಸಿಯೇ, ಸಾಧಕನೆ? ಮೊದಲೇ ಹೇಳಿದಹಾಗೆ ಎರಡೂಕೂಡ. ಇದಲ್ಲದೆ ವೈದ್ಯಕೀಯ ಬಲ್ಲರು, ಕೃಷಿಗೊತ್ತು. ಸುಮಾರು 14ರ ಎಳೆ ವಯಸ್ಸಿಗೇ ಮನೆ ಬಿಟ್ಟು, ಭಾರತವನೆಲ್ಲ ಸುತ್ತಿ ಹಿಮಾಚಲದ ಉನ್ನತಸಾನ್ನಿಧ್ಯದಲ್ಲಿ ತಪೋನಿರತರಾಗಿ, ಗುರುಗಳಿಂದ ವಿದ್ಯೆಗಳನ್ನು ಕಲಿತು, ಶಿವಾನಂದರಂಥ, ಪೂಜ್ಯ ಪಳನಿಸ್ವಾಮಿಗಳಂಥ, ಸಾಧು ಸಂತರಿಂದ ಯೋಗವಿದ್ಯೆ ಕಲಿತ ಯೋಗಸಾಧಕ ಆಗಿ, ಆಯುರ್ವೇದದಲ್ಲೂ ಪರಿಣತರಾಗಿ, ಸುಸಂಸ್ಕೃತ ಜೀವ ಆಗಿ, ಮೈ-ಮನಗಳೆರೆಡರಲ್ಲೂ ಸಂಪೂರ್ಣ ಚೇತನ ಪಡೆದು ಸಮಾಜ ಸೇವೆಗೆಂದು ಹೊರಟ ಈ ಮಹಾನುಭಾವ, ಕರ್ಣಾಟಕದಲ್ಲಿ ಬಂದು ನೆಲಸಿದ್ದು, ನೆಲಸಲು ಮನ ಮಾಡಿದ್ದು, ಇಲ್ಲಿನ ಜನತೆಯ ಪುಣ್ಯ ; ತಾಯಿ ಭಾರತ ಮಾತೆಯ ಪುತ್ರಿಯಾದ ಕರ್ಣಾಟಕ ದೇವಿಯ ಬಸಿರಿನ ಪುಣ್ಯ!

ಹೀಗೆಲ್ಲ ಮೊದಲು ಹೇಳಿರೋ ಮಾತು ಅವರಿಗೆ ಹಿಡಿಸವು. ಹೊಗಳಿಕೆಯನ್ನು ಅವರು ದ್ವೇಷಿಸುತ್ತಾರೆ. ಪ್ರೇಮ-ಸಾತ್ವಿಕ, ಶುದ್ಧ ಪ್ರೇಮ ಅವರಿಗೆ ಬೇಕಾದ್ದು. ಅದು ಹಾರ್ದಿಕವಾದದ್ದು. ಬೂಟಾಟಿಕೆಯದಲ್ಲ, ಒಳಗೆ ವಿಷ, ಮೇಲೆ ನಗೆ.-ಮೊಸಳೆ ಇರೋ ಮಡು ಹಾಗೆ. ಅದನ್ನವರು ತಕ್ಷಣ ತಿಳಿದುಬಿಡುತ್ತಾರೆ. ಅಂಥವರನ್ನ ಖಡಾಖಂಡಿತವಾಗಿ ಶಿಕ್ಷಿಸುವಂಥ ಮೊನಾಚಾದ ಮಾತಾಡುತ್ತಾರೆ. ಈ ವ್ಯಕ್ತಿ ಮಾಡಿರುವ ಸಾಧನೆ, ಸಮಾಜಕ್ಕೆ ಗೈದಿರುವ ಸೇವೆ-ನಿಷ್ಕಾಮ ಕರ್ಮ-ಈ ವಿಚಾರಗಳನ್ನು ನೆನೆದು, ಸ್ಮರಿಸಿ, ಆಲೋಚಿಸಿ, ಎರಡು ಮಾತು ಬರೆದರೆ ಅದು ಆ ವ್ಯಕ್ತಿಯಲ್ಲಿರುವ ಹಿರಿಯತನಕ್ಕೆ ಅರ್ಪಿಸುವ ಒಂದು ನುಡಿಕುಸುಮ, ಅಷ್ಟೆ.

ಆ ವ್ಯಕ್ತಿ ಯಾರಂತೀರಿ? ಮಲ್ಲಾಡಿಹಳ್ಳಿಯ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಜಿ. ಬ್ರಹ್ಮಚರ್ಯದ ಸಾಧನೆಯಿಂದಿರುವ ಶರೀರ. "ವರುಷವೆಂಭತ್ತಂತೆ! ಹುರಿಯಣಂ ಬಗ್ಗಿಲ್ಲ" ಅಂತ ಗೋವಿಂದ ಪೈಗಳವರ "ವೈಶಾಖಿ"ಯಲ್ಲಿ ಬರುತ್ತಲ್ಲ ಹಾಗೆ, ಎಂಭತ್ತರ ವಯೋಮಾನ ಸಂದಿದ್ದರೂ ಸ್ವಾಮಿಜಿಯನ್ನು ನೋಡಿದವರು ಅದರರ್ಧ ವಯಸ್ಸು ಹೇಳಬಹುದಾದ ಯೌವನದ ಹೊಳಪು ಅವರಲ್ಲಿದೆ. ಸುಕ್ಕು ಇನ್ನೂ ಕಂಡಿಲ್ಲ. ಈಗಲೂ ವ್ಯಾಯಾಮಕ್ಕೆ ನಿಂತರೆಂದರೆ, ಆಗ ನೋಡಬೇಕು-ಆ ನಿಯಮದಿಂದೊಡಗೂಡಿ ಉಬ್ಬಿ, ಇಳಿಯುವ ಸ್ನಾಯುಗಳನ್ನ! ಮಾತೂ ಅಷ್ಟೆ, ಚೂಪು. ಇನ್ನು ಸಂಗೀತಕ್ಕೆ ಸರಿಯಾದ ಶಾರೀರ. ಅಚ್ಚುಕಟ್ಟಾಗಿ ಹಾಡುತ್ತಾರೆ.

ಕರ್ಮಯೋಗಿ, ಅಂತಯೆ ಕಾವ್ಯರ್ಷಿ ಕೂಡ. ಕವಿಹೃದಯದ ಸ್ಪಂದನ ಕಾಣಬೇಕಾದರೆ, ಅವರ ಕವನ ಸಂಕಲನಗಳನ್ನ ಜನತೆ ಓದಬೇಕು. ಇನ್ನು ಕೃಷಿಯೊ? ಅದನ್ನ ಆಶ್ರಮದ ಬಯಲಿನ ಆ ಕಡೆ ತೆಂಗಿನಸಾಲು ನೋಡಿದರೆ ತಿಳಿದು ಬರುತ್ತೆ. ಎಲ್ಲಿವೆಲ್ಲಿದರಲ್ಲೂ ಅಚ್ಚುಕಟ್ಟು, ಸ್ವಯಂ ಪರಿಪಾಲಿತ ನಿಯಮ.

ಸ್ವಾಮಿಜಿಯ ಸಾಧನೆ ಸೇವೆ, ಸದ್ದಿಲ್ಲದ್ದು. ಚಿತ್ರದುರ್ಗದ ಗಂಡು ನೆಲ ಇವರಿಗೆ ಹಿಡಿಸಿತೇ, ಅಥವಾ ಅಲ್ಲಿಗೆ ಬರಬೇಕಿದ್ದ ಯಶಸ್ಸೆ? ಅಲ್ಲೆ ಹೊಳಲ್ಕೆರೆ ತಾಲ್ಲೂಕು. ಎರೆನೆಲ ಹೆಚ್ಚು. ಅದರ ಹತ್ತಿರವಲ್ಲೇ ಇದೆ ಸಣ್ಣ ಊರು, "ಮಲ್ಲಾಡಿಹಳ್ಳಿ". ಈ ದಿನ ಅದರ ಹೆಸರು ಅಮೇರಿಕೆಯಲ್ಲೂ ಕೇಳ ಬಂದಿದ್ದರೆ, ಅದರ ಬೆನ್ನಿಗೇ ಇರುವ ಒಂದು ಸೇವಾ ಸಂಸ್ಥೆಯಿಂದಾಗಿ. ಅದೇ—"ಅನಾಥಸೇವಾಶ್ರಮ" ಸಂಸ್ಥೆ. ಹೆಸರೇ ಎಷ್ಟು ಹಾರ್ದಿಕವಾಗಿದೆ ನೋಡಿ? "ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಂ ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ" ಅಂತ ಅಪ್ಪಣೆ ಕೊಡಿಸಿದ ಗೀತಾಚಾರ್ಯನ ಆಶೀರ್ವಾದ ಈ ಸಾಧುವಿಗೆ ಖಂಡಿತಾ ಇತ್ತು, ಈ ಕೆಲಸಕ್ಕೆ ನಿಯೋಜಿಸಿ, ಯಶಸ್ಸು ನೀಡುತ್ತಿದ್ದಾನೆ ಅಂತ ಅನ್ನಿಸುತ್ತೆ. ಅದು ಉತ್ಪ್ರೇಕ್ಷೆ ಅಲ್ಲ. "ಏನು ಮಹಾ?" ಅಂತ ಹಗುರವಾಗಿ ಅನ್ನೋ ಹಾಗೂ ಅಲ್ಲ. ಸೇವೆ ಅಂಥದ್ದು. ಪ್ರತ್ಯಕ್ಷ ಕಾಣುವಂಥದ್ದು. ಪ್ರಶಂಸನೀಯ ಆದದ್ದು. ಆ ಸಂಸ್ಥೆಯನ್ನು ಕಟ್ಟಿ, ಬೆಳಸತಾ ಇದಾರೆ ಸ್ವಾಮಿಜಿ.

ಸುತ್ತ ಮುತ್ತ ಮಳೆ ಕಡಿಮೆ ಆದ್ದರಿಂದ ಒಣಕೆರೇ ಹೆಚ್ಚು. ಆದರೂ ಈ ವಾತಾವರಣವನ್ನು ನಾವು ಪ್ರವೇಶಿಸಿದೊಡನೆಯೆ ಹಸಿರು ಕಾಣುತ್ತದೆ. ಶಿಸ್ತು, ಸಂಯಮ, ದೃಢತೆ, ಮೈಗೂಡಿ ಬರುತ್ತವೆ. 'ಅನಾಥಸೇವಾಶ್ರಮ' ಇಂದು ಇಡಿ ಭಾರತಕ್ಕೇ ಒಂದು ಮಾದರಿಸೇವಾಸಂಸ್ಥೆ ಆಗಿ ಮೈತಾಳಿ ನಿಂತಿದೆ. ಸಾವಿರಾರು ಮಕ್ಕಳನ್ನು ಸಾಕಿ ಉತ್ತಮ ಪ್ರಜೆಗಳನ್ನಾಗಿ, ಸಾವಿರಾರು ಶಿಕ್ಷಕರನ್ನು ದಕ್ಷರನ್ನಾಗಿ—ಮಾಡಿದೆ. ಸಮಾಜಕ್ಕೆ ಇನ್ನೆಂಥ ಕೊಡುಗೆ ಬೇಕು? ಅದಕ್ಕಾಗಿ ಸ್ವಾಮಿಜಿ ಪಟ್ಟ ಶ್ರಮವೆಷ್ಟು? ಆ ನಿಸ್ವಾರ್ಥ, ನಿಷ್ಕಾಮಕರ್ಮ ಎಂಥ ಮಟ್ಟದ್ದು?

'ಅನಾಥ ಸೇವಾಶ್ರಮ'ದ ಬಾಗಿಲಲ್ಲೆ ಕಾಣಬರುತ್ತೆ ದಪ್ಪ ಅಕ್ಷರಗಳಲ್ಲಿ ಬರೆದ ಒಂದು ದೊಡ್ಡ ಬೋರ್ಡು "ರಾಜಕೀಯಕ್ಕೆ ಇಲ್ಲಿ ಪ್ರವೇಶವಿಲ್ಲ" ಅಂತ. ಅಲ್ಲಿಗೆ ಯಾವುದೆ ರಾಜಕೀಯ ಆದರೂ, ಮನದಲ್ಲಿ ದಮನ ಆಗಲೇ ಬೇಕು. ಮತ್ತೆ ಮುಕ್ತಮನದಿಂದ ಒಳಹೊಕ್ಕು,ಶುದ್ಧನಾಗಿಆಚೆ ಬಂದು, ಸಾಧಕನ ಜಾಡನ್ನು ಸ್ವಲ್ಪವಾದರೂ ಅನುಸರಿಸುವ ನಮ್ಮ ಪ್ರಯತ್ನವನ್ನು ಶ್ರದ್ಧೆಯಿಂದ ಮಾಡಿದರೆ, ಅದೇ ಆ ಸಾಧಕ—ಸನ್ಯಾಸಿ—ಸ್ವಾಮಿಜಿಗೆ ಕೊಡಬಹುದಾದ ಒಳ್ಳೆಯ ಕಾಣಿಕೆ.

ಆಶ್ರಮದೊಳಕ್ಕೆ ಹೋಗುತ್ತಿದ್ದಂತೆ, ಎಡಗಡೆ ಒಂದು ಕಲ್ಲಿನಲ್ಲಿ ಕಟ್ಟಿದ ಮಠ ಸಿಗುತ್ತೆ, 'ಪರಪ್ಪ ಸ್ವಾಮಿಗಳ ಮಠ' ಅಂತ. ಸ್ವಾಮಿಜಿ ತಮ್ಮ ಸಾಧನೆಯನ್ನು ಸಂಸ್ಥೆಯ ರೂಪದಲ್ಲಿ ಕಡೆಯೋದಕ್ಕೆ ಮೊದಲು ಊರಿಗೆ ಬಂದಾಗ, ಸ್ಫೂರ್ತಿಕೊಟ್ಟ ಮಠ, ಇದು. ಎದುರಿಗೆಯೆ ಕಾಣುವ ಪ್ರಾರ್ಥನಾ ಮಂದಿರ. ಸರ್ವಧರ್ಮ ಪ್ರಾರ್ಥನೆ, ಸದ್ಭಾವನೆ ಮೂಡಿಸೋ ಹಾಡುಗಳು. ಪ್ರಾರ್ಥನಾ ಮಂದಿರದೊಳಹೊಕ್ಕು ಸಭಾಂಗಣ ದಾಟಿದರೆ ಕಾಣುತ್ತೆ 'ಮಾಣಿಕರಾಯ ವ್ಯಾಯಾಮಶಾಲೆ'. ಅದು ಭವ್ಯವಾಗಿದೆ ಗರಡಿ, ವ್ಯಾಯಾಮ, ಎರಡಕ್ಕೂ ಪ್ರಾಶಸ್ತ್ಯ, ಪಾಠವೂ ಉಂಟು. ಉತ್ತಮ ದೇಹದಾರ್ಢ್ಯ ಬಾಳಿಗೆ ಒಂದು ಅಗತ್ಯ, ಅವಿಭಾಜ್ಯ ಅಂಗ ಅಲ್ಲವೆ ? 'ರತನ್‌ಕೇ ಜತನಾ' ಅಂತ. ವೀರ್ಯವನ್ನು ರತ್ನದ ಹಾಗೆ ಕಾಪಾಡಿಕೊಂಡರೆ ಅದು ನಮ್ಮನ್ನು ಕಾಪಾಡುತ್ತೆ. ಅದರಲ್ಲೇ ಇದೆ, ಬಾಳಿನ ಸಾರ. ಪಟುತ್ವ ಇರೋ ಶರೀರ-ಇದ್ರೆ, ಮನಸ್ಸನ್ನೂ ಚೆನ್ನಾಗಿ ಇರಿಸಿಕೊಳ್ಳೊ ಪ್ರಯತ್ನ ನಡೆಸಬಹುದು. ಇದನ್ನೆ ಸ್ವಾಮಿಜಿ ಒತ್ತಿ ಒತ್ತಿ ಹೇಳುತ್ತಾರೆ. ಅವರು ಬರೀ ಶರೀರಕ್ಕೆ ಬೆಲೆ ಕೊಡೊಲ್ಲ, ಅದರೊಂದಿಗೆಯೆ ಮನಸ್ಸು ಬೆಳಸಿಕೊಳ್ಳಲನುಕೂಲವಾದ ಸಂಸ್ಕೃತಿಗೂ ಬೆಲೆ ಕೊಡುತ್ತಾರೆ. ಆಶ್ರಮ ಎಂದರೆ ಹುಲ್ಲು ಜೋಪಡಿ ಅಲ್ಲ. ಭವ್ಯವಾದ ಗಾರೆ ಕಟ್ಟಡಗಳಿವೆ. ಸಂಸ್ಥೆಯಲ್ಲಿ ಸಾವಿರಾರು ಬಡಹುಡುಗರನ್ನು ಉಚಿತವಾಗಿ ಊಟೋಪಚಾರ ಕೊಟ್ಟು, ಸಾಕುತ್ತಾ ಇದ್ದಾರೆ. ಶಿಕ್ಷಕರನ್ನು ತರಬೇತು ಮಾಡುತ್ತಿದ್ದಾರೆ. ವೈದ್ಯಕೀಯ

ಕೂಡ ಆಸಕ್ತರಾದವರಿಗೆ ಕಲಿಯೊ ಅವಕಾಶ ಇದೆ. ಎಲ್ಲ ಉಚಿತ. ಸಂಸ್ಥೆಯ ಒಂದೊಂದು ಕಟ್ಟಡಕ್ಕೂ ಸ್ವಾಮಿಜಿಯ ಯೋಗಾಸನ ಪ್ರದರ್ಶನ, ತನ್ಮೂಲಕ ಶರೀರಶ್ರಮ ತಾನೇ ತಾನಾಗಿ ಗಾರೆ ಹಾಕಿದೆ ಆ ಶ್ರಮ ಅಲೆತ, ಇವಿಲ್ಲದಿದ್ದರ್ರೆ, ಸಾಧನೆ ಮುಂದುವರಿಯುತ್ತಿರಲಿಲ್ಲ.

ಶ್ರೀ ಸ್ವಾಮಿಜಿಯವರನ್ನು ಪ್ರಥಮಬಾರಿಗೆ ಶಿವಮೊಗ್ಗೆಯಲ್ಲಿ ಕಂಡಾಗ ಸಾಧಕ–ಸನ್ಯಾಸಿ ಶ್ರೀ ವಿವೇಕಾನಂದರು ನೆನಪಿಗೆ ಬಂದರು. ವಿವೇಕಾನಂದರ ಮಾತುಗಳ ಸಾರ ನೆನಪಿಗೆ ಬಂತು. ‘ಸನ್ಯಾಸಿ ಆದವನು ಮೂಲೇಲಿ ಮೂಗು ಹಿಡಿದು ಕೂಡುವುದಿಲ್ಲ. ಸಮಾಜದ ದೀನ–ದಲಿತರ ಸೇವೆಗೆ, ನೋವುಗಳ ನಿವಾರಣೆಗೆ ಟೊಂಕಕಟ್ಟಿ ನಿಲ್ಲಬೇಕು. ಅದೇ ಅವನ ತಪಸ್ಸಿನ ಒಂದು ಭಾಗ. ಆದರೆ ಆ ಕರ್ಮದಲ್ಲಿ ಆತ ಫಲವನ್ನು ನಿರೀಕ್ಷಿಸಬಾರದಷ್ಟೆ. ತಾನು ಮಾಡುವುದಷ್ಟೆ ತನ್ನ ಕೆಲಸ. ಮಿಕ್ಕುದೇಕೆ? ಅದು ಈಶ್ವರೇಚ್ಛೆ. ಶ್ರೀ ಸ್ವಾಮಿಜಿ ಈ ಮಾತನ್ನು ಅಕ್ಷರಶಃ ತಮ್ಮ ದಿನನಿತ್ಯದ ಬದುಕಿನಲ್ಲಿ ಅಳವಡಿಸಿಕೊಂಡಿರುವಂಥ ಮಹನೀಯರು. ಆ ದಿನ ಅವರ ಯೋಗಾಸನ ಪ್ರದರ್ಶನ ಕಂಡು ವಿದ್ಯಾರ್ಥಿಯಾಗಿದ್ದ ನನ್ನ ಮನಸ್ಸು ಅದೆಷ್ಟು ಸಂತೋಷ ಗೊಂಡಿತೊ! ನಿರ್ಮಲವಾದ ಸಂತೋಷ, ಅಲ್ಲಿ ಇಹದ ಡಾಂಭಿಕತೆ, ಕೃತಕತೆ ಇರಲಿಲ್ಲ. ಕರುಳನ್ನು ಚೊಕ್ಕಟ ಮಾಡುವ “ವಾಸನೇತಿ” ಕ್ರಿಯೆಯನ್ನು ಶ್ರೀ ಸ್ವಾಮಿಜಿ ನಡೆಸಿದರು. ಅದು ನಡೆಯುವಾಗ, ವಿದ್ಯಾರ್ಥಿಗಳಾದ ನಾವೆಲ್ಲ ತುಟಿಪಿಟಕ್ಕೆನ್ನದೆ, ಚಕಿತರಾಗಿ ಅವರು ಬಟ್ಟೆಯನ್ನು ನುಂಗುವುದನ್ನೆ ನೋಡುತ್ತಿದ್ದೆವು. ಆಗ ಸ್ವಾಮಿಜಿಯ ಕವನಗಳನ್ನು ಅವರೊಂದಿಗೆ ಬಂದಿದ್ದ ಹಿರಿಯರೊಬ್ಬರು ಸುಶ್ರಾವ್ಯವಾಗಿ ಹಾಡಿದರು. ಯೋಗಾಸನ ಮುಗಿದನಂತರ ಪುಟ್ಟ ಭಾಷಣ. ಮಾತು ನೇರವಾಗಿ ಮನವನ್ನು ತಾಕುವಂಥವು. ವಿದ್ಯಾರ್ಥಿಯನ್ನು ಪುಟಕ್ಕಿಡುವಂಥವು. ವೇಳೆಗೆ ಸರಿಯಾಗಿ ಕಾರ್ಯಕ್ರಮ ಆರಂಭ, ಮುಕ್ತಾಯ ಕೂಡ. ವೇಳೆಯ ನಿಯಮವನ್ನಂತೂ ಸ್ವಾಮಿಜಿ ತುಂಬ ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಅದರ ಝಳ ಅನುಭವಿಸಿದವರಿಗೇ ಗೊತ್ತು. ಸ್ವಾಮಿಜಿಯ ನಿಯಮ ಎಷ್ಟು ಖಂಡಿತವಾಗಿ ಪಾಲಿತವಾಗುತ್ತದೆ, ಎಂದು. ಒಮ್ಮೆ ಗಣಪತಿ ಉತ್ಸವಕ್ಕೆ ಭಾರೀ ಮನುಷ್ಯರನ್ನು ಆಹ್ವಾನಿಸಿದ್ದರು. ಅವರು ಸಮಯಕ್ಕೆ ಸರಿಯಾಗಿ ಬರಬೇಡವೆ? ಸ್ವಲ್ಪ ವಿಳಂಬವೇನೋ ಆಯಿತು. ಆದರೆ ಸ್ವಾಮಿಜಿ ಮಾತ್ರ ಕಾರ್ಯಕ್ರಮ ಆರಂಭಿಸಿಯೆ ಬಿಟ್ಟರು. ಬಂದ ಅತಿಥಿಗಳಿಗೆ, ತಮ್ಮ ತಪ್ಪು ಅರಿವಾಗಿದ್ದಿತು. ಬಾಪೂಜಿಯ ನಿಷ್ಠೆ, ಈ ವಿಚಾರದಲ್ಲಿ ಕಾಣಬರುತ್ತದಲ್ಲವೆ? ಅದನ್ನೆ ಸ್ವಾಮಿಜಿ ಪಾಲಿಸುತ್ತಾ ಇದಾರೆ. ಎಲ್ಲ ಎಲ್ಲ ಮಾತಿನಲ್ಲೂ, ಕವನದಲ್ಲೂ ರಾಷ್ಟ್ರೀಯತೆ, ಸಂಸ್ಕೃತಿಯ ಸ್ಮರಣೆ, ಪುನರುತ್ಥಾನಕ್ಕೆ ಬೇಡಿಕೆ, ತಮ್ಮ ಕಾರ್ಯಯೋಜನೆ, ಅದಕ್ಕೋಸ್ಕರ ನಡಸಬೇಕಾಗಿರುವ ಸಾಧನೆ,– ಇವುಗಳು ತುಂಬಿತ್ತು! ನಮಗೆಲ್ಲ ಮನಸ್ಸಿಗೆ ಸಂತೋಷ ಆಗುವುದರೊಂದಿಗೆ ಆರೋಗ್ಯಕರ ಬದುಕು ನಡಸಲು ಸ್ಫೂರ್ತಿಯಾದರು ಸ್ವಾಮಿಜಿ.

ಸ್ವಾಮಿಜಿಯನ್ನು ಅನಂತರ ಕಂಡದ್ದು ಒಮ್ಮೆ ಮಲ್ಲಾಡಿಹಳ್ಳಿಯಲ್ಲಿ. ಅನಂತರ ಅವರ ಆಪ್ತರಾದ ಸೂರದಾಸಜೀ ಅವರು ವೈದ್ಯಕೀಯ ಚಿಕಿತ್ಸೆ ನೀಡಿದ್ದರು. ನಾನು ಕೆಲವು ಸಲಹೆ ಪಡೆದಿದ್ದೆ. ಅವರಿತ್ತ ಔಷಧ ನನ್ನ ಚೇತನವನ್ನು ಮರಳಿ ಶಕ್ತಿಯುತವಾಗಿ ಮಾಡಿತು. ಪಥ್ಯ ಹೇಳಿದ್ದನ್ನು ಮಾತ್ರ ಕಟ್ಟುನಿಟ್ಟಾಗಿ ಪಾಲಿಸಬೇಕು. ಇಲ್ಲದಿದ್ರೆ, ಉಗ್ರರಾಗಿ ಬಿಡುತ್ತಾರೆ, ಸ್ವಾಮಿಜಿ. “ಖಾಹಿಲೆ ಬಂದಾಗ ಔಷಧ ಮಾತ್ರ ಕುಡಿಯಬೇಕೆ? ಶರೀರ ಆ ಸ್ಥಿತೀಲಿ ಬಯಸದೇ ಇರೋ ಆಹಾರಾನ ಬಲವಂತವಾಗಿ ತುರುಕೋದೆ? ನಾಲಿಗೆಗೆ ರುಚಿ ಆದರೆ, ಶರೀರಕ್ಕೆ ಅಹಿತ ಆಗಿರೊಲ್ವೆ? ಬರೀ ಔಷಧ ಮಾತ್ರ ಅಲ್ಲ–ಮನಸ್ಸು, ಆಹಾರ ವಿಹಾರಗಳಲ್ಲಿ ಕ್ಲುಪ್ತತೆ; ಎರಡೂ ಬೇಕಯ್ಯ” ಅಂತ ಅನ್ನುತ್ತಾರೆ. ಹಾಗೆ ಅವರು ಹೇಳುವುದು ನಮ್ಮ ಒಳತಿಗಾಗಿ ಅಂತ ರೋಗಿ ಅರ್ಥಮಾಡಿಕೊಂಡರೆ ಅವನಿಗೇ ರೋಗ ಪರಿಹಾರ ಆಯಿತು. ಒಮ್ಮೆ ಬಳ್ಳಾರಿಯವನೊಬ್ಬ ಬಂದು ಔಷಧ ಪಡೆದುಕೊಂಡ. ಕೆಲವಾರು ಪದಾರ್ಥಗಳನ್ನು ತಿನ್ನಬಾರದು ಅಂತ ಮೊದಲೇ ಹೇಳಿ, ಔಷಧವಿತ್ತು ಕಳಿಸಿದ್ದರು. ಈತ ಊರಿಗೆ ಮರಳಿದ.

ಎರಡು ದಿನ ಸ್ವಾಮಿಜಿ ಹೇಳಿದ ಮಾರ್ಗ ಅನುಸರಿಸಿದ. ಈಗ ಶೇಂಗಾ ಕಾಲ ಜೇರಿ. ನಾಲಗೆ ಚಪಲ. ತಡೆಯೋಕಾಗಲಿಲ್ಲ. ಉಪ್ಪು ಹಾಕಿ, ಜೇಯಿಸಿಸಿ, ಪಟ್ಟಾಗಿ ಹೊಡೆದು ಬಿಟ್ಟ ! ಸರಿ, ಮರುಕಳಿಸಿತು ರೋಗ ! ಓಡಿ ಬಂದ, ಗೋಳುಕರೆವ. "ನಿನ್ ರೋಗ ನೀನು ವಾಸಿ ಮಾಡ್ಕೊಳ್ಳೊಕೆ ನಾನು ಹೇಳಿದ ಮಾರ್ಗ ಅನುಸರಿಸದೆ ಇದ್ದರೆ, ನಿನಗೆತಾನೆ ಕೆಡುಕು ? ನೀನುತಾನೆ ಅನುಭವಿಸೋನು ? ಕಡಲೆಕಾಯಿ ಬೇಯಿಸಿ ಕೊಟ್ಟೋರು ಈಗ ಬರ್ತ್ತಾರ್ಯೇನು ನಿನ್ನ ರೋಗ ವಾಸಿಮಾಡೋಕೆ ? ಅಥವಾ ನಿನ್ನ ಶರೀರ ನಾನು ತಗೊಳ್ಳೋಕಾಗುತ್ತೊ? ಎರಡೂ ಇಲ್ಲ. ಇರು ಅಂತ ಔಷಧಿ ಕೊಟ್ಟೆ. ಹೋಗೋ ಮಾರ್ಗ ನೀನು ಹಿಡಿದೆ. ಎತ್ತು ಏರಿಗೆ ಎಳೆದರೆ, ಕೋಣ ನೀರಿಗೆ ಇಳೀತು ಅಂದಹಾಗಾಯ್ತು ನೋಡು. ನಾನೇನು ಮಾಡಲಿ ? ಪ್ರಜ್ಞೆ ಸ್ವಲ್ಪವಾದರೂ ನಿಂಗೇ ಇರದಿದ್ರೆ ಔಷಧ ಎಷ್ಟೊಂತ ಒದ್ದಾಡೀತು ರೋಗದ ವಿರುದ್ಧ ? ಅನುಭವಿಸು" ಅಂದರು. ಮಾತು, ಅವರಲ್ಲಿ ಅಡಗಿದ್ದ ಸತ್ಯವಾದುದು–ನಿಷ್ಠುರ ಎನಿಸುವ ಪಕ್ಷದಲ್ಲಿ ಮನಸ್ಸು ಅರಿವಿನ ಪಥ ಹಿಡಿದಿಲ್ಲ ಅಂತ ಅರ್ಥ ಅಷ್ಟೆ. ಉಚಿತ ಔಷಧ, ನೀಡುವ ವೈದ್ಯರಲ್ಲಿ ದೇವರನ್ನು ಕಾಣಬೇಕಾದರೆ, ರೋಗಿಯೂ ವೈದ್ಯರು ಹೇಳಿದ್ದನ್ನ ಪಾಲಿಸೊ ಸೇವಕ ಆಗಲೇ ಬೇಕಲ್ಲವೆ? "ರೋಗಿಯಲ್ಲಿ ಚಿಕಿತ್ಸಕ ದೇವರನ್ನುಕಾಣಬೇಕು. ಹಾಗೆಯೆ ಚಿಕಿತ್ಸಕನಲ್ಲೂ ರೋಗಿ ನಂಬುಗೆ, ವಿಶ್ವಾಸ ಭಕ್ತಿಗಳನ್ನಿರಿಸಬೇಕು" ಸ್ವಾಮಿಜಿಅವರು ಹಣಕ್ಕೋಸ್ಕರ ಆಶಿಸುವ ಒರಟು ಹೃದಯಿಯಲ್ಲ. ಅಲ್ಲಿ ಬರಡಿಲ್ಲ. ಸಾತ್ವಿಕ ತೇಜ ಇದೆ. ಧನ್ವಂತರಿಯನ್ನು ಉಪಾಸಿಸುವಂಥ ನಿಷ್ಠೆ ಇದೆ. ಸೇವಿಸುವ ಹಂಬಲ, ಕರ್ಮ ಎರಡೂ ಇವೆ. ಅಂದ ಮೇಲೆ ರೋಗಿ ಚಿಕಿತ್ಸಕನಲ್ಲಿ ಸಾಕಷ್ಟು ವಿಶ್ವಾಸ ಇರಿಸುವುದು, ಸಲಹೆಯಂತೆ ನಡೆದುಕೊಳ್ಳುವುದು ಅವನ ಆದ್ಯ ಕರ್ತವ್ಯವಲ್ಲವೆ? ಆ ಘಟನೆ ಕಂಡು ಮೊದಲು ನಗು ಬಂದರೂ (ರೋಗಿಯ ಅಜ್ಞಾನಕ್ಕೆ ! ಚಟಕ್ಕೆ !) ಅದೊಂದು ಪಾಠ ಕಲಿಸಿತು. ಔಷಧ ಕೊಡುವುದೊಂದೆ ಅಲ್ಲ. ಆಸ್ತಿಕತನವನ್ನೂ ಬೆಳಸುತ್ತಾರೆ.ಸ್ವಾಮಿಜಿ ದೇವರ ಪ್ರಾರ್ಥನೆಯಲ್ಲಿ ಇವೆಲ್ಲದರಲ್ಲಿ ನಂಬುಗೆ ಬೆಳಸಿಕೊಳ್ಳ ಹೇಳುತ್ತಾರೆ. ಅವರ ಮಾತು, ಜಿಂಕೆಯಂಥ ಆ ನಡೆ ಎಲ್ಲ ಅದೆಷ್ಟು ಹಿತವೋ ಅಷ್ಟೇ ಚೂಪೂ ಆಗಿರುತ್ತೆ. 'ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದುಪಿ' ಅಂತ ಅನ್ನುತ್ತೇವೆ. ಅದನ್ನುಅವರಲ್ಲಿ ಕಾಣಲೂಬಹುದು.

ಇಷ್ಟೆಲ್ಲ ಮಾಡಿದರೂ ಸದ್ದಿಲ್ಲದ ದುಡಿಮೆ. ಅವರದು "Not a stone tell where I lie" ಅಂತ ಅಲೆಕ್ಸಾಂಡರ್ ಪೋಪ್ ಎಂಬಾತ ತನ್ನ "Quiet life" ಅಂಬೋ ಸಣ್ಣ ಕವನದಲ್ಲಿ ತನ್ನ ವಿನಯವಂತಿಕೆಯನ್ನ ವ್ಯಕ್ತಪಡಿಸುತ್ತಾನೆ. ಆ ತರಹ ಜಗದೀಶನಿಗೆ ಅರ್ಪಿತ ಮಾಡಿಕೊಂಡ ಎಲೆ ಮರೆಯ ಹೂ ಅಂತ ಅನ್ನೋಣವೆ ? ಎಲೆ ಮರೆಯ ಕಾಯಿ, ಆಗಿದ್ದು, ತನ್ನನ್ನೆ ತಾನು ಸೃಷ್ಟಿಸಿದಾತನಿಗೆ ಅರ್ಪಿಸಿಕೊಂಡು, ಪಕ್ವ ಆಗೋ ರೀತಿ ಅನ್ನೋಣವೆ ? ಹಾಗೆ ಅನ್ನಬಹುದು. ಸ್ವಾಮಿಜಿ ನಡೆದು ತೋರಿಸೋ ಬದುಕಂತೂ ನಮಗೆ ಅನುಸರಿಸಲು ಕಷ್ಟಸಾಧ್ಯವಾದ ಜಾಡು. "ಪದ್ಮಶ್ರೀ" ಮುಂತಾದ ಬಿರುದನ್ನು ಅವರು ನಿರಾಕರಿಸಿರುವ ಸುದ್ದಿ ಪತ್ರಿಕೆಗಳಲ್ಲೆಲ್ಲ ಬಂದಿದೆ. ಅದನ್ನ ಅವರು ಬಯಸೋದಿಲ್ಲ. "ನನಗೆ ಬೇಕಾದ್ದೇನು? ಈ ಬಿರುದೆ? ಅದು ಬೇಡ ನನಗೆ.ಅದನ್ನು ಕಟ್ಟಿಕೊಂಡು ನಾನೇನು ಮಾಡಲಿ? ನನಗೆ ಬೇಕಾದ್ದು ನನ್ನ ಆಶ್ರಮದ ಮಕ್ಕಳ ಹೊಟ್ಟೆಯ ಪೋಷಣೆ ಅವರಿಗೆ ಅನ್ನ ಹಾಕಬೇಡವೆ ? ಅದಕ್ಕಾಗಿ ಸರಕಾರ ದಯಮಾಡಿ ಗದ್ದೆ ಕೊಡಿಸಿಕೊಡಲಿ, ಆ ಸಹಾಯ ಸರಕಾರ ಮಾಡಿದರೆ ಸಾಕು. ಈ ಕೆಲಸ ಸ್ವಾರ್ಥದ್ದೆ, ನಾಲ್ಕು ಜನರಿಗೆ ಬೇಕಾದುದೆ? ಅದು ಅರ್ಥ ಆದರೆ ಸಾಕು".ಎನ್ನುತ್ತಾರೆ ಅವರ ಈ ಮಾತುಗಳು ಎಷ್ಟು ನಿಸ್ವಾರ್ಥವಾದವು ! ಸ್ವಾಮಿಜಿಗೆ ಬೇಕಾದ್ದು ಒಣಢಾಂಭಿಕತೆ ಅಲ್ಲ. ಬಿರುದು, ಪ್ರತಿಷ್ಠೆಗಳಲ್ಲ. ಹಾರ್ದಿಕ ಪ್ರೇಮ, ಕೈಲಾದ ನೆರವು. ಅವರ ಸೇವಾಕಾರ್ಯ ಮುಂದುವರಿದು ಸಾವಿರಾರು ವಿದ್ಯಾರ್ಥಿಗಳಿಗೆ ಕಲ್ಪವೃಕ್ಷ ಆಗಲು ಮಾಡಬೇಕಾದ ಸಹಾಯವನ್ನು ಕಾರ್ಯರೂಪಕ್ಕಿಳಿಸಿ, ಬೆಂಬಲ ನೀಡಿದರೆ ಸಾಕು.

ಲಕ್ಷ್ಮೀದೇವಿ

ನಂದನವನ

ನಂದನವನವೆಂಬೀ ಆನಂದದ ಹೂ
ಬನದೊಳಗಿಹ ಪುಷ್ಪಗಳನಾದರಿಸಿ ||

ಮಘ ಮಘಿಸುವ ಕಂಪಿನ ಸೊಂಪಿನ
ಬನವನು ಸೇರಲು ಬರುತಿಹುದೀ ಸುಮ ||

ಸುಂದರ ಸುಮಗಳ ಸುಮಧುರ ತೋಟ
ಕಂಗಳ ರಂಜಿಪ ಕಾಂತಿಯ ತೋಟ ||

ವನವನು ಅರಸುತ ನೆಲೆಯನು ಬೇಡುತ
ಭಕ್ತಿಯ ಭಾವದಿ ಬರುತಿಹುದೀ ಸುಮ ||

ಗುರುಕಾರುಣ್ಯದಿ ಸೊಬಗಿನ ಬನವನು
ಬಯಸುತ ಬರುತಿಹುದೀ ಕುಸುಮ ||

ಗುರುವಿನ ಪಾದವ ಸೇರಿದರೀ ಸುಮ
ಸುಕೃತವು ಎನ್ನುವುದೀ ಕುಸುಮ ||

ನಂದನವನದ ಗುರುಗಳ ಚರಣವ
ಸೇರಿದರೀ ಸುಮ ಸಂತಸವು ||

ಮಲ್ಲರ ನಾಡಿನ ನಂದನವನವು
ಚಿನ್ಮಯವಾಗಲಿ ಅನುದಿನವು ||

ಎನ್. ಎಸ್. ಕೃಷ್ಣಮೂರ್ತಿ

ಮಲ್ಲಾಡಿಹಳ್ಳಿಗೊಲಿದ ಮಲ್ಲ

ನಾನು ಮೊಟ್ಟಮೊದಲು ಪೂಜ್ಯ ಶ್ರೀ ರಾಘವೇಂದ್ರ ಸ್ವಾಮೀಜಿಯವರ ದರ್ಶನಭಾಗ್ಯ ಪಡೆದದ್ದು ನನ್ನ ತಾಯಿಯ ತೌರೂರಾದ ದಾವಣಗೆರೆ ತಾಲ್ಲೂಕು ಲೋಕಿಕೆರೆ ಗ್ರಾಮದಲ್ಲಿ. ನಾನು ಆಗ ದಾವಣಗೆರೆಯ ಪ್ರಾಥಮಿಕ ಶಾಲೆಯೊಂದರಲ್ಲಿ ಉಪಾಧ್ಯಾಯನಾಗಿದ್ದೆ. ಒಂದು ದಿನ ಬೆಳಗ್ಗೆ ನಮ್ಮ ಭಾವನವರು ನನ್ನ ಮನೆಗೆ ಬಂದು "ಇಂದು ಸಂಜೆ ನಾಲ್ಕು ಗಂಟೆಗೆ ನಮ್ಮೂರಿನಲ್ಲಿ ಒಂದು ವ್ಯಾಯಾಮ ಪ್ರದರ್ಶನವನ್ನು ಏರ್ಪಡಿಸಿದ್ದೇವೆ. ಅದರ ಅಧ್ಯಕ್ಷತೆ ವಹಿಸಲು ತಾಲ್ಲೂಕು ಅಮಲ್ದಾರರನ್ನು ಕರೆದುಕೊಂಡುಹೋಗಬೇಕಾಗಿದೆ, ಅದಕ್ಕಾಗಿ ಒಂದು ಮೋಟಾರುವಾಹನವನ್ನು ಗೊತ್ತುಮಾಡಿಕೊಂಡು ಬಂದಿದ್ದೇನೆ, ಸಂಜೆ ಮೂರು ಗಂಟೆಗೆ ಇಲ್ಲಿಂದ ಹೊರಡಬೇಕು, ನೀನು ಸಿದ್ಧವಾಗಿರು" ಎಂದು ಹೇಳಿ ಹೋದರು.

ಮಧ್ಯಾಹ್ನ ಮೂರುಗಂಟೆಗೆ ಸರಿಯಾಗಿ ನನ್ನ ಭಾವ ವೆಂಕಟರಾಯರು—ಅವರು ಲೋಕಿಕೆರೆಯ ಶಾನುಭೋಗರಾಗಿದ್ದರು—ಅಮಲ್ದಾರರೊಡನೆ ಕಾರಿನಲ್ಲಿ ನನ್ನ ಮನೆಯ ಮುಂದೆ ಪ್ರತ್ಯಕ್ಷರಾದರು. ನಾನು ಅವರೊಡನೆ ಕುಳಿತು ಪ್ರಯಾಣವನ್ನು ಕೈಕೊಂಡೆ. ಊರಿನ ಬಳಿಗೆ ಬರುತ್ತಿದ್ದಂತೆಯೇ ನನಗೆ ಆಶ್ಚರ್ಯವೋ ಆಶ್ಚರ್ಯ. ಇದು ನಿಜವಾಗಿಯೂ ಲೋಕಿಕೆರೆಯೆ ? ಎನ್ನುವಷ್ಟು ನನಗೆ ದಿಗ್ಭ್ರಮೆಯಾಯಿತು. ನಾನು ಹುಟ್ಟಿ ಬೆಳೆದ ಊರಾದುದರಿಂದ ನನಗೆ ಚಿರಪರಿಚಿತವಾಗಿದ್ದ ಕೊಚ್ಚೆಗುಂಡಿಗಳು, ತಿಪ್ಪೆಯ ಗುಡ್ಡೆಗಳು, ಕಳ್ಳಿ ಪೊದರುಗಳು, ಗುಂಡಿ ಗುಟರುಗಳು ಒಂದೂ ಅಲ್ಲಿ ಕಾಣಲಿಲ್ಲ. ಹಾದಿಬೀದಿಗಳಲ್ಲಿ ತುಂಬಿ ತುಳುಕುತ್ತಿದ್ದ ಸಗಣಿ-ಕಸ ಹೇಸಿಗೆಗಳೆಲ್ಲ ಮಂಗಮಾಯವಾಗಿದ್ದವು. ಊರೆಲ್ಲ ಚೊಕ್ಕಟವಾಗಿದೆ, ರಸ್ತೆಗಳೆಲ್ಲ ಸಮತಲವಾಗಿವೆ. ಅಲ್ಲಲ್ಲಿಯೇ ತಳಿರು ತೋರಣಗಳು ಕಣ್ಣಿಗೆ ಹಬ್ಬವನ್ನುಂಟುಮಾಡುತ್ತಿವೆ; ಪ್ರತಿ ಮನೆಯ ಅಂಗಳವನ್ನೂ ಗುಡಿಸಿ, ಸಾರಿಸಿ, ರಂಗೋಲಿಗಳಿಂದ ಅಲಂಕರಿಸಿದ್ದಾರೆ. ಊರಿನ ತುಂಬ ನೆರೆಹೊರೆಯ ಗ್ರಾಮದ ಜನರು ತುಂಬಿ, ಜಾತ್ರೆಯ ಸಡಗರ ಎಲ್ಲೆಲ್ಲಿಯೂ ಕಣ್ಣಿಗೆ ಬೀಳುತ್ತಿದೆ. ಅದನ್ನು ಕಂಡು ನಾನು ದಂಗುಬಡಿದು ಹೋದೆ.

ಕಾರು ಊರನ್ನು ಪ್ರವೇಶಿಸುತ್ತಿದ್ದಂತೆಯೇ ಸಮವಸ್ತ್ರಧಾರಿಗಳಾಗಿದ್ದ ಬಾಲಕ-ಬಾಲಕಿಯರ ತಂಡ ಇಕ್ಕೆಲಗಳಲ್ಲಿಯೂ ನಿಂತು ನಮ್ಮನ್ನು ಸ್ವಾಗತಿಸಿತು. ಕಾರಿನಿಂದ ಇಳಿಯುತ್ತಲೇ ಅಧ್ಯಕ್ಷರಿಗೆ ಗೌರವ ರಕ್ಷೆಯನ್ನು ನೀಡಿ ಮಂಗಳವಾದ್ಯಗಳೊಡನೆ ಮೆರವಣಿಗೆಯಿಂದ ಊರೊಳಗೆ ಕರೆದೊಯ್ದರು. ಕೆಲ ನಿಮಿಷಗಳ ವಿಶ್ರಾಂತಿಗಾಗಿ ಅವರನ್ನು ಊರ ಚಾವಡಿಯಲ್ಲಿ ಕುಳ್ಳಿರಿಸಿ ಷೋಡಶೋಪಚಾರಗಳನ್ನು ಮಾಡಲಾಯಿತು. ನಾನು ನನ್ನ ಮನೆಯನ್ನು ಸೇರಿದೆ. ಕೃತ್ಯೋಪಚಾರಗಳಾದನಂತರ ನಮ್ಮ ಭಾವ ನನ್ನನ್ನು ಪೂಜ್ಯ ಶ್ರೀ ರಾಘವೇಂದ್ರ ಸ್ವಾಮಿಗಳಿದ್ದ ಬಿಡಾರಕ್ಕೆ ಕರೆದೊಯ್ದರು. ಹಾದಿಯಲ್ಲಿ ಅಂದಿನ ಸಮಾರಂಭದ ಪರಿಚಯವನ್ನೂ ಮಾಡಿಸಿದರು. ಅಂದಿಗೆ ನಲವತ್ತು ದಿನಗಳ ಕೆಳಗೆ ರಾಘವೇಂದ್ರರಾವ್ ಮಾಸ್ತರರು—ಆಗ ಶ್ರೀ ಶ್ರೀ ರಾಘವೇಂದ್ರ

ಸ್ವಾಮಿಗಳನ್ನು ಕರೆಯುತ್ತಿದ್ದುದು ಹಾಗೆ—ಆ ಊರಿಗೆ ಬಂದರಂತೆ. ಜಾತಿ, ಮತ ಕುಲಗಳ ಭೇದವಿಲ್ಲದೆ ಊರಿನಲ್ಲಿದ್ದ ಬಾಲಕ ಬಾಲಕಿಯರನ್ನೆಲ್ಲಾ ಕೂಡಿಸಿಕೊಂಡು ಅವರಿಗೆ ವ್ಯಾಯಾಮ ಶಿಕ್ಷಣವನ್ನು ಕೊಡಲು ಆರಂಭಿಸಿದರಂತೆ. ಬೆಳಗಿನ ಝಾವ ನಾಲ್ಕು ಗಂಟೆಗೆ ಜಾಗಟೆ ಹೊಡೆದೊಡನೆಯೇ ಬಾಲಕರೆಲ್ಲರೂ ಊರು ಮುಂದಿನ ಬಯಲಿನಲ್ಲಿ ಬಂದು ಸೇರುತ್ತಿದ್ದರು. ರಾತ್ರಿ ಹತ್ತುಗಂಟೆಯವರೆವಿಗೂ ಬಿಡುವಿಲ್ಲದ ಕಾರ್ಯಕ್ರಮ. ಮಕ್ಕಳಿಗೆ ದೈಹಿಕ, ನೈತಿಕ, ಆಧ್ಯಾತ್ಮಿಕ ಶಿಕ್ಷಣವನ್ನು ನೀಡುತ್ತಿದ್ದುದಲ್ಲದೆ ರಚನಾತ್ಮಕ ಕಾರ್ಯಗಳ ನಿರ್ವಹಣೆಯನ್ನು ಕುರಿತು ಉಪದೇಶ ನೀಡುತ್ತಿದ್ದರಂತೆ. ಇಷ್ಟೆ ಅಲ್ಲ, ಅವರ ಮೇಲ್ವಿಚಾರಣೆಯಲ್ಲಿ ಗ್ರಾಮ ನೈರ್ಮಲ್ಯವನ್ನು ಸಾಧಿಸಿದುದಲ್ಲದೆ ಗ್ರಾಮೀಣ ಕಲೆ ಕೈಗಾರಿಕೆಗಳನ್ನೂ ಪುನರುಜ್ಜೀವಿಸಲು ಕ್ರಮಕೈಗೊಂಡಿದ್ದರು. ಸಾಮೂಹಿಕ ಶ್ರಮದಾನಗಳನ್ನು ಏರ್ಪಡಿಸುತ್ತಿದ್ದರು. ನಮ್ಮ ಊರು ಅಷ್ಟು ಚೊಕ್ಕವಾಗಿದ್ದುದರ ಚೊಕ್ಕಟವಾಗಿದ್ದುದರ ಗುಟ್ಟು ನನಗಾಗ ಅರ್ಥವಾಯಿತು. ಅಂದಿಗೆ ಅವರು ಹೂಡಿದ್ದ ಶಿಬಿರ ಮುಕ್ತಾಯವಾಗಿತ್ತು. ಅಂದು ಬಹಿರಂಗ ಪ್ರದರ್ಶನವನ್ನು ಏರ್ಪಡಿಸಿದ್ದರು. ಇದೇ ಅಂದಿನ ಸಂಭ್ರಮಕ್ಕೆ ಮುಖ್ಯ ಕಾರಣ. ರಾಘವೇಂದ್ರರಾಯರು ಕಸರತ್ತಿನ ಮಾಸ್ತರಷ್ಟೇ ಅಲ್ಲ; ಅವರು ದೊಡ್ಡ ವೈದ್ಯರೂ ಆಗಿದ್ದರು. ಅವರು ಪ್ರತಿಮನೆಗೂ ಭೇಟಿ ಇತ್ತು ರೋಗಿಗಳಿಗೆ ಔಷಧವನ್ನು ನೀಡುತ್ತಿದ್ದರು. ದೇವ ವೈದ್ಯರಂತಿದ್ದ ಅವರ ಹಸ್ತಗುಣದಿಂದ ಎಂತೆಂತಹ ರೋಗಗಳೂ ವಾಸಿಯಾಗುತ್ತಿದ್ದವು. ಅವರ ಈ ಹಸ್ತಗುಣದ ಮಹಿಮೆಯನ್ನು ಕೇಳಿ ಸುತ್ತುಮುತ್ತಿನ ಗ್ರಾಮದವರೂ ಅವರ ಬಳಿಗೆ ಬಂದು ಔಷಧವನ್ನು ಕೊಂಡೊಯ್ಯುತ್ತಿದ್ದರು. ಈ ಕಾರಣದಿಂದಲೇ ಅಂದು ಸಹಸ್ರಾರು ಜನ ಅಲ್ಲಿ ನೆರೆಯಲು ಸಾಧ್ಯವಾಗಿತ್ತು.

ನಾನು ಅತ್ಯಂತ ಕುತೂಹಲದಿಂದ ಹೋಗಿ ಸ್ವಾಮಿಗಳನ್ನು ಕಂಡೆ. ಒಳ್ಳೆಯ ಕೆಂಪುಬಣ್ಣದ ತೇಜಃಪುಂಜವಾದ ಮುಖಮುದ್ರೆ, ನಗೆಯ ನವಿಲು ಆ ಮುಖದಲ್ಲಿ ನರ್ತನ ಮಾಡುತ್ತಿತ್ತು. ಕಂಠದಲ್ಲಿ ಕರಿರೇಶ್ಮೆಯ ದಾರದಲ್ಲಿ ಪೋಣಿಸಿದ್ದ ಹನುಮದಾಳಿ ಕಂಗೊಳಿಸುತ್ತಿತ್ತು. ಖಾದಿಯ ಬಿಳಿಯ ಜುಬ್ಬ, ಹಿಂದುಮುಂದು ತೀಡಿ ಕಚ್ಚೆ ಹಾಕಿದ್ದ ಖಾದಿಯ ಪಂಚೆ, ಆಕರ್ಷಕ ನಿಲುವು. ಆ ವ್ಯಕ್ತಿಯನ್ನು ಕಂಡು ನನ್ನ ಕೈಗಳು ತಮಗೆ ತಾವೇ ಜೋಡಿಸಿಕೊಂಡವು. ಅವರು ಪ್ರದರ್ಶನಕ್ಕೆ ಹೊರಡುವ ಅವಸರದಲ್ಲಿದ್ದರು. ಹೆಚ್ಚು ಮಾತನಾಡದೆ ಪ್ರತಿವಂದನೆ ಮಾಡಿ ಅವರು ಪ್ರದರ್ಶನದ ಮೈದಾನಕ್ಕೆ ಹೊರಟರು. ಅವರು ಮುಂದೆ ಮುಂದೆ ನಡೆಯುತ್ತಿದ್ದಾಗ ನಾನು ಓಡಿ ಓಡಿ ಹಿಂಬಾಲಿಸಿದೆ.

ಮೈದಾನದಲ್ಲಿ ಆಬಾಲವೃದ್ಧರು ಕಿಕ್ಕಿರಿದು ನೆರೆದಿದ್ದರು. ರಾಘವೇಂದ್ರರಾಯರ ಆಗಮನವಾಗುತ್ತಿದ್ದಂತೆಯೇ ಅಧ್ಯಕ್ಷರು ಬಂದು ತಮ್ಮ ಆಸನವನ್ನು ಅಲಂಕರಿಸಿದರು. ಒಡನೆಯೇ ಮಾಸ್ತರರು ತಮ್ಮ ವಿದ್ಯಾರ್ಥಿ ವಿದ್ಯಾರ್ಥಿನಿಯರೊಂದಿಗೆ "ಹಿಂದು ಜನನಿ ಭಾರತ, ನಮ್ಮ ದೇಶ ಭಾರತ, ಸ್ವರ್ಣಭೂಮಿ ಭಾರತ, ಈ ಪುಣ್ಯಭೂಮಿ ಭಾರತ" ಎಂದು ಸಾಮೂಹಿಕವಾಗಿ ಹಾಡುತ್ತಾ, ತಾಳಬದ್ಧವಾಗಿ ಹೆಜ್ಜೆ ಹಾಕುತ್ತಾ ಅಧ್ಯಕ್ಷರ ಇದಿರಾಗಿ ನಿಂತು ಸೈನಿಕವಂದನೆ ಸಲ್ಲಿಸಿದರು. ಮಾಸ್ತರರು 'ತಮಾಮ್ ಏಕ್ ಕತಾರ್' ಎಂಬ ಆಜ್ಞೆಯನ್ನು ನೀಡುತ್ತಲೇ ವಿದ್ಯಾರ್ಥಿಗಳೆಲ್ಲಾ ಶಿಸ್ತಿನ ಸಿಪಾಯಿಗಳಂತೆ ಸೆಟೆದು ಸಾಲಾಗಿ ನಿಂತರು. ಮರುಕ್ಷಣದಲ್ಲಿ ಮಾಸ್ತರರು ಏಕಪಾತ್ರಾಭಿನಯ ಮಾಡುವವರಂತೆ ಹಾರ್ಮೋನಿಯಂನ್ನು ಕೈಗೆ ತೆಗೆದುಕೊಂಡು ಅದನ್ನು ಬಾರಿಸುತ್ತಾ "ಹೇ ಪ್ರಭೋ, ಆನಂದ ದಾತ, ಜ್ಞಾನ ಹಮಕೋ ದಿ, ಜೇ" ಎಂಬ ಪ್ರಾರ್ಥನೆಯನ್ನು ಮಾಡಿಸಿದರು. ಅನಂತರ ಬಾಲಕ ಬಾಲಕಿಯರಿಂದ ಸೂರ್ಯನಮಸ್ಕಾರ, ಗುರು ನಮಸ್ಕಾರ ಮತ್ತು ಯೋಗಾಸನಗಳನ್ನು ಮಾಡಿಸಿದರು. ಅನಂತರ ಬಾಲಕಿಯರ ಮಧ್ಯದಲ್ಲಿ ನಿಂತು ಸುತ್ತಲಿದ್ದ ಬಾಲಕಿಯರೊಡನೆ "ಕೋಲನೊಯ್ಯಣ ಬನ್ನಿರೆ, ಬಾಲೆರೆಲ್ಲ ಕೂಡಿ ಆಡೋಣ ಬನ್ನಿರೆ, ಆ ಕೋಲು ಈ ಕೋಲು ಕನ್ನಡದ ಸಿರಿಕೋಲು" ಎಂದು ಹಾಡುತ್ತಾ ಕೋಲಾಟವಾಡಿದರು. ಜನಮನದಲ್ಲಿ ರಾಷ್ಟ್ರಭಕ್ತಿ ನೆಲೆಗೊಳ್ಳಲು ಸಾಧಕವಾದ ನಾಲ್ಕಾರು ಹಾಡುಗಳನ್ನು

ಹಾಡಿಸುತ್ತಾ ತಾಳಬದ್ಧವಾಗಿ ಲಯಬದ್ಧವಾಗಿ ಕೋಲಾಟವಾಡಿದರು. ಅದಾದಮೇಲೆ ಬಾಲಕರಿಂದ ಲಾಠಿ ಪ್ರದರ್ಶನ, ಬಾಲಕಿಯರಿಂದ ಲಜೀಂ ಪ್ರದರ್ಶನ ನಡೆದವು. ಸಭೆಯು ಇದನ್ನು ಬೆಕ್ಕಸಬೆರಗಾಗಿ ನೋಡುತ್ತಾ ಇತ್ತು.

ಇಲ್ಲಿಂದ ಮುಂದೆ ಸ್ವಾಮೀಜಿಯವರಿಂದ ಶಕ್ತಿಪ್ರದರ್ಶನಕ್ಕೆ ಪ್ರಾರಂಭವಾಯಿತು. ಅವರು ಮೈಗಂಟಿನ ಕರಿಚಡ್ಡಿಯನ್ನು ಭುಜದವರೆಗೂ ಹಾಕಿಕೊಂಡು ತಮ್ಮ ಪ್ರದರ್ಶನಗಳಲ್ಲಿ ಬಹುಮಾನ ಪಡೆದಿದ್ದ "ಚಿನ್ನದಪದಕಗಳ ಸರವನ್ನೇ ಕೊರಳಲ್ಲಿ ಧರಿಸಿ ತಾಳಬದ್ಧವಾಗಿ ವಾದ್ಯಗಳು ಭೋರ್ಗರೆಯುತ್ತಿರಲು ರಂಗಸ್ಥಳವನ್ನು ಪ್ರವೇಶಿಸಿದರು. ಮೊದಲು ತಮ್ಮ ಮುಷ್ಟಿಯ ಬಲದಿಂದ ಇಡೀ ಇಸ್ಪೀಟ್‌ಪ್ಯಾಕನ್ನು ಹರಿದುಹಾಕಿದರು ; ಎರಡು ಕೊಂಕಳಲ್ಲಿಯೂ ಲೋಡುಗಳನ್ನು ಅವಚಿಕೊಂಡು ಜೋಡಿ ತಿರುಗಿಸುವ ಪ್ರದರ್ಶನವನ್ನು ಮಾಡಿದರು. ಎತ್ತರವಾದ ಮೇಜಿನ ಮೇಲೆ ನಿಂತು ತಮ್ಮ ಮಾಂಸಖಂಡಗಳ ಪ್ರದರ್ಶನ ಮಾಡಿದರು ; ನೆಲದ ಮೇಲೆ ಅಂಗಾತ ಮಲಗಿ, ಎದೆಯ ಮೇಲೆ ಕಬ್ಬಿಣದ ಅಡಿಗಲ್ಲನ್ನು ಇರಿಸಿ, ಅದರ ಮೇಲೆ ಬಂಡಿಯ ಹಳಿಯನ್ನಿರಿಸಿ ಅದು ಎರಡು ತುಂಡಾಗುವವರೆಗೆ ಚಮ್ಮಟಿಗೆಯಿಂದ ಹೊಡೆಸಿ, ಅದು ಎರಡು ತುಂಡಾಗಿ ಕೆಳಗೆ ಬಿದ್ದಮೇಲೆ ಚಂಗನೆ ಹಾರಿ ಮೇಲಕ್ಕೆದ್ದು ಸಭೆಗೆ ವಂದಿಸಿದರು. ಇದಾದನಂತರ ಷಟ್ಕರ್ಮ ವಿಧಿಯನ್ನು ಪ್ರದರ್ಶಿಸಿದರು ; ಬಾಲಕ ಬಾಲಕಿಯರಿಂದ ಹಲವು ಬಗೆಯ ಆಸನಗಳನ್ನು ಪ್ರದರ್ಶನ ಮಾಡಿಸಿದ ಮೇಲೆ ತಾವು ನೆಲದ ಮೇಲೆ ಮಲಗಿ ಎದೆಯ ಮೇಲೆ ರೋಣಗಲ್ಲನ್ನು ಉರುಳಿಸಿ ಕೊಂಡರು. ಇದನ್ನು ಕಂಡ ಪ್ರೇಕ್ಷಕರು ಅವರು ಪ್ರತ್ಯಕ್ಷ ಮಾರುತಿಯ ಅಂಶವೆಂದು ಭಾವಿಸಿದರು. ಕಡೆಯಲ್ಲಿ ಶಿಸ್ತು ಸಂಯಮಗಳಿಲ್ಲದ ರಾಷ್ಟ್ರದ ಗತಿಯನ್ನು ಮಕ್ಕಳು ಪ್ರದರ್ಶಿಸುವಂತೆ ಮಾಡಿ, ರಾಷ್ಟ್ರದ ಉನ್ನತಿಗೆ ಶಿಸ್ತು ಅಗತ್ಯವೆಂದು ಮನದಟ್ಟುಮಾಡಿಕೊಟ್ಟರು.

ಶ್ರೀ ರಾಘವೇಂದ್ರರಾಯರ ಪ್ರದರ್ಶನ ನನ್ನ ಮೇಲೆ ಮಹತ್ತರವಾದ ಪರಿಣಾಮವನ್ನುಂಟುಮಾಡಿತು. ನಾಡಿನ ಎಲ್ಲ ಉಪಾಧ್ಯಾಯರೂ ಈ ಶಿಕ್ಷಣವನ್ನೇ ಕಲಿತು ತಮ್ಮ ಮಕ್ಕಳಲ್ಲಿ ಶಿಸ್ತು, ಶಕ್ತಿ, ಸಹನೆ, ದೇಶಪ್ರೇಮ ಇತ್ಯಾದಿ ಸದ್ಗುಣಗಳನ್ನು ಬಿತ್ತಬೇಕೆಂದು ಅನಿಸಿತು. ಈ ಪುಣ್ಯಾತ್ಮರ ಮಾರ್ಗದರ್ಶನದಲ್ಲಿ ನಡೆಯುವ ರಚನಾತ್ಮಕ ಕಾರ್ಯಗಳು ನಾಡಿನ ಹಳ್ಳಿಹಳ್ಳಿಯಲ್ಲಿಯೂ ನಡೆದರೆ ರಾಮರಾಜ್ಯ ದೂರವೇನೂ ಇಲ್ಲ ಎನಿಸಿತು. ಇವರ ಮಾರ್ಗದರ್ಶನದಲ್ಲಿ ನಾಡು ನಂದನವನವಾದೀತು ಎನ್ನಿಸಿತು. ಈ ಸಮಾರಂಭದಲ್ಲಿ ಪಾಲ್ಗೊಂಡುದರಿಂದ ನನ್ನ ಜನ್ಮ ಸಾರ್ಥಕವಾಯಿತು ಎಂದುಕೊಂಡೆ. ಅಂದಿನಿಂದ ಮುಂದೆ ನಾನು ಅವರು ನಡೆಸಿದ ಒಂದೊಂದು ಶಿಬಿರಗಳ ಪ್ರದರ್ಶನಗಳಲ್ಲಿಯೂ ತಪ್ಪದೆ ಭಾಗಿಯಾದೆ. ಪ್ರಯತ್ನಪಟ್ಟು ಅವರ ಸಾಮೀಪ್ಯವನ್ನು ಸಾಧಿಸಿ ಅವರ ಪ್ರೇಮಕ್ಕೆ ಪಾತ್ರನಾದೆ. ಅವರ ಅಚ್ಚುಮೆಚ್ಚಿನ ಶಿಷ್ಯರಲ್ಲಿ ಒಬ್ಬನಾದೆ, ನಾನು ಧನ್ಯನಾದೆ. ನಾನು ಈಗ ಅವರ ಸಾನ್ನಿಧ್ಯದಲ್ಲಿಯೇ ನನ್ನ ಕೈಲಾದ ಸೇವೆಯನ್ನು ಸಲ್ಲಿಸುತ್ತಾ ಜೀವನದಲ್ಲಿ ಸಾರ್ಥಕತೆಯನ್ನು ಕಾಣುತ್ತಿದ್ದೇನೆ.

ಟಿ. ಎಸ್. ರಾಮಸ್ವಾಮಯ್ಯ

ಒಂದು ಸ್ಮರಣೆ

ಪರಮಪೂಜ್ಯ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳನ್ನು ನಾನು ಈಗ ಸುಮಾರು ಮೂವತ್ತೈದು ವರ್ಷಗಳಿಂದಲೂ 'ಬಲ್ಲೆ'–ಎಂದರೆ ಅವರ ವಿಚಾರವನ್ನು ಕೇಳಿಬಲ್ಲೆ. ಅವರು ಹೊಳಲ್ಕೆರೆಯ ಸಮೀಪದಲ್ಲಿದ್ದುಕೊಂಡು ಜನತಾ ಜನಾರ್ದನನ ಸೇವೆಗಾಗಿ ಹಳ್ಳಿ ಹಳ್ಳಿಗೆ ಕಾಲುನಡಗೆಯಿಂದ ತಿರುಗುತ್ತಿದ್ದರೆಂದೂ ಬಡವರಿಗೆ ಉಚಿತ ವೈದ್ಯಚಿಕಿತ್ಸೆಯನ್ನು ನೀಡುತ್ತಿದ್ದರೆಂದೂ ಕೇಳಿದ್ದೆ. ಅವರು ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮದಲ್ಲಿ ಹಲವು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಜ್ಞಾನಪ್ರಸಾರ ಮಾಡುತ್ತಿರುವರೆಂದೂ ವರುಷಕ್ಕೆ ಒಮ್ಮೆ ಯೋಗಾಭ್ಯಾಸದ ತರಗತಿಗಳನ್ನು ನಡೆಸುತ್ತಿರುವರೆಂದೂ ಕೇಳಿದ್ದೆ. ಅವರು ಆಗಿಂದಾಗ ಚಿತ್ರದುರ್ಗಕ್ಕೆ ಬರುತ್ತಿದ್ದುದರಿಂದ ಒಂದೆರಡು ಬಾರಿ ದೂರದಿಂದ ಅವರ ದರ್ಶನವೂ ಆಗಿತ್ತು.

ಈಗ ಸುಮಾರು ಒಂದೂವರೆ ವರ್ಷದಕೆಳಗೆ ಅವರ ಪರಿಚಯ ನಿಕಟವಾಗುವ ಸದವಕಾಶ ಒದಗಿಬಂತು. ನನ್ನ ತಮ್ಮ ತ. ಸು. ಶಾಮರಾಯನು ದೇಹಾಲಸ್ಯದ ಕಾರಣದಿಂದ ಅನಾಥಸೇವಾಶ್ರಮಕ್ಕೆ ಬಂದಿರುವನೆಂದು ಕೇಳಿ ಆತನನ್ನು ನೋಡಲೆಂದು ಆಶ್ರಮಕ್ಕೆ ಹೋದೆ. ನನ್ನ ಜೊತೆಯಲ್ಲಿ ನನ್ನ ಮೂರುಜನ ಹೆಣ್ಣುಮಕ್ಕಳೂ ಸ್ವಾಮೀಜಿಯವರನ್ನೂ ಮತ್ತು ಆಶ್ರಮವನ್ನೂ ನೋಡಬೇಕೆಂಬ ಕುತೂಹಲದಿಂದ ನನ್ನ ಜೊತೆ ಬಂದಿದ್ದರು. ಚಿತ್ರದುರ್ಗದಿಂದ ಮಧ್ಯಾಹ್ನದ ಬಸ್ಸಿನಲ್ಲಿ ಹೊರಟು ಆಶ್ರಮವನ್ನು ಸೇರುವ ಹೊತ್ತಿಗೆ ಸುಮಾರು ಮೂರುಗಂಟೆಯಾಗಿತ್ತು. ಆಶ್ರಮದ ಹೆಬ್ಬಾಗಿಲಿನಿಂದ ಮುಂದಿನ ವಿಶಾಲವಾದ ಅಂಗಳಕ್ಕೆ ಹೋಗಿ ಒಂದು ಕಡೆ ನಿಂತೆವು. ಆಶ್ರಮ ನನಗೆ ಅಪರಿಚಿತ. ಆ ಹೊತ್ತಿನಲ್ಲಿ ನಾವು ನಿಂತೆಡೆ ನಿರ್ಜನವಾಗಿತ್ತು. ನನ್ನ ತಮ್ಮ ಎಲ್ಲಿ ಇಳಿದುಕೊಂಡಿರುವುದೆಂದು ನನಗೆ ತಿಳಿಯದು. ಹೀಗಾಗಿ ನಾನು ಎರಡು ನಿಮಿಷ ನಿಂತುಕೊಂಡೆ. ಅಷ್ಟರಲ್ಲಿ ಚಡ್ಡಿ ಮತ್ತು ಒಳ ಅಂಗಿ ಧರಿಸಿದ ತರುಣನೊಬ್ಬ ನಮ್ಮ ಹತ್ತಿರಕ್ಕೆ ಬಂದು 'ನಿಮಗೆ ಯಾರುಬೇಕಿತ್ತು?' ಎಂದು ಕೇಳಿದ. ನಾನು ನನ್ನ ತಮ್ಮನ ಹೆಸರು ಕೇಳಿ, ಆತನನ್ನು ಕಾಣಬೇಕೆಂದೆ. ಆ ತರುಣ ನನ್ನ ಕೈಲಿದ್ದ ಸಾಮಾನುಗಳನ್ನು ತೆಗೆದುಕೊಂಡು 'ಬನ್ನಿ ನಾನು ಅವರ ಬಳಿಗೆ ಕರೆದೊಯ್ಯುತ್ತೇನೆ' ಎಂದು ಮುಂದೆ ಹೊರಟ. ನಾನೂ ನನ್ನ ಮಕ್ಕಳೂ ಆತನನ್ನು ಹಿಂಬಾಲಿಸಿದೆವು. ಆತನ ಸಲಿಗೆಯನ್ನು ಕಂಡು ಆತನಿಗೆ ನನ್ನ ಪರಿಚಯವಿರಬಹುದೆಂದು ಯೋಚಿಸುತ್ತಾ ಸಲಿಗೆಯಿಂದ ಬೆನ್ನ ಮೇಲೆ ಕೈ ಹಾಕಿ ಆತನ ಯೋಗಕ್ಷೇಮ ವಿಚಾರಿಸುತ್ತಾ ಪಕ್ಕದಲ್ಲಿ ನಡೆದೆ. ಆತನ ಬೆನ್ನು ಸೀಸದ ಗುಂಡಿನಂತೆ ಭಾಸವಾಗುತ್ತಿತ್ತು. ನಾನು ಇಲ್ಲದ ಸಲಿಗೆಯನ್ನು ಬಳಸಿ 'ನಿನ್ನ ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರೇನಪ್ಪ? ಇಲ್ಲಿಗೆ ಬಂದು ಎಷ್ಟು ವರ್ಷವಾಯಿತು?' ಎಂದು ಪ್ರಶ್ನಿಸುತ್ತಾ ಹೋದೆ. ಆತನು ಕೇಳಿದ್ದಕ್ಕೆಲ್ಲಾ ಹೂಂ, ಹೂಂ, ಎನ್ನುತ್ತಾ ನನ್ನ ತಮ್ಮನಿದ್ದ ಅತಿಥಿಮಂದಿರಕ್ಕೆ ಹೋಗಿ ಬಾಗಿಲು ತಟ್ಟಿದ. ಒಳಗಿದ್ದ ನನ್ನ ತಮ್ಮ ಬಾಗಿಲು ತೆರೆದ, ನಾವೆಲ್ಲರೂ ಒಳಕ್ಕೆ ಹೋದೆವು. ನನ್ನ ತಮ್ಮ ಆ ಯುವಕನನ್ನು

ಕಂಡೊಡನೆಯೇ ಸಾಷ್ಟಾಂಗ ಪ್ರಣಾಮಮಾಡಿ ಕೈಜೋಡಿಸಿಕೊಂಡು ನಿಂತ. ನನಗೆ ಮುಖದ ಮೇಲೆ ರಪ್ಪೆಂದು ಹೊಡೆದಂತಾಯಿತು. ಆ ಚಡ್ಡಿವಾಲರೇ ಸ್ವಾಮೀಜಿ ಎಂದು ನನ್ನ ವಿವೇಕ ತಿಳಿಸಿತು. ನಾನೂ ನನ್ನ ಮಕ್ಕಳೂ ಆತನಿಗೆ ದೀರ್ಘದಂಡ ಪ್ರಣಾಮಮಾಡಿ ಮೂಕರಂತೆ ನಿಂತೆವು. ಶ್ರೀ ಸ್ವಾಮೀಜಿಯವರು "ಕುಳಿತು ವಿಶ್ರಾಂತಿ ತೆಗೆದುಕೊಳ್ಳಿ, ಈಗ ಕಾಫಿ ತಿಂಡಿ ಬರುತ್ತದೆ. ಸಾಯಂಕಾಲ ಐದು ಗಂಟೆಯ ಮೇಲೆ ಆಶ್ರಮದಲ್ಲಿ ಭಜನೆ ನಡೆಯುತ್ತದೆ. ಅಲ್ಲಿಗೆ ಬನ್ನಿ" ಎಂದು ಹೇಳಿ ನಗುತ್ತಾ ಹೊರಟುಹೋದರು. ನಾನು ನನ್ನ ತಮ್ಮನೊಡನೆ ನಾನು ಮಾಡಿದ ಅಪರಾಧವನ್ನು ತಿಳಿಸಿದೆ. ಆತ ನಕ್ಕು ಇದು 'ಮಾಮೂಲು' ಎಂದ.

ಸಂಜೆ ಆಶ್ರಮದ ಭಜನೆಯಲ್ಲಿ ಪಾಲುಗೊಳ್ಳಲೆಂದು ಹೋದೆ. ಸ್ವಾಮೀಜಿಯವರನ್ನು ಕಂಡು ನಾನು ಮಾಡಿದ ಅಪರಾಧಕ್ಕೆ ಕ್ಷಮೆ ಕೇಳುವುದೇ ನನ್ನ ಮುಖ್ಯ ಗುರಿಯಾಗಿತ್ತು. ನನಗೆ ವಯಸ್ಸಾಗಿದೆ,ದೃಷ್ಟಿ ಸಾಧಾರಣ, ಭಜನೆ ಮುಗಿಯುವ ವೇಳೆಗೆ ಕತ್ತಲೂ ಆಗಿತ್ತು. ಆದ್ದರಿಂದ ಅವರನ್ನು ಗುರುತಿಸಲಾಗಲಿಲ್ಲ. ಅನಿವಾರ್ಯವಾಗಿ ನಾನು ನನ್ನ ತಮ್ಮನನ್ನು 'ಸ್ವಾಮೀಜಿ ಎಲ್ಲಿದ್ದಾರೆ' ಎಂದು ಕೇಳಿದೆ. ಅವರು ಪಕ್ಕದಲ್ಲಿಯೇ ನಿಂತಿದ್ದರು. ನನ್ನ ತಮ್ಮ ಸ್ವಾಮೀಜಿಗೆ ನನ್ನ ಪರಿಚಯ ಮಾಡಿಸಿದ. ನಾನು ಅವರ ಪಾದಗಳಿಗೆ ನಮಸ್ಕರಿಸಿ ನನ್ನ ಅನುಚಿತ ವರ್ತನೆಗೆ ಕ್ಷಮೆಯನ್ನು ಯಾಚಿಸಿದೆ. ಅವರು ನಗುತ್ತಾ "ಇದರಲ್ಲೇನು ವಿಶೇಷ ಬಂತಪ್ಪಾ, ನಮ್ಮ ಬಾಳಿನ ಸಾರ್ಥಕತೆ ಇರುವುದೇ ಸೇವೆಯಲ್ಲಿ, ನಾನು ಎಷ್ಟೋ ಬಾರಿ ರೈಲ್ವೆನಿಲ್ದಾಣದಿಂದ ಇಲ್ಲಿಗೆ ಬರುವ ಯಾತ್ರಿಕರ ಸಾಮಾನು ಹೊತ್ತು ತಂದಿದ್ದೇನೆ, ನೀವೇನೂ ಯೋಚಿಸಬೇಡಿ' ಎಂದು ಸಮಾಧಾನ ಮಾಡಿದರು.

ನಾವು ಮಲ್ಲಾಡಿಹಳ್ಳಿ ಆಶ್ರಮದಲ್ಲಿ ಎರಡು ದಿನಗಳನ್ನು ಕಳೆದೆವು. ಸ್ವಾಮಿಗಳು ವೈದ್ಯರಷ್ಟೆ ? ವೈದ್ಯರನ್ನು ಕಂಡರೆ ವ್ಯಾಧಿಯನ್ನು ಹೇಳಿಕೊಳ್ಳಬೇಕೆಂಬ ಚಪಲ. ನನ್ನ ಮಕ್ಕಳಲ್ಲಿ ಒಬ್ಬಳು ಗಿಡ್ಡ. ಅವಳಿಗೆ ಎತ್ತರವಾಗಬೇಕೆಂಬ ಬಯಕೆ. ಮತ್ತೊಬ್ಬಳು ತುಂಬ ತೆಳುವು. ಅವಳಿಗೆ ದಪ್ಪವಾಗಬೇಕೆಂಬ ಬಯಕೆ. ಅವರು ಸ್ವಾಮೀಜಿಯವರಲ್ಲಿ ತಮ್ಮ ಬಯಕೆಯನ್ನು ಹೇಳಿಕೊಂಡರು. ಸ್ವಾಮೀಜಿ ಅವರೊಡನೆ ಚಿಕ್ಕಮಗುವಿನಂತೆ ಹುಡುಗಾಟವಾಡಿಕೊಂಡು ಕೆಲವು ಆಸನಗಳನ್ನೂ ಸೂರ್ಯನಮಸ್ಕಾರವನ್ನೂ ಹೇಳಿಕೊಟ್ಟರು. ಪುಕ್ಕಟೆಯಾಗಿ ಕೆಲವು ಔಷಧಗಳನ್ನೂ ಕೊಟ್ಟು ಅವರನ್ನು ತೃಪ್ತಿಪಡಿಸಿದರು.

ನಾವು ಆಶ್ರಮದಲ್ಲಿದ್ದ ಎರಡು ದಿನಗಳೂ ಆನಂದವಾಗಿ ಕಳೆದೆವು. ಅವರು ಆಗಾಗ ಬಂದು ತಮ್ಮ ಸವಿನುಡಿಗಳಿಂದ ನಮ್ಮನ್ನು ನಗಿಸಿ, ತಾವೂ ನಕ್ಕು ನಮ್ಮನ್ನು ತೃಪ್ತಿಪಡಿಸಿದರು. ಆಶ್ರಮದ ಶೈಕ್ಷಣಿಕ, ವೈದ್ಯಕೀಯ, ಆಧ್ಯಾತ್ಮಿಕ ಚಟುವಟಿಕೆಗಳನ್ನು ಕಂಡು ನಾವು ಧನ್ಯರಾದೆವು. ಹಿಂದಿನ ಋಷಿಕುಲಗಳನ್ನು ಹೋಲುವ ಈ ಆಶ್ರಮಸ್ಥಾಪಕನನ್ನು—'ತಿರುಕ'ನೆಂದು ಹೇಳಿಕೊಂಡು ಸಾಮಾನ್ಯರಲ್ಲಿ ಸಾಮಾನ್ಯನಂತೆ ವ್ಯವಹರಿಸುವ—ಈ ಮಹಾಪುರುಷನನ್ನು ಅಲ್ಲದೆ ಮತ್ತಾರನ್ನು ಅವತಾರ ಪುರುಷನೆಂದು ಕರೆಯೋಣ ?

ಪರಮೇಶದಾಸದಾಸ

ಪೂಜ್ಯಗುರುಗಳು

ಆಧ್ಯಾತ್ಮರಂಗದಲ್ಲೇ ಅಪರೂಪ ವ್ಯಕ್ತಿಗಳು ನಮ್ಮ ಪೂಜ್ಯ ಗುರುಗಳು. ಕಾವಿ ಧರಿಸುವುದಿಲ್ಲ. ತಲೆ ಬೋಳಿಸುವುದಿಲ್ಲ. ಗಡ್ಡವನ್ನೂ ಬಿಟ್ಟಿಲ್ಲ. ಆದರೂ ಆತ್ಮ ಚಿಂತನದ ಗಹನತೆ ಕಡಿಮೆಯಾಗಿಲ್ಲ.

ನಂಬೂದರಿ ವಂಶಸ್ಥರಾದ ಪೂಜ್ಯರಿಗೆ ತಂದೆ ತಾಯಿಗಳ ಗುರುತಿಲ್ಲ. ಹುಟ್ಟಿದಾಗ ಬಾಲಗ್ರಹಪೀಡಿತರಾದ ಇವರನ್ನು ಕೇರಳದ ಆ ಪಾವನ ದಂಪತಿಗಳು ಬಹಳ ಎಚ್ಚರದಿಂದಲೇ ಸಾಕಿಸಲಹಿದರು ಮಗುವಿಗೆ ಆಯಸ್ಸು ಹನ್ನೆರಡಾದರೂ ತಂದೆ ತಾಯಿಗಳ ಕೈಕೂಸೇ ಆಗಿ ಕಿರಿಚುತ್ತಿತ್ತಂತೆ. ದಂಪತಿಗಳು ಮಗನ ಬಗ್ಗೆ ಇನ್ನು ಚಿಂತೆ ಬಿಟ್ಟರು. ಒಂದೆಡೆ ಹಾಸಿ ಮಲಗಿಸಿದರು. ಮಲಗಿದಲ್ಲೇ ಸುಮ್ಮನೆ ತುಂಡಿನಂತೆ ಬಿದ್ದಿರುತ್ತಿದ್ದ ಈ ಮಗುವಿನ ಬಗ್ಗೆ ಒಮ್ಮೆ ನಿರ್ಧಾರಕ್ಕೆ ಬಂದರು. ಅವರ ಕುಲದೇವತೆ ಮೂಕಾಂಬಿಕೆ. ಆ ತಾಯ ಸನ್ನಿಧಿಗೆ ಒಯ್ದು ಆಕೆಯ ಉಡಿಗೇ ಈ ಪಡೆದ ವರವನ್ನು ಕಾಣಿಕೆಯೊಪ್ಪಿಸುವುದೆಂದು ತೀರ್ಮಾನಿಸಿದರು. ಒಂದು ಶುಕ್ರವಾರ ಪೂಜಾಸಾಮಗ್ರಿಗಳನ್ನು ಬಂಡಿಯಲ್ಲಿ ಸಿದ್ಧಗೊಳಿಸಿ ದಂಪತಿಗಳು ಮಗನೊಂದಿಗೆ ಯಾತ್ರೆ ಹೊರಟರು.*

ತಾಯ ಸನ್ನಿಧಿಯಲ್ಲಿ ಪೂಜೆಸಲ್ಲಿಸಿ ದಂಪತಿಗಳು ಭಕ್ತಿಯಿಂದ ‘ತಾಯೇ ನೀನಿತ್ತ ವರ ಈ ಮಗು ; ಕರುಣೆಯ ಕಂದ ಬೆಳೆಯಲಿಲ್ಲ–ಮಾತಾಡಲಿಲ್ಲ, ಉಣ್ಣಲಿಲ್ಲ–ಉಡಲಿಲ್ಲ. ಈ ಎಲ್ಲ ಸೌಭಾಗ್ಯವನ್ನು ನೋಡುವ ಭಾಗ್ಯ ನಮಗಿಲ್ಲದ ಮೇಲೆ ಈ ಮಗುವನ್ನಾದರೂ ಪಡೆದು ಪ್ರಯೋಜನವೇನು ? ನಿನ್ನ ಸಂಕಲ್ಪವೇನೋ ನಾವರಿಯೆವು. ಈ ಕರುಣೆಯ ಕಂದನನ್ನು ನಿನಗೆ ಅರ್ಪಿಸಿದ್ದೇವೆ. ಇಚ್ಛೆ ಬಂದಂತೆ ನಡೆಸಿಕೋ” ಎಂದು ಪ್ರಾರ್ಥಿಸಿ ದೇವಾಲಯದಲ್ಲೇ ಬಿಟ್ಟು ಹೊರಟು ಹೋದರು.

ತಾಯ ಕರುಣೆಯ ಕಂದನಾದ ಈ ಪವಾಡದ ಮಗು ಹೇಗೋ ಬದುಕಿತು–ಆಡಿತು ಹಾಡಿತು ಯೋಗೀಶ್ವರನಾಗಿ ಬೆಳಗಿ ತೊಳಗಿತು.

ವಿದ್ಯಾಭ್ಯಾಸ ಎಲ್ಲೋ ಎಷ್ಟೋ ಯಾರಿಗೂ ತಿಳಿಯದು. ನಾಟಕ ಕಂಪನಿಯ ಜೀವನದಲ್ಲೇ ಪರಮ ಪೂಜ್ಯ ಪಳನೀ ಮೂರ್ತಿ ಸ್ವಾಮಿಗಳವರ ಸಂದರ್ಶನಯೋಗ. ಪ್ರಾಣಾಯಾಮ-ಹಠಯೋಗ ಸಾಧನೆ. ಅಮರಾವತಿಯ ಸದ್ಗುರು ಶಿವಾನಂದರಲ್ಲಿ ಯೋಗಾಭ್ಯಾಸ, ಸಮಾಜ ಸೇವಾದೀಕ್ಷೆ. ಅವರೇ ತಮ್ಮಗುರುಗಳಾದ ಬರೋಡದ ರಾಜರತ್ನ ಗುರು ಮಾಣಿಕ್ಯರಾಯರಲ್ಲಿ ಇವರನ್ನು ಸಾಧನೆಗೆ ಹಚ್ಚಿದರು. ಪಾಶ್ಚಾತ್ಯ ಪೌರ್ವಾತ್ಯ ವ್ಯಾಯಾಮಗಳಲ್ಲಿ ನಿಷ್ಣಾತರಾಗುವುದರೊಡನೆ ಜನ್ಮವ್ಯಾಧಿಯಾದ ಮೂರ್ಛೆ ರೋಗವನ್ನು ಸಮೂಲವಾಗಿ ಕಳೆದೀಡಾಡಿದರು.

---

*ಈ ಮನೆತನದ ಕುಲ ಪುರೋಹಿತರು ಹೇಳಿದ ಸಂಗತಿಯನ್ನು ಇಲ್ಲಿ ನಮೂದಿಸಿದ್ದೇನೆ.

ಸಾಧು ಲಕ್ಷ್ಮಣ ಬೂವಾ ಅವರ ಸಹವಾಸ ದೊರಕಿ ಹಿಮಾಚಲದಲ್ಲಿ ಸುತ್ತಾಟ, ಅನೇಕ ವನಸ್ಪತಿಗಳ ಪರಿಚಯ. ಆಯುರ್ವೇದ ವಿದ್ಯಾ ಪರಿಣತಿ. ಅಲ್ಲಿಂದ ಅನೇಕ ಯೋಗಿಗಳ ಸಹವಾಸ, ಧ್ಯಾನಯೋಗ ಜಪಯೋಗಗಳಲ್ಲಿ ಸಾಧನೆ–ಸಿದ್ಧಿ.

ನಂತರ ಅನೇಕ ಜಾಗೃತ ಕ್ಷೇತ್ರಗಳಲ್ಲಿ ಕಠಿಣ ಸಾಧನೆಯನ್ನು ಸಾಗಿಸಿ ಗುರುವರ್ಯರಾದ ಪೂಜ್ಯ ಶಿವಾನಂದರನ್ನು ಸಂದರ್ಶಿಸಲು ಹೊರಟರು. ಅವರಿಗಾಗಿ ಹಲವಾರು ಊರುಗಳನ್ನು ತಿರುಗಿದ ಮೇಲೆ ಗುರುದರ್ಶನ ಭಾಗ್ಯ ಪಡೆದರು. ತಮ್ಮೆಲ್ಲ ಸಿದ್ಧಿಗಳನ್ನು ಗುರುಪಾದದಲ್ಲಿ ಸಮರ್ಪಣೆ ಮಾಡಿದರು.

ಪೂಜ್ಯ ಶಿವಾನಂದರ ಆದೇಶದಂತೆ ದೇಶ ಸೇವೆ–ಈಶ ಸೇವೆಗಾಗಿ ಪಣತೊಟ್ಟು ಜೀವನವನ್ನೇ ಮುಡುಪಾಗಿಟ್ಟರು. ಗುರುವಿನ ಆದೇಶದಂತೆ ದೇಶದ ತುಂಬ ಸಂಚರಿಸಿ ಅಂದಿನ ಪ್ರಬಲ ರಾಜಕೀಯ ಹೋರಾಟದಲ್ಲಿ ಸಕ್ರಿಯಭಾಗಿಗಳಾದರು.

ಪೂಜ್ಯ ಬಾಪೂಜಿಯವರು ಒಮ್ಮೆ, ವಿದ್ಯಾವಂತರು ಹಳ್ಳಿಗಳಲ್ಲಿ ನೆಲಸಿ ಅಲ್ಲಿನ ಮುಗ್ಧ ಜನರನ್ನು ಮೇಲೆತ್ತಲು ಪಣತೊಡಬೇಕೆಂದು ಹೇಳಿದುದನ್ನೇ ಗುರಿ ಮಾಡಿಕೊಂಡು, ಹಳ್ಳಿ ಹಳ್ಳಿಯಲ್ಲಿ ವ್ಯಾಯಾಮ ಶಿಬಿರಗಳನ್ನು ನಡೆಸುತ್ತಾ ಬಂದರು. ಜೊತೆಯಲ್ಲೇ ರೋಗಿಗಳ ಸೇವೆ ಯೋಗಾಭ್ಯಾಸ ಶಿಕ್ಷಣವೂ ನಡೆಯುತ್ತಿತ್ತು.

ಹೀಗೆ ಸಾವಿರಾರು ಸತ್ಯಾಗ್ರಹಿಗಳನ್ನು ಸಿದ್ಧಗೊಳಿಸುತ್ತಾ ಚಿತ್ರದುರ್ಗದ ಜಿಲ್ಲೆಯಲ್ಲಿ ಪದಾರ್ಪಣ ಮಾಡಿದರು.

1942 ರ ದೇಶದ ಆಂದೋಲನದಲ್ಲಿ ಇಡೀ ಕರ್ನಾಟಕದಲ್ಲೇ ಪೂಜ್ಯ ಗುರುಗಳ ಶಿಷ್ಯವರ್ಗ ತಾಯಿನಾಡಿಗಾಗಿ ತನು–ಮನ–ಧನ ಅರ್ಪಿಸಿ ಕೃತಾರ್ಥವಾಯಿತು.

1943ರಲ್ಲಿ ಜನರ ಪ್ರೇಮಕ್ಕೆ ಸಿಕ್ಕಿಬಿದ್ದ ಪೂಜ್ಯರು ಮಲ್ಲಾಡಿಹಳ್ಳಿ ಗ್ರಾಮದಲ್ಲಿ ಸಣ್ಣದಾಗಿ ಆಶ್ರಮವೊಂದನ್ನು ಸ್ಥಾಪಿಸಿದರು.

ಪ್ರವಾಸ ಕಾಲದಲ್ಲಿ ಪೂಜ್ಯರು ಮಾಟಗಾರರು–ಮಂತ್ರವಾದಿಗಳು–ವಿಷಪ್ರಾಶಕರುಗಳ ಕೈತುತ್ತನ್ನೂ ಉಂಡು ತೇಗಿದ್ದಾರೆ, ವಜ್ರಾಂಗಿಗಳಾಗಿ ಚಿರಯೌವ್ವನವನ್ನು ಮೆರೆದಿದ್ದಾರೆ.

ಸಣ್ಣದಾಗಿ ಆರಂಭ ಮಾಡಿದ ಆಶ್ರಮವನ್ನು ಕೇವಲ ಜೋಳಿಗೆಯ ಭಿಕ್ಷೆಯಿಂದಲೇ ಜಗನ್ಮಂದಿರವನ್ನಾಗಿ ಮಾಡುವ ಹಠ ತೊಟ್ಟಿದ್ದಾರೆ.

ವ್ಯಾಯಾಮ ಮೇಷ್ಟ್ರು ಎಂದು ಪರಿಚಿತರಾಗಿದ್ದ ಗುರುಗಳು ವೈದ್ಯ ಸಿದ್ಧರೆಂಬ ಖ್ಯಾತಿಯನ್ನು ಪಡೆದರು. ದೇಶದ ಮೂಲೆ ಮೂಲೆಗಳಿಂದ ಎಲ್ಲೂ ವಾಸಿಯಾಗದ ರೋಗಗ್ರಸ್ತರು ಆಶ್ರಮದ ಹಾದಿ ತುಳಿದರು. ಅಮೃತ ಪಡೆದು ಸುಜೀವಿಗಳಾದರು.

ಹಳ್ಳಿಗಳಲ್ಲಿ ವಿದ್ಯೆಯನ್ನು ಹರಡುವ ಸದಿಚ್ಛೆ ಮೂಡಿದೊಡನೆ ವಿದ್ಯಾಮಂದಿರ ಸಿದ್ಧವಾಗಿ ಸ್ಥಳ-ಪರಸ್ಥಳದ ಮಕ್ಕಳಿಗೆ ವಸತಿ ಗೃಹ ಮೈದೋರಿ ನಿಂತಿತು.ಇಂದು ಅದರ ಹಸ್ತ ನಾಲ್ಕೂ ದಿಕ್ಕಿಗೂ ಚಾಚಿದೆ,ಚಾಚುತ್ತಿದೆ. ಇನ್ನೂ ಅಂಗಸಾಧನೆ–ಶಿಕ್ಷಣ ತರಪೇತಿ ಕಾಲೇಜಿನ ಶಿಕ್ಷಣ–ಹೀಗೆ ಹಲವು ಬಗೆಯ ವಿದ್ಯಾಮಂದಿರಗಳು ಆಶ್ರಮದ ಯಶಸ್ಸನ್ನು ಹಾರೈಸುತ್ತ ನಿಂತಿವೆ.

ಗೋಸೇವೆ ಆಧುನಿಕ ರೀತಿಯ ಬೇಸಾಯ ತೋಟಗಾರಿಕೆಗಳೂ ಆಶ್ರಮದ ವಿಶಿಷ್ಟ ಸೇವೆಗಳ ಭಾಗಗಳಾಗಿವೆ.

ಇಷ್ಟಾದರೂ, ಇನ್ನೂ ಎಷ್ಟೇ ಆದರೂ ಗುರುವರ್ಯರ ಶಕ್ತಿ ಆತ್ಮತೇಜ ಸಹಿಸಬಲ್ಲುದು–ವರ್ಧಿಸಬಲ್ಲುದು.

ಎಂಭತ್ತೆಂಟು ವರ್ಷದ ಈ ಗುರುವರ್ಯರ ದೇಹಕ್ಕೆ ಮುಪ್ಪಂತೂ ದೂರವೇ. ಚಿರಯೌವ್ವನವೇ ಅವರ ಪಾಲಿಗೆ ಬಂದಿರುವ ಮೂಕಾಂಬಿಕೆಯ ಹರಕೆ.

ಸೇವೆ–ಸೇವೆ–ಸೇವೆ–ಇದೇ ಅವರ ಘೋಷಣಾಮಂತ್ರ. ಉದ್ದಾಮಸಾಹಿತಿಗಳಾಗಿ–ಕವಿಗಳಾಗಿ–ನಾಟಕಕಾರರಾಗಿ– ಕೀರ್ತನಕಾರರಾಗಿ ಮೆರೆದಿದ್ದರೂ ಸದಾ ಮೌನಿ. ಘನಸರ್ಕಾರಗಳ ನಾನಾ ಮಟ್ಟದ ಗೌರವಪದವಿಗಳಿಂದ ಅತಿದೂರ ಈಮಾನವ–ಅತಿಮಾನವ.

ಕಾಯಸತ್ಕರುಣೆಯನ್ನು ಪಡೆದ ಈತ ಯಾವುದಕ್ಕೆ ತಾನೇ ಆಶೆಬಿದ್ದಾನು ? ಶಾಶ್ವತ–ಅಶಾಶ್ವತಗಳ ಚಿರಪರಿಚಯ ಪಡೆದ ಈತ ಯಾವುದಕ್ಕೂ ದೂರ–ಅತಿದೂರ.

ಇಂತಹ ಮುಚ್ಚಿದ ಕೆಂಡವನ್ನೂ ಗುರುತಿಸುವ ಎದೆ ದೇಶದಲ್ಲಿ ಯಾರಿಗುಂಟು ? ಮಠಾಧಿಪತಿಗಳೇ, ನಾಡಿನ ಜನಪತಿಗಳೇ, ಲಕ್ಷ್ಮೀಪತಿಗಳೇ ಯಾರೂ ಈ ಗುರುವಿನ ನಿಜವನ್ನು ಅರಿಯಲಾರರು. ಯಾರನ್ನೂ ಪೂಜ್ಯರು ಹೊಗಳುವುದಿಲ್ಲ–ದ್ವೇಷಿಸುವುದಂತೂ ಇಲ್ಲವೇ ಇಲ್ಲ.

ಪ್ರೇಮವೇ ಆವರ ಹೃದಯ ತುಂಬಿದೆ. ಹತ್ತಿರದವರು ತಮ್ಮ ಯೋಗ್ಯತೆ ಇದ್ದಷ್ಟು ಅದನ್ನು ಪಡೆದು ಧನ್ಯರಾಗಬೇಕು; ಪಾವನರಾಗಬೇಕು. ಇವರೇ ಪರಮಪೂಜ್ಯ ಶ್ರೀಶ್ರೀ ರಾಘವೇಂದ್ರಸ್ವಾಮಿಗಳು.

ಅನಾಥ ಹಾಗೂ ಬಡ ಬಾಲಕರನ್ನು ಸಾಕಿ ಸಲಹಿ ವಿದ್ಯೆ ಬುದ್ಧಿಗಳನ್ನು ಕಲಿಸಿ ಅದರಲ್ಲೂ ಆರ್ಷೇಯ ಪದ್ಧತಿಗನುಸಾರವಾಗಿ ಆತ್ಮಶಕ್ತಿಯನ್ನೂ ದೇಹಶಕ್ತಿಯನ್ನೂ ಅಭಿವೃದ್ಧಿಗೊಳಿಸಿ, ಚಾರಿತ್ರ್ಯದಿಂದ ಕೂಡಿದ ಪ್ರಜೆಗಳನ್ನು ದೇಶಕ್ಕೊದಗಿಸುವ ಕಾರ್ಯ ಬಹು ದೊಡ್ಡದು. ಈ ದಾರಿಯಲ್ಲಿ ರಾಘವೇಂದ್ರರಾಯರು ಬಹಳ ಶ್ರಮಿಸುತ್ತಿದ್ದಾರೆ. ಅನೇಕ ರೋಗಗಳಿಗೂ ಚಿಕಿತ್ಸೆಯನ್ನು ಮಾಡುತ್ತಿದ್ದಾನೆ.

—ಬಿ. ರಾಮಮೂರ್ತಿ ಮುನಿಸಿಪಲ್ ಪ್ರೆಸಿಡೆಂಟ್, ಭದ್ರಾವತಿ

ಬಿ. ನರಸಿಂಹಯ್ಯ

ಜೀವಂತ ಶಕ್ತಿ ಸಂಚಾಲನೆ

"ಗುರುಗಳೇ, ಗುರುಗಳೇ,"

"ಯಾರದು ?"

"ನಾನು ಗುರುಗಳೆ"

"ಯಾರು ? ಇಷ್ಟು ಹೊತ್ತಿನಲ್ಲಿ ?"

"..............."

ಅಂದು ರಾತ್ರಿ ಸುಮಾರು ಹತ್ತು ಘಂಟೆ ಇರಬಹುದು, ನಮ್ಮ ಅಜ್ಜಂಪುರದ ಮನೆಯಲ್ಲಿ ಮೇಜಿನ ಮುಂದೆ ಕುಳಿತು ಮಾಮೂಲಿನಂತೆ ದಿನ ಪತ್ರಿಕೆ ಓದುತ್ತಿದ್ದೆ. ಆಗಂತುಕರೊಬ್ಬರು ಮೇಲಿನಂತೆ ಕೂಗಿ ನನ್ನ ಮನಸ್ಸನ್ನು ಪಲ್ಲಟಗೊಳಿಸಿದರು. ಅದೃಷ್ಟವೊ, ದುರದೃಷ್ಟವೋ, ಪತ್ರಿಕೆ ಓದುತ್ತಿದ್ದ ನಾನು ಮೇಲೆದ್ದು ಹೋಗಿ ಬಾಗಿಲು ತೆಗೆಯಲಿಲ್ಲ, ಯಾರು ಎಂದು ಮತ್ತೆ ಕೇಳಲಿಲ್ಲ, ಪತ್ರಿಕೆ ಓದುವುದರಲ್ಲಿ ಮಗ್ನನಾಗಿದ್ದೆ. ಅಷ್ಟು ಸೌಜನ್ಯ ಕೂಡಾ ತೋರಿಸಲಿಲ್ಲ. ಮನೆಯ ಮುಂದಿನ ಹಜಾರದಲ್ಲಿ ನಾನೊಬ್ಬನೇ ಮಲಗುತ್ತಿದ್ದೆ. ಮನೆಯವರೆಲ್ಲ ಒಳಗೆ ಕೋಣೆಗಳಲ್ಲಿ ಮಲಗುತ್ತಿದ್ದರು.

ಪತ್ರಿಕೆ ಓದಿ ಮುಗಿಯಿತು. ಹನ್ನೊಂದು ಘಂಟೆಯಾಯಿತು. ಮಲಗುವ ಮುನ್ನ ಬೀದಿ ಬಾಗಿಲು ತೆಗೆದು ಪ್ರಕೃತಿಯ ಕರೆಗಾಗಿ ಹೊರಕ್ಕೆ ಬಂದೆ. ಜಗುಲಿಯ ಮೇಲೆ ಯಾರೋ ಮಲಗಿಕೊಳ್ಳುವ ಸಿದ್ಧತೆ ಮಾಡಿಕೊಳ್ಳುತ್ತಿರುವುದನ್ನು ಕಂಡೆ. ಅದೇ ಹಳೇ ಧ್ವನಿ "ನಾನು ಗುರುಗಳೆ" ಎಂದರು. ಮುಗುಳು ನಗೆ ನಕ್ಕರು. ಹತ್ತಿರ ಹೋಗಿ ನೋಡಿದೆ. ಅವರೆ ನಮ್ಮ ಮಲ್ಲಾಡಿಹಳ್ಳಿ ಸ್ವಾಮಿಗಳು !

"ಇದೇನು ? ಸ್ವಾಮಿಗಳು ! ಈ ಹೊತ್ತಿನಲ್ಲಿ ಇಲ್ಲಿ ! ಏಕೆ ?" ನನಗೆ ಬಹಳ ಆಶ್ಚರ್ಯವಾಯಿತು.

"ಮೂರು ಸಾರಿ ಗುರುಗಳೇ, ಗುರುಗಳೇ ಎಂದು ಕೂಗಿದೆ. ಆದರೆ ಗುರುಗಳು ಕುಳಿತ ಸ್ಥಳದಿಂದ ಎದ್ದು ಬರಲಿಲ್ಲ. ಗುರುಗಳು ಕೋಪದಿಂದ ಇದ್ದಾರೆ, ಬೆಳಿಗ್ಗೆ ಮಾತನಾಡಿದರೆ ಆಯಿತು–ಎಂದು ಇಲ್ಲೇ ಮಲಗಲು ವ್ಯವಸ್ಥೆ ಮಾಡುತ್ತಿದ್ದೆ" ಎಂದರು. ಮುಗುಳುನಗೆ ನಕ್ಕರು.

ಒಳಕ್ಕೆ ಕರೆದುಕೊಂಡು ಹೋದೆ.

"ಸ್ನಾನಕ್ಕೆ ಸಿದ್ಧಮಾಡಲೆ ಸ್ವಾಮಿಗಳೇ ?" ಎಂದೆ.

"ನಾನು ಊಟಮಾಡಿ ಮೂರುದಿನಗಳಾಯಿತು. ಗುರುಗಳೇ ! ನಿಮ್ಮ ತಾಯಿಯವರು ಎಷ್ಟು ಹೊತ್ತಿನಲ್ಲಿ ಬಂದರೂ ಸಂತೋಷದಿಂದ ಮಾಡಿ ಬಡಿಸುತ್ತಾರೆ ಎಂದು ಇಲ್ಲಿಗೆ ಬಂದೆ" ಎಂದರು.

ಒಳಗೆ ಮಲಗಿದ್ದ ತಾಯಿಯನ್ನು ಎಬ್ಬಿಸಿದ ಮೇಲೆ ಗುರುಗಳ ಸ್ನಾನ, ಪೂಜೆ, ಫಲಹಾರ ಎಲ್ಲ ಆಯಿತು. ಅಂದಿನ ಅನುಭವ ಜೀವನದಲ್ಲಿ ಪಾಠ ಕಲಿಸಿತು. ಅಲ್ಪ ಸ್ವಲ್ಪ ಸೌಜನ್ಯ, ವಿನಯ ಕೂಡಾ ತೋರಿಸಲು ಮರೆತೆನಲ್ಲಾ! ಇನ್ನು ಮುಂದೆ ಎಂದೆಂದಿಗೂ ವಿನಯ ವರ್ತನೆ ಮರೆಯುವುದಿಲ್ಲ ಎಂದು ಸಂಕಲ್ಪ ಮಾಡಿದೆ.

ಸಾಮಾನ್ಯವಾಗಿ ಉಪಾಧ್ಯಾಯರನ್ನೆಲ್ಲ ಗುರುಗಳೇ ಎಂದು ಕರೆಯುವುದು ಮಲ್ಲಾಡಿಹಳ್ಳಿ ಸ್ವಾಮಿಗಳ ಪದ್ಧತಿ. ಅದರಂತೆ ನನ್ನನ್ನೂ ಗುರುಗಳೇ ಎಂದು ಕರೆಯುತ್ತಿದ್ದರು. ಅಂದಿನ ಘಟನೆಗೆ ಮುಖ್ಯ ಕಾರಣ, ನನ್ನ ಮತ್ತು ಅವರ ನಡುವಣ ಹತ್ತಾರು ವರ್ಷಗಳ ದೀರ್ಘ ಪರಿಚಯ ಮತ್ತು ಸಹಚರ್ಯೆ. ಅವರು ಅಜ್ಜಂಪುರಕ್ಕೆ ಬಂದಾಗಲೆಲ್ಲ ನಿಧಿ ಸಂಗ್ರಹಿಸಲು ಜೋಳಿಗೆ ಹಿಡಿದು ನಮ್ಮಗಳನ್ನು ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು.

ಒಂದು ದಿನ ಸಂಜೆ ಸುಮಾರು ನಾಲ್ಕುಐದು ಮೈಲಿ ದೂರದ ಹಳ್ಳಿಗೆ ನಿಧಿ ಸಂಗ್ರಹಿಸಲು ನಾವೆಲ್ಲ ಹೋದೆವು. ಸಾಯಂಕಾಲ ಆರು ಘಂಟೆಗೆ ಹಳ್ಳಿ ತಲಪಿದೆವು.ಆದರೆ ನಮ್ಮ ದುರಾದೃಷ್ಟ, ನಮ್ಮವಸೂಲಿಗೆ ಸಹಾಯ ಮಾಡುವ ಮುಖ್ಯಸ್ಥರು ಯಾರು ಬರಲಿಲ್ಲ. ಮುಖ್ಯಸ್ಥರನ್ನು ನೋಡಲು ಹೋದ ನಮ್ಮ ಗುಂಪಿನ ಮುಖ್ಯಸ್ಥರು ಕೂಡ ರಾತ್ರಿ ಹತ್ತು ಘಂಟೆಯವರೆಗೂ ಬರಲಿಲ್ಲ. ಮಿತ್ರ ಅನಂತಯ್ಯ, ಪೂಜ್ಯ ಸ್ವಾಮಿಜಿಯವರು, ನಾನು–ಮೂವರು ಬಂದು ಹಳ್ಳಿಯ ಹೊರಗಿನ ಒಂದು ಬಾವಿಯ ಬಳಿ ಕುಳಿತೆವು. ಅಜ್ಜಂಪುರ, ಬೀರೂರು ಛಳಿಗೆ ಪ್ರಸಿದ್ಧವಾದದ್ದು. ನಾವಿಬ್ಬರೂ ಕೋಟು ಹಾಕಿಕೊಂಡಿದ್ದೆವು. ಆದರೆ ಸ್ವಾಮಿಜಿ ಮೊಣಕಾಲ ವರೆಗಿನ ಚಡ್ಡಿ ಮತ್ತು ಬನಿಯನ್ ಮಾತ್ರ ಹಾಕಿದ್ದರು. ಮೈ ಕತ್ತರಿಸುವ ಛಳಿಯಲ್ಲಿ ಅವರು ತಮ್ಮ ಜೀವನದ ಘಟನೆಗಳನ್ನು ವಿವರಿಸತೊಡಗಿದರು. ಬಾಲ್ಯದಲ್ಲಿ ಬರುತ್ತಿದ್ದ ಮೂರ್ಛೆ ರೋಗವನ್ನು ವಾಸಿಮಾಡಿಕೊಂಡಿದ್ದು, ದುಡ್ಡಿಲ್ಲದ್ದರಿಂದ ಕಾಲು ನಡಿಗೆಯಲ್ಲಿ ನಡೆದುಕೊಂಡು ಹೋಗಿ ಪೂನಾ ತಲಪಿ ಸ್ವಾಮಿ ಶಿವಾನಂದರನ್ನು ಕಂಡದ್ದು, ಅವರ ಬಳಿ ಹನ್ನೆರಡು ವರ್ಷ ಸೇವೆಮಾಡಿ ಕಾಟಿ, ಲಾಟಿ, ಕತ್ತಿ ವರಸೆ, ಕುಸ್ತಿ, ಕಸರತ್ ಮುಂತಾದುವುಗಳನ್ನು ಕಲಿತದ್ದು ಎಲ್ಲವನ್ನು ಹೇಳಿದರು. ಆಸನ ಮತ್ತು ಪ್ರಾಣಯಾಮಗಳ ಜೊತೆಯಲ್ಲಿ ಆಯುರ್ವೇದ ಚಿಕಿತ್ಸೆಯನ್ನು ದೀರ್ಘವಾಗಿ ಅಭ್ಯಾಸ ಮಾಡಿದ್ದನ್ನು ಹೇಳಿದರು.

ಒಂದು ಸಲ ರಾಜರತ್ನ ಪ್ರೊಫೆಸರ್ ಮಾಣಿಕರಾವ್‌ರವರು ಬರೋಡ ಮಹಾರಾಜರವರ ಆಸ್ಥಾನದಲ್ಲಿ ಒಂದು ಪ್ರದರ್ಶನ ಕೊಡುತ್ತಿದ್ದರು. ಪ್ರದರ್ಶನ ಮಧ್ಯದಲ್ಲಿ ಅವರು ಹೀಗೆ ಹೇಳಿದರು "ಐನೂರು ಪೌಂಡು ತೂಕದ–ಹೆಚ್ಚು ಇರಬಹುದು ಮರೆತು ಹೋಗಿದೆ–ಎರಡು ಮಂದಿ ಪೈಲ್ವಾನರುಗಳ ಸೊಂಟಕ್ಕೆ ಹಗ್ಗ ಕಟ್ಟಿ ಹಲ್ಲಿನಿಂದ ಹಗ್ಗವನ್ನು ಎತ್ತಿ ಸುತ್ತ ತಿರುಗಿಸಬೇಕು. ಕರ್ನಾಟಕೀ, ನೀವುಎದ್ದು ಈ ಪ್ರದರ್ಶನ ಕೊಡಿ" ತಕ್ಷಣ ಗುರುಗಳು ಮೇಲೆದ್ದು ಇಂತಹ ಪ್ರದರ್ಶನಕ್ಕೆ ಸಿದ್ಧರಾಗಿ ಪ್ರದರ್ಶನ ಕೊಟ್ಟರಂತೆ. ವಿನಯ, ಶರೀರಆರೋಗ್ಯ ಮನುಷ್ಯನಿಗೆ ಬೇಕಾದ ಸೌಭಾಗ್ಯಗಳು. ಇದನ್ನು ಪೂಜ್ಯ ಸ್ವಾಮೀಜಿಯವರ ಜೀವನದಿಂದ ಕಲಿತೆ. ಅವರು ಅನೇಕ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ಅನ್ನದಾನ ಜ್ಞಾನದಾನ ಆರೋಗ್ಯ ದಾನಗಳನ್ನು ಮಾಡಿ ಸಾವಿರಾರು ಜನರನ್ನು ಸುಖ ಸಂತೋಷದ ಹಾದಿಯತ್ತ ಕರೆದೊಯ್ದಿದ್ದಾರೆ. ದೂರದಿಂದ ನೋಡಿದವರು ಕೂಡ ಇವರಿಂದ ಸ್ಫೂರ್ತಿಗೊಂಡಿದ್ದಾರೆ. ಇವರ ಆತ್ಮೀಯ ಸ್ಪರ್ಶದಿಂದ ಪವಿತ್ರಗೊಂಡಿದ್ದಾರೆ.

ಇವರ ಸಮೀಪದಲ್ಲಿ ಓಡಾಡುವ ಅವಕಾಶ ಸಿಕ್ಕಿ ಇವರು ಮಾಡುವ ರೀತಿ ಮಾಡಿದರೆ, ಮತ್ತೊಬ್ಬರ ಬಡಕಲ ಶರೀರ ಇವರಂತೆ ಆರೋಗ್ಯದಾಯಕವಾಗುವುದು ಸಾಧ್ಯ–ಎನ್ನುವ ಆತ್ಮವಿಶ್ವಾಸ ಮೂಡುತ್ತದೆ. "ನುಡಿದಂತೆ ನಡೆ, ನಡೆದಂತೆ ನುಡಿ" ಹೇಳುವವರು ಬಹಳ. ಆದರೆ ಅದನ್ನು ಮಾಡಿ ತೋರಿಸುವ ಅಪರೂಪದ ವ್ಯಕ್ತಿ ನಮ್ಮ ಮಲ್ಲಾಡಿಹಳ್ಳಿ ಸ್ವಾಮಿಗಳು.

ಶಿಕ್ಷಣಕ್ಕಾಗಿ ಸರ್ಕಾರ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ದೈಹಿಕವಾಗಿ, ಮಾನಸಿಕವಾಗಿ, ನೈತಿಕವಾಗಿ, ತನ್ನ ಒಳಗಿರುವ ಪೂರ್ಣ ಆತ್ಮಶಕ್ತಿಯ ಪರಿಚಯವನ್ನು ಮಾಡಿಕೊಟ್ಟು,

ವೈಯುಕ್ತಿಕ ಹಾಗು ಸಮಾಜಿಕ ಸಮಸ್ಯೆಗಳನ್ನು ಬಿಡಿಸುತ್ತಾ, ದೇವಋಣ, ಪಿತೃಋಣ ಮತ್ತು ಸಮಾಜಋಣಗಳನ್ನು ತೀರಿಸಿ ತನ್ನ ಗೃಹಕೃತ್ಯ ಜೀವನದಲ್ಲಿ ಶ್ರೇಷ್ಠನಾಗಬೇಕೆಂಬುದೆ ಶಿಕ್ಷಣದ ಗುರಿಯಾಗಿದೆ. ಆದರೆ ಇದು ಬಾಯಲ್ಲಿ ಹೇಳಲು ಮಾತ್ರ ಸುಲಭ. ಅದರಂತೆ ನಡೆದವರು ಬಹಳ ಅಪರೂಪ. ಆದರೆ ಸ್ವಾಮಿಗಳು ಹುಟ್ಟಿನಿಂದ ಬಂದ ಮಲರೋಗವನ್ನು ವಾಸಿಮಾಡಿಕೊಂಡು, ಯಾವ ಶಾಲಾ ಕಾಲೇಜುಗಳಲ್ಲಿ ಓದದೆ ಇವ್ವರು ಕೂಡ ಶ್ರೇಷ್ಠ ವಿದ್ಯಾವಂತರಾಗಿ ಲಕ್ಷಾಂತರ ಜನಗಳಿಗೆ ಪೋಷಕರಾಗಿದ್ದಾರೆ.

ಸ್ವಾಮಿಜಿಯವರ ರಕ್ತನಾಡಿಗಳಲ್ಲಿ ಹರಿಯುತ್ತಿರುವುದು ದೇಶಾಭಿಮಾನ. ನಮ್ಮದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ಅನೇಕ ಪಂಚವಾರ್ಷಿಕ ಯೋಜನೆಗಳ ಮೂಲಕ ಕೋಟ್ಯಾನು ಕೋಟಿ ಹಣ ವಿನಿಯೋಗವಾಗಿದೆ. ಇಲ್ಲಿಯವರೆಗೆ ಚಲ್ಲಿದ ಹಣಕ್ಕೆ ಈ ವೇಳೆಗಾಗಲೆ ಬಡ್ಡಿ ಚಕ್ರಬಡ್ಡಿಗಳ ಸಮೇತ ಲಾಭದ ಹಣ ಸುರಿಮಳೆಯಾಗಿ ಸುರಿಯಬೇಕಿತ್ತು. ರಾಮರಾಜ್ಯವಾಗಬೇಕಿತ್ತು. ಆದರೆ ಹಾಗಾಗಿಲ್ಲ. ಹಣದ ಋಣ ತೀರಿಸುವ ಮನೋಧರ್ಮದಿಂದ ಜನ ಬಾಳನ್ನು ಬಾಳಬೇಕು. ಜನರಲ್ಲಿ ಮೋಸ, ಕಷ್ಟಪಡದೆ ಶ್ರೀಮಂತನಾಗಬೇಕು ಎನ್ನುವ ಬಯಕೆ ಹೆಚ್ಚಾಗುತ್ತಿದೆ. ಆದರೆ ಯಾರನ್ನು ಅನುಸರಿಸಬೇಕು ಎನ್ನುವ ಜೀವಂತ ಉದಾಹರಣೆ ಅವರಿಗೆ ಬೇಕಾಗಿದೆ. ತ್ಯಾಗಜೀವಿ ಮಲ್ಲಾಡಿಹಳ್ಳಿ ಸ್ವಾಮಿಗಳ ಆದರ್ಶವನ್ನು ಜನ ಅನುಸರಿಸಿ ಬಾಳಿದಲ್ಲಿ ನಿಜವಾಗಿ ರಾಮರಾಜ್ಯವಾದೀತು.

'ಸ್ವಾಮಿ' ಎಂದು ಜನರು ಪಟ್ಟಕಟ್ಟಿರುವುದು ಅವರು ಸಂನ್ಯಾಸ ತೆಗೆದುಕೊಂಡು ಸ್ವಾಮಿಗಳು ಆಗಿದ್ದಾರೆ ಅಂತ ಅಲ್ಲ. ಅವರು ಕೇವಲ ಸಮಾಜ ಸೇವಕರು. ತಮ್ಮ ಸೇವಾಗುರಿಯನ್ನು ಆಧ್ಯಾತ್ಮಿಕ ತಳಹದಿ ಮೇಲೆ ಬೆಳೆಸುತ್ತಾ ಬಂದಿರುವುದರಿಂದ ಅವರಿಗೆ ಆದರ್ಶ ಸಂನ್ಯಾಸಿಯ ಆತ್ಮಬಲ, ತೇಜೋಬಲ, ಬ್ರಹ್ಮಬಲ ತಾನೆ ತಾನಾಗಿ ಕರಗತವಾಗಿದೆ.ಈ ಬಲದ ಅನುಕರಣ ಇಂದಿನ ಪೀಳಿಗೆಯಲ್ಲಿ ಬೆಳೆದರೆ ಸ್ವಾಮಿಜಿಗೆ ಸೂಕ್ತಗುರುಕಾಣಿಕೆ ಅರ್ಪಿತವಾಗುತ್ತದೆ. ಇವರು ಇವರ ಗುರುಗಳಿಗೂ ಇದೇ ಗುರುದಕ್ಷಿಣೆ ವಾಗ್ದಾನ ಮಾಡಿ ಅದರಂತೆ ನಡೆದುಕೊಳ್ಳುತ್ತಿದ್ದಾರೆ.

ಆರ್ಯಸಂಸ್ಕೃತಿಯ ಪುನರೋದ್ಧಾರವಾಗಿದೆ ಇಲ್ಲಿ.

—ಬಿ. ಎಸ್. ಶಂಕರಪ್ಪ

ವೈ. ಶೇ. ಅನಂತಪದ್ಮನಾಭರಾವ್

ಕರ್ಮಯೋಗಿ ಶ್ರೀ ರಾಘವೇಂದ್ರಸ್ವಾಮಿಗಳು

ಈಶಿತವ್ಯರೆಂತಪ್ಪರೇಕಾಂತ ಭಕ್ತರು
ದೇಶ ಕಾಲೋಚಿತ ಧರ್ಮ-ಕರ್ಮಾಸಕ್ತರು
ಆಶಾ ಕ್ರೋಧ ಲೋಭ ಮೋಹ ಪಾಶಮುಕ್ತರು
ಈ ಸುಜನರೇ ಶಾಪಾನುಗ್ರಹಶಕ್ತರು.

— ಜಗನ್ನಾಥದಾಸರು

ಬಾಹ್ಯ ಪ್ರಪಂಚ ವ್ಯಾಮೋಹವನ್ನು ಸಂಪೂರ್ಣವಾಗಿ ತ್ಯಾಗಮಾಡಿ ಧರ್ಮ–ಕರ್ಮ ತಪಸ್ವಿಗಳಾಗಿ ಲೋಕೋಪಕಾರಕ್ಕಾಗಿ ತಮ್ಮ ಜೀವನವನ್ನು ಮುಡಿಪಾಗಿ ಮಾಡಿ ಮಹಾತ್ಮರೆನಿಸಿರುವ ಮಲ್ಲಾಡಿಹಳ್ಳಿಯ ಕರ್ಮಯೋಗಿಗಳು ಶ್ರೀ ರಾಘವೇಂದ್ರಸ್ವಾಮಿಗಳವರು. 'ಕಾಯಕವೇ ಕೈಲಾಸ'ವೆಂಬ ಬಸವಣ್ಣನವರ ವಚನದಂತೆ ಸ್ವಾಮಿಗಳವರು ದೀನ ದಲಿತರಿಗಾಗಿ ದುಡಿಯುತ್ತಿರುವ ದಿವ್ಯ ಜೀವಿಗಳು. ಇವರು ಜಿತೇಂದ್ರಿಯರು, ವಿರಕ್ತ ಪುರುಷರು, ಕರ್ಮನಿರತರು, ಧರ್ಮ–ಸತ್ಯನಿಷ್ಠರು; ಪ್ರಾಚೀನ ಋಷಿಗಳ ಮಾರ್ಗದಲ್ಲಿ ನಡೆದು ಲೋಕಕ್ಕೆ ಆದರ್ಶ ಪುರುಷರಾಗಿರುವವರು. ವಿದ್ಯಾತುರರಿಗೆ ವಿದ್ಯೆ, ಯೋಗಾಭ್ಯಾಸಿಗಳಿಗೆ ಯೋಗವಿದ್ಯೆ, ಜ್ಞಾನಾರ್ಜನೆ ಮಾಡಬೇಕೆನ್ನುವವರಿಗೆ ಸುಜ್ಞಾನ ಸಂಪತ್ತು, ಅಂಗಸಾಧಕರಿಗೆ ಅಂಗಸಾಧನೆ, ರೋಗಿಗಳಿಗೆ ಚಿಕಿತ್ಸೆ ಇವೇ ಮೊದಲಾದ ಸುವ್ಯವಸ್ಥಿತ ಅನುಕೂಲಗಳನ್ನು ಒದಗಿಸಿ ನಿರಪೇಕ್ಷೆಯಿಂದ, ನಿಸ್ಸ್ವಾರ್ಥತೆಯಿಂದ ನಿಶಿಹಗಲು ಶ್ರಮಿಸುತ್ತಿರುವ ಶ್ರೀ ರಾಘವೇಂದ್ರಸ್ವಾಮಿಗಳು ಸರ್ವ ಪೂಜ್ಯರಾಗಿರುವರು. ಜನಸೇವೆಯೇ ಜನಾರ್ದನನ ಸೇವೆಯೆಂಬ ನಿಷ್ಠೆ, ಅವರ ಪ್ರತಿಯೊಂದು ಕಾರ್ಯದಲ್ಲೂ ವಿಶಿಷ್ಟವಾದ ಶಿಸ್ತು, ಯಾವ ಬಗೆಯ ಸದ್ದುಗದ್ದಲವೂ ಇಲ್ಲದೆ, ಪ್ರಶಸ್ತಿ ಪ್ರಭಾವಗಳಿಗೆ ಸಿಕ್ಕದೆ, ಯಾವ ಬಗೆಯ ಜಾಹೀರಾತುಗಳಿಗೆ ಅವಕಾಶ ಕೊಡದೆ, ಮೌನ ಮಾನಸರಾಗಿ ನಿರಂತರ ಕಾರ್ಯ ತತ್ಪರರಾದ ಈ ಮಹಾನುಭಾವರ ದರ್ಶನವೇ ಪರಮಭಾಗ್ಯ.

ಕರ್ಮಣೈವಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ
ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ.

—ಗೀತಾ. ಅ. ೩. ಶ್ಲೋ ೨೦

(ಜನಕನೇ ಮೊದಲಾದ ಮಹಾನುಭಾವರು ಕರ್ಮಾನುಷ್ಠಾನದಿಂದಲೇ ಸಿದ್ಧಿಯನ್ನು ಪಡೆದರು. ಲೋಕಸಂಗ್ರಹವನ್ನು ನೋಡಿಯಾದರು ಕರ್ಮವನ್ನು ಮಾಡಲು ಯೋಗ್ಯನಾಗಿರುವೆ.)

ಶ್ರೀ ಕೃಷ್ಣೋಪದೇಶದಂತೆ ಸ್ವಾಮಿಗಳವರು ಸತ್ಕರ್ಮ ನಿರತರಾಗಿ ಫಲಾಪೇಕ್ಷೆಯಿಲ್ಲದೆ ತಮ್ಮ ಸತ್ಕಾರ್ಯದ ಫಲಗಳನ್ನೆಲ್ಲಾ ಭಗವದರ್ಪಣ ಮಾಡುತ್ತಾ ಕೃತಾರ್ಥರಾಗಿರುವರು. ಸ್ವಾಮಿಗಳು ಪವಾಡ ಪುರುಷರಲ್ಲ.

ಅವರ ವ್ಯಕ್ತಿತ್ವ, ಅವರ ಯೋಗಶಕ್ತಿ. ತಪಶ್ಶಕ್ತಿ, ಅವರು ಹಿಡಿದಿರುವ ಧರ್ಮಮಾರ್ಗ, ಸತ್ಯನಿಷ್ಠೆ — ಇವು ಸರ್ವವಿಧ ಜನರನ್ನೂ ಮಲ್ಲಾಡಿಹಳ್ಳಿಯ ಕಡೆಗೆ ಆಕರ್ಷಿಸುತ್ತಿವೆ. ಅವರ ಹಸ್ತ ಅಮೃತ ಹಸ್ತ, ಅಕ್ಷಯ ಹಸ್ತ. ಪಲ್ಲಕ್ಕಿ, ಮೇನೆಗಳಲ್ಲಿ ಸಂಚರಿಸುವವರಲ್ಲ. ಪ್ರಯಾಣಾನುಕೂಲಕ್ಕೆ ವೈಭವೋಪೇತವಾದ ಕಾರುಗಳನ್ನು ಅಪೇಕ್ಷಿಸು ವವರಲ್ಲ. ಏಕವಸ್ತ್ರ (ಕಾವಿ) ಧಾರಿಯಾಗಿ, ದೇಶ, ನಗರ, ಗ್ರಾಮಗಳಲ್ಲಿ ಪಾದಚಾರಿಯಾಗಿ ಜೋಳಿಗೆ ಹಿಡಿದು ಸಂಚರಿಸಿ ತಾವು ಸೃಷ್ಟಿಸಿ ನಡೆಸುತ್ತಿರುವ ಅನಾಥ ಸೇವಾಶ್ರಮದ ಅಭಿವೃದ್ಧಿಗೆ ಮಾತ್ರವೇ ಹೇರಳ ಕಾಣಿಕೆ ಗಳನ್ನು ಸ್ವೀಕರಿಸುತ್ತಿರುವರು. ಇವರಲ್ಲಿ ತಮಗಾಗಿ ಒಂದು ಪೈಸೆಯನ್ನೂ ಬಳಸುವವರಲ್ಲ. ಪರಮಾತ್ಮ ಸ್ವರೂಪಿ ಗಳಾದ ಭಕ್ತರೇ ಅವರ ಅಗಾಧ ಬಳಗ.

ವೃದ್ಧಾಪ್ಯದಲ್ಲೂ, ಬಲಿಷ್ಠರಾದ ತರುಣರೂ ನಾಚುವಂತೆ ಹೊಳೆಯುವ ಅವರ ದೇಹ, ಅವರ ನಡಿಗೆ, ಅವರ ನಿಲುವು, ಕಾರ್ಯೋತ್ಸಾಹ, ಸಂಯಮ, ಸಹನೆ, ಶಾಂತಿ ಇವೇ ಮೊದಲಾದ ಅಮೋಘ ಸದ್ಗುಣಗಳು ಅವ ರಲ್ಲಿ ಒಡಮೂಡಿವೆ.

ನಿರಾಶೀರ್ಯತ ಚಿತ್ತಾತ್ಮಾ ತ್ಯಕ್ತ ಸರ್ವ ಪರಿಗ್ರಹಃ
ಶಾರೀರಂ ಕೇವಲಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್ ॥

—ಗೀತಾ. ಅ. ೪. ಶ್ಲೋ ೨೧.

(ಆಸೆಯಿಲ್ಲದವನೂ, ಚಿತ್ತ ಮತ್ತು ಆತ್ಮಗಳನ್ನು ವಶಪಡಿಸಿಕೊಂಡಿರುವವನೂ, ಸರ್ವಪರಿಗ್ರಹವನ್ನು ತ್ಯಜಿಸಿರುವವನೂ, ಕೇವಲ ಶರೀರ ರಕ್ಷಣೆಗೆ ಬೇಕಾದ ಕರ್ಮವನ್ನು ಮಾಡುತ್ತಿರುವವನೂ ಆದ ಯೋಗಿಯು ಯಾವ ಕಿಲ್ಬಿಷವನ್ನೂ ಹೊಂದುವುದಿಲ್ಲ.)

ಅಂತಃಕರಣ ಶುದ್ಧಿ, ದೇಹಶುದ್ಧಿ, ಜಿತೇಂದ್ರಿಯತ್ವ ಇವೆಲ್ಲ ಶಕ್ತಿಗಳನ್ನು ಪಡೆದಿರುವ ಸ್ವಾಮಿಗಳು ಆಶ್ರಮವನ್ನೇ ತಮ್ಮ ಜೀವದುಸಿರಾಗಿ ಭಾವಿಸಿ ಅದರ ಪೋಷಣೆಯಲ್ಲೇ ಆಸಕ್ತರು. ನನಗೆ ಸ್ವಾಮಿಗಳ ದರ್ಶನ ವಾದುದು ಶಿವಮೊಗ್ಗೆಯಲ್ಲಿ ೧೯೬೪ರ ಮಧ್ಯದಲ್ಲಿ. "ಶ್ರೀಮಾನ್ ಯೋಗಾನರಸಿಂಹ ಅವರ ಮನೆಯಲ್ಲಿ ಮಲ್ಲಾಡಿ ಹಳ್ಳಿ ಸ್ವಾಮಿಗಳು ತಂಗಿದ್ದಾರೆ. ಅಲ್ಲಿಗೆ ಹೋದರೆ ಅವರ ದರ್ಶನಲಾಭವಾಗುವುದು" ಎಂದು ನನ್ನ ಮಿತ್ರ ರೊಬ್ಬರು ಸೂಚಿಸಿದರು. ಅಲ್ಲಿಗೆ ಹೋದೆ. ಶ್ರೀ ಯೋಗಾನರಸಿಂಹ ಅವರ ಪರಿಚಯವಿರಲಿಲ್ಲ ನನಗೆ. ಅವರ ಮನೆಗೆ ಹೋದಾಗ ಅವರೇ ನನ್ನನ್ನು ಕರೆದೊಯ್ದು ಸ್ವಾಮಿಗಳ ದರ್ಶನ ಮಾಡಿಸಿದರು. ಅವರು ಸ್ವಾಮಿಗಳ ಅಚ್ಛಿನ್ನಭಕ್ತರು. ವಿನಯಸಂಪನ್ನರು. ಆಗತಾನೇ ಸ್ವಾಮಿಗಳು ಅಂದಿನ ಸಂಚಾರ ಮುಗಿಸಿ ಹಿಂದಿರು ಗಿದ್ದರು. ಸಂಚಾರದ ಆಯಾಸವನ್ನೇ ಗಣಿಸದೆ ಸಮೀಪದಲ್ಲಿ ನನ್ನನ್ನು ಕುಳ್ಳಿರಿಸಿಕೊಂಡು, ಬಹುಕಾಲದ ಪರಿಚಯ ವಿರುವ ರೀತಿಯಲ್ಲಿ ವಿಶ್ವಾಸದಿಂದಲೂ, ಪ್ರೀತಿಯಿಂದಲೂ ಮಾತನಾಡಿಸಿದರು. ಇದರಿಂದ ನಾನು ಪುಳಕಿತನಾದೆ. ಇದೇ ಸಮಯದಲ್ಲಿ ಅವರೊಡನೆ ನನ್ನ ಮಗಳಿಗಿರುವ ಹಲವು ದಿನಗಳ ವ್ಯಾಧಿಯ ಪ್ರಸ್ತಾಪ ಮಾಡಿದೆ. ಮರುದಿನ ಬೆಳಗ್ಗೆ ರೋಗಿಯನ್ನು ಪರೀಕ್ಷಿಸಿ ಔಷಧ ಕೊಡುವುದಾಗಿ ತಿಳಿಸಿದರು. ಅದೇ ಪ್ರಕಾರವಾಗಿ ಮಾರನೇ ದಿವಸ ಸ್ವಾಮಿಜಿಯವರು ಆಕೆಯನ್ನು ಚೆನ್ನಾಗಿ ಪರೀಕ್ಷಿಸಿ ಔಷಧವನ್ನು ಬರೆದು ಕೊಟ್ಟರು. 'ಶನಿವಾರ ಸಂಜೆ ಮಲ್ಲಾಡಿ ಹಳ್ಳಿಗೆ ಬಂದು ೧೫ ದಿವಸಗಳಿಗೆ ಸಾಕಾಗುವಷ್ಟು ಔಷಧ ತೆಗೆದುಕೊಳ್ಳಿ' ಎಂದು ಅಪ್ಪಣೆ ಮಾಡಿದರು.

ಸ್ವಾಮಿಜಿಯವರ ಆದೇಶದಂತೆ ಮುಂದಿನ ಶನಿವಾರ ಸಂಜೆ ಮಲ್ಲಾಡಿಹಳ್ಳಿಗೆ ಬಸ್ಸಿನಲ್ಲಿ ಹೊರಟೆ. ಶಿವಮೊಗ್ಗೆಯಿಂದ ಚಿತ್ರದುರ್ಗದ ಮಾರ್ಗ; ಹೊಳಲ್ಕೆರೆಯಿಂದ ಸ್ವಲ್ಪ ಈಚೆಗೇ ಇಳಿದು ಮುಂದೆ ನಡೆದು ಹೋದರೆ ಮಲ್ಲಾಡಿಹಳ್ಳಿ ಸಿಕ್ಕುವುದು. ನನ್ನ ಜೊತೆಯಲ್ಲಿ ನನ್ನ ಗೆಳೆಯರಾದ ಜ್ಞಾನೇಂದ್ರ ಪ್ರಭುಗಳೂ ಇದ್ದರು. ಇವರು ಸ್ವಾಮಿಜಿಯವರಿಗೆ ಚಿರಪರಿಚಿತರು, ಕ್ರಿಶ್ಚಿಯನ್ ಮತದಿಂದ ಹಿಂದೂಮತಕ್ಕೆ ಪರಿವರ್ತನ ಗೊಂಡವರು, ಆರ್ಯ ಸಮಾಜದ ಅನುಯಾಯಿಗಳು. ನಾವಿಬ್ಬರೂ ಹಳ್ಳಿಯನ್ನು ತಲುಪಿದ ಮೇಲೆ ಅಲ್ಲಿ ರಾತ್ರಿ

ಮಲಗಲು ಒಂದು ಕೋಣೆಯನ್ನು ಹಿಡಿದೆವು. ಬಂದ ಅತಿಥಿಗಳು ಇಳಿದುಕೊಳ್ಳಲು ಅನುಕೂಲಿಸುವಂತೆ ವಸತಿಗೃಹ ಪ್ರತ್ಯೇಕ ನಿರ್ಮಾಣವಾಗಿದೆ.

ಜ್ಞಾನೇಂದ್ರ ಪ್ರಭುಗಳು ನನಗೆ, ಸ್ವಾಮಿಜಿಯವರ ಹಸ್ತದಿಂದ ನಿರ್ಮಿತವಾದ ಉದ್ಯಾನ, ಅಲ್ಲಿನ ದನಕರುಗಳು, ಅವುಗಳಿಗಾಗಿ ಇರುವ ನಿರ್ಮಲವಾದ ಕೊಟ್ಟಿಗೆಗಳು, ಹೈಸ್ಕೂಲು, ಉಪಾಧ್ಯಾಯರುಗಳ ವಸತಿ ಗೃಹಗಳು, ಶಿಶುವಿಹಾರ, ವನ್ಯ ಮೃಗ ಪಕ್ಷಿಗಳು, ನಿರ್ಭಯವಾಗಿ ಸುತ್ತಲೂ ಓಡಾಡುತ್ತಿರುವ ಹುಲ್ಲೆಕರುಗಳು, ನವಿಲುಗಳು ಇವುಗಳನ್ನೆಲ್ಲ ತೋರಿಸಿದರು. ನಾವು ಪುರಾಣಗಳಲ್ಲಿ ಓದಿತಿಳಿಯುವ ಋಷ್ಯಾಶ್ರಮಗಳಂತೆ ಇಲ್ಲಿ ಪ್ರತ್ಯಕ್ಷವಾಗಿ ಪುಣ್ಯಾಶ್ರಮವನ್ನು ಕಂಡ ಅನುಭವವಾಯಿತು. ಮುಂದೆ ಕುಸ್ತಿಯ ಅಖಾಡವನ್ನು ನೋಡಿದೆವು. ಮಲ್ಲಕಾಳಗ ಸಮಯದಲ್ಲಿ ಘಾಯಗಳಿಗೆ ಈ ಅಖಾಡದ ಔಷಧಯುಕ್ತವಾದ ಕೆಂಪುಮಣ್ಣೇ ದಿವ್ಯೌಷಧವೆಂದು ಪ್ರಭುಗಳು ತಿಳಿಸಿದರು. ಈ ಸ್ಥಳವನ್ನು ನೋಡಿದಾಗ ಅಶಕ್ತ ದುರ್ಬಲನಿಗೂ ಮಲ್ಲಕಾಳಗ ಕಲಿಯಬೇಕೆಂಬ ಉತ್ಸಾಹ ಮೂಡುವುದು. ಅಲ್ಲಿಂದ ಮುಂದೆ ಹೋದಾಗ ಸ್ವಾಮಿಜಿಯವರು ದೀರ್ಘಕಾಲ ಯೋಗದಲ್ಲಿ ಇರುವ ಗೃಹ. ಒಳಗೆ ಪ್ರವೇಶ ದೊರೆಯಲಿಲ್ಲವಾದ ಕಾರಣ ಹೊರಗಿನಿಂದ ನೋಡಿಯೇ ತೃಪ್ತನಾಗಬೇಕಾಯಿತು. ಇವೆಲ್ಲ ಆಶ್ರಮದಿಂದ ಹೊರ ಆವರಣದಲ್ಲಿರುವುವು.

ಆವರಣದೊಳಗೆ ಶ್ರೀ ಪರಪ್ಪಗುರುಗಳ ಮಂದಿರ, ಭಜನೆ ಮಾಡುವ ವಿಶಾಲವಾದ ಜಗುಲಿ; ಇನ್ನೊಂದು ಕಡೆ ಆಸ್ಪತ್ರೆ, ಔಷಧ ತಯಾರಿಸುವ, ಕೊಡುವ ಸ್ಥಳ, ರೋಗಿಗಳನ್ನು ಪರೀಕ್ಷಿಸುವ ಜಾಗ, ಅಲ್ಲೇ ಸ್ವಾಮಿಜಿಯವರ ಕೊಠಡಿ, ಸಮಾಪದಲ್ಲೇ ಮುದ್ರಣಾಲಯ. ಎಲ್ಲಿಯೂ ಆಡಂಬರವಿಲ್ಲ. ಈ ಆವರಣ ವೃತ್ತಾಕಾರವಾಗಿ ವಿಸ್ತಾರವಾಗಿದೆ. ಇಲ್ಲಿ ಅಶೌಚ ಮಾಡಕೂಡದು, ಉಗಳಬಾರದು, ಸಿಗರೇಟು ಮುಂತಾದ ಹೊಗೆ ಬತ್ತಿ ಸೇವನೆ ಮಾಡಬಾರದು. ಮದ್ಯಪಾನ ಮಾಡಿದವರಿಗೆ ಆವರಣ ಪ್ರವೇಶವಿಲ್ಲ. ಹಾಳು ಹರಟೆ, ಗಟ್ಟಿಯಾಗಿ ಶಬ್ದ ಮಾಡುವುದು, ಕಲಹ ಇವೇ ಮೊದಲಾದವಕ್ಕೆ ಅವಕಾಶವೇ ಇಲ್ಲ. ಹೆಂಗಸರಿರುವ ತಾಣಕ್ಕೆ ಅಕಾರಣವಾಗಿ ಪುರುಷರಿಗೆ ಪ್ರವೇಶವಿಲ್ಲ. ಭಜನೆ ವೇದಿಕೆಯ ಆ ಕಡೆಗೇ ಅಡಿಗೆಯ ಕೋಣೆ, ಭೋಜನ ಗೃಹ, ಇವುಗಳ ಹಿಂಬದಿಗೆ ಉಗ್ರಾಣ. ಇವುಗಳನ್ನೆಲ್ಲ ನೋಡಿದೆವು.

ಪ್ರತಿ ಸೋಮವಾರ ಸಂಜೆ ಪ್ರವಾಸ ಹೊರಡುವ ಸ್ವಾಮಿಜಿಯವರು ಮುಂದಿನ ಶನಿವಾರ ಸಂಜೆಯ ಹೊತ್ತಿಗೆ ಆಶ್ರಮಕ್ಕೆ ಹಿಂದಿರುಗುವುದು ವಾಡಿಕೆ. ಬಂದ ಕ್ಷಣವೇ ಅವರು ಕಾರ್ಯೋನ್ಮುಖರಾಗುತ್ತಾರೆ. ಕತ್ತಲು ಮೂಡುತ್ತಲೇ ಭಜನೆಗೆ ಆರಂಭ. ಸ್ವಾಮಿಜಿಯವರು ತಾವೇ ಹಾರ್ಮೋನಿಯಂ ನುಡಿಸುತ್ತಾ ಸುಮಧುರವಾದ ಕಂಠದಿಂದ ಉಪಕ್ರಮಿಸುವರು. ಅವರು ಹೇಳಿಕೊಟ್ಟನಂತರ ಉಳಿದವರು ಹೇಳುವರು. ಕೆಲವು ಸಲ ಸೂರ್ ದಾಸ್‌ಜೀಯವರೂ ಹೇಳಿಕೊಡುತ್ತಾರೆ. ಆರ್ಯಸಮಾಜ ಪಂಥಿಗಳಾದ ಜ್ಞಾನೇಂದ್ರ ಪ್ರಭುಗಳು ಈ ಭಜನೆಯಲ್ಲಿ ಉಪಸ್ಥಿತರಿಲ್ಲದೆ ನನ್ನನ್ನು ಬಿಟ್ಟು ಎಲ್ಲೋ ಹೋದರು.

ಎಲ್ಲ ಮುಗಿದ ಮೇಲೆ ಬಂದ ಸಮಸ್ತರಿಗೂ ಸುಗ್ರಾಸ ಭೋಜನ. ಜೋಳದ ಹಿಟ್ಟಿನ ಮುದ್ದೆ, ಅನ್ನ ಹುಳಿ ಮೊದಲಾದ ಪರಿಕರಗಳು ರುಚಿಯಾಗಿರುತ್ತವೆ. ಆಶ್ರಮದ ಶಿಷ್ಯವೃಂದದವರು ಪ್ರತಿಯೊಬ್ಬರನ್ನೂ ಕಂಡು ಕರೆದುಕೊಂಡು ಹೋಗಿ ಊಟಕ್ಕೆ ಬಡಿಸುತ್ತಾರೆ. ಭೋಜನ ಗೃಹದಲ್ಲಿ ಸ್ವಾಮಿಜಿಯವರು ತಾವೇ ನಿಂತು ಪ್ರತಿ ಯೊಬ್ಬರನ್ನೂ ವಿಚಾರಿಸಿಕೊಳ್ಳುತ್ತಾರೆ. ಕೊನೆಯವನು ಊಟ ಮುಗಿಸುವವರೆಗೂ ಯಾರೂ ಏಳಬಾರದು. ಕೈತೊಳೆಯಲು ಸಾಲಿನಲ್ಲಿ ಹೋಗಬೇಕು. ಊಟ ಮಾಡಿದವರು ಊಟಮಾಡಿದ ಎಲೆಯನ್ನು ಎತ್ತಿಕೊಂಡು ಹೋಗಲು ಬಿಡುವುದಿಲ್ಲ. ಎಂಜಲೆಲೆಗಳನ್ನು ಸ್ವಾಮಿಜಿಯವರೇ ಮೊದಲು ತೆಗೆಯಲು ಸಿದ್ಧರಾದುದನ್ನು ನಾನು ಹೋಗಿದ್ದಾಗಲೆಲ್ಲ ನೋಡಿದ್ದೇನೆ. ಅಷ್ಟರಲ್ಲಿ ಶಿಷ್ಯ ಸಮೂಹ ಬಂದು ಕ್ಷಣ ಮಾತ್ರದಲ್ಲಿ ಎಲ್ಲವನ್ನೂ ತೆಗೆದು ಶುದ್ಧಿ ಗೊಳಿಸಿ ಮುಂದಿನ ಪಂಕ್ತಿಗೆ ಸಿದ್ಧಗೊಳಿಸುವರು. ಊಟ ಮಾಡದೆ ಇರುವವರಿಗೆ ಅಥವಾ ಏಕಭುಕ್ತರಿಗೆ ಹಾಲು ಹಣ್ಣುಗಳನ್ನು ಅವರು ಇರುವಲ್ಲಿ ತಂದು ಕೊಡುವ ಸೇವೆ ಸಲ್ಲಿಸುತ್ತಾರೆ.

ರಾತ್ರಿ ಬ್ರಾಹ್ಮೀಮುಹೂರ್ತದಲ್ಲಿ ಆಶ್ರಮದ ವಿದ್ಯಾರ್ಥಿಗಳಿಗೆ ಶಾಸ್ತ್ರೋಕ್ತವಾದ ಅಂಗಸಾಧನೆ, ಯೋಗಾಸನಗಳು ಆರಂಭವಾಗುವುದು. ಮಲಗಿದ್ದವರಿಗೆ ಮಂತ್ರಗಳು ಕಿವಿಹೊಕ್ಕು ಎಚ್ಚರಗೊಳಿಸುವುವು. ಬೆಳಗ್ಗೆ ರೋಗಿಗಳ ಪರೀಕ್ಷೆ, ಔಷಧ ವಿತರಣೆ. ಅನಂತರ ಬಂದವರೆಲ್ಲ ಅವರವರ ಊರುಗಳಿಗೆ ಪಯಣಿಸುವರು.

ಇಲ್ಲಿನ ಹೈಯರ್ ಸೆಕೆಂಡರಿ ಶಾಲೆ ತಾಂತ್ರಿಕ ಶಾಲೆಯೂ ಹೌದು. ನಾನು ನೋಡಿದಾಗ ತಾಂತ್ರಿಕ ಶಾಲೆಗೆ ಬೇಕಾಗುವ ಎಲ್ಲ ಸಾಮಗ್ರಿಗಳೂ ಅಲ್ಲಿದ್ದುವು. ಆಗ ಶಾಲೆಗೆ ರಜಾಕಾಲವಾದ್ದರಿಂದ ಇವಾವುದನ್ನೂ ನೋಡಲು ಅವಕಾಶವಾಗಲಿಲ್ಲ. ಅಲ್ಲಿ ನುರಿತ ಉಪಾಧ್ಯಾಯರುಗಳಿದ್ದಾರೆ. ಅವರಿಗೂ ಅವರ ಸಂಸಾರಕ್ಕೂ ಯೋಗ್ಯವಾದ ವಸತಿಗೃಹಗಳಿವೆ. ಅತಿ ಬಡ ವಿದ್ಯಾರ್ಥಿಗಳಿಗೆ ಉಚಿತ ಪ್ರವೇಶ, ಉಚಿತ ವಸತಿ, ಭೋಜನ. ಆತ ಆಶ್ರಮಕ್ಕೆ ವಿಧೇಯನಾಗಿ ನಡೆದು ತನಗೆ ನಿಯಮಿತವಾದ ಸೇವೆ ಸಲ್ಲಿಸಬೇಕು. ಈ ಆಶ್ರಮದಲ್ಲಿರುವ ಮತ್ತು ಅಲ್ಲಿಗೆ ಬರುವ ಪ್ರತಿಯೊಬ್ಬರೂ ಸ್ವಾಮೀಜಿಯವರಲ್ಲಿ ನಿಷ್ಠೆಯುಳ್ಳವರೂ, ಭಕ್ತಿ ವಿನಯ ವಿಶ್ವಾಸಪರರೂ ಆಗಿದ್ದಾರೆ.

ನಾನು ಮುಂದೆ ಪಕ್ಷಕ್ಕೊಮ್ಮೆ ಮಲ್ಲಾಡಿಹಳ್ಳಿಗೆ ಹೋಗಿ ಶನಿವಾರ ರಾತ್ರಿ ಅಲ್ಲಿದ್ದು, ಭಜನೆಗಳಲ್ಲಿ ಭಾಗವಹಿಸಿ, ಮರುದಿನ ಔಷಧಿ ಪಡೆದು ಹಿಂದಿರುಗುತ್ತಿದ್ದೆ. ಸರ್ವರೂ ಸ್ವಾಮೀಜಿಯವರ ದರ್ಶನ ಕುತೂಹಲ ರಾದುದರಿಂದ ಐದರಿಂದ ಹತ್ತು ನಿಮಿಷಗಳ ಕಾಲ ಅವರ ದರ್ಶನಲಾಭವಾಗುತ್ತಿತ್ತು. ದರ್ಶನವಿಲ್ಲದೆ ಯಾರೂ ಹೋಗುವುದಿಲ್ಲ. ಸ್ವಾಮೀಜಿಯವರು ಮಿತಭಾಷಿಗಳು. ಹಾಗೆಯೇ ಸೂರ್‌ದಾಸ್‌ಜೀಯವರು ಸಹ ಎಲ್ಲ ವಿಧದಲ್ಲೂ ಸ್ವಾಮೀಜಿಯವರಂತೆಯೇ ಇದ್ದಾರೆ.

ಆಶ್ರಮದಲ್ಲಿ ಕೆಲವು ನಿರ್ದಿಷ್ಟ ಸಮಯಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುವುದೂ ಉಂಟು. ಇಲ್ಲಿ ಭಾರತ, ರಾಮಾಯಣಾದಿ ಕಾವ್ಯಗಾಯನ ಪ್ರವಚನಗಳಿಗೂ ಅವಕಾಶವಿದೆ. ಅನೇಕ ಗಮಕಿಗಳು ಇಲ್ಲಿ ಸ್ವಾಮೀಜಿಯವರ ಸನ್ನಿಧಿಯಲ್ಲಿ ವಾಚನ ಮಾಡಿ ಅವರ ಆಶೀರ್ವಾದ–ಅನುಗ್ರಹ ಪಡೆದಿದ್ದಾರೆ. ಆಶ್ರಮದಲ್ಲಿ ಶ್ರೀಮಂತರು ಬಡವರೆಂಬ ಭೇದಭಾವನೆಯಿಲ್ಲ. ಎಲ್ಲ ಸಮದರ್ಶನ. ಸೋಫ, ಕುರ್ಚಿ, ಮೇಜು ಇವುಗಳಿಲ್ಲ. ಭಾರತೀಯ ಸಂಸ್ಕೃತಿ ಈ ಆಶ್ರಮದಲ್ಲಿ ಎದ್ದು ಕಾಣುವುದು. ಆಶ್ರಮದ ವಿಷಯಗಳನ್ನು ಅಲ್ಲಿನ ಕಾರ್ಯಗಳಿಂದ ತಿಳಿಯಬೇಕೇ ಹೊರತು ವರ್ಣಿಸಿ ಮುಗಿಯುವುದಿಲ್ಲ. ಬಾಹ್ಯಾಡಂಬರ ಬಹುದೂರ.

ಸ್ವಾಮೀಜಿಯವರು ತಮ್ಮ ದೇಹದಲ್ಲುಂಟಾದ ವ್ಯಾಧಿಗಳನ್ನು ಕೇವಲ ತಮ್ಮ ಯೋಗಶಕ್ತಿಯಿಂದಲೇ ಗುಣಗೊಳಿಸಿ ಜಯಶಾಲಿಗಳಾಗಿದ್ದಾರೆ. ಇಂದ್ರಿಯನಿಗ್ರಹ, ಮನೋಜಯ ಇವು ಸ್ವಾಮೀಜಿಯವರಲ್ಲಿ ಹಾಸುಹೊಕ್ಕು. ಇವರ ಈ ಅದ್ಭುತ ಶಕ್ತಿಯ ಫಲವಾಗಿ ಆಶ್ರಮದ ಉಗ್ರಾಣ, ದ್ರೌಪದಿಯ ಅಕ್ಷಯಪಾತ್ರೆಯಂತೆ ಅಕ್ಷಯ ಉಗ್ರಾಣವೆಂದರೆ ಅತಿಶಯೋಕ್ತಿಯಲ್ಲ. ಸ್ವಾಮಿಗಳ ಶಕ್ತಿ ದಿವ್ಯಶಕ್ತಿ; ದೃಷ್ಟಿ ಅಮೃತದೃಷ್ಟಿ; ಹಸ್ತ ಅಕ್ಷಯ ಹಸ್ತ; ಮಾತು ಮಿತ, ಮೃದು. ಆಡಿದ ಮಾತು ಸಾರ್ಥಕವಾದ ಮಾತು. ಶುಚಿಯಾದ ನಡೆನುಡಿ, ಮಕ್ಕಳನ್ನು ಕಂಡರೆ ಅಕ್ಕರೆ, ಭಜನೆ ಕಾಲದಲ್ಲಿ ಶಿಶುಗಳು ಅವರ ಸುತ್ತ ನಿಶ್ಶಬ್ದವಾಗಿ ಕುಳಿತು ತಾಳ ಹಾಕುವುದನ್ನು ನೋಡಿದ್ದೇನೆ.

ಒಂದು ಕಾಲದಲ್ಲಿ ಕುಗ್ರಾಮವಾಗಿದ್ದ ಹಳ್ಳಿ ಇಂದು ಯಾತ್ರಾಸ್ಥಳ. ಸ್ವಾಮೀಜಿಯವರ ಪಾದಸ್ಪರ್ಶದಿಂದ ಧಾನ್ಯಸಂಪತ್ತು ಇದೆ, ಜನ ಸಂಪತ್ತು ತುಂಬಿರುತ್ತದೆ. ಒಬ್ಬ ಮಹಾಪುರುಷನ ಸಂಗದಿಂದ ಬಹುಮಂದಿ ಸಾಧುಗಳು, ಪವಿತ್ರ ಪುರುಷರ ಉದಯವಾಗಿದೆ. ಉದಾಹರಣೆಗೆ ಸೂರ್‌ದಾಸ್‌ಜೀ ಮತ್ತು ಅವರ ಅನುಯಾಯಿಗಳು. ಇಂಥಾ ಮಹಾತ್ಮರ ಸಹವಾಸ ದೊರೆಯಬೇಕಾದರೂ ಅದೃಷ್ಟವಿರಬೇಕು.

ಚನ್ನಪ್ಪ ಎರೇಸೀಮೆ

ನಾ ಕಂಡ 'ತಿರುಕ'—ಅಂದು-ಇಂದು

ಪ್ರಾಚೀನ ಭಾರತದ ಸಂನ್ಯಾಸಿಯ ಧರ್ಮ ಬಿಡಬೇಕಾದುದನ್ನು ಬಿಟ್ಟು, ಕಟ್ಟಿಕೊಳ್ಳಬೇಕಾದುವನ್ನು ಕಟ್ಟಿಕೊಳ್ಳುವ ವಿಚಿತ್ರ ಸ್ವರೂಪದ್ದು. ಯಾವುದನ್ನು ಸುಖವೆಂದು ಲೋಕಬೆನ್ನಟ್ಟಿ ಹೋಗುವುದೋ ಸಂನ್ಯಾಸಿ ಅಲ್ಲಿ ಸಂಯಮಿಯಾಗಿ, ನಿಂತು ಯೋಚಿಸಿ, ಸುಖವೆಂಬುವೆಂದರೆ ಯಾವುದೆಂಬುವರ ವಿಶ್ಲೇಷಣೆ ಮಾಡಿ ಅಲ್ಲಿಗೆ ಧಾವಿಸಿ, ಸುಮಗ್ರಲೋಕ ಸಾಮಾನ್ಯ ಜೀವನ ಮಧ್ಯದ ಮೇಟಿಯಂತೆ ನಿಂತು ಉದಾತ್ತತೆಯನ್ನು ಸಾಧಿಸಿ ಲೋಕದಲ್ಲಿದ್ದು ಇಲ್ಲದವನಂತೆ ವರ್ತಿಸುತ್ತಾನೆ. ಲೋಕಕ್ಕಾಗಿ ಅಳುತ್ತಾನೆ; ಆದರೆ ಅತ್ತು ತನ್ನ ಕಣ್ಣನ್ನೇ ಹಾಳು ಮಾಡಿಕೊಳ್ಳುವುದಿಲ್ಲ. ಪ್ರಪಂಚವನ್ನೇ ಕಟ್ಟಿಕೊಂಡು ಅದರಲ್ಲಿ ಮುಳುಗಿದ್ದರೂ ತನ್ನಲ್ಲಿ ಪ್ರಪಂಚವನ್ನು ಮುಳುಗಿಸಿಕೊಳ್ಳುವುದಿಲ್ಲ. ಲೋಕ ಬೇಕಾದರೆ ಇವನನ್ನು ಬೆನ್ನಟ್ಟಿ ಬರಬಹುದು ; ಆದರೆ ಲೋಕವನ್ನು ಅವನು ಬೆನ್ನಟ್ಟಿ ಹೋಗುವುದಿಲ್ಲ. ಅಂತೆಯೇ ಪ್ರಾಚೀನ ಭಾರತಜನಾಂಗ ಸಂನ್ಯಾಸಧರ್ಮದ ಉನ್ನತಾದರ್ಶಗಳನ್ನು ತನ್ನ ಇತಿಹಾಸದ ಪುಟಗಳಲ್ಲಿ ವರ್ಣರಂಜಿತಾಕ್ಷರಗಳಿಂದ ಕಾಯ್ದಿಟ್ಟು, ಸಮಗ್ರ ಜನಾಂಗದ ಜೀವನಮಾರ್ಗದ ಶೈಮರವನ್ನಾಗಿಸಿದೆ. ಈ ಆದರ್ಶವನ್ನು ಲೋಕವೆಲ್ಲ ಅನುಸರಿಸಬೇಕೆಂದೇನೂ ಅಲ್ಲ. ಮುಂದೆ ಯಾವುದೋ ಸಂಸ್ಕಾರಜೀವ ಅದನ್ನು ಆದರ್ಶವಾಗಿ ಸ್ವೀಕರಿಸಿ ಲೋಕಕ್ಕೆ ಉತ್ತಮಮಾರ್ಗವನ್ನು ಒದಗಿಸೀತೆಂಬುದೇ ಇತಿಹಾಸಕಾರನ ಆಕಾಂಕ್ಷೆ. ಇಂಥ ಪ್ರಾಚೀನ ಸಂನ್ಯಾಸಿಜೀವನದ ಉನ್ನತಾದರ್ಶವನ್ನು ಸ್ವೀಕಾರಮಾಡಿ, ದಿವ್ಯಭವ್ಯ ಜೀವನಾದರ್ಶವನ್ನು ಲೋಕಜೀವನಕ್ಕೆ ಬಿತ್ತರಿಸುವ ಉದಾತ್ತ ವ್ಯಕ್ತಿತ್ವವನ್ನು ಹೊಂದಿರುವವರು ಮಲ್ಲಾಡಿಹಳ್ಳಿಯ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಜಿಯವರು. ಅವರನ್ನು ವ್ಯಕ್ತಿಯೆನ್ನುವುದಕ್ಕಿಂತ ಒಂದು ಮಹಾಶಕ್ತಿಯೆನ್ನುವುದುಚಿತ.

ನಾನು ಇಂಥ ಒಂದು ಅಪೂರ್ವ ಸಂನ್ಯಾಸಿಧರ್ಮದ ಪ್ರಕಾಶವನ್ನು ಕಂಡುದು 1943ನೆಯ ಇಸ್ವಿಯಲ್ಲಿ. ಆಗ ನಾನು ಶಿವಮೊಗ್ಗ ನಾರ್ಮಲ್‌ಸ್ಕೂಲಿನಲ್ಲಿ ವಿ.ಟಿ.ಸಿ. ಎಂಬ ಹೆಸರಿನ ಉಪಾಧ್ಯಾಯ ತರಬೇತಿ ಪಡೆಯುತ್ತಿದ್ದೆ. ಈ ಓದಿನ ಖರ್ಚುವೆಚ್ಚಗಳಿಗಾಗಿ ನನಗೆ ಅನ್ಯ ಮಾರ್ಗವಿರದೆ ಒಂದು ವೃತ್ತಿಯನ್ನು ಹೇಗೆ ಹೇಗೋ ಅಭ್ಯಾಸಮಾಡಿಕೊಂಡಿದ್ದೆ. ಶಿವಕಥೆ, ಹರಿಕಥೆ ಅಥವಾ ಕೀರ್ತನೆ ಅನ್ನುತ್ತಾರಲ್ಲ! ಅದೇ ಆ ವೃತ್ತಿ. ರಜೆ ಬಂದಾಗ ಊರೂರು ಅಲೆದು ಹೇಗೋ ವ್ಯಾಪಾರ ಕುದುರಿಸಿಕೊಂಡು ಕಥೆಮಾಡಿ ಅಷ್ಟುಇಷ್ಟು ಪ್ರಡಿಗಾಸು ಮತ್ತು ಸಾರ್ವಜನಿಕರ ಔದಾರ್ಯದ ಫಲವಾದ ಆರತಿತಟ್ಟೆಯ ಚಿಲ್ಲರೆಕಾಸು ಗಿಟ್ಟಿಸಿಕೊಳ್ಳುತ್ತಿದ್ದೆ. ಒಮ್ಮೆ ಕಥೆ ಮಾಡುತ್ತ ಕೆಂಗುಂಟೆ ಗ್ರಾಮಕ್ಕೆ ಬಂದು, ಅಲ್ಲಿ ಮೂರುನಾಲ್ಕು ಕಥೆ ಗಿಟ್ಟಿಸಿಕೊಂಡೆ. ಕೆಂಗುಂಟೆಗೆ ಸಮೀಪದ ಮಲ್ಲಾಡಿಹಳ್ಳಿಯ ಕೆಲವರು ಕಥೆ ಕೇಳಲು ಬಂದು ತಮ್ಮ ಊರಲ್ಲೂ ನಾಳೆ ಒಂದು ಕಥೆಯಾಗಬೇಕೆಂದೂ ಆ ದಿನದ ಸಭಾಧ್ಯಕ್ಷರು ವ್ಯಾಯಾಮ ಮೇಷ್ಟ್ರು ರಾಘವೇಂದ್ರಸ್ವಾಮಿಗಳೆಂದೂ ಕೆಂಗುಂಟೆ ಸಭೆಯಲ್ಲೇ ಪ್ರಕಟಿಸಿ ಹೋಗಿ

ತಮ್ಮ ಊರಲ್ಲೂ ಟಾಂಟಾಂ ಹಾಕಿಸಿದರು. ಆಗ ಸಾಮಾನ್ಯವಾಗಿ ವಿದ್ವಾಂಸರು, ಬಹಳ ವಿದ್ಯಾವಂತರು ಎನಿಸಿಕೊಂಡವರ ಮುಂದೆ ಕಥೆ ಮಾಡಲು ಸ್ವಲ್ಪ ಅಳುಕಾಗುತ್ತಿತ್ತು. ಏಕೆಂದರೆ ನನ್ನ ಸಂಸ್ಕೃತಶ್ಲೋಕಗಳೋ! ಆ ಅಶಾಸ್ತ್ರೀಯ ಸಂಗೀತವೋ! ದೇವರಿಗೇ ತೃಪ್ತಿ ಎಂದು ನನಗೆ ಹೇಗೊ ತಿಳಿದುಹೋಗಿತ್ತು. ರಾಘವೇಂದ್ರ ಸ್ವಾಮಿಗಳು ಎಂದರೆ ವ್ಯಾಯಾಮಮೇಷ್ಟ್ರುತಾನೆ, ಭಯವಿಲ್ಲ ಎಂದುಕೊಂಡು ಧೈರ್ಯ ತಂದುಕೊಂಡೆ.

ಮರುದಿನ ಸಂಜೆಯ ಊಟವನ್ನು ಕೆಂಗುಂಟೆಯಲ್ಲೇ ಮುಗಿಸಿಕೊಂಡು ಮಲ್ಲಾಡಿಹಳ್ಳಿಗೆ 7–7½ ಘಂಟೆ ಸುಮಾರಿಗೆ ಹೊರಟೆವು. ದಾರಿಯಲ್ಲಿ ನನ್ನ ಮಿತ್ರ ನಾಗಪ್ಪ 'ಅಪ್ಪಾ ಮಹಾರಾಯ, ಈ ದಿನದ ನಿನ್ನ ಕಥೆ ಚೆನ್ನಾಗಿರಬೇಕು. ರಾಘವೇಂದ್ರ ಸ್ವಾಮಿಗಳು ಅಧ್ಯಕ್ಷರು. ಅವರನ್ನು ಸಾಮಾನ್ಯರೆಂದು ಭಾವಿಸಬೇಡ. ಹಿಮಾಲಯದ ಬೆಟ್ಟದಲ್ಲಿ ಸಾಧನೆ ಮಾಡಿಬಂದವರು. ನಿನ್ನಂಥವರನ್ನೆಷ್ಟು ಜನರನ್ನು ನೋಡಿದ್ದಾರೋ ಏನೊ! ಈಗ ಅವರಿಗೆ ಐವತ್ತು ವರ್ಷಕ್ಕೂ ಹೆಚ್ಚಿನ ವಯಸ್ಸಿನವರಾದರೂ ಹೇಗಿದ್ದಾರೆ ಗೊತ್ತೇ? ಇನ್ನೂ ಹುಡುಗ ಇದ್ದ ಹಾಗೆ ಇದ್ದಾರೆ. ಸಾಹಿತ್ಯದಲ್ಲೂ ಗಟ್ಟಿಗರು. ಬುರುಡೆಗಿರಡೆ ಬಿಡಬೇಡ' ಎಂದು ಹೇಳಿದ. ಆಗಲೇ ನನ್ನ ಎದೆ 'ಢಸಕ್' ಎಂದಿತು. ಆದರೂ ಒಣ ಧೈರ್ಯದಿಂದ 'ಪರವಾಯಿಲ್ಲ ಏನೂ ಕಾಳಜಿ ಮಾಡಬೇಡಿ. ಈ ದಿನದ ಕಥೆ "ಶಬರ ಶಂಕರವಿಳಾಸ". ವೀರರಸದ ಪ್ರವಾಹವನ್ನೇ ಹರಿಸಿಬಿಡುತ್ತೇನೆ' ಎಂದು ಹೇಳಿದೆ. ನನಗೆ ವೀರರಸದ ಅಬ್ಬರ ಗೊತ್ತಿತ್ತಲ್ಲದೆ ಕಥಾಕಾಲಕ್ಷೇಪದ ಪ್ರಧಾನ ಗುಣವಾದ ಭಕ್ತಿರಸದ ಗಂಧವೇ ಇದ್ದಿಲ್ಲವೆಂದರೂ ತಡೆದೀತು. ಆಪ್ತರಾದ ಕೆಂಗುಂಟೆ ಮಿತ್ರರ ಮಾತುಗಳು ನಿಜವಾಗಿ ನನ್ನಲ್ಲಿ ಭಯವನ್ನೇ ಉಂಟುಮಾಡಿದುವು. ಶಬರ ಶಂಕರ ವಿಳಾಸದ ನನ್ನ ಕಥೆಗೆ ಬಂಡವಾಳ ನಾನು ಪ್ರೈಮರಿ ಆರು ಮತ್ತು ಏಳನೆಯ ತರಗತಿಯಲ್ಲಿ ಓದಿ ಬಾಯಿಪಾಠ ಮಾಡಿಕೊಂಡ ಷಡಕ್ಷರದೇವನ ಶಬರಶಂಕರವಿಳಾಸ ಕಾವ್ಯದ ಹದಿನೈದು ಇಪ್ಪತ್ತು ಪದ್ಯಗಳು ಮಾತ್ರ. ಅವನ್ನೇ ಅವಸರಪತಿತಾ ವಾಣಿಯಲ್ಲಿ ಉಚ್ಚಕಂಠದಿಂದ ಕೂಗಾಡಿ ಅಭಿನಯಮಾಡಿ ಕಳೆಗಟ್ಟಿಸಿಕೊಳ್ಳುತ್ತಿದ್ದೆ. ಆದರೆ ಪೀಠಿಕೆಯಲ್ಲಿ ಮತ್ತು ಆಗಾಗ ಸಂದರ್ಭಕ್ಕನುಗುಣವಾಗಿ ಹೇಳುತ್ತಿದ್ದ ಸಂಸ್ಕೃತ ಶ್ಲೋಕಗಳ ವಿಷಯದಲ್ಲಿ ನನಗೇ ಅನುಮಾನವಿತ್ತು. ಎಷ್ಟೋ ಸಲ ಸಾರ್ಥಕ ಜೀವನ ಎನ್ನುವುದಕ್ಕೆ ಸ್ವಾರ್ಥಕ ಜೀವನ ಎನ್ನುತ್ತಿದ್ದೆ. ನಾನು ಸಂಸ್ಕೃತವನ್ನು ಕುರಿತು ಓದುವವರೆಗೆ ಇಂಥ ನೂರಾರು ತಪ್ಪುಗಳು ನನ್ನ ಸಂಸ್ಕೃತ ಶ್ಲೋಕಗಳಲ್ಲಿದ್ದುದು ನನಗೆ ಗೊತ್ತಾಗಲೇ ಇಲ್ಲ. "ಗುರುಂಬ್ರಹ್ಮಂ, ಗುರುಂ ವಿಷ್ಣುಂ...." ಇಂಥ ಅಬದ್ಧಕಂತೆ ಕಥೆಯ ಪ್ರಾರಂಭದಲ್ಲೇ ನನ್ನ ಮುಖ ಕುಹರವಿನಿರ್ಗತವಾಗುತ್ತಿತ್ತು. ಆದರೂ ದೇವರು ಕೊಟ್ಟ ಮೊಂಡುಧೈರ್ಯ ಆ ಕಾಲದ ನನ್ನ ರಕ್ಷಾ ಕವಚವೇ ಆಗಿತ್ತು. ಬಾಯಿಂದ ಬರುವ ತಪ್ಪುತಡೆಗಳಿಗೆ ಹೆದರಿದ್ದರೆ ನನ್ನ ಚರಿತಾರ್ಥಕ್ಕೆ ಸೊನ್ನೆ ಸುತ್ತಬೇಕಾಗಿತ್ತು. 'ಅಂದಂದಿನ ದಂದುಗಕ್ಕೆ ಏವೆನೇವೆನಯ್ಯ' ಎನ್ನುವವರು ಒಮ್ಮೊಮ್ಮೆ ಹೀಗೂ ಇದ್ದು ಆ ದಂದುಗದಿಂದ ಪಾರಾಗಬೇಕಲ್ಲವೆ? ಪರಿಪೂರ್ಣ ಉಪಾಧ್ಯಾಯತ್ವ ಅಳವಟ್ಟ ಮೇಲೆ ಶಾಲಾ ಶಿಕ್ಷಕನಾಗಬೇಕೇನು? ಅದು ಶಕ್ಯವೇ?

ಸರಿ, ಮಲ್ಲಾಡಿಹಳ್ಳಿಯ ಒಂದು ಮನೆಯ ಚಾವಣಿಯ ಮುಂಭಾಗದಲ್ಲಿ ಸಿದ್ಧಪಡಿಸಿದ ಮಂಟಪದಲ್ಲಿ ನಾನು ಆಗಿನ ಕೀರ್ತನಕಾರರ ಸಮವಸ್ತ್ರಗಳೆನಿಸಿದ್ದ ಖಾದಿ ಜುಬ್ಬಾ, ಖಾದಿ ಟೊಪ್ಪಿಗೆ, ಖಾದಿ ಪಂಚೆಗಳನ್ನುಟ್ಟು ಖಾದಿ ಸೆಲ್ಲೆಯಿಂದ ನಡುಕಟ್ಟುಕಟ್ಟಿ, ತಾಳ ಹಿಡಿದು ನಿಂತೆ. ಅಕ್ಕಪಕ್ಕದಲ್ಲಿ ತಬಲಾ ಹಾರ್ಮೋನಿಯಂನವರು ಶ್ರುತಿಮಾಡಿಕೊಂಡು ಸ್ಪರ್ಧಾಳುಗಳು ಅಂಕೆಯನ್ನೆಣಿಸುವ ದಾರಿಯನ್ನೇ ಕಾಯುತ್ತ ನಿಂತಿರುವಂತೆ ಕುಂಞಗುಡುತ್ತ ಕುಳಿತಿದ್ದರು. ಎಲ್ಲರ ಕಣ್ಣುಗಳೂ ಸಭಾಧ್ಯಕ್ಷರ ಆಗಮನವನ್ನೇ ನಿರೀಕ್ಷಿಸುತ್ತಿದ್ದವು. ಅನಿತರಲ್ಲಿ ನಾಲ್ಕಾರು ಜನ ರಾಘವೇಂದ್ರ ಸ್ವಾಮಿಗಳನ್ನು ಕರೆತಂದರು. ಆಗ ಅವರಿಗೆ ಐವತ್ತು ವರ್ಷಕ್ಕೂ ಹೆಚ್ಚು ವಯಸ್ಸಾಗಿದೆಯೆಂದು ಯಾರೂ ಹೇಳುವಂತಿರಲಿಲ್ಲ. ಇಪ್ಪತ್ತೈದು ವರ್ಷದ ತರುಣರನ್ನೂ ನಾಚಿಸುವಂತಹ ಮುಖಮಂಡಲ, ಹೊಳೆವ ನೇತ್ರದ್ವಯ, ಸ್ಥೂಲವಲ್ಲದ ನೀಳವಾಗಿ ಪ್ರಮಾಣಬದ್ಧವಾಗಿ ಬೆಳೆದ, ಹುರಿಕಟ್ಟಾದ

ವಜ್ರವಲ್ಲರಿಯಂತಹ ದೇಹ, ಚುರುಕಾದ ನಡಿಗೆ—ನಮಸ್ಕಾರ ಪ್ರತಿ ನಮಸ್ಕಾರ ಶಾಸ್ತ್ರ ಮುಗಿಯಿತು. ಇಂಥ ಸುಂದರ ಮಂಗಳಾಂಗರಾದ ಸ್ವಾಮಿಗಳು 'ಸ್ವಲ್ಪ ತಡವಾಯಿತು ಕ್ಷಮಿಸಿ' ಎನ್ನುತ್ತ ಬಂದು ತಮ್ಮ ಆಸನದಲ್ಲಿ ಕುಳಿತರು. ನನ್ನ ಎದೆ ಡವಡವಬಡಿದುಕೊಳ್ಳತೊಡಗಿತು. ಮುಖಂಡರೊಬ್ಬರು ಸಭೆಗೆ ಸ್ವಾಗತ ಕೋರಿ ನನ್ನ ಮತ್ತು ಸ್ವಾಮಿಗಳ ಪರಿಚಯಭಾಷಣದ ಸಂಪ್ರದಾಯ ಮುಗಿಸಿದರು. ಕಥೆ ಪ್ರಾರಂಭವಾಯಿತು. "ಶ್ರೀಮತ್ ಕಲ್ಯಾಣರೂಪಂ ಶರಭವನಗಜೋತ್ಸಂಗನಭ್ರಾಂತಯೋಗಾ..." ಎಂಬ ಮಂಗಲ ಪದ್ಯವನ್ನು ಉಚ್ಚಕಂಠದಿಂದ ಯಮುನ ಕಲ್ಯಾಣಿಯಲ್ಲಿ ಹಾಡಿ ಸ್ವಾಮಿಗಳವರ ಮುಖ ನೋಡಿದೆ. ಮುಖದ ಮೇಲೆ ಮಂದಹಾಸಮೂಡಿತ್ತು. ಸಭೆ ಕೈತಟ್ಟಿ ಸಂತೋಷ ವ್ಯಕ್ತಪಡಿಸಿತು. 'ಪರವಾಯಿಲ್ಲ, ಕಥೆಕಳೆಗಟ್ಟುತ್ತೆ' ಎಂದುಕೊಂಡು ಸ್ವಾಮಿಗಳ ಮುಖ ವನ್ನು ಪದೇಪದೇ ನೋಡುತ್ತ ಮುಖದ ಮೇಲಿಂದಲೇ ಅವರ ಪ್ರತಿಕ್ರಿಯೆಯನ್ನು ಅರ್ಥಮಾಡಿಕೊಳ್ಳುತ್ತ, ಮುಂದುವರಿದೆ. ಆದರೆ ಸ್ವಾಮಿಗಳು ಸಂಸ್ಕೃತವನ್ನು ಬಲ್ಲವರೆಂದು ಮೊದಲೇ ಅರ್ಥಮಾಡಿಕೊಂಡಿದ್ದ ನಾನು ಆ ಕಥೆಯ ಸಂದರ್ಭದಲ್ಲಿ ನನ್ನ ಅಬದ್ಧ ಸಂಸ್ಕೃತ ಶ್ಲೋಕಗಳನ್ನು ಹೇಳುವಲ್ಲಿ ಸಂಯಮತೋರಿದ್ದು ಮಾನ ಬಚಾವಾಗಲು ಸಹಕಾರಿಯಾಯಿತು. ಆ ದಿನದ ಕಥೆಯಲ್ಲಿ ನನ್ನ ಕಲಿತ ಪಾಠವನ್ನೆಲ್ಲ ಸ್ವಾಮಿಗಳಿಗೆ ಒಪ್ಪಿಸಿ ಬಿಟ್ಟೆ. ಕಿರಾತ–ರುದ್ರರ ಯುದ್ಧಪ್ರಸಂಗದಲ್ಲಂತೂ ಸಾಹಿತ್ಯದ ಜೊತೆಗೆ ಅಭಿನಯಕ್ಕೂ ಪ್ರಾಶಸ್ತ್ಯ ಕೊಟ್ಟೆ. "ಇನಿತೊಂದಾರ್ಭಟೆಯೇಂ? ಪುಳಿಂದಬಿಡು ನಿನ್ನೀ ಭಿಂಕಮಂ ಮಾಣ್ಗೆ, ಶಸ್ತ್ರ ನಿಪಾತಾಸ್ತ್ರ ನಿಕಾಯದಿಂ ನೆಗಳ್ವ ಯುದ್ಧಂ. ಮುಷ್ಟಿಯುದ್ಧಕೆ ನಿಂದನುವಾಗು, ತೋರ್ಪೆನೆನ್ನ ಬಲವದ್ದೋರ್ದಂಡ ಶೌರ್ಯ ಪ್ರವರ್ತನಮಂ...." ಎಂದು ಹೇಳುವ ಸಮಯದಲ್ಲಂತೂ ತೋಳು ತೊಡೆ ಚಪ್ಪರಿಸಿಯೇ ಅಭಿನಯಮಾಡಿ ತೋರಿಸಿದೆ. ಇಷ್ಟೆಲ್ಲ ಕಸರತ್ತು ಮಾಡಿ ಕಥೆ ಮುಗಿಸಿದ ಮೇಲೆ ಸ್ವಾಮಿಗಳು ಮಂದಹಾಸಬೀರಿ ನನ್ನ ಬೆನ್ನು ಚಪ್ಪರಿಸಿ ತಮ್ಮ ಅಧ್ಯಕ್ಷಭಾಷಣದಲ್ಲಿ ಶ್ಲಾಘಿಸುತ್ತ "ಇಷ್ಟೊಂದು ಚಿಕ್ಕ ವಯಸ್ಸಿನಲ್ಲಿ ಮೈಮರೆತು ಕಥೆ ಮಾಡುವ ಇವರನ್ನು ಕಂಡು ಸಂತೋಷ ವಾಯಿತು" ಎಂದಾಗ ನನಗೆ ಕುಣಿದಾಡುವಂತಾಯಿತು. 'ಸಧ್ಯ ಬದುಕಿದೆಯಾ ಎಲೆ ಜೀವವೇ' ಎಂದುಕೊಂಡೆ. ಆರತಿ ತಟ್ಟೆ ನನ್ನ ಊಹೆ ಮೀರಿ ತುಂಬಿಬಂದಿತ್ತು. ಎಲ್ಲವನ್ನೂ ಬಾಚಿ ಜೇಬಿಗಿಳಿಬಿಟ್ಟೆ. ಸ್ವಾಮಿಗಳು ಹೋಗುವಾಗ ನನ್ನನ್ನು ಕರೆದು "ನಿಮಗೆ ಒಳ್ಳೆಯ ಭವಿಷ್ಯವಿದೆ, ಈ ಕಲೆಯನ್ನು ಬೆಳೆಸಿಕೊಳ್ಳಿ. ಮೂಲಗ್ರಂಥದ ಪದ ಪದ್ಯಗಳನ್ನು ಶುದ್ಧವಾಗಿ ಕಂಠಪಾಠ ಮಾಡಿಕೊಳ್ಳಿ" ಎಂದರು. ನಾನು ಮೊದಲೇ ಹೇಳಿದಂತೆ ಹುಟ್ಟು ಉತ್ಸಾಹದ ತುಂಬುಹೊಳೆ ನನ್ನಲ್ಲಿತ್ತಲ್ಲದೆ, ಶುದ್ಧಪಾಠದ ಸಂಸ್ಕಾರಪೂರ್ಣ ವಿದ್ವತ್ತಿನ ಶುದ್ಧ ಶಾಂತಗಂಭೀರ ಶ್ರೋತದ ಅಭಾವವಿತ್ತೆಂಬುದರಲ್ಲಿ ಸಂದೇಹವೇ ಇಲ್ಲ. ಅಂದೇ ನಾನು ಕಣ್ಣು ತೆರೆದೆ. ಹೀಗೆ ಶ್ಲಾಘಿಸಿ ಹಿತ ವಾಕ್ಯ ನುಡಿದು ತಿದ್ದಿಕೊಳ್ಳುವ ಹಿತವಾಕ್ಯವನ್ನಾರೂ ನುಡಿದಿರಲಿಲ್ಲ. ಅಂದೇ ನನಗೆ ಮನಃಪರಿವರ್ತನೆಯಾಗಿ ನಾನು ಉಪಯೋಗಿಸುವ ಶ್ಲೋಕಗಳ ಶುದ್ಧಪಾಠಗಳ ಕಡೆಗೆ ಗಮನವಿತ್ತೆ.

ಶ್ರೀ ಪರಿವ್ರಾಜಕ ರಾಘವೇಂದ್ರಸ್ವಾಮಿಗಳ ಪರಿಚಯವಾದುದು ನನಗೆ ಹೀಗೆ. ಇಲ್ಲಿ ಅನಿವಾರ್ಯವಾಗಿ ನನ್ನ ಹರಿಕಥೆ ಹೇಳಿಕೊಳ್ಳಬೇಕಾಗಿ ಬಂದ ಪ್ರಸಂಗಕ್ಕೆ ಕ್ಷಮೆಕೇಳಿಕೊಳ್ಳದಿರಲಾರೆ. ಆಮೇಲೆ ನಾನು ಮಾಯ ಕೊಂಡದ ಹೈಸ್ಕೂಲ್ ಉಪಾಧ್ಯಾಯನಾದ ಮೇಲೆ ಮಲ್ಲಾಡಿಹಳ್ಳಿಯ ಅನಾಥಾಶ್ರಮ ಮತ್ತು ಶ್ರೀ ಶ್ರೀಗಳವರ ದರ್ಶನಕ್ಕೆ ಆಗಿಂದಾಗ್ಗೆ ಹೋಗುತ್ತಿದ್ದೆ. ಆದರೆ ಸ್ವಾಮಿಗಳವರನ್ನು ದೂರದಿಂದಲೇ ನೋಡಿ ಆನಂದಿಸುತ್ತಿದ್ದೆ ಅಷ್ಟೆ. ಹತ್ತಿರಕ್ಕೆ ಹೋಗಿ ವಿಶೇಷ ಪರಿಚಯ ಮಾಡಿಕೊಳ್ಳಲಿಲ್ಲ. ಒಮ್ಮೆ 'ಗೂರಲುಬೇನೆ'ಯವರನ್ನೊಬ್ಬರನ್ನು ಕರೆದುಕೊಂಡು ಹೋಗಿ ಔಷಧಿ ಕೊಡಿಸಿಕೊಂಡು ಬಂದೆ. ಆಗ ಅಲ್ಲಿ ವಿರಾಟ್‌ಸ್ವರೂಪಿಯಂತೆ ಬೆಳೆದ ಅನೇಕ ಲೋಕೋಪಕಾರಕ ಸಂಸ್ಥೆಗಳನ್ನು ಕಂಡು ಮೈಮರೆತೆ. ಶ್ರೀಗಳವರ ಲೋಕೋಪಕಾರ ಮಾರ್ಗ ತತ್ಪರತೆಗೆ ಎತ್ತಿ ಕೈಮುಗಿದೆ.

1943ರಲ್ಲಿ ಆಗತಾನೇ ಮಲ್ಲಾಡಿಹಳ್ಳಿಗೆ ಭಾಗ್ಯವೇ ಬರುವಂತೆ ಶ್ರೀಗಳು ಬಂದಿದ್ದರು. ಅವರು ಮೊದಲು

ಆ ಚಿಕ್ಕ ಮಲ್ಲಾಡಿಹಳ್ಳಿಯಲ್ಲಿ ಲೋಕಜೀವನದ ಶಕ್ತಿಸಂವರ್ಧನೆಯ ಮೂಲಮಂತ್ರವಾದ ವ್ಯಾಯಾಮಶಾಲೆಯನ್ನು ತೆರೆದು ತರುಣ ಜೀವರುಗಳನ್ನಾಕರ್ಷಿಸಿ, ದಿನೇದಿನೇ ಮಲ್ಲಾಡಿಹಳ್ಳಿಯಂಥ ಒಂದು ಸಣ್ಣ ಹಳ್ಳಿಯನ್ನು ಲೋಕವಿಖ್ಯಾತಗೊಳಿಸಲು ಅನಂತಮುಖದಲ್ಲಿ ತಮ್ಮ ಮನಸ್ಸಂಕಲ್ಪಕ್ಕನುಗುಣವಾದ ರಚನಾತ್ಮಕ ಕಾರ್ಯಬಾಹುಳ್ಯದಿಂದ ಬೀಗಿಸಿ ಬಳುಕಿಸಿ ತಮ್ಮ ಅನಾಥಶ್ರಮದ ವಿರಾಡ್ದರ್ಶನ ಮಾಡಿಸಿದ್ದಾರೆ.

ಬಿರುದು ಬಾವುಲಿಗಳನ್ನಪೇಕ್ಷಿಸದೆ ಪಲ್ಲಕ್ಕಿಯ ಉತ್ಸವಗಳಿಗೆ ಮಾರುಹೋಗಿ ಭಟ್ಟಂಗಿಗಳ ಪರಾಕುಗಳಿಗೆ ಆಶಿಸದಿದ್ದರೂ ಜನಮನದ ದಿವ್ಯಾಂದೋಳಿಕದಲ್ಲಿ ಕುಳಿತು ಅವರ ಗೌರವಾದರಗಳ ಚಾಮರದ ಗಾಳಿಯಲ್ಲಿದ್ದಾರೆ ಲೋಕದ ಶ್ಲಾಘನೆಯ ಪರಾಕಿನಲ್ಲಿದ್ದಾರೆ. ಶುಷ್ಕವೇದಾಂತ, ಪ್ರಾರಬ್ಧವಾದ, ಸಂಪ್ರದಾಯಕತೆ ಮೊದಲಾದ ಪ್ರಗತಿಪ್ರತಿಬಂಧಕ ಅಡಚಣೆಗಳನ್ನು ದೂರ ತಳ್ಳಿ ಧರ್ಮವನ್ನು ಜನಜೀವನಕ್ಕಿಳಿಸಿ ಜನಾಂಗದ ವಿಚಾರಧಾರೆಯನ್ನು ಬದಲಾಯಿಸಲು ಪ್ರಯತ್ನಿಸುವ ಪ್ರಚಂಡ ಕ್ರಾಂತಿಕಾರಿ ಮನೋಭಾವ ಶ್ರೀಗಳವರ ಕ್ರಿಯಾತ್ಮಕ ಧೋರಣೆಯಲ್ಲಿ ಅಭಿವ್ಯಕ್ತವಾಗುತ್ತಿದೆ. ತಮ್ಮ ಅದ್ಭುತ ಸಂನ್ಯಾಸ ಕರ್ಮಗಳ ಪ್ರಾಬಲ್ಯ ಲಭ್ಯಶುದ್ಧಿ ಸಿದ್ಧಿಗಳಿಂದ ಲೋಕದ ಕಣ್ಣು ತೆರೆಯಿಸಿ ಅವರನ್ನು ವರ್ತನೋಪದೇಶದ ಮೂಲಕವಾಗಿ ದಾರಿಗೆ ತರುವ ಶ್ರಮಸಹಿಷ್ಣು ಜೀವನ ಅವರದು. ವಾಗುಪದೇಶಕ್ಕಿಂತ ವರ್ತನೋಪದೇಶ ಸತ್ವಭರಿತ; ಪರಿಣಾಮಕಾರೀಮಾರ್ಗ. ಸಾಮಾನ್ಯವಾಗಿ ಇಂಥ ಮೌನವಾದ ಋಷಿಜನೋಚಿತ ಜೀವನಮಾರ್ಗಕ್ಕೆ ಲೋಕ ಆಕರ್ಷಿಕವಾಗುವಷ್ಟು ಬೇರೆ ವಿಧಾನಗಳಿಂದ ಆಗುವುದಿಲ್ಲ. ಅಷ್ಟಾಂಗಯೋಗಮಾರ್ಗಗಳನ್ನಾಚರಿಸಿ ಶರೀರ ಮನೋಬುದ್ಧಿಗಳನ್ನು ಹಿಡಿತದಲ್ಲಿಟ್ಟುಕೊಳ್ಳಬೇಕೆಂದು ಮಾಡುವ ಉಪದೇಶ ವರ್ತನೋಪದೇಶವಾಗದಿದ್ದರೆ ಗೋರ್ಕಲ್ಲ ಮೇಲೆ ಮಳೆಗರೆದಂತೆ. ಅವನ್ನು ಸ್ವತಃ ಆಚರಿಸಿ ದೇಹ ಮನೋಬುದ್ಧಿಗಳ ಮೇಲೆ ಹತೋಟಿಯನ್ನು ತೋರಿಸುವ ವರ್ತನೆ ಶಬ್ದಗಳನ್ನು ಮಿಕ್ಕಿ ನಿಂತ ಸತ್ವಭರಿತ ಪೂರ್ಣೋಪದೇಶವಾಗಿದೆ. ಶ್ರೀ ರಾಘವೇಂದ್ರಸ್ವಾಮಿಗಳವರದು ಈ ಮಾದರಿಯ ಉಪದೇಶ. ಪ್ರಾಚೀನ ಭಾರತದ ಸಂನ್ಯಾಸಿಧರ್ಮದ ಧ್ಯೇಯೋದ್ದೇಶಗಳನ್ನು ಹೊತ್ತು ನಿಂತ ಇವರ ನಿಡುಬಾಳಿನ ರಹಸ್ಯ 'ಸರ್ವೇಜನಾಸ್ಸುಖಿನೋ ಭವಂತು' ಎಂಬ ದಿವ್ಯ ಮಂತ್ರವನ್ನು ಸಾರ್ಥಕಪಡಿಸುವುದೇ ಆಗಿದೆ. ಅಂತೆಯೇ ಕೇವಲ 33 ವರ್ಷಗಳ ಅಲ್ಪಕಾಲದಲ್ಲಿ ಇವರು ಸಾಧಿಸಿದ ಸಾಧನೆ ಮುಗಿಲೆತ್ತರದ್ದು; ವಿಶ್ವವಿಶಾಲದ್ದು.

ಸಂನ್ಯಾಸಿಯ ಜೀವನ ಕ್ರಿಯಾಮುಖವಾದಾಗ ಅಘಟಿತ ಘಟನೆಯೇ ನಡೆಯುತ್ತದೆ. ಲೋಕದ ಕಣ್ಣಿಗೆ ಅದು ಪವಾಡವೆನಿಸುತ್ತದೆ. ಸಂನ್ಯಾಸಿಗಳು ಇತರರಿಗಿಂತ ಅಧಿಕತಮ ಕ್ರಿಯಾಶೀಲರೆಂಬುವಕ್ಕೆ ಶ್ರೀ ರಾಘವೇಂದ್ರ ಸ್ವಾಮಿಗಳು ಒಂದು ಜ್ವಲಂತ ನಿದರ್ಶನವಾಗಿದ್ದಾರೆ. ಇಂದು ದೇಶವಿದೇಶಗಳುದ್ದಗಲದ ಬಾನಿನಲ್ಲಿ ಇವರ ಕ್ರಿಯಾಶಕ್ತಿಯ ವಿವಿಧಮುಖಗಳ ಸೇವಾಸೂರ್ಯನ ರಕ್ತಾರುಣಕಾಂತಿಯ ಸಹಸ್ರಹೊಂಗಿರಣಗಳು ಚಾಚಿವೆ; ಬೆಳಕುಮಾಡಿವೆ. ಲೋಕದಿಂದ ಕ್ರಿಯೆಗೆ ಫಲವನ್ನು ಸಂನ್ಯಾಸಿ ಕೇಳದಿದ್ದರೂ ಕ್ರಿಯೆಯ ಪ್ರಾಬಲ್ಯವೇ, ಸತ್ಯವೇ ಫಲವನ್ನೆಳೆದು ತರುತ್ತದೆ. ಶ್ರೀಗಳವರಲ್ಲಿ ಆಹಾರಶುದ್ಧಿಯಿದೆ; ಕ್ರಿಯಾಸಿದ್ಧಿಯಿದೆ; ವಾಕ್‌ಪರುಷವಿದೆ; ದೃಷ್ಟಿ ಪರುಷವಿದೆ. ಇವೆಲ್ಲ ಅವರ ಜೀವಿತದ ಸತ್ಯ ಶುದ್ಧಕ್ರಿಯಾಚಾರಗಳು ತಂದೊದಗಿಸಿದ ಸಹಜಾಚರಣೆಗಳೇ. ಭಕ್ತಿಜೀವನ ಇವರ ಜೀವಿತದುಸಿರು. ಭಕ್ತಿಯೆಂದರೆ ಕೇವಲ ಏತದಂತೆ ಬಾಗುವುದಲ್ಲ; ಇಕ್ಕಳದಂತೆ ಕೈಮುಗಿಯುವುದಲ್ಲ. ಅದು ಅಂಗಗತಶಕ್ತಿಯೆಲ್ಲ ಸತ್ಕ್ರಿಯಾಚಾರದಲ್ಲಿ ತೊಡಗುವಂತೆ ಮಾಡುವ ಕರ್ತವ್ಯನಿಷ್ಠೆಯ ಸೂತ್ರ. ಮನಸ್ಸಿನಿಂದ ಭಕ್ತಿ ಪ್ರೀತಿಯಾಗಿ, ಬುದ್ಧಿಯಿಂದ ಸದಸದ್ವಿವೇಕವಾಗಿ, ಚಿತ್ತದಲ್ಲಿ ತೃಪ್ತಿಯಾಗಿ, ಅಹಂಕಾರದಲ್ಲಿ ಸ್ವಸ್ವರೂಪ ವಿಮರ್ಶಾಜ್ಞಾನವಾಗಿ, ಆತ್ಮದಲ್ಲಿ ಅವಿರಳೈಕ್ಯವಾಗುವ ಶಕ್ತಿವಿಶೇಷ. ಅಂತಃಕರಣದಲ್ಲಿ ಈ ಸಂಸ್ಕಾರವನ್ನುಂಟುಮಾಡಲಸಮರ್ಥವಾದ ಯಾವುದೇ ಭಕ್ತಿ ಭಕ್ತಿಯೆನಿಸದು. ಶ್ರೀ ಶ್ರೀಗಳವರ ಭಕ್ತಿಜೀವನ ಜನತಾಜನಾರ್ದನನಿಗಾಗಿ ಆಚರಿಸುವ ವಿವಿಧ ಕ್ರಿಯಾಮುಖದಿಂದ ಹೊರಹೊಮ್ಮುವ ಅಂಗಗತಶಕ್ತಿ. ಇಂಥ ಅದ್ಭುತ ಶಕ್ತಿಸಂಪನ್ನ ಕ್ರಿಯಾಶೀಲ ಸಂನ್ಯಾಸಿ ಕನ್ನಡನಾಡಿಗೆ, ಜನತೆಗೆ, ನುಡಿಗೆ ಒಂದು ಮಹಾಭೂಷಣ. ಇಂಥ ಜ್ಞಾನಕ್ರಿಯಾಯುಕ್ತ ಪರಮಜ್ಯೋತಿಸ್ವರೂಪರಾದ ಪರಿವ್ರಾಜಕ ರಾಘವೇಂದ್ರ ಸ್ವಾಮಿಗಳಿಗೆ, ತಿರುಕರಿಗೆ ನಮೋನಮಃ.

ಬಿ. ಕೆ. ಗುರುರಾಜರಾವ್

ಧರ್ಮದ ಜೀವಂತ ಪ್ರತಿನಿಧಿ

ಅನಾದಿಕಾಲದಿಂದಲೂ ಹಿಂದೂಗಳ ಜೀವನದಲ್ಲಿ ಧರ್ಮ ಹಾಸುಹೊಕ್ಕಾಗಿ ಸೇರಿಕೊಂಡಿದೆ ಮತ್ತು ಜನರ ಲೌಕಿಕದೃಷ್ಟಿ, ಆಚಾರ, ವ್ಯವಹಾರಗಳ ಮೇಲೆ ಅಮಿತ ಪ್ರಭಾವವನ್ನು ಬೀರುತ್ತ ಬಂದಿದೆ. ಜೀವನದ ಎಲ್ಲ ರಂಗಗಳಲ್ಲೂ ಧರ್ಮದ ಪ್ರಭಾವ ಎಷ್ಟು ಗಾಢವಾಗಿದೆಯೆಂದರೆ, ಇಡೀ ಜೀವನವೇ ಧರ್ಮದ ವಿವಿಧ ಮುಖಗಳ ಆಚರಣೆಗೆ ಮೀಸಲಾಗಿದೆಯೆಂದರೆ ತಪ್ಪಾಗಲಾರದು. ಹೀಗೆ ಸರ್ವವ್ಯಾಪಕವಾದ ಧರ್ಮದ ಸ್ವರೂಪ ಲಕ್ಷಣಗಳನ್ನು ತಿಳಿಯುವುದು ಬಹಳ ಕಷ್ಟಸಾಧ್ಯ.

ಮಹಾಭಾರತದಲ್ಲಿ ಧರ್ಮದ ವ್ಯುತ್ಪತ್ತಿ ಮತ್ತು ಸ್ವರೂಪದ ಬಗ್ಗೆ ವಿವೇಚನೆ ಮಾಡಲಾಗಿದೆ.

> ಧಾರಣಾತ್ ಧರ್ಮಃ ಇತ್ಯಾಹುಃ ಧರ್ಮೋ ಧಾರಯತೇ ಪ್ರಜಾಃ |
> ಯಸ್ಮಾದ್ ಧಾರಣ ಸಂಯುಕ್ತಃ ಸಧರ್ಮ ಇತಿ ನಿಶ್ಚಯಃ || (ಶಾಂತಿ, 109, 59)

ಎಲ್ಲರನ್ನೂ ರಕ್ಷಿಸುವುದರಿಂದ ಧರ್ಮವೆಂದು ಕರೆಯಲಾಗಿದೆ. ಸೃಷ್ಟಿಸಲಾದ ಎಲ್ಲ ಜೀವಕೋಟಿಗಳನ್ನೂ ಧರ್ಮವು ರಕ್ಷಿಸುತ್ತದೆ. ಆದುದರಿಂದ ಜಗತ್ತನ್ನು ಸಂರಕ್ಷಿಸುವ ಶಕ್ತಿಯನ್ನು ಹೊಂದಿರುವ ತತ್ತ್ವವೇ ಧರ್ಮ. ಮತ್ತೊಂದು ಸಂದರ್ಭದಲ್ಲಿ ಹೀಗೆ ಹೇಳಲಾಗಿದೆ.

> ಯಸ್ಮಾದ್ ಅಹಿಂಸಾ ಸಂಯುಕ್ತ ಸ್ಸಧರ್ಮ ಇತಿ ನಿಶ್ಚಯಃ |
> ಅಹಿಂಸಾರ್ಥಾಂಚ ಭೂತಾನಾಂ ಧರ್ಮಪ್ರವಚನಂ ಕೃತಂ || (ಶಾಂತಿ, 109, 58)

ಸೃಷ್ಟಿಸಲಾದ ಜೀವಿಗಳ ಕೇಡು ಮಾಡದಿರುವುದೇ ನಿಜಕ್ಕೂ ಧರ್ಮ. ಏಕೆಂದರೆ ಜೀವಿಗಳಿಗೊದಗಬಹುದಾದ ಕೇಡನ್ನು ತಡೆಯುವುದಕ್ಕಾಗಿಯೇ ಧರ್ಮವನ್ನು ಸೃಜಿಸಲಾಗಿದೆ.

> ಪ್ರಭವಾರ್ಥಾಯ ಭೂತಾನಂ ಧರ್ಮಪ್ರವಚನಂ ಕೃತಂ |
> ಯಸ್ಮಾತ್ ಪ್ರಭವ ಸಂಯುಕ್ತ ಸ್ಸಧರ್ಮ ಇತಿ ನಿಶ್ಚಯಃ || (ಶಾಂತಿ, 109 10)

ಸಕಲ ಜೀವಿಗಳ ಯೋಗಕ್ಷೇಮ ಸಾಧನೆಗಾಗಿ ಧರ್ಮವನ್ನು ಸೃಷ್ಟಿಸಲಾಗಿದೆ. ಆದುದರಿಂದ ಸರ್ವಜೀವಿಗಳ ಯೋಗಕ್ಷೇಮ ಸಾಧನೆಗೆ ಯಾವಮಾರ್ಗ ಸುಗಮವಾಗಿದೆಯೋ ಅದೇ ನಿಶ್ಚಯವಾಗಿಯೂ ಧರ್ಮ. ಹೀಗೆ ಈ ಧರ್ಮದ ಸ್ವರೂಪ ಮತ್ತು ಲಕ್ಷಣಗಳನ್ನು ವೇದಾದಿ ಶಾಸ್ತ್ರ ಗ್ರಂಥಗಳಿಂದ ಹಿಡಿದು ಉಪನಿಷತ್, ಪುರಾಣ, ಇತಿಹಾಸ, ಕಾವ್ಯಗ್ರಂಥಗಳವರೆಗೂ ಎಲ್ಲ ಮೂಲಗಳಲ್ಲಿಯೂ ಪ್ರತಿಪಾದಿಸಲಾಗಿದೆ.

ಈ ವಿವೇಚನೆಯಿಂದ ಸ್ಪಷ್ಟಪಡುವಂತೆ ಹಿಂದೂಧರ್ಮದಲ್ಲಿ ವಿಶ್ವದಲ್ಲಿ ಭಗವತ್ಸೃಷ್ಟಿಭೂತವಾದ ಸಮಸ್ತ ಪ್ರಾಣಿ ಹಿತಸಂರಕ್ಷಣೆಗೆ ಹೆಚ್ಚಿನ ಪ್ರಾಮುಖ್ಯ ನೀಡಲಾಗಿದೆ. ಈ ಹಿತಸಂರಕ್ಷಣೆಯ ಕಾರ್ಯಕ್ಕೆ ಧಕ್ಕೆ

ಏವಂ ಪ್ರವರ್ತಿತಂ ಚಕ್ರಂ ನಾನು ವರ್ತಯತೀಹ ಯಃ |
ಅಘಾಯುರಿಂದ್ರಿಯಾರಾಮೋ ಮೋಘಂ ಪಾರ್ಥ ಸಜೀವತಿ ‖ (ಭಗ, III, 16)

ಲೋಕ ಸಂಗ್ರಹಣಾರ್ಥವಾಗಿ ಸ್ವಕರ್ಮವನ್ನು ಮಾಡೆಂಬುದೇ ಗೀತೆಯ ಮಥಿತಾರ್ಥ. ಈ ರೀತಿಯಲ್ಲಿ ಹಿಂದೂ ಧರ್ಮದ ಪ್ರಮುಖ ತತ್ತ್ವವೆಂದರೆ ವ್ಯಕ್ತಿ ತನ್ನ ಸ್ವಾರ್ಥವನ್ನು ಬದಿಗೊತ್ತಿ ತನ್ನ ಪ್ರತಿಯೊಂದು ಕರ್ಮದಲ್ಲೂ ಇತರರ ಒಳಿತನ್ನು ಸಾಧಿಸುವುದೇ ಆಗಿದೆ. ಸಮಾಜಸೇವೆ, ಸಮಾಜ ಕಲ್ಯಾಣ, ಸರ್ವಪ್ರಾಣಿಗಳ ಹಿತ ಚಿಂತನೆಗೆ ಅಗ್ರಮಾನ್ಯತೆ ನೀಡಲಾಗಿದೆ. ಸರ್ವೇಜನಾಸ್ಸುಖಿನೋ ಭವಂತು ಎಂಬ ತತ್ತ್ವವನ್ನು ಸರ್ವದಾ ಪಾಲಿಸುವುದು ಪ್ರತಿಯೊಬ್ಬ ಭಾರತೀಯನ ಆದ್ಯಕರ್ತವ್ಯವೆಂದು ಭಾವಿಸಲಾಗಿದೆ. ಇಂಥ ಧರ್ಮಕ್ಕೆ ಅಪಚಾರವೆಸಗದೆ ಧರ್ಮಮಾರ್ಗದಲ್ಲಿ ಬಾಳಬೇಕಾದರೆ ವ್ಯಕ್ತಿ ಸಮಸ್ತ ಜೀವಕೋಟಿಗಳ ಸಂಗ್ರಹ ಮತ್ತು ಹಿತರಕ್ಷಣೆ ಸಾಧಿಸಬೇಕು. ಇದಕ್ಕೆ ತಪ್ಪಿ ನಡೆದಾಗ, ಅಂಥ ವ್ಯಕ್ತಿ ಧರ್ಮಲಂಡನಾಗುತ್ತಾನಷ್ಟೇ ಅಲ್ಲದೇ ಇಹಪರಗಳೆರಡರಲ್ಲೂ ತನ್ನ ವಿನಾಶಕ್ಕೆ ತಾನೇ ಕಾರಣನಾಗುತ್ತಾನೆ.

ಈ ದೃಷ್ಟಿಯಿಂದ ಲೋಕಸಂಗ್ರಹ ಕಾರ್ಯವೆಸಗಿದ ಮಹಾವ್ಯಕ್ತಿಗಳು ಭಾರತದಲ್ಲಿ ಹಿಂದೂ ಸಮಾಜದಲ್ಲಿ ಹಲವಾರು ಮಂದಿ. ಪೌರಾಣಿಕ ವ್ಯಕ್ತಿಗಳ ಹೆಸರುಗಳನ್ನು ಇಲ್ಲಿ ಹೆಸರಿಸುವುದು ಅಪ್ರಸ್ತುತ ; ಏಕೆಂದರೆ ಅಂಥ ಅಸಂಖ್ಯಾತ ಪುರುಷರ ವಿಷಯ ಸುವಿದಿತ. ಐತಿಹಾಸಿಕ ಯುಗದಲ್ಲಿ ಭಗವಾನ್ ಮಹಾವೀರ, ಭಗವಾನ್ ಬುದ್ಧರಂಥ ಮಹಾನುಭಾವರು ಹೊಸಮತ ಸ್ಥಾಪಕರೆಂದು ವಿಖ್ಯಾತರಾಗಿದ್ದರೂ, ಪ್ರಾಣಿದಯೆ,ಅಹಿಂಸೆ ಮತ್ತು ಸಮಸ್ತ ಜೀವಕೋಟಿಗಳ ಶ್ರೇಯಸ್ಸಿಗೆ ಶ್ರಮಿಸಿ, ಆ ದಿಶೆಯಲ್ಲಿ ಸಾರ್ಥಕತೆಯನ್ನು ಪಡೆದ ಜೀವಶ್ರೇಷ್ಠರು. ಅಶೋಕನು ಒಬ್ಬ ಮಹಾನ್ ಚಕ್ರಾಧಿಪತಿಯಾಗಿದ್ದರೂ ಕೇವಲ ಮಾನವರಷ್ಟೇ ಅಲ್ಲ ಸಕಲ ಪ್ರಾಣಿಗಳ ಮೇಲ್ಮೆ ಸೌಖ್ಯಗಳಿಗಾಗಿ ಎಲ್ಲ ವಿಧಗಳಲ್ಲೂ ಶ್ರಮಿಸಿ ಕೀರ್ತಿವಂತನಾದಂಥ ಶ್ರೇಷ್ಠ ಪುರುಷ. ಮಧ್ಯಯುಗದ ಇತಿಹಾಸದಲ್ಲಿ ಸರ್ವಜೀವಿಸಮತೆ, ಹಿತರಕ್ಷಣೆಗೆ ದುಡಿದ ಮತ್ತೊಬ್ಬ ಮಹಾಪುರುಷನೆಂದರೆ ಬಸವೇಶ್ವರ ; ಮಂತ್ರಿ ಪದವಿಯಲ್ಲಿದ್ದರೂ, ಸಕಲ ಐಶ್ವರ್ಯ, ಸ್ವಸುಖಗಳನ್ನು ಕಡೆಗಣಿಸಿ ದೀನದಲಿತರಿಗಾಗಿ ದುಡಿದು ಅಮರನಾದ. ಇತ್ತೀಚಿನ ದಿನಗಳಲ್ಲಿ ಸಮಾಜದ ಏಳಿಗೆಗಾಗಿ, ಹಿತರಕ್ಷಣೆಗಾಗಿ ತಮ್ಮನ್ನೇ ಅರ್ಪಿಸಿಕೊಂಡ ಅನೇಕ ಮಹಾನುಭಾವರಲ್ಲಿ ಬೇರೆ ಬೇರೆ ಮಾರ್ಗಗಳನ್ನನುಸರಿಸಿದರೂ ಒಂದೇ ಧ್ಯೇಯಕ್ಕಾಗಿ ದುಡಿದವರಲ್ಲಿ ಶ್ರೀರಾಮಕೃಷ್ಣ ಪರಮಹಂಸ ಮತ್ತು ಮಹಾತ್ಮಗಾಂಧಿಗಳ ಹೆಸರುಗಳು ಚಿರಸ್ಮರಣೀಯ. ಸಮಾಜದಲ್ಲಿದ್ದ ಅಂಕುಡೊಂಕುಗಳನ್ನು ಸರಿಪಡಿಸುವ ಸಲುವಾಗಿ, ಪ್ರತಿಯೊಬ್ಬ ಪ್ರಾಣಿಯ ಒಳಿತಿಗಾಗಿ ತಮ್ಮ ಇಡೀ ಜೀವನವನ್ನೇ ಸವೆಸಿದ ಪಾವನ ಪುರುಷರಿವರು.

ಇಂಥ ಪರಂಪರೆಯನ್ನು ಹಿಂದೂಧರ್ಮದ ಪರಮೋದ್ದೇಶ ಸಾಧನೆಯನ್ನು ಅನುಸರಿಸುತ್ತ ಬರುತ್ತಿರುವ ಈಗಿರುವ ಒಬ್ಬ ಅದ್ವಿತೀಯ ಪುರುಷರೆಂದರೆ ಮಲ್ಲಾಡಿಹಳ್ಳಿಯ ಅನಾಥ ಸೇವಾಶ್ರಮವನ್ನು ನಡೆಸಿಕೊಂಡು ಬರುತ್ತಿರುವ ಪರಮಪೂಜ್ಯ ಶ್ರೀ ರಾಘವೇಂದ್ರ ಸ್ವಾಮಿ. ಅವರು ನಿಗರ್ವವನ್ನು ಸೂಚಿಸುವ "ತಿರುಕ"ನೆಂಬ ಅಭಿಧಾನದಿಂದ ದೀನದಲಿತರ ಸಕಲ ವಿಧದ ಶ್ರೇಯಸ್ಸಿಗೆ ದುಡಿಯುತ್ತಿದ್ದಾರೆ. ಸರಳ ಮನಸ್ಸಿನ ಸಾದಾ ವ್ಯಕ್ತಿ, ನಿರಹಂಕಾರಿ, ಮೇಲುಕೀಳೆಂಬ ಭೇದವಿಲ್ಲದೆ ಸರ್ವರ ಒಳಿತನ್ನೇ ಗುರಿಯಾಗಿಟ್ಟುಕೊಂಡು ದುಡಿಯುತ್ತಿರುವ ಅಪೂರ್ವ ವ್ಯಕ್ತಿ. ಸ್ವಾರ್ಥಿಗಳು,ಕುಹಕಿಗಳು,ಕಪಟಿಗಳು ಇವರ ಬಳಿ ಹಾಯಲು ಸಾಧ್ಯವಿಲ್ಲ. ಉನ್ನತ ಧ್ಯೇಯ ಸಾಧನೆಗೆ ಅಕೃತ್ರಿಮ ಮತ್ತು ಪರಿಶುದ್ಧ ಮಾರ್ಗವನ್ನು ಅನುಸರಿಸಬೇಕೆಂಬ ಉದಾತ್ತಧ್ಯೇಯವನ್ನು ತಮ್ಮ ಜೀವನದಲ್ಲಿ ಆಚರಿಸಿ ತೋರಿಸಿದ್ದಾರೆ. ಎಷ್ಟು ದಯಾಪರರೋ, ಕರುಣಾ ಮೂರ್ತಿಗಳೋ ಅಷ್ಟೇ ದೃಢತೆಯಿಂದ ಶಿಸ್ತು, ನಿಯಮ, ಸತ್ಯ ಮತ್ತು ನ್ಯಾಯ ಪಕ್ಷಪಾತಿಗಳೂ ಹೌದು. ಒಂದೇ ಮಾತಿನಲ್ಲಿ ಹೇಳುವುದಾದರೆ ಹಿಂದೂ ಧರ್ಮದ ಪರಮೋಚ್ಚ ತತ್ತ್ವಗಳನ್ನು ಸ್ವಜೀವನದಲ್ಲಿ ಆಚರಿಸುತ್ತಿರುವ ಅದ್ಭುತ ಪುರುಷನೀತ.

ವಿದ್ವಾನ್ ಸಾಮುಳ ಗಣೇಶ ಶಾಸ್ತ್ರೀ

ಶ್ರೀ ರಾಘವೇಂದ್ರ ಗುಣಗಾನಮ್

ಪರಪ್ಪ ಯೋಗೀಂದ್ರ ಕರಾಬ್ಜ ಜಾತಃ
ಪರಾರ್ಥ ಸಂಸಾಧನ ಸಕ್ತಚಿತ್ತಃ ||
ಮಲ್ಲಾಡಿಹಳ್ಳೀ ಕುಮುದೈಕ ಬಂಧುಃ
ಶ್ರೀ ರಾಘವೇಂದ್ರಃ ಶ್ರಿಯಮಾತನೋತು || || ೧ ||

ಜಾಡ್ಯಂ ಜನಾನಾಂ ಪರಿಹರ್ತುಕಾಮಃ
ಸಂಸ್ಥಾಪ್ಯ ಯೋಗಾಸನ ಸಿದ್ಧಿ ಶಾಲಾಃ ||
ಕರ್ನಾಟದೇಶೇ ಬಹುಲಸ್ಥಲೇಷು
ಸಂರಾಜತೇ ಸಾಧುಜನೈಸ್ಸುಪೂಜ್ಯಃ || !| ೨ ||

ಯೋಗಪ್ರಚಾರಾಯ ಬಹುಪ್ರಬಂಧಾ
ಯೋ ನಿರ್ಮಮೇ ನಿರ್ಮಲಮಾನಸಾಗ್ರ್ಯಃ ||
ಯೋಗೇನ ಸಾಕ್ಷಾತ್ಕೃತ ಸರ್ವತತ್ತ್ವಂ
ಯೋಗೀಂದ್ರಮೇನಂ ಮಹಯಂತು ಸರ್ವೇ ||| || ೩ ||

ಸನ್ನಾಟಕಂ ಸತ್ಕವನಂ ಕಥಾಶ್ಚ
ಕಾದಂಬರೀಂ ಮಾನಸಲಾಸ್ಯ ಹೇತೋಃ ||
ಸರ್ವಾಃ ಕೃತೀರಮ್ಯತರಾ ವಿಧಾಯ
ಸರ್ವಾನ್ ಜನಾನ್ ನಂದಯತೇ ನಿತಾಂತಮ್ || || ೪ ||

ಯತ್ಯಾಶ್ರಮಂ ಪ್ರಾಪ್ಯ ಪರೋಪಕಾರಂ
ನಿರ್ವರ್ತಯಂತಂ ಯತಿರಾಜಮೇನಮ್ ||
ಆದರ್ಶಭೂತಂ ಸುವಿಶಾಲ ಬುದ್ಧಿಮ್
ಸರ್ವೇಽಪಿ ಕುರ್ವಂತು ವಿಶಾಲಭಾವಾಃ |! || ೫ ||

ಜಯತು ಜಯತು ಭವ್ಯೋ ಭಾರತಾಂಬಾಸುಪುತ್ರೋ
ಜಯತು ಜಯತು ನಿತ್ಯಂ ವಿಶ್ವವಿಖ್ಯಾತ ಕೀರ್ತಿಃ
ಜಯತು ಜಯತು ವೃದ್ಧೋ ವೈದ್ಯವಿದ್ಯಾ ಪ್ರಚಾರೇ
ಜಯತು ಜಯತು ಯೋಗೀ ಶ್ರೀಧರೋ ರಾಘವೇಂದ್ರಃ || ೬ ||

ಬಿ. ಕೆ. ತಮ್ಮಯ್ಯ

"ಕರ್ನಾಟಕದ ಮಹಾಯೋಗಿ"

'ಮಲ್ಲಾಡಿಹಳ್ಳಿ'–ಕರ್ನಾಟಕದ ಜಿಲ್ಲಾ ಕೇಂದ್ರವಾದ ಚಿತ್ರದುರ್ಗದಿಂದ ನೈರುತ್ಯಕ್ಕೆ ಸುಮಾರು 43 ಕಿ.ಮೀ. ದೂರದಲ್ಲಿದೆ. ಕರ್ನಾಟಕದ 'ಶಾಂತಿನಿಕೇತನ'ವೆಂದು ಹೆಸರಿಸಬಹುದಾದಂತಹ ಒಂದು ಅನಾಥಸೇವಾಶ್ರಮ ಇಲ್ಲಿದೆ. ಇದು ಕೇವಲ ಒಂದು ವಿದ್ಯಾಸಂಸ್ಥೆ ಮಾತ್ರವಾಗಿರದೆ, ತಪೋವನವೂ, ಮಠವೂ ಆಗಿದೆ. ಈ ತಪೋವನದ ಋಷಿಗಳೂ, ಮಠದ ಮಠಾಧಿಪತಿಗಳೂ, ಆಶ್ರಮಕ್ಕೆ ಅಧ್ಯಕ್ಷರೂ ಆಗಿರುವವರು 86ರ ಹರೆಯದ, 'ತಿರುಕ' ಎಂಬ ವಿಶಿಷ್ಟ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪೂಜ್ಯ ಶ್ರೀ ರಾಘವೇಂದ್ರ ಸ್ವಾಮಿಗಳವರು. ಶ್ರೀ ಸ್ವಾಮೀಜಿಯವರ ಸನ್ನಿಧಾನದಲ್ಲಿ ರಾಜಕೀಯತೆ, ಜಾತೀಯತೆ, ಸಾಮಾಜಿಕ ಪ್ರತಿಷ್ಠೆಯ ಗದ್ದುಗೆ, ಪ್ರಚಾರದ ಅಬ್ಬರ, ವೇಷ ಭೂಷಣಗಳ ಆಡಂಬರ ಇತ್ಯಾದಿಗಳಾವುವೂ ಇಲ್ಲ. ಜನಸೇವೆಯೇ ಜನಾರ್ದನನ ಸೇವೆಯೆಂದು ತಿಳಿದು,ಸಾಧಕರಿಗೆ, ಆತ್ಮಾನ್ವೇಷಕರಿಗೆ,ಆರೋಗ್ಯಾನ್ವೇಷಕರಿಗೆ,ಶಿಕ್ಷಣಾರ್ಥಿಗಳಿಗೆ,ರಾಷ್ಟ್ರವು ಪುನರ್‌ನಿರ್ಮಾಪಕರಿಗೆ ಈ ಆಶ್ರಮವನ್ನು ಜ್ಞಾನತೀರ್ಥವನ್ನಾಗಿಸಿದ್ದಾರೆ. ಪೂಜ್ಯ ರಾಘವೇಂದ್ರ ಸ್ವಾಮೀಜಿಯವರು ದೀಕ್ಷಾಬದ್ಧರಾಗಿ, ಬ್ರಹ್ಮಚರ್ಯವನ್ನೂ ಭಿಕ್ಷುಚರ್ಯವನ್ನೂ ಕೈಕೊಂಡು, ಲೋಕಕಲ್ಯಾಣವ್ರತವನ್ನು ಆಚರಿಸುತ್ತಿದ್ದಾರೆ. ಇವರು ಸ್ವತಃ ಕವಿಗಳು, ಸಾಹಿತಿಗಳು, ಶಿಕ್ಷಣಧುರೀಣರು, ಉಜ್ವಲ ರಾಷ್ಟ್ರಾಭಿಮಾನಿಗಳು, ಸ್ವಾತಂತ್ರ್ಯಯೋಧರು, ಪ್ರಖ್ಯಾತ ಆಯುರ್ವೇದ ವೈದ್ಯರು, ಪೌರಾತ್ಯ–ಪಾಶ್ಚಿಮಾತ್ಯ ಪದ್ಧತಿಗಳಲ್ಲಿ ದೇಹಬಲ ಸಂವರ್ಧನ ವಿಧಾನ ವೇತ್ತರು, ಜಟ್ಟಿಗಳು. ಇನ್ನು ಒಳಮುಖದಲ್ಲಿ ಇವರು, ತಪಸ್ವಿಗಳು, ಯೋಗಿಗಳು. ಅವರ ಧ್ಯೇಯ ಸಾಧನೆಯ, ಕುಗ್ಗದ ಶಕ್ತಿಯ, ಬತ್ತಿಹೋಗದ ಸ್ಫೂರ್ತಿಯ, ಹುಮ್ಮಸ್ಸು ಹುರುಪುಗಳ ಚಿಲುಮೆಯಿರುವುದು ಅವರ ಈ ಅಂತರಗಂಗೆಯಲ್ಲಿ. ಸಮಾಜದಲ್ಲಿ ಬಡವ ಬಲ್ಲಿದರೆನ್ನದೆ, ಮೇಲುಕೀಳೆನ್ನದೆ, ತಮ್ಮ ಜೀವನವನ್ನು ಹಸನು ಮಾಡಿ ಕೊಳ್ಳಬೇಕು ಎಂಬ ಉತ್ಕಟೇಚ್ಛೆಯಿಂದ ಅದಕ್ಕಾಗಿ ಬದ್ಧಕಂಕಣರಾಗಿರುವುದು ಈ ಸ್ವಾಮೀಜಿಯವರ ವೈಶಿಷ್ಟ್ಯ. ಇದಕ್ಕಾಗಿ ಇವರು ಪ್ರಾಣಾಯಾಮ, ಧ್ಯಾನ ಮತ್ತು ಷಟ್ಕರ್ಮವಿಧಿಗಳನ್ನು ಕುರಿತ ಉದಾಹರಣ ಪೂರ್ವಕ ಉಪನ್ಯಾಸಗಳನ್ನು ನಡೆಸಿಕೊಡುತ್ತಿದ್ದಾರೆ. ಸ್ವಾನುಭವದ ಅಧಿಕಾರವಾಣಿಯಿಂದ ತಿಳಿಸಮಾತಿನಲ್ಲಿ ಅವರು ನಡೆಸಿಕೊಡುವ ಈ ಕಾರ್ಯಕ್ರಮಗಳು ಜನಪ್ರಿಯವಾಗಿಯೂ, ಮಹತ್ವಪೂರ್ಣವಾಗಿಯೂ ಇವೆ.

'ಸ್ವಾಮೀಜಿಯವರು ಪೂರ್ವದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯವರು.ಇವರು ಗೃಹಸ್ಥಾಶ್ರಮಿಗಳಾಗದೆ,ಸಾಧು ಸತ್ಪುರುಷರ, ದೀನದಲಿತರ, ದಿವ್ಯಚೇತನವಾಗಿ ನೈಷ್ಠಿಕ ಬ್ರಹ್ಮಚಾರಿಯಾಗಿಯೇ ಉಳಿದರು. ಇವರಿಗೆ ಬಾಲ್ಯದಲ್ಲಿ 'ಅಪಸ್ಮಾರರೋಗ ಹಾಗೂ ಹೃದಯದೌರ್ಬಲ್ಯವೂ ಇದ್ದುವು.ಈ ಸಂದರ್ಭದಲ್ಲಿ ಅವರಿಗೆ ಖ್ಯಾತ ವ್ಯಾಯಾಮ ಶಿಕ್ಷಣಪಟು, ಪಳನಿಸ್ವಾಮಿಯವರ ಪರಿಚಯವಾಯಿತು. ಇವರು ತಮಿಳುನಾಡಿನವರು. ಇವರಲ್ಲಿ ಸ್ವಾಮೀಜಿಯವರ ಅನೇಕ ಒಡನಾಡಿಗಳು ವ್ಯಾಯಾಮ ಮತ್ತು ಪ್ರಾಣಾಯಾಮಗಳನ್ನು ಕಲಿಯುತ್ತಿದ್ದರು. ತಾವೂ ಈ ವಿದ್ಯೆಯನ್ನು

ಅಭ್ಯಾಸಮಾಡಬೇಕೆಂಬ ಉತ್ಕಟೇಚ್ಛೆಯಿಂದ ಅವರ ಅನುಮತಿ ಪಡೆದು, ಈ ಶಾಲೆಗೆ ಸೇರಿದರು. ಸ್ವಲ್ಪಕಾಲದಲ್ಲಿಯೇ ಶ್ರೀಸ್ವಾಮೀಜಿಯವರು, ತಮ್ಮ ಕಾರ್ಯಸಾಧನೆಯಿಂದ ಪಳನೀ ಸ್ವಾಮಿಯವರ ಅಚ್ಚುಮೆಚ್ಚಿನ ಶಿಷ್ಯರಾಗಿ ಯೋಗಸಾಧನೆ, ಹಠಯೋಗ, ನಾಡೀಪರಿಕ್ಷಾ ವಿಧಾನಗಳಲ್ಲಿ ಅಪಾರ ಪರಿಣಿತರಾದರು. ಅಲ್ಲಿಂದಮುಂದೆ ಸ್ವಾಮೀಜಿಯವರು, ಬರೋಡಾದ ಜುಮ್ಮ ದಾದಾ ವ್ಯಾಯಾಮ ಶಾಲೆಯ ಸಂಸ್ಥಾಪಕರಾದ ಕೈ. ಬಾಲಬ್ರಹ್ಮಚಾರಿ ರಾಜರತ್ನ ಪ್ರೊ. ಮಾಣಿಕ್ಯರಾಯರ ವ್ಯಾಯಾಮಶಾಲೆ ಸೇರಿದರು. ಇಲ್ಲಿ ವ್ಯಾಯಾಮ ಶಿಕ್ಷಣದ ಜೊತೆಗೆ, ಮಾಲೀಷ್ (ಅಂಗಮರ್ದನ) ಶಿಕ್ಷಣವೂ ದೊರೆತು ಆ ವಿದ್ಯೆಗಳಲ್ಲೂ ಪಾಂಡಿತ್ಯಗಳಿಸಿದರು. ಮಲ್ಲಯುದ್ಧ, ಕತ್ತಿವರಸೆ, ಲಾಠಿವರಸೆ ಮೊದಲಾದವುಗಳನ್ನು ಶಾಸ್ತ್ರೀಯವಾಗಿ ಅಭ್ಯಸಿಸಿ, ಈ ವಿದ್ಯೆಗಳಲ್ಲೂ ನಿಷ್ಣಾತರಾದರು.

ಹೀಗೆ ಎಲ್ಲಾ ಯೋಗವಿದ್ಯೆಗಳಲ್ಲಿ ಪರಿಣತರಾಗಿ, ಶ್ರೀಸ್ವಾಮೀಜಿಯವರು, 1937–38 ರ ಸುಮಾರಿನಲ್ಲಿ ದಕ್ಷಿಣಪ್ರವಾಸ ಕೈಕೊಂಡರು ಆಗ ದೇಶವು ಪರಕೀಯರ ದಾಸ್ಯದಲ್ಲಿತ್ತು. ಸ್ವಾಮೀಜಿಯವರು ಮಹಾತ್ಮಾಗಾಂಧಿಯವರ ಅನುಯಾಯಿಗಳಾಗಿ, ಜನರಲ್ಲಿ ರಾಷ್ಟ್ರೀಯಮನೋಭಾವನೆಯನ್ನು ಬೆಳೆಸುವ, ರಾಷ್ಟ್ರಸೇವೆಗೆ ಸುಧೃಢ ಸುಶಿಕ್ಷಿತ, ನಿಷ್ಠಾವಂತ ಯುವಕರನ್ನು ತಯಾರುಮಾಡುವ ಪವಿತ್ರ ಕಾರ್ಯದಲ್ಲಿ ನೆರವಾದರು. ಜನಸೇವೆಯೇ ಜನಾರ್ದನಸೇವೆಯೆಂದು ದುಡಿದರು. ದೇಶದಲ್ಲೆಲ್ಲಾ ಸ್ವಾತಂತ್ರ್ಯದ ಕಹಳೆಯನ್ನು ಊದಿ,ಭಾರತೀಯ ಸಂಸ್ಕೃತಿಯ ಶ್ರೇಷ್ಠತೆಯನ್ನು ಎತ್ತಿ ತೋರಿಸಿ, ಅದರ ಉಳಿವಿಗಾಗಿ ಅಹರ್ನಿಶಿ ಪ್ರಯತ್ನಿಸಿದರು. ಹೀಗೆಯೇ ಪ್ರವಾಸ ಮಾಡುತ್ತಾ ಮಾಡುತ್ತಾ ಸ್ವಾಮೀಜಿಯವರು, ನಮ್ಮ ಪುಣ್ಯಭೂಮಿಯಾದ ಕರ್ನಾಟಕ ರಾಜ್ಯಕ್ಕೆ ಪದಾರ್ಪಣೆ ಮಾಡಿದರು. ಇಲ್ಲಿಯೂ ತಮ್ಮ ರಾಷ್ಟ್ರೀಯ ಕರ್ತವ್ಯಗಳೊಂದಿಗೆ, ಯೋಗವಿದ್ಯೆಗಳನ್ನೂ ಪ್ರದರ್ಶಿಸುತ್ತಾ, ಕೊನೆಗೆ, ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು ಸುಲೇನೂರು (ಸುಲೇಪುರ) ಎಂಬ ಗ್ರಾಮಕ್ಕೆ ಬಂದರು. ಅಲ್ಲಿನ ದತ್ತಾತ್ರಮದ ಯತಿಶ್ರೇಷ್ಠ ಶ್ರೀ ಶ್ರೀ ಶಂಕರಲಿಂಗ ಭಗವಾನ್‌ರವರ ಆದೇಶದಂತೆ ಅಲ್ಲಿಯೇ ಉಳಿದುಕೊಂಡು ಜನಸೇವೆಯನ್ನು ಮಾಡುತ್ತಾ ತಮ್ಮ ಕಾರ್ಯಸಿದ್ಧಿಗೆ ಒಂದು ಆಶ್ರಮವನ್ನು ಕಟ್ಟಬೇಕೆಂಬ ಯೋಜನೆ ಹಾಕಿಕೊಂಡರು. ಇದರ ಫಲವಾಗಿ ಈಗಿನ ಮಲ್ಲಾಡಿಹಳ್ಳಿಯಲ್ಲಿ ಒಂದು ಸಣ್ಣ ಕುಟೀರದಂತಹ ಆಶ್ರಮ ನಿರ್ಮಾಣಗೊಂಡಿತು.

ಮಲ್ಲಾಡಿಹಳ್ಳಿ, ಮಲ್ಲ ನಾಡಿದ ಹಳ್ಳಿಯ ರೂಪ ಎಂದು ಹೇಳಲಾಗಿದೆ. ಸ್ವಾಮೀಜಿಯವರು ಸ್ವತಃ ಮಲ್ಲಯುದ್ಧ ಪ್ರವೀಣರು ಹಾಗೂ ಅಪಾರ ನಾಡಿಪರೀಕ್ಷಾ ಜ್ಞಾನವುಳ್ಳವರು. ಅವರಿಗೆ ಸಹಜವಾಗಿಯೇ ಈ ಕ್ಷೇತ್ರ ಹಿಡಿಸಿತು. ಅಲ್ಲಿನ ನಿಸರ್ಗ ಇವರನ್ನು ಕೈಬೀಸಿ ಕರೆಯಿತು. ಸ್ವಾಮೀಜಿಯವರ ಅಂತಃಕರುಣ, ಈ ಆತ್ಮೀಯಕರೆಗೆ ಓಗೊಟ್ಟು ಮುಂದಿನ ಮಹಾ ಕಾರ್ಯಕ್ಕೆ ನಾಂದಿಯಾಗಿ ಇಲ್ಲಿಯೇ ನೆಲಸಲು ನಿರ್ಧರಿಸಿದರು. ಇದು ನಮ್ಮ ಕರ್ನಾಟಕದ ಸುದೈವ. ಆಗ್ಯೆ ಮಲ್ಲಾಡಿಹಳ್ಳಿ ಜೇಂಗಾಡಾಗಿದ್ದು ದುರ್ಗಮವಾಗಿದ್ದು ಕಳ್ಳಕಾಕರ ಭೀತಿಗೊಳಗಾಗಿತ್ತು. ಇಂತಹ ಒಂದು ದುರ್ಭರ ಸನ್ನಿವೇಶದಲ್ಲಿ ಶ್ರೀಸ್ವಾಮೀಜಿಯವರು ಇಲ್ಲಿಗೆ ಪಾದಾರ್ಪಣಮಾಡಿದರು. ತಮ್ಮ ನಿಷ್ಠಾವಂತ ಅನುಯಾಯಿಗಳಲ್ಲೊಬ್ಬರಾದ ಶ್ರೀ ಸೂರ್‌ದಾಸಜೀ ಅವರೊಂದಿಗೆ ಮಲ್ಲಾಡಿಹಳ್ಳಿಯ ಮನೆಮನೆಗೂ ಹೋಗಿ ಜನರಿಗೆ ಮಾನವೀಯತೆ, ಪ್ರೀತಿಪ್ರೇಮಗಳ ಎರಕ ಹೊಯ್ದು ನೈಜಮಾನವರನ್ನಾಗಿ ಮಾಡಿದರು. ಸ್ವತಃ ತಾವೇ ನಿಂತು, ಊರಿನ ಎಲ್ಲಾ ಮಲಿನಜಾಗಗಳನ್ನೂ ಗುಡಿಸಿ, ಸ್ವಚ್ಛಮಾಡಿ ಜನರಿಗೆ ಆದರ್ಶ ಪ್ರಾಯರಾದರು.

ಯೋಗಶಿಕ್ಷಣದ ಜೊತೆಗೆ ನಮ್ಮ ಭಾರತೀಯ ಸಂಸ್ಕೃತಿಯನ್ನೂ ಆಧ್ಯಾತ್ಮಿಕತೆಯನ್ನೂ ಬೋಧಿಸಿ, ಪ್ರತಿವರ್ಷವೂ ಉತ್ಸವಗಳು, ದೇವರ ಪೂಜೆಗಳು, ಅಖಂಡ ಭಜನೆಗಳನ್ನು ಏರ್ಪಡಿಸಿ ಜನರಲ್ಲಿ ಆಸ್ತಿಕ ಮನೋಭಾವನೆಯನ್ನು ಬೆಳೆಸಿದರು. ಸನ್ಮಾರ್ಗದಲ್ಲಿ ನಡೆಯುವಂತೆ ಮಾಡಿದರು. ಸ್ವಾಭಿಮಾನ ಬಿಟ್ಟು ಜೋಳಿಗೆ ಹಾಕಿಕೊಂಡು ಕಾಲು ನಡಿಗೆಯಲ್ಲೇ ಹಳ್ಳಿಯಿಂದ ದಿಳ್ಳಿಯವರೆಗೂ ಸಂಚರಿಸಿ ನಿರಾಡಂಬರದಿಂದ ಸಾಮಾನ್ಯ ಜನತೆಯೊಂದಿಗೆ ಬೆರೆತು ಮನೆಮನೆಗೂ ಹೋಗಿ ಭಿಕ್ಷೆಯ ರೂಪದಲ್ಲಿ ಧನಧಾನ್ಯಗಳನ್ನು ಸಂಗ್ರಹಿಸಿ ಆ ಒಂದು ಉತ್ಪತ್ತಿಯಿಂದ ಅನಾಥಸೇವಾಶ್ರಮ ಎಂಬ ಸಂಸ್ಥೆಯನ್ನು ಕಟ್ಟಿದರು. ಕೇವಲ ಮಾನಾಪಮಾನಗಳನ್ನೂ ಸುಖದುಃಖ

ಗಳನ್ನೂ, ನಿಂದಾಸ್ತುತಿಗಳನ್ನೂ ಒಂದೇ ಸಮವೆಂದು ಭಾವಿಸಿ, ಸಾತ್ವಿಕ ಆಹಾರವನ್ನು ಸೇವಿಸುತ್ತಾ ಜನಸೇವೆಯನ್ನು ಮಾಡುತ್ತಾ ಬಂದರು. ಸ್ವಾಮಿಜಿಯವರ ಸೇವಾತತ್ಪರತೆ, ಕಾರ್ಯದಕ್ಷತೆ, ಶಿಸ್ತು, ಸಂಯಮ, ಸದ್ವಿನಿಯೋಗ, ನಿಸ್ವಾರ್ಥತೆ, ದೀನದಲಿತರ ಬಗೆಗಿನ ಅಂತಃಕರುಣ ಇವುಗಳೆಲ್ಲವನ್ನೂ ಅರ್ಥಮಾಡಿಕೊಂಡ ಜನತೆ, ಆಶ್ರಮಕ್ಕೆ ಹೆಚ್ಚುಹೆಚ್ಚು ಧನ, ಧಾನ್ಯಗಳನ್ನು ಕೊಡುತ್ತಾ ಪ್ರೋತ್ಸಾಹಿಸಿದರು. ಕೇವಲ ಸಣ್ಣ ಕುಟೀರದಲ್ಲಿನ ಒಬ್ಬ ವ್ಯಕ್ತಿಯಿಂದ ಇಂದು ಕಾಣುವ ಬೃಹತ್ ಪ್ರಮಾಣದ ಅನಾಥಸೇವಾಶ್ರಮ ಬೆಳಗುತ್ತಿದೆ ಎಂದರೆ ಸ್ವಾಮಿಜಿಯವರ ಶ್ರೇಷ್ಠತೆ, ಅವರ ಮಹಾನ್‌ಶಕ್ತಿ ಎಷ್ಟಿದೆ ಎಂಬುದು ಪ್ರತಿಯೊಬ್ಬರಿಗೂ ಅರಿವಾದೀತು.!

ಆರ್ಯಸಂಸ್ಕೃತಿಯ ಮೂಲತಳಹದಿಯಮೇಲೆ ಲೌಕಿಕ ಪಾರಮಾರ್ಥಿಕಗಳೆರಡರ ಹೆಗ್ಗುರಿಯನ್ನು ಸಾಧಿಸಿ, ಮಾನವಜೀವನವನ್ನು ಕೃತಾರ್ಥವನ್ನಾಗಿಸುವ ಸದುದ್ದೇಶದಿಂದಲೇ ಈ ಸಂಸ್ಥೆಯು ಪ್ರಾರಂಭಿಸಲ್ಪಟ್ಟಿದೆ. ಇಲ್ಲಿ ದೈಹಿಕ, ಮಾನಸಿಕ, ನೈತಿಕ ಮತ್ತು ಆಧ್ಯಾತ್ಮಿಕ ಪ್ರಗತಿಗೆ ಆವಶ್ಯಕವಾದ ಶಿಕ್ಷಣಗಳನ್ನು ಕೊಡಲಾಗುತ್ತಿದೆ. ಮಲ್ಲಾಡಿಹಳ್ಳಿಯು ಈ ಸೇವಾಶ್ರಮದ ಕೇಂದ್ರವಾದರೂ, ವಿಶಾಲವಿಶ್ವವೇ ಇದರ ಕಾರ್ಯಕ್ಷೇತ್ರ. ವಿಶ್ವಭ್ರಾತೃತ್ವ, ವಿಶ್ವಪ್ರೇಮ ಮತ್ತು ವಿಶ್ವಸೇವೆಯೇ ಇದರ ಅಂತರಾಳದ ಹೆಬ್ಬಯಕೆ.

ಇಲ್ಲಿ ಆಯುರ್ವೇದ ಚಿಕಿತ್ಸಾಲಯ, ರುಗ್ಣಾಲಯ, ವೃತ್ತಿ ಶಿಕ್ಷಣ ಶಾಲೆ, ವ್ಯಾಯಾಮ ಶಿಕ್ಷಣ ಶಾಲೆ, ವಿವಿಧೋದ್ದೇಶ ಪ್ರೌಢಶಾಲೆ, ಸರ್ವಸೇವಾಬೋಧಕ ಶಿಕ್ಷಣಾಲಯ, ಶಿಶುವಿಹಾರ ಮತ್ತು ಮಹಿಳಾಸಮಾಜ ಮೊದಲಾದವುಗಳಿದ್ದು ಅವು ತಮ್ಮತಮ್ಮ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಿವೆ. ಇವಲ್ಲದೆ ಇಲ್ಲಿ ವಿದ್ಯಾರ್ಥಿವಸತಿಗೃಹ, ವ್ಯಾಯಾಮಶಾಲೆ, ಉಪಾಧ್ಯಾಯರ ವಸತಿಗೃಹ, ಗೋಶಾಲೆ, ಧರ್ಮಶಾಲೆ, ಸಹಕಾರಸಂಘ ಅತಿಥಿಗೃಹ ಇದ್ದು ಈ ಆಶ್ರಮದ ಅಭಿವೃದ್ಧಿಗೆ ಕೀರ್ತಿಕಳಶವಾಗಿವೆ. ಇವಲ್ಲದೆ ಪೂಜ್ಯ ಸ್ವಾಮಿಜಿಯವರು ಯೋಜಿಸಿಕೊಂಡಿರುವ, ಆಗಬೇಕಾಗಿರುವ ಇನ್ನೂ ಅನೇಕ ಕಾರ್ಯಗಳಿವೆ. ಇವೆಲ್ಲವೂ ಶ್ರೀಮಂತರ, ದಾನಿಗಳ, ಉದಾರಿಗಳ, ಸಮಗ್ರಜನತೆಯ ಹಾಗೂ ನಮ್ಮ ಘನ ಸರ್ಕಾರದ ನೆರವಿನ ಮೇಲೆ ಅವಲಂಬಿಸಿವೆ. ಮಹಾಸ್ವಾಮಿಗಳವರೇ ಒಂದೆಡೆ ಹೀಗೆ ಹೇಳಿದ್ದಾರೆ "ನಾನೊಂದು ಸಮುದ್ರದಲ್ಲಿ ತೇಲಿಬಿಟ್ಟ ನೌಕೆ, ಅವನ ಇಚ್ಛಾಮಾರುತ ಎತ್ತ ಒಯ್ಯುವುದೋ ಅತ್ತ ಈ ನೌಕೆ ಸಾಗುತ್ತದೆ"-ಅಂದಮೇಲೆ ಭಗವಂತನ ಕೃಪಕಟಾಕ್ಷದೊಂದಿಗೆ, ಜನತೆಯೂ ಸರಕಾರವೂ, ಈ ಮಹಾನ್ ಸಂಸ್ಥೆಯ ಮಹಾ ಉದ್ದಿಶ್ಯವನ್ನು ಅರಿತು, ಮುಂದೆ ಬರಬೇಕು, ಸಹಕಾರ ನೀಡಬೇಕು. ಆಗ ಮಾತ್ರ ಈ ಸಂಸ್ಥೆಯು ಕರ್ನಾಟಕದ ಮಲ್ಲಾಡಿಹಳ್ಳಿಯಲ್ಲಿ ಮಾತ್ರವಲ್ಲದೆ, ಇಡೀ ಭಾರತದಲ್ಲಿ ಒಂದು ಮಾದರಿ ಸಂಸ್ಥೆಯಾಗಿ ಬೆಳೆದೀತು, ಬೆಳಗೀತು.

ದಯಾಮಯನಾದ ಭಗವಂತನ ಕೃಪಾಕಟಾಕ್ಷದಿಂದ, ಹಾಗೂ ನಮ್ಮ ಕನ್ನಡನಾಡಿನ ಪುಣ್ಯಪ್ರಭಾವದಿಂದ. ಲೋಕಕಲ್ಯಾಣಾರ್ಥವಾಗಿ ತಲೆಯೆತ್ತಿ ನಿಂತಿರುವ ಈ ಅನಾಥ ಸೇವಾಶ್ರಮದ ಅಭಿವೃದ್ಧಿಕಾರ್ಯಗಳು ಶೀಘ್ರವಾಗಿ ನೆರವೇರಲಿ, ಈ ಸಂಸ್ಥೆಯ ಜನಕರಾದ ಪೂಜ್ಯ ಶ್ರೀ ರಾಘವೇಂದ್ರಸ್ವಾಮಿಗಳವರಿಗೆ ಭಗವಂತನು ಆಯುರಾರೋಗ್ಯಭಾಗ್ಯಾದಿಗಳನ್ನು ದಯಪಾಲಿಸಿ, ಈ ನಿರ್ಮಾಣ ಕಾರ್ಯಗಳಲ್ಲಿ ಅವರಿಗೆ ಭೀಮಬಲವನ್ನೀಯಲಿ, ಅವರ ಸರ್ವಾಭಿಲಾಷೆಗಳು ಈಡೇರಲಿ, ಅವರು ನಮ್ಮ ಪವಿತ್ರ ಭಾರತದ ಮಹಾನ್ ವ್ಯಕ್ತಿಗಳಾದ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಮಹಾತ್ಮಾಗಾಂಧಿಯವರಂತಹ ಪುಣ್ಯಪುರುಷರ ಶ್ರೇಣಿಯಲ್ಲಿ ನಿಲ್ಲಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ರಾ. ಚಂದ್ರಶೇಖರಯ್ಯ

ಶ್ರೀ ತಿರುಕ–ಒಂದು ಯೋಚನಾಲಹರಿ

ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳನ್ನು ನೆನೆದಾಗಲೆಲ್ಲ ನನ್ನ ಮನಸ್ಸಿನಲ್ಲಿ ಹಲವಾರು ಆಲೋಚನಾ ತರಂಗಗಳು ಬುದ್ಬುದವಾಗಿ ಮೇಲೇಳುತ್ತವೆ. ಒಂದೊಂದು ಕ್ಷೇತ್ರದಲ್ಲಿಯೂ ಅವರು ಸಾಧಿಸಿರುವ ಮಹತ್ತ್ವವನ್ನು ಕಂಡು ರೋಮಾಂಚವಾಗುತ್ತದೆ. ಕೇವಲ ಲೌಕಿಕಕ್ಕೇ ಮೀಸಲಾದವನಾಗಿದ್ದರೆ ಹೇಗೆ ನಡೆದುಕೊಳ್ಳಬಹುದಾಗಿತ್ತು ಎಂಬ ಆಲೋಚನೆ ನನ್ನ ತಲೆಯಲ್ಲಿ ಆಗಾಗ ಸಂಚರಿಸುತ್ತದೆ. ಹೀಗೆ ಸಂಚರಿಸಿದ ಭಾವನೆಗಳಿಗೆ ಒಂದು ರೂಪವನ್ನು ಕೊಡಲು ನಾನಿಲ್ಲಿ ಯತ್ನಿಸಿದ್ದೇನೆ.

ಶಿಕ್ಷಣ ಕ್ಷೇತ್ರದಲ್ಲಿ ವಿಶಿಷ್ಟವಾದ ಒಂದು ಪ್ರಯೋಗವನ್ನು ಮಾಡಿ ಪ್ರಾಚೀನಕಾಲದ ಗುರುಕುಲದಂತೆ ಶಿಷ್ಯರಿಗೆ ಆಶನ ವಸನ ವಸತಿಗಳನ್ನು ಧರ್ಮಾರ್ಥವಾಗಿ ನೀಡಿ ಅಶಿಸ್ತು, ಅವಿದ್ಯೆ, ಅಜ್ಞಾನ, ಅಸಂಸ್ಕೃತಿಯಿಂದ ಕೂಡಿ ಬಂದ ವಿದ್ಯಾರ್ಥಿಗಳಲ್ಲಿ ಅವರ 'ಅ' ಕಾರಗಳನ್ನೆಲ್ಲ ಹೋಗಲಾಡಿಸಿ ದೇಶದ ಆದರ್ಶ ಪ್ರಜೆಗಳನ್ನಾಗಿ ಮಾಡುತ್ತಿರುವ —ಸುಮಾರು ಅರ್ಧ ಶತಮಾನದಿಂದ ಹೀಗೆ ದುಡಿಯುತ್ತಿರುವ—ಈ ಸ್ವಾಮಿಗಳಿಗೆ ತಮ್ಮ ಯೋಗ್ಯತಾ ಪ್ರದರ್ಶನವನ್ನು ಲೋಕಕ್ಕೆ ಮಾಡುವಂತಹ ಒಂದು ಪ್ರಶಸ್ತಿ ಇರಬೇಡವೇ ?

ಪ್ರತಿ ಸೋಮವಾರ ಬೆಳಗಿನಝಾವ ಆಶ್ರಮದಲ್ಲಿ ಜಾತ್ರೆ ಸೇರುವುದಲ್ಲ!–ಆನೇಕ ಬಗೆಯ ರೋಗಿಗಳ ಜಾತ್ರೆ ! ಆನುವಂಶಿಕ, ಸಾಂಕ್ರಾಮಿಕ, ವ್ಯಕ್ತಿಗತ ಸಕಲ ರೋಗಗಳನ್ನೂ ಸುಲಭವಾಗಿ, ಹೆಚ್ಚು ಪ್ರಯಾಸವಿಲ್ಲದೆ, ಕಾಸಿನ ಖರ್ಚಿಲ್ಲದೆ ವಾಸಿಮಾಡುತ್ತಿರುವರಲ್ಲ ! ಈ ರೋಗಿಗಳಿಗೆ ಉಚಿತ ಚಿಕಿತ್ಸೆಯ ಜೊತೆಗೆ ಊಟೋಪಚಾರಗಳು ಬೇರೆ! ತೀರ ಬಡವರಾದವರಿಗೆ ಹೋಗಿಬರುವ ವೆಚ್ಚ ಕೂಡಾ ನೀಡುತ್ತಾರೆ. ಇಷ್ಟೆಲ್ಲ ಮಾಡಿ ಅವರ ಸ್ವಂತಕ್ಕೆ ಆದ ಪ್ರಯೋಜನವೇನು ?

ಈ ಎಂಭತ್ತೈದು ವರ್ಷ ಪ್ರಾಯದ ಯುವಕನ ಶಾರೀರಕ್ಕೆ ಯಾವ ಮೈಕ್ರೋಫೋನೂ ಬೇಕಿಲ್ಲ. ಸಾವಿರಾರು ಜನ ಶ್ರೋತೃಗಳಿರುವ ಸಭೆಯಲ್ಲಿ ಸ್ಪಷ್ಟವಾಗಿ ಎಲ್ಲರಿಗೂ ಕೇಳಿಸುವಂತೆ ತಾವೇ ರಚಿಸಿದ ಹಾಡುಗಳನ್ನು ಭಜನೆ ಮಾಡುತ್ತಾರಲ್ಲ, ದಿನದಿನವೂ ಸಂಜೆಯಲ್ಲಿ. ಉತ್ತರ ಅಥವಾ ದಕ್ಷಿಣದ ಎಂತಹ ಸಂಗೀತ ವಿದ್ವಾಂಸನೂ ಅಸೂಯೆ ಪಡುವಂತೆ ಭಕ್ತಿ ತನ್ಮಯತೆಯಿಂದ ಹಾಡಿ ಕೇಳುವವರ ಮನಸ್ಸನ್ನು ಭಾವನಾಮಯವಾಗಿ ಮಾಡುತ್ತಾರಲ್ಲ. ಇದರಿಂದ ಇವರಿಗೆ ಬಂದ ಲಾಭವೇನು ?

ಪ್ರತಿ ವರ್ಷವೂ ಎರಡು ಸಲ ಆಶ್ರಮದಲ್ಲಿ ಮಹೋತ್ಸವಗಳನ್ನು ಮಾಡುತ್ತಾರೆ. ಹಲವಾರು ಜನ ವಿದ್ವಾಂಸರನ್ನು ಅಥವಾ ಕಲಾವಿದರನ್ನು ಕರೆಸಿ, ಪ್ರಶಸ್ತಿಗಳನ್ನು ನೀಡುತ್ತಾರಲ್ಲಾ ! ಈ ಸ್ವಾಮಿಗಳಿಗೇಕೆ ಪ್ರಶಸ್ತಿಗಳ ಮೇಲೆ ಅಷ್ಟು ದ್ವೇಷ ? ರಾಜ್ಯ ಸರ್ಕಾರ ನೀಡುವ ಪ್ರಶಸ್ತಿಗಳನ್ನೆಲ್ಲಾ ತಿರಸ್ಕರಿಸುವರಲ್ಲಾ, ಐವತ್ತಕ್ಕೂ ಮಿಕ್ಕಿ

ಕಾವ್ಯರಚನೆ ಮಾಡಿರುವ ಈತನಿಗೆ ಸನ್ಮಾನವನ್ನು ಮಾಡುವ ಜನ ಇಲ್ಲವೇ ? ಅದೇಕೆ ಈತನಿಗೆ ಅವುಗಳಲ್ಲಿ ಅಷ್ಟು ವಿರಾಗ ?

ಅಲ್ಲಾ, ಈಗ ಕೈಮೇಲಿರೋ ಕೆಲಸ ಈತನಿಗೆ ಸಾಲದೆ ? ನಿದ್ದೆಗೂ ಆಹಾರಕ್ಕೂ ಅವಕಾಶವಿಲ್ಲದಂತೆ ಅರವತ್ತು ಘಳಿಗೆಗಳ ದುಡಿಮೆ. ಲೋಕದಲ್ಲಿರೋ ಎಲ್ಲಾ ಸಮಸ್ಯೆಗಳನ್ನೂ ತಮ್ಮ ತಲೆಗೇ ಕಟ್ಟಿಕೊಳ್ಳುವುದು ಯಾಕೆ ? ಹಠಯೋಗ ತೊಗೋತೀರಾ, ರಾಜಯೋಗ ತೊಗೋತೀರಾ, ಕರ್ಮಯೋಗ ತೊಗೋತೀರಾ, ಯೋಗಾಸನ ತೊಗೋತೀರಾ–ಎಲ್ಲದರಲ್ಲಿಯೂ ಈತ ನಿಷ್ಣಾತ. ಇದೇ ಮನುಷ್ಯ ಹೊಲ ತೋಟಗಳಲ್ಲಿ ದುಡಿಯೋದು, ಆಶ್ರಮವನ್ನೆಲ್ಲಾ ಸ್ವಚ್ಛವಾಗಿಡುವುದು, ಬಂದು ಹೋಗುವ ಅತಿಥಿ ಅಭ್ಯಾಗತರ ಸಾಮಾನು ಹೊರುವುದು, ಶಿಶುವಿಹಾರದ ಮಕ್ಕಳೊಡನೆ ಆಟವಾಡುವುದು, ದೊಡ್ಡವರಿಗೆ ಮಲ್ಲಯುದ್ಧವನ್ನು ಕಲಿಸುವುದು, ಅಳುತ್ತ ಬಂದವರನ್ನು ನಗುತ್ತ ಕಳುಹಿಸುವುದು, ಆಶ್ರಮದ ಆಗು ಹೋಗುಗಳನ್ನು ನೋಡಿಕೊಳ್ಳುವುದು ಇನ್ನೂ ಎಷ್ಟೋ ಎಷ್ಟೋ ಯಾವಾಗಲೂ ಎಲ್ಲೆಲ್ಲೂ ದುಡಿ ದುಡಿ ದುಡಿ. ಇಷ್ಟೆಲ್ಲಾ ದುಡಿಮೆ ಏಕೆ ಬೇಕು ? ಯಾವುದೊಂದು ಪ್ರತ್ಯಾಶೆಯೂ ಇಲ್ಲದೆ ಮಾಡುವ ಈ ನಿಷ್ಕಾಮ ಕರ್ಮಕ್ಕೆ ಏನು ಹೇಳುವುದು ? ಕರ್ಮ, ಅದಕ್ಕೆ ತಕ್ಕ ಫಲ—ಎನ್ನುತ್ತಾರೆ. ಈತ ಕರ್ಮಕ್ಕೆ ಫಲವೇ ಬೇಡವೆನ್ನುತ್ತಾರಲ್ಲಾ ? ಚಡ್ಡಿ ಬನೀನುಗಳನ್ನು ಧರಿಸುವುದಕ್ಕೆ ಬದಲಾಗಿ ಜಬರ್ದಸ್ತ ಜರತಾರಿ ಜಗದ್ಗುರುಗಳಂತೆ ಜರಿ ಪೀತಾಂಬರ ಉಟ್ಟು ಚಿನ್ನದ ಸರ, ಕರೀ ರಿಸ್ಟ್‌ವಾಚ್ ಇತ್ಯಾದಿಗಳನ್ನು ಧರಿಸಿ ಜಗತ್ತಿನಲ್ಲೆಲ್ಲಾ ದೊಡ್ಡವರೆಂದು ಹೊಗಳುಭಟ್ಟರನ್ನಿಟ್ಟುಕೊಂಡು ಪ್ರಚಾರ ಮಾಡುತ್ತಾ ಹೋದರೆ ಕೂತ ಕಡೆಯೇ ಲಕ್ಷಾಂತರ ಗಿಟ್ಟಿಸಬಹುದಲ್ಲ ? ಖಾದಿ ಚಡ್ಡಿ ಬನೀನುಗಳಿಗೂ ಬಿಡಿಸಲಾಗದ ಗಂಟು ನಂಟು ಯಾಕಿರಬೇಕು ?

ನನಗೆ ಒಂದೇ ಒಂದು ಸಮಾಧಾನ. ನಾವೆಲ್ಲ ಬಿರುದುಗಳ ಸರಮಾಲೆಗೆ ಆಸೆ ಪಟ್ಟರೆ ಸ್ವಾಮೀಜಿ ಒಂದೇ ಒಂದು ಬಿರುದು ತಗುಲಿ ಹಾಕಿಕೊಂಡಿದ್ದಾರೆ–'ತಿರುಕ' ಅಂತ. ತುಂಬ ಅನ್ವರ್ಥವಾಗಿರುವ ಬಿರುದು ಅದು. ಶಿವನ ತರುವಾಯ ಆ ಬಿರುದು ಧರಿಸಿದ ಮಹಾನುಭಾವ ಈ ಮಾನವದೇವನೊಬ್ಬನೇ.

ನನ್ನ ವಿಚಾರಲಹರಿ ಹೀಗೆ ಹರಿಯುತ್ತಿರುವಾಗ 'ನಮಸ್ಕಾರ ಗುರುಗಳೇ' ಎಂದು ತುಂಟುನಗೆ ಚೆಲ್ಲುತ್ತಾ ಶ್ರೀ ರಾಘವೇಂದ್ರ ಸ್ವಾಮಿಗಳು ಪ್ರತ್ಯಕ್ಷರಾದರು. ಅರೆ ಎಚ್ಚರದಲ್ಲಿದ್ದ ನಾನು ಕಾಲಿಗೆ ಸ್ಪ್ರಿಂಗ್ ಕೊಟ್ಟಂತೆ ಧಿಗ್ಗನೆ ಎದ್ದು ಅವರ ಪಾದದ್ವಯಗಳ ಮೇಲೆ ದೀರ್ಘದಂಡ ಪ್ರಣಾಮವನ್ನು ಸಲ್ಲಿಸಿದೆ. ಆ ಕೃಪಾಪೂರಿತ ಹಸನ್ಮುಖ, ಆ ಪಾದಧೂಳಿಯ ಪ್ರಭಾವ, ಅವರ ಅಮೃತ ಹಸ್ತಸ್ಪರ್ಶ–ಇವುಗಳಿಂದಾಗಿ ನನ್ನಲ್ಲಿ ಮೂಡಿ ಬೆಳೆಯುತ್ತಿದ್ದ ಅಜ್ಞಾನವು ಮಾಯವಾಗಿ ನಾನು ಮಾಮೂಲಿ ಚಂದ್ರಶೇಖರಯ್ಯನಾದೆ. 'ಏಕಮೇವಾ ದ್ವಿತೀಯ'ರಾದ ಶ್ರೀ ಶ್ರೀಯವರಿಗೆ ನನ್ನ ಅನಂತ ಪ್ರಣಾಮಗಳು.

ಇದು ದೇಶದ ವಿದ್ಯಾಭಿಮಾನಿಗಳಿಗೆಲ್ಲಾ ಒಂದು ಯಾತ್ರಾಸ್ಥಳವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

— ನಾ. ಕಸ್ತೂರಿ

ಎ. ಮೈಲಾರಿರಾವ್

"ರಾಜಕೀಯಕ್ಕೆ ಪ್ರವೇಶವಿಲ್ಲ"

1951ನೇ ಇಸವಿ. ನನಗೆ ಮಲ್ಲಾಡಿಹಳ್ಳಿಯ ಪರಿಚಯವಾದದ್ದು ಆ ವರ್ಷ. 26 ಮೈಲಿ ದೂರದ ಚಿತ್ರದುರ್ಗದಲ್ಲಿದ್ದ ನಾನು, ಶ್ರೀ ಸ್ವಾಮಿಗಳು ಆ ಕುಗ್ರಾಮದಲ್ಲಿ ಸ್ಥಾಪಿಸಿ ನಡೆಸುತ್ತಿದ್ದ ಶಿಕ್ಷಣಸಂಸ್ಥೆಯ ವಿಷಯವಾಗಿ ಜನರು ಆಡುತ್ತಿದ್ದ ಪ್ರಶಂಸೆಯ ಮಾತುಗಳನ್ನು ಕೇಳುತ್ತಲೇ ಇದ್ದೆ. ಶಿಕ್ಷಣರಂಗದಲ್ಲೇ ಸುಮಾರು ಇಪ್ಪತ್ತೈದು ವರ್ಷ ದುಡಿದು ಸಾರ್ಥಕಶಿಕ್ಷಣ ಹೇಗಿರಬೇಕೆಂಬುದನ್ನು ಕೊಂಚಮಟ್ಟಿಗೆ ತಿಳಿದುಕೊಂಡಿದ್ದ ನನಗೆ ಆ ಆಶ್ರಮವನ್ನು ನೋಡಬೇಕೆಂಬ ಆಸೆ ದಿನದಿನಕ್ಕೆ ಬೆಳೆಯುತ್ತ ಬಂತು.

ಆಗ ನನ್ನ ಮನಸ್ಸನ್ನು ಕಾಡುತ್ತಿದ್ದ ಒಂದು ದೊಡ್ಡ ಶಿಕ್ಷಣಸಮಸ್ಯೆಗೆ ಪರಿಹಾರವನ್ನು ಈ ಸ್ವಾಮಿಜಿಯವರು ಕಂಡುಹಿಡಿದಿದ್ದಾರೆಯೇ ಎಂಬುದನ್ನು ತಿಳಿಯಲು, ನಾನು ಆ ಆಶ್ರಮವನ್ನು ನೋಡಲು ಕಾತುರನಾಗಿದ್ದೆದ್ದು. 1947ಕ್ಕೆ ಪೂರ್ವ, ನಾಡಿನ ಸ್ವಾತಂತ್ರ್ಯ ಚಳುವಳಿಯಲ್ಲಿ ಹಿರಿಯರು ವಿದ್ಯಾರ್ಥಿತರುಣರ ಉತ್ಸಾಹ, ಧೈರ್ಯ, ತ್ಯಾಗಶೀಲತೆಗಳನ್ನು ಬಹುವಾಗಿ ಉಪಯೋಗಿಸಿಕೊಂಡರು ; ಸ್ವಾತಂತ್ರ್ಯ ಸಂಪಾದನೆಯಲ್ಲಿ ತರುಣರ ಪಾತ್ರ ಗಮನಾರ್ಹವಾಗಿತ್ತು. ಸ್ವಾತಂತ್ರ್ಯ ದೊರಕಿದ ಮೇಲೆ ಹಿರಿಯರ ಗಮನ ರಾಜಕೀಯ ಪ್ರಭಾವ, ಹಣ, ಗೌರವಸ್ಥಾನಗಳನ್ನು ಸಂಪಾದಿಸುವದರ ಕಡೆ ಹರಿಯಿತು. ತರುಣರ ಏಳಿಗೆ ಅಭಿವೃದ್ಧಿಗಳ ವಿಷಯ ಅವರು ಯೋಚಿಸಲಿಲ್ಲ. ಕಾನೂನುಭಂಗ ಮಾಡುವುದನ್ನು ಕಲಿತು ಅದನ್ನು ಯಶಸ್ವಿಯಾಗಿ ನೆರವೇರಿಸಿದ್ದ ತರುಣರಲ್ಲನೇಕರು ಸ್ವತಂತ್ರ ಭಾರತದಲ್ಲೂ ಕಾನೂನುಭಂಗಮಾಡುವ ಹವ್ಯಾಸದಲ್ಲಿ ತೊಡಗಿದರು. ಎರಡನೇ ಮಹಾಯುದ್ಧಕಾಲದಲ್ಲಿ ಮತ್ತು ಅದಕ್ಕೆ ಮುಂದಿನ ರೇಷನ್ ಕಾಲದಲ್ಲಿ ಹುಟ್ಟಿ ದೇಶದಾದ್ಯಂತ ವ್ಯಾಪಿಸಿದ ಕಾಳಸಂತೆ ಮೊದಲಾದ ದುರ್ವ್ಯಾಪಾರಗಳು ಹಿರಿಯರ ಮನಸ್ಸನ್ನೇ ಕೆಡಿಸಿ ಅವರನ್ನು ನೀತಿನಿಷ್ಠೆಗಳ, ಪ್ರಾಮಾಣಿಕತೆಯ ಬಂಧನಗಳನ್ನು ಕಿತ್ತೊಗೆದು ಸ್ವಾರ್ಥ ಮತ್ತು ಅನೈತಿಕ ಕಾರ್ಯಗಳಿಗೆ ತೊಡಗಿಸಿದಾಗ, ಕಿರಿಯರು ಮಾತ್ರ ಋಜುಮಾರ್ಗದಲ್ಲೇ ಉಳಿಯಬೇಕೆನ್ನುವುದು, ಅವರು ಶಿಸ್ತು ಪಾಲಿಸಬೇಕೆನ್ನುವುದೂ ವಿವೇಕಿಗಳ ಮಾತಲ್ಲ. ಸಮಾಜದ ನೈತಿಕ ಅಸ್ತಿಭಾರವೇ ಕುಸಿದಿದ್ದಾಗ, ತರುಣರು ಮಾತ್ರ ವಿಧೇಯರಾಗಿರಬೇಕೆನ್ನುವುದು ಸಾಧುವೆ? ಇನ್ನೂ ಅನೇಕ, ಇತ್ತೀಚೆಗೆ ಹುಟ್ಟಿಕೊಂಡಿರುವ, ಹಾನಿಕಾರಕ ಶಕ್ತಿಗಳು, ನಮ್ಮ ತರುಣರ ಮೇಲೆ ಪ್ರಭಾವ ಬೀರಿವೆ, ಅವರು ಅಂಕೆತಪ್ಪುವಂತೆ ಮಾಡಿವೆ. ಇಂದಿನ ತರುಣರು ನಾಳೆಯ ಪ್ರಜೆಗಳು, ನಾಡಿನ ಅಭ್ಯುದಯವನ್ನು ಸಾಧಿಸಬೇಕಾದವರು. ಅವರ ಜೀವನ ಇಂದಿನಂತೆಯೇ ಮುಂದುವರೆದರೆ ಈಗಲೇ ಸಾಕಾದಷ್ಟು ಹದಗೆಟ್ಟಿರುವ ದೇಶದ ಪರಿಸ್ಥಿತಿ—ಮುಂದೆ?

ಈ ಯೋಚನೆ ಪ್ರಾರಂಭವಾದದ್ದು, ಸ್ವಾತಂತ್ರ್ಯ ದೊರಕಿದ ಎರಡು ಮೂರು ವರ್ಷಗಳಲ್ಲೇ. ಶ್ರೀ ಸ್ವಾಮಿಜಿಯವರು ಈ ವಿಷಯದಲ್ಲಿ ಎಂತಹ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ ಎಂಬುವನ್ನು ನೋಡಬೇಕೆಂಬ

ಆಸೆ, ನನಗೆ. ಬೆಳಗ್ಗೆ ಸುಮಾರು ಒಂಭತ್ತು ಗಂಟೆಗೆ ಮಲ್ಲಾಡಿಹಳ್ಳಿಯನ್ನು ತಲುಪಿದೆ. ಊರೊಳಗೆ ಹೋದರೆ, ಒಂದೂ ಸರಿಯಾದ ರಸ್ತೆ ಇಲ್ಲ. ಊರಿನ ಪಶ್ಚಿಮದ ಅಂಚಿನಲ್ಲಿದ್ದ ಆಶ್ರಮದ ಹತ್ತಿರ ಹೋದಾಗ ಮೊದಲು ಕಂಡುಬಂದದ್ದು ಒಂದು ಹೆಬ್ಬಾಗಿಲು, ಮತ್ತು ದಪ್ಪಕ್ಷರಗಳಲ್ಲಿ "ಅನಾಥಸೇವಾಶ್ರಮ" ಎಂದು ಬರೆದಿದ್ದ ದೊಡ್ಡ ಬೋರ್ಡು. ಇನ್ನೂ ಕೊಂಚ ಹತ್ತಿರ ಹೋದಾಗ "ರಾಜಕೀಯಕ್ಕೆ ಪ್ರವೇಶವಿಲ್ಲ" ಎಂದು ತಿಳಿಸುವ ಇನ್ನೊಂದು ಹಲಗೆಯನ್ನು ತಗಲುಹಾಕಿದ್ದರು. ಇದು ನನ್ನ ಕುತೂಹಲವನ್ನು ಕೆರಳಿಸಿತು; ವಿಸ್ಮಯಗೊಂಡು ಅದನ್ನೇ ನೋಡುತ್ತ ನಿಂತೆ. ಇದೊಂದು ವಿದ್ಯಾಸಂಸ್ಥೆ; ಇಲ್ಲಿ ನಿಮ್ಮ ಬಾಲಕ ಬಾಲಕಿಯರನ್ನು ಮುಂದೆ ಅವರು ತಾಯ್ನಾಡಿನ ಸತ್ಪ್ರಜೆಗಳಾಗುವಂತೆ ರೂಪಿಸಬೇಕಾಗಿದೆ. ಅವರ ಗಮನವೆಲ್ಲ ವಿದ್ಯಾರ್ಜನೆ, ಭಾರತೀಯ ಸಂಸ್ಕೃತಿಗೆ ಅನುಗುಣವಾದ ನೀತಿನಿಯಮಗಳನ್ನು ಕಲಿಯುವುದು, ಇದನ್ನು ಕಲಿಯಲು ಆವಶ್ಯಕವಾದ ಶಿಕ್ಷಣ, ಇಷ್ಟಕ್ಕೆ ಸೀಮಿತವಾಗಿರಬೇಕು. ತರುಣರು ರಾಜಕೀಯದಲ್ಲಿ ಸಕ್ರಿಯವಾಗಿ ಭಾಗವಹಿಸಿ ರಾಷ್ಟ್ರಕ್ಕಾಗಿ ಸರ್ವವನ್ನೂ ತ್ಯಾಗಮಾಡಬೇಕಾಗಿದ್ದ ಕಾಲ 1947ರಲ್ಲೇ ಕೊನೆಗೊಂಡಿತು. ಇನ್ನು ಅವರಿಂದ ಆಗಬೇಕಾದ್ದು ರಾಷ್ಟ್ರ ನಿರ್ಮಾಣಕಾರ್ಯ; ಇದಕ್ಕೆ ಅವರನ್ನು ಸಿದ್ಧಗೊಳಿಸಲು ಮಾಡಬೇಕಾದ್ದೆಲ್ಲವನ್ನೂ ಇಲ್ಲಿ ಮಾಡುವ ಪ್ರಯತ್ನ ನಡೆದಿದೆ. ಆದ್ದರಿಂದ ಇಲ್ಲಿಗೆ ಬರುವವರು ಯಾರೂ ಈ ಪವಿತ್ರ ಸಂಸ್ಥೆಗೆ ರಾಜಕೀಯದ ಸೋಂಕನ್ನು ಹಚ್ಚುವ ಪ್ರಯತ್ನಮಾಡಬೇಡಿ—ಎಂದು ಕಳಕಳಿಯಿಂದ ಕೇಳಿಕೊಳ್ಳುವಂತಿತ್ತು, ಆ "ರಾಜಕೀಯಕ್ಕೆ ಪ್ರವೇಶವಿಲ್ಲ". ಸ್ವಾತಂತ್ರ್ಯ ತರುವಾಯಕಾಲದ ಬೃಹತ್‌ರಾಷ್ಟ್ರೀಯ ಪ್ರಶ್ನೆಗಳಲ್ಲೊಂದಾದ ಶಿಕ್ಷಣದ ಪ್ರಾಮುಖ್ಯತೆಯನ್ನು ಅರಿತು ಅದು ಯಶಸ್ವಿಯಾಗಿ ಮುಂದುವರಿಯುವುದಕ್ಕೆ ಅತ್ಯಾವಶ್ಯಕವಾಗಿ ಇರಬೇಕಾದ ಅಂಶವನ್ನು ಗ್ರಹಿಸಿ, ಇದಕ್ಕೆ ಕೊಡಬೇಕಾದ ಪ್ರಾಮುಖ್ಯತೆಯನ್ನು ಕೊಟ್ಟದ್ದ ಶ್ರೀ ಸ್ವಾಮಿಜಿಯವರ ದೂರದರ್ಶಿತ್ವಕ್ಕೆ ಅಲ್ಲೇ ತಲೆ ಬಾಗಿದೆ.

ಈ ಆಶ್ರಮದಲ್ಲಿ ರಾಜಕೀಯವನ್ನು ಬಹುಮಟ್ಟಿಗೆ ತಡೆಗಟ್ಟಲು ಸಾಧ್ಯವಾಗಿದೆ. ಯಾವ ವಿದ್ಯಾಸಂಸ್ಥೆಯಲ್ಲಾಗಲಿ ಆವಶ್ಯಕವಾಗಿ ಇರಬೇಕಾದ್ದು ನಿಯಮಪಾಲನೆ, ಶಿಸ್ತು. ಶ್ರೀಮಂತನಾಗಲಿ ದಟ್ಟದರಿದ್ರನಾಗಲಿ, ಮಂತ್ರಿಯ ಮಗನಾಗಲಿ ಚಾಕರನ ಮಗನಾಗಲಿ, ಅಲ್ಲಿನ ನಿಯಮಗಳನ್ನು ಪಾಲಿಸಲೇಬೇಕು. ಅಲ್ಲಿನ ವಿದ್ಯಾರ್ಥಿಗಳು ಎಲ್ಲರೂ ವಿದ್ಯಾಭಿಕ್ಷುಗಳು; ಶ್ರೀ ಸ್ವಾಮಿಗಳಂತೆ ಎಲ್ಲರೂ 'ತಿರುಕ'ರು. ಬೆಳಗ್ಗೆ ನಾಲ್ಕೂವರೆ ಗಂಟೆಗೆ ಜಾಗಟೆ ಸದ್ದು ಕೇಳಿದ ಕೂಡಲೆ ಎಲ್ಲರೂ ಏಳಬೇಕು, ಪ್ರಾತರ್ವಿಧಿಗಳನ್ನು ತೀರಿಸಿಕೊಂಡು ಬಂದಕೂಡಲೆ ಮಂತ್ರಸಹಿತವಾಗಿ ಸೂರ್ಯನಮಸ್ಕಾರ; ಆ ಪ್ರಶಾಂತ ನಿರಾಕುಲ ಸನ್ನಿವೇಶದಲ್ಲಿ, ಅರುಣೋದಯಕ್ಕೂ ಸ್ವಲ್ಪ ಮುಂಚಿನ ವೇಳೆಯಲ್ಲಿ, ಆಶ್ರಮದ ಹೊರಾಂಗಣದಿಂದ ಹೊರಡುವ ಆ ಸಾಮೂಹಿಕ ಮಂತ್ರಘೋಷ, ಮೊದಲು ಅರುಣನಿಗೆ ಅನಂತರ ಸೂರ್ಯನಾರಾಯಣನಿಗೆ ಮಾಡುವ ಕ್ರಮಬದ್ಧ ಪ್ರಣಾಮ, ಇವೆಲ್ಲ ನಮ್ಮನ್ನು ಪ್ರಾಚೀನ ಋಷಿಲೋಕಕ್ಕೆ ಕೊಂಡೊಯ್ಯುತ್ತವೆ. ಮನಸ್ಸು, ಹೃದಯ ನಿರ್ಮಲವಾಗುತ್ತವೆ. ಇದನ್ನು ಹೇಳುತ್ತ ಒಂದು ವಿಷಯ ಮನಸ್ಸಿಗೆ ಬರುತ್ತೆ; ತಿಳಿಸುವುದು ಸೂಕ್ತವೆಂದು ತೋರುತ್ತೆ. ಇದೊಂದು ವಿನಮ್ರ ಸಲಹೆ. ಮೇಲು ಕೀಳು, ಹಿರಿಯರು, ಕಿರಿಯರು ಮುಂತಾದ ಯಾವ ಭೇದಭಾವವೂ ಇಲ್ಲದೆ ಆಶ್ರಮದವರೆಲ್ಲಾ ಇದರಲ್ಲಿ ಭಾಗವಹಿಸುವಂತಾದರೆ, ಅದೊಂದು ಹಿರಿಯ ಆದರ್ಶವಾದೀತು. ಇತರರಿಗೆ, ಆದರೆ ಇದು ಯಾವ ರೀತಿಯ ಬಲಾತ್ಕಾರವೂ ಇಲ್ಲದೆ, ಸ್ವಪ್ರೇರಣೆಯಿಂದ ಹಿರಿಯರಾದವರು ಮಾಡಬೇಕಾದ ಕೆಲಸ.

ಪ್ರಾರ್ಥನೆ (ವ್ಯಾಯಾಮ ಕೂಡ) ಮುಗಿದ ಮೇಲೆ, ಸೇವಾಕಾರ್ಯ, ಗುಡಿಸುವುದು ಮುಂತಾದ ಆಶ್ರಮದ ಕೆಲಸ. ವಿದ್ಯಾರ್ಥಿಗಳನ್ನು ತಂಡಗಳಾಗಿ ವಿಭಾಗಿಸಿ ಒಂದೊಂದು ತಂಡಕ್ಕೂ ಒಂದೊಂದು ಕೆಲಸ. ಸುಮಾರು ಏಳೂವರೆ ಗಂಟೆ ಹೊತ್ತಿಗೆ ಅವರಿಗೆ ಇದರಿಂದ ಬಿಡುಗಡೆ. ಅನಂತರ ಅಧ್ಯಯನ. ಸುಮಾರು ಒಂಭತ್ತೂವರೆಗೆ ಅಡಿಗೆ ಮನೆ ಜಾಗಟೆ ಬಾರಿಸುತ್ತಾರೆ. ಅವರೆಗೂ ಓದಲು ಅವಕಾಶ. ಊಟಮಾಡಿ ಕೊಂಚ ವಿಶ್ರಾಂತಿ

ಹತ್ತೂವರೆಗೆ ಸ್ಕೂಲು ಗಂಟೆ ಶಬ್ದ. ಆಕ್ಷಣ ಧಾವಿಸಬೇಕು ಶಾಲೆಗೆ. ಅಲ್ಲಿ ಸಾಮೂಹಿಕ ಪ್ರಾರ್ಥನೆ ಯಾದನಂತರ ಹನ್ನೊಂದು ಗಂಟೆಗೆ ಪಾಠ ಪ್ರಾರಂಭ. ಒಂದೂವರೆಗೆ ಅರ್ಧಗಂಟೆ ವಿರಾಮ; ಮಧ್ಯಾಹ್ನದ ಉಪಾಹಾರಕ್ಕಾಗಿ. ಪುನಃ ಮಧ್ಯಾಹ್ನದ ಪಾಠಗಳು. ಇದರಿಂದ ನಾಲ್ಕೂವರೆಗೆ ಬಿಡುಗಡೆ. ಅನಂತರ ಡ್ರಿಲ್, ಆದಾದಮೇಲೆ ಆಟಪಾಟಗಳು. ಏಳೂವರೆಗೆ ಊಟ ಮುಗಿಸಿ ಕುಳಿತರೆ ಹತ್ತುಗಂಟೆವರೆಗೂ ಓದು. ಹತ್ತು ಗಂಟೆ ಜಾಗಟೆ ಶಬ್ದ ಕೇಳಿದ ಕೂಡಲೇ ಮಲಗಬೇಕು.

ಈ ರೀತಿ ಅವಿಚ್ಛಿನ್ನವಾಗಿ ತಪ್ಪದೆ ನಡೆಯುವ ಕಾರ್ಯಕಲಾಪಗಳಿಂದ ವಿದ್ಯಾರ್ಥಿಗಳಿಗೆ, ತಮ್ಮ ಮನಸ್ಸನ್ನು ಇತರ ವಿಷಯಗಳ ಕಡೆ ತಿರುಗಿಸಲು ಅವಕಾಶವೇ ಇಲ್ಲ. ಶಾರೀರಿಕ, ಮಾನಸಿಕ, ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣಗಳು ಸಮನ್ವಯಗೊಂಡು ನಡೆಯುವ ವ್ಯವಸ್ಥೆಯಿರುವುದರಿಂದ ಆ ತರುಣಚೇತನದ ವಿಕಾಸಕ್ಕೆ ಅವಕಾಶವಿದೆ. ಜಾತೀಯ ಸೋಂಕೂ ಇಲ್ಲ, ಇಲ್ಲಿ, ಎಲ್ಲರೂ ಬೆರೆತು ಊಟಮಾಡಬೇಕು, ಬೆರೆತು ವಾಸಿಸಬೇಕು, ಬೆರೆತು ಕೆಲಸಮಾಡಬೇಕು; 'ಅಸ್ಪೃಶ್ಯ'ರೂ ಇವರೊಂದಿಗೇ ಕೂಡಿಬಾಳಬೇಕು. ಮುಸಲ್ಮಾನರಾಗಲಿ, ಕ್ರೈಸ್ತರಾಗಲಿ, ಬೇರೆ ಯಾವ ಧರ್ಮದವರಾಗಲಿ ಇಲ್ಲಿ ಬಂದಿರಬಹುದು, ತಮ್ಮ ಧರ್ಮಕ್ಕೆ ಯಾವ ರೀತಿಯಲ್ಲೂ ಚ್ಯುತಿ ಬಾರದಂತೆ. ಈ ಆಶ್ರಮದ ಧರ್ಮ ಮಾನವೀಯತೆ, ದಯೆ, ಅನುಕಂಪ, ದೀನಸೇವೆ. ಈ ಧರ್ಮ ಯಾವ ಮತಕ್ಕಿಲ್ಲ? ಕೆಲವು ವರ್ಷಗಳ ಹಿಂದೆ, ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಶ್ರೀಮಾನ್ ಢೇಬರ್‌ರವರು ಆಶ್ರಮಕ್ಕೆ ಭೇಟಿಯಿತ್ತರು. "ಇಲ್ಲಿ ನಡೆಸುತ್ತಿರುವ ಸಾಧನೆಯನ್ನು ನೋಡಿ ನಾನು ಬೆರಗಾಗಿದ್ದೇನೆ. ನಮ್ಮ ನಾಡಿನಲ್ಲಿ ಐಕ್ಯತೆ ಬೆಳೆಯಬೇಕಾದರೆ ಇಂತಹ ವಿದ್ಯಾಸಂಸ್ಥೆಗಳು ದೇಶದ ಎಲ್ಲಾ ಕಡೆ ಸ್ಥಾಪಿತವಾಗಬೇಕು" ಎಂದು ಮೆಚ್ಚಿ ನುಡಿದರು.

ಇತ್ತೀಚೆಗಂತೂ ರಾಷ್ಟ್ರಜೀವನದ ಪ್ರತಿಯೊಂದು ರಂಗದಲ್ಲೂ ವ್ಯಾಪಿಸಿಬಿಟ್ಟಿದೆ, ರಾಜಕೀಯ. ಪಕ್ಷ ಪ್ರತಿಪಕ್ಷಗಳ ಭಂಡಪೈಪೋಟಿ, ಪ್ರಾಂತೀಯತೆ, ಜಾತೀಯತೆ. ಉದಾತ್ತ ಧ್ಯೇಯಗಳನ್ನು ತತ್ತ್ವಗಳನ್ನು ಬಾಯಲ್ಲಿ ಹೇಳುತ್ತ ಗೋಪ್ಯವಾಗಿ ನಡೆಸುತ್ತಿರುವ ಕುಟಿಲ ಕಾರ್ಯಗಳು, ಇವುಗಳಿಂದ ಭಾರತದ ಬಲ, ಗೌರವ ಎರಡೂ ಕುಸಿದಿವೆ. ರಾಜಕಾರಣಿಗಳನೇಕರಲ್ಲಿ ಘನತೆಯಿಲ್ಲ, ಗೌರವವಿಲ್ಲ, ತತ್ತ್ವನಿಷ್ಠೆಯಿಲ್ಲ; ಆವೇಗಪರ ತರುಣರನ್ನು ಈ ರಾಜಕೀಯ ಮುಖಂಡರು ತಮ್ಮ ಸ್ವಾರ್ಥಸಾಧನೆಗಾಗಿ ಉಪಯೋಗಿಸತೊಡಗಿದ್ದಾರೆ. ಪ್ರತಿ ಪ್ರಾಂತ್ಯದಲ್ಲೂ "ಸೇನೆ"ಗಳು. ಇವುಗಳಲ್ಲಿರುವವರು, ಹೆಚ್ಚಾಗಿ ತರುಣರು. ಈ ಸೇನೆಗಳು ಏತಕ್ಕೆ? ಮುಂದೆ ಅಂತರಪ್ರಾಂತೀಯ ವಿವಾದಗಳು ಉಗ್ರರೂಪ ತಾಳಿದಾಗ ವಿರೋಧಿಗಳನ್ನು ಸದೆಬಡಿಯುವದಕ್ಕೆ, ಅವರ ಮನೆಮಠಗಳನ್ನು ಸುಟ್ಟು ಅವರನ್ನು ತಮ್ಮ ಪ್ರಾಂತ್ಯದಿಂದ ಹೊಡೆದೋಡಿಸುವುದಕ್ಕೆ. ಈ ರಾಷ್ಟ್ರಘಾತಕ ಸಂಸ್ಥೆಗಳನ್ನು ನಿಷೇಧಿಸಬೇಕು. ಯಾವ ರೂಪದಲ್ಲೂ ಅಂತಹ ಸಂಸ್ಥೆಗಳು ತಲೆಯೆತ್ತಲವಕಾಶಕೊಡಕೂಡದು, ಈಗ ಆಗಿರುವ ಹಾನಿಗೆ ಕಾರಣರಾದವರನ್ನು ಉಗ್ರವಾಗಿ ದಂಡಿಸಬೇಕು, ಎಂದು ನಾನಾಕಡೆಗಳಿಂದ ಕೂಗುಬರುತ್ತಿದ್ದರೂ ಪ್ರಾಂತ ಸರಕಾರಗಳಾಗಲಿ, ಕೇಂದ್ರಸರಕಾರವಾಗಲಿ ಯಾವ ನಿರ್ದಿಷ್ಟ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ನಾಳೆ ನಾಡಿನ ರಕ್ಷಕರಾಗಬೇಕಾದ ತಮ್ಮ ಮಕ್ಕಳನ್ನೇ ಈ ನಾಯಕರು ರಾಜಕೀಯ ರಂಗಕ್ಕಿಳಿಸಿ ಸಂತೃಪ್ತರಾಗಿರುವಾಗ, ಭಾರತದ ಮುಂದಿನ ಗತಿಯೇನು?

ಈ ಎಲ್ಲಾ ವಿಷಯಗಳ ಮನನ, ಚಿಂತನದ ಪರಿಣಾಮವಾಗಿಯೇ ಮಲ್ಲಾಡಿಹಳ್ಳಿಯ ಆಶ್ರಮದಲ್ಲಿ "ರಾಜಕೀಯಕ್ಕೆ ಪ್ರವೇಶವಿಲ್ಲ" ಎಂಬ ಬೋರ್ಡು ಬಂದದ್ದು.

ಎಂ. ವೀರಭದ್ರಯ್ಯ

ಗುರುಸ್ತುತಿ

ಅಜ್ಞಾನ ತಿಮಿರಾಂಧಸ್ಯ ಜ್ಞಾನಾಂಜನ ಶಲಾಕಯಾ
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರುವೇ ನಮಃ ||

ತಿರುಕನೆಂಬ ಹೆಸರಿನಿಂದ
ತಿರುಗಿ ತಿರುಗಿ ಧರೆಯ ತುಂಬ
ತಿರುಗಿ ಬಂದೆ ನೀನು ಜಟ್ಟಿ ಕುಣಿದ ಊರಿಗೆ
ಗುರುವೆ ನಿನ್ನ ಮಹಿಮೆಯನ್ನು
ಅರಿಯಲಿಲ್ಲ ಮೊದಲು ಜನರು
ಅರಿವನಿತ್ತೆ ಮರೆದ ಜನಕೆ ರಾಘವೇಂದ್ರನೆ || ೧ ||

ಗಂಗೆಯನ್ನು ಧರೆಯ ಮೇಲೆ
ಅಂಗ ಸಹಿತ ಭಗೀರಥನು
ಮಂಗಳಕ್ಕೆ ಕರೆದುತಂದ ಹಿಂದೆ ತಾನವ
ಹಿಂಗದಂತ ವಿದ್ಯದೇವಿ
ಭಂಗ ದೂರ ಮಾಡಲಿಕ್ಕೆ
ಅಂಗ ಸಹಿತ ತಂದೆ ನೀನು ರಾಘವೇಂದ್ರನೆ || ೨ ||

ಮರಳು ಕಾಡಿನಂತ ಊರ
ಸುರರ ತೋಟದಂತೆ ಮಾಡಿ
ಧರೆಗೆ ಹೆಸರು ಆಗುವಂತೆ ನೀನು ಮಾಡಿದೆ
ಹಿರಿಯರೆಲ್ಲ ನಿನ್ನ ಶಕ್ತಿ
ಯರಿದು ಬಾಯಿ ತುಂಬ ನಿನ್ನ
ಹಿರಿಯ ನಾಮ ನೆನೆವರಯ್ಯ ರಾಘವೇಂದ್ರನೆ || ೩ ||

ಜಟ್ಟಿ ಕುಣಿದ ಊರಿನಲ್ಲಿ
ಗಟ್ಟಿಯಾಗಿ ನೀನು ನಿಂತು
ಕುಟ್ಟಿ ಹಾಕಿದಯ್ಯವಲ್ಲೆ ಹೀನ ಗುಣಗಳ
ಕಟ್ಟಿದಯ್ಯ ಸೌಧಗಳನು

ಕೊಟ್ಟೆ ನೀನು ಕಾಮಧೇನು
ತಟ್ಟೆ ನಿಂತೆ ಹೀನ ಜನಕೆ ತೊಡೆಯ ರಾಘವ ॥ ೪ ॥

ಪೀಡೆಯಂತೆ ನಿನ್ನನಲ್ಲಿ
ಕಾಡಲಿಕ್ಕೆ ಹೀನ ಶಕ್ತಿ
ಕೂಡಿ ನಿನ್ನ ನಾಶ ಮಾಡಲಿಕ್ಕೆ ತಾ ಬರೆ
ಮಾಡಿದಯ್ಯ ಧೈರ್ಯವನ್ನು
ದೂಡಿದೇಯೊ ಹೀನಗಳನು
ರೂಢಿ ಮೆಚ್ಚಿ ತಲೆಯ ಬಾಗುವಂತೆ ರಾಘವ ॥ ೫ ॥

ನೀನು ಕಟ್ಟಿದಂತ ಒಳ್ಳೆ
ಜೇನುಗೂಡು ಬೆಳೆಯಲೆಂದು
ತಾನು ಊರು ತಿರುಗಿತಂದು ಸುಧೆಯ ತುಂಬಿದೆ
ನಾನು ಎಂಬ ಶಬ್ದ ವಿಲ್ಲ
ನೀನೆ ಎಂದು ನುಡಿಯುತೆಲ್ಲ
ನೀನು ದುಡಿವೆ ಷಟ್ಪದೀಯ ತೆರೆದಿ ರಾಘವ ॥ ೬ ॥

ಜಟ್ಟಿಯಲ್ಲಿ ಜಟ್ಟಿ ನೀನು
ದಿಟ್ಟ ಧೀರನಯ್ಯ ತಾನು
ಜಟ್ಟಿ ಕುಣಿದ ಊರಿನಲ್ಲಿ ಮತ್ತೆ ಆಡಿದೆ
ಕಟ್ಟು ಬ್ರಹ್ಮಚಾರಿಯಾಗಿ
ಮೆಟ್ಟಿದಯ್ಯ ಆಯುಮಾನ
ಕಟ್ಟುನಿಟ್ಟು ರೂಪಕೊಂದು ನಾಮ ರಾಘವ ॥ ೭ ॥

ಯತಿಗಳಲ್ಲಿ ಮಾನ್ಯ ನೀನು
ಮತಿಯುತರಲಿ ನೀನು ಮಾನ್ಯ
ಅತಿಶಯಾದ ಶಕ್ತಿ ನಮ್ಮ ನಾಡಿಗಯ್ಯ ನೀ
ಮತಿಯು ಮಂದನಾದ ನಾನು
ಅತಿಯನೇನ ಹೇಳ ಬಲ್ಲೆ
ಹಿತದಿ ನನ್ನ ಹರಸಬೇಕು ರಾಘವೇಂದ್ರನೆ ॥ ೮ ॥

ಮಂಗಳಾವು ಗುರುವೆ ನಿನಗೆ
ಮಂಗಳಾವು ನಿನ್ನ ನೆಲೆಗೆ
ಮಂಗಳಾವು ನಿನ್ನ ಸುತ್ತ ಮುತ್ತು ಎಲ್ಲಕೆ
ಮಂಗಳಾವ ನೀಡು ಎಂದು
ಮಂಗಳಾದ ಅಡಿಯ ಲೆನ್ನ
ಅಂಗವನ್ನು ಇಡುವೆ ವೀರೇಶ ರಾಘವ ॥ ೯ ॥

ರಾ. ವಿಶ್ವೇಶ್ವರನ್

ಪವಾಡ ಪುರುಷ

ಪೂಜ್ಯ ಶ್ರೀ ರಾಘವೇಂದ್ರಸ್ವಾಮಿಜಿಯವರ ಸಾಧನೆಯ ಬಗ್ಗೆ ಅನೇಕ ಪ್ರಾಜ್ಞರೂ ಹಿರಿಯರೂ ನಿಕಟವರ್ತಿಗಳೂ ಸಾಕಷ್ಟು ವರ್ಣಿಸಿರುವಾಗ ಆ ಮಹಾವ್ಯಕ್ತಿಯನ್ನು ಬಣ್ಣಿಸುವುದಕ್ಕೆ ನನ್ನ ಲೇಖನಿ ತುಂಬ ಅಸಮರ್ಥವೆನಿಸುತ್ತದೆ. ಆದರೆ ನನ್ನಂತಹರಿಗೂ ಸ್ಮರಣೆಗೆ, ಸ್ತುತಿಗೆ, ಚಿಂತನೆಗೆ, ಆದರ್ಶಕ್ಕೆ ನಿಲುಕುವುದೇ ಮಹಾನುಭಾವರ—ಅವತಾರ ಪುರುಷರ—ಸಹಜಗುಣವಾದುದರಿಂದ ಅವರ ಈ ಮಹತ್ತೇ ನನ್ನನ್ನು ಅನುಗ್ರಹಿಸಿ ನನ್ನ ಭಾವನೆಗಳನ್ನು ವ್ಯಕ್ತಪಡಿಸಲು ಸ್ಫೂರ್ತಿಯನ್ನು ನೀಡುತ್ತದೆ. ಅದರ ಫಲವೇ ಈ ಪುಟ್ಟ ಲೇಖನ.

ಯಾವ ಪವಾಡದಿಂದಲೂ ಸಾಧಿಸಲಾಗದ ಅದ್ಭುತ ಕಾರ್ಯವನ್ನು, ಅತಿ ಮಾನವ ಶಕ್ತಿ ಯಾವುದನ್ನೂ ಬಳಸದೆ, ಮಾನವನಾಗಿ ಮಾನವಶಕ್ತಿಯ ಮಿತಿಯಲ್ಲಿಯೇ ರಾಷ್ಟ್ರಕ್ಕೆ ಜನತೆಗೆ ಸಮಾಜಕ್ಕೆ ನೀಡಿರುವ ಪರಮಪೂಜ್ಯ ಶ್ರೀ ರಾಘವೇಂದ್ರಸ್ವಾಮಿಗಳು ಅಸಾಮಾನ್ಯ ಅರ್ಥದಲ್ಲಿ ಒಬ್ಬ ಪವಾಡ ಪುರುಷರೇ. ವಿರಾಟ್ ಪುರುಷನಂತೆ ಆ ಮಹೋನ್ನತ ವ್ಯಕ್ತಿ ಸುತ್ತು ಮುತ್ತಿನ ಸಹಮಾನವರನ್ನೇ ಉದ್ಧರಿಸುವ ಕಾರ್ಯದಲ್ಲಿ ತಮ್ಮ ದಿವ್ಯ ಶಕ್ತಿಯನ್ನು ಕ್ಷಣ ಕ್ಷಣಕ್ಕೂ ಮನವರಿಕೆ ಮಾಡಿಕೊಡುತ್ತಿದ್ದಾರೆ. ಕಣ್ಣಾರೆ ನೋಡಿದರೂ ಬುದ್ಧಿಗೆ ನಂಬಲು ಕಷ್ಟವಾದ ಮಹಾ ಕೃತಿಗಳನ್ನು ಮಾಡಿ ನೆರವೇರಿಸುವ ಆತ ಒಬ್ಬ ವಿಭಿನ್ನ ರೀತಿಯ ಪವಾಡ ಪುರುಷ.

ಕೆಲವು ದಶಕಗಳ ಹಿಂದೆ 'ಕುಗ್ರಾಮ'ಕ್ಕೆ ಅತ್ಯುತ್ತಮ ಉದಾಹರಣೆಯಾಗಿದ್ದ ಹಳ್ಳಿಯೊಂದು ಇಂದು ಪವಿತ್ರ ಯಾತ್ರಾಸ್ಥಳವಾಗಿ ಪರಿವರ್ತಿತವಾಗಿದೆ. ಶ್ರೀ ರಾಘವೇಂದ್ರರ ಈ ಸಾಧನೆಯ ಗುಟ್ಟು—ಅಲ್ಲ ತೆರೆದ ಪುಸ್ತಕ—ಅವರ ತ್ಯಾಗ, ವಿರಾಗ, ಶ್ರದ್ಧೆ, ಶಿಸ್ತು, ಸರಳತೆ, ಬಿಡುವಿಲ್ಲದ ದುಡಿಮೆ, ನಿಸ್ವಾರ್ಥತೆ, ನಿರ್ವಂಚನೆ, ಜಿಗುಟುತನ, ಪಾರಾನುಕಂಪ ; 'ಲೋಕಾಸ್ಸಮಸ್ತ ಸುಖಿನೋಭವಂತು' ಎಂಬ ಉದಾತ್ತ ಧ್ಯೇಯದಿಂದ ತ್ರಿಕರಣ ಶುದ್ಧಿಯ ಕರ್ಮಯೋಗಿಯಾಗಿರುವುದು.

'ರಾಜಕೀಯಕ್ಕೆ ಪ್ರವೇಶವಿಲ್ಲ' ಎಂದು ಆಶ್ರಮದ ದ್ವಾರದಲ್ಲಿ ಭಿತ್ತಿ ಪತ್ರವನ್ನು ಹಾಕಿಕೊಂಡಿರುವ ಈ ಸನ್ಯಾಸಿ, ಅಷ್ಟೋ ಇಷ್ಟೋ ತಿಂಗಳಿಗೆ ಕೆಲವಾರು ದಶ ಸಹಸ್ರ ರೂಪಾಯಿಗಳಷ್ಟು ಆಶ್ರಮಕ್ಕಾಗಿ ಹಣ ಕೂಡಿಸುವುದು ಹೇಗೆ? ಇದಕ್ಕೆ ಉತ್ತರ ಸರಳವಾಗಿದೆ. ಅವರು ಭಿಕ್ಷುಕರಾಗಿ ತಮ್ಮ ಜೋಳಿಗೆಯಿಂದ ಇದನ್ನು ಒದಗಿಸುತ್ತಾರೆ. ಇವರು ವಿರಾಗಿಗಳು ಮತ್ತು ತ್ಯಾಗಿಗಳು. ಆದ್ದರಿಂದಲೇ ಇವರಿಗೆ ಇತರರಿಗಿಂತ ಹೆಚ್ಚು ಹಣದ ಅವಶ್ಯಕತೆ ಇದೆ. ತಮಗಾಗಿ ಏನೂ ಬೇಡದ ಈ ಸ್ವಾಮಿಗಳು ತಮಗೆ ಏನೇನೂ ಸಂಬಂಧವಿಲ್ಲದ, ಸಹಮಾನವರು ಎಂಬ ಒಂದೇ ಸಂಬಂಧವನ್ನು ಬೆಳಸಿಕೊಂಡಿರುವ, ಈ ಕರ್ಮಯೋಗಿಗೆ ಅಳತೆಯೇ ಇಲ್ಲದಷ್ಟು ಹಣ ಬೇಕಾಗಿದೆ. ಆಶ್ಚರ್ಯವೆಂದರೆ ಇದನ್ನೂ ಕಳೆದ ಮೂರು ದಶಕಗಳಿಂದಲೂ ಅವರು ನಡೆಸಿಕೊಂಡು ಬಂದಿದ್ದಾರೆ. ಇದನ್ನು ನೋಡಿದಾಗ ಇವರನ್ನು ಭಿಕ್ಷಾಟನ ಪ್ರಭುವಾದ ಪರಶಿವನಿಗೆ ಹೋಲಿಸಬೇಕಾಗುತ್ತದೆ. ವಾರದಲ್ಲಿ ಒಂದು ದಿನ ಮಾತ್ರ

ಆಶ್ರಮದಲ್ಲಿದ್ದ ಅಂದು ಆಶ್ರಮದ ಮೇಲ್ವಿಚಾರಣೆಯನ್ನೆಲ್ಲಾ ದಕ್ಷತೆಯಿಂದ ನಿರ್ವಹಿಸಿ, ಆವರ ಜೊತೆಗೆ ಆಶ್ರಮಕ್ಕೆ ಬಂದ ನೂರಾರು ರೋಗಿಗಳನ್ನು ಪರೀಕ್ಷಿಸಿ, ಉಪಚರಿಸಿ, ಔಷಧಿನೀಡಿ ಮಿಕ್ಕ ದಿನಗಳಲ್ಲೆಲ್ಲ ಜೋಳಿಗೆಯನ್ನು ಹಾಕಿಕೊಂಡು ಸುತ್ತು ಮುತ್ತಿನ ಪ್ರದೇಶಗಳಿಗೆ ಹೋಗಿ ಜೋಳಿಗೆಯನ್ನು ತುಂಬಿಸಿಕೊಂಡು ಬರುತ್ತಾರೆ. ಆಶ್ರಮಕ್ಕಾಗಿ ಇಲ್ಲಿನವರೆಗೆ ಸುಮಾರು ಒಂದುಕೋಟಿ ರೂಪಾಯಿಗಳಷ್ಟು ಆಸ್ತಿಯನ್ನು ಮಾಡಿದ್ದಾರೆ. ಇದೊಂದು ದೊಡ್ಡ ಪವಾಡವಲ್ಲದೆ ಮತ್ತೇನು? ಇನ್ನೂ ಎಷ್ಟೆಷ್ಟೋ ಸಾಧಿಸಬೇಕೆಂಬ ಮಹದಾಸೆ ಶ್ರೀ ಸ್ವಾಮಿಗಳಿಗಿದೆ. “ಸ್ವಾಮಿಗಳಿಗೆ ಮಹದಾಸೆ”! ಶ್ರೀ ಸ್ವಾಮಿಗಳದು ಅಂತಹ ಆಸೆ ಎನ್ನುವುದೇ ಸ್ವಾರಸ್ಯವಾದ ಸಂಗತಿ.

86ನ್ನು ದಾಟಿದ ಶ್ರೀ ಸ್ವಾಮಿಗಳು ಜೋಳಿಗೆ ಹಿಡಿದು ಹೋಗಬೇಕಲ್ಲ, ಇನ್ನೂ ಶ್ರಮವನ್ನು ಪಡಲೇ ಬೇಕಾಗಿದೆಯಲ್ಲ—ಎಂಬುದು ತುಂಬಾ ವ್ಯಥೆಯನ್ನೂ ಆತಂಕವನ್ನೂ ಮೂಡಿಸುವ ವಿಷಯ. ಆಶ್ರಮದ ಅಸ್ತಿತ್ವಕ್ಕೆ ಮತ್ತು ಸಾರೋದ್ಧಾರವಾಗಿ ನಡೆಯುವುದಕ್ಕೆ ಬೇಕಾದ ಸಂಪನ್ಮೂಲಗಳ ಬಗ್ಗೆ ಶಾಶ್ವತವಾದ ಏರ್ಪಾಡನ್ನು ಮಾಡಬೇಕೆಂಬುದು ಆಶ್ರಮದ ಹಿತೈಷಿಗಳನೇಕರು ಸಮಾಲೋಚಿಸುತ್ತಿರುವ ಸಮಾಧಾನಕರ ಸಂಗತಿ.

ಸ್ವಾಮೀಜಿಯಂತಹ ಮಹಾವ್ಯಕ್ತಿಯ ಮಹಾಸಾಧನೆಗಳು ಕೈಗೂಡಬೇಕಾದರೆ ನಿಷ್ಠೆಯಿಂದ, ಶ್ರದ್ಧೆಯಿಂದ, ಸಹೃದಯತೆಯಿಂದ, ಗೌರವ ಭಕ್ತಿಗಳಿಂದ ಅವನ್ನು ಕಾರ್ಯಗತ ಮಾಡುವ ಸೇವಾತತ್ಪರರು, ಆದರ್ಶ ನಿರತರು ಆದವರ ಸಣ್ಣ ತಂಡವೊಂದು ಅತ್ಯಗತ್ಯ. ನಮ್ಮ ನಾಡಿನ ಪುಣ್ಯದಿಂದ ಪೂಜ್ಯ ಶ್ರೀ ಸೂರ್‌ದಾಸ್‌ಜೀಯವರಲ್ಲಿ ಗುರುವಿಗೆ ತಕ್ಕ ಶಿಷ್ಯರನ್ನು ನಾವು ಕಾಣುತ್ತೇವೆ. ಕರ್ನಾಟಕ ರಾಜ್ಯದ ಏಳಿಗೆಗಾಗಿ, ಹಿರಿಯ ಆದರ್ಶಗಳ ಪಾಲನೆಗಾಗಿ, ಇಂಥವರೊಬ್ಬರಿದ್ದಾರೆ ಎಂಬ ಭಾವನೆಯೇ ನಮಗೆ ಅಪಾರವಾದ ತೃಪ್ತಿ ನೆಮ್ಮದಿಗಳನ್ನು ನೀಡುತ್ತದೆ. ಶ್ರೀ ಶ್ರೀ ಯವರು ಆರೋಗ್ಯವಂತರಾಗಿ, ದೃಢಕಾಯರಾಗಿ ಇನ್ನೂ ಅನೇಕ ದಶಕಗಳು ನಮ್ಮನ್ನು ಆಶೀರ್ವದಿಸಿ ಅನುಗ್ರಹಿಸುತ್ತಿರಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

ಶ್ರೀ ರಾಘವೇಂದ್ರರಾಯರ ನಿಷ್ಕಾಮಕರ್ಮದ ಫಲವಾಗಿ ನವಚೇತನ ರೂಪಿಯಾದ ಅನಾಥ ಸೇವಾಶ್ರಮ ಬೆಳೆದುನಿಂತಿದೆ. ನಮ್ಮ ಸ್ಥಾನಕ್ಕೆ, ಕನ್ನಡ ನಾಡಿಗೆ, ಭರತಖಂಡಕ್ಕೆ ಇದೊಂದು ಅಮೂಲ್ಯವಾದ ಕಾಣಿಕೆ ದೈಹಿಕ, ಮಾನಸಿಕ ಮತ್ತು ನೈತಿಕವೆಂಬ ಪಾಣಿಪೀಠಗಳಮೇಲೆ ಮಾನವಪ್ರಾಣಿಯನ್ನು ನಿಲ್ಲಿಸಿ ಅವನ್ನು ನರೋತ್ತಮನನ್ನಾಗಿ ಮಾಡುವ ಆಧ್ಯಾತ್ಮವೂ ಇಲ್ಲಿ ಹಾಸುಹೊಕ್ಕಾಗಿ ಸೇರಿರುವುದು ಒಂದು ಗಮನೀಯ ವಿಷಯ.

—ಬಿ. ಪಾಂಡುರಂಗರಾವ್

ಹರಿಹರ ಗುಂಡೂರಾವ್

ವೃದ್ಧ ತರುಣ

ಮಲ್ಲಾಡಿಹಳ್ಳಿ ರಾಘವೇಂದ್ರರಾಯರೇ ಆ ವೃದ್ಧ ತರುಣರು. ಅವರು ಮಂಗಳೂರು ಕಡೆಯವರು.ಅವರು ಮೊದಲಿನಿಂದಲೂ ಗ್ರಾಮಸೇವಕರು. ಅವರು ಮಲ್ಲಾಡಿಹಳ್ಳಿಯನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಆರಿಸಿಕೊಂಡು ಅಲ್ಲಿಯೇ ನೆಲೆನಿಂತಿದ್ದಾರೆ.

ಅವರು ಯೋಗಿಗಳೂ ಆಯುರ್ವೇದ ವೈದ್ಯರೂ ಅಹುದು. ಅವರು ಯಾವಾಗಲೂ ಕಾರ್ಯನಿರತರಾಗಿರುತ್ತಾರೆ. ಅವರನ್ನು ನೋಡಿದರೆ ದಿವಂಗತ ಶ್ರೀ ಎಮ್. ವಿಶ್ವೇಶ್ವರಯ್ಯನವರು ನೆನಪಿಗೆ ಬರುತ್ತಾರೆ.

ಅವರನ್ನು ನಾನು ಮೊದಲ ಸಾರಿ ನೋಡಿದ್ದು ಹೊಳಲ್ಕೆರೆ ನಿಲ್ದಾಣದ ಹಿಂಭಾಗದಲ್ಲಿರುವ ಮಾಲೇಣಹಳ್ಳಿಯಲ್ಲಿ. ಆ ಗ್ರಾಮದ ರಂಗನಾಥ ದೇವರ ರಥೋತ್ಸವಕ್ಕೆ ಹೋಗಿದ್ದೆನು. ಆಗ ಅಲ್ಲಿಗೆ ಶ್ರೀ ರಾಘವೇಂದ್ರರಾಯರೂ ಬಂದಿದ್ದರು. ಅಲ್ಲಿ ರಥೋತ್ಸವದ ಅಂಗವಾಗಿ ಅವರು ಗ್ರಾಮಸ್ಥರೊಂದಿಗೆ ಬೆರೆತು, ಗ್ರಾಮಸ್ಥರಂತೆಯೇ ಚೆಡ್ಡಿ, ಬನಿಯನ್ನುಗಳನ್ನು ಹಾಕಿಕೊಂಡು ದೇವರ ಎಡೆಯನ್ನುಣ್ಣುವ ವಿಶೇಷ ರೀತಿಯ ಪ್ರದರ್ಶನಗಳನ್ನು ತೋರಿಸಿದರು. ಆ ಸಮಯದಲ್ಲಿ ಅವರು ಗ್ರಾಮಸ್ಥರೊಂದಿಗೆ ಸಂಪೂರ್ಣವಾಗಿ ಸೇರಿಹೋಗಿದ್ದರು. ಅವರು ಗ್ರಾಮಸ್ಥರ ಜೊತೆಗೆ ಎದ್ದು, ಕೂತು, ಮಲಗಿ, ನೆಲದಮೇಲೆ ಸರಿಯುತ್ತಾ ಎಡೆತಿಂದ ದೃಶ್ಯವು ನೋಡುವಂತಿತ್ತು.

ಅದೇ ದಿನ ರಥೋತ್ಸವದ ಊಟವಾಯಿತು. ನೂರಾರು ಜನರ ಊಟದಲ್ಲಿ ನಾನಿದ್ದೆ. ಆದರೆ ಶ್ರೀ ರಾಘವೇಂದ್ರರಾಯರು ನಮ್ಮೊಂದಿಗೆ ಬೆರೆಯದೆ ಬೇರೊಂದು ಜಾಗದಲ್ಲಿ ಕೂತುಕೊಂಡು ಯೋಗಿಗಳಿಗೆ ಯೋಗ್ಯವಾದ ಸಾದಾ ಆಹಾರವನ್ನು ತೆಗೆದುಕೊಂಡು ತೃಪ್ತರಾದರು.

ಅದೇ ದಿನ ಸಾಯಂಕಾಲ ನಾನು ಗಾಳಿ ಕುಡಿಯಲಿಕ್ಕೆಂದು ಹೊರಗೆ ಹೋಗಿದ್ದೆ. ನಾನು ಹೋಗುತ್ತಿದ್ದಾಗ ಹಿಂದಿನಿಂದ ಶ್ರೀ ರಾಘವೇಂದ್ರರಾಯರು ಬಂದರು. ನಾನು ನಿಧಾನವಾಗಿ ನಡೆಯುತ್ತಿದ್ದೆನು. ಅವರಾದರೋ ವಾಯುವೇಗದಿಂದ ನಡೆದು ನನ್ನನ್ನು ಹಿಂದಕ್ಕೆ ಹಾಕಿ ಮುಂದೆಷ್ಟೋ ದೂರ ಹೋಗಿಬಿಟ್ಟರು!

ಅವರನ್ನು ಪುನಃ ನಾನು ನೋಡಿದ್ದು ಅನೇಕ ವರ್ಷಗಳ ಅನಂತರ ಬೆಂಗಳೂರಿನ ಆಸ್ಪತ್ರೆಯಲ್ಲಿ. ಅದು ಒಂದು ಪ್ರಸಿದ್ಧ ಆಸ್ಪತ್ರೆ. ಅಲ್ಲಿ ಅವರು ವಿಶ್ರಾಂತಿಗೋಸ್ಕರ ತಂಗಿದ್ದರು. ಅಲ್ಲಿನ ವ್ಯವಸ್ಥೆ ಅವರಿಗೆ ಒಪ್ಪಿಗೆಯಾಗಲಿಲ್ಲ. ಅವರು "ಇದು ಪ್ರಸಿದ್ಧ ಆಸ್ಪತ್ರೆಯಂತೆ. ಆಸ್ಪತ್ರೆಯವರಿಗೇನೆ ಸ್ವಚ್ಛತೆ ತಿಳಿಯದಿರುವುದು ಶೋಚನೀಯವೇ ಸರಿ. ನಾನು ಈ ಕೂಡಲೇ ಇಲ್ಲಿಂದ ಹೊರಟು ಬೇರೆ ಸ್ವಚ್ಛ ಜಾಗದಲ್ಲಿರುವೆ" ಎಂದು ನನ್ನೆದುರಿಗೆ ಹೇಳಿದರು.

ಶ್ರೀ ರಾಘವೇಂದ್ರರಾಯರು ಜನರಿಂದ ಹಣ ಸಂಗ್ರಹಿಸಿ ತಮ್ಮ ಗ್ರಾಮದಲ್ಲಿ ಕೈಕೊಂಡ ಮಹತ್ಕಾರ್ಯಗಳನ್ನು ನೆರವೇರಿಸಿದ್ದಾರೆ. ಆದುದರಿಂದ ಅವರು ತಮ್ಮ ಹೆಸರನ್ನು 'ತಿರುಕ' ಎಂದು ಇಟ್ಟುಕೊಂಡಿದ್ದಾರೆ. ಇಂತಹ

'ತಿರುಕರು' ನಮ್ಮಲ್ಲಿ ಇನ್ನೂ ಹೆಚ್ಚಾಗಿಲ್ಲವಲ್ಲಾ ಎಂದು ನಾವು ವ್ಯಸನ ಪಡೆಯಬೇಕಾಗಿದೆಯಷ್ಟೆ. ಅವರು ಬಹಳ ನಿಗರ್ವಿಗಳು.

ಈಚೆಗೆ ಮಲ್ಲಾಡಿಹಳ್ಳಿಯು ಅದ್ಭುತ ವಿದ್ಯಾಕೇಂದ್ರವಾಗಿದೆಯಂತೆ! ಹೆಚ್ಚಾಗಿ ದೊಡ್ಡ ದೊಡ್ಡ ಕಟ್ಟಡಗಳಿಂದ ತುಂಬಿದೆಯಂತೆ. ಅವರು ಮಾಡಿರುವ ಮಹತ್ಕಾರ್ಯಗಳನ್ನು ಕಿವಿಯಿಂದ ಕೇಳಿದ್ದೇನೆಯೇ ಹೊರತು ನಾನು ಸ್ವಂತವಾಗಿ ಅವ್ಯಾವನ್ನೂ ಕಣ್ಣಿಂದ ನೋಡಿಲ್ಲ. ನಾನು ಒಮ್ಮೆಯಾದರೂ ಅವರ ಕಾರ್ಯಭೂಮಿಗೆ ಹೋಗಿ ಅವರ ಅದ್ಭುತ ಕಾರ್ಯಗಳನ್ನು ಪ್ರತ್ಯಕ್ಷವಾಗಿ ನೋಡಿಲ್ಲವಲ್ಲಾ ಎಂದು ಪರಿತಪಿಸುತ್ತೇನೆಂಬುದು ನನಗೊಬ್ಬನಿಗೇ ಗೊತ್ತು. ಇನ್ನಾದರೂ ಒಮ್ಮೆ ಅಲ್ಲಿಗೆ ಹೋಗಿ ಅಲ್ಲಿನ ಅಗಾಧ ಕಾರ್ಯಗಳನ್ನು ನೋಡಿ ಆನಂದಿಸಲು ದೇವರು ನನಗೊಂದು ಸುವರ್ಣಸಂಧಿಯನ್ನು ತಂದುಕೊಡಲೆಂದು ಅವನಲ್ಲಿ ನಾನು ಪ್ರಾರ್ಥಿಸುತ್ತೇನೆ.

ಇಲ್ಲಿನ ಅನ್ನದಾಸೋಹ, ಜ್ಞಾನದಾಸೋಹ ಕಾರ್ಯಗಳು ಸ್ತುತ್ಯವಾದವು. ಸ್ವಾಮಿಗಳು ನೀರವವಾಗಿ, ನಿರಾಡಂಬರವಾಗಿ ಮಾಡುತ್ತಿರುವ ಅಮೋಘ ಸೇವೆ ಅತ್ಯಂತ ಪ್ರಶಂಸನೀಯ. ಇಲ್ಲಿ ರಾಜಕೀಯದ ಗೊಂದಲವಿಲ್ಲ. ಪಂಗಡ, ಜಾತಿಗಳ, ವೈಷಮ್ಯವಿಲ್ಲ. ಲೌಕಿಕವಿದ್ಯೆಯ ಜೊತೆಗೆ ಪಾರಮಾರ್ಥಿಕ ಜ್ಞಾನವೂ ಇಲ್ಲಿನ ವಿದ್ಯಾರ್ಥಿಗಳಿಗೆ ಲಭಿಸುತ್ತಿದೆ.

—ಕೆ. ಎಸ್. ಧರಣೇಂದ್ರಯ್ಯ

ಉಡುಪಿ ಭೀಮರಾವ ಬೀಡಿ

ಮಲ್ಲರಹಳ್ಳಿಯ ಶ್ರೀರಾಘವೇಂದ್ರಸ್ವಾಮಿಜಿ

ನಾನು ಒಂದು ದಿನ ಡಾಕ್ಟರ್ ಕಮಲಾಪೂರ ಇವರ ಮನೆಯಲ್ಲಿ ಸುಧಾ ಸಂಚಿಕೆಯ ಪುಟಗಳನ್ನು ತಿರುವುತ್ತ ಕುಳಿತಿದ್ದೆ. ಮಲ್ಲಾಡಿಹಳ್ಳಿಯ ಸೇವಾಶ್ರಮದ ಪರಿಚಯ ಲೇಖನ ನೋಡಿದೆ. ಶ್ರೀರಾಘವೇಂದ್ರ ಸ್ವಾಮಿಜಿಯವರ ಚಿತ್ರ ನೋಡಿ ಮುಖ ಗುರುತು ಹತ್ತಿದಂತಾಯಿತು. ಪೂರ್ತಿಯಾಗಿ ಲೇಖನ ಓದಿದೆ. ನನ್ನ ಹಿಂದಿನ ರಾಘವೇಂದ್ರರೇ ಎಂದು ತಿಳಿದು ಹೃದಯ ನಲಿದಾಡಿತು, ಮೈ ರೋಮಾಂಚನಗೊಂಡಿತು. ಮರುದಿನವೇ ನನ್ನ ಅವರ ಹಿಂದಿನ ದಿನಗಳನ್ನು ನೆನಪು ಮಾಡಿ ಪತ್ರ ಬರೆದನು. ತತ್‌ಕ್ಷಣವೇ ಅವರಿಂದ ಉತ್ತರ ಬಂದಿತು. ಹೌದು ನಾನೇ ಆ ರಾಘವೇಂದ್ರ. ಇತ್ತ ಕಡೆಗೆ ಒಮ್ಮೆ ಬರಬೇಕು ಎಂದು ಬರೆದರು.

ನಾನು ಧಾರವಾಡ ಬಿಟ್ಟು ಪುಣೆಗೆ, ರಾಜಧಾನಿಯ ನೆರಳಿನ ಪಟ್ಟಣವೆಂದು (ಮುಂಬಯಿ ಹತ್ತಿರ) ಅಲ್ಲಿ ಏನಾದರೊಂದು ಉದ್ಯೋಗ, ವ್ಯವಹಾರ ಮಾಡಿ, ಸ್ವತಂತ್ರ ಜೀವನ ನಡೆಸಬೇಕೆಂದು ಹೋಗಿದ್ದೆನು. ಪುಣೆಯಲ್ಲಿ ಹೀಗೆ ಕೆಲಸದ ನಿಮಿತ್ತ ತಿರುಗಾಡುವಾಗ, ನಾರಾಯಣ ಇಜಂತಕರ ಎಂಬುವನು ಚಿತ್ರಶಾಲಾ ಮುದ್ರಣಾಲಯದಲ್ಲಿ ಕಂಪೋಜಿಂಗ್ ಕೆಲಸ ಮಾಡುತ್ತಿದ್ದನು. ಅವನು ನನಗೆ ಭೆಟ್ಟಿಯಾಗಿ ನಿಮಗೆ ಕರಡು ತಿದ್ದುವ ಕೆಲಸ ಬರುವದೆ, ಎಂದು ಕೇಳಿದನು. ನಾನು ಕರಡು ತಿದ್ದುವದಲ್ಲ, ಗ್ರಂಥಗಳನ್ನು ಬರೆದು ಕೊಡುತ್ತೇನೆ ಎಂದು ಹೇಳಿದೆನು. ಅವನು ಕೂಡಲೇ ನನ್ನನ್ನು ಮುದ್ರಣಾಲಯಕ್ಕೆ ಕರಕೊಂಡು ಹೋಗಿ ಕರಡು ತಿದ್ದುವ ಕೆಲಸವನ್ನು ಒಪ್ಪಿಸಿಕೊಟ್ಟನು. ನಾನು ಈ ಲೇಖಕರ ಪರಿಚಯ ಮಾಡಿಕೊಡು ಎಂದು ಕೇಳಿದ್ದಕ್ಕೆ ಒಂದು ದಿನ, ದಿನದ ಕೆಲಸ ಮುಗಿದ ಮೇಲೆ ತನ್ನ ಜೊತೆಗೆ ನನ್ನನ್ನು ಶ್ರೀ ರಾಘವೇಂದ್ರರ ಭೆಟ್ಟಿಗೆ ಕರಕೊಂಡು ಹೋದನು. 1935ರ ಒಂದು ಸಂಜೆ ನಾನು ನಾರಾಯಣ ಇಜಂತಕರ ಇಬ್ಬರೂ ಪುಣೆಯ ಒಂದು ವಿಸ್ತರಣೆ ಡೆಕ್ಕನ ಜಿಮಖಾನುಕ್ಕೆ ಹೋದೆವು. ಅಲ್ಲಿ ಚಿತ್ರಶಾಲಾ ಮುದ್ರಣಾಲಯದವರ ಇಮಾರತಿಯಲ್ಲಿ ಶ್ರೀ ರಾಘವೇಂದ್ರರನ್ನ ನನ್ನಮಿತ್ರ ಪರಿಚಯ ಮಾಡಿಕೊಟ್ಟನು. ಆಗ ನೋಡಲಿಕ್ಕೆ ರಾಘವೇಂದ್ರರು ಬಡಕಲ ದೇಹ, ಉತ್ಸಾಹ ತುಂಬಿದ ಮುಖ, ಕಂಪು ಮಿಶ್ರಿತ ಕಪ್ಪು ವರ್ಣದ ಶರೀರ, ಚಟುವಟಿಕೆಯಿಂದ ಸದಾ ಸ್ವಾಮಿಜಿಯವರ ಸೇವಾ ಕಾರ್ಯದಲ್ಲಿ ತತ್ಪರನಾಗಿರುತ್ತಿದ್ದ ವ್ಯಕ್ತಿ, ಮಾತನಾಡುತ್ತಿದ್ದಂತೆಯೆ ತಮ್ಮ ಕೆಲಸಗಳನ್ನು ಮಾಡುವ ರೂಢಿಯನ್ನು ಬೆಳೆಸಿಕೊಂಡಿದ್ದರು.

ಶ್ರೀ ರಾಘವೇಂದ್ರರ ಗುರುಗಳವರು ಯಾವ ಧರ್ಮಪ್ರಚಾರದ, ಪೀಠದ ಸ್ವಾಮಿ ಇರಲಿಲ್ಲ. ಇವರು ಕೇವಲ ಭಾರತೀಯರ ಶರೀರವನ್ನು ದೃಢಕಾಯದವರನ್ನಾಗಿ ಮಾಡುವದು, ಬ್ರಹ್ಮಚರ್ಯ ಬಲದ ಸೌಂದರ್ಯವನ್ನು ಪ್ರಚಾರ ಮಾಡುವ ಉದ್ದೇಶವನ್ನು ಇಟ್ಟುಕೊಂಡ ವ್ಯಕ್ತಿ. ಇವರ ಹೆಸರು ಶ್ರೀ ಶಿವಾನಂದಸ್ವಾಮಿ. ಇವರ ನಿತ್ಯದ ಕಾರ್ಯಕ್ರಮವೆಂದರೆ ಶಾಲೆ, ಕಾಲೇಜು ವಿದ್ಯಾರ್ಥಿಗಳಿಗೆ ಸೂರ್ಯನಮಸ್ಕಾರ, ಆಸನಗಳನ್ನು ಹಾಕಲು ಕಲಿಸುವದು, ಅಲ್ಲದೆ ಪುಸ್ತಕಗಳನ್ನು ಬರೆದು ಪ್ರಕಟಮಾಡುವದು, ಇವರು 1) ಉದರದ ಆರೋಗ್ಯ. 2) ಸ್ನಾಯು

ಬಲಸಂವರ್ಧನೆ, 3. ಬ್ರಹ್ಮಚರ್ಯವೇ ಜೀವನ. 4. ಸೂರ್ಯನಮಸ್ಕಾರ ಸಚಿತ್ರವಾಗಿ ಮರಾಠಿಯಲ್ಲಿ ಬರೆದಿದ್ದಾರೆ. ಈ ಗ್ರಂಥಗಳನ್ನೇ ಶ್ರೀ ರಾಘವೇಂದ್ರರು ಕನ್ನಡದಲ್ಲಿ ಭಾಷಾಂತರಿಸಿ ಚಿತ್ರಶಾಲಾ ಮುದ್ರಣಾಲಯದಲ್ಲಿ ಮುದ್ರಿಸುತ್ತಿದ್ದರು. ಈ ಗ್ರಂಥಗಳ ಕರಡು ತಿದ್ದುವ ಕೆಲಸವನ್ನುಅವರಷ್ಟೇ ಶ್ರದ್ಧೆಯಿಂದ ನಾನು ಮಾಡುತ್ತಿದ್ದೆನು. ಈ ಮೇಲಿನ ಗ್ರಂಥಗಳಲ್ಲಿ ಆಸನಕ್ಕೆ, ಸೂರ್ಯನಮಸ್ಕಾರಕ್ಕೆ ಉಪಯೋಗಿಸಿದ ಪಡಿಯಚ್ಚುಗಳು ಶ್ರೀ ರಾಘವೇಂದ್ರರ ಶರೀರಸಂಪತ್ತೇ.

ಶಿವಾನಂದ ಸ್ವಾಮಿಜಿಯವರು ಅಂದಿನ ತರುಣ ತರುಣಿಯರಲ್ಲಿ ಧೈರ್ಯ, ಮನೋಬಲ, ಶರೀರದ ಆರೋಗ್ಯ ತಿದ್ದಲೆಂದು ಚಳವಳಿಯನ್ನೇ ಹೂಡಿದ್ದರು. ಆ ಕಾಲವೆಂದರೆ ಬ್ರಿಟಿಶರ ದಬ್ಬಾಳಿಕೆಯ ಕಾಲ. ಎಲ್ಲೆಲ್ಲೂ ಗುಲಾಮಗಿರಿ ತಾಂಡವವಾಡುತ್ತಿತ್ತು.ರಾಷ್ಟ್ರೀಯ ಮನೋಭಾವದ ಸಂಘಗಳು ಅಲ್ಲಲ್ಲಿ ಹುಟ್ಟಿಕೊಂಡು ದೇಶವನ್ನು ಧೈರ್ಯಶಾಲಿಯನ್ನಾಗಿ ಮಾಡುವಲ್ಲಿ ತೊಡಗಿದ್ದವು. ಇಂಥ ಸಂಘಗಳಲ್ಲಿ ಶ್ರೀ ಶಿವಾನಂದರ ಆಶ್ರಮವೂ ಪ್ರಮುಖ ಪಾತ್ರವನ್ನು ವಹಿಸಿತ್ತು. ಶ್ರೀ ಶಿವಾನಂದ ಸ್ವಾಮಿಗಳು ನೋಡಲಿಕ್ಕೆ ಭವ್ಯಆಕೃತಿ. ದಷ್ಟಪುಷ್ಟ ಕೆಂಪುವರ್ಣದ ಶರೀರ ವಿಶಾಲವಾದ ಹಣೆಯಮೇಲೆ ಕಪ್ಪುಕೂದಲಿನ ಜಟೆ, ಮತ್ತು ಮುಖದ ಕೆಳಗೆ ಕಪ್ಪು ಕೂದಲಿನ ಗಡ್ಡ ; ಇವುಗಳಿಂದ ಸ್ವಾಮಿಜಿಯವರ ವ್ಯಕ್ತಿತ್ವ ಎದ್ದು ಕಾಣುತ್ತಿತ್ತು. ಅವರ ವೇಷ ಒಂದು ಖಾದಿಯ ಲುಂಗಿ, ಮೈಯಲ್ಲಿ ಕಫನಿಯಂಥ ಬನಿಯನ್ನು, ಇದರ ಮೇಲೆ ಖಾದಿಯ ಶಾಲು, ಕೈಯ್ಯಲ್ಲಿ ಬೆಳ್ಳಿ ಹಿಡಿಕೆಯ ದಪ್ಪನ್ನ ಬಡಿಗೆ, ಕಾಲಲ್ಲಿ ಬಿಹಾರ ಮಾದರಿಯ ಚಡಾವು. ಇವರು ಬೀದಿಯಲ್ಲಿ ಹೋಗುತ್ತಿದ್ದರೆ ಸ್ತ್ರೀಯರು ನಿಂತು ಕಣ್ಮರೆಯಾಗುವವರೆಗೆ ನೋಡುತ್ತಿದ್ದರು. ಇಂಥ ಸ್ವಾಮಿಜಿಯವರು ನಮ್ಮ ರಾಘವೇಂದ್ರರಲ್ಲಿ ಅತ್ಯಂತ ವಿಶ್ವಾಸವುಳ್ಳವರಾಗಿದ್ದರು. ಈ ತರುಣನ ಮೇಲೆ ತಮ್ಮ ಯೋಜನೆಯ ಅಸ್ತಿವಾರವನ್ನುಹಾಕಿದ್ದರು. ಅವರು ಮಾತು ಮಾತಿಗೆ ನಮ್ಮರಾಘವೇಂದ್ರ ಎಲ್ಲವನ್ನೂ ನೋಡಿಕೊಳ್ಳುತ್ತಾನೆ ಎಂದು ಹೃದಯ ತುಂಬಿ ಮಾತನಾಡುತ್ತಿದ್ದರು. ಶಿಷ್ಯನು ಹೇಳಿದ ಕಾರ್ಯವನ್ನು ಕಟ್ಟಾಜ್ಞೆಯಂತೆ ಮಾಡುವದರಲ್ಲಿ ನಿಸ್ಸೀಮನು. ಶ್ರೀ ರಾಘವೇಂದ್ರರ ಅಂದಿನ ವೇಷವೆಂದರೆ ಖಾದಿಚಣ್ಣ, ನೆಹರು ಬನಿಯನ್ನು, ಮೇಲೆ ಒಂದು ಶುಭ್ರ ಖಾದಿಶಾಲು, ತಲೆಯ ಮೇಲೆ ಬಿಳಿ ಗಾಂಧಿ ಟೊಪ್ಪಿಗೆ. ಕಾಲಲ್ಲಿ ಬಲು ಹಗುರು, ಚಿಗರಿಯಂತೆ ಇವರ ನಡಿಗೆ. ಇವರ ನಡೆಯಲ್ಲಿ, ನುಡಿಯಲ್ಲಿ ಸೈನಿಕ ಶಿಸ್ತಿನ ಚಟುವಟಿಕೆ, ಹೇಳಿದ ಕಾರ್ಯ ಹೇಳಿದ ಕಾಲಕ್ಕೆ ಆಗಲೇಬೇಕೆಂಬ ಹಟ.

ಒಂದು ದಿನ ನಾನು ರಾಘವೇಂದ್ರರ ಭೆಟ್ಟಿಗೆ 'ಹೋದಾಗ ಇಲ್ಲಿಯ ನನ್ನ ಕೆಲಸ ಮುಗಿಯಿತು. ನಾನು ಹೊರಡುತ್ತೇನೆ. ಇನ್ನುಮುಂದೆ ಪತ್ರ ಮುಖಾಂತರ ನಮ್ಮಿಬ್ಬರ ಸ್ನೇಹವರ್ಧನೆ' ಎಂದರು.

ಯಥಾ ಕಾಷ್ಠಂಚ ಕಾಷ್ಠಂಚ ಸಮವೇತಾ ಮಹೋದಧೆ ಎಂದು ಹೇಳಿ ಮಹಾಸಾಗರದಲ್ಲಿ ಭಿನ್ನ ತೊಲೆಗಳು ಹೇಗೆ ಆಕಸ್ಮಿಕ ಬಂದು ಕೂಡುತ್ತವೆಯೊ ಹಾಗೆ ಕೂಡಿದೆವು ಎಂದು ಹೇಳಿದೆ.ಅವರು ತಾವು ಬರೆಯುವ ಕಥೆ ಕಾದಂಬರಿಗಳ ಯೋಜನೆಗಳನ್ನು ತಿಳಿಸಿದರು. ನಾನು ನನ್ನ ಕವಿತೆಗಳನ್ನು ತೋರಿಸಿದೆನು. ಮತ್ತು ಪುಣೆಯಲ್ಲಿಯ ಕಾರ್ಯಕ್ರಮ ಯೋಜನೆಯನ್ನು ವಿವರಿಸಿದೆ. ದೀನದಲಿತರ ವಿಷಯವಾಗಿ ರಾಘವೇಂದ್ರರಲ್ಲಿ ಬಹಳ ಕಳಕಳಿ, ಆದರೆ ಏನೂ ಕೆಲಸ ಮಾಡದೆ ನೆರವನ್ನು ಸ್ವೀಕರಿಸುವಂತಿರಲಿಲ್ಲ. ಮುಂದೆ ಪುಣೆಬಿಟ್ಟು ಬರೋಡೆಗೆ ಹೋಗುವೆನೆಂದು ಹೇಳಿದರು. ನಮಸ್ಕಾರ ಮಾಡಿ ಬೀಳ್ಕೊಟ್ಟೆನು. ಇಂದಿನ ಶ್ರೀ ರಾಘವೇಂದ್ರಸ್ವಾಮಿಜಿಯವರನ್ನುನೋಡಲಾಗಿ ತಮ್ಮ ತಾರುಣ್ಯದಲ್ಲಿ ದೀನ ದುರ್ಬಲರಿಗಾಗಿ ಪಡುತ್ತಿದ್ದ ಕಳಕಳಿಯನ್ನು ನಿವಾರಿಸಲೆಂದು ಇಂದು ಮಲ್ಲಾಡಿಹಳ್ಳಿಯಲ್ಲಿ (ಮಲ್ಲರಹಳ್ಳಿ) ಅನಾಥಸೇವಾಶ್ರಮವನ್ನು ಸ್ಥಾಪಿಸಿದ್ದಾರೆ. ಗಾಂಧೀಜಿಯವರ 'ಹಳ್ಳಿಗೆ ಹೋಗು (Go to village), ಎಂಬ ಕಾರ್ಯಕ್ರಮವನ್ನು ಕಾರ್ಯರೂಪದಲ್ಲಿ ತಂದವರೆಂದರೆ ಇವರೇ ಎಂದು ಹೇಳಬಹುದು.ಈ ಭೀಮಕಾಯದ ಸೇವಾಶ್ರಮದ ಧೀಮಂತ ವ್ಯಕ್ತಿ ನಾಡಿಗೆ, ನುಡಿಗೆ, ದೇಶಕ್ಕೆ ಒಂದು ಮರೆಯಲಾಗದ ರತ್ನವೆಂದು ಹೇಳದೇ ಮನಸ್ಸಿಗೆ ಸಮಾಧಾನವಿಲ್ಲ. ಶಬ್ದಗಳು ಕೃತಜ್ಞತೆಯನ್ನು ಪ್ರದರ್ಶಿಸಲು ಬಡವಾಗಿವೆ.

ಪಂ. ಕೆ. ಪಿ. ಶಿವಲಿಂಗಯ್ಯ

ತಿರುಕ

ಎಂಥ ಆಕರ್ಷಕ ಶಬ್ದವಿದು !
ಇರುವುದದರೊಳಗಾವುದೋ ಎರಕ !!
ತರುವುದಿದು ಚಿತ್ತ ಭಿತ್ತಿಯ ಮೇಲೆ ಒರಜಿನಲ್ ತಿರುಕನಾ ಭಾವ ಚಿತ್ರವನ್ನ :
'ಕರದಿ ಕಪ್ಪರವುಂಟು ಹಿರಿದೊಂದು ನಾಡುಂಟು' ಎಂದು ಸಾರಿದ
'ಮಂಡೆಬೋಳಿಸಿಕೊಂಡು ತುಂಡುಗಂಬಳಿ ಹೊದೆದ'
ಓರೊಂದು ವ್ಯಕ್ತಿಯಲಿ ಕಂಡುಂಡ ಅನುಭವವ
ಓರೊಂದು ಉಕ್ತಿಯಲಿ ಅಭಿವ್ಯಕ್ತಗೊಳಿಸುವವ
ಶಾಶ್ವತದಿ ಕನ್ನಡದ ಜನಮನದಿ ನೆಲೆಸಿರುವ
ವಿದ್ಯೆಯಾ ಪರ್ವತವೆ ಆದವ,
ನೀವಾದರೋ–
ಅನಾಥ ಸೇವಾಶ್ರಮದ (ಸ)ನಾಥ–ತಿರುಕ ;
'ಬ್ರಹ್ಮವನ ವಿಹಾರಿ'ಗಳಾಗಿ ವಿನೂತನ ರಾಘವೇಂದ್ರಸ್ವಾಮಿಗಳಾಗಿದ್ದೀರಿ ;
'ತಿರಿವರಿಂ ಸಿರಿವಂತರಾರ್' ಎನುವ ಸವಾಲನು ಸಾರ್ಥಕಗೊಳಿಸಿದ್ದೀರಿ.
ಜಾತಿಭೂತವನೋಡಿಸಲು ಸತತ ಹೆಣಗಿದ್ದೀರಿ,
ನೀತಿಯಲಿ 'ಪಂಡಿತಾಃ ಸಮದರ್ಶಿನಃ' ಆಗಿದ್ದೀರಿ ;
'ಮೂಲಕುಂಡಲಿಯನು ಮೇಲು ಮುಖವ ಮಾಡಿ' ಬ್ರಹ್ಮಚರ್ಯವನರ್ಥೈಸಿದಿರಿ,
ಎಂಬತ್ತ ದಾಟಿದರು ತಾರುಣ್ಯವನು ಸಿಗ್ಗಿಗೊಳಪಡಿಸಿದಿರಿ !
ಕೃತಿಕಾರರೂ ಆಗಿ ನಿಮ್ಮ ನೋಡುವ ಭಾಗ್ಯವಿತ್ತಿಹಿರಿ ನನ್ನನ್ನರಿಗೆ,
ಮಾನವಜನ್ಮ ದೊಡ್ಡದೆಂದು ಜ್ಞಾಪಿಸಿದಿರಿ ಈ ಹುಚ್ಚಪ್ಪಗಳಿಗೆ !!
ಇಪ್ಪತ್ತು ಮೇಲೈದು ರಾಷ್ಟ್ರೀಯ ಅಂಶಗಳ ಕಾರ್ಯಗತ ಗೊಳಿಸಿರುವ,
ಮಲ್ಲಾಡಿಹಳ್ಳಿಯನು ವಿದ್ಯೆಯ ಮಲ್ಲರಂಗವನ್ನಾಗಿಸಿದ,
ಶ್ರೀಶಿವಾನಂದ ಗುರುವಿನಾಣತಿಯ ಅಕ್ಷರಶಃ ಪಾಲಿಸಿದ,
ಓ 'ನಿಷ್ಕಾಮಕರ್ಮಿ' ನಿಮಗಿದೋ ನಮನಗಳು.

ಎ. ಟಿ. ದಾಸೇಗೌಡ

"ತಿರುಕ"ರ ಕವನಗಳು

ಕತೆ, ಕಾದಂಬರಿ, ನಾಟಕ ಮೊದಲಾದ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಕೈಯಾಡಿಸಿದ ತಿರುಕರು ಕಾವ್ಯ ರಂಗವನ್ನೂ ಪ್ರವೇಶಿಸಿದ್ದಾರೆ. ಯಾವುದೇ ವ್ಯಕ್ತಿಯ ಸಾಹಿತ್ಯಿಕ ಬರವಣಿಗೆ ಪ್ರಾರಂಭವಾಗುವುದು ಕವಿತೆಯಿಂದಂತೆ. ಬಹುಶಃ ಕವಿತೆ ಹುಟ್ಟುವುದು ಸುಪ್ತ ಪ್ರಜ್ಞೆಯಿಂದಾದ್ದರಿಂದ ಈ ಮಾತು ನಿಜವಿರಬಹುದು. ಏಕೆಂದರೆ ಅಂತಹ ಪ್ರತಿಭೆ ಅವನಲ್ಲಿ ಹುದುಗಿದ್ದರೆ ತಾನಾಗಿಯೇ ಕವಿತೆ ಸೃಷ್ಟಿಯಾಗುತ್ತದೆ. ಕವಿಯ ವ್ಯಕ್ತಿತ್ವ ಮತ್ತು ಮನೋಧರ್ಮದ ಹಿನ್ನೆಲೆಯಲ್ಲಿ ಕವಿತೆಗೆ ವಸ್ತು ಒದಗುತ್ತದೆ. ಇದನ್ನು ಹೇಳಿದ ಕಾರಣವಿಷ್ಟೆ: ತಿರುಕರು ಕವಿತೆ ಬರೆದುದು ಒಂದೆಡೆ ಕುಳಿತಲ್ಲ; ಪ್ರಜ್ಞಾಪೂರ್ವಕ ಸ್ಥಿತಿಯಿಂದಲ್ಲ; ಅವರು ತಮ್ಮ ವಿವಿಧ ಕಾರ್ಯ ವ್ಯಾಪಾರಗಳಲ್ಲಿ ಸುತ್ತುತ್ತಿರುವಾಗ ಅವರ ಅಂತರಂಗದ ಭಾವನೆಗಳನ್ನು ವಚನ–ಭಾವಗೀತೆ–ಕವನಗಳ ಶೈಲಿಯಲ್ಲಿ ಹರಿಸಿದ್ದಾರೆ. ಅಂತೆಯೇ ಈ ಕವಿತೆಗಳು ಪ್ರಾಮಾಣಿಕತೆಯಿಂದ ಕೂಡಿವೆ ಎಂದು ಬೇರೆ ವಿವರಿಸಬೇಕಿಲ್ಲ.

ಅವರು ಆರಿಸಿಕೊಂಡಿರುವ ವಸ್ತು ಮಾನವೀಯ ಮೌಲ್ಯವುಳ್ಳದು. ಮುಖ್ಯವಾಗಿ ಅವರ ಕವನಗಳ ದಾರಿಯೆಲ್ಲಾ ಆಧ್ಯಾತ್ಮ ಮತ್ತು ನೈತಿಕ ಕ್ಷೇತ್ರದತ್ತ ಸಾಗುತ್ತವೆ. ಈ ಕವಿತೆಗಳ ವಸ್ತು ಹಳೆಯದೆಂದೂ, ಧ್ವನಿ, ರಸ, ಪ್ರತಿಮೆ ಇಲ್ಲವೆಂದೂ ಯಾವುದೇ ರೀತಿಯ ಕುಂದಿಡುವವರಿಗೆ ತಿರುಕರ ಮಾತುಗಳೇ ಉತ್ತರವೀಯುತ್ತವೆ: "ನಮ್ಮ ಪ್ರಾಚೀನ ಋಷಿಮುನಿಗಳು ಅನುಭಾವಿಗಳು ಯಾವ ವಿಷಯವನ್ನೂ ಹೇಳದೆ ಬಿಟ್ಟಿಲ್ಲ. ಬರೆಯಲು ಮರೆತಿಲ್ಲ. ಅಂತಲ್ಲಿ ನನ್ನ ಮಟ್ಟಿಗೆ ಹೇಳುವುದಾದರೆ, ಇಂದು ನಾವೇನೇ ಹೊಸದೆಂದು ಬರೆದರೂ, ನವೀನವೆಂದು ಹೇಳಿದರೂ ಎಲ್ಲವೂ ಹಿಂದಿನವರ ಎಂಜಲೇ"—ಈ ಮಾತುಗಳನ್ನು ಅವರ ವಚನಸಾಹಿತ್ಯ ಓದುವಾಗ ನೆನಸಿಕೊಳ್ಳಬೇಕು. ಅವುಗಳನ್ನು ಓದುವಾಗ ಬಸವಣ್ಣ ಮೊದಲಾದ ವಚನಕಾರರೂ ಮತ್ತು ಕೀರ್ತನಕಾರರೂ ನೆನಪಿಗೆ ಬರುತ್ತಾರೆ. ಆದರೆ ಆ ವಸ್ತುವನ್ನೇ ತಮ್ಮ ರೀತಿಯಲ್ಲಿ ಅಭಿವ್ಯಕ್ತಿಸಿರುವುದನ್ನೂ ಅಲ್ಲಿಯೇ ಗುರುತಿಸಬಹುದು. ಆದರೆ ಈ ಕವನಗಳನ್ನು ಬರೆದ ಉದ್ದೇಶವಾದರೂ ಏನು ?

ಕವಿಶ್ರೇಣಿಯಲ್ಲಿ ವಿರಾಜಿಸುವ ಬಯಕೆ ಎನಗಿಲ್ಲ
ಜ್ಞಾನಿಗಳ ಮುಂದೆ ನಾ ಕುಣಿಯಬೇಕಿಲ್ಲ
........ನಾ ನನಗೆ ನಾನೇ ಹಾಡಿ
ಅಂತರಂಗದ ಬಯಕೆ ನಿನ್ನ ಮುಂದದೆ ತೋಡಿ

ತಿರುಕರು ತಮ್ಮ ಉಪದೇಶವನ್ನು ಯಾರ ಮೇಲೂ ಬಲಾತ್ಕಾರವಾಗಿ ಹೇರಿಲ್ಲ. ತಮಗೆ ತಾವೇ ಹಾಡಿಕೊಂಡಿದ್ದಾರೆ. ಅವು ಒಳ್ಳೆಯ ಮೌಲ್ಯವುಳ್ಳವು ಎನಿಸಿದರೆ ಇಚ್ಛೆಯುಳ್ಳವರು ಪ್ರಯೋಜನ ಪಡೆಯಬಹುದು. ಇವೆಲ್ಲ ತಿರುಕರ ಉನ್ನತ ವ್ಯಕ್ತಿತ್ವಕ್ಕೆ ಕನ್ನಡಿಯಾಗುತ್ತವೆ.

ನಾವು ಮುಖ್ಯವಾಗಿ ದೃಷ್ಟಿ ಹರಿಸಬೇಕಾದುದು ತಾವು ಆಯ್ದುಕೊಂಡ ಕ್ಷೇತ್ರದಲ್ಲಿ ಎಷ್ಟರಮಟ್ಟಿಗೆ ಯಶಸ್ವಿಯಾಗಿದ್ದಾರೆ ಎಂಬುದರ ಕಡೆಗೆ.

ಇವರ ಕವನ ಸಂಕಲನಗಳಲ್ಲಿ ಮೊದಲನೆ ಪಂಕ್ತಿಗೆ ಸಿಲ್ಲುವಂತಹ ಕೃತಿ "ಪೂಜೆ". ಪೂಜಿಸಬೇಕಾದರೆ ಭಕ್ತಿ ಪ್ರಧಾನವಾಗಿರಬೇಕು. ಇಲ್ಲವಾದರೆ ಆ ಪೂಜೆ ನೀರಸವಾಗುತ್ತದೆ, ಯಾಂತ್ರಿಕವಾಗುತ್ತದೆ. ಅಂತೆಯೇ ಈ ಕವನಗಳಲ್ಲಿ ಭಕ್ತಿಯ ರಸವಿದೆ; ಪ್ರಾರ್ಥನಾ ಶ್ಲೋಕಗಳಿವೆ; ಜತೆಗೆ ಕವಿಯ ಆಲೋಚನಾ ಶಕ್ತಿಯ ತೀವ್ರತೆಯೂ ಅಡಗಿದೆ. ಓದುಗರ ಹೃದಯವನ್ನು ಪರಿಣಾಮಕಾರಿಯಾಗಿ ಮುಟ್ಟಬಲ್ಲಂಥ ಮತ್ತು ನೇರ ಹಾಗೂ ಸರಳವಾಗಿ ನಿರೂಪಿತವಾಗಿರುವ ಈ ಕವಿತೆಗಳು ಹಾಡಲೂ ಅನುಕೂಲವಿದೆ. ಸಮಕಾಲೀನ ಸಾಮಾಜಿಕ ಮೌಲ್ಯಗಳನ್ನೊಳಗೊಂಡಂತೆ ಮತ್ತು ದೇಶಪ್ರೇಮ ಮತ್ತು ಡಾಂಭಿಕ ವೃತ್ತಿ—ಈ ವಸ್ತುವನ್ನೊಳಗೊಂಡ ಪದ್ಯಗಳು ಹಲವಿವೆ.

ದೇವರ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಅನ್ಯಾಯ, ಅತ್ಯಾಚಾರ, ಸುಲಿಗೆಗಳು ಇಂದು ಕಲ್ಪನೆಗೆ ನಿಲುಕದಷ್ಟಿವೆ. ಬಹುಶಃ ಇವುಗಳನ್ನು ಗಮನಿಸಿಯೇ ತಿರುಕರು 'ಪೂಜೆ' ಕವನದಲ್ಲಿ ಬರೆದಿದ್ದಾರೆ.

ತಿಳಿದು ಪೂಜೆಯ ಮಾಡು ಪುಣ್ಯ ಸಂಚಯ ಮಾಡು
ಕಳೆದು ಭ್ರಾಂತಿಯ ತತ್ತ್ವಮಂಥನವ ಮಾಡು
ಒಳಗೆ ತಾ ನೆಲಸಿರುವ ಅಂತರಾತ್ಮನ ಬೇಡು
ತಿಳಿಸುವ ಪೂಜೆಯ ಮರ್ಮವನೆ ನೋಡು........

ನಿಜವಾದ ಪೂಜೆ ಕರ್ಪೂರ, ಹೂ ಬತ್ತಿಯಲ್ಲಿಲ್ಲ; ದೀಪಧೂಪದಲ್ಲಿಲ್ಲ; ಆದರೆ ಹಸಿದವರಿಗೆ ಅನ್ನವಿಕ್ಕಿದಾಗ, ಅರಿವೆಯಿಲ್ಲದವರಿಗೆ ಅರಿವೆ ನೀಡಿದಾಗ ಪೂಜೆಯ ಫಲ ದೊರೆಯುತ್ತದೆ. ಅದೇ ರೀತಿ ಯಾವ ದೇಗುಲವೂ ಬೇಡ; ಯಾವ ಆಡಂಬರದ ಪೂಜೆಯೂ ಬೇಡ; ಅದರ ಬದಲು ಸಮಾಜಸೇವೆ ಕೈಗೊಂಡರೆ ಆತ್ಮತೃಪ್ತಿದೊರೆಯುತ್ತದೆ ಎನ್ನುವ ತಿರುಕರು 'ಜನಸೇವೆಯೇ ಜನಾರ್ಧನಸೇವೆ' ಎಂಬ ವಾಣಿಯನ್ನೆ ಪ್ರತಿನಿಧಿಸುವ ಈ ಕವಿತೆಯಲ್ಲಿ ಡಾಂಭಿಕ ಪೂಜೆಯನ್ನು ಅಲ್ಲಗಳೆದಿದ್ದಾರೆ.

ಈ ತತ್ತ್ವಗಳನ್ನು ಹಿಂದಿನವರು ಮೇಲಿಂದ ಮೇಲೆ ಹೇಳಿದ್ದಾರೆ. ಆದರೆ ಜನರ ಮನೋಧರ್ಮ ಬದಲಾಗಬೇಕಾದರೆ, ಅಂತಹ ಪ್ರವೃತ್ತಿಯುಳ್ಳವರಲ್ಲಿ ಆ ಪ್ರಜ್ಞೆ ನೆಲಸಬೇಕಾದರೆ ಒತ್ತಿ ಒತ್ತಿ ಹೇಳಿದಾಗಲೆ ಅದು ಸ್ವಲ್ಪ ಬೇರೂರುವುದು. ಅದೇ ರೀತಿ ಮಾನವೀಯತೆಯನ್ನು ಮರೆತು, ವ್ಯಾಲಿಗೊಂದು ಗುಡಿಕಟ್ಟಿ ನಿಷ್ಠೆ, ನಿಯಮವಿಲ್ಲದ ಡಂಭಾಚಾರ ಪ್ರವೃತ್ತಿಯವರಿಗೆ ಪೆಟ್ಟುಬೀಳುವುದು 'ಶಿಲ್ಪಿ' ಕವನದಲ್ಲಿ. ಇವೆಲ್ಲಕ್ಕಿಂತಲೂ ಇಂದಿನ ಜಾತ್ಯಾತೀತ ಮತ್ತು ಸಮತಾವಾದದ ಕೂಗುಗಳನ್ನು ಸಮರ್ಥಿಸುವ ಕವಿತೆಗಳು ಇಲ್ಲಿ ತುಂಬಾ ಗಮನಾರ್ಹವಾದುವು.

ಹಿಂದೆ ನಾವು ಉನ್ನತಧ್ಯೇಯಕ್ಕೆ ಬಳಸಿದ ತತ್ತ್ವ ಇಂದು ಹೇಗೆ ದುರುಪಯೋಗಪಡಿಸಿಕೊಳ್ಳುತ್ತಿದ್ದೇವೆ ಎಂಬುದರ ಒಂದು ಸ್ವಾರಸ್ಯಕರ ನಿರೂಪಣೆ 'ಸತ್ಯಾಗ್ರಹ'ದಲ್ಲಿ.ಬರುತ್ತದೆ. ಯಾವ ರಕ್ತಪಾತವನ್ನೂ ಮಾಡದೆ ಅಹಿಂಸಾಮಾರ್ಗದಿಂದ ಭಾರತ ದಾಸ್ಯಶೃಂಖಲೆಯಿಂದ ಬಿಡುಗಡೆಹೊಂದಲು ಗಾಂಧೀಜಿ ಪ್ರಯೋಗಿಸಿದ ಅಸ್ತ್ರ–ಸತ್ಯಾಗ್ರಹ. ರಾಷ್ಟ್ರಕ್ಕಾಗಿ, ಜನತೆಯ ಹಿತಕ್ಕಾಗಿ ಪ್ರಯೋಗಿಸಿದ ಮಹಾಸ್ತ್ರ ಅದು. ಆದರೆ ಇಂದು ಸತ್ಯಾಗ್ರಹ ಎಂಬುದು ಏನಾಗಿದೆ ? ಯಾವುದಕ್ಕೆ ಉಪಯೋಗವಾಗುತ್ತಿದೆ ? ಕ್ಷುದ್ರ ಕಾರಣಗಳನ್ನು ಮುಂದು ಮಾಡಿ, ಸತ್ಯಾಗ್ರಹ ಹೂಡಿ ಕಾರಾಗೃಹ ಸೇರಿದರೆ ಕೀರ್ತಿ ಬರುತ್ತದೆ ಎಂಬ ಸ್ವಾರ್ಥಕ್ಕಾಗಿ ; ಗಂಡ ತನಗೆ ಬೇಕಾದ್ದನ್ನು ಕೊಡಿಸಲಿಲ್ಲವೆನ್ನುವ ಹೆಂಡತಿಯ ಭರ್ತ್ಸನೆಗಾಗಿ ; ಕುಣಿಯಲು ಬಿಡವೆ, ಪಾಠ ಬೋಧಿಸುವ ಗುರುಗಳಿಗೆ ತಿರುಗಿ ಬೀಳುವ ಹುಡುಗರಿಗಾಗಿ ಮತ್ತು ತಮ್ಮ ಬಯಕೆ ಈಡೇರದಿದ್ದರೆ ಮಾಲೀಕನ ಮೇಲೆ ತಿರುಗಿಬೀಳುವ ಕಾರ್ಮಿಕರಿಗಾಗಿ ; ಇತ್ಯಾದಿ.

ಇಂತದೇ ಮೊದಲಾದ ಬದುಕಿನ ವಿಭಿನ್ನ ಗೊಂದಲಗಳನ್ನು ತಿಳಿಸುವ ಅಂಶಗಳು ಈ ಕವಿತೆಗಳಲ್ಲಿ ಅಡಗಿವೆ. ಸರಳವಾಗಿ ಸುಂದರವಾಗಿ ಜನಸಾಮಾನ್ಯರಿಗೆ ಅರ್ಥವಾಗುವಂಥ ಈ ಕವಿತೆಗಳಲ್ಲಿ ಸಮಾಜವಿಮರ್ಶೆಯೂ ನಡೆದಿದೆ.

ಈ ಸಂಕಲನದ ಕೊನೆಯ ಭಾಗ ಜನಪದಸಾಹಿತ್ಯ. ಆಡುಮಾತಿನಲ್ಲಿ, ದೇಸಿಯ ಶೈಲಿಯಲ್ಲಿ ಹಳ್ಳಿಯ ಸಂಸಾರವೊಂದರ ಚಿತ್ರ ಇಲ್ಲಿ ವ್ಯಕ್ತಗೊಂಡಿದೆ. ಹಳೆತು ಮತ್ತು ಹೊಸತು ಮೌಲ್ಯಗಳ ನಡುವಿನ ತಿಕ್ಕಾಟ ಇದರ ವಸ್ತು. ಇದೇ ರೀತಿ 'ಸೊಳ್ಳೆ–ತಿಗಣೆ'ಯೂ ಕೂಡ ಒಂದು ವಿಡಂಬನಚಿತ್ರ. ಬಡವರ ರಕ್ತವನ್ನು ಹೀರುವ ನಿಜವಾದ ಸೊಳ್ಳೆ–ತಿಗಣೆಗಳು ಶ್ರೀಮಂತರೆಂಬ ವಸ್ತುವುಳ್ಳ ಈ ಕವಿತೆ ಸೊಳ್ಳೆ–ತಿಗಣೆಗಳ ನಿದರ್ಶನದೊಡನೆ ಕವಿತಾ ತಂತ್ರವನ್ನೂ ಹೊಂದಿದೆ.

ಒಟ್ಟಿನಲ್ಲಿ 'ಪೂಜೆ' ಕವನಸಂಕಲನ ವಸ್ತುವಿನ ದೃಷ್ಟಿಯಿಂದ ಸಮಕಾಲೀನ ಸ್ಥಿತಿಯ ಕಡೆ ಬಾಗುತ್ತದೆ. ಭಾವಗೀತೆಯ ಶೈಲಿಯೂ ಅದರ ಉದ್ದೇಶವನ್ನು ಈಡೇರಿಸಿದೆ. ಹೇಳಿದ ತತ್ತ್ವವೇ ಪುನರಾವರ್ತಿಯಾಗುವುದಾದರೂ ಸ್ವಾರಸ್ಯ ಕೆಡದಂತಿರುವುದು ಇಲ್ಲಿಯ ಹೆಚ್ಚಳ.

ಧಾರ್ಮಿಕ ಮತ್ತು ನೈತಿಕ ಮೌಲ್ಯಗಳ ಕಡೆಗೆ ಜನಮನವನ್ನು ಸೆಳೆಯುವ ಉತ್ತಮ ಸಾಹಿತ್ಯಪ್ರಕಾರ 'ವಚನ ಸಾಹಿತ್ಯ'. 12ನೇ ಶತಮಾನದಲ್ಲಿ ಸಾಮಾನ್ಯರ ಗದ್ದುಗೆ ಏರಿದ ಈ ಸಾಹಿತ್ಯ ಜನಸಾಮಾನ್ಯರ ನಾಲಿಗೆಯ ಮೇಲೆಲ್ಲಾ ಕುಣಿದಾಡುತ್ತಿದೆ. ಜನರಿಗೆ ಉಪದೇಶ ಬೋಧನೆಗೆ, ನೀತಿ ಹೇಳುವುದಕ್ಕೆ ಈ ಮಾರ್ಗವೇ ಸರಿ. ಆದ್ದರಿಂದ ಇದನ್ನೇ ಮಾಧ್ಯಮವನ್ನಾಗಿ ಬಳಸಿಕೊಂಡಿದ್ದಾರೆ.

"ನಾ ನುಡಿವ ಮಾತು ಅನುಭಾವಿಗಳು ನುಡಿದ ಮಾತಿನ ಎಂಜಲಯ್ಯ" ಎಂದು ತಮ್ಮ 'ಅಂತರ್ವಾಣಿ'ಯಲ್ಲಿ ನುಡಿದಿದ್ದಾರೆ. ಈ ವಚನಗಳನ್ನೋದುವಾಗ ಬಸವಣ್ಣನವರ ಮಾತುಗಳು ನೆನಪಿಗೆ ಬರುತ್ತವೆ. ಕೂಡಲ ಸಂಗಮದೇವ ಅವರಿಗೆ ಇಷ್ಟದೈವವಾದಂತೆ ಇವರು ಪರಮೇಶದಾಸನಿಗೆ ತಮ್ಮ ಅಂತರಂಗವನ್ನು ತೋಡಿಕೊಂಡಿದ್ದಾರೆ. "ಲೋಕಗಳೆರಡುಂಟಯ್ಯಾ, ಇಲ್ಲಿ ಅಂಜಿ ನಡೆದವರಿಗೆ ಅಲ್ಲೂ ತಾವುಂಟಯ್ಯ" ಎನ್ನುವಾಗ ಬಸವಣ್ಣನವರ"ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯ"ಎಂಬ ಮಾತೂ,"ಕುಲ ಕುಲವು ಕುಲವೆಂದು ಹಿರಿದಾಡಿಕೊಂಬರೇ ಕುಲ ನಿಮ್ಮದ್ಯಾವುದೋ ತಿಳಿದು ಪೇಳುವಿರಾ ?" ಎನ್ನುವಲ್ಲಿ ಕನಕದಾಸರ "ಕುಲ ಕುಲವೆಂದು ಹೊಡೆದಾಡದಿರಿ, ಕುಲ ಯಾವುದು ಸತ್ಯಸುಖವುಳ್ಳ ಜನರಿಗೆ" ಎಂಬ ಕೀರ್ತನೆಯೂ ನೆನಪಿಗೆ ಬರುತ್ತವೆ. ಒಟ್ಟಿನಲ್ಲಿ ಹಿರಿಯರ ತತ್ತ್ವಗಳನ್ನೇ ತಮ್ಮದೇ ಶೈಲಿಯ ಮೂಲಕ ಸರಳವಾಗಿ ನಿರೂಪಿಸಿದ್ದಾರೆ. ಇಲ್ಲಿಯ ಅನೇಕ ಉಪಮೆಗಳು ಜನಸಾಮಾನ್ಯರಿಗೆ ಆಸಕ್ತಿ ಕೆರಳಿಸಿ ಅವರ ಮನದಲ್ಲಿ ಬಹಳಕಾಲ ನಿಲ್ಲಬಲ್ಲುವು. ಸಾಮಾನ್ಯರ ದೃಷ್ಟಿ ಹೊಂದಿದ ಈ ವಚನಗಳು ಹಿಂದಿನ ವಾಣಿಗಳ ಉತ್ಸವಮೂರ್ತಿಗಳಾಗಿವೆ.

ಈ ಕವಿತೆಗಳು ಲೌಕಿಕದಿಂದ ಪಾರಮಾರ್ಥಿಕದೆಡೆಗೆ ಒಯ್ಯುವ ಧೋರಣೆಯುಳ್ಳವಾದರೂ, ಸಮಕಾಲೀನ ಬದುಕಿನ ವಿಷಮತೆ ಇಲ್ಲಿ ಸ್ಪಷ್ಟಗೊಂಡಿದೆ. ಇಲ್ಲಿ ಎಲ್ಲಿಯೂ ಮೌಢ್ಯ ಪ್ರತಿಪಾದನೆಯಾಗಿಲ್ಲ ; ಅಂಧಶ್ರದ್ಧೆಯನ್ನು ಮೆಚ್ಚಿಲ್ಲ. ಈ ಧೋರಣೆವುಳ್ಳವಾದ್ದರಿಂದಲೇ ಈ ಕವನಗಳು ಸಾರ್ವಕಾಲಿಕವಾಗಬಲ್ಲುವು. ಇದರಲ್ಲಿ ಜಾತಿ–ಮತ ಭೇದಗಳಿಗೆ ಪ್ರತಿಭಟನೆಯಿದೆ ; ಅಜ್ಞಾನ, ಅಂಧತೆಗಳಿಗೆ ವಿರೋಧವಿದೆ.

ತಿರುಕರ ಉನ್ನತ ಪ್ರತಿಭೆಗೆ, ಅವರ ಆಲೋಚನಾಶಕ್ತಿಗೆ ಇಲ್ಲಿ ಒಂದೆರಡು ವಚನಗಳನ್ನು ನಿದರ್ಶಿಸಬಹುದು.

> ಎನಗೆ ಔಷಧವ ಹುಯ್ದು ಹುಯ್ದು
> ಕೆಡಸಿದರು ಕಾಣಯ್ಯ ಈ ವೈದ್ಯರು
> ಎನಗಂಟಿಹ ನಿಜದ ರೋಗವ ತಿಳಿಯಲಾರದೆ

ಪ್ರಾಣವನ್ನು ಹಿಂಡುತಿಹರಯ್ಯ ಈ ದುರುಳರು
....
ಘನ ವೈದ್ಯರಾರೂ ದೊರಕಿಲ್ಲವಯ್ಯಾ
ಎನ್ನೀ ಅಜ್ಞಾನದ ರೋಗವ ನೀಗುವವರು

ಈ ವಚನ ಮೌಢ್ಯತೆಯನ್ನು ಕಿತ್ತೆಸೆದು, ವೈಚಾರಿಕತೆಗೆ ತೆರವು ಮಾಡಬೇಕೆಂಬ ಉನ್ನತ ವಸ್ತುವನ್ನು ಸಾಂಕೇತಿಕವಾಗಿ ಧ್ವನಿಸಬಲ್ಲುದು. ಜಗತ್ತಿನ ಇಂದಿನ ಈ ಜಟಿಲ ಸಮಸ್ಯೆಗಳಿಗೆ ಬಹುಪಾಲು ನಿರಕ್ಷರತೆಯೇ ಕಾರಣ. ಜನ ಜ್ಞಾನಾರ್ಜನೆಯುಳ್ಳವರಾದರೆ ತಮ್ಮ ಸುತ್ತಲ ಸಮಸ್ಯೆಗಳಿಗೆ ತಾವೇ ಪರಿಹಾರ ಹುಡುಕುತ್ತಾರೆ. ವಿದ್ಯೆ ಸಾಮಾಜಿಕ ರೋಗರುಜಿನಗಳಿಗೆ ಸಿದ್ಧೌಷಧವಾಗಬಲ್ಲುದು. ಅದಿಲ್ಲದಿದ್ದರೆ ಲೋಕಕಲ್ಯಾಣಕ್ಕಾಗಿ, ಮನುಕುಲದ ಶ್ರೇಯಸ್ಸಿಗಾಗಿ ಯಾವ ಯೋಜನೆ ಹಾಕಿದರೂ ಅದು ಮೊಲದ ಕೋಡಾಗುತ್ತದೆ. ಎಂತಲೆ ಜಗತ್ತಿಗೆ ಜ್ಞಾನದೀವಿಗೆ ಬೆಳಗಿದಾಗ ಈ ರೋಗ ಉಪಶಮನವಾಗಬಲ್ಲುದು. ಈ ಅಭಿಪ್ರಾಯವನ್ನು ತಿರುಕರ ಮೇಲಿನ ಕವನ ದರ್ಶಿಸುತ್ತದೆ.

ಇದೇ ರೀತಿ ಬರೀ ಭಾಷಣದಲ್ಲೇ ಹೊಗಳಿ ಹೋಗುವವರು ; ದೋಷವನ್ನೇ ಹುಡುಕಿ ತೆಗಳುವವರು; ಗೋವಿನಂತೆ ಕಂಡು ವ್ಯಾಘ್ರರಾದವರು ; ನೋವಿಲ್ಲದೇ ಕಿತ್ತು ತಿನ್ನ ಬಯಸುವವರು ;–ವಚನಗಳಲ್ಲಿ ಅಲ್ಲಲ್ಲಿ ಕಾಣುವ ಈ ಮಾತುಗಳು ವಾಸ್ತವ ಬದುಕಿನ ವಿಪರ್ಯಾಸದ ಹಲವು ಚಿತ್ರಗಳು.

ಇಂಥದೇ ಆದ ಅವರ ಮತ್ತೊಂದು ಕೃತಿ 'ಹಣ್ಣು–ಕಾಯಿ'. ಇದರಲ್ಲಿ ಭಾವಗೀತೆ ಮತ್ತು ಕ್ರೀಡಾರಂಗಕ್ಕೆ ಅನುಕೂಲವಾಗುವಂಥ ಹಾಡುಗಳು ಮತ್ತು ದೇವರ ನಾಮಗಳು ಹಲವಾರು ವೈಖರಿಯಲ್ಲಿ ಮೂಡಿಬಂದಿವೆ. ಗ್ರಾಮೀಣ ಜನರ ಮನೋರಂಜನೆಗಾಗಿ ಮತ್ತು ಶಾಲಾಮಕ್ಕಳ ಲೆಜಿಂ, ಡಂಬೆಲ್ಸ್ ಮೊದಲಾದ ತಾಳಬದ್ಧ ಸಾಂಘಿಕ ವ್ಯಾಯಾಮಕ್ಕೆ ಅನುಕೂಲವಾಗುವಂಥ ಗೀತೆಗಳು ಇಲ್ಲಿ ಕಂಡುಬರುತ್ತದೆ. ನಾಡು, ನುಡಿಯ ವೈಭವದ ಚಿತ್ರಣ ಮತ್ತು ಐತಿಹಾಸಿಕ ಹಾಗೂ ಪೌರಾಣಿಕ ಮಹಾವ್ಯಕ್ತಿಗಳ ಗುಣಗಾನ, ಈ ಕವಿತೆಗಳ ಮುಖ್ಯ ವಸ್ತುಗಳಾಗಿವೆ.

ಒಟ್ಟನಲ್ಲಿ ತಿರುಕರ ಕವಿತೆಗಳು ಎಲ್ಲವೂ ಶ್ರೇಷ್ಠ ಮಟ್ಟದವು ಎನ್ನಲಾಗದಿದ್ದರೂ ಅವುಗಳು ಸಾರುವ ಮೌಲ್ಯಗಳು ಚಿರಕಾಲವಾದುವು. ಯಾವುದೇ ಅಜ್ಞಾನ, ಮೌಢ್ಯತೆ, ಮೂಢನಂಬಿಕೆಗಳನ್ನು ಪ್ರತಿಪಾದಿಸದೆ ವೈಜ್ಞಾನಿಕ ದೃಷ್ಟಿಕೋನದ ಕಡೆಗೆ ವಾಲಿರುವುದು ಈ ಕವಿತೆಗಳ ಶ್ರೇಷ್ಠತೆಯನ್ನು ಸ್ಪಷ್ಟಪಡಿಸುತ್ತದೆ. ಅಂತೆಯೇ ಇವುಗಳಿಗೆ ಇಂದಿನ ನೀತಿಸಾಹಿತ್ಯದ ಮಟ್ಟದಲ್ಲಿ ಒಂದು ವಿಶಿಷ್ಟ ಸ್ಥಾನವಿದೆ.

ಎ. ಕೃಷ್ಣಮೂರ್ತಿ

ತಿರುಕರ ಶಾಸ್ತ್ರಗ್ರಂಥಗಳು

ಸೂರ್ಯನಮಸ್ಕಾರ

ಈಗ ಮೂರು ಸಾವಿರ ವರ್ಷಗಳ ಹಿಂದಿನಿಂದಲೂ ಭಾರತದಲ್ಲಿ ಋಷಿಶ್ರೇಷ್ಠರೇ ಆದಿಯಾಗಿ ಎಲ್ಲರೂ ಆಚರಿಸುತ್ತಿದ್ದ ಸೂರ್ಯೋಪಾಸನೆ, ಸೂರ್ಯನಮಸ್ಕಾರ ಕೆಲವುಕಾಲ ಜನಮನದಿಂದ ದೂರವಾಗಿತ್ತು. ಸೂರ್ಯ ಜಗತ್ತಿಗೆ ಬೆಳಕು ಬೀರುವವನೆಂದು ಮಾತ್ರ ಅವನನ್ನು ಪೂಜಿಸುತ್ತಿರಲಿಲ್ಲ. ಸಕಲ ಜೀವರಾಶಿಗಳಿಗೂ ಸೂರ್ಯನ ಕಾಂತಿ ಆರೋಗ್ಯದಾಯಕ, ದೇಹ ಮನೋವಿಕಾಸಕ್ಕೆ ಸಹಾಯಕ ಎಂದು ನಮ್ಮ ಹಿರಿಯರು ಮನಗಂಡಿದ್ದರು. ಈಗ ವಿಜ್ಞಾನಿಗಳು ಸಂಶೋಧನೆ ನಡೆಸಿ ಸೂರ್ಯನ ಬೆಳಕು ಪ್ರಕೃತಿಚಿಕಿತ್ಸೆಗೆ ಸಂಜೀವಿನಿ ಎಂದು ಹೇಳುತ್ತಿದ್ದಾರೆ. ಸೂರ್ಯನಮಸ್ಕಾರ ಈಗ ಮತ್ತೆ ತನ್ನ ಮುಂಚಿನ ಪ್ರಾಮುಖ್ಯತೆಯನ್ನು ಪಡೆಯುತ್ತಿದೆ ಮಾತ್ರವಲ್ಲ ; ಹುಟ್ಟು ದೇಶದ ಗಡಿ ದಾಟಿ ಪರದೇಶಗಳಲ್ಲಿಯೂ ತನ್ನ ಶ್ರೇಷ್ಠತೆಯನ್ನು ಸ್ಥಾಪಿಸುತ್ತಿದೆ.

ಸೂರ್ಯನಮಸ್ಕಾರ ಸೂರ್ಯನ ಉಪಾಸನೆಯೂ ಹೌದು ; ಅಂಗಸಾಧನೆಯೂ ಹೌದು. ಅಲ್ಲದೆ ಆತ್ಮ ಶಕ್ತಿಯ ವರ್ಧನೆಗೆ, ಮನೋವಿಕಾಸಕ್ಕೆ ಚೈತನ್ಯಸಂವರ್ಧನೆಗೆ ಸೂರ್ಯನಮಸ್ಕಾರ ಪ್ರೇರಕ. ಇದನ್ನು ಪೂಜ್ಯ ಸ್ವಾಮಿಜಿಯವರು ಬಹಳ ಚನ್ನಾಗಿ ಈ ಪುಸ್ತಕದಲ್ಲಿ ಸಮರ್ಥಿಸಿದ್ದಾರೆ. ಈ ಕ್ಷೇತ್ರದಲ್ಲಿ ಅವರಿಗೆ ನಲವತ್ತು ವರ್ಷಕ್ಕೂ ಮೀರಿದ ಅನುಭವ. ಸೂರ್ಯನಮಸ್ಕಾರದ ಬಗ್ಗೆ ಅಧ್ಯಯನ ಮತ್ತು ಪ್ರಯೋಗಗಳನ್ನುನಡೆಸಿದ್ದಾರೆ. ಈ ಉಪಾಸನೆಯಿಂದ ಲಭಿಸುವ ವರಪ್ರಸಾದಕ್ಕೆ ಅವರೇ ಸಾಕ್ಷಿ. ಆದುದರಿಂದ ಅವರ ಲೇಖನಿಯಿಂದ ಬಂದಿರುವ ಈ ಪುಸ್ತಕದ ಸಂದೇಶ ಅಧಿಕಾರವಾಣಿ. ಆದರೂ ಸೂರ್ಯನಮಸ್ಕಾರ ಪದ್ಧತಿಯಲ್ಲಿ ವಿಭಿನ್ನತೆಯಿರುವುದನ್ನು ಪ್ರಸ್ತಾಪಿಸುವಾಗ “ಭಾರತದಲ್ಲಿರುವ ಯೋಗತಜ್ಞರೆಲ್ಲ ಒಂದು ಕಡೆ ಕಲೆತು ಪರಸ್ಪರ ವಿಚಾರ ವಿನಿಮಯಮಾಡಿ ಒಂದು ಸಿದ್ಧಾಂತಕ್ಕೆ ಬರುವುದು ಸೂಕ್ತ” ಎಂದು ಸಲಹೆಮಾಡಿರುವುದು ಗಮನಾರ್ಹ.

ಸೂರ್ಯನಮಸ್ಕಾರ ಪ್ರಾರಂಭದಲ್ಲಿ ಕಷ್ಟವಾಗಬಹುದು. ಆದರೆ ಅಳಿಯದ ಆಸಕ್ತಿ, ಸತತ ಪ್ರಯತ್ನ, ಮಂತ್ರಪೂರ್ವಕ ಆಚರಣೆ–ಇವುಗಳಿಂದ ಅದನ್ನು ಸಾಧಿಸಿಕೊಳ್ಳಬಹುದು ಎಂಬ ಸ್ವಾಮಿಜಿಯವರ ನುಡಿ ಓದು ಗರಲ್ಲಿ ಉತ್ಸಾಹ ಮೂಡಿಸುವುದು ಖಂಡಿತ.

ಸಾಷ್ಟಾಂಗ ನಮಸ್ಕಾರದ ವಿವಿಧ ಆಸನಗಳನ್ನು ಮಾಡುವುದು, ಹಾಗೆ ಮಾಡಿದಾಗ ದೇಹದ ಅಂಗಾಂಗ ಗಳಿಗೆ ಆಗುವ ಸಾಧನೆ, ಆಸನಗಳನ್ನು ಮಾಡುವಾಗ ಪಠಿಸಬೇಕಾದ ಮಂತ್ರಗಳು,ಸೂರ್ಯಾಷ್ಟೋತ್ತರ—ಇವೆಲ್ಲ ವನ್ನೂ ಒಳಗೊಂಡ ಈ ಪುಸ್ತಕ ಎಲ್ಲ ದೃಷ್ಟಿಯಿಂದಲೂ ಪೂರ್ಣವಾಗಿದೆ.

ಆರಾಧ್ಯ ದೇವತೆಯಲ್ಲಿ(ಇಲ್ಲಿ ಸೂರ್ಯ)ನಂಬಿಕೆ, ಭಕ್ತಿ ಮತ್ತು ಏಕಾಗ್ರತೆ ಅತಿ ಆವಶ್ಯಕವೆಂಬ ಹೇಳಿಕೆ ನಮ್ಮ ಎಲ್ಲ ಕೆಲಸಕ್ಕೂ ಬೇಕಾದ ಗುಣಗಳು. ಈ ಆದರ್ಶವನ್ನು ಬೆಳೆಸಿಕೊಳ್ಳುವುದು ಎಲ್ಲರಿಗೂ ಅಗತ್ಯ.

ಈ ಪುಸ್ತಕದಲ್ಲಿಯೂ ಉಲ್ಲೇಖಿಸಿರುವ "ಆಹಾರ ನಿಯಮಗಳು" ಮತ್ತು ಛಾಯಾ ಚಿತ್ರಗಳು ಎಷ್ಟು ಉಪಯುಕ್ತವಾಗಿವೆ ಎಂಬುದನ್ನು ಒತ್ತಿ ಹೇಳಬೇಕಾದುದು ಅನಾವಶ್ಯಕ.

ಈ ಪುಸ್ತಕದ ಪ್ರಾರಂಭದಲ್ಲಿರುವ ಹನ್ನೊಂದು ಪುಟದ ಆತ್ಮ ನಿವೇದನೆಯು "ಸೂರ್ಯನಮಸ್ಕಾರ"ಕ್ಕೆ ಒಳ್ಳೆಯ ಪೀಠಿಕೆ.

ಪ್ರಾಣಾಯಾಮ

"ನಮ್ಮ ರಾಜ್ಯದಲ್ಲಿ ನೀನು ಕಲಿತ ಯೋಗವನ್ನು ಪ್ರಚಾರಮಾಡು" ಎಂದು ಗುರುಗಳಿತ್ತ ಆಣತಿಯನ್ನು ಚಾಚೂ ತಪ್ಪದೆ ಪಾಲಿಸಲು ಪೂಜ್ಯ ರಾಘವೇಂದ್ರ ಸ್ವಾಮಿಗಳು ಪಣತೊಟ್ಟಿದ್ದಾರೆ. ಉತ್ತರ ದೇಶದಿಂದ ಹಿಂತಿರುಗಿದ ಕೂಡಲೇ ಕರ್ನಾಟಕದ ವಿವಿಧ ಪ್ರದೇಶಗಳಿಗೆ ಹೋಗಿ ಶಿಬಿರಗಳನ್ನು ಸ್ಥಾಪಿಸಿ ಸಹಸ್ರಾರು ಜನರಿಗೆ ಯೋಗಾಭ್ಯಾಸದಲ್ಲಿ ಶಿಕ್ಷಣ ಕೊಟ್ಟರು. ಅವರ ಹತ್ತಿರ ಇರುವವರಿಗೆ, ಬರುವವರಿಗೆ ಮತ್ತು ಅವರೇ ಸೃಷ್ಟಿಸಿರುವ ಶಾಲೆಗಳಲ್ಲಿರುವ ವಿದ್ಯಾರ್ಥಿಗಳಿಗೆ ಯೋಗದ ಬೋಧನೆ ನಡೆಯುತ್ತಿದೆ. ಮಲ್ಲಾಡಿಹಳ್ಳಿ ಕ್ಷೇತ್ರದಿಂದ ದೂರವಾಗಿರುವವರನೇಕರಿಗೆ ಸ್ವಾಮೀಜಿಯವರ ಯೋಗಾಭ್ಯಾಸದ ಪುಸ್ತಕಗಳು ಉತ್ತಮ ಮಾರ್ಗದರ್ಶನ ಮಾಡುತ್ತವೆ. ಆ ಪುಸ್ತಕಗಳಲ್ಲಿ "ಪ್ರಾಣಾಯಾಮ, ದೇಹಸ್ವಾಸ್ಥ್ಯ, ಸಾಕ್ಷಾತ್ಕಾರ" ಎಂಬ ಪುಸ್ತಕ ಒಂದು ಅಮೂಲ್ಯ ಕೊಡುಗೆ.

ಯೋಗಾಸನ, ಪ್ರಾಣಾಯಾಮ, ಧ್ಯಾನ ಇವುಗಳು ಪಾರಮಾರ್ಥಿಕ ಮತ್ತು ಐಹಿಕ ಪ್ರಗತಿಗೆ ಮೂಲ ಸಾಧನವೆಂಬ ಅಭಿಪ್ರಾಯ ಜನರಿಗೆ ಮರೆತೇ ಹೋಗಿತ್ತು. ಇತ್ತೀಚೆಗೆ ಜನ ಈ ವಿಷಯಗಳನ್ನು ಕುರಿತು ಚಿಂತಿಸುತ್ತಿರುವಾಗ ಪ್ರಾಣಾಯಾಮ, ಯೋಗಾಸನಗಳು ಆತ್ಮೋದ್ಧಾರಕ್ಕೆ ಮತ್ತು ಆರೋಗ್ಯಕ್ಕೆ ಆವಶ್ಯಕವೆಂದು ಸಾರುವ ಈ ಪುಸ್ತಕ ಸಕಾಲಿಕ ಮತ್ತು ಸ್ವಾಗತಾರ್ಹ.

ಮೋಕ್ಷಪ್ರಾಪ್ತಿಗೆ ಸಾಧನಗಳಾದ ಜ್ಞಾನಯೋಗ, ಕರ್ಮಯೋಗ, ಭಕ್ತಿಯೋಗ ಮತ್ತು ರಾಜಯೋಗಗಳನ್ನು ವಿವರಿಸಿ ಸ್ವಾಮೀಜಿಯವರು ರಾಜಯೋಗದ ಅಷ್ಟಾಂಗಯೋಗಗಳಲ್ಲಿ ನಾಲ್ಕನೆಯದಾದ ಪ್ರಾಣಾಯಾಮವನ್ನು ವಿಶದವಾಗಿ ವಿಚಾರಮಾಡಿದ್ದಾರೆ.

ಎಲ್ಲಿ ಚಲನೆಯಿದೆಯೋ ಅಲ್ಲಿ ಪ್ರಾಣಶಕ್ತಿ ಇದೆ,ನಮ್ಮಲ್ಲಿ. ಈ ಪ್ರಾಣಶಕ್ತಿಯ ನಿಯಂತ್ರಣವೇ ಪ್ರಾಣಾಯಾಮ. ದೇಹಸ್ವಾಸ್ಥ್ಯವು ಪ್ರಾಣಾಯಾಮದ ಒಂದುಗುರಿ. ಮನಸ್ಸಿಗೂ ಪ್ರಾಣಕ್ಕೂ ನಿಕಟವಾದ ಸಂಬಂಧವಿರುವುದರಿಂದ ಪ್ರಾಣದ ಸಹಾಯದಿಂದ ಮನಸ್ಸಿನ ವೃತ್ತಿಯನ್ನು ತಡೆದು ಅದನ್ನು ಆತ್ಮಾಭಿಮುಖವಾಗಿ ಮಾಡುವುದೇ ಪ್ರಾಣಾಯಾಮದ ಮೂಲ ಉದ್ದೇಶ.ಆದುದರಿಂದ ಪ್ರಾಣಾಯಾಮವು ಎಲ್ಲರಿಗೂ ಬೇಕೆಂಬ ಅಂಶವನ್ನುಲೇಖಕರು ಬಲು ಸಮಂಜಸವಾಗಿ ಸಮರ್ಥಿಸಿದ್ದಾರೆ.

ಪ್ರಾಣಾಯಾಮವೆಂದರೆ ಕೇವಲ ಉಸಿರಾಟವಲ್ಲ. ಉಸಿರಾಟ ಬಹಿರಂಗದ ವ್ಯಾಪಾರ ಮಾತ್ರ ; ಆದರೆ ಪ್ರಾಣಾಯಾಮ ಅಂತರಂಗಸಾಧನೆ. ಅಂತರಂಗಸಾಧನೆಯಿಂದ ಆತ್ಮಸಾಕ್ಷಾತ್ಕಾರವನ್ನು ಸಾಧಿಸುವುದು ಹೇಗೆ–ಎಂಬುದು ಸಾಮಾನ್ಯ ಜನರಿಗೂ ತಿಳಿಯುವಂತೆ ವಿವರಿಸಲ್ಪಟ್ಟಿದೆ.

ಪ್ರಾಣಾಯಾಮದಿಂದ ದೇಹಸ್ವಾಸ್ಥ್ಯ ಹೇಗಾಗುತ್ತೆಂಬುದನ್ನು ಮತ್ತು ಯಾವ ಕಾಯಿಲೆಗಳೂ ಬಾರದಂತೆ ತಡೆಯಬಹುದು ಎಂಬುದನ್ನು ವಿವರಿಸಲು ಒಂದು ಅಧ್ಯಾಯವೇ ಮೀಸಲಾಗಿದೆ. ಇದರಿಂದ ಪ್ರಾಣಾಯಾಮ ಒಂದು ಚಿಕಿತ್ಸಾಕ್ರಮವಾಗಿ ಕೈಕೊಳ್ಳಲು ಈ ಪುಸ್ತಕ ಪ್ರೇರೇಪಿಸುತ್ತದೆ.

ಪ್ರಾಣಾಯಾಮ, ಯೋಗಾಭ್ಯಾಸ–ಈ ಪ್ರಾಚೀನ ಸಾಧನೆಗಳು ದೇಹಶಕ್ತಿ ಮತ್ತು ಆತ್ಮಶಕ್ತಿಯ ಬೆಳವಣಿಗೆಗೆ ಬಹಳ ಸಹಾಯಕಾರಿ ಎಂಬ ಭಾವನೆ ಜನರಲ್ಲಿ ಖಚಿತವಾಗಲು ಸ್ವಾಮೀಜಿಯವರು ಈ ವಿಷಯಗಳನ್ನು

ಕುರಿತು ಬರೆದ ಗ್ರಂಥಗಳು ಬಹಳಮಟ್ಟಿಗೆ ಸಹಾಯಕವಾಗುತ್ತವೆ.

"ಪ್ರಾಣಾಯಾಮ" ಪುಸ್ತಕದಲ್ಲೂ ಇರುವ ಛಾಯಾಚಿತ್ರಗಳು ಗ್ರಂಥದ ಪ್ರಯೋಜನವನ್ನು ಬಹಳ ಮಟ್ಟಿಗೆ ಹೆಚ್ಚಿಸಿವೆ.

ಅಂಗಮರ್ದನ

ಅಲ್ಲಲ್ಲಿ ಕೆಲವರು ಕೈನಲ್ಲೊಂದು ಸಣ್ಣ ಪೆಟ್ಟಿಗೆ ಹಿಡಿದುಕೊಂಡು "ಮಾಲೀಸ್ ! ಮಾಲೀಸ್ !" ಎಂದು ಕೂಗಿಕೊಂಡು ಬರುವುದನ್ನು ಕೇಳಿದ್ದೇವೆ. ಅದೊಂದು ಹೊಟ್ಟೆಯ ಪಾಡಿಗಾಗಿ ಕಲ್ಪಿಸಿಕೊಂಡಿರುವ ಸೇವೆ ಎಂಬ ಭಾವನೆ ನಮಗೆ. ಆಗಾಗ ಹತ್ತೋ ಇಪ್ಪತ್ತೋ ಪೈಸೆಕೊಟ್ಟು ಅಂಥವರಿಂದ ಮೈ ತಿಕ್ಕಿಸಿಕೊಂಡು ಸುಖವನ್ನನುಭವಿಸಿರುವುದೂ ನಮ್ಮಲ್ಲಿ ಅನೇಕರಿಗೆ ಅನುಭವವಾಗಿದೆ. ಒಂದಾನೊಂದು ಕಾಲಕ್ಕೆ ಒಂದು ವೈಖರಿಯಿಂದಲೇ ನಡೆಯುತ್ತಿದ್ದ ಅಭ್ಯಂಗನವನ್ನು ಅನೇಕ ಸಂದರ್ಭಗಳಲ್ಲಿ ಮಂಗಳಸ್ನಾನವೆಂದು ಉಳಿಸಿಕೊಂಡಿದ್ದೇವೆ. ಕೆಲವರ ಮನೆಯಲ್ಲಿ ಈಗಲೂ ಅಭ್ಯಂಗನ ಮಾಡುತ್ತಾರೆ. ಆದರೆ ಅದು ಮೈಗೆ ಎಣ್ಣೆ ಕಾಣಿಸಿ ಆ ಎಣ್ಣೆಯನ್ನು ನೀರಿನಿಂದ ತೊಳೆಯುವಷ್ಟಕ್ಕೆ ಮಾತ್ರ ಸೀಮಿತವಾಗಿದೆ. ಆದರೆ "ಮಾಲೀಶ್" ಅಂಗಮರ್ದನವೆಂಬ ಆಯುರ್ವೇದ ಚಿಕಿತ್ಸೆ ಕ್ರಮ ಮತ್ತು ಅಭ್ಯಂಗನವೂ ಅದರ ಒಂದು ರೂಪ ಎಂಬುದು ಅನೇಕರಿಗೆ ತಿಳಿದಿಲ್ಲ. ಸಾಲದುದಕ್ಕೆ ಆಂಗ್ಲ ಪದ್ಧತಿಯ ಔಷಧಿ ಸೇವನೆ ಹೆಚ್ಚಾಗಿ ಹೋಗಿ ಆಯುರ್ವೇದ ಚಿಕಿತ್ಸೆಯ ಒಲವೂ ಕಡಮೆಯಾಗಿದೆ. ಈಗ ಒಂದೆರಡು ವರ್ಷಗಳಿಂದ ಆಯುರ್ವೇದದ ಬಗ್ಗೆ ಸಂಶೋಧನೆ ನಡೆಸುವ ಅಭಿಪ್ರಾಯ ಅಲ್ಲಲ್ಲಿ ಕಂಡುಬರುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ಸಂಪೂರ್ಣವಾಗಿ ಮರೆತೇ ಹೋಗಿರುವ"ಅಂಗಮರ್ದನ"ದ ವಿಷಯವಾಗಿ ಶಾಸ್ತ್ರೀಯ ಮೌಲ್ಯಗಳನ್ನುಳ್ಳ ಈ ಪುಸ್ತಕ ಪ್ರಕಟವಾಗಿರುವುದು ಆ ಚಿಕಿತ್ಸಾ ಕಲೆಯ ಅಧ್ಯಯನ ಮತ್ತು ಅಭ್ಯಾಸಕ್ಕೆ ಎಡೆ ಮಾಡಿಕೊಟ್ಟಿದೆ. ಈ ದೃಷ್ಟಿಯಿಂದ ಪೂಜ್ಯ ರಾಘವೇಂದ್ರ ಸ್ವಾಮೀಜಿಯವರ ಸೇವೆ ಬಹಳ ಮುಖ್ಯವೆಂದು ಹೇಳಬಹುದು.

ಭೂಮಿಕೆಯಲ್ಲಿ ಈಗ ಅನುಸರಿಸುತ್ತಿರುವ ಅಡ್ಡಾದಿಡ್ಡಿ ಮಾಲೀಶ್ ಕ್ರಮದ ವೈಚಿತ್ರ್ಯದ ವರ್ಣನೆಯಿದೆ. ಅದರ ಅಪಾಯವನ್ನು ಅರಿವು ಮಾಡಿಕೊಟ್ಟು ಸ್ವಾಮೀಜಿಯವರು ಶಾಸ್ತ್ರೀಯ ಅಂಗಮರ್ದನದ ಬಗ್ಗೆ ವಿವರವಾಗಿ ತಿಳಿಸಿಕೊಟ್ಟಿದ್ದಾರೆ. ಈ ಕಲೆಯನ್ನುಕುರಿತ ವಿಷಯ ಸಂಗ್ರಹಣಕ್ಕೆ ಗ್ರಂಥಕರ್ತರು ವಿಶೇಷ ಪ್ರಯತ್ನಪಟ್ಟಿರುವುದು ನಿಜಕ್ಕೂ ಅಗಾಧವಾದ ಕೆಲಸವೇ ಸರಿ. 26 ಹಸ್ತಗಳನ್ನೊಳಗೊಂಡ ಅಂಗಮರ್ದನ ವನ್ನು ಕ್ರಮವಾಗಿ, ಶಾಸ್ತ್ರೀಯವಾಗಿ ಮಾಡಿದ್ದೇ ಆದರೆ ದೇಹದ ಅನೇಕ ತೊಂದರೆಗಳನ್ನು ಈ ಚಿಕಿತ್ಸೆಯಿಂದಲೇ ಗುಣಪಡಿಸಬಹುದೆಂದು ತಮ್ಮ ಸ್ವಂತ ಅನುಭವದಿಂದ ಸಿದ್ಧಾಂತ ಮಾಡಿಕೊಟ್ಟಿದ್ದಾರೆ. ಅಂಗಮರ್ದನವನ್ನು ಅಭ್ಯಾಸ ಮಾಡಲಿಚ್ಛಿಸುವವರು ಮೊದಲು ತಮ್ಮ ದೇಹವನ್ನೇ ಮಾಲೀಶ್ ಮಾಡಿಕೊಂಡು ಅಭ್ಯಾಸ ಮಾಡಿದ ಮೇಲೆ ಇತರರಿಗೆ ಆ ಚಿಕಿತ್ಸೆ ನೀಡಬೇಕೆಂದು ಎಚ್ಚರಿಸಿರುವುದು ಉಚಿತವೇ ಸರಿ.

ಸ್ವಾಮೀಜಿಯವರ ಪ್ರಕಾರ ಅಂಗಮರ್ದನ ಚಿಕಿತ್ಸೆ ಈ ಪುಸ್ತಕದಲ್ಲಿ ವಿವರಿಸಿರುವ 26 ಹಸ್ತಗಳಿಗೆ ಮಾತ್ರ ಸೀಮಿತವಾಗಿಲ್ಲ. ಅವರ ನಿರಂತರ ಪ್ರಯತ್ನದ ಫಲವಾಗಿ ಇಷ್ಟು ಸಿಕ್ಕಿದೆ. ಈ ಬಗ್ಗೆ ಪ್ರಾಚೀನ ಗ್ರಂಥಗಳ ಪರಿಶೀಲನೆ,ಅಧ್ಯಯನ ಮತ್ತು ಸಂಶೋಧನೆ ಮಾಡಬೇಕಾದುದು ಅಗತ್ಯವೆಂದು ಅವರು ಕೊಟ್ಟಿರುವ ಸಲಹೆಯನ್ನು ಆ ಕ್ಷೇತ್ರದಲ್ಲಿ ಕೆಲಸಮಾಡುವವರು ಗಮನಿಸಬೇಕಾಗಿದೆ.

"ಕೆಲವು ಮಹತ್ವದ ಸೂಚನೆಗಳು" ಸ್ವಯಂ ಮರ್ದನದಲ್ಲಿ ವಹಿಸಬೇಕಾದ ಎಚ್ಚರಿಕೆಗಳು, ಅಂಗಮರ್ದನದಲ್ಲಿ ಉಪಯೋಗಿಸುವುದಕ್ಕೆ ಯೋಗ್ಯವಾದ ತೈಲಗಳು–ಇವು ಈ ಪುಸ್ತಕದಲ್ಲಿ ಅಡಕವಾಗಿರುವ ಬಹಳ ಅಮೂಲ್ಯವಾದ ಇತರ ವಿಷಯಗಳು.

ಪುಸ್ತಕದಲ್ಲಿ 26 ಛಾಯಾ ಚಿತ್ರಗಳಿವೆ. ವಿವಿಧ ಹಸ್ತಗಳನ್ನು ತೋರಿಸುವ ಛಾಯಾಚಿತ್ರಗಳು ಅಂಗ ಮರ್ದನದ ಅಭ್ಯಾಸ ಮಾಡುವವರಿಗಂತೂ ಬಹಳ ಸಹಾಯಕ.

ಕನ್ನಡದಲ್ಲಿ ಅಂಗಮರ್ದನ ಮತ್ತು ಅಭ್ಯಂಗನ ಕುರಿತು ದೊರೆಯುವ ಇತ್ತೀಚಿನ ಪುಸ್ತಕವೆಂದರೆ ಇದೊಂದೇ. ಆದುದರಿಂದ ಇದರ ಉಪಯುಕ್ತತೆಯ ಬಗ್ಗೆ ಹೆಚ್ಚು ಹೇಳಬೇಕಾದುದು ಅನಾವಶ್ಯಕ.

ಷಟ್ಕರ್ಮವಿಧಿ

ಈ ಪುಸ್ತಕವೂ ಯೋಗಾಭ್ಯಾಸ ಪ್ರಾಣಾಯಾಮಗಳ ಪಂಕ್ತಿಗೆ ಸೇರಿದ ಮತ್ತೊಂದು ಉಪಯುಕ್ತ ಪುಸ್ತಕ. ಆದರೆ ಈ ಪುಸ್ತಕದಲ್ಲಿ ವಿಚಾರ ಮಾಡಿರುವ ವಿಷಯ ಮುಖ್ಯವಾಗಿ ಶರೀರ ಶೋಧನಾಕ್ರಿಯೆ ಯನ್ನು ಕುರಿತದ್ದು. ಯೋಗಸಾಧನೆಯ ಪೂರ್ವಾಂಗವಾಗಿ ಷಟ್ಕರ್ಮವಿಧಿಯನ್ನು ಕೈಕೊಂಡರೆ ಶರೀರದ ಅಂತರ್ಬಾಹ್ಯ ವಿಕಾರಗಳನ್ನು ಸಮೂಲವಾಗಿ ಹೋಗಲಾಡಿಸುವುದು ಸಾಧ್ಯ ಎಂಬುದು ಇಲ್ಲಿ ಚೆನ್ನಾಗಿ ವಿವರಿಸಲ್ಪಟ್ಟಿದೆ.

ಆದರೆ ಷಟ್ಕರ್ಮವಿಧಿಯನ್ನು ಅನುಸರಿಸುವ ಬಗ್ಗೆ ಲೇಖಕರು ಒಂದು ಸೂಚನೆ (ಎಚ್ಚರಿಕೆ ಎನ್ನಲೂ ಬಹುದು) ನೀಡಿದ್ದಾರೆ. ವಾತ, ಪಿತ್ತ, ಕಫವೆಂಬ ತ್ರಿದೋಷಗಳಿಗೊಳಗಾದವರು ಈ ವಿಧಿಗಳನ್ನಾಚರಿಸಿದರೆ ಆಗ ಆ ದೋಷಗಳನ್ನು ಸಮಸ್ಥಿಯಲ್ಲಿಡುವುದಕ್ಕೆ ಸಹಾಯಕ. ಚಿತ್ತವೃತ್ತಿಯ ನಿರೋಧದ ಮೂಲಕ ಸಮಾಧಿಸ್ಥಿತಿ ಯನ್ನು ಪಡೆಯುವುದೂ ಷಟ್ಕರ್ಮವಿಧಿ ಆಚರಣೆಯಿಂದ ಸಾಧಿಯತವಾಗಬಹುದು. ಆದುದರಿಂದ ವಾತ,ಪಿತ್ತ, ಕಫ ಇವು ಸಮಾಧಾನಸ್ಥಿತಿಯಲ್ಲಿರುವವರು ಈ ವಿಧಿಗಳನ್ನು ನಿತ್ಯವೂ ಅನುಸರಿಸುವುದು ಸರಿಯಲ್ಲ. ಆದರೆ ಆಗಾಗ ಮಾಡ ಬೇಕು ಎನ್ನುತ್ತಾರೆ ಗ್ರಂಥಕರ್ತರು. ಏಕೆಂದರೆ ಮಾನಸಚೇತನದ ಶಕ್ತಿಸಂಚಯನಕ್ಕೆ, ಮತ್ತು ಹಲವು ಕಠಿಣ ರೋಗಗಳನ್ನು ಔಷಧಿ ಉಪಚಾರವಿಲ್ಲದೆ ಗುಣಪಡಿಸುವುದಕ್ಕೆ ಈ ವಿಧಿ ಸಾಧನವಾಗುತ್ತದೆ.

ಷಟ್ಕರ್ಮವಿಧಿಯ ಸಾಧನೆ ಕಷ್ಟ. ಆದರೆ ಕಲಿಯಲಾರದಂತಹುದಲ್ಲ. ಈ ಆರು ವಿಧಿಗಳಾದ ಧೌತಿ, ಬಸ್ತಿ, ನೇತಿ, ತ್ರಾಟಕ, ನೌಲಿ ಮತ್ತು ಕಪಾಲಭಾತಿಗಳನ್ನು ಕಲಿಯುವ ಬಗ್ಗೆ ಸ್ವಾಮಿಜಿ ಉಪಯುಕ್ತ ಸಲಹೆ ಗಳನ್ನೂ ಸೂಚನೆಗಳನ್ನೂ ವಿವರಿಸಿದ್ದಾರೆ. ಆದರೂ ಅವರೇ ಹೇಳಿರುವಂತೆ ಪ್ರತ್ಯಕ್ಷ ಗುರುಮುಖೇನ ಕಲಿಯು ವುದು ಒಳ್ಳೆಯದು. ಈ ಪುಸ್ತಕದಲ್ಲೂ ಐದನೆಯ ಅಧ್ಯಾಯದಲ್ಲಿರುವ "ರೋಗ ಚಿಕಿತ್ಸೆ"ಯು ಷಟ್ಕರ್ಮವಿಧಿಯನ್ನು ಕಲಿಯಬೇಕೆಂಬ ಆಸೆಯನ್ನು ಓದುಗರಲ್ಲಿ ಹುಟ್ಟಿಸುತ್ತದೆ. ಇಲ್ಲಿರುವ ಹದಿನಾರು ಛಾಯಾಚಿತ್ರಗಳು ಷಟ್ಕರ್ಮ ವಿಧಿಯನ್ನಾಚರಿಸತೊಡಗುವವರಿಗೆ ತುಂಬಾ ಪ್ರಯೋಜನಕರ.

ಈ ಶಾಸ್ತ್ರಗ್ರಂಥವೊಂದನ್ನು ಆಸಕ್ತ ಜನರಿಗೆ ಒದಗಿಸಿಕೊಟ್ಟ ಸ್ವಾಮಿಜಿಯವರಿಗೆ ಕೃತಜ್ಞತೆಗಳ ಸಲ್ಲಬೇಕು. ಹಾಗೆಯೇ ಪುಸ್ತಕವನ್ನು ಬೆಳಕಿಗೆ ತರಲು ನೆರವಾದ ಶ್ರೀಮತಿ ಮತ್ತು ಶ್ರೀ ಎಸ್. ಹನುಮಂತಪ್ಪ ನವರು ವಂದನಾರ್ಹರು.

ದೇಹಸ್ವಾಸ್ಥ್ಯಕ್ಕಾಗಿ ಯೋಗಾಸನಗಳು

ಈ ಚಿಕ್ಕ ಪುಸ್ತಕವಲ್ಲಿ ಹತ್ತೊಂಭತ್ತು ಯೋಗಾಸನಗಳನ್ನು ಮಾಡುವ ಕ್ರಮವನ್ನು ಪೂಜ್ಯ ಸ್ವಾಮಿಜಿಯವರು ವರ್ಣಿಸಿದ್ದಾರೆ. ಇವುಗಳಿಗೆ ಪುಷ್ಟಿ ನೀಡಿ ಸಾಧಕನಿಗೆ ನೆರವಾಗುವಂತೆ 23 ಛಾಯಾಚಿತ್ರ ಗಳಿವೆ. ಯೋಗಾಸನದ ಆವಶ್ಯಕತೆ, ಯೋಗಾಸನದ ಪೂರ್ವ ಸಿದ್ಧತೆ, ನಿಯಮಗಳು ಮತ್ತು ಯೋಗಾಸನ:

ಆತ್ಮಸಾಧನೆ ಎಂಬ ಶಿರೋನಾಮವುಳ್ಳ ಅಧ್ಯಾಯಗಳು ಯೋಗಾಭ್ಯಾಸಕ್ಕೆ ತೊಡಗಲು ಪ್ರೇರೇಪಿಸುವ ಮತ್ತು ಸಿದ್ಧತೆ ಮಾಡಿಕೊಳ್ಳುವ ದೃಷ್ಟಿಯಿಂದ ಉಪಯುಕ್ತವಾಗಿದೆ. 'ವಿಧಿ' ಎಂಬ ಅಧ್ಯಾಯದಲ್ಲಿ ಹತ್ತೊಂಭತ್ತು ಆಸನಗಳನ್ನು ಮಾಡುವ ಕ್ರಮದ ಬಗ್ಗೆ ಸೂಚನೆಗಳು ವರ್ಣಿಸಲ್ಪಟ್ಟವೆ. ಈ ಅಧ್ಯಾಯವೇ ಒಂದು ದೃಷ್ಟಿಯಿಂದ ಪುಸ್ತಕದ ಅತಿ ಮುಖ್ಯ ತಿರುಳು ಎನ್ನಬಹುದು. ನಮ್ಮಲ್ಲಿ ಈಗೀಗ ಬೆಳೆದು ಬರುತ್ತಿರುವ ಜೀವನಕ್ರಮದಿಂದ ನಮ್ಮ ಜನರ ಆರೋಗ್ಯ ಕುಗ್ಗುತ್ತಿದೆ. ಸಣ್ಣದೊಂದು ಕುತ್ತಿಗೂ ಗುಳಿಗೆ ನುಂಗುವ ಪ್ರವೃತ್ತಿ ಬೆಳೆದು ಬರುತ್ತಿದೆ. ಪುಸ್ತಕದ ಆರನೆಯ ಅಧ್ಯಾಯ "ಯೋಗಾಸನ—ರೋಗಚಿಕಿತ್ಸೆ" ನಮಗೆ ಹೊಸದೊಂದು ಬೆಳಕನ್ನು ತೋರಿ ಪ್ರಾಚೀನವೂ ಅಮೂಲ್ಯವೂ ಆದ ಚಿಕಿತ್ಸೆಯನ್ನು ನೆನಪುಮಾಡಿಕೊಡುತ್ತದೆ. "ದೇಹಸ್ವಾಸ್ಥ್ಯಕ್ಕಾಗಿ ಯೋಗಾಸನಗಳು" ಎಂಬ ಶೀರ್ಷಿಕೆಯೂ ಬಹಳ ಉಚಿತವಾಗಿದೆ.

ಪೂಜ್ಯರೇ ಹೇಳಿರುವಂತೆ ಯೋಗಾಭ್ಯಾಸ ಭಾರತದಲ್ಲಿ ಪ್ರಾಚೀನಕಾಲದಿಂದ ನಡೆದುಬಂದಿದ್ದರೂ ಆ ವಿಷಯವಾಗಿ ಬೆಳೆದು ಬಂದಿರುವ ಸಾಹಿತ್ಯ ಕಡಮೆ. ಈ ದಿಶೆಯಲ್ಲಿ ವಿಪುಲವಾಗಿ ಸಾಹಿತ್ಯ ಬೆಳೆಯಬೇಕಾಗಿದೆ. ಯೋಗಾಭ್ಯಾಸದಲ್ಲಿ ಅಧಿಕಾರವಾಣಿಯಿಂದ ಹೇಳಬಲ್ಲ ಅನುಭವಿಗಳು ವಿರಳ. ಅವರಲ್ಲಿ ಅಗ್ರಗಣ್ಯರ ಪಂಕ್ತಿಗೆ ಸೇರಿದವರು 85 ವಯಸ್ಸಿನ ಹರೆಯದ ಪೂಜ್ಯ ಸ್ವಾಮೀಜಿ. ಇವರ ಕೈಯಿಂದ ಬಂದಿರುವ ಈ ಪುಸ್ತಕ ನಮ್ಮ ಜನರ, ಅದರಲ್ಲೂ ನಮ್ಮ ತರುಣರ ಅಭ್ಯುದಯಕ್ಕೆ ನಾಂದಿಯಾಗುವುದರಲ್ಲಿ ಸಂದೇಹವಿಲ್ಲ.

ಪುಸ್ತಕದಲ್ಲಿ ಅನಗತ್ಯ ವರ್ಣನೆಯಿಲ್ಲ; ಶಬ್ದಾಡಂಬರವಿಲ್ಲ; ಸರಳವಾದ ತಿಳಿಯಾದ ಭಾಷೆ ಪುಸ್ತಕದ ಮೌಲ್ಯವನ್ನು ಹೆಚ್ಚಿಸಿದೆ.

ಗುರು ನಮಸ್ಕಾರ

ಈ ಪುಸ್ತಕವು ಮಾರುತಿ ಮತ್ತು ಮಾರುತಿಗೆ ಮಾಡುವ ನಮಸ್ಕಾರದ ವಿಧಿ ನಿಯಮಗಳಿಗೆ ಮೀಸಲಾಗಿದೆ.

ಸೂರ್ಯನಮಸ್ಕಾರ ಏಕೆ ಮತ್ತು ಹೇಗೆ ಎಂಬ ವಿಷಯದಲ್ಲಿ ಹಲವಾರು ಪುಸ್ತಕಗಳು ಬಂದಿವೆ. ಆದರೆ "ಗುರು ನಮಸ್ಕಾರ" ಅಂದರೆ ಮಾರುತಿಯ ನಮಸ್ಕಾರವನ್ನು ಕುರಿತ ಪುಸ್ತಕಗಳಿಲ್ಲ. ಆದುದರಿಂದ ಗುರು ನಮಸ್ಕಾರದ ವಿಧಿ ನಿಯಮಗಳ ಅರಿವು ಮಾಡಿಕೊಡುವ ಈ ಪುಸ್ತಕವನ್ನು ಸ್ವಾಗತಿಸಬೇಕು.

ಹನುಮಂತನ ಜನ್ಮವೃತ್ತಾಂತದ ಬಗ್ಗೆ ಭಾರತದ ಬೇರೆಬೇರೆ ಭಾಗಗಳಲ್ಲಿರುವ ಐತಿಹ್ಯ, ವೇದ ಉಪನಿಷತ್ತುಗಳಲ್ಲಿ ಮಾರುತಿಗೆ ಕೊಟ್ಟಿರುವ ಪ್ರಾಮುಖ್ಯತೆಯನ್ನು ಕುರಿತು ವಿಚಾರಪೂರ್ಣ ವಿವರಣೆ ಮೊದಲ ಆರು ಅಧ್ಯಾಯಗಳಲ್ಲಿದೆ. ಮಾರುತಿಗಿರುವ ಭಕ್ತಿ ಅವನಿಗಿದ್ದ ಶಕ್ತಿಗೆ ಮಾತ್ರವಲ್ಲ, ಅವನ ಆತ್ಮಬಲಕ್ಕೆ. ಆ ಮಹಾಮಹಿಮ ಪರಬ್ರಹ್ಮ ಸ್ವರೂಪ, ನೈಷ್ಠಿಕ ಬ್ರಹ್ಮಚಾರಿ; ಆದುದರಿಂದ ಅವನು ಲೋಕಕ್ಕೆ ಗುರು. ವಿದ್ಯಾರ್ಥಿಗಳಾದಿಯಾಗಿ ಪುರುಷ ಸ್ತ್ರೀಯರೆಲ್ಲರಿಗೂ ಆದರ್ಶ ವ್ಯಕ್ತಿ. ಅವನ ಉಪಾಸನೆ, ಅವನಿಗೆ ವಿಧಿಪೂರ್ವಕ ನಮಸ್ಕಾರ ಅತಿ ಶ್ರೇಷ್ಠ ಮತ್ತು ಆರೋಗ್ಯದಾಯಕ ಎಂಬುದನ್ನು ಪೂಜ್ಯ ಸ್ವಾಮೀಜಿಯವರು ಬಲು ಚೆನ್ನಾಗಿ ಸಮರ್ಥಿಸಿದ್ದಾರೆ. ಏಳು ಮತ್ತು ಎಂಟನೆಯ ಅಧ್ಯಾಯಗಳಲ್ಲಿ ಗುರು ನಮಸ್ಕಾರ ಮಾಡಲು ಬೇಕಾದ ಮನೋಭಾವ, ನಿಷ್ಠೆ, ನಿಯಮ, ವಿಧಿಗಳು ವಿವರವಾಗಿ ತಿಳಿಸಲ್ಪಟ್ಟವೆ. ಮಾರುತಿಯ ಉಪಾಸನೆ ಮುಖ್ಯ ಉದ್ದೇಶ. ಅದರ ಫಲವಾಗಿ ದೊರೆಯುವುದು ಅಂಗಸಾಧನೆ ಎಂಬ ಭಾವನೆಯನ್ನು ಲೇಖಕರು ಖಚಿತಪಡಿಸಿದ್ದಾರೆ. ಮಾರುತಿಯ ಅಷ್ಟೋತ್ತರ ಮುಂದಿನ

ಅಧ್ಯಾಯದಲ್ಲಿದ್ದು ಹನ್ನೊಂದನೆಯ ಅಧ್ಯಾಯವಲ್ಲಿ ಗುರುನಮಸ್ಕಾರ ಮಾಡುವವರು ಅನುಸರಿಸಬೇಕಾದ ಆಹಾರ ನಿಯಮಗಳನ್ನು ವಿವರಿಸಲಾಗಿದೆ.

ಗುರು ನಮಸ್ಕಾರದ ಅಂಗಗಳಾಗಿರುವ ಏಳು ಆಸನಗಳ ಛಾಯಾಚಿತ್ರಗಳು ಪುಸ್ತಕದ ಉಪಯುಕ್ತತೆಯನ್ನು ಹೆಚ್ಚಿಸಿವೆ.

ಈ ಪುಸ್ತಕವನ್ನು ಓದಿದವರಿಗೆ ನೂರುತಿಯ ಮಹಿಮೆಯ ಪರಿಚಯ ಆಗುವುದು ಮಾತ್ರವಲ್ಲ, ತಾವೂ ಅಂದಿನಿಂದಲೇ ಗುರು ನಮಸ್ಕಾರ ಪ್ರಾರಂಭಿಸಬೇಕೆಂಬ ಆಕಾಂಕ್ಷೆ ಉಂಟಾಗುವುದು. ಆದುದರಿಂದ ಈ ಪುಸ್ತಕದ ಪ್ರಕಟಣೆ ಸಾರ್ಥಕವೆನ್ನುವುದು ಖಚಿತ.

ಕಥಾರೂಪಕ ಯೋಗಾಸನ (ಸಚಿತ್ರ) ಭಾಗ ೧

ಎಳೆಯ ಮಕ್ಕಳಾಗಿರುವಾಗಲೇ ಅವರಿಗೆ ಯೋಗಾಸನಗಳಲ್ಲಿ ಆಸಕ್ತಿ ಮೂಡಿಸಲು ಕೈಕೊಂಡಿರುವ ಸ್ವಾಮಿಜಿಯವರ ಪ್ರಯತ್ನ ಏಕೈಕವಾದುದು; ಹೊಸದೇ ಆದ ಒಂದು ಯಶಸ್ವಿ ಪ್ರಯೋಗ.ಅವರೇ ಹೇಳಿರುವಂತೆ ಈ ಪುಸ್ತಕ ಎಳೆಯರು, ಬೆಳೆದವರು ಇಬ್ಬರಿಗೂ ಉಪಯುಕ್ತವಾಗಿದೆ. ಇದರಲ್ಲಿ ಹತ್ತು ಕಥೆಗಳು ಮತ್ತು ಅವುಗಳಿಗೆ ಹೊಂದಿಕೊಂಡಂತೆ ಐವತ್ತೈದು ಆಸನಗಳ ರೇಖಾಚಿತ್ರಗಳಿವೆ. ಆಸನಗಳ ಚಿತ್ರಗಳ ಜೊತೆಗೆ ಸನ್ನಿವೇಶ ಸೂಚಿಸುವ ಚಿತ್ರಗಳೂ ಇರುವುದು ಅದರ ಅರ್ಥ ಸ್ವಾರಸ್ಯಗಳನ್ನು ಹೆಚ್ಚಿಸಿವೆ.

ಆರಿಸಿಕೊಂಡಿರುವ ಕಥಾವಸ್ತುಗಳಂತೂ ನೀತಿಯುತವಾಗಿಯೂ ಎಳೆಯ ಮಕ್ಕಳಿಗೆ ಆಸಕ್ತಿಯನ್ನುಂಟು ಮಾಡುವಂತೆಯೂ ಇವೆ. ಪುರಾಣ ಪುಣ್ಯಕಥೆಗಳಿಂದ ಆಯ್ದುಕೊಂಡಿರುವ ಬಕನಧ್ಯಾನ, ಭಕ್ತಪ್ರಹ್ಲಾದ, ಧ್ರುವ, ಶ್ರೀಕೃಷ್ಣನ ರಾಯಭಾರ, ಗೀತೋಪದೇಶ, ಎಲ್ಲರಿಗೂ ತಾಯ ಸ್ವರೂಪವೇ ಎಂಬ ಕಥೆಗಳು ಮಕ್ಕಳಿಗೆ ನಮ್ಮ ಪುರಾಣ ಪುಣ್ಯಕಥೆಗಳ ಇಣುಕು ನೋಟಕ್ಕೆ ಅವಕಾಶಮಾಡಿಕೊಟ್ಟು ಅವುಗಳನ್ನೆಲ್ಲಾ ಓದಲು ಪ್ರೇರೇಪಣೆಯನ್ನು ಮಾಡಿಕೊಡುತ್ತವೆ. ಹಾಗೆಯೇ ಬಸವಣ್ಣನವರ ಮನೆಗೆ ಬಂದ ಕಳ್ಳ, ಮಹಾದೇವಿಯಕ್ಕ ಮತ್ತು ಅಲ್ಲಮ ಪ್ರಭುಗಳನ್ನು ಕುರಿತ ಕಥೆಗಳು ನಮ್ಮ ಸಾಧುಸಂತರ ಬಗ್ಗೆ ಭಕ್ತಿಗೌರವಗಳನ್ನು ಹುಟ್ಟಿಸುತ್ತವೆ. ಇದು ಪರೋಕ್ಷ ಪ್ರಯೋಜನವಾದರೆ ಯೋಗಾಸನಗಳಲ್ಲಿ ಆಸಕ್ತಿ ಹುಟ್ಟಿಸುವುದು ಪ್ರತ್ಯಕ್ಷ ಪ್ರಯೋಜನ. ಈ ದ್ವಂದ್ವ ಉದ್ದೇಶಗಳನ್ನೊಳಗೊಂಡ ಈ ಹೊಸ ಪ್ರಯತ್ನ ಫಲಪ್ರದವೆನ್ನುವುದರಲ್ಲಿ ಸಂದೇಹವಿಲ್ಲ.ಇಂತಹ ಕಥಾರೂಪಕ ಯೋಗಾಸನಗಳ ಇನ್ನೂ ಒಂಭತ್ತು ಪುಸ್ತಕಗಳನ್ನು ತರುವ ಇಚ್ಛೆಯನ್ನು ಸ್ವಾಮಿಜಿಯವರು ಇಟ್ಟುಕೊಂಡಿದ್ದಾರೆ.ಆ ಒಂಭತ್ತು ಭಾಗಗಳೂ ಬೇಗ ಓದುಗರ ಕೈಸೇರುವಂತಾಗಲೆಂದು ನಿರೀಕ್ಷಿಸೋಣ.

ಯೋಗಾಸನಗಳ ಬಗ್ಗೆ ಅದರ ತಾಯ್ನಾಡಿನಲ್ಲಿಯೇ ಆಸಕ್ತಿ ಅಳಿದು ಹೊರದೇಶದಲ್ಲಿ ಆಸಕ್ತಿ ಹೆಚ್ಚುತ್ತಿದೆ ಎನ್ನುತ್ತಿರುವ ಈ ಕಾಲದಲ್ಲಿ ನಮ್ಮ ಮುಂದಿನ ಪೀಳಿಗೆಗೆ ಯೋಗಾಭ್ಯಾಸದಲ್ಲಿ ಶ್ರದ್ಧೆ, ಆಸಕ್ತಿ ಹುಟ್ಟಿಸಲು ಪೂಜ್ಯ ಸ್ವಾಮಿಜಿಯವರು ಮಾಡಿರುವ ಈ ನೂತನ ಪ್ರಯೋಗ ಪೂರ್ಣ ಯಶಸ್ವಿಯಾಗುವುದು ಖಂಡಿತ.

ಶಿವರಾಮು ಕಾಡನಕುಪ್ಪೆ

ತಿರುಕರ ಕಥಾಸಾಹಿತ್ಯ

ನನಗೆ ತಿರುಕರ ಕಥಾಸಾಹಿತ್ಯವನ್ನು ಓದಿಯಾದ ಮೇಲೆ, ಕೃತಿ ಸಂದರ್ಭವೊಂದರಲ್ಲಿ ಆದರ್ಶ ಮೂಡಿ ಬಂದಾಗ, ಅದನ್ನು ತೂಗಿ ನೋಡುವುದು ಹೇಗೆ ಎಂಬ ಸಮಸ್ಯೆ ಎದುರಾಯಿತು. ಇಲ್ಲಿ ಈ ಮಾತು ಸರಳ ಎನಿಸಿದರೂ ತಿರುಕರ ಸಂದರ್ಭದಲ್ಲಿ ಆದರ್ಶ ಯಾವುದು, ವಾಸ್ತವ ಯಾವುದು ಎಂಬ ಸಮಸ್ಯೆಯನ್ನು ಬಿಡಿಸುವುದರಲ್ಲಿಯೇ ಗೊಂದಲವಾಗುತ್ತದೆ. ತಿರುಕರ ಕಥಾಸಾಹಿತ್ಯದಲ್ಲಿ ನಾವು ಆದರ್ಶದ ಆಕಾಂಕ್ಷೆ ಮತ್ತು ಅದರ ಸಾರ್ಥಕ್ಯವನ್ನು ಕಾಣುತ್ತೇವೆ ನವೋದಯ ಮತ್ತು ಪ್ರಗತಿಶೀಲ ಪಂಥಗಳಲ್ಲಿ ಆದರ್ಶವೇ ಸಿಂಹಪಾಲು ಗಳಿಸಿಕೊಂಡ ಕಾರಣಕ್ಕಾಗಿಯೇ ಹೊಸ ಸಾಹಿತ್ಯ ಪ್ರಕಾರ, ಆದರ್ಶರಹಿತ ಬದುಕಿನ ಗಟ್ಟಿತನದ ಅನ್ವೇಷಣೆಯ ಹೆಸರಿನಲ್ಲಿ ಜನ್ಮತಾಳಿತು. ತಿರುಕರು ಹೊಸ ಪೀಳಿಗೆಯ ಬರಹಗಾರರಲ್ಲವಾದರೂ, ಅವರನ್ನು ಪ್ರಗತಿಶೀಲ ಅಥವಾ ನವೋದಯ ಪಂಥಗಳಿಗೂ ಸೇರಿಸಲಾಗುವುದಿಲ್ಲ. ಒಮ್ಮೆ, ಹಾಗೆ ಸೇರಿಸಿದರೆ ಅವರನ್ನು ಅರ್ಥಮಾಡಿಕೊಳ್ಳುವುದರಲ್ಲಿ ಮುಗ್ಗರಿಸುತ್ತೇವೆ.

ತಿರುಕರ ಕಾದಂಬರಿಗಳ ಆದರ್ಶ, ಅವರ ಬದುಕಿನಲ್ಲಿಯೇ ಬೆಸೆದುಕೊಂಡಿರುವಂಥದು. ಅದು ನಮಗೀಗ ನಗುವ ವಸ್ತುವಾಗಿ ತೋರುತ್ತದೆ, ನಿಜ. ಕಾರಣ, ಇಂದಿನ ನಮ್ಮ ಬದುಕಿನಲ್ಲಿ ಆದರ್ಶಕ್ಕೆ ಬೆಲೆ ಇಲ್ಲ. ಎಲ್ಲೆಲ್ಲೂ ಮೋಸ, ವಂಚನೆ, ಅತ್ಯಾಚಾರ, ಕಪಟಗಳೇ ರಾಜ್ಯವಾಳುತ್ತಿವೆ. ಇಂದು ಆದರ್ಶ ಒಂದು ಕನಸಿನ ಪ್ರಪಂಚ. ಯಾರು ಆದರ್ಶ ಹೇಳಿದರೂ ಮೂಲಭೂತವಾಗಿ ಜನತೆಗೆ ಅದರಲ್ಲಿ ನಂಬಿಕೆ ಕಳೆದುಹೋಗಿದೆ. ತಿರುಕರ ಆದರ್ಶ ತೀರಾ ವ್ಯಕ್ತಿನಿಷ್ಠವಾದುದು. ಅದು ಅವರಂಥ ಕೆಲಕೆಲವೇ ಮಂದಿ ಜನತೆಗೆ ನಿಲುಕುವಂಥದು. ಮಿಕ್ಕವರ ಮುಂದೆ ಅದು ಸಮಸ್ಯೆಯಾಗುತ್ತದೆ.

ಇಂದಿನ ಸಾಮಾಜಿಕ ಆವರಣದಲ್ಲಿ ಆದರ್ಶದ ಸ್ಥಾನ, ಕಲ್ಪನೆ ಏನೇ ಇರಲಿ, ಬದುಕಿನಲ್ಲಿ ಯಾವುದಾದರೊಂದು ಆದರ್ಶ, ಗುರಿ—ಇರಲೇಬೇಕಾಗುತ್ತದೆ, ನಿಜವಾದ ವ್ಯಕ್ತಿತ್ವವಿರುವ ಮನುಷ್ಯನಿಗೆ. ಅದರ ಬೆಂಬೆಳಕಿನಲ್ಲಿ ಆತನ ಸಾಧನೆ ಗುರಿಮುಟ್ಟಬೇಕಾಗುತ್ತದೆ. ಆದರ್ಶದ ಕಲ್ಪನೆ ತಪ್ಪಲ್ಲ; ಆದರ್ಶದ ಹೆಸರಲ್ಲಿ ಬದುಕು ಮಾಡುವ ನಮ್ಮ ಇಂದಿನ ವ್ಯವಸ್ಥೆಯ ತಳುಕು-ಸೋಗಿನ ಬದುಕಿನ ತಪ್ಪು ಇಲ್ಲಿ ಮುಖ್ಯವಾಗುತ್ತದೆ.

ತಿರುಕರು ಮತ್ತು ಆದರ್ಶ ಬೇರೆ ಬೇರೆ ಅಲ್ಲ; ಎರಡೂ ಒಂದೇ. ತಿರುಕರು ಜೀವನದಲ್ಲಿ ಕಂಡ ಆದರ್ಶಗಳನ್ನೆಲ್ಲ ಕಾರ್ಯರೂಪಕ್ಕೆ ತಂದವರು. ಅವರೊಬ್ಬ ಸಾಧಕರು; ಆದರ್ಶ ಕಾರ್ಯರೂಪಕ್ಕೆ ಬಂದಮೇಲೆ, ಅದರ ಸಾರ್ಥಕ್ಯದ ಅನುಭವ ಪಡೆದಿದ್ದಾರೆ. ತಮ್ಮ ಬದುಕಿನಲ್ಲಿ ಕಂಡ, ಉಂಡ ಮತ್ತು ನಡೆಸಿದ ಆದರ್ಶವ ಬದುಕನ್ನೇ ತಮ್ಮ ಕೃತಿಗಳಲ್ಲಿ ಮೂಡಿಸಿದ್ದಾರೆ. ಆದರೆ ಅದು ಈ ವ್ಯವಸ್ಥೆಯ ಕೊಳಕಿನಲ್ಲಿ ಬದುಕು ಮಾಡುತ್ತಿರುವವರಿಗೆ ತೀರಾ 'ಆದರ್ಶ'ವಾಗಿ ಕಂಡು ಬಂದರೆ ಆಶ್ಚರ್ಯವಿಲ್ಲ.

ಎಷ್ಟೋ ವೇಳೆ ಸತ್ಯ ಮಿಥ್ಯವಾಗುತ್ತವೆ ಎಂಬುದಕ್ಕೆ ತಿರುಕರ ಕಥಾಸಾಹಿತ್ಯವೇ ಸಾಕ್ಷಿ. ತಿರುಕರ ಸಾಧನೆ ವಾಸ್ತವವೇ ಆದರೂ, ಜನತೆಗೆ ಅದು ಸಾಹಿತ್ಯವಲ್ಲಿ 'ಆದರ್ಶ'ವಾಗಿ ತೋರುವುದು, ಅವರಲ್ಲಿನ ಗುರಿರಹಿತ ಜೀವನದಿಂದಾಗಿ ಎನಿಸುತ್ತದೆ. ಇದಕ್ಕೆ ಮೂಲಭೂತ ಕಾರಣ, ಜನತೆಯಲ್ಲ; ಇಡೀ ವ್ಯವಸ್ಥೆಯದು. ಇಂದು ವ್ಯವಸ್ಥೆಯು ತನ್ನ ಪರಿಧಿಯಲ್ಲಿಯೇ ದಿನೇ ದಿನೇ ಕುಬ್ಜಗೊಳ್ಳುತ್ತಿರುವಾಗ, ಅದರ ವಿಕಾಸಕ್ಕೆ ಬದುಕಿನಲ್ಲಿ ದೊಡ್ಡದಾದ ಆದರ್ಶ, ಆಶೆಗಳ ಗೋಪುರವನ್ನೇ ಕಟ್ಟಬೇಕಾಗುತ್ತದೆ. ತಿರುಕರು ಅವರ ಸಾಹಿತ್ಯದಲ್ಲಿಯೇ ಅಭಿವ್ಯಕ್ತಗೊಂಡಿರುವಂತೆ, ಅವರೊಬ್ಬ ಸಮಾಜ–ಸುಧಾರಕರು. ಸಮಾಜ ಸುಧಾರಣೆಯ ಹಲವು ಮುಖಗಳು ಕಾದಂಬರಿಗಳಲ್ಲಿ ಮೂರ್ತವಾಗಿ ಗೋಚರಿಸುತ್ತವೆ. ಆದರೆ ಅವು ಕಾದಂಬರಿ ಸೃಷ್ಟಿಯಲ್ಲಿ ಅವಯವಗಳಾಗಿ ಮೂಡಿ ಬರುವುದಿಲ್ಲ ಎನಿಸುತ್ತದೆ. ಈ ಕಾರಣದಿಂದಾಗಿ ಕೆಲವು ವೇಳೆ ಸಾಹಿತ್ಯಿಕವಾಗಿ ತಿರುಕರ ಕಾದಂಬರಿಗಳು ಸೋಲುತ್ತವೆ ಎನಿಸಿದರೂ, ತಿರುಕರು 'ಸಾಹಿತಿ'ಎಂದು ಹಣೆಪಟ್ಟಿ ಕಟ್ಟಿಕೊಂಡು ಬರೆದವರಲ್ಲ ಎಂಬುದನ್ನು ಗಮನಿಸಿದಾಗ, ನಮ್ಮ ಎಷ್ಟೋ ಜನ ಲೇಖಕರಿಗಿಂತ ಇವರ ಸಾಧನೆ ಹಿರಿಯದು ಎನಿಸದಿರದು. ಇಡೀ ಜಗತ್ತೇ ನನ್ನದು, ನಾವಿರುವುದೇ ಅದರ ಸೇವೆಗಾಗಿ ಎಂಬ ಸಮರ್ಪಣಾಭಾವ ತಿರುಕರ ಎಲ್ಲ ಕಾದಂಬರಿ, ಕತೆಗಳಲ್ಲಿ ಏಕಮುಖವಾಗಿ ಗೋಚರಿಸುತ್ತದೆ. ಲೇಖಕನ ಚೇತನದಂತೆ ಅವನ ಕೃತಿ ಒಡಮೂಡುತ್ತದೆ ಎಂಬ ಮಾತಿಗೆ ತಿರುಕರ ಈ ಕೃತಿಗಳು ಸಾಕ್ಷಿಯಾಗುತ್ತವೆ.

1950 ರಿಂದ ಪ್ರಾರಂಭವಾದ ತಿರುಕರ ಕಥಾಸಾಹಿತ್ಯರಚನೆ 1969ರ ವರೆಗೆ ಹರಿದುಬಂದಿದೆ. ಹತ್ತು ಕಾದಂಬರಿಗಳನ್ನೂ, ಒಂದು ಕಥಾಸಂಕಲನವನ್ನು ಈ ವರೆಗೆ ಪ್ರಕಟಿಸಿದ್ದಾರೆ. ನನ್ನ ಈ ಲೇಖನ ತಿರುಕರ ಕಥಾಸಾಹಿತ್ಯದ ಸ್ಥೂಲ ಪರಿಚಯವೇ ಹೊರತು, ಸೂಕ್ಷ್ಮ ಅಧ್ಯಯನವಲ್ಲ. ನನ್ನ ಈ ಇತಿಮಿತಿಗಳ ಚೌಕಟ್ಟಿನಲ್ಲಿಯೇ ತಿರುಕರ ಕಥಾಸಾಹಿತ್ಯದ ಸಮೀಕ್ಷೆಯನ್ನು ಇಲ್ಲಿ ನಡೆಸಿದ್ದೇನೆ.

"ಕೊನೆಯ ಗುಟುಕು" ತಿರುಕರ ಮೊದಲನೆಯ ಕಾದಂಬರಿ. ಇದು ಸಮಾಜದ ಕರಾಳತೆಯನ್ನು ಎತ್ತಿ ತೋರಿಸುತ್ತದೆ. ಇಡೀ ಕಾದಂಬರಿಯೇ ಒಂದು ಸಾಮಾಜಿಕ ವಿಡಂಬನೆ. ಇಲ್ಲಿನ ನಾಯಕಿ ಮುಗ್ಧೆ, ರೂಪಸಿ. ಆದರೆ ಅವಳಿಗೆ ಬಂದ ತೊನ್ನಿನ ಕಾರಣವಾಗಿಯೇ ಸಮಾಜ ಅವಳನ್ನು ತುಚ್ಛವಾಗಿ ಕಾಣುತ್ತದೆ. ಕ್ಷಣಕ್ಷಣಕ್ಕೂ ಅವಳನ್ನು ಮಾತಿನ ಮೊನೆಯಿಂದ ಇರಿಯುತ್ತದೆ. ಈ ಎಲ್ಲ ಸಂಕಷ್ಟಗಳ ಮಧ್ಯೆ ಬದುಕುಮಾಡುವ ನಾಯಕಿ ಶಾಂತ ಆದರ್ಶವಾದಿ. ಕಾದಂಬರಿಯ ಬಂಧದಲ್ಲಿ ಶಿಥಿಲತೆಯಿರುವುದು ಮತ್ತು ಕ್ರಿಯೆಗಳು ಸಹಜವಾಗಿ ಮೂಡದಿರುವುದು ಕಂಡು ಬರುತ್ತದೆ. ಶಾಂತಳದು ಗಂಭೀರ ವ್ಯಕ್ತಿತ್ವದಂತೆ ಕಂಡು ಬಂದರೂ, ಆ ವ್ಯಕ್ತಿತ್ವ ರೂಪುಗೊಳ್ಳಲು ಕಾರಣವಾದ ಅವಳ ಬೌದ್ಧಿಕ ಹಾಗೂ ಮಾನಸಿಕ ಬೆಳವಣಿಗೆಯ ಸೂಕ್ಷ್ಮಚಿತ್ರಣ ಇಲ್ಲಿ ಕಂಡು ಬರುವುದಿಲ್ಲ. ಶಾಂತಳನ್ನು ಕಾದಂಬರಿಕಾರರು ಓದುಗನಿಗೆ ಪರಿಚಯಿಸಿ ಕೊಡುವಾಗಲೇ, ಅವರ ಗಮನ ಅವಳ ಒಳ್ಳೆಯತನವನ್ನು ಹೇಳುವುದಾಗಿದೆ ಎನಿಸುತ್ತದೆ. ಪ್ರಾರಂಭದಲ್ಲಿ ಆಕೆಗೆ ಬೀಳುವ ಕನಸೇ ಅವಳ ಜೀವನದ ಗತಿಯನ್ನು ತಿಳಿಸುವ ಸಂಕೇತವಾಗಿ ಬಂದು ಓದುಗನ ಕುತೂಹಲವನ್ನು ಕಡಮೆಮಾಡಿ ಬಿಡುತ್ತದೆ. ಘಟನೆಗಳು ಆಕಸ್ಮಿಕದಂತೆ ತೋರುತ್ತವೆ. ಉದಾ—ರಮೆಯ ಮದುವೆಯ ಸುದ್ದಿ ಶಾಂತಳಿಗೂ ರಾಮಮೂರ್ತಿಗೂ ಈ ಮೊದಲೇ ಮದುವೆಯ ಪ್ರಸ್ತಾಪ ಆಗಿತ್ತು ಎಂಬುದಾಗಲೀ, ಅವರಿಬ್ಬರು ಪ್ರಣಯಿಗಳು ಎಂಬುದಾಗಲೀ ಕೃತಿಯಲ್ಲಿ ಧಿಡೀರನೆ ಮೂಡುತ್ತವೆ. ಮಾಧವ, ಶ್ರೀಧರ, ವಿಜಯೆ–ಈ ಪಾತ್ರಗಳು ತಮ್ಮನ್ನು ಸಂಪೂರ್ಣ ಬಿಚ್ಚಿಕೊಳ್ಳುವುದಿಲ್ಲ. ಶಾಂತಳ ಜೊತೆಯಲ್ಲಿನ ರಮೆಯ ನಡತೆ ಕೆಲವಡೆ ತೀರಾ ಕೃತಕ ಎನಿಸಿಬಿಡುತ್ತದೆ. ಆದರೆ ಈ ಕಾದಂಬರಿಯಲ್ಲಿ ಕಾದಂಬರಿಕಾರರು ಸಾಧಿಸಿರುವುದು: ವ್ಯಕ್ತಿಯೊಬ್ಬನನ್ನು ಈ ವ್ಯವಸ್ಥೆ ಹೇಗೆ ತುಳಿಯಬಲ್ಲುದು ಎಂಬುವನ್ನು, ಮತ್ತು ಸಾಮಾಜಿಕವಾಗಿ ಪುರಸ್ಕಾರ ಸಿಗದ ಯಾವುದೇ ಆದರ್ಶವ್ಯಕ್ತಿತ್ವವೂ ಬದುಕಲಾರದು ಎಂಬುದನ್ನು ಮೂರ್ತವಾಗಿ ಕೊಟ್ಟಿರುವುದು. ಈ ಕಾದಂಬರಿಯ ಮಿತಿಗಳೇನಿದ್ದರೂ ಇದು ತಿರುಕರ ಪ್ರಥಮ ಕಾದಂಬರಿ ಎಂಬುದನ್ನು ಮರೆಯಲಾಗದು.

ಸಮಾಜ ಸೇವಾಕರ್ತನೊಬ್ಬನ ಜೀವನಕತೆ "ಮೂಳೆಯ ಹಂದರ" ಕಾದಂಬರಿಯಲ್ಲಿ ಪ್ರಾರಂಭವಾಗಿ "ಚಿತೆಯೋ ಸಮಾಧಿಯೋ" ಕಾದಂಬರಿಯಲ್ಲಿ ಪೂರ್ಣಗೊಳ್ಳುತ್ತದೆ. ಈ ಕೃತಿಗಳಲ್ಲಿ ಲೇಖಕರೇ ಹೇಳುವಂತೆ ರೋಮಾಂಚನಗೊಳಿಸುವಂಥ ಸನ್ನಿವೇಶಗಳಿಲ್ಲ. ಆದರೆ ಇಲ್ಲಿಯ ನಾಯಕ ಗುರುಜರಣನ ಆದರ್ಶ ಕೇವಲ ಆದರ್ಶವಾಗಿ ನಿಲ್ಲದೆ, ಆತ ತನ್ನ ಆದರ್ಶವನ್ನು ಏಕೈಕನಿಷ್ಠೆಯಿಂದ ಸಾಧಿಸುವಲ್ಲಿ ಮುಗಿಯುವುದು ಮೆಚ್ಚತಕ್ಕದ್ದು. "ಕಥಾನಾಯಕ ಗುರುಚರಣನ ವ್ಯಕ್ತಿತ್ವದಲ್ಲಿ ತಮಗೆ ಪ್ರಿಯವಾದ ಆದರ್ಶವನ್ನು ತುಂಬಿ ಜೀವನ ವೃತ್ತಾಂತದ ರೀತಿಯಲ್ಲಿ ಕಾದಂಬರಿಗಳನ್ನು ನಡೆಸಿದ್ದಾರೆ. ಗುರುಚರಣನೇ ಮುಖ್ಯಪಾತ್ರವಾದ್ದರಿಂದ ಉಳಿದ ಪಾತ್ರಗಳು ಮುಸುಕುಮುಸುಕಾಗುತ್ತವೆ. ಒಂದು ಗಮನಾರ್ಹವಾದ ಸಂಗತಿಯೆಂದರೇ–ಗುರುಚರಣನ ವ್ಯಕ್ತಿತ್ವದ ಸ್ಥಿತಪ್ರಜ್ಞತೆಯನ್ನು ಕಾದಂಬರಿಕಾರರು ಒಂದೇ ಮಟ್ಟದಲ್ಲಿರಿಸುವುದು. ಆತನ ಬದುಕೇ ಒಂದು ತಪಸ್ಸಾಗಿ ಕಾದಂಬರಿಯಲ್ಲಿ ಮೂಡಿಬರುತ್ತದೆ. ಇಲ್ಲಿ ಗುರುಚರಣನಿಗಿರುವುದು ಒಂದೇ ಗುರಿ; ಅವನ ಗತಿಯೂ ಆ ಕಡೆಯೇ. ಅವನ ಕಾರ್ಯದಲ್ಲಿ, ಅವನ ಆದರ್ಶದ ಸಾಧನೆಯ ಸೇವೆಯಲ್ಲಿ ತೊಡಕುಗಳು ಬರುವುದಿಲ್ಲ. ಒಂದು ವೇಳೆ ಅವು ಬಂದರೂ ಅವನ ವ್ಯಕ್ತಿತ್ವದ ಶುಭ್ರತೆಯ ಮುಂದೆ ನಾಚಿ, ಹಿಂದೆ ಸರಿಯುತ್ತವೆ. ಕಾದಂಬರಿಗಳುದ್ದಕ್ಕೂ ಒಂದು ಅವ್ಯಕ್ತ ಶಕ್ತಿಯ ನಂಬಿಕೆಯನ್ನು ಪ್ರತಿಪಾದಿಸುತ್ತಾ ಹೋಗುತ್ತದೆ. ಅದು ಗುರುವಿನ ರೂಪದಲ್ಲಿ, ನಾಯಕನ ರೂಪದಲ್ಲಿ ಮೂರ್ತರೂಪ ಪಡೆಯುತ್ತದೆ. ಕಾದಂಬರಿಗಳಲ್ಲಿ ಅಲ್ಲಲ್ಲಿ ಇಣುಕುವ ಬರಗಾಲ, ಗಾಂಧಿ ನೆನಪು, ಸ್ವಾತಂತ್ರ್ಯಚಳುವಳಿಯ ವಿಷಯ, ಮಹಾಯುದ್ಧದ ವಾರ್ತೆ–ನಾಯಕನ ವ್ಯಕ್ತಿತ್ವ ಬೆಳವಣಿಗೆಗೆ ಪೋಷಕವಾಗಿ ಬರುತ್ತವೆ. "ಮೂಳೆಯ ಹಂದರ"ಕ್ಕಿಂತ ಹೆಚ್ಚು ಸ್ಫುಟವಾಗಿ ಗುರುಚರಣನ ವ್ಯಕ್ತಿತ್ವ "ಚಿತೆಯೋ ಸಮಾಧಿಯೋ"ನಲ್ಲಿ ಎದ್ದು ಕಾಣುತ್ತದೆ. ಅವನ ಸೇವಾ ಕಾತುರತೆ ಮತ್ತು ಶ್ರದ್ಧೆ ವಿಸ್ಮಯಗೊಳಿಸುತ್ತವೆ ಇಡೀ ಜಟ್ಟಿ ಕುಣಿದೂರಿನ ಈ ಎಲ್ಲಾ ಸಾಧನೆಗಳು ಏಕವ್ಯಕ್ತಿಕೃತವೆಂದು ಕೊಂಡಾಗ ಅದೊಂದು ಪವಾಡಸದೃಶವಾಗಿ ತೋರುತ್ತದೆ. ಕಾದಂಬರಿಗಳುದ್ದಕ್ಕೂ ಎದ್ದು ಕಾಣುವ ಪ್ರಧಾನ ಅಂಶವೆಂದರೇ—"ಸಮಾಜದ ಹಿತ"ದ ಬಗ್ಗೆ ಲೇಖಕರಿಗಿರುವ ಕಳಕಳಿ. ಜನತೆಯ ಹಿತಕ್ಕಾಗಿ ತನ್ನ ತನುಮನಧನಗಳನ್ನೂ ಸವೆಸಿದ ಗುರುಚರಣ ಸತ್ತಾಗ, ಅವನ ಶವವನ್ನು ಚಿತೆ ಮಾಡುವುದೋ, ಸಮಾಧಿ ಮಾಡುವುದೋ ಎಂದು ಅವನ ಹಿಂಬಾಲಕರಲ್ಲಿ ಎದ್ದ ವಾದ ವಿವಾದಗಳು ಈ ಸಮಾಜದ ನಾಯಿ–ಬಾಲತನಕ್ಕೆ ಒಳ್ಳೆಯ ನಿದರ್ಶನವಾಗುತ್ತದೆ. ಗುರುಚರಣನ ಸಂಘಟನಾ ಶಕ್ತಿ,ನಾಯಕ ನಿಷ್ಠೆಯ ಪದರ ಪದರಗಳನ್ನು ಈ ಕಾದಂಬರಿಗಳು ಬಿಚ್ಚಿ ತೋರಿಸುತ್ತವೆ. ಕಾದಂಬರಿ ಗುರುಚರಣನ ಸಾವಿನಿಂದ ಕೊನೆಗೊಂಡರೂ ಅದು ದುರಂತಾಂತವಲ್ಲ; ಮಂಗಳಾಂತ. ಗುರುಚರಣನ ಚೇತನ ಸಾರ್ಥಕ ಬದುಕನ್ನು ಬದುಕಿ, ಸಿದ್ಧಿಯನ್ನು ಪಡೆಯುತ್ತದೆ.

"ಉದಯಾಸ್ತ" ಪ್ರಾರಂಭದಲ್ಲಿ ಸಂಜೀವಯ್ಯ–ಚಂಪಾ ಎಂಬ ತಿರುಪೆ ಎತ್ತುವ ತಂದೆ ಮಗಳ ಕತೆಯಂತೆ ಕಂಡುಬಂದರೂ ಮುಂದೆ ಅದು ಬೆಳೆಯುವ ರೀತಿ ಮಾತ್ರ ಬೇರೆಯಾದುದು. ಸಂಜೀವಯ್ಯ ಬದುಕಿನಲ್ಲಿ ಒಮ್ಮೆ ಗಡದ್ದಾಗಿ ಬದುಕಿದವನು. ಆದರೆ ಕಾಲಧರ್ಮಕ್ಕೆ ಸಿಲುಕಿ ನಶಿಸಿ, ಕೊನೆಗೆ ಭಿಕ್ಷೆ ಎತ್ತುವ ಸ್ಥಿತಿಗೆ ಬಂದವನು. ಚಂಪಾ ಹುಟ್ಟು ಕಲಾವಿದೆ; ಮಹಾಭಕ್ತೆ. ಗಾನಸರಸ್ವತಿಯು ಅವಳಲ್ಲಿ ನೆಲೆಯಾಗಿದ್ದಳು. ಇವಳ ದೈವೀ ಶಕ್ತಿಗೆ ಮಾರು ಹೋದ ರೈಲ್ವೆ ಸ್ಟೇಷನ್ ಮಾಸ್ಟರ್ ಗೋಪಾಲಯ್ಯ ಮತ್ತು ರೈಲ್ವೆಗಾರ್ಡ್ ಎಡ್ವಿನ್, ಸಂಜೀವಯ್ಯ ಮತ್ತು ಚಂಪಾರ ಒಳಿತಿಗಾಗಿ ಹೆಣಗಾಡುವುದೇ ಕಾದಂಬರಿಯ ತುಂಬ ನಿಂತಿದೆ. ಈ ಒಂದು ಆದರ್ಶ ತಿರುಕರ ಉಳಿದ ಕಾದಂಬರಿಗಳ ಆದರ್ಶದಂತಿಲ್ಲ. ತಿರುಪೆಯ ಸಮಸ್ಯೆಯನ್ನು ಕಾದಂಬರಿಕಾರರು ತೀರಾ ಸರಳೀಕರಿಸಿದ್ದಾರೆ. ಚಂಪಾ ಮತ್ತು ಸಂಜೀವಯ್ಯನವರಿಗೆ, ಎಲ್ಲೇ ಹೋದರೂ ಸಮಾಜ ಅನ್ನಬಟ್ಟೆ ಕೊಡುತ್ತಿತ್ತು ಎಂಬುದು ನಂಬಿಕೆಯ ನೆಲೆಗಟ್ಟಿನಿಂದ ದೂರ ಸರಿಯುತ್ತದೆ. ಇವರಿಬ್ಬರಿಗೆ ವೈರಿಯಾಗಿ ಬರುವವನು ಬೇರೆ ಯಾರೂ ಆಗಿರದೆ, ತಿರುಕನಾದ ದುಂಡಪ್ಪನೇ ಆಗಿರುವುದು ತೀರಾ ಅವಾಸ್ತವವಾಗಿದೆ. ತಿರುಕರ ಸಮಸ್ಯೆಯನ್ನು ಕುರಿತ ಕಾದಂಬರಿ,

ಆ ತಿರುಕರಲ್ಲೇ ಖಳನಾಯಕನನ್ನೂ ಸೃಷ್ಟಿಸಿಕೊಳ್ಳುವುದು ವಿಪರ್ಯಾಸದ ಸಂಗತಿ. ತಿರುಪೆಯ ಅಸಾಧ್ಯವಾದ ಹೊಟ್ಟೆಪಾಡಿನ ಭೀಕರತೆಯನ್ನು ಕಾದಂಬರಿ ಕೊಡುವುದಿಲ್ಲ. ದುಂಡಪ್ಪ ಕೊನೆಯವರೆಗೆ ಖಳನಾಯಕನಾಗಿಯೇ ಉಳಿದು, ಚಂಪಾಳ ಪ್ರಾಣ ತೆಗೆದುಕೊಳ್ಳುವುದು ತೀರಾ ನಾಟಕೀಯವಾಗಿದೆ. ಕಾದಂಬರಿಯ ವಸ್ತು ಮಹತ್ವದ್ದಾದರೂ ನಿರ್ವಹಿಸಿರುವ ರೀತಿಯಲ್ಲಿ ಸರಳತೆಯಿದೆ.

"ಸೂತ್ರದಬೊಂಬೆ" ಮತ್ತು "ರಸಋಷಿ"—ಈ ಕಾದಂಬರಿಗಳಲ್ಲಿ ಯಕ್ಷಗಾನ-ಬಯಲಾಟ ಮತ್ತು ಸೂತ್ರದಬೊಂಬೆ ಕಲಾವಿದರ ಜೀವನ ಚಿತ್ರಣವಿದೆ. ಕಾದಂಬರಿಕಾರರೇ ಮುನ್ನುಡಿಯಲ್ಲಿ ಹೇಳುವಂತೆ, ಇಲ್ಲಿ ಬರುವ ಪಾತ್ರಗಳು 'ಐತಿಹಾಸಿಕ ವ್ಯಕ್ತಿಗಳು.' ಇದರಿಂದ ಕಾದಂಬರಿಗಳಿಗೆ ಸಹಜತೆ ಬಂದಿದೆ. ತಿರುಕರ ಸಾಮಾಜಿಕ ಕಾದಂಬರಿಗಳಿಗಿಂತ ಈ ಕಾದಂಬರಿಗಳಲ್ಲಿ ಹೆಚ್ಚು ಆಕರ್ಷಣೆ ಇದೆ. ಏಕೆಂದರೆ—ಲೇಖಕರಿಗೆ ವಸ್ತುವಿನ ಮೇಲೆ ವಸ್ತುನಿಷ್ಠವಾಗಿ ಆಲೋಚಿಸಿ, ಅದನ್ನು ಕಥನಕ್ರಿಯೆಗೆ ಅಳವಡಿಸುವ ಅವಕಾಶವಿದೆ. ಆದ್ದರಿಂದ ಪುಟ್ಟರಂಗಪ್ಪ ಮತ್ತು ಕಸ್ತೂರಿರಂಗಪ್ಪನವರ ಕಥೆ ತೀವ್ರವಾಗಿ ಹರಿದು ಬರುತ್ತದೆ; ಓದುಗನನ್ನು ಹಿಡಿದಿಡುತ್ತದೆ. ಲೇಖಕರು ಸೂತ್ರದಬೊಂಬೆಯ ಔಚಿತ್ಯವನ್ನು ಕಸ್ತೂರಿರಂಗಪ್ಪನವರ ಸಾಲಿನಲ್ಲಿ ಅರ್ಥಪೂರ್ಣವಾಗಿ ಕೊಡುತ್ತಾರೆ. ಜೇನಾವಿ ಪತ್ರದಿಂದ ತಮ್ಮ ಶಿಷ್ಯರ ಬಗ್ಗೆ ಜಿಗುಪ್ಸೆಗೊಂಡು ಒರಟಾಗಿ ವರ್ತಿಸುವ ಕಸ್ತೂರಿರಂಗಪ್ಪನವರ ಪಾತ್ರ ಕಲಾವಿದನೊಬ್ಬನ ಭಾವುಕ ಜೀವನದಂತಿರುವುದು ಸಹಜವಾಗಿ ಬಂದಿದೆ. ಪುಟ್ಟರಂಗಪ್ಪ, ಕಸ್ತೂರಿರಂಗಪ್ಪ, ಚಲುವಯ್ಯ, ರಂಗನಾಯಕಿ, ಕೃಷ್ಣನಾಯಕಿ–ಈ ಪಾತ್ರಗಳು ಕಲೆಯ ಉಪಾಸಕರಾಗಿ ಕಂಡುಬರುವಲ್ಲಿ ನಿಷ್ಠೆ, ಸಂಯಮ ತೋರುತ್ತವೆ. ಆದರೆ ಕಾದಂಬರಿಯಲ್ಲಿ ನಮ್ಮನ್ನು ಬಹಳವಾಗಿ ಸೆಳೆಯುವ ಪಾತ್ರ ಚಲುವಯ್ಯನದು. ಆತ ಪ್ರಾರಂಭದಲ್ಲಿ ಒರಟಾಗಿ ಕಂಡುಬಂದರೂ, ಕಾದಂಬರಿ ಬೆಳೆಬೆಳೆಯುತ್ತಾ ಅವನ ವ್ಯಕ್ತಿತ್ವ ಹೆಚ್ಚು ಗಂಭೀರವಾಗಿ, ಧೀಮಂತವಾಗಿ ಬೆಳೆಯುತ್ತಾ ಹೋಗುತ್ತದೆ. ಅವನ ದಾಯಾದಿ ಮತ್ಸರಕಲೆಯ ಸಂಸರ್ಗದಿಂದ ಮಾಯವಾಗುವುದು. ಎಂಥವರ ಮನಸ್ಸನ್ನು ಬೇಕಾದರೂ ಪರಿವರ್ತಿಸುವ ಶಕ್ತಿ ಕಲೆಗಿದೆ ಎಂಬುದು ಇದರಿಂದ ತಿಳಿಯುತ್ತದೆ. ಚಲುವಯ್ಯನ ಆತ್ಮಸಂಯಮ, ಆಧ್ಯಾತ್ಮನಿಷ್ಠೆ, ಅವನ ಸಾಧಕತನದ ಹೋರಾಟ—ಮನಮುಟ್ಟುವಂತೆ ಚಿತ್ರಿತವಾಗಿದೆ. ಕಲೆಯ ಉಪಾಸಕನಾಗಿ, ಕೊನೆಗೆ 'ರಸಋಷಿ' ಆಗುತ್ತಾನೆ. ಈ ಎರಡು ಕಾದಂಬರಿಗಳಲ್ಲಿ ಯಕ್ಷಗಾನ, ಬಯಲಾಟ ಮತ್ತು ಸೂತ್ರದಬೊಂಬೆಗಳ ಸೂಕ್ಷ್ಮ ಪರಿಚಯ ಮೂಡಿಬಂದಿದೆ. ಮಧುರೆಯ ರಾಮಭದ್ರಪಿಳ್ಳೆ, ಅವರ ಶಿಷ್ಯೆ ವಿಜಯರಂಗಮ್ಮನವರ ವ್ಯಕ್ತಿತ್ವ ಕತೆಯ ಅಂತಿಮ ಘಟ್ಟದಲ್ಲಿ, ಮೂಲಬಿತ್ತಿಗೆ ಪೋಷಕವಾಗಿ ಬರುತ್ತದೆ. ಪುಟ್ಟರಂಗಪ್ಪನವರ ಪಾತ್ರ ತನ್ನ ಅಂತ್ಯದಲ್ಲಿ 'ಆ ತಾಯಿ'ಯ ಮೇಲಿನ ನಂಬುಗೆಯಿಂದಲೇ ಅಂತ್ಯವಾಗುವುದು, ಕಾದಂಬರಿಕಾರರ ಧೋರಣೆಯನ್ನು ಸಮರ್ಥಿಸುತ್ತವೆ.

'ಗುಡ್ಡದ ಸಿಂಗಾರಿ' ಮತ್ತು 'ತ್ಯಾಗಜೀವಿ'—ಈ ಎರಡು ಕಾದಂಬರಿಗಳು ದಲಿತವರ್ಗದ ಉದ್ಧಾರಕ್ಕಾಗಿ ತನ್ನ ಜೀವನವನ್ನೇ ಮುಡಿಪಾಗಿಟ್ಟ ಸಮಾಜ ಸುಧಾರಕನೊಬ್ಬನ ಜೀವನವನ್ನು ಹೇಳುತ್ತವೆ. ಇಲ್ಲಿಯ ನಾಯಕರಾದ ಪಟ್ಟಾಭಿರಾಮಯ್ಯನವರು ಲಂಬಾಣಿವರ್ಗದ ಉದ್ಧಾರಕ್ಕೆ ತಮ್ಮತನವನ್ನು ಮುಡಿಪಾಗಿಡುವ ಚಿತ್ರ 'ಗುಡ್ಡದ ಸಿಂಗಾರಿ'ಯಲ್ಲಿ ಕಂಡುಬಂದರೆ, 'ತ್ಯಾಗಜೀವಿ'ಯಲ್ಲಿ ಜೋಗಿಗಳು, ಬುಡಬುಡಕೆಯವರು, ಕೊರಮರು, ಕಂಚೀಗೊಲ್ಲರು, ಹೆಳವರು, ವ್ಯಾಸನಾಯಕರು, ಕುರುಬರು, ಕೊರಚರು, ಒಡ್ಡರು, ಗೊಲ್ಲರು— ಮೊದಲಾದ ನಿಮ್ನವರ್ಗದ ಜೀವನೋದ್ಧಾರಕ್ಕೆ ಸೇವೆ ಸಲ್ಲಿಸುವ ಚಿತ್ರವಿದೆ. ಸಮಾಜಸುಧಾರಣೆಯ ಇವರ ವ್ಯಕ್ತಿತ್ವದ ಜೊತೆಗೆ ಇವರಿಗಿರುವ ಮಾನವತಾ ಪ್ರೇಮ ಮೆಚ್ಚುವಂಥದು. ಈ ಕಾದಂಬರಿಗಳಲ್ಲಿ ಕಂಡುಬರುವ ಜಾನಕಮ್ಮ, ಮಧುರಾಬಾಯಿ, ಶಾರದೆ—ಪಾತ್ರಗಳು ತಮ್ಮ ವ್ಯಕ್ತಿತ್ವವನ್ನು ಬಿಚ್ಚಿಕೊಳ್ಳುತ್ತವೆ. ಈ ಕಾದಂಬರಿಗಳನ್ನು ಕೇವಲ ಕತೆಯ ದೃಷ್ಟಿಯಿಂದ ಅಥವಾ ಸಾಹಿತ್ಯಕ ದೃಷ್ಟಿಯಿಂದ ಓದಬಯಸುವವರಿಗೆ ಸ್ವಲ್ಪ ನಿರಾಸೆಯಾದೀತು. ಆದರೆ ಈ ಎರಡು ಕಾದಂಬರಿಗಳ ಸಾರ್ಥಕ್ಯ ನಿಂತಿರುವುದು, ಆ ಕಾದಂಬರಿಗಳು ಒಳಗೊಂಡಿರುವ ಜನಜೀವನದ

ವಾಸ್ತವ ಚಿತ್ರದಿಂದ. ನಿಮ್ನವರ್ಗದವರ ಆಚಾರ–ವಿಚಾರ, ನಂಬಿಕೆ, ಸಂಪ್ರದಾಯ, ಅವರ ಮೂಲ ಭಾಷೆ ಮುಂತಾದ ಅನೇಕ ವಿಷಯಗಳನ್ನು ಕಾದಂಬರಿಕಾರರು ಸಂಗ್ರಹಿಸಿ ಇಲ್ಲಿ ಕೊಟ್ಟಿದ್ದಾರೆ. ಈ ಕಾರಣದಿಂದ ಈ ಕಾದಂಬರಿಗಳು ಆ ಜನಜೀವನದ ದೃಷ್ಟಿಯಿಂದ ಅಧ್ಯಯನಕ್ಕೆ ಅತ್ಯಾವಶ್ಯಕವಾದವುಗಳು. ಸಾಹಿತ್ಯಿಕವಾಗಿ ಇವುಗಳ ಬೆಲೆ ಏನೇ ಇರಲಿ, ಇವು ಮಾನವ ಶಾಸ್ತ್ರೀಯ ದೃಷ್ಟಿಯಿಂದ ಗಮನಾರ್ಹವಾದವುಗಳು. ಈ ಕಾದಂಬರಿಗಳನ್ನು ಓದಿ ಮುಗಿಸಿದಾಗ ತಿರುಕರಿಗಿರುವ ಅನ್ವೇಷಣಾಶಕ್ತಿ ಮತ್ತು ಸಂಗ್ರಹತನಗಳು ಮೂಕರನ್ನಾಗಿಸುತ್ತವೆ.

"ಎಲ್ಲಾ ಹಸಿವೆಯ ಆಟ" ಕಾದಂಬರಿಯಲ್ಲಿ, ಬಡತನ ವ್ಯಕ್ತಿತ್ವವನ್ನು ಮಾರಿಕೊಳ್ಳುತ್ತದೆ; ಹಸಿವು ಎಲ್ಲ ನೈತಿಕತೆಯನ್ನು ತುಳಿಯುತ್ತದೆ ಎಂಬುದನ್ನು ತುಂಬಾ ಕರುಣಾಜನಕವಾಗಿ ಹೇಳುತ್ತದೆ. ಕಾದಂಬರಿ ಬಿಡಿ ಬಿಡಿಯಾಗಿರುವಂತೆ ಕಂಡುಬಂದರೂ ಮೂಲಕ್ರಿಯೆಗೆ ಒಂದು ಏಕಸೂತ್ರತೆ ಇದೆ. ಇದರ ಜೊತೆಗೆ ಕತೆಗಾರ ವಿಶ್ವ ಮತ್ತು ಅವನ ತಂಗಿ ಅಮರ–ಇವರ ಪತ್ರವ್ಯವಹಾರ ಒಂದು ರೀತಿಯಲ್ಲಿ ಕತೆಯ ವ್ಯಾಖ್ಯಾನದಂತಿದೆ. ಕಾದಂಬರಿ ಸೂಳೆಯರ ಉದ್ಧಾರದಲ್ಲಿ ಕೊನೆಗೊಳ್ಳುತ್ತದೆ.

ತಿರುಕರು ಕಾದಂಬರಿಕಾರರು ಮಾತ್ರವಲ್ಲ; ಅವರು ಕತೆಗಾರರೂ ಹೌದು. ಇವರು ಕಾದಂಬರಿಗಳನ್ನು ಬರೆಯುವುದಕ್ಕೆ ಮುನ್ನವೇ ಕತೆಗಳನ್ನು ಬರೆದಿದ್ದರು. ಹತ್ತು ಕತೆಗಳನ್ನು ಒಳಗೊಂಡಿರುವ "ದೇವರ ಉಪವಾಸ" ಬೆಳೆಯುವ ಲೇಖಕನೊಬ್ಬನ ಎಲ್ಲ ಗುಣಗಳನ್ನು ಹೇಳುತ್ತದೆ. ಇಲ್ಲಿಯ ಕತೆಗಳಲ್ಲಿ 'ತಪ್ಪಾರ್ಯದು', 'ದುರ್ದೈವಿ', 'ತಬ್ಬಲೀ—ಕಾಗದ', 'ಪ್ರೇಮದ ಕರೆ','ಅರಳುವ ಮೊದಲೇ ಹೂ ಬಾಡಿತು' ಕತೆಗಳು ಮನ ಸೆಳೆಯುತ್ತವೆ. ಇವರ ಕತೆಗಳಲ್ಲಿ ತೀವ್ರವಾದ ಸಾಮಾಜಿಕ ಕಳಕಳಿ ಇದೆ. ಸಾಮಾಜಿಕ ಅಂಧತೆಯನ್ನು ತೀವ್ರವಾಗಿ ವಿಡಂಬಿಸುವ ಹರಿತತೆ ಇವರ ಲೇಖನಿಗಿದೆ. ಆದರೆ ಸಮಸ್ಯೆ ಸರಳವಾಗುವುದು ಮಾತ್ರ ಕತೆಗಳ ಮೌಲ್ಯವನ್ನು ತಗ್ಗಿಸುತ್ತದೆ, ಎನಿಸುತ್ತದೆ. ಆದರೂ ಈ ಕೃತಿ ಪ್ರಥಮಕೃತಿ ಎಂಬುದನ್ನು ನೋಡಿದಾಗ ಇವರ ಸಾಧನೆ ಕಡಿಮೆಯದೇನಲ್ಲ.

ತಿರುಕರ ಕಥಾಸಾಹಿತ್ಯವನ್ನು ಅವಲೋಕಿಸಿದಾಗ ಕೆಲವು ಸಾಮಾನ್ಯ ಅಂಶಗಳು ಗೋಚರಿಸುತ್ತವೆ. ಅವು ತಿರುಕರ ಜೀವನ ಮತ್ತು ವ್ಯಕ್ತಿತ್ವದ ಮೇಲೆ ಬೆಳಕು ಚೆಲ್ಲುತ್ತದೆ. ಅವರ ಕೃತಿಗಳ ಅಧ್ಯಯನದಿಂದ, ಅವರಿಗೆ ಹೆಣ್ಣಿನ ಬಗ್ಗೆ ತುಂಬ ಗೌರವವಿರುವುದು ಕಂಡುಬರುತ್ತದೆ. ಅವರ ಎಲ್ಲ ಕೃತಿಗಳಲ್ಲಿ ಕಂಡುಬರುವುದು ಹೆಣ್ಣಿನ ಮೃದುತನವನ್ನೇ. ಅವಳನ್ನು ಇಡೀ ಸಮಾಜ ಗೌರವಿಸಬೇಕೆನ್ನುವುದು ಲೇಖಕರ ಬಯಕೆ. ಈ ದೃಷ್ಟಿಯಿಂದಲೇ ತಮ್ಮ ಕೃತಿಗಳಲ್ಲಿ ಪಾತ್ರಗಳ ಮೂಲಕ, ಆಕೆಗೆ ತುಂಬ ಗೌರವವನ್ನು ಕೊಡಿಸುವುದು ; ಆಕೆಯನ್ನು 'ತಾಯಿ', 'ತಂಗಿ', 'ಅಮ್ಮ' ಎಂದು ಕರೆಸುವುದು ಎಂದಮಾತ್ರಕ್ಕೆ ಹೆಣ್ಣಿನ ಕರಾಳ ಮುಖವನ್ನು ತೋರಿಸಿಲ್ಲ ಎಂದರ್ಥವಲ್ಲ. 'ಕೊನೆಯ ಗುಟುಕು' ಕಾದಂಬರಿಯಲ್ಲಿ ಬರುವ ಬಹುಪಾಲು ಹೆಣ್ಣುಗಳು ಹೃದಯವಿಲ್ಲದವರು, 'ತ್ಯಾಗಜೀವಿ'ಯ ಶಾರದ ಕೂಡ ಅಂಥವಳೇ. ಈ ಸಮಾಜದ ತುಳಿತಕ್ಕೆ ಸಿಕ್ಕ ಹೆಣ್ಣಿನ ಬಗ್ಗೆ ಸಹಜವಾಗಿಯೇ ಪ್ರೀತಿ, ವಾತ್ಸಲ್ಯ, ಗೌರವಗಳಿರುವುದು ಸಾಧಕ ತಿರುಕರಿಗೆ ಸಹಜವಾಗಿದೆ.

ತಿರುಕರದು ಆರೋಗ್ಯಕರವಾದ ಪ್ರವೃತ್ತಿ. ಅವರು ಸಮಾಜ ಸುಧಾರಕರಾಗಿದ್ದುಕೊಂಡು ಸಾಹಿತ್ಯ ರಚಿಸಿದವರಾದ್ದರಿಂದ, ಅವರ ಕೃತಿಗಳಲ್ಲಿ ಎಲ್ಲೆಲ್ಲೂ ಬದಲಾವಣೆಗಳಾಗಬೇಕೆಂಬ ಹಂಬಲ ಕೇಳಿ ಬರುತ್ತದೆ. ನಮ್ಮಲ್ಲಿ ಸಾಹಿತಿಗಳುಂಟು ; ಸಮಾಜ ಸುಧಾರಕರೂ ಉಂಟು. ಆದರೆ ಸಮಾಜಸುಧಾರಕ–ಸಾಹಿತಿ–ಎರಡೂ ಆಗಿರುವವರು ಬಹಳ ಕಡಮೆ. ತಿರುಕರು ಅಂಥವರಲ್ಲಿ ಒಬ್ಬರು. ತಿರುಕರ ಸಮಾಜ ಸುಧಾರಣೆ ಕೇವಲ ಕೃತಿಗಳಲ್ಲಿ ಕನಸುವುದಲ್ಲ. ಅದು ಅವರ ಜೀವನದಲ್ಲಿ ಸಾಧಿತವಾಗಿರುವಂಥದು, ತಿರುಕರಿಗೆ ಈ ಸಾಮಾಜಿಕ ಮೌಲ್ಯಗಳಲ್ಲಿ ಗಟ್ಟಿಯಾಗಿರುವುದನ್ನು ಮೆಚ್ಚುವುದರಲ್ಲಿ ನಂಬಿಕೆ ಇದೆ. ಅದೇ ರೀತಿ ಅಂಥ ಸಂಪ್ರದಾಯ, ಆಚರಣೆಗಳನ್ನು ತಿರಸ್ಕರಿಸುವುದಕ್ಕೆ ಹಿಂದೆಮುಂದೆ ನೋಡುವುದಿಲ್ಲ. ಇಂಥವುಗಳಿಂದ ಆಗುತ್ತಿರುವ ಸಮಾಜ ಘಾತುಕತನಗಳ

ಬಗ್ಗೆ ತಿರುಕರ ಕಳಕಳಿಯ ಎಚ್ಚರಿಕೆ ಇದೆ. ಇವರ 'ಮೂಳೆಯ ಹಂದರ', 'ಚಿತೆಯೋ ಸಮಾಧಿಯೋ' ಮತ್ತು 'ಗುಡ್ಡದ ಸಿಂಗಾರಿ' 'ತ್ಯಾಗಜೀವಿ' ಕಾದಂಬರಿಗಳು ಈ ದಿಸೆಯಲ್ಲಿ ಮುಖ್ಯವಾಗುತ್ತವೆ. ಈ ಕಾದಂಬರಿಗಳಲ್ಲಿ ಸಮಾಜದ ಎಲ್ಲ ಮುಖಗಳ, ಎಲ್ಲ ವರ್ಗಗಳ ಅಭ್ಯುದಯಕ್ಕೆ ಚಿಂತಿಸುವ, ಶ್ರಮಿಸುವ ಲೇಖಕರ ಧೋರಣೆ ಚೆನ್ನಾಗಿ ವ್ಯಕ್ತವಾಗುತ್ತದೆ.

ತಿರುಕರು ಕತೆ, ಕಾದಂಬರಿಗಳಲ್ಲಿ ಬಳಸುವ ತಂತ್ರ ಸರಳವಾದುದು. ನೇರವಾಗಿ ಕತೆ ಹೇಳಿಬಿಡುತ್ತಾರೆ. ತಂತ್ರ, ಬಂಧ, ಪಾತ್ರಚಿತ್ರಣಗಳ ಕಡೆ ಲೇಖಕರು ಅಷ್ಟಾಗಿ ಗಮನ ಕೊಡುವುದಿಲ್ಲ. ಕಾದಂಬರಿಯಲ್ಲಿ ಮುಖ್ಯ ದೃಷ್ಟಿಕೋನದ ಜೊತೆಗೆ, ತಾವು ಮಧ್ಯೆ ಮಧ್ಯೆ ವ್ಯಾಖ್ಯಾನ ಕೊಡುವುದು ಕಂಡು ಬರುತ್ತದೆ. 'ಗುಡ್ಡದ ಸಿಂಗಾರಿ', 'ತ್ಯಾಗಜೀವಿ'ಗಳಲ್ಲಿ ಪಟ್ಟಾಭಿರಾಮಯ್ಯನವರ ದೃಷ್ಟಿಕೋನದಲ್ಲಿ ಕಾದಂಬರಿಯನ್ನು ಬೆಳಸುವ ತಂತ್ರವಿದೆ. ಆದರೆ ಮಧ್ಯೆ ಮಧ್ಯೆ ಕಾದಂಬರಿಕಾರರು ಪ್ರವೇಶಿಸಿ ಬಿಡುವುದರಿಂದ ತಂತ್ರದಲ್ಲಿ ಒಂದು ಏಕಮುಖತೆಯನ್ನು ಕಾಯ್ದುಕೊಳ್ಳಲಾಗುವುದಿಲ್ಲ. ಆದರೆ ಇವರದು ಸರಳ ಹಾಗೂ ನೇರವಾದ ಅಭಿವ್ಯಕ್ತಿ.

ಒಂದು ಗಮನಾರ್ಹವಾದ ಸಂಗತಿ ಎಂದರೆ–ತಿರುಕರ ಭಾಷೆ. ಸರಳವಾದ, ಲಲಿತವಾದ ನಡಿಗೆ ಇವರ ಭಾಷೆಗಿದೆ. ಬಳಕೆಯಲ್ಲಿ ಗೊಂದಲವಿಲ್ಲ. ಇವರಿಗೆ ಜನಜೀವನದ ಆಳವಾದ ಪರಿಚಯವಿರುವುದರಿಂದ, ಭಾಷೆ ರಕ್ತಗತವಾಗಿದೆ. ಅದನ್ನು ಇವರು ಎಲ್ಲ ಮಗ್ಗಲುಗಳಿಂದಲೂ ದುಡಿಸಿಕೊಳ್ಳಬಲ್ಲರು. ಭಾಷೆಯ ಈ ಲಾಲಿತ್ಯವೇ ಓದುಗನನ್ನು ಒಮ್ಮೊಮ್ಮೆ ಸೆರೆಹಿಡಿಯುತ್ತದೆ. ಲೇಖಕರಿಗೆ ಸಂಸ್ಕೃತದ ಪ್ರಭಾವ ಅಗಾಧವಾಗಿದ್ದರೂ, ಅದರಿಂದ ಬಿಡಿಸಿಕೊಂಡಿರುವುದು ಆಶ್ಚರ್ಯದ ಹಾಗೂ ಸಂತೋಷದ ಸಂಗತಿ.

ಜನ ಜೀವನ ಸೇವೆಯ ಅಂಗಗಳಾದ ಅನ್ನ, ವಿದ್ಯೆ, ವೈದ್ಯದ ಸೇವಾತ್ರಯ ಭಾವನೆಯಿಂದ ಪರಿಪುಷ್ಟವಾಗಿ ಬೆಳೆಯುತ್ತಿರುವ ಈ ಸಂಸ್ಥೆಯನ್ನು ನನ್ನ ಆತ್ಮವೆಂದೇ ತಿಳಿಯುತ್ತೇನೆ.

—ಶ್ರೀ ಶ್ರೀ ಚಿದಂಬರಸ್ವಾಮಿಗಳು ಗುಬ್ಬಿ

ಟಿ. ಎಸ್. ಲಕ್ಷ್ಮೀದೇವಿ

ಶ್ರೀ ತಿರುಕರ ರೂಪಕಸಾಹಿತ್ಯ–ಒಂದು ಲಘುಪರಿಚಯ

೧

'ತಿರುಕ' ಎಂಬ ಕಾವ್ಯನಾಮದಿಂದ ಕೃತಿರಚನೆಗೆ ಕೈಯಿಕ್ಕಿ, ಸಾಹಿತ್ಯವನ್ನು ಶ್ರೀಮಂತಗೊಳಿಸಿರುವ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳು ಬಹುಮುಖ ಪ್ರತಿಭೆಯ ಅಸಾಮಾನ್ಯವ್ಯಕ್ತಿ. ಅವರ ಸೇವಾಕ್ಷೇತ್ರ ಅಸೀಮಿತವಾದುದು, ಸರ್ವತೋಮುಖವಾದುದು. ಸನ್ಯಾಸಿಯಾದರೂ ವಿಶ್ವಸಂಸಾರಿಯಾಗಿ ಜನತಾಜನಾರ್ದನನ ಸೇವೆಯಲ್ಲಿ ತನ್ನ ಬಾಳನ್ನು ಸಾರ್ಥಕವಾಗಿ ಸವೆಸುತ್ತಿರುವ ಈ ನಿಷ್ಕಾಮಕರ್ಮಯೋಗಿ, ಬಿಡುವಿಲ್ಲದ ತಮ್ಮ ಕಾರ್ಯಗಳ ಮಧ್ಯದಲ್ಲಿ ಸಾಹಿತ್ಯಸೃಷ್ಟಿಗೂ ಕೈಹಾಕಿ ಅಸಾಧಾರಣವಾದ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಕಥೆ, ಕಾದಂಬರಿ, ಭಾವಗೀತೆ, ಪ್ರಬಂಧ, ನಾಟಕ, ವಚನ, ಶಾಸ್ತ್ರಗ್ರಂಥ–ಇತ್ಯಾದಿ ಹಲವು ಮುಖಗಳಲ್ಲಿ ಹಬ್ಬಿ ಹರಡಿರುವ ಅವರ ಸಾಹಿತ್ಯಸೃಷ್ಟಿ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದೆ. ಸಾಹಿತ್ಯಸೃಷ್ಟಿಗೆ ಅಗತ್ಯವಾದ ಕಾಲಾವಕಾಶವನ್ನೂ ಮನಶ್ಶಾಂತಿಯನ್ನೂ ಅವರು ಹೇಗೆ ಹೊಂದಿಸಿಕೊಳ್ಳುತ್ತಾರೆಂಬುದು ಒಂದು ಪವಾಡದಂತೆ ಭಾಸವಾಗುತ್ತದೆ. ಅವರ ಲೇಖನದಿಂದ ಹೊರಬಂದಿರುವ ಗ್ರಂಥರಾಶಿಯಲ್ಲಿ ಕೇವಲ ರೂಪಕ ಜಾತಿಯ ಸಾಹಿತ್ಯವನ್ನು ಮಾತ್ರ ಇಲ್ಲಿ ಸಂಗ್ರಹವಾಗಿ ಸಮೀಕ್ಷಿಸುವ–ಲಘು ಪರಿಚಯವನ್ನು ಮಾಡಿಕೊಡುವ ಪ್ರಯತ್ನವನ್ನು ಕೈಕೊಳ್ಳಲಾಗಿದೆ.

ಲೋಕಾನುಭವವನ್ನುಂಟುಮಾಡಿಕೊಳ್ಳುವ ಸಾಹಿತ್ಯ ಸಾಧನಗಳಲ್ಲೆಲ್ಲ ನಾಟಕ ಅತ್ಯಂತ ಶ್ರೇಷ್ಠವಾದುದು. ಅತಿಕ್ಷಿಪ್ರವಾಗಿ ಫಲಕಾರಿಯಾಗುವಂತೆ ಸದುದ್ದೇಶಗಳನ್ನು ಜನರಲ್ಲಿ ನಾಟಲು ಇದಕ್ಕಿಂತ ಉತ್ತಮವಾದ ವಿಧಾನ ಇನ್ನೊಂದಿಲ್ಲ. "Stage is not mere play-thing or a past-time, it is a University; Produce beauty on the Stage" ಎಂದು ಕವಯಿತ್ರಿ ಸರೋಜಿನೀದೇವಿ ಹೇಳಿರುವ ಮಾತುಗಳು ಅರ್ಥವತ್ತಾಗಿವೆ. ಜೀವನದ ಹೊರೆಯ ಭಾರ ಹಗುರವಾಗಬೇಕಾದರೆ, ವ್ಯಕ್ತಿ ವ್ಯಕ್ತಿಗಳಲ್ಲಿ ಸಂಬಂಧ ನಿಕಟವಾಗಿ ಬೆಳೆಯಬೇಕಾದರೆ, ದಯೆ ಸಹನೆ ಸ್ವತಂತ್ರವಿಚಾರಗಳು ಸಮಾಜದಲ್ಲಿ ಮೂಡಬೇಕಾದರೆ ನಾಟಕ ಅತ್ಯುತ್ತಮ ಸಾಧನ. ಅದೊಂದು ಸಮಾಜದ ಸಂಸ್ಕೃತಿಮಾಪಕ ಯಂತ್ರವಿದ್ದಂತೆ. ಆದ್ದರಿಂದಲೆ ಕವಿಕುಲಗುರುವಾದ ಕಾಳಿದಾಸ ಈ ಕಲಾಕೃತಿಯನ್ನು 'ಶಾಂತಂ ಕ್ರತುಂ ಚಾಕ್ಷುಷಂ' ಎಂದು ಕರೆದ. ನಾಟಕವೆಂಬುದು ಕಣ್ಣು ಕುಡಿದು ತೃಪ್ತಿಗೊಳ್ಳಬಲ್ಲ ಯಜ್ಞವಂತೆ ! ಇತರ ಕಲೆಗಳಿಗಿಂತ ಹೆಚ್ಚಾಗಿ ಇದಕ್ಕೆ ಮೂಡಿರುವ ಕೋಡೆಂದರೆ 'ನಾಟ್ಯಂ ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ'. ನಾಟಕದ ಸಾರ್ಥಕತೆ ಇರುವುದೇ ಅದರ ಪ್ರಯೋಗದಲ್ಲಿ. ಸಂಗೀತ ಸಾಹಿತ್ಯಕ್ಕಾಗಿ ಹಲವು ಕಲೆಗಳು ಹಿತಮಿತವಾಗಿ ಸೇರಿರುವ ಈ ಸಂಕೀರ್ಣಕಲೆ ಎಲ್ಲರ ಅಭಿರುಚಿಗೂ ಹೊಂದಿಕೊಳ್ಳುವಂತಹುದು. ಶ್ರೀ ತಿರುಕರ ನಾಟಕಗಳೆಲ್ಲವೂ ರಂಗಸ್ಥಳಕ್ಕಾಗಿಯೆ, ಅದರಲ್ಲಿಯೂ

ಮುಖ್ಯವಾಗಿ ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಸೃಷ್ಟಿಯಾದುವು. ಅವು ಆ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿ ಕೃತಕೃತ್ಯವಾಗಿವೆ. ಶ್ರೀ ತಿರುಕರು ತಮ್ಮ ನಾಟಕಗಳನ್ನು ಕುರಿತು ಹೇಳಿರುವ ಈ ಮಾತುಗಳು ಗಮನಾರ್ಹವಾದುವು—"ನಾಟಕವು ಅದೊಂದು ದೊಡ್ಡ ಕಲೆಯಂತೆ, ಶಾಸ್ತ್ರವಂತೆ. ಅವರೆ ಅದ್ಯಾವುದನ್ನೂ ನಾನು ತಿಳಿಯೆ, ನನ್ನ ಪಾಲಿಗೆ ಜೀವನವೇ ಒಂದು ಮಹಾನಾಟಕ. ಅದು ಮುಗಿಯುವವರೆಗೂ ಮಧ್ಯೆ ಎಷ್ಟೋ ಅಂತರ್ನಾಟಕಗಳು ಕಳೆದು ಹೋಗಬಹುದು, ಇಷ್ಟೆ." ಎಲ್ಲ ಹಿರಿಯ ಸಾಹಿತಿಗಳೂ ಇದೇ ಮಾತನ್ನು ಹೇಳಿದ್ದಾರೆ. "ಅಪಾರೇ ಕಾವ್ಯಸಂಸಾರೇ, ಕವಿರೇವ ಪ್ರಜಾಪತಿಃ" ನಿರಂಕುಶಮತಿಯಾದ ಕವಿಬ್ರಹ್ಮ ತನ್ನ ಲಹರಿಗೆ ತಕ್ಕಂತೆ ಕಾವ್ಯ ಸೃಷ್ಟಿಮಾಡುತ್ತಾನೆ. ಅದರ ಸಹಾಯದಿಂದ ವಿಮರ್ಶಕ ತನ್ನ ಅಳತೆಗೋಲನ್ನು ತಯಾರು ಮಾಡಿಕೊಳ್ಳುತ್ತಾನೆ. ನಾವೀಗ ಶ್ರೀ ತಿರುಕರ ನಾಟಕಗಳನ್ನು ಒಮ್ಮೆ ಪರಾಮರ್ಶಿಸಿ, ನಮಗೆ ಸಾಧ್ಯವಾದಷ್ಟು ಆನಂದಾನುಭವವನ್ನು ಪಡೆಯೋಣ.

ಶ್ರೀ ತಿರುಕರು ದೃಶ್ಯಜಾತಿಗೆ ಸೇರಿದ ಸುಮಾರು 42 ಕಲಾಕೃತಿಗಳನ್ನು ರಚಿಸಿ ತಮ್ಮ 'ಬಾಳ ಬೆಳಕು ಸಾಹಿತ್ಯಮಾಲೆ'ಯಲ್ಲಿ ಹೊರತಂದಿದ್ದಾರೆ. ಅವುಗಳಲ್ಲಿ ಸುಮಾರು ಅರ್ಧದಷ್ಟು ಏಕಪಾತ್ರಾಭಿನಯಗಳು, ನಾಲ್ಕು ಕೀರ್ತನ ಕೃತಿಗಳು; ಉಳಿದವುಗಳಲ್ಲಿ ಪೌರಾಣಿಕ, ಕಾಲ್ಪನಿಕ, ಐತಿಹಾಸಿಕ, ಗೀತಾತ್ಮಕ, ಸಾಮಾಜಿಕವಾದ ದೊಡ್ಡ ಚಿಕ್ಕ ನಾಟಕಗಳಿವೆ. ಹೀಗೆ ಶ್ರೀ ತಿರುಕರ ನಾಟಕಗಳು ಸಂಖ್ಯೆಯಲ್ಲಿ ಮಾತ್ರವೇ ಅಲ್ಲ, ವೈವಿಧ್ಯತೆಯಲ್ಲಿಯೂ ಶ್ರೀಮಂತವಾಗಿವೆ.

೨

'ಭಿನ್ನರುಚೇರ್ಜನಸ್ಯ ಬಹುಧಾಪ್ಯೇಕಂ ಸಮಾರಾಧನಂ' ಎನ್ನಿಸಿರುವ ನಾಟಕಕಲೆ ಸಂಪೂರ್ಣವಾಗಿ ಅರಳಿ ಅಭಿವ್ಯಕ್ತಗೊಳ್ಳಲು ರಂಗಸಜ್ಜಿಕೆ, ವೇಷಭೂಷಣಗಳು, ಹಲವಾರು ಅಭಿನಯ ಕರ್ತೃಗಳು–ಇತ್ಯಾದಿ ಇತ್ಯಾದಿ ಹಲವು ಹನ್ನೊಂದು ಪರಿಕರಗಳು ಅಗತ್ಯ. ಅವುಗಳ ಅಭಾವವಿದ್ದು, ವ್ಯಕ್ತಿಯೊಬ್ಬನಲ್ಲಿ ಸುಪ್ತವಾಗಿರುವ ಅಭಿನಯಕಲೆ ಅಭಿವ್ಯಕ್ತಗೊಳ್ಳಲು ತಹ ತಹ ಪಡುತ್ತಿದ್ದಾಗ, ಆತನ ಉತ್ಸಾಹವನ್ನು ಪ್ರೋತ್ಸಾಹಿಸಿ, ಕಲಾಶಕ್ತಿಯನ್ನು ವಿಕಾಸಗೊಳಿಸಲು 'ಏಕ ಪಾತ್ರಾಭಿನಯ' ಅತ್ಯುತ್ತಮ ಸಾಧನ. ಅದರ ಹೆಸರೇ ಸೂಚಿಸುವಂತೆ 'ಏಕ ಪಾತ್ರಾಭಿನಯ'ದಲ್ಲಿ ಒಬ್ಬನೇ ವ್ಯಕ್ತಿ ಪಾತ್ರಧಾರಿಯಾಗಿರುವವನು. ಅವನು ಹಲವು ಪಾತ್ರಗಳ ಅಭಿನಯವನ್ನು, ಅಥವಾ ಒಂದು ಮುಖ್ಯ ಪಾತ್ರದ ಹಲವು ಮುಖಗಳನ್ನು ತನ್ನ ಧ್ವನಿಯ ಬದಲಾವಣೆಯಮೂಲಕ ತಾನೊಬ್ಬನೇ ನಿರ್ವಹಿಸುತ್ತಾನೆ. ಇಲ್ಲಿನ ಕಥಾವಸ್ತು ನಿರ್ದಿಷ್ಟವಾದ ಒಂದು ಕಥಾಭಾಗ ಅಥವಾ ಸನ್ನಿವೇಶವನ್ನು ಒಳಗೊಂಡಿದ್ದರೂ, ಅದರ ರಸ ಪೋಷಣೆಗೆ ಸಹಾಯಕವಾಗುವ ಹಲವು ವಿಷಯಗಳನ್ನು ಅದರಲ್ಲಿ ತಂದು ಸೇರಿಸಬಹುದು. ಈ ದೃಷ್ಟಿಯಲ್ಲಿ ಇದು ಸ್ವಲ್ಪಮಟ್ಟಿಗೆ 'ಪ್ರಬಂಧ'ವನ್ನು ಹೋಲುತ್ತದೆ. ರಸೈಕ್ಯತೆಗೆ ಭಂಗಬಾರದಂತೆ, ಪ್ರೇಕ್ಷಕರು ನಾಟಕದಲ್ಲಿ ತಲ್ಲೀನರಾಗುವಂತೆ ನಿರ್ವಹಿಸುವುದರಲ್ಲಿ ನಾಟಕಕಾರನಷ್ಟೆ ಅಭಿನಯಕರ್ತನೂ ಕಾರಣ. ನಾಟಕಕರ್ತನ ಪ್ರತಿಭೆ, ಪಾಂಡಿತ್ಯ, ಲೋಕಾನುಭವಗಳು ಎಷ್ಟು ಹೆಚ್ಚಾಗಿದ್ದರೆ ಆತನ ಔಚಿತ್ಯಜ್ಞಾನ, ರಸಿಕತೆಗಳು ಎಷ್ಟು ಪ್ರಖರವಾಗಿದ್ದರೆ ಆತನ ನಾಟಕವೂ ಅಷ್ಟು ರುಚಿಕಟ್ಟಾಗಿರುತ್ತದೆ. ನಾಟಕದಲ್ಲಿ ಒಂದೆರಡು ಲೋಪದೋಷಗಳು ತಲೆ ಹಾಕಿದ್ದರೆ ಅಭಿನಯಕಾರನ ಕಲಾಶಕ್ತಿ ಜಾಣ್ಮೆಗಳು ಅವುಗಳನ್ನು ಮುಚ್ಚಿಹಾಕಿ ಪ್ರೇಕ್ಷಕರನ್ನು ಮೆಚ್ಚಿಸಬಲ್ಲವು.

ಶ್ರೀ ತಿರುಕರ 'ಏಕಪಾತ್ರಭಿನಯ'ಗಳೆಲ್ಲವೂ ಬಹು ಮಟ್ಟಿಗೆ ಸಾಮಾಜಿಕವಾದವು. ವಿವಿಧ ರಸಗಳು ಮಧ್ಯೆ ಮಧ್ಯೆ ಇಣಿಕಿ ಹಾಕಿದರೂ ಹಾಸ್ಯರಸವೇ ಪ್ರಧಾನ. ಜನಜೀವನವನ್ನು–ಅವರಲ್ಲಿಯೂ ಹಳ್ಳಿಯ ಜನಜೀವನವನ್ನು–ಆಳವಾಗಿ ಹೊಕ್ಕು. ತೀಕ್ಷ್ಣ ದೃಷ್ಟಿಯಿಂದ ಪರಿಶೀಲಿಸಿದ್ದಾರೆ. ಅವರ ಕಷ್ಟಕಾರ್ಪಣ್ಯಗಳನ್ನು,

ನೋವು ಸಾವುಗಳನ್ನು ಕಂಡು ಕಣ್ಣೀರುಗರೆಯಬಲ್ಲ ಕೋಮಲಅಂತಃಕರಣವಿದೆ, ವಿಶಾಲಹೃದಯವಿದೆ, ಅಪಾರವಾದ ಅನುಕಂಪವಿದೆ, ಕಣ್ಣೀರಿನ ಕಡಲಿನ ಮೇಲೆ ಹಾಸ್ಯದ ಹರಿಗೋಲನ್ನು ಹಾಯಿಸಬಲ್ಲ ಕಲಾಶಕ್ತಿಯದೆ. ಆದ್ದರಿಂದಲೆ ಅವರ ಹಾಸ್ಯ ದೃಷ್ಟಿಯ ಭೂತಕನ್ನಡಿಯಲ್ಲಿ ಜನ ನಿಸ್ಸಂಕೋಚವಾಗಿ ತಮ್ಮನ್ನು ತಾವೇ ನೋಡಿಕೊಂಡು ನಗಲು ಆಸ್ಪದವಾಗಿದೆ.

ಶ್ರೀ ತಿರುಕರ ಏಕಪಾತ್ರಾಭಿನಯ ರಚನೆ ಪ್ರಾರಂಭವಾದುದು '**ನನ್ನ ರಾಮರಾಜ್ಯ**'ದಿಂದ. ಇದೊಂದು ಕಲ್ಪನಾಚಿತ್ರ. ಮಹಾತ್ಮಾ ಗಾಂಧಿಯವರು ಸ್ವಾತಂತ್ರ್ಯಾನಂತರದ ಭಾರತದಲ್ಲಿ ತಾವು ಕನಸು ಕಟ್ಟಿಕೊಂಡಿದ್ದ ರಾಮರಾಜ್ಯವನ್ನು ಕಾಣಲೆಂದು ದೇವಮಾರ್ಗದಿಂದ ಭೂಮಿಗೆ ಇಳಿದು ಬರುತ್ತಾರೆ. ಆಗ ಅವರಿಗಾದ ಆಶಾಭಂಗವೇ ಇಲ್ಲಿನ ಕಥಾವಸ್ತು. ಅಭಿನಯ ಕಲಾಪಟುಗಳಾದ ನಾಟಕಕಾರರೇ ಇದನ್ನು ರಂಗಸ್ಥಳದಲ್ಲಿ ಪ್ರದರ್ಶಿಸಿ ಅದ್ಭುತವಾದ ವಿಜಯವನ್ನು ಗಳಿಸಿದರಂತೆ! ಆ ಕಾರಣದಿಂದಲೇ ಏನೋ, ಅಚ್ಚಾದ ಪ್ರತಿಗಳೆಲ್ಲ ಒಂದೂವರೆ ತಿಂಗಳಷ್ಟು ಅಲ್ಪ ಕಾಲದಲ್ಲೆ ಮಾರಾಟವಾಗಿ ಹೋದವು. ಅಷ್ಟೇ ಅಲ್ಲ; ಇದನ್ನು ನೋಡಿ ಮೆಚ್ಚಿದ ಪಂಡಿತರೊಬ್ಬರು ಇದನ್ನು ಇಂಗ್ಲಿಷಿಗೂ ಭಾಷಾಂತರಿಸಿದ್ದಾರೆ. ಇದರಂತೆಯೇ '**ಧ್ಯಾನಭಾರತಿ**'ಯೂ ಒಂದು ಕಾಲ್ಪನಿಕ ಕೃತಿ. ಭರತಮಾತೆ ವಿಶ್ವಮಾತೆಯ ಸಾನ್ನಿಧ್ಯದಲ್ಲಿ ತನ್ನ ಮಕ್ಕಳ ಕಿಡಿಗೇಡಿತನಕ್ಕಾಗಿ ಕಣ್ಣೀರಿಕ್ಕುವ ಸನ್ನಿವೇಶ ಇಲ್ಲಿ ಚಿತ್ರಿತವಾಗಿದೆ. ನಾಟಕಕಾರರು ಅದ್ವಿತೀಯ ದೇಶಭಕ್ತರು, ರಾಷ್ಟ್ರಪ್ರೇಮಿಗಳು ಎಂಬುವಕ್ಕೆ ಈ ನಾಟಕಗಳು ಸಾಕ್ಷಿಯಾಗಿವೆ.

ಪೌರಾಣಿಕ ಕಥಾವಸ್ತುವನ್ನು ಬಳಸಿಕೊಂಡ ಐದು ಏಕಪಾತ್ರಾಭಿನಯಗಳು ಶ್ರೀ ತಿರುಕರ ಲೆಕ್ಕಣಿಕೆಯಿಂದ ಇಳಿದು ಬಂದಿವೆ. ಯಾರೂ ಇಲ್ಲದ ಕಡೆ ಬಾಳೆಹಣ್ಣನ್ನು ತಿಂದು ಬರುವಂತೆ ವ್ಯಾಸರಾಯರು ಶಿಷ್ಯ ಸಮುದಾಯಕ್ಕೆ ತಿಳಿಸಿದಾಗ, ಅವರಲ್ಲಿ ಒರ್ವರಾದ ಕನಕದಾಸರ ತಲೆಯಲ್ಲಿ ಸಂಚಾರವಾದ ಯೋಚನಾಲಹರಿ '**ಭಕ್ತ ಕನಕ**'ದಲ್ಲಿ ಹೃದಯಂಗಮವಾಗಿ ಕಾಣಿಸಿಕೊಂಡಿದೆ. ಶ್ರೀರಾಮಚಂದ್ರ ತನ್ನ ಪರಮಭಕ್ತನಾದ ಆಂಜನೇಯನಿಗೆ ರತ್ನಹಾರವೊಂದನ್ನು ಬಹುಮಾನವಾಗಿ ನೀಡಿದಾಗ ಅವನು ರತ್ನಗಳನ್ನೆಲ್ಲ ಹಲ್ಲಲ್ಲಿ ಕಡಿದು ಬಿಸಾಡಿದನಂತೆ! ಅವನ ಹೃದಯದಲ್ಲಿ ನೆಲೆಸಿದ್ದ ಶ್ರೀರಾಮ ಅವುಗಳಲ್ಲಿ ಇಲ್ಲದುದರಿಂದ ಆತನಿಗೆ ಅವು ತ್ಯಾಜ್ಯ. ಇದು '**ರಾಮಸನ್ಮಾನ**'ದ ಚಿತ್ರಣ. ಈ ಎರಡರಲ್ಲಿಯೂ ಭಕ್ತಿಯ ಮಹತ್ತಿದೆ. '**ಜ್ವಾಲಾಮುಖಿ**'—ಎಂಬುದು ಜ್ವಾಲೆಯೆಂಬ ಹೆಣ್ಣು ಜ್ವಾಲಾಮುಖಿಯಂತೆ ಸ್ಫೋಟನೆಗೊಂಡಿರುವ ಸನ್ನಿವೇಶದ ಚಿತ್ರಣ: ಲಕ್ಷ್ಮೀಶ ಕವಿ ಕಡೆದು ನಿಲ್ಲಿಸಿರುವ ವ್ಯಕ್ತಿ ಇಲ್ಲಿ ಮರುಹುಟ್ಟು ಪಡೆದಿದೆ. ಗೌತಮ ಪತ್ನಿ ಅಹಲ್ಯೆ ಇಂದ್ರನಿಗೆ ಮನಸೋತು ಋಷಿಶಾಪದಿಂದ ಕಲ್ಲಾದ ಕಥೆ '**ಪ್ರೇಮಪಾಷಾಣಿ**'. '**ಮಮತೆಯ ಮಗಳು**' ಪೆರಿಯಾಳ್ವಾರರ ಮಗಳು ಗೋದಾದೇವಿಯ ಕಥೆಯನ್ನು ಒಳಗೊಂಡಿದೆ. 'ಪ್ರೇಮಪಾಷಾಣಿ' ಕರುಣರಸವನ್ನು 'ಮಮತೆಯ ಮಗಳು' ಭಕ್ತಿರಸವನ್ನೂ ಒಳಗೊಂಡು ಹೃದಯಂಗಮವಾಗಿವೆ.

ಶ್ರೀ ತಿರುಕರ ಉಳಿದೆಲ್ಲ ಏಕಾಭಿನಯಗಳು ಸಾಮಾಜಿಕವಾದುವು. ಇವುಗಳಲ್ಲಿ ಒಂದೊಂದರಲ್ಲಿಯೂ ಸಮಾಜದಲ್ಲಿ ಬೇರು ಬಿಟ್ಟುಕೊಂಡಿರುವ ಒಂದು ಲೋಪದೋಷದ ಚಿತ್ರಣವಿದೆ, ಅದರ ನಿವಾರಣೋಪಾಯದ ಸೂಚನೆಯಿದೆ. ವ್ಯಕ್ತಿಗಳ ನಡೆನುಡಿಗಳಲ್ಲಿ ತಾರ್ಕಣೆಯಿರಬೇಕು, ಕರ್ತವ್ಯ ಪ್ರಜ್ಞೆ ಮೂಡಬೇಕು—ಎಂದು '**ಸಮಾಜ ಶಿಕ್ಷಣ**'ದ ನಿರ್ದೇಶನ. '**ಧನಪಿಶಾಚಿ**'ಯು ದುರಾಶಾಪೀಡಿತನಾದವನು (ಭೀಮರಾಯ) ಮನಸ್ಸಿನ ಶಾಂತಿಯನ್ನು ಕಳೆದುಕೊಂಡು ಹೊಯ್ದಾಡುವ ಚಿತ್ರಣವಿದ್ದರೆ '**ಸ್ಪರ್ಧೆ**'ಯು ಮನವು‌ಳ್ಳೊಡುಂಟು ಮಾರ್ಗಂ ಎಂಬ ಸೂಕ್ತಿಗೆ ಒಂದು ಉತ್ತಮ ಉದಾಹರಣೆಯನ್ನು ಒದಗಿಸುತ್ತದೆ. ಗಿರಿಯಪ್ಪನಿಗೆ ಗಂಟು ಬಿದ್ದಿರುವ ಇಸ್ಪೇಟು ಚಟವೆ "**ಬ್ರಹ್ಮೇತಿ**". ಈ ಚಟಕ್ಕೆ ಬಲಿಯಾಗಬಾರದೆಂಬ ವಿವೇಕಘೋಷ ಇದೆ ಇದರಲ್ಲಿ. '**ಕೊನೆಯ ನೋಟೀಸು**' 'ಗಂಡ ಬಿಟ್ಟರೂ ಗಣಾಚಾರಿ ಬಿಡ' ಎಂಬ ಗಾದೆಯಂತೆ ವ್ಯಕ್ತಿ ಬೇಡವೆಂದರೂ ಸುತ್ತು ಮುತ್ತಿ

ನವರು ಅವನನ್ನು ವ್ಯವಹಾರಕ್ಕೆ ಎಳೆದು ಸಂಕಟಕ್ಕೆ ಸಿಕ್ಕಿಸುವ ಸನ್ನಿವೇಶ ಮಾರ್ಮಿಕವಾಗಿ ಚಿತ್ರಿತವಾಗಿದೆ. 'ದನೀನ ಜಾತ್ರೆ' ಎಂಬುದು ದನಗಳ ಜಾತ್ರೆ ಎಂಬುದರ ಅಪಭ್ರಂಶ. ದನಗಳ ಜಾತ್ರೆಯಲ್ಲಿ ದನದ ಬೆಲೆಯನ್ನು ವ್ಯಾಪಾರದಿಂದ ಕುದುರಿಸುವಂತೆ ಜನರ ಜಾತ್ರೆಯಲ್ಲಿ ಹೆಣ್ಣಿನ ಲಗ್ನವನ್ನು ಕುದುರಿಸುವ ಪ್ರಯತ್ನ ಹೃದಯ ವಿದ್ರಾವಕವಾಗಿದೆ. **'ಬತ್ತಿ, ದರ್ಬಾರ್ ಬತ್ತಿ'**—ಹೆಸರು ದರ್ಬಾರ್‌ಬತ್ತಿ, ಸುವಾಸನೆಗೆ ಅಭಾವ. ಇದೊಂದು ಸೊಗಸಾದ ವಿಡಂಬನ ಚಿತ್ರ. ಪರಿಸರದ ಪ್ರಭಾವದಿಂದ ಕಳ್ಳನಾಗಿರುವ ದ್ಯಾಮಣ್ಣ ಶುಕ್ರವಾರದ ಪೂಜೆಗೆ ತಂದ ದರ್ಬಾರ್ ಬತ್ತಿಯನ್ನು ಕುರಿತು "ಇದು ದರ್ಬಾರ್ ಬತ್ತೀನೆ....ಆದರೆ ದರ್ಬಾರ್ ರೊಕ್ಕ ತಗೊಂಡವರು.... ಬತ್ತಿ ಮಾತ್ರ ನಮಗೆ" ಎನ್ನುತ್ತಾರೆ. ಆಗ ಜೇಲರ್ "ನೀನಿಲ್ಲಿ ಯಾತಕ್ಕಿದೀಯ....ದೇಶದ ಮಂತ್ರಿಯಾಗೋದು ಬಿಟ್ಟು" ಎಂದು ಅವನ ಚಾಣಕ್ಯತನವನ್ನು ಹೊಗಳುತ್ತಾರೆ. ಆಗ ಆ ದ್ಯಾಮಣ್ಣ ತನಗೆ ತಾನೆ "ಅವರು ದರ್ಬಾರ್ ಮಾಡ್ತಾ ದೇಶಕ್ಕೆ ಬತ್ತಿ ಕೊಡಲಿಕ್ಕೆ ನಿಂತಿರುವಾಗ ನಮ್ಮಂಥ ಬಡಪಾಯಿಗಳಿಗೆ ಅಲ್ಲಿ ಸ್ಥಾನ ಸಿಕ್ಕಲಾರದು"ಎಂದೂ ವ್ಯಂಗ್ಯವಾಗಿ ನುಡಿಯುವುದರ ಮೂಲಕ ನಾಟಕಕ್ಕಿಟ್ಟಿರುವ ನಾಮಕರಣವನ್ನು ಸಾರ್ಥಕಗೊಳಿಸುತ್ತಾನೆ. **'ಸಂಸಾರ–ಸನ್ಯಾಸ'**ವು ಹೆಣ್ಣು ಮಕ್ಕಳ ತಂದೆಯೊಬ್ಬರ ಹೊಟ್ಟೆಯುರಿ, ಅಪಲಾಪ. **'ಎಲ್ರೂ ತಿರುಪದ್ತಾತ ಗಳೇ'**–ಎಂಬುದು ಗೋವಿಂದದಾಸರು ಭಿಕ್ಷೆ ಕಾನೂನು ಬಾಹಿರನೆಂದವನಿಗೆ ಉತ್ತರ ರೂಪವಾಗಿ ಕೊಟ್ಟ ಒಂದು ಸಂದೇಶ; ಪರಾಶ್ರಯ ಯಾರಿಗೂ ತಪ್ಪಿದುದಲ್ಲ,ಮಾನವನನ್ನಲ್ಲದಿದ್ದರೆ ದೇವರನ್ನಾದರೂ ಬೇಡಿಯೆ ತಾನೆ ಬೇಕಾದು ದನ್ನು ಪಡೆಯಬೇಕು?

'ಪಂಚಾಯ್ತಿ ರಾಜ್ಯ', 'ಬಣ್ಣದ ಬೀಸಣಿಗೆ', **'ಹೆಂಗಸ್ರು ಬೇಕ್ರಿ'**, 'ಆಲುಕೊಡ್ದ ಬರಡೆಮ್ಮೆ'–ಈ ನಾಲ್ಕು ಸಮಾಜದ ಟೀಕೆಗಿಂತಲೂ ಹಾಸ್ಯರಸ ಪ್ರಮುಖವಾದವು.ಆಚಾರವಂತರ ಮನೆ ನರಸಮ್ಮ ಬಾವಿ ಕಟ್ಟೆಯ ಮಹಿಳಾ ಸಮಾಜದಲ್ಲಿ ಸ್ತ್ರೀ ಸಮಾಜದ ಹಲವು ಸಮಸ್ಯೆಗಳನ್ನು ಕುರಿತು ತನ್ನದೇ ಆದ ವಿಚಾರ ಧಾರೆ ನಡೆಸಿದ್ದಾಳೆ'ಪಂಚಾಯ್ತಿ ರಾಜ್ಯ'ದಲ್ಲಿ.ನವನಾಗರೀಕಳಾದ ಅಂಬಾಬಾಯಿ ಮಹಿಳಾ ಸಮಾಜದ ಪ್ರತಿನಿಧಿಯಾಗಿ ಆಂಗ್ಲೊ–ಕನ್ನಡ ಭಾಷೆಯ ಮೂಲಕ ಭಾಷಣ ಮಾಡುತ್ತಾ "ಬಣ್ಣದ ಬೀಸಣಿಗೆ"ಯ ನಾಯಕಿಯಾಗಿದ್ದಾಳೆ. 'ಹೆಂಗಸ್ರು ಬೇಕ್ರಿ'ನಲ್ಲಿ ಪಟ್ಟಣದ ಪ್ರವಾಸಕ್ಕೆ ಗೆಳತಿಯರೊಡನೆ ಹೊರಟ ಹಳ್ಳಿಯ ಹೆಣ್ಣೊಬ್ಬಳು 'ಅಯ್ಯಂಗಾರ್ ಬೇಕ್ರಿ' ಎಂಬ ನಾಮ ಫಲಕವನ್ನು ಓದಿ, ತನ್ನ ಊರಿನಲ್ಲಿ 'ಹೆಂಗಸ್ರು ಬೇಕ್ರಿ' ಎಂಬ ಫಲಕವನ್ನ ಹಾಕಿಸಬೇಕೆಂದುಕೊಳ್ಳುತ್ತಾಳೆ ;ನಾಮ ಫಲಕಗಳ ಅಶುದ್ಧ ಬರಹದ ಮೇಲೆ ಗದಾ ಪ್ರಹಾರ ಮಾಡಲಾಗಿದೆ. ಈ ಸಾಲಿನಲ್ಲಿ ಬರುವ ಕಡೆಯ 'ಆಲುಕೊಡದ ಬರಡೆಮ್ಮೆ'–ಅತ್ಯಂತ ರಸವತ್ತಾಗಿದೆ. ಹಾಲಿಗೆ ಕಡಮೆ ನೀರು ಹಾಕಿದರೆ ಅದು ಎಮ್ಮೆ ಹಾಲು ; ಜಾಸ್ತಿ ನೀರು ಹಾಕಿದರೆ ಆಕಳ ಹಾಲು–ಇದು ಎಲ್ಲಮ್ಮನ ವ್ಯಾಪಾರ ಧರ್ಮ, ಮರ್ಮ ! ಇದನ್ನು ಟೀಕಿಸುವವರಿಗೆ ಅವಳು ಬರಡೆಮ್ಮೆ ಕಥೆ ಹೇಳುತ್ತಾಳೆ. ಉದ್ದಕ್ಕೂ ನಗುತ್ತಾ ಹೋಗುವ ಪ್ರೇಕ್ಷಕರು ಕಡೆಯಲ್ಲಿ ಎಂ. ಎ. ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಬರಡೆಮ್ಮೆಗಳು–ಎಂಬ ತೀರ್ಮಾನ ಕೊಟ್ಟಾಗ, ಅನಿರೀಕ್ಷಿತವಾದ ಅವಳ ಕಥೆಯ ತಿರುವು ನಮ್ಮನ್ನು ಮೆಟ್ಟಿ ಬೀಳುವಂತೆ ಮಾಡುತ್ತದೆ. ನಗುವಿನ ಹಿಂದಿರುವ ನೋವನ್ನು ನಾಟಕಕಾರರು ಅತ್ಯಂತ ಯಶಸ್ವಿಯಾಗಿ ಪ್ರಯೋಗಿಸಿದ್ದಾರೆ. ಎಂತಹ ವಿಡಂಬನೆ !

೩

ಶ್ರೀಮಾನ್ ತಿರುಕರು **'ಕಿರಾತಾರ್ಜುನೀಯ'**, 'ಗಿರಿಜಾ ಕಲ್ಯಾಣ', 'ಹೆಳವನಕಟ್ಟೆ ಸಂತ ಗಿರಿಯಮ್ಮ', 'ತಿರು ನೀಲಕಂಠರು', ಎಂಬ ನಾಲ್ಕು 'ಕೀರ್ತನ' ಕೃತಿಗಳನ್ನು ರಚಿಸಿದ್ದಾರೆ. ಪುರಾಣ ಪುಣ್ಯಕಥೆಗಳ ಮೂಲಕ ಜನರಲ್ಲಿ ಧಾರ್ಮಿಕ ಭಾವನೆಗಳನ್ನು ಪ್ರಚೋದಿಸಲು ಹರಿಕಥೆ, ಶಿವಕಥೆಗಳಂಥ ಕೀರ್ತನ ಕೃತಿಗಳು ನಮ್ಮ ಜನಾಂಗದಲ್ಲಿ ಬಹು ಪ್ರಾಚೀನ ಕಾಲದಿಂದ ಪ್ರಯೋಗದಲ್ಲಿವೆ.ಇತ್ತೀಚಿಗೆ ಈ ಮಾಧ್ಯಮ ಕಣ್ಮರೆಯಾಗುತ್ತಿದೆ.ಇದರ ಪುನರು

ಜ್ಜೀವನಕ್ಕಾಗಿ ಶ್ರೀ ತಿರುಕರು ಪ್ರಾಥಮಿಕ ಕೀರ್ತನಾಭ್ಯಾಸಿಗಳಿಗೆ ದಾರಿ ದೀಪವಾಗುವಂತೆ ಇವುಗಳನ್ನು ರಚಿಸಿದ್ದಾರೆ. ಇವುಗಳ ಪ್ರತಿಯೊಂದರಲ್ಲೂ ಪೀಠಿಕಾಭಾಗ, ಕಥಾಭಾಗ ಎಂಬ ಎರಡು ಭಾಗಗಳಿವೆ. ಮುಖ್ಯ ಕಥೆಗೆ ಹಿನ್ನೆಲೆಯಾಗಿ ಔಚಿತ್ಯ ಪೂರ್ಣವಾದ ನೀತಿ ನಿರೂಪಣೆಯನ್ನು ಒದಗಿಸುತ್ತದೆ "ಪೀಠಿಕಾ ಭಾಗ", ಅದಕ್ಕೆ ಪೂರಕವಾದ ಉದಾಹರಣೆಯಂತಿರುತ್ತದೆ "ಕಥಾ ಭಾಗ."

"ತನ್ನ ಭಕ್ತಿಯ ಬಲದಿಂದ ಪರಶಿವನನ್ನು ಮೆಚ್ಚಿಸಿ, ಆತನಿಂದ ಪಾಶುಪತಾಸ್ತ್ರವನ್ನು ಪಡೆದು ಬಂದ ಅರ್ಜುನನ ಸಾಹಸಮಯ ಕಥೆಯೇ "**ಕಿರಾತಾರ್ಜುನೀಯ**". ಕುಮಾರ ವ್ಯಾಸನಿಂದ ಪ್ರೇರಣೆಯನ್ನು ಪಡೆದು ನೂತನವಾದ ಆಕಾರವನ್ನು ತಳೆದಿದೆ. "ಭಕ್ತಿಯ ಬಲದಿಂದ ಪರಮೇಶ್ವರನನ್ನು ಒಲಿಸಿಕೊಂಡು, ಆತನ ಅರ್ಧಾಂಗಿಯಾಗಿ ಮೆರೆದ ಪಾರ್ವತಿಯ ಪುಣ್ಯಚರಿತ್ರೆ "**ಗಿರಿಜಾ ಕಲ್ಯಾಣ**". ಇದರ ಹೆಸರಿನಂತೆ ವಿಷಯಾನುಕ್ರಮಣಿಕೆಯೂ ಹರಿಹರನ ಗಿರಿಜಾ ಕಲ್ಯಾಣಕ್ಕೆ ಹೋಲಿಕೆಯನ್ನು ಹೊಂದಿದ್ದರೂ ನಿರೂಪಣೆಯಲ್ಲಿ ನವೀನತೆ ಇದೆ. "**ಹೆಳವನ ಕಟ್ಟೆ ಸಂತ ಗಿರಿಯಮ್ಮ**" ಐತಿಹಾಸಿಕ ವ್ಯಕ್ತಿ ; ಹತ್ತೊಂಬತ್ತನೆ ಶತಮಾನದಲ್ಲಿದ್ದವಳು. ಈಕೆ ಚಂದ್ರಹಾಸನ ಕಥೆ, ಸೀತಾ ಕಲ್ಯಾಣ, ಉದ್ದಾಳಿಕನ ಕಥೆ ಇತ್ಯಾದಿ ಕೃತಿಗಳನ್ನು ರಚಿಸಿದವಳು. ಹೆಳವನ ಕಟ್ಟೆ ರಂಗನಾಥಸ್ವಾಮಿಯ ಪರಮ ಭಕ್ತಳಾಗಿದ್ದು, ಅನೇಕತ್ವದಲ್ಲಿ ಏಕತ್ವವನ್ನು ಕಂಡುಕೊಂಡು, ಸುತ್ತು ಮುತ್ತಿನ ಸಮಾಜವನ್ನು ಉದ್ಧರಿಸಿದವಳು. ಈಕೆಯ ಕಥೆ ಜನಜೀವನವನ್ನು ಹಸನುಗೊಳಿಸಲು ಸಹಾಯಕವಾಗಿದೆ. ಧರ್ಮ ಮಾರ್ಗದಿಂದ ತಮ್ಮ ಬಾಳನ್ನು ಸವೆಸಿ, ಆ ಧರ್ಮದ ಬಲದಿಂದಲೆ ಪರಶಿವನನ್ನು ಒಲಿಸಿಕೊಂಡ ಪುಣ್ಯ ಜೀವಿ "**ತಿರುನೀಲಕಂಠರು**" ; ಹರಿಹರ ಕೃತಿಯ "ತಿರುನೀಲಕಂಠರ ರಗಳೆ" ಶ್ರೀ ತಿರುಕರ ಪ್ರತಿಭೆಯಲ್ಲಿ ಕರಗಿ ಇಲ್ಲಿ ಮರುವುಟ್ಟನ್ನು ಪಡೆದಿದೆ.

ಈ ಕೀರ್ತನ ಕೃತಿಗಳ ಪೀಠಿಕೆಗಳು ಶ್ರೀ ತಿರುಕರ ವಿಶಾಲವೂ ಆಳವೂ ಆದ ಪಾಂಡಿತ್ಯಕ್ಕೆ ಸಾಕ್ಷಿಯಾಗಿರುವಂತೆ ಕಥಾ ಭಾಗವು ಅವರ ಪ್ರತಿಭೆಗೆ ಸಾಕ್ಷಿಯಾಗಿದೆ. ದಾಸರು, ವಚನಕಾರರು ಮೊದಲಾದ ಕನ್ನಡ ಸಂತರ ಸಾಹಿತ್ಯದ ಜೊತೆಗೆ ಮೀರಾಬಾಯಿ, ತುಕಾರಾಮ ಇತ್ಯಾದಿ ಕನ್ನಡೇತರ ಸಂತ ಸಾಹಿತ್ಯವೂ, ಹಿಂದಿ ಮತ್ತು ಸಂಸ್ಕೃತಸಾಹಿತ್ಯವೂ ತಿರುಕರಿಗೆ ಕರತಲಾಮಲಕವಾಗಿದೆ. ಇವನ್ನು ಬಳಸಿಕೊಳ್ಳುವುದರಲ್ಲಿ ಅವರು ತೋರಿರುವ ಔಚಿತ್ಯಜ್ಞಾನವೂ ಪ್ರಶಂಸಾರ್ಹವಾದುದು.

೪

ಇನ್ನು ಶ್ರೀಮಾನ್ ತಿರುಕರ ನಾಟಕಗಳತ್ತ ಗಮನ ಹರಿಸೋಣ. ಅವರು 'ಉಷಾಸ್ವಯಂವರ' ಮತ್ತು 'ಗುರುದಕ್ಷಿಣೆ' ಎಂಬ ಎರಡು ಪೌರಾಣಿಕ ನಾಟಕಗಳನ್ನು ಬರೆದಿದ್ದಾರೆ. ಮೊದಲನೆಯದಕ್ಕೆ ಭಾರತವೂ, ಎರಡನೆಯದಕ್ಕೆ ಮಹಾ ಭಾರತವೂ ಕಥಾವಸ್ತುವನ್ನು ನೀಡಿವೆ. ಬಾಣಾಸುರನ ಮಗಳಾದ ಉಷೆ ಶ್ರೀಕೃಷ್ಣನ ಮೊಮ್ಮಗನಾದ ಅನಿರುದ್ಧನನ್ನು ಮೋಹಿಸಿ, ಗುಟ್ಟಾಗಿ ಅವನೊಡನೆ ಪ್ರಣಯ ಜೀವನವನ್ನು ನಡೆಸುತ್ತಾಳೆ. ಇದು ಬಾಣಾಸುರನಿಗೆ ಗೊತ್ತಾದಾಗ ಅವನು ಕೆರಳಿ ಅನಿರುದ್ಧನನ್ನು ಶಿಕ್ಷಿಸ ಹೊರಡುತ್ತಾನೆ. ಇದರ ಫಲವಾಗಿ ಯಾದವ ಮತ್ತು ರಾಕ್ಷಸ ಸೈನ್ಯಗಳಿಗೆ ಯುದ್ಧ ನಡೆಯುತ್ತದೆ. ಬಾಣಾಸುರ ಸೋಲುತ್ತಾನೆ. ಅವನ ಆರಾಧ್ಯ ದೈವವಾದ ಪರಶಿವನು ಶ್ರೀಕೃಷ್ಣನ ಕೃಪೆಯನ್ನು ಅವನಿಗೆ ಒದಗಿಸಿ ರಕ್ಷಿಸುತ್ತಾನೆ. ಉಷಾ-ಅನಿರುದ್ಧರ ವಿವಾಹದೊಡನೆ ನಾಟಕ ಮಂಗಳಾಂತವಾಗುತ್ತದೆ. ಈ ಮೂರು ಅಂಕದ ಕಥೆ ಹಳೆಯದಾದರೂ ಅದರ ಅಭಿವ್ಯಕ್ತತೆಯಲ್ಲಿ ನೂತನತೆ ಇದೆ. ಚಕ್ಕುಮುಕ್ಕಿ ಹೊಡೆದಂತೆ ನಡೆವ ಸಂಭಾಷಣೆಯ ಮೂಲಕ ಕಥೆ ವಿದ್ಯುದ್ವೇಗದಿಂದ ಸಾಗಿಹೋಗುತ್ತದೆ. ಪ್ರಣಯ ಪ್ರಧಾನವಾದ ಈ ನಾಟಕದಲ್ಲಿ ಶೃಂಗಾರರಸವೇ ಪ್ರಮುಖವಾಗಿದ್ದರೂ ಇತರ ರಸಗಳು ಹದವಾಗಿ ಬೆರೆತು ಮುಖ್ಯ ರಸಕ್ಕೆ ಪರಿಪೋಷಕವಾಗಿವೆ. ಅಕಟ-ವಿಕಟರ ಸಂಭಾಷಣೆ ಅವರ ಹೆಸರಿಗೆ ತಕ್ಕಂತೆ ಹಾಸ್ಯರಸದಿಂದ ತುಂಬಿ ನಗು

ವನ್ನು ಉಕ್ಕಿಸುತ್ತವೆ. ಪ್ರೇಕ್ಷಕರನ್ನು ತಲ್ಲೀನಗೊಳಿಸಬಲ್ಲ ಗಾರುಡಿಗತನ ಶ್ರೀ ತಿರುಕರಿಗೆ ಸಿದ್ಧಿಸಿದೆ.

'ಗುರುದಕ್ಷಿಣೆ'–ಸುಪ್ರಸಿದ್ಧವಾದ ಏಕಲವ್ಯನ ಕಥೆಯನ್ನೊಳಗೊಂಡ ಒಂದಂಕದ ನಾಟಕ. ಹೃದಯಂಗಮವಾದ ಈ ಕಥಾವಸ್ತುವನ್ನು ಶ್ರೀಕುವೆಂಪು ತಮ್ಮ 'ಬೆರಳ್‌ಗೆ ಕೊರಳ್' ನಾಟಕಕ್ಕೂ, ದಿ|| ಗೋವಿಂದ ಪೈ "ಹೆಬ್ಬೆರಳು"ವಿಗೂ, ದಿ|| ಕೈಲಾಸಂ Purpose ನಾಟಕಕ್ಕೂ ಆಯ್ದುಕೊಂಡಿದ್ದಾರೆ. ಶ್ರೀ 'ತಿರುಕರ' ಗುರುದಕ್ಷಿಣೆ ಅವುಗಳ ಮಧ್ಯದಲ್ಲಿ ತನ್ನ ವ್ಯಕ್ತಿತ್ವವನ್ನು ಉಳಿಸಿಕೊಂಡಿದೆ. ಇಲ್ಲಿನ ಅರ್ಜುನ ಏಕಲವ್ಯರ ಸಂಭಾಷಣೆ ಸರಳ ಸುಂದರವಾಗಿರುವಷ್ಟೆ ಧೀರಗಂಭೀರವಾಗಿದೆ. ವೀರರಸ ಪರಿಪೂರ್ಣವಾಗಿದೆ. ಹದವರಿತು ಬೆಳೆಸಿರುವ ಇಲ್ಲಿನ ಹಾಡುಗಳು ನಾಟಕದ ರಂಜನೆಗೆ ಸಹಾಯಕವಾಗಿವೆ. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ಗುರುಭಕ್ತಿ, ತ್ಯಾಗಬುದ್ಧಿಗಳನ್ನು ಪ್ರಚೋದಿಸಿ, ಮನೋರಂಜನೆಯನ್ನು ನೀಡಬಲ್ಲ ನಾಟಕ ಇದು.

'ಮಹಾಕವಿ ಭಾರವಿ' ಮತ್ತು 'ಕರ್ಮಶೇಷ'–ಎಂಬ ನಾಟಕಗಳಲ್ಲಿನ ಕಥಾವಸ್ತು ಹಳೆಯದು ಎಂಬ ಅರ್ಥದಲ್ಲಿ ಅವು ಪೌರಾಣಿಕ ನಾಟಕಗಳು, ಇವುಗಳಲ್ಲಿ ಕಥೆಗಿಂತ ಕವಿಯ ಕಲ್ಪನೆಯೇ ಪ್ರಮುಖವೆಂಬ ಅರ್ಥದಲ್ಲಿ ಇವು ಕಾಲ್ಪನಿಕ ಕೃತಿಗಳು. ಸಂಸ್ಕೃತ ಮಹಾಕವಿಗಳ ಸಾಲಿನಲ್ಲಿ ಸುಪ್ರಸಿದ್ಧವಾದ ಹೆಸರು ಭಾರವಿಯದು. ಆತನ 'ಕಿರಾತಾರ್ಜುನೀಯ' ಸಂಸ್ಕೃತ ಪಂಚಮಹಾಕಾವ್ಯಗಳಲ್ಲಿ ಒಂದೆಂದು ಪ್ರಖ್ಯಾತವಾದುದು. ಆದರೆ ಕವಿಯ ಬಾಳ ಕಥೆ ಕಾಲಗರ್ಭದಲ್ಲಿ ಅಡಗಿ ಕೇವಲ ದಂತಕಥೆಗಳ ಮೂಲಕ ಮಾತ್ರ ಅದು ಜಿನುಗಿ ಹೊರಬಂದಿದೆ. ಜಗತ್ತೆಲ್ಲ ತನ್ನನ್ನು ಮಹಾಕವಿಯೆಂದು ಹಾಡಿ ಹೊಗಳುತ್ತಿರುವಾಗ ತನ್ನ ತಂದೆಯು ಮಾತ್ರ ತನ್ನನ್ನು ಉದಾಸೀನವಾಗಿ ನೋಡುತ್ತಿರುವುದನ್ನು ಕಂಡು, ಮನನೊಂದ ಭಾರವಿ ಆತನನ್ನು ತೀರಿಸಿಬಿಡಬೇಕೆಂದು ಹಂಚಿಕೆ ಹಾಕುತ್ತಾನೆ. ಅಷ್ಟರಲ್ಲಿ ಆ ತಂದೆಗೆ ತನ್ನಲ್ಲಿರುವ ಅಪಾರವಾದ ಮಮತೆ ಅರ್ಥವಾಗಿ, ಭಾರವಿಗೆ ಕೃತಕಾರ್ಯಕ್ಕಾಗಿ ಪಶ್ಚಾತ್ತಾಪ ಮೂಡುತ್ತದೆ. ಪಿತೃಹತ್ಯಾಲೋಚನೆಯ ಪಾಪಕ್ಕೆ ಪ್ರಾಯಶ್ಚಿತ್ತವೇನು ? ತಂದೆ ಹೇಳುತ್ತಾನೆ–'ಆರು ತಿಂಗಳು ಅತ್ತೆಯ ಮನೆಯ ವಾಸ'. ಅದನ್ನು ಕೈಕೊಂಡ ಭಾರವಿ, ಅಲ್ಲಿನ ಕಟು ಅನುಭವಗಳಿಂದ ಪಾಪ ಪ್ರಕ್ಷಾಳನೆ ಮಾಡಿಕೊಂಡು, 'ಕಿರಾತಾರ್ಜುನೀಯ' ರಚನೆಯಿಂದ ತನ್ನ ಕೀರ್ತಿ ಗೌರವಗಳು ಮುಗಿಲು ಮುಟ್ಟುವಂತೆ ಮಾಡಿಕೊಳ್ಳುತ್ತಾನೆ. ಮೂಲ ಕಥೆಯ ಈ ಕಂಕಾಳಕ್ಕೆ ನಾಟಕಕಾರರು ತಮ್ಮ ಕಲ್ಪನೆಯ ರಕ್ತ ಮಾಂಸಗಳನ್ನು ತುಂಬಿ ಅದನ್ನು ಹೃದಯಂಗಮವಾಗುವಂತೆ ಮೂರಂಕಗಳ ನಾಟಕವಾಗಿ ರಚಿಸಿದ್ದಾರೆ. ಇಲ್ಲಿನ ಸುನಂದೆ–ಆನಂದೆಯರ ಪಾತ್ರಗಳಿಂದ ಕಥೆಗೆ ಯಾವ ಪೋಷಣೆ ಅಥವಾ ಪ್ರಯೋಜನ ಕಂಡುಬರುವುದಿಲ್ಲ. ಈ ಭಾಗವನ್ನು ಕಿತ್ತು ಹಾಕಿದರೆ ನಾಟಕಕ್ಕೆ ಯಾವ ಅಪೋಹವೂ ಆಗುವುದಿಲ್ಲ. ಉಳಿದಂತೆ ನಾಟಕವು ಅತ್ಯಂತ ಯಶಸ್ವಿಯಾದ ಪ್ರಯೋಗವಾಗಬಲ್ಲುದು. ನಾಟಕದಲ್ಲಿ ಬರುವ ಭಾರವಿಯ ಉದ್ವೇಗ ಅತ್ಯಂತ ಪ್ರಭಾವಯುತವಾಗಿದೆ. ಇಲ್ಲಿನ ಸಂಭಾಷಣೆ ಸಾಹಿತ್ಯ ಸತ್ತ್ವದಿಂದ ಕೂಡಿ ಹೃದಯಂಗಮವಾಗಿದೆ. ಹಿತಮಿತವಾದ ಹಾಸ್ಯ, ಚಾತುರ್ಯಪೂರ್ಣವಾದ ಸಂಭಾಷಣೆ, ಸಜೀವವಾದ ಪಾತ್ರಗಳು-ಇವುಗಳಿಂದ ಕೂಡಿ ಮನೋರಂಜನೆಯೊಡನೆ ವಿಚಾರ ವೃಷ್ಟಿಯನ್ನು ಬೆಳೆಸುತ್ತದೆ, ಬೆಳಗಿಸುತ್ತದೆ–ಈ ನಾಟಕ.

ವ್ಯಕ್ತಿಯ ಕರ್ಮ ಸವೆಯುವವರೆಗೆ ಮುಕ್ತಿ ದೊರೆಯದೆಂಬ ಸಂದೇಶವನ್ನು ಹೊತ್ತ ಒಂದು ಅಂಕದ ನಾಟಕ 'ಕರ್ಮಶೇಷ'. ಸ್ವಾಮಿ ವಿವೇಕಾನಂದರು ಹೇಳುವ ದೃಷ್ಟಾಂತ ಕಥೆಯೊಂದು ಇದಕ್ಕೆ ಮೂಲವೆಂದು ತೋರುತ್ತದೆ. ಅಡವಿಯಲ್ಲಿ ತನಗೊಬ್ಬ ಅಣ್ಣನಿರುವನೆಂಬ ತಾಯಿಯ ಸಾಂಕೇತಿಕ ನುಡಿಯನ್ನು ವಾಚ್ಯಾರ್ಥ ಮಾಡಿಕೊಂಡ ಪುಟ್ಟ ಗೋಪಾಲ ತನ್ನ ಮುಗ್ಧ ಭಕ್ತಿಯಿಂದ ಶ್ರೀಕೃಷ್ಣನನ್ನು ಮೆಚ್ಚಿಸಿ ಪ್ರತ್ಯಕ್ಷ ಮಾಡಿಕೊಳ್ಳುತ್ತಾನೆ. ಆ ಬಾಲಕನ ವಿದ್ಯಾಗುರು ತ್ರಿಯಂಬಕಪಂತ ಶಿಷ್ಯನ ದೆಸೆಯಿಂದ ಭಗವಂತನ ಕೃಪಾಕಟಾಕ್ಷಕ್ಕೆ ಪಾತ್ರನಾಗುತ್ತಾನೆ. ಗುರುಪತ್ನಿ ರೋಹಿಣಿಯ ಗುಡುಗು ಸಿಡಿಲುಗಳೂ, ಗುರುವಿನ ಶಾಂತಸ್ವಭಾವ ಶಿಷ್ಯಪ್ರೇಮಗಳೂ,

ಗೋಪಾಲನ ಮುಗ್ಧಭಕ್ತಿ ಮತ್ತು ಮಾತೃಪ್ರೇಮಗಳೂ ಹೃದಯಂಗಮವಾಗಿವೆ. ಕವಿ ಕುವೆಂಪು ಇದೇ ವಸ್ತುವನ್ನು ಬಳಸಿಕೊಂಡು ಬರೆದಿರುವ 'ನನ್ನಗೋಪಾಲ' ನಮ್ಮ ನೆನಪಿಗೆ ಬರುತ್ತದೆ, ಇದನ್ನು ಓದಿದಾಗ. ಅದರಂತೆ ಈ ನಾಟಕವೂ ಮಕ್ಕಳ ಶಾಲೆಗಳಲ್ಲಿ ಪ್ರದರ್ಶಿಸಲು ಅತ್ಯಂತ ಉಪಯುಕ್ತವಾಗಿದೆ.

೫

'ರಣಚಂಡಿ', 'ನ್ಯಾಯಮಂತ್ರಿ'–ಇವೆರಡೂ ಶ್ರೀ ತಿರುಕರ ಐತಿಹಾಸಿಕ ನಾಟಕಗಳು. 'ರಣಚಂಡಿಯ' ಕಥಾವಸ್ತು ರಜಪೂತವೀರರ ಇತಿಹಾಸದಿಂದ ಎತ್ತಿಕೊಂಡುದು. ಚಂದೇಲರಾಜನ ಏಕ ಮಾತ್ರ ಪುತ್ರಿ ದುರ್ಗಾದೇವಿ ತಂದೆಯ ಇಷ್ಟಕ್ಕೆ ವಿರೋಧವಾಗಿ ಪುಟ್ಟ ಪಾಳೆಯಪಟ್ಟಿನ ರಾಜ ದಳಪತಿಶಹನ ಪರಾಕ್ರಮಕ್ಕೆ ಮೆಚ್ಚಿ ಅವನನ್ನು ವರಿಸುತ್ತಾಳೆ. ಕುಪಿತನಾದ ತಂದೆ ಮಗಳನ್ನು ತ್ಯಜಿಸಿದ. ಇದನ್ನು ತಿಳಿದ ಅಕ್ಬರನ ಸುಬೇದಾರ ಅಸೂಫಖಾನ ದುರ್ಗಾದೇವಿಯ ಮೇಲಿನ ಮೋಹದಿಂದ ದಳಪತಿಶಹನ ಮೇಲೆ ಮತ್ತೆ ಮತ್ತೆ ದಂಡೆತ್ತಿ ಬಂದು ಸೋತುಹೋದ. ದಳಪತಿಶಹನು ಕಾಯಿಲೆಯಿಂದ ಸತ್ತು ಹೋದ ಮೇಲೆ ಅಸೂಫಖಾನ ಮತ್ತೆ ಯುದ್ಧಕ್ಕೆ ನಿಂತಾಗ ದುರ್ಗಾದೇವಿ ಅವನೊಡನೆ ಮತ್ತೆ ಯುದ್ಧಮಾಡಿ ಸೋಲಿಸುತ್ತಾಳೆ. ಆದರೆ ಅವಳು ರಣಚಂಡಿಯಾಗಿ ಕಾಣಿಸಿಕೊಳ್ಳುವುದಕ್ಕಿಂತಲೂ ಹೆಚ್ಚಾಗಿ ದಯಾಮಯಿಯಾದ ಉದಾರಹೃದಯಿಯಾಗಿ ಕಾಣಿಸಿಕೊಳ್ಳುತ್ತಾಳೆ. ಸೋತು ಸೆರೆಸಿಕ್ಕಿದ ಕರೀಂಭಕ್ಷ ಮೊದಲಾದ ಶತ್ರುಗಳನ್ನು ಸೆರೆಯಿಂದ ಬಿಡುಗಡೆ ಮಾಡುತ್ತಾಳೆ. ಅವಳು ರಣಚಂಡಿಯಾಗಿ ನೆತ್ತರನ್ನಾಗಲಿ, ವೀರರಸವನ್ನಾಗಲಿ ಹರಿಸಿರುವುದನ್ನು ನಮ್ಮ ಕಲ್ಪನೆಯ ಬೆನ್ನೇರಿ ಕಾಣಬೇಕೆ ಹೊರತು ನಾಟಕದಲ್ಲಿ ನಮ್ಮ ಕಣ್ಣೆದುರಿಗೆ ಅದನ್ನು ಕಾಣುವಂತಿಲ್ಲ. ಕಥಾವಸ್ತುವನ್ನು ಬೆಳೆಸುವಲ್ಲಿ, ಸಂಭಾಷಣೆಯಲ್ಲಿ ನಾಟಕಕಾರರ ಜಾಣ್ಮೆ ಎದ್ದು ಕಾಣುತ್ತದೆ. ಆದರೆ ಪೋಷಕ ಪಾತ್ರಗಳಾದ ಚಂದ್ರಿಕೆ ಮತ್ತು ಜಯಪಾಲರ ಪ್ರಣಯಜೀವನ ಸರಿಯಾಗಿ ಅರಳದೆ ಅಸಂದಿಗ್ಧವಾಗಿ ಕೊನೆಗೊಂಡಿದೆ. ಇಲ್ಲಿನ ಮೂಕನಾಯಕನ ಪಾತ್ರ ಸಜೀವವಾಗಿ ಕಂಗೊಳಿಸುತ್ತಿದೆ.

'ನ್ಯಾಯ ಮಂತ್ರಿ'ಗೆ ಅದೇ ಹೆಸರಿನ ಹಿಂದಿ ಕಥೆಯೊಂದು ವಸ್ತುವನ್ನು ಒದಗಿಸಿರುವುದಾಗಿ ನಾಟಕಕಾರರು ಹೇಳಿಕೊಂಡಿದ್ದಾರೆ. ಸಾಮ್ರಾಟ್ ಅಶೋಕನ ಪ್ರಣಯಜೀವನದೊಂದಿಗೆ ಅವನ ನ್ಯಾಯಪರತೆಯೂ ಇಲ್ಲಿ ದಿಗ್ದರ್ಶಿತವಾಗಿದೆ. ಇದರಲ್ಲಿ ಅಶೋಕನ ಪಾತ್ರಕ್ಕಿಂತಲೂ ನ್ಯಾಯಮಂತ್ರಿ ಶಿಶುಪಾಲ ಶರ್ಮ ಮತ್ತು ಅತನ ಸಾಕುಮಗಳು ಮಮತಾಳ ಪಾತ್ರಗಳು ಹೆಚ್ಚು ಮುಖ್ಯವಾಗಿ, ಸ್ಫುಟವಾಗಿ ವ್ಯಕ್ತವಾಗಿವೆ. ಶಿಶುಪಾಲ ಶರ್ಮನ ನ್ಯಾಯನಿಷ್ಠುರತೆ ಆದರ್ಶದ ಅಂಚಿನಲ್ಲಿ ನಿಂತಿದೆ. ಮಮತಾಳು ಹುಟ್ಟಿನಿಂದ ಸೂಳೆಯಾದರೂ ಚಾರುದತ್ತನ ವಸಂತಸೇನೆಯಂತೆ ತನ್ನ ದೃಢಸಂಕಲ್ಪ, ಸಂಯಮ, ಪಾತಿವ್ರತ್ಯಗಳಿಂದ ಕಡೆಯಲ್ಲಿ ಗೃಹಿಣಿಯ ಪಟ್ಟಕ್ಕೇರುತ್ತಾಳೆ. ಅದ್ವಿತೀಯ ಕಲೋಪಾಸಕಿಯಾಗಿ, ಸುಸಂಸ್ಕೃತ ಜೀವಿಯಾಗಿರುವ ಆಕೆಯ ಪಾತ್ರ ಸಜೀವವಾಗಿ ಕಳಕಳಿಸುತ್ತದೆ. ಇಲ್ಲಿನ ಬಹಿರ್ಘಟನೆಗಳು ಎಷ್ಟರಮಟ್ಟಿಗೆ ಐತಿಹಾಸಿಕವೊ ನಮಗೆ ಗೊತ್ತಿಲ್ಲ. ಐತಿಹಾಸಿಕ ನಾಟಕದಲ್ಲಿ ಗತಿಸಿಹೋದವರಿಗೆ ಜೀವದಾನ ಮಾಡುವ ಕಾರ್ಯ ನಡೆಯಬೇಕು. ಬಹಿರಂಗಜೀವನದ ಘಟನೆಗಳನ್ನು ತಿದ್ದುವಂತಿಲ್ಲ ; ಆದರೆ ಯಾರೂ ಕಂಡು ಕೇಳಿ ಅರಿಯದ ಅಂತರಂಗ ಜೀವನವನ್ನು ನಾಟಕಕಾರನ ಬಗೆಗಣ್ಣೂ ಒಳಗಿವಿಯೂ ಚುರುಕಾಗಿದ್ದು ಅರಿತುಕೊಳ್ಳಬೇಕಾಗುತ್ತದೆ. ಶ್ರೀ ತಿರುಕರ ಕಲ್ಪನಾಶಕ್ತಿ ಇದನ್ನು ಸಾಕಷ್ಟು ಸಮರ್ಥವಾಗಿ ನಿರ್ವಹಿಸಿದೆ.

೬

ಶ್ರೀ ತಿರುಕರು ನಾಟಕಕಾರರಾಗಿರುವಂತೆ ಒಳ್ಳೆಯ ಕವಿಗಳೂ ಆಗಿರುವರೆಂಬುದಕ್ಕೆ ಅವರ 'ಮಹಾಶಿಲ್ಪಿ' 'ಮಹಾಯಾತ್ರೆ', 'ನಿಷ್ಕಾಮ ಪ್ರೇಮ' ಮತ್ತು 'ಭಕ್ತ ಶಬರಿ' ಎಂಬ ಗೀತ ರೂಪಕಗಳು ಸಾಕ್ಷಿಯಾಗಿದೆ. 'ಗೀತ

ನಾಟಕ' ಎಂಬ ಮಾತನ್ನು ಇಂಗ್ಲಿಷಿನ 'ಆಪೆರಾ' ಎಂಬ ಮಾತಿಗೆ ಸಮಾನಾರ್ಥವಾಗಿ ಬಳಸಿದಾಗ, ನಮ್ಮಲ್ಲಿ ಈಗ ಬಳಕೆಗೆ ಬಂದಿರುವ ಗೀತ ನಾಟಕಗಳ ಬಹುಭಾಗ ಸಾಕಷ್ಟು ಕಲಾತ್ಮಕವಾಗಿಲ್ಲವೆಂದು ಹೇಳಬೇಕಾಗುತ್ತದೆ. ಸಂಗೀತ, ನೃತ್ಯ, ರಂಗಪ್ರಸಾಧನಗಳ ಮೂಲಕ ಕಣ್ಣಿಗೆ ಹಬ್ಬವಾಗುವುದರ ಜೊತೆಗೆ ನಿರ್ದಿಷ್ಟವಾದ ಒಂದು ವಾತಾವರಣವನ್ನು ಸೃಷ್ಟಿಸಬಲ್ಲ ಅಪೆರಾ ನಾಟಕಕ್ಕಿಂತಲೂ ಶ್ರೇಷ್ಠವಾದ ಕಲೆಯೆಂದು ಪಾಶ್ಚಾತ್ಯ ವಿದ್ವಾಂಸರ ಅಭಿಪ್ರಾಯ. ಪ್ರಯೋಗಶೀಲರಾದ ಶ್ರೀ ಕಾರಂತರ ಗೀತನಾಟಕಗಳನ್ನು ಬಿಟ್ಟರೆ ಉಳಿದುವು ಬಹುಮಟ್ಟಿಗೆ ಪದ್ಯ ರೂಪದಿಂದ ಇರುವುದರಿಂದ ಮಾತ್ರವೇ ಆ ಹೆಸರಿಗೆ ಪಾತ್ರವಾಗಿವೆಯೆಂದು ಹೇಳಬಹುದು.

'ಮಹಾಶಿಲ್ಪಿ'ಯ ಕಥೆ ಇಷ್ಟು–ಉತ್ಕಲದ ನರಸಿಂಹದೇವರಾಜ ತನ್ನ ದಿಗ್ವಿಜಯದ ಸ್ಮಾರಕವಾಗಿ ಸೂರ್ಯ ದೇವಾಲಯವೊಂದನ್ನು ಸೃಷ್ಟಿಸ ಹೊರಟ. ಅಸದೃಶ ಕಲಾಕುಶಲಿಯಾದ ಶಿಲ್ಪಿ–ಅವನೇ ಕಥಾನಾಯಕನಾದ ಮಹಾಶಿಲ್ಪಿ–ಹನ್ನೆರಡು ಸಹಸ್ರ ಜನ ಸಹಾಯಕರೊಡನೆ ಹನ್ನೆರಡು ವರ್ಷಕಾಲ ಶ್ರಮಿಸಿ ದಿವ್ಯದೇಗುಲವೊಂದನ್ನು ನಿರ್ಮಾಣ ಮಾಡಿದ. ಆದರೆ ಆ ಗುಡಿಯ ಶಿಖರವನ್ನು ಮೇಲಕ್ಕೇರಿಸಿ ಅಳವಡಿಸುವುದು ಹೇಗೆಂಬ ಚಿಂತೆಯಲ್ಲಿ ಮುಳುಗಿರಲು ಅವನನ್ನು ಅರಸುತ್ತಾ ಬಂದ ಹನ್ನೆರಡು ವರ್ಷದ ಅವನ ಮಗ ಬಾಲಶಿಲ್ಪಿ ಆ ಕಾರ್ಯವನ್ನು ಮಾಡಿ ಮುಗಿಸುತ್ತಾನೆ. ಆದರೆ ಈ ತನ್ನ ಕಾರ್ಯದಿಂದ ತಂದೆಯ ಕೀರ್ತಿಗೆ ಕಳಂಕ ತಟ್ಟೀತೆಂಬ ಅಳುಕಿನಿಂದ ಅವನು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಇದನ್ನು ತಿಳಿದ ತಂದೆಯೂ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ನಾಟಕದ ಕೊನೆಯಲ್ಲಿ ಬರುವ ಈ ಸನ್ನಿವೇಶ ಅಸಹಜವಾಗಿದೆ. ಮಹಾಶಿಲ್ಪಿಯಿಂದ ಆಗದ ಕೆಲಸವನ್ನು ಬಾಲಶಿಲ್ಪಿ ಹೇಗೆ ನೆರವೇರಿಸಿದ ಎಂಬುದು ಅರ್ಥವಾಗುವುದಿಲ್ಲ; ಈ ತಂದೆ–ಮಗನ ಸಾವಿಗೆ ದುರಂತದ ಕಾಂತಿಯನ್ನು ಕೊಡುವಂತಹ ಹಿನ್ನೆಲೆ ಇಲ್ಲ. ನಾಟಕದ ಉಳಿದೆಲ್ಲ ಭಾಗ ಸಹಜ ಸುಂದರವಾಗಿದೆ. ಶಿಲ್ಪಿಯು ತನ್ನ ಮಡದಿಯನ್ನೂ ಮಗನನ್ನೂ ಕರ್ತವ್ಯದ ಕರೆಗೆ ಓಗೊಟ್ಟು ಅಗಲುವ ಸನ್ನಿವೇಶ ರಸಮಯವಾಗಿದೆ. ರತ್ನಮಾಲಳು ಗಂಡನಾದ ಮಹಾಶಿಲ್ಪಿಯೊಡನೆ 'ತ್ಯಾಗವಿಲ್ಲದೆ ಯೋಗ ಸಿದ್ಧಿಸದು ದೇವ, ಸಂಸಾರ ಬಂಧನದ....ಸುಖಸೌಖ್ಯ ಸಂಪದವ ಹರಿದೊಗೆಯದಲ್ಲದೆ ಋಷಿಪದವಿ ದೊರೆಯದು. ಅದರಿಂದ ಮನ ಮೊದಲು ಬರಿದಾಗಬೇಕು, ಸಾಧಕರು ಬಾಹ್ಯದೊಳು ಬರಡಾಗಬೇಕು' ಎಂದು ಹೇಳುವ ಮಾತು ನಾಟಕಕಾರರ ತತ್ತ್ವಜ್ಞಾನಕ್ಕೆ ಹಿಡಿದ ಸೊಡರಿನಂತಿದೆ.

'ಭಕ್ತ ಶಬರಿ'ಯ ವಸ್ತು ರಾಮಾಯಣದಿಂದ ಎತ್ತಿಕೊಂಡುದಾದರೂ, ಮೂಲದಲ್ಲಿಲ್ಲದ ಶಬರಿಯ ಜನ್ಮವೃತ್ತಾಂತ ನಾಟಕಕಾರರ ಸ್ವಕಪೋಲಕಲ್ಪಿತವಾಗಿ ಇಲ್ಲಿ ಕಾಣಿಸಿಕೊಂಡಿದೆ. ಅವಳು ತಪಸ್ವಿನಿಯಾದುದರ ಹಿನ್ನೆಲೆಯನ್ನು ಅದು ಅತ್ಯಂತ ಸ್ವಾಭಾವಿಕವಾಗಿ ಚಿತ್ರಿಸುತ್ತದೆ. ಶಬರಿ ಶಾಬರನಾಯಕನೊಬ್ಬನ ಮಗಳು ; ಅವಳ ವಾಸಸ್ಥಾನದ ಹತ್ತಿರದಲ್ಲಿಯೆ ಹಲವು ಋಷ್ಯಾಶ್ರಮಗಳಿವೆ ; ಅವು ಅವಳಿಗೆ ಬಾಲ್ಯದಿಂದಲೂ ಚಿರಪರಿಚಿತ. ಅದರ ಪ್ರಭಾವದಿಂದಲೊ ಏನೊ, ಅವಳಲ್ಲಿ ವ್ರತ, ನೇಮನಿಷ್ಠೆಗಳು ಮನೆಮಾಡಿಕೊಂಡಿವೆ. "ಅವಳು ಮಾಂಸವನೆ ಹುಟ್ಟಿಂದ ಅಟ್ಟಿಲ್ಲ, ಮುಟ್ಟಿಲ್ಲ." ಮದ್ಯ ಮಾಂಸಗಳ ಹೆಸರನ್ನು ಕೇಳಿದರೆ ಅವಳಿಗೆ ತಲ್ಲಣ. ಹೀಗಿರುವಾಗ ಅವಳ ಮದುವೆಗೆಂದು ಮಾಂಸಮದ್ಯಗಳ ಶೇಖರಣೆಗೆ ಪ್ರಯತ್ನ ನಡೆಯುತ್ತಿದ್ದಾಗ, ಪ್ರಾಣಿಗಳ ಆರ್ತನಾದದಿಂದ ನೊಂದ ಆ ಬಾಲೆ "ಒಂದು ಮದುವೆಯ ನೆವದಿಂ ಕಗ್ಗೊಲೆಯ ನರ್ತನಂ! ಪಾಪದಾ ಹೊಣೆಯ ಹೊರುವವರು ಯಾರಿಲ್ಲಿ?.....ತನ್ನದೂ ಪಾಲು ಇದೆಯಲ್ಲ ಇದರಲ್ಲಿ" ಎಂಬ ಯೋಚನೆಯಿಂದ ಗೃಹತ್ಯಾಗಿಯಾಗುತ್ತಾಳೆ. ರಾತ್ರಿ ಹಗಲು ಓಡಿಯೋಡಿ ದೂರದ ಮತಂಗಾಶ್ರಮವನ್ನು ಸೇರುತ್ತಾಳೆ. ಅಲ್ಲಿನ ಮತಂಗಋಷಿ ಜಾತಿ ಕುಲಗಳ ಅಂಧಾನುಕರಣೆಯವರಲ್ಲ. ಸರ್ವಸಮತಾಭಾವನೆಯವರು. ಆತ ಶಬರಿಗೆ ಆಶ್ರಯವನ್ನು ನೀಡಿ, "ಕಂದಮ್ಮ ಕೇಳ್ ಪೇಳ್ವೆ, ಮುಂದೊಂದು ದಿನದಲ್ಲಿ ಬರುವನಾ ಶ್ರೀರಾಮ, ನಿನಗೆ ದರ್ಶನವಿತ್ತು ಹರಸಲೊಸುಗವಾಗಿ, ಅದರೆಗೆ ನೀನಿಲ್ಲಿ ತಪವನೆಸಗುತಲಿದ್ದು, ಆತನನು ಸತ್ಕರಿಸು" ಎಂದು ಹೇಳಿ ಪರಂಧಾಮಕ್ಕೆ ತೆರಳಿದರು. ಬಾಲೆಯಾಗಿ ಆಶ್ರಮಕ್ಕೆ ಬಂದ ಶಬರಿ ಮುಪ್ಪಿನ ಮುದುಕಿಯಾಗುವವರೆಗೆ ಶ್ರೀರಾಮನಿಗಾಗಿ ಕಾದಿದ್ದು, ಕಡೆಗೆ ಆತನನ್ನು ಸತ್ಕರಿಸಿದ ಮೇಲೆ ಸತ್ತು ಸದ್ಗತಿಪಡೆಯು

ತ್ತಾಳೆ. ಭಕ್ತ ಶಬರಿಗಿಂತಲೂ ಮುಗ್ಧಶಬರಿಯ ಚಿತ್ರ ತುಂಬ ರಮ್ಯವಾಗಿದೆ. ಸಂವಿಧಾನ ಕೌಶಲದ ಜೊತೆಗೆ, ನಾಟಕವಲ್ಲಿ ಅಲ್ಲಲ್ಲಿ ಮಿನುಗುವ ಕಾವ್ಯಮಯವಾದ ಪದ್ಯದ ಸಾಲುಗಳು ಹೃದಯಂಗಮವಾಗಿವೆ. ಕವಿ ಕಲ್ಪನೆಯ ಮೂಸೆಯಿಂದ ಹೊರಬಿದ್ದಿರುವ ಶಬರಿಯ ಪಾತ್ರ ಮುಗ್ಧಮನೋಹರವಾಗಿ, ಜೀವಂತವಾಗಿ ಕಳಕಳಿಸುತ್ತದೆ.

'ನಿಷ್ಕಾಮ ಪ್ರೇಮ' ಮತ್ತು 'ಮಹಾಯಾತ್ರೆ'ಗಳಲ್ಲಿ ಕಥೆ ಹೆಚ್ಚಾಗಿಲ್ಲ. ಮೊದಲಿನವರಲ್ಲಿ ನಾರದರ ಸಂದೇಹವನ್ನು ನಿವಾರಿಸುವುದಕ್ಕಾಗಿ ಶ್ರೀಕೃಷ್ಣನು ಗೋಪಿಕಾಸ್ತ್ರೀಯರ ನಿಷ್ಕಾಮಪ್ರೇಮವನ್ನು ಪ್ರತ್ಯಕ್ಷಪ್ರಮಾಣ ಮಾಡಿ ತೋರಿಸುತ್ತಾನೆ. ಶ್ರೀರಂಗನಾಥನ ಅರ್ಚಕ ಲೋಕಸಾರಂಗಮುನಿಯು ಪರಮಭಕ್ತರಾದ ತಿರುಪ್ಪಾಣಿಯವರನ್ನು ಹೊಡೆದು ಹಿಂಸಿಸಿದ ತಪ್ಪಿಗಾಗಿ, ಸ್ವಾಮಿಯ ಅಪ್ಪಣೆಯಂತೆ ಆ ಭಕ್ತರನ್ನು ಹೆಗಲಮೇಲೆ ಹೊತ್ತು ದೇವರ ಸನ್ನಿಧಿಗೆ ನಡೆದುದೆ "ಮಹಾಯಾತ್ರೆ." ಈ ಎರಡು ನಾಟಕಗಳಲ್ಲಿಯೂ ರಾಗ ತಾಳಗಳಿಂದ ಕೂಡಿದ ಹಾಡುಗಳಿವೆ. ಇವುಗಳಿಗೆ ವಾದ್ಯವೃಂದದ ಹಿನ್ನೆಲೆಯನ್ನೂ, ಸಾಧ್ಯವಾದರೆ ನರ್ತನವನ್ನೂ ಅಳವಡಿಸುವುದಾದರೆ ಇವು ಸೊಗಸಾದ ಅಪೇರಾಗಳಾಗುತ್ತವೆ.

೭

ಈಗ ಕಡೆಯದಾಗಿ ಶ್ರೀಮಾನ್ ತಿರುಕರ ಸಾಮಾಜಿಕ ನಾಟಕಗಳನ್ನು ಸಮೀಕ್ಷಿಸೋಣ. ಇವೇ ಅವರ ನಾಟಕ ಶೈಲದ ಶಿಖರಗಳು. ಇವು ಸಂಖ್ಯೆಯಲ್ಲಿ ಎಂಟು. ಇವುಗಳು ಒಂದೊಂದರಲ್ಲಿಯೂ ಸಮಾಜದ ಒಂದು ಸಮಸ್ಯೆ ಹೆಡೆಯೆತ್ತಿ ಕುಳಿತಿದೆ. ನಾಟಕಕಾರರು ಸಮಸ್ಯೆಗಳನ್ನು ಬಿಡಿಸುವ ಕಾರ್ಯದಲ್ಲಿ ಪ್ರವೃತ್ತರಾಗಿಲ್ಲವಾದರೂ ನವ ಯುವಕರಲ್ಲಿ ತಮಗಿರುವ ನಂಬಿಕೆ ಭರವಸೆಗಳನ್ನು ಇವುಗಳಲ್ಲಿ ವ್ಯಕ್ತಪಡಿಸಿದ್ದಾರೆ. ನಾವು ಹಿಂದೆಯೆ ಹೇಳಿರುವಂತೆ ಹಾಸ್ಯದ ಹರಿಗೋಲು ಕಣ್ಣೀರಿನ ಕಡಲಲ್ಲಿ ತೇಲುವುದನ್ನು ನಾವಿಲ್ಲಿ ಅಗತ್ಯವಾಗಿಯೂ ಗಮನಿಸಬೇಕಾದ ವಿಚಾರ.

ಶ್ರೀ ತಿರುಕರ ಸಾಮಾಜಿಕ ನಾಟಕಗಳಲ್ಲಿ 'ಕರ್ಮಯೋಗಿ' ಕಾಲದ ದೃಷ್ಟಿಯಿಂದ ಮಾತ್ರವೇ ಅಲ್ಲದೆ ಯೋಗ್ಯತೆಯ ದೃಷ್ಟಿಯಿಂದಲೂ ಅಗ್ರಗಣ್ಯವಾದುದು. ಬಡವರ ನೆತ್ತರನ್ನು ಹೀರುವ ಜಿಗಣೆ ಸಾಹುಕಾರ ಗಿರಿಯಪ್ಪ; ಅವನನ್ನು ಮೀರಿಸುವಂತಹ ಮೋಸಗಾರ ಪಟೇಲ್ ಕಲ್ಲಪ್ಪ. ಇವರಿಬ್ಬರ ಹಂಚಿಕೆ, ಕಾರಸ್ಥಾನಗಳಿಗೆ ಒಳಗಾಗಿ ಒಕ್ಕಲಿಗ ಸಂಕಪ್ಪ ಅನುಭವಿಸಿದ ಸಂಕಟ ಪರಂಪರೆಯೆ ಮೂರಂಕಗಳ ಈ ನಾಟಕದ ಕಥಾವಸ್ತು. ಹಳ್ಳಿಯ ಈ ಹಿರಿಯರಿಬ್ಬರ ಪ್ರತಿಭಟನಾಶಕ್ತಿಯ ಪ್ರತಿಮೆಯಾಗಿ ಕಾಣಿಸಿಕೊಂಡಿದ್ದಾನೆ ಗೌಡನ ಮಗ ರಾಮಯ್ಯ. ವಿದ್ಯಾವಂತನಾದ ಈ ಯುವಕ ಜನಸಾಮಾನ್ಯರಲ್ಲಿ ಪ್ರಜ್ಞೆಯನ್ನು ಹುಟ್ಟಿಸುವುದರ ಮೂಲಕ ಅನ್ಯಾಯವನ್ನು ಪ್ರತಿಭಟಿಸುವ ಶಕ್ತಿಯನ್ನು ಬಿತ್ತಿ ಬೆಳೆಸುತ್ತಾನೆ. ಈ ನಾಟಕದಲ್ಲಿ ಬರುವ ಸ್ತ್ರೀ ಪಾತ್ರಗಳೆರಡೂ ಸಜೀವವಾಗಿ ಕಂಗೊಳಿಸುತ್ತವೆ. ಸಾಹುಕಾರ್ತಿಯಾದ ಸರ್ವಮಂಗಳೆ ಸಾತ್ವಿಕಶಕ್ತಿಯ, ಪಾತಿವ್ರತ್ಯದ, ಧಾರ್ಮಿಕಪ್ರವೃತ್ತಿಯ ಆದರ್ಶ ಮೂರ್ತಿ; ಕಥಾನಾಯಕ ಸಂಕಪ್ಪನ ಮಗಳು ಗಂಗವ್ವ ಜೀವಪೂರ್ಣಳಾದ, ರಸಪೂರ್ಣಳಾದ, ಉತ್ಸಾಹಪೂರ್ಣಳಾದ ಕ್ರತುಶಕ್ತಿಯಾಗಿ ಕಳಕಳಿಸುತ್ತಾಳೆ. ಸರ್ವಮಂಗಳೆಯು ತನ್ನ ಮೂಕವೇದನೆಯ ತಪಸ್ಸಿನಿಂದಲೆ ಗಂಡನನ್ನು ಸಜ್ಜನನನ್ನಾಗಿ ರೂಪಾಂತರಿಸುತ್ತಾಳೆ; ಗಂಗವ್ವ ಸನ್ನಿವೇಶಗಳ ಘರ್ಷಣೆಗೆ ಸಿಕ್ಕಿ ನಲುಗಿ ಹೋಗುವಳಾದರೂ ತನ್ನ ಸ್ಥಿರತೆಯನ್ನು ಕಳೆದುಕೊಳ್ಳುವುದಿಲ್ಲ. ಕ್ರಿಯಾಪೂರ್ಣವಾಗಿ ವಿದ್ಯುದ್ವೇಗದಿಂದ ಕಥೆ ಮುಂದುವರಿಯುವುದಾದರೂ ನಾಟಕದ ಕೊನೆಯಲ್ಲಿ ಸಾಹುಕಾರ ಗಿರಿಯಪ್ಪ ಮತ್ತು ಗೋಮುಖ ವ್ಯಾಘ್ರ ಸಂಗಯ್ಯ ಸಜ್ಜನರಾಗಿ ಪರಿವರ್ತನೆಗೊಳ್ಳುವುದಕ್ಕೆ ಸಾಕಷ್ಟು ಹಿನ್ನಲೆಯಿಲ್ಲವೆನಿಸುತ್ತದೆ. ಸಂಕಪ್ಪನ ಅಂತ್ಯ ಮತ್ತು ಅವನಿಗಾಗಿ ನಿರ್ಮಿಸುವ ಸ್ಮಾರಕ ನಾಟಕಕಥೆಯ ಶಿಖರದಂತಿದೆ.

ಕನ್ಯಾಶುಲ್ಕ, ವರದಕ್ಷಿಣೆ ಮತ್ತು ಬಾಲ್ಯವಿವಾಹಕ್ಕೆ ಪ್ರತಿಭಟನೆಯಾಗಿ ಕಾಣಿಸಿಕೊಂಡಿದೆ, ಮೂರಂಕಗಳ 'ಉದ್ಧಾರ'. ಲೋಭಿ ವಿಶ್ವನಾಥರಾಯನಿಗೆ ತನ್ನ ಮಗಳು ಆಶಾಳ ಸುಖಜೀವನಕ್ಕಿಂತ ಮುದಿ ರಂಗರಾಯನ ಕನ್ಯಾಶುಲ್ಕ, ಅವನು ಸತ್ತಮೇಲೆ ತನ್ನದಾಗುವ ಅಪಾರವಾದ ಆಸ್ತಿ–ಇವುಗಳ ಕಡೆ ಗಮನ ಹೆಚ್ಚು; ಮಗಳನ್ನು ಮೋಸದಿಂದ ಬಲವಂತವಾಗಿ ರಂಗರಾಯನಿಗೆ ವಿವಾಹ ಮಾಡಿಕೊಟ್ಟು ಶಾಸ್ತ್ರ ಮಾಡುತ್ತಾನೆ. ಮಗನಾದ ತಾರಾನಾಥನಿಗೂ ಹೀಗೆಯೆ ಒಂದು ಹುಡುಗಿಯನ್ನು ಗಂಟುಹಾಕಿ ವರದಕ್ಷಿಣೆ ಗಿಟ್ಟಿಸಲು ಹವಣಿಸುತ್ತಾನೆ. ಆದರೆ ಅವನು ಅದಕ್ಕೆ ಅವಕಾಶ ಕೊಡದೆ ಗೃಹತ್ಯಾಗಿಯಾಗುತ್ತಾನೆ. ಈ ಅಣ್ಣನ ಬೆಂಬಲದಿಂದ ಆಶಾ ಆನಂದಾಶ್ರಮವನ್ನು ಸೇರಿ, ಕಡೆಗೆ ತನ್ನ ಪ್ರೇಮಿಯಾದ ಗಿರೀಶನನ್ನು ವಿವಾಹವಾಗುತ್ತಾಳೆ—ಇದು ಕಥೆಯ ಒಂದು ಮುಖ. ಆಶಾ–ರಂಗರಾಯರ ವಿವಾಹಕ್ಕೆ ಹಣದಾಸೆಯಿಂದ ಪೌರೋಹಿತ್ಯ ನಡೆಸಿದ ಊರ ಜೋಯಿಸ ತನ್ನ ಅಣ್ಣನ ಮಗಳಾದ ಬಾಲವಿಧವೆ ತಿಪ್ಪಮ್ಮನನ್ನು ಸದಾ ಹಂಗಿಸಿ, ಹೊಡೆದು ಹಿಂಸಿಸುತ್ತಿರಲು, ಜೀವ ರೋಸಿದ ಆ ಹೆಣ್ಣು ಹಮೀದ್ ಖಾನ್ ಒಡ್ಡಿದ ಬಲೆಗೆ ಬಿದ್ದು ಅವನ ಜನಾನಾ ಸೇರುತ್ತಾಳೆ. ರಂಗರಾಯ ಪೋಲೀಸರ ಭಯವನ್ನು ಹುಟ್ಟಿಸಿ, ಆವಳನ್ನು ತನ್ನ ಮನೆಗೆ ಕರೆದೊಯ್ದು, ತನ್ನ ಪ್ರಣಯನಿಯನ್ನಾಗಿ ಮಾಡಿಕೊಳ್ಳುತ್ತಾನೆ. ಇದನ್ನು ಕಂಡು ಕೆರಳಿದ ಹಮೀದ್ ರಂಗರಾಯನನ್ನು ಇರಿದು ಕೊಲೆ ಮಾಡುತ್ತಾನೆ—ಇದು ನಾಟಕದ ಮತ್ತೊಂದು ಮುಖ. ಸಾಮಾಜಿಕ ಸಮಸ್ಯೆಯನ್ನು ಈ ನಗ್ನಚಿತ್ರದಲ್ಲಿ ಸನ್ನಿವೇಶಕಲ್ಪನೆ, ಸಂಭಾಷಣೆ, ಪಾತ್ರಸೃಷ್ಟಿಗಳಲ್ಲಿ ಹೃದಯಂಗಮವಾಗಿದ್ದು, ರಂಗಸ್ಥಳದಲ್ಲಿ ಇದು ಯಶಸ್ವಿಯಾಗಬಲ್ಲದು.

'ದಾರಿಯ ದೇವರು'– 'ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರಿಯಲ್ಲಿ ಕೊಡೆ ಹಿಡಿಸಿಕೊಂಡ' ಎಂಬ ಗಾದೆಗೆ ಒಂದು ಸೊಗಸಾದ ಉದಾಹರಣೆ. ಮಡದಿಯೊಡನೆ ಬೆಟ್ಟದದೇವರ ಯಾತ್ರೆಗೆ ಹೊರಟ ನರಸಯ್ಯಗೌಡ. ಹಾದಿಯಲ್ಲಿ ಸಿಕ್ಕ ಬೀದಿಯ ಭಿಕಾರಿ ಸೋಮಯ್ಯನ ಬಾಳ ಗೋಳನ್ನು ಕೇಳಿ ಕನಿಕರದಿಂದ ಅವನಿಗೆ ಆಶ್ರಯವಿತ್ತ. ಗೌಡನ ಮಡದಿ ಹೊಳೆದಂಡೆಯ ಬಂಡೆಯೊಂದರ ಮೇಲೆ, ತಿಂದುಳಿದ ಬುತ್ತಿಯನ್ನು ಇರಿಸಿ ಬಂದಳು. ಬೆಟ್ಟ ಹತ್ತಿ ದೇವರಪೂಜೆ ಮಾಡಲು ಮನಸ್ಸಿಲ್ಲದ ಪೂಜಾರಿ ಬುತ್ತಿ ಇದ್ದ ಕಲ್ಲಿಗೆ, ಇಲ್ಲಿ ಶಿವನು ಅವತರಿಸಿರುವನೆಂದು ಪ್ರಚಾರಮಾಡಿ ಅಲ್ಲೊಂದು ದೊಡ್ಡ ದೇವಸ್ಥಾನ, ಜಾತ್ರೆ ನಡೆಯುವಂತೆ ಏರ್ಪಡಿಸಿದ. ನರಸಯ್ಯಗೌಡರ ಕೃಪಾಶ್ರಯಪಡೆದ ಸೋಮಯ್ಯ ಅಸೆಂಬ್ಲಿ ಮೆಂಬರಾಗಿ ಸೋಮಯ್ಯ ಗೌಡನಾದ. ಎರಡೂ ದಾರಿಯ ದೇವರುಗಳೇ. ಸೋಮಯ್ಯ ತನ್ನ ಅಧಿಕಾರ ದುರುಪಯೋಗಪಡಿಸಿಕೊಂಡು ಜನಕಂಟಕನಾದ. ರೊಚ್ಚಿಗೆದ್ದ ಜನ ಅವನನ್ನು ಅವಮಾನಗೊಳಿಸಿ ಕೆಳಕ್ಕಿಳಿಸಿದರು. ಸೋಮಯ್ಯನ ಉದ್ಧಾರ, ಅಧಃಪತನಗಳೆರಡನ್ನೂ ಹೊಳೆಯ ತಡಿಯ ಕಲ್ಲ ಬಳಿಯೆ ಕಲ್ಪಿಸಿರುವುದು ನಾಟಕಕಾರರ ಚಾತುರ್ಯಕ್ಕೆ ನಿದರ್ಶನ. ಮುಖ್ಯಕಥೆಗೆ ಗುಡಿಯ ಕಥೆಯು ಸೊಗಸಾದ ಒಂದು ಸಾಂಕೇತಿಕ ಪ್ರತಿಮೆಯಂತಿದೆ. ನಾಟಕದ ಉದ್ದಕ್ಕೂ ಜನತೆಯ ಮೌಢ್ಯಕ್ಕೆ ಕವಣೆಗಲ್ಲನ್ನೆಸೆಯುವಂತಿರುವ ಮಾತುಗಳು ಮನೋಹರವಾಗಿವೆ.

'ದೆವ್ವದ ಮನೆ' ನಮ್ಮ ಗ್ರಾಮಾಂತರದಲ್ಲಿ ನಡೆಯುತ್ತಿರುವ ಶಿಕ್ಷಣ ವೈಖರಿಯನ್ನು ಮನಮುಟ್ಟುವಂತೆ ಚಿತ್ರಿಸುತ್ತದೆ. ತಮ್ಮ ಎಲ್ಲ ಸಾಮಾಜಿಕ ನಾಟಕಗಳಂತೆ ಇಲ್ಲಿಯೂ ಶ್ರೀ ತಿರುಕರು ನೈಜ ಚಿತ್ರಕ್ಕೆ ಭೂತಗನ್ನಡಿಯನ್ನು–ರಾವುಗನ್ನಡಿಯನ್ನು-ಹಿಡಿದಿದ್ದಾರೆ. ಸ್ವತಃ ಶಿಕ್ಷಣವೇತ್ತರಾದ ನಾಟಕಕಾರರು ಶಾಲೆಗಳಲ್ಲಿನ ಲೋಪದೋಷಗಳಮೇಲೆ ಕ್ಷಕಿರಣವನ್ನು ಚೆಲ್ಲಿದ್ದಾರೆ. ಶಾಲೆಯ ಮುಖ್ಯೋಪಾಧ್ಯಾಯ ಗಾಳಿಗಂಟೆ ಮಂಗೇಶರಾಯ-ಹೆಸರು ಸಾರ್ಥಕವಾಗಿದೆ-ಜ್ಞಾನದೇಗುಲವಾದ ಪಾಠಶಾಲೆಯನ್ನು ಕುಡಿತದ ಗಡಂಗಾಗಿ, ಜೂಜಿನ ಕಟ್ಟೆಯಾಗಿ–ದೆವ್ವದ ಮನೆಯಾಗಿ ಮಾಡಿದ. ಶಾಲೆಯ ಇನ್‌ಸ್ಪೆಕ್ಟರ್ ನರಸಿಂಹಯ್ಯನ ಬೆಂಬಲದಿಂದ ಪ್ರಹ್ಲಾದರಾಯ ಅದನ್ನು ಮತ್ತೆ ಶಾರದಾಪೀಠವಾಗಿ ಪರಿವರ್ತಿಸಿದ. ಅರಾಜಕತೆಯ ಹಾಳುಕೊಂಪೆಯಾಗಿದ್ದ ಊರು ಆತನಿಂದ ನವನಾಗರಿಕವೆನಿಸಿತು. ಯುವಕನಾದ ಕೃಷ್ಣಮೂರ್ತಿ ಈ ಕಾರ್ಯದಲ್ಲಿ ಆತನಿಗೆ ಬೆಂಬಲನೀಡಿದ. ಇಲ್ಲಿ

ಬರುವ ಸ್ತ್ರೀ ಪಾತ್ರಗಳೆರಡೂ ಲವಲವಿಕೆಯಿಂದ ಕೂಡಿ ಸಜೀವವಾಗಿವೆ. ಇಂತಹ ನಾಟಕಗಳ ಪ್ರದರ್ಶನ ಸಮಾಜದ ಆರೋಗ್ಯಕ್ಕೆ ಅತ್ಯಾವಶ್ಯಕ.

ಉತ್ತಮ ಸಾಹಿತಿಯಾಗಿರುವಂತೆ ಸಮರ್ಥ ವೈದ್ಯರೂ ಆಗಿರುವ ಶ್ರೀ ತಿರುಕರು '**ವಣಮಹೋತ್ಸವ**' ಅಥವಾ 'ಕಳ್ಳಿಯ ಬೇಲಿ' ಎಂಬ ತಮ್ಮ ನಾಟಕಕ್ಕೆ ಮುನ್ನುಡಿ ಬರೆಯುತ್ತಾ ರೋಗ ಚಿಕಿತ್ಸಾ ಪದ್ಧತಿಯಲ್ಲಿ ಔಷಧದಿಂದ ಗುಣವಾಗದ ರೋಗಗಳಿಗೆ ಶಸ್ತ್ರ ಚಿಕಿತ್ಸೆಯನ್ನು ಹೇಳಲಾಗಿದೆ ಎಂದು ಸೂಚಿಸಿ, ಸಮಾಜದಲ್ಲಿನ ಕೆಟ್ಟರೋಗವೊಂದಕ್ಕೆ ಆ ಚಿಕಿತ್ಸೆಯನ್ನು ನಡೆಸಿದ್ದಾರೆ, ಈ ನಾಟಕದಲ್ಲಿ. ಮಠದ ಪಾರುಪತ್ತೆಗಾರ ಸಂಜುಂಡಶಾಸ್ತ್ರಿ ತನ್ನ ಸ್ವಾರ್ಥಸಾಧನೆಗಾಗಿ ನೀತಿಗೆಟ್ಟ ಯುವಕನೊಬ್ಬನನ್ನು ಹಿಡಿತಂದು. ಮಠದ ಸ್ವಾಮಿಯಾಗಿ ಕೂಡಿಸಿದ. ಅವನ 'ಕಚ್ಚೆ, ಕೈ ಬಾಯಿ–ಯಾವುದೂ ಚೆನ್ನಾಗಿಲ್ಲ' ಊರಿನ ಯುವಕರಾದ ಕಪಿಸೀಪತಿ ಮತ್ತು ಗುರುಮೂರ್ತಿ ಸ್ವಾಮಿಯ ಅನ್ಯಾಯಗಳನ್ನು ಸಾಕ್ಷಿಸಹಿತ ಬಯಲಿಗೆ ಹಾಕುತ್ತಾರೆ; ಆ ಸ್ವಾಮಿಯನ್ನು ವಿಚಾರಣೆಗೆ ಗುರಿಪಡಿಸುತ್ತಾರೆ. ಅಲ್ಲಿ ಶಸ್ತ್ರಚಿಕಿತ್ಸೆಯಾದಮೇಲೆ ಆ ಸ್ವಾಮಿಗೂ ಅವನ ಪ್ರೇಯಸಿಗೂ ವಿವಾಹವನ್ನು ಮಾಡಿ, ಶಸ್ತ್ರ ಚಿಕಿತ್ಸೆನಂತರದ 'ಶಾಂತ ಶೀತಲ ಔಷಧ' ವನ್ನು ಲೇಪಿಸುತ್ತಾರೆ. ವನಮಹೋತ್ಸವದ ದಿನ ಆ ಠಕ್ಕಸ್ವಾಮಿ ನಾಟಿದ ಗಿಡಕ್ಕೆ ಕಳ್ಳಿಯನ್ನು ಕಟ್ಟಿ ವರ್ಷವೆಲ್ಲ ನೀರೆರೆದರೂ, ಆ ಮರಕ್ಕೆ ಬದಲಾಗಿ ಕಳ್ಳಿಯೆ ಪ್ರಬಲವಾಗಿ ಪ್ರಸರಿಸುತ್ತದೆ. ಆ ಸ್ವಾಮಿಯ ಸ್ವರೂಪಕ್ಕೆ ಇದು ಸಾಂಕೇತಿಕವಾಗಿದೆ; 'ಕಳ್ಳಿಯ ಬೇಲಿ' ಎಂಬ ನಾಮಕರಣವನ್ನು ಸಾರ್ಥಕಗೊಳಿಸುತ್ತದೆ.

'ಶಿವನ ಸಂಸಾರ' 'ಸುಖೀರಾಜ್ಯ' ಮತ್ತು 'ತಿರುನಾಮ'–ಈ ಮೂರೂ ಸಾಮಾಜಿಕ ಪ್ರಹಸನಗಳು. '**ಶಿವನಸಂಸಾರ**' ಅಥವಾ 'ಬ್ರಹ್ಮಸೃಷ್ಟಿ' ಯಲ್ಲಿನ ಪ್ರಧಾನಪಾತ್ರಗಳೆಲ್ಲ ಅಂಗ ವಿಕಲವಾದುವು. ಜಿಪುಣಾಗ್ರೇಸರ ಚಕ್ರವರ್ತಿ ಶ್ರೀಮಂತ ಶ್ರೀಧರರಾಯ ಕುಂಟ. ಅವನ ಹೆಂಡತಿ ಅಂಗವಿಕಲಳಲ್ಲದಿದ್ದರೂ ನಿತ್ಯರೋಗಿ. ಮಗ ಕುರುಡ. ಸೊಸೆಯಾಗಿ ಬರುವವಳು ಕಿವುಡಿ. ಮನೆಯ ಕೆಲಸದ ಸಿದ್ದವ್ವ ಮೂಕಿ. ನಾಟಕವನ್ನು ನೋಡಿದ ಮೇಲೆ ಇವರ ತಲೆಗಳೂ ಐಬು-ಎಂಬುದು ಪ್ರೇಕ್ಷಕರಿಗೆ ಅರ್ಥವಾಗುತ್ತದೆ. 'ಹುಚ್ಚಲ್ಲ ಬೆಪ್ಪಲ್ಲ ಶಿವಲೀಲೆ' ಎಂಬ ಗಾದೆಗೆ ತಕ್ಕಂತಿರುವ ಈ ವಿಲಕ್ಷಣ ಸಂಸಾರ ಒಂದು ಹಾಸ್ಯರಸದ ಮಡುವನ್ನೆ ನಿರ್ಮಿಸಿದೆ. '**ಸುಖೀರಾಜ್ಯ**'. ನಗುವಿನಷ್ಟೆ ವಿಡಂಬನವನ್ನೂ ಒಳಗೊಂಡಿದೆ. ಹಳ್ಳಿಯಲ್ಲಿ ಹಲವರ ಗಂಟುನುಂಗಿ, ಮಡದಿಯೊಡನೆ ತಲೆತಪ್ಪಿಸಿಕೊಂಡು ಬೆಂಗಳೂರನ್ನು ಸೇರಿದ ಪ್ರಾಣೇಶರಾಯ ಚಪ್ಪಲಿ ಕಳ್ಳತನದ ಮಹೋದ್ಯೋಗವನ್ನು ಕೈಕೊಂಡು ಲಕ್ಷಾಧಿಪತಿಯಾಗುತ್ತಾನೆ. ಈ ದುಡಿಮೆಯ ಗೌರವದಲ್ಲಿ ಅರ್ಧ ಅವನ ಅರ್ಧಾಂಗಿಗೂ ಸಲ್ಲಬೇಕು. ದಿನಸಿ ಅಂಗಡಿ ರಾಮಯ್ಯ, ಕಟ್ಟಿಗೆ ಅಂಗಡಿ ಚೆನ್ನಪ್ಪ, ಹಜಾಮರ ತಿಪ್ಪಯ್ಯ, ಅಗಸರ ಪಾಪಯ್ಯ, ಹಾಲಿನ ಕೆಂಚಮ್ಮ ಈ ಒಬ್ಬೊಬ್ಬರೂ ಸಮಾಜ ದ್ರೋಹದ ಒಂದೊಂದು ಮುಖದ ಪ್ರತಿನಿಧಿಗಳು. 'ತಿರುನಾಮ'ದಲ್ಲಿ ಬರುವ ಅಕ್ಕಸಾಲಿ ಮಾಯಾಚಾರಿ ಇವರೆಲ್ಲರಗಿಂತ ಕದೀಮ. ಜಾಗೀರ್‌ದಾರ್ ಶ್ರೀಕಂಠಯ್ಯ ಮಗಳ ಮದುವೆಗೆಂದು ಒಡವೆ ಮಾಡಿಸಲು ಕೊಟ್ಟ ಬಂಗಾರವನ್ನು ನುಂಗಿ ನೀರುಕುಡಿದ. ಕೊಟ್ಟವರ ಗಂಟಿಗೆ ತಿರುನಾಮ ಹಾಕಲು ಹೇಳಿಕೊಟ್ಟ ಚಿದಂಬರಪ್ಪನಿಗೆ, ಅವನು ಹೇಳಿಕೊಟ್ಟ ಮಂತ್ರವೇ ತಿರುಮಂತ್ರವಾಗುತ್ತದೆ. ಶ್ರೀಕಂಠಯ್ಯ ಜಟಕಾದವನೊಡನೆಯೂ ಅಕ್ಕಸಾಲಿಗನೊಡನೆಯೂ ಮಾತನಾಡುವ ಆಂಗ್ಲೊ-ಕನ್ನಡ ಅವಾಸ್ತವನೆನಿಸಿದರೂ ಹಸನ ಭಾವಕ್ಕೆ ವಸ್ತುವಾಗಿದೆ. ಹಾಸ್ಯ ಸ್ವಲ್ಪ ಬಗ್ಗಡವಾದರೂ ನಿರ್ದುಷ್ಟವಾಗಿದೆ.

ಶ್ರೀ ತಿರುಕರ ನಾಟಕಗಳು ಇನ್ನೂ ಆಳವಾಗಿ ಅಭ್ಯಾಸಮಾಡಿ, ಇನ್ನೂ ವಿಸ್ತೃತವಾಗಿ ಸಮೀಕ್ಷಿಸಲು ಅರ್ಹವಾಗಿವೆ. ಪ್ರಸ್ತುತ ಸಂದರ್ಭಕ್ಕೆ ಇಷ್ಟು ಸಾಕು.

ಭಾಗ ೨

ಡಾ. ಹಾ. ಮಾ. ನಾಯಕ

ನಂದನದ ಹೂವುಗಳು

೧ ಸರ್ವಭಾಷಾಸರಸ್ವತಿ

ಭಾಷೆ ನಮ್ಮ ಪಾಲಿಗೆ ಲಭ್ಯವಾಗಿರುವ ಒಂದು ದಿವ್ಯ ವರ. ಮನುಷ್ಯನನ್ನು ಮಿಕ್ಕ ಪ್ರಾಣಿಗಳಿಂದ ಬೇರ್ಪಡಿಸಿದ ಒಂದು ಪ್ರಧಾನ ಲಕ್ಷಣ. ನಮ್ಮ ಯೋಚನೆ ಆಲೋಚನೆಗಳು, ಆಸೆ ಅನಿಸಿಕೆಗಳು, ಭಾವ ಭಾವನೆಗಳು ಒಡಮೂಡುವುದು ಭಾಷೆಯಲ್ಲಿ. ಭಾಷೆ ಅವ್ಯಕ್ತಮನಸ್ಸಿನ ವ್ಯಕ್ತಸ್ವರೂಪ, ಸಂಪ್ರದಾಯ, ಸಂಸ್ಕೃತಿಗಳು ನಿಂತು ಬಂದಿರುವುದು ಅದರ ಮೂಲಕ. ಭಾಷೆ ಇಲ್ಲದೆ ಬದುಕಿಲ್ಲ. ನಮ್ಮ ನೆನ್ನೆ ಮೊನ್ನೆಗಳೆಲ್ಲ ಭಾಷೆಯಿಂದಲೆ ಇಂದೂ ಉಳಿದಿರುವುದು.

ಲೋಕದಲ್ಲಿ ಸಾವಿರಾರು ಭಾಷೆಗಳಿವೆ. ಎಷ್ಟಿವೆ ಎಂದು ಖಚಿತವಾಗಿ ಲೆಕ್ಕ ಹಾಕಿ ಹೇಳಿದವರಿಲ್ಲ. ಆದರೂ ಅವುಗಳ ಸಂಖ್ಯೆಯೇನೊ ದೊಡ್ಡದೆ. ಕೆಲವು ಭಾಷೆಗಳಿಗೆ ಸಾವಿರಾರು ವರ್ಷಗಳ ಪ್ರಾಚೀನತೆಯನ್ನು ತೋರಿಸಲು ಆಧಾರಗಳಿವೆ. ಹಲವಕ್ಕೆ ಅಂಥ ಆಧಾರಗಳಿಲ್ಲ. ಕೆಲವಕ್ಕೆ ಬರವಣಿಗೆಯುಂಟು ; ಲಿಖಿತಗೊಂಡ ಸಾಹಿತ್ಯವುಂಟು. ಇನ್ನು ಕೆಲವಕ್ಕೆ ಲಿಪಿಯಿಲ್ಲ ; ಬರಿಯ ಬಾಯಿ ಸಾಹಿತ್ಯ. ಕೆಲವು ಭಾಷೆಗಳನ್ನು ಕೋಟ್ಯಂತರ ಜನ ಆಡುತ್ತಾರೆ ; ಕೆಲವನ್ನು ಕೇವಲ ಕೆಲವು ನೂರು ಜನರು ಬಳಸುತ್ತಾರೆ.

ಸಂಪದ್ಯುಕ್ತ ಸಾಹಿತ್ಯವನ್ನುಳ್ಳ ಭಾಷೆಗಳು ಅನೇಕ. ಸಂಪರ್ಕ ಸಾಧನ ಮಾತ್ರವಾಗಿ ಉಳಿದ ಭಾಷೆಗಳು ಹಲವು. ಕೆಲವು ಭಾಷೆಗಳಿಗೆ ಸಮಾಜದಲ್ಲಿ, ರಾಷ್ಟ್ರಜೀವನದಲ್ಲಿ ವಿಶೇಷ ಸ್ಥಾನಮಾನಗಳುಂಟು ; ಮತ್ತೆ ಕೆಲವು ನಿರ್ಲಕ್ಷ್ಯಕ್ಕೆ ಒಳಗಾಗಿ ತಿರಸ್ಕೃತಗೊಂಡಿರುವುದೂ ಉಂಟು. ವಿಜ್ಞಾನ ವಾಣಿಜ್ಯ ವಿದ್ಯಾಭ್ಯಾಸಗಳ ನೆವದಲ್ಲಿ ಕೆಲವಕ್ಕೆ ಮೊದಲ ಮಣೆ ; ಇನ್ನು ಕೆಲವಕ್ಕೆ ಹಿಂದಿನ ಸಾಲಿನ ಅಸ್ತಿತ್ವ. ಕೆಲವು ಭಾಷೆಗಳಲ್ಲಿ ಉಪಭಾಷೆಗಳ ವರ್ಣವೈವಿಧ್ಯ, ವೈಭವ ಉಂಟು. ಕೆಲವು ಭಾಷೆಗಳಲ್ಲಿ ಒಣ ಏಕತಾನತೆ ತಾನೇ ತಾನಾಗಿರುವುದುಂಟು.

ಒಂದು ಭಾಷೆ ಬಳಸುವ ಧ್ವನಿಗಳು ಇನ್ನೊಂದು ಭಾಷೆಯ ಧ್ವನಿಗಳಿಗಿಂತ ಭಿನ್ನ ; ಸಂಖ್ಯೆಯೂ ಬೇರೆ ಬೇರೆ. ಒಂದು ಭಾಷೆಯಲ್ಲಿ ಇರುವಂಥ ಪದಗಳೆಲ್ಲ ಮತ್ತೊಂದು ಭಾಷೆಯಲ್ಲಿ ಸಿಕ್ಕುವುದಿಲ್ಲ. ಒಂದರ ವಾಕ್ಯರಚನೆಯ ವಿಧಾನ ಇನ್ನೊಂದರ ವಿಧಾನದಿಂದ ಪ್ರತ್ಯೇಕವಾದುದು. ಒಂದು ಭಾಷೆಯಲ್ಲಿ ಲಿಂಗಗಳು ಎರಡು, ಇನ್ನೊಂದರಲ್ಲಿ ಮೂರು. ಎರಡು ವಚನಗಳು ಇರುವ ಭಾಷೆಯಂತೆ ಮೂರು ವಚನಗಳನ್ನುಳ್ಳ ಭಾಷೆಯೂ ಇದೆ. ಕಾಲಸೂಚಕ ಪ್ರತ್ಯಯಗಳು ಎಲ್ಲ ಭಾಷೆಗಳಲ್ಲೂ ಒಂದೇ ತೆರನಲ್ಲ.

ಭಾಷೆಗಳಲ್ಲಿ ಬಣ್ಣಗಳು ಬೇರೆ, ನಾದಗಳು ಬೇರೆ. ಒಂದರಲ್ಲಿ ಹೆಣ್ಣಿಗೂ ಹೆಂಡತಿಗೂ ವ್ಯತ್ಯಾಸವಿಲ್ಲ; ಇನ್ನೊಂದರಲ್ಲಿ ಮಂಜಿಗೂ ಮಳೆಗೂ ವ್ಯತ್ಯಾಸವಿಲ್ಲ ; ಮತ್ತೊಂದರಲ್ಲಿ ನೆನ್ನೆ ಮೊನ್ನೆ ಬೇರೆಯಲ್ಲ ; ಮಗುದೊಂದರಲ್ಲಿ ಹೆಂಡತಿ ಹೆಣ್ಣೂ ಹೌದು, ಗಂಡೂ ಹೌದು ; ಯಾವುದೋ ಒಂದರಲ್ಲಿ ನದಿಯೇ ಸಮುದ್ರ; ಒಂದು ಕಡೆ

ಹುಲಿಯೇ ಸಿಂಹವಾಗುತ್ತದೆ; ಊರುನಾಯಿ ಕಾಡುನಾಯಿಯಾಗುತ್ತದೆ; ಕಾಡುಕೋಳಿ ಊರುಕೋಳಿಯಾಗುತ್ತದೆ.

ಹೀಗೆ ಪಟ್ಟಿ ಮಾಡುತ್ತಾ ಹೋದರೆ ವೈವಿಧ್ಯಗಳಿಗೆ ಕೊನೆ ಎಂಬುದಿಲ್ಲ. ಇಷ್ಟೆಲ್ಲ ವೈವಿಧ್ಯಗಳಿದ್ದರೂ ಅಂತರ್ಗತವಾದ ಭಾಷೆಯ ಸಾಮಾನ್ಯ ಲಕ್ಷಣ ಎಂದರೆ ಅದರ ಸಂವಹನ ಗುಣ, ತಿಳಿಸುವ ಲಕ್ಷಣ. ವಾಸ್ತವವಾಗಿ ಭಾಷೆಗಳಲ್ಲಿ ಮೇಲು ಕೀಳಿಲ್ಲ. ಈ ಗುಣವನ್ನು ನಮ್ಮ ಕಣ್ಣು ನೇರಕ್ಕೆ ನಾವು ಆರೋಪಿಸಿಕೊಂಡಿರುವುದು. ಇದರಿಂದ ಈ ಭಾಷೆ ಆ ಭಾಷೆ ಎಂದು ನಾವು ಕೈಮಾಡಿ ತೋರುತ್ತಿದ್ದೇವೆ. ಇದು ಹಾಗೆ ಅದು ಹೀಗೆ ಎನ್ನುತ್ತಿದ್ದೇವೆ. ಹೀಗೆ ಹೇಳುವ ಸಂದರ್ಭದಲ್ಲಿ ಜಗಳ, ವೈಮನಸ್ಸುಗಳಿಗೆ ಹಾದಿ ಹಾಕುತ್ತಿದ್ದೇವೆ. ಎಲ್ಲ ಭಾಷೆಗಳೂ ಮಾಡುವ ಕೆಲಸ ಒಂದೇ ಎಂಬ ಸತ್ಯವನ್ನು ನಾವು ಮರೆತಿದ್ದೇವೆ.

ಭಾಷೆಗಳು ಒಂದು ಮಾಧ್ಯಮ ಅಷ್ಟೆ. ಎಲ್ಲರಿಗೂ ಅವರವರ ಭಾಷೆಗಳು ಪ್ರಿಯವಾದವು, ಹತ್ತಿರವಾದವು. ಉಪಯುಕ್ತತೆಯ ದೃಷ್ಟಿಯಲ್ಲಿ ಒಬ್ಬೊಬ್ಬರಿಗೆ ಒಂದೊಂದು ಹೆಚ್ಚು ಪ್ರಿಯ ಎನ್ನಿಸಬಹುದು, ಹೆಚ್ಚು ಹತ್ತಿರವಾಗಿರಬಹುದು. ಬಹು ಭಾಷೆಗಳ ದೇಶವಾದ ನಮ್ಮಲ್ಲಿ ಭಾಷೆಗಳ ಬಗೆಗೆ ನಮ್ಮ ಜನದ ತಿಳಿವಳಿಕೆ ಸ್ಪಷ್ಟವಾದಲ್ಲಿ, ನೇರವಾದಲ್ಲಿ ಎಷ್ಟೋ ಉದ್ವೇಗ ಮಾತ್ಸರ್ಯಗಳು ಕಡಿಮೆಯಾಗುತ್ತವೆ; ಸಂಘರ್ಷದ ತೀವ್ರತೆ ಇಳಿಮುಖವಾಗುತ್ತದೆ.

ನೂರಾರು ವರ್ಷಗಳ ಹಿಂದೆ ನಾಗವರ್ಮನೆಂಬ ಕನ್ನಡ ಕವಿ ಹೇಳಿದ :

> ಸರ್ವಜ್ಞಂ ತದಹಂ ವಂದೇ ಪರಂಜ್ಯೋತಿಸ್ತಮೋಪಹಂ
>
> ಪ್ರವೃತ್ತಾ ಯನ್ಮುಖಾದ್ದೇವೀ ಸರ್ವಭಾಷಾಸರಸ್ವತೀ

ವಿದ್ಯಾಧಿದೇವತೆ ಸರಸ್ವತಿ ಸಕಲ ಭಾಷಾತ್ಮಕಳು. ಅವಳು ಯಾವ ಒಂದೇ ಭಾಷೆಗೆ ಮೀಸಲಾದ ದೇವಿಯಲ್ಲ. 'ಸರ್ವಭಾಷಾಸರಸ್ವತಿ' ಎಂಬುದು ಕನ್ನಡಿಗರ ದಿವ್ಯಕಲ್ಪನೆ. ಅದನ್ನು ನಾವು ನೆನಪಿನಲ್ಲಿಟ್ಟುಕೊಂಡಿರುವುದು ಎಲ್ಲ ಕಾಲಕ್ಕೂ ಶ್ರೇಯಸ್ಕರ—ನಮಗೆ ಮಾತ್ರವಲ್ಲ, ರಾಷ್ಟ್ರಜೀವನಕ್ಕೆ ಕೂಡ.

೨ ದೂರ

'ರಂಗಬಿನ್ನಪ'ದ ಒಂದು ವಚನ ಹೀಗಿದೆ :

> "ಮೈಸೂರಿಂದ ಮೆಕ್ಸಿಕೋ ದೂರ ; ಭೂಮಿಯಿಂದ ಆಕಾಶ ಬಲುದೂರ, ಆದರೆ
>
> ನೋಡು ರಂಗಯ್ಯ, ಮನುಷ್ಯರ ಮನಕ್ಕೂ ವಚನಕ್ಕೂ, ವಚನಕ್ಕೂ ಕಾರ್ಯಕ್ಕೂ
>
> ಅತ್ಯಂತ ದೂರ....

ಮೈಸೂರು ದಕ್ಷಿಣ ಭಾರತದ ಒಂದು ನಗರ ; ಮೆಕ್ಸಿಕೊ ದಕ್ಷಿಣ ಅಮೆರಿಕೆಯ ಒಂದು ರಾಜ್ಯ. ಎರಡಕ್ಕೂ ಖಂಡಗಳ ದೂರವಿದೆ. ಸಾಮಾನ್ಯವಾಗಿ ಈಗ ಒಂದು ಕಡೆಯಿಂದ ಇನ್ನೊಂದು ಕಡೆಗೆ ವಿಮಾನದಲ್ಲಿಯೇ ಪ್ರಯಾಣ ಮಾಡಬೇಕು. ಅದಕ್ಕೆ ಒಂದೆರಡು ದಿನಗಳಾದರೂ ಹಿಡಿಯುತ್ತವೆ. ಆದರೂ ಈ ದೂರ ಎಷ್ಟೆಂದು ಖಚಿತವಾಗಿ ನಮಗೆ ಗೊತ್ತಿದೆ. ಮೈಲು ಕಿಲೋಮೀಟರುಗಳ ಲೆಕ್ಕದಲ್ಲಿ ಅದನ್ನು ನಾವು ಹೇಳಬಹುದು. ಇಷ್ಟು ದೂರವನ್ನು ನಾವು ಬಹಳ ಸುಲಭವಾಗಿ ಈಗ ಕ್ರಮಿಸುವಂತಾಗಿದೆ.

ಭೂಮಿಯಿಂದ ಆಕಾಶ ಎಂದರೆ ನಮಗೆ ಯೋಚಿಸಲಾಗದ ದೂರ ಎನಿಸುತ್ತದೆ. ಸೂರ್ಯನಿಗೂ ಭೂಮಿಗೂ ಇರುವ ದೂರ 93 ಮಿಲಿಯ ಮೈಲಿಗಳು ; ಚಂದ್ರನಿಗೂ ಭೂಮಿಗೂ ಇರುವ ದೂರ 240 ಸಾವಿರ ಮೈಲಿಗಳು. ಸೂರ್ಯನಿಗೂ ಭೂಮಿಗೂ ಇರುವ ದೂರವನ್ನು ಒಂದು ಏಕಮಾನ ಎಂದು ಇಟ್ಟುಕೊಂಡರೆ ಸೂರ್ಯನಿಂದ

ಮುಂದಿನ ಅತಿ ಸಮೀಪದ ನಕ್ಷತ್ರಕ್ಕೆ ಹಲವು ಲಕ್ಷ ಇಂಥ ಏಕಮಾನಗಳ ದೂರವಾಗುತ್ತದಂತೆ. ಇದೆಲ್ಲ ನಮ್ಮ ತಲೆ ಕೆಡಿಸುವ ಲೆಕ್ಕಾಚಾರವಾದರೂ, ವಿಜ್ಞಾನಿಗಳು ದೂರವನ್ನು ಲೆಕ್ಕ ಮಾಡಿದ್ದಾರೆ. ಬೇರೆ ಬೇರೆ ಗ್ರಹಗಳನ್ನು ತಲುಪುವ ಪ್ರಯತ್ನ ನಡೆದಿದೆ, ಯಾವ ದೂರವನ್ನು ಯೋಚಿಸಲಾಗದ ದೂರ ಎಂದುಕೊಂಡಿದ್ದೆವೋ ಆ ದೂರದ ಸ್ವರೂಪವು ನಮಗೆ ಖಚಿತವಾಗಿ ತಿಳಿಯುವಂತಾಗಿದೆ.

ಆದರೆ ಎಣಿಸಲಾಗದ ಗುಣಿಸಲಾಗದ, ದೂರವೊಂದಿದೆ. ಅದು ಮನುಷ್ಯರ ಮನಸ್ಸಿನಲ್ಲಿರುವುದಕ್ಕೂ, ಅವರು ಮಾತನಾಡುವುದಕ್ಕೂ ನಡುವೆ ಇರುವ ದೂರ; ಮಾತನಾಡುವುದಕ್ಕೂ ಅವರು ಕಾರ್ಯತಃ ಮಾಡುವುದಕ್ಕೂ ನಡುವೆ ಇರುವ ದೂರ. ಈ ದೂರ ಯಾರಿಗೂ ತಿಳಿಯದ ದೂರ.

ಅನೇಕರು ಮನಸ್ಸಿನಲ್ಲಿ ಒಂದನ್ನು ಇಟ್ಟುಕೊಂಡಿರುತ್ತಾರೆ ; ಮತ್ತೊಂದನ್ನು ಆಡುತ್ತಾರೆ. ಒಂದನ್ನು ಹೇಳುತ್ತಾರೆ, ಇನ್ನೊಂದನ್ನು ಮಾಡುತ್ತಾರೆ. ನಡೆ-ನುಡಿಗಳಲ್ಲಿ ಸಾಂಗತ್ಯವಿಲ್ಲ. ಬಹು ಸಂದರ್ಭಗಳಲ್ಲಿ ವಿರೋಧಾಭಾಸ ಕಾಣಿಸುತ್ತದೆ. ಸನ್ಯಾಸದ ಮಾತನಾಡುವವನು ಸಂಸಾರದಲ್ಲಿ ಭೋಗಿಯಾಗಿರುತ್ತಾನೆ. ಮನಸ್ಸು ಬೇಕು ಎನ್ನುತ್ತದೆ ; ಮಾತು ಬೇಡ ಎನ್ನುತ್ತದೆ ಮಾತು ಆಗಲಿ ಎನ್ನುತ್ತದೆ ; ಕೃತಿ ಇಲ್ಲ ಎನ್ನುವುದನ್ನು ತೋರಿಸುತ್ತದೆ.

ತನ್ನ ಜೀವನದ ವಿಧಾನ ಒಂದು ರೀತಿಯಲ್ಲಿದ್ದರೆ, ಬೋಧನೆ ಬೇರೆಯವರಿಗಾಗಿಯೇ ಇನ್ನೊಂದು ತೆರನಾಗಿರುತ್ತದೆ. ತನ್ನಂತೆ ಪರರನ್ನು ಬಗೆಯುವುದು ವಿರಳ. ಇರುವವನು ಇಲ್ಲದಿರುವಿಕೆಯನ್ನು ಮೆಚ್ಚುತ್ತಾನೆ ; ಇಲ್ಲದವನು ವೈರಾಗ್ಯದ ಮುಸುಕು ಹಾಕುತ್ತಾನೆ. ಕೈಗೆ ಎಟುಕದ ದ್ರಾಕ್ಷಿಯೆಲ್ಲ ಹುಳಿಯಾಗಿ ತೋರುತ್ತದೆ. ಅಧಿಕಾರ ಮುಳ್ಳಿನ ಮೊನೆ ಎನ್ನುವವರು, ಅದಕ್ಕಾಗಿ ಪ್ರಾಣಬಿಡುತ್ತಾರೆ. ಅಧಿಕಾರ ಬೇಡ ಬೇಡ ಎನ್ನುವವರು ಅದನ್ನು ಉಳಿಸಿಕೊಳ್ಳುವುದಕ್ಕಾಗಿ ಹೆಣಗುತ್ತಾರೆ ; ಅದು ಕಳೆದುಹೋದಾಗ ಮನುಷ್ಯತ್ವವನ್ನೂ ಕಳೆದುಕೊಳ್ಳುತ್ತಾರೆ. ನೀತಿಯನ್ನು ಬೋಧಿಸುತ್ತಾ ಭ್ರಷ್ಟಾಚಾರ ನಡೆಸುತ್ತಿರುತ್ತಾರೆ.

ಕೆಲವರಿರುತ್ತಾರೆ, ಸಿಡುಕು ಮೋರೆಯವರು; ಗಂಟುಮುಖದವರು. ಅವರ ಮಾತು ಕೇಳಿದರೆ ಅವರಿಂದ ಯಾವ ಉಪಕಾರವೂ ಆಗದೆಂದು ತೋರುತ್ತದೆ. ಅವರು ಎಸಗುವ ಕಾರ್ಯ ಮಾತ್ರ ಊಹೆಯನ್ನು ಮೀರಿಸುತ್ತದೆ.

ಆದರೆ ಲೋಕ ವಿಚಿತ್ರವಾದುದು. ಗೋವಿನ ಮುಖವನ್ನು ಕಟ್ಟಿಕೊಂಡ ವ್ಯಾಘ್ರಗಳಷ್ಟು ದೊಡ್ಡ ಸಂಖ್ಯೆಯಲ್ಲಿ, ಹುಲಿಯ ಮುಖಹಾಕಿಕೊಂಡ ಹಸುಗಳಿಲ್ಲ. ಆದುದರಿಂದಲೇ ಮನುಷ್ಯನ ಮನಸ್ಸು-ಮಾತಿನ, ಮಾತು-ಕೃತಿಯ ದೂರ ಚಿಂತೆಯನ್ನುಂಟುಮಾಡುತ್ತಿರುವುದು. ಈ ದೂರವನ್ನು ಕಡಮೆ ಮಾಡದಿದ್ದರೆ, ದೂರವೇ ಇಲ್ಲದಿರುವಂಥ ಆದರ್ಶಕ್ಕಾಗಿ ಶ್ರಮಿಸದಿದ್ದರೆ, ಮನುಷ್ಯ, ಮೈಸೂರು-ಮೆಕ್ಸಿಕೋಗಳ ದೂರವನ್ನು ಲೆಕ್ಕ ಹಾಕಿದ್ದು ವ್ಯರ್ಥ; ಭೂಮಿಗೂ ಉಳಿದ ಗ್ರಹಗಳಿಗೂ ಸಂಪರ್ಕವನ್ನು ಸಾಧಿಸಿರುವುದು ವ್ಯರ್ಥ; ಮನೆಯನ್ನು ಗೆದ್ದು ಮಾರನ್ನು ಗೆಲ್ಲಬೇಕು.

೩ ಅಧಿಕಾರ

ಅಧಿಕಾರ ಎರಡು ಬಗೆಯಾದುದು.

ಒಂದು, ಕಾರ್ಯನಿರ್ವಾಹಕ ಸ್ಥಾನದಲ್ಲಿದ್ದು ಯಾವುದಾದರೂ ಒಂದು ಕೆಲಸವನ್ನು ನಡೆಸುವ, ನಿಯಮವನ್ನು ವಿಧಿಸುವ, ತೀರ್ಮಾನವನ್ನು ಕೈಗೊಳ್ಳುವ ಶಕ್ತಿಯನ್ನು ಹೊಂದಿರುವುದು. ಇನ್ನೊಂದು, ಅರ್ಹತೆಯನ್ನು ಸಂಪಾದಿಸಿಕೊಂಡಿರುವುದು. ಮೊದಲನೆಯದು ಎಲ್ಲರಿಗೂ ಪರಿಚಿತವಾದದ್ದು ; ಎಲ್ಲರೂ ಬಯಸುವಂಥದು. ಎರಡನೆ

ಯದು ಎಲ್ಲೋ ಕೆಲವರು ಸ್ವಂತ ಆಸೆ ಆಸಕ್ತಿಗಳಿಂದ, ಆತ್ಮಸಂತೋಷಕ್ಕಾಗಿ ಪಡೆದಿರುವಂಥದು.

ಅಧಿಕಾರ ನಡೆಸುವವರು ಲೋಕವನ್ನು ಆಳುತ್ತಾರೆ ; ಅಧಿಕಾರ ಪಡೆದವರು ಜ್ಞಾನಲೋಕವನ್ನು ವಿಸ್ತರಿಸುತ್ತಾರೆ. ಒಂದು ಅಧಿಕಾರ ನಶ್ವರವಾದದ್ದು; ಅದನ್ನು ಯಾರು ಯಾವ ಹೊತ್ತಿನಲ್ಲಿ ಹೇಗೆ ಕಿತ್ತುಕೊಳ್ಳುತ್ತಾರೆ ಎಂದು ಹೇಳುವುದು ಸಾಧ್ಯವಿಲ್ಲ. ಇನ್ನೊಂದು ಅಧಿಕಾರವನ್ನು ಯಾರೂ ಕಸಿಯಲಾರರು; ಆದರೂ ಕ್ಷಣಿಕ ಅಧಿಕಾರವನ್ನೇ ಎಲ್ಲರೂ ಅಪೇಕ್ಷಿಸುತ್ತಾರೆ. ಅದಕ್ಕಾಗಿ ಸದಾ ಹಾತೊರೆಯುತ್ತಿರುತ್ತಾರೆ.

ಈ ಅಧಿಕಾರ ಬರಿಯ ಒಂದು ಮುಖವಾಡ. ಅದು ದುರ್ಬಲನಿಗೆ ಶಕ್ತಿಯನ್ನು ಕೊಡುತ್ತದೆ ; ಕೆಟ್ಟವನನ್ನು ಒಳ್ಳೆಯವನನ್ನಾಗಿ ತೋರಿಸುತ್ತದೆ. ದಗಾಖೋರ ಸತ್ಯಸಂಧನಾಗುತ್ತಾನೆ. ಅಯೋಗ್ಯ ಯೋಗ್ಯನೆಂದು ಪರಿಗಣಿತನಾಗುತ್ತಾನೆ ; ಲೋಭಿ ದೊಡ್ಡ ಉದಾರಿಯಾಗುತ್ತಾನೆ. ಇದೆಲ್ಲವೂ ಅಧಿಕಾರಸ್ಥಾನದ ಪವಾಡ, ಕಣ್ಕಟ್ಟು.

ನಿಜದಲ್ಲಿ ಈ ಅಧಿಕಾರ ಒಂದು ಉಬ್ಬರ. ಉಬ್ಬರ ಇಳಿದ ಮೇಲೆ ಮತ್ತೆ ಅದೇ ಸಮಸ್ಥಿತಿ, ವಸ್ತುಸ್ಥಿತಿ. ಅಧಿಕಾರಕ್ಕೆ ಬಂದು ಹೃದಯವನ್ನು ಕಳೆದುಕೊಳ್ಳದೆ, ಮೌಲ್ಯಪತನಕ್ಕೆ ಒಳಗಾಗದೆ, ಅದನ್ನು ಒಂದು ಸೇವೆಯ ಸ್ಥಾನ ಎಂದು ತಿಳಿದುಕೊಂಡವರು ಇಲ್ಲವೆನ್ನುಷ್ಟರ ಮಟ್ಟಿಗೆ ವಿರಳ. ಅಧಿಕಾರ ಮತ್ತು ಬರಿಸುತ್ತದೆ; ತಲೆತಿರುಗಿಸುತ್ತದೆ. ಅಧಿಕಾರ ಮನುಷ್ಯತ್ವವನ್ನು ತೊಲಗಿಸುತ್ತದೆ, ಹೃದಯವನ್ನು ಕಲ್ಲುಮಾಡುತ್ತದೆ. ಅಧಿಕಾರದ ಕರ್ತವ್ಯಗಳ ಕಡೆಗೆ ಕಣ್ಣೆತ್ತಿ ನೋಡುವವರಿಲ್ಲ. ಅದರಿಂದ ಲಭಿಸುವ ಅನುಕೂಲ ಗೌರವಗಳ ಬಗ್ಗೆ ಮಾತ್ರ ಎಲ್ಲರಿಗೂ ಆಸಕ್ತಿ.

ಅಧಿಕಾರ, ಸಂಚು ಎರಡಕ್ಕೂ ಹತ್ತಿರದ ನಂಟು. ಅಧಿಕಾರ ಇರುವಲ್ಲಿ ಗುಂಪು ಇರುತ್ತದೆ. ಅಧಿಕಾರ ಉಳಿಸಿಕೊಳ್ಳುವುದರ, ಬೆಳೆಸಿಕೊಳ್ಳುವುದರ ಸುತ್ತ ಗುಂಪುಗಾರಿಕೆ ಬೆಳೆಯುತ್ತದೆ. ಒಬ್ಬನನ್ನು ಸಮಾಧಾನ ಪಡಿಸುವುದೇ ಕಷ್ಟ ; ಗುಂಪನ್ನು ಜೊತೆಗೊಯ್ಯುವುದು ಅಸಾಧ್ಯ. ಆದ್ದರಿಂದಲೇ ಅಧಿಕಾರ ವಹಿಸಿದವನು ದಾರಿಬಿಡಬೇಕಾಗುತ್ತದೆ. ಒಮ್ಮೆ ಹಾಗಾದರೆ ಉಗಿಬಂಡಿ ಹಳಿ ತಪ್ಪಿದ ಹಾಗೆ. ಮತ್ತೆ ಅದು ತನ್ನಷ್ಟಕ್ಕೇ ಹಳಿಯ ಮೇಲಕ್ಕೆ ಬರಲಾರದು. ಹಾದಿ ತಪ್ಪಿದ ಅಧಿಕಾರಿ ಅವನತಿಯತ್ತ ಸಾಗುತ್ತಾನೆ. ಆದರೆ ಅವನಿಗೆ ಅಧಿಕಾರದ ಭದ್ರ ಕವಚವಿರುತ್ತದೆ.

ಅಧಿಕಾರ ಪಡೆದವರ ಸುತ್ತ ಭಟ್ಟಂಗಿಗಳು ಇರುತ್ತಾರೆ. ಅವರ ಜಯಘೋಷದ ಅಬ್ಬರದ ನಡುವೆ ಅಧಿಕಾರ ವಹಿಸಿದವನಿಗೂ ಲೋಕಕ್ಕೂ ಸಂಪರ್ಕ ತಪ್ಪುತ್ತದೆ.ಲೋಕವೆಲ್ಲ ನಿಮ್ಮದೇ ಎಂಬ ಭ್ರಮೆಯನ್ನು ಈ ಭಟ್ಟಂಗಿಗಳು ಅಧಿಕಾರಿಯಲ್ಲಿ ಹುಟ್ಟಿಸುತ್ತಾರೆ. ವಾಸ್ತವವಾಗಿ ಈ ಅಧಿಕಾರಿ ಕೆಟ್ಟವನಲ್ಲದಿರಬಹುದು. ಆದರೆ ಅವನ ಅಸಹಾಯಕತೆಯೇ ಕೆಟ್ಟದ್ದಾಗಿ ಪರಿಣಮಿಸುತ್ತದೆ. ಅವನ ಹೆಸರಿನಲ್ಲಿ ಭಟ್ಟಂಗಿಗಳ ಗುಂಪು ಅಧಿಕಾರ ನಡೆಸುವಂತಾಗಬಹುದು.

ಅನುಭವ ಇರದಲ್ಲಿ ಅಧಿಕಾರದ ಅಪಾಯ ಹೆಚ್ಚಿನದು. ಹಂತ ಹಂತವಾಗಿ ಕ್ರಮತಪ್ಪದೆ ಅಧಿಕಾರ ಲಭಿಸಿದಾಗ ಅದನ್ನು ವಹಿಸಿದವನಿಂದ ಹೊಣೆಗಾರಿಕೆಯನ್ನು ನಿರೀಕ್ಷಿಸಿದರೆ ತಪ್ಪಾಗುವುದಿಲ್ಲ. ಅಧಿಕಾರ ಇದ್ದವನಿಗೆ ಎಲ್ಲರೂ ಸೊಂಟ ಬಗ್ಗಿಸಿ ನಮಸ್ಕಾರ ಮಾಡುತ್ತಾರೆ. ಕೈ ಹೊಸೆದು ಕಾಲು ಕಟ್ಟುತ್ತಾರೆ. ಅಧಿಕಾರ ಹೋದ ಬಳಿಕ ಕೇಕೆ ಹಾಕಿ ನಗುತ್ತಾರೆ; ಗೇಲಿ ಎಬ್ಬಿಸುತ್ತಾರೆ. ನೀನು ಯಾರು ಎಂದು ಯಾರೂ ಕೇಳುವುದಿಲ್ಲ. ಸ್ವಾರಸ್ಯದ ಸಂಗತಿ ಎಂದರೆ ಇದನ್ನು ತಿಳಿದಿದ್ದೂ ಅಧಿಕಾರ ವಹಿಸಿದವರು ಮೋಸಹೋಗುತ್ತಾರೆ ಎಂಬುದು. ಅಧಿಕಾರದ ಆಮಿಷ ಅವರಿಗೆ ಭವಿಷ್ಯವನ್ನು ಮರೆಸುತ್ತದೆ ; ಭೂತವನ್ನು ತೋರಿಸುವುದಿಲ್ಲ.

ಅಧಿಕಾರಕ್ಕೆ ನಿಜವಾಗಿ ಅರ್ಹರಾದವರು, ಅಧಿಕಾರವನ್ನು ಜೀವನದ ತುದಿ ಎಂದು ಭ್ರಮಿಸುವುದಿಲ್ಲ ; ಅದನ್ನು ಕೇವಲ ಒಂದು ಅವಕಾಶ ಎಂದು ಭಾವಿಸುತ್ತಾರೆ ; ಬದುಕಿನ ಏಣಿಯಲ್ಲಿ ಒಂದು ಹಂತ ಮಾತ್ರ ಎಂದು

ತಿಳಿಯುತ್ತಾರೆ. ಅಧಿಕಾರ ಅಂಥವರಿಗೆ ಕೇವಲ ಆಕಸ್ಮಿಕ. ಅದನ್ನು ಅವರು ತಮ್ಮ ಪಾಲಿನ ಕರ್ತವ್ಯ ಎಂದು ಸ್ವೀಕರಿಸುತ್ತಾರೆ. ಅವರಿಗೆ ಬದುಕಿನ ನಶ್ವರತೆಯೂ ಗೊತ್ತಿರುತ್ತದೆ; ಅಧಿಕಾರದ ಕ್ಷಣಿಕತೆಯೂ ತಿಳಿದಿರುತ್ತದೆ. ಇಂಥವರು ಅಧಿಕಾರಕ್ಕೆ ಬಂದರೆ ಜನಕ್ಕೆ ನೆಮ್ಮದಿ ; ದೇಶಕ್ಕೆ ಸುಖ.

೪ ಸ್ವಾತಂತ್ರ್ಯ

"ಜಗದಿ ಸ್ವಾತಂತ್ರ್ಯವೇ ಲೇಸು" ಎಂದ ನಮ್ಮ ಸರ್ವಜ್ಞ. ಮಂಡೆ ಬೋಳಿಸಿಕೊಂಡು ತುಂಡು ಗಂಬಳಿ ಹೊದೆದು ಕೈಯಲ್ಲಿ ಕಪ್ಪರ ಹಿಡಿದು, ಪರಮೇಶ್ವರನ ನಾಮಸ್ಮರಣೆ ಮಾಡುತ್ತಾ ಹಿಂಡನಗಲಿದ ಗಜದಂತೆ ಎದುರಿಗಿರುವ ಹಿರಿದಾದ ನಾಡಿನಲ್ಲಿ ತಿರಿಯುತ್ತಾ ಹೊರಟ ಅವನಿಗೆ ಬೇಕಾಗಿದ್ದುದು,ತನಗೆ ತೋಚಿದಂತೆ ಮಾಡಲು ಸ್ವಾತಂತ್ರ್ಯ.ಅದಕ್ಕಿಂತ ಮಿಗಿಲಾದುದು,ಪವಿತ್ರವಾದುದು ಬೇರೊಂದಿಲ್ಲ ಎಂಬುದು ಅವನ ಅನುಭವ.ಯೋಚಿಸುವ ಶಕ್ತಿಯುಳ್ಳ ಎಲ್ಲರ ಅನುಭವವೂ ಅದೇ.

ಸ್ವಾತಂತ್ರ್ಯ ಎಂದರೆ ಕೇವಲ ರಾಷ್ಟ್ರವ್ಯವಸ್ಥೆಗಷ್ಟೇ ಸಂಬಂಧಿಸಿಪ್ಪಲ್ಲ. ಈಗ ಆ ಮಾತಿಗೆ ನಾವು ರಾಜಕೀಯ ಬಿಡುಗಡೆ ಎಂದು ಅರ್ಥ ಮಾಡಿದ್ದೇವೆ.ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರದ ಹಿಡಿತದಿಂದ ಹೊರಬರುವುದಷ್ಟೇ ಸ್ವಾತಂತ್ರ್ಯವಲ್ಲ. ಪ್ರತಿಯೊಬ್ಬ ವ್ಯಕ್ತಿಗೂ ಸ್ವಾತಂತ್ರ್ಯ ಸಂಬಂಧಿಸಿದುದಾಗಿದೆ. ಅದು ನಮ್ಮ ಜೀವನವ್ಯವಸ್ಥೆಗೆ ಸಂಬಂಧಿಸಿದೆ ; ನಮ್ಮ ಆರ್ಥಿಕ, ಸಾಂಸ್ಕೃತಿಕ ಧೋರಣೆಗಳಿಗೆ ಸಂಬಂಧಿಸಿದೆ ; ನಮ್ಮ ದೈನಂದಿನ ಚಟುವಟಿಕೆಗಳಿಗೆ ಸಂಬಂಧಿಸಿದೆ. ನಮ್ಮ ಬುದ್ಧಿ ಮನಸ್ಸುಗಳಿಗೆ ಅದರೊಡನೆ ಸಂಪರ್ಕವಿದೆ.

ಒಳ್ಳೆಯ ಗಾಳಿ ನೀರು ಬೆಳಕುಗಳು ನಮಗೆ ಬೇಕಾದ ಹಾಗೆ ಸ್ವಾತಂತ್ರ್ಯವೂ ಬೇಕು. ಬೇಕೆನಿಸಿದುದನ್ನು ಮಾಡಲು, ತೋಚಿದ್ದನ್ನು ಆಡಲು ನಮಗೆ ಸ್ವಾತಂತ್ರ್ಯ ಬೇಕು. ಹಾಗೆಂದರೆ ಮುಕ್ತ ಪರವಾನಿಗೆ ಎಂದು ಅರ್ಥವಲ್ಲ. ಸ್ವಾತಂತ್ರ್ಯ ಸ್ವಚ್ಛಂದವಲ್ಲ. ಸ್ವಾತಂತ್ರ್ಯದೊಡನೆ ಹೊಣೆಗಾರಿಕೆಯೂ ಇರುತ್ತದೆ. ವ್ಯಕ್ತಿಯೊಬ್ಬ ಸಮಷ್ಟಿ ಜೀವನದಲ್ಲಿ ಪಾಲುಗೊಳ್ಳುವ ವಿಧಿ ವಿಧಾನಗಳನ್ನು ಅರಿತು ಅದರಂತೆ ವರ್ತಿಸಬೇಕು.

ಈ ವರ್ತನೆಯ ಗಡಿ ಗೆರೆಗಳನ್ನು ಗುರುತುಮಾಡುವುದರಲ್ಲಿಯೇ ಎಲ್ಲ ತೊಂದರೆಗಳೂ ಉದ್ಭವಿಸುತ್ತವೆ. ಯಾವ ಸ್ವಾತಂತ್ರ್ಯ ? ಎಷ್ಟು ಸ್ವಾತಂತ್ರ್ಯ ? ಹಲವರಿಗಾಗಿ ಕೆಲವರು ಇದನ್ನು ಗೊತ್ತುಪಡಿಸುತ್ತಾರೆ. ಆಗ ಬಹುಜನರ ಆಶೋತ್ತರಗಳು ಮರೆಯಾಗುತ್ತವೆ ; ಕೇವಲ ಕೆಲವರ ಆಸಕ್ತಿಗಳು ರಕ್ಷಿತವಾಗುತ್ತವೆ.

ಅನ್ನ ಬಟ್ಟೆಗಳ ಆಮಿಷದಲ್ಲಿ, ಸ್ವಾತಂತ್ರ್ಯ ಬಹು ಸಂದರ್ಭಗಳಲ್ಲಿ ಕಣ್ಮರೆಯಾಗಿ ಹೋಗುವ ಅಪಾಯವಿರುತ್ತದೆ. ಮನುಷ್ಯನ ಜೀವನ ಯಾವುದರಿಂದ ಸುಖವಾಗಿರುತ್ತದೆ ? ತುಂಬಿದ ಹೊಟ್ಟೆಯೊಂದೇ ಅವನಿಗೆ ನೆಮ್ಮದಿ ನೀಡುತ್ತದೆಯೆ ? ಈ ಪ್ರಶ್ನೆಗಳಿಗೆ ಉತ್ತರವನ್ನು ಬಗೆಬಗೆಯಾಗಿ ನೀಡಬಹುದು. ಆದರೆ ಮನುಷ್ಯನಿಗೆ ಯೋಚಿಸುವ ಶಕ್ತಿಯಿದೆ, ಹಿಗ್ಗುವ ಕುಗ್ಗುವ ಮನಸ್ಸಿದೆ, ಅಭಿವ್ಯಕ್ತಿಗಾಗಿ ಮಾತಿದೆ. ಇವನ್ನು ನಾವು ಮರೆಯುವಂತಿಲ್ಲ.

ಮನುಷ್ಯ ತನ್ನ ಬುದ್ಧಿ ಮನಸ್ಸು ಅಭಿವ್ಯಕ್ತಿಗಳ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಾ ಬಂದಿರುವುದೇ ಇತಿಹಾಸದ ಪ್ರಧಾನ ಲಕ್ಷಣವಾಗಿದೆ. ಮುಂದಿನ ಇತಿಹಾಸದ ಸೃಷ್ಟಿಯಾಗುವುದಾದರೂ ಇದೇ ಕಾರಣಗಳಿಂದ. ಹೊಣೆಗಾರಿಕೆಯನ್ನುಳ್ಳ ಮುಕ್ತಸ್ವಾತಂತ್ರ್ಯ ಪ್ರತಿಯೊಬ್ಬ ಮಾನವನ ಅಂತಿಮ ಗುರಿ. ಅವನ ಯೋಚನೆಗೆ ಯಾರೂ ಕಡಿವಾಣ ಹಾಕಲಾರರು, ಅವನನ್ನು ಒಂದೇ ಸ್ಥಳದಲ್ಲಿ ಬಂಧಿಸಿಡಲಾರರು ; ಅವನ ಮಾತಿನ ಶಕ್ತಿಯನ್ನು ಅಪಹರಿಸಲಾರರು , ಅವನ ವ್ಯಕ್ತಿತ್ವಕ್ಕೆ ಚೌಕಟ್ಟನ್ನು ನಿರ್ಮಿಸಲಾರರು : ಕ್ರಿಯಾತ್ಮಕ ಗುಣಗಳನ್ನು ಕುಂಠಿತಗೊಳಿಸಲಾರರು, ಆಗಲೇ ಮಾನವ ಸ್ವಾತಂತ್ರ್ಯದ ಪಾಲುದಾರನಾಗುತ್ತಾನೆ; ಆ ಪದಕ್ಕೆ ಅರ್ಥ ತರುತ್ತಾನೆ.

ಠಾಕೂರರ ಗೀತೆಯೊಂದರಲ್ಲಿ ಪಂಜರದ ಹಕ್ಕಿ ಮತ್ತು ಕಾಡಿನ ಹಕ್ಕಿ ಸಂಧಿಸಿದ ಸಂದರ್ಭಬರುತ್ತದೆ. ಸ್ವತಂತ್ರವಾದ ಕಾಡಿನ ಹಕ್ಕಿ ಕೂಗುತ್ತದೆ: "ಓ ಪ್ರಿಯೆ, ನಾವು ಅಡವಿಗೆ ಹಾರೋಣ."

ಪಂಜರದ ಪಕ್ಷಿ ಉಸುರುತ್ತದೆ: "ಇಲ್ಲಿಗೇ ಬಾ, ನಾವಿಬ್ಬರೂ ಪಂಜರದೊಳಗೆ ವಾಸಿಸೋಣ."

"ಪಂಜರದ ನಡುವೆ ನಮ್ಮ ಗರಿಗೆದರಲು ಅವಕಾಶವೆಲ್ಲಿದೆ?" ಎಂಬ ಕಾಡುಹಕ್ಕಿಯ ಪ್ರಶ್ನೆಗೆ ಪಂಜರದ ಪಕ್ಷಿ ಮರುಪ್ರಶ್ನೆ ಕೇಳುತ್ತದೆ: "ಅಯ್ಯೋ, ಆಕಾಶದಲ್ಲಿ ಎಲ್ಲಿ ಗೂಡು ಕಟ್ಟುವುದು?"

"ಅರಣ್ಯಗೀತಗಳನ್ನು ಹಾಡಲು." ಕಾಡುಹಕ್ಕಿ ಕೇಳುತ್ತದೆ.

"ಪಂಡಿತರ ಮಾತುಗಳನ್ನು ಕಲಿಸುತ್ತೇನೆ, ಬಾ." ಎಂದು ಪಂಜರದ ಪಕ್ಷಿ ಕರೆಯುತ್ತದೆ.

"ಹಾಡುಗಳು ಎಂದೂ ಕಲಿಸಿಕೊಡುವಂಥವಲ್ಲ" ಎಂದು ಸ್ವತಂತ್ರವಾದ ಹಕ್ಕಿ ಹೇಳುತ್ತದೆ.

ಹಕ್ಕಿಗಳ ಪ್ರೇಮ ಅತ್ಯಾಸೆಯಿಂದ ತೀವ್ರಗೊಳ್ಳುತ್ತದೆ. ರೆಕ್ಕೆ ಸೇರಿಸಿ ಹಾರಲು ಅವು ಯತ್ನಿಸುತ್ತವೆ. ಹಾರಲಾಗುವುದಿಲ್ಲ. ಅವು ಒಂದನ್ನೊಂದು ಅರಿತುಕೊಳ್ಳಲು ಶ್ರಮಪಟ್ಟದ್ದೆಲ್ಲ ವ್ಯರ್ಥವಾಯಿತು. ಕೊನೆಯಲ್ಲಿ ಸ್ವತಂತ್ರವಾದ ಹಕ್ಕಿ ಕೂಗುತ್ತದೆ: "ಮುಚ್ಚಿದ ಪಂಜರದ ಬಾಗಿಲಿಗೆ ನಾನು ಹೆದರುತ್ತೇನೆ"

ಬಂದಿಯಾದ ಹಕ್ಕಿ ಗೋಳಿಡುತ್ತಾ ನಿಧಾನವಾಗಿ ಹೇಳುತ್ತದೆ: "ಅಯ್ಯೋ ನನ್ನ ರೆಕ್ಕೆಗಳು ಶಕ್ತಿಗುಂದಿವೆ, ಸತ್ತಿವೆ."

ಮನುಷ್ಯ ಪಂಜರದ ಪಕ್ಷಿಯಾಗಬಾರದು; ರೆಕ್ಕೆಯ ಸತ್ತ್ವ ಕುಂದಬಾರದು.

೫ ಸೌಜನ್ಯ

ನಮ್ಮ ದೈನಂದಿನ ಬದುಕಿನಲ್ಲಿ ತುಂಬ ಅಪರೂಪವಾಗಿರುವುದೆಂದರೆ ಸೌಜನ್ಯ.

ಇದಕ್ಕಾಗಿ ಯಾರೂ ಯಾರ ಮನಸ್ಸನ್ನೂ ನೋಯಿಸಬೇಕಾಗಿಲ್ಲ; ಯಾವ ಶಕ್ತಿಯನ್ನೂ ಅಪವ್ಯಯ ಮಾಡಬೇಕಾಗಿಲ್ಲ; ಕಾಸು ಖರ್ಚುಮಾಡಬೇಕಾಗಿಲ್ಲ. ಆದರೂ ಅನೇಕರಿಗೆ ಸೌಜನ್ಯ ಎಂದರೆ ಏನು ಎಂದೇ ಗೊತ್ತಿಲ್ಲ.

ಒಬ್ಬರು ಇನ್ನೊಬ್ಬರ ಬಳಿಗೆ ಹೋಗಬೇಕಾಗಿ ಬರುವುದು ಸಮಾಜಜೀವನದ ಪ್ರಧಾನ ಲಕ್ಷಣ. ದೊಡ್ಡ ಬೇಡಿಕೆಯೊಂದಿಗೆ ಹೋಗಬಹುದು; ಚಿಕ್ಕ ಕೋರಿಕೆಯೊಂದಿಗೆ ಹೋಗಬಹುದು. ಸ್ವಾರ್ಥಕ್ಕಾಗಿ ಹೋಗಬಹುದು; ಕರ್ತವ್ಯನಿರ್ವಹಣೆಗಾಗಿ ಹೋಗಬಹುದು. ಅಂಗಡಿಗೆ ಗ್ರಾಹಕರು ಹೋಗುತ್ತಾರೆ; ರೋಗಿಗಳು ವೈದ್ಯರ ಬಳಿ ಹೋಗುತ್ತಾರೆ; ಕಕ್ಷಿದಾರರು ವಕೀಲರಲ್ಲಿ ಹೋಗುತ್ತಾರೆ; ಜನ ಅಧಿಕಾರಿಗಳ ಬಳಿ ಹೋಗುತ್ತಾರೆ. ಟಿಕೆಟ್ ಕೇಳಲು ಕಂಡಕ್ಟರ್ ಹತ್ತಿರ ಹೋಗಬೇಕು; ದೂರು ಕೊಡಲು ಪೋಲೀಸರ ಬಳಿ ಹೋಗಬೇಕು; ಬಟ್ಟೆ ಹೊಲಿಸಿಕೊಳ್ಳಲು ದರ್ಜಿಯ ಹತ್ತಿರ ಹೋಗಬೇಕು.

ಹೀಗೆ ಒಬ್ಬೊಬ್ಬರು ಇನ್ನೊಬ್ಬರ ಬಳಿ ಹೋಗದೆ ಜೀವನ ಸಾಗುವುದಿಲ್ಲ. ಸಹಕಾರ ಬಾಳಿನ ಸೂತ್ರ; ಅವಲಂಬನೆ ದಿನದ ಬದುಕಿನ ವಿಧಿ.

ಕಾರಣ ಯಾವುದೇ ಇರಲಿ, ಒಬ್ಬರು ಇನ್ನೊಬ್ಬರ ಬಳಿ ಬಂದಾಗ ಪರಸ್ಪರ ಅವರು ಹೇಗೆ ವರ್ತಿಸುತ್ತಾರೆ ಎನ್ನುವುದು ಸೌಜನ್ಯಕ್ಕೆ ಸಂಬಂಧಿಸಿದ್ದು. ಸೌಜನ್ಯ ಇಬ್ಬರ ನಡುವಿನ ಸಂಬಂಧವನ್ನು ಆಧರಿಸಿದ್ದು. ಹಾಗೆಂದು ಅದು ಕೊಟ್ಟು ತೆಗೆದುಕೊಳ್ಳುವಂಥವಲ್ಲ. ಅದು ದ್ವಿಮುಖ ಸಂಚಾರಿಯಾದರೂ ಏಕಮುಖ ಸಂಚಾರದಿಂದ ನಷ್ಟವಿಲ್ಲ. ಬದಲಿಗೆ ಅದಕ್ಕೆ ಕಾರಣರಾದವರ ಘನತೆ ಹೆಚ್ಚುತ್ತದೆ.

ತಮ್ಮ ಬಳಿಗೆ ಬಂದವರ ಬಗೆಗೆ ಅನೇಕ ಜನರು ಆದರ ತೋರುವುದಿಲ್ಲ; ತಾಳ್ಮೆ ತೋರಿಸುವುದಿಲ್ಲ, ಎರಡು

ಒಳ್ಳೆಯ ಮಾತು ಸಹ ಆಡುವುದಿಲ್ಲ. ಇದು ಅಸೌಜನ್ಯ.

ಕೆಲವರು ಯಾವಾಗಲೂ ಮುಖ ಗಂಟು ಹಾಕಿಕೊಂಡಿರುತ್ತಾರೆ; ದೈನ್ಯತೆಯಿಂದ ಮತ್ತೆಮತ್ತೆ ಕೇಳಿಕೊಂಡರೂ ಉತ್ತರಿಸುವುದು ಅವರಿಗೆ ದಣಿವಾಗುತ್ತದೆ. ಇದು ಅಸೌಜನ್ಯ.

ಅಧಿಕಾರದಲ್ಲಿರುವವರು ತಮ್ಮ ಬಳಿಗೆ ಬರುವವರೆಲ್ಲ ಭಿಕ್ಷುಕರೆಂದೇ ಭಾವಿಸುತ್ತಾರೆ; ದರ್ಪಮತ್ತರಾಗಿ ನಡೆಯುತ್ತಾರೆ. ಅದು ಅಸೌಜನ್ಯ.

ಔಷಧ ಕೊಡುವುದಷ್ಟೇ ವೈದ್ಯರ ಕರ್ತವ್ಯವಿರಬಹುದು; ಪಾಠ ಹೇಳುವುದಷ್ಟೇ ಅಧ್ಯಾಪಕರ ಕರ್ತವ್ಯ ಇರಬಹುದು; ಸಾರ್ವಜನಿಕಸೇವೆಯಷ್ಟೇ ಅಧಿಕಾರಿಯ ಕರ್ತವ್ಯವಿರಬಹುದು. ನಿಯಮಾನುಸಾರ ಇವೆಲ್ಲ ಸರಿ. ಆದರೆ ಇವರೆಲ್ಲರೂ ಮನುಷ್ಯರೇ; ಇವರು ವರ್ತಿಸುತ್ತಿರುವುದು ತಮ್ಮಂಥ ಮನುಷ್ಯರೊಡನೆಯೇ. ಆದುದರಿಂದ ಅವರ ಸಂಬಂಧ ಮಾನವೀಯವಾದದ್ದು. ಮಾನವೀಯಸಂಬಂಧ ಸೌಜನ್ಯತೆಯನ್ನು ಅಪೇಕ್ಷಿಸುತ್ತದೆ.

ಸೌಜನ್ಯದಿಂದ ವರ್ತಿಸಿ ಎಂದು ಸುತ್ತೋಲೆಗಳನ್ನು ಕಳಿಸುತ್ತಾರೆ; ಜಾಹಿರಾತುಗಳನ್ನು ಪ್ರಕಟಿಸುತ್ತಾರೆ. ಸೌಜನ್ಯದ ವಾರಗಳನ್ನು ಆಚರಿಸುತ್ತಾರೆ. ಏನಿದರ ಅರ್ಥ? ಸೌಜನ್ಯತೆ ಬೇರೊಬ್ಬರು ಹೇಳಿ ತರಿಸುವಂಥದೆಂದೆ? ಗೊತ್ತಾದ ವಾರಕ್ಕಷ್ಟೇ ಅದು ಸಾಕೆಂದೆ? ಸೌಜನ್ಯ ಹೂವು ಅರಳಿದಂತೆ ಅರಳಬೇಕು. ಆಗ ಅದರ ಮಹತ್ವ ಹೆಚ್ಚಿನದು.

ಕೆಲವರಲ್ಲಿ ಅದು ಕೃತಕವಾಗಿ ಇರಬಹುದು. ಅಷ್ಟಕ್ಕಾಗಿಯಾದರೂ ಅವರು ಅಭಿನಂದನಾರ್ಹರು. ಕುಂಡದ ಗಿಡದ ಹೂವಿನಂತೆ ಏನೋ ಕೆಲವರಿಗಾದರೂ ಅದು ನೆಮ್ಮದಿಯನ್ನು ತರಬಹುದು. ಇಂದಿನದು ಬಹು ಮುಖ ಜೀವನ. ಸಮಸ್ಯೆಗಳು ಸಂಕೀರ್ಣ. ವ್ಯಕ್ತಿಯ ನಡತೆ ನಡೆವಳಿಕೆಗಳು ಚಿತ್ರ ವಿಚಿತ್ರ. ಇಂಥ ಸಂದರ್ಭದಲ್ಲಿ ಸೌಜನ್ಯ ತೋರಲು ಸಹ ತಮಗೆ ಸಮಯವಿಲ್ಲವೆಂದು ಅನೇಕರು ನಟಿಸುತ್ತಾರೆ.

ಬಳಿಗೆ ಬಂದವರು ಏನು ಹೇಳುತ್ತಾರೆ ಎಂಬುವನ್ನು ಕೇಳುವ ತಾಳ್ಮೆ ಬೇಕು. ಆಗುತ್ತದೋ ಇಲ್ಲವೋ ಎಂಬುದನ್ನು ಹೇಳುವಾಗ ಮೃದುವಾಗಿರಲಿ ಮಾತು, ಸಾಕು. ಇದೇ ಸೌಜನ್ಯ, ಇಷ್ಟೇ ಸೌಜನ್ಯ. ಬಂದವರನ್ನು ಕೂರಿಸಿ ಕಾಫಿ ತರಿಸಿಕೊಡಬೇಕಾಗಿಲ್ಲ; ಅವರ ಯೋಗಕ್ಷೇಮಗಳನ್ನು ಗಂಟೆಗಟ್ಟಲೆ ಕೇಳಬೇಕಾಗಿಲ್ಲ. ಯಾವುದೇ ಸಂದರ್ಭದಲ್ಲಿ ಇನ್ನೊಬ್ಬರ ವಿಷಯದಲ್ಲಿ ನಮ್ಮ ವರ್ತನೆ ಹೇಗಿರುತ್ತದೆ ಎಂಬುದಷ್ಟೇ ಸೌಜನ್ಯದ ಗುರುತು.

ಸಹಾನುಭೂತಿ, ಸಹೃದಯತೆ, ಸಮಾಧಾನ ಸೌಜನ್ಯಶೀಲರ ಲಕ್ಷಣ. ಒಂದು ಮಾತು, ಒಂದು ನಗು ಬಳಿಗೆ ಬಂದವರಿಗೆ ತೃಪ್ತಿ ನೀಡುತ್ತವೆ. ಮೊದಲು ಇಷ್ಟಾದರೆ ಸಾಕು. ಆಮೇಲೆ ಉಳಿದುದೆಲ್ಲ. "ಸತ್ಯವನ್ನು ಹೇಳು. ಹೇಳುವ ಸತ್ಯವನ್ನು ಪ್ರಿಯವಾಗಿ ಹೇಳು" ಎನ್ನುವುದರಲ್ಲಿ ನಮ್ಮ ಹಿರಿಯರು ನಮಗೆ ಸೌಜನ್ಯದ ಗೆರೆಯನ್ನು ಕಾಣಿಸಿದ್ದಾರೆ. ಅಯ್ಯಾ ಎಂದರೆ ಸ್ವರ್ಗ. ಎಲವೋ ಎಂದರೆ ನರಕ ಎಂಬ ಮಾತಿನಲ್ಲಿ ಸೌಜನ್ಯದ ಸ್ವರೂಪ ವ್ಯಕ್ತವಾಗುತ್ತದೆ.

ಸೌಜನ್ಯದಿಂದ ನಮಗೆ ನಷ್ಟವಿಲ್ಲದೆ ಬೇರೆಯವರಿಗೆ ಲಾಭವಾಗುತ್ತದೆ. ಹಾಗಿರುವಾಗ ನಾವೇಕೆ ಸೌಜನ್ಯಶೀಲರಾಗಿರಬಾರದು?

೬ ಕೃತಜ್ಞತೆ

ಕೃತಜ್ಞತೆ ಕೃತಘ್ನತೆ ಎಂಬ ಎರಡು ಮಾತುಗಳಿವೆ:

ಕೃತಜ್ಞತೆ ಎಂದರೆ ಮಾಡಿದ ಉಪಕಾರವನ್ನು ಸ್ಮರಿಸುವುದು; ಕೃತಘ್ನತೆ ಎಂದರೆ ಮಾಡಿದ ಉಪಕಾರವನ್ನು ಮರೆಯುವುದು. ಅನೇಕರ ಉಚ್ಚಾರ, ಬರೆವಣಿಗೆಗಳಲ್ಲಿ ಎರಡಕ್ಕೂ ವ್ಯತ್ಯಾಸವಿರುವುದಿಲ್ಲ. ಅವರಿಗೆ ಅವುಗಳ

ನಡುವಣ ಅಂತರ ತಿಳಿದಿರುವುದಿಲ್ಲ. ಅವರ ನಡೆವಳಿಕೆಯಲ್ಲಿಯೂ ಈ ವ್ಯತ್ಯಾಸ ಗೋಚರಿಸುವುದಿಲ್ಲ.

ಸಮಾಜಜೀವನದಲ್ಲಿ ಒಬ್ಬ ವ್ಯಕ್ತಿ ಇನ್ನೊಬ್ಬನನ್ನು ಒಂದಲ್ಲ ಒಂದು ಕಾರಣಕ್ಕಾಗಿ ಆಶ್ರಯಿಸಬೇಕಾಗುತ್ತದೆ; ನೆರವನ್ನು ಯಾಚಿಸಬೇಕಾಗುತ್ತದೆ; ಸಹಾಯ ಕೋರಬೇಕಾಗುತ್ತದೆ. ಹಾಗೆಯೇ ಸಾಂಸ್ಥಿಕ ಜೀವನದಲ್ಲಿ, ರಾಷ್ಟ್ರಜೀವನದಲ್ಲಿ ಕೂಡ. ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರವನ್ನು ಆಶ್ರಯಿಸಬೇಕಾಗುತ್ತದೆ. ಒಂದು ಮತ್ತೊಂದಕ್ಕೆ ಸಹಾಯವೆಸಗುತ್ತದೆ.ಇತರರ ಕಷ್ಟದ ಸಂದರ್ಭಗಳಲ್ಲಿ ಒದಗಿಬರುವುದು,ಅಸಹಾಯಕ ಪರಿಸ್ಥಿತಿಯಲ್ಲಿ ಕೈಲಾದುದನ್ನು ಮಾಡುವುದು ಮಾನವತೆಯ ಒಂದು ಗುಣ.

ಕೆಲವು ಸಂದರ್ಭಗಳಲ್ಲಿ ನೀತಿ ನಿಯಮಗಳನ್ನು ಮುರಿದೂ ಒಬ್ಬರು ಇನ್ನೊಬ್ಬರಿಗೆ ಅನುಕೂಲಗಳನ್ನು ಮಾಡಿಕೊಡಬಹುದು; ಸೌಲಭ್ಯಗಳನ್ನು ಕಲ್ಪಿಸಬಹುದು. ಹೀಗೆ ಯಾವುದಾದರೂ ರೀತಿಯಿಂದ ಸಹಾಯ ಪಡೆದವರು, ಸಹಾಯ ಮಾಡಿದವರನ್ನು ಸ್ಮರಿಸುತ್ತಾರೆ; ಸ್ಮರಿಸುತ್ತಲೇ ಇರುತ್ತಾರೆ. ಪ್ರತಿಯಾಗಿ ಸಹಾಯ ಮಾಡಲು ಯತ್ನಿಸುತ್ತಾರೆ. ಋಣ ತೀರಿಸಬೇಕೆಂದು ವಿಧವಿಧವಾಗಿ ಶ್ರಮಿಸುತ್ತಾರೆ. ಕೆಲವು ಸಮಯ ಏನೂ ಮಾಡಲು ಸಾಧ್ಯವಾಗದೆ ಹೋಗಬಹುದು. ಆಗ ಅಂತಃಕರಣದಲ್ಲಿಯೇ ಅವರು ನೆರವನ್ನು ನೆನೆದುಕೊಳ್ಳಬಹುದು. ತಮ್ಮ ಕಷ್ಟದಲ್ಲಿ ಕೈ ನೀಡಿದವರಿಗೆ ಎಲ್ಲ ಶುಭಗಳೂ ಒದಗಲಿ ಎಂದು ಮನಸ್ಸಿನಲ್ಲಿಯೇ ಹಾರೈಸಬಹುದು. ಏನು ಮಾಡದಿದ್ದರೂ, ಅವರು ತಮ್ಮ ಸಹಾಯಕ್ಕೆ ಬಂದವರಿಗೆ ಕೆಟ್ಟದ್ದನ್ನು ಮಾತ್ರ ಎಣಿಸುವುದಿಲ್ಲ. ಇದು ಕೃತಜ್ಞತೆಯ ಸ್ವರೂಪ.

ಸಹಾಯಕ್ಕೆ ಬಂದವನು ಯೋಗ್ಯನಾಗಿದ್ದರೆ ಅವನು ಕೃತಜ್ಞತೆಯನ್ನು ಯಾವ ರೀತಿಯಲ್ಲಿಯೂ ಅಪೇಕ್ಷಿಸುವುದಿಲ್ಲ. ತಾನು ಮಾಡಿದ್ದು ಕೇವಲ ಕರ್ತವ್ಯ ಎಂದು ತಿಳಿಯುತ್ತಾನೆ. ತಾನು ಮಾಡಬೇಕಾಗಿದ್ದ ಬಗೆ ಬಗೆಯ ಕೆಲಸಗಳಲ್ಲಿ ಇದೂ ಒಂದು ಎನ್ನುತ್ತಾನೆ. ಸಹಾಯ ಮಾಡಿದೆ ಎಂಬ ಮಾತನ್ನು ಅವನು ನೆನಪಿನಿಂದ ಅಳಿಸಿಹಾಕುತ್ತಾನೆ.

ಆದರೆ ಕೆಲವರಿರುತ್ತಾರೆ. ಅವರಿಗೆ ಕೃತಜ್ಞತೆಗೂ ದಾಸ್ಯಕ್ಕೂ ವ್ಯತ್ಯಾಸವಿಲ್ಲ. ಕೃತಜ್ಞತೆಯ ನೆಪದಲ್ಲಿ ದಾಸರನ್ನಿಟ್ಟುಕೊಳ್ಳಲು ಅವರು ಕೆಲಸಮಾಡುತ್ತಾರೆ; ನೀತಿಭ್ರಷ್ಟರಾಗುತ್ತಾರೆ. ನಿಯಮಗಳನ್ನು ಸಡಲಿಸುತ್ತಾರೆ. ಯಾರಿಗೆ ತಾವು ಸಹಾಯ ಮಾಡಿರುತ್ತಾರೆಯೋ ಅವರು ಜೀವಮಾನಪರ್ಯಂತ ತಮ್ಮ ದಾಸರಾಗಿರಬೇಕೆಂದು ಅಪೇಕ್ಷಿಸುತ್ತಾರೆ. ತಾವು ಹೇಳಿದಂತೆ ಕೇಳದಿದ್ದರೆ, ವರ್ತಿಸದಿದ್ದರೆ ಅದು ಕೃತಜ್ಞತೆಯಲ್ಲ ಎಂದು ಭಾವಿಸುತ್ತಾರೆ. ತಮ್ಮ ಅಭಿಪ್ರಾಯಕ್ಕೆ ಎದುರಾಡಿದರೆ ಅದು ಕೃತಘ್ನತೆ ಎಂದು ಘೋಷಿಸುತ್ತಾರೆ. ತಾವು ಮಾಡಿದ್ದಕ್ಕೆ ಅಸಲು ಬಡ್ಡಿಗಳಲ್ಲ, ಚಕ್ರಬಡ್ಡಿಯ ಸಮೇತ ಋಣ ತೀರಿಸಲು ಷರತ್ತು ಹಾಕುತ್ತಾರೆ.

ಕೃತಜ್ಞತೆ ವ್ಯಕ್ತಪಡಿಸುವವರೂ ಅನೇಕ ಸಲ ದಾಸರಂತೆಯೇ ವರ್ತಿಸುತ್ತಾರೆ. ತಮ್ಮತನವನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತಾರೆ. 'ಹೌದು, ಹೌದು' ಎನ್ನುವುದಷ್ಟೇ ಕೃತಜ್ಞತೆಯ ಪರಮಲಕ್ಷಣ ಎಂದು ಅವರು ತಿಳಿದುಕೊಂಡಿರುತ್ತಾರೆ. ಅವರಿಗೆ ಸ್ವಂತ ವ್ಯಕ್ತಿತ್ವವಿರುವುದಿಲ್ಲ; ಆಲೋಚನೆ ಮಾಡುವ ಶಕ್ತಿಯಿರುವುದಿಲ್ಲ; ಖಚಿತವಾದ ಅಭಿಪ್ರಾಯಗಳಿರುವುದಿಲ್ಲ. ಅವರ ಬದುಕೆಲ್ಲ ಬೇರೆಯವರ ನೆರಳಿನಲ್ಲಿ.

ನೈಜವಾದ ಕೃತಜ್ಞತೆ ಸೂಚಿಸಲು ಯಾರೂ ವ್ಯಕ್ತಿತ್ವವನ್ನು ಕಳೆದುಕೊಳ್ಳಬೇಕಾಗಿಲ್ಲ; ತಮ್ಮ ಅಭಿಪ್ರಾಯಗಳನ್ನು ಮಾರಬೇಕಾಗಿಲ್ಲ. ಕೃತಜ್ಞತೆ ಸಹಜ ಚಿಮ್ಮಿಕೆ. ತೋರ್ಕೆಗೂ ಅದಕ್ಕೂ ದೂರ. ಪರಿಶುದ್ಧವಾದ ಕೃತಜ್ಞತೆಯನ್ನು ಯಾರೂ ಬೇಡುವುದಿಲ್ಲ. ಪ್ರದರ್ಶನದ ಕೃತಜ್ಞತೆ ಪರಿಶುದ್ಧವಾದುದಲ್ಲ.

ದಾಸ್ಯರೂಪದ ಕೃತಜ್ಞತೆ ಕೃತಜ್ಞತೆಯಲ್ಲ. ಅದು ಒಂದು ಬಗೆಯ ಸಂಚು. ಅದನ್ನು ಅಪೇಕ್ಷಿಸುವವರೂ ನೀಡುವವರೂ ಸಭ್ಯರಲ್ಲ. ಅಂಥ ಕೃತಜ್ಞತೆಗೆ ಕಾರಣವಾದ ಸಂದರ್ಭ ಸನ್ನಿವೇಶಗಳಾದರೂ ಶಂಕೆಯಿಂದ ನೋಡಬೇಕಾದವು.

ಲೋಕದಲ್ಲಿ ತುಂಬ ವಿರಳವಾದುದೆಂದರೆ ಕೃತಜ್ಞತೆ, ನಿಜವಾದ ಕೃತಜ್ಞತೆ. ಈ ಕೃತಜ್ಞತೆ ಯಾವುದೋ ಒಂದು ಚಿಕ್ಕ ಪ್ರಸಂಗದಲ್ಲಿ ವ್ಯಕ್ತಗೊಳ್ಳಬಹುದು. ಒಂದೇ ಒಂದು ಮಾತಿನಲ್ಲಿ ಗೋಚರಿಸಬಹುದು; ನೋಟದ ರೀತಿಯಲ್ಲಿಯೋ, ನಗೆಯ ಅಂಚಿನಲ್ಲಿಯೋ ತೋರಿಸಿಕೊಳ್ಳಬಹುದು. ಅನೇಕ ಸಂದರ್ಭಗಳಲ್ಲಿ ಅದು ಪ್ರಕಟಗೊಳ್ಳದೆಯೆ ಹೋಗಬಹುದು.

ಕೃತಘ್ನರೇ ಬಹುವಾಗಿರುವ ಜಗತ್ತಿನಲ್ಲಿ, ಕೃತಜ್ಞತೆಯ ಸೋಗಿನಲ್ಲಿ ದಾಸರಾಗಿರುವವರೇ ಬಹುವಾಗಿರುವ ಸಮಾಜದಲ್ಲಿ, ಶುದ್ಧ ಕೃತಜ್ಞತೆಗೆ ಪಾತ್ರರಾಗಿರುವವರೇ ವಿರಳ; ಅಂಥ ಕೃತಜ್ಞತೆ ಸೂಚಿಸುವವರೂ ವಿರಳ. ಇರುವವರು ಮಾತ್ರ ನಿಜವಾಗಿಯೂ ಧನ್ಯರು; ಮಾನ್ಯರು.

ಆತ್ಮ ಒಂದೆ ಮಾನವದೇಹದಲ್ಲಿರುವ ಅದ್ರವ್ಯ ವಸ್ತು. ಅದು ಅದ್ರವ್ಯವಾಗಿರುವುದರಿಂದ ಕಾರ್ಯಕಾರಣಗಳ ನಿಯಮಗಳಿಗೆ ಅತೀತವಾಗಿರುವುದು; ಆದ ಕಾರಣ ಅಮೃತವಾಗಿರುವುದು. ಯಾವುದು ಅಮೃತವಾಗಿರುವುದೊ ಅದಕ್ಕೆ ಆದಿಯಿಲ್ಲ. ಏಕೆಂದರೆ ಆದಿ ಇರುವುದಕ್ಕೆಲ್ಲ ಒಂದು ಅಂತ್ಯವಿರಬೇಕು. ಇದರಿಂದ ಅದು ನಿರಾಕಾರವೆಂದು ಕೂಡಾ ಗೊತ್ತಾಗುತ್ತದೆ.

ಟಿ. ವಿ. ಸುಬ್ರಹ್ಮಣ್ಯ

ಮಹಾಭಾರತದ ಶ್ರೀಕೃಷ್ಣ

ಭೀಷ್ಮದ್ರೋಣತಟಾ ಜಯದ್ರಥಜಲಾ ಗಾಂಧಾರನೀಲೋತ್ಪಲಾ ।
ಶಲ್ಯಗ್ರಾಹವತೀ ಕೃಪೇಣ ವಹನೀ ಕರ್ಣೇನ ವೇಲಾಕುಲಾ ॥
ಅಶ್ವತ್ಥಾಮ ವಿಕರ್ಣ ಘೋರಮಕರಾ ದುರ್ಯೋಧನಾ ವರ್ತಿನೀ ।
ಸೋತ್ತೀರ್ಣಾ ಖಲು ಪಾಂಡವೈ ರಣನದೀ ಕೈವರ್ತಕಃ ಕೇಶವಃ ॥

(ಭಗವದ್ಗೀತಾ ಧ್ಯಾನಶ್ಲೋಕ)

ಜ್ಞಾನವೃದ್ಧನೂ, ಕುರುಕುಲ ವೃದ್ಧನೂ ಆದ ಭೀಷ್ಮನಿಂದ ಉನ್ನತ ವ್ಯಕ್ತಿ ಎಂದು ಪರಿಭಾವಿಸಲ್ಪಟ್ಟಿರುವ ಶ್ರೀಕೃಷ್ಣ ಮಾನವೀಯತೆಯಿಂದ ದೈವತ್ವಕ್ಕೇರಿದ ಮಹಿಮಾಪುರುಷ. ವೈಷ್ಣವ ಧರ್ಮದ ಪ್ರತೀಕವಾಗಿ ಕಂಡುಬರುವ ಶ್ರೀಕೃಷ್ಣ, ಮಹಾಭಾರತಕಾವ್ಯದಲ್ಲಿ ಧೀರ ಗಂಭೀರ ಸರಸಿಯೂ ಮಹಾ ತೇಜೋಶಾಲಿಯೂ ಆದ ಅತ್ಯುನ್ನತ ವ್ಯಕ್ತಿಯಾಗಿ, ಯೋಗಿಶ್ರೇಷ್ಠನಾಗಿ ಕಂಗೊಳಿಸುತ್ತಾನೆ. ಕರ್ಮಯೋಗಿಯಾದ ಶ್ರೀಕೃಷ್ಣನಿಂದ ವೈಷ್ಣವಧರ್ಮ ಬಲಗೊಂಡು ಬೆಳೆದಿರುವುದಾದರೂ ಅವನ ಕಾಲದಲ್ಲಿ ಅವನನ್ನು ಎಲ್ಲರೂ ಅವತಾರ ಪುರುಷ ಅಥವಾ ಭಗವಂತ ಎಂದು ಕರೆಯುತ್ತಿರಲಿಲ್ಲ. ಭಗವದ್ಗೀತೆಯಲ್ಲಿ ಬೋಧಿಸಿರುವ ಪ್ರತಿಯೊಂದನ್ನೂ ಅವರಂತೆ ಆಚರಿಸಿ ತೋರಿಸಿದ ಶ್ರೀಕೃಷ್ಣನ ಮಹತ್ವವನ್ನು ಮಹಾಭಾರತದಲ್ಲಿ ಬಹುಮಟ್ಟಿಗೆ ಅರಿತವನೆಂದರೆ ಅವನ ಪರಿಪಾಕಕ್ಕೂ ಔನ್ನತ್ಯಕ್ಕೂ ಸರಿತೂಗುವ ಗಂಗಾತನಯ, ಭೀಷ್ಮಾಚಾರ್ಯ. ಇವರಿಬ್ಬರಲ್ಲಿ ಕಂಡುಬರುವ ಆತ್ಮೀಯತೆ ಬೆಸುಗೆ ಮಹಾಭಾರತದ ಉಳಿದಾವ ಪಾತ್ರಗಳಲ್ಲಿಯೂ ಆಗಿಲ್ಲವೆಂದರೆ ಅತಿಶಯವಲ್ಲ. ಭೀಷ್ಮನು ಶರಶಯ್ಯಾಗತನಾದಾಗ ಅವನ ಮೇಲಣ ಚಿಂತೆ ಶ್ರೀಕೃಷ್ಣನಿಗೆ. ಕುರುಕುಲಪಿತಾಮಹನಾದ ಭೀಷ್ಮಾಚಾರ್ಯ ಶ್ರೀಕೃಷ್ಣನ ಅಪ್ಪಣೆಗಾಗಿ ತನ್ನ ಅಂತ್ಯಕಾಲದಲ್ಲಿ ಕಾಯುವುದು ಸಹಜ ಸೌಂದರ್ಯದೊಡನೆ ವ್ಯಾಸಭಾರತದಲ್ಲಿ ಕಾಣಿಸಿಕೊಳ್ಳುತ್ತದೆ. ಮಹಾಭಾರತದ ಉಳಿದೆಲ್ಲ ಪಾತ್ರಗಳು ಈ ಉನ್ನತ ವ್ಯಕ್ತಿಗಳ ನೇತೃತ್ವದಲ್ಲಿ ಪರಿಪಾಕಗೊಳ್ಳುವುದು ನಮಗೆ ಕಂಡುಬರುತ್ತದೆ.

ಮಹಾಭಾರತದಲ್ಲಿ ಚಿತ್ರಿತರಾದ ಪ್ರಧಾನ ಉದಾತ್ತ ವ್ಯಕ್ತಿಗಳೆಂದರೆ ಶ್ರೀಕೃಷ್ಣ, ಭೀಷ್ಮ ಮತ್ತು ಧರ್ಮರಾಜ. ಯುಧಿಷ್ಠಿರನ ದೃಷ್ಟಿಯಲ್ಲಿ ಶ್ರೀಕೃಷ್ಣ ಕುಲದ ಹಿರಿಯನಾಗಿ ಅಣ್ಣನಂತೆ ಕಂಡರೆ, ಭೀಷ್ಮಾಚಾರ್ಯನಿಗೆ ಇವನು ಸಾಕ್ಷಾತ್ ದೇವತೆಯೇ ಆಗುತ್ತಾನೆ. ಆದ್ದರಿಂದ ಭಾರತಕಾರನ ಮತದಲ್ಲಿ ಶ್ರೀಕೃಷ್ಣನೇ ಅತ್ಯಂತ ಉದಾತ್ತವ್ಯಕ್ತಿ. ಇಂತಹ ಪೂಜ್ಯವ್ಯಕ್ತಿಯ ವಿಚಾರದಲ್ಲಿ ಅದ್ಭುತವಾದ ಕತೆಗಳು ಹುಟ್ಟಿಕೊಂಡಿರುವುದರಲ್ಲಿ ಆಶ್ಚರ್ಯವಿಲ್ಲ.

'ದ್ರವ್ಯಮಯವಾದ ಯಜ್ಞಕ್ಕಿಂತ ಜ್ಞಾನಮಯವಾದ ಯಜ್ಞ' ಶ್ರೇಷ್ಠವೆಂದು ಭಾವಿಸುವ ಶ್ರೀಕೃಷ್ಣ ಅದರಂತೆ ಬಾಳಿ ಬದುಕಿದ ಮಹಾವ್ಯಕ್ತಿ. ತನ್ನ ಇತಿ ಮಿತಿಗಳನ್ನು ಚೆನ್ನಾಗಿ ಅರ್ಥಮಾಡಿಕೊಂಡ ಶ್ರೀಕೃಷ್ಣ ಎಂತಹ

ಸಂದರ್ಭದಲ್ಲಿಯೂ ವಿವೇಚನಾರಹಿತವಾದ ವೊಂದು ಧೈರ್ಯವನ್ನು ತೋರಿಸುವುದಿಲ್ಲ. ಮಗಧಾಧಿಪತಿಯಾದ ಜರಾಸಂಧನಿಗೆ ಹೆದರಿ ಊರುಬಿಡುವ ಕೃಷ್ಣ, ಸಮಯ ಕಾದು ಉಪಾಯದಿಂದ ಭೀಮನ ಮೂಲಕ ಅವನನ್ನು ಕೊಲ್ಲಿಸುವುದು ಅವನ ಚತುರತೆಗೆ ಸಾಕ್ಷಿಯಾಗಿದೆ. ತನ್ನ ಕರ್ತವ್ಯದಲ್ಲಿ ವಿಮುಖನಾಗದೆ, ನಿರುತ್ಸಾಹ ಹೊಂದದೆ ನಿರಂತರವಾಗಿ ತನ್ನ ಕರ್ಮದಲ್ಲಿ ನಿರತನಾಗುವ ಶ್ರೀಕೃಷ್ಣ, ಗುರುಹಿರಿಯರನ್ನು ಕಂಡಾಗ ಪೂಜ್ಯಭಾವನೆಯುಳ್ಳವನಾಗುತ್ತಾನೆ. ಮಹಾಭಾರತದಲ್ಲಿ ಕಂಡುಬರುವ ಪಾತ್ರಗಳ ಮನೋಭಾವನೆಗೆ ತಕ್ಕಂತೆ ಶ್ರೀಕೃಷ್ಣ ವರ್ತಿಸುತ್ತಾನೆ. ಧರ್ಮರಾಯಾದಿಗಳಲ್ಲಿ ಹೆಚ್ಚು ಸ್ಥಿರವೀರ್ಯನಾದ ಅರ್ಜುನನಲ್ಲಿ ಶ್ರೀಕೃಷ್ಣನಿಗೆ ಸಹಜವಾಗಿ ಸ್ನೇಹಭಾವವುಂಟಾಗುತ್ತದೆ. ಪರಮ ಸಾತ್ವಿಕನೂ ಧರ್ಮಪರನೂ ನೀತಿವಂತನೂ ಆದ ವಿದುರನಲ್ಲಿ ಶ್ರೀಕೃಷ್ಣನಿಗೆ ಸಹಜವಾಗಿ ವಿಶ್ವಾಸವುಂಟಾಗುತ್ತದೆ.

ಮಹಾಕವಿ ಪಂಪನ ಲೌಕಿಕಕಾವ್ಯವಾದ 'ವಿಕ್ರಮಾರ್ಜುನವಿಜಯ' ಎಂಬ ಕಾವ್ಯಕ್ಕೆ ಆಕರವಾದ ಗ್ರಂಥ ವ್ಯಾಸಮಹರ್ಷಿ ಪ್ರಣೀತನಾದ ಸಂಸ್ಕೃತ ಮಹಾಭಾರತ ಕಾವ್ಯ. ಧಾರ್ಮಿಕ ಹಿನ್ನೆಲೆಯಲ್ಲಿ ರಚಿತವಾದ ಮಹಾಭಾರತದ ಪಾತ್ರಗಳು ಮಾನವೀಯ ಮೌಲ್ಯಗಳೊಡನೆ ಉನ್ನತವಾಗಿ ಮಹಾಕವಿ ಪಂಪನ 'ಸಮಸ್ತಭಾರತ'ದಲ್ಲಿ ಬೆಳಗುತ್ತವೆ. ಸ್ಥೂಲವಾಗಿ ಪಂಪನ ಈ ಲೌಕಿಕಕಾವ್ಯದಲ್ಲಿ ಕಂಡುಬರುವ ಶ್ರೀಕೃಷ್ಣನ ಪಾತ್ರವನ್ನು ಹೀಗೆ ನಿರ್ದೇಶಿಸಬಹುದು.

ಕನ್ನಡ ಸಾಹಿತ್ಯದ 'ಸುವರ್ಣಯುಗ'ವಾದ ಹತ್ತನೆಯ ಶತಮಾನದ ವೇಳೆಗೆ ಶ್ರೀಕೃಷ್ಣ ತನ್ನ ವ್ಯಕ್ತಿವೈಶಿಷ್ಟ್ಯದಿಂದ ದೇವತ್ವವನ್ನು ಪಡೆದ ಅವತಾರ ಪುರುಷನಾಗಿ ಕಂಡುಬರುತ್ತಾನೆ. ಮಹಾಕವಿ ಪಂಪನ ಭಾರತದಲ್ಲಿ ಇದರ ಸ್ಪಷ್ಟ ಸೂಚನೆಯನ್ನು ನಾವು ಗುರ್ತಿಸಬಹುದು. ಪಂಪ ತನ್ನ ಈ ಲೌಕಿಕಕಾವ್ಯದಲ್ಲಿ ಮಹಾಭಾರತದ ಉನ್ನತ ವ್ಯಕ್ತಿಗಳ ಪರಿಚಯವನ್ನು ಹೀಗೆ ಸಾರಿರುವನು—

ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ ।
ಬಲದೊಳ್ ಮದ್ರೇಶನತ್ಯುನ್ನತಿಯೊಳಮರಸಿಂಧೂದ್ಭವಂ ಚಾಪವಿದ್ಯಾ ॥
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿ ।
ರ್ಮಲಚಿತ್ತಂ ಧರ್ಮಪುತ್ರಂ ಮಿಗಿಲಿವರ್ಗಳಿನೀ ಭಾರತಂ ಲೋಕಪೂಜ್ಯಂ ॥

(ವಿಕ್ರಮಾರ್ಜುನವಿಜಯ, ಆಶ್ವಾಸ ೧೪, ಪ. ೬೪)

ಮೇಲಿನ ಈ ಪದ್ಯದಲ್ಲಿ ಮಹಾಭಾರತದ ಎಲ್ಲ ರೀತಿಯ ಆಗು–ಹೋಗುಗಳಿಗೆ ಕಾರಣರಾದ 'ದ್ರೌಪದಿ' ಮತ್ತು 'ಶ್ರೀಕೃಷ್ಣ'ರ ಹೆಸರುಗಳು ಕಂಡುಬರುವುದಿಲ್ಲ. ಪಂಚಪಾಂಡವರ ಧರ್ಮಪತ್ನಿಯಾದ ದ್ರೌಪದಿ ಪಂಪನ ಈ ಕೃತಿಯಲ್ಲಿ ಅರ್ಜುನನೊಬ್ಬನನ್ನೇ ವರಿಸಿದರೂ ಅವಳು 'ಪಂಚವಲ್ಲಭೆ' ಎನ್ನುವುದನ್ನು ಅಲ್ಲಗಳೆಯಲು ಪಂಪನಿಗೆ ಸಾಧ್ಯವಾಗಲಿಲ್ಲವೆನ್ನುವುದು ಈ ಕೃತಿಯನ್ನುಓದಿದವರೆಲ್ಲರಿಗೂ ಮನವರಿಕೆಯಾಗುತ್ತದೆ.ಆಗಿನ ಕಾಲದ ಸಾಮಾಜಿಕ ಮತ್ತು ಧಾರ್ಮಿಕ ಮನೋಭಾವನೆಗಳಿಗೆ ವಿರುದ್ಧವಾಗಿ ಉನ್ನತ ಸ್ಥಾನವನ್ನು ದ್ರೌಪದಿಗೆ ಪಂಪ ಕೊಡದಿರುವುದು ಸಹಜವಾಗಿ ಕಾಣುತ್ತದೆ. ಪಂಪಕವಿಯ ಪೋಷಕನಾದ ಅರಿಕೇಸರಿಯ ಸ್ಥಾನ-ಮಾನಗಳ ದೃಷ್ಟಿಯಿಂದಲೂ ಇದು ಮುಖ್ಯವಾಗಿರುವುದರಿಂದ ಪಂಪ ದ್ರೌಪದಿಯನ್ನು ಇಲ್ಲಿ ಹೆಸರಿಸಿಲ್ಲ. ಈ ಕಾರಣದಿಂದಲೇ ಕೌರವನ ಅವಸಾನದ ನಂತರ ಅರ್ಜುನನೊಡನೆ ಪಟ್ಟವೇರಲು ದ್ರೌಪದಿ ಅನರ್ಹಳಾಗಿ, ಸುಭದ್ರೆ ಆ ಸ್ಥಾನವನ್ನು ಅಲಂಕರಿಸುತ್ತಾಳೆ. ಆದರೆ ಮಹಾಭಾರತದ ಆಗು ಹೋಗುಗಳಲ್ಲಿ ಪ್ರಧಾನಪಾತ್ರಧಾರಿಯಾದ ಶ್ರೀಕೃಷ್ಣನ ವಿಚಾರವನ್ನು ಇಷ್ಟು ಸುಲಭವಾಗಿ ಜಾರಿಸಿಕೊಳ್ಳುವುದು ಯುಕ್ತವಾಗಿ ತೋರುವುದಿಲ್ಲ.

ಜೈನಪುರಾಣದಲ್ಲಿ ಕೃಷ್ಣನಿಗೆ ವಿಶಿಷ್ಟವಾದ ಸ್ಥಾನವಿಲ್ಲ. ಮಹಾಕವಿ ಪಂಪ ಜೈನಮತಾವಲಂಬಿಯಾದುದರಿಂದ ಶ್ರೀಕೃಷ್ಣನಿಗೆ ಕೊಡಬೇಕಾದ ಉನ್ನತ ಸ್ಥಾನವನ್ನು ಕೊಟ್ಟಿಲ್ಲವೆನ್ನುವ ಅಭಿಪ್ರಾಯವೊಂದು ಇದೆ. ಆದರೆ

ಈ ವಾದ ಹಲವು ಕಾರಣಗಳಿಂದ ಸಾಧುವಾಗಿ ತೋರುವುದಿಲ್ಲ. ಹತ್ತನೆಯ ಶತಮಾನದ ಧಾರ್ಮಿಕ ಮನೋಭಾವನೆ ಗೊಂದಲಮಯವಾಗಿ ನಮಗೆ ಕಾಣುವುದಿಲ್ಲ. 'ಅಹಿಂಸಾವ್ರತ'ದ ಮೂಲಕ ಜೈನಧರ್ಮ ತನ್ನ ಉನ್ನತಿಯನ್ನು ಗಳಿಸಿಕೊಂಡು ಈ ಕಾಲದಲ್ಲಿ ಶೋಭಿಸಿದರೂ ವೈದಿಕಧರ್ಮದ ಬಗ್ಗೆ ಕ್ಷುಲ್ಲಕವಾದ ಮನೋಭಾವವನ್ನು ಹೊಂದಿಲ್ಲ ಎನ್ನುವುದು ಸ್ಪಷ್ಟ. ಮಹಾಕವಿ ಪಂಪ ತನ್ನ ಪೂರ್ವಜರ ಬಗ್ಗೆ ಪ್ರಸ್ತಾಪಿಸುವಾಗ ಅವರು ಯಜ್ಞ-ಯಾಗಾದಿಗಳಲ್ಲಿ ಕೊಡುತ್ತಿದ್ದ ಪಶುಬಲಿಯನ್ನು ಖಂಡಿಸಿದ್ದಾನೆಯೇ ಹೊರತು ಉಳಿದ ಯಾವುದನ್ನೂ ಅಲ್ಲ. ಪಂಪ ತನ್ನ ಈ ಲೌಕಿಕ ಕೃತಿಯನ್ನು ಅರ್ಪಿಸುವುದು ವೈದಿಕ ಮತಾವಲಂಬಿಯಾದ ಅರಿಕೇಸರಿಗೆ. ಇದರೊಂದಿಗೆ ಪಂಪನ ಈ ಲೌಕಿಕ ಗ್ರಂಥದ ಪುಟಗಳನ್ನು ತಿರುವಿಹಾಕಿದಾಗ ಕೃಷ್ಣನ ವಿಚಾರದಲ್ಲಿ ಅಗೌರವವನ್ನು ವ್ಯಕ್ತಪಡಿಸುವ ಪ್ರಸಂಗಗಳಾವುವೂ ಕಂಡುಬರುವುದಿಲ್ಲ. ಹಾಗಾದರೆ ಶ್ರೀಕೃಷ್ಣನ ವಿಚಾರದಲ್ಲಿ ಪಂಪ ತಟಸ್ಥನಾಗಿ ಹೆಸರಿಸದಿರುವುದೇಕೆ? ಎಂಬ ಪ್ರಶ್ನೆ ನಮ್ಮಲ್ಲಿ ಸಹಜವಾಗಿ ಕಾಣಿಸಿಕೊಳ್ಳುತ್ತದೆ. ಇದನ್ನು ನಾವು ಹೀಗೆ ಉತ್ತರಿಸಬಹುದು.

ಮಹಾಕವಿ ಪಂಪ 'ವಿಕ್ರಮಾರ್ಜುನ ವಿಜಯಂ' ಎಂಬ ಕೃತಿಯಲ್ಲಿ 'ಲೌಕಿಕವನ್ನು ಬೆಳಗಿದ್ದೇನೆ' ಎಂದು ಹೇಳಿಕೊಂಡಿದ್ದಾನೆ. ಲೌಕಿಕವಾಗಿ ಬೆಳಗುವ ಪಾತ್ರಗಳ ಪರಿಚಯವನ್ನು ತನ್ನ ಭಾರತದ ಕಡೆಯಲ್ಲಿ ಕೊಟ್ಟಿದ್ದಾನೆ. ಅತ್ಯುನ್ನತಿಯನ್ನು ಪಡೆದ ಭೀಷ್ಮಾಚಾರ್ಯರ ವ್ಯಕ್ತಿತ್ವವನ್ನೂ ಮೀರಿ ನಿಲ್ಲುವ ಕೃಷ್ಣನಿಗೆ ಲೌಕಿಕವಾದ ಯಾವ ವ್ಯಕ್ತಿ ವೈಶಿಷ್ಟ್ಯವನ್ನು ಕೊಡಲು ಪಂಪನಿಗೆ ಸಾಧ್ಯವಾಗಲಿಲ್ಲ. ಗುಣಾತೀತನಾದ ಶ್ರೀಕೃಷ್ಣನನ್ನು ಗುಣಬದ್ಧನನ್ನಾಗಿ ಮಾಡಲು ಪಂಪ ಇಷ್ಟಪಡಲಿಲ್ಲ ಎನ್ನುವುದು ಹೆಚ್ಚು ಸಮಂಜಸ. ವ್ಯಾಸಪ್ರಣೀತವಾದ ಮೂಲ ಸಂಸ್ಕೃತ ಭಾರತದಲ್ಲಿ ಕಂಡುಬರುವ ಕೃಷ್ಣನ ಪಾತ್ರದ ಪ್ರಾಧಾನ್ಯ ಇಲ್ಲಿಯೂ ಅಷ್ಟೇ ಸಮಂಜಸವಾಗಿ ಕಂಡು ತನ್ನಿಂದ ತಾನೇ ವಿಜೃಂಭಿಸುತ್ತದೆ. ಮಹಾಭಾರತದ ಎಲ್ಲ ಪಾತ್ರಗಳೂ ಕೃಷ್ಣನ ನೇತೃತ್ವದಲ್ಲಿ ಪರಿಪೂರ್ಣವಾಗಲು ಯತ್ನಿಸುವಂತೆ ಪಂಪನ ಈ ಕೃತಿಯಲ್ಲೂ ಪ್ರಯತ್ನಿಸುತ್ತವೆ. ಇದಕ್ಕೆ ಸಂಬಂಧಪಟ್ಟಂತೆ ಒಂದೆರಡು ಸನ್ನಿವೇಶಗಳನ್ನು ಗಮನಿಸಿದೆ.

ಧರ್ಮರಾಯ ರಾಜಸೂಯಯಾಗವನ್ನು ಮಾಡುತ್ತಾನೆ. ಈ ಯಾಗದ ಕೊನೆಯ ಅಂಗವಾಗಿ ಅರ್ಘ್ಯ ಪೂಜೆಯನ್ನು ಮಾಡಬೇಕಾಗುತ್ತದೆ. ಧರ್ಮರಾಯ ಕುರುಕುಲವೃದ್ಧನಾದ ಭೀಷ್ಮನನ್ನು ನೆರೆದ ಈ ಸಭೆಯಲ್ಲಿ ಅರ್ಘ್ಯಪೂಜೆಗೆ ಅರ್ಹರಾರೆಂದು ಕೇಳಿದಾಗ ಭೀಷ್ಮ

ಬಲಿಯಂ ಕಟ್ಟಿದನಾವನೀ ಧರಣಿಯಂ ವಿಕ್ರಾಂತದಿಂದಂ ರಸಾ ।
ತಲದಿಂದೆತ್ತಿದನಾವನಂದು ನರಸಿಂಹಾಕಾರದಿಂ ದೈತ್ಯನಂ॥
ಚಲದಿಂ ಸೀಳ್ದವನಾವನಬ್ಧಿಮಥನಪ್ರಾರಂಭದೊಳ್ ಮಂದರಾ ।
ಚಲಮಂ ತಂದವನಾವನಾತನೆ ವಲಂ ತಕ್ಕಂ ಪೆಱರ್ ತಕ್ಕರೇ ॥

(ಆಶ್ವಾಸ 6, ಪದ್ಯ 41).

ಎಂದು ನುಡಿದಾಗ ಧರ್ಮರಾಯ 'ಪುರುಷೋತ್ತಮ'ನಿಗೆ ಅರ್ಘ್ಯವೆತ್ತಲು ಸಿದ್ಧನಾಗುತ್ತಾನೆ. ಮಹಾಭಾರತ ಯುದ್ಧಕ್ಕೆ ಮೊದಲು ಕೃಷ್ಣನ ಸಹಾಯವನ್ನು ಯಾಚಿಸಿ ಅರ್ಜುನ ಮತ್ತು ದುರ್ಯೋಧನರು ದ್ವಾರಕೆಗೆ ಬರುತ್ತಾರೆ. ಶ್ರೀಕೃಷ್ಣ ತನ್ನ ಸಮಸ್ತ ಯಾದವಬಲವನ್ನು ದುರ್ಯೋಧನನಿಗೆ ಕೊಟ್ಟು, ಪಾಂಡವ ಪಕ್ಷಕ್ಕೆ ಸಹಾಯಕನಾಗಿ ನಿಲ್ಲುತ್ತಾನೆ. ಪಾಂಡವರು ಶ್ರೀಕೃಷ್ಣನನ್ನು ಆಶಿಸಿದುದು ಪಂಚೇಂದ್ರಿಯಗಳು ಮನಸ್ಸನ್ನು ಆಶ್ರಯಿಸಿದಂತೆ ಆಯಿತೆಂದು ಪಂಪ ಬಹು ಸೊಗಸಾಗಿ ಹೇಳಿದ್ದಾನೆ.

ಪ್ರಿಯ ವಿಷಯ ಕಾಂಕ್ಷೆಯಿಂದಿಂ। ದ್ರಿಯಂಗಳೆಂತೆಯ್ದೆ ಮನಮನಾಶ್ರಯಿಸುಗುಮಂ॥
ತಯನಯ ಪರರಯ್ದುರುಮಾ। ಶ್ರಯಿಸಿರ್ದರ್ ವಿಷಯಕಾಂಕ್ಷೆಯಿಂ ಮುರರಿಪುವಂ॥

(ಆಶ್ವಾಸ 9, ಪದ್ಯ 13).

ಶ್ರೀಕೃಷ್ಣನ ವ್ಯಕ್ತಿತ್ವ ಎಷ್ಟು ಉನ್ನತವಾಗಿದೆ ಎನ್ನುವುದಕ್ಕೆ ಈ ಪದ್ಯ ಸಾಕ್ಷಿಯಾಗಿದೆ. ಕೌರವನು ಶ್ರೀಕೃಷ್ಣ ಸಭೆಗೆ ಬರುತ್ತಿರುವ ವಿಚಾರ ದ್ವಾರಪಾಲಕನಿಂದ ತಿಳಿದಾಗ ಭೀಷ್ಮನಿಗೆ

ಲೋಕಗುರು ಶಂಖಚಕ್ರ ಗ। ದಾ ಕರನತಿಶಯ ಚತುರ್ಭುಜಂ ಜನಜನಿತ ॥
ವ್ಯಾಕುಳದೆ ಬಂದೆನೆಂದೊಡೆ । ಲೋಕದೊಳಿನ್ನೆನ್ನ ದೊರೆಗೆ ಪಿರಿಯರುಮೊಳರೇ ॥

(ಆಶ್ವಾಸ 9, ಪದ್ಯ 30)

ಎಂದು ಹೇಳಿ, ಕೃಷ್ಣನು ಸಭೆಗೆ ಬಂದಾಗ ಮೆಯ್ಯಲಸಿಕೆಯಾದಂತೆ ಸಿಂಹಪೀಠದಿಂದೆದ್ದರೂ, ಆವನಿಗೆ ಅರ್ಘ್ಯವನ್ನೆತ್ತಿ ಉಚಿತಾಸನದಲ್ಲಿ ಕುಳ್ಳಿರಿಸಿ ಅನಂತರ ತಾನು ಕುಳಿತುಕೊಳ್ಳುತ್ತಾನೆ. ಪಾಂಡವರಿಗಾಗಿ ಸಂಧಿಗೆ ಕೃಷ್ಣ ಬಂದಿರುವುದೆಂದು ದುರ್ಯೋಧನನಿಗೆ ತಿಳಿದಿದ್ದರೂ ಅವನಿಗರಿವಿಲ್ಲದೆ ಕೃಷ್ಣನ ವ್ಯಕ್ತಿತ್ವಕ್ಕೆ ಮನ್ನಣೆ ಕೊಡುವುದು ಮಾತ್ರವಲ್ಲ ; ಅಂತಹ ಉನ್ನತ ವ್ಯಕ್ತಿ ತನ್ನಲ್ಲಿಗೆ ಬಂದುದು ತನ್ನ ಹಿರಿತನಕ್ಕೆ ಸಾಕ್ಷಿ ಎಂದು ಭಾವಿಸುತ್ತಾನೆ. ಸಂಧಿ ಮುರಿದು ಬಿದ್ದಾಗ, ದುರ್ಯೋಧನ ತನ್ನ ಮನದಲ್ಲಿ ಸಂತೋಷಿಸಿ, ಪಾಂಡವರನ್ನು ವಶಪಡಿಸಿಕೊಳ್ಳಲು ಕೃಷ್ಣನನ್ನು ಕಟ್ಟಿಹಾಕಲು ಯತ್ನಿಸಿದಾಗ ಕವಿ ಅವನ ಪ್ರಯತ್ನ 'ಸಂಜೆಯ ಮೇಲೆ ಸೊಣ' ಹಾಯುವಂತಾಯಿತೆಂದು ಉದ್ಗರಿಸುತ್ತಾನೆ. ಈ ಸಂದರ್ಭದಲ್ಲಿ ಶ್ರೀಕೃಷ್ಣನ ವಿಶ್ವರೂಪದರ್ಶನವನ್ನು ಕವಿ ನಮಗೆ ಸೂಕ್ಷ್ಮವಾಗಿ ಮಾಡಿಸುತ್ತಾನೆ. ಭೀಷ್ಮಾಚಾರ್ಯ ತನ್ನ ಪಟ್ಟಾಭಿಷೇಕದ ಸಮಯದಲ್ಲಿ ನರನಾರಾಯಣರ ಪರಿಚಯವನ್ನು ದುರ್ಯೋಧನನಿಗೆ ಹೇಳುತ್ತಾ "ಒರ್ವಂ ಮೊಮ್ಮಂ ಪರಮಗುರುವೊರ್ವಂ" ಎನ್ನುವಾಗ ಭೀಷ್ಮರ ಕೃಷ್ಣಭಕ್ತಿಯ ಪರಿಚಯ ನಮಗಾಗುತ್ತದೆ. ಭೀಷ್ಮರು ಸೇನಾಧಿಪತಿ ಪಟ್ಟವನ್ನು ನಿರ್ವಹಿಸುವ ಸಮಯದಲ್ಲಿ ಪ್ರತಿಜ್ಞೆಯನ್ನು ಮಾಡುವಾಗ 'ಪಿಡಿಯೆಂ ಚಕ್ರಮನೆಂಬ ಚಕ್ರಿಯಂ ಇಳಾಚಕ್ರಂ ಭಯಂಗೊಳ್ವಂತೆ ಪಿಡಿಯಿಪ್ಪೆಂ' ಎನ್ನುತ್ತಾರೆ. ಯಾರ ಪ್ರತಿಜ್ಞೆಯನ್ನಾದರೂ ಮುರಿಯಬಹುದು ; ಕೃಷ್ಣನ ಪ್ರತಿಜ್ಞೆಯನ್ನು ಮುರಿಯುವುದು ಸಾಧ್ಯವಿಲ್ಲ ಎಂಬ ಅಂಶ ನಮಗೆ ಇಲ್ಲಿ ಸ್ಪಷ್ಟವಾಗುತ್ತದೆ. ಇಂತಹ ಶ್ರೀಕೃಷ್ಣನ ಪ್ರತಿಜ್ಞೆಯನ್ನು ಮುರಿದು ಅವನ ಕೈಯಲ್ಲಿ ಚಕ್ರವನ್ನು ಹಿಡಿಸುವುದು ಭೀಷ್ಮಾಚಾರ್ಯನೊಬ್ಬನಿಗೆ ಮಾತ್ರ ಸಾಧ್ಯ ಎಂಬ ಅಂಶ ನಮಗೆ ಇಲ್ಲಿ ಗೋಚರವಾಗುತ್ತದೆ. ಕೌರವರ ಸೈನ್ಯದಲ್ಲಿದ್ದ ತನ್ನ ಬಂಧು ಬಾಂಧವರನ್ನು ನೋಡಿ ಅರ್ಜುನ ಮೋಹದಿಂದ ಕರ್ತವ್ಯ ಪರಾಙ್ಮುಖನಾಗುವ ಸಂದರ್ಭದಲ್ಲಿ ಅದನ್ನು ಶ್ರೀಕೃಷ್ಣ ಗಮನಿಸಿ, ಅವನಿಗೆ ತನ್ನ ದಿವ್ಯ ಸ್ವರೂಪದರ್ಶನ ಮಾಡಿಸಿ, ಕರ್ತವ್ಯದತ್ತ ತಿರುಗುವಂತೆ ಮಾಡುತ್ತಾನೆ. ಭೀಷ್ಮನಿದ್ದರೂ ಕೃಷ್ಣಾರ್ಜುನರಿಂದ ಅವರ ಕಣ್ಣೆದುರಿಗೇ ಕೌರವ ಬಲ ನಾಶವಾಯಿತೆಂದು ದುರ್ಯೋಧನ ಅವರಿಗೆ ಹೇಳಿದಾಗ ಭೀಷ್ಮ ಅವನಿಗೆ 'ತ್ರಿಜಗಕ್ಕಂ ಗುರು ದೇವನಾದಿಪುರುಷಂ ಕೇಳೊರ್ವಂ' ಎಂದು ಹೇಳುವಾಗ ಶ್ರೀಕೃಷ್ಣನ ವ್ಯಕ್ತಿತ್ವ ಎಷ್ಟು ಮಹತ್ತರವಾದುದೆಂಬ ಅರಿವು ನಮಗಾಗುತ್ತದೆ.

ಮಹಾಕವಿ ಪಂಪನ ಕೃತಿಯಲ್ಲಿ ಕಂಡುಬರುವ ಈ ಎಲ್ಲ ಸನ್ನಿವೇಶಗಳನ್ನು ಗಮನಿಸಿದಾಗ ಶ್ರೀಕೃಷ್ಣನನ್ನು ಪಂಪ ಪ್ರತ್ಯೇಕವಾಗಿ ಹೆಸರಿಸದಿರುವುದಕ್ಕೆ ಕಾರಣ ಅವನು ಜೈನ ಪುರಾಣದಲ್ಲಿ ಉನ್ನತ ಸ್ಥಾನ ಪಡೆವಿಲ್ಲವೆನ್ನುವುದಕ್ಕಿಂತಲೂ ಅಲೌಕಿಕ ವ್ಯಕ್ತಿಯಾಗಿದ್ದಾನೆ ಎನ್ನುವುದು ಹೆಚ್ಚು ಸಮಂಜಸ. ಮೂಲ ಸಂಸ್ಕೃತಭಾರತದ ಶ್ರೀಕೃಷ್ಣನಂತೆ ಮಹಾಕವಿ ಪಂಪನ ಶ್ರೀಕೃಷ್ಣನೂ ಧೀರ ಗಂಭೀರ ಸರಸಿಯಾದ ಮಹಾವ್ಯಕ್ತಿಯಾಗಿದ್ದಾನೆ ಎನ್ನಬಹುದು.

'ರೂಪಕ ಸಾಮ್ರಾಜ್ಯ ಚಕ್ರವರ್ತಿ', 'ಕನ್ನಡ ಸಾಹಿತ್ಯದ ಧ್ರುವತಾರೆ', 'ಗದುಗಿನ ವೀರನಾರಾಯಣನ ಪ್ರೇಮಕಿಂಕರ', 'ವಿಶಿಷ್ಟ ಶಕ್ತಿಯ ಸ್ವತಂತ್ರಕವಿ'–ಮೊದಲಾಗಿ ಬಿರುದಾಂಕಿತನಾದ ಕುಮಾರ ವ್ಯಾಸ 'ವೀರ ನಾರಾಯಣ ಕೃಪಾಚಾಲಿತ'ನಾಗಿ ತನ್ನ 'ಭಾರತ ಕಥಾ ಮಂಜರಿ'ಯ ಕತೆಯನ್ನು ಭಗವದ್ವಿಲಾಸದ ಭೂಮಿಕೆಯಾಗಿ ಮಾಡಿದುದರಲ್ಲಿ ಆಶ್ಚರ್ಯವಿಲ್ಲ. ಕನ್ನಡ ಸಾಹಿತ್ಯದ ಸುವರ್ಣಯುಗದ ಭೂಮಿಕೆಯಲ್ಲಿ ಮೆರೆದ ಪ್ರಥಮ ರತ್ನವಾದ ಮಹಾಕವಿ ಪಂಪ, ಮಹಾಭಾರತದ ಪಾತ್ರಗಳನ್ನೂ ಲೌಕಿಕವಾಗಿ ಮೆರೆದರೆ, ಕನ್ನಡ ಸಾಹಿತ್ಯಾಕಾಶ

ದಲ್ಲಿ ಚಿರಂತನವಾಗಿ ಮಿನುಗುವ ದಿವ್ಯರತ್ನ ಕುಮಾರವ್ಯಾಸ ಅಲೌಕಿಕವಾಗಿ ಮಹಾಭಾರತದ ಪಾತ್ರಗಳನ್ನು ಬೆಳಗಿದ್ದಾನೆ. ಮಹಿಮಾನ್ವಿತನಾಗಿ ಕಂಡುಬರುವ ಶ್ರೀಕೃಷ್ಣನ ಪಾತ್ರ ಕುಮಾರವ್ಯಾಸನ ಕೃತಿಯಲ್ಲಿ ಹೇಗೆ ಬೆಳಗಿದೆ ಎನ್ನುವುದನ್ನು ಸ್ಥೂಲವಾಗಿ ಹೀಗೆ ಹೇಳಬಹುದು—

ಭಾಗವತೋತ್ತಮನಾದ ಮಹಾಕವಿ ಕುಮಾರವ್ಯಾಸನ ದೃಷ್ಟಿಯಲ್ಲಿ ಶ್ರೀಕೃಷ್ಣ, 'ಅಲೌಕಿಕ ವ್ಯಕ್ತಿ', 'ದೇವ ದೇವ', ಹಾಗೂ 'ಕೈತವದ ಶಿಕ್ಷಾಗುರು'. 'ಒಲಿದವರನುಜ್ಜೀವಿಸುವ ಬಗೆ ಬಲುಹು' ಶ್ರೀಕೃಷ್ಣನದು. ಇವನು ಮುನಿದರೆ 'ತಲೆಯ ಬರಹವ ತೊಡೆವನಲ್ಲದೆ ಬಳಿಕ ಸೈರಿಸನು'. ಕುಮಾರವ್ಯಾಸನ 'ಭಾರತ ಕಥಾ ಮಂಜರಿ'ಯಲ್ಲಿ ಕಥಾನಾಯಕನಾಗಿ ಗೋಚರಿಸುವ ಶ್ರೀಕೃಷ್ಣ ಅತಿಮಾನವವ್ಯಕ್ತಿಯಾದರೂ, ಮಾನವ ಕಟ್ಟಳೆಯನ್ನು ಮೀರಿ ನಡೆಯುವುದಿಲ್ಲ. ತಂದೆ–ತಾಯಿಯರಲ್ಲಿ, ಗುರು–ಹಿರಿಯರಲ್ಲಿ ಶ್ರೀಕೃಷ್ಣನಿಗೆ ಕಂಡು ಬರುವ ಗೌರವ ಭಾವನೆ ಇಲ್ಲಿ ಸೈಜತೆಯೊಡನೆ ಕಾಣಿಸಿಕೊಳ್ಳುತ್ತದೆ. ಮಹಾಮಹಿಮನಾದ ಶ್ರೀಕೃಷ್ಣ ಇಲ್ಲಿ ಸರ್ವಶಕ್ತನಾಗಿ ಕಂಡುಬಂದರೂ ಆಯಾಪಾತ್ರಗಳು ಆಯಾ ಶಕ್ತಿವೈಶಿಷ್ಟ್ಯದ ಮೂಲಕ ಸಾರ್ಥಕಗೊಳ್ಳುವಂತೆ ನೋಡಿಕೊಳ್ಳುತ್ತಾನೆ. ಕುಮಾರವ್ಯಾಸ ಭಾರತದ ಪ್ರತಿಯೊಂದು ಪಾತ್ರವೂ ಒಂದಲ್ಲ ಒಂದು ರೀತಿಯಲ್ಲಿ ಶ್ರೀಕೃಷ್ಣನನ್ನು ಆಶ್ರಯಿಸಿ ಪರಿಪೂರ್ಣತೆಯನ್ನು ಹೊಂದಲು ಪ್ರಯತ್ನಿಸುತ್ತದೆ.

ಪಾಂಡವರಿಗೆ ಶ್ರೀಕೃಷ್ಣನ ಮೈತ್ರಿ ಪ್ರತ್ಯಕ್ಷವಾಗಿ ದೊರೆಯುವುದು 'ದ್ರೌಪದೀ ಸ್ವಯಂವರ' ಪ್ರಸಂಗ ದಲ್ಲಿ. ಧರ್ಮದಲ್ಲಿ ಆಸಕ್ತರಾದ ಪಾಂಡವರಿಗೆ ಶ್ರೀಕೃಷ್ಣನ ಕೃಪೆ ನಿರಂತರವಾಗಿ ಇಲ್ಲಿಂದ ಮುಂದೆ ಒದಗು ತ್ತದೆ. ಅತಿ ಸಂಕಷ್ಟ ಸಮಯದಲ್ಲಿ ಶ್ರೀಕೃಷ್ಣನ ದರ್ಶನ ಪಾಂಡವರಿಗೆ ಒದಗಿ ನೆಮ್ಮದಿಯನ್ನುಂಟುಮಾಡು ತ್ತದೆ. ಕುಮಾರವ್ಯಾಸಭಾರತದಲ್ಲಿ ಇದಕ್ಕೆ ನಿದರ್ಶನವಾಗಿ ದೊರೆಯುವ ಪ್ರಸಂಗಗಳು ಹಲವು. ಪಾಂಡವರ ಪಟ್ಟಮಹಿಷಿಯಾದ ದ್ರೌಪದಿಯ 'ವಸ್ತ್ರಾಪಹರಣಪ್ರಸಂಗ'ದಲ್ಲಿ ದ್ರೌಪದಿ ಶ್ರೀಕೃಷ್ಣನನ್ನು ಮನಃಪೂರ್ವಕ ವಾಗಿ ತನ್ನನ್ನು ರಕ್ಷಿಸುವಂತೆ ಪ್ರಾರ್ಥಿಸಿದಾಗ ಆಕೆಗೆ ಅಕ್ಷಯವಸ್ತ್ರವನ್ನು ಕರುಣಿಸಿ ಕಾಪಾಡುತ್ತಾನೆ. ದುರ್ಯೋಧನನ ಕುತಂತ್ರದಲ್ಲಿ ಸಿಕ್ಕಿಕೊಂಡ ದುರ್ವಾಸ ಮಹರ್ಷಿ ದ್ರೌಪದಿಯ ಊಟವಾದನಂತರ ಧರ್ಮರಾಯ ನಲ್ಲಿಗೆ ಬಂದು ತನಗೂ, ತನ್ನ ಸಾವಿರ ಶಿಷ್ಯರಿಗೂ ಆತಿಥ್ಯ ನೀಡಬೇಕೆಂದು ಅಪ್ಪಣೆ ಮಾಡಿದಾಗ, ಕೃಷ್ಣನ ಕೃಪೆ ಅವರನ್ನು ದುರ್ವಾಸ ಮುನಿಯ ಶಾಪದಿಂದ ವಿಮುಕ್ತಗೊಳಿಸುತ್ತದೆ. ಅಭಿಮನ್ಯುವಿನ ಮರಣದಿಂದ ತಪ್ತ ನಾದ ಅರ್ಜುನ ಮಾರನೆಯ ದಿನ ಸೈಂಧವನನ್ನು ಕೊಲ್ಲುವೆನೆಂದು ಪ್ರತಿಜ್ಞೆ ಮಾಡಿದಾಗ, ಅದನ್ನು ನೆರವೇರಿ ಸಲು ಕೃಷ್ಣ ಸಹಾಯ ಮಾಡುತ್ತಾನೆ. ಕರ್ಣನು ಭಾರತ ಯುದ್ಧದಲ್ಲಿ ದಿವ್ಯವಾದ ಸರ್ಪಾಸ್ತ್ರವನ್ನು ಪ್ರಯೋಗಿಸಿ ಅರ್ಜುನನನ್ನು ಕೊಲ್ಲಲು ಪ್ರಯತ್ನಿಸಿದಾಗ, ಶ್ರೀಕೃಷ್ಣ ರಥವು ನೆಲದಲ್ಲಿ ಕುಸಿಯುವಂತೆ ಮಾಡಿ ಅವನನ್ನು ರಕ್ಷಿಸುತ್ತಾನೆ. ಹೀಗೆ ಶ್ರೀಕೃಷ್ಣ ಹಲವು ಸಲ ಪಾಂಡವರನ್ನು ರಕ್ಷಿಸಿ 'ಮಮ ಪ್ರಾಣಾ ಹಿ ಪಾಂಡವಾಃ' ಎಂಬ ಮಾತನ್ನು ಸಾರ್ಥಕಗೊಳಿಸಿಕೊಳ್ಳುತ್ತಾನೆ.

ಮಹಾಭಾರತ ಕತೆಯ ಸೂತ್ರಧಾರನಾದ ಶ್ರೀಕೃಷ್ಣ ಕೇವಲ ಪಾಂಡವಪಕ್ಷಪಾತಿಯಲ್ಲ. ಇವನು ಗುಣಪಕ್ಷಪಾತಿ. ದುಷ್ಟಚತುಷ್ಟಯರಲ್ಲಿ ಪ್ರಮುಖನಾಗಿ ಕಂಡುಬರುವ ದುರ್ಯೋಧನ ಶ್ರೀಕೃಷ್ಣನನ್ನು ಇಲ್ಲಿ ಕೆಣಕುವುದು ಮೋಕ್ಷವು ತನಗೆ ಬೇಗ ಸನ್ನಿಹಿತವಾಗಲಿ ಎಂಬ ಕಾರಣದಿಂದ. ಉದ್ಯೋಗ ಪರ್ವದ ಒಂಭತ್ತನೆಯ ಸಂಧಿಯಲ್ಲಿ ಕಂಡುಬರುವ ಎಪ್ಪತ್ತೈದನೆಯ ಪದ್ಯ ಈ ಭಾವವನ್ನು ನಮಗೆ ಸ್ಫುಟಗೊಳಿಸು ತ್ತದೆ—

ಮಣಿದು ಬದುಕುವನಲ್ಲ ಹಗೆಯಲಿ
ಸೆಣಸಿ ಬಿಡುವವನಲ್ಲ ದಿಟ ಧಾ
ರುಣಿಯಸಿರಿಗಳುಪುವವನಲ್ಲಳುಕಿಲ್ಲ ಕಾಯದಲಿ ।

ರಣಮಹೋತ್ಸವವೆನ್ನು ಮತ ಕೈ
ದಣಿಯೆ ಹೊಯ್ದಾಡುವೆನು ಕೃಷ್ಣನ
ಕೆಣಕಿದಲ್ಲದೆ ವಹಿಲದಲಿ ಕೈವಲ್ಯವಿಲ್ಲೆಂದ ||

ಶ್ರೀಕೃಷ್ಣ ಕರ್ಣನ ವ್ಯಕ್ತಿತ್ವಕ್ಕೆ ಮಾರುಹೋಗುತ್ತಾನೆ. ಕರ್ಣನ ಸಾಹಸವನ್ನು ಕಂಡ ಶ್ರೀಕೃಷ್ಣ ಅರ್ಜುನನನ್ನು ಕ್ಷಣಕಾಲ ಮರೆತು ಅವನನ್ನು ಹೊಗಳುತ್ತಾನೆ. ಇದನ್ನು ಕಂಡು ಅರ್ಜುನನ ಮುಖವು ಬಾಡಿದಾಗ ಕೃಷ್ಣ ಅವನಿಗೆ ಕರ್ಣನ ಪರಾಕ್ರಮದ ಪರಿಚಯವನ್ನು ಸ್ಪಷ್ಟವಾಗಿ ಮಾಡಿಕೊಡುತ್ತಾನೆ.

ಬಸುರೊಳಗೆ ಬ್ರಹ್ಮಾಂಡ ಕೋಟಿಯು
ಮುಸುಕಿಕೊಂಡಿಹ ನಾ ಸಹಿತ ಮೇ
ಲೆಸೆವ ಸಿಂಧದ ಹನುಮಸಹಿತೀ ದಿವ್ಯಹಯ ಸಹಿತ ।
ಎಸುಗೆಯಲಿ ತೊಲಗಿಸುವ ಕರ್ಣನ
ಅಸಮ ಸಾಹಸ ಪಿರಿದೊ ಹುಲುರಥ
ದೆಸುಗೆ ನಿನ್ನಗ್ಗಳಿಕೆ ಪಿರಿದೋ ಪಾರ್ಥ ಹೇಳೆಂದ ||

(ಕರ್ಣ ಪರ್ವ, ಸಂಧಿ 23, ಪದ್ಯ 23)

ಮಹಾಕವಿ ಕುಮಾರವ್ಯಾಸನ ಭಾರತದಲ್ಲಿ ಶ್ರೀಕೃಷ್ಣ-ಕರ್ಣರ ಸಂಬಂಧ ಅತಿಶಯವಾದುದು. ಮಹಾಭಾರತ ಯುದ್ಧಕ್ಕೆ ಮೊದಲು ಶ್ರೀಕೃಷ್ಣ ಭೇದೋಪಾಯದಿಂದ ಕರ್ಣನ ಮನಸೆಳೆಯಲು ಪ್ರಯತ್ನಿಸಿ, ಪ್ರಲೋಭದ ಸಮೂಹವನ್ನು ಒಡ್ಡಿದಾಗ, ಕರ್ಣ ಅದನ್ನು ತಿರಸ್ಕರಿಸಿ ಕೌರವನ ಕಡೆ ಹೋರಾಡುವ ತನ್ನ ಅಚಲ ನಿರ್ಧಾರವನ್ನು ವ್ಯಕ್ತಪಡಿಸಿದಾಗ ತುಂಬ ಸಂತೋಷವಾಗುತ್ತದೆ. ಮಹಾ ಕೃಷ್ಣಭಕ್ತನಾದ ಕರ್ಣ ಲೌಕಿಕವಾಗಿ ಕರ್ತವ್ಯದತ್ತ ದೃಷ್ಟಿಯನ್ನು ಹರಿಯಿಸುವನು. 'ಕರ್ಮಣ್ಯೇವ ಅಧಿಕಾರಸ್ತೇ' ಎಂಬ ಮಾತು ಇವನ ವ್ಯಕ್ತಿತ್ವದಲ್ಲಿ ಪುಟಗೊಳ್ಳುವಂತೆ ಕಂಡುಬರುತ್ತದೆ. ಕೌರವನ ಉಪ್ಪುಂಡು ಬೆಳೆದ ತನ್ನ ದೇಹವನ್ನು ಅವನಿಗೇ ಸಮರ್ಪಿಸುತ್ತಾನೆ, ಕರ್ಣ. ಆದರೆ ಇವನ ಮನಸ್ಸು ಕೃಷ್ಣನಿಗೆ ಸಮರ್ಪಿತವಾಗುತ್ತದೆ. ಕರ್ಣಾವಸಾನ ಪ್ರಸಂಗದಲ್ಲಿ ಈ ಭಾವನೆ ನಮಗೆ ಸ್ಪಷ್ಟವಾಗಿ ತಿಳಿಯುತ್ತದೆ. 'ಮರಣದ ಹೊತ್ತು ಕೃಷ್ಣನ ಕಾಂಬ ಸುಕೃತಫಲ ಇಳೆಯ ಮೇಲೆನಗಲ್ಲದೆ ಆರಿಗೆ ಫಲಿಸುವುದು ತಾ ಧನ್ಯನು' ಎಂದು ಕರ್ಣ ತನ್ನ ಅಂತ್ಯಕಾಲದಲ್ಲಿ ಭಾವಿಸಿ ಕೃಷ್ಣನನ್ನು ನೋಡುತ್ತಿದ್ದಾಗ ತನಗರಿವಿಲ್ಲದೆ ಮೈಮರೆತು ಸಮಾಧಿಸ್ಥಿತಿಯನ್ನು ಹೊಂದುತ್ತಾನೆ. ಆಗ ಅವನಿಗೆ

ಒಳಗೆ ಹೃದಯಾಂಬುಜದ ಮಧ್ಯ
ಸ್ಥಳದೊಳಗೆ ಮುರವೈರಿಯನು ಹೊರ
ವಳಯದಲಿ ಫಲುಗುಣನ ಮಣಿರಥದಗ್ರಭಾಗದಲಿ ।
ಹೊಳೆವ ಹರಿಯನು ಕಂಡಸಿದು ಹೊರ
ಗೊಳಗೆ ಹರಿ ತಾನೆಂಬ ಭೇದವ
ತಿಳಿದು ನಿಜದೆಚ್ಚರ ಸಮಾಧಿಯೊಳಿರ್ದನಾ ಕರ್ಣ ||

(ಕರ್ಣಪರ್ವ, ಸಂಧಿ ೨೭, ಪದ್ಯ ೧೦)

ಇತ್ತ ಕಡೆ ಶ್ರೀಕೃಷ್ಣ ಕರ್ಣನ ಮೇಲೆ ದಿವ್ಯ ಬಾಣವನ್ನು ಪ್ರಯೋಗಿಸಿ, ಅವನ ತಲೆಯನ್ನು ಕತ್ತರಿಸುವಂತೆ ಅರ್ಜುನನಿಗೆ ಹೇಳಲು, ಅವನು ಪಾರ್ವತಿ ಕೊಟ್ಟ ಅಂಜಳಿಕಾಸ್ತ್ರವನ್ನು ಪ್ರಯೋಗಿಸುತ್ತಾನೆ. ಆದರೂ ಅವನ ಪ್ರಾಣ ಹೋಗದಿರುವುದನ್ನು ಕಂಡು ಕೃಷ್ಣ ಚಕಿತನಾಗಿ ನಿಜಸ್ಥಿತಿಯನ್ನರಿತು ವಿಪ್ರವೇಷದಲ್ಲಿ ಅವನ ಬಳಿಗೆ ಬಂದು ಅವನ ಕುಂಡಲಗಳನ್ನು ದಾನವಾಗಿ ಕೊಡುವಂತೆ ಕೇಳಿದಾಗ ಸ್ವಲ್ಪವೂ ಅಳುಕದೆ ಅಂತಹ ವಿಷಮ ಸಮಯದಲ್ಲಿಯೂ ಅದನ್ನು ದಾನವಾಗಿ ಕೊಡುತ್ತಾನೆ. ಕೃಷ್ಣ ಇದನ್ನು ಸ್ವೀಕರಿಸಿ, ತನ್ನ ಹಸುಳೆಗಳಾದ ಪಾಂಡವರಿಗೂ ದೊರೆಯದ ಮೋಕ್ಷಪದವಿಯನ್ನು ಮೊತ್ತಮೊದಲು ಕರ್ಣನಿಗೆ ಕೊಡುತ್ತಾನೆ.

ಪರಮ ಕರುಣಾಸಿಂಧು ಕರ್ಣಂ
ಗಿರದೆ ನಿಜಮೂರ್ತಿಯನು ತೋರಿದ
ಸುರುತರ ಪ್ರೇಮದಲಿ ಮುಕುತಿಯ ಪದವ ನೇಮಿಸಿದ ॥

(ಕರ್ಣಪರ್ವ, ಸಂಧಿ ೨೭, ಪದ್ಯ ೧೯)

ಮಹಾಕವಿ ಪಂಪ ಕರ್ಣನ ಗುಣಾತಿಶಯಗಳಿಗೆ ಮನಸೋತು 'ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ' ಎಂದು ಚರಮಶ್ಲೋಕವನ್ನು ಹಾಡಿ ಲೌಕಿಕವಾಗಿ ಅತ್ಯುನ್ನತ ಸ್ಥಾನವನ್ನುಗಳಿಸಿಕೊಟ್ಟರೆ, ಭಾಗವತ ಶ್ರೇಷ್ಠನಾದ ಕುಮಾರವ್ಯಾಸ ಶ್ರೀಕೃಷ್ಣನ ಕರುಣೆಗೆ ಪಾತ್ರನಾದ ಕರ್ಣನನ್ನು ಅಲೌಕಿಕವಾಗಿ ಅತ್ಯುನ್ನತ ಸ್ಥಾನ ಪಡೆಯುವಂತೆ ಮಾಡುತ್ತಾನೆ.

ಒಟ್ಟಿನಲ್ಲಿ ಶ್ರೀಕೃಷ್ಣನ ಪಾತ್ರ ಮಹಾಭಾರತದಲ್ಲಿ ತನ್ನಿಂದ ತಾನೇ, ತನ್ನದೇ ಆದ ವೈಶಿಷ್ಟ್ಯದೊಡನೆ ಶೋಭಿಸುವ ಅತ್ಯುನ್ನತ ಪಾತ್ರವೆನ್ನಲು ಅಡ್ಡಿಯಿಲ್ಲ. ಇವನ ಪಾತ್ರಕ್ಕೆ ಸರಿಮಿಗಿಲಾದ ಮತ್ತೊಂದು ಪಾತ್ರ ಮಹಾಭಾರತದಲ್ಲಿ ಇಲ್ಲ ಎಂದು ಹೇಳಿದರೆ ಆತಿಶಯವಾಗಲಾರದು.

ಒಮ್ಮೆ ಕಾರ್ಲೈಲನು ಎಮರ್ಸನ್‌ನೊಡನೆ ಸುಮಾರು ಒಂದು ಘಂಟೆಗಿಂತ ಹೆಚ್ಚುಕಾಲ ಮೌನವಾಗಿ ನಿಂತು ಸಂದರ್ಶಿಸಿದನು. ಇದಾದ ಮೇಲೆ ಎಮರ್ಸನ್ನನು ಕಾರ್ಲೈಲನಿಗೆ ಒಂದು ಗೀತೆಯ ಪ್ರತಿಯನ್ನು ಮೌನದಿಂದ ಕೊಟ್ಟು ಕಳುಹಿಸಿದನು.

ಡಾ. ಪಿ. ವಿ. ನಾರಾಯಣ

ಬಸವಣ್ಣನ ವ್ಯಕ್ತಿತ್ವ

ನಮ್ಮ ಮತ್ತು ಬಸವಣ್ಣನ ನಡುವೆಯಿರುವುದು ಎಂಟುನೂರು ವರ್ಷಗಳಷ್ಟು ದೀರ್ಘವಾದ ಕಾಲದ ಕಂದರ. ಆದರೆ ಈ ಕಾಲವ್ಯತ್ಯಾಸವನ್ನು ಮೀರಿ ಬಸವಣ್ಣ ನಮ್ಮ ಹೃದಯ–ಬುದ್ಧಿಗಳಿಗೆ ಹತ್ತಿರವಾಗುತ್ತಾನೆ, ನಮ್ಮ ಮನಸ್ಸು–ಕಲ್ಪನೆಗಳನ್ನು ಸೂರೆಗೊಳ್ಳುತ್ತಾನೆ. ಇದಕ್ಕೆ ಕಾರಣ ಆತನ ವ್ಯಕ್ತಿತ್ವದ ಮಾರ್ದವ ಮತ್ತು ಆಲೋಚನೆಗಳ ಆಧುನಿಕತೆ. ಅವನು ಶ್ರೇಷ್ಠವ್ಯಕ್ತಿಗಳಲ್ಲೊಬ್ಬನಾದರೂ ಸಾಮಾನ್ಯರಿಗೂ ಅರ್ಥವಾಗುವುದು, ತನ್ನ ಸರಳತೆ ಮತ್ತು ನೇರವಾದ ನಡೆ–ನುಡಿಗಳಿಂದ ; ಪ್ರಾಮಾಣಿಕತೆಯಿಂದ. ಅವನ ವೈಚಾರಿಕತೆಯು ಯಾವುದೇ ಕಾಲದ ಆಲೋಚನಾ ದೃಷ್ಟಿಯಿಂದಲೂ ಆಧುನಿಕವಾಗಿರುವುದಕ್ಕೆ ಕಾರಣ ಅವನು ವಸ್ತುನಿಷ್ಠವಾಗಿ ನೋಡುವ ದೃಷ್ಟಿ. ಸಾಮಾನ್ಯರಿಗೆ ಅವನು ಪೂಜ್ಯನಾಗುವಂತೆಯೇ ಬುದ್ಧಿಜೀವಿಗಳಿಗೆ ಶ್ರೇಷ್ಠ ವೈಚಾರಿಕನಾಗುತ್ತಾನೆ ; ಸಾಹಿತಿಗಳ ದೃಷ್ಟಿಯಲ್ಲಿ ಅತ್ಯಂತ ಮಹತ್ವದ ಕವಿಯಾಗಿರುವಂತೆಯೇ ಇತಿಹಾಸಕಾರರಿಗೆ, ಕನ್ನಡ ನಾಡಿನ ಸಾಂಸ್ಕೃತಿಕ–ಧಾರ್ಮಿಕ ಇತಿಹಾಸಕ್ಕೆ, ಹೊಸ ತಿರುವನ್ನಿತ್ತ ಪ್ರಮುಖ ವ್ಯಕ್ತಿಯಾಗುತ್ತಾನೆ.

ಬಸವಣ್ಣನ ವಚನಗಳನ್ನೂ, ಅವನ ಬಗ್ಗೆ ಹಿಂದಿನ ಕವಿಗಳು ರಚಿಸಿದ ಕಾವ್ಯಗಳನ್ನೂ ನೋಡಿ ಹೇಳಬಹುದಾದರೆ ಅವನದು ಅತ್ಯಂತ ಮೃದುಸ್ವಭಾವ, ವಿನಯವಂತಿಕೆ ಮತ್ತು ಸೌಜನ್ಯಗಳ ಸಾಕಾರ ಸ್ವರೂಪ. "ಮೃದು ವಚನವೇ ಸಕಲ ಜಪಂಗಳಯ್ಯಾ, ಮೃದುವಚನವೇ ಸಕಲ ತಪಂಗಳಯ್ಯಾ, ಸದುವಿನಯವೇ ಸದಾಶಿವನ ಒಲುಮೆಯಯ್ಯಾ" ಎಂಬ ಅವನ ಮಾತು ಅವನ ನಡೆಗೆ ಅನ್ವಯಿಸುತ್ತಿತ್ತು. ಆತ ಶಿವಶರಣರ ಜೊತೆಯಲ್ಲಿ ನಡೆದುಕೊಳ್ಳುತ್ತಿದ್ದ ರೀತಿಯನ್ನು ಹರಿಹರಕವಿಯು ವರ್ಣಿಸಿದ್ದನ್ನು ನೋಡಿ : ತನ್ನ ಮಹಾಮನೆಗೆ ಬರುವ ಭಕ್ತರಿಗೆ "ತಪ್ಪದೆಲ್ಲರ್ಗೆ ತರತರದಿಂದ ಮೈಯಿಕ್ಕಿ, ಪಲ್ಗಿರಿದು ತಗ್ಗಿ ತಲೆಗೆರೆದು ಬೆರಳಂ ಕಚ್ಚಿ, ಕಾಲ್ಗೆರಗಿ ಕುಗ್ಗಿ ಕಿಂಕರತೆಯಿಂ ನೆರೆ ಪೆರ್ಚಿ, ಕೈಗೊಟ್ಟು ತಂದು ಬಿಜಯಂಗೈಸಿ ಕುಳ್ಳಿರಿಸಿ" ಉಪಚರಿಸುತ್ತಿದ್ದನಂತೆ! ಈತನ ಈ ಸೌಜನ್ಯವೇ ಜನರ ಹೃದಯವನ್ನು ಗೆಲ್ಲುವ ಶ್ರೇಷ್ಠ ಅಸ್ತ್ರವಾಗಿತ್ತು. ಅದರ ಹಿಂದಿದ್ದ ಅವನ ದಯಾಪರತೆ, ದೀನರ ಬಗ್ಗೆ ಹೊಂದಿದ್ದ ಕಳಕಳಿ ನಡತೆಯನ್ನು ಹೆಚ್ಚು ಬಲಗೊಳಿಸುತ್ತಿತ್ತು, ಅವನೆಡೆಗೆ ಬಂದವರಲ್ಲಿ ಇವನು ನಮ್ಮವನು ಎಂಬ ಅನುಭವವನ್ನುಂಟುಮಾಡುತ್ತಿತ್ತು. "ದಯವೇ ಧರ್ಮದ ಮೂಲವಯ್ಯ" ಎಂದು ಹೇಳಿದ ಬಸವಣ್ಣ ಶೋಷಿತರ ಬಗ್ಗೆ ಹೃತ್ಪೂರ್ವಕ ಸಹಾನುಭೂತಿಯನ್ನು ಪಡೆದಿದ್ದ. ಒಮ್ಮೆ ಅವನ ಮನೆಯಲ್ಲಿದ್ದ ಹಸುಗಳನ್ನು ಜಂಗಮವೇಷದ ಕಳ್ಳರು ಅಪಹರಿಸಿ ಹೊಡೆದುಕೊಂಡು ಹೋಗುತ್ತಿದ್ದರಂತೆ. ಆ ವಿಷಯವು ಬಸವಣ್ಣನ ಕಿವಿಗೆ ಬಿದ್ದಾಗ "ತಾಯ್ಗಳುಮ್ಮಳಿಸಲಾಗದು, ಕರುಗಳಂ ಬಿಡಿರೇ" ಎಂದು ಕರುಗಳಿಲ್ಲದೆ ಹಸುಗಳು ನೋಯುತ್ತವೆಂದು ಕರುಗಳನ್ನೂ ಕಳಿಸಿರೆಂದು ಆಳುಗಳಿಗೆ ಹೇಳಿದನಂತೆ ; 'ಬಸವರಾಜದೇವರ ರಗಳೆ'ಯಲ್ಲಿನ ಈ ಪ್ರಸಂಗವು ಅವನ ವಾತ್ಸಲ್ಯವನ್ನು ತುಂಬ ಸುಂದರವಾಗಿ ಚಿತ್ರಿಸುತ್ತದೆ.

ಭಕ್ತರ–ಹಿರಿಯರ ಮನಸ್ಸನ್ನು ಸ್ವಲ್ಪವೂ ನೋಯಿಸಲಾರ ಬಸವಣ್ಣ. ಕಿನ್ನರ ಬೊಮ್ಮಯ್ಯನೆಂಬ ಭಕ್ತನೊಬ್ಬನು ಬಸವಣ್ಣನ ಮನೆಗೆ ಬಂದಾಗ ತನಗೆ ಇಷ್ಟವಾದ ಈರುಳ್ಳಿಯ ಅಡುಗೆ ಮಾಡಲು ಹೇಳಿದ್ದನಂತೆ. ಇದರ ವಾಸನೆ ಮೂಗಿಗೆ ಬಡಿದಾಗ ಬಸವಣ್ಣ "ತಂಪರಾರೀ ಅಭೋಜ್ಯವನು" ಎಂದು ಈರುಳ್ಳಿಯನ್ನು ನಿಂದಿಸಿದನಂತೆ. ಇದನ್ನು ಕೇಳಿ ಕಿನ್ನರಯ್ಯನು ಕೋಪದಿಂದ ಮನೆಬಿಟ್ಟು ಹೋದಾಗ, ಬಸವಣ್ಣನು ತನ್ನ ತಪ್ಪು ಮಾತಿನಿಂದ ಭಕ್ತನ ಮನಸ್ಸಿಗೆ ನೋವಾದುದನ್ನರಿತು ಅವನನ್ನು ಪ್ರಸನ್ನಗೊಳಿಸುವುದಕ್ಕಾಗಿ ಈರುಳ್ಳಿಯನ್ನು ಗಾಡಿಯೊಂದರಲ್ಲಿ ತುಂಬಿಸಿ ದೊಡ್ಡ ಮೆರವಣಿಗೆಯನ್ನೇ ಮಾಡಿಸಿದನಂತೆ. ಈ ಪ್ರಸಿದ್ಧವಾದ ಕತೆಯಲ್ಲಿ ಅಡಗಿರುವುದು ಬಸವಣ್ಣನ ಸೌಜನ್ಯ ; ತನ್ನಿಂದ ತಪ್ಪಾಯಿತೆಂದು ತಿಳಿದಾಗ ಅದನ್ನು ಪಶ್ಚಾತ್ತಾಪ–ಪ್ರಾಯಶ್ಚಿತ್ತಗಳ ಮೂಲಕ ನೇರ್ಪಡಿಸಿಕೊಳ್ಳುವ ಹಿರಿಯಗುಣ.

ಬಸವಣ್ಣನ ಈ ಮಾರ್ದವತೆಯು ಪುಕ್ಕಲುತನದ ನಾಗರಿಕ ರೂಪವಲ್ಲ. ಕಷ್ಟಜೀವಿಗಳ ಬಗ್ಗೆ, ಹಿರಿಯರ ಬಗ್ಗೆ ಅವನೆಷ್ಟು ಮೃದುವಾಗಬಲ್ಲನೋ ತನ್ನ ಸಂಕಲ್ಪದಲ್ಲಿ, ತನ್ನ ನಂಬಿಕೆಗಳನ್ನು ಕೃತಿಗಿಳಿಸುವಲ್ಲಿ, ಕಷ್ಟವನ್ನೆದುರಿಸಬೇಕಾದ ಸನ್ನಿವೇಶಗಳಲ್ಲಿ ಆತ ಅಷ್ಟೇ ಕಠಿಣನಾಗಬಲ್ಲ. ಈ ದಾರ್ಢ್ಯವಿಲ್ಲದಿದ್ದರೆ ಬಸವಣ್ಣನು ಇಷ್ಟೆಲ್ಲ ಸಾಧಿಸಲು ಸಾಧ್ಯವೇ ಆಗುತ್ತಿರಲಿಲ್ಲ. ತನ್ನ ಜೀವನವು ಸದಾ ಎದುರಾಳಿಗಳಿಂದ, ಸಂಪ್ರದಾಯಶೀಲರಿಂದ ಎದುರಿಸಲ್ಪಟ್ಟರೂ ಅವನೆಂದೂ ತನ್ನ ನಂಬಿಕೆಯೊಂದಿಗೆ ರಾಜಿಮಾಡಿಕೊಳ್ಳಲು ಸಿದ್ಧನಿರಲಿಲ್ಲ. ಎಂಟುನೂರು ವರ್ಷಗಳ ಹಿಂದೆ ಸುಮಾರು ಹದಿನಾರು ವರ್ಷದ ಹುಡುಗನೊಬ್ಬ ಆಗಿನ ಸಮಾಜದ ಅಂಧಸಾಂಪ್ರದಾಯಿಕತೆಯನ್ನು ಧಿಕ್ಕರಿಸಿ, ಧಾರ್ಮಿಕಾಚರಣೆಗಳ ಅರ್ಥಹೀನತೆಯನ್ನು ಮನಗಂಡು ತನ್ನ ಜನಿವಾರವನ್ನು ಕಿತ್ತೆಸೆದು ಸಮಾಜವನ್ನೆದುರಿಸಬೇಕಾದರೆ ಎಂಥ ಧೈರ್ಯ ಬೇಕಾಗಿತ್ತು ! ಅದನ್ನು ಮಾಡಿದ ಬಸವಣ್ಣ. ಮುಂದೆ ಬಿಜ್ಜಳನಲ್ಲಿ ಭಂಡಾರಾಧಿಕಾರಿಯಾದಾಗ ಪ್ರತಿನಿತ್ಯವೂ ವಿರೋಧವನ್ನೆದುರಿಸಬೇಕಾಗಿತ್ತು. ತನ್ನ ಸ್ವಂತ ಬುದ್ಧಿಮತ್ತೆಯಿಂದಲೇ ಗಣಕನಾಗಿದ್ದವನು ಚಕ್ರಾಧಿಪತ್ಯವೊಂದರ ಕೋಶದ ಶ್ರೇಷ್ಠ ಅಧಿಕಾರಕ್ಕೇರಿದ ಇವನನ್ನು ಕಂಡರೆ ಅನೇಕರಿಗೆ ಹೊಟ್ಟೆಕಿಚ್ಚು. ಅವರೆಲ್ಲ ಇವನ ಮೇಲೆ ರಾಜನಲ್ಲಿ ದೂರಿನ ಸುರಿಮಳೆಯನ್ನೇ ಸುರಿಸಿ ವಾತಾವರಣವನ್ನು ಪ್ರಕ್ಷುಬ್ಧಗೊಳಿಸುತ್ತಿದ್ದರು. ಆದರೆ ಇದನ್ನೆಲ್ಲ ಎದುರಿಸುವ ಬುದ್ಧಿಯ ಸಮತೋಲನ, ಕಠಿಣ ಪರಿಸ್ಥಿತಿಯಲ್ಲಿ ಅದಕ್ಕೆ ಬಲಿಯಾಗದೆ ಎದ್ದು ನಿಲ್ಲುವ ಸಾಮರ್ಥ್ಯ ಬಸವಣ್ಣನಿಗಿತ್ತು.

ಜೀವನದಲ್ಲಿ ಏನನ್ನೇ ಆಗಲಿ ಎದುರಿಸುವ ಸಾಮರ್ಥ್ಯವು ಬಸವಣ್ಣನಿಗೆ ಬಂದದ್ದು ಭಂಡತನದಿಂದಲ್ಲ, ಎಮ್ಮೆಯ ಮೇಲೆ ಮಳೆಸುರಿದರೂ ಅದನ್ನರಿಯಲಾರದ ದಪ್ಪ ಚರ್ಮದಿಂದಲ್ಲ. ಒಂದು ಕಡೆ ಅವನ ನಂಬುಗೆ–ಜೀವನ ಮೌಲ್ಯಗಳು ಅತ್ಯಂತ ಸ್ಪಷ್ಟವಾಗಿ ಅವನ ಜೀವನಕ್ಕೆ ಭದ್ರವಾದ ತಳಹದಿಯನ್ನು ಹಾಕಿದ್ದವು ; ಇನ್ನೊಂದು ಕಡೆ ಅವನು ಇನ್ನಿತರ ವಿಷಯಗಳಲ್ಲಿ ಎಷ್ಟೇ ಅಂತರ್ಮುಖಿಯಾಗಿ, ಕರುಣಾಮಯಿಯಾಗಿದ್ದರೂ ವ್ಯವಹಾರದಲ್ಲಿ ಕರ್ತವ್ಯಪರತೆಯಲ್ಲಿ ಅತ್ಯಂತ ನಿಷ್ಠುರನೂ ಪರಿಶುದ್ಧನೂ ಆಗಿದ್ದ. ತನ್ನ ಅನಿಸಿಕೆಯನ್ನೇ (ಏಕೆಂದರೆ ಅದು ಸದಾ ವಸ್ತುನಿಷ್ಠ ವಿಚಾರದ ಫಲವಾದುದರಿಂದ) ಸರಿಯೆಂದು ಅದನ್ನು ಕೃತಿಗಿಳಿಸುವುದು ಅವನಿಗೆ ಬಾಲ್ಯದಿಂದಲೇ ಬಂದದ್ದು. ತನ್ನ ನೌಕರಿಯನ್ನುಳಿಸಿಕೊಳ್ಳುವ ಲೋಭದಿಂದಾಗಲೀ, ಕಾಲಕ್ಕನುಗುಣವಾಗಿ ಎಲ್ಲರೊಂದಿಗೆ ಹೊಂದಿಕೊಂಡು ಆದರ್ಶಗಳನ್ನು ತಿಪ್ಪೆಸಾರಿಸಿಬಿಡುವ ಜಾಣತನದಿಂದಾಗಲೀ ಬಸವಣ್ಣ ಜೀವಿಸಲಿಲ್ಲ. ಪ್ರಕೃತಿಯ ದೃಷ್ಟಿಯಲ್ಲಿ ಎಲ್ಲ ಮನುಷ್ಯರೂ ಒಂದೇ ಎಂದು ನಂಬಿದ್ದುದರಿಂದ ಅವನು ತನ್ನ ಬೆನ್ನಹಿಂದಿದ್ದ ಸಮಾಜದಲ್ಲಿನ ಜಾತಿಪದ್ಧತಿಯನ್ನು ನಿರಾಕರಿಸಿದ. ಸಂಬೋಳಿ ನಾಗಿದೇವನೆಂಬ ಅಸ್ಪೃಶ್ಯ ಭಕ್ತನೊಬ್ಬನ ಮನೆಯಲ್ಲಿ ಅವನು ಆರೋಗಣೆಮಾಡಿದ ಬಗ್ಗೆ ಕೆಲವರು ರಾಜನಲ್ಲಿ ಚಾಡಿ ಹೇಳಿದಾಗ, ಎಲ್ಲರೆದುರಿಗೆ ನಾಗಿದೇವನೂ ಮನುಷ್ಯನೇ ಎಂಬುದನ್ನು ತೋರಿಸಿಕೊಟ್ಟಿದ್ದ. ಕೆಲವು ವೇಳೆ ಆವೇಶದಿಂದ ಹೀಗೆ ಮಾಡಿದು

ದಲ್ಲಿದೆ, ಜಾತಿಪದ್ಧತಿಯ ಹಿಂದೆ ಆರ್ಥಿಕ ಕಾರಣವು ಹುದುಗಿರುವುದನ್ನು ತನ್ನ ವಿಶ್ಲೇಷಣಾಬುದ್ಧಿಯಿಂದ ಗುರುತಿಸಿದ್ದ. "ಕಾಸಿ ಕಮ್ಮಾರನಾದ, ಬೀಸಿ ಮಡಿವಳನಾದ, ಹಾಸನಿಕ್ಕಿ ಸಾಲಿಗನಾದ, ವೇದವನೋದಿ ಹಾರುವನಾದ" ಎಂದು ಅವನು ಸಾರಿ, ಈ ಜಾತಿಗಳೊಳಗೆ ಭೇದವೇ ಇಲ್ಲವೆಂದೂ, ಎಲ್ಲರ ಮೂಲವೂ ಒಂದೇ ಎಂದೂ "ಕರ್ಣದಲ್ಲಿ ಜನಿಸಿದವರುಂಟೆ ?" ಎಂಬ ಮಾರ್ಮಿಕವಾದ ಪ್ರಶ್ನೆಯ ಮೂಲಕವೇ ಸ್ಪಷ್ಟಪಡಿಸುತ್ತಾನೆ— ತನ್ನೊಂದು ವಚನದಲ್ಲಿ. ತನ್ನ ಮತಕ್ಕೆ ಮತಾಂತರಗೊಂಡವರಲ್ಲಿಯೂ ತಮ್ಮ ಹಿಂದಿನ ಜಾತಿಯ ಬಗ್ಗೆ ಹೆಮ್ಮೆ ಮುಂದುವರಿದುದನ್ನು ಕಂಡಾಗ ಅವರನ್ನೂ ಖಂಡಿಸುವವನೇ. "ಉಂಬಲ್ಲಿ ಉಡುವಲ್ಲಿ ಕ್ರೀಯಳಿಯಿತ್ತೆಂಬರು, ಕೊಂಬಲ್ಲಿ ಕೊಡುವಲ್ಲಿ ಕುಲವನರಸುವರು. ಎಂತಯ್ಯಾ ಅವರ ಭಕ್ತರೆಂಬೆ, ಎಂತಯ್ಯಾ ಅವರ ಯುಕ್ತರೆಂಬೆ ?" ಎಂದು ಕೇಳುವ ಬಸವಣ್ಣ ಜಾತಿಯ ಭೇದದ ವಿಚಾರದಲ್ಲಿ ಎಲ್ಲರಿಗೂ ನಿಷ್ಠುರನೇ.

ಈ ಜಾತಿವ್ಯವಸ್ಥೆಗೆ ಮೂಲಕಾರಣವಾಗಿದ್ದಿರಬಹುದಾದ ವೃತ್ತಿಪ್ರಭೇದಗಳು ಕೀಳು–ಮೇಲು ಗಳೆಂದು ಪರಿಗಣಿತವಾಗಿದ್ದುದರಿಂದಲೇ ಜಾತಿಗಳಲ್ಲಿಯೂ ಮೇಲು ಕೀಳುಗಳೆಂದಾಯಿತು. ಇದನ್ನರಿತ ಬಸವಣ್ಣ ಎಲ್ಲ ವೃತ್ತಿಗಳೂ ಸರಿಸಮಾನವೆಂದು ಸಾರಲು ಪ್ರಯತ್ನಿಸಿದ. ವೃತ್ತಿಯು ಜೀವನೋಪಾಯಕ್ಕೆ ಕಾರಣ, ಹಣ ಸಂಪಾದನೆಯ ಮೂಲ. ಆದ್ದರಿಂದ ಅವೆಲ್ಲವರ ಗುರಿಯೂ ಒಂದೆ, ಅಲ್ಲದೆ ಯಾವ ವೃತ್ತಿಯನ್ನು ಕಡೆಗಣಿಸಿದರೂ ಅಷ್ಟರಮಟ್ಟಿಗೆ ಸಮಾಜವು ಊನವಾಗುತ್ತದೆ. ಹೀಗಾಗಿ ಎಲ್ಲ ವೃತ್ತಿಗಳೂ ಆವಶ್ಯಕ, ಸಮಾಜದ ಸುಮುಖತೆಗೆ ಅನಿವಾರ್ಯ. ಎಲ್ಲರೂ ತಮ್ಮ ತಮ್ಮ ಕೆಲಸಗಳನ್ನು ಮಾಡಿಕೊಂಡರೆ ಯಾವ ಘರ್ಷಣೆಗೂ ಆಸ್ಪದವಿಲ್ಲ. ಅಲ್ಲದೆ ಸಂಪಾದನೆಯು ಕೂಡಿಡುವುದನ್ನೇ ಗುರಿಯಾಗಿ ಪಡೆದಿದ್ದರೆ ಕರ್ತವ್ಯವೆಂಬುದು ಅಡ್ಡದಾರಿ ಹಿಡಿಯಬಹುದು. ಇವನ್ನೆಲ್ಲ ಮನಗಂಡ ಬಸವಣ್ಣ, ಮತ್ತವನ ಸಹಕಾರ್ಯಕರ್ತರು ವೃತ್ತಿಯನ್ನು 'ಕಾಯಕ'ವೆಂದು ಕರೆದರು. ಕರ್ತವ್ಯಪರತೆಯು ಲಿಂಗಪೂಜೆಗಿಂತ ಮಿಗಿಲಾದದ್ದು. ಆದ್ದರಿಂದ ಅದು ಆಧ್ಯಾತ್ಮಿಕ ಔನ್ನತ್ಯದ ಸಾಧನವೂ ಆಗಿದೆಯೆಂದು ಹೇಳಿದರು. ನಿಷ್ಠೆಯಿಂದ ದುಡಿದು ಸಂಪಾದಿಸಬೇಕೇ ವಿನಾ ಸೋಮಾರಿತನ–ಭಿಕ್ಷೆಗಳಿಂದ ಬದುಕಬಾರದೆಂಬುದೇ ಇವರ ಹಿಂದಿನ ಮನೋಭಾವ. ಗಳಿಸಿದುದರಲ್ಲಿ ಎಷ್ಟು ಬೇಕೋ ಅಷ್ಟನ್ನು ತನಗೆ, ಕುಟುಂಬಕ್ಕೆ ಉಳಿಸಿಕೊಂಡು ಮಿಕ್ಕುದನ್ನು ಲೋಕಕ್ಕಾಗಿ ಕೆಲಸ ಮಾಡುವವರ ದಾಸೋಹಕ್ಕಾಗಿ ಬಳಸಬೇಕೆಂದು ಹೇಳಿದರು. ಇದರಿಂದ ಆಸ್ತಿಯ ವಿಚಾರವು ಬರುವುದಿಲ್ಲ. ಇದ್ದವರ–ಇಲ್ಲದವರ ನಡುವಣ ಕಂದರ ಉಳಿಯುವುದಿಲ್ಲ ಎಂದರು.

ಸಂಪಾದನೆ ಮಾಡಿ, ಸುಖವಾಗಿ ಜೀವನ ಮಾಡಿ ಎಂದು ಬೋಧಿಸುವ ಧಾರ್ಮಿಕ ನಾಯಕರು ಬಹು ಅಪರೂಪ. ಬಸವಣ್ಣ ಎಂದೂ ಸಂಸಾರ ವಿರಕ್ತಿಯನ್ನು ಬೋಧಿಸಲಿಲ್ಲ. ಅವನಿಗೆ ನೀಲಲೋಚನೆ–ಗಂಗಾಂಬಿಕೆಯರೆಂಬ ಇಬ್ಬರು ಹೆಂಡತಿಯರಿದ್ದರು. "ಸತಿಪತಿಯರೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ" ಎಂಬ ಜೇಡರ ದಾಸಿಮಯ್ಯನ ಮಾತನ್ನೇ ಬಸವಣ್ಣನೂ ಪುನರುಚ್ಚರಿಸಿದ. ಸಂಸಾರವನ್ನು ಬಿಡಬೇಕೆಂದು ಬಲವಂತವಾಗಿ ಸನ್ಯಾಸಿಗಳಾದರೆ ಸಂಸಾರದಲ್ಲಿಯೇ ಇರುವುದಕ್ಕಿಂತ ಹೆಚ್ಚಾಗಿ ಪ್ರಾಪಂಚಿಕ ಆಮಿಷಗಳು ಸನ್ಯಾಸಿಯನ್ನು ಕಾಡಿಸುತ್ತವೆಂಬ ವಾಸ್ತವಪ್ರಜ್ಞೆ ಬಸವಣ್ಣನದು. ಲೌಕಿಕ ಜೀವನದ ಸ್ವಚ್ಛತೆಯೇ ಪರಲೋಕದ ಸದ್ಗತಿಗೆ ಬೇರು ಎಂಬುದನ್ನು "ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯಾ; ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ, ಇಲ್ಲಿ ಸಲ್ಲದವರು ಅಲ್ಲಿಯೂ ಸಲ್ಲರಯ್ಯಾ" ಎಂಬ ವಚನದಲ್ಲಿ ಸೂತ್ರರೂಪವಾಗಿ ಬಸವಣ್ಣನು ಹೇಳುತ್ತಾನೆ. ಜನರಿಗೆ ಬೇಕಾದದ್ದು ಆಸೆ ಆಕಾಂಕ್ಷೆಗಳನ್ನು ಬಿಡುವುದಲ್ಲ, ಅವುಗಳನ್ನು ಹತೋಟಿಯಲ್ಲಿಟ್ಟುಕೊಳ್ಳಬಲ್ಲ ದೃಢಮನಸ್ಸು ಎಂಬ ವಿಚಾರ ಇವನಿಗೆ ಮನದಟ್ಟಾಗಿತ್ತು. ಜೀವನದ ಬಗ್ಗೆ ಇರುವ ಈ ಪ್ರೀತಿ ನಮ್ಮನ್ನು ಬಹುವಾಗಿ ಆಕರ್ಷಿಸುತ್ತದೆ.

ಬಸವಣ್ಣನು ವ್ಯವಹಾರ ಶುದ್ಧನಾಗಿರದಿದ್ದರೆ ಅವನು ರಾಜನ ಆಸ್ಥಾನದಲ್ಲಿ ಎಲ್ಲರ ವಿರೋಧವನ್ನೂ

ಗಳಿಸಿ ಉಳಿಯಲು ಸಾಧ್ಯವಾಗುತ್ತಿರಲಿಲ್ಲ. ಇವನನ್ನು ಪ್ರಾಯಶಃ ಅಧಿಕಾರದಿಂದ ಇಳಿಸಬೇಕೆಂದು ಮಾಡಿದ ಬಹುದಾದ ವಿರೋಧಿಗಳ ಪ್ರಯತ್ನವೆಲ್ಲ ಮಣ್ಣುಪಾಲಾಗಲು ಕಾರಣ ಇವನ ನಿರ್ಮಲಹಸ್ತ. ಬಸವಣ್ಣ ಸಿದ್ಧ ದಂಡಾಧಿಪನ ಮಗನಂತೆ ಬೆಳೆದು ಅವನು ತೀರಿಕೊಂಡ ನಂತರ ಅವನ ಆಸ್ತಿಗೆಲ್ಲ ವಾರಸುದಾರನಾಗಿದ್ದವನು, ಜೊತೆಗೆ ತಾನೇ ಹಿರಿಯ ಹುದ್ದೆಯಲ್ಲಿದ್ದು ಸಾಕಷ್ಟು ಗಳಿಸಿದ್ದವನು. ಆದರೆ ಅದನ್ನೆಲ್ಲ 'ಜಂಗಮ ಪ್ರಾಣಿ'ಯಾದ ಇವನು ಭಕ್ತರ ದಾಸೋಹಕ್ಕಾಗಿ ವಿನಿಯೋಗಿಸುತ್ತಿದ್ದ. ಇದನ್ನು ಕಂಡು ಹಲವರು ಚಾಡಿಕೋರರು ರಾಜನಾದ ಬಿಜ್ಜಳನ ಬಳಿಗೆ ಹೋಗಿ, ಬಸವಣ್ಣನು ರಾಜ್ಯದ ಬೊಕ್ಕಸದಿಂದ ಹಣವನ್ನು ತೆಗೆದು ಜಂಗಮರಿಗೆ ದಾನಮಾಡುತ್ತಿದ್ದಾನೆಂಬ ಆರೋಪವನ್ನು ಹೊರಿಸಿದರಂತೆ. ಬಿಜ್ಜಳನು ಇದರಿಂದ ಕುಪಿತನಾಗಿ ಇದ್ದಕ್ಕಿದ್ದಂತೆ ಲೆಕ್ಕದ ತನಿಖೆಗಾಗಿ ಭಂಡಾರದ ಕಾರ್ಯಾಲಯಕ್ಕೆ ಬಂದು ಸಮಜಾಯಿಷಿಗಾಗಿ ಬಸವಣ್ಣನನ್ನು ಕೇಳಿದ ಖರ್ಚಿನ ಲೆಕ್ಕವನ್ನಿತ್ತ ಬಸವಣ್ಣನು ಉಳಿದಿರಬೇಕಾದ ಹಣವನ್ನು ಎಣಿಸಲು ತೊಡಗಿದಾಗ ಭಂಡಾರದಲ್ಲಿ ಉಳಿದಿರಬೇಕಾದ ಹಣಕ್ಕಿಂತ ಹಲವಾರು ಪಟ್ಟು ಜಾಸ್ತಿಯಾಗುತ್ತಿರುವುದು ಗೋಚರಿಸಿತಂತೆ. ಬಸವಣ್ಣನು ಅಪ್ರಾಮಾಣಿಕನಾಗಿ ಬೊಕ್ಕಸದ ಹಣವು ವಿನಿಯೋಗವಾಗಬೇಕಾದ ರೀತಿಗಿಂತ ಬೇರೆಯ ರೀತಿಯಲ್ಲಿ ಖರ್ಚು ಮಾಡಿದ್ದರೆ ಪ್ರಾಯಶಃ ಶಿವನು ಹಣವನ್ನು ಹೆಚ್ಚು ಮಾಡುತ್ತಿರಲಿಲ್ಲ ! ಒಟ್ಟಾರೆ ಇದರಿಂದ ನಮಗೆ ತಿಳಿಯುವುದಿಷ್ಟು: ಯಾವ ಕಾಲದಲ್ಲಿ ತನಿಖೆಗೆ ಬಂದರೂ ಸರಿಯಾದ ಆಯ-ವ್ಯಯದ ಲೆಕ್ಕವನ್ನು ತೋರಿಸಬಲ್ಲಂತಹ ಕರಾರುವಾಕ್ಕಾದ ವ್ಯವಹಾರ ಬಸವಣ್ಣನದು. ಇಲ್ಲದಿದ್ದರೆ "ಊರಮುಂದೆ ಹಾಲಹಳ್ಳ ಹರಿವುತ್ತಿರಲು ಒರೆಯಾವಿನ ಬೆನ್ನಲಿ ಹರಿಯಲದೇಕಯ್ಯಾ ? ಲಜ್ಜೆಗೆಡಲೇಕೆ ? ನಾಣುಗೆಡಲೇಕೆ ? ಕೂಡಲಸಂಗಮ ದೇವರುಳ್ಳನ್ನಕ್ಕ ಬಿಜ್ಜಳನ ಭಂಡಾರವೆನಗೇಕಯ್ಯಾ" ಎಂದು ಹೇಳುವ ಧೈರ್ಯ, ನೈತಿಕಸಾಮರ್ಥ್ಯಗಳು ಅವನಲ್ಲಿರುತ್ತಿರಲಿಲ್ಲ.

ಬಸವಣ್ಣನ ಪ್ರಾಮಾಣಿಕತೆಯು ವ್ಯವಹಾರರಂಗದಲ್ಲಿ ಹೇಗೆಯೋ ಆಧ್ಯಾತ್ಮಿಕಸಾಧನೆಯಲ್ಲಿಯೂ ಹಾಗೆಯೇ ಗೋಚರವಾಗುತ್ತದೆ. ಅವನು ತಾನು ಭಗವಂತನ ಅವತಾರವೆಂಬ ಸೋಗನ್ನು ಹಾಕಿಕೊಂಡು ಇತರರಿಗೆ ಉಪದೇಶವನ್ನು ನೀಡುವುದರಲ್ಲಿಯೇ ತೃಪ್ತನಾದವನಲ್ಲ. ಅವನ ಬಹು ಸುಂದರವಾದ ವಚನಗಳು ಹಲವು ಆಧ್ಯಾತ್ಮಿಕ ಸಾಧನೆಯ ಮಾರ್ಗದಲ್ಲಿ ತಾನು ಎದುರಿಸಿದ ಮಾನಸಿಕ ಸಂಘರ್ಷದ ಪ್ರಾಮಾಣಿಕ ಅಭಿವ್ಯಕ್ತಿಯಾಗಿವೆ. ಹಿರಿದನ್ನು ಕಾಣಬೇಕೆಂಬ, ಸಾಧಿಸಬೇಕೆಂಬ ಚಾಪಲ್ಯದ ಮುಗ್ಧ ಜೀವಿಯೆಂದು ಆ ದಿಸೆಯಲ್ಲಿ ಸಾಗುವಾಗ ಮೊದಮೊದಲು ಪ್ರಾಪಂಚಿಕ ಆಕರ್ಷಣೆಯಿಂದ ಪಾರಾಗಲಾರದೆ, ಆದರೆ ಹಿರಿದರ ಹಂಬಲನ್ನು ಬಿಡಲಾಗದೆ—ಈ ಎರಡರ ನಡುವೆ ಸಿಲುಕಿಕೊಂಡು ಪಡುವ ಬವಣೆಯನ್ನು ಈ ವಚನಗಳು ಹೃದಯಂಗಮವಾಗಿ ಚಿತ್ರಿಸುತ್ತವೆ. ತನ್ನ ಮನಸ್ಸನ್ನು ಅತ್ತಿಯಹಣ್ಣಿಗೆ ಹೋಲಿಸಿಕೊಂಡು ಅದರಲ್ಲಿ ಪ್ರಾಪಂಚಿಕ ಆಮಿಷಗಳು ಹೇಗೆ ಹುಳುಗಳಂತೆ ಕಾಡುತ್ತಿವೆ ಎಂದು ಒಂದೆಡೆ ಹೇಳಿದರೆ, ಮತ್ತೊಂದೆಡೆ "ಮಾವಿನಕಾಯೊಳಗೊಂದು ಎಕ್ಕೆಯ ಕಾಯಿ ನಾನಯ್ಯ. ಆನು ಭಕ್ತನೆಂತೆಂಬೆ ನಿಮ್ಮ ಶರಣರ ಮುಂದೆ ನಾಚಿಕೆಯಿಲ್ಲದೆ" ಎಂದು ತನ್ನ ಕಿರಿತನವನ್ನು ಸೂಚಿಸುತ್ತಾನೆ. ತಾನು ಬ್ರಾಹ್ಮಣಕುಲದಲ್ಲಿ ಹುಟ್ಟಿದ್ದರಿಂದ ಅದರ ಹೆಮ್ಮೆಯು ಪ್ರಾಯಶಃ ಅವನನ್ನೂ ಎಷ್ಟೋ ವೇಳೆ ಕಾಡಿಸಿರಬೇಕು. ಅಂತಹ ಸನ್ನಿವೇಶಗಳಲ್ಲಿ ಅವನ ಜಾಗೃತಪ್ರಜ್ಞೆಯೂ ತನಗೆ ತಾನೇ ದೃಢಪಡಿಸಿಕೊಳ್ಳುವಂತೆ ಹೀಗೆ ಹೇಳಿಕೊಳ್ಳುತ್ತದೆ : "ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ". ತನ್ನಂತಹ ಕಲಂಕಪೂರ್ಣನನ್ನು ಶುದ್ಧನನ್ನಾಗಿಸುವಂತೆ ಶಿವನನ್ನೇ ಪ್ರಾರ್ಥಿಸುತ್ತಾನೆ. "ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ. ಒರೆಗೆ ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯಾ. ಕಡಿಹಕ್ಕೆ ಬಡಿಹಕ್ಕೆ ತಂದೆನ್ನಕಡೆಯಾಣಿಯ ಮಾಡಿ ನಿಮ್ಮ ಶರಣರ ಪಾದಕ್ಕೆ ಕಡೆಯಾಣಿಯ ಮಾಡಿ ಸಲಹಯ್ಯಾ" ಎಂಬ ವಚನದಲ್ಲಿ ಶಿವಭಕ್ತರಿಗೆ ತಾನು ಮೆಚ್ಚಿಕೆಯಾಗುವಂತೆ ಬಾಳಬೇಕೆಂಬ ಅವನ ಹಂಬಲ ವ್ಯಕ್ತವಾಗುತ್ತದೆ.

ಸಾಧನೆಯ ಈ ಪ್ರಾಮಾಣಿಕ ಚಿತ್ರಣ ನಮ್ಮಲ್ಲಿ ಬೆರಗು ಹುಟ್ಟಿಸುವಷ್ಟೇ ಸಾಮಾನ್ಯ ಭಾವುಕರಲ್ಲಿ ಭರವಸೆಯನ್ನೂ ಮೂಡಿಸುತ್ತದೆ.

ನಡೆ–ನುಡಿಗಳು ಒಂದೇ ಆಗಿರಬೇಕೆಂದು ಹೇಳಿದವನು ಬಸವಣ್ಣ, ಅದರಂತೆಯೇ ನಡೆದುಕೊಂಡವನೂ ಕೂಡ. ಒಬ್ಬ ವ್ಯಾಖ್ಯಾನಕಾರನು ಶರಣರ ವಚನಗಳನ್ನು ಶಿವಸುಖದ ಸಂತೃಪ್ತಿಯ ಅಭಿವ್ಯಕ್ತಿಯೆಂದು ಕರೆಯುತ್ತಾನೆ. ಈ ಮಾತು ಅವರ ವಿಶಿಷ್ಟಾನುಭವವನ್ನು ಹೇಳುವ ವಚನಗಳಿಗೆ ಅನ್ವಯಿಸುವ ಮಾತು. ಬಸವಣ್ಣನು ಇದಲ್ಲದೆ ಲೌಕಿಕ ನಡವಳಿಕೆಯ ಬಗ್ಗೆ ಹೇಳಿದ ಮಾತುಗಳನ್ನೂ ಅನುಷ್ಠಾನಕ್ಕೆ ತಂದು ತನ್ನ ಮಾತುಗಳಿಗೆ ಅರ್ಥಗೌರವವನ್ನುಂಟುಮಾಡಿದವನು, ತಾನು ಹಿರಿಯ ಅಧಿಕಾರದಲ್ಲಿದ್ದರೂ ಅದನ್ನೆಂದೂ ಹಿರಿದೆಂದು ಭಾವಿಸಿ ಹೆಮ್ಮೆಯಿಂದ ಬೀಗಿದವನಲ್ಲ. ಅದೊಂದು ಕಾಯಕ ಅಷ್ಟೆ. ಇತರರು ಮಾಡುವ ಕೆಲಸಕ್ಕೂ ತನ್ನ ಹುದ್ದೆಗೂ ಮೂಲಭೂತವಾದ ಯಾವ ವ್ಯತ್ಯಾಸವಿಲ್ಲವೆಂದೇ ಅವನ ಭಾವನೆ; ತಾನು ಬ್ರಾಹ್ಮಣನಾಗಿ ಜನ್ಮತಾಳಿದ್ದರೂ ಪ್ರಯತ್ನಪೂರ್ವಕವಾಗಿ ಆ ಭಾವನೆಯನ್ನು ತೊಡೆದು ಹಾಕಿ ಎಲ್ಲ ಜಾತಿ ಎಲ್ಲ ವೃತ್ತಿಗಳಿಗೆ ಸೇರಿದ ಇತರರ ಜೊತೆಯಲ್ಲಿ ಸೇರಿ ತನ್ನ ಆದರ್ಶ ಸಮಾಜ ಸ್ಥಾಪನೆಗೆ ಪ್ರಯತ್ನಿಸಿದನು. ಅವರ ಜೊತೆಯಲ್ಲಿ ಸೌಜನ್ಯಪೂರ್ಣವಾಗಿ ಬೆರೆತು ವಿಶ್ವಾಸ ಸಂಪಾದನೆ ಮಾಡಿದನು. ಇವನ ಹಿಂದೆ 'ಬಸವಣ್ಣ, ಬಸವಣ್ಣ' ಎಂದು ನೂರಾರು ಭಕ್ತರು ಪ್ರೀತಿವಾತ್ಸಲ್ಯಗಳಿಂದ ಕೂಡಿ ಅವನ ಮಾರ್ಗದರ್ಶನ, ಸಲಹೆಗಳನ್ನರಸುತ್ತ ಬರುತ್ತಿದ್ದ ಚಿತ್ರವನ್ನು ಕಲ್ಪಿಸಿಕೊಳ್ಳಬಹುದು.

ಬಸವಣ್ಣನೇನೂ ದೇವರ ಅಸ್ತಿತ್ವವನ್ನು ನಿರಾಕರಿಸಿದವನಲ್ಲ. ಆದರೆ "ಮಡಕೆ ದೈವ, ಮೊರ ದೈವ, ಬೀದಿಯ ಕಲ್ಲು ದೈವ, ಹಣಿಗೆ ದೈವ, ಬಿಲ್ಲನಾರಿ ದೈವ ಕಾಣಿರೊ. ಕೊಳಗ ದೈವ ಗಿಣ್ಣಿಲು ದೈವ, ಕಾಣಿರೊ !" ಎಂದು ಕಂಡದ್ದನ್ನು ಪೂಜಿಸಿ "ದೈವದೈವವೆಂದು ಕಾಲಿಡಲಿಂಬಿಲ್ಲ"ದ ಸ್ಥಿತಿಯನ್ನು ಮತ್ತಷ್ಟು ಹದಗೆಡಿಸಿದವನಲ್ಲ. ಅವನು ನಂಬಿದ್ದು, ಅನುಸರಿಸಿದ್ದು ಸಾತ್ವಿಕರೂಪದ ದೈವವನ್ನು; ಸಾತ್ವಿಕ ಭಕ್ತಿಯ ಮಾರ್ಗವನ್ನು. ಇದನ್ನು ಪಡೆಯಲು ಅವನು ಸೂಚಿಸಿದ್ದು ನಿರ್ಮಲ ಮನಸ್ಸು ಹಾಗೂ ಶುದ್ಧ ಜೀವನವನ್ನು. "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ; ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ; ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ; ಇದೇ ಅಂತರಂಗಶುದ್ಧಿ, ಇದೇ ಬಹಿರಂಗ ಶುದ್ಧಿ; ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ" ಎಂದು ಅತ್ಯಂತ ಸರಳವಾಗಿ ಭಕ್ತಿಮಾರ್ಗವನ್ನು ಅವನು ತಿಳಿಯ ಹೇಳಿದ. ದೊಡ್ಡ ದೊಡ್ಡ ಭಾಷ್ಯ ಟೀಕೆಗಳನ್ನೋದಲಾರದ, ಆಧ್ಯಾತ್ಮಿಕ ಸೂಕ್ಷ್ಮಗಳ ಬಗ್ಗೆ ಚರ್ಚೆಮಾಡಲಾಗದ ಸಾಮಾನ್ಯ ಮನುಷ್ಯನಿಗೆ ದೇವರು ತನಗೆ ದೂರ ಎಂಬ ಭಾವನೆಯಿದ್ದದ್ದು ಹೋಗಿ, ಈ ಮಾತುಗಳಿಂದ ಭರವಸೆಯುಂಟಾಗಿರಬೇಕು—ಆ ಕಾಲದಲ್ಲಿ.

ಬಸವಣ್ಣನ ವಚನಗಳ ಕಾವ್ಯ ಸೌಂದರ್ಯದ ಬಗ್ಗೆ ರಾಶಿ ರಾಶಿ ಬರೆಹ ಮೂಡಿಬಂದಿದೆ. ಯಾವ ದೃಷ್ಟಿಕೋನದಿಂದ ವಿಮರ್ಶಿಸಿದರೂ ರತ್ನದಂತೆ ಸ್ವಯಂಪ್ರಕಾಶಿತ ಕಾವ್ಯ ಇವನ ವಚನಗಳು. ಹೃದಯದಾಳದ ಪ್ರಾಮಾಣಿಕ ಅನುಭವವನ್ನು ಅತ್ಯಂತ ಪ್ರತಿಭಾಸಂಪನ್ನನೂ, ಭಾಷೆಯ ಕಸುವನ್ನು ತನ್ನ ರಕ್ತದಲ್ಲಿ ಸೇರಿಸಿಕೊಂಡವನೂ ಆದ ವ್ಯಕ್ತಿಯು ಮಾತಿನಲ್ಲಿ ಹೇಳಿದರೆ ಆಡಿದುದೆಲ್ಲ ಕಾವ್ಯವಾಗುತ್ತವೆ. ಬಸವಣ್ಣನು ಈ ರೀತಿ ಆಡಿದುದೆಲ್ಲ ಕಾವ್ಯವಾಯಿತು, ಮಾಡಿದುದೆಲ್ಲ ಪವಾಡವಾಯಿತು.

ಬಸವಣ್ಣ ನಮಗೇಕೆ ಆತ್ಮೀಯನಾಗಿದ್ದಾನೆ ಎಂದರೆ ಅವನ ಮಾತು—ಕೃತಿಗಳು, ಇವುಗಳನ್ನೊಳಗೊಂಡ ಅವನ ವರ್ಚಸ್ಸು ಎಂತಹವರನ್ನೂ ಆಕರ್ಷಿಸಬಲ್ಲವಾದುದರಿಂದ. ಹರಿಹರನ 'ಬಸವರಾಜ ದೇವರ ರಗಳೆ'ಯಲ್ಲಿ ಬರುವ ಒಂದು ಪ್ರಸಂಗ ಹೀಗಿದೆ : ಒಮ್ಮೆ ಕೆಲವು ವ್ಯಕ್ತಿಗಳು ಬಸವಣ್ಣನ ಡಾಂಭಿಕತನವನ್ನು ತಾವು ಬಯಲುಮಾಡಿ ಅವನನ್ನು ಬಂದಿವಿಡಿಯುತ್ತೇವೆಂದು ಜಂಗಮವೇಷವನ್ನು ಹಾಕಿಕೊಂಡು ಬದನೆಕಾಯಿಯನ್ನೇ

ಲಿಂಗವಂತೆ ಕಟ್ಟಿಕೊಂಡು ಇತರ ಜಂಗಮರ ಜೊತೆಯಲ್ಲಿ ಸೇರಿ ಬಸವಣ್ಣನ ಮನೆಗೆ ಬರುತ್ತಾರೆ. ಬಸವಣ್ಣನು ಬೇರೆಯವರಿಗೆ ಹೇಗೆಯೋ ಹಾಗೆ ಇವರಿಗೂ ಉಪಚಾರಮಾಡಿ, ಕರಡಿಗೆಯಲ್ಲಿನ ಲಿಂಗಕ್ಕೆ ಪೂಜೆ ಮಾಡಿರೆಂದು ಪೂಜಾ ಸಾಮಗ್ರಿಗಳನ್ನು ಕೊಡುತ್ತಾನೆ. ಆದರೆ ಬದನೆಕಾಯಿಗಳನ್ನು ಕಟ್ಟಿಕೊಂಡು ಬಂದಿದ್ದ ಅವರು ಹೇಗೆ ಕರಡಿಗೆಯನ್ನು ತೆಗೆಯಬಲ್ಲರು ! ಬಸವಣ್ಣನು ಬಲವಂತಮಾಡಿದುದರಿಂದ ನಿರ್ವಾಹವಿಲ್ಲದೆ ಅವರು ವಸ್ತ್ರದ ಹಿಂದೆ ಅಡಗಿದ್ದ ಬದನೆಕಾಯಿಗಳನ್ನು ತೆಗೆದಾಗ ಅವು ಲಿಂಗಗಳಾಗಿದ್ದುವಂತೆ. ಬಂದಿಕಾರರು ಭಕ್ತರಾದರಂತೆ ! ಬಸವಣ್ಣನಿಗೆ ಮೋಸಮಾಡಲು ಬಂದವರು ತಾವೇ ಅವನ ವರ್ಚಸ್ಸಿನ ಬಲೆಗೆ ಬಿದ್ದ ಈ ಪ್ರಸಂಗ ತುಂಬ ಮಾರ್ಮಿಕವಾಗಿದೆ. ಅವನನ್ನು ಎದುರಿಗೆ ಕಂಡವರೆಲ್ಲ ಅವನ ವ್ಯಕ್ತಿತ್ವಕ್ಕೆ ಮಾರುಹೋಗಿ ಪರಿವರ್ತಿತರಾಗುತ್ತಿದ್ದರೆಂಬುದು ಇಲ್ಲಿ ಸೂಚಿತವಾಗಿದೆ. ಈಗಲೂ ಅವನ ವ್ಯಕ್ತಿತ್ವಕ್ಕೆ ಎಲ್ಲರೂ ಮಾರುಹೋಗುವವರೇ.

ಬಸವಣ್ಣನ ವ್ಯಕ್ತಿತ್ವದ ಈ ಆಕರ್ಷಣೆ–ಸರಳತೆ–ಸೌಜನ್ಯಗಳು ಅವನ ನಿಚ್ಚಳವಾದ ಆದರ್ಶ, ವಾಸ್ತವ ಪ್ರಜ್ಞೆಗಳು, ಮಾರ್ದವತೆ–ಎಂದೂ ನಂಬಿಕೆಯನ್ನು ಬಲಿಗೊಡದ ದೃಢತೆಗಳು, ಪ್ರಾಮಾಣಿಕತೆ, ದಯಾಪರತೆಗಳು ಎಲ್ಲ ಕಾಲದ ಎಲ್ಲರನ್ನೂ, ಆಸ್ತಿಕರನ್ನಾಗಲೀ ನಾಸ್ತಿಕರನ್ನಾಗಲೀ, ಆಕರ್ಷಿಸುತ್ತವೆ.

ಪಾಪ ಪುಣ್ಯಗಳೆರಡೂ ಆತ್ಮನ ತೋರಿಕೆಯ ಆವಿರ್ಭಾವಗಳಾದರೂ ಪಾಪ ಅತಿ ಹೊರಗಿನ ಕವಚ, ಪುಣ್ಯ ಮಾನವನ ನೈಜತೆಗೆ ಸಮೀಪದಲ್ಲಿರುವುದು. ಮನುಷ್ಯ ಪಾಪದಿಂದ ಪಾರಾದ ಹೊರತು ಪುಣ್ಯವನ್ನು ಸೇರಲಾರ. ಅವನು ಪಾಪ ಪುಣ್ಯಗಳೆರಡರಿಂದಲೂ ಪಾರಾಗದೆ, ಆತ್ಮವನ್ನು ಸೇರಲಾರ.

ಪಿ. ಬಸವಣ್ಣ

ನಿರುಪಮಜ್ಞಾನಿ ನಿಜಗುಣಶಿವಯೋಗಿ

ಪಲವು ಮತಭೇದವಾದವನುಳಿದು ಸಂಶಯದ
ಹೊಲಬಿಲ್ಲದಾನು ನೀನೆಂಬುದಳಿದು
ಸಲೆ ನೇಮಸೀಮೆದೋರದ ಶಂಭುಲಿಂಗವಾ
ದುಳುಮೆ ಚಿನ್ಮಾತ್ರವದು ನಿಜಕಾಣಿರೈ ॥

ಎಂದು ನಿಜವನರಿದು, ಆ ನಿಜವ ಜಗಕರುಹಿ, ಕೊನೆಗೆ ಅದೇ ನಿಜದೊಳೈಕ್ಯವಾದ ನಿರುಪಮಜ್ಞಾನಿ ನಿಜಗುಣಶಿವಯೋಗಿಗಳ ಬಗ್ಗೆ ಬರೆಯುವುದೆಂದರೆ ಸುಲಭಸಾಧ್ಯವಲ್ಲ. ಆದರೂ ಇಲ್ಲಿ ಅವರ ಸ್ಥೂಲ ಪರಿಚಯ ಮಾತ್ರ ಕೊಡಲ್ಪಟ್ಟಿದೆ. ಅವರ ಮತ್ತು ಅವರ ಕೃತಿಗಳ ಬಗ್ಗೆ ಅವರನ್ನು ಅಭ್ಯಾಸಮಾಡದವರಲ್ಲಿ ಇನ್ನೂ ಹೆಚ್ಚಿಗೆ ತಿಳಿಯಬೇಕೆನ್ನಿಸುವಷ್ಟು ಆಸಕ್ತಿ ಮೂಡಿಸಿದರೆ ಈ ಲೇಖನವು ಸಾರ್ಥಕ.

ನಿಜಗುಣರೆಂಬ ಹೆಸರಿನಲ್ಲಿ ಸಾಹಿತ್ಯಪ್ರಪಂಚಕ್ಕೆ ಗೊತ್ತಾಗಿರುವವರು ಮೂರು ಜನ. ಅವರಲ್ಲಿ ಅದ್ವೈತರಾಮಾಯಣವನ್ನು ಬರೆದವರು ನಿಜಗುಣಾರ್ಯರು. ವಚನಕಾರರಾಗಿ ಮೆರೆದವರು ನಿಜಗುಣ ದೇವರು. ಷಟ್ಶಾಸ್ತ್ರಗಳ ಕರ್ತೃವಾಗಿ ಕನ್ನಡ ನಾಡಿನ ಮುಮುಕ್ಷುಗಳ ದಣಿವನ್ನು ತಣಿಸಿದವರು ನಿಜಗುಣ ಶಿವಯೋಗಿಗಳು ಕೊನೆಯವರ ಬಗ್ಗೆಯೇ ಈ ಪ್ರಸ್ತುತ ಲೇಖನ.

ನಿಜಗುಣರ ಕಾಲದ ಬಗ್ಗೆ ಹಾಗೂ ಜೀವನದ ಬಗ್ಗೆ ನಿಶ್ಚಿತವಾದ ಆಧಾರಗಳು ಇನ್ನೂ ದೊರಕದಿರುವುದು ವಿಷಾದಕರ. ಅವರು ಎಲ್ಲಿ ಹುಟ್ಟಿದರು, ಎಲ್ಲಿ ಬೆಳೆದರು, ಎಲ್ಲಿ ಐಕ್ಯವಾದರು ಎಂಬುದರ ಬಗ್ಗೆ ನಿರ್ದಿಷ್ಟವಾದ ಯಾವ ಮಾಹಿತಿಯೂ ದೊರಕಿಲ್ಲ. ಆದರೆ ಅವರು 15ನೇ ಶತಮಾನದ ಪೂರ್ವಾರ್ಧದಲ್ಲಿ ಇದ್ದಿರಬಹುದೆಂದು ಬಹುಪಾಲು ಚರಿತ್ರೆಕಾರರ ಅಭಿಪ್ರಾಯ ಮತ್ತು ಅವರು ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಚಿಲುಕವಾಡಿ ಗ್ರಾಮದ ಬಳಿಯಿರುವ ಶಂಭುಲಿಂಗನ ಬೆಟ್ಟದಲ್ಲಿ ಹಲವಾರು ವರ್ಷಗಳು ಯೋಗನಿಷ್ಠರಾಗಿದ್ದು ಅಲ್ಲಿಯೇ ಅವರ ಎಲ್ಲಾ ಕೃತಿಗಳನ್ನೂ ರಚಿಸಿದರೆಂದು ಎಲ್ಲಾ ಚರಿತ್ರೆಕಾರರು ಒಮ್ಮತದಿಂದ ನುಡಿಯುತ್ತಿದ್ದಾರೆ. ಅಲ್ಲಿ ಶಂಭುಲಿಂಗೇಶ್ವರ ದೇವಾಲಯವಿರುವುದರಿಂದಲೂ ಮತ್ತು ತಮ್ಮ ಇಷ್ಟದೈವವಾದ ಆ ಶಂಭುಲಿಂಗನ ಪವಿತ್ರನಾಮವನ್ನೇ ತಮ್ಮ ವಚನಗಳಿಗೆ ಅಂಕಿತವಾಗಿಟ್ಟುಕೊಂಡಿರುವುದರಿಂದಲೂ ಈ ಮಾತು ಸತ್ಯವೆಂದು ನಂಬಬಹುದು.

ಅವರ ಜೀವನದ ಬಗ್ಗೆ ಮತ್ತು ಅವರು ವೀರವಿರಕ್ತರಾದ ಬಗ್ಗೆ ಹಲವಾರು ರೀತಿಯ ಪ್ರಚಾರಗಳಿವೆ. ಅವರು ಮೇಲ್ಕಂಡ ಶಂಭುಲಿಂಗನ ಬೆಟ್ಟದ ಪಕ್ಕದಲ್ಲಿಯೇ ಇದ್ದಂತಹ ಗಾಳಿಪುರವೆಂಬಲ್ಲಿ ಒಬ್ಬ ಪಾಳ್ಯಗಾರರಾಗಿದ್ದರೆಂತಲೂ, ಅವರ ಧರ್ಮಪತ್ನಿಯು ಜಂಗಮಾರಾಧನೆಯಲ್ಲಿ ಶ್ರದ್ಧೆ ಭಕ್ತಿಗಳಿಲ್ಲದೆ ಒಬ್ಬ ಜಂಗಮರಿಗೆ ತಂಗಳನ್ನವನ್ನು ಕೊಟ್ಟದ್ದಕ್ಕೆ ಬೇಸರಗೊಂಡು, ಪದವಿಯನ್ನೂ ಸಂಸಾರವನ್ನೂ ತೊರೆದು ಶಿವಯೋಗಿಗಳಾದರೆಂದು ಬಹು ಜನರ

ನಂಬಿಕೆ. ಏನೇ ಇರಲಿ, ಮಾನ–ಅವಮಾನ, ಹಿತ–ಅಹಿತ, ಭೋಗ–ರೋಗ, ಲಾಭ–ನಷ್ಟ, ಸಂಪತ್ತು–ವಿಪತ್ತು, ಸುಖ–ದುಃಖ, ರಾಗ–ದ್ವೇಷ, ಶಮೆ–ಮೋಹ, ಮುನಿನರ್ತನೆ–ಲೋಕರಂಜನೆ ಮೊದಲಾದ ದ್ವಂದ್ವಗಳ ಜಡಜಗತ್ತನ್ನು ತೊರೆದು ತಿಳಿವು ತೆರೆದು ಸಾಗುವ ಅರಿವಿನ ತೊರೆಯಲ್ಲಿ ಈಸಿ ಜೈಸಬೇಕೆಂಬ ದೃಢಸಂಕಲ್ಪಕ್ಕೆ ಅವರ ಜೀವನದ ಯಾವುದೋ ಸಂದರ್ಭದಲ್ಲಿ ಒಮ್ಮೆ ಬಂದಿರಬಹುದೆಂದು ಹೇಳಬಹುದು. ಹಾಗೆ ಜೈಸಬೇಕಾದರೆ ಸುಲಭದ ಮಾತಲ್ಲ. ಅದಕ್ಕೆ ಸಾಕಷ್ಟು ಸಾಧನೆ ಆವಶ್ಯಕ. ಅಂತಹ ಸಾಧಕನು ಸದಾ ಪ್ರಕೃತಿಶ್ರೀಯ ಸಾನ್ನಿಧ್ಯ, ಏಕಾಂತ ಚಿಂತನೆ, ಅಂತರ್ಮುಖತೆ, ಅಧ್ಯಯನ, ಮನನ, ಅನುಸಂಧಾನಗಳನ್ನು ಬಯಸುವಂತೆ ತಾವೂ ಸಹ ಅವುಗಳನ್ನು ಬಯಸಿ ಅವುಗಳೆಲ್ಲಕ್ಕೂ ಅನುಕೂಲವಾಗಿದ್ದು ಪಾವನತೆ ರಮಣೀಯತೆಗಳ ಸಂಗಮದಂತಿದ್ದ ಶಂಭುಲಿಂಗನ ಬೆಟ್ಟಕ್ಕೆ ಬಂದು ನೆಲೆಸಿದ್ದರೆಂಬುದರಲ್ಲಿ ಯಾವ ಸಂಶಯವೂ ಇರಲಾರದು.

ಅವರ ವೈಯಕ್ತಿಕ ಜೀವನ ಹೇಗೋ ಇರಲಿ, ಅದರ ಗೊಡವೆಗೆ ಕೈಹಾಕದೆ ಅವರ ಕೃತಿಗಳ ಬಗ್ಗೆ ಅವಲೋಕಿಸೋಣ. ಕಾವ್ಯದ ತೆರೆಯ ಮೇಲೆ ನಿಂತು ಆಧ್ಯಾತ್ಮದಾಗಸವನ್ನು ಮುಟ್ಟಿದ ಈ ಉನ್ನತಜ್ಞಾನಿ, ಉದಾತ್ತಯೋಗಿ, ಉತ್ತಮಕವಿ, ಬಳಸದ ಗದ್ಯಪದ್ಯದ ಪ್ರಕಾರಗಳೇ ಇಲ್ಲವೆನ್ನಬಹುದು. ಹಾಡುಗಬ್ಬ, ದ್ವಿಪದಿ, ತ್ರಿಪದಿ, ಚೌಪದಿ, ಷಟ್ಪದಿ, ಅಷ್ಟಪದಿ, ಕಂದ, ಸಾಂಗತ್ಯ, ರಗಳೆ, ವೃತ್ತ ಮೊದಲಾದ ಅನೇಕ ಛಂದಸ್ಸುಗಳನ್ನು ಏಕಪ್ರಕಾರವಾದ ಸಹಜತೆ ಹಾಗೂ ಸುಭಗತೆಯಿಂದ ಬಳಸಿಕೊಂಡು ಕಾವ್ಯಗಳನ್ನು ರಚಿಸಿದ್ದಾರೆ. ಛಂದೋವೈವಿಧ್ಯದಲ್ಲಷ್ಟೇ ಅಲ್ಲ, ವಿಷಯ ವೈವಿಧ್ಯತೆಯಲ್ಲಿಯೂ ಇವರಿಗೆ ಸರಿದೂಗುವವರು ಬಹುವಿರಳ. ಭಕ್ತಿ, ಜ್ಞಾನ, ವೈರಾಗ್ಯ, ಅಧ್ಯಾತ್ಮ, ಯೋಗ, ನೀತಿ, ವ್ಯವಹಾರ, ವಿವೇಕ, ಶಾಸ್ತ್ರಪ್ರಮೇಯ, ಮತೀಯ ಹಾಗೂ ಮತಾತೀತವಾದ ವಿವಿಧ ವಿಷಯಗಳಲ್ಲಿಯೂ ಕೈಯಾಡಿಸಿದ್ದಾರೆ."ನಿಜಗುಣ ಶಿವಯೋಗಿಗಳು ಬಹುಮುಖವಾದ ಪ್ರತಿಭೆಯನ್ನು ಪಡೆದಿದ್ದ ಮಹಾಪುರುಷರು. ಶಾಸ್ತ್ರ–ಸಾಹಿತ್ಯ, ಲೌಕಿಕ–ಪಾರಮಾರ್ಥಿಕ, ಭಕ್ತಿ–ಜ್ಞಾನ, ದೊರೆತನ–ವಿರಕ್ತಿ, ಕಾವ್ಯ–ಸಂಗೀತ, ವ್ಯಷ್ಟಿ–ಸಮಷ್ಟಿ, ಸ್ವಮತನಿಷ್ಠೆ–ಪರಮತ ಸಹಿಷ್ಣುತೆ ಹೀಗೆ ಅನೇಕ ಮುಖಿಯಾಗಿ ಅವರ ಪ್ರತಿಭೆಯರಳಿ ನರುಗಂಪು ಸೂಸಿತು. ಆದುದರಿಂದ ವಿದ್ವತ್ತಿನಲ್ಲಿ, ಶಿವಯೋಗದಲ್ಲಿ, ವೇದಾಂತಶಾಸ್ತ್ರದಲ್ಲಿ, ಶಿವಾನುಭವ ವಿದ್ಯೆಯಲ್ಲಿ, ಲೌಕಿಕ ವ್ಯವಹಾರದಲ್ಲಿ, ಪಾರಮಾರ್ಥಿಕ ಜೀವನದಲ್ಲಿಯೂ ಇವರನ್ನು ಸರಿದೂಗುವವರು ಯಾರೂ ಇಲ್ಲವೆಂದು ಧೈರ್ಯದಿಂದ ಹೇಳಬಹುದು" ಎಂಬ ದಿವಂಗತ ಸಿ. ಜೆ. ನಂದಿಮಠ್ ಅವರ ಮಾತು ನಿಜಕ್ಕೂ ಒಪ್ಪಿಕೊಳ್ಳಬೇಕಾದದ್ದೆ.

ನಿಜಗುಣರ ಷಟ್ಶಾಸ್ತ್ರಗಳೆಂದೇ ಪ್ರಸಿದ್ಧಿ ಪಡೆದಿರುವ 1) ವಿವೇಕ ಚಿಂತಾಮಣಿ 2) ಪರಮಾನುಭವ ಬೋಧೆ 3) ಅನುಭವಸಾರ 4) ಪರಮಾರ್ಥ ಗೀತೆ 5) ಪಾರಮಾರ್ಥ ಪ್ರಕಾಶಿಕೆ 6) ಕೈವಲ್ಯ ಪದ್ಧತಿ ಎಂಬವುಗಳೇ ಅವರ ಆರು ಪ್ರಮುಖ ಕೃತಿಗಳು. ಇವಲ್ಲದೆ ತಿರುನೀಲಕಂಠರ್, ನಂಬಿಯಣ್ಣ, ಸಿರಿಯಾಳಶೆಟ್ಟಿ ಮೊದಲಾದ ಅರವತ್ತುಮೂರು ಪುರಾತನರನ್ನು ಕುರಿತು ಒಬ್ಬೊಬ್ಬರಿಗೆ ಒಂದೊಂದು ತ್ರಿಪದಿಯಂತೆ "ಪುರಾತನರ ತ್ರಿವಿಧಿ" ಯನ್ನೂ ಸಹ ರಚಿಸಿದ್ದಾರೆ. ಈಚೆಗೆ ಮೈಸೂರು ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿ ಸಹಾಯಕ ಸಂಶೋಧಕರಾಗಿರುವ ವಿದ್ವಾಂ ಶ್ರೀ ಎಂ.ಎಸ್.ಬಸವರಾಜಯ್ಯನವರು ಪರಂಜ್ಯೋತಿಯತಿಗಳ "ಅನುಭವಮುಕುರ" ಎಂಬ ಆಧ್ಯಾತ್ಮ ಗ್ರಂಥಕ್ಕೆ "ಸ್ವರೂಪ ಸಿದ್ಧಿ"ಯೆಂಬ ಟೀಕೆಯನ್ನು ಈ ನಿಜಗುಣ ಶಿವಯೋಗಿಗಳೇ ಬರೆದಿದ್ದಾರೆಂದು ಅಭಿಪ್ರಾಯ ಪಟ್ಟಿದ್ದಾರೆ. ಆ ನಿಜಗುಣರೇ ಬೇರೆ ಎಂದು ಕೆಲವು ವಿದ್ವಾಂಸರ ಅಭಿಪ್ರಾಯ. ಇದರ ಬಗ್ಗೆ ಇನ್ನೂ ಸಂಶೋಧನೆ ನಡೆಯಬೇಕಾಗಿದೆ. ಇಷ್ಟೇ ಅಲ್ಲದೆ "ದರ್ಶನಸಾರ", "ಆತ್ಮತರ್ಕಚಿಂತಾಮಣಿ" ಎಂಬ ಎರಡು ಸಂಸ್ಕೃತ ಗ್ರಂಥಗಳನ್ನು ಸಹ ಬರೆದಿದ್ದಾರೆಂದು ತಿಳಿದುಬಂದಿದೆ. ಅವು ಈ ತನಕ ಉಪಲಬ್ಧವಾಗಿಲ್ಲ.

೧. **ವಿವೇಕ ಚಿಂತಾಮಣಿ:** ಇದು ಕನ್ನಡದಲ್ಲಿ ಮೊತ್ತಮೊದಲಿನ ವಿಶ್ವಕೋಶ. ಇದನ್ನು ರಚಿಸಲಿಕ್ಕೆ

6000 ಗ್ರಂಥಗಳಿಂದ ವಿಷಯ ಸಂಗ್ರಹಿಸಿರುವಂತೆ ತಿಳಿದು ಬರುತ್ತದೆ. ಆ ಕಾಲಕ್ಕೆ ತಿಳಿದಿದ್ದ ಎಲ್ಲಾ ವಿಚಾರಗಳನ್ನೂ ಇದರಲ್ಲಿ ಉಲ್ಲೇಖಿಸಿದ್ದಾರೆ. ಇದರ ಪ್ರಾರಂಭದಲ್ಲಿಯೇ

ಶ್ರೀಮದನೇಕ ಲೋಕಹಿತಮಾಗಿರೆ ವೇದ ಪುರಾಣಶಾಸ್ತ್ರದೊ
ಳ್ನೇಮಿಸಿ ತೋರ್ಪ ವಿಶ್ವವಿಷಯಂಗಳ ಸಂಸ್ಥಿತಿಯಂ ವಿವೇಕಚಿಂ
ತಾಮಣಿಯೆಂಬ ಸಲ್ವ ಪೆಸರಿಟ್ಟು ಮಹಾಕವಿತಾಪ್ರಬಂಧಮಂ
ಪ್ರೇಮದಿ ಪೇಳ್ವೆ ನಾನಿದನೆ ನೀನೊಲಿದಾಲಿಸು ಶಂಭುಲಿಂಗವೇ ॥

ಎಂದು ವೇದಪುರಾಣ ಶಾಸ್ತ್ರಗಳಲ್ಲಿ ಅಡಕವಾಗಿರುವ ವಿಶ್ವವಿಷಯಗಳ ಸ್ಥಿತಿಗತಿಗಳನ್ನು ಹೇಳುತ್ತಿರುವುದಾಗಿ ನಿವೇದಿಸಿ ತನ್ನ ಇಷ್ಟದೈವವಾದ ಶಂಭುಲಿಂಗನನ್ನು ಒಲಿದಾಲಿಸುವಂತೆ ಕೇಳಿದ್ದಾರೆ. ಮತ್ತು "ಸ್ಮೃತಿ ಪುರಾಣೇತಿಹಾಸಪುರಾತನೋಕ್ತಿಗಳ ಅನುಸಾರದಿಂದ ಅನುಭವಿಗಳು ಅಹುದೆನಿಸಿಪ್ಪಂತೆ ಸ್ವಕಪೋಲಕಲ್ಪಿತವಲ್ಲದ ಸಾರತರಮಾದ ಸತ್ಯಾರ್ಥಂಗಳಿಗೆ ಸಂಗ್ರಹಿಸಿ ಮುನ್ನುಳ್ಳ ಮಣಿಪುಂಜಮಂ ರಂಜನಂಗೆಯ್ವ ತೆರನರಿತು ಸರಂಗೊಳಿಸಿ ನವೀನ ಕಂಠಾಭರಣಮೆನಿಸುವಂತೆ ಮುಮುಕ್ಷುಜನಂಗಳು ಈ ಜಗತ್ತಿನ ಸ್ಥಿತಿಗಳು ಆವ ಪ್ರಕಾರದಿಂದಪ್ಪುವೆಂದರಸಿ ಬಳಲದೆ ಅಭಿವ್ಯಕ್ತಮಾಗಿಲ್ಲಿಯೆ ಸಲೀಲೆಯಿಂದರಿದು ಕೃತಾರ್ಥರಾಗಲೆಂದು ನಿಜಗುಣ ಶಿವಯೋಗಿ ಜಿಳುಗನ್ನಡಮಾದ ವಚನರಚನೆಗಳಿಂ ವಿವೇಕ ಚಿಂತಾಮಣಿಯೆಂಬ ಪ್ರಕರಣಮಂ ಪೇಳ್ದಂ" ಎಂದು ಆ ಗ್ರಂಥದ ವಿಷಯಗಳನ್ನೂ, ಅದರ ಸಮುದ್ದೇಶವನ್ನೂ ತಿಳಿಸಿದ್ದಾರೆ. ಇದರಲ್ಲಿ ಕೈವಲ್ಯೋಪಾಯಕಥನ, ಸಪ್ತದ್ವೀಪವರ್ಣನ, ದೇವಲೋಕಸ್ಥಿತಿವರ್ಣನ, ಪೃಥಿವ್ಯಾದಿ ತತ್ತ್ವವರ್ಣನ, ಶುದ್ಧಭುವನಸ್ಥಿತಿವರ್ಣನ, ಕಾಲಕ್ರಮವರ್ಣನ ಮೊದಲಾದ ಹತ್ತು ಪ್ರಕರಣಗಳಿವೆ. ವೇದ, ವೇದಾಂಗ, ಉಪನಿಷತ್, ಆಗಮ ಮೊದಲಾದವುಗಳ ವರ್ಗೀಕರಣ, ತರ್ಕ, ನ್ಯಾಯ, ಜ್ಯೋತಿಷ, ಮೀಮಾಂಸ ಮೊದಲಾದ ಹಲವಾರು ಶಾಸ್ತ್ರಗಳ ಪರಿಚಯಮಾಡಿಸಿದ್ದಾರೆ. ಕಾಮಶಾಸ್ತ್ರವನ್ನೂ ಸಹ ಬಿಟ್ಟಿಲ್ಲ. ಗರ್ಭೋತ್ಪತ್ತಿಕ್ರಮ ಮತ್ತು ಅದು ನವಮಾಸವಲ್ಲಿ ಬೆಳೆಯುವ ಹಂತಹಂತಗಳನ್ನೂ ಸಹ ವಿವರಿಸಿದ್ದಾರೆ. ಸಂಗೀತ ಶಾಸ್ತ್ರದ ಬಗ್ಗೆ ಬಹಳವಾಗಿ ತಿಳಿಸಿದ್ದಾರೆ, ಕನ್ನಡದ ಪ್ರಥಮ ವಾಗ್ಗೇಯಕಾರರಾದ ಇವರು ಸ್ವರೋತ್ಪತ್ತಿಕ್ರಮ, ರಾಗೋತ್ಪತ್ತಿ ಕ್ರಮ, ರಾಗಾಂಗಗಳು, ಶುದ್ಧಮಿಶ್ರಸಂಕೀರ್ಣರಾಗಗಳು, ವಾದ್ಯಭೇದಗಳು, ತಂತ್ರೀವಾದ್ಯಗಳು, ತಾಳಭೇದಗಳು ಹೀಗೆ ಹಲವಾರು ವಿಷಯಗಳನ್ನು ನಾಲ್ಕನೇ ಪ್ರಕರಣದಲ್ಲಿ ವಿವರಿಸಿದ್ದಾರೆ. ಇದರ ಮಹತ್ವಕ್ಕೆ ಮಾರುಹೋಗಿ 16ನೇ ಶತಮಾನದಲ್ಲಿ ಶಾಂತಲಿಂಗದೇಶಿಕರು ಮರಾಠಿಗೂ, 17ನೇ ಶತಮಾನದಲ್ಲಿ ಶಿವಪ್ರಕಾಶ ಸ್ವಾಮಿಗಳು ತಮಿಳಿಗೂ, 18ನೇ ಶತಮಾನದಲ್ಲಿ ಕೊಡಗಿನ ಲಿಂಗರಾಜರು ಸಂಸ್ಕೃತಕ್ಕೂ ಅನುವಾದ ಮಾಡಿದ್ದಾರೆ. ಈ ಗ್ರಂಥದ ಘನತೆಯನ್ನು ಕುರಿತು ಆ ಸಂಸ್ಕೃತ ಗ್ರಂಥದಲ್ಲಿ ಲಿಂಗರಾಜರು ಈ ರೀತಿ ಹೇಳುತ್ತಾರೆ.

"ವಿವೇಕಚಿಂತಾಮಣಿರಬ್ಜಜನ್ಮನಾ
ಚಿಂತಾಮಣಿಃ ಪ್ರಾಕ್ತುಲಿತಃ ಸಕೌತುಕಂ
ಪೂರ್ವೋ ಗುರುರ್ಲಿಂಗನೃಪಂ ಸಮಾಗಮಾತ್
ಗೀರ್ವಾಣಹೇತೋರಪರೋ ಲಘುರ್ಹರಿಂ"

ಅಂದರೆ, ಹಿಂದೆ ಬ್ರಹ್ಮದೇವನು ಕುತೂಹಲಕ್ಕಾಗಿ ವಿವೇಕಚಿಂತಾಮಣಿಯ ಘನತೆಯನ್ನು ತೂಗಲು ಸುರಲೋಕದ ಚಿಂತಾಮಣಿಯೊಡನೆ ತಕ್ಕಡಿಯಲ್ಲಿಟ್ಟನಂತೆ. ವಿವೇಕಚಿಂತಾಮಣಿಯು ಘನತರವಾದುದರಿಂದ ಲಿಂಗರಾಜನ ಕೈಸೇರಿತಂತೆ, ದೇವಚಿಂತಾಮಣಿಯು ಲಘುವಾದುದರಿಂದ ದೇವೇಂದ್ರನನ್ನು ಸೇರಿತಂತೆ–ಎಂದು ಉತ್ಪ್ರೇಕ್ಷೆಯಿಂದ ಬಣ್ಣಿಸಿದ್ದಾನೆ. ಇದೆಲ್ಲವನ್ನೂ ನೋಡಿದಾಗ ಈ ಕೃತಿಯ ಘನತೆಯು ಎಷ್ಟೆಂಬುದು ತಿಳಿಯುತ್ತದೆ.

೩. **ಪರಮಾನುಭವಬೋಧೆ** : ಇದು 6 ಸಂಧಿಗಳಲ್ಲಿ 982 ಸಾಂಗತ್ಯಗಳನ್ನೊಳಗೊಂಡ ಸರಳ ಸುಂದರ

ಗ್ರಂಥ. ಬೃಹದಾರಣ್ಯಕೋಪನಿಷತ್ತಿನ ತಿರುಳು. ಯಾಜ್ಞವಲ್ಕ್ಯ–ಮೈತ್ರೇಯಿಯರ ಸಂವಾದದ ಕನ್ನಡದ ವಿಸ್ತಾರ ರೂಪ. ಅವರ ಮಾತಿನಲ್ಲೇ ಹೇಳುವುದಾದರೆ

ವಿರಚಿಸುವೆನು ಯಾಜ್ಞವಲ್ಕ್ಯ–ಮೈತ್ರೇಯಿಯ
ವರಸಂವಾದವನೆ ಕನ್ನಡಮಾಗಿ
ಪರಮಾರ್ಥವಿದು ಪರತರವೆಂದು ಪೊಗಳೆ ವಿ
ಸ್ತರವಾಗಿ ಸಾಧಕರರಿವಂತೆ

ಎಂದು ತಿಳಿಸಿದ್ದಾರೆ.

ನಿಜವನರಿತ ಮಹಂತರೂ, ಮಹಾದಾರ್ಶನಿಕರೂ, ಯೋಗನಿಷ್ಠರೂ, ಬಹುಶ್ರುತಮತಿಗಳೂ, ಪ್ರಕಾಂಡ ಪಂಡಿತರೂ, ಪ್ರತಿಭೆಯೇ ಮೈದಳೆದ ಮೇಧಾವಿಗಳೂ, ಅನುಭಾವಸಾಹಿತ್ಯದ ಸೀಮಾಪುರುಷರೂ ಆದ ಶ್ರೀ ನಿಜಗುಣ ಶಿವಯೋಗಿಗಳು ಎಷ್ಟು ವಿನಮ್ರರು,ಎಂತಹ ವಿಶಾಲಹೃದಯಿಗಳು ಎಂಬುದಕ್ಕೆ ಈ ಗ್ರಂಥದ ಪೀಠಿಕಾ ಪ್ರಕರಣದ

ಅವರಿವರೆನ್ನದೆ ನಿಜವರಿದವರಂಘ್ರಿ
ಗವನತನಾಗಿ ಸಂತಸದಿಂದೆ
ತವೆ ರಮ್ಯವಾದುದೆಂದೆನೆ ಪೇಳ್ವೆನಧ್ಯಾತ್ಮ
ಸುವಿಚಾರಗತಿಯನೀ ಕ್ರಮದಿಂದೆ

ಎಂಬ ಪದ್ಯವೇ ಸಾಕ್ಷಿಯಾಗಿದೆ.

ನಿಜಗುಣರು ಆಧ್ಯಾತ್ಮ ಜೀವಿಗಳಾದರೂ ಎಂತಹ ಶೃಂಗಾರಪ್ರಿಯರೆಂಬುವನ್ನು ಈ ಗ್ರಂಥದಲ್ಲಿ ತಿಳಿಯ ಬಹುದು. ಆಧ್ಯಾತ್ಮದಂತಹ ನೀರಸವಾದ ವಿಷಯವನ್ನೂ ಸಹ ಶ್ರೇಷ್ಠಕವಿಯಾದವನು ಹೇಗೆ 'ರಸಮೊಸರ್ವಂತೆ' ಹೇಳಬಲ್ಲನೆಂಬುದಕ್ಕೆ ಒಂದು ನಿದರ್ಶನಗ್ರಂಥವಾಗಿದೆ. ಇದರಲ್ಲಿ ಅವರ ಕಾಂತಾಸಮ್ಮಿತ ಕಾವ್ಯಶಕ್ತಿಯನ್ನು ಅಳೆಯಬಹುದು. ಇಲ್ಲಿ ಯಾಜ್ಞವಲ್ಕ್ಯರು ಮೈತ್ರೇಯಿಯನ್ನು ಪದ್ಮಾಕ್ಷಿ, ಚಂದ್ರಮುಖಿ, ಪಲ್ಲವಾಧರೆ, ಸುಭಗೆ, ಕನಕಾಂಗಿ, ಕಲಶಕುಚೆ, ಮನೋರಮೆ, ಗಜಗಮನೆ, ಚಂದನಗಂಧಿ ಇತ್ಯಾದಿಯಾಗಿ ಸಂಸ್ಕೃತಭೂಯಿಷ್ಠವಾಗಿಯೂ ಪೆರೆನೊಸಲೆ, ಹೆಂಗಳರನ್ನೆ, ತಳಿರಡಿಯಳೆ, ತೋರಮುಡಿಯಳೆ, ನಗೆಮೊಗದರಸಿ, ಮಿಸುನಿವರ್ಣದ ಮೈಯ್ಯಳೆ, ಪರನೆಗುರುಳೆ, ಚಲ್ಲೆಕಂಗಳೆ, ಏರುಜವ್ವನೆ ಇತ್ಯಾದಿಯಾಗಿ ಬೆಳುಗನ್ನಡದಲ್ಲಿಯೂ ಸಂಬೋಧಿಸಿರುವುದನ್ನು ನೋಡಿದರೆ ನಿಜಗುಣರು ಎಂತಹ ಉತ್ತಮರಸಿಕರೆಂಬುದನ್ನು ನಾವು ಮನಗಾಣಬಹುದು.

ಅಲ್ಲದೆ ಆತ್ಮಸ್ವರೂಪವನ್ನು ಸುಗಮವಾಗಿ ಬೋಧಿಸುವುದರಿಂದ ಇದೊಂದು ಶ್ರವಣಗ್ರಂಥ. ಇದು ಲೋಕ ಹಿತಾರ್ಥವಾದ ಗ್ರಂಥವೆಂದೂ,ವೇದವೇದಾಂತದೊಳು ಗೋಪ್ಯವಾದರ್ಥವೆಂದೂ, ಪುರಾಣಸ್ಮೃತಿಗಳ ಸಾರವೆಂದೂ, ಪರಮಾರ್ಥದ ತಿರುಳೆಂದೂ, ತತ್ವರಹಸ್ಯವೆಂದೂ ಬರೆದಿದ್ದಾರೆ.

೩. **ಅನುಭವಸಾರ** : ಇದು ಉಪನಿಷತ್ತುಗಳ ಸಾರಸರ್ವಸ್ವ. ತ್ರಿಪದಿಯಲ್ಲಿದೆ. ಇದೂ ಸಾಮಾನ್ಯ ವಾದ ಗ್ರಂಥವಲ್ಲ.

ಇದು ವೇದಶಿರದರ್ಥವಿದು ಸಕಲಶಾಸ್ತ್ರೋಕ್ತ
ಇದು ಪುರಾತನರ ಮತವಿದು ಗುರೂಕ್ತಿ ಮ
ತ್ತಿದು ತತ್ವವಿದರ ನಿಜಮಾರ್ಗ

ಎಂದು ಈ ಗ್ರಂಥವನ್ನು ನಿಜಗುಣರೇ ವಿವರಿಸಿದ್ದಾರೆ. ಇದರಲ್ಲಿ 1) ಚಿದ್ವಿವರ್ತಸ್ವರೂಪನಿರ್ಣಯ 2) ಜೀವೇಶ್ವರ ಸ್ವರೂಪ ನಿರ್ಣಯ 3) ಭೇದನಿರಾಕರಣ 4) ಅನಾತ್ಮನಿರಾಕರಣ 5) ಚಿದಚಿದ್ವಿವೇಕ, 6) ಬಂಧ

ಮುಕ್ತಿ ಲಕ್ಷಣ 7) ಜೀವನ್ಮುಕ್ತನ ನಿರ್ಲೇಪಸ್ಥಿತಿ 8) ಆನಂದಾವಿರ್ಭಾವ ಎಂದು ವಿಂಗಡಿಸಲ್ಪಟ್ಟಿರುವ 8 ಸಂಧಿಗಳಿವೆ. ಇದು ಯುಕ್ತಿಪ್ರಾಧಾನ್ಯಮೂಲಕ ಬೋಧಿಸುವುದರಿಂದ ಈ ಗ್ರಂಥವನ್ನು ಮನನಗ್ರಂಥವೆನ್ನಬಹುದು.

೪. **ಪರಮಾರ್ಥಗೀತೆ** : ಇದು ಯೋಗವಾಸಿಷ್ಠಾದಿಗಳಲ್ಲಿ ಪ್ರತಿಪಾದಿತವಾಗಿರುವ ತತ್ವಾರ್ಥದ ಕನ್ನಡ ರೂಪಾಂತರ. ನಿಜಗುಣರೇ ಇದರ ಬಗ್ಗೆ

ಕೇಳಿಲೆ ವಾಸಿಷ್ಠಾದಿಗಳಲ್ಲಿ
ಪೇಳದ ತತ್ತ್ವಾರ್ಥವನಿಂದಿಲ್ಲಿ
ನಿನಗರುಪುವೆ ನಾಽೀ ಗೀತೆಯೊಳು
ತನುಜನೆ ಪೇಳ್ವೆ ತಿಳಿದೊಲವಿನೊಳು

ಎಂದು ವಿವರಣೆ ನೀಡಿದ್ದಾರೆ. ಇದು ಲಲಿತರಗಳೆಯಲ್ಲಿದೆ, ಅಲ್ಲಲ್ಲಿ ಕೆಲವು ಕಂದಪದ್ಯಗಳೂ ಸಹ ಇವೆ. ಪರಮಾನುಭವಬೋಧೆ ಮತ್ತು ಅನುಭವಸಾರಗ್ರಂಥಗಳು ಕ್ರಮವಾಗಿ ಶ್ರವಣ, ಮನನ ಗ್ರಂಥಗಳಾದರೆ, ಪ್ರತಿ ಪದಕ್ಕೂ ಅನಾತ್ಮಾಕಾರವನ್ನು ತೆಗೆದುಹಾಕಿ ಆತ್ಮಾಕಾರ ಸ್ವರೂಪ ವೃತ್ತಿಯನ್ನುಂಟುಮಾಡುವುದರಿಂದ ಇದನ್ನು ನಿದಿಧ್ಯಾಸನ ಗ್ರಂಥವೆನ್ನಬಹುದು.

೫. **ಪಾರಮಾರ್ಥಪ್ರಕಾಶಿಕೆ** : ಇದು ಯೋಗಶಾಸ್ತ್ರಪ್ರತಿಪಾದನಾ ಗ್ರಂಥ. ಗದ್ಯಾತ್ಮಕವಾದುದು. ಇದರಲ್ಲಿ ಯೋಗದ ಅಷ್ಟಾಂಗಗಳನ್ನೂ ಯೋಗದ ಪ್ರಭೇದಗಳಾದ ಮಂತ್ರ,ಲಯ, ಹಠ, ರಾಜಯೋಗಗಳ ಜೊತೆಗೆ ಶಿವಯೋಗವನ್ನೂ ಸಹ ವಿವರಿಸಲಾಗಿದೆ. ಚೆನ್ನಸದಾಶಿವಯೋಗಿಗಳ "ಶಿವಯೋಗಪ್ರದೀಪಿಕೆ"ಯನ್ನು ಆಧರಿಸಿ ವಿಸ್ತರಿಸಿ ಬರೆದಿರುವುದಾಗಿ ಈ ಗ್ರಂಥದ ಮೊದಲನೆಯ ಪರಿಚ್ಛೇದದ ಪ್ರಾರಂಭದಲ್ಲಿಯೇ "ಅನಿಮಿತ್ತಬಂಧುತ್ವದಿಂ ನೆನೆದು ನೋಡಿ, ಸಂಸ್ಕೃತ ಶಬ್ದ,ವ್ಯಾಕರಣ ಪ್ರಮಾಣಾದಿಗಳ ಲಕ್ಷಣ ಶಿಕ್ಷಣವಿಲ್ಲದ ಮೋಕ್ಷಮಾತ್ರಾಪೇಕ್ಷಿಗಳಾದ ಸಾಧುಜನಂಗಳಿಗಾಯಾಸವಿನಿತಿಲ್ಲದೋದಿ ಕೇಳಿ, ತಿಳಿದು ಕೃತಾರ್ಥರಾಗಲೆಂದು 'ಶಿವಯೋಗ ಪ್ರದೀಪಿಕೆ' ಎಂಬ ವಿಶಿಷ್ಟಯೋಗಶಾಸ್ತ್ರದ ಗ್ರಂಥಗಳನ್ವಯ ತಾತ್ಪರ್ಯವನ್ನೇ ಸೂಪಶಾಸ್ತ್ರ ಸಮ್ಮತದಿಂ ಕೂಡಿಮಾಡಿದ ಸುಪದಾರ್ಥ ದಂದವನರಿದೊಂದಿನಿಸು ತುಪ್ಪವ ನೆರೆದೊಪ್ಪವಾಗಿ ಪ್ರೌಢಮಡೆಗೆಗೊಟ್ಟು ಮಹಾಸ್ವಾದುಗೊಳಿಸುವಂತೆ ಲಾಲಿತ್ಯ ಮಾದ ಮಾಲಾಟೀಕಾನುರೂಪದಿಂ ನೇರಿತ್ತಾಗಿ ಸೇರುವೆಗೆಯ್ದು ಸಕಲ ಯೋಗೀಶ್ವರರೊಡಂಬಡುವಂತೆ..." ಬರೆದಿರುವೆನೆಂದು ಅವರೇ ಗ್ರಂಥದ ಉದ್ದೇಶ ಹಾಗೂ ಗ್ರಂಥಾಧಾರಗಳನ್ನು ತಿಳಿಸಿದ್ದಾರೆ.

೬. **ಕೈವಲ್ಯಪದ್ಧತಿ** : ಇದು ಹೃದಯವನ್ನು ಮಿಡಿಯುವ ಹಾಡುಗಬ್ಬಗಳಿಂದ ಕೂಡಿದೆ. ಶಿವಾಗಮಗಳ ಹಾಗೂ ಉಪನಿಷತ್ತುಗಳ ಸುಮಧುರಸಮನ್ವಯವನ್ನು ಇದರಲ್ಲಿ ಕಾಣಬಹುದು. ಅವರೇ ಹೇಳಿರುವಂತೆ ಇದು "ಯೋಗಿ ನಿಜಾನಂದದೊಳು ನುಡಿಸುವ ವೀಣೆ ರಾಗರಸವತರಂಗಿಣಿ"ಯಾಗಿ ಹರಿದಿದೆ. ಇದು "ಸರಸ ಸಂಗೀತ ಸಾಹಿತ್ಯ ಸಲ್ಲಾಪ"ನಾದ ಶಂಭುಲಿಂಗನು "ಶರಣ ಸತಿಯನೊಲಿಸುವ ಸತ್ಕಲಾಪ." ಇದರಲ್ಲಿ ಮನಂಬುಗುವ ಭಕ್ತಿಶ್ರೀ ಚಿತ್ತವನ್ನು ಸೂರೆಗೊಳ್ಳುವ ಸಂಗೀತಶ್ರೀಯಲ್ಲಿ ಸಮ್ಮಿಲನಗೊಂಡು ಸಮ್ಮೋಹಕವಾಗಿ ಪ್ರವಹಿಸಿ ಜ್ಞಾನ ಶ್ರೀಯಲ್ಲಿ ಐಕ್ಯಗೊಂಡಿದೆ. ಇದರಲ್ಲಿ ಶಾಸ್ತ್ರದ ಗಾಂಭೀರ್ಯ, ಸಾಹಿತ್ಯದ ಸೌಂದರ್ಯ, ಸಂಗೀತದ ಮಾಧುರ್ಯ ಮೂರೂ ಮುಪ್ಪುರಿಗೊಂಡು ತ್ರಿವೇಣಿ ಸಂಗಮವಾಗಿರುವುದನ್ನು ಕಾಣಬಹುದು. ವಿಪುಲವಾದ ವಿದ್ಯಾಪ್ರತಿಭೆ ಯಿಂದಲೂ, ದೀರ್ಘವಾದ ತಪಶ್ಚರ್ಯೆಯಿಂದಲೂ ಜ್ಞಾನದ ತುತ್ತತುದಿಗೇರಿ ಆನಂದವನ್ನನುಭವಿಸಿ, ತಾವು ಕಂಡುಂಡ ಆನಂದದ ಸವಿಯನ್ನು ಮೋಕ್ಷಾಪೇಕ್ಷಿಗಳಿಗೆ ಕೆಳಗಿಳಿದು ಬಂದು ಇದರ ಮೂಲಕ ಹಂಚಿದ್ದಾರೆ. ಈ ಕಾವ್ಯದ ಉದ್ದೇಶ ಹಾಗೂ ಬಾಹುಳ್ಯತೆಯನ್ನು ಕುರಿತು ಅವರೇ "ಆಬಾಲವೃದ್ಧರಿಗಾಯಾಸವಿನಿತಿಲ್ಲದಂತೆ

ಸಮ್ಯಗ್ಜ್ಞಾನಿಗಳೊಡಂಬಡುವಂತೆ ಸಕಲ ವೇದವೇದಾಂತಾಗಮಸ್ಮೃತಿಪುರಾಣಇತಿಹಾಸಸೂತ್ರಾದಿ ಶಾಸ್ತ್ರಸಮ್ಮತದಿಂ ಪುರಾತನಗೀತಾನುಗುಣ್ಯಮೆನಿಸಿ ಪೇಳ್ದಂ" ಎಂದು ಹೇಳಿದ್ದಾರೆ.

ಜೀವನು ಮೋಕ್ಷವನ್ನು ಪಡೆಯಬೇಕಾದಲ್ಲಿ ಮೊದಲು ಶಿವಕಾರುಣ್ಯವನ್ನು ಪಡೆಯಬೇಕು. ಏಕೆಂದರೆ ಶಿವ ಕಾರುಣ್ಯವಿಲ್ಲದೆ ಇದ್ದಲ್ಲಿ ಜೀವನಲ್ಲಿ ಜಾಗೃತಿಯುಂಟಾಗುವುದಿಲ್ಲ. ಜಾಗೃತಿಯಿಲ್ಲದ ಜೀವನಲ್ಲಿ ನೀತಿ ಮತ್ತು ಕ್ರಿಯೆಗಳ ಆಚರಣೆಗೆ ಅವಕಾಶವಿಲ್ಲ. ಅವುಗಳ ಆಚರಣೆಯಿಲ್ಲದೆ ಬಹಿರಂತರಂಗಗಳ ಶುದ್ಧಿಗಾಗಿ ಬೇಕಾದ ಮಂತ್ರ,ಲಯ, ಹಠ, ರಾಜ ಹಾಗೂ ಶಿವಯೋಗಗಳನ್ನು ಅನುಸರಿಸಲಾಗುವುದಿಲ್ಲ. ಯೋಗಸಾಧನೆಯ ಮೂಲಕ ಅಂತಹ ಶುದ್ಧಿಯಾಗದೆ ಜ್ಞಾನವು ಲಭಿಸುವುದಿಲ್ಲ. ಆದುದರಿಂದ ಹಂತಹಂತವಾಗಿ ಮೋಕ್ಷಸಾಧನೆಯ ಸೋಪಾನಗಳನ್ನು ರೂಪಿಸಿ ಕೈವಲ್ಯಪದ್ಧತಿಯೆಂದು ಈ ಗ್ರಂಥವನ್ನು ಕರೆದಿದ್ದಾರೆ. ಮೊದಲ ಕೈವಲ್ಯಗ್ರಂಥವಾದ ಇದು, ಅಂತಹ ಗ್ರಂಥ ವಿಷಯ ಪ್ರತಿಪಾದಿಸುವುದೋ ಅಂದರೆ 1) ಪಾರಮಾರ್ಥ ಸಾಧನೆಯ ಮಾರ್ಗವನ್ನು ತೋರಿಸುವುದು 2) ಪಾರಮಾರ್ಥಿಕ ವಿಷಯಗಳನ್ನು ಸ್ತುತಿಸುವುದು 3) ಅವುಗಳ ಮಹತಿಯನ್ನು ಮುಮುಕ್ಷುಗಳಿಗೆ ಎತ್ತಿ ತೋರಿಸುವುದು 4) ಐಹಿಕ ವಿಷಯಗಳ ಅನಿತ್ಯತೆ, ಹೇಯತೆ, ಮತ್ತು ಪರಿಣಾಮಗಳನ್ನು ಭಾವಗಮ್ಯವಾಗುವಂತೆ ಬೋಧಿಸುವುದು 5) ಕೈವಲ್ಯಕ್ಕೆ ಸಾಧಕಬಾಧಕಗಳನ್ನು ವಿವರಿಸುವುದು - ಈ ಎಲ್ಲವನ್ನೂ ಪ್ರತಿಪಾದಿಸಿದೆ. ಅದರಂತೆ ಶಿವಕಾರುಣ್ಯವನ್ನು ಪಡೆಯೆಂದು ಶಿವಕಾರುಣ್ಯ ಸ್ಥಲದಲ್ಲಿಯೂ, ವಿವೇಕವೈರಾಗ್ಯಗಳನ್ನು ಬೋಧಿಸಿ ಮೋಹವನ್ನು ಬಿಡುಯೆಂದು ಜೀವಸಂಬೋಧನಾ ಸ್ಥಲದಲ್ಲಿಯೂ, ಸದ್ಗುಣಗಳಿಂದ ಕೂಡಿಕೊಂಡು ನೀತಿಯುಕ್ತನಾಗಿ ನಡೆಯೆಂದು ನೀತಿ ಕ್ರಿಯಾಸ್ಥಲದಲ್ಲಿಯೂ, ಚಿತ್ತದ ಏಕಾಗ್ರತೆಗಾಗಿ ಯೋಗವನ್ನು ಮಾಡುಯೆಂದು ಯೋಗಪ್ರತಿಪಾದನ ಸ್ಥಲದಲ್ಲಿಯೂ,ಬಳಿಕ ನಾನಾರೆಂದು ಅರಿತು ಜಗತ್ತಿಗೆ ನುಡಿಯೆಂದು ಜ್ಞಾನಪ್ರತಿಪಾದನ ಸ್ಥಲದಲ್ಲಿಯೂ ವಿವರಿಸಿದ್ದಾರೆ. ಮೊದಲಿನ ಮೂರು ಸ್ಥಲಗಳು ಅಂತಃಕರಣದ ಮಲದೋಷವನ್ನೂ ನಾಲ್ಕನೇ ಸ್ಥಲವು ಚಿತ್ತದ ವಿಕ್ಷೇಪದೋಷವನ್ನೂ ಐದನೇ ಸ್ಥಲವು ಸ್ವರೂಪದ ಆವರಣದೋಷವನ್ನೂ ಕಳೆದುಕೊಳ್ಳಲು ಸಹಕರಿಸುತ್ತವೆ. ಸಂಕ್ಷಿಪ್ತವಾಗಿ ಈ ಸ್ಥಲಗಳು ಪಡೆ, ಬಿಡು, ನಡೆ, ಮಾಡು, ನುಡಿ ಎಂಬುದನ್ನು ವಿವರವಾಗಿ ತಿಳಿಸುತ್ತವೆ.

ಈ ಕೃತಿಯು ಕರ್ನಾಟಕದ ಅತ್ಯಮೂಲ್ಯವಾದ ಮೊತ್ತಮೊದಲ ವಾಗ್ಗೇಯಕೃತಿ. ಇದರಲ್ಲಿ ಆ ಕಾಲಕ್ಕೆ ಗೊತ್ತಿದ್ದ 'ಬತ್ತೀಸ' ರಾಗಗಳಲ್ಲಿ ಅಂದರೆ ಮೂವತ್ತೆರಡು ರಾಗಗಳಲ್ಲಿಯೂ ಕೃತಿಗಳು ರಚನೆಯಾಗಿವೆ. ಒಟ್ಟು 174 ಕೃತಿಗಳಿವೆ. ನಾದನಾಮಕ್ರಿಯೆಯಲ್ಲಿ-25, ಸೌರಾಷ್ಟ್ರ-23, ದೇಶಿ-13, ಕಾಂಬೋಧಿ-11, ಶಂಕರಾಭರಣ -10, ತೆನುಗು ಕಾಂಬೋಧಿ-9, ಪಹಡಿ-8, ಧನ್ಯಾಸಿ-7, ಭೈರವಿ ಜವುಳಿ, ಮಧುಮಾಧವಿ-ತಲಾ 6, ಸಾರಂಗ, ಆಹರಿ-ತಲಾ 5, ಲಲಿತ, ತೋಡಿ, ಶ್ರೀರಾಗ, ಪಾರಸಿ, ವಡ್ಡಿಧನ್ಯಾಸಿ-ತಲಾ 4, ಮಾಳವ-3, ಸುವ್ವಾಲಿವರ್ಣ, ಭೂಪಾಳಿ, ಸಾಮಂತ, ನಾಟಿ-ತಲಾ 2, ಕುರಂಜಿ, ಚೌಪದಿವರ್ಣ, ವಸಂತ, ಕುಂತವರಾಳಿ, ಹಿಂದೋಳವಸಂತ, ಪುಷ್ಪಮಾವತಿ, ನಾಂಟ್ಯ, ಕಲ್ಯಾಣಿ, ಸಾವೇರಿ-ತಲಾ 1 ಹಾಡುಗಳಿವೆ.ನಿಜಗುಣಶಿವಯೋಗಿಗಳು ಎಂತಹ ಉದಾತ್ತಜೀವಿ, ಉತ್ತಮ ಸಾಹಿತಿ, ಉನ್ನತಜ್ಞಾನಿಗಳೆಂದು ತಿಳಿದುಕೊಳ್ಳಬೇಕಾದರೆ ಈ ಗ್ರಂಥವನ್ನು ಆಳವಾಗಿ ಅಭ್ಯಾಸಮಾಡಬೇಕು.

1) ನೋಡಲಾಗದೆ ದೇವ ನೋಡಲಾಗದೆ ‖ ಪ ‖

2) ಕರುಣಿಸು ನೀನೆನ್ನ ಕರಣನಿಕರದೊಳು
ವರಪುಣ್ಯವಗಲದಂತೆಲೆ ದೇವ
ಶರಣಸಹಜಭಾವ ಗಿರಿಜೆಯ ಸುಖಜೀವಿತ್ವೆಬೇಗ ಕರುಣಿಸು ‖ ಪ ‖

3) ಕಾಯೋ ಸುಖಸಾರ ನೀನುಪಕಾರ
ಮಾಯವಿದೂರ ಬಿಡದೆನ್ನ ಗುಣಮಣಿಹಾರ ‖ ಪ ‖

ಮುಂತಾದ ಹಾಡುಗಳನ್ನು ದೈನ್ಯದಿಂದ ಹಾಡಿ ಅವರು ಮೊರೆಯಿಟ್ಟಾಗ ಆ ಶಂಭುಲಿಂಗ "ಓ"ಎಂದು ಓಗೊಟ್ಟಿರಬೇಕೆನ್ನಿಸುತ್ತದೆ.

ಮನಸ್ಸನ್ನು ಕುರಿತು ಸಂಬೋಧಿಸುವುದರಲ್ಲಿ ನಿಜಗುಣರಲ್ಲಿ ಉಳಿದ ಅಧ್ಯಾತ್ಮವಿದ್ಯೆಯನ್ನುಬೋಧಿಸುವ ವರಿಗಿಂತ ಒಂದು ಅಪೂರ್ವವಾದ ವಿಧಾನವನ್ನು ಕಾಣುತ್ತೇವೆ.ವಿಶೇಷವಾಗಿ ಎಲ್ಲರೂ ಮನವನ್ನು ಮರ್ಕಟನೆಂದು ಕರೆದರೆ ನಿಜಗುಣರು ಅದನ್ನು "ಚೆಲ್ವ ಕೋಗಿಲೆ, ಮುದ್ದು ಕೋಗಿಲೆ, ಜಾಣ ಕೋಗಿಲೆ" ಎಂದೂ "ಮನವೆಂಬ ಗಿಳಿಯನೊಯ್ಯಾರದೊಳೋವಿ ಮೆಲ್ಲನೆ ಮುದ್ದುನುಡಿಗಲಿಸೆಲೆ ಮಾನಿನಿ" ಎಂದೂ ಕರೆದಿದ್ದಾರೆ.

1) ಸುಮ್ಮನೆ ಕಾಲವನು ಕಳೆದು ಸಾವುದುಚಿತವೆ
ನೆಮ್ಮಿ ನಿಜವನು ಮುಕ್ತಿ ಪಡೆಯದೆ ಮನುಜ ‖ ಪ ‖

2) ಪಡೆವೆ ನೀನೆಂದಿಗೆ ಪರಮುಕ್ತಿಸುಖವನು
ಕೆಡುವ ಕಾಯದ ಮೋಹವನು ಮಾಣು ಮನುಜ ‖ ಪ ‖

3) ಮನುಜ ನೀನೆಡೆವಿಡದನುದಿನವೆಳಸುವ
ವನಿತೆಯೊಳೆಣಿಸಲೊಂದಿನಿಸು ಲೇಸಿಹುದೆ ‖ ಪ ‖

4) ಯಾಕೆ ವಿರತಿಯನುಳಿದು ಹೀನ ವಿಷಯವನೊಲಿವೆ
ಕಾಕು ಮಾನಸವೆ ನಿನಗದರೊಳೇನುಂಟು ? ‖ ಪ ‖

5) ಬೇಡ ಬೇಡ ಭೋಗದೊಡನಾಟ
ನೋಡು ನಂಜುವೆರಸಿದ ಸವಿಯೂಟ
ಕೇಡು ಕಡೆಯೊಳಿಹುದದು ಮಾಯೆಯ ಕೈಮಾಟ ‖ ಪ ‖

6) ಆವ ಬಲವಿಡಿದಳುಕದಖಿಳ ದುರಿತವನೆಸಗಿ
ಜೀವಿಸುವೆ ನಾಚದುಸುರೆಲೆ ಮಾನವ ‖ ಪ ‖

ಮುಂತಾದ ಹಾಡುಗಳಲ್ಲಿ ಕಾಣುವ ಜೀವಸಂಬೋಧನೆಯನ್ನು ನೋಡಿದರೆ ಎಂತಹ ವಿಷಯಲಂಪಟನೂ ಸಹ ಎಲ್ಲವನ್ನೂ ತೊರೆದು ಮುಮುಕ್ಷುವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ.

ಬೇಡುವೆನಭವ ನಿಮ್ಮನು ಭವಭವದೊಳು
ಮಾಡೆನಗೊಲಿದು ಸುಗುಣಸಂತತಿಯನಿಂತು ‖ ಪ ‖

ಎಡರಡಸಿದ ವೇಳೆಯೊಳು ಧೈರ್ಯವನು ಸಿರಿ
ವಡೆದು ಜೀವಿಸುವೆಡೆಯೊಳು ವಿನಯವನು
ಕಡು ಜವ್ವನದೊಳು ವಿಕೃತಿದೋರದಿಹುದನು
ಪಿಡಿದ ನೇಮವನೆಡೆಪಿಡದತಿಛಲವನು ‖ ೧ ‖

....
....

ಎಂಬ ಹಾಡಿನಲ್ಲಿ ಅವರ ಉದಾತ್ತ ಜೀವನಧೋರಣೆಯನ್ನು ಕಾಣಬಹುದು. ಅಭವನನ್ನು ಭೋಗ ಭಾಗ್ಯಾದಿಗಳನ್ನಾಗಲೀ ದೀರ್ಘಾಯುವನ್ನಾಗಲೀ ಬೇಡದಿರುವುದನ್ನು ನೋಡಿದರೆ ಎಂತಹ ವಿರತಿಮನೋಭಾವ ಅವರಿಗೆ ಅಳವಟ್ಟಿತ್ತೆಂದು ತಿಳಿಯಬಹುದು.

ಶ್ರೀಗುರುವಚನದಿಂದಧಿಕ ಸುಧೆಯುಂಟೆ
ರಾಗದಿಂ ಬೇರಿನ್ನು ಭವಬೀಜಮುಂಟೆ ‖ ಪ ‖

ಎಂಬ ಹಾಡಿನಲ್ಲಿ ಶ್ರೇಷ್ಠವಾದವುಗಳ ಒಂದು ಪಟ್ಟಿಯನ್ನೇ ಕೊಟ್ಟು ಅವುಗಳ ಸಂಪಾದನೆಗಾಗಿ ಪ್ರಾಣವನು ತೋರಬೇಕೆಂದು ಸೂಚ್ಯವಾಗಿ ಬೋಧಿಸಿದ್ದಾರೆ.

ತನುವ ದಂಡಿಸಬೇಡ ಮನವ ನಿಲ್ಲಿಸಬೇಡ
ಧನವ ನೀಗಿರಬೇಡ ಮನೆಮಾರು ತೊರೆದು
ವನವಾಸ ಬೇಡ ನಿನಗಿನಿತು ತತ್ವಜ್ಞಾನ ಸಂ
ಜನಿಸಲಘವೆಲ್ಲವನು ಕೆಡಿಸುವುದರಿಂದೆ

ಎಂಬುವ ಹಾಡಿನಲ್ಲಿ ತತ್ವಜ್ಞಾನಿಯು ಏನೊಂದನ್ನೂ ಬಿಡಬೇಕಾಗಿಲ್ಲವೆಂದು ತಿಳಿಸುತ್ತಾರೆ. ಆದರೆ ಅಭಿಮಾನವನ್ನು ಮಾತ್ರ ಬಿಡಬೇಕೆಂದು ತಿಳಿಸುತ್ತಾರೆ. ಅಂತೆಯೇ ಅದನ್ನು ಬಿಡಲೆಷ್ಟು ಕಷ್ಟವೆಂಬುವನ್ನು ಹೀಗೆ ತಿಳಿಸಿದ್ದಾರೆ.

ಧನಕನಕವಸ್ತ್ರ ಭೂಷಣ ಗಂಧ ಮಾಲ್ಯ ವಾ
ಹನ ರಮ್ಯವಾಸ ವನಿತಾದಿ ವಸ್ತುಗಳು
ಮನವಾರೆ ಮುಂದೆ ತೀವಿರೆ ಭೋಗಿಸುವ ಶಕ್ತಿ
ತನಗಿರ್ದೊಡಂತವೆಲ್ಲವನು ತೃಣವೆಂದು ॥ ೨ ॥

ತಿಳಿಯಲಹುದೊಲಿದು ಬಿಡಲಹುದು ಮೋಹಿಸದೆ ಭೂ
ತಳದೊಳಾನೆಂದಹಂಕರಿಸದಿಹುದರಿದು........

ಎಂದು ತಿಳಿಸಿ

ಜ್ಞಾನಿ ತರಹರಿ ಶಾಸ್ತ್ರಿ ಸುಗುಣಿ ವಿಜಿತೇಂದ್ರಿಯನ
ನೂನಮತಿ ಯೋಗಿ ಮುನಿ ವಿಮಲನತಿ ಮಹಿಮ
ದಾನಿಯೆಂದಿಳೆ ತನ್ನನೆಳಸಿ ಬಣ್ಣಿಸಿದೊಡಭಿ
ಮಾನಿಸದೆ ನಡೆವುದಚ್ಚರಿ ಶಂಭುಲಿಂಗ ॥ ೩ ॥

ಎಂದೂ ತಿಳಿಸಿದ್ದಾರೆ.

ಶಿವಯೋಗಿಯಾಗಿ ಆಧ್ಯಾತ್ಮವನ್ನೇ ಬೋಧಿಸಿದ್ದರೂ ಚಿತ್ರಕವಿತ್ವವನ್ನೂ ಸಹ ಬಿಟ್ಟಿಲ್ಲ.

ನೀನೊಲಿಯದ ನಿಮಿಷವೆ ಪಲವರುಷವ
ದಾನೆಂತುಳಿವೆನು ಮನ್ನಿಸು ದೇವ ॥ ಪ ॥

ಜ್ಞಾನವಿರೋಧಿ ಮಾಯಾವಿಕೃತಿ ಬಹು
ಧಾನ್ಯದೆ ಶುಕ್ಲಧಾತುಗಳಾಗೆ
ಈ ನಿಖಿಳ ಪ್ರಜೋತ್ಪತ್ತಿಯನವರೊಳು
ನೀನುಂಟು ಮಾಡ್ಪೆ ಸರ್ವೇಶ್ವರ ॥ ೧ ॥

ಮುಳಿದು ಮನ್ಮಥನ ವಿಕ್ರಮವನು ಜಯಿಸಿ ಮು
ಪ್ಪೊಳಲದುರ್ಮುಖಿ ರಾಕ್ಷಸರನಿಕ್ಕಿ
ನಳಪಾರ್ಥಿವಾದಿ ಶ್ರೀಮುಖದ ಸೌಮ್ಯರಿಗೆ ಮಂ
ಜುಳಕರಾನಂದವೀವನುಪಮ ॥ ೨ ॥

ಭಾವಿಸೆ ಪ್ರಭವಾದಿ ಕ್ಷಯ ಕಡೆಯಾದವರ
ಭಾವ ವಿಕಾರತ್ವ ವಿರಹಿತ
ಜೀವದುಃಖಾರ್ಣವೋತ್ತರಣ ಪ್ಲವ ಮಹಿ
ಮಾವಿಭವದ ಶಂಭುಲಿಂಗನೆ ॥ ೩ ॥

ಎಂಬ ಹಾಡಿನಲ್ಲಿ ಹಲವಾರು (21) ಸಂವತ್ಸರಗಳ ಹೆಸರು ಬರುವಂತೆ ರಚಿಸಿದ್ದಾರೆ. ಮತ್ತು

ಕಮಲಕಮಲ ಕುಮುದಾಶ್ರಯಮಸ್ತನೆ ಶಂಭುಲಿಂಗ
ಕುಮುದ ಕಮಲ ಕರುಣಾನ್ವಿತಹಸ್ತನೆ ಶಂಭುಲಿಂಗ ॥ ಪ ॥

ಎಂಬ ಹಾಡಿನಲ್ಲಿ ಹರಿ, ಸೋಮ, ಸುರಭಿ ಎಂಬ ಮೂರು ಪದಗಳಲ್ಲಿ ಶ್ಲೇಷಾಲಂಕಾರವನ್ನಿತ್ತು ಮೂರು ಚರಣಗಳನ್ನು ರಚಿಸಿರುವುದನ್ನು ನೋಡಿದರೆ ಶಬ್ದಾಲಂಕಾರಕ್ಕೂ ಗಮನವಿತ್ತಿದ್ದಾರೆಂಬುದನ್ನು ಕಾಣಬಹುದು. ಇವೆಲ್ಲಕ್ಕೂ ಮಿಗಿಲಾಗಿ

ಸೋಲದಾತನೆ ವಿರತನು ಮನದೊಳಗೆ
ಬಾಲೆಯರ ಸಿಂಗರವನೆ ಕಂಡು ॥ ಪ ॥

ಎಂಬ ಹಾಡಿನಲ್ಲಿ

ತಳಿರಡಿಯ ಸುಜ್ಜೊಡೆಗಳ ಚಲುವಿನೊ
ಬ್ಬುಳಿಯಹ ನಿತಂಬ ಭರದ । ನಡೆಗೆ
ಬಳುಕುವತಿ ಬಡನಡುವಿನ । ತೆಳುವಸರ
ನಳಿದೋಳ ನಲ್ಲಳನುವ ಕಂಡು ॥ ೧ ॥

ಮುಂತಾದ ಚರಣಗಳಲ್ಲಿ ಎಲ್ಲವನ್ನೂ ತೊರೆದು ತಾನು ಶಿವಯೋಗಿಯಾಗಿದ್ದರೂ ಶೃಂಗಾರದ ಹೊನಲನ್ನೇ ಹರಿಸಿದ್ದಾನೆ.

ಕೊನೆಯಲ್ಲಿ "ಜ್ಯೋತಿ ಬೆಳಗುತಿದೆ ವಿಮಲ ಪರಂಜ್ಯೋತಿ ಬೆಳಗುತಿದೆ" ಎಂಬ ಹಾಡನ್ನು ಬರೆದು ಜ್ಯೋತಿಸ್ವರೂಪವಾದ ಪರವಸ್ತುವನ್ನೂ ಬಣ್ಣಿಸಿ ಗ್ರಂಥಕ್ಕೆ ಮಂಗಳ ಹಾಡಿ ಅದೇ ಚಿಜ್ಜ್ಯೋತಿಯಲ್ಲಿ ಬೆರೆತು ಪ್ರಾಜ್ವಲ್ಯಮಾನವಾಗಿ ಬೆಳಗಿ ಕರ್ನಾಟಕದ ಪ್ರತಿಯೊಬ್ಬ ಮುಮುಕ್ಷುವಿನ ಮನವನ್ನೂ ಬೆಳಗುತ್ತಿದ್ದಾರೆ.

"ಯಾವುದನ್ನು ಎಲ್ಲ ವೇದಗಳು ಸಾರುವುವೊ, ಯಾವುದಕ್ಕಾಗಿ ಎಲ್ಲರೂ ತಪಸ್ಸನ್ನು ಮಾಡು ವರೋ, ಯಾವುದನ್ನು ಪಡೆಯುವುದಕ್ಕೆ ಜನರು ಬ್ರಹ್ಮಚರ್ಯವ್ರತವನ್ನು ಆಚರಿಸುವರೋ, ಅದನ್ನು ಒಂದು ಪದದಲ್ಲಿ ಹೇಳುತ್ತೇನೆ ; ಅದೇ 'ಓಂ'." ವೇದಗಳು ಈ ಪದವನ್ನು ಶ್ಲಾಘಿಸು ತ್ತವೆ. ಇದು ಅತಿ ಪವಿತ್ರವೆಂದು ಭಾವಿಸಲಾಗಿದೆ.

ಕೆ. ಜಿ. ವಸಂತಮಾಧವ

ಸಮಕಾಲೀನ ಅರಸರ ಮೇಲೆ ರಾಘವೇಂದ್ರಸ್ವಾಮಿಗಳ ಪ್ರಭಾವ

ಹದಿನಾರನೇ ಶತಮಾನದ ಉತ್ತರಾರ್ಧವು ಭಾರತೀಯ ಚರಿತ್ರೆಯ ಪರ್ವಕಾಲ. ಉತ್ತರ ಭಾರತದಲ್ಲಿ ಅಕ್ಬರನ ನೇತೃತ್ವದಲ್ಲಿ ಮೊಘಲ ಸಾಮ್ರಾಜ್ಯ ಸುಸಂಘಟಿತವಾಗಿದ್ದರೆ, ದಕ್ಷಿಣ ಭಾರತದಲ್ಲಿ ಹಿಂದು ಧರ್ಮಕ್ಕೆ ಆಧಾರಸ್ತಂಭವಾಗಿದ್ದ ವಿಜಯನಗರ ಸಾಮ್ರಾಜ್ಯದ ಪತನಕ್ಕೆ ಆರಂಭವಾಯಿತು. ಹಲವಾರು ಚಿಕ್ಕಪುಟ್ಟ ಸಂಸ್ಥಾನಗಳು ದಕ್ಷಿಣ ಭಾರತದಲ್ಲಿ ಉದಯಿಸಿ ಅವರವರೊಳಗೆ ಕಚ್ಚಾಡಿಕೊಂಡು ತಮ್ಮ ಶಕ್ತಿಯನ್ನು ನಶಿಸಿಕೊಳ್ಳುತ್ತಿದ್ದುವು. ಇವರ ಲಾಭವನ್ನು ಮುಸ್ಲಿಂ ರಾಜ್ಯಗಳು ಪಡೆಯುತ್ತಿದ್ದುವು. ಉತ್ತರ ಕರ್ನಾಟಕದ ಹೆಚ್ಚಿನ ಭಾಗಗಳು ಮುಸ್ಲಿಂ ರಾಜರ ವಶವಾಗಿದ್ದುವು. ಹಿಂದು ಧರ್ಮಕ್ಕೆ ನೀಡುತ್ತಿದ್ದ ಪ್ರೋತ್ಸಾಹವು ಕ್ಷೀಣಿಸತೊಡಗಿ ಹಿಂದುಗಳಲ್ಲಿ ಆತ್ಮ ವಿಶ್ವಾಸವು ಕಳೆಗುಂದುತ್ತಿದ್ದಿತು. ಮುಸ್ಲಿಂ ಅರಸರು ಮುಸ್ಲಿಂ ಮತದ ಹೆಸರಿನಲ್ಲಿ ಕೊಳ್ಳೆಸುಲಿಗೆಗಳನ್ನು ಮಾಡಿ ಹಿಂದೂ ದೇವಾಲಯಗಳನ್ನು ನಾಶ ಮಾಡುತ್ತಿದ್ದರು. ದೇಶದ ಕರಾವಳಿ ಪ್ರದೇಶಗಳಲ್ಲಿ ಸೈಂಟ್ ಫ್ರಾನ್ಸಿಸ್ ಕ್ಸೇವಿಯರ್ ಮತ್ತು ಫಾದರ್ ನೊಬಿಲಿಯವರ ನೇತೃತ್ವದಲ್ಲಿ ಕ್ರೈಸ್ತಧರ್ಮವು ಶೀಘ್ರದಲ್ಲಿ ಪ್ರಚಾರವಾಗುತ್ತಿತ್ತು. ರಾಜಕೀಯ ಶಕ್ತಿ, ವಾಣಿಜ್ಯದ ಪ್ರಭಾವದಿಂದ ಪ್ರಚಾರವಾಗುತ್ತಿದ್ದ ಮುಸ್ಲಿಂ ಮತ್ತು ಕ್ರೈಸ್ತಧರ್ಮಗಳ ವರ್ಚಸ್ಸಿನಿಂದ ವೇದಗಳ ಹಾಗೂ ದೈವ ಭಕ್ತಿಯ ವಿಪರಿಹಾಸ ನಡೆದು ಹಿಂದು ಧರ್ಮವು ವಿಕೃತವಾಗಲಾರಂಭಿಸಿತು. ಈ ಸಂದಿಗ್ಧಸ್ಥಿತಿಯಲ್ಲಿ ಶ್ರೀರಾಘವೇಂದ್ರಸ್ವಾಮಿಗಳು ಅವತರಿಸಿದರು. ತಮ್ಮ ತಪಃಪ್ರಭಾವ ಹಾಗೂ ಉದಾತ್ತಗುಣಗಳಿಂದ ವೈದಿಕಮತವನ್ನು ಉದ್ಧರಿಸಿ ಭಕ್ತರಿಗೆ ಅಭಯವನ್ನೀಯುತ್ತಾ ರಾಘವೇಂದ್ರ ಸ್ವಾಮಿಗಳು ಹಿಂದೂ ಧರ್ಮಕ್ಕೆ ಅಪಾರ ಕೊಡುಗೆಯನ್ನಿತ್ತರು. ಶ್ರೀಯುತರ ಜೀವನ ಚರಿತ್ರೆ ಮತ್ತು ಸಾಧನೆಗಳ ಕುರಿತಾಗಿ ಹಲವಾರು ವಿದ್ವಾಂಸರು ಹಲವಾರು ಗ್ರಂಥಗಳನ್ನು ರಚಿಸಿರುವುದರಿಂದ ಅವುಗಳನ್ನು ಹೊರತುಪಡಿಸಿ, ಶ್ರೀಯುತರು ಅಂದಿನ ರಾಜಕೀಯದಲ್ಲಿ ಹೇಗೆ ಪ್ರಭಾವ ಬೀರಿ ಹಿಂದು ಧರ್ಮವನ್ನು ರಕ್ಷಿಸಿದರೆಂಬುದನ್ನು ಈ ಲೇಖನದಲ್ಲಿ ತಿಳಿಸಲಾಗುವುದು.

ಶ್ರೀರಾಘವೇಂದ್ರಸ್ವಾಮಿಗಳ ಕಾಲಾವಧಿಯಲ್ಲಿ (1582–1671)[1] 'ದಕ್ಷಿಣಭಾರತದಲ್ಲಿ ತಂಜಾವೂರು, ಮಧುರೆ, ಮೈಸೂರು, ಕೆಳದಿ ಮತ್ತು ಪೆನುಗೊಂಡೆಯನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದ ವಿಜಯನಗರ ಮೊದಲಾದ ಹಿಂದು ರಾಜ್ಯಗಳೂ, ಆದಿಲ್ ಶಾಹಿ, ಕುತುಬ್ ಶಾಹಿಗಳೆಂಬ ಮುಸ್ಲಿಂ ರಾಜ್ಯಗಳೂ ಇದ್ದುವು. ಇಷ್ಟಲ್ಲದೆ ಕೃಷ್ಣಾ ನದಿಯ ಉತ್ತರದಲ್ಲಿ ಶಿವಾಜಿಯ ನೇತೃತ್ವದಲ್ಲಿ ಮರಾಠರ ರಾಜ್ಯವು ಉದಯವಾಗುತ್ತಿತ್ತು. ಶ್ರೀಯುತರು ಈ ಸಂಸ್ಥಾನದ ರಾಜರುಗಳೊಡನೆ ಒಂದಲ್ಲ ಒಂದು ರೀತಿಯಿಂದ ಸಂಪರ್ಕವನ್ನು ಹೊಂದಿ

1. Karnatak Historical Review. (Vol. V, p. 11, July 1938)

ದ್ದರು. ತಂಜಾವೂರು ಸಂಸ್ಥಾನದ ಅರಸ ರಘುನಾಥನಾಯಕನ[2] (1597–1640) ಆಸ್ಥಾನದಲ್ಲಿದ್ದ ಯಜ್ಞನಾರಾಯಣ ದೀಕ್ಷಿತನನ್ನು ವಾದದಲ್ಲಿ ಸೋಲಿಸಿ ವೆಂಕಟಭಟ್ಟ (ಮುಂದಿನ ರಾಘವೇಂದ್ರಸ್ವಾಮಿ)ನು ರಘುನಾಥ ನಾಯಕನ ಆದರಕ್ಕೆ ಪಾತ್ರನಾದನು. ಇವರು ಕುಂಭಕೋಣ ಪೀಠವನ್ನು ಏರುವ ಕಾಲದಲ್ಲಿ ಸ್ವತಃ ರಘುನಾಥ ನಾಯಕನು ಬಂದಿದ್ದನು.[3] ರಘುನಾಥನ ನಂತರ ವಿಜಯರಾಘವನಾಯಕನು ಪಟ್ಟಕ್ಕೆ ಬಂದನು. ಇವನ ಕಾಲದಲ್ಲಿ (1640–1673)ಪೋರ್ತುಗೀಸ ಡಚ್ಚರ ವ್ಯಾಪಾರ ಪ್ರತಿಸ್ಪರ್ಧೆಗಳಿಂದಾಗಿ ರಾಜಕೀಯದಲ್ಲಿ ಗೊಂದಲವುಂಟಾಯಿತು. ಆದಿಲ್‌ಶಾಹಿಯ ಆಕ್ರಮಣವೂ ಇವನನ್ನು ಕಂಗೆಡಿಸಿತು. ಆಡಳಿತವು ಶಿಥಿಲಗೊಂಡಿತು. ಇದರ ಪರಿಣಾಮವಾಗಿ ರಾಜ್ಯದಲ್ಲಿ ಬರಗಾಲ ಬಂತು. ನಾಯಕನು ಕಂಗಾಲಾಗಿ ಇದರ ಪರಿಹಾರಕ್ಕೆ ರಾಘವೇಂದ್ರಸ್ವಾಮಿಗಳನ್ನು ಆಶ್ರಯಿಸಿದನು. ರಾಜನ ಪ್ರಜಾವಾತ್ಸಲ್ಯವನ್ನು ಮೆಚ್ಚಿದ ಸ್ವಾಮಿಗಳು ಅವನಿಗೆ ಧೈರ್ಯವನ್ನು ನೀಡಿದರು. ತಮ್ಮ ಮಂತ್ರಪ್ರಭಾವದಿಂದ ರಾಜನ ಭಂಡಾರವು ಅಕ್ಷಯವಾಗುವಂತೆ ಶ್ರೀಸ್ವಾಮಿಗಳು ಅನುಗ್ರಹಿಸಿದರೆಂದು[4] ಪ್ರತೀತಿಯಿದ್ದರೂ ಶ್ರೀಯುತರು ರಾಜನಿಗೆ ಕ್ಷಾಮನಿವಾರಣಾ ಕ್ರಮವನ್ನು ಬೋಧಿಸಿದರೆಂದು ನಾವು ತಿಳಿಯಬಹುದು.

ಮಧುರೆಯ ತಿರುಮಲನಾಯಕನ ಹಾಗೂ ವೆಲ್ಲೂರನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದ ವಿಜಯನಗರದ ಚಕ್ರವರ್ತಿಗಳ ವಂಶಸ್ಥನಾದ ಇಮ್ಮಡಿವೆಂಕಟಪತಿರಾಯನ ಗೌರವಕ್ಕೆ ಶ್ರೀರಾಘವೇಂದ್ರಸ್ವಾಮಿಗಳು ಪಾತ್ರರಾಗಿದ್ದರು.[5] ಇವರ ವಿದ್ವತ್ತು ರಾಜರುಗಳನ್ನೆಲ್ಲಾ ಆಕರ್ಷಿಸುತ್ತಿತ್ತು. ಮಧುರೆಯ ಈ ದೊರೆಯು ಪೋರ್ತುಗೀಸರ ಮಿತ್ರನಾಗಿದ್ದನೆಂದು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ.[6] ಇಂತಹ ರಾಜನನ್ನು ತಮ್ಮ ಪ್ರಭಾವದಿಂದ ತಮ್ಮ ಕಡೆಗೆ ಒಲಿಸಿಕೊಂಡದ್ದು ನಿಜವಾಗಿಯೂ ಶ್ಲಾಘನೀಯವಾಗಿದೆ. ಅದೇ ಕಾಲದಲ್ಲಿ ಕ್ರೈಸ್ತ ಮಿಶನರಿಯಾದ ಫಾದರ್ ನೊಬಿಲಿಯವರು ತಮ್ಮದೇ ಪವಾಡ ಶಕ್ತಿಯಿಂದ ಕ್ರೈಸ್ತಮತವನ್ನು ಭರದಿಂದ ಪ್ರಚಾರ ಮಾಡುತ್ತಿದ್ದರು.[7] ಶ್ರೀರಾಘವೇಂದ್ರಸ್ವಾಮಿಯವರು ತಮ್ಮ ವಿದ್ವತ್ತು ಮತ್ತು ಪವಾಡಗಳಿಂದ ಕ್ರೈಸ್ತಮತದ ಪ್ರಭಾವವನ್ನು ಮಧುರೆಯಲ್ಲಿ ತಡೆಗಟ್ಟಿದರೆಂದು ಒಪ್ಪಿಕೊಂಡರೆ ತಪ್ಪಾಗಲಿಕ್ಕಿಲ್ಲ. ಈ ರೀತಿಯ ತಮ್ಮ ಧರ್ಮವನ್ನು ಬೋಧಿಸುವಾಗ ಶ್ರೀ ಸ್ವಾಮಿಗಳು ಕ್ರೈಸ್ತ ಯಾ ಮುಸ್ಲಿಮರ ಮತಗಳನ್ನು ಹೀಯಾಳಿಸದೆ ಇದ್ದದ್ದು ಮೆಚ್ಚಲೇಬೇಕಾದ ಸಂಗತಿ.

ಕ್ರಿ. ಶ. 1663 ರಲ್ಲಿ ಮೈಸೂರಿನ ಅರಸನಾದ ದೊಡ್ಡದೇವರಾಯನಿಗೆ ರಾಘವೇಂದ್ರಸ್ವಾಮಿಗಳ ಸಂಪರ್ಕವುಂಟಾಯಿತು. ಶ್ರೀ ಸ್ವಾಮಿಗಳ ವಿದ್ವತ್ತು ಮತ್ತು ಧಾರ್ಮಿಕ ಪ್ರಭಾವವನ್ನು ತಿಳಿದು ಮೈಸೂರಿನ ದೊಡ್ಡದೇವರಾಯನು (1659–1672) ಅವರನ್ನು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡನು ; ರಾಜನ ಆದರದ ಆತಿಥ್ಯ ಮತ್ತು ಭಕ್ತಿಯನ್ನು ಮೆಚ್ಚಿಕೊಂಡ ಸ್ವಾಮಿಗಳು ಚಾತುರ್ಮಾಸ್ಯವನ್ನು ಮೈಸೂರು ರಾಜ್ಯದಲ್ಲೇ ಕಳೆದರು ; ಕ್ರಿ. ಶ. 1663 ರಲ್ಲಿ ದೊಡ್ಡದೇವರಾಯನು ನಲ್ಲೂರನ್ನು ದೇವರಾಜಪುರವೆಂದು ಕರೆದು ಸ್ವಾಮಿಗಳಿಗೆ ದಾನವಾಗಿ ಕೊಟ್ಟನೆಂದು ಆ ಕಾಲದ ಒಂದು ಶಾಸನ ತಿಳಿಸುತ್ತದೆ.[8]

---

2. Sathyanath Iyer, History of India, Vol. II, p. 534, Ed. 1973.
3. G. B. Joshi, Sri Raghavendra: His Life and Works, 1971, p. 77.
4. ಬೇಲೂರು ಕೇಶವದಾಸ — ಕರ್ನಾಟಕ ಭಕ್ತವಿಜಯ (1974 ಆವೃತ್ತಿ), ಪು. 347–48. ಜಿ. ಬಿ ಜೋಷಿ, ಅದೇ ಗ್ರಂಥ, ಪು. 95.
5. ಜಿ. ಬಿ. ಜೋಷಿ, ಅದೇ ಗ್ರಂಥ, ಪು. 99–101.
6. Sathyanath Iyer—op. cit., p. 538.
7. Heras, Aravidu Dynasty of Vijayanagar, pp. 363-396, pp, 446-486.
8. Mysore Archaeological Report, 1917, pp. 58–59.

ಕ್ರಿ. ಶ. 1663 ರಿಂದ 1665 ರವರೆಗೆ ಕೃಷ್ಣಾ ನದಿಯ ಉತ್ತರಕ್ಕಿರುವ ಮಹಾರಾಷ್ಟ್ರದ ಕೊಲ್ಹಾಪುರ ಪಂಡರಾಪುರಗಳನ್ನು ಶ್ರೀಸ್ವಾಮಿಗಳು ಸಂದರ್ಶಿಸಿದರು. ಆ ಕಾಲದಲ್ಲಿ ಶಿವಾಜಿಯೂ ತನ್ನ ಸ್ವರಾಜ್ಯವನ್ನು ಕಟ್ಟುತ್ತಿದ್ದನು. ಈ ಸ್ವಾಮೀಜಿಯವರು ಮಹಾರಾಷ್ಟ್ರವನ್ನು ಸಂದರ್ಶಿಸುವ ಕಾಲದಲ್ಲಿ ಮೊಘಲರು ಶಿವಾಜಿಯನ್ನು ಸದೆಬಡಿಯಲು ರಾಜ ಜಯಸಿಂಹನ ನೇತೃತ್ವದಲ್ಲಿ ಬಲವಾದ ದಂಡನ್ನು ಕಳುಹಿಸಿದ್ದರು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಶಿವಾಜಿಯು ರಾಘವೇಂದ್ರಸ್ವಾಮಿಯವರನ್ನು ಭೇಟಿ ಮಾಡಿದ್ದನೆಂದೂ ಮತ್ತು ಅವನನ್ನು ಸ್ವಾಮಿಗಳು ಆಶೀರ್ವದಿಸಿದರೆಂದೂ ಹೇಳಿಕೆ[9] ಇದೆಯಾದರೂ ಇದನ್ನು ಸಮರ್ಥಿಸುವ ದಾಖಲೆ ಮರಾಠರಲ್ಲಿ ಇಲ್ಲದಿದ್ದುದು ಆಶ್ಚರ್ಯವಾಗಿದೆ.

ಶ್ರೀರಾಘವೇಂದ್ರ ಸ್ವಾಮಿಗಳು ಮತಾಂಧರಾದ ಮುಸ್ಲಿಂ ಅರಸರನ್ನು ಸಂದರ್ಶಿಸಿ ಹಿಂದೂ ಮತದ ಮಹಿಮೆಯನ್ನು ಅರಿವುಮಾಡಿಕೊಟ್ಟದ್ದು ಪ್ರಶಂಸನೀಯವಾಗಿದೆ. ಈ ಮುಸ್ಲಿಂ ಅರಸರಲ್ಲಿ ಒಬ್ಬನಾದ ಮಹಮ್ಮದ್ ಆದಿಲ್‌ಶಾಹನು ಮತಾಂಧನಾಗಿದ್ದು ಹಿಂದುಗಳನ್ನು ನಿಸ್ತೇಜ ಮಾಡಿದ್ದನೆಂದರೆ ತಪ್ಪಾಗಲಿಕ್ಕಿಲ್ಲ. ಇವನ ಆಳ್ವಿಕೆಯಲ್ಲಿ ಹಿಂದುಗಳಿಗೆ ತಮ್ಮ ಧಾರ್ಮಿಕ ಕಟ್ಟಳೆಯನ್ನು ಸಾರ್ವಜನಿಕವಾಗಿ ಆಚರಿಸುವ ಸ್ವಾತಂತ್ರ್ಯವಿರಲಿಲ್ಲ.[10] ಇವನ ನಂತರ ಬಂದ ಇಮ್ಮಡಿ ಆದಿಲ್‌ಶಾಹನ ಕಾಲದಲ್ಲಿ ಹಿಂದೂಗಳ ಸ್ಥಿತಿ ಹೆಚ್ಚಿನ ಉತ್ತಮ ಸ್ಥಿತಿಗೆ ಬರಲಿಲ್ಲ. ಶ್ರೀಯುತ ರಾಘವೇಂದ್ರಸ್ವಾಮಿಗಳು ಕ್ರಿ. ಶ. 1665 ರ ನಂತರ ಬಿಜಾಪುರದಲ್ಲಿ ತಮ್ಮ ತತ್ತ್ವವನ್ನು ಪ್ರಚಾರಮಾಡಿ ಹೆಚ್ಚಿನ ಜನರನ್ನು ತಮ್ಮ ಅನುಯಾಯಿಗಳಾಗಿ ಮಾಡಿಕೊಂಡರೆಂದು ರಾಘವೇಂದ್ರ ವಿಜಯದಿಂದ ತಿಳಿದುಬರುತ್ತದೆ.[11] ಶ್ರೀ ಸ್ವಾಮಿಗಳ ಧಾರ್ಮಿಕ ಶಕ್ತಿಯು ಕ್ರಿಯಾಲೋಪಿಯಾದ ಆಲಿಆದಿಲ್ ಶಾಹನಿಗೆ ಅರಿವಾಗಿ, ಅವರಿಗೆ ಬಿಳಿ ಛತ್ರವನ್ನಿತ್ತು ಜಗದ್ಗುರು ಎಂಬ ಬಿರುದನ್ನಿತ್ತನು.[12] ಇದರ ಪರಿಣಾಮವಾಗಿ ಇವರ ಆಶ್ರಿತರಾಜರು ಇವರನ್ನು ಗೌರವಿಸಲು ಆರಂಭಿಸಿದರು. ಹಿಂದೂಗಳಲ್ಲಿ ನವಚೇತನ ಉದಯವಾಯಿತು.

ಶ್ರೀ ರಾಘವೇಂದ್ರಸ್ವಾಮಿಗಳು ಸಂಚಾರಾರ್ಥವಾಗಿ ಸವಣೂರಿಗೆ ಬಂದರು. ಆಗ ಸವಣೂರು ಆದಿಲ್‌ಶಾಹಿ ಆಶ್ರಿತ ನವಾಬ ಅಬ್ದುಲ್ ಹೊನು ಆಳುತ್ತಿದ್ದನು.[13] ಈ ನವಾಬನ ಮಗನನ್ನು ಸರ್ಪಕಚ್ಚಿದಾಗ ಶ್ರೀ ಸ್ವಾಮಿಗಳು ತಮ್ಮ ಮಂತ್ರಶಕ್ತಿಯಿಂದ ಬದುಕಿಸಿ ನವಾಬನ ಭಕ್ತಿಗೆ ಪಾತ್ರರಾದರು. ನವಾಬನು ಕೃಷ್ಣಾಪುರ ಮೊದಲಾದ ಹನ್ನೆರಡು ಗ್ರಾಮಗಳನ್ನು ಸ್ವಾಮಿಗಳಿಗೆ ಜಹಗೀರನ್ನಾಗಿ ಇತ್ತನು.[14] ಬಿಜಾಪುರ ಆದಿಲ್‌ಶಾಹಿಯ ಸಾಮಂತನಾಗಿ ಆದವಾನಿ ಪ್ರದೇಶಗಳನ್ನು ಆಳಿಕೊಂಡಿದ್ದ ಅಸದುಲ್ಲಾಖಾನನು ಶ್ರೀ ರಾಘವೇಂದ್ರ ಸ್ವಾಮಿಗಳ ಪ್ರಭಾವಕ್ಕೊಳಗಾಗಿದ್ದನು. ಈತನು ಸ್ವಾಮಿಗಳ ಸತ್ವವನ್ನು ಪರೀಕ್ಷಿಸುವುದಕ್ಕಾಗಿ ಕುರಿಮಾಂಸವನ್ನು ಕಾಣಿಕೆಯಾಗಿ ಕೊಂಡುಹೋಗಿದ್ದನು. ಸ್ವಾಮಿಗಳು ದಿವ್ಯಶಕ್ತಿಯಿಂದ ವಿಷಯವನ್ನು ತಿಳಿದು ಅದನ್ನು ಉತ್ತಮ ಹಣ್ಣುಗಳನ್ನಾಗಿ ಪರಿವರ್ತಿಸಿದರಂತೆ! ಇದರಿಂದ ಪರಿವರ್ತಿತನಾದ ಅಸದುಲ್ಲಾ

9. ಮೊಹರೆ ಹನುಮಂತರಾವು, ಕರ್ಮವೀರ

10. Verma, D. C., History of Bijapur (1974), p. 255.

11. ಈ ಕಾವ್ಯವನ್ನು ಶ್ರೀ ಸ್ವಾಮಿಗಳ ಅಳಿಯ ನಾರಾಯಣನು ಬರೆದನು. ಇದು ಸಮಕಾಲೀನ ದಾಖಲೆಯಾಗಿದೆ. Karnatak Historical Review, p. 28.

12. ಜಿ. ಬಿ. ಜೋಶಿ, ಅದೇ ಗ್ರಂಥ, ಪು. 114.

13. ಕೆಳದಿ ನೃಪವಿಜಯ, 1973 ಆವೃತ್ತಿ, ಪು. 155.

14. ಕೇಶವದಾಸ, ಅದೇ ಗ್ರಂಥ, ಪು. 351, ಜಿ. ಬಿ. ಜೋಶಿ, ಅದೇ ಗ್ರಂಥ, ಪು. 110.

ಖಾನನು ಅವರ ದೊಡ್ಡ ಭಕ್ತನಾದನು. ಸ್ವಾಮಿಯವರ ಅಪೇಕ್ಷೆಯಂತೆ ಮಂಚಾಲಯವನ್ನು ಅವರಿಗೆ ದಾನ ಮಾಡಿದನು. ರಾಜ್ಯದಲ್ಲಿ ನಡೆಯುತ್ತಿದ್ದ ಜುಲುಮೆ ದುರಹಾರ ಪದ್ಧತಿಯನ್ನು ನವಾಬನು ಸ್ವಾಮಿಗಳ ಸಾತ್ವಿಕ ಗುಣಗಳ ಪ್ರಭಾವದಿಂದ ನಿಲ್ಲಿಸಿದನು.[15]

ಶ್ರೀರಾಘವೇಂದ್ರಸ್ವಾಮಿಗಳು ತಮ್ಮ ಜೀವಿತ ಕಾಲದಲ್ಲಿ ನಶಿಸಿ ಹೋಗುತ್ತಿದ್ದ ಹಿಂದೂ ಧರ್ಮಕ್ಕೆ ಹೊಸ ಕಳೆಯನ್ನಿತ್ತು ಜನರಲ್ಲೂ ಹಾಗೂ ಪರಕೀಯ ಅರಸರಲ್ಲೂ ಹಿಂದೂಧರ್ಮದ ಮೇಲೆ ಗೌರವವನ್ನುಂಟು ಮಾಡಿದರು. ಇದೇ ಅವರು ಹಿಂದೂಧರ್ಮಕ್ಕೆ ಮಾಡಿದ ಅಪಾರ ಸೇವೆ.

ವಿದ್ಯಾರಣ್ಯರಂತೆ ರಾಘವೇಂದ್ರಸ್ವಾಮಿಗಳು ಯಾವ ರಾಜ್ಯವನ್ನೂ ಕಟ್ಟಲು ಪ್ರೇರಕಶಕ್ತಿಯಾಗಿಲ್ಲವಾದರೂ ತಮ್ಮ ವಿದ್ವತ್ತು ಮತ್ತು ಪರಮತಗಳ ಮೇಲಿನ ಗೌರವ ಮತ್ತು ಪವಾಡಗಳ ಮುಖಾಂತರ ತೇಜೋಹೀನವಾಗುತ್ತಿದ್ದ ಹಿಂದೂ ಧರ್ಮವನ್ನು ಉದ್ಧರಿಸಿ ಜನರಲ್ಲಿ ಆತ್ಮವಿಶ್ವಾಸ ಮೂಡಿಸಿದ್ದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಶ್ರೀಸ್ವಾಮಿಗಳ ಪವಾಡ ಸಾಮಾನ್ಯ ಜನರ ಮೇಲೆ ಪ್ರಭಾವ ಬೀರಿದರೆ, ಇವರ ಜ್ಞಾನಶಕ್ತಿ ಪಂಡಿತರನ್ನು ಹೆಚ್ಚು ಆಕರ್ಷಿಸಿತು. ಒಟ್ಟಿನಲ್ಲಿ ಶ್ರೀರಾಘವೇಂದ್ರಸ್ವಾಮಿಗಳು ಹಿಂದೂ ರಾಜರಲ್ಲಿ ಧರ್ಮ ಜಾಗೃತಿಯನ್ನುಂಟುಮಾಡಿ ಪರಧರ್ಮೀಯರಿಗೆ ಹಿಂದೂಧರ್ಮದ ಶಕ್ತಿಯ ಅರಿವನ್ನುಂಟುಮಾಡಿದರು. ಇದು ಇತಿಹಾಸದಲ್ಲಿ ಮರೆಯಲಾರದ ಸಂಗತಿ.

---

15. ಕೇಶವದಾಸ, ಅದೇ ಗ್ರಂಥ, ಪು. 353.

ಡಾ. ಜಿ. ಎಸ್. ದೀಕ್ಷಿತ

ವಿದ್ಯಾರಣ್ಯರ ಮಹತ್ಕಾರ್ಯ

ದೇಶದಲ್ಲಿ ಪುನರುಜ್ಜೀವನವಾಗುತ್ತಿರುವ ಈಗಿನ ಸಮಯದಲ್ಲಿ ವಿದ್ಯಾರಣ್ಯರ ಜೀವನದಿಂದ ನಾವು ಸ್ಫೂರ್ತಿಯನ್ನು ಪಡೆಯಬೇಕು. ವಿದ್ಯಾರಣ್ಯರ ಪೂರ್ವಾಶ್ರಮದ ಹೆಸರು ಮಾಧವಾಚಾರ್ಯ. ಅವರ ತಮ್ಮ ಸಾಯಣಾಚಾರ್ಯ.ಇವರಿಬ್ಬರೂ ಉದ್ದಾಮ ಪಂಡಿತರಾಗಿದ್ದರಲ್ಲದೆ ವಿಜಯನಗರಸಾಮ್ರಾಜ್ಯದಲ್ಲಿ ಮಂತ್ರಿಗಳೆಂದು ಹೆಸರುವಾಸಿಯಾಗಿದ್ದರು. ಇಬ್ಬರಿಗೂ ವಿದ್ಯಾತೀರ್ಥರು ಗುರುಗಳಾಗಿದ್ದರು. ಶೃಂಗೇರಿಯ ಮಠದಲ್ಲಿ ಮೊದಲು ವಿದ್ಯಾತೀರ್ಥರೂ ನಂತರ ವಿದ್ಯಾರಣ್ಯರೂ ಜಗದ್ಗುರುಗಳಾಗಿದ್ದರು. ಇವರೆಲ್ಲರೂ ಜೀವಿಸಿದ ಕಾಲ ದಕ್ಷಿಣ ಭಾರತದ ಇತಿಹಾಸದಲ್ಲಿ ಪರ್ವಕಾಲ. ಪ್ರಳಯಕಾಲವೆಂದರೂ ತಪ್ಪಾಗದು. ಹದಿನಾಲ್ಕನೆಯ ಶತಮಾನದ ಆದಿಭಾಗದಲ್ಲಿ ಮಲ್ಲಿಕಾಫರ್ ಮತ್ತು ಮಹಮದ್ ತುಘಲಕರು ದಕ್ಷಿಣ ಭಾರತದ ಎಲ್ಲಾ ಹಿಂದೂ ರಾಜ್ಯಗಳನ್ನು ನಾಶಮಾಡಿದರು. ಈ ಭಾಗದ ಹಿಂದೂ ದೇವಾಲಯಗಳನ್ನು ಲೂಟಿ ಮಾಡಿದರು. ಜನಜೀವನ ಅಸ್ತವ್ಯಸ್ತವಾಯಿತು. ಹಿಮಾಲಯದಿಂದ ರಾಮೇಶ್ವರದವರೆಗೂ ಮುಸಲ್ಮಾನರ ಕೈ ಮೇಲಾಯಿತು. ನಮ್ಮ ಪ್ರಾಚೀನ ಧರ್ಮ ಮತ್ತು ಸಂಸ್ಕೃತಿ ಕೊನೆಗಾಣುವ ಸ್ಥಿತಿ ಬಂದಿತು. ಇಂತಹ ಪರಿಸ್ಥಿತಿಯಿಂದ ನಮ್ಮ ಸಂಸ್ಕೃತಿಯನ್ನು ಕಾಪಾಡಿದವರಲ್ಲಿ ವಿದ್ಯಾರಣ್ಯರು ಅಗ್ರಗಣ್ಯರು. ಇವರು ಹರಿಹರ ಬುಕ್ಕರಿಗೆ ಮಾರ್ಗದರ್ಶನ ಮಾಡಿ 1336 ರಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪನೆಮಾಡಿದರೆಂದು ನಮ್ಮ ಜನ ನಂಬಿದ್ದಾರೆ.

ಈ ನಂಬಿಕೆಯು ಸತ್ಯವೋ, ಅಸತ್ಯವೋ ಇದನ್ನು ಪರಾಮರ್ಶಿಸಬೇಕು. ಕೆಲವು ಸಂಶೋಧಕರು ಈ ಸಾಮ್ರಾಜ್ಯಸ್ಥಾಪನೆಯಲ್ಲಿ ವಿದ್ಯಾರಣ್ಯರಿಗೆ ಸ್ಥಾನವಿಲ್ಲವೆನ್ನುತ್ತಾರೆ. ಇಂಥವರಲ್ಲಿ ಕವಿಚರಿತೆಕಾರರಾದ ಆರ್. ನರಸಿಂಹಾಚಾರ್ಯರು ಒಬ್ಬರು. ಅವರ ಪ್ರಕಾರ ವಿದ್ಯಾರಣ್ಯರಿಗೆ ಸಂಬಂಧಪಟ್ಟ ಒಂದೂ ಶಾಸನವು ಮೊದಲನೆಯ ಹರಿಹರನ ಕಾಲದಲ್ಲಿ ಇಲ್ಲದಿರುವುದರಿಂದಲೂ, ಅವುಗಳು ಬುಕ್ಕ ಮತ್ತು ಎರಡನೆಯ ಹರಿಹರನ ಕಾಲದಲ್ಲಿ ಇರುವುದರಿಂದಲೂ, ಅವರ ಚಟುವಟಿಕೆಗಳೆಲ್ಲಾ ಬುಕ್ಕ ಮತ್ತು ಎರಡನೆಯ ಹರಿಹರನ ಕಾಲದಲ್ಲಿಯೇ ಆಗಿರಬೇಕು.

ಮೇಲಾಗಿ ಮೊದಲನೆಯ ಹರಿಹರ ಮತ್ತು ಬುಕ್ಕ ಇವರು ವಿದ್ಯಾತೀರ್ಥರೇ ತಮ್ಮ ಪ್ರೇರಕರೆಂದ ಹೇಳಿಕೊಂಡಿದ್ದಾರೆ. 1336ರಲ್ಲಿ ಈ ಸಹೋದರರು ವಿಜಯನಗರಸಾಮ್ರಾಜ್ಯವನ್ನು ಸ್ಥಾಪಿಸಿ ಮುಂದಿನ ಹತ್ತೇ ವರ್ಷಗಳಲ್ಲಿ ದಕ್ಷಿಣ ಭಾರತದ ಬಹು ಭಾಗವನ್ನು ಗೆದ್ದರು. 1346 ರಲ್ಲಿ ತಮ್ಮ ಕೆಲಸವನ್ನು ಸುಲಭ ಮಾಡಿಸಿದ ಜಗದ್ಗುರು ಶ್ರೀ ವಿದ್ಯಾತೀರ್ಥರ ಸಂದರ್ಶನಕ್ಕೆ ಶೃಂಗೇರಿಗೆ ಹೋಗಿ ವಿಜಯೋತ್ಸವವನ್ನು ಆಚರಿಸಿದರು. ಈ ಉತ್ಸವದಲ್ಲಿ ಅವರು ತಮ್ಮ ಕೃತಜ್ಞತೆಯನ್ನು ಶ್ರೀವಿದ್ಯಾತೀರ್ಥರಿಗೆ ಸಲ್ಲಿಸಿದರು. ಈ ಸಂದರ್ಭ

ದಲ್ಲಿ ವಿದ್ಯಾರಣ್ಯರ ಹೆಸರೇ ಇಲ್ಲ. ನಿಜವಾಗಿಯೂ ವಿದ್ಯಾರಣ್ಯರು ಈ ಸಹೋದರರಿಗೆ ಅಷ್ಟು ಸಹಾಯ ಮಾಡಿದ್ದರೆ ವಿಜಯೋತ್ಸವದಲ್ಲಿ ಅವರನ್ನು ಸ್ಮರಿಸಬೇಕಾಗಿತ್ತು. ಹಾಗೆ ಮಾಡದಿರುವುದರಿಂದ ಸಾಮ್ರಾಜ್ಯ ಸ್ಥಾಪನೆಗೂ ಅವರಿಗೂ ಯಾವ ಸಂಬಂಧವೂ ಇಲ್ಲ. ಈ ಗೌರವ ವಿದ್ಯಾತೀರ್ಥರಿಗೆ ಸಲ್ಲತಕ್ಕದ್ದು. ಇದು ನರಸಿಂಹಾಚಾರ್ಯರ ವಾದ.

ವಿದ್ಯಾರಣ್ಯರೇ ಸಾಮ್ರಾಜ್ಯಸ್ಥಾಪಕರೆಂದು ವಾದಿಸುವವರು ಡಿ. ವಿ. ಗುಂಡಪ್ಪನವರು. ಅವರು ಹೇಳುವುದೇನೆಂದರೆ : ವಿದ್ಯಾತೀರ್ಥರು ಯಾವಾಗಲೂ ಯೋಗಾಭ್ಯಾಸದಲ್ಲಿ ನಿರತರಾಗಿರುತ್ತಿದ್ದರು. ಅವರಿಗೂ ಲೌಕಿಕಕ್ಕೂ ಬಹು ದೂರವಾಗಿತ್ತು. ಅವರ ಶಿಷ್ಯರಾದ ವಿದ್ಯಾರಣ್ಯರು ಸ್ವಭಾವದಲ್ಲಿ ತಮ್ಮ ಗುರುಗಳಿಗಿಂತ ಭಿನ್ನವಾಗಿದ್ದರು. ಯತಿಗಳಾಗಿದ್ದರೂ ರಾಜಕೀಯ ಪರಿಸ್ಥಿತಿಯ ಅರಿವು ಅವರಿಗೆ ಚೆನ್ನಾಗಿತ್ತು. ರಾಜಕೀಯ ಸರಿಯಾಗಿಲ್ಲದಿದ್ದರೆ, ಯಾವುದೂ ಸರಿಯಾಗಿರುವುದಿಲ್ಲವೆನ್ನುವ ಮತದವರಾಗಿದ್ದರು. ಎಲ್ಲಾ ಕೆಲಸಗಳಲ್ಲಿಯೂ ತಮ್ಮ ಗುರುಗಳನ್ನೇ ಮುಂದಿಟ್ಟುಕೊಂಡು, ಅವರ ಹೆಸರಿನಲ್ಲಿಯೇ ವಿದ್ಯಾರಣ್ಯರು ಕಾರ್ಯ ನಿರ್ವಹಿಸುತ್ತಿದ್ದರು. ದೊಡ್ಡವರ ಹೆಸರಿನಲ್ಲಿ ಕೆಲಸ ನಡೆಸಿಕೊಂಡು ಹೋಗುವುದು ನಮ್ಮಲ್ಲಿಯ ಸಂಪ್ರದಾಯ. ಇದೇ ರೀತಿಯಾಗಿ ಸ್ವಾಮಿ ವಿವೇಕಾನಂದರು ರಾಮಕೃಷ್ಣ ಪರಮಹಂಸರ ಹೆಸರಿನಲ್ಲಿ ಕೆಲಸ ಮಾಡುತ್ತಿದ್ದರು. ವಿದ್ಯಾರಣ್ಯರು ಕಲಿಸಿದ ಪಾಠದಿಂದಾಗಿ ಹರಿಹರ ಬುಕ್ಕರು ತಮ್ಮ ಸಾಧನೆಗಳೆಲ್ಲ ವಿದ್ಯಾರಣ್ಯತೀರ್ಥರ ಅನುಗ್ರಹದಿಂದ ಆಯಿತೆಂದು ಹೇಳಿರಬೇಕು. ನಿಜವಾಗಿಯೂ ಈ ಸಾಧನೆಗಳೆಲ್ಲ ವಿದ್ಯಾತೀರ್ಥರ ಮಾರ್ಗದರ್ಶನದ ಫಲ. ಇದು ಡಿ. ವಿ. ಗುಂಡಪ್ಪನವರ ವಾದ.

ವಿದ್ಯಾರಣ್ಯರ ಜೀವನಚರಿತ್ರೆಯನ್ನು ನಾವು ನೋಡಿದರೆ ವಿಜಯನಗರಸಾಮ್ರಾಜ್ಯಸ್ಥಾಪನೆಯ ಕಾಲದಲ್ಲಿ (1336) ಅವರು ಸೇವೆ ಸಲ್ಲಿಸಿದ್ದು ಅಸಾಧ್ಯವೆಂದು ಹೇಳುವ ಹಾಗಿಲ್ಲ. ಅವರು ಹುಟ್ಟಿದ್ದು ಸುಮಾರು 1296 ರಲ್ಲಿ. ಅವರ 35ನೆಯ ವಯಸ್ಸಿನಲ್ಲಿ ಅಂದರೆ 1331ರಲ್ಲಿ ಅವರು ಸನ್ಯಾಸಗ್ರಹಣ ಮಾಡಿದರಂತೆ. ಆದ್ದರಿಂದ 1336 ರಲ್ಲಿ ಅಂದರೆ ಅವರ 40ನೆಯ ವಯಸ್ಸಿನಲ್ಲಿ ಸಾಮ್ರಾಜ್ಯಸ್ಥಾಪನೆಯ ಕೆಲಸವನ್ನು ಕೈಕೊಂಡಿರಬೇಕು. ಕೈಕೊಂಡ ಕೆಲಸ ಮುಗಿಯಿತೆಂದು ಅವರು ಕಾಶಿಗೆ ಹೊರಟುಹೋಗಿರಬೇಕು. ಈ ಕಾರಣದಿಂದ 1346ರ ವಿಜಯೋತ್ಸವದಲ್ಲಿ ಅವರ ಹೆಸರು ಬರಲಿಲ್ಲ.

ಅವರು ಕಾಶಿಗೆ ಹೋದಮೇಲೆ ಮೊದಲನೆಯ ಹರಿಹರನು 1336 ರಿಂದ 1356 ರವರೆಗೆ ಆಳಿದನು. ಅವನ ತರುವಾಯ ಬುಕ್ಕರಾಯ ಪಟ್ಟಕ್ಕೆ ಬಂದನು. ಬಂದ ತಕ್ಷಣ ಕಾಶಿಯಲ್ಲಿದ್ದ ವಿದ್ಯಾರಣ್ಯರನ್ನು ತನ್ನ ಸಹಾಯಕ್ಕೆ ಕರೆಯಿಸಿಕೊಳ್ಳಬೇಕೆಂದು ಹವಣಿಸಿದನು. ತಾನೇ ಪತ್ರ ಬರೆದರೆ ವಿದ್ಯಾರಣ್ಯರು ಬರುತ್ತಾರೋ ಇಲ್ಲವೋ ಎನ್ನುವ ಸಂಶಯವಿದ್ದುದರಿಂದ ತನ್ನ ಪತ್ರದ ಜೊತೆಗೆ ವಿದ್ಯಾತೀರ್ಥರ ಪತ್ರವನ್ನೂ ಕಳಿಸಿದನು. ಗುರುಗಳ ಆಜ್ಞೆಯನ್ನು ಮೀರದೆ ವಿದ್ಯಾರಣ್ಯರು ವಿಜಯನಗರಕ್ಕೆ ಹಿಂತಿರುಗಬೇಕಾಯಿತು. ಬಂದ ತಕ್ಷಣ ತಮ್ಮ ಗುರುಗಳ ದರ್ಶನಕ್ಕಾಗಿ ಶೃಂಗೇರಿಗೆ ಹೋಗಿಬಂದರು. ಮುಂದೆ ಅವರು ಬುಕ್ಕ ಮತ್ತು ಎರಡನೆ ಹರಿಹರರಿಗೆ ಮಂತ್ರಿಗಳಾಗಿದ್ದರು. 1386 ರಲ್ಲಿ ಅಂದರೆ ಅವರ ತೊಂಭತ್ತನೆಯ ವಯಸ್ಸಿನಲ್ಲಿ ಕೈವಲ್ಯವನ್ನು ಪಡೆದಂತೆ ತಿಳಿದು ಬರುತ್ತದೆ.

ಇನ್ನು ಇವರ ಗುಣಗಳನ್ನು ಮತ್ತು ಸಾಧನೆಗಳನ್ನು ಅವಲೋಕಿಸೋಣ. ಇವರ ಗುರುಗಳಾದ ವಿದ್ಯಾತೀರ್ಥರು, ಭಾರತೀತೀರ್ಥರು ಮತ್ತು ಶಿಷ್ಯರಾದ ಹರಿಹರ ಮತ್ತು ಬುಕ್ಕರು ಇವರಲ್ಲಿ ಸಂಪೂರ್ಣ ವಿಶ್ವಾಸವಿಟ್ಟಿದ್ದರಲ್ಲಿ ಏನೂ ಆಶ್ಚರ್ಯವಿಲ್ಲ. ಇತರ ಮತೀಯಮುಖಂಡರ ವಿಶ್ವಾಸವನ್ನೂ ಇವರು ಸಂಪಾದಿಸಿದ್ದರು. ಮಾಧ್ವ ಗುರುಗಳಾದ ಅಕ್ಷೋಭ್ಯತೀರ್ಥರೂ, ಟೀಕಾಚಾರ್ಯರೂ ಮತ್ತು ನರಹರಿತೀರ್ಥರೂ ಇವರ ಕಾಲದಲ್ಲಿ ಹಂಪೆಯಲ್ಲಿ ಇದ್ದರು. ಟೀಕಾಚಾರ್ಯರ ಮೆರವಣಿಗೆಯನ್ನು ವಿಜಯನಗರದ ರಾಜಬೀದಿಯಲ್ಲಿ

ವಿದ್ಯಾರಣ್ಯರು ಮೆರವಣಿಗೆ ಮಾಡಿಸಿದರೆಂದು ಪ್ರತೀತಿ ಇದೆ. ಇವರಿಗೂ ಅಕ್ಷೋಭ್ಯತೀರ್ಥರಿಗೂ ಒಂದು ಚರ್ಚೆ ನಡೆಯಿತು. ಇದಕ್ಕೆ ಶ್ರೀವೈಷ್ಣವ ಮುಖಂಡ ವೇದಾಂತದೇಶಿಕರು ಅಧ್ಯಕ್ಷರಾಗಿದ್ದರು. ಇಂಥ ತಾತ್ವಿಕವಾದ ವಿವಾದಗಳಿಂದ ದೇಶದ ಒಗ್ಗಟ್ಟಿಗೆ ಧಕ್ಕೆ ಬರಲಿಲ್ಲ.

ವಿಜಯನಗರಸಾಮ್ರಾಜ್ಯದ ಸ್ಥಾಪನೆಗೆ ಮಾರ್ಗದರ್ಶನವಲ್ಲದೆ ವಿದ್ಯಾರಣ್ಯರು ಧನ ಸಹಾಯವನ್ನೂ ಮಾಡಿದರೆನ್ನುವ ದಂತಕಥೆ ಇದೆ. ಲಲಿತಾ ಸಹಸ್ರನಾಮದ ಕೆಲವು ಪ್ರತಿಗಳ ಕೊನೆಗೆ ಈ ಕಥೆ ಇದೆ. ಈ ಸಹಸ್ರನಾಮವನ್ನು ವಿದ್ಯಾರಣ್ಯರು ನವರಾತ್ರಿಯಲ್ಲಿ ಪಾರಾಯಣ ಮಾಡಿದರಂತೆ. ಪಾರಾಯಣ ಮುಗಿದ ಮೇಲೆ ವಿಜಯನಗರದಲ್ಲಿ ಸುವರ್ಣವೃಷ್ಟಿ ಆಯಿತಂತೆ. ವಿಜಯನಗರದಲ್ಲಿ ವಿದ್ಯಾರಣ್ಯರು ಸುವರ್ಣವೃಷ್ಟಿ ಮಾಡಿಸಿದರೆನ್ನುವುದಕ್ಕೆ ಬೇರೆ ರೀತಿಯಲ್ಲಿ ಅರ್ಥಮಾಡಬಹುದು. ದೇಶಕ್ಕೆ ಬಂದ ವಿಪತ್ತನ್ನು ವಿದ್ಯಾರಣ್ಯರು ಜನರಿಗೆ ಮನವರಿಕೆ ಮಾಡಿಕೊಟ್ಟು ಸ್ವಾತಂತ್ರ್ಯ ಸಂರಕ್ಷಣೆಗೆ ನೀವು ನಿಮ್ಮ ಬಂಗಾರವನ್ನು ಕೊಡಿರೆಂದು ಕೇಳಿರಬೇಕು. ಆಗ ಜನರೆಲ್ಲ ತಮ್ಮಲ್ಲಿಯ ಬಂಗಾರವನ್ನು ತಂದುಕೊಟ್ಟಿರಬೇಕು. ಇದೇ ಸುವರ್ಣವೃಷ್ಟಿಯ ದಂತಕಥೆ.

ವಿದ್ಯಾರಣ್ಯರು ಮಾಡಿದ ಇನ್ನೊಂದು ಪವಾಡವೆಂದರೆ ವಿಶ್ವಕೋಶರಚನೆ. ಈ ಕೆಲಸದಲ್ಲಿ ಸಾಯಣಾಚಾರ್ಯರು ವಿದ್ಯಾರಣ್ಯರ ಬಲಗೈ ಆಗಿದ್ದರು. ಇಬ್ಬರೂ ಸೇರಿ ಆ ಕಾಲದ ಪ್ರಮುಖ ಪಂಡಿತರನ್ನು ವಿಜಯನಗರ ಮತ್ತು ಶೃಂಗೇರಿಗಳಲ್ಲಿ ಒಟ್ಟುಗೂಡಿಸಿ ಅವರಿಂದ ವೇದ, ವೇದಾಂತ, ಸಾಹಿತ್ಯ, ಧರ್ಮಶಾಸ್ತ್ರ, ಸಂಗೀತ, ಆಯುರ್ವೇದ ಇತ್ಯಾದಿ ಭಾರತೀಯ ಜ್ಞಾನದ ಬೇರೆ ಬೇರೆ ಭಾಗಗಳಲ್ಲಿ ಅಲ್ಲಿಯವರೆಗೂ ಆದ ಸಾಧನೆಯನ್ನು ಬರೆಸಿಟ್ಟಿದ್ದಾರೆ. ಸರ್ವದರ್ಶನ ಸಂಗ್ರಹ, ಪರಾಶರ ಮಾಧವೀಯ ಇತ್ಯಾದಿ ಗ್ರಂಥಗಳು ಈ ಉಪಕ್ರಮದಿಂದ ಆದವು.

ಇದೇ ರೀತಿಯಾಗಿ ವಿದ್ಯಾರಣ್ಯರು ನಮ್ಮ ವಾಸ್ತುಶಿಲ್ಪವನ್ನೂ ಉಳಿಸಿದರು. ವಿಜಯನಗರ ಸಾಮ್ರಾಜ್ಯದ ಮೊದಲು ಕರ್ನಾಟಕದಲ್ಲಿ ಚಾಲುಕ್ಯ ರೀತಿಯ ವಾಸ್ತುಶಿಲ್ಪ ಚೆನ್ನಾಗಿ ಬೆಳೆದಿತ್ತು. ಮುಸಲ್ಮಾನರ ದಾಳಿಯಿಂದ ಈ ಕಲೆಯು ಸಂಪೂರ್ಣವಾಗಿ ನಾಶವಾಗಿತ್ತು. ವಿದ್ಯಾರಣ್ಯರು ಬೇರೆ ಬೇರೆ ಭಾಗಗಳಿಂದ ಶಿಲ್ಪಿಗಳನ್ನು ಕರೆತಂದು ಶೃಂಗೇರಿಯಲ್ಲಿ ವಿದ್ಯಾಶಂಕರ (ವಿದ್ಯಾತೀರ್ಥರ ಇನ್ನೊಂದು ಹೆಸರು) ದೇವಾಲಯವನ್ನು ಕಟ್ಟಿಸಿದರು. ಇದೊಂದು ಅಪೂರ್ವ ಕಲಾಕೃತಿ. ಮುಂದೆ ವಿಜಯನಗರದ ಅರಸರು ಈ ಕಲೆಯನ್ನು ಪ್ರೋತ್ಸಾಹಿಸಿದ್ದರಿಂದ ಅದು ಇವತ್ತಿನವರೆಗೂ ಉಳಿದಿದೆ. ಹೀಗೆ ನಮ್ಮ ಸಂಸ್ಕೃತಿಯನ್ನು ಕಾಪಾಡಿದ ವಿದ್ಯಾರಣ್ಯರನ್ನು ನಾವು ನೆನೆಯುವುದು ಅತ್ಯವಶ್ಯ.

ಸುಖದುಃಖಗಳೆರಡೂ ಸರಪಳಿಗಳೆ. ಒಂದು ಚಿನ್ನದ್ದು ಮತ್ತೊಂದು ಕಬ್ಬಿಣದ್ದು.

ಲ. ನ. ಶಾಸ್ತ್ರೀ

ಸ್ವಾಮಿ ಶ್ರೀ ಭಾರತೀಕೃಷ್ಣತೀರ್ಥ

೧

ಭರತಖಂಡದ ಸಾಧುಸಂತರು, ಯೋಗಿಸಿದ್ಧರು, ಯತಿಸನ್ಯಾಸಿಗಳು ಲೋಕದಲ್ಲಿರುವ ದುಃಖಸಂಕಟಗಳು, ಕಷ್ಟನಷ್ಟಗಳು, ರೋಗರುಜಿನಗಳು ಮುಂತಾದುವನ್ನು ಪ್ರಾರಬ್ಧವೆಂದು ನಿರ್ಲಕ್ಷಿಸಿ, ತಮ್ಮ ಸ್ವಂತ ಮುಕ್ತಿಗಾಗಿ ಸುಖಲಾಭಕ್ಕಾಗಿ ಪ್ರಯತ್ನಿಸುವ ಸ್ವಾರ್ಥಿಗಳೆಂಬ ದೂರು ಪಾಶ್ಚಾತ್ಯ ವರ್ತುಲಗಳಿಂದ ಕೇಳಿಬರುತ್ತಿದೆ. ಇವರು ಮಾನವರ ಕಲ್ಯಾಣಕ್ಕಾಗಿ ಏಳಿಗೆಗಾಗಿ ಯಾವ ವಿಧವಾದ ಕೆಲಸವನ್ನೂ ಮಾಡದ ಜಡರೆಂಬ ಆಕ್ಷೇಪವೂ ಕೇಳಿ ಬರುತ್ತಿದೆ. ದೇಶದ, ಸಮಾಜದ ಕಷ್ಟಸಂಕಷ್ಟಗಳ ಪರಿಹಾರಕ್ಕೆ ಸ್ವಲ್ಪವೂ ನೆರವಾಗದೆ ಸೋಮಾರಿಗಳಂತೆ ಜೀವಿಸುವ ಈ ಸಾಧುಸಂತರು ಸಮಾಜಕ್ಕೆ ದೇಶಕ್ಕೆ ಅನಾವಶ್ಯಕವಾದ ಹೊರೆಯಾಗಿದ್ದಾರೆ; ಇವರಿಂದ ರಾಷ್ಟ್ರಕ್ಕೇ ಆಗಲಿ ಜನಕ್ಕೇ ಆಗಲಿ ಯಾವ ಹಿತವೂ ಇಲ್ಲ, ಏನು ಪ್ರಯೋಜನವೂ ಇಲ್ಲ ಎಂದು ಪಾಶ್ಚಾತ್ಯ ವಿದ್ಯಾಭ್ಯಾಸದಿಂದ ಪ್ರಭಾವಿತರಾದ ಭಾರತೀಯರು ಸಹ ದೂರುತ್ತಾರೆ. ಇಂತಹ ದೂಷಣೆ, ಆಕ್ಷೇಪಣೆಗಳಿಗೆ ನಮ್ಮ ಸಾಧುಸನ್ಯಾಸಿಗಳ ಬಗೆಗೆ ಸರಿಯಾದ ಪರಿಚಯ, ತಿಳುವಳಿಕೆ ಇಲ್ಲದುದೇ ಕಾರಣವಾಗಿದೆ.

ನಮ್ಮ ವೇದಾಂತಶಾಸ್ತ್ರವು (ಅದ್ವೈತ ವೇದಾಂತ) ಜಗತ್ತನ್ನು ಮಿಥ್ಯೆ ಎಂದು ಕರೆದರೂ ಜಗತ್ತಿಗೆ, ದೇಶಕ್ಕೆ ಅಪಾಯ ಬಂದಾಗ ಅದರ ರಕ್ಷಣೆಗೆ ಧಾವಿಸಿದವರು ಈ ಅದ್ವೈತ ಸನ್ಯಾಸಿಗಳೇ ಎಂಬುದು ಗಮನಾರ್ಹ. ಭರತಖಂಡದ ಭೌಗೋಳಿಕ, ಸಾಂಸ್ಕೃತಿಕ, ಮತ್ತು ಆಧ್ಯಾತ್ಮಿಕ ಐಕ್ಯತೆಯು ಸಾವಿರಾರು ವರ್ಷಗಳ ಹಿಂದೆಯೇ ಸ್ಥಾಪಿಸಲ್ಪಟ್ಟಿದ್ದರೂ ಶ್ರೀ ಶಂಕರಾಚಾರ್ಯರು ಉಪದೇಶಿಸಿದ ಧಾರ್ಮಿಕ ಮತ್ತು ನೈತಿಕ ತತ್ವಗಳಿಂದ ಇಂದು ರಾಜಕೀಯ ಮತ್ತು ಆರ್ಥಿಕ ಬಲಗಳ ಸಹಾಯದಿಂದ ನಾವಿನ್ನೂ ಸಾಧಿಸಲಾಗದ ಭಾವೈಕ್ಯತೆ ಮತ್ತು ಸಾಮಾಜಿಕ ಐಕ್ಯತೆಯನ್ನು ಆರು ಶತಕಕ್ಕೂ ಹಿಂದೆ ಶ್ರೀವಿದ್ಯಾರಣ್ಯರು ಧಾರ್ಮಿಕ ಬಲದಿಂದಲೆ ಸ್ಥಾಪಿಸಿದ್ದರೆಂಬುದು ಐತಿಹಾಸಿಕ ಸತ್ಯ. ಆ ಧಾರ್ಮಿಕ ಮತ್ತು ನೈತಿಕ ತತ್ವಗಳೇ ರಾಷ್ಟ್ರದ ಉದ್ಧಾರಕ್ಕೆ ಅತ್ಯಗತ್ಯವೆಂದು ಕಂಡುಕೊಂಡು ಪುನಃ ಪ್ರಸಾರಮಾಡಿದವರು ಸ್ವಾಮಿ ಶ್ರೀದಯಾನಂದ ಸರಸ್ವತಿ,ಶ್ರೀರಾಮಕೃಷ್ಣ ಪರಮಹಂಸ,ಶ್ರೀವಿವೇಕಾನಂದ,ಶ್ರೀರಾಮ ತೀರ್ಥ ಮುಂತಾದವರು. ಅಂತಹವರ ಶ್ರೇಷ್ಠ ಪರಂಪರೆಗೆ ಸೇರಿದವರು ಸ್ವಾಮಿ ಶ್ರೀಭಾರತೀಕೃಷ್ಣ ತೀರ್ಥರು.

ಶ್ರೀ ಶಂಕರಾಚಾರ್ಯರು ಭರತ ಖಂಡದಲ್ಲಿ ಸ್ಥಾಪಿಸಿದ ನಾಲ್ಕು ಆಮ್ನಾಯ ಪೀಠಗಳಲ್ಲಿ ಒಂದಾದ ಪೂರ್ವದ ಪುರೀ ಗೋವರ್ಧನಪೀಠದ ಜಗದ್ಗುರುಗಳಾಗಿದ್ದವರೇ ಸ್ವಾಮಿಾ ಶ್ರೀಭಾರತೀಕೃಷ್ಣ ತೀರ್ಥರು. ಭರತ ಖಂಡದ ಸ್ವಾತಂತ್ರ್ಯ ಸಮಯದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿದ ಪೀಠಾಧಿಪತಿಗಳೆಂದರೆ ಇವರೊಬ್ಬರೇ. ಹಾಗೆಯೇ ಭರತಖಂಡದ ಸನಾತನ ಧರ್ಮ ಮತ್ತು ವೇದಾಂತತತ್ವಪ್ರಸಾರಕ್ಕಾಗಿ ಪಾಶ್ಚಾತ್ಯಪ್ರವಾಸ ಮಾಡಿದಂತಹ ಶಾಂಕರ ಪೀಠಾಧಿಪತಿಗಳೂ ಇವರೊಬ್ಬರೇ.

ಶ್ರೀ ಭಾರತೀಕೃಷ್ಣ ತೀರ್ಥರ ಪೂರ್ವಾಶ್ರಮದ ಹೆಸರು ಶ್ರೀ ವೆಂಕಟರಾಮನ್. ತಂದೆಯವರು ಶ್ರೀ ನರಸಿಂಹಶಾಸ್ತ್ರಿ. ಆಗಿನ ಮದ್ರಾಸ್ ಸರ್ಕಾರದ ಒಳ್ಳೆಯ ಹುದ್ದೆಯಲ್ಲಿದ್ದವರು. ಧರ್ಮಶ್ರದ್ಧೆ ಮತ್ತು ಕರ್ಮನಿಷ್ಠೆಯುಳ್ಳ ಸತ್ಪುರುಷರು. ವೆಂಕಟರಾಮನ್ ಹುಟ್ಟಿದುದು 1883ನೆಯ ಇಸವಿ. ಜನ್ಮಸ್ಥಳ ತಮಿಳುನಾಡಿನ ತಿರುನೆಲ್ವೇಲಿ. ಬಾಲ್ಯದಲ್ಲಿಯೇ ಅದ್ಭುತ ಮೇಧಾಶಕ್ತಿಯನ್ನೂ ಪ್ರತಿಭೆಯನ್ನೂ ಹೊಂದಿದ್ದ ವೆಂಕಟರಾಮನ್ ತಮ್ಮ ಹದಿನಾರನೆಯ ವಯಸ್ಸಿನಲ್ಲಿಯೇ ಇನ್ನೂ ಮೆಟ್ರಿಕ್ಯುಲೇಷನ್ ತರಗತಿಯಲ್ಲಿದ್ದಾಗ ಸಂಸ್ಕೃತ ಭಾಷೆಯಲ್ಲಿ ಪ್ರವೀಣರಾಗಿದ್ದರು. ಕಾವ್ಯರಚಿಸುವ ಸಾಮರ್ಥ್ಯವನ್ನೂ, ಉಪನ್ಯಾಸ ಮಾಡುವ ಶಕ್ತಿಯನ್ನೂ ಪಡೆದಿದ್ದರು. ಸಂಸ್ಕೃತದಲ್ಲಿ ಇವರಿಗಿದ್ದ ಪ್ರತಿಭೆಯನ್ನು ಗೌರವಿಸಿ ಮದ್ರಾಸಿನ ಸಂಸ್ಕೃತ ಸಭಾದವರು ಸರಸ್ವತೀ ಎಂಬ ಮನ್ನಣೆಯ ಬಿರುದನ್ನು ಪುರಸ್ಕರಿಸಿದ್ದರು. ಹಾಗೆಯೇ ಇಂಗ್ಲೀಷ್ ಭಾಷೆ ಮತ್ತು ಸಾಹಿತ್ಯದಲ್ಲೂ ವೆಂಕಟರಾಮನ್ ಪ್ರಭುತ್ವವನ್ನು ಸ್ಥಾಪಿಸಿದ್ದರು. ಅವರು ಓದುತ್ತಿದ್ದ ಕ್ರೈಸ್ತಶಾಲೆಯಲ್ಲಿ ನಡೆಯುತ್ತಿದ್ದ ಬೈಬಲ್ ತರಗತಿಗಳಲ್ಲಿ ವೆಂಕಟರಾಮನ್‌ರದೇ ಪ್ರಥಮ ಸ್ಥಾನ. ಗಣಿತಶಾಸ್ತ್ರ, ವಿಜ್ಞಾನಶಾಸ್ತ್ರ, ಇತಿಹಾಸ, ಭೂಗೋಳಶಾಸ್ತ್ರ ಮುಂತಾದ ವಿಷಯಗಳಲ್ಲಿ ಇವರ ಪ್ರತಿಭೆ ಅಸದೃಶವಾಗಿತ್ತು.

ಬಿ. ಎ. ತರಗತಿಯಲ್ಲಿ ಅತ್ಯುಚ್ಚಶ್ರೇಣಿಯಲ್ಲಿ ಉತ್ತೀರ್ಣರಾದ ವೆಂಕಟರಾಮನ್ 1903ರಲ್ಲಿ ಅಮೇರಿಕನ್ ಕಾಲೇಜ್ ಆಫ್ ಸೈನ್ಸಸ್, ರೋಚೆಸ್ಟರ್, ನ್ಯೂಯಾರ್ಕ್ ಎಂಬ ಸಂಸ್ಥೆಯ ಎಂ.ಎ. ಪರೀಕ್ಷೆಯಲ್ಲಿಯೂ ಉತ್ತಮ ದರ್ಜೆಯಲ್ಲಿ ಉತ್ತೀರ್ಣರಾದ ಅನಂತರ 1904 ರಲ್ಲಿ ಅದೇ ಸಂಸ್ಥೆಯಲ್ಲಿ ಏಳು ವಿವಿಧ ವಿಷಯಗಳನ್ನು ಆರಿಸಿಕೊಂಡು ಎಂ. ಎ. ಪರೀಕ್ಷೆಗೆ ಕುಳಿತು ಎಲ್ಲಾ ವಿಷಯಗಳಲ್ಲೂ ಅತ್ಯುಚ್ಚ ಶ್ರೇಣಿಯಲ್ಲಿ ವಿಜೇತರಾಗಿ ವಿಶ್ವದಾಖಲೆಯನ್ನೇ ಸ್ಥಾಪಿಸಿದರು.ವಿದ್ಯಾರ್ಥಿ ದೆಸೆಯಲ್ಲಿ ಇದ್ದಾಗಲೇ ತತ್ವಶಾಸ್ತ್ರ,ಧರ್ಮಶಾಸ್ತ್ರ,ಸಮಾಜಶಾಸ್ತ್ರ,ಇತಿಹಾಸ,ರಾಜ್ಯಶಾಸ್ತ್ರ ಸಾಹಿತ್ಯ, ಗಣಿತ ಮತ್ತು ವಿಜ್ಞಾನ ಶಾಸ್ತ್ರಗಳನ್ನು ಕುರಿತು ಪ್ರಬುದ್ಧ ಲೇಖನಗಳನ್ನೂ ಪ್ರಬಂಧಗಳನ್ನೂ ಬರೆಯುತ್ತಿದ್ದರು. ಅವುಗಳು ಭಾರತೀಯ ಪತ್ರಿಕೆಗಳಲ್ಲಿಯೂ, ಪಾಶ್ಚಾತ್ಯ ದೇಶದ ಪತ್ರಿಕೆಗಳಲ್ಲಿಯೂ ಪ್ರಕಟವಾಗುತ್ತಿದ್ದು ವಿದ್ವಾಂಸರ ಮೆಚ್ಚುಗೆಗೆ ಪಾತ್ರವಾಗುತ್ತಿದ್ದವು.

೨

ವಿದ್ಯಾಭ್ಯಾಸ ಕಾಲದಲ್ಲಿಯೇ ವೆಂಕಟರಾಮನ್‌ರವರು ಶ್ರೀ ಗೋಪಾಲಕೃಷ್ಣ ಗೋಖಲೆಯವರ ಧ್ಯೇಯ, ಆದರ್ಶಗಳತ್ತ ಆಕರ್ಷಿತರಾಗಿದ್ದರು.ಪದವೀಧರರಾದ ನಂತರ ಸ್ವಲ್ಪಕಾಲ ಗೋಖಲೆಯವರ ನೇತೃತ್ವದಲ್ಲಿ ಸಮಾಜ ಸೇವಾ ನಿರತರಾಗಿದ್ದರು. ಬರೋಡ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸ್ವಲ್ಪಕಾಲ ಶ್ರೀ ಅರವಿಂದಘೋಷರ (ಪಾಂಡಿಚೆರಿಯ ಶ್ರೀಅರವಿಂದ ಮಹರ್ಷಿ) ಸಹೋದ್ಯೋಗಿಯಾಗಿಯೂ ಕೆಲಸ ಮಾಡಿದರು. ವಂಗಭಂಗ ಚಳುವಳಿಯಲ್ಲಿ ಕೆಲಸಕ್ಕೆ ರಾಜೀನಾಮೆ ಇತ್ತು ರಾಷ್ಟ್ರಸೇವೆಗೆ ಧುಮುಕಿದರು. ಅಂದಿನ ಕ್ರಾಂತಿಕಾರೀ ದೇಶಭಕ್ತರ ಸ್ನೇಹ ಸಹವಾಸದಲ್ಲಿ ವೆಂಕಟರಾಮನ್‌ರ ಅನೇಕ ವಿಚಾರಗಳು ಬದಲಾದವು. ದೇಶದ ದಾಸ್ಯವಿಮೋಚನೆಗೆ ಶಾಂತಿಯುತವಾದ ಅಹಿಂಸಾತ್ಮಕ ಚಳುವಳಿಗಳಿಗಿಂತ ಕ್ಷಾತ್ರಸಮರವೇ ಹೆಚ್ಚು ಯೋಗ್ಯವೆಂದು ಅವರು ನಂಬಿದರು. ಆ ನಂಬಿಕೆ ದೃಢವಾಗಲು ಕ್ರಾಂತಿಕಾರೀ ಚಟುವಟಿಕೆಗಳಲ್ಲಿ ಮಗ್ನರಾದರು. ರಾಷ್ಟ್ರಾದ್ಯಂತ ಇದ್ದಂತಹ ದೇಶಭಕ್ತರ ಸ್ನೇಹ ಸಂಪರ್ಕಗಳಲ್ಲಿ ವೆಂಕಟರಾಮನ್‌ರ ಕಾರ್ಯಕ್ಷೇತ್ರವೂ ವಿಸ್ತಾರವಾಯಿತು.

ಕ್ರಾಂತಿಕಾರಿಗಳ ನಿಕಟಸಂಪರ್ಕ ಹೊಂದಿದ್ದ ವೆಂಕಟರಾಮನ್‌ರ ಮೇಲೆ ಬ್ರಿಟಿಷ್ ಸರಕಾರದ ವಕ್ರದೃಷ್ಟಿ ಇದ್ದೇ ಇತ್ತು. ಕ್ರಾಂತಿಕಾರಿಗಳು ತಿರುನೆಲ್ವೇಲಿ ಜಿಲ್ಲೆಯ ಆಂಗ್ಲ ಕಲೆಕ್ಟರನನ್ನು ಗುಂಡಿಟ್ಟು ಕೊಂದಾಗ, ಅವರೊಡನೆ ವೆಂಕಟರಾಮನ್‌ರು ಸೇರಿರಬಹುದೆಂಬ ಶಂಕೆಯಿಂದ ಬ್ರಿಟಿಷ್ ಸರ್ಕಾರ ಅವರನ್ನು ಬಂಧಿಸಿತು. ವೆಂಕಟರಾಮನ್‌ರವರ ಮೇಲೆ ಹೊರಿಸಿದ ತಪ್ಪು ಸಾಬೀತು ಆಗದುದರಿಂದ ನ್ಯಾಯಾಲಯ ಅವರನ್ನು ಬಿಡುಗಡೆ ಮಾಡಿತು. ಜೈಲಿ

ನಿಂದ ಹೊರಬಂದ ವೆಂಕಟರಾಮನ್ ರಾಷ್ಟ್ರದ ರಾಜಕೀಯ ಹೋರಾಟಕ್ಕೆ ಆಧ್ಯಾತ್ಮಿಕ ಸಾಧನೆಯ ಬೆಂಬಲವೂ ಅಗತ್ಯವೆಂಬುದನ್ನು ಕಂಡುಕೊಂಡರು. ಆಧ್ಯಾತ್ಮಿಕ ಸಾಧನೆಯಲ್ಲಿ, ವೇದ ವೇದಾಂತಗಳ ಅಧ್ಯಯನದಲ್ಲಿ ಅವರಿಗೆ ಮೊದಲಿನಿಂದಲೂ ಆಸಕ್ತಿ ಇದ್ದೇ ಇತ್ತು, ಈಗ ಅದು ಇನ್ನೂ ಹೆಚ್ಚಿತು. ಅವರು ಸ್ವತಃ ಸಂಸ್ಕೃತ ಪಾಂಡಿತ್ಯವನ್ನು ಪಡೆದಿದ್ದರೂ ಅದು ಸಾಲದೆಂದು ಅವರ ಅತೃಪ್ತಿ ಹೆಚ್ಚುತ್ತಲೇ ಹೋಯಿತು. ಆಂತರ್ಯದಲ್ಲಿ ತುಮುಲ ನಿಲ್ಲಲೇ ಇಲ್ಲ. ಗ್ರಂಥವ್ಯಾಸಂಗಕ್ಕಿಂತ ಗುರುವಿನ ಅನುಗ್ರಹದಿಂದಲೇ ಆಧ್ಯಾತ್ಮಿಕ ಸಾಧನೆಯಲ್ಲಿ ಪ್ರಗತಿ ದೊರಕುವುದೆಂಬುದನ್ನು ವೆಂಕಟರಾಮನ್ ಅರ್ಥಮಾಡಿಕೊಂಡರು. ತಮ್ಮ ಸಾಮಾಜಿಕ ಸೇವಾಕಾರ್ಯಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿದರು. ಯೋಗ್ಯ ಗುರುವಿನ ಅನ್ವೇಷಣೆಯಲ್ಲಿ ತೊಡಗಿದರು. ಆಗ ಶೃಂಗೇರಿಯಲ್ಲಿ ಜಗದ್ಗುರುಗಳಾಗಿದ್ದ ರಾಜಯೋಗಿಗಳೆಂದೂ, ಅಭಿನವ ಶಂಕರರೆಂದೂ ಪ್ರಖ್ಯಾತರಾಗಿದ್ದ ಶ್ರೀಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀಸ್ವಾಮಿಗಳವರೇ ತಮ್ಮ ಮಾರ್ಗದರ್ಶಿಯೆಂಬುದನ್ನು ಕಂಡುಕೊಂಡು ಅವರ ಬಳಿ ವೇದಾಂತದ ಅಧ್ಯಯನ ಮಾಡಲು ನಿರ್ಧರಿಸಿ 1908ರಲ್ಲಿ ಶೃಂಗೇರಿಗೆ ಬಂದರು.

ಶ್ರೀವೆಂಕಟರಾಮನ್‌ರಿಗೆ ತ್ಯಾಗವೈರಾಗ್ಯಗಳು ಸ್ವಾಭಾವಿಕ ಗುಣಗಳಾಗಿದ್ದವು. ತಮ್ಮ ದೇಶದ ಜನಗಳ ದುಃಸ್ಥಿತಿಗೆ ಕಾರಣವನ್ನು ಹುಡುಕಿ ಅದರ ನಿವಾರಣೆಗೆ ದುಡಿಯಬೇಕೆಂಬ ಆಕಾಂಕ್ಷೆಯೂ ಉತ್ಕಟವಾಗಿತ್ತು. ಆಧ್ಯಾತ್ಮಿಕ ಸಾಧನೆಯು ಅವರನ್ನು ಅತ್ಯಂತ ಗಾಢವಾಗಿ ಆಕರ್ಷಿಸಿದಾಗ ಎಲ್ಲವನ್ನೂ ಬಿಟ್ಟುಕೊಟ್ಟು ಶೃಂಗೇರಿಗೆ ಬಂದರು. ಅಲ್ಲಿ ಶ್ರೀಗುರುವರ್ಯರ ಸನ್ನಿಧಿಯಲ್ಲಿ ಅಶಾಂತವಾಗಿದ್ದ ಅವರ ಮನಸ್ಸು ಶಾಂತವಾಗಿ ಸ್ಥಿರತೆ ಪಡೆಯಿತು. ಬ್ರಹ್ಮಸೂತ್ರಗಳು, ಉಪನಿಷತ್ತುಗಳು ಮತ್ತು ಭಗವದ್ಗೀತೆ ಇವುಗಳ ಭಾಷ್ಯಗಳನ್ನೂ ಪ್ರಕರಣಗ್ರಂಥಗಳನ್ನೂ ಕ್ರಮವಾಗಿ ಅಧ್ಯಯನ ಮಾಡಿದರು. ಶ್ರೀನೃಸಿಂಹಭಾರತೀ ಸ್ವಾಮಿಗಳು ಮುಕ್ತರಾದ ನಂತರವೂ ಶೃಂಗೇರಿಯಲ್ಲಿಯೇ ಇದ್ದು ತಮ್ಮ ಶಾಸ್ತ್ರವ್ಯಾಸಂಗವನ್ನು ಮುಂದುವರೆಸಿದರು.

ಆ ವೇಳೆಗೆ ರಾಜಮಹೇಂದ್ರಿಯ ನ್ಯಾಷನಲ್ ಕಾಲೇಜಿನ ಪ್ರಿನ್ಸಿಪಾಲರ ಹುದ್ದೆಗೆ ಬರಬೇಕೆಂದು ಶ್ರೀವೆಂಕಟರಾಮನ್‌ರಿಗೆ ಕರೆಬಂದಿತು. ಅದೊಂದು ರಾಷ್ಟ್ರೀಯ ಸಂಸ್ಥೆಯಾಗಿದ್ದು ವೆಂಕಟರಾಮನ್‌ರು ಬರೋಡವನ್ನು ಬಿಟ್ಟನಂತರ ಆ ಕಾಲೇಜಿನಲ್ಲಿ ಗಣಿತ ಪ್ರಾಧ್ಯಾಪಕರಾಗಿ ಸ್ವಲ್ಪಕಾಲ ಕೆಲಸಮಾಡಿಯೂ ಇದ್ದರು. ಒತ್ತಾಯದ ಮೇಲೆ ಒತ್ತಾಯ ಬಂದನಂತರ ರಾಜಮಹೇಂದ್ರಿಗೆ ಹೋಗಿ ಆ ಹುದ್ದೆಯನ್ನು ವಹಿಸಿಕೊಂಡರು. ಆದರೆ ಆಧ್ಯಾತ್ಮಿಕ ಪಿಪಾಸೆ ಪ್ರಬಲವಾಗಿ ಕಾಡಲು ಪ್ರಿನ್ಸಿಪಾಲ್ ಹುದ್ದೆಗೆ ರಾಜೀನಾಮೆಯಿತ್ತು 1911 ರಲ್ಲಿ ಪುನಃ ಶೃಂಗೇರಿಗೆ ಬಂದರು. ಅನಂತರ ಜಗದ್ಗುರುಗಳಾಗಿದ್ದ ಮಹಾತಪಸ್ವಿ ಶ್ರೀಚಂದ್ರಶೇಖರ ಭಾರತಿಯವರಲ್ಲಿ ವೇದಾಂತದ ಅಧ್ಯಯನವನ್ನು ಮುಂದುವರಿಸಿದರು.

ವೇದಾಂತದ ಗಾಢರಹಸ್ಯವನ್ನು ಅರಿಯುವುದರಲ್ಲಿಯೂ ಬ್ರಹ್ಮಸಾಕ್ಷಾತ್ಕಾರದ ಸಾಧನೆಯಲ್ಲಿಯೂ ನಿರತರಾದ ವೆಂಕಟರಾಮನ್ ಯೋಗಾಭ್ಯಾಸದಲ್ಲಿಯೂ ಮಗ್ನರಾದರು. ಅಧ್ಯಯನ ಪೂರ್ಣವಾಗಿ ಭಾಷ್ಯಶಾಂತಿಯಾದ ನಂತರ ಸ್ವಲ್ಪಕಾಲ ಶೃಂಗೇರಿಯ ಸಂಸ್ಕೃತ ಪಾಠಶಾಲೆಯಲ್ಲಿ ಗೌರವ ಅಧ್ಯಾಪಕರಾಗಿ ಸೇವೆಸಲ್ಲಿಸಿದರು.

ಆ ವೇಳೆಗಾಗಲೆ ವೆಂಕಟರಾಮನ್‌ರಲ್ಲಿ ವೈರಾಗ್ಯದ ಪೂರ್ಣಲಕ್ಷಣಗಳು ಕಾಣಿಸಿಕೊಂಡಿದ್ದವು. ಸಾಂಸಾರಿಕ ಜೀವನದಲ್ಲಿ ಸ್ವಾಭಾವಿಕವಾಗಿ ಜಿಹಾಸೆ ಮೂಡಿತ್ತು. ಅವರ ಪತ್ನಿಯೂ ತೀರಿಕೊಂಡಿದ್ದರು. ಆದರೂ ಗುಪ್ತಪೋಲೀಸರ ಕಣ್ಣು ಅವರ ಮೇಲೆ ಇನ್ನೂ ಇತ್ತು. ವೆಂಕಟರಾಮನ್ ಮೊದಲಿನಿಂದಲೂ ಭೀತಿ ಭಯವೆಂದರೇನೆಂಬುದನ್ನೇ ಅರಿಯರು. ಹೆದರುವ ಪ್ರವೃತ್ತಿ ಅವರದಲ್ಲ. ಅವರ ಮೇಲೆ ಸೂಕ್ತವಾದ ನಿಗಾ ಇಟ್ಟಿರಬೇಕೆಂದು ಪೋಲೀಸ್ ಅಧಿಕಾರಿಗೆ ಅವರ ಸಮಗ್ರ ಇತಿಹಾಸವನ್ನು ಕುರಿತ ಗುಪ್ತ ಸಂದೇಶವೊಂದು ಬಂದಿತು (secret communication). ಆಗ ಶೃಂಗೇರಿಯ ಮುಖ್ಯ ಪೋಲೀಸ್ ಅಧಿಕಾರಿಯೆಂದರೆ ದಫೇದಾರ್ ದರ್ಜೆಯವನು. ಅವನಿಗೆ ಇಂಗ್ಲೀಷಿನ ಗಂಧವು ಸ್ವಲ್ಪವೂ ಇರಲಿಲ್ಲ. ಮೇಲಧಿಕಾರಿಗಳಿಂದ

ಬಂದಿದ್ದ ಪತ್ರ ಪೂರ್ಣವಾಗಿ ಇಂಗ್ಲೀಷಿನಲ್ಲಿಯೇ ಇತ್ತು. ಅದನ್ನು ಇಂಗ್ಲೀಷ್ ಬಲ್ಲ ಸ್ಥಳೀಯರೊಂದಿಗೆ ಓದಿಸುವ ಹಾಗಿರಲಿಲ್ಲ. ಗುಪ್ತಪತ್ರವಾಗಿದ್ದುದರಿಂದ, ಆತ ಮಠಕ್ಕೆ ಬಂದು ವೆಂಕಟರಾಮನ್‌ರನ್ನೇ ಭೇಟಿ ಮಾಡಿ ಕಾಗದವನ್ನು ಅವರ ಕೈಗಿತ್ತು ಅದನ್ನು ಓದಿ ಅರ್ಥ ಹೇಳಬೇಕೆಂದು ಕೇಳಿಕೊಂಡ. (ಆಗ ಅವರೊಡನೆ ಶ್ರೀ ವೀರಕೇಸರಿ ಸೀತಾರಾಮಶಾಸ್ತ್ರಿಯವರೂ ಇದ್ದರು.) ವೆಂಕಟರಾಮನ್ ಆ ಕಾಗದವನ್ನೋದಿ ವಾಕ್ಯ ವಾಕ್ಯಕ್ಕೂ ಕನ್ನಡದಲ್ಲಿ ಅರ್ಥವನ್ನು ಹೇಳಿದರು. ಅನಂತರ ಆ ಗುಪ್ತಪತ್ರವು ತಮ್ಮನ್ನೇ ಕುರಿತು ಬರೆಯಲ್ಪಟ್ಟಿದ್ದೆಂದು ಆತನಿಗೆ ತಿಳಿಸಿದರು. ಆತ ಅವರ ಮಾತನ್ನು ನಂಬಲಿಲ್ಲ, ನಕ್ಕುಬಿಟ್ಟ.

ಸ್ವಲ್ಪಕಾಲ ಶೃಂಗೇರಿಯ ಅರಣ್ಯಪ್ರದೇಶಗಳಲ್ಲಿ ಅನುಷ್ಠಾನ ಮಾಡಿಕೊಂಡಿದ್ದ ವೆಂಕಟರಾಮನ್ ನಂತರ ಶೃಂಗೇರಿಯಿಂದ ಹೊರಟು ದೇಶಸಂಚಾರವನ್ನಾರಂಭಿಸಿದರು. ಸನ್ಯಾಸವನ್ನು ತೆಗೆದುಕೊಳ್ಳುವ ಇಚ್ಛೆ ಅವರಲ್ಲಿ ಮೂಡಿತ್ತು. ಆ ಅಪೇಕ್ಷೆಯಿಂದಲೇ ಕಾಶಿಕ್ಷೇತ್ರಕ್ಕೆ ಬಂದರು. ವೆಂಕಟರಾಮನ್‌ರ ಪಾಂಡಿತ್ಯ ಮತ್ತು ವೈರಾಗ್ಯಗಳನ್ನು ಕಂಡು ಆಗ ಕಾಶಿಯಲ್ಲೇ ಇದ್ದ ದ್ವಾರಕಾಪೀಠದ ಜಗದ್ಗುರುಗಳಾಗಿದ್ದ ಶ್ರೀ ತ್ರಿವಿಕ್ರಮ ತೀರ್ಥಸ್ವಾಮಿಗಳು ವೆಂಕಟರಾಮನ್‌ರಿಗೆ ಸನ್ಯಾಸದೀಕ್ಷೆಯನ್ನು ಕೊಟ್ಟರು. ಅಂದಿನಿಂದ ಅವರ ಯೋಗಪಟ್ಟವು–ಸಂನ್ಯಾಸಾಶ್ರಮದ ಹೆಸರು–'ಶ್ರೀ ಭಾರತೀಕೃಷ್ಣ ತೀರ್ಥ' ಎಂದಾಯಿತು.

೩

ಶ್ರೀ ತ್ರಿವಿಕ್ರಮತೀರ್ಥರು 1921 ರಲ್ಲಿ ವಿದೇಹ ಮುಕ್ತಿಯನ್ನು ಪಡೆಯಲು ಅವರ ಅಪೇಕ್ಷೆಯಂತೆ ಶ್ರೀ ಭಾರತೀಕೃಷ್ಣತೀರ್ಥರು ದ್ವಾರಕಾಪೀಠದಲ್ಲಿ ಜಗದ್ಗುರುಗಳಾಗಿ ಪಟ್ಟಾಭಿಷಿಕ್ತರಾದರು. ಮಠದ ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ನಡೆಯುತ್ತಿದ್ದ ವ್ಯವಹಾರವನ್ನು ಶೀಘ್ರವಾಗಿ ಬಗೆಹರಿಸಲು ಸ್ವಾಮಿಗಳು ಅಗತ್ಯವಾಗಿದ್ದ ಸಾಕ್ಷ್ಯ ಪುರಾವೆಗಳನ್ನು ಸಿವಿಲ್ ನ್ಯಾಯಾಲಯಕ್ಕೆ ಒದಗಿಸಿದರು. ವ್ಯವಹಾರವು ಸ್ವಾಮಿಗಳ ಪರವಾಗಿಯೇ ತೀರ್ಮಾನಿಸಲ್ಪಟ್ಟಿತು. ಸನ್ಯಾಸ ಸ್ವೀಕರಿಸಿದ ನಂತರ ಸ್ವಾಮಿಗಳು ವಿಶ್ವಕುಟುಂಬಿಯಾಗಿ ಅವರ ಕಾರ್ಯಕ್ಷೇತ್ರ ಮಠದ ಧಾರ್ಮಿಕ ವಲಯಕ್ಕೆ ಪರಿಮಿತಗೊಳ್ಳದೆ ಭಾರತದ ರಾಜಕೀಯ ಕ್ಷೇತ್ರಕ್ಕೂ ವಿಸ್ತರಿಸಿತು. ಅವರು ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ಮತ್ತೆ ಪ್ರತ್ಯಕ್ಷವಾಗಿ ಭಾಗವಹಿಸಿದರು. ಊರಿನಿಂದ ಊರಿಗೆ ಸಂಚರಿಸುತ್ತಾ ರಾಷ್ಟ್ರೀಯ ಆಂದೋಳನದ ಪರವಾಗಿ ಉಪನ್ಯಾಸ ಮಾಡಲು ಆರಂಭಿಸಿದರು.

1921 ರಲ್ಲಿ ಕರಾಚಿನಗರದಲ್ಲಿ ಶ್ರೀ ಭಾರತೀಕೃಷ್ಣತೀರ್ಥರು ಮಾಡಿದ ಸಾರ್ವಜನಿಕ ಉಪನ್ಯಾಸವು ಸರ್ಕಾರಿ ನೌಕರವರ್ಗವೂ ಸಹ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸುವುದು ಅವರ ಕರ್ತವ್ಯ ಎಂಬ ಘೋರಣೆಯನ್ನು ಹೊಂದಿತ್ತು. ಈ ಭಾಷಣವು ರಾಜದ್ರೋಹಕರವೆಂದು ಪರಿಗಣಿಸಲ್ಪಟ್ಟು, ಸ್ವಾಮಿಗಳವರನ್ನು ಬ್ರಿಟಿಷ್ ಸರ್ಕಾರ ಬಂಧಿಸಿ ಸೆರೆಯಲ್ಲಿಟ್ಟಿತು. ಆಗ ತುಂಬಾ ಕೋಲಾಹಲವುಂಟಾಗಿ ಜನತೆಯ ಒತ್ತಡದಿಂದ ಶ್ರೀ ಸ್ವಾಮಿಗಳವರನ್ನು ಪ್ರತ್ಯೇಕವಾದ ಸೆರೆಮನೆಯಲ್ಲಿ ಎಲ್ಲ ಅನುಕೂಲಗಳನ್ನೂ ಕಲ್ಪಿಸಿ ಅವರ ನಿತ್ಯದ ಪೂಜೆ ಅನುಷ್ಠಾನಗಳಿಗೆ ಅಡ್ಡಿಯಿಲ್ಲದಂತೆ ಸರ್ಕಾರ ವ್ಯವಸ್ಥೆ ಮಾಡಿತು. ಶ್ರೀಸ್ವಾಮಿಗಳವರ ವಿಚಾರಣೆಗಾಗಿಯೇ ಏರ್ಪಟ್ಟಿದ್ದ ವಿಶೇಷ ನ್ಯಾಯಾಲಯದಲ್ಲಿ ಸ್ವಾಮಿಗಳವರ ಪರವಾಗಿ ಬಾಬು ರಾಜೇಂದ್ರಪ್ರಸಾದರು ವಕಾಲತ್ತು ವಹಿಸಿದ್ದರು. ಸ್ವಾಮಿಗಳವರು ಕೋರ್ಟಿಗೆ ತಮ್ಮೆಲ್ಲ ಅನುಷ್ಠಾನಗಳನ್ನು ಮುಗಿಸಿಕೊಂಡು ಬರುತ್ತಿದ್ದರು. ಅವರು ಕೋರ್ಟಿನಲ್ಲಿ ಕೊಟ್ಟ ಹೇಳಿಕೆಯು ವಿಚಾರಪೂರಿತವೂ ಸ್ಫೂರ್ತಿದಾಯಕವೂ ಆಗಿದ್ದು ಎಲ್ಲರ ಗೌರವಾದರಕ್ಕೆ ಪಾತ್ರವಾಗಿತ್ತು. ತಮ್ಮ ಹೇಳಿಕೆಯಲ್ಲಿ ಶ್ರೀಸ್ವಾಮಿಗಳು ಹಿಂದೂಧರ್ಮದ ವೈಶಿಷ್ಟ್ಯವನ್ನು ಸಂಗ್ರಹವಾಗಿ ನಿರೂಪಿಸಿ ತುರೀಯಾಶ್ರಮದಲ್ಲಿರುವ ತಮ್ಮಂತಹ ಸನ್ಯಾಸಿಗಳ ಧರ್ಮವು ಜನಕ್ಕೆ ಅವರವರ

ಕರ್ತವ್ಯವೇನೆಂಬುದನ್ನು ಬೋಧಿಸುವುದೇ ಆಗಿದೆ ಎಂದು ತಿಳಿಸಿ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸುವಂತೆ ಎಲ್ಲರಿಗೂ ಕರೆಕೊಟ್ಟಿರುವುದು ತಮ್ಮ ಯತಿಧರ್ಮಕ್ಕೆ ಅನುಗುಣವಾಗಿಯೇ ಇದೆ ಎಂದು ವಿವರಿಸಿದರು.

ಆಗ ಪುರೀ ಗೋವರ್ಧನ ಪೀಠದಲ್ಲಿ ಆಚಾರ್ಯರಾಗಿದ್ದವರು ಜಗದ್ಗುರು ಶ್ರೀ ಮಧುಸೂದನತೀರ್ಥ ಸ್ವಾಮಿಗಳು. ಶ್ರೀ ಭಾರತೀಕೃಷ್ಣತೀರ್ಥರು ಸೆರೆಮನೆಯಿಂದ ಬಿಡುಗಡೆಯಾಗಿ ಹೊರಬಂದಾಗ ಅವರನ್ನು ಶ್ರೀಮಧುಸೂದನತೀರ್ಥರು ಪುರೀಗೋವರ್ಧನಪೀಠದ ಆಧಿಪತ್ಯವನ್ನು ವಹಿಸಿಕೊಳ್ಳುವಂತೆ ಒತ್ತಾಯಮಾಡಿ ಒಪ್ಪಿಸಿದರು. ದ್ವಾರಕೆಯ ಪೀಠದಲ್ಲಿ ಶ್ರೀ ಸ್ವರೂಪಾನಂದರನ್ನು ಜಗದ್ಗುರುಗಳಾಗಿ ನೇಮಕಮಾಡಿ ಶ್ರೀ ಭಾರತೀಕೃಷ್ಣತೀರ್ಥರು ತಾವು ಪುರೀ ಪೀಠದ ಅಧಿಪತಿಯಾದರು. ಕೊನೆಯವರೆಗೂ ಅದರಲ್ಲಿಯೇ ಮುಂದುವರಿದು ಆ ಮಠಕ್ಕೆ ಇದ್ದ ಅನೇಕ ವ್ಯವಹಾರಗಳ ಅಡ್ಡಿ ಆತಂಕಗಳನ್ನು ನಿವಾರಿಸಿದರು. ಭರತಖಂಡವನ್ನೆಲ್ಲ ಸಂಚರಿಸಿ ಸಾಂಸ್ಕೃತಿಕ, ನೈತಿಕ, ಆಧ್ಯಾತ್ಮಿಕ ಮತ್ತು ಸಾಮಾಜಿಕ ಪುನರುತ್ಥಾನಕ್ಕೆ ಕ್ರತುಶೀಲರಾದರು. ತಮ್ಮ ಜಗದ್ಗುರು ಪೀಠದ ಬಿರುದು ಬಾವಲಿಗಳನ್ನೆಲ್ಲಾ ತ್ಯಜಿಸಿದರು. ಅತ್ಯಂತ ಸರಳಜೀವನವನ್ನು ನಡೆಸುತ್ತ ದೇಶವನ್ನೆಲ್ಲಾ ಸಂಚರಿಸಿ ಜನಗಳಲ್ಲಿ ಧಾರ್ಮಿಕ ರಾಜಕೀಯ ಜಾಗೃತಿಯನ್ನು ಮೂಡಿಸಿದರು. ತಮಿಳು, ತೆಲುಗು, ಕನ್ನಡ, ಮಲೆಯಾಳ, ಹಿಂದಿ, ಗುಜರಾತಿ ಇದೇ ಮೊದಲಾದ ಭಾಷೆಗಳನ್ನು ಬಲ್ಲವರಾಗಿದ್ದ ಶ್ರೀ ಸ್ವಾಮಿಗಳು ತಾವು ಹೋದೆಡೆಯೆಲ್ಲಾ ಆಯಾ ಪ್ರಾಂತ ಭಾಷೆಯಲ್ಲಿಯೇ ಉಪನ್ಯಾಸ ಮಾಡುತ್ತಿದ್ದರು. ಅವರ ಭಾಷಣ ಪ್ರವಚನಗಳಿಗೆ ಬಹುಜನ ಸೇರಿರುತ್ತಿದ್ದರು. ತರುಣರೂ ವಿದ್ಯಾವಂತರೂ ಅವರನ್ನು ಯಾವಾಗಲೂ ಮುತ್ತಿರುತ್ತಿದ್ದರು. ಎಷ್ಟೋ ಸಲ ಅವರು ಕುಳಿತು ಕೊಳ್ಳುತ್ತಿದ್ದ ಗಾಡಿಯ ಕುದುರೆಗಳನ್ನು ಬಿಚ್ಚಿ ಜನವೇ ಗಾಡಿಯನ್ನು ರಥದಂತೆ ಎಳೆದುಕೊಂಡು ಜಯಘೋಷದೊಡನೆ ಉತ್ಸವ ಮಾಡುತ್ತಿದ್ದರು.

ಭರತಖಂಡದ ಸ್ವಾಮಿ ಪರಮಹಂಸಯೋಗಾನಂದರೆಂಬ ಯೋಗಿಯಿಂದ ಸ್ಥಾಪಿತವಾಗಿದ್ದ ಅಮೆರಿಕದ ಸೆಲ್ಫ್ ರಿಯಲೈಜೇಷನ್ ಸಂಸ್ಥೆಯ ಆಹ್ವಾನದ ಮೇಲೆ ಸನಾತನಧರ್ಮದ ತತ್ವಗಳನ್ನು ಬೋಧಿಸಿ ತನ್ಮೂಲಕ ವಿಶ್ವಭ್ರಾತೃತ್ವ ಮತ್ತು ಪರಸ್ಪರ ಅರಿವನ್ನು ಮೂಡಿಸಲು ಶ್ರೀ ಸ್ವಾಮಿಗಳು 1958ರಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನಕ್ಕೆ ಭೇಟಿಕೊಟ್ಟರು. ಅಲ್ಲಿ ಮೂರು ತಿಂಗಳ ಕಾಲ ಸಂಚಾರಮಾಡಿ ಅನೇಕ ಕಾಲೇಜುಗಳು, ವಿಶ್ವವಿದ್ಯಾನಿಲಯಗಳು, ಚರ್ಚುಗಳು ಮತ್ತು ಹಲವಾರು ಸಂಘಸಂಸ್ಥೆಗಳಲ್ಲಿ ಭಾರತೀಯ ಸಂಸ್ಕೃತಿ, ತತ್ವಶಾಸ್ತ್ರ, ಮತ್ತಿತರ ವಿಷಯಗಳನ್ನು ಕುರಿತು ಉಪನ್ಯಾಸಗಳನ್ನು ಮಾಡುತ್ತಿದ್ದರು. ಹಾಗೆಯೇ ಹಿಂದಿರುಗುವ ದಾರಿಯಲ್ಲಿ ಇಂಗ್ಲೆಂಡಿನಲ್ಲಿಯೂ ಸ್ವಲ್ಪಕಾಲವಿದ್ದು ಅಲ್ಲಿಯೂ ಉಪನ್ಯಾಸಗಳನ್ನಿತ್ತು ಸ್ವದೇಶಕ್ಕೆ ಮರಳಿದರು. ಸ್ವಾಮಿ ಶ್ರೀವಿವೇಕಾನಂದ, ಸ್ವಾಮಿ ಶ್ರೀ ಅಭೇದಾನಂದ ಮತ್ತು ಸ್ವಾಮಿ ಶ್ರೀ ರಾಮತೀರ್ಥರಂತೆ ವಿಶ್ವದ ನೈತಿಕ ಪುನರುತ್ಥಾನಕ್ಕೆ ಮತ್ತು ವಿಶ್ವ ಜನಾಂಗದಲ್ಲಿ ಶಾಂತಿ ಸೌಹಾರ್ದಗಳನ್ನು ಮೂಡಿಸುವುದಕ್ಕೆ ಶ್ರೀ ಸ್ವಾಮಿಗಳು ಅಮೆರಿಕ, ಇಂಗ್ಲೆಂಡುಗಳಲ್ಲಿ ಸಂಚರಿಸಿ ಭಾರತೀಯ ಸಂಸ್ಕೃತಿ,ನಾಗರೀಕತೆಯ ಬಗೆಗೆ ಪಾಶ್ಚಾತ್ಯರಲ್ಲಿ ಸದ್ಭಾವನೆಯನ್ನು ಮೂಡಿಸಲು ನೆರವಾದರು.

ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಆಧ್ಯಾತ್ಮಿಕ ಮತ್ತು ತಾರ್ಕಿಕ ಮುನ್ನಡೆಯೊಂದಿಗೆ ತಾನು ಬದುಕಿ ಬಾಳುತ್ತಿರುವ ದೇಶ ಮತ್ತು ಸಮಾಜದ ಸರ್ವತೋಮುಖವಾದ ಉನ್ನತಿಯನ್ನು ಸಾಧಿಸಲು ಶ್ರಮಿಸಬೇಕೆಂಬುದು ಶ್ರೀ ಸ್ವಾಮಿಗಳವರ ನಂಬುಗೆಯಾಗಿತ್ತು. ತಮ್ಮ ಉಪನ್ಯಾಸಗಳಲ್ಲಿಯೂ, ಲೇಖನಗಳಲ್ಲಿಯೂ ಈ ಅಂಶವನ್ನು ಅವರು ಒತ್ತಿ ಒತ್ತಿ ಹೇಳುತ್ತಿದ್ದರು. ಆಧ್ಯಾತ್ಮಿಕ, ರಾಷ್ಟ್ರೀಯ ಮತ್ತು ಸಾಮಾಜಿಕ ಸೇವಾಕಾರ್ಯಗಳಲ್ಲಿ ಶ್ರದ್ಧಾಸಕ್ತಿಗಳನ್ನು ಹೊಂದಿರುವವರೆಲ್ಲರಿಗೂ ಮಾರ್ಗದರ್ಶನ ನೀಡುವಂತೆ ಶ್ರೀ ಸ್ವಾಮಿಗಳವರನ್ನು ಶ್ರೀ ಅರವಿಂದ ಮಹರ್ಷಿಗಳು ಪ್ರಾರ್ಥಿಸಿದ್ದರು. ಅವರ ಅಪೇಕ್ಷೆಯಂತೆಯೇ ಇತರ ಅನೇಕ ಜನ ಶಿಷ್ಯರು ಪ್ರಾರ್ಥಿಸಿ ಒತ್ತಾಯಿಸಲು ಸ್ವಾಮಿಗಳು 1953ರಲ್ಲಿ 'ವಿಶ್ವಪುನರ್ನಿರ್ಮಾಣ ಸಂಘ' ಎಂಬ ಸಂಸ್ಥೆಯನ್ನು ನಾಗಪುರದಲ್ಲಿ ಸ್ಥಾಪಿಸಿದರು. ಈ ಸಂಘಕ್ಕೆ ಅನೇಕ ಜನ ವಿದ್ಯಾವಂತರನ್ನು ಆಕರ್ಷಿಸಿ ಮಾರ್ಗದರ್ಶನ ನೀಡಿದರು.

೪

ಬಹುಶಾಸ್ತ್ರವಿಶಾರದರಾಗಿದ್ದ ಶ್ರೀ ಸ್ವಾಮಿಗಳು ವೇದಾಂತಶಾಸ್ತ್ರದಂತೆಯೇ ವಿಜ್ಞಾನಶಾಸ್ತ್ರದಲ್ಲಿಯೂ ಪ್ರಗಲ್ಭ ಪಾಂಡಿತ್ಯವುಳ್ಳವರಾಗಿದ್ದರು. ಅಮೆರಿಕ ಮತ್ತು ಇತರ ಪಾಶ್ಚಾತ್ಯ ದೇಶದ ಬಹುಜನ ವಿಜ್ಞಾನಿಗಳು ಶ್ರೀ ಸ್ವಾಮಿಗಳ ಸ್ನೇಹಿತರಾಗಿದ್ದರು. ಸ್ವಾಮಿಗಳೊಡನೆ ವಿಜ್ಞಾನಶಾಸ್ತ್ರಕ್ಕೆ ಸಂಬಂಧಿಸಿದ ಅನೇಕ ವಿಷಯಗಳಲ್ಲಿ ವಿಚಾರವಿನಿಮಯ ಮಾಡುತ್ತಿದ್ದರು.

ಎಂಟು ವರ್ಷಗಳಿಗೂ ಹೆಚ್ಚು ಕಾಲ ಶ್ರೀ ಸ್ವಾಮಿಗಳು ಅಥರ್ವಣ ವೇದದಲ್ಲಿ ಸಂಶೋಧನೆಗಳನ್ನು ನಡೆಸಿ ಗಣಿತಶಾಸ್ತ್ರದ ಹದಿನಾರು ಮುಖ್ಯ ಸೂತ್ರಗಳನ್ನು ಕಂಡು ಹಿಡಿದಿದ್ದರು. ತಮ್ಮ ಸಂಶೋಧನೆಯನ್ನು ಕುರಿತು ನಾಗಪುರ ವಿಶ್ವವಿದ್ಯಾನಿಲಯದಲ್ಲಿ ಹಲವಾರು ಉಪನ್ಯಾಸಗಳನ್ನಿತ್ತರು. ಸೂತ್ರಗಳನ್ನು ವಿವರಿಸಿ ಅವುಗಳ ಸಹಾಯದಿಂದ ಗಣಿತಶಾಸ್ತ್ರದ ಸಮಸ್ಯೆಯನ್ನು ಸುಲಭವಾಗಿ ಬಿಡಿಸಬಹುದೆಂಬುದನ್ನು ತೋರಿಸಿಕೊಟ್ಟರು. ಅವರ ಭಾಷಣಗಳನ್ನು ಕೇಳಲು ತರುಣರೂ, ವಿದ್ಯಾವಂತರೂ ಕಿಕ್ಕಿರಿದು ಸೇರುತ್ತಿದ್ದರು. "ಏಕಾಧಿಕೇನ ಪೂರ್ವೇಣ" ಎಂಬ ಸೂತ್ರದ ಸಹಾಯದಿಂದ ಒಂಬುನೂರು ಅಂಕಿಗಳ ಒಂದು ಸಂಖ್ಯೆಯನ್ನು ಒಂಬುನೂರು ಅಂಕಿಗಳ ಇನ್ನೊಂದು ಸಂಖ್ಯೆಯಿಂದ ಗುಣಿಸಿದಾಗ ಬರಬೇಕಾದ ಗುಣಲಬ್ಧವನ್ನು ಎರಡೇ ಘಟ್ಟಗಳಲ್ಲಿ (two steps) ಶ್ರೀ ಸ್ವಾಮಿಗಳು ಕಪ್ಪು ಹಲಗೆಯ ಮೇಲೆ ಲೆಕ್ಕಿಸಿ ತೋರಿಸುತ್ತಿದ್ದರು. ಇದೇ ರೀತಿಯಲ್ಲಿ ಕೂಡುವುದನ್ನೂ, ಭಾಗಿಸುವುದನ್ನೂ ಮಾಡಬಹುದೆಂದು ಅವರು ಉದಾಹರಣೆಗಳ ಮೂಲಕ ವಿವರಿಸುತ್ತಿದ್ದರು. ಈ ಸೂತ್ರಗಳ ಸಹಾಯದಿಂದ ಎಂ. ಎಸ್‌ಸಿ. ದರ್ಜೆಯ ಗಣಿತಶಾಸ್ತ್ರವನ್ನು ಕೇವಲ ಎರಡು ವರ್ಷದಲ್ಲಿ ಸಾಮಾನ್ಯ ದರ್ಜೆಯ ಹದಿನೈದು ಹದಿನಾರು ವರ್ಷದ ಬಾಲಕರಿಗೆ ಓದಿಸಬಹುದೆಂದು ಸ್ವಾಮಿಗಳು ನುಡಿಯುತ್ತಿದ್ದರು. ಅವರ ಭಾಷಣಗಳನ್ನು ಕೇಳಿದ ಅನೇಕ ಜನ ವಿದ್ಯಾರ್ಥಿಗಳೂ ಪ್ರಾಧ್ಯಾಪಕರೂ ಸ್ವಾಮಿಗಳವರ ಬಿಡಾರಕ್ಕೆ ಹೋಗಿ ಗಣಿತಶಾಸ್ತ್ರದ ಜಟಿಲವಾದ ರಹಸ್ಯಗಳ ಶೋಧನೆಯಲ್ಲಿ ಸ್ವಾಮಿಗಳ ನೆರವನ್ನು ಪಡೆಯುತ್ತಿದ್ದರು. ಶ್ರೀ ಸ್ವಾಮಿಗಳು ಸಂಶೋಧನೆ ನಡೆಸಿ ಬರೆದಿಟ್ಟುಕೊಂಡಿದ್ದ ಗಣಿತಶಾಸ್ತ್ರದ ಪುಟಗಳೇ ಐದು ಸಹಸ್ರದಷ್ಟಿದ್ದವು. ಅವುಗಳಲ್ಲಿ ಈವರೆಗೆ ಒಂಬು ಪುಸ್ತಕ ಮಾತ್ರ ಅಚ್ಚಾಗಿದ್ದು ಉಳಿದವು ಇನ್ನೂ ಪ್ರಕಟವಾಗಬೇಕಾಗಿದೆ. ಅಚ್ಚಾಗಿರುವ ಪುಸ್ತಕಗಳೂ ಸಹ ಗಣಿತಶಾಸ್ತ್ರಜ್ಞರಿಗೆ ಕಬ್ಬಿಣದ ಕಡಲೆಯಾಗಿವೆ.

ಶ್ರೀ ಭಾರತೀ ಕೃಷ್ಣತೀರ್ಥರು ಗಣಿತ ಶಾಸ್ತ್ರದಂತೆಯೇ ಆಯುರ್ವೇದ ಶಾಸ್ತ್ರದಲ್ಲಿಯೂ ಸಂಶೋಧನೆ ನಡೆಸಿದ್ದರು; ಜ್ಯೋತಿಷ್ಯಶಾಸ್ತ್ರದಲ್ಲಿಯೂ ಸಂಶೋಧನೆ ನಡೆಸಿ ಜಾತಕ ಭಾಗದಲ್ಲಿ ಪ್ರಾವೀಣ್ಯತೆ ಪಡೆದಿದ್ದರು. ನಾಡೀಶಾಸ್ತ್ರದಲ್ಲಿ ತಜ್ಞರಾಗಿದ್ದ ಶ್ರೀ ಸ್ವಾಮಿಗಳು ರೋಗಿಗಳ ನಾಡಿಯ ಮಿಡಿತವನ್ನು ಸೂಕ್ಷ್ಮವಾಗಿ ಪರೀಕ್ಷಿಸಿ ವ್ಯಾಧಿಯ ಪೂರ್ವೋತ್ತರಗಳನ್ನೆಲ್ಲಾ ಕಂಡುಹಿಡಿದು ಬಿಡುತ್ತಿದ್ದರು. ಈ ವಿಷಯದಲ್ಲಿಯೂ ಸಹ ಅವರು ಪುಸ್ತಕವನ್ನು ರಚಿಸಿದ್ದರು. ಅದಿನ್ನೂ ಪ್ರಕಟಗೊಂಡಿಲ್ಲ. ಶ್ರೀ ಸ್ವಾಮಿಗಳವರು ವಾರಕ್ಕೆ ಹಲವು ದಿನಗಳು ಕ್ಲುಪ್ತ ಕಾಲದಲ್ಲಿ ರೋಗಿಗಳನ್ನು ಪರೀಕ್ಷಿಸಿ ಅವರಿಗೆ ಆಯುರ್ವೇದೀಯ ಚಿಕಿತ್ಸೆಯನ್ನು ತೆಗೆದುಕೊಳ್ಳುವಂತೆ ಸೂಚಿಸಿ ಔಷಧಿ ಪಥ್ಯಗಳ ಬಗ್ಗೆ ವಿವರವಾಗಿ ತಿಳಿಸುತ್ತಿದ್ದರು. ಜ್ಯೋತಿಷ್ಯ ಶಾಸ್ತ್ರವನ್ನೂ ಒಂದು ವಿಜ್ಞಾನವೆಂದೇ ಪರಿಗಣಿಸಿದ್ದ ಶ್ರೀಸ್ವಾಮಿಗಳವರು ಅದರ ಆಳವಾದ ಅಧ್ಯಯನವನ್ನೂ ನಡೆಸಿದ್ದರು. ಕಷ್ಟ ಸಂಕಟಗಳ ನಿವಾರಣೆಗೆ, ರೋಗರುಜನಗಳ ಪರಿಹಾರಕ್ಕೆ ಅವರಿಂದ ಮಾರ್ಗದರ್ಶನವನ್ನು ಪಡೆಯಲು ಬಹುಜನ ಅವರನ್ನು ಮುತ್ತಿರುತ್ತಿದ್ದರು.

ಶ್ರೀ ಭಾರತೀ ಕೃಷ್ಣತೀರ್ಥರ ಪಾಂಡಿತ್ಯ ಬಹು ಆಳವೂ ತುಂಬಾ ವಿಶಾಲವೂ ಆದುದು. ಅವರು ಅನೇಕ ಕೃತಿಗಳನ್ನೂ ರಚಿಸಿದ್ದಾರೆ. ಕಲ್ಕತ್ತಾ ವಿಶ್ವವಿದ್ಯಾಲಯದವರು ಪ್ರಕಟಿಸಿರುವ ಶ್ರೀ ಶಂಕರಾಚಾರ್ಯರ

ಬ್ರಹ್ಮಸೂತ್ರ ಭಾಷ್ಯಕ್ಕೆ ಶ್ರೀ ಸ್ವಾಮಿಗಳವರು ವಿದ್ವತ್ಪೂರ್ಣವಾದ ಮುನ್ನುಡಿಯನ್ನು ಬರೆದಿದ್ದಾರೆ. ಅವರ ಅನೇಕ ಲೇಖನಗಳು ಇಂಗ್ಲೀಷಿನಲ್ಲಿಯೂ ಇತರ ಭಾಷೆಗಳಲ್ಲಿಯೂ ಪ್ರಕಟವಾಗಿವೆ. 'ಸನಾತನಧರ್ಮ' ಎಂಬ ಇಂಗ್ಲೀಷ್ ಗ್ರಂಥವು ಅವರ ವೈಜ್ಞಾನಿಕ ದೃಷ್ಟಿ ಮತ್ತು ವಿಚಾರಧಾರೆಗೆ ಶ್ರೇಷ್ಠ ಸಾಕ್ಷಿಯಾಗಿದೆ. 'ವೇದಿಕ್ ಮ್ಯಾಥಮ್ಯಾಟಿಕ್ಸ್' ಎಂಬ ಪುಸ್ತಕವು ಅವರ ಗಣಿತಶಾಸ್ತ್ರದ ಪಾಂಡಿತ್ಯಕ್ಕೂ ಸಂಶೋಧನೆಗೂ ಪ್ರಮಾಣವಾಗಿದೆ. ಅವರ ಅನೇಕ ಕೃತಿಗಳು ಪುಸ್ತಕ ರೂಪದಲ್ಲಿ ಹಿಂದಿ ಗುಜರಾತಿ ಮರಾಠಿ ಮುಂತಾದ ಭಾಷೆಗಳಲ್ಲಿ ಪ್ರಕಟಗೊಂಡಿವೆ. ಶ್ರೀ ಸ್ವಾಮಿಗಳ ಉಪನ್ಯಾಸ ಮತ್ತು ಸಂಭಾಷಣೆಗಳನ್ನು ಆಗಿಂದಾಗ್ಗೆ ಸಂಗ್ರಹಿಸಿ ಶ್ರೀ ಕುಂಬಾರ್ತಿ ಲಕ್ಷ್ಮೀನಾರಾಯಣ ಉಪಾಧ್ಯಾಯರು ಕನ್ನಡದಲ್ಲಿ ಧರ್ಮವಿಜ್ಞಾನ, ಗೀತಾವಿಜ್ಞಾನ ಮತ್ತು ವೇದಾಂತವಿಜ್ಞಾನ ಎಂಬ ಮೂರು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಶ್ರೀಸ್ವಾಮಿಗಳವರು ಆಶುಕವಿಗಳಾಗಿದ್ದು ಹಲವಾರು ಸ್ತೋತ್ರಗಳನ್ನು ಸಂಸ್ಕೃತದಲ್ಲಿರಚಿಸಿದ್ದಾರೆ. ಅವೆಲ್ಲವೂ 'ಸ್ತೋತ್ರಭಾರತೀಕಂಠಹಾರ' ಎಂಬ ಶೀರ್ಷಿಕೆಯಲ್ಲಿಪುಸ್ತಕರೂಪವಲ್ಲಿ ಪ್ರಕಟವಾಗಿವೆ.

ಶ್ರೀ ಸ್ವಾಮಿಗಳವರು ರಚಿಸಿದ ಕೊನೆಯ ಕೃತಿಯೆಂದರೆ 'ಎಕ್‌ಲೀಸ್ಟಿಯಾಸ್ಟಿಕಲ್ ಎಡಿಕ್ಟ್'— ಧಾರ್ಮಿಕ ಅನುಶಾಸನ. ಇದು ಇಂಗ್ಲೀಷ್ ಹಿಂದಿ ಮತ್ತು ಸಂಸ್ಕೃತ ಭಾಷೆಗಳಲ್ಲಿದೆ. ವೇದಮತವನ್ನು ಎಲ್ಲರಿಗೂ ತೆರೆದಿಡುವಂತೆ, ಅಪೇಕ್ಷೆಯುಳ್ಳವರೆಲ್ಲರನ್ನೂ ಅದರೊಳಕ್ಕೆ ಸ್ವಾಗತಿಸುವಂತೆ ಮಾಡುವುದೇ ಈ ಅನುಶಾಸನದ ಗುರಿ. ವೇದ, ಉಪನಿಷತ್ತುಗಳು ಮತ್ತು ಪ್ರಾಚೀನ ಪುರಾಣಗಳ ಆಧಾರವನ್ನು ಕೊಟ್ಟು ಮತಪರಿವರ್ತನೆಗೆ ನಮ್ಮಲ್ಲಿ ಅವಕಾಶವುಂಟು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ನಾಲ್ಕು ಸಾವಿರ ವರ್ಷಗಳ ಹಿಂದೆ ಶ್ರೀ ಕಶ್ಯಪ ಮಹರ್ಷಿಗಳು ಮಿಶ್ರ ಪ್ರದೇಶಕ್ಕೆ ಹೋಗಿದ್ದಾಗ ಅಲ್ಲಿದ್ದ ಹಲವಾರು ಜನ ಅವರನ್ನು ಆಶ್ರಯಿಸಿ ತಮಗೆ ವೈದಿಕಧರ್ಮ ದೀಕ್ಷೆಯನ್ನು ಕೊಡಬೇಕೆಂದು ಕೇಳಿಕೊಂಡರೆಂದೂ, ಕಶ್ಯಪರು ಅವರೆಲ್ಲರನ್ನೂ ಬ್ರಾಹ್ಮಣ ಧರ್ಮಕ್ಕೆ ಸೇರಿಸಿಕೊಂಡರೆಂದೂ ಇರುವ ಭವಿಷ್ಯಪುರಾಣದ ದೃಷ್ಟಾಂತವನ್ನು ಕೊಟ್ಟು ವೈದಿಕ ಧರ್ಮದಲ್ಲಿ ಮತಪರಿವರ್ತನೆಗೆ ಅವಕಾಶವಿತ್ತು ಎಂದು ಸಾಧಾರಪೂರ್ವಕವಾಗಿ ತೋರಿಸಿಕೊಟ್ಟಿದ್ದಾರೆ.

ಹಾಗೆಯೇ ಪುರೀ ಶ್ರೀ ಜಗನ್ನಾಥ ಸ್ವಾಮಿಯ ದೇವಾಲಯದ ಪ್ರವೇಶದ ವಿಚಾರದಲ್ಲಿಯೂ ಶ್ರೀ ಸ್ವಾಮಿಗಳು ತಮ್ಮ ನಿಷ್ಕೃಷ್ಟವಾದ ಅಭಿಪ್ರಾಯವನ್ನಿತ್ತಿದ್ದಾರೆ. ಹಿಂದೂ ಧರ್ಮದಲ್ಲಿ ಶ್ರದ್ಧೆ, ಗೌರವ, ನಂಬಿಗೆಯುಳ್ಳ ಯಾರೇ ಆಗಲಿ ಜಗನ್ನಾಥ ದೇವಾಲಯ ಪ್ರವೇಶಮಾಡಬಹುದೆಂದು ಘೋಷಿಸಿದ್ದಾರೆ. ಇದು ಪಾಶ್ಚಾತ್ಯ ಯಾತ್ರಿಕರಿಗೂ ಅನ್ವಯಿಸುತ್ತದೆ. ಹಿಂದೆ ಶ್ರೀ ಸ್ವಾಮಿ ವಿವೇಕಾನಂದರಿಗೂ ಮತ್ತು ಇತ್ತೀಚೆಗೆ ಆಚಾರ್ಯ ವಿನೋಬಾಭಾವೆಯವರಿಗೂ ಈ ದೇವಾಲಯದಲ್ಲಿ ಪ್ರವೇಶ ನಿರಾಕರಿಸಲ್ಪಟ್ಟಿತು, ; ಅವರಲ್ಲಿ ವಿವೇಕಾನಂದರು ಸಮುದ್ರಯಾನಮಾಡಿದ್ದರೆಂಬ ಕಾರಣಕ್ಕಾಗಿ, ವಿನೋಬಾಭಾವೆಯವರು ಪಾಶ್ಚಾತ್ಯ ಶಿಷ್ಯರೊಡನೆ ಬಂದಿದ್ದರೆಂಬ ಕಾರಣಕ್ಕಾಗಿ ದೇವಾಲಯದ ಅಧಿಕಾರಿಗಳು ಅವರನ್ನು ತಡೆದಿದ್ದರು. ಶ್ರೀ ಸ್ವಾಮಿಗಳು ಈ ದೇವಾಲಯದ ಧರ್ಮಕರ್ತರಾಗಿದ್ದು ಕೊಟ್ಟಿರುವ ಈ ಅನುಶಾಸನ ಬಹಳ ಮಹತ್ವಪೂರ್ಣವಾಗಿದೆ. ಈ ಅನುಶಾಸನವು ಇನ್ನೂ ಮುದ್ರಿತವಾಗಿಲ್ಲ.

ಶ್ರೀ ಭಾರತೀಕೃಷ್ಣ ತೀರ್ಥರು ವೃದ್ಧಾಪ್ಯದ ದೆಸೆಯಿಂದಲೂ ವಿರಾಮರಹಿತವಾದ ಎಡೆಬಿಡದ ಕಾರ್ಯಕ್ರಮಗಳಿಂದಲೂ ತೀರ ದಣಿದಿದ್ದರು. ಧಾರ್ಮಿಕ ಪೀಠಾಧಿಪತಿಗಳಾಗಿದ್ದುದರಿಂದ ಕಷ್ಟ, ತೊಂದರೆ, ಸಂಕಟ, ರೋಗಗಳಿಂದ ಬಳಲುತ್ತಿದ್ದ ಜನ ಅವರನ್ನು ಸದಾ ಆಶ್ರಯಿಸಿರುತ್ತಿದ್ದರು. ಯಂತ್ರ ಮಂತ್ರ ಔಷಧಿಗಳಿಗಾಗಿ ಅವರನ್ನು ಕಾಡಿಬೇಡುತ್ತಿದ್ದರು. ಸ್ವಾಮಿಗಳದು ವಿಶ್ವಕುಟುಂಬವಾಗಿದ್ದು ಅವರ ಹೃದಯ ಮನಸ್ಸುಗಳು ದಯೆ ಅನುಕಂಪದಿಂದ ತುಂಬಿದ್ದವು. ಸ್ವಾಮಿಗಳು ತಮ್ಮ ಸ್ವಂತ ಅನಾರೋಗ್ಯ ಆಯಾಸಗಳನ್ನು ಪರಿಗಣಿಸದೆ ಆಶ್ರಯಿಸಿದವರ ಕಲ್ಯಾಣ ಚಿಂತನೆಯನ್ನೇ ಮಾಡುತ್ತಿದ್ದರು.

ಬಹು ಜನ ಶಿಷ್ಯರ ಅಪೇಕ್ಷೆಯಂತೆ ಅವರ ಬಲವಂತದ ಮೇಲೆ ಚಿಕಿತ್ಸೆ ಮತ್ತು ವಿಶ್ರಾಂತಿಗಾಗಿ ಬೊಂಬಾಯಿ ನಗರಕ್ಕೆ ಬಂದರು. ಕೇವಲ ಸಾಮಾನ್ಯ ಸನ್ಯಾಸಿಯಂತೆ ತಮ್ಮ ಆಪ್ತ ಶಿಷ್ಯರೊಬ್ಬರ ಮನೆಯಲ್ಲಿ ಸ್ವಲ್ಪ ದಿನಗಳ ಕಾಲ ಚಿಕಿತ್ಸೆ ಪಡೆದು 1960 ರ ಫೆಬ್ರವರಿ 3 ರಂದು ಮಹಾಸಮಾಧಿ ಹೊಂದಿದರು.

ಧರ್ಮ ಪ್ರಸಾರಕರೂ, ಯೋಗಪುರುಷರೂ ಆಗಿದ್ದ ಆ ಸಂತಶ್ರೇಷ್ಠರಿಗೆ ಎಲ್ಲರೂ ಎಲ್ಲವೂ ಸಮಾನವಾಗಿದ್ದು ಉಚ್ಚ, ನೀಚ, ಎಂಬ ಭೇದವೇ ಇರಲಿಲ್ಲ. ಇಡೀ ವಿಶ್ವವನ್ನೇ ಅವರು ಪ್ರೀತಿಸುತ್ತಿದ್ದರು. ಅವರ ಗುರುದೈವ ಭಕ್ತಿ ರಾಷ್ಟ್ರಭಕ್ತಿ ಇವು ಶ್ರೇಷ್ಠವಾಗಿದ್ದವು. ಅವರ ತಪಃಶಕ್ತಿ, ಲೋಕಕಾರುಣ್ಯ, ಅನುಗ್ರಹಶಕ್ತಿ ಇವು ಅನುಪಮವಾದುವು.

ಆತ್ಮ ಬರುವುದೂ ಇಲ್ಲ, ಹೋಗುವುದೂ ಇಲ್ಲ, ಹುಟ್ಟುವುದೂ ಇಲ್ಲ, ಸಾಯುವುದೂ ಇಲ್ಲ. ಈ ಚಲನೆಯ ಪ್ರತಿಬಿಂಬ ಆತ್ಮನಲ್ಲಿರುವುದು ಆತ್ಮವು ಭ್ರಾಂತಿಯಿಂದ 'ನಾನು ಸಂಚರಿಸುತ್ತಿರುವೆನು, ಪ್ರಕೃತಿಯಲ್ಲ' ಎಂದು ಭಾವಿಸುವುದು. ಆತ್ಮ ಹೀಗೆ ಭಾವಿಸಿದರೆ ಅದೇ ಬಂಧನ. 'ನಾನು ಎಂದೂ ಚಲಿಸುವುದಿಲ್ಲ, ನಾನು ಸರ್ವವ್ಯಾಪಿ' ಎಂದು ಭಾವಿಸಿದರೆ ಅದೇ ಮುಕ್ತಿ.

ಸಿ. ಎನ್. ಶಾಂತಾ

ವೇಮನ

ತೆಲುಗುದೇಶದಲ್ಲಿ ವೇಮನನ ಹೆಸರು ಆಬಾಲವೃದ್ಧರಾದಿಯಾಗಿ ಎಲ್ಲರಿಗೂ ಸುಪರಿಚಿತ. ಕರ್ಣಾಟಕದ ಸರ್ವಜ್ಞ ಕವಿಯಂತೆ ತೆಲುಗಿನ ವೇಮನನೂ ಜಾನಪದ ಕವಿ. ಆತ ಮಹಾಯೋಗಿ. ಸ್ವಯಂ ಸ್ಫೂರ್ತಿಯಿಂದ ತನ್ನ ಅನುಭವ, ಜೀವನ ಇವೇ ಮೊದಲಾದುವುಗಳನ್ನು ಚಿಕ್ಕದಾಗಿ, ಚೊಕ್ಕವಾಗಿ ತನ್ನ ಪದ್ಯಗಳಲ್ಲಿ ಕಡೆದಿಟ್ಟಿದ್ದಾನೆ. ವೇಮನ ತಾನು ಕವಿಯಾಗಬೇಕೆಂದು ಕವಿತ್ವ ರಚಿಸಿದವನಲ್ಲ. ತನ್ನ ಅನುಭವದಿಂದ, ಪ್ರತಿಭೆಯಿಂದ ಹೊಮ್ಮಿದ ಸಂದೇಶಾಮೃತಗಳನ್ನು ಇವನ ಶಿಷ್ಯರು ಬರೆದಿಟ್ಟಿರುವುದೇ ಹೊರತು ಈತ ಸ್ವತಃ ಅವನ್ನು ಬರೆದಿಟ್ಟಿಲ್ಲ. ಕರ್ಣಾಟಕದ ವಚನಕಾರರು ಹಾಗೂ ದಾಸಶ್ರೇಷ್ಠರಂತೆ ಇವರೆಲ್ಲರ ಗುರಿಯೂ ಲೋಕಹಿತವಷ್ಟೇ ಆಗಿರುವಂತೆ ವೇಮನನ ಗುರಿಯೂ ಲೋಕಹಿತವೇ ಆಗಿದೆ. ಲೋಕಕ್ಕೆ ನೀತಿಯನ್ನು ಉಪದೇಶಿಸಿ, ಸಮಾಜ ಸುಧಾರಣೆ ಮಾಡಿ ಜನರನ್ನು ಸನ್ಮಾರ್ಗಪ್ರವರ್ತಕರನ್ನಾಗಿಸಲು ಶ್ರಮಿಸಿದ ತತ್ವದರ್ಶಿ ವೇಮನ. ಈತನ ಕೀರ್ತಿ ತೆಲುಗು ನಾಡಿಗಷ್ಟೇ ಸೀಮಿತವಾಗದೆ ನೆರೆನಾಡುಗಳಿಗೂ ಹಬ್ಬಿದೆ. ಅವನ ಪದ್ಯಗಳನ್ನು ತುಂಬ ಹಿಂದೆಯೇ ಕನ್ನಡ ಹಾಗೂ ತಮಿಳಿಗೆ ಅನುವಾದಿಸಿದ್ದಾರೆ.

ವೇಮನ ರೆಡ್ಡಿ ವಂಶದಲ್ಲಿ ಹುಟ್ಟಿದವನೆಂದು ಹೇಳುತ್ತಾರೆ. ಇವನನ್ನು ತೆಲುಗರು "ಕಾಪು" (ಒಕ್ಕಲಿಗ) ಕುಲದವರು ಎನ್ನುತ್ತಾರೆ. ವೇಮನ ಯೌವನದಲ್ಲಿ ವೇಶ್ಯಾಲಂಪಟನಾಗಿದ್ದು, ಯಾರ ಮಾತಿಗೂ ಕಿವಿಗೊಡದೆ, ಒಮ್ಮೆ ವೇಶ್ಯೆಯಿಂದಲೇ ಜುಗುಪ್ಸೆಹೊಂದಿ ವಿರಾಗಿಯಾದನೆಂದು ಹೇಳುತ್ತಾರೆ. ತುಳಸೀದಾಸರೂ ಯೌವನಕಾಲದಲ್ಲಿ ಹೀಗೆಯೇ ಒಂದುಗಳಿಗೆಯೂ ತಮ್ಮ ಹೆಂಡತಿಯನ್ನು ಬಿಟ್ಟಿರಲಾರದೆ ಕಡೆಗೆ ಅವಳಿಂದಲೇ ಅವರ ಪ್ರೇಮ ರಾಮಾಭಿಮುಖವಾಗಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಸರ್ವಜ್ಞನಂತೆ ವೇಮನನೂ ಲೋಹಗಳನ್ನು ಬಂಗಾರ ಮಾಡುವ ವಿದ್ಯೆಯನ್ನು ತಿಳಿದಿದ್ದನೆಂದು ಅವನ ಕೆಲವು ಪದ್ಯಗಳಿಂದಲೇ ತಿಳಿದು ಬರುತ್ತದೆ. ಆದರೆ ಅವನು ಹೇಳುವ ವಿಧಾನದಿಂದ ನಾವು ಬಂಗಾರ ಮಾಡಲು ಸಾಧ್ಯವಿಲ್ಲವಂತೆ. ಅದರ ಕ್ರಿಯೆ ಗುರುಮುಖೇನವೇ ಬರಬೇಕಂತೆ. ವೇಮನನ ಗುರು ಅಭಿರಾಮ ಎಂಬುದಾಗಿ ಊಹಿಸಿದ್ದಾರೆ. ಇವನಿಂದಲೇ ಬಂಗಾರ ಮಾಡುವ ವಿದ್ಯೆಯನ್ನೂ ತಿಳಿದಿದ್ದನಂತೆ. ತನ್ನ ಪದ್ಯಗಳ ನಾಲ್ಕನೆಯ ಸಾಲನ್ನು ವೇಮನ ಅಭಿರಾಮನಿಗೆ ಅಂಕಿತ ಮಾಡಿದ್ದಾನೆ.

ವೇಮನ ತನ್ನ ಜೀವನದಲ್ಲಿ ಅನೇಕ ರೀತಿಯ ಸುಖ ದುಃಖಗಳನ್ನು ಉಂಡವನು; ಅನೇಕ ಕಷ್ಟಕಾರ್ಪಣ್ಯಗಳಿಗೆ ಸಿಲುಕಿಕೊಂಡವನು. ಇವನ ಪದ್ಯಗಳಲ್ಲಿ ಮಾತೃಪ್ರೇಮ, ಮಲತಾಯಿಯ ಕ್ರೌರ್ಯ, ದೇವದಾಸಿಯ ಸ್ವಭಾವ ಇವೆಲ್ಲ ಉಕ್ತವಾಗಿದೆ. ಇವುಗಳ ಆಧಾರದಿಂದ ಅವನ ಸಾಂಸಾರಿಕ ಜೀವನ ದುಃಖಮಯವಾಗಿದ್ದಿರಬಹುದೆಂದು ಊಹಿಸಬಹುದು.

ವೇಮನನ ಕಾಲವನ್ನು ಕುರಿತು ನಿಶ್ಚಿತವಾಗಿ ಏನೂ ಹೇಳಲಾಗುವುದಿಲ್ಲ. ಅವನ ಪದ್ಯಗಳಲ್ಲಿಲ್ಲೂ ಅವನ

ಕಾಲದ ಬಗ್ಗೆ ಸೂಚನೆ ಇಲ್ಲ. ಇವನ ಕಾಲ 16ನೇ ಶತಮಾನದಿಂದ 18ನೇ ಶತಮಾನದವರೆಗೂ ಓಡುತ್ತದೆ ! ಇವೆರಡಕ್ಕೂ ನಡುವಿನ ಸು. 17ನೇ ಶತಮಾನ ಇವನ ಕಾಲ ಎಂದು ಕೆಲವರು ಊಹಿಸಿದ್ದಾರೆ. ಬ್ರೌನ್‌ದೊರೆ ವೇಮನನ ವಿಚಾರವನ್ನು ಚೆನ್ನಾಗಿ ವಿಮರ್ಶಿಸಿ ಅವನು ಅನಂತಪುರ ಜಿಲ್ಲೆಯ ಕದಿರಿ ತಾಲ್ಲೂಕಿನ ಕಟಾರುಪಲ್ಲಿ ಯವನೆಂದು ಹೇಳಿದ್ದಾನೆ. ತನ್ನ ಜೀವನದ ಉತ್ತಮ ಭಾಗವನ್ನೆಲ್ಲ ಈತ ರಾಯಲಸೀಮೆಯಲ್ಲಿ ಕಳೆದಿದ್ದಾನೆಂದು ವಿದ್ವಾಂಸರು ಊಹಿಸಿದ್ದಾರೆ.

ಸರ್ವಜ್ಞನಿಗೂ ವೇಮನನಿಗೂ ಸಂವಾದವಾಗಿದೆ ಎಂದು ಕೆಲವರ ಊಹೆ. ಮೈಸೂರು ಪ್ರಾಚ್ಯ ಸಂಶೋಧನಾಲಯದಲ್ಲಿ "ಸರ್ವಜ್ಞ - ವೇಮನ ಸಂವಾದ" ಎಂಬ ಚಿಕ್ಕ ಗ್ರಂಥವಿದೆ.

ವೇಮನ ತನ್ನ ಮನೋಧರ್ಮಕ್ಕೆ ಹೊಂದುವ 'ಆಟವೆಲದಿ' ಛಂದಸ್ಸಿನಲ್ಲಿ ತನ್ನ ಪದ್ಯಗಳನ್ನು ಕಟ್ಟಿದ್ದಾನೆ. ಆಟವೆಲದಿ ಇವನ ಕೈಲಿ ತನ್ನ ಅತ್ಯುಚ್ಚ ಮಟ್ಟವನ್ನು ಪಡೆಯಿತು. ವೇಮನ ಆಟವೆಲದಿಯ ಪೂರ್ಣಲಾಭ ಪಡೆದಿದ್ದಾನೆ.ಆಟವೆಲದಿ ನಾಲ್ಕು ಸಾಲುಗಳನ್ನುಳ್ಳ ಛಂದಸ್ಸು. ಎರಡು ಮತ್ತು ನಾಲ್ಕನೆಯ ಸಾಲಿನಲ್ಲಿ 5 ಸೂರ್ಯ (ಬ್ರಹ್ಮ) ಗಣಗಳೂ ಮತ್ತು ಮೂರು ಮತ್ತು ಒಂದನೆಯ ಸಾಲಿನಲ್ಲಿ 2 ಇಂದ್ರ (ವಿಷ್ಣು) ಗಣಗಳೂ ಇರುತ್ತವೆ. ಗೀತಿಕೆಯನ್ನು ತೇಟಗೀತ ಮತ್ತು ಆಟವೆಲದಿ ಎಂದು ಎರಡು ಭಾಗ ಮಾಡುತ್ತಾರೆ. ಇದು ತ್ರಿಪದಿಯಂತೆ ಜನ ಪ್ರಿಯ ಛಂದಸ್ಸು ಎನ್ನಬಹುದು. ವೇಮನ ತಾನು ಹೇಳಬೇಕಾದುದನ್ನೆಲ್ಲ ಮೊದಲ ಮೂರು ಸಾಲಿನಲ್ಲಿಯೇ ಹೇಳಿ, ನಾಲ್ಕನೆಯ ಸಾಲನ್ನು "ವಿಶ್ವದಾಭಿರಾಮ ವಿನುರ ವೇಮ" ಎಂಬ ಅಂಕಿತಕ್ಕೆ ವಿನಿಯೋಗಿಸಿದ್ದಾನೆ.

ವೇಮನ ತನ್ನ ಪದ್ಯಗಳಲ್ಲಿ ಹೇಳಿರುವ ವಿಷಯಗಳು ಹೃದಯಂಗಮವಾಗಿ, ಆಕರ್ಷಕವಾಗಿವೆ. ಒಂದು ವಿಷಯವನ್ನು ಹೇಳಿ, ಒಳ್ಳೆಯ ಉದಾಹರಣೆಗಳ ಮೂಲಕ ಅದನ್ನು ಸಮರ್ಥಿಸುತ್ತಾನೆ. ಇವನ ಕವಿತ್ವದಲ್ಲಿ ಮಹಾಕವಿಗಳ ರಚನಾಸೌಂದರ್ಯ, ವಾಗ್ಮಿತೆ ಮುಂತಾದ ಗುಣಗಳಿವೆ. ಜನಸಾಮಾನ್ಯರಲ್ಲಿ ಮನೆಮಾಡಿ ಕೊಂಡಿದ್ದ ಹಲವಾರು ಮೂಢ ವಿಶ್ವಾಸಗಳನ್ನು, ಡಾಂಭಿಕ ಆಚಾರಗಳನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿ, ಧರ್ಮದ ನಿಜಸ್ವರೂಪವನ್ನು ಜನರಿಗೆ ತಿಳಿಯಹೇಳಲು ನಿರಂತರವಾಗಿ ವೇಮನನು ಶ್ರಮಿಸಿದನು. ವಿಸ್ತಾರವಾದ ವಿಚಾರ ವನ್ನು ಕೇವಲ ಹತ್ತಾರು ಶಬ್ದಗಳಿಂದಲೇ ಜನಮನಕ್ಕೆ ಅಂಟುವಂತೆ ಹೇಳುವುದೇ ವೇಮನನ ವೈಶಿಷ್ಟ್ಯ. ಶೂನ್ಯ ಹೃದಯದಲ್ಲಿ ನವ ಚೈತನ್ಯವನ್ನುಂಟುಮಾಡಿ ನೈತಿಕಮಾರ್ಗದಿಂದ ಮಾನವನನ್ನು ಮತ್ತಷ್ಟು ಮೇಲ್ಮಟ್ಟಕ್ಕೆ ಏರಿಸುವ ಸಹಜಶಕ್ತಿ ಇವನ ಕವಿತ್ವದಲ್ಲಿದೆ. ಸಮಾಜದಲ್ಲಿರುವ ಅನೀತಿ, ಆಲಸ್ಯ ಮೊದಲಾದ ಅನೇಕ ರೋಗಗಳಿಗೆ ಇವನ ಪದ್ಯಗಳು ಸಂಜೀವನೀ ಮಾತ್ರೆಗಳಂತಿವೆ.

ಅರ್ಥೌಚಿತ್ಯ, ಭಾಷಾಮಿತಿ, ಭಾವಗಾಂಭೀರ್ಯ ಇವೆಲ್ಲವೂ "ಆನೆ ಕನ್ನಡಿಯಲ್ಲಿ ತಾನಡಗಿ ಇಪ್ಪಂತೆ". ಚಿಕ್ಕ ಪದ್ಯಗಳಲ್ಲಿ ಅಡಗಿಸಿರುವ ವೇಮನನ ನೈಪುಣ್ಯ ಅಸಾಮಾನ್ಯವಾದುದು. ಇವನ ಶೈಲಿ ಮೃದುಮಧುರ. ಇವನ ಉಪಮೆಗಳು ಎಲ್ಲ ಕಾಲಕ್ಕೂ ರಮ್ಯ, ಸ್ಪಷ್ಟ ಹಾಗೂ ಸರಳ.

ವೇಮನನ ಪದ್ಯಗಳೆಲ್ಲವೂ ಸಾಮಾನ್ಯವಾಗಿ ಪ್ರತಿಪಾದನೆ (thesis), ವಿರೋಧ (antithesis) ಮತ್ತು ಸಾರಾಂಶ (synthesis) ಈ ಮೂರು ಹಂತಗಳಲ್ಲೇ ಬರುತ್ತವೆ. ಇವನ ಪದ್ಯಗಳಲ್ಲಿ ಲೋಕಾನುಭವ, ನೀತಿ, ದುರ್ಜನ-ಸಜ್ಜನರ ಲಕ್ಷಣಗಳು-ಇವೆಲ್ಲ ಉಂಟು. ಇವನು ಕೆಲವು ಪೌರಾಣಿಕ ಉದಾಹರಣೆಗಳನ್ನೂ ಕೊಡುತ್ತಾನೆ.

ದುರ್ಜನ-ಸಜ್ಜನರ ಬಗ್ಗೆ ಅವನ ಅಭಿಪ್ರಾಯಗಳನ್ನು ಈ ಕೆಲವು ಪದ್ಯಗಳಲ್ಲಿ ಗುರ್ತಿಸಬಹುದು.

ಅಲ್ಪಬುದ್ಧಿವಾನಿಕಧಿಕಾರಮಿಚ್ಚಿನ
ದೊಡ್ಡವಾರಿನೆಲ್ಲ ದೊಲಗಗೊಟ್ಟು
ಚೆಪ್ಪು ತಿನೆಡಿ ಕುಕ್ಕ ಚೆರಕುತೀಗೆರುಗುನಾ, ವಿಶ್ವ

(ಅಲ್ಪಬುದ್ಧಿಯವನಿಗೆ ಅಧಿಕಾರ ಕೊಟ್ಟರೆ ದೊಡ್ಡವರನ್ನೆಲ್ಲ ತೊಲಗುವಂತೆ ಹೊಡೆಯುತ್ತಾನೆ. ಚಪ್ಪಲಿ ತಿನ್ನುವ ನಾಯಿ ಕಬ್ಬಿನ ಸಿಹಿಯನ್ನು ಅರಿಯಬಲ್ಲುದೇ ?

> ತಪ್ಪುಲೆನ್ನುವಾರು ತಂಡೋಪತಂಡಮು
> ಉರ್ವಿಜನುಲಕೆಲ್ಲನುಂಡು ದಪ್ಪು
> ತಪ್ಪು ಲೆನ್ನುವಾರು ದಮತಪ್ಪುಲೆರುಗರು, ವಿಶ್ವ....

(ತಪ್ಪುಗಳನ್ನು ಲೆಕ್ಕಿಸುವವರು ತಂಡೋಪತಂಡ. ಭೂಮಿಯಲ್ಲಿನ ಜನರಿಗೆಲ್ಲ ತಪ್ಪು ಸಾಮಾನ್ಯ. ಆದರೆ ತಪ್ಪು ಎಣಿಸುವವರು ತಮ್ಮ ತಪ್ಪುಗಳನ್ನು ಅರಿಯರು.)

ಕನ್ನಡದ ಒಂದು ಗಾದೆ–"ತನ್ನ ಎಲೆಯಲ್ಲಿ ಕತ್ತೆ ಸತ್ತು ಬಿದ್ದಿದ್ದರೂ ಕಾಣುತ್ತಿಲ್ಲ, ಇನ್ನೊಬ್ಬರ ಎಲೆಯ ಮೇಲೆ ಹಾರಾಡುವ ನೊಣವನ್ನು ಓಡಿಸುತ್ತಾನೆ"—ಎಂಬುದು ಇಲ್ಲಿ ನೆನಪಿಗೆ ಬರುತ್ತಿದೆ. ಜೊತೆಗೆ ಬಸವಣ್ಣನವರು ಹೇಳಿರುವ "ಲೋಕದ ಡೊಂಕ ನೀವೇಕೆ ತಿದ್ದುವಿರಿ? ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ. ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ. ನೆರೆಮನೆಯ ದುಃಖಕ್ಕೆ ಅಳುವವರ ಮೆಚ್ಚ ನಮ್ಮ ಕೂಡಲ ಸಂಗಮದೇವ"–ಎಂಬುದೂ ಇದೇ ಅರ್ಥವನ್ನು ಹೊಂದಿದೆ. 'Great men think alike' ಎಂಬುದು ಎಷ್ಟೊಂದು ಸಮರ್ಪಕ !

> ಅಲ್ಪುಡೆಪ್ಪುಡು ಪಲ್ಕುನಾಡಂಬರಮುಗಾನು
> ಸಜ್ಜನುಂಡು ಪಲ್ಕು ಚಲ್ಲಗಾನು
> ಕಂಚುಮ್ರೋಗುನಟ್ಲು ಕನಕಂಬು ಮ್ರೋಗುನಾ ? ವಿಶ್ವ....

(ಅಲ್ಪನಾದವನು ಯಾವಾಗಲೂ ಆಡಂಬರದಿಂದ ಮಾತನಾಡುತ್ತಾನೆ. ಸಜ್ಜನನಾದವನು ಯಾವಾಗಲೂ ಮೆಲ್ಲನೆ ಮಾತನಾಡುತ್ತಾನೆ. ಕಂಚು ಮೊಳಗುವಂತೆ ಬಂಗಾರ ಮೊಳಗುವುದೇ ?)

'ತುಂಬಿದ ಕೊಡ ತುಳುಕುವುದಿಲ್ಲ', 'ಅಲ್ಪವಿದ್ಯಾ ಮಹಾಗರ್ವೀ'–ಇವೇ ಮೊದಲಾದ ಕನ್ನಡ ಗಾದೆಗಳ ಜೊತೆಗೆ, ಬಸವಣ್ಣನವರು ಮಾತು ಹೇಗಿರಬೇಕು ಎಂದು ಹೇಳಿರುವ ವಚನವನ್ನೂ ಇದರೊಂದಿಗೆ ಹೋಲಿಸಬಹುದು : "ನುಡಿದರೆ ಮುತ್ತಿನಹಾರದಂತಿರಬೇಕು........"

> ಉಪ್ಪು ಕಪ್ಪುರಂಬುನೊಕ್ಕ ಪೋಲಿಕನುಂಡು
> ಚೂಡ ಚೂಡ ರುಚುಲ ಜಾಡ ವೇರು
> ಪುರುಷಲಂದು ಪುಣ್ಯಪುರುಷಲು ವೇರಯಾ ? ವಿಶ್ವ....

(ಉಪ್ಪು, ಕರ್ಪೂರ ನೋಡಲು ಒಂದೇ ರೀತಿಯಾಗಿರುತ್ತದೆ. ಪುನಃ ಪುನಃ ನೋಡಿದಾಗ ರುಚಿಗಳು ಬೇರೆ. ಮಾನವರಲ್ಲಿ ಪುಣ್ಯಪುರುಷರು ಬೇರೆಯಲ್ಲವೇ ?)

ಹಂಸಕ್ಷೀರ ನ್ಯಾಯದಂತೆ ಈ ಸಜ್ಜನರನ್ನು ಹುಡುಕಬೇಕು.

> ವೇಮು ಪಾಲು ಬೋಸಿ ವೇಯೇಂಡ್ಲು ಪೆಂಚಿನ
> ಚೇದು ವಿಡಿಚಿ ತೀಪು ಜೆಂದನಟುಲ
> ನೋಗು ಗುಣಮು ವಿಡಿಚಿ ಯುಚಿತಜ್ಞುಡಗುನೆಟ್ಲು ವಿಶ್ವ....

(ಬೇವಿಗೆ ಹಾಲೆರೆದು ಒಂದು ಸಾವಿರ ವರ್ಷ ಬೆಳೆಸಿದರೂ ಅದು ಕಹಿ ಬಿಟ್ಟು ಹೇಗೆ ಸಿಹಿಯನ್ನು ಹೊಂದುವುದಿಲ್ಲವೋ ಹಾಗೆಯೇ ಅಲ್ಪನಾದವನು (ದುರ್ಗುಣಿ) ತನ್ನ ಅಲ್ಪ ಗುಣವನ್ನು ಬಿಟ್ಟು ಉಚಿತಜ್ಞನಾಗುವುದು ಹೇಗೆ ?)

'ಹೀನಸುಳಿ ಬೋಳಿಸಿದರೆ ಹೋಗುವುದೆ ?' ಎಂಬ ಗಾದೆಯಲ್ಲಿಯೂ ಇಂತಹ ದುರ್ಜನರನ್ನು ತಿದ್ದಲು ಅಸಾಧ್ಯ ಎಂಬುದು ಎಷ್ಟು ಮಾರ್ಮಿಕವಾಗಿದೆ !

ತಲ್ಲಿ ತಂಡ್ರಿಮೀದ ದಯ ಲೇನಿ ಪುತ್ರುಂಡು
ಪುಟ್ಟನೇಮಿ ? ವಾಡು ಗಿಟ್ಟನೇಮಿ ?
ಪುಟ್ಟಲೋನ ಜೆದಲು ಪುಟ್ಟದಾ ಗಿಟ್ಟದಾ ? ವಿಶ್ವ....

(ತಾಯಿ-ತಂದೆಯರ ಮೇಲೆ ದಯೆ ಇಲ್ಲದ ಮಗ ಹುಟ್ಟಿದರೇನು ? ಸತ್ತರೇನು ? ಹುತ್ತದಲ್ಲಿ ಗೆದ್ದಲು ಹುಟುತ್ತದೆ, ಸಾಯುತ್ತದೆ.)

ಮೇಡಿಪಂಡು, ಜೂಡ ಮೇಲಿ ಮೈಯುಂಡುನು
ಪೊಟ್ಟವಿಚ್ಚಿ ಜೂಡ ಬುರುಗು ಲುಂಡು
ಬೆರುಕವಾನಿ ಮದಿನಿ ಬಿಂಕಮಿಾಲಾಗುರಾ ವಿಶ್ವ....

(ಅತ್ತಿಯಹಣ್ಣು ನೋಡಲು ಮೇಲ್ನೋಟಕ್ಕೆ ಮೋಹಕವಾಗಿರುತ್ತದೆ. ಹೊಟ್ಟೆ ಬಿಚ್ಚಿ ನೋಡಿದರೆ ಹುಳುಗಳು ಇರುತ್ತವೆ. ದುರ್ಜನರ ಮನಸ್ಸಿನಲ್ಲಿರುವ ಬಿಂಕವೂ ಹೀಗೆಯೇ ಅಲ್ಲವೇ ?)

ದುರ್ಜನರಿಗೆ ಅತ್ತಿಯ ಹಣ್ಣನ್ನು ಹೋಲಿಸುವುದು ಸಾಮಾನ್ಯವಾಗಿದೆ.

ಎಂತ ಚದುವು ಚದಿವಿ ಯೆನ್ನಿ ವಿನ್ನನುಗಾನಿ
ಹೀನುಡವಗುಣಂಬು ಮಾನಲೇಡು
ಬೊಗ್ಗು ಪಾಲಗಡುಗ ಬೋವುನಾ ನುಲಿನಂಬು, ವಿಶ್ವ....

(ಎಷ್ಟು ಓದಿದರೇನು ! ಎಷ್ಟು ಕೇಳಿದರೇನು ? ಹೀನನಾದವನಿಗೆ ಅವಗುಣ ಮರೆತು ಹೋಗುವುದಿಲ್ಲ. ಇದ್ದಿಲನ್ನು ಹಾಲಿನಲ್ಲಿ ತೊಳೆದರೆ ಬೆಳ್ಳಗಾಗುತ್ತದೆಯೇ ?)

ಆತ್ಮಶುದ್ಧಿ ಲೇನಿಯಾಚಾರ ಮದಿಯೇಲ
ಭಾಂಡ ಶುದ್ಧಿಲೇನಿ ಪಾಕಮೇಲ
ಚಿತ್ತಶುದ್ಧಿ ಲೇನಿ ಶಿವಪೂಜಲೇಲರಾ ? ವಿಶ್ವ....

(ಆತ್ಮಶುದ್ಧಿ ಇಲ್ಲದ ಆಚಾರವದೇಕೆ ? ಪಾತ್ರೆ ಶುದ್ಧವಾಗಿಲ್ಲದ ಪಾಕ (ಅಡಿಗೆ) ಏಕೆ ? ಚಿತ್ತಶುದ್ಧಿ ಇಲ್ಲದ ಶಿವಪೂಜೆ ಏಕೆ !)

ಸಂಸಾರದಲ್ಲಿ ವೈರಾಗ್ಯ ಬೋಧನೆಯೂ ಇಲ್ಲಿ ಕಂಡು ಬರುತ್ತದೆ.

ವೇಮನ ಹೇಳಿರುವ ಈ ಮಾತುಗಳಿಗೆ ಸಂವಾದಿಯಾಗಿ ಬೇರೆ ಬೇರೆ ಭಾಷೆಗಳಲ್ಲೂ ಇದೇ ವಿಚಾರಗಳೇ ಬಂದಿರಬಹುದು. ಎಲ್ಲರೂ ಬೋಧಿಸುವ ನೀತಿ ಒಂದೇ, ಮಾರ್ಗ ಬೇರೆ. ತೆಲುಗಿನ ಸುಂದರ ಮಾತುಗಳಲ್ಲಿ ತುಂಬ ಚಿಕ್ಕದಾಗಿ ತನ್ನ ಅನುಭವಗಳನ್ನು ಹಿಡಿದಿಟ್ಟ ಕೀರ್ತಿ ವೇಮನನದು.

ಸರ್ವಜ್ಞನ–"ಹಲವನೋದಿದರೇನು ? ಚೆಲುವನಾದರೆ ಏನು ? ಕುಲವಂತನಾಗಿ ಫಲವೇನು ? ಲಿಂಗದ ಒಲುಮೆ ಇಲ್ಲದನ್ನಕ್ಕ" ಎಂಬ ಪದ್ಯ ವೇಮನನ–"ಎಂತ ಚದುವು ಚದಿವಿ...." ಗೆ ಸಂವಾದಿಯಾಗಿದೆ. "ಧರ್ಮವೇ ಜಯವೆಂಬ ದಿವ್ಯ ಮಂತ್ರ....ಆಚಾರವಿಲ್ಲದ ಜಪತಪವೇಕೆ ? ನೀತಿನೇಮವಿಲ್ಲದ ಕೂಟವು ಏಕೆ ? ಭಕ್ತಿಲಿ ಮಾಡದ ಹರಿಪೂಜೆ ಏಕೆ ?...." ದಾಸರ ಈ ಪದ ವೇಮನನ—"ಆತ್ಮಶುದ್ಧಿ ಲೇನಿಯಾಚಾರ ಮದಿಯೇಲ...." ಕ್ಕೆ ಸಮೀಪವಾಗಿದೆ.

ಇದಲ್ಲದೆ ವೇಮನ ಕೆಲವು ನೀತಿಮಾತುಗಳನ್ನೂ ತನ್ನ ಪದ್ಯಗಳಲ್ಲಿ ಹೇಳಿದ್ದಾನೆ.

ಕೋಪಮುನನು ಘನತ ಕೊಂಚ ಮೈ ಪೋವುನು
ಕೋಪಮುನನು ಮಿಗುಲಗೋಡು ಜೆಂದು
ಕೋಪನುಡಚೆನೇನಿ ಗೋರಿಕಲೀಡೇರು, ವಿಶ್ವ....

(ಕೋಪದಿಂದಾಗಿ ಘನತೆ ಕೊಂಚವೇ ಉಳಿಯುತ್ತದೆ. ಕೋಪದಿಂದ ಬಹಳ ಗೋಳು ಉಂಟಾಗುತ್ತದೆ. ಕೋಪವನ್ನು ಅಡಗಿಸಿದರೆ ನಮ್ಮ ಕೋರಿಕೆಗಳು ಈಡೇರುತ್ತವೆ.)

ಅನುವುಗಾನಿ ಚೋಟ ಅಧಿಕುಲ ಮನರಾದು
ಕೊಂಚೆ ಮುಂಡಟೆಲ್ಲ ಕೊದುವ ಕಾದು
ಕೊಂಡ ಅದ್ದಮಂದು ಕೊಂಚಮೈಯುಂಡದಾ ವಿಶ್ವ....

(ತನಗೆ ಬೆಲೆಯಿಲ್ಲದ ಕಡೆ ಹೋಗಿ ತಾನು ದೊಡ್ಡವನು ಎಂದು ಹೇಳಬಾರದು ಅಡಗಿರುವುದೆಲ್ಲ ಕೊರತೆಯಲ್ಲ (ವಿನಯದಿಂದಿರುವುದು ದೋಷವಲ್ಲ.) ದೊಡ್ಡ ಬೆಟ್ಟ ಕನ್ನಡಿಯಲ್ಲಿ ಚಿಕ್ಕದಾಗಿಯೇ ಕಾಣುತ್ತದೆ ಅಲ್ಲವೆ ?)

ಪದುಗುರಾಡು ಮಾಟ ಪಾಟಿಯೈ ಧರಜೆಲ್ಲು
ನೊಕ್ಕರಾಡು ಮಾಟ ಯೆಕ್ಕದೆಂದು
ಊರಕುಂಡುವಾನಿ ಶೂರಲ್ಲನೋಪದು, ವಿಶ್ವ....

(ಹತ್ತು ಜನ ಆಡುವ ಮಾತು ನ್ಯಾಯವಾಗಿ ಸಲ್ಲುತ್ತದೆ. ಒಬ್ಬನು ಆಡುವ ಮಾತು ಜಾರಿಗೆ ಬರುವುದಿಲ್ಲ. ಸುಮ್ಮನಿರುವವನನ್ನು ಊರೆಲ್ಲ ಸಹಿಸುವುದೂ ಇಲ್ಲ.)

ಚಿತ್ತಶುದ್ಧಿಗಲ್ಗಿ ಚೇಸಿನ ಪುಣ್ಯಂಬು
ಕೊಂಚ ಮಯಿನ ನದಿಯು ಗೊದುವ ಗಾದು
ವಿತ್ತನಂಬು ಮಱ್ಱವೃಕ್ಷಂಬುನಕು ನೆಂತ ? ವಿಶ್ವ....

(ಚಿತ್ತಶುದ್ಧಿಯಿಂದ ಮಾಡಿದ ಪುಣ್ಯ ಸ್ವಲ್ಪವಾದರೂ ಅದು ಕೊರತೆ ಅಲ್ಲ. ಆಲದ ಮರಕ್ಕೂ ಬೀಜಕ್ಕೂ ಹೋಲಿಕೆಯೆಲ್ಲಿ ? ಆಲದ ಮರದ ಬೀಜದಿಂದಲೇ ದೊಡ್ಡ ಆಲದಮರ ಬರುವುದಿಲ್ಲವೇ ?)

ಗಂಗಿಗೋವು ಪಾಲು ಗಂಟೆಡೈನನು ಚಾಲು
ಕಡವೆಡೈನ ನೇಮಿ ಭರಮು ಪಾಲು
ಭಕ್ತಿ ಕಲುಗು ಕೂಡು ಪಟ್ಟೆ ಡೈನನು ಚಾಲು, ವಿಶ್ವ....

(ಗಂಗೆ ಗೋವಿನ (ಶ್ರೇಷ್ಠ ಹಸು) ಹಾಲು ಒಂದು ಸೌಟಿನಷ್ಟಾದರೂ ಸಾಕು. ಕತ್ತೆಯ ಹಾಲು ಮಡಕೆ ಯಷ್ಟಿದ್ದರೇನು ? ಭಕ್ತಿಯಿಂದ ನೀಡಿದ ಕೂಳು ಒಂದು ಹಿಡಿಯಾದರೂ ಸಾಕು)

ಮೇಲಿನ ಎರಡು ಪದ್ಯಗಳಲ್ಲಿ ಚಿತ್ತಶುದ್ಧಿ, ಪೂರ್ಣಮನಸ್ಸು ಇವುಗಳಿಂದ ಮಾಡಿದ ಕೆಲಸ ಉತ್ತಮ ವಾದುದು ಎಂಬುದನ್ನು ಹೇಳುತ್ತಿದ್ದಾನೆ. "ಭಕ್ತಿಲಿ ಮಾಡದ ಶಿವಪೂಜೆ ಏಕೆ ?" ಎಂದು ದಾಸವರೇಣ್ಯರು ಪ್ರಶ್ನಿಸಿ ರುವಂತೆಯೇ ವೇಮನನೂ ಪ್ರಶ್ನಿಸಿದ್ದಾನೆ. ದಾನ ಮಾಡುವಾಗಲೂ ಶ್ರೇಷ್ಠವಾದ್ದನ್ನು, ಅದು ಕಡಮೆ ಇದ್ದರೂ ಸರಿ, ಪ್ರೀತಿಯಿಂದ ನೀಡಬೇಕು. ಆಗಲೇ ಪರಮಾತ್ಮ ತೃಪ್ತನಾಗುತ್ತಾನೆ.

"ತನ್ನ ಮನೆಯಲ್ಲಿ ತಾನೇ ರಾಜ"—ಎಂಬ ಮಾತನ್ನು ವೇಮನ ಎಷ್ಟು ಚೆನ್ನಾಗಿ ಹೇಳಿದ್ದಾನೆ ನೋಡಿ.

ನೀಳ್ಳಲೋನ ಮೊಸಲಿ ನಿಗಿಡಿ ಏನುಗು ಬಟ್ಟು
ಬಯಟ ಕುಕ್ಕ ಚೇತ ಭಂಗಪಡುನು
ಸ್ಥಾನ ಬಲಿಮಿಗಾನಿ ತನಬಲ್ಮಿ ಕಾದಯಾ, ವಿಶ್ವ....

ತನ್ನ ಬೀದಿಯಲ್ಲಿ 'ನಾಯಿಯೂ ಸಿಂಹವಾಗುತ್ತದೆ' ಎಂಬ ಅರ್ಥವೇ ಇಲ್ಲಿ ಇರುವುದು.

(ನೀರಿನಲ್ಲಿರುವ ಮೊಸಳೆ ಆನೆಯನ್ನು ಎಗರಿ ಹಿಡಿಯುತ್ತದೆ. ಆದರೆ ಹೊರಗಡೆ ನಾಯಿಯಿಂದ ಕೂಡ ಭಂಗ ಹೊಂದುತ್ತದೆ. ಸ್ಥಾನಬಲವಷ್ಟೇ ಹೊರತು ತನ್ನ ಬಲವಲ್ಲ.)

ಸಂಸಾರ ಎಂತಹ ಕ್ಲೇಶಕಾರಿ ಎಂಬುದನ್ನು ವೇಮನ ಸೊಗಸಾಗಿ ಹೇಳಿದ್ದಾನೆ.

ಚೆಪ್ಪುಲೋನಿ ರಾಯಿ ಚೆವಿಲೋನಿ ಜೋರೀಗ
ಕಂಟಿಲೋನಿ ನಲುಸು ಕಾಲಿಮುಲ್ಲು
ಯಿಂಟಿಲೋನಿ ಪೋರು ನಿಂತಂತ ಗಾದಯಾ, ವಿಶ್ವ.....

(ಚಪ್ಪಲಿಯಲ್ಲಿರುವ ಕಲ್ಲು, ಕಿವಿಯಲ್ಲಿರುವ ಗುಂಗುರು, ಕಣ್ಣಿನಲ್ಲಿರುವ ಧೂಳಿನ ಕಣ, ಕಾಲಿನಲ್ಲಿರುವ ಮುಳ್ಳು, ಮನೆಯಲ್ಲಿನ ಜಗಳ—ಇವೆಲ್ಲ ಬಹಳ ಸೊಡ್ಡದು.)

ಬಡವರು-ಬಡವರು ಒಂದು. ಶ್ರೀಮಂತ-ಬಡವ ಎಂದಿಗೂ ಒಂದಲ್ಲ. 'Birds of the same feather flock together' ಈ ಬಗ್ಗೆ ವೇಮನ ಹೀಗೆ ಹೇಳಿದ್ದಾನೆ.

ಕನ್ನು ಪೋವುವಾಡು ಗಾಳ್ಲು ಪೋಯಿನ ವಾಡು
ನುಭಯು ಲರಯು ಗೂಡಿ ಯುುಂಡುನಟ್ಲು
ಪೇದ ಪೇದ ಗೂಡಿ ಪೆನಗೋನಿಯುಂಡುನು, ವಿಶ್ವ....

(ಕಣ್ಣು ಹೋದವನು, ಕಾಲು ಹೋದವನು ಇಬ್ಬರೂ ಕೂಡಿ ಇರುವಂತೆ ಬಡವರು-ಬಡವರು ಕೂಡಿ ಹೊಂದಿಕೊಂಡಿರುತ್ತಾರೆ)

ಕನ್ನಡದಲ್ಲಿ "ಹಾಡುತ್ತ ಹಾಡುತ್ತ ರಾಗ...." ಎಂಬ ಗಾದೆ ಮಾತಿದೆ. ಇವನ್ನು ವೇಮನ ಸುಂದರವಾಗಿ ಬಳಸಿಕೊಂಡು ಹೀಗೆ ಹೇಳಿದ್ದಾನೆ.

ಅನಗ ಅನಗ ರಾಗ ಮತಿಶಯಿಲ್ಲು ಚುನುಂಡು
ದಿನಗ ದಿನಗ ವೇಮು ತೀಯನುಂಡು
ಸಾಧನಮುನ ಬನುಲು ಸಮಕೂರುಧರಲೋನ, ವಿಶ್ವ....

(ಹಾಡುತ್ತ ಹಾಡುತ್ತ ರಾಗವು ಅತಿಶಯವಾಗಿ ಕೇಳುತ್ತದೆ. ತಿನ್ನುತ್ತ ತಿನ್ನುತ್ತ ಬೇವು ಸಿಹಿಯಾಗುತ್ತದೆ. ಸಾಧನೆಯಿಂದ ಕೆಲಸಗಳು ಸಾಧ್ಯವಾಗುತ್ತದೆ. ಅಂದರೆ ಸಾಧನೆಯಿಂದ ಏನನ್ನಾದರೂ ಸಾಧಿಸಬಹುದು.)

ಇನುಮು ವಿಱಿಗೆ ನೇಸಿಯಿನುಮಾರು ಮುಮ್ಮಾರು
ಕಾಂಚಿಯತುಕ ನೇರ್ಚು ಕಮ್ಮರೀಡು
ಮನಸು ವಿಱಿಗೆ ನೇಸಿ ಮಱಿಯಂಟ ನೇರ್ಚುನಾ ? ವಿಶ್ವ....

(ಕಬ್ಬಿಣ ಮುರಿದು ಹೋದರೆ ಎರಡು-ಮೂರು ಬಾರಿ ಕಾಯಿಸಿ ಕಮ್ಮಾರ ಬೆಸಗೆ ಹಾಕುತ್ತಾನೆ. ಆದರೆ ಮನಸ್ಸು ಮುರಿದು ಹೋದರೆ ಅದಕ್ಕೆ ಬೆಸುಗೆ ಹಾಕುವುದು ಸಾಧ್ಯವೇ ಇಲ್ಲ.)

ಚಿಕ್ಕಿಯುನ್ನ ವೇಳ ಸಿಂಹಂಬು ನೈನನು
ಬಕ್ಕ ಕುಕ್ಕ ಚೇಸಿರಿ ಬಾಧನೇಯು
ಬಲಿಮಿ ಲೇನಿ ವೇಳ ಬಂತಂಬು ಚೆಲ್ಲದು, ವಿಶ್ವ....

(ಸಿಕ್ಕಿಬಿದ್ದ ವೇಳೆಯಲ್ಲಿ ಸಿಂಹವನ್ನು ಕೂಡ ನಾಯಿ ಬಾಧಿಸಬಲ್ಲುದು. ಬಲವಿಲ್ಲದಾಗ ಹಟ ಸಲ್ಲದು.)

ಭೂಮಿ ನಾದಿಯನ್ನ ಭೂಮಿ ಪಕ್ಕುನ ನವ್ವು
ದಾನಹೀನು ಜೂಚಿ ಧನಮು ನವ್ವು
ಕದನಭೀತು ಜೂಚಿ ಕಾಲುಡು ನವ್ವುನು, ವಿಶ್ವ....

(ಈ ಭೂಮಿ ನನ್ನದು ಎಂದರೆ ಆ ಭೂಮಿ ಪಕ್ಕನೆ ನಗುತ್ತಾಳೆ. ದಾನಹೀನನನ್ನು ನೋಡಿ ಧನವು ನಗುತ್ತದೆ. ಕದನ ಭೀತನನ್ನು ಕಂಡು ಯಮ ನಗುತ್ತಾನೆ.)

ಸಂಸಾರದಲ್ಲಿ ವೈರಾಗ್ಯ ಬೋಧನೆಯನ್ನು ಈ ಪದ್ಯದ ಮೂಲಕ ವೇಮನ ಮಾಡುತ್ತಾನೆ.

> **ಆಪದಂದು ಜೂಡು ನಾರಯ ಬಂಧುಲ**
> **ಭಯಮು ವೇಳ ಜೂಡು ಬಂಟುಗುಣಮು**
> **ಪೇದ ಪಡ್ಡವೇಳ ಪೆಂಡ್ಲಾಮುಗತೀ ಜೂಡು, ವಿಶ್ವ**

(ಆಪತ್ತಿನಲ್ಲಿ ಬಂಧುಗಳ ಗುಣ ತಿಳಿಯುತ್ತದೆ. ಭಯದ ಕಾಲದಲ್ಲಿ ಸೇವಕನ ಗುಣ ತಿಳಿಯುತ್ತದೆ. ಬಡತನದಲ್ಲಿ ಹೆಂಡತಿಯ ಗುಣ ತಿಳಿಯುತ್ತದೆ.)

ಎಲ್ಲವೂ ಸರಿಯಾಗಿದ್ದಾಗ ಎಲ್ಲರೂ ನಮ್ಮವರಾಗಿರುತ್ತಾರೆ. ಆದರೆ ಜೀವನದಲ್ಲಿ ಸ್ವಲ್ಪ ಎಡವಟ್ಟಾದರೂ ಯಾರೂ ಹತ್ತಿರ ಸುಳಿಯುವುದಿಲ್ಲ.

ಇಷ್ಟೇ ಅಲ್ಲದೆ ವೇಮನ ತನ್ನ ಪದ್ಯಗಳಲ್ಲಿ ವೇದ, ಯಜ್ಞ, ಪುರಾಣ, ಧರ್ಮಶಾಸ್ತ್ರ–ಇವುಗಳನ್ನೆಲ್ಲ ಲೇವಡಿ ಮಾಡಿದ್ದಾನೆ. ಈತ ವಿಗ್ರಹಾರಾಧನ ವಿರೋಧಿ. ಜಾತಿಪದ್ಧತಿಯನ್ನು ಪ್ರತಿಭಟಿಸಿದವ. ಒಟ್ಟಿನಲ್ಲಿ ಮಡಿವಂತರ ದೃಷ್ಟಿಯಲ್ಲಿ ಈತ ನಾಸ್ತಿಕ. ಶಿವಭಕ್ತನಾದರೂ ಲಿಂಗಧಾರಣೆ, ಉಪವಾಸ, ಜಾಗರಣೆ, ತೀರ್ಥಯಾತ್ರೆ ಇತ್ಯಾದಿಗಳನ್ನು ತಿರಸ್ಕರಿಸಿ ಅಪಹಾಸ್ಯ ಮಾಡಿದ್ದಾನೆ. ಜಾತಿಯಲ್ಲಿ ಈತ ಕೀಳು. ಈ ಕಾರಣಗಳಿಂದ ತೆಲುಗು ಸಾಹಿತ್ಯದಲ್ಲಿ ವೇಮನನ ಹೆಸರು ಕೇಳಿ ಬರುತ್ತಿರುವುದೇ ಇತ್ತೀಚೆಗೆ.

ಅಣಕ, ವಿಡಂಬನೆಗೆ ವೇಮನ ತುಂಬ ಪ್ರಸಿದ್ಧ. ಇವನ ಹಾಸ್ಯಪ್ರಜ್ಞೆ ಮೆಚ್ಚುವಂತಹುದು. ಲೋಭಿಯನ್ನು ಕುರಿತು ಇವನು ಮಾಡಿರುವ ಈ ಹಾಸ್ಯ ದರ್ಶನೀಯ.

೧) ಲೋಭಿಯನ್ನು ಕೊಲ್ಲಲು ಅವನಿಗೆ ವಿಷ ಹಾಕಬೇಕಾಗಿಲ್ಲ, ಅಥವಾ ಯಾವ ಕಷ್ಟವನ್ನೂ ಪಡಬೇಕಿಲ್ಲ. ಅವನಲ್ಲಿ ದೊಡ್ಡ ದಾನವನ್ನು ಕೇಳಿ, ಆ ಆಘಾತದಿಂದ ತಟ್ಟನೆ ಸಾಯುತ್ತಾನೆ.

೨) ಮನೆಯಲ್ಲಿ ಯಾರಾದರೂ ಸತ್ತರೆ ಲೋಭಿ ತುಂಬ ಗೋಳಾಡುತ್ತಾನೆ. ಕಾರಣ–ಶವ ಸಂಸ್ಕಾರದ ಖರ್ಚನ್ನು ನೆನೆದು ಅವನ ಹೃದಯ ಒಡೆದು ಹೋಗುತ್ತದೆ.

ಹೀಗೆ ವೇಮನ ತೆಲುಗು ಸಾಹಿತ್ಯದಲ್ಲಿ ಅತ್ಯಂತ ಜನಪ್ರಿಯನಾಗಿ, 'ತೆಲುಗಿನ ಸರ್ವಜ್ಞ' ಎನಿಸಿಕೊಂಡಿದ್ದಾನೆ. ವೇಮನನ ಶೈಲಿ ಅಸಾಧಾರಣವಾದುದೆಂಬುದನ್ನು ಎಲ್ಲರೂ ಒಪ್ಪುತ್ತಾರೆ. ಕನ್ನಡದಲ್ಲಿ ಸರ್ವಜ್ಞ, ತಮಿಳಿನಲ್ಲಿ ತಿರುವಾಳ್ಳುವರ, ಮಹಾರಾಷ್ಟ್ರದಲ್ಲಿ ರಾಮದಾಸ, ಹಿಂದಿಯಲ್ಲಿ ಕಬೀರ ಹೇಗೋ ತೆಲುಗಿನಲ್ಲಿ ವೇಮನ ಹಾಗೆ.

ನೀನು ಬದುಕಿರುವವರೆಗೂ ನಿನ್ನ ರಕ್ಷಣೆಗಾಗಿ ಧರ್ಮದ ಆಯುಧ ಅನಿವಾರ್ಯ.

ಹೆಚ್. ರಾಮಚಂದ್ರಸ್ವಾಮಿ

ಆಚಾರ್ಯ ಸ್ವಾಮಿ ವಿವೇಕಾನಂದರು

ವೇದಗಳ ಕಾಲದಿಂದ ಇಂದಿನವರೆಗೆ ಭಾರತಭೂಮಿಯಲ್ಲಿ ಜನ್ಮವೆತ್ತಿ ಕೀರ್ತಿಶೇಷರಾಗಿಹೋದ ಮಹಾಚಾರ್ಯರುಗಳಲ್ಲಿ ವೇದಾಂತಕೇಸರಿಯೆಂದು ಕೀರ್ತಿವೆತ್ತ ಶ್ರೀಮತ್ ಸ್ವಾಮಿ ವಿವೇಕಾನಂದರೂ ಒಬ್ಬರು. ಭಾರತೀಯ ಸಂಸ್ಕೃತಿಯ ಜೀವಾಳವಾದ ಆಧ್ಯಾತ್ಮಿಕತೆಗೆ ಚೇತನವನ್ನೆರೆದು ಬೆಳೆಸಿ ಜನಜೀವನದಲ್ಲಿ ತಮ್ಮ ನಂತರವೂ ಬಹುಕಾಲ ಅದು ಮಾಸದಂತೆ ಕಾಪಾಡಿ ನಮ್ಮ ಹಿಂದೂಧರ್ಮವು 'ಸನಾತನ'ವೆನ್ನಿಸಿಕೊಂಡುದು ಸಾರ್ಥಕವೆನ್ನಿಸುವಂತೆ ನಡೆಸಿಕೊಂಡು ಬಂದಿರುವವರು ಇಂತಹ ಮಹಾ ಆಚಾರ್ಯರುಗಳು. ಕಾಲಕಾಲಕ್ಕೂ ಇಂಥವರು ಹುಟ್ಟಿ ಬಂದದ್ದರಿಂದಲೇ ನಮ್ಮ ನಾಡು ನಾನಾ ಸಾಮ್ರಾಜ್ಯಗಳ ಕ್ರೂರ ದಾಳಿ ದರೋಡೆ ದೌರ್ಜನ್ಯಗಳಿಗೆ ಸಿಕ್ಕಿಯೂ ನಾನಾ 'ಧರ್ಮ'ಗಳ ದುರಾಕ್ರಮಣಕ್ಕೆ ತುತ್ತಾಗಿಯೂ ಇಂದಿಗೂ ನಾವು ಬದುಕಿದ್ದೇವೆ—ಬರೀ ಬದುಕಿ ಉಳಿದಿಲ್ಲ ; ಶಕ್ತಿಯುತರಾಗಿದ್ದೇವೆ, ಲೋಕದ ಕಣ್ಣಿನಲ್ಲಿ ನಾವೂ ಒಂದು ರಾಷ್ಟ್ರ, ಒಂದು ಜನಾಂಗ ಎಂದು ಗೌರವಯುಕ್ತವಾದ ರಾಷ್ಟ್ರೀಯ ವ್ಯಕ್ತಿತ್ವವನ್ನು ಗಳಿಸಿದ್ದೇವೆ. ಪುರಾತನವಾದ ಭಾರತೀಯ ಸಂಸ್ಕೃತಿಗೂ ಸನಾತನವಾದ ಹಿಂದೂ ಧರ್ಮಕ್ಕೂ ಕಾಯಕಲ್ಪ ಚಿಕಿತ್ಸೆಮಾಡಿ ಪುನಶ್ಚೇತನಗೊಳಿಸಿ, ಹೊಸ ಪ್ರಪಂಚದ ಪ್ರಶ್ನೆಗಳಿಗೆ ಎದೆಗೊಟ್ಟು ಉತ್ತರಿಸಬಲ್ಲ ಸತ್ತ್ವ ಅವಕ್ಕಿವೆಯೆಂದು ಪ್ರಪ್ರಥಮವಾಗಿ ಜಗತ್ತಿಗೆ ತೋರಿಸಿಕೊಟ್ಟವರು ದಕ್ಷಿಣೇಶ್ವರದ ದೇವಮಾನವ ಶ್ರೀ ರಾಮಕೃಷ್ಣಪರಮಹಂಸರು ಮತ್ತು ಅವರ ಶಿಷ್ಯವರೇಣ್ಯರಾದ ಸ್ವಾಮಿ ವಿವೇಕಾನಂದರು. ಸಂಶಯ ಲೇಶಮಾತ್ರಕ್ಕೂ ಅವಕಾಶವಿಲ್ಲದಂತೆ ನಿರಂತರವಾಗಿ ಫಲಕೊಡುತ್ತ ಮಹಾಪ್ರವಾಹದಂತೆ ಮೇಲೆ ನುಗ್ಗಿ ಬರುತ್ತಿರುವ ವೈಜ್ಞಾನಿಕ ವಿದ್ಯಾ ಚಮತ್ಕಾರಗಳ ಮಧ್ಯೆ ಹಾಸ್ಯಾಸ್ಪದವಾಗದಂತೆ ಬದುಕಿ ಉಳಿಯುವ ಪ್ರಾಣಶಕ್ತಿ ನಮ್ಮ ಆರ್ಷೇಯ ಆಧ್ಯಾತ್ಮಿಕ ಸಂಸ್ಕೃತಿಗೆ ಇರುವುದೆಂದು ಲೋಕಕ್ಕೆ ಸಾರಿ ಸಾಧಿಸಿ ತೋರಿಸಿದವರು ಸ್ವಾಮಿ ವಿವೇಕಾನಂದರು.

ವಿವೇಕಾನಂದರ ಕಾಲಕ್ಕೆ ಹಿಂದೆ ಬ್ರಿಟಿಷರ ನೂರಾರು ವರ್ಷಗಳ ಆಳ್ವಿಕೆಯ ಫಲವಾಗಿಯೋ ಎಂಬಂತೆ ಹಿಂದೂ ಸಮಾಜದ ಹೃದಯದಲ್ಲಿ ಒಂದು ಮಹಾಶಂಕೆ, ಮರಣಭೀತಿ—ತಲೆದೋರಿತು. ನಮ್ಮ ಜನರೇ ನಮ್ಮ ಧರ್ಮ ಸಂಸ್ಕೃತಿಗಳನ್ನು ಹಳಿಯುತ್ತ, ಆಳುವ ಪರಂಗಿ ಪ್ರಭುಗಳ ಪಾದಸೇವೆಯೇ ಪರಮೋಚ್ಚ ಜೀವನಾದರ್ಶವೆಂಬಂತೆ ವರ್ತಿಸತೊಡಗಿದರು. ಇಂತಹ ಸಂಶಯರಾಕ್ಷಸನ ನಾಶಕ್ಕೆ ಮಹಾ ಅಸ್ತ್ರವಾಗಿ ಹುಟ್ಟಿದವರು ವಿವೇಕಾನಂದರು. ನರ ಸತ್ತ ನಮ್ಮವರಿಗೆ ಜೀವ ತುಂಬಿ, ಸಮಾಜದ ಆತ್ಮಶ್ರದ್ಧೆಯನ್ನು ಬದುಕಿಸಿ, ಧಾರ್ಮಿಕ ಪುನರುತ್ಥಾನದ ಮೂಲಕವಾಗಿ ನಮ್ಮ ರಾಷ್ಟ್ರವ್ಯಕ್ತಿತ್ವವನ್ನು ಸೃಜಿಸಿ ಬೆಳೆಸಿದವರು ಸ್ವಾಮಿ ವಿವೇಕಾನಂದರು.

'ಯಾರು ಹಿರಿದನ್ನು ಕಾಣುವ ಶಕ್ತಿಯನ್ನೀಯುವರೋ, ಹಿರಿದನ್ನು ಚಿಂತಿಸುವ ಶಕ್ತಿಯನ್ನೀಯುವರೋ,

ಹಿರಿದನ್ನು ಜಯಿಸಿ ಹಿರಿಯನಾಗುವಂತೆ ಮಾಡುವರೋ,ಅವರೇ ಗುರು' ಎಂಬುದಾಗಿ ಉಪನಿಷತ್ತಿನ ಒಂದು ಮಾತಿದೆ. ಇದಿಷ್ಟನ್ನೂ ಇಡೀ ನಾಡಿಗೇ ಅನುಗ್ರಹಿಸಿ, ಇಡೀ ನಾಡಿನ ಪ್ರಜ್ಞೆಯನ್ನೇ ಬಡಿದೆಬ್ಬಿಸಿದ ಸ್ವಾಮಿ ವಿವೇಕಾನಂದರು ನಮ್ಮ ರಾಷ್ಟ್ರಗುರು—ಅಷ್ಟೇ ಅಲ್ಲ, ಅದಕ್ಕಿಂತಲೂ ಮಿಗಿಲು. ಏಕೆಂದರೆ ಅವರ ಕಾರ್ಯಕ್ಷೇತ್ರ ಭಾರತ ಭೂಮಿ ಮಾತ್ರವಾಗಿರಲಿಲ್ಲ. ಕಾಸಿಲ್ಲದ ಬೈರಾಗಿಯಾದರೂ ಪಾಶ್ಚಾತ್ಯ ದೇಶಗಳಲ್ಲೆಲ್ಲ ಮಿಂಚಿನಂತೆ ಸಂಚರಿಸಿ ಸಿಡಿಲಿನಂತೆ ಮೊರೆದರು ; ವೇದಾಂತಕೇಸರಿಯಾಗಿ ಗರ್ಜಿಸಿದರು ; ಇತರರಿಂದಲೂ ತಮ್ಮ ವೇದಾಂತಡಿಂಡಿಮ ವನ್ನು ಸಾರ್ವತ್ರಿಕವಾಗಿ ಉದ್ಘೋಷಿಸಿದರು. ಇಂದು ಮಾನವ ಕುಲವನ್ನೇ ಒಂದಾಗಿಸಿದೆಯೆಂದು ಹೇಳಲಾಗುವ ನವ ವಿಜ್ಞಾನಶಾಸ್ತ್ರವು ಇನ್ನೂ ಶೈಶವಾವಸ್ಥೆಯಲ್ಲಿದ್ದಾಗಲೇ ಸ್ವಾಮಿ ವಿವೇಕಾನಂದರು ಚಿಕಾಗೋ ಸರ್ವಧರ್ಮ ಸಮ್ಮೇಳನದಿಂದ ಪ್ರಾರಂಭಿಸಿದ ತಮ್ಮ ಪ್ರಚಾರಕಾರ್ಯದ ಮೂಲಕವಾಗಿ ದೇಶದೇಶಗಳ, ಜನಾಂಗಗಳ, ಸಂಸ್ಕೃತಿಗಳ, ಮತಗಳ, ಧರ್ಮಗಳ, ಜಾತಿಕುಲಗಳ, ಇನ್ನೂ ಅನೇಕ ವಿಧವಾದ ಭೇದ ವೈಷಮ್ಯಗಳನ್ನಳಿಸಿ ನಾವೆಲ್ಲ ಮುಖ್ಯವಾಗಿ ಮಾನವರು, ಒಬ್ಬನೇ ದೇವರ ಮಕ್ಕಳು ಎಂಬ ಮಾನವೀಯ ಐಕ್ಯವನ್ನು ಬೋಧಿಸಿದರು. ಅವರು ಬದುಕಿದ್ದೇ ಮೂವತ್ತೊಂಭತ್ತು ವರ್ಷ. ಅದರಲ್ಲೂ ತಮ್ಮ ಜೀವಿತದ ಕೊನೆಯ ಹತ್ತು ವರ್ಷಗಳಲ್ಲಿ ಅವರು ಸಾಧಿಸಿದ ಕೆಲಸದ ಮಹತ್ತು, ಬೃಹತ್ತು ಇಂದಿಗೂ ಅದ್ಭುತವಾಗಿಯೇ ಉಳಿದಿದೆ. ಪೌರ್ವಾತ್ಯ–ಪಾಶ್ಚಾತ್ಯಗಳನ್ನೊಂದಾಗಿಸಿದ 'ವಿವೇಕಾನಂದ'ರು ಪುರಾತನ—ನೂತನಗಳನ್ನೊಂದಾಗಿಸಿದ 'ಕಾಲಾತೀತಾನಂದರೂ' ಹೌದು.

ಯಾವ ದೃಷ್ಟಿಯಿಂದ ನೋಡಿದರೂ ಸ್ವಾಮಿ ವಿವೇಕಾನಂದರು ವಿಶ್ವಮಾನವರು, ವಿಶ್ವಾಚಾರ್ಯರು, ವಿಶ್ವಬೋಧಕರು, ವಿಶ್ವಶಕ್ತಿ ಸಮಷ್ಟಿರೂಪರು. ಆದ್ದರಿಂದಲೇ ವಿಶ್ವವಂದ್ಯರು. ಎಲ್ಲಿ ಹೋದರೂ ಅವರ ಮುಖ್ಯೋದ್ದೇಶವು ಜನರ ಸುಪ್ತ ಆಧ್ಯಾತ್ಮಿಕ ಸಿರಿಯನ್ನು ಅವರ ಗಮನಕ್ಕೆ ತರುವುದೇ ಆಗಿತ್ತು.ಅವರ ಬೋಧನೆಯ ಸಾರವೇ ನಿನ್ನನ್ನು ನೀನು ಅರಿತುಕೋ ಎಂಬುದಾಗಿತ್ತು. ಭಾರತದಲ್ಲಿ ದಾರಿದ್ರ್ಯ ಅಸ್ಪೃಶ್ಯತೆಗಳ ಬಗ್ಗೆ ಮಾತನಾಡುವಾಗಲೇ ಆಗಲಿ, ಪಶ್ಚಿಮ ದೇಶಗಳಲ್ಲಿ ಧಾರ್ಮಿಕ ಸಹಿಷ್ಣುತೆಯನ್ನು ಬೋಧಿಸುವಾಗಲೇ ಆಗಲಿ ಅವರ ಮುಖ್ಯೋದ್ದೇಶ ಪ್ರತಿಯೊಬ್ಬ ಮಾನವನಿಗೂ ಆತ್ಮಜ್ಞಾನವನ್ನು ಕೊಡುವುದೇ ಆಗಿತ್ತು.

ಇಂದು ಧರ್ಮವೆಂದರೆ ಏನೋ ಅಲ್ಪತೆ, ಮೂರ್ಖತನ ಎಂಬ ಅಭಿಪ್ರಾಯ ವಿದ್ಯಾವಂತರಲ್ಲಿರುವುದು. ಆದರೆ ವಿವೇಕಾನಂದರು ಬೋಧಿಸಿದ 'ಧರ್ಮ'ದಲ್ಲಿ ಯಾವ ವಿಧವಾದ ಕುಬ್ಜತೆಯಾಗಲಿ ಅಲ್ಪತೆಯಾಗಲಿ ಇಲ್ಲ ; ವಿಧಾಯಕವಲ್ಲದ್ದಾಗಲಿ ತ್ಯಾಜ್ಯವಾದದ್ದಾಗಲಿ ಇಲ್ಲ. ಅವರ ಧರ್ಮವೆಂದರೆ ಪಂಡಿತರುಗಳ ವಾದವಿವಾದಗಳಲ್ಲ, ಕಂತೆ ಪುರಾಣವಲ್ಲ, ವ್ಯರ್ಥ ಸಂಪ್ರದಾಯಗಳಲ್ಲ: ಪರಿಪೂರ್ಣ, ಶುದ್ಧಾಂಗವಾದ ಆಧ್ಯಾತ್ಮಿಕತೆ, ಅದೂ ಪ್ರಯತ್ನ ಪಟ್ಟು ಎಲ್ಲರೂ ಸಾಧಿಸಬಹುದಾದಂತಹ ಆಧ್ಯಾತ್ಮಿಕತೆಯೇ. ಭಾರತದ ಮಟ್ಟಿಗೆ ಈ ಅಧ್ಯಾತ್ಮದ ಆದರ್ಶ ಸನಾತನವಾದದ್ದು ; ವೇದ ಉಪನಿಷತ್ತು ಗೀತೆ ಬ್ರಹ್ಮಸೂತ್ರ ಭಾರತ ರಾಮಾಯಣ ಎಲ್ಲವೂ ಹೇಳುವುದು ಇವನ್ನೇ. ಧರ್ಮವೆಂದರೆ ಅನುಭಾವ, ಕೇವಲ ಆಧ್ಯಾತ್ಮಿಕ ಸಾಧನೆಯಿಂದಲೇ ಅದನ್ನು ಗಳಿಸಲು ಸಾಧ್ಯ—ಎಂದೇ ನಮ್ಮ ಹಿರಿಯರ, ಋಷಿಗಳ ಬೋಧನೆ. ಸ್ವಾಮಿ ವಿವೇಕಾನಂದರೂ 'Religion is being and becoming' ಎಂದರು. ಮತೀಯ ಕಲಹಗಳಾಗಲಿ ಜಾತಿ ಪದ್ಧತಿಗಳಾಗಲಿ ಮಠ–ಮಠಾಧಿಪತಿಗಳಾಗಲಿ ಧರ್ಮವಲ್ಲ, ಧರ್ಮವೆಂದರೆ ನಮ್ಮ ಬಹಿರಿಂದ್ರಿಯಗಳನ್ನು ನಿಗ್ರಹಿಸಿ, ಅಂತಶ್ಚಕ್ಷುವನ್ನು ತೆರೆದು, ಅಂತರಾತ್ಮನನ್ನು ಅರಿಯುವುದಕ್ಕಾಗಿ ನಾವು ನಮ್ಮೊಳಗೇ ನಡೆಸಬೇಕಾದ ನಿರಂತರ ತಪಸ್ಸು ಎಂದರು. 'Religion is the manifestation of the divinity already in man' ಎಂದರು. ಮಾನವನು ಒಳಹೊರಗಿನ ಸರ್ವವಿಧವಾದ ಉಪಾಧಿಗಳಿಂದಲೂ ಮುಕ್ತನಾಗಿ ಸಮಸ್ತ ಬಂಧನಗಳನ್ನೂ ಹರಿದೊಗೆದು ಸರ್ವತಂತ್ರಸ್ವತಂತ್ರನಾಗಿ ಆನಂದಮಯನಾಗುವುದೇ ವಿವೇಕಾನಂದರ ಎಲ್ಲ ಉಪನ್ಯಾಸಗಳಲ್ಲೂ ಕಂಡುಬರುವ 'ಧರ್ಮ'.

ಇಡಿಯ ಮಾನವಕುಲಕ್ಕೇ ಈ ಪರಮಸತ್ಯವನ್ನು ಬೋಧಿಸಿದವರು ಸ್ವಾಮಿ ವಿವೇಕಾನಂದರು. 1893ರಲ್ಲಿ ನಡೆದ ಚಿಕಾಗೋ ಸರ್ವಧರ್ಮ ಸಮ್ಮೇಳನದ ಮಹಾಸಭೆಯನ್ನು ಮಂತ್ರಮುಗ್ಧವಾಗಿಸಿದ್ದು ಅವರ 'ಸೋದರ ಸೋದರಿಯರೇ' ಎಂಬ ಹೃದಯಾಂತರಾಳದಿಂದ ಹೊರಹೊಮ್ಮಿದ ಸಮ್ಮೋಹಕ ಸಂಬೋಧನೆಗಿಂತ ಹೆಚ್ಚಾಗಿ— ಮಾನವ ಪಾಪಿಯಲ್ಲ, ಅಮೃತ ಪುತ್ರ—ಎಂಬ ಈ ಹೊಸ ಮಾತು. ಹದಿನೆಂಟು ಶತಮಾನಗಳ ಕಾಲ ತಾವು ಪರಮ ಪಾಪಿಗಳೆಂದೇ ನಂಬಿಕೊಂಡು ಬಂದಿದ್ದ ಪಾಶ್ಚಾತ್ಯ ಕ್ರೈಸ್ತ ಜನಾಂಗಕ್ಕೆ ವಿವೇಕಾನಂದರು ಹೀಗೆಂದಾಗ ಏನನ್ನಿಸಿರಬಹುದು ?—'Allow me to call you, brothern, by that sweet name—heirs of immortal bliss Yes, the Hindu refuses to call you sinners. Ye are the children of God, the sharers of immortal bliss, holy and perfect beings. Ye divinities on earth—sinners ! It is a sin to call a man so : It is a standing libel on human nature.'

ಹೀಗೆ ಅಜ್ಞಾನಾಂಧಕಾರಗಳ ತಮೋನಿದ್ರೆಯಿಂದ ಮಾನವಚೇತನವನ್ನು ಜಾಗೃತಗೊಳಿಸಿ ಕುರಿಗಳು ತಾವೆಂದುಕೊಂಡಿದ್ದವರನ್ನು ಪುರುಷಸಿಂಹರನ್ನಾಗಿಸುವುದೇ ಭಾರತದಲ್ಲಿಯೂ ಇತರ ದೇಶಗಳಲ್ಲಿಯೂ ವಿವೇಕಾನಂದರು ಮಾಡಿದ ಮುಖ್ಯ ಕಾರ್ಯ. ಆದರೆ ಇದರ ಸಾಧನೆಗಾಗಿ ಪೂರ್ವ ಪಶ್ಚಿಮಗಳಲ್ಲಿ ಅವರು ಅನುಸರಿಸಿದ ವಿಧಾನ ಮಾತ್ರ ಬೇರೆ ಬೇರೆ. ಭಾರತದಲ್ಲಿ ಅಗತ್ಯವಾಗಿರುವುದು ಮುಖ್ಯವಾಗಿ ಸಾಮಾಜಿಕ ಜಾಗೃತಿ ಹಾಗೂ ರಾಷ್ಟ್ರಪ್ರಜ್ಞೆ ಎಂಬುದನ್ನು ಅವರು ಮನಗಂಡರು. ಪ್ರತಿಯೊಬ್ಬ ಭಾರತೀಯನಿಗೂ ಪೌರಪ್ರಜ್ಞೆಯೇ ಮೊದಲಾದ ನಾಗರಿಕ ಮೌಲ್ಯಗಳು, ಸಾಂಘಿಕ ಜೀವನದ ಉಪಯುಕ್ತತೆ, ನಿತ್ಯ ಜೀವನದಲ್ಲಿನ ಕಾರ್ಯಕುಶಲತೆ— ಇವುಗಳ ಅಗತ್ಯವನ್ನು ಮನಗಾಣಿಸಿದರು. ಅವರ 'ಅನುಷ್ಠಾನ ವೇದಾಂತ'ದ (Practical Vedanta) ಮುಖ್ಯೋದ್ದೇಶವೇ ಇಂತಹ ಧೀರ ಸ್ವತಂತ್ರ ಸ್ವಾವಲಂಬಿಗಳಾದ ನಾಗರಿಕರ ಸೃಷ್ಟಿ. ನಿಜವಾದ ಧರ್ಮಾನುಷ್ಠಾನವು ವೈಚಾರಿಕ ಬುದ್ಧಿಯ, ಸುಸಂಸ್ಕೃತಿಯ, ಮಾನವೀಯ ಪ್ರಜ್ಞೆಯ ತಳಹದಿಯ ಮೇಲೆ ಮಾತ್ರ ಸಾಧ್ಯ; ಇಂತಹ ನೈತಿಕ ಭೂಮಿಕೆಯಿಲ್ಲದಿದ್ದರೆ ಧರ್ಮ ಬರಿಯ 'ಖರ್ಮ'ವಾದೀತು, ಆಧ್ಯಾತ್ಮಿಕತೆ ಬರಿಯ 'ಕತೆ' ಯಾದೀತು ಎಂಬ ಎಚ್ಚರ ಅವರಿಗಿದ್ದಿತು. ಆದ್ದರಿಂದಲೇ ಭಾರತದಲ್ಲಿ ಧರ್ಮದ ಬಗ್ಗೆ ಹೇಳುವಾಗಲೆಲ್ಲ 'Man-making religion' ಎಂದು ಹೇಳಲು ಮರೆಯುತ್ತಿರಲಿಲ್ಲ. ಅಂತೆಯೇ ಭಾರತೀಯರಾದ ನಮಗೆ ಅಗತ್ಯವಾದುದು 'man-making education' — ಪುರುಷಸಿಂಹರನ್ನು ತಯಾರುಮಾಡುವ ವಿದ್ಯೆ— ಎನ್ನುತ್ತಿದ್ದರು.

ಶ್ರೀ ರಾಮಕೃಷ್ಣ ಪರಮಹಂಸರು ಮಹಾಸಮಾಧಿಯನ್ನು ಹೊಂದಿದ ಬಳಿಕ ಸ್ವಾಮಿ ವಿವೇಕಾನಂದರು ತಮ್ಮ ಜೀವನಕ್ಕೊಂದು ನಿರ್ದಿಷ್ಟವಾದ ರೂಪವನ್ನು ಕೊಡುವ ಪ್ರಯತ್ನದ ಅಂಗವಾಗಿ ಪರಿವ್ರಾಜಕರಾಗಿ ಭರತಖಂಡದ ಮೂಲೆಮೂಲೆಗಳನ್ನೂ ಸಂದರ್ಶಿಸಿದರು. ನಾಡಿನ ಸ್ಥಿತಿಯನ್ನು ಪ್ರತ್ಯಕ್ಷವಾಗಿ ಕಂಡ ಅವರಿಗೆ ಅತ್ಯಂತ ಆಘಾತವಾಯಿತು. 'ಅಯ್ಯೋ, ನಮ್ಮ ಜನರು ಒಂದು ಹೊತ್ತಿನ ಗಂಜಿಗೂ ಗತಿಯಿಲ್ಲದ ಬಡವರು. ಇತರ ದೇಶಗಳ ಸಾಧಾರಣ ಜನರಿಗೆ ಸಿಗುವ ಜೀವನಾವಶ್ಯಕತೆಗಳಲ್ಲಿ ಶೇಕಡ ಪಾಲಿನಷ್ಟೂ ಇವರಿಗೆ ದೊರೆಯದು. ಈ ಸ್ಥಿತಿಯಲ್ಲಿರುವ ನಮ್ಮ ಭಾರತೀಯರಿಗೆ ವಿದ್ಯೆ ಸಂಸ್ಕೃತಿ ನಾಗರಿಕತೆಗಳೆಲ್ಲಿ ದೊರಕಬೇಕು ? ಆಧ್ಯಾತ್ಮಿಕ ಸಾಕ್ಷಾತ್ಕಾರವಂತೂ ಅವರ ಕ್ಷಿತಿಜದಿಂದ ದೂರವೇ ಉಳಿಯಿತು' ಎಂದು ಮನಗಂಡು ನಿರ್ವಿಣ್ಣರಾದರು. ಅವರೆದೆ ಕರಗಿ ನೀರಾಯಿತು. 'ನಮ್ಮ ಭಾರತೀಯರು ಒಗ್ಗಟ್ಟಾಗಲಾರರಾದರೆ, ಪರಸ್ಪರ ಸಹಾಯ ಮಾಡಿಕೊಳ್ಳಲೊಲ್ಲರಾದರೆ, ಒಬ್ಬರು ಇನ್ನೊಬ್ಬರನ್ನು ಹುರಿದುಂಬಿಸಿ ಗೌರವಿಸಿ ಪ್ರೀತಿಸಿ ನಡೆಯಲಾರರಾದರೆ, ನಾವು ಅದೆಂತು ಉತ್ತಮರಾದೇವು? ನಮ್ಮ ನಾಡು ಅದೆಂತು ಒಂದು ರಾಷ್ಟ್ರವೆನಿಸೀತು? ಆದರೆ—ಬರಿಮೈಯ, ಬರಿ ಹೊಟ್ಟೆಯ, ನಿರಕ್ಷರಕುಕ್ಷಿ ನರಪ್ರೇತಗಳಿಗೆ ಯಾವ ಬಾಯಿಂದ ಇವನ್ನೆಲ್ಲ ಬೋಧಿಸಲಿ ? ಯಾವ ಬಾಯಿಂದ ಧರ್ಮವನ್ನು

ಬೋಧಿಸಲಿ ?' ಎಂದು ಚಿಂತಿಸಿದರು. ತಮ್ಮ ಜನರ ಅಸಹಾಯಕತೆ ಅವರನ್ನು ಪೂರ್ತಿಯಾಗಿ ಕರಗಿಸಿತು. 'As long as a hungry dog lives in this country, I do not want my liberation' ಎಂದು ನಿರ್ಧರಿಸಿದ ಅವರು ಭಾರತೀಯರಿಗಾಗಿ ಅನ್ನವನ್ನು ಭಿಕ್ಷೆಯೆತ್ತಲೆಂದೇ ಅಮೆರಿಕಾಕ್ಕೆ ತೆರಳಿದರು. (ಅಲ್ಲಿಗೆ ಹೋದ ಬಳಿಕ ಅವರು ಆರ್ಥಿಕ ಭಿಕ್ಷೆಯೆತ್ತುವುದನ್ನು ಬಿಟ್ಟುಕೊಟ್ಟು ಆತ್ಮಿಕ ದೀಕ್ಷೆ ಕೊಡುವ ಕೆಲಸ ವನ್ನಾರಂಭಿಸಿದರೆಂಬುದು ಪ್ರತ್ಯೇಕ.)

ದೃಢತೆ, ಸ್ಥೈರ್ಯ, ಸ್ವಾತಂತ್ರ್ಯ ಪರಸ್ಪರ ಸಹಾಯ, ಪರಸ್ಪರ ಗೌರವ, ಸಮಾನತೆ — ಇವೇ ಮಾನವತೆಯ ಮೌಲ್ಯಗಳು. ವ್ಯಕ್ತಿ ವ್ಯಕ್ತಿಯಲ್ಲೂ ಒಟ್ಟು ಸಮಾಜದಲ್ಲಿಯೂ ಪ್ರೌಢತೆ ಪ್ರಬುದ್ಧತೆಗಳನ್ನು ಬೆಳೆಸುವುದೇ man-making ಧರ್ಮದ ಹಾಗೂ man-making ವಿದ್ಯಾಭ್ಯಾಸದ ಗುರಿ. ಮಾನವೀಯತೆಯ ಹಿರಿಮೆಯನ್ನು ಹೀಗೆ ಜಗತ್ತಿಗೆ ಸಾರ್ವತ್ರಿಕವಾಗಿ ಸಾರಿದವರಲ್ಲಿ ಬಹುಶಃ ಸ್ವಾಮಿ ವಿವೇಕಾನಂದರೇ ಮೊದಲಿಗರು. ಇಂಥ ಮಾನವೀಯ ಧರ್ಮವನ್ನೇ ಅವರು 'ಅನುಷ್ಠಾನ ವೇದಾಂತ'ವೆಂದು ಕರೆದರು. ನಮ್ಮಲ್ಲಿ ಪುಸ್ತಕದ ವೇದಾಂತ ಬೇಕಾದಷ್ಟಿತ್ತು ; ಸಾಧುಸಂತರುಗಳ ವೈಯಕ್ತಿಕ ಜೀವನದಲ್ಲಿ ಅದರ ಜೀವಂತ ರೂಪವನ್ನೂ ನಾವು ಪ್ರತ್ಯಕ್ಷವಾಗಿ ನೋಡಿದ್ದೆವು ; ಆದರೆ ರಾಷ್ಟ್ರ ನಿರ್ಮಾಪಕವಾಗಬಲ್ಲ, ಸಾರ್ವತ್ರಿಕವಾಗಿ ಸಾರ್ವಜನಿಕವಾಗಿ ಸುಲಭ ವಾದ ಪ್ರಜ್ಞಾವಂತ ಸಮಾಜವನ್ನು ಕಟ್ಟುವ, ಕ್ಷುದ್ರಕುರಿಯನ್ನೂ ಕೆರಳಿದ ಕೇಸರಿಯನ್ನಾಗಿಸಬಲ್ಲ ಈ ಜೀವಂತ, ಜ್ವಲಂತ 'ಅನುಷ್ಠಾನ ವೇದಾಂತ'ವನ್ನು ನಮ್ಮ ಜನರು ಹಿಂದೆಂದೂ ಕಂಡಿರಲಿಲ್ಲ, ಕೇಳಿರಲಿಲ್ಲ. ನಮ್ಮ ಸನಾತನ ಹಿಂದೂ ಧರ್ಮದ ಈ ಮಾನವೀಯ ಸಂದೇಶವನ್ನು ಜಗತ್ತಿನ ಪ್ರತಿಯೊಬ್ಬನ ಕಿವಿಗೂ ಮುಟ್ಟಿ ಮೊಳಗುವಂತೆ ಸಾರಿದ್ದು ಸ್ವಾಮಿ ವಿವೇಕಾನಂದರು ಸಾಧಿಸಿದ ಮಹಾಕಾರ್ಯ. ಒಂದು ಉಪನ್ಯಾಸದಲ್ಲಿ ಹೇಳಿದರು — 'These conceptions of Vedanta must come out, They must remain not only in the caves and forests, but they must come to work at the bar and the bench, in the pulpit and in the cottage of the cobbler, with the fisherman fishing and with the students studying. The truths of Vedanta must call on every man, woman and child, wherever they may be. No previlege for anyone, equal chances for all ; let everyone be taught that the Divine is within, and everyone will work out his own salvation.'

ಭಾರತೀಯ ಸಂಸ್ಕೃತಿಯಲ್ಲಿನ ಮುಖ್ಯವಾದ ಎರಡು ಮೌಲ್ಯಗಳಾದ ತ್ಯಾಗ ಮತ್ತು ಸೇವೆಗಳ ಭದ್ರ ವಾದ ಅಡಿಪಾಯದ ಮೇಲೆ ವಿವೇಕಾನಂದರು ಶ್ರೀ ರಾಮಕೃಷ್ಣ ಮಹಾಸಂಘವನ್ನು ಸ್ಥಾಪಿಸಿದರು. ತ್ಯಾಗ ಸೇವೆಗಳೇ ನಮ್ಮ ರಾಷ್ಟ್ರೀಯ ಆದರ್ಶಗಳೆನ್ನುತ್ತಾರೆ ಸ್ವಾಮಿ ವಿವೇಕಾನಂದರು. 'Renunciation and service are the twin national ideals of India. Intensify her in those channels, and the rest will take care of itself.' ರಾಮಕೃಷ್ಣ ಮಠ-ಮಿಶನ್ನಿನ ಸ್ಥಾಪನೆಯಾದ ಮೇಲೆ ಸ್ವಾಮಿಗಳು ಹೆಚ್ಚು ಕಾಲ ಬದುಕಿರಲಿಲ್ಲ. ಜೀವನಸಂಧ್ಯೆಯಲ್ಲಿ ಅವರಿಗೆ ತಮ್ಮ ಮನಸ್ಸಿನ ಅಭೀಪ್ಸೆಗೆ ತಕ್ಕಂತೆ ಆದರ್ಶ ಸನ್ಯಾಸಿ ಶಿಷ್ಯರನ್ನು ತಯಾರು ಮಾಡಲು ಸಾಕಷ್ಟು ಸಮಯವಿರಲಿಲ್ಲ. ಆದರೂ ಅವರ ಓಜಸ್ಸಿನ ಸತ್ಯತೆಯ ಪ್ರತೀಕವೋ ಎಂಬಂತೆ ಇಂದಿಗೂ ತ್ಯಾಗ ಸೇವೆಗಳ ಅನುಷ್ಠಾನಕ್ಕಾಗಿಯೇ ತಮ್ಮ ಜೀವನವನ್ನು ಮುಡಿಪಾಗಿಟ್ಟಿರುವ ತರುಣ ಸನ್ಯಾಸಿಗಳಿಂದಲೇ ನಡೆಯುವ ಈ ಮಹಾಸಂಘವು ನಿರಂತರವಾಗಿ ಬೆಳೆಯುತ್ತಿದೆ ; ಸದ್ದುಗದ್ದಲವಿಲ್ಲದಂತೆ ತನ್ನ ಸೇವಾಕಾರ್ಯ ಧರ್ಮಾನುಷ್ಠಾನಗಳನ್ನು ಮುಂದುವರೆಸುತ್ತಿದೆ. ಇಂದು ಭಾರತದಲ್ಲಿ ರಾಮಕೃಷ್ಣ ಮಠ – ಮಿಶನ್ನು ಗಳ ತೊಂಭತ್ತು ಶಾಖೆಗಳು ಕಾರ್ಯನಿರತವಾಗಿವೆ. ಹಿಂದಿನ ಧಾರ್ಮಿಕಸಂಸ್ಥೆಗಳಂತೆ ಸಂಘವು ಭಾರತಕ್ಕೇ ಸೀಮಿತ ವಾಗಿಲ್ಲ; ವಿವೇಕಾನಂದರೇ ಹೇಳುವಂತೆ 'We cannot do without the world outside India ; it was

our foolishness that we thought we could. We have already paid the penalty. Let us do it no more.' ಇಂದು ಭಾರತದ ಹೊರಗಡೆ ವಿವಿಧ ದೇಶಗಳಲ್ಲಿ ಸಂಘದ ಮೂವತ್ತೆರಡು ಕೇಂದ್ರಗಳು ಧರ್ಮಮಾರ್ಗ ಪ್ರಚಾರದಲ್ಲಿ ತೊಡಗಿವೆ. ಭಾರತ ದೇಶದಿಂದ ಪ್ರಸಾರವಾಗಬೇಕಾದ ಸನಾತನ ಧರ್ಮದ ತತ್ತ್ವಗಳು ಭೂಮಂಡಲದ ಎಲ್ಲ ದೇಶಗಳೂ ಪರಸ್ಪರ ಮೈತ್ರಿಯಿಂದ ಶಾಂತಿಯುತ ಸಹಬಾಳ್ವೆ ನಡೆಸಲು ನೆರವಾಗುತ್ತವೆಂದು ಸ್ವಾಮಿ ವಿವೇಕಾನಂದರು ದೃಢವಾಗಿ ನಂಬಿದ್ದರು. ಅವರ ಅಭಿಪ್ರಾಯದಲ್ಲಿ ಹಿಂದೂಧರ್ಮವು ಒಂದು ಮಾನವೀಯ ತತ್ತ್ವವಾಗಿದ್ದಿತೇ ಹೊರತು ಯಾವುದೋ ಒಂದು ದೇಶದ, ಜನರ ಸ್ವತ್ತಾಗಿರಲಿಲ್ಲ. ವಿಶಾಲ ಮನೋಭಾವನೆಯುಳ್ಳ ಹಿಂದೂಧರ್ಮದ ಪ್ರಚಾರ ಅವರಿಗೆ ಹೆಮ್ಮೆಯ ವಿಷಯವಾಗಿದ್ದಿತು. ಪರದೇಶಗಳಲ್ಲಿ ಅವರು ಕಂಡ ಆಗಿನ ಸ್ಥಿತಿಯನ್ನು ಅವರ ಪತ್ರವೊಂದರ ಈ ಮಾತುಗಳಿಂದ ಊಹಿಸಬಹುದು—'Shall India die? Then from the world all spirituality will be extinct, all moral perfection will be extinct, all sweet-souled sympathy for religion will be extinct, all ideality will be extinct, and in its place will reign the duality of lust and luxury as the male and female dieties, with money as its priest, fraud, force and competition as its ceremonies and the human soul its sacrifice.' ಆದರೆ ಇಂದು ನಮ್ಮ ನಾಡಿನಲ್ಲೇ ಈ ಭವಿಷ್ಯವಾಣಿ ನಿಜವಾಗಿರುವಂತೆ ತೋರುತ್ತದೆ. ವಿವೇಕಾನಂದರು ಅಭಿಮಾನಪಟ್ಟುಕೊಂಡ ಭಾರತ ಇಂದು ಸತ್ತಿದೆಯೆ ?

ವಿಶ್ವಭ್ರಾತೃತ್ವದ ಹೆಸರಿನಲ್ಲಿ ಸನಾತನ ಭಾರತದ ಹಿರಿಮೆಯನ್ನು ಹೀಗಳೆಯುವುದೂ ವಿವೇಕಾನಂದರಿಗೆ ಸೇರುತ್ತಿರಲಿಲ್ಲ. ಭಾರತದ ಗತವೈಭವದ ಬಗ್ಗೆ ಅವರಷ್ಟು ಹೆಮ್ಮೆಪಟ್ಟುಕೊಂಡು ನಮ್ಮ ನಾಡಿನ ಕೀರ್ತಿಯನ್ನು ಹೋದಲ್ಲೆ, ಬಂದಲ್ಲಿ, ಮುಕ್ತಕಂಠದಿಂದ, ಸಿಂಹವಾಣಿಯಿಂದ ಪ್ರಚಾರಮಾಡಿದವರು ಬೇರೊಬ್ಬರಿಲ್ಲ. ಭಾರತದ ಭವ್ಯ ಭವಿಷ್ಯದ ಬಗ್ಗೆ ಅವರಷ್ಟು ಅಚಲವಿಶ್ವಾಸದಿಂದ ದಿವ್ಯದರ್ಶನವನ್ನು ಕಂಡು ಆನಂದದಲ್ಲಿ ಮೈಮರೆಯುತ್ತಿದ್ದವರು ಬೇರೊಬ್ಬರಿಲ್ಲ. ಅವರೂ ಸಹ ಶತಮಾನಗಳ ಆಂಗ್ಲಪದಾಘಾತದಿಂದ ತಮ್ಮ ವ್ಯಕ್ತಿತ್ವವನ್ನೇ ಕಳೆದುಕೊಂಡು ತಮೋನಿದ್ರೆಯಲ್ಲಿದ್ದ ಆಂದಿನ ಭಾರತೀಯರ ರಾಷ್ಟ್ರಾಭಿಮಾನರಾಹಿತ್ಯ ವಿವೇಕಾನಂದರನ್ನು ಬಹಳವಾಗಿ ನೋಯಿಸಿತು. ಅದ್ವೈತ ದರ್ಶನವನ್ನು, ವಿಶ್ವಭ್ರಾತೃತ್ವ ಮೈತ್ರಿಗಳನ್ನು, ಲೋಕದ ಮೂಲೆ ಮೂಲೆಗೂ ಕೊಂಡೊಯ್ದು ಸಾರಿ ವೇದಾಂತ ಕೇಸರಿಯೆನಿಸಿಕೊಂಡು ಹಿಂದಿರುಗಿದ್ದ ಸ್ವಾಮಿ ವಿವೇಕಾನಂದರು ಭಾರತೀಯರಿಗೆ ಬೋಧಿಸಿದ್ದು ಧರ್ಮವನ್ನಲ್ಲ—ಕೆಚ್ಚು, ಸ್ವಾಭಿಮಾನ, ಧೈರ್ಯ, ರಾಷ್ಟ್ರಾಭಿಮಾನ ಇವುಗಳನ್ನು. ಮೊದಲಬಾರಿ ವಿದೇಶಯಾತ್ರೆಯಿಂದ ಹಿಂದಿರುಗಿ ನಾಡಿಗೆ ಕಾಲಿಟ್ಟ ಅವರು ಕೊಲಂಬೋದಿಂದ ಆಲ್ಮೋರಾದ ವರೆಗೆ ನಾನಾ ನಗರಗಳಲ್ಲಿ ಮಾಡಿದ ಉಪನ್ಯಾಸಗಳಲ್ಲಿ ಕಂಡುಬರುವ ಕಲಿತನ, ಮಿಂಚಿನ ಹೊಳೆ, ಬೆಂಕಿಯ ಮಳೆ, ಸಿಂಹಗರ್ಜನೆ, ವಿದ್ಯುದ್ವೈಭವ, ಸಿಡಿಲಾಳ್ತನದಿಂದ ತುಂಬಿ ತುಳುಕುವ ಮಾತುಗಳು ವಿಶ್ವದ ಇತಿಹಾಸದಲ್ಲಿ ಯಾವ ಕಾಲಕ್ಕೂ ಯಾವ ಮಾತುಗಾರನ ಬಾಯಿಂದಲೂ ಈ ಹಿಂದೆ ಬಂದಿಲ್ಲ, ಮುಂದೂ ಬರುವ ಸಂಭವ ಇಲ್ಲವೆಂದೇ ತೋರುವುದು. 1897ರಲ್ಲಿ ಭಾರತೀಯರಿಗೆ ಇಂತೆಂದರು :

"For the next fifty years, this alone shall be our key-note-this, our great MOTHER INDIA. Let all other vain gods disappear for that time from our minds. This is the only God that is awake, all other gods are sleeping."

'ಭಾರತಮಾತೆಯು ಪಾವಿತ್ರ್ಯದ, ಔನ್ನತ್ಯದ, ಋಜುತ್ವದ ಖನಿ. ಮಂತ್ರದ್ರಷ್ಟಾರರಾದ ಮಹಾ ಋಷಿಗಳು ಇಂದಿಗೂ ಜೀವಿಸಿರುವ ನಾಡು. ಹಗಲುದೀವಟಿಗೆ ಹಿಡಿದು ಲೋಕದ ಮೂಲೆಮೂಲೆಗಳನ್ನು ಹುಡುಕಿದರೂ ಇಂಥ ಮಹರ್ಷಿಗಳು ದೊರಕಲಾರರು. ಬೇರೆಲ್ಲ ನಾಗರಿಕತೆ ಸಂಸ್ಕೃತಿಗಳು ಭಾರತಮಾತೆಯೇ ಬೆಳೆಸಿದ ಮಕ್ಕಳು. ಗ್ರೀಕ್ ರೋಮನ್ ಸಂಸ್ಕೃತಿಗಳ ಹುಟ್ಟಿಗೂ ಮೊದಲೇ ನಮ್ಮಲ್ಲಿ ಸತ್ಯಾನ್ವೇಷಣೆ ಉನ್ನತ

ಮಟ್ಟದಲ್ಲಿತ್ತು, ಜೀವನವವೌಲ್ಯಗಳು ರೂಢಿಸಲ್ಪಟ್ಟಿದ್ದವು. ಕಲೆ ಗಣಿತ ತತ್ತ್ವಬೋಧೆ ಎಲ್ಲವೂ ಇಲ್ಲಿದ್ದವು. ಒಂದು ಕಾಲದಲ್ಲಿ ಲೋಕಗುರುವಾಗಿದ್ದ ಭಾರತ ಇಂದೇಕೆ ಬಡವಾಗಿದೆ ? ಬೇರೆ ದೇಶಗಳೆಲ್ಲ ಬೆಳಕಿಗಾಗಿ ಹಿಂದೆಂದಿಗಿಂತಲೂ ಇಂದು ಭಾರತದತ್ತ ನೋಡುತ್ತಿವೆ—ಆದರೆ ನಮಗೇನಾಗಿದೆ ? ನಾವೇ ನಮ್ಮ ಅಸ್ತಿಯಾದ ಈ ಧರ್ಮವೆಂಬ ಬೆಳಕನ್ನು ಮರೆತಿದ್ದೇವೆ. ಸಮಾಜ ಸರ್ಕಾರ ರಾಜಕೀಯ ಶಾಸನ ಹಣ ಕೀರ್ತಿ ಎಲ್ಲ ನಮಗಿಂದು ಬೇಕು, ನಿಜವಾದ ಧರ್ಮವೊಂದು ಮಾತ್ರ ಬೇಡ. ಇದೆಂಥ ಹಾಸ್ಯಾಸ್ಪದ ಪರಿಸ್ಥಿತಿ ? ಧರ್ಮವೇ ನಮ್ಮ ಬೆನ್ನೆಲಬು, ಆಧ್ಯಾತ್ಮಿಕತೆಯೇ ನಮ್ಮ ಹೃದಯದಲ್ಲಿ ಪ್ರವಹಿಸುವ ರಕ್ತ. ಇವನ್ನುಳಿದು ನಾವೆಂತು ಬದುಕಿಯೇವು ? ನಮ್ಮಲ್ಲಿಂದು ಸ್ವಾರ್ಥದ ಕಚ್ಚಾಟ ಹೊಟ್ಟೆಯುರಿಯ ಬೊಗಳಾಟ ನಡೆದಿದೆ. ನಮಗೊಂದು ಉದ್ದೇಶವಿಲ್ಲ, ಮಾರ್ಗವಿಲ್ಲ, ಧೈರ್ಯವೂ ಇಲ್ಲ. ನಮ್ಮನ್ನು ಮೇಲೆತ್ತುವವರಾರು ? ನವಭಾರತದ ಚೇತನ ರೈತನ ಗುಡಿಸಲಿನಿಂದ ಬರಲಿ, ಮೊಗವೀರರ ಚಮ್ಮಾರರ ಹರಿಜನರ ರಂಗರೆಯುವವರ ಕಡಲೆ ಹುರಿಯುವವರ ಬಡ ಜೋಪಡಿಗಳೊಳಗಿಂದ ಹೊರಹೊಮ್ಮಲಿ ! ನೈತಿಕ ಅವನತಿಗಿನ್ನೂ ಅಷ್ಟಾಗಿ ಇಳಿಯದ ನಮ್ಮ ಶೂದ್ರಶಕ್ತಿ ದೇಶವನ್ನಾಳಲಿ! ಶತಶತಮಾನಗಳಿಂದಲೂ ಪುರೋಹಿತಶಾಹಿಯಿಂದ ತುಳಿಯಲ್ಪಟ್ಟ ಇವರಿಂದಲೇ ಭವಿಷ್ಯಭಾರತದ ಉದ್ಧಾರ ! ಮೇಲ್ಜಾತಿಯವರೆಲ್ಲ ಮೂಳೆಯಿಲ್ಲದವರಾದರೆ ಮಾಡುವುದೇನು ? ಕಣಕ್ಕಿಳಿದು ಹೋರದೆ ಬೆಚ್ಚಗೆ ಮನೆಯಲ್ಲಿದ್ದೇ ಮಂತ್ರೋಪವೇಶ ಮಾಡುವ ಇವರಿಂದೇನು ಪ್ರಯೋಜನವಾದೀತು ? ಇವರ ಮಾತಿಗೆ ಇನ್ನೆಷ್ಟು ದಿನ ಬೆಲೆ ಬಂದೀತು ? ಉತ್ತರಕುಮಾರನ ಪೌರುಷವಳಿದು ಬೃಹನ್ನಳೆಯೇ ಗಾಂಡೀವ ಧರಿಸುವ ಕಾಲ ಬಂದಿದೆ– ಸಾರಥ್ಯವನ್ನಾದರೂ ಮಾಡಿ ಈ ಉತ್ತರಕುಮಾರರು ಮರ್ಯಾದೆ ಉಳಿಸಿಕೊಳ್ಳಲಿ ! ಧರ್ಮವೆಂಬುದು ಮಡಿ ಪಾತ್ರೆಗಳಲ್ಲಿ,ಯಜ್ಞಕುಂಡಗಳಲ್ಲಿ,ಮಣಕುಹಣತೆಗಳಲ್ಲಿಲ್ಲ; ಮಾನವೀಯತೆಯಲ್ಲಿ ಅಡಗಿದೆ! ಅದರ ಪುನರುತ್ಥಾನವೇ ಇಂದು ದೇಶದಲ್ಲಾಗಬೇಕಾದ ಮಹಾಕಾರ್ಯ. ಉದ್ಯಮಶೀಲತೆ, ಕೆಚ್ಚು, ಚೈತನ್ಯ, ಮುಂದಾಳ್ತನ ಯಾವುದೂ ಇಲ್ಲದೇ ತಮ್ಮ ಸ್ವಾರ್ಥಕ್ಕಾಗಿ ಮಾತ್ರ ತಾವು ಬದುಕಿ ಎಣೆಯಿಲ್ಲದ ಒಣಕು ಹೆಮ್ಮೆಪಟ್ಟುಕೊಳ್ಳುವ ಪುರೋಹಿತ ವರ್ಗದವರನ್ನು ಅವರ ಪಾಡಿಗೆ ಬಿಟ್ಟು ಉಳಿದವರು ದೇಶ ಕಟ್ಟುವ ಕೆಲಸಕ್ಕಾಗಿ ಎಡರುತೊಡರುಗಳನ್ನು ಲೆಕ್ಕಿಸದೆ ಎದ್ದು ನಿಲ್ಲಬೇಕಾಗಿದೆ ಇಂದು !' ಕಳೆದ ನೂರಾರು ವರ್ಷಗಳಲ್ಲಿ ಭಾರತ ಭೂಮಿಯ ಮೇಲೆ ಸಮಾಜ ಸುಧಾರಕರು ಲೆಕ್ಕವಿಲ್ಲದಷ್ಟು ಮಂದಿ ಆಗಿಹೋಗಿದ್ದಾರೆ. ಕೆಲಸದ ರಹಸ್ಯವನ್ನೇ ಅರಿಯದ ಅವರಿಂದ ಏನನ್ನೂ ಸಾಧಿಸಲಾಗಲಿಲ್ಲ. ಅವಸರದಲ್ಲಿ ಅವರು ತಪ್ಪನ್ನೆಲ್ಲಾ ಧರ್ಮದ ಮೇಲೆ ಹಾಕಿದರು ; ನೊಣವನ್ನು ಕೊಲ್ಲಲು ಹೋಗಿ ರಾಜನನ್ನೇ ಅಪ್ಪಳಿಸಿದ ಕಪಿಯಂತೆ ಗದಾಪ್ರಹಾರ ಮಾಡಿದರು. ಆದರೆ ಅದೃಷ್ಟವಶಾತ್ ನಮ್ಮ ನೆಲ ಕಲ್ಲಿನದಾದ್ದರಿಂದ ತಮ್ಮ ಮೂಗನ್ನೇ ಜಜ್ಜಿಕೊಂಡರು. ವಿನಾಶಮಾರ್ಗ ಹಿಡಿಯಬಯಸಿದ ಅವರೇ ನಾಶವಾದರು. ಆದರೆ ಅವರ ಅನುಭವದಿಂದ ನಾವು ಪಾಠ ಕಲಿಯಬೇಕು. ನಮ್ಮ ಶಕ್ತಿಯ ಮೂಲವಾದ ಮಾನವೀಯತೆಯ ಧರ್ಮವನ್ನು ಬಿಟ್ಟು ನಡೆದೆವಾದರೆ ನಮ್ಮ ನಾಶ ಖಂಡಿತ. ನಾಡನ್ನು ಕಟ್ಟುವ ಕಠಿಣವಾದ ಕೆಲಸ ನಮ್ಮದು. ಆಲಸ್ಯಕ್ಕೆ ಇದು ಕಾಲವಲ್ಲ. ಭಾರತದ ಭವ್ಯಭವಿಷ್ಯತ್ತಿನ ಕನಸು ನಮ್ಮ ಕಣ್ಣಮುಂದಿದೆ. ಬಾಯ್ಗಳು ಮುಚ್ಚಲಿ, ಹೃನ್ಮಂದಿರಗಳು ತೆರೆಯಲಿ. ವೇದಾಂತದ ಬೆಳಕು ಒಳಗೆ ನುಗ್ಗಲಿ. ನಮ್ಮ ನರಗಳಿಗೆ ಉಕ್ಕಿನ ಸಾಣೆಯಾಗಲಿ. ನಮ್ಮ ಖಂಡಗಳು ಕಬ್ಬಿಣವಾಗಲಿ. ಅತ್ತಿದ್ದು ಸಾಕಿನ್ನು—ಮೇಲೆದ್ದು ಮನುಷ್ಯರಾಗೋಣ ! ನಮ್ಮ ಯುವಕ ಯುವತಿಯರಿಗೆ ನಾವು ಯಾವ ರೀತಿಯ ತರಬೇತಿಯನ್ನೀಯುವೆವೊ ಅಂತೆ ನಮ್ಮ ದೇಶದ ಭವಿಷ್ಯ ! ನಮ್ಮ ಹೊಸ ರಕ್ತವು ಧೀರ, ಶುದ್ಧ ಹಾಗೂ ಪ್ರಾಮಾಣಿಕವಾಗಿರಲೇಬೇಕು. ಬಡವರಾಗಿರುವುದು ನಮ್ಮ ಪುಣ್ಯ— ಏಕೆಂದರೆ ನಾವು ದುಡಿಯಲೇಬೇಕು. ಸತತೋದ್ಯಮವಿಲ್ಲದೆ ಯಾವ ಜನಾಂಗವೂ ಉದ್ಧಾರವಾಗಿಲ್ಲ. ಮನಸ್ಸು ಇತರರಿಗೆ ಉಪಕಾರಮಾಡುವುದರಿಂದ ಶಾಂತವೂ ಶುದ್ಧವೂ ಶಕ್ತಿಯುತವೂ ಆಗುತ್ತದೆ. ಸೇವೆಯಿಂದಲೇ ಆತ್ಮವಿಕಾಸ ; ಮೇಲೆದ್ದು ನಾಡಿನ ಉದ್ಧಾರಕಾರ್ಯಕ್ಕೆ ಹೆಗಲು ಕೊಡೋಣ. ಕೆಲವೇ ವರ್ಷಗಳ ನಮ್ಮೀ ಬಾಳಿ

ನಲ್ಲಿ—ನಾವು ಈ ಪ್ರಪಂಚಕ್ಕೆ ಬಂದುದರ ಕುರುಹಾಗಿ ಏನನ್ನಾದರೂ ಬಿಟ್ಟುಹೋಗೋಣ. ಇಲ್ಲವಾದರೆ ದಾರಿ ಗಿಡ ಕಲ್ಲುಗಳಿಗಿಂತ ನಾವೇನು ಹೆಚ್ಚು ? ಜೀವನವೊಂದು ನಂದನವನವೆನ್ನುವ ಪ್ರೇಮಿಯಲ್ಲ ನಮಗಿಂದು ಅಗತ್ಯವಾಗಿರುವುದು—ಜೀವನವೊಂದು ರಣರಂಗವೆಂಬಂತೆ ತ್ಯಾಗದ ಗುರಾಣಿಯನ್ನೊಡ್ಡಿ ಅರಿವಿನ ಖಡ್ಗವನ್ನು ಹಿಡಿದು ಹೋರುವ ಮಹಾ ದಣ್ಣಾಯಕರುಗಳು ! ಹಣ ಯಶಸ್ಸುಗಳಿಗೆ ಮರುಳಾಗಿ ಏನನ್ನೂ ಮಾಡದೆ ಇದ್ದಲ್ಲಿದ್ದು ಬಿದ್ದ ಗೋಡೆ ಹಾಕುತ್ತ ಕ್ರಮೇಣ ತುಕ್ಕು ಹಿಡಿದು ನಶಿಸುವುದಕ್ಕಿಂತ ಕಚ್ಚೆಕಟ್ಟಿ ಮೇಲೆದ್ದು ಸೆಡ್ಡುಹೊಡೆದು ಬಾಳ ಸಮರಾಹ್ವಾನವನ್ನು ಸ್ವೀಕರಿಸಿ ಯುದ್ಧ ಮಾಡುತ್ತಲೇ ಮಡಿದು ಸಾಯುವುದೊಳಿತು ! ಜ್ಞಾನ ಭಕ್ತಿ ಮುಕ್ತಿಗಳೆಲ್ಲ ಅಂತಿರಲಿ—ನಮ್ಮ ಮುಂದಿದೆ ಹಿಂದುಳಿದೊಂದು ದೇಶವನ್ನು ಮುನ್ನಡೆಸುವ ಮಹಾಕಾರ್ಯ ! ನಮ್ಮ ಸ್ತ್ರೀಯರ ಆದರ್ಶ ಸೀತಾ ಸಾವಿತ್ರಿ ದಮಯಂತಿಯರೆಂಬುದು ನೆನಪಿರಲಿ ! ನಮ್ಮ ಅಧಿದೈವ ಸರ್ವಸಂಗ ಪರಿತ್ಯಾಗಿಗಳೊಡೆಯನಾದ ಈಶ್ವರನೆಂಬುದು ಮರೆಯದಿರಲಿ ! ನಮ್ಮ ಅಲ್ಪೈಶ್ವರ್ಯವು ನಮ್ಮ ಸ್ವಾರ್ಥಕ್ಕಾಗಿಯಲ್ಲ. ನಾವೆಲ್ಲ ಋಷಿಸಂತಾನ. ನಮ್ಮ ಬಾಳೇ ಒಂದು ಮಹಾಯಜ್ಞವಾಗಲಿ.

ಇಂದು ರಾಷ್ಟ್ರಾಭಿಮಾನವು ರಾಜಕೀಯ ಎನಿಸಿಕೊಂಡಿದೆ. ಆದರೆ ಮೇಲಿನ ಚಿಂತನಗಳಿಂದ ರಾಷ್ಟ್ರಾಭಿಮಾನವು ಸ್ವಾಮಿ ವಿವೇಕಾನಂದರಿಗೆ ಧರ್ಮದ ಅಂಗವೇ ಆಗಿತ್ತೆಂದು, ಜೀವನದ ಅವಿಭಾಜ್ಯ ಭಾವನೆಯಾಗಿತ್ತೆಂದು ಗೊತ್ತಾಗುತ್ತದೆ. ಮನಸ್ಸು ಮಾಡಿದರೆ ತಮ್ಮ ಜೀವಿತ ಕಾಲದಲ್ಲಿಯೇ ದೇಶಕ್ಕೆ ರಾಜಕೀಯ ಸ್ವಾತಂತ್ರ್ಯವನ್ನು ಗೆದ್ದುಕೊಡುವುದು ಅವರಿಗೆ ಕಷ್ಟವಾಗಿರಲಿಲ್ಲ. ಆದರೆ—ದೇಶದ ಜನರು ತಮ್ಮ ತಮೋನಿದ್ರೆಯಿಂದೇಳುವವರೆಗೆ, ಹೊತ್ತುಹೊತ್ತಿನ ಗಂಜಿ ಅವರಿಗೆ ದೊರಕುವವರೆಗೆ, ಅವರು ತಾವು ಒಂದು ಜನಾಂಗವೆಂದು ಅರಿತುಕೊಳ್ಳುವಷ್ಟು ವಿದ್ಯಾವಂತರಾಗುವವರೆಗೆ, ನಮಗೆ ರಾಜಕೀಯ ಸ್ವಾತಂತ್ರ್ಯ ಅನಗತ್ಯ ಹಾಗೂ ಉಪಯೋಗವಿಲ್ಲದ್ದು ಎಂದೇ ಅವರ ಅಭಿಪ್ರಾಯವಾಗಿತ್ತು. ರಾಜಕಾರಣದಷ್ಟು ಹಾನಿಕರವಾದದ್ದು ಪ್ರಚಲಿತ ಪರಿಸ್ಥಿತಿಯಲ್ಲಿ ಬೇರೊಂದಿಲ್ಲ ಎಂದು ಅವರು ಸಾರಿದರು. ರಾಜಕಾರಣದಿಂದ ದೂರವಿರಿರೆಂದು ತಮ್ಮ ಶಿಷ್ಯರಿಗೆಲ್ಲಾ ಒತ್ತಿಒತ್ತಿ ಹೇಳಿದರು.

ಇತರರಿಗೆ ಪ್ರೋತ್ಸಾಹ ನೀಡಿ ಅವರಿಗೆ ಶಕ್ತಿ ತುಂಬಿ ಹುರಿದುಂಬಿಸುವುದರಲ್ಲಿ ಸ್ವಾಮಿ ವಿವೇಕಾನಂದರು ಅಗ್ರಗಣ್ಯರು. ಅವರ ಮಾತುಗಳಲ್ಲಿ ಅಡಗಿರುವ ಚೇತನ ಎಂದಿಗೂ ಅಳಿಯದು. ಅವರ ತೇಜಃಪೂರ್ಣ ಮುಖಾರವಿಂದದಿಂದ ಸಿಡಿಲಿನ ಪುಡಿಕೆಗಳಂತೆ, ಶಕ್ತಿಯ ಬಾಂಬುಗಳಂತೆ ಓತಪ್ರೋತವಾಗಿ ಹರಿದ ವಾಗ್ಝರಿಯ ಹುರಿ ಇನ್ನೂ ಸಡಿಲವಾಗಿಲ್ಲ. ಇಂದಿಗೂ ಓದಿದವರೆದೆಯನ್ನು ಮಿಡಿಸಬಲ್ಲ ಶಕ್ತಿ ಅವರ ಮಾತುಗಳಿಗಿದೆ. ವಿವೇಕಾನಂದರು ಗರ್ಜಿಸಿದರೆಂದರೆ ಬಡಪಾಯಿಯು ಸಿಡಿಲಾಳಾಗುವನು. ಆದ್ದರಿಂದಲೇ ಅವರು ತಮ್ಮಂತೆ ಇಡೀ ಜಗತ್ತನ್ನೇ ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ದುಡಿವ ಉತ್ಸಾಹೀ ತರುಣ ಶಿಷ್ಯರ ತಂಡವನ್ನೇ ನಿರ್ಮಿಸಿದರು. ಅವರ ವಾಣಿ ನಮ್ಮೆದೆಗೂ ಚೇತನವನ್ನು ತುಂಬಿ ನಮ್ಮ ಜೀವನವನ್ನೂ ಬೆಳಗಲಿ ; ನಮ್ಮನ್ನೂ ಪುರುಷಸಿಂಹರನ್ನಾಗಿ ಪರಿವರ್ತಿಸಲಿ ; ನಾವು ಧೀರರಾಗಿ ಬದುಕುವಂತೆ ಮಾಡಲಿ.

ಟಿ.ವಿ. ರಾಘವ

ರಮಣ ಮಹರ್ಷಿ

ಲೋಕೋದ್ಧಾರಕ್ಕಾಗಿ ಭಗವಂತನು ಜೀವನ್ಮುಕ್ತರಾದ ವ್ಯಕ್ತಿಗಳನ್ನು ಆರಿಸಿ, ಆಗಾಗ ಇಹಲೋಕಕ್ಕೆ ಕಳುಹಿಸುತ್ತಾನೆ. ಅವರಿಗೆ ಈ ಇಹಲೋಕ ಅಪರಿಚಿತವಾದುದೇನೂ ಅಲ್ಲ. ಒಮ್ಮೆ ಇಹದಲ್ಲಿದ್ದು ತಮ್ಮ ಆಧ್ಯಾತ್ಮ ಸಾಧನೆಯಿಂದ ಆತ್ಮೋನ್ನತಿಯನ್ನು ಪಡೆದು ಭಗವಂತನ ಸಾನ್ನಿಧ್ಯವನ್ನು ಸೇರಿದವರು. ಆದ್ದರಿಂದಲೇ ಅವರು ಇಹದಲ್ಲಿ ಅವತರಿಸಿದಾಗ "ಸಾಧನಾ ಮಾರ್ಗವೆಂದರೇನು ? ಸಿದ್ಧಿಯನ್ನು ಹೇಗೆ ಪಡೆಯಬೇಕು ?" ಎಂಬ ಕ್ಲಿಷ್ಟ ಸಮಸ್ಯೆಗಳಿಗೆ ಸದುತ್ತರವನ್ನು ನೀಡಬಲ್ಲರಷ್ಟೇ ಅಲ್ಲ, ಸ್ವತಃ ಮಾಡಿ ತೋರಿಸಬಲ್ಲರು.

ನಾವೀಗ ಕಲಿಯುಗದ ಪ್ರಥಮ ಪಾದದಲ್ಲಿದ್ದೇವೆ. ಇದು ಆರಂಭವಾಗಿ ಸುಮಾರು ಐದು ಸಹಸ್ರ ವರ್ಷಗಳಾಗಿವೆ. ಕಲ್ಕಿಯು ಅವತರಿಸಿ ಕಲಿಯುಗ ಅಂತ್ಯವಾಗಬೇಕಾದರೆ ಇನ್ನೂ ಶತಶತಮಾನಗಳ ಕಾಲಬೇಕು. ಈಗಿನ ಪ್ರಥಮ ಪಾದ ಮುಗಿದು ಮುಂದಿನ ಮೂರು ಪಾದಗಳು ಸವೆಯಬೇಕು. ಅದು ನಡೆಯುವುದು ಎಂದೋ. ಆದರೆ ಮಾನವನು ಅವನತಿಗೆ ಇಳಿದ ಹಾಗೆಲ್ಲಾ ಅವನ ಉದ್ಧಾರಕ್ಕಾಗಿ ಭಗವಂತನ ಅವತಾರ ಅವಶ್ಯವಾಗುತ್ತದೆ. ಧರ್ಮಕ್ಕೆ ಗ್ಲಾನಿ ಬಂದಾಗ ಶಿಷ್ಟ ರಕ್ಷಣೆ, ದುಷ್ಟ ಶಿಕ್ಷಣಕ್ಕಾಗಿ ತಾನು ಅವತರಿಸುವುದಾಗಿ ಭಗವಂತ ಹೇಳಿಕೊಂಡಿದ್ದಾನೆ. ಧರ್ಮಗ್ಲಾನಿಯ ಗಾತ್ರಕ್ಕೆ ತಕ್ಕಂತೆ ಅವತಾರವೂ ತರತಮ ಭೇದಗಳನ್ನು ಹೊಂದಿರುವುದು. ಉನ್ನತ ಹಿಮಾಲಯದಲ್ಲಿ ಅಲ್ಲಲ್ಲಿಯೇ ಶಿಖರ ಕಂದರಗಳಿರುವಂತೆ ಅಪಾರವಾದ ಕಲಿಯುಗದ ಕಾಲರಾಶಿಯಲ್ಲಿ ಆಗಾಗ ಮಾನವನ ಅಧೋಗತಿ, ಧರ್ಮಸ್ಥಾಪನೆಗಳ ಕಾರ್ಯ ನಡೆದುಕೊಂಡು ಹೋಗುತ್ತದೆ. ಹಾಗೆ ಧರ್ಮಸ್ಥಾಪನೆಗೆಂದು ಅವತರಿಸಿದ ಮಹಾಪುರುಷರಲ್ಲಿ ಈ ಶತಮಾನದ ಶ್ರೀ ರಮಣ ಮಹರ್ಷಿಗಳೂ ಒಬ್ಬರು.

ತಮಿಳು ನಾಡಿನ ಮಧುರೆಯ ಬಳಿ ತಿರುಚ್ಚುಳಿ ಎಂಬ ಒಂದು ಪುಟ್ಟ ಗ್ರಾಮವಿದೆ. ತಿರುಚ್ಚುಳಿ ಎಂದರೆ 'ಓಂಕಾರ' ಎಂದರ್ಥ. ಆ ಊರಿನಲ್ಲಿ ಸುಪ್ರಸಿದ್ಧ ಶಿವಶರಣರಾದ ಸುಂದರಮೂರ್ತಿ ಮಾಣಿಕ್ಯ ವಾಚಕರು ಸ್ಥಾಪಿಸಿದ ಭೂತನಾಥೇಶ್ವರನ ಸುಂದರ ದೇವಾಲಯವಿದೆ. ಅದು ಒಂದು ಪವಿತ್ರ ಕ್ಷೇತ್ರ. ಅದಕ್ಕೆ ಕೌಂಡಿನ್ಯ ಕ್ಷೇತ್ರವೆಂದೂ ಹೆಸರು. ಅಲ್ಲಿ ವಕೀಲ ವೃತ್ತಿಯಿಂದ ಉದರಂಭರಣ ಮಾಡುತ್ತಿದ್ದ ಸುಂದರಂ ಐಯ್ಯರ್ ಎಂಬ ಒಬ್ಬ ಸಾತ್ವಿಕ ಬ್ರಾಹ್ಮಣನಿದ್ದ. ಆತನ ಮಡದಿ ಅಳಘಮ್ಮಾಳ್. ಈ ದಂಪತಿಗಳ ಪುಣ್ಯಗರ್ಭದಿಂದ ವೆಂಕಟರಮಣನೆಂಬ ಒಬ್ಬ ಮಗ ಹುಟ್ಟಿದ. ಈ ಮಗ ಏಳುವರ್ಷದ ಬಾಲಕನಾಗಿದ್ದಾಗ ಪಿತೃವಿಯೋಗವನ್ನು ಅನುಭವಿಸಬೇಕಾಯಿತು. ಆತನ ಚಿಕ್ಕಪ್ಪನೊಬ್ಬನು ವೆಂಕಟರಮಣನನ್ನು ಅತ್ಯಂತ ಮಮತೆಯಿಂದ ಪೋಷಿಸಿ ಬೆಳೆಸಿದನು.

ವೆಂಕಟರಮಣನು ತುಂಬ ನಿಶಿತಮತಿ. ಆದರೆ ಆದೇನೊ, ಅವನಿಗೆ ಲೌಕಿಕ ವಿದ್ಯೆಯಲ್ಲಿ ಆಸಕ್ತಿಯೇ ಇಲ್ಲ. ಆಟ ಪಾಟಗಳಲ್ಲಿ ತುಂಬ ಚೂಟಿಯಾಗಿದ್ದ ಹುಡುಗ ಶಾಲೆಯ ಓದಿನಲ್ಲಿ ಶುದ್ಧ ಸೋಮಾರಿ. ಶೈವಧರ್ಮದ ೬೩ ಪುರಾತನರಲ್ಲಿ ಆತನಿಗೆ ಅಪಾರವಾದ ಆಸಕ್ತಿ. ಆ ನಂತರ ಗ್ರಂಥಗಳನ್ನೆಲ್ಲಾ ಭಕ್ತಿಯಿಂದ ಅಧ್ಯಯನ ಮಾಡು

ತ್ತಿದ್ದ; ಮೇಲಿಂದ ಮೇಲೆ ಮಧುರೆಯ ಮೀನಾಕ್ಷಿ ದೇವಾಲಯಕ್ಕೆ ಹೋಗುತ್ತಿದ್ದ; ಸಮಯ ಸಿಕ್ಕಿದಾಗಲೆಲ್ಲಾ ಕಣ್ಣು ಮುಚ್ಚಿ ಧ್ಯಾನಾಸಕ್ತನಾಗುತ್ತಿದ್ದ. ಆದರೆ ಶಾಲೆಯ ಪಾಠಗಳೆಂದರೆ ಮಾತ್ರ ತಲೆನೋವು.

ನಿಶಿತಮತಿಯಾದ ಬಾಲಕ ಯಾವ ತರಗತಿಯಲ್ಲಿಯೂ ನಿಲ್ಲಲಿಲ್ಲ, ಹೇಗೋ ಜೀವನಾಂಶವನ್ನು ಗಿಟ್ಟಿಸಿಕೊಂಡು ಹದಿನಾರನೆಯ ವಯಸ್ಸಿಗೆ ಮೆಟ್ರಿಕ್ಯುಲೇಶನ್ ತರಗತಿಗೆ ಬಂದ.

ಹದಿನಾರರ ಹರೆಯದ ವೆಂಕಟರಮಣನು ತನ್ನ ಕೊಠಡಿಯಲ್ಲಿ ಕುಳಿತು ಚಿಂತಾಮಗ್ನನಾಗಿರುತ್ತಿದ್ದ. ಅವನಿಗೊಂದು ದೊಡ್ಡ ಸಮಸ್ಯೆ "ಸಾವು ಎಂದರೆ ಏನು? ಯಾವುದು ಸಾಯುತ್ತದೆ, ಹೇಗೆ ಸಾಯುತ್ತದೆ, ಏಕೆ ಸಾಯುತ್ತದೆ, ಸತ್ತ ಮೇಲೇನಾಗುತ್ತದೆ? ಕಣ್ಣಿಗೆ ಕಾಣುವಂತೆ ಈ ದೇಹ ಸಾಯುತ್ತದೆ, ಬಂಧುಗಳು ಇದನ್ನು ಸ್ಮಶಾನಕ್ಕೆ ಕೊಂಡೊಯ್ದು ಸುಟ್ಟು ಬೂದಿಮಾಡುತ್ತಾರೆ. ಹೀಗೆ ನಾಶವಾಗುವ ದೇಹವೇ ನಾನೇ? ದೇಹದೊಡನೆ ನಾನೂ ಸಾಯುತ್ತೇನೆಯೇ? ನಾನು ಎಂದರೆ ಯಾರು? ಆ ನಾನು ಎಂಬುದು ದೇಹ ನಷ್ಟವಾದ ಮೇಲೆಯೂ ಉಳಿಯುತ್ತದೆಯೆ? ಉಳಿದರೆ ಅದರ ಸ್ವರೂಪವೇನು?" ಇದರ ಸತ್ತ್ವವನ್ನು ತಿಳಿಯುವುದಕ್ಕಾಗಿ ರಮಣನು ಸಾಯಬಯಸಿದನು ಸತ್ತ ದೇಹ ಉಸಿರಾಡುವುದಿಲ್ಲ, ಮಾತನಾಡುವುದಿಲ್ಲ, ಆಲೋಚಿಸುವುದಿಲ್ಲ—ಹೀಗೆಂದುಕೊಂಡು ತಾನೂ ಹಾಗಿರಲು ಯತ್ನಿಸಿದನು. ಆತನ ದೇಹ ಕಟ್ಟಿಗೆಯಂತೆ ಸೆಟೆದುಕೊಂಡಿತು, ಸತ್ವಶಕ್ತಿಯೆಲ್ಲಾ ಮನಸ್ಸಿನಲ್ಲಿ ಕೇಂದ್ರೀಕೃತವಾಯಿತು; ಇದ್ದಕ್ಕಿದ್ದಂತೆಯೇ ಅಲೌಕಿಕವಾದ ಶಕ್ತಿಯೊಂದು ಆತನ ಅಂತರಾಳದಿಂದ ಪ್ರಚೋದನೆಗೊಂಡು ಮನಸ್ಸನ್ನು ಜೀವವನ್ನೂ ಕಲಕಿದಂತಾಯಿತು. ಆತನ ಅನುಭವ ಮಾತಿಗೆ ಮೀರಿದುದಾಗಿತ್ತು. ನಿಗೂಢವಾದ ದಿವ್ಯ ತತ್ತ್ವ ಇದ್ದಕ್ಕಿದ್ದಂತೆ ಗೋಚರಿಸಿದಂತಾಯ್ತು. ಮನಸ್ಸು ಜೀವನಮೂಲದಲ್ಲಿ ವಿಲೀನವಾಗಿ ಸತ್ಯ ಗೋಚರವಾದಂತಾಯ್ತು. ಎಲ್ಲ ಭಾವನೆಗಳೂ ಆಸೆ ಆಕಾಂಕ್ಷೆಗಳೂ ದೂರವಾಗಿ ಹೃದಯ ಪರಮಶಾಂತಿಯನ್ನು ಅನುಭವಿಸಿತು. ನಿರಹಂಕಾರದ ಮೂರ್ತಿಯಾಗಿದ್ದ. ಆ ವ್ಯಕ್ತಿ ಆ ಕ್ಷಣದಲ್ಲಿಯೇ ಅದ್ವೈತ ದರ್ಶನವನ್ನು ಅನುಭವಿಸಿ ರಮಣ ಮಹರ್ಷಿಯಾಗಿದ್ದ.

ಇಲ್ಲಿಂದ ಮುಂದೆ ರಮಣನಿಗೆ ಪಾಠಪ್ರವಚನಗಳಲ್ಲಿದ್ದ ಅಲ್ಪಸ್ವಲ್ಪ ಆ ಇದ್ದ ಆಸಕ್ತಿಯೂ ಸತ್ತು ಹೋಯಿತು. ಆತನು ಔದಾಸೀನ್ಯದ ಮೂರ್ತಿಯಾದನು. ಅವನನ್ನು ಈ ಸ್ಥಿತಿಯಲ್ಲಿ ಕಂಡ ಹಿರಿಯರು ಅವನನ್ನು ಅರ್ಥಮಾಡಿಕೊಳ್ಳಲಾರದೆ ಸಿಡಿಮಿಡಿಗೊಂಡರು, ಅವನನ್ನು ಕಟುವಾಗಿ ಆಕ್ಷೇಪಿಸಿದರು. ರಮಣ ಪಡಿ ನುಡಿಯಲಿಲ್ಲ. ಅವನು ಅವರ ಮನ ನೋಯಿಸಲಾಗದೆ ಪುಸ್ತಕವನ್ನು ಕೈಲಿ ಹಿಡಿದನು. ಆದರೆ ಮನಸ್ಸು ಮಾತ್ರ ಅಲ್ಲಿನ ಪರಿಸರದಿಂದ ದೂರ, ಬಹುದೂರವಿದ್ದ ಅರುಣಾಚಲದತ್ತ ಹಾರಿ ಹೋಯಿತು.

'ತಿರುವಣ್ಣಾಮಲೈ'ಎಂಬ ಹೆಸರಿನ ಅರುಣಾಚಲವು ಒಂದು ಪ್ರಸಿದ್ಧವಾದ ಯಾತ್ರಾಸ್ಥಳ. ಇದು ಮಧುರೆಯಿಂದ ಸಾಕಷ್ಟು ದೂರವಾಗಿದೆ. ಅದರ ಕರೆ ರಮಣನ ಮನಸ್ಸನ್ನು ಸೂಜಿಗಲ್ಲಿನಂತೆ ಆಕರ್ಷಿಸಿತು. ಆತನು ಮನೆಯಿಂದ ಹೊರಟು ಅಲ್ಲಿಗೆ ಓಡಿ ಹೋಗಲು ನಿಶ್ಚಯಿಸಿದನು. ಹಿರಿಯರು ಶಾಲೆಯ ಶುಲ್ಕಕ್ಕಾಗಿ ಐದು ರೂಪಾಯಿಗಳನ್ನು ಕೊಟ್ಟಿದ್ದರು. ರಮಣನು ಅದರಲ್ಲಿ ಮೂರು ರೂಪಾಯಿಗಳನ್ನು ತೆಗೆದುಕೊಂಡು, ಉಳಿದೆರಡರೊಡನೆ ಒಂದು ಕಾಗದವನ್ನು ಮನೆಯವರಿಗೆ ಬರೆದಿಟ್ಟನು—"ನನ್ನನ್ನು ಹುಡುಕಬೇಡಿ, ನಾನು ತಂದೆಯನ್ನು ಹುಡುಕುತ್ತಾ ಹೊರಟಿದ್ದೇನೆ."

ಮಧುರೆಯಲ್ಲಿ ರೈಲುಹತ್ತಿ ಹೊರಟ ರಮಣ ದಿಂಡಿಗಲ್‌ವರೆಗೆ ಪ್ರಯಾಣ ಮಾಡಿದ. ಅಲ್ಲಿಗೆ ಅವನ ಹಣ ಮುಗಿಯಿತು. ತನ್ನ ಕಿವಿಯಲ್ಲಿದ್ದ ಕಡಕುಗಳನ್ನು ಮಾರಿ ಪ್ರಯಾಣ ಮುಂದುವರೆಸಿದ. ಹೊಟ್ಟೆಗೆ ಹಿಟ್ಟಿಲ್ಲ, ಕಣ್ಣಿಗೆ ನಿದ್ರೆಯಿಲ್ಲ, ಎರಡು ದಿನಗಳು ಎಡಬಿಡದ ಪ್ರಯಾಣ, ಕಡೆಗೆ ಅರುಣಾಚಲ ಬಂದಿತು. ಹುಡುಗ ರೈಲಿನಿಂದಿಳಿದು ಗುಡಿಯ ಬಳಿಗೆ ಓಡಿದ. ಅಲ್ಲಿ ಅರುಣಾಚಲೇಶ್ವರನ ಇದಿರಿಗೆ ನಿಂತು "ಅಪ್ಪಾ, ನಿನ್ನ ಅಪ್ಪಣೆಯಂತೆ ಬಂದಿದ್ದೇನೆ, ನನ್ನ ಮುಂದಿನ ಪಾಡು ನಿನ್ನದು" ಎಂದು ಕಣ್ಣೀರು ಕರೆಯುತ್ತಾ ಮೈಮರೆತು ನೆಲಕ್ಕೆ ಉರುಳಿದನು.

ಕೆಲಕಾಲದ ಮೇಲೆ ರಮಣನು ಎಚ್ಚೆತ್ತು ಗುಡಿಯಿಂದ ಹೊರಕ್ಕೆ ಬಂದನು. ಆಗ ಇದ್ದಕ್ಕಿದ್ದಂತೆ ಒಬ್ಬ ಕ್ಷೌರಿಕನು ಅವನ ಬಳಿಗೆ ಬಂದು ಹೇಳದೆ ಕೇಳದೆ ಅವನ ತಲೆಯನ್ನು ನುಣ್ಣಗೆ ಬೋಳಿಸಿದನು. ಅಷ್ಟರಲ್ಲಿ ಇದ್ದಕ್ಕಿದ್ದಂತೆ ಮಳೆ ಸುರಿಯಿತು. ಅಯಾಚಿತವಾಗಿ ರಮಣನಿಗೆ ಸ್ನಾನವಾಯಿತು. ಆತನು ಒಂದು ಕೌಪೀನವನ್ನು ಧರಿಸಿ ಏಕಾಂತವಾದ ಪಾಳು ಮಂಟಪವೊಂದರಲ್ಲಿ ಧ್ಯಾನಾಸಕ್ತನಾಗಿ ಕುಳಿತನು. ಮಧ್ಯಾಹ್ನದ ವೇಳೆಗೆ ಅವನು ಹಸಿವನ್ನು ತಾಳಲಾರದೆ ನಾಲ್ಕು ಮನೆಗೆ ಹೋಗಿ ಭಿಕ್ಷವನ್ನು ಬೇಡಿದನು. ಅವರು ನೀಡಿದ ಅನ್ನದಿಂದ ಅವನ ಕ್ಷುದ್ಬಾಧೆ ತೀರಿತು. ಹೀಗೆ ಕೆಲದಿನ ಕಳೆಯುವಷ್ಟರಲ್ಲಿ ಒಂದು ದಿನ ಆತನು ಪಾತಾಳಲಿಂಗವಿರುವ ನೆಲಮಾಳಿಗೆಯನ್ನು ಪ್ರವೇಶಿಸಿದನು. ಅದೊಂದು ಕತ್ತಲಗವಿ. ಕ್ರಿಮಿ ಕೀಟಗಳ ಆವಾಸಸ್ಥಾನ. ಯಾರೂ ಅಲ್ಲಿಗೆ ಪ್ರವೇಶಿಸುತ್ತಿರಲಿಲ್ಲ. ರಮಣನು ಅದರೊಳಗೆ ಹೋಗಿ ಧ್ಯಾನಾಸಕ್ತನಾಗಿ ಕುಳಿತನು. ಅವನಲ್ಲಿಗೆ ಹೋದುದು ಯಾರಿಗೂ ಗೊತ್ತಿಲ್ಲ. ಭಿಕ್ಷೆಗೆ ಬರುತ್ತಿದ್ದ ಹುಡುಗ ಬಾರದಿದ್ದನ್ನು ಕಂಡು ಕೆಲವರು ಕುತೂಹಲದಿಂದ ಅವನಿಗಾಗಿ ಅಲ್ಲಲ್ಲಿ ಹುಡುಕಾಡಿದರು. ಎಲ್ಲಿಯೂ ಅವನು ಕಾಣಿಸಲಿಲ್ಲ. ಅವರು ಸುಮ್ಮನಾದರು. ಗುಹೆಯನ್ನು ಪ್ರವೇಶಿಸಿದ ಹುಡುಗ ಧ್ಯಾನಾಸಕ್ತನಾಗಿ ಹಾಗೆಯೇ ಸಮಾಧಿಸ್ಥನಾದನು. ಮೂರು ತಿಂಗಳುಗಳು ಉರುಳಿಹೋದವು. ಬಾಲಕನೇನಾದನೆಂಬುದು ಯಾರಿಗೂ ಗೊತ್ತಿರಲಿಲ್ಲ.

ಶ್ರೀ ರಮಣ ಮಹರ್ಷಿಗಳ ಸಮಕಾಲೀನರಾದ ಶೇಷಾದ್ರಿ ಎಂಬ ಒಬ್ಬ ಅವಧೂತರು ತ್ರಿಕಾಲಜ್ಞಾನಿಗಳಾಗಿದ್ದರು. ರಮಣರು ಸಮಾಧಿಯಲ್ಲಿ ಕುಳಿತಿರುವುದು ಅವರಿಗೆ ಅರ್ಥವಾಯಿತು. ಅವರು ಗುಹೆಯನ್ನು ಪ್ರವೇಶಿಸಿ ಭಕ್ತರೊಬ್ಬರ ನೆರವಿನಿಂದ ರಮಣರನ್ನು ಹೊರಕ್ಕೆ ಎತ್ತಿಕೊಂಡು ಬಂದರು. ಆ ವೇಳೆಗೆ ರಮಣರ ದೇಹ ಹುಳಹುಪ್ಪಟೆಗಳ ಕಡಿತದಿಂದ ತೂರಿ ಹೋಗಿತ್ತು. ಜೀವಶವದಂತಿದ್ದ ಅವರನ್ನು ಶೇಷಾದ್ರಿ ಸ್ವಾಮಿ ಉಪಚರಿಸಿ ಸಮಾಧಿಯಿಂದ ಕೆಳಗಿಳಿಸಿದರು. ಕೆಲಕಾಲದ ಮೇಲೆ ರಮಣರು ಆರೋಗ ದೃಢಕಾಯರಾಗಿ ಅರುಣಾಚಲದ ಎಲ್ಲೆಡೆಯಲ್ಲಿಯೂ ಸಂಚರಿಸಿ ಅಲ್ಲಿನ ಪವಿತ್ರ ಕ್ಷೇತ್ರಗಳನ್ನೆಲ್ಲಾ ಪರಿಚಯ ಮಾಡಿಕೊಂಡರು. ಕಡೆಗೆ ಅವರು ಈಗ ಸ್ಥಾಪನೆಯಾಗಿರುವ ರಮಣಾಶ್ರಮದ ಬಳಿಯಲ್ಲಿ ಬಂದು ನೆಲೆಸಿದರು

ರಮಣರ ಮಹತ್ತು ಬಹುಬೇಗ ಲೋಕವಿಖ್ಯಾತವಾಯಿತು. ಸತ್ಯಾನ್ವೇಷಿಗಳಾದ ಪ್ರಾಚ್ಯ ಮತ್ತು ಪಾಶ್ಚಾತ್ಯ ಸಂತರು ಗುಂಪು ಗುಂಪಾಗಿ ರಮಣರ ಬಳಿಗೆ ಬಂದು ಜ್ಞಾನೋಪದೇಶವನ್ನು ಪಡೆದರು. ರಮಣರ ಉಪದೇಶದ ಸಾರಸರ್ವಸ್ವವೆಂದರೆ ಇಷ್ಟೇ—"ನಾನು ಯಾರು?" ಈ ಪ್ರಶ್ನೆಯನ್ನು ಅನುಲಕ್ಷಿಸಿ ಆಲೋಚನೆಯ ಆಳಕ್ಕೆ ಇಳಿದಾಗ ಸತ್ಯ ಸಾಕ್ಷಾತ್ಕಾರವಾಗುತ್ತದೆ. ಅವರ ಬಾಳು, ಅವರ ಬಾಳಿನ ಕಥೆ ಜಗದ್ವಿಖ್ಯಾತವಾಗಿ ನೂರಾರು ಗ್ರಂಥಗಳು ಹೊರಬಂದಿವೆ. ಸಹಸ್ರಾರು ಜನ ಸತ್ಯಾನ್ವೇಷಿಗಳು ಅವರ ಆಶ್ರಮ ದರ್ಶನದಿಂದ, ಅವರ ಸಮಾಧಿಯ ದರ್ಶನದಿಂದ ಸತ್ಯ ಸಾಕ್ಷಾತ್ಕಾರವನ್ನು ಪಡೆದು ಧನ್ಯರಾಗಿದ್ದಾರೆ, ಧನ್ಯರಾಗುತ್ತಿದ್ದಾರೆ, ಧನ್ಯರಾಗುವವರಿದ್ದಾರೆ.

ಅರ್ಥರೇಖೆ ಆಯುಷ್ಯರೇಖೆ ಇಲ್ಲದವನ ಕೈಲಿದ್ದರೇನು ಫಲ?

ಶ್ರೀಮತಿ ಶಾರದಾ ಸೂರ್ಯನಾರಾಯಣರಾವ್

ಪೂಜ್ಯ ಮಾತಾಜಿ ಕೃಷ್ಣಾಬಾಯಿ

ಭಾರತ ಅನೇಕ ಸಾಧುಸಂತರಿಗೆ ಜನ್ಮ ಕೊಟ್ಟಿರುವ ಪುಣ್ಯಭೂಮಿ ದಿವ್ಯ ಮಾತೃಕರುಣೆ ಮತ್ತು ಪ್ರೇಮ ಅನೇಕ ಸ್ತ್ರೀಸಂತರ ಮೂಲಕವೂ ಪ್ರಕಟಗೊಂಡಿದೆ. ಇವರ ಪೈಕಿ ಸಕ್ಕೂಬಾಯಿ, ರಮಾಬಾಯಿ, ಮೀರಾಬಾಯಿ, ಆಂಡಾಳ್, ಶ್ರೀಮಾತೆ ಶಾರದಾದೇವಿ, ಆನಂದಮಾಯಿ, ಗೋದಾವರಿಮಾತಾ ಮೊದಲಾದವರು ಪ್ರಸಿದ್ಧರಾಗಿರುವುದು ಸರಿಯಷ್ಟೆ. ಇದೇ ಪಂಕ್ತಿಗೆ ಸೇರಿದ ಮಹಾಮಾತೆ ಕೃಷ್ಣಾಬಾಯಿಯವರ ಜೀವನ ಕುರಿತು ಬರೆಯಲು ನನಗೆ ಅತ್ಯಂತ ಆನಂದವಾಗುತ್ತದೆ.

ಇವರು ಆನಂದಾಶ್ರಮದ ಶ್ರೀರಾಮದಾಸರ ಪ್ರಮುಖ ಶಿಷ್ಯೆ. ತಮ್ಮ ಇಡೀ ಬದುಕನ್ನು ಸದ್ಗುರುವಿನ ಸೇವೆಯಲ್ಲಿ ಕಳೆದು ಆತ್ಮಸಾಕ್ಷಾತ್ಕಾರ ಮಾಡಿಕೊಂಡ ಪೂಜ್ಯ ಮಾತಾಜಿ ಕೃಷ್ಣಾಬಾಯಿಯವರು ಈಗ ಇರುವುದು ಆನಂದಾಶ್ರಮದಲ್ಲಿ. ಇವರು ಹುಟ್ಟಿದ್ದು ಭಟ್ಕಲ್‌ನ ಸಾರಸ್ವತ ಬ್ರಾಹ್ಮಣ ಕುಲಕ್ಕೆ ಸೇರಿದ ಪರಮ ಸಾತ್ವಿಕ ಸಾರಸ್ವತ ಕುಟುಂಬದಲ್ಲಿ (1903). ಚಿಕ್ಕಂದಿನಿಂದಲೂ ಇವರು ಮೃದುವಾಗಿ ಪ್ರೀತಿಯಿಂದ ಹೇಳಿದರೆ ಮಾತ್ರ ಒಲಿಯುತ್ತಿದ್ದರೇ ಹೊರತು ಒರಟು ಮಾತುಗಳಿಗೆ, ಗದರಿಕೆ ಬೆದರಿಕೆಗಳಿಗೆ ಜಗ್ಗುತ್ತಿರಲಿಲ್ಲ. ಎಂಟನೆ ವಯಸ್ಸಿನಲ್ಲಿ ಶಾಲೆಗೆ ಸೇರಿದ ಕೃಷ್ಣಾಬಾಯಿ ಓರ್ವ ಉಪಾಧ್ಯಾಯರು ತರಗತಿಯಲ್ಲಿ ಅವಾಚ್ಯ ಶಬ್ದಗಳನ್ನು ಬಳಸಿದ್ದರಿಂದ ಬೇಸರಗೊಂಡು ಶಾಲೆಯನ್ನೇ ಬಿಟ್ಟುಬಿಟ್ಟರು.

ಹನ್ನೆರಡನೆ ವಯಸ್ಸಿನಲ್ಲಿ ಮದುವೆಯಾಗಿ ಗಂಡ ಲಕ್ಷ್ಮಣರಾವ್ ಅವರೊಡನೆ ಬೊಂಬಾಯಿಯಲ್ಲಿ ಅತ್ಯಂತ ನೆಮ್ಮದಿಯ ಸಾಂಸಾರಿಕ ಜೀವನವನ್ನು ನಡೆಸಿದರು. ಇವರಿಗೆ ಇಬ್ಬರು ಮಕ್ಕಳು. ಇವರು ಒಮ್ಮೆ ತವರಿಗೆ ಬಂದಾಗ ಗಂಡ ಹಠಾತ್ತಾಗಿ ವಿಧಿವಶರಾದರು. ಕಡೆಯಕಾಲದಲ್ಲಿ ಪತಿಸೇವೆಯನ್ನು ಮಾಡಲಿಲ್ಲವೆಂಬ ಕೊರಗು ಕೃಷ್ಣಾಬಾಯಿಯವರನ್ನು ಅಪಾರವಾದ ದುಃಖ ಮತ್ತು ಪಶ್ಚಾತ್ತಾಪಕ್ಕೀಡುಮಾಡಿತು. ಇದ್ದಕ್ಕಿದ್ದಂತೆ ಆದ ಈ ಆಘಾತದಿಂದ ಅವರು ಜೀವನದ ನಶ್ವರತೆಯನ್ನು ಮನಗಂಡರು. ಮನಸ್ಸಿನ ಶಾಂತಿ ಸಮಾಧಾನಗಳಿಗಾಗಿ ಅವರು ತೀರ್ಥಯಾತ್ರೆ ಕೈಕೊಂಡರು ; ಸಾಧುಸಂತರ ದರ್ಶನ ಪಡೆದರು. ಇವರಿಗೆ ಮೊದಲು ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮೀಜಿಯವರ ದರ್ಶನವಾಯಿತು. ಅವರಿಂದ ಶಿವಮಂತ್ರದ ಉಪದೇಶ ಪಡೆದು ಕೆಲವು ತಿಂಗಳಕಾಲ ಅಲ್ಲಿಯೇ ಜಪತಪಾದಿಗಳಲ್ಲಿ ನಿರತರಾದರು. ಇಲ್ಲಿ ಸ್ವಲ್ಪಮಟ್ಟಿಗೆ ಶಾಂತಿ ಸಮಾಧಾನಗಳು ಮನಸ್ಸಿಗೆ ದೊರೆತರೂ ಇವರ ಹೃದಯದ ಭಾರ ಪೂರ್ಣವಾಗಿ ಇಳಿಯಲಿಲ್ಲ. ಇದೇ ಕಾಲಕ್ಕೆ ಗೋಂದಾವಲಿಯ ಶ್ರೀ ಬ್ರಹ್ಮಚೈತನ್ಯರ ಶಿಷ್ಯರ ದರ್ಶನವೂ ಲಭಿಸಿತು. ಅವರ ಉಪದೇಶವೂ ಕೃಷ್ಣಾಬಾಯಿಯವರ ಆಧ್ಯಾತ್ಮಸಾಧನೆಗೆ ಸಹಾಯ ಮಾಡಿತು.

ಅತ್ಯಂತ ಎಳೆಯ ವಯಸ್ಸಿನಲ್ಲೇ ಗಂಡನನ್ನು ಕಳೆದುಕೊಂಡ ಕೃಷ್ಣಾಬಾಯಿಗೆ ಪುನಃ ಮದುವೆಮಾಡಿ

ಕೊಳ್ಳಲು ಬಂಧುವರ್ಗದಿಂದ ಒತ್ತಾಯ ಬಂದಿತು. ರೂಪ, ಯೌವನ ಎಲ್ಲ ಇದ್ದರೂ ಕೃಷ್ಣಾಬಾಯಿಗೆ ಪುನರ್ವಿವಾಹದ ಮಾತು ಹಿಡಿಸಲಿಲ್ಲ. ಅವರ ವಯಸ್ಸು ಚಿಕ್ಕದಾದರೂ ಮನಸ್ಸು ಪರಿಪಕ್ವವಾಗಿತ್ತು. ಪೂರ್ಣ ವೈರಾಗ್ಯದ ಕಡೆಗೆ ತಿರುಗಿದ್ದ ಇವರ ಹೃದಯ ಯಾರ ಒತ್ತಾಯಕ್ಕೂ ಮಣಿಯಲಿಲ್ಲ. ಅವರು ಶಾಶ್ವತ ಸುಖ, ಶಾಂತಿಗಳಿಗಾಗಿ ಹಂಬಲಿಸುತ್ತಿದ್ದರು. ಸುತ್ತುಮುತ್ತಲಿನವರ ಹಾಗೂ ಬಂಧುಬಳಗದವರ ಬಲವಂತಕ್ಕೆ ವಶರಾಗದೆ ಅವರು ತಮ್ಮ ಕರ್ತವ್ಯವನ್ನು ನಿರ್ಧರಿಸಿದರು : ತಾಯಿಯಾಗಿ ತನ್ನ ಮಕ್ಕಳನ್ನು ಬೆಳೆಸಿ ಮುಂದೆ ತರುವುದು, ಜೀವನದ ಪರಮ ಗುರಿಯಾದ ಆತ್ಮಸಾಕ್ಷಾತ್ಕಾರವನ್ನು ಪಡೆಯುವುದು. ಆಧ್ಯಾತ್ಮ ಯಾತ್ರೆಯನ್ನು ಕೈಕೊಂಡ ಕೃಷ್ಣಾಬಾಯಿ ಬಗೆಬಗೆಯ ಕಷ್ಟಗಳನ್ನು ಅನುಭವಿಸಬೇಕಾಯಿತು. ಆಧ್ಯಾತ್ಮಸಾಧನೆಯ ಮಾರ್ಗ ಹಿಡಿದ ಒಬ್ಬ ಹೆಂಗಸು ಪಡಬೇಕಾದ ಕಷ್ಟ ಅಷ್ಟಿಷ್ಟಲ್ಲ. ಆದರೆ ಧೀರ ಸಂಕಲ್ಪದ ಚೇತನಕ್ಕೆ ದೈವದ ರಕ್ಷಣೆ ಸದಾಕಾಲವೂ ಇದ್ದದ್ದೇ. ಈ ಸಮಯಕ್ಕೆ ಕೃಷ್ಣಾಬಾಯಿ ಕಾಸರಗೋಡಿನ ಬಳಿ ಆಶ್ರಮ ಮಾಡಿಕೊಂಡು ನೆಲೆಸಿದ್ದ ಶ್ರೀರಾಮದಾಸರ ದರ್ಶನ ಪಡೆದರು. ಸ್ವಾಮಿರಾಮದಾಸರ ದಿವ್ಯ ದರ್ಶನ ಮಾತ್ರದಿಂದಲೇ ಇವರ ಹೃದಯದ ಭಾರ ಇಳಿಯಿತು, ಆನಂದದ ಅನುಭವವಾಯಿತು. ಆದರೂ ಪರೀಕ್ಷೆಮಾಡದೆ ಯಾವುದನ್ನೂ ಒಪ್ಪದ ಕೃಷ್ಣಾಬಾಯಿ ಆಶ್ರಮದಲ್ಲಿ ನಡೆಯುತ್ತಿದ್ದ ಭಜನೆಯಿಂದಲೂ ಶ್ರೀರಾಮದಾಸರ ಪ್ರವಚನಗಳಿಂದಲೂ ಪ್ರಭಾವಿತರಾದರು. ತಮ್ಮನ್ನು ಉದ್ಧಾರಮಾಡುವ ಸದ್ಗುರು ಶ್ರೀರಾಮದಾಸರೊಬ್ಬರೇ ಎಂದು ತೀರ್ಮಾನಿಸಿಕೊಂಡು ತಮ್ಮನ್ನು ಶಿಷ್ಯೆಯಾಗಿ ಸ್ವೀಕರಿಸುವ ಕೃಪೆಮಾಡಬೇಕೆಂದು ಅವರನ್ನು ಪ್ರಾರ್ಥಿಸಿದರು. ಅಖಂಡ ರಾಮನಾಮಜಪದಿಂದಲೇ ಸಾಕ್ಷಾತ್ಕಾರ ಪಡೆದ ಕೃಪಾಸಿದ್ಧರಾದ ಸ್ವಾಮಿರಾಮದಾಸರು ಕೃಷ್ಣಾಬಾಯಿಯ ಧೀರಸಂಕಲ್ಪವನ್ನು ಆಧ್ಯಾತ್ಮ ಜೀವನದ ಹಂಬಲವನ್ನೂ ಪವಿತ್ರ ಚಾರಿತ್ರ್ಯವನ್ನೂ ಅರಿತು ಅವರಿಗೆ ಗುರುವಾಗಲು ಒಪ್ಪಿದರು. ರಾಮದಾಸರಿಂದ ಶ್ರೀರಾಮಮಂತ್ರದ ದೀಕ್ಷೆ ಪಡೆದ ಕೃಷ್ಣಾಬಾಯಿ ಕುಳಿತಾಗ, ನಿಂತಾಗ ದಿವ್ಯ ರಾಮಮಂತ್ರದ ಜಪಮಾಡುತ್ತಾ ತಮ್ಮ ಕಾಲವನ್ನೆಲ್ಲ ಗುರುಸೇವೆಯಲ್ಲೂ ಉಗ್ರಸಾಧನೆಯಲ್ಲೂ ಕಳೆದರು.

ಕಾಸರಗೋಡಿನ ಆಶ್ರಮದಲ್ಲಿದ್ದಾಗ ಲೋಕಾಪವಾದಗಳಿಗೆ ಗುರಿಯಾದರು ಮಾತಾಜಿ. ಸಲ್ಲದ ಮಾತುಗಳನ್ನು ಅನೇಕ ಜನ ಆಡಿದರು. ಆದರೆ ಅವನ್ನೆಲ್ಲ ಅವರು ಗಮನಿಸಲಿಲ್ಲ; ತಮ್ಮ ಮಾರ್ಗದಿಂದ ವಿಚಲಿತರಾಗಲೂ ಇಲ್ಲ. ಗುರುಸೇವೆಯನ್ನು ನಿಷ್ಠೆಯಿಂದ ಮಾಡಿ ಸಾಕಾರನಾದ ಗುರುವಿನಲ್ಲಿ ನಿರಾಕಾರ ದೇವರನ್ನು ಕಂಡರು.

ಅನಂತರ ಪೂಜ್ಯ ರಾಮದಾಸರು ಮತ್ತು ಪೂಜ್ಯಮಾತಾಜಿ ಕಾಸರಗೋಡಿನ ಬಳಿ ಕಾಂಜನಗಾಡಿನಲ್ಲಿ ಬಂದು ನೆಲಸಿದರು. ಅದೇ ಈಗಿನ ಆನಂದಾಶ್ರಮ. ಸುತ್ತಲೂ ಗಿಡಮರಗಳಿಂದ ಕೂಡಿದ ಸುಂದರ ಪ್ರದೇಶ, ಪ್ರಶಾಂತ ವಾತಾವರಣ. ಈ ಆಶ್ರಮದಲ್ಲಿ ವಿಶಾಲವಾದ ಭಜನೆಯ ಮಂದಿರವಿದೆ. ಇಲ್ಲಿ ಅಖಂಡವಾಗಿ ರಾಮನಾಮ ಸಂಕೀರ್ತನೆ ಆಗುತ್ತಿರುತ್ತದೆ. ಸ್ವಾಮಿರಾಮದಾಸರೂ (ಇವರು 1963 ರಲ್ಲಿ ಮಹಾಸಮಾಧಿ ಪಡೆದರು) ಮಾತಾಜಿಯವರೂ ಇದರಲ್ಲಿ ಭಾಗವಹಿಸುತ್ತಾರೆ. ಇಲ್ಲಿ ಗೋಶಾಲೆ, ಆಸ್ಪತ್ರೆ, ಶ್ರೀಕೃಷ್ಣ ಉದ್ಯೋಗಶಾಲೆ, ಗ್ರಂಥಾಲಯ, ಪಾಕಶಾಲೆ, ಭೋಜನಶಾಲೆ ಇವೆ. ಅಲ್ಲದೆ ಭಕ್ತಾದಿಗಳು ಇಳಿದುಕೊಳ್ಳಲು ಆಶ್ರಮದ ಸುತ್ತಲೂ ಅಚ್ಚುಕಟ್ಟಾದ ಮನೆಗಳೂ ಸಜ್ಜುಗೊಳಿಸಿದ ಕೊಠಡಿಗಳೂ ಇವೆ. ದೇಶವಿದೇಶಗಳಿಂದ ಭಕ್ತರು ಇವರ ದರ್ಶನಕ್ಕಾಗಿ ಇಲ್ಲಿಗೆ ಬರುತ್ತಾರೆ.

ಆನಂದಾಶ್ರಮಕ್ಕೆ ಹೋಗಿ ಬರುವ ಸುಯೋಗವು ನಮಗೂ ಮೂರು ನಾಲ್ಕು ಬಾರಿ ಲಭಿಸಿದೆ. ಮಾತಾಜಿಯವರನ್ನು ಆಶ್ರಮದ ಅಧಿದೇವತೆಯೆಂದೇ ಕರೆಯಬಹುದು. ಅವರು ಆಶ್ರಮದ ಎಲ್ಲ ಚಟುವಟಿಕೆಗಳ ಕಡೆ ಗಮನವಿಟ್ಟಿರುತ್ತಾರೆ. ಅವರಿಗೆ ಕೆಲಸದಲ್ಲಿ ಮೇಲುಕೀಳೆಂಬ ಭೇದವಿಲ್ಲ. ಅವರೇ ಸ್ವತಃ ಎಲ್ಲ ಕೆಲಸಗಳಲ್ಲೂ ಭಾಗವಹಿಸುತ್ತಾರೆ. ಪ್ರಾಯಶಃ ಆಶ್ರಮದಲ್ಲಿ ಎಲ್ಲರಿಗಿಂತಲೂ ಮೊದಲು ಏಳುವವರು ಮಾತಾಜಿ. ರಾತ್ರಿ ಹೊತ್ತಾಗಿ ಮಲಗುವವರೂ ಇವರೇ. ಹೂವು ಬಿಡಿಸುವುದು, ಮಾಲೆ ಕಟ್ಟುವುದು, ಗೋಶಾಲೆಯ ಕೆಲಸ,

ಅಡಿಗೆ ಕೆಲಸ, ಬಂದುಹೋಗುವವರಿಗೆ ಊಟ ಉಪಚಾರಗಳ ವ್ಯವಸ್ಥೆ, ಕೆಲಸಗಾರರ ಮೇಲ್ವಿಚಾರಣೆ, ಆಶ್ರಮದ ಸ್ವಚ್ಛತೆ ಎಲ್ಲವನ್ನೂ ನೋಡಿಕೊಳ್ಳುತ್ತಾ ರಾಮನಾಮ ಸಂಕೀರ್ತನೆ ಮಾಡುತ್ತಿರುತ್ತಾರೆ. ಶುಭ್ರಧವಳವಾದ ಉಡುಪನ್ನು ಧರಿಸುವ, ಕರುಣಾದೃಷ್ಟಿಯಿಂದ ಕೂಡಿದ, ಪರಮಶಾಂತರೂ ಪ್ರೇಮಮಯಿಯೂ ಆದ ಮಾತಾಜಿಯವರು ನಿಜವಾಗಿಯೂ ದೇವತೆಯಂತೆಯೇ ಕಾಣುತ್ತಾರೆ.

ಆಶ್ರಮಕ್ಕೆ ಹೋಗಿ ಬಂದರೆ ತೌರೂರಿಗೇ ಹೋಗಿ ಬಂದಂತಾಗುತ್ತದೆ. ಹೋದೊಡನೆಯೇ ಆದರದ ಸ್ವಾಗತ. ಮುಂಚೆ ಬರುವುದಾಗಿ ತಿಳಿಸಿದ್ದರಂತೂ ಸ್ಟೇಷನ್ನಿಗೆ ಕಾರು ಬಂದು ಕಾದಿರುತ್ತದೆ. ಸ್ವಲ್ಪ ಹೊತ್ತು ಕುಶಲಪ್ರಶ್ನೆಯಾದ ನಂತರ ಸ್ನಾನ, ಪಾನ, ಆಹಾರಾದಿಗಳನ್ನು ತೆಗೆದುಕೊಂಡು ಭಜನೆಗೆ ಸೇರಿಕೊಳ್ಳಬೇಕೆಂಬ ಪ್ರೇಮಾಜ್ಞೆ.

ಭಕ್ತಾದಿಗಳು ಇಳಿದುಕೊಳ್ಳಲು ಒಳ್ಳೆಯ ಕೊಠಡಿಗಳಿವೆ. ಮಂಚಗಳ ಮೇಲೆ ಹಾಸಿದ ಸುಪ್ಪತ್ತಿಗೆಗಳು, ಹೂಜಿಯಲ್ಲಿ ನೀರು, ಸ್ವಚ್ಛವಾಗಿ ಗುಡಿಸಿದ ನೆಲ. ನೋಡಿದೊಡನೆಯೇ ಆನಂದವಾಗುತ್ತದೆ. ಸ್ನಾನಕ್ಕೆ ಒಳ್ಳೆಯ ಅನುಕೂಲವಿದೆ. ಹೊತ್ತಿಗೆ ಸರಿಯಾಗಿ ಊಟದ ವ್ಯವಸ್ಥೆ. ಎರಡು ಹೊತ್ತೂ ಹಸನಾದ ಹಾಲು ನಾವಿರುವ ಕೊಠಡಿಗೇ ಬರುತ್ತದೆ. ಹಣಕೊಡುವ ಹಾಗಿಲ್ಲ. ಮೊದಲು ಊಟ ತಿಂಡಿಯ ವ್ಯವಸ್ಥೆಯೂ ಹೀಗೆಯೇ ಮುಫತ್ತಾಗಿತ್ತು. ಆದರೆ ಆಶ್ರಮಕ್ಕೆ ಬರುವವರ ಸಂಖ್ಯೆ ಹೆಚ್ಚಾದದ್ದರಿಂದಲೂ ಇತ್ತೀಚೆಗೆ ಮಾತಾಜಿಯವರ ಆರೋಗ್ಯ ಅಷ್ಟು ಚೆನ್ನಾಗಿಲ್ಲದಿರುವುದರಿಂದಲೂ ಈಗ ಉಚಿತ ಭೋಜನವ್ಯವಸ್ಥೆ ಇಲ್ಲ. ಓರ್ವ ಭಕ್ತರು ಭೋಜನ ಶಾಲೆಯನ್ನು ತೆರೆದಿದ್ದಾರೆ. ಇಲ್ಲಿ ರಾಮನಾಮೋಚ್ಚಾರಣೆಯಿಂದ ತಯಾರಿಸಿದ ಆಹಾರವನ್ನು ಬಹಳ ಕಡಮೆ ಬೆಲೆಗೆ ಭಕ್ತಾದಿಗಳಿಗೆ ಕೊಡುತ್ತಾರೆ. ತೃಪ್ತಿಯಾಗಿ ಸ್ನಾನಮಾಡುವಷ್ಟು ಬಿಸಿನೀರು, ಬಟ್ಟೆಗಳನ್ನು ಒಗೆಸಿ, ಮಡಿಸಿ ನಾವಿರುವ ಸ್ಥಳಕ್ಕೆ ಕಳುಹಿಸಿ ಕೊಡುತ್ತಾರೆ. ಆಯಾ ಋತುಗಳ ಹಣ್ಣುಗಳನ್ನೂ, ಭಕ್ತಾದಿಗಳು ಕಳುಹಿಸುವ ತಿಂಡಿತಿನಿಸುಗಳನ್ನೂ ಎಲ್ಲರಿಗೂ ಪ್ರೀತಿಯಿಂದ ಹಂಚುತ್ತಾರೆ. ಆಶ್ರಮದ ವಿಶೇಷವೆಂದರೆ ಮೊದಲು ಊಟ, ಉಪಹಾರ, ಅನಂತರ ಭಜನೆ. ಭಜನೆ ಮಾಡುವಾಗ ಹೊಟ್ಟೆಯ ಚಿಂತೆ ಇರಬಾರದಲ್ಲಾ ! ಬೆಳಗಿನ ಜಾವದಿಂದ ಹಿಡಿದು ರಾತ್ರಿ 9-30 ಗಂಟೆಯವರೆಗೆ ಅಖಂಡ ರಾಮನಾಮಭಜನೆ ಮಂದಿರದಲ್ಲಿ ನಡೆಯುತ್ತಿರುತ್ತದೆ. ಎಲ್ಲ ಅನುಕೂಲಗಳನ್ನೂ ಉಪಯೋಗಿಸಿಕೊಂಡು ರಾಮನಾಮ ಹೇಳುವುದೇ ನಾವು ಮಾತಾಜಿಗೆ ಮಾಡುವ ದೊಡ್ಡ ಉಪಕಾರ !

ಮಾತಾಜಿಯವರೊಂದಿಗೆ ತಾಯಿಗಿಂತಲೂ ಹೆಚ್ಚಾಗಿ ನಮ್ಮ ಎಲ್ಲ ಕಷ್ಟಸುಖಗಳನ್ನೂ ಹೇಳಿಕೊಳ್ಳುವ ಮನಸ್ಸಾಗುತ್ತದೆ. ಅವಕ್ಕೆಲ್ಲ ತಕ್ಕ ಪರಿಹಾರವನ್ನು ಮಾತಾಜಿ ಸುಲಭವಾಗಿ ಹೇಳಿಕೊಡುತ್ತಾರೆ. ಅವರೊಂದಿಗೆ ನಾವು ಕೆಲಸಗಳಲ್ಲಿ ಬೆರೆಯಬಹುದು, ಸಂಜೆ ಆಶ್ರಮದ ಸುತ್ತ ತಿರುಗಾಡಲು ಹೋಗಬಹುದು. ಆಗ ಅವರು ಏನಾದರೂ ಒಳ್ಳೆಯ ವಿಷಯ ಹೇಳುತ್ತಿರುತ್ತಾರೆ. ಅದೊಂದು ಸದವಕಾಶ. ಅವರು ಹೆಚ್ಚು ಮಾತನಾಡುವುದಿಲ್ಲ. ಆದರೆ ಅವರಾಡುವ ಮಾತುಗಳು ಆಣಿ ಮುತ್ತುಗಳು. ಅವರ ಮಾತುಗಳನ್ನು ಕೇಳಿದರೆ ಮನಸ್ಸು ಹಗುರವಾಗುತ್ತದೆ. "ಮನೆಯಲ್ಲೇ ಇದ್ದು ರಾಮನಾಮ ಹೇಳುತ್ತಲೇ ಎಲ್ಲ ಕೆಲಸಗಳನ್ನು ಮಾಡಿ, ಆಶ್ರಮವನ್ನು ಜ್ಞಾಪಿಸಿಕೊಳ್ಳಿ" ಎನ್ನುತ್ತಾರೆ ಅವರು. ರಾಮನಾಮ ಹೇಳುವುದಕ್ಕೆ ಯಾವ ಕಟ್ಟುಕಟ್ಟಳೆಯೂ ಇಲ್ಲ. ನಾವು ಮಾಡುವ ಕೆಲಸವೇ ದೇವರ ಪೂಜೆ. ರಾಮನಾಮಕ್ಕೆ ಪ್ರತ್ಯೇಕವಾದ ಸಮಯ ಬೇಕಾಗಿಲ್ಲ. ಆದರೆ ಸತತವಾಗಿ ಅದರ ಸ್ಮರಣೆ ಆಗುತ್ತಿರಲಿ ಎನ್ನುತ್ತಾರೆ.

ಆಶ್ರಮವನ್ನು ಬಿಡುವ ದಿವಸ ನಮಗೆ ಊಟೋಪಚಾರಗಳನ್ನೆಲ್ಲ ಮಾಡಿಸಿ ನಮ್ಮೊಂದಿಗೆ ಸ್ವಲ್ಪ ಹೊತ್ತು ಮಾತನಾಡುತ್ತಾರೆ. ಹೊತ್ತಿಗೆ ಸರಿಯಾಗಿ ಕಾರು ತರಿಸುತ್ತಾರೆ. ದಾರಿಗೆ ಬೇಕಾದ ಬುತ್ತಿಯನ್ನು ತಾವೇ ತಯಾರಿಸಿ ಕೊಡುತ್ತಾರೆ. ಆಶ್ರಮದಲ್ಲಿ ಬೆಳೆದ ಹಣ್ಣು ಹಂಪಲುಗಳನ್ನು ಪ್ರೀತಿಯಿಂದ ನಮಗೆ

ಕೊಡುತ್ತಾರೆ. ತಮ್ಮ ವಿಶ್ರಾಂತಿ, ಕೆಲಸ ಯಾವುದನ್ನೂ ಲೆಕ್ಕಿಸದೆ ನಾವು ಹೊರಡುವಾಗ ಆಶ್ರಮದ ಮುಂಭಾಗಕ್ಕೆ ಬಂದು ನಮ್ಮನ್ನು ಬೀಳ್ಕೊಡುತ್ತಾರೆ. ಕಾರು ಮರೆಯಾಗುವವರೆಗೂ ಕರುಣೆ ತುಂಬಿದ ಕಣ್ಣುಗಳಿಂದ ನೋಡುತ್ತಿರುತ್ತಾರೆ ಈ ವಿಶ್ವಮಾತೆ. ಆಶ್ರಮಕ್ಕೆ ಹೋಗಿಬರುವುದು ನಿಜವಾಗಿಯೂ ಒಂದು Spiritual Holiday (ಆಧ್ಯಾತ್ಮಿಕ ವಿಹಾರ). ಗುರು ಸೇವೆಯನ್ನಂತೂ ಮಾತಾಜಿಯವರನ್ನು ನೋಡಿ ಕಲಿಯ ಬೇಕು. ಸಮರ್ಪಣ ಮನೋಭಾವದಿಂದ ಅವರು ಶ್ರೀರಾಮದಾಸರಿಗೆ ನಮಸ್ಕಾರ ಮಾಡುವುದನ್ನು ನೋಡಿದರೇ ಮೈರೋಮಾಂಚನವಾಗುತ್ತಿತ್ತು. ಸ್ವಾಮಿರಾಮದಾಸ್ ಹಾಗೂ ಮಾತಾಜಿಯವರು ನಮಗೆ ಇಹಕ್ಕೂ ಪರಕ್ಕೂ ಸುಲಭವಾದ ಸಾಧನಮಾರ್ಗವಾದ ರಾಮನಾಮ ಜಪವನ್ನು ಉಪದೇಶಿಸಿ ಉದ್ಧಾರಮಾಡುತ್ತಾರೆ. ಈ ಇಹಪರ ರುಚಿಯ ರಾಮನಾಮ ಪಾಯಸವನ್ನು ನಾವು ಸವಿಯಬೇಕಷ್ಟೆ. ಸಾಕ್ಷಾತ್ಕಾರ ಪಡೆದ ಮಾತಾಜಿಯವ ರನ್ನು ನೋಡಿ ನಾವು ಕಲಿಯಬೇಕು. ಇವರೇ ನಮಗೆ ಆದರ್ಶ, ಮೇಲ್ಪಂಕ್ತಿ. ಜೀವನದಲ್ಲಿ ನಾವು ಯಾವು ದನ್ನೂ ತೊರೆಯಬೇಕಾಗಿಲ್ಲ ದಿನಚರಿಯಲ್ಲಿ 'ರಾಮನಾಮ'ವನ್ನು ಸೇರಿಸಿಕೊಳ್ಳಬೇಕು ಅಷ್ಟೆ.

1955ರಲ್ಲಿ ಭಕ್ತರ ಇಚ್ಛೆಯ ಮೇರೆಗೆ ಮಾತಾಜಿಯವರು ಗುರು ರಾಮದಾಸರೊಡನೆ ಯೂರೋಪ್, ಅಮೆರಿಕಾ, ಜಪಾನ್, ಸಿಲೋನ್ ಮೊದಲಾದ ದೇಶಗಳಿಗೆ ಪ್ರಯಾಣ ಬೆಳೆಸಿದರು. ಅಲ್ಲಿಯ ಜನರೆಲ್ಲ ಇವರ ದರ್ಶನ ಲಾಭದಿಂದ ಸಂತೋಷಗೊಂಡರು. ಧೈರ್ಯ, ತ್ಯಾಗ, ತಾಳ್ಮೆ, ಸಹನೆ, ಅನುಕಂಪೆ, ಸರಳತೆ, ನಿಸ್ವಾರ್ಥ ಪ್ರೇಮ, ಔದಾರ್ಯ ಮೊದಲಾದ ಎಲ್ಲ ದೈವೀಗುಣ ಸಂಪನ್ನರಾದ ಇವರು ಹೋದಲ್ಲೆಲ್ಲಾ ಜನರ ಹೃನ್ಮನ ಗಳನ್ನು ಸೂರೆಗೊಂಡರು.

ಮಾತಾಜಿಯವರು ಕಾರ್ಯದಕ್ಷರು. ಆಶ್ರಮದ ಕೆಲಸಗಾರರನ್ನೆಲ್ಲ ಮಕ್ಕಳಂತೆ ನೋಡಿಕೊಳ್ಳು ತ್ತಾರೆ. ಆದರೆ ಕೆಲಸಗಾರರು ಕಾರ್ಯನಿಷ್ಠೆಯಲ್ಲಿ ತಪ್ಪಿದರೆ ಅವರನ್ನು ದಾರಿಗೆ ತರುತ್ತಾರೆ. ಅಲ್ಲಿನ ಕಟ್ಟಡ ಗಳನ್ನೆಲ್ಲ ಮಾತಾಜಿಯವರೇ ಸ್ವತಃ ನಿಂತು ಕಟ್ಟಿಸಿದ್ದಾರೆ. ಕೆಲಸಗಾರರ ಹಿತವನ್ನೂ ಅಷ್ಟೇ ಶ್ರದ್ಧೆಯಿಂದ ನೋಡಿಕೊಳ್ಳುತ್ತಾರೆ. ದಾನಧರ್ಮಗಳನ್ನು ಮಾಡುವುದರಲ್ಲಂತೂ ಮಾತಾಜಿಯವರು ಎತ್ತಿದ ಕೈ. ಬಟ್ಟೆ ಗಳು, ದವಸಧಾನ್ಯಗಳು, ಹಣ್ಣುಹಂಪಲುಗಳು, ಹಾಲು ಎಲ್ಲವನ್ನೂ ಅವರು ಯಥೇಚ್ಛವಾಗಿ ಬಡವರಿಗೆ ಹಂಚು ತ್ತಾರೆ. ಅವರಿಗೆ ಮನೆಗಳನ್ನು ಕಟ್ಟಿಸಿಕೊಡುತ್ತಾರೆ. ರೋಗಿಗಳಿಗೆ ಔಷಧಿ ಕೊಡಿಸುತ್ತಾರೆ. ರಾಮನಾಮ ಹೇಳಿಸುತ್ತಾರೆ. ಜಾತಿ, ಬಡವ, ಬಲ್ಲಿದ—ಈ ಯಾವ ಭೇದವೂ ಆಶ್ರಮದಲ್ಲಿಲ್ಲ. ಮಾತಾಜಿಯವರ ಮಿತಿ ಯಿಲ್ಲದ ದಾನಧರ್ಮಗಳನ್ನು ನೋಡಿ ರಾಮದಾಸರು ಒಮ್ಮೆ "ಮಾತಾಜಿ ಸಾಧ್ಯವಿದ್ದರೆ ನನ್ನನ್ನೂ ದಾನಮಾಡಿ ಬಿಡುತ್ತಿದ್ದರು !" ಎಂದು ಹೇಳಿದರಂತೆ!

ಆಶ್ರಮದ ಗೋಶಾಲೆಯ ಮೇಲ್ವಿಚಾರಣೆಯನ್ನೂ ಮಾತಾಜಿಯವರೇ ನೋಡಿಕೊಳ್ಳುತ್ತಾರೆ. ಅವು ಗಳಿಗೆ ನೋವಾದರೆ ಮಾತಾಜಿಯ ಮಾತೃಹೃದಯ ಕರಗುತ್ತದೆ. ಅವುಗಳ ಶುಶ್ರೂಷೆ ಮಾಡುವಾಗಲೂ ಮಾತಾಜಿ ರಾಮನಾಮದಲ್ಲಿ ತೊಡಗಿರುತ್ತಾರೆ. ಒಂದು ಹಸುವಂತೂ ಇವರ ರಾಮನಾಮವಿಲ್ಲದೆ ಹಾಲನ್ನೇ ಕರೆಯುತ್ತಿರಲಿಲ್ಲ. ಜನರನ್ನು ಹೇಗೆ ನೋಡಿಕೊಳ್ಳುತ್ತಾರೋ ಅಷ್ಟೇ ಆಸ್ಥೆಯಿಂದ ಹಸುಗಳನ್ನೂ ನೋಡಿ ಕೊಳ್ಳುತ್ತಾರೆ. ಅವರು ದಿನಕ್ಕೆ ಮೂರು ನಾಲ್ಕು ಘಂಟೆಗಳ ಕಾಲವನ್ನು ಗೋಸೇವೆಗೆ ಮೀಸಲಿಟ್ಟಿದ್ದಾರೆ. ಗೋಶಾಲೆಯನ್ನು ತುಂಬ ಚೊಕ್ಕಟವಾಗಿಟ್ಟಿರುತ್ತಾರೆ. ಹಸುಗಳಿಗೆ ಗಂಗಾ, ಯಮುನಾ, ಸರಸ್ವತಿ ಮೊದಲಾಗಿ ನಾಮಕರಣ ಮಾಡಿದ್ದಾರೆ. ಗೋದಾನ ಮಾಡುವಾಗ ದಾನ ಸ್ವೀಕರಿಸುವವರು ಅವುಗಳನ್ನು ಸರಿಯಾಗಿ ನೋಡಿಕೊಳ್ಳುತ್ತಾರೆಯೇ ಎಂಬುದನ್ನು ನಿಶ್ಚಯಮಾಡಿಕೊಳ್ಳದೇ ಅವರು ಕೊಡುವುದಿಲ್ಲ. ಒಮ್ಮೆ ಒಬ್ಬ ಬಡವ ನಿಗೆ ಒಂದು ಹಸುವನ್ನು ದಾನವಾಗಿ ಕೊಟ್ಟರು. ಅವನು ಮೇವಿಗೆ ತಾಪತ್ರಯವಾಗಿದೆ ಎಂದು ಹೇಳಿದಾಗ ಮೇವಿಗೂ ವ್ಯವಸ್ಥೆ ಮಾಡಿದರು. ಆಮೇಲೆ ಅವನು ಹಾಲನ್ನು ಕೊಳ್ಳುವವರಿಲ್ಲ ಎಂದು ಗೊಣಗಿದಾಗ ಆಶ್ರಮಕ್ಕೇ

ಆ ಹಾಲನ್ನು ಕೊಳ್ಳುವ ವ್ಯವಸ್ಥೆ ಮಾಡಿದರು. ಇಷ್ಟೆಲ್ಲ ಮಾಡಿದ್ದು ದಾನ ಮಾಡಿದ ಗೋವಿನ ಹಾಲನೆ ಅವರಿಂದ ಸರಿಯಾಗಿ ಆಗಲೆಂದು ! ಹಸುಗಳಿಗೂ ಮಾತಾಜಿಯವರನ್ನು ಕಂಡರೆ ಅಷ್ಟೇ ಪ್ರೇಮ. ಅವುಗಳನ್ನು ದಾನ ಮಾಡಿದಾಗ ಅವು ಹೋಗದೆ ಅತ್ತಿದ್ದೂ ಉಂಟು. ಒಮ್ಮೆ ಹಾಗೆ ಹೋಗಬಯಸದೆ ಅಳುತ್ತಿದ್ದ ಹಸುವನ್ನು ಮಾತಾಜಿ ದಾನ ಮಾಡಲೇ ಇಲ್ಲ.

ಮಾತಾಜಿಯವರು ಆಶ್ರಮದಲ್ಲಿ ಎಂತಹ ಸತ್ಕಾರ ನೀಡುತ್ತಾರೆಂಬುದಕ್ಕೆ ಒಂದೇ ಒಂದು ನಿದರ್ಶನ ಸಾಕೆನಿಸುತ್ತದೆ. ಒಮ್ಮೆ ಅರವಿಂದರ ಶಿಷ್ಯರೂ ದೊಡ್ಡ ಸಂಗೀತಗಾರರೂ ಆದ ದಿಲೀಪ್‌ಕುಮಾರ್‌ರಾಯ್ ಅವರು ಈ ಆಶ್ರಮಕ್ಕೆ ಬಂದಿದ್ದರಂತೆ. ಅಲ್ಲಿ ರಾಯ್ ಜ್ವರಬಂದು ಹಾಸಿಗೆ ಹಿಡಿದು ಮಲಗಿಬಿಟ್ಟರು. ಮಾತಾಜಿ ಅವರನ್ನು ಸ್ವಂತ ಮಗನಿಗಿಂತಲೂ ಹೆಚ್ಚಾಗಿ ಶುಶ್ರೂಷೆ ಮಾಡಿದರಂತೆ. ಅವರ ಶುಶ್ರೂಷೆಯನ್ನು ಮೆಚ್ಚಿ ರಾಯ್ "ಆಶ್ರಮದಲ್ಲಿ ಖಾಯಿಲೆ ಬೀಳುವುದು ನಮ್ಮ ಭಾಗ್ಯ; ಏಕೆಂದರೆ ಅಲ್ಲಿ ಪೂಜ್ಯ ಮಾತಾಜಿಯವರ ಅಸದೃಶವಾದ ಶುಶ್ರೂಷೆ ದೊರಕುತ್ತದೆ" ಎಂದು ಹೇಳಿರುತ್ತಾರೆ.

ಮಾತಾಜಿಯವರ ಜೀವನ ಇತರರ ಸೇವೆಗಾಗಿ ಮೀಸಲು. ಇವರ ಸನ್ಯಾಸ ಜೀವನದ 25ನೇ ವರ್ಷದಲ್ಲಿ ರಾಮನಾಮ ಲಿಖಿತ ಜಪಯಜ್ಞವನ್ನು ಆಚರಿಸಲಾಯಿತು. ಆಗ ಪ್ರಪಂಚದ ನಾನಾ ಮೂಲೆಗಳಿಂದ ಆಶ್ರಮ ಭಕ್ತರು ಇದರಲ್ಲಿ ಭಾಗವಹಿಸಿ 25 ಕೋಟಿ ರಾಮನಾಮವನ್ನು ಬರೆದು ಕಳುಹಿಸಿದರು. ಇದನ್ನು ಆಶ್ರಮದಲ್ಲಿ ಈಗಲೂ ಭದ್ರವಾಗಿಟ್ಟಿದ್ದಾರೆ. ಆಶ್ರಮಕ್ಕೆ ಭೇಟಿಕೊಟ್ಟಾಗ ಇದನ್ನು ನೋಡಿ ಆಚಾರ್ಯ ವಿನೋಬಾ ಭಾವೆಯವರು "ಪರಮಾಣುಬಾಂಬಿಗೆ ರಾಮನಾಮವೇ ಉತ್ತರ" ಎಂದು ಹೇಳಿದರಂತೆ.

ಈಗ ಮಾತಾಜಿಯವರೇ ಆಶ್ರಮವನ್ನು ಸಮರ್ಥವಾಗಿ ನೋಡಿಕೊಳ್ಳುತ್ತಿದ್ದಾರೆ. ಆಶ್ರಮದಿಂದ 'Vision' 'ವಿಷನ್' ಎಂಬ ಮಾಸಪತ್ರಿಕೆ ಹೊರಡುತ್ತದೆ. ಇದರಲ್ಲಿ ಅಧ್ಯಾತ್ಮಕ್ಕೆ ಸಂಬಂಧಿಸಿದ ಲೇಖನಗಳನ್ನು ಪ್ರಕಟಿಸುತ್ತಾರೆ. ಇದರಿಂದ ಆಶ್ರಮದ ಚಟುವಟಿಕೆಗಳೆಲ್ಲಾ ಗೊತ್ತಾಗುತ್ತದೆ. ಇದರ ಮೂಲಕ ಅವರು ವಿಶ್ವಪ್ರೇಮ ಮತ್ತು ವಿಶ್ವಸೇವೆಯ ತತ್ತ್ವಗಳನ್ನು ಪ್ರಸಾರ ಮಾಡುತ್ತಿದ್ದಾರೆ.

ಪ್ರೇಮ ಮತ್ತು ಸೇವೆಗಳು ಕೇವಲ ಸಾಧಿಸಲಾಗದ ಆದರ್ಶಗಳಲ್ಲ. ಮಾತಾಜಿ ಇವುಗಳ ಮೈವೆತ್ತ ಮೂರ್ತಿ. ಇವರು ಲೋಕೋದ್ಧಾರ, ಲೋಕಸೇವೆಗಳನ್ನು ಅಖಂಡವಾಗಿ ನಡೆಸುತ್ತಿದ್ದಾರೆ. ಮಾತಾಜಿಯವರು ತಮ್ಮ ಆಧ್ಯಾತ್ಮಿಕ ಜೀವನಚರಿತ್ರೆಯನ್ನು ಹೊರತಂದಿದ್ದಾರೆ. 'ಗುರುಕೃಪೆ'—'GURU'S GRACE' ಎಂಬ ಹೆಸರಿನ ಈ ಆತ್ಮಕಥೆಯನ್ನು ಅವರು ತಮ್ಮ ಗುರು ರಾಮದಾಸರಲ್ಲಿ ಅರಿಕೆ ಮಾಡಿಕೊಳ್ಳುವ ರೀತಿಯಲ್ಲಿ ಬರೆದಿದ್ದಾರೆ. ಇದರಲ್ಲೂ ಒಂದು ವೈಶಿಷ್ಟ್ಯ ಕಾಣುತ್ತದೆ. ಎಲ್ಲವನ್ನೂ ಸ್ವಾಮಿ ರಾಮದಾಸರಿಗೆ ಅರ್ಪಣ ಮನೋಭಾವದಿಂದ ಹೇಳಿಕೊಂಡಿದ್ದಾರೆ. ಮಾತಾಜಿ ಕೃಷ್ಣಾಬಾಯಿಯವರು ಎಲ್ಲ ಮಹಿಳೆಯರಿಗೂ ಎಲ್ಲ ಕಾಲಕ್ಕೂ ಆದರ್ಶಸಂತರಾಗಿದ್ದಾರೆ. ಸ್ವಾಮಿ ರಾಮದಾಸರ ಮಾತಿನಲ್ಲೇ ಹೇಳುವುದಾದರೆ ಇವರು :

'All wisdom, beauty and bliss are moulded into a human form of Mataji and no words can describe her infinite glory and grace'—"ಸಕಲ ಜ್ಞಾನ ಸೌಂದರ್ಯ ಮತ್ತು ಆನಂದ ಮಾತಾಜಿಯ ರೂಪದಲ್ಲಿ ಮೈದಳೆದಿದೆ. ಆಕೆಯ ಅನಂತವಾದ ವೈಭವ ಮತ್ತು ಕಾರುಣ್ಯಗಳನ್ನು ಮಾತಿನಿಂದ ಬಣ್ಣಿಸಲು ಅಸಾಧ್ಯ."

ಡಾ. ಎಂ. ವಿ. ಶ್ರೀನಿವಾಸ್

ಭಗವದ್ಗೀತೆ ಮತ್ತು ಥೋರೊ

ರಾಷ್ಟ್ರಪಿತ ಮಹಾತ್ಮಗಾಂಧಿ ಅನೇಕ ರಾಷ್ಟ್ರೀಯ ನಾಯಕರಂತೆ ಭಗವದ್ಗೀತೆಯಿಂದ ಸ್ಫೂರ್ತಿ ಮಾರ್ಗದರ್ಶನವನ್ನು ಪಡೆದು ತಮ್ಮ ಬಾಳನ್ನು ಬೆಳಗಿಸಿಕೊಂಡರೆಂಬ ವಿಷಯ ಎಲ್ಲರಿಗೂ ತಿಳಿದಿದೆ. ಆದರೆ ಗಾಂಧೀಜಿಯವರ ಮೇಲೆ ಪ್ರಭಾವ ಬೀರಿದ ಮಹಾಪುರುಷರಲ್ಲಿ ಒಬ್ಬರಾದ ಅಮೆರಿಕದ ದಾರ್ಶನಿಕ ಹೆನ್ರಿ ಡೇವಿಡ್ ಥೋರೊ ಗೀತೆಯನ್ನು ಓದಿ ಅದರ ಪ್ರೇರಣೆಯಿಂದ ಜೀವನದಲ್ಲಿ ಬೆಳಕನ್ನು ಕಂಡರೆಂಬ ವಿಷಯ ಅನೇಕರು ಅರಿತಿರಲಾರರು. ಹತ್ತೊಂಭತ್ತನೆಯ ಶತಮಾನದ ಮಧ್ಯಭಾಗದಲ್ಲಿ ಅಮೆರಿಕದ ರಾಜಕೀಯ, ಸಾಮಾಜಿಕ ಜೀವನದಲ್ಲಿನ ಲೋಪದೋಷಗಳನ್ನು ಎತ್ತಿತೋರಿಸಿದ ಈ ವಿಚಾರವಂತನ ಗ್ರಂಥವನ್ನು ಓದಿ ಸ್ಫೂರ್ತಿ ಪಡೆದು ತಾವು ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹವನ್ನು ಪ್ರಾರಂಭಿಸಿದುದಾಗಿ ಗಾಂಧೀಜಿಯವರು ಹೇಳಿ ಕೊಂಡಿದ್ದಾರೆ.

ಹತ್ತೊಂಭತ್ತನೆಯ ಶತಮಾನದಲ್ಲಿ ಭಾರತದ ಧರ್ಮ ಸಂಸ್ಕೃತಿಗಳ ಬಗ್ಗೆ ಅನೇಕ ಪಾಶ್ಚಿಮಾತ್ಯರಿಗೆ ಆಸಕ್ತಿ ಹುಟ್ಟಿತು. ಭಾರತೀಯ ಧರ್ಮಗ್ರಂಥಗಳ ಭಾಷಾಂತರವನ್ನು ಓದಿ ಹಲವು ಮಂದಿ ವಿದ್ವಾಂಸರು, ವಿಚಾರವಂತರು ನಮ್ಮ ಧರ್ಮ ಅಸಾಧಾರಣವೆಂಬುದನ್ನು ಮನಗಂಡರು.

ಅಮೆರಿಕದ ಸಂಯುಕ್ತಸಂಸ್ಥಾನಗಳಲ್ಲಿ ಖ್ಯಾತ ತತ್ತ್ವಶಾಸ್ತ್ರಜ್ಞ ಎಮರ್ಸನ್, ಥೋರೊ ಈ ರೀತಿ ಭಾರತದ ಸಾಹಿತ್ಯ ಧರ್ಮಗಳಿಂದ ಪ್ರಭಾವಿತರಾದವರಲ್ಲಿ ಮುಖ್ಯರಾದವರು. ಪಾಶ್ಚಿಮಾತ್ಯ ನಾಗರಿಕತೆಯ ಮುಖ್ಯ ಕೇಂದ್ರವಾಗಿರುವ ಅಮೆರಿಕದಲ್ಲಿ ಹುಟ್ಟಿ ಬೆಳೆದ ಈ ವಿದ್ವಾಂಸನಿಗೆ ಪ್ರಾಚ್ಯ ಧರ್ಮ ಹಾಗೂ ದರ್ಶನ ಸ್ಫೂರ್ತಿ ನೀಡಿದವು. ಗ್ರೀಕ್ ಪುರಾಣ ಹಾಗೂ ದರ್ಶನ, ಹಿಬ್ರೂ ಧರ್ಮ ಇವು ತರುಣ ಥೋರೋವಿನಲ್ಲಿ ಆಸಕ್ತಿಯನ್ನು ಹುಟ್ಟಿಸಿದವು. ಕ್ರೈಸ್ತಧರ್ಮದಲ್ಲಿ ಕಾಣದ ಆಳ ಅಂತಸ್ಸತ್ತ್ವ ಭಾರತೀಯ ಧರ್ಮಶಾಸ್ತ್ರಗಳಲ್ಲಿ ಕಂಡುಬಂದಿತು. ಕಳೆದ ಶತಮಾನದ ಪೂರ್ವಾರ್ಧದಲ್ಲೇ ಹಾರ್ವರ್ಡ್‌ನಲ್ಲಿ ತನ್ನ ವಿದ್ಯಾಭ್ಯಾಸ ಮುಗಿಸಿ ಕೊಂಡಿದ್ದ ಥೋರೊ ಭಾರತದ ಧರ್ಮಗ್ರಂಥಗಳನ್ನು ಬಹು ಆಸಕ್ತಿಯಿಂದ ಓದಿದ. "ಇಲ್ಲಿರುವ ಸರಳಜೀವನ ನೋಡುತ್ತಿರುವಂತೆಯೇ ನಮಗೆ ಸ್ವಲ್ಪಮಟ್ಟಿನ ಸ್ವಾತಂತ್ರ್ಯವನ್ನು ಕೊಡುವಂತೆ ಕಾಣುತ್ತದೆ" ಎಂದು 1841 ರಲ್ಲಿ ಥೋರೊ ಬರೆದಾಗ ಆವರಿಗೆ ಹಿಂದೂ ಧರ್ಮದ ಪರಿಚಯ ಅಷ್ಟಾಗಿ ಇರಲಿಲ್ಲ. ಉಪನಿಷತ್ತು, ಭಗವದ್ಗೀತೆ, ಮನುಧರ್ಮಶಾಸ್ತ್ರ ಇವುಗಳನ್ನು ಓದಿದಂತೆ ಅವನ ಅನುಭಾವ ವಿಸ್ತಾರಗೊಂಡಿತು. ಹೊಸ ಹೊಸ ವಿಚಾರ, ತತ್ತ್ವಗಳಿಂದ ರೂಪುಗೊಳ್ಳುತ್ತಿದ್ದ ಅವನ ಚೇತನಕ್ಕೆ ಭಾರತದಿಂದ ದಿವ್ಯ ಸ್ಫೂರ್ತಿ ದೊರೆಯಿತು.

2500 ವರ್ಷಗಳಿಂದ ತನ್ನ ಪ್ರಭಾವವನ್ನು ಹಿಂದೂ ಜನಾಂಗದ ಮೇಲೆ ಬೀರುತ್ತ ಬಂದಿದ್ದ ಗೀತೆ ಈ ಆದರ್ಶವಾದಿ ಯುವಕನಿಗೆ ದಾರಿದೀಪವಾಯಿತು. ಭಾರತೀಯ ಆಧ್ಯಾತ್ಮಿಕ ಜ್ಯೋತಿಯು ಅವನ ಬಾಳಿಗೆ ಚೈತನ್ಯವನ್ನೂ ಉತ್ಸಾಹವನ್ನೂ ನೀಡಿತು—ಎಂದು ಕ್ಯಾನ್ ಬಿ ಎಂಬ ಲೇಖಕ ಹೇಳಿದ್ದಾನೆ.

ತನ್ನ ಬಾಳಿನ ಗುರಿ ಏನಾಗಿರಬೇಕೆಂಬುದನ್ನು ನಿರ್ಧರಿಸಲು ಪ್ರಯತ್ನಿಸುತ್ತಿದ್ದ ಈ ತರುಣನಿಗೆ ಗೀತೆಯ ದಿವ್ಯ ಸಂದೇಶ ಮಾರ್ಗದರ್ಶನವಾಯಿತು. ಎಮರ್ಸನ್, ವಿಲ್‌ಡುರಾಂಡ್ ಅವರಿಗಿಂತಲೂ ಮುಂದೆ ಹೋಗಿ ಭಾರತೀಯ ದರ್ಶನದಲ್ಲಿ ಥೋರೊ ತನ್ನ ಧ್ಯೇಯಗಳನ್ನು ಕಂಡುಕೊಂಡ. "ಈ ವಿಚಾರಗಳು ನನ್ನನ್ನು ಜಾಗೃತಗೊಳಿಸಿದವು" ಎಂದು ಥೋರೊ ಹೇಳಿಕೊಂಡಿದ್ದಾನೆ.

ಈ ಮಹಾಗ್ರಂಥವನ್ನು ಓದಿದಾಗ ಪೆನ್ಸಿಲ್ ತಯಾರಿಸುವ ನನಗೆ ಇದರ ಸಂದೇಶವೇನು ಎಂದು ಥೋರೊ ಕೇಳಿಕೊಂಡ. ತನ್ನ ಸ್ವಭಾವಕ್ಕನುಗುಣವಾದ ತತ್ತ್ವಗಳು ಯಾವ ದಿಕ್ಕಿಗೆ ಕೊಂಡೊಯ್ಯುವುವೋ ಅತ್ತ ನಡೆದ ತನ್ನ ಪ್ರತಿಭೆ (genius) ಯನ್ನು ಕಂಡುಕೊಳ್ಳುವುದೇ ಅವನ ಧ್ಯೇಯವಾಗಿದ್ದಿತು. ಸ್ವಧರ್ಮಕ್ಕೆ ಅನುಗುಣವಾಗಿ ಕರ್ಮವನ್ನು ಮಾಡು ಎಂಬ ಕೃಷ್ಣನ ಉಪದೇಶ ಥೋರೊ ಮನಸ್ಸಿಗೆ ನಾಟಿತು. ತನ್ನತನವನ್ನು ದೇವರಲ್ಲಿ ಮರೆಹೋಗುವ, ದೇವರಲ್ಲಿ ಲೀನವಾಗುವ ಅದ್ಭುತ ಕಲ್ಪನೆ ಅವನ ಚೇತನಕ್ಕೆ ಪುಷ್ಟಿ ಕೊಟ್ಟಿತು. ತನ್ನ ಮನಸ್ಸಿನಲ್ಲಿದ್ದ ಅಸ್ಪಷ್ಟ ಭಾವನೆಗಳಿಗೆ ಗೀತೆಯಲ್ಲಿ ಸ್ಪಷ್ಟ ಸಮರ್ಥನೆ ದೊರಕಿತು. ತನ್ನ ಕಲ್ಪನೆಗಳಿಗೆ ಅಲ್ಲಿ ಪ್ರೇರಣೆ, ಪೋಷಣೆ ದೊರೆಯಿತು. ಆತ್ಮ ಮತ್ತು ಪರಮಾತ್ಮರ ನಡುವಿನ ವಿಕಟ ಸಂಕಲ್ಪದ ಕಲ್ಪನೆ ಈ ಅಮೆರಿಕದ ವಿದ್ವಾಂಸನಿಗೆ ಜೀವನದಲ್ಲಿ ಹೊಸ ಅರ್ಥವನ್ನು ಕೊಟ್ಟಿತು. ಪ್ರಕೃತಿಪ್ರೇಮಿಯಾಗಿದ್ದ ಈ ಯುವಕನಿಗೆ ಮಾನವ ಮತ್ತು ಪ್ರಕೃತಿಯ ನಡುವಿನ ಅಂತರವನ್ನು ಕಡಮೆ ಮಾಡುವ ಭಾರತೀಯ ವಿಚಾರಧಾರೆ ಬಹಳ ಮಹತ್ವಪೂರ್ಣವಾಗಿ ಕಂಡಿತು. ಸದಾ ಉತ್ಸಾಹದಿಂದ ತುಂಬಿ ಏನನ್ನಾದರೂ ಸಾಧಿಸಬೇಕು. ತನ್ನ ದೇಶಕ್ಕೆ ಯಾವ ರೀತಿಯಲ್ಲಾದರೂ ಸೇವೆ ಸಲ್ಲಿಸಬೇಕು ಎಂದು ಹಾತೊರೆಯುತ್ತಿದ್ದ ಈ ಯುವಕನಿಗೆ "ಶ್ರದ್ಧೆಯಿಂದ ನಿನ್ನ ಕರ್ಮವನ್ನು ಮಾಡು. ಫಲದ ಬಗ್ಗೆ ಚಿಂತಿಸಬೇಡ" ಎಂಬ ನುಡಿ ಸ್ಫೂರ್ತಿದಾಯಕವಾಯಿತು.

ಭಗವದ್ಗೀತೆಯನ್ನು ಓದುತ್ತ ಓದುತ್ತ ಹೆನ್ರಿ ಥೋರೊ ಪುಳಕಿತನಾದ. ಹಿಂದೂಸ್ತಾನದ ಮೊದಲನೆಯ ಗವರ್ನರ್ ಜನರಲ್ ವಾರನ್‌ಹೇಸ್ಟಿಂಗ್ಸ್ ಗೀತೆಯನ್ನು ಕುರಿತು ಹೇಳಿದ ಮಾತನ್ನು ಥೋರೊ ಅನುಮೋದಿಸಿದ. ಗೀತೆಯ ಇಂಗ್ಲೀಷ್ ಭಾಷಾಂತರದಲ್ಲಿ ಹೇಸ್ಟಿಂಗ್ಸ್ ಭಾರತೀಯ ದಾರ್ಶನಿಕ ಗ್ರಂಥಗಳು ಬ್ರಿಟಿಷ್ ಸಾಮ್ರಾಜ್ಯವು ನಾಶವಾದ ಮೇಲೂ, ಅದರ ಅಧಿಕಾರಸಂಪತ್ತು ಅಳಿದ ಮೇಲೂ ಉಳಿಯುತ್ತವೆ ಎಂದು ಹೇಳಿದ್ದ. ಥೋರೊ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ "ಭಗವದ್ಗೀತೆಯ ಉದಾರವೂ ವಿಶ್ವವ್ಯಾಪಕವೂ ಆದ ತತ್ತ್ವಜ್ಞಾನದೊಡನೆ ಹೋಲಿಸಿದರೆ ನಮ್ಮ ಷೇಕ್ಸ್‌ಪಿಯರ್ ಕೇವಲ ಅಪಕ್ವ ಮತ್ತು ಚಿಂತನರಹಿತ ಎನಿಸಿಕೊಳ್ಳುತ್ತಾನೆ" ಎಂದು ಸಾರಿದ.

ಭಗವದ್ಗೀತೆಯ ವ್ಯಾಪ್ತಿ ಯಾವುದೇ ದೇಶ ಮತ್ತು ಕಾಲಕ್ಕೆ ಸೀಮಿತವಾಗಿಲ್ಲ. ಇಡೀ ಜಗದ ಬದ್ಧಜೀವಿಗಳಿಗೆ, ಕರ್ತವ್ಯಮೂಢರಿಗೆ, ದುರ್ಬಲಮನಸ್ಸುಳ್ಳವರಿಗೆ ಅರ್ಜುನನ ಮೂಲಕ ಮಾರ್ಗದರ್ಶನ ಲಭಿಸುತ್ತದೆ. ಮಹಾಭಾರತದ ಯುದ್ಧದಲ್ಲಿ ಧನಂಜಯನಿಗೆ ಸಾರಥಿಯಾಗಿದ್ದು ಅವನ ಮನದ ಕತ್ತಲನ್ನು ಕಳೆದು ಬೆಳಕಿನತ್ತ ಕೊಂಡೊಯ್ದ ಶ್ರೀಕೃಷ್ಣ ಅಮೆರಿಕದ ಹೆನ್ರಿ ಡೇವಿಡ್ ಥೋರೊವಿಗೂ ಸಾರಥಿಯಾಗಿ ಅವನ ಜೀವನ ರಥ ಸುಗಮವಾಗಿ ಚಲಿಸಲು ಕಾರಣನಾದ. ಗೀತಾಮೃತವನ್ನು ಸವಿಯುತ್ತಾ ಹೋದಂತೆ ಥೋರೋವಿನ ಸ್ವಭಾವ ಸಾಧನೆಗಳಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬಂದಿತು. ಅದನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಿ ಅನೇಕ ಭಾರತೀಯರೂ ಅರ್ಥಮಾಡಿಕೊಳ್ಳಲು ಕಷ್ಟವಾದ ಕೆಲವು ತತ್ತ್ವಗಳನ್ನು ಥೋರೊ ತಿಳಿದುಕೊಂಡ. ನಾಲ್ಕು ವಿಧರಾದ ಭಕ್ತರಲ್ಲಿ ಜ್ಞಾನಿ ತನಗೆ ಅತ್ಯಂತ ಪ್ರಿಯನೆಂದು ಭಗವಂತ ತಿಳಿಸುತ್ತಾನೆ. ಹೆಚ್. ಡಿ. ಥೋರೊ ಪ್ರಖರವಾದ ಪಾಂಡಿತ್ಯ ಹೊಂದಿದ್ದಲ್ಲದೆ ಗೀತೆಯಲ್ಲಿ ತಿಳಿಸಲಾಗಿರುವ ಸ್ಥಿತಪ್ರಜ್ಞನ ಅನೇಕ ಲಕ್ಷಣಗಳನ್ನೂ ಹೊಂದಿದ್ದನೆಂದು ಹೇಳಬಹುದು.

ಭಗವದ್ಗೀತೆಯಿಂದ ಥೋರೊ ಆರಿಸಿ ತನ್ನ ಗ್ರಂಥದಲ್ಲಿ ಉದ್ಧರಿಸುವ ಭಾಗಗಳಿಂದ ಅವನ ಸ್ವಭಾವ, ಪ್ರಬುದ್ಧತೆ, ಸ್ಪಷ್ಟಪಡುತ್ತದೆ.

ಯಸ್ಯ ಸರ್ವೇ ಸಮಾರಂಭಾಃ ಕಾಮಸಂಕಲ್ಪವರ್ಜಿತಾಃ ।
ಜ್ಞಾನಾಗ್ನಿದಗ್ಧಕರ್ಮಾಣಂ ತಮಾಹುಃ ಪಂಡಿತಂಬುಧಾಃ ॥

ನಿಜವಾಗಿಯೂ ಜ್ಞಾನಾಗ್ನಿಯಿಂದ ದಗ್ಧನಾಗಿ ಪರಿಶುದ್ಧವಾದ ಚೇತನ ಥೋರೋವಿನದು. ಇನ್ನು ಕೆಳಗಿನ ಶ್ಲೋಕದಲ್ಲಿ ಕಾಣುವ ಯೋಗಿಯ ಚಿತ್ರ ಥೋರೋಗೆ ಬಹಳ ಚೆನ್ನಾಗಿ ಅನ್ವಯಿಸುತ್ತದೆ.

ಸಂತುಷ್ಟಃ ಸತತಂ ಯೋಗೀ ಯತಾತ್ಮಾ ದೃಢನಿಶ್ಚಯಃ ।
ಮಯ್ಯರ್ಪಿತ ಮನೋಬುದ್ಧಿರ್ಯೋ ಮದ್ಭಕ್ತಃಸಮೇಪ್ರಿಯಃ ॥

ಅದರಂತೆ, ಉದಾಸಿನ (ಅಂದರೆ ಫಲದಲ್ಲಿ), ಶುಚಿರ್ದಕ್ಷ, ಗತವ್ಯಥ, ಅನಿಕೇತ, ಸ್ಥಿರಮತಿ, ತುಲ್ಯನಿಂದಾ ಸ್ತುತಿರ್ಮೌನೀ ಮೊದಲಾದ ಗುಣಗಳನ್ನು ಈ ವಿದ್ವಾಂಸನಲ್ಲಿ ಕಾಣಬಹುದು. ಕರ್ಮಕ್ಕೆ ವಿಕರ್ಮ ಜೊತೆಯಾದಾಗ ನಿಷ್ಕಾಮ ಬರುತ್ತದೆ ಎಂಬುದನ್ನು ಅರಿತು ಅದರಂತೆ ಥೋರೊ ನಡೆದ."ದೂರೇಣ ಹ್ಯವರಂ ಕರ್ಮ ಬುದ್ಧಿಯೋಗಾ ನ್ಧನಂಜಯ" ಎಂಬ ಕೃಷ್ಣನ ನುಡಿ ಅವನಿಗೆ ಬಹುವಾಗಿ ಹಿಡಿಸಿತು. ಕಾಮ್ಯಕರ್ಮ ಬುದ್ಧಿಯೋಗಕ್ಕಿಂತಲೂ ಅತ್ಯಂತ ತುಚ್ಛವಾದದ್ದು. ಆದ್ದರಿಂದ ಬುದ್ಧಿಯಲ್ಲಿ ಆಶ್ರಯಪಡೆ. ಫಲಾಕಾಂಕ್ಷಿಗಳು ಕೃಪಣರು ಎಂಬ ಗೀತಾ ವಾಕ್ಯ ವನ್ನು ಥೋರೊ ಮೆಚ್ಚಿ ಅದರಂತೆ ನಡೆದ. ಗೀತೆಯನ್ನು ಕೇಳಿ ದೃಢ ನಿಶ್ಚಯನಾದ ಫಲ್ಗುಣನಂತೆ ಮನದ ಕಶ್ಮಲ ವನ್ನು ಕಳೆದುಕೊಂಡು ನಿರ್ವಿಕಾರ ಮನೋಭಾವದಿಂದ ತನ್ನ ಕರ್ತವ್ಯದಲ್ಲಿ ತೊಡಗಿದ.

ಭಾರತೀಯ ಧರ್ಮ, ಭಾಷೆಗಳ ಪೂರ್ವಪರಿಚಯವಿಲ್ಲದೆ ಪರಕೀಯನಾಗಿದ್ದರೂ ಥೋರೊ ಭಾರತದ ದರ್ಶನವನ್ನು ಅಭ್ಯಸಿಸಿ, ಅದನ್ನು ಅರಿತು ಅನುಸರಿಸಿದ್ದು ಒಂದು ಅಸಾಧಾರಣವಾದ ಸಾಧನೆಯೇ ಸರಿ. ತನ್ನ ದಿನ ಚರಿಯಲ್ಲಿ ಗ್ರಂಥಗಳಲ್ಲಿ ಈತ ಗೀತೆಯ ವಾಕ್ಯಗಳನ್ನು ಉಪಯೋಗಿಸಿರುವುದನ್ನು ನೋಡಿದಾಗ ಗೀತೆಯ ಆತ್ಮ ವನ್ನು ಆತ ಅರಿತಿದ್ದಾನೆಂದು ಹೇಳಬಹುದು. "ವೇದ್ಯಂ ಪವಿತ್ರಮೋಂಕಾರಂ" ಎನ್ನುವ ಮಹತ್ವದ ನುಡಿಯ ಸಾರ ವನ್ನು ಆತ ಅರ್ಥಮಾಡಿಕೊಂಡಂತೆ ಕಾಣುತ್ತದೆ. ಎಷ್ಟು ಜನ ಭಾರತೀಯರು ಈ ದಿವ್ಯ ಗ್ರಂಥದ ಸಾರವನ್ನು ಸರಿ ಯಾಗಿ ತಿಳಿದುಕೊಂಡಿದ್ದೇವೆಂದು ಹೇಳಬಲ್ಲರು? ಅವರಲ್ಲಿ ಎಷ್ಟು ಮಂದಿ ಗೀತೆಯ ಸಂದೇಶವನ್ನು ತಮ್ಮ ಬಾಳಿನಲ್ಲಿ ಅಳವಡಿಸಿಕೊಂಡಿದ್ದಾರೆ?

ಭಗವದ್ಗೀತೆ ನಮಗೆ ದೊರೆತಿರುವ ಅತ್ಯಂತ ಉದಾತ್ತವೂ ಪವಿತ್ರವೂ ಆದ ಗ್ರಂಥ. ಆ ಮಹಾಕೃತಿ ಯನ್ನು ಪ್ರತಿಯೊಬ್ಬ ಅಮೆರಿಕನ್ನನೂ ಅತ್ಯಂತ ಭಕ್ತಿಯಿಂದ ಓದಬೇಕೆಂದು ಥೋರೊ ವಾದಿಸುತ್ತಾನೆ. ಮಾನವ ತನ್ನ ದೋಷ ದೌರ್ಬಲ್ಯಗಳಿಂದ ವಿಮುಕ್ತನಾಗಿ ದೇವ ನಿರ್ಮಿತವಾದ ಪ್ರಕೃತಿಯೊಂದಿಗೆ ಹೊಂದಿಕೊಂಡು ಜೀವಿ ಸುವುದು ಅಗತ್ಯವೆಂದು ಅವನು ಭಾವಿಸುತ್ತಾನೆ. ಕರ್ಮದ ಫಲದ ಬಗ್ಗೆ ಯೋಚಿಸದೆ ಆತ್ಮ ವಿಶ್ವಾಸದಿಂದ ಜೀವಿಸ ಬೇಕು. ತನ್ನ ಜೀವನದ ಅನುಭವ ಅನಿಸಿಕೆಗಳನ್ನು, ಪರಿಣಾಮಗಳನ್ನು ಇತರರ ಪ್ರಯೋಜನಕ್ಕಾಗಿ ಪ್ರಕಟಿಸಬೇಕು ಎಂಬುದು ಥೋರೊವಿನ ಧ್ಯೇಯವಾಯಿತು. ಸರಳಜೀವನ ಪರಿಶುದ್ಧ ಚಾರಿತ್ರ್ಯ ಗೀತೆಯಲ್ಲಿ ಕಾಣುವ ಸ್ಥಿತಪ್ರಜ್ಞ ಲಕ್ಷಣಗಳು ಅವನ ಬಾಳಿನುದ್ದಕ್ಕೂ ಕಾಣುತ್ತವೆ.

ಭಾರತೀಯರೇ ತಮ್ಮ ಧರ್ಮ ಸಂಸ್ಕೃತಿಗಳನ್ನು ತಿರಸ್ಕರಿಸಿ ಪರಧರ್ಮದ ವ್ಯಾಮೋಹದಲ್ಲಿ ಸಿಲುಕು ತ್ತಿದ್ದ ಪರಿಸ್ಥಿತಿಯಲ್ಲಿ ಹಿಂದೂಧರ್ಮದ ಹೃದಯದಂತಿರುವ ಭಗವದ್ಗೀತೆಯ ಅಂತರಾರ್ಥವನ್ನು ಅರಿತು ಅದರಂತೆ ನಡೆಯಲು ಯತ್ನಿಸಿದ ಈ ಮಹಾನುಭಾವನ ಆದರ್ಶ ಅನುಪಮವಾದುದು. ಪ್ರಾಯಶಃ ಈ ಕಾರಣದಿಂದಲೇ ಮಹಾತ್ಮಾಗಾಂಧಿಯವರು ಥೋರೋವಿನ ಕೃತಿಗಳನ್ನು ಓದಿ ಸ್ಫೂರ್ತಿಪಡೆದು ತಮ್ಮ ಸತ್ಯಾಗ್ರಹ ವಿಧಾನವನ್ನು ರೂಪಿಸಿಕೊಂಡರು. ಹೆನ್ರಿಡೇವಿಡ್ ಥೋರೊವಿನ ಕೃತಿಗಳನ್ನೂ ಅವನ ಬಾಳಿನ ಕತೆಯನ್ನೂ ಓದಿದಾಗ ಅವನೊಬ್ಬ ಅದ್ವಿತೀಯ ವಿಚಾರವಂತ, ವಿದ್ವಾಂಸ ಎಂದು ಧಾರಾಳವಾಗಿ ಹೇಳಬಹುದು.

ಎಚ್. ಎಂ. ಶಂಕರನಾರಾಯಣರಾವ್

ಸತ್ಯವತಿ

'ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ' ಎಂಬ ಗಾದೆ ಕನ್ನಡದಲ್ಲಿ ಉಂಟಲ್ಲವೇ ? ಬೆಟ್ಟವನ್ನು ದೂರದಿಂದ ನೋಡಿದಾಗ ಹಸಿರು ಹುಲ್ಲಿನ ಮಕಮಲ್ ಬಟ್ಟೆಯನ್ನು ಹೊದಿಸಿದಂತೆ ಅದು ರಮ್ಯವಾಗಿ ಕಂಡು, ಹತ್ತಿರ ಹೋದಾಗ ಅದರಲ್ಲಿರುವ ಹಳ್ಳ ಕೊಳ್ಳ ತಿಟ್ಟು ತಗ್ಗು ದುಷ್ಟಮೃಗಗಳು ಗೋಚರವಾಗಿ ಅಲ್ಲಿ ಕಾಲಿಡಲು ನಮಗೆ ದಿಗಿಲುಂಟಾದರೆ ಅದೇನೂ ಆಶ್ಚರ್ಯವಲ್ಲ. ಪ್ರತಿಯೊಂದು ಸಂಸಾರಕ್ಕೂ, ಪ್ರತಿಯೊಬ್ಬನ ಬದುಕಿಗೂ ಈ ಮಾತು ಅನ್ವಯಿಸುತ್ತದೆ–ಅದರಲ್ಲಿಯೂ ವಿಶೇಷವಾಗಿ ಅರಮನೆಗಳಿಗೆ. ಅರಮನೆ ನಮಗಂತೂ ದೂರದ ಬೆಟ್ಟ. ದೂರದಿಂದ ಅದು ರಮ್ಯವಾಗಿ ಭವ್ಯವಾಗಿ ಗೋಚರಿಸುತ್ತದೆ. ಆದರೆ ಅದನ್ನು ಒಳಹೊಕ್ಕು ಪರಿಶೀಲಿಸಿದಾಗ ಯಾವ ಹುಲಿ, ಯಾವ ಹಾವು, ಯಾವ ಕರಡಿ, ಒಟ್ಟಿನಲ್ಲಿ ಯಾವ ದುಷ್ಟ ಜಂತು ಎಲ್ಲಿ ಅಡಗಿರುವುದೋ ಯಾರಿಗೆ ಗೊತ್ತು? ಅರಮನೆಯಲ್ಲಿ ಸುಖವುಂಟು, ಸಮೃದ್ಧಿಯುಂಟು ; ಅಲ್ಲಿ ವಾಸಿಸುವರು ಸುಖಪುರುಷರು ಎಂಬ ಭಾವನೆ ನಮ್ಮಲ್ಲಿದೆ. ಈ ಭಾವನೆ ಅಭಿಪ್ರಾಯ ತಪ್ಪು ಎನ್ನುವುದಕ್ಕೆ ನಮ್ಮ ನಾಡಿನ ಗುರುಕಾವ್ಯಗಳಾದ ರಾಮಾಯಣ, ಮಹಾಭಾರತಗಳೇ ಸಾಕ್ಷಿಯಾಗಿ ನಿಂತಿವೆ. ಈ ಮಹಾಕಾವ್ಯಗಳ ಕಥೆ ನಡೆದಾಗ ಬದುಕಿದ್ದ ವಾಲ್ಮೀಕಿ ವ್ಯಾಸರು ಅರಮನೆಯ ಸಂಸಾರದ ವಾಸ್ತವ ಚಿತ್ರವನ್ನು ಇಲ್ಲಿ ನಮಗೆ ಒದಗಿಸಿ ಕೊಟ್ಟಿದ್ದಾರೆ. ಈ ಎರಡು ಕೃತಿಗಳಲ್ಲಿ ಬರುವ ಪುರುಷರ ಮಾತು ಹಾಗಿರಲಿ. ಅವರಿಗೆ ಯುದ್ಧವಿರುತ್ತದೆ. ಬೇರೆಬೇರೆ ರಾಜಕಾರ್ಯವಿರುವುದರಿಂದ ಕಾಲ ಹೇಗೋ ಸರಿದು ಹೋಗುತ್ತದೆ. ಆದರೆ ಇಲ್ಲಿ ಬರುವ ಸ್ತ್ರೀಯರ ಬದುಕನ್ನು ನೋಡಿದಾಗ, ನೆನೆದಾಗ, ಅವರ ದುಃಖ, ಪಟ್ಟಪಾಡನ್ನು ಸ್ಮರಿಸಿಕೊಂಡಾಗ ಕಣ್ಣು ಹನಿಗೂಡುತ್ತದೆ. ಅರಮನೆಯಲ್ಲಿ ಹುಟ್ಟಿ ಬೆಳೆದು, ಮಹಾಪುರುಷರನ್ನು ಕೈ ಹಿಡಿದರೂ ಅವರಿಗೆ ಮೇಲಿಂದ ಮೇಲೆ ಒದಗಿ ಬಂದ ಕ್ಲೇಶಗಳನ್ನು ಮೆಲುಕುಹಾಕಿ ಮನಸ್ಸು ನಿರ್ವಿಣ್ಣವಾಗುತ್ತದೆ. ವ್ಯಾಸಕೃತ ಭಾರತದಲ್ಲಿ ಬರುವ ಸ್ತ್ರೀಪಾತ್ರಗಳಲ್ಲಿ ಸತ್ಯವತಿಯದು ಅಂಥದೊಂದು ಪಾತ್ರ. ಕುಮಾರವ್ಯಾಸನು ಸತ್ಯವತಿಯ ಪಾತ್ರವನ್ನು ಹೇಗೆ ಚಿತ್ರಿಸಿದ್ದಾನೆಂಬುದು ಈ ಪ್ರಬಂಧದ ವಿಷಯ.

ದೇವೇಂದ್ರನ ಮಿತ್ರನಾದ ಉಪರಿಚರವಸುವಿನ ಮಗಳಾಗಿ, ಬ್ರಹ್ಮಶಾಪದಿಂದ ಮೀನಾಗಿದ್ದ ಅದ್ರಿಕೆಯೆಂಬ ಅಪ್ಸರೆಯ ಗರ್ಭದಲ್ಲಿ ಬೆಳೆದು, ಮತ್ಸ್ಯಗಂಧಿಯೆನಿಸಿ, ವಿಧಿಯ ನಿಷ್ಕರುಣೆಗೆ ಒಳಗಾಗಿ, ಬೆಸ್ತನಾದ ದಾಶರಾಯನನ್ನು ಸೇರಿ, ದೋಣಿ ನಡೆಸಿ ಬದುಕನ್ನು ಸಾಗಿಸುತ್ತ, ತನ್ನ ರೂಪಕ್ಕೆ ಮರುಳಾದ ಪರಾಶರರಿಂದ ಯೋಜನಗಂಧಿತ್ವ, ವ್ಯಾಸರು, ಕನ್ಯತ್ವವನ್ನು ಪಡೆದು, ಚಂದ್ರವಂಶದ ಶಂತನುವನ್ನು ಕೈಹಿಡಿದು, ಚಕ್ರವರ್ತಿನಿಯೆನಿಸಿಕೊಂಡು, ಚಕ್ರವರ್ತಿ ಪುತ್ರರನ್ನು ಪಡೆದರೂ, ತನ್ನ ಕಣ್ಣೆದುರಿಗೇ ನಡೆದ ಅನರ್ಥಗಳಿಗೆ ಮೂಕಸಾಕ್ಷಿಯಾಗಿ ನಿಂತು, ಎಲ್ಲವನ್ನೂ ಮೌನವಾಗಿ ಸಹಿಸಿಕೊಂಡು, 'ತನ್ನ ಒಡಲಿಂಗೆ ಬಪ್ಪ ದುಃಖಂಗಳಿಗೆ ಸಾಕ್ಷಿಯಾಗಿ ನಿಂತು, ಮಗನಾದ ವೇದವ್ಯಾಸನ ಮಾತಿನಂತೆ ಸೊಸೆಯರೊಂದಿಗೆ ಕಾಡಿಗೆ ನಡೆದವಳು ಸತ್ಯವತಿ ಅವಳ ಬದು

ಕನ್ನು ನೆನೆದಾಗ ರಾಣಿಯಾಗಿ, ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು, ರಾಜ್ಯ ವೈಭವ–ಇವುಗಳನ್ನು ಪಡೆದು ಅವಳು ಪಟ್ಟ ಸುಖವೇನು ಎಂಬ ಪ್ರಶ್ನೆ ನಮ್ಮ ಮುಂದೆ ನಿಲ್ಲುತ್ತದೆ.

ಶ್ರೀಕೃಷ್ಣನ ಪಾತ್ರವನ್ನು ವಿಸ್ತಾರವಾಗಿ ನಿರೂಪಿಸಿ, ಕುರುಪಾಂಡವರ ಕಥೆಯನ್ನು ಹೇಳುವುದರಲ್ಲಿ ನಟ್ಟ ದೃಷ್ಟಿಯುಳ್ಳ ಕುಮಾರವ್ಯಾಸನು ಸಂಸ್ಕೃತ ಮಹಾಭಾರತದಲ್ಲಿ ಬರುವ ಸತ್ಯವತಿಯ ಬದುಕಿಗೆ ಸಂಬಂಧಿಸಿದ ಪೂರ್ಣ ವಿವರಗಳನ್ನು ಇಲ್ಲಿ ನಿರೂಪಿಸಿಲ್ಲ. ಆಕೆಯ ಬದುಕಿನ ರೂಪರೇಖೆಗಳನ್ನು ಮಾತ್ರ ಕವಿ ನಮ್ಮ ಅವಗಾಹನೆಗೆ ತರುತ್ತಾನೆ. ಉದಾಹರಣೆಗೆ ಪರಾಶರರು ಸತ್ಯವತಿಯನ್ನು ಕೂಡಿದ ಸಂದರ್ಭದಲ್ಲಿ ಅವರಿಬ್ಬರಿಗಾದ ಮಾತು ಕಥೆ, ರಾಜ್ಯ ಸ್ವೀಕಾರ ಮತ್ತು ಮಕ್ಕಳನ್ನು ಪಡೆಯುವ ವಿಷಯವಲ್ಲಿ ಸತ್ಯವತಿ ಮತ್ತು ಭೀಷ್ಮರಿಗಾದ ಸಂಭಾಷಣೆ, ತಾಯಿಗೆ ಅವಳ ಸೊಸೆಯರಲ್ಲಿ ಮಕ್ಕಳಾಗಲು ವ್ಯಾಸರು ಕೊಟ್ಟ ಸೂಚನೆ–ಈ ವಿವರಗಳನ್ನು ಕುಮಾರವ್ಯಾಸನು ಕೈಬಿಟ್ಟದ್ದಾನೆ. ಆದರೂ ಕನ್ನಡ ಭಾರತದ ಅಲ್ಪಾವಕಾಶದಲ್ಲಿ ಬರುವ ಸತ್ಯವತಿಯ ಪಾತ್ರದ ಒಂದು ಚಿತ್ರವನ್ನು ನಾವು ಕಲ್ಪಿಸಿಕೊಳ್ಳಬಹುದು.

ಸತ್ಯವತಿ ಉಪರಿಚರವಸುವಿನ ವೀರ್ಯದಿಂದ 'ಮೀನ ಬಸುರಲಿ' ಜನಿಸಿದವಳು ಸುಂದರಿ, 'ನಳಿನ ಲೋಚನೆ.' ಆದರೆ 'ಮತ್ಸ್ಯಗಂಧಿನಿ' ದಾಶರಾಯನ ವಶಕ್ಕೆ ಸಂದಾಗ, ಈಕೆ ತಂದೆಯ ವೃತ್ತಿಯನ್ನು ಕೈಕೊಂಡು, ಜನರನ್ನು ಯಮುನಾ ನದಿಯನ್ನು ದಾಟಿಸುತ್ತಿದ್ದಾಗ, ಒಮ್ಮೆ 'ಸಂಗವಾಯ್ತು ಪರಾಶರವ್ರತಿಯ.' ತನ್ನ ಸೌಂದರ್ಯವನ್ನು ಮೋಹದ ದೃಷ್ಟಿಯಿಂದ ನೋಡಿದ ಪರಾಶರರನ್ನು ಇವಳು ತಿರಸ್ಕರಿಸುವಂತಿರಲಿಲ್ಲ–ಎರಡು ಕಾರಣಗಳಿಂದ. ಒಂದು ಕಡೆ ಶಾಪದ ಭಯ ; ಮತ್ತೊಂದು ಕಡೆ ವರದ ಆಕರ್ಷಣೆ. ಪರಾಶರರ ಸಂಪರ್ಕದಿಂದ ಸತ್ಯವತಿಗೆ ನಷ್ಟವೇನೂ ಆಗಲಿಲ್ಲ ; ಅತಿಶಯವಾದ ಲಾಭವೇ ಉಂಟಾಯಿತು. ಮತ್ಸ್ಯಗಂಧಿ ಯೋಜನಗಂಧಿಯಾದಳು. ಇದರಿಂದ ದಾಶರಾಯನು ಸುಪ್ರೀತನಾದನು. ಎರಡನೆಯದಾಗಿ ಲೋಕೋತ್ತರವಾದ ಖ್ಯಾತಿಯನ್ನು ಪಡೆಯತಕ್ಕ ವೇದವ್ಯಾಸನೆಂಬ ಮಗನನ್ನು ಪಡೆದುದಲ್ಲದೆ, ಮುಂದೆ ಅವನಿಂದ ಅನುಕೂಲವಾಗತಕ್ಕ 'ನೆನೆ ವಿಪತ್ತಿನೊಳು' ಎಂಬ ಆಶ್ವಾಸನೆಯನ್ನು ಮಗನಿಂದ ಪಡೆದಳು. ಇಷ್ಟಾದರೂ ಮುನಿಯ ಅನುಗ್ರಹದಿಂದ ಇವಳ ಕನ್ಯತ್ವ ಕೆಡಲಿಲ್ಲ. ಇಲ್ಲಿಯವರೆಗೆ ಸತ್ಯವತಿ ಯೌವನದ ಹೂಬಿಸಿಲಿನಲ್ಲಿ ಸುಖಸಂತೋಷಗಳಿಂದ ಕಾಲಕಳೆದಳು. ಇಲ್ಲಿಗೆ ಸತ್ಯವತಿಯ ಸುಖದ ಕಥೆ ಮುಗಿಯಿತು. ಮುಂದಿನದು ದಾರುಣದ ವೃತ್ತಾಂತ.

ಮುವ್ವತ್ತಾರು ವರ್ಷಗಳ ಕಾಲ ಸ್ತ್ರೀ ಸುಖದಿಂದ ಪರಾಙ್ಮುಖನಾಗಿದ್ದ ಶಂತನು ಒಮ್ಮೆ ಯಮುನಾ ನದಿಯ ತೀರದಲ್ಲಿ ಬೇಟೆಯಾಡುತ್ತ ಬರುತ್ತಿರಲು, ಪರಿಮಳದ ಕಂಪ್ಪುತಟ್ಟಿ, ಅದನ್ನು ಅನುಸರಿಸಿ ಬರುತ್ತ, ತರುಣಿಯಾದ ಸತ್ಯವತಿಯನ್ನು ಕಂಡು ಅವಳಲ್ಲಿ ಮೋಹಗೊಂಡನು. ಅಲ್ಲದೆ ಅವಳ ಪ್ರಶ್ನೋತ್ತರಗಳನ್ನು ವಿಚಾರಿಸಿ, ತನ್ನನ್ನು ಕೈಹಿಡಿದು ಅರಮನೆಗೆ ಬರಬೇಕೆಂದು ಪ್ರಾರ್ಥಿಸಿದನು. ವಯಸ್ಸಾದ ದೊರೆಯನ್ನು ನೋಡಿ 'ತಂದೆಯ ಪರಮವಚನ ಅಲಂಘ್ಯ', ಎಂಬ ಮಾತು ಸತ್ಯವತಿಯ ಬಾಯಿಂದ ಹೊರಬಿತ್ತು. ಶಂತನು ಕಾತರಿಸಿ ಭಗ್ನಮನೋರಥನಾಗಿ ಅರಮನೆಗೆ ಹಿಂದಿರುಗಿದನೆಂದು ಕವಿ ನುಡಿಯುತ್ತಾನೆ.* ಇಲ್ಲಿ ಭಗ್ನಮನೋರಥನಾದವನ್ನು ಯಾರಿಗೆ ? ಶಂತನುವಿಗೋ ಸತ್ಯವತಿಗೋ ?

ಮಾ

*ನಿನಿಯು ಕಂಡನು ಬೇಂಟೆಯಾಡುತ
ಜನಪ ಶಂತನು ಮರುಳುಗೊಂಡನು ಮದನನೆಸುಗೆಯಲಿ ॥
ಪರಿಮಳದ ಬಳಿವಿಡಿದು ಬಂದೀ । ತರುಣಿಯಾರು ಕಂಡಾರು ನೀನೆಂ ।
ದರಸ ಬೆಸಗೊಂಡನು ಕಾಮನ ಶರಕೆ ಮೆಯ್ಯೊಡ್ಡಿ ॥
ಅರಮನೆಗೆ ನಡೆಯೆನಲು ತಂದೆಯು । ಪರಮ ವಚನವಲಂಘ್ಯವೆನೆ ಕಾ ।
ತರಿಸಿ ಭಗ್ನಮನೋರಥನು ಮರಳಿದನು ಮಂದಿರಕೆ ॥ ೧,೩–೨೪,೨೫.

ಇಲ್ಲಿ ಕ್ಷಣಕಾಲ ನಿಂತು ಶಂತನುವನ್ನು ನೋಡಿದಾಗ ಸತ್ಯವತಿಯ ಮನಸ್ಸಿನಲ್ಲಿ ಮೂಡಿದ ಭಾವಗಳೇನೆಂಬುವನ್ನು ಪರಿಶೀಲಿಸಬಹುದು. ಶಂತನು ಸತ್ಯವತಿಯನ್ನು ನೋಡುವ ವೇಳೆಗೆ ಅವನಿಗೆ ವಯಸ್ಸಾಗಿತ್ತು. ಭೀಷ್ಮನಿಗೆ ಅವನು ಆಗಲೇ ಯುವರಾಜ ಪಟ್ಟವನ್ನು ಕಟ್ಟಿದ್ದನು. ರಾಜನನ್ನು ನೋಡಿದಾಗ ಅವನ ವಯಸ್ಸು ಸತ್ಯವತಿಯ ಮೇಲೆ ಪರಿಣಾಮವನ್ನುಂಟು ಮಾಡಿರಬೇಕು. ಅದಕ್ಕೇ ಇರಬೇಕು, ಗಂಗೆಯಂತೆ ಮೊದಲಬಾರಿಗೆ ತನ್ನ ಒಪ್ಪಿಗೆಯನ್ನು ಸೂಚಿಸದೆ, ಯೋಜನಗಂಧಿ ಈ ಹೊಣೆಯನ್ನು ತಂದೆಯ ಮೇಲೆ ಹಾಕಿದಳು. ಎಲ್ಲ ಹೆಣ್ಣುಮಕ್ಕಳ ತಂದೆಯಂತೆ ದಾಶರಾಜನು ಮಗಳಿಗಾಗಿ, ಮಗಳ ಮಕ್ಕಳಿಗಾಗಿ ರಾಜ್ಯವನ್ನು ಬೇಡಿದನು. ಮೂಲತಃ ಅವನು ಸತ್ಯವತಿಯ ಮನಸ್ಸಿನ ಆಶೋತ್ತರಗಳನ್ನು ವಿಚಾರಿಸಲಿಲ್ಲ. ತಂದೆಗಾಗಿ ತನ್ನನ್ನು ವಿಚಾರಿಸಬಂದ ಭೀಷ್ಮನ ಆಕೃತಿಯನ್ನು ನೋಡಿ, ಅವಳಲ್ಲಿ ಅವನನ್ನು ಮದುವೆಯಾಗುವ ಆಸೆ ಮೊಳೆತಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ದೈವಸಂಕಲ್ಪ ಬೇರೆಯಾಗಿತ್ತು. ಭೀಷ್ಮನ ತ್ಯಾಗದಿಂದ ಶಂತನುವಿನ ಕೈಹಿಡಿದು,* ಅವನ ಹೆಂಡತಿಯಾಗಬಹುದಾಗಿದ್ದ ಆಕೆ ಅವನ ತಾಯಿಯಾದಳು.

ಶಂತನುವನ್ನು ಕೈಹಿಡಿದು ರಾಣಿಯೆನಿಸಿಕೊಂಡ ಸತ್ಯವತಿ ಪಟ್ಟ ಸುಖವೇನು ? ಭೀಷ್ಮನಿಗೆ ಹೆಮ್ಮೆವರ ಬೇಡಿದ ತಂದೆಯಿಂದ ರಾಣಿಯೆನಿಸಿಕೊಂಡ ಯೋಜನಗಂಧಿ, ಶಂತನುವಿನಿಂದ 'ದೀಪ್ತಜ್ವಲನತೇಜ'ರಾದ ಚಂದ್ರವಶಕ್ಕೆ ಕಲ್ಪವೃಕ್ಷದಂತಿದ್ದ ಇಬ್ಬರು ಮಕ್ಕಳನ್ನೇನೋ ಪಡೆದಳು. ಆದರೆ ಇಲ್ಲಿಂದ ಮುಂದೆ ಅವಳ ಬಾಳು ಇಳಿಮುಖವಾಯಿತು. ಮಕ್ಕಳು ಹುಟ್ಟಿದ ತರುಣದಲ್ಲಿಯೇ ಶಂತನು ಸತ್ತು ಸ್ವರ್ಗವೇರಲು, ಸತ್ಯವತಿಯ ಬಾಳು ಬರಿದಾಯಿತು. ಹುಟ್ಟಿದ ಇಬ್ಬರು ಮಕ್ಕಳಲ್ಲಿ ಹಿರಿಯವನಾದ ಚಿತ್ರಾಂಗದನು ಗಂಧರ್ವರೊಡನೆ ಕಾದಿ ಮಡಿದನು. ಅಣ್ಣನ ನಂತರ ಭೀಷ್ಮನು ತಮ್ಮನಾದ ವಿಚಿತ್ರವೀರ್ಯನಿಗೆ ಪಟ್ಟಕಟ್ಟಿ 'ಸಕಲ ರಾಜ್ಯಶ್ರೀಯನಾತಂಗಿತ್ತು ತಾಯ ಚಿತ್ತವ ಪಡೆದು ಮೆಚ್ಚಿಸಿದನು ಜಗತ್ರಯವ.' ಅಲ್ಲದೆ ಅವನಿಗೆ ಅಂಬಿಕೆ, ಅಂಬಾಲಿಕೆಯರನ್ನು ತಂದು ಮದುವೆ ಮಾಡಿದನು. ಭೀಷ್ಮನ ಔದಾರ್ಯ, ಮಗನ ಉತ್ಕರ್ಷದಿಂದ ಸತ್ಯವತಿ ನೆಮ್ಮದಿಯ ನಿಟ್ಟುಸಿರನ್ನು ಬಿಟ್ಟಿರಬೇಕು. ಆದರೆ ಈ ನೆಮ್ಮದಿ ಈಕೆಗೆ ಬಹಳ ಕಾಲ ಉಳಿಯಲಿಲ್ಲ. ಧರ್ಮಾತ್ಮನಾದ ವಿಚಿತ್ರವೀರ್ಯ ಕಾಮಾತ್ಮನಾಗಿ ಪರಲೋಕವನ್ನು ಸೇರಿದನು. ಸತ್ಯವತಿಯ ತಂದೆ ಮಾಡಿದ ಯುಕ್ತಿ ವಿಧಿಯಿಂದ ಬುಡಮೇಲಾಗಿ, ಅವಳು ಮಕ್ಕಳಿಲ್ಲದ ವಿಧವೆಯಾದಳು. ಭರತವಂಶ ಅವಳಲ್ಲಿ ಬಂದು ನಿಂತಿತು-ಎಂಬ ಅಪವಾದ ತಟ್ಟುವಂತಾಯಿತು, ದಾಶರಾಜಪುತ್ರಿಗೆ.

ತನ್ನಿಬ್ಬರು ಮಕ್ಕಳು ತೀರಿಕೊಂಡಿದ್ದಾರೆ. ಸೊಸೆಯರು ತನ್ನಂತೆ ವಿಧವೆಯರಾಗಿದ್ದಾರೆ. ರಾಜ್ಯ ಅರಾಜಕವಾಗಿದೆ. ದಿಕ್ಕುತೋರದ ಈ ಹೆಣ್ಣು 'ಮದುವೆಯಾಗಿ ರಾಜ್ಯವನ್ನಾಳು' ಎಂದು ಭೀಷ್ಮನನ್ನು ಬೇಡಿದಳು. ಆದರೆ ಭೀಷ್ಮನು ತಾಯಿಯ ಈ ಮಾತನ್ನು ಮಾತ್ರ ಮನ್ನಿಸದಿರಲು, ಸತ್ಯವತಿ ಕಂಗೆಟ್ಟು ಚಿಂತೆಗೆ ಒಳಗಾದಳು. ಆಗ ಇದ್ದಕ್ಕಿದ್ದಂತೆ ಅವಳಿಗೆ ವೇದವ್ಯಾಸನ ನೆನಪಾಗಿ 'ಮಗನೆ, ವೇದವ್ಯಾಸ ಬಹುದು' ಎಂದು ಅವನನ್ನು ನೆನೆದಳು. ವೇದವ್ಯಾಸನ ನೆನಪು 'ಮುಳಿದ ಭರತಾನ್ವಯದ ಬೆಸುಗೆಯ ತೆಱನಂತಿದ್ದು' ಸತ್ಯವತಿಯ ಚಿಂತೆಯ ಕಾರ್ಮೋಡದಲ್ಲಿ ಒಂದು ಮಿಂಚಿನಂತಿದೆ. ಸತ್ಯವತಿಯ ಕರೆಯಲ್ಲಿ ಅವಳ ಬದುಕಿನ ಆರ್ತನಾದ ಕೇಳಿಬರುತ್ತಿದೆ.

ಇದರೊಡನೆ ಪಂಪನ ಈ ಪದ್ಯವನ್ನು ಹೋಲಿಸಿ–

ಮೃಗಯಾ ವ್ಯಾಜದಿನೊರ್ಮೆ ಶಂತನು ತೊೞಲ್ತರ್ಪಂ ಪಳಂಚಲ್ಕೆ ತ
ನ್ಮೃಗಶಾಬಾಕ್ಷಿಯ ಕಂಪು ತಟ್ಟೆ ಮಧುಪಂಬೊಲ್ ಸೋಲ್ತು ಕಂಡೊಲ್ದು ನ
ಲ್ಮೆಗೆ ದಿಬ್ಯಂಬಿಡಿವಂತೆ ಪೋಲ್ ಪಿಡಿದು ನೀಂ ಬಾ ಪೋಪಮೆಂದಂಗೆ ಮ
ಲ್ಲಗೆ ತತ್ಕನ್ಯಕೆ ನಾಣ್ಚಿ ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ ? (೧–೭೦)

* ಸತ್ಯವತಿ ಕೈ ಹಿಡಿದದ್ದು ವಯಸ್ಸಾದ ರಾಜನನ್ನು ತಾನೆ ? ಪಂಪನು ಪರಾಶರರನ್ನು ವೃದ್ಧರು ಎನ್ನುತ್ತಾನೆ. ಏನು ದುರದೃಷ್ಟ ಇವಳದು !

'ವಿಚಿತ್ರವೀರ್ಯನ ಕ್ಷೇತ್ರದಲ್ಲಿ ನಿನ್ನಿಂದ ಮಕ್ಕಳಾಗಲಿ' ಎಂದು ಸತ್ಯವತಿ ವ್ಯಾಸರಿಗೆ ನುಡಿದಾಗ, ಆವಳ ಮನಸ್ಸಿನಲ್ಲಿ ಒಂದು ಕಡೆ ಕರ್ತವ್ಯದೃಷ್ಟಿ,ಮತ್ತೊಂದು ಕಡೆ ದಾಕ್ಷಿಣ್ಯ,ಮಗುದೊಂದು ಕಡೆ ಸಂಕಟ ಇವು ಉಂಟಾಗಿರಬೇಕು ಆ ಮಹಾತಾಯಿಗೆ. 'ವ್ಯಾಸರನ್ನು ಕೂಡಿ ಮಕ್ಕಳನ್ನು ಪಡೆಯಿರಿ' ಎಂದು ಸೊಸೆಯರಿಗೆ ಆಜ್ಞಾಪಿಸಿದಾಗ ಆಕೆ ಎಷ್ಟು ನೊಂದುಕೊಂಡಳೋ ! ಇಷ್ಟೆಲ್ಲ ಪ್ರಯತ್ನಪಟ್ಟರೂ ಸತ್ಯವತಿಗೆ ದೊರೆತ ಫಲವೇನು ? ವ್ಯಾಸರ 'ದಿವ್ಯ ರೂಪವನಿಂದುಮುಖಿ ಕಂಡಕ್ಷಿಗಳ ಭಯದಿಂದ ಮುಚ್ಚಿದಳು' ಪರಿಣಾಮ ಅಂಬಿಕೆಯಲ್ಲಿ ಜಾತ್ಯಂಧನಾದ ಧೃತರಾಷ್ಟ್ರನು ಹುಟ್ಟಿದನು. ಅಂಬಾಲಿಕೆಗಾದರೋ 'ಮುನಿಯ ರೌದ್ರಾಕಾರದರ್ಶನ' ದಿಂದ ಮುಖ ಬಿಳುಪೇರಿತು. ಪಾಂಡುಮಯನಾದ ಮಗನು ಹುಟ್ಟಿದನು. ಇಲ್ಲಿಯೂ ಅವಳ ಅದೃಷ್ಟ ಸುಮಾರಾಗಿ ಬರಿಯ ಕೈಗಿಂತ ಹಿತ್ತಾಳೆಯ ಕಡಗ ಉತ್ತಮವೆನ್ನುವಂತಾಯಿತು. ಭೀಷ್ಮನ ಹಿರಿಮೆಯಿಂದ, ಔದಾರ್ಯದಿಂದ* ಧೃತರಾಷ್ಟ್ರ ಪಾಂಡುಗಳು ಬೆಳೆದು ದೊಡ್ಡವರಾಗಿ, ಗೃಹಸ್ಥರಾಗಿ ಅನ್ಯೋನ್ಯವಾಗಿ ಬಾಳಿದ್ದನ್ನು ಯೋಜನಗಂಧಿ ನೋಡಿದಳು. ದುರ್ದಿನದಲ್ಲಿ ಸೂರ್ಯನ ಹೊಂಬಿಸಿಲು ಆಗಾಗ ಕಾಣಿಸಿಕೊಂಡು ಮರೆಯಾಗುವಂತೆ ಸತ್ಯವತಿಗೆ ಈ ಸಂತೋಷ ಇದ್ದದ್ದು ಅಲ್ಪಕಾಲ ಮಾತ್ರ. ಪಾಂಡು ಮುನಿಶಾಪಕ್ಕೆ ತುತ್ತಾಗಿ ಪತ್ನಿಯರೊಡನೆ ಕಾಡಿಗೆ ಹೋಗುತ್ತಲೇ ಈ ಸಂಸಾರದಲ್ಲಿ ವಿರಸ ಕಾಣಿಸಿಕೊಂಡಿರಬೇಕು.

ಧೃತರಾಷ್ಟ್ರನ ಹೆಂಡತಿ ಗಾಂಧಾರಿಯೊಡನೆ, ಶಕುನಿಯೂ ಬಂದನು. ಕುರುವಂಶವನ್ನು ಮುರಿಯಲು, ಒಡೆಯಲು ಮೊದಲನೆಯ ಮೆಟ್ಟಲಾದನು. ಪಾಂಡು ಕಾಡಿಗೆ ಹೋದಮೇಲೆ ರಾಜ್ಯದ ಹೊರೆ ಭೀಷ್ಮರ ಮೇಲೆ ಬಿದ್ದಿತಷ್ಟೆ. ಗಾಂಧಾರಿಯ ಅಸೂಯೆಯ ಫಲವಾಗಿ ಹುಟ್ಟಿದವರು ನೂರು ಮಂದಿ ಕೌರವರು. 'ಅಜ್ಜ ಸಾಕಿದ ಮಕ್ಕಳು ಯಾವ ಕಜ್ಜಕ್ಕೂ ಬಾರರು' ಎಂಬ ಲೋಕೋಕ್ತಿಯಂತೆ, ಭೀಷ್ಮನ ಹೆದರಿಕೆ, ತಂದೆ ತಾಯಿಗಳ ಅಂಕೆ, ಶಕುನಿಯ ದುರ್ಬೋಧೆ ಇವುಗಳ ಪರಿಣಾಮವಾಗಿ ಬೆಳೆದ ಮರಿಮಕ್ಕಳ ದಿನದಿನದ ಕೋಲಾಹಲವನ್ನು ಕಂಡ ಸತ್ಯವತಿಗೆ ತಲೆಚಿಟ್ಟು ಹಿಡಿದಿರಬೇಕು. ಈ ಕಷ್ಟಕೋಟಲೆಗಳಿಗೆ ಕಲಶವಿಟ್ಟಂತೆ ಕಾಡಿನಲ್ಲಿದ್ದ ಪಾಂಡುವಿನ ಮರಣ, ಮಾದ್ರಿಯ ಸಹಗಮನ ಸಮಾಚಾರವನ್ನು ಕೇಳಿದಳು ಸತ್ಯವತಿ. ನಿಡುಬಾಳಿನ ಸತ್ಯವತಿಯ ದುಃಖದ ಕೊಡ ತುಂಬಿತು. ತಂದೆಯ ನೇತೃತ್ವದಲ್ಲಿ ಋಷಿಗಳ ಸಹವಾಸದಲ್ಲಿ ಬೆಳೆದು ಸಜ್ಜನರಾಗಿದ್ದ, ದೇವಪುತ್ರರಾದ ಪಾಂಡವರೊಡನೆ ವಿಧವೆ ಕುಂತಿ, ಹಸ್ತಿನಾವತಿಗೆ ಬಂದಾಗ, ಸತ್ಯವತಿಗೆ ಆ ತಬ್ಬಲಿ ಮಕ್ಕಳನ್ನು ಕಂಡು, ಮನಮರುಗಿ, ಕಣ್ಣೀರು ತುಂಬಿ, ಮುಂದೆ ದಾಯಾದಿಗಳಲ್ಲಿ ವಿರಸವುಂಟಾಗಬಹುದೆಂಬ ಸೂಚನೆ ಮನಸ್ಸಿನಲ್ಲಿ ವ್ಯಕ್ತಾವ್ಯಕ್ತವಾಗಿ ಹೊಳೆದಿರಬೇಕು. ಅವಳಲ್ಲಿಗೆ ಈ ಸಂದರ್ಭದಲ್ಲಿ ಬಂದ ವೇದವ್ಯಾಸರ ಕೆಳಗಿನ ಮಾತುಗಳು ಸತ್ಯವತಿಯ ಮನೋಭಿಪ್ರಾಯವನ್ನು ಸಂಪೂರ್ಣವಾಗಿ ದೃಢಪಡಿಸಿದವು.

ಸೀ

ವಿರಲು ಬೇಡೌ ತಾಯೆ ನಿವಿನ್ನು
ಭರತವಂಶದೊಳೊಗೆದ ಕಿಚ್ಚುಱಿಹುವುದು ನೃಪಕುಲವ
ಹೇಳಬಾರದು ಮುಂದಣದು ದು
ಷ್ಕಾಲವಿಂದಿಗೆ ನಾಳೆ ನಾಳೆಗೆ
ನಾಳೆ ಬಟ್ಟೆಱು ವರ್ಣಧರ್ಮಾಶ್ರಮದ ನೆಲೆಹೋಯ್ತು
ಕಾಲ ವಿಷಮವು ಕೌರವಕ್ಷಿತಿ

---

*ಕುಲವಿಹಿತ ಚೌಲೋಪನಯನವನಿಬ್ಬರಿಗೆ ರಚಿಸಿ ॥
ಕಲಿತ ವಿದ್ಯರ ಮಾಡಿ ತಾಯುಱ ಮೃಗಸದಂಶಿತೆ ಸೋಮವಂಶದ ।
ಬೆಳವಿಗೆಯನೇ ಮಾಡಿ ಕೊಂಡಾಡಿದನು ಕಲಿಭೀಷ್ಮ ॥ ೧,೩–೧೨

ಪಾಲ ಪಾಂಡುಕುಮಾರರಲಿ ಕೈ
ವೇಳವಿಸುವುದು ತಾಯೆ ಬಿಜಯಂಗೈಯಿ ನೀವು ೧, ೫–೩೧*

ನಿಡುಕಾಲ ಅರಮನೆಯಲ್ಲಿ ಜೀವನ ನಡೆಸಿ ಸಾವು, ವೈಧವ್ಯ, ದುಃಖ, ಅಸಹ್ಯಕರವಾದ ಕೋಲಾಹಲಗಳನ್ನು ಕಂಡಿದ್ದ ಸತ್ಯವತಿಗೆ ಬದುಕಿ ಸಾಕೆನಿಸಿ 'ನಿಜನಂದನನ ನುಡಿಯೇ ವೇದಸಿದ್ಧವಿದು' ಎನಿಸಿರಬೇಕು. ದುಃಖ ತ್ಯಾಗ ಮೌನಗಳ ಮೂರ್ತಿಯಾದ ಆಕೆ ಸೊಸೆಯಂದಿರೊಡನೆ ತಪೋವನಕ್ಕೆ ನಡೆದಳು. ಅಲ್ಲಿಗೆ ಮುಗಿಯಿತು ಸತ್ಯವತಿಯ ಚರಿತ್ರೆ.

ಸತ್ಯವತಿಯ ಚರಿತ್ರೆಯನ್ನು ಅವಲೋಕಿಸಿದಾಗ ಸ್ಪಷ್ಟಪಡುವ ಅಂಶಗಳೇನು ? ರಾಜಕುಮಾರಿಯಾಗಿ ಬೆಳೆಯಬೇಕಾಗಿದ್ದವಳು ಬೆಸ್ತರ ಕುಲವನ್ನು ಸೇರಬೇಕಾಯಿತು. ಆದರೂ ಆಕೆ ಸಜ್ಜನಳಂತೆ ಕುಲದ ಉದ್ಧಾರಕ್ಕಾಗಿ, ದುಃಖಕಷ್ಟಗಳನ್ನು ಸಹಿಸಲು ಪ್ರಯತ್ನಪಟ್ಟಳೇ ಹೊರತು, ಯಾವ ಸಂದರ್ಭದಲ್ಲಿಯೂ ಪ್ರತಿಮಾತನ್ನಾಡಲಿಲ್ಲ. ಶಂತನುವಿನಿಂದ ಹುಟ್ಟಿದ ಮಕ್ಕಳನ್ನು ಕಳೆದುಕೊಂಡ ಆಕೆಗೆ ಕಷ್ಟಕಾಲದಲ್ಲಿ ಊರೆಗೋಲಾಗಿ ನಿಂತು, ಅವಳ ಮಾತನ್ನು ನಡೆಸಿದವರು ಅವಳ ಹೊಟ್ಟೆಯಲ್ಲಿ ಹುಟ್ಟಿದ ಭಗವಾನ್ ವೇದವ್ಯಾಸರು ಮತ್ತು ಹೊಟ್ಟೆಯಲ್ಲಿ ಹುಟ್ಟಿದ ಸ್ವಂತಮಗನಿಗಿಂತ ಹೆಚ್ಚಾಗಿ ನಡೆದುಕೊಂಡ ಭೀಷ್ಮ. ತಂದೆ ತೀರಿದೊಡನೆಯೇ ಭೀಷ್ಮನು ತಮ್ಮಂದಿರಿಗೆ ಕ್ರಮವಾಗಿ ಪಟ್ಟಕಟ್ಟಿದನು. ವಿಚಿತ್ರವೀರ್ಯನಿಗೆ ಹೆಣ್ಣುಗಳನ್ನು ಸಂಪಾದಿಸಿ ಮದುವೆ ಮಾಡಿಸಿದನು. ವಿಚಿತ್ರವೀರ್ಯನು ಸತ್ತಾಗ ತಾಯಿಯ ಮಾತಿನಂತೆ ಮದುವೆನಿಂತು ರಾಜನಾಗದಿದ್ದರೂ ಮೊಮ್ಮಕ್ಕಳು ಬೆಳೆದು ದೊಡ್ಡವರಾಗುವವರೆಗೆ ಸಮಸ್ತ ರಾಜ್ಯದ ಭಾರವನ್ನು ಹೊತ್ತುಕೊಂಡನು. ಇವರಿಬ್ಬರ ವರ್ತನೆಯಿಂದ ಸತ್ಯವತಿಯ ಬಾಳು ಸ್ವಲ್ಪ ಸಹ್ಯವೆನಿಸಿರಬೇಕು. ಮನುಷ್ಯನು ಕಟ್ಟಿಕೊಂಡ ಕನಸನ್ನು ವಿಧಿ ಹೇಗೆ ಪುಡಿಮಾಡಿ, ಕಷ್ಟಪರಂಪರೆಯನ್ನು ತರುವುದೆನ್ನುವುದಕ್ಕೆ ಮಹಾಭಾರತದಲ್ಲಿ ಸತ್ಯವತಿ ಸಾಕ್ಷಿಯಾಗಿ ನಿಂತಿದ್ದಾಳೆ.

ವಿಶೇಷಾಂಶಗಳು: ಕುಮಾರವ್ಯಾಸನು ಕುರುಪಾಂಡವರ ವೃತ್ತಾಂತಕ್ಕೆ ಮೊದಲು ಬರುವ ಅಂಶಗಳಲ್ಲಿ ಕೆಲವನ್ನು ಕೈಬಿಟ್ಟಿದ್ದಾನೆ, ಕೆಲವನ್ನು ಸಂಗ್ರಹಿಸಿದ್ದಾನೆಯೆಂದು ಈ ಮೊದಲು ಹೇಳಿತಷ್ಟೆ. ಇಲ್ಲಿ ವ್ಯಾಸ, ಪಂಪ, ಕುಮಾರವ್ಯಾಸ–ಇವರ ಕೃತಿಗಳಿಗೆ ಸಂಬಂಧಿಸಿದಂತೆ ಕೆಲವು ವಿವರಗಳನ್ನು ಪರಿಶೀಲಿಸಬಹುದು.

ಸತ್ಯವತಿಯ ಪ್ರಕರಣದಲ್ಲಿ ಕುಮಾರವ್ಯಾಸನು ಮತ್ಸ್ಯಗಂಧಿ, ಯೋಜನಗಂಧಿ ಎಂಬ ಪದಗಳನ್ನು ಉಪಯೋಗಿಸುವನೇ ಹೊರತು ಸತ್ಯವತಿಯೆಂಬ ಪದವನ್ನು ಉಪಯೋಗಿಸದಿರುವುದು ನಿಜಕ್ಕೂ ಆಶ್ಚರ್ಯಕರವಾದ ಸಂಗತಿ.

ಮಹಾಭಾರತದ ಪ್ರಕಾರ ಉಪರಿಚರವಸುವಿನ ಹೆಂಡತಿ ಗಿರಿಜೆ. ಇವನ ವೀರ್ಯವನ್ನು ನುಂಗಿದವಳು ಶಾಪಗ್ರಸ್ತಳಾಗಿ ಮೀನಾಗಿದ್ದ ಅದ್ರಿಕೆಯೆಂಬ ಅಪ್ಸರ ಸ್ತ್ರೀ. ಈಕೆ ಪಡೆದ ಇಬ್ಬರು ಮಕ್ಕಳಲ್ಲಿ ಮತ್ಸ್ಯಗಂಧಿ ದಾಶರಾಜನ ಪಾಲಾದಳು. ಭರತ ಸಂತತಿ ನಿಂತಾಗ, ಉಪಾಯಗಾಣದೆ ಸತ್ಯವತಿ ಭೀಷ್ಮನಲ್ಲಿ ತಾನು ಹಿಂದೆ ಪರಾಶರ

---

* ಹೋಲಿಸಿ–

ವ್ಯಾಸೋ ಮಾತರಮಬ್ರವೀತ್ ॥
ಅತಿಕ್ರಾಂತಸುಖಾಃ ಕಾಲಾಃ ಪ್ರತ್ಯುಪಸ್ಥಿತ ದಾರುಣಾಃ ।
ಶ್ವಃ ಶ್ವಃ ಪಾಪೀಯದಿವಸಾಃ ಪೃಥಿವೀ ಗತಯೌವನಾ ॥
ಬಹುಮಾಯಾಸಮಾಕೀರ್ಣಾ ನಾನಾದೋಷಸಮಾಕುಲಃ ॥
ಲುಪ್ತಧರ್ಮಕ್ರಿಯಾಚಾರೋ ಘೋರಃ ಕಾಲಃ ಭವಿಷ್ಯತಿ ॥
ಗಚ್ಛತ್ವಂ ತ್ಯಾಗಮಾಸ್ಥಾಯ ಯುಕ್ತಾ ವಸ ತಪೋವನೇ ।
ಮಾದ್ರಕ್ಷಸಿ ಕುಲಸ್ಯಾಸ್ಯ ಘೋರಂ ಸಂಶಯಮಾತ್ಮನಃ ॥ ಮ. ಭಾ. ೧,೧೧೯–೫,೬,೭,೮

ರನ್ನು ಕೂಡಿ, ವ್ಯಾಸರನ್ನು ಪಡೆದ ವೃತ್ತಾಂತವನ್ನು ವಿವರವಾಗಿ ಹೇಳಿ, ವ್ಯಾಸರಿಂದ ಮಕ್ಕಳನ್ನು ಪಡೆಯಲು ಅವನನ್ನು ಒಪ್ಪಿಸುತ್ತಾಳೆ. ಸೊಸೆಯರು ಮಿತ್ರಾವರುಣರಂಥ ಮಕ್ಕಳನ್ನು ಪಡೆಯಲು ಸೊಸೆಯರು ಒಂದು ವರ್ಷ ನಿಯಮದಿಂದಿರಬೇಕೆಂಬ ವ್ಯಾಸರ ಮಾತನ್ನು ಸತ್ಯವತಿ ಮಾನ್ಯ ಮಾಡುವುದಿಲ್ಲ. ತಾಯಿಯ ಮಾತಿಗೆ ಕಟ್ಟುಬಿದ್ದ ವ್ಯಾಸರು ತಮ್ಮ ರೌದ್ರರೂಪವನ್ನೂ, ದುರ್ಗಂಧವನ್ನೂ ಸೊಸೆಯರು ಸಹಿಸಬೇಕೆನ್ನುತ್ತಾರೆ. ಸತ್ಯವತಿ ವ್ಯಾಸಾಗಮನದ ಸೂಚನೆಯನ್ನು ಸೊಸೆಯರಿಗೆ ಸೂಚ್ಯವಾಗಿ ಕೊಡುತ್ತಾಳೆ. ಹೀಗೆ ಮಹಾಭಾರತದಲ್ಲಿ ಬರುವ ಅನೇಕ ಅಂಶಗಳನ್ನು ಕುಮಾರವ್ಯಾಸನು ಕೈಬಿಟ್ಟಿದ್ದಾನೆ. ವ್ಯಾಸನ ಉತ್ಪತ್ತಿ, ಅವನಿಂದ ಮಕ್ಕಳನ್ನು ಪಡೆಯುವುದನ್ನು ಭೀಷ್ಮನಿಗೆ ಹೇಳದೆ ತಾನೇ ಸ್ವತಂತ್ರಿಸಿ ಅವನನ್ನು ಕರೆಸಿ, ಅವನು ಮಾಡಬೇಕಾದ ಕರ್ತವ್ಯವನ್ನು ನಿಯಮಿಸುತ್ತಾಳೆ ಕುಮಾರ ವ್ಯಾಸನ ಸತ್ಯವತಿ. ಕುಮಾರವ್ಯಾಸನ ಅಂಬಿಕೆಗೆ 'ಮುನಿಪನ ದಿವ್ಯರೂಪವನಿಂದುಮುಖಿ ಕಂಡಳು.' ಕಂಡದ್ದೇ ತಡ 'ಅಕ್ಷಿಗಳ ಭಯದಿಂದ ಮುಚ್ಚಿದಳು.' ಅಂಬಾಲಿಕೆಗೆ ಕಂಡದ್ದು ಮುನಿಯ ರೌದ್ರಾಕಾರ. ಈ ಅಂಶಗಳನ್ನು ಪರಿಶೀಲಿಸಿದಾಗ ಕವಿ ವ್ಯಾಸಭಾರತವನ್ನು ಮುಂದಿಟ್ಟುಕೊಂಡಿದ್ದರೂ ಕಥೆ ಹೇಳುವುದರಲ್ಲಿ ತನ್ನ ಜಾಡನ್ನೇ ಹಿಡಿದಿದ್ದಾನೆ ಎಂಬುದು ಸುಸ್ಪಷ್ಟ.

ಕುಮಾರವ್ಯಾಸನಂತೆ ಪಂಪನು ಸತ್ಯವತಿಯ ಪ್ರಕರಣದಲ್ಲಿ ಸತ್ಯವತಿಗೂ ಭೀಷ್ಮನಿಗೂ ಆದ ಬಹುಮುಖ್ಯವಾದ ಸಂಭಾಷಣೆಗಳನ್ನು ಕೈಬಿಟ್ಟಿದ್ದಾನೆ; ಹಾಗೆಯೇ ಮಕ್ಕಳಾಗುವ ವಿಷಯದಲ್ಲಿ ವ್ಯಾಸರು ಸತ್ಯವತಿಗೆ ಕೊಟ್ಟ ಸೂಚನೆಯನ್ನು. ಆದರೆ ಪಂಪನು ಈ ವಿಷಯದಲ್ಲಿ ಕುಮಾರವ್ಯಾಸನಿಗಿಂತ ಹೆಚ್ಚು ವಿವರಗಳನ್ನು ಒದಗಿಸಿದ್ದಾನೆ. ಇದಕ್ಕೆ ಇಲ್ಲಿ ಕೆಲವು ನಿದರ್ಶನಗಳನ್ನು ನೋಡಬಹುದು. ಉಪರಿಚರವಸುವಿನ ಹೆಂಡತಿ ಗಿರಿಜೆಯೆಂದು ಇಲ್ಲಿ ಉಕ್ತವಾಗಿದೆ. ಮತ್ಸ್ಯಗಂಧಿಯ ಉತ್ಪತ್ತಿ ಪಂಪನಲ್ಲಿ ವಿವರವಾಗಿ ಬಂದಿದೆ. ಮೀನಿನ ಗರ್ಭದಲ್ಲಿದ್ದ ಇಬ್ಬರು ಮಕ್ಕಳನ್ನು ಕಾಪಾಡಿದವನು ದಾಶರಾಜ. ತಾನು ಸಾವಿರಜನಕ್ಕೆ ಸಮ ಎಂದು ಹೇಳಿ, ಮಂಜಿನ ಮರೆಯಲ್ಲಿ ವೃದ್ಧ ಪರಾಶರನು ಸತ್ಯವತಿಯನ್ನು ಕೂಡಿದ್ದು, ವಿಚಿತ್ರವೀರ್ಯನು ಕ್ಷಯರೋಗದಿಂದ ಸತ್ತದ್ದು ಮುಂತಾದ ವಿವರಗಳು ಪಂಪನಲ್ಲಿ ಉಕ್ತವಾಗಿವೆ. ಹುಟ್ಟುವ ಮಕ್ಕಳ ಸ್ವರೂಪವನ್ನು ಮಹಾಭಾರತದಂತೆ ಪಂಪನಲ್ಲಿ ವ್ಯಾಸರು ಭೀಷ್ಮ ಸತ್ಯವತಿಯರಿಬ್ಬರಿಗೂ ತಿಳಿಸುತ್ತಾರೆ. ಕುಮಾರವ್ಯಾಸನಲ್ಲಿಯಾದರೋ ತಾಯಿಗೆ ಮಾತ್ರ. ಸತ್ಯವತಿ ಕಾಡಿಗೆ ಹೋಗುವಂತೆ ಹೇಳುವ ವ್ಯಾಸರ ಮಾತುಗಳು ಪಂಪನಲ್ಲಿ ಹೀಗೆ ಬಂದಿವೆ. 'ಸತ್ಯವತಿಯುಮಂಬಿಕೆಯುಮಂಬಾಲೆಯುಂ ಸಂಸಾರ ವಿಶೀರ್ಣೆಯರಾಗಿ ಮುನಿವನವನಾಶ್ರಯಿಸಿದರ್.'

ಒಂದು ವಿಶೇಷ. ಸತ್ಯವತಿ ಕೂಡಿದ್ದು ವೃದ್ಧ ಪರಾಶರರನ್ನು, ಬಳಿಕ ಕೈಹಿಡಿದದ್ದು ಶಂತನುವನ್ನು, ಅಂಬಿಕೆ, ಅಂಬಾಲಿಕೆಯರು ವಿಚಿತ್ರವೀರ್ಯನನ್ನು ಮದುವೆಯಾಗಿ ವಿಧವೆಯರಾದ ಮೇಲೆ ವ್ಯಾಸರ ಸಂಪರ್ಕ ಮಾಡಬೇಕಾಯಿತು. ಕುಂತಿ ಮಾದ್ರಿಯರು ಗಂಡನಿದ್ದಂತೆ ದೇವತೆಗಳನ್ನು ಸೇರಿ ಮಕ್ಕಳನ್ನು ಪಡೆದರು.

ಜೀವನವೆಂಬುದು ಯಾವಾಗಲೂ ಮುಗುಳ್ನಗುವಿಗೂ ಕಣ್ಣೀರಿಗೂ ಮಧ್ಯೆ ತೂಗಾಡುತ್ತಿರುತ್ತದೆ.

ಆರ್. ಕೆ. ದಲಾಲ್

ಡಿ. ಎಸ್. ಜಯಪ್ಪಗೌಡ

ಇತಿಹಾಸ ನಿರ್ಮಾಪಕ ಕುವೆಂಪು

ಕನ್ನಡ ಸಾಹಿತ್ಯದ, ಕನ್ನಡನಾಡಿನ ಇತಿಹಾಸದಲ್ಲಿ ಕುವೆಂಪು ಅವರಿಗೆ ವಿಶಿಷ್ಟ ಸ್ಥಾನವಿದೆ. ಅವರು ಸೃಷ್ಟಿಸಿದ ಅಪಾರ ಸಾಹಿತ್ಯರಾಶಿ, ಅದರ ಉತ್ಕೃಷ್ಟ ಸಾಹಿತ್ಯಿಕಮೌಲ್ಯಗಳು ಅವರನ್ನು ಮಹಾಕವಿಯನ್ನಾಗಿ, ಶ್ರೇಷ್ಠಸಾಹಿತಿಯನ್ನಾಗಿ ಮಾಡಿದವು. ಅವರು ಬೆಳೆದುಬಂದ ಪರಿಸರ, ಸಾಮಾಜಿಕ ಹಿನ್ನೆಲೆಯಲ್ಲಿ ಒಂದು ವಿಶೇಷ ಘಟನೆಯಾಯಿತು. ಸ್ವಾತಂತ್ರ್ಯ ಹೋರಾಟಕ್ಕೆ, ಸಾಮಾಜಿಕ ಬದಲಾವಣೆಗೆ ಅವರು ನೀಡಿದ ಸ್ಫೂರ್ತಿ ಮತ್ತು ವಿಚಾರಧಾರೆಗಳು ಅವರ ಸಾಹಿತ್ಯದ ಪ್ರಭಾವವನ್ನು ಸಾಮಾಜಿಕಕ್ಷೇತ್ರಕ್ಕೆ ಹರಿಸಿ ಸಾರ್ಥಕವಾಗುವಂತೆ ಮಾಡಿದವು. ಅವರ ಜೀವನರೀತಿಯೂ ಸಾಹಿತ್ಯದಷ್ಟೇ ಆಳವಾಗಿ ಜನರಮೇಲೆ ಪ್ರಭಾವಬೀರಿತು. ಈ ಎಲ್ಲ ದೃಷ್ಟಿಯಿಂದ ಕುವೆಂಪು ಈ ಶತಮಾನದ ಶ್ರೇಷ್ಠ ಸಾಹಿತಿಯಾಗಿ, ವಿಚಾರಶೀಲರಾಗಿ ಕಾಣಿಸಿಕೊಂಡಿದ್ದಾರೆ.

ಇತಿಹಾಸ ಕಾಲಪಥದಲ್ಲಿ ನಿರಂತರವಾಗಿ ಸಾಗುತ್ತಿರುತ್ತದೆ. ಸಾಮಾಜಿಕಕ್ರಿಯೆಗಳು ಬದಲಾವಣೆಗೊಳಗಾಗುತ್ತಲೇ ಇರುವುದರಿಂದ ಪ್ರತಿಯೊಂದು ಹಳೆಯ ವ್ಯವಸ್ಥೆಯಲ್ಲೂ ಹೊಸ ವ್ಯವಸ್ಥೆ ರೂಹುಗಟ್ಟುತ್ತಿರುತ್ತದೆ. ಒಂದು ರೀತಿಯಲ್ಲಿ ಇದೊಂದು ವಿಕಾಸಕ್ರಮವಿದ್ದಂತೆ. ಆದರೆ ಇಲ್ಲಿನ ನಿಯಮಗಳು ಪ್ರಕೃತಿ ವಿಕಾಸದಂತೆ ನಿಯತ ಬೆಳವಣಿಗೆಗೆ ಒಳಗಾಗದೆ ಸಾಮಾಜಿಕ ಏರುಪೇರುಗಳಿಗೆ ಒಳಗಾಗುತ್ತವೆಯಷ್ಟೆ. ಸಾಮಾಜಿಕ, ರಾಜಕೀಯ, ಸಾಹಿತ್ಯಕ ಮೊದಲಾದ ಕ್ಷೇತ್ರಗಳಲ್ಲಿ ನಡೆಯುವ ಉದ್ದೇಶಪೂರ್ವಕ ಘಟನೆಗಳ ಒಟ್ಟು ಮೊತ್ತವೇ ಇತಿಹಾಸ. ಎಲ್ಲ ನದಿಗಳು ಸೇರಿ ಸಮುದ್ರವನ್ನು ತುಂಬುವಂತೆ ಜೀವನದ ವಿವಿಧಕ್ಷೇತ್ರಗಳ ಚಟುವಟಿಕೆಗಳು ಸಮಾಜವನ್ನು ತುಂಬುತ್ತವೆ. ಈ ಕ್ಷೇತ್ರಗಳಲ್ಲಿ ಯಾರು ಆಯಾ ಕಾಲದ ಬದಲಾವಣೆಯ ಅಗತ್ಯವನ್ನು ಗುರುತಿಸಿ ಅದನ್ನು ಮಾನ್ಯಮಾಡಿ ಅದಕ್ಕೊಂದು ಮುಖಂಡತ್ವವನ್ನು ನೀಡುತ್ತಾರೋ ಅವರು ಇತಿಹಾಸದಲ್ಲಿ ಚಿರಸ್ಮರಣೀಯರಾಗುತ್ತಾರೆ.

ಕರ್ನಾಟಕದಲ್ಲಿ ಪಂಡಿತರನ್ನು ಕಲಾಮಂಡಿತರನ್ನು ತಲೆದೂಗಿಸಿದವರಿದ್ದಾರೆ; ರಾಜಾಧಿರಾಜರ ಅನುಗ್ರಹಕ್ಕೆ ಪಾತ್ರರಾದ 'ಕವಿಚಕ್ರವರ್ತಿ', 'ಕವಿಚೂಡಾಮಣಿ', 'ಅಭಿನವ ಕಾಳಿದಾಸ'ರೆಂಬ ಬಿರುದಾಂಕಿತರಿದ್ದಾರೆ; ಚಕ್ರವರ್ತಿಗಳಿಂದಲೇ ಪಲ್ಲಕ್ಕಿ ಹೊರಿಸಿಕೊಂಡು ಪಾದತೊಳೆಸಿಕೊಂಡವರಿದ್ದಾರೆ. ಪ್ರತಿಭೆ ಇಲ್ಲದೆಯೂ ಚತುರತೆಯಿಂದ ಈ ಗೌರವಗಳಿಗೆ ಪಾತ್ರರಾದವರಿದ್ದಾರೆ. ಆದರೆ ಆಯಾ ಕಾಲದ ಜನಸಾಮಾನ್ಯರ ಅಗತ್ಯವನ್ನರಿತು ಸಾಹಿತ್ಯ ರಚಿಸಿದವರು ವಿರಳ. ವಚನಕಾರರು, ಹರಿಹರ, ಕುಮಾರವ್ಯಾಸ, ಸರ್ವಜ್ಞ, ದಾಸರು ಮೊದಲಾದ ಕೆಲವರ ಸಾಹಿತ್ಯ ಸಮಾಜದೊಂದಿಗೆ ಅನನ್ಯತೆ ಪಡೆದಿರುವುದನ್ನು ಕಾಣುತ್ತೇವೆ. ಕುವೆಂಪು ಏಕಕಾಲದಲ್ಲಿ ಶ್ರೇಷ್ಠ ಕೃತಿಗಳನ್ನು ರಚಿಸಿದುದರ ಜತೆಗೆ ಸಾಮಾಜಿಕ ಕ್ರಾಂತಿಯ ಕರೆಗೂ ಓಗೊಟ್ಟರು.

ಅರ್ಧಶತಮಾನಕ್ಕೂ ಹೆಚ್ಚು ಕಾಲ ಸತತವಾಗಿ ಸಾಹಿತ್ಯ ಸೃಷ್ಟಿಸಿಕೊಂಡು ಬಂದಿರುವ ವಿರಳರಲ್ಲಿ ಕುವೆಂಪು ಒಬ್ಬರು. 1920ರ ದಶಕದಿಂದ ಅವರು ಸಾಹಿತ್ಯ ರಚಿಸತೊಡಗಿದರು. 1924ರಲ್ಲಿ 'ಕರ್ನಾಟಕ ರಾಷ್ಟ್ರಗೀತೆ' ಎಂಬ ಕವನ ಬರೆದರು. ಅದು 1928ರಲ್ಲಿ ಪ್ರಕಟವಾಯಿತು. ಇದು ಅವರು ಆಗಲೇ ಕಂಡಿದ್ದ 'ಸಾಂಸ್ಕೃತಿಕ ಕರ್ನಾಟಕದ' ಚಿತ್ರಣ 1930ರಲ್ಲಿ ಆ ಕವನ 'ಜಯ ಹೇ ಕರ್ನಾಟಕ ಮಾತೆ' ಎಂಬ ರೂಪುತಳೆಯಿತು. ಅವರು ಅಖಂಡ ಕರ್ನಾಟಕದ ಕನಸು ಕಾಣುವಲ್ಲಿ ಭಾರತಾಂಬೆಯನ್ನು ಮರೆತವರಲ್ಲ. ಭಾರತದ ಸ್ವಾತಂತ್ರ್ಯ ಇನ್ನೂ ಅಸ್ಪಷ್ಟವಾಗಿದ್ದಾಗಲೇ ಕುವೆಂಪು ಕರ್ನಾಟಕವನ್ನು 'ಭಾರತಜನನಿಯ ತನುಜಾತೆ' ಎಂದು ಕರೆದಳು. ಇದು ಯುವಕ ಪುಟ್ಟಪ್ಪನವರ ಹೃದಯ ವೈಶಾಲ್ಯಕ್ಕೆ ಹಿಡಿದ ಕನ್ನಡಿ. 1924ರಲ್ಲಿ ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನಕ್ಕೆ ಹೋಗಿ ಗಾಂಧೀಜಿಯವರ ದರ್ಶನ ಪಡೆದುಬಂದರು. 1926ರಲ್ಲಿ ರಚಿಸಿದ 'ಬೊಮ್ಮನಹಳ್ಳಿಯ ಕಿಂದರಿಜೋಗಿ' ಯಂತೂ ಕನ್ನಡನಾಡಿನ ಮನೆಮಾತಾಗಿತ್ತು. ಅವರ 'ಲಿಂಗ ಅಥವಾ ಯಾರೂ ಅರಿಯದ ವೀರ' ಕಥೆಗೆ 1927ರಲ್ಲಿ ಬಹುಮಾನ ಬಂತು. ಪುಟ್ಟಪ್ಪನವರು ಬಹುಮಾನ ವಿನಿಯೋಗ ಸಮಾರಂಭಕ್ಕೆ ಹೋಗಲಿಲ್ಲ. ಈ ಪ್ರಕರಣ ಅವರ ಗುರುಗಳೂ ಅವರ ಬಗ್ಗೆ ಕುತೂಹಲ ತಳೆಯುವಂತೆ ಮಾಡಿತು. ಶ್ರೀರಾಮಕೃಷ್ಣ ಆಶ್ರಮದಲ್ಲಿ ಅವರು ಹಲವಾರು ವರ್ಷ ಕಳೆದರು. 1929ರಲ್ಲಿ ಬಂಗಾಳಕ್ಕೆ ಹೋಗಿ ಶ್ರೀ ರಾಮಕೃಷ್ಣರ ಆಶ್ರಮವನ್ನು, ದಕ್ಷಿಣೇಶ್ವರವನ್ನು ಕಂಡುಬಂದರು. ಇದೆಲ್ಲ ಅವರಲ್ಲಿ ಆಧ್ಯಾತ್ಮಿಕ ಶಕ್ತಿಯನ್ನು ದೃಢಗೊಳಿಸಿತು. 1929ರಲ್ಲಿಯೇ ವಿದ್ಯಾರ್ಥಿ ಕವಿಸಮ್ಮೇಳನದ ಅಧ್ಯಕ್ಷರಾಗಿ ಆ ಕಾಲದ ಯುವಕರ ಗಮನ ಸೆಳೆದರು. ಹೀಗೆ ಪುಟ್ಟಪ್ಪನವರು ಅಧ್ಯಾಪಕರಾಗುವ ಹೊತ್ತಿಗೆ ವಿಶಿಷ್ಟ ವ್ಯಕ್ತಿತ್ವವನ್ನು ಬೆಳೆಸಿಕೊಂಡು ಇತರರ ಮೇಲೆ ಪ್ರಭಾವಬೀರುವಂತಹ ವ್ಯಕ್ತಿಮಹಿಮೆ ಪಡೆದಿದ್ದರು.

ಕುವೆಂಪು ಸ್ವಾತಂತ್ರ್ಯಪೂರ್ವದ ದಶಕಗಳಲ್ಲಿ ಸಮರ್ಥ ಕವಿಯಾಗಿ, ವಿಚಾರವಂತರಾಗಿ ರೂಪುಗೊಂಡಿದ್ದು ಕರ್ನಾಟಕದ ಇತಿಹಾಸದ ಮಹತ್ವಪೂರ್ಣ ಘಟನೆಗಳಲ್ಲಿ ಒಂದು. ಗಾಂಧೀಜಿಯವರ ಚಳವಳಿಯಿಂದಾಗಿ ಮತ್ತು ನಾಗರಿಕತೆಯ ಪ್ರಸಾರದಿಂದಾಗಿ ಗ್ರಾಮಾಂತರ ಜನತೆ ಜಾಗೃತರಾಗುತ್ತಿದ್ದ ಕಾಲವದು. ವಿದ್ಯೆಗಾಗಿ, ಉದ್ಯೋಗಕ್ಕಾಗಿ, ರಾಜಕೀಯ ಹೋರಾಟಕ್ಕಾಗಿ ಹಳ್ಳಿಗಳಿಂದ ಜನರು ಪಟ್ಟಣಗಳಿಗೆ ಬರತೊಡಗಿದ್ದರು. ಗ್ರಾಮಾಂತರ ಬಡಜನರ ವಿದ್ಯಾಭ್ಯಾಸಕ್ಕೆ ಅನುಕೂಲಮಾಡಿಕೊಡಲು ಅನೇಕ ಸಂಘಸಂಸ್ಥೆಗಳು ಹುಟ್ಟಿಕೊಂಡಿದ್ದವು. ದೂರದ ಮಲೆನಾಡಿನ ಹಳ್ಳಿಯಿಂದ ಬಂದಿದ್ದ ಪುಟ್ಟಪ್ಪನವರ ಕೀರ್ತಿ 1930ರ ದಶಕದಲ್ಲಿ ಕರ್ನಾಟಕದಾದ್ಯಂತ ಹರಡಿತ್ತು. ಇದರಿಂದ ಶಿಕ್ಷಣದಲ್ಲಿ ಹಿಂದುಳಿದ ವರ್ಗಗಳ ಯುವಕರಿಗೆ ಅವರು ಸ್ಫೂರ್ತಿಪ್ರಾಯರಾಗಿದ್ದರು. ಇದು ಗ್ರಾಮೀಣ ಯುವಕರಲ್ಲಿ ಆತ್ಮವಿಶ್ವಾಸ ಬೆಳೆಯಲು ಪ್ರೇರಕವಾಯಿತು. ಆಗ ದೇಶದಲ್ಲಿ ಸ್ವಾತಂತ್ರ್ಯ ಹೋರಾಟ ಬಿರುಸಿನಿಂದ ನಡೆಯುತ್ತಿತ್ತು. ಪುಟ್ಟಪ್ಪನವರು ಈ ಹೋರಾಟಕ್ಕೆ ಹಿರಿದಾದ ಕಾಣಿಕೆ ಸಲ್ಲಿಸಿದರು. ಅವರ 'ಪಾಂಚಜನ್ಯ', 'ಕಲ್ಕಿ', 'ಶಿಲಾಭೇರಿ' ಕವನಗಳೂ 'ಕೃತ್ತಿಕೆ', 'ಇಕ್ಷುಗಂಗೋತ್ರಿ', 'ಕೋಗಿಲೆ ಮತ್ತು ಸೋವಿಯಟ್ ರಷ್ಯಾ' ಮೊದಲಾದ ಕವನ ಸಂಗ್ರಹಗಳಲ್ಲಿ ಪ್ರಕಟವಾದ ಅನೇಕ ಕವನಗಳು ಸ್ವಾತಂತ್ರ್ಯ ಹೋರಾಟದ ಬಗ್ಗೆ ಜನರನ್ನು ಬಡಿದೆಬ್ಬಿಸುವ ವೀರಗೀತೆಗಳಾದವು. ಪುಟ್ಟಪ್ಪನವರ ಕವನಗಳನ್ನು ಸಾರ್ವಜನಿಕ ಸಭೆಗಳಲ್ಲಿ ಓದಿದ್ದಕ್ಕಾಗಿ ಜೈಲುವಾಸ ಅನುಭವಿಸಿದ ಪ್ರಸಂಗಗಳುಂಟು. ಸ್ವತಃ ಪುಟ್ಟಪ್ಪನವರೆ ಸಾರ್ವಜನಿಕ ಸಭೆಯಲ್ಲಿ 'ಆತ್ಮಶ್ರೀಗಾಗಿ ನಿರಂಕುಶ ಮತಿಗಳಾಗಿ' ಎಂಬ ವಿಚಾರಪೂರಿತ ಭಾಷಣವನ್ನು ಮಾಡಿದರು.

ಕುವೆಂಪು ಬಂಗಾರದ ಸೂಜಿಯೆಂದು ಕಣ್ಣಿಗೆ ಚುಚ್ಚಿಕೊಳ್ಳುವವರಲ್ಲ. ಪರಕೀಯರ ಆಳ್ವಿಕೆಯಾಗಲಿ ತಮ್ಮದೇ ಆದ ಅರಸೊತ್ತಿಗೆಯಾಗಲಿ ಅವೆಲ್ಲ ಕಾಲವಿರೋಧವಾದುವೆಂಬುದು ಅವರ ನಿಲುವು. ಅವರು ಈ ಎಲ್ಲ ದಬ್ಬಾಳಿಕೆ, ಶೋಷಣೆಗಳ ವಿರುದ್ಧ ಕವನಗಳನ್ನು ಕಟ್ಟಿಹಾಡಿದರು. ಅರಸರ ಹಂಗು ಬೇಡವೆಂದು ಬಹಿರಂಗವಾಗಿ ಘೋಷಿಸಿದರು. ಸಂಸ್ಥಾನದ ಸೇವೆಯಲ್ಲಿದ್ದು ಹೀಗೆ ಪ್ರತಿಭಟಿಸಿದವರು ತುಂಬಾ ವಿರಳವೆಂದೇ ಹೇಳಬೇಕು. ರಾಜಸಭೆಗಳ ರೀತಿ ರಿವಾಜುಗಳನ್ನು ಅವರು ಎಂದೂ ಪಾಲಿಸಿದವರಲ್ಲ.

ಕಾವ್ಯಪ್ರತಿಭೆಯ ದೃಷ್ಟಿಯಿಂದ ಕುವೆಂಪು ಮಹಾಕವಿ ಎನಿಸಿದರು. ಅವರು ಅರವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. 'ಪ್ರೇಮ ಕಾಶ್ಮೀರ', 'ಜೇನಾಗುವಾ', 'ಚಂದ್ರಮಂಚಕೆ ಬಾ ಚಕೋರಿ', 'ಅನುತ್ತರಾ' ಮೊದಲಾದ ಕವನ ಸಂಗ್ರಹಗಳು ಜೀವನದಲ್ಲಿ ರಸಿಕತೆ, ಗಂಡುಹೆಣ್ಣಿನ ಒಲವು, ಮಾನವ–ಪ್ರಕೃತಿ ಸಂಬಂಧಗಳು– ಮೊದಲಾದವುಗಳನ್ನು ಕುರಿತು ಅದ್ಭುತವಾಗಿ ವರ್ಣಿಸುತ್ತವೆ. ಅವರು 'ಶ್ರೀ ರಾಮಾಯಣ ದರ್ಶನಂ' ಒಂದನ್ನೇ ರಚಿಸಿದ್ದರೂ ಸುಲಭವಾಗಿ ಮಹಾಕವಿಗಳ ಸಾಲಿಗೆ ಸೇರುತ್ತಿದ್ದರು. ಅವರದು ಬಹುಮುಖಪ್ರತಿಭೆ. 'ಆಡು ಮುಟ್ಟದ ಸೊಪ್ಪಿಲ್ಲ, ಕುವೆಂಪು ಮುಟ್ಟದ ಸಾಹಿತ್ಯ ಪ್ರಕಾರವಿಲ್ಲ' ಎಂಬ ಅಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ. ಕಾವ್ಯ, ನಾಟಕ, ಕಾದಂಬರಿ, ಜೀವನ ಚರಿತ್ರೆ, ಮಕ್ಕಳ ಸಾಹಿತ್ಯ, ಸಣ್ಣ ಕಥೆಗಳು ಮೊದಲಾದ ಯಾವುದೇ ಕ್ಷೇತ್ರವನ್ನು ತೆಗೆದುಕೊಂಡರೂ ಕುವೆಂಪು ಅವರ ಕೃತಿಗಳು ಆಯಾ ಕ್ಷೇತ್ರದಲ್ಲಿ ಮಹತ್ತರ ಸ್ಥಾನವನ್ನೇ ಪಡೆದಿರುವುದು ವಿಸ್ಮಯಕಾರಿಯಾಗಿದೆ. ಹೀಗೆ ಇಷ್ಟೊಂದು ಅಗಾಧವೂ ಮೌಲ್ಯಭರಿತವೂ ಆದ ಸಾಹಿತ್ಯ ಸೃಷ್ಟಿಸಿರುವವರು ಜಗತ್ತಿನ ಸಾಹಿತ್ಯ ಚರಿತ್ರೆಯಲ್ಲಿ ಬಹಳಮಂದಿ ಇರಲಾರರು. ಕನ್ನಡದಲ್ಲಂತು ಶ್ರೀ ದ. ರಾ. ಬೇಂದ್ರೆಯವರು ಹೇಳುವಂತೆ ಕುವೆಂಪು 'ಯುಗದ ಕವಿ, ಜಗದ ಕವಿ'

ಕುವೆಂಪು ಅವರ ಕೆಲವು ಭಾವಗೀತೆಗಳು ಮತ್ತು ಕಾವ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು ಕುವೆಂಪು ಅವರ ಸಾಹಿತ್ಯಕ್ಕೂ ಜನಸಾಮಾನ್ಯರಿಗೂ ನಿಕಟ ಸಂಬಂಧವಿಲ್ಲ ಎಂಬ ಅಭಿಪ್ರಾಯವನ್ನು ಕೆಲವರು ವ್ಯಕ್ತಪಡಿಸುವುದುಂಟು. ಇಂಥ ನಿಲುವಿಗೆ ಬರಲು ಒಂದುಕಡೆ ಪೂರ್ವಾಗ್ರಹ ಕಾರಣವಾದರೆ ಇನ್ನೊಂದು ಕಡೆ ಅವರ ಸಾಹಿತ್ಯದ ಸರಿಯಾದ ಪರಿಚಯವಿಲ್ಲದಿರುವುದೂ ಕಾರಣವಾಗುತ್ತದೆ. ಸಾಮಾಜಿಕ ಪ್ರಜ್ಞೆಯಿಂದ ಕೂಡಿದ ವೈಚಾರಿಕ ಸಾಹಿತ್ಯ ನೀಡಿದವರಲ್ಲಿ ಕುವೆಂಪು ಅಗ್ರಗಣ್ಯರಾಗಿದ್ದಾರೆ. ಹರಿಜನರ ಮೇಲೆ, ದಾರಿದ್ರ್ಯದ ಮೇಲೆ ಸಾಹಿತ್ಯ ರಚಿಸುವುದು ಈ ಕಾಲದ ಮುಖ್ಯ ವೈಶಿಷ್ಟ್ಯಗಳಲ್ಲೊಂದಾಗಿದೆ. ಆದರೆ ಸ್ವಾತಂತ್ರ್ಯ ಪೂರ್ವಕಾಲದಲ್ಲೆ ಕುವೆಂಪು ಅವರಿಗೆ ಇವೆಲ್ಲ ಸಾಹಿತ್ಯ ವಸ್ತುಗಳಾಗಿದ್ದವು. ಅವರ 'ಜಲಗಾರ'. 'ಶೂದ್ರ ತಪಸ್ವಿ', 'ಬೆರಳ್‌ಗೆ ಕೊರಳ್', ಮೊದಲಾದ ನಾಟಕಗಳು ಯಃಕಶ್ಚಿತರನ್ನೇ ಕುರಿತು ಬರೆದವು. 'ಅಮಲನ ಕಥೆ', 'ಯಾರೂ ಅರಿಯದ ವೀರ' ಮೊದಲಾದ ಕಥೆಗಳು 1920ರ ದಶಕದಲ್ಲಿ ರಚಿತವಾಗಿ ಬಹುಮಾನ ಸಹ ಗಳಿಸಿದ್ದವು. 'ಕರಿಸಿದ್ದ', 'ಧನ್ವಂತರಿಯ ಚಿಕಿತ್ಸೆ', 'ಸಾಲದ ಮಗು', 'ಮಲೆನಾಡಿನ ಚಿತ್ರಗಳು', ಇವೆಲ್ಲ ಪಾಮರರನ್ನು, ಬಡತನವನ್ನು ಕುರಿತೇ ರಚಿತವಾದವು. ಅವರ 'ಶೂದ್ರ ತಪಸ್ವಿ' 'ಗೊಬ್ಬರ' ಮೊದಲಾದ ರಚನೆಗಳು ಆ ಕಾಲದಲ್ಲಿ ಸಾಮಾಜಿಕರ ಟೀಕೆಗೊಳಗಾಗಿದ್ದವೆಂದರೆ ಅವುಗಳ ಪರಿಣಾಮ ತಿಳಿಯುತ್ತದೆ. ಅವರ 'ಮಲೆಗಳಲ್ಲಿ ಮದುಮಗಳು' ಮತ್ತು 'ಕಾನೂರು ಹೆಗ್ಗಡಿತಿ' ಕಾದಂಬರಿಗಳಲ್ಲಿ ಸಾಮಾನ್ಯರ ಪ್ರಪಂಚವೇ ಇದೆ. 'ಶ್ರೀಸಾಮಾನ್ಯ' ಎಂಬ ಪದ ಇಂದು ಅವರು ಸೃಷ್ಟಿಸಿದರು ಎಂಬುದನ್ನು ಮರೆಯುವಷ್ಟರಮಟ್ಟಿಗೆ ಕನ್ನಡದಲ್ಲಿ ಸಹಜವಾಗಿ ಸೇರಿಕೊಂಡಿದೆ. 'ಶ್ರೀ ರಾಮಾಯಣ ದರ್ಶನಂ' ಸಹ ಕಿಂಚಿತ್ತಾದುದನ್ನೆಲ್ಲ ಮಹತ್ತಾಗಿ ಕಾಣುವ ಪೂರ್ಣದೃಷ್ಟಿಯಿಂದಲೇ ರಚಿತವಾಗಿದೆ ಎಂದು ಕವಿ ಹೇಳುತ್ತಾರೆ. ಕುವೆಂಪು ತಮ್ಮ "ಕರಿಸಿದ್ದ" ಕವನದಲ್ಲಿ

> "ಪಂಡಿತರ ಮೆಚ್ಚಿಸಲು ನಾನಿದನು ಕಟ್ಟಿಲ್ಲ
> ದಿಟದ ಕತೆಗಾಶಿಸುವ ಪಾಮರರಿಗಾಗಿದನು
> ಬರೆದಿಹೆನು. ನಾನೊಬ್ಬ ಪಾಮರನು"

ಎಂದು ಘೋಷಿಸಿಕೊಂಡಿದ್ದಾರೆ.

ಕನ್ನಡದ ಅಭಿವೃದ್ಧಿಗಾಗಿ, ಅಖಂಡ ಕರ್ನಾಟಕದ ರಚನೆಗಾಗಿ ಕುವೆಂಪು 'ಕನ್ನಡಡಿಂಡಿಮ'ವನ್ನೇ ಬಾರಿಸಿದರು. ಮಂತ್ರಿಗಳು, ಅಧಿಕಾರಿಗಳು, ಪ್ರತಿಷ್ಠ ಮಂಡಳಿಗಳನ್ನು ಲೆಕ್ಕಿಸದೆ ಕನ್ನಡಕ್ಕಾಗಿ, ಕರ್ನಾಟಕಕ್ಕಾಗಿ ಅವರು ತೀವ್ರವಾಗಿ ಪ್ರತಿಪಾದಿಸಿದರು. ಅವರ ಕನ್ನಡ 'ಡಿಂಡಿಮ' ಸಂಗ್ರಹದಲ್ಲಿ ಇಂಥ ಕವನಗಳು ಒಟ್ಟಾಗಿ ಬಂದಿರು

ವುದನ್ನು ಕಾಣಬಹುದು. ಅವರ 'ಅಖಂಡ ಕರ್ನಾಟಕ', 'ಕರ್ನಾಟಕ ಮಂತ್ರದೀಕ್ಷೆ', 'ಕನ್ನಡಮ್ಮನ ಹರಕೆ', 'ಬಲಾತ್ಕಾರದ ಭಾಷಾತ್ರಿಶೂಲ' ಮೊದಲಾದವು ಜನರನ್ನು ಜಾಗೃತಗೊಳಿಸುವ, ಸಂಬಂಧಪಟ್ಟವರನ್ನು ಎಚ್ಚರಿಸುವ ಕರೆಯಾಗಿವೆ. ಕನ್ನಡವನ್ನು ಮೊದಲಬಾರಿಗೆ ಕಾಲೇಜು ಶಿಕ್ಷಣದಲ್ಲಿ ಭಾಷಾಮಾಧ್ಯಮವಾಗಿ ತಂದರು. ಅವರದು ಅವರಲ್ಲಿ ಮಡಿವಂತಿಕೆ ದೃಷ್ಟಿಯಿಲ್ಲ. ಕನ್ನಡದಲ್ಲಿ ವಿಜ್ಞಾನದಂತಹ ವಿಷಯಗಳನ್ನು ಬರೆಯುವಾಗ ಅನ್ಯ ಭಾಷೆಗಳ ಪಾರಿಭಾಷಿಕ ಪದಗಳನ್ನು ಬಳಸಲು ಅವರು ಸೂಚಿಸಿದರು. ಕನ್ನಡದ ಏಳ್ಗೆ ಇಲ್ಲದೆ ನಮ್ಮ ಮಕ್ಕಳಿಗೆ ಭವಿಷ್ಯವಿಲ್ಲವೆಂದು ಅವರು ದೃಢವಾಗಿ ನಂಬಿದ್ದಾರೆ. "ನಾನು ಅವಧೂತನಾಗಿ ಹೋಗುವುದಿಲ್ಲ. ಕನ್ನಡವು ತನ್ನ ಸ್ಥಾನವನ್ನು ಅಧಿಕೃತವಾಗಿ ಪಡೆಯುವ ತನಕ, ನನ್ನ ಪ್ರಾಣವಿರುವ ತನಕ ಕನ್ನಡಕ್ಕಾಗಿ ದುಡಿಯುವುದು, ಕನ್ನಡಕ್ಕಾಗಿ ದುಡಿಯಲು ವ್ಯಕ್ತಿಗಳನ್ನು ಪ್ರಚೋದಿಸುವುದು, ಅದಕ್ಕಾಗಿ ಭಗವಂತನಲ್ಲಿ ಮೊರೆಯಿಡುವುದು ಮಾಡುತ್ತೇನೆ. ನನ್ನೆಲ್ಲ ತಪಃಶಕ್ತಿಯನ್ನು ಅಥವಾ ಪ್ರಾರ್ಥನಾ ಶಕ್ತಿಯನ್ನು ಕನ್ನಡದ ಸೇವೆಗಾಗಿ ಮೀಸಲಿಡುತ್ತೇನೆ." ಎನ್ನುತ್ತಾರೆ ಕವಿ.

ಇಷ್ಟು ಮಾತ್ರವಾಗಿದ್ದರೆ ಕುವೆಂಪು ಒಬ್ಬ ಶ್ರೇಷ್ಠ ಕವಿಯಾಗಿ, ಸಾಹಿತಿಯಾಗಿ ಉಳಿಯುತ್ತಿದ್ದರಷ್ಟೆ. ಆದರೆ ಅವರ ವೈಚಾರಿಕ ಮುಖ ಇನ್ನೂ ಪ್ರಭಾವಶಾಲಿಯಾದುದು. ತಾವು ಬದುಕಿರುವ ಸಮಾಜವನ್ನು ಅರಿತು, ಅರಿವು ಮೂಡಿಸಿ ಬಾಳಲಿಚ್ಛಿಸಿದವರು ಅವರು. 'ಜನ ಜೀವನವನ್ನು ಎಚ್ಚರಿಸುವ ತೂರ್ಯಧ್ವನಿ ಸಾಹಿತ್ಯದಿಂದ ಬರುತ್ತದೆ ಸಾಹಿತ್ಯ ಜನಜೀವನದ ಇಂದಿನ ಸ್ಥಿತಿಯನ್ನು ವರ್ಣಿಸಿ ಮುಂದಿನ ಗತಿಯನ್ನು ನಿರ್ಣಯಿಸುತ್ತದೆ" ಎಂದು ನಂಬಿದ್ದಾರೆ. ಕುವೆಂಪು ತಾವು ಬದುಕುತ್ತಿದ್ದ ಸಮಾಜದ ವ್ಯವಸ್ಥೆಯನ್ನು ಪ್ರಾರಂಭದಿಂದಲೂ ಪ್ರತಿಭಟಿಸುತ್ತಾ ಬಂದವರು. ಅವರು ಆತ್ಮ ಶ್ರೀಯನ್ನು ಮಾತ್ರ ನಂಬಿ ಆತ್ಮವಂಚನೆಯ ಮೂಢನಂಬಿಕೆಯನ್ನು ತೊರೆದರು. ಇದರಿಂದ ಅವರ ಸಾಹಿತ್ಯ ಮತ್ತು ಜೀವನಗಳೆರಡರಲ್ಲೂ ವೈಚಾರಿಕತೆ ಮನೆಮಾಡಿತು. 1930ರ ದಶಕದಲ್ಲೇ

ನೂರು ದೇವರನೆಲ್ಲ ನೂಕಾಚೆ ದೂರ
ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ
ಬಡತನವ ಬುಡಮುಟ್ಟ ಕೀಳಬನ್ನಿ

ಎಂದು ಕರೆಕೊಟ್ಟರು. 1944ರಲ್ಲಿ ಪ್ರಕಟವಾದ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎಂಬ ಉಪನ್ಯಾಸ ಅವರ ವೈಚಾರಿಕತೆಗೆ ಹಿಡಿದ ಕನ್ನಡಿ.

ಕುವೆಂಪು ತಮ್ಮ ಕಾಲದ ರಾಜಕೀಯಸಿದ್ಧಾಂತಗಳನ್ನು, ಸಾಮಾಜಿಕ ಪರಿಸ್ಥಿತಿಯನ್ನು ಕಡೆಗಣಿಸಿದವರಲ್ಲ. ಅವರು ಅನುಕೂಲಸ್ಥ ಮನೆತನಕ್ಕೆ ಸೇರಿದ್ದು ಶ್ರೀಮಂತ ಬಂಧುಬಾಂಧವರನ್ನುಳ್ಳವರಾದರೂ ಬಡವರ ಮೊರೆಗೆ ಅವರು ಕಿವಿಮುಚ್ಚಿಕೊಳ್ಳಲಿಲ್ಲ. ಶ್ರೀಮಂತಿಕೆ ಅಟ್ಟಹಾಸವನ್ನು ಎಂದೂ ಮೆಚ್ಚಿದವರಲ್ಲ. ಅವರು 'ಕ್ರಾಂತಿ ಕಾಳಿ' ಎಂಬ ಪದ್ಯದಲ್ಲಿ

ಬಡತನಂ, ಗೊಬ್ಬರಂ, ಕತ್ತಿ ಗುದ್ದಲಿ, ಹಾರೆ
ಬೆವರು, ನೆತ್ತರ್ಗಳಂ ಗಾನಗೈವುದು ನಿನ್ನ
ಕರ್ತವ್ಯನಿಂದು

ಎಂದು ತಮ್ಮ ನಿಲುವನ್ನು ಸ್ಪಷ್ಟಪಡಿಸಿಕೊಂಡರು. ಅಷ್ಟೇ ಅಲ್ಲ—

ಬಡವನ ಜಠರಾಗ್ನಿಯೆ ಬಡಬಾಗ್ನಿ !
ಬಡವನೆ ಕಲಿಯುಗದಂತ್ಯದ ಕಲ್ಕಿ !
ಕುಡಿದನು ರಕ್ತವ ಮೊಗೆ ಮೊಗೆದು
ತಿಂದನು ತಲೆಗಳ ತೆಗೆ ತೆಗೆದು

ಬಡವರ ಬೆಂಕಿಯು ನಾಲಗೆ ಚಾಚಿ,
ಶ್ರೀಮಂತರನಪ್ಪಿತು ಬಾಚಿ

ಎಂದು ಸಾರಿದರು. ನಿಜಕ್ಕೂ ಕವಿ ಕುವೆಂಪು ಹೀಗೆ ಬರೆದರೆ ಎಂದು ವಿಸ್ಮಯವಾಗುವಷ್ಟರ ಮಟ್ಟಿಗೆ ಅವರ ಕ್ರಾಂತಿ ಕವನ ಹರಿದಿದೆ.

ಕುವೆಂಪು 'ರಾಷ್ಟ್ರಕವಿ' ಬಿರುದಾಂಕಿತರು. ಜ್ಞಾನಪೀಠಪ್ರಶಸ್ತಿ ವಿಜೇತರು, ಮಾಜಿ ಕುಲಪತಿಗಳು, ಮಾನಸಗಂಗೋತ್ರಿಯ ನಿರ್ಮಾತೃ. ಇಂತಹವರು ಜಾತಿವಿನಾಶ ಸಮ್ಮೇಳನದಲ್ಲಿ ಭಾಗವಹಿಸಿದ್ದು ಹಲವರಿಗೆ ಆಶ್ಚರ್ಯವನ್ನುಂಟುಮಾಡಿತು. ಮತ್ತೆ 'ಕರ್ನಾಟಕದ ಬರಹಗಾರರು ಮತ್ತು ಕಲಾವಿದರ' ಒಕ್ಕೂಟದಲ್ಲಿ ಮಾಡಿದ ಭಾಷಣವಂತು ಕರ್ನಾಟಕದಲ್ಲಿ ಬಿಸಿ ಬಿಸಿ ಚರ್ಚೆಗೆ ದಾರಿಯಾಯಿತು. ಭಾರತದಾದ್ಯಂತ ಕುತೂಹಲ ಕೆರಳಿಸಿತು. ಆದರೆ ಕುವೆಂಪು ಅವರ ಸಾಹಿತ್ಯ ಮತ್ತು ಜೀವನವನ್ನು ನೋಡಿದಾಗ ಇದು ಸ್ವಾಭಾವಿಕವೆಂದೇ ತೋರುತ್ತದೆ. ಸ್ವಾತಂತ್ರ್ಯಪೂರ್ವದಲ್ಲೇ "ಪರೀಕ್ಷೆ, ವಿಮರ್ಶೆ, ವಿಚಾರ–ಇವೆಲ್ಲವೂ ನಮ್ಮ ಹುಟ್ಟು ಹಕ್ಕುಗಳು. ಇವುಗಳನ್ನು ಬಿಟ್ಟುಕೊಡಬಾರದು... ಹಾಗೆಂದ ಮೇಲೆ ಯಾವ ಗುರುವಾದರೇನು ? ಯಾವ ಮಠಾಚಾರ್ಯನಾದರೇನು ? ನಾವು ವಿಮರ್ಶೆ ಮಾಡಲೇಬೇಕು." ಎಂದು ಅವರು ಘೋಷಿಸಿದ್ದಾರೆ. ಮಾರ್ಟಿನ್ ಲ್ಯೂಥರ್ ಮತ್ತು ಮಾರ್ಕ್ಸ್‌ರು ತಮ್ಮ ಧರ್ಮ ಮತ್ತು ಸಮಾಜವನ್ನು ಟೀಕಿಸಿದಾಗ ಪ್ರಗತಿಶೀಲರಾದರು. ಜನತೆಯ ಒಂದು ಸ್ತರ ಅವರ ವಿಚಾರಧಾರೆಗಳನ್ನು ಬೆಂಬಲಿಸಿತು. ಆದರೆ ಬಸವಣ್ಣನವರು ಸಾಮಾಜಿಕ ದೋಷಗಳ ವಿರುದ್ಧ ಹೋರಾಡಿದಾಗ ಅವರು ಕೆಲವು ಜಾತಿಗಳ ವಿರೋಧ ಕಟ್ಟಿಕೊಳ್ಳಬೇಕಾಯಿತು. ಅಂದರೆ ಭಾರತದಲ್ಲಿ ಸಮಾಜ 'ಪುರುಷ ಸೂಕ್ತ'ದ ಆಧಾರದ ಮೇಲೆ ನಿಂತಿರುವುದರಿಂದ ಅದು ಅಡಿಯಿಂದ ಹಿಡಿದು ಮುಡಿಯವರೆಗೂ ಒಂದೊಂದು ಪ್ರತ್ಯೇಕ ಜಾತಿಗಳಾಗಿ ಪರಿಣಮಿಸಿದೆ. ಒಂದು ಭಾಗ ಇನ್ನೊಂದರ ಬಗ್ಗೆ ಅಂದರೆ ತನ್ನ ಸ್ವಧರ್ಮ ವ್ಯವಸ್ಥೆಯ ಬಗ್ಗೆ ಏನೂ ಹೇಳುವಂತಿಲ್ಲ. 'ಬಂಡವಾಳ ಷಾಹಿ' ಎಂದರೆ 'ಆಸ್ತಿವಂತರು' ಎಂದರೆ, 'ಮಧ್ಯಮವರ್ಗ' ಎಂದರೆ, 'ಪುರೋಹಿತಶಾಹಿ' ಎಂದರೆ ಇದು ನಮ್ಮನ್ನು ಕುರಿತು ಹೇಳಿದ್ದು, ಇದು ನಮ್ಮನ್ನು ಕುರಿತು ಹೇಳಿದ್ದು ಎಂದು "ಕುಂಬಳ ಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿಕೊಳ್ಳುವಂತೆ" ಪ್ರತಿಯೊಂದು ಜಾತಿಗಳು ಯೋಚಿಸುವ ಶೋಚನೀಯ ಸ್ಥಿತಿಯಲ್ಲಿ ನಮ್ಮ ಸಮಾಜವಿದೆ. ತಮ್ಮ ಸಮಾಜವನ್ನೂ ಧರ್ಮವನ್ನೂ ವಿಮರ್ಶಿಸಿಕೊಳ್ಳಲಾರದ ದುಃಸ್ಥಿತಿ ಪೂರ್ವಾರ್ಜಿತವಾಗಿ ಬಂದಿದೆ.

ಕುವೆಂಪು ಅವರು ಮಾಡಿದ ಭಾಷಣ ಯಾವುದೋ ಒಂದು ಜಾತಿಯ ವಿರುದ್ಧವೆಂಬ ಆರೋಪ ಕೆಲವು ಕಡೆಯಿಂದ ಬಂದಾಗ

"ಶುದ್ಧ ಅಪಾರ್ಥ ! ಮೊದಲನೆಯದಾಗಿ ಅದು ಬ್ರಾಹ್ಮಣ ವಿರೋಧಿ ಧ್ವನಿಯಲ್ಲ, ಪುರೋಹಿತ ಷಾಹಿ ವಿರೋಧಿ. ಅಂದರೆ ಬೌದ್ಧ, ಜೈನ, ಕ್ರೈಸ್ತ, ಇಸ್ಲಾಂ ಮತ್ತು ಲಿಂಗಾಯಿತ ಪುರೋಹಿತ ಷಾಹಿಯನ್ನು ಒಳಗೊಂಡಿದೆ" ಎಂದು ಉತ್ತರಿಸಿದ್ದಾರೆ. ಅವರು "ನನ್ನದು ವಿಶ್ವಪ್ರಜ್ಞೆ, ಇವತ್ತು ಚಿಲಿಯಲ್ಲಿ ಏನು ನಡೆಯುತ್ತಿದೆ ಎನ್ನುವುದು ನನಗೆ ಗೊತ್ತು. ಇವೊತ್ತು ವಿಯಟ್ನಾಂನಲ್ಲಿ ಏನು ನಡೆಯುತ್ತಿದೆ ಎನ್ನುವುದು ನನಗೆ ಗೊತ್ತು —ಈ ಹೋರಾಟ ಎಲ್ಲಿ ಏನೇ ನಡೆಯುತ್ತಾ ಇರಲಿ, ಇದೇ ಹೋರಾಟ" ಎನ್ನುತ್ತಾರೆ.

ಕುವೆಂಪು ಹಳೆಯ ವ್ಯವಸ್ಥೆಯನ್ನು ಟೀಕಿಸಿದರೂ ಸನಾತನ ಸಂಸ್ಕೃತಿಯನ್ನು ಅಲ್ಲಗಳೆಯುವುದಿಲ್ಲ. ಅವರಲ್ಲಿ ಗೌರವವಿದೆ. ಆದರೆ 66 ಉಪನಿಷತ್ತು, ಭಗವದ್ಗೀತೆ ಮತ್ತು ಮಹಾ ವಿಭೂತಿಗಳು ಸಾರಿದ ಮತ್ತು ಸಾರುತ್ತಿರುವ ಅಮೃತ ಸಂದೇಶ ಅರಣ್ಯರೋದನವಾಗಿದೆ" ಎಂಬುದೇ ಅವರ ವ್ಯಾಕುಲ.

ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳ ಬಗ್ಗೆಯೂ ಅವರು ತಮ್ಮ ಅಭಿಪ್ರಾಯಗಳನ್ನು ಮುಂದಿಟ್ಟಿದ್ದಾರೆ. "ನಿಜವಾದ ಪ್ರಜಾಸತ್ತೆ ಎಂದರೆ ಅನಿರ್ಬಾಧಿತ ಇಚ್ಛಾ ಸ್ವಾತಂತ್ರ್ಯದಿಂದ ಪ್ರಜೆಗಳು ಆಯುವ ಪ್ರಾಮಾಣಿಕ ವ್ಯಕ್ತಿಗಳಿಂದ ಸರ್ವರ ಅಭ್ಯುದಯಕ್ಕಾಗಿ ನಡೆಯುವ ರಾಜ್ಯಭಾರ" ಎನ್ನುತ್ತಾರೆ. ಆದರೆ ಹಿಂದೆ ಇದ್ದ ವಿದ್ಯಮಾನಗಳ ಬಗ್ಗೆ ಅವರಿಗೆ ಸಮಾಧಾನವಿಲ್ಲ. "ಭೋಗದ ಮತ್ತು ಷೋಕಿಯ ವಸ್ತುಗಳ ತಯಾರಿಕೆಗೆ ಬಡರೈತರ ತೆರಿಗೆಯ ಧನವನ್ನು ವ್ಯಯ ಮಾಡಿದೆವು, ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಭೋಗ ಜೀವನ ನಡೆಸುವ ಶ್ರೀಮಂತರ ಸುಖಕ್ಕಾಗಿ ಹಳ್ಳಿ

ಗಳನ್ನು ರೈತ ವರ್ಗವನ್ನು ಮರೆತುಬಿಟ್ಟೆವು" ಎಂದು ವಿಷಾದಿಸಿದ್ದಾರೆ. ಅವರು ಅಸ್ಪೃಶ್ಯತೆ, ಬಾಲ್ಯವಿವಾಹ, ಕುಟುಂಬಯೋಜನೆ, ಸರಳವಿವಾಹ ಇವೇ ಮೊದಲಾದ ವಿಷಯಗಳ ಬಗ್ಗೆ ತಮ್ಮ ಉಪನ್ಯಾಸಗಳಲ್ಲಿ ಮತ್ತು ಕವನಗಳಲ್ಲಿ ಪ್ರಸ್ತಾಪಿಸಿದ್ದಾರೆ."ಅಸ್ಪೃಶ್ಯರನ್ನು ದೇವಾಲಯಗಳಿಗೆ ಪ್ರವೇಶ ಮಾಡಲು ಬಿಡಬೇಕೆಂದು ಹೇಳುತ್ತಿರುವುದು ಉಚ್ಚವರ್ಗದ ಹಿಂದುಗಳ ಪರಿಶುದ್ಧತೆಗಾಗಿ ಮತ್ತು ದೃಷ್ಟಿ ವೈಶಾಲ್ಯ ಸಾಧನೆಗಾಗಿಯೇ ಹೊರತು ಹರಿಜನರ ಮೋಕ್ಷಕ್ಕಾಗಿಯಲ್ಲ." ಎಂದು ಮಾರ್ಮಿಕವಾಗಿ ಸ್ವಾತಂತ್ರ್ಯಪೂರ್ವದಲ್ಲೇ ಹೇಳಿದ್ದಾರೆ. ಕುಟುಂಬ ಯೋಜನೆಯನ್ನು ಕುರಿತು 'ಪ್ರೇತ ಕ್ಯೂ' ಎಂಬ ಕವನದಲ್ಲಿ ಬರೆದಿದ್ದಾರೆ.

ಸರಳ ವಿವಾಹದ ಬಗ್ಗೆ ಅವರು ಒಂದು ಚಳುವಳಿಯನ್ನೇ ಹೂಡಿದರು. 'ಮಂತ್ರಾಕ್ಷತೆ' ಎಂಬ ದೀಕ್ಷಾ ಮಂತ್ರವನ್ನು ವಧೂ–ವರರಿಗೆ ಸಿದ್ಧಪಡಿಸಿಕೊಟ್ಟರು. ಅವರೇ ತಮ್ಮ ಮಕ್ಕಳ ವಿವಾಹವನ್ನು ಸರಳವಾಗಿ ಮಾಡಿ ತೋರಿಸಿದರು. ಇಂದು ಅದರ ಪರಿಣಾಮದಿಂದಾಗಿ ಅನೇಕ ಕಡೆ ಶಾಸ್ತ್ರವಿಧಿಗಳಿಲ್ಲದೆ ಸರಳವಿವಾಹಗಳು ಏರ್ಪಡುತ್ತಿರುವುದನ್ನು ಕಾಣುತ್ತಿದ್ದೇವೆ

ಯಾವುದೋ ಕವಿ ಅಥವಾ ಸಾಹಿತಿಯ ಕೃತಿಗಳು ತನ್ನ ಜೀವಿತಕಾಲದಲ್ಲೇ ಜನಪ್ರಿಯವಾಗಬೇಕಾದರೆ, ಜನಪ್ರಿಯವಾದರೂ ಸಮಾಜದಲ್ಲಿ ಆಳವಾಗಿ ಬೇರೂರಬೇಕಾದರೆ ಅವನ ವೈಯಕ್ತಿಕಜೀವನವೂ ಅಷ್ಟೇ ಮುಖ್ಯವಾಗುತ್ತದೆ. ಕುವೆಂಪು ನಿಜಜೀವನದಲ್ಲೂ ವಿಚಾರವಾದಿಗಳಾಗಿ ಬಾಳುತ್ತಿರುವವರು. ಅವರ ಬಳಿ ಮೂಢನಂಬಿಕೆಗಳು, ಅಂಧಶ್ರದ್ಧೆಗಳು ಸುಳಿಯುವುದೇ ಇಲ್ಲ. ಆಡಂಬರ ಕೀರ್ತಿಗಾಗಿ ಹಾತೊರೆಯುವುದು ಅವರಿಗಾಗುವುದೇ ಇಲ್ಲ. ೧೯೩೦ರ ದಶಕದಲ್ಲಿ ನಡೆದ ಹುಬ್ಬಳ್ಳಿಯ ಸಾಹಿತ್ಯ ಸಮ್ಮೇಳನದಲ್ಲಿ ಕುವೆಂಪು ಅವರಿಗೆ ಆನೆ ಮೇಲೆ ಮೆರವಣಿಗೆ ಮಾಡಿಸಿಕೊಳ್ಳುವ ಸಂದರ್ಭವೊದಗಿತ್ತಂತೆ. ಆದರೆ ಗುರು ಶ್ರೀ ವೆಂಕಣ್ಣಯ್ಯನವರು ಮತ್ತು ಕುವೆಂಪು ಅದರಿಂದ ತಪ್ಪಿಸಿಕೊಂಡರು. ತಮ್ಮ ಮಕ್ಕಳಿಗೆ ಮೊದಲು ಸರಳ ವಿವಾಹ ಮಾಡಿ ತೋರಿಸಿದರು. ಕೆಲವರು ಸಮಾಜವಾದವನ್ನೇ ಉಸಿರಾಡುತ್ತಿದ್ದು ಮಣ್ಣಿನ ವಾಸನೆಯನ್ನು ಸದಾ ಸವಿಯುತ್ತಿದ್ದರೂ ಮಿನಿಸ್ಟರ್‌ ಆದಕೂಡಲೇ ತಮ್ಮ ಬಣ್ಣ ಬದಲಾಯಿಸಿ ಯಾವುದಾದರೂ ಲಾಂಛನದ ಆಶ್ರಯಪಡೆಯಲು ಮುಂದಾಗುವುದನ್ನು ನಮ್ಮ ಸುತ್ತ ಕಾಣುತ್ತಿರುವ ಈ ಕಾಲದಲ್ಲಿ ಕುವೆಂಪು ಅವರದು ಮಹತ್ತರ ಸಾಧನೆಯೇ ಸರಿ. ಅವರ ನಿವಾಸ 'ಉದಯರವಿ' ಇಂದು ಹೇಳುವ ಹೆಸರಾಗಿದೆ. ವಿನೋಬಾಭಾವೆಯವರಂಥ ಮಹಾಪುರುಷರು, ಲೋಹಿಯಾರಂಥ ದೇಶಸೇವಕರು ಈ ಮನೆಯನ್ನು ಹೊಕ್ಕುಹೋಗಿದ್ದಾರೆ.

ಸ್ವಾತಂತ್ರ್ಯ ಪೂರ್ವದಲ್ಲಿ 'ಯುವಕರು ನಿರಂಕುಶಮತಿಗಳಾಗಬೇಕು' ಎಂಬ ಭಾಷಣ ಮಾಡಿದ್ದಕ್ಕೆ ಕುವೆಂಪು ಅವರ ಮೇಲೆ ವಿಶ್ವವಿದ್ಯಾನಿಲಯ ತನಿಖೆಗೆ ಆಜ್ಞೆ ಮಾಡಿತ್ತು. ಇತ್ತೀಚೆಗೆ ಅವರು ಮಾಡಿದ ಭಾಷಣದ ಬಗ್ಗೆ ಅವರಿಗೆ ಲಾಯರ್ ನೋಟೀಸ್ ನೀಡಿದ್ದು ಎಲ್ಲರಿಗೂ ಜ್ಞಾಪಕವಿದೆ. ಕುವೆಂಪು ಇದರಿಂದ ತಮ್ಮ ಕೀರ್ತಿಗೆ ಕುಂದೆಂದು ಎಂದೂ ಭಾವಿಸಿದವರಲ್ಲ. "ಕೀರ್ತಿಗಿಂತಲೂ ನನಗೆ ಹೆಚ್ಚು ಪ್ರಿಯವಾದದ್ದು ಸತ್ಯ. ಸತ್ಯ ಹೇಳಿದರೆ ಕಲುಷಿತವಾಗುವ ಕೀರ್ತಿ ಭ್ರಷ್ಟಾಚಾರದ ವಸ್ತುವಾಗುತ್ತದೆ. ಅಲ್ಲದೆ 'ಕೀರ್ತಿಶನಿ' ಎಂಬ ನನ್ನ ಸಾನೆಟ್ಟಿನಲ್ಲಿ ಅನೇಕ ವರ್ಷಗಳ ಹಿಂದೆಯೆ ನಾನು ಅದನ್ನು 'ತೊಲಗಾಚೆ' ಎಂದು ತೊಲಗಿಸಿದ್ದೇನೆ.... ಕೀರ್ತಿ ಕಲುಷಿತವಾಗುವುದಿರಲಿ ಅಪಕೀರ್ತಿಯೆ ಬಂದರೂ ಸತ್ಯ ಹೇಳುವುದನ್ನು ಬಿಡುವುದಿಲ್ಲ" ಎಂದು ಕುವೆಂಪು ಘೋಷಿಸಿದ್ದಾರೆ. ಹೀಗೆ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯೋತ್ತರ ದಿನಗಳೆರಡರಲ್ಲೂ ಕ್ರಾಂತಿಕಹಳೆ ಮೊಳಗಿದವರು ವಿರಳ. ಈ ವಿರಳರಲ್ಲಿ ವಿರಳರಾಗಿ ಕುವೆಂಪು ವಿಚಾರಕ್ರಾಂತಿಗೆ ಆಹ್ವಾನ ನೀಡಿ ಕ್ರಾಂತಿಕಾರಿ ಕವಿಯಾಗಿದ್ದಾರೆ. ಮಾವೋತ್ಸೆತುಂಗ್ ಇದನ್ನೇ 'ನಿರಂತರಕ್ರಾಂತಿ'ಯೆಂದು ಹೇಳಿದ್ದು. ಪ್ರತಿ ಹಳೆಯ ವ್ಯವಸ್ಥೆಯ ದೋಷಗಳನ್ನು ಹೊಸ ವಿಚಾರದ ಹೊಳೆ ಸದಾ ಶುದ್ಧಿಮಾಡುತ್ತಿರಬೇಕಾಗುತ್ತದೆ. ಆದರೆ ಆಯಾ ದೇಶ, ಸಂಸ್ಕೃತಿಗಳಿಗೆ ತಕ್ಕಂತೆ ಅದರ ಸ್ವರೂಪ ಬೇರೆಯಾಗಿರುತ್ತದಷ್ಟೆ.

ಯಾವುದೇ ಸಮಕಾಲೀನ ಸಮಾಜ ಮತ್ತು ಸಾಹಿತ್ಯದ ಮೇಲೆ ಕುವೆಂಪು ಅವರಷ್ಟು ಗಾಢ ಪ್ರಭಾವ ಬೀರಿದ ಕವಿಗಳು, ಸಾಹಿತಿಗಳು ವಿರಳವೆಂದೇ ಹೇಳಬಹುದು. ಮಹಾಕಾವ್ಯ ಹಾಗೂ ಕ್ರಾಂತಿಕಾರಕ ಕೃತಿಗಳು ಕುವೆಂಪು ಅವರ ಲೇಖನಿಯಿಂದ ಮೂಡಿದ್ದು ಈ ಯುಗದ ಹಾಗೂ ಕುವೆಂಪು ಅವರ ವೈಶಿಷ್ಟ್ಯ. ಅವರು ಜೀವನ ಮತ್ತು ವೈಜ್ಞಾನಿಕ ದೃಷ್ಟಿಗಳೆರಡನ್ನೂ ಕನ್ನಡ ಸಾಹಿತ್ಯದಲ್ಲಿ ಬಿತ್ತಿ ಬೆಳೆದರು. ಆದ್ದರಿಂದಲೇ ಅವರ ಸಾಹಿತ್ಯ ಸಮಷ್ಟಿಗೂ ವ್ಯಷ್ಟಿಗೂ ಸಮಾನ ಮಹತ್ವದ್ದಾಗಿದೆ. ನಾಡಿನ ಸಾಹಿತ್ಯಚರಿತ್ರೆಯಲ್ಲಾಗಲಿ, ಸ್ವಾತಂತ್ರ್ಯ ಹೋರಾಟ ಚರಿತ್ರೆಯಲ್ಲಾಗಲಿ, ಏಕೀಕರಣ ಚರಿತ್ರೆಯಲ್ಲಾಗಲಿ,ಸಾಮಾಜಿಕ ಬದಲಾವಣೆಯ ಚರಿತ್ರೆಯಲ್ಲಾಗಲಿ ಕುವೆಂಪು ಅವರ ಸ್ಥಾನ ಹಿರಿದಾಗಿದೆ. ಅವರ ವ್ಯಕ್ತಿತ್ವವಂತೂ ಸ್ಫೂರ್ತಿಯ ಸೆಲೆಯಾಗಿ ಪ್ರಭಾವ ಬೀರುತ್ತಿದೆ.

ಮಾನವದೇಹ ಗುಡಿಗಳಲ್ಲಿ ತಾಜ್‌ಮಹಲ್ ಇದ್ದಂತೆ. ಅದರಲ್ಲಿ ನನಗೆ ಪೂಜಿಸಲು ಆಗದೇ ಇದ್ದರೆ, ಉಳಿದ ಎಂತಹ ದೇವಸ್ಥಾನಗಳಿದ್ದರೂ ಪ್ರಯೋಜನವಿಲ್ಲ. ಪ್ರತಿಯೊಂದು ಮಾನವದೇಹದ ಗುಡಿಯಲ್ಲೂ ಕುಳಿತಿರುವ ದೇವರು ನನಗೆ ತಿಳಿದ ಒಡನೆ ಪ್ರತಿಯೊಬ್ಬ ಮಾನವನೆದುರು ಭಕ್ತಿಯಿಂದ ನಮ್ರನಾಗಿ ನಿಂತುಕೊಂಡು ದೇವರನ್ನು ಕಂಡೊಡನೆಯೆ ಬಂಧನದಿಂದ ಮುಕ್ತನಾಗುವೆನು. ನನ್ನನ್ನು ಬಂಧಿಸಿರುವುದೆಲ್ಲಾ ಮಾಯವಾಗುವುದು. ನಾನು ಮುಕ್ತನಾಗುವೆನು.

ಕೆ. ಬಿ. ರಾಮಕೃಷ್ಣರಾವ್

ಅದು ಪೂರ್ಣ-ಇದು ಪೂರ್ಣ

ಸತ್ಯದ ನಿಲುವಿನಲ್ಲಿ ನಿಂತು ಅದರ ಪೂರ್ಣ ದರ್ಶನದ ಆಧಾರದ ಮೇಲೆ ಉಪನಿಷತ್ತಿನ ಋಷಿ ಈ 'ಶಾಂತಿಮಂತ್ರ'ವನ್ನು ನಮಗೆ ಅನುಗ್ರಹಿಸಿದ್ದಾನೆ :

ಪೂರ್ಣಮದಃ ಪೂರ್ಣಮಿದಂ
ಪೂರ್ಣಾತ್ ಪೂರ್ಣಮುದಚ್ಯತೇ ।
ಪೂರ್ಣಸ್ಯ ಪೂರ್ಣಮಾದಾಯ
ಪೂರ್ಣಮೇವಾವಶಿಷ್ಯತೇ ॥

ಈ ಶಾಂತಿಮಂತ್ರದಿಂದ "ಈಶಾವಾಸ್ಯ"ವೆಂಬ ಉಪನಿಷತ್ತು ಪ್ರಾರಂಭವಾಗಿ ಮತ್ತೆ ಈ ಶಾಂತಿಮಂತ್ರದಿಂದಲೇ ಪೂರ್ಣಗೊಳ್ಳುತ್ತದೆ.

ಈ ಶಾಂತಿಮಂತ್ರದ ಅರ್ಥವಿಸ್ತಾರ ಇಹಪರಗಳೆಂಬ ಭೇದವಿಲ್ಲದೆ ಜೀವೇಶ್ವರರೆಂಬ ಬೇಧವಿಲ್ಲದೆ ಸಮಸ್ತ ಅಸ್ತಿತ್ವದ ಪೂರ್ಣಭಾವವನ್ನು ವ್ಯಕ್ತಪಡಿಸುತ್ತದೆ. ಎಲ್ಲವೂ ಈಶ್ವರನಿಂದ ವ್ಯಾಪ್ತವಾದದ್ದು ಎಂದು ಪ್ರತಿಪಾದಿಸಲು ಹೊರಟ "ಈಶಾವಾಸ್ಯ" ಉಪನಿಷತ್ತು ಈ ಶಾಂತಿಮಂತ್ರದ ವ್ಯಾಖ್ಯಾನ ಎಂದರೂ ತಪ್ಪಾಗಲಾರದು.

ಶಾಂತಿಮಂತ್ರದ ಸರಳ ಅರ್ಥವನ್ನು ಹೀಗೆ ಹೇಳುತ್ತಾರೆ: ಅದು ಪೂರ್ಣ, ಇದು ಪೂರ್ಣ. ಪೂರ್ಣದಿಂದ ಪೂರ್ಣ ಬರುತ್ತದೆ. ಪೂರ್ಣದಿಂದ ಪೂರ್ಣವನ್ನು ತೆಗೆದರೆ ಉಳಿಯುವುದು ಪೂರ್ಣವೇ. ಇದನ್ನು ವಿವಿಧ ರೀತಿಯಲ್ಲಿ ಅರ್ಥಮಾಡಿದ್ದಾರೆ. ಸಾಪೇಕ್ಷ ದೃಷ್ಟಿಯಿಂದ ಮಾಡುವ ವ್ಯಾಖ್ಯಾನ ಈ ನಿರಪೇಕ್ಷವಾದ ಪೂರ್ಣತೆಗೆ ಅಪಚಾರವಾಗುವುದು ಸಹಜ. ಮಂತ್ರದ್ರಷ್ಟಾರ ನಿರಪೇಕ್ಷ ದೃಷ್ಟಿಯಿಂದಲೇ ಇದನ್ನು ನಮಗೆ ಇತ್ತಿದ್ದಾನೆಂಬುದನ್ನು ನಾವು ಮರೆಯಬಾರದು. ಹಾಗಾದರೆ ಈ ಮಂತ್ರದ ಅರ್ಥವಾದರೂ ಏನು ?

ಪೂರ್ಣವೆನ್ನುವುದು ಯಾವುದೇ ದೃಷ್ಟಿಯಿಂದಲಾದರೂ ಕೊರತೆ ಇಲ್ಲದಂತಹುದು. ಇದನ್ನು "ಅನಂತ" Infinite ವೆನ್ನುವ ಪದದಿಂದ ಬಹುಶಃ ನಾವು ಸೂಚಿಸಬಹುದು. ಪರ್ಯಾಯವಾಗಿ "ಭೂಮ"ಎನ್ನುವ ಪದವನ್ನು ಉಪಯೋಗಿಸಬಹುದು. ಈ ಬೆಳಕಿನಲ್ಲಿ ಪೂರ್ಣ ಎನ್ನುವುದನ್ನು ನೋಡಿದಾಗ ಸಾಮಾನ್ಯ ಗಣಿತದ ಸಂಕಲನ (ಕೂಡುವಿಕೆ) ವ್ಯವಕಲನ (ಕಳೆಯುವಿಕೆ) ಶೇಷ (ಉಳಿಯುವಿಕೆ) ಮುಂತಾದ ಯಾವವೂ ಈ ಮಂತ್ರಕ್ಕೆ ಅನ್ವಯವಾಗುವುದಿಲ್ಲ. ಇಲ್ಲಿ ಹೇಳುವ "ಪೂರ್ಣ"ವನ್ನು ಗಣಿತದ "ಸೊನ್ನೆ" (zero) ಯಿಂದ ಗುರುತಿಸಲಾಗದು. ಇಲ್ಲಿ ಸೊನ್ನೆಯಿಂದ ಸೊನ್ನೆಯನ್ನು ಕಳೆಯುವುದೂ ಅಲ್ಲ, ಸೊನ್ನೆ ಉಳಿಯಿತು ಎಂದು ಹೇಳುವುದೂ ಅಲ್ಲ.

ಶಾಂತಿಮಂತ್ರದ ಗಣಿತ 'ಅನಂತದ ಗಣಿತ.' ಇದರ ಆಯಾಮ ಅನಂತ ಆಯಾಮ. ಇಲ್ಲಿ ಕಳೆಯುವುದೂ ಇಲ್ಲ ಕೂಡುವುದೂ ಇಲ್ಲ. ಗಣಿತದ ಸೊನ್ನೆ ತನ್ನ ವೃತ್ತದಿಂದಲೆ ಪರಿಮಿತಗೊಳ್ಳುವಂತಹುದು. ಅನಂತದ

ಗಣಿತದಲ್ಲಿ ಪರಿಮಿತಗೊಳಿಸುವ ಯಾವ ವೃತ್ತವೂ ಇಲ್ಲ, ಯಾವ ರೇಖೆಯೂ ಇಲ್ಲ ; ಎಂದರೆ ದೇಶದಿಂದಲಾಗಲೀ ಕಾಲದಿಂದಲಾಗಲೀ ಮತ್ತೊಂದು ವಸ್ತುವಿನಿಂದಲಾಗಲೀ ಘಟನೆಯಿಂದಲಾಗಲೀ ಸೀಮಿತಗೊಳ್ಳುವಂತಹ ಆಯಾಮವಲ್ಲ. ಇದು ಎಲ್ಲವನ್ನೂ ಕೂಡಿಕೊಂಡ, ವ್ಯಾಪಿಸಿಕೊಂಡ ಸ್ಥಿತಿ. ಇದಕ್ಕೆ ಬಾಹ್ಯವಿಲ್ಲ, ಅಂತರ ಭೇದವಿಲ್ಲ. ಅಸ್ತಿತ್ವದಲ್ಲಿ ಇರುವುದೆಲ್ಲಾ ಅನಂತದ ಅಖಂಡ ಅವಿಭಾಜ್ಯ ರೂಪ. ಇದನ್ನೇ ವೇದಾಂತಿಗಳು "ಬ್ರಹ್ಮ" ಎಂಬ ಪದದಿಂದ ನಿರ್ದೇಶಿಸುತ್ತಾರೆ. ಇಲ್ಲಿ ನಿರಾಕರಣೆಯ ನಿರಾಕರಣೆ ಇದೆ. ಇದನ್ನು ನಿರಾಕರಿಸಲು ಸಾಧ್ಯವೇ ಇಲ್ಲ. ಎಂದರೆ ಯಾವುದನ್ನು ನಿರಾಕರಿಸಲಾಗದೋ ಅದೇ ಬ್ರಹ್ಮ. ಅದೇ ಸತ್, ಚಿತ್, ಆನಂದ.

ಈ ಲಕ್ಷಣಗಳೆಲ್ಲವನ್ನು ಶಾಂತಿಮಂತ್ರವು ತನ್ನದೇ ಆದ ರೀತಿಯಲ್ಲಿ ಸೂಚಿಸುತ್ತದೆ.

ಪೂರ್ಣವಾದ ವಸ್ತು ಅನಂತವಾದದ್ದು ಎಂದಾದರೆ ಯಾವುದನ್ನು ನಾವು ಗುರುತಿಸಿದರೂ ಅದು ಅನಂತವಾದುದನ್ನೇ ಸೂಚಿಸಿದಂತಾಗುತ್ತದೆ. ಎಲ್ಲದರ "ಸತ್" ಭಾವ, "ಅಸ್ತಿತ್ವ" ಅನಂತದಿಂದ ವ್ಯಾಪ್ತವಾಗಿರುತ್ತದೆ. ಅನಂತಕ್ಕೆ ಸೀಮಾರೇಖೆ ಇಲ್ಲದ್ದರಿಂದ ನಾವು ಯಾವುದನ್ನು ಮುಟ್ಟಿ ಅಥವಾ ಬೆರಳಿನಿಂದ ತೋರಿಸಿದರೂ ಅದು ಅನಂತವನ್ನೇ ಮುಟ್ಟಿದಂತೆ.ಏಕೆಂದರೆ ಅನಂತದ ರಚನೆಯನ್ನು ಬಿಟ್ಟು ಅದಕ್ಕೆ ಬಾಹಿರವಾಗಿ ಯಾವುದೂ ಪ್ರತ್ಯೇಕ ಅಸ್ತಿತ್ವವನ್ನು ಹೊಂದಿರುವುದಿಲ್ಲ; ಹೊಂದುವುದೂ ಇಲ್ಲ. ಆದ್ದರಿಂದ ಇದೂ ಪೂರ್ಣ, ಅದೂ ಪೂರ್ಣ !

ಹೀಗಿರುವಾಗ ಶಾಂತಿಮಂತ್ರದಲ್ಲಿ "ಪೂರ್ಣದಿಂದ ಪೂರ್ಣವನ್ನು ತೆಗೆದರೆ ಪೂರ್ಣವೇ ಉಳಿಯುತ್ತದೆ" ಎಂದರೇನು ? ಮೇಲೆ ಹೇಳಿದಂತೆ ವ್ಯವಕಲನಮಾಡಿ ಶೇಷವನ್ನು ತೋರಿಸುವುದಲ್ಲ. ಅಥವಾ ಪೂರ್ಣವಾದುದರಿಂದ ಅಪೂರ್ಣವಾದ ಯಾವುದೂ ಹುಟ್ಟಿ ಬಂದಿತು ಎಂದಲ್ಲ. ಪರಬ್ರಹ್ಮದಿಂದ ಈ ಜಗತ್ತು, ಈ ಜೀವ ಹುಟ್ಟಿಬಂದ ಘಟಕಗಳು ಎಂದು ಹೇಳುವುದೂ ತಪ್ಪು. ಅನಂತವಾದದ್ದು ಶೂನ್ಯವಲ್ಲದ್ದರಿಂದ, ಅನಂತದಿಂದ ಅನಂತವನ್ನು ವ್ಯವಕಲನ ಮಾಡಲಾಗದುದರಿಂದ, ಶೇಷವಾಗಿ ಬರುವುದು ಶೂನ್ಯವಲ್ಲ. ಶೇಷ ಬರುವುದೂ ಇಲ್ಲ.

ಶಾಂತಿಮಂತ್ರದ ಅಂತರಾರ್ಥವನ್ನು ನಿರಪೇಕ್ಷ ಪೂರ್ಣದ ದೃಷ್ಟಿಯಿಂದಲೇ ನೋಡಬೇಕು. "ಅನಂತ"ವಾದದ್ದು ಯಾವುದನ್ನು ಉತ್ಪನ್ನಮಾಡಬಲ್ಲದು ? ಹೊರಗೆಡವಬಲ್ಲದು ? ತನ್ನ ಅನಂತವನ್ನೇ ತಾನು ಪ್ರಕಟಿಸಬೇಕಾಗುತ್ತದೆ! ಎಂದರೆ ಅನಂತವು ಯಾವುದನ್ನೂ ಉತ್ಪತ್ತಿ ಮಾಡುವುದಿಲ್ಲ.ಹೊಸತು ಎನ್ನುವ ಯಾವುದೂ ಸೃಷ್ಟಿಯಾಗದು. ಅನಂತದ ಲಕ್ಷಣವೆಂದರೆ ಕಾರಣವಾದದ್ದು ಕಾರ್ಯದ ರೂಪದಲ್ಲಿ ಪರಿವರ್ತನೆ ಆಗುವುದಾಗಲೀ, ತೋರಿಕೊಳ್ಳುವುದಾಗಲೀ ನಡೆಯದು. ಎಂದರೆ ಕಾರ್ಯ–ಕಾರಣಗಳೆನ್ನುವ ಸಾಪೇಕ್ಷ ಮಾನದಂಡಕ್ಕೆ ಸಿಗದ ವಸ್ತು ಅನಂತವಸ್ತು. ಇಲ್ಲಿ ಪರಿಣಾಮವೂ ಇಲ್ಲ ವಿವರ್ತವೂ ಇಲ್ಲ ! ಅನಂತ ಅನಂತವೇ, ಪೂರ್ಣ ಪೂರ್ಣವೇ ! "ಪೂರ್ಣಮದಃ ಪೂರ್ಣಮಿದಂ" ಅದು ಪೂರ್ಣ, ಇದು ಪೂರ್ಣ ಎನ್ನುವಲ್ಲಿ "ಅದು", "ಇದು" ಎನ್ನುವುದು ಖಂಡ ವಸ್ತುಗಳಲ್ಲ ; ನಾಮ, ರೂಪ, ದೇಶ, ಕಾಲಗಳಿಂದ ವಿಭಿನ್ನವಾದ ಘಟಕಗಳಲ್ಲ. ಆತ್ಮಾನುಭಾವದ ಸಂಪತ್ತಿನಲ್ಲಿ ದರ್ಶಿತವಾಗುವ ಅಖಂಡ ಅನಂತ ಸದ್ರೂಪ.

ಇಷ್ಟು ಪೂರ್ಣತೆಯ 'ಸತ್' ಸ್ವರೂಪ.

ಇಂತಹ ಅನಂತ ಅಸ್ತಿತ್ವ ಸ್ವಯಂ ಜ್ಯೋತಿ ಸ್ವರೂಪವಾದದ್ದು. ಎಂದರೆ ಯಾವ ಅಸ್ತಿತ್ವವೇ ಆಗಲಿ ತನ್ನ ಅಸ್ತಿತ್ವವನ್ನು ಅರಿಯುವ ಬಗೆಗೆ ತನಗಿಂತ ಭಿನ್ನವಾದ ಅಂಶದ ಮೇಲೆ ಆಧಾರಗೊಂಡಿದ್ದಲ್ಲಿ ಅಸ್ತಿತ್ವದಲ್ಲಿ ನ್ಯೂನತೆ ಹೊಂದಿರುವುದೊಂದೇ ಅಲ್ಲದೆ, ಅಂಧಕಾರ ಮಯವೇ ಆಗಿರುತ್ತದೆ. ಇರವು ಅರಿವಾಗಿರಬೇಕು. ಎಂದರೆ ಅಸ್ತಿತ್ವವೆನ್ನುವುದು ಸ್ವಯಂ ಪ್ರಜ್ಞೆಯೇ ಆಗಬೇಕು. ಹೀಗೆ ಯಾವುದು ಅನಂತವೋ ಪೂರ್ಣವೋ ಅದರ ಗರ್ಭದಲ್ಲಿ ಭೇದವೇ ಇಲ್ಲದಂತಹ ಸ್ಥಿತಿಯಲ್ಲಿಯೇ ಪ್ರಜ್ಞೆ, ಚೈತನ್ಯ ಎನ್ನುವುದೇ ಅಸ್ತಿತ್ವವೆನಿಸುತ್ತದೆ.ಈ ಚೈತನ್ಯ ಗುಣವಿಶೇಷವೆಂಬಂತೆ ಬಾಹ್ಯ ಸಂಬಂಧವನ್ನು ಹೊಂದಿರದ, ಆಗಂತುಕವಾಗಿರದ ಸದಾ ಸ್ಥಿತಿ. ಇದನ್ನು ಅನುಸರಿಸಿ ಉಪನಿಷತ್ಕಾರರು ಸತ್ ಎನ್ನುವುದನ್ನೆ ಚಿತ್ ಎಂದು ಕರೆದಿದ್ದಾರೆ.ಅಸ್ತಿತ್ವವು ಸ್ವಯಂ–ಜ್ಯೋತಿತ್ವದಲ್ಲಿ ಪೂರ್ಣಗೊಳ್ಳು

ತ್ತದೆ. ಪೂರ್ಣತೆಯ ಅನಂತ ಆಯಾಮದಲ್ಲಿ ಸ್ವಯಂ ಪ್ರಕಾಶತೆಯು ಎಲ್ಲದಕ್ಕೂ ಅರ್ಥವನ್ನು ನೀಡುವಂತಹ ಬೆಳಕು. ಇದು ಹುಣ್ಣಿಮೆಯ ಬೆಳಕಲ್ಲ, ಆದಿತ್ಯನ ಪ್ರಭೆ. ಇದು ಬೆಳಗಿದರೆ ಎಲ್ಲವೂ ಬೆಳಗುವುದು. ಇಲ್ಲದಿದ್ದರೆ ಇಲ್ಲ. 'ತಸ್ಯ ಭಾಸಾ ಸರ್ವಮಿದಂ ವಿಭಾತಿ.'

ಇದು ಪೂರ್ಣತೆಯ ಚಿತ್ ಸ್ವರೂಪ.

ಪೂರ್ಣತೆಯ ರಚನೆಯಲ್ಲಿ ಸಾಧನೆಯ ಮೂಲಕ ಗಳಿಸಿಕೊಂಡು ತೃಪ್ತಿಯನ್ನು ಪಡೆದುಕೊಳ್ಳುವಂತಹ ಯಾವ ಸಂದರ್ಭವೂ ಇರುವುದಿಲ್ಲ. ಇದರ ಲಕ್ಷಣ ಯಾವುದನ್ನೂ ಬಯಸದಿರುವುದು. ಬಯಕೆ ಎನ್ನುವುದು ಅಪೂರ್ಣದ,ಅನಂತವಲ್ಲದುದರ ಸಹಜ ಸ್ವಭಾವ. ಪರಿಮಿತವಾದುದರ ಬಾಳು ಬಯಸುವುದರಲ್ಲೇ ಕಳೆದು ಹೋಗುತ್ತದೆ. ಆದರೆ ಪೂರ್ಣವಾದುದು ಆತ್ಮಕಾಮ, ಆಪ್ತಕಾಮ, ಅಕಾಮ. ಕಾಮ ಸಂತೃಪ್ತಿಗೆ ಅಗತ್ಯವಾದ ಯಾವ ಸ್ಪಂದನದ ಅಗತ್ಯವೂ ಇಲ್ಲಿ ಇರುವುದಿಲ್ಲ. ತೃಪ್ತಿ ಸಾಧನೆ ಗುರಿಯಾಗಿ ಇಲ್ಲಿ ಯಾವ ಚಲನೆಯೂ ಇಲ್ಲ. ಇದು ನಿಶ್ಚಲವಾದ ಆತ್ಮಾರಾಮ,ಅನಂತ ಶಾಂತ ಸ್ಥಿತಿ. ಯಾವುದು ಭೂಮವೋ ಅದೇ ಅತ್ಯಂತ ಸುಖ, ಎಂದರೆ ಆನಂದ. ಅಲ್ಪವಾದದ್ದು, ಎಂದರೆ ಅಪೂರ್ಣವಾದದ್ದು ಎಂದಿಗೂ ಸುಖಕರವಲ್ಲ.

ಆನಂದ ಪೂರ್ಣತೆಯ ಮತ್ತೊಂದು ಆಯಾಮ. ಪೂರ್ಣತೆ ಅನಂತವಾದದ್ದರಿಂದ ಅಂತರಂಗ ಬಹಿರಂಗಗಳು ಇಲ್ಲದಿರುವುದರಿಂದ ಇದರ ಅಸ್ತಿತ್ವದಲ್ಲಿ ಅಥವಾ ರಚನೆಯಲ್ಲಿ ಭೇದದ ಇಜ್ಜೋಡು ಇರುವುದಿಲ್ಲ. ಎರಡರ ಪರಸ್ಪರ ಪ್ರತಿಸ್ಪರ್ಧೆ ಇಲ್ಲ. ಏಕ–ಅನೇಕ, ಜೀವ–ಅಜೀವ, ಚೇತನ–ಅಚೇತನ, ಅಣು–ವಿಭುಗಳ ತಿಕ್ಕಾಟಗಳಿಲ್ಲ. ವಿರೋಧವಿಲ್ಲ. ಇಲ್ಲಿನ ನಿರಪೇಕ್ಷ ಸ್ಥಿತಿ ಸಮತ್ವ, ಸಂವಾದ, ಸುಸ್ವರಗಳಲ್ಲಿ ನಿರಂತರವಾಗಿ ಪ್ರಕಟವಾಗುತ್ತಿರುವ ಮಧುರತೆ. ಇದಕ್ಕೆ ಶಾಂತಿ ಎನ್ನುತ್ತಾರೆ. ಆನಂದವೆನ್ನುತ್ತಾರೆ.

ಶಾಂತಿಮಂತ್ರದ ಉದ್ದೇಶ ಅಸ್ತಿತ್ವವು ಅಪಸ್ವರಗಳಿಲ್ಲದ ಏಕತಾನದಲ್ಲಿ ಭಾಗವಹಿಸಬೇಕು ಎಂದು ಬೋಧಿಸುವುದರಲ್ಲಿ ಅಡಗಿದೆ. ಈ ಶಾಂತಿ ನಮ್ಮ ಅಂತರಂಗದಲ್ಲಿಯೇ ಅಲ್ಲ, ಬಹಿರಂಗದಲ್ಲೂ ಹರಡುವಂತಿರಬೇಕು. ಇದನ್ನು ಅನುಭವದಲ್ಲಿ ಕಂಡುಕೊಳ್ಳಬೇಕಾದರೆ ನಾವು ಕೈಕೊಳ್ಳಬೇಕಾದ "ತಂತ್ರ" "ಪೂರ್ಣತೆಯ ತಂತ್ರ" ಎಂದು ಸೂಚಿಸುತ್ತದೆ. ಎಂದರೆ ಸತ್ ಚಿತ್ ಆನಂದ ಎನಿಸುವ ಅನಂತ ತತ್ತ್ವದ ಒಂದು ಆಯಾಮ ನಾವೇ ಆಗಬೇಕಾಗಿದೆ.

ಆಗ ಎಲ್ಲೆಲ್ಲೂ ಶಾಂತಿ
ಅದೇ ಎಲ್ಲದರ ಶಾಂತಿ
ಇದೇ ಪೂರ್ಣ ಶಾಂತಿ

ಈ ಶಾಂತಿಮಂತ್ರದ ಅನ್ವಯವನ್ನೇ ಈಶಾವಾಸ್ಯ ಉಪನಿಷತ್ತು ಮಾಡುತ್ತದೆ ಎನ್ನಬಹುದು.

ಗುಂಡ್ಮಿ, ಚಂದ್ರಶೇಖರ ಐತಾಳ

ಮಾನವ ಗೀತ*

೧

ರೇಡಿಯೋದಲ್ಲಿ ಒಳ್ಳೆಯ ಸಂಗೀತ ಬರುವಾಗ
ಕರೆಂಟ್ ಹೋದಂತಾಯಿತ್ತಯ್ಯಾ ನನ್ನ ಸ್ಥಿತಿ.
ಕರೆಂಟ್ ಬರಿಸಿ ಸುಮಧುರ ಸಂಗೀತ ಕೇಳಿಸೋ
ತಿಂಗಳ ಮುಡಿದವನೇ !

೨

ನನ್ನ ಕಳಪೆ ಪುಸ್ತಕಕ್ಕೆ ಪ್ರಶಸ್ತಿ ಬಂದಾಗ
ನನಗಿಂತ ಹೆಚ್ಚು ದುಃಖಿತರಾದವರಿಲ್ಲ
ನನ್ನ ಶ್ರೇಷ್ಠ ಕೃತಿಗೆ ಪ್ರಶಸ್ತಿ ಬಾರದಾಗ
ನನಗಿಂತ ಹೆಚ್ಚು ನೊಂದವರಿಲ್ಲ
ಆದರೊಂದು ಸಮಾಧಾನ :
ವಾಲ್ಮೀಕಿ ರಾಮಾಯಣಕ್ಕೆ ಯಾರು ಪ್ರಶಸ್ತಿ ಇತ್ತರು,
ವ್ಯಾಸ ಮಹಾಭಾರತಕ್ಕೆ ಯಾರು ಪ್ರಶಸ್ತಿ ಇತ್ತರು,
ಅವರು ನನ್ನ ಕೃತಿಯನೋದಿ
ಕಣ್ಣಂಚಿನಲ್ಲಿ ಮುತ್ತಿನ ಮಾಲೆ ತೊಟ್ಟರು
ಈ ಮುತ್ತಿನ ಮಾಲೆ ಯಾವ ಮುತ್ತಿನ ಮಾಲೆಗೂ
ಮೀರಿದ ಪ್ರಶಸ್ತಿಯಲ್ಲವೇ ತಿಂಗಳ ಮುಡಿದವನೇ !

---

*ಮಾನವನ ಅನುಭವದ ಮಿತಿಗೆ ಬರಬಹುದಾದ ಎಲ್ಲ ಸಂವೇದನೆಗಳನ್ನು ಇಲ್ಲಿ ವಚನರೂಪದಲ್ಲಿ ಕವಿ ಹಿಡಿದಿಟ್ಟಿದ್ದಾನೆ. ಕವಿಯು ತನ್ನ ಹೆಸರಾದ 'ಚಂದ್ರಶೇಖರ' ಎಂಬುದನ್ನು 'ತಿಂಗಳ ಮುಡಿದವನು' ಎಂಬ ಅಂಕಿತವಾಗಿ ಬಳಸಿದ್ದಾನೆ. ಹಾಗೆಂದರೆ 'ಪರಮೇಶ್ವರ' ಎಂಬ ಅರ್ಥವೂ ಉಂಟಾಗುತ್ತದೆ. ಹೀಗೆ ಬರೆದ ಸಾವಿರ ವಚನಗಳ ಸಂಕಲನ 'ಮಾನವ ಗೀತ' ಮಾನವ ಹೃದಯ ಸಮುದ್ರಮಥನದಿಂದೆದ್ದ ರತ್ನಗಳು. ಇದರ ಇನ್ನೊಂದು ಅರ್ಥ 'ಮಾ+ನವಗೀತ' ಎಂದೂ ಕವಿಯ ಉದ್ದೇಶ. ಅದರಿಂದ ಎತ್ತಿಕೊಟ್ಟ ಹತ್ತು ವಚನಗಳು ಇವಾಗಿವೆ.

೩

ಮಾನವಮುಖದ ಮೇಲೆ ಭೂಮಿಯನು ಕಂಡಿದ್ದೇನೆ
ಮಾನವಮುಖದ ಮೇಲೆ ಸಾಗರವ ಕಂಡಿದ್ದೇನೆ
ಮಾನವಮುಖದ ಮೇಲೆ ಕೆರೆ ಹಳ್ಳ ತಿಪ್ಪೆಯ ಕಂಡಿದ್ದೇನೆ
ಮಾನವಮುಖದ ಮೇಲೆ ವ್ಯೋಮವ ಕಂಡಿದ್ದೇನೆ
ಮಾನವಮುಖದ ಮೇಲೆ ನಿನ್ನ ಕಾಣೆಸೋ ತಿಂಗಳ ಮುಡಿದವನೇ !

೪

ಸದ್ಗುರು ದೊರೆಯುವುದು ಏಳೇಳು ಜನ್ಮದ ಪುಣ್ಯ
ನಾನು ಪುಣ್ಯವಂತ ಕಾಣಿರೋ
ನನಗೆ ದೊರೆತ ಸದ್ಗುರುಗಳೇ ಈ ಮಾತಿಗೆ ಸಾಕ್ಷಿ ಕಾಣಿರೋ
ಇಂದಿನ ಪುಂಡ ಪೋಕರಿ ಕುಡುಕ ತಲೆಹಿಡುಕರು
ಗುರುಗಳಾಗಿರುವುದ ಕಂಡರೆ
ಇಂದಿನ ಶಿಷ್ಯರು ಏಳೇಳು ಜನ್ಮಗಳಲ್ಲಿ
ಪಾಪಮಾಡಿ ಬಂದರೋ ಎನ್ನಿಸುವುದೆನಗೆ
ತಿಂಗಳ ಮುಡಿದವನೇ !

೫

ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟಂತಾಯಿತ್ತಯ್ಯಾ
ಕತ್ತೆಯ ಮೇಲೆ ಕಸ್ತೂರಿ ಹೊರಿಸಿದಂತಾಯಿತ್ತಯ್ಯಾ
ನೀರ ಮೇಲೆ ಮಾಡಿದ ಹೋಮದಂತಾಯಿತ್ತಯ್ಯಾ
ಬಂಡೆಯ ಮೇಲೆ ಮಂಡೆಯ ಕುಟ್ಟಿ ಹೋರಾಡಿದಂತಾಯಿತ್ತಯ್ಯಾ
ಶಿಷ್ಯರನರಿಯದ ಗುರು ಗುಗ್ಗುರು
ಗುರುವನರಿಯದ ಶಿಷ್ಯ ಗುಗ್ಗು
ಇವರಿಬ್ಬರನರಿಯದ ಅಧಿಕಾರಿ ಅಧಿಕ+ಅರಿ ಕಾಣಾ
ತಿಂಗಳ ಮುಡಿದವನೇ !

೬

ಇಲಿಯನ್ನು ಹುಲಿಯೆಂದು ಬಣ್ಣಿಸುವುದ ಕಂಡೆ
ಸತ್ಯ ಸತ್ತುದ ಕಂಡೆ ; ಸುಳ್ಳು ಮೆರೆವುದ ಕಂಡೆ
ನ್ಯಾಯದ ತಿಥಿಯೂಟವನ್ನುಂಡೆ !
ಅಲ್ಪತೆಯೆ ಕಲ್ಪವಾಗುವುದ ಕಂಡೆ
ಇದಕೆಲ್ಲ ಸಾಕ್ಷಿಯಾಗೆಂದು ಬದುಕಿಸಿದೆಯ, ತಂದೆ
ಬದುಕಿಸಿ ಕೊಂದೆ, ತಿಂಗಳ ಮುಡಿದವನೇ !

೭

ಬರೆವುದೆನ್ನ ಹಣೆಬರೆಹ
ಬಯ್ಗಳೇ ಬಾಸಿಂಗವೆನಗೆ
ಬಯ್ಯುವವರು ಭಾವಂದಿರೆನಗೆ
ಅವರ ಕಟಕಿ ಎನಗೆ ಮಕುಟ
ಅವರೊಡಲ ವಿಷವೆನ್ನ ಕೊರಳ ಗರಳ !
ಅವರ ತೊಗಲು ಎನ್ನುಡುಗೆ
ಅವರಸ್ತ್ರ ನನಗೆ ಕೊಡುಗೆ
ಲೋಕವನೀಪರಿ ಕಾಣಲು
ಕಲಿಸಿದೆ ನನಗೆ ತಿಂಗಳ ಮುಡಿದವನು !

೮

ಎಲ್ಲವನೂ ನುಂಗಿ ನೊಣೆಯುವವನಿದ್ದಾನೆಂದು ತಿಳಿಯಿರೋ
ಎಲ್ಲದಕೂ ಮೇಲೆ ಒಬ್ಬನಿದ್ದಾನೆಂದು ಬಗೆಯಿರೋ
ಏನುಗೈದರೂ ಕೇಳುವವರಿಲ್ಲವೆಂದು ಕೊಬ್ಬದಿರೋ
ಕೊಬ್ಬಿದ ಕುರಿ ಕಟುಕನಿಗೆ ಹಬ್ಬ
ಕಟುಕನಿಗೂ ಕಟುಕನಾದವ ನಮಗೆಟುಕ
ತಿಂಗಳ ಮುಡಿದವನು !

೯

ಕಬ್ಬಿಣ ಇದ್ದಲ್ಲೇ ಇದ್ದರೆ ತುಕ್ಕು ಹಿಡಿವುದಯ್ಯಾ
ಮಾನವಬುದ್ಧಿ ಕಬ್ಬಿಣಕ್ಕೆ ಗುರೂಪದೇಶ ಲೇಪನವಯ್ಯಾ
ತುಕ್ಕು ಹಿಡಿಯದಂತೆ ತಡೆವುದಯ್ಯಾ
ಅವನವನ ಸಂಸ್ಕಾರವೆಂಬ ಎಣ್ಣೆ ಸವರಿದಷ್ಟೂ
ತುಕ್ಕು ಕಳೆವುದಯ್ಯಾ ;
ಲಕಲಕನೆ ಹೊಳೆವುದಯ್ಯಾ ತಿಂಗಳ ಮುಡಿದವನೇ !

೧೦

ಹೂವನ್ನೂ ಹಾವನ್ನೂ ಈ ಭೂಮಿ ಹೊರುವುದಯ್ಯಾ
ಹಾವನ್ನು ಕಂಡವರು ಬಡಿದು ಕೊಂದುಬಿಡುವರಯ್ಯಾ
ಹೂವನ್ನೋ–ತಿಂಗಳ ಮುಡಿದವನ
ತಲೆಗೇರಿಸುವರಯ್ಯಾ !

ವ್ಯಕ್ತಿಚಿತ್ರಗಳು

ವ್ಯಕ್ತಿಚಿತ್ರ ಎಂಬ ಪದವನ್ನು ಇಂಗ್ಲಿಷಿನ profile ಎಂಬುದಕ್ಕೆ ಸಮಾನವಾದ ಪದವಾಗಿ ಬಳಸಲಾಗಿದೆ. ಆದರೆ ವ್ಯಕ್ತಿಚಿತ್ರದ ಅರ್ಥ ವ್ಯಾಪಕವಾದ್ದು. ಅದು ಒಬ್ಬ ವ್ಯಕ್ತಿಯ ಸುತ್ತ ಹರಿಸಿದ ಬೆಳಕು, ಅವನ ಸಮಗ್ರ ಚಿತ್ರ ಎಂದಾಗುತ್ತದೆ. Profile ಹಾಗಲ್ಲ. ಅದೊಂದು ಬದಿಯ ಚಿತ್ರ, ಅಡ್ಡ ಕೊಯ್ತ, cross Section. ಪ್ರೊಫೈಲ್ ಎಂಬ ಅರ್ಥದಲ್ಲಿ ವ್ಯಕ್ತಿಚಿತ್ರವನ್ನು ಇಲ್ಲಿ ವಿವೇಚಿಸಲಾಗಿದೆ. ವ್ಯಕ್ತಿಚಿತ್ರವನ್ನು ಬರೆಯುವವನಿಗೆ ವ್ಯಕ್ತಿಯ ಜೀವನವನ್ನು ಕುರಿತ ಎಲ್ಲ ವಿವರಗಳನ್ನೂ ನೀಡಬೇಕೆಂಬ ಹಠವಿಲ್ಲ. ಅಂತ್ಯದ ಕಿರಿದಾದ ಕ್ಷೇತ್ರದಲ್ಲಿ ಅದನ್ನು ಮಾಡಲು ಸಾಧ್ಯವಿಲ್ಲವೆಂಬುದನ್ನೂ ಅವನು ಬಲ್ಲ. ವ್ಯಕ್ತಿಯ ಬಾಳನ್ನು ಅವನು ಸಮಗ್ರವಾಗಿ ಅಭ್ಯಾಸ ಮಾಡಿದ್ದೇನೆಂದೂ ಭಾವಿಸಲಾರ. ಆ ವ್ಯಕ್ತಿಯ ವೈಶಿಷ್ಟ್ಯವನ್ನು, ರಾಗರಂಗುಗಳನ್ನು, ಸೊಟ್ಟುಪಟ್ಟುಗಳನ್ನು ವೈಚಿತ್ರ್ಯಗಳನ್ನು ತನ್ನದೇ ಆದ ರೀತಿಯಲ್ಲಿ ವೀಕ್ಷಿಸಿ ಒಕ್ಕಣಿಸುವುದು ಅವನ ವಿಧಾನ. ಈ ಪ್ರಯತ್ನದಲ್ಲಿ ಅವನಿಗೆ ನೆರವಾಗುವವನು ರೇಖಾಚಿತ್ರಕಾರ. ರೇಖಾಚಿತ್ರಕಾರ ಕೆಲವೇ ಗೆರೆಗಳಲ್ಲಿ ವ್ಯಕ್ತಿಯ ಮನದಾಳವನ್ನು ಬಗೆದು ತೆಗೆದಿಡುತ್ತಾನೆ. ಅದು ಹಲವು ವೇಳೆ ಉತ್ಪ್ರೇಕ್ಷೆಯಾಗಿರುವುದುಂಟು. ವ್ಯಂಗ್ಯ, ನಗೆ ಅದರಲ್ಲೂ ಬೆರೆತಿರುವುದುಂಟು. ಹಿಟ್ಲರನ ಮೀಸೆ, ಗಾಂಧಿಯ ಬಟ್ಟಗಣ್ಣು, ಹೊ ಚಿ-ಮಿನ್ಹನ ಹೋತದ ಗಡ್ಡ, ರಾಜಾಜಿಯ ದಪ್ಪತಲೆ ಕಪ್ಪು ಕನ್ನಡಕ, ಇಂದಿರಾ ಗಾಂಧಿಯ ಮುಂದಲೆಗೂದಲ ಬಿಳಿಪಟ್ಟೆ, ಉದ್ದ ಮೂಗು, ಮುರಾಜಿಯ ಅಗಲ ಕಿವಿ ದಪ್ಪ ಮೂಗು—ಇಂಥವನ್ನು ಸ್ವಲ್ಪ ಹೆಚ್ಚು ಮಾಡಿ ಚಿತ್ರ ಬರೆದಾಗ ವ್ಯಂಗ್ಯ, ಉತ್ಪ್ರೇಕ್ಷೆ, ಚೇಷ್ಟೆ ಇರುತ್ತವೆ. ಆದರೆ ರೇಖಾಚಿತ್ರಕ್ಕೆ ಬಲಿಯಾದ ವ್ಯಕ್ತಿ ಪ್ರಾಮಾಣಿಕನಾಗಿದ್ದರೆ ಅವನ ಬಗ್ಗೆ ಅನುಕಂಪವು ಇರುತ್ತದೆ. ಅವನ ಅಂತಃಕರಣವನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನ ಕೂಡ ಇರುತ್ತದೆ. ಒಟ್ಟನಲ್ಲಿ ಈ ವ್ಯಕ್ತಿಯ ಬಗ್ಗೆ ಬರೆದಿರುವುದು ತುಂಬ ಗಂಭೀರವಾದ ವಿಚಾರವಲ್ಲ. 'ಚಿಟಿಕೆಯಲ್ಲಿ ಚಪ್ಪರ'ಎಂಬ ಹಾಗೆ ಕ್ಷಣಾರ್ಧದಲ್ಲಿ ಅವನ ಒಂದು ನೋಟ ಕೊಡುವುದು ಉದ್ದೇಶ. ಅದೊಂದು ಪಕ್ಕ ನೋಟ. ಚಾಮುಂಡಿಬೆಟ್ಟವನ್ನು ಮೈಸೂರಿನ ಕಡೆಯಿಂದಲೋ ನಂಜನಗೂಡಿನ ಕಡೆಯಿಂದಲೋ ನೋಡಿದ ಹಾಗೆ. ಇನ್ನೊಂದು ಕಡೆಯಿಂದ ನೋಡಿದಾಗ ಬೆಟ್ಟ ಹೀಗುಂಟೆ, ಎನಿಸಬಹುದು. ಆದರೆ ಅದೂ ನಿಜ. ಒಟ್ಟನಲ್ಲಿ ಈ ವ್ಯಕ್ತಿಯ ಬಗ್ಗೆ ಒಂದು ನೋಟ ಇದು. ಇದು ಮುಖ್ಯವಾದ ನೋಟವೇ. ಆದರೆ ಅತ್ಯಂತ ಗಂಭೀರವಾದ ನೋಟ ಆಗಿರಬೇಕಾಗಿಲ್ಲ.

ಇಂಥ ರೇಖಾಚಿತ್ರವನ್ನು ನೋಡಿದ ಕೂಡಲೆ ಓದುಗನ ಮನಸ್ಸು ಮುಂದೆ ಲೇಖನದಲ್ಲಿ ಏನಿರಬಹುದೆಂಬುದನ್ನು ನಿರೀಕ್ಷಿಸುತ್ತದೆ. ವ್ಯಕ್ತಿಚಿತ್ರವು ವ್ಯಕ್ತಿಯ ರೇಖಾಚಿತ್ರವು ಯಾವಾಗಲೂ ಒಟ್ಟಿಗೇ ಹೋಗತಕ್ಕವು. ಒಂದು ಇನ್ನೊಂದಕ್ಕೆ ಪೂರಕ. ಒಂದಿಲ್ಲದೆ ಇನ್ನೊಂದು ಶೋಭಿಸಲಾರದು. ಮಾತಿನ ಒಕ್ಕಣೆಯಿಲ್ಲದ ವ್ಯಂಗ್ಯಚಿತ್ರ ಮೂಕ ಚಲನಚಿತ್ರದಂತೆ. ವ್ಯಕ್ತಿ ರೇಖಾಚಿತ್ರವಿಲ್ಲದ ವ್ಯಕ್ತಿಚಿತ್ರ ಶಬ್ದನಾಟಕದಂತೆ. ಮಾತು—ನೋಟ

ಗಳೆರಡೂ ಕೂಡಿದಾಗ ಪೂರ್ಣ ರಸವೃಷ್ಟಿ. ಜಗತ್ತಿನ ಪ್ರಖ್ಯಾತ ವ್ಯಂಗ್ಯಚಿತ್ರಕಾರರು ಬಲು ಸಂತೋಷದಿಂದ ತಮ್ಮ ಕುಂಚದ ಬಲವನ್ನು ಶಬ್ದ ಚಿತ್ರಕಾರನಿಗೆ ನೀಡಿದ್ದಾರೆ. ಡೇವಿಡ್ ಲೋ, ವಿಕಿ, ಶಂಕರ್, ಆರ್.ಕೆ. ಲಕ್ಷ್ಮಣ್, ಮೂರ್ತಿ—ಇವರೆಲ್ಲ ವ್ಯಕ್ತಿಚಿತ್ರಗಳಿಗೆ ರೇಖಾಚಿತ್ರಗಳನ್ನು ಒದಗಿಸಿದ್ದಾರೆ. ಈ ರೇಖಾಚಿತ್ರಗಳೂ ಇವುಗಳ ಪಕ್ಕದಲ್ಲಿ ಪ್ರಕಟವಾಗುವ ವ್ಯಕ್ತಿಚಿತ್ರಗಳೂ ಎಷ್ಟರಮಟ್ಟಿಗೆ ಪರಸ್ಪರ ಹೊಂದಿಕೊಳ್ಳುತ್ತವೆ, ಪೂರಕವಾಗುತ್ತವೆ, ಪ್ರೇರಕವಾಗುತ್ತವೆ—ಎಂಬುದನ್ನು ಪರಿಶೀಲಿಸುವುದು ಯಾವಾಗಲೂ ಸ್ವಾರಸ್ಯಕರ.

ಇಂಗ್ಲಿಷಿನಲ್ಲಿ ವ್ಯಕ್ತಿಚಿತ್ರಗಳ ಪೀಳಿಗೆ ಬಲು ಹಿರಿಯದು. ಅತ್ಯಂತ ಪ್ರಸಿದ್ಧವಾದ ಹೆಸರು ಎ.ಜಿ. ಗಾರ್ಡಿನರನದು. ಡೇಲಿ ನ್ಯೂಸ್ ಪತ್ರಿಕೆಯಲ್ಲಿ ಅವನು ಬರೆಯುತ್ತಿದ್ದ ವ್ಯಕ್ತಿಚಿತ್ರಗಳು (charecter sketches) ಪುಸ್ತಕದಲ್ಲೂ ಪ್ರಕಟವಾದುವು: Prophets, Priests and Kings ಎಂದು ಅದರ ಹೆಸರು. ಈ ಚಿತ್ರಗಳಲ್ಲಿ ಎ.ಜಿ. ಗಾರ್ಡಿನರನ ಲೋಕಾನುಭವ, ತಿಳಿಹಾಸ್ಯ, ಅನುಭೂತಿ, ಸಾಹಿತ್ಯಶಕ್ತಿ ಇವೆಲ್ಲ ಪ್ರಕಟವಾಗಿವೆ. ಅಧಿಕಾರಾರೂಢರಾದ ವ್ಯಕ್ತಿಗಳ ವಿಮರ್ಶಾತ್ಮಕ, ವಿನೋದಾತ್ಮಕ ಮುಖಚಿತ್ರಗಳನ್ನು ಅವನು ಅಲ್ಲಿ ಕೊಟ್ಟಿದ್ದಾನೆ. ಇಂಗ್ಲೆಂಡಿನ 'ನ್ಯೂ ಸ್ಟೇಟ್ಸ್‌ಮನ್ ಮತ್ತು ನೇಷನ್'ನಲ್ಲೂ ಅಮೇರಿಕದ 'ನ್ಯೂಯಾರ್ಕರ್'ನಲ್ಲೂ ಅನೇಕ ವ್ಯಕ್ತಿಚಿತ್ರಗಳು ಪ್ರಕಟವಾಗಿವೆ. ನ್ಯೂ ಸ್ಟೇಟ್ಸ್‌ಮನ್ನಿನ ಕಿಂಗ್ಸ್ಲಿ ಮಾರ್ಟಿನ್ ಸುರಿತ ವ್ಯಕ್ತಿಚಿತ್ರಕಾರ.

ಪಾಶ್ಚಾತ್ಯ ಲೋಕದಲ್ಲಿ ಒಂದನೆಯ ಮಹಾಯುದ್ಧದಿಂದೀಚೆಗೆ ವ್ಯಕ್ತಿಚಿತ್ರದ ಬರೆವಣಿಗೆಯಲ್ಲಿ ಅಗಾಧ ವ್ಯತ್ಯಾಸಗಳಾಗಿವೆ. 1914 ಕ್ಕಿಂತ ಮುಂಚಿನ ವ್ಯಕ್ತಿಚಿತ್ರಗಳು ಬಹುಮಟ್ಟಿಗೆ ಹಿರಿಯ ವ್ಯಕ್ತಿಗಳ ಸಾರ್ವಜನಿಕ ಮುಖಗಳ ಚಿತ್ರಗಳಾಗಿದ್ದು ಅವುಗಳ ವಸ್ತುಗಳಾದ ವ್ಯಕ್ತಿಗಳ ಬಗ್ಗೆ ಸಾಕಷ್ಟು ಸಂಶೋಧನೆ, ವೈಯಕ್ತಿಕ ವಿಷಯ ಸಂಗ್ರಹ ಇರುತ್ತಿರಲಿಲ್ಲ. ವೈಯಕ್ತಿಕವಾಗಿ ಆ ವ್ಯಕ್ತಿಗಳು ಲೇಖಕನಿಗೆ ತಿಳಿದಿರಬೇಕೆಂಬ ಕಡ್ಡಾಯವಿರಲಿಲ್ಲ.

ಆದರೆ ಈಚೆಗೆ ವ್ಯಕ್ತಿಚಿತ್ರ ಲೇಖನ ಇತರ ಸಾಹಿತ್ಯ ಪ್ರಕಾರಗಳಂತೆ ಅತ್ಯಂತ ತೊಡಕಾಗಿದೆ, ಅತ್ಯಂತ ಸಂಕೀರ್ಣವಾಗಿದೆ. ಒಬ್ಬ ವ್ಯಕ್ತಿಯ ವಿಮರ್ಶಾತ್ಮಕ ಪರಿಚಯ ಮಾಡಿಕೊಡುವುದು ಸುಲಭವಲ್ಲ. ವ್ಯಕ್ತಿಗಳು ತಮ್ಮ ವೈಯಕ್ತಿಕ ದೌರ್ಬಲ್ಯಗಳನ್ನು ಮುಚ್ಚಿಕೊಳ್ಳಲು ಸಾರ್ವತ್ರಿಕವಾಗಿ ಅವಕ್ಕೆ ಭಿನ್ನವಾದ ರೀತಿಯಲ್ಲಿ ವರ್ತಿಸಬಹುದು. ವಾಸ್ತವಿಕ ಇರುವಿಕೆಗಿಂತ ಭಿನ್ನವಾಗಿ ತೋರುವಂತೆ ಮೊಗವಾಡ ಧರಿಸಬಹುದು. ಪ್ರತಿಯೊಬ್ಬ ವ್ಯಕ್ತಿಗೂ ಕನಿಷ್ಠಪಕ್ಷ ಎರಡು ಮುಖಗಳಾದರೂ ಇರುತ್ತವೆ. ಒಂದು ಖಾಸಗಿ. ಇನ್ನೊಂದು ಸಾರ್ವಜನಿಕ. ಖಾಸಗಿ ಜೀವನದ ಕುಂದುಗಳನ್ನು ಮುಚ್ಚಿಕೊಳ್ಳಲು ಸಾರ್ವಜನಿಕ ವೇಷಭೂಷ ಥಾಟ ಧೋರಣೆ. ಕೈಲಾಸಂ ಅವರ ಅಮ್ಮಾವ್ರಗಂಡ ನಾಟಕದಲ್ಲಿ ಇದರ ವಿಡಂಬನೆಯಿದೆ. ವೈಯಕ್ತಿಕ ಜೀವನದಲ್ಲಿ ಹೆಂಡತಿಯನ್ನು ನಡೆಸಲಾರದವನು ಸಾರ್ವಜನಿಕದಲ್ಲಿ ಮಹಾನಾಯಕ. "ಮನೇಲಿ ಮೂಗಿಲಿ, ಹೊರಗಡೆ ಹೆಬ್ಬುಲಿ." ನಮ್ಮ ಪತ್ರಿಕೆಗಳಲ್ಲಿ ಬರುವ ಅನೇಕ ನಗೆಚಿತ್ರಗಳು ಹೆನ್-ಪೆಕ್ಡ್ ಗಂಡನ ಚಿತ್ರಗಳೇ. ಪ್ರಜಾವಾಣಿಯ ಮೊದ್ದು ಮಣಿಯನ್ನು ನೋಡಿ.

ಈಗಿನ ಕಾಲದಲ್ಲಂತೂ ದೀರ್ಘ ತಂತಿ ಸುದ್ದಿಗಳನ್ನೂ ಬಾತ್ಮೀದಾರರ ವರದಿಗಳನ್ನೂ ಒಳಗೊಂಡ ಪಪ್ಪಗಾತ್ರದ ಪತ್ರಿಕೆಗಳು, ರೇಡಿಯೊ, ಟೆಲಿವಿಷನ್— ಇವೆಲ್ಲ ಸಾರ್ವಜನಿಕ ಮಂದಿಯ ಖಾಸಗಿಜೀವನವನ್ನು ಬಿಡಿಸಿ ತೋರುತ್ತವೆ. ಸಾರ್ವಜನಿಕನೆನಿಸಿಕೊಂಡ ಯಾವನೂ ತನ್ನ ಅಂತರಂಗದಲ್ಲಿ ಯಾವುದನ್ನೂ ಬಚ್ಚಿಟ್ಟುಕೊಳ್ಳಲಾರ. ಪ್ರಚಾರದ ಎಲೆಕ್ಟ್ರಾನಿಕ್‌ಕಣ್ಣು ಅದನ್ನು ಕುಕ್ಕಿ ಹೊರಗೆಳೆಯುತ್ತದೆ. ಆದ್ದರಿಂದ ಯಾರ ಬಗ್ಗೆಯೂ ಶ್ರೀಮುದ್ಗಾಂಭೀರ್ಯ ಸಾಧ್ಯವಿಲ್ಲ. ಹಿಂದೆ ಒಬ್ಬ ಸಾರ್ವಜನಿಕ ವ್ಯಕ್ತಿಯ ಬಹಿರಂಗ ಚಟುವಟಿಕೆಗಳಲ್ಲಿ ಜನಕ್ಕೆ ಆಸಕ್ತಿಯಿತ್ತು. ಮನೆಯಲ್ಲಿ ಅವನು ಹೆಂಡತಿಯನ್ನು ಹೊಡೆಯಲಿ, ಅವಳಿಂದ ಹೊಡೆಯಿಸಿಕೊಳ್ಳಲಿ, ಅದು ಮುಖ್ಯವಾಗಿರಲಿಲ್ಲ. ಒಬ್ಬ ಕಲಾವಿದ, ಸಂಗೀತಗಾರ, ಚಿತ್ರಕಾರ, ಕವಿ, ಕಾದಂಬರಿಕಾರ—ಮನೆಯಲ್ಲಿ ಹೇಗಿದ್ದಾನೆ, ಏನು ಮಾಡುತ್ತಾನೆ, ಏನು ಕುಡಿಯುತ್ತಾನೆ, ಏನು ತಿನ್ನುತ್ತಾನೆ"—ಎಂಬ ವಿಚಾರದಲ್ಲಿ ಆಸಕ್ತಿ ಇರಲಿಲ್ಲ. ಈಗ ಹಾಗಲ್ಲ.

ಒಬ್ಬ ಸಂಗೀತಗಾರ ಹಾಡುವ ಮುನ್ನ ಎಷ್ಟು ಬಾಟಲಿ ಹಾಕಿದ? ಅದು ಯಾವ ಬ್ರ್ಯಾಂಡು ? ಕ್ರಿಕೆಟ್ ಆಟಗಾರ ಬೋರ್ನ್‌ವೀಟವನ್ನು ಕುಡಿಯುತ್ತಾನೆಯೋ ಇಲ್ಲವೋ ? ಬರ್ಕ್ಲಿ ಸೇದುವ ಖನ್ನಾನನ್ನು ಕಂಡರೆ ನಟಿ ಖುರ್ಷೀದಳಿಗೆ ಇಷ್ಟವಲ್ಲವೆ ?—ಇಂಥ ವಿಚಾರಗಳಲ್ಲೂ ಜನಕ್ಕೆ ಕುತೂಹಲ. ಸಾರ್ವಜನಿಕ ವ್ಯಕ್ತಿಯ ಖಾಸಗಿ ಇಚ್ಛಾನಿಚ್ಛೆಗಳಲ್ಲಿ ಶಕ್ತಿ ದೌರ್ಬಲ್ಯಗಳಲ್ಲಿ ಅವನ ಅಭಿಮಾನಿಗೆ ತುಂಬ ಆಸಕ್ತಿ. ಇವನ್ನೆಲ್ಲ ಅರಿಯುವುದರಿಂದ ಅವನ ಕ್ರಿಯೆ, ಕಲಾಪ, ಕಲೆ, ಕವಿತೆ, ಕಾದಂಬರಿಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬಹುದು. ಸಾರ್ವಜನಿಕವಾಗಿ ದೊಡ್ಡವನೆನಿಸಿಕೊಂಡ ವ್ಯಕ್ತಿ ಖಾಸಗಿ ಜೀವನದಲ್ಲೂ ಹಾಗೆಯೇ ಇರುವುದು ಸಾಧ್ಯವಿಲ್ಲ. ಖಾಕಿ ಸಮವಸ್ತ್ರವನ್ನು ತೊಟ್ಟೇ ಯಾವಾಗಲೂ ಇರಬೇಕಾದರೆ ಸಿಪಾಯಿಗೆ ಎಷ್ಟು ಕಷ್ಟ ? ಅವನ ನರಗಳು ಸೆಟೆದುಕೊಳ್ಳುತ್ತವೆ. ತಲೆ ಸಿಡಿಯುತ್ತದೆ. ಸಾರ್ವಜನಿಕ ವ್ಯಕ್ತಿಗೆ ದೌರ್ಬಲ್ಯಗಳಿರುವುದರಿಂದಲೇ ಅವನು ರಕ್ತದ ಒತ್ತಡವಿಲ್ಲದೆ ಬದುಕುವುದು ಸಾಧ್ಯ. ಆದ್ದರಿಂದ ಅವನ ದೌರ್ಬಲ್ಯಗಳೂ ಅಭಿಮಾನಿಗೆ ಪ್ರಿಯ. ಅವು ಇರುವುದರಿಂದಲೇ ಅವನು ಮಾನವ.

ಈ ದೃಷ್ಟಿ ಇರುವ ಈ ಕಾಲದಲ್ಲಿ ವ್ಯಕ್ತಿಚಿತ್ರಕಾರನ ಕೆಲಸ ಬಲು ಕಷ್ಟ. ತನ್ನ ಮುಂದೆ ಇರುವ ವ್ಯಕ್ತಿಯ ವಿಚಾರವಾಗಿ ಏನು ಬರೆಯಬೇಕು ? ಏನು ಬರೆಯಲಾಗದು ? ಎಂಬುದನ್ನು ಹೇಳುವುದು ಕಷ್ಟ. ಇಲ್ಲಿ ಅವನ ಔಚಿತ್ಯಪ್ರಜ್ಞೆ ಮುಖ್ಯವಾದ ಕೆಲಸ ಮಾಡುತ್ತದೆ. ಆದರೆ ಯಾವುದನ್ನು ಸೇರಿಸಬೇಕು, ಯಾವುದನ್ನು ಬಿಡಬೇಕು ಎಂಬುದನ್ನು ತೀರ್ಮಾನಿಸುವ ಮುನ್ನ ಆ ವ್ಯಕ್ತಿಯ ಬಗ್ಗೆ ಎಲ್ಲ ವಿಷಯಗಳೂ ಅವನ ಬಳಿ ಇರಬೇಕು. ಅವನ ವಂಶ, ಅವನ ಹುಟ್ಟು, ಅವನ ಬೆಳವಣಿಗೆ, ಅವನ ಬಾಲ್ಯ, ಅವನ ಆಟ, ಅವನ ಬೇಟ, ಅವನ ವಿದ್ಯೆ ಅವನು ಮಾಡಿದ ಅಕೃತ್ಯಗಳು, ಅವನ ಜೊತೆಗಾರರು, ಅವನು ಓದಿದ ಪುಸ್ತಕ, ಅವನ ಹುಚ್ಚು, ಅವನ ಸಂಚಾರ, ಅವನ ಹವ್ಯಾಸ, ಅವನು ಆಡಿದ ಮಾತುಗಳು, ತೋರಿಸಿದ ಪ್ರತಿಕ್ರಿಯೆಗಳು—ಎಲ್ಲವೂ ಲೇಖಕನಿಗೆ ಬೇಕು, ಕೆಲವು ಪತ್ರಿಕೆಗಳು ತಾವು ಪ್ರಕಟಿಸುವ ವ್ಯಕ್ತಿಚಿತ್ರಕ್ಕೆ ಸಂಬಂಧಿಸಿದ ವ್ಯಕ್ತಿಯ ಬಗ್ಗೆ ರಾಶಿ ಸಾಮಗ್ರಿ ಸಂಗ್ರಹಿಸುತ್ತವೆ. ಅವನ್ನು ನಾನಾ ಮೂಲಗಳಿಂದ, ನಾನಾ ಕಡೆಗಳಿಂದ ಸಂಗ್ರಹಿಸುತ್ತವೆ. ಒಬ್ಬನೇ ವ್ಯಕ್ತಿಯನ್ನು ಕುರಿತ ಲೇಖನಗಳನ್ನು ಅನೇಕರು ಬರೆಯಬಹುದು. ಆ ಎಲ್ಲ ರಾಶಿಯಿಂದ ವ್ಯಕ್ತಿಚಿತ್ರ ರಚನೆಯಾಗುತ್ತದೆ. ಒಂದು ವ್ಯಕ್ತಿಚಿತ್ರ ಲೇಖನದ ಹಿಂದೆ ಅಗಾಧವಾದ ಸಿದ್ಧತೆ ಇರುತ್ತದೆ ; ಸಾಹಿತ್ಯ ರಾಶಿ ಇರುತ್ತದೆ. ಅಮೆರಿಕದ 'ನ್ಯೂಯಾರ್ಕರ್' ಪತ್ರಿಕೆ ಅತ್ಯಂತ ಸಮಗ್ರವಾದ ವ್ಯಕ್ತಿ ಅಧ್ಯಯನಗಳನ್ನು ನೀಡುವುದುಂಟು. ಆದರೆ ಇಂಗ್ಲೆಂಡಿನ ಪತ್ರಿಕೆಗಳಲ್ಲಿ ಸಂಗ್ರಹ ಗುಣಕ್ಕೆ ಹೆಚ್ಚು ಬೆಲೆ. ನ್ಯೂಸ್ಟೇಟ್ಸ್‌ಮನ್‌ಗಳಲ್ಲಿ ಬರುವ ವ್ಯಕ್ತಿಚಿತ್ರಗಳು ಚುಟುಕ, ಸಮಗ್ರ.

ವ್ಯಕ್ತಿಚಿತ್ರಗಳು ಗಂಭೀರವಾಗಿರಬೇಕಿಲ್ಲ. ಚೇಷ್ಟೆಯೂ ಅಲ್ಲಿ ಮಾನ್ಯ. ಹಿಂದೆ ವ್ಯಕ್ತಿಚಿತ್ರಗಳಲ್ಲಿ ಹೆಚ್ಚಿನ ವ್ಯಂಗ್ಯ ಇರುತ್ತಿತ್ತು. ಉತ್ಪ್ರೇಕ್ಷೆ ಇರುತ್ತಿತ್ತು. ಆದರೆ ಈಗ ಹಾಗಲ್ಲ. ಎಲ್ಲವೂ ಸಮಸಮ. ವ್ಯಕ್ತಿಚಿತ್ರಕ್ಕೆ ಗುರಿಯಾದ ವ್ಯಕ್ತಿ ಎಷ್ಟೇ ದೊಡ್ಡವನಾಗಿರಲಿ–ಅವನ ಬಗ್ಗೆ ಅತಿಯಾದ ಗೌರವಭಾವ, ಭಕ್ತಿಭಾವ ಇರಬೇಕಾದುದಿಲ್ಲ. ಒಮ್ಮೊಮ್ಮೆ ಅವನ ಸಾರ್ವಜನಿಕ ಮೊಗವಾಡವನ್ನು ಕಳಚಿಹಾಕುವ ಪ್ರಯತ್ನವನ್ನೂ ವ್ಯಕ್ತಿಚಿತ್ರಕಾರ ನಡಸಿಯಾನು. ಅತಿಯಾದ ಗೌರವದಿಂದ ಅಪಾಯವೇ ಆದೀತು. ಸೋಗಿನ ದೊಡ್ಡಸ್ತಿಕೆಯ ಹಿಂದೆ ಅಪಾಯ ಅಡಗಿರುತ್ತದೆ.

ವ್ಯಕ್ತಿಚಿತ್ರ ಬರೆಯುವವನಿಗೆ ವ್ಯಕ್ತಿಯ ನಿಕಟ ಪರಿಚಯ ಇರಬೇಕೆ ?—ಎಂಬುದು ಪ್ರಶ್ನೆ. ಅದು ಅಗತ್ಯವಿಲ್ಲ ಅವನು ವ್ಯಕ್ತಿಯನ್ನು ಗಮನಿಸಿದ್ದರೆ ಉತ್ತಮ – ಆದರೆ ಅತಿ ನಿಕಟ ಪರಿಚಯ ಇದ್ದರೆ ವ್ಯಕ್ತಿಯ ಬಗ್ಗೆ ನಿರ್ವೇಗದಿಂದ ಬರೆಯುವುದು ಸಾಧ್ಯವಾಗದು. ಅವನ ಪೂರ್ವಾಗ್ರಹಗಳು, ಇಷ್ಟಾನಿಷ್ಟಗಳು ಅಡ್ಡಿಯಾದಾವು. ಇದು ನನ್ನ ಅನುಭವಕ್ಕೆ ಬಂದ ವಿಚಾರ. ಅತ್ಯಂತ ನಿಕಟವರ್ತಿಯಾದವರ ಬಗ್ಗೆ ಆತ್ಮೀಯತೆ ಬೆಳೆದಾಗ ಉತ್ಪ್ರೇಕ್ಷೆಗೆ ಅವಕಾಶವುಂಟು. ವ್ಯಕ್ತಿಚಿತ್ರದಲ್ಲಿ ಉತ್ಪ್ರೇಕ್ಷೆ ಅತಿಯಾಗಬಾರದು, ಇಲ್ಲದೆಯೂ ಇರಬಾರದು.

ಉಪ್ಪು, ಹುಳಿ ಖಾರ ಇಂಗು ಇವೆಲ್ಲ ಸಾರಿಗೆ ಬೀಳಬೇಕು. ಆದರೆ ಸ್ವಲ್ಪ ಇಂಗು ಹೆಚ್ಚಾಗಿದ್ದರೆ ಸಾರಿಗೆ ಒಂದು ವಿಶಿಷ್ಟವಾದ ರುಚಿ ಬರುತ್ತದೆ. ವ್ಯಕ್ತಿಚಿತ್ರ ಹಾಗೆ. ಗೆರೆ ಸ್ವಲ್ಪ ದಪ್ಪವಾಗಿರಲಿ. ಆದರೆ ಅತಿಯಾಗಿರಬಾರದು. ಅದೊಂದು ದೋಷ, ನಗೆ,ಚೇಷ್ಟೆ ಇದ್ದರೆ ಹಿನ್ನೆಲೆಯಲ್ಲಿರಬೇಕು. ವ್ಯಕ್ತಿ ತನ್ನತನವನ್ನು ಅದರಲ್ಲಿ ತೋರಿಸಬಾರದು. ವ್ಯಕ್ತಿ ಯಾವ ಕ್ಷೇತ್ರಕ್ಕೆ ಸೇರಿದವನೋ ಆ ಕ್ಷೇತ್ರದ ಪರಿಚಯ ವ್ಯಕ್ತಿಚಿತ್ರಕಾರನಿಗೆ ಚೆನ್ನಾಗಿ ಇರಬೇಕು. ಅವನ ಅನುಭವ ವಿಸ್ತಾರವಾಗಿರಬೇಕು. ನೋಡಿದ ಎಲ್ಲವನ್ನೂ ಗ್ರಹಿಸಬೇಕು. ವ್ಯಕ್ತಿಯ ಮೇಲೆ ಬೆಳಕು ಚೆಲ್ಲಬಹುದಾದ ಯಾವ ವಿಚಾರವನ್ನಾದರೂ ಸೇರಿಸಬಹುದು. ವ್ಯಕ್ತಿಯ ಜೀವನದ ವಿವರಗಳನ್ನೆಲ್ಲ ಕೊಡಬೇಕೆಂಬ ಹಠವಿಲ್ಲ. ವ್ಯಕ್ತಿಚಿತ್ರ ಡೈರೆಕ್ಟರಿ ಅಲ್ಲ. ಪ್ರಬಂಧಕಾರನ ಹಾಗೆ ವ್ಯಕ್ತಿಚಿತ್ರಕಾರ. ಹೇಗೆ ಮಾಡಬೇಕು, ಯಾವುದನ್ನು ಎಲ್ಲಿ ಹೇಳಬೇಕು, ಎಲ್ಲಿ ಮುಗಿಸಬೇಕು—ಎಲ್ಲವೂ ಮುಖ್ಯ. ಒಂದು ಒಳ್ಳೆಯ ವ್ಯಕ್ತಿಚಿತ್ರ ಒಂದು ಒಳ್ಳೆಯ ಪದ್ಯವಿದ್ದ ಹಾಗೆ. ವ್ಯಕ್ತಿ ನಿಮಿತ್ತವಾಗಿ ಅವನ ಸುತ್ತ ಭಾವನೆಗಳನ್ನು ಲೇಖಕ ಹರಿಯಬಿಡುತ್ತಾನೆ. ಅದರಲ್ಲಿ ಅಲ್ಲಲ್ಲಿ ಪದ್ಯದ ಚಂದ, ಛಂದ ಇರುವುದುಂಟು. ಗದ್ಯವೂ ಕಾವ್ಯಮಯವಾಗಬಲ್ಲುದು. ಶಬ್ದಗಳು ಸರಳವಾಗಿರಬೇಕು. ವಾಕ್ಯ ಪುಟ್ಟದಾಗಿರಲಿ. ಸಂಗ್ರಹಶಕ್ತಿ ಮುಖ್ಯ. ಒಂದು ವಾಕ್ಯದಿಂದ ಇನ್ನೊಂದಕ್ಕೆ ಟೆಲಿಸ್ಕೋಪಿನ ಹಾಗೆ ವಿಚಾರ ಹರಿಯಬೇಕು. ಕೊನೆಗೆ ಅದು ಮುಗಿದಾಗ ಏನೋ ಒಂದು ಪರಿಣಾಮ ಆಗುತ್ತದೆ. ವ್ಯಕ್ತಿಯ ಬಗ್ಗೆ ಸಹಾನುಭೂತಿ–ಅವನನ್ನು ಅವನೇ ಹೇಗೆ ಕಾಣುತ್ತಾನೆಂಬುದರ ಅರಿವು–ಮುಖ್ಯ. ವ್ಯಕ್ತಿಯ ಬಗ್ಗೆ ದ್ವೇಷ ಸಲ್ಲದು–ಅವನು ಎಷ್ಟೇ ಕೆಟ್ಟವನಾಗಿರಲಿ. ಸೂಕ್ಷ್ಮದರ್ಶಕದ ಕೆಳಗೆ ಎಲೆಯನ್ನಿಟ್ಟು ನೋಡುವವನ ಅಲಿಪ್ತ ದೃಷ್ಟಿ ಲೇಖಕನಿಗೆ ಇರಬೇಕು. ಸೂಕ್ಷ್ಮದರ್ಶಕದಲ್ಲಿ ನೋಡುತ್ತಿರುವವನಿಗೂ ಕೆಳಗಿನ ಎಲೆಗೂ ಎಷ್ಟು ಹತ್ತಿರ ! ಆದರೂ ಎಷ್ಟು ದೂರ !

ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಲೇಖಕನಿಗೆ ದೂರದ ನಕ್ಷತ್ರವನ್ನು ವೀಕ್ಷಿಸುವ ಕಣ್ಣಿರಬೇಕು. ಅವನಿಗೂ ನಕ್ಷತ್ರಕ್ಕೂ ಎಷ್ಟು ದೂರ ! ಆದರೂ ಎಷ್ಟು ಹತ್ತಿರ !

ಹೀಗೆ ಬರೆದ ವ್ಯಕ್ತಿಚಿತ್ರ ಸಾರ್ಥಕವಾಗುತ್ತದೆ. ಅದೊಂದು ಸಾಹಿತ್ಯರತ್ನ ಆಗುತ್ತದೆ. ಆ ಗಳಿಗೆಯಲ್ಲಿ ಲೇಖಕನಿಗೆ ಅನಿರ್ವಚನೀಯವಾದ ಆನಂದವಾಗುತ್ತದೆ

ನಿಯಮವೆನ್ನುವುದು ಬಾಹ್ಯ ಘಟನೆಗಳನ್ನು ವಿವರಿಸುವ ಒಂದು ಸಂಕೇತ. ಅದರೆ ನಿಯಮವೆನ್ನುವುದೇ ಬೇರೆ ಇಲ್ಲ. ಬಾಹ್ಯ ಘಟನೆಯಲ್ಲಿ ಇರುವ ಒಂದು ಕ್ರಮವನ್ನು ವಿವರಿಸುವುದಕ್ಕೆ ನಿಯಮ ಎನ್ನುತ್ತೇವೆ. ನಿಯಮವನ್ನು ನಾವು ಅನಿವಾರ್ಯವಾಗಿ ಶರಣಾಗತರಾಗಲೇಬೇಕಾದ ಮೂಢನಂಬಿಕೆಯನ್ನಾಗಿ ಮಾಡಬಾರದು.

ಚಂದ್ರಶೇಖರ ಕಂಬಾರ

ಧಾರವಾಡದ ಕವಿಗಾರ

ಅವರ ಪರಿಕರದಲ್ಲೆಲ್ಲ ಬೇಂದ್ರೆಯವರದೇ ಒಂದು ನೋಡಿ. ಬೇಂದ್ರೆ ಇದ್ದಲ್ಲಿ ಜನ ಇರಲೇ ಬೇಕು. ಒಬ್ಬರಿರಲಿ, ಹಲವರಿರಲಿ, ಹಾಗೆ ಇದ್ದವರೆಲ್ಲ ತಮಗೇ ಗೊತ್ತಿಲ್ಲದಂತೆ ಪ್ರೇಕ್ಷಕರಾಗುತ್ತಾರೆ, ಬೇಂದ್ರೆ ಪದ್ಯಹಾಡಿದರೂ, ಓದಿದರೂ ಮಾತಾಡಿದರೂ ಅದೆಲ್ಲ Performance ಆಗುತ್ತದೆ. ಮಾತಾಡಿದಂತೆ ಹಾಡುತ್ತ, ಹಾಡಿದಂತೆ ಮಾತಾಡುತ್ತ. ಕಿಡಿಹಾರಿದಂತೆ ಉಚ್ಚರಿಸುವ ಪ್ರತಿಯೊಂದು ಶಬ್ದ ತನ್ನ ಪದಾರ್ಥ ಧ್ವನ್ಯರ್ಥ (ಅಪಾರ್ಥ, ಅನರ್ಥಗಳೊಂದಿಗೆ ಕೂಡ) ಅಭಿನಯಗಳೊಂದಿಗೆ ನೋಡ ನೋಡುತ್ತಿದ್ದಂತೆ–ಬಾಳೆ ಫಲಬಿಟ್ಟ ಹಾಗೆ ಕವಿಗೆ ಸಷ್ಟವಾಗಿ ಕಣ್ಣಿಗೆ–ಮೂರ್ತವಾಗಿ ದಟ್ಟವಾಗಿ ಕಟ್ಟಿಬಿಡುತ್ತದೆ. ಈ Performance ಎದುರಿಗೆ ಮೂಕಪ್ರೇಕ್ಷಕರಾಗಿ ಆನಂದಿಸುವುದೊಂದೇ ನಿಮ್ಮ ಪಾಲಿಗೆ. ಎಷ್ಟೋಸಲ "ಬೇಂದ್ರೆ" ಏನು ಮಾಡುತ್ತಾರೆ ! ಎಂದು ನಿಬ್ಬೆರಗಾದವರು ಹೊರ ಬಂದಾಗ ಏನೂ ತಿಳಿಯದೆ "ಬೇಂದ್ರೆ ಏನು ಮಾತಾಡಿದರು ?" ಎಂದು ಪರಸ್ಪರ ಕೇಳಿಕೊಳ್ಳುವುದೂ ಉಂಟು. ಬೇಂದ್ರೆ ಮಾತು ಕೇಳಿ (ಅಥವಾ ನೋಡಿ) ಹೊರಗಡೆ ಹೋಗಿ ಕುಣಿಯಬೇಕೆನಿಸುತ್ತದೆ ಎಂದು ಕೆಲವರ ಚೇಷ್ಟೆ. ಬಾಯಿ ಬಿಟ್ಟಾಗೆಲ್ಲ ಬೇಂದ್ರೆ ಪಾತ್ರವಾಗುತ್ತಾರೆ ಎನ್ನುವುದು ಒಳ್ಳೆಯ ಅರ್ಥದಲ್ಲಿ ಸರಿಯಾದ ಮಾತು. ಇಂಥ ನಾಲ್ಕು ಪಾತ್ರಗಳನ್ನು ಅವರೇ ಹೆಸರಿಸಿದ್ದಾರೆ. ಪ್ರೊಫೆಸರ್ ಬೇಂದ್ರೆ, ಕವಿ ಬೇಂದ್ರೆ, ವಿಮರ್ಶಕ ಬೇಂದ್ರೆ, ಮಾಸ್ತರ ಬೇಂದ್ರೆ–ಎಂದು. ಇದು "ಚತುರ್ಮುಖ" ಬ್ರಹ್ಮವಾಯಿತು. ಅವರ ಪ್ರಕಾರ (ಏಕಂ ಸತ್ ವಿಪ್ರಾ ಬಹುಧಾ ವದಂತಿ) ಅವರಿಗೂ ಗೊತ್ತಿಲ್ಲದ ಪಾತ್ರಗಳು ಇನ್ನೆಷ್ಟಿವೆಯೊ !

ಇದೆಲ್ಲ ಅವರಿಗೆ ಜಾನಪದದ ತೋಂಡಿ (oral) ಸಂಪ್ರದಾಯದಿಂದ ಬಂದಿರಬೇಕು. ಜನಪದ ಕವಿ (ಕವಿಯತ್ರಿಯಲ್ಲ) ಬಯಲಿಗೆ ಹುಟ್ಟಿ, ಬಯಲಲ್ಲೇ ಬೆಳೆದು, ಬಯಲು ತುಂಬಿದ ಪ್ರೇಕ್ಷಕರಿಗೆ ಒಗ್ಗಿದವ. ಹಾಡುವುದಕ್ಕೆಂದೇ ಅವರೆದುರು ನಿಂತವ. ಹಾಡು ಬಂದು ಮೈತುಂಬಿತೋ–ತನಗೆ ತಕ್ಕಹಾಗೆ ದನಿಯ ಏರಿಳಿವುಗಳೊಂದಿಗೆ. ವೈಕೈಯ ಮಣಿತಕುಣಿತಗಳೊಂದಿಗೆ ದಪ್ಪಿನ ಗತ್ತಿನೊಂದಿಗೆ, ಇಡೀ ಬಯಲು ಮಾರ್ದನಿಗೊಳ್ಳುವಂತೆ ಹಾಡಾಗಿ ತುಳುಕಬಲ್ಲ. ಆದರೆ ಬೇಂದ್ರೆಯವರು ಕತ್ತಿನ ಮೇಲೆ ಬಿದ್ದ ನಾಲ್ಕೈದು ನೀಗೂದಲನ್ನು ಗತ್ತಿನಿಂದ ಕುಣಿಸುತ್ತ ನಾಲ್ಕು ಬೆರಳುಂಗುರದ ನೂರಿಪ್ಪತ್ತು ಅಂಶ ಬಾಗಿದ ಎಡಗೈಯನ್ನು ಹತ್ತು ದಿಕ್ಕಿಗೆ ಚಾಚುತ್ತ ಹಾಡತೊಡಗಿದರೆ ನೀವು ಸುಶಿಕ್ಷಿತರು ಕೂತ ಸಣ್ಣ ಆಲಯವೇ ಬಟಾಬಯಲಾಗಿ, ಲೋಮಾಂಚನದ ಅರಿವೂ ಇಲ್ಲದೆ ತನ್ಮಯರಾಗುವ ದವಾಡವನ್ನು ಮೆರೆಯಬಲ್ಲರು. ಆದ್ದರಿಂದಲೇ ಇರಬೇಕು–ಬೇಂದ್ರೆಯವರ ಕಾವ್ಯವೆಲ್ಲ-ಪ್ರೇಕ್ಷಕರನ್ನು ಕುರಿತೇ ಹೇಳಿದಂತಿದೆ. ಬಹುಶಃ ಜಾನಪದದಿಂದಲೇ ಪಡೆದ ಇನ್ನೊಂದು ವಿಶೇಷ ಅವರಲ್ಲಿದೆ ಅದು ಅವರ ಕಾವ್ಯ ಪ್ರಕೃತಿಯ ಮನೋಧರ್ಮ, ಜಾನಪದದಂತೆಯೇ ಅವರೂ ಬದುಕನ್ನು ಆರಾಧನೆಯಂತೆ ಆಚರಿಸುತ್ತಾರೆ. ಈ ಆಚರಣೆ ಬದುಕನ್ನು ಸಮಗ್ರವಾಗಿ ಒಪ್ಪಿಕೊಳ್ಳುವ ಹಾಗೆ, ವೈಭವಿಸುವ ಹಾಗೆ, ತೊಡಗುವ ಹಾಗೆ ಪ್ರೇರಿಸುತ್ತದೆ.

ಬೇಂದ್ರೆಯವರು ತಮ್ಮ ಕಾವ್ಯವಸ್ತುವಿನಲ್ಲಿ ಸಂಭೋಗಕ್ರಿಯೆಯಲ್ಲಿನಷ್ಟು ತೀವ್ರವಾಗಿ ತೊಡಗುತ್ತಾರೆ. ಮತ್ತು ತೊಡಗುವಿಕೆಯ ತೀವ್ರತೆಯ ಎದುರು ಅನಾಥಪ್ರಜ್ಞೆ,ಪರಕೀಯ ಪ್ರಜ್ಞೆ,ಸಿನಿಕತನಗಳೆಲ್ಲ ಕೇವಲ ಸಂಚಾರಿ ಭಾವಗಳಾಗುತ್ತವೆ.ಬದುಕನ್ನು ಈ ರೀತಿ ಒಪ್ಪಿದ್ದರಿಂದಲೇ ಅವರು ಕಾವ್ಯವಸ್ತುವಿನ ಆಯ್ಕೆಯಲ್ಲಿ ಯಾವ ಸಂಕೋಚವನ್ನು ಇಟ್ಟುಕೊಳ್ಳಲಿಲ್ಲ. ಮತ್ತು ತಮ್ಮ ಇಡೀ ಜೀವಮಾನದ ಅನುಭವವನ್ನೆಲ್ಲ ಕಾವ್ಯಾನುಭವ ಮಾಡಿದರು. 'ಜೋಗಿ' 'ಸಚ್ಚಿದಾನಂದ'ದವರೆಗೆ ಅವರ ಕಾವ್ಯವಸ್ತುವಿನ ಹರಹಿದೆ. ಸಾಂಸ್ಕೃತಿಕವಾದ ಯಾವುದನ್ನೂ ನಿರಾಕರಿಸದೆ ಮಾನವ ಸಂವೇದನೆಯ ಸಮಸ್ತ ಸ್ತರಗಳನ್ನು ಸಮಗ್ರವಾಗಿ ಒಪ್ಪಿಕೊಳ್ಳುವ ಮಹಾಕವಿ ಚೇತನ ಅವರದು. ಆದ್ದರಿಂದಲೇ ವಿಮರ್ಶಕರನ್ನು ದಂಗು ಬಡಿಸುವಷ್ಟು ಪರಸ್ಪರ ವಿರೋಧವುಳ್ಳವ ವಸ್ತು ಧೋರಣೆಗಳು ಅವರ ಕಾವ್ಯದಲ್ಲಿ ಬರುತ್ತವೆ. ಬೇಂದ್ರೆ ತಮ್ಮನ್ನು ತಾವೇ ವಿರೋಧಿಸುತ್ತ, ತಮ್ಮೊಂದಿಗೆ ತಾವೇ ಜಗಳವಾಡುತ್ತಿದ್ದಾರೆಂದು ಅನ್ನಿಸುವಷ್ಟು ಎರಡೂ ಬಗೆಯ ಕವನಗಳು ಯಶಸ್ವಿಯಾಗಿವೆ. ವಸ್ತುವಿನ ಹಾಗೆ ಅವರ ಛಂದೋವೈವಿಧ್ಯವೂ ಬೆರಗುಗೊಳಿಸುವಂಥಾದ್ದು, ವೇದದ ಮಾಂತ್ರಿಕಛಂದಸ್ಸಿನಿಂದ ಹಿಡಿದು ಕನ್ನಡದಲ್ಲಿ ಏಳೆ, ಪಿರಿಯಕ್ಕರದಿಂದ ನವ್ಯದ ಮುಕ್ತ ಛಂದಸ್ಸಿನವರೆಗೆ-ನೂರಾರು ಬಗೆಗಳನ್ನು ಪ್ರಯತ್ನಿಸಿದ್ದಾರೆ. ಕನ್ನಡದಲ್ಲಿ ಇಷ್ಟೊಂದು ಛಂದಸ್ಸುಗಳನ್ನು ಯಾವೊಬ್ಬ ಕವಿಯೂ ಬಳಸಿಲ್ಲ.

ಬದುಕಿನಲ್ಲಿ ಹೀಗೆ ತನ್ಮಯನಾದಾಗ ಕವಿ ವಸ್ತುನಿಷ್ಠೆಗೆ ಎರವಾಗಬೇಕಾಗುತ್ತದೆ. ಬೇಂದ್ರೆ ಎಂದು ಇಲ್ಲಿ ಗೊತ್ತಾಗುತ್ತದೆ. 'ಮೂವತ್ತುಮೂರು ಕೋಟಿ' 'ಹೆಣದ ಹಿಂದೆ' 'ನರಬಲಿ' 'ಅನ್ನಾವತಾರ' 'ತುತ್ತಿನ ಚೀಲ' ದಂಥ ಕವಿತೆಗಳಲ್ಲಿ ಪ್ರಕಟವಾದ ಹಸೀರೊಚ್ಚು, ತೀರ ವೈಯಕ್ತಿಕವೆನ್ನಬಹುದಾದ 'ಸಖೀಗೀತ'ದ ಸುಕುಮಾರ ದಾಂಪತ್ಯ–ಇಲ್ಲೆಲ್ಲ ತಮ್ಮನ್ನು ತಾವು ಪಾತ್ರವಾಗುವುದರ ಮೂಲಕ ಬಿಡಿಸಿಕೊಂಡು ದೂರ ನಿಲ್ಲುತ್ತಾರೆ.ಈಗ ಶೈಲಿ ನಾಟಕೀಯವಾಗುತ್ತದೆ, ವಸ್ತುನಿಷ್ಠತೆ ತಂತಾನೆ ಮೂಡುತ್ತದೆ. ಹೀಗೆ ಪಾತ್ರವಾಗುವುದರಿಂದ ಇಲ್ಲಿ ಮೂಡುವ ಕವಿಯ ವೈಯಕ್ತಿಕ ಜೀವನಚಿತ್ರ ಕವಿಯದಲ್ಲ, ಲೋಕದ್ದು ಎನಿಸುತ್ತದೆ. 'ಕವನಗಳ ಭಾಷೆಯಲ್ಲಿ ಒಂದಲ್ಲ ಹತ್ತು ದನಿಗಳನ್ನು ಕೇಳುತ್ತೇವೆ. ಅವುಗಳಲ್ಲಿ ಒಂದು ಮಾತ್ರ ಕವಿಯದು. ಉಳಿದುವೆಲ್ಲ ಲೋಕದವು' (ಕುರ್ತಕೋಟಿ)

ಇದೇ ಕಾರಣದಿಂದ ಇರಬೇಕು ಬೇಂದ್ರೆ ಯಾವಾಗಲೂ ತಮ್ಮ ಹುಟ್ಟುನೆಲದವರಾಗಿಯೇ, ಧಾರವಾಡವರಾಗಿಯೇ ಉಳಿದರು. ರಷಿಯಾ ಸರಕಾರ ಇವರನ್ನು ತಮ್ಮ ದೇಶಕ್ಕೆ ಆಮಂತ್ರಿಸಿತ್ತು. ಇವರು ಆಗುವುದಿಲ್ಲ ಎಂದರು. ಯಾಕೆ ಹೋಗಲಿಲ್ಲವೆಂದು ಸ್ನೇಹಿತರು ಕೇಳಿದರೆ 'ಇನ್ನೂ ಮಂಗಳವಾರ ಪೇಟೆಯ ಜಗಳ ಬಗೆಹರಿದಿಲ್ಲ ; ಅಲ್ಲಿಗೆ ಹೋಗಿ ಏನು ಮಾಡಲಿ ?' ಎಂದರಂತೆ. ಅವರಿಗದು ಸಹಜ. ಧಾರವಾಡದ ಬಗೆಗೆ ಅನೇಕ ಕವಿತೆ ಬರೆದಿದ್ದಾರೆ. ಅದನ್ನು ಅಗಲಿದಾಗೊಂದು, ವಾಪಸ್ಸು ಬಂದಾಗೊಂದು ಕವಿತೆ ಬರೆದಿದ್ದಾರೆ. ಹಾಡಿ, ಹೊಗಳಿ, ಜಗಳಾಡಿ, ಪ್ರೀತಿ, ಸ್ನೇಹ, ವೈರಗಳಿಂದ ಅಲ್ಲಿಯ ಮಣ್ಣಿನೊಂದಿಗೆ ಎಷ್ಟು ಬೆರತಿದ್ದಾರೆಂದರೆ_ಅವರು ಎಲ್ಲೇ ಇರಲಿ; ಇಲ್ಲಾ ಧಾರವಾಡದಿಂದ ದೂರವಿರುತ್ತಾರೆ,ಇಲ್ಲಾ ಧಾರವಾಡಕ್ಕೆ ಸಮೀಪವಿರುತ್ತಾರೆ. ಜನಗಳಿಗೂ ಈ 'ಬೇಂದ್ರೆ ಮಾಸ್ತರ' ಬೇಕೇ ಬೇಕು. ಬೇಕಾದಂಥ ದಟ್ಟಗುಂಪಿನಲ್ಲಿ ಅವರನ್ನು ಎಲ್ಲ ಗುರುತಿಸುತ್ತಾರೆ. ಕತ್ತು ಸುತ್ತಿ, ತಲೆಗಂಟೆ ಮುಖಮಾತ್ರ ಕಾಣುವ ಅಷ್ಟೊಂದು ಘರದ ಊಲನ್ ಕುಲಾವಿಗೆ ಧಾರವಾಡದಲ್ಲಿ 'ಬೇಂದ್ರೆ ಕುಲಾಯಿ'ಯೆಂದೇ ಹೆಸರು. ಬೇಂದ್ರೆ ಟೋಪಿಗಂತೂ ದಿಲ್ಲಿತನಕ ಖ್ಯಾತಿ. ಇಲ್ಲೇ ಗೆಳೆಯರ ಗುಂಪು ಕಟ್ಟಿದರು. ಇಲ್ಲೇ ಮುರಿದರು.ಸುತ್ತಿನ ಹಳ್ಳಿಗಳ ಜಗಳೆಲ್ಲ ಈ 'ಶಾಣ್ಯಾ ಕವಿಗಾರ'ನಿಂದಲೇ ಬಗೆಹರಿಯಬೇಕು.ಸ್ವಂತ ಜಗಳಗಳ ಮಾತು ಬೇರೆ. ಹಾಗೇ ನಿರ್ಭಿಡೆಗೆ ಹೆಸರಾದವರು. ಎದುರಿಗಿದ್ದವನು ಮಂತ್ರಿಯಾದರೇನು ತಂತ್ರಿಯಾದರೇನು ಮುಖದ ಮೇಲೆ ನಿಷ್ಠುರವಾಡಬಲ್ಲರು. ಸ್ವಾಭಾವಿಕವಾಗಿಯೇ ರಾಜಕೀಯ ಕೇಂದ್ರವಾಗಲಿದ್ದ ಧಾರವಾಡವನ್ನು ಸಾಂಸ್ಕೃತಿಕ ಕೇಂದ್ರವಾಗಿಸಿದವರು ಬೇಂದ್ರೆಯವರೇ. ಬೆಳಗಾವಿಯಾದ ಮೇಲೆ ಹುಬ್ಬಳ್ಳಿ ರಾಜಕೀಯ ಕೇಂದ್ರ

ವಾದದ್ದು ಈ ಕಾರಣಕ್ಕಾಗಿ. ಧಾರವಾಡ ಇವರಿಗೆಷ್ಟು ಅಂಟಿಕೊಂಡಿದೆಯೆಂದರೆ ಆಗಲೇ ಇವರ ಬಗ್ಗೆ ಜನಪದ ಕಥೆ, ಪುರಾಣ, ಐತಿಹ್ಯ, ಕಟ್ಟುಕಥೆ ಹುಟ್ಟಿಕೊಂಡಿವೆ !

ಸಂದರ್ಭ ಏನೇ ಇರಲಿ, ಉಳಿದವರು ಸಹಜ ಸಣ್ಣದನಿಯಲ್ಲಿ ಮಾತಾಡುತ್ತಿದ್ದರೆ ಬೇಂದ್ರೆ ಚೀರುದನಿಯ ತಾರಕದಲ್ಲೇ ಮಾತಾಡುತ್ತಾರೆ–ಜಗಳಾಡಿದಂತೆ. ನಿನಗೇನು ತಿಳಿದೀತು ಸಂದೇ ಖರೆ ಎಂಬ ಛಲ. ಈ ಹಮ್ಮಿಗೆ ಕಾರಣಗಳೂ ಇವೆ. ಅವರಷ್ಟು ಓದಿದವರು, ತಿಳಿದುಕೊಂಡವರು ನಮ್ಮಲ್ಲಿ ಯಾರೂ ಇಲ್ಲ. ಮೂಲ ಸಾಮಗ್ರಿಯನ್ನು ಆಮೂಲಾಗ್ರ ತಿಳಿಯುವುದಿರಲಿ ಅದಕ್ಕೆ ತಮ್ಮದೊಂದು ದೃಷ್ಟಿಕೋನ ಅಂಟಿಸಿಯೇ ಸಿದ್ಧ ! ಜ್ಯಾಮಿತಿ ಗಣಿತವಂತೆ. ವಿಜ್ಞಾನ, ತತ್ತ್ವಜ್ಞಾನ, ತಂತ್ರ, ಹಸ್ತ ಸಾಮುದ್ರಿಕವಂತೆ, ಜ್ಯೋತಿಷ್ಯ, ತರಕಾರಿಯಂತೆ, ಮಾವಿನ ಥರಾವರಿಯಂತೆ ಪಾಕಶಾಸ್ತ್ರ (ಬೇಂದ್ರೆ ಬಹಳ ತಿನ್ನುತ್ತಾರೆಂದು ವದಂತಿ) ಕೋಕ ಶಾಸ್ತ್ರವಂತೆ, ಭೂಗೋಳ, ಇತಿಹಾಸ, ರಾಜಕೀಯವಂತೆ-ಇವರ ಆಸಕ್ತಿಗಳಿಗೆ ಕೊನೆಯೇ ಇಲ್ಲ. ಅದೊಂದು ಖಾಸಗಿ ವಿಶ್ವಕೋಶ. ಇಷ್ಟೆ ಅವರ ವಿಶ್ವಕೋಶಕ್ಕೂ ನಾವು ಬಳಸುವ ವಿಶ್ವಕೋಶಕ್ಕೂ ತಾಳೆ ಹೊಂದುವುದಿಲ್ಲ. ಪಡಿಲಬಿಟ್ಟರೆ ವಿಜ್ಞಾನದ ಪ್ರತಿಯೊಂದು ಥಿಯರಿಗೂ ಒಂದೊಂದು ತಿದ್ದುಪಡಿ ಸೂಚಿಸಿಯಾರು !

ಸಾಹಿತ್ಯಿಕ ವಿವಾದಗಳೆಲ್ಲ ಮೂಲೆಗುಂಪಾದ ಇಂದಿನ ಸಂದರ್ಭದಲ್ಲಿ ತಣ್ಣಗೆ ಕೂತು ವಿಚಾರ ಮಾಡಿದಾಗ ಬೇಂದ್ರೆ ನಮಗೆ ಯಾಕೆ ಇಂದಿಗೂ ಪ್ರಸ್ತುತರಾಗುತ್ತಾರೆ–ಎಂದು ಕೇಳಿಕೊಳ್ಳಬೇಕೆನಿಸುತ್ತದೆ. ಒಟ್ಟು ಧೋರಣೆ, ಕೇಂದ್ರ ಪ್ರಜ್ಞೆಯಂಥ ಕೃತಕ ವಾದಗಳನ್ನು ಮೀರಿದ ಒಂದು ವಿಶೇಷ ಜೀವನಶ್ರದ್ಧೆ ಅವರ ಕಾವ್ಯದಲ್ಲಿದೆಯೆಂದು ಅನ್ನಿಸುತ್ತದೆ. ಅವರು ಕಾಲಮಾನದ ಸೂಕ್ಷ್ಮ ಸಂವೇದನೆಗಳನ್ನು ಸಮರ್ಥವಾಗಿ ಗುರುತಿಸಿದರು. ಯಾರೂ ಹೇಳದ ರೀತಿಯಲ್ಲಿ ಹೇಳಿ ವಿಶಿಷ್ಟ ರಸಾನುಭವ ನೀಡಿದರು. ನಾವು ಕಂಡರಿಯದ, ಕೇಳರಿಯದ ಬದುಕಿನ ರಹಸ್ಯಗಳನ್ನು ನಮ್ಮ ಅರಿವಿಗೆ ವೇದಿಸಿದರು. ಅದಕ್ಕೆ ಸಂವಾಹಕವಾಗಬಲ್ಲ ಸಾಮರ್ಥ್ಯವನ್ನು ಭಾಷೆಗೆ ನೀಡಿದರು. ಕನ್ನಡಕ್ಕೆ ಸಾಹಿತ್ಯ ಚರಿತ್ರೆಯ ಮಹತ್ವದ ಘಟನೆಗಳಲ್ಲಿ ಬೇಂದ್ರೆ ಕೂಡ ಒಬ್ಬರು. ಅವರ 'ನಾಕುತಂತಿ'ಗೆ ಜ್ಞಾನ ಪೀಠದ ಪ್ರಶಸ್ತಿ ಸಿಕ್ಕದ್ದು ಸಂತೋಷ. ಅದರಿಂದ ಕನ್ನಡವೂ, ಬೇಂದ್ರೆಯವರೂ ಕೂಡಿಯೇ ಶ್ರೀಮಂತರಾದರು. ಅವರ ಉಳಿದ ಸಂಕಲನಗಳಿಗಿಂತ 'ನಾಕುತಂತಿ' ಮಹತ್ವದ ಸಂಕಲನವಾಗಿರಲಿಕ್ಕಿಲ್ಲ. ಆದರೆ ಒಟ್ಟು ಬೇಂದ್ರೆಯವರಿಗೆ ಸಿಕ್ಕಿದ್ದಕ್ಕೆ ಖಂಡಿತ ಯಾರಿಗೂ ಅಸಮಾಧಾನವಿಲ್ಲ.

•

ಭಕ್ತಿಯು ಸಾಗಿ ಪರಾಭಕ್ತಿಯಾದ ಮೇಲೆ ಮತಭ್ರಾಂತಿಯ ಕರಾಳ ರಕ್ಕಸನ ಸುಳಿವು ಇರುವುದಿಲ್ಲ. ಪರಾಭಕ್ತಿಯಲ್ಲಿ ನೆಲಸುವ ಜೀವಿ ಪ್ರೇಮೇಶ್ವರನ ಸಮೀಪದಲ್ಲಿರುವವನು.

ಎಂ. ಚೆಲುವರಾಯಸ್ವಾಮಿ

ಶ್ರೀ ತ್ಯಾಗರಾಜ ಸ್ವಾಮಿಯವರು ರಚಿಸಿರುವ ಸಂಕ್ಷೇಪ ರಾಮಾಯಣ ಕೃತಿಗಳು

ರಾಮಾಯಣ ವಾಗ್ಗೇಯಕಾರರಾದ ಸದ್ಗುರು ತ್ಯಾಗರಾಜ ಸ್ವಾಮಿಯವರನ್ನು ಆದಿಕವಿ ವಾಲ್ಮೀಕಿಗಳ ಅವತಾರವೆಂದು ಭಗವದ್ಭಕ್ತರೂ, ಸಂಗೀತ ಮತ್ತು ಸಾಹಿತ್ಯ ವಿದ್ವಾಂಸರೂ ಪರಿಗಣಿಸಿರುತ್ತಾರೆ. ವಾಲ್ಮೀಕಿ ರಾಮಾಯಣವು 24000 ಶ್ಲೋಕಗಳಿಂದ ಕೂಡಿದೆ. ಇದರಂತೆಯೇ ತ್ಯಾಗರಾಜರೂ ಸಹ 24000 ಕೃತಿಗಳನ್ನು ರಚಿಸಿದ್ದರೆಂದು ಪ್ರತೀತಿ. ಆದರೆ ಇಂದು ಸಂಗೀತ ಪ್ರಪಂಚಕ್ಕೆ ಲಭ್ಯವಾಗಿರುವುದು ಸುಮಾರು ಒಂದು ಸಾವಿರ ಕೃತಿಗಳು ಮಾತ್ರ. ವಿದ್ವಾಂಸರುಗಳ ಹೆಚ್ಚಿನ ಸಂಶೋಧನೆಯಿಂದ ಉಳಿದ ಕೃತಿಗಳೂ ಲಭ್ಯವಾದರೆ ಭಕ್ತಿಯುತವಾದ ಸಂಗೀತಪ್ರಪಂಚವು ಹೆಚ್ಚು ಶ್ರೀಮಂತವಾಗುವುದರಲ್ಲಿ ಸಂದೇಹವಿಲ್ಲ. ಈಗ ದೊರೆತಿರುವ ಕೃತಿಗಳಲ್ಲಿನ ವಸ್ತುಗಳನ್ನು ಪರಿಶೀಲಿಸಿದಾಗ ಅವುಗಳಲ್ಲಿ ರಾಮಾಯಣ, ಮಹಾಭಾರತ, ಹರಿವಂಶ, ಭಾಗವತ ಮತ್ತು ಅಷ್ಟಾದಶ ಪುರಾಣಗಳ ಸಾರಾಂಶವು ಸಂದರ್ಭೋಚಿತವಾಗಿ ಅಡಕವಾಗಿರುವುದು ಕಂಡುಬರುತ್ತದೆ.

ಪ್ರಕೃತ ತ್ಯಾಗರಾಜಸ್ವಾಮಿಯವರು ರಚಿಸಿರುವ ಸಂಕ್ಷೇಪರಾಮಾಯಣ ಕೃತಿಗಳನ್ನು ಗಮನಿಸೋಣ. ತಂಜಾವೂರಿನ ದೊರೆ ಎರಡನೇ ತುಳಜಾಜಿಯು (1765-1787) ತ್ಯಾಗರಾಜರ ತಂದೆ ರಾಮಬ್ರಹ್ಮರವರಿಗೆ ಆಶ್ರಯದಾತನಾಗಿದ್ದ. ರಾಮನವಮಿ ಉತ್ಸವದ ಸಂದರ್ಭದಲ್ಲಿ ರಾಮಬ್ರಹ್ಮರು ತುಳಜನ ಆಸ್ಥಾನದಲ್ಲಿ ರಾಮಾಯಣ ಪ್ರವಚನವನ್ನು ನಡೆಸಲು ಆಹ್ವಾನಿತರಾಗುತ್ತಿದ್ದರು. ಅವರು ವಾಲ್ಮೀಕಿ ರಾಮಾಯಣ ಅಲ್ಲದೇ ತುಳಸಿದಾಸರ ರಾಮಾಯಣ, ಅಧ್ಯಾತ್ಮರಾಮಾಯಣ, ಆನಂದ ರಾಮಾಯಣ, ಅದ್ಭುತರಾಮಾಯಣ, ವಾಸಿಷ್ಠ ರಾಮಾಯಣ ಮತ್ತು ಕಂಬರಾಮಾಯಣಗಳನ್ನು ಸಹ ವಿಶೇಷವಾಗಿ ಅಧ್ಯಯನ ಮಾಡಿದ್ದುದರಿಂದ ಅತ್ಯಂತ ಆಕರ್ಷಣೀಯವಾಗಿ ಪ್ರವಚನಗಳನ್ನು ನಡೆಸುತ್ತಿದ್ದರು. ಈ ವಿಶೇಷ ಸಂದರ್ಭಗಳಲ್ಲಿ ತ್ಯಾಗರಾಜರು ತಮ್ಮ ತಂದೆಯೊಡನೆ ರಾಜಾಸ್ಥಾನಕ್ಕೆ ಹೋಗುವುದು ರೂಢಿಯಲ್ಲಿದ್ದಿತು. ತದೇಕ ಮನಸ್ಕರಾಗಿ ತಂದೆಯವರ ಪ್ರವಚನಗಳನ್ನು ಕೇಳುತ್ತಿದ್ದುದರಿಂದ ರಾಮಾಯಣದ ಕಥೆ ಮತ್ತು ಅದರ ತತ್ತ್ವಗಳು ತ್ಯಾಗರಾಜರ ಮೇಲೆ ಹೆಚ್ಚು ಪ್ರಭಾವವನ್ನು ಬೀರಲು ಅವಕಾಶವಾಯಿತು. ಈ ಪ್ರಭಾವವೆಲ್ಲವನ್ನೂ ಅವರ ರಾಮಾಯಣ ಕೃತಿಗಳಲ್ಲಿ ಕಾಣಬಹುದು. ಆದಿಕವಿ ವಾಲ್ಮೀಕಿಯ ಆದಿ ಕಾವ್ಯವಾದ ರಾಮಾಯಣದ ಕಥೆಯನ್ನು ತ್ಯಾಗರಾಜರು ತಮ್ಮ ಮೂರು ಸುಪ್ರಸಿದ್ಧ ಕೃತಿಗಳಲ್ಲಿ ಸಂಕ್ಷೇಪವಾಗಿ ವಿವರಿಸಿರುತ್ತಾರೆ. ಇವುಗಳು ಯಾವುವೆಂದರೆ 1. ಶ್ರೀ ರಘುಕುಲ (ಹಂಸಧ್ವನಿ, ಆದಿತಾಳ) 2. ಶ್ರೀರಾಮ ರಘುರಾಮ (ಯದುಕುಲಕಾಂಭೋಜಿ ಝಂಪೆ) 3. ವಿನಯಮುನನು. (ಸೌರಾಷ್ಟ್ರ ಛಾಪು) ಇದರಲ್ಲಿ ಮೊದಲನೆಯ ಕೃತಿಯು ಇಡೀ ರಾಮಾಯಣದ ಕಥೆಯನ್ನು ಅತ್ಯಂತ ಸಂಕ್ಷೇಪವಾಗಿ ತಿಳಿಸುತ್ತದೆ. ಕೃತಿಯ ತಾತ್ಪರ್ಯ ಈ ರೀತಿ ಇದೆ.

"ಎಲೈ ರಾಮಚಂದ್ರ, ಸಾಕೇತವಾಸ, ತ್ಯಾಗರಾಜನುತ, ನೀನು ಶ್ರೀ ರಘುಕುಲದಲ್ಲಿ ಹುಟ್ಟಿ ಸೀತಾ ಮಾತೆಯ ಪಾಣಿಗ್ರಹಣ ಮಾಡಿದೆ. ರಾಕ್ಷಸರ ಬಾಧೆಯಿಂದ ಅತ್ಯಂತವಾಗಿ ಪೀಡಿತರಾದ ಮುನಿಗಳ ಕೋರಿಕೆಯನ್ನು ಈಡೇರಿಸಲು ರಾಕ್ಷಸರ ಸಂಹಾರಕ್ಕಾಗಿ ಧನುಸ್ಸಿನ ಸಮೇತ ಅವತಾರ ಮಾಡಿದೆ. ಲಂಕೆಯಲ್ಲಿದ್ದ ರಾಕ್ಷಸರನ್ನೆಲ್ಲಾ ನಿರ್ಮೂಲಮಾಡಿ ಅಯೋಧ್ಯೆಗೆ ಹಿಂತಿರುಗಿ ಪರಮ ಭಕ್ತರುಗಳನ್ನು ಪಾಲಿಸಿ ರತ್ನಸಿಂಹಾಸನದಲ್ಲಿ ಮಂಡಿಸಿ ಬ್ರಾಹ್ಮಣೋತ್ತಮರಿಂದ ಪಟ್ಟಾಭಿಷಿಕ್ತನಾಗಿದ್ದೀಯೆ." ಹಂಸಧ್ವನಿ ರಾಗವು ಮೊಟ್ಟ ಮೊದಲು ಮುತ್ತುಸ್ವಾಮಿ ದೀಕ್ಷಿತರ ತಂದೆ ರಾಮಸ್ವಾಮಿದೀಕ್ಷಿತ (1735–1817) ರಿಂದ ಕಂಡುಹಿಡಿಯಲ್ಪಟ್ಟಿತೆಂಬುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು. ಇದೇ ರಾಗದಲ್ಲಿ ಮುತ್ತುಸ್ವಾಮಿ ದೀಕ್ಷಿತರು "ವಾತಾಪಿ ಗಣಪತಿಂ ಭಜೇಹಂ" ಎಂಬ ಕೃತಿಯನ್ನು ರಚಿಸಿರುತ್ತಾರೆ. ತ್ಯಾಗರಾಜರು ಸಹ "ರಘುನಾಯಕ" ಮತ್ತು "ಶ್ರೀರಘುಕುಲ" ಎಂಬ ಕೃತಿಗಳನ್ನು ಇದೇ ರಾಗದಲ್ಲಿ ರಚಿಸಿರುತ್ತಾರೆ.

ಸಂಕ್ಷೇಪರಾಮಾಯಣದ ಎರಡನೇ ಕೃತಿಯಾದ "ಶ್ರೀರಾಮ ರಘುರಾಮ ಶೃಂಗಾರರಾಮಯನಿ" ಎಂಬುದು ಯದುಕುಲ ಕಾಂಭೋಜಿ ರಾಗ ಮತ್ತು ಝಂಪೆತಾಳದಲ್ಲಿ ರಚಿತವಾಗಿ ಪಲ್ಲವಿ ಮತ್ತು ಒಂಭತ್ತು ಚರಣಗಳಿಂದ ಕೂಡಿದೆ. ಅಲ್ಲದೆ ರಾಮಾಯಣದ ಕಥೆಯಲ್ಲಿ ರಾಮನ ಜನನದಿಂದ ಸೀತಾ ವಿವಾಹದವರೆಗಿನ ಘಟನೆಗಳು ಈ ಕೃತಿಯಲ್ಲಿ ವಿವರಿಸಲ್ಪಟ್ಟಿವೆ. ಸಂಗೀತಕ್ಕಿಂತಲೂ ಸಾಹಿತ್ಯಕ್ಕೆ ಹೆಚ್ಚು ಪ್ರಾಶಸ್ತ್ಯವು ಈ ದಿವ್ಯ ನಾಮ ಸಂಕೀರ್ತನೆಯಲ್ಲಿ ಕಂಡುಬರುತ್ತದೆ. ಕೃತಿಯ ಸಾರಾಂಶವು ಈ ರೀತಿಯಿದೆ.

"ಎಲೈ ಮನಸ್ಸೇ ! ಶೃಂಗಾರ ರಾಮನನ್ನು ಕುರಿತು ಚಿಂತಿಸಲಾರೆಯಾ ? ಕೌಸಲ್ಯೆಯು ರಾಮನ ಪ್ರಕಾಶಮಾನವಾದ, ಮುದ್ದಾದ ಮುಖಕ್ಕೆ ಮುತ್ತಿಡಲು ಪೂರ್ವಜನ್ಮದಲ್ಲಿ ಎಂಥಾ ತಪಸ್ಸು ಮಾಡಿದ್ದಳೋ ನನಗೆ ತಿಳಿಯದಲ್ಲಾ ! ಇದೇ ರೀತಿ ದಶರಥನು ಅತ್ಯಂತ ಪ್ರೀತಿಯಿಂದ 'ರಾಮ' ಎಂದು ಕರೆಯಲು, ಲಕ್ಷ್ಮಣನು ವಿರಾಮವೇ ಇಲ್ಲದೇ ಅತ್ಯಂತ ಭಕ್ತಿಯಿಂದ ರಾಮನಿಗೆ ಕೈಂಕರ್ಯವನ್ನು ಮಾಡಲು, ವಿಶ್ವಾಮಿತ್ರನು ಯಾಗ ಸಂರಕ್ಷಣಾರ್ಥವಾಗಿ ರಾಮನನ್ನು ತನ್ನ ಹಿಂದೆ ಕರೆದುಕೊಂಡು ಹೋಗುತ್ತಿದ್ದಾಗ ತನಗಾದ ಅತಿ ಸಂತೋಷಕ್ಕಾಗಿ ಹಿಗ್ಗಲು, ಅಹಲ್ಯೆಯು ಶ್ರೀರಾಮನ ಪಾದದಿಂದ ಶಾಪವಿಮೋಚಿತಳಾಗಿ ತನ್ನ ಸುಂದರವಾದ ಪೂರ್ವದ ರೂಪವನ್ನು ಪಡೆಯಲು, ಧರ್ಮವೇ ಮೂರ್ತಿ ರೂಪವನ್ನು ಪಡೆಯಲು, ಜನಕನು ತನ್ನ ಮಗಳಾದ ಸೀತೆಯನ್ನು ಶ್ರೀರಾಮನಿಗೆ ಲಗ್ನ ಮಾಡಿಕೊಟ್ಟು ದಂಪತಿಗಳನ್ನು ನೋಡಿ ಅತ್ಯಂತ ಆನಂದವನ್ನು ಪಡಲು, ಜಾನಕಿಯು ರಾಮನ ಕೈ ಪಿಡಿದಾಗ ಮೈಯೆಲ್ಲಾ ಅತಿಶಯವಾದ ಆನಂದದಿಂದ ರೋಮಾಂಚಿತವಾಗಲು, ನಾರದ ಮುನಿಯು ಶ್ರೀ ರಾಮನನ್ನು ತ್ಯಾಗರಾಜಾಪ್ತ (ತ್ಯಾಗರಾಜೇಶ್ವರ)ನೆಂದು ಸ್ತುತಿಸಲು, ಅಂದರೆ ಈ ಮೇಲೆ ತಿಳಿಸಿರುವ ಪುಣ್ಯಶಾಲಿಗಳೆಲ್ಲರೂ ಪೂರ್ವಜನ್ಮದಲ್ಲಿ ಎಷ್ಟೆಷ್ಟು ಒಳ್ಳೆಯ ತಪಸ್ಸನ್ನು ಮಾಡಿದರೋ ತಿಳಿಯದಲ್ಲಾ" ಎಂದು ತ್ಯಾಗರಾಜರು ರಾಮನ ಗುಣಗಾನ ಮಾಡಿದ್ದಾರೆ.

ಸಂಕ್ಷೇಪ ರಾಮಾಯಣವನ್ನು ಒಳಗೊಂಡ ಮೂರನೆಯ ದಿವ್ಯಕೃತಿಯು "ವಿನಯ ಮುನನು" ಎಂದು ಪ್ರಾರಂಭವಾಗಿದೆ. ಇದು ಸೌರಾಷ್ಟ್ರರಾಗ ಮತ್ತು ಛಾಪು ತಾಳದಲ್ಲಿದೆ. ಈ ಕೃತಿಯಲ್ಲಿ ಹನ್ನೊಂದು ಚರಣಗಳಿವೆ. ರಾಮಾಯಣದ ಕಥೆಯು ಹಿಂದಿನ ಕೃತಿಯಿಂದ ಮುಂದರಿದು ಉಳಿದ ಕಾಂಡಗಳ ಸಾರಾಂಶವನ್ನೊಳಗೊಂಡಿದೆ. ಹಿಂದಿನ ಕೃತಿಯಲ್ಲಿದ್ದ ಕೆಲವು ಕಥಾಸಂದರ್ಭಗಳು ಇಲ್ಲೂ ಪುನರುಕ್ತಿಯಾಗಿದೆ. ಹೀಗಾಗಲು ತ್ಯಾಗರಾಜರಿಗೆ ಪುನರುಕ್ತಿಯಾಗಿರುವ ಕಥಾ ಸಂದರ್ಭಗಳಲ್ಲಿ ಹೆಚ್ಚಿನ ಮಮತೆ ಇದ್ದಿತೆಂದು ಊಹಿಸಬಹುದು.

ಪಲ್ಲವಿ ಮತ್ತು ಒಂದನೆಯ ಚರಣದಲ್ಲಿ ತ್ಯಾಗರಾಜರು ರಾಮನ ಪಾದಗಳನ್ನು ವರ್ಣಿಸಿರುತ್ತಾರೆ. ಇದರ ಭಾವಾರ್ಥ ಈರೀತಿ ಇದೆ. "ವಿನಯದಿಂದ ವಿಶ್ವಾಮಿತ್ರನನ್ನು ಅನುಸರಿಸಿದ ಪಾದ, ಶಿಲೆಯಾಗಿದ್ದ ಅಹಲ್ಯೆಗೆ ದಿವ್ಯ ರೂಪವನ್ನು ಕರುಣಿಸಿದ ಪಾದ, ಶಿವಧನುರ್ಭಂಗ ಮಾಡಲು ಸಹಾಯವಿತ್ತ ಪಾದ, ಸೀತಾ ವಿವಾಹದ ಸಂದರ್ಭದಲ್ಲಿ

ಜನಕ ಮಹಾರಾಜನು ಹಾಲಿನಿಂದ ತೊಳೆದ ಪಾದ. ಇಂಥ ಪಾದಗಳ ದರ್ಶನವು ನನಗೆ ಎಂದು ಲಭ್ಯವಾಗುತ್ತದೆ" ಎಂದಿದ್ದಾರೆ, ತ್ಯಾಗರಾಜರು. ಎರಡು ಮತ್ತು ಮೂರನೆಯ ಚರಣದಲ್ಲಿ ರಾಮನ ಕರಗಳ ವರ್ಣನೆ ಇದೆ. ವಿವಾಹದ ಸಮಯದಲ್ಲಿ ಶ್ರೀರಾಮನು ಸೀತೆಯ ಕಂಠಕ್ಕೆ ಮಾಂಗಲ್ಯವನ್ನು ಕಟ್ಟಿದ ಕರ, ಪರಶುರಾಮನ ಧನುಸ್ಸಿನ ಶಕ್ತಿಯನ್ನು ಕೋಪದಿಂದ ಅಡಗಿಸಿದ ಕರ. ಕಾಡಿನಲ್ಲಿ ವಿರಾಧನನ್ನು ವಧಿಸಿದ ಕರ, ವನದಲ್ಲಿ ವಾಸವಾಗಿದ್ದ ಮುನಿಗಳಿಗೆ ಅಭಯವಿತ್ತ ಹಸ್ತ" ಇವುಗಳನ್ನು ಎಂದು ನೋಡುವೆನೋ ಎಂದಿದ್ದಾರೆ ತ್ಯಾಗರಾಜರು. ನಾಲ್ಕು ಮತ್ತು ಐದನೆಯ ಚರಣಗಳಲ್ಲಿ ರಾಮನ ಬಾಣದ ವರ್ಣನೆ ಇದೆ. "ಕಾಕಾಸುರನಿಗೆ ಕರುಣೆ ತೋರಿದ ಬಾಣ, ಕ್ಷಣ ಮಾತ್ರದಲ್ಲಿ ಅನೇಕ ರಥಗಳನ್ನು ನಾಶ ಮಾಡಿದ ಬಾಣ. ಬಲಶಾಲಿಯಾದ ವಾಲಿಯನ್ನು ಕೊಂದ ಬಾಣ. ಸಮುದ್ರರಾಜನ ಗರ್ವವನ್ನು ಅಡಗಿಸಿದ ಬಾಣ"ಗಳನ್ನು ಎಂದು ನೋಡುವೆನೋ ಎಂದಿದ್ದಾರೆ ತ್ಯಾಗರಾಜರು.

ಆರು ಮತ್ತು ಏಳನೆಯ ಚರಣಗಳಲ್ಲಿ ತ್ಯಾಗರಾಜರು ರಾಮನ ನೇತ್ರಗಳನ್ನು ವರ್ಣಿಸಿದ್ದಾರೆ. "ಕನಿಕರದಿಂದ ವಿಭೀಷಣನನ್ನು ನೋಡಿದ ಕಣ್ಣು. ರಾವಣ ವಧೆಯಾದ ನಂತರ ಮೃತರಾದ ಕಪಿಗಳನ್ನು ಕೃಪಾಕಟಾಕ್ಷದಿಂದ ನೋಡಿ ಅವುಗಳಿಗೆ ಜೀವದಾನ ಮಾಡಿದ ನೇತ್ರ, ವಾನರಾಧಿಪತಿಯಾದ ಸುಗ್ರೀವನನ್ನು ದಯಾರಸದಿಂದ ನೋಡಿದ ಕಣ್ಣು. ಕೇವಲ ನೋಟದಿಂದಲೇ ಲಂಕೆಯನ್ನು ಪುನಃ ಸಮೃದ್ಧಿಗೊಳಿಸಿದ ನೇತ್ರ" ಇವುಗಳನ್ನು ಎಂದಿಗೆ ನೋಡುವೆನೋ ಎಂದು ಹಂಬಲಿಸಿದ್ದಾರೆ ತ್ಯಾಗರಾಜರು. ಎಂಟು ಮತ್ತು ಒಂಭತ್ತನೆಯ ಚರಣಗಳಲ್ಲಿ 'ರಾಮನು ಘನವಾದ ಪುಷ್ಪಕ ವಿಮಾನದಲ್ಲಿ ಕುಳಿತು ಅದರ ಸೌಂದರ್ಯವನ್ನು ಹೆಚ್ಚಿಸಿದ ದೃಶ್ಯವನ್ನೂ ಭರತನನ್ನು ಸಂದರ್ಶಿಸಿ ಅವನನ್ನು ಅತ್ಯಂತ ಪ್ರೀತಿಯಿಂದ ಆಲಂಗಿಸಿದ ದೃಶ್ಯವನ್ನೂ ರತ್ನಖಚಿತವಾದ ಸಿಂಹಾಸನದಲ್ಲಿ ಮಂಡಿಸಿರುವ ಠೀವಿಯನ್ನೂ ರಾಜರುಗಳು ಮತ್ತು ಋಷಿಗಳೂ ಸಹ ರಾಮನನ್ನು ಅಲಂಕರಿಸುತ್ತಿರುವ ದೃಶ್ಯವನ್ನೂ" ಎಂದು ಕಾಣುವೆನೋ, ಎಂದಿರುತ್ತಾರೆ ತ್ಯಾಗರಾಜರು.

ಹತ್ತು ಮತ್ತು ಹನ್ನೊಂದನೆಯ ಚರಣಗಳಲ್ಲಿ "ವೇದ ಪೂಜಿತನೂ ಮತ್ತು ಆನಂದ ಕಂದನೂ ಭಾಗವತ ಪ್ರಿಯನೂ, ನಿರ್ವಿಕಾರನೂ, ಸಾಗರ ಶಾಯಿಯೂ, ಕರುಣಾ ಜಲನಿಧಿಯೂ, ತ್ಯಾಗರಾಜೇಶ್ವರ ಮತ್ತು ಇತರ ದೇವತೆಗಳಿಂದ ಸ್ತುತಿಸಲ್ಪಟ್ಟವನೂ ಆದ ಶ್ರೀರಾಮಚಂದ್ರಮೂರ್ತಿಯನ್ನು" ಎಂದು ನೋಡುವೆನೋ ಎಂಬುದಾಗಿ ತ್ಯಾಗರಾಜರು ಹಂಬಲಿಸುತ್ತಾರೆ.

ಈ ಮೇಲಿನ ಮೂರು ಕೃತಿಗಳಲ್ಲೂ ತ್ಯಾಗರಾಜರು ವಾಲ್ಮೀಕಿ ರಾಮಾಯಣದ ಕಥಾ ಭಾಗವನ್ನು ಕ್ರಮವಾಗಿ ಅನುಸರಿಸುವುದು ಗಮನಾರ್ಹವಾಗಿದೆ. ಅಲ್ಲದೆ ಸೌರಾಷ್ಟ್ರ ರಾಗವು ಬಹಳ ಪ್ರಾಚೀನ ಮತ್ತು ಸಂಪ್ರದಾಯವಾದ ರಾಗ. ಮುತ್ತುಸ್ವಾಮಿ ದೀಕ್ಷಿತರು ರಚಿಸಿರುವ ನವಗ್ರಹ ಕೃತಿಗಳಲ್ಲಿ ಮೊದಲನೆಯದಾದ "ಸೂರ್ಯಮೂರ್ತೇ" ಎಂಬ ಸೂರ್ಯನ ಸ್ತೋತ್ರವು ಸಹ ಸೌರಾಷ್ಟ್ರ ರಾಗದಲ್ಲಿದೆ. ತ್ಯಾಗರಾಜರು ಸಹ ರವಿವಂಶ ಲಲಾಮನಾದ ಶ್ರೀರಾಮಚಂದ್ರಮೂರ್ತಿಯ ದಿವ್ಯಕಥೆಯನ್ನು ಸಂಕ್ಷೇಪ ರಾಮಾಯಣದ ರೀತಿಯಲ್ಲಿ ಸೌರಾಷ್ಟ್ರ ರಾಗದಲ್ಲೇ ರಚಿಸಿರುವುದು ಅತ್ಯಂತ ಅರ್ಥಗರ್ಭಿತವಾಗಿದೆ ಎನ್ನಬಹುದು.

ಪ್ರಹ್ಲಾದನಂತೆ ತ್ಯಾಗರಾಜರೂ ಸಹ ಗರ್ಭ ಭಾಗವತರು. ಅವರ ಕೃತಿರತ್ನಗಳೆಲ್ಲವೂ ಸಂಸಾರಸಾಗರದಲ್ಲಿ ಬಿದ್ದು ಬಳಲುತ್ತಿರುವವರೆಲ್ಲರಿಗೂ ಸಂಜೀವನದಂತಿರುತ್ತವೆ. ತ್ಯಾಗರಾಜರ ಹಂಬಲ ಮಾನವ ಮೊದಲು ಸಜ್ಜನನಾಗಬೇಕು. ನಂತರ ಭಕ್ತನಾಗುತ್ತಾನೆ. ತದನಂತರ ಮುಕ್ತನಾಗುತ್ತಾನೆ. ಈ ದೃಷ್ಟಿಯಿಂದ ಅವಲೋಕಿಸಿದರೆ ಮೇಲೆ ಉದಾಹರಿಸಿರುವ ಮೂರು ಸಂಕ್ಷೇಪ ರಾಮಾಯಣ ಕೃತಿಗಳೂ ಪ್ರತಿ ಕಲಾವಿದರಿಗೂ ಉಪಾಸನಾಯೋಗ್ಯವಾಗಿರುತ್ತವೆ. ಲೋಕಕಲ್ಯಾಣಕ್ಕೆ ಅವತಾರ ಮಾಡಿದ ಶ್ರೀರಾಮಚಂದ್ರ ಮೂರ್ತಿಯ ಆದರ್ಶ ಗುಣಗಳನ್ನೊಳಗೊಂಡ ತ್ಯಾಗರಾಜರ ಸಂಕ್ಷೇಪ ರಾಮಾಯಣ ಕೃತಿಗಳ ಅಧ್ಯಯನದಿಂದ ಸಂಗೀತ ಕಲಾಪ್ರಪಂಚವೂ ಹೆಚ್ಚು ಪವಿತ್ರವಾಗಲೆಂದು ಭಗವಂತನನ್ನು ಪ್ರಾರ್ಥಿಸೋಣ.

ಎ. ಎಸ್. ಮೂರ್ತಿರಾವ್

ಅಮೆರಿಕನ್ ದಿನಚರಿಯಿಂದ—ನನ್ನ ಯೆಹೂದ್ಯ ಮಿತ್ರರು

ಆರೇಳು ವರ್ಷಗಳ ಕೆಳಗೆ ಭೋಪಾಲಿನಲ್ಲಿ ಮೊಮ್ಮಗಳ ಆಟವನ್ನು ನೋಡುತ್ತ ಕುಳಿತಿದ್ದಾಗ ತೀ. ನಂ. ಶ್ರೀಕಂಠಯ್ಯನಿಂದ ಒಂದು ಕಾಗದ ಬಂತು. ಅದರ ಒಕ್ಕಣೆಯನ್ನು ನೋಡುವುದಕ್ಕಿಂತ ಮುಂಚೆ ನನ್ನ ಕಣ್ಣು ಅಕಸ್ಮಾತ್ ತಾರೀಖು ಬರೆಯುವ ಬಲತುದಿಗೆ ತಿರುಗಿತು. ಅಲ್ಲಿ ಶ್ರೀಕಂಠಯ್ಯ ಬರೆದಿದ್ದದ್ದು ಪಾಶ್ಚಾತ್ಯ ಕ್ಯಾಲೆಂಡರಿನ ತಾರೀಖಲ್ಲ—'ಆಷಾಢಸ್ಯ ಪ್ರಥಮದಿವಸೇ'. ಅದನ್ನು ನೋಡಿದೊಡನೆ ಮರಳುಗಾಡಿನಲ್ಲಿ ಓಯಸಿಸ್ಸನ್ನು ಕಂಡಂತಾಯಿತು. ಮೇಘದೂತದ ಆ ಪಂಕ್ತಿಗಳೂ ಚಿತ್ರಗಳೂ ನೆನಪಿಗೆ ಬಂದವು.

> ಆಷಾಢಸ್ಯ ಪ್ರಥಮದಿವಸೇ ಮೇಘಮಾಶ್ಲಿಷ್ಟಸಾನುಮ್
> ವಪ್ರಕ್ರೀಡಾಪರಿಣತಗಜ ಪ್ರೇಕ್ಷಣೀಯಂ ದದರ್ಶ ॥

ಮನಸ್ಸಿನಲ್ಲಿ ಸ್ವಿಚ್ ಒಂದನ್ನು ಒತ್ತಿದಂತಾಗಿ ಅದು ಕಾಲದಲ್ಲಿ ಹಿಂದುಹಿಂದಾಗಿ ಪ್ರಯಾಣ ಮಾಡಿತು. 'ಮೇಘದೂತ'ದ ಇತರ ಪದ್ಯಗಳು, ಅದರ ಕಾವ್ಯಗುಣದ ವಿಷಯವಾಗಿ ನಾವು ನಡಸಿದ್ದ ಚರ್ಚೆ, ಕಪಿಮುಷ್ಟಿ ಹಿಡಿದು ಸಮರ್ಥಿಸಿದ ಅಭಿಪ್ರಾಯಗಳು, ನೆನಸಿಕೊಂಡ ಇತರ ಕಾವ್ಯಗಳು, ಹಾಸ್ಯ ಕುಚೋದ್ಯ—'ಸಾ. ವಿದಗ್ಧ ಪರಿಷತ್....ತಾಃ ಕಥಾಃ'—ಅವೆಲ್ಲ ಸ್ಮೃತಿಪಥಕ್ಕೆ ಹೋಗಿ ಆದೆಷ್ಟು ವರ್ಷಗಳಾದುವೊ ! ಸ್ಮೃತಿಯಲ್ಲಿ ಸಹ ಅವು ಮಂಕಾಗತೊಡಗಿವೆ. ಮಹಾರಾಜರ ಕಾಲೇಜಿನ ಮಿತ್ರವರ್ಗ ನಿರ್ಮಿಸಿಕೊಂಡಿದ್ದ ದಿವ್ಯಪ್ರಪಂಚ ಒಡೆದು ಹೋಯಿತು. ಅಳಿದುಳಿದವರ ಮನಸ್ಸಿನಲ್ಲಿ 'ಕಾಂತಿಮತ್ಖಂಡಮೇಕಂ' (ಮತ್ತೆ 'ಮೇಘದೂತ' ನೆನಪಿಗೆ ಬರುತ್ತಿದೆ!) ಇನ್ನೂ ಇರಬಹುದೇನೊ, ಅಷ್ಟೆ. ಶ್ರೀಕಂಠಯ್ಯನೇ ಆ ಕಾಗದ ಬರೆದ ಕೆಲವು ತಿಂಗಳಲ್ಲಿ ತೀರಿಕೊಂಡರು...

'Nice day Mr. Rao. Deep in thought ?'

'ಸೆಂಟಿಮೆಂಟಲ್' ಮನೋವೃತ್ತಿಗೆ ಬಲಿಬೀಳುತ್ತಿದ್ದ ನನ್ನನ್ನು ಪಾರುಮಾಡಿದವರು ಎದುರು ಮನೆಯ ಮಿ. ಸ್ಕಿನರ್. ಅವರು ಯೆಹೂದ್ಯರು. ಸಿದ್ಧಗೊಳಿಸಿದ ಬಟ್ಟೆಗಳನ್ನು ಮಾರಾಟ ಮಾಡುವುದು ಅವರ ವೃತ್ತಿ. ಅವರ ಕಾರ್ಯಕ್ಷೇತ್ರ ವಿಶಾಲವಾದದ್ದು—ಇಲ್ಲಿನಾಯ್, ಮಿಷಿಗನ್, ವಿಸ್ಕಾನ್ಸಿನ್, ಮಿನ್ನಿಸೋಟ—ಈ ನಾಲ್ಕು ರಾಜ್ಯಗಳನ್ನೊಳಗೊಂಡದ್ದು. ಕಾರಿನಲ್ಲಿ ಸದಾ ಸುತ್ತುತ್ತಲೇ ಇರುತ್ತಾರೆ. ಇವತ್ತು ಅವರಿಗೆ ಬಿಡುವಾಗಿದ್ದದ್ದು ಆಶ್ಚರ್ಯ. ಅವರು ಬಿಡುವಾಗಿದ್ದಾಗ ಬಹಳ ಸಲಿಗೆಯಿಂದಲೂ ಸ್ನೇಹದಿಂದಲೂ ವರ್ತಿಸುತ್ತಾರೆ. ರಾಮು ಓಕ್ ಪಾರ್ಕ್‌ನಿಂದ ಸ್ಕೈಲ್ಸ್‌ಗೆ ಬಂದ ಹೊಸದರಲ್ಲಿ ತಾವಾಗಿಯೇ ಮನೆಗೆ ಬಂದು ಪರಿಚಯ ಮಾಡಿಕೊಂಡು 'ನೀವು ಇಲ್ಲಿಗೆ ಬಂದದ್ದು ಬಹಳ ಸಂತೋಷ. ನಮಗೆ ಒಳ್ಳೆಯ ನೆರೆ ಬೇಕು. ನಮ್ಮಿಂದ ಆಗಬಹುದಾದ ಸಹಾಯವೇನಾದರೂ ಇದ್ದರೆ ದಯವಿಟ್ಟು ತಿಳಿಸಿ. ಆ ವಿಷಯದಲ್ಲಿ ನೀವು ಸ್ವಾತಂತ್ರ್ಯ ವಹಿಸಬೇಕು. (ಇದು ಇಲ್ಲಿಯ ಜನ

ವಿಶೇಷವಾಗಿ ಬಳಸುವ ಮಾತು: 'Please feel free to tell us....)' ಎಂದು ಹೇಳಿ ಬಹಳ ಆದರದಿಂದ ಸ್ವಾಗತಿಸಿದರಂತೆ.

'I dont know whether I disturbed you' ಎಂದು ಸ್ಕಿನರ್ ಮಾತಿಗೆ ಪೀಠಿಕೆ ಹಾಕಿದರು.

'You did, I thank you for it. I was in a rather unheathy frame of mind. So I am grateful for the disturbance !' ಎಂದು ನಾನು ನಕ್ಕೆ.

'ನಿಮಗೆ ಬೇಸರವಾಗುವುದು ಸಹಜ. ನಿಮ್ಮ ಮಗ ಬೆಳಗ್ಗೆ ಹೊರಟುಹೋದರೆ ಸಂಜೆ ಆರೂವರೆಗೆ ಬರುತ್ತಾರೆ. ನೀವು ಒಬ್ಬರೇ ಎಲ್ಲಿಗೂ ಹೋಗುವಂತಿಲ್ಲ. ನಾನು ಮೂರು ನಾಲ್ಕು ದಿನ ಟೂರ್ ಹೋಗುವುದಿಲ್ಲ. ಡೌನ್‌ಟೌನ್ ಷಿಕಾಗೋವಿಗೆ ಹೋಗಬೇಕಾದಾಗ ಹೇಳುತ್ತೇನೆ. ನನ್ನ ಜೊತೆ ಬನ್ನಿ'.

'ಧನ್ಯವಾದ, ಸಂತೋಷದಿಂದ ಬರುತ್ತೇನೆ.'

'ಈಗ ವುಡ್‌ಫೀಲ್ಡ್‌ನಲ್ಲಿ ಸ್ವಲ್ಪ ಕೆಲಸವಿದೆ. ಹೊರಡುವಾಗ ಕರೆಯುತ್ತೇನೆ. ಬನ್ನಿ. ಅದು ನೋಡಬೇಕಾದ ಸ್ಥಳ.'

ಸುಮಾರು 11 ಘಂಟೆಯ ಹೊತ್ತಿಗೆ ಹೊರಟೆವು. ವುಡ್‌ಫೀಲ್ಡ್ ಇಲ್ಲಿಗೆ 15 ಮೈಲಿ ದೂರದಲ್ಲಿರುವ ಮಾರುಕಟ್ಟೆ—ಷಾಪಿಂಗ್ ಸೆಂಟರ್, ಒಂದೇ ಛಾವಣಿಯ ಕೆಳಗೆ ಅಷ್ಟು ದೊಡ್ಡ ಮಾರುಕಟ್ಟೆ ಪ್ರಪಂಚದಲ್ಲಿ ಮತ್ತೆಲ್ಲೂ ಇಲ್ಲವಂತೆ. ಅದನ್ನು ಮಾರ್ಕೆಟ್ ಎನ್ನುವುದಕ್ಕಿಂತ ಸಣ್ಣ ಊರು ಎಂದೇ ಕರೆಯಬಹುದೇನೊ. ರೆಸ್ಟೊರಾಂಟ್, ಬ್ಯಾಂಕ್, ಮಕ್ಕಳು ಆಡುವ ಸ್ಥಳ, ಬೇಸರವಾದವರಿಗೆ ಲೌಂಜು, (lounge), ಮನಸ್ಸಿಗೆ ಆನಂದವಾಗುವಂತೆ ಹಸರು, ಹೂವು, ಮಿನಿ-ಜಲಪಾತಗಳು ಕಾಲುವೆಗಳು-ಜನರನ್ನು ಆಕರ್ಷಿಸುವುದಕ್ಕೆ ಬೇಕಾದ್ದೆಲ್ಲ ಇದೆ. ಈ ಬೃಹತ್ಸೌಧದ ಪ್ರಮಾಣ, ಅಚ್ಚುಕಟ್ಟು, ಶುಭ್ರತೆ, ಸೊಬಗುಗಳನ್ನು ಎಷ್ಟು ಬಣ್ಣಿಸಿದರೂ ಸಾಲದು. ಸಿಯರ್ಸ್-ರೋಬಕ್, ವಾಲ್ ಗ್ರೀನ್ಸ್, ಪೆನಿ, ಮುಂತಾದ ಭಾರಿ ವ್ಯಾಪಾರ ಸಂಸ್ಥೆಗಳೆಲ್ಲ ಇಲ್ಲಿ ಸ್ಟೋರುಗಳನ್ನಿಟ್ಟಿದ್ದಾರೆ. ಮೈಮೇಲೆ ಬಿಸಿಲು ಮಳೆ ಬೀಳದಂತೆ ನಾವು ಇವೆಲ್ಲ ಸ್ಟೋರುಗಳಿಗೂ ಹೋಗಬಹುದು. ಸೌಂದರ್ಯ ಪ್ರಸಾಧನ, ಒಡವೆ, ಬಟ್ಟೆಬರೆ, ಆಹಾರ, ಪಾನೀಯ (ಸಾಮಾನ್ಯ ಮತ್ತು ಮಾದಕ), ಮಕ್ಕಳ ಆಟಿಕೆ, ಕಬ್ಬಿಣದ ಸಾಮಾನು, ಪಾತ್ರೆಗಳು, ಹವಾನಿಯಂತ್ರಕಗಳು—ಅಲ್ಲಿ ಸಿಕ್ಕದಿರುವ ಸಾಮಾನೇ ಇಲ್ಲ. ಇಹಜೀವನಕ್ಕೆ ಬೇಕಾದ ಸುಖ ಸಾಮಗ್ರಿಗಳನ್ನು ಮಾತ್ರ ಗಣನೆಗೆ ತಂದುಕೊಂಡರೆ ಮಹಾಭಾರತದ ವಿಷಯದಲ್ಲಿ ಹೇಳುವ ಕ್ಲೀಷೆ(cliche) ಯನ್ನು (ಅದು ಅಲ್ಲೂ ಉತ್ಪ್ರೇಕ್ಷೆ, ಇಲ್ಲೂ ಉತ್ಪ್ರೇಕ್ಷೆ) ಇದಕ್ಕೂ ಅನ್ವಯಿಸಬಹುದು: 'ಯದಿಹಾಸ್ತಿ ತದನ್ಯತ್ರ, ಯನ್ನೇಹಾಸ್ತಿ ನ ಕುತ್ರಚಿತ್.'

'ಇದಕ್ಕೆ ಎಷ್ಟು ಖರ್ಚಾಗಿರಬಹುದು?' ಎಂದು ಸ್ಕಿನರ್ ಅವರನ್ನು ಕೇಳಿದೆ. ಅವರು 'ಹೇಳಲಾರೆ. ಬಿಲಿಯನ್ ಆಗಿರಬಹುದು' ಎಂದರು.

ಸ್ಕಿನರ್ ಯಾವ ಸ್ಟೋರಿನಲ್ಲಿ ವ್ಯವಹಾರ ಇಟ್ಟುಕೊಂಡಿದ್ದರೋ ಅದರ ಮುಖ್ಯಸ್ಥನನ್ನು ನನಗೆ ಪರಿಚಯ ಮಾಡಿಕೊಟ್ಟರು. ಆತ ಎರಡನೆಯ ಮಹಾಯುದ್ಧದ ಕಾಲದಲ್ಲಿ ಅಮೆರಿಕನ್ ನೌಕಾದಳದ ಸರಬರಾಜು ಶಾಖೆಯಲ್ಲಿದ್ದನಂತೆ, ಕರಾಚಿ ಬೊಂಬಾಯಿಗಳಿಗೆ ಬಂದಿದ್ದನಂತೆ. ಸುಮಾರು 65 ವರ್ಷದವನು. ಅನುಕೂಲ ಸ್ಥಿತಿಯಲ್ಲಿರುವವರ ಮುಖದಲ್ಲಿ ಸಾಮಾನ್ಯವಾಗಿ ಕಾಣಬಹುದಾದ ಆತ್ಮವಿಶ್ವಾಸದ ಜೊತೆಗೆ ಒಂದು ಬಗೆಯ quizzical ಹಾಸ್ಯ ಪ್ರವೃತ್ತಿಯೂ ಕಾಣುತ್ತಿತ್ತು. ಸಾಮಾನ್ಯವಾಗಿ ಅಮೆರಿಕನ್ನರು ಬಟ್ಟೆಬರೆಯ ವಿಷಯದಲ್ಲಿ ಹೇಗೆಂದರೆ ಹಾಗೆ. ಆದರೆ ಈತ ಆ ವಿಷಯದಲ್ಲಿ ಬಹಳ ಎಚ್ಚರಿಕೆ ವಹಿಸಿದ್ದಂತೆ ತೋರಿತು. ಅಸಿಧಾರೆಯ ಹಾಗೆ ಕಾಣುವಂತೆ ಇಸ್ತ್ರಿಮಾಡಿದ ಅನವದ್ಯವಾದ ಸೂಟು, ಟೈ, ಪಿನ್, ಇತ್ಯಾದಿ. ಅವನ ವ್ಯಾಪಾರಕ್ಕೆ(ಬಟ್ಟೆವ್ಯಾಪಾರ) ಇದೆಲ್ಲ ಆವಶ್ಯಕವೇನೊ.

ಆತ ನನ್ನನ್ನು ಮಾತಿಗೆ ಎಳೆದ: 'ನಮ್ಮ ರಾಜಕೀಯದ ವಿಷಯ ನೀವು ವೃತ್ತಪತ್ರಿಕೆಗಳಲ್ಲಿ ಓದುತ್ತಿದ್ದೀರಲ್ಲವೆ? ವಾಟರ್‌ಗೇಟ್ ಪ್ರಸಂಗ, ಗವರ್ನರ್ ವಾಕರ್ ಮತ್ತು ಮೇಯರ್ ಡೇಲಿ ಇವರ ವಾದವಿವಾದಗಳು—ನಿಮ್ಮ ಅಭಿಪ್ರಾಯವೇನು?

'ನನ್ನ ಅಭಿಪ್ರಾಯ...ಈಗ ನಾನು ನಿಮ್ಮ ದೇಶದ ಅತಿಥಿಯಾಗಿದ್ದೇನೆ ಎಂದುಕೊಳ್ಳಬಹುದು. ನಮ್ಮ ಮನೆಯ ಹತ್ತಿರ ಇರುವ ಜನಸಾಮಾನ್ಯರಿಂದ ನನಗೆ ಆದರ ದೊರೆತಿದೆ. ಅದಲ್ಲದೆ ರಾಜಕೀಯದಲ್ಲಾಗಲಿ ವ್ಯಾಪಾರೋದ್ಯಮಗಳಲ್ಲಾಗಲಿ ಉನ್ನತಸ್ಥಾನದಲ್ಲಿರುವವರ ವಿಷಯ ನಮಗೇನು ಗೊತ್ತಾಗುತ್ತದೆ? wheels within wheels. ವೃತ್ತಿ ಪತ್ರಿಕೆಗಳಲ್ಲಿ ಬಂದಷ್ಟು ಮಾತ್ರ ಬಲ್ಲೆ. ನಿಮ್ಮವರೇ 'ನಿರ್ಣಯ ಕಷ್ಟ' ಎನ್ನುತ್ತಾರೆ. ಹೀಗಿರುವಾಗ ನಾನು ಅಭಿಪ್ರಾಯ ಕೊಡಲೇಬಾರದು.

'ಕೊಡುವುದಕ್ಕೆ ಇಷ್ಟವಿಲ್ಲ ಅಂತ ಸ್ಪಷ್ಟವಾಗಿ ಹೇಳಿಬಿಡಿ! ನೀವು ಆ ವಿಷಯ ಮಾತಾಡುವುದಿಲ್ಲ ಅಂದರೆ ಅದೇ ನನ್ನ ಪ್ರಶ್ನೆಗೆ ಉತ್ತರವಾಯಿತು! ನಾವಾದರೆ ಏನು ಮಾಡುತ್ತೇವೆ ಗೊತ್ತೆ? ಇಲ್ಲಿಂದ ಬೊಂಬಾಯಿಗೆ, ಅಲ್ಲಿಂದ ದಿಲ್ಲಿಗೆ ಕಲ್ಕತ್ತಕ್ಕೆ ವಿಮಾನದಲ್ಲಿ ಹಾರಿ ಬರುತ್ತೇವೆ. ಟ್ಯಾಕ್ಸಿಯಲ್ಲಿ ತಿರುಗುತ್ತೇವೆ, ನಿಮ್ಮ ಸರ್ಕಾರವೇ ನಮ್ಮನ್ನು ಸುತ್ತಿಸಬಹುದು. ಇಲ್ಲಿ ಅಲ್ಲಿ ಕ್ಯಾಮರಾ ಕ್ಲಿಕ್ಕಿಸುತ್ತೇವೆ. ಅಮೆರಿಕನ್ ಎಂಬಸಿಯಲ್ಲಿ ಹರಟೆ ಹೊಡೆದು ಹದಿನೈದು ದಿನವಾದ ಮೇಲೆ ಮರಳಿ ಬಂದು 'life in India—seen from inside' ಎಂದು ಪುಸ್ತಕ ಬರೆದು ಬಿಡುತ್ತೇವೆ.

'ನಾನೂ ಹಾಗೆ ಮಾಡುವುದಿಲ್ಲ ಎಂದು ಭರವಸೆ ಕೊಡಲಾರೆ!'

'ಬರೆಯಿರಿ, ಬರೆಯಿರಿ. ನಮ್ಮನ್ನು ಚೆನ್ನಾಗಿ ಹೊಗಳಿ. ಅಮೆರಿಕನ್ನರು ಎಷ್ಟು ಹೊಗಳಿಕೆಯನ್ನಾದರೂ ಜೀರ್ಣಿಸಿಕೊಳ್ಳಬಲ್ಲರು ಅಮೆರಿಕದಲ್ಲಿ ಎಲ್ಲ ಬೃಹತ್ಪ್ರಮಾಣದ್ದು, Grab ಕೂಡ ಬೃಹತ್ಪ್ರಮಾಣದ್ದು ಅಂತ ಬರೆಯಿರಿ!'

'Grab ಮಾಡುವ ಇಚ್ಛೆಯಲ್ಲಿ ನಾವೇನೂ ಹಿಂದೆ ಬಿದ್ದಿಲ್ಲ (ನಾನು ಮನಸ್ಸಿನಲ್ಲೇ ಅಂದುಕೊಂಡೆ: 'The spirit indeed is willing; but the flesh is weak ಎಂದು) ನಾವು ನಿಮ್ಮೊಡನೆ ಸ್ಪರ್ಧೆ ಹೂಡುತ್ತೇವೆ.

'He who dines with the devil must have a long spoon!'

ಮಧ್ಯಾಹ್ನ ನಾಲ್ಕು ಘಂಟೆಯ ಹೊತ್ತಿಗೆ ಸ್ಕಿನರ್ ಅವರೊಡನೆ ಇನ್ನೊಂದು ಒಬ್ಬೆ ಹರಟೆ ನಡೆಯಿತು. ಅವರು ತಮ್ಮ ಮತದಲ್ಲೂ ಬೈಬಲ್‌ನಲ್ಲೂ (ಬೈಬಲ್ ಎಂದರೆ ಯೆಹೂದ್ಯರ ಪುಟ್ಟಗಿ ಹಳೆಯ ಒಡಂಬಡಿಕೆ—'The old testament.') ಅಚಲವಾದ ನಂಬಿಕೆಯಿಟ್ಟಿದ್ದಾರೆ. ನಮ್ಮಲ್ಲಿ ಕೆಲವರು ಯಾವುದಾದರೂ ಸಂದರ್ಭದಲ್ಲಿ ಹೇಗೆ ನಡೆಯಬೇಕು ಎಂಬ ಪ್ರಶ್ನೆ ಬಂದರೆ, ಅದಕ್ಕೆ ಉತ್ತರವನ್ನು ಶ್ರೀಮದ್ರಾಮಾಯಣದಲ್ಲಿ ಹುಡುಕುವುದುಂಟು. ಆ ಪುಸ್ತಕವನ್ನು ತೆಗೆದು ಮೊದಲು ಯಾವ ಪುಟ ಕಣ್ಣಿಗೆ ಬೀಳುತ್ತೋ ಅದನ್ನು ಓದಿ ಮೊದಲು ಕಾಣುವ ವಾಕ್ಯ ಸೂಚಿಸಿದಂತೆ ನಡೆಯುವುದು—'ಗಮನಾಯ ಮತಿಂ ಕೃತ್ವಾ' ಎಂಬ ಮಾತು ಕಣ್ಣಿಗೆ ಬಿದ್ದರೆ ಅವತ್ತು ಪ್ರಯಾಣಕ್ಕೆ ಒಳ್ಳೆಯ ದಿನ ಎಂದುಕೊಂಡು ಹೊರಡುವುದು. ಕ್ರೈಸ್ತರಲ್ಲಿ ಕೆಲವರು ಬೈಬಲ್ಲನ್ನೂ ಹೀಗೆ ಉಪಯೋಗಿಸುತ್ತಾರೆಂದು ಕೇಳಿದ್ದೇನೆ. ಸ್ಕಿನರ್ ಅವರಲ್ಲಿ ಇಂಥ ಅಂಧವಿಶ್ವಾಸವೇನೂ ಇಲ್ಲ. ಆದರೆ ಬೈಬಲ್ ಬೋಧಿಸುವ ನೀತಿ (ಉದಾ: ದೇವರು ಮೋಶೆಗೆ ಕೊಟ್ಟ ದಶಾಜ್ಞೆಗಳು—The ten commandments) ಅದು ಪ್ರಚೋದಿಸುವ ದೈವಶ್ರದ್ಧೆ, ಅದರಲ್ಲಿ ಕಾಣುವ ಜೀವನಾದರ್ಶ, ಇವನ್ನೆಲ್ಲ ಅವರು ಮೆಚ್ಚುತ್ತಾರೆ. 'ಈಗ ನಾವೆಲ್ಲ ಕೆಟ್ಟಿರುವುದು ಬೈಬಲ್ಲನ್ನು ಮರೆತಿರುವುದರಿಂದ. ಇಂದಿನ ಪ್ರಪಂಚದ ರೋಗಕ್ಕೆಲ್ಲ ಬೈಬಲ್ ಸಿದ್ಧೌಷಧ' ಎಂದರು. ಕೂಡಲೆ ನನಗೆ ಅಸಮಾಧಾನವಾದೀತೆಂಬ ಶಂಕೆಯಿಂದ 'ನಿಮ್ಮ ಅಥವಾ ಇತರರ ಮತಗಳನ್ನು ಕಡೆಗಣಿಸುತ್ತಿದ್ದೇ

ನೆಂದು ಭಾವಿಸಬೇಡಿ. ನನಗೆ ನಿಮ್ಮ ಮತದ ವಿಷಯ ಏನೇನೂ ಗೊತ್ತಿಲ್ಲ. ನನ್ನ ಮತ ನನಗೆ ಸ್ವಲ್ಪ ತಿಳಿದದ್ದಾದ್ದ ರಿಂದ ಆ ಮಾತಾಡಿದೆ, ಅಷ್ಟೆ' ಎಂದರು. ಇತರರ ಮನಸ್ಸನ್ನು ನೋಯಿಸಬಾರದು ಎಂಬ ಪ್ರವೃತ್ತಿಯನ್ನು ನಾನು ಮೆಚ್ಚಿದೆ.

ಕೆಲವು ದಿನಗಳ ಹಿಂದೆ ಬ್ರೆಜ್‌ನೆವ್ ಅಮೆರಿಕಕ್ಕೆ ಭೇಟಿಕೊಟ್ಟಿದ್ದರು. ಆದ್ದರಿಂದ ಸ್ವಾಭಾವಿಕವಾಗಿಯೇ ರಷ್ಯದಲ್ಲಿ ಯೆಹೂದ್ಯರು ಅನುಭವಿಸುತ್ತಿರುವ ಕಷ್ಟನಿಷ್ಠುರಗಳ ಮಾತು ಬಂತು. ಅಮೆರಿಕದಲ್ಲೂ ಯೆಹೂದ್ಯರ ವಿಷಯದಲ್ಲಿ ಸಹಾನುಭೂತಿ ಸಾಲದು ಎಂಬ ಅಭಿಪ್ರಾಯವೂ ಬಂತು. ಇಸ್ರಯೇಲ್‌ನ ಮಾತು ಬರದಿರುವುದಂತೂ ಅಸಾಧ್ಯವಷ್ಟೆ. ಅವರು ಭಾರತೀಯರಿಗೆ ಇಸ್ರೆಯಲ್ ವಿಷಯದಲ್ಲಿ ಸಾಕಾದಷ್ಟು ಸಹಾನುಭೂತಿಯಿಲ್ಲ ಎಂದು ಕೊಂಡಿರಬಹುದಾದರೂ ಅದರ ಮಾತನ್ನೆತ್ತಲಿಲ್ಲ. ಸಂದಿಗ್ಧವಾಗಿ ಲೋಕ ಸಾಮಾನ್ಯವಾದ ಮಾತಾಡಿದಂತೆ 'politics...a very complicated business, gives us strange bedfellows' ಎಂದರು. ಅವರ ಒಲವು ಎತ್ತಕಡೆಗೆ ಎನ್ನುವುದು ಸ್ಪಷ್ಟವಾಗಿಯೇ ಇತ್ತು :

'ನಾವು ಬಹಳ ಕಷ್ಟಪಟ್ಟ ಜನ. ಈಗಲೂ ಕಷ್ಟಪಡುತ್ತಿದ್ದೇವೆ. ಯೆಹೂದ್ಯರ ಚರಿತ್ರೆಯ ವಿಷಯ ನೀವು ಓದಿರಬಹುದು,' ಎಂದರು.

'ಸ್ವಲ್ಪಮಟ್ಟಿಗೆ ಓದಿದ್ದೇನೆ. ಯೂರೋಪಿನಲ್ಲಿ ಬಹು ಹಿಂದಿನ ಕಾಲದಿಂದಲೂ ಯೆಹೂದ್ಯರು ಎಂಥ ಪಾಡುಪಟ್ಟರೆಂದು ಬಲ್ಲೆ. ಅದಕ್ಕೆ ಕಾರಣವೇನು ಎಂಬುದು ಸರಿಯಾಗಿ ಅರ್ಥವಾಗಿಲ್ಲ. ಅವರು ಯೇಸುವನ್ನು ಶಿಲುಬೆಗೆ ಹಾಕಿದರು ಎಂಬ ಭಾವನೆಯೆ ?'

'ಯೇಸುವನ್ನು ಶಿಲುಬೆಗೆ ಹಾಕಿದವರು ನಾವಲ್ಲ !'

'ಅದಕ್ಕೆ ನಾನು 'ಭಾವನೆ' ಎಂಬ ಪದವನ್ನು ಉಪಯೋಗಿಸಿದ್ದು. ಶಿಲುಬೆಗೆ ಹಾಕಿಸಿದ್ದರ ಜವಾಬ್ದಾರಿ ರೋಮನ್ನರ ಮೇಲೆ ಬರಬೇಕಲ್ಲವೆ? ಪಿಲಾತ (pontius pilate) ಯೇಸುವನ್ನು ಕೊಲೆಗಾರರಿಗೆ ಒಪ್ಪಿಸಿದ ಮೇಲೆ ನೀರು ತರಿಸಿ ಕೈ ತೊಳೆದುಕೊಂಡ ಮಾತ್ರಕ್ಕೆ ಅವನಾಗಲಿ ರೋಮನ್ನರಾಗಲಿ ಪಾಪದಿಂದ ಮುಕ್ತರಾಗಲಿಲ್ಲ.'

'ನಿಜ. ಆದರೂ ನೋಡಿ, ಯೂರೋಪಿನವರೆಲ್ಲ ರೋಮನ್ ನಾಗರಿಕತೆಯನ್ನು ಮೆಚ್ಚುತ್ತಾರೆ. ಅವರು ದ್ವೇಷಿಸುವುದು ಅಪರಾಧಿಗಳನ್ನಲ್ಲ, ನಮ್ಮನ್ನು !'

'ಯೂರೋಪಿಯನ್ನರು ರೋಮನ್ ನಾಗರಿಕತೆಯನ್ನು ಮೆಚ್ಚುವುದಕ್ಕೇನೊ ಕಾರಣ ಹೇಳಬಹುದು ; ಇತರ ಕಾರಣಗಳ ಜೊತೆಗೆ ಮತೀಯ ಕಾರಣವನ್ನು ಕೂಡ ಹೇಳಬಹುದು. ರೋಮ್ ಮೊದಮೊದಲು ಕ್ರೈಸ್ತರಿಗೆ ಚಿತ್ರಹಿಂಸೆ ಕೊಟ್ಟು, ಅವರನ್ನು ಕೊಂದು, ಎಲ್ಲ ಮಾಡಿದರೂ ಆಮೇಲೆ ಅದೇ ಕ್ರೈಸ್ತಮತದ ಕೇಂದ್ರವಾಯಿತಷ್ಟೆ. ಕ್ರೈಸ್ತಮತ ಕವಲೊಡೆದು ಪ್ರಾಟೆಸ್ಟೆಂಟ್ ಶಾಖೆ ಹುಟ್ಟುವವರೆಗೂ ರೋಮ್ ಎಲ್ಲ ಕ್ರೈಸ್ತರಿಗೂ 'ಹೋಲಿ ಲ್ಯಾಂಡ್'ನಷ್ಟೇ ಪವಿತ್ರವಾಯಿತು, Eternal cityಯ ಪಟ್ಟವನ್ನು ಗಳಿಸಿತು. ರೋಮನ್ ನಾಗರಿಕತೆ ಕೂಡ–ಅದರ ದೋಷಗಳನ್ನು ಮರೆಯದಿದ್ದರೂ—ಹೊಗಳಿಸಿಕೊಳ್ಳಬಹುದಾದದ್ದು. The glory that was Greece and the grandeur that was Rome ಎಂಬ ಮಾತು ನಿಮಗೆ ಪರಿಚಯವಾದದ್ದೇ ಇರಬೇಕು. ನನಗೆ ಗ್ರೀಸ್ ಕಡೆಗೆ ಒಲವು ಹೆಚ್ಚು. ಆದರೆ ರೋಮ್‌ನಲ್ಲಿ grandeur ಇತ್ತೆಂದು ಒಪ್ಪಬೇಕು. ಕ್ರಿಸ್ತಪೂರ್ವದ grandeur ಜೊತೆಗೆ ಆಮೇಲೆ gloryಯು ಬಂತಲ್ಲ-ದಾಂತೆ, ಮೈಕಲೇಂಜಲೊ, ಲಿಯನಾರ್ಡೊ ಡವಿಂಚಿ....'

'ಹೌದು ಆ gloryಯ ಹಿಂದಿದ್ದ ದಿವ್ಯ ಪ್ರೇರಕಶಕ್ತಿ ಕ್ರೈಸ್ತಮತದ್ದು; ಒಪ್ಪಲೇ ಬೇಕು.'

'ಕ್ರೈಸ್ತಮತದ ವಿಷಯದಲ್ಲಿ ಬಹಳ ಒಳ್ಳೆಯ ಮಾತನಾಡಿದಿರಿ. ನಿಮ್ಮದು ಉದಾರಹೃದಯ.'

'ವಂದನೆ'

‘ಆದರೆ ‘ಆ ಪ್ರೇರಕಶಕ್ತಿಯಲ್ಲಿ ಒಂದು ಭಾಗ ನಮ್ಮದು’ ಎಂದು ನೀವು (ಅಂದರೆ ಯೆಹೂದ್ಯರು) ಹೇಳಬಹುದಲ್ಲವೆ? ‘The last supper’, ಮಡೋನಾ (Madonna) ಚಿತ್ರಗಳು ಇವು ಮಾತ್ರವಲ್ಲದೆ ‘Moses’ ನಂಥ ಕೃತಿಗಳೂ ಇವೆಯಲ್ಲ? ಅವಕ್ಕೆ ಪ್ರೇರಣೆ ಬಂದಷ್ಟು ಹಳೆಯ ಒಡಂಬಡಿಕೆ (The old Testament)ಯಿಂದ ತಾನೆ.’

‘ನಿಜ. ನೀವು ರೋಮ್‌ಗೆ ಹೋಗಿದ್ದೀರ? ನಾನು ಹೋಗಿಯೇ ಇಲ್ಲ. ವ್ಯಾಪಾರಕ್ಕಾಗಿ ಸುತ್ತುವುದರಲ್ಲೇ ಕಾಲ ಕಳೆಯುತ್ತಿದೆ.

‘ನಾನೂ ಹೋಗಿಲ್ಲ. ಆ ಕೃತಿಗಳ ಫೋಟೋ ನೋಡಿದ್ದೇನೆ, ಅಷ್ಟೆ. ಮೋಶೆಯ ಚಿತ್ರವನ್ನು ನೋಡಿದಾಗ ನನಗೊಂದು ವಿಚಿತ್ರ ಅನುಭವವಾಯಿತು. ಅದು ನಮ್ಮ ಬೃಹತ್‌ಕೃತಿಯಾದ ಮಹಾಭಾರತವನ್ನು ಬರೆದ— ಅಥವಾ ಬರೆದನೆಂದು ನಂಬಲಾದ-ವ್ಯಾಸರನ್ನು ನೆನಪಿಗೆ ತಂದಿತು.*

‘ಸ್ವಲ್ಪ ವಿವರಣೆ ಬೇಕಾಗುತ್ತದೆ.’

‘ಕೊಡುವುದರಲ್ಲಿದ್ದೆ. ಮೋಶೆ, ವ್ಯಾಸ, ಇಬ್ಬರಿಗೂ ತಮ್ಮ ದೇಶದ ಮತ್ತು ಮತಧರ್ಮಗಳ ವಿಷಯದಲ್ಲಿ ಅಪಾರ ಪ್ರೇಮವಿತ್ತು. ಇಬ್ಬರೂ ಮಹೋನ್ನತರು. “ದೇವರು ದಶಾಜ್ಞೆಗಳನ್ನು ಕೊಟ್ಟ; ಆತ ಅವನ್ನು ಯೆಹೂದ್ಯರಿಗೆ ಕೊಟ್ಟ” ಎಂದು ನೀವು ನಂಬುತ್ತೀರಿ. ಅದನ್ನು ಯೆಹೂದ್ಯರಲ್ಲದ ನಾವು ಬೇರೆ ರೀತಿಯಲ್ಲಿ ಅರ್ಥ ಮಾಡಿಕೊಳ್ಳುತ್ತೇವೆ-ಆತನಲ್ಲಿದ್ದ ದೈವೀಶಕ್ತಿ ಆ ಆಜ್ಞೆಗಳನ್ನು ಹೊರಡಿಸಿತು ಎಂದು. ನಮ್ಮಲ್ಲಿ ವ್ಯಾಸರು ವೇದಗಳನ್ನು ವಿಂಗಡಿಸಿದರು ಎಂಬ ನಂಬಿಕೆಯಿದೆ. ಆದರೆ ನನ್ನ ಮನಸ್ಸಿಗೆ ಬಂದ ಸಾಮ್ಯ ಇದೊಂದು ಅಲ್ಲ. ಇವರಿಬ್ಬರಿಗೂ ತಮ್ಮ ಜನರ ವಿಷಯದಲ್ಲಿ ಪ್ರೇಮದ ಜೊತೆಗೆ ಅಸಮಾಧಾನವೂ ಇತ್ತು–ಅದನ್ನು ರೋಷ ಎಂದೇ ಕರೆಯಬಹುದೇನೋ. ಯೇಸುಕ್ರಿಸ್ತ ‘Oh faithless and perverse generation ! How long shall I be with you’ ಎಂದಾಗ ಆತನ ಮನಸ್ಸಿನಲ್ಲೂ ಇಂಥದೇ ಭಾವವಿದ್ದಿರಬೇಕು. ನಮ್ಮ ವ್ಯಾಸ ‘ಧರ್ಮದಿಂದಲೇ ಅರ್ಥ, ಧರ್ಮದಿಂದಲೇ ಕಾಮ. ಅದನ್ನೇಕೆ ಜನ ಅನುಸರಿಸುವುದಿಲ್ಲ ಎಂದು ನಾನು ತೋಳನ್ನು ಆಕಾಶಕ್ಕೆತ್ತಿ ಕೂಗುತ್ತಿದ್ದೇನೆ; ಕೇಳುವವರು ಗತಿಯಿಲ್ಲ !’ ಎಂದು ತನ್ನ ನಿರಾಶೆಯನ್ನೂ ಜುಗುಪ್ಸೆಯನ್ನೂ ಹೊರಗೆಡವಿದ. ಮೈಕಲೇಂಜಲೋವಿನ ‘ಮೋಶೆ’ಯ ಮುಖದಲ್ಲಿ ಇದೇ ಜಗುಪ್ಸೆ, ನಿರಾಶೆ, sternness ಕಾಣುತ್ತದೆ.’

‘ಮೋಶೆಯ ಮನಸ್ಸಿನಲ್ಲಿ ಆ ಭಾವವಿತ್ತೆಂದು ಬೈಬಲ್‌ನಿಂದ ಸ್ಪಷ್ಟವಾಗುತ್ತದೆ. ಆ ಮಟ್ಟದಲ್ಲಿರುವವರಲ್ಲಿ ಕೂಡ ಜನ ಸಾಮಾನ್ಯದ ವಿಷಯದಲ್ಲಿ ಅಸಹನೆ, ಜುಗುಪ್ಸೆ, ನಿರಾಶೆ, ಕೋಪ ಇವೆಲ್ಲ ಕೆರಳಿದರೆ ಆಶ್ಚರ್ಯವಲ್ಲ. ಅದಕ್ಕೆ ಕಾರಣ ನಮ್ಮ ಕೊನೆಮೊದಲಿಲ್ಲದ ದೌರ್ಬಲ್ಯ, ಹುಚ್ಚುತನ, ಪಾಶವೀವೃತ್ತಿ. ಇವನ್ನೆಲ್ಲ ಕಂಡೂ ಅವರು ತಮ್ಮ ರೋಷವನ್ನು ತಡೆಹಿಡಿದು ಲೋಕೋಪಕಾರಮಾಡಿದ್ದು ಅವರ ದೊಡ್ಡತನ.

‘ನಿಜ, ಮಿ. ಸ್ಕಿನರ್. ಮೋಶೆ ಸ್ವತಃ ಸುಖಪಡಲಿಲ್ಲ. ತನ್ನ ಜನರನ್ನು promised land ಕಡೆಗೆ ನಡಸಿದನೇ ಹೊರತು ತಾನು ಆ ಪುಣ್ಯಭೂಮಿಯನ್ನು ನೋಡಲೇ ಇಲ್ಲ ! ಇದು ಅರ್ಥಪೂರ್ಣವಾದದ್ದು.’

ಸ್ಕಿನರ್ ಸಂಭಾಷಣೆಯನ್ನು ಮತ್ತೆ ಯೆಹೂದ್ಯರ ಕಷ್ಟಸುಖಗಳ ಕಡೆಗೆ ಎಳೆದರು :

‘ಯೂರೋಪಿನವರು ರೋಮ್‌ನ grandeur ಅನ್ನು ಜೀರ್ಣಿಸಿಕೊಂಡಂತೆ ರೋಮ್‌ನ ಕ್ರೌರ್ಯವನ್ನು ಅರೆದುಹೊಯ್ದುಕೊಂಡರು, ರೋಮ್‌ನವರು ಕ್ರೈಸ್ತರಿಗೆ ಮಾಡಿದ ಅನ್ಯಾಯಕ್ಕಿಂತ ಹತ್ತುಪಾಲು ಹೆಚ್ಚು ಅನ್ಯಾಯವನ್ನು ಅವರು ಯೆಹೂದ್ಯರಿಗೆ ಮಾಡಿದರು. ಯೆಹೂದ್ಯರು ಮನುಷ್ಯರೇ ಅಲ್ಲ ಎಂಬಂತೆ ನಡೆದುಕೊಂಡರು.’

---

* ಈ ಹೋಲಿಕೆಯ ವಿಷಯ ತೀ. ನಂ. ಶ್ರೀಕಂಠಯ್ಯ ಮತ್ತು ನಾನು ಮಾತಾಡಿದ್ದರ ನೆನಪಿದೆ. ಆದರೆ ಅದು ನಮ್ಮಿಬ್ಬರಲ್ಲಿ ಯಾರ ಮನಸ್ಸಿಗೆ ಮೊದಲು ಹೊಳೆಯಿತೋ ಖಚಿತವಾಗಿ ಹೇಳಲಾರೆ. ಅದು ಮುಖ್ಯವೂ ಅಲ್ಲ.

'ಅಪರೂಪಕ್ಕೆ (rarely) ಒಂದೊಂದು ಸಾರಿ ಬೇರೆ ದನಿ—Hath not a jew eyes—if you prick us do we not bleed ? ಇಂಥ ಮಾನವೀಯತೆಯ ದನಿ ಕೇಳಿ ಬರುತ್ತದೆ. The accent is on rarely'

'ನಾನು 'The Merchant of Venice' ಓದಿದ್ದೇನೆ. ಷೇಕ್ಸ್‌ಪಿಯರ್‌ಗೆ ಯೆಹೂದ್ಯರ ವಿಷಯದಲ್ಲಿ ಹೆಚ್ಚು ಸಹಾನುಭೂತಿಯಿತ್ತೆಂದು ಹೇಳಲಾರೆ.'

'ಒಪ್ಪಿದೆ, ಆದರೆ ಅಂದಿನ ವಾತಾವರಣದಲ್ಲಿ ಅವನು ಷೈಲಾಕ್ ಬಾಯಿಂದ ಆ ಮಾತನ್ನಾಡಿಸಿದ್ದು ಆಶ್ಚರ್ಯ. ಅದು ಷೈಲಾಕ್‌ನ ಪಾತ್ರಕ್ಕೆ ಉಚಿತವಾದ ಮಾತು, ಅಷ್ಟೆ, ಎನ್ನಬಹುದು. ಆದರೂ ಅದನ್ನು ಬರೆದ ಘಳಿಗೆಯಲ್ಲಾದರೂ ಕವಿಯ ಸಹಾನುಭೂತಿ ಷೈಲಾಕನ ಕಡೆಗೇ ಇತ್ತು ಎಂದು ನನಗೆ ತೋರುತ್ತೆ.'

'ಇರಬಹುದು. ನಾನು ಆ ನಾಟಕವನ್ನು ಅಷ್ಟೇನೂ ಸೂಕ್ಷ್ಮವಾಗಿ ಪರಿಶೀಲಿಸಿಲ್ಲ....ನಿಮ್ಮನ್ನು ಒಂದು ಪ್ರಶ್ನೆ ಕೇಳೋಣ ಎನ್ನಿಸುತ್ತದೆ. ಆದರೆ ನಿಮಗೆ ಅಸಮಾಧಾನವಾದೀತೇನೊ ಎಂಬ ಶಂಕೆ.

'ಧಾರಾಳವಾಗಿ ಕೇಳಿ. ಪ್ರಶ್ನೆ ಏನೇ ಆಗಲಿ, ನಿಮ್ಮ bona fides ನಲ್ಲಿ ನನಗೆ ವಿಶ್ವಾಸವಿದೆ.

'ನನಗೆ ಇಂಡಿಯದ ವಿಷಯ ಏನೇನೂ ಗೊತ್ತಿಲ್ಲ. ಷೇಕ್ಸ್‌ಪಿಯರ್ ನಾಟಕ ಪ್ರಸಿದ್ಧವಾದದ್ದು, ನೀವು ಕಾಲೇಜಿನಲ್ಲಿ ಓದಿರಬೇಕು ಎಂದುಕೊಂಡೆ. ಆದರೆ ಬೈಬಲ್ ವಿಷಯ ಕೂಡ ನೀವು ಧಾರಾಳವಾಗಿ ಮಾತಾಡಿದಿರಿ. ಇದೆಲ್ಲದರ ಪರಿಚಯ ಹೇಗಾಯಿತು ? ಭಾರತೀಯರೆಲ್ಲ ಅಜ್ಞರು, ಅವರಲ್ಲಿ ತಿಳಿವಳಿಕೆ ಕಂಡುಬಂದರೆ ಆಶ್ಚರ್ಯ ಎಂಬ ಭಾವನೆಯಿಂದ ಬಂದದ್ದಲ್ಲ, ನನ್ನ ಪ್ರಶ್ನೆ.'

'ನಿಮ್ಮ ವಿಷಯದಲ್ಲಿ ಆ ಮಾತನ್ನು ಒಪ್ಪುತ್ತೇನೆ. ಆದರೆ ಪಾಶ್ಚಾತ್ಯರಲ್ಲಿ ಅನೇಕರು ಭಾರತೀಯರ ವಿಷಯದಲ್ಲಿ ನೀವು ಹೇಳಿದಂತೆ ಭಾವಿಸುವುದುಂಟು. ವಾಸ್ತವವಾಗಿ ನೋಡಿದರೆ ಈ ಭಾವನೆ ವಿಚಿತ್ರ. ನನಗೆ ಇಂಗ್ಲಿಷ್ ಬರುವುದಿಲ್ಲ ಎಂದಿಟ್ಟುಕೊಳ್ಳಿ—ಷೇಕ್ಸ್‌ಪಿಯರ್‌ನ ಮತ್ತು ಬೈಬಲ್ಲಿನ ಪರಿಚಯ ನನಗಿಲ್ಲ ಎಂದಿಟ್ಟುಕೊಳ್ಳಿ. ನನ್ನಲ್ಲಿ ಅದೊಂದು ಕೊರತೆ ಎನ್ನಬೇಕಾದರೆ ಎಲ್ಲಮಾನವರೂ ಎಲ್ಲವಿಷಯಗಳಲ್ಲೂ ಪೂರ್ಣಪ್ರಜ್ಞರಾಗಬೇಕು ಎಂಬ ಆದರ್ಶದ ದೃಷ್ಟಿಯಿಂದ ಮಾತ್ರ. ಅದು ಕನಸು. ಆದ್ದರಿಂದ ಮೇಲೆ ಹೇಳಿದ ಪರಿಚಯದ ಅಭಾವ ನನ್ನಲ್ಲಿ 'ದೋಷ' ಎಂದೇಕೆ ಭಾವಿಸಬೇಕು? ಇಂಗ್ಲಿಷರಿಗೆ ಕನ್ನಡ ಬರುವುದಿಲ್ಲ; ಅವರಿಗೆ ಭಾರತದ ಪ್ರಸಿದ್ಧ ಕವಿ ಕಾಳಿದಾಸನ ಪರಿಚಯವಿಲ್ಲ; ಅವರು ವೇದಾಧ್ಯಯನ ಮಾಡಿಲ್ಲ. ಈ ಕಾರಣಕ್ಕಾಗಿ ಅವರನ್ನು ನಿಕೃಷ್ಟರು ಎನ್ನಬಹುದೆ? ಪಾಶ್ಚಾತ್ಯರ ಮನಸ್ಸಿನಲ್ಲಿ 'ನಮ್ಮ ನಾಗರಿಕತೆ ದೊಡ್ಡದು, ಅದನ್ನು ತಿಳಿಯದವನು ಕೀಳು. ಇತರರ ನಾಗರಿಕತೆ... ಅದನ್ನು ತಿಳಿದುಕೊಳ್ಳದಿದ್ದರೆ ನಷ್ಟವೇನಿಲ್ಲ' ಎಂಬ ಭಾವನೆ ಅನೇಕ ವೇಳೆ ಕಾಣುತ್ತದೆ. ಇದು ಪಾಶ್ಚಾತ್ಯರಲ್ಲಿ ಸಾಮಾನ್ಯ ಜನರನ್ನು ಕುರಿತು ಹೇಳುವ ಮಾತು. ವಿದೇಶೀಯ ಸಂಸ್ಕೃತಿಯ ಅಧ್ಯಯನಕ್ಕಾಗಿ ಜೀವನವನ್ನು ಮುಡುಪಾಗಿಟ್ಟ ಸಾವಿರಾರು ಪಾಶ್ಚಾತ್ಯಜನರಿದ್ದಾರೆ. ಇದನ್ನು ನಾನು ಮರೆತಿಲ್ಲ'.

'ನೀವು ಹೇಳಿದ್ದು ನಿಜ. ಇತರರ ಸಂಸ್ಕೃತಿಯನ್ನು ತಿಳಿಯುವುದು ಹಾಗಿರಲಿ, ಎಷ್ಟೋ ವೇಳೆ ನಮ್ಮದನ್ನೇ ನಾವು ತಿಳಿದಿರುವುದಿಲ್ಲ.'

'ನಿಮ್ಮ ಮಾತಿಗೆ ಸಾಕ್ಷಿಯಾಗಿ ನನ್ನ ಆಪ್ತಮಿತ್ರರೊಬ್ಬರ ಅನುಭವವನ್ನು ಹೇಳುತ್ತೇನೆ. ಅವರು ಇಂಗ್ಲೆಂಡಿನಲ್ಲಿದ್ದಾಗ ಒಂದುಸಲ ಕಾಲುನಡಗೆಯ ಪ್ರವಾಸ ಹೊರಟರು. ಅವರ ಜೊತೆಗೆ ಒಬ್ಬ ಆಂಗ್ಲನಿದ್ದ—ಸ್ನೇಹಿತನಲ್ಲ, ಅಕಸ್ಮಾತ್ ಪರಿಚಯವಾದವನು. ದಾರಿಯಲ್ಲಿ 'ನೆದರ್ ಸ್ಟೋಯಿ' ಎಂಬ ಬೋರ್ಡು ಕಾಣಿಸಿತು. ಆಗ ನನ್ನ ಮಿತ್ರ ಆಚಾರ್ಯರು 'ಕೋಲ್‌ರಿಜ್‌ನ್ ನೆನಪು ತರುತ್ತದೆ' ಎಂದರು. ಆಂಗ್ಲ 'ಆತ ಯಾರು ? ನಿಮ್ಮ ಸ್ನೇಹಿತನೆ ?' ಎಂದು ಕೇಳಿದ !'

'ಅದೂ ಆಶ್ಚರ್ಯವಲ್ಲ, ಅಸ್ವಾಭಾವಿಕವೂ ಅಲ್ಲ.'

'ಸರ್ವಥಾ ನಿಜ. ನಾನಾಗಲಿ ನನ್ನ ಮಿತ್ರರಾಗಲಿ ಈ ವಿಷಯಗಳನ್ನು ತಿಳಿದಿದ್ದೇವೆಂದು ಹೊಗಳಿಕೊಳ್ಳ

ಬೇಕಾಗಿಲ್ಲ. ಅದಕ್ಕೆ ಐತಿಹಾಸಿಕ ಕಾರಣಗಳಿವೆ. ನನ್ನ ಮಟ್ಟಿಗೆ ಹೇಳುವುದಾದರೆ, ನಾನು ಷೇಕ್ಸ್‌ಪಿಯರ್ ಓದಿರುವುದರಲ್ಲಿ ಏನೇನೂ ವಿಶೇಷವಿಲ್ಲ. ಅದು ನನ್ನ ವೃತ್ತಿ. ನಾನು ಮೈಸೂರು ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕನಾಗಿದ್ದೆ ; ಇಂಗ್ಲಿಷ್ ಪಾಠ ಹೇಳುತ್ತಿದ್ದೆ. ಇಂಗ್ಲಿಷ್ ಸಾಹಿತ್ಯವನ್ನು ಓದುವುದರಲ್ಲಿ ಆನಂದವನ್ನೂ ಪಡೆದಿದ್ದೇನೆಂಬುದು ನಿಜ. ಆದರೆ ಅವನ್ನು ಓದದೆ ವಿಧಿಯಿರಲಿಲ್ಲ ಎಂಬುದೂ ನಿಜ. ಬೈಬಲ್ ಓದಿದ್ದಕ್ಕೂ ಇಂಥದೇ ಕಾರಣವಿದೆ. ನಾನು ವೆಸ್ಲಿಯನ್ ಮಿಷನ್ ಸ್ಕೂಲಿನಲ್ಲಿ ಓದಿದವನು ; ಅಲ್ಲಿ ಎಲ್ಲ ತರಗತಿಗಳಲ್ಲೂ ಬೈಬಲ್ ಪಠ್ಯವಿಷಯ. ಅದನ್ನು ಓದಲೇಬೇಕಾಯಿತು.'

'ಇಂಡಿಯದಲ್ಲಿ ನಿಮ್ಮಂಥವರು ವಿರಳ ಎಂದರೆ ಸರಿಯೆ ?'

ಇಲ್ಲ. ವಿಶ್ವವಿದ್ಯಾಲಯಗಳಲ್ಲಿ ಬೇಕಾದಷ್ಟು ಜನ ಇದ್ದಾರೆ. ಮಾತ್ರವಲ್ಲ, ವಿಶ್ವವಿದ್ಯಾಲಯಗಳ ಹೊರಗೂ ಕೇವಲ ಆತ್ಮಸಂತೋಷಕ್ಕಾಗಿ ಇಂಗ್ಲಿಷ್ ಸಾಹಿತ್ಯವನ್ನು ಓದಿ ಚಾಲತಿಯಲ್ಲಿಟ್ಟುಕೊಂಡಿರುವವರು ಅನೇಕರಿದ್ದಾರೆ. ನಮ್ಮ ಶಾಲೆಗಳಲ್ಲಿ ಇಂಗ್ಲಿಷೇ ಮಾಧ್ಯಮವಾಗಿತ್ತು, ನೋಡಿ ! ಆ ಸ್ಥಿತಿ ಈಗಲೂ ಪೂರ್ತಿ ಬದಲಾಯಿಸಿಲ್ಲ. ಅಣ್ಣತಮ್ಮಂದಿರಿಗೆ ಕಾಗದ ಬರೆಯುವಾಗಲೂ ಎಷ್ಟೋ ಜನ ಇಂದಿಗೂ ಇಂಗ್ಲಿಷನ್ನೇ ಬಳಸುತ್ತಾರೆ. ಇಂಥ ಅಪರಾಧಿಗಳಲ್ಲಿ ನಾನೂ ಒಬ್ಬ. ಈಚೆಗೆ ನಮ್ಮ ಕೆಲಸಕಾರ್ಯಗಳಿಗೆಲ್ಲ ನಮ್ಮ ದೇಶದ ಭಾಷೆಯನ್ನೇ ಬಳಸಬೇಕೆಂಬ ಆಗ್ರಹ ಬಲವಾಗಿದೆ. ಹಾಗೆ ಆಗ್ರಹ ಮಾಡುವವರಲ್ಲಿ ನಾನೂ ಒಬ್ಬ.'

ಸ್ಕಿನರ್ ನಕ್ಕು ಕೇಳಿದರು : 'ಇದೇನು ! ಅಪರಾಧಮಾಡುವವರಲ್ಲಿ ನಾನೂ ಒಬ್ಬ ಎಂದಿರಿ ; ಈಗ ಅದಕ್ಕೆ ವಿರುದ್ಧವಾದ ಮಾತು ಹೇಳುತ್ತಿದ್ದೀರಲ್ಲ ?'

'ಡೊಂಕುಬಾಲ ! ಈ ಕ್ಷಣ ಸರಿಪಡಿಸಿಕೊಂಡರೆ ಮುಂದಿನ ಕ್ಷಣ ಮತ್ತೆ ಡೊಂಕಾಗುತ್ತೆ.'

'ಅದಕ್ಕಾಗಿ ಅಷ್ಟೇನೂ ಪರಿತಪಿಸಬೇಕಾಗಿಲ್ಲ, ಬಿಡಿ ! ಎಷ್ಟೇ ಆಗಲಿ ಇಂಗ್ಲಿಷ್ ವಿಶ್ವಭಾಷೆಯಾಗುತ್ತಿದೆ. ಅದರಲ್ಲಿ ಅಪಾರವಾದ ಸಾಹಿತ್ಯವಿದೆ, ಅದರ ಶಬ್ದಭಂಡಾರ ದಿನದಿನಕ್ಕೂ ಹೆಚ್ಚುತ್ತಿದೆ. ನಿಮಗೆ ಅಕಸ್ಮಾತ್ ದೊರೆತಿರುವ ಸೌಕರ್ಯವನ್ನು ಏತಕ್ಕೆ ಬಿಟ್ಟುಕೊಡಬೇಕು ? ಈಗ ನಾನು ಹೀಬ್ರ್ಯೂ ಮಾತಾಡುತ್ತೇನೆಯೆ ? ಎಲ್ಲ ಕೆಲಸಕ್ಕೂ ಇಂಗ್ಲಿಷನ್ನೇ ಬಳಸುತ್ತೇನೆ. ನಾನಿರುವುದು ಅಮೆರಿಕದಲ್ಲಿ. ನನ್ನ ಜೀವನ ನಡೆಯುತ್ತಿರುವುದು ಅಮೆರಿಕನ್ನರ ಸಹಕಾರದಿಂದ. ಇಂಗ್ಲಿಷನ್ನೇ ಬಳಸಬೇಕಾದದ್ದು ನನ್ನ ಕರ್ತವ್ಯ ಎಂದರೂ ಎನ್ನಬಹುದು.'

'ನ್ಯಾಯವೇ. ನಾವು ಇಂಗ್ಲಿಷನ್ನು ವಿರೋಧಿಸಿ ಕನ್ನಡದ ಪರವಾಗಿ ಪ್ರಚಾರ ಮಾಡುವಾಗ ಹೀಗೆಯೇ ವಾದಿಸುತ್ತೇವೆ. ನಾವು ಯಾವ ಜನದ ಮಧ್ಯೆ ಬದುಕುತ್ತಿದ್ದೇವೆಯೋ ಅವರ ಭಾಷೆಯನ್ನು ಕಲಿತು ಅದರಲ್ಲಿ ವ್ಯವಹಾರಮಾಡುವುದು ಕರ್ತವ್ಯ. ನಮ್ಮಲ್ಲಿ ಈಗ ಕನ್ನಡ ಸಾಹಿತ್ಯ ನಿರ್ಮಾಣಮಾಡುತ್ತಿರುವವರಲ್ಲಿ ಎಷ್ಟೋ ಜನರ ಮಾತೃಭಾಷೆ ಕನ್ನಡವಲ್ಲ ; ಆದರೆ ಅವರು ಅದನ್ನು ತಮ್ಮ ಭಾಷೆಯಾಗಿ ಮಾಡಿಕೊಂಡಿದ್ದಾರೆ.'

ಸ್ಕಿನರ್ ಸ್ವಲ್ಪ ನಕ್ಕು 'ನಾನು ಇಂಗ್ಲಿಷಿನ ಪರವಾಗಿ ಹೇಳಿದ ವಾದವನ್ನು ನೀವು ಅದಕ್ಕೆ ವಿರೋಧವಾಗಿ ಬಳಸುತ್ತಿದ್ದೀರಿ !' ಎಂದರು.

'ಇಂಗ್ಲಿಷ್ ವಿಷಯದಲ್ಲಿ ನೀವು ಹೇಳಿದ್ದನ್ನು ಮನಸಾರ ಒಪ್ಪುತ್ತೇನೆ. ಯಾವ ವಿಷಯದಲ್ಲೂ ಅತಿರೇಕದ ಶ್ರದ್ಧೆ ನನಗೆ ಹಿಡಿಸುವುದಿಲ್ಲ. ಆದರೆ ನಾವು ಇಂಗ್ಲಿಷಿನ ಮೇಲೆ ಯುದ್ಧ ಹೂಡಬೇಕಾದ ಕಾಲ ಬಂದಿತ್ತು. ಅದು ನಮ್ಮನ್ನು ಮುಳುಗಿಸುವಂತಿತ್ತು. ಆಗ fanaticism ಆವಶ್ಯಕವಾಗಿತ್ತು. ಇಂಗ್ಲಿಷ್ ಸರ್ವವ್ಯಾಪಿಯಾಗುತ್ತಿತ್ತು, ನೋಡಿ.'

'ಸರ್ವವ್ಯಾಪಿ ಎಂದಿರಲ್ಲ, ಹತ್ತುಸಲ ಹೇಳಿ, ಆ ಮಾತನ್ನ. ಈ ಇಂಗ್ಲಿಷ್ ಜನ ಕಾಲಿಟ್ಟಕೂಡಲೆ ಹರಡಿಕೊಳ್ಳುತ್ತಾರೆ. ಸುತ್ತ ಇರುವುದನ್ನೆಲ್ಲ ನುಂಗುತ್ತಾರೆ. ನೀವು 'ವಾಸ್ಪ್' (wasp) ಎಂಬ ಪದ ಕೇಳಿದ್ದೀರಲ್ಲವೆ ?'

'ಹಾರಾಡುವ ಕೀಟ ? ಅದು ಎಲ್ಲರಿಗೂ ಪರಿಚಿತವಾದದ್ದು ತಾನೆ ?'

'ಅಲ್ಲ. ಅಮೆರಿಕದಲ್ಲಿ ಆ ಪದಕ್ಕೆ ವಿಶೇಷಾರ್ಥವಿದೆ. White Anglo Saxon Protestant ಎಂಬ ಪದಗಳ ಮೊದಲ ಅಕ್ಷರಗಳನ್ನು ಸೇರಿಸಿದರೆ ವಾಸ್ಪ್ (WASP) ಆಗುತ್ತದೆ.'

'ಭೇಷ್. ಅರ್ಥಗರ್ಭಿತವಾದ ಮಾತು. ವಾಸ್ಪ್ ಕಚ್ಚಿ ಹೊರಟುಹೋದ ಮೇಲೂ ಆ ಸ್ಥಳ ಉರಿಯು ತ್ತಿರುತ್ತದೆ. ವಾಸ್ಪ್‌ಗಳು ಇಂಡಿಯವನ್ನು ಬಿಟ್ಟು ಹೋಗಿ ಕಾಲು ಶತಮಾನಕ್ಕಿಂತ ಹೆಚ್ಚಾಯಿತು. ಆದರೆ ಉರಿಯೂ ನವೆಯೂ ಇನ್ನೂ ನಿಂತಿಲ್ಲ! 'ವಾಸ್ಪ್' ಪದವನ್ನು ಈ ಅರ್ಥದಲ್ಲಿ ಬಳಸುತ್ತಾರೆಂದು ನನಗೆ ಗೊತ್ತಿರಲಿಲ್ಲ.*'

'ಅಮೆರಿಕದಲ್ಲಿ ಎಲ್ಲ ಅಧಿಕಾರವೂ ಈ ವಾಸ್ಪ್‌ಗಳದ್ದೇ ಆಗಿತ್ತು. ಕಾಲೇಜುಗಳಲ್ಲಿ, ಅದರಲ್ಲೂ ಮೆಡಿಕಲ್, ಎಂಜಿನಿಯರಿಂಗ್, ಮುಂತಾದ ಕಾಲೇಜುಗಳಲ್ಲಿ ಉಳಿದ ಪಂಗಡದವರಿಗೆ ಸೀಟೇ ಸಿಕ್ಕುತ್ತಿರಲಿಲ್ಲ. ಮೆಥಡಿಸ್ಟ್ ಪಂಗಡದವರು ಸ್ಥಾಪಿಸಿದ ಕಾಲೇಜಾದರೆ ಸೀಟುಗಳೆಲ್ಲ ಅವರಿಗೇ ಮೀಸಲು. ಇತರರಿಗೆ ಎಲ್ಲೋ ಒಂದು ಸಣ್ಣ 'ಕ್ವೋಟ'. ಏನಾದರೂ ತಗರುಬುಗರು ಮಾಡಿ ಅದನ್ನೂ ತಾವೇ ದಕ್ಕಿಸಿಕೊಳ್ಳುತ್ತಿದ್ದರು. ಪ್ರಾಟೆಸ್ಟೆಂಟರು ಸ್ಥಾಪಿಸಿದ ಬ್ಯಾಂಕಿನಲ್ಲಿ, ವ್ಯಾಪಾರೀಸಂಸ್ಥೆಯಲ್ಲಿ, ಎಲ್ಲ ಹುದ್ದೆಗಳೂ ಅವರಿಗೇ. ಈಚೆಗೆ ಸರ್ಕಾರ ವಿದ್ಯಾಸಂಸ್ಥೆ ಗಳಿಗೆ ಹೆಚ್ಚು ಗ್ರಾಂಟು ಕೊಡುತ್ತಿದೆಯಾದ್ದರಿಂದ ವಾಸ್ಪುಗಳು ಸರ್ಕಾರೀ ನಿಯಮಗಳಿಗೆ ಹೆಚ್ಚು ಬೆಲೆ ಕೊಡ ಬೇಕಾಗಿದೆ. ಆದರೂ ಒಟ್ಟಿನಲ್ಲಿ ಅವರ ದರ್ಬಾರು ಈಗಲೂ ನಡೆಯುತ್ತಲೇ ಇದೆ.'

ಸ್ಕಿನರ್ ಇಂಗ್ಲಿಷರ ವಿಷಯದಲ್ಲಿ ಹೇಳಿದ ಮಾತನ್ನು ಇತರರು ಯೆಹೂದ್ಯರ ವಿಷಯದಲ್ಲಿ ಹೇಳುತ್ತಾರೆ. ನ್ಯೂಯಾರ್ಕ್‌ನಲ್ಲಿ ನನ್ನ ಮಿತ್ರರೊಬ್ಬರು ಯಾವುದೋ ಆಸ್ಪತ್ರೆಯ ಮಾತಾಡುತ್ತಾ 'ಅದರ ಆಡಳಿತವೆಲ್ಲ ಯೆಹೂದ್ಯರ ಕೈಯಲ್ಲಿದೆ' ಎಂದರು. ಹತ್ತಿರದಲ್ಲಿದ್ದ ಅಮೆರಿಕನ್ನರೊಬ್ಬರು (ಅವರು ಯಾವ ಪಂಗಡದವರೋ ಕಾಣೆ, ಯೆಹೂದ್ಯರಂತೂ ಅಲ್ಲ) 'ಆ ಆಸ್ಪತ್ರೆಯೊಂದರ ಮಾತೇಕೆ? ನ್ಯೂಯಾರ್ಕ್‌ನ ಆಡಳಿತವೇ ಅವರ ಕೈಯಲ್ಲಿದೆ!' ಎಂದರು.

ಇಂಥ ಮಾತುಗಳಲ್ಲಿ ಸತ್ಯಾಂಶ ಎಷ್ಟಿದೆಯೋ ಹೇಳುವುದು ಕಷ್ಟ. ಅಂತೂ ಪಶ್ಚಿಮದಲ್ಲೆಲ್ಲ ಬ್ಯಾಂಕಿಂಗ್ ನಲ್ಲೂ ವ್ಯಾಪಾರೋದ್ಯಮದಲ್ಲೂ ಪ್ರಮುಖರು ಎಂದು ಯೆಹೂದ್ಯರಿಗೆ ಬಹುಕಾಲದಿಂದ ಪ್ರಸಿದ್ಧಿಯಿದೆ. ವಾಟರ್‌ಲೂ ಯುದ್ಧದ ಹಿಂದಿನ ದಿನ ನೆಪೋಲಿಯನ್ ಗೆಲ್ಲುತ್ತಾನೆಂಬ ನಂಬಿಕೆಯಿಂದಾಗಿ ಷೇರುಗಳ ಬೆಲೆ ತೀರ ಕೆಳಮಟ್ಟಕ್ಕೆ ಇಳಿಯಿತಂತೆ. ಆಗ ರಾತ್ಸ್‌ಚೈಲ್ಡ್ ಸಂಸ್ಥೆಯವರು ಅವನ್ನೆಲ್ಲ ಕೊಂಡು ಎರಡು ದಿನ ಕಳೆದಮೇಲೆ—ನೆಪೋಲಿಯನ್ ಸೋತನೆಂಬುದು ತಿಳಿದಮೇಲೆ—ಹೆಚ್ಚು ಬೆಲೆಗೆ ಮಾರಿ ಆದೊಂದು ದಿನದಲ್ಲೇ ಐದು ಮಿಲಿಯನ್ ಪೌಂಡು ಸಂಪಾದಿಸಿದರಂತೆ! ಇಂಥ ಕಥೆಗಳನ್ನು ಈಗಲೂ ಯೆಹೂದ್ಯರ ವಿಷಯದಲ್ಲಿ ಹೇಳುತ್ತಾರೆ. ಸಂಯುಕ್ತಸಂಸ್ಥಾನ ಗಳಲ್ಲಿ ಅವರ ಸಾಹಸದಕ್ಷತೆಗಳಿಂದಾಗಿ ಕೆಲವು ದೈತ್ಯಪ್ರಮಾಣದ ಸಂಸ್ಥೆಗಳು ಉಚ್ಛ್ರಾಯಸ್ಥಿತಿಯಲ್ಲಿವೆಯೆಂಬು ದೇನೋ ಸತ್ಯ. ಸಿಯರ್ಸ್‌ರೋಬಿಕ್, ಗೋಲ್ಡ್‌ಬ್ಲಾಟ್ಸ್ ಮುಂತಾದ ಭಾರಿ ಸಂಸ್ಥೆಗಳನ್ನು ಸ್ಥಾಪಿಸಿ ನಡಸುತ್ತಿರು ವವರು ಅವರೇಯಂತೆ. ಯೆಹೂದ್ಯರ ವಿಷಯದಲ್ಲಿ ಅಸಹನೆಯಿರುವುದಕ್ಕೆ ಮತೀಯ ಕಾರಣಗಳ ಜೊತೆಗೆ ಅವರ ಪ್ರತಿಭೆ, ಅಭ್ಯುದಯ, ಐಶ್ವರ್ಯಗಳು ಕೆರಳಿಸುವ ಹೊಟ್ಟೆ ಉರಿಯೂ ಒಂದು ಕಾರಣ. ಅವರು ಸಮರ್ಥರೆಂದು ಬಹುಶಃ ಎಲ್ಲರೂ ಒಪ್ಪುತ್ತಾರೆ.

ತಮ್ಮ ಜನ ಎಂಥ ಔನ್ನತ್ಯವನ್ನು ಸಾಧಿಸಿದ್ದಾರೆ ಎಂಬುದನ್ನು ಸ್ಕಿನರ್ ಒತ್ತಿ ಹೇಳಲಿಲ್ಲ. ಅವರ ಆಗಿನ ಮನೋಧರ್ಮ ಹೆಮ್ಮೆ ಹೇಳಿಕೊಳ್ಳುವುದಲ್ಲ, ಸಹಾನುಭೂತಿಯನ್ನು ಬೇಡುವುದು. ಆದರೆ ಆ ಹೆಮ್ಮೆ ಮನಸ್ಸಿನಲ್ಲಿ

---

*ಅಮೆರಿಕನ್ ವೆಬ್‌ಸ್ಟರ್ ನಿಘಂಟಿನಲ್ಲಿ ಈ ಅರ್ಥವನ್ನು ಕಾಣಿಸಿದೆ. ಇದು ನನಗೆ ಈಚೆಗೆ ತಿಳಿಯಿತು.

ದ್ದಿರಬೇಕು. 'ಇತರ ಜನಾಂಗದವರಲ್ಲಿ ಎಷ್ಟೋ ಜನ ವ್ಯಾಪಾರ, ಕೈಗಾರಿಕೆ, ಬ್ಯಾಂಕಿಂಗ್ ಮುಂತಾದ ಕ್ಷೇತ್ರಗಳಲ್ಲಿ ಭಾರೀ ಸಂಸ್ಥೆಗಳನ್ನು ಸ್ಥಾಪಿಸಿಲ್ಲವೆ ? ಅದು ಜನರ ಕಣ್ಣನ್ನು ಕುಕ್ಕುವುದಿಲ್ಲ. ಯೆಹೂದ್ಯರ ಸಾಧನೆಗಳನ್ನು ಮಾತ್ರ ನೋಡಿ ಹೊಟ್ಟೆಕಿಚ್ಚು ಪಡುತ್ತಾರೆ. ನಮ್ಮಲ್ಲಿ ಬಡವರೂ ಇಲ್ಲವೆ ? ಇದೆಲ್ಲ ಹಿಂದಿನಿಂದ ಬಂದ ಪೂರ್ವ ಗ್ರಹಗಳ ಫಲ. ನಾವು ಹೊಡೆದಾಟಕ್ಕೆ ನಿಂತವರಲ್ಲ. ಅಮೆರಿಕದಲ್ಲಿ ಬಂದೂಕ ಇಟ್ಟುಕೊಳ್ಳುವವರು ಅಪರೂಪ. ಆದರೆ ನನ್ನ ಮನೆಯಲ್ಲಿ ಇವತ್ತೂ ಬಂದೂಕವಿಲ್ಲ, ಯಾವ ಆಯುಧವೂ ಇಲ್ಲ. ಹಿಂಸೆಗೂ ಕೊಲೆಗೂ ನಾವು ಸಿದ್ಧರಾಗಿಲ್ಲವಾದ್ದರಿಂದ ಎಲ್ಲರೂ ನಮ್ಮನ್ನು ಹಳಿಯುತ್ತಾರೆ, ತುಳಿಯುತ್ತಾರೆ. ಇಡೀ ಜನಾಂಗವನ್ನೇ ದೂರುವುದು ತಪ್ಪು. ಗುಣವಾಗಲಿ ದೋಷವಾಗಲಿ ಯಾವುದೊಂದು ಜನಾಂಗಕ್ಕೆ ಮೀಸಲಾದ ಸ್ವತ್ತಲ್ಲ' ಎಂದರು.

ಸ್ಕಿನರ್ ಸ್ವತಃ ಸಾತ್ವಿಕರು. ಅವರು ಹೇಳಿದ ಕೊನೆಯ ಮಾತು ಖಂಡಿತ ಒಪ್ಪತಕ್ಕದ್ದು. ಯೆಹೂದ್ಯರ ಮಾತು ಬಂದಾಗ ಹಣವಂತರನ್ನು ಮಾತ್ರವಲ್ಲದೆ ದೈವಮತ್ತನೆಂದು ಹೆಸರುಗೊಂಡ ಸ್ಪಿನೋಜನನ್ನೂ ಐನ್‌ಸ್ಟೈನ್ ಮಹರ್ಷಿಯನ್ನೂ ಏಕೆ ನೆನೆಯಬಾರದು ? ಯೇಸುಸ್ವಾಮಿಯೂ ಯೆಹೂದ್ಯರಲ್ಲಿ ಹುಟ್ಟಿದವನಲ್ಲವೆ ?

ಶಂಕರಾಚಾರ್ಯರು ಮನುಷ್ಯತ್ವ, ಮುಮುಕ್ಷತ್ವ ಮತ್ತು ಸತ್ಯವನ್ನು ತೋರಬಲ್ಲ ಮಹಾಗುರುವಿನ ಆಶೀರ್ವಾದ ಈ ಮೂರೂ ಭಗವತ್ ಕೃಪೆಯಿಂದ ಲಭಿಸುವುದು ಎಂದು ಹೇಳುವರು. ಈ ಮೂರು ಸೌಲಭ್ಯಗಳು ನಮಗೆ ಒದಗಿದರೆ ನಮ್ಮ ಮುಕ್ತಿ ಕರಗತವಾದಂತೆಯೆ.

ಎಸ್. ವಿ. ರಂಗಣ್ಣ

ಹೊ ಗ ಳಿ ಕೆ–ಆ ಸೆ

ಹೊಗಳಿಕೆ

ಹೊಗಳಿಕೆಯು ಸಾಕ್ಷಾತ್ ಸುಳ್ಳಲ್ಲ, ಸುಳ್ಳಿನ ಮುದ್ದು ತಂಗಿ;
ಹೊಗಳಿಕೆಯು ಮೋಸವಲ್ಲ, ಮೋಸದ ಮೃದು ಸಂಗಾತಿ;
ಹೊಗಳಿಕೆಯು ತಿರುಪೆಯಲ್ಲ, ತಿರುಪೆಯ ಮಕಮಲ್ಲು ಮೇಲಂಗಿ;
ಹೊಗಳಿಕೆಯು ತೊತ್ತಲ್ಲ, ತೊತ್ತಿನ ನಿಪುಣ ನಕಲಿ;
ಹೊಗಳಿಕೆಯು ಬಂಡಾಟವಲ್ಲ, ಬಂಡಾಟದ ಒಂದು ವೇಶ;
ಹೊಗಳಿಕೆಯು ಅಪಹಾಸ್ಯವಲ್ಲ, ಅಪಹಾಸ್ಯದ ತಿರುಗುಮುರುಗು;
ಹೊಗಳಿಕೆಯು ಶತ್ರುವಲ್ಲ, ಮಿತ್ರರೂಪದ ಶತ್ರು;
ಹೊಗಳಿಕೆಯು ಸ್ನೇಹವಲ್ಲ, ಸ್ನೇಹದ ವಿಕೃತ ಛಾಯೆ;
ಹೊಗಳಿಕೆಯು ನ್ಯಾಯವಲ್ಲ, ನ್ಯಾಯದ ಅಣಕ;
ಹೊಗಳಿಕೆಯು ಅನ್ಯಾಯವಲ್ಲ, ಅನ್ಯಾಯದ ಸೌಮ್ಯಾಕಾರ;
ಹೊಗಳಿಕೆಯು ಸತ್ವವಲ್ಲ, ಸತ್ವದಂತೆ ಕಾಣಿಸುವ ಟೊಳ್ಳು;
ಹೊಗಳಿಕೆಯು ಜರತಾರಿಯಲ್ಲ, ಜರತಾರಿಯಂತೆ ಭ್ರಾಂತಿಸುವ ಗುನ್ನಂಪಟ್ಟೆ;
ಹೊಗಳಿಕೆಯ ನೈಜಗುಣವನ್ನು ಅರಿತವನೆ ಪುರುಷ;
ಹೊಗಳಿಕೆಯನ್ನು ಹತ್ತಿರ ಬರಗೊಡದವನೆ ಧೀರ;
ಹೊಗಳಿಕೆ ಯಾರಿಗೆ ಹೆದರಿ ಎತ್ತಲೊ ಓಡುವುದೊ ಅವನೆ ಯೋಗಿ!
ನನ್ನಿಂದ ಕಡುದೂರವಿರಲಿ ಹೊಗಳಿಕೆ, ಎನ್ನಪ್ಪ ರಂಗಯ್ಯ!

ಆಸೆ

"ಆಸೆಯೆಂಬುದು ವೇಶ್ಯೆ, ಎಲ್ಲರನು
ಸೆಳೆಯುವ ವೇಶ್ಯೆ" ಎಂಬೊಂದು
ಹೇಳಿಕೆ ಉಂಟಯ್ಯ. ಆಸೆಗೆ ಸೆಳೆಶಕ್ತಿ ವಿಪರೀತ, ಆದರೆ ಆಸೆ
ವೇಶ್ಯೆಯಲ್ಲಯ್ಯ. ಆಸೆ ಸರಿ ಸುಮಾರಾಗಿ
ಸಮಸ್ತರನು ಸೆಳೆಯಬಲ್ಲದು: ವೇಶ್ಯೆ

ಸೆಳೆಯುತ್ತಾಳೆ ಸಡಿಲ ಚಿತ್ತದ ಸಡಿಲ
ಮಂದಿಯನು ಮಾತ್ರ. ಆಸೆ ವಾಸ್ತವವಾಗಿ
ವಿಚಿತ್ರ ಮಾಯದ ವಿಸ್ಮಯ
ಸತ್ವ; ಅದೊಂದು ಮಹಾಸತ್ವ,
ಪುರಾತನ ಸತ್ವ, ಚಿರಂಜೀವಿ ಸತ್ವ,
ದರ್ಪದಿಂದ ದಬ್ಬಾಳಿಕೆಯಿಂದ ಲೋಕಗಳ
ಆಳುತ್ತಿರುವ ವಿಲಕ್ಷಣ ವೈಭವದ
ಭಟಮಾರಿ ಸತ್ವ, ಗೋಳಿಡಿಸುವ
ಮಹಂಮಾರಿ ಸತ್ವ!
ತನ್ನ ಇಚ್ಛೆಬಂದಂತೆ ಅತಿಕ್ಷಿಪ್ರ ಪರಿವರ್ತನದಿಂದ
ಬಗೆಬಗೆ ಹೆಣ್ಣಾಗಬಲ್ಲುದು ಆಸೆ,
ವಿಧ ವಿಧ ಗಂಡಾಗಬಲ್ಲುದು ಆಸೆ,
ತರಹೆತರಹೆ ಪಕ್ಷಿಯಾಗಬಲ್ಲದು ಆಸೆ,
ನಾನಾ ಮಾದರಿ ಮೃಗವಾಗಬಲ್ಲದು ಆಸೆ,
ಅನೇಕಾನೇಕ ರೂಪ ತಾಳಬಲ್ಲುದು ಆಸೆ.
ಅಜ್ಜಿಯಂತೆ ತಾಯಿಯಂತೆ ಹೆಂಡತಿಯಂತೆ
ನಾದಿನಿಯಂತೆ ಅಕ್ಕನಂತೆ ತಂಗಿಯಂತೆ
ಮಗಳಂತೆ ಸೊಸೆಯಂತೆ ಅತ್ತಿಗೆಯಂತೆ
ಅಡಿಗೆಯವಳಂತೆ ಊಳಿಗಗಿತ್ತಿಯಂತೆ
ಆದರ ಪ್ರಭಾವ ಪುರುಷರ ಮೇಲೆ.
ಅಜ್ಜನಂತೆ ತಂದೆಯಂತೆ ಗಂಡನಂತೆ
ಅಣ್ಣನಂತೆ ತಮ್ಮನಂತೆ ಅಳಿಯನಂತೆ
ಮಾವನಂತೆ ಮಗನಂತೆ ಮೊಮ್ಮಗನಂತೆ
ಪರಿಚಾರಕನಂತೆ ಅಡಿಗೆ ಭಟ್ಟನಂತೆ
ಆದರ ಪ್ರಭಾವ ಸ್ತ್ರೀಯರ ಮೇಲೆ.
ಗಿಣಿಯಾಗಿ ಗೀಜಗನಾಗಿ ಗರುಡಪಕ್ಷಿಯಾಗಿ
ನವಿಲಾಗಿ ನಾಯಾಗಿ ನರಿಯಾಗಿ
ಕುರಿಯಾಗಿ ಕರಿಯಾಗಿ ಕರಡಿಯಾಗಿ
ಮೀನಾಗಿ ಮೊಸಳೆಯಾಗಿ ಮಂಡೂಕವಾಗಿ
ಅಳಿಲಾಗಿ ಆವಾಗಿ ಆಡಾಗಿ
ಚಿಟ್ಟೆಯಾಗಿ ಚಿರತೆಯಾಗಿ ಚೇಲಿಯಾಗಿ
ಬಾತಾಗಿ ಬೆಳ್ವಕ್ಕಿಯಾಗಿ ಕೊಕ್ಕರೆಯಾಗಿ
ಎರಳೆಯಾಗಿ ಏಡಿಯಾಗಿ ಏನೇನೊ ಆಗಿ
ಆಕರ್ಷಿಸುತ್ತದೆ ನಾಕರ್ಷಿಸುತ್ತದೆ ಆಸೆ.

ಮಾವಿನ ಮರವಾಗಿ ದಾಳಿಂಬೆಗಿಡವಾಗಿ
ತೆಂಗಾಗಿ ಹೊಂಗೆಯಾಗಿ ಶ್ರೀಗಂಧವಾಗಿ
ಬಿದಿರಾಗಿ ಬೇಲವಾಗಿ ಬಸುರಿಮರವಾಗಿ
ಬೇವಾಗಿ ಅಶ್ವತ್ಥವಾಗಿ ಹುಣಿಸೆಯಾಗಿ
ಮಲ್ಲೆಯಾಗಿ ಮಲ್ಲಿಗೆಯಾಗಿ ಸುಗಂಧರಾಜನಾಗಿ
ಗುಲಾಬಿಯಾಗಿ ಸಂಪಿಗೆಯಾಗಿ ತುತೂರಿ ಹೂವಾಗಿ
ಗಮನ ಎಳೆಯುತ್ತದೆ ಆಸೆ.
ಆಸೆ ಅಪೇಕ್ಷಿಸುವ ಪದಾರ್ಥಗಳನು
ಎಣಿಕೆ ಮಾಡುವಂತಿಲ್ಲ, ಎಣಿಸಿ ಮುಗಿಸುವಂತಿಲ್ಲ.
ಆಸೆ ಹಿಡಿಯುವ ಮಾಡುವ ನೆರವೇರಿಸುವ
ಕೃತ್ಯಗಳು ದಿಟವಾಗಿ ಅಸಂಖ್ಯಾತ.
ಹರ್ಷ ಉಂಟುಮಾಡುತ್ತದೆ ದುಃಖ
ಸುರಿಸುತ್ತದೆ, ಗೊಂದಲ ಎಬ್ಬಿಸುತ್ತದೆ
ಸುಲಭಗ್ರೈಯುತ್ತದೆ, ಸಮಸ್ಯೆಯಾಗುತ್ತದೆ
ಸಮಾಧಾನ ತಂದುಕೊಡುತ್ತದೆ, ಕಾತರ
ಹೆಚ್ಚಿಸುತ್ತದೆ ಕಾತರ ಇಳಿಸುತ್ತದೆ,
ಬೀಳಿಸುತ್ತದೆ ಏಳಿಸುತ್ತದೆ, ಆಲಸ್ಯ
ಕಳೆಯುತ್ತದೆ ಆಲಸ್ಯ ಬೆಳೆಸುತ್ತದೆ,
ಕೋಪ ಉದ್ರೇಕಿಸುತ್ತದೆ ತಾಪ
ತಗ್ಗಿಸುತ್ತದೆ, ಚಟುವಟಿಕೆಗೆ ಉದಾಸೀನಕ್ಕೆ
ಅಚ್ಚರಿಗೆ ಮಾಂದ್ಯಕ್ಕೆ ಕಾರಣವಾಗುತ್ತದೆ:
ಸಂಸಾರದ ಯಾವ ವಿದ್ಯಮಾನ
ಆಗದು ಆಸೆಯಿಂದ; ಸಂಸಾರವೆಂಬುದೆ
ಆಸೆ, ವಿಶ್ವ ಸಂಸಾರಿ ರಂಗೇಶ.
ಆಸೆಯನು ಗೆಲ್ಲದವ ಬಿದ್ದ, ಆಸೆಯನು ಗೆದ್ದವ ಎದ್ದ;
ಆಸೆಯನು ಗೆದ್ದವನೆ ಸ್ವಯಂಬುದ್ಧ:
ಇದು ಬದ್ಧ ಬದ್ಧ ಬದ್ಧ!

ಕೆ. ವಿ. ರಾಜಗೋಪಾಲ

ರಾಮಾಯಣವನ್ನು ಕುರಿತು

ವೈದಿಕ ಸಾಹಿತ್ಯವೆಂದು ಪ್ರಸಿದ್ಧವಾಗಿರುವ ರಾಮಾಯಣ, ಮಹಾಭಾರತ ಕಾವ್ಯಗಳನ್ನು ಕುರಿತು ಅವು ವೈದಿಕ ನಿರ್ಮಾಣಗಳೆಂದು ವೈದಿಕರಲ್ಲದವರು ವಿಚಾರ ಮಾಡುವುದರ ಜೊತೆಗೆ ವೈದಿಕರೂ ಸಂತೋಷದಿಂದ ಒಪ್ಪಿಕೊಂಡಿರುವುದು ಇಂದಿಗೂ ಕಂಡುಬರುತ್ತಿದ್ದು ಇತ್ತೀಚೆಗೂ ಅದರ ನಿಜವಾದ ಸ್ವರೂಪವನ್ನು ಯಾರೂ ಪರಿಗಣಿಸಿದಂತೆ ಕಂಡುಬರುವುದಿಲ್ಲ. ಈಗ ರಾಮಾಯಣದ ಕರ್ತೃವಿನ ವಿಚಾರವನ್ನು ಗಮನಿಸಬಹುದು. ವಾಲ್ಮೀಕಿಯು ಹುಟ್ಟಿನಿಂದ ಬೇಡರವನು. ಅಂದರೆ ಪಕ್ಕಾ ಶೂದ್ರ. ಇಂಥವನಿಗೆ ವೇದಗಳು ಪ್ರಮಾಣವಾಗಿ ಅವುಗಳ ಸತ್ಯವೇ ಪರಮಾರ್ಥ ಸತ್ಯವಾಗಿ ಕಂಡುಬಂದಿರಬೇಕೆಂದು ಆತನ ಕೃತಿಯಿಂದ ಅರಿಯಬಹುದಾಗಿದೆ. ಆತನನ್ನು ಕ್ಷತ್ರಿಯ ಮನೋಧರ್ಮದವನು ಎಂದು ಹೇಳಿದರೆ ಅದು ಅರ್ಧ ಸತ್ಯವಾಗುತ್ತದೆ. ಇಂಥ ಶೂದ್ರನೊಬ್ಬನು ತಪಸ್ಸು ಮಾಡಿ ಕಂಡ ದರ್ಶನವನ್ನು 'ರಾಮಾಯಣ'ವನ್ನಾಗಿ ರಚಿಸಿದ್ದಾನೆ. ಈ ರಚನೆಯಲ್ಲಿ ರಾಮನನ್ನು ನಾಯಕನನ್ನಾಗಿ ಮಾಡಿರುವುದನ್ನು ಎಚ್ಚರಿಕೆಯಿಂದ ಗಮನಿಸಿದರೆ, ರಾಮನು 'ಕರಿಯ'ನೆಂಬುದನ್ನೂ ಮರೆಯುವಂತಿಲ್ಲ. ಇವಕ್ಕೆ ಪ್ರತಿಯಾಗಿ ಲಕ್ಷ್ಮಣನು 'ಬಿಳಿಯ'ನಾಗಿ ಅಥವಾ ಆರ್ಯವರ್ಗದವನಾಗಿ ಕಾಣುತ್ತಾನೆ. ಆದುದರಿಂದ ವಾಲ್ಮೀಕಿಯು ಎರಡು ಭಿನ್ನ ವರ್ಣಗಳ ಸಹಬಾಳ್ವೆಯನ್ನು ಪ್ರತಿಪಾದಿಸುವ ಕವಿಯಾಗುತ್ತಾನೆ.

ವಾಲ್ಮೀಕಿಯ ದರ್ಶನದಲ್ಲಿ ಹೀಗೆ ಸಮನ್ವಯ ಧರ್ಮವಿರುವಂತೆ ವೇದಗಳ ಸಂರಕ್ಷಣೆಯೂ ಒಂದು ಹೊಣೆಗಾರಿಕೆಯೆಂದು ಆತನು ತಿಳಿದಿರಬೇಕು. ಆದುದರಿಂದಲೇ ರಾಮಾಯಣವು ಯಜ್ಞಯಾಗಾದಿಗಳನ್ನು ಅನುಮೋದಿಸುತ್ತದೆ; ಅವುಗಳ ಹಿರಿಮೆಯನ್ನು ಬೆಳಕಿಗೊಡ್ಡುವಲ್ಲಿ ಪುತ್ರಕಾಮೇಷ್ಟಿಯಂಥ ಮಹಾಯಾಗವನ್ನು ಮಾಡಿಸಿಯೇ ದಶರಥನಿಗೆ ಮಕ್ಕಳಾಗುವ ಸ್ಥಿತಿಯನ್ನು ತಂದಿದ್ದಾನೆ. ಇದರಿಂದ ವೈದಿಕಧರ್ಮದ ರಕ್ಷಣೆಯನ್ನು ರಾಮಾಯಣವು ಸಾಧಿಸುವುದಲ್ಲದೆ ಮಾರ್ಗದರ್ಶನ ನೀಡಿದಂತಾಗಿದೆ.

ವಾಲ್ಮೀಕಿಯ ಧೋರಣೆಯು ಇಷ್ಟಕ್ಕೆ ಸಮಾಧಾನ ತಾಳುವುದಿಲ್ಲ. ರಾಮನನ್ನು ಅವತಾರ ಪುರುಷನನ್ನಾಗಿ ಮಾಡಲು ಮತ್ತು ವೇದಗಳ ಸಂರಕ್ಷಕನನ್ನಾಗಿ ಮಾಡಲು ಆತನ ಕಡೆಯಿಂದ ಅದ್ಭುತ ಪವಾಡಗಳನ್ನೂ ಸಾಧಿಸಿದ್ದಾನೆ. ಆತನು ಕೊಲ್ಲುವ ರಾಕ್ಷಸರು ನೇರವಾಗಿ ಮುಕ್ತಗಾಮಿಗಳಾಗುತ್ತಾರೆ; ಆತನ ಗುಣಗಾನ ಮಾಡುತ್ತಾರೆ. ಇತ್ಯಾದಿ ರೀತಿನೀತಿಗಳಲ್ಲಿ ರಾಮನು ಸಾಮಾನ್ಯ ಮನುಷ್ಯನ ಮಟ್ಟದಿಂದ ಏರಿ 'ಅವತಾರಿ'ಯಾಗಿ ವಿಷ್ಣುವಿನ ಸ್ವರೂಪವೇ ಆಗುತ್ತಾನೆ.

ವಾಲ್ಮೀಕಿಯ ರಾವಣೇಶ್ವರನು ಲಂಕಾಧಿಪತಿಯಷ್ಟೆ. ಈತನು ಬ್ರಹ್ಮನ ಮೊಮ್ಮಗನಾಗಿರುವುದಲ್ಲದೆ ಸಾಮವೇದದ ಕರ್ತೃ ಬೇರೆ. ಸಾಲದುದಕ್ಕೆ ಈತನು ದ್ರಾವಿಡ ವೀರನಾದ ವಾಲಿಯ ಸ್ನೇಹಿತ. ಅಂದರೆ ಅಂದಿನ ರಾಜಕೀಯ ಧೋರಣೆಯಲ್ಲಿ ಆತನು ತನ್ನ ಚಕ್ರವರ್ತಿಯ ಪಟ್ಟವನ್ನು ಭದ್ರಪಡಿಸಿಕೊಂಡವನು. ಅವನ

ಮುಕ್ತಿಯೇ ರಾಮಾಯಣದ ಮಹದುದ್ದೇಶ. ವೈದಿಕನಾಗಿದ್ದು ರಾಕ್ಷಸನಾಗಿರುವುದನ್ನು ವಾಲ್ಮೀಕಿಯು ಸಹಿಸಲಾರದೆ ಆತನನ್ನು ಪ್ರತಿನಾಯಕನನ್ನಾಗಿ ಮಾಡಿ ಅದರ ಮೂಲಕ ರಾಮನ ಅವತಾರವನ್ನು ಪ್ರತಿಪಾದಿಸಿರುವುದನ್ನು ಗಮನಿಸಿದರೆ ವಾಲ್ಮೀಕಿಯ ಉದ್ದೇಶವು ಮತ್ತಷ್ಟು ಖಚಿತವಾಗುತ್ತದೆ. ಅಂಥವನ ಸಂಹಾರದಿಂದ ಕವಿಯು ಮತ್ತೆ ಆರ್ಯ ಮತ್ತು ದ್ರಾವಿಡ ವರ್ಣಗಳ ಸಮನ್ವಯವನ್ನು ಪ್ರತಿಪಾದಿಸಿರುವಂತೆ ಕಂಡುಬರುತ್ತದೆ. ಇದಕ್ಕಾಗಿ ಆತನು 'ವಿಧಿ'ಯ ತತ್ತ್ವವನ್ನು ಬಳಸಿ ಸೀತೆಯ ಅಪಹಾರ ಮಾಡಿಸಿ ತನ್ನ ಕಥೆಯನ್ನು ರಚಿಸಿರಬೇಕು.

ಹೀಗೆ ಪರಿಶೀಲಿಸುವಾಗ ವಾಲ್ಮೀಕಿಗೂ ರಾವಣನಿಗೂ ಸಾಮ್ಯಗಳನ್ನು ಕಾಣಬಹುದಾಗಿದೆ. ವೈಷಮ್ಯಗಳು ಸ್ಪಷ್ಟವಾಗಿರುವುದರಿಂದ ಅವುಗಳನ್ನು ಗೌಣಮಾಡಿನೋಡಬಹುದು. ಇವರು ಇಬ್ಬರೂ ವಿದ್ಯಾಸಂಪನ್ನತೆಯಿಂದ, (ಇಬ್ಬರೂ ಸಂಸ್ಕೃತರು) ವೈದಿಕ ಮನೋಧರ್ಮದ ಎರಡು ವಿಪರೀತಗಳು. ಹುಟ್ಟಿನಲ್ಲಿ ಸಮಾನರು. ಧೋರಣೆಯಿಂದ ಮಾತ್ರ ಭಿನ್ನರು. ವಾಲ್ಮೀಕಿಗಿಂತ ಮುಂಚಿತವಾಗಿಯೇ ರಾವಣನು ಕವಿ-ಸಾಮವೇದದ ಕರ್ತೃ. ವಿಧಿ ವಿಪಾಕದಿಂದಾಗಿ (ರಾವಣನು) ಸೀತೆಯನ್ನು ಕಂಡು ಮೋಹಗೊಳ್ಳುವ ಪರಿಸ್ಥಿತಿಯುಂಟಾಗಿ ರಾಮನೊಡನೆ ಅವನಿಗೆ ಸೆಣಸಾಟವಾಗುತ್ತದೆ. ಅದರಲ್ಲಿ •ವಾಲ್ಮೀಕಿಯ ಧೋರಣೆಯ ಗೆಲುವೇ ಸಾಧ್ಯವಾಗಿರುವುದನ್ನು ಮರೆಯುವಂತಿಲ್ಲ. ಇಂಥ ಗೆಲುವಿಗೆ ದ್ರಾವಿಡವರ್ಗವೂ ಬೆಂಬಲವಾಗಿ (ಸೈನ್ಯವಾಗಿ) ರಾಮನ ಭಕ್ತರಾಗಿ ಉಳಿಯುತ್ತಾರೆ.

ಈಗ ಉಳಿಯುವ ಪ್ರಶ್ನೆಯೆಂದರೆ ರಾಮನದು. ಈತನ ಸ್ವರೂಪವನ್ನು ಗಮನಿಸಿದರೆ (ವಾಲಿಗೆ ಹೋಲಿಸಿದಾಗಲೂ) ಮಹಾಪರಾಕ್ರಮಿಯಾದ 'ಕರಿಯಣ್ಣ'. ವಾಲ್ಮೀಕಿಯು ದ್ರಾವಿಡವರ್ಗದ ಕಲ್ಪನೆಯ ಆಧಾರದಿಂದಲೇ ರಾಮನ ಪ್ರತಿಮೆಯನ್ನು ಸೃಷ್ಟಿಮಾಡಿದ್ದಾನೆ. ಇದರಿಂದ ವಾನರರಿಗೆ ರಾಮನು ಆರಾಧ್ಯದೈವವಾದ ಬಗೆ ಮಿಂಚುತ್ತದೆ. ಆತನನ್ನು ಅವರು ಕಂಡಕೂಡಲೇ (ಪರೀಕ್ಷೆಗಳು ಗೌಣ) ತಮ್ಮ ಉದ್ಧಾರಕನಾದ ಅವತಾರಿಯೆಂದು ಅನ್ನಿಸಿರಬೇಕಷ್ಟೆ. ಆದುದರಿಂದ ಆಂಜನೇಯ ಮೊದಲಾಗಿ ಎಲ್ಲರೂ ಆತನಿಗೆ ಶರಣಾದ ಸೇವಕರು. ಇಂಥ ಜಾಣ್ಮೆಗೆ ವಾಲ್ಮೀಕಿಯ ಮನೋಧರ್ಮವು ಭೂಮಿಕೆಯಾಗಿದೆ.

ವಾಲ್ಮೀಕಿಯು ತನ್ನ ಮುಖ್ಯ ಪಾತ್ರಗಳನ್ನು ತನ್ನ ಬದುಕಿನ ಆಧಾರದ ಮೇಲೆ, ತನ್ನ ಸ್ವರೂಪದ ಆಧಾರದ ಮೇಲೆ ಮತ್ತು ಆರ್ಯ ದ್ರಾವಿಡ ವರ್ಣಗಳ ಸಮನ್ವಯ ದೃಷ್ಟಿಕೋಣದಿಂದ ತನ್ನ ಮಹಾಕಾವ್ಯವನ್ನು ರಚಿಸಿದ್ದಾನೆ. ಇಂತಹ ಕವಿಯನ್ನು ಹುಟ್ಟು ಆರ್ಯನೆಂದು ಕರೆದರೆ ಅಪಚಾರವಾಗುತ್ತದೆ. ಈತನು ಶೂದ್ರನಾದವನು; ಹುಟ್ಟಿನಿಂದ ಭಾರತೀಯನಾದ ಅನಾರ್ಯ. ಅಂದರೆ ದ್ರಾವಿಡನೆಂದು ಕರೆಯಬಹುದಾಗಿ ತೋರುತ್ತದೆ.

ವಾಲ್ಮೀಕಿಯನ್ನು ದ್ರಾವಿಡನೆಂದು ಕರೆಯಲು ಇಷ್ಟು ಸಾಲದಾಗುತ್ತದೆ. ಆದುದರಿಂದ ಇನ್ನಷ್ಟು ಪರಿಶೀಲನೆಗೆ ಆತನನ್ನು ಒಡ್ಡಬಹುದು—ಆತನು ಆರ್ಯ ಅಥವಾ ವೈದಿಕ ಮತ್ತು ಅನಾರ್ಯ ಅಥವಾ ದ್ರಾವಿಡ ವರ್ಣಗಳ ಸಮನ್ವಯವನ್ನು ದರ್ಶನವಾಗಿ ಕಂಡವನು ; ಅದನ್ನು ಕಾವ್ಯವನ್ನಾಗಿ ರಚಿಸಿಕೊಟ್ಟವನು; ರಾಮನ ಪಾತ್ರ, ರಾವಣನ ಪಾತ್ರ ಮತ್ತು ದ್ರಾವಿಡ ವರ್ಣದ ಭವಿಷ್ಯವನ್ನು ಕುರಿತು ಕವಿಯಾದವನು. ದ್ರಾವಿಡರ ನಂತರ ಭಾರತಕ್ಕೆ ಆರ್ಯರು ವಲಸೆ ಬಂದವರು; ಬರುವ ವೇಳೆಗೆ ಸಂಯಮದಿಂದ ಬದುಕಿನ ಆದರ್ಶಗಳನ್ನು ರೂಢಿಸಿಕೊಂಡು ದರ್ಶನವನ್ನು ಕಂಡಿದ್ದವರು. ಇಷ್ಟೇ ಅಲ್ಲದೆ ದರ್ಶನಮಾರ್ಗದಲ್ಲಿ ಮುಂದುವರಿಯುತ್ತಿದ್ದವರು. ಇಷ್ಟಲ್ಲದೆ ವಾಲ್ಮೀಕಿಯು ದ್ರಾವಿಡರನ್ನು ಕೀಳೆಂದು ಕಂಡಿರಬೇಕೆಂದು ಪ್ರತಿಪಾದಿಸಬೇಕಾಗುವುದಿಲ್ಲ. ಏಕೆಂದರೆ ಆತನ ನಾಯಕನು 'ದ್ರಾವಿಡವರ್ಣ'ದವನು. ಪ್ರತಿನಾಯಕನೂ ಅವರಿಗೆ ಸಮಾನನಾದವನು. ಆದುದರಿಂದ ವಾಲ್ಮೀಕಿಯು ಹುಟ್ಟು ದ್ರಾವಿಡನಿರಬೇಕೆಂಬ ವಿಚಾರಕ್ಕೆ ಬಲವತ್ತರವಾದ ಕಾರಣವಾಗುತ್ತಿದೆ. ಅಂದರೆ ರಾಮಾಯಣವು ಒಬ್ಬ ದ್ರಾವಿಡನ ದರ್ಶನವೇ ಆಗಿ ಸುಮಾರು ಎರಡು ದಶಶತಮಾನಗಳಾದರೂ ಮಹಾಕಾವ್ಯವಾಗಿ ಮಾರ್ಗದರ್ಶಕವಾಗಿದೆ.

ಇದಕ್ಕೂ ಬಲವತ್ತರವಾದ ಕಾರಣವೊಂದಿದೆ. ರಾಮಾಯಣವನ್ನು ರಚಿಸಿದ ವಾಲ್ಮೀಕಿಯ ಪೂರ್ವಾ

ಶ್ರಮ (ಬೇಡನಾಗಿದ್ದಾಗ)ದ ಹೆಸರೇನೊ ತಿಳಿಯದು. 'ವಾಲ್ಮೀಕಿ'ಯೆನ್ನುವುದು ಅವನು ಋಷಿಯಾದ ಮೇಲೆ ಪ್ರಸಿದ್ಧವಾದ ಹೆಸರು. ಈತನು ರಾಮಾಯಣದಲ್ಲಿ ದಕ್ಷಿಣದ ದಂಡಕಾರಣ್ಯ ವೊದಲಾದುವನ್ನು ಕಂಡಿರುವಂತೆ ವರ್ಣನೆ ಮಾಡಿದ್ದಾನೆ. ಋಷ್ಯಮೂಕ ಪರ್ವತವು ಕರ್ನಾಟಕದಲ್ಲಿರುವುದನ್ನು ಗಮನಿಸಬೇಕು. ಲಂಕೆಯಂತೂ ತುತ್ತತುದಿಯ ದ್ವೀಪ. ವಾನರರ ಚರಿತ್ರೆಯನ್ನಂತೂ ಒಂದು ಜನಾಂಗವೆನ್ನುವಂತೆ ಬಳಸಿಕೊಂಡಿದ್ದಾನೆ. ಅವರ ಒಳಜಗಳಗಳನ್ನೂ ಬಿಟ್ಟಿಲ್ಲ. ಅವರೂ ಯುದ್ಧ ಮಾಡಬಲ್ಲವರು. ಒಳ್ಳೆಯವರು. ರಾವಣನ ಮೇಲೆ ಗೂಢವಾದ ಮಾತ್ಸರ್ಯವಿದ್ದು ಸಮಯಕ್ಕಾಗಿ ಕಾದಿದ್ದವರು. ಆದುದರಿಂದ ವಾಲ್ಮೀಕಿಮುನಿಯು ದ್ರಾವಿಡ ಬುಡಕಟ್ಟಿನವನಾಗಿದ್ದರೆ ಆಶ್ಚರ್ಯವಿಲ್ಲ. ಒಂದು ರೀತಿಯಲ್ಲಿ ರಾಮಾಯಣವು ಆತನ ಬುಡಕಟ್ಟಿನ ಸಮಸ್ಯೆಯಾಗಿ ಅವರ ಉದ್ಧಾರ ಮಾರ್ಗವನ್ನು ಕಂಡುಕೊಂಡ ಋಷಿಯಾಗಿದ್ದರೆ ? ಸಾಧುವಾಗಿ ತೋರುತ್ತದೆ. ಸಮನ್ವಯವು ಅದರ ಮಾರ್ಗದ ಗುರಿಯಾಗುತ್ತದೆ.

ರಾಮಾಯಣದ ಕರ್ತೃವು ಬೇಡರ ಸಂಗಡವನ್ನು ರಾಮನ ಭಕ್ತರನ್ನಾಗಿಯೇ ಚಿತ್ರಿಸಿದ್ದಾನೆ. ಒಬ್ಬ ಗುಹ ಮತ್ತು ಒಬ್ಬಾಕೆ ಶಬರಿ. ಎರಡೂ ಪಾತ್ರಗಳನ್ನು ಈ ದಿಟ್ಟಿಯಲ್ಲಿ ಕಾಣುತ್ತೇವೆ. (ಶಬರಿಮಲೈ ಕೂಡ ದಕ್ಷಿಣದಲ್ಲಿದೆ.) ಆದುದರಿಂದ ಈತನನ್ನು ಗುರುತಿಸುವಾಗ ಈತನು ದಕ್ಷಿಣದವನೆಂಬ ಅನುಮಾನವು ಬಲವತ್ತರವಾಗುತ್ತದೆ. ಇದು ಊಹೆಯೆನ್ನುವುದಾದರೂ ಬೇಡರ ವರ್ಗವು ಆರ್ಯನಲ್ಲ ; ದ್ರಾವಿಡವಿರಬೇಕು. ಈಗಂತೂ, ಬೇಡರು ದ್ರಾವಿಡ ಭಾಷಾವರ್ಗಕ್ಕೆ ಸೇರಿದವರು (ಬೇಡರಕಣ್ಣಪ್ಪನನ್ನೂ ಇಲ್ಲಿ ನೆನೆಯಬಹುದಷ್ಟೆ.) ಆದುದರಿಂದ ಇವರ ಪ್ರತಿನಿಧಿಯನ್ನು ಅನಾರ್ಯನೆಂದೂ ಬಹುಶ ದ್ರಾವಿಡನೆಂದೂ ಗುರುತಿಸಿದರೆ ರಾಮಾಯಣಕ್ಕೆ ಅಪಚಾರ ಮಾಡಿದಂತಾಗುವುದಿಲ್ಲ.

ಬುದ್ಧನ ಜಾತಕ ಕಥೆಗಳಲ್ಲಿ ರಾಮಕಥೆಯ ವಿಚಾರ ಬರುತ್ತದೆ. ಆದರೆ ಅಲ್ಲಿಯ ಕಥಾಭಾಗವು ರಾಮ-ಸೀತೆಯರನ್ನು ಅಣ್ಣ-ತಂಗಿಯೆಂದು ಗುರುತಿಸುತ್ತದೆ. ಇದು ಪ್ರಸಿದ್ಧವಾದ 'ಮಧ್ಯದೇಶ'ದ ಸಂಪ್ರದಾಯಕ್ಕೆ ಸೇರುವುದರಿಂದ ದಕ್ಷಿಣದ ಸಂಪ್ರದಾಯವಂತೂ ಆಗುವುದಿಲ್ಲ. ಅಂದಮೇಲೆ ವಾಲ್ಮೀಕಿಯನ್ನು ರಾಮಾಯಣದ ಕರ್ತೃವಾಗಿ ದಕ್ಷಿಣಭಾರತದವನೆಂದು ಪರಿಗಣಿಸುವುದಕ್ಕೆ ಮತ್ತೊಂದು ಅರ್ಥವಾಗುತ್ತದೆ. ಅಲ್ಲದೆ ರಾಮಾಯಣದ ಕಥೆಯು ಮೂಲತಃ ಒಂದು ಜಾನಪದ ಕಥೆಯಾಗಿದ್ದು ಅದನ್ನು ದರ್ಶನಾಕಾಂಕ್ಷಿಯಾದ ವಾಲ್ಮೀಕಿಯು ಸದುಪಯೋಗಪಡಿಸಿಕೊಂಡಿರಬೇಕೆಂದು ಹೇಳಲು ಬೌದ್ಧ ಸಂಪ್ರದಾಯದ ರಾಮಾಯಣ ಕಥಾ ಭಾಗವೂ ನೆರವಾಗುತ್ತದೆ. ಅಂದರೆ ಬೌದ್ಧರು ತಮ್ಮ ಕಡೆಯ ಜಾನಪದ ಕಥನವನ್ನು ಧಾರ್ಮಿಕ ಕಾರಣಗಳಿಗೆ ಅಳವಡಿಸಿದಾಗ ಅದು ಜಾತಕ ಕಥೆಗಳಲ್ಲಿ ಸೇರಿ ಹೋಗಿರಬೇಕು. ಹಾಗೆಯೇ ವಾಲ್ಮೀಕಿಯು ದಕ್ಷಿಣದ ಸಂಪ್ರದಾಯದ ರಾಮಕಥೆಯನ್ನು ಜಾನಪದದಿಂದ ಮುಕ್ತಗೊಳಿಸಿ ರಾಮಾಯಣ ಕಾವ್ಯವನ್ನಾಗಿ ರಚಿಸಿರಬೇಕು. ಇಂಥ ಹಿನ್ನೆಲೆಯಿಂದ ರಾಮಾಯಣವು ವಾಲ್ಮೀಕಿಯನ್ನು ದಕ್ಷಿಣದವ ಅಥವಾ ದ್ರಾವಿಡ ವರ್ಗದವ—ಎಂಬ ವಿಚಾರಕ್ಕೆ ಆಧಾರವಾಗಿ ನಿಲ್ಲುತ್ತದೆ.

ಒಟ್ಟಿನಲ್ಲಿ ಕೂಲಂಕಶವಾಗಿ ಪರಿಶೀಲಿಸಿದರೆ ರಾಮಾಯಣ ಕಾವ್ಯವು ದ್ರಾವಿಡವರ್ಗದ ಕಾವ್ಯ ಪ್ರಗತಿಯಲ್ಲಿ ದರ್ಶನವಾಗಿ ಕಂಡುಬರುತ್ತದೆ. ಆದುದರಿಂದ ರಾಮಾಯಣದ ಅನುವಾದಿತ ಕೃತಿಗಳು ದ್ರಾವಿಡ ಭಾಷಾವರ್ಗದಲ್ಲಿನ ಕೃಷಿಮಾಡಿದ ಭಾಷೆಗಳಲ್ಲೆಲ್ಲಾ ಪದೇ ಪದೇ ಕಾಣಿಸಿಕೊಂಡು ಇಂದಿಗೂ ರಚಿತವಾಗುತ್ತಿವೆಯಷ್ಟೆ. ಕನ್ನಡ ಮಹಾಕವಿ ಕುಮಾರವ್ಯಾಸನು 'ತಿಣಿಕಿದನು ಫಣಿರಾಯ ರಾಮಾಯಣದ ಭಾರದಲಿ' ಎಂದು ಹೇಳಿರುವುದನ್ನು ಗಮನಿಸಿದರೆ ರಾಮಾಯಣದ ದರ್ಶನ ವಿಕಾಸದ ಭಾಷೆಗಳ ನೆಲೆಗಟ್ಟು ದ್ರಾವಿಡ ವರ್ಗದ ಬೀಡಿನಲ್ಲೇ ಅಧಿಕವೆಂದು ಹೇಳಿ ವಾಲ್ಮೀಕಿಯು 'ಮುಕ್ಕಾಲು ಮೂರುವೀಸ ಪಾಲು' ದ್ರಾವಿಡನೆಂದು ಹೇಳಿರುತ್ತೇನೆ. ವಿಚಾರವಂತರು ಇದನ್ನು ಪರಿಶೀಲಿಸಬೇಕಾಗಿದೆ. ಇದರಿಂದ ರಾಮಾಯಣಕ್ಕಾಗಲಿ ಅದರ ವೈದಿಕ ಅಭಿಮಾನಿಗಳಿಗಾಗಲಿ ಯಾವ ಆತಂಕವೂ ಉಂಟಾಗಲಾರದು. ಏಕೆಂದರೆ ಸಮನ್ವಯ ಮಾರ್ಗವು ಇಂದಿಗೂ ಅವಶ್ಯವಾಗಿದೆ.

ಬಲರಾಮ ಗುಪ್ತ

ಮುಲ್ಕರಾಜ ಆನಂದ

ಭಾರತದ ಉದ್ದಾಮ ಇಂಗ್ಲೀಷ ಬರಹಗಾರರಲ್ಲಿ ಡಾ. ಮುಲ್ಕರಾಜ ಆನಂದರು ಒಬ್ಬರು.

ಹುಟ್ಟು ಬಾಲ್ಯ : 1905ರ ಡಿಸೆಂಬರ 12 ರಂದು ಆನಂದರು ಪೇಶಾವರದಲ್ಲಿ ಜನಿಸಿದರು. ಅವರ ತಾಯಿ ರೈತ ಕುಟುಂಬಕ್ಕೆ ಸೇರಿದಾಕೆ. ತಂದೆ ಅಕ್ಕಸಾಲಿಗರ ವಂಶಕ್ಕೆ ಸೇರಿದ್ದರೂ ಕೆಲಕಾಲದ ಬಳಿಕ ಬ್ರಿಟಿಷ್ ಸೈನ್ಯವನ್ನು ಸೇರಿದರು. ರಾಮಾಯಣ, ಮಹಾಭಾರತ ಮುಂತಾದ ಪ್ರಾಚೀನ ಮಹಾಕಾವ್ಯಗಳ ಮತ್ತು ಜನಪದ ಸಾಹಿತ್ಯ ಪರಿಚಯ ಆನಂದರಿಗಾದದ್ದು ಅವರ ತಾಯಿಯ ಮೂಲಕ.

ಶಿಕ್ಷಣ: ಮುಲ್ಕರಾಜರು ಪಂಜಾಬ ವಿಶ್ವವಿದ್ಯಾಲಯದಲ್ಲಿ ಓದಿ ಬಿ. ಎ. (ಆನರ್ಸ್) ಪದವೀಧರರಾದರು. ಮುಂದೆ ತಮ್ಮ ಮಗ ತಹಸೀಲದಾರ ಅಥವಾ ಕಲೆಕ್ಟರ ಆಗಬೇಕೆಂದು ತಂದೆಯ ಆಶೆ. ಆದರೆ ವ್ಯಾಸಂಗವನ್ನು ಮುಂದುವರಿಸಬೇಕೆಂದು ಮಗನ ಬಯಕೆ. ಅವರ ಈ ಬಯಕೆ ನಿರ್ಧಾರವಾಗಿ ಮಾರ್ಪಟ್ಟುದು ಉರ್ದು ಕವಿ ಇಕ್ಬಾಲರ ಸತತ ಪ್ರೋತ್ಸಾಹದಿಂದ. ಆನಂದರು ವಿಲಾಯತಿಗೆ ಪ್ರಯಾಣ ಬೆಳೆಸಿ ಲಂಡನ್ ಮತ್ತು ಕೇಂಬ್ರಿಜ್ ವಿಶ್ವವಿದ್ಯಾಲಯಗಳಲ್ಲಿ ಅಭ್ಯಾಸ ನಡೆಸಿದರು. ಪ್ರೊಫೆಸರ್ ಹಿಕ್ಸರ ಬಳಿ ಕಲಿತು, ತತ್ತ್ವಜ್ಞಾನದಲ್ಲಿ ಡಾಕ್ಟರೇಟ್ ಉಪಾಧಿಯನ್ನು ಪಡೆದರು. ಇಂಗ್ಲೆಂಡಿನಲ್ಲಿದ್ದಾಗ ಆನಂದರು ಡಿ.ಎಚ್. ಲಾರೆನ್ಸ್, ಇ.ಎಂ. ಫಾಸ್ಟರ ಮೊದಲಾದ ಹಿರಿಯ ಸಾಹಿತಿಗಳೊಡನೆ ತಮ್ಮ ಸಂಪರ್ಕವನ್ನು ಬೆಳೆಸಿಕೊಂಡರು.

ಸಾಹಿತಿಗಳ ಪ್ರಭಾವ : ಗಾರ್ಕಿ, ಟಾಲಸ್ಟಾಯ್, ಮಾರ್ಕ್ಸ್, ಹ್ಯೂಗೊ, ಹಾರ್ಡಿ, ಬೈರನ್, ಶೆಲ್ಲಿ, ಕೀಟ್ಸ್, ಗಯಟೆ, ರಸೆಲ್ ಮುಂತಾದವರ ಪ್ರಭಾವ ಆನಂದರ ಮೇಲಾಗಿದೆ. ಅಲ್ಲದೆ ಹ್ಯೂಂ, ಲಾಕ್, ಬರ್ಕಲೇ, ಕ್ಯಾಂಟ, ಲಾಲಾಮನಮೋಹನರಿಂದ ಕೂಡ ಆನಂದರು ಪ್ರಭಾವಿತರಾಗಿದ್ದಾರೆ.ಆದರೆ ಎಲ್. ಆರ್. ಪುರಿಯವರು ಆನಂದರನ್ನು ಅತ್ಯಂತ ಹೆಚ್ಚಾಗಿ ಪ್ರಭಾವಿತಗೊಳಿಸಿದರೆಂದು ಹೇಳಬೇಕು.

ಐವತ್ತು ಗ್ರಂಥಗಳು : ಡಾ. ಆನಂದರ ಸತ್ವಯುತ ವ್ಯಕ್ತಿತ್ವವು ಬಹುರೂಪಿಯಾದದ್ದು. ಇದು ವರೆಗೆ ಅವರು ಸುಮಾರು ೫೦ ಗ್ರಂಥಗಳನ್ನು ಬರೆದಿದ್ದಾರೆ. ಅವರ ಪುಸ್ತಕಗಳು ಪ್ರಪಂಚದ ಅನೇಕ ಭಾಷೆಗಳಲ್ಲಿ ಅನುವಾದಿತವಾಗಿವೆ. ಅವು ಕನ್ನಡವಲ್ಲಿಯೂ ಬಂದರೆ ನಮ್ಮ ಸಾಹಿತ್ಯದ ಹಿರಿಮೆ ಹೆಚ್ಚುವುದರಲ್ಲಿ ಸಂದೇಹವಿಲ್ಲ.

ಅಚ್ಚ ಮಾನವತಾವಾದಿ : ಆನಂದರು ಮಾನವತಾವಾದಿ. ಇಂಗ್ಲಂಡಿನಲ್ಲಿದ್ದಾಗಲೆ ಅವರು ಗಾಂಧೀಜಿಯವರ ವಿಚಾರಧಾರೆಯಿಂದ ಆಕರ್ಷಿತರಾದರು. ದರಿದ್ರನಾರಾಯಣನ ಬಗೆಗೆ ಅವರಿಗಿರುವ ಅಪಾರ ಅನುಕಂಪ ಮತ್ತು ಭಾರತದ ಸಂತಪ್ತ ಜನತೆಯ ಬಗ್ಗೆ ಅವರು ತೋರುವ ಸಹಾನುಭೂತಿ ಅವರ 'ಅಸ್ಪೃಶ್ಯ,' 'ಕೂಲಿ,'ಹಾದಿ ಮುಂತಾದ ಕಾದಂಬರಿಗಳಿಂದ ವ್ಯಕ್ತವಾಗುತ್ತದೆ.

ನೇರು ಕೃತಿ–'ಅಸ್ಪ್ರಶ್ಯ' : ಆನಂದರ 'ಅಸ್ಪ್ರಶ್ಯ' ಎಂಬ ಸಣ್ಣ ಕಾದಂಬರಿಯು ಓದುಗರ ಹಾಗೂ ವಿಮರ್ಶಕರ ಮೆಚ್ಚುಗೆಯನ್ನು ಪ್ರಕಟವಾದೊಡನೆಯೆ ಸಂಪಾದಿಸಿತು. ಉತ್ತರ ಭಾರತದ ಝಾಡಮಾಲಿ ಹುಡುಗನೊಬ್ಬನ ಕಷ್ಟ ಹಾಗೂ ಕರುಣಾಮಯ ಚಿತ್ರ ಇದರಲ್ಲಿ ವರ್ಣಿತವಾಗಿದೆ ಈ ಕಾದಂಬರಿಯು ಸಣ್ಣದಾದರೂ ಆನಂದರ ಮೇರುಕೃತಿಗಳಲ್ಲಿ ಒಂದೆಂದು ಧಾರಾಳವಾಗಿ ಹೇಳಬಹುದು. ಅಸ್ಪ್ರಶ್ಯ ಜಾತಿಯ ಮತ್ತೊಬ್ಬ ಬಾಲಕನ ಕಥೆ ಆನಂದರ 'ಹಾದಿ' ಎಂಬ ಕಿರುಕಾದಂಬರಿಯಲ್ಲಿ ಮೂಡಿಬಂದಿದೆ. ಭಾರತದ ಸಂತ್ರಸ್ತ ಸ್ತ್ರೀಯ ಜೀವನವನ್ನು ಆಧಾರವಾಗಿಟ್ಟುಕೊಂಡು ಆನಂದರು ಬರೆದ ಕಾದಂಬರಿಗಳಲ್ಲಿ 'The old Woman and the Cow' ಮೊದಲನೆಯದು. ಹಳ್ಳಿಯ ಹುಡುಗಿ ಗೌರಿಯ ಚಿತ್ತವೇದಕ ಕಥೆ ಇದರಲ್ಲಿ ಚಿತ್ರಿತವಾಗಿದೆ. ಅಸ್ಸಾಮಿನ ಚಹಬೆಳೆಯುವ ಕ್ಷೇತ್ರವೊಂದರಲ್ಲಿಯ ಸಾಹೇಬರು ಮತ್ತು ಅವರ ಕೂಲಿಗಳ ಜೀವನವನ್ನು ಚಿತ್ರಿಸುವ ಆನಂದರ ಕಾದಂಬರಿ 'ಎರಡು ಎಲೆ ಒಂದು ಮೊಗ್ಗು' ಇಂಗ್ಲಂಡಿನಲ್ಲಿ ಆಕ್ಷೇಪಾರ್ಹ ಸಾಹಿತ್ಯವೆಂದು ಪರಿಗಣಿಸಲ್ಪಟ್ಟು ಅಲ್ಲಿ ಅದರ ಪ್ರಚಾರವಾಗುವುದೇ ಕಷ್ಟವಾಯಿತು. 'Seven Summers' ಎಂಬುದು ಮುಲ್ಕರಾಜರ ಆತ್ಮ ಚರಿತ್ರಾತ್ಮಕ ಕಾದಂಬರಿಗಳ ಸಾಲಿನಲ್ಲಿ ಮೊದಲನೆಯದು. ಈ ವಸ್ತುವನ್ನು ಕುರಿತು ಬಹುಶಃ ಇನ್ನೂ ಆರು ಕಾದಂಬರಿಗಳು ಪ್ರಕಟವಾಗಲಿವೆ. ಆದರೆ ತಾವು ಕಂಡು ಅನುಭವಿಸಿದ ಸತ್ಯವನ್ನು ಮಾತ್ರ ಸೃಜಿಸುವ ಆನಂದರ ಕೃತಿಗಳಲ್ಲಿ ಸಾಹಿತ್ಯ ಮತ್ತು ಜೀವನವನ್ನು ಪೃಥಃಕರಿಸುವುದು ಕಷ್ಟವಾಗುತ್ತದೆ.

ಮಹಾಕೃತಿ–'ಕೂಲಿ' : ಆನಂದರ ಮತ್ತೊಂದು ಮಹಾಕೃತಿ 'ಕೂಲಿ'. ಮೂನು ಎಂಬ ಗುಡ್ಡಗಾಡಿನ ಅನಾಥ ಬಾಲಕ ಹೊಟ್ಟೆಹೊರೆಯುವುದಕ್ಕಾಗಿ ಊರಿಂದೂರಿಗೆ ಸುತ್ತಿ, ಪಡಬಾರದ ಕಷ್ಟಗಳನ್ನು ಪಟ್ಟು, ಕೊನೆಗೆ ಮಲಬಾರ ಬೆಟ್ಟಗಳ ಪ್ರದೇಶವೊಂದರಲ್ಲಿ ರೋಗ, ನಿಶ್ಶಕ್ತಿಗಳಿಂದ ನರಳಿ ಮರಣಿಸುವ ಭೀಕರ ಚಿತ್ರವನ್ನು ನಾವು ಈ ಕಾದಂಬರಿಯಲ್ಲಿ ಕಾಣುತ್ತೇವೆ. The village, Across the Black Waters, The Sword and the fichie, Private Life of an Indian Prince ಇವು ಆನಂದರ ಕಾದಂಬರಿಗಳಲ್ಲಿ ಪ್ರಮುಖವಾದವು.

ಮುಲ್ಕರಾಜ ಆನಂದರ ಕಥನ ಕಲೆಯ ಜಾಣ್ಮೆಯನ್ನರಿಯಬೇಕಾದರೆ ನಾವು ಅವರ The Barber's Trade Union, Reflections on the Golden Bed, The Power of Darkness ಮತ್ತು Between Tears and Laughter ಮುಂತಾದ ಕಥಾ ಸಂಕಲನಗಳನ್ನೋದಬೇಕು.

ಪತ್ರಿಕಾ ಸಂಪಾದಕರು : ಡಾ. ಆನಂದರು ಉತ್ತಮ ಚಿತ್ರಕಾರರೂ ಹೌದು. ಚಿತ್ರಕಲೆಯ ವಿಮರ್ಶಕರೂ ಹೌದು. Persian Painting ಮತ್ತು The Hindu View of Act ಎಂಬ ಅವರ ಗ್ರಂಥಗಳು ಖ್ಯಾತಿಯನ್ನು ಗಳಿಸಿವೆ. ಈಗ ಆನಂದರು ಮುಂಬಯಿಯಿಂದ ಪ್ರಕಟವಾಗುವ ನಿಯತಕಾಲಿಕ ಆಂಗ್ಲ ಪತ್ರಿಕೆಯ ಸಂಪಾದಕರಾಗಿದ್ದಾರೆ. ವಾಸ್ತುಶಿಲ್ಪ, ಚಿತ್ರಕಲೆ ಮುಂತಾದ ಕಲೆಗಳಿಗೆ ಮೀಸಲಾದ ಇಂತಹ ಪತ್ರಿಕೆ ಭಾರತದಲ್ಲಿ ಅತಿ ವಿರಳವೆಂದರೆ ತಪ್ಪಾಗಲಾರದು.

ಅಖಿಲ ಭಾರತ ಪ್ರಗತಿಶೀಲ ಲೇಖಕರ ಸಂಘದೊಡನೆ ಮುಲ್ಕರಾಜರು ಕೆಲಕಾಲ ಕ್ರಿಯಾತ್ಮಕ ಸಂಬಂಧವನ್ನಿರಿಸಿಕೊಂಡಿದ್ದರು. ಆಗ ಅವರು ನ್ಯೂ ಇಂಡಿಯನ್ ಲಿಟರೇಚರ್ ಎಂಬ ಪತ್ರಿಕೆಯ ಸಂಪಾದಕರಾಗಿದ್ದರು.

ಉತ್ತಮ ಪ್ರಾಧ್ಯಾಪಕರು : ಡಾ. ಮುಲ್ಕರಾಜ ಆನಂದರು ಉತ್ತಮ ಪ್ರಾಧ್ಯಾಪಕರೂ ಹೌದು. ಎರಡನೆಯ ಮಹಾಯುದ್ಧದ ಸಮಯದಲ್ಲಿ ಸುಮಾರು ನಾಲ್ಕು ವರ್ಷಗಳವರೆಗೆ ಲಂಡನ್ ಕಂಟ್ರಿ ಕೌನ್ಸಿಲಿನ ವಯಸ್ಕರ ಶಿಕ್ಷಣ ಶಾಲೆಗಳಲ್ಲಿ ಆನಂದರು ಸಾಹಿತ್ಯ ಮತ್ತು ತತ್ತ್ವಜ್ಞಾನವನ್ನು ಬೋಧಿಸುತ್ತಿದ್ದರು. ಪಂಜಾಬ

ವಿಶ್ವವಿದ್ಯಾಲಯದಲ್ಲಿ Tagore Professor of Art and Literature ಎಂದು ಕೆಲಸ ಮಾಡಿದ ಅನುಭವವೂ ಆನಂದರಿಗಿದೆ.

ಬಹುಮುಖ ಸಂಬಂಧ : ಉತ್ತಮ ಶಿಶುಸಾಹಿತ್ಯದ ರಚನೆಯನ್ನು ಆನಂದರು ಮಾಡಬಲ್ಲರೆಂಬುದಕ್ಕೆ ಅವರ ಈಸೋಪನ ಕತೆಗಳು, ಭಾರತದ ಕತೆ ಮೊದಲಾದ ಪುಸ್ತಕಗಳೇ ಸಾಕ್ಷಿ. ಗುರುದೇವ ರವೀಂದ್ರರ ಬಗ್ಗೆ ಅವರಿಗಿಪ್ಪ ಅಮಿತ ಗೌರವ ಅವರ 'Homage to Tagore' ಎಂಬ ಕಿರು ಹೊತ್ತಿಗೆಯಿಂದ ವ್ಯಕ್ತವಾಗುತ್ತದೆ. ದಿವಂಗತ ಪಂಡಿತ ನೆಹರೂರೊಡನೆಯೂ ಅವರು ನಿಕಟವಾದ ಸಂಬಂಧವನ್ನಿರಿಸಿಕೊಂಡಿದ್ದರು.

ಇಂಗ್ಲೀಷಿನಲ್ಲಿ ಎತ್ತಿದ ಕೈ : ಡಾ. ಮುಲ್ಕರಾಜ ಆನಂದರು ಇಂಗ್ಲೀಷ್ ಭಾಷೆಯಲ್ಲಿ ಬಹುಚೆನ್ನಾಗಿ ಬರೆಯಬಲ್ಲರು. ಅವರ ಶೈಲಿಯನ್ನು ಫಾಸ್ಟರ್, ಜಾಕ್ ಲಿಂಡ್ಸೆ ಮಾರ್ಜರಿ ಬೌಲ್ಟನ್. ವಿ. ಎಸ್. ಪ್ರಿಶೆಟ್, ಆಲಫ್ರೆಡ್ ಪೆರ್ಲ್ಸ್ ಮುಂತಾದವರು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ.

ಸತ್ಯವಾದಿ : ಆನಂದರು ಸತ್ಯಪ್ರಿಯರು. ಸತ್ಯ ಕಹಿಯಾಗಿದ್ದರೆ ಆಶ್ಚರ್ಯಪಡಬೇಕಾಗಿಲ್ಲ. ಅವರ ಕೆಲವು ಕಾದಂಬರಿಗಳಂತೂ ಡೈನಮೈಟನಂತೆ ಸ್ಫೋಟಕವಾಗಿವೆ. ಆದ್ದರಿಂದಲೇ ಇಂಗ್ಲಂಡದಲ್ಲಿ ಅಂತೆಯೆ ಭಾರತದಲ್ಲಿ ಅವುಗಳಿಗೆ ಬಹಿಷ್ಕಾರವನ್ನು ಹಾಕಿತ್ತು.

1966 ರಲ್ಲಿ ಆನಂದರು National Academy of Arts ದ ಗೌರವ ಕಾರ್ಯದರ್ಶಿಯಾಗಿ ನಿಯಮಿಸಲ್ಪಟ್ಟರು. ಅವರು ಕಲೆ ಮತ್ತು ಸಾಹಿತ್ಯಕ್ಕೆ ಅಪಾರ ಸೇವೆ ಸಲ್ಲಿಸಿದುದರ ದ್ಯೋತಕವಾಗಿ 1967 ರಲ್ಲಿಯೇ ಅವರಿಗೆ ರಾಷ್ಟ್ರಪತಿಗಳಿಂದ ಪದ್ಮಭೂಷಣ ಎಂಬ ಬಿರದೂ ದೊರೆಯಿತು. 1969ರಲ್ಲಿ ಅವರ ಮತ್ತೊಂದು ಮೇರುಕೃತಿ 'Morning Face' ಎಂಬ ಕಾದಂಬರಿ ಹೊರಬಂದಿತು. ಅದಕ್ಕೆ 1972ರಲ್ಲಿ ಸಾಹಿತ್ಯ ಅಕ್ಯಾಡೆಮಿಯ ಬಹುಮಾನವೂ ಬಂದಿತು. ಅವರ ಇತ್ತೀಚಿನ 'ಗೌರಿ' ಎಂಬ ಕಾದಂಬರಿಯೂ ಪ್ರಕಟವಾಗುವುದರಲ್ಲಿದೆ. ಇದು ಅಂತರ್ರಾಷ್ಟ್ರೀಯ ಸ್ತ್ರೀ ವರುಷಕ್ಕೆ ಆನಂದರ ಕೊಡುಗೆ.

ಆನಂದರ ಬಗೆಗೆ ವಿಮರ್ಶೆ : ಈಗಾಗಲೇ ಆನಂದರ ಕೃತಿಗಳ ಮೇಲೆ ಅನೇಕ ವಿಮರ್ಶಕ ಗ್ರಂಥಗಳು ಪ್ರಕಟವಾಗಿವೆ. ಡಾ. ಕೆ. ಆರ್. ಶ್ರೀನಿವಾಸ ಅಯ್ಯಂಗಾರ್, ಪ್ರೊ. ಕೃಷ್ಣನಂದನ್ ಸಿನ್ಹಾ, ಮತ್ತು ಡಾ. ಎಂ. ಕೆ. ನಾಯಕ ಅವರ ಸ್ವತಂತ್ರ ವಿಮರ್ಶಾಕೃತಿಗಳು ಆನಂದರ ಸಾಹಿತ್ಯ ಮತ್ತು ಜೀವನದರ್ಶನವನ್ನು ವಿಶ್ಲೇಷಿಸಿ ಇಂಡೊ ಆಂಗ್ಲಿಯನ್ ಸಾಹಿತ್ಯಾಭ್ಯಾಸಿಗಳಿಗೂ, ಸಾಮಾನ್ಯ ಓದುಗರಿಗೂ ಅತ್ಯಂತ ಸಹಾಯ ಮಾಡಿದ್ದಾರೆ. ಆನಂದರ ಕೃತಿಗಳ ಬಗ್ಗೆ ಪರದೇಶಗಳಲ್ಲಿಯೂ ಅಧ್ಯಯನ ನಡೆದಿರುವುದು ಅವರ ಘನತೆಗೆ ಸಾಕ್ಷಿ. ಆನಂದರ ಮತ್ತು ಜಗತ್ತಿನ ಇತರ ಮಾನವತಾವಾದಿ ಸಾಹಿತ್ಯಿಗಳಾದ ಗಾರ್ಕಿ, ಡಿಕೆನ್ಸ್ ಮೊದಲಾದವರ ಕೃತಿಗಳನ್ನು ತುಲನಾತ್ಮಕವಾಗಿ ವಿಮರ್ಶಿಸುವುದು ಇಂಗ್ಲಿಷ್ ಸಾಹಿತ್ಯಾಭ್ಯಾಸಿಗಳು ಮಾಡಬೇಕಾದ ಕರ್ತವ್ಯ.

ಕಾಮಸೂತ್ರ,ಪಾಕಶಾಸ್ತ್ರದಿಂದ ತತ್ತ್ವಜ್ಞಾನದವರೆಗಿನ ಅನೇಕವಿಷಯಗಳ ಬಗ್ಗೆ ಗ್ರಂಥರಚಿಸಿದ ಆನಂದರ ಅಭಿರುಚಿ ಮತ್ತು ಜ್ಞಾನ ವೈವಿಧ್ಯಮಯುವಾದುದು, ಅಗಾಧವಾದುದು. ವರುಷಕ್ಕೆ ಕನಿಷ್ಠ ಪಕ್ಷ ಎರಡುಮೂರು ಬಾರಿ ವಿದೇಶಪ್ರಯಾಣ ಮಾಡುವುದು, ಇಲ್ಲವೆ ಸಾಹಿತ್ಯರಚನೆಯಲ್ಲಿ ಅಥವಾ ಕಲೆಯ ಅಭ್ಯಾಸದಲ್ಲಿ ತೊಡಗಿರುವ ಇವರಿಗೆ ದಣಿವು ಬೇಸರಗಳೇ ಇಲ್ಲ. ಹಿರಿಯ ಸಾಹಿತಿ ಎಂಬ ಒಣ ಅಭಿಮಾನವಿಲ್ಲದೆ, ಸದಾ ಹಸನ್ಮುಖದಿಂದಿರುವ, ತಮ್ಮ ಹೃದಯವಂತಿಕೆಯಿಂದ ಜನರ ಸ್ನೇಹ, ವಿಶ್ವಾಸಗಳನ್ನು ಗಳಿಸುವ ಇವರ ಉತ್ಸಾಹ ತರುಣರನ್ನು ನಾಚಿಕೆಗೊಳಿಸುವಂಥದು. 'ನಾನು ಅರವತ್ತು ವರುಷದ ಯುವಕ'ನೆಂದು ಹೇಳುವ ಆನಂದರು ಯುವಜನರಿಗೆ ಆದರ್ಶಪ್ರಾಯರಾಗಿದ್ದಾರೆ.

ಸಮಾರೋಪ : ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಗಳ ಮಧುರ ಸಂಗಮಕ್ಕಾಗಿ, ವಿಶ್ವಶಾಂತಿಗಾಗಿ ಹಾಗೂ ಮಾನವತೆಯ ಉದ್ಧಾರಕ್ಕಾಗಿ ಶ್ರಮಿಸುತ್ತಿರುವ ಆನಂದರು ನೂರ್ಕಾಲ ಬಾಳಲಿ !

ಎಂ. ವಿ. ಶ್ರೀನಿವಾಸಮೂರ್ತಿ

‘ಪಾಂಡು-ಮಾದ್ರಿಯರ ದುರಂತ’

ಪ್ರಪಂಚ ಸಾಹಿತ್ಯದ ಇತರ ಹಿಮಾಲಯ ಶಿಖರಗಳಲ್ಲಿ ‘ಭಾರತವು’ ‘ಗೌರೀಶಂಕರ’. ಇಲ್ಲಿ ಕಾಣುವದರ್ಶನ ಬೇರೆಲ್ಲೂ ಇಲ್ಲ. ಇಲ್ಲಿಯ ಪಾತ್ರಗಳು ನಮ್ಮ ನಿತ್ಯಜೀವನದಲ್ಲಿ ಕಂಡುಬರುವ ವ್ಯಕ್ತಿಗಳಿಗೆ ಸಮರಾಗಿಯೊ, ಸಮಧಿಕರಾಗಿಯೋ ಒಟ್ಟನಲ್ಲಿ ಸಮೀಪವರ್ತಿಗಳಾಗಿರುತ್ತವೆ. ಇಲ್ಲಿಯ ವ್ಯಕ್ತಿಗಳು ನಮ್ಮಂತೆಯೇ ಕಷ್ಟಸುಖಗಳನ್ನು ಎದುರಿಸುತ್ತಾರೆ, ಕಾಮ ವಿಕಾರಕ್ಕೆ ಒಳಗಾಗುತ್ತಾರೆ, ಸುಖಾಪೇಕ್ಷಿಗಳಾಗಿ ದುರಂತಕ್ಕೆ ಒಳಗಾಗುತ್ತಾರೆ. ಆದರೆ ಕವಿ ನಿರ್ಮಿತ ಪ್ರಪಂಚದ ವ್ಯಕ್ತಿಗಳು ಪಾತ್ರಗಳು ನಮ್ಮಿಂದ ಭಿನ್ನವಾದ ಒಂದು ವಿಶಿಷ್ಟ ವ್ಯಕ್ತಿತ್ವವನ್ನು ಪಡೆದುಕೊಂಡು ನಮಗೆ ಆದರ್ಶ ವ್ಯಕ್ತಿಗಳೆನಿಸಿ ತಮ್ಮ ಪ್ರಭಾವವನ್ನು ನಮ್ಮ ಮೇಲೆ ಬೀರಬಲ್ಲ ವಿಶಿಷ್ಟ ಗುಣೋಪೇತರಾಗಿ ಬಿಡುತ್ತಾರೆ. ನಮಗೆ ಸಮೀಪದವರೆನಿಸಿಯೂ ನಮ್ಮಿಂದ ದೂರ ಉಳಿದು ನಮ್ಮ ಬದುಕಿಗೆ ತೋರುಗಂಬವಾಗಿ ಬಿಡುತ್ತಾರೆ. ಈ ಮಾನಸಿಕ ಅಂತರ (Psychical distance) ದಿಂದಾಗಿ ಅವರು ನಮ್ಮ ಬದುಕಿಗೆ ಸಂಬಂಧಿಸದೆಯೂ ಸಂಬಂಧಿಸಿದಂತವರಾಗಿ ಪರಿಚಿತರಾಗಿ ಬಿಡುತ್ತಾರೆ. ಮಹಾಭಾರತದ ಅನೇಕ ದುರಂತ ಸನ್ನಿವೇಶಗಳಲ್ಲಿ ವಿಧಿಯ ಅಪ್ರತಿಹತ ಪ್ರಹಾರಕ್ಕೆ ತಲೆಬಾಗಿ ಜೀವನವನ್ನೊಪ್ಪಿಸಿ, ಸೋಲೊಪ್ಪಿದ ವ್ಯಕ್ತಿಗಳ ಸಾಲಿನಲ್ಲಿ ಮರೆಯಲಾಗದ ಚಿತ್ರ ಪಾಂಡು–ಮಾದ್ರಿಯವರದು. ವ್ಯಾಸ, ಪಂಪ, ಕುಮಾರವ್ಯಾಸರ ಕಾವ್ಯಗಳಲ್ಲಿ ಈ ಚಿತ್ರ ಹೇಗೆ ಒಡಮೂಡಿದೆ ಎಂಬ ಅಭ್ಯಾಸದ ಜೊತೆಗೆ ಆಧುನಿಕ ಕವಿ ಕಡೆಂಗೋಡ್ಲು ಶಂಕರ ಭಟ್ಟರ ‘ಮಾದ್ರಿಯ ಚಿತೆ’ ಕವನ ಇದೇ ‘ವಸ್ತು’ವನ್ನು ಕುರಿತಿದ್ದು ಹೇಗೆ ಸ್ವಂತಿಕೆಯಿಂದ ಬೆಳಗುತ್ತಿದೆ ಎಂಬುದರ ಅಧ್ಯಯನವೂ ಈ ಲೇಖನದ ವಸ್ತುವಾಗಿದೆ.

‘ಮನಸಿಜನ ಮಾಯೆ ವಿಧಿ ವಿಳಸನದ ನೆರಂ ಒಡೆಯೆ ಕೊಂದು ಕೂಗದೆ ನರರಂ’ಎಂಬ ಜನ್ನನ ವಾಣಿ ಇಂಥ ಅನೇಕ ಪ್ರಸಂಗಗಳಿಗೆ ಮಾರ್ದನಿಗೊಟ್ಟ ಒಂದು ಪಡೆ ನುಡಿಯಂತಿದೆ. ಕಾಮ (libido) ಮನುಷ್ಯನಲ್ಲಿ ಅನಿವಾರ್ಯವಾಗಿ ಅಭಿವ್ಯಕ್ತಗೊಳ್ಳಲು ಸದಾ ಅಪೇಕ್ಷಿಸುತ್ತಾ, ಅಂತರ್ಗಾಮಿಯಾಗಿರುವ ಒಂದು ವಿಶಿಷ್ಟ ಶಕ್ತಿ. ಈ ಶಕ್ತಿ ಸಂಚಯನದೊಂದಿಗೇ, ಪ್ರಕಟವಾಗುವ ಮುಖಗಳು, ಸನ್ನಿವೇಶಗಳು ಹಲವಾರು. ಬದುಕಿನ ಸೊಬಗಿಗೆ ನೆರವಾಗುವ, ಹೊಸ ಆಯಾಮಗಳನ್ನು ತೆರೆದು ವಿಭಿನ್ನ ಪ್ರಪಂಚದ ಅಸ್ತಿತ್ವಕ್ಕೆ ಕಾರಣವಾಗುವ ಈ ಮೂಲಭೂತ ಶಕ್ತಿ ಸನ್ನಿವೇಶ ಮಹಿಮೆಯಿಂದಲೋ, ವ್ಯಕ್ತಿಗಳ ಅಚಾತುರ್ಯದಿಂದಲೋ, ಅಥವಾ ಅಸ್ಥಿರ ಭೂಮಿಕೆಯಿಂದಾಗಿಯೋ ಅಪಾಯಕಾರಿಯಾಗುವ ಸಂಭವವೂ ಉಂಟು, ಇಲ್ಲದ ಸಮಸ್ಯೆಗಳನ್ನು ಒಡ್ಡುವುದುಂಟು, ಕೆಲವು ವೇಳೆ ಮಾರಕವಾಗುವುದೂ ಉಂಟು. ಪಾಂಡುವಿನ ಬದುಕಿನಲ್ಲಂತೂ ಅಸ್ಥಿರ ಕಾಮ ತನ್ನ ಕಾಮಕ್ಕೆ ಪ್ರತಿಕೂಲವಾಗಿ ಪರಿಣಮಿಸಿದುದರ ವಿಚಿತ್ರ ಸನ್ನಿವೇಶವನ್ನು ಕಾಣುತ್ತೇವೆ ಹಾಗಾಗಿ ಮಾದ್ರಿ–ಕುಂತಿಯರ ತಾಯ್ತನದ ಬಯಕೆಗೆ ವಿಚಿತ್ರ ಸವಾಲಾಗಿ ನಿಂತ ಈ ‘ಕಾಮ’ ಧರ್ಮಅವಿರುದ್ಧ ‘ಕಾಮ’ಕ್ಕೆ ಎಡೆಮಾಡಿಕೊಡುವುದನ್ನೂ

ಕಾಣುತ್ತೇವೆ. ಇಷ್ಟಾಗಿಯೂ ತನ್ನ ಪಾಲಿನ ಸುಖವನ್ನು ಬೇಡುವ ಪ್ರಶ್ನೆ ಬಂದಾಗ ಇದು ಮರಣಾಂತಿಕವಾಗಿ ಪರಿಣಮಿಸುತ್ತದೆ.

ವ್ಯಾಸರು ನಿರ್ಲಿಪ್ತವಾಗಿ ಯಾವುದೇ ಸನ್ನಿವೇಶವನ್ನೂ ವರ್ಣಿಸಬಲ್ಲರು ಎಂಬುದಕ್ಕೆ ಈ ಸನ್ನಿವೇಶವೂ ಒಂದು ನಿದರ್ಶನವಾಗುತ್ತದೆ. ದಿಗ್ವಿಜಯ ಮಾಡಿಕೊಂಡು ಬಂದ ಪಾಂಡು ತಂದ ಐಶ್ವರ್ಯವನ್ನು ಎಲ್ಲರಿಗೂ ಹಂಚಿ ಕುಂತೀ–ಮಾದ್ರಿಯರೊಂದಿಗೆ ವನವಿಹಾರಕ್ಕಾಗಿ ಹೊರಟನಂತೆ. ದಿಗ್ವಿಜಯದಲ್ಲಿ ಅಗಲಿದ್ದ ಪತ್ನಿಯರೊಂದಿಗೆ ಏಕಾಂತವನ್ನು ಅನುಭವಿಸುವ ಆಸೆಯು ಸಹಜವಾದುದಾದರೂ ಗುರುಹಿರಿಯರ ಕಣ್ಣು ತಪ್ಪಿಸಿ ಕಾಡಿನಲ್ಲಿ ಸ್ವೇಚ್ಛೆಯಾಗಿರಬೇಕೆಂಬ, ಸ್ವೈರ ವಿಹಾರದ ಬಯಕೆಯಲ್ಲಿಯೇ ಅವನ ದುರಂತದ ಬಿತ್ತನ್ನು ವ್ಯಾಸರು ಕಂಡುಕೊಂಡಂತೆ ಕಾಣುತ್ತದೆ. 'ಇವನ ಸಂಚಾರವು ಎರಡು ಹೆಣ್ಣಾನೆಗಳಿಂದ ಕೂಡಿದ ಐರಾವತದ ಸ್ವೇಚ್ಛಾವಿಹಾರದ ಸ್ಮರಣೆಯನ್ನುಂಟು ಮಾಡುತ್ತಿತ್ತು.'[1] ಅಲ್ಲಿಯೂ ಅವನ ರಾಜಭೋಗಕ್ಕೆ ಯಾವ ಕೊರತೆಯೂ ಉಂಟಾಗದಂತೆ ಧೃತರಾಷ್ಟ್ರನು ಸುಖೋಪಭೋಗ ವಸ್ತುಗಳನ್ನು ಒದಗಿಸುತ್ತಿದ್ದನಂತೆ. ಈ ಸ್ವೇಚ್ಛಾವಿಹಾರದ ಕತೆಯೇ ಪರಿಣಾಮ ದುರಂತತೆಗೆ ಕಾರಣವಾಗಿದೆ ಎಂಬ ಅಂಶವನ್ನು ತಮ್ಮ ತೂಕವಾದ ಮಾತಿನಿಂದ ವ್ಯಾಸರು ಗುರುತಿಸಿದ್ದಾರೆ

ಗಂಡು ಜಿಂಕೆಯೊಂದು ಹೆಣ್ಣು ಜಿಂಕೆಯೊಂದಿಗೆ ಸುರತದಲ್ಲಿದ್ದಾಗ ಪಾಂಡು ಮೃಗಯುಗಳಕ್ಕೆ ಗುರಿಯಿಟ್ಟು ಹೊಡೆದ. ಅವನ ದುರದೃಷ್ಟಕ್ಕೆ ಅವು ಮೃಗಯುಗ್ಮವಾಗಿರದೆ ಋಷಿಕುಮಾರನೊಬ್ಬ ಮೃಗೀರೂಪಧಾರಿಣಿ ಪತ್ನಿಯೊಡನೆ ಕ್ರೀಡಿಸುತ್ತಿದ್ದ. ಮಾನುಷ ಧ್ವನಿಯಲ್ಲಿ ಆರ್ತನಾದ ಮಾಡಿ ಕೆಳಗುರುಳಿದ. ಜಿಂಕೆಯು ಋಷಿರೂಪ ಧರಿಸಿ ಪಾಂಡುವಿಗೆ ಹೇಳಿದ ಮಾತುಗಳು ಮನನೀಯವಾಗಿವೆ.

> ಕಾಮಮನ್ಯು ಪರೀತಾ ಹಿ ಬುದ್ಧ್ಯಾ ವಿರಹಿತಾ ಅಪಿ
> ವರ್ಜಯನ್ತಿ ನೃಶಂಸಾನಿ ಪಾಪೇಷ್ವಪಿ ರತಾ ನರಾಃ[2]

(ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳಿಗೆ ದಾಸರಾಗಿರುವ ಮತ್ತು ಸರ್ವದಾ ಪಾಪಕ್ರಿಯೆಗಳನ್ನೇ ಮಾಡುವ ಮಾನವರು ಕೂಡ ನೀನು ಮಾಡಿದಂತಹ ಕ್ರೂರ ಕರ್ಮವನ್ನು ಎಂದಿಗೂ ಮಾಡುವುದಿಲ್ಲ)

ಮೃಗಹತ್ಯೆಯ ವಿಚಾರದಲ್ಲಿ ವಾದಕ್ಕೆ ಇಳಿಯುತ್ತಾನೆ ಪಾಂಡು. ತಾನು ಮಾಡಿದ್ದು ಸರಿ ಎಂದು ಸಮರ್ಥಿಸಿಕೊಳ್ಳಲು ಹೆಣಗಾಡುತ್ತಾನೆ. ಮಾಡಿದ್ದು ತಪ್ಪು ಎಂದೊಪ್ಪಿಕೊಳ್ಳುವ, ಪ್ರಾಯಶ್ಚಿತ್ತವನ್ನು ಬೇಡುವ, ಪಶ್ಚಾತ್ತಾಪಕ್ಕೆ ಒಳಗಾಗುವ ಯಾವ ಲಕ್ಷಣವನ್ನೂ ತೋರಿಸದ ಪಾಂಡು ಸಹಜವಾಗಿಯೇ ಎಲ್ಲರ ಸಹಾನುಭೂತಿಯನ್ನೂ ಕಳೆದುಕೊಳ್ಳುತ್ತಾನೆ. ಅಗಸ್ತ್ಯರು ಮೃಗಗಳನ್ನು ಅರ್ಪಿಸಿದ ವೃತ್ತಾಂತವನ್ನು ಹೇಳಿ (ಮಹಾಸತ್ರಕ್ಕಾಗಿ ಮಾಡಿದ ಹಿಂಸೆ ಒಂದು ರೀತಿಯಲ್ಲಿ ಅವುಗಳ ಬದುಕಿನ ಸಾರ್ಥಕತೆ ಎಂದು ತಿಳಿಯುವ ಕಾಲವಿತ್ತಲ್ಲವೆ? ಭಾಸನ ಪ್ರತಿಮಾನಾಟಕದಲ್ಲಿ ಋಷಿಗಳು ಶ್ರಾದ್ಧ ಮಾಡುವಾಗ ತಮ್ಮ ಮನಸ್ಸಂಕಲ್ಪದಿಂದ ಯಜ್ಞಕುಂಡಕ್ಕೆ ಮೃಗಗಳು ತಾವಾಗಿಯೇ ಬಂದು ಬೀಳುವಂತೆ ಮಾಡುತ್ತಿದ್ದರೆಂಬ ವಿಚಾರವಿದೆ. ಇವೆಲ್ಲವೂ ಒಂದು ರೀತಿಯಲ್ಲಿ ಯಜ್ಞಪಶುಗಳು, ಬಲಿದಾನಗಳು. ಆದರೆ ಇಲ್ಲಿ ಅಂತಹ ಯಾವ ಮಹಾಕಾರ್ಯಕ್ಕಾಗಿ ಪಾಂಡು ಈ ಯುಗ್ಮಗಳ ಬಲಿದಾನವನ್ನು ಬೇಡುತ್ತಿದ್ದಾನೆ? ಧರ್ಮರಾಯ ಯಮಧರ್ಮನ ಅಂಶ ಎಂಬುದನ್ನು ಹೇಳುವಾಗ ಮಹಾಭಾರತದಲ್ಲಿ ಅಣಿಮಾಂಡವ್ಯ ಋಷಿಯ ಕಥೆ ಬರುತ್ತದೆ. ಬಾಲನಾಗಿದ್ದಾಗ ಪತಂಗಿಗಳ ಪೃಷ್ಠಭಾಗಕ್ಕೆ ಹುಲ್ಲಿನ ಕಡ್ಡಿಯಿಂದ ಚುಚ್ಚಿದ್ದಕ್ಕೆ ಈಗ ಶರೀರದೊಳಗೆ ಶೂಲ ಹೊಕ್ಕಿಕೊಂಡಿದೆ ಎಂಬ ವಿವರಣೆ ಪಾಪಕ್ಕೆ ಎಂಥ ದಂಡನೆ

---

1. ಶ್ರೀಮನ್ಮಹಾಭಾರತ-ಸಂಪುಟ 2. ಭಾರತ ದರ್ಶನ ಪ್ರಕಾಶನ ತ್ಯಾಗರಾಜನಗರ.ಬೆಂಗಳೂರು. 1973, ಪುಟ 723.
2. ಅದೇ. ಪುಟ–735–736.

ಎಂದು ಬೆರಳು ಕಚ್ಚುವಂತೆ ಮಾಡುತ್ತದೆಯಲ್ಲವೆ?) ಸಮರ್ಥಿಸಿಕೊಳ್ಳುತ್ತಾನೆ. ಪ್ರತ್ಯುತ್ತರವಾಗಿ ಋಷಿಕುಮಾರ ತಾವು ಸುರತವಿರಮಿತರಾಗುವವರೆಗೂ ಕಾದಿದ್ದರೆ ದೂಷ್ಯನಾಗುತ್ತಿರಲಿಲ್ಲವೆಂದೂ, ಕಾಮತೃಪ್ತಿ ಇನ್ನೂ ಹೊಂದಿರಲಿಲ್ಲವಾಗಿ, ಸುರತ ಕ್ರಿಯೆಯ ಸುಖವನ್ನು ಬಲ್ಲ ಪಾಂಡುವಿಗೆ ಅದರಿಂದ ವಂಚಿತನಾಗುವಂತೆ ಶಾಪ ಕೊಡುತ್ತಾನೆ.

> ಧ್ವಯೋರ್ನೃಶಂಸಕರ್ತಾರಮವಶಂ ಕಾಮಮೋಹಿತಮ್
> ಜೀವಿತಾನ್ತಕರೋ ಭಾವ ಏವಮೇವಾಗಮಿಷ್ಯತಿ[3]
>
> (ಅಧ್ಯಾಯ 118-ಶ್ಲೋಕ-27.)

ರಾಮಾಯಣದ ಮೊದಲನೆಯ ಶ್ಲೋಕ ಹೀಗೇ ಬರುತ್ತದೆಯಲ್ಲವೆ ?

> ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ
> ಯತ್ ಕ್ರೌಂಚ ಮಿಥುನಾದೇಕಮವಧೀಃ ಕಾಮಮೋಹಿತಂ.

ನಿಷಾದ ವಿದ್ಧಾಂಡಜ ದರ್ಶನೋತ್ಥಃ ಶ್ಲೋಕತ್ವ ಮಾಪದ್ಯತ ಯಸ್ಯ ಶೋಕಃ[4]

ಒಂದು ಮಹಾಕಾವ್ಯದ ಉದಯಕ್ಕೆ ಕಾರಣವಾದ ಪ್ರಸಂಗವಾದರೆ ಮತ್ತೊಂದು ದಾರುಣ ವಿಷಾದಕ್ಕೆ, ದುರಂತಕ್ಕೆ, ಕಾರಣವಾಗುತ್ತದೆ. ಒಂದರಲ್ಲಿ ವಾಲ್ಮೀಕಿ ಮಹರ್ಷಿ ಪ್ರೇಕ್ಷಕ, ಮತ್ತೊಂದರಲ್ಲಿ ಋಷಿಕುಮಾರ ಬಾಣಹತಿಗೆ ಒಳಗಾಗಿ ಸಾವನ್ನು ಎದುರಿಸುತ್ತಿರುವ ವ್ಯಕ್ತಿ. ಬೇಡನಿಗೆ ಶಾಪ ಕೊಡುವುದರಲ್ಲಿ ತಾನು ಮಾಡುತ್ತಿರುವುದು ಸರಿ ಎಂಬ ಭಾವವಿದೆ. ತಪ್ಪಿಗೆ ಪ್ರಾಯಶ್ಚಿತ್ತವಾಗಲೇಬೇಕೆಂಬ ನಿಯತಿಯಿದೆ. ಎರಡರಲ್ಲೂ ಸಮಾನವಾದ ಪದ ‘ಕಾಮಮೋಹಿತಂ’. ಎರಡೂ ಸನ್ನಿವೇಶಗಳ ತೀವ್ರತೆ ಭಿನ್ನವಾದರೂ ಪ್ರಸಂಗಾವಧಾನ ಮಾತ್ರ ಅಷ್ಟೇನೂ ಭಿನ್ನವಲ್ಲ ಎನಿಸುತ್ತದೆ.

ಇದು ದುರಂತದ ಪೂರ್ವ ಕಥನವಾದರೆ, ಉತ್ತರ ಕಥನವೇ ಬೇರೆ. ಶಾಪ ಒದಗಿದ ಪ್ರಸಂಗವನ್ನು ಕುರಿತು ವ್ಯಾಸರಿಂದ ಹಿಡಿದು ಕುಮಾರವ್ಯಾಸನವರೆಗೆ ಅಷ್ಟೇನೂ ವ್ಯತ್ಯಾಸವಿಲ್ಲದ ಕಥನವಿದೆಯಾದರೂ ಪಾಂಡುವಿನ ಮರಣದ ಬಗೆಗೆ ಕೊನೆಯ ಅಂಕವನ್ನು ಚಿತ್ರಿಸುವಲ್ಲಿ ಕಲ್ಪನೆ ವೈವಿಧ್ಯಮಯವಾಗಿದೆ. ಮಹಾಕಾವ್ಯವನ್ನು ನಿರ್ವಹಿಸಬೇಕಾದ ಕಾಳಜಿ, ಗಾತ್ರ, ವೈಭವದ ಕಡೆಗೆ ಗಮನವಿದ್ದು ನಮ್ಮ ಎಲ್ಲ ಕವಿಗಳೂ ಈ ಅವಧಿಯಲ್ಲಿ ಪಾಂಡು ಅನುಭವಿಸಿರಬಹುದಾದ ಯಾತನೆಯನ್ನು ಅಷ್ಟಾಗಿ ಚಿತ್ರಿಸಲು ಹೋಗಲಿಲ್ಲ. ತಪಸ್ಸನ್ನು ಕೈಗೊಂಡು ಬ್ರಹ್ಮರ್ಷಿಯಾಗಿ, ಬ್ರಹ್ಮಲೋಕಕ್ಕೆ ಹೋಗಲೆಳಸಿ, ಸಂತಾನಪ್ರಾಪ್ತಿಯಾದಲ್ಲದೆ ಅವಕಾಶವಿಲ್ಲೆಂದು ಹಿಂತಿರುಗಿ ಬಂದನೆಂದು ಹೇಳಿ ವ್ಯಾಸರು ಅಷ್ಟಕ್ಕೇ ತೃಪ್ತರಾಗುತ್ತಾರೆ. ಇಂದ್ರಿಯ ನಿಯಮದ ಬೇಡಿಕೆಯನ್ನು ಬಲವಂತವಾಗಿ ಪಾಂಡುವಿಗೆ ತೊಡಿಸಿಬಿಟ್ಟು ತಾವು ನಿಶ್ಚಿಂತರಾಗಿ ಬಿಡುತ್ತಾರೆ, ಅದೂ ಕಲ್ಪಲತೆಗಳೆರಡರ ನಡುವಣ ಕಲ್ಪತರುವಾದ ಅವನು! ಮೃಗಮಿಥುನದ ಸುರತವನ್ನು ನೋಡಿ ಸಹಿಸಲಾಗದ ಪುಣ್ಯಾತ್ಮ! ಪಂಪ ಕುಮಾರವ್ಯಾಸರು ಪಾಂಡುವನ್ನು ಹೆಚ್ಚು ಮಾನವೀಯವಾಗಿ ನೋಡುವ ಪ್ರಯತ್ನಮಾಡಿದ್ದರೂ ಮನೋವಿಶ್ಲೇಷಣೆ (Psycho-Analysis) ಗಮನಾರ್ಹವಾಗೇನಿಲ್ಲ. ಈ ದೃಷ್ಟಿಯಲ್ಲಿ ಪಾಂಡುವಿನ ಯಾತನೆಯನ್ನು, ಅದಕ್ಕೂ ಹೆಚ್ಚಾಗಿ ಮಾದ್ರಿಯ ಯಾತನೆಯನ್ನು ಅರ್ಥೈಸಿದವರು ಕಡೆಂಗೋಡ್ಲು ಶಂಕರಭಟ್ಟರು.

ವಸಂತಗಜ ಪಾಂಡುವಿನ ಮೇಲೆ ನಡೆದ ರೀತಿಯನ್ನು ವ್ಯಾಸರಿಗಿಂತ ಪಂಪ ಸಮರ್ಥವಾಗಿ ಚಿತ್ರಿಸಿದ್ದಾನೆ. ಕುಮಾರವ್ಯಾಸ ಪಂಪನಿಗೆ ಋಣಿಯಾಗಿರುವಂತೆ ತೋರುತ್ತದೆ. ವ್ಯಾಸರ ಪಾಂಡು ಮಾದ್ರಿಯೊಂದಿಗೆ ಸ್ವೇಚ್ಛೆಯಿಂದ ವನವಿಹಾರವನ್ನು ಕೈಗೊಳ್ಳುತ್ತಾನೆ. ಕುಸುಮಬಾಣಕ್ಕೆ ಒಳಗಾಗಿ. ಮುನಿಯ ಶಾಪವನ್ನು ನಿಜ

---

3. ಅದೇ ಪುಟ. 738.
4. ರಘುವಂಶ–ಕಾಳಿದಾಸ–14–70.

ಮಾಡುವಂತೆ ಮಾದ್ರಿಯ ಕೈ ಹಿಡಿಯುತ್ತಾನೆ. ಮಾದ್ರಿ ವ್ಯರ್ಥವಾಗಿ ಹೋರಾಡುತ್ತಾಳೆ. ಮನ್ಮಥನ ಪಂಚ ಬಾಣಗಳು ಪಾಂಡುವಿನ ಪಂಚತ್ವವನ್ನೇ ಸಾಧಿಸಿದವು. ಕಾಮ ಪೂರ್ಣವಾಗಿಲ್ಲವಾದ್ದರಿಂದಲೂ, ತನ್ನ ಮಕ್ಕಳನ್ನು ತನಗಿಂತ ಚೆನ್ನಾಗಿ ಕುಂತಿ ನೋಡಿಕೊಳ್ಳುವಳೆಂದೂ ಒಡಂಬಡಿಸಿ ಮಾದ್ರಿ ಪಾಂಡುವಿನ ಚಿತೆಯನ್ನೇರುವಳು.

ಪಂಪನಲ್ಲಿ ಈ ಪ್ರಸಂಗ ಚೇತೋಹಾರಿಯಾಗಿದೆ. 'ಈ ಮುನಿಗಳ್ಗೀಗೆಯ್ದೊಡಂ ತೀರದೆ' ಎಂದು ಪರಾಶರ –ಮತ್ಸ್ಯಗಂಧಿ ಪ್ರಕರಣವನ್ನು ಕುರಿತು ಅವನು ತೆಗೆದ ಉದ್ಗಾರ ಈ ಸನ್ನಿವೇಶಕ್ಕೂ ಅನ್ವಯಿಸುತ್ತದೆ.

> ಇನಿಯಳನಪ್ಪಿಯಿಂದೆ ಮೃಗಿಯಾಡಿ ಮನೋಜ ಸುಖಕ್ಕೆ ಸೋಲ್ತು ಅಲಂ
> ಪಿನೆ ನೆರೆವಲ್ಲಿ ದಿವ್ಯಮುನಿಯುಂ ಮೃಗಮಾಗಿ ಮರಲ್ದು ಕೂಡೆ ನೆ
> ಲ್ಲನೆ ಮೃಗಮೆಂದು ಸಾರ್ದು ನೆಜಿನಂ ನಡೆನೋಡಿ ನರೇಂದ್ರನೆಚ್ಚು ಭೋಂ
> ಕನೆ ಮೃಗಚಾರಿಯುಂ ತನಗೆ ಮಾಣದೆ ತಂದನದೊಂದು ಮಾರಿಯಂ

ಪಾಂಡು ಮಾಡಿದ್ದಂತೂ ಸರಿಯಲ್ಲವೆಂದು ಯಾರಿಗಾದರೂ ಅನಿಸದೆ ಇರದು. 'ನೆಜಿನಂ ನಡೆನೋಡಿ' ಎಚ್ಚಿದ್ದೇಕೆ ? ಬೀದಿಯಲ್ಲಿ ಹೋಗುವ ಮಾರಿಯನ್ನು ಮನೆಗೆ ಕರೆತಂದದ್ದೇಕೆ ? 'ಮಾರಿ' ಎಂಬ ಉಚಿತ ಪದ ಪ್ರಯೋಗವನ್ನು ಕುರಿತು ಎಷ್ಟಾದರೂ ಅರ್ಥೈಸಬಹುದು. ಪಾಂಡುವಿನ ಮಾರಣಹೋಮದ ಪೂರ್ವದ ಸದ್ದು ಗದ್ದಲಗಳೆಲ್ಲವೂ ಮುನಿಯ ಆರ್ತನಾದದಲ್ಲಿಲ್ಲವೇ ? ಇವನಿಗರಿಯದಂತೆಯೇ 'ಮರಣಕ್ಕೆಂದೇ ತಂದ ಕುರಿ ತಳಿರ ಮೇಯುವಂತೆ' ಮಾದ್ರಿಯೊಂದಿಗೆ ಕೊನೆಯ ಬೇಟವನ್ನು ನಡೆಸಿದಾಗ ಇದು ತನ್ನ ಬೇಟೆಯ ಪ್ರತಿಫಲ ಎಂದು ಅವನಿಗೆ ಅರಿವಾಗುವುದಕ್ಕೆ ಮುನ್ನವೇ ಅವನು ಬೇಟೆಯ ಬಲಿಯಾಗುವುದು.—ಈ ಪದಪ್ರಯೋಗದ ಔಚಿತ್ಯಕ್ಕೆ ಸಾಕ್ಷಿಯಾಗಿದೆ. ಪ್ರಸನ್ನ ಗಂಭೀರ ಹಿತಮಿತ ಮೃದುವಚನರಚನ ಚತುರನಾದ ಪಂಪನಿಗೆ ಈ ಪ್ರಸಂಗದೊಳಗಿನ ಒಳತಿರುಳು ಮನವರಿಕೆಯಾಗಿದೆ ಎಂಬುದನ್ನು ಹೇಳಬೇಕೆ ?

ವ್ಯಾಸರ ಪಾಂಡುವಿನಂತಲ್ಲದೆ ಪಂಪನ ಪಾಂಡು ವಿಚಾರವಂತಿಕೆಯನ್ನು ತೋರ್ಪಡಿಸುತ್ತಾನೆ. 'ಎನ್ನ ಗೆಯ್ದ ಕಾಮಾಕ್ರಾಂತಕ್ಕೆ ಕಾಮಕೃತಮೇಂ ಪಿರಿದಲ್ತು'ಎನ್ನುತ್ತಾನೆ. 'ಆಕ್ರಾಂತ' ಶಬ್ದ ತಾನು ಅಪರಾಧಿ ಎಂಬುದನ್ನು ಒಪ್ಪಿಕೊಂಡು ತನ್ನದೇ ಮನೋವಿಶ್ಲೇಷಣೆಯನ್ನು ಮಾಡುತ್ತದೆ. 'ಕಾಮಕೃತ'ಕ್ಕೆ ಎರಡು ರೀತಿಯಿಂದ ಅರ್ಥೈಸಬಹುದು. ಕಾಮ ತನಗೆ ನೀಡಿದ ಶಿಕ್ಷೆ ಬಹಳವೇನಲ್ಲ ! ತನ್ನಲ್ಲಿ ಅಡಕವಾಗಿದ್ದ ಕಾಮ ಎಂದರೆ ಅನ್ಯರ ಕಾಮದ ಬಗೆಗಿನ ಅಸಹಿಷ್ಣುತೆ ಎಂದೂ ಅರ್ಥೈಸ ಬಹುದು. ಇನ್ನೊಂದು ಸರಳವಾದ 'ಮನ್ಮಥ' ಎಂಬ ಅರ್ಥ. ಆದರೆ ಈ ಪ್ರಸಂಗವನ್ನು 'ಅಘಟಿತ ಘಟಿತ'ಎಂದು ಸುಲಭವಾಗಿ ನುಣುಚಿಕೊಳ್ಳುವಂತೆ ಮಾಡಿದ್ದಾನೆ ಪಂಪ. ತತ್ತ್ವಜ್ಞಾನದ ಮರೆಹೋಗುವ ಅನಾಯಾಸ ದಾರಿಯನ್ನು ತೋರಿಸಿದ್ದಾನೆ ಪಾಂಡುವಿಗೆ. 'ಸಾರಮನಂಗ ಜಂಗಮ ಲತಾ ಲತಾಂಗಿಯರಿಂದಲ್ತೆ ಸಂಸಾರಂ' ಅದು ತನಗೆ ತಪ್ಪಿಹೋಗುವುದಲ್ಲಾ ಎಂಬ ಚಿಂತೆ ಅವನಿಗೆ. ಅದು 'ತಪ್ಪದು ಎನಗೆ' ಎಂಬ ಮಾತಿನಲ್ಲಿಯ ವ್ಯಥೆಯ ಸಾರವನ್ನು ಗಮನಿಸಬೇಕು. 'ಆರುಮಿದರ್ಕೆ ವಕ್ರಿಸದಿರಿಂ' ಎಂದು ಹೇಳಿದರೂ ಪೆಪ್ಪರಮೆಂಟನ್ನು ಚಪ್ಪರಿಸಿದ ಅನುಭವವುಳ್ಳ ಬಾಲಕನಂತೆ ನಿಷೇಧದ ಮೂಲಕವೇ ತನ್ನ ಮನದಾಸೆಯನ್ನು ವ್ಯಕ್ತಪಡಿಸುತ್ತಾನೆ. ಇದನ್ನು ಅರಿತಿದ್ದರಿಂದಲೇ ಬಹುಶಃ ಕುಂತಿ–ಮಾದ್ರಿಯರು ಪಂಚೇಂದ್ರಿಯಗಳಲ್ಲಿ ಒಂದರ ಸುಖವನ್ನಾದರೂ ನೋಡೋಣ ಎಂದು (ಕಣ್ಬೇಟ) ಬೆನ್ನ ಬೆನ್ನನೆ, (ಬಿನ್ನ ಬಿನ್ನನೆ) ಪೋದರಂತೆ.

ವಸಂತಗಜ ಪಾಂಡುವಿನ ಮೇಲೆ ಬಿದ್ದ ರೀತಿಯನ್ನು ಪಂಪ ತುಂಬಾ ಶಕ್ತಿಯುತವಾಗಿ ವರ್ಣಿಸಿದ್ದಾನೆ. ವಸಂತಮಾಸ ಘೋಷಿಸಿಕೊಂಡೇ (ನಗಾರಿ, ತಮಟೆ ಹೊಡೆದು ಸಾರಿಕೊಂಡು ಬರುತ್ತದೆ) ವಿರಹಿಗಳಿಗೆ ಎಚ್ಚರಿಕೆ ನೀಡುತ್ತಾ ಬರುತ್ತದ. 'ಬರಯಿಯಬಿಟ್ಟುವೆಂ' ಅದರ ಮೊದಲಮಾತು. ಇದು ಪಾಂಡುವಿಗೇ ಹೆಚ್ಚು ಅನ್ವಯ. ಇತರ ವಿರಹಿಗಳಿಗೆ ಮೃತ್ಯುಸ್ವರೂಪವಾಗುವಷ್ಟರಮಟ್ಟಿಗೆ ಕ್ರೂರವಲ್ಲದ ವಸಂತ ಪಾಂಡುವಿನ ಪಾಲಿಗೆ

‘ಮಿಟ್ಟುವೇ’ ಆಗಿ ಪರಿಣಮಿಸುತ್ತಾನೆ. ಈ ವಸಂತ ಪಾಂಡುವಿನಲ್ಲಿ ಸುಪ್ತವಾಗಿದ್ದ ಅರಳಿದ ಕಾಮ ತಾನೆ? ಹೊರಗಿನ ವಸಂತ ಉದ್ದೀಪನ ವಿಭಾವ ಅಷ್ಟೆ, ಆದರೆ ಆಲಂಬನ ವಿಭಾವವೂ, ಭಾವವೂ ಇವೇ ತಾನೆ? ಇಲ್ಲಿ ಉಂಟಾವ ರಸ ಮಾತ್ರ ಶೃಂಗಾರವಾಗದೆ ಕರುಣ, ಅಥವಾ ಭೀಭತ್ಸ. ಮಾದ್ರಿಯನ್ನು ಕೂಡಿದಾಗ ಅವಳ ದೇಹಕ್ಕೇ ಅಂಟಿಕೊಂಡು ಸತ್ತ ಪಾಂಡುವಿನ ಚಿತ್ರ ಕರುಣಕ್ಕಿಂತ ಭೀಭತ್ಸವೇ ಆಗುತ್ತದೆ. ಆದಕ್ಕೆಂದೇ ವ್ಯಾಸ ಭಾರತದಲ್ಲಿ ಮಾದ್ರಿ ಕುಂತಿಯೊಬ್ಬಳನ್ನೇ ಬರುವಂತೆ, ಮಕ್ಕಳು ಬರದಿರುವಂತೆ ಸೂಚಿಸುತ್ತಾಳೆ. ಪಂಪನಂಥ ಜಿನಕವಿಗೆ ವೈರಾಗ್ಯವನ್ನು ಬೋಧಿಸಲು ಒಂದು ಸೊಗಸಾದ ಪ್ರಸಂಗ ಇದು. ಆದರೆ ಅವನ ಬಾಯಿ ಕೂಡ ಕಟ್ಟಿಹೋಗಿದೆ ಈ ಭಯಂಕರ ಪ್ರಸಂಗದಿಂದಾಗಿ.

‘ಪೋಗದೆ ಪಾಡುತಿರ್ಪಳಿಯ ಬೃಂಹಿತವಾಗಿರೆ....ಕೋಡುಗೊಂಡು ಪರಿವತ್ತು ವಸಂತಗಜಂ ವಿಯೋಗಿಯುಂ’[೬]....‘ಕೋಡುಗೊಂಡು’ ಪದಕ್ಕೆ ಎಂಥ ಶಕ್ತಿಯಿದೆ! ಕೋಡನ್ನು ಮುಂದೆ ಮಾಡಿಕೊಂಡು ಎಂಬ ಸಾಮಾನ್ಯಾರ್ಥವಲ್ಲದೆ ‘ಕೋಡು’ ಎಂಬುದಕ್ಕೆ ‘ಚಳಿ’, ‘ಕೊರೆತ’ ಎಂಬರ್ಥ ಇಟ್ಟುಕೊಂಡರೆ ಎಂಥವರನ್ನೂ ಕೊಕ್ಕರಿಸುವಂತೆ ಮಾಡುವ ಶಕ್ತಿಯುಳ್ಳದೆಂಬ ಅರ್ಥ ವ್ಯಂಜಕವಾಗುವುದಿಲ್ಲವೆ? ವ್ಯಾಸಭಾರತದಲ್ಲಿ ಪಾಂಡು ಮಾದ್ರಿಯೊಂದಿಗೆ ವಿಹಾರಹೊರಟು ಆಲಂಬನ ವಿಭಾವನ್ನೂ ಒಟ್ಟಿಗೆ ಕಟ್ಟಿಕೊಂಡು ಹೊರಟಿದ್ದರೆ, ಪಂಪ ಉಚಿತವಾಗಿ ಬೇರ್ಪಡಿಸಿಕೊಂಡು ಬೇರೆಬೇರೆಯಾಗಿ ಹೊರಟು ಒಮ್ಮೆಗೇ ಸಂಧಿಸುವಾಗಿನ ತೀವ್ರತೆಯನ್ನು ಉಳಿಸಿದ್ದಾನೆ. ಮಾದ್ರಿಯ ಸ್ವಭಾವ ‘ಗರ್ವವ್ಯಾಲೆ, ಕ್ರೀಡಾನುಶೀಲೆ’ ಪದಗಳಲ್ಲಿ ವ್ಯಕ್ತವಾಗಿವೆ. ಇದರಿಂದ ಪಾಂಡುರಾಜನ ಮನದಲ್ಲಿ ಅವಳ ಗಾಡಿ ತಡಂ ಆಡುತ್ತದೆ. ಮಿಟ್ಟುದೇವತೆಯನ್ನು ಅಪ್ಪುವಂತೆ ಅಪ್ಪುತ್ತಾನೆ. ಮಾದ್ರಿಗೆ ಎಂಥ ಉಡುಗೊರೆ! ಮಿಟ್ಟುದೇವತೆ! ಅವನ ಹೆಂಡತಿಯಾದದ್ದಕ್ಕೆ, ಅವನು ವಿಚಾರ ಮಾಡದೆ ಮೃಗಯುಗಗಳನ್ನು ಹೊಡೆದದ್ದಕ್ಕೆ, ಅವಳ ಪಾತ್ರ ಈ ಅವನತಿಯನ್ನು ಅನುಭವಿಸಬೇಕಾಯಿತು. ಪಾಂಡುವಿನ ದುರಂತದೊಂದಿಗೆ ಮಾದ್ರಿಯ ದುರಂತವೂ ಬೆಸೆದುಕೊಂಡಿದೆ– ಅವರಿಬ್ಬರ ದೇಹಗಳಂತೆ. ಈ ದುರಂತ ನಾಣ್ಯದ ಎರಡು ಮುಖಗಳ ಅಧ್ಯಯನದಿಂದ ಮಾತ್ರ ಈ ಪ್ರಸಂಗದ ಮೌಲ್ಯಮಾಪನ ಸಾಧ್ಯ. ಈ ದುರಂತ ಪೂರ್ಣವಾಗುವುದು ಈ ಎರಡೂ ಮುಖಗಳ ಪೂರ್ಣ ಪರಿಭಾವನೆಯಿಂದ ಮಾತ್ರ. ‘ಎನಗಿಂದಿನೊಂದು ಸೂಟಿುಮನ್ ಇನಿಯಂ ವಯೆಗೆಯ್ದನ್ ಎನ್ನ ಸೂಟಿಂ ನಿನಗೆ ಆನ್ ಎನಿತಾದೊಡಂ ಈವೆನೆ?’ ಎಂಬ ಮಾದ್ರಿಯ ಮಾತಿನಲ್ಲಿ ಅವಳ ಬದುಕಿನ ಇತಿಹಾಸವೇ ಅಡಗಿದೆ. ಎರಡನೆಯ ಹೆಂಡತಿಯಾಗಿ ಬಂದು ತಾನು ಯಾವ ನೆಲೆಯಲ್ಲಿದ್ದೇನೆ ಎಂಬುದರ ವ್ಯಾಖ್ಯೆ ಇದಾಗಿದೆ.

ಕುಮಾರ ವ್ಯಾಸನಿಗೆ ಈ ಪ್ರಸಂಗದಲ್ಲಿ ಅಷ್ಟಾಗಿ ಆಸಕ್ತಿಯಿರುವಂತೆ ಕಾಣುವುದಿಲ್ಲ. ವಿದುರೋಪಖ್ಯಾನಕ್ಕೆ ಸಂಧಿಗಳನ್ನು ಮೀಸಲಿಡುವ ಈ ಭಾಗವತಕವಿ ಶುಕಮುನಿಯಾದ್ದರಿಂದಲೋ ಏನೋ ‘ಕುಮಾರವ್ಯಾಸನಿಗೆ ಲಗಾಮಿಲ್ಲ’ ಎಂಬ ಅಪಪ್ರಥೆಯನ್ನು ಅಲ್ಲಗಳೆಯುವಂತೆ ತೆಪ್ಪಗೆ ಈ ಸನ್ನಿವೇಶವನ್ನು ಓಡಿಸಿಬಿಡುತ್ತಾನೆ.

‘ಪಿಶಾಚೋನ್ನೃಪಾಲಕರ್’ ಎಂಬ ಹಾಗೆ ವ್ಯಸನಾನುಬಂಧಿಗಳಾದ ರಾಜರು ಪ್ರತಿಕೂಲ ಪ್ರಸಂಗಗಳಿಗೆ ಈಡಾಗುತ್ತಾರೆಂಬುದನ್ನು ವೈಶಂಪಾಯನರು ಜನಮೇಜಯನಿಗೆ ಹೇಳುತ್ತಾ ಈ ಪ್ರಸಂಗವನ್ನು ಚಿತ್ರಿಸುತ್ತಾರೆ. ‘ಮುನಿಮೃಗ ಮಿಥುನರೂಪಿನಲಿ’ ವಿಪತ್ತು ಬಂದ ಬಗೆಯನ್ನು ವಿವರಿಸುತ್ತಾರೆ. ‘ನಿಂದು ರಮಿಸುತ್ತಿರೆ ಮೃಗದ್ವಯವೆಂದು’ ಅಂಬನ್ನು ಹೂಡಿದ ಪಾಂಡು. ಅದು ಕೀಲಿಸಿದಾಗ ನರರಾಗಿ ಒರಲಿದರು. ಮುನಿಯ ಹೆಸರು (ಕಿಂದಮ) ಪಂಪನಲ್ಲೂ ಇಲ್ಲ, ಕುಮಾರವ್ಯಾಸನಲ್ಲೂ ಇಲ್ಲ. ಈ ಮುನಿಗೆ ಬಾಣ ತಗುಲಿದ ತನ್ನ ಪ್ರಿಯೆಯನ್ನು ಸಮಾಧಾನಪಡಿಸಲು ಗೊತ್ತು. ‘ಕಾಮಿನಿಯೆ ಕಡುನೊಂದೆಲಾ ಮುಖತಾಮರಸವನು ತೋರು ತೋರು’ ಎನ್ನುತ್ತ

೬. ಹೆಚ್ಚಿನ ವಿವರಣೆಗೆ ನೋಡಿ, ಪಂಪನ ಅಭಿವ್ಯಕ್ತಿ. ಜಿ. ಹೆಚ್. ನಾಯಕ್
ಪಂಪ-ಒಂದು ಅಧ್ಯಯನ. ಬೆಂಗಳೂರು ವಿಶ್ವವಿದ್ಯಾಲಯ. ಪುಟ. 225–226–227.

ಮುಂದಾದವನಂತೆ. ವ್ಯಾಸರಲ್ಲಿ ಋಷಿಕುಮಾರನೇ ಬಾಣಕ್ಕೀಡಾದವರೆ ಇಲ್ಲಿ ಇಬ್ಬರೂ ಈಡಾಗಿದ್ದಾರೆ. 'ಉರುವ ಮಾಣಿಕವೆಂದು ಕೊಂಡೊಡೆ ಕೆಂಡವಾದುವಲೆ' ಕುಮಾರವ್ಯಾಸನ ಪಾಂಡು ಮಾನವೀಯವಾಗಿ ನಡೆದುಕೊಳ್ಳುತ್ತಾನೆ. ಬಾಣವನ್ನು ತೆಗೆದು ನೀರಿನಲ್ಲಿ ಗಾಯವನ್ನು ತೊಳೆದು ಒರಸುತ್ತಾನೆ. 'ಮೃಗವಧರೆ ಮಾನಿಸರ್' ? ಪಾಪಿಗಳಿಗೆ ಎತ್ತಣ ತಪ, ಇವೆತ್ತಣವಿನೋದ ಕ್ರೀಡೆ' ಎಂದು ಗದರುತ್ತಾನೆ. 'ನಿನ್ನಯ ಲಲನೆಯನು ನೀ ಕೂಡಿದಾಗಲೆ ಮರಣ ನಿನಗಹುದು' ಎಂಬ ಶಾಪ ಕೊಟ್ಟು ಮುಕ್ತರಾಗುತ್ತಾರೆ ಅವರು.

ಪಂಪನಲ್ಲಿ ವಸಂತರಾಜ ಪಾಂಡುವಿನ ಮೇಲೆ ನಡೆದರೆ, ಕುಮಾರವ್ಯಾಸನಲ್ಲಿ 'ವಸಂತ ನೃಪಾಲ ನಡೆದನು ಪಾಂಡುವಿನ ಮೇಲೆ'. ಪ್ರಕೃತಿ ಮತ್ತು ಮಾನವ ಸ್ವಭಾವಗಳ ಮೇಳವಿಕೆ ಪಂಪನಲ್ಲಿ ಸಶಕ್ತವಾಗಿರುವಂತೆ ಬೇರಾರಲ್ಲೂ ಇಲ್ಲ. ಮಾದ್ರಿಯನ್ನು ಊರ್ವಶಿ, ರಂಭೆ, ದೇವವಧುಗಳಿಗೆ ಹೋಲಿಸಿದ್ದಾನೆ ಕವಿ. ಪಾಂಡು ಮಾದ್ರಿಯ ಸೆರಗು ಹಿಡಿದನಂತೆ. ವ್ಯಾಸರಲ್ಲಿ ಕೈ ಹಿಡಿದ, ಪಂಪನಲ್ಲಿ ಮೇಲೆ ಬಿದ್ದ, ಕುಮಾರವ್ಯಾಸನಲ್ಲಿ ಸೆರಗು ಹಿಡಿದ. ವ್ಯಾಸರ ಮಾದ್ರಿ ಶಾಪವನ್ನು ಜ್ಞಾಪಿಸಿ ಅವನಿಂದ ತಪ್ಪಿಸಿಕೊಳ್ಳಲು ಹೆಣಗಾಡಿದರೆ, ಪಂಪನ ಮಾದ್ರಿಗೆ ಅದಕ್ಕೆ ಅವಕಾಶವೇ ಆಗಲಿಲ್ಲ. ಮೇಲೆ ಬಿದ್ದ ಮೇಲೆ ಮಾಡುವುದೇನು? ಕುಮಾರವ್ಯಾಸನ ಮಾದ್ರಿ ಹಾಗಲ್ಲ. ಅವನ ಹಾಗೆಯೇ ಉಪದೇಶ ನೀಡಬಲ್ಲಾಕೆ, ಸಿಟ್ಟಾಗಬಲ್ಲಾಕೆ, ಬಾಯಿಗೆ ಬಂದ ಹಾಗೆ ಗಂಡನನ್ನು ಬಯ್ದು ತರಾಟೆಗೆ ತೆಗೆದುಕೊಳ್ಳುವಾಕೆ. 'ಕೊಂದೆಲಾ ಕಡುಪಾಪಿ'! (?) ಯಾರನ್ನು ಯಾರು ಕೊಂದದ್ದು ? ಅವನ ಮರಣ ಅರ್ಥಾತ್ ತನ್ನ ಮರಣ ಎಂಬುದನ್ನು ಎಷ್ಟು ಬೇಗ ಊಹಿಸಿದಳು? ಕುಮಾರವ್ಯಾಸನ ಚುರುಕಿನ ಹುಡುಗಿ ಮಾದ್ರಿ 'ಮರೆದಾ ಹಿಂದೆ ಮಾಡಿದ ಕೃತ್ಯವನು' ? (ಈ ಚುಚ್ಚು ಮಾತು ಅಗತ್ಯವೆ?)'ನಿನ್ನಯನಂದನರಿಗಾರುಂಟು ? ಮುನಿ ಎಂದ ನುಡಿ ಹೊಳ್ಳಹುದೆ ? ಬೆಂದುದೇ ನಿನ್ನರಿವು' ಎಂದೆಲ್ಲಾ ಹೆಣಗುತ್ತಾಳೆ. ಪಂಪ ಶಾಪ ಹೀಗೆ ಕೊಡಿಸುತ್ತಾನೆ. 'ನೀನ್ನಡೆ ನೋಡಿಯುಂ ಕೂಡಿಯುಂ ಆಗಡೆ ಸಾವೆ' ಎಂಥ ನವಿರು! ಅದ್ದರಿಂದಲೇ ಅಲ್ಲಿ ಬಯಕೆಗಣ್ಣು, ಒಂದು ಬಿಗಿಯಪ್ಪುಗೆ ಅಷ್ಟೇ ಸಾಕು. ವಿಷಮ ವಿಷವಲ್ಲಿಯನಪ್ಪಿದಂತೆ ಸಾಯುತ್ತಾನೆ. ಇಲ್ಲಿಯ ಪಾಂಡು ಮಾರುತ್ತರ ನೀಡುತ್ತಾನೆ. ನೀತಿಗೀತಿ, ಬೇಡ ಅವನಿಗೆ. 'ಬೆಂಬಿಡದೆ ಮರಳಿದೊಡೆ ಮರುವೊನೆಗೊಂಬುದು' ಎಂದು ಒತ್ತಂಬರದಿಂದ ಹಿಡಿದು ಅಬಲೆಯನು ಕೂಡಿದನು ಕಳವಳಿಸಿ. ಕುಂತಿ ಮಾದ್ರಿಯರ ಜೊತೆಗೆ ಮಕ್ಕಳೂ ಪ್ರಲಾಪಿಸುವುದು ಇಲ್ಲಿಯ ಒಂದು ವಿಶೇಷ. 'ಜೊಪ್ಪ ದೇಶಿಗರಾದೆವೈ' 'ನೀನಾರಿಗೆಮ್ಮನು ಒಪ್ಪಿಸಿದೆ ?' ಎಂದೆಲ್ಲ ಹಲುಬಿ ನಮ್ಮ ಕರುಣೆಗೆ ಪಾತ್ರರಾಗುತ್ತಾರೆ, ಮಕ್ಕಳು.

ಶಂಕರಭಟ್ಟರು ಈ ದುರಂತದ ಮತ್ತೊಂದು ಮುಖವಾದ ಮಾದ್ರಿಯ ದೃಷ್ಟಿಯಿಂದ ಈ ಪ್ರಸಂಗವನ್ನು ನೋಡಿದ್ದಾರೆ. 'ಪಾಂಡುರಾಜನ ಕಿರಿಯರಾಣಿ, ಮೋಹದ ರಾಣಿ, ಸುಖದ ದುಃಖದ ವಿಪ್ರಲವೇಣಿ, ಪನ್ನಗವೇಣಿ, ಭಾಗ್ಯದೇವತೆಯ ಕೊರಲಂ ಬಿದ್ದ ಕಟ್ಟಾಣಿ'ಮಾದ್ರಿ. ಆಕೆ ಪನ್ನಗವೇಣಿಯಂತೂ ನಿಜ.ಮರವೆಮುಸುಕಿ ದಂಪತಿಗಳು ಕೂಡೆ—ಜೊಂಪದೊಂದು ಮುಗುಳು ತೊಟ್ಟು ಕಡಿದು ಜಾರುವಂತೆ ಗಂಡುಬಾಳು ಕೆಡೆದುದು'. ಗಂಡ ನಡೆದ–ತನ್ನ ನೃಪ ಕೊಂಡೆನಡೆದ. 'ಜೊಮ್ಮ ಬರೆದ ರೂಪ ಮೃತ್ಯು ತಿದ್ದಿ ಬರೆದನಾಗಳೆ'–'ಇನಿಯ ತುಟಿಯ ತೋಟಿಯಂತು ಜೀವನವನೆ ಹೀರಿಬಂತು'. ಈ ವಿರಸ ಪ್ರಸಂಗಕ್ಕೆ ಆಧುನಿಕ ಕವಿ ಹೊಸ ಆವರಣವನ್ನು ನಿರ್ಮಿಸಿದ್ದಾರೆ, ಹೊಸ ರೀತಿಯ ತಾತ್ವಿಕ ಸಮಾಧಾನ ನೀಡಿದ್ದಾರೆ.

> ಪಾಪವೆಂದು, ಶಾಪವೆಂದು
> ಕೆಟ್ಟ ವಿಧಿಯ ಕೋಪವೆಂದು
> ಹಳಿವುದೇಕೆ? ಜರೆವುದೇಕೆ? ಪ್ರಣಯದಗ್ನಿ ಸುಟ್ಟಿತು.

ಅವರಿಗೆ ಬೇರೊಂದು ಲೋಕದಲ್ಲಿ ಎಂಥ ಭವ್ಯ ಸ್ವಾಗತ ಕಾದಿದೆ! ಮಾದ್ರಿ ಅದನ್ನು ನಿರೀಕ್ಷಿಸುತ್ತಾಳೆ.

ತಾರಗೆಗಳೆ! ಕಟ್ಟಿತೂಗಿ
ಬಾಲರವಿಯ ತೂಗು ಸೊಡರ
ಬಾನ ಮಂಡಪದಲಿ ಮದುವೆ! ಹಾಡುವವರೆ ಹಾಡಿರಿ!
ಮದುವೆಗಾವ ಸಿಂಗರಗಳು?
ಕಣ್ಣನೀರೆ? ಬಿಡುವ ಸುಯ್ಲೆ?
ಹಳಬರಿಟ್ಟ ತೊಡವು ಬೇಡ ನಮಗೆ; ಹೊಸತನೀವುದು.

ಕವಿ ದ್ವೈತದಿಂದ ಅದ್ವೈತಕ್ಕೆ ಒಯ್ಯುತ್ತಾರೆ ಈ ದುರಂತ ಪ್ರಸಂಗವನ್ನು.

ಗಂಡು ಹೆಣ್ಣು—ಎಂಬ ಭೇದ
ದೇವರೊಂದೆ ಮಯ್ಯ ಭೇದ
ಒಂದನನಗಲಲೊಂದು ವಿಶ್ವರೂಪವರ್ಥವೆನಿಸದೆ?
ಜನನವೆಂಬುದಿದುವೆ ತೊಟ್ಟು;
ಹೆಣ್ಣು—ಗಂಡು—ಜವಳಿ ಹುಟ್ಟು
ಮೊಗ್ಗೆಯಾಗಿ ಕೂಡಿ ಬಿದ್ದು ಮುಗ್ಗಿ ಹೋಪುವೊಮ್ಮೆಗೆ.

ಕವಿ ಕೊನೆಗೆ ಹೇಳುತ್ತಾರೆ.

'ಮಾದ್ರಿ ಮಡಿದಳೇನು? ಅವಳ ಹಿಡಿದ ಮೃತ್ಯು ಮಡಿದುದು ಜವನ ಕೈಯ ಸೊಡರ ಬೆಳಗಲವಳ ಚಿತೆಯ ಕೆಂಡವು'—ಕವಿ ದನಿಯೊಂದಿಗೆ ನಾವೂ ದನಿಗೂಡಿಸಿ ನೆನಪಿನ ಸ್ಮಾರಕವೊಂದು ನಿರ್ಮಿಸೋಣವೇ?

ನಾನು ದೇಹವೆಂದು ಭಾವಿಸಿದಾಗ, ನಾನು ದೇಹ ಮಾತ್ರ; ನಾನು ದೇಹವಲ್ಲದೆ ಬೇರೆ ಎಂದು ಹೇಳುವುದಕ್ಕೆ ಅರ್ಥವಿಲ್ಲ. ನಾನು ಆತ್ಮನೆಂದು ಆಲೋಚಿಸಿದಾಗ ದೇಹ—ಬುದ್ಧಿ ಮಾಯ ವಾಗುತ್ತದೆ. ದೇಹದ ಅರಿವು ಉಳಿಯುವುದಿಲ್ಲ; ದೇಹದ ಭಾವನೆ ಬರುವುದಿಲ್ಲ. ಗುಣಗಳ ಭಾವನೆ ಮಾಯವಾಗುವವರೆಗೂ ಯಾರಿಗೂ ಗುಣಿಯ ಭಾವನೆ ಬರುವುದಿಲ್ಲ.

ಎಚ್. ಎಸ್. ವೆಂಕಟೇಶಮೂರ್ತಿ

ಉದ್ಯೋಗಪರ್ವದ ಒಂದು ಸಂಧಿ

೧

ಸಾಮಾಜಿಕ ದೃಷ್ಟಿಯ ಹೊಸ ವಿಮರ್ಶೆಯ ಓಘದಲ್ಲಿ ಸಿದ್ಧ ಪ್ರಸಿದ್ಧರಾದ ಅನೇಕ ಹಳೆಯ ಕವಿಗಳ 'ಆಸನಕಂಪ'ವಾಗುತ್ತಿರುವ ಈ ಕಾಲದಲ್ಲಿ, ಏನು ವ್ಯಾಮೋಹವೋ ಏನೋ, ಪುನಃ ನಾನು ಕುಮಾರವ್ಯಾಸನನ್ನು ಓದತೊಡಗಿದೆ.

ಮಹಾಭಾರತ ರಾಜರ ಕಥೆಯೇ. ಹೊಸ ಪರಿಭಾಷೆಯಲ್ಲಿ 'ಉಚ್ಚವರ್ಗ' ಮತ್ತು 'ಉಚ್ಚವರ್ಣ'ದವರ ಕಥೆ. ಅಲ್ಲಿನ ಹೇಮಾಹೇಮಿಗಳೆಲ್ಲಾ ಕ್ಷತ್ರಿಯರು ಅಥವಾ ಬ್ರಾಹ್ಮಣರು. ಗೋಕುಲದಿಂದ ಬಂದ ಒಬ್ಬ ಗೊಲ್ಲರ ಹುಡುಗ ಅಂಥವರನ್ನೆಲ್ಲಾ ಹಿಡಿದಾಡಿಸಿ ರಾಜಸ್ಥಾಪಕನಾದ ಉದಾಹರಣೆಯಿದೆ. ಆದರೆ ಹಿಂದಿನಿಂದ ಅವನು ಯದುವಂಶಸ್ಥ ; ಆಳುವ ವರ್ಗದ ರಾಜಕುಮಾರ ; ದುರ್ವಿಧಿಯಿಂದ (?) ವೇಷಾಂತರಗೊಂಡವನು ಎಂದಾಗುತ್ತದೆ. ಇನ್ನೊಂದು ಉದಾಹರಣೆ ಒಬ್ಬ ಸೂತ ಹುಡುಗ ಉಚ್ಚವರ್ಣೋಚಿತ ಸಂಸ್ಕಾರಗಳನ್ನು ಪಡೆದು ರಾಜಮಹಾರಾಜರ ಸಾಲಿನಲ್ಲಿ ಸ್ವಪರಿಶ್ರಮದಿಂದ ನಿಂತ ಎಂಬುದು. ಹಿಂದಿನಿಂದ ಅವನಾದರೂ ಕ್ಷತ್ರಿಯಕುಲದವನು. ಆಳುವ ವರ್ಗದವನು, ದುರ್ವಿಧಿಯಿಂದ (? !) ವೇಷಾಂತರಗೊಂಡ ಹತಭಾಗ್ಯ ಎಂದಾಗುತ್ತದೆ. ಹೀಗಾಗಿ ಅವರಿಬ್ಬರ ಬಹುಕಾಲದ ಸಾಧನೆ ಅವರಿಗೆ ಹುಟ್ಟಿನಿಂದ ಸಹಜವಾದುದು ಎಂದಾಗಿಬಿಡುತ್ತದೆ. ಹೀಗಾಗಿ ಒಟ್ಟಿನಲ್ಲಿ ಮಹಾಭಾರತ ಉಚ್ಚ ವರ್ಣ-ವರ್ಗದವರ ಕಥೆಯಾಗಿಯೇ ಉಳಿಯುತ್ತದೆ.

ಸಾಮಾನ್ಯವರ್ಣ—ವರ್ಗದವರೆಂದು ಕರೆಸಿಕೊಂಡವರು ಮಹಾಭಾರತದ ಕಥೆಯಲ್ಲಿ ತಮ್ಮ ಉಸಿರು ದಕ್ಕಿಸಿಕೊಂಡು ನಿಂತದ್ದಾಗಲೀ, ನಡೆದದ್ದಾಗಲೀ ಕಾಣುವುದಿಲ್ಲ. ಹೆಚ್ಚೆಂದರೆ ರಾಜ ಕಾಡಿಗೆ ಹೋಗುವಾಗ ಪ್ರಜೆಗಳು ಗುಂಪಾಗಿ ಅಳುವುದಕ್ಕೆ ಬರುತ್ತಾರೆ. ಗುಂಪಿನಲ್ಲಿ ಅವರೆಲ್ಲಾ ಗೋವಿಂದರಾಗಿ ಕಲಸಿಹೋಗಿದ್ದಾರೆ. ಅವರು ಅತ್ತರು ಎಂದರೆ, ಹೆಚ್ಚು ಅತ್ತರು ಎಂದರೆ, ಆ ರಾಜ ಅಷ್ಟು ದೊಡ್ಡವ, ಯೋಗ್ಯ ಅಂತ ಆಯಿತು.

ಎರಡು ಕ್ಷತ್ರಿಯ ಮನೆತನಗಳ ಸ್ವಪ್ರತಿಷ್ಠೆ, ದ್ವೇಷಾಸೂಯೆ, ರಾಜ್ಯಲೋಭ, ದೊಡ್ಡತನ, ಲುಚ್ಚಾತನ, ಸ್ವಾಭಿಮಾನಗಳ ತಾಕಲಾಟದಲ್ಲಿ ಮಹಾಭಾರತ ಕುರುಕ್ಷೇತ್ರಕ್ಕೆ ಬಂದು ಮುಟ್ಟುತ್ತದೆ. ಬಹಳ ಕೆಟ್ಟ ಮನುಷ್ಯನಾಗಿದ್ದ ದುರ್ಯೋಧನನ ಪ್ರಜಾಪಾಲನೆ ದೋಷಯುಕ್ತವಾಗಿತ್ತೋ, ಪ್ರಜಾಹಿತಕಾರಿಯಾಗಿತ್ತೋ ಗೊತ್ತಾಗುವುದಿಲ್ಲ. ದುರ್ಯೋಧನ ಕೆಟ್ಟ ರಾಜನಾಗಿದ್ದ ಎಂಬುದಕ್ಕೆ ಆಧಾರಗಳಿಲ್ಲ. ರಾಜ್ಯದಲ್ಲಿ ದುರ್ಭಿಕ್ಷೆ, ಅಶಾಂತಿ, ಅಸಹನೆ ಉಂಟಾದ ಉಲ್ಲೇಖಗಳಿಲ್ಲ. ಹೀಗೆ ದುರ್ಯೋಧನನ ಸಾಮಾಜಿಕ ವ್ಯಕ್ತಿತ್ವ ಅಸ್ಪಷ್ಟವಾಗಿದೆ. ಅವನ ಸ್ನೇಹಿತ, ಮಂತ್ರಿ, ಸಲಹೆಗಾರ ಕರ್ಣನ ಸಾಮಾಜಿಕ ವ್ಯಕ್ತಿತ್ವ ಅಮೋಘವಾಗಿದ್ದಂತಿದೆ.

ಕುರುಕ್ಷೇತ್ರದಲ್ಲಿ ಅಕ್ಷೋಹಿಣಿಗಟ್ಟಲೆ ಶ್ರೀಸಾಮಾನ್ಯರು ಕಾಣುತ್ತಾರೆ. ಒಬ್ಬ ವೀರ ಎಷ್ಟು ಜನರನ್ನು

ಕೊಂಡ ಎಂಬುದರ ಮೇಲೆ ಅವನು ಎಷ್ಟು ವೀರನಾಗಿದ್ದ ಎಂಬುವನ್ನು ಲೆಕ್ಕಾಚಾರಮಾಡಲು ಇದರಿಂದ ಅನುಕೂಲವಾಗಿದೆ. ಅದಕ್ಕಿಂತ ಹೆಚ್ಚಾದ ವೈಚಿತ್ರ್ಯ ಆ ಪದಾತಿ, ರಾವುತ ಮೊದಲಾದ ಅಸಂಖ್ಯ ಅನಾಮಿಕರಿಗಿಲ್ಲ.

ಜನಸಾಮಾನ್ಯದ ಸ್ಥಿತಿಗತಿ, ಆಸೆ ಆಕಾಂಕ್ಷೆ, ನೋವು ನಲಿವುಗಳನ್ನು ಸಾಮಾಜಿಕ ಎಚ್ಚರದಿಂದ ಹಿಡಿದಿಡಲಾರದ ಈ ಕೃತಿ ಮಹಾಕೃತಿ ಅಲ್ಲ ಎಂಬ ವಿಮರ್ಶೆ ಬಹಳ ಸುಲಭವಾಗಿ ಸಿದ್ಧಿಸುವ ಕಾಲ ಬಲುದೂರದಲ್ಲಿಲ್ಲ.

೨

ಹಟಮಾರಿಯಾದ ನಾನು ಕುಮಾರವ್ಯಾಸನನ್ನು ಮತ್ತೆ ಮತ್ತೆ ಓದುತ್ತಿದ್ದೇನೆ. ಆಗೆಲ್ಲಾ ಅನೇಕ ಕಡೆ ನಾನು ಹೊಸ ವಿಚಾರದ ಓಘವನ್ನು ಮರೆತು, ತನ್ಮಯನಾಗಿ ಅಲ್ಲಿನ ಘಟನೆಗಳಲ್ಲಿ ಒಂದಾಗಿ ಮೆಚ್ಚಿಕೊಂಡಿದ್ದೇನೆ. ಮಾತ್ರವಲ್ಲ ಒಪ್ಪಿಕೊಂಡಿದ್ದೇನೆ.

ರಾಮಾಯಣ ಮಹಾಭಾರತದ ಕಥೆಗಳು ಈ ದೇಶದಲ್ಲಿ ಆಳಕ್ಕೆ ಊರಿವೆ. ಅದಕ್ಕಾಗಿ ನಾವು ಅವನ್ನು ಅಷ್ಟು ಗಾಢವಾಗಿ ಅನುಭವಿಸಿ ಒಪ್ಪುತ್ತೇವೆ. ಇದರಲ್ಲಿ ನಮ್ಮ ಧರ್ಮ, ಸಂಸ್ಕಾರಗಳೂ ಪ್ರಭಾವ ಬೀರುತ್ತಿವೆ. ಆಶ್ಚರ್ಯವಿಲ್ಲ ಎನ್ನಬಹುದು. ಅವನ್ನು ಅರ್ಥ ಒಪ್ಪುತ್ತೇನೆ, ಅಂದರೆ ರಾಮಾಯಣ ಮಹಾಭಾರತಗಳ ಮೂಲ ಕಥಾ ಸ್ವರೂಪಕ್ಕೆ ಅನ್ವಯಿಸಿ ಒಪ್ಪುತ್ತೇನೆ. ಆದರೆ ಕನ್ನಡ ಅವತರಣಿಕೆಗಳಿಗೆ ಅನ್ವಯಿಸಿ ಈ ಮಾತು ಒಪ್ಪಲಾರೆ. ಕುಮಾರವ್ಯಾಸನಷ್ಟು ಗಾಢವಾಗಿ ಕುಮಾರ ವಾಲ್ಮೀಕಿ ನನ್ನನ್ನು ಕಲಕಲಾರ. ಅಂದರೆ ಕುಮಾರವ್ಯಾಸನನ್ನು ತಾಗುತ್ತಿರುವುದಕ್ಕೆ ಇನ್ನೂ ಏನೋ ಬೇರೆ ಕಾರಣವಿರಬೇಕು.

೩

ಮೊನ್ನೆ ಉದ್ಯೋಗಪರ್ವ ಓದುತ್ತಿದ್ದಾಗ ನನಗೆ ಆಶ್ಚರ್ಯವಾಯಿತು. ರಾಜರು ಎಂದು ಕರೆಸಿಕೊಳ್ಳುವ ಕೃಷ್ಣ, ದುರ್ಯೋಧನ, ಅರ್ಜುನ ಮೊದಲಾದ ಪಾತ್ರಗಳು ನನಗೆ ತುಂಬ ಹಸಿಹಸಿಯಾಗಿ ಕಂಡವು. ನನ್ನ ಹಳ್ಳಿಯ ಮುಖ್ಯಸ್ಥರು ನನಗೆ ನೆನಪಾದರು. ಕೃಷ್ಣ ನ್ಯಾಯನಿಷ್ಠುರರಾದ ನಮ್ಮ ಶ್ಯಾನುಭೋಗರಂತೆ; ಅರ್ಜುನ ಮಾತುಬಲ್ಲ ವಿನಯಶೀಲರಾದ ನಮ್ಮ ಅಂಗಡಿ ಶೆಟ್ಟರಂತೆ; ದುರ್ಯೋಧನ ಸ್ವಲ್ಪ ಕಪಟಿ, ಧೂರ್ತ, ಚಾಣಾಕ್ಷನಾದ ಇನ್ನೊಬ್ಬನಂತೆ.

ಉದ್ಯೋಗಪರ್ವದ ಮೊದಲ ಸಂಧಿಯಲ್ಲಿ ಎರಡು ಮುಖ್ಯ ಸಂದರ್ಭಗಳಿವೆ. ಮೊದಲ ಸಂದರ್ಭ ಕೋಳಿವಾಡದ ಗ್ರಾಮಚಾವಡಿಯಲ್ಲಿ ಆಗಿರಬಹುದು. ಎರಡನೆಯದು ಆ ಊರಿನ ಶ್ಯಾನುಭೋಗರ ಮನೆಯಲ್ಲಿ ನಡೆದಿದ್ದೀತು.

ನಮ್ಮ ಹಳ್ಳಿಯ ಬಂಧುಗಳು ಚಾವಡಿಯಲ್ಲಿ ಕೂತಾಗ ಮಾತಾಡುವುದನ್ನು ನಾನು ಕೇಳಿದ್ದೇನೆ. ಯಾರೂ ಸುಲಭವಾಗಿ ತಮ್ಮನ್ನು ಬಿಟ್ಟುಕೊಡುವುದಿಲ್ಲ. ಸುತ್ತಿ ಬಳಸಿ ಕೊನೆಗೆ ತುದಿಗೆ ಮುಟ್ಟಿಸುತ್ತಾರೆ. ಚಾವಡಿಯಲ್ಲಿ ಧಗೆ ಹತ್ತಬಾರದೆಂದು ನಕ್ಕು ಮಾತಾಡಿಯೋ, ಮಾತಾಡಿ ನಕ್ಕೋ, ತಮ್ಮ ಮಾತಿಗೆ ಒಂದು ಸಾರ್ವತ್ರಿಕತೆಯನ್ನು ತರುತ್ತಾರೆ. ಬಲ್ಲವರೂ ಸ್ಥಾನದ ಬೆಲೆಯೆಂದು ವಿನಯವನ್ನು ಸೂಚಿಸುತ್ತಾರೆ. ಎಲ್ಲಾ ಗೊತ್ತಿದ್ದವರು ತಮಗೆ ಏನೂ ಗೊತ್ತಿಲ್ಲ ಎಂದು ಮಾತು ಪ್ರಾರಂಭಿಸುತ್ತಾರೆ. ವಿನಯ ತೋರಿಯೂ ತಮ್ಮ ಸ್ವಂತ ಮಾತು ಬಿಟ್ಟುಕೊಡುವುದಿಲ್ಲ. ಮಾತು ಇಷ್ಟವಾಗದವರು ಮಧ್ಯೆ ಒಂದು ಮಾತು ಆಡಿಬಿಟ್ಟು, ನಕ್ಕು, ತಮ್ಮ ವಿರೋಧವನ್ನು ಸೂಚಿಸಿ ಸುಮ್ಮನೆ ಕೂಡುತ್ತಾರೆ. ಕೆಲವರು ಉದ್ರಿಕ್ತರು ಗಟ್ಟಿಯಾಗಿ ಕೂಗಾಡುತ್ತಾರೆ; ವ್ಯಂಗ್ಯವಾಗಿ ನಗುತ್ತಾರೆ. ಮುದುಕರು ಹಾಗೂ ಹೀಗೂ ಮಾತಾಡಿ ಸಂದರ್ಭವನ್ನು ಒಂದು ಹದಕ್ಕೆ ತರಲು ಪ್ರಯತ್ನಿಸುತ್ತಾರೆ. ಕೊನೆಗೆ ಚಾಣಾಕ್ಷನಾದ ಆದರೆ ಸ್ವಭಾವತಃ ನ್ಯಾಯ ನಿಷ್ಠುರನಾದ ಅಧ್ಯಕ್ಷ ತನ್ನ ಅಭಿಪ್ರಾಯವನ್ನೇ ಹೇಳಿರುವ ಬೇರೆ ಒಬ್ಬನ ಮಾತನ್ನು ಎತ್ತಿಕೊಂಡು ಆತ ಹೇಳಿದ್ದು ತುಂಬ ಸರಿಯಾಗಿದೆ ಎಂದು ಮಾತು ಮುಗಿಸುತ್ತಾನೆ.

ವಿರಾಟನ ಅರಮನೆಯಲ್ಲಿ ಕೃಷ್ಣನ ಅಧ್ಯಕ್ಷತೆಯಲ್ಲಿ ಪಾಂಡವರ ಸಭೆ ಸೇರಿದೆ. ವಿಷಯ ತಮಗೇ ಸಂಬಂಧಿಸಿರುವುದರಿಂದ ಪಾಂಡವರು ಒಂದು ಮಾತೂ ಆಡುವುದಿಲ್ಲ. ಸಭೆಯ ಅಧ್ಯಕ್ಷನಾದ ಕೃಷ್ಣ ವಿಷಯವನ್ನು ಸೂಕ್ಷ್ಮವಾಗಿ ಪ್ರಸ್ತಾಪಿಸಿ ಸಭೆಯ ಮುಂದೆ ಇಡುತ್ತಾನೆ. ವಿಷಯದ ಮಂಡನೆಯಲ್ಲೇ ಪಾಂಡವರ ಕಡೆ ಒಲವು ಸೂಕ್ಷ್ಮವಾಗಿ ಸೂಚಿತವಾಗುವಂತೆ ಮಾಡಬಲ್ಲ ಜಾಣ ಅವನು.

ಹಿಂದೆ ಜೂಜಿನ ವಿಲಗದಲಿ ಮನ
ನೊಂದರಿವರಡವಿಯಲಿ ಧರೆಗಿ
ನ್ನೆಂದು ಸೇರುವರೇನು ಹದನೀ ಪಾಂಡುತನಯರಿಗೆ

ಆಮೇಲೆ ದ್ರುಪದ ಹಿರಿಯನಾದುದರಿಂದ ನಂತರ ಮಾತಾಡುವ ಗೌರವವನ್ನು ಒಪ್ಪಿಕೊಂಡು ಅಧ್ಯಕ್ಷನಿಗೆ ಸೂಚಿಸಲೇಬೇಕಾದ ಗೌರವ ವಿನಯಗಳನ್ನು ಸೂಚಿಸುತ್ತಾನೆ. ಆ ಮಾತು ನಮ್ಮ ಗೌಡಜ್ಜನ ಬಾಯಲ್ಲಿ ಹೀಗೆ ಬರುತ್ತದೆ.

'ಎಲ್ಲಾ ನಿಮ್ಗೇ ಗೊತ್ತೈತೆ ಬುದ್ದೀ.....ನಿಮಗೆ ತಿಳೀದಿದ್ದು ಯಾವ್ದು? ನೀವು ಕಾಲಾಗೆ ತೋರ್ಸಿದ್ದ ತಲೇ ಮೇಲೆ ಹೊತ್ತು ಮಾಡೋದೇನೈತೋ ಅದಷ್ಟು ನಮ್ಗೆ ಗೊತ್ತು'. (ಹರಣ ಭರಣವ ನೀವು ಬಲ್ಲಿರಿ. ಕಾಲ ಲೊದೆದುದನೋವಿ ತಲೆಯಲಿ ಹೊತ್ತು ನಡಸುವಡಾವು ಬಲ್ಲೆವು ಜೀಯ...!)

ಹೆಚ್ಚು ಲಂಬಿಸದೆ ಕೃಷ್ಣ ಅಚ್ಚುಕಟ್ಟಾಗಿ ತಾನು ಹೇಳಬೇಕಾದ್ದನ್ನು ಹೇಳುತ್ತಾನೆ. 'ಯೋಗ್ಯರಾದವ ರನ್ನು ಆರಿಸಿ ಭೂಮಿಯನ್ನು ಬೇಡುವುದಕ್ಕೆ ಭೀಷ್ಮಾದಿಗಳ ಹತ್ತಿರ ವಿನಯದಿಂದ ಕಳಿಸುವುದು. ಆತನ (ದುರ್ಯೋಧನನ) ಅಭಿಪ್ರಾಯವನ್ನು ತಿಳಿಯುವುದು. ಆ ವಿನಯ ಪ್ರಯೋಜನವಿಲ್ಲ ಎಂದಾದರೆ ಆಮೇಲೆ ಯುದ್ಧ ದಲ್ಲಿ ಒಂದು ಕೈ ತೋರಿಸುವುದು. ಇದು 'ನನ್ನ ಅಭಿಪ್ರಾಯ'

ಕೃಷ್ಣನ ಮಾತಿಗೆ ದೊಡ್ಡ ವ್ಯಾಖ್ಯಾನ ಬರೆಯಬಹುದು. ಯೋಗ್ಯರಾದವರನ್ನು ಅಂದಿದ್ದಾನೆ. ಅಯೋಗ್ಯ ರಾದರೆ ಎರ್ರಾಬಿರ್ರಿ ಮಾತಾಡಿ ಸಂದರ್ಭವನ್ನು ಕೆಡಿಸಬಹುದು. ಭೀಷ್ಮಾದಿಗಳ ಹತ್ತಿರ ಕಳುಹಿಸಬೇಕು; ದುರ್ಯೋಧನನ ಅಭಿಪ್ರಾಯ ತಿಳಿಯಬೇಕು. ಎಂದರೆ ಭೀಷ್ಮಾದಿಗಳು ಇರುವಾಗಲೇ ದುರ್ಯೋಧನನ್ನು ನೋಡ ಬೇಕು. ಇದರಿಂದ ದುರ್ಯೋಧನ ಧರ್ಮಕ್ಕೆ ಕಟ್ಟುಬೀಳಬಹುದು. ಬೀಳಲಿಲ್ಲ, ಭೀಷ್ಮಾದಿಗಳಿಗೆ ಅವನ ಬಗ್ಗೆ ಪುನಃ ಅಸಮಾಧಾನ ಉಂಟಾಗುವುದು. 'ಧರಣೀತಳವ ಬೇಡಿಸುವುದು' ಎಂದಿದ್ದಾನೆ. 'ಬೇಡು' ಪದ ಕೃಷ್ಣನ ಒಳ ಮನಸ್ಸಿನ ಒಳಗನ್ನು ಸೂಚಿಸುವಂತಿದೆ. ಈ ಪದದ ಬಳಕೆಯಿಂದ ಕೆರಳುವವರು ಕೆರಳಿದರೊಳ್ಳೆಯದು ಎಂಬ ಉದ್ದೇಶವಿದ್ದಂತಿದೆ. ಮುಂದೆ ಉದ್ರಿಕ್ತ ಯುವಕ ಸಾತ್ಯಕಿ ರೇಗುವುದಕ್ಕೆ ಬಲರಾಮ ದುರ್ಯೋಧನನ ಪಕ್ಷ ವಹಿಸಿ ಮಾತಾಡಿದ್ದು ಪ್ರತ್ಯಕ್ಷ ಕಾರಣ. ಕೃಷ್ಣನ ಈ ಬೇಡು ಪದ ಪರೋಕ್ಷ ಕಾರಣ. ಕೃಷ್ಣನ ಮಾತಿಗೆ ಊರಿದ ಬೀಜ ಬಲರಾಮನ ಮಾತಿಗೆ ಮಾತ್ರ ಸಿಡಿಯಬಲ್ಲುದು. ಇದು ಸಂಬಂಧಗಳ ಸೂಕ್ಷ್ಮ. ಪಾಪ, ಸಾತ್ಯಕಿ ತಾನು ರೇಗು ತ್ತಿರುವುದು ಬಲರಾಮನ ಮೇಲೆ ಎಂದುಕೊಂಡಿದ್ದಾನೆ.

ಬಲರಾಮ 'ದುರ್ಯೋಧನನಲ್ಲಿ ತಪ್ಪಿಲ್ಲ, ಜೂಜಿನಲ್ಲಿ ಯುಧಿಷ್ಠಿರ ಸೋತ. ಮತ್ತೆ ಜೂಜಾಡಿ ಗೆದ್ದು ಕೊಳ್ಳಲಿ. ಅಥವಾ ಯುದ್ಧ ಮಾಡಿ ಗೆದ್ದುಕೊಳ್ಳಲಿ', ಎಂದು ನಗುತ್ತಾ ನುಡಿದು, ತಾನು ಆಡಬೇಕಾದ್ದು ಆಡಿಯೂ, ಗುಂಪಿನಲ್ಲಿ ತೀರ ಒಂಟಿಯಾಗದೆ 'ನಗುತ್ತಾ' ಉಳಿದುಕೊಂಡಿದ್ದಾನೆ.

'ನೆಲಬೇಡೋದು ಬ್ರಾಹ್ಮಣರಿಗೆ ಹೇಳಿಸಿದ್ದು' ಎಂದು ಕೂಗಾಡುವ ಸಾತ್ಯಕಿಯ ನಗು ಬಲರಾಮನ ನಗೆಗಿಂತ ಭಿನ್ನವಾಗಿದೆ. ಅವರಲ್ಲಿ ತಾತ್ಸಾರ, ವ್ಯಂಗ್ಯ, ರೋಷ ಹೊಗೆಯಾಡುತ್ತಿದೆ. ಅವನು ನಗುತ ಖತಿಗೊಂಡಿ ದ್ದಾನೆ. ಆದರೂ ಆವೇಶದಲ್ಲಿ ತನ್ನನ್ನು ಪೂರಾ ಸೋರು ಬಿಡಬಾರದೆಂದು ನಕ್ಕಿದ್ದಾನೆ.

ಸಾತ್ಯಕಿಯ ಮಾತಿಗೆ ದ್ರುಪದನೂ ನಕ್ಕು ಮಾತಾಡುತ್ತಾನೆ. ಇವನ ನಗೆ ಸಾತ್ಯಕಿ ಬಲರಾಮನನ್ನು

ಎದುರಿಸಿದ್ದರಿಂದಾದ ಒಂದು ಗುಟ್ಟಾದ ತೃಪ್ತಿಯಿಂದ ಹುಟ್ಟಿದೆ. ಅದನ್ನು ಅವನ 'ವಿನುತ ಸಾತ್ಯಕಿ' ಎಂಬ ಪ್ರಯೋಗ ಖಚಿತಪಡಿಸಿದೆ. ಹಿಂದೆ ಕೃಷ್ಣ ಹೇಳಿದ ದೂತ, ಕೆನಯ, ಸಾಮ, ಕಾಳಕೆ ಮೊದಲಾದ ಮಾತುಗಳನ್ನೇ ಬಳಸಿ, ಅವನ ಅಭಿಪ್ರಾಯವನ್ನೇ ಆಡಿ ದ್ರುಪದ ಅದು ತನ್ನ ಮಾತು ಎನ್ನುತ್ತಾನೆ. 'ವಿಹಿತವಿದು ಪಾಂಚಾಲಕನ ಮತ' ಎಂದು ಕೃಷ್ಣ ತನ್ನ ಮಾತನ್ನೇ ಗೆಲಿಸಿ ಸಭೆಯನ್ನು ಮುಗಿಸುತ್ತಾನೆ.

ಇಷ್ಟೆಲ್ಲಾ ಆಗಿಯೂ ಸಂಧಿಯ ಬಗ್ಗೆ ಯಾರಿಗೂ ನಂಬಿಕೆ ಇಲ್ಲ. ದ್ರುಪದನ ಪುರೋಹಿತನನ್ನು ಸಂಧಿ ಪ್ರಸ್ತಾಪಕ್ಕೆ ಕಳಿಸಿ, ಯುದ್ಧದಲ್ಲಿ ಸಹಾಯ ಬೇಡಿ ಕ್ಷತ್ರಿಯ ರಾಜರಿಗೂ ಪಾಂಡವರು ತಮ್ಮ ಜನವನ್ನು ಕಳಿಸಿ ಕೊಡುತ್ತಾರೆ.ಇಷ್ಟರ ಮಧ್ಯೆ ದುರ್ಯೋಧನ ದ್ವಾರಕಿಗೆ ಹೊರಟಿರುವುದು ಪಾಂಡವರಿಗೆ ಬೇಹುಗಾರರಿಂದ ತಿಳಿಯು ತ್ತದೆ. ದುರ್ಯೋಧನ ಗುಟ್ಟಾಗಿ ಕೃಷ್ಣನನ್ನು ಒಳಗು ಮಾಡಿಕೊಳ್ಳಬೇಕು ಎಂದು ಹೊರಟಿದ್ದಾನೆ. ಧರ್ಮಜ ವಿಷಯ ತಿಳಿದು ಅಳುಕಿ ಅರ್ಜುನನನ್ನು ಕೃಷ್ಣನ ಬಳಿಗೆ ಕಳಿಸುತ್ತಾನೆ. ಅರ್ಜುನನೇ ಏಕೆ? ತಮ್ಮೆಲ್ಲರಿಗಿಂತ ಕೃಷ್ಣನಿಗೆ ಅವನು ಪ್ರಿಯ ಎಂತ. ದುರ್ಯೋಧನ ಒಂದು ಕಡೆಯಿಂದ, ಅರ್ಜುನ ಒಂದು ಕಡೆಯಿಂದ ದ್ವಾರಕಿಗೆ ಬರುತ್ತಿರುವಾಗ, ದ್ವಾರಕಿಯನ್ನು ಓದುಗರಿಗೆ ಮುಟ್ಟಿಸಲು ಕುಮಾರವ್ಯಾಸ ಈಗ ಅರ್ಜುನನನ್ನು ಹಿಂಬಾಲಿಸು ತ್ತಾನೆ. ಕಾರಣ ಸ್ಪಷ್ಟ. ದುರ್ಯೋಧನನಿಗಿಂತ ಅರ್ಜುನ ಹೆಚ್ಚು ಗಾಢವಾಗಿ ದ್ವಾರಕಿಯ ಕ್ಷೇತ್ರವನ್ನು ಅನು ಭವಿಸಬಲ್ಲ. ಆದ್ದರಿಂದ ಕೃಷ್ಣಭಕ್ತನಾದ ಕವಿಗೆ ಅರ್ಜುನನ ಕಣ್ಣೇ ಚೆನ್ನು ಎನ್ನಿಸಿದೆ. ಅರ್ಜುನ ದಾರಿಯಲ್ಲಿ ಕಾಣುವ ಶಕುನಗಳಿಂದ ಸುಖಪಡುವುದು, ನಾನು ಹಿಂದೆ ಹೇಳಿದಂತೆ ನಮ್ಮ ಶೆಟ್ಟರ ನೆನಪನ್ನೇ ತರುತ್ತದೆ.

ಮುಂದೆ ಕೋಳಿವಾಡನ ಶ್ಯಾನುಭೋಗರ ಮನೆಯಲ್ಲಿ ನಡೆದಿರಬಹುದಾದ ಎರಡನೆಯ ಸಂದರ್ಭ. ಅವಿಭಕ್ತ ಕುಟುಂಬ ಭಾರತದ ಹಳ್ಳಿಗಳ ಲಕ್ಷಣ. ಅಂತಹ ಒಂದು ಕುಟುಂಬ ಆಸ್ತಿಯ ನೆಪದಲ್ಲಿ ದಾಯಾದಿ ಮತ್ಸರದಿಂದ ಬಹುಬೇಗ ಶ್ರೀಮಂತನಾಗಿ, ಅಧಿಕಾರಿಯಾಗಿ, ಲೌಕಿಕವಾಗಿ ಪ್ರಬಲನಾಗಿದ್ದಾನೆ. ಯೋಗ್ಯಭ್ರಷ್ಟನಾಗದ್ದಕ್ಕಾಗಿ ಬಡವನಾಗಿ, ಅಧಿಕಾರಹೀನನಾಗಿ ಪರದೇಶಿಯಾಗಿದ್ದಾನೆ. ಇಬ್ಬರ ನಡುವೆ ತಿಕ್ಕಾಟ ಅನಿವಾರ್ಯವಾಗಿದೆ. ಈಗ ಈ ಅಣ್ಣ ತಮ್ಮಂದಿರು ಹೇಗೆ ನಡೆಯುತ್ತಾರೆ ಎಂಬುದಕ್ಕಿಂತ ಬೇರೆಯವರು ಹೇಗೆ ನಡೆಯಬೇಕೆಂಬುದು ನಿಜವಾದ ಸಮಸ್ಯೆ. ಇದು ಆ ಊರಿನ ಮುಖ್ಯಸ್ಥನ ಸಮಸ್ಯೆ ಎನ್ನೋಣ. ಕುಟುಂಬದ ಹೊಡೆದಾಟದಲ್ಲಿ ಹಳ್ಳಿ ಎರಡಾಗಿ ಗುಂಪುಗಳಾಗುತ್ತವೆ. ಶಾಂತಿ ನಾಶವಾಗುತ್ತದೆ. ಆದ್ದರಿಂದ ಮುಖ್ಯಸ್ಥ ಸಾಧ್ಯ ವಾದರೆ ಈ ಹೊಡೆದಾಟವನ್ನು ತಪ್ಪಿಸಬೇಕು. ಅದು ಸಾಧ್ಯವಾಗದೆ ಪ್ರಸಂಗ ಕೈ ಮೀರಿದರೆ ಅವನು ತಟಸ್ಥ ನಾದರೆ ನ್ಯಾಯ ಸೋಲುತ್ತದೆ. ಹಳ್ಳಿ ಹಾಳಾಗುತ್ತದೆ. ಅದಕ್ಕಾಗಿ ಅವನು ನ್ಯಾಯದ ಪಕ್ಷ ವಹಿಸುತ್ತಾನೆ. ಅವನಿಗೆ ಎರಡೂ ಪಕ್ಷದವರು ನೆಂಟರು ಎನ್ನೋಣ. ಒಬ್ಬ ಶ್ರೀಮಂತ, ಬಲಾಢ್ಯ ಎನ್ನೋಣ. ಆದರೆ ಅವನು ಅಧರ್ಮಿಯಾಗಿದ್ದರೆ ಧರ್ಮಿಯಾದ ನಿರ್ಬಲನ ಪಕ್ಷವನ್ನೇ ವಹಿಸಬೇಕು. ತನ್ನ ಜನವನ್ನು ಬಲಿಕೊಟ್ಟಾದರೂ ತಾನು ಖುದ್ದಾಗಿ ನ್ಯಾಯದ ಪಕ್ಷವಹಿಸಬೇಕು. ಉದ್ಯೋಗಪರ್ವದ ಮೊದಲ ಸಂಧಿಯ ಎರಡನೆ ಮುಖ್ಯ ಸಂದರ್ಭ ದಲ್ಲಿ ಶ್ರೀಕೃಷ್ಣ ಕೈಗೊಂಡ ನಿರ್ಣಯವಾದರೂ ಇಂಥದ್ದೆ.

ಆ ದೃಶ್ಯ ತುಂಬ ನಾಟಕೀಯವಾಗಿ ನಿಯೋಜಿತವಾಗಿದೆ. ಕೃಷ್ಣ ಮಲಗಿದ್ದಾನೆ. ಅವನ ತಲೆಯ ಬಳಿ ದುರ್ಯೋಧನ, ಕಾಲಬಳಿ ಅರ್ಜುನ ಕುಳಿತಿದ್ದಾರೆ. ಕೃಷ್ಣ ಎಚ್ಚರಾಗಿ ಮೊದಲು ಅರ್ಜುನನನ್ನು ನೋಡಿದ. ಕೃಷ್ಣನ ಮುಖದಲ್ಲಿ ನಗೆಯ ಮೊಳೆ ಮಿನುಗಿತು. ಅವನು ತಿರುಗಿ ನೋಡಿದಾಗ ದುರ್ಯೋಧನನ ವಿಕಾರಗೊಂಡ ಮುಖ ಕಂಡಿತು. ದುರ್ಯೋಧನನ ಮುಖ ಕೆಡುವುದಕ್ಕೆ ಕೃಷ್ಣ ಮೊದಲು ಅರ್ಜುನನನ್ನು ನೋಡಿದ್ದು, ನಕ್ಕಿದ್ದು ಕಾರಣ. ಮನುಷ್ಯನ ಸ್ವಭಾವ ಎಷ್ಟು ಸೂಕ್ಷ್ಮ ಎಷ್ಟು ಜಟಿಲ ತಿಳಿಯುವುದು ಕಷ್ಟ. ಇಬ್ಬರಿಗೂ ವೀಳಯವ ಕೊಟ್ಟು ಜಾಣನಾದ ಕೃಷ್ಣ ಇಬ್ಬರಿಗೂ ಅನ್ವಯಿಸುವ ಒಂದೇ ಮಾತು ಆಡುತ್ತಾನೆ. ದುರ್ಯೋಧನ ನೇರವಾಗಿ

ವಿಷಯಕ್ಕೆ ಬರುತ್ತಾನೆ. 'ಧರಣಿಗೆ ಕಾದುವೆವು. ನೀವು ಇಬ್ಬರಿಗೆ ಬಲವಾಗಬೇಕು'. ಇಬ್ಬರಿಗೂ ಸಹಾಯವಾಗ ಬೇಕು ಎಂದಿದ್ದಾನೆ. ಇದು ಅವನ ಜಾಣ್ಮೆ.

ಕೃಷ್ಣ ಮಾತಿನಲ್ಲಿ ಎಷ್ಟೇ ವಿನಯಪರನಾದರೂ ಸತ್ಯವನ್ನು ಹೇಳುವುದಕ್ಕೆ ಹಿಂಜರಿಯುವವನಲ್ಲ. ಕೇಳುವವನಿಗೆ ಅಂಥ ಮಾತು ಹಿಡಿಸುತ್ತದೆ ಎಂದಲ್ಲ, ಅವನು ಒಪ್ಪಬಹುದು ಎಂದೂ ಅಲ್ಲ, ಆದರೆ ತಾನು ಆಡಲೇ ಬೇಕಾದುದು ಕರ್ತವ್ಯ ಎಂಬುದು ದೃಷ್ಟಿ.

ಕೌರವೇಶ್ವರ ಕೇಳು ಧರಣೀ
ನಾರಿ ಯಾರೊಡನೊಕ್ಕತನವಿ
ದ್ದಾರ ಮೆಚ್ಚಿದಳಾರ ಸಂಗಡವುರಿಯ ಹಾಯಿದಳು
ಭೂರಿ ಮಮಕಾರದಲಿ ನೃಪರು ವಿ
ಚಾರಿಸದೆ ಧರೆ ತಮ್ಮದೆಂದೇ
ನಾರಕದ ಸಾಮ್ರಾಜ್ಯಕೈದುವರೆಂದು ಹರಿ ನುಡಿದ.

ದುರ್ಯೋಧನ 'ರಾಜ' ಎಂಬುದರಿಂದ ಇಲ್ಲಿ ಧರಣಿ, ಸಾಮ್ರಾಜ್ಯ ಎಂಬ ಮಾತುಗಳು ಬಂದಿವೆ. ಇಲ್ಲ ವಾಗಿದ್ದರೆ 'ಒಕ್ಕತನ' ಎಂಬುದನ್ನು ಬಳಸಬಲ್ಲ ಕವಿಗೆ ಮನೆ–ಮಾರು, ಹೊಲ–ಗದ್ದೆಗಳೇ ಹೆಚ್ಚು ಸಹಜ. ಈಗ ಹಾಗೇ ಅಂದುಕೊಂಡರೂ ಸರಿಯೆ. ಹಳ್ಳಿಗಳಲ್ಲಿ ನಡೆಯುವ ಬಹುಪಾಲು ಮಾರಾಮಾರಿ ಇದಕ್ಕಾಗಿಯೇ. ನೀವು ಒಂದಾಗಿ ಬದುಕಬೇಕು. ನಾವು (ಹೊರಗಿನವರು) ನೋಡಿ ಸಂತೋಷಪಡುತ್ತೇವೆ ಎನ್ನುತ್ತಾನೆ ಕೃಷ್ಣ. ಅದು ಲೌಕಿಕ. ಅದು ಧರ್ಮ. ಆದರೆ ಎಲ್ಲರೂ ಹಾಗೇ ಇರುವುದಿಲ್ಲ. 'ಖುಲ್ಲರು' ಇಬ್ಬರಿಗೂ ಹಚ್ಚಿ, ಚುಚ್ಚಿ, ಅವರು ಹೊಡೆದಾಡಿ ಸತ್ತರೆ, ನೋಡಿ ಬಿಟ್ಟಿ ಮನರಂಜನೆ ಪಡೆಯುತ್ತಾರೆ. ದುರ್ಯೋಧನನಿಗೆ ಇವೆಲ್ಲಾ ಅರ್ಥ ವಾಗುವುದಿಲ್ಲವೋ, ಹಿಡಿಸುವುದಿಲ್ಲವೋ ಗೊತ್ತಿಲ್ಲ. 'ನಾವ್ ಪುರಾಣ ಕೇಳೋಕೆ ಬಂದಿಲ್ಲ ಸ್ವಾಮಿ' ಎನ್ನುತ್ತಾನೆ.

ಅವಧರಿಸು ಮುರವೈರಿ ಧರ್ಮ
ಶ್ರವಣಕೋಸುಗ ಬಾರೆವಾವ್. ಪಾ
ರ್ಥಿವರ ಪಂಥದ ಕದನವಿದ್ಯಾ ಕಾಮುವೆಮಗಾಯ್ತು.
ನಿನಗೆ ನಾವಿತ್ತಂಡ ಸರಿ. ಪಾಂ
ಡವರಿಗೆಯು, ಮನದೊಲವಿನಲಿ ಕೌ
ರವರಿಗೆಯು ಬಲವಾಗಬೇಕೆಂದೆನು ಸುಯೋಧನನು

ದುರ್ಯೋಧನ ಹೀಗೆಂದಾಗ 'ತಂಬುಲಸೂಸೆ ನಗುತ' ಕೃಷ್ಣ ಅರ್ಜುನನನ್ನು ನೋಡಿದ. ಹೀಗೆ ತಂಬುಲಸೂಸೆ ನಗಬಲ್ಲವರು ನಮ್ಮ ಶ್ಯಾನುಭೋಗರೇ.

'ಅರ್ಜುನಾ ನಿನ್ನ ಮತವೇನಯ್ಯ?' ಎಂದು ಕೃಷ್ಣ ಕೇಳಿದರೆ, ದುರ್ಯೋಧನನ ಮತವೇ ತನ್ನ ಮತ ಎನ್ನುತ್ತಾನೆ ಅರ್ಜುನ. ಇದಲ್ಲವೇ ಅಣ್ಣತಮ್ಮಂದಿರ ಅನ್ಯೋನ್ಯ! ಕೃಷ್ಣನಿಗೆ ಲೌಕಿಕವಾಗಿ ಇಬ್ಬರೂ ಸಮರೇ ಆದುದರಿಂದ ತಾನು ಒಂದು ಕಡೆ, ತನ್ನ ಸೈನ್ಯ ಒಂದು ಕಡೆ ಎಂದು ಎರಡು ಭಾಗ ಮಾಡುತ್ತಾನೆ. ತಾನು ಕಾದುವವನಲ್ಲ ಎನ್ನುತ್ತಾನೆ. ಈ ಎರಡರಲ್ಲಿ ಒಂದನ್ನು ಆರಿಸಿಕೊಳ್ಳಲು ಅರ್ಜುನನನ್ನೇ ಕೇಳುತ್ತಾನೆ. ನಿರೀಕ್ಷಿಸಿ ದಂತೆಯೇ ಅರ್ಜುನ ಕಾದದ ಕೃಷ್ಣನನ್ನು ಕಟ್ಟಿಕೊಳ್ಳುತ್ತಾನೆ.ಅದಕ್ಕೆ ಅವನು ಕೊಡುವ ಕಾರಣ ವ್ಯಂಗ್ಯವಾಗಿ ದುರ್ಯೋಧನನನ್ನು ಚುಚ್ಚುವಂತಿದೆ.

1. ಕೌರವರ ಅರಸ ಅತಿಸಿರಿವಂತ. ಬಹಳ ಯಾದವ ಸೈನ್ಯ ಸಾಗರವ ಸಂವರಿಸಲಾಪನು.
2. ಆವು ಧರೆಯ ಸಂಪದವಿಲ್ಲದ ಅಡವಿಯ ತಿರುಕರು ಅನಿಬರನು ಸಲೆ ಸಂವರಿಸಲಾಪೆವೆ?
3. ಕೃಷ್ಣ ನೀಸಾಕು.

ನೀನೊಬ್ಬನೇ ನಮಗೆ ಸಾಕು ಎಂದೂ ಹೌದು; ನೀನೇ ನಮ್ಮನ್ನು ಸಾಕಬೇಕು ಎಂದೂ ಹೌದು.

ಈ ಕೃಷ್ಣಾರ್ಜುನ ನಾಟಕ ದುರ್ಯೋಧನನಿಗೆ ಅರ್ಥವಾಗದ್ದಲ್ಲ. ಕೃಷ್ಣ ತನ್ನನ್ನು ಉಪಾಯವಾಗಿ ದೂರಿಡುವ ರೀತಿ ಇದು ಎಂದು ಅವನು ಬಲ್ಲ. ಅದರಿಂದ ಅವನಿಗೆ ಪ್ರಕಟವಾಗಿ ಬೇಸರ; ಗುಟ್ಟಾಗಿ ಇದೂ ಒಳ್ಳೆಯದೇ ಎಂದು ಸಮಾಧಾನ. ಆಯುಧ ಹಿಡಿಯದ ಕೃಷ್ಣ ಏನು ಮಾಡಬಲ್ಲ ಎಂಬ ವಿಚಾರ ಅವನದು. ಆದರೆ ಕೃಷ್ಣ ಹೊಕ್ಕಿರಿಯಬಾರದು ಮಾತ್ರ. ದುರ್ಯೋಧನ ತನ್ನ ಶಂಕೆಯನ್ನು ಸೂಚಿಸಿದಾಗ, ಕೃಷ್ಣ ಈಗ ಹಂಗು ಹರಿದ ಸ್ಥಿತಿಯಲ್ಲಿರುವುದರಿಂದ ವ್ಯಂಗ್ಯದಿಂದ ದುರ್ಯೋಧನನನ್ನು ಚುಚ್ಚುತ್ತಾನೆ. ತನ್ನ ಬಾಲ್ಯದ ಸಾಹಸಗಳನ್ನು ಆಡಿಕೊಂಡು ನಕ್ಕವರ ಮಾತನ್ನು ಕೃಷ್ಣ ಕೇಳಿರಬೇಕು. ಆ ಮಾತುಗಳನ್ನು ದುರ್ಯೋಧನನೂ ಆಡುವವನೇ. ಅದಕ್ಕಾಗಿ ಕೃಷ್ಣ ತನ್ನನ್ನೇ ತಮಾಷೆ ಮಾಡಿಕೊಳ್ಳುವಂತೆ ವ್ಯಂಗ್ಯವಾಗಿ ಆ ಮಾತುಗಳನ್ನು ಆಡಿ, ತುದಿಯಲ್ಲಿ ತಾನು ಮಾಡಿದ ಮಹಾ ಕಾರ್ಯಗಳನ್ನು ಹೇಳಿದ್ದಾನೆ. ಆದರೆ ಅದೆಲ್ಲಾ ಆಗಿಹೋದ ಮಾತು. ಈಗ ವಯಸ್ಸಾಗಿದೆ. ಈಗ ತಾವು ಉಂಡಾಡಿ ಭಟ್ಟರು ಮಾತ್ರ. 'ಹಾಗೋ....ಒಳ್ಳೇದು' ಎಂದು ಕೌರವ ಕೃಷ್ಣನಿಂದ ಬೀಳ್ಕೊಳ್ಳುತ್ತಾನೆ. ಅವನು ಹೋದಮೇಲೆ ಕೃಷ್ಣ 'ನಸುನಗುತ' ಅರ್ಜುನನನ್ನು ಹಾಸ್ಯಮಾಡುತ್ತಾನೆ. ಚರ್ಚೆ ಒಟ್ಟಿಗೇ ಆದರೂ, ಅದು ಮುಗಿದ ಮೇಲೂ ಹೆಚ್ಚು ಹೊತ್ತು ಒಟ್ಟಿಗೆ ಉಳಿದವರು ಹೆಚ್ಚು ಆಪ್ತರು ಎಂಬುದು ಲೋಕಸ್ವಾಭಾವ ಬಲ್ಲವರಿಗೆ ಗೊತ್ತು. ಕೃಷ್ಣ ಮತ್ತು ಅರ್ಜುನನ ಸಂಭಾಷಣೆ ಏಕಾಂತದಲ್ಲಿ ಈ ಧಾಟಿಯಲ್ಲಿ ಸಾಗುತ್ತದೆ.

ಕೃಷ್ಣ :–ಅಲ್ಲಯ್ಯ....ಎಂಥ ಹುಚ್ಚ ನೀನು....ಯಾರೋ ಒಬ್ಬ ಕತ್ತಿ ಬಿಟ್ಟು ಒರೆ ತೆಗೆದುಕೊಂಡನಂತೆ. ಹಾಗಾಯ್ತು ನಿನ್ನ ಕಥೆ. ಮಹಾಬಲದಿಂದ ಕೂಡಿದ ಯಾದವ ಸೇನೆಯನ್ನು ಬಿಟ್ಟು ಕಾದದ, ಕಟ್ಟದ ನಮ್ಮನ್ನು ಆರಿಸಿ ಕೊಂಡೆಯಲ್ಲ....ಇದು ಗೊತ್ತಾದ್ರೆ ನಿಮ್ಮ ಅಣ್ಣ ತಮ್ಮಂದಿರು ನಿನ್ನ ಸುಮ್ಮನೆ ಬಿಡ್ತಾರೆಯೇ....?

ಅರ್ಜುನ :–(ಗಹಗಹಿಸಿ ನಕ್ಕು) ಸ್ವಾಮಿ...ಯಾರ ಮುಂದೆ ಮಾತಾಡ್ತಿದೀರಿ....ನಿಮ್ಮ ಗರುಡಿಯಲ್ಲೇ ನಾವೂ ಸಾಮುಮಾಡಿದ್ದೇವೆ....ನೀವು ಏನು ಎಂತು ಅಂತ ನಮ್ಮ ಅಣ್ಣ ತಮ್ಮಂದಿರಿಗೆ ಗೊತ್ತಿಲ್ಲ ಅಂತತಿಳಿದಿರಾ....?

ಕೃಷ್ಣ :–ಸರಿಯಪ್ಪ, ನಾವು ಹೇಗೂ ಆಯುಧ ಹಿಡಿದು ಯುದ್ಧ ಮಾಡೋರಲ್ಲ. ಯುದ್ಧಭೂಮಿಗೆ ಬಂದು 'ಏನು ಮಾಡಬೇಕು ? ಇನ್ನೊಬ್ಬರಿಗೆ ಹಂಗಾಗಿ ಸುಮ್ಮನೆ ಕೂಡೋದಕ್ಕೆ ಸಾಧ್ಯವಿಲ್ಲ. ನೀವೇನೋ ನಮ್ಮನ್ನು ದೇವರು ಅಂತೀರಿ. ನಾವು ಏನು ಅಂತ ನಮಗೆ ಗೊತ್ತಿದೆ. ಆದಿರಲಿ. ನಾವು ಏನು ಮಾಡ್ಬೇಕು ಎನ್ನೋದನ್ನ ಮೊದಲು ಹೇಳ್ಬಿಡಿ.

ಅರ್ಜುನ :–ನೀವು ಕೇವಲ ದೇವರೇ ? ನೀವು ದೇವರ ದೇವರು. ಇರಲಿ. ಆ ಮಾತು ಸಾಕು. ನಾವು ಭಕ್ತರು. ಭಕ್ತರ ಸೇವಕರು ನೀವು. ಸಾರಥಿಯಾಗಿ ನಮ್ಮನ್ನು ಕಾಪಾಡಬೇಕು.

(ಹೀಗೆ ಹೇಳಿ ಅರ್ಜುನ ಕೃಷ್ಣನ ಕಾಲುಮುಟ್ಟಿ ನಮಸ್ಕರಿಸಿದನು. ಕೃಷ್ಣ ನಕ್ಕು ಅರ್ಜುನನನ್ನು ಎತ್ತಿ, ಸಾರಥಿತನವನ್ನು ಕೈಗೊಂಡನು.)

ಕುಮಾರವ್ಯಾಸ ಏಕೆ ನನಗೆ ಇಷ್ಟ ಎಂಬುದು ನನಗೆ ಸ್ಪಷ್ಟವಾಗತೊಡಗಿದೆ. ಆತ ನಮ್ಮದೇ ಕಥೆ ಬರೆದಿದ್ದಾನೆ. ನಮ್ಮದೇ ಸಮಸ್ಯೆ, ನೋವು, ನಲವು, ಧರ್ಮ, ಧರ್ಮಸಂಕಟಗಳನ್ನು ಚಿತ್ರಿಸಿದ್ದಾನೆ. ಬದುಕನ್ನು ಗಾಢವಾಗಿ ಅನುಭವಿಸಬಲ್ಲ ಹಳ್ಳಿಗರನ್ನು ತನ್ನ ಕೃತಿಯಲ್ಲಿ ಚಿತ್ರಿಸಿದ್ದಾನೆ. ಮನೆತನದ ಮಾನಕ್ಕಾಗಿ ಇಲ್ಲಿಯ ಮಂದಿ ಬಡಿದಾಡಿದ್ದಾರೆ. ಆಗ ಸಹ ತಮ್ಮ ಸ್ವಂತ ಪ್ರತಿಷ್ಠೆ, ಅಹಂಕಾರಗಳಿಗೆ ಹಾತೊರೆಯುತ್ತಾ ತಾವು ತಾವೇ ಆಗಿದ್ದಾರೆ. ಕುಮಾರವ್ಯಾಸ ನಗರದ ಕಥೆಯನ್ನು ಹಳ್ಳಿಯಲ್ಲಿ 'ಆಡಿ'ದ್ದಾನೆ. ಕುಮಾರವ್ಯಾಸ ಭಾರತ ನಮ್ಮ ಜಾನಪದ ಮಹಾಕಾವ್ಯ. ಇಂಥ ಕಾವ್ಯವನ್ನು ಬರೆದ ಕವಿಯ ಸಾಮಾಜಿಕ ಪ್ರಜ್ಞೆ, ಸಾಮಾಜಿಕ ಎಚ್ಚರಗಳನ್ನು ಶಂಕಿಸುವ ಎದೆಗಾರಿಕೆ ನನಗಿಲ್ಲ.

ಹೇಮದಳ ರಾಮದಾಸ್

ಸ್ವಾಮಿ ವಿವೇಕಾನಂದ

ಯೋಗದೃಷ್ಟಿ ; ಕಾವ್ಯಸೃಷ್ಟಿ

ಸ್ವಾಮಿ ವಿವೇಕಾನಂದರು ರಾಷ್ಟ್ರದ ಧರ್ಮ ಹಾಗೂ ಸಾಮಾಜಿಕ ಜೀವನದ ಪುನರುಜ್ಜೀವನಕ್ಕೆ ಶ್ರಮಿಸಿದ ವೀರಸನ್ಯಾಸಿ, ರಸಋಷಿ ಹಾಗೂ ಕಾವ್ಯಋಷಿ. ಅವರು ರಚಿಸಿರುವ ಕವಿತೆಗಳಲ್ಲಿ ಪ್ರಧಾನವಾಗಿರುವ ಅಂಶ ಸ್ವಾನುಭವ ಹಾಗೂ ಅವರ ಯೋಗದೃಷ್ಟಿ.

ಸ್ವಾಮಿಜಿಯವರು ಇಂಗ್ಲೀಷ್, ಸಂಸ್ಕೃತ, ಬಂಗಾಳಿ ಸಾಹಿತ್ಯವನ್ನೂ ವೇದ ಉಪನಿಷತ್ತು ಮೊದಲಾದ ಧರ್ಮಗ್ರಂಥಗಳನ್ನೂ ಆಳವಾಗಿ ವ್ಯಾಸಂಗ ಮಾಡಿದವರು. ಜೀವನವನ್ನು ತೆರೆದ ಕಣ್ಣಿನಿಂದ ನೋಡಿದ ಅನುಭವಿಗಳು. ಇಂಥವರಿಗೆ ಕಾವ್ಯ ರಚಿಸುವುದು ಶ್ರಮದ ಕೆಲಸವಾಗಿರಲಿಲ್ಲ. ಆದರೆ ಕಾವ್ಯರಚನೆ ಅವರ ಜೀವನದ ಉದ್ದೇಶವಾಗಿರಲಿಲ್ಲ. ಇಡೀ ಮಾನವಕೋಟಿಯ ಕಲ್ಯಾಣಕ್ಕಾಗಿ ತಮ್ಮ ಜೀವಿತವನ್ನು ಮುಡುಪಿಟ್ಟು ಶ್ರಮಿಸಿದವರು ಸ್ವಾಮಿಜಿ. ಅವರ ಬದುಕೇ ಸಾಹಿತ್ಯರಚನೆಗೆ ಪ್ರೇರಕಶಕ್ತಿಯಾಯಿತು. "ಭಾವ ಭಾಷೆಯಲ್ಲಿ ಹೊಸತನವಿರಬೇಕು. ಪುರುಷಸಿಂಹವನ್ನು ನಿರ್ಮಾಣ ಮಾಡುವಂಥ ಕಾವ್ಯಗಳನ್ನು ಕೊಡುತ್ತಾ ಬಂದರೆ ಜನ ತಮ್ಮ ಕಾಲಮೇಲೆ ನಿಲ್ಲುವುದನ್ನು ಕಲಿಯುವರು." ಇದು ಸಾಹಿತ್ಯದ ಬಗ್ಗೆ ಅವರ ಅಭಿಪ್ರಾಯ. ಈ ಮಾತನ್ನು ಸ್ವಾಮಿಜಿಯವರು ಕಾರ್ಯರೂಪಕ್ಕೆ ತಂದರು. ತಮ್ಮ ನಡೆ, ನುಡಿ ಹಾಗೂ ಸಾಹಿತ್ಯದಿಂದ ಇಡೀ ಭರತಖಂಡವನ್ನೇ ಜಡನಿದ್ದೆಯಿಂದ ಎಚ್ಚರಿಸಿದರು. ಸ್ವಾಮಿಜಿಯವರು ಸಂಸ್ಕೃತ, ಬಂಗಾಳಿ, ಇಂಗ್ಲೀಷಿನಲ್ಲಿ ರಚಿಸಿರುವ ಗೀತೆ ಹಾಗೂ ಕವಿತೆಗಳಲ್ಲಿ ಕೆಲವನ್ನು ಮಾತ್ರ ಪರಿಚಯ ಮಾಡಿಕೊಡುವುದೇ ಈ ಲೇಖನದ ಉದ್ದೇಶ.

ಮೋಹಂ ಕಷಂ ಬಹುಕೃತಂ ನಭಜೇ ಯತೋಹಂ
ತಸ್ಮಾತ್ ತ್ವಮೇವ ಶರಣಂ ಮಮ ದೀನಬಂಧೋ.

ಮೋಹನಾಶಕವೂ, ಪೂಜನೀಯವೂ ಆದ ನಿನ್ನ ಅಡಿದಾವರೆಗಳನ್ನು ನಾನು ಹಗಲೂ ರಾತ್ರಿಯೂ ವ್ಯಾಕುಲದಿಂದ ಭಜಿಸಲಿಲ್ಲ. ಆದುದರಿಂದ ಹೇ ದೀನಬಂಧು ನಿನಗೆ ನಾನು ಶರಣು—ಎಂದು ಧರ್ಮಸಂಸ್ಥಾಪಕನೂ ಅವತಾರ ಶ್ರೇಷ್ಠನೂ ಆದ ಶ್ರೀ ರಾಮಕೃಷ್ಣರಿಗೆ ನಮಸ್ಕರಿಸುವ 18 ಸಾಲುಗಳ ಈ ಶ್ಲೋಕದಲ್ಲಿ ಭಕ್ತಿಯೇ ಪ್ರಧಾನವಾಗಿದೆ. ಈ ಸ್ತೋತ್ರವನ್ನು ವಿಶ್ವದಾದ್ಯಂತ ರಾಮಕೃಷ್ಣಾಶ್ರಮಗಳಲ್ಲಿ ಇಂದು ಪ್ರತಿದಿನವೂ ಸಂಜೆ ಭಕ್ತವೃಂದ ಹಾಡಿ, ತಮ್ಮ ಜೀವನವನ್ನೇ ಪುನೀತವನ್ನಾಗಿ ಮಾಡಿಕೊಳ್ಳುತ್ತಿದೆ. ಶಿವಶರಣರ ವಚನಗಳಂತೆ, ದಾಸರ ಕೀರ್ತನೆಗಳಂತೆ, ಭಕ್ತಿಪ್ರಧಾನವಾಗಿರುವ ಸ್ವಾಮಿಜಿಯವರ ಹಲವು ಸ್ತೋತ್ರಗಳು ಭಕ್ತಕೋಟಿಯ ಹೃದಯವನ್ನು ತಣಿಸುತ್ತಿವೆ. ಅಸತ್ಯದಿಂದ ಸತ್ಯಕ್ಕೆ, ಕತ್ತಲಿನಿಂದ ಬೆಳಕಿಗೆ ಅವರನ್ನು ನಡೆಸುತ್ತಿವೆ.

ಸ್ವಾಮಿಜಿಯವರು ಬಂಗಾಳಿಯಲ್ಲಿ ರಚಿಸಿರುವ ಗೀತೆಗಳಲ್ಲಿ ಕೆಲವನ್ನು ಹಾಡಲು ಬಲು ಸೊಗಸು. "ಕೊರಳಲ್ಲಿ ಕಪಾಲ ಮಾಲೆಯನ್ನು ಧರಿಸಿ, ಡಿಮಿ ಡಿಮಿ ಎಂದು ಡಮರು ಬಾರಿಸುತ್ತಿರುವನು. ಜಟೆಯ ಮೂಲಕ ಗಂಗಾನದಿ ಘರ್ಜಿಸುತ್ತ ಹರಿಯುತ್ತಿರುವಳು. ಕರಗಳಲ್ಲಿ ಧರಿಸಿರುವ ತ್ರಿಶೂಲದಿಂದ ಧಗಧಗಿಸುವ ಅಗ್ನಿ ಪ್ರಕಾಶಿಸುತ್ತಿದೆ. ಹಣೆಯಲ್ಲಿ ಶಶಾಂಕನು ಹೊಳೆಯುತ್ತಿರುವನು" ಎಂದು ಶಿವನ ನೃತ್ಯವನ್ನು ವರ್ಣಿಸುವ ಗೀತೆ :

ತಾಥೈಯಾ ತಾಥೈಯಾ ನಚೇ ಭೋಲಾ
ಬಂ ಬಬ ಬಾಜೇ ಗಾಲ ॥
ಡಿಮಿ ಡಿಮಿ ಡಿಮಿ ಡಮರು ಬಾಜಿ
ದುಲಿಛೆ ಕಪಾಲ ಮಾಲ ॥
ಗರಜೇ ಗಂಗಾ ಜಟಾ ಮಾಝೇ
ಉಗರೇ ಅನಲ ತ್ರಿಶೂಲ ರಾಜೇ
ಧಕ್ ಧಕ್ ಧಕ್ ಮೌಲಿ ಬಂಧ
ಜ್ವಲೇ ಶಶಾಂಕ ಭಾಲ ॥

ಗಾಯಕ

ಈ ಶಿವಗೀತದಲ್ಲಿ ಸಂಗೀತಕ್ಕೆ ವಿಶಿಷ್ಟ ಸ್ಥಾನವಿದೆ. ಸ್ವಾಮಿಜಿಯವರೇ ಸ್ವತಃ ಉತ್ತಮ ಗಾಯಕರು. ಆದಕಾರಣ ಅವರು ರಚಿಸಿರುವ ಕವನದಲ್ಲಿ ಸಂಗೀತದ ಛಾಯೆ ಇದೆ. ನಾದ ಇವರ ಕವಿತೆಯ ಉಸಿರು. "ಸಮಾಧಿ" ಸ್ವಾಮಿಜಿಯವರ ಯೋಗದೃಷ್ಟಿಯನ್ನು ಪರಿಚಯ ಮಾಡಿಕೊಡುವ ಕವಿತೆ. ನಿರ್ವಿಕಲ್ಪ ಸಮಾಧಿಯಲ್ಲಿ ತೊಡಗಿದಾಗ ಅವರಿಗೆ ಸಿದ್ಧಿಸಿದ ಅದ್ವಿತೀಯವಾದ ಅನುಭವವನ್ನು ಚಿತ್ರಿಸುವ ಕವನ :

ನಹಿ ಸೂರ್ಯ ನಹಿ ಜ್ಯೋತಿಃ ಶಶಾಂಕ ಸುಂದರ
ಬಾಸೆ ವ್ಯೋಮ ಛಾಯ ಸಮ ಛವಿ ವಿಶ್ವ ಚರಾಚರ

ಅಲ್ಲಿ ಸೂರ್ಯನಿಲ್ಲ, ಜ್ಯೋತಿಯಿಲ್ಲ. ಸುಂದರ ಶಶಾಂಕನಿಲ್ಲ. ಆ ಮಹಾ ಶೂನ್ಯದಲ್ಲಿ ಛಾಯಾ ಸಮಾನವಾದ ವಿಶ್ವ ತೇಲುತ್ತಿದೆ ಎಂಬ ಭಾವದಿಂದ ಆರಂಭಿಸಿದ ಈ ಕವನವನ್ನು "ಶೂನ್ಯ ಶೂನ್ಯ ಮಿಲಾಯಿಲ, ಬೋಝು– ಪ್ರಾಣ ಬೋಝು ಜಾಯ" ಶೂನ್ಯ ಶೂನ್ಯದಲ್ಲಿ ವಿಲೀನವಾಯಿತು. ಅನುಭವಿಸಿದವರಿಗೇ ಇದು ಗೊತ್ತು—ಎಂದು ಮುಕ್ತಾಯ ಗೊಳಿಸುತ್ತಾರೆ.

ಸ್ವಾಮಿಜಿಗೆ ಪ್ರಕೃತಿ ಎಂದರೆ ಬಹು ಪ್ರೀತಿ. ಕಡಲು, ಹೊಳೆ, ಬೆಟ್ಟ, ಕಣಿವೆಗಳನ್ನು ಕಂಡಾಗ ಮೈ ಮರೆತು ಹಾಡಿ ತಣಿಯುತ್ತಾರೆ. ಸೌಂದರ್ಯದಲ್ಲಿ ಶಿವನನ್ನು ಕಾಣುತ್ತಾರೆ. 'ನಾಚುಕ್ ತಹತೆ ಶ್ಯಾಮ' ಕವನದಲ್ಲಿ :

ಪುಲ್ಲಪೂಲ್ ಸೌರಭೆ ಅಕುಲ ಮತ್ತ ಅಳಿಕುಲ ಗುಂಜರಿ ಛೆ ಆಶೆಪಾಶೆ
ಶುಭ್ರಶಶಿಯೆನ ಹಾಸಿರಾಶಿ ಯುತ ಸ್ವರ್ಗವಾಸಿ ವಿತರಿಛೆ ಧರವಾಸೆ

ಸೌರಭದಿಂದ ಕೂಡಿದ ವಿಕಸಿತ ಹೂವುಗಳು, ಅದರ ಸುತ್ತಲೂ ಉನ್ಮತ್ತ ಅಳಿಗಳು ಝೇಂಕರಿಸುತ್ತಿವೆ. ಶುಭ್ರ ಶಶಿಯ ಮಂದಸ್ಮಿತ ಕಾಂತಿಯು ಭೂಲೋಕದ ಮನೆಗಳ ಮೇಲೆ ತಂಗಿದೆ— ಎಂದು ಪ್ರಕೃತಿಯನ್ನು ವರ್ಣಿಸುತ್ತಾರೆ.

"The cup" ಎನ್ನುವ ಕವಿತೆಯಲ್ಲಿ

This is your cup–the cup assigned to you from the beginning.
Nay, My child, I know how much of that dark drink is your own brew.

Of fault and passion, ages long ago,
In the deep years of yesterday I know,

ಇದು ನೀನು ಕುಡಿಯುವುದಕ್ಕಾಗಿ ಇಟ್ಟಿರುವ ಬಟ್ಟಲು. ಅನಾದಿಕಾಲದಿಂದಲೂ ನಿನಗಾಗಿ ಇದನ್ನು ಇಟ್ಟಿವೆ. ಎದುರಿಗಿರುವ ಈ ಕಹಿಯಾದ ಕಷಾಯದ ಬಹುಪಾಲನ್ನು ನೀನೇ ಮಾಡಿಕೊಂಡಿರುವೆ. ಬಹಳ ಹಿಂದೆ ನೀನು ಮಾಡಿದ ಕರ್ಮಪಾಕವೆಲ್ಲವೂ ಇಲ್ಲಿದೆ—ಎಂದು ಜೀವನದ ರಹಸ್ಯ ಕುರಿತು ಹೇಳುತ್ತಾರೆ.

"Misunderstood'' ಕವನವನ್ನು ಕತೆ ಹೇಳುವ ರೀತಿಯಲ್ಲಿ ಆರಂಭಿಸುತ್ತಾರೆ. ಚಿಕ್ಕದೊಂದು ಘಟನೆ, ತಿಳಿಹಾಸ್ಯ, ಕೊನೆಯಲ್ಲಿ ಒಂದು ತತ್ತ್ವವನ್ನು ಈ ಕವನದಲ್ಲಿ ನಿರೂಪಿಸಿದ್ದಾರೆ. ಗಂಗಾನದಿ ತೀರ, ಅಲ್ಲಿ ಒಬ್ಬ ಬ್ರಾಹ್ಮಣ, ರಾಮಾಯಣದ ಕತೆ ಬೋಧಿಸುತ್ತಿದ್ದ. ಬೋಧನೆ ಪೂರೈಸಿದ ಮೇಲೆ ಪುರಾಣ ಕೇಳಲಿಕ್ಕೆ ಬಂದ ಜನ ತಮ್ಮ ತಮ್ಮ ಮನೆಗಳಿಗೆ ಹೋಗುತ್ತಾರೆ. ಆ ಗುಂಪಿನಲ್ಲಿ ಒಬ್ಬನು ಮಾತ್ರ ಆ ಬ್ರಾಹ್ಮಣನನ್ನು ಬೇಡಿಕೊಂಡ, "ನೀವು ಬೋಧಿಸುತ್ತಿದ್ದ ರಾಮ, ಸೀತೆ ಯಾರು ದಯವಿಟ್ಟು ಹೇಳಿ" ಎಂದು. ಬೋಧಕನು ಹೀಗೆಂದ : "ನೆನಪಿನಲ್ಲಿಡು ; ದೇವರೊಬ್ಬನೇ ಸತ್ಯ ಉಳಿದವುಗಳೆಲ್ಲ ಮಿಥ್ಯ. ಈ ಪ್ರಪಂಚ ಸತ್ಯವಾಗಿ ಕಂಡರೂ ಇದೊಂದು ಕನಸು. ನಿಜವಾದ ನಾನು ಅವನಲ್ಲದೆ ಬೇರೆ ಅಲ್ಲ" ಹೀಗೆ ಅದ್ವೈತ ತತ್ತ್ವವನ್ನು ಈ ಚಿಕ್ಕ ಕವಿತೆಯಲ್ಲಿ ನಿರೂಪಿಸಿದ್ದಾರೆ. ಶಂಕರಾಚಾರ್ಯರ ಸಂಸ್ಕೃತ ಕಾವ್ಯದ ಕೆಲವು ಭಾಗಗಳನ್ನೂ ಸಹ ಸ್ವಾಮಿಜಿಯವರು ಆಂಗ್ಲಭಾಷೆಗೆ ಭಾಷಾಂತರಿಸಿದ್ದಾರೆ.

ದಿವ್ಯಾನುಭೂತಿ

ಸ್ವಾಮಿಜಿ ಅವರ ಪಾಲಿಗೆ ದಕ್ಷಿಣೇಶ್ವರದ ಭವತಾರಣಿ ಸಾಕಾರ ಜಗನ್ಮಾತೆ. ಅಷ್ಟೇ ಅಲ್ಲ, ಅವರಿಗೆ ಇಡೀ ಭರತಖಂಡವೇ ಮಹಾಕಾಳಿಯಂತೆ ಪವಿತ್ರವಾಗಿತ್ತು. "ನಮ್ಮೀ ಭರತಭೂಮಿ ನಿದ್ರೆಯಿಂದ ಏಳುತ್ತಿದೆ. ಏಕೆಂದರೆ, ಅದೋ ನೋಡಿ ! ಮಹಾಕಾಳಿ ಮತ್ತೊಮ್ಮೆ ಎಚ್ಚೆತ್ತು ಮೈಕೊಡವಿ ಉಸಿರೆಳೆದು ನಿಲ್ಲುತ್ತಿದ್ದಾಳೆ", ಎನ್ನುವ ಅವರ ಮಾತಿನಲ್ಲಿ ದಿವ್ಯಾನುಭೂತಿಯ ಅದ್ಭುತ ಕಲ್ಪನೆ ಇದೆ.

ಸ್ವಾಮಿಜಿಯವರು ಒಮ್ಮೆ ಕಾಶ್ಮೀರದಲ್ಲಿ ಯಾತ್ರೆ ಕೈಗೊಂಡಾಗ ಸ್ಫೂರ್ತಿಯಿಂದ ಬರೆದ ಕವನ "Kali, the mother'' ಅವರ ಆಧ್ಯಾತ್ಮಿಕಚಿಂತನೆ ಹಿಮಶೈಲದ ತುದಿ ಮುಟ್ಟಿರಬೇಕು. ಯಾತ್ರೆಯಲ್ಲಿ ಸ್ವಾಮಿಜಿಯವರ ಜೊತೆಯಲ್ಲಿದ್ದ ಸೋದರಿ ನಿವೇದಿತ "ಈ ಕವಿತೆಯನ್ನು ಪೂರ್ಣ ಮಾಡುವವರೆಗೂ ನನ್ನ ಬೆರಳು ವಿಶ್ರಾಂತಿಯನ್ನೇ ಪಡೆಯಲಿಲ್ಲ—ಎಂದು ಸ್ವಾಮಿಜಿ ಒಮ್ಮೆ ಹೇಳಿದ್ದರು. ಸ್ಫೂರ್ತಿಯಿಂದ ಈ ಕವಿತೆಯನ್ನು ಬರೆದ ಮೇಲೆ ಭಾವೋದ್ರೇಕದಿಂದ ಬಳಲಿದ ಸ್ವಾಮಿಜಿಯವರು ಹಾಗೆಯೇ ನೆಲದ ಮೇಲೆ ಬಿದ್ದುಬಿಟ್ಟರೆಂದು ನನಗೆ ಆಮೇಲೆ ತಿಳಿಯಿತು" ಎಂದಿದ್ದಾರೆ. ಸ್ವಾಮಿಜಿಯವರು ಈ ಕವಿತೆಯಲ್ಲಿ ಕಾಳಿಯ ರೌದ್ರ ರೂಪವನ್ನು ವರ್ಣಿಸುತ್ತ :

Terror is thy name
Death is in thy breath,
And every shaking step,
Destroys a world fore'er,
Thou 'Time' the all—Destroyer !
Come, O Mother, Come !

ನಿನ್ನ ಹೆಸರು ಕಾಳಿ ; ನಿನ್ನ ಉಛ್ವಾಸ ನಿಶ್ವಾಸಗಳಲ್ಲಿ ಮೃತ್ಯುವಿದೆ ; ನಿನ್ನ ಭೀಮಚರಣಗಳ ಒಂದು ಅಡಿ ಒಂದು ಪ್ರಪಂಚವನ್ನೇ ನಾಶ ಮಾಡುತ್ತದೆ, ಎನ್ನುತ್ತಾರೆ. ಈ ಕವಿತೆಯ ಕೊನೆಯಲ್ಲಿ "ಯಾರಿಗೆ ದುಃಖವನ್ನು ಪ್ರೀತಿಸಿ ಮೃತ್ಯುವನ್ನು ಅಪ್ಪಿಕೊಳ್ಳುವ ಸಾಹಸವಿದೆಯೋ ಅವರ ಸಮೀಪಕ್ಕೆ ತಾಯಿ ಬರುವಳು" ಎನ್ನುತ್ತಾರೆ.

ಸ್ವಾಮಿಜಿಯವರು 1895ರಲ್ಲಿ ನ್ಯೂಯಾರ್ಕಿಗೆ ತೆರಳಿದ್ದಾಗ, ಅಲ್ಲಿಯೇ ಕೆಲವು ವಾರಗಳ ಕಾಲ ತಮ್ಮ ಶಿಷ್ಯರೊಂದಿಗೆ ಇದ್ದ ಸಮಯದಲ್ಲಿ ಬರೆದ ಕವನ "The song of the Sanyasin." ಈ ಕವಿತೆಯನ್ನು ರಾಷ್ಟ್ರಕವಿ ಕುವೆಂಪು ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ಕವಿತೆಯ ಆಯ್ದ ಕೆಲವು ಸಾಲುಗಳು ಈ ರೀತಿ ಇವೆ.

ಕುಟ್ಟಿ ಪುಡಿ ಪುಡಿ ಮಾಡಿ ಮಾಯೆಯು ಕಟ್ಟಿಬಿಗಿದಿಹ ಹಗ್ಗವ ;
ಕಿತ್ತು ಬಿಸುಡೈ ಹೊಳೆವ ಹೊನ್ನಿನ ಹೆಣ್ಣು ಮಣ್ಣಿನ ಕಗ್ಗವ।
ಮುದ್ದಿಸಲಿ ಪೀಡಿಸಲಿ ದಾಸನು ದಾಸನೆಂಬುದೆ ಸತ್ಯವು ;
ಕಬ್ಬಿಣವೊ ? ಕಾಂಚನವೊ ? ಕಟ್ಟಿದ ಕಣ್ಣಿ ಕಣ್ಣಿಯೆ ನಿತ್ಯವು.
ಪಾಪ ಪುಣ್ಯಗಳೆಂಬವು,—ಮಾತ್ಸರ್ಯ ಪ್ರೇಮಗಳೆಂಬವು
ದ್ವಂದ್ವ ರಾಜ್ಯದ ಧೂರ್ತಚೋರರು| ಬಿಟ್ಟು ಕಳೆ, ಕಳೆಯುವರನು !
ಮೋಹಗೊಳಿಪರು ಬಗಿವರಿವರಿವರು ; ಎಚ್ಚರಿಕೆಯಿಂದವರನು
ತಳ್ಳು ದೂರಕೆ ಓ ವಿರಕ್ತನೆ ! ಹಾಡು ಚಾಗಿಯ ಹಾಡನು !
ಹಾಡಿನಿಂದೆಚ್ಚರಿಸು ಮಲಗಿಹ ನಮ್ಮ ಈ ತಾಯ್ನಾಡನು !
ಹಾಡು ಮುಕ್ತಿಯ ಗಾನವನು ಓ ವೀರ ಸನ್ಯಾಸಿ.
ಓಂ ! ತತ್ ! ಸತ್ ! ಓಂ !
....
ಇರುವುದೊಂದೇ ! ನಿತ್ಯಮುಕ್ತನು; ಸರ್ವಜ್ಞಾನಿಯು ಆತ್ಮನು !
ನಾಮರೂಪಾತೀತನಾತನು ! ಪಾಪ ಪುಣ್ಯಾತೀತನು !
....
ಗಗನವೇ ಮನೆ ! ಹಸುರೆ ಹಾಸಿಗೆ !
ಮನೆಯು ಸಾಲ್ವುದ ಜಾರಿಗೆ !
ಹಸಿಯೊ ? ಬಿಸಿಯೊ ? ಬಿದಿಯು
ಕೊಟ್ಟಾಹಾರವನ್ನವು ಯೋಗಿಗೆ ?
ಏನು ತಿಂದರೆ ಏನು ಕುಡಿದರೆ ಏನು ?
ಆತ್ಮಗೆ ಕೊರತೆಯೋ ?
ಸರ್ವಪಾಪವ ತಿಂದು ತೇಗುವ ಗಂಗೆಗೇಂ ಕೊಳೆ ಕೊರತೆಯೆ !
ನೀನು ಮಿಂಚೈ ! ನೀನು ಸಿಡಿಲೈ ! ಮೊಳಗು ಸನ್ಯಾಸಿ
ಓಂ !ತತ್ ! ಸತ್ ! ಓಂ !

ಗುರುಪಾದ ಕೆ. ಹೆಗಡೆ

ರಾಮಾಯಣ-ಒಂದು ಪ್ರತಿಮಾವಿಧಾನ

ರಾಮಾಯಣದ ಐತಿಹಾಸಿಕ ಮೌಲ್ಯಮಾಪನವು ಆಗಾಗ ನಡೆಯುತ್ತಿರುತ್ತದೆ. ಇದು ಇತಿಹಾಸವೇ ಸರಿ ಎಂದು ತೀರ್ಮಾನಿಸುವವರು ಕೊಡುವಷ್ಟೇ ಪ್ರಬಲಕಾರಣಗಳನ್ನು ಕಟ್ಟುಕಥೆಯೆಂದು ನಿರ್ಣಯಿಸುವವರೂ ನೀಡಬಲ್ಲರು. ಶ್ರೀರಾಮ ಸೇತುವೆ ಕಟ್ಟಿಸಿದ್ದು ರಾಮೇಶ್ವರದಿಂದ ಸಿಂಹಳದ್ವೀಪಕ್ಕೆ ಎಂಬ ನಂಬಿಕೆ ಇರುವಂತೆಯೇ ಲಂಕೆಯೆಂಬುದು ಗೋದಾವರೀನದಿಯಲ್ಲಿನ ಒಂದು ದ್ವೀಪ[1]ವೆಂಬ ವಿಚಾರವೂ ಇದೆ. ಹಾಗೆಯೇ ರಾವಣನನ್ನು ಕೀಳಾಗಿ ಚಿತ್ರಿಸಿದ್ದು ದಕ್ಷಿಣದವರನ್ನು ಅವಮಾನಿಸಲು ಎಂಬ ಹುಯ್ಲೂ ಇದೆ: ಆರ್ಯರ ಪ್ರತಿನಿಧಿ ರಾಮ; ದ್ರಾವಿಡರೇ ರಾಕ್ಷಸರು; ಕಪಿಗಳು ಆರ್ಯರು ಹೇಳಿದಂತೆ ಕೇಳುವ ಪಳಗಿದ ರಾಕ್ಷಸರು; ಆರ್ಯರು ದ್ರಾವಿಡರನ್ನು ಹತ್ತಿಕ್ಕುವುದೇ ರಾಮಾಯಣದ ತಿರುಳು—ಎನ್ನುವ ಅಭಿಪ್ರಾಯವೂ ಇದೆ. ಭರತನಿಗೆ ರಾಮನು ಕೊಟ್ಟದ್ದು ಬಂಗಾರದ ಪಾದುಕೆಯೇ[2] ಎಂದು ಮುಂತಾದ ಚರ್ಚೆಗಳೂ ನಡೆಯುತ್ತಿವೆ.

ಕವಿ ವಾಲ್ಮೀಕಿ ಹಾಗೂ ಕಾವ್ಯನಾಯಕ ಶ್ರೀರಾಮ ಇವರ ಬಗ್ಗೆಯೂ ಅಂದಿನಿಂದಲೂ ವಾದ ಮತ್ತು ಸಮರ್ಥನೆಗಳು ಇದ್ದೇ ಇವೆ. ರಾಮಾಯಣದ ಕರ್ತೃವಾದ ವಾಲ್ಮೀಕಿಯು ನಾರದನಿಂದ ಸಮಗ್ರ ರಾಮಕಥೆ[3]ಯನ್ನು ಕೇಳುತ್ತಾನೆ. ಇದೇ ವಾಲ್ಮೀಕಿಯು ಚಿತ್ರಕೂಟನಿವಾಸಿ[4]ಯಾಗಿದ್ದು ರಾಮಸೀತಾಲಕ್ಷ್ಮಣರು ಅಲ್ಲಿಗೆ ಬಂದು ನಮಸ್ಕರಿಸಿದಾಗ ಅವರನ್ನು ಯೋಗ್ಯರೀತಿ ಸತ್ಕರಿಸಿದನು. ಅವರ ಆಶ್ರಮ-ಸ್ಥಳದಲ್ಲಿಯೇ ರಾಮಾದಿಗಳ ಚಿತ್ರಕೂಟನಿವಾಸವೇರ್ಪಡುವುದು. ಉತ್ತರ ಕಾಂಡ[5]ದಲ್ಲಿ ಭೃಗು ಕುಲೋತ್ಪನ್ನ[6]ನಾದ ವಾಲ್ಮೀಕಿ ದಶರಥನ ಪ್ರಾಣ

---

[1] ಡಾ. ಕೆ. ಕೃಷ್ಣಮೂರ್ತಿ : ಸಂಸ್ಕೃತಕಾವ್ಯ ಪುಟ 58 ಮತ್ತು M. V. Kibe: Ravana's Lanka located in Central India—I. H. Q. Vol IV 1928 pp 693–702.

[2] ಹೆಚ್. ಡಿ. ಸಂಕಾಲಿಯಾ ಮತ್ತು ರಾಮಕೃಷ್ಣನ್—ವಿಶಾಲ ಕರ್ನಾಟಕ 16–10–76 ಪುಟ 5. ಮೂಲದಲ್ಲಿ 'ಪಾದುಕೇ ಹೇಮಭೂಷಿತೇ'—ಬಂಗಾರದಿಂದ ಅಲಂಕೃತವಾದ ಪಾದುಕೆ ಎಂದಿದೆ: ಅಯೋಧ್ಯಾ, ಸರ್ಗ 112, 115 ಶ್ಲೋಕ 51, 14.

[3] ರಾಮಾಯಣ, ಬಾಲಕಾಂಡ, 1ನೇ ಸರ್ಗ.

[4] ಅಯೋಧ್ಯಾ, ಸರ್ಗ 56: ಶ್ಲೋಕ 16–17.

[5] ಉತ್ತರಕಾಂಡವು ಪ್ರಕ್ಷೇಪವಾಗಿದ್ದು ವಾಲ್ಮೀಕಿಯ ಹೆಸರಿನಲ್ಲಿ ಯಾರೋ ಬರೆದು ಸೇರಿಸಿದ್ದಾರೆ ಎನ್ನುವ ಅಭಿಪ್ರಾಯವಿದೆ. ಡಾ. ಕೆ. ಕೃಷ್ಣಮೂರ್ತಿ: ಸಂಸ್ಕೃತಕಾವ್ಯ ಪುಟ 45-50

[6] ಭಾರ್ಗವೇಣ ತಪಸ್ವಿನಾ ಉತ್ತರ, ಸರ್ಗ 94 ಶ್ಲೋಕ 26 ಮತ್ತು ಸರ್ಗ 47 ಶ್ಲೋಕ 16-17

ಸಖನೆನ್ನಿಸಿದ್ದಾನೆ. ಈತ ಬೇಡರ ವೃತ್ತಿಯವನನ್ನು ಋಷಿಯನ್ನಾಗಿಸಿದನು. ಅಷ್ಟರಿಂದ ಈತನ ಬ್ರಾಹ್ಮಣತ್ವವನ್ನು ದೃಢಪಡಿಸಲು ಯತ್ನಿಸಿದ ಸುಳಿವು ಅಧ್ಯಾತ್ಮರಾಮಾಯಣದಲ್ಲಿ ತೋರಿಬರುವುದು. ಮಹಾಭಾರತದ ಅನುಶಾಸನ ಪರ್ವ ಶಾಂತಿಪರ್ವಗಳಲ್ಲಿಯೂ ಅಶ್ವಘೋಷನ ಬುದ್ಧಚರಿತೆಯಲ್ಲಿಯೂ ಬರುವ ವಿಷಯಗಳನ್ನು ಅಧ್ಯಾತ್ಮರಾಮಾಯಣವು ಆಧಾರಗಳನ್ನಾಗಿ ಇಟ್ಟುಕೊಂಡಿರಬಹುದು. ಏನೋ ಆದ ಕಥೆಯನ್ನು ನಾರದನಿಂದ ಕೇಳುವ ವಾಲ್ಮೀಕಿ ತಾನೇ ಕಥೆಯಲ್ಲಿಯ ಒಂದು ಪಾತ್ರವು ಹೇಗಾದ ಎನ್ನುವ ಸಂಶಯ ಕೆಲವರಿಗೆ; ನಾರದನ ಕಥೆಯಲ್ಲಿ 'ವಿಷ್ಣುನಾ[8] ಸದೃಶೋವೀರ್ಯೇ....'ಎಂದಿದ್ದ ರಾಮ, ಹನ್ನೊಂದು ಸಾವಿರವರ್ಷ ರಾಜ್ಯ[9]ವನ್ನಾಳಿ ಬ್ರಹ್ಮಲೋಕಕ್ಕೆ ಹೋಗುವ ರಾಮ ವಾಲ್ಮೀಕಿಯ ಕೈಯಲ್ಲಿ ವಿಷ್ಣುವಿನ ಅವತಾರ[10]ವು ಹೇಗಾದ ಎನ್ನುವ ವಿಕಲ್ಪ ಇನ್ನು ಕೆಲವರಿಗೆ; ರಾಮನ ಅವತಾರತತ್ತ್ವದ ವಿಷಯದಲ್ಲಿಯೇ ಅನುಮಾನವಿರುವಾಗ ಐತಿಹಾಸಿಕ ತತ್ತ್ವಕ್ಕೆ ಅರ್ಥವಿದೆಯೇ ಎನ್ನುವ ವಿಚಾರ ಇನ್ನು ಹಲವರಿಗೆ.

ಆದರೆ, ರಾಮಾಯಣವು ಮಹಾಕಾವ್ಯವೆಂಬ ಸತ್ಯವು ಯಾವುದೇ ಸಂದರ್ಭದಲ್ಲಿಯೂ ಮರೆಯಾಗಿಲ್ಲ, ಉತ್ತರಕಾಂಡದಲ್ಲಿಯೇ ಈ ಮಹಾಕಾವ್ಯಕರ್ತಾರನ ಬಗ್ಗೆ ಆನಂದಾ[11]ಶ್ಚರ್ಯಗಳನ್ನು ಪ್ರಕಟಿಸಲಾಗಿದೆ. ಬೃಹದ್ಧರ್ಮ[12] ಪುರಾಣದಲ್ಲಿ ವಾಲ್ಮೀಕಿ ವಿರಚಿತ ರಾಮಾಯಣವು ಆದಿಕಾವ್ಯವೂ ಮಹಾಕಾವ್ಯವೂ ಆಗಿದ್ದು ಮುಂದಿನ ಸಮಸ್ತ ಕಾವ್ಯ ನಾಟಕ ಇತಿಹಾಸ ಪುರಾಣಗಳಿಗೆ ಪ್ರೇರಕ ಶಕ್ತಿಯಾಗಿದೆಯೆಂದು ಹೇಳಲಾಗಿದೆ. ಕಾವ್ಯಲಾಕ್ಷಣಿಕರಿಗೆ ಪರಮಪ್ರಾಜ್ಞನೆನ್ನಿಸಿದ ಆನಂದವರ್ಧನನು[13] ವಾಲ್ಮೀಕಿಯನ್ನು ಆದಿಕವಿಯೆಂದು ಘೋಷಿಸಿದ್ದಾನೆ. ರಾಮಾಯಣ ಮಹಾಭಾರತ ಪುರಾಣಗಳಲ್ಲಿ ರಾಮಾಯಣವೇ ಆದಿಕಾವ್ಯವೆಂದೂ ವಾಲ್ಮೀಕಿಯೇ ಆದಿಕವಿಯೆಂದೂ ಡಾ. ಕೆ. ಕೃಷ್ಣಮೂರ್ತಿಯವರ ಸಂಶೋಧನ[14] ಗ್ರಂಥವು ತಿಳಿಸುತ್ತದೆ; ಶ್ರೀಮದ್ರಾಮಾಯಣವು ಆದಿಕಾವ್ಯವಾಗಿದ್ದು ಪ್ರಪಂಚದ ಸಾಹಿತ್ಯ ಚರಿತ್ರೆಯಲ್ಲಿ ಒಂದು ಅಚ್ಚರಿಯ ಸಂಗತಿಯಾಗಿ ಅವತರಿಸಿದೆ ಎಂದು ಡಿ. ವಿ. ಗುಂಡಪ್ಪನವರು[15] ಘೋಷಿಸುತ್ತಾರೆ.

---

7 ಅಹಂ ಪುರಾ ಕಿರಾತೇಷು ಕಿರಾತೈಃ ಸಹ ವರ್ಧಿತಃ। ಜನ್ಮಮಾತ್ರದ್ವಿಜತ್ವಂ ಮೇ ಶೂದ್ರಾಚಾರರತಃ ಸದಾ — ಅಧ್ಯಾತ್ಮ ರಾಮಾಯಣದ ಅಯೋಧ್ಯಾಕಾಂಡದಲ್ಲಿ ವಾಲ್ಮೀಕಿ ರಾಮನಿಗೆ ಹೇಳಿದ್ದು.

8 ಬಾಲ. ಸರ್ಗ 1 ಶ್ಲೋಕ 18

9 ಬಾಲ. ಸರ್ಗ 1 ಶ್ಲೋಕ 97.

10 'ಪುತ್ರತ್ವಂ ತು ಗತೇ ವಿಷ್ಣೌ....'ಬಾಲ. ಸರ್ಗ 17 ಶ್ಲೋಕ 1.

11 ಕರ್ತಾ ಕಾವ್ಯಸ್ಯ ಮಹತಃ ಕ್ವ ಚಾಸೌ ಮುನಿಪುಂಗವಃ। ಉತ್ತರ. ಸರ್ಗ 94 ಶ್ಲೋಕ 24.

12 ರಾಮಾಯಣಂ ಮಹಾಕಾವ್ಯಮಾದೌ ವಾಲ್ಮೀಕಿನಾ ಕೃತಂ । ತನ್ಮೂಲಂ ಸರ್ವಕಾವ್ಯಾನಾಮಿತಿಹಾಸಪುರಾಣಯೋಃ ॥ ಸಂಹಿತಾನಾಂ ಚ ಸರ್ವಾಸಾಂ ಮೂಲಂ ರಾಮಾಯಣಂ ಮತಮ್ । ತದೇವಾದರ್ಶಮಾರಾಧ್ಯ ವೇದವ್ಯಾಸೋ ಮುನೀಶ್ವರಃ ॥ ಚಕ್ರೇ ಮಹಾಭಾರತಾಖ್ಯಾತಮಿತಿಹಾಸಂ ಪುರಾತನಮ್ ॥ಪೂರ್ವಭಾಗ : ಅಧ್ಯಾಯ 25 ಶ್ಲೋ. 28–30

13 ಧ್ವನ್ಯಾಲೋಕ : IV ಉದ್ಯೋತ ; ಕಾರಿಕಾ 5ರ ವೃತ್ತಿ
... ರಾಮಾಯಣೇ ಹಿ........ಆದಿಕವಿನಾಸೂತ್ರಿತಃ........

14 "Of all these epics, only the Ramayana has been recognized as a poem par excellence and its author is significantly styled as Adi Kavi...
—The Dhvanyaloka and its critics P. 2.

15 ವಿದ್ವಾನ್ ಎನ್. ರಂಗನಾಥಶರ್ಮರ ಅನುವಾದದ ಬಾಲಕಾಂಡದ ಮುನ್ನುಡಿ ಪು. 10

ರಾಮಾಯಣದಲ್ಲಿ ಬರುವ ಕಾಂಚನಮೃಗದ ಬೇಟೆ, ನರವಾನರಸಖ್ಯ, ಶಬರಿಯ ಪ್ರಸಂಗ, ವಾಲಿವಧೆ, ಸೇತುಬಂಧನ ಮತ್ತು ಉತ್ತರಕಾಂಡದಲ್ಲಿನ ಶಂಬೂಕವಧಾ ಪ್ರಸಂಗಗಳು ಸಾಕಷ್ಟು ಕುತೂಹಲಕರವಾಗಿವೆ; ಚರ್ಚೆಗೊಳಪಟ್ಟಿವೆ. ಕ್ರಿಸ್ತಪೂರ್ವದ ಬುದ್ಧಿಜೀವಿಗಳಿಗೇ ಇವು ಒಗಟುಗಳಾಗಿದ್ದವು. ದಾರಿಕಾಣದೆ ತಮ್ಮದೇ ಆದ ತಿರುವು ಕೊಟ್ಟವರೂ ಇದ್ದಾರೆ.

ರಾಮನೇ ಸರ್ವಸ್ವವೆನ್ನುವ ಸೀತೆ ಕಾಂಚನಮೃಗವನ್ನು ಬಯಸಿದ್ದು ಮತ್ತು ರಾಮನು ಅದನ್ನು ಹಿಡಿಯಲು ಹೊರಟಿದ್ದು ಪ್ರಪ್ರಥಮ ನಾಟಕಕಾರನೆಂದು ಕರೆಸಿಕೊಳ್ಳುವ ಭಾಸನಿಗೇ ಸರಿಬರಲಿಲ್ಲ. ಈತನ ಪ್ರತಿಮಾ ನಾಟಕದಲ್ಲಿ ರಾವಣ ಸನ್ಯಾಸಿಯು ರಾಮನಿರುವಾಗಲೇಬಂದು ಆ ದಿನ ನಡೆಯಬೇಕಾಗಿದ್ದ ಪಿತೃಶ್ರಾದ್ಧಕ್ಕೆ ಕಾಂಚನ ಮೃಗದ ಮಾಂಸವು ಶ್ರೇಷ್ಠವೆಂದಾಗ ರಾಮನು ಮೃಗವನ್ನು ಹಿಡಿಯಲು ಹೊರಡುತ್ತಾನೆ. ರಾಮನು ಸುಗ್ರೀವ ನೊಡನೆ ಗೆಳೆತನ ಮಾಡಿಕೊಂಡು ವಾಲಿಯನ್ನು ಮರೆಯಲ್ಲಿ ನಿಂತು ಕೊಲ್ಲುವುದು ಎಂಟನೇ ಶತಮಾನದಲ್ಲಿ ಆಗಿ ಹೋದ ಭವಭೂತಿಗೆ ಹಿಡಿಸಲಿಲ್ಲ. ಈತನ ಮಹಾವೀರಚರಿತ ನಾಟಕದಲ್ಲಿ ಮಾಲ್ಯವಂತನ ವಿಚಾರಕ್ಕನುಗುಣವಾಗಿ ರಾವಣನ ಗೆಳೆಯನಾದ ವಾಲಿ ರಾಮನನ್ನು ಕೊಲ್ಲುವ ಸಂಕಲ್ಪದಿಂದ ಯುದ್ಧಕ್ಕೆ ಬಂದು ರಾಮಬಾಣಕ್ಕೆ ತುತ್ತಾಗಿ ತಾನೇ ಹತನಾಗುತ್ತಾನೆ. ಕಪಿಲೋಕವನ್ನು ಸೃಷ್ಟಿಸಿದ ವಾಲ್ಮೀಕಿ ನರವಾನರರಲ್ಲಿ ಗೆಳೆತನ ಮಾಡಿಸಿದ ; ಮನುಷ್ಯ ರಾಕ್ಷಸನನ್ನು ಕೊಲ್ಲಲು ಕಪಿಗಳ ಸಹಾಯದಿಂದ ಸೇತುವೆ ಕಟ್ಟಿಸುತ್ತಾನೆ—ಈ ಕಪಿಸೃಷ್ಟಿಯೇಕೆ ಬೇಕಾಗಿತ್ತು ಎಂದು ಮುಂತಾಗಿ ಡಿ ವಿ. ಗುಂಡಪ್ಪನವರು[16] ಸಾಕಷ್ಟು ಚರ್ಚಿಸಿದ್ದಾರೆ. ಅಯೋಧ್ಯೆ ಮಿಥಿಲೆಗಳಲ್ಲಿ ಮನುಷ್ಯಲೋಕ, ಲಂಕೆಯಲ್ಲಿ ರಾಕ್ಷಸಲೋಕ ಅರ್ಥಾತ್ ರಾಕ್ಷಸಸಮಾನ ಮನುಷ್ಯ ಪ್ರಪಂಚ ; ತನ್ಮಧ್ಯೆ ಬಂದ ಈ ಕಪಿ ಜನಾಂಗವು ಮನುಷ್ಯನಿಗಿಂತ ಎಷ್ಟೋ ವಾಸಿ ಎಂದು ಭಾವಿಸಿ ವಾಲ್ಮೀಕಿಯು ಮನುಷ್ಯಲೋಕವನ್ನು ಗೇಲಿ ಮಾಡಲು ಹೊರಟಿರಬೇಕು ಎಂದು ಹೇಳುತ್ತ ಡಿ. ವಿ. ಜಿ.ಯವರು ಕವಿಯು ಸ್ವೋಪಜ್ಞತೆಯಿಂದ ಸೃಷ್ಟಿಸಿದ ಕಪಿ ರಾಜ್ಯವು ಅಂತರಂಗ ಪ್ರಪಂಚವನ್ನು ಕುರಿತ ಕಾವ್ಯಲೋಕಕ್ಕೆ ಸೇರಿದ್ದು ; ವಾಸ್ತವ ಸತ್ಯವಾಗಿರದೆ ಸತ್ಯೌಪಮ್ಯವಾಗಿದೆ ಎಂದು ಅಭಿಪ್ರಾಯಪಡುತ್ತಾರೆ. ಕವಿಗಳ ಶ್ರೇಷ್ಠತೆಯನ್ನು ಕೊಂಡಾಡುವಾಗ ಕನ್ನಡಕವಿ ನೇಮಿಚಂದ್ರನು ಕಡಲಿಗೆ ಕಟ್ಟಿದ ಸೇತುವೆಯನ್ನೇ[17] ಮೊದಲು ನೆನಪಿಸಿಕೊಳ್ಳುತ್ತಾನೆ. ಶಂಬೂಕವಧಾ ಪ್ರಸಂಗವನ್ನು ಭವಭೂತಿಯು ಅಮಾನುಷ ಘಟನೆಯೆಂದು ಎಣಿಸಿದ್ದಾನೆ. ಶೂದ್ರಶಂಬೂಕ ತಪಸ್ಸು ಮಾಡಿದ್ದೇ ಅಪರಾಧವಾಗಿ ಪರಿಣಮಿಸಿ ರಾಮನು ಆತನನ್ನು ಕೊಲ್ಲಬೇಕಾದದ್ದು ಉತ್ತರ ಕಾಂಡದಲ್ಲಿ[18] ಬರುವ ಕ್ರೂರ ಘಟನೆ. ಭವಭೂತಿಯು ಉತ್ತರ ರಾಮಚರಿತದಲ್ಲಿ[19] ಈ ಪ್ರಸಂಗವನ್ನೂ ಕಲ್ಲೂ ಕೂಡ ಕರಗುವ ರೀತಿಯಲ್ಲಿ ಚಿತ್ರಿಸಿದ್ದಾನೆ, ಗರ್ಭಿಣಿ ಸೀತೆಯನ್ನು ತ್ಯಜಿಸಿದ ತನ್ನ ಕೈಯನ್ನು ನಿಂದಿಸಿಕೊಳ್ಳುತ್ತಾ ರಾಮನು ಶಂಬೂಕನನ್ನು ಕಡಿದು ಹಾಕುತ್ತಾನೆ.

ಆದರೆ, ಯೌಗಿಕ ಮತ್ತು ಆಧ್ಯಾತ್ಮಿಕ ಪ್ರತಿಮೆಗಳ ಮೂಲಕ ರಾಮಾಯಣವನ್ನು ನೋಡಿದರೆ ಯಾವ

---

16. ವಿದ್ವಾನ್ ಎನ್. ರಂಗನಾಥಶರ್ಮರಿಂದ ಅನುವಾದಿತ ಕಿಷ್ಕಿಂಧಾಕಾಂಡ—ಮುನ್ನುಡಿ ಪುಟ XIXV

17. ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ ವಾಮನಕ್ರಮಂ ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ ಹರನಾನರಸಿಕ್ಕಿಗಂಟಲಂ ಮೆಟ್ಟುಗೆ ಮಟ್ಟದಿರ್ಕೆ ಕವಿಗಳ್ ಕೃತಿಬಂಧದೊಳಲ್ತೆ ಕಟ್ಟಿದರ್ ಮುಟ್ಟದರಿಕ್ಕಿ ಮೆಟ್ಟದರಿದೇನಗ್ಗಳಮೋ ಕವೀಂದ್ರರಾ–ಲೀಲಾವತಿ ಆ. ರಾ. ಪ. ೧-೧೧

18. ಉತ್ತರಕಾಂಡ ಸರ್ಗ 74 ಶ್ಲೋಕ 10 ಸರ್ಗ 75 ಶ್ಲೋಕ 14, 15 ಸರ್ಗ 76 ಶ್ಲೋಕ 4

19. ಹೇ ! ಹಸ್ತ ದಕ್ಷಿಣ ಮೃತಸ್ಯ ಶಿಶೋರ್ದ್ವಿಜಸ್ಯ
ಜೀವಾತವೇ ವಿಸೃಜ ಶೂದ್ರ ಮುನೌ ಕೃಪಾಣಮ್
ರಾಮಸ್ಯ ಬಾಹುರಸಿ ನಿರ್ಭರಗರ್ಭಖಿನ್ನ
ಸೀತಾವಿವಾಸನಪಟೋಃ ಕರುಣಾಕುತಸ್ತೇ ॥ II 9

ಪ್ರಸಂಗವೂ ಅನುಚಿತವೆಂದು ಅನಿಸುವುದಿಲ್ಲ. ರಾಮಾಯಣದ 'ಮಹತ್ವವು ಚಿರಸ್ಥಾಯಿಯಾದದ್ದು' ಎನ್ನಲು ರಾಮಾಯಣದಲ್ಲೂ ನಿದರ್ಶನವಿದೆ. ಪ್ರತಿಮಾ ವಿಧಾನಗಳಿಂದ ಮಾತ್ರ ವಿಕಲ್ಪಗಳು ಸೀಮಿತಗೊಂಡು ರಾಮಾಯಣವು ಲೋಕೋತ್ತರಕಾವ್ಯವೆನ್ನುವುದು ಸಾರ್ಥಕವಾಗಲು ಸಾಧ್ಯ.

ವಾಲ್ಮೀಕಿ ಎಂಬ ಹೆಸರಿನಿಂದಲೇ ಪ್ರತಿಮಾಪ್ರಪಂಚವು ಪ್ರಾರಂಭವಾಗುತ್ತದೆ. ವನವಾಸದ ಸಂದರ್ಭದಲ್ಲಿ ರಾಮ ವಾಲ್ಮೀಕಿಯ ಆಶ್ರಮಕ್ಕೆ ಬಂದವನೇ ಚಿತ್ರಕೂಟವೆಂಬ ಆ ಸ್ಥಳದಲ್ಲಿಯೇ ಇರಲು ನಿರ್ಧರಿಸುತ್ತಾನೆ. 'ವಲಂತೇ ಪ್ರಾಣಿನಃ ಅತ್ರ ಇತಿ ವಲ್ಮೀಕ' ಪ್ರಾಣಿಗಳು ವಾಸಿಸುತ್ತವೆ ; ಆದ್ದರಿಂದ ವಲ್ಮೀಕ ; ಅಂದರೆ ದೇಹ. ಈ ದೇಹಭಾವವೇ ವಾಲ್ಮೀಕಿ. ದೇಹಸ್ಥ ಸಮಸ್ತಕಾರ್ಯ ಪ್ರಪಂಚವೇ ವಿಜ್ಞಾನ ಸ್ವರೂಪವಾದಂತಹ ಚಿತ್ರಕೂಟ. ಚೈತನ್ಯವು ದೇಹದಲ್ಲಿ ನೆಲಸಿ ಸಂಸಾರದಲ್ಲಿ ಪ್ರವರ್ತಿಸುವುದೇ ರಾಮನು ಕೈಗೊಳ್ಳುವ ವನವಾಸ.

ಚೈತನ್ಯವು ಸತ್ವಗುಣದಲ್ಲಿ ಪ್ರತಿಬಿಂಬಿತವಾಗಿ ಪ್ರಜ್ಞಾವಿಶೇಷದಿಂದ ಪ್ರವರ್ತಿಸುವುದು ಬುದ್ಧಿ ತತ್ತ್ವ ; ರಜೋಗುಣದಲ್ಲಿ ಪ್ರತಿಬಿಂಬಿತವಾಗಿ ಕ್ರಿಯಾವಿಶೇಷದಿಂದ ಪ್ರವರ್ತಿಸುವುದು ಮನಸ್ತತ್ತ್ವ ; ತಮೋಗುಣದಲ್ಲಿ ಪ್ರತಿಬಿಂಬಿತವಾಗಿ ಇಚ್ಛಾಶಕ್ತಿಯಿಂದ ಪ್ರವರ್ತಿಸುವುದು ಅಹಂಕಾರ ತತ್ತ್ವ ; ಕ್ರಿಯಾವಿಶೇಷವು ಅಹಂಕಾರವನ್ನು ಓಲೈಸುವುದೇ ಚಿತ್ತತತ್ತ್ವ. ದಶೇಂದ್ರಿಯ ಗೋಲಕವು ಚೈತನ್ಯವನ್ನು ಬಯಸಿದಾಗ ಪರಮಾತ್ಮತತ್ತ್ವವು ಅದನ್ನು ಪೂರೈಸುವುದು; ಗರ್ಭಸ್ಥ ಪಿಂಡದಲ್ಲಿ ಜೀವಸಂಚಾರವಾಗುವುದು. ಪುತ್ರಾಪೇಕ್ಷಿ ದಶರಥನು ಅಗ್ನಿಯಿಂದ ಪಾಯಸವನ್ನು ಪಡೆದು ಮೂರು ಗುಣಗಳನ್ನು ಪ್ರತಿನಿಧಿಸುವ ಕೌಸಲ್ಯೆ ಸುಮಿತ್ರೆ ಕೈಕೆಯರಲ್ಲಿ ರಾಮಲಕ್ಷ್ಮಣ ಭರತ ಶತ್ರುಘ್ನರನ್ನು ಪಡೆಯುತ್ತಾನೆ. ಪ್ರತಿಯೊಂದು ಚೈತನ್ಯವೂ ಅರ್ಥಾತ್ ಸಮಸ್ತ ಜೀವರಾಶಿಯೂ ದೇವಸ್ವರೂಪ[21]ವೆಂಬ ಮಹಾತತ್ತ್ವವನ್ನು ಕವಿ ಇಲ್ಲಿ ಪ್ರತಿಪಾದಿಸಿದ್ದಾನೆ. ಈ ಚೈತನ್ಯದ ಶಕ್ತಿಯೇ ಸೀತೆ. ಶಕ್ತಿಯೆಂದರೆ ಪ್ರಕೃತಿ ; ಆದ್ದರಿಂದ ಸೀತೆ ಭೂಜಾತೆ. ಶುದ್ಧ ಸತ್ವ ಚೈತನ್ಯದ ಈ ಶಕ್ತಿಯನ್ನು ಭೋಗಾಸಕ್ತ ರಜೋಗುಣ ಚೈತನ್ಯವು ಹ್ರಾಸಗೊಳಿಸುವುದೇ ರಾವಣನು ಸೀತಾಪಹರಣ ಮಾಡಿದ್ದು.

ರಾಮನ ವನವಾಸಕ್ಕೆ ಮೂಲಕಾರಣಳು ಮಂಥರೆ. ಮಂಥ್ ಅಂದರೆ ಕಲಕು. ಮಂಥರೆ ಅಂದರೆ ಕಲಕುವಿಕೆ; ವೃತ್ತಿರೂಪೀ ಅಲೆಗಳೇಳುವಿಕೆ. ಇದರ ಪರಿಣಾಮ ಇಚ್ಛಾಶಕ್ತಿಯ ಮೇಲೆ. ಅಹಂಕಾರಕ್ಕೆ ಪ್ರಾಬಲ್ಯಬಂದರೆ ಮಾತ್ರ ಇಚ್ಛಾಶಕ್ತಿಯ ಬಯಕೆ ಸಫಲ. ಬುದ್ಧಿ ಪ್ರತಿಬಿಂಬಿತ ಚೈತನ್ಯವು ಕರ್ಮಬಂಧನದಲ್ಲಿ ತಾನಾಗಿಯೇ ತೊಡಗಿಕೊಂಡು ತನ್ನ ಶಕ್ತಿ ಮತ್ತು ಕ್ರಿಯಾವಿಶೇಷತೆಗಳಿಂದ ಪ್ರವರ್ತಿಸುವುದೇ ರಾಮನು ಸೀತಾಲಕ್ಷ್ಮಣರೊಡನೆ ವನವಾಸಕ್ಕೆ ಹೊರಟದ್ದು.

ಆನಂದಘನಸ್ವರೂಪೀ ಚೈತನ್ಯವು ತನ್ನ ಶಕ್ತಿಯನ್ನು ಕಳೆದುಕೊಳ್ಳುವುದಕ್ಕೆ ಮುಖ್ಯಕಾರಣ ಇಹಲೋಕದ ಹೊಟ್ಟೆಬಟ್ಟೆಗಳ ಕಾಳಜಿ. ಆದ್ದರಿಂದ ಶೂರ್ಪಣಖಿಯ ಪ್ರವೇಶ. ಇವಳ ಉಗುರು ಶೂರ್ಪದ ಅಂದರೆ ಮೊರದ

---

20. ಯಾವತ್‌ಸ್ಥಾಸ್ಯಂತಿ ಗಿರಯಃ ಸರಿತಶ್ಚ ಮಹೀತಲೇ ॥
ತಾವದ್ರಾಮಾಯಣಕಥಾಲೋಕೇಷು ಪ್ರಚರಿಷ್ಯತಿ ॥ ಬಾಲ. II, 36–37

21. ವಿಷ್ಣೋರರ್ಧಂ ಮಹಾಭಾಗಂ ಪುತ್ರಮೈಕ್ಷ್ವಾಕವರ್ಧನಮ್ ।
ಕೌಸಲ್ಯಾ ಶುಶುಭೇ ತೇನ ಪುತ್ರೇಣಾಮಿತತೇಜಸಾ ॥
ಯಥಾ ವರೇಣ ದೇವಾನಾಮದಿತಿರ್ವಜ್ರಪಾಣಿನಾ ।
ಭರತೋ ನಾಮ ಕೈಕೇಯ್ಯಾಂ ಜಜ್ಞೇ ಸತ್ಯಪರಾಕ್ರಮಃ ॥
ಸಾಕ್ಷಾದ್ವಿಷ್ಣೋಶ್ಚತುರ್ಭಾಗಃ ಸರ್ವೈಃ ಸಮುದಿತೋ ಗುಣೈಃ ।
ಅಥ ಲಕ್ಷ್ಮಣ ಶತ್ರುಘ್ನೌ ಸುಮಿತ್ರಾಜನಯತ್ ಸುತೌ ॥

ಬಾಲ. ಸರ್ಗ 18 ಶ್ಲೋಕ 11–13

[illegible]

[illegible] ಉಪೇಕ್ಷಿತವಾಗುತ್ತದೆ; ಜಟಾಯು ಸೋತುಹೋಗುತ್ತಾನೆ.

ಜೀವದ ಯಾತ್ರೆ ಈ ಕೆಳಹಂತದಿಂದ ಪಾರಾಗಬೇಕು ಎನ್ನುವುದು ಕವಿಯ ಆಶಯ. [illegible] ಚೈತನ್ಯಕ್ಕೆ ಸಂಕಟವೆನಿಸುವುದು; ನಿರಾಶೆಯೆನಿಸುವುದು. [illegible]

ಸದ್ಬುದ್ಧಿಯುಂಟಾದ ಕೂಡಲೇ ಮನುಷ್ಯ ಆತ್ಮಜ್ಞಾನಿಯಾಗಿಬಿಡುವುದಿಲ್ಲ. [illegible] ರಾಮನು ಬರುವವರೆಗೂ ಕಾದಿದ್ದು ನಂತರ ಸಾಯುತ್ತಾನೆ.

ಆತ್ಮಜ್ಞಾನದ ಮಾರ್ಗವೇನೂ ಸುಲಭವಲ್ಲ. [illegible]

[illegible]

ಮೊದಲು ಪ್ರೇಮದಿಂದಿದ್ದ ವಾಲಿಸುಗ್ರೀವರು ನಂತರ ವೈರಿಗಳಾದದ್ದು. ಪ್ರಾಣವಾಯುವಿನ ಚಲನಾ ಸಾಮರ್ಥ್ಯವು ಕುಗ್ಗುವುದೇ ವಾಲಿಯು ಸುಗ್ರೀವನ ಹೆಂಡತಿಯನ್ನು ಅಪಹರಿಸಿ ಆತನನ್ನು ಹೊಡೆದೋಡಿಸಿದ್ದು. ಅಪಾನವಾಯುವನ್ನು ನಿಯಂತ್ರಿಸಿ ಪ್ರಾಣವಾಯುವಿನ ಚಲನೆಯನ್ನು ಸುಲಭಗೊಳಿಸದಿದ್ದರೆ ಸಾಧಕ ಏನನ್ನೂ ಸಾಧಿಸಲಾರ. ಇದಕ್ಕಾಗಿ ವಾಲಿವಧೆಯಾಗಬೇಕು

ಮೊದಲು ಪ್ರಾಣಾಯಾಮದ ಪರಿಚಯ. ಪ್ರಾಣಾಯಾಮದ ಶ್ವಾಸೋಚ್ಛ್ವಾಸ ತತ್ತ್ವವೇ ಮಾರುತಿ. ಸಮಷ್ಟಿರೂಪದಲ್ಲಿರುವ ವಾಯುವಿನ ವ್ಯಷ್ಟಿಸ್ವರೂಪವೇ ವಾಯುಪುತ್ರ ತತ್ತ್ವ. ಹನು ಅಂದರೆ ಮೀಸೆಯಿರುವ ಸ್ಥಳದಿಂದ ಶ್ವಾಸೋಚ್ಛ್ವಾಸ; ಆದ್ದರಿಂದ ಹೆಸರು ಹನುಮಂತ. ಪ್ರಾಣಾಯಾಮದ ಶ್ವಾಸೋಚ್ಛ್ವಾಸಗಳ ಮುಖಾಂತರವೇ ಪ್ರಾಣವಾಯುವಿನ ಭೆಟ್ಟಿ–ಆದ್ದರಿಂದ ಹನುಮಂತನ ಮೂಲಕ ರಾಮಸುಗ್ರೀವರ ಸಖ್ಯವೇರ್ಪಡುವುದು. ಸಾಧಕನಿಗೆ ಮೊದಲು ಪ್ರಾಣಾಪಾನಗಳನ್ನು ಗುರುತಿಸುವುದು ಕಷ್ಟವಾಗುತ್ತದೆ; ಕೊನೆಗೆ ಅಪಾನವಾಯುವನ್ನು ನಿಗ್ರಹಿಸಿ ಪ್ರಾಣವಾಯುವಿನ ಉಚ್ಛ್ವಾಸದೊಡನೆ ಅದರ ನಿಃಶ್ವಾಸವನ್ನು ಸೇರಿಸುತ್ತಾನೆ; ಇದೇ ವಾಲಿವಧೆ. ಆಗ ವಿವೇಚನಾಶಕ್ತಿಯನ್ನು ಸಾಧಕನು ಆಶ್ರಯಿಸುವುದೇ ರಾಮನು ಮರೆಯಲ್ಲಿ ನಿಂತದ್ದು. ಅಪಾನವಾಯುವು ಪ್ರಾಣವಾಯುವನ್ನು ಒಪ್ಪಿಸಿ ಅದಕ್ಕೆ ಬಲವನ್ನು ತಂದುಕೊಡುವ ತತ್ತ್ವವು ವಾಲಿಯ ಮಗ ಅಂಗದನು ಯುವರಾಜನಾಗಿ ಸುಗ್ರೀವನಿಗೆ ಸಹಾಯಕನಾಗುವುದರಲ್ಲಿದೆ.

ಹನುಮಂತನು ಲಂಕೆಗೆ ಹಾರುತ್ತಾನೆ. ಇದು ಪ್ರಾಣಾಯಾಮದ ಶ್ವಾಸೋಚ್ಛ್ವಾಸವು ಮೂಲಾಧಾರವೆಂಬ ನಾಡೀ ಸಮುದಾಯವನ್ನು ತಲ್ಪುವುದಾಗಿರುತ್ತದೆ. ಲಂಕೆಗೆ ಹಾರಲು ಪ್ರೇರೇಪಿಸುವವ ಜಾಂಬುವಂತ. 'ಜಮತಿ ಇತಿ ಜಂಬುಃ'–ಎಳೆದುಕೊಳ್ಳುವಂಥಾದ್ದು. ಕಂಠದಲ್ಲಿದ್ದುಕೊಂಡು ಗಾಳಿಯನ್ನು ಎಳೆದುಕೊಳ್ಳುವುದು ಉದಾನವಾಯು, 'ಉದಾನಃ ಕಂಠಮಧ್ಯಗಃ' ಎಂದು ಯೋಗಚೂಡಾಮಣಿಯಲ್ಲಿದೆ. ಉದಾನವಾಯುವಿನ ಪ್ರೇರಣೆ ಪ್ರಾಣಾಯಾಮಕ್ಕೆ ಅತ್ಯಂತ ಆವಶ್ಯಕ.

ಕಂಠದಲ್ಲಿರುವ ವಾಯುವೊಂದನ್ನು ಬಿಟ್ಟು ಉಳಿದವು ದೇಹದಲ್ಲಿ ಚಂಚಲ ಚಲನವಲನವುಳ್ಳವು. ಆದ್ದರಿಂದ ಇದೊಂದನ್ನು ಬಿಟ್ಟು ಇನ್ನುಳಿದವು ಕಪಿಗಳು. 'ಕಂ ಪಾತಿ ಇತಿ ಕಪಿ'–ಸುಖವನ್ನು ರಕ್ಷಿಸುವಂಥಾದ್ದು. ಶ್ವಾಸೋಚ್ಛ್ವಾಸ ಮತ್ತು ಪ್ರಾಣಾಪಾನಾದಿಗಳು ಸಾಧಕನಿಗೆ ಶಾಶ್ವತಸುಖವನ್ನು ದರ್ಶಿಸಬಲ್ಲವು.

ಲಂಕೆಯಿರುವುದು ತ್ರಿಕೂಟ ಪರ್ವತದ ಮೇಲೆ. ತ್ರಿಕೂಟವೆಂದರೆ ಇಡಾ, ಪಿಂಗಳ ಮತ್ತು ಸುಷುಮ್ನಾ ನಾಡಿಗಳು ಸೇರಿದ ಸ್ಥಳ. ವಾಕ್, ಪಾಣಿ, ಪಾದ, ಪಾಯು ಮತ್ತು ಜನನೇಂದ್ರಿಯಗಳೆಂಬ ಪಂಚಕರ್ಮೇಂದ್ರಿಯಗಳಿಂದ ಹಾಗೂ ಮೂಗು, ನಾಲಗೆ, ಕಿವಿ, ಕಣ್ಣು ಮತ್ತು ಚರ್ಮಗಳೆಂಬ ಪಂಚಜ್ಞಾನೇಂದ್ರಿಯಗಳಿಂದ ದಶವಿಧವಾಗಿ ಭೋಗಾಸಕ್ತಿಯನ್ನು ಹೊರಹೊಮ್ಮಿಸುತ್ತಾ ಬಲಿಷ್ಠವಾಗಿರುವ ರಾಜಸ ಅಹಂಕಾರ ತತ್ತ್ವವೇ ದಶಶಿರಸ್ಸುಳ್ಳ ರಾಕ್ಷಸರಾವಣ. ಶುದ್ಧ ಸತ್ವಚೈತನ್ಯವು ಮೂಲಾಧಾರಕ್ಕೆ ನುಗ್ಗಬೇಕು ಎನ್ನುವಾಗ ಪಂಚಪ್ರಾಣಗಳಲ್ಲೊಂದಾದ ವ್ಯಾನದ ಪ್ರಯೋಜನ; ಏಕೆಂದರೆ, ವ್ಯಾನವಾಯುವು ಇಡೀ ದೇಹವನ್ನು ವ್ಯಾಪಿಸಿರುವಂಥಾದ್ದು—'ವ್ಯಾನಃ ಸರ್ವಶರೀರಗಃ' ನಲ ಎಂದರೆ ಬಂಧಿಸುವವ, ಸಮಸ್ತ ದೇಹವನ್ನು ವ್ಯಾನವು ವ್ಯಾಪಕವಾಗಿ ಬಂಧಿಸುವುದರಿಂದ ಇದಕ್ಕೆ ನಲ ಎಂದು ನಾಮಕರಣ. ಈತ ಸಮುದ್ರದ ಮೇಲೆ ಸೇತುವೆಯನ್ನು ಕಟ್ಟಿದರೆ ಅದು ಮುಳುಗಲಾರದು. ಸ್ವಾಧಿಷ್ಠಾನಾದಿಗಳು ವ್ಯಾನ ವಾಯುವನ್ನು ತಡೆಯಲಾರವು ಎಂದರ್ಥ.

ಮಲಿನಸತ್ವವು ರಜೋಗುಣವನ್ನು ಒಪ್ಪಿಸಿದರೂ ತಮೋಗುಣದಂತೆ ಸುಮ್ಮನಿರುವುದಿಲ್ಲ. ಆದ್ದರಿಂದ ಕುಂಭಕರ್ಣನಂತೆ ವಿಭೀಷಣ ಕಣ್ಮುಚ್ಚಿ ಕುಳಿತಿರಲಾರ; ದೀರ್ಘನಿದ್ರೆಗೈಯಲಾರ. ಇದು ಒಳ್ಳೆಯದು ಅಥವಾ ಕೆಟ್ಟದ್ದು ಎನ್ನುವುದನ್ನು ಎಂತಹ ನೀಚನ ಮನಸ್ಸಿನಲ್ಲಿಯೂ ಮಲಿನಸತ್ವವು ಬಿಂಬಿಸುತ್ತಿರುತ್ತದೆ; ಸಾಧನೆಗೆ ತೊಡಗಿದರೆ ಈ ಗುಣವೂ ಸಾಧಕನಿಗೆ ನೆರವು ನೀಡುತ್ತದೆ. ಆದ್ದರಿಂದ ವಿಭೀಷಣ ರಾವಣನಿಗೆ ಬುದ್ಧಿಯನ್ನೇ

ಹೇಳುತ್ತಿದ್ದು ಕೊನೆಗೆ ರಾಮನನ್ನು ಕೂಡಿಕೊಳ್ಳುತ್ತಾನೆ. ತಮೋಗುಣದ ಸಂಪೂರ್ಣನಿಗ್ರಹವೇ ಕುಂಭಕರ್ಣನ ಸಾವು; ಬುದ್ಧಿತತ್ತ್ವವು ಇದನ್ನು ಸಾಧಿಸುತ್ತದೆ; ಆದ್ದರಿಂದ ಕುಂಭಕರ್ಣನನ್ನು ಕೊಲ್ಲಲು ಮನಸ್ತತ್ತ್ವದ ಲಕ್ಷ್ಮಣನಿಂದಾಗಲಿಲ್ಲ; ರಾಮನೇ ಆತನನ್ನು ಕೊಲ್ಲಬೇಕಾಯಿತು.

ಇಂದ್ರಿಯಗಳ ಮೇಲೆ ವಿಜಯವನ್ನು ಸಾಧಿಸಿದ ಸಂಚಿತ ಪ್ರಾರಬ್ಧಫಲವಾದ ಭೋಗಪ್ರಧಾನಶಕ್ತಿಯನ್ನು ಪ್ರತಿನಿಧಿಸುವವ ಇಂದ್ರಜಿತ್ತು; ಕಾರ್ಯ ಸಂಜಾತಫಲವನ್ನು ಅಪೇಕ್ಷಿಸುತ್ತಾ ಮತ್ತೆ ಮತ್ತೆ ಪ್ರಾರಬ್ಧಕ್ಕೆ ಪೂರ್ವಾಪರಗಳನ್ನು ಗಂಟುಹಾಕುತ್ತಾ ಜನನ ಮರಣಗಳನ್ನುಂಟುಮಾಡುವ ತತ್ತ್ವವನ್ನು ಪ್ರತಿನಿಧಿಸುವವ ಅತಿಕಾಯ. ಇಬ್ಬರೂ ರಾವಣನ ಮಕ್ಕಳೇ. ಈ ತತ್ತ್ವಗಳೆರಡನ್ನೂ ಸಾತ್ವಿಕವಾದ ದೃಢಮನಸ್ಸಿನಿಂದಮಾತ್ರ ಗೆಲ್ಲಲು ಸಾಧ್ಯ. ಆದ್ದರಿಂದ ಇಂದ್ರಜಿತ್ತು ಮತ್ತು ಅತಿಕಾಯರನ್ನು ಕೊಲ್ಲುವವ ಲಕ್ಷ್ಮಣ.

ನಿರಂತರವಾದ ಸಾಧನೆಯಲ್ಲಿ ಸಾಧಕನು ರಜೋಗುಣಾತ್ಮಕವಾದ ಚೈತನ್ಯವನ್ನು ನಿಗ್ರಹಿಸಿ ಶುದ್ಧಸತ್ತ್ವ ಚೈತನ್ಯಶಕ್ತಿಯನ್ನು ಸಂಪಾದಿಸುವುದೇ ಸಮಗ್ರಯುದ್ಧಕಾಂಡದ ಘಟನೆ, ರಾವಣನ ನಿಗ್ರಹ ಮತ್ತು ಸೀತಾಪ್ರಾಪ್ತಿ. ರಾವಣನನ್ನು ಕೊಲ್ಲುವುದು ಮನುಷ್ಯನಿಂದ ಮಾತ್ರ ಸಾಧ್ಯ ; ಏಕೆಂದರೆ ಕರ್ಮೇಂದ್ರಿಯ ಜ್ಞಾನೇಂದ್ರಿಯಗಳು ಮತ್ತು ಪಂಚಪ್ರಾಣಗಳು ವಿಚಾರ ಶಕ್ತಿಯುಳ್ಳ ಬುದ್ಧಿತತ್ತ್ವವಿಲ್ಲದೆ ಅಸಹಾಯಕವಾಗುತ್ತವೆ; ರಾಜಸ ಅಹಂಕಾರವನ್ನು ಹತ್ತಿಕ್ಕಲು ಅಸಮರ್ಥವಾಗುತ್ತವೆ. ಬೇರೆ ಬೇರೆ ಪ್ರಾಣಿವರ್ಗಗಳಲ್ಲಿಯೂ ಜನಿಸುವ ಆತ್ಮಚೈತನ್ಯವು ಮನುಷ್ಯ ಜನ್ಮದಲ್ಲಿ ಮಾತ್ರ ಪರಮಾತ್ಮ ಸ್ವರೂಪವಾಗಬಲ್ಲದು.

ಪ್ರಕೃತಿಯ ಸರ್ವರಹಸ್ಯಗಳನ್ನು ಭೇದಿಸಿದ ಸಾಧಕನು ಗುಣಾತೀತನಾಗಿ ಪರಮಹಂಸ ಸ್ವರೂಪಕ್ಕೇರಲು ತೊಡಗುತ್ತಾನೆ; ಇದೇ ರಾಮನು ಸೀತೆಯನ್ನು ತಿರಸ್ಕರಿಸುವ ತತ್ತ್ವ. ಪ್ರಕೃತಿಯೂ ಪರಮಾತ್ಮ ತತ್ತ್ವದಿಂದ ಆವಿರ್ಭವಿಸಿದ್ದು; ಪರಮಹಂಸಸ್ವರೂಪದಲ್ಲಿರುವಾಗಲೂ ಪ್ರಪಂಚವನ್ನು ನಿರ್ಲಕ್ಷಿಸಲಾಗದು ; ಪರಮಪವಿತ್ರರೂಪದಲ್ಲಿ ಸಮಸ್ತ ಪ್ರಪಂಚವನ್ನು ನೋಡುತ್ತಾ ಯೋಗಿಯು ಪರಮಹಂಸಸ್ಥಿತಿಯಲ್ಲಿರಬೇಕು. ಆದ್ದರಿಂದ, ಸೀತೆ ಅಗ್ನಿ-ಪ್ರವೇಶಮಾಡಿದಾಗ ಅಗ್ನಿ ದೇವನೇ ಸೀತೆಯನ್ನು ರಾಮನಿಗೆ ತಂದೊಪ್ಪಿಸುವನು; ರಾಮನು ಅವಳನ್ನು ಸಂತೋಷದಿಂದ ಸ್ವೀಕರಿಸಿ ಅಯೋಧ್ಯೆಗೆ ಮರಳಿ ಪಟ್ಟಾಭಿಷಿಕ್ತನಾಗುವನು–ಪರಮಹಂಸ ಪದವಿಯಲ್ಲಿರುವನು. ಹೀಗೆ ಸಾರ್ವಕಾಲಿಕ, ಸಾರ್ವದೇಶಿಕ ಮತ್ತು ಸಾರ್ವಜೀವಿಕ ಶಾಶ್ವತ ತತ್ತ್ವವನ್ನು ರಾಮಾಯಣವು ಪ್ರತಿಪಾದಿಸುತ್ತದೆ—'ನಿತ್ಯಂ ರಾಮಾಯಣಂ ಮತಮ್.'

ಯೋಗ ಮತ್ತು ಆಧ್ಯಾತ್ಮಗಳ ದೃಷ್ಟಿಯಿಂದ ರಾಮಾಯಣವು ಇಲ್ಲಿಗೆ ಮುಗಿಯುತ್ತದೆ. ಉತ್ತರಕಾಂಡವು ಪ್ರಕ್ಷೇಪವೆಂಬ ತರ್ಕವಿತರ್ಕಗಳಿದ್ದರೂ ಶಂಬೂಕವಧಾ ಪ್ರಸಂಗಕ್ಕೆ ಆಧ್ಯಾತ್ಮಿಕ ಉತ್ತರವಿದೆ. ಶಂಬೂಕ ಪ್ರತಿನಿಧಿಸುವುದು ಸರಿಯಾದ ತಿಳುವಳಿಕೆಯಿಲ್ಲದ ಘೋರರೀತಿಯ ಉಪಾಸಕ ಸಾಧಕರನ್ನು, ವಿವೇಕಯುತವಾದ ಸಾಧನೆಯಲ್ಲಿದ್ದು ಅಸ್ಪೃಶ್ಯವೆನಿಸುವುದು. ದೇಹ ಮತ್ತು ಅಂತಃಕರಣಗಳಿಗೆ ವೃಥಾಪೀಡೆಯೇ ಹೊರತು ಯಾವ ಪುರುಷಾರ್ಥವೂ ಸಾಧಿಸಲಾರದು. ಇಂತಹ ಸಾಧಕರ ಅವಿವೇಕವನ್ನು ನಿವಾರಿಸುವುದೇ ಶಂಬೂಕವಧೆ. ಅವಿವೇಕ ನಿವಾರಣೆ ಬುದ್ಧಿ ತತ್ತ್ವದಿಂದ ಮಾತ್ರ ಸಾಧ್ಯ.

ಇತಿ ಶಮ್

ಎನ್. ಪ್ರಹ್ಲಾದರಾವ್

ಸಾಂಬನ ಕಥೆ

ಎಂಥವರ ಹೊಟ್ಟೆಯಲ್ಲಿ ಎಂಥವರು ಹುಟ್ಟುತ್ತಾರೆ, ಏನು ಮಾಡುತ್ತಾರೆ ಎಂದು ಹೇಳಲುಬಾರದು. ಸಾಂಬ ಶ್ರೀಕೃಷ್ಣನ ಮಗ. ಕೃಷ್ಣ ಪಾಂಡವ ಕೌರವರ ಗೌರವಕ್ಕೆ ಪಾತ್ರನಾದ ವ್ಯಕ್ತಿ. ಪಾಂಡವರಿಗಂತೂ ಗುರು, ದೈವ, ಏಕೈಕ ರಕ್ಷಕ. ಜಾಂಬವತಿಯ ಹೊಟ್ಟೆಯಲ್ಲಿ ಹುಟ್ಟಿದ ಸಾಂಬನಾದರೋ ಶುದ್ಧ ಪಟಿಂಗ. ಮೂರೂ ಬಿಟ್ಟವನು. ಅತಿ ಕಾಮಿ, ಒರಟ, ಪಾಪಪುಣ್ಯಗಳ ಭೀತಿ ಇಲ್ಲದವನು, ಶೀಲಭ್ರಷ್ಟ, ಸದಾ ಕುಡಿತದಲ್ಲಿ ನಿರತನಾಗಿರುತ್ತಿದ್ದ ಈತ ಹೊಟ್ಟೆಬಾಕ ಜೇರೆ. ತಿನ್ನುವುದಕ್ಕಾಗಿಯೇ ಹುಟ್ಟಿದವನಂತೆ ಮಾಂಸಾದಿಗಳನ್ನು ಯಥೇಚ್ಛವಾಗಿ ಭಕ್ಷಿಸುತ್ತಿದ್ದ. ಬೇರೆಯ ಉದ್ಯೋಗವಿಲ್ಲದುದರಿಂದ ಬೇಟೆಯಲ್ಲಿ ಕಾಲ ಕಳೆಯುತ್ತಿದ್ದ. ದುರ್ಯೋಧನನ ಮಗಳಾದ ಲಕ್ಷಣೆಯ ಸ್ವಯಂವರಕ್ಕೆ ಹೋಗಿದ್ದ ಈತ ಆಕೆಯನ್ನು ಅಪಹರಿಸಿ ತಂದದು ಒಂದು ದೃಷ್ಟಿಯಿಂದ ಶೌರ್ಯದ ಲಕ್ಷಣವಾದರೂ ಅದು ಈತನಿಗೆ ಹೆಂಗಸರನ್ನು ಅಪಹರಿಸುವ ವಿದ್ಯೆಯಲ್ಲಿ ಮೊದಲಪಾಠವಾಗಿತ್ತೆಂಬುದು ನೆನಪಿಡಬೇಕಾದ ಅಂಶ. ಅನಂತರ ಈತ ಇನ್ನೊಬ್ಬರ ಹೆಂಡಂದಿರನ್ನು ಅಪಹರಿಸಿದುದೂ ಕೆಡಿಸಿದುದೂ ಉಂಟು. ತನ್ನ ಮಗಳನ್ನು ಅಪಹರಿಸಿದ್ದನ್ನು ಕಂಡು ದುರ್ಯೋಧನ ಈತನನ್ನು ಸೆರೆಹಿಡಿದು ಹಸ್ತಿನಾವತಿಗೆ ಕರೆದೊಯ್ದು ಸೆರೆ ಇಟ್ಟನಂತೆ. ಆಗ ಈತನ ದೊಡ್ಡಪ್ಪ ಬಲರಾಮ ಹಸ್ತಿನಾವತಿಯನ್ನೇ ಸುಟ್ಟುಬಿಡುವುದಾಗಿ ಬೆದರಿಕೆ ಹಾಕಿ ಈತನನ್ನೂ ಲಕ್ಷ್ಮಣೆಯನ್ನೂ ಬಿಡಿಸಿ ತಂದನಂತೆ. ದುಷ್ಟರನ್ನು ಕಾಪಾಡಲು ಬಲರಾಮನಂಥ ಒಬ್ಬಿಬ್ಬರು ಯಾವಾಗಲೂ ಇರುತ್ತಾರೆ. ಬಲರಾಮನೇನು ಶುದ್ಧ ; ಆತನೂ ಮಹಾ ಕುಡುಕನೆ.

ಇತ್ತ ದ್ವಾರಕೆಯಲ್ಲಿ ಸಾಂಬ ಆಡಿದ್ದೆ ಆಟವಾಯಿತು. ಇವನಂತೆ ನೀತಿಕೆಟ್ಟ ಇತರರು ಇವನ ಸಂಗಡ ಸೇರಿದರು. ಎಲ್ಲರೊಂದಾಗಿ ಪುಂಡೆದ್ದು ಬೀದಿ ಬೀದಿ ಅಲೆದರು. ಚೌಕಗಳಲ್ಲಿ ನಿಂತು ಕುಣಿದರು. ಕೇಕೆ ಹಾಕಿದರು. ಸಾಂಬ ಹೆಣ್ಣು ವೇಷ ಧರಿಸಿ ಅವರೊಂದಿಗೆ ಪ್ರಣಯ ಚೇಷ್ಟೆಗಳನ್ನು ಮೆರೆಯುತ್ತ ನರ್ತಿಸಿದ. ವಿಶ್ವಾಮಿತ್ರ, ದೂರ್ವಾಸ, ನಾರದ ಮೊದಲಾದ ಹಿರಿಯರು ಹೇಳಿದ ಯಾವ ಬುದ್ಧಿವಾದವೂ ಈ ಮೂರ್ಖರಿಗೆ ರುಚಿಸಲಿಲ್ಲ. ಇಷ್ಟೆಲ್ಲ ಸಾಲದೊ ಎಂಬಂತೆ ಸಾಂಬ ಸಲಿಂಗ ಸಂಭೋಗದಲ್ಲಿ ನಿರತನಾದನಂತೆ.

ಒಂದು ಸಾರಿ, ಪೋಕರಿ—ಸ್ನೇಹಿತರು ಕೆಲವರು ಸಾಂಬನಿಗೆ ಬಸುರಿ ಹೆಂಗಸಿನ ವೇಷ ಹಾಕಿ ದ್ವಾರಕೆಗೆ ಬಂದಿದ್ದ ಕಣ್ವರ ಎದುರಿನಲ್ಲಿ ನಿಲ್ಲಿಸಿ 'ಈಕೆ ಎಂಥ ಮಗುವನ್ನು ಹೆರುವಳು ?' ಎಂದು ಕೇಳಿದರಂತೆ. ಇವರ ಹುಡುಗಾಟವನ್ನು ದಿವ್ಯದೃಷ್ಟಿಯಿಂದ ಅರಿತು ಸಿಟ್ಟಿಗೆದ್ದ ಕಣ್ವರು 'ನಿಮ್ಮ ವಂಶವನ್ನೇ ನಿರ್ನಾಮ ಮಾಡುವ ಮುಸಲವನ್ನು ಹೆರುವಳು !' ಎಂದರಂತೆ.

ಋಷಿ ವಾಕ್ಯದಂತೆ ಸಾಂಬ ಒಂದು ಮುಸಲವನ್ನು ಹೆತ್ತ. ಅದರಿಂದ ತಮ್ಮ ನಾಶವಾಗುವುದೆಂದು ತಿಳಿದ

ಯಾದವರು ಅದನ್ನು ಪುಡಿಪುಡಿಯಾಗಿ ಅರೆದು ಸಮುದ್ರಕ್ಕೆ ಎಸೆದರು. ಸಮುದ್ರಕ್ಕೆ ಬಿದ್ದ ಆ ಪುಡಿಯಿಂದ ಸಮುದ್ರ ತೀರದಲ್ಲಿ ಅಸಂಖ್ಯಾತವಾಗಿ ಜೊಂಡು ಬೆಳೆದು ಕೊಂಡಿತು.

ಕೊನೆಗೊಂದು ದಿನ, ಉನ್ಮತ್ತರಾದ ಯಾದವರು ಯಾವುದೋ ಒಂದು ಒಳಜಗಳವನ್ನು ಮುಂದುಮಾಡಿ ಕೊಂಡು ಹೊಡೆದಾಟಕ್ಕೆ ನಿಂತು ಸಮುದ್ರತೀರದಲ್ಲಿ ಬೆಳೆದಿದ್ದ ಬೆತ್ತದಂಥ ಜೊಂಡನ್ನು ಕಿತ್ತುಕೊಂಡು ಪರಸ್ಪರ ಥಳಿಸಿ ಎಲ್ಲರೂ ನಾಶವಾದರು.

ಇಷ್ಟೆಲ್ಲ ಆದದ್ದು ಶ್ರೀಕೃಷ್ಣನ ಎದುರಿನಲ್ಲಿಯೆ! ಸಾಧುಗಳನ್ನು ಸಂಬಾಳಿಸಿ ದುಷ್ಟರನ್ನು ಸಂಹಾರ ಮಾಡಲು ಅವತಾರವೆತ್ತಿ ಬಂದ ಶ್ರೀಕೃಷ್ಣ ಕೂಡ ಯಾದವರನ್ನು ಉಳಿಸಲಾರದೆ ಹೋದ. ಅವನ ಎದುರಿಗೇ ಅವನ ವಂಶ ನಾಶವಾಗಿ ಹೋಯಿತು. ದೊಡ್ಡ ವಂಶ, ದೊಡ್ಡ ದೇಶ ಯಾರಿಂದ ಯಾವಾಗ ನೆಲಸಮವಾಗುತ್ತದೆ ಎಂದು ಹೇಳಲುಬಾರದು. ಸಾಂಬನಂಥ ದುಷ್ಟರು ಒಬ್ಬಿಬ್ಬರು ಇದ್ದರೆ ಏನಾಯಿತು ಎಂದು ತಾತ್ಸಾರ ಮಾಡುವಂತಿಲ್ಲ. ಕ್ರಮೇಣ ಅಂಥವರ ಸಂತತಿ ಹೆಚ್ಚುತ್ತದೆ. ಸಾಂಬ ತನ್ನ ಗೆಳೆಯರೊಂದಿಗೆ ಬೀದಿಗುಣಿದಾಗ ಉಳಿದವರು ಏನು ಮಾಡುತ್ತಿದ್ದರು? ಅವರನ್ನು ತಡೆಯುವ ಶಕ್ತಿ ಯಾರಿಗೂ ಇರಲಿಲ್ಲವೆ? ಎಲ್ಲರೂ ಅವರೊಡನೆ ಸಾಮೀಲಾದರೆ? ಯಾರ ದೌರ್ಜನ್ಯವನ್ನೇ ಆಗಲಿ ಕಣ್ಣಾರೆ ಕಂಡ ಜನ ಹಾಗೂ ಅಧಿಕಾರ ನಿಸ್ಸಹಾಯಕತೆಯಿಂದ ಅದನ್ನು ಕಡೆಗಣಿಸಿದಲ್ಲಿ ಅದು ಇಡೀ ದೇಶಕ್ಕೆ ಒಂದು ದಿನ ಪಾರ್ಥೇನಿಯಂ ಆಗಬಲ್ಲದು.

ಶಿಶು ಅಪೂರ್ಣವಾದ ಮನುಷ್ಯ. ಮನುಷ್ಯ ವಿಕಾಸವಾದ ಮಗು. ಬೀಜ ಅಪೂರ್ಣವಾದ ಮರ. ಪರಿಣಾಮವನ್ನು ಹೊಂದಿದ ಬೀಜ. ಜೀವನದ ಸಾಧ್ಯತೆಗಳೆಲ್ಲ ಜೀವಾಣುವಿನಲ್ಲಿ ಇವೆ.

ಎನ್. ರಂಗನಾಥಶರ್ಮ

ಹರಿಣಪ್ಲುತ

ಕವಿಗಳಿಗೆ ಜಿಂಕೆಗಳಲ್ಲಿ ಇನ್ನಿಲ್ಲದ ಮಮತೆ. ಅವುಗಳಿಲ್ಲದ ವನವೇ ಇಲ್ಲ. ತಪೋವನದಲ್ಲಿ ಮೊದಲು ಕಾಣತಕ್ಕವು ಜಿಂಕೆಗಳು. ಮುಗ್ಧತೆಗೆ, ಮಾರ್ದವಕ್ಕೆ, ಚಪಲತೆಗೆ ಅವು ಪ್ರಥಮೋದಾಹರಣೆಗಳು. ಪ್ರಕೃತಿಯ ಸೌಂದರ್ಯ ಹರಿಣಗಳಿಲ್ಲದಿದ್ದರೆ ಅಪೂರ್ಣ. ಎಳೆಯ ಮಕ್ಕಳಂತೆ, ಹೂಬಳ್ಳಿಗಳಂತೆ ಕರುಣೆಗೆ ಪಾತ್ರವಾದವು ಈ ಪ್ರಾಣಿಗಳು. ಹಳ್ಳಿಯಲ್ಲಿ, ಪಟ್ಟಣದಲ್ಲಿ, ರಾಜಭವನದಲ್ಲಿ, ರಾಜೋದ್ಯಾನದಲ್ಲಿ—ಎಲ್ಲೆಲ್ಲಿಯೂ ಕವಿ ಪ್ರಪಂಚದಲ್ಲಿ ಇವು ಕಂಡೇ ಕಾಣುತ್ತವೆ. ಒಂದುವೇಳೆ ಹರಿಣಗಳಿಲ್ಲದಿದ್ದರೂ ಹರಿಣಾಕ್ಷಿಗಳಾದರೂ ಇದ್ದೇ ಇರುತ್ತಾರೆ !

ಋಷಿಗಳಿಗೂ ಜಿಂಕೆಗಳಿಗೂ ಅಗಾಧವಾದ ನೆಂಟು. ಅವರ ಆಶ್ರಮಗಳಲ್ಲಿ ಜಿಂಕೆಗಳು ಶಿಶುಗಳಂತೆ ತಿರುಗಾಡಿಕೊಂಡಿರುತ್ತವೆ. ಋಷಿಪತ್ನಿಯರು ನೀವಾರಾದಿ ಧಾನ್ಯಗಳನ್ನು ಕೊಟ್ಟು ಮಮತೆಯಿಂದ ಸಾಕಿರುತ್ತಾರೆ. ಹಗಲು ಅಲ್ಲಲ್ಲಿ ಸುತ್ತಾಡಿ ಸಾಯಂಕಾಲ ಆಶ್ರಮಗಳಿಗೆ ಅವು ಬರುತ್ತವೆ. ಅಂಗಣದಲ್ಲಿ ಮೆಲುಕು ಹಾಕುತ್ತ ಮಲಗಿರುತ್ತವೆ. ಪರ್ಣಶಾಲೆಯ ಬಾಗಿಲಿಗೆ ಅಡ್ಡಲಾಗಿ ಎಲ್ಲೆಂದರಲ್ಲಿ ಅವು ಮಲಗಿರುವುದುಂಟು. ಯಾರೂ ಆ ಮುಗ್ಧ ಪ್ರಾಣಿಗಳನ್ನು ಎಬ್ಬಿಸಿ ತೊಂದರೆ ಕೊಡುವುದಿಲ್ಲ. ಮಕ್ಕಳು ಆ ಜಿಂಕೆಗಳೊಡನೆ ಆಟವಾಡುತ್ತಾರೆ.

ಎಲ್ಲಿ ಜಿಂಕೆಯು ಸಹಜವಾಗಿ ವಾಸಿಸುವುದೋ ಅದೇ ಆರ್ಯದೇಶ — ಯಜ್ಞಾರ್ಹವಾದ ದೇಶ. ಜಿಂಕೆಯು ಸಂಚರಿಸದ ಸ್ಥಳ ಮ್ಲೇಚ್ಛದೇಶವೆಂದು ಮನುಸ್ಮೃತಿಯಲ್ಲಿ ಹೇಳಿದೆ :

> ಕೃಷ್ಣಸಾರಸ್ತು ಚರತಿ ಮೃಗೋ ಯತ್ರ ಸ್ವಭಾವತಃ ।
> ಸಜ್ಞೇಯೋ ಯಜ್ಞಿಯೋ ದೇಶೋ ಮ್ಲೇಚ್ಛದೇಶಸ್ತ್ವತಃ ಪರಃ ॥

(ಮನು. ೨-೨೩)

ಋಷಿಗಳಿಗೆ ಕೃಷ್ಣಾಜಿನವು ಪರಿಶುದ್ಧವಾದ ಆಸನ. ಬ್ರಹ್ಮಚಾರಿಯು ಕೃಷ್ಣಾಜಿನವನ್ನು ಧರಿಸಿರಲೇಬೇಕೆಂದು ವಿಧಿ ಇದೆ. ರಘು ಮಹಾರಾಜನು ಬಾಲ್ಯದಲ್ಲಿ ಬ್ರಹ್ಮಚಾರಿಯಾಗಿದ್ದಾಗ ಪರಿಶುದ್ಧವಾದ ಜಿಂಕೆಯ ಚರ್ಮವನ್ನು ಧರಿಸಿ ತಂದೆಯಿಂದ ಮಂತ್ರಾಸ್ತ್ರಗಳನ್ನು ಕಲಿತನೆಂದು ಕಾಳಿದಾಸನು ವರ್ಣಿಸಿದ್ದಾನೆ :

> ತ್ವಚಂ ಸ ಮೇಧ್ಯಾ ಪರಿಧಾಯ ರೌರವೀಂ
> ಅಶಿಕ್ಷತಾಸ್ತ್ರಂ ಪಿತುರೇವ ಮಂತ್ರವತ್ ॥

(ರಘು ೩-೩೧)

ಋಗ್ವೇದ ಮತ್ತು ಸಾಮವೇದಗಳು ಒಂದು ಸಲ ಜಿಂಕೆಯ ದೇಹದಲ್ಲಿ ಅಡಗಿಕೊಂಡಿದ್ದವೆಂದೂ ಅದರ ಚರ್ಮದಲ್ಲಿರುವ ಬಿಳಿಯ ಚುಕ್ಕೆಯೇ ಋಗ್ವೇದದ ಚಿಹ್ನೆಯೆಂದೂ ಕಪ್ಪುಬಣ್ಣವೇ ಸಾಮವೇದದ ಚಿಹ್ನೆಯೆಂದೂ ಕಥೆ ಇದೆ. ಆದ್ದರಿಂದ ಜಿಂಕೆಯು ವೇದಮಯವಾದ ಮೃಗವೆಂದು ತೈತ್ತಿರೀಯ ಸಂಹಿತೆಯಲ್ಲಿ ಹೇಳಿದೆ. ಪರಮೇಶ್ವ

ರನ ಚತುರ್ಭುಜಗಳಲ್ಲಿ ಒಂದು ಭುಜವು ಮೃಗವನ್ನು ಧರಿಸಿದೆಯೆಂಬ ವರ್ಣನೆಯುಂಟು. ಅದರ ಹಿಂಗಾಲುಗಳನ್ನು ಪರಮೇಶ್ವರನು ದೃಢವಾಗಿ ಹಿಡಿದಿರುತ್ತಾನೆ. ಅದು ವೈದಿಕ ಯಜ್ಞರೂಪವಾದ ಜಿಂಕೆ. ಯಜ್ಞಕಾಂಡವು ಇಂದ್ರಾದಿ ದೇವತೆಗಳನ್ನುದ್ದೇಶಿಸಿ ಹೊರಟಿದೆಯಷ್ಟೆ. ಇಂದ್ರಾದಿ ಶಬ್ದಗಳೇ ದೇವತೆಗಳೆಂದು ಮೀಮಾಂಸಕರ ಮತವಿದೆ. ದೇವರಿಲ್ಲವೆಂಬ ನಿರೀಶ್ವರ ಮೀಮಾಂಸಕರ ವಾದವೂ ಉಂಟು. "ಅದು ಹಾಗಲ್ಲ, ಈಶ್ವರನೇ ಮುಖ್ಯವಾಗಿ ವೇದಪ್ರತಿಪಾದ್ಯ. ವೇದವು ಭಗವಂತನಲ್ಲಿಯೇ ದೃಢವಾಗಿ ನಿಲ್ಲತಕ್ಕದ್ದು. ಅವನನ್ನು ತ್ಯಜಿಸಿ ಹೋಗತಕ್ಕದ್ದಲ್ಲ" ಎಂಬುದನ್ನು ಶಿವನು ಹಿಡಿದ ಮೃಗವು ಸೂಚಿಸುತ್ತದೆ. ದಕ್ಷನ ಯಜ್ಞವನ್ನು ಶಿವನು ವಿಧ್ವಂಸಗೊಳಿಸಿದನಷ್ಟೆ. ಆಗ ಯಜ್ಞವು ಮೃಗರೂಪವನ್ನು ಧರಿಸಿ ಓಡಿಹೋಯಿತಂತೆ. ಶಿವನು ಬೆನ್ನಟ್ಟಿ ಹೋಗಿ ಅದನ್ನು ಹಿಡಿದು ನಿಲ್ಲಿಸಿದನೆಂದು ಪುರಾಣಗಳಲ್ಲಿ ಕಥೆಯುಂಟು. ದುಷ್ಯಂತನು ಕಣ್ವಾಶ್ರಮದ ಬಳಿ ಜಿಂಕೆಯನ್ನು ಬೆನ್ನಟ್ಟಿ ಹೋದಾಗ ಅವನ ಸಾರಥಿಯು ಹೇಳುತ್ತಾನೆ :

> ಕೃಷ್ಣಸಾರೇ ದದಚ್ಚಕ್ಷುಸ್ತ್ವಯಿ ಚಾಧಿಜ್ಯಕಾರ್ಮುಕೇ ।
> ಮೃಗಾನುಸಾರಿಣಂ ಸಾಕ್ಷಾತ್ ಪಶ್ಯಾಮೀವ ಪಿನಾಕಿನಮ್ ॥

(ಶಾಕುಂತಲ ೧–೬)

"ಓಡುತ್ತಿರುವ ಜಿಂಕೆಯನ್ನು ಧನುರ್ಧಾರಿಯಾಗಿ ಧಾವಿಸುತ್ತಿರುವ ನಿನ್ನನ್ನು ನೋಡಿದರೆ, ಮಹಾರಾಜ, ಜಿಂಕೆಯನ್ನು ಬೆನ್ನಟ್ಟಿಹೋದ ಸಾಕ್ಷಾತ್ ಪಿನಾಕಿಯನ್ನು ನೋಡಿದಂತಾಗುತ್ತದೆ."

ದಕ್ಷನ ಯಜ್ಞಕಾಂಡದಲ್ಲಿ ಸೂಚ್ಯವಾದ ಅಂಶವೇನು ? ಯಜ್ಞವು ಭಗವದುದ್ದೇಶ್ಯಕವಾಗಿರಬೇಕೇ ಹೊರತು ಬೇರೆಯಲ್ಲ. ಬ್ರಹ್ಮಾರ್ಪಣ ಬುದ್ಧಿಯಿಲ್ಲದೆ ಮಾಡುವ ಯಜ್ಞಾದಿಕಾರ್ಯವೆಲ್ಲವೂ ರಾಜಸವೋ ತಾಮಸವೋ ಆಗಿರುತ್ತದೆ. ಅದು ಬೂದಿಯಲ್ಲಿ ಹೋಮ ಮಾಡಿದಂತೆ ಎಂದಲ್ಲವೆ ?

ಜಿಂಕೆಯ ಜಾತಿಯಲ್ಲಿ ಹಲವಾರು ಒಳಭೇದಗಳುಂಟು. ಜಿಂಕೆ, ಚಿಗರಿ, ಮಿಕ, ಹುಲ್ಲೆ, ಎರಳೆ, ದುಪ್ಪಿ, –ಮುಂತಾದವು. ಅಮರಕೋಶದಲ್ಲಿ ಹದಿನೆಂಟು ಭೇದಗಳನ್ನು ಗುರುತಿಸಿದ್ದಾರೆ. ಕೃಷ್ಣಸಾರ, ರುರು—ಎಂಬ ಎರಡು ಭೇದಗಳನ್ನು ಸ್ಮೃತಿಕಾರರು ವಿಶೇಷವಾಗಿ ಗಮನಿಸಿ ಹೇಳುತ್ತಾರೆ. ಕವಿಗಳು ಒಳಭೇದವನ್ನು ಗಮನಿಸುವುದಿಲ್ಲ. ಮೃಗವೆಂಬುದು ಜಿಂಕೆಗಳಿಗೆ ಸಾಮಾನ್ಯವಾದ ಶಬ್ದ.

ವೇಗವಾಗಿ ಓಡುವುದರಲ್ಲಿ ಜಿಂಕೆಯು ನಿಸ್ಸೀಮ. ಆದಕ್ಕೇ ಇರಬೇಕು ವಾಯುವಿನ ವಾಹನ ಮೃಗವೆಂದು ಹೇಳಿದ್ದು. ಶಾಕುಂತಲ ನಾಟಕದಲ್ಲಿ ಜಿಂಕೆಯ ಓಟ ಬಹುಸುಂದರವಾಗಿ ಚಿತ್ರಿತವಾಗಿದೆ. ದುಷ್ಯಂತನು ಬೇಟೆಯಾಡುತ್ತಿರುವಾಗ ಒಂದು ಜಿಂಕೆಯನ್ನು ಅಟ್ಟಿಸಿಕೊಂಡು ಹೋಗುತ್ತಾನೆ. ಅದು ಭಯದಿಂದ ನೆಗೆಯುತ್ತ ಓಡುತ್ತದೆ. ಆಗ ರಾಜನು ಸಾರಥಿಗೆ ಹೇಳುತ್ತಾನೆ :

> ಗ್ರೀವಾಭಂಗಾಭಿರಾಮಂ ಮುಹುರನುಪತತಿ ಸ್ಯಂದನೇ ಬದ್ಧದೃಷ್ಟಿಃ
> ಪಶ್ಚಾರ್ಧೇನ ಪ್ರವಿಷ್ಟಃ ಶರಪತನಭಯಾತ್ ಭೂಯಸಾ ಪೂರ್ವಕಾಯಮ್ ।
> ದರ್ಭೈರರ್ಧಾವಲೀಢೈಃ ಶ್ರಮವಿವೃತಮುಖಭ್ರಂಶಿಭಿಃ ಕೀರ್ಣವರ್ತ್ಮಾ
> ಪಶ್ಯೋದಗ್ರಪ್ಲುತತ್ವಾತ್ ವಿಯತಿ ಬಹುತರಂ ಸ್ತೋಕಮುರ್ವ್ಯಾಂ ಪ್ರಯಾತಿ ॥

"ಸಾರಥಿ, ನೋಡು ಆ ಜಿಂಕೆಯನ್ನು ! ನನ್ನ ರಥದ ಕಡೆಗೇ ಅದರ ದೃಷ್ಟಿ. ಕತ್ತನ್ನು ಕೊಂಕಿಸಿ, ನೋಡುವಾಗ ಎಷ್ಟು ಚೆಲುವಾಗಿ ಕಾಣಿಸುತ್ತದೆ ! ರಥವನ್ನು ನೋಡುತ್ತಲೇ ಥಕ್ಕನೆ ಮುಂದಕ್ಕೆ ನೆಗೆಯುತ್ತದೆ. ಬಾಣವು ನೆಟ್ಟೀತೆಂಬ ಭಯದಿಂದ ಪೃಷ್ಠ ಭಾಗವನ್ನೆಲ್ಲ ಮುದುರಿಸಿಕೊಂಡಿದೆ. ದಣಿವಿನಿಂದ ಬಾಯ್ತೆರೆದು, ಅರೆಬರೆ ಅಗಿದ ಗರಿಕೆಗಳನ್ನು ದಾರಿಯಲ್ಲಿ ಉದುರಿಸುತ್ತ ಓಡುತ್ತಿದೆ. ಅಬ್ಬ, ಎಷ್ಟು ದೂರಕ್ಕೆ ಅದು ನೆಗೆಯುವುದು ! ಅದರ ಓಟವೆಲ್ಲ ಆಕಾಶದಲ್ಲೇ. ಆಗಾಗ ನೆಲವನ್ನು ಕೊಂಚ ಮುಟ್ಟುವಂತೆ ಕಾಣುತ್ತದೆ !"

ದುಷ್ಯಂತನ ನುಡಿಯಲ್ಲಿ ಮರುಕದ ಅಂಕುರ ಉಂಟು. ಅಷ್ಟರಲ್ಲಿ ಋಷಿಗಳು ನೀರೆರೆದು ಅದನ್ನು ಪೋಷಿಸಿದರು. ಆಶ್ರಮ ಮೃಗ ಉಳಿಯಿತು.

ಶಕುಂತಲೆ ಜಿಂಕೆಯ ಮರಿಯೊಂದನ್ನು ಪ್ರೀತಿಯಿಂದ ಸಾಕಿ ಬೆಳೆಸಿದ್ದಳು. ಅದು ಹುಟ್ಟಿದೊಡನೆ ತಾಯಿಯನ್ನು ಕಳೆದುಕೊಂಡಿತ್ತು. ಶಕುಂತಲೆಗೆ ಅದಗಲ್ಲಿ ಇನ್ನಿಲ್ಲದ ವಾತ್ಸಲ್ಯ. ಆ ಜಿಂಕೆಗೆ ದೀರ್ಘಾಪಾಂಗ ಎಂದು ಅವಳು ಹೆಸರಿಟ್ಟಿದ್ದಳು. ಶಕುಂತಲಾ ದುಷ್ಯಂತರು ಒಮ್ಮೆ ನವಮಾಲಿಕಾ ಮಂಟಪದಲ್ಲಿ ಕುಳಿತಿದ್ದಾಗ ದೀರ್ಘಾಪಾಂಗವು ಅಲ್ಲಿಗೆ ಬಂದಿತು. ದುಷ್ಯಂತನು ತಾವರೆ ಎಲೆಯ ದೊನ್ನೆಯಲ್ಲಿದ್ದ ನೀರನ್ನು ಕುಡಿಸಲು ಹೋದಾಗ ಆ ಜಿಂಕೆ ಹತ್ತಿರ ಬರಲೇ ಇಲ್ಲ. ಆಗ ಶಕುಂತಲೆ ಅದೇ ನೀರನ್ನು ಹಿಡಿದುಕೊಂಡಾಗ ಜಿಂಕೆ ಹತ್ತಿರ ಬಂದು ನೀರನ್ನು ಕುಡಿಯಿತಂತೆ ! ಆಗ ದುಷ್ಯಂತನು ಹಾಸ್ಯ ಮಾಡುತ್ತಾನೆ : "ಆ ! ಎಲ್ಲರಿಗೂ ತಮ್ಮವರಲ್ಲಿ ನಂಬಿಕೆ! ನೀವಿಬ್ಬರೂ ಕಾಡು ಪ್ರಾಣಿಗಳು !"

ತಪೋವನದಿಂದ ಶಕುಂತಲೆ ಗಂಡನ ಮನೆಗೆ ಹೊರಟಿದ್ದಾಳೆ. ಕಣ್ವಮುನಿಗಳು ಅವಳನ್ನು ಕಳಿಸುತ್ತ ಬರುತ್ತಿದ್ದಾರೆ. ಎಲ್ಲರ ಹೃದಯದಲ್ಲಿಯೂ ತುಂಬಿದ ದುಗುಡ, ಏನೋ ತಳಮಳ, ಹೇಳಲಾಗದ ಮೂಕಸಂಕಟ. ಕರುಣೆಯ ಆ ದೃಶ್ಯಕ್ಕೆ ಪುಟವೇರಿಸಲು ಬರುತ್ತದೆ ದೀರ್ಘಾಪಾಂಗ. ತನ್ನ ಸಾಕುತಾಯಿಯನ್ನು ಬೀಳ್ಕೊಡಲು ಅದು ಬರುತ್ತದೆ. ಶಕುಂತಲೆಯ ಹಿಂದೆ ಬಂದು ಸೀರೆಗೆ ಮೈತಾಕಿಸಿ ಆಕೆಯು ನಡೆಯಲು ತೊಡರು ಮಾಡುತ್ತದೆ. "ಯಾರಿದು ?" ಎಂದು ಶಕುಂತಲೆ ಹಿಂದಿರುಗಿ ನೋಡುತ್ತಾಳೆ. ಕಣ್ವರು "ವತ್ಸೆ, ಇದು ನಿನ್ನ ಸಾಕುಮಗು ದೀರ್ಘಾಪಾಂಗ. ಅದು ಹುಲ್ಲು ತಿನ್ನುವಾಗ ಬಾಯಿಗೆ ಗಾಯವಾಯಿತೆಂದು ಇಂಗುದಿಯ ಎಣ್ಣೆಯನ್ನು ಹಚ್ಚಿ ಉಪಚರಿಸುತ್ತಿದ್ದೆಯಲ್ಲಾ. ಸಾಮೆಯ ಕಾಳನ್ನು ಕೈಯಲ್ಲಿ ಹಿಡಿದು ತಿನ್ನಿಸಿ ಬೆಳೆಸಿದೆಯಲ್ಲಾ. ಆ ಜಿಂಕೆಯಮರಿ ಇದು. ನಿನಗೆ ದಾರಿ ಬಿಡುವುದಿಲ್ಲ!" ಆಗ ಶಕುಂತಲೆ "ಮಗು, ನಿನ್ನ ಜೊತೆಯನ್ನಗಲಿ ಹೋಗುತ್ತಿದ್ದೇನೆ. ನನ್ನೊಡನೇಕೆ ಬರುವೆ? ತಾಯಿಯಿಲ್ಲದ ಮರಿಯೆಂದು ಸಾಕಿದೆ. ನಾನಿಲ್ಲದಿದ್ದರೂ ನನ್ನ ತಂದೆ (ಕಣ್ವರು) ನಿನ್ನ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಾರೆ. ಹಿಂದಿರುಗು ಮಗು" ಎಂದು ನುಡಿದು ಅಳುತ್ತ ಮುಂದೆ ಹೋಗುವಳು.

ಹರೀಶ್ವರನ ಗಿರಿಜಾಕಲ್ಯಾಣದಲ್ಲಿ ಬೇಟೆಯ ಒಂದು ಸಂದರ್ಭ :

> ತಿರುಗುವ ತನು ಬೆರ್ಚುವ ಕಣ್
> ಹರಿವ ಮನಂ ನಟ್ಟ ಕಿವಿಯುಡಂಗುವ ಸುಯ್ಲಿಂ ।
> ಸರಳಂ ಮೀರುತೆ ಹರಿಣಂ
> ಸರಳಿಸಿತಯ್ದಾರನೇಳನೆಂಟೊಂಬತ್ತಂ ॥

ನೇಮಿಚಂದ್ರನ ಲೀಲಾವತಿ ಕಾವ್ಯದಲ್ಲಿ ಜಿಂಕೆಯು ನೀರನ್ನುಕುಡಿಯುವ ಒಂದು ದೃಶ್ಯ ಸುಂದರವಾಗಿದೆ:

> ನಿರ್ಮಿದಕೊರಲ್ ಮರಲ್ದು ಮಡಿದೂರಿದ ಮುಂದಣ ಕಾಲ್ಗಳೆರ್ದ್ದ ಪ ।
> ಶ್ಚಿಮತನು ಜೋಲ್ದುರಂ ಪೆರಗನಪ್ಪಿದ ಕೊಂಬುಗಳಾಲಿಸುತ್ತೆ ವಿ ॥
> ಭ್ರಮಿಸುವ ಕರ್ಣಮುಂ ಮುಗುಳ್ವ ಕಣ್ ಮಿಡುಕೋಡುವ ಕಂಠನಾಳಮುಂ ।
> ದಮರ್ದಿರೆ ನೀರನುಣ್ಬೆರಲೆಯಂ ಬರಲೊಲ್ಲದೆ ನೋಡಿದಂ ನೃಪಂ ॥

ಕಾಳಿದಾಸನ ಪ್ರಕೃತಿ ವರ್ಣನೆಯಲ್ಲಿ ಜಿಂಕೆ ಬಂದೇ ಬರುತ್ತದೆ. ಅದರ ಮುಗ್ಧ ಸ್ವಭಾವ, ಪ್ರಣಯ ವಿಧಾನ ಕವಿಗೆ ಮೆಚ್ಚು. ಗಂಡು ಜಿಂಕೆ ತನ್ನ ಕೊಂಬಿನಿಂದ ಹೆಣ್ಣಿನ ಮೈಯನ್ನು ಮೆಲ್ಲಗೆ ತೀಡುವುದನ್ನು ಸ್ಪರ್ಶಸುಖದಿಂದ ಹೆಣ್ಣು ಜಿಂಕೆ ಕಣ್ಣು ಮುಚ್ಚಿ ಆನಂದವನ್ನನುಭವಿಸುವುದನ್ನು ಕವಿಯು ಗಮನಿಸಿದ್ದಾನೆ :

> ಶೃಂಗೇಣ ಚ ಸ್ಪರ್ಶನಿಮೀಲಿತಾಕ್ಷೀಂ ಮೃಗೀಮಕಂಡೂಯತ ಕೃಷ್ಣಸಾರಃ ।

(ಕುಮಾರ, ೩-೩೬)

ದಶರಥನು ಬೇಟೆಗೆ ಹೋಗಿದ್ದಾಗ ಒಂದು ಹರಿಣಗಳ ಜೋಡಿ ಗೋಚರಿಸಿತು. ರಾಜನು ಹರಿಣಕ್ಕೆ ಗುರಿಯಿಟ್ಟು ಬಾಣವನ್ನು ಸೆಳೆದನು. ಅಷ್ಟರಲ್ಲಿ ಸಹಚರಿಯಾದ ಹರಿಣಿ ತನ್ನ ಪ್ರಿಯನಿಗೆ ಅಡ್ಡಲಾಗಿ ತನ್ನ ದೇಹವನ್ನೊಡ್ಡಿ ನಿಂತಿತಂತೆ. ಅದರ ತ್ಯಾಗಮಯವಾದ ಪ್ರೇಮವನ್ನು ಕಂಡು ದಶರಥನ ಹೃದಯ ಕರಗಿತು. ಹೂಡಿದ ಬಾಣವನ್ನು ಉಪಸಂಹರಿಸಿದನು. ಅನಂತರ ಅವನಿಗೆ ಹರಿಣಗಳನ್ನು ಬೇಟೆಯಾಡಲು ಸಾಧ್ಯವೇ ಆಗಲಿಲ್ಲ. ಬಾಣಗಳನ್ನು ಹೂಡಿದಾಗಲೆಲ್ಲ ಹರಿಣಗಳ ನೇತ್ರಗಳು ಭೀತಿಯಿಂದ ಮತ್ತಷ್ಟು ಚಂಚಲಗೊಳ್ಳುತ್ತಿದ್ದವು. ಒಡನೆಯೇ ದಶರಥನಿಗೆ ತನ್ನ ಕಾಂತೆಯರ ಚಪಲ ನೇತ್ರಗಳ ಸ್ಮರಣೆಯಾಗಿ ಅವನ ಮನಸ್ಸು ಕರಗಿಹೋಗುತ್ತಿತ್ತು! (ರಘು. 9-57,58)

ರಾಮಾಯಣದಲ್ಲಿ ಬರುವ ಮಾಯಾಮೃಗದ ವೃತ್ತಾಂತ ಸುಪ್ರಸಿದ್ಧವಾದದ್ದು. ಮಾರೀಚನು ಎಲ್ಲವನ್ನೂ ಬಿಟ್ಟು ಜಿಂಕೆಯ ರೂಪವನ್ನು ಧರಿಸಿದ ಉದ್ದೇಶವೇನು? ನವಿಲಿನ ವೇಷವನ್ನೇಕೆ ಧರಿಸಲಿಲ್ಲ? ಸೀತೆಯನ್ನು ಮೋಹಗೊಳಿಸಲು ಜಿಂಕೆಯೇ ಸರಿಯೆಂದು ಆ ಚಾಣಾಕ್ಷನು ನಿರ್ಧರಿಸಿದ. ಅದು ಆಶ್ರಮ ಮೃಗ. ಸಾಕಿದರೆ ಆಶ್ರಮದಲ್ಲಿಯೇ ಸುಳಿದಾಡಿಕೊಂಡಿರುತ್ತದೆ. ಎತ್ತಿ ಮುದ್ದಿಸಲು ಹಿತಕರವಾಗಿರುತ್ತದೆ. ವೇಗದಿಂದ ತಪ್ಪಿಸಿಕೊಂಡು ಓಡುತ್ತ ಅಲ್ಲಲ್ಲಿ ಮರೆಯಾಗಿ ಶ್ರೀರಾಮನನ್ನು ವಂಚಿಸಲು ಯುಕ್ತವಾದ ವೇಷ ಎಂದು ಅವನು ಆಲೋಚಿಸಿರಬೇಕು. ಸೀತೆ ಆ ಮಾಯಾಮೃಗವನ್ನು ನೋಡಿದೊಡನೆ ಮುಗ್ಧಳಾದಳು. ರಾಮಾಯಣದಲ್ಲಿ ಅದರ ವರ್ಣನೆ ಮನೋಹರವಾಗಿದೆ: "ಆ ಜಿಂಕೆಗೆ ಇಂದ್ರನೀಲಮಣಿಯಂಥ ಕೊಂಬುಗಳಿದ್ದವು. ಮುಖದಲ್ಲಿ ಬೆಳ್ಳಗೂ ಕರ್‍ರಗೂ ಇರುವ ಸುಂದರ ರೇಖೆಗಳಿದ್ದವು. ಮುಖದ ಒಂದು ಪಾರ್ಶ್ವ ಕೆಂದಾವರೆಯಂತೆಯೂ ಇನ್ನೊಂದು ಪಾರ್ಶ್ವ ನೀಲೋತ್ಪಲದಂತೆಯೂ ಇತ್ತು. ಕಿವಿಗಳು ಇಂದೀವರ ದಳದಂತಿದ್ದವು. ಕತ್ತು ನೀಳವಾಗಿತ್ತು. ಆ ಜಿಂಕೆಯ ಉದರವು ಮಲ್ಲಿಗೆಯಂತೆ ಬೆಳ್ಳಗೆ ಮಿನುಗುತ್ತಿತ್ತು. ದೇಹದ ಇತರ ಭಾಗವು ಕಮಲಕೇಸರದ ಬಣ್ಣವಾಗಿತ್ತು. ಕಾಲ್ಗೊರಸು ವೈಢೂರ್ಯಮಣಿಯಂತೆ ಹೊಳೆಯುತ್ತಿದ್ದಿತು. ಮೊಳಕಾಲು ತೆಳ್ಳಗಿತ್ತು. ಎಲ್ಲ ಅವಯವಗಳೂ ಮಾಟವಾಗಿ ಮುದ್ದಾಗಿದ್ದವು. ಅದರ ಬಾಲ ಕಾಮನಬಿಲ್ಲಿನಂತೆ ರಂಜಿಸುತ್ತಿತ್ತು. ಮೈ ನುಣುಪಾಗಿತ್ತು. ಮೈಮೇಲೆ ಬೆಳ್ಳಿಯಂತಹ ಬಿಳಿಯ ಚುಕ್ಕೆಗಳಿದ್ದವು. ಆ ಮೃಗವು ಗಿಡದೆಲೆಗಳನ್ನು ತಿನ್ನುತ್ತ ಬಾಳೆಯ ತೋಟಕ್ಕೆ ಹೋಗಿ ಕಣಗಿಲಗಿಡಗಳ ಮಧ್ಯದಲ್ಲಿ ಸುತ್ತಿ, ಸೀತೆಯು ಕಾಣಬಹುದಾದ ಸ್ಥಳಕ್ಕೆ ಮೆಲ್ಲಕ್ಕೆ ಬಂದಿತು." ಅದರ ಚೆಲ್ಲಾಟವನ್ನು ಸೌಂದರ್ಯವನ್ನೂ ನೋಡಿ ಸೀತೆಗೆ ಆಸೆಯಾದದ್ದರಲ್ಲಿ ಅಚ್ಚರಿಯೇನೂ ಇಲ್ಲ. ಶ್ರೀರಾಮನೂ ಸಹ ಭ್ರಾಂತನಾದನು. ಆಗ ಸೀತೆ ತನ್ನ ಕಾಂತನಿಗೆ ಅದನ್ನು ತಂದು ಕೊಡುವಂತೆ ಹಠ ಹಿಡಿದು ಹೇಳುವ ಮಾತು ಜಿಂಕೆಯ ಮನೋಹರತೆಯನ್ನು ಇನ್ನೂ ವಿಶದಗೊಳಿಸುತ್ತದೆ: "ಆರ್ಯಪುತ್ರ, ನಾನಾ ಬಣ್ಣಗಳಿರುವ ಇದರ ದೇಹ ಎಷ್ಟು ವಿಚಿತ್ರವಾಗಿದೆ! ಮೈಮೇಲೆ ರತ್ನದ ಕಣಗಳನ್ನು ಹರಡಿದಂತಿದೆ. ಅಬ್ಬ! ಇದರ ರೂಪವೇ! ಇದರ ಸೌಂದರ್ಯವೇ! ಇದರ ಧ್ವನಿ ಎಷ್ಟು ಇಂಪಾಗಿದೆ! ನನ್ನ ಹೃದಯವನ್ನು ಸೆಳೆಯುತ್ತಿದೆ. ಈ ಜಿಂಕೆಯು ಬದುಕಿರುವಂತೆಯೇ ನಿನಗೆ ಸಿಕ್ಕಿದರೆ, ಇದೊಂದು ಅಚ್ಚರಿಯ ಮೃಗವೆನಿಸುತ್ತದೆ. ನಾವು ಅಯೋಧ್ಯೆಗೆ ಹಿಂದಿರುಗಿದ ಮೇಲೆ ನಮ್ಮ ಅಂತಃಪುರದಲ್ಲಿ ಇದೊಂದು ಭೂಷಣವಾಗಿರುತ್ತದೆ. ನನ್ನ ಮೈದುನರಿಗೂ ಅತ್ತೆಯರಿಗೂ ಇದನ್ನು ನೋಡಿ ಎಷ್ಟು ಆನಂದವಾಗುವುದೋ! ಇದು ಬದುಕಿರುವಂತೆಯೇ ನಿನಗೆ ಸಿಗದಿದ್ದರೆ, ಇದರ ಚರ್ಮವಾದರೂ ನನಗೆ ಸಿಗಬಹುದು. ಹುಲ್ಲಿನ ಚಾಪೆಯ ಮೇಲೆ ಈ ಚರ್ಮವನ್ನು ಹಾಸಿ, ಅದರಲ್ಲಿ ನಿನ್ನೊಡನೆ ಕುಳಿತುಕೊಳ್ಳಬೇಕೆಂದು ನನಗೆ ಆಸೆ!"

ಈ ಆಸೆಯೇ ಅವಳಿಗೆ ಘೋರವಿಪತ್ತನ್ನು ತಂದೊಡ್ಡಿತು. ಅವಳ ಕಷ್ಟಕ್ಕೆ ಜಿಂಕೆ ಕಾರಣವಾಯಿತು. ಆದರೆ ಅದು ಮಾಯಾಮೃಗ. ಮಾರೀಚನ ಕಪಟ ತಂತ್ರ ಜಿಂಕೆಯ ರೂಪದಲ್ಲಿ ಕಷ್ಟವನ್ನು ತಂದಿಕ್ಕಿತು. ಆದರೆ ಯಾವ ಕಪಟವನ್ನು ಅರಿಯದ ಒಂದು ಹರಿಣ ಶಿಶು ಭರತರಾಜನ ಶ್ರೇಯಸ್ಸಿಗೆ ಹೇಗೆ ವಿಘ್ನವಾಯಿತೆಂದು

ಜಡ ಭರತೋಪಖ್ಯಾನದಲ್ಲಿ ವಿವೃತವಾಗಿದೆ. ಈ ಉಪಾಖ್ಯಾನವು ವಿಷ್ಣು ಪುರಾಣದಲ್ಲಿಯೂ ಭಾಗವತದಲ್ಲಿಯೂ ಬಂದಿದೆ :

"ಭರತನೆಂಬ ಒಬ್ಬ ಮಹಾರಾಜನು ವಿರಕ್ತನಾಗಿ ಶಾಲಗ್ರಾಮವೆಂಬ ಸ್ಥಳದಲ್ಲಿ ನೆಲೆಸಿ ತಪಶ್ಚರ್ಯೆಯಲ್ಲಿದ್ದನು. ಒಂದು ದಿನ ಸ್ನಾನಾರ್ಥವಾಗಿ ನದಿಗೆ ಹೋಗಿ ಆಹ್ನಿಕಾದಿಗಳಲ್ಲಿ ತೊಡಗಿದ್ದಾಗ, ಗರ್ಭಿಣಿಯಾದ ಹರಿಣಿ ನೀರು ಕುಡಿಯಲು ನದಿಗೆ ಬಂದಿತು. ಅದು ನೀರನ್ನು ಕುಡಿಯುತ್ತಿರುವಾಗ ಒಂದು ಸಿಂಹದ ಗರ್ಜನೆ ಕೇಳಿಸಿತು. ಒಡನೆಯೇ ಆ ಹೆಣ್ಣು ಜಿಂಕೆ ಗಾಬರಿಯಿಂದ ಮುಂದಿನ ದಡಕ್ಕೆ ಕುಪ್ಪಳಿಸಿತು. ಥಕ್ಕನೆ ಒದಗಿದ ಭಯಶ್ರಮ ಗಳಿಂದ ಅದರ ಗರ್ಭವು ಸ್ರವಿಸಿ, ಜಿಂಕೆಯ ಮರಿ ಪ್ರವಾಹದಲ್ಲಿ ಬಿದ್ದಿತು. ಅದು ತೇಲಿ ಹೋಗುತ್ತಿರುವುದನ್ನು ಕಂಡು ಭರತನು ಮರುಕದಿಂದ ನೀರಿಗಿಳಿದು ಅದನ್ನು ಮೇಲಕ್ಕೆತ್ತಿ ತಂದನು. ಇತ್ತ ಅದರ ತಾಯಿ ಹೆಣ್ಣು ಜಿಂಕೆ ಸತ್ತುಹೋಯಿತು. ಭರತನು ಶೋಕಾಕ್ರಾಂತನಾದನು. ಅವನು ಮರುಕದಿಂದ ಆ ಮರಿಯನ್ನು ತನ್ನ ಆಶ್ರಮಕ್ಕೆ ತಂದು ಪ್ರೀತಿಯಿಂದ ಸಾಕತೊಡಗಿದನು. ಆ ಮರಿ ಅವನ ಪೋಷಣೆಯಲ್ಲಿ ಬೆಳೆದು ದೊಡ್ಡದಾಯಿತು. ಭರತನಿ ಗಂತೂ ಸದಾ ಅದರ ಚಿಂತೆಯೇ. ಒಂದು ಕ್ಷಣವೂ ಅದನ್ನು ಬಿಟ್ಟಿರುತ್ತಿರಲಿಲ್ಲ. ಅವನ ಮನಸ್ಸನ್ನು ಆ ಜಿಂಕೆ ಎಷ್ಟು ಸೆಳೆಯಿತೆಂದರೆ, ಭರತನ ಅನುಷ್ಠಾನ ತಪಸ್ಸುಗಳು ಕಡಮೆಯಾಗಿ ಯಾವಾಗಲೂ ಜಿಂಕೆಯ ಪೋಷಣೆಯಲ್ಲಿ ನಿರತ ನಾದನು. ಅದರ ಆಟಗಳನ್ನು ಕಂಡು ನಲಿಯುತ್ತಿದ್ದನು. ಒಂದು ಅರಗಳಿಗೆಯೂ ಬಳಿಯಲ್ಲಿ ಆ ಜಿಂಕೆಯಿರದಿದ್ದರೆ ಅವನಿಗೆ ಚಿಂತೆಯಾಗುತ್ತಿತ್ತು. ವೈರಾಗ್ಯದಿಂದ ರಾಜ್ಯವನ್ನೂ ಮಡದಿ ಮಕ್ಕಳನ್ನೂ ಬಿಟ್ಟು ಬಂದ ಭರತ ಜಿಂಕೆಯ ವ್ಯಾಮೋಹದಲ್ಲಿ ಸಿಕ್ಕಿದ. ಜಪತಪಗಳು ಹಿಂದೆ ಬಿದ್ದವು.

ಭರತನಿಗೆ ಮರಣ ಕಾಲವು ಸಮೀಪಿಸಿತು. ಬಳಿಯಲ್ಲಿ ಜಿಂಕೆಯು ಕಂಬನಿ ಸುರಿಸುತ್ತ ಅವನನ್ನೇ ನೋಡು ತ್ತಿತ್ತು. ಭರತನು ಅದನ್ನೇ ನೋಡುತ್ತ 'ಅಯ್ಯೋ, ನನ್ನ ಮರಣಾನಂತರ ಈ ಹರಿಣದ ಗತಿಯೇನು ? ಎಷ್ಟು ಪ್ರೀತಿಯಿಂದ ಸಾಕಿದೆ' ಎಂದು ಅದನ್ನೇ ನೋಡುತ್ತ ಅದನ್ನೇ ಧ್ಯಾನಿಸುತ್ತ ಪ್ರಾಣಬಿಟ್ಟನು. ಮುಂದೆ ಅವನಿಗೆ ಜಿಂಕೆಯ ಜನ್ಮವೇ ಪ್ರಾಪ್ತವಾಯಿತು. ಪೂರ್ವಜನ್ಮದ ಸ್ಮರಣೆ ಅವನಿಗಿತ್ತು. ಜಿಂಕೆಯ ಜನ್ಮವು ಕಳೆದ ಮೇಲೆ ಒಬ್ಬ ವಿಪ್ರನ ಮನೆಯಲ್ಲಿ ಜನಿಸಿದನು. ಪೂರ್ವಜನ್ಮಗಳ ಸ್ಥಿತಿಯನ್ನು ನೆನೆಸಿಕೊಂಡು, ಇನ್ನು ಯಾವ ವಸ್ತುವಿ ನಲ್ಲಿಯೂ ನಿರಾಸಂಗನಾಗಿರಬೇಕೆಂದು ಜಡನಂತೆ ನಟಿಸುತ್ತಿದ್ದನು. ಅವನೇ ಜಡಭರತ."

ಯಂ ಯಂ ಭಾವಂ ಸ್ಮರನ್ನಿತ್ಯಂ ತ್ಯಜತ್ಯಂತೇ ಕಲೇವರಮ್ ।
ತಂತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ ॥

ಎಂಬ ಭಗವದ್ಗೀತೆಯ ವಚನಕ್ಕೆ ಈ ಉಪಾಖ್ಯಾನ ಒಂದು ನಿದರ್ಶನ.

ಹೀಗೆ ಜಿಂಕೆಯ ಕಥೆ ಬಹು ವಿಧ. ಪಂಚತಂತ್ರಾದಿ ನೀತಿಕಥೆಗಳಲ್ಲಿ ಅದಕ್ಕೆ ಮುಖ್ಯವಾದ ಸ್ಥಾನವುಂಟು. ವೇದಾಂತಿಗಳ ತತ್ತ್ವ ಬೋಧನೆಗೆ ಅದು ದೃಷ್ಟಾಂತವಾಗುತ್ತದೆ. ಹರಿಣಗಳಿಗೆ ಸಂಗೀತವನ್ನು ಕೇಳಲು ಬಹಳ ಆಸಕ್ತಿಯಂತೆ. ನಾದ ಮಾಧುರ್ಯದಲ್ಲಿ ಅವು ಮೈಮರೆಯುತ್ತವೆ. ಈ ತಂತ್ರವನ್ನುಪ್ರಯೋಗಿಸಿ ಬೇಡರು ಅವು ಗಳನ್ನು ಕೊಲ್ಲುತ್ತಾರೆ. ಒಂದು ಶ್ರವಣೇಂದ್ರಿಯದ ಚಾಪಲ್ಯದಿಂದ ಇಷ್ಟು ಅನರ್ಥ. ಎಲೆ ಮಾನವ, ಪಂಚೇಂದ್ರಿಯ ಗಳಿಗೂ ವಶನಾದ ನಿನಗೆ ಎಷ್ಟು ಅನರ್ಥಗಳು ಕಾದಿರಬೇಕು !

ಕವಿಗಳಿಗಂತೂ ಹರಿಣಗಳು ಒದಗಿಸುವ ಕಾವ್ಯ ಸಾಮಗ್ರಿ ವಿಪುಲ. ಹರಿಣಾಕ್ಷಿ, ಏಣಾಕ್ಷಿ, ಮೃಗ ನೇತ್ರೆ, ಕುರಂಗನಯನೆಯರಿಲ್ಲದ ಕಾವ್ಯ ಯಾವುದು ? ಹರಿಣಗಳನ್ನು ನೆವಮಾಡಿ ಹೇಳುವ ಅನ್ಯೋಕ್ತಿಗಳು ಯಥೇಷ್ಟ.

ತೃಣಮುಖಮಪಿ ನ ಖಲು ತ್ವಾಂ
ತ್ಯಜಂತಿ ಹೇ ಹರಿಣ ವೈರಿಣಃ ಶಬರಾಃ ।

ಯಶಸ್ಯೈವ ಜೀವತಮಿದಂ
ತ್ಯಜ ಯೋಜಿತ ಶೃಂಗಸಂಗ್ರಾಮಃ ॥

"ಎಲೈ ಹರಿಣ, ನೀನು ಬಾಯಲ್ಲಿ ಹುಲ್ಲುಕಚ್ಚಿದ್ದರೂ (ಶರಣಾದರೂ) ವೈರಿಗಳಾದ ಈ ಕಿರಾತರೂ ನಿನ್ನನ್ನು ಉಳಿಸುವುದಿಲ್ಲ. ಆದ್ದರಿಂದ ಕೊಂಬುಗಳನ್ನು ಚಾಚಿ ಯುದ್ಧವನ್ನು ಹೂಡು. ಯಶಸ್ಸನ್ನು ಗಳಿಸಿ ಪ್ರಾಣ ಬಿಡು !"

ಸಾಯುವುದು ಸತ್ಯವಾಗಿರುವಾಗ, ಎಲೆ ಮಾನವ, ಯಾವುದಾದರೊಂದು ಒಳ್ಳೆಯ ಕಾರ್ಯವನ್ನು ಮಾಡಿ ಕೀರ್ತಿಯನ್ನು ಗಳಿಸು ಎಂದು ಸೂಚ್ಯಾರ್ಥ. ಇನ್ನೊಂದು ಉದಾಹರಣೆ :

ಯದ್ವಕ್ತ್ರಂ ಮುಹುರೀಕ್ಷಸೇ ನ ಧನಿನಾಂ ಬ್ರೂಷೇನ ಚಾಟೂನ್ ಮೃಷಾ
ನೈಷಾಂ ಗರ್ವಗಿರಃ ಶೃಣೋಷಿನ ಚ ತಾನ್ ಪ್ರತ್ಯಾಶಯಾ ಧಾವಸಿ ।
ಕಾಲೇ ಬಾಲತೃಣಾನಿ ಖಾದಸಿ ಪರಂ ನಿದ್ರಾಸಿ ನಿದ್ರಾಗಮೇ
ತನ್ಮೇ ಬ್ರೂಹಿ ಕುರಂಗ ಕುತ್ರ ಭವತಾ ಕಿನ್ನಾಮ ತಪ್ತಂ ತಪಃ ॥

"ಎಲೈ ಕುರಂಗವೆ, ನೀನು ಧನಿಕರ ಮುಖವನ್ನು ಮತ್ತೆ ಮತ್ತೆ ನೋಡಬೇಕಾಗಿಲ್ಲ. ಅವರ ಸಂತೋಷಕ್ಕಾಗಿ ಸುಳ್ಳನ್ನು ಹೇಳಬೇಕಾಗಿಲ್ಲ. ಅವರ ಸೊಕ್ಕಿನ ಮಾತುಗಳನ್ನೂ ಕೇಳಬೇಕಾಗಿಲ್ಲ. ಏನಾದರೂ ದೊರಕೀತೆಂಬ ಆಸೆಯಿಂದ ಅವರ ಹಿಂದೆ ಓಡುವುದೂ ಇಲ್ಲ. ಹಸಿವಾದಾಗ ಎಳೆಯ ಹುಲ್ಲನ್ನು ತಿನ್ನುವೆ. ನಿದ್ರೆ ಬಂದಾಗ ಮಲಗುವೆ. ಓ ಜಿಂಕೆಯೆ, ಎಲ್ಲಿ ಹೋಗಿ ಯಾವ ತಪಸ್ಸನ್ನು ಮಾಡಿದ್ದೀಯೆ? (ಯಾವುದರ ಪುಣ್ಯ ಫಲ ಇದು ?) ನನಗೂ ಸ್ವಲ್ಪ ಹೇಳು !"

ಮನುಷ್ಯ ಮೊದಲು ಸ್ಥೂಲದಿಂದಾಗಿರುವನು. ಎರಡನೆಯದಾಗಿ ಮನಸ್ಸು, ಬುದ್ಧಿ, ಅಹಂಕಾರ–ಇವುಗಳಿಂದ ಕೂಡಿದ ದೇಹವಾಗಿರುವನು. ಅದರ ಹಿಂದೆ ನಿಜವಾದ ಆತ್ಮವಿರುವುದು. ಸ್ಥೂಲದೇಹದ ಗುಣಶಕ್ತಿಗಳೆಲ್ಲಾ ಮನಸ್ಸಿನಿಂದ ಬಂದಿವೆ. ಈ ಸೂಕ್ಷ್ಮದೇಹವೆಂಬ ಮನಸ್ಸು ತನ್ನ ಹಿಂದೆ ಇರುವ ಆತ್ಮನಿಂದ ತನ್ನ ಶಕ್ತಿಗಳನ್ನೆಲ್ಲಾ ಪಡೆಯುತ್ತದೆ.

ಎನ್. ಎಸ್. ಚಿದಂಬರರಾವ್

ಕನ್ನಡ ಕಾವ್ಯ ಮತ್ತು ಸಮಾಜ

ಬಾಳಿಗೆ ಹಿನ್ನೆಲೆಯಾಗಿರುವ ಅಮೂರ್ತ ಮೌಲ್ಯಗಳ ಕಲಾತ್ಮಕ ಹಾಗೂ ಸಾಂಕೇತಿಕ ಅಭಿವ್ಯಕ್ತಿಯೇ ಕಾವ್ಯ–ಎಂಬುವನ್ನು ಒಪ್ಪಿಕೊಂಡರೆ ಹಲವಾರು ಪ್ರಶ್ನೆಗಳು ಏಳುತ್ತವೆ. ಬಾಳಿಗೆ ಹಿನ್ನೆಲೆಯಾಗಿ ಕೆಲವು ಅಮೂರ್ತ ಸತ್ಯಗಳಿವೆಯೇ ? ಅಥವಾ ಬಾಳಿನ ಪ್ರತಿಘಟನೆಯೂ ಆಕಸ್ಮಿಕವೇ ? ಹಾಗೆ ಒಂದು ಪಕ್ಷ ಆ ಮೌಲ್ಯಗಳಿದ್ದಲ್ಲಿ, ಅವುಗಳ ಅಭಿವ್ಯಕ್ತಿ ಅನಿವಾರ್ಯವೇ ? ಅಭಿವ್ಯಕ್ತಗೊಳಿಸುವಲ್ಲಿ ಆದಕ್ಕೆ ಕಲಾತ್ಮಕ ಅಂಶದ ಅಗತ್ಯವಿದೆಯೆ ? ಏಕೆ ?–ಹೀಗೆ ಈ ಪ್ರಶ್ನೆಗಳು ಪುಂಖಾನುಪುಂಖವಾಗಿ ಏಳುತ್ತವೆ. ಈ ಪ್ರಶ್ನೆಗಳಿಗೆ ಮೊದಲು ಉತ್ತರವನ್ನು ಕಂಡುಕೊಳ್ಳಬೇಕು. ಈ ಪ್ರಶ್ನೆಗಳೆಲ್ಲವೂ ನೇರವಾಗಿ ಮಾನವನ ಮೂಲಸ್ವಭಾವದ ಕಡೆಗೆ ನಮ್ಮ ಗಮನ ಸೆಳೆಯುತ್ತವೆ.

ಮಾನವನ ಭಾವನೆ ಹಾಗೂ ಬುದ್ಧಿಗಳಲ್ಲಿರುವ ವಿಶೇಷತೆಯೇನೆಂದರೆ, ತಾನು ಕಂಡು ಅನುಭವಿಸಿದುದೆಲ್ಲಕ್ಕೂ ಒಂದು ಸಾಧಾರಣ ರೂಪಕೊಡುವುದು. ತಾನು ಪಡೆಯುತ್ತಿರುವ ಅನುಭವಗಳಲ್ಲಿನ ಸಾಮ್ಯ ಇತರರ ಅನುಭವಗಳೊಂದಿಗೆ ಹೆಚ್ಚಾದಾಗ ಆ ಅನುಭವಗಳಿಗೆ ಒಂದು ಸಾಧಾರಣ ರೂಪ ಸಿಕ್ಕುತ್ತದೆ. ಈ ಸಾಧಾರಣೀಕರಣ ಕಾವ್ಯದ ಅಭಿವ್ಯಕ್ತಿಗೆ ಅತ್ಯಗತ್ಯವಾದ ಬಂಡವಾಳ. ಎರಡನೆಯದಾಗಿ, ಮಾನವನಲ್ಲಿರುವ ಸೌಂದರ್ಯಪ್ರಜ್ಞೆ–ತಾನು ಕಂಡು ಕೇಳುವ ಎಲ್ಲದರಲ್ಲೂ ಅವನು ಚೆಲುವನ್ನು ಕಾಣಬಲ್ಲ. ಈ ಚೆಲುವು ತೀರಾ ವೈಯುಕ್ತಿಕ ಮಟ್ಟದಲ್ಲಿ ಸಾಪೇಕ್ಷವಾದರೂ, ಕೆಲವಾರು ವಿಶಿಷ್ಟ ರೂಪಗಳಲ್ಲಿ ಸಾಧಾರಣೀಕರಿಸಲ್ಪಡುತ್ತದೆ. ಕಲೆಯ ನೆರವು ಕಾವ್ಯಕ್ಕೆ ಬೇಕಾಗುವುದು ಇಲ್ಲಿಯೇ.

ಅಂದರೆ, ಕವಿಯೊಬ್ಬನ ಕೃತಿ ಸಾಧಾರಣೀಕರಿಸಲ್ಪಟ್ಟ ಮೌಲ್ಯವೊಂದರ ಸುಂದರ ಸಾಂಕೇತಿಕ ವಸ್ತು–ಎಂಬುದು ನಿರ್ವಿವಾದವಾದರೂ, ಅದನ್ನು ಅವನು ಸೃಷ್ಟಿಸಿದ ಅಗತ್ಯವೇನು ?–ಎನ್ನುವ ಪ್ರಶ್ನೆ ಹಾಗೇ ಉಳಿಯುತ್ತದೆ. ಈ ಪ್ರಶ್ನೆಗೆ ಅತ್ಯಂತ ಸರಳ ಹಾಗೂ ಸಹಜವಾದ ಉತ್ತರ–"ತನ್ನ ಕೃತಿಯನ್ನು ಇತರರು ಓದಲೆಂದು ಕವಿ ಬರೆಯುತ್ತಾನೆ" ಅಂದಮೇಲೆ, ಕವಿಯು ತನ್ನಷ್ಟಕ್ಕೆ ತಾನು ಬರೆದುಕೊಂಡು ಖುಷಿಪಡುತ್ತಾನೆ–ಎನ್ನುವ ಮಾತು ತೀರಾ ಬೂಟಾಟಿಕೆಯದಾಗುತ್ತದೆ. ಬರೆದುಕೊಂಡರೆ ಬರೆದುಕೊಳ್ಳಲಿ, ಬೇಡವೆನ್ನುವವರಾರು ?–ಬರೆದುದನ್ನು ಅವನು ಪ್ರಕಟಿಸುವ ಉದ್ದೇಶವಂತೂ ಮೇಲಿನ ಮಾತನ್ನು ಸಮರ್ಥಿಸುತ್ತದೆ. ಇತರರು ತನ್ನ ಕೃತಿಯನ್ನು ಓದಬೇಕೆಂಬುದಷ್ಟೇ ಅವನ ಅಭಿಲಾಷೆಯಲ್ಲ ; ತನ್ನ ಕೃತಿಯನ್ನು ಎಲ್ಲರೂ ಹಣತೆತ್ತು, ಕೊಂಡು ಓದಲಿ–ಎಂಬುದು ಅವನ ಅಭಿಲಾಷೆ. ಅಂದರೆ, ಕವಿಯೊಬ್ಬ ತನ್ನ ಕೃತಿಯನ್ನು ಪ್ರಕಟಿಸಿಕೊಳ್ಳುವುದು ಕೇವಲ ಅವನ ಮಟ್ಟಿಗೆ ಸೀಮಿತವಾದ ವಿಚಾರವಲ್ಲ. ಅದೊಂದು ಸಾಮಾಜಿಕ ಹೊಣೆಗಾರಿಕೆಯಾಗುತ್ತದೆ. ಆ ಮಟ್ಟಿಗೆ ಪ್ರತಿಯೊಬ್ಬ ಬರಹಗಾರನೂ ಸಮಾಜಕ್ಕೆ ಉತ್ತರದಾಯಿಯಾಗುತ್ತಾನೆ.

ಆದರೆ ವಸ್ತುಸ್ಥಿತಿಯನ್ನು ಪರಿಶೀಲಿಸಿದರೆ–ಹೀಗೆ ಪ್ರಕಟವಾದ ಕೃತಿಗಳೆಲ್ಲವೂ ಜನಾದರಣೆ ಪಡೆಯಲಾರವು–ಎಂಬ ಅಂಶ ಸ್ಪಷ್ಟವಾಗುತ್ತದೆ. ಕೆಲವು ಕೃತಿಗಳು ಜನಪ್ರಿಯವಾಗುತ್ತವೆ; ಕೆಲವು ಅವು ಪ್ರಕಟವಾಗಲೇ ಇಲ್ಲವೇನೋ ಎನ್ನುವಂತೆ ಮೂಲೆಗುಂಪಾಗುತ್ತವೆ. ಇದು ಏಕೆ ಹೀಗೆ? ಇದಕ್ಕೆ ಏನೋ ಕಾರಣವಿರಲೇಬೇಕು. ಎಲ್ಲೋ ತಪ್ಪಿರಲೇಬೇಕು. ಕೆಲವರು ಕವಿಗಳು ತಮ್ಮ ಕಾವ್ಯ ಜನಪ್ರಿಯವಾಗದಿದ್ದಾಗ ಜನತೆಯನ್ನೇ ದೂಷಿಸುತ್ತಾರೆ. "ಜನಕ್ಕೆ ಕಾವ್ಯವನ್ನು ಅರ್ಥಮಾಡಿಕೊಳ್ಳುವ ಶಕ್ತಿಯೇ ಇಲ್ಲ" ಎಂಬ ಮೂದಲಿಕೆಯ ಮಾತು ಕೇಳಿಬರುತ್ತದೆ. ಇದು ತೀರ ಅಸಮರ್ಪಕ ವಿಚಾರ–ನಮ್ಮ ಬಡಜನತೆ ಒಪ್ಪೊತ್ತಿನ ಊಟವನ್ನು ಬಿಟ್ಟು ಉಳಿಸಿದ ಹಣವನ್ನು ಒಂದು ಪದ್ಯದ ಪುಸ್ತಕಕ್ಕೆ ತೆರಬೇಕಾದರೆ, ಆ ಪುಸ್ತಕದ ಯೋಗ್ಯತೆ ಹಾಗಿರಬೇಡವೆ ಮತ್ತೆ? ಕೆಲವರು ಈ ಜನಪ್ರಿಯತೆಯನ್ನು ಬಯಸುವುದಿಲ್ಲವಂತೆ. ಜನಪ್ರಿಯನಾದ ಕವಿಯ ಬಗ್ಗೆ ಹಗುರವಾಗಿ ಮಾತನಾಡುತ್ತಾರೆ–ಅಲ್ಲದೆ,"ನೋಡಿ, ನಮ್ಮ ಜನರಲ್ಲಿ ದಡ್ಡರೇ ಜಾಸ್ತಿ; ಹೀಗಾಗಿ ನನ್ನ ಕಾವ್ಯಾನ ಬಹಳ ಜನ ಮೆಚ್ಚಿದರೆ ನನಗೆ ಗಾಬರಿಯಾಗುತ್ತೆ"–ಎಂದು ಬೇರೆ ಹೇಳುತ್ತಾರೆ. ಅಷ್ಟೇ ಅಲ್ಲ–"ನೋಡ್ರೀ....ಕವಿ ಬೆಳೀಬೇಕಾದ್ರೆ ಜನತೆಯ ಅಭಿಪ್ರಾಯಕ್ಕೆ ಬೆಲೆ ಕೊಡಲೇಬಾರ್ದು....ಜನಕ್ಕೆ ಬೇಕಾಗಿಯೋ ಕಾವ್ಯ ಬರೀತಾ ಹೋದ್ರೆ, ಕವಿ ಸಾಯುತ್ತಾನೆ"–ಹೀಗೆಲ್ಲ ಹೇಳುತ್ತಾರೆ. ಜನತೆಗೇ ಬೇಡವಾದ ಕವಿ ಬೆಳೆದರೇನು ಬಿಟ್ಟರೇನು? ಸರ್ವಜ್ಞ, ಬಸವಣ್ಣನವರು, ಕನಕದಾಸರು,ಪುರಂದರದಾಸರು ಮುಂತಾದ ಹಿಂದಿನ ಕವಿಗಳು ಜನಕ್ಕಾಗಿಯೇ ತಮ್ಮ ಕೃತಿಗಳನ್ನು ರಚಿಸಿದುದರಿಂದಲೇ ಆ ಕೃತಿಗಳಿನ್ನೂ ಜೀವಂತವಾಗಿವೆ. ಹೀಗೆ ಜನತೆಯನ್ನು ದೂರವಿಟ್ಟು ಕಾವ್ಯರಚಿಸುವ ಕೆಟ್ಟ ಚಟವೂ ಸಹ ಒಂದು ವಿಧವಾದ ಶ್ರೀಮಂತಿಕೆಯ ದಬ್ಬಾಳಿಕೆ. ವ್ಯಾರೆನ್ ಮತ್ತು ವ್ಯಾಲೆಕ್‌ರು ಬರೆದಿರುವ ಪ್ರಸಿದ್ಧ ಗ್ರಂಥ "ದಿ ಥಿಯರಿ ಆಫ್ ಲಿಟರೇಚರ್"ನಲ್ಲಿ ಹೀಗೆ ಹೇಳಲಾಗಿದೆ–'ಸಾಹಿತ್ಯ ಕೃತಿ' ಎಂಬುದು 'ಸಾಮಾಜಿಕ ಸಂದರ್ಭ'ದಲ್ಲಿ ನೆರವೇರುವ ಕಾರ್ಯ (social context).

ಹೀಗೆ, ಜನತೆಯನ್ನು ದೂರವಿಟ್ಟು ಕಾವ್ಯರಚಿಸುವ ಯತ್ನದಲ್ಲಿ ಇತ್ತೀಚೆಗೆ ಬರುತ್ತಿರುವ 'ನವ್ಯಕಾವ್ಯ' ಪ್ರಥಮಹೆಜ್ಜೆ ಇಟ್ಟಿದೆ. ಇವರು ಹೇಳುವುದೇನೆಂದರೆ ಪುರಾತನ, ರಮ್ಯ ಹಾಗೂ ನವೋದಯ ಕಾವ್ಯಗಳಲ್ಲಿದ್ದ ಭಾಷಾಜಟಿಲತೆಯನ್ನು ದೂರಮಾಡಲಾಗಿದೆ. ಆದರೆ, ಈ ಕಾವ್ಯ ಬೇರೊಂದು ದೃಷ್ಟಿಯಿಂದ ಭಾಷೆಗೂ ಮೀರಿದ ಜಟಿಲತೆಯ ಬೇಲಿಯನ್ನು ತನ್ನ ಸುತ್ತ ಹೆಣೆದುಕೊಂಡು ಜನ ಸಾಮಾನ್ಯರನ್ನು ದೂರವಿಟ್ಟಿದೆ. ಜನಸಾಮಾನ್ಯರ ಬಗ್ಗೆಯೇ ಬರೆಯಹೊರಟ ಇವರು, ಅವರುಗಳಿಗೆ ತಮ್ಮ ಕಾವ್ಯ ಎಂದೆಂದಿಗೂ ತಲುಪಲಾರದಷ್ಟು ಜಟಿಲವಾದುದನ್ನು ತಯಾರಿಸಿ ಇಡುತ್ತಾರೆ. ಇಂತಹ ಕೆಲವರ ಗುಂಪು ಬಹುಬೇಗ ಸೃಷ್ಟಿಯಾಗಿ, ಅಷ್ಟು ಜನ ಮಾತ್ರ ತಮ್ಮ ತಮ್ಮ ಬರಹಗಳನ್ನು ಓದಿಕೊಂಡು, ಒಬ್ಬರನ್ನೊಬ್ಬರು ಹೊಗಳಿಕೊಳ್ಳುತ್ತಾ ಸುಮ್ಮನಾಗುತ್ತಾರೆ. ಇವರು ಅಚ್ಚು ಹಾಕಿಸಿದ ಪುಸ್ತಕದ ಬೆಲೆಯೂ ಸಾಮಾನ್ಯರಿಗೆಟುಕುವಂಥದ್ದಲ್ಲವಾದರೂ, ಇವರ ಗುಂಪಿನ ಎಲ್ಲ ಸದಸ್ಯರೂ ಅದನ್ನು ಕೊಂಡುಕೊಳ್ಳುವುದರಿಂದ (ಏಕೆಂದರೆ, ನಾಳೆ ಅವರ ಗ್ರಂಥವನ್ನು ಇವರೂ ಕೊಳ್ಳಬೇಡವೆ?) ಇವರ ಅಸಲಿಗೆ ಮೋಸವಿಲ್ಲ. ಅವರ ಕಾವ್ಯದ ಜಟಿಲತೆಯಾದರೂ ಎಂತಹುದು? ತೀರ ವೈಯುಕ್ತಿಕ ಅನಿಸಿಕೆಗಳಿಗೆ ಕಾವ್ಯದ ಹೊದಿಕೆ ಹೊದಿಸಿದರೆ, ಅದು ಜಟಿಲವಾಗಿ ಕಾಣದೇ ಏನು ಮಾಡೀತು? ಸಾಧಾರಣೀಕರಿಸದ ಅನಿಸಿಕೆಗಳು, ಸಿನಿಕತನದ ಟೀಕೆಗಳು ಕಾವ್ಯವಾಗಲಾರವು. (ನವ್ಯರೆನ್ನಿಸಿಕೊಂಡವರೆಲ್ಲರಿಗೂ ಈ ಮಾತು ಅನ್ವಯಿಸುವುದಿಲ್ಲ.)

ಕಾವ್ಯ ಜನತೆಯನ್ನು ತಲುಪುವುದು ನಿಧಾನವೇ. ಏಕೆಂದರೆ, ಜನತೆಯಲ್ಲಿರುವ ಕಲಾಪ್ರಜ್ಞೆಯನ್ನು ಕಾವ್ಯ ಎಚ್ಚರಿಸಬೇಕು. ಜನತೆಯ ಕಲಾಪ್ರಜ್ಞೆಯ ಮಟ್ಟವೂ ಸಹ ಭಿನ್ನಭಿನ್ನ ಸ್ತರಗಳಲ್ಲಿರುತ್ತದೆ. ಈ ಭಿನ್ನ ಸ್ತರಗಳಲ್ಲಿ ಏಕರೂಪತೆಯನ್ನು ಸಾಧಿಸಿ, ಜನತೆಯನ್ನು ಕಾವ್ಯದ ಕಡೆಗೆ ಆಕರ್ಷಿಸಲು,ಒಂದು ಸಮುದಾಯ ಮಾಧ್ಯಮದ ಅಗತ್ಯವಿದ್ದೇ ಇದೆ. ಈ ಸಮುದಾಯ ಮಾಧ್ಯಮವೇ'ಸಂಗೀತ'ಅಥವಾ ಗೇಯತೆ—ಸಂಗೀತದ ನಾದ

ಮಾಧುರ್ಯ ಸಂವೇದನಾತ್ಮಕವಾದುದರಿಂದ, ಅದನ್ನು ಗುರುತಿಸಲು ಜನತೆಗೆ ಹೆಚ್ಚಿನ ಕಲಾಪ್ರಜ್ಞೆಯ ಆವಶ್ಯಕತೆಯಿಲ್ಲ. ನಾದದ ಗುಂಗಿಗೆ ಸೋತು, ಜನತೆ ಕಾವ್ಯದ ಕಡೆ ಗಮನ ನೀಡುತ್ತದೆ. ಸಿನಿಮಾ ಹಾಡಿನ ಪುಸ್ತಕಗಳು ಎಷ್ಟು ಬೇಗ ಖರ್ಚಾಗುತ್ತವೆ-ಎಂಬುದನ್ನು ಗಮನಿಸಿದರೆ, ಈ ಅಂಶ ಸ್ಪಷ್ಟವಾಗುತ್ತದೆ. ಬಹುಪಾಲು ಸಿನಿಮಾ ಹಾಡುಗಳಲ್ಲಿ ಯಾವ ಸಾಹಿತ್ಯ ಮೌಲ್ಯವಿಲ್ಲದಿದ್ದರೂ, ಕೇವಲ ನಾದ ಮಾಧುರ್ಯಕ್ಕಾಗಿಯೇ ಅವು ಮನೆಮನೆಯನ್ನು ತಲುಪುತ್ತವೆ. ಅಷ್ಟೇ ಬೇಗ ಅವು ಹಳತೂ ಆಗುತ್ತವೆ. ಈ ಹಳತಾಗುವ ಕಾರಣ ಆ ಗೀತೆಗಳ ಧಾಟಿ ಬೇಸರ ಬರಿಸುತ್ತದೆ ಮತ್ತು ಆ ಗೀತೆಗಳಿಗೇ ಸ್ವತಃ ಯಾವ ಸಾಹಿತ್ಯಶಕ್ತಿಯೂ ಇಲ್ಲ. ಸಾಹಿತ್ಯಶಕ್ತಿಯುಳ್ಳ ಕೃತಿಯೊಂದು ಹೀಗೇ ಮಾಸಿಹೋಗುತ್ತದೆಯೇ ? ಸರ್ವಜ್ಞ ಪದಗಳು, ಜಾನಪದಗೀತೆಗಳು, ದಾಸರಪದಗಳು, ವಚನಸಾಹಿತ್ಯ –ಮುಂತಾದ ಪದ್ಯಭಾಗಗಳೆಲ್ಲವೂ ಜನತೆಯ ಸ್ಮೃತಿಯಿಂದ ಮಾಸದೇ ಹಾಗೇ ಉಳಿದಿರುವ ಕಾರಣ, ಪ್ರಧಾನವಾಗಿ 'ಸಂಗೀತ'. ಸಂಗೀತದ ಮಾಧ್ಯಮವಿಲ್ಲದೆ ಕಾವ್ಯ ಎಂದೆಂದಿಗೂ ಜನತೆಯನ್ನು ತಲುಪಲಾರದು-ಹಾಗೂ ಜನತೆಯನ್ನು ತಲುಪದ ಕಾವ್ಯ, ಕಾವ್ಯವಾಗಿ ಏಕಿರಬೇಕು ?

ಇಂದಿನ ನವ್ಯಕಾವ್ಯದ ಘೋಷಣೆಗಳಲ್ಲಿ ಇದೂ ಒಂದು – "ಕಾವ್ಯವನ್ನು ಸಂಗೀತದ ಸಂಕೋಲೆಯಿಂದ ಮುಕ್ತಗೊಳಿಸುತ್ತೇವೆ"—ಆದರೆ ಅದನ್ನು ಏಕೆ ಮುಕ್ತಗೊಳಿಸಬೇಕೆಂಬುದೇ ಅರ್ಥವಾಗುವುದಿಲ್ಲ. ಅದು ಒಂದು ಇಡೀ ಸಮುದಾಯದ ಬಯಕೆಯಾದರೆ ಅದು ಸರಿಯಾಗಬಹುದು. ಯಾರೋ ಇಬ್ಬರು ಮಾತನಾಡಿಕೊಂಡು, ಸಂಗೀತದಿಂದ ಮುಕ್ತಿಯನ್ನು ದಯಪಾಲಿಸುತ್ತೇವೆಂದರೆ ಅದು ಹಾಸ್ಯಾಸ್ಪದ. ಹಲವಾರು ಜನ ಕನ್ನಡಿಗರಿಗೆ ಇನ್ನೂ ಈ ಘೋಷಣೆಯೇ ತಿಳಿದಿಲ್ಲವಲ್ಲ ! ಹಾಗೆಯೇ ನವ್ಯಕಾವ್ಯ ಹುಟ್ಟಿದೆ–ಎಂಬ ವಿಚಾರವೂ ಬಹುಜನಕ್ಕೆ ತಿಳಿದಿಲ್ಲ. ಇದೊಂದು ಹೆಗ್ಗಳಿಕೆ ಎಂದು ನವ್ಯರು ಭಾವಿಸುವುದಾದರೆ ಅದು ಶೋಚನೀಯ. ಆರ್ಥಿಕ ಅಸಮತೆಯನ್ನು ತೊಡೆದುಹಾಕುವಂತೆಯೇ ಈ ಸಾಹಿತ್ಯಕ ಅಸಮತೆಯನ್ನೂ ತೊಡೆದುಹಾಕಬೇಕಾದುದು ಪ್ರತಿಯೊಬ್ಬ ಬರೆಹಗಾರನ ಕರ್ತವ್ಯ. ಜನತೆಯ ಅಜ್ಞಾನವನ್ನು ಕಂಡು ಕವಿ ಮರುಗಬೇಕೇ ವಿನಾ ಅಪಹಾಸ್ಯಮಾಡಬಾರದು.

ಸಾಮಾನ್ಯವಾಗಿ ಕಾವ್ಯ ಸೃಷ್ಟಿಯಾಗುವುದು ಕವಿಯ ಪರಿಪಕ್ವ ಅನುಭವದಿಂದ. ಈ ಅನುಭವ ಅವನು ಬಾಳುತ್ತಿರುವ ಪರಿಸರದಿಂದ ಒದಗಿಬರುತ್ತದೆ. ತನ್ನ ಪರಿಸರವನ್ನು ಚೆನ್ನಾಗಿ ಅರ್ಥೈಸಿಕೊಂಡ ಕವಿಹೃದಯ, ಸಹಜವಾಗಿಯೇ ರಸಸ್ಯಂದಿಯಾಗಿ ಕಾವ್ಯವನ್ನು ಸೃಷ್ಟಿಸತೊಡಗುತ್ತದೆ. ಕಾವ್ಯವನ್ನು ಓದುವ ಅಥವಾ ಅಭ್ಯಸಿಸುವ ಉದ್ದೇಶ ಆನಂದವನ್ನು ಪಡೆಯುವುದು ಎಂದಾದರೂ, ಈ ಆನಂದ ವಿಕಾಸದತ್ತ ತಿರುಗುತ್ತದೆ. ಹಾಗೆ ವಿಕಾಸಗೊಂಡ ಚಿಂತನೆಯೇ ಕಾವ್ಯದ ಧ್ಯೇಯವಸ್ತು. ವಿಜ್ಞಾನವು ಮಾನವನಿಗೆ ನೀಡಬಹುದಾದ ತಾರ್ಕಿಕಚಿಂತನೆ ಅಪರಿಪೂರ್ಣವೆಂಬುದು ನಿರ್ವಿವಾದ. ತಾರ್ಕಿಕಚಿಂತನೆ ಯಾಂತ್ರಿಕ ಜೀವನದ ಅಡಿಪಾಯವಾಗುತ್ತದೆ. ಮಾನವನನ್ನು ಮಾನವ ಅರ್ಥಮಾಡಿಕೊಳ್ಳಲು ಈ ವಿಧದ ಚಿಂತನೆ ಅಷ್ಟು ಸಹಕಾರಿಯಾಗಲಾರದು. ಮಾನವನಿಗೆ ಮೂಲಭೂತವಾಗಿರಬೇಕಾದುದು ಆ ಸಹೃದಯತೆ. ತರ್ಕವನ್ನು ಅತಿಯಾಗಿ ಬಳಸುವುದರಿಂದ, ಸಹೃದಯತೆ ಲುಪ್ತವಾಗುತ್ತದೆ. ಹೃದಯ ಕೋಮಲಗೊಳ್ಳಲು ಕೆಲಮಟ್ಟಿನ ಭಾವನಾಬಲ ತೀರ ಅಗತ್ಯ. ಈ ಭಾವಬಲ ವೃದ್ಧಿಹೊಂದಲು ರಸೋತ್ಪತ್ತಿಯಾಗಬೇಕು. ಈ ರಸ ಉದಯಿಸುವುದು ಕಾವ್ಯದಿಂದ. ಆನಂದವೇ ಕಾವ್ಯದ ಅಂತಿಮ ಪ್ರಯೋಜನ—ಎನ್ನುವಲ್ಲಿ ನಾವು ಈ ವಿವಿಧ ರಸಗಳನ್ನು ನಿರ್ದೇಶಿಸುತ್ತೇವೆ. ರಸ ಯಾವುದೇ ಇರಲಿ—ಅದು ಆನಂದದಾಯಕ. ಪ್ರಿಯವ್ಯಕ್ತಿಯೊಬ್ಬನ ಅಗಲಿಕೆಯಿಂದ ಮತ್ತೊಬ್ಬ ಹುಯ್ಯಲಿಟ್ಟು ಅಳುವುದರಲ್ಲಿಯೇ ಏನೋ ಆನಂದಾನುಭವವಿದೆ. ಈ ರಸಾನಂದಾನುಭೂತಿಯೇ ತುಂಬುಬಾಳಿನ ಗುರಿ.

ಈ ದೃಷ್ಟಿಯಿಂದ ನೋಡುವುದಾದರೆ, ಮಾನವನ ಬೌದ್ಧಿಕ ಹಾಗೂ ಮಾನಸಿಕ ಸ್ತರಗಳಲ್ಲಿ ವಿಶಿಷ್ಟ ಹೊಂದಾಣಿಕೆಯಾಗಲು ಕಾವ್ಯಬೇಕು. ಹೊಲದಲ್ಲಿ ದುಡಿಯುವ ರೈತನೂ ಸಹ, ತನ್ನ ಪ್ರೀತಿಯ ಮಗಳು ಹೆರಿಗೆಗಾಗಿ ತೌರಿಗೆ ಬಂದಾಗ ಸಂತೋಷಪಡುತ್ತಾನೆ—ಆಕೆ ತಾನು ಹೆತ್ತ ಶಿಶುವನ್ನು ಕಳೆದುಕೊಂಡಾಗ ಅವನೂ ಅಳು

ತ್ತಾನೆ. ಈ ಬಾಳಿನ ಪ್ರತಿ ಘಟನೆಯೂ ಅವನ ಭಾಗಕ್ಕೆ ಕಾವ್ಯಮಯವಾಗಿ, ರಸೋತ್ಪತ್ತಿಯನ್ನು ಉಂಟುಮಾಡುತ್ತದೆ. ಅದು ಎಷ್ಟರಮಟ್ಟಿಗೆ ಕಾವ್ಯವಾಗಿದೆ ಎಂಬ ಪ್ರಜ್ಞೆ ಅವನಲ್ಲಿ ಮೂಡದಿರಬಹುದು. ಆದರೂ ತನ್ನಷ್ಟಕ್ಕೆ ತಾನೇ ಆ ಘಟನೆಗಳು ಅವನ ಹೃದಯಕ್ಕೆ ರಸಭಾವಗಳ ಸಾಣೆ ಹಿಡಿಯುತ್ತವೆ. ಕಾವ್ಯ ಮಾಡುವುದೂ ಇದೇ ಕೆಲಸವನ್ನೇ—ಆದರೂ ಅದು ಹೆಚ್ಚು ಕಲಾತ್ಮಕವಾಗಿ ಈ ಕಾರ್ಯವನ್ನು ನೆರವೇರಿಸುತ್ತದೆ.

ಅಂದರೆ, ಕಾವ್ಯವನ್ನು ಅನುಭವಿಸಲು ಪಂಡಿತೋತ್ತಮನೇ ಆಗಬೇಕೆಂದು ನಾವು ಬಯಸುವುದಾದರೂ ಏಕೆ ? ನಾವು ಅನೇಕ ಬಗೆಯ ಊಹಾಪೋಹಗಳನ್ನು, ಪೂರ್ವಾಗ್ರಹಗಳನ್ನು ಇಟ್ಟುಕೊಂಡು ಕಾವ್ಯವನ್ನು ರಚಿಸತೊಡಗುತ್ತೇವೆ. ಮೊದಲನೆಯ ಪೂರ್ವಾಗ್ರಹವೆಂದರೆ, “ನಾನು ಬರೆವ ಕಾವ್ಯವನ್ನು ಎಷ್ಟು ಜನ ಆಸ್ವಾದಿಸುತ್ತಾರೆಂಬ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ”—ಎಂಬುದು. ಈ ಬಗ್ಗೆ ಕವಿ ಯೋಚಿಸಬೇಕು. ಅವನು ಒಂದು ಸಮುದಾಯದ ಪ್ರತಿನಿಧಿಯಾಗಿದ್ದಾನೆ. ಆ ಸಮುದಾಯದಿಂದ ಅನುಭವ, ಪರಂಪರೆಗಳನ್ನು ಪಡೆದು ಉಪಕೃತನಾಗಿದ್ದಾನೆ. ಕೇವಲ ಅವನ ಕಲ್ಪನೆಯೊಂದೇ ಕಾವ್ಯವನ್ನು ಹೆಣೆಯಲಾರದು—ಎಂಬುದು ನಿತಾಂತ ಸತ್ಯ. ಅಮೆರಿಕಾದಲ್ಲಿ ವಾಸಿಸುವ ಕನ್ನಡಿಗನೊಬ್ಬ, ಕನ್ನಡದಲ್ಲಿ ಬರೆದಾಗ, ಆತನಿಗೆ ಪರಿಸರದ ಪ್ರಭಾವದ ಕೊರತೆ ಕಂಡುಬಂದು, ಆ ಮಟ್ಟಿಗೆ ಅವನ ಕಾವ್ಯ ಬರಡಾಗುತ್ತದೆ. ಅವನು ತನ್ನ ವಾಸಸ್ಥಾನವಾದ ಅಮೆರಿಕಾದ ಪರಿಸರದಿಂದ ಪ್ರಭಾವಿತನಾಗಿದ್ದಾನೆ. ಆದ ಕಾರಣ ಅವನ ಕಾವ್ಯದಲ್ಲಿ ಕಂಡುಬರುವ ಮನೋಧರ್ಮ ಆ ದೇಶದ್ದಾಗಿದ್ದು, ಭಾಷೆಯೊಂದು ಕನ್ನಡವಾಗಿರುತ್ತದೆ. ಈ ರೀತಿಯ ಕಾವ್ಯ ಜನತೆಯ ಮೇಲೆ ಹೇಗೆ ತಾನೇ ಪ್ರಭಾವಬೀರಬಲ್ಲದು ?

ಭವ್ಯಬಂಗಲೆಯೊಂದರ ಸುಸಜ್ಜಿತ ಕೋಣೆಯಲ್ಲಿ ಕುಳಿತು ಕಲ್ಪನೆಯ ಬೆನ್ನೇರಿ ಕಾವ್ಯ ರಚಿಸುವ ಪಂಡಿತರಿಂದ ಮೌಲಿಕ ಸೃಷ್ಟಿಯಾಗಲಾರದು. ಕವಿ ಜನತೆಯ ಮಧ್ಯೆ ವಾಸಿಸಿ, ಜನತೆಯ ನಿಕಟ ಸಂಪರ್ಕ ಪಡೆದು, ಜನತೆಯ ಆಶೋತ್ತರಗಳನ್ನು ತನ್ನ ಕಾವ್ಯದಲ್ಲಿ ಬಿಂಬಿಸಬೇಕು ಹೆಚ್ಚೇಕೆ? ಕವಿಯು ಜನತೆಯ ಅವಿಭಾಜ್ಯ ಘಟಕವೇ ಆದಾಗ ಮಾತ್ರ ಕಾವ್ಯ ರಸಮಯವಾಗುತ್ತದೆ. ಈ ರಸಮಯ ಕಾವ್ಯ, ಯಾವ ಜನತೆಯಿಂದ ರೂಪುಗೊಂಡಿತೋ ಅದೇ ಜನತೆಯನ್ನು ತಲುಪಬೇಕು. ಕಾವ್ಯಾಭ್ಯಾಸಕ್ಕಿಂತ ಮೊದಲು ಕಾವ್ಯಾನಂದ ದೊರೆಯಬೇಕು. ಕಾವ್ಯವನ್ನು ಕೇಳಿ ಎಲ್ಲರೂ ಆನಂದಿಸುವಂತಾದಾಗಲೇ, ಕಾವ್ಯದ ಸಾರ್ಥಕ್ಯ ಪೂರ್ಣವಾದೀತು. ಹೀಗೆ ಜನತೆಯನ್ನು ಕಾವ್ಯದ ದನಿಗೆ ಕಿವಿಗೊಡುವಂತೆ ಮಾಡುವ ಮಾಧ್ಯಮ ‘ಸಂಗೀತ’ ಅಗತ್ಯ ಘಟಕವಾಗುತ್ತದೆ.

ಕೆಲವರು ಹೀಗೆ ವಾದಿಸುತ್ತಾರೆ—ಸಂಗೀತದ ಮಾಧುರ್ಯ ಜನರನ್ನು ದಾರಿ ತಪ್ಪಿಸುತ್ತದೆ. ಕಾವ್ಯವಲ್ಲದುದನ್ನೂ ಜನ ಮೆಚ್ಚುವಂತೆ ಸಂಗೀತ ಭ್ರಮೆಯನ್ನುಂಟು ಮಾಡುತ್ತದೆ. ಹಾಗೂ ಒಂದು ಒಳ್ಳೆಯ ಕಾವ್ಯ ಸುಶ್ರಾವ್ಯ ಸಂಗೀತದೊಡಗೂಡಿದಲ್ಲಿ, ಜನತೆಯ ಗಮನವೆಲ್ಲ ಆ ಕಾವ್ಯದ ‘ಧಾಟಿ’ ಅಥವಾ ‘ಮಟ್ಟ’ನ ಕಡೆಗಿರುವುದೇ ವಿನಾ, ಕಾವ್ಯಾಂಶದ ಕಡೆಗಿರುವುದಿಲ್ಲ. ಆದುದರಿಂದ ಕಾವ್ಯವನ್ನು ಈ ಸಂಗೀತದೊಂದಿಗೆ ಬೆರೆಸದೇ ಬರೀ ಕಾವ್ಯವಾಗಿಯೇ ಜನದ ಮುಂದಿಟ್ಟರೆ, ಆಗ ಅವರು ಅದನ್ನು (ಕಾವ್ಯಾಂಶವನ್ನು) ಗಮನಿಸಿಯೇ ಗಮನಿಸುತ್ತಾರೆ.

ಈ ವಾದ ಕೆಲಮಟ್ಟಿಗೆ ಸರಿ—ಎನ್ನಿಸಿದರೂ, ಇದರ ಮಿಥ್ಯೆಯೂ ಬಹುಬೇಗ ಸ್ಥಾಪಿತವಾಗುತ್ತದೆ. ಸಂಗೀತದ ಸೆರೆಯಿಂದ ಬಿಡುಗಡೆ ಹೊಂದಿದ ಕಾವ್ಯವನ್ನು ಬಹುಜನ ಗಮನಿಸುವುದೇ ಇಲ್ಲ. ಹೆಣ್ಣಿಗೆ ರೂಪಕ್ಕಿಂತ ಗುಣವೇ ಪ್ರಧಾನವಾದರೂ, ಬರೀ ಗುಣಗಳ ಸಮೂಹವನ್ನು ಮೂರ್ತತ್ವದಲ್ಲಿ ಕಲ್ಪಿಸಿಕೊಳ್ಳುವುದು ಅಸಾಧ್ಯವಷ್ಟೆ! ಹಾಗೇ ಕಾವ್ಯಾಂಶವೆಂಬ ಅಮೂರ್ತ ತತ್ತ್ವ, ಸಂಗೀತದ ಮೂರ್ತ ಸ್ವರೂಪದ ಮೂಲಕ ಜನತೆಯನ್ನು ಸೇರಬೇಕು—ಸೇರುತ್ತದೆ. ಕಾವ್ಯಾಂಶವನ್ನು ಗುರುತಿಸುವಲ್ಲಿ ಆಸಕ್ತಿಯುಳ್ಳ ಜನ ಸಂಗೀತ ರೂಪದ ಕಾವ್ಯದಲ್ಲಿಯೂ, ತಮಗೆ ಬೇಕಾದ ಕಾವ್ಯಾಂಶವನ್ನೇ ಆಯ್ದುಕೊಳ್ಳುತ್ತಾರೆ—ಕಾವ್ಯಾಂಶವನ್ನು ಗುರುತಿಸಲಿ, ಬಿಡಲಿ—ಕಾವ್ಯವಂತೂ ಸಂಗೀತದಿಂದ ಎಲ್ಲರನ್ನೂ ತಲುಪುವುದು ದಿಟ. ಪ್ರಾಥಮಿಕ ಶಾಲೆಗಳಲ್ಲಿ ರಾಗವಾಗಿ ಹಾಡಿ ಕಲಿತ ಅನೇಕ ಪದ್ಯಗಳು ಸ್ಮೃತಿಯಲ್ಲಿ ಬಹುಕಾಲ ಉಳಿದಂತೆ, ಗದ್ಯಪಾಠಗಳು ಉಳಿಯುವುದಿಲ್ಲ. ಆ ಕೃತಿ ನಾಲಿಗೆಯಲ್ಲಿ ನೆಲೆ

ಯಾಗಿ ನಿಂತ ನಂತರ, ಚಿಂತನಶಕ್ತಿ ಅಭಿವೃದ್ಧಿಯಾದಂತೆ, ಕ್ರಮೇಣ ಅವುಗಳಲ್ಲಿನ ಕಾವ್ಯಾಂಶದ ಬಗ್ಗೆ ಯೋಚಿಸಲು ಅನುಕೂಲವಾಗುತ್ತದೆ. ಹಿಂದೆ ಅಮರಕೋಶವನ್ನು ಮಕ್ಕಳು ರಾಗವಾಗಿ ಬಾಯಿಪಾಠಮಾಡುತ್ತಿದ್ದರು. ಆ ಅಭ್ಯಾಸ ದೊಡ್ಡವರಾದ ಮೇಲೆ ಭಾಷಾ ದೃಷ್ಟಿಯಿಂದ ತುಂಬ ಪ್ರಯೋಜನಕಾರಿಯಾಗುತ್ತಿತ್ತು.

ಅಂದರೆ, ನಾವು ಹೀಗೆ ಭಾವಿಸಬಹುದು—ಕಾವ್ಯದ ದೃಷ್ಟಿಯಿಂದ ನಮ್ಮ ಜನತೆ ಇನ್ನೂ ಪ್ರಾಥಮಿಕ ಹಂತದಲ್ಲಿದ್ದಾರೆ—ಇವರಿಗೆ ಮೊದಲು 'ಸರಾಗ'ವಾದ ಕೃತಿಗಳನ್ನು ನೀಡಿ, ತನ್ಮೂಲಕ ಕೃತಿಗಳ ಮೇಲಣ ಸ್ವಾಮ್ಯವನ್ನು ಅವರಿಗೆ ಒದಗಿಸಿಕೊಡಬೇಕು. ಕನ್ನಡನಾಡಿನ ಕವಿಗಳ ಹೆಸರುಗಳನ್ನು ಪ್ರತಿಯೋರ್ವ ಕನ್ನಡಿಗನೂ ಹೇಳುವಂತಾಗಬೇಕಾದರೆ ಸಂಗೀತದ ಆಲಂಬನೆ ಅಗತ್ಯ. ಸಂಗೀತವೆಂದರೆ, ಅದು ಶಾಸ್ತ್ರೀಯ ಸ್ವರೂಪದ ಸಂಗೀತವೇನೂ ಆಗಬೇಕಿಲ್ಲ. ಶೃತಿಯುಕ್ತವಾದ ಒಂದು ಮಟ್ಟು. ನಮ್ಮ ರಾಷ್ಟ್ರಗೀತೆಗೂ ಒಂದು ಮಟ್ಟೆದೆಯಲ್ಲವೆ !

ಸಂಗೀತವನ್ನು ಬಿಟ್ಟು ಕಾವ್ಯ ಬರೆಯುವವರಿಗೆ ಮತ್ತೊಂದು ಪ್ರಶ್ನೆ—"ನೀವು ಹೇಳಬೇಕಾದುದನ್ನು ಪದ್ಯದಲ್ಲಿ ಏಕೆ ಹೇಳುತ್ತೀರಿ ? ಗದ್ಯರೂಪದಲ್ಲೇ ಬರೆದಿಡಿ. ಪದ್ಯದಲ್ಲಿಯೇ ಹೇಳುವ ಚಪಲವೇಕೆ ?" ಅದಕ್ಕೆ ಕೆಲವು ಕವಿಗಳು ಹೀಗೆ ಉತ್ತರಿಸುತ್ತಾರೆ—"ಸ್ವಾಮಿ, ನಾವು ಯೋಚನೆ ಮಾಡುವ ವಿಧಾನವೇ ಪದ್ಯ. ಆ ಲಯ ನಮಗೆ ಒಗ್ಗಿದೆ. ನಾವು ಆ ಯೋಚನೆಗಳನ್ನು ಬೇರೊಂದು ಮಾಧ್ಯಮದಲ್ಲಿ ವ್ಯಕ್ತಪಡಿಸಲಾರೆವು"—ಈ ಹೇಳಿಕೆ ಯಥಾರ್ಥವಾದರೂ, ಕೇವಲ ಬುದ್ಧಿಯ ಕಸರತ್ತುಗಳಿಂದ ಸೃಷ್ಟಿಯಾಗುವ ಪದ್ಯಗಳಿಗೆ ಈ ಮಾತು ಸರಿಹೊಂದುವುದಿಲ್ಲ. ಗದ್ಯದ ಇಡೀ ಒಂದು ಸಾಲನ್ನು ಒಡೆದು ನಾಲ್ಕು ವಿಷಮಸಾಲುಗಳನ್ನಾಗಿಸುವಲ್ಲಿ ಹೃದಯ ಮೂಕವಾಗಿ ಬುದ್ಧಿಯ ತಿಣುಕಾಟವನ್ನು ಕಂಡು ನಗುತ್ತದೆ. ಅಲ್ಲದೆ, ಹಲವಾರು ಜನಗಳು ಹೀಗೆ ಹೇಳುವುದನ್ನು ಕೇಳಿದ್ದೇವೆ—"ಯಾವ ಪದ್ಯ ಅರ್ಥವಾಗುವುದಿಲ್ಲವೋ ಅದು ಸರ್ವಶ್ರೇಷ್ಠ ಪದ್ಯ"

ಇಂದು ನಾವು ಅಂಕಿ ಅಂಶಗಳನ್ನು ಸಂಗ್ರಹಿಸಿ ಪರಿಶೀಲಿಸಿದರೆ—ಪದ್ಯಕಾವ್ಯವನ್ನು ಓದುವ ಜನರ ಸಂಖ್ಯೆ ಬೆರಳೆಣಿಕೆಯಷ್ಟು ಸಿಕ್ಕುತ್ತದೆ. ಸಂಗೀತದಿಂದ ಮುಕ್ತವಾದ (ಅಂದರೆ ಯಾವುದೇ ಧಾಟಿಯಿಲ್ಲದ) ಪದ್ಯಕಾವ್ಯ ಬರಬರುತ್ತಾ ಬರೆದ ಕವಿಯೊಬ್ಬ ಮಾತ್ರ ಓದಿಕೊಂಡು—"ಸ್ವಾಂತಃಸುಖಾಯ...."ಕಾವ್ಯ ರಚಿಸಬೇಕಾಗುತ್ತದೆ. ಮತ್ತು ಕೆಲವು ಸಮಯದ ನಂತರ ಪದ್ಯಕಾವ್ಯ ಲುಪ್ತವಾಗಿಹೋದರೂ ಆಚ್ಚರಿಯೇನಲ್ಲ.

ಓದುಗರನ್ನು ದೂರವಿಡುವ ಹಂಬಲ ಲೇಖಕರಲ್ಲಿ ಎಂದಿಗೂ ಬೆಳೆಯಬಾರದು—ಬಹಳ ಜನ ಓದಲಿ—ಎಂದು ಬರೆದಾಗ ಮಾತ್ರ ಕಾವ್ಯ ಸಮಾಜದ ಮೇಲೆ ಸಾಕಷ್ಟು ಪ್ರಭಾವ ಬೀರಬಲ್ಲುದು. ನಾಟಕಗಳಿಂದ ಸಮಾಜದ ಮೇಲೆ ನೇರವಾದ ಪ್ರಭಾವ ಬೀಳುತ್ತದೆ. ಏಕೆಂದರೆ, ನಾಟಕವನ್ನು ನೋಡಲು ಪ್ರೇಕ್ಷಕನಿಗೆ ಸಾಕ್ಷರತೆ ಅಡ್ಡಿಯಾಗದು—ಅದನ್ನು ಬಿಟ್ಟರೆ ಕಾವ್ಯ. ಅದು ಪದ್ಯಕಾವ್ಯವೇ ಪ್ರಭಾವಶಾಲಿಯಾದುದು. ಕಾರಣವೇನೆಂದರೆ, ಅದರ ಗೇಯತೆ ಜನರಲ್ಲಿ ಸಾಕಷ್ಟು ಪರಿಣಾಮ ಬೀರುತ್ತದೆ. ಇದೀಗ ಗೇಯತೆ ಲುಪ್ತವಾಗುತ್ತಿರುವುದರಿಂದ ಜನತೆ ಓದುಬರಹವನ್ನು ಕಲಿತೇ ಕಾವ್ಯವನ್ನು ಆಸ್ವಾದಿಸಬೇಕಾಗಿದೆ. ಕಠಿಣವಾದ ಕಾವ್ಯಗಳೆಲ್ಲವನ್ನೂ ಹಿಂದಿನವರು ಬಾಯಿಪಾಠ ಮಾಡಿಕೊಂಡು ಹಾಡುತ್ತಿದ್ದರು. ಇದೀಗ ಪರಿಸ್ಥಿತಿಯೇ ಬದಲಾಗುತ್ತಿದೆ. ಅಕ್ಷರ ವಿನ್ಯಾಸವೂ ಕಾವ್ಯದ ಹೊರಮೈ ಎಂಬ ಮಾತಿಗೆ ಏನು ಅರ್ಥವಿದೆ ?

ಇತ್ತೀಚಿನ ಕತೆ-ಕಾದಂಬರಿಗಳಲ್ಲಿ ಕೆಲವು, ಹೊಸ ರೀತಿಯಲ್ಲಿ ಹೊರಬರುತ್ತಿವೆ. ಕಾವ್ಯಾಂಶ ಇವುಗಳಲ್ಲೂ ಇದೆ ಎಂಬುದು ದಿಟವಾದರೂ, ಇವು ಸಹಜವಾಗಿ ಮೂಡಿಬರದೆ, ಬುದ್ಧಿಯ ವಿಶೇಷ ಕಸರತ್ತಿನಿಂದ ಮೈದಳೆದು, ಪರಿಣಾಮದಲ್ಲಿ ಕೃತಕ ಎನ್ನಿಸುತ್ತವೆ—ಉದಾಹರಣೆಗೆ ಹೇಳಬಹುದಾದರೆ, ಕನ್ನಡವಲ್ಲಿ 'ಹಳದಿಮೀನು'—ಎಂಬ ಕಾದಂಬರಿಯೊಂದಿದೆ. ಅದನ್ನು ಕನ್ನಡಬಲ್ಲವರೆಲ್ಲರೂ ಓದಲು ಸಾಧ್ಯವಿದೆ. ಆದರೆ ಅದನ್ನು ಅರ್ಥೈಸಿಕೊಳ್ಳಬೇಕೆಂದರೆ ಬಲು ಪ್ರಯಾಸವಾಗುತ್ತದೆ, ಹೃದಯ ಮೂಕವಾಗುತ್ತದೆ ; ಬುದ್ಧಿ ತಿಣುಕಾಡುತ್ತದೆ. ಏಕೆ ಹೀಗೆ?

ಎಂದು ಯೋಚಿಸಿದಾಗ ಸ್ಪಷ್ಟವಾಗುತ್ತದೆ—ಅದನ್ನು ಬರೆದಾತನ ಮೇಲೆ ಪಾಶ್ಚಾತ್ಯ ಪರಿಸರದ ಪ್ರಭಾವ ವಿಶೇಷವಾಗಿದೆ—ಎಂಬ ಅಂಶ. ಅಂತಹ ಬರಹಗಳು ಕನ್ನಡಕ್ಕೆ ಅನಾವಶ್ಯಕ.

ಮತ್ತೆ ಪದ್ಯಕಾವ್ಯದತ್ತ ದೃಷ್ಟಿ ಹರಿಸೋಣ. ಇಂದಿನ ಕಾವ್ಯ ಹುಟ್ಟಿರುವ ಉದ್ದೇಶ ಪ್ರಮುಖವಾಗಿ ಎರಡು— ಮೊದಲನೆಯದು, ಕಾವ್ಯ ಇದ್ದ ಹಾಗೇ ಮುಂದುವರೆಯಬಾರದು. ಒಂದು ಬದಲಾವಣೆ ಬೇಕು—ಈ ಬದಲಾವಣೆ ಕಾವ್ಯದ ವಸ್ತುವಿನ ವಿಚಾರದಲ್ಲಿ ಹಾಗೂ ಛಂದಸ್ಸಿನ ವಿಚಾರದಲ್ಲಿ, ಅಲ್ಲದೆ ಇದನ್ನು ಹೇಳುವ ವಿಧಾನದಲ್ಲಿ ಎದ್ದು ಕಾಣಬೇಕು. ಅಂದರೆ ಈ ಒಂದು ಬದಲಾವಣೆ ಕೇವಲ ಬದಲಾವಣೆಗಾಗಿಯೇ ಆಗಿದೆ. ಹೀಗಾದಾಗ ಇದು ಕೃತಕವೂ ಅಸಹಜವೂ ಆಗುವುದರಲ್ಲಿ ಸಂದೇಹವಿಲ್ಲ.

ಇನ್ನು ಎರಡನೆಯ ಉದ್ದೇಶ ಈ ಹಿಂದೆಯೇ ಹೇಳಿದಂತೆ ಸಂಗೀತದ ಗುಂಗಿನಲ್ಲಿ ಜನತೆ ಕಾವ್ಯವನ್ನು ಅಲಕ್ಷಿಸುತ್ತದೆ—ಎಂಬುದು. ಅಂದರೆ, ಇವರ ಅಭಿಪ್ರಾಯದಲ್ಲಿ, ತಮ್ಮ ಕಾವ್ಯ ಸಂಗೀತಕ್ಕಿಂತ ದುರ್ಬಲ—ಎಂಬುದಾಗಿದೆ. ಕಾವ್ಯಕ್ಕೆ ಆ ಶಕ್ತಿಯಿದ್ದರೆ ಅದಕ್ಕೆ ಸಂಗೀತದ ಭಯವೇಕೆ? ಇವರಿಗೆ ಗೇಯಾಂಶದಲ್ಲಿರುವ ತಿರಸ್ಕಾರಕ್ಕಿಂತಲೂ ಭಯವೇ ಹೆಚ್ಚಾಗಿದೆ! ಜನತೆಗೆ ಉಪಕಾರವಾಗಲೆಂದು ಸಂಗೀತದ ಸಂಕೋಲೆಯನ್ನಿವರು ತೆಗೆಯುತ್ತಿಲ್ಲ. ತಮ್ಮ ಶ್ರೇಷ್ಠತೆ ಗಾಯಕನನ್ನವಲಂಬಿಸಿದೆ ಎಂಬ ಭಯದಿಂದ.

ವಸ್ತುಸ್ಥಿತಿ ಹೀಗಿರುವಾಗ, ಕನ್ನಡ ಕಾವ್ಯ ಸಮಾಜವನ್ನು ತಲುಪಬಲ್ಲುದೆ? ಅಥವಾ ಅದು ಸಮಾಜಕ್ಕೆ ತಲುಪಲೇ ಬಾರದೆ? ಸಮಾಜಕ್ಕೆ ತಲುಪದ ಕಾವ್ಯ ಕಾವ್ಯವಾಗಿ ಉಳಿಯಬಲ್ಲುದೆ? ಈ ಪರಿಸ್ಥಿತಿಯನ್ನು ನೋಡಿದಾಗ ನಮಗೆ ಮನದಟ್ಟಾಗುವ ಅಂಶವೆಂದರೆ. ಈ ಕವಿಗಳೆಲ್ಲರೂ ಯಾವುದೋ ಪರಕೀಯ ಪ್ರಭಾವಕ್ಕೆ ಒಳಗಾಗಿರಬಹುದು–ಹಿಡತಕ್ಕೆ ಸಿಕ್ಕಲಾರದ ಏನನ್ನೋ ಅನುಸರಿಸುವ ಪ್ರಯತ್ನವಿದ್ದರೂ ಇರಬಹುದು–ಅಥವಾ ತಮ್ಮದೇ ಆದ ಗುಂಪೊಂದನ್ನು ಕಟ್ಟಿಕೊಳ್ಳಲು ಇವರು ಈ ಹೊಸ ತಂತ್ರವನ್ನು ಸೃಷ್ಟಿಸಿರಬಹುದು.

ಅಸಮ ಸಾಲುಗಳುಳ್ಳ, ಒಂದೊಂದೇ ಅಕ್ಷರಕ್ಕೆ ಒಂದು ಸಾಲಾಗಿ ಬರೆಯಲ್ಪಡುವ ಪದ್ಯಗಳೂ ಉಂಟು. ಅವು ಸಾಕ್ಷರತೆಯೇ ಇಲ್ಲದ ನಮ್ಮ ದೇಶದ ಜನತೆಗಲ್ಲ. ಶ್ರೀಮಂತರೂ, ವಿದ್ಯಾವಂತರೂ ತುಂಬಿರುವ ಯಾವುದೋ ದೇಶದಲ್ಲಿ ಏನೋ ಬರೆಯುತ್ತಾರೆ ಎಂದು ನಾವೂ ಅನುಕರಿಸಿದರೆ ನಾವು ಕಾವ್ಯಕ್ಕೆ, ಅದಕ್ಕೂ ಹೆಚ್ಚಾಗಿ ಜನತೆಗೆ ದ್ರೋಹವಾಡಿದಂತೆ. ಜನಕ್ಕೆ ಅರ್ಥವಾಗದ, ಅಥವಾ ಅರ್ಥವಾಗಬೇಕಿಲ್ಲದ ಕೃತಿಯೊಂದನ್ನು ರಚಿಸಿ, ಅದನ್ನು ಅದೇ ಜನಗಳೇ ಕೊಳ್ಳಲೆಂದು ಮಾರುಕಟ್ಟೆಗೆ ಪುಸ್ತಕ ತರುವುದೂ ಅಂಥದೇ ಸಮಾಜದ್ರೋಹ. ಹಾಡಲು ಬರುವಂಥ ಸಮರ್ಥ ಕೃತಿಗಳು ಬೇಂದ್ರೆ, ಕುವೆಂಪು, ಪುತಿನ, ಡಿವಿಜಿ—ಮುಂತಾದ ಉದ್ದಾಮ ಸಾಹಿತಿಗಳ ಲೇಖನಿಯಿಂದ ಬೇಕಾದಷ್ಟು ಹೊರಹೊಮ್ಮಿ— ಎಷ್ಟೋ ಕೃತಿಗಳು ಜನಪ್ರಿಯವೂ ಆಗಿವೆ—"ಮೂಡಣ ಮನೆಯ ಮುತ್ತಿನ..._","ಜಯ ಭಾರತಜನನಿಯ ತನುಜಾತೆ... ", "ಎಮ್ಮ ಮನೆಯಂಗಳದಿ....", "ವನಸುಮದೊಲೆನ್ನ...." "ಕೃಷ್ಣನಾ ಕೊಳಲಿನಾ ಕರೆ...."—ಮುಂತಾದ ಈ ಗೀತೆಗಳು ಜನಮನದಲ್ಲಿ ಸ್ಥಿರವಾಗಿ ನಿಲ್ಲಲು ಮೊದಲನೇ ಕಾರಣ ಈ ಕೃತಿಗಳ ಗೇಯತೆ. ಗೇಯತೆಯಿಂದ ಕಾವ್ಯ ಜನತೆಯನ್ನು ತಲುಪಿದಲ್ಲಿ, ಕಾವ್ಯಕ್ಕೆ ಸಾಮಾಜಿಕಸ್ಥಾನ ಸಿಕ್ಕುತ್ತದೆ. ಕಾಲಕ್ರಮದಲ್ಲಿ ಸಮಾಜ ಒಟ್ಟಾಗಿ ಈ ಕೃತಿಗಳ ಬಗ್ಗೆ ಚಿಂತಿಸುವಂತಾಗಿ, ಸಾಮಾಜಿಕಚಿಂತನ ಅಭಿವೃದ್ಧಿ ಹೊಂದಬಲ್ಲದು. ಕೇವಲ ಬುದ್ಧಿಜೀವಿಗಳೆನಿಸಿಕೊಂಡವರಷ್ಟೇ ಇಡೀ ಸಮಾಜವಲ್ಲ. ಹಾಗೆಂದು, ಈ ಬುದ್ಧಿಜೀವಿಗಳು ಮಾಡುವ ದ್ರೋಹವೂ ಕಡಮೆಯದಲ್ಲ. ಇವರಿಗೆ ಸ್ಥಾನಮಾನಬೇಕು—ಉಳಿದವರೆಲ್ಲರೂ ದಡ್ಡರಾಗಿಯೇ ಉಳಿಯಬೇಕು. ಆದರೂ ತಾವು ಬರೆದುದನ್ನು ಅವರು ಕೊಳ್ಳಬೇಕು.

ಕಾವ್ಯದ ವಸ್ತುವಿನ ವಿಚಾರವಾಗಿ ತಡಕಾಡುವ ಜನರೂ ಇದ್ದಾರೆ. ಸ್ವಾತಂತ್ರ್ಯೋತ್ತರ ಕಾವ್ಯಕ್ಕೆ ಯಾವ ವಸ್ತು?—"ಬಾಳಿನ ಅರ್ಥಹೀನತೆ, ಹಾಗೂ ಮಾನವನ ದೌರ್ಬಲ್ಯ"—ಈ ಎರಡೇ ಅಂಶಗಳ ಬಗ್ಗೆ ಎಷ್ಟು ಪದ್ಯಗಳನ್ನು ಬರೆಯಬಹುದು? ನಮ್ಮ ದಾಸರ ಕೃತಿಗಳಲ್ಲಿಯೂ ಈ ಚಿತ್ರಗಳೆಲ್ಲ ಬೇಕಾದಷ್ಟು ಒಡಮೂಡಿ

ಲ್ಲವೆ ? ಮೇಲ್ಕಂಡ ಎರಡು ಅಂಶಗಳೂ ಒಂದು ರಾಷ್ಟ್ರದ ಪ್ರಗತಿಯ ದೃಷ್ಟಿಯಿಂದ ಮಾರಕವಾಗಿವೆ. ಸ್ಪರ್ಧಾತ್ಮಕ ಪ್ರಪಂಚದಲ್ಲಿ, ಮಾನವ ಭೂಮಿಗೂ ಆಚೆ ಜಿಗಿಯುವ ಸಂದರ್ಭದಲ್ಲಿಯೂ ಈ ವಿಷಾದದ ಕರಿನೆರಳು ನಮ್ಮನ್ನೇಕೆ ಕಾಡಬೇಕು ? ಇತ್ಯಾತ್ಮಕ ಅಥವಾ ನೇತ್ಯಾತ್ಮಕವಾಗಿ ರೂಪಿಸುವ ನೀತಿಗೆ ಹೊರತಾದ ಕಾವ್ಯ ಕಾವ್ಯವಾಗಬಲ್ಲುದೆ? ನೀತಿಯಿಲ್ಲದ ಕಾವ್ಯ ಇರುವುದಾದರೂ ಯಾಕೆ? ಅಥವಾ ನೀತಿಯಿರುವ ಅಕಾವ್ಯವೂ ನಮಗೆ ತೀರಾ ಅಗತ್ಯವಾದುದು. ಏಕೆಂದರೆ, ಇಂದಿನ ಬಾಳಿನಲ್ಲಿ ನೀತಿಯ ಅಧಃಪತನವಾಗುತ್ತಲೇ ಇದೆ. ನವ್ಯಕಾವ್ಯ ಹುಟ್ಟಿದರೂ ಈ ದುರ್ಗತಿಯೇಕೆ ? ಕಾರಣ ಸ್ಪಷ್ಟವೇ ಇದೆ—ಕಾವ್ಯ ತಾನು ಮಾಡುತ್ತಿದ್ದ ಕೆಲಸವನ್ನು ಮಾಡದಂತೆ ಇಂದಿನ ಕವಿಗಳು ಸಂಕೋಲೆ ಬಿಗಿದಿದ್ದಾರೆ—ಜನತೆಯವರೆಗೂ ತಲುಪದಂತೆ, ಸಂಗೀತದ ತಂತಿಯನ್ನು ಕಡಿಯುತ್ತಿದ್ದಾರೆ–ಹೆಚ್ಚೇಕೆ ? ಕಾವ್ಯ ಇರುವುದು ಓದಲಿಕ್ಕಲ್ಲ, ಹಾಡಲಿಕ್ಕೆ; ಹಾಡಿ ಚಿಂತಿಸುವುದಕ್ಕೆ, ಅಥವಾ ಹಾಡುವುದನ್ನು ಕೇಳಿ ಮೈಮರೆಯುವುದಕ್ಕೆ ! ಈ ಮೈಮರೆವು ವಿಸ್ಮೃತಿಯ ಕುರುಹಲ್ಲ, ಸೌಂದರ್ಯಪ್ರಜ್ಞೆಯ, ಕಲಾಪ್ರಜ್ಞೆಯ ಅತ್ಯಂತ ಜಾಗ್ರತಸ್ಥಿತಿ !

ಈ ಭಾವಸಮಾಧಿಯಲ್ಲಿ ಕಾವ್ಯ ಹೊಸಹೊಸ ಅರ್ಥಗಳನ್ನು ಪಡೆಯುತ್ತದೆ.

ಮನಸ್ಸು ಯಾವಾಗಲೂ ಭಗವಂತನನ್ನು ಚಿಂತಿಸುತ್ತಿರಬೇಕು. ಪ್ರಾರಂಭದಲ್ಲಿ ಮನಸ್ಸನ್ನು ಯಾವಾಗಲೂ ಭಗವಂತನನ್ನು ಕುರಿತು ಚಿಂತಿಸುವಂತೆ ಮಾಡುವುದು ಬಹಳ ಕಷ್ಟ. ಆದರೆ ನಾವು ಸಾಧನೆ ಮಾಡಿದಷ್ಟೂ ಅವನನ್ನು ಕುರಿತು ಚಿಂತಿಸುವುದೂ ಹೆಚ್ಚಾಗುವುದು. ಅಭ್ಯಾಸದಿಂದ ಮತ್ತು ವೈರಾಗ್ಯದಿಂದ ಮಾತ್ರ ಇದು ಲಭಿಸುತ್ತದೆ.

ಟಿ. ಎಸ್. ರಾಮಚಂದ್ರಮೂರ್ತಿ

ಕಿರಿಯರ ದೃಷ್ಟಿಯಿಂದ ಕಾವ್ಯಾಭ್ಯಾಸ

ಕನ್ನಡಸಾಹಿತ್ಯವನ್ನು ಕುರಿತು ಬೇಕಾದಷ್ಟು ವಿಮರ್ಶಾತ್ಮಕ ಗ್ರಂಥಗಳು ಬಂದಿವೆ. ಪಾಶ್ಚಾತ್ಯ ವಿಮರ್ಶೆಯನ್ನು ಅನುಕರಿಸಿ ಬಂದಿರುವ ಗ್ರಂಥಗಳು ಅದೆಷ್ಟೋ. ಇವುಗಳ ಜೊತೆಗೆ ಟಿಪ್ಪಣಿಗಳನ್ನು ಕೊಟ್ಟು ಸಂಪಾದಿಸಿರುವ ಗ್ರಂಥಗಳೂ ನಮ್ಮಲ್ಲಿ ಹೇರಳವಾಗಿವೆ. ಇವೆಲ್ಲ ಉತ್ಕೃಷ್ಟವಾದ ಗ್ರಂಥಗಳೇನೊ ನಿಜ. ಹಿರಿಯ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗಂತು ಇವು ತುಂಬ ಲಾಭದಾಯಕ.

ಆದರೆ ಕಿರಿಯ ವಿದ್ಯಾರ್ಥಿಗಳ ದೃಷ್ಟಿಯಿಂದ ಬರೆದ ಸಣ್ಣ ಪ್ರಮಾಣದ (small compass) ಸರಳ ಶೈಲಿಯ, ಸಾಮಾನ್ಯ ನಿರೂಪಣೆಯ ವಿಮರ್ಶೆ ಇಲ್ಲದಿರುವುದು ತುಂಬ ಆಶ್ಚರ್ಯದ ಸಂಗತಿ ಎನಿಸುತ್ತದೆ. ವಿದ್ಯಾರ್ಥಿ ತಾನು ಓದುವ ಪದ್ಯದ ಸಾರಾಂಶವನ್ನು ನೇರವಾಗಿ ಅರ್ಥಮಾಡಿಕೊಳ್ಳುವ ಗೋಜಿಗೆ ಹೋಗದೆ ಅದರ ವಿವಿಧ ಆಕಾರಗಳನ್ನು ಗ್ರಹಿಸುವುದಕ್ಕೆ ಸಹಾಯ ಮಾಡುವ ಆಕರ ಗ್ರಂಥಗಳು ಇಷ್ಟು ವರ್ಷಗಳು ಸಂದರೂ ಬರದಿರುವುದು ನಿಜಕ್ಕೂ ದುಃಖದ ಸಂಗತಿ. ಸಾಹಿತ್ಯವನ್ನು ಬೋಧಿಸುವ ನನಗಂತೂ ಈ ಒಂದು ಕೊರತೆ ಸದಾ ಕಾಡುತ್ತಲೇ ಇದೆ. ಬಹುಶಃ ಎಲ್ಲ ಉಪಾಧ್ಯಾಯರ ಬವಣೆಯೂ ಇದೇ ಆಗಿರಬೇಕು- ಈ ಚಿಂತೆಯೆ ನನ್ನ ಈ ಚಿಂತನಕ್ಕೆ, ತನ್ಮೂಲಕ ಈ ಲಘು ಲೇಖನಕ್ಕೆ ಕಾರಣವಾಗಿದೆ.

ಕಾವ್ಯವು ಒಂದು ವನಸುಮದ ಹಾಗೆ; ಅದರ ಕೆಲಸವು ಮನೋಹರವಾದ ರೂಪಿನಿಂದಾಗಲಿ ಸುವಾಸನೆಯಿಂದಾಗಲಿ ಇವೆರಡರಿಂದಾಗಲಿ ಪ್ರೀತಿಯನ್ನು ಉಂಟುಮಾಡತಕ್ಕದ್ದು. ಆದರೆ ಅದರ ಎಸಳು ಔಷಧಕ್ಕೂ ಉಪಯೋಗವಾಗಬೇಕೆಂದು ಹೇಳುವುದು ನ್ಯಾಯವಲ್ಲ. ಆದ್ದರಿಂದ ಕಾವ್ಯದಲ್ಲಿ ಆನಂದವೇ ಮುಖ್ಯ ಫಲವೆಂದು ಹೇಳಬಹುದಾಗಿದೆ.

ಈ ಗುರಿಯಿಂದ ಪದ್ಯಕಾವ್ಯವನ್ನು ಅಭ್ಯಸಿಸುವುದಕ್ಕೆ ಹೊರಟಾಗ ಕೊನೆಯ ಹಂತದಲ್ಲಿ ಬರುವುದು ಸಾರಾಂಶ. ಆದರೆ ಈಗಿನ ಶಾಲೆಗಳಲ್ಲಿ ಮೊದಲನೆಯ ಸ್ಥಳವನ್ನೇ ಈ ಹಂತಕ್ಕೆ ಕೊಟ್ಟು ವಿದ್ಯಾರ್ಥಿಗಳ ಆನಂದಕ್ಕೆ ಕೊಡಲಿ ಪೆಟ್ಟನ್ನು ಹಾಕುತ್ತಿದ್ದೇವೆ. ಪದ್ಯಕಾವ್ಯದ ಪಠಣ ಈ ರೀತಿಯಾದರೆ ಅವುಗಳನ್ನು ಪಠ್ಯ ಪುಸ್ತಕಗಳಿಂದ ತೆಗೆಯುವುದೇ ಲೇಸೆಂದು ಕಾಣುತ್ತದೆ.

ವಿದ್ಯಾರ್ಥಿಗಳಿಗೆ ವಿಮರ್ಶೆ ಕಷ್ಟ,ಅಸಾಧ್ಯ ಎಂದು ಕೆಲವರ ವಾದ. ಆದರೆ ಆ ಮಾತು ಸತ್ಯಕ್ಕೆ ಬಹುದೂರ. 'children are naturally good critics of poetry, for they are akin to the poet, who is the child of the race ; and they have instinct appreciation of its beauty.'

ಪದ್ಯಕಾವ್ಯದಲ್ಲಿ ಗಮನಿಸಬೇಕಾದ ಅಂಶಗಳನ್ನು ಈ ರೀತಿಯಾಗಿ ವಿಂಗಡಿಸಬಹುದು.

1. **ಪದ್ಯ ಕಾವ್ಯದ ಲಕ್ಷಣ:** ಗದ್ಯಕ್ಕೂ ಮತ್ತು ಪದ್ಯಕ್ಕೂ ಇರುವ ವ್ಯತ್ಯಾಸವನ್ನು ವಿದ್ಯಾರ್ಥಿಗಳು ಅರ್ಥಮಾಡಿಕೊಳ್ಳಬೇಕು. ವಿಶಾಲವಾದ ಮೈದಾನದಲ್ಲಿ ಅಡ್ಡಾಡಿದಂತೆ ಗದ್ಯದ ನಡಿಗೆ. ಆಟದ ಅಂಗಳದಲ್ಲಿ ಕುಣಿ

ದಂತೆ ಪದ್ಯದ ಗತ್ತು. ಗದ್ಯಕ್ಕೆ ಮಿತಿಯಿಲ್ಲ: ಪದ್ಯಕ್ಕೆ ಅತಿ ಇಲ್ಲ. ಪದ್ಯದಲ್ಲಿ ಅರ್ಥಮಿಂಚಿ ಹೃದ್ಯವಾಗುತ್ತದೆ. ಗದ್ಯದಲ್ಲಿ ಅರ್ಥ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ. ಪದ್ಯಕಾವ್ಯವು ಎಲ್ಲ ಧ್ವನಿಗಳ ಸಂಯುಕ್ತವಸ್ತು (ವಸ್ತು, ಅಲಂಕಾರ, ರಸ ಇತ್ಯಾದಿ). ಒಂದೊಂದು ಪದ್ಯ ಒಂದೊಂದು ಧ್ವನಿಯನ್ನು ಎತ್ತಿ ಹಿಡಿಯುತ್ತದೆ. ಉಳಿದವು ಪೂರಕವಾಗಿ ಸೇರಿಹೋಗುತ್ತವೆ.

2. **ಛಂದೋಗತಿ ಮತ್ತು ಪ್ರಾಸ** : ಪದ್ಯಕಾವ್ಯದಲ್ಲಿ ಛಂದಸ್ಸು ಮತ್ತು ಪ್ರಾಸದ ಸ್ಥಾನ ತುಂಬ ಹೆಚ್ಚು. ಮಾತಿನ ಚಮತ್ಕಾರಕ್ಕಿಂತ "ಛಂದದ ಜಾಣತನವು" ಮುಖ್ಯವೆಂದು ನೃಪತುಂಗನು ಹೇಳಿರುವನು. ಛಂದದಲ್ಲಿ ಕನ್ನಡ ಕವಿಗಳು ಬಹುವಾಗಿ ಸಂಶೋಧನೆಯನ್ನು ಮಾಡಿರುವರೆನ್ನಬಹುದು. ಕನ್ನಡಿಗರಂತೂ ಛಂದಕ್ಕೆ ಬಹಳಷ್ಟು ಮನಸೋತಿದ್ದಾರೆ. ಜಾನಪದ ಗೀತದೊಳಗಿನ ಛಂದೋಬಂಧಗಳು ಇವುಗಳಿಗೆ ಸಾಕ್ಷಿ.

ಈ ಛಂದೋಬಂಧಗಳು ಕಾಲ, ಜನಾಂಗ ಮತ್ತು ಕವಿಗಳ ದೃಷ್ಟಿಗೆ ಅನುಗುಣವಾಗಿ ಮಾರ್ಪಾಟಾಗಿರುವುದನ್ನು ನಾವು ಕಾಣುತ್ತೇವೆ. ಚಂಪೂ, ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯ, ಗೀತಿಕೆ—ಹೀಗೆ ಇದರ ಪ್ರಗತಿಯನ್ನೂ ನಾವು ಕಾಣಬಹುದು. ಪ್ರತಿಯೊಂದು ಛಂದಸ್ಸಿಗೂ ಇಷ್ಟೇ ಮಾತ್ರೆ–ಗುರು (—), ಲಘು (⏑) ಗಳಿರಬೇಕೆಂಬ ನಿಗದಿ ಇದೆ. (ಈಚೆಗೆ ಸ್ವಚ್ಛಂದದ ಕವಿತೆಗಳನ್ನು ಬಹುವಾಗಿ ನೋಡುತ್ತೇವೆ.) ಧ್ವನಿಯೂ ಇದರಲ್ಲೇ ಹುದುಗಿರುವುದೆಂಬುದನ್ನು ಮರೆಯಬಾರದು.

ಛಂದಸ್ಸಿನ ಇನ್ನೊಂದು ಪ್ರಯೋಜನ ಅದರಿಂದ ಸಹಜವಾಗಿ ಉಂಟಾಗುವ ಪ್ರಾಸ. ಇವುಗಳೇ ನಾದದ ಮೂಲವೆಂದು ಹೇಳಬಹುದು.

'Rhimes the rudders are of verses
with which like ships they steer their courtses.'

ಪ್ರಾಸದ ವಿಧಿಗಳು ನಮ್ಮಲ್ಲಿ ಅನೇಕ (ಆದಿಪ್ರಾಸ, ಮಧ್ಯಪ್ರಾಸ ಮತ್ತು ಅಂತ್ಯಪ್ರಾಸ ಇತ್ಯಾದಿ). ಇವುಗಳನ್ನು ವಿದ್ಯಾರ್ಥಿಗಳು ಗಮನಿಸಬೇಕು.

3. **ನಾದಮಾಧುರ್ಯ** : ಛಂದಸ್ಸು ಮತ್ತು ಪ್ರಾಸದಿಂದ ಉಂಟಾಗುವ ನಾದಕ್ಕಿಂತ ಇನ್ನೂ ಹೆಚ್ಚಿನ ನಾದಮಾಧುರ್ಯ ಪದ್ಯಕಾವ್ಯದಲ್ಲಿ ಕಾಣಿಸಿಕೊಳ್ಳುತ್ತದೆ. ಇದು ಕವಿ ಜೋಡಿಸಿ ಬದಲಾಯಿಸುವ ತುಂಬುನಾದದ ಪದ, ಪದಭಾಗ (syllable) ಅಥವಾ ವಸ್ತುವಿನ ಮೇಲೆ ಅವಲಂಬಿಸಿರುತ್ತದೆ. ಸ್ವರಗಳಲ್ಲಿ ಮೂಡಿ ಬರುವ ಇಂಪು, ಕರ್ಕಶ ಮತ್ತು ಸೌಮ್ಯವ್ಯಂಜನಗಳಲ್ಲಿ ಬರುವ ನಾದಗಳನ್ನು ವಿದ್ಯಾರ್ಥಿಗಳು ಆಘ್ರಾಣಿಸಬೇಕು. ಜೊತೆಗೆ ಆರೋಹಣ, ಅವರೋಹಣಗಳಲ್ಲಿ (raising and falling tone) ಅರ್ಥಕ್ಕನುಗುಣವಾಗಿ ಧ್ವನಿಯನ್ನು ಬದಲಾಯಿಸಿ ಸ್ವರ ಕಲ್ಪನೆಗಳನ್ನು ಮಾನಸಿಕವಾಗಿ ಆಸ್ವಾದಿಸಬೇಕು.

'The music in the brain is far better thing than
music on the tongue.'

ಛಂದಸ್ಸು ಮತ್ತು ಪ್ರಾಸಗಳ ಸಹಾಯವನ್ನು ಅಪೇಕ್ಷಿಸದೆ ಉಂಟಾಗುವ ಸಂಗೀತ ಕವಿಯ ಮಹತ್ವನ್ನು ತೋರಿಸುತ್ತದೆ. ಅಂತಹ ಪದ್ಯಕಾವ್ಯ ನಾದಪೂರ್ಣವಾಗಿ ಶೋಭಿಸುತ್ತದೆ. ಈ ಗಾನವನ್ನು ಅನುಭವಿಸುವುದಕ್ಕೆ ವಿದ್ಯಾರ್ಥಿಗಳು ಪ್ರಯತ್ನಿಸಬೇಕು. ಉಪಾಧ್ಯಾಯರ ಸಹಕಾರ ಇಲ್ಲಿ ಅತ್ಯಗತ್ಯ.

4. **ಅನುಕರಣ ಶಬ್ದಗಳು** : ಪದ್ಯದ ನಾದದಷ್ಟೆ ಮುಖ್ಯವಾಗಿರುವುದು ನಾದದಿಂದ ಬರುವ ಅರ್ಥ. ಇದೇ ಪದ್ಯದ ಸತ್ವ. (essence of poetry). ಇದು ಬಹುಮಟ್ಟಿಗೆ ಪದ್ಯಕಾವ್ಯದಲ್ಲಿ ಬರುವ ಅನುಕರಣ ಶಬ್ದಗಳ ಮೇಲೆ ಅವಲಂಬಿಸಿರುತ್ತೆ. (sound and sense) ಈ ಶಬ್ದಗಳು ಮನುಷ್ಯನ ಹುಟ್ಟುಗುಣಗಳ ಹಾಗೆ; ತಾವಾಗಿಯೇ ಕವಿಗೆ ಗೋಚರವಾಗುತ್ತವೆ. ಕವಿ ಇವುಗಳನ್ನು charge ಮಾಡಿಬಿಟ್ಟಾಗ ಪದ್ಯಕಾವ್ಯದ "ಪುರುಳು

ಪಳಚ್ಚನೆ ಮಿಂಚಿ" ಹೃದ್ಯವಾಗುತ್ತದೆ. ವಿದ್ಯಾರ್ಥಿಗಳಿಗೆ (ಹಿರಿಯರಿಗೂ ಕೂಡ) ಈ ಅನುಕರಣ ಶಬ್ದಗಳು ಹಿಡಿಸು ವಷ್ಟು ಬೇಗ ಸಾಮಾನ್ಯ ಪದಗಳು ಹಿಡಿಸಲಾರವು. ಇದನ್ನು ಗುರುತಿಸುವ ಶಕ್ತಿಯನ್ನು ವಿದ್ಯಾರ್ಥಿ ಬೆಳೆಸಿಕೊಳ್ಳ ಬೇಕು

5. **ಚಿತ್ರಗಳು :** ಪದ್ಯಕಾವ್ಯದ ನಾಪ ಹೃದ್ಯವಾಗುವುದರಿಂದ ಕವಿ ನಿರ್ದಿಷ್ಟವಾದ ಚಿತ್ರಗಳ ಮುಖಾಂತರ ಅದರ ಸತ್ವವನ್ನೂ ಕೊಡುವುದಕ್ಕೆ ಪ್ರಯತ್ನಿಸುತ್ತಾನೆ. ಬುದ್ಧಿಯು ಒರೆಗೆ ಹೆಚ್ಚದೆ ಅದರ ಸತ್ವ ಪಳಚ್ಚನೆ ಗೋಚರವಾಗುತ್ತದೆ. ಇದನ್ನು ಕಂಡುಕೊಳ್ಳುವ ಶಕ್ತಿ ಓದುಗನಿಗೆ ತಾನಾಗಿಯೆ ಬರುತ್ತದೆ. "ಮೂರು ವರ್ಷಗಳ ಹಿಂದೆ" ಎನ್ನುವುದಕ್ಕೆ ಬದಲಾಗಿ "ಮೂರು ಛಳಿಗಾಲದ ಹಿಂದೆ" ಎಂದು ಅಂದಾಗ ಆ ಕಾಲದ ಚಿತ್ರ ಕಣ್ಣಿಗೆ ಕಟ್ಟುತ್ತದೆ. "ವಸಂತ ಕಾಲದಲ್ಲಿ" ಎನ್ನುವುದಕ್ಕೆ ಬದಲಾಗಿ ಆ ಕಾಲದ ಬಣ್ಣಬಣ್ಣದ ವರ್ಣನೆಯನ್ನು ಕೊಟ್ಟಾಗ ಅದು ಹೆಚ್ಚು ಚಿತ್ರಮಯವಾಗುತ್ತದೆ. ಉತ್ತುಂಗ ಶಿಖರದಲ್ಲಿ ನಿಂತು ನೋಡುವ ಕವಿಗೆ ಸಮುದ್ರ "ಕಾಲಿನಡಿಯಲಿ ಸುಕ್ಕಿಟ್ಟು ನುಸುಳುವ" ವಸ್ತುವಾಗಿ ಕಾಣುತ್ತದೆ. ಎಂತಹ ಅದ್ಭುತ ಗಾಂಭೀರ್ಯ ಚಿತ್ರ ! ಇಂತಹ ಬಗೆಬಗೆಯ ಚಿತ್ರಗಳ ಅರ್ಥದಾಸ್ವಾದನೆ ಮಕ್ಕಳಿಗಾದಾಗ ಆಗುವ ಆನಂದ ಅಷ್ಟಿಷ್ಟಲ್ಲ.

6. **ಅಲಂಕಾರಗಳು :** ಅಲಂಕಾರಗಳು ಕವಿಯು ವೀಕ್ಷಿಸುವ ಒಂದು ದೃಶ್ಯದ ಸ್ವಭಾವ ಸಿದ್ಧವಾದ ಸ್ಪಷ್ಟತೆಯ ಕುರುಹು. ಆ ದೃಶ್ಯದ ಬಗೆಬಗೆಯ ವಿನ್ಯಾಸಗಳನ್ನು ಅಥವಾ ಅದರ ಗುಣಗಳನ್ನು ಪಡೆದಿರುವ ಬೇರೆ ಬೇರೆ ವಸ್ತುಗಳನ್ನು ತೋರಿಸುವ ಒಂದು ಚಮತ್ಕಾರವೆನ್ನಬಹುದು.

'Tiger, tiger burning bright'

ಪ್ರಸಿದ್ಧ ಆಂಗ್ಲ ಕವಿ ಬ್ಲೇಕನ ರೂಪಕ ಆ ಕಾಡುಮೃಗದ ಭೀಕರತೆ, ಕ್ರೌರ್ಯ, ಪೌರುಷ, ಗಾಂಭೀರ್ಯ, ಎಲ್ಲವನ್ನೂ ಅರ್ಥಾಲಂಕಾರ ಮತ್ತು ಶಬ್ದಾಲಂಕಾರಗಳ ಮೂಲಕ ಸ್ಪಷ್ಟಪಡಿಸುತ್ತದೆ. ಅಲಂಕಾರಗಳು ಈ ಶಬ್ದಾರ್ಥ ವೈಚಿತ್ರ್ಯಗಳನ್ನು, ಸೌಂದರ್ಯ ತತ್ತ್ವವನ್ನು ವಿಚಾರ ಮಾಡಿ, ಕಾವ್ಯದ ಸ್ವರೂಪ ಲಕ್ಷಣ ಮುಂತಾದುವುಗಳನ್ನೂ ಅವಕ್ಕೆ ಸಂಬಂಧಪಟ್ಟ ಇತರ ಅಂಶಗಳನ್ನೂ ತಿಳಿಸುವ ಶಾಸ್ತ್ರವೆಂದು ಹೇಳಬಹುದು.

7. **ಪದ್ಯಕಾವ್ಯ ಸೌಂದರ್ಯದ ಸ್ಪಷ್ಟ ಸ್ವರೂಪ :**

ಸತ್ಯವೇ ಸೌಂದರ್ಯ, ಸೌಂದರ್ಯವೇ ಸತ್ಯ

ಕವಿಯು ತನ್ನಲ್ಲಿ ಆದ ಒಂದು ಅನುಭವ ಅಥವಾ ತನ್ನ ಪರಿಸರದಲ್ಲಿ ಕಂಡುಕೊಂಡ ವಸ್ತುವಿನ ಚಿತ್ರ ವಿಚಿತ್ರವಾದ, ಮನಮೋಹಕವಾಗಿರುವ ಆಕೃತಿಯ ಸ್ಪಷ್ಟ ಸ್ವರೂಪದ ಪದ್ಯಕಾವ್ಯವನ್ನು ಬೆಳಗಿಸುತ್ತಾನೆ. ಇದು ಸತ್ಯದ ಸ್ವರೂಪವಾಗಿ ನಮ್ಮ ಕಣ್ಣು ಮುಂದೆ ನಿಲ್ಲುತ್ತದೆ. ಆದ್ದರಿಂದ ಪದ್ಯಕಾವ್ಯ ಮಕ್ಕಳಿಗೆ ಬುದ್ಧಿಗ್ರಾಹ್ಯದ ಸಾಧನವಾಗದೆ ಸೌಂದರ್ಯದ ತನ್ಮೂಲಕ ಸತ್ಯದ ಸ್ವರೂಪವಾಗಬೇಕು. ಇದೇ "ಸತ್ಯಂ ಶಿವಂ ಸುಂದರಂ,."

ಮೇಲೆ ಹೇಳಿದ ಅಂಶಗಳನ್ನೊಳಗೊಂಡ ಒಂದು ಪದ್ಯದ ವಿಮರ್ಶೆಯನ್ನು ಇಲ್ಲಿ ಕೊಡಲಾಗಿದೆ.

ಪಾತಕಿಗಳೊಡಲೊಳಿಹ ಪರಮಾತ್ಮನಂತೆ, ಯಮ
ದೂತರೆಳೆತಂದಜಾಮಿಳನಂತೆ, ಕಾಕ ಸಂ
ಘಾತದೊಳ್ ಸಿಕ್ಕಿರ್ದ ಕೋಗಿಲೆಯ ಮರಿಯಂತೆ, ನಲುಗಿ ಕತ್ತಲೆಯೊಳಿರ್ದ
ಶೀತಳಮರೀಚಿ ಲಾಂಛನದಂತೆ, ಬಹಳ ಕೋ
ಪಾತಿಶಯದೊಳಗಿಹ ವಿವೇಕದಂತಾಗ ಪಶು
ಘಾತಕಿಗಳೆತ್ತಿಕೊಂಡುಯ್ದ ಬಾಲಕನಿರ್ದನವರೆಡೆಯೊಳಂಜುತಳುತ,

ಜೈಮಿನಿ ಭಾರತ, 28 ಸಂಧಿ, 31 ಪದ್ಯ..

1. ಕೊಲೆಗಡುಕರ ಮಧ್ಯೆ (ಅಂಜುತಳುತ) ಒದ್ದಾಡುತ್ತಿರುವ ಮುಗ್ಧ ಚಂದ್ರಹಾಸನ ಪರಿಸ್ಥಿತಿ ಹೃದಯಕ್ಕೆ ನಾಟುತ್ತದೆ. 'ಅಂಜುತಳುತ' ಎಂಬ ಪದಗುಚ್ಛದಿಂದಲೆ ಒದ್ದಾಡುತ್ತಿದೆ ಎಂಬ ಭಾವನೆ ಮನಸ್ಸಿಗೆ ಬರುತ್ತದೆ.

2. 1–2–4–5 ನೇ ಸಾಲುಗಳಲ್ಲಿ 5 ಮಾತ್ರೆಗಳ 4 ಗಣವೂ 3–6 ನೇ ಸಾಲುಗಳಲ್ಲಿ 5 ಮಾತ್ರೆಗಳ 6 ಗಣವೂ ಇದ್ದು ಕೊನೆಯಲ್ಲಿ ಗುರುವೊಂದು ಬಂದಿರುವುದರಿಂದ ಇದು ವಾರ್ಧಕ ಷಟ್ಪದಿಯಲ್ಲಿದೆ.
ಆದಿ ಪ್ರಾಸ ಮತ್ತು ಯತಿಗಳನ್ನು ಕವಿ ಇಲ್ಲಿ ಅಳವಡಿಸಿದ್ದಾನೆ. ಓದುಗರ ಮನಸ್ಸಿಗೆ ಆಕರ್ಷಕವಾಗುವಂತೆ ಮಾಡಿದ್ದಾನೆ.

3. ಈ ಪದ್ಯದಲ್ಲಿ ಬರುವ ಕರ್ಕಶ ವ್ಯಂಜನಗಳ ವಿಷಮ ವ್ಯಂಜನಗಳ ನಾದ ಮನಸ್ಸಿಗೆ ಜಿಗುಪ್ಸೆ, ಭಯ, ಕನಿಕರ ಮತ್ತು ಪಶ್ಚಾತ್ತಾಪವನ್ನು ಒಮ್ಮೆಲೆ ಉಂಟುಮಾಡುತ್ತದೆ. ಪಾತ, ಘಾತ, ಶೀತ ಮತ್ತು ಕಕಾರ ಳಕಾರಗಳನ್ನು ಕವಿ ಬಹಳ ಚಮತ್ಕಾರವಾಗಿ ಭೀಕರಪರಿಣಾಮ ಉಂಟಾಗುವಂತೆ ಮಾಡಿದ್ದಾನೆ.

4. ಕಾಕ, ಘಾತಕಿ ಮತ್ತು ಪಾತಕಿ ಇವುಗಳ ಅರ್ಥ ತಾನಾಗಿಯೆ ಮಿಂಚಿ ಓದುಗನ ಮೇಲೆ ವಿಪರೀತವಾದ ಪರಿಣಾಮವನ್ನು ಉಂಟುಮಾಡುತ್ತದೆ (telling effect). ಇವು ಅನುಕರಣ ಶಬ್ದಗಳ ರೀತಿ ಇದೆ.

5. ಕಾಗೆಗಳ ಮಧ್ಯೆ ಇರುವ ಕೋಗಿಲೆ, ಕತ್ತಲೆಯ ಮಧ್ಯೆ ಇರುವ ಚಂದ್ರ ಮತ್ತು ಪಾತಕಿಗಳ ಮಧ್ಯೆ ಇರುವ ಚಂದ್ರಹಾಸನ ಚಿತ್ರ ಕಣ್ಣಿಗೆ ಕಟ್ಟಿದಂತಿದೆ.

6. ಪಾಪಿಗಳ ಮಧ್ಯದ ದೇವರು, ಯಮದೂತರ ಮಧ್ಯೆ ಅಜಾಮಿಳ, ಕೋಪದ ಭರದಲ್ಲಿ ವಿವೇಕ–ಇವುಗಳು ಇರುವ ಹಾಗೆ ಚಂದ್ರಹಾಸ ಇದ್ದನೆಂದು ವರ್ಣಿಸಿರುವುದರಿಂದ ಇದು ಉಪಮಾಲಂಕಾರದಲ್ಲಿದೆ. ಪದ್ಯಕಾವ್ಯದ ಸತ್ವವನ್ನು ಸ್ಪಷ್ಟಪಡಿಸುವುದೇ ಉಪಮಾಲಂಕಾರದ ಉದ್ದೇಶ.

7. ಕವಿಯ ಒಳಗಣ್ಣಿಗೆ ಗೋಚರಿಸಿದ ಈ ಚಿತ್ರ ಸತ್ಯದ ಸ್ಪಷ್ಟ ಸ್ವರೂಪ.

ಪದ್ಯಕಾವ್ಯವನ್ನು ಪಠಿಸುವಾಗ ವಿದ್ಯಾರ್ಥಿಗಳು ಈ ಮೇಲೆ ಹೇಳಿದ ಅಂಶಗಳ ಕಡೆ ನಮ್ಮ ದೃಷ್ಟಿಕೋನವನ್ನು ಕೇಂದ್ರಿಕರಿಸಿದ್ದೆ ಆದರೆ ಅವರು ಪಡೆಯುವ ಆನಂದ ವರ್ಣನಾತೀತ. ಇದೇ ಕಾವ್ಯಗಳನ್ನು ಅರ್ಥೈಸುವ ಮೊದಲ ಹೆಜ್ಜೆ.

ಮುಂದೆ ವಿದ್ಯಾರ್ಥಿ ಪದ್ಯಕಾವ್ಯದಲ್ಲಿ ಕಾಣುವ ವಾಕ್ಯರಚನೆಗಳ ಕಡೆ ಗಮನವನ್ನು ಹರಿಸಬಹುದು. ವಾಕ್ಯಭೇದಗಳು, ವಾಕ್ಯಗಳಲ್ಲಿ ಕಾಣುವ ಸಾದೃಶ್ಯ, ವಾಕ್ಯಗಳಲ್ಲಿ ಜೋಡಿಸಿರುವ ಕ್ರಿಯಾಪದ, ಕ್ರಿಯಾವಿಶೇಷಣ, ನಾಮಪದ, ಗುಣವಾಚಕ, ಕೃದಂತ ಭಾವನಾಮಗಳು, ಇತ್ಯಾದಿಗಳಿಂದುಟಾಗುವ ಉಪಯೋಗಗಳನ್ನು ಕೂಲಂಕಶವಾಗಿ ವಿಮರ್ಶಿಸಿ ಪದ್ಯಕಾವ್ಯದ ಹೃದಯವನ್ನೆ ಹೊಕ್ಕು ಸೌಂದರ್ಯ ಸಾಧನೆಯನ್ನು ಮಾಡಬಹುದು.

ಇಂತಹ ಶಕ್ತಿಯನ್ನು ವೃದ್ಧಿಸಿಕೊಳ್ಳುವುದಕ್ಕೆ ಈ ಪ್ರಬಂಧ ಮೊದಲನೆಯ ಹೆಜ್ಜೆಯಾದರೆ ನಾನು ಧನ್ಯ.

ಗ್ರಂಥಋಣ

1. ಸಾಹಿತ್ಯದ ವಿರಾಟಸ್ವರೂಪ—ದ. ರಾ. ಬೇಂದ್ರೆ.
2. ಕನ್ನಡ ಕೈಪಿಡಿ—ಸಂಪುಟ 1, ಪ್ರಸಾರಾಂಗ, ವಿಶ್ವವಿದ್ಯಾನಿಲಯ, ಮೈಸೂರು
3. The Rudiments of criticism— E. A. G. Lamborn.

2–11

ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ

'ತೆ' ಎಂಬ ಅವ್ಯಯದ ವಿಚಾರ

'ತೆ' ಎಂಬ ಅವ್ಯಯ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಅಲ್ಲಲ್ಲಿ ವಿರಳವಾಗಿ ಕಂಡುಬಂದಿದೆ. ಕೇಶಿರಾಜನನ್ನು ಒಳಕೊಂಡು ಎಲ್ಲ ಹಳಗನ್ನಡ ವೈಯಾಕರಣರ ಕಣ್ಣನ್ನೂ ತಪ್ಪಿಸಿರುವ ಈ ಅವ್ಯಯ ವಿದ್ವಾಂಸರ ಗಮನವನ್ನೂ ಅಷ್ಟಾಗಿ ಸೆಳೆದಿಲ್ಲ ಎನ್ನಬಹುದು. 'ಪಂಪಭಾರತ'ದ—

ಮುಳಿದು ಶಿಶುಪಾಲನಾ ಸಭೆ
ಯೊಳಗೆ ಮಹಾಪ್ರಳಯ ಜಳಧಿನಾದದಿನಿರದು
ಚ್ಚಳಿಸಿ ನುಡಿದಂತೆ ಕಳೆ ಕಳೆ
ಹರಿಗೆತ್ತಿದನರ್ಘ್ಯದರ್ಘ್ಯಮಂ ಧರ್ಮಸುತಾ ॥ (6–42)

ಎಂಬ ಪದ್ಯದ ಆಶಯವನ್ನು ತಮ್ಮ ವಿದ್ಯಾರ್ಥಿಗಳಿಗೆ ವಿವರಿಸುವಾಗ ಬಿ. ಎಂ. ಶ್ರೀಕಂಠಯ್ಯನವರು 'ನುಡಿದಂತೆ' ಎಂಬೆಡೆಯಲ್ಲಿ ದಿಟವಾಗಿ ಇರಬೇಕಾದ್ದು 'ನುಡಿದಂ ತೆ' ಎಂಬುದಾಗಿ ಮೊದಲ ಸಲ ಸೂಚಿಸಿದರೆಂದು ಡಿ. ಎಲ್. ನರಸಿಂಹಾಚಾರ್ಯರ ಒಂದು ಟಿಪ್ಪಣಿಯಿಂದ ತಿಳಿಯುತ್ತದೆ.[1] ಬಹುಮಟ್ಟಿಗೆ 'ಛೀ' ಎಂಬ ಅರ್ಥವನ್ನು ಕೊಡುವ ನಿಪಾತಾವ್ಯಯ 'ತೆ'. "ಆ ಸಭೆಯಲ್ಲಿ ಶಿಶುಪಾಲ ಕ್ರುದ್ಧನಾಗಿ, ಉಗ್ರವಾದ ಪ್ರಲಯಸಮುದ್ರದ ಘೋಷದಿಂದ ತಡೆಯದೆ ಮೇಲೆ ಚಿಮ್ಮಿ, 'ಧರ್ಮರಾಯನೇ, ಕೃಷ್ಣನಿಗೆ ಎತ್ತಿದ ಶ್ರೇಷ್ಠವಾದ ಅರ್ಘ್ಯೋದಕವನ್ನು ಛೀ ತೆಗೆ ತೆಗೆ' ಎಂದು ನುಡಿದನು" ಎಂಬುದು ಮೇಲಿನ ಪದ್ಯದ ಸಾಮಾನ್ಯವಾದ ಅರ್ಥ.

ಈಚೆಗೆ 'ಕನ್ನಡ ಕಾವ್ಯಾಂಜಲಿ–ಸಂಪುಟ 2' (1960, 61) ರಲ್ಲಿ ಉದ್ಧೃತವಾದ ಈ ಕಾವ್ಯಭಾಗದ ಟಿಪ್ಪಣಿಗಳಲ್ಲಿ (ಪು. 73) ಮತ್ತು ಡಿ. ಎಲ್. ನರಸಿಂಹಾಚಾರ್ಯರ 'ಪಂಪಭಾರತ ದೀಪಿಕೆ' (1971, ಪು. 228) ಯಲ್ಲಿ 'ನುಡಿದಂ ತೆ' ಎಂಬುದಾಗಿಯೇ ಶಬ್ದರೂಪವನ್ನು ಗ್ರಹಿಸಿರುವುದೂ ಅರ್ಥಮಾಡಿರುವುದೂ ಕಾಣುತ್ತದೆ. ಹೀಗೆ ಅರ್ಥಮಾಡದೆ, 'ನುಡಿದಂತೆ' ಎಂಬ ಶಬ್ದರೂಪವನ್ನಿಟ್ಟುಕೊಂಡು ಅರ್ಥಮಾಡಿದ್ದಾದರೆ, ಪದ್ಯದಲ್ಲಿ ವಿನ್ಯಾಸಗೊಂಡ ವಾಕ್ಯ ಅಸಂಪೂರ್ಣವಾಗಿ ನಿಂತು, ವಿಲಕ್ಷಣವಾಗಿ ತೋರುತ್ತದೆ. ಪಂಪಭಾರತದ ಹಳೆಯ (1926, 31, 35) ಮತ್ತು ಈಚಿನ (1973) ಮುದ್ರಣಗಳಲ್ಲೆಲ್ಲ[2] ಶಬ್ದರೂಪವನ್ನು 'ನುಡಿದಂತೆ' ಎಂದು ಸೇರಿಸಿಯೇ ಅಚ್ಚುಮಾಡಿರುವುದು, ಮುಂಬನ ಮುದ್ರಣಗಳಲ್ಲಾದರೂ ಸರಿಯಾಗಿ ಅಚ್ಚಾಗಬೇಕಾಗಿದೆ.

---

1. 'ಕನ್ನಡ ಗ್ರಂಥ ಸಂಪಾದನೆ', ಮೈಸೂರು, 1964, ಪು. 126

2. 'ಕನ್ನಡ ಕಾವ್ಯಾಂಜಲಿ'—ಸಂಪುಟ 2, ಮೈಸೂರು 1961, 'ಕನ್ನಡ ಕೈಪಿಡಿ'—ಸಂಪುಟ 2 ಮೈಸೂರು, 1970 ಮತ್ತು ಇತರತ್ರವೂ.

ಈ ಅವ್ಯಯದ ಇನ್ನೂ ಕೆಲವು ಪ್ರಯೋಗಗಳುಂಟು. 'ಅಜಿತಪುರಾಣ' (993) ದಲ್ಲಿ ವಿಮಲವಾಹನನು ಶರೀರಾನಿತ್ಯತೆಯನ್ನು ಪರಿಭಾವಿಸಿದ ಸಂದರ್ಭವನ್ನು ತಿಳಿಸುವಾಗಿನ ಒಂದು ಪದ್ಯ ಈ ರೀತಿಯಾಗಿದೆ :

ಒಡಲಂ ದಂಡಿಸಿ ತಪದೊಳ್
ನಡೆವ ತಪಸ್ವಿಗಳುಮೆಯ್ದೆ ಮನಮಂ ತೆ ಗೆಲಲ್
ಪಡೆಯರೆನೆ ಚಪಳರಕ್ಕಟ
ಪಡೆದಪರೆ ಗೃಹಸ್ಥರೆಂತೊ ಸರ್ವಾವಸ್ಥರ್ ॥ (2–91)

"ಶರೀರವನ್ನು ಕ್ಲೇಶಗಳಿಗೆ ಗುರಿಪಡಿಸಿ ತಪಸ್ಸುಮಾಡುವ ತಪಸ್ವಿಗಳೂ ಕೂಡ ಮನಸ್ಸನ್ನು, ಛೀ (= ಥೂ, ಬಿಡು) ಗೆಲ್ಲಲಾರರು ಎನ್ನಬೇಕಾದರೆ, ಎಲ್ಲ ಅವಸ್ಥೆಗಳ ಗೃಹಸ್ಥರು, ಚಪಲಸ್ವಭಾವರು, ಅಯ್ಯೋ ಹೇಗಾದರೂ ಸರಿ, ಶಕ್ತರಾದರೇ ?" ಎಂಬುದು ಇಲ್ಲಿ ಅಭಿಪ್ರಾಯ.

ಮಂ. ಆ. ರಾಮಾನುಜಯ್ಯಂಗಾರ್ಯರ ಪರಿಷ್ಕರಣದ (ಮೈಸೂರು 1909) ಪಾಠದಂತೆ ಪೂರ್ವೋಕ್ತ ಪದ್ಯವನ್ನು ಉದ್ಧರಿಸಿ ಅರ್ಥವನ್ನು ತಿಳಿಸಿದೆ. ಈ ಅರ್ಥ ಸಂಗತವಾಗಿಯೂ ಇದೆ. ಎಚ್. ದೇವೀರಪ್ಪ, ದೇ. ಜವರೇ ಗೌಡರ ಈಚಿನ ಪರಿಷ್ಕರಣದಲ್ಲಿ (ಮೈಸೂರು, 1959) ಈ ಪದ್ಯದ "ಮನಮಂ ತೆ ಗೆಲಲ್" ಎಂಬ ಭಾಗದೆಡೆ "ಮನಮಂ ತಗೆಯಲ್" ಎಂಬ ಪಾಠವನ್ನು ಒಪ್ಪಿದೆ. ಇದಕ್ಕೆ ಪ್ರತಿಗಳ ಬೆಂಬಲ ಏನಿದೆಯೆಂಬುದು ವಿಶದವಿಲ್ಲ. ಅಲ್ಲಿಯೇ ತೋರಿಸಿರುವ ಪಾಠಾಂತರಗಳು "ತಗೆಲ (ಅ), ತೆಗೆಲ (ಈ ಉ ಎ ಕ)" ಎಂದಿವೆ. 'ತಗೆಲ' ಅಥವಾ 'ತ ಗೆಲ' ಬಳಸಿದರೆ ಸಿದ್ಧವಾಗುವ ಪದರೂಪ ವಾಕ್ಯರಚನೆಗಳು ಅಸಂಬದ್ಧ ; ಆದ್ದರಿಂದ ತ್ಯಾಜ್ಯ. ಇನ್ನು 'ತೆಗೆಲ' ಅಥವಾ 'ತೆ ಗೆಲ' ಬಳಸಿದರೆ 'ಮನಮಂತೆಗೆಲಲ್', 'ಮನಮಂತೆ ಗೆಲಲ್', 'ಮನಮಂ ತೆ ಗೆಲಲ್' 'ಮನಮಂ ತೆಗೆಲಲ್' ಎಂಬ ಕೆಲವು ವಿಭಜನೆಗಳು ಸಾಧ್ಯವಾಗಿ ಸಮಂಜಸವಾದ ಅರ್ಥಕ್ಕೆ ಸಹಕಾರಿಯಾದ್ದು ಮೂರನೆಯದು ಮಾತ್ರವೇ. ಇದು ಈಗಾಗಲೇ ನೋಡಿರುವ 1909ರ ಪರಿಷ್ಕರಣದಲ್ಲಿ ಅಂಗೀಕೃತವಾಗಿರುವ ಪಾಠ. 'ಮನಮಂ ತಗೆಯಲ್' ಎಂದರೆ "ಮನಸ್ಸನ್ನು ಸ್ತಂಭಿಸಲು ಎಂದರೆ ನಿಗ್ರಹಿಸಲು" (ತಗೆ ಸ್ತಂಭನೇ : ಶಮಧಾ.) ಎಂದು ಅರ್ಥವಾಗುವುದೇನೋ ನಿಜ ; ಅದು ಪದಾರ್ಥವಿಶದತೆಗೆ ಹೊಂದಿಬರುವುದೂ ನಿಜ. ಆದರೆ ಯಕಾರಕ್ಕೆ ಪ್ರತಿಗಳ ಬೆಂಬಲ ? ಆದ್ದರಿಂದ ಇಲ್ಲಿ 1909ರ ಪರಿಷ್ಕರಣದಲ್ಲಿ 'ತೆ' ಅವ್ಯಯವನ್ನು ಒಳಕೊಂಡ ಪದ್ಯಪಾಠವೇ ಸೂಕ್ತ.

'ಜಗನ್ನಾಥ ವಿಜಯ'ದಲ್ಲಿ ಕವಿ ರುದ್ರಭಟ್ಟನು (ಸು. 1185), ಕಾವ್ಯಾರಂಭದಲ್ಲಿ ಸಾಂಪ್ರದಾಯಿಕ ರೀತಿಯಲ್ಲಿ ದುರ್ಜನನಿಂದೆಯನ್ನು ಮಾಡುವಾಗ ಒಂದು ಪದ್ಯವನ್ನು ಹೀಗೆ ಬರೆದಿದ್ದಾನೆ :

ಕವಿತಾಪ್ರೌಢನೆ ಸೋಲ್ವವೊಲ್ ಕೃತಿಯೊಳಜ್ಞಂ ಸೋಲ್ವನೇ ಚಂದ್ರಕಾಂ
ತವೊಸರ್ವಂತಿರೆ ಗೋರಿಕಲ್ಲೊಸರ್ಗುಮೇ ಬೆಳ್ದಿಂಗಳೊಳ್ ತುಂಬಿ ಪೀ
ರ್ವವೊಲೇಂ ಪೀರ್ದಪುದೇ ಕಡಂದುಱುತೆ ನವ್ಯಾಮೋದಮಂ ಪೂಗಳೊಳ್
ನವಚೂತಂ ತಳಿರ್ವಂದದಿಂ ತಳಿರ್ಗುಮೇ ಸ್ಥಾಣೂತ್ಕರಂ ಚೈತ್ರದೊಳ್ ॥ (1–13)

"ಕೃತಿಗೆ ಬಲ್ಲವನು ಮನಸೋಲುವ ಹಾಗೆ ಅಜ್ಞನಾದವನು ಸೋಲುವನೇ ? ಬೆಳುದಿಂಗಳು ಚೆಲ್ಲಿದಾಗ ಚಂದ್ರಕಾಂತಶಿಲೆ ಒಸರುವ ಹಾಗೆ ಬೆಣಚುಕಲ್ಲು ಒಸರುವುದೇ ? ಹೂವುಗಳ ಹೊಸ ರಸವನ್ನು ದುಂಬಿ ಹೀರುವ ಹಾಗೆ 'ಕಡಂದುರುತೆ' ಹೀರುತ್ತದೆಯೇ ? ಚೈತ್ರ ಮಾಸದಲ್ಲಿ ಹೊಸ ಮಾವಿನ ಮರ ಚಿಗುರುವ ಹಾಗೆ ಮೋಟು ಮರಗಳು ಚಿಗುರುತ್ತವೆಯೆ ?". ಇದು ಕವಿಯ ಪ್ರಶ್ನೆ. ಇಲ್ಲಿ 'ಕಡಂದುಱುತೆ' ಎಂದರೇನು ? ಕಿಟ್ಟೆಲ್ ತಮ್ಮ ನಿಘಂಟಿನಲ್ಲಿ ಇದೇ ಪ್ರಯೋಗವನ್ನೆತ್ತಿಕೊಂಡು, 'ಕಡಂದಱು' ಎಂಬ ಪದಕ್ಕಿರುವ ಅರ್ಥವೇ ಈ ಪದಕ್ಕೆ ಕೂಡ ಇದೆ ಯೆಂದು ಸೂಚಿಸಿ ತಕ್ಕ ಅರ್ಥಕೊಟ್ಟಿದ್ದಾರೆ. ಅವರು ಸರಿಯಾಗಿಯೇ ಕೊಟ್ಟಿರುವಂತೆ ಕಡ (ಣ)ಜದ ಹುಳು

ಎಂಬುದು ಅವರ ಅರ್ಥ. ಆದರೆ 'ಕಡಂದಱು' ಎಂಬ ಪದಕ್ಕೆ ಮಾತ್ರ ಪ್ರಯೋಗಗಳು ಕಾಣುವವಲ್ಲದೆ,[3] 'ಕಡಂದು ಱುತೆ' ಎಂಬುವಕ್ಕೆ ಜಗವಿ.ದ ಹೊರತು ಅನ್ಯತ್ರ ಪ್ರಯೋಗವಿಲ್ಲ. 19)4ರ ಜಗವಿ.ದ ಪರಿಷ್ಕರಣದಲ್ಲಿ "ಕಡಂದಱು ತೆಸವ್ಯಾಮೋದಮಂ" ಎಂದಿದ್ದು, ಉಳಿದ ಪರಿಷ್ಕರಣಗಳಲ್ಲಿ (1922,23,76) "ಕಡಂದುಱುತೆ ಸವ್ಯಾಮೋದಮಂ" ಎಂಬುದಾಗಿದೆ. ವಾಸ್ತವವಾಗಿ 'ಕಡಂದುಱುತೆ' ಒಂದು ಮಿಥ್ಯಾಪದ (ghost-word). ಹಸ್ತಪ್ರತಿಗಳಲ್ಲಿ 'ಕಡಂದುಱು ತೆ' ಎಂಬುದಾಗಿ ಲಿಖಿತವಾಗಬೇಕಾದ್ದು, 'ಕಡಂದುಱುತೆ' ಎಂದು ಅವಿರಳವಾಗಿ ಲಿಖಿತವಾಗಿದ್ದರಿಂದ ಈ ಪದ ಹುಟ್ಟಿತು. ಈ ಸಂಗತಿಯನ್ನು ಗ್ರಹಿಸದೆ ಕಿಟ್ಟೆಲ್ ಇದನ್ನೂ ಒಂದು ನಾಮಪ್ರಕೃತಿಯನ್ನಾಗಿ ತಮ್ಮ ನಿಘಂಟಿನಲ್ಲಿ ತೋರಿಸಿದ್ದಾರೆ. ಸಂಬಂಧಿಸಿದ ಭಾಗ ಇಲ್ಲಿ "ತುಂಬಿ ಪೀರ್ವವೊಲೇಂ ಪೀರ್ದಪುದೇ ಕಡಂದುಱು ತೆ ಸವ್ಯಾಮೋದಮಂ ಪೂಗಳೊಳ್" ಎಂದಿದ್ದು, ಇದರ ಆಶಯ "ಹೂವುಗಳಲ್ಲಿ ಹೊಸರಸವನ್ನು ದುಂಬಿ ಹೀರುವ ಹಾಗೆ ಕಣಜದ ಹುಳು, ಛೀ ಹೀರುತ್ತದೆಯೇ?" ಎಂದಾಗುವುದು.[4]

'ಜೀವಸಂಬೋಧನ'ದಲ್ಲಿ ಬಂಧುವರ್ಮನು (ಸು. 12)0,) ಮಹಾವ್ರತಗಳನ್ನು ಪರಿಗ್ರಹಿಸುವ ಸಂದರ್ಭವನ್ನು ಕುರಿತಂತೆ, ಲೋಕಾನುಪ್ರೇಕ್ಷೆಯಲ್ಲಿ ಕೊನೆಗೆ ಒಂದು ಪದ್ಯವನ್ನು ಹೀಗೆ ಬರೆದಿದ್ದಾನೆ :

ನೆಟ್ಟನೆ ಸರ್ವಭಕ್ಷಿ (ಕ್ಷ) ಭುವನತ್ರಯ ಮೆಲ್ಲಮನೇನೊ ನುಂಗನೇ
ತೊಟ್ಟನೆ ನುಂಗುಗುಂ ತನಗೆ ದೇಹದ ಮಾತಿನಿತಿಲ್ಲದಿರ್ಪ (ರ್ಪ) ನಂ
ತಿಟ್ಟಳಮಲ್ತು ರಾಹು ತನುವಿಲ್ಲದೆ ತಾನುಗುಳ್ದಿಪ್ಪನೇಂ ಮನಂ
ಗೆಟ್ಟುಗುಳ್ದಪ್ಪ (ನಾ)ನೇ ರವಿ ನಿಶಾಕರರಂ ತೆ ನಿವೃತ್ತಿಯಿಲ್ಲದೊಂ ॥ (9–25)

"ಸರ್ವಭಕ್ಷಕನಾದ ಅಗ್ನಿ ಮೂರು ಲೋಕಗಳನ್ನೂ ನುಂಗದೇ ಇರುತ್ತಿದ್ದನೇ ? ಕೂಡಲೇ ನುಂಗುತ್ತಿದ್ದ. ತನಗೆ (ನುಂಗಿದ್ದನ್ನು ಹುಗಿದಿಟ್ಟುಕೊಳ್ಳಲು) ದೇಹವೆಂಬುದೇನೂ ಇಲ್ಲವಾದ್ದರಿಂದ (ಹಾಗೆ ಮಾಡದೆ) ಸುಮ್ಮನಿದ್ದಾನೆ. ಹಾಗೆಯೇ, ಛೀ ರಾಹು ತಾನು ನುಂಗಿದ ಸೂರ್ಯ ಚಂದ್ರರನ್ನು (ಒಳಗೆ ಹುಗಿದಿಟ್ಟುಕೊಳ್ಳಲು) ಒಡಲೆಂಬುದು ಇಲ್ಲದೆ ಉಗುಳುತ್ತಾನೆ; ಏನು ಬೇಸರದಿಂದ ಉಗುಳುತ್ತಾನೆಯೇ ? ಆತ ನಿವೃತ್ತಿಯಿಲ್ಲದವನು."

ಮುಂದಿನ ಗದ್ಯದಲ್ಲಿ ಈ ಆಶಯ ಸೂಕ್ತರೀತಿಯಲ್ಲಿ ಮುನ್ನಡೆದು ಮುಗಿದಿದೆ : "ರಾಹುವಿಗೆ ಮೈಯಿಲ್ಲದೆ ಚಂದ್ರಾದಿತ್ಯರು ಉಳಿದುಕೊಳ್ಳುವಂತೆ, ಪಾಪಕ್ಕೆ ಹೇಸದವನಿಗೆ, ಮಾಡಿದ ಪಾಪಗಳನ್ನು ದಕ್ಕಿಸಲು ಆಗುವ ಮಟ್ಟಿಗೆ ದೇಹವಿಲ್ಲದ್ದರಿಂದ ಈ ಮೂರು ಲೋಕಗಳೂ ಉಳಿದುಕೊಂಡುವು ; ಹಾಗಲ್ಲದಿದ್ದರೆ ಅವನ ಹೊಟ್ಟೆಯಲ್ಲಿ ಅವು ಜೀರ್ಣವಾಗಿಹೋಗದೆ ಉಳಿಯುತ್ತಿದ್ದುವೇನು ? ಅಂತಹ ಮಹಾಪಾತಕನಿಗೆ ಹೆದರಿ ಮಹಾವ್ರತಗಳನ್ನು ಧರಿಸುವುದು."

ಗ್ರಂಥದ ಸಂಪಾದಕರು 'ತೆ' ಅವ್ಯಯವನ್ನು ಸರಿಯಾಗಿಯೇ ಗುರುತಿಸಿರುವುದು ಮೆಚ್ಚತಕ್ಕದ್ದಾಗಿದೆ. ಅವರು ಪರಿಶಿಷ್ಟ 5ರಲ್ಲಿಯ ಕ್ಲಿಷ್ಟಪದಕೋಶದಲ್ಲಿ "ತೆ (ನಿಪಾತ) ಛೀ ! ಎಂಬ ಧಿಕ್ಕಾರ ಸೂಚಕ" ಎಂಬುದಾಗಿಯೂ ತಿಳಿಸಿದ್ದಾರೆ.

ಈಚಿನ ಕಾವ್ಯವಾದ 'ಇಮ್ಮಡಿ ಗುರುಸಿದ್ಧನ (172)) 'ಹಾಲಾಸ್ಯ ಪುರಾಣ'ದ ತೃತೀಯಕಾಂಡದ 'ಚೋಳ ಸೇನಾಪ್ರಪಾತನಲೀಲೆ'ಯೆಂಬ ಪಂಚಮಾಶ್ವಾಸದಲ್ಲಿ ಚೋಳರಾಜನೊಬ್ಬ ಸುಂದರಪಾದಶೇಖರನೆಂಬ

---

3. ಕೆಲವು ಪ್ರಯೋಗಗಳು : "ಮದುವೆಯ ನೆರವಿಯುಂ ಕಡಂದುಱು ಕವಿವಂತೆ" (ಧರ್ಮಾಮೃ. 2–71) ; "ಕಾವನುಳಿ ಕಱಿಪಂತೆಯುಂ ಕಡಂದಱ ಹುಟ್ಟಿಯು ಕೆಣಕಿದಂತೆಯುಂ" (ಎಕ., VIII, ಸೊರಬ 175 ; 1156) ; "ಅಱಿಯದು ಕಡಂದಱು ಕಂಪಂ (ಶಬ್ದಾನು. ಸೂತ್ರ 292) ಇತ್ಯಾದಿ ಶಾಸನ,ದಲ್ಲಿ ನಿತ್ಯಬಿಂದುವಿನ ಪದಪಟ್ಟಿಯಲ್ಲಿ ಇದನ್ನು ಸೇರಿಸಿದ್ದರೂ ಕಡುಂದುಱು, ಕಡುಂದುಱು ರೂಪಗಳಲ್ಲಿಯೂ ಇದು ಕಂಡುಬರುತ್ತದೆ.

4. ಡಿ. ಎಲ್. ನರಸಿಂಹಾಚಾರ್ಯರು 'ಪಂಪಭಾರತ ದೀಪಿಕೆಯಲ್ಲಿ, ಪಂಪಭಾ. ದ 6–42ರ ಪದ್ಯದ ಅರ್ಥವನ್ನು ವಿವರಿಸುವಾಗ ಈ ಪ್ರಯೋಗವನ್ನು ಪ್ರಾಸಂಗಿಕವಾಗಿ ಉಲ್ಲೇಖಿಸಿದ್ದಾರೆ.

ಪಾಂಡ್ಯರಾಜನ ಮೇಲೆ ದಂಡೆತ್ತಿ ಬಂದಾಗ, ಆ ಪಾಂಡ್ಯನು ಶಿವನಿಗೆ ಮೊರೆಯಿಟ್ಟುದನ್ನು ಹೇಳುವ ಒಂದು ಅಪೂರ್ಣ ಪದ್ಯ ಬರುತ್ತದೆ. ಆ ಪದ್ಯ :

ಮತ್ತಂ ಚೋಳನೃಪಂ ಸ್ವಮೂಲಬಲದಿಂ ಸಾಹಸ್ರಸಂಖ್ಯೈಕದಿಂ
ಮೊತ್ತಂಗೂಡೆ ತೆ ಪಾಂಡ್ಯಸೇನೆಯನಣಂ ಕೊಂದಾತನಂ ತಂದಪೆಂ
ಜೊತ್ತೇತಕ್ಕಿದಕೆಂದು ಕೂಗಿ ನುಡಿಯಲ್ ಕೇಳುತ್ತದಂ ಸುಂದರಾ
ಯತ್ತಾಂಘ್ರಿದ್ವಯಶೇಖರಂ ಪೆ(ೞ)ರ್ದು ಸರ್ವೇಶಂಗೆ ದೂಱಲ್ಕವಂ ॥ (3–5–17)

ಪದ್ಯದ ಆಶಯ ಸುಲಭವಾಗಿದೆ. ಆದರೆ ಇಲ್ಲಿ ‘ತೆ’ ಅವ್ಯಯ ಜುಗುಪ್ಸನಾರ್ಥದಲ್ಲಿಯೋ ಗರ್ಹಣಾರ್ಥದಲ್ಲಿಯೋ ಬಂದಿರದೆ ‘ಪ್ಪೋ’ ಎಂಬ ಅವ್ಯಯ ದ್ಯೋತಿಸುವ ತಿರಸ್ಕಾರ, ಅಹಂಕಾರ ಇವನ್ನು ಸೂಚಿಸುವ ಅವ್ಯಯವಾಗಿ ಬಂದಿರುವಂತೆ ತೋರುತ್ತದೆ.

ಇದುವರೆಗೆ ‘ತೆ’ ಎಂಬ ಅವ್ಯಯದ ಕೆಲವು ಪ್ರಯೋಗಗಳನ್ನೂ[೬] ಅವು ಯಾವ ಅರ್ಥಗಳಲ್ಲಿ ಬಳಕೆಯಾಗಿವೆಯೆಂಬುದನ್ನೂ ನೋಡಿ ಆಯಿತು. ಮುಖ್ಯವಾಗಿ ಇದು, ಜುಗುಪ್ಸೆ+ಗರ್ಹಣೆಗಳನ್ನು ಸೂಚನೆ ಮಾಡುವ ಚಿಃ (= ಛೀ) ಎಂಬುದಕ್ಕೆ ಸಂವಾದಿಯಾಗಿ ಬರುತ್ತದೆ. ಈ ಶಬ್ದದ ನಿಷ್ಪತ್ತಿ ವಿಚಾರಣೀಯ. ತೆಗೆ > ತೆ ಆಗಿದೆಯೋ ಅಥವಾ ಬೇರೆ ಹೇಗೆ ಬಂದಿದೆಯೋ ತಿಳಿಯದು. ದ್ರಾವಿಡ ವ್ಯುತ್ಪತ್ತಿಕೋಶದ ಪ್ರಕಾರ ತಮಿಳು ತೆಲುಗು ಮೊದಲಾದ ಸೋದರ ಭಾಷೆಗಳಲ್ಲಿ ‘ಚಿಃ’ ಎಂಬುದರ ಸದೃಶರೂಪಗಳನ್ನು ಕಾಣಬಹುದೇ ವಿನಾ ‘ತೆ’ ಎಂಬುದನ್ನು ಹೋಲುವ ಯಾವ ರೂಪವೂ ಕಂಡುಬರುವಂತೆ ತೋರುವುದಿಲ್ಲ; ಆದುದರಿಂದ ಈ ನಿಪಾತಾವ್ಯಯ ಕನ್ನಡ ಭಾಷೆಗೆ ವಿಶಿಷ್ಟವಾದುದು ಎಂದು ತಿಳಿಯುವುದು.

೬. ಪಂಪ ‘ಆದಿಪುರಾಣ’ದ “ಅಣಮೆಮೆಯಿಕ್ಕದೊಪ್ಪುಗಮೆ....” (4–47) ಎಂಬ ಒಂದು ಪದ್ಯದ ಪಾಠ, ಈಚಿನ ಎಲ್. ಬಸವರಾಜು ಅವರ ಪರಿಷ್ಕರಣದಲ್ಲಿ (1976) ಈ ಹಿಂದಿನ ಪರಿಷ್ಕರಣಗಳ (1900, 1953) ಪಾಠಗಳಿಗಿಂತ ಅಲ್ಲಲ್ಲಿ ಬೇರೆಯದಾಗಿದ್ದು, ಪದ್ಯ ಪಾಠದಲ್ಲಿ ಎರಡು ಕಡೆ ‘ತೆ’ ಎಂಬ ಅವ್ಯಯವನ್ನು ಕಾಣಿಸಿದೆ. ಆದರೆ ಈ ಸಂಯೋಜನೆ ಅಸಮರ್ಥವಾದ್ದು. ಮೊದಲ ಪಾದದಲ್ಲಿ ಈ ಸಂಯೋಜನೆಯಿಂದ ಛಂದಸ್ಸು ಕೆಟ್ಟಿದೆ; ಮೂರನೆಯ ಪಾದದಲ್ಲಿಯ ಸಂಯೋಜನೆಗೆ ಯಾವ ಹಸ್ತಪ್ರತಿಯ ಬೆಂಬಲವೂ ಇಲ್ಲವಾಗಿದೆ. ಹೀಗಾಗಿ ಹಿಂದಿನ ಪರಿಷ್ಕರಣಗಳ ಪಾಠಗಳೇ ಈಯೆಡೆ ಗ್ರಾಹ್ಯ. ಅವನ್ನು ಪ್ರತಿಗಳ ಬಲದಿಂದ ಮಾತ್ರವಲ್ಲದೆ ಅಂತಸ್ಸಂಭಾವ್ಯತೆ ಬಾಹ್ಯಸಾಕ್ಷ್ಯಗಳಿಂದಲೂ ಸಾಧಿಸುವುದು ಶಕ್ಯವಿದೆ.

ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ಮಹಿಳಾಲೇಖಕಿಯರು

ಇಂದು ಅಂತರರಾಷ್ಟ್ರೀಯ ಮಹಿಳಾವರ್ಷವೆಂದು ಆಚರಿಸಲು ತೀರ್ಮಾನಿಸಿ, ಮಹಿಳೆಯರ ಕುಂದು ಕೊರತೆಗಳನ್ನು ನಿವಾರಿಸಿ, ಅವರ ಸ್ಥಿತಿಗತಿಗಳನ್ನು ಉತ್ತಮಪಡಿಸಬೇಕೆಂದು ವಿಶ್ವದಾದ್ಯಂತ ಅನೇಕ ಕಾರ್ಯಕ್ರಮಗಳನ್ನು ರೂಪಿಸಿ, ಸಭೆ ಸಮಾರಂಭಗಳು ನಡೆಯುತ್ತಿವೆ. ಚರ್ಚೆಗಳು ನಡೆದು ಅನೇಕ ಸಲಹೆಗಳು ಬರುತ್ತಿವೆ.

ಭಾರತದಲ್ಲಿ ಮಹಿಳೆಯರನ್ನು ಪೂಜ್ಯಭಾವದಿಂದ ಕಾಣುತ್ತಿದ್ದರು. ಮಹಿಳೆಯರು ವಿದ್ಯಾಪತಿಯರಾಗಿದ್ದು, ವೇದಮಂತ್ರಗಳನ್ನೂ ರಚಿಸುತ್ತಿದ್ದರು. ಪರಕೀಯರ ದಬ್ಬಾಳಿಕೆಯಿಂದಾಗಿ, ರಾಜಕೀಯ ಹಾಗೂ ಸಾಮಾಜಿಕ ಬದಲಾವಣೆಗಳು ಉಂಟಾಗಿ ಮಹಿಳೆ ತನಗಿದ್ದ ಉತ್ತಮ ಸ್ಥಾನದಿಂದ ಹಿಂದೆ ಸರಿಯಬೇಕಾಗಿ ಬಂತು. ವೇದವನ್ನು ರಚಿಸುವಷ್ಟು ಶಕ್ತಿಯನ್ನು ಪಡೆದಿದ್ದ ಮಹಿಳೆ, ವೇದವನ್ನು ಓದಲೂ ಬಾರದೆಂದು ಮಾಡಿದ ಕಟ್ಟುಪಾಡಿಗೆ ಬದ್ಧಳಾದಳು.

ವಿದ್ಯಾಭ್ಯಾಸಕ್ಕೆ ಅವಕಾಶವಿಲ್ಲದೆ ನಾಲ್ಕು ಗೋಡೆಗಳ ಮಧ್ಯೆ ಬಂಧಿತಳಾಗಿದ್ದ ಮಹಿಳೆ, ಕ್ರಮೇಣ ಈ ಸಂಕೋಲೆಗಳನ್ನೆಲ್ಲ ಕಿತ್ತೊಗೆದು ಪುರುಷರಿಗೆ ಸರಿಸಮನಾಗಿ ನಿಂತು ಜೀವನದ ಎಲ್ಲ ರಂಗಗಳಲ್ಲೂ ಧೈರ್ಯವಾಗಿ ಮುನ್ನುಗ್ಗುತ್ತಿದ್ದಾಳೆ. ರಾಜಕಾರಣಿಯಾಗಿ ಉನ್ನತ ಪದವಿ ಅಲಂಕರಿಸಿದ್ದಾಳೆ. ವೈದ್ಯಳಾಗಿ, ವಿದುಷಿಯಾಗಿ, ಸಂಗೀತ, ನೃತ್ಯಕಲೆಗಳಲ್ಲಿ ಪ್ರವೀಣಳಾಗಿದ್ದಾಳೆ. ನ್ಯಾಯಾಧೀಶಳಾಗಿ, ನ್ಯಾಯವಾದಿನಿಯಾಗಿರುವುದಲ್ಲದೆ ಸಾಹಿತಿಯಾಗಿ ತನ್ನ ವಿಶಿಷ್ಟದೃಷ್ಟಿಕೋನದಿಂದ ಬದುಕಿನ ಸಮಸ್ಯೆಗಳನ್ನು ವಿವೇಚಿಸುತ್ತಿದ್ದಾಳೆ

ಸ್ವಾತಂತ್ರ್ಯ ಸಂಗ್ರಾಮದಲ್ಲಿ ದಿಟ್ಟತನದಿಂದ ಪುರುಷರೊಂದಿಗೆ ಭಾಗವಹಿಸಿದ ಮಹಿಳೆ, ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ, ಎಲ್ಲ ಕ್ಷೇತ್ರಗಳಲ್ಲೂ ಧೈರ್ಯದಿಂದ ಮುಂದೆ ಬರಲು ಹಾದಿ ಸುಗಮವಾಯಿತು. ಅವರಲ್ಲಿ ಮುಖ್ಯವಾಗಿ ಹೆಣ್ಣುಮಕ್ಕಳ ವಿದ್ಯಾಭ್ಯಾಸದಲ್ಲಿ ಗಮನಾರ್ಹವಾದ ಪ್ರಗತಿ ಕಂಡುಬಂದಿದೆ. ವಿದ್ಯೆಯ ಬೆಂಬಲ, ಆರ್ಥಿಕ ಸ್ವಾತಂತ್ರ್ಯದಿಂದಾಗಿ ಅವರ ದೃಷ್ಟಿಕೋನವೇ ಬದಲಾಗಿದೆ. ಜೀವನದ ಎಲ್ಲ ಕ್ಷೇತ್ರಗಳಲ್ಲೂ ಸಾಧಿಸುತ್ತಿರುವಂತೆ, ಸಾಹಿತ್ಯಕ್ಷೇತ್ರಕ್ಕೂ ಮಹಿಳೆ ಉತ್ಸಾಹದಿಂದ ಪ್ರವೇಶಿಸಿ ಅಲ್ಲಿ ತನ್ನ ಪಾಲಿನ ಸೇವೆಯನ್ನು ಸಲ್ಲಿಸಿ, ಸಾಹಿತ್ಯ ಸುಂದರವಾಗಿ ಮೈತುಂಬಿಬರಲು ಸಹಾಯಕಳಾಗಿದ್ದಾಳೆ. ಇದು ಬಹಳ ಹೆಮ್ಮೆಯ ವಿಷಯ.

ಸ್ವಾತಂತ್ರ್ಯ ಬರುವುದಕ್ಕೂ ಮುಂಚೆ, ಬರವಣಿಗೆಗೆ ಯಾವತರಹ ಪ್ರೋತ್ಸಾಹವೂ ಇರದಿದ್ದ ಕಾಲದಲ್ಲಿ, ಲೇಖನಿ ಹಿಡಿದು, ಕಾದಂಬರಿಯ ಮೂಲಕ ಅಂದಿನ ಸಮಾಜದಲ್ಲಿ ಹೆಣ್ಣುಮಕ್ಕಳಿಗೆ ಇದ್ದ ವಿವಿಧ ಸಮಸ್ಯೆಗಳನ್ನು ಚಿತ್ರಿಸಿದ ಶ್ರೀಮತಿ ತಿರುಮಲಾಂಬ, 'ಸರಸ್ವತಿ' ಪತ್ರಿಕೆಯನ್ನು ನಡೆಸುತ್ತಿದ್ದ ಶ್ರೀಮತಿ ಆರ್. ಕಲ್ಯಾಣಮ್ಮ, ಶ್ರೀಮತಿ ತಿರುಮಲೆ ರಾಜಮ್ಮ ಇವರುಗಳನ್ನು ಇಲ್ಲಿ ನೆನಸಿಕೊಳ್ಳುವುದು ಉಚಿತವಾಗಿದೆ. ಅದೇ ರೀತಿ ಜನಪದ ಸಾಹಿತ್ಯ ಕರ್ತೃಗಳಾದ ಅಜ್ಞಾತ ಸೋದರಿಯರನ್ನು ನಾವು ಮರೆಯುವಂತಿಲ್ಲ. ಹೃದಯ ತುಂಬಿ ಹಾಡಿ,

ಹೃದಯವನ್ನು ಮುಟ್ಟುವ ಆ ಹಾಡುಗಳು ಎಂದೆಂದಿಗೂ ಸಾಹಿತ್ಯದ ಅಭ್ಯಾಸಿಗಳಿಗೆ ಸ್ಫೂರ್ತಿದಾಯಕವಾಗಿವೆ.

ಬೆರಳಿನಲ್ಲಿ ಎಣಿಸುವಷ್ಟು ಜನ ಲೇಖಿಕೆಯರು ಮಾತ್ರ ಇದ್ದ ಕಾಲವೊಂದಿತ್ತು. ಓದುಗರ ಬಳಗ ಬೆಳೆದಂತೆ, ಪ್ರಕಾಶಕರೂ ಮುಂದಾಗಿ ಬಂದು, ಬರೆದ ಕೃತಿಗಳನ್ನು ಬೆಳಕಿಗೆ ತರಲು ಸಿದ್ಧರಾದಂತೆ, ಬರೆಯುವ ಮಹಿಳೆಯರ ಗುಂಪೂ ದೊಡ್ಡದಾಗಿದೆ.

ಸಾಹಿತ್ಯದಲ್ಲಿ ಸಣ್ಣ ಕಥೆ ಜನಪ್ರಿಯ ಪ್ರಾಕಾರವಾಗಿದ್ದು, ಮಹಿಳೆಯರ ಗಮನವನ್ನು ವಿಶೇಷವಾಗಿ ಸೆಳೆದಿದೆ. ವಾರಪತ್ರಿಕೆ, ಮಾಸಪತ್ರಿಕೆ, ವಿಶೇಷಾಂಕಗಳಲ್ಲಿ ಹೆಚ್ಚು ಪುಟಗಳನ್ನು ಸಣ್ಣ ಕಥೆಗಳೇ ಆಕ್ರಮಿಸಿರುವುದನ್ನು ಕಾಣಬಹುದು. ಸಣ್ಣ ಕಥೆಗಳನ್ನು ಬರೆಯುವ ಮಹಿಳೆಯರ ಸಂಖ್ಯೆ ಈಗ ಹೆಚ್ಚಾಗಿದೆ. ಇವರ ಉತ್ಸಾಹ ಕೇವಲ ಬರವಣಿಗೆಗೇ ಸೀಮಿತವಾಗಿಲ್ಲ. ಹಿರಿಯ ಕಿರಿಯ ಲೇಖಕಿಯರನ್ನೆಲ್ಲ ಗುಡ್ಡೆ ಹಾಕಿ; ಅವರಿಂದ ಕಥೆಗಳನ್ನು ಸಂಗ್ರಹಿಸಿ, ಒಂದು ಕಥಾಸಂಕಲನವನ್ನೇ ತಂದಿರುವುದು, ಸಾಹಿತ್ಯ ಪಥದಲ್ಲಿ ಪ್ರಗತಿಯ ಕುರುಹು. ಹೆಣ್ಣುಮಕ್ಕಳು ಮೊದಲು ಬರೆಯಲು ಆರಂಭಿಸಿದ್ದು ಸಣ್ಣ ಕಥೆಗಳನ್ನೆ. ಆದರೆ ಕೈಪಳಗಿದಂತೆ ಕಾದಂಬರಿ ರಚನೆಯತ್ತ ಅವರ ಗಮನ ಹರಿಯಿತು. ಮಹಿಳೆಯರು ರಚಿಸಿರುವ ಕಾದಂಬರಿಗಳಲ್ಲಿ ಹೆಚ್ಚಾಗಿ ಸಾಂಸಾರಿಕ ಜೀವನದ ಚೌಕಟ್ಟಿನೊಳಗೆ ಬರುವ, ಗಂಡು ಹೆಣ್ಣಿನ ಪ್ರೇಮ, ಕಾಮ ಮೊದಲಾದ ಕೌಟುಂಬಿಕ ಸಮಸ್ಯೆಗಳೇ ಹೆಚ್ಚಾಗಿ ಕಾಣುತ್ತಿವೆ. ಮನೋವಿಶ್ಲೇಷಣಾತ್ಮಕ ಕಾದಂಬರಿಗಳು ಕೆಲವು ಹೊರಬಂದು, ಓದುಗರ ಗಮನವನ್ನು ಸೆಳೆದುದುಂಟು. ಐತಿಹಾಸಿಕ ಕಾದಂಬರಿಗಳು ಇನ್ನೂ ಬಂದಿರುವಂತಿಲ್ಲ.

ಹೆಣ್ಣುಮಕ್ಕಳ ಬರಹದಲ್ಲಿ ವೈವಿಧ್ಯವಿಲ್ಲ. ಪ್ರಚಲಿತ ಸಾಮಾಜಿಕ ಜೀವನದಲ್ಲಿ ಎದುರಿಸಬೇಕಾಗಿರುವ ಹಲವು ಸಮಸ್ಯೆಗಳತ್ತ ಅವರ ಲೇಖನಿ ಕೆಲಸ ಮಾಡಿಲ್ಲ ಎಂಬ ಅಭಿಪ್ರಾಯವೂ ಇದೆ. ಆದರೆ ಇತ್ತೀಚೆಗೆ ಹೊಸ ದೃಷ್ಟಿಯಿಂದ ಬರೆಯುವ ಲೇಖಕಿಯರು ಕೆಲವರಾದರೂ ಇರುವರೆಂಬುದು ಸಮಾಧಾನದ ವಿಷಯ. ಕೃತಿ ರಚನೆಗೆ ಕೈಹಾಕಿರುವವರಿಗೆಲ್ಲ ಒಂದೇ ತೆರನಾದ ಸೌಲಭ್ಯಗಳು ಇರಲಾರವು. ತಮಗೆ ದೊರೆತಷ್ಟು ಅವಕಾಶದಲ್ಲಿ, ಎಟುಕಿದಷ್ಟು ಪರಿಮಿತಿಯಲ್ಲೇ ಕೆಲವರು ಸುಂದರ ಕಾದಂಬರಿಗಳನ್ನು ರಚಿಸಿದ್ದಾರೆ. ಬರವಣಿಗೆಯನ್ನು ಉತ್ತಮ ಪಡಿಸಿಕೊಳ್ಳುವ ಪ್ರಯತ್ನವಂತೂ ನಡೆದೇ ಇದೆ. ಆಳವಾದ ವ್ಯಾಸಂಗ, ಜೀವನಾನುಭವ, ಎರಡೂ ಪಕ್ವವಾದಾಗ ಅವರಿಂದ ಇನ್ನೂ ಉತ್ತಮ ಸಾಹಿತ್ಯವನ್ನು ನಿರೀಕ್ಷಿಸಬಹುದು. ಹಾಗೆಂದ ಮಾತ್ರಕ್ಕೆ ಮಹಿಳೆಯರು ಬರೆದಿರುವುದು ಕಳಪೆಯೆಂದು ಯಾರೂ ಭಾವಿಸಬೇಕಾಗಿಲ್ಲ.

ಮಹಿಳೆಯರು ಬರೆದದ್ದು ಎಂಬ ಒಂದೇ ಕಾರಣದಿಂದ ಸಾಹಿತ್ಯ ಪ್ರಪಂಚದಲ್ಲಿ ಸ್ಥಾನ ಸಿಗಬೇಕೆಂದು ಯಾರೂ ಅಪೇಕ್ಷಿಸುವುದಿಲ್ಲ. ಎಲ್ಲರೊಡನೆ ಒಟ್ಟಾಗಿ ನಿಂತು, ಪ್ರತಿಭೆ, ಕೃತಿಯ ಯೋಗ್ಯತೆಯಿಂದ ಮಾತ್ರ ಸ್ಥಾನ ಸಿಗಬೇಕು. ಆ ಕಾಲ ಈಗ ಬರುತ್ತಿದೆ. ಬರಹಗಾರ್ತಿಯರು ತಮ್ಮ ಸುತ್ತಲಿನ ಬದುಕನ್ನು ತೆರೆದ ಮನಸ್ಸಿನಿಂದ ನೋಡಿ, ಜೀವನದ ಸಮಸ್ಯೆಗಳನ್ನು ವಸ್ತುವಾಗಿ ಆರಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲೂ ಸರಿಸಮನಾಗಿ ನಿಂತು ತಮ್ಮ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಸಣ್ಣಕಥೆ ಕಾದಂಬರಿಗಳಲ್ಲಿ ಅವರು ಹೆಚ್ಚಾಗಿ ಕೈಆಡಿಸಿದ್ದರೂ, ಸಾಹಿತ್ಯದ ಇತರ ಪ್ರಾಕಾರಗಳಾದ ಕಾವ್ಯ, ನಾಟಕ, ಪ್ರಬಂಧ, ವಿಮರ್ಶೆ, ಪ್ರವಾಸ ಸಾಹಿತ್ಯ ಇವುಗಳ ಕಡೆ ಅವರ ಗಮನ ಸಾಕಷ್ಟು ಹರಿದಿಲ್ಲ. ಹಾಸ್ಯಲೇಖನ ಬರೆಯುವುದರಲ್ಲಿ ಕೆಲವು ಮಹಿಳೆಯರು ಮುಂದಾಗಿದ್ದಾರೆ. ಕೇವಲ ಪತ್ರಿಕೆಗಳಲ್ಲಿ ಕಾಣಿಸಿಕೊಂಡು, ಮತ್ತೆ ನೋಡಬೇಕೆಂದರೆ ಪ್ರಯಾಸವಾಗಿದ್ದ ಬರಹಗಳು ಈಗ ಸಂಕಲನವಾಗಿ ಬಂದಿರುವುದನ್ನು ನೋಡಿದರೆ ಲಘು ಬರಹಗಳ ಜನಪ್ರಿಯತೆ ಅರ್ಥವಾಗುವಂತಿದೆ. ಹಾಸ್ಯಲೇಖನ ಬರೆಯುವುದರಲ್ಲಿ ಮಹಿಳೆಯರು ಉತ್ತಮ ಅಭಿರುಚಿ ತೋರಿಸಿದ್ದಾರೆ. ಕೀಳುಮಟ್ಟದ ಹಾಸ್ಯ ಎಲ್ಲೂ ಕಾಣಬರುವುದಿಲ್ಲ.

ಸಾಹಿತ್ಯ ಪಥದಲ್ಲಿ ಹೆಣ್ಣುಮಕ್ಕಳು ನಡೆದು ಬಂದಿರುವ ದಾರಿಯನ್ನು ಗಮನಿಸಿದರೆ, ಎಲ್ಲಿಂದ ಎಲ್ಲಿಗೆ ಬಂದಿದ್ದೇವೆ? ಇನ್ನೂ ಎಷ್ಟುಮುಂದೆ ಹೋಗಲು ಸಾಧ್ಯವಿದೆ ಎಂಬುದನ್ನು ನೆನೆದಾಗ ಮುಂದೆ ಕಾಣುವ ಚಿತ್ರ ಭವ್ಯವಾಗಿದೆ. ಅದನ್ನು ಸಾಧಿಸಬೇಕಾದರೆ ಸತತ ಶ್ರಮ ಬೇಸರವರಿಯದ ಅಭ್ಯಾಸ ಅಗತ್ಯ.

ಕಮಲಾ ಹಂಪನಾ

ಆಧುನಿಕಕನ್ನಡಸಾಹಿತ್ಯಕ್ಕೆ ಮಹಿಳೆಯರ ಕೊಡುಗೆ

ಈ ಪ್ರಬಂಧದ ವಿವಕ್ಷೆಯಲ್ಲಿ ಸಾಹಿತ್ಯದ ವಿವಿಧ ಪ್ರಕಾರಗಳ ಇತ್ತೀಚಿನ ಒಲವುಗಳನ್ನು ದೃಷ್ಟಿಯಲ್ಲಿರಿಸಿಕೊಂಡಿದ್ದೇನೆ; ವಿಭಿನ್ನ ಸಾಹಿತ್ಯಕ್ಷೇತ್ರಗಳಲ್ಲಿ ಮಹಿಳಾಲೇಖಕಿ ನಡೆಸಿರುವ ಸಿದ್ಧಿಸಾಧನೆಗಳನ್ನಷ್ಟೇ ಸಮೀಕ್ಷಿಸಿದ್ದೇನೆ. ಪ್ರಬಂಧದ ಉದ್ದಕ್ಕೂ ವಿಮರ್ಶಾತ್ಮಕ ವಿವೇಚನೆಯೇ ಗುರಿಯಾಗಿದೆಯಾಗಿ ಈ ಬರವಣಿಗೆ ಮಾಮೂಲಿನಂತೆ ಕೇವಲ ಲೇಖಕಿಯರ ಅಥವಾ ಅವರು ಬರೆದ ಪುಸ್ತಕಗಳನ್ನು ಹೆಸರಿಸುವ ಪಟ್ಟಿಯಾಗಿಲ್ಲ. ಆದರೆ ನನ್ನ ಪ್ರತಿಯೊಂದು ಹೇಳಿಕೆಯ ಹಿಂದೆ ಅವರೆಲ್ಲರ ಕೃತಿಗಳ ಅಭ್ಯಾಸ ಅಡಗಿದೆಯೆಂಬುದನ್ನು ದಯವಿಟ್ಟು ಮರೆಯಬಾರದು. ವರ್ತಮಾನ ಕಾಲದ ಕನ್ನಡ ಸಾಹಿತ್ಯದ ನಿಕಟವಾದ ಸಂಪರ್ಕ ಕಳೆದ ಇಪ್ಪತ್ತು ವರ್ಷಗಳಿಂದ ನನಗಿದೆ. ಸಾಹಿತ್ಯದ ವಿದ್ಯಾರ್ಥಿಯೂ ಆಗಿರುವುದರಿಂದ, ಸಾಹಿತ್ಯವನ್ನೇ ಪದವೀ ತರಗತಿಗಳಿಗೆ ಬೋಧಿಸುವ ಶಿಕ್ಷಕಿಯೂ ಆಗಿರುವುದರಿಂದ ಮತ್ತು ಮುಖ್ಯವಾಗಿ ನಾನೂ ಒಬ್ಬ ಲೇಖಕಿಯೇ ಆಗಿರುವುದರಿಂದ ಸಾಹಿತ್ಯದ ಬೆಳವಣಿಗೆಯನ್ನು ಕುರಿತು ಸಹಜವಾದ ಆಸಕ್ತಿ ತಳೆದು ಗಮನಿಸುತ್ತಾ ಬಂದಿದ್ದೇನೆ.

ಇಂದಿನ ಕನ್ನಡ ಸಾಹಿತ್ಯಕ್ಕೆ ಮಹಿಳೆಯರ ಮೌಲಿಕ ಕೊಡುಗೆ ಕಡಮೆ ಎಂಬುದನ್ನು ಪ್ರಬಂಧದ ಪ್ರಾರಂಭದಲ್ಲೇ ಸ್ಪಷ್ಟವಾಗಿ ಹೇಳಿಬಿಡುವುದು ಒಳ್ಳೆಯದು. ಆದರೆ ಹೀಗಾಗಲು ಕೆಲವು ಕಾರಣಗಳೂ ಇವೆಯೆಂದು ತೋರಿದೆ. ಈ ಪ್ರಬಂಧದಲ್ಲಿ ಅಂಥ ಕಾರಣಗಳನ್ನು ವಿಶ್ಲೇಷಿಸುವುದರ ಜೊತೆಗೆ ಪರಿಹಾರಗಳನ್ನೂ ಗುರುತಿಸಿದ್ದೇನೆ. ಪುರುಷರಿಗೆ ಇರುವ ಪರಿಸರ, ವ್ಯಾಪ್ತಿ, ಅನುಭವ, ಸಾಮಗ್ರಿ ಸಂಗ್ರಹ ಮೊದಲಾದ ಅನುಕೂಲಕರ ವಾತಾವರಣ ಮಹಿಳೆಯರಿಗೆ ಆ ಪ್ರಮಾಣದಲ್ಲಿ ಇಲ್ಲ. ಈಕೆಗೆ ಪ್ರತಿಕೂಲಗಳೇ ಜಾಸ್ತಿ ; ಅಲ್ಲದೆ ಲೇಖಕಿಯರ ವೈಫಲ್ಯವನ್ನು ನಾನು ತಿಳಿಸುವಾಗ, ಅವರ ಸೋಲುಗಳು ಅವರಿಗಷ್ಟೇ ಸೀಮಿತವೆಂದು ಅರ್ಥೈಸಬಾರದು. ಈ ಬಗೆಯ ಶುಷ್ಕ ಹಾಗೂ ಸಾಮಾನ್ಯ ಮಟ್ಟದ ಸಾಹಿತ್ಯ, ನಮ್ಮಲ್ಲಿ ಅನೇಕ ಜನ ಪುರುಷರು ಬರೆದ ಬರವಣಿಗೆಯಲ್ಲೂ ಇದೆ. ಹಾಗೆ ನೋಡುವುದಾದರೆ ಕೆಲವು ಲೇಖಕಿಯರ ಕೃತಿಗಳು ಕೆಲವು ಪುರುಷ ಸಾಹಿತಿಗಳ ಕೃತಿಗಳಿಗಿಂತಲೂ ನಿಜವಾಗಿಯೂ ಚೆನ್ನಾಗಿವೆ. ಆದರೆ ಈ ಹೇಳಿಕೆಗೆ ಇತಿಮಿತಿಗಳೂ ಇರುವುದರಿಂದ ಇದನ್ನು ಹೆಚ್ಚು ಹಿಂಜಬಾರದು.

ಕನ್ನಡಸಾಹಿತ್ಯದ ಸುಮಾರು ಒಂದೂವರೆ ಸಾವಿರವರ್ಷದ ಸುದೀರ್ಘ ಚರಿತ್ರೆಯಲ್ಲಿ ಮಹಿಳಾಲೇಖಕಿಯರ ಸಂಖ್ಯೆ ಅತ್ಯಂತ ಕಡಮೆ ಎಂದು ವಿಷಾದಿಸಬೇಕಾಗಿಲ್ಲ. ಸಾಹಿತ್ಯ ಕ್ಷೇತ್ರ ಪ್ರಜಾಪ್ರಭುತ್ವವಲ್ಲ. ಇಲ್ಲಿ ಸಂಖ್ಯೆಗೌಣ, ಗುಣಕ್ಕೆ ಪ್ರಾಧಾನ್ಯ. ಸತ್ವದ ದೃಷ್ಟಿಯಿಂದ ಅಕ್ಕಮಹಾದೇವಿ, ಹೊನ್ನಮ್ಮ, ಹೆಳವನಕಟ್ಟೆ ಗಿರಿಯಮ್ಮ ಮುಂತಾದವರ ಬರವಣಿಗೆ ಪರಿಭಾವನಾರ್ಹವಾಗಿದೆ. ಹೀಗಿದ್ದೂ ಅವರನ್ನು ಸೇರಿಕೊಂಡಂತೆ ಯಾವೊಬ್ಬ ಕವಯಿತ್ರಿಯೂ, ಪಂಪ, ರನ್ನ, ಜನ್ನ ಮೊದಲಾದ ಹಿರಿಯ ಕವಿಗಳ ಸಾಲಿನಲ್ಲಿ ನಿಲ್ಲಬಲ್ಲ ಸಾಮರ್ಥ್ಯ ಗಳಿಸಿಕೊಂಡಿಲ್ಲ ; ಹಿಂದೂ ಇಲ್ಲ, ಇಂದೂ ಇಲ್ಲ. ಹೀಗೇಕೆ ಎಂಬ ಪ್ರಶ್ನೆ ಸಹಜವಾಗಿಯೇ ಬರುತ್ತದೆ.

ಹಿಂದೆ ಹೆಣ್ಣಿಗೆ 'ಕಾಲ ದೇಶ ಪರಿಸರ' (Time, space, environment) ಕಾರಣದಿಂದಾಗಿ, ಸಾಹಿತ್ಯರಂಗದಲ್ಲೇ ಸದಾ (Full time) ನಿರತಳಾಗುವ ಅವಕಾಶ, ಅನುಕೂಲ ಹೆಚ್ಚು ಇರಲಿಲ್ಲ. ಇದಕ್ಕೆ ಅಪವಾದಗಳಿವೆ ನಿಜ. ಇಂದು ಹಿಂದೆ ಇದ್ದುದಕ್ಕಿಂತ ಹಲವುಪಟ್ಟು ಅಧಿಕ ಅವಕಾಶಗಳಿವೆ. ಮಹಿಳೆಗೆ ಇಂದು ಸಾಹಿತ್ಯ ಮುಕ್ತ ವೇದಿಕೆ. ಸ್ತ್ರೀಯರ ಬರಹಗಳನ್ನು ಪ್ರಕಟಿಸುವ ಪತ್ರಿಕೆಗಳಿವೆ. ಪತ್ರಿಕೆಗಳ ಹಾಗೆಯೇ ಪ್ರಕಾಶಕರ ಪ್ರೋತ್ಸಾಹವಿದೆ. ಇವೆರಡಕ್ಕೂ ಮಿಗಿಲಾಗಿ ಓದುಗರ ಉತ್ತೇಜನವಿದೆ. ಇಂಥ ಆಶಾದಾಯಕ, ಸ್ಫೂರ್ತಿದಾಯಕ ಪರಿಸರದ ಪ್ರಯೋಜನವನ್ನು ಕೆಲವು ಲೇಖಕಿಯರು ಸಾಕಷ್ಟು ಪಡೆದಿದ್ದಾರೆ. ಪರಿಣಾಮವಾಗಿ ಎಂದಿಗಿಂತ ಈಗ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಬರವಣಿಗೆಗೆ ತೊಡಗಿದ್ದಾರೆ. ಕಳೆದ ಒಂದು ದಶಕದಲ್ಲಿ ಬೆಳಕಿಗೆ ಬಂದಿರುವ ಲೇಖಕಿಯರ ಲೆಕ್ಕ, ಇದುವರೆಗಿನ ಒಂದೂವರೆ ಸಾವಿರ ವರ್ಷದಲ್ಲಿ ಆಗಿಹೋದ ಒಟ್ಟು ಲೇಖಕಿಯರ ಮೊತ್ತಕ್ಕೆ ಸರಿಬರುತ್ತದೆ. ಇದು ನಿಜಕ್ಕೂ ಶ್ಲಾಘನೀಯ.

ಲೇಖಕಿಯರ ಸಂಖ್ಯೆಯಲ್ಲೇನೋ ಹೆಚ್ಚಳವಿದೆ ನಿಜ. ಆದರಂತೆ ಅವರ ಸಾಹಿತ್ಯ ಸತ್ವದಲ್ಲಿ, ಸಾಹಿತ್ಯಕ್ಕೆ ಸಂದ ಅವರ ಸ್ಥಿರ ಕೊಡುಗೆಯಲ್ಲಿ ಹೆಚ್ಚಳವಿದೆಯೇ ಎಂಬುದು ಪರಿಶೀಲಿಸಬೇಕಾದ ವಿಷಯ. ಈ ವಿಚಾರದಲ್ಲಿ ಏಕಾಭಿಪ್ರಾಯಕ್ಕಿಂತ ಭಿನ್ನಾಭಿಪ್ರಾಯವೇ ಅಧಿಕ. ಜೊತೆಗೆ ಹೆಣ್ಣಿಗಿರುವ ಪರಿಸರ, ಪರಿಮಿತಿಗಳನ್ನು ಗಮನಿಸಬೇಕು. ಆಕೆ ಮನೆಗೆಲಸದ,ಸಂಸಾರದ ಹೊಣೆ ಹೊರಬೇಕು. ಆಕೆಗೆ ಸಿಗುವ ಬಿಡುವು ಕಡಮೆ. ಬರೆಯುವುದಕ್ಕಿರಲಿ, ಓದುವುದಕ್ಕೂ ವಿರಾಮ ಸಿಗುವುದಿಲ್ಲ. ಮನೆ ಹೊರಗಿನ ಪರಿಚಯ ಸಾಲದು. ಪ್ರವಾಸ, ಪ್ರಪಂಚಪರ್ಯಟನದ ಪ್ರಯೋಜನ ಅವರಿಗೆ ಕನಸಿನ ಗಂಟು.

ಇಷ್ಟೆಲ್ಲಾ ಪ್ರತಿಗಾಮಿ ಪರಿಸರವನ್ನು ಇಕ್ಕಿಮೆಟ್ಟಿ ಕೃತಿ ನಿರ್ಮಾಣಕ್ಕಿಳಿದ ಮಹಿಳಾ ಸಾಹಿತಿಗಳನ್ನು ಮೊದಲು ಮೆಚ್ಚೋಣ. ಅನಂತರ ಅವರ ಕೃತಿ ಪರಿಶೀಲನೆ, ಅರ್ಥಾತ್ ಗ್ರಂಥಗಳ ಗುಣದೋಷಗಳ ವಿಮರ್ಶೆ ಸ್ವಾಗತಾರ್ಹ. ಆಕೆ ಬರೆದ ಕೃತಿಗಳಲ್ಲಿ ನಿತ್ಯಜೀವನದ ಸಾಮಾಜಿಕ ಹಾಗೂ ಸಂಸಾರಿಕ ಚಿತ್ರಗಳೇ ಹೆಚ್ಚು—ಎಂಬುದಷ್ಟೇ ವಿಮರ್ಶೆಯಾಗದು. ಆ ಚಿತ್ರಣವನ್ನು ಇನ್ನೂ ಚೆನ್ನಾಗಿ, ಸಜೀವವಾಗಿ, ಕಲಾತ್ಮಕವಾಗಿ ಕೊಡುವ ಸಾಧ್ಯತೆ ಇದೆಯೆಂದು ತೋರಿಸಿಕೊಟ್ಟರೆ ಅದನ್ನು ಮಹಿಳೆಯರೂ ಒಪ್ಪಬೇಕಾಗುತ್ತದೆ. ಆದರೆ ಮಹಿಳಾಸಾಹಿತ್ಯವನ್ನು ಪೂರ್ವಗ್ರಹಪೀಡಿತರಾಗಿ ಅಪಹಾಸ್ಯ ಮಾಡುವುದು, ಅಲ್ಲಗಳೆಯುವುದು ಸರಿಯಲ್ಲ. ಹಾಗೆಯೇ ವಿನಾಕಾರಣ, ಅದು ಹೆಂಗಸರು ಬರೆದುದೆಂಬುದಷ್ಟರಿಂದಲೇ, ಉದಾರವಾಗಿ ಹೊಗಳಿ ಹೊನ್ನಶೂಲಕ್ಕೇರಿಸುವುದೂ ತೀರ ಅಪಾಯಕಾರಿ. ಉತ್ತಮ ಸಾಹಿತ್ಯಕ್ಕೆ ಯಾರ ಶಿಫಾರಸ್ಸೂ ರಿಯಾಯಿತಿಯೂ ಬೇಕಿಲ್ಲ. ಸಮರ್ಥ ಲೇಖಕಿಯರು ಅದನ್ನು ಎಂದೂ ಬಯಸಬಾರದು.

ನಮ್ಮ ಸೋದರಿಯರು 'ಮಹಿಳಾಸಾಹಿತಿ' 'ಮಹಿಳಾಸಾಹಿತ್ಯ' ಎಂಬ ಪ್ರಾಥಮಿಕ ನೆಲೆಯಲ್ಲೇ ವಿರಮಿಸಬಾರದು. ಸ್ತ್ರೀ ಸಾಹಿತ್ಯವೆಂಬ ಈ ಪ್ರತ್ಯೇಕತೆಯೇ ಆರೋಗ್ಯದ ಲಕ್ಷಣವಲ್ಲ. ವಾಸ್ತವವಾಗಿ ಸಾಹಿತ್ಯಕ್ಕೆ ಲಿಂಗಭೇದವಿಲ್ಲ. ಈ ದೃಷ್ಟಿಯಿಂದ 'ಮಹಿಳಾಸಾಹಿತ್ಯ' ಇಲ್ಲವೇ 'ಪುರುಷಸಾಹಿತ್ಯ' ಅಥವಾ 'ಮಕ್ಕಳಸಾಹಿತ್ಯ' ಎಂಬ ಮಾತೇ ಸಮಂಜಸವಾಗಿಲ್ಲ. ಏಕೆಂದರೆ ಅಂತಿಮವಾಗಿ ವಿಮರ್ಶೆ ಸಾಹಿತ್ಯವನ್ನು ಕುರಿತೇ ಹೊರತು ಅದನ್ನು ಬರೆದ ವ್ಯಕ್ತಿಯನ್ನು ಕುರಿತು ಅಲ್ಲ. ಶುದ್ಧ ವಿಮರ್ಶೆಯಲ್ಲಿ ಮಹಿಳಾಸಾಹಿತ್ಯ, ಪುರುಷಸಾಹಿತ್ಯವೆಂಬ ವ್ಯತ್ಯಾಸ ಇಲ್ಲದಿರುವುದಷ್ಟೇ ಅಲ್ಲ, ಸಾಹಿತ್ಯ, ಎಂದೂ ಅವುಗಳಿಗೆ ಸೀಮಿತವಲ್ಲ. ಯಾವ ಸಾಹಿತ್ಯ ವಿಮರ್ಶೆಯಲ್ಲೂ ಈ ತಾರತಮ್ಯವಿಲ್ಲ. ವಿಮರ್ಶೆಯಲ್ಲಿ ಶ್ರೇಷ್ಠಸಾಹಿತ್ಯ, ಅಥವಾ ಅಶ್ರೇಷ್ಠಸಾಹಿತ್ಯ, ಸತ್ವಯುತ ಅಥವಾ ಸತ್ವರಹಿತ ಎಂಬಂಥ ಪ್ರಾಂಜಲ ಪರಿಶೀಲನೆಯೇ ಸಾರ್ವದೇಶಿಕ ಹಾಗೂ ಸಾರ್ವಕಾಲಿಕವಾದ ಸಾಧು ಪ್ರಯತ್ನ.

ಹೊಗಳಿಕೆ ಇಲ್ಲವೇ ತೆಗಳಿಕೆಗಳಿಂದ ಸಾಹಿತ್ಯದ ಏಳುಬೀಳು ನಿರ್ಧರಿತವಾಗದು. ಕಡೆಗೆ ನಿಲ್ಲುವುದು ಜೊಳ್ಳಲ್ಲ, ಕಾಳು. ತನ್ನ ಅಂತಃಸತ್ವದಿಂದ ಅದರ ಅಳಿವು ಉಳಿವು ತಿಳಿದುಬರುತ್ತದೆ. ನೂರು ಕಾಲ ನಿಲ್ಲಬಹುದಾದ

ಗಟ್ಟಿಯಾದ ಮೇಲುಮಟ್ಟದ ಬರಹ ಕನ್ನಡದ ಲೇಖಕಿಯರಿಂದ ಇನ್ನೂ ಆಗಬೇಕಾಗಿದೆ ಹಾಗೆ ಆಗುವ ಶುಭ ಸೂಚನೆಗಳು ಈಗೀಗ ದಿನೇದಿನೇ ಹೆಚ್ಚುಹೆಚ್ಚಾಗಿ ಕಂಡುಬರುತ್ತಿವೆ. ಈ ಹೆದ್ದಾರಿಯಲ್ಲಿ ಹೊರಟ ಲೇಖಕಿಯರ ಮೇಲೆ ಜವಾಬ್ದಾರಿಯೂ ಇರುವುದರಿಂದ ಅವರು ಎಚ್ಚರವಾಗಿರುವುದು, ಸೂಕ್ಷ್ಮವಾಗಿರುವುದು ಅವಶ್ಯ.

ನಮ್ಮಲ್ಲಿ ಇಂದು ಬರೆಯುತ್ತಿರುವ ಶೇಕಡಾ ತೊಂಬತ್ತು ಜನ ಮಹಿಳಾ ಸಾಹಿತಿಗಳು ಸ್ವಲ್ಪದರಲ್ಲೇ ಸಂಭ್ರಮಿಸುವ ಸುಲಭ ಸಡಗರ ಸ್ವಭಾವಕ್ಕೆ ಮೊದಲು ನಿಲುಗಡೆ ಹಾಕಬೇಕಾಗಿದೆ. ತಮ್ಮ ಬರಹಕ್ಕೆ ಹೊಸ ಬೀಸು ತಂದುಕೊಳ್ಳಬೇಕಾಗಿದೆ. ಇನ್ನಷ್ಟು ವ್ಯಾಪ್ತಿ, ಆಳ, ಹರಿತ ದಕ್ಕಿಸುವತ್ತ ಭಾಷೆಯನ್ನು ಸಮರ್ಥವಾಗಿ ದುಡಿಸಿ ಕೊಳ್ಳುವತ್ತ ಅಂದರೆ ತಮ್ಮ ಸಿದ್ಧತೆಗಳನ್ನು ಹೆಚ್ಚಿಸಿಕೊಳ್ಳುವತ್ತ ಹಾಗೂ ಹೊಸ ಕಸುವು ಗಳಿಸಿಕೊಳ್ಳುವತ್ತ ಅಣಿಯಾಗಬೇಕಾಗಿದೆ. ಚರ್ವಿತಚರ್ವಣವಾದ ನೀರಸ ನಿರೂಪಣೆಯ ಕ್ಲೀಷೆಗಳಲ್ಲೇ ಸುಖಪಟ್ಟುಕೊಳ್ಳುವ ಕ್ಲೈಬ್ಯತೆ ನಿಲ್ಲಬೇಕಾಗಿದೆ.

ಕನ್ನಡದಲ್ಲಿ ಮೂವರು ಜನಪ್ರಿಯ ಲೇಖಕಿಯರಿದ್ದಾರೆ. ಜನಪ್ರಿಯತೆಯೊಂದೆ, ಸಾಹಿತ್ಯಕ್ಕೆ ಮೌಲಿಕ ಕೊಡುಗೆಯ ಮಾನದಂಡವಲ್ಲ. ಕಾಲದ ಅಗ್ನಿಪರೀಕ್ಷೆಯನ್ನು ಗೆದ್ದುನಿಲ್ಲುವ ಸಾರಸ್ವತವನ್ನು ಸೃಷ್ಟಿಸುವುದರತ್ತ ದೃಷ್ಟಿ ಕೇಂದ್ರೀಕರಿಸಬೇಕು. ಬಿಸಿ ಬಿಸಿ ಮಸಾಲೆದೋಸೆಯ ರುಚಿ ದೋಸೆಯು ಆರಿದ ಮೇಲೆ ಇರದು ಮತ್ತು ಅದು ಬಿಸಿಯಾಗಿ ಇದ್ದಾಗ ಅದಕ್ಕೆ ರುಚಿಯ ಹೊರತು ಆರೋಗ್ಯ ಇರದು. ಕೇವಲ ಸಕಾಲಿಕವೆಂದು ಬರೆದರೆ ಸಾಲದು. ಅನುಭವ ಸತ್ಯದ ಜೊತೆಗೆ ಚಾರಿತ್ರಿಕ ಸತ್ಯವನ್ನೂ ಸಮಾವೇಶಗೊಳಿಸಿಕೊಂಡು ಅದು ತ್ರಿಕಾಲವೂ ಅಬಾಧಿತವಾಗಿರಬೇಕು. ಅಂತಹ ಕೃತಿಗಳಿಂದ ಮಾತ್ರ ಸಾಹಿತ್ಯಕ್ಕೂ ತನ್ಮೂಲಕ ಭಾಷೆಗೂ ಹೊಸ ಆಯಾಮ ತಂದುಕೊಡಲು ಸಾಧ್ಯ.

ಆದರಿಂದ ಸಾಮಾನ್ಯ ಸ್ತರದಲ್ಲೇ ಬದುಕನ್ನು ವೈಭವಿಸಿಕೊಂಡು ತೃಪ್ತಿಪಟ್ಟುಕೊಳ್ಳುವುದು ತಪ್ಪ ಬೇಕು. ಕೆಲವು ಲೇಖಕಿಯರಲ್ಲಿ ಪಾರಂಪರಿಕ ಹಿನ್ನೆಲೆ ಇದೆ, ಆದರೆ ವರ್ತಮಾನಕ್ಕೆ ಮಾತ್ರ ಅವರು ಚೆನ್ನಾಗಿ ದ್ದಾರೆ. ಇನ್ನು ಸಮಕಾಲೀನ ಪ್ರಜ್ಞೆ ಇರುವ ಕೆಲವರಲ್ಲಿ ಅದನ್ನು ದಕ್ಕಿಸಿಕೊಳ್ಳುವ ಶಕ್ತಿ ಇಲ್ಲ. ಪರಂಪರೆಯೊಂದಿಗೆ ಹೇಗೋ ಹಾಗೆ ವರ್ತಮಾನದೊಂದಿಗೆ, ತಾವು ಈಗ ಬರೆಯುತ್ತಿರುವ ಬಾಳುತ್ತಿರುವ ಪರಿಸರದೊಂದಿಗೆ ಬೆಸೆದು ಕೊಳ್ಳಬೇಕು. ಸಾಹಿತ್ಯವನ್ನು ಅವಶ್ಯ ಚೆನ್ನಾಗಿ ಓದಬೇಕು. ಕನ್ನಡದಲ್ಲಿ ಬರೆಯುತ್ತಿರುವ ಬಹುಜನ ಲೇಖಕಿಯ ರಿಗೆ ಕನ್ನಡ ಸಾಹಿತ್ಯದ ಭಾಷೆಯ ಪರಿಚಯದ ಅಭಾವವಿದೆ.

ಅಂದಮಾತ್ರಕ್ಕೆ ಸಾಹಿತ್ಯ ಚೆನ್ನಾಗಿ ಅಭ್ಯಾಸ ಮಾಡಿದರೇನೇ ಶ್ರೇಷ್ಠಸಾಹಿತ್ಯದ ನಿರ್ಮಾಣ ಸಾಧ್ಯ ಎಂದು ಅರ್ಥವಲ್ಲ. ಹಳಗನ್ನಡ ಸಾಹಿತ್ಯವನ್ನು ಚೆನ್ನಾಗಿ ಓದಿಕೊಂಡವರು ಮಾತ್ರ ಉತ್ತಮ ಸಾಹಿತಿಗಳಾಗುತ್ತಾ ರೆಂದು ತಿಳಿದರೆ ಅದಕ್ಕಿಂತ ದೊಡ್ಡ ಭ್ರಮೆ ಮತ್ತೊಂದಿಲ್ಲ. ಹಾಗಿದ್ದಲ್ಲಿ ಕನ್ನಡ ಎಂ. ಎ. ಸ್ನಾತಕೋತ್ತರ ಪದವೀ ಧರರೆಲ್ಲಾ ಸಾಹಿತಿಗಳಾಗಬೇಕಿತ್ತು. ವಾಸ್ತವ್ಯ ಅದಲ್ಲ. ಸಾಹಿತ್ಯಾಭ್ಯಾಸದಿಂದ ಪ್ರತಿಭಾಶಾಲಿಯಾದ ಸೃಜನಶೀಲ ಲೇಖಕರಿಗೆ ತುಂಬ ಲಾಭವಿದೆ. ಮೌಲಿಕಸಾಹಿತ್ಯ ನಿರ್ಮಾಣ ಮಾಡಬಲ್ಲ ಬಂಡವಾಳವೆಂದರೆ ಅನುಭವ— ಅಭಿವ್ಯಕ್ತಿ ಇವುಗಳಲ್ಲಿ ವ್ಯಕ್ತಪಡಿಸುವ ಸತ್ವ. ಈ ಮಾತು ಮಹಿಳಾ ಸಾಹಿತಿಗಳಿಗೇ ಅಲ್ಲ ಎಲ್ಲ ಸಾಹಿತಿಗಳಿಗೂ ಅನ್ವಯಿಸುತ್ತದೆ.

ಮಹಿಳೆಯರಲ್ಲಿ ಇರುವ ಅನುಭವಕ್ಕೂ ಅವರ ಬರವಣಿಗೆಗೂ ತಕ್ಕ ಸಮುಚಿತ ಸಾಹಚರ್ಯವಿಲ್ಲ. ಫಲ ವಾಗಿ ಅವರ ಬರಹದಲ್ಲಿ ಬಿರುಕುಗಳು ಕಂಡುಬರುತ್ತಿವೆ. ಲೇಖಕನ ಬಂಡವಾಳಗಳಲ್ಲಿ ಬಲವಾದ ಆವಶ್ಯಕ ಪರಿಕರ ಗಳಲ್ಲಿ ಮಹತ್ವದ್ದಾದ ವ್ಯುತ್ಪತ್ತಿಯ ಶ್ರೀಮಂತಿಕೆಯೇ ಶೂನ್ಯವಾಗಿದೆ. ಪ್ರತಿಭೆ, ಸ್ಫೂರ್ತಿ, ಔಚಿತ್ಯಪ್ರಜ್ಞೆ, ಚಾರಿತ್ರಿಕ ದೃಷ್ಟಿ, ಭಾಷೆ ಅಥವಾ ಶೈಲಿ, ಉನ್ನತ ಕಲ್ಪನೆ ಇವುಗಳಲ್ಲೂ ಅವರು ಸಾಮಾನ್ಯ ಮಟ್ಟಕ್ಕಿಂತ ಮೇಲೇ

ರಿಲ್ಲ. ಮನುಷ್ಯಸ್ವಭಾವದ ಸೂಕ್ಷ್ಮಗಳನ್ನು ಅದರ ಎಲ್ಲ ಸಂಕೀರ್ಣಸ್ತರ ಸ್ವರೂಪಗಳಲ್ಲೂ ಹರಳುಗೊಳಿಸಿ ಹಿಡಿದು ಕೊಡಬಲ್ಲ, ಸಂವಹನಿಸಬಲ್ಲ ಬಿಗಿ–ಬನಿ ಮಹಿಳಾ ಸಾಹಿತಿಗಳಲ್ಲಿ ಸಾಲದಾಗಿದೆ.

ಕಥೆ ಮತ್ತು ಕಾದಂಬರಿ ಕ್ಷೇತ್ರದಲ್ಲಿ ಲೇಖಕಿಯರು ಪೈಪೋಟಿ ನಡೆಸಿದ್ದಾರೆನ್ನುವಷ್ಟು ಇದ್ದಾರೆ. ದಿನ ಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ— ಹೀಗೆ ಹಲವು ನಿಯತಕಾಲಿಕ ಪತ್ರಿಕೆಗಳಲ್ಲಿ ಇವರ ಧಾರವಾಹಿ ಇರುತ್ತದೆ. ಇಲ್ಲಿ ನಾವು ಪತ್ರಿಕೆಗಳವರನ್ನೇ ಅಭಿನಂದಿಸಬೇಕಾಗಿದೆ. ಏಕೆಂದರೆ ಅವರು ಅಷ್ಟು ಅವಕಾಶ ಕಲ್ಪಿಸಿಕೊಟ್ಟಾಗಲೂ ಲೇಖಕಿಯರು ಈಷತ್ ಪ್ರಮಾಣದ ಉತ್ತಮ ಸಾಹಿತ್ಯದ ಹೊರತು ಮೇಲೇರಿಲ್ಲ. ಪತ್ರಿಕೆಯಲ್ಲಿ ಚಿಗುರೊಡೆದ ಬಂದಳಿಕೆ ಸಾಹಿತ್ಯವನ್ನು ಕಂಡಾಗ ತುಂಬ ನಿರಾಶೆಯಾಗುತ್ತದೆ. ಯಾವ ಕಾಳಜಿಯೂ ಇಲ್ಲದೆ ಬರೆಯುವ ಈ ಬಗೆಯ ಲೇಖಕಿಯರಿಗೆ 'ಉಜ್ವಲ ಭವಿಷ್ಯ' ಅಲ್ಲ, ಭವಿಷ್ಯವೇ ಇಲ್ಲವೇನೋ ಎನಿಸುತ್ತದೆ.

ಮಹಿಳೆಯರಿಂದ ರಚಿತವಾಗುತ್ತಿರುವ ಈ ಕಥೆ ಕಾದಂಬರಿಗಳಲ್ಲಿ ಸರಳ ಸಾಮಾಜಿಕ ಚಿತ್ರಗಳನ್ನು ಸಪ್ಪೆಯಾದ ರೀತಿಯಲ್ಲಿ ಕೃತಕವಾದ ಭಾಷೆಯಲ್ಲಿ ನಿರೂಪಿಸಿರುವುದು ದೊಡ್ಡದಾಗಿ ಎದ್ದು ಕಾಣುವ ದೋಷ. ಸರಳತೆ ಗುಣ ಹೌದು ಆದರೆ ತೀರಾ ಸರಳವಾದರೆ, ತೆಳುವಾದರೆ, ಹಿಂಜಿ ಜಾಳುಜಾಳಾದರೆ ಆಗ ಅದು ದುರ್ಬಲವಾಗುತ್ತದೆ. ಕೆಲವರಂತೂ ಕನ್ನಡೇತರ ಕೃತಿಗಳ, ಚಲನಚಿತ್ರಗಳ ಅಸಲಿ–ನಕಲಿಗಳ ನೀಲಿ ನಕಾಶೆಯನ್ನು, ಅದೂ ಪೇಲವವಾಗಿ ಇಳಿಸಿದ್ದಾರೆ. ಮೂಲವನ್ನು ಮನಸ್ಸಿನಲ್ಲೂ ಸ್ಮರಿಸದೆ ಎರಕ ಹಾಕಿದ್ದಾರೆ. ಕೃತಿಚೌರ್ಯ ಅಕ್ಷಮ್ಯ ಅಪರಾಧ. ಕೃತಿಗೆ ವಸ್ತುಭಾಗಗಳನ್ನು ಸ್ವೀಕರಿಸುವುದು ಸರಿ. ಆದರೆ ಅವರಲ್ಲಿ ವ್ಯವಸ್ಥೆ ಇರಬೇಕಾದದ್ದು ಅನಿವಾರ್ಯ.

ವ್ಯಾಪಕವಾದ ವಿಚಾರ ಸಂಪತ್ತಾಗಲೀ ಸಂವೇದನೆಯ ತೀವ್ರತೆ, ಸಂಕೀರ್ಣತೆ ಆಗಲೀ, ಉನ್ನತಮಟ್ಟದ ಬೌದ್ಧಿಕ ವಿಕಾಸವಾಗಲೀ, ಬದುಕಿನ ನೈಜ ಪ್ರತಿಬಿಂಬವಾಗಲೀ ಇಂದಿನ ಬಹುಜನ ಮಹಿಳೆಯರ ಬರಹಗಳಲ್ಲಿ ಮಿಡಿಯುತ್ತಿಲ್ಲ. ಅನೇಕ ಕಥೆಗಳಲ್ಲಿ ಈ ನೆಲದ ವಾಸ್ತವ್ಯದ ನೆಲೆಗಟ್ಟೇ ಇರುವುದಿಲ್ಲ. ಹಳ್ಳಿಯ ಬಾಳಿಗೆ ಸಂಬಂಧಿಸಿದ ವಸ್ತು ಎತ್ತಿಕೊಂಡ ಮಾತ್ರಕ್ಕೆ ಮಣ್ಣಿನವಾಸನೆ ಘಮ್ಮೆಂದು ಹೊಮ್ಮಿಬಿಡುವುದಿಲ್ಲ. ಬೇಗ ತಮ್ಮ ಕಾದಂಬರಿ ಚಲನ ಚಿತ್ರವಾಗಿ ರಜತಪರದೆಯ ಮೇಲೆ ರಾರಾಜಿಸಿದರೆ ಅಲ್ಲಿಗೆ ಜನ್ಮ ಸಾರ್ಥಕವೆಂಬ ತಪ್ಪು ಕಲ್ಪನೆಯೂ ಕೆಲವರಿಗಿದೆ. ಈ ಆಮಿಷದ ಸುಳಿಗಳಿಂದ ಬಿಡಿಸಿಕೊಳ್ಳಬೇಕು.

ಮಹಿಳೆಯರಿಂದ ಇದುವರೆಗೆ ಇಷ್ಟೊಂದು ಕಥೆ ಕಾದಂಬರಿಗಳು ರಚಿತವಾಗಿವೆ. ಆದರೆ ಕನ್ನಡದಲ್ಲಿ ಅತ್ಯುತ್ತಮವೆಂದು ಹೇಳಬಹುದಾದ ಹತ್ತು ಪ್ರಾತಿನಿಧಿಕ ಕಥೆಗಳಾಗಲೀ ಅಥವಾ ಕಾದಂಬರಿಗಳಾಗಲೀ ಆರಿಸಿದ್ದೇ ಆದರೆ ಒಬ್ಬ ಮಹಿಳೆಯ ಕೃತಿಯೂ ಆ ಗುಂಪಿಗೆ ಅಳವಡುವುದಿಲ್ಲ. ಇದರಿಂದಾಗಿ ಇಂಥ ವಿಪರ್ಯಾಸಗಳನ್ನು ಜೀರ್ಣಿಸಿಕೊಂಡು ಮೌಲಿಕ ಕೊಡುಗೆಯಾಗಿ ನಿಲ್ಲಬಲ್ಲ ಕೃತಿರಚನೆಗೆ ಇಂದು ಕನ್ನಡದಲ್ಲಿ ಬರೆಯುತ್ತಿರುವ ಲೇಖಕಿಯರು ಅನಿವಾರ್ಯವಾಗಿ ಅತಿಮುಖ್ಯ ಗಮನ ಹರಿಸಬೇಕಾಗಿದೆ.

ಮಹಿಳೆಯಿಂದ ರಚಿವಾಗಿರುವುದೆಲ್ಲವೂ ಸಾರಾಸಗಟು ನಿಸ್ಸಾರ ಇಲ್ಲವೇ ನಿಷ್ಪ್ರಯೋಜಕ ಎಂಬುದು ನನ್ನ ಧ್ವನಿಯಲ್ಲ. ಅವರ ಬರವಣಿಗೆಯಲ್ಲಿ ಕೆಲವಾದರೂ ಉತ್ತಮ ಕೃತಿಗಳಿವೆ. ಅಲ್ಲಿನ ಕಲಾವಂತಿಕೆ, ಜೀವಂತಿಕೆ, ಪ್ರಸನ್ನವಾದ ಮಾತುಗಾರಿಕೆ, ನಿರರ್ಗಳವಾದ ನಿರೂಪಣೆ ಇವನ್ನು ಯಾರೂ ಒಪ್ಪಿಕೊಳ್ಳಬೇಕು. ಪರಿಮಿತ ವಾದರೂ ಇರುವ ಸಾಹಿತ್ಯ ಮೌಲ್ಯವನ್ನು ಉಪೇಕ್ಷಿಸುವಂತಿಲ್ಲ. ಅದರಲ್ಲಿಯೂ ತೀರ ಇತ್ತೀಚಿಗೆ ಹೊಸ ಗಾಳಿ ಬೀಸುತ್ತಿದೆ. ದಿ. ತ್ರಿವೇಣಿ, ವಾಣಿ, ಇಂದಿರಾ, ಅನುಪಮಾ ನಿರಂಜನ,— ಮೊದಲಾದವರನ್ನಾದರೂ ಅವಶ್ಯ ನಾನು ಹೆಸರಿಸಬೇಕಾಗುತ್ತದೆ. ತ್ರಿವೇಣಿಯವರ ಕೃತಿಗಳಲ್ಲಿ ಹೊರ ಆವರಣದ ಚೆಲುವಿದೆ, ಆದರೆ ಒಳ ಹೂರಣ ದಲ್ಲಿ ಊನವಿದೆ. ಅನುಪಮಾ ನಿರಂಜನರಲ್ಲಿ ಸ್ವಲ್ಪಮಟ್ಟಿಗೆ ಇದರ ತದ್ವಿರುದ್ಧ ಕಂಡುಬರುತ್ತದೆ. ಸ್ವಲ್ಪಮಟ್ಟಿಗೆ ಎಂದು ನಿಬಂಧನೆ ಹಾಕಿದ್ದಕ್ಕೆ ಕಾರಣವಿದೆ. ಅನುಪಮಾ ನಿರಂಜನರ ಕೃತಿಗಳಲ್ಲಿ ಬಹುಮಟ್ಟಿಗೆ ವಸ್ತುವಿನ

ವೈವಿಧ್ಯ, ವಿಸ್ತಾರ, ಜೀವಂತಿಕೆ ಸ್ವೋಪಜ್ಞತೆಗಳಿಗೆ, ಕೊರತೆಗಳಿಲ್ಲ. ಅವರ ನಿರೂಪಣೆಯಲ್ಲೂ ಲವಲವಿಕೆಯಿದೆ. ಅವರೂ ಅವರಲ್ಲಿ ಇವೆರಡನ್ನೂ ಸಂಗಮಿಸಿಕೊಂಡು ಬೆಳೆದು ನಿಲ್ಲಬಲ್ಲ ಸಹಯೋಗ ಗುಣ ಇನ್ನೂ ಮೈದೋರಬೇಕಾಗಿದೆ. ಅಂಥ ಸೂಚನೆಗಳು ಕಾಣಿಸುತ್ತಿವೆ ; ಡಾ. ಅನುಪಮಾ ನಿರಂಜನರಿಂದ ಉತ್ತಮೋತ್ತಮ ಕೃತಿ ಸಾಧ್ಯವೆಂದು ಹಾಸುಬೀಸು ಹರಹಿನಿಂದ ಕೂಡಿದ ಅವರ ಬರವಣಿಗೆಯನ್ನು ಆಧರಿಸಿ ಹೇಳಬಹುದಾಗಿದೆ.

ಇನ್ನು ಕಾವ್ಯ ಮತ್ತು ನಾಟಕ ಕ್ಷೇತ್ರಗಳತ್ತ ಕಣ್ಣಾಡಿಸಿದರೂ ಮೊದಲಿನ ಚಿತ್ರಣವೇ ಕಾಣುತ್ತದೆ. ಒಂದೇ ಕೈಯ ಬೆರಳೆಣಿಕೆಗೆ ನಿಂತುಹೋಗುವ ಕಡಮೆ ಕವಯಿತ್ರಿಯರೂ ಗುಣದಲ್ಲೂ ಕಡಮೆ ಪದರದಲ್ಲಿ ವಿರಮಿಸುತ್ತಾರೆ. ಸಿದ್ಧಮಾಪ ಸವೆದ ಜಾಡಿನಲ್ಲಿ ನಡೆದರೂ ಸ್ವತಂತ್ರ ಸ್ಥಾನವನ್ನು ಅರಸಿಕೊಂಡು ಹೊರಟಿರುವ ಜಯದೇವಿ ಲಿಗಾಡೆಯವರು ಹಿಂಡನಗಲಿದ ಆನೆಯಂತೆ ಕಾಣುತ್ತಾರೆ. ಇನ್ನೂ ಒಬ್ಬಿಬ್ಬರು ಅನುಭವದ ಗಳಿಗೆಗಳನ್ನು ಚೆಲುವಾಗಿ ಕವಿತೆಯ ಚೌಕಟ್ಟಿನಲ್ಲಿ ಹಿಡಿದಿರುತ್ತಾರಾದರೂ, ಮೇಲ್ಮೈಯ ಚಿಗುರಿನಿಂದ ಸಹೃದಯರನ್ನು ಮುದಗೊಳಿಸುತ್ತಾರಾದರೂ, ಕವನಗಳ ತೆಳುವಾದ ಸರಳವಾದ ಸಪ್ಪೆರಚನೆಯಿಂದಾಗಿ ಬಹುಬೇಗನೆ ಓದುಗರ ಮನಸ್ಸಿನಿಂದ ಜಾರಿಹೋಗುತ್ತಾರೆ. ಮತ್ತೆ ಇಬ್ಬರು ಮಹಿಳೆಯರು ಕೇವಲ ನಿರ್ವೀರ್ಯ ನಿಸ್ತೇಜ ಶಿವಗೀತೆಗಳ ಅಕಾವ್ಯ ಸಂಕಲನ ಪ್ರಕಟಿಸಿದ್ದಾರೆ. ಸಮರ್ಥರ ಬರುವಿಕೆಗಾಗಿ ಈ ಕಾವ್ಯಕ್ಷೇತ್ರ ಇನ್ನೂ ನಿರೀಕ್ಷಿಸುತ್ತಿದೆ.

ವೈಯಕ್ತಿಕ ಕರ್ತೃತ್ವಶಕ್ತಿಯಿಂದ ನಾಟಕ ಬರೆದು ಯಶಸ್ವಿಯಾದ ಒಬ್ಬ ಲೇಖಕಿಯೂ ಇಲ್ಲ. ಇರುವ ನಾಟಕಕಾರ್ತಿಯರೂ ಇದಕ್ಕೆ ಅಪವಾದವಲ್ಲ. ಅನುವಾದ ಸಾಹಿತ್ಯದಲ್ಲೂ ಈ ಮಾತೇ ಒಂದೆರಡು ಅಪವಾದಗಳೊಡನೆ ಸಲ್ಲುತ್ತದೆ; ವಿಮರ್ಶೆಯನ್ನಂತೂ ಮಹಿಳಾಸಾಹಿತಿಗಳು 'ಮಡಿ' ಎಂದು ತಿಳಿದಂತೆ ತೋರುತ್ತದೆ. ವಿಚಾರ ಸಾಹಿತ್ಯದ ಬೆಳವಣಿಗೆಗೆ ಇಂದಿನ ಮಹಿಳಾಲೇಖಕಿಯರ ಕೊಡುಗೆ ಏನೇನೂ ಸಾಲದು. ಸಂಶೋಧನೆಯಂತೂ ಅವರಿಗೆ ಒಗ್ಗೇ ಇಲ್ಲ; ಅಲರ್ಜಿಯಂತೆ ದೂರ ಸರಿದಿದೆ. ಪ್ರಬಂಧ ಸಾಹಿತ್ಯವೂ ಅವರನ್ನು ಸಬಲವಾಗಿ ಉದ್ದೀಪಿಸಿಲ್ಲ. ಹಾಸ್ಯಚಟಾಕಿಗಳಷ್ಟೇ ಲಲಿತ ಪ್ರಬಂಧಗಳಾಗಿ ನಿಲ್ಲಲಾರವು. ಹಾಸ್ಯವನ್ನು ತೆಕ್ಕೆಗೆ ತಬ್ಬಿಕೊಂಡು ಅದರಾಚೆಗಿನ ಪ್ರಪಂಚಕ್ಕೆ ರಸಮಾತ್ರೆ ಮೂಡಿಸಬಲ್ಲ ಪ್ರಬಂಧಗಳ ರಚನೆ ಇನ್ನೂ ಆಗಿಲ್ಲ. ಪ್ರವಾಸ ಸಾಹಿತ್ಯವೂ ಅಷ್ಟೇ.

ಈ ಲೇಖನ ಹೆಸರುಗಳ ಪಟ್ಟಿಯಾಗಿಲ್ಲವಾದರೂ ಸಾಹಿತ್ಯದ ಬೇರೆ ಬೇರೆ ಪ್ರಕಾರಗಳಲ್ಲಿ ಒಟ್ಟು ಲೇಖಕಿಯರ ಸಮುದಾಯ ತೋರಿದ ಮೌಲಿಕ ಸಾಧನೆಗಳನ್ನು, ಕೊಡುಗೆಯನ್ನು ಅವಲೋಕಿಸಿದೆ. ಈ ಸಮೀಕ್ಷೆಯಲ್ಲಿ, ಆಧುನಿಕಕನ್ನಡಸಾಹಿತ್ಯಕ್ಕೆ ಮಹಿಳೆಯರ ಗಟ್ಟಿ ಕೊಡುಗೆಯ ಪ್ರಮಾಣ ಅಭಿಮಾನಪಡುವಷ್ಟು ಇಲ್ಲವೆಂದು ಇಂಥ ಒಂದು ನಿರಾಶೆಯ ಚಿತ್ರವನ್ನು ಪ್ರತಿಪಾದಿಸಿದೆ. ಆದರೆ ಈ ವಿಮರ್ಶಾತ್ಮಕ ಬರಹದ ಹಿಂದೆ ಮಿಡಿಯುವ ನನ್ನ ಉತ್ಕಟ ಭಾವನೆಗಳ ಕಳಕಳಿಯನ್ನೂ ತೀವ್ರತೆಯನ್ನೂ ನನ್ನ ಸಮಕಾಲೀನ ಲೇಖಕಸೋದರಿಯರು ಗುರುತಿಸಬೇಕು. ನಾನು ಆಶಾವಾದಿಯೇ ಹೊರತು ನಿರಾಶಾವಾದಿಯಲ್ಲ.

ಆದ್ದರಿಂದ ನನ್ನದು ಶುದ್ಧ ಅತೃಪ್ತಿಯ ಧ್ವನಿಯೇ ಹೊರತು ಆಕ್ಷೇಪ ಅಥವಾ ಆರೋಪ ಸ್ವರೂಪದ್ದಲ್ಲ. ಮಹಿಳಾಸಾಹಿತಿಗಳ ಸಾಹಿತ್ಯದ ಸಾತತ್ಯದಲ್ಲಿ ನಾನು ಗುರುತಿಸಿದ ಅಸಾಂಗತ್ಯಗಳನ್ನು ಪರಿಹರಿಸಿಕೊಂಡು ಉತ್ತಮ ಸೃಜನಾತ್ಮಕ ಸಾಹಿತ್ಯ ಕೊಡಬಲ್ಲ ಸಾಮರ್ಥ್ಯವುಳ್ಳ ಲೇಖಕಿಯರ ಸಂಖ್ಯೆ ಇನ್ನು ಮುಂದಾದರೂ ಹೆಚ್ಚಲಿ ಎಂದು ಕಳಕಳಿಯಿಂದ ಹಾರೈಸುತ್ತೇನೆ.

ಇಂಗ್ಲೀಷ್ ಸಾಹಿತ್ಯಕ್ಕೆ ತಮ್ಮ ವಿಶಿಷ್ಟ ಕೊಡುಗೆಯಿಂದ ಹೆಸರಾಗಿರುವ ಚಾರ್ಲೆಟ ಬ್ರಾಂಟೆ, ಎಮಿಲಿ ಬ್ರಾಂಟೆ, ಆ್ಯನಿ ಬ್ರಾಂಟೆ, ಜೇನ್ ಆಸ್ಟಿನ್, ಮಿಸೆಸ್ ಬ್ರೋನಿ, ಮಿಸೆಸ್ ಹೆನ್ರಿವುಡ್, ನೊಬೆಲ್ ಪಾರಿತೋಷಕ ವಿಜೇತೆ ಪೆರ್ಲ್ ಎಸ್ ಬಕ್—ಮುಂತಾದ ಮಹಿಳಾ ಸಾಹಿತಿಗಳ ಶ್ರೇಣಿಗೆ ಸಮನಾಗಿ ನಿಲ್ಲಬಲ್ಲ ಲೇಖಕಿಯರು ಕನ್ನಡದಲ್ಲಿ ಬೇಗಬರಲಿ ಎಂಬುದೊಂದೆ ನನ್ನ ಆಶಯ.

ಜಿ. ಎಸ್. ಶಿವರುದ್ರಪ್ಪ

ಸಾಹಿತ್ಯ ಮತ್ತು ಸಾಮಾಜಿಕಪ್ರಜ್ಞೆ

'ಸಾಮಾಜಿಕಪ್ರಜ್ಞೆ'—ಎಂಬುದು ಸಾಹಿತ್ಯವಿಮರ್ಶೆಯಲ್ಲಿ ತೀರಾ ಇತ್ತೀಚೆಗೆ ಬಳಕೆಯಾಗುತ್ತಿರುವ ಒಂದು ಪದವಾಗಿದೆ. ಸಮಾಜವಾದೀ ರಾಷ್ಟ್ರಗಳ ಸಾಹಿತ್ಯಕ ಸಂದರ್ಭದಲ್ಲಿ ಹುಟ್ಟಿಕೊಂಡ ಈ ಪದ, ಸಾಹಿತಿಗೆ ಇರಬೇಕಾದ ಸಾಮಾಜಿಕ ಎಚ್ಚರ, ಸಾಮಾಜಿಕ ಜವಾಬ್ದಾರಿ ಇತ್ಯಾದಿಗಳನ್ನು ಸೂಚಿಸುತ್ತದೆ. ಹಾಗೆ ನೋಡಿದರೆ ಸಾಹಿತ್ಯವನ್ನು ಕುರಿತ ವ್ಯಾಖ್ಯೆಗಳೆಲ್ಲವೂ ಕಾಲದಿಂದ ಕಾಲಕ್ಕೆ, ಸಾಹಿತ್ಯವು ತನ್ನ ಸುತ್ತಣ ಸಮಾಜದೊಂದಿಗೆ ಇರಿಸಿಕೊಂಡ ಸಂಬಂಧವನ್ನೇ ಅನುಲಕ್ಷಿಸಿ ನಿರೂಪಿತವಾಗಿರುತ್ತವೆ ಮತ್ತು ಸಾಹಿತ್ಯದಲ್ಲಿ, ಅಂದಂದಿನ ಸಮಾಜವು-ಆದರಲ್ಲೂ ಹಿಂದಿನ ಕಾವ್ಯಗಳ ಸಂದರ್ಭದಲ್ಲಿ—ಅಂದಂದಿನ ಸಹೃದಯ ಸಮಾಜವು, ಯಾವ ರೀತಿಯ ಬದುಕನ್ನು, ಬದುಕಿನ ದೃಷ್ಟಿಯನ್ನು, ಬೆಲೆಗಳನ್ನು ಬಹುಮುಖ್ಯವೆಂದು ಭಾವಿಸಿತ್ತೋ ಅವುಗಳೇ ಅಭಿವ್ಯಕ್ತವಾಗಿರುವುದನ್ನು ಗುರುತಿಸಬಹುದು.

ಸಾಹಿತ್ಯವು ಒಂದು ಕಾಲದ ಸಾಮಾಜಿಕ ಸಂದರ್ಭದಲ್ಲಿ ಸಂಭವಿಸುತ್ತದೆ. ಸಾಹಿತಿಯೂ ಆ ಸಮಾಜದ ಒಂದು ಅನಿವಾರ್ಯವಾದ ಅಂಗವಾಗಿರುವುದರಿಂದ, ಮತ್ತು ತನ್ನ ಸಾಮಾಜಿಕ ಸಂಪರ್ಕ ಮಾಧ್ಯಮವಾದ ಭಾಷೆಯ ಮೂಲಕ ತನ್ನ ಸಮಾಜದೊಂದಿಗೆ ಕೃತಿಮುಖೇನ ವ್ಯವಹರಿಸುವುದರಿಂದ, ಸಾಹಿತಿಯಾದವನು ತನ್ನ ಸಮಕಾಲೀನ ಸಮಾಜದ ಬಗ್ಗೆ ಮತ್ತು ಸಾಮಾಜಿಕ ಮಾಧ್ಯಮವಾದ ಭಾಷೆಯ ಬಗ್ಗೆ ವಿಶೇಷವಾದ ರೀತಿಯ ಎಚ್ಚರವನ್ನು ತಾಳಿರುತ್ತಾನೆ. ಈ ವಿಶೇಷ ರೀತಿಯ ಎಚ್ಚರವನ್ನು ಸ್ಥೂಲವಾಗಿ ನಾವು ಸಾಮಾಜಿಕಪ್ರಜ್ಞೆ ಎಂದು ಕರೆಯುತ್ತೇವೆ.

ಈ ವಿಷಯವನ್ನು ಕುರಿತು ವಿಚಾರ ಮಾಡುವಾಗ ಮೂರು ಮುಖ್ಯವಾದ ಪ್ರಶ್ನೆಗಳು ಏಳುತ್ತವೆ :

ಒಂದು : ಸಾಮಾಜಿಕಪ್ರಜ್ಞೆ ಎಂದರೇನು ?

ಎರಡು : ಸಾಮಾಜಿಕಪ್ರಜ್ಞೆಯ ಅಭಿವ್ಯಕ್ತಿಗೆ, ಸಾಹಿತಿ ತಾನು ಆರಿಸಿಕೊಳ್ಳುವ ವಸ್ತುವು ಎಷ್ಟರ ಮಟ್ಟಿಗೆ ನೆರವಾಗುತ್ತದೆ ಅಥವಾ ಆತಂಕವಾಗುತ್ತದೆ ?

ಮೂರು : ಸಾಮಾಜಿಕಪ್ರಜ್ಞೆಯೊಂದರಿಂದಲೆ, ಸಾಹಿತ್ಯದ ನೆಲೆ—ಬೆಲೆಗಳನ್ನು ಗುರುತಿಸಲು ಹೊರಡುವುದು ಸಾಧ್ಯವೆ ?

ಮೊದಲನೆಯದಾಗಿ 'ಸಾಮಾಜಿಕಪ್ರಜ್ಞೆ' ಎಂದರೇನೆಂಬುದನ್ನು ನೋಡೋಣ. ಈ ಪ್ರಶ್ನೆಗೆ ಉತ್ತರವಿರುವುದು ಕವಿಗೂ, ಸುತ್ತಣ ಸಮಾಜಕ್ಕೂ ಇರುವ ಸಂಬಂಧದ ಸ್ವರೂಪದಲ್ಲಿ. ಸಮಾಜವನ್ನು ಸಾಹಿತಿಯಲ್ಲದ ಬೇರೆಬೇರೆಯವರು ನೋಡುವ ದೃಷ್ಟಿಗೂ, ಕವಿಯಾದವನು ನೋಡುವ ದೃಷ್ಟಿಗೂ ವ್ಯತ್ಯಾಸವಿದೆ ಎಂಬುದೆ ಇಲ್ಲಿ ಗುರುತಿಸಿಕೊಳ್ಳಬೇಕಾದ ಅಂಶ. ಒಬ್ಬ ಚರಿತ್ರಕಾರ, ಮಾನವ ಶಾಸ್ತ್ರಜ್ಞ, ಭಾಷಾಶಾಸ್ತ್ರಜ್ಞ ಇವರೂ ಸಮಾಜ

ವನ್ನು ತಮ್ಮತಮ್ಮ ನಿಲುವುಗಳಿಂದ, ಅವರ ಇತಿಹಾಸವನ್ನು, ನಡೆನುಡಿಗಳನ್ನು ಅಭ್ಯಾಸ ಮಾಡುತ್ತಾರೆ. ಆದರೆ ಒಬ್ಬ ಕವಿ ಸಮಾಜವನ್ನು ನೋಡುವುದು, ಅಥವಾ ಅದನ್ನು ತನ್ನ ಅನುಭವದ ವಸ್ತುವನ್ನಾಗಿ ಮಾಡಿಕೊಳ್ಳುವುದು ಮತ್ತು ಆ ಅನುಭವವನ್ನು ಕಲಾತ್ಮಕವಾಗಿ ರೂಪಿಸುವುದು, ಸಮಾಜಶಾಸ್ತ್ರಜ್ಞನ, ಚರಿತ್ರಕಾರನ, ಮಾನವ ಶಾಸ್ತ್ರಜ್ಞನ ಸಂಶೋಧನಾತ್ಮಕ ದೃಷ್ಟಿಯಿಂದ ಭಿನ್ನವಾಗಿರುತ್ತದೆ. ಯಾಕೆಂದರೆ ಸಾಹಿತ್ಯ ಇತರ ಶಾಸ್ತ್ರಗಳಂತೆ ಸಮಾಜದ ಅಂದಂದಿನ ಬದುಕಿನ, ಹಾಗೂ ಸಂಗತಿಗಳ ದಾಖಲೆ ಅಲ್ಲ ; ಅದು ಅಂದಿನ ಸಮಗ್ರವಾದ ಬದುಕನ್ನು ಕವಿಯಾದವನು ತನ್ನ ತೀವ್ರವಾದ ಸಂವೇದನೆಗೆ ಒಳಗು ಪಡಿಸಿಕೊಂಡದ್ದರ ಪರಿಣಾಮವಾಗಿರುತ್ತದೆ. 'ಪ್ರಜ್ಞೆ' ಎಂದರೆ ಯಾವುದೇ ವಸ್ತು ಸತ್ಯವನ್ನು ತನ್ನ ಪ್ರತಿಭಾವದಿಂದ ಗ್ರಹಿಸಿ ಪರಿಭವಿಸುವ ಒಂದು ವಿಶೇಷ ಸಂವೇದನೆ ಎಂದು ಅರ್ಥ. ಕವಿಯಾದವನು ಈ 'ಪ್ರಜ್ಞೆ'ಯಿಂದ ತನ್ನ ಸುತ್ತಣ ಸಮಾಜದ ಆಶೋತ್ತರಗಳನ್ನು, ತುಡಿತ ಮಿಡಿತೆಗಳನ್ನು, ನಂಬಿಕೆಗಳನ್ನು ಮೌಲ್ಯಗಳನ್ನು ಒಳಹೊಕ್ಕು ಕಂಡು ತನ್ನ ಕೃತಿಯಲ್ಲಿ ಕಲಾತ್ಮಕವಾಗಿ ಅಭಿವ್ಯಕ್ತ ಪಡಿಸುತ್ತಾನೆ. ಆದರೂ ಅಂದಂದಿನ ಸಾಮಾಜಿಕ ಪರಿಸ್ಥಿತಿಯನ್ನು ಅಧ್ಯಯನ ಮಾಡುವವರಿಗೆ, ಸಾಹಿತ್ಯವು ವಿಶ್ವಸನೀಯವಾದ ಸಂಗತಿಗಳನ್ನು ಸೂಚಿಸುವ ಹಲವು ಆಕರಗಳಲ್ಲಿ ಒಂದು ಎಂಬುದನ್ನು ಮರೆಯಬಾರದು.

ಎರಡನೆಯ ಪ್ರಶ್ನೆ ಸಾಹಿತಿಯ ಸಾಮಾಜಿಕ ಪ್ರಜ್ಞೆಯ ಅಭಿವ್ಯಕ್ತಿ, ಅವನು ತನ್ನ ಕೃತಿ ರಚನೆಗೆ ಆರಿಸಿ ಕೊಳ್ಳುವ ವಸ್ತುವಿನ ಮೇಲೆ ಅವಲಂಬಿತವಾಗಿರುತ್ತದೆಯೇ ಎನ್ನುವುದು. ಅಂದರೆ ಸಾಹಿತಿಯೊಬ್ಬನು ತನ್ನ ಸಮಕಾಲೀನ ಸಮಾಜದ ಸಂದರ್ಭದಿಂದ ವಸ್ತುವನ್ನೆತ್ತಿಕೊಂಡು ಬರೆಯುವಾಗ, ಅವನ ಸಾಮಾಜಿಕಪ್ರಜ್ಞೆಯ ಅಭಿವ್ಯಕ್ತಿಗೆ ಇರುವ ಅನುಕೂಲ ಹಾಗೂ ಅವಕಾಶಗಳು, ಅವನು ಪ್ರಾಚೀನವಾದ ಪುರಾಣೇತಿಹಾಸಗಳಿಂದ ವಸ್ತುವನ್ನೆತ್ತಿಕೊಂಡು ಬರೆಯುವಾಗ ಇರುತ್ತವೆಯೆ ? ಹೀಗಾದಾಗ, ಪುರಾಣೇತಿಹಾಸಗಳನ್ನು ವಸ್ತುವನ್ನಾಗಿ ಮಾಡಿಕೊಳ್ಳಬೇಕಾದ ಪರಿಸ್ಥಿತಿಗೆ ಕಟ್ಟುಬಿದ್ದ ಹಿಂದಿನ ಸಾಹಿತಿಗಳು, ಆಧುನಿಕ ಕಾಲದ ಸಮಕಾಲೀನ ಲೇಖಕರಿಗಿಂತ ಕಡಮೆ ಸಾಮಾಜಿಕ ಪ್ರಜ್ಞೆಯನ್ನು ಪ್ರಕಟಿಸಿದ್ದಾರೆಂದೂ ಅಥವಾ ಇಂಥ ಪ್ರಾಚೀನ ವಸ್ತುಗಳನ್ನು ನಿರ್ವಹಿಸುವ ಯಾವ ಕಾಲದ ಲೇಖಕರೂ, ತಮ್ಮ ಸಮಕಾಲೀನ ಸಾಮಾಜಿಕಪ್ರಜ್ಞೆಯನ್ನು ಸಮರ್ಪಕವಾಗಿ ಪ್ರಕಟಿಸಲು ಸಾಧ್ಯವೇ ಆಗುವುದಿಲ್ಲವೆಂದೂ ಹೇಳಬಹುದೆ? ಈ ಸಂಶಯಕ್ಕೆ ನಮ್ಮ ಇಡೀ ಕನ್ನಡ ಸಾಹಿತ್ಯ ಪರಂಪರೆಯು ಸಾಕಷ್ಟು ಆಧಾರಗಳನ್ನು ಒದಗಿಸುತ್ತದೆ. ಪಂಪ ರನ್ನಾದಿ ಮಾರ್ಗ ಕವಿಗಳೂ ಮತ್ತು ದೇಸೀ ಪರಂಪರೆಯಲ್ಲೂ, ಪುರಾಣೇತಿಹಾಸಗಳನ್ನು ವಸ್ತುವನ್ನಾಗಿಸಿಕೊಂಡು ಬರೆದ ಇನ್ನಿತರ ಕವಿಗಳೂ, ತಮ್ಮ ಸಮಕಾಲೀನ ಸಮಾಜದ ಬಗ್ಗೆ ಅಂಥ ವಿಶೇಷವಾದ ಕಾಳಜಿಯನ್ನು ವಹಿಸಿದ್ದಾರೆಂದೂ ಸಾಮಾಜಿಕಪ್ರಜ್ಞೆಯನ್ನು ಪ್ರಕಟಿಸಿದ್ದಾರೆಂದೂ ತೋರುವುದೇ ಇಲ್ಲವಲ್ಲ; ಉದಾತ್ತ ವಸ್ತುಗಳನ್ನು ಉದಾತ್ತ ವ್ಯಕ್ತಿಗಳನ್ನೂ, ಮಹಿಮಾಶಾಲಿಗಳಾದ ಅವತಾರ ಪುರುಷರನ್ನೂ ಕುರಿತು ಕೃತಿರಚನೆ ಮಾಡಿದ ನಮ್ಮ ಹಿಂದಿನ ಕವಿಗಳು, ತಮ್ಮ ಸುತ್ತಣ ಸರಳ ಸಾಧಾರಣ ಬದುಕಿನ ಬಗೆಗೆ, ಸಾಮಾನ್ಯ ಜನದ ಬಗೆಗೆ ತೋರಿರುವ ನಿರ್ಲಕ್ಷ್ಯ ಗಮನಿಸತಕ್ಕದ್ದಾಗಿದೆ. ರಾಜಾಧಿರಾಜರ ಭೋಗ ವಿಲಾಸ ವೈಭವಗಳ ಚಿತ್ರಣದಲ್ಲಾಗಲಿ, ಮತ್ತು ಅದಕ್ಕೆ ವಿರುದ್ಧವಾದ ತ್ಯಾಗ—ವೈರಾಗ್ಯಶಾಲಿಗಳ ಮತ್ತು ಅವತಾರ ಪುರುಷರ ಪವಾಡಮಯ ನಡವಳಿಕೆಗಳಲ್ಲಾಗಲಿ ಯಾವ ಸಾಮಾಜಿಕಪ್ರಜ್ಞೆ ಪ್ರಕಟವಾಗಿದೆ? ಹಾಗೆಯೆ ಮಾರ್ಗ ಕವಿಗಳು ಬಳಸಿದ ಪ್ರೌಢವಾದ ಪಂಡಿತಭಾಷೆ ಯಾವಾಗಲಾದರೂ ಅಂದಿನ ಸಮಾಜದ ಸಹಜವಾದ ಸಂಪರ್ಕಮಾಧ್ಯಮವಾಗಿತ್ತೆಂದು ನಂಬಬಹುದೆ ? ಹೀಗಾಗಿ ಸುತ್ತಣ ಸಮಾಜದಿಂದ, ತಾವೇ ಬೇರೆಯಾಗಿ ಯಾರೋ ಕೆಲವು ವಿಶಿಷ್ಟ ವರ್ಗದವರ ಮನಃಪ್ರೀತ್ಯರ್ಥವಾಗಿ ಅಥವಾ ತಾವು ಹುಟ್ಟಿದ ಮತ—ಧರ್ಮಗಳನ್ನು ಮತ್ತು ಅದರ ಉದಾತ್ತತತ್ತ್ವಗಳನ್ನು ಪ್ರಚಾರ ಮಾಡುವ ಸಾಧನವಾಗಿ ಮಾತ್ರ ಕಾಣಿಸಿಕೊಳ್ಳುವ ಹಿಂದಿನ ಸಾಹಿತ್ಯ, ಸಾಮಾಜಿಕ ಪ್ರಜ್ಞೆಯನ್ನು ಪ್ರಕಟಿಸಿದೆ ಎಂದು ಒಪ್ಪುವುದಾದರೂ ಹೇಗೆ ?

ಈ ತರ್ಕವೇನೋ ಸ್ವಾರಸ್ಯವಾಗಿದೆ. ಆದರೆ ಅದು ಸಂಪೂರ್ಣವಾಗಿ ಸರಿ ಎಂದು ಒಪ್ಪಲಾಗುವುದಿಲ್ಲ. ಯಾಕೆಂದರೆ ಅದು ಸಾಹಿತ್ಯವೆಂದರೆ ಸಾಮಾಜಿಕ ಪ್ರಜ್ಞೆಯ ಅಭಿವ್ಯಕ್ತಿಯೇ—ಎಂಬ ಏಕಮುಖವಾದ ಧೋರಣೆಯನ್ನು ಪ್ರತಿಪಾದಿಸುತ್ತದೆ ಮತ್ತು ಸಾಹಿತ್ಯದ ಮೌಲಿಕತೆಯನ್ನು ಸಾಮಾಜಿಕ ಪ್ರಜ್ಞೆಯೊಂದರಿಂದಲೆ ನಿರ್ಣಯಿಸಲು ಹೊರಡುತ್ತದೆ. ಇಷ್ಟು ಮಾತ್ರ ನಿಜ, ಆಧುನಿಕ ಸಾಹಿತ್ಯಕ್ಕೆ ಇರುವ ಪ್ರಮಾಣದ ಸಾಮಾಜಿಕ ಪ್ರಜ್ಞೆ ಪ್ರಾಚೀನ ಸಾಹಿತ್ಯಕ್ಕೆ ಇರಲಿಲ್ಲ. ಅದಕ್ಕೆ ಅನೇಕ ಸಾಂಸ್ಕೃತಿಕವಾದ ಕಾರಣಗಳೂ ಇವೆ. ಹಾಗೆಂದ ಮಾತ್ರಕ್ಕೆ ಹಿಂದಿನ ಸಾಹಿತ್ಯದಲ್ಲಿ, ಅದರ ಪರಿಮಿತಿಗಳೇನೇ ಇರಲಿ, ಸಾಮಾಜಿಕ ಪ್ರಜ್ಞೆ ಅಭಿವ್ಯಕ್ತವಾಗಿಯೆ ಇಲ್ಲವೆಂದು ಹೇಳಲಾಗುವುದಿಲ್ಲ. ಇದಕ್ಕೆ ಪಂಪನ 'ವಿಕ್ರಮಾರ್ಜುನ ವಿಜಯ'ವೇ ಸಾಕ್ಷಿ; ನಯಸೇನನ "ಧರ್ಮಾಮೃತ"ವೇ ಸಾಕ್ಷಿ. ಮುಂದೆ ಹನ್ನೆರಡನೆ ಶತಮಾನದಲ್ಲಿ ನಡೆದ ವಚನಕಾರರ ಧಾರ್ಮಿಕ—ಸಾಮಾಜಿಕ ವಿಚಾರ ಕ್ರಾಂತಿಯಿಂದ, ವಚನಾಭಿವ್ಯಕ್ತಿಯಲ್ಲಿ ತೆರೆಯುವ ಸಾಮಾಜಿಕ ಪ್ರಜ್ಞೆ ಆಶ್ಚರ್ಯಕರವಾಗಿದೆ. ಮುಂದಿನ ಅನೇಕ ಷಟ್ಪದಿ ಹಾಗೂ ಸಾಂಗತ್ಯ ಕೃತಿಗಳಲ್ಲಿ ಅವುಗಳ ವಸ್ತು ಎಷ್ಟೇ ಉದಾತ್ತವಾದುದಾದರೂ ತಕ್ಕಮಟ್ಟಿನ ಸಾಮಾಜಿಕ ಪ್ರಜ್ಞೆ ಅಭಿವ್ಯಕ್ತವಾಗಿರುವುದನ್ನು ಗುರುತಿಸಬಹುದು. ಮೊದಲೇ ಹೇಳಿರುವ ಹಾಗೆ, ಅಂದಂದಿನ ಸಾಹಿತ್ಯವು ಎಷ್ಟೆಷ್ಟರ ಮಟ್ಟಿಗೆ ತನ್ನ ಸುತ್ತಣ ಸಮಾಜದೊಂದಿಗೆ ಸಂಬಂಧವನ್ನು ಸ್ಥಾಪಿಸಿಕೊಳ್ಳತೊಡಗಿದೆಯೋ, ಅಷ್ಟಷ್ಟರಮಟ್ಟಿಗೆ ಅಂದಂದಿನ ಸಾಹಿತ್ಯದಲ್ಲಿ ಅವರ ಸಾಮಾಜಿಕ ಕಾಳಜಿಗಳನ್ನು ನಾವು ಗುರುತಿಸಬಹುದು. ಈ ದೃಷ್ಟಿಯಿಂದ ಇಡೀ ಕನ್ನಡಸಾಹಿತ್ಯ ಚರಿತ್ರೆಯೇ, ಸಾಮಾಜಿಕ ಪ್ರಜ್ಞೆ ಜಾಗೃತವಾಗುತ್ತ ಬಂದದ್ದರ ಚರಿತ್ರೆಯಾಗಿದೆ.

ಮೂರನೆಯ ಪ್ರಶ್ನೆ 'ಸಾಮಾಜಿಕ ಪ್ರಜ್ಞೆ'ಯೊಂದರಿಂದಲೇ, ಯಾವುದೇ ಸಾಹಿತ್ಯದ ನೆಲೆ–ಬೆಲೆಗಳನ್ನು ನಿರ್ಣಯಿಸುವುದು ಸಾಧ್ಯವೆ? ಇದೊಂದು ಮೌಲಿಕವಾದ ಪ್ರಶ್ನೆ. ಸಾಮಾಜಿಕ ಪ್ರಜ್ಞೆಯೊಂದೇ ಒಂದು ಕೃತಿಯ ಸಾಹಿತ್ಯಮೌಲ್ಯವನ್ನು ಅಳೆಯುವ ಮಾನದಂಡವಲ್ಲ. ವ್ಯಕ್ತಿನಿಷ್ಠವಾದ ಭಕ್ತಿ ಸಾಹಿತ್ಯವಲ್ಲಾಗಲೀ, ಸೌಂದರ್ಯನಿಷ್ಠ ಭಾವಗೀತೆಗಳಲ್ಲಾಗಲಿ, ಸಾಮಾಜಿಕ ಪ್ರಜೆಯನ್ನು ಕಾಣಲಾಗುವುದಿಲ್ಲವೆಂಬ ಕಾರಣದಿಂದ ಅವು ಸಾಹಿತ್ಯವೇ ಅಲ್ಲ ಅನ್ನಬಹುದೆ ? ಹರಿಹರನ ರಗಳೆಗಳಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಹುಡುಕುವುದು ವ್ಯರ್ಥ. ಹರಿಹರನ ರಗಳೆಯ ಪಾತ್ರಗಳು, ವಾಸ್ತವವಾಗಿ ಸರಳ ಸಾಧಾರಣ ಸಾಮಾಜಿಕ ಸ್ತರಗಳಿಂದ ಬಂದವುಗಳಾದರೂ, ಅವುಗಳ ವ್ಯವಹಾರವೆಲ್ಲಾ ಅಲೌಕಿಕ ಸಾಧನೆಯ ಕಡೆಗೇ ಕೇಂದ್ರೀಕೃತವಾಗಿದೆ ; ಪರಮಾತ್ಮನಾದ ಶಿವ ಹಾಗೂ ಭಕ್ತ ಇವರಿಬ್ಬರ ಖಾಸಗೀ ವ್ಯವಹಾರವೆಂಬಂತೆ ಅವುಗಳ ನಡವಳಿಕೆಯಿಂದ ಭಾಸವಾಗುತ್ತದೆ. ಆದರೆ ಹರಿಹರನ ರಗಳೆಗಳನ್ನು, ಸಾಮಾಜಿಕ ಪ್ರಜ್ಞೆಯಿಲ್ಲವೆಂಬ ಕಾರಣದಿಂದ, ಸಾಹಿತ್ಯವಲ್ಲವೆಂದು ತಳ್ಳಿಹಾಕುವುದು ಮೂರ್ಖತನವಾಗುತ್ತದೆ. ಹಾಗೆಯೆ ಕುವೆಂಪು ಅವರು ಬರೆದ ಸೊಗಸಾದ ಪ್ರಕೃತಿ ಗೀತೆಗಳಲ್ಲಿ ಮತ್ತು ಪ್ರಾಚೀನವಾದ ವಸ್ತುವನ್ನಾಶ್ರಯಿಸಿ ಬರೆದ 'ರಾಮಾಯಣ ದರ್ಶನಂ' ದಲ್ಲಿ ಸಾಮಾಜಿಕ ಪ್ರಜ್ಞೆ ಇದೆಯೆ ಎಂದು ಪ್ರಶ್ನಿಸುವುದೂ ಅಷ್ಟೇ ತಪ್ಪು. ಅರವಿಂದರ 'ಸಾವಿತ್ರಿ'ಯಂತಹ ಮಹಾಕಾವ್ಯದಲ್ಲಿ ಸಾಮಾಜಿಕ ಪ್ರಜ್ಞೆಯನ್ನು ಸಂಶೋಧಿಸಲು ಹೊರಡುವುದೂ ಇದೇ ರೀತಿಯದು. ಮೊದಲನೆಯದಾಗಿ, ಸಮಕಾಲೀನವಾದ ಸಾಮಾಜಿಕ ಸಂದರ್ಭದಿಂದ ವಸ್ತುವನ್ನಾರಿಸಿಕೊಂಡವರಲ್ಲಿಯೇ ಸಾಮಾಜಿಕ ಪ್ರಜ್ಞೆ ಇದೆ ಎಂದು ಭಾವಿಸುವುದೂ, ಇದರಿಂದ ಬೇರೆಯಾದ ವಸ್ತುಗಳನ್ನಾರಿಸಿಕೊಂಡವರಲ್ಲಿ ಸಾಮಾಜಿಕ ಪ್ರಜ್ಞೆ ಇಲ್ಲವೆಂದು ಸಾಧಿಸುವುದೂ ಸರಿಯಾದ ದೃಷ್ಟಿ ಅಲ್ಲ. ಎರಡನೆಯದಾಗಿ ಸಾಮಾಜಿಕ ಪ್ರಜ್ಞೆ ಎಂದರೆ, ತಾನು ಬದುಕಿದ ಸುತ್ತಣ ಪರಿಸರದ ಸಾಮಾಜಿಕ ಸಂಗತಿಗಳನ್ನು ದಾಖಲೆ ಮಾಡುವ ಕೆಲಸ ಎಂದೂ ಅಲ್ಲ. ಕವಿಗೆ ಅಂದಿನ ಸಮಾಜವನ್ನೂ ಒಳಗೊಳ್ಳುವ ಮತ್ತು ಅದನ್ನೂ ಮೀರಿದ ಸಮಗ್ರ ಬದುಕು ಮುಖ್ಯ. ಆ ಬದುಕನ್ನು ಮತ್ತು ಅದಕ್ಕೆ ಹಿನ್ನೆಲೆಯಾದ ಯುಗಧರ್ಮವನ್ನು, ಮೌಲ್ಯಗಳನ್ನು, ಸಾಂಸ್ಕೃತಿಕ ಸಂಘರ್ಷಣೆಗಳನ್ನು ಕವಿ ಎಷ್ಟರಮಟ್ಟಿಗೆ ತನ್ನ ತೀವ್ರ ಸಂವೇದನೆಯಿಂದ ಕಾವ್ಯಾನುಭವವನ್ನಾಗಿ ಮಾಡಿಕೊಂಡಿದ್ದಾನೆ ಎಂಬುದನ್ನು ವಿಮರ್ಶಕರು ಗಮನಿಸಬೇಕು ; ಅದರ ಬದಲು ಒಂದು ಕಾವ್ಯದಲ್ಲಿ ಅಂದಂದಿನ ನಡವಳಿಕೆಗಳು,

ಆ ಜನರ ವೇಷಭೂಷಣಗಳು, ಆಚಾರಗಳು, ಹಬ್ಬಹರಿದಿನಗಳು, ನಂಬಿಕೆಗಳು, ಸಮಸ್ಯೆಗಳು ಇನ್ನೂ ಇಂಥ ಸಂಗತಿಗಳನ್ನು ಸಂಶೋಧಿಸಿ ಪಟ್ಟಿ ಹಾಕಿ ಅದರಿಂದ ಮಾತ್ರ ಸಾಹಿತ್ಯದಲ್ಲಿನ ಸಾಮಾಜಿಕ ಪ್ರಜ್ಞೆಯನ್ನು ಗುರುತಿಸಲು ಹೊರಡುವುದು ಸಮರ್ಪಕವಾಗಲಾರದು. ಹಾಗೆ ನೋಡಿದರೆ ಯಾವುದೇ ಮಹತ್ವದ ಕವಿಕೃತಿ, ಅಂದಂದಿನ ಸಾಮಾಜಿಕ ಸಂದರ್ಭದಲ್ಲಿ ಉದ್ಭವಿಸುವುದರಿಂದ, ಅದು ಅಂದಿನ ಸಮಾಜದ ಆಶೋತ್ತರಗಳ ಪ್ರತಿನಿಧಿಯಾಗಿರುವುದು ಅನಿವಾರ್ಯ.

ಒಂದು ದೃಷ್ಟಿಯಿಂದ ನೋಡಿದರೆ ಸಾಮಾಜಿಕಪ್ರಜ್ಞೆ ವ್ಯಕ್ತಿವಿಶಿಷ್ಟವಾದದ್ದು ಮತ್ತು ಒಂದು ಕವಿಯಿಂದ ಮತ್ತೊಂದು ಕವಿಗೆ ವ್ಯತ್ಯಾಸ ಹೊಂದತಕ್ಕದ್ದು. ರಾಜಾಸ್ಥಾನದಂಥ ವ್ಯವಸ್ಥೆಯೊಳಗಿನ ಕವಿಯ ಸಾಮಾಜಿಕಪ್ರಜ್ಞೆಗೂ, ಅದರಿಂದಾಚೆ ನಿಂತ ಕವಿಗಳ ಸಾಮಾಜಿಕಪ್ರಜ್ಞೆಗೂ ಖಂಡಿತ ವ್ಯತ್ಯಾಸವಿದೆ. ಮಾರ್ಗಕವಿಗಳಾದ ಪಂಪ, ರನ್ನರ ಮತ್ತು ವಚನಕಾರರ, ಹರಿಹರ ರಾಘವಾಂಕರ ಕೃತಿಗಳನ್ನು ಹೋಲಿಸಿ ನೋಡಿದರೆ ಈ ಮಾತಿನ ಸತ್ಯ ಗೋಚರವಾಗುತ್ತದೆ. ಕೇವಲ ನಗರಗಳಲ್ಲಿ ಬದುಕುವ ಲೇಖಕರ ಸಾಮಾಜಿಕಪ್ರಜ್ಞೆಗೂ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಬದುಕಿದ ಅಥವಾ ಬದುಕುವ ಲೇಖಕರ ಸಾಮಾಜಿಕಪ್ರಜೆಗೂ ವ್ಯತ್ಯಾಸಗಳಿವೆ. ಹಾಗೆಯೆ ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆದು, ಅನಂತರ ವಿದೇಶದಲ್ಲಿ ನೆಲಸಿ ತನ್ನ ಹಳೆಯ ನೆನಪುಗಳ ಆಧಾರದ ಮೇಲೆ ಕೃತಿರಚನೆ ಮಾಡುವ ರಾಜಾರಾಯರಂಥ ಲೇಖಕರ 'ಸಾಮಾಜಿಕಪ್ರಜ್ಞೆ' ಯಾವುದು? ಒಂದೇ ಸಾಮಾಜಿಕ ಪರಿಸರದಲ್ಲಿ ಬದುಕುವ ಹಲವು ಜನ ಲೇಖಕರೂ ಒಂದೇ ರೀತಿಯ ಸಾಮಾಜಿಕಪ್ರಜ್ಞೆಯನ್ನು ಪ್ರಕಟಿಸುವರೆಂದು ಹೇಳಲಾಗುವುದಿಲ್ಲ. ಯಾಕೆಂದರೆ, ಆಯಾ ಸಾಹಿತಿಗಳ ದೃಷ್ಟಿ, ಧೋರಣೆ, ಅಭಿರುಚಿ ಮತ್ತು ಅವರು ತಮ್ಮ ಸುತ್ತಣ ಬದುಕನ್ನು ತಮ್ಮ ಅನುಭವದ ತೆಕ್ಕೆಯೊಳಕ್ಕೆ ತೆಗೆದುಕೊಳ್ಳುವ ಸಾಮರ್ಥ್ಯ, ಇವೆಲ್ಲವೂ ಅವರವರ 'ಸಾಮಾಜಿಕಪ್ರಜ್ಞೆ'ಯನ್ನು ನಿಯಂತ್ರಿಸುತ್ತವೆ.

ಯಾರೂ ದೇವರನ್ನು ಮಾನವನ ಮೂಲಕ ವ್ಯಕ್ತವಾಗುವ ಅವಿರ್ಭಾವಗಳಲ್ಲಿ ವಿನಃ ನಿಜವಾಗಿ ನೋಡಲಾರರು. ನಾವು ಬೇರೆ ವಿಧವಾಗಿ ನೋಡಲು ಯತ್ನಿಸಿದರೆ ನಾವು ಭಗವಂತನ ಬೇರೊಂದು ಹಾಸ್ಯಾಸ್ಪದವಾದ ರೂಪ ವಿಕಾರವನ್ನು ಕಲ್ಪಿಸಿಕೊಳ್ಳುವೆವು.

ಭಗವಾನ್

ಷೇಕ್ಸ್‌ಪಿಯರ್ ದೃಷ್ಟಿಯಲ್ಲಿ ಕವಿ

ಪ್ರಪಂಚದ ಶ್ರೇಷ್ಠತಮ ಮಹಾಕವಿಗಳಾದ ವ್ಯಾಸಮಹರ್ಷಿ, ಹೋಮರ್ ಮತ್ತು ಷೇಕ್ಸ್‌ಪಿಯರ್, ನನ್ನ ದೃಷ್ಟಿಯಲ್ಲಿ, ಸಾಹಿತ್ಯ ಹಿಮಾಲಯದ ಗೌರೀಶಂಕರ ಶಿಖರಗಳು. ಜೀವನವನ್ನು, ಅದರ ಎಲ್ಲ ಸ್ತರಗಳಲ್ಲಿ, ಇವರ ಹಾಗೆ ಸಮಬುದ್ಧಿಯಿಂದ ಸಮಗ್ರವಾಗಿ ಕಂಡರಸಿದವರು ಬೇರಿಲ್ಲ. ಯಾವ ತತ್ತ್ವಗಳ ಮೋಹಕ ಬೋನಿಗೂ ಬೀಳದ ಇವರಿಗೆ ಅಖಂಡ ಜೀವನಾನುಭವವಿದೆ. ಏಕೆಂದರೆ, ಜೀವನಕ್ಕಾಗಿ ತತ್ತ್ವಗಳೇ ಹೊರತು ತತ್ತ್ವಗಳಿಗಾಗಿ ಜೀವನವಲ್ಲ. ತತ್ತ್ವಗಳು ಉದುರಲು ಸಿದ್ಧವಿರುವ ಹಣ್ಣೆಲೆಗಳು. ಜೀವನವೃಕ್ಷ ಸದಾ ಎಲೆಗಳಿಂದ ಹಚ್ಚ ಹಸುರಾಗಿ, ಹೂಗಳಿಂದ ಸುವಾಸನಾಭರಿತವಾಗಿ, ಮಧುರ ರಸಪೂರಿತ ಹಣ್ಣುಗಳಿಂದ ಸಮೃದ್ಧವಾಗಿ ಕಂಗೊಳಿಸುತ್ತದೆ. ಇವರಲ್ಲಿರುವಷ್ಟು ಮಾನವೀಯ ಸ್ವಾರಸ್ಯ ಅಥವಾ ಮಾನವಾಂಶ ಡಾಂಟೆ ಮತ್ತು ಮಿಲ್ಟನ್ ಕವಿಗಳಲ್ಲಿ ಕಾಣಸಿಗುವುದಿಲ್ಲ. ಡಾಂಟೆ ಬರೆಯುವುದು ಸತ್ತವರನ್ನು ಕುರಿತು; ಮಿಲ್ಟನ್, ದೇವರು ಮತ್ತು ದೆವ್ವಗಳನ್ನು ಕುರಿತು. ಆದ್ದರಿಂದ ಇವರಲ್ಲಿ ಮಾನವೀಯ ಸ್ವಾರಸ್ಯ ಇಲ್ಲವಾಗುತ್ತದೆ. ಆದರೆ ಸಾಮಾನ್ಯ ಸರಳ ಸತ್ಯ ಇದು: ಮನುಷ್ಯ ಸದಾ ಮನುಷ್ಯನಲ್ಲಿ ಹೆಚ್ಚು ಆಸಕ್ತ. ತನ್ನನ್ನು ಕುರಿತು ಹೇಳದ ಕಾವ್ಯ ಮನುಷ್ಯನಿಗೆ ಹಿಡಿಸುವುದಿಲ್ಲ; ಅದು ಅವನಿಗೆ ಅನಾದರಣೀಯ. ತಾವು ವರ್ಣಿಸುವ ವಸ್ತುವನ್ನು ಆತ್ಮೀಯ ತನ್ಮಯತೆಯಿಂದ ಅನುಭವಿಸುವಾಗಲೆ ತೋರುವ ಎಚ್ಚರದ ವಿಮರ್ಶಕ ವಸ್ತುನಿಷ್ಠತೆ, ಹಾಗೂ ನಿರ್ವಿಕಾರ ವಸ್ತುನಿಷ್ಠಸ್ಥಿತಿಯಲ್ಲಿದ್ದಾಗಲೆ ಆಪ್ತ ತನ್ಮಯತೆಯಿಂದ ಅನುಭವಿಸುವ ಸಾಮರ್ಥ್ಯ ಅವರ (ವ್ಯಾಸ, ಹೋಮರ್ ಮತ್ತು ಷೇಕ್ಸ್‌ಪಿಯರ್) ಕೃತಿಗಳಲ್ಲಿ ಸರ್ವತ್ರ ಮಿಂಚುವುದು ತುಂಬಾ ಅನನ್ಯ, ಮಹತ್ವಪೂರ್ಣ. ಲೋಕದ ಬಗ್ಗೆ ಅವರಿಗಿರುವ ಅಪಾರ ಸಹಾನುಭೂತಿ ಅಚ್ಚರಿಗೊಳಿಸುವಂಥದು. ಸಹಾನುಭೂತಿ ಸಮಗ್ರ ತಿಳುವಳಿಕೆಯ ತಾಯಿ. ಇಂಥ ಮಹಾಕವಿಗಳಲ್ಲಿ ಒಬ್ಬನಾದ ವಿಲಿಯಂ ಷೇಕ್ಸ್‌ಪಿಯರ್ (1564-1616) ತನ್ನ ವೃತ್ತಿಯ ಬಗ್ಗೆ ಮತ್ತು ಕವಿಯ ಬಗ್ಗೆ ಇಟ್ಟುಕೊಂಡಿದ್ದ ಧೋರಣೆ ಏನು? ನಿಲುವು ಎಂಥದು ? ಎನ್ನುವುದು ನಿಜವಾಗಿ ಕುತೂಹಲಕರ ; ಅದನ್ನು ಪರಿಶೀಲಿಸುವುದು ಫಲಪ್ರದ.

ಷೇಕ್ಸ್‌ಪಿಯರ್ ತನ್ನ ನಾಟಕಗಳಲ್ಲಿ ಕವಿ ಮತ್ತು ಕವಿವೃತ್ತಿಯನ್ನು ಕುರಿತು, ಕಾವ್ಯದ ಉಪಯೋಗ, ಗುರಿಯನ್ನು ಕುರಿತು ಪ್ರಾಸಂಗಿಕವಾಗಿ ತನ್ನ ಉಪಯುಕ್ತ ಹರಿತ ವಿಚಾರಪ್ರಚೋದಕ ಅಭಿಪ್ರಾಯಗಳನ್ನು ಕಲಾತ್ಮಕವಾಗಿ ವ್ಯಕ್ತಪಡಿಸಿದ್ದಾನೆ. "ಎ ಮಿಡ್‌ಸಮರ್ ನೈಟ್ಸ್ ಡ್ರೀಮ್" ಮತ್ತು "ಜೂಲಿಯಸ್ ಸೀಸರ್" ನಾಟಕಗಳಲ್ಲಿ ಅವನ ದೃಷ್ಟಿ ಸಜೀವ ರೂಪ ಪಡೆದಿದೆ.

"ಎ ಮಿಡ್‌ಸಮರ್ ನೈಟ್ಸ್ ಡ್ರೀಮ್" (ನಡುಬೇಸಗೆ ಇರುಳಿನ ಕನಸು) 1595 ರಲ್ಲಿ ರಚಿತವಾಗಿ ಪ್ರದರ್ಶಿತವಾಯಿತು. (ಈ ನಾಟಕದ ಕಾಲ 1594 ರಿಂದ 1596 ರವರೆಗೆ. ಅಂದರೆ ಮೂರು ವರ್ಷಗಳ ಅಂತರದವರೆಗೆ ಓಡಾಡುತ್ತಿದೆ. ಅದನ್ನು ಬರೆದದ್ದು 1595 ನೆ ವರ್ಷವೆಂದು ಹೆಚ್ಚು ಮಂದಿ ಷೇಕ್ಸ್‌ಪಿಯರ್ ವಿದ್ವಾಂಸರು

ಒಪ್ಪಿಕೊಂಡಿದ್ದಾರೆ.) ಷೇಕ್ಸ್ಪಿಯರ್‌ನ ಕಾಮೆಡಿಗಳಲ್ಲಿ “ನಡುಬೇಸಗೆ ಇರುಳಿನ ಕನಸು” ಸಾಧಾರಣವಾದ ಕೃತಿ. ಅವನು ಅದುವರೆಗೆ ಬರೆದ ಎಲ್ಲ ಕಾಮೆಡಿಗಳಲ್ಲಿ ಬರುವ ಪದ್ಯಕ್ಕಿಂತ “ಡ್ರೀಮ್”ನ ಕಾವ್ಯ ಹೆಚ್ಚು ಮಾಗಿದೆ,ಮನೋಹರವಾಗಿದೆ; ಆದರೆ ಜೀವನದೃಷ್ಟಿ ಪಕ್ವವಾಗಿಲ್ಲ. ಮೂರ್ನಾಲ್ಕು ಜೋಡಿಗಳ-ಥೀಸಿಯಸ್+ಹಿಪಾಲಿಟ, ಓಬೆರಾನ್+ಟೈಟಾನಿಯ, ಹರ್ಮಿಯ+ಲೈಸ್ಯಾಂಡರ್, ಮತ್ತು ಹೆಲೆನ+ಡೆಮೆಟ್ರಿಯಸ್—ಪ್ರೇಮಕಥೆಯನ್ನು ರೋಚಕವಾಗಿ ತೋರಿಸಿದರೂ, ಪಾತ್ರಗಳಲ್ಲಿ ಒಂದೊಂದಕ್ಕೆ ವಿಶಿಷ್ಟತೆಯಿಲ್ಲ. ಒಂದು ಪಾತ್ರದ ಭಾಷಣಗಳನ್ನು ಇನ್ನೊಂದು ಪಾತ್ರದ ಬಾಯಿಗಿಟ್ಟರೂ ಕುಂದುಂಟಾಗುವುದಿಲ್ಲ.ಆದರೆ ನಾಟಕದೊಳಗೇ ನಾಟಕ ಆಡಿಸುವ ನಿಪುಣತೆ ಅವನ ಕಲೆಗಾರಿಕೆಯ ಹೆಚ್ಚಳ.

“ನಡುಬೇಸಗೆ ಇರುಳಿನ ಕನಸು” ಕಥೆಯನ್ನು ಗಮನಿಸಿದರೆ ಯಕ್ಷಲೋಕದ ವಾತಾವರಣ ಅದನ್ನು ಆವರಿಸಿರುವುದು ಗೋಚರಿಸುತ್ತದೆ.ಮಾಯಾಕಿನ್ನರಿಲೋಕದ ಮಂತ್ರಮುಗ್ಧ ಮೋಹಕತೆ ಮತ್ತು ಮರ್ತ್ಯಲೋಕದ ನಿಷ್ಠುರ ಸುಭದ್ರವಾಸ್ತವತೆ ಒಂದೆಡೆ ಅಪೂರ್ವವಾಗಿ ಸಂಧಿಸುತ್ತವೆ. ಅವೆರಡರ ಸಂಮಿಳನದಿಂದ ಒಂದು ಹೊಸ ಭಾವಲೋಕ ಅನಾಯಾಸವಾಗಿ ಚಿತ್ತಾಕರ್ಷಕವಾಗಿ ಸೃಷ್ಟಿಯಾಗುತ್ತದೆ.ನಾಟಕದ ನಾಯಕನಾದ,ಸ್ವತಃ ಪ್ರೇಮಿಯಾದ ಥೀಸಿಯಸ್ ಹೇಳುವ ಮಾತುಗಳು ಸದ್ಯಕ್ಕೆ ಇಲ್ಲಿ ನಮಗೆ ಮುಖ್ಯ.

“ವಾಸ್ತವಕ್ಕಿಂತಲೂ ವೈಚಿತ್ರ್ಯವೇ ಹೆಚ್ಚು.
....
....ಪ್ರೇಮಿಗಳ, ಉನ್ಮತ್ತರ
ಮಿದುಳು ಭಾವೋದ್ರಿಕ್ತ. ಮತಿವಿವೇಕವೂ ಪೂರ್ತಿ
ಅರ್ಥೈಸದ ಸೃಷ್ಟ್ಯಾತ್ಮಕ ಕಲ್ಪನೆಗಳನ್ನದು ಗ್ರಹಿಸುತ್ತದೆ.
ಹುಚ್ಚ, ಪ್ರಣಯಿ, ‘ಕವಿ’—ಇದರಲ್ಲಿ ತುಂಬಿರುವುದು
ಒಂದೇ ಕಲ್ಪನೆಯ ತಿರುಳು.
ವಿಸ್ತಾರ ನರಕವೂ ಹಿಡಿಸದಷ್ಟು ಅಧಿಕ ದೆವ್ವಗಳನ್ನ
ಕಾಣುತ್ತಾನೆ ಒಬ್ಬ ; ಅವನೇ ಹುಚ್ಚ, ಅಂಥದೇ
ಅಸ್ವಾಸ್ಥ್ಯದಲ್ಲಿ ಕೊರವಂಜಿಯಲ್ಲೂ ಹೆಲೆನಳ ಚೆಲ್ವಿಕೆಯನ್ನ
ಕಾಣುತ್ತಾನೆ ಪ್ರಣಯಿ. ಭಾವೋತ್ಕರ್ಷದಲ್ಲಿ
ಕವಿದೃಷ್ಟಿ ಸ್ವರ್ಗದಿಂದಿಲ್ಲಿಗೆ, ಇಲ್ಲಿಂದ ಸ್ವರ್ಗಕ್ಕೆ
ಹಾಯುತ್ತದೆ. ಅಜ್ಞಾತ ವಿಷಯಗಳ ರೂಪರೇಖೆ
ಕಲ್ಪನೆಯಲ್ಲಿ ಮೂರ್ತತ್ವ ಪಡೆದಂತೆಲ್ಲ, ಕವಿಯ ಲೇಖನಿ
ಅವಕ್ಕೆ ಸ್ಪಷ್ಟಾಕೃತಿಯನ್ನು ನೀಡುತ್ತದೆ. ಗಾಳಿತೆಳುವಿನ ಶೂನ್ಯಕ್ಕೆ
ಸ್ವಂತ ವಸತಿಯನ್ನ ಹಾಗೆಯೇ ಹೆಸರನ್ನ ದಯಪಾಲಿಸುತ್ತದೆ.
ಒಂದಿಷ್ಟು ಆನಂದವಾದರೂ ಸಾಕು,
ಆನಂದದಾಯಕ ಯಾವುದನ್ನೋ ಗ್ರಹಿಸಿ ಸೃಷ್ಟಿಸುವ
ಗುಣವುಂಟು ಶಕ್ತಿಯುತ ಕಲ್ಪನೆಗೆ.”[1]

[1] ಕೆ. ಎಸ್. ನಿಸಾರ್ ಅಹಮದ್ (ಅನು). ಷೇಕ್ಸ್ಪಿಯರ್ ಬರೆದ ಎ ಮಿಡ್‌ಸಮ್ಮರ್ ನೈಟ್ಸ್ ಡ್ರೀಮ್, ಪು. 78–9; 1974. (ಒತ್ತು ನನ್ನದು).

ಶ್ರೀ ನಿಸಾರ್ ಅಹಮದ್ ಅವರ ಅನುವಾದ ತನಗೆ ತಾನೇ ಚೆಲುವಾಗಿದೆ. ಆದರೆ ಮೂಲದೊಡನೆ ಹೋಲಿಸಿದಾಗ

ಈ ಪ್ಯಾಸೇಜನ್ನು ಪರಿಶೀಲಿಸಿದರೆ ಷೇಕ್‌ಸ್ಪಿಯರ್ ಕಾವ್ಯದ ಹುಟ್ಟು ಮತ್ತು ಕವಿಸೃಷ್ಟಿಯ ಬಗ್ಗೆ ಆಳವಾಗಿ ಕೂಲಂಕಷವಾಗಿ ಯೋಚಿಸಿದ್ದನೆಂದು ಕಾಣುತ್ತದೆ. ಅದು ಮೇಲೆ ಉದ್ಧರಿಸಿರುವ ಮಾತುಗಳಲ್ಲಿ ಸಶಕ್ತವಾಗಿ ಅತ್ಯಂತ ಪರಿಣಾಮ ಪ್ರಭಾವಕಾರಿಯಾಗಿ ವರ್ಚಸ್ವಿ ಅಭಿವ್ಯಕ್ತಿ ಪಡೆದು ಕೊಂಡಿದೆ; ತಲಸ್ಪರ್ಶಿಯಾಗಿದೆ. ಕವಿಯನ್ನು ಉನ್ಮತ್ತ ಮತ್ತು ಪ್ರಣಯಿಗಳ ಜೊತೆ ಸೇರಿಸಿರುವುದು ಅವರಲ್ಲಿ ಒಂದೇಮಟ್ಟದ ಬುದ್ಧಿಶಕ್ತಿ ಇದೆ ಎಂದು ಅರ್ಥವಲ್ಲ; ಒಂದೇ ಬಗೆಯ ಕಾವಿನ ಮನಸ್ಥಿತಿ ಇದೆ ಎಂದು. ಕಾವಿನಿಂದ ಕಾವ್ಯ; ಕಾಮದ ಕಾವಿನಿಂದ ಸೃಷ್ಟಿ. ಕವಿ ಪ್ರತಿಭೆಯಲ್ಲಿ ಹುಚ್ಚನ ಕಲ್ಪನೆ ಮತ್ತುಪ್ರೇಮಿಯ ಅಸೀಮಸಾಹಸ ಶಕ್ತಿ ಬೆರೆತ್ತಿವೆ. ಕವಿಕಲ್ಪನೆಗೆ ಎಲ್ಲೆಯಿಲ್ಲ, ಅದು ಬುವಿ ಬಾನುಗಳನ್ನೆಲ್ಲ ತೀಕ್ಷ್ಣವಾಗಿ ಭೇದಿಸುತ್ತದೆ,ಆವರಿಸುತ್ತದೆ. ಸ್ವರ್ಗ ಮತ್ತುಭೂಮಿ ಕ್ರಮವಾಗಿ ಉದಾತ್ತ ಆದರ್ಶಮಯತೆಯನ್ನು ಹಾಗೂ ಸುಭದ್ರ ವಾಸ್ತವತೆಯನ್ನುಉಜ್ವಲ ವಾಗಿ ಪ್ರತಿಮಿಸುತ್ತವೆ. ವಾಸ್ತವಾದರ್ಶಗಳು ಕಾವ್ಯಪುರುಷನ ದೇಹಾತ್ಮಗಳು. ಆದರ್ಶದ ಹಂಬಲ ತುಂಬಿಕೊಂಡು ಭಾವುಕವಾದರೆ ಕಾವ್ಯ ಬಾಲಿಷವಾಗುತ್ತದೆ;ನಿಷ್ಠುರ ವಾಸ್ತವವನ್ನುಹೇಳಿದರೆ, ಬೌದ್ಧಿಕವಾದರೆ ನೀರಸವಾಗುತ್ತದೆ. ಅವೆರಡರ ತೃಪ್ತ ಸಂಯೋಗದಿಂದ ಶ್ರೇಷ್ಠ ಕಾವ್ಯ ಹುಟ್ಟುತ್ತದೆ imagination ಅಂದರೆ 'ಕಲ್ಪನೆ' ಎಂದು ಮಾತ್ರ ವಲ್ಲ,"ಪ್ರತಿಭೆ" ಎಂಮೂ ಅರ್ಥ.ಕಲ್ಪನೆ ಪ್ರತಿಭೆಯ ಒಂದಂಶ,ಅಷ್ಟೆ. ಪ್ರತಿಭೆ "ಬುದ್ಧಿಭಾವಗಳ ವಿದ್ಯುದಾಲಿಂಗನ." ಪ್ರತಿಭೆ ಇಲ್ಲದ ಕಾವ್ಯಹಿಡಿಸುವುದಿಲ್ಲ; ಶಾಶ್ವತ ಪ್ರಭಾವ ಬೀರುವುದಿಲ್ಲ. ಅದು ಸಾಹಿತ್ಯಚರಿತ್ರೆಗೆ ಅವಶೇಷವಾಗ ಬಹುದಷ್ಟೆ. ಕಾವ್ಯ ಭೂಮಿಯಲ್ಲಿ ಗಟ್ಟಿಯಾಗಿ ಬೇರುಬಿಟ್ಟು ಸ್ವರ್ಗೀಯ ದರ್ಶನ ಮಾಡಿಸುತ್ತದೆ. ಸಾಹಿತ್ಯ ಇಹ ಪರಗಳ ಏಳಿಗೆಗೆ ಸಾಧನ. ಷೇಕ್‌ಸ್ಪಿಯರ್ ನೇರವಾಗಿ ಸ್ಫೂರ್ತಿಯ ಮಾತು ಬಳಸದಿದ್ದರೂ "ಹುಚ್ಚು" ಅದನ್ನು ಧ್ವನಿಸುತ್ತದೆಂದು ನನ್ನ ಭಾವನೆ. ಸ್ಫೂರ್ತಿಗೊಳ್ಳದ ಕಾವ್ಯಕ್ಕೆ ಸೊಗಸಿಲ್ಲ, ಸಹಜತೆಯಿಲ್ಲ. ಶ್ರಮದಿಂದ ಕಾವ್ಯ ಬರು ವಂತಿದ್ದರೆ ಪ್ರಾಸಕಟ್ಟುವವರೆಲ್ಲ ಕವಿಗಳಾಗಿ ಉಳಿಯುತ್ತಿದ್ದರು. ಕಾವ್ಯ ಕೇವಲ ಬೌದ್ಧಿಕಶ್ರಮ, ಸ್ಫೂರ್ತಿಯಲ್ಲಿ ನಂಬಿಕೆ ಇಲ್ಲ, ಎಂದು ಕೊಚ್ಚಿಕೊಳ್ಳುವ "ಬಣಗುಕವಿಗಳಾ"ದ ನವ್ಯರು ಷೇಕ್‌ಸ್ಪಿಯರ್‌ನ ಮಾತುಗಳನ್ನು ಮುಕ್ತ ಮನಸ್ಸಿನಿಂದ ಚೆನ್ನಾಗಿ ಮನನ ಮಾಡಬೇಕು; ಅಲ್ಲಿನ ಸತ್ಯವನ್ನು ಸಂಪೂರ್ಣವಾಗಿ ಅರಗಿಸಿಕೊಳ್ಳಬೇಕು. ವಿಶ್ವ

ಅಲ್ಲಿ ಇಲ್ಲಿ ಸ್ವಾತಂತ್ರ್ಯ ತೆಗೆದುಕೊಂಡಂತೆ, ಸೋತಂತೆ ಕಾಣುತ್ತದೆ, ಹಾಗೂ ಕೆಲವು ಕಡೆ ತಪ್ಪಾಗಿ ಅನುವಾದಿಸಿದ್ದಾರೆ. ಕೆಲವು ಪದಗಳ ಧ್ವನಿಯನ್ನು ಸರಿಯಾಗಿ ಹಿಡಿದಿಲ್ಲವೆನಿಸುತ್ತದೆ. ಉದಾಹರಣೆಗೆ, ಮೇಲೆ ಉದ್ಧರಿಸಿದ ಭಾಷಣಖಂಡದಲ್ಲಿ ಬರುವ 'ಅಸ್ವಾಸ್ಥ್ಯ'—ದೈಹಿಕ ಮತ್ತು ಮಾನಸಿಕ ಅನಾರೋಗ್ಯವನ್ನು ಸೂಚಿಸುತ್ತದೆ. ಮೂಲದ frantic ಪದಕ್ಕೆ 'ಉದ್ರೇಕ', ಮುಖ್ಯವಾಗಿ 'ಹುಚ್ಚು' ಎಂದರ್ಥ. ಅಸ್ವಾಸ್ಥ್ಯ ರೋಗಸೂಚಕ. ಅಸ್ವಾಸ್ಥ್ಯದಿಂದ ನೆಮ್ಮದಿಯಿಲ್ಲ, ಗೆಲುವಿಲ್ಲ, ಸಂತೋಷವಿಲ್ಲ. ಹುಚ್ಚಿನಲ್ಲಿ abnormality ಇದ್ದರೂ ಅದರಲ್ಲಿ ನೋವಿಲ್ಲ; ಉಲ್ಲಾಸವಿದೆ. ಹುಚ್ಚನಿಗೆ ಏನೋ ಒಂದು ರೀತಿಯ ಖುಷಿಯಿದೆ; ಮೈಮರೆಸುವ ಹರ್ಷವಿದೆ. ಅಸ್ವಾಸ್ಥ್ಯ ತ್ರಾಣವನ್ನು ಕುಗ್ಗಿಸುತ್ತದೆ; ಹುಚ್ಚು ಚಡಪಡಿಸುವ ಚೈತನ್ಯ ನೀಡುತ್ತದೆ. ಹುಚ್ಚ, ಪ್ರೇಮಿ, ಕವಿ – ಮೂವರೂ 'ಹುಚ್ಚ'ರೆ, abnormal ಪ್ರತಿಭಾವಂತರೆಲ್ಲ 'ಹುಚ್ಚ'ರೇ. ಆ 'ಹುಚ್ಚಿ'ನಿಂದ ಅವರಿಗೆ ಆನಂದ; ಅವರ ಅಸ್ತಿತ್ವಕ್ಕೆ ಶೋಭೆ. ಕಲೆಯ ಗುರಿ ಆನಂದ. ಆದ್ದರಿಂದ ಷೇಕ್‌ಸ್ಪಿಯರ್ 'ಆನಂದ'ದ ಮೇಲೆ ಜೋರಾದ ಒತ್ತುಕೊಟ್ಟಿದ್ದಾನೆ. ಆದ್ದರಿಂದ ಈ ಸಂದರ್ಭದಲ್ಲಿ 'ಅಸ್ವಾಸ್ಥ್ಯ' ಸರಿಯಾದ ಶಬ್ದವಲ್ಲ. ಇದಲ್ಲದೆ, ಮೂಲದ 'from heaven to earth, from earth to heaven' ಎನ್ನುವುದನ್ನು 'ಸ್ವರ್ಗದಿಂದಿಲ್ಲಿಗೆ, ಇಲ್ಲಿಂದ ಸ್ವರ್ಗಕ್ಕೆ' ಎಂದು ಅನುವಾದಿಸಿದ್ದಾರೆ. 'ಇಲ್ಲಿ'ಗೆ ಭೂಮಿಯ ಅರ್ಥ ಕೊಡುವುದಿಲ್ಲ. 'ಇಲ್ಲಿ' ಹೇಳುವವನು ಇರುವ ಸ್ಥಳವನ್ನು ಮಾತ್ರ ನಿರ್ದೇಶಿಸುತ್ತದೆ. ಆದರೆ ಭೂಮಿ 'ಇಲ್ಲಿ'ಗೆ ನಿಲ್ಲುವುದಿಲ್ಲ. ಕವಿ ಪ್ರತಿಭೆ ಭೂಮಂಡಲವನ್ನೆಲ್ಲ ಅಲ್ಲಿರುವ ಗಿಡ ಮರ ಬಳ್ಳಿಗಳು, ಪ್ರಾಣಿ ಪಕ್ಷಿ ಕ್ರಿಮಿಕೀಟಗಳು, ನದಿ ಹೊಳೆ ಸಮುದ್ರ ಸಾಗರಗಳು, ಬೆಟ್ಟ ಗುಡ್ಡ ಕಾಡು ಮೇಡುಗಳನ್ನೆಲ್ಲ ತನ್ನ ಪರಿಧಿಯೊಳಗೆ ತಂದುಕೊಂಡು ಪರಿಭಾವಿಸಿ ಪುನರ್‌ಸೃಷ್ಟಿಸುವ ಚೈತನ್ಯ ಹೊಂದಿದೆ. 'ಇಲ್ಲಿ' ಎನ್ನುವ ಪದ ದೃಷ್ಟಿಯನ್ನು ಸಂಕುಚಿತಗೊಳಿಸುತ್ತದೆ; ಭೂಮಿ ಶಬ್ದಕ್ಕೆ ವ್ಯಾಪ್ತಿ ಹೆಚ್ಚು. ಭೂಮಿ ಪ್ರತಿಮೆಯಾಗುತ್ತದೆ; 'ಇಲ್ಲಿ' ಮೂರ್ತರೂಪ ಕಳೆದುಕೊಳ್ಳುತ್ತದೆ. ಭೂಮಿ ಭೋಗವನ್ನೂ, ಸ್ವರ್ಗ ತ್ಯಾಗವನ್ನೂ ಸಂಕೇತಿಸುತ್ತವೆ. ತ್ಯಾಗಭೋಗಗಳ ಸುಖಮಯ ದಾಂಪತ್ಯದಿಂದ ಪರಿಪೂರ್ಣ ಜೀವನ.

ಮಹಾಕವಿಗಳಲ್ಲಿ ಒಬ್ಬನಾದ ಷೇಕ್ಸ್‌ಪಿಯರ್ ಕಾವ್ಯಸೃಷ್ಟಿಯ ಬಗ್ಗೆ, ಕಾವ್ಯದ ಗುರಿಯಾದ "ಆನಂದ"ದ ಬಗ್ಗೆ ಆಡುವ ನುಡಿಗಳು, ಪ್ರಾಸಂಗಿಕವಾದರೂ, ತುಂಬ ಬೆಲೆಯುಳ್ಳವಾಗಿವೆ; ಮಹತ್ವಪೂರ್ಣವಾಗಿವೆ.

ಕಾವ್ಯದ ಉಗಮ ಮತ್ತು ಉದ್ದೇಶವನ್ನು ಕುರಿತ ಚಿಂತನೆಯನ್ನು "ಎ ಮಿಡ್‌ಸಮರ್ ನೈಟ್ಸ್ ಡ್ರೀಮ್" ನಾಟಕದಲ್ಲಿ ಷೇಕ್ಸ್‌ಪಿಯರ್ ನಡೆಸಿದರೆ "ಜೂಲಿಯಸ್ ಸೀಸರ್" ನಾಟಕದಲ್ಲಿ ಕಾವ್ಯದ ಉಪಯುಕ್ತತೆಯನ್ನು ಒರೆ ಹಚ್ಚುವಂತೆ ತೋರುತ್ತದೆ "ಜೂಲಿಯಸ್ ಸೀಸರ್" ನಾಟಕ 1599ರಲ್ಲಿ ರಚಿತವಾಗಿ ಪ್ರದರ್ಶನಗೊಂಡಿರಬೇಕೆಂದು ವಿದ್ವಾಂಸರ ವಾದ. ಸುಮಾರು ನಾಲ್ಕೈದು ವರ್ಷಗಳ ಅವಧಿಯಲ್ಲಿ—"ಎ ಮಿಡ್‌ಸಮರ್ ನೈಟ್ಸ್ ಡ್ರೀಮ್" ಮತ್ತು "ಜೂಲಿಯಸ್ ಸೀಸರ್" ನಡುವಿನ ಕಾಲದಲ್ಲಿ—ಷೇಕ್ಸ್‌ಪಿಯರ್ ತನ್ನ ವೃತ್ತಿಯನ್ನೇ ನಿರ್ದಾಕ್ಷಿಣ್ಯ ಮನೋಭಾವದಿಂದ ವಿಮರ್ಶಿಸಿಕೊಂಡಿರುವ ಸಾಧ್ಯತೆಯಿದೆ.

"ಜೂಲಿಯಸ್ ಸೀಸರ್" ಒಬ್ಬ ಐತಿಹಾಸಿಕ ಮಹಾಪುರುಷನನ್ನು ಕುರಿತ ಟ್ರ್ಯಾಜಿಡಿ. ಸೀಸರ್ ಪ್ರಾಚೀನ ಜಗತ್ತಿನ ಒಬ್ಬ ಬಹುದೊಡ್ಡ ವ್ಯಕ್ತಿ. ಅದುವರೆಗೆ ಆಗಿಹೋದ ಚಾರಿತ್ರಿಕ ಗಣ್ಯ ಮನುಷ್ಯರಾರೂ, ಸೀಸರ್‌ನ ಹಾಗೆ, ಷೇಕ್ಸ್‌ಪಿಯರ್‌ನ ಮನಸ್ಸನ್ನು ಆಕರ್ಷಿಸಿ ತುಂಬಿಕೊಳ್ಳಲಿಲ್ಲ. ಇವಕ್ಕೆ ಅವನ ಉಳಿದ ನಾಟಕಗಳಲ್ಲಿ ಸೀಸರ್‌ನನ್ನು ಕುರಿತು ಬೇರೆಬೇರೆ ಪಾತ್ರಗಳ ಬಾಯಿಂದ ಅವನು ಆಡಿಸುವ ಮಾತುಗಳೆ ನಿದರ್ಶನ. ಸೀಸರ್‌ನ ದೊಡ್ಡಸ್ತಿಕೆಯನ್ನು ಷೇಕ್ಸ್‌ಪಿಯರ್ ಚೆನ್ನಾಗಿ ಅರಿತಿದ್ದನು. ಸೀಸರ್ ಮಹಾಯೋಧ, ಧೀರ ದಂಡನಾಯಕ, ಮೇಧಾವಿ ಲೇಖಕ, ಆಕರ್ಷಕ ಪ್ರಣಯಿ, ಶ್ರೇಷ್ಠ ಆಡಳಿತಗಾರ, ಉತ್ತಮ ಸ್ಟೇಟ್ಸ್‌ಮನ್. ಹೀಗೆ ಅವನದು ಬಹುಮುಖದ ವಿಶಿಷ್ಟ ವ್ಯಕ್ತಿತ್ವ.

"ಜೂಲಿಯಸ್ ಸೀಸರ್" ರಾಜಕೀಯ ವಸ್ತುವುಳ್ಳ ಚಾರಿತ್ರಿಕ ನಾಟಕ. ಪದಗಳ ಪ್ರಪಂಚದಲ್ಲಿ ಮಾನಸಿಕ ಜೀವನವನ್ನು ಬದುಕುತ್ತಿದ್ದ ಷೇಕ್ಸ್‌ಪಿಯರ್‌ಗೆ ಕಾರ್ಯಲೋಕದಲ್ಲಿ ಅಸದೃಶನಾದ ಸೀಸರ್ ಮುಗಿಯದ ವಿಸ್ಮಯವಾಗಿ, ಒಡೆಯದ ರಹಸ್ಯವಾಗಿ ಕಂಡಿರಬೇಕು. ರಾಜಕಾರಣಿ ಮತ್ತು ಕವಿ—ಇವರಿಬ್ಬರಲ್ಲಿ ಯಾರು ನಿಜವಾಗಿ ಜನಸೇವೆ ಮಾಡುತ್ತಾರೆ? ಯಾರು ಜನಜೀವನವನ್ನು ಕಲಕುತ್ತಾರೆ? ಯಾರು ಉತ್ತಮ? ಎಂಬ ಪ್ರಶ್ನೆ ಅವನನ್ನು ಕಾಡಿರಬೇಕು. ಅಲ್ಲದಿದ್ದರೆ, ರಾಜಕೀಯ ವಸ್ತುವುಳ್ಳ ನಾಟಕದಲ್ಲಿ, ಎರಡು ಬಾರಿ, ಅದೂ ಒಂದೇ ನಾಟಕದಲ್ಲಿ, ಬೇರೆಬೇರೆ ಸಂದರ್ಭಗಳಲ್ಲಿ ಇಬ್ಬರು ಕವಿಗಳನ್ನು ಏಕೆ ಬುದ್ಧಿಪೂರ್ವಕವಾಗಿ ತರುತ್ತಿದ್ದ?

ಗ್ರೀಕ್ ಮಹಾತತ್ತ್ವಜ್ಞಾನಿ ಪ್ಲೇಟೊ ತನ್ನ ಅಮರಕೃತಿ "ರಿಪಬ್ಲಿಕ್"ನ ಹತ್ತನೆ ಅಧ್ಯಾಯದಲ್ಲಿ, "ಕಾವ್ಯವನ್ನು ಆದರ್ಶ ರಾಜ್ಯದಿಂದ ಹೊರಗಿಡಬೇಕು. ಏಕೆಂದರೆ, ಅದು ಭಾವರಾಗಗಳನ್ನು ಬತ್ತಿಸುವುದಕ್ಕೆ ಬದಲು ಅವುಗಳಿಗೆ ನೀರೆರೆದು ಬೆಳೆಸುತ್ತದೆ. ಸ್ವತಃ ಕವಿಗಳಲ್ಲದ ಕಾವ್ಯಪ್ರೇಮಿಗಳು ಕಾವ್ಯದ ಸ್ಥಾನವನ್ನು ಗದ್ಯದಲ್ಲಿ ಸಮರ್ಥಿಸಲಿ," ಎಂದು ಕಾವ್ಯವನ್ನು ಖಂಡಿಸುವುದರ ಜೊತೆಗೆ ಕಾವ್ಯಪ್ರೇಮಿಗಳಿಗೆ ಸವಾಲು ಹಾಕಿದ. ಕಾವ್ಯದ ಬಗೆಗಿನ ಈ ಸುಪ್ರಸಿದ್ಧ ಆಪಾದನೆ ಷೇಕ್ಸ್‌ಪಿಯರ್‌ಗೆ ಪರಿಚಯವಿದ್ದಿರಬೇಕು.

ಜೂಲಿಯಸ್ ಸೀಸರ್ (ಕ್ರಿ. ಪೂ. 102-44) ನ ಕಾಲದಲ್ಲಿ ರೋಮ್ ರಿಪಬ್ಲಿಕ್ ದೇಶವಾಗಿತ್ತು. "ಪ್ರಜಾಪ್ರಭುತ್ವ"ದ ಪರಂಪರೆಗೆ ವಿರುದ್ಧವಾಗಿ ಸೀಸರ್ ರಾಜನಾಗಲು ಆಸೆ ಪಡುವನೆಂದು ಶಂಕಿಸಿ ಬ್ರೂಟಸ್‌ನ ಮುಂದಾಳುತ್ವದಲ್ಲಿ ಕ್ಯಾಸಿಯಸ್ ಮುಂತಾದ ಪಿತೂರಿಗಾರರು ಅವನನ್ನು ಕೊಲೆಮಾಡಿದರು. ತನ್ನ ವಾಕ್ಚಾತುರ್ಯದಿಂದ ನಾಡಿನ ಜನದ ಮಂದೆಯನ್ನು ಅವರ ಮೇಲೆ ದಂಗೆಯೇಳುವಂತೆ ಆಂಟೊನಿ ಪ್ರಚೋದಿಸಿ ಪಿತೂರಿಗಾರರು ದೇಶ ಬಿಟ್ಟೋಡುವಂತೆ ಮಾಡಿದ. ದೇಶದಲ್ಲಿ ಅಲ್ಲೋಲಕಲ್ಲೋಲವಾಗಿದೆ; ಸೀಸರ್‌ನ ರಕ್ತ ಚೆಲ್ಲಿ ಕ್ರಾಂತಿಯಾಗಿದೆ. ಇಂಥ ಸನ್ನಿವೇಶದಲ್ಲಿ (ಮೂರನೆ ಅಂಕ, ಮೂರನೆ ದೃಶ್ಯ) ಕವಿ ಸಿನ್ನನನ್ನು ಷೇಕ್ಸ್‌ಪಿಯರ್ ರಂಗದ ಮೇಲೆ ತರುವ ರೀತಿ ಬಹು ಮಾರ್ಮಿಕವಾಗಿದೆ. ಕವಿ ಸಿನ್ನ ಈ ಲೋಕದ ಪರಿವೆಯಿಲ್ಲದವನಂತೆ, ತನ್ನಷ್ಟಕ್ಕೆ ತಾನೇ ಮಾತನಾಡಿಕೊಂಡು ಮನೆಯಿಂದ ಬರುತ್ತಾನೆ :

"ಸೀಸರ್‌ನ ಜೊತೆ ಊಟ ಮಾಡಿದ ಹಾಗೆ ರಾತ್ರಿ
ಕನಸಾಯ್ತು. ಅಶುಭ ವಿಷಯಗಳನ್ನೆ ಕಲ್ಪನೆಯು
ಕಾಡುತಿವೆ. ಹೊರಗೆ ಹೋಗಲು ನನಗೆ ಮನಸಿಲ್ಲ.
ಆದರೂ ಹೋಗುವ ಹಾಗೆ ಏನೊ ದಬ್ಬುತಿದೆ"[2]

ಎಂಥ ಐತಿಹಾಸಿಕ ಮಹತ್ವಪೂರ್ಣ ಘಟನೆ ನಡೆದಿದೆ. ಈ ಸಂದರ್ಭದಲ್ಲಿ ಕವಿ ಸಿನ್ನನ ಸ್ವಗತ ಎಷ್ಟು ಹಾಸ್ಯಾಸ್ಪದ ವಾಗುತ್ತದೆ; ಅರ್ಥಹೀನವಾಗುತ್ತದೆ! ದೇಶದ ಆಗುಹೋಗಿನ ಕಡೆ ಆಸಕ್ತಿವಹಿಸದ ಕವಿ ಇದ್ದರೇನು? ಹೋದ ರೇನು? ಅವನಿಗೂ ಸಮಾಜಕ್ಕೂ ಏನು ಸಂಬಂಧ? ಹೀಗೆ ಪ್ರಶ್ನೆ ಕೆರಳಿಸುವ ಗಂಭೀರ ಸನ್ನಿವೇಶ ಇದು. ಬುದ್ಧಿ ಜೀವಿ ಎಂದು ಕರೆಸಿಕೊಳ್ಳುವ ಕವಿ ಲದ್ದಿಜೀವಿಯಾಗಿದ್ದಾನೆ. ಆಕಾಶದಲ್ಲಿ ತಲೆಯಿಟ್ಟುಕೊಂಡು ನಿಂತನೆಲ ಮರೆತಿ ದ್ದಾನೆ. ಆಂಟೊನಿಯ ಭಾಷಣದಿಂದ ಹುಚ್ಚೆದ್ದ ಜನದ ಮಂದೆ ಅವನನ್ನು ಎದುರಾಗುತ್ತಾರೆ; ಅವನ ಮುಖದ ಮೇಲೆ ನಾನಾ ಪ್ರಶ್ನೆಗಳನ್ನು ಒಗೆಯುತ್ತಾರೆ. ನಿನ್ನ ಹೆಸರೇನೆಂದು ಜಬರುದಸ್ತು ಮಾಡಿದಾಗ "ಸಿನ್ನ" ಎಂದು ಉತ್ತರ ಕೊಡುತ್ತಾನೆ. ಸೀಸರ್‌ನನ್ನು ಕೊಲೆಮಾಡಿದ್ದ ಪಿತೂರಿಗಾರರಲ್ಲಿ "ಸಿನ್ನ" ಎಂಬ ಹೆಸರಿನ ವ್ಯಕ್ತಿಯೂ ಸೇರಿದ್ದ. ಆದರೆ ಇವನನ್ನೆ ಪಿತೂರಿಗಾರ ಸಿನ್ನನೆಂದು ನಂಬಿ ಮೇಲೆ ಬೀಳುತ್ತಾರೆ. ತಾನು "ಪಿತೂರಿಗಾರ ಸಿನ್ನ ಅಲ್ಲ; ಕವಿ ಸಿನ್ನ" ಎಂದು ಪ್ರತಿಭಟಿಸಿದರೆ ಜನರ ಕೋಪ ಇನ್ನೂ ಹೆಚ್ಚಿ "ಕೆಟ್ಟ ಕಾವ್ಯ ಬರೆದ ಅವನನ್ನು ಸಿಗಿದು ಹಾಕಿ; ಕೆಟ್ಟ ಕಾವ್ಯ ಬರೆದ ಅವನನ್ನು ಸಿಗಿದು ಹಾಕಿ."[3] ಎಂದು ಕಿರುಚಿಕೊಂಡು ಅವನ ಕಥೆ ಮುಗಿಸುತ್ತಾರೆ.

ಇಲ್ಲಿ ಗಮನಿಸಬೇಕಾದದ್ದು: ಜನರ ಅವಿವೇಕವನ್ನು, ಅವರ ಭಯಂಕರ ತಿಳಿಗೇಡಿತನ ಎಷ್ಟೆಂದರೆ ಅವ ರಿಗೆ ಪಿತೂರಗಾರ ಸಿನ್ನ ಯಾರು, ಕವಿ ಸಿನ್ನ ಯಾರು, ಎಂದು ಗೊತ್ತಿಲ್ಲ. ಉದ್ರೇಕಗೊಂಡ ದೊಂಬಿ ಜನ ಏನೂ ಗೊತ್ತಿಲ್ಲದ ನಿರಪರಾಧಿಯನ್ನು ಬಲಿತೆಗೆದುಕೊಳ್ಳುತ್ತದೆ. ಇಂಥ ಜನದ ಮಂದೆಯ ಬಗ್ಗೆ ಷೇಕ್‌ಸ್ಪಿಯರ್‌ಗೆ ತಿರಸ್ಕಾರವಿದೆ; ತನ್ನ ಜವಾಬ್ದಾರಿಯನ್ನು ಅರಿಯದ ಕವಿಯ ಮೇಲೆ ಜುಗುಪ್ಸೆಯಿದೆ. ಆದ್ದರಿಂದ ಇಂಥವರು ರಿಪಬ್ಲಿಕ್‌ನಲ್ಲಿ ಇರಲು ಲಾಯಖ್ಖಿಲ್ಲ, ಎನ್ನುವಂತಿದೆ ಷೇಕ್‌ಸ್ಪಿಯರ್‌ನ ಧೋರಣೆ. ಕವಿ ಸಿನ್ನ ತಾನು ಪಿತೂರಿಗಾರ ನಲ್ಲವೆಂದು ಘೋಷಿಸಿದರೆ "ಕೆಟ್ಟ ಕಾವ್ಯ ಬರೆದ ಅವನನ್ನು ಸಿಗಿದು ಹಾಕಿ; ಕೆಟ್ಟ ಕಾವ್ಯ ಬರೆದ ಅವನನ್ನು ಸಿಗಿದು ಹಾಕಿ," ಎಂದು ಅಬ್ಬರಿಸುತ್ತಾರೆ. ಕವಿ ಸಿನ್ನ ಯಾರು? ಏನು? ಅಂತ ಗೊತ್ತಿಲ್ಲದ, ಅವನ ಕಾವ್ಯವನ್ನು ಕೂಡ ಓದಿ ತಿಳಿದಿಲ್ಲದ ಅವರು ಅವನ ಕವಿತೆಯ ಮೇಲೆ ತೀರ್ಪು ಕೊಡುತ್ತಾರೆ! ಹೀಗೆ ಅನೇಕ ವೇಳೆ ಅಧ್ಯಯನಮಾಡದೆ ಅಭಿಪ್ರಾಯ ಎಸೆಯುವವರೆ ಹೆಚ್ಚು. ಅವರು ಪಶುಪ್ರಾಯ ಬಹುಮತವನ್ನು ಬೊಗಳುತ್ತಾರೆ. ಈ ರೀತಿ ಮಾಡು ವುದು ಸಾಹಿತ್ಯಕ್ಕೆ ಎಷ್ಟು ಅಪಾಯಕರ ಎನ್ನುವುದನ್ನು ಷೇಕ್‌ಸ್ಪಿಯರ್ ತೀರ ತೀಕ್ಷ್ಣವಾಗಿ ವಿಡಂಬಿಸಿದ್ದಾನೆ. ಆದ್ದರಿಂದ ಷೇಕ್‌ಸ್ಪಿಯರ್ ಯಾರನ್ನೂ ಮುಲಾಜಿನಿಂದ ನೋಡುವುದಿಲ್ಲ; ಕವಿಯ ಮೇಲೆ ನಮ್ಮ ಕನಿಕರ ಹರಿಯುವಂತೆ ಮಾಡುವ ಸಮಯದಲ್ಲೆ ನಾವು ಪಕ್ಷಪಾತಿಗಳಾಗದಂತೆ, ನಮಗೆ ಸಮದೃಷ್ಟಿ ಬರುವಂತೆ ನೋಡಿ ಕೊಳ್ಳುತ್ತಾನೆ.

ಇದೇ ನಾಟಕದಲ್ಲಿ ಇನ್ನೊಂದು ಪ್ರಸಂಗ: ಪ್ರಜಾಧಿಪತ್ಯಕ್ಕಾಗಿ ಕ್ರಾಂತಿ ನಡೆಸಿ ವಿಫಲರಾಗಿ ದೇಶ ಬಿಟ್ಟು ಬಂದಿರುವ ಬ್ರೂಟಸ್ ಮತ್ತು ಕ್ಯಾಷಿಯಸ್ ರಣಭೂಮಿಯಲ್ಲಿ ಸೀಸರ್‌ನ ಕಡೆಯವರಾದ ಆಂಟೊನಿ ಮತ್ತು ಆಕ್ಟೇವಿಯಸ್‌ರನ್ನು ಎದುರಿಸಲು ಸಾರ್‌ಡಿಸ್ ಇಂದ ಫಿಲಿಪ್ಪೈಗೆ ಬಂದಿದ್ದಾರೆ. ಯಾವ ಹಿರಿಯ ಧ್ಯೇಯಕ್ಕಾಗಿ ಕ್ರಾಂತಿ ನಡೆಸಿದರೊ ಅದನ್ನು ಕ್ಯಾಷಿಯಸ್ ಕಡೆಗಣಿಸಿ ಲಂಚರುಷುವತ್ತು ತೆಗೆದುಕೊಂಡು "ಪದವಿಗಳನ್ನು

[2] ಭಗವಾನ್ (ಅನು): ಷೇಕ್‌ಸ್ಪಿಯರ್ ಮಹಾಕವಿಯ ಜೂಲಿಯಸ್ ಸೀಸರ್, ಪು. 84–5; 1975.
[3] ಅದೇ: ಪು. 85

ಅಯೋಗ್ಯರಿಗೆ ಮಾರಾಟ"[4] ಮಾಡಿದ್ದಾನೆ. ಸಾಮಾನ್ಯವಾಗಿ ಎರಡನೆ ಮೂರನೆ ದರ್ಜೆಯ ರಾಜಕಾರಣಿಗಳು ಮಾಡುವ ಕೆಲಸ ಇದು. ದೊಡ್ಡ ದೊಡ್ಡ ಆದರ್ಶಗಳನ್ನು ಬಿತ್ತುತ್ತಾರೆ; ಭ್ರಷ್ಟಾಚಾರವನ್ನು ಬೆಳೆಯುತ್ತಾರೆ, ಅದರಲ್ಲೇ ಇಳಿದು ರಾಷ್ಟ್ರವನ್ನು ಮುಳುಗಿಸುತ್ತಾರೆ. ಷೇಕ್ಸ್ಪಿಯರ್‌ನ ವಾಸ್ತವಪ್ರಜ್ಞೆ ದಂಗುಬಡಿಸುವಂತಿದೆ. ನಾಯಕನ ಆದರ್ಶಗಳನ್ನು ಅವನ ಅನುಯಾ (ನಾ ?) ಯಿಗಳು ತಮ್ಮ ಜೀವನ ಧ್ಯೇಯವನ್ನಾಗಿ ರಾಜಕೀಯದಲ್ಲಿ ಆತ್ಮಪೂರ್ವಕವಾಗಿ ಸ್ವೀಕರಿಸುವುದು ಅಪರೂಪ. ಧ್ಯೇಯ ಊರ್ಜಿತಗೊಂಡರೆ ಸರ್ಕಾರದಲ್ಲಿ ತಮಗೆ ಏನಾದರೂ ಸ್ಥಾನಮಾನ ಸಿಗುತ್ತದೆಂಬ ಸ್ವಾರ್ಥಲಾಭದೃಷ್ಟಿಯಿಂದ ನಾಯಕನನ್ನು ಡಿಪ್ಲೋಮ್ಯಾಟಿಕ್ಕಾಗಿ ಅನುಸರಿಸಿ ಬೆಂಬಲಿಸುವವರೆ ಬಹಳ ಮಂದಿ. ಮಾನವ ಸ್ವಭಾವವನ್ನು ಷೇಕ್ಸ್ಪಿಯರ್ ಅನನ್ಯವಾಗಿ ಪ್ರತಿಬಿಂಬಿಸಿದ್ದಾನೆ. ದೇಶದಲ್ಲಿ ಪ್ರಜಾಪ್ರಭುತ್ವ ಪರಂಪರೆಯನ್ನು ಎತ್ತಿಹಿಡಿಯಲು ಬಾಳನ್ನು ಮುಡುಪಿಟ್ಟಿರುವ ಬ್ರೂಟಸ್, ಆಪ್ತ ಗೆಳೆಯ ಕ್ಯಾಷಿಯಸ್‌ನ ಭ್ರಷ್ಟಾಚಾರವನ್ನು ಮುಚ್ಚಿಕೊಳ್ಳದೆ ಅವನನ್ನು ತರಾಟೆ ತೆಗೆದುಕೊಳ್ಳುತ್ತಾನೆ, ಛೇಡಿಸುತ್ತಾನೆ. ಇಬ್ಬರ ಮಧ್ಯೆ ಕಿಡಿಯ ವಾತಾವರಣ ಏರ್ಪಡುತ್ತದೆ. ಇಬ್ಬರೂ ಡೇರೆಯೊಳಗೆ ಜಗಳಾಡುತ್ತಿದ್ದಾರೆ. ಆಗ ಕವಿ ಒಬ್ಬ ಬಂದು, ಬಾಗಿಲು ಕಾಯುತ್ತಿದ್ದ ಲೂಸಿಯಸ್ ಮತ್ತು ಟೈಟಿನಿಯಸ್‌ರನ್ನು ದಬಾಯಿಸಿಕೊಂಡು ಒಳಗೆ ಹೋಗಿ ಬ್ರೂಟಸ್ ಮತ್ತು ಕ್ಯಾಷಿಯಸ್‌ರಿಗೆ ಬುದ್ಧಿ ಹೇಳುತ್ತಾನೆ !

> "ನಾಚಿಕೆಗೇಡು, ದಂಡನಾಯಕರೇ ! ಏನಿದು ?
> ಪ್ರೀತಿಸಿ, ಗೆಳೆಯರಾಗಿರಿ, ನೀವಿಬ್ಬರೂ ಮೊದಲಿನಂತಿರಿ !
> ನಿಮಗಿಂತ ವಯಸ್ಸಿನಲಿ ನಾನು ಹಿರಿಯವ, ತಿಳಿಯಿರಿ
>
> ಕ್ಯಾಷಿ : ಹಾ ! ಹಾ ! ಈ ಕುನ್ನಿ ಎಷ್ಟು ಕೆಟ್ಟದಾಗಿ ಪ್ರಾಸಕಟ್ಟುತ್ತಾನೆ !
> ಬ್ರೂಟ : ಏಯ್, ಇಲ್ಲಿಂದ ಹೊರಡು ! ತಲೆಹರಟೆ, ತೊಲಗು !
> ಕ್ಯಾಷಿ : ತಾಳ್ಮೆ, ಬ್ರೂಟಸ್ ; ಅದು ಅವನ ಹವ್ಯಾಸ !
> ಬ್ರೂಟ : ತನ್ನ ಸಮಯಪ್ರಜ್ಞೆ ತಿಳಿದಾಗ ಅವನ ಖಯಾಲು ನನಗರ್ಥವಾಗುತ್ತದೆ.
>
> ಯುದ್ಧಕ್ಕೂ ಪ್ರಾಸಮೂರ್ಖರಿಗೂ ಏನು ಸಂಬಂಧ ? ಅನಿಷ್ಟ, ತೊಲಗಾಚೆ !"[5]

ಎಂದು ಅವನಿಗೆ ತುಚ್ಛವಾಗಿ ಬೈದು ಹೊರಗಟ್ಟುತ್ತಾರೆ. ಮಾನವ ದೌರ್ಬಲ್ಯವನ್ನು ಅಧಿಕಪ್ರಸಂಗಿತನವನ್ನು ಕಂಡರೆ ಬ್ರೂಟಸ್‌ಗೆ ಎಲ್ಲಿಲ್ಲದಂಥ ಮೈಯುರಿಯುವ ಕೋಪ. ಸ್ವತಃ ದೌರ್ಬಲ್ಯವಶಿಯಾದ ಕ್ಯಾಷಿಯಸ್‌ಗೆ ಅಷ್ಟು ಸಿಟ್ಟಿಲ್ಲ ; ಕೊಂಚ ಸಹನೆಯಿದೆ. ಆದರ್ಶವನ್ನು ತಬ್ಬಿಕೊಂಡ ವ್ಯಕ್ತಿ ತನ್ನೆಲ್ಲ ದೌರ್ಬಲ್ಯಗಳನ್ನು ಗೆಲ್ಲುತ್ತ, ದೌರ್ಬಲ್ಯಗಳಿದ್ದವರನ್ನು ಸಹಿಸದ ಯಂತ್ರವಾಗುತ್ತಾನೆ. ಕವಿಗಳೆಂದರೆ ಕೆಟ್ಟದಾಗಿ ಪ್ರಾಸಕಟ್ಟುವವರು ! "ಯುದ್ಧಕ್ಕೂ ಪ್ರಾಸ ಮೂರ್ಖರಿಗೂ ಏನು ಸಂಬಂಧ ?" ಎನ್ನುವಲ್ಲಿ ಕವಿಗಳನ್ನು ಹಳಿದು ಅವರ ನಿರುಪಯುಕ್ತತೆಯನ್ನು (ಸಾಂಸ್ಕೃತಿಕ ಕೊಡುಗೆ ಇಲ್ಲಿ ಅಷ್ಟು ಮುಖ್ಯವಲ್ಲ.) ಸ್ವತಃ ಶ್ರೇಷ್ಠ ಮಹಾಕವಿಯಾದ ಷೇಕ್ಸ್ಪಿಯರ್ ತೋರಿಸುವ ರೀತಿ ತುಂಬ ಮಹತ್ವದ ವಿಷಯವಾಗಿದೆ. ಕವಿ ಸಿನ್ನನಿಗೆ ಲೋಕಪ್ರಜ್ಞೆ ಇಲ್ಲ ; ಈ ಮೂರ್ಖ ಕವಿಗೆ "ಸಮಯಪ್ರಜ್ಞೆ" ಇಲ್ಲ.

ಷೇಕ್ಸ್ಪಿಯರ್‌ಗೆ ಆಕರವಾದ ಪ್ಲೂಟಾರ್ಕ್ (ನಾರ್ತ್‌ನ ಭಾಷಾಂತರ)ನಲ್ಲಿ ಬ್ರೂಟಸ್ ಮತ್ತು ಕ್ಯಾಷಿಯಸ್‌ರ ಜಗಳವನ್ನು ಬಿಡಿಸಲು ಬರುವವನು ಕವಿಯಲ್ಲ ; ಒಬ್ಬ ತತ್ತ್ವಜ್ಞಾನಿ. "ಕೇಟೊ ಬದುಕಿದ್ದಾಗ ಅವನ ಸ್ನೇಹಿತನೂ ಅನುಯಾಯಿಯೂ ಆಗಿದ್ದ, ಜ್ಞಾನವಿವೇಕ ಇಲ್ಲದಿದ್ದರೂ ತತ್ತ್ವಜ್ಞಾನಿಯೆಂದು ಹೇಳಿ

4. ಅದೇ : ಪು 92
5. ಅದೇ : ಪು. 98–9

ಕೊಳ್ಳುತ್ತಿದ್ದ ಮಾರ್ಕಸ್ ಫಯೋನಿಯಸ್, ಹೊರಗಡೆ ಇದ್ದ ಜನರು 'ಬಿಡುವುದಿಲ್ಲ' ಎಂದು ಹೇಳಿದರೂ ಒಳಗೆ ನುಗ್ಗಿದ....ಅವನೇ ಅವರನ್ನೂ (ಬ್ರೂಟಸ್ ಮತ್ತು ಕ್ಯಾಷಿಯಸ್‌ರನ್ನು) ಮಾತನಾಡಿಸಿದರೂ 'ಕುನ್ನಿ ತತ್ತ್ವ ಜ್ಞಾನಿ' ಎಂದು ಕರೆಯುತ್ತಿದ್ದ ಅವನನ್ನು ನೋಡಿ ಅವರಿಬ್ಬರೂ ನಕ್ಕರು"[6] ಮೂಲದಲ್ಲಿರುವ ತತ್ತ್ವಜ್ಞಾನಿಯನ್ನು ಷೇಕ್ಸ್ಪಿಯರ್ "ಕವಿ"ಯಾಗಿ ಮಾರ್ಪಡಿಸಿದ್ದಾನೆ.

ಷೇಕ್ಸ್ಪಿಯರ್ ಏಕೆ ಹೀಗೆ ಬದಲಾಯಿಸಿದ? ಎರಡು ಸಾರಿ, ಅದೂ ಒಂದೇ ನಾಟಕದಲ್ಲಿ, ಇಬ್ಬರು ಕವಿಗಳನ್ನು ತಂದ ಉದ್ದೇಶವೇನು? ಏಕೆ ಅವರಿಗೆ ಛೀಮಾರಿ ಹಾಕಿಸಿ ಮುಗಿಸುತ್ತಾನೆ? "ಎ ಮಿಡ್‌ಸಮರ್ ನೈಟ್ಸ್ ಡ್ರೀಮ್"ನಾಟಕದಲ್ಲಿ ಕವಿಯನ್ನು,ಅವನ ಪ್ರತಿಭಾಶಕ್ತಿಯನ್ನು, ಸೃಷ್ಟಿಯನ್ನು ಅಷ್ಟು ಮುಕ್ತ ಮನಸ್ಸಿನಿಂದ,ಆರ್ದ್ರ ಹೃದಯದಿಂದ, ಇನ್ನಿಲ್ಲದ ಹೆಮ್ಮೆಯಿಂದ ಹೊಗಳುವ ಮಹಾಕವಿ "ಜೂಲಿಯಸ್ ಸೀಸರ್" ನಾಟಕದಲ್ಲಿ ಏಕೆ ತೆಗಳುತ್ತಾನೆ? ಅವನದು ಕುಕವಿಗಳನ್ನು ನಿಂದಿಸುವ ಪ್ರವೃತ್ತಿಯೆ, ಅಲೆಕ್ಸಾಂಡರ್ ಪೋಪ್ (1688–1744)ನ ಹಾಗೆ? ಅಲ್ಲವೆಂದು ನನ್ನ ಭಾವನೆ. ಕವಿ ಪೋಪ್‌ನ ವಿಡಂಬನೆಯಂತೆ ಷೇಕ್ಸ್ಪಿಯರ್‌ನದು ನೇರ ಸರಳ ವಿಡಂಬನೆಯಲ್ಲ. ತುಂಬ ಸಂಕೀರ್ಣವಾದುದು; ಖಚಿತವಾಗಿ ಇಷ್ಟೇ ಎಂದು ಹೇಳಲು ಸಿಗುವುದಿಲ್ಲ. ನಾನಾ ರೀತಿಯ ಅರ್ಥ ವಿವರಣೆಗೆ ಅದು ಎಡೆಗೊಡುತ್ತದೆ, ಅವನ ಇಡೀ ಸೃಷ್ಟಿಯಂತೆ. ಶ್ರೇಷ್ಠತನು ಕಲೆಗೆ ತನ್ನನ್ನೇ ತಾನು ನಿಗೂಢ ಮಾಡಿಕೊಳ್ಳುವ ಗುಣವಿದೆ. ಷೇಕ್ಸ್ಪಿಯರ್ ಸಾಹಿತ್ಯದ ಅನಂತ ಧ್ವನಿಶಕ್ತಿ ಬೆರಗುಗೊಳಿಸುವಂಥದು ಎಷ್ಟೋ ದೊಡ್ಡ ಕವಿಗಳೆಂದು ಪರಿಗಣಿತವಾಗಿರುವವರಲ್ಲಿ ಈ ವೈವಿಧ್ಯ ಕಾಣುವುದಿಲ್ಲ.

ಷೇಕ್ಸ್ಪಿಯರ್‌ಗೆ ತನ್ನ ವೃತ್ತಿಯ ಬಗ್ಗೆನೇ ಅನುಮಾನ ಅಸಂತೋಷಗಳಿದ್ದಂತೆ ಭಾಸವಾಗುತ್ತದೆ. ಆದರೂ ಅವನು ಇನ್ನೂ ಹೆಚ್ಚು ಶ್ರೇಷ್ಠ ಕಲಾಕೃತಿಗಳನ್ನು ರಚಿಸಿದನಲ್ಲ ಅಂದರೆ, ಅವನಲ್ಲಿದ್ದ ಪ್ರಬಲ ಕಾವ್ಯ ಪ್ರತಿಭೆ ಅವನನ್ನು ತೆಪ್ಪಗಿರಲು ಬಿಡದೆ ಹಿಡಿದು ದುಡಿಸಿಕೊಂಡು ತನ್ನ ಸಂಪೂರ್ಣ ಅಭಿವ್ಯಕ್ತಿ ಪಡೆದುಕೊಂಡಿತು. ತಾನು ನಿಜವಾಗಿ ಜನಸೇವೆ ಮಾಡುತ್ತಿದ್ದೇನೆಯೆ? ಎಂಬ ಕೊರಗು ಅವನಿಗಿದ್ದಂತೆ ಕಾಣುತ್ತದೆ. ರಾಜಕಾರಣಿ ಮತ್ತು ಕವಿ—ಈ ಇಬ್ಬರಲ್ಲಿ ರಾಜಕಾರಣಿಯೆ ಹೆಚ್ಚು ಚೆನ್ನಾಗಿ ಸಮಾಜಸೇವೆ ಮಾಡುತ್ತಾನೆಂಬ ಭಾವನೆ ಷೇಕ್ಸ್ಪಿಯರ್‌ಗೆ ಇದ್ದಿರಬಹುದು. ನಾನು ನಾಟಕ ಬರೆದೆ, ಹಣ ಬಂತು; ಸಂಸಾರ ಸುಖವಾಯಿತು; ಮನೆ ಮಾಡಿಕೊಂಡೆ. ಇದು ಹೇಗೆ ಜನಸೇವೆ? ಎಂದು ಅವನಿಗೆ ಪ್ರಾಮಾಣಿಕವಾಗಿ ಅನ್ನಿಸಿರಬೇಕು. ಸೇವೆ ಅಂದರೆ ಪ್ರತಿಫಲಾಪೇಕ್ಷೆ ಇಲ್ಲದೆ ಮಾಡುವ ಪ್ರೀತಿಕಾರ್ಯ. ರಾಜಕಾರಣಿಯೂ ಪ್ರತಿಫಲ ನಿರೀಕ್ಷೆಯಿಂದಲೇ ಕೆಲಸ ಮಾಡುತ್ತಾನೆ. ಆದರೆ ಅವನಿಗೂ ಕವಿಗೂ ಮೂಲಭೂತ ವ್ಯತ್ಯಾಸವಿದೆ. ರಾಜಕಾರಣಿ ತನ್ನ ಕ್ಷೇತ್ರಕ್ಕೆ ಶಾಲೆ, ಆಸ್ಪತ್ರೆ, ರಸ್ತೆ, ಕೆರೆ, ಬಾವಿ ಇತ್ಯಾದಿ ಜನೋಪಯೋಗಿ ಕಾರ್ಯಗಳನ್ನು ಆಗ ಮಾಡಿಸುತ್ತಾನೆ. ಇದ್ಯಾವುದೂ ಆಗದಿದ್ದರೆ ಕೊನೇಪಕ್ಷ ಒಂದು ಪಾರ್ಟಿಗೂ ಇನ್ನೊಂದು ಪಾರ್ಟಿಗೂ ಕಲಹ ಉಂಟುಮಾಡುತ್ತಾನೆ. ತಕ್ಷಣ ಜನಜೀವನವನ್ನು ಕಲಕುವ, ಅಲ್ಲೋಲಕಲ್ಲೋಲ ಮಾಡುವ ಶಕ್ತಿ ರಾಜಕಾರಣಿಗುಂಟು.ಕವಿಗೆ ಇದು ಸಾಧ್ಯವಿಲ್ಲ. ಸಾಹಿತ್ಯ ಭೋಗವಸ್ತು, ಸಾಹಿತ್ಯದಿಂದ ಜನಜೀವನ ಎಚ್ಚರವಾಗಿರುವುದು ಚರಿತ್ರೆಯಲ್ಲಿ ಅಪರೂಪ. ಆದ್ದರಿಂದ ಸಮಾಜಸೇವೆಯಲ್ಲಿ ಕವಿಗಿಂತ ರಾಜಕಾರಣಿ ಮೇಲು, ಎನ್ನುವಂತಿದೆ ಮಹಾಕವಿ ಷೇಕ್ಸ್ಪಿಯರ್‌ನ ದೃಷ್ಟಿ.

---

6. ಅದೇ; ಪೀಠಿಕೆ, xxviii. ಹಾಗೂ ರೆವರೆಂಡ್ ಡಬ್ಲ್ಯೂ. ಡಬ್ಲ್ಯೂ. ಸ್ಕೀಟ್ ಸಿದ್ಧಪಡಿಸಿರುವ ಗ್ರಂಥ Shakespeare's 'plutarch' ಪು. 134 ನೋಡಿ.

ಕೆ. ಎಂ. ಸೀತಾರಾಮಯ್ಯ

ಮಹಾಕವಿ ಹೋಮರ್

ಗ್ರೀಸ್‌ದೇಶದ ಪ್ರಾಚೀನ ಮಹಾಕಾವ್ಯಗಳಾದ "ಇಲಿಯಡ್" ಮತ್ತು "ಒಡಿಸ್ಸಿ" ಜಗತ್ಪ್ರಸಿದ್ಧವಾಗಿವೆ. ಇವುಗಳನ್ನು ರಚಿಸಿದ ಕವಿಯು "ಹೋಮರ್" ಎಂಬುದು ಹಿಂದಿನಿಂದಲೂ ಪ್ರತೀತವಾಗಿರುವ ಸಂಗತಿ. ಕವಿಯ ಕಾಲ ಕ್ರಿಸ್ತಪೂರ್ವ ಸುಮಾರು ಒಂಬತ್ತನೆಯ ಶತಮಾನವೆಂದು ಬಹುಜನ ವಿದ್ವಾಂಸರ ಅಭಿಪ್ರಾಯ.

ಕವಿಯ ಕಾಲ ದೇಶ ವರ್ತಮಾನಗಳ ಬಗ್ಗೆ ವಿದ್ವಾಂಸರ ವಲಯದಲ್ಲಿ ವಿಪುಲವಾಗಿ ಚರ್ಚೆ ನಡೆದಿದೆ. ಅವುಗಳನ್ನು ಇಲ್ಲಿ ಸಂಗ್ರಹಿಸಿ ಕೊಟ್ಟಿದೆ.

ಹೋಮರನ ಅಸ್ತಿತ್ವ

ಎಲ್ಲಕ್ಕೂ ಮೊದಲು, ಹೋಮರನ ಅಸ್ತಿತ್ವದ ಬಗ್ಗೆಯೇ ಕೆಲವು ವಿದ್ವಾಂಸರು ಅನುಮಾನ ವ್ಯಕ್ತಪಡಿಸಿದ್ದಾರೆ. ಫ್ರಾನ್ಸ್ ದೇಶದ ಫ್ರಾಂಕೋ ಹೆಡೆಲಿನ್ (ಕ್ರಿ.ಶ. 1664) ಎಂಬ ವಿದ್ವಾಂಸನು ಹೋಮರ್ ಎಂಬ ಕವಿ ಬಹುಶಃ ಎಂದೂ ಇರಲೇ ಇಲ್ಲ ಎಂದು ವಾದಿಸಿದ. ಜರ್ಮನಿ ದೇಶದ ಕಾರ್ಲ್ ಲಕ್‌ಮನ್ (ಕ್ರಿ. ಶ. 1793–1851) ಎಂಬ ವಿದ್ವಾಂಸನೂ ಹೋಮರ್ ಕವಿಯ ಅಸ್ತಿತ್ವದ ಬಗ್ಗೆ ಅನುಮಾನ ತಾಳಿದ.

ಇದಕ್ಕೆ ವಿರುದ್ಧವಾಗಿ, ಕೊನೆಯಪಕ್ಷ, ಎಂಟು ಮಂದಿ, "ಹೋಮರರ ಕಥೆ"ಗಳು ಸಿಕ್ಕಿವೆ. ಅವುಗಳಲ್ಲೊಂದು ಕಥೆಯಪ್ರಕಾರ ಹೋಮರನು ಮೆಲೀಸ್ ಎಂಬೊಬ್ಬ ನದಿ–ದೇವತೆಯ ಮಗ. ಅವನ ತಾಯಿಯು ಕ್ರೈಥೀಸ್ ಎಂಬ ವನದೇವತೆ. ಗರ್ಭಿಣಿ ಕ್ರೈಥೀಸಳು ಮೆಲೀಸ್ ನದಿಯ ದಡದ ಮೇಲಿದ್ದ ಸ್ಮಿರ್ನಾ ಎಂಬ ನಗರದಲ್ಲಿ ಹೋಮರನನ್ನು ಹಡೆದಳು. ಮೆಲೀಸ್ ನದಿಯ ಸಮೀಪದಲ್ಲಿ ಹುಟ್ಟಿದ್ದರಿಂದ ಹೋಮರನಿಗೆ ಮೆಲಿಸಿಜಿನೀಸ್ ಎಂದೂ ಹೆಸರಾಯಿತು. ಇನ್ನೊಂದು ಕಥೆಯ ಪ್ರಕಾರ, ಒಡಿಸ್ಸಿ ಮಹಾಕಾವ್ಯದ ನಾಯಕನಾದ ಒಡಿಸ್ಯೂಸನೇ ಹೋಮರ್. ಆ ಕಾವ್ಯದಲ್ಲಿ ಹೋಮರ್ ತನ್ನ ಸ್ವಂತ ಕಥೆಯನ್ನೇ ಹೇಳಿಕೊಂಡಿದ್ದಾನೆ. ಹೀಗೆ ಹೋಮರನ ಬಗ್ಗೆ ಬೇರೆಬೇರೆಯ ಕಥೆಗಳುಂಟು. ಆದರೆ ಅವುಗಳನ್ನು ಎಷ್ಟರಮಟ್ಟಿಗೆ ನಂಬಬಹುದು? ಆ ಎಂಟುಜನ "ಹೋಮರರ" ಪೈಕಿ ಇಲಿಯಡ್ ಮತ್ತು ಒಡಿಸ್ಸಿ ಮಹಾಕಾವ್ಯಗಳ ಕರ್ತೃವಾದ ಹೋಮರ್ ಯಾರು? ಅಥವಾ ಅವನು ಅವರೆಲ್ಲರಿಗಿಂತಲೂ ಭಿನ್ನವಾದ ಬೇರೊಬ್ಬ ವ್ಯಕ್ತಿಯೇ?

ಗ್ರೀಸ್‌ದೇಶದ ಬಹುಪಾಲು ಜನ ತಮ್ಮ ಮಹಾಕವಿಯ ಅಸ್ತಿತ್ವದ ಬಗೆಗಾಗಲಿ, ಅವನೇ ಇಲಿಯಡ್ ಮತ್ತು ಒಡಿಸ್ಸಿ ಮಹಾಕಾವ್ಯಗಳನ್ನು ಬರೆದನೆಂಬ ಬಗೆಗಾಗಲಿ ಅನುಮಾನ ತಾಳಿಲ್ಲ.

ಹೋಮರನ ಜನ್ಮಸ್ಥಳ

ಹೋಮರ್ ರಚಿಸಿದ್ದು ಎಂದು ಹೇಳಲಾದ, ಅಪಾಲೋದೇವತೆಯನ್ನು ಕುರಿತ ಒಂದು ಸ್ತೋತ್ರಗೀತೆಯಲ್ಲಿ ಕವಿಯು "ನಿಮ್ಮ ಶ್ರೇಷ್ಠ ಕವಿ ಯಾರು ?" ಎಂದು ಗಾಯಕರಿಗೆ ಪ್ರಶ್ನೆ ಹಾಕಿದಂತೆಯೂ, ಅದಕ್ಕೆ ಉತ್ತರವಾಗಿ ಅವರು, "ನಮ್ಮ ಶ್ರೇಷ್ಠ ಕವಿಯು ಒಬ್ಬ ಕುರುಡ. ಕಲ್ಲುಬಂಡೆಗಳಿಂದ ಕೂಡಿದ ಕಿಯೋಸ್ (chios) ನಲ್ಲಿ ಅವನ ವಾಸ" ಎಂದು ಹೇಳಿದಂತೆಯೂ ಒಂದು ಸಂಭಾಷಣೆ ಬರುತ್ತದೆ. ಈ ಸ್ತೋತ್ರಗೀತೆಯ ಆಧಾರದಿಂದ, ಹೋಮರನ ಜನ್ಮಸ್ಥಳ ಕಿಯೋಸ್ ಎಂದು ಕೆಲವರು ಹೇಳಿದರೆ ; ಮೇಲಿನ ಕಥೆಯ ಆಧಾರವನ್ನು ಕೊಟ್ಟು, ಮೆಲೀಸ್ ನದಿಯ ದಡದ ಮೇಲಿರುವ ಸ್ಮಿರ್ನಾ ನಗರವೇ ಕವಿಯ ಜನ್ಮಸ್ಥಳ ಎಂದು ಇನ್ನು ಕೆಲವರು ವಾದಿಸಿದರು. ಈ ಎರಡು ಊರುಗಳ ಜೊತೆಗೆ, ಕವಿಗೆ ಜನ್ಮಕೊಟ್ಟ ಕೀರ್ತಿ ನಮಗೇ ಸಲ್ಲುತ್ತದೆ ಎಂದು ರ್‍ಹೋಡ್ಸ್, ಕೋಲೊಫಾನ್, ಸಲಾಮಿಸ್, ಆರ್ಗಾಸ್ ಮತ್ತು ಆಥೆನ್ಸ್ ನಗರಗಳು ಹೇಳಿಕೊಳ್ಳುತ್ತವೆಯಂತೆ. ಇವುಗಳ ಜೊತೆಗೆ ಕೈಮಿ, ಇಥಾಕ, ಇಯೊಸ್, ಪೈಲಸ್, ಸ್ಪಾರ್ಟಾ, ಈಜಿಪ್ಟ್ ಮತ್ತು ಬೇಬಿಲಾನ್‌ಗಳೂ ದನಿಗೂಡಿಸುತ್ತವೆಯಂತೆ. ಆದರೆ ಇವುಗಳ ಪಟ್ಟಿಯಲ್ಲಿ ಕಿಯೋಸ್ ಮತ್ತು ಸ್ಮಿರ್ನಾ ನಗರಗಳಿಗೆ ಹೆಚ್ಚು ಬೆಂಬಲ. ಇವುಗಳ ನಂತರ ಬರುವ ಹೆಸರುಗಳೆಂದರೆ ಕೈಮಿ ಮತ್ತು ಕೋಲೊಫಾನ್.

ಹೋಮರನ ಅಂಧತ್ವ

ಹಿಂದಿನಿಂದ ಬಂದ ಚಿತ್ರ ಮತ್ತು ಶಿಲ್ಪಗಳಲ್ಲಿ ಹೋಮರ್ ಮಹಾಕವಿಯನ್ನು ಅಂಧನನ್ನಾಗಿಯೇ ಚಿತ್ರಿಸಲಾಗಿದೆ.

ಮೇಲೆ ಹೇಳಿದ ಅಪಾಲೋದೇವತೆಯನ್ನು ಕುರಿತ ಸ್ತೋತ್ರಗೀತೆಯಲ್ಲಿ "ನಮ್ಮ ಶ್ರೇಷ್ಠ ಕವಿಯು ಒಬ್ಬ ಕುರುಡ. ಕಲ್ಲುಬಂಡೆಗಳಿಂದ ಕೂಡಿದ ಕಿಯೋಸ್‌ನಲ್ಲಿ ಅವನ ವಾಸ" ಎಂದು ಗಾಯಕರು ಹೇಳಿದಂತೆ ಒಂದು ಸಂಭಾಷಣೆ ಬರುತ್ತದಷ್ಟೆ.

ಹಾಗೆಯೇ, ಒಡಿಸ್ಸಿ ಮಹಾಕಾವ್ಯದಲ್ಲಿ ಡೆಮೊಡೋಕಸ್ ಎಂಬೊಬ್ಬ ಹಾಡುಗಬ್ಬಿಗನ ಪಾತ್ರ ಬರುತ್ತದೆ. ಅವನು ಕುರುಡ. ಎತ್ತರವಾದೊಂದು ಕೋಲು ಹಿಡಿದುಕೊಂಡು, ಒಬ್ಬ ಹುಡುಗನ ಹೆಗಲ ಮೇಲೆ ಕೈಯೂರಿಕೊಂಡು, ಅವನು ದಾರಿ ನಡೆಯುತ್ತಾನೆ. ಇದು ಸ್ವತಃ ಹೋಮರ್ ಕವಿಯ ಚಿತ್ರವಲ್ಲದೆ ಬೇರೆಯಲ್ಲ ಎಂದು ಕೆಲವರ ಹೇಳಿಕೆ. ಪಾರಂಪರಿಕವಾಗಿ ಬಂದ ಕಥೆಗಳಲ್ಲಿಯೂ ಹೋಮರನನ್ನು ಕುರುಡನೆಂದೇ ಹೇಳಲಾಗಿದೆ. ಈ ಮೇಲಿನ ಸಾಕ್ಷ್ಯಾಧಾರಗಳನ್ನು ಕೊಟ್ಟು, ಹೋಮರನು ಕುರುಡನಾಗಿದ್ದನೆಂದು ಕೆಲವರು ವಾದಿಸಿದರು. ಆದರೆ ಅದಕ್ಕೆ ವಿರುದ್ಧವಾದ ಅಭಿಪ್ರಾಯವೂ ಇಲ್ಲದಿಲ್ಲ.

ಎಲ್ಲರ ಹಾಗೆ ಹೋಮರನಿಗೂ ಕಣ್ಣುಗಳಿದ್ದುವು. ಚೆನ್ನಾಗಿಯೇ ಇದ್ದುವು. ವೃದ್ಧಾಪ್ಯದಲ್ಲಿ ಅವನಿಗೆ ಕಣ್ಣು ಹೋಗಿರಬಹುದು ಎಂದು ಕೆಲವರ ಮತ. ಹೋಮರನು ಒಮ್ಮೆ ವೀರ ಅಕಿಲೀಸನ ಗೋರಿಯ ಬಳಿ ಹೋಗಿ, "ಅಕಿಲೀಸ್ ! ನೀನು ನಿನ್ನ ದಿವ್ಯವಾದ ಕವಚ ಶಿರಸ್ತ್ರಾಣ ತೊಟ್ಟು, ನಿನ್ನ ಯುದ್ಧವೇಷದಲ್ಲಿ ನನಗೆ ಒಮ್ಮೆ ದರ್ಶನ ಕೊಡು" ಎಂದು ಕೇಳಿಕೊಂಡನಂತೆ. ಅಂತೆಯೇ ಅಕಿಲೀಸ್ ಕಾಣಿಸಿಕೊಂಡಾಗ, ಅವನ ಆ ಜಾಜ್ವಲ್ಯಮಾನವಾದ ಪ್ರಖರ ತೇಜಸ್ಸನ್ನು ತಡೆದುಕೊಳ್ಳಲಾರದೆ ಕವಿಯ ಕಣ್ಣುಗಳು ಕುರುಡಾದುವು ಎಂದು ಒಂದು ಕಥೆ.

ಹೋಮರನ ಕಾವ್ಯಗಳಲ್ಲಿ ಬರುವ ಕೆಲವು ವರ್ಣನೆಗಳನ್ನು ಆಧಾರವಾಗಿಟ್ಟುಕೊಂಡು, ಅವನು ಕುರುಡನಾಗಿರಲಿಲ್ಲ ಎಂದು ಇನ್ನು ಕೆಲವರು ವಾದಿಸಿದರು. ಒಡಿಸ್ಸಿ ಮಹಾಕಾವ್ಯದಲ್ಲಿ ಬರುವ ಕ್ಯಾಲಿಪ್ಸೊದೇವತೆಯ ಗುಹಾ

ಭವನದ ಮುಂದಿನ ನಿಸರ್ಗೋದ್ಯಾನದ ರಮಣೀಯವಾದ ವರ್ಣನೆಯನ್ನು ಹುಟ್ಟುಗುರುಡನಾದ ಕವಿಯೊಬ್ಬ ಮಾಡುವುದು ಸಾಧ್ಯವೇ ? ಅಂತಹ ವರ್ಣನೆಗಳು ಅವನ ಕಾವ್ಯಗಳಲ್ಲಿ ಹೇರಳವಾಗಿ ಸಿಗುತ್ತವೆ. ಪ್ರಕೃತಿಯ ಚಿತ್ರವನ್ನಾಗಲಿ ರಣರಂಗದ ಚಿತ್ರವನ್ನಾಗಲಿ, ಗುಡಿಸಲು ಅಥವಾ ಅರಮನೆಯ ಚಿತ್ರವನ್ನಾಗಲಿ, ಯಾವುದನ್ನೇ ಆಗಲಿ ಹಾಗೆ ಕಣ್ಣಿಗೆ ಕಟ್ಟುವಂತೆ ಬಣ್ಣಿಸಬೇಕಾದರೆ ಹೋಮರನು ಹುಟ್ಟುಗುರುಡನಂತೂ ಖಂಡಿತ ಆಗಿರಲಾರ ಎಂದು ಈ ಎರಡನೆಯ ಪಕ್ಷದವರ ವಾದ.

ಹೋಮರನ ಕಾಲ

ಗ್ರೀಸ್‌ದೇಶದ ಪ್ರಥಮ ಇತಿಹಾಸಕಾರನಾದ ಹೆರೊಡೋಟಸನು (ಕಾಲ. ಕ್ರಿ.ಪೂ. ಐದನೆಯ ಶತಮಾನ) ಹೋಮರನು ತನಗಿಂತ ಸುಮಾರು ನಾಲ್ಕುನೂರು ವರ್ಷಗಳಿಗಿಂತಲೂ ಹಿಂದೆ ಇದ್ದಿರಲಾರನೆಂದು ತಿಳಿಸಿದ್ದಾನೆ. ಅಂದರೆ ಹೋಮರನ ಕಾಲ ಕ್ರಿ.ಪೂ. ಸುಮಾರು ಒಂಬತ್ತನೆಯ ಶತಮಾನವಾಗಬೇಕು. ಆದರೆ ಹೆರೊಡೋಟಸನ ನಂತರ ಬಂದ ವಿದ್ವಾಂಸರು ಹೋಮರನ ಕಾಲವನ್ನು ಇನ್ನೂ ಹಿಂದಕ್ಕೆ ತಳ್ಳಿ ಅವನು ಕ್ರಿ. ಪೂ. ಹತ್ತು ಅಥವಾ ಹನ್ನೊಂದನೆಯ ಶತಮಾನದಲ್ಲಿದ್ದನೆಂದು ಹೇಳಿದರು.

ಕವಿಯ ಕಾಲದ ಬಗೆಗೆ ವಿಪುಲವಾಗಿ ಚರ್ಚೆ ನಡೆದು, ಕೊನೆಗೆ ಅವನು ಕ್ರಿ.ಪೂ. ಎಂಟನೆಯ ಶತಮಾನದಿಂದ ಹತ್ತನೆಯ ಶತಮಾನದ ಗಡುವಿನಲ್ಲಿದ್ದಿರಬಹುದೆಂದು ಬಹುಜನ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ.

ಕವಿಯ ಖ್ಯಾತಿ

ಗ್ರೀಕ್ ಜನ ಹೋಮರ್ ಮಹಾಕವಿಯನ್ನು ಒಬ್ಬ ದೇವತೆಯಂತೆಯೇ ಕಂಡು ಪೂಜಿಸುತ್ತಿದ್ದರಂತೆ. ಅವನಿಗಾಗಿ ಸ್ಮಿರ್ನಾ, ಕಿಯೋಸ್ ಮತ್ತು ಅಲೆಗ್ಸಾಂಡ್ರಿಯ ನಗರಗಳಲ್ಲಿ ದೇವಾಲಯಗಳು ನಿರ್ಮಾಣವಾಗಿದ್ದು, ಜನರು ತಮ್ಮ ಮಹಾಕವಿಗೆ ಪೂಜೆ ಪ್ರಾರ್ಥನೆ ಬಲಿಗಳನ್ನು ಸಮರ್ಪಿಸುತ್ತಿದ್ದರಂತೆ.

ಗ್ರೀಸ್‌ದೇಶದ ಮಹಾಚಕ್ರವರ್ತಿ ಅಲೆಗ್ಸಾಂಡರನು ತನ್ನ ದಿಗ್ವಿಜಯ ಕಾಲದಲ್ಲಿ, ಇಲಿಯಡ್ ಮಹಾಕಾವ್ಯದ ಒಂದು ಪ್ರತಿಯನ್ನು ಯಾವಾಗಲೂ ತನ್ನ ಬಳಿ ಇಟ್ಟುಕೊಂಡಿರುತ್ತಿದ್ದನಂತೆ.

ಅಲೆಗ್ಸಾಂಡರನ ಗುರುವಾದ ಅರಿಸ್ಟಾಟಲನು ಹೋಮರನ ಕಾವ್ಯಗಳನ್ನು ಮೆಚ್ಚಿಕೊಂಡು, ನಿರ್ದುಷ್ಟವಾದ ಕಾವ್ಯ ರಚನೆಗೆ "ಇಲಿಯಡ್" ಒಂದು ಮಾದರಿಯಂತಿದೆ ಎಂದು ಹೇಳಿದ್ದಾನೆ.

ಅರಿಸ್ಟಾಟಲನ ಗುರುವಾದ ಪ್ಲೇಟೋ ಮಹಾಶಯನು ತನ್ನ "ಆದರ್ಶ ರಾಜ್ಯ" (utopia)ದಿಂದ ಎಲ್ಲ ಕವಿಗಳನ್ನು ಉಚ್ಚಾಟನೆ ಮಾಡಿದ ಹಾಗೆ ಹೋಮರನನ್ನು ಉಚ್ಚಾಟನೆ ಮಾಡಿದ್ದಾನೆ.

ಕವಿಯ ಕೃತಿಗಳು

ಕೆಲವು ವಿರೋಧಾಭಿಪ್ರಾಯಗಳಿದ್ದರೂ, ಇಲಿಯಡ್ ಮತ್ತು ಒಡಿಸ್ಸಿ ಮಹಾಕಾವ್ಯಗಳೆರಡೂ ಹೋಮರನೇ ರಚಿಸಿದ್ದು ಎಂಬುದು ಬಹುಜನ ಸಮ್ಮತವಾದ ಅಭಿಪ್ರಾಯ. ವಿದ್ವಾಂಸರ ವಲಯದಲ್ಲಿ ಈ ಬಗ್ಗೆ ಎಷ್ಟೇ ತೀವ್ರವಾದ ಚರ್ಚೆ ನಡೆದಿರಲಿ, ಸಹೃದಯರು ಮಾತ್ರ ಈ ಎರಡು ಮಹಾಕಾವ್ಯಗಳು ಹೋಮರನೆ ರಚಿಸಿದ್ದು ಎಂದು ನಂಬಿ, ಅವುಗಳನ್ನು ಮತ್ತೆ ಮತ್ತೆ ಓದಿ ಸಂತೋಷಪಡುತ್ತಿದ್ದಾರೆ.

ಇವುಗಳಲ್ಲದೆ ಹೋಮರನು ಇನ್ನೂ ಕೆಲವು ಕೃತಿಗಳನ್ನು ರಚಿಸಿದನೆಂದು ವಿದ್ವಾಂಸರ ಹೇಳಿಕೆ. ಅವುಗಳಲ್ಲಿ ಈ ಕೆಳಗಿನವು ಉಪಲಬ್ಧವಾಗಿವೆ :

1. ಮಾರ್ಗೈಟ್ಸ್ (Margites) : ಇದೊಂದು ವಿಡಂಬನಾತ್ಮಕ ಕೃತಿ. ಇದರ ಆರು ಪದ್ಯಗಳು ಮಾತ್ರ ಸಿಕ್ಕಿವೆ.

2. ಭೇಕ-ಮೂಷಕ ಯುದ್ಧ (Battle of the Frogs and Mice) :ಇದರಲ್ಲಿ 316 ಪದ್ಯಗಳು ಮಾತ್ರ ಇವೆ. (ಆದರೆ ಈ ಕೃತಿ ಹೋಮರ್ ರಚಿಸಿದ್ದಲ್ಲ, ಇದು ಅನ್ಯ ಕವಿಕೃತಿ ಎಂದು ಕೆಲವು ವಿದ್ವಾಂಸರ ಅಭಿಪ್ರಾಯ.)

3. ಹೋಮರ್‌ನ "ಸ್ತೋತ್ರ ಗೀತೆಗಳು" (Homeric Hymns) : ಇವುಗಳಲ್ಲಿ ಸುಮಾರು 31 ಸ್ತೋತ್ರಗಳು (Hymns) ಮಾತ್ರ ಉಳಿದಿವೆ. (ಆದರೆ ಹೋಮರನ ಶಿಷ್ಯ ಪರಂಪರೆಯು ಈ ಸ್ತೋತ್ರಗೀತೆಗಳನ್ನು ರಚಿಸಿತೆಂಬ ಬೇರೆ ಅಭಿಪ್ರಾಯವೂ ಉಂಟು)

ಆದರೆ ಹೋಮರ್ ರಚಿಸಿದ್ದು ಎಂದು ಹೇಳಲಾದ ಈ ಮೇಲಿನ ಯಾವ ಕೃತಿಯಲ್ಲೂ—ಇಲಿಯಡ್ ಮತ್ತು ಒಡಿಸ್ಸಿ ಮಹಾಕಾವ್ಯಗಳಲ್ಲಿಯೂ ಸಹ ಕವಿಯ ಸ್ವಂತ ವಿಚಾರ—ಅವನ ಹೆಸರು, ಕಾಲ, ಊರುಕೇರಿ ಮುಂತಾಗಿ ಯಾವ ವಿಚಾರವೂ ತಿಳಿದು ಬರುವುದಿಲ್ಲ.

ಇಲಿಯಡ್ ಮಹಾಕಾವ್ಯವನ್ನು ಕುರಿತು

"ಇಲಿಯಡ್" ಎಂದರೆ "ಇಲಿಯಂ ನಗರ"ದ ಕಥೆ ಎಂದರ್ಥ. ಟ್ರಾಯ್ ನಗರಕ್ಕೆ "ಇಲಿಯಂ" ಎಂದು ಇನ್ನೊಂದು ಹೆಸರೂ ಇದ್ದಿತು. ಗ್ರೀಕರಿಗೂ ಟ್ರೋಜನರಿಗೂ ನಡೆದ ಯುದ್ಧದ ಕಥೆಯನ್ನು ಈ ಮಹಾಕಾವ್ಯದಲ್ಲಿ ಹೇಳಿದೆ. ಗ್ರೀಕ್ ಸುಂದರಿ ಹೆಲೆನ್ನಳನ್ನು ಟ್ರೋಜನ್ ರಾಜಕುಮಾರ ಪ್ಯಾರಿಸ್ ಅಪಹರಿಸಿಕೊಂಡು ಬಂದುದೇ ಈ ಯುದ್ಧಕ್ಕೆ ಕಾರಣ. ಸಂಶೋಧಕರ ಪ್ರಕಾರ ಈ ಯುದ್ಧ ನಡೆದುದು ಕ್ರಿ.ಪೂ. 1194 ರಲ್ಲಿ. ಏಷ್ಯಾಮೈನರಿನ ವಾಯುವ್ಯ ದಿಕ್ಕಿನಲ್ಲಿ ಹಿಸ್ಸಾರ್‌ಲಿಕ್ ಎಂಬ ಹೆಸರಿನ ಒಂದು ಮಣ್ಣಿನ ದಿಣ್ಣೆ ಇದೆ. ಭೂಮಟ್ಟದಿಂದ ಅದು ಸುಮಾರು 112 ಅಡಿ ಎತ್ತರದಲ್ಲಿದೆ. ಅದರ ಮೇಲೆ ಟ್ರಾಯ್ ನಗರವಿದ್ದಿತು ಎಂಬ ಊಹೆಯ ಮೇಲೆ, ಅಲ್ಲಿ ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ (1872–74) ಭೂಸಂಶೋಧನೆ ನಡೆಯಿತು. ಜರ್ಮನಿ ದೇಶದ ಸುಪ್ರಸಿದ್ಧ ಭೂಸಂಶೋಧಕ ಹೇನ್‌ರಿಕ್ ಶ್ಲೀಮನ್ ಎಂಬುವನು ಅಲ್ಲಿ ಖಾಸಗಿಯಾಗಿ ಈ ಸಂಶೋಧನೆಯನ್ನು ಕೈಕೊಂಡ. ಅವನು ಆ ಸ್ಥಳದಲ್ಲಿ ಒಂದರಕೆಳಗೊಂದರಂತೆ ಏಳು ನಗರಗಳ ಅವಶೇಷಗಳನ್ನು ಕಂಡು, ಅವುಗಳ ಪೈಕಿ ಮೇಲಿನಿಂದ ಆರನೆಯ ಅಥವಾ ಕೆಳಗಿನಿಂದ ಎರಡನೆಯ ನಗರವೇ ಇಲಿಯಡ್ ಕಾವ್ಯದಲ್ಲಿ ವರ್ಣಿತವಾಗಿರುವ ಟ್ರಾಯ್‌ನಗರ ಎಂದು ಹೇಳಿದ. ಅಲ್ಲಿಂದ ಸುಮಾರು ಇಪ್ಪತ್ತು ವರ್ಷಗಳ ನಂತರ (1891–94) ವಿಲ್‌ಹೆಲ್ಮ್ ಡಾರ್‌ಫೆಲ್ಡ್ (ಈತನೂ ಜರ್ಮನಿ ದೇಶದವನೇ) ಎಂಬುವನು ಸಂಶೋಧನೆಯನ್ನು ಮುಂದುವರಿಸಿ, ಆ ಸ್ಥಳದಲ್ಲಿ ಒಂದರಕೆಳಗೊಂದರಂತೆ ಒಟ್ಟು ಒಂಬತ್ತು ನಗರಗಳನ್ನು ಕಂಡು ಹಿಡಿದ. ಆದರೆ ಅವುಗಳ ಪೈಕಿ ಕೆಳಗಿನಿಂದ ಆರನೇಯದೇ "ಇಲಿಯಡ್" ಕಾವ್ಯದಲ್ಲಿ ವರ್ಣಿತವಾಗಿರುವ ಟ್ರಾಯ್‌ನಗರ ಎಂದು ವಾದಿಸಿದ. ಅನಂತರ ಸಿ. ಡಬ್ಲ್ಯು ಬ್ಲೆಗೆನ್ (ಕ್ರಿ. ಶ. 1938) ಎಂಬುವನು, ಆ ಒಂಬತ್ತು ನಗರಗಳ ಪೈಕಿ 7ನೇ ನಗರವೇ ಟ್ರಾಯ್‌ನಗರ, ಏಕೆಂದರೆ ಅದು ಇದ್ದಕ್ಕಿದ್ದಂತೆ ಬೆಂಕಿಗೆ ಸಿಕ್ಕಿ ನಾಶವಾದಂತೆ ತೋರಿಬರುತ್ತದೆ ಎಂದು ವಿವರಿಸಿದ.

ಟ್ರೋಜನ್ ಯುದ್ಧಕ್ಕೆ ಹೆಲೆನ್ನಳ ಅಪಹರಣವೇ ಕಾರಣ ಎಂದು ಗ್ರೀಸ್‌ದೇಶದ ಪುರಾಣ ಕಥೆಗಳು ಹೇಳಿದರೆ, ಸಂಶೋಧಕರು ಅದಕ್ಕೆ ಬೇರೆ ರಾಜಕೀಯ ಕಾರಣಗಳನ್ನು ಊಹಿಸಿದ್ದಾರೆ.

ಗ್ರೀಕರು ಟ್ರೋಜನರ ಮೇಲೆ ದಂಡೆತ್ತಿ ಬಂದು ಸುಮಾರು ಹತ್ತು ವರ್ಷಗಳ ಕಾಲ ಕೋಟೆಗೆ ಮುತ್ತಿಗೆ ಹಾಕಿ ಕುಳಿತರು. ಅವರದು ಒಟ್ಟು 1186 ಹಡಗುಪಡೆ ಮತ್ತು ಸೈನಿಕರ ಸಂಖ್ಯೆ 1,00,000 ಎಂದು ವಿದ್ವಾಂಸರ ಅಭಿಪ್ರಾಯ. ಗ್ರೀಕರಿಗೂ ಟ್ರೋಜನರಿಗೂ ನೇರ ಯುದ್ಧ ನಡೆದದು ಮುತ್ತಿಗೆಯ ಹತ್ತನೆಯ ವರ್ಷದಲ್ಲಿ. ಈ ಮೊದಲ ಒಂಬತ್ತು ವರ್ಷಗಳನ್ನು ಗ್ರೀಕರು ಹೇಗೆ ಕಳೆದರು ಎಂಬುದು ಇಲಿಯಡ್ ಕಾವ್ಯದಲ್ಲಿ, ನಡುನಡುವೆ, ಸ್ವಲ್ಪ ಮಾತ್ರ ಸೂಚಿತವಾಗಿದೆಯೇ ಹೊರತು ಅದರ ವಿವರವಾದ ವರ್ಣನೆಯಿಲ್ಲ. ಹತ್ತನೆಯ ವರ್ಷದ ಪ್ರಾರಂಭದಲ್ಲಿ ಎರಡು ಪಕ್ಷಗಳಿಗೂ ತೊಡಗಿದ ಯುದ್ಧದಿಂದ ಕಾವ್ಯ ಪ್ರಾರಂಭವಾಗಿದೆ. ಗ್ರೀಕ್ ಪಕ್ಷದ ಅಪ್ರತಿಮ ವೀರ ಅಕಿಲೀಸನ ಆಗ್ರಹದಿಂದ ತೊಡಗಿ, ಟ್ರೋಜನ್ ಪಕ್ಷದ ಸೇನಾಪತಿ ಹೆಕ್ಟರನ ಸಾವು ಮತ್ತು ಶವಸಂಸ್ಕಾರದೊಂದಿಗೆ "ಇಲಿಯಡ್" ಕಾವ್ಯ ಮುಗಿದಿದೆ. ಇಲ್ಲಿ ಕೇವಲ ಸುಮಾರು ಐವತ್ತು ದಿನಗಳ ಯುದ್ಧದ ವಿಷಯ ಮಾತ್ರ ಬರುತ್ತದೆ. ಅಕಿಲೀಸ್ ಸತ್ತ ವಿಚಾರವಾಗಲಿ, ಗ್ರೀಕರು ಟ್ರಾಯ್‌ನಗರವನ್ನು ಗೆದ್ದುಕೊಂಡ ವಿಚಾರವಾಗಲೀ ಇಲಿಯಡ್ ಕಾವ್ಯದಲ್ಲಿ ಬರುವುದಿಲ್ಲ. ಅದಕ್ಕೆ ಮೊದಲೇ ಕಾವ್ಯ ಕೊನೆಗೊಂಡಿದೆ. ಈಗಿರುವಂತೆ ಇಲಿಯಡ್ ಕಾವ್ಯ ಅಪೂರ್ಣ, ಇದರ ಹಿಂದುಮುಂದಿನ ಭಾಗಗಳು ಎಂದಾದರೂ ಒಂದು ದಿನ ಸಿಕ್ಕಿದರೂ ಸಿಗಬಹುದು ಎಂಬ ಆಶಯವನ್ನೂ ಕೆಲವರು ವ್ಯಕ್ತಪಡಿಸಿದ್ದಾರೆ. ಆದರೆ ಕಾವ್ಯವು ತನಗೆ ತಾನೇ ಪೂರ್ಣವಾಗಿದೆ, ಹೋಮರ್ ರಚಿಸಿದ್ದೇ ಇಷ್ಟು, ಕಥೆಯ ಹಿಂದುಮುಂದಿನ ಸಂಗತಿಯೆಲ್ಲ ಇದರಲ್ಲೇ ಸೂಚಿತವಾಗಿದೆ ಎಂಬ ಅಭಿಪ್ರಾಯವೇ ಪ್ರಬಲವಾಗಿದೆ.

ಟ್ರೋಜನ್ ಮಹಾಯುದ್ಧದ ಸಂಗತಿ, ಹೋಮರನ ಕಾಲಕ್ಕೂ ಬಹಳ ಹಿಂದಿನಿಂದಲೇ, ಜಾನಪದಗೀತೆಗಳು ಹಾಗೂ ಲಾವಣಿಗಳ ರೂಪದಲ್ಲಿ ಜನಜನಿತವಾಗಿದ್ದಿರಬೇಕು. ಆ ಮಹಾಯುದ್ಧದಲ್ಲಿ ಗ್ರೀಕ್ ವೀರರು ಮೆರೆದ ಸಾಹಸಗಳ ರೋಮಾಂಚಕಾರೀ ಕಥೆಗಳು ಪ್ರತಿಯೊಬ್ಬ ಗ್ರೀಕ್ ಪ್ರಜೆಗೂ ತಿಳಿದ ವಿಷಯವೇ ಆಗಿರಬೇಕು. ಹೋಮರ್ ಮಹಾಕವಿಯು ಈ ಕಥೆಗಳು ಹಾಗೂ ಜಾನಪದಗೀತೆಗಳು ಮತ್ತು ಲಾವಣಿಗಳ ಪರಿಚಯವನ್ನು ಮಾಡಿಕೊಂಡು ತನ್ನ ಕಾವ್ಯಗಳನ್ನು ರಚಿಸುವಲ್ಲಿ, ಅವುಗಳಿಂದ ಸ್ಫೂರ್ತಿ ಹೊಂದಿರುವುದು ತೀರ ಸಾಧ್ಯ.

ಟ್ರಾಯ್ ನಗರ ಇದ್ದಿತು ಎಂದು ಹೇಳಲಾದ ಸ್ಥಳವನ್ನು ಹೋಮರ್ ಮಹಾಕವಿಯು ಪ್ರತ್ಯಕ್ಷವಾಗಿ ಕಂಡುಬಂದಿರಬಹುದೆಂದು ಕೆಲವರು ವಿದ್ವಾಂಸರು ತರ್ಕಿಸಿದ್ದಾರೆ. ಅಲ್ಲಿಯ ಭೌಗೋಳಿಕ ಲಕ್ಷಣಗಳು, ತುಸು ಹೆಚ್ಚು ಕಡಮೆ ಹೋಮರ್ ವರ್ಣಿಸಿದಂತೆ ಈಗಲೂ ಇವೆ ಎಂದು ವಿದ್ವಾಂಸರ ಹೇಳಿಕೆ.

ಒಡಿಸ್ಸಿ ಮಹಾಕಾವ್ಯವನ್ನು ಕುರಿತು

ಒಡಿಸ್ಸಿ ಮಹಾಕಾವ್ಯದ ಕರ್ತೃತ್ವದ ಬಗ್ಗೆ ನಡೆದ ವಾದದ ವಿಚಾರವನ್ನು ಈ ಮೊದಲೇ ಸೂಚಿಸಿದೆ. ಇಲಿಯಡ್ ಮಹಾಕಾವ್ಯದ ನಾಯಕನು ಅಕಿಲೀಸನಾದರೂ, ಅಲ್ಲಿ ಇನ್ನೂ ಅನೇಕ ವೀರರ ಕಥೆಗಳು ಬಂದಿವೆ. ಆದರೆ ಒಡಿಸ್ಸಿ ಮಹಾಕಾವ್ಯದ ನಾಯಕ ಒಡಿಸ್ಸ್ಯೂಸ್. ಒಡಿಸ್ಸ್ಯೂಸನ ಸಾಹಸಗಳ ಕಥಾನಕವೇ ಒಡಿಸ್ಸಿ ಮಹಾಕಾವ್ಯ. ಟ್ರೋಜನ್ ಮಹಾಯುದ್ಧಕ್ಕೆಂದು ಹೊರಟ ಒಡಿಸ್ಸ್ಯೂಸ್ ಪುನಃ ತನ್ನ ಮನೆ ಕಾಣುವುದು ಇಪ್ಪತ್ತು ವರ್ಷಗಳ ನಂತರವೇ ಎಂಬ ಭವಿಷ್ಯವಿತ್ತು. ಟ್ರೋಜನ್ ಮಹಾಯುದ್ಧ ಮುಗಿಸಿಕೊಂಡು ಅಳಿದುಳಿದ ಗ್ರೀಕ್ ವೀರರು ತಮ್ಮ ತಮ್ಮ ಮನೆಯ ದಾರಿ ಹಿಡಿದು ಪ್ರಯಾಣ ಹೊರಟರು. ಅವರಂತೆಯೇ ಒಡಿಸ್ಸ್ಯೂಸನೂ ಹೊರಟ. ತನ್ನ ಭವಿಷ್ಯವನ್ನು ಅವನು ಅರಿಯದವನೂ ಅಲ್ಲ. ಅಲ್ಲಿಂದ ಹತ್ತು ವರ್ಷಗಳವರೆಗೆ ಅವನು ಪಟ್ಟ ಕಷ್ಟ, ನಷ್ಟ, ನಡೆಸಿದ ಸಾಹಸಗಳ ಅದ್ಭುತ ರೋಮಾಂಚಕಾರೀ ಕಥೆಯನ್ನು ನಾವು ಒಡಿಸ್ಸಿ ಮಹಾಕಾವ್ಯದಲ್ಲಿ ಕಾಣುತ್ತೇವೆ.

ಗ್ರೀಕರು ಟ್ರಾಯ್‌ನಗರಕ್ಕೆ ಮುತ್ತಿಗೆ ಹಾಕಿದ ಹತ್ತನೆಯ ವರ್ಷದ ಘಟನೆಗಳಿಂದ ಇಲಿಯಡ್ ಮಹಾ ಕಾವ್ಯಕಥೆ ಪ್ರಾರಂಭವಾದರೆ, ಒಡಿಸ್ಸಿ ಮಹಾಕಾವ್ಯಕಥೆ ಪ್ರಾರಂಭವಾಗುವುದು ಒಡಿಸ್ಯೂಸನ ಮರುಪಯಣದ ಹತ್ತನೆಯ ವರ್ಷದಿಂದ. ಒಡಿಸ್ಯೂಸನು ಈಚಿನ ಏಳು ವರ್ಷಗಳಿಂದಲೂ, ಸಮುದ್ರಮಧ್ಯದಲ್ಲಿದ್ದ ಕ್ಯಾಲಿಪ್ಸೋ ದೇವತೆಯ ಮಹಾಭವನದಲ್ಲಿ ಒಂದು ರೀತಿಯಲ್ಲಿ ಬಂಧಿತನಾಗಿದ್ದಾನೆ. ಅಲ್ಲಿಂದ ಬಿಡುಗಡೆ ಹೊಂದಿ ಅವನು ತನ್ನ ಊರು ಕೇರಿ ಕಾಣುವುದು ಎಂದು ? ಈ ಬಗ್ಗೆ ಒಲಿಂಪಸ್ ಸ್ವರ್ಗದಲ್ಲಿ ಸ್ಯೂಸ್ ದೇವನ ಅಧ್ಯಕ್ಷತೆಯಲ್ಲಿ, ಪೋಸೈಡನ್ ಹೊರತು ಉಳಿದ ಪ್ರಧಾನ ದೇವತೆಗಳೆಲ್ಲ ಸಭೆ ಸೇರಿ ಚರ್ಚೆ ಮಾಡುತ್ತಾರೆ. ಈ ಅಧ್ಯಾಯದಿಂದ ಈ ಮಹಾಕಾವ್ಯಕಥೆ ಪ್ರಾರಂಭವಾಗುತ್ತದೆ. ದೇವಸಭೆಯ ತೀರ್ಮಾನದಂತೆ ಹರ್ಮೀಸನು ಕ್ಯಾಲಿಪ್ಸೋ ದೇವತೆಯನ್ನು ಕಂಡು, ಸ್ಯೂಸನ ಇಚ್ಛೆಯಂತೆ ಒಡಿಸ್ಯೂಸನ ಬಿಡುಗಡೆ ಮಾಡಬೇಕೆಂದು ತಿಳಿಸುತ್ತಾನೆ. ಹೀಗೆ ಬಿಡುಗಡೆ ಹೊಂದಿದ ಒಡಿಸ್ಯೂಸ್ ಅಲ್ಲಿಂದ ಏಕಾಂಗಿಯಾಗಿ ಹೊರಟು, ನಡುವೆ ಕಷ್ಟನಷ್ಟಗಳಿಗೆ ಗುರಿಯಾದರೂ, ಕೊನೆಗೆ ಪಾರಾಗಿ, ಫೀಯೇಸಿಯನರ ನಾಡಿಗೆಹೋಗಿ, ಅಲ್ಲಿಯ ದೊರೆ ಅಲ್ಸಿನೌಸಿನ ಅರಮನೆಯನ್ನು ಸೇರುತ್ತಾನೆ. ದೊರೆಯ ಆತಿಥ್ಯವನ್ನು ಪಡೆದು, ತನ್ನ ಮುಂದಿನ ಪ್ರಯಾಣಕ್ಕೆ ಅವನ ಸಹಾಯವನ್ನು ಕೋರುತ್ತಾನೆ. ಕೊನೆಗೆ, ದೊರೆಯ ಅಪೇಕ್ಷೆಯ ಮೇರೆಗೆ, ತನ್ನ ಸಾಹಸಮಯ ಕಥೆಯನ್ನು ವರ್ಣಿಸಿ ಹೇಳುತ್ತಾನೆ. ತಾನು ಟ್ರೋಜನ್ ಯುದ್ಧ ಮುಗಿಸಿಕೊಂಡು ಹೊರಟಮೇಲಿನ ಮೊದಲ ಮೂರು ವರ್ಷದ ಕಥೆಯನ್ನೂ, ಆಮೇಲೆ ಕ್ಯಾಲಿಪ್ಸೋದೇವತೆಯ ಗುಹೆಗೆ ಹೋಗಿ, ಅಲ್ಲಿ ಸುಮಾರು ಏಳು ವರ್ಷಗಳನ್ನು ಕಳೆದು ಅಲ್ಲಿಂದ ಹೊರಟು ಅಲ್ಸಿನೌಸಿನಅರಮನೆಯ ವರೆಗೆ ಬಂದ ವಿಷಯವನ್ನೂ ತಿಳಿಸುತ್ತಾನೆ. ಈ ಭಾಗವೆಲ್ಲ ಕಥಾನಾಯಕನ ಆತ್ಮಕಥೆಯ ರೂಪದಲ್ಲಿ ಬಂದಿದೆ. ವಾಸ್ತವವಾಗಿ ಒಡಿಸ್ಸಿ ಮಹಾಕಾವ್ಯಕಥೆ, ಒಡಿಸ್ಯೂಸನ ಸಾಹಸಮಯ ಯಾತ್ರೆಯ ಹತ್ತನೆಯ ವರ್ಷದಿಂದ ಪ್ರಾರಂಭವಾಗಿ, ಒಡಿಸ್ಯೂಸನ ಆತ್ಮಕಥೆಯ ರೂಪದಲ್ಲಿ ಹಿಂದಿನ ಕಥೆಯೆಲ್ಲ ಚಿತ್ರಿತವಾಗಿ ಆಮೇಲೆ ಮುಂದೆ ಸಾಗಿದೆ. ನೇರವಾಗಿ ಹೇಳಿಕೊಂಡು ಹೋಗಿದ್ದರೆ ಆಗುತ್ತಿದ್ದ ಪರಿಣಾಮಕ್ಕಿಂತ, ಮಹಾಕವಿ ಪ್ರತಿಭಾಮಾತ್ರ ಗೋಚರವಾದ ಈ ಅದ್ಭುತ ತಂತ್ರದಿಂದಾಗಿ ಕಥೆ ತನ್ನ ಸ್ವಾರಸ್ಯವನ್ನು ಹೆಚ್ಚಿಸಿಕೊಂಡಿದೆ.

ಗ್ರೀಸ್‌ದೇಶದ ಪಶ್ಚಿಮ ತೀರದಲ್ಲಿ, ಅಯೋನಿಯ ಸಮುದ್ರದಲ್ಲಿ, ಪುರಾಣ ಕಾಲದ ಇಥಾಕದ್ವೀಪ ಎಂದು ಹೇಳಲಾದ, ಒಡಿಸ್ಸಿ ಮಹಾಕಾವ್ಯದಲ್ಲಿ ಹೋಮರ್ ವರ್ಣಿಸಿರುವ ಲಕ್ಷಣಗಳಿಂದ ಕೂಡಿರುವ ಒಂದು ದ್ವೀಪವಿದೆಯಂತೆ. ಟ್ರಾಯ್‌ನಗರದ ನೆಲೆಗಾಗಿ, ಹಿಸ್ಸಾರ್‌ಲಿಕ್ ದಿಣ್ಣೆಯ ಮೇಲೆ ಭೂಸಂಶೋಧನೆ ನಡೆದ ಹಾಗೆ, ಒಡಿಸ್ಯೂಸನ ಅರಮನೆಯ ಅವಶೇಷಗಳ ಪತ್ತೆಗಾಗಿ ಈ ದ್ವೀಪದಲ್ಲೂ ಭೂಸಂಶೋಧನೆ ನಡೆದಿದೆಯಂತೆ. ಆದರೆ ಹೆಚ್ಚಿನ ಪ್ರಗತಿಯೇನೂ ಸಾಧ್ಯವಾಗಿಲ್ಲ ಎಂದು ಸಂಶೋಧಕರ ಹೇಳಿಕೆ.

ಉಪಸಂಹಾರ

ಹೋಮರನು ಐರೋಪ್ಯದೇಶಗಳಲ್ಲೇ ಪ್ರಾಚೀನತಮನಾದ ಮಹಾಕವಿ. ಅವನ ಬಗ್ಗೆ ವಾದ ಪ್ರತಿವಾದ, ಪ್ರಶಂಸೆ ವಿಮರ್ಶೆ, ಖಂಡನೆ ಮಂಡನೆಗಳು ಕ್ರಿಸ್ತಪೂರ್ವದಿಂದ ತೊಡಗಿ, ಈ ಇಪ್ಪತ್ತನೆಯ ಶತಮಾನದಲ್ಲೂ ನಡೆದಿದೆ. ಹೋಮರ್ ಅದ್ವಿತೀಯನಾದ ಕಥೆಗಾರ. ಅತಿಯಾದ ನೀತಿಬೋಧನೆಯ ಭಾರವಿಲ್ಲದೆ ಅತ್ಯಂತ ಹೃದಯಂಗಮವಾಗಿ ಕಥೆಯನ್ನು ಹೇಳಿಕೊಂಡು ಹೋಗಿದ್ದಾನೆ. ಅವನು ಬಳಸಿರುವ ಉಪಮೆಗಳು ತಮ್ಮ ವೈಶಿಷ್ಟ್ಯದಿಂದಾಗಿ "ಹೋಮರೋಪಮೆ" (Homeric Similies) ಎಂದೇ ಖ್ಯಾತವಾಗಿವೆ. ಇಲಿಯಡ್ ಮತ್ತು ಒಡಿಸ್ಸಿ ಮಹಾಕಾವ್ಯಗಳಲ್ಲಿ ಹೋಮರನು ಚಿತ್ರಿಸಿರುವ ಜನಜೀವನ ಅತ್ಯಂತ ಕುತೂಹಲಾಸ್ಪದವಾಗಿದೆ. ಹೋಮರ್ ಮಹಾಕವಿಯ ಪ್ರತಿಭೆ ಗೋಚರವಾಗಬೇಕಾದರೆ ಮೂಲಕೃತಿಯನ್ನೋ ಅಥವಾ ಮೂಲದ ಪೂರ್ಣ ಪಾಠದ ಸಮರ್ಥವಾದ ಅನುವಾದವನ್ನೋ ಓದಬೇಕೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಎಚ್. ನಂಜಪ್ಪಯ್ಯ.

ಸಾಕ್ಷಾತ್ಕಾರ

ಪರಮ ವ್ಯೋಮದಲಿ ಋತವಾಗಿ
ಪ್ರತ್ಯಕ್ಷ ಋತು ಪರಿವರ್ತನವಾಗಿ
ನವರಸ ವೈವಿಧ್ಯತೆಯು ಒಂದಾಗಿ
ರಸಮಾಧುರ್ಯವಾಗಿ
ವಿಶ್ವಕಲ್ಯಾಣ ಸುಖಸಂತೋಷವಾಗಿ

ವಸುಂಧರೆಯ ಲಾವಣ್ಯರಾಶಿಯಾಗಿ
ನಕ್ಷತ್ರ ಗ್ರಹಮಂಡಲದಿಂದ
ಧರೆಗಿಳಿದು ಬರುತಿರುವ
ಸ್ವರ್ಗಜ್ಯೋತಿ !

ಜಗದ ತನುಮನವೆಲ್ಲ ಜಡನಿದ್ರೆಯಲಿ ಸಂಕ್ಷಿಪ್ತವಾಗಿರೆ
ಕಾರಿರುಳು ಸೌಂದರ್ಯಶ್ರೀಯ ಮುಸುಕಿರೆ
ಕಮಲ ಕಲ್ಹಾರಗಳ ಎದೆಯನರಳಿಸಿ
ಸುಗಂಧಸೌರಭವವ ಹೊರಹೊಮ್ಮಿಸಿ
ಕೋಗಿಲೆಯ ನಾದ ಮಾಧುರ್ಯವಾಗಿ
ದಿಗಂತದಿಂದ ಧರೆಗಿಳಿದು ಬರುತಿಹ
ಉದಯಾರುಣ ಜಗಾದಾನಂದಮಯ
ಆಹ್ಲಾದಕರ ಜ್ಯೋತಿ.

ಮನವಿಲ್ಲದ ಮಾನವರ ಎದೆಯಲ್ಲಿ
ಒಲವಿನಮೃತಧಾರೆಯನು ಸುರಿಸೆ
ಬುದ್ಧದೇವನಾಗಿ ಧರೆಗಿಳಿದು ಬಂದ
ಕರುಣಾಮಯ ಜ್ಯೋತಿ.

"ತನುವೆ ತಾನೆಂದು" ತನುಬಿಟ್ಟರೆ ಬೇರೆ ನಿಜವಿಲ್ಲೆಂದು
ಕಣ್ಣು ಕಾಣುವುದೆ ಪರಮಾರ್ಥ
ಮಿಕ್ಕೆಲ್ಲ ಮಾತುಗಳು ವ್ಯರ್ಥವೆಂಬುವವರನು
ನಿರವಧಿಸುಖ ಸೀಮೆಯಾತ್ರೆಗೆ
ಕೈಹಿಡಿದು ಕರೆದೊಯ್ಯಲು
ಶ್ರೀರಾಮಕೃಷ್ಣನಾಗಿ ಧರೆಗವತರಿಸಿಬಂದ
ಪರಮಹಂಸ ಪರಮಾತ್ಮ ಜ್ಯೋತಿ !

ಮರೆವಿನಲಿ–ಅರಿವಾಗಿ
ಅರಿವಿಗೆ ಅರಿವಾಗಿ
ಸಕಲ ಸೃಷ್ಟಿಕಲಾಸಾಹಿತ್ಯ ಸೌಂದರ್ಯಶ್ರೀಯ
ಚಿದಾನಂದಾನುಭವ–ಸಂಜ್ಞಾನ–ವಿಜ್ಞಾನ
ಪ್ರಜ್ಞಾನಘನ ನೀನೇ ಎಂದು
ಆರಾಧಿಸುವುದೇ ಸಾಕ್ಷಾತ್ಕಾರ–
ಇದುವೇ ಜೀವನ್ಮುಕ್ತಿ.

ಜ್ಞಾನ ಜಾತ್ಯಾತೀತವಾದುದು. ಆದರೆ ಅದು ಜಾತಿಯನ್ನು ದ್ವೇಷಿಸುವುದಿಲ್ಲ. ಅಂದರೆ ಅದು ಜಾತ್ಯಾತೀತ ಅವಸ್ಥೆಯನ್ನು ಪಡೆದಿದೆ ಎಂದು ಅರ್ಥ. ಜ್ಞಾನಿ ಧ್ವಂಸಮಾಡಲು ಇಚ್ಛಿಸುವುದಿಲ್ಲ. ಎಲ್ಲರಿಗೂ ನೆರವು ನೀಡುವನು. ನದಿಗಳೆಲ್ಲ ಸಾಗರಕ್ಕೆ ಸೇರಿ ಒಂದಾಗುವಂತೆ.

ಡಾ. ಹೊಸಬೆಟ್ಟು ಸೀತಾರಾಮಾಚಾರ್ಯ

ನಮ್ಮ ವೈಯಾಕರಣರ ರಸಿಕಪ್ರಜ್ಞೆ

ಶಾಸ್ತ್ರವಿಷಯಗಳು ಸಾಹಿತ್ಯದಂತೆ ರಸಸ್ಯಂದಿಯೆನಿಸುವುದು ಅಸಂಭಾವ್ಯವೇ ಆದರೂ, ವ್ಯಾಕರಣದಂತಹ ಶಾಸ್ತ್ರವನ್ನು ಸರಸಗೊಳಿಸಲು ನಮ್ಮ ವೈಯಾಕರಣರು ಗಮನಹರಿಸಿದ್ದು ಕಂಡುಬರುತ್ತದೆ. ಸೂತ್ರಗಳಿಗೆ ಅವರು ಕೊಟ್ಟ ಹಲವು ಪ್ರಯೋಗ, ದೃಷ್ಟಾಂತಗಳು ರಮಣೀಯವಾಗಿದ್ದು, ಅವು ವ್ಯಾಕರಣದ ಶಾಸ್ತ್ರಾಂಶಗಳಿಗಿಂತಲೂ ಹೆಚ್ಚು ಸ್ಫುಟವಾಗಿ ರಸಿಕರ ಸ್ಮರಣೆಯಲ್ಲುಳಿಯುವಂತಾಗಿವೆ. ಇವು ವೈಯಾಕರಣರ ಲೋಕಾನುಭವಕ್ಕೂ, ರಸಿಕ ಪ್ರಜ್ಞೆಗೂ ಕನ್ನಡಿ ಹಿಡಿದಂತಿವೆ.

ಶಾಸ್ತ್ರದ ಹಿರಿಮೆ: ವ್ಯಾಕರಣದ ಮಹತ್ತ್ವವನ್ನು ಹೇಳಹೊರಟ ಸಂಸ್ಕೃತದ ಶ್ಲೋಕವೊಂದು ಹೀಗಿದೆ:

ಅವ್ಯಾಕರಣ ಮಧೀತಂ ಭಿನ್ನ ದ್ರೋಣ್ಯಾ ತರಂಗಿಣೀತರಣಮ್
ಭೇಷಜ ಮಪಥ್ಯಸಹಿತಂ ತ್ರಯಮಿದ ಮಕೃತಂವರಂ ನಕೃತಮ್

ವ್ಯಾಕರಣದ ಪರಿಚಯವಿಲ್ಲದೆ ಅಭ್ಯಾಸ ಮಾಡುವುದು, ಒಡಕು ದೋಣಿಯಲ್ಲಿ ನದಿಯನ್ನು ದಾಟುವುದು, ಪಥ್ಯವಿಲ್ಲದೆ ಔಷಧಿಯನ್ನು ಸೇವಿಸುವುದು—ಇವು ಮೂರನ್ನು ಮಾಡುವುದಕ್ಕಿಂತ ಮಾಡದಿರುವುದೇ ಮೇಲು.

ವ್ಯಾಕರಣದಿಂದ ಪದಸಿದ್ಧಿ, ಪದಸಿದ್ಧಿಯಿಂದ ಅರ್ಥಜ್ಞಾನ, ಅರ್ಥಜ್ಞಾನದಿಂದ ತತ್ತ್ವವಿಚಾರ, ತತ್ತ್ವವಿಚಾರದಿಂದ ಮುಕ್ತಿ ದೊರೆಯುವುದೆಂದು ವಿವರಿಸಿ, ವ್ಯಾಕರಣವೂ ಒಂದು ಮೋಕ್ಷ ಮಾರ್ಗವೆಂಬುದನ್ನು ಕೇಶಿರಾಜನು ಹೇಳಿದುದರಲ್ಲಿ ಇಹ–ಪರಗಳ ಅನನ್ಯತೆ ಧ್ವನಿಸುತ್ತದೆ.

ವ್ಯಾಕರಣದಿಂದೆ ಪದಮಾ
ವ್ಯಾಕರಣದ ಪದದಿನರ್ಥಮರ್ಥದೆ ತತ್ತ್ವ
ಲೋಕಂ ತತ್ತ್ವಾಲೋಕದಿ
ನಾಕಾಂಕ್ಷಿಪ ಮುಕ್ತಿಯಕ್ಕುಮಿದೆ ಬುಧರ್ಗೆ ಫಲಂ. (ಶ. ಮ. ದ. ಸೂತ್ರ. 10)

ದೃಷ್ಟಾಂತಗಳಲ್ಲಿನ ರಸದೃಷ್ಟಿ: ಶಬ್ದಮಣಿದರ್ಪಣದ ಸಂಧಿಪ್ರಕರಣದ 27ನೆಯ ಸೂತ್ರದ ವೃತ್ತಿಯಲ್ಲಿ ಯೋಗವಾಹಗಳ ಕುರಿತು ವಿವರಿಸುತ್ತಾ, ಜಿಹ್ವಾಮೂಲೀಯವು 'ಹಸುಂಬೆ' (ಚೀಲ) ಯ ಲಕ್ಷಣವುಳ್ಳದೆಂದೂ, ಉಪಾಧ್ಮಾನೀಯವು "ಕುಮಾರಿಯ ಸ್ತನಯುಗಳಾಕೃತಿಯ ವರ್ಣ" ಎಂದೂ–ಅವುಗಳ ಆಕಾರಗಳನ್ನು ಹೋಲಿಸಿದ್ದು ಶಾಸ್ತ್ರಕಾರನ ರಸಿಕದೃಷ್ಟಿಗೆ ಒಂದು ಮಾದರಿಯೆನಿಸುತ್ತದೆ.

ನಾಮಪ್ರಕರಣದ 128ನೆಯ ಸೂತ್ರಕ್ಕೆ ಪ್ರಯೋಗವಾಗಿ ಬಂದ ಈ ಕೆಳಗಿನ ಪದ್ಯವಂತೂ ಹಲವು ಹಿರಿಯರ ಗಮನ ಸೆಳೆದಿದೆ (ಈ ಪದ್ಯವು "ಕಾವ್ಯಾವಲೋಕನ"ದ "ಶಬ್ದಸ್ಮೃತಿ"ಯಲ್ಲಿ ಇದೆ)

ಎನಿತ್ತೆನಿತ್ತಂಬುಜ ಪತ್ರ ನೇತ್ರೆಯಾ
ಘನಸ್ತನಂಗಳ್ ಬಳೆಗುಂ ಕಿರಾತೆಯಾ
ಅನಿತ್ತನಿತ್ತಂ ವನದೊಳ್ ವನೇಚರಂ
ತನತ್ತು ಬಿಲ್ಲಾನದನಂತೆ ಕೀಸುವಂ

ದಿ. ತೀ. ನಂ. ಶ್ರೀಯವರು ಈ ಪದ್ಯಕ್ಕೆ ಹೀಗೆ ಅರ್ಥಮಾಡಿದ್ದಾರೆ: "ಚೆಲುವೆಯಾದ ಬೇಡಿತಿಯ ಯೌವನವು ವರ್ಧಿಸಿದ ಹಾಗೆಲ್ಲಾ ಅವಳಲ್ಲಿ ಬೇಡನು ಅತ್ಯಾಸಕ್ತನಾಗಿ ದುರ್ಬಲನಾಗುತ್ತಾನೆ. ಮೊದಲು ಲೀಲಾಜಾಲವಾಗಿ ಅವನು ಬಾಗಿಸುತಿದ್ದ ಬಿಲ್ಲು ಈಗ ಅವನ ಅಳವಿಗೆ ಮೀರುತ್ತದೆ. ಅದನ್ನು ಆಗಿಂದಾಗ ಕೆತ್ತಿ ತೆಳ್ಳತೆಳ್ಳಗೆ ಮಾಡಿಕೊಂಡ ಹೊರತು ಅವನು ಉಪಯೋಗಿಸಲಾರ. ಹೀಗೆ ಬೇಡಿತಿಯ ಎದೆ ಎಷ್ಟೆಷ್ಟು ತುಂಬಿಕೊಳ್ಳುವುದೋ ಅಷ್ಟಷ್ಟು ತನ್ನ ಬಿಲ್ಲನ್ನು ಬೇಡನು ಹೆರೆಹೆರೆದು ತೆಳುವಾಗಿಸುತ್ತಾನೆ—ಎಂಬುದೇ ಇಲ್ಲಿಯ ಅರ್ಥಚಮತ್ಕಾರ."

ಈ ಅರ್ಥವನ್ನು ಒಪ್ಪದೆ ಶ್ರೀ. ದೇವೀರಪ್ಪನವರು "ಅವುಗಳ ಮಾಟವನ್ನು ದಿನದಿನವೂ ನೋಡುತ್ತಲಿದ್ದ ಕಿರಾತ ಬಿಲ್ಲುಗಾರನು ಅವುಗಳನ್ನೆ (ಆ ಘನಸ್ತನಗಳನ್ನೆ) ಮಾದರಿಯಾಗಿಟ್ಟುಕೊಂಡು, ಅವುಗಳ ರೂಪವನ್ನೆ ಹೋಲುವಂತೆ ತನ್ನ ಬಿಲ್ಲನ್ನು ಮಾಡುತಿದ್ದನು. ಇಷ್ಟೇ ಆ ಪದ್ಯದ ಮಥಿತಾರ್ಥ" ಎಂದಿದ್ದಾರೆ.

ದಿ. ತೀ. ನಂ. ಶ್ರೀಯವರ ವಿವರಣೆಯೇ ಉಚಿತವೆಂದು ಸಮರ್ಥಿಸುತ್ತಾ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು "ಗಾಥಾ ಸಪ್ತಶತಿ"ಯಲ್ಲಿ ಇದೇ ಸಂದರ್ಭ, ಅರ್ಥಗಳನ್ನು ಹೋಲಿಬರುವ ಪದ್ಯವೊಂದನ್ನು ಉದಾಹರಿಸಿದ್ದಾರೆ. ಡಾ. ಸಿ. ಪಿ. ಕೆ. ಯವರೂ ಈ ಬಗ್ಗೆ ತಮ್ಮ ಸಮ್ಮತಿಯ ಅಭಿಮತವನ್ನು ಬರೆದಿದ್ದಾರೆ. (ಪ್ರ.ನ. 51–2) "ಬಿಲ್ಲಾನದಂ" ಎಂಬ ದೀರ್ಘ ವಿಕಲ್ಪಕ್ಕೆ ಕೊಟ್ಟ ಈ ಪ್ರಯೋಗವು ತನ್ನ ಶಾಸ್ತ್ರೀಯ ಉದ್ದೇಶಕ್ಕಿಂತಲೂ ಭಿನ್ನವಾದ ರೀತಿಯಲ್ಲಿ ರಸಿಕ ಪಂಡಿತರಿಂದ ಆಕರ್ಷಿತವಾದದ್ದು ಗಮನಾರ್ಹ.

ಆರು ಸಮಾಸಗಳ ಹೆಸರುಗಳನ್ನು ಕೂಡಿಸಿ ಮಾಡಿದ ಸೂಕ್ತಿಯಿದು:

ದ್ವಂದ್ವೋಽಸ್ಮಿ ದ್ವಿಗುರಸ್ಮಿ ಚ
ಗೃಹೇ ನಮೇ ಸತತಮವ್ಯಯೀ ಭಾವಃ
ತತ್ಪುರುಷ ಕರ್ಮಧಾರಯ
ಯೇನಾಹಂ ಸ್ಯಾಂ ಬಹುವ್ರೀಹಿ.

"ನಾನು ದ್ವಂದ್ವ ಆಗಿದ್ದೇನೆ (= ನನಗೆ ಮದುವೆಯಾಗಿದೆ), ನಾನು ದ್ವಿಗು (= ನನ್ನಲ್ಲಿ ಎರಡು ಹಸುಗಳಿವೆ) ನನಗೆ ಯಾವಾಗಲೂ ಅವ್ಯಯೀಭಾವವಿಲ್ಲ (= ನನಗೆಂದೂ ಖರ್ಚು ತಪ್ಪಿದ್ದಲ್ಲ) ತತ್ಪುರುಷ! (= ಆದುದರಿಂದ ಪುರುಷನೇ,) ಯಾವರೀತಿ ನಾನು ಬಹುವ್ರೀಹಿಯಾಗುವೆನೋ (= ನನಗೆ ಹೆಚ್ಚು ಬತ್ತ ಬರುವುದೋ) ಅಂತಹ "ಕರ್ಮಧಾರಯ" (= ಕೆಲಸವನ್ನು ಮಾಡು)—(ರಾ. ಶಿ. ಕೃಷ್ಣಮೂರ್ತಿಯವರ "ಕನ್ನಡಕಾವ್ಯ ಮೀಮಾಂಸೆ" ಪು. 44 ನೋಡಿರಿ)

"ಮನಸ್" ಶಬ್ದವು, ಸಂಸ್ಕೃತದಲ್ಲಿ ವ್ಯಾಕರಣಶಾಸ್ತ್ರ ರೀತಿಯಿಂದ ನಪುಂಸಕಲಿಂಗವಷ್ಟೆ! ಇಷ್ಟನ್ನು ತಿಳಿದು, "ನಪುಂಸಕ"ವಾದ "ಮನಸ್ಸಿ"ನಿಂದ ಅಪಾಯವಿಲ್ಲವೆಂದು ಯೋಚಿಸಿದ ಶಬ್ದಜ್ಞ ಸುಂದರಿಯೊಬ್ಬಳಲ್ಲಿಗೆ ತನ್ನ ಮನಸ್ಸನ್ನು ಕಳುಹಿದನಂತೆ. ಆಮೇಲೆ ಆ ಮನಸ್ಸು ಅಲ್ಲಿಂದ ಹಿಂದೆಯೇ ಬರಲೊಲ್ಲದಾಯಿತು.

"ಪಾಣಿನಿಯ ವ್ಯಾಕರಣ ಪಾಠವನ್ನು ನಂಬಿ ನಾನು ವಂಚಿತನಾದೆ"—ಎಂದು ಆತ ಕೊರಗಿದನಂತೆ.

ವಿಭಕ್ತಿ ಪ್ರತ್ಯಯಗಳು: ವಿಭಕ್ತಿ ಪ್ರತ್ಯಯಗಳನ್ನು ನೆನಪಿನಲ್ಲಿರಿಸುವುದಕ್ಕೆ ನಮ್ಮ ವೈಯಾಕರಣರು ನೀಡಿದ ಪ್ರಯೋಗಗಳನ್ನು ಗಮನಿಸಬಹುದು :

ನೆಲನಿದು ನೆಲನಂ ಪಾಲಿಸು
ನೆಲದಿಂ ಪುರುಳಕ್ಕು ಪಾರ್ ನೆಲಕ್ಕೆರೆಗದವರ್
ನೆಲದತ್ತಣಿನುರದರಿಯಿಂ
ತೊಲಗಿಸು ನೆಲೆನೆಲೆಯ ನೆಲಮೊಳಡವಿಸು ಜಸವಂ (ಕಾವ್ಯಾವಲೋಕನ ಸೂತ್ರ 65)

ಕೇಶಿರಾಜನ "ಶಬ್ದ ಮಣಿದರ್ಪಣ"ದಲ್ಲಿನ ಪ್ರಯೋಗ ಹೀಗಿದೆ:

ಮರನಿರ್ದುದು ಮರನಂ ಕಡಿ
ಮರದಿಂ ಮಾಡಾನೆಯುಂ ಮರಕ್ಕೆರೆ ನೀರಂ
ಮರದತ್ತಣಿನೆಲೆ ಬಿಳ್ದುದು
ಮರದದು ಪಣ್ ಮರದೊಳಿರು ತಳಿರ್ತಿರುಮರನೇ (ಶ. ಮ. ದ. ಸೂತ್ರ — 103)

ಇವೆರಡರೊಡನೆ ಸಂಸ್ಕೃತದ "ರಾಮೋ ರಾಜಮಣಿಸ್ಸದಾ ವಿಜಯತೇ...." ಎಂದು ಆರಂಭವಾಗಿ "ಹೇ ರಾಮ ! ಮಾಮುದ್ಧರ !" ಎಂದು ಕೊನೆಗೊಳ್ಳುವ, ವಿಭಕ್ತಿಪ್ರತ್ಯಯಗಳನ್ನುಅನುಕ್ರಮವಾಗಿ ರಾಮ ಪ್ರಾರ್ಥನಾ ರೂಪದಲ್ಲಿ ಹೇಳುವ ಶ್ಲೋಕದ ನೆನಪಾಗುತ್ತದೆ.

ಹೀಗೆಯೇ ಗಮಕ ಸಮಾಸವನ್ನು ಸ್ವಾರಸ್ಯವಾಗಿ ಉದಾಹರಿಸುವ ಕಂದಪದ್ಯವೊಂದಿದೆ-(ಎಸೆವಮತಂ.... ಶ. ಮ. ದ. ಸೂತ್ರ. 179)

ಕಾವ್ಯವಿಮಾಮಾಂಸೆ-ಲೋಕಾನುಭವ : ವ್ಯಾಕರಣಾಂಶಗಳನ್ನು ತಿಳಿಸುವುದಕ್ಕಾಗಿ ಆಯ್ದುಕೊಂಡ ಈ ಪ್ರಯೋಗಗಳು ಕಾವ್ಯ–ಮೀಮಾಂಸೆಗೂ ನೆರವಾಗುತ್ತವೆ:

1. ಅವರಿವರುವರಳವೆ ಕಾವ್ಯವಿದ್ಯೆಗಳ್ (ಶ. ಮ. ದ. ಸೂತ್ರ, 108) 2. ಕವಿಗೆ ಕೇಡಿಲ್ಲೆಂತುಂ, (ಸೂ. 123) 3. ಪ್ರತಿಭೆಯುಮಭ್ಯಾಸಮುಂ ವಿದ್ವತ್ಸೇವೆಯುಂ ಕಾವ್ಯಪರಿಚಯಮುಂ ಕವಿತೆಗೆ ಕಾರಣಂ, (ಸೂ. 155) 4. ಕವಿಗಳ ಕೃತಿ ಬಂಧದೊಳಲ್ತೆ ಕಟ್ಟಿದರ್ ಮುಟ್ಟಸರಿಕ್ತಿ ಮೆಟ್ಟಿ ಪರಿದೇನಳವಗ್ಗಳಮೋ ಕವೀಂದ್ರರಾ (ಸೂ. 228).

ವೈಯಾಕರಣರ ಲೋಕಾನುಭವ ಪ್ರಸಕ್ತಿಗೆ–ಈ ಸಾಲುಗಳು ಉದಾಹರಣೆಗಳಾಗಬಲ್ಲುವು :

1. ಕವಿಗೆ ಕವಿ ಮುನಿವಂ. 2. ಕೂಸಿಂಗೆ ಲಡ್ಡುಗೆಯಲ್ಲಿ. 3. ಧನಮುಳ್ಳೊಡಾತನೆ ಇಂದ್ರಂ. ಪೊನ್ನುಳ್ಳವನೆ ಕುಲೀನಂ. 4. ಏನೇನೋ ಓದಿನ ಪರಿ ಲೇಸುಲೇಸು 5. ಕೂಡಿದಂಗೆರಡಂ ಬಗೆವಾತನುಂ ನರಕದೊಳ್ ಬೀಳ್ವಲ್ಲಿಗೇಂ ಸಂದೆಯಂ. 6. ಅರಸಂ ಮುರ್ಖಂ, ಸಚಿವರ್ ಸರಸ್ವತೀ ದ್ರೋಹರ್. 7. ಒಂದೆಡೆಯೊಳ್ ಕಟ್ಟುವುದೆ ಪುಲಿಯುಮಂ ಕಪಿಲೆಯುಮಂ ? 8. ಪಾಪಕ್ಕಂಜುಗುಂ ತಕ್ಕಂ. 9. ಉದ್ಯೋಗದತ್ತಣಿಂ ಸಿರಿಬಂದುದು. 10. ಪ್ರಾಯಂ ಕೂಸಾದೊಡಭಿಪ್ರಾಯಂ ಕೂಸಕ್ಕುಮೆ ?

ಇಂತಹ ಹಲವಾರು ಪ್ರಯೋಗಗಳಲ್ಲಿ ವೈಯಾಕರಣ ಕೇಶಿರಾಜನ ಜೀವನಾನುಭವ ಪರಿಣತಿ ವ್ಯಕ್ತವಾಗುತ್ತದೆ.

ವಿಧುವಿಲ್ಲದಿರುಳ್ ತನ್ನಯ
ವಧುವಿಲ್ಲದ ಲೀಲೆ, ಮಧುರ ಮಧುವಿಲ್ಲದ ಪೂ
ದಧಿಯಿಲ್ಲದುಣಿಸದೇವುದೋ
ಬುಧರಿಲ್ಲದ ಸಭೆ ಸರಸ್ವತೀ ಮುಖತಿಲಕಾ (ಕಾವ್ಯಾವಲೋಕನ 41; ಶ. ಮ. ದ. ಸೂತ್ರ 65)

ಇಂತಹ ಶಾಸ್ತ್ರಕಾರನ ಸಾಮಾಜಿಕಪ್ರಜ್ಞೆಗೆ ಸಾಕ್ಷಿಯೆನಿಸುವ ಹಲವು ಪದ್ಯಗಳು ನಮ್ಮ ಮನ ಸೆಳೆಯುತ್ತವೆ. ಕೇಶಿರಾಜನು ತನ್ನ 115ನೆಯ ಸೂತ್ರಕ್ಕೆ ಪ್ರಯೋಗವಾಗಿ ಪುರೋಹಿತ ಲಕ್ಷಣವನ್ನು ಉಲ್ಲೇಖಿಸಿದ್ದರಲ್ಲೂ ಆವನ ಬಹುಜ್ಞತೆ ವ್ಯಕ್ತವಾಗುತ್ತದೆ—

ವೇದವಿದಂ ಕಾಲತ್ರಯ
ವೇದಿ ಬಹುಶ್ರುತನರ್ಥ ಕುಶಲಂ ಶುಭವಂ
ಶೋದಯನುತ್ತಮನಾಶೀ
ರ್ವಾದ ಪರಂ ಪರಹಿತಂ ಪುರೋಹಿತನಕ್ಕುಂ

ವ್ಯಾಕರಣ ಗ್ರಂಥಗಳಲ್ಲಿ ರೋಗ ಚಿಕಿತ್ಸಾಪರವಾದ 'ಪ್ರಯೋಗ'ಗಳೂ ಕೆಲವಿವೆ–ಸರ್ಪದಂಶನ, ಕುರು, ತರ್ದುಗಳಿಗೆ ತಕ್ಕ ಔಷಧಿಗಳನ್ನು "ಶಬ್ದಮಣಿದರ್ಪಣ"ವು ಸೂಚಿಸುತ್ತದೆ ಉದಾಹರಣೆಗಾಗಿ–

ಉರಗಂ ಕೊಂಡಲ್ಲಿಗೆ ನಾ
ಲ್ವೆರಲನಿತಂ ಕಳೆದು ಕಟ್ಟಿ ಮೇಗಂ ಬೇಗಂ
ಸೆರೆವಿಡುಗೆ ಸುಡುಗೆ ಕಡಿದಿರ
ವರಿದಿಕ್ಕುಗೆ ನೀವಿ ಕಳೆಗೆ ನಿರ್ವಿಷಮಕ್ಕುಂ (ಸೂತ್ರ 200)

ಕಥಾನಕ, ಪ್ರಕೃತಿ ವರ್ಣನೆಗಳು : "ಶಬ್ದಮಣಿದರ್ಪಣ"ದಲ್ಲಿ ಬರುವ ಪ್ರಯೋಗಗಳನ್ನೆ ಕಥಾನುಕ್ರಮವಲ್ಲಿ ಸಂಗ್ರಹಿಸಿ ಮಹಾಭಾರತ, ರಾಮಾಯಣ ಕಥಾನಕಗಳನ್ನು ಹೆಣೆಯಬಹುದು. ಈ ಪ್ರಯೋಗಗಳಲ್ಲಿ ಹಲವನ್ನು ಪಂಪ, ಪೊನ್ನ, ರನ್ನ, ನಾಗಚಂದ್ರ, ನಾಗವರ್ಮರ ಕೃತಿಗಳಿಂದ ಆರಿಸಲಾಗಿದ್ದು, ಇನ್ನುಳಿದವು ಕೇಶಿರಾಜನ ಸ್ವರಚನೆಗಳೆಂದು ನಿರ್ಣಯ ಮಾಡುವುದಕ್ಕಿಂತ ಅವು ನಮಗೆ ಇಂದು ಲಭ್ಯವಿಲ್ಲದ ರಾಮಾಯಣ, ಭಾರತ ಕೃತಿಗಳ ಕಡೆಗೆ ಬೆರಳು ತೋರುವಂತಿವೆ- ಎಂದು ವರ್ಣಿಸುವುದು ಹೆಚ್ಚು ಉಚಿತವೆನಿಸುತ್ತದೆ.

ಅಲ್ಲಲ್ಲಿ ಪ್ರಕೃತಿ ಸೌಂದರ್ಯವನ್ನು, ಸ್ತ್ರೀ, ಋತುಮಾನಗಳನ್ನು ಸೊಗಸಾಗಿ ಚಿತ್ರಿಸುವ ವರ್ಣನಾತ್ಮಕ ಪ್ರಯೋಗಗಳು–ಶಬ್ದಮಣಿದರ್ಪಣದಲ್ಲಿ ಹಲವಾರಿವೆ. "ಶಬರಿ"ಯ ಶಬ್ದ ಚಿತ್ರವೊಂದನ್ನು ಇಲ್ಲಿ ಸ್ಮರಿಸಬಹುದು.

ಎಣ್ಣೆಯೊಳರೆನೇರಿಲ ತನಿ
ವಣ್ಣಂ ನುಣ್ಣಿಸಿದನಬ್ಜಭವನೆನಿಸಿದ ಮೆಯ್
ವಣ್ಣದ ಶಬರಿ ತನಾಲದ
ತಣ್ಣೆಳಲೊಳ್ ಕಣ್ಣಬೆಳಕೆ ಬೆಳಕಾಗಿರ್ದಳ್ (ಸೂತ್ರ, 79)

ಮಲೆವಣಿಗೂ ಬೀಣೆಗೂ ಇರುವಷ್ಟೆ ಅಂತರವು ಕಟೂಕ್ತಿಗೂ ಕವಿಯ ಸರಸೋಕ್ತಿಗೂ ಇದೆ–ಎನ್ನುವ ಕಂದಪದ್ಯವನ್ನು ನಾಗವರ್ಮ ಮತ್ತು ಕೇಶಿರಾಜರಿಬ್ಬರೂ ಪ್ರಯೋಗವಾಗಿರಿಸಿಕೊಂಡಿದ್ದಾರೆ.

ಶಬ್ದೋತ್ಪತ್ತಿ, ಸಂಸ್ಕೃತ–ಕನ್ನಡ ಶಬ್ದಗಳ ಮಿಶ್ರಣ, ಸಮಾಸಕಾರ್ಯ–ಮೊದಲಾದ ವಿಚಾರಗಳಲ್ಲಿ ಕೇಶಿರಾಜನು ನೀಡುವ ವಿವರಣೆ, ಪ್ರಯೋಗಗಳು ಸಮುಚಿತವೂ ಸರಸವೂ ಆಗಿವೆ.

"ತನುವಾದ್ಯಂ, ನಾಲಗೆ ವಾದನದಂಡಂ, ಕರ್ತೃವು ಆತ್ಮನ್""ಅವನ ಮನೋವೃತ್ತಿ ನಿಮಿತ್ತಮಾಗಿ ಶಬ್ದಂ "ಜನಿಯಿಸುಗುಂ" (ಸೂತ್ರ 44) ಎಂದು"ರೂಪಕ"ದ ಮೂಲಕ ಶಬ್ದೋತ್ಪತ್ತಿಯನ್ನು ವಿವರಿಸಿದ್ದು ಅದ್ಭುತವಾಗಿದೆ! ಕರುವು ತಾಯಿಯಬಳಿಯಲ್ಲೇ ಇದ್ದು, ಅದರ ಬೆನ್ನು ಬಿಡದಿರುವಂತೆ ನಾಮಪದವು ಅರ್ಥಾನುಸಾರಿಯಾಗಿರುವುದು –ಎಂದು ಪ್ರಾರಂಭಿಸಿ ಸಮಾಸಗಳನ್ನು ವಿವರಿಸುವ ಕೇಶಿರಾಜನ ರೀತಿಯು ಅನ್ಯಾದೃಶವಾದುದು !

ಹೀಗೆ ಶಾಸ್ತ್ರವನ್ನು ಸರಸಗೊಳಿಸಿದ ಕೇಶಿರಾಜನಂತಹ ರಸಿಕಪ್ರಜ್ಞೆಯ ವೈಯಾಕರಣರಿಗೆ ನಾವಿಂದು ಕೃತಜ್ಞತೆಯಿಂದ ತಲೆಬಾಗಬೇಕು.

ಡಿ. ವಿ. ಕೆ. ಮೂರ್ತಿ

ಆಚಾರ್ಯ ಡಿ. ಎಲ್. ಎನ್. ಅವರ ಸೌಂದರ್ಯಮೀಮಾಂಸೆಯ ದಿವ್ಯದೃಷ್ಟಿ

ಈಚಿನ ಎಂಟುಹತ್ತು ವರ್ಷಗಳಲ್ಲಿ ಆಚಾರ್ಯ ಡಿ.ಎಲ್.ಎನ್. ಅವರನ್ನು ಬಹು ಹತ್ತಿರದಿಂದ ಆತ್ಮೀಯವಾಗಿ ಅರಿಯುವ ಪುಣ್ಯವಿಶೇಷ ನನ್ನದಾಗಿತ್ತು.

ಆಚಾರ್ಯರು ಶಿಷ್ಯವತ್ಸಲರು, ಸಾಹಿತ್ಯ ಸಂಶೋಧನೆಯಲ್ಲಿ ತೊಡಗಿದ್ದ ವಿದ್ವಾಂಸರಿಗೆ ಬಹು ಸುಲಭ ಸಾಧ್ಯರಾಗಿ ಸಮಾಲೋಚನೆಗಳಲ್ಲಿ ಪಾಲುಗೊಂಡು ತಮ್ಮ ಜ್ಞಾನ ಸಂಪತ್ತನ್ನು ಮುಕ್ತ ಮನಸ್ಸಿನಿಂದ ವಿನಿಮಯ ಮಾಡಿಕೊಳ್ಳುತ್ತಿದ್ದ ಸಹೃದಯ ವಿದ್ವನ್ಮಣಿಗಳು. ನನ್ನಂಥ ಕಿರಿಯರಲ್ಲಿ ಅವರು ತೋರುತ್ತಿದ್ದ ಅಭಿಮಾನ ಅವರ ಪ್ರೀತಿ ವಿಶ್ವಾಸಗಳಿಗಂತೂ ಎಣೆಯಿಲ್ಲ.

ವಾರ ಎರಡು ವಾರಗಳಿಗೊಮ್ಮೆಯಾದರೂ ನಾನು ಆಚಾರ್ಯರನ್ನು ಭೇಟಿಮಾಡಿ ಗಂಟೆಗಟ್ಟಲೆ ಅನೇಕ ಸಾಹಿತ್ಯಕ ವಿಚಾರಗಳನ್ನು ಕುರಿತು ಅವರ ಅಮೂಲ್ಯ ವಿಚಾರಧಾರೆಯನ್ನರಿತು ಬೆಳಕು ಕಂಡಿದ್ದೇನೆ.

ನನಗೆ ಪ್ರಿಯವಾದ ಸೌಂದರ್ಯಮೀಮಾಂಸೆ, ಸಾಹಿತ್ಯವಿಮರ್ಶೆಗಳನ್ನು ಕುರಿತು ಎಷ್ಟೋ ಬಾರಿ ಆಚಾರ್ಯರೊಡನೆ ನಾನು ಮಾತನಾಡುತ್ತಿದ್ದುದುಂಟು. ಒಮ್ಮೆ ಅವರು, "ಈ ಸೌಂದರ್ಯಮೀಮಾಂಸೆ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದೇ ಇಲ್ಲನಯ್ಯ. ಅದೆಲ್ಲ ನಮ್ಮ ಶ್ರೀಕಂಠಯ್ಯ ಹನುಮಂತರಾಯರಿಗೇ ಸರಿ. ನನಗೆ ವಿಷಯ ಒಂದು ರೀತಿಯಲ್ಲಿ ಕಡ್ಡಿ ಮುರಿದಂತೆ ಇತ್ಯರ್ಥವಾಗಿಬಿಡಬೇಕು. ಬಗೆಹರಿಯದ ಸೌಂದರ್ಯ ಮೀಮಾಂಸೆಯ ಜಿಜ್ಞಾಸೆ ನನಗೆ ಹಿಡಿಯವುದಿಲ್ಲ" ಎಂದರು.

ನಾನು ಪಟ್ಟುಹಿಡಿದು ನನ್ನ ಮನಸ್ಸಿನಲ್ಲಿನ ಕೆಲವು ವಿಚಾರಗಳನ್ನು ಆಚಾರ್ಯರ ಮುಂದಿಟ್ಟೆ :

"ಸೃಷ್ಟ್ಯಾತ್ಮಕಸಾಹಿತ್ಯ ವಾಸ್ತವಿಕವಾಗಿರಬೇಕೆಂದು ಹೇಳುವುದು ರೂಢಿಯಾಗಿಬಿಟ್ಟಿದೆ. ಆದರೆ ವಾಸ್ತವಿಕತೆ ಕಣ್ಣಿಗೆ,ಮೇಲುನೋಟಕ್ಕೆ ಕಾಣುವಂಥದಲ್ಲ ; ತಲೆಮರೆಸಿಕೊಂಡು ಬಗೆಬಗೆಯ ತೋರ್ಕೆಯ ಸ್ವರೂಪ ತಳೆದು ಕಣ್ಣಿಗೆ ಮಂಕುಬೂದಿ ಎರಚುವಂಥದು. ಕಣ್ಣಿಗೆ ಕಾಣುವ ತೋರ್ಕೆಯ ಸತ್ಯವನ್ನು ಐತಿಹಾಸಿಕವಾಗಿ, ತಾರ್ಕಿಕವಾಗಿ ವಿಶ್ಲೇಷಿಸಿ ಮೂಲಭೂತ ಸತ್ಯದರ್ಶನ ಮಾಡುವಂಥ ಲೋಕದೃಷ್ಟಿ ಇದ್ದರೆ ತಾನೆ ವಾಸ್ತವಿಕ ಸಾಹಿತ್ಯ ಸೃಷ್ಟಿಯಾದೀತು ? ಒಂದು ಕಾಲಕ್ಕೆ ಜೀವನಕ್ರಮ ಸರಳವಾಗಿ ನೇರವಾಗಿತ್ತು, ವ್ಯಕ್ತಿ ವ್ಯಕ್ತಿಯ, ನಡುವೆ ಸಮಾಜವ್ಯವಸ್ಥೆಯಲ್ಲಿ ನೇರವಾದ ಮಾನವೀಯ ಸಂಬಂಧವಿತ್ತು. ಒಳಿತು-ಕೆಡಕು ಧರ್ಮ-ಕರ್ಮ ಇವುಗಳ ಸಮನ್ವಯ ಜೀವನದಲ್ಲಿ ನೇರವಾಗಿ ಏರ್ಪಟ್ಟಿತ್ತು. ಯಂತ್ರಯುಗಕ್ಕೆ ಬಹು ಹಿಂದೆ ಇದ್ದ ಈ ವ್ಯವಸ್ಥೆಯಲ್ಲಿ ಮಾನವನು ನೀತಿಯ ಪ್ರಶ್ನೆಯನ್ನು ಸಹಜವಾಗಿಯೇ ಬಿಡಿಸಬಲ್ಲವನಾಗಿದ್ದ. ಸಾಮೂಹಿಕ ಭಾವನೆಗಳು ಸಹಜವಾಗಿಯೆ ಪ್ರಚಲಿತಗೊಳ್ಳುವಂಥ ಸನ್ನಿವೇಶ ಆಗ ಸಾಧ್ಯವಿತ್ತು. ಇಂಥ ಐತಿಹಾಸಿಕ ಹಿನ್ನೆಲೆಯಲ್ಲಿ ಮಹಾಕಾವ್ಯ ಸೃಷ್ಟಿಯಾಯಿತು. ಉದಾತ್ತ ಭವ್ಯಜೀವನದ ಅಭಿವ್ಯಕ್ತಿ ಭಾವಪ್ರಧಾನವಾಗಿ

ಕವಿಯ, ರಸಋಷಿಯ ಸೃಷ್ಟಿಯಲ್ಲಿ ಮಹಾಕಾವ್ಯಗಳಾಗಿ ಮೆರೆಯಿತು. ಆದರೆ ಯಂತ್ರಯುಗ, ಬಂಡವಾಳ ಷಾಹಿ ಬೆಳೆದಂತೆ ವ್ಯಕ್ತಿ ವ್ಯಕ್ತಿಯ ನಡುವಣ ಸಂಬಂಧ ಸಂಕೀರ್ಣಗೊಂಡು ಮನುಷ್ಯನೊಂದಿಗೆ ಮನುಷ್ಯನ ನೇರ ವಾದ ಮಾನವೀಯ ಸಂಬಂಧವೇ ಕಳಚಿಹೋಯಿತು. ಮನುಷ್ಯನ ಮುಖ್ಯಸಂಬಂಧ ನಿರ್ಜೀವ ವಸ್ತುವಾದ ಬಂಡವಾಳ, ಖಾಸಗಿ ಲಾಭಗಳೊಡನೆ ಏರ್ಪಟ್ಟಿತು. ಅದನ್ನವಲಂಬಿಸಿ ಉಳಿದೆಲ್ಲ ಮೌಲ್ಯಗಳೂ ಸಂಬಂಧಗಳೂ ನಿರ್ಣಯವಾಗುವಂಥ ಜಟಿಲವಾದ ಘಟ್ಟ ತಲುಪಿತು. ಇಂಥ ಪರಿಸ್ಥಿತಿಯಲ್ಲಿ ಅನೇಕ ತಾಕಲಾಟಗಳೂ ವಿರೋಧಾ ಭ್ಯಾಸಗಳೂ ಉದ್ಭವಿಸಿ ಒಂದೊಂದೂ ಸ್ವತಂತ್ರ ಸಮಸ್ಯೆಯೆಂಬಂತೆ ಕಾಣಿಸಿಕೊಳ್ಳುವಂತಾಯಿತು. ಆದರೂ, ಈ ಸಮಸ್ಯೆಗಳ ಜೀವನಾಡಿಯಿದ್ದುದು ಇತಿಹಾಸದ ಗತಿಯಲ್ಲಿ. ಈ ವಿಚಾರವನ್ನು ತಾರ್ಕಿಕವಾಗಿ ಐತಿಹಾಸಿಕವಾಗಿ ವೈಜ್ಞಾನಿಕವಾಗಿ ಅರಿತುಕೊಳ್ಳದೆ ತೋರ್ಕೆಯ ಸಮಸ್ಯೆಗಳನ್ನು ಕೇವಲ ಭಾವುಕತೆಯಿಂದ ಸ್ವತಂತ್ರವಾಗಿ ಪರಿ ಗ್ರಹಿಸುವುದು ಸತ್ಯಕ್ಕೆ ಅಪಚಾರ ಮಾಡಿದಂತಾಗುವ ಸನ್ನಿವೇಶ ಒದಗಿತು. ಈ ಹಿನ್ನೆಲೆಯಲ್ಲಿ ಕಾದಂಬರಿಯ ಉಗಮವಾಯಿತು. ಹಿಂದೆ ಮಹಾಕಾವ್ಯ ಮಾತ್ರ ನೀಡುತ್ತಿದ್ದ ಅಭಿವ್ಯಕ್ತಿ ಕಾದಂಬರಿಯ ಪಾಲಿಗೆ ಬಂತು. ಇಂದಿನ ಜಟಿಲವಾದ ಸಮಸ್ಯೆಗಳನ್ನು ಸಮರ್ಥವಾಗಿ ಚಿತ್ರಿಸುವ ಸಾಹಿತ್ಯಮಾಧ್ಯಮ ಕಾದಂಬರಿಯಾಯಿತು. ಹಿಂದೆ ಕಾವ್ಯಗಳನ್ನು ಕುರಿತು ನಡೆದ ವಿಸ್ತಾರವಾದ ವಿಮರ್ಶೆ ಕನ್ನಡ ಕಾದಂಬರಿಗಳ ಸಲುವಾಗಿಯೂ ನಡೆಯ ಬೇಕು. ಇದಕ್ಕೆ ತಮ್ಮಂಥ ಹಿರಿಯರು ಮಾರ್ಗದರ್ಶನ ಮಾಡಬೇಕು."

ಗಾಢಚಿಂತನೆಯಲ್ಲಿ ತನ್ಮಯರಾದಂತೆ ಕಾಣುತ್ತಿದ್ದ ಆಚಾರ್ಯರು ಗಂಭೀರವದನರಾಗಿ ನುಡಿದರು :

"ಸಾಹಿತ್ಯಸೃಷ್ಟಿಗೆ ಸಂಬಂಧಿಸಿದ ಕೆಲವು ಮೂಲಭೂತ ವಿಷಯಗಳನ್ನೆ ನೀನು ಎತ್ತಿದ್ದಿ. ಸಮಸ್ಯೆಗಳು ಎಲ್ಲ ಕಾಲದಲ್ಲೂ ಇದ್ದುವು. ರಾಮಾಯಣ ಮಹಾಭಾರತಗಳಲ್ಲಿ ಕಾಣದ ಸಮಸ್ಯೆಗಳು ಬೇರೇನು ತಾನೆ ಇವೆ. ಕಾಲಕಾಲಕ್ಕೆ ಸಾಹಿತ್ಯದ ಪ್ರಕಾರ ಬದಲಾಗುವುದೆಂಬುದನ್ನು ಒಪ್ಪಬಹುದು. ಆದರೆ ಒಂದು ಕಾಲಕ್ಕೆ ಆಗಿಹೋದ ಉತ್ಕೃಷ್ಟ ಸಾಹಿತ್ಯಕೃತಿ ಎಂದಿಗೂ ಕಾಲಮಾನದಿಂದ ಕುಂದುವುದಿಲ್ಲ. ನೂರಾರು ಸಾವಿರಾರು ವರ್ಷಗಳಾದರೂ ಅದರ ವ್ಯಾಸಂಗದಿಂದ ಲೋಕಕಲ್ಯಾಣವಾಗುತ್ತದೆ. ಪುನಃ ಪುನಃ ಅದನ್ನು ಮನನ ಮಾಡುವುದರಿಂದ ಉತ್ಕೃಷ್ಟ ಸಂಸ್ಕಾರ ವಾಗುತ್ತದೆ. ಇದಕ್ಕೆ ಮುಖ್ಯ ಕಾರಣವೆಂದರೆ, ಸಾಹಿತಿ ಪ್ರಧಾನವಾಗಿ ಸಮಾಜ ಸುಧಾರಕನೂ ಅಲ್ಲ, ಪ್ರಚಾರಕನೂ ಅಲ್ಲ. ಜೀವನಪ್ರವಾಹ ನಿರಂತರವಾಗಿ ಸಾಗುವಂಥ ವ್ಯಾಪಾರ. ಅದಕ್ಕೆ ಎಂದೂ ಸೋಲಿಲ್ಲ, ಸಾವಿಲ್ಲ. ಮನುಷ್ಯನ ಆರೋಗ್ಯ ಕೆಟ್ಟಿತೆಂದರೆ ಅವನು ತನ್ನ ದಿನನಿತ್ಯದ ವ್ಯಾಪಾರದಿಂದ ವಿರಮಿಸಿ ವೈದ್ಯರಿಂದ ಚಿಕಿತ್ಸೆ ಪಡೆಯುತ್ತಾನೆ, ವಿಶ್ರಾಂತಿ ಹೊಂದುತ್ತಾನೆ. ಆದರೆ ಈ ನಿರಂತರ ಜೀವನಪ್ರವಾಹ ಯಾವೊಂದು ಸಮಸ್ಯೆಯಿಂದಲೂ ರಾಗಭಾವ ಗಳಿಂದಲೂ ವಿಚಲಿತವಾಗುವುದಿಲ್ಲ, ಕುಂಠಿತವಾಗುವುದಿಲ್ಲ. ನದಿ ಹರಿದಂತೆ ಅದು ಒಂದು ಕ್ಷಣವೂ ನಿಲ್ಲದೆ ನಿತ್ಯ ನೂತನವಾಗಿ ನಿರರ್ಗಳವಾಗಿ ಪೂರ್ಣಾರೋಗ್ಯದಿಂದ ಚಲಿಸುತ್ತಿರುತ್ತದೆ. ಸುಖ–ದುಃಖ, ಸಾವು–ನೋವು, ಆಸೆ–ಆಕಾಂಕ್ಷೆ, ನಿರಾಸೆ–ನಿಟ್ಟುಸಿರು ಈ ಎಲ್ಲ ತುಯ್ದಾಟ ತೊಳಲಾಟ ತುಮುಲ ಸಂಕೀರ್ಣಗಳನ್ನು ವೈಗೂಡಿಸಿ ಕೊಂಡೇ ಈ ಮಹಾಚಲನೆ ನಿರ್ವಿಕಾರವಾಗಿ ತಿಳಿಯಾಗಿ ಮುಂದೆ ಮುಂದೆ ನಡೆಯುತ್ತಿರುತ್ತದೆ. ಜ್ಞಾತೃಜ್ಞೇಯ ಗಳೆರಡೂ ಒಂದೇ ಆಗಿ, ತನಗೆ ತಾನೇ ದೃಷ್ಟಾಂತವಾಗಿ, ಕಾಲವೇ ನೆರಳಾಗಿ ನಡೆವಂಥ ಸೃಷ್ಟಿಯ ವ್ಯಾಪಾರ ಕ್ಕಿಂತ ರೋಮಾಂಚಕಾರಿಯಾದ ಸಂಘಟನೆ ಮತ್ತೊಂದಿಲ್ಲ. ಇದನ್ನು ಕಾಣಲು ಪುರ್ಣದೃಷ್ಟಿ ಬೇಕು. ಯಾವೊಂದು ರಾಗಭಾವಕ್ಕೂ ಸಮಸ್ಯೆಗೂ ಅಂಟದೆ ಈ ಇಡೀ ಜೀವನಪ್ರವಾಹವನ್ನು ಇದರಲ್ಲಿನ ಸಾಮರಸ್ಯ ಸಮನ್ವಯಗಳನ್ನು ಕಂಡುಕೊಳ್ಳಲು ಒಂದು ಅತೀಂದ್ರಿಯ ಶಕ್ತಿ ಸಿದ್ಧಿಸಬೇಕು. ಅದನ್ನು ಪ್ರತಿಭೆ insight, imagination, sixth sense, superior intellect ಎಂದು ಬೇರೆ ಬೇರೆ ಹೆಸರುಗಳಿಂದ ಕರೆದಿದ್ದಾರೆ. ಇಂಥ ಪೂರ್ಣದೃಷ್ಟಿಗೆ ಗೋಚರಿಸುವುದು ಸಾರ್ವಕಾಲಿಕ ಸತ್ಯ. ಸೃಷ್ಟಿಯ ಜೀವಂತ ಸತ್ಯದೊಡನೆ ಸಾಹಿತಿಯ ಕಲಾ ಚೇತನ ತಾದಾತ್ಮ್ಯಗೊಂಡಾಗ ವಿಶ್ವಸಾಹಿತ್ಯವೇ ಸೃಷ್ಟಿಯಾಗುತ್ತದೆ. ಅದೊಂದು ಮಹಾಕಾವ್ಯವೇ ಆಗ

ಬಹುದು, ನಾಟಕ ಸಣ್ಣ ಕತೆ ಭಾವಗೀತೆ ಕಾದಂಬರಿಗಳಾಗಿ ವ್ಯಕ್ತವಾಗಬಹುದು. ಆದರೆ, ಈ ಪೂರ್ಣಸೃಷ್ಟಿಯ ಸಾಕ್ಷಾತ್ಕಾರ ಸಾಹಿತಿಗೆ ಸಂಪೂರ್ಣವಾಗಿ ಸಿದ್ಧಿಸುವುದು ಅಪರೂಪ. ಶತಮಾನಗಳಿಗೊಮ್ಮೊಮ್ಮೆ ಮಾತ್ರ ವಿವಿಧ ಹಂತಗಳಲ್ಲಿ ಇದನ್ನು ಪಡೆಯುವ ಸಾಹಿತಿ ತಾನು ಏರಿದ ಎತ್ತರಕ್ಕನುಗುಣವಾಗಿ ಸಾಹಿತ್ಯಸೃಷ್ಟಿ ಮಾಡುತ್ತಾನೆ. ಈ ದಿಸೆಯಲ್ಲಿ ನಡೆಯುವ ಸಾಹಿತ್ಯಸೃಷ್ಟಿ ಒಂದೊಂದೂ ಅಲೌಕಿಕ ನಿತ್ಯ ಸತ್ಯದ ಪರಿಸರದಲ್ಲಿ ಲೌಕಿಕ ಸತ್ಯವನ್ನು ಬೇರೆ ಬೇರೆ ಸನ್ನಿವೇಶಗಳಲ್ಲಿ ಎತ್ತಿತೋರುತ್ತದೆ. ಇದಕ್ಕಾಗಿಯೆ ನಮ್ಮ ಪೂರ್ವಿಕರು ಕವಿಯನ್ನು ರಸಋಷಿ ಎಂದುದು. ತರ್ಕದಿಂದ ಅನುಭಾವದಿಂವ ದಾರ್ಶನಿಕ ಕಾಣುವ ಸತ್ಯವನ್ನು ಕವಿ ತನ್ನ ಪ್ರತಿಭೆಯಿಂದ ಪ್ರಕಟಿಸುತ್ತಾನೆ. ಮಹಾಕಾವ್ಯದಿಂದ ಹಿಡಿದು ಭಾವಗೀತೆ, ಸಣ್ಣ ಕತೆ, ನಾಟಕ, ಕಾದಂಬರಿ ಮುಂತಾದ ಎಲ್ಲ ಸಾಹಿತ್ಯ ಪ್ರಕಾರಗಳಿಗೂ ಈ ಸೂತ್ರ ಅನ್ವಯವಾಗುತ್ತದೆ. ಮನಸ್ಸಿನ ವಿಕಾರಗಳನ್ನು ದೂರ ಮಾಡಿ ಭಾವಶುದ್ಧಿಗೈದು ಶಾಂತತೆಯತ್ತ ಕೊಂಡೊಯ್ಯುವಂಥ ಯಾವುದೇ ಸಾಹಿತ್ಯ ಕೃತಿಯೂ ಶ್ರೇಷ್ಠವಾದುದು. ನಿತ್ಯಚಲನೆಯಲ್ಲಿರುವ ಸೃಷ್ಟಿಯನ್ನು ಅರ್ಥಪೂರ್ಣವಾಗಿ ಪ್ರತಿಫಲಿಸುವಂಥ ಸಾಹಿತ್ಯ ಬಹು ಮಹತ್ತ್ವದ್ದು. ತಾಕಲಾಟ ವಿರೋಧಾಭಾಸಗಳಿಂದ ವಿಕೃತವಾಗಿ ಕಾಣುವ ಲೌಕಿಕ ಸಂಗತಿಗಳನ್ನು ಸಾಮರಸ್ಯ, ಸಮನ್ವಯದ ಜೀವನದಿಯೊಂದಿಗೆ ಕೊಂಡೊಯ್ದು ಪೂರ್ಣಸತ್ಯದ ಬೆಳಕಿನಲ್ಲಿ ತಾನೇತಾನಾಗಿ ತೋರಿಕೊಡುವಂಥ ಸಾಹಿತ್ಯ ನಿಜಕ್ಕೂ ಸತ್ಯ ಸೌಂದರ್ಯಗಳ ಸಂಗಮವೇ ಆಗುತ್ತದೆ."

ಆಚಾರ್ಯರು ಸೌಂದರ್ಯಮೀಮಾಂಸೆಯನ್ನು ಕುರಿತು ತಮ್ಮ ನಿಲುವನ್ನು ಸ್ಪಷ್ಟವಾಗಿ ತಿಳಿಯಾಗಿ ಕಡ್ಡಿಮುರಿದಂತೆ ನಿರೂಪಿಸಿಬಿಟ್ಟರು. ಅವರ ಅಮೃತವಾಣಿಯನ್ನು ಕೇಳುತ್ತ ಕೇಳುತ್ತ ನಾನು ಪುಲಕಿತನಾಗಿ ಒಂದು ಅಪೂರ್ವ ಆನಂದವನ್ನನುಭವಿಸಿದೆ. ಕನ್ನಡ ಕಾವ್ಯಪರಂಪರೆಯ ಮೌಲ್ಯಮಾಪನ ಕುರಿತು ಆಚಾರ್ಯರು ಶಿಷ್ಯರಿಗೆ ಹೇಗೆ ಪಾಠ ಹೇಳಿರಬೇಕೆಂಬುದರ ಕಲ್ಪನೆ ಅಂದು ಆ ಘಳಿಗೆಯಲ್ಲಿ ನನ್ನ ಅನುಭವಕ್ಕೆ ಬಂತು.

ಆಚಾರ್ಯರ ಕಣ್ಣುಗಳಲ್ಲಿ ಅಪೂರ್ವ ಕಾಂತಿ ಶೋಭಿಸಿತು. ಅವರ ಪ್ರಸನ್ನವದನದಲ್ಲಿ ಅಲೌಕಿಕ ತೃಪ್ತಿಯೊಂದು ಲಾಸ್ಯವಾಡುತ್ತಿತ್ತು.

ಸತ್ಯಸೌಂದರ್ಯಗಳ ಜೀವನಾಡಿಯನ್ನೆ ಮೀಂಟಿ ತಮ್ಮ ಅಂತರಂಗದ ಬಾಗಿಲನ್ನು ಮುಕ್ತಮನಸ್ಸಿನಿಂದ ತೆರೆದು ಕಾವ್ಯತತ್ತ್ವದ ವಿಶ್ವರೂಪವನ್ನೇ ಆಚಾರ್ಯರು ಅಂದು ತೋರಿಕೊಟ್ಟರು.

ಅತ್ಯುತ್ತಮ ಮಾನವನಾಗುವುದಕ್ಕೆ ಎರಡು ಅತ್ಯಗತ್ಯ—ಮೈತ್ರೀ ಮತ್ತು ಗಾಯತ್ರಿ

ಕೆ. ಶಿವರಾಮ ಐತಾಳ

ಕೆಲವು ಶಬ್ದಗಳು

ಕನ್ನಡದಲ್ಲಿನ ಮಹಾಪ್ರಾಣಗಳನ್ನು ಕುರಿತ ಸಂದರ್ಭದಲ್ಲಿ ಕೇಶಿರಾಜ ತನ್ನ ಶಬ್ದಮಣಿದರ್ಪಣದಲ್ಲಿ ಶಬ್ದಗಳ ಒಂದು ಪಟ್ಟಿಯನ್ನೇ ಕೊಟ್ಟಿದ್ದಾನೆ. ಅಲ್ಲಿನ ಹಲವು ಶಬ್ದಗಳು ಸಂದಿಗ್ಧವಾಗಿವೆ. ಯವಲಗಳ ಅನುನಾಸಿಕತ್ವ ನಿರನುನಾಸಿಕತ್ವವನ್ನು ಹೇಳಿದ್ದಾನೆ. ಲಕಾರಾಂತಗಳನ್ನು ಗ್ರಾಮ್ಯರು ತಿಳಿಯದೆ ಳಕಾರಾಂತವಾಗಿ ಉಚ್ಚರಿಸುತ್ತಾರೆಂದಿದ್ದಾನೆ. ಈ ಮೂರು ಪ್ರಸಕ್ತಿಗಳ ವಿಚಾರ ಈ ಲೇಖನದ ಗುರಿ.

ಕನ್ನಡದಲ್ಲಿ ಮಹಾಪ್ರಾಣಗಳಿಲ್ಲ ಎನ್ನುವುದು ಹಳೆಯ ಮಾತು. ಕೇಶಿರಾಜನೇನೋ ಮಹಾಪ್ರಾಣಗಳು ವಿಳಸತ್‌ಕರ್ಣಾಟ ಭಾಷೆಯಲ್ಲಿ ನಿಜೋಜ್ವಳಮಾಗಿ ಒಳವು ಎಂದೇ ನಂಬಿದ್ದಾನೆ. "ವಕ್ಖಾಣಂ" ಮೊದಲಾದ ಹಲವು ಉದಾಹರಣೆಗಳನ್ನು ನೀಡಿದ್ದಾನೆ. ಸೂತ್ರದಲ್ಲಿನ "ಕೆಲವು" ಎಂಬ ಶಬ್ದ ಅರ್ಥವತ್ತಾದುದು. ಬೇರೆಡೆಗಳಲ್ಲೆಲ್ಲ ಸಾಮಾನ್ಯವಾಗಿ ಬೇಕಾದ ಶಬ್ದ ಬಳಸಲಾದ ವಾಕ್ಯವೋ, ವಾಕ್ಯಭಾಗವೋ ಉದ್ಧೃತವಾದರೆ ಇಲ್ಲಿ ಶಬ್ದಗಳು ಮಾತ್ರವೇ ಉದ್ಧೃತವಾಗಿವೆ.

ಕೇಶಿರಾಜನಲ್ಲಿ ತಾನು ಗಮನಿಸಿದುದರಲ್ಲಿ ಸಂದೇಹ ಬಂದರೆ ಇದು "ಸಂದೇಹಂ" ಎಂದು ಹೇಳದಿರುವನಲ್ಲ. ಇಲ್ಲಿ ಏಕೆ ಅವನಿಗೆ ಸಂದೇಹ ಬರಲಿಲ್ಲ ? "ಕಂಭಕ್ಕಂ ಭಾಸೆಗಂ ವಿಕಲ್ಪಂ" ಎಂದ. ಅಪಭ್ರಂಶ ಪ್ರಕರಣದಲ್ಲಿ "ಕೂಪಸ್ತಂಭಂ" "ಕೂವಕಂಬಂ" ಎಂದಾಗುತ್ತದೆ, "ಭಾಷೆ" "ಬಾಸೆ" ಎಂದಾಗುತ್ತದೆ ಎಂದಿದ್ದಾನೆ. ಕಂಬ ಬಾಸೆ—ಇವು ಅಪಭ್ರಷ್ಟವಾದರೆ ಕಂಭ, ಭಾಸೆಗಳೂ ಅಪಭ್ರಷ್ಟ ಎಂದೇಕೆ ತೋರಲಿಲ್ಲ ? ಹೋಗಲಿ, "ಭಾವಂ" ಹೇಗೆ ನುಸುಳಿತು ?

ವಕ್ಖಾಣಂ ಮೊದಲಾದ ಶಬ್ದಗಳಲ್ಲಿ ಹಲವು ಪ್ರಾಕೃತ ಸಮೀಪ ರೂಪಗಳು. ಹಲವನ್ನು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಸಂಸ್ಕೃತದ ವ್ಯಾಖ್ಯಾನವೇ ಪ್ರಾಕೃತದಲ್ಲಿ ವಕ್ಖಾಣಂ ಎಂದಾಗಿದೆ. ಕನ್ನಡದಲ್ಲಿ ಒಕ್ಕಣೆ, ದೆಕ್ಖಾಣಂ. ಕಿಟೆಲ್ ಅವರು ದೆಖ್ಖಾಳ ಎಂಬ ಪ್ರಯೋಗವನ್ನೂ ಕೊಟ್ಟಿದ್ದಾರೆ. ನೋಡಬೇಕಾದ್ದು, ನೋಟ. ಹಿಂದಿಯ ದೇಖನಾ, ಮರಾಠಿಯ ದೇಖಣೇ, ಪಂಜಾಬಿಯ ದೇಖಣಾ—ಪ್ರೇಕ್ಷಣೀಯ, ಸುಂದರ ದ್ರಕ್ಷಾಮಿ ಪ್ರಾಕೃತದಲ್ಲಿ ದೆಕ್ಖಉ. ದಕ್ಷಿಣ ಕನ್ನಡದಲ್ಲಿ "ದೇಖಾವೆ" show ಜ್ಞಾತಿರೂಪ. ಪಕ್ಖಾಳಂ. ಕೇಶಿರಾಜ ಪಖ್ಖಾಳ ರೂಪವನ್ನೂ ಕೊಟ್ಟನ್ನಾನೆ. ಪ್ರಕ್ಷಾಲ—ಸಂ. ಪ್ರಾಕೃತದಲ್ಲಿ ಪಕ್ಖಾಲ. ಸಂಸ್ಕೃತದ ಪ್ರಕ್ಷಾಲಿತ ಪ್ರಾಕೃತದಲ್ಲಿ ಪಚ್ಛಾಡಿಅ ಎಂದೂ, ಪಕ್ಖಾಲಿಅ ಎಂದೂ ಆಗುತ್ತದೆ. ಕಿಟೆಲ್ ಹೇಳುವ "ಪಚ್ಚಳ"ವೂ ಅಪಭ್ರಂಶವೇ.

ಠಾವು, ಠಾಣ, ಠಾಣಿಸಿದಂ—ಎಲ್ಲಕ್ಕೂ "ಸ್ಥ" ಮೂಲ. ಥಾಪಣೆ—ಸ್ಥಾಪನೆ. ಪ್ರಾಕೃತದಲ್ಲಿ ಥಾವಣ, ಮರಾಠಿಯಲ್ಲಿ ಥಾವಣೇ. ಕನ್ನಡದಲ್ಲಿ ತಾಪಣೆಯೂ ಉಂಟು. ಠಾವು—ತಾವು ಆಗಿರಬಹುದು. ತಾವು—ಸ್ಥಳ, ಹತ್ತಿರ. "ನನ್‌ತಾವ ಹಣವಿಲ್ಲ."

ಘಟ್ಟು. ಪ್ರಾಕೃತದಲ್ಲಿ ಘಟ್ಟ ಎಂಬ ದೇಸೀ ಶಬ್ದಕ್ಕೆ ಸಮೂಹ ಎಂದರ್ಥ. ಥಾಟ-ಹಿಂದೀ, ಮರಾಠಿ. ಘಟ್ಟು ಕನ್ನಡದಲ್ಲಿ ಸೈನ್ಯವೆಂದೂ ಅರ್ಥ. ಕನ್ನಡದ "ತಟ್ಟು"—ಹತ್ತಿರವಾಗು, ಘಟ್ಟು ಆಗಿರಬಹುದು.

ಖೊಪ್ಪರ. ಸಂಸ್ಕೃತದ ಕರ್ಪರ ಪ್ರಾಕೃತದಲ್ಲಿ ಖಪ್ಪರ ಆಗುತ್ತದೆ. ಕೂರ್ಪರವು ಕೊಪ್ಪರವಾಗುತ್ತದೆ. ಪ್ರಾಕೃತದಲ್ಲೇ ಅಲ್ಪಪ್ರಾಣ ಮಹಾಪ್ರಾಣವಾಗುತ್ತದೆ. ಕೊಪ್ಪರಕ್ಕೆ ಮೊಳಕಾಲು, ಮೊಳಕೈ, ನದೀದಡ, ತೀರ ಎಂಬರ್ಥಗಳಿವೆ.

ಖಾರಿಗೆ. ಸಂಸ್ಕೃತದ ಖಾತಿಕೆ (ಕಂದಕ) ಪ್ರಾಕೃತದಲ್ಲಿ ಖಾಇಅ. ಪ್ರಾಕೃತದಲ್ಲಿ ತಕಾರ ಡಕಾರವಾಗಿ ರೇಫೆಯಾಗುವುದುಂಟು. ಮರಾಠಿಯ ಖಾಡಿ (back water) ಇದರಿಂದ ಬಂದಿರಬಹುದು.

ಛಲ್ಲಿ ಮಾಡಿದಂ. ಪ್ರಾಕೃತದ ಛಲ್ಲೀ ಎಂಬ ದೇಸೀ ಶಬ್ದಕ್ಕೆ ತೊಗಟೆ ಎಂದರ್ಥ. ಸಂಸ್ಕೃತ ಚೇಲ—ನಾರು ಬಟ್ಟೆ. ತೆಲುಗಿನಲ್ಲಿ ಚಿಲ್ಲಾ—ಬಟ್ಟೆ, ಹಿಂಡಿ ಹಿಪ್ಪೆ (ಸಿಪ್ಪೆ) ಮಾಡಿದ ಎಂದರ್ಥವೊ?

ಎಕ್ಕ ಛಾಯ. ಏಕ-ಎಕ್ಕ. ಛಾಯ ಎಂದರೇನು? ನೆರಳು, ಬೆಳಕು. ಒಂದು ನೆರಳು, ಬೆಳಕು ಎಂಬುದರಲ್ಲಿ ಸ್ವಾರಸ್ಯವಿಲ್ಲ. ಪ್ರಾಕೃತದ ಛಾಅ (ಛಾವ)—ಶಾಬ, ಬಾಲಕ. ಇದೂ ಪ್ರಸಿದ್ಧಾರ್ಥವಿರಲಾರದು. ಛಾತ (ಛಾದನ)—ಛಾಯ. ಹೊದಿಕೆ ಎಂದರ್ಥ. ಎಕ್ಕಛಾಯವೆಂದರೆ ಒಂದು ಹೊದಿಕೆ. ಪ್ರಾಯಶಃ ಸನ್ಯಾಸಿಗಳು ಧರಿಸುವ ಏಕವಸ್ತ್ರ.

ಸುತ್ಥಣೆಯಂ. ಸ್ವಸ್ಥ ಪ್ರಾಕೃತದಲ್ಲಿ ಸುತ್ಥ. ಸ್ವಸ್ತಿಕ—ಸೊತ್ತಿಅ. ಶ್ರೀ ಎಂ. ಮರಿಯಪ್ಪಭಟ್ಟರು ಸುತ್ತಣೆಯಂ ಎಂದರೆ ಕಾಲಾಳುಗಳೆನ್ನುತ್ತಾರೆ. ಪ್ರಾಯಶಃ ಸ್ವಸ್ಥಾನಿಕಂ—ಸುತ್ಥಾಣಿಯಂ—ಸುತ್ಥಣಿಯಂ?

ಫಳೆಯಕಾಱಂ. ಕಾಱಂ ತದ್ಧಿತ ಪ್ರತ್ಯಯ. ಫಳೆಯ ಎನ್ನುವುದು ಏನೋ ವಸ್ತುವಾಗಿರಬೇಕು. ಕಿಟಲ್ ಅವರು ಒಂದು ಕಡೆ ಫಲಕಪಾಣಿ, ಕಡಿದಲೆಕಾಱ ಎಂದು ನಮೂದಿಸಿದ್ದಾರೆ. ಮೊದಲನೆಯದು ಮುಖ್ಯ. ನಮ್ಮ ಫಳೆಯಕಾಱ ಈ ಫಲಕಪಾಣಿಯೇ ಇರಬೇಕು. ಗುರಾಣಿ, ಹಲಗೆ ಹಿಡಿಯುವವನು. ಜನ್ನನಲ್ಲಿನ ಸಿಂಹ ಚೂಡ "ಫಳಕಾರಂ." ಸಾಮಾನ್ಯವಾಗಿ ಯೋಧ, ವಿಶೇಷವಾಗಿ ಒಡೆಯನನ್ನು ಗುರಾಣಿಯಂತೆ ಕಾಯುವವನು ಎಂದರ್ಥವಿರಬಹುದು.

ಅಫಳಿಯಂ. ಪ್ರಾಕೃತದಲ್ಲಿ ಅಪಡಿಚ್ಛಿರ ಎಂಬ ದೇಸೀ ಶಬ್ದಕ್ಕೆ ಜಡಬುದ್ಧಿಯವನು, ಮೂರ್ಖ ಎಂದರ್ಥ. ಶಿರ ಶಬ್ದ ಸುಳುಹು ನೀಡುವಂತಿದೆ. ಅದನ್ನು ಬೇರ್ಪಡಿಸಿದರೆ ಉಳಿಯಬಹುದಾದುದು ಅಪಠಿ (ತ)—ಓದದವನು ಎಂದು. ಅಪಠಿತಂ—ಅಪಡಿಯಂ. ಇದೇ ಅಫಳಿಯಂ ಎಂದಾಗಿರಬಹುದು.

ಫೆಳಾವುಗಂ. ಶಬ್ದಾದಿ ಹ್ರಸ್ವ ಅನಂತರ ದೀರ್ಘ ಗಮನೀಯ. ಪ್ರಾಯಶಃ ಫೇಳಾವುಗಂ ಎಂದಿದ್ದಿರಬಹುದು. ಎ, ಒಗಳು ಬಂದಾಗ ಸಂಸ್ಕೃತದಲ್ಲಿ ದೀರ್ಘ ಅಧ್ಯಾಹಾರ. ಶಬ್ದರೂಪ ಹೀಗಿದ್ದು ಏನು ಪ್ರಯೋಜನ? ಇಲ್ಲಿನ 'ಳ' ಕ್ಷಳವೆಂದುಕೊಂಡರೆ ಹಿಂದಿನ ರೂಪ ಫೇಲಾವುಗಂ. ಆವುಗಂ ಎಂದರೇನೋ ತಿಳಿಯುವುದಿಲ್ಲ. ಫೇಲಾ ಪ್ರಾಕೃತದಲ್ಲಿ ದೇಸಿ ಶಬ್ದ. ಉಚ್ಛಿಷ್ಟ, ಎಂಜಲು. ಇದು ದೇಸಿಯಾದುದು ಹೇಗೊ! ಸಂಸ್ಕೃತದಲ್ಲಿ ಇದೇ ಅರ್ಥದಲ್ಲಿ ಫೇಲಂ, ಫೇಲಾ, ಫೇಲಿಕಾ, ಫೇಲೀ ರೂಪಗಳಿವೆ. ಪ್ರಾಕೃತದಲ್ಲಿ ಫೇಲಾ—ಫೆಲ್ಲ ಆಗಬಹುದು. ಪ್ರಾಕೃತದಲ್ಲಿ ದ್ವಿತ್ವದ ಹಿಂದೆ ದೀರ್ಘಸ್ವರ ನುಡಿಯುವುದಿಲ್ಲ. ಪ್ರಾಕೃತದಲ್ಲಿ ಈ ಫೆಲ್ಲವೂ ಇದೆ. ಇದಕ್ಕೆ ದರಿದ್ರ, ನಿರ್ಧನ ಎಂದರ್ಥ. ಆಯುಷ್ (ಷ್ಕ) ರೂಪ ಪ್ರಾಕೃತದಲ್ಲಿ ಆಉಕ್ಕ, ಆಉಗ ಎಂದಾಗುತ್ತದೆ. ಜೀವನ ಎಂದೂ ಅರ್ಥ. ನಮ್ಮ ಆವುಗ ಇದೇ ಇರಬಹುದು. ಫೆಲ್ಲಾಉಗ, ಫೇಳಾವುಗ, ದರಿದ್ರ ಬಾಳು. ಎಂಜಲು ಬದುಕು.

ಇವೆಲ್ಲ ಮಾರ್ಗಕವಿಗಳು ಬಳಸಿರುವ ಶಬ್ದಗಳೇ ಇರಬೇಕೆಂದಿಲ್ಲ. ಆಡುಮಾತಿಗೂ ಕಿವಿಗೊಟ್ಟವನು ಕೇಶಿರಾಜ. ಕಿವಿಗೆ ಬಿದ್ದ ರೂಪಗಳನ್ನು ಕೇಶಿರಾಜ ಉದ್ಧರಿಸಬಹುದು. ಸ್ವತಃ ಜೈನನಾದ ಕೇಶಿರಾಜನಿಗೆ ಪ್ರಾಕೃತದ ಪರಿಚಯ ಇದ್ದಿರುವುದೂ ಸಾಧ್ಯ. ಅಪಭ್ರಂಶ ಪ್ರಕರಣ ಬರೆಯುವಲ್ಲಿ ಪ್ರಾಕೃತ ರೂಪಗಳನ್ನು

ಗಮನಿಸಿದ್ದರೆ ತೌಲನಿಕ ಭಾಷಾ ಶಾಸ್ತ್ರಜ್ಞನಾಗುವ ಯೋಗ ಒದಗಿಬರುತ್ತಿತ್ತು. ಆ ದೊಡ್ಡ ಯೋಗ ಸ್ವಲ್ಪದರಲ್ಲಿ ತಪ್ಪಿಹೋದುದು ವಿಷಾದನೀಯ.

ಮುಂದೆ ಯವಲಗಳ ವಿಷಯಕ್ಕೆ ಬರೋಣ. ಇವು ಅನುನಾಸಿಕಗಳೂ ನಿರನುನಾಸಿಕಗಳೂ ಆಗಿವೆ ಎನ್ನಲು ಉದಾಹರಣೆಗಳನ್ನು ನೀಡಿದ್ದಾನೆ. ಅನುನಾಸಿಕವಾಗಿಲ್ಲದೆ ಇರುವುದು ಇವುಗಳ ಸಹಜ ಸ್ವರೂಪ. ಆದಕ್ಕೆ ಪ್ರಯೋಗಗಳನ್ನು ಕೊಡಬೇಕಾಗಿರಲಿಲ್ಲ. ಅನುನಾಸಿಕತ್ವ ಒದಗಿರುವುದೇ ವಿಶೇಷ. ಎರಡಕ್ಕೂ ಉದಾಹರಣೆಗಳನ್ನು ಕೊಡುವಲ್ಲಿನ ಕೇಶಿರಾಜನ ಶಾಸ್ತ್ರೋಚಿತ ಬುದ್ಧಿಯನ್ನು ಮೆಚ್ಚಬೇಕು. ಜೊತೆಜೊತೆಯಲ್ಲಿರಿಸಿದಾಗಲೇ ವೈದೃಶ್ಯ ಸ್ಪಷ್ಟವೇದ್ಯವಾಗುತ್ತದೆ. ಯವಲಗಳಿಗೆ ಅನುನಾಸಿಕತ್ವ ಏಕೆ ಒದಗಿತು ಎನ್ನುವುದನ್ನು ಹೇಳಿಲ್ಲ. ಮೊದಲನೆಯದಾಗಿ ಆಡುರೂಪಗಳಿಗೆ ಕಿವಿಕೊಟ್ಟದ್ದೇ ದೊಡ್ಡ ಔದಾರ್ಯ. ಸಂಪ್ರದಾಯನಿಷ್ಠ ವ್ಯಾಕರಣದಲ್ಲಿ ಇದರ ವಿವರ ಅಪೇಕ್ಷಣೀಯವೆನಿಸದೆ ಹೋಗಿರಬಹುದು. ಶಿಥಿಲತೆಯನ್ನು ಕುರಿತಾಗ ವರ್ಣಪರಿಸರವನ್ನು ಗಮನಿಸಿದ, ತತ್ಸಮಗಳನ್ನೂ ತಿಳಿದಿದ್ದ ಕೇಶಿರಾಜನಿಗೆ ಇಲ್ಲಿ ಕಷ್ಟವೇನೂ ಇರಲಿಲ್ಲ. ಅನಗತ್ಯವೆಂದೇ ಬಿಟ್ಟಿರಬಹುದಾಗಿರುವುದೇ ಸಂಭವನೀಯ.

ಉದಾಹರಿಸಿದವುಗಳಲ್ಲಿ ದೇಸೀ ಶಬ್ದಗಳೂ, ಅನ್ಯದೇಸೀ ಶಬ್ದಗಳೂ ಸೇರಿವೆ.

1. ಪರಿಸರದ ಅನುನಾಸಿಕಗಳ ಪ್ರಭಾವದಿಂದ ಯವಲಗಳು ಅನುನಾಸಿಕಗಳಾಗಿವೆ. ಮೇಯಿಸಿದಂ ಮಾವಂ, ಮಯಣ ಇತ್ಯಾದಿ.

2. ಮೂಲರೂಪದಲ್ಲಿ ಅನುನಾಸಿಕವಾಗಿದ್ದು ನಿಷ್ಪನ್ನ ರೂಪದಲ್ಲಿ ಅದರ ಅಂಶ ಉಳಿದಿರಬಹುದು. ಯಾಮ-ಜಾವ, ಇಲ್ಲಿ ಆದಿ ದೀರ್ಘವೂ ಅನುನಾಸಿಕ. ಸಮಿತಾ–ಸೇವೊ (ಹಿಂದೂಸ್ತಾನಿ)—ಸೇವಿಗೆ. ಶ್ಯಾವಿಗೆ ಎಂದೂ ಇದೆ. ಪಾಂಬು—ಹಾವು. ಇಲ್ಲೂ ಆದಿದೀರ್ಘವೂ ಅನುನಾಸಿಕ ಎನ್ನಬಹುದು.

3. ಅನುನಾಸಿಕತೆ ಒಂದು ಅಭ್ಯಾಸ, ರೂಢಿಯಾಗಿರಬಹುದು. ಮಾಡ್ತೇವೆ "ಏವೆ" ಅನುನಾಸಿಕವಾಗಿರುವುದುಂಟು ಕೆಲವರಲ್ಲಿ. ಅನನ್ವಯದಿಂದ ಅನುನಾಸಿಕವಾಗಬಹುದು. ತವು, ತವೆ–ಕಡಮೆಯಾಗು. ಸವೆ ಇಲ್ಲಿನ ವಕಾರ ಮೊದಲು ಅನುನಾಸಿಕ ಛಾಯೆ ಪಡೆದು ಅನಂತರ ಶುದ್ಧ ಅನುನಾಸಿಕವಾಗಬಹುದು—ಸಮೆ. ದಕ್ಷಿಣ ಕನ್ನಡದ ಕೋಟದಲ್ಲಿ ಸಮ್‌ದ್‌ಹೋಯ್ತ್—ಸವೆದುಹೋಯಿತು. ಕೌಪೀನ-ಕೋಮಣ, ಕೋಮಾಣ, (ಕೋವಣಕ) ಕ್ವಾಣ್ಕ—ಇಲ್ಲಿ"ವಾ"ಅನುನಾಸಿಕ. ತೋಟ–ತ್ವಾಟ, ಪೇಟೆ–ಪ್ಯಾಟೆ. ಇಲ್ಲೂ ವ, ಯ ಅನುನಾಸಿಕ.

ಹಕಾರ ಯಕಾರವಾಗಿ ಅನುನಾಸಿಕವಾಗಬಹುದು. ಕಹಿ (ಕೈಪೆ)—ಕಯ್, ಕುಹಕ-ಕುಯಕ–ಕುಯ್ಕಲು, ಅಸಹ್ಯ-ಅಸಯ್ಯ ಇತ್ಯಾದಿ.

ಸ್ವರಗಳೂ ಅನುನಾಸಿಕತೆಯನ್ನು ಪಡೆಯಬಹುದು. ಚಿವುಂಟು — ಚೂಟು— ಊ ಅನುನಾಸಿಕ.

ಮರಲ್ ನೇರವಾಗಿ ಮಣಲ್ ಆಗಿರಲಾರದು. ಮಳಲ್ ಆಗಿ, ಳಕಾರ ಅನುನಾಸಿಕವಾಗಿ ಮಣಲ್ ಆಗಿರಬಹುದು. ಮುಳುಂಕು(ಗು) ಮುಳುಗು—ಮುಣುಗು. ಕೊಲ್, ಕೊಳ್ ಇವುಗಳ ಭೂತರೂಪದಲ್ಲಿ ಅನುನಾಸಿಕ ಬರುವುದನ್ನೂ, ಕೊಲ್‌ಗೆ ಕೊಂದ್ ರೂಪ ಕೊಡಗಿನಲ್ಲಿರುವುದನ್ನೂ ಗಮನಿಸಬಹುದು.

ಯವಲಗಳು ಅನುನಾಸಿಕಗಳೂ ಆಗುತ್ತವೆ ಎಂದ ಕೇಶಿರಾಜ. ಹೇಗೆ ಎಂದೂ ನೋಡಿದೆವು. ಆದರೆ ಯವಲಗಳನ್ನು ಅನುನಾಸಿಕ ಎನ್ನುವುದು ಹೇಗೆ ಸಾಧ್ಯ ? ಅವುಗಳಲ್ಲಿನ ಸ್ವರಗಳು ಅನುನಾಸಿಕಗಳಾಗುತ್ತವೆ ಎನ್ನಬಹುದು. ಯವರಲಗಳು ಸಂಸ್ಕೃತದಲ್ಲಿ ಸಹ ಪ್ರಸಾರಣದಿಂದ ಸ್ವರಗಳಾಗುವುದೂ ವಿಶೇಷವಾಗಿ ಗಮನಿಸಬೇಕಾದುದು.

ಇನ್ನು ಕೇಶಿರಾಜನು ಹೇಳುವ ಗ್ರಾಮ್ಯದ ವಿಷಯ ನೋಡೋಣ. ಬೆರಲ್, ಒರಲ್, ಕೊರಲ್ ಮೊದಲಾದುವು ಲಕಾರಾಂತಗಳು. ಗ್ರಾಮ್ಯರು ಇದನ್ನು ತಿಳಿಯದೆ ಬೆರಳ್ ಮೊದಲಾಗಿ ಹೇಳುತ್ತಾರೆ ಎಂದು ಕೇಶಿರಾಜನ ದೂರು. ಇದು ರೂಢಿಯಿಂದ ಬಂದ ರೋಗ. ಕನ್ನಡದವರಿಗೆ ಕ್ಷಳ ಇಷ್ಟ. ಈ ಪ್ರವೃತ್ತಿ ಇಲ್ಲೂ ನಡೆಯಿತು. ಹಿರಿಯರು ಮಾಡಿದರೆ ಸರಿ, ಕಿರಿಯರು ಮಾಡಿದರೆ ತಪ್ಪು. ಸಸಿ ಎಂದರೆ ತಪ್ಪಲ್ಲ; ಹಿರಿಯರು ಒಪ್ಪಿದ್ದು. ಅದೇ ಆಧಾರದ ಮೇಲೆ ವಿಸಯ ಎಂದರೆ ತಪ್ಪು. ಇದು ಭಾಷೆಯಲ್ಲಿರುವ ಸಾಮಾಜಿಕ ಸಮಸ್ಯೆ. ಬಿಲ್, ಸಲ್, ಕೋಲ್ ಕೊಡಲಿ ಇತ್ಯಾದಿಗಳಲ್ಲಿ ಕ್ಷಳೀಕರಣವಾಗದೆ ಇಲ್ಲಿ ಮಾತ್ರ ಏಕಾಯಿತು ಎಂಬುದಕ್ಕೆ ಬೇರೆ ಕಾರಣವಿರಬೇಕು. ರ,ಲ ಸಮೀಪ ವರ್ಣಗಳು. ಅವೆರಡು ಬೆರೆತು ಸಜಾತೀಯವಾಗದೆ ಇರಬೇಕಾದರೆ ಹೆಚ್ಚಿನ ವೈದೃಶ್ಯಬೇಕು. ಬೆರಳ್ ಎನ್ನುವುದರಿಂದ "ಲ" ಖಚಿತವಾಯಿತು ಎನ್ನಬಹುದೋ ಏನೋ.

ಸ್ವಾರ್ಥತ್ಯಾಗಕ್ಕೆ ಸ್ವಾಥಪ್ರೇಮವು ಮೊದಲನೆಯ ಗುರು. ವ್ಯಷ್ಟಿಯ ಹಿತವನ್ನು ಉಳಿಸಿಕೊಳ್ಳುವುದಕ್ಕಾಗಿಯೆ ಒಬ್ಬನು ಮೊದಲು ಸಮಷ್ಟಿಯ ಹಿತವನ್ನು ನೋಡುವನು. ಒಂದು ದೇಶದ ಹಿತದಲ್ಲಿ ತನ್ನ ಹಿತ ಬೆರೆತಿದೆ, ದೇಶದ ಹಿತದಲ್ಲಿ ವ್ಯಕ್ತಿಯ ಹಿತವಿದೆ. ಹಲವರ ಸಹಕಾರವಿಲ್ಲದೆ ಇದ್ದರೆ ಮುಕ್ಕಾಲು ಪಾಲು ಕೆಲಸ ಮುಂದೆ ಸಾಗುತ್ತಿರಲಿಲ್ಲ. ಆತ್ಮರಕ್ಷಣೆ ಅಸಾಧ್ಯವಾಗುತ್ತಿತ್ತು. ಸ್ವಾರ್ಥರಕ್ಷಣೆಯಹಿತಕ್ಕಾಗಿ ಪರಸ್ಪರ ಸಹಾಯಕ್ಕೆಂದು ಒಟ್ಟು ಕಲೆಯುವುದನ್ನು ಪ್ರತಿಯೊಂದು ಜನಾಂಗದಲ್ಲಿಯೂ ಮತ್ತು ದೇಶದಲ್ಲಿಯೂ ನಾವು ನೋಡುತ್ತೇವೆ.

ಹೆಚ್. ದೇವೀರಪ್ಪ

ಒಗಂಟುವೇಳ್ಪ ಕವಿಯುಂ ಕವಿಯೇ

ಸುಮಾರು ಇನ್ನೂರು ವರ್ಷಗಳ ಹಿಂದೆ ದಾವಣಗೆರೆಯ ಬಳಿಯಲ್ಲಿರುವ ಆನಗೋಡು ಎಂಬ ಗ್ರಾಮದಲ್ಲಿ ರೇವಣಸಿದ್ಧ ಎಂಬ ಕವಿಯಿದ್ದ. ಈತನು "ಸಿದ್ಧಲಿಂಗಚಾರಿತ್ರ" ಮತ್ತು "ಮರುಳೇಶ ಸಾಂಗತ್ಯ"ವನ್ನು ರಚಿಸಿದ್ದಾನೆ[1]—ಸಾಂಗತ್ಯದ ಅಂತ್ಯದಲ್ಲಿರುವ,

ಸದಮಲಾನೆಯಗೋಡಿಗಾನೆಕೊಂಡದಮಠದ । ಮುದಿ ಬಸವಪ್ಪ ಸ್ವಾಮಿಗಳ
ಉದರೋದ್ಭವನಾದ ಗುರುಸಿದ್ಧದೇವರ । ಉದರಾಬ್ಧಿ ಚಂದ್ರನೆಂದೆನಿಪ vii–129

ಎರಡೆಂಟು ವರುಷದ ತರಳ ರೇವಣಸಿದ್ಧ । ಕರಿಗೋಡು ಪುರಕೆ ತಾ ಬಂದು
ಪುರದ ಮಠದ ಪರಮೇಶ್ವರ ದೇವರ । ವರಗೃಹ ಪಟ್ಟಶಾಲೆಯೊಳು vii-130

ಶೂಲಧರನ ಭಕ್ತನ ಶಿಶುಗಳಿಗೆ ತಾ ! ಶಾಲೆಯ ಹೇಳುತಲಿರಲು
ಕಾಲಹರನ ಕೃತಿಯನು ಪೊಗಳೆನೆ ರುಂಡ । ಮಾಲಾಧರನ ಆಜ್ಞೆಯಲಿ vii–131

ಏಳು ಅಧ್ಯಾಯಕೆ ಏಳು ಜನ್ಮದ ಪಾಪ । ಕೀಳಿಸಬೇಕೆಂದು ಶಿವನು
ಪೇಳಿದಾಜ್ಞೆಯಲಿ ಸಿದ್ಧೇಶನ ಕೃತಿಯನು । ಪೇಳಿದೆ ಸೊಗಸಾಗಿ ಕಥೆಯ vii–133

—ಈ ಪದ್ಯಗಳಿಂದ ಈತನು (ದಾವಣಗೆರೆಯ ಪಕ್ಕದಲ್ಲಿರುವ) ಆನೆಯಕೊಂಡದ ಮಠದ ಮುದಿಬಸವಪ್ಪ ಸ್ವಾಮಿಗಳ ಮಕ್ಕಳಾದ ಗುರು ಸಿದ್ಧದೇವರ ಮಗನೆಂಬುದೂ ಹದಿನಾರು ವರ್ಷದವನಾಗಿದ್ದಾಗಲೇ ಆನಗೋಡಿಗೆ ಬಂದು ಪರಮೇಶ್ವರದೇವರ ಮಠದ ಪಡಶಾಲೆಯ ಮೇಲೆ ಶಿವಭಕ್ತರ ಮಕ್ಕಳಿಗೆ 'ಶಾಲೆ' ಹೇಳುತ್ತಿದ್ದನೆಂಬುದೂ ವ್ಯಕ್ತವಾಗುತ್ತದೆ.

ಕಾವ್ಯಾರಂಭದಲ್ಲಿ, ಆನಗೋಡಿನ ಮರುಳಸಿದ್ಧ (ಆ ಗ್ರಾಮದಲ್ಲಿ ಬಹು ಪ್ರಾಚೀನವಾದ ಶ್ರೀ ಮರುಳಸಿದ್ಧನ ಗದ್ದುಗೆಯಿದೆ)ನ ಪ್ರೇರಣೆಯಂತೆ, ದೇವ ಕವಿಯು ವಾರ್ಧಕ ಷಟ್ಪದಿಯಲ್ಲಿ ಬರೆದಿರುವ "ಸಿದ್ಧಲಿಂಗಚಾರಿತ್ರ" ಎಂಬ "ಮರುಳಸಿದ್ಧ ಕಾವ್ಯ"ವನ್ನು ಆಧಾರವಾಗಿಟ್ಟುಕೊಂಡು ಈ ಕೃತಿಯನ್ನು ರಚಿಸಿರುತ್ತೇನೆಂದು ತಿಳಿಸಿರುತ್ತಾನೆ. ಪ್ರತಿ ಸಂಧಿಯ ಅಂತ್ಯದಲ್ಲಿಯೂ

[1] ಈ ಪುಸ್ತಕವು ಸಿರಿಗೆರೆಯ 'ತರಳಬಾಳು ಗ್ರಂಥಮಾಲೆ'ಯ 12ನೆಯ ಪುಷ್ಪ. ಇದರ ಸಂಪಾದಕರು ಶ್ರೀ ತರಳಬಾಳು ಶಿವಮೂರ್ತಿ ಎಂ. ಎ ಅವರು (1970).

ಇದು ಶ್ರೀಮದಜ್ಜನಿ ಮರುಳ ಸಿದ್ಧೇಶನ । ಪದಕಮಲ ಮಧುಕರನಾದ
ಬುಧ ರೇವಣಸಿದ್ಧನ ಕೃತಿಯಿದನೋದ ! ಲೊದುವುದು ಮುಕ್ತಿ ಸಾಮ್ರಾಜ್ಯ

—ಈ ಪದ್ಯವಿದೆ.

ಈ 'ಪದಕೃತಿ'ಯಲ್ಲಿ ಮರುಳಸಿದ್ಧನು ಮುಕ್ತಿಯ ಕಾಯಕದವನಾದ ಕೂಗಿನೂರನ ಮಗನಾಗಿ ಹುಟ್ಟಿದ್ದು, ಕಗ್ಗಲ್ಲ ಬಾಚಿಗೌಡನ ಸಾಕುಮಗನಾಗಿ ಇನ್ನೂ ಬಾಲಕನಾಗಿದ್ದಾಗಲೇ ಅನೇಕ ಲೀಲಾಮಯ ಪವಾಡಗಳನ್ನು ತೋರಿದುದು, ಶ್ರೀ ರೇವಣಸಿದ್ಧರಿಂದ ಚಿನ್ಮೂಲಗಿರಿಯಲ್ಲಿ ಲಿಂಗದೀಕ್ಷೆ ಪಡೆದುದು, ಅನೇಕ ಧಾರ್ಮಿಕ ಸಾಮಾಜಿಕ ಕ್ರಾಂತಿಗಳನ್ನು ಮಾಡಿದುದು—ಈ ಮುಂತಾದ ಸಂಗತಿಗಳು ತಿಳಿಗನ್ನಡ ಶೈಲಿಯಲ್ಲಿ ಎಲ್ಲರಿಗೂ ತಿಳಿಯುವಂತೆ ನಿರೂಪಿಸಲ್ಪಟ್ಟಿವೆ. ಇಲ್ಲಿಯೂ ಶ್ರೀ ಮರುಳಸಿದ್ಧನು, "ತೆಲುಗ ಬಾಳಿಂ ತಂದ ಶಿಷ್ಯಂಗೆ, ಅಂದು ಉಪದೇಶವಿತ್ತು, ಚಂದದಿಂ ಮೂರು ಮುದ್ರೆಯಿತ್ತು, ಅರುಹುಗೊಟ್ಟು, ಆತ್ಮಾನಂದದಿಂ'ತರಳ ಬಾಳ್"—ಎಂದು ಹರಸಿದ ವೃತ್ತಾಂತ ವಿದೆ. ದೇವಕವಿಯ 'ಚಾರಿತ್ರ'ಕ್ಕೂ ಈ 'ಸಾಂಗತ್ಯ'ಕ್ಕೂ ಎಷ್ಟರಮಟ್ಟಿನ ಹೋಲಿಕೆಯಿದೆಯೆಂದರೆ ಇವರ ನೆರವಿನಿಂದ ಅವರ ಆ ಕಾಲದ ಪಾಠಗಳನ್ನೂ ಪ್ರಕ್ಷೇಪಾದಿಗಳನ್ನೂ ಗುರುತಿಸಿಕೊಳ್ಳಲೂ ಆಗುತ್ತದೆ.

ಆದುದರಿಂದ ಈ ಕವಿಯಲ್ಲಿ ನೋಡಬೇಕಾದುದು ವಸ್ತುರಚನೆ, ಪಾತ್ರಶಿಲ್ಪ, ರಸಪ್ರತಿಪಾದನೆಗಳನ್ನಲ್ಲ; ಪ್ರತಿಸಂಧಿಯ ಆದಿಯಲ್ಲಿಯೂ ಬರುವ 'ವಾವೆ' ಪದ್ಯಗಳಲ್ಲಿಯೂ ವರ್ಣನಾ ಭಾಗಗಳಲ್ಲಿರುವ ಒಗಟಿನ ಕವಿತೆಗಳಲ್ಲಿಯೂ ಇರುವ ವೈಶಿಷ್ಟ್ಯವನ್ನು.

ಚಂದ್ರನ ತಂಗಿಯ ಹೊಂದಿದವನ ಗರ್ಭ । ದಿಂದ ಬಂದವನರಸಿಯಳೆ
ಅಂದದಾನೆಯ ಗೋಡ ಓದುವ ಮಠದಲ್ಲಿ । ನಿಂದ ದೇವಿಯೆ ಕೊಡು ಮತಿಯ i-9

ಎರಳೆ ರಥಕೆ ಹೂಡಿ ಎಳಸುವನಣ್ಣನ । ತರಳನ ಕೊಂದನ ಸಖನ
ತರುಣಿಯ ಮೊಮ್ಮಗನ ಸತಿಯ ಮಾವನ ಕೊಂದ । ಪರಮ ಗುರುವೆ ಕೊಡು ಮತಿಯ iii–1

ಇವುಗಳಲ್ಲಿ ಮೊದಲನೆಯದು ಶಾರದಾಸ್ತುತಿ ಎಂದು ಬೇರೆ ಹೇಳಬೇಕಾಗಿಲ್ಲ. ಮುಂದಿನದಕ್ಕೂ ಇತರ ಸಂಧಿಗಳಲ್ಲಿ ಬರುವ 'ವಾವೆ'ಗಳಿಗೂ ಅರ್ಥಮಾಡುವುದು ಕಷ್ಟಸಾಧ್ಯ. ಅನೇಕ ಸಾಂಗತ್ಯ ಗ್ರಂಥಗಳಲ್ಲಿ ಇಂತಹ ಪದ್ಯಗಳು ಬರುವುದುಂಟು. ಪುರಾಣ ಶಾಸ್ತ್ರಗಳ ಗಾಢವಾದ ಪರಿಚಯ ಇರುವವರು ಮಾತ್ರ ಈ ಪದಗಳನ್ನು ಅರ್ಥೈಸಬಲ್ಲರು. ರೇವಣಸಿದ್ಧಕವಿಯು ಇಂತಹ ಪದಗಳನ್ನು ಕಟ್ಟಲೂ ಬಲ್ಲ, ಬಿಚ್ಚಲೂ ಬಲ್ಲ. ಆದರೆ ಇವನ ಕೃತಿಯಲ್ಲಿ ಕೇವಲ ಏಳೆಂಟು ಈ ಬಗೆಯ ಹಾಡುಗಳಿವೆ. ಆದರೆ ಒಗಟುಳ್ಳ ಜಿಗಟುಳ್ಳ ಪದ್ಯಗಳು ನೂರಾರು. ಅವಿರುವುದು ಉದ್ಯಾನ, ಅರಣ್ಯ, ಅಂಗಡಿಬೀದಿಗಳ ವರ್ಣನೆಗಳಲ್ಲಿ.

ಪ್ರಾಚೀನ ಕನ್ನಡ ಕಾವ್ಯಗಳಲ್ಲಿ ಈ ವರ್ಣನೆಗಳಿಲ್ಲವೆಂದಲ್ಲ. ಗಿಡ ಮರ ಬಳ್ಳಿಗಳ ಗುಣ, ಸ್ವರೂಪ, ಸ್ವಭಾವಗಳನ್ನು, ಅಂಗಡಿಗಳಲ್ಲಿರುವ ಸರಕುಗಳ ಆಕಾರ ಪ್ರಯೋಜನಗಳನ್ನು ಇವನಂತೆ ಹೇಳಿರುವ ಕನ್ನಡ ಕೃತಿಗಳು ವಿರಳ. ಕೆಲವು ಉದಾಹರಣೆಗಳಿವು.

ಸೋಮನ ಧರಿಸಿ ಭಾಗೀರಥಿಯನು ಪೊತ್ತ । ಕಾಮಹರನ ದೃಷ್ಟಿಯಂತೆ
ನೇಮದಿ ಒಪ್ಪುವ ವೃಕ್ಷಂಗಳಿಪ್ಪವು । ಆ ಮಹಾವನದಿ ಸೊಂಪಿನಲಿ (ತೆಂಗು ?) v–24

ಕೆಟ್ಟ ಮೋರೆಯ ಮೂಳಿ ಅಷ್ಟು ಬಾಲಕರನ್ನು । ಗಟ್ಟ್ಯಾಗಿ ಮೂಡೆಯೊಳ್ ಬಿಗಿದು
ಬಿಟ್ಟು ಹೋದಾಳೆಂದು ಸುತ್ತು ಬೇಲಿಯ ಬಿಗಿದು । ಕಟ್ಟಿ ನಡುವಿಗೆ ವೃಕ್ಷವಿಹವು (ಹಲಸು) v–31

ಸುದತಿಯರ ತೊಡೆಗೆನ್ನ ಸರಿಯೆಂದು ಪೇಳ್ವರು । ಇದಕೇಕೆ ಜನ್ಮ ಸಾಕೆನುತ
ಹದಿನೆಂಟು ಮಾನವು ವಿಧಿ ಬರೆದಾಯುವು । ಒದಗಿ ಶಿರವು ಬಾಗಿ ವೃಕ್ಷ (ಬಾಳೆ) v–34

ಉರುವ ನಾಮವು ತೋರಲರಳುಗಳಲ್ಲಿಲ್ಲ । ಬೀರಿ ಫಲವು ಅಂಗತುಂಬ
ಮಿಾರಿ ಗರ್ಭವ ಜಗಿದಾರೈದು ನೋಡಲು । ಸೇರಿದ ಕ್ರಿಮಿಯಿಹ ವೃಕ್ಷ (ಅತ್ತಿ) v–40

ಗುರುಗಳು ಊರಿಂದ ತ್ವರಿತದಿ ದಯಮಾಡಿ । ಪುರದ ಮುಂದಿರೆ ಭಕ್ತ ಕೇಳಿ
ಭರದಿಂದ ಹೊರಟಾಗ ಚರಣಕೆ ವಂದಿಸಿ । ನಿರುತ ಕರೆವ ನಾಮ ವೃಕ್ಷ (ಬನ್ನಿ) v–46

ರಂಗಾಗಿ ಕುಸುಮವು ಹೊಂಗುತಲಿರುವುದು । ಅಂಗಕ್ಕೆ ತೃಪ್ತಿಯ ವರ್ಣ
ಹಿಂಗದೆ ಮನುಜಗೆ ವೃದ್ಧಾಪ್ಯ ಕಾಲದಿ । ಕಂಗೊಳಿಸುವ ನಾಮವೃಕ್ಷ (ಮುತ್ತುಗ) v–51

ಕಾಡು ಮೃಗಗಳನ್ನು ಕುರಿತವು :

ಕರಿಯ ಕಂಬಳಿ ಹೊದ್ದು ಹರುಷದಿ ಮುಖದೊಳು । ಧರಿಸಿ ಬೂದಿಯ ನಲವಿಂದ
ಬೆರಳು ಕೂರುಗುರಿಂದ ಕೆರೆವುತ್ತ ಭೂಮಿಯ । ಮರುಳುಗೊಂಡಿರುವಂಥ ಮೃಗವು v–64

ಕಾಂತಾರದೊಳು ಮನೆ ಜ್ಯೋತಿ ತೆರದಿ ನೇತ್ರ । ಪ್ರೀತಿಯಲಿ ಮೂಬಣ್ಣ ಪಹುದು
ಆತುರಕೆ ಪಶುಕಾಯ್ದು ಹೊಟ್ಟೆಯ ಹೊರೆವಂತ । ಖ್ಯಾತ ಮೃಗಗಳಲ್ಲಿಹವು v–65

ಈ ಮೃಗಗಳು ಯಾವುವೆಂಬುದು ಮೇಲೆಯೇ ತಿಳಿಯುತ್ತದೆ ಆದರೆ,

ಜಗದೊಳು ನಾಲ್ಕು ದಿಕ್ಕಿನೊಳಿಹ ವಸ್ತುವ । ತೆಗೆತಂದು ಮಳಿಗೆಗಳಲ್ಲಿ
ಹಗಲಿರುಳುಗಳಲ್ಲಿ ಮಿಗೆ ತೂಗಿ ಮಾರುವ । ಸೊಗಸಾದ ಹರದರಂಗಡಿಯು

ಎಂದು ಆರಂಭಿಸಿ ಅಂಗಡಿಗಳಲ್ಲಿ ಮಾರುವ ಒಂದೊಂದು ವಸ್ತುವನ್ನೂ ಒಗಟಿನ ಶೈಲಿಯಲ್ಲಿಯೇ ಹೇಳುವ ಕಲೆ ಮೆಚ್ಚಬೇಕಾದುದು.

ಮನೆಯ ಗಂಡನ ಬಿಟ್ಟು ಇನಿಯನಿಗೆ ಕೈನೀಡೆ । ತನುಜರು ನಾಸಿಕ ಕೊರೆಯೆ
ಅನುವಾಗಿ ಸಕಲಕ್ಕೆ ಗೆಲವಿಂದ ಮುಂಸ್ರೋಪ । ವನಿತೆಯ ತಂದು ಮಾರುವರು vii–54

ಎಲೆಯ ಮುಖ ಯಾವಾಗಲೂ ಬೇರೊಂದು ಕಡೆಗೆ ಅಲ್ಲವೆ ? ಇದು ಕವಿಯ ನಿರೀಕ್ಷಣಾ ಶಕ್ತಿಗೆ ಸಾಕ್ಷಿ.

ನಾರಿಯ ಮೈಸೀಳಿ ತೂರ್ಯ ನಡುವಿಗೆ ಸೀಳಿ । ಮಿಾರಿ ಕಿಚ್ಚಿನಲಿ ಸುಡುವಂಥ
ಧೀರೆಯ ಹರುಷದಿ ಸಕಲಕ್ಕೆ ಸಲುವಂಥ । ಪೋರಿಯ ತಂದು ಮಾರುವರು (ಅಡಕೆ) vii–55

ತೆಂಗಿನಕಾಯಿಯ ವರ್ಣನೆ ಎಷ್ಟು ಅರ್ಥವತ್ತಾಗಿದೆ ನೋಡಿ.

ಹೊರಗೆ ಸೀಗೆಯ ಮೇಳೆ ಒಳಗೆ ಕಂಚಿನ ಕೋಟೆ । ಜೆರೆದಿರೆ ಸುಣ್ಣ ಗಾರೆಯಲಿ
ಇರುವ ಲಿಂಗಕೆ ದಾರಿ ಎರೆವ ದ್ವಾರವು ಮೂರು । ಮೆರೆವಂಥ ಪಸರಂಗಳಿಹವು vii–56

ನಾರಿಯ ವೈಬಣ್ಣ ತೋರುವ ಚಿನ್ನವು । ಸೇರಿ ರಸವು ದುಂಡಾಗಿ
ಧಾರಿಣಿ ಪತಿಗಳ ಊಟಕ್ಕೆ ಸಲುವಂಥ । ಕ್ಷೀರಿಯ ತಂದು ಮಾರುವರು vii–57

ಸಿಂಬೆಯ ಹಣ್ಣನ್ನು ಇದಕ್ಕಿಂತ ಚೆನ್ನಾಗಿ ಚಿತ್ರಿಸಿರುವುದು ಬೇರೆಲ್ಲಿಯೂ ಕಾಣೆ

ಬಿಂದಿಗೆಯೊಲು ತಾನು ಚಂದವಾಗಿರುವಳು । ಮಂದಿಯೊಳಗೆ ಹಲ್ಲ ಕಿಸಿದು
ಅಂದಗಾರರು ಕೊಂಡು ಮೆಲ್ಲೆ ರುಚಿದೋರುವ । ಚಂದದ ಪಸರಗಳಿಹವು vii–59

ಬಿರಿದ ದಾಳಿಂಬೆಯ ಹಣ್ಣಿನ ಆಕಾರ ಹೀಗೆಯೇ ತಾನೆ ಇರುವುದು ?

"ಮಾತುಲ" ಎಂಬ ಮಾತಿಗೆ ಎರಡು ಅರ್ಥವಿದೆಯೆಂಬುದನ್ನೂ ಅರಿತರೆ ಈ ಕೆಳಗಿನ ಪದ್ಯದ ಸೊಗಸು ನೆತ್ತಿಗೆ ಹತ್ತುವುದು.

ಹುಡುಗನ ಪೆತ್ತವಳ ಒಡಹುಟ್ಟು ತನಗಿಲ್ಲ ! ಕಡುಮೋಹದ ಸುತೆಯಿಲ್ಲ
ನುಡಿವರೆಲ್ಲರು ಮಾತುಲನೆಂದು ಕಾಯುವ । ಪಡೆದ ರಂಗಾದ ಫಲಗಳ vii–62

ಏಲಕ್ಕಿ ಲವಂಗಗಳನ್ನು ಹೇಳುವಾಗಲೂ ಕವಿಯು ಇದೇ ತೆರನಾದ ಜಾಣ್ಮೆಯನ್ನು ತೋರಿದ್ದಾನೆ.

ಅಡಕೆ ಎಲೆಯಂತೆ ಬಿಡದೆ ಬೇರೊಳು ಲತೆ । ತೊಡಕಿದ ಫಲಗೆಜ್ಜೆಯಂತೆ
ಕಡು ಪ್ರೀತಿ ಸುಗುಣಳ ಅಡಿಗೆ ಪಾಕಕೆ ಯೋಗ್ಯ । ಮಡಗಿ ಮಾರುವ ಪಸರಗಳು vii–66

ಕಡು ಪ್ರೀತಿಯುಳ್ಳ ಸುಗುಣಳು ಇದಕ್ಕೆ 'ಅಡಿಗೆ ಪಾಕ'ಕ್ಕೆ ಬಳಸಿಕೊಳ್ಳದಿರುತ್ತಾಳೆಯೆ ?

ನೋಡಿದರೆ ಸಣ್ಣವನು ನೀಡಲು ಅಂಗಕ್ಕೆ । ನೀಡುವನು ಕ್ರೂರನಾಗಿ
ಪಾಡುಳ್ಳ ಸುಗುಣರ್ಗೆ ಕೂಡೆ ವೀಳ್ಯಕೆ ಮೆಚ್ಚು । ರೂಢಿಯೊಳಧಿಕ ಪಸರಗಳು vii–76

ಜಾಕಾಯಿ ಪತ್ರೆಗಳ ಬೆಲೆ ಆಗಲೂ ಅತಿಯಾಗಿದ್ದಿತೇನೋ! ಆದುದರಿಂದಲೇ,

ಎಲೆಯ ಫಲವು ಯೋಗ್ಯ ಗೆಲವುಳ್ಳ ಪ್ರೌಢರಿಗೆ । ಒಲಿದು ಕೊಳ್ಳ ಹೆಚ್ಚು ಬೆಲೆಯು
ಲಲನೆ ಸುಗುಣರ ಮೆಚ್ಚು ದೇಹಕ್ಕೆ ಅತಿ ಹೆಚ್ಚು । ಬಲು ಹೆಚ್ಚು ಪಸರಂಗಳಿಹವು vii-68

ಮೆಣಸಿನಕಾಯಿಯ ಘಾಟು ಯಾರ ಅನುಭವಕ್ಕೆ ಬಂದಿಲ್ಲ ?

ತ್ರಾಸಿನೊಳಗೆ ಇಡೆ ಘಾಸಿ ಮಾಳ್ಪುದು ಜನರ । ಸೂಸೆ ನಾಸಿಕ ನೇತ್ರದೊಳಗೆ
ಮೋಸಹೋದವನಂತೆ ಸೂಸುತಿರ್ಪವು ನೀರು । ಲೇಸಿನ ಪಸರಂಗಳಿಹವು vii-70

ಜೇನಿನ ಬಣ್ಣನೆ ಅದರಷ್ಟೆ ಇನಿದಾಗಿದೆ, ಬನಿಯುಳ್ಳದ್ದಾಗಿದೆ. ರಾಣಿ ಜೇನು,

ಗಿಡಕೆ ಮನೆಯ ಕಟ್ಟಿ ಪಡೆವಳು ತನುಜರ । ಬಿಡದೆ ಜೋಗುಳವ ಪಾಡುವಳು
ಒಡನೆ ರಸವು ಕೂಡಿ ಹುಡುಗರು ಕಾಣುತ್ತ । ತಡೆಯದೆ ತಂದು ಮಾರುವರು vii–71

—ಪ್ರಪಂಚವೇ ಹೀಗೆ.

ಪುರುಷನಾಳುವ ಸ್ತ್ರೀಯ ಉರವೈಯ ಪಿಡಿವುದು । ಭರದಿಂದ ಕುಚಗಳನೊತ್ತಿ
ವಿರಹ ಮನದೊಳಗೆಲ್ಲ ಧರಿಸಿದವಳ ಮೆಚ್ಚು । ಪರರಿಗೆ ಅತಿ ಪೆಚ್ಚು ಪಸರ vii–75

ಈ ವರ್ಣನೆ ಆರಿಸಿನವನ್ನು ಕುರಿತದೆಂದು ಹೇಳಬೇಕಾಗಿಲ್ಲ.
ತಟ್ಟಿ ಜೇಗಟೆಗಳು ಈ ಕವಿಯ ಕಣ್ಣಿಗೆ ಹೇಗೆ ಕಾಣುತ್ತಿಪ್ಪವು ?

ಪುಡಿ ಬೂದಿ ತಿಂಬುತ್ತ ಗೊಡುಗುಟ್ಟಿ ರಂಗಾಗಿ । ಬಿಡದೆ ಗಗನಕೇ ಬಾಯ್ದೆರೆದು
ಸಡಗರದಿ ಜಾಣರು ತಡೆಯದೂಟಕೆ ಜರೆ । ನಡೆದು ಬರುವಳ ಮಾರುವರು vii_81

ಅಂಗ ತೆಳ್ಳಗೆ ಆಗಿ ತಿಂಗಳಂತಿರುವುದು । ಹಿಂಗದೆ ಹಗ್ಗದಿಂ ಕಟ್ಟಿ
ಮುಂಗೊಂಡು ಜಡಿಯಲು ಡೊಂಬಿಯ ಮಾಳ್ಪಂಥ । ಸಂಗಿಯ ತಂದು ಮಾರುವರು vii–28

ಹೀಗೆ ಒಟ್ಟು ನೂರಾರು ಒಗಟುಗಳು ಈ ಕೃತಿಯಲ್ಲಿ ದೊರೆಯುತ್ತಿವೆ. ಅವುಗಳಲ್ಲಿ ಕೆಲವು ಅಲಂಕಾರ ಮಯವಾಗಿವೆ; ಕೆಲವು ಚಮತ್ಕಾರವುಳ್ಳವು; ಮತ್ತೆ ಕೆಲವು ಭಾವ ಬೆಡಗುಗಳಿಂದ ಕಂಗೊಳಿಸುತ್ತಿವೆ. ಕವಿಯು ಆನಗೋಡು 'ಪೇಟೆ'ಯಲ್ಲಿದ್ದ ಸರಕುಗಳನ್ನು ವರ್ಣಿಸುತ್ತ,

ನುಳಿಗಿಗಳಲಿ ಜೇಗ ಬಳಸಿದ ದಿನಸುಗಳ । ಉಳಿಯದೆ ಒಗಟಿಸಿಂ ಪೇಳ್ವೆ
ತಿಳಿವಂಥ ಪ್ರೌಢರಿಗೆ ಬಲುಪೆರ್ಚೆ ನಗುಪ್ಪೋಲ್ ನಿ । ಮ್ಮೆಳೆಯ ಬಾಲಕನುಸುರುವನು vii 53

ಎಂದು ಹೇಳಿರುವನು. ಆ ಪದಗಳೆಲ್ಲವೂ ನಿಜವಾಗಿಯೂ ಹಾಸ್ಯಮಯವಾಗಿವೆ.

'ಗೂಡಾರದ ಕವಿಯಂತಿರೆ ಮುಚ್ಚಿಪ್ಪೋದ ಕವಿಯುಂ ಕವಿಯೇ' ಎಂದು ಮಹಾಕವಿರನ್ನನೂ 'ಒಗಂಟು ಪೇಳ್ವ ಕವಿಯುಂ ಕವಿಯೇ' ಎಂದು ಪಾರ್ಶ್ವಪಂಡಿತನೂ ಹೇಳಿರುವುದು ರೇವಣಸಿದ್ಧನಂಥ ಕವಿಗಳನ್ನು ಕುರಿತು ಅಲ್ಲ; ಪ್ರಸನ್ನತೆಯಿಲ್ಲದ 'ಅರ್ಥಮಂ ಪ್ರಕಟಿಸಿ ಪೇಳದ' ಬರಡು ಕವಿಗಳನ್ನು ಕುರಿತು. ರೇವಣಸಿದ್ಧರಂತಹ ನಾಡು ಕವಿಗಳು ಅವರ ಲೆಕ್ಕದಲ್ಲಿ ಇರಲೂ ಇಲ್ಲ! ಅವರ ಆದರ್ಶ ಮುಖ್ಯವಾಗಿ ಸಂಸ್ಕೃತ ಮತ್ತು ಪ್ರಾಕೃತ ಸಾಹಿತ್ಯ. ಅವೇ ಇವರಿಗೇ ಸ್ಫೂರ್ತಿಯ ಸೆಲೆ, ಕಥಾವಸ್ತು ಭಂಡಾರ, ಭಾವಚಿಂತಾರತ್ನ'

ವಚನ ಸಾಹಿತ್ಯದ ಉಗಮವಾಗುವವರೆಗೆ ವಾಪೆ ಪದ್ಯಗಳು, ಒಗಟುಗಳು, ಬೆಡಗಿನ ನುಡಿಗಳು, ಮುಂಡಿಗೆಗಳು, ಹೇಳಿಕೆ ಪ್ರಹೇಳಿಕೆಗಳು, ಗ್ರಾಂಥಿಕ ಸಾಹಿತ್ಯದಲ್ಲಿ ಪ್ರವೇಶ ಪಡೆದಿರಲಿಲ್ಲ ಎಂದು ಹೇಳಬಹುದು. ಈಚೆಗೆ ಸಾಮಾನ್ಯರಿಂದ ಮೂಡಿಬಂದ ಕವಿಗಳಿಂದ, ಶ್ರೀ ಸಾಮಾನ್ಯನಿಗಾಗಿ ರಚಿಸಲ್ಪಟ್ಟ ಕೃತಿಗಳಲ್ಲಿ ಇವಕ್ಕೆ ಕ್ರಮೇಣ ಎಡೆಸಿಕ್ಕಿತು. ದೇಶೀ ಛಂದಸ್ಸಿನಲ್ಲಿರುವ, ಅದರಲ್ಲಿಯೂ ಸಾಂಗತ್ಯ ಶೈಲಿಯಲ್ಲಿರುವ ಕಾವ್ಯಗಳಲ್ಲಿ 'ವಾಪೆ'ಗಳು ಒಗಟುಗಳು ಸಮಯ ಸಾಧಿಸಿ ತಲೆಯೆತ್ತಿದುವು. (ಇವುಗಳ ರುಚಿಯನ್ನು ಕಂಡ, ಷಡಕ್ಷರದೇವನಂಥ ಕವಿಗಳು ಕೂಡ ಒಮ್ಮೊಮ್ಮೆ ಬಳಸಿಕೊಂಡದ್ದುಂಟು). ಈ ತೆರನ ತಂತ್ರವನ್ನು ಎಲ್ಲೆಲ್ಲಿ ಬಳಸಬೇಕು, ಯಾವ ಪ್ರಮಾಣದಲ್ಲಿ ಬಳಸಬೇಕೆಂಬುದರ ಅರಿವು ನಮ್ಮ ಜಾನಪದ ಕವಿಗಳಿಗೆ ಇದ್ದಿತು. ವರ್ಣನೆಗಳು ನಾಮ ನಿರ್ದೇಶನ, ವಸ್ತು ನಿರ್ದೇಶನ ಮಾಡುವಾಗ ಮಾತ್ರ ಈ ತಂತ್ರದ ಬಳಕೆ. ರೇವಣಸಿದ್ಧನ ಕೃತಿಯನ್ನು ಓದಿದರೆ ವಾಪೆ, ಒಗಟುಗಳ ಬಳಕೆಯ ಔಚಿತ್ಯದ ಅರಿವಾಗುವುದು.

ಅಂತೂ ಈ ಬಗೆಯ ಸಾಹಿತ್ಯದ ಅಧ್ಯಯನ ನಡೆಸುವವರಿಗೆ ಇಂತಹ ಕೃತಿಗಳಿಂದ ಬಹಳ ಪ್ರಯೋಜನವುಂಟು.

ಎಚ್. ನಂಜೇಗೌಡ

ಕರ್ಣಾಟಕ ಶಬ್ದಾನುಶಾಸನ–ಒಂದು ವಿವೇಚನೆ

ಸಂಶೋ? ಕನ್ನಡದಲ್ಲಿ ರಚಿತವಾದ ವ್ಯಾಕರಣ ಗ್ರಂಥಗಳಲ್ಲಿ ನೃಪತುಂಗನ 'ಕವಿರಾಜ ಮಾರ್ಗ'ವೇ ಮೊದಲನೆಯ ವ್ಯಾಕರಣಗ್ರಂಥ. ಇದು ಕೇವಲ ವ್ಯಾಕರಣಕ್ಕೇ ಮೀಸಲಾಗಿರದೆ ಅಲಂಕಾರಾದಿಗಳನ್ನು ಪ್ರಸ್ತಾಪಿಸಿರುವ ಗ್ರಂಥವಾಗಿದೆ. ಕ್ರಿ. ಶ. 1145 ರಲ್ಲಿ ನಾಗವರ್ಮನಿಂದ'ಶಬ್ದಸ್ಮೃತಿ'ಮತ್ತು 'ಭಾಷಾಭೂಷಣ',ಗಳೂಕ್ರಿ. ಶ.1260 ರಲ್ಲಿ ಕೇಶಿರಾಜನಿಂದ 'ಶಬ್ದಮಣಿ ದರ್ಪಣ'ವೂ ಮತ್ತು ಕ್ರಿ. ಶ. 1604 ರಲ್ಲಿ ಭಟ್ಟಾಕಳಂಕನಿಂದ 'ಕರ್ಣಾಟಕ ಶಬ್ದಾನುಶ್ಶಾಸನ'ವೆಂಬ ವ್ಯಾಕರಣ ಗ್ರಂಥವೂ ರಚಿತವಾದುವು.

ಶಬ್ದಾನುಶಾಸನದ ಕಡೆಯಲ್ಲಿ ಕಂಡುಬರುವ ಸಮಾಪ್ತಿಪದ್ಯಗಳಿಂದ ಭಟ್ಟಾಕಳಂಕ ದೇವನು 'ಶಬ್ದಾನುಶಾಸನ'ದ ಕರ್ತೃವೆಂದು ತಿಳಿದುಬರುತ್ತದೆ. ಇದರ ಸೂತ್ರಗಳನ್ನೂ, 'ಭಾಷಾಮಂಜರಿ'' ಎಂಬ ವೃತ್ತಿಯನ್ನೂ ಮತ್ತು 'ಮಂಜರೀ ಮಕರಂದ'ವೆಂಬ ವ್ಯಾಖ್ಯಾನವನ್ನೂ ಈತನೇ ಬರೆದನೆಂದೂ, ಅದರ ವ್ಯಾಖ್ಯಾನವು ಸ್ವಸ್ತಿಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷ 1526 ನೆಯ ಶೋಭಕೃತ್ ಸಂವತ್ಸರದಲ್ಲಿ ಬರೆದು ಮುಗಿಯಿತೆಂದೂ, ಶ್ರೀ ಅಕಳಂಕ ದೇವನು ಆತನ ಗುರುವೆಂದೂ, ತಿಳಿದುಬರುತ್ತದೆ. ತಾನು ನಾನಾ ಬಗೆಯ ತರ್ಕಗಳಲ್ಲಿ ನಿಷ್ಣಾತನೆಂದೂ, ಮಹಾ ವ್ಯಾಖ್ಯಾನ ಪಟುವೆಂದೂ, ಹಲವು ರಾಜಾಸ್ಥಾನಗಳಲ್ಲಿ ಜೈನಧರ್ಮದ ಮಹತ್ತನ್ನು ಎತ್ತಿಹಿಡಿದವನೆಂದೂ, ಕರ್ಣಾಟಕ ಸಂಸ್ಕೃತ ಭಾಷೆಗಳೆರಡರಲ್ಲಿಯೂ ದಿಗ್ದಂತಿಯೆಂದೂ, ಸಾಧು ಜನಪ್ರಿಯನೆಂದೂ ಆತ ಗ್ರಂಥದ ಸಮಾಪ್ತಿ ಪದ್ಯಗಳಲ್ಲಿ ಹೇಳಿಕೊಂಡಿದ್ದಾನೆ.

ಶಬ್ದಾನುಶಾಸನವು ತನ್ನ ಹಿಂದಿನ ವ್ಯಾಕರಣಗಳಿಗಿಂತ ವಿವರವಾಗಿದೆ ; ವಿಸ್ತಾರವಾಗಿದೆ ; ಸಮಗ್ರವಾಗಿದೆ ಹಾಗೂ ಶಾಸ್ತ್ರೀಯವಾಗಿದೆ. ಇದು ಹೆಚ್ಚು ಪ್ರೌಢ ಮತ್ತು ಅಧಿಕೃತ. ಭಟ್ಟಾಕಳಂಕದೇವನು ಹಿಂದಿನ ವ್ಯಾಕರಣಕಾರರನ್ನು ಸಾಮಾನ್ಯವಾಗಿ ಅನುಸರಿಸಿರುವನಾದರೂ ಅಂಧಾನುಕರಣವನ್ನು ಮಾಡಿಲ್ಲ. ವಿಷಯ ಪ್ರತಿಪಾದನೆಯಲ್ಲಿ ಹಿಂದಿನ ವ್ಯಾಕರಣಕಾರರನ್ನು ಅನುಸರಿಸಿದ್ದರೂ ನಿರೂಪಣಾ ವಿಧಾನದಲ್ಲಿ ಸಂಸ್ಕೃತ ವೈಯಾಕರಣರನ್ನು ಅನುಸರಿಸಿದ್ದಾನೆ; ಸ್ವತಂತ್ರವಾಗಿ ಆಲೋಚಿಸಿ ಪ್ರತಿಪಾದಿಸಹೊರಟಿದ್ದಾನೆ. ಅನೇಕವೇಳೆ ಅವರಿಂದ ಭಿನ್ನಾಭಿಪ್ರಾಯಗಳನ್ನು ಸೂಚಿಸಿದ್ದಾನೆ.ನಾಗವರ್ಮ ಕೇಶಿರಾಜರ ಗ್ರಂಥಗಳ ಪ್ರಯೋಗಗಳನ್ನು ಅನೇಕ ಕಡೆ ಆತ ಉದಾಹರಿಸಿದ್ದಾನೆ. ಅವರಿಂದ ಭಿನ್ನವಾದ ಸ್ವತಂತ್ರಾಭಿಪ್ರಾಯಗಳನ್ನೂ ಪ್ರಕಟಿಸಿದ್ದಾನೆ. ಈತನ ಪ್ರತಿಪಾದನೆಯು ಹಲವು ಕಡೆಗಳಲ್ಲಿ ತನ್ನ ಹಿಂದಿನವರಿಗಿಂತ ಹೆಚ್ಚು ವಿಸ್ತಾರವೂ, ವಿವರಪೂರ್ಣವೂ, ತರ್ಕಬದ್ಧವೂ ಆಗಿದೆ. ನಾಗವರ್ಮ ಮತ್ತು ಕೇಶಿರಾಜರುಗಳ ಗ್ರಂಥಗಳಲ್ಲಿ ಪರಿಭಾಷಾಸೂತ್ರಗಳಿಲ್ಲ. ಆದರೆ ಶಾಸನಕಾರನು ಸಂಸ್ಕೃತ ವೈಯಾಕರಣರನ್ನು ಅನುಸರಿಸಿ ಅನುಕರಿಸಿ ಪರಿಭಾಷಾ ಸೂತ್ರಗಳನ್ನು ರಚಿಸಿದ್ದಾನೆ. ಪ್ರಯೋಗ ಪ್ರಾಮಾಣ್ಯದಲ್ಲಿ 'ಶಬ್ದಮಣಿದರ್ಪಣ'ವು ಅದ್ವಿತೀಯ ನಿಜ. ಆದರೆ ಶಾಸ್ತ್ರ ಪ್ರೌಢಿಮೆಯಲ್ಲಿ 'ಶಬ್ದಾನುಶಾಸನ' ಅದ್ವಿತೀಯ. ಸಂಸ್ಕೃತದಲ್ಲಿ

‘ಅಷ್ಟಾಧ್ಯಾಯಿ’ಗಿರುವ ಸ್ಥಾನ ಕನ್ನಡದಲ್ಲಿ ‘ಶಬ್ದಾನುಶಾಸನ’ಕ್ಕಿದೆಯೆಂದು ಶ್ರೀ ಆರ್. ನರಸಿಂಹಾಚಾರ್ಯರು ಹೇಳಿರುವ ಮಾತು ಸಾರ್ಥಕವಾದುದು. ಆದರೆ ಇದರ ವ್ಯಾಖ್ಯಾನವಾದ ‘ಮಂಜರೀ ಮಕರಂದ’ವನ್ನು ಪತಂಜಲಿ ಮಹಾಭಾಷ್ಯಕ್ಕೆ ಹೋಲಿಸಿರುವುದು ಅತಿಶಯೋಕ್ತಿ ಎನಿಸದಿರಲಾರದು. ವ್ಯಾಖ್ಯಾನಕಾರನ ಪಾಂಡಿತ್ಯ, ಆತನ ಕನ್ನಡದ ಅಭಿಮಾನ–ಇತ್ಯಾದಿಯಾದ ವಿಚಾರದಲ್ಲಿ ಆತನ ವ್ಯಾಖ್ಯಾನಕ್ಕಿರುವ ಪ್ರಾಶಸ್ತ್ಯ ಅದ್ವಿತೀಯವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ ಅದು ಪತಂಜಲಿಯ ‘ಮಹಾಭಾಷ್ಯ’ದಂತೆ ಮೂಲದ ತಿರುಳನ್ನು ಸಮಗ್ರವಾಗಿ ಅಭಿವ್ಯಕ್ತಿಗೊಳಿಸುವ ಮತ್ತು ಮೂಲಸೂತ್ರಗಳಿಗೆ ಸರ್ವಸಮರ್ಪಕವಾಗಿದೆಯೆಂಬ ವಿಚಾರದಲ್ಲಿ ಸ್ವಲ್ಪ ಸಂದೇಹವಾಗುತ್ತದೆ. ಇದನ್ನು ಇಲ್ಲಿ ಪ್ರಸ್ತಾಪಿಸಲಾಗುತ್ತದೆ.

ಶಬ್ದಾನುಶಾಸನವು ಸೂತ್ರರೂಪವಾಗಿದ್ದು 592 ಸೂತ್ರಗಳನ್ನೊಳಗೊಂಡಿದೆ. ಇದರಲ್ಲಿ ನಾಲ್ಕು ಪಾದಗಳಿವೆ. ಒಂದನೆಯ ಪಾದದಲ್ಲಿ ವರ್ಣಸಮಾಮ್ನಾಯ, ಸಂಜ್ಞಾಸೂತ್ರಗಳು, ಸಂಧಿ, ಅವ್ಯಯ (ಸೂತ್ರ 1ರಿಂದ101) ವಿಚಾರವಿದೆ. ಎರಡನೆಯ ಪಾದದಲ್ಲಿ ಲಿಂಗ, ಸಂಸ್ಕೃತ ಶಬ್ದಗಳು ಕನ್ನಡಕ್ಕೆ ಲಿಂಗವಾಗುವ ಬಗೆಗಳು ಮತ್ತು ವಿಭಕ್ತಿ ಪ್ರತ್ಯಯ (ಸೂತ್ರ 102 ರಿಂದ 291) ವಿಚಾರವಿದೆ. ಮೂರನೆಯ ಪಾದದಲ್ಲಿ ಸಮಾಸ, ಪುರುಷವಾಚಕ ಸರ್ವನಾಮಗಳು, ವಚನ, ಸಂಖ್ಯಾವಾಚಕ ಮತ್ತು ತದ್ಧಿತ (ಸೂತ್ರ 292 ರಿಂದ 441)ಗಳ ವಿಚಾರವಿದೆ. ನಾಲ್ಕನೆಯ ಪಾದದಲ್ಲಿ ಧಾತು ಮತ್ತು ಕೃದಂತಗಳ (ಸೂತ್ರ 442 ರಿಂದ 592) ವಿಚಾರವಿದೆ ಈ ಸೂತ್ರಗಳಿಗೆ ‘ಭಾಷಾಮಂಜರಿ’ ಎಂಬ ವೃತ್ತಿಯೂ ‘ಮಂಜರಿ ಮಕರಂದ’ವೆಂಬ ವ್ಯಾಖ್ಯಾನವೂ ಇವೆ. ಈ ಗ್ರಂಥಕ್ಕಿಟ್ಟಿರುವ ‘ಶಬ್ದಾನುಶಾಸನ’ವೆಂಬ ಹೆಸರು ಹೊಸದೇನೂ ಅಲ್ಲ. ಶಾಕಟಾಯನ ಮತ್ತು ಹೇಮಚಂದ್ರರು ತಮ್ಮ ವ್ಯಾಕರಣ ಗ್ರಂಥಗಳನ್ನು ಆ ಹೆಸರಿನಿಂದ ಕರೆದಿದ್ದರು. ವೃತ್ತಿ ಮತ್ತು ವ್ಯಾಖ್ಯಾನಗಳಿಗೆ ಕೊಟ್ಟಿರುವ ಹೆಸರುಗಳೂ ಸಹ ಹೊಸವೇನೂ ಅಲ್ಲ. ಹರದತ್ತನು ತನ್ನ ವ್ಯಾಕರಣವನ್ನು ‘ಪದಮಂಜರಿ’ ಎಂದೂ, ರಂಗನಾಥನು ಅದರ ವ್ಯಾಖ್ಯಾನವನ್ನು ‘ಮಂಜರೀ ಮಕರಂದ’ವೆಂದೂ ಹೆಸರಿಸಿದ್ದರು. ಪ್ರಾಯಶಃ ಭಟ್ಟಾಕಳಂಕನು ಆ ಹೆಸರುಗಳನ್ನು ಅಲ್ಲಿಂದಲೇ ಎತ್ತಿಕೊಂಡು ತನ್ನ ಗ್ರಂಥದಲ್ಲಿ ಬಳಸಿಕೊಂಡಿರುವಂತೆ ಕಂಡುಬರುತ್ತದೆ.

ಶಬ್ದಾನುಶಾಸನದ ಸೂತ್ರಕಾರನೂ ವೃತ್ತಿಕಾರನೂ ಒಬ್ಬನೇ ಎಂಬುದಾಗಿ ಸ್ವೀಕರಿಸುವುದು ಸಾಂಪ್ರದಾಯಿಕವಾಗಿ ಬಂದಿದೆ. ಆದರೆ ಶಾಸನವನ್ನು ಆಮೂಲಾಗ್ರವಾಗಿ ಓದಿದಾಗ ಆ ಮಾತು ವಿಚಾರಣೀಯವಾಗಿ ತೋರುತ್ತದೆ. ಅಲ್ಲದೆ ಸೂತ್ರಕಾರರು ತಮ್ಮ ಸೂತ್ರಗಳಿಗೆ ವೃತ್ತಿಯನ್ನು ಬರೆದಿರುವ ನಿದರ್ಶನಗಳಿದ್ದರೂ ತಾವೇ ವ್ಯಾಖ್ಯಾನಿಸಿರುವ ನಿದರ್ಶನಗಳು ಸಾಮಾನ್ಯವಾಗಿ ಕಂಡುಬರುವುದಿಲ್ಲ. ಇದನ್ನು ಕುರಿತು ಸುಮಾರು ಐವತ್ತು ವರ್ಷಗಳ ಕೆಳಗೆ ವ್ಯಾಕರಣ ವಿದ್ವಾಂಸರಾದ ಕಾನಕಾನಹಳ್ಳಿ ವರದಾಚಾರ್ಯರು ಸುದೀರ್ಘವಾದ ಒಂದು ಲೇಖನವನ್ನು ಬರೆದು ಕನ್ನಡಸಾಹಿತ್ಯ ಪರಿಷತ್ಪತ್ರಿಕೆಯಲ್ಲಿಯೂ, ಪ್ರಬುದ್ಧ ಕರ್ಣಾಟಕದಲ್ಲಿಯೂ ಪ್ರಕಟಿಸಿದುದಲ್ಲದೆ ಸ್ವತಂತ್ರವಾದ ಪುಸ್ತಿಕೆಯೊಂದನ್ನು ಪ್ರಕಟಿಸಿದರು. ಆದರೆ ಶ್ರೀ ಆರ್. ನರಸಿಂಹಾಚಾರ್ಯರು ಶಬ್ದಾನುಶಾಸನದ ಮುನ್ನುಡಿಯಲ್ಲಿ ಅದನ್ನು ಅಲ್ಲಗಳೆದಿದ್ದಾರೆ. ಅಲ್ಲದೆ ಸ್ವಲ್ಪ ಮಟ್ಟಿಗೆ ವ್ಯಂಗ್ಯವಾಗಿಯೂ ಕಟಕಿಯಾಡಿದ್ದಾರೆ. ಆದರೆ ಶ್ರೀ ನರಸಿಂಹಾಚಾರ್ಯರು ವರದಾಚಾರ್ಯರು ಎತ್ತಿರುವ ಆಕ್ಷೇಪವನ್ನು ಸುಲಭವಾಗಿ ತಳ್ಳಿಹಾಕಿರುವುದು ಸಮಂಜಸವಾಗಿ ಕಾಣಲಾರದು. ಶ್ರೀ ವರದಾಚಾರ್ಯರು ತಮ್ಮ ಆಕ್ಷೇಪವನ್ನು ಹೀಗೆ ಪ್ರಸ್ತಾಪಿಸಿದ್ದಾರೆ :

‘ಸಾಧಾರಣವಾಗಿ ಸೂತ್ರಕಾರರು ಓದುಗರಿಗೆ ಸೂತ್ರಾರ್ಥವನ್ನು ಸ್ಪಷ್ಟಪಡಿಸಲು ವೃತ್ತಿಯನ್ನು ಬರೆಯುವುದು ರೂಢಿ. ಕವಿರಾಜಮಾರ್ಗ, ಕಾವ್ಯಾವಲೋಕನ, ಶಬ್ದಮಣಿದರ್ಪಣ, ಕರ್ಣಾಟಕ ಭಾಷಾಭೂಷಣಕಾರರು ಇದೇ ಮಾರ್ಗವನ್ನವಲಂಬಿಸಿ ತಾವೇ ಸೂತ್ರಗಳಿಗೆ ವೃತ್ತಿಯನ್ನು ರಚಿಸಿದ್ದಾರೆ. ಸೂತ್ರಗಳಿಗೆ ಭಾವಾಂತರವಾಗದಂತೆ ತತ್ತದ್ಗ್ರಂಥಕಾರರೇ ಸ್ವಾಭಿಪ್ರಾಯವನ್ನು ವಿಶದಪಡಿಸಿರುವುದರಿಂದ ಯಾವ ಸಂದೇಹಕ್ಕೂ ಅವಕಾಶವಿರುವುದಿಲ್ಲ. ಈ ವ್ಯಾಕರಣವು (ಕರ್ಣಾಟಕ ಶಬ್ದಾನುಶಾಸನ) ಸೂತ್ರಾಧಿಕ್ಯವಿಲ್ಲದೆಯೂ, ಪದಾಧಿಕ್ಯವಿಲ್ಲದೆಯೂ

ಕೊನೆಗೆ ಕ್,ಚ್,ಟ್–ಇತ್ಯಾದಿ ಅರ್ಧ ಮಾತ್ರಕವಾದ ಒಂದು ವ್ಯಂಜನವೂ ಅಧಿಕವಾಗಿಲ್ಲದಂತೆಯೂ, ವಿಚಾರ ಪೂರ್ವಕವಾಗಿ ನೋಡಿದರೆ ವಿವೇಕ್ಷಿತಾರ್ಥವೆಲ್ಲ ಲಭಿಸುವಂತೆಯೂ ವಿಮರ್ದಸಹಜವಾಗಿರುವಂತೆಯೂ ವಿಚಾರಶೀಲ ನಾದ ಯಾವನೋ ಒಬ್ಬ ಮಹಾಮೇಧಾವಿಯಿಂದ ರಚಿತವಾಗಿರುವುದು. ಆದರೆ ಮೇಲೆ ಹೇಳಿದ ಇತರ ವೈಯಾ ಕರಣರಂತೆ ಸ್ವಾಭಿಪ್ರಾಯ ವಿಶದವಾಗುವ ಹಾಗೆ ಕರ್ಣಾಟಕ ಶಬ್ದಾನುಶಾಸನ ಸೂತ್ರಕಾರನು ತನ್ನ ಸೂತ್ರಗಳಿಗೆ ಅರ್ಥವನ್ನು ಬರೆಯಲಿಲ್ಲವಾದರೂ ಅಲ್ಲಲ್ಲಿ ಕೆಲವು ಸೂತ್ರಗಳಿಗೆ ಸೂತ್ರಪ್ರಾಯವಾದ ಲಘುವೃತ್ತಿಯನ್ನೂ ಒಂದೊಂದು ಲಕ್ಷ್ಯವನ್ನೂ ಬರೆದಿದ್ದಂತೆ ಕಾಣುತ್ತದೆ. ಸೂತ್ರಪ್ರಾಯ ಲಘುವೃತ್ತಿ ಸಹಿತವಾದ ಕರ್ಣಾಟಕ ಶಬ್ದಾನುಶಾಸನ ವನ್ನು ಬರೆದ ಮಹಾನುಭಾವನಾರೋ ತಿಳಿಯದು. ಭಟ್ಟಾಕಳಂಕನಿಗೆ ಅದು ದೊರೆಯಲು ಅವನು ಕೆಲವು ಅಧಿಕ ಸೂತ್ರಗಳನ್ನು ಸೇರಿಸಿ ಅಲ್ಲಲ್ಲೇ ಕೆಲವು ಸೂತ್ರಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಅದಕ್ಕೆ ಭಾಷಾಮಂಜರಿ ಯೆಂಬ ವೃತ್ತಿಯನ್ನೂ ಆ ವೃತ್ತಿಗೆ ಮಂಜರೀ ಮಕರಂದವೆಂಬ ವ್ಯಾಖ್ಯಾನವನ್ನೂ ಬರೆದು

> ಯಃ ಕರ್ಣಾಟಕ ಶಬ್ದಶಾಸನಮಿದಂ ನಿರ್ಮಾಯ ಶರ್ಮಾವಹಂ
> ವೃತ್ತಿಂ ಚಾರುಚಯಚ್ಚ ತಸ್ಯ ವಿಧುಷಾಂ ಪ್ರೌಢಂ ಪ್ರರೂಢಶ್ರಿಯಾಂ
> ತೇನೇದಂ ವ್ಯರಚಿ ಪ್ರಗಲ್ಭ ವಚಸಾ ಭಟ್ಟಾಕಲಂಕೇನ ತ
> ದ್ವೃತ್ತೇಃ ಸಾಧು ನಿಬಂಧನಂ ಚ ಮಕರಂದಾಖ್ಯಾಂ ಸಮಾಖ್ಯಾಸ್ಪದಂ

ಎಂದು ಹೇಳಿಕೊಂಡಿದ್ದಾನೆ.

'ಕಾದಲರಃ 75', 'ವಾಗಿ 85', 'ಆದಿಷ್ಟಾದ್ರಬಿ: 514'–ಇವು ಸಾಧು ಸೂತ್ರಗಳಲ್ಲ. ಈ ಸೂತ್ರಗಳಿಗೆ ಕೊಟ್ಟಿರುವ ಕಾದಲದಿರ್, ಕಾದಲದಿರ್ಗ್ಗೆ, ಕಾದಲವಿರ್, ಕಾದಲವಿರ್ಗ್ಗೆ. ಕಾದಲರ್ಗಳ್, ಕಾದಲರ್ಗ್ಗಳ್, ಕಾದಲೆ ಯರ್ಗ್ಗಳ್, ಕಾದಲದಿರ್ಗ್ಗಳ್, ಕಾದಲವಿರ್ಗ್ಗಳ್, ತೋರ್ಗುಂ, ನೋೞ್ಪಿರ್ಗ್ಗಿ ಮಾೞ್ಪಿರ್ಗ್ಗಂ, ಸೂೞ್ಪಿಂ–ಈ ಪ್ರಯೋಗ ಗಳೂ ಸಾಧು ಪ್ರಯೋಗಗಳಲ್ಲ. ಈ ಶಬ್ದಗಳಲ್ಲಿ ಯಾವುದೊಂದು ಶಬ್ದವನ್ನಾದರೂ ಯಾವ ಪ್ರಾಕ್ತನ ಗ್ರಂಥ ಕಾರನೂ ಪ್ರಯೋಗಿಸುವುದಿಲ್ಲ. ಕವಿರಾಜಮಾರ್ಗದಲ್ಲಿ 'ಮಾಡುವೆನೆಂಬುದಲ್ಲಮಣಮಾಗದು ಸೂೞ್ಪಿನಮೋಘ ವೆಂಬುದುಂ' ಎಂಬುದಾಗಿ ಸೂೞ್ಪಿಂ ಇತ್ಯಾದಿ ರೂಪಗಳು ಅಸಾಧುರೂಪಗಳೆಂದು ನಿಷೇಧಿಸಿದ್ದರೂ ಈ ಭಟ್ಟಾಕಳಂಕ ದೇವನು ಸೂೞ್ಪಿಂ, ಸೂೞ್ಪಿನಂ ಎಂಬ ರೂಪಗಳನ್ನು ಅಂಗೀಕರಿಸಿದ್ದಾನೆ. 'ಕಾದಲರ್ಗ್ಗಳ್' ಇತ್ಯಾದಿಯಾದ ರೂಪ ಸಿದ್ಧಿಯಾಗದೆ 'ಕಾದಲರ್ಕ್ಕಳ್' ಇತ್ಯಾದಿ ರೂಪಗಳು ಸಿದ್ಧಿಸುವಂತೆ ಮಣಿದರ್ಪಣದಲ್ಲಿಯೂ, ಶಬ್ದಾನು ಶಾಸನ ಸೂತ್ರಮಾಲೆಯಲ್ಲಿಯೂ ಸೂತ್ರಗಳಿದ್ದರೂ ಅವುಗಳ ಪರ್ಯಾಲೋಚನೆಯೇ ಇಲ್ಲ. ನೇರವಾಗಿ ಸೂತ್ರಕ್ಕೆ ಅನ್ವಯಿಸದ ಪ್ರಯೋಗಗಳು ಹೇರಳವಾಗಿ ವ್ಯಾಖ್ಯಾನದಲ್ಲಿ ದೊರೆಯುತ್ತವೆ. ಅಸಾಧು ಮತ್ತು ನಿಷಿದ್ಧರೂಪಗಳನ್ನು ತಿಳಿಸುವ ಈ ಸೂತ್ರಗಳನ್ನು ಸೂತ್ರಕಾರನು ರಚಿಸಲಾರ. ಇವುಗಳನ್ನು ಭಟ್ಟಾಕಳಂಕನು ಸೇರಿಸಿರಬೇಕು. ಸೂತ್ರ ಕಾರನಿಗೆ ಭ್ರಮಪ್ರಮಾದಿ ದೋಷಗಳಿರಬಾರದು. ಅಲ್ಲದೆ ಪೂರ್ಣ ಪರಿಜ್ಞಾನವಿರಬೇಕು. ಸೂತ್ರಗಳ ಸ್ವರೂಪದಿಂದ ಅಪ್ರತಿಮ ಪಾಂಡಿತ್ಯವನ್ನುಳ್ಳ ಸೂತ್ರಕಾರನು ಈ ಸೂತ್ರಗಳನ್ನು ರಚಿಸಲಾರ. ಸಂಕ್ಷಿಪ್ತವಾಗಿರುವ ಸೂತ್ರಕ್ಕೂ, ವಿಸ್ತೃತವಾಗಿರುವ ವೃತ್ತಿಗೂ ಮಹಾ ವಿಚಾರಪರಿಪೂರ್ಣವಾಗಿರುವ ವ್ಯಾಖ್ಯಾನಕ್ಕೂ ಕೂಡ ಸಮಾನ ಲಕ್ಷ್ಯಸಿದ್ಧಿ ಯಲ್ಲಿ ತಾತ್ಪರ್ಯವಿರಬೇಕೇ ಹೊರತು ಪರಸ್ಪರ ವಿರುದ್ಧ ರೂಪಸಿದ್ಧಿಯಲ್ಲಿ ತಾತ್ಪರ್ಯವಿರಕೂಡದು. ಈ ಹೊಂದಾ ಣಿಕೆ ಪ್ರಕೃತ ಕಂಡು ಬರುವುದಿಲ್ಲ.

'ಮೋನಃ ಸ್ವರೇ 77', 'ನಪಿವಾ 78' ಎಂಬ ಸೂತ್ರದ್ವಯವು ಪದಾಂತ ವಿಷಯಕವೆಂಬುದಾಗಿ ಭಟ್ಟಾ ಕಳಂಕದೇವನು ವ್ಯಾಖ್ಯಾನದಲ್ಲಿ ಬರೆದಿರುವನು. ಈ ವ್ಯಾಖ್ಯಾನಕಾರನ ವಚನವು ಸಂಗತವಾಗಿದ್ದಲ್ಲಿ—'ತಾಮಿ ವರ್', 'ದೇವನಿಂದಮಿಾಗಳ್', 'ಮಾಡುಗುಮಿಂದು', 'ಬೆಸಸಿಮಿಾಗಳ್'—ಇತ್ಯಾದಿ ರೂಪಗಳಲ್ಲಿ 'ಮೋನಃಸ್ವರೇ

77' ಎಂಬ ಸೂತ್ರದಿಂದ ಪದಾಂತ ಮಕಾರಕ್ಕೆ ಣಕಾರಾದೇಶವೂ, ಹೀಗೆಯೇ 'ವಪಿವಾ 78' ಎಂಬ ಸೂತ್ರದಿಂದ 'ನೆಲನಿದು'ಎಂದಾಗಿರುವಂತೆ 'ನೆಲನಿಂದಮಿಾಗಳ್'ಇತ್ಯಾದಿ ರೂಪಗಳಲ್ಲಿ ಮಕಾರಕ್ಕೆ ನಕಾರಾದೇಶವೂ 'ವೃಕ್ಷಮಿದು' ಎಂದಾಗಿರುವಂತೆ 'ವೃಕ್ಷಮನಿದಂ' 'ವೃಕ್ಷದಿನೀಗಳ್' ಇತ್ಯಾದಿ ರೂಪಗಳಲ್ಲಿ ವಿಭಕ್ತಿಪ್ರತ್ಯಯದ ಮಕಾರಕ್ಕೆ ಸ್ವರೂಪಾವಸ್ಥಿತಿಯೂ ಬರಬೇಕಾದೀತೆಂದು ವಿವರಿಸಬೇಕಾಗಿರುವುದಿಲ್ಲ. ಆದರೆ ಈ ನಮ್ಮ ಗ್ರಂಥದಲ್ಲಿ ಹೇಳಿರುವುದನ್ನು ನೋಡಿದರೆ ಈ ವಿಧವಾದ ಅಸಂಗತ ರೂಪಕ್ಕೆ ಅವಕಾಶ ಕಾಣಬರುವುದಿಲ್ಲ. ಈ ನಮ್ಮ ಹೇಳಿಕೆಗೆ ಸೂತ್ರದಲ್ಲಿರುವ ಜ್ಞಾಪಕಸಾಮಗ್ರಿಯೇ ಸಾಧಕ. ಈ ಮಾತ್ರದ್ವಯವನ್ನು ನೋಡಿದಲ್ಲಿ ವ್ಯಾಖ್ಯಾನದ ತಾತ್ಪರ್ಯವು ಅಸಂಗತವಾಗುವುದೆಂದೂ ಆದರೆ ಸೂತ್ರದ ತಾತ್ಪರ್ಯವು ಹೀಗಿರದೆ ಲೋಕಸಿದ್ಧ ಶಬ್ದಸ್ವರೂಪ ಬೋಧಕವಾಗಿ ಸಂಗತವಾಗಿರುವುದೆಂದೂ ಆದುದರಿಂದಲೇ ವ್ಯಾಖ್ಯಾನಕಾರನೂ ಸೂತ್ರಕಾರನೂ ಪರಸ್ಪರ ವಿಭಿನ್ನವಾಗಿರಬೇಕೆಂಬುದು ತಿಳಿಯದಿರಲಾರದು.'

ಹೀಗೆ ಪಂಡಿತ ವರದಾಚಾರ್ಯರು ಪಾಂಡಿತ್ಯಪೂರ್ಣವಾದ ವಿಮರ್ಶೆಯನ್ನು ನೀಡಿ ಸೂತ್ರಕಾರನಿಗಿಂತಲೂ ವೃತ್ತಿ ಮತ್ತು ವ್ಯಾಖ್ಯಾನಕಾರನು ಭಿನ್ನವೆಂದು ಎತ್ತಿಹಿಡಿದು, ಭಟ್ಟಾಕಳಂಕನು ವ್ಯಾಖ್ಯಾನಕಾರನಾಗಿದ್ದಾನೆ; ಸೂತ್ರಕಾರನಲ್ಲ ಎಂದು ವಿಚಾರಮಾಡಿದ್ದಾರೆ. ಭಟ್ಟಾಕಳಂಕನು ಸೂತ್ರಕಾರನಲ್ಲವೆಂಬ ಸಂದೇಹಕ್ಕೆ ಪುಷ್ಟಿಕೊಡುವ ಕೆಲವಂಶಗಳನ್ನು ಮುಂದೆ ಪ್ರಸ್ತಾಪಿಸಲಾಗಿದೆ.

ಗ್ರಂಥಾರಂಭದಲ್ಲಿ—

> ನಮಃ ಶ್ರೀ ವರ್ಧಮಾನಾಯ ವಿಶ್ವವಿದ್ಯಾವಭಾಸಿನೇ
> ಸರ್ವ ಭಾಷಾಮಯೀ ಭಾಷಾ ಪ್ರವೃತ್ತಾಯನ್ಮುಖಾಮ್ಬುಜಾತ್ ॥

ಎಂಬ ಮಂಗಳ ಪದ್ಯವಿದೆ. ಈ ಪದ್ಯದ ನಂತರ 'ಅಥ ಶಬ್ದಾನುಶಾಸನಮಾರಭ್ಯತೇ' ಎಂಬ ವಾಕ್ಯವಿದೆ. ವ್ಯಾಖ್ಯಾನದಲ್ಲಿ 'ಆರಭ್ಯತೇ, ಉಪಕ್ರಮ್ಯತೇ ವ್ಯಾಖ್ಯಾತುಮಿತಿ ಶೇಷಃ' (ಪುಟ 14) ಎಂಬ ವಿವರಣೆಯನ್ನು 'ಆರಭ್ಯತೇ' ಎಂಬ ಶಬ್ದಕ್ಕೆ ಕೊಡಲಾಗಿದೆ. ಆದ್ದರಿಂದ 'ಅಥ ಶಬ್ದಾನುಶಾಸನಮಾರಭ್ಯತೇ' ಎಂಬ ಮಾತು ವೃತ್ತಿಗೆ ಅನ್ವಯವಾಗುತ್ತದೆ. ಈ ಮಾತಿನ ಪ್ರಾರಂಭದಲ್ಲಿರುವ 'ಅಥ' ಶಬ್ದದಿಂದಾಗಿ ಗ್ರಂಥಾದಿಯಲ್ಲಿರುವ ಮಂಗಳಪದ್ಯವನ್ನು ವೃತ್ತಿಯ ಮಂಗಳಪದ್ಯವೆಂದೂ ಸೂತ್ರಗಳ ಮಂಗಳಪದ್ಯವಲ್ಲವೆಂದೂ ಭಾವಿಸಬೇಕಾಗುತ್ತದೆ. ಹಾಗೆ ಭಾವಿಸಿದರೆ ಸೂತ್ರಗಳಿಗೆ ಮಂಗಳಪದ್ಯವೇ ಇಲ್ಲವಾಗುತ್ತದೆ. ಅಲ್ಲದೆ 'ವ್ಯಾಖ್ಯಾತುಂ' ಎಂಬ ಶಬ್ದವನ್ನು ಅಧ್ಯಾಹಾರಮಾಡಿಕೊಳ್ಳದಿದ್ದರೆ ವೃತ್ತಿಗೇ ಶಬ್ದಾನುಶಾಸನವೆಂಬ ಹೆಸರು ಸಲ್ಲಬೇಕಾಗುತ್ತದೆ. ಈ ಮಂಗಳಶ್ಲೋಕವು ವೃತ್ತಿಯ ಪ್ರಾರಂಭದ ರಚನೆಯೋ ಅಥವಾ ಮೂಲಸೂತ್ರಕಾರನದೋ ಹೇಳುವುದು ಕಷ್ಟವಾಗುತ್ತದೆ. ಬಹುಶಃ ಸೂತ್ರಕಾರನು ಮಂಗಳಪದ್ಯವನ್ನು ಬರೆದು 'ಅಥ ಶಬ್ದಾನುಶಾಸನಮಾರಭ್ಯತೇ' ಎಂದು ಬರೆದಿದ್ದರೆ ಮಂಗಳಶ್ಲೋಕವೇ ಇಲ್ಲವಾಗುತ್ತದೆ. ಮೂಲಸೂತ್ರಕಾರನೇ ವೃತ್ತಿಯನ್ನು ಬರೆದಿದ್ದರೂ ಮೂಲದ ಮಂಗಳಶ್ಲೋಕವನ್ನು ವೃತ್ತಿಗೆ ಸೇರಿಸಿಕೊಳ್ಳುವ ಕೃತಿಚೌರ್ಯವು ನಡೆದಿದ್ದರೂ ನಡೆದಿರಬಹುದು.

ಇಲ್ಲಿನ ಮಂಗಳಪದ್ಯದಲ್ಲಿ ಕ್ರಿಯಾಪದವಿಲ್ಲ. 'ನಮಃ' ಎಂಬ ಅವ್ಯಯವಿದೆ. ವರ್ಧಮಾನನಿಗೆ ನಮಸ್ಕಾರಗಳು ಎಂದು ಅರ್ಥ. ಇಲ್ಲಿ 'ಕರೋಮಿ' ಅಥವಾ 'ಅಸ್ತು' ಎಂದು ಅಧ್ಯಾಹಾರಮಾಡಿಕೊಂಡು 'ಮಾಡುತ್ತೇನೆ' ಅಥವಾ 'ಆಗಲಿ' ಎಂದು ಅರ್ಥಹೇಳಬೇಕು. 'ಅಸ್ತು' ಎಂಬುದು ಪರಾರ್ಥ ಕರ್ತೃವಾಗಿ ತೋರುತ್ತದೆ. ಒಟ್ಟಿನಲ್ಲಿ ಇಲ್ಲಿನ ವಾಕ್ಯವು ಕರ್ತರಿಪ್ರಯೋಗದಲ್ಲಿದೆ. ವೃತ್ತಿಯಾದರೋ 'ಆರಭ್ಯತೇ' ಎಂಬ ಕರ್ಮಣಿ ವಾಕ್ಯದಿಂದ ಆರಂಭವಾಗುತ್ತದೆ. ಕರ್ತರಿ ಪ್ರಯೋಗದಲ್ಲಿ ಪ್ರಾರಂಭಿಸಿದವರು ಇದ್ದಕ್ಕಿದ್ದಂತೆಯೇ ಕರ್ಮಣಿಪ್ರಯೋಗದಲ್ಲಿ ಪ್ರಾರಂಭಿಸುವುದು ಅಸ್ವಾಭಾವಿಕವಾಗಿ ತೋರುತ್ತದೆ. ವ್ಯಾಖ್ಯಾನದಲ್ಲಿ 'ಸೂತ್ರವೃತ್ತಿ ಕೃತೋರಭೇದದ್ಯೋತನಾರ್ಥಂ ತಥಾ ಪ್ರಯೋಗಃ ಆರಭ್ಯತ ಇತಿ ಕರ್ಮಣಿ ಪ್ರಯೋಗೋಪಿ ಕರ್ತುರಪ್ರಾಧಾನ್ಯೇನ ಔದ್ಧತ್ಯ ಪರಿಹಾರಾರ್ಥಃ' 'ಅನ್ಯಥಾ

ಕರ್ತುಃ ಪ್ರಾಧಾನ್ಯವಿವಕ್ಷಯಾ ಅಹಮಾರಭ ಇತ್ಯೇವ ಪ್ರಯುಜ್ಯೇತ' (ಪುಟ 14) ಎಂದು ಅರ್ಥವಿವರಣೆ ಕೊಡಲಾಗಿದೆ. ಈ ಮಾತಿನಿಂದ ಸೂತ್ರಕಾರನೂ ವೃತ್ತಿಕಾರನೂ ಒಬ್ಬನೇ ಎಂದು ಅರ್ಥವಾಗುತ್ತದೆ. ಅಹಂಕಾರ ನಿರಸನೆಗಾಗಿ 'ಮಯಾ ಆರಭ್ಯತೆ' ಎಂದು ಕರ್ಮಣಿಯಲ್ಲಿ ಪ್ರಾರಂಭಿಸಲಾಗಿದೆ. ಎಂದು ತಿಳಿದುಬರುತ್ತದೆ.ವ್ಯಾಖ್ಯಾನಕಾರನ ಈ ಅಭಿಪ್ರಾಯವನ್ನು ಒಪ್ಪಿಕೊಂಡರೆ ಸೂತ್ರ ಮತ್ತು ವೃತ್ತಿಗಳು ಸೇರಿ ಒಂದು ಗ್ರಂಥವೆಂದು ಅರ್ಥವಾಗುತ್ತದೆ. ಆಗ ವೃತ್ತಿಯನ್ನು ಪ್ರತ್ಯೇಕವಾಗಿ ಪರಿಗಣಿಸಿ ಅದಕ್ಕೆ 'ಭಾಷಾಮಂಜರಿ' ಎಂಬ ಹೆಸರನ್ನು ಕೊಟ್ಟಿರುವುದು ಸರ್ವಥಾ ಅಸಾಧುವಾಗಿ ಕಾಣುತ್ತದೆ. ಪ್ರಾಯಶಃ ಸೂತ್ರಕಾರನೇ ಲಘುವೃತ್ತಿಯನ್ನು ಬರೆದಿದ್ದು ಅದನ್ನು ಭಟ್ಟಾಕಳಂಕನು ವಿಸ್ತರಿಸಿ ತನ್ನದನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿರುವಂತೆ ಭಾಸವಾಗುತ್ತದೆ.

ಸೂತ್ರ, ವೃತ್ತಿ ಮತ್ತು ವ್ಯಾಖ್ಯಾನಗಳೆಲ್ಲಕ್ಕೂ ಒಬ್ಬನೇ ಕರ್ತೃವಾಗಿದ್ದರೆ ಒಂದೇ ಮಂಗಳಪದ್ಯ ಸಾಕಾಗಿತ್ತು. ಮೂರು ಪ್ರತ್ಯೇಕ ಕೃತಿಗಳೆಂದು ಭಾವಿಸಿ ಒಬ್ಬನೇ ರಚಿಸಿದ್ದಲ್ಲಿ ಮೂರು ಮಂಗಳಪದ್ಯಗಳಿರಬೇಕಾಗಿತ್ತು. ಆದರೆ ಇಲ್ಲಿರುವುದು ಎರಡೇ ಮಂಗಳಪದ್ಯಗಳು; ಕೃತಿಗೊಂದು ; ವ್ಯಾಖ್ಯಾನಕ್ಕೊಂದು. ವ್ಯಾಖ್ಯಾನದ ಮಂಗಳಪದ್ಯದಲ್ಲಿ ವಿಶೇಷ ಅರ್ಥವಾಗಲೀ ಪ್ರತಿಭೆಯಾಗಲೀ ಕಂಡುಬರದೆ ಎರಡು ಸಾಲುಗಳಲ್ಲಿರುವ ವೃತ್ತಿಯ ಮಂಗಳಪದ್ಯವನ್ನು ನಾಲ್ಕು ಸಾಲುಗಳಲ್ಲಿ ವಿಸ್ತರಿಸಿ ಬರೆಯಲಾಗಿದೆ. ಇಲ್ಲಿನ ಮಾತುಗಳ ಜೋಡಣೆಯೂ ಚೆನ್ನಾಗಿಲ್ಲ. 'ಮುಖಾಂಬುಜಾತ್' ಎಂಬುದಕ್ಕೆ 'ಆಸ್ಯಕಮಲಾತ್' ಎಂದೂ, 'ಸರ್ವಭಾಷಾಮಯಿ' ಎಂಬುದಕ್ಕೆ 'ಅಖಿಲ ಭಾಷಾವಪುಃ' ಎಂದೂ, 'ಶ್ರೀವರ್ಧಮಾನಾಯ' ಎಂಬುದಕ್ಕೆ 'ಶ್ರೀಜಿನವಿಭುಃ' ಎಂಬ ಪರ್ಯಾಯಪದಗಳನ್ನು ಪ್ರಯೋಗಿಸಲಾಗಿದೆ. ಬಂಧದಲ್ಲಿ ಬಿಗಿಯಿಲ್ಲ; ಅರ್ಥದಲ್ಲಿ ಚಮತ್ಕಾರವಿಲ್ಲ. ಇಂತಹ ಎರಡು ಪದ್ಯಗಳಿಗೆ ಒಬ್ಬನೇ ಕರ್ತೃವಾಗಿರುವುದು ಅಸಾಧ್ಯ. ಒಂದು ಮಂಗಳಪದ್ಯವನ್ನು ಬರೆದವನು ಅದರ ಕೆಳಗೇ ಸ್ವಲ್ಪವೂ ವ್ಯತ್ಯಾಸವಿಲ್ಲದ ಅದೇ ಭಾವ ಭಾಷೆಗಳನ್ನು ಬಳಸಿ ಮತ್ತೊಂದು ಮಂಗಳಪದ್ಯವನ್ನು ರಚಿಸಲಾರ. ಸುಂದರವೂ ಪಾಂಡಿತ್ಯಪೂರ್ಣವೂ ಶಾಸ್ತ್ರಬದ್ಧವೂ ಆಗಿರುವ ಸೂತ್ರಗಳನ್ನು ರಚಿಸಿರುವ ಸೂತ್ರಕಾರನಿಗೆ ಇಂತಹ ಅರ್ಥದಾರಿದ್ರ್ಯವನ್ನು ಭಾವಿಸುವುದು ಸರಿಯಲ್ಲ. ಇತರ ಯಾವ ಸೂತ್ರಕಾರನೂ ತನ್ನ ಸೂತ್ರಗಳಿಗೆ ತನ್ನದೇ ಆದ ಪ್ರತ್ಯೇಕವಾದ ವೃತ್ತಿಯನ್ನು ಬರೆದು ಅದೇ ವೃತ್ತಿಗೆ ಪ್ರತ್ಯೇಕವಾದ ವ್ಯಾಖ್ಯಾನವನ್ನು ಬರೆದಿರುವುದು ಸಾಮಾನ್ಯವಾಗಿ ಎಲ್ಲಿಯೂ ಕಂಡುಬರುವುದಿಲ್ಲ. ಅಪ್ಪಯರ ದೀಕ್ಷಿತರ 'ಕುವಲಯಾನಂದ'ವು ಜಯದೇವನ 'ಚಂದ್ರಾಲೋಕ'ದ ಒಂದು ವ್ಯಾಖ್ಯಾನ ರೂಪದ ಗ್ರಂಥವಾಗಿದೆ.ಮೂಲಕೃತಿ ಮತ್ತು ವ್ಯಾಖ್ಯಾನಗಳಲ್ಲಿ ಒಬ್ಬನು ಒಂದನ್ನು ಬರೆಯುವುದು ಸಹಜ.ಎರಡನ್ನೂ ಒಬ್ಬನೇ ಬರೆಯುತ್ತಾನೆಂಬುದು ತುಂಬ ಅಸಹಜ. ಅಹಂಕಾರನಿರಸನೆಗಾಗಿ 'ಮಯಾ ಆರಭ್ಯತೇ' ಎಂದು ಗ್ರಂಥಕಾರನು ಕರ್ಮಣಿಯನ್ನು ಬಳಸಿರುವನೆಂದು ಅಭಿಪ್ರಾಯಪಡುವ ವ್ಯಾಖ್ಯಾನಕಾರನು ತನ್ನ ವ್ಯಾಖ್ಯಾನದ ಮಂಗಳಪದ್ಯದಲ್ಲಿ 'ಮಂಜರೀ ಮಕರಂದಾಖ್ಯಾಂ ವ್ಯಾಖ್ಯಾಂ ತನವಾನಿ' ಎಂದು ಕರ್ತರಿಯನ್ನು ಬಳಸಿರುವುದು ಆಶ್ಚರ್ಯಕರವಾಗಿದೆ. ವ್ಯಾಖ್ಯಾನ ವಿಚಾರಕ್ಕೂ ತನ್ನ ಕೃತಿಗೂ ಇಲ್ಲಿ ವಿಪರ್ಯಾಸವು ಸ್ಪಷ್ಟವಾಗಿ ಗೋಚರವಾಗುತ್ತದೆ. ವೃತ್ತಿಯಲ್ಲಿ ಮಂಗಳಪದ್ಯದ ವಿಚಾರವಾಗಿ ಏನನ್ನೂ ಬರೆದಿರುವುದಿಲ್ಲ. ಆದ್ದರಿಂದ ಸೂತ್ರಕಾರ ಮತ್ತು ವೃತ್ತಿಕಾರ ಒಬ್ಬನೇ ಇರಬಹುದು. ಅವರು ಭಿನ್ನರಾಗಿದ್ದರೆ ಸೂತ್ರದ ಮಂಗಳಪದ್ಯದ ವಿಚಾರವಾಗಿ ಸ್ವಲ್ಪವಾದರೂ ಪ್ರಸ್ತಾಪಿಸಬೇಕಾಗಿದ್ದಿತು. ವ್ಯಾಖ್ಯಾನಕಾರನು ಮೇಲಿನ ಮಂಗಳಪದ್ಯವನ್ನು ಪುನಃ ಬರೆದುಕೊಂಡು ಅದಕ್ಕೆ ವ್ಯಾಖ್ಯಾನವನ್ನು ಬರೆಯುತ್ತಾನೆ. ಅವನೇ ಸೂತ್ರಕಾರನಾಗಿದ್ದಲ್ಲಿ ಪುನಃ ಅದನ್ನು ಅನುವಚನಮಾಡಿಕೊಳ್ಳುವ ಅಗತ್ಯವಿರಲಿಲ್ಲ. ಭಾಷೆ, ಶೈಲಿ ಬಂಧಗಳ ದೃಷ್ಟಿಯಿಂದಲೂ ಅವುಗಳಲ್ಲಿ ಭಿನ್ನತೆ ಎದ್ದು ಕಾಣುತ್ತದೆ. ಆದ್ದರಿಂದ ಸೂತ್ರಕಾರನಿಂದ ವ್ಯಾಖ್ಯಾನಕಾರನು ಭಿನ್ನವಾಗಿರಬೇಕೆಂಬ ಸಂದೇಹ ಮೂಡುತ್ತದೆ.

ಸೂತ್ರ ಮತ್ತು ಕೃತಿಗಳಿಗೆ ಸಂಬಂಧಪಡದ ಹಲವಾರು ವಿಷಯಗಳು ವ್ಯಾಖ್ಯಾನದಲ್ಲಿ ಕಂಡುಬರುತ್ತವೆ. ಶಾಸ್ತ್ರಸಮ್ಮತವಲ್ಲದ ಮತ್ತು ವಿಷಯಕ್ಕೆಸಂಬಂಧಿಸದ ವಿಷಯಗಳು ವ್ಯಾಖ್ಯಾನದಲ್ಲಿವೆ. ವ್ಯಾಖ್ಯಾನದಲ್ಲಿ ಹಲವಾರು

ಉಪಯುಕ್ತವಾದ ವಿಷಯಗಳು ಕಂಡುಬರುವುದಾದರೂ ಅವು ಬಹುಮಟ್ಟಿಗೆ ವಿದ್ಯಾರ್ಥಿಯೊಬ್ಬನು ತರಗತಿಯಲ್ಲಿ ಬರೆದುಕೊಳ್ಳುವ ಟಿಪ್ಪಣಿಯಂತಿವೆ. ಉದಾಹರಣೆಗೆ 'ಸಿದ್ಧ' ಶಬ್ದಕ್ಕೆ ನಿಷ್ಪನ್ನ, ಪ್ರಾಪ್ತ, ಉಪಲಬ್ಧ ಮೊದಲಾದ ಅರ್ಥಗಳನ್ನೆಲ್ಲ ಬರೆದು ಇಲ್ಲಿ ಈ ಪದಕ್ಕೆ ಲೋಕಪ್ರಸಿದ್ಧ ಎಂಬರ್ಥವು ಗ್ರಾಹ್ಯ ಎಂದಿದ್ದಾನೆ. ಹೀಗೆಯೇ ಎಲ್ಲ ಕಡೆಯಲ್ಲಿಯೂ ಶಬ್ದಗಳಿಗಿರಬಹುದಾದ ಅರ್ಥಗಳನ್ನೆಲ್ಲ ಬರೆದು ಉದ್ದಿಷ್ಟಾರ್ಥವನ್ನು ನಿರ್ಣಯಿಸುತ್ತಾನೆ.

'ಓ ನಿಪಾತೇ 45' ಸೂತ್ರದಲ್ಲಿ ಅವರ್ಣಕ್ಕೆ ನಿಪಾತಸ್ವರ ಪರವಾದರೆ ಪ್ರಕೃತಿಭಾವ ಬರುತ್ತದೆಂದು ಹೇಳಿದ್ದಾನೆ. ಆದರೆ ವ್ಯಾಖ್ಯಾನದಲ್ಲಿ ಬಹುಲಾಧಿಕಾರದಿಂದ ಸಂಧಿಯಾಗುವುದೆಂದು ಒಪ್ಪಿಕೊಂಡು ರನ್ನನ ಪದ್ಯವೊಂದನ್ನು ಉದಾಹರಿಸಿದ್ದಾನೆ. ಸೂತ್ರದಲ್ಲಿಯಾಗಲೀ ವೃತ್ತಿಯಲ್ಲಿಯಾಗಲೀ ಬಹುಲಾಧಿಕಾರವನ್ನು ಹೇಳಿಲ್ಲ. ಸೂತ್ರಕಾರನೇ ವ್ಯಾಖ್ಯಾನಕಾರನೂ ಆಗಿದ್ದಲ್ಲಿ ಸೂತ್ರವೃತ್ತಿಗಳಲ್ಲಿ 'ಬಹುಳವಾಗಿ' 'ವಿಕಲ್ಪವಾಗಿ' ಎಂದು ಸೇರಿಸಬಹುದಾಗಿತ್ತು. ಹಲವುಕಡೆ ಸೂತ್ರದಲ್ಲಿ ಇಂತಹ ಪದಗಳಿಲ್ಲವಾದರೂ ಅಧಿಕಾರಬಲದಿಂದ ವೃತ್ತಿಯಲ್ಲಿ ಆ ಪದಗಳನ್ನು ಸೇರಿಸಲಾಗಿದೆಯಾದರೂ ಇಲ್ಲಿ ಮಾತ್ರ ಆ ಕ್ರಮವನ್ನನುಸರಿಸಿಲ್ಲ.

'ನೆಯುಯ್ಯುನ್ನುಯ್ಯ್ ಯುಃ 54' ಎಂಬ ಸೂತ್ರವನ್ನು 'ಯೋವಾಲಿ 64' ಸೂತ್ರದನಂತರ ಹಾಕಿಕೊಂಡಿದ್ದರೆ ಸಮಂಜಸವಾಗುತ್ತಿತ್ತು. ಕಾರಣ 54ನೆಯ ಸೂತ್ರದ ಸಾರ್ಥಕತೆಯನ್ನು 62, 63, 64ನೆಯ ಸೂತ್ರಗಳ ಜ್ಞಾನವಿಲ್ಲದೆ ಹೇಳಲಾಗುವುದಿಲ್ಲ. ಮುಂದಿನ ಸೂತ್ರಗಳಿಂದ ಹಿಂದಿನಸೂತ್ರದ ಸಾರ್ಥಕತೆಯನ್ನು ಸಾಧಿಸುವುದು ನಿಲುಕದ ಕೆಲಸ. ಅಲ್ಲದೆ ವಿಧಿಸೂತ್ರಗಳನ್ನು ಮೊದಲು ಹೇಳಿ ತರುವಾಯ ಅಪವಾದ ಸೂತ್ರವನ್ನು ಹೇಳುವುದು ರೂಢಿ. ಈ ಕ್ರಮವನ್ನು ಇಲ್ಲಿ ಮೀರಿರುವುದರಿಂದ ಶಾಸ್ತ್ರಜ್ಞಾನವಿಲ್ಲದಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

'ಡೋ ಬಹುಲಂ 140' ಸೂತ್ರವು 'ಡ'ಕಾರಕ್ಕೆ 'ಳ' ಕಾರಾದೇಶವನ್ನು ವಿಧಿಸುತ್ತದೆ—ಬಹುಳವಾಗಿ. ಯಾವ ಪದಗಳಲ್ಲಿರಬಹುದಾದ 'ಡ'ಕಾರಕ್ಕೆ ಎಂತಹ 'ಳ'ಕಾರಾದೇಶವಾಗಿ ಬರಬೇಕೆಂಬುದನ್ನು ಇಲ್ಲಿ ಹೇಳಿಲ್ಲ. ವ್ಯಾಖ್ಯಾನಕಾರನಾದರೋ ಱಟಿ, ಕುಳ ಕ್ಷಳಗಳು ಬರುವ ಸಂದರ್ಭಗಳನ್ನು ಸವಿಸ್ತಾರವಾಗಿ ಪ್ರಸ್ತಾಪಿಸಿದ್ದಾನೆ. ಪ್ರಾಯಶಃ ಈ ವ್ಯಾಖ್ಯಾನಕ್ಕೆ ಕೇಶಿರಾಜನ ಮಾರ್ಗವು ಆಧಾರವಾಗಿರುವುದು ಕಂಡುಬರುತ್ತದೆ. ಈ ಸೂತ್ರದ ವ್ಯಾಖ್ಯಾನದಲ್ಲಿ ಒಂದು ಕಡೆ 'ಯದ್ಯಪಿ ಅಯಂ ವಿಭಾಗಃ ಶಬ್ದಸಿದ್ಧ್ಯನಿಬನ್ಧನತ್ವಾತ್ ವ್ಯಾಕರಣ ವಿಷಯೋ ನಭವತೀತಿ ಸೂತ್ರಕೃತಾ ನೋಪದಿಷ್ಟಃ ಇತಿ ವೃತ್ತಿ ಕೃತಾಪಿ ನೋಪದರ್ಶಿತಃ; ತಥಾಪಿ ಕವಿತಾ ವಿಷಯೇ ಪ್ರಾಸಾದಿಷು ಉಪಯುಜ್ಯತಾ ಇತಿ ಮಯಾ ಕಿಂಚಿತ್ಪ್ರಪಂಚಿತಃ'—ಱಟಿ, ಕುಳ ಕ್ಷಳ ವಿಭಾಗವು ವ್ಯಾಕರಣ ವಿಷಯವಲ್ಲವೆಂದು ಸೂತ್ರಕಾರನೂ ವೃತ್ತಿಕಾರನೂ ಕೈ ಬಿಟ್ಟಿದ್ದಾರೆ. ಆದರೂ ಪ್ರಾಸಾದಿಗಳಲ್ಲಿ ಅದರ ಉಪಯೋಗವಿದೆಯೆಂದು ನಾನು ಅದನ್ನು ಪ್ರಸ್ತಾಪಿಸಿದ್ದೇನೆ—ಎಂದು ಹೇಳಿ ಅದಕ್ಕೆ ಅನೇಕ ಉದಾಹರಣೆಗಳನ್ನು ಕೊಟ್ಟಿದ್ದಾನೆ. ಸೂತ್ರಕಾರ ವೃತ್ತಿಕಾರರು ಅದನ್ನು ಕೈಬಿಟ್ಟಿದ್ದಾರೆ ಎಂದು ಹೇಳಿರುವುದರಿಂದಲೂ, ನಾನು ಅದನ್ನು ವಿಸ್ತಾರವಾಗಿ ಪ್ರಸ್ತಾಪಿಸಿದ್ದೇನೆ ಎಂದು ಹೇಳಿರುವುದರಿಂದಲೂ ವ್ಯಾಖ್ಯಾನಕಾರ ಮತ್ತು ಸೂತ್ರವೃತ್ತಿಕಾರರು ಭಿನ್ನವೆಂಬುದು ಸ್ಪಷ್ಟವಾಗುತ್ತದೆ. ಒಂದುವೇಳೆ ಸೂತ್ರಕಾರನೂ ವೃತ್ತಿಕಾರನೂ ಒಬ್ಬನೇ ಆಗಿದ್ದಲ್ಲಿ ತನ್ನನ್ನೇ ವ್ಯಾಖ್ಯಾನಕಾರನನ್ನಾಗಿ ಭಾವಿಸಿಕೊಂಡು 'ನನ್ನಿಂದ ವಿಸ್ತರಿಸಲ್ಪಟ್ಟಿದೆ' ಎಂದು ಬರೆದಿದ್ದಾನೆಂದು ಭಾವಿಸಲು ಬರುವುದಿಲ್ಲ. ಏಕೆಂದರೆ 'ರೋದ್ವಿರ್ವ್ಯಂಜನಸ್ಯಾಹಾದೇಃ 65' ಸೂತ್ರದಿಂದ ರೇಫಕ್ಕೆಪ್ರಾಪ್ತವಾದ ದ್ವಿತ್ವವನ್ನು ಅದೇ ಸೂತ್ರದ ಪ್ರಯೋಗದಲ್ಲಿ 'ರೇಫಸ್ಯ ವ್ಯಞ್ಜನಾನ್ತರ್ಭಾವೇನ ಯದ್ವ್ಯಂಜನಕಾರ್ಯಂ ಪ್ರಾಪ್ತಂ ತತ್ ಸಾಕ್ಷಾಚ್ಛಿಷ್ಟೇನ ನಿಮಿತ್ತ ಭಾವೇನ ಬಾಧ್ಯತ ಇತಿ ನದ್ವಿರುಚ್ಯತೇ ರೇಫಃ' ಎಂದು ಹೇಳಿ 'ಇವರ್ ರಮಣಿಯರ್' 'ಅವರ ರಾಮಲಕ್ಷ್ಮಣರ್' ಮುಂತಾದ ಪ್ರಯೋಗಗಳನ್ನು ಕೊಟ್ಟಿದ್ದಾನೆ. ಮತ್ತೊಮ್ಮೆ ವ್ಯಾಖ್ಯಾನದಲ್ಲಿ ಈ ವಿಚಾರವಾಗಿ ವಿಸ್ತಾರವಾದ ವಿವರಣೆಯನ್ನು ಬರೆದಿದ್ದಾನೆ. ಅದೇ ಕ್ರಮವನ್ನು 140ನೆಯ ಸೂತ್ರದಲ್ಲಿಯೂ ಅನುಸರಿಸಿ ಸೂತ್ರದಲ್ಲಿ ಬಿಟ್ಟಿರಬಹುದಾದ ವಿಷಯವನ್ನು ವೃತ್ತಿ ಅಥವಾ ಪ್ರಯೋಗ ಭಾಗದಲ್ಲಿ ಸೂಚಿಸಿ ವ್ಯಾಖ್ಯಾನದಲ್ಲಿ

ವಿಸ್ತಾರವಾಗಿ ವಿವರಿಸಲು ಅವಕಾಶವಿತ್ತು. ಹಾಗೆ ಮಾಡದೆ ವ್ಯಾಖ್ಯಾನದಲ್ಲಿ ಮಾತ್ರ ಪ್ರಸ್ತಾಪಿಸಲಾಗಿದೆ. ಈ ಕಾರಣದಿಂದಾಗಿ ವ್ಯಾಖ್ಯಾನಕಾರನು ಸೂತ್ರಕಾರನಿಗಿಂತ ಭಿನ್ನನೆಂಬುದು ಸ್ಪಷ್ಟ.

'ಸಂಸ್ಕೃತಾದಿರ್ ಚ 243' ಸೂತ್ರವು 'ಇರ್' ಪ್ರತ್ಯಯವನ್ನು ವಿಧಿಸುತ್ತದೆ. ಸೂತ್ರದಲ್ಲಿರುವ 'ಚ' ಗ್ರಹಣದಿಂದ 'ಕಳ್' ಪ್ರತ್ಯಯವು ಗ್ರಾಹ್ಯವಾಗುತ್ತದೆ. ಉಕ್ತವಾದುದನ್ನು ಮೊದಲು, ಗ್ರಾಹ್ಯವಾದುದನ್ನು ಅನಂತರ ಹೇಳುವುದು ಶಾಸ್ತ್ರಕಾರರ ಸಂಪ್ರದಾಯ. ಆದರೆ ಈ ಸೂತ್ರದ ವೃತ್ತಿಯಲ್ಲಿ 'ಕಳ್ ಪ್ರತ್ಯಯ ಇರ್ ಪ್ರತ್ಯಯಶ್ಚ ವಾ ಭವತಿ' ಎಂದು ಹಿಂದುಮುಂದಾಗಿ ಹೇಳಲಾಗಿದೆ. ಸೂತ್ರಕಾರನೇ ಬರೆದಿರಬಹುದಾದ ವೃತ್ತಿಯು ಸ್ವಸ್ವರೂಪದಿಂದ ಇದ್ದರೆ ಕ್ರಮವ್ಯತ್ಯಯವಾಗುತ್ತಿರಲಿಲ್ಲ. ಈ ಸೂತ್ರದ ವೃತ್ತಿರಚನೆಯಲ್ಲಿ ಅನ್ಯರ ಹಸ್ತಕ್ಷೇಪವಿರುವುದು ಕಂಡುಬರುತ್ತದೆ.

'ಅತೋ ಮಗ್ಗೆದ್ವಿರಿ 257' 'ಗಳಿ 258' ಈ ಎರಡು ಸೂತ್ರಗಳನ್ನು ಪ್ರತ್ಯೇಕಗೊಳಿಸುವುದಕ್ಕೆ ಕಾರಣವೇ ಇಲ್ಲ. ಗೆತ್, ದಿರ್, ಗಳ್ ಪ್ರತ್ಯಯಗಳು ಪರವಾದಾಗ ಮಗಾಗಮ ಬರುವುದೆಂದು ಒಂದೇ ಸೂತ್ರವನ್ನು ರಚಿಸಬಹುದಾಗಿತ್ತು. ಇಂತಹ ಪ್ರತ್ಯೇಕ ಸೂತ್ರರಚನೆಯಿಂದ ವಿನಾಕಾರಣ ಸೂತ್ರಸಂಖ್ಯೆ ಬೆಳೆದಿದೆ. ಅತ್ಯಂತ ಸಂಗ್ರಹವಾಗಿ ಹೇಳುವುದು ಸೂತ್ರಕಾರನ ಗುರಿ. ಆ ಗುರಿಗೆ ಇಲ್ಲಿ ಭಂಗಬಂದಿದೆ. 243ನೆಯ ಸೂತ್ರದ ವೃತ್ತಿಯಲ್ಲಿ ಅನ್ಯರ ಹಸ್ತಕ್ಷೇಪವನ್ನು ಸಂದೇಹಿಸಿದಂತೆ ಇಲ್ಲಿಯೂ ಸೂತ್ರರಚನೆಯಲ್ಲಿ ಅನ್ಯರ ಹಸ್ತಕ್ಷೇಪವನ್ನು ಊಹಿಸಲು ಸಾಧ್ಯವಿದೆ. ಪ್ರಾಯಶಃ ವ್ಯಾಖ್ಯಾನಕಾರನೇ ಈ ಕೆಲಸವನ್ನು ಮಾಡಿರುವಂತೆ ಕಂಡುಬರುತ್ತದೆ.

'ವೋಃ 270' ಸೂತ್ರದ ವ್ಯಾಖ್ಯಾನವನ್ನು 'ನನು ಅಯಂ ಯೋಗೋ ನಾರಂಭಣೀಯಃ' ಎಂದು ಪ್ರಾರಂಭಿಸಿ 'ಅಯಮನಾರಬ್ಧಣೀಯ ಏವೇತಿ' ಎಂದು ಮುಗಿಸಿದ್ದಾನೆ. ಈ ಸೂತ್ರದ ಅಗತ್ಯವಿದೆಯೆ ಎಂದು ನಾನಾರೀತಿಯಾಗಿ ವಿಮರ್ಶೆಮಾಡಿ ಸೂತ್ರಾಂತರಗಳಿಂದಲೇ ಉದ್ದಿಷ್ಟಕಾರ್ಯವು ಸಿದ್ಧಿಸುವುದರಿಂದ ಈ ಸೂತ್ರವು ಅಗತ್ಯವೆಂದು ನಿರ್ಣಯಿಸಿದ್ದಾನೆ. ಸೂತ್ರಕಾರನೂ ವ್ಯಾಖ್ಯಾನಕಾರನೂ ಒಬ್ಬನೇ ಆಗಿದ್ದರೆ ತಾನು ರಚಿಸಿದ ಸೂತ್ರವನ್ನೇ ವ್ಯರ್ಥವೆಂದು ಹೇಳುತ್ತಿರಲಿಲ್ಲ.

'ಉಗು ಪುಗು ಕುಡು ತುಡೋರೋದ್ಧ್ರಸ್ವಃ 489' ಸೂತ್ರವು ಉಗು ಮೊದಲಾದ ನಾಲ್ಕುಧಾತುಗಳ 'ಉ'ಕಾರಕ್ಕೆ 'ಒ'ಕಾರಾದೇಶವನ್ನು ವಿಧಿಸುತ್ತದೆ. ಆದರೆ 'ಉಳ್' ಧಾತುವಿನ 'ಉ'ಕಾರಕ್ಕೆ 'ಒ'ಕಾರವನ್ನು ವಿಧಿಸುವ ಸೂತ್ರವಾವುದೂ ಈ ಗ್ರಂಥದಲ್ಲಿ ಇಲ್ಲ. 'ಒಳಂ' 'ಒಳರ್'ಎಂಬ ಪ್ರಯೋಗಗಳನ್ನು 61ನೆಯ ಸೂತ್ರದ ಪ್ರಾಯೋಗಭಾಗದಲ್ಲಿ ಹೇಳಿದೆ. ಒ ಕಾರಾದೇಶ ಬರದಿದ್ದರೆ ಒಳಂ, ಒಳರ್–ಮೊದಲಾದ ರೂಪಗಳು ಸಿದ್ಧಿಸುವುದಿಲ್ಲ. ವ್ಯಾಖ್ಯಾನಕಾರನು ಇದನ್ನು ಗಮನಿಸಿ ವ್ಯಾಖ್ಯಾನದ ಕೊನೆಯಲ್ಲಿ 'ಅತ್ರ ಉಳಃ ಸತ್ತಾಯಾಂ ಇತಿ ವಕ್ತವ್ಯಂ' 'ಉಳಃ ಸತ್ತಾಯಾಂ' ಎಂಬ ಸೂತ್ರವನ್ನು ರಚಿಸಬೇಕು ಎಂದು ಅಭಿಪ್ರಾಯಪಟ್ಟಿದ್ದಾನೆ. ಸೂತ್ರಕಾರನೂ ವ್ಯಾಖ್ಯಾನಕಾರನೂ ಒಬ್ಬನೇ ಆಗಿದ್ದರೆ ಇಂತಹ ಒಂದು ಸೂತ್ರವನ್ನು ಮೂಲದಲ್ಲಿಯೇ ರಚಿಸಿ ಸೇರಿಸಬಹುದಾಗಿತ್ತು. ಮೂಲದ ದೋಷವನ್ನು ವ್ಯಾಖ್ಯಾನಕಾರನು ಎತ್ತಿಹಿಡಿದಿದ್ದಾನೆ. ಅಲ್ಲದೆ 'ವೇಮಃ 525' 'ವೇಮಃ 527' ಎಂದು ಎರಡು ಸೂತ್ರಗಳನ್ನು ಪ್ರಸ್ತಾಪಿಸಿ, ಇವುಗಳಲ್ಲಿ ಒಂದು ಸೂತ್ರವು ಅನಗತ್ಯವೆಂದು ಹೇಳಿ 527ನೆಯ ಸೂತ್ರದ ವ್ಯಾಖ್ಯಾನದಲ್ಲಿ ಪ್ರಸ್ತಾಪಿಸಿದ್ದಾನೆ. 'ನ ಚ ಏವಂ ಸೂತ್ರ ಸಂಖ್ಯಾ ನ್ಯೂನತಾ ಸ್ಯಾದಿತಿ ವಾಚ್ಯಂ.' ಉಗ್ವಾದಿ ಹ್ರಸ್ವಾತ್ವ ವಿಧಾನಾನನ್ತರಂ ಉಳಃ ಸತ್ತಾಯಾಮಿತಿ ವಕ್ತವ್ಯ ಯೋಗಾಧಿಕ್ಯೇನ ತುಲ್ಯಾಯವ್ಯಯತ್ವಾದಿತಿ'—ಈ ಎರಡು ಸೂತ್ರಗಳಲ್ಲಿ ಒಂದು ಸೂತ್ರವಿಲ್ಲವಾದರೆ ಈ ಗ್ರಂಥದ ಸೂತ್ರ ಸಂಖ್ಯೆ 592ಕ್ಕೆ ನ್ಯೂನತೆ ಬರುತ್ತದೆಂದು ಚಿಂತಿಸಬೇಕಾದುದಿಲ್ಲ. 489ನೆಯ ಸೂತ್ರದನಂತರ 'ಉಳಃ ಸತ್ತಾಯಾಂ' ಎಂಬ ಮತ್ತೊಂದು ಸೂತ್ರವನ್ನು ರಚಿಸಿದರೆ ಸೂತ್ರಸಂಖ್ಯೆಯು ಅಷ್ಟೇ (592) ಉಳಿಯುತ್ತದೆಂದು ವಾದಿಸಿದ್ದಾನೆ. 'ವೇಮಃ' ಎಂಬ ಎರಡು ಸೂತ್ರಗಳಲ್ಲಿ ಒಂದು ಅನಗತ್ಯವೆಂದು ವಾದಿಸಿರುವುದರಿಂದಲೂ 'ಉಳಃ ಸತ್ತಾಯಾಂ'

ಎಂಬ ಹೊಸ ಸೂತ್ರವನ್ನು ರಚಿಸಬೇಕೆಂದು ಹೇಳಿರುವುದರಿಂದಲೂ ಸೂತ್ರಕಾರನಿಗಿಂತಲೂ ವ್ಯಾಖ್ಯಾನಕಾರನು ಭಿನ್ನನೆಂಬುದು ಖಚಿತವಾಗಿ ಕಂಡುಬರುತ್ತದೆ.

'ಒಡನೆದೊಡಮುಲೋನು 592' ಇದು ಶಾಸನದ ಕೊನೆಯ ಸೂತ್ರ. 'ಅನು' ಎಂಬುದು ಮಂಗಳವಾಚಕ. ಆದ್ದರಿಂದ ಇದು ಸೂತ್ರಗಳ ಅಂತ್ಯ ಮಂಗಳವಾಗಿದೆ. ಪಾಡಲೊಡನೆ ಮೆಚ್ಚಿದಂ, ಪಾಡಲೊಡಂ ಮೆಚ್ಚಿದಂ, ಪಾಡಲ್ಕೆ ಮೆಚ್ಚಿದಂ, ಪಾಡಲ್ ಮೆಚ್ಚಿದಂ—ಎಂಬಿವು ವೃತ್ತಿ ಮತ್ತು ಪ್ರಯೋಗಭಾಗದ ಕೊನೆಯ ವಾಕ್ಯಗಳು. ಮೆಚ್ಚು ಮನಃ ಪ್ರಸಾದೇಸ್ಸೂಂಗಲ್ಕೇ ಚೇತಿ' ಆದ್ದರಿಂದ 'ಮೆಚ್ಚಿದಂ' ಎಂಬುದು ವೃತ್ತಿ ಮತ್ತು ಪ್ರಯೋಗಭಾಗದ ಅಂತ್ಯಮಂಗಳ ಎಂಬುದಾಗಿ ವ್ಯಾಖ್ಯಾನಕಾರನು ಸೂತ್ರ ಮತ್ತು ವೃತ್ತಿಭಾಗಗಳ ಅಂತ್ಯಮಂಗಳವನ್ನು ಪ್ರಸ್ತಾಪಿಸಿದ್ದಾನೆ. ವೃತ್ತಿಭಾಗಕ್ಕೆ ಅಂತ್ಯಮಂಗಳವಿದ್ದ ಮೇಲೆ ಆದಿಭಾಗಕ್ಕೂ ಮಂಗಳವಿರಬೇಕಾದುದು ಸ್ವಾಭಾವಿಕ. ಆದರೆ ವೃತ್ತಿಯ ಪ್ರಾರಂಭದಲ್ಲಿ ಯಾವ ಮಂಗಳವೂ ಇಲ್ಲ. 'ಅಥ ಶಬ್ದ ಶಾಸನಮಾರಭ್ಯತೇ' ಎಂಬ ಪ್ರಥಮ ವಾಕ್ಯದ ಪ್ರಥಮ ಪದವಾದ 'ಅಥ' ಎಂಬುದನ್ನು ಮಂಗಳವಾಚಕವೆಂದು ಸಮಾಧಾನಪಟ್ಟು ಕೊಳ್ಳಬೇಕಾಗುತ್ತದೆ. ಆದರೆ ಇಲ್ಲಿನ 'ಅಥ' ಶಬ್ದವು ಮಂಗಳದ ನಂತರ ಎಂಬರ್ಥದಲ್ಲಿಯೇ ಪ್ರಯೋಗವಾಗಿದೆ.

ವ್ಯಾಖ್ಯಾನಕಾರನು 'ಅಥ ಶಬ್ದೋಯಮಾನಂತರ್ಯೇ' ಎಂಬುದಾಗಿಯೇ ವ್ಯಾಖ್ಯಾನದಲ್ಲಿ ವಿವರಿಸಿದ್ದಾನೆ. ಅಲ್ಲದೆ ವ್ಯಾಖ್ಯಾನಗ್ರಂಥದ ಕೊನೆಯಲ್ಲಿ 'ಸರ್ವಮೇತನ್ಮಂಗಳ್ಯೆ' ಎಂದು ಪ್ರಾರಂಭಿಸಿ ಐದು ಪದ್ಯಗಳನ್ನು ಕೊಟ್ಟಿದ್ದಾನೆ. ಮೊದಲ ಪದ್ಯವು ದೇವತಾ ಪ್ರಾರ್ಥನೆಗೂ, ಎರಡನೆಯ ಪದ್ಯವು ಭಟ್ಟಾಕಳಂಕದೇವನ ಪ್ರಶಂಸೆಗೂ ಮೀಸಲಾಗಿವೆ. ಮೂರನೆಯ ಪದ್ಯದಲ್ಲಿ ಮಾತ್ರ ಶರ್ಮಾವಹವಾದ ಕರ್ಣಾಟಕ ಶಬ್ದಾನುಶಾಸನವನ್ನು ರಚಿಸಿ ಪ್ರೌಢಪ್ರರೂಢ ಶ್ರೀಯಿಂದ ಕೂಡಿದ ವೃತ್ತಿಯನ್ನು ಬರೆದು ಆ ವೃತ್ತಿಗೆ ಮಕರಂದವೆಂಬ ವ್ಯಾಖ್ಯಾನವನ್ನು ಭಟ್ಟಾಕಳಂಕನೇ ಬರೆದಿರುವನೆಂದು ಉಕ್ತವಾಗಿದೆ. ನಾಲ್ಕನೆಯ ಪದ್ಯದಲ್ಲಿ ಮಂಜರೀಮಕರಂದ ವ್ಯಾಖ್ಯಾನದ ವಿಸ್ತೃತವಾದ ಪ್ರಶಂಸೆ ಇದೆ. ಕೊನೆಯ ಪದ್ಯದಲ್ಲಿ ಮಂಜರೀಮಕರಂದದ ರಚನೆಯ ಕಾಲವನ್ನು ತಿಳಿಸಲಾಗಿದೆ. ಈ ಪದ್ಯಗಳಲ್ಲಿ ಶಬ್ದಾನುಶಾಸನವನ್ನು ಶಬ್ದಶಾಸನವೆಂದು ಕರೆದು ಅದಕ್ಕೆ ಒಂದೇ ಶರ್ಮಾವಹಂ ಎಂಬ ವಿಶೇಷಣವನ್ನು ಕೊಟ್ಟಿದ್ದಾನೆ. ವೃತ್ತಿಗೂ ಒಂದೇ ವಿಶೇಷಣವಿದೆ. ಆದರೆ ವ್ಯಾಖ್ಯಾನವನ್ನು ಮಾತ್ರ ವಿಸ್ತಾರವಾಗಿ ಪ್ರಶಂಸಿಸಲಾಗಿದೆ. ಇದರಿಂದ ವ್ಯಾಖ್ಯಾನದ ಕಡೆಗಿರುವ ಒಲವು ಸುಸ್ಪಷ್ಟವಾಗಿ ಗೋಚರವಾಗುತ್ತದೆ. ಸೂತ್ರವೃತ್ತಿಗಳನ್ನು ಕಡೆಗಣಿಸಿ ವ್ಯಾಖ್ಯಾನಕ್ಕೆ ಹೆಚ್ಚು ಒಲವು ತೋರಿರುವುದರಿಂದ ಭಟ್ಟಾಕಳಂಕನು ವ್ಯಾಖ್ಯಾನಕರ್ತೃವೆಂಬುದರಲ್ಲಿ ಯಾವ ಸಂದೇಹವೂ ಇರುವುದಿಲ್ಲ. ಸೂತ್ರವೃತ್ತಿಗಳನ್ನು ಬೇರೆ ಯಾರೋ ರಚಿಸಿರಬೇಕು. ಶ್ರೀಮರ್ಾ ವರದಾಚಾರ್ಯರು ಅಭಿಪ್ರಾಯಪಟ್ಟಿರುವಂತೆ ಪ್ರಾಯಶಃ ಭಟ್ಟಾಕಳಂಕದೇವನು ಅವೆರಡನ್ನೂ (ಸೂತ್ರವೃತ್ತಿಗಳನ್ನು) ತನ್ನದನ್ನಾಗಿಸಿಕೊಂಡು ಅಷ್ಟಿಷ್ಟು ಬದಲಾವಣೆಯೊಡನೆ ತನ್ನ ಹೆಸರಿನಲ್ಲಿ ಪ್ರಕಟಿಸಿಕೊಂಡಿರುವನೋ ಏನೋ !

ಪ್ರತಿ ಪಾದಾಂತ್ಯದಲ್ಲಿಯೂ ಸೂತ್ರವೃತ್ತಿ ಪ್ರಯೋಗ ಮುಗಿದಮೇಲೆ ಒಂದುಸಾರಿ, ಅನಂತರ ವ್ಯಾಖ್ಯಾನವಾದ ಮೇಲೆ ಒಂದುಸಾರಿ ಮುಕ್ತಾಯವಾಕ್ಯಗಳು ಬಂದಿವೆ. ಹೀಗೆ ಎರಡುಬಾರಿ ಮುಕ್ತಾಯವಾಕ್ಯಗಳ ರಚನೆಯ ಔಚಿತ್ಯವು ಅರ್ಥವಾಗುವುದಿಲ್ಲ. ಮೂರರ ಕರ್ತೃವೂ ಒಬ್ಬನೇ ಆಗಿದ್ದಲ್ಲಿ ಬೇರೆಬೇರೆಯಾದ ಮುಕ್ತಾಯವಾಕ್ಯದ ಅಗತ್ಯವೇನಿತ್ತೋ ಅರಿಯದು. ಒಟ್ಟಿನಲ್ಲಿ ಏಕಕರ್ತೃತ್ವ ವಿಷಯದಲ್ಲಿ ಸಂದೇಹ ಮೂಡುವುದಾದರೂ ಇದಮಿತ್ಥಂ ಎಂಬ ತೀರ್ಮಾನಕ್ಕೆ ಹೋಗದೆ ಸಮಸ್ಯೆಯನ್ನು ಎತ್ತಿ ವಿದ್ವಾಂಸರು ಈ ವಿಚಾರದಲ್ಲಿ ಆಳವಾಗಿ ಆಲೋಚಿಸಿ ಸಿದ್ಧಾಂತವನ್ನು ಸ್ಥಾಪಿಸಲೆಂದು ಆಶಿಸುತ್ತೇನೆ.

ಬಿ. ವಿ. ವೈಕುಂಠರಾಜು

ಸಾಮಾನ್ಯ ಮತ್ತು ಸಾಹಿತ್ಯ

ಸಾಹಿತ್ಯ ಎಲ್ಲರಿಗೂ ಅರ್ಥವಾಗುವಂತಿರಬೇಕು ಎನ್ನುವ ಮಾತು ಹೊಸದಲ್ಲವಾದರೂ ಈಚೆಗೆ ಹೆಚ್ಚಾಗಿ ಕೇಳಿಬರುತ್ತಿದೆ. ಕನ್ನಡಸಾಹಿತ್ಯಚರಿತ್ರೆಯಲ್ಲಿ ಇದರ ಉಲ್ಲೇಖವಿಲ್ಲದಿದ್ದರೂ ಆಗಾಗ ಅನೇಕ ಕವಿಗಳು ಇಂತಹ ಮಾತುಗಳನ್ನು ಕೇಳಬೇಕಾಗಿ ಬಂದಿರಬಹುದು. ನಾವು ನೋಡಿದಂತೆ ನವ್ಯಕಾವ್ಯದ ಪ್ರಾರಂಭದ ದಿನಗಳಲ್ಲಿ ಅದನ್ನು ಅರ್ಥಮಾಡಿಕೊಳ್ಳಲಾಗದವರು ಸಾಮಾನ್ಯವಾಗಿ ಈ ಆರೋಪವನ್ನು ಮಾಡುತ್ತಿದ್ದರು. ನವ್ಯಕಾವ್ಯ ಪ್ರಭಾವಶಾಲಿ ಶಕ್ತಿಯಾಗಿ ಬೆಳೆದಮೇಲೆ ಈ ರೀತಿಯ ಮಾತು ನಿಂತುಹೋಗಿತ್ತು. ಆದರೆ ಈ ಕಾವ್ಯಮಾರ್ಗ ಪ್ರಾರಂಭವಾಗಿ ಇಪ್ಪತ್ತೈದು ವರ್ಷಗಳಾದ ಮೇಲೂ, ಕನ್ನಡ ಭಾಷೆ ಮತ್ತು ಸಾಹಿತ್ಯಕ್ಕೆ ಹೊಸ ರೂಪ ನೀಡಿದ ಹಲವು ಮಹತ್ಕೃತಿಗಳು ಬಂದಮೇಲೂ ಇಂತಹ ಮಾತು ಕೇಳಿಬರುತ್ತಿರುವುದು ಸೋಜಿಗದ ಸಂಗತಿ.

ಸಾಹಿತ್ಯ ಎಲ್ಲರಿಗೂ ಅರ್ಥವಾಗಬೇಕು ಎಂದು ಹೇಳುವವರ ಮಾತಿನ ಸಾರಾಂಶ ಇಷ್ಟು–ಬರಹಗಾರ ಬರೆಯುವುದು ಜನರಿಗಾಗಿ, ಅವನು ಬರೆದದ್ದು ಜನರಿಗೆ ಅರ್ಥವಾಗದಿದ್ದ ಮೇಲೆ ಬರವಣಿಗೆಯ ಉದ್ದೇಶ ವಿಫಲವಾಗುತ್ತದೆ. ಆಗ ಸಾಹಿತ್ಯ ಮತ್ತು ಜನಸಾಮಾನ್ಯರ ನಡುವೆ ಕಂದರವೇರ್ಪಡುತ್ತದೆ. ಇದರಿಂದ ಲೇಖಕ ಜನರಿಂದ ದೂರವಾಗಿ ಒಂಟಿಯಾಗುತ್ತಾನೆ. ಒಂಟಿಯಾಗುವುದರಿಂದ ಅವನು ಬದುಕಿಗೆ ವಿಮುಖನಾಗಿ ಭ್ರಮೆಯ ಲೋಕದಲ್ಲಿ ವಿಹರಿಸುತ್ತಾನೆ, ಇತ್ಯಾದಿ ಇತ್ಯಾದಿ. ಎಂದರೆ ಒಬ್ಬ ಲೇಖಕ ಬರೆದದ್ದೆಲ್ಲವೂ ಜನರಿಗೆ ಅರ್ಥವಾಗಬೇಕು. ಅರ್ಥವಾಗದಿರುವಂತಹ ಬರವಣಿಗೆಯಿಂದ ಏನು ಪ್ರಯೋಜನ ಎನ್ನುವ ಮಾತಿನ ಆಧಾರದ ಮೇಲೆಯೇ ಅವರ ವಾದ ಬೆಳೆಯುತ್ತಾ ಹೋಗುತ್ತಿದೆ.

ಒಬ್ಬ ಕವಿ, ಒಬ್ಬ ಕಾದಂಬರಿಕಾರ ಅಥವಾ ಸಾಹಿತ್ಯದ ಯಾವುದೇ ಪ್ರಕಾರದಲ್ಲಿ ಕೆಲಸಮಾಡುವ ಒಬ್ಬ ವ್ಯಕ್ತಿ ಬರೆಯುವುದು ಜನರಿಗಾಗಿ ಎನ್ನುವುದು ನಿಜ. ಅದರಲ್ಲಿ ವಿವಾದದ ಪ್ರಶ್ನೆಯೇ ಇಲ್ಲ. ಆದರೆ ಯಾವ ಜನ ಎನ್ನುವುದೇ ಇಲ್ಲಿ ಏಳುವ ಮುಖ್ಯ ಪ್ರಶ್ನೆ. ನಾನು ಒಂದು ಕತೆಯನ್ನೋ, ಕಾದಂಬರಿಯನ್ನೋ ಕನ್ನಡದಲ್ಲಿ ಬರೆದರೆ ಮುಕ್ಕೋಟಿ ಕನ್ನಡಿಗರೆಲ್ಲರೂ ಅದನ್ನು ಓದಿ ಅರ್ಥಮಾಡಿಕೊಳ್ಳಬೇಕೆ ? ಇಲ್ಲವೇ ಕೆಲವು ಜನರಾದರೂ ಅದನ್ನು ಓದಿ ಅರ್ಥಮಾಡಿಕೊಂಡರೆ ಸಾಕೆ? ಕೇವಲ ಸಹಿ ಹಾಕುವುದಷ್ಟನ್ನೇ ಕಲಿತಿರುವವರೂ ಸೇರಿ ನಮ್ಮಲ್ಲಿರುವ ಅಕ್ಷರಸ್ಥರ ಸಂಖ್ಯೆ ಶೇಕಡಾ 30. ಓದು ಬರಹ ಬಲ್ಲವರು ಅವರಲ್ಲಿ ಅರ್ಧದಷ್ಟಿರಬಹುದು. ಅವರಲ್ಲಿ ಸಾಹಿತ್ಯಾಸಕ್ತರು ಒಬ್ಬರೋ ಇಬ್ಬರೋ ಇರಬಹುದು. ಆದ್ದರಿಂದಲೇ ಒಂದು ಪುಸ್ತಕದ ಸಾವಿರ ಕೃತಿಗಳು ಖರ್ಚಾಗಬೇಕಾದರೆ ಈಗಲೂ ಎರಡುಮೂರು ವರ್ಷ ಬೇಕು. ಅಕ್ಷರಸ್ಥರ ಸಂಖ್ಯೆ ಅಪಾರವಾಗಿರುವ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೂ ಸಾಹಿತ್ಯಾಸಕ್ತರು ಅಲ್ಪಸಂಖ್ಯಾತರೇ. ಈ ಅಲ್ಪಸಂಖ್ಯಾತರಲ್ಲಿಯೂ ಎಲ್ಲರೂ ಎಲ್ಲ ಬಗೆಯ ಬರವಣಿಗೆಯನ್ನು ಓದುವುದಿಲ್ಲ. ಹೆಚ್ಚಿನವರು ಕತೆ, ಕಾದಂಬರಿಗಳನ್ನು ಓದಿದರೆ (ಅದರಲ್ಲಿಯೂ ಪತ್ತೇದಾರಿ, ಥ್ರಿಲ್ಲರ್‌ಗಳನ್ನು ಓದುವವರ

ಸಂಖ್ಯೆ ಹೆಚ್ಚು) ಇನ್ನು ಕೆಲವರು ನಾಟಕ, ಪ್ರಬಂಧಗಳನ್ನು ಓದಬಹುದು. ಅವರಲ್ಲಿ ಕೆಲವರು ಮಾತ್ರ ಕಾವ್ಯವನ್ನು ಅಭ್ಯಾಸಮಾಡಬಹುದು. ಎಲ್ಲ ಭಾಷೆಗಳಲ್ಲಿಯೂ ಕಾವ್ಯವನ್ನು ಓದುವವರ ಸಂಖ್ಯೆ ಕಡಮೆ. ಇದಕ್ಕೆ ಕಾರಣ ಓದುವವರ ಅಭಿರುಚಿ. ಕಾಲಕಳೆಯಲೆಂದೋ, ಮನರಂಜನೆಗೆಂದೋ ಓದುವವರು ಪತ್ತೇದಾರಿ, ಥ್ರಿಲ್ಲರ್‌ಗಳನ್ನು ಓದುವುದರಲ್ಲಿಯೇ ತೃಪ್ತಿ ಪಡೆಯಬಹುದು. ಅದಕ್ಕಿಂತ ಸ್ವಲ್ಪ ಹೆಚ್ಚು ಆಸಕ್ತಿಯಿರುವವರು ಕತೆ, ಕಾದಂಬರಿಗಳನ್ನು ಓದಬಹುದು. ಇನ್ನುಕೆಲವೇ ಕೆಲವು ಜನ ಕಾವ್ಯಾಭ್ಯಾಸಕ್ಕೆ ಕೈಹಾಕಬಹುದು. ಎಂದರೆ ಸಾಹಿತ್ಯದಲ್ಲಿ ಆಸಕ್ತಿಯಿರುವವರಲ್ಲಿಯೂ ಕೂಡ ಗಂಭೀರ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವವರ ಸಂಖ್ಯೆ ತೀರಾ ಅತ್ಯಲ್ಪ. ಗಂಭೀರ ಪ್ರವೃತ್ತಿಯ ಬರಹಗಾರ ಇಂತಹವರಿಗಾಗಿಯೇ ಕೃತಿರಚನೆ ಮಾಡುವುದು. ಆಗ ಅವನು ಬರೆದದ್ದು ಆ ಕೆಲವೇ ಜನರನ್ನು ಮುಟ್ಟುತ್ತದೆಯೇ ಹೊರತು ಎಲ್ಲರನ್ನೂ ಅಲ್ಲ ಎನ್ನುವುದನ್ನು ಮರೆಯಬಾರದು. ಅಷ್ಟರಿಂದಲೇ ಆ ಲೇಖಕನೂ ತೃಪ್ತನಾಗುತ್ತಾನೆ ಎನ್ನುವುದೂ ಸತ್ಯ. ಆದರೆ ಲೇಖಕನಾದವನು ಕೆಲವೇ ಜನರನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡು ಬರೆಯುವುದು ಸರಿಯೇ ಎಂದು ಜನಸಾಮಾನ್ಯರ ಪರವಾಗಿ ಹೋರಾಡುತ್ತಿರುವವರು ಪ್ರಶ್ನಿಸಬಹುದು. ಯಾವ ಲೇಖಕನೂ ಒಂದು ಗುಂಪನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆಯುವುದಿಲ್ಲ, ಅವನು ಬರೆದದ್ದನ್ನು ಅವನಿಗೆ ಪರಿಚಯವಿಲ್ಲದಿರುವ ನೂರಾರು ಜನ ಓದಿ ಸಂತೋಷಪಡಬಹುದು. ಆದರೆ ಬಹಳ ಜನರಿಗೆ ಅರ್ಥವಾಗದಿರುವ ವಿಷಯವನ್ನು ಅರ್ಥಮಾಡಿಕೊಳ್ಳುವ ಶಕ್ತಿಯನ್ನು ಆ ಜನ ಪಡೆದಿರುತ್ತಾರೆ. ಅದಕ್ಕಾಗಿ ಸಿದ್ಧತೆಯನ್ನು ಮಾಡಿಕೊಂಡಿರುತ್ತಾರೆ. ಅದರ ಫಲವಾಗಿ ಲೇಖಕ ಹೇಳಿರುವ ವಿಷಯ ಅವರ ಹೃದಯವನ್ನು ತಟ್ಟುತ್ತದೆ. ಈ ಹಿನ್ನೆಲೆಯಲ್ಲಿಯೇ ನಮ್ಮಕಾವ್ಯಮೀಮಾಂಸಕರು ಗಂಭೀರವಾದ ಓದುಗನನ್ನುಸಹೃದಯ ಎಂದು ಕರೆದದ್ದು. ಸಹೃದಯನಾದವನು ಕಾವ್ಯವನ್ನು ಓದುವುದರ ಮೂಲಕ ಕವಿಯ ಅಂತರಂಗವನ್ನು ಗುರುತಿಸಬಲ್ಲ; ಕವಿಗೆ ಸರಿಸಮನಾದ ರೀತಿಯಲ್ಲಿ ಯೋಚಿಸಬಲ್ಲ. ಹಾಗಾದಾಗ ಮಾತ್ರವೇ ಸಹೃದಯನಿಗೂ ಕವಿಗೂ ಸಂಪರ್ಕವೇರ್ಪಡುತ್ತದೆ.

ಸಾಹಿತ್ಯದಲ್ಲಿ ಆಸಕ್ತಿಯುಳ್ಳವರು ಕ್ರಮೇಣ ತಮ್ಮ ಆಸಕ್ತಿಯನ್ನು ರೂಢಿಸಿಕೊಂಡು ಬೆಳಸಿಕೊಳ್ಳುತ್ತಾ ಹೋದರೆ ಅಂತಹವರು ತಮಗರಿವಿಲ್ಲದಂತೆಯೇ ಬೆಳೆಯುತ್ತಾ ಹೋಗುತ್ತಾರೆ. ಈ ಬೆಳವಣಿಗೆ ಮಗು, ವಯಸ್ಕನಾಗುವುದಷ್ಟೇ ಸಹಜ, ಸ್ವಾಭಾವಿಕ. ಪ್ರಾಥಮಿಕ ಶಾಲೆಯಲ್ಲಿದ್ದಾಗ 'ಹೂವನು ಮಾರಲು ಹೂವಾಡಗಿತ್ತಿ ಹಾಡುತ ಬರುತಿಹಳು' ಎನ್ನುವುದನ್ನೋ 'ನಾಗರಹಾವೇ, ಹಾವೊಳು ಹೂವೇ ಬಾಗಿಲ ಬಿಲದಲಿ ನಿನ್ನಯ ಠಾವೇ' ಎನ್ನುವುದನ್ನೋ ಓದಿ ಸಂತೋಷಪಟ್ಟಹುಡುಗ ಮಾಧ್ಯಮಿಕ ಶಾಲೆಗೆ ಬರುವವೇಳೆಗೆ 'ಕಿಂದರಿಜೋಗಿ' ಕಥನ ಕವನವನ್ನುಅರ್ಥಮಾಡಿಕೊಂಡು ಸಂತೋಷಪಡುವ ಸ್ಥಿತಿಗೆ ಬಂದಿರುತ್ತಾನೆ.ಎಂದರೆ 'ಕಿಂದರಿಜೋಗಿ' ಅಥವಾ ಅಂತಹ ಯಾವುದೇ ಕವನವನ್ನು ಅರ್ಥಮಾಡಿಕೊಳ್ಳುವುದು ಇದ್ದಕ್ಕಿದ್ದಂತೆ ಅವನಿಗೆ ಸಾಧ್ಯವಾಗಿರುವುದಿಲ್ಲ. ಅವನಿಗರಿವಿಲ್ಲದೆಯೇ ಅವನು ಹಿಂದೆ ಅಭ್ಯಾಸಮಾಡಿದ ಹೂವಾಡಗಿತ್ತಿ, ನಾಗರಹಾವಿನಂತಹ ಕವನಗಳು ಅವನನ್ನು ಇದಕ್ಕೆ ಸಿದ್ಧಗೊಳಿಸಿರುತ್ತವೆ. ಕ್ರಮೇಣ ಅವನು ಬೆಳೆದಂತೆ ಇನ್ನೂ ಕಷ್ಟವಾದ ಕವನಗಳನ್ನು ಅರ್ಥಮಾಡಿಕೊಳ್ಳುವ ಸ್ಥಿತಿಗೆ ಬರುತ್ತಾನೆ. ಇದನ್ನು ರೂಢಿಸಿಕೊಳ್ಳುತ್ತಾ ಹೋದಂತೆ ಅವನು ಆ ಭಾಷೆಯಲ್ಲಿ ಯಾವುದನ್ನು ಬೇಕಾದರೂ ಅರ್ಥಮಾಡಿಕೊಳ್ಳಬಲ್ಲ. ಆದರೆ ನಮ್ಮಲ್ಲಿ ಬಹುಪಾಲು ಜನ ಪಠ್ಯಪುಸ್ತಕಗಳನ್ನು ಓದುವುದಷ್ಟಕ್ಕೇ ತಮ್ಮ ಸಾಹಿತ್ಯಾಭ್ಯಾಸವನ್ನು ಸೀಮಿತಗೊಳಿಸಿಕೊಳ್ಳುವುದರಿಂದ ಅಥವಾ ಬೇರೆ ಬೇರೆ ವಿಷಯಗಳಲ್ಲಿ ಆಸಕ್ತಿಯನ್ನು ಬೆಳಸಿಕೊಳ್ಳುವುದರಿಂದ ಅವರ ಮನಸ್ಸು ಬೇರೆ ಕಡೆ ಹರಿಯುತ್ತದೆ. ಸಾಹಿತ್ಯ ಅನೇಕರಿಗೆ ಬೇಕಾಗಿರುವುದಿಲ್ಲ. ಆದರೆ ಆಸಕ್ತಿಯನ್ನು ಬೆಳಸಿಕೊಂಡು ಬೆಳೆದ ಮನಸ್ಸಿಗೆ ತೃಪ್ತಿ ಕೊಡುವಂತಹ ಸಾಹಿತ್ಯದ ಅಗತ್ಯವೂ ಇರುತ್ತದೆ. ಅಂತಹವರ ಹಸಿವನ್ನು ಒಬ್ಬ ಸಮರ್ಥ ಬರಹಗಾರ ನೀಗಿಸಿದರೆ ಅದು ಆ ಓದುಗನ ತಪ್ಪೆ ಅಥವಾ ಆ ಲೇಖಕನ ತಪ್ಪೆ ?

ಸಾಹಿತ್ಯ ಮಾತ್ರವಲ್ಲ, ಇತರ ಯಾವುದೇ ಕ್ಷೇತ್ರದಲ್ಲಾದರೂ ಗಂಭೀರ ವಿಷಯಗಳನ್ನು ಅರ್ಥಮಾಡಿ

ಕೊಳ್ಳುವುದಕ್ಕೆ ಒಬ್ಬ ವ್ಯಕ್ತಿ ಸಿದ್ಧತೆಯನ್ನು ಮಾಡಿಕೊಳ್ಳಲೇಬೇಕಾಗುತ್ತದೆ. ಸಂಗೀತ, ನೃತ್ಯ ಮತ್ತಿತರ ಲಲಿತ ಕಲೆಗಳನ್ನು ಉದಾಹರಣೆಯಾಗಿ ತೆಗೆದುಕೊಂಡರೂ ಈ ಮಾತು ಸ್ಪಷ್ಟವಾಗುತ್ತದೆ. ಜಾನಪದ ಸಂಗೀತವನ್ನೋ, ಚಿತ್ರಗೀತೆಗಳನ್ನೋ ಕೇಳಿ ಸಂತೋಷಪಡುವ ಒಬ್ಬ ವ್ಯಕ್ತಿ ಶಾಸ್ತ್ರೀಯಸಂಗೀತವನ್ನು ಕೇಳಿ ಸಂತೋಷಪಡದಿರಬಹುದು. ಸಂಗೀತದ ರಾಗ, ಲಯ, ತಾಳಗಳ ಪರಿಚಯವಿಲ್ಲದಿದ್ದರೆ ಶಾಸ್ತ್ರೀಯಸಂಗೀತ ಬೋರಾಗಬಹುದು. ಇವುಗಳ ಪರಿಚಯ ಮಾಡಿಕೊಂಡವನಿಗೆ ಚಿತ್ರಗೀತೆಗಳಿಂದ ದೊರಕುವ ಆನಂದದ ಹತ್ತು ಪಾಲು ಇವರಿಂದ ದೊರಕುತ್ತದೆ. ಅದೇ ರೀತಿ ಕೋಲಾಟವನ್ನು ನೋಡಿ ಮೈ ಮರೆಯುವ ವ್ಯಕ್ತಿ ಭರತನಾಟ್ಯವನ್ನು ನೋಡಿ ಅದೇ ಪ್ರಮಾಣದಲ್ಲಿ ಸಂತೋಷಿಸದಿರಬಹುದು. ಆದರೆ ಭರತನಾಟ್ಯದ ಮುದ್ರೆ, ಅಭಿನಯಗಳನ್ನು ಪರಿಚಯ ಮಾಡಿಕೊಂಡರೆ ಆಗ ಅವನಿಗೆ ಅದರ ಸೊಗಸು ತಿಳಿದೀತು. ಚಿತ್ರಕಲೆಯೂ ಹಾಗೆಯೇ. ರವಿವರ್ಮನ ಚಿತ್ರಗಳನ್ನೇ ಉದಾಹರಣೆಗೆ ನೋಡೋಣ. ರಾವಣ ಸೀತೆಯನ್ನು ಅಪಹರಿಸಿಕೊಂಡು ಹೋಗುವಾಗ ದಾರಿಯಲ್ಲಿ ಜಟಾಯು ಅವನನ್ನು ಅಡ್ಡಗಟ್ಟುತ್ತದೆ. ರಾವಣ ಜಟಾಯುವನ್ನು ತುಂಡರಿಸುವ ರವಿವರ್ಮನ ಒಂದು ಚಿತ್ರ ಜಗನ್ಮೋಹನ ಪ್ಯಾಲೇಸ್‌ನಲ್ಲಿದೆ. ಆ ಚಿತ್ರವನ್ನು ಅನೇಕರು ನೋಡಿ ಸಂತೋಷಿಸಿದ್ದಾರೆ. ಆದರೆ ರಾಮಾಯಣದ ಗಂಧವೇ ಇಲ್ಲದ ಒಬ್ಬ ವಿದೇಶೀಯ ಈ ಚಿತ್ರವನ್ನು ನೋಡಿದರೆ ಅವನಿಗೆ ಏನೂ ಅರ್ಥವಾಗದಿರಬಹುದು. ಅವನು ಯಾರನ್ನಾದರೂ ಕೇಳಿ ಆ ಕತೆಯನ್ನು ತಿಳಿದುಕೊಂಡ ನಂತರ ಮತ್ತೆ ಆ ಚಿತ್ರವನ್ನು ನೋಡಿದಾಗ ಅವನ ಮನಸ್ಸಿನ ಮೇಲಾಗುವ ಪರಿಣಾಮವೇ ಬೇರೆ. ಈ ಬದಲಾವಣೆಯಾದದ್ದು ಯಾವ ಕಾರಣದಿಂದ ಎನ್ನುವುದನ್ನು ಗುರುತಿಸಬೇಕು. ಅದೇ ರೀತಿ ಜನ ನೋಡಿರುವ ಕೇಳಿರುವ ಘಟನೆಗಳನ್ನು ಚಿತ್ರಿಸಿರುವ ಚಿತ್ರಗಳನ್ನು ನೋಡಿ ಚೆನ್ನಾಗಿದೆ ಎಂದವರು ಅಮೂರ್ತ ಶೈಲಿಯ ಚಿತ್ರಗಳನ್ನು ನೋಡಿದಾಗ ಮುಖ ಸಿಂಡರಿಸಿಕೊಳ್ಳಬಹುದು. ರವಿವರ್ಮನ ಚಿತ್ರವನ್ನು ಅರ್ಥಮಾಡಿಕೊಳ್ಳಲು ವಿದೇಶದ ವ್ಯಕ್ತಿ ಪ್ರಯತ್ನಿಸಿದಂತೆ ನಮ್ಮವರೂ ಅಮೂರ್ತ ಶೈಲಿಯ ಚಿತ್ರಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದರೆ ಫಲ ಸಿಕ್ಕುತ್ತದೆ. ಆದರೆ ಅಂತಹ ಪ್ರಯತ್ನವನ್ನೇ ನಡೆಸದೆ ಅದು ತನಗೆ ಅರ್ಥವಾಗಬೇಕು ಎಂದು ಬಯಸಿದರೆ, ಅರ್ಥವಾಗದಿದ್ದಾಗ ಅದು ಕೆಟ್ಟ ಚಿತ್ರ ಎಂದು ದೂರಿದರೆ ಆ ಚಿತ್ರದ ವಿಮರ್ಶೆ ಮಾಡಿದಂತಾಯಿತೆ?

ಸಾಹಿತ್ಯ ಎಲ್ಲರಿಗೂ ಅರ್ಥವಾಗಬೇಕು ಎಂದು ಹೇಳುವ ಜನ ಹಾಗೆಯೇ ಇತರ ಎಲ್ಲ ವಿಷಯಗಳೂ ಜನರಿಗೆ ಅರ್ಥವಾಗುವಂತೆ ಬರೆಯಬೇಕು ಎಂದು ಏಕೆ ಹೇಳುವುದಿಲ್ಲ? ವಿಜ್ಞಾನದ ಸಂಶೋಧನಾ ಪ್ರಬಂಧಗಳಿರಲಿ, ಸಾಮಾನ್ಯ ತತ್ತ್ವಗಳನ್ನು ಕುರಿತ ಸರಳ ಲೇಖನಗಳೂ ನನಗೆ ಅರ್ಥವಾಗುವುದಿಲ್ಲ. ಅದನ್ನು ಅರ್ಥಮಾಡಿಕೊಳ್ಳಲು ನಾನು ಪ್ರಯತ್ನಪಟ್ಟೂ ಇಲ್ಲ. ಎಂತಹ ಮೇಧಾವಿಯೇ ಆಗಲಿ ಜಗತ್ತಿನ ಎಲ್ಲ ವಿಷಯಗಳನ್ನೂ ಅರ್ಥಮಾಡಿಕೊಳ್ಳಲಾರ. ಒಂದು ವಿಷಯದಲ್ಲಿ ಪ್ರಚಂಡ ಜ್ಞಾನವನ್ನು ಪಡೆದುಕೊಂಡಿದ್ದರೂ ಇತರ ನೂರಾಒಂದು ವಿಷಯಗಳಲ್ಲಿ ಅವನು ಸಾಮಾನ್ಯನೇ ಆಗಿರುತ್ತಾನೆ. ನಮ್ಮ ಹುಡುಗನೊಬ್ಬ ಎಲೆಕ್ಟ್ರಾನಿಕ್ಸ್ ವ್ಯಾಸಂಗಮಾಡುತ್ತಿದ್ದಾನೆ. ಅವನು ಯಾವುದಾದರೂ ಒಂದು ಪುಸ್ತಕವನ್ನು ಅಭ್ಯಾಸ ಮಾಡುತ್ತಿದ್ದಾಗ ನಾನು ಕುತೂಹಲದಿಂದ ಏನಿದು ಎಂದು ಕೇಳಿದರೆ, 'ನಿಮಗೆ ಅದೆಲ್ಲಾ ಅರ್ಥವಾಗೊಲ್ಲ' ಎನ್ನುತ್ತಾನೆ. ಅವನು ಹೇಳುವುದು ನಿಜ. ಅದನ್ನು ತಿಳಿದುಕೊಳ್ಳದೆ 'ನೀನು ಚೋಟುದ್ದದ ಹುಡುಗ, ನಿನಗೆ ಅರ್ಥವಾದದ್ದು ನನಗೆ ಅರ್ಥವಾಗೊಲ್ವೆ?' ಎಂದು ನಾನು ರೇಗಿದರೆ ಅದು ನನ್ನ ಮೌಢ್ಯವನ್ನು ಸೂಚಿಸುತ್ತದೆ, ಅಷ್ಟೆ. ಸಾಹಿತ್ಯದಲ್ಲಿ ಏನೇನೂ ಆಸಕ್ತಿಯಿಲ್ಲದ ಒಬ್ಬ ವ್ಯಕ್ತಿ ಸಾಹಿತ್ಯಕ್ಕೆ ಸಂಬಂಧಪಟ್ಟಂತೆ ಸಾಮಾನ್ಯ ಮನುಷ್ಯನಾಗಿರುವಂತೆ ಎಲೆಕ್ಟ್ರಾನಿಕ್ಸ್ ಅಥವಾ ಬೇರೆ ಯಾವುದೇ ವಿಜ್ಞಾನದ ವಿಷಯಕ್ಕೆ ಸಂಬಂಧಿಸಿದಂತೆ ನಾನು ಸಾಮಾನ್ಯ ಮನುಷ್ಯ. ಅಷ್ಟೇ ಅಲ್ಲ, ಆ ವಿಷಯಗಳಲ್ಲಿ ನಾನು ಅಜ್ಞಾನಿ ಕೂಡ. ಆದ್ದರಿಂದ ಸಾಮಾನ್ಯ ಎನ್ನುವ ಪಟ್ಟ ಕೆಲವೇ ಜನರಿಗೆ ಮೀಸಲಲ್ಲ. ಒಂದಲ್ಲ ಒಂದು ವಿಷಯದಲ್ಲಿ ಎಲ್ಲರೂ ಸಾಮಾನ್ಯರೇ ಆಗಿರುತ್ತಾರೆ ; ಅಜ್ಞಾನಿಗಳೂ ಆಗಿರುತ್ತಾರೆ. ಹಾಗೆಯೇ ಸಾಹಿತ್ಯವೂ ಕೂಡ. ವಿಜ್ಞಾನ ಅಥವಾ

ಇತರ ವಿಷಯಗಳಿಗೆ ಹೋಲಿಸಿದರೆ ಸಾಹಿತ್ಯದಲ್ಲಿ ಆಸಕ್ತಿಯಿರುವವರ, ಸಾಹಿತ್ಯವನ್ನು ಗಂಭೀರವಾಗಿ ತೆಗೆದುಕೊಂಡವರ ಸಂಖ್ಯೆ ಹೆಚ್ಚಿರಬಹುದು. ಆದರೂ ಜನಸಂಖ್ಯೆಯೊಡನೆ ಹೋಲಿಸಿದರೆ ಇವರು ಅಲ್ಪಸಂಖ್ಯಾತರೇ. ಆದ್ದರಿಂದಲೇ ಸರ್ವಜ್ಞ ಹೇಳಿದಂತೆ ಸಾಹಿತ್ಯ ಎಲ್ಲರಿಗೂ ಅಲ್ಲ....

ಎಲ್ಲರಿಗೂ ಅರ್ಥವಾಗುವಂತಹ ಸಾಹಿತ್ಯವನ್ನೇ ಎಲ್ಲರೂ ರಚಿಸುತ್ತಾರೆ ಎಂದಿಟ್ಟುಕೊಳ್ಳೋಣ. ಆಗ ಏನಾಗುತ್ತದೆ ? ಈಗ ಮಕ್ಕಳ ಸಾಹಿತ್ಯವೆಂದು ಕರೆಯುವುದನ್ನೇ ಎಲ್ಲರೂ ರಚಿಸಬೇಕಾಗುತ್ತದೆ. ಎಷ್ಟೋ ಜನ ದೊಡ್ಡವರಾದರೂ ಮಾನಸಿಕವಾಗಿ ಮಕ್ಕಳೇ ಆಗಿರುವುದರಿಂದ ಅವರಿಗೂ ಅರ್ಥವಾಗಬೇಕಲ್ಲ.ಆದ್ದರಿಂದ ಅಂತಹ ಸಾಹಿತ್ಯವನ್ನೇ ಎಲ್ಲರೂ ಸದಾ ರಚಿಸುವುದು ಅನಿವಾರ್ಯವಾಗುತ್ತದೆ. ಅಂತಹ ಪರಿಸ್ಥಿತಿ ಬಂದರೆ ಆಗ ಜನರ ಬೌದ್ಧಿಕಮಟ್ಟ ಹೇಗಿರಬಹುದು ಎನ್ನುವುದನ್ನು ಊಹಿಸಲೂ ಸಾಧ್ಯವಿಲ್ಲ. ಜನರ ಬೌದ್ಧಿಕಮಟ್ಟ ಹೆಚ್ಚಬೇಕಾದರೆ ಅವರ ವೈಚಾರಿಕ ಪ್ರಜ್ಞೆಯನ್ನು ಉದ್ದೀಪನಗೊಳಿಸುವಂತಹ ಬರವಣಿಗೆಯ ಅಗತ್ಯವಿದ್ದೇ ಇರುತ್ತದೆ. ಬೌದ್ಧಿಕವಾಗಿ ಒಬ್ಬ ಮನುಷ್ಯ ಮೇಲೇರಿದಷ್ಟೂ ಅವನಿಗೆ ತೃಪ್ತಿಯನ್ನು ಕೊಡುವಂತಹ ವಿಚಾರಗಳನ್ನು ಅರಸಿಕೊಂಡು ಹೋಗುತ್ತಾನೆ. ಅವನ ಅಪೇಕ್ಷೆಯನ್ನು ಈಡೇರಿಸುವ ಹೊಣೆ ಸಮಾಜದ ಮೇಲಿರುತ್ತದೆ. ಸಮಾಜದ ಒಂದು ಅಂಗವಾದ ಸಾಹಿತಿಗಳ ಮೇಲೂ ಅಂತಹ ಜವಾಬ್ದಾರಿಯಿರುತ್ತದೆ. ಅದನ್ನು ಅರಿತುಕೊಂಡ ಒಬ್ಬ ಲೇಖಕ ಬರವಣಿಗೆಯ ಮಾಧ್ಯಮವನ್ನು ಗಂಭೀರ ವಿಷಯಗಳ ಅಭಿವ್ಯಕ್ತಿಗೆ ಅಳವಡಿಸಿಕೊಂಡಾಗ ಅದು ಎಲ್ಲರನ್ನೂ ಮುಟ್ಟಲು ಸಾಧ್ಯವಿಲ್ಲ.

ಬರವಣಿಗೆ ಎಲ್ಲರನ್ನೂ ಮುಟ್ಟಬೇಕು ಎಂದು ಭಾವಿಸುವವರು ಒಂದು ಭ್ರಮೆಯ ಲೋಕದಲ್ಲಿದ್ದು ಸಾಹಿತ್ಯದಿಂದ ಹೆಚ್ಚಿನದನ್ನು ಅಪೇಕ್ಷಿಸುತ್ತಾರೆ. ಈ ಜನ ಸಾಹಿತ್ಯದ ಇತಿಮಿತಿಗಳನ್ನು ಅರಿತುಕೊಂಡರೆ ಆಗ ಅವರು ವಾಸ್ತವಿಕ ಪ್ರಪಂಚಕ್ಕೆ ಕಾಲಿಡಬಹುದು. ಸಾಹಿತ್ಯದಿಂದ ಕ್ರಾಂತಿ ಸಾಧ್ಯವಿಲ್ಲ. ಇದುವರೆಗೆ ಜಗತ್ತಿನ ಯಾವ ಮೂಲೆಯಲ್ಲಿಯೂ ಸಾಹಿತ್ಯದಿಂದ ಕ್ರಾಂತಿಯಾಗಿಲ್ಲ. ಸಾಮಾಜಿಕ ಮತ್ತು ರಾಜಕೀಯ ವಿಷಯಗಳಲ್ಲಿ ಜನರಲ್ಲಿ ತಿಳಿವಳಿಕೆ ಬಂದರೆ ಸಮಾಜದಲ್ಲಿ ಬದಲಾವಣೆಗಳಾಗಬಹುದು. ಜನರಲ್ಲಿ ಅಂತಹ ಪ್ರಜ್ಞೆಯನ್ನು ಮೂಡಿಸಲು ಅಗತ್ಯವಾದ ಬರವಣಿಗೆ ಬೇಕು. ಆದರೆ ಅದು ಸಾಹಿತ್ಯವೇ ಆಗಬೇಕಾಗಿಲ್ಲ. ಒಂದು ಭಾಷೆಯಲ್ಲಿ ಬರೆದದ್ದೆಲ್ಲವೂ ಸಾಹಿತ್ಯವಲ್ಲ. ಅದು ಸಾಹಿತ್ಯವಾಗಬೇಕಾದ ಅಗತ್ಯವೂ ಇಲ್ಲ.

ನಾನು ಲೇಖನದ ಮೊದಲಲ್ಲಿ ಪ್ರಸ್ತಾಪಿಸಿದಂತೆ ಸಾಹಿತ್ಯ ಎಲ್ಲರಿಗೂ ಅರ್ಥವಾಗುವಂತಿರಬೇಕು ಎಂದು ಹಿಂದೆ ಹೇಳಿದ್ದು, ಈಗ ಹೇಳುತ್ತಿರುವುದು ನವ್ಯಸಾಹಿತ್ಯವನ್ನು ದೃಷ್ಟಿಯಲ್ಲಿಟ್ಟುಕೊಂಡು. ನವ್ಯರು ಬರೆಯುವುದು ಅಸ್ಪಷ್ಟ ಎಂದು ಆಗಾಗ ಈ ಜನ ಹೇಳುತ್ತಲೇ ಬಂದಿದ್ದಾರೆ. ನವೋದಯಕಾಲದ ಸರಳವಾದ ಬರವಣಿಗೆಯನ್ನು ಓದಿ ಓದಿ ಅದಕ್ಕೆ ಒಗ್ಗಿಹೋಗಿದ್ದ ಜನಕ್ಕೆ ತಕ್ಷಣವೇ ನವ್ಯದ ಸಂಕೀರ್ಣ ಬರವಣಿಗೆಯನ್ನು ಓದಿ ಅರ್ಥಮಾಡಿಕೊಳ್ಳಲು ಸಾಧ್ಯವಾಗಲಿಲ್ಲ. ಯಾವುದೇ ಸಾಹಿತ್ಯದ ಪರಿವರ್ತನೆಯ ಕಾಲದಲ್ಲೂ ಇಂತಹ ವಾತಾವರಣ ನೆಲಸುತ್ತದೆ. ಒಂದು ಕಾವ್ಯಮಾರ್ಗವನ್ನು ಓದುತ್ತಿರುವ ಜನ ಕಾವ್ಯವೆಂದರೆ ಹೀಗೆಯೇ ಇರುತ್ತದೆ ಎಂದು ಕಲ್ಪಿಸಿಕೊಂಡಿರುವುದರಿಂದ ಹೊಸದಕ್ಕೆ ತಕ್ಷಣ ಸ್ಪಂದಿಸುವುದಿಲ್ಲ. ಕನ್ನಡದಲ್ಲಿ ಆದದ್ದು ಹೀಗೆ. ನವ್ಯರು ಕೃತಿರಚನೆಮಾಡಲು ಪ್ರಾರಂಭಿಸಿದಾಗ, ನವೋದಯದ ಗುಂಗಿನಲ್ಲಿಯೇ ಇದ್ದ ಓದುಗರ ಹೊಸದನ್ನು ನೋಡಿ ದಿಗ್ಭ್ರಾಂತರಾದರು. ಓದಿದ ತಕ್ಷಣ ಇದು ಅರ್ಥವಾಗುವುದಿಲ್ಲವಲ್ಲ ಎಂದು ತಲೆಕೆರೆದುಕೊಂಡರು. ಕಾವ್ಯವೆಂದರೆ ಮೊದಲು ವಾಚ್ಯಾರ್ಥ ಬರಬೇಕು, ಅನಂತರ ಧ್ವನಿಯನ್ನು ಅರ್ಥಮಾಡಿಕೊಳ್ಳುವ ವಿಷಯ ಎಂದೇ ಭಾವಿಸಿದ್ದ ಜನರಿಗೆ ನವ್ಯಕಾವ್ಯದಲ್ಲಿ ತಕ್ಷಣ ವಾಚ್ಯಾರ್ಥ ಸ್ಫುರಿಸದಿದ್ದಾಗ ಇದು ಕಾವ್ಯವೇ ಅಲ್ಲ ಎಂದು ತೀರ್ಪುಕೊಟ್ಟರು. ಕಾವ್ಯ ಯಾವುದೇ ಸೂತ್ರದ ಬಂಧನಕ್ಕೊಳಗಾಗಲು ಸಾಧ್ಯವಿಲ್ಲ. ಸಂಕೀರ್ಣತೆಯೇ ನವ್ಯದ ಪ್ರಧಾನ ಗುಣವಾದುದರಿಂದ ವಾಚ್ಯಾರ್ಥ ಎನ್ನುವುದಕ್ಕೆ ಇಲ್ಲಿ ಬೆಲೆಯಿಲ್ಲ. ಮೊದಲು ಹೊರಡುವುದೇ ಧ್ವನಿ. ಅನಂತರ ಬೇರೆಬೇರೆ ಧ್ವನಿಗಳು ಹೊರಡುತ್ತವೆ.

'ಸರಸರವ ಪೋರಿಯಲಿ ಇಲಿ ಹೆಗ್ಗಣದ ಮೇಳ' ಎಂದಾಗ ಇಲ್ಲಿ ವಾಚ್ಯಕ್ಕೆ ಸ್ಥಾನವಿಲ್ಲದೆ ಮೊದಲೇ ಧ್ವನಿ ಹೊರಡುವುದನ್ನು ಗಮನಿಸಬೇಕು. ನರಿ, ಹೆಗ್ಗಣಗಳು ಮೋಸ, ವಂಚನೆ, ದರೋಡೆಗಳಿಗೆ ಸಂಕೇತಗಳು. ಮನುಷ್ಯನಲ್ಲಿ ಈ ಗುಣಗಳು ರಕ್ತಗತವಾದಾಗ ಅವನ ಒಂದೊಂದು ನರವೂ ಇಲಿ, ಹೆಗ್ಗಣಗಳಿಗೆ ಆಶ್ರಯ ನೀಡಿದಂತಾಗುತ್ತದೆ ಎಂಬೆಲ್ಲಾ ನೂರಾರು ಮಾತಿನಲ್ಲಿ ಹೇಳಬಹುದಾದದ್ದನ್ನು ಒಂದೇ ಒಂದು ವಾಕ್ಯ ಧ್ವನಿಸುತ್ತದೆ. ಹೀಗೆ ಕವನದ ತುಂಬಾ ಹಲವು ಸಂಕೇತಗಳು, ಪ್ರತಿಮೆಗಳು ಬಂದು ಒಟ್ಟಾಗಿ ಕವನ ಬೇರೆಯದನ್ನೇ ಧ್ವನಿಸುತ್ತದೆ. ಹಾಗೆಯೇ 'ಮಿದುಳು ಬಚ್ಚಲ ಹಂಡೆಯಲಿ ಬೇಯುವ ಆಮೆ, ಎದ್ದೆದ್ದು ಬಿದ್ದು ಒದ್ದಾಡುತಿತ್ತು' ಎನ್ನುವ ಪ್ರತಿಮೆಯನ್ನು ನೋಡಬಹುದು. ಆದ್ದರಿಂದ ಈ ಕವನಗಳನ್ನು ಓದುವಾಗ ಇದು ವಾಚ್ಯ, ಇದು ಧ್ವನಿ ಎಂದು ವಿಂಗಡಿಸುವುದು ಹೇಗೆ ? ಒಂದು ಕಾವ್ಯ ಒಂದೇ ಒಂದು ಧ್ವನಿಯನ್ನು ಹೊರಡಿಸಿದರೆ ಸಾಕೆ ? ಸಹೃದಯ ತನ್ನ ಸಿದ್ಧತೆಗೆ ತಕ್ಕಂತೆ ಇಲ್ಲಿ ಧ್ವನಿಗಳನ್ನು ಗುರುತಿಸುತ್ತಾನೆ. ಎಂದರೆ ನವೋದಯ ಕಾವ್ಯವನ್ನಾಗಲೀ, ಅದಕ್ಕೆ ಹಿಂದಿನ ಕಾವ್ಯವನ್ನಾಗಲೀ ಓದಬೇಕಾದ ಕ್ರಮವೇ ಬೇರೆ, ನವ್ಯಕಾವ್ಯವನ್ನು ಓದಬೇಕಾದ ಕ್ರಮವೇ ಬೇರೆ.

ಹೊಸದಕ್ಕೆ, ಸಹೃದಯ ತನ್ನನ್ನು ತಾನು ತೆರೆದುಕೊಳ್ಳಲು ಸಿದ್ಧನಾಗಿರಬೇಕು, ಮನಸ್ಸು ಮುಕ್ತವಾಗಿದ್ದರೆ, ಯಾವುದನ್ನು ಬೇಕಾದರೂ ಅರ್ಥಮಾಡಿಕೊಳ್ಳಬಹುದು. ಹಾಗೆ ಮಾಡದೆ ಮೊದಲಿಗೇ ಅಸ್ಪಷ್ಟವೆಂದು ವಿಮುಖನಾದರೆ ಖಾಯಂ ಆಗಿ ಅವನು ಹಾಗೆಯೇ ಉಳಿಯುತ್ತಾನೆ. ಒಬ್ಬ ಕವಿಯ ಅಭಿವ್ಯಕ್ತಿ ಅವನ ಭಾವನೆಗಳಿಗೆ ಅನುಗುಣವಾಗಿದೆಯೇ ಇಲ್ಲವೇ ಎನ್ನುವುದು ಮುಖ್ಯವೇ ಹೊರತು ಬೇರೆ ಯಾವುದೂ ಇಲ್ಲ. ಸಂಕೀರ್ಣ ಭಾವನೆಗಳನ್ನು ಸಂಕೀರ್ಣವಾಗಿಯೇ ಹೇಳಬೇಕಾಗುತ್ತದೆ. ಸರಳವಾಗಿ ಹೇಳಿದರೆ ಕಾವ್ಯ ಜಾಳುಜಾಳಾಗುತ್ತದೆ. ಇಲ್ಲವೇ ಸರಳ ಭಾವನೆಗಳನ್ನು ಉದ್ದೇಶಪೂರ್ವಕವಾಗಿಯೇ ಸಂಕೀರ್ಣಗೊಳಿಸಲು ಯತ್ನಿಸಿದರೆ ಆಗ ಸರ್ಕಸ್ ಆಗಬಹುದು. ಎಂದರೆ ಕವಿ, ಏನು ಹೇಳಬೇಕೆಂದಿದ್ದಾನೆ, ಅದನ್ನು ಹೇಗೆ ಹೇಳಿದ್ದಾನೆ ಎನ್ನುವುದು ಮುಖ್ಯ. ಅದರ ಮೇಲೆ ಅವನ ಕಾವ್ಯದ ಯಶಸ್ಸು, ಅಪಯಶಸ್ಸು ನಿಂತಿರುತ್ತದೆ. ಅದನ್ನು ಗುರುತಿಸಲು ಶಕ್ತನಾದ ವ್ಯಕ್ತಿ ವಿಮರ್ಶಕನಾಗುತ್ತಾನೆ.

ನವ್ಯಕಾವ್ಯದ ಪ್ರಭಾವ ಕನ್ನಡ ಗದ್ಯದ ಮೇಲೂ ಆಗಿ ಬರವಣಿಗೆ ಸಂಕೀರ್ಣವಾಗುತ್ತಾ ಬಂದಿದೆ. ಆದ್ದರಿಂದಲೇ ನವ್ಯರು ಮತ್ತು ಅವರ ಪ್ರಭಾವಕೊಳ್ಳಗಾದವರು ಬರೆಯುವುದಕ್ಕೂ ಇತರರು ಬರೆಯುವುದಕ್ಕೂ ವ್ಯತ್ಯಾಸವಿರುವುದನ್ನು ಗಮನಿಸಬೇಕು. ಜಾಳುಜಾಳು ಬರವಣಿಗೆಯನ್ನೇ ಓದುತ್ತಿರುವ ಜನ ಯಾವಾಗಲೋ ಒಂದು ಬಾರಿ ಸಂಕೀರ್ಣ ಬರವಣಿಗೆಯ ಕೃತಿಯನ್ನು ಓದಲು ಕೈಗೆತ್ತಿಕೊಂಡು ಅರ್ಥವಾಗುವುದಿಲ್ಲ ಎಂದು ಮೂಲೆಗೆಸೆದುಬಿಟ್ಟರೆ? ಹೇಳಿದ್ದನ್ನೇ ಸಾವಿರದ ಒಂದನೆ ಬಾರಿ ಬರೆಯುವ ಲೇಖಕರೆನಿಸಿಕೊಂಡವರೂ ಓದುಗರ ಈ ಪ್ರವೃತ್ತಿಯನ್ನೂ ಪೋಷಿಸಿಕೊಂಡೇ ಬಂದಿದ್ದಾರೆ.ಇಲ್ಲದಿದ್ದರೆ ಅವರ ಬೇಳೆಕಾಳು ಬೇಯುವುದು ಹೇಗೆ ? ಇಂತಹವರಿಂದಲೂ ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಅಪಾಯಗಳಾಗುತ್ತಿವೆ.

ಎಷ್ಟು ಜನ ಓದುತ್ತಾರೆ ಎನ್ನುವ ಲೆಕ್ಕದ ಮೇಲೆ ಒಬ್ಬ ಲೇಖಕನ ಯಶಸ್ಸು ಅಪಯಶಸ್ಸುಗಳನ್ನು ನಿರ್ಧರಿಸುವುದಕ್ಕಿಂತ ದೊಡ್ಡ ದುರಂತ ಇನ್ನೊಂದಿಲ್ಲ. ಈಗ ಕನ್ನಡದಲ್ಲಿ ಎನ್. ನರಸಿಂಹಯ್ಯನವರಂತಹವರ ಪುಸ್ತಕಗಳೇ ಹೆಚ್ಚು ಪ್ರಮಾಣದಲ್ಲಿ ಖರ್ಚಾಗುವುದು. ಭಾರಿ ಪ್ರಮಾಣದಲ್ಲಿ ಜನ ಅವುಗಳನ್ನು ಓದುತ್ತಾರೆ. ಎಂದರೆ ಇಂತಹವರೇ ಶ್ರೇಷ್ಠ ಲೇಖಕರು ಎಂದು ನಿರ್ಧರಿಸಿಬಿಡಬಹುದೆ ? ಅವುಗಳನ್ನು ಓದುವುದು ತಪ್ಪು ಎಂದು ನಾನು ಹೇಳುವುದಿಲ್ಲ. ಆದರೆ ಇವುಗಳನ್ನು ಓದಿದ ತಕ್ಷಣ ಜನ ಅದನ್ನು ಅಲ್ಲಿಗೆ ಮರೆತುಬಿಡುತ್ತಾರೆ. ಆದರೆ ಗಂಭೀರವಾದ ಬರವಣಿಗೆಯ ಒಂದು ಕೃತಿಯನ್ನು ಓದಿದ ಮೇಲೆ ಎಷ್ಟೇ ದಿನಗಳಾದರೂ ಅದು ಅವನ ಮನಸ್ಸನ್ನು ಕಾಡುತ್ತಿರುತ್ತದೆ. ಇಂತಹ ಬರವಣಿಗೆಯಿಂದಲೇ ವೈಚಾರಿಕ ಪ್ರಜ್ಞೆ ಬೆಳೆಯುವುದು, ಮನಸ್ಸು ಶ್ರೀಮಂತವಾಗುವುದು ; ಸಾಹಿತ್ಯವೂ ಶ್ರೀಮಂತವಾಗುವುದು. ಆದರೆ ಅಂತಹ ಬರಹಗಳನ್ನು ಓದುವವರ ಸಂಖ್ಯೆ ನಮ್ಮಲ್ಲಿ ಕಡಮೆ. ಆದರೆ ಅದಕ್ಕಾಗಿ ತಲೆ ಕೆಡಿಸಿಕೊಳ್ಳಬೇಕಾಗಿಲ್ಲ. ಎಲ್ಲ ಕಾಲದಲ್ಲೂ, ಎಲ್ಲ ಭಾಷೆಗಳಲ್ಲಿ ಆಗುವುದು ಹೀಗೇ.

ಕೆ. ಎಸ್. ನಿಸಾರ್ ಅಹಮದ್

ಬೇಂದ್ರೆಯವರ "ಮನದನ್ನೆ"

ಕೌಟುಂಬಿಕ ಬದುಕಿನ ವಿವಿಧ ಚಹರೆಗಳನ್ನು ಶ್ರೀ ಬೇಂದ್ರೆಯವರು ತಮ್ಮ ಬೇರೆಬೇರೆ ಕವನಸಂಗ್ರಹಗಳ ಬಿಡಿಬಿಡಿ ಪದ್ಯಗಳಲ್ಲಿ ತಕ್ಕಷ್ಟು ಯಶಸ್ವಿಯಾಗಿ, ಮನಃಸ್ಪರ್ಶಿಯಾಗಿ ಕುಂಚಿಸಿದ್ದಾರೆ. "ನಾದಲೀಲೆ" ಕವನಸಂಗ್ರಹದ "ಮನದನ್ನೆ" ಹೆಸರಿನ ಪದ್ಯ, ಅವರ ಇತರ ಆ ಜಾತಿಯ ಪದ್ಯಗಳಿಗಿಂತ ಹೆಚ್ಚು ವಿಶಿಷ್ಟತೆ, ಅರ್ಥವಂತಿಕೆಗಳುಳ್ಳದ್ದು. ಈ ಸಂಗ್ರಹದ "ನಾನು ಬಡವಿ", "ಅಷ್ಟು ಪ್ರೀತಿ", "ಪ್ರೋರಿ ಪ್ರೋರ"ಗಳ ಜೊತೆ "ಮನದನ್ನೆ"ಯನ್ನು ತೂಗಿ ನೋಡಿದಾಗ ಈ ಅಂಶ ಸುಸ್ಪಷ್ಟವಾಗುತ್ತದೆ. ಸದರಿ ಪದ್ಯಗಳಲ್ಲಿ ಕವಿ ಅನುರಾಗದ ಹೆಚ್ಚುಗಾರಿಕೆಯನ್ನು ಸಾರಿದ್ದರೆ, "ಮನದನ್ನೆ"ಯಲ್ಲಿ ಗಂಡಹೆಂಡಿರುಗಳ ನಡುವಿನ ಅಪಾರ್ಥ, ವೈಮನಸ್ಯಗಳ ಚಿತ್ರಣವನ್ನು ಕಾಣಿಸಿ, ದಂಪತಿಗಳ ಭಾವ ಸಂಶುದ್ಧಿಯಾಗದೆ ಹೃದಯ ಸಂವಾದಕ್ಕೆ ಪುಷ್ಟಿ ದೊರಕದೆ ಪ್ರೇಮದ ಜಗತ್ತು ತನ್ನ ಪರಿಪೂರ್ಣತೆಯಲ್ಲಿ ಪ್ರಕಟಗೊಳ್ಳದೆಂಬ ತಾತ್ತ್ವಿಕ ಧೋರಣೆಯನ್ನು ಕಲಾತ್ಮಕವಾಗಿ ಅಭಿವ್ಯಕ್ತಿಸಿದ್ದಾರೆ.

ಮೊದಲ ಓದಿಗೆ ಪದ್ಯ ಸರಳವಾಗಿದ್ದಂತೆ ತೋರಿಬಂದರೂ, ಅದನ್ನು ಅಂಗಅಂಗವಾಗಿ ವಿಶ್ಲೇಷಿಸಿ, ಪರಿಭಾವಿಸಿದಾಗ ಅದರ ಸಾವಯುವ ಸಂಬಂಧದ ಸಂಕೀರ್ಣತೆ ಆಶ್ಚರ್ಯಗೊಳಿಸುತ್ತದೆ. ಇಡೀ ಪದ್ಯ ಒಂದು ಘಟಕವಾಗಿರುವಂತೆ ನಮಗೆ ಭಾಸವಾಗುತ್ತದೆ.

ಪದ್ಯದ ವಿಶ್ಲೇಷಣೆಗೆ ಎಟುಕಬಹುದಾದ ಸ್ವಾರಸ್ಯಗಳನ್ನು ಪರಿಶೀಲಿಸೋಣ : ಗಂಡು ಆಚೆ ದುಡಿದು, ಸ್ನೇಹಿತರ ಸಹೋದ್ಯೋಗಿಗಳ ಜೊತೆ ಸಂದರ್ಭ ಸನ್ನಿವೇಶಗಳಿಗೆ ತಕ್ಕಂತೆ ಏನೇನೋ ಚರ್ಚೆ, ವಾಗ್ವಾದ ನಡೆಸಿ ತಲೆ ಬಿಸಿಮಾಡಿಕೊಂಡು, ಎಲ್ಲವನ್ನೂ ಮರೆತು ಮರಳಿ ಸ್ವಾಸ್ಥ್ಯವನ್ನು ಸ್ಥಾಪಿಸಿಕೊಳ್ಳಲು ಮನೆಗೆ ಬರುತ್ತಾನೆ. ಮನೆಯಲ್ಲೂ ಆಚೆಯದೇ ಪಾಡಾದರೆ ?

ಗಂಡಿಗೆ ಹೆಣ್ಣಿನ ಮಂದಸ್ಮಿತ, ಆರೈಕೆ, ಸಂತೈಕೆ, ತಾಳ್ಮೆಗಳ ರಕ್ಷೆಯಿರದಿದ್ದರೆ ದಾಂಪತ್ಯಜೀವನ ವಿಗಾನಗೊಳ್ಳುತ್ತದೆ. ಇಬ್ಬರಿಗೂ ಬದುಕು ಅಸಹನೀಯ ನರಕವಾಗುತ್ತದೆ. ಈ ನರಕವನ್ನು ಸೃಷ್ಟಿಸುವ ಸನ್ನಿವೇಶಗಳು ಕಾಲಿಡದ ಸಂಸಾರಿಯ ಬದುಕು ಒಂದು ಆದರ್ಶವಷ್ಟೆ. ಎಲ್ಲರಿಗೂ ಒಂದಿಲ್ಲ ಒಂದು ಸಂದರ್ಭದಲ್ಲಿ ಈ ನರಕ ದರ್ಶನವಾಗದೆ ಇರುವುದು ಸಾಧ್ಯವೇ ಇಲ್ಲ.

"ಮನದನ್ನೆ" ಪದ್ಯದ ನಾಯಕ ಇಂಥ ಒಂದು ದುರವಸ್ಥೆಗೆ ಸಿಕ್ಕಿಬಿದ್ದಿದ್ದಾನೆ. ತನ್ನನ್ನು ಅರ್ಥಮಾಡಿಕೊಳ್ಳುವಂತೆ ಪತ್ನಿಯನ್ನು ವಿಧವಿಧವಾಗಿ ಅನುನಯಿಸುವುದು ಈ ಪದ್ಯದ ಕೇಂದ್ರವಸ್ತು. ಪದ್ಯದ ಹೆಸರು ಮಾರ್ಮಿಕವಾಗಿದೆ. "ಹೆಂಡತಿ" "ಮಡದಿ", "ಅರ್ಧಾಂಗಿ" ಎನ್ನದೆ "ಮನದನ್ನೆ" ಎಂದಿರುವುದರಿಂದ ಒಂದು ತೆರನಾದ ಆತ್ಮೀಯತೆ ತನಗೆ ತಾನೆ ಮೂಡಿಕೊಳ್ಳುತ್ತದೆ. ಗಂಡನ ಮನಸ್ಸಿಗೆ ನೆಮ್ಮದಿಯನ್ನು, ಜರ್ಜರಿತವಾದ

ಜೀವನಕ್ಕೆ ಆಹ್ಲಾದ ಅರ್ಥಗಳನ್ನು ಕೊಡಬಲ್ಲವಳು ಮಡದಿ. ಅವನಿಗೆ "ಪ್ರಿಯೆ"ಯಾಗಿ ಪರಿಣಮಿಸಬೇಕು ಹೀಗಾಗಬೇಕಾದರೆ ಅವನ ಮನಸ್ಸಿನೊಂದಿಗೆ ಹೊಂದಿಕೊಳ್ಳಲು ಪ್ರಯತ್ನಿಸಬೇಕು.

ಸುತ್ತೂ ಬಳಸೂ ಇಲ್ಲದೆ ಪದ್ಯ ಶುರುವಾಗುತ್ತದೆ. ಹೀಗಾಗಿ ನಮ್ಮ ಮನಸ್ಸನ್ನು ಮೊದಲಿನ ಸಾಲಿನಿಂದಲೇ ಹಿಡಿದಿಟ್ಟುಕೊಳ್ಳಲು ಪದ್ಯ ಪ್ರಯತ್ನಿಸುತ್ತದೆ:

ಆಡದಿರು ಮಡದನ್ನೆ | ಎನಗೆ ಇದಿರಾಡದಿರು
ವಾದಕ್ಕೆ ಬೇಸತ್ತು | ಮರ್ಮಘಾತಕ್ಕೆ ಸತ್ತು

ಉಳಿದು ಬಂದೆ; | 'ಎಲ್ಲಿಹುದು ತಿಳಿವಳಿಕೆ
ಜೀವನದ ಸಲುವಳಿಕೆ' | ಎಂದು ಕಳಮಳಿಸಿ ನೀರಡಿಸಿ ಬಂದೆ

—ಇಲ್ಲಿ ಗಂಡನ ದೀನತೆ ವಿಷಣ್ಣತೆಗಳೊಂದಿಗೇ ಹೆಂಡತಿಯ ಚಂಡಿತನದ ಅರಿವೂ ನಮಗಾಗುತ್ತದೆ. "ಸತ್ತು" "ಉಳಿದು ಬಂದೆ", "ನೀರಡಿಸಿ ಬಂದೆ" ಎನ್ನುವ ಪದಗಳು ನಾಯಕನ ಮನಃಸ್ಥಿತಿಯ ಉತ್ಕಟತೆಗೆ ದ್ಯೋತಕವಾಗುತ್ತವೆ.

ಇಂಥ ತಲೆಕೆಟ್ಟ ಘಳಿಗೆಯಲ್ಲಿ ಆತ ಮಡದಿಯಿಂದ ಬಯಸುವುದು ಹೇಳಿದ್ದಕ್ಕೆಲ್ಲ ಸಿಡಿಮಿಡಿತನ, 'ಹೂಂಕಾರ'ವಲ್ಲ; 'ಹೂಂಗುಟ್ಟುವಿಕೆ'ಯನ್ನು. ನಾಯಕನ ಆರ್ತತೆ ನಿಸ್ಸಹಾಯಕತೆಗಳು ಪದ್ಯದ ಉದ್ದಕ್ಕೂ ಹಾಸುಹೊಕ್ಕಾಗಿ ತೋರಿಬರುತ್ತವೆ.

"ನಿನ್ನ ತಿಳಿವನು ಹಣಿಸು" ಎನ್ನುವ ಸಾಲಿನಲ್ಲಿ ನಾಯಕನ ಆರ್ತತೆಯ ತೀವ್ರತೆ ಸುಸ್ಪಷ್ಟವಾಗಿ ವ್ಯಕ್ತಗೊಳ್ಳುತ್ತದೆ. ಮುಂದೆ ಯಾವ ದಾರಿಯೂ ಕಾಣದೆ "ನೀನೇ ದಿಕ್ಕು" ಎನ್ನುವ ಶರಣತೆಯೂ, ಮಡದಿಯ ತಿಳಿವಳಿಕೆಯಲ್ಲಿ ತನಗಿರುವ ಅಚಲ ಶ್ರದ್ಧೆಯೂ ಒಮ್ಮೆಗೇ ಮೂಡುತ್ತವೆ. ಎಂಟನೆಯ ಸಾಲಿನ "ನೀರಡಸಿ ಬಂದೆ" ಎನ್ನುವುದಕ್ಕೂ, ಇಪ್ಪತ್ತಮೂರನೆಯ ಸಾಲಿನ "ಹಸಿದು ಬಂದೆ" ಎನ್ನುವುದಕ್ಕೂ, ಇರುವ ಅಂತಃಸಂಬಂಧ ಗಮನಾರ್ಹ. ಉತ್ಕಟವಾದದ್ದನ್ನು ಕಲಾಪೂರ್ಣವಾಗಿ ಹೇಳುವಂಥ ಪರಿಸ್ಥಿತಿಯೊದಗಿದಾಗ ಅದನ್ನು ಬಗೆಗೆ ನಾಟುವಂತೆ ನಿವೇದಿಸುವ ಉಪಾಯವನ್ನು ಹುಡುಕಿಕೊಳ್ಳಬೇಕಾಗಿರುವುದರ ಜೊತೆಗೇ ಅದನ್ನು ಒಂದು "ಬಗೆ"ಯಲ್ಲಿ—ಪೂರ್ವಾಪರ ಸಂಬಂಧವನ್ನು ಸದಾ ದೃಷ್ಟಿಯಲ್ಲಿಟ್ಟುಕೊಂಡು—ತೋಡಿಕೊಳ್ಳಬೇಕಾಗುತ್ತದೆ. ಎಂದೇ ಮುಂಚೆ ಬರುವ "ನೀರಡಿಸಿ ಬಂದೆ" ಎನ್ನುವ ಮಾತು, ಮುಂದೆ ಬರುವ "ಹಸಿದು ಬಂದೆ"ಯೆನ್ನುವುದಕ್ಕೆ ಪೂರಕವಾಗಿ, ಲೋಕಾನುಭವದ ದೃಷ್ಟಿಯಿಂದ ಕ್ರಮಾಗತವಾಗಿ ಮೂಡಿ, ಆಲೋಚನೆಯ ತಾರ್ಕಿಕತೆಯನ್ನು ಪೋಷಿಸುತ್ತದೆ. ನಮ್ಮ ಮೇಲೆ ಉಂಟುಮಾಡುವ ಪರಿಣಾಮಕಾರಿತೆಯನ್ನು ಹಂತಹಂತವಾಗಿ ಕಟ್ಟುತ್ತದೆ.

ವಿರಸತೆ ಮಾಯವಾಗಿ, ಪ್ರತಿ ಮಾತು, ನಡಾವಳಿಯಲ್ಲಿ ಸಂಶಯದ ನೆರಳು ನಿವಾರಿತವಾಗಿ ಸಂಸಾರದಲ್ಲಿ ಅನ್ಯೋನ್ಯತೆಯ ಸಮತೋಲ ಮಾಡಬೇಕಾದರೆ ಇಬ್ಬರಲ್ಲೂ ಸ್ವಹಿತಭಾವ ತಗ್ಗಬೇಕು; ನಿಸ್ಪೃಹತೆ ನಿಸ್ವಾರ್ಥತೆಗಳ ಜ್ವಲಂತ ಅರಿವು ಹೆಜ್ಜೆಹೆಜ್ಜೆಗೂ ಇರಲೇಬೇಕು. "ಸ್ವಹಿತತೆ" ಕೊನೆಗೊಂಡು "ಸಹಿತತೆ" ಮೂಡಲೆಂದು ನಾಯಕ ಯಾಚಿಸಿಕೊಳ್ಳುವುದು ಹೀಗೆ :

ನನ್ನದಿದು ನಿನ್ನದಿದು | ಎಂದು ಎರಡನು ಬಗೆದು
ಪಾಲುಗಾರಿಕೆಗಾಗಿ ಹೆಣಗಬೇಡ | ನಿನಗೆ ನೀರಿಲ್ಲೆಂದು ಒಣಗಬೇಡ.

ಕೊನೆಯ ಸಾಲು ತುಂಬ ಅರ್ಥಪೂರ್ಣವಾಗುತ್ತದೆ. ದಾಂಪತ್ಯ ಎರಡು ಭಿನ್ನಘಟಕಗಳ ಪಾರಸ್ಪರ್ಯವಲ್ಲ; ಒಂದೇ ಪಾತಿಯಲ್ಲಿ ಬೆಳೆದು ಬೇರು ಹೆಣೆದುಕೊಂಡು ಒಂದಾದ ಎರಡು ಬಳ್ಳಿಗಳಂತೆ ತೋರುವ ಸಮ "ರಸ" ಸ್ವರೂಪಿ. ಇಲ್ಲಿ ಪಾಲುಗಾರಿಕೆಗಾಗಲಿ, "ನನಗಿಷ್ಟು ನಿನಗಿಷ್ಟು" ಎನ್ನುವ ವ್ಯಾಪಾರೀ ಮನೋಭಾವಕ್ಕಾಗಲಿ ಎಡೆ

ಯಿಲ್ಲ. ದೇಹಕ್ಕೆ ಎರಡು ಕಣ್ಣಿದ್ದಂತೆ ಬದುಕಿಗೆ ಹೆಣ್ಣು, ಗಂಡು : ಒಂದಕ್ಕೆ ಸಲ್ಲುವುದು, ಬೇಕಾಗುವುದು ಇನ್ನೊಂದಕ್ಕೂ ಸಲ್ಲುತ್ತದೆ,ಬೇಕಾಗುತ್ತದೆ.ಎಂದೇ "ನಿನಗೆ ನೀರಿಲ್ಲೆಂದು ಒಣಗಬೇಡ" ಎಂಬ ಮಾತು ಅಪ್ರತ್ಯೇಕತೆ ಯನ್ನು ಧ್ವನಿಸುವುದರಲ್ಲಿ ಯಶಸ್ವಿಯಾಗುತ್ತದೆ. ಸಂಸಾರದ ಈ "ಅದ್ವೈತ" ಭಾವನೆ ಮುಂದುವರೆದು ಘನಗೊಳ್ಳು ವುದು ಹಂತಹಂತವಾಗಿ :

> "ಒಂದು ಸಿರೆತಾನಾಡಿದಂತೆ ಇಹುದು | ಹೀಗಿರಲು ಬಾಳುದ್ದ ಬದುಕಬಹುದು"

ಶ್ವಾಸಕೋಶಗಳು ಎರಡಾದರೂ ಶ್ವಾಸ ಒಂದೇ ಎನ್ನುವಂಥ ಬೆಸುಗೆ ಸಂಸಾರಿಗರಲ್ಲಿ ಇದ್ದರೇನೇ ಬಾಳಿಗೆ ಅರ್ಥ ; ಅದಿಲ್ಲದೆ, ಎಂಥ ವಿಲಾಸೋಪ–ಭೋಗಗಳಿದ್ದರೂ ಸಹ ಬಾಳೊಂದು ಅನರ್ಥ. ಈ ಭಾವನೆಯನ್ನೇ ಇನ್ನಷ್ಟು ಚಿತ್ರವತ್ತಾಗಿ, ಆತ್ಮೀಯವಾಗಿ ಮನಗಾಣಿಸುವುದು ಪದ್ಯದ ಕೊನೆಯಲ್ಲಿ ಬರುವ ಈ ಪ್ರತಿಮೆ :

> "ಇದಿರಾಡದಿರು ಮತ್ತೆ | ಎದಿರಾಡದಿರು ಇತ್ತ
> ಮಾಡದಿರು ಬಾಳನ್ನು ಬೇಳೆಯಂತೆ | ಕೂಡಿರಲಿ ಬಾಳು ಇಡಿಗಾಳಿನಂತೆ"

"ಬೇಳೆ" ಅರೆಯನ್ನು ಪ್ರತ್ಯೇಕತೆಯನ್ನು, "ಇಡಿಗಾಳು" ಪರಿಪೂರ್ಣತೆ ಹಾಗೂ ಐಕ್ಯಗಳನ್ನು ಸಂಕೇತಿಸಿ ದಂಪತಿಗಳ ಸಂಬಂಧದ ರೀತಿಯನ್ನು ಸ್ಪಷ್ಟೀಕರಿಸುತ್ತದೆ.

ಇಂಥ ಆತ್ಮೀಯ, ಮೂರ್ತಶಬ್ದ ಚಿತ್ರಗಳ ಜೊತೆಗೇ ಕವಿ, ನಿಗೂಢವಾದದ್ದನ್ನು ಸೂಚಿಸುವಾಗ ಅಮೂರ್ತ ಚಿತ್ರಗಳನ್ನು ಸಮಯೋಚಿತವಾಗಿ ಬಳಸುತ್ತಾರೆ: 'ಜೀವ ಜೀವಾಳದಲಿ ಹೃದಯಾಂತರಾಳದಲಿ ಇಳಿದು ನೋಡು" ಎಂದು ಪ್ರಾರಂಭವಾಗುವ ಸಾಲಿನಿಂದ "ನೆಲೆಯಿಂದ ನೆಲವನ್ನು ಬಗೆದು ನೋಡು" ಎಂದು ಮುಕ್ತಾಯ ಗೊಳ್ಳುವ ಸಾಲಿನ ತನಕ ನಮ್ಮ ಮನಸ್ಸಿನಲ್ಲಿ ಸುಳಿಯುವುದು ಅಸ್ಪಷ್ಟ, ಅಮೂರ್ತವಾದ ಆಕಾಶ ಹಾಗು ಸಮುದ್ರದ ಚಿತ್ರಣ. ಇವೆರಡೂ ಮನಸ್ಸಿನ ಅಮೇಯತೆ, ಗಹನತೆಗಳಿಗೆ ಸಂಕೇತವಾಗುತ್ತವೆ. ಪ್ರಸ್ತುತ ಸಮಸ್ಯೆ— ಅಂದರೆ ಗಂಡುಹೆಂಡಿರ ಸಾಮರಸ್ಯ–ನಿಂತಿರುವುದು ಅವರ ಮನೋವ್ಯಾಪಾರದ ಮೇಲೆ 'ಎನ್ನುವುದನ್ನು ಮನ ಗಂಡರೆ, ಆ ಮನೋವ್ಯಾಪಾರ ಎಷ್ಟು ಜಟಿಲವೆನ್ನುವ ಅರಿವಾಗಿ ಪದ್ಯದ ಅರ್ಥಕ್ಕೆ ಹೊಸ ತಿರುವು ಮೂಡುತ್ತದೆ ; ಹೊಸ ಆಯಾಮ ದಕ್ಕುತ್ತದೆ.

ಈ ಪದ್ಯದ ನಾಯಕ ತನ್ನ ಪತ್ನಿಯನ್ನು ಕಾಣುವ ರೀತಿಯಲ್ಲೇ ಅವನ ಸ್ವಭಾವ ಸಂಸ್ಕಾರಗಳ ಪರಿ ಚಯ ನಮಗಾಗುತ್ತದೆ. ಆತ ಪುರುಷನಾದದ್ದರಿಂದ ಮೇಲೆಂಬ ಭಾವನೆಯಿಂದ ವರ್ತಿಸದೆ, ತನ್ನ ಸಂಗಾತಿ ಸಿರನು ಭವಿಯೆಂಬ ಪೂರ್ವನಿರ್ಧಾರದಿಂದ ಹಿತೋಪದೇಶಗಳ ಮುಂಗಾರನ್ನು ಸುರಿಸದೆ ಸಮಸ್ಕಂಧನಂತೆ ವ್ಯವಹರಿಸುವುದು ಗಣನೀಯ. ಅವನ ಪ್ರಸ್ತುತ ಮನಃಸ್ಥಿತಿಯ ತೀವ್ರತೆಯ ಅರಿವಿಗೆ ಅವನ ಶರಣಾಗತ ಭಂಗಿ ಬಹುಮಟ್ಟಿಗೆ ಸಹ ಕಾರಿ :

> "ಗಂಡು ದರ್ಪವ ಹರಿದು | ಬಿರಸು ಬಿಂಕವ ತೊರೆದು
> ತೋಳತೊಟ್ಟಿಲ ಮಗುವು ಆಗಿಬಂದೆ | ಗೊಂಬೆಯಾಡಿಸಿದಂತೆ ಆಡಿಸೆಂದೆ"

"ದರ್ಪ" "ಬಿರುಸು ಬಿಂಕ"ಗಳ ಜೊತೆ "ಮಗು" "ಗೊಂಬೆ"ಯಂಥ ಮೃದುವಾದ, ಮೂರ್ತವಾದ ಚಿತ್ರ ಗಳನ್ನು ಹೋಲಿಸಿದಾಗ ಸ್ವೈರ ಸ್ವಾಚ್ಛಂದ್ಯಗಳಿಗೆ ಪ್ರತಿಯಾದ ಪರಾಶ್ರಯತೆ, ಶರಣತೆಗಳನ್ನು ನಾಯಕನ ಸ್ಥಿತಿ ಯಾಚಿಸಿರುವುದು ಸುವ್ಯಕ್ತವಾಗುತ್ತದೆ. "ದರ್ಪ" ಬೆಳೆದವನಲ್ಲಿ, ಸ್ವಾರ್ಥಿಯಲ್ಲಿ ಕಾಣುವಂಥದ್ದು. ಅಂಥ ಗಂಡು ಅಬಲೆಯಾದ ಮಡದಿಯೆದುರು "ಮಗು"ವಾಗಿ ನಿಲ್ಲಬೇಕಾದರೆ, "ತಾಯ್ತನದ ಸೈರಣೆಯವಿತರಣೆ"ಗೆ, "ತಾಳ್ಮೆಯ ಸೈಪಿನೊಂದು ಕರುಣೆ"ಗೆ ಹಾತೊರೆದಿರಬೇಕಾದರೆ ಅವನಿಗಾಗಿರಬಹುದಾದ ಗರ್ವಭಂಗ, ಮರ್ಮಘಾತ ಯಾವ ತೆರದ್ದಿರಬೇಕು ! ಈ ತಿಳಿವು ನಾಯಕನ ದಾರುಣಾವಸ್ಥೆಯ ತೀವ್ರತೆಯನ್ನು ನಮ್ಮ ಅನು

ಭವಕ್ಕೆ ನೇರವಾಗಿ ಮುಟ್ಟಿಸುತ್ತದೆ. ಹೆಂಡತಿ ಕೇವಲ ಭೋಗವಸ್ತುವೆಂಬ ತಾರುಣ್ಯಸಹಜ ಭಾವನೆಯು "ಗಂಡು ದರ್ಪ" ಕ್ರಮೇಣ ನಿವಾರಿತವಾಗಿ, ಆಕೆಯಲ್ಲಿ "ತಾಯ್ತನ"ದ, ಆರೈಕೆ ವಾತ್ಸಲ್ಯದ ದೃಷ್ಟಿ ಬೆಳೆಯುವುದು ಮನಸ್ಸಿನ ಪ್ರೌಢತೆಯನ್ನು, ಅನುಭವದಿಂದಾಗುವ ಪಕ್ವ-ವಿವೇಕೋದಯವನ್ನು ಸೂಚಿಸುತ್ತದೆ. ಗಂಡು ಮಡದಿಯ ಎದುರು ನಿರ್ಜೀವ "ಗೊಂಬೆ"ಯಾಗಿ ಆಕೆ ಆಡಿಸಿದಂತೆ ಆಡಲು ಆಶಿಸುತ್ತಾನೆ. ಅವಳೇ ಸರ್ವಸ್ವವೆನ್ನುವ ಮಜಲಿಗೆ ಏರುತ್ತಾನೆ. ಕೊನೆಗೆ ಇಬ್ಬರ ನಡುವಿನ ಭೇದವೇ ಅಳಿಸಿಹೋಗಿ "ನಾನೆಂದರೂ ಒಂದೇ, ನೀನೆಂದರೂ ಒಂದೇ" ಎಂಬ ತಾದಾತ್ಮ್ಯದ ನೆಲೆಗೆ ಮನಸ್ಸು ಮುಟ್ಟುತ್ತದೆ. ಈ ಪೂರ್ಣದೃಷ್ಟಿಯ ಪ್ರಜ್ಞೆಯೇ ಸಾರ್ಥಕ ಜೀವನದ ಪ್ರತೀಕ.

"ಮನದನ್ನೆ" ಪದ್ಯದ ತುಂಬ ವಿರಸತೆ ನಿರಾಶೆ ಹತಾಶೆಗಳೇ ಗಿಡದಂತೆ ಭಾಸವಾದರೂ, ಮುಕ್ತಾಯದ ವೇಳೆಗೆ ತೋರಿಬರುವ ಆಶಾವಾದ-ಕಗ್ಗತ್ತಲೆಯಲ್ಲಿನ ಮಿಂಚಿನಂತೆ-ಪದ್ಯದ ಮಡಿಕೆ ಮಗ್ಗುಲುಗಳನ್ನು ಬಿಚ್ಚಿ ಹೊಸ ಅರ್ಥವನ್ನು ಹೊಮ್ಮಿಸುತ್ತದೆ:

ಹೊಸ ಹುಟ್ಟು ಬರುವುದಿದೆ ಇನ್ನು ಮುಂದೆ | ಆಗೋಣ ಆ ಜಗದ ತಾಯಿತಂದೆ

ಮೇಲಿನ ಸಾಲುಗಳಲ್ಲಿ, ಹಿಂದಿನ ವೈಮನಸ್ಯ, ನೋವು, ವಿರಸತೆಗಳು ಕರಗಿ ಮುಂದಿನ ಬಾಳು ಸವಿಯಾಗುವಂತೆ ದಂಪತಿಗಳು ಭವಿಷ್ಯವನ್ನು ಕಟ್ಟಿಕೊಳ್ಳುವುದರ ಅನಿವಾರ್ಯತೆ ಲೋಕಾಭಿರಾಮವಾಗಿ ಸೂಚಿತವಾಗುವುದರ ಜೊತೆಗೆ ಮತ್ತೊಂದು ಇಂಗಿತಾರ್ಥವೂ ಅಡಕವಾಗಿದೆ "ಹೊಸಹುಟ್ಟು" ದಾಂಪತ್ಯದ ಸಾಫಲ್ಯಕ್ಕೆ ಸಂಕೇತ. ಮಗುವಿನ ಆಗಮನದಿಂದ ಈ ಎಳೆಯ ದಂಪತಿಗಳ ಹುಡುಗಾಟದ ಜಗಳ ಕಳೆದು, ಅವರು ಈಗ ಹೊಣೆಗಾರಿಕೆಯನ್ನು ಹೊರಲೇಬೇಕಾದ "ತಾಯಿತಂದೆ"ಗಳಾಗಬೇಕಾಗಿದೆ. ಈತನಕ ಇವರು ಎಲ್ಲವನ್ನೂ ತಮ್ಮ ಹಿತಾಹಿತಗಳ ಮಾನದಿಂದ ಅಳೆಯುತ್ತಿದ್ದರು ; ಎಲ್ಲ ಸನ್ನಿವೇಶಗಳಲ್ಲೂ ತಾವೇ ಮುಖ್ಯ ಕೇಂದ್ರವಾಗಿರುತ್ತಿದ್ದರು. ಆದರೆ ಮುಂದೆ ತಮ್ಮಿಬ್ಬರ ಬದುಕೂ, ಬರಲಿರುವ ಕಂದನಿಗೆ ಮೀಸಲಾಗಬೇಕಿದೆ. ತಾವು ಸ್ವಹಿತಗಳನ್ನು ತ್ಯಜಿಸಿ, ಹೊಸದಾಗಿ ಲೋಕಕ್ಕೆ ಅವತರಿಸಲಿರುವ ತಮ್ಮ ಕರುಳಿನ ಕುಡಿಯ ಪೋಷಣೆಯಲ್ಲಿ ಬದುಕನ್ನು ಸವೆಸಬೇಕಿದೆ. ಇನ್ನುಮುಂದೆ ಅವರು ಗಂಡು ಹೆಂಡಿರಷ್ಟೇ ಅಲ್ಲ "ತಾಯಿತಂದೆ"ಗಳು ; ಭೋಗ ತ್ಯಾಗಕ್ಕೆ ಜಾಗಮಾಡಿಕೊಡಬೇಕಾದ ಬಾಳಿನ ಸತ್ಯವದು.

ಪದ್ಯದಲ್ಲಿ ಹಿಂದೆಂದೂ ಸುಳಿವುಕೊಡದೆ ಕೊನೆಯಲ್ಲಿ ಅನಿರೀಕ್ಷಿತವಾಗಿ "ಹೊಸಹುಟ್ಟ"ನ ಉಲ್ಲೇಖ ಬರುವುದು ಅರ್ಥಪೂರ್ಣವಾಗಿದೆ. ಪ್ರಣಯದ ತಿಳಿಗೇಡಿತನ, ಲಾಘವಗಳ ಅನುಭವ ಮೊದಲಿಲ್ಲ ನಮಗಾಗಿ, ಅಂತ್ಯದಲ್ಲಿ ಅದು ಒಗರು ಹುಳಿಗಳನ್ನು ಕಳೆದುಕೊಂಡು ಕಲ್ಯಾಣಕರವೂ, ಗಂಭೀರವೂ ಆದ ಪ್ರೇಮದಲ್ಲಿ ಹಠಾತ್ತನೆ ಪರ್ಯವಸಾನಗೊಳ್ಳುವುದು ಪದ್ಯದ ನಾಯಕನ ಮನಸ್ಸಿನ ಬೆಳವಣಿಗೆಯನ್ನು ಸೂಚಿಸುತ್ತದೆ. ಬೇಂದ್ರೆಯವರ ಕೌಟುಂಬಿಕ ಪದ್ಯಗಳಲ್ಲಿ "ಮನದನ್ನೆ"ಗೆ ದಕ್ಕಿರುವ ವಿಶಿಷ್ಟ ಸ್ಥಾನಕ್ಕೆ ಇದರಲ್ಲಿ ಹಂತಹಂತವಾಗಿ ನಿರೂಪಿತವಾಗಿರುವ ದೃಷ್ಟ್ಯಂತರವೇ ಕಾರಣ. ದಂಪತಿಗಳ ಸಾಧಾರಣ ವಿರಸದ ಚಿತ್ರಣ ತುದಿಯಲ್ಲಿ ಗಹನಾರ್ಥಗಳ ಕಡೆಗೆ ಹಾಯುತ್ತದೆ. ಹೀಗಾಗಿ ವೈಯಕ್ತಿಕಾನುಭವವೆನ್ನಿಸಿದ್ದು, ಆಳ ಅಗಲಗಳನ್ನು ದಕ್ಕಿಸಿಕೊಳ್ಳುತ್ತ ಸಾರ್ವತ್ರಿಕ ತತ್ತ್ವಾರ್ಥವನ್ನು ಧ್ವನಿಸುವುದರಲ್ಲಿ ಸಮರ್ಥವಾಗುತ್ತದೆ.

ಬಿ. ಎಸ್. ನಾಗರಾಜ್‌ಭಟ್

ನವ್ಯಸಾಹಿತ್ಯ ಹಾಗು ಕಾಮ

ಬದುಕಿನ ವಿಭಿನ್ನ ಅನುಭವಗಳ ಅಭಿವ್ಯಕ್ತಿ ಮಾಧ್ಯಮವೆ ಸಾಹಿತ್ಯ. ಪಂಪನಿಂದ ಇಂದಿನವರೆಗೂ ಬದುಕಿನ ವಿಚಿತ್ರ ಸತ್ಯಗಳ ಶೋಧನೆ ನಡೆಯುತ್ತಲೇ ಇದೆ. ತಾವು ಕಂಡುಕೊಂಡ ಬದುಕಿನ ಮೂಲಭೂತ ಅನುಭವಗಳ ತಾಕಲಾಟಕ್ಕೆ ನಿರ್ದಿಷ್ಟ ರೇಖೆಗಳನ್ನು ರೂಪಿಸುವುದರಲ್ಲಿ ಸಫಲರಾದ ಕವಿಗಳು ಬಹಳ ಮಂದಿ. ಪಂಪನ ಕಾಲದಲ್ಲಿ ಜೀವನದ ಸಮಗ್ರ ಅನುಭವವಾಗಿ ತಾತ್ವಿಕ ದೃಷ್ಟಿಕೋನಗಳೂ ಮೈಗೂಡಿಕೊಳ್ಳುತ್ತಿತ್ತು. ಅಂದರೆ ಬದುಕಿನ ಎಲ್ಲ ಅನುಭವಗಳಂತೆ ಆಧ್ಯಾತ್ಮಿಕ ಅನುಭವಗಳು ಕಾವ್ಯದ ಪರಿಧಿಯಲ್ಲಿ ಮೈದಾಳುತ್ತಿತ್ತು. ಪ್ರೇಮ ಬದುಕಿನ ಯೌವನಾವಸ್ಥೆಯಲ್ಲಿ ಮಹತ್ವವಾದಷ್ಟೇ ಆಧ್ಯಾತ್ಮವು ಪ್ರಮುಖವಾಗಿ ವ್ಯಕ್ತಿಯ ಬದುಕನ್ನು ಸಮತೂಕವಾಗಿರಿಸುತ್ತಿತ್ತು. ಇಂದಿನ ಕಾವ್ಯಗಳನ್ನು ನೋಡುವ ನಮಗೆ ಆಶ್ಚರ್ಯವಾಗಬಹುದು ; ಮಿಥ್ಯೆ ಎನಿಸಬಹುದು ; ಆ ಕಾಲದ ಜೀವನ ಕೇವಲ ಆದರ್ಶಮಯ ಎನ್ನಿಸಲೂಬಹುದು. ಅಂದಿನ ಯುಗಧರ್ಮದ ಸ್ಪಷ್ಟಚಿತ್ರಣ, ಜೀವನವಿಧಾನ ತಿಳಿದಾಗ ಮೇಲಿನ ಮಾತುಗಳ ನೈಜ ಮೌಲ್ಯಗಳು ಸ್ಫುರಿಸುತ್ತವೆ.

ಒಂದು ಮಾತು ನಿಜ, ಬದುಕಿನ ಆಳಕ್ಕೆ ಇಳಿದು ನೋವು ನಲಿವನ್ನು ಚಿತ್ರಿಸುವಲ್ಲಿ ಅಂದಿನ ಕಾವ್ಯಗಳು ವಿಫಲವಾದವು. ಧರ್ಮಾರ್ಥ ಕಾಮ ಮೋಕ್ಷಗಳ ಚಿತ್ರಣದಲ್ಲಿ ಜೈನಸಾಹಿತ್ಯ ಮೋಕ್ಷಗಾಮಿಯಾದುದರಿಂದ ಅದರ ಮೇಲೆ ಒತ್ತು ಸಹಜವಾಯಿತು. ಕನ್ನಡಸಾಹಿತ್ಯದ ಆರಂಭ ಜೈನಕವಿಗಳಿಂದಾದ್ದರಿಂದ ಆ ಧರ್ಮದ ವಿಧಾನಗಳು ಹೆಚ್ಚು ಮೂರ್ತವಾಗಲು ಸಾಧ್ಯವಾಯಿತು. ಸಂಸ್ಕೃತ ಸಾಹಿತ್ಯದಲ್ಲಿ ಅಷ್ಟುಹೊತ್ತಿಗಾಗಲೆ ಚಾರ್ವಾಕರು ಸಿದ್ಧಾಂತರೂಪದಲ್ಲಿ ಬಂದುಹೋದದ್ದು ಸಾಹಿತ್ತಿಕ ಸತ್ಯವಾದರು ವ್ಯಾಪಕವಾಗಿ ಬೆಳೆಯಲಿಲ್ಲ. ಮತಧರ್ಮಗಳ ಬಿಗಿತದಲ್ಲಿ ಅದಕ್ಕೆ ಉಸಿರುಕಟ್ಟಿರುವುದೂ ಅಷ್ಟೇ ಚಾರಿತ್ರಿಕ ಸತ್ಯ. ಸಾಹಿತ್ಯಜೀವನದ ಎಲ್ಲ ಅನುಭವಗಳನ್ನು ದಕ್ಕಿಸಿಕೊಳ್ಳುವುದರಲ್ಲಿ ಸಫಲವಾಗಲಿಲ್ಲ. ಜೊತೆಗೆ ಜೀವನದ ಮೇಲು ಸ್ತರಗಳಷ್ಟರಲ್ಲೆ ಚಿತ್ರಿತವಾಗುವುದರಿಂದ ಸರಳವೂ ಆಯಿತು. ಜನ್ನನ 'ಯಶೋಧರ ಚರಿತೆ'ಯಂಥ ಕೃತಿ ಬದುಕಿನ ಇನ್ನೊಂದು ಮುಖವನ್ನು ಚಿತ್ರಿಸಿದರೂ ಅಂಥ ಕೃತಿಗಳು ಹೆಚ್ಚು ಬರಲಿಲ್ಲವೆಂಬುದು ಪ್ರಮುಖವಾಗುತ್ತದೆ.

ಈ ಧೋರಣೆ ನವ್ಯಸಾಹಿತ್ಯದ ಆರಂಭದವರೆಗೂ ಸ್ವಲ್ಪ ಹೆಚ್ಚು ಕಮ್ಮಿ ಬೆಳೆದುಕೊಂಡು ಬಂತು. ಇಲ್ಲಿಯವರೆಗೆ ಸಾಹಿತ್ಯ ಬದುಕಿನ ಆಳಕ್ಕೆ ಇಳಿದು ತನ್ನ ತೆಕ್ಕೆಗೆ ಒಗ್ಗಿಸಿಕೊಳ್ಳದ ಅನುಭವಗಳನ್ನು ನವ್ಯಸಾಹಿತ್ಯ ಒಗ್ಗಿಸಿಕೊಳ್ಳುವುದರಲ್ಲಿ ಸಫಲವಾದರೂ ಮತ್ತೊಂದು ಅತಿರೇಕದ ಸ್ಥಿತಿಗೆ ಹೋಯಿತು. ನವ್ಯಸಾಹಿತ್ಯದ ಸಂದರ್ಭದಲ್ಲಿ ಸಾಹಿತ್ಯ ಕೆಲವೊಂದು ಅನುಭವಕ್ಕೆ ಸೀಮಿತವೂ ಆಗುತ್ತಿರುವ ಅಪಾಯದ ಅಂಚಿನಲ್ಲೇ ಸಾಗುತ್ತಿದೆ ಎಂಬುದನ್ನು ಮರೆಯುವಂತಿಲ್ಲ. ನಿರುತ್ಸಾಹ, ಕುರೂಪ, ಕಾಮದ ವಿವಿಧ ಮುಖಗಳ ಕತ್ತಲೆಯ ಆಳವನ್ನು ಅಗೆದು ಅನ್ವೇಷಿಸು

ವುದರಲ್ಲಿ ಸಫಲತೆಯನ್ನು ಪಡೆದುಕೊಂಡರೂ ಇದಿಷ್ಟಕ್ಕೇ ಸೀಮಿತವೂ ಆಗುತ್ತಿರುವುದರಿಂದ ಪ್ರಾಚೀನ ಸಾಹಿತ್ಯ ತನ್ನ ಹರವನ್ನು ಕಂಡುಕೊಳ್ಳುವಲ್ಲಿ ಅನುಭವಿಸಿದ ಸೋಲನ್ನೆ ನವ್ಯ ಸಾಹಿತ್ಯವು ಅನುಭವಿಸಿದಂತಾಗುತ್ತದೆ.

ಇತ್ತೀಚೆಗೆ ಬರುತ್ತಿರುವ ಸಾಹಿತ್ಯ ಪ್ರಕಾರಗಳನ್ನು ಗಮನಿಸಿದಾಗ ಕಾಮಕ್ಕೆ ಹೆಚ್ಚು ಒತ್ತು ಬಿದ್ದಿರುವುದು ನಿಚ್ಚಳವಾಗುತ್ತದೆ. ಇದಕ್ಕೆ ಈಗಾಗಲೆ ಕೆಲವು ವಿಮರ್ಶಕರು ಕಾರಣಗಳನ್ನೂ ಗುರುತಿಸಿದ್ದಾರೆ. ಪ್ರಮುಖವಾಗಿ ಎಲ್ಲರೂ ನಿರ್ದಿಷ್ಟ ವಯಸ್ಸಿನ ಹಂತದಲ್ಲಿ ಬರೆಯುವವರು ಸುಮಾರು ಇಪ್ಪತ್ತರಿಂದ ನಲವತ್ತೈದರ ಅಂತರದಲ್ಲಿ ಬರುವ ಬರೆಯುತ್ತಿರುವ ಲೇಖಕರು ತಮ್ಮ ಅನುಭವಗಳ ಆಳವನ್ನು, ಅನ್ವೇಷಣೆಯನ್ನು ಸೀಮಿತಗೊಳಿಸಿಕೊಳ್ಳುವುದರಿಂದ ಹೀಗಾಗುವುದು. ಆದರೆ ನನ್ನ ಮುಂದಿರುವ ಸಮಸ್ಯೆಯೆಂದರೆ ಪಂಪ ರನ್ನ ನಾರಾಯಣಪ್ಪ ಮುಂತಾದವರೆಲ್ಲ ಸ್ವಲ್ಪ ಹೆಚ್ಚುಕಮ್ಮಿ ಇದೇ ವಯಸ್ಸಿನ ಅಂತರದಲ್ಲೆ ಬರುತ್ತಾರೆ. ಆದರೆ ಇವರ ಬರವಣಿಗೆ ನವರಸಗಳ ವ್ಯಾಪ್ತಿಯನ್ನು ಪಡೆದುಕೊಳ್ಳುತ್ತದೆ. ಒಂದು ಮಾತಂತು ಸತ್ಯ. ಸ್ಥಾಯೀಭಾವಗಳು ಸಂಚಾರಿ ಭಾವಗಳ ವಿಶ್ಲೇಷಣೆ ನಡೆದಿದ್ದರೂ ಅದನ್ನು ಆಂಗಿಕವಾಗಿ ಅನ್ವಯಿಸುವಲ್ಲಿ ಪೂರ್ಣವಾಗಿ ಸಮರ್ಥವಾಗಿದೆಯೆನ್ನುವಂತಿಲ್ಲ.

ಪ್ರಾಚೀನ ಸಾಹಿತ್ಯದಲ್ಲಿ ಕಂಡುಬರುವ ಪ್ರೇಮದ ಜಾಡೆ ನವೋದಯದ ವ್ಯಾಪ್ತಿಯಲ್ಲಿ ಇನ್ನೂ ಹರವನ್ನು ಪಡೆದುಕೊಂಡಿದ್ದು ನವ್ಯಸಾಹಿತ್ಯದಲ್ಲಿ ಕಾಮದ ರೂಪದಲ್ಲಿ ತೀರ ಒರಟಾಗಿ, ನಗ್ನರೂಪದಲ್ಲಿ ಕಾಣಲು ಆರಂಭವಾಯಿತು. ಸ್ವಾರಸ್ಯವಾದ ವಿಷಯವೆಂದರೆ ಕಾಮವನ್ನು ಕುರಿತು ಒಂದಾದರೂ ಪದ್ಯ ಬರೆಯದಿದ್ದರೆ ಬದುಕೆ ಸಾರ್ಥಕವಾಗದೆಂಬಷ್ಟರಮಟ್ಟಿಗೆ ಪದ್ಯದಲ್ಲೂ, ಕತೆಗಳಲ್ಲಂತು ಇದನ್ನು ಬಿಟ್ಟು ಕತೆಗಳೆ ಇಲ್ಲವೆನ್ನುವಷ್ಟರಮಟ್ಟಿಗೆ ಆಗಿದ್ದು. ಅಂದರೆ ನಾನು ಇಲ್ಲಿ ಪ್ರಮುಖವಾದ ಒಂದಂಶದತ್ತ ಗಮನ ಸೆಳೆಯುತ್ತಿದ್ದೇನೆ. ನಮ್ಮ ಲೇಖಕರಿಗೆ ಬದುಕಿನಲ್ಲಿ ವೈವಿಧ್ಯವಿದ್ದು ಕಾಮದತ್ತವೇ ಕೇಂದ್ರೀಕೃತವಾದದ್ದು ಯಾಕೆ? ಬಾರ್ ನೋಡದ, ಕ್ಯಾಬರೆ ಕಾಣದವರೂ ಇದನ್ನು ತಮ್ಮ ಕೃತಿಯಲ್ಲಿ ತರದಿದ್ದರೆ ಏನನ್ನೋ ಕಳೆದುಕೊಂಡಂತೆ ಭಾಸವಾಗುತ್ತದೆ. ಇದಕ್ಕೆ ಕಾರಣ ನಮ್ಮ ಸಮಕಾಲೀನ ಬದುಕೆ, ಪರಿಸರವೆ ಎಂಬುದನ್ನು ಆಳವಾಗಿ ಚಿಂತಿಸಬೇಕಾಗುತ್ತದೆ. ಬದುಕಿನ ಒಂದಂಶವಾದ ಕಾಮ ಸಂಕೀರ್ಣಸ್ವರೂಪದ್ದಾದರೂ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಅದ್ವಿತೀಯವಾಗಿ ಏಕಪಾತ್ರಾಭಿನಯ ಕೊಡುತ್ತಿರುವುದು ಒಂದು ಆಭಾಸವಷ್ಟೆ.

ಅಸ್ತಿತ್ವ ವಾದದ ಹಿನ್ನೆಲೆಯಲ್ಲಿ, ಅಸಂಗತ ತಂತ್ರಗಳ ಹಿನ್ನೆಲೆಯಲ್ಲಿ, ವೈವಿಧ್ಯಮಯ ಬದುಕಿನ ಹಿನ್ನೆಲೆಯಲ್ಲಿ ಕಾಮದ ಕೈವಾಡದಷ್ಟು ಮತ್ತೆ ಯಾವುದೂ ಇಲ್ಲ. ಹಾಗಾಗಿ ಗಾಬರಿ ಹುಟ್ಟಿಸುವ ಮಾತೆಂದರೆ ಸಮಗ್ರತೆಯನ್ನು ಸಾಧಿಸಲು ಹೊರಟ ನವ್ಯಸಾಹಿತ್ಯ ವಿಶಿಷ್ಟ ಪಾತಳಿಗಳಲ್ಲಿ ಬದುಕಿನ ಎಲ್ಲಾ ಮುಖಗಳನ್ನು ಕಾಣುವ ಬದಲು ಇತ್ತ ವಾತ್ರ ವಾಲುತ್ತಿರುವುದು ಮತ್ತೊಂದು ಅಪಾಯದ ಅಂಚನ್ನು ಮುಟ್ಟುತ್ತಿದೆಯೆಂಬುದು. ಮೊದಲು ಅತ್ಯಂತ ನಿರೀಕ್ಷೆಯನ್ನು ಇಟ್ಟುಕೊಂಡ ಈ ಪ್ರಕಾರ ಅದನ್ನು ತಲುಪುವಲ್ಲಿ ವಿಫಲವಾಗಿದ್ದುದು ಈಗಿನ 'ನವ್ಯ' ಕೇವಲ ಒಂದು ತಂತ್ರ ಎಂಬಷ್ಟರಮಟ್ಟಿಗೆ ಹಳೆಯದಾಗಿ ಯೌವನದಲ್ಲೆ ವೃದ್ಧಾಪ್ಯ ಕಾಣುವ ಸ್ಥಿತಿಗೆ ಬಂದಿದೆ.

ನನಗನ್ನಿಸುವುದು, ಇಂದಿನ ಜೀವನ ವಿಧಾನಗಳಲ್ಲಿ ಪ್ರಾಚೀನ ತಾತ್ವಿಕ ಸಿದ್ಧಾಂತಗಳು ಸತ್ತುಹೋಗುತ್ತಿರುವುದು ಸೃಜನಶೀಲ ಬರಹಗಾರರ ಮುಂದಿರುವ ಸಮಸ್ಯೆಯಾದರೆ, ಸಾಮಾನ್ಯ ದರ್ಜೆಯವರಲ್ಲಿ ಇದರತ್ತ ಕಾಳಜಿ ಇಲ್ಲದಿರುವುದು. ಈ ಮಾತನ್ನು ಇನ್ನೂ ಸ್ಪಷ್ಟಪಡಿಸುವ ಅಗತ್ಯವಿಲ್ಲವೆಂದುಕೊಂಡಿದ್ದೇನೆ.

ಬಸವ ಕಮಲೆಯಿಂದ ಆರಂಭವಾಗುವ ಪ್ರಾಥಮಿಕ ಶಿಕ್ಷಣ ಪ್ರಾಚೀನ ತತ್ತ್ವಶಾಸ್ತ್ರಗಳ ಕೊಂಡಿಯನ್ನು ಕಳಚಿಕೊಂಡದ್ದು. ನಿರ್ದಿಷ್ಟ ತಾತ್ವಿಕ ಸಿದ್ಧಾಂತಗಳಿಲ್ಲದೆ ಕಾಲಕಳೆಯಬಹುದೆಂದು ಸಿದ್ಧಾಂತ ಮಾಡಿತೋರಿಸಬಲ್ಲಂಥಾದ್ದು. ವ್ಯಾಪಕವಾಗಿ ಬದುಕಿನ ಮೂಸೆಯಲ್ಲಿ ಮೂಡುವುದೆ ಇಲ್ಲವಾಗಿ ಸೆಳೆತ ಸುಳಿಗಳಿಂದ ದೂರ ಉಳಿದು

ಬಿಡುತ್ತಾನೆ. ಹಾಗಾಗಿ ಒಂದರ್ಥದಲ್ಲಿ ಐಚ್ಛಿಕವಾಗುವುದರತ್ತ ವಾಲುತ್ತಿರುವ ಈ ಫಿಲಾಸಫಿಗಳು ಸಾಮಾನ್ಯರ ಬದುಕಿನ ಸುತ್ತ ಘೇರಾಯಿಸುವುದಿಲ್ಲ. ಎಲ್ಲರ ಜೀವನದ ಅವಿಭಾಜ್ಯವಾಗದಿದ್ದಾಗ ಸೀಮಿತ ವಲಯದಲ್ಲಿ ಹರಿಯುವುದು ಸಹಜವೂ ಆಗುತ್ತದೆ. ಇದರ ಜೊತೆಗೆ ನಮ್ಮಲ್ಲಿ ದಿನದಿನಕ್ಕೂ ಹೆಚ್ಚಾಗುತ್ತಿರುವ ಬರಹಗಾರರ ಸಂಖ್ಯೆಯನ್ನು ಗಮನಿಸಿದಾಗ ಇವರೆಲ್ಲ ಬದುಕಿನ ಬಗ್ಗೆ ಹೆಚ್ಚು ಕಾಳಜಿವಹಿಸುವರೂ ಎನ್ನುವುದಕ್ಕಿಂತಲು ತಮ್ಮ ವಯಸ್ಸಿಗನುಗುಣವಾದ ಚಿಂತನೆಗೆ ಹೆಚ್ಚು ಒತ್ತನ್ನು ಕೊಡುತ್ತಿರುವುದು ಇಲ್ಲಿ ಗಮನಾರ್ಹ. ಸಾವನ್ನು ಕುರಿತು ನಮ್ಮಲ್ಲಿ ಸಾಕಷ್ಟು ಉತ್ತಮ ಸಾಹಿತ್ಯ ರೂಪುಗೊಳ್ಳುತ್ತಿದೆ. ಆದರೆ ನಿರಾಸೆ, ಬದುಕಿನ ಅಸ್ಥಿರತೆ, ಕ್ಷಣಿಕ ಸ್ಥಿತಿಗಳನ್ನು ಕುರಿತು ಅಲ್ಲೊಂದು ಇಲ್ಲೊಂದು ಕೃತಿಗಳು ಮೂಡುತ್ತಿವೆಯೆ ಹೊರತು ವ್ಯಾಪಕವಾಗದಿರುವುದು ಗಮನಿಸಬೇಕಾದ ವಿಚಾರ.

ನವ್ಯಸಾಹಿತ್ಯದಲ್ಲಿ 'ಕಾಮ'ವನ್ನೇ ಅಧಿಕೃತವಾಗಿ ಬರೆಯುವವರೂ ಇದ್ದಾರೆ. ಇಂಥಾ ಕವಿಗಳ ಪ್ರಭಾವದಿಂದ ಬಹಳ ಜನ ತಪ್ಪಿಸಿಕೊಳ್ಳಲಾರದವರಾಗಿ ಸೊರಗುತ್ತಲೂ ಇದ್ದಾರೆ. ಇದಕ್ಕೆ ನಮ್ಮ ನವ್ಯ ವಿಮರ್ಶಕರೂ ಕಾರಣರಾಗಿದ್ದಾರೆ. ಇಂಥ ಬರವಣಿಗೆಗೆ ಅತಿ ಪ್ರಚಾರಕೊಟ್ಟು ಆ ಬಗೆಯ ಸಾಹಿತಿಗಳನ್ನು ಸಾಹಿತ್ಯಗಳನ್ನು ಮೇಲೆತ್ತುವ ಹವಣಿಕೆಯಲ್ಲಿ ಅದರ ಅಪಾಯದತ್ತ ಹೆಚ್ಚು ಕಿವುಡರಾಗಿರುವುದನ್ನು ನಾವು ಗಮನಿಸಬೇಕಾಗುತ್ತದೆ. ಕಾಮದ ಬಗೆಗೆ ಬರೆಯುವವರು ಇನ್ನೂ ಮೇಲುಸ್ತರದಲ್ಲೆ ಇದ್ದಾರೆ ಎಂದೆನ್ನಿಸುತ್ತದೆ. ಅದರ ಆಳಕ್ಕೆ ಇಳಿದು ಕರಾಳಮುಖಗಳ, ಜಿಗುಪ್ಸೆ, ಭೀಭತ್ಸಗಳ ಸಮಗ್ರ ಚಿತ್ರಣವನ್ನು ಕೊಟ್ಟಿಲ್ಲವೆನ್ನಿಸುತ್ತದೆ. ಮೇಲುಮೇಲೆ ಕಂಡು ಬರುವ ಥ್ರಿಲ್ ಮಾತ್ರ ಸೆರೆಹಿಡಿಯುವುದಷ್ಟಕ್ಕೆ ಸೀಮಿತವಾದಂತಿವೆ. ನನ್ನ ಅನುಮಾನವನ್ನು ಗಟ್ಟಿಮಾಡುವುದು ಇಂಥಾ ಸಂದರ್ಭಗಳಲ್ಲಿ, ಅಂದರೆ 'ನವ್ಯಸಾಹಿತ್ಯ' ಕಾಮವನ್ನೇ ಹೆಚ್ಚಾಗಿ ಚಿತ್ರಿಸುತ್ತದೆ ಎಂದರು ಕೇವಲ ಮೇಲು ಸ್ತರದಲ್ಲಿ ಮಾತ್ರ ಇದು ಕಾರ್ಯಪ್ರವೃತ್ತವಾಗಿದೆ ಎಂಬುದು ನನ್ನ ಅಭಿಪ್ರಾಯ. ಆಳದ ಅನ್ವೇಷಣೆಗೆ ಹೊರಟ ಈ ಸಾಹಿತ್ಯ ಪ್ರಕಾರ ಇಲ್ಲಿ ಅಷ್ಟೊಂದು ಯಶಸ್ವಿಯೂ ಆಗಲಿಲ್ಲವೆನಿಸುತ್ತದೆ.

ಇತ್ತೀಚಿಗೆ ಸಾಮಾಜಿಕ ಕಾಳಜಿ ಹೆಚ್ಚಾಗಿ ವ್ಯಕ್ತಿಯ ಬಯಕೆಗಿಂತ ಸಮಷ್ಟಿಯ ಮಿಡಿತ ಮುಖ್ಯವಾಗುತ್ತಿರುವುದು ಕಾವ್ಯದ ಬೆಳವಣಿಗೆ ದೃಷ್ಟಿಯಿಂದ ಮಹತ್ವದ್ದಾಗುತ್ತಿದೆ.

ನಿರ್ದಿಷ್ಟ ತಾತ್ವಿಕ ನೆಲೆಗಟ್ಟಿನ ಮೇಲೆ ರೂಪಿತವಾಗುವ ಸಾಹಿತ್ಯದ ಬಗ್ಗೆ ಬೆರಳಮೇಲೆ ಎಣಿಸುವಷ್ಟು ಮಂದಿ ಸಾಹಿತಿಗಳು ನಮ್ಮಲ್ಲಿದ್ದಾರೆ. ಹಾಗಾಗದೆ ಬರವಣಿಗೆಗೆ ತೊಡಗುವ ಮುನ್ನ ತನ್ನ ಇತಿಮಿತಿಗಳನ್ನು ಗುರುತಿಸಿಕೊಂಡು ಆಳಕ್ಕೆ ಇಳಿದು ಅನ್ವೇಷಿಸುವ ಸಾಹಿತ್ಯ ಹೆಚ್ಚುಹೆಚ್ಚಾಗಿ ಬರಬೇಕು. ಆಗ ನವ್ಯಸಾಹಿತ್ಯದ ವ್ಯಾಪ್ತಿ ಬದುಕಿನ ವಿವಿಧ ಮಗ್ಗುಲತ್ತ ಹರಡಿ ಆರೋಗ್ಯಕರ ಧೋರಣೆ ನಿರೂಪಿತವಾಗಲು ಕಾರಣವಾಗುತ್ತದೆ.

ಭಕ್ತಿಯು ಮಾಗಿ ಪರಾಭಕ್ತಿಯಾದ ಮೇಲೆ ಮತಭ್ರಾಂತಿಯ ಕರಾಳ ರಕ್ಕಸನ ಸುಳಿವು ಇರುವುದಿಲ್ಲ. ಪರಾಭಕ್ತಿಯಲ್ಲಿ ನೆಲಸುವ ಜೀವಿ ಪ್ರೇಮೇಶ್ವರನ ಸಮೀಪದಲ್ಲಿರುವನು.

ಹಂ. ಪ. ನಾಗರಾಜಯ್ಯ

ಹರಿಹರಕವಿಯ ಕಾವ್ಯಪದ್ಧತಿ

ಹರಿಹರ ಕನ್ನಡ ಕಾವ್ಯಮಾರ್ಗದ ದಿಕ್ಕನ್ನು, ಇದು ವೈಯಕ್ತಿಕ ಪ್ರಯತ್ನವಾಗಷ್ಟೇ ಉಳಿದರೂ, ಬದಲಿಸಿದ ಆವೇಶದ ಕವಿ. ಈತನ ಕಾವ್ಯದ ಪಾತ್ರಗಳು ಯಾವ ವಿರೋಧವನ್ನೂ ಸ್ವಂತ ವ್ಯಕ್ತಿತ್ವವನ್ನೂ ತೋರದೆ ಶಿವನಿಗೆ ಶರಣಾದ, ಸಮರ್ಪಿಸಿಕೊಂಡ ನಾಯಕ ನಾಯಕಿಯರು; ಕಡೆಗೆ ಚಾರಿತ್ರಿಕ ವ್ಯಕ್ತಿಗಳಾದ ಅಕ್ಕಮಹಾದೇವಿ ಮತ್ತು ಬಸವಣ್ಣನವರೂ ಇದಕ್ಕೆ ಹೊರತಾಗಿಲ್ಲ. ಕವಿ ಇವರಿಬ್ಬರನ್ನೂ ಐತಿಹಾಸಿಕ ವ್ಯಕ್ತಿಗಳನ್ನಾಗಿ ಚಿತ್ರಿಸದೆ ದೇವರನ್ನಾಗಿ. ಪೌರಾಣಿಕರನ್ನಾಗಿ ಮಾಡಿ ತಳ ತಪ್ಪಿಸಿದ್ದಾನೆ. ಇದರಿಂದ ಇವರು ಈ ಮಣ್ಣಿನಲ್ಲಿ ಬೇರುಬಿಟ್ಟ ಮಾಂಸಮಜ್ಜೆಗಳ ಮಾನವರಾಗಿ ಕಾಣುವುದಿಲ್ಲ.

ಹರಿಹರ ಈ ವಚನಕಾರರಿಗೆ ಅತಿ ಸಮೀಪದ ಕಾಲದಲ್ಲಿದ್ದ ಹತ್ತಿರದ ಕವಿ. ಬಸವಣ್ಣನವರ ವಚನಗಳೇ ಅವರ ವ್ಯಕ್ತಿಚಿತ್ರಕ್ಕೆ ಹೆಚ್ಚು ಪ್ರಾಮಾಣಿಕ ಆಧಾರಗಳಾಗಿದ್ದು ಇವುಗಳ ವಿಶ್ವಾಸಾರ್ಹ ಮೂಲರೂಪದ ವಚನಗಳು ಕವಿಗೆ ದೊರೆತಿರುವ ಸಂಭವವಿದೆ. ಇಂಥದೊಂದು ಅನುಕೂಲವಿದ್ದೂ ಕವಿ ಅವನ್ನೇಕೆ ಕಡೆಗಣಿಸಿದ? ಕೇವಲ ಚರಿತ್ರೆಗೆ ಪ್ರಾಮಾಣಿಕವಾಗಿರಲು ಏನಾದರೂ ಅಪಾಯಗಳಿದ್ದುವೆ? ಬಸವಣ್ಣ ಎಂಬತ್ತೆಂಟು ಪವಾಡಗಳನ್ನು ಮೆರೆದರೆಂಬ ಉಲ್ಲೇಖದಲ್ಲಿ 'ಪವಾಡ' ಎಂಬ ಮಾತಿನೊಳಗೆ ವ್ಯಥೆಯ ಧ್ವನಿಯಿದೆಯೆ? ಅಂದರೆ ಹರಿಹರನ ಕಾಲಕ್ಕಾಗಲೆ ವಿಭೂತಿಪುರುಷ, ಪವಾಡಪುರುಷ ಎಂಬ ಪ್ರಚಾರ ಹಬ್ಬಿತ್ತೆ?-ಉತ್ತರಿಸಲು ಅಸ್ಖಲಿತ ಆಧಾರಗಳು ಸಾಲವು. ಅಲ್ಲದೆ ಬಸವಣ್ಣನವರಿಗೆ, ಜಂಗಮರಿಗೆ ಮಾಡಿದ ನಿತ್ಯ ದಾಸೋಹಕ್ಕೆ ಹಣ ಎಲ್ಲಿಂದ ಬಂತು? ರಾಜಬೊಕ್ಕಸವನ್ನು ಬೇಕಾಬಿಟ್ಟೆ ಸ್ವಮತದವರ ಸುಖಜೀವನಕ್ಕೆ ಬಳಸಿಕೊಂಡರೆಂಬ ಆಪಾದನೆ ಅವರ ಮೇಲಿದೆ; ಈ ಆರೋಪ ಇನ್ನೂ ಜನಮನದಲ್ಲಿ ಹೊಗೆಯಾಡುತ್ತಿರುವಾಗ ಬಂದವನು ಹರಿಹರ.

ಬಸವಣ್ಣನವರ ಬದುಕನ್ನು ಕವಿ ವೈಭವಿಸಲೆತ್ನಿಸಿರುವುದು ಸ್ವಯಂ ಸ್ಪಷ್ಟ. ಪವಾಡಗಳ ಪ್ರಭಾವಳಿ ಕಟ್ಟಿ ಬಸವಣ್ಣನವರನ್ನೂ ಹೀಗೆ ಹಿಗ್ಗಿಸುವ ಭರದಲ್ಲಿ ಚಾರಿತ್ರಿಕ ಸತ್ಯಕ್ಕೆ ತಿಲಾಂಜಲಿಯಾಗಿದೆ. ಕವಿ ತನ್ನ ಕಾವ್ಯಕ್ಕೆ ಕೊಟ್ಟ ಹೆಸರು 'ಬಸವಣ್ಣನ ರಗಳೆ' ಎಂದಲ್ಲ, ಬಸವ ದೇವರ ರಗಳೆ ಎಂದು. ಕವಿಯ ದೃಷ್ಟಿ ಯಾವುದಿತ್ತೆಂಬುದಕ್ಕೆ ಈ ಧ್ವನಿಪೂರ್ಣ ಹೆಸರೇ ಸಾಕ್ಷಿಕೊಡುತ್ತದೆ. ಇದೇ ರೀತಿ ಅಕ್ಕನನ್ನು ಕುರಿತು ಬರೆದ ರಗಳೆಯು ಗತಿಯೂ ಮಿತಿಗಳಿಗೆ ಇಳಿದಿದೆ. ಅಲ್ಲಿ ಬಸವಣ್ಣನನ್ನು ಮೇಲೆತ್ತುವ ಪ್ರಯತ್ನದಲ್ಲಿ ಬಿಜ್ಜಳನನ್ನು ಕೆಳಗಿಳಿಸಿದರೆ, ಇಲ್ಲಿ ಅಕ್ಕನನ್ನು ಎತ್ತರಕ್ಕೇರಿಸುವ ಅವಸರದಲ್ಲಿ ಕೌಶಿಕನಿಗೆ ಅಪಚಾರವೆಸಗಿದ್ದಾನೆ. ಇವು ಚಾರಿತ್ರಿಕ ಆಭಾಸಗಳಲ್ಲವೆ?

ಚಾರಿತ್ರಿಕ ವ್ಯಕ್ತಿಯಾದರೂ ಬಸವಣ್ಣನನ್ನು ಪವಾಡ-ಕಾರಣ ಪುರುಷನನ್ನಾಗಿಸಿದ್ದೇಕೆಂಬ ಪ್ರಶ್ನೆಗೆ ಇನ್ನೊಂದು ಉತ್ತರವೂ ಸಾಧ್ಯವಿದೆ. ಜೈನಪುರಾಣಗಳನ್ನು ಮಾದರಿಯಾಗಿರಿಸಿಕೊಂಡ ಈ ಕವಿಗೆ ಅಲ್ಲಿಯೂ ಚಾರಿತ್ರಿಕ ವ್ಯಕ್ತಿಗಳಾದ ಮಹಾವೀರ, ಶ್ರೇಣಿಕ ಮೊದಲಾದವರನ್ನು ಪೌರಾಣಿಕ ಚೌಕಟ್ಟಿಗೆ ಎರಕ ಹಾಕಿದ್ದು

ಕಂಡುಬಂತು. ಜೈನ ಕವಿಗಳು ಮಾಡಿದ ತಪ್ಪಿನ ಸರಮಾಲೆ ಈ ಕವಿಯ ಕೊರಳಿಗೆ ಬಿದ್ದಿದೆ. ಮಹಾವೀರನಿಗೂ, ಆತ ತೀರ್ಥಂಕರನೆಂಬ ನಂಬಿಕೆಯಿಂದ ಪಂಚ ಕಲ್ಯಾಣಗಳನ್ನು ಮಾಡಿಸಿ ನೆಲದ ಬೇರನ್ನು ಕತ್ತರಿಸಿದರು. ಹರಿಹರನೂ ಆ ಮಾದರಿಯನ್ನು ಮುಂದುವರಿಸಿದ್ದಾನೆ. ಚಾರಿತ್ರಿಕ ವ್ಯಕ್ತಿಗಳಿಗೆ ಹೀಗೆ ಪೌರಾಣಿಕ ಪರಿವೇಶವನ್ನು ಕಟ್ಟಿದ್ದೇಕೆಂಬ ಪ್ರಶ್ನೆಗೆ ಉತ್ತರಿಸಲು ನಾವು ಅದುವರೆಗಿನ ಕನ್ನಡ ಸಾಹಿತ್ಯದ ವ್ಯವಸ್ಥೆಯನ್ನು ಗಮನಿಸಬೇಕಾಗುತ್ತದೆ.

ಹರಿಹರನಿಗೆ ಜೈನ ಕವಿಗಳ ಕಾವ್ಯರಚನೆ, ಪದ್ಧತಿ ಕಣ್ಮುಂದೆ ಇತ್ತು. ಅವರಲ್ಲಿ ಕೆಲವರು ತಮಗೆ ಆಶ್ರಯ ಕೊಟ್ಟ ರಾಜನನ್ನು ವಿಖ್ಯಾತ ಪಾತ್ರಗಳೊಡನೆ ಸಮೀಕರಿಸಿ ಕಾವ್ಯರಚಿಸಿದರು. ಹರಿಹರನೂ ಹಾಗೆ ಮಾಡಲು ಅವನಿಗೆ ಯಾವ ರಾಜಾಶ್ರಯವೂ ದೊರೆಯಲಿಲ್ಲ. ಈತ ಒಡ್ಡೋಲಗದಲ್ಲಿದ್ದುದು ನಿಜವಾದರೂ ಅಲ್ಲಿ ಈತನಿಗೆ ದೊರತ ಪ್ರವೇಶ–ಪುರಸ್ಕಾರ ಕವಿಯೆಂಬ ಕಾರಣದಿಂದಾಗಿ ಅಲ್ಲ. ಕೇವಲ ಒಬ್ಬ ಕರಣಿಕನಾಗಿ ಅವನಿಗೆ ಅರಮನೆಯಲ್ಲಿ ಆಶ್ರಯ ದೊರೆತಿತ್ತು. ಅಲ್ಲಿದ್ದ ಅವಧಿಯಲ್ಲೂ ಈತ ಒಬ್ಬ ಲೇಖಕನಾಗಿ ಗಣ್ಯಸ್ಥಾನವನ್ನು ಸ್ಥಾಪಿಸಿಕೊಳ್ಳಲು ಆಗಲಿಲ್ಲ; ಅಥವಾ ರಾಜನ ಊಳಿಗದಲ್ಲಿ ಇರುವವರೆಗೂ ಅವನಲ್ಲಿ ಸಾಹಿತ್ಯದ ಹಂಬಲ ಉಂಟಾಗದೆಯೂ ಇರಬಹುದು–ಇವೆರಡರಲ್ಲಿ ಒಂದರ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಅಂತೂ ಕವಿಗೆ ಪ್ರಭು ಸಂಬಂಧ ಸರಸವಾಗಿರಲಿಲ್ಲ. ಅದು ಅನಿವಾರ್ಯವಾಗಿ ವಿರಸದಲ್ಲೇ ಪರ್ಯವಸಾನವಾಯಿತೆಂದು ನಿರೀಕ್ಷಿಸಬಹುದು. ರಾಜಾವಲೋಕನದ ವಲಯದಿಂದ ಕಳಚಿಕೊಂಡು ಆಚೆಗೆ ಹೋದಮೇಲೆ ಭಕ್ತಿಯ ಆವೇಶ ಬಂದಂತೆ ಕಾವ್ಯದ ಸ್ಫೂರ್ತಿಯೂ ಬಂದಿರಬಹುದು.

ಹರಿಹರ ಹೀಗೆ ಕಾವ್ಯೋದ್ಯಮಕ್ಕೆ ತೊಡಗಿದಾಗ ಅವನ ಕಣ್ಣೆದುರಿಗೆ ಕನ್ನಡ ಸಾಹಿತ್ಯದಲ್ಲಿ ರಾಶಿಯಾಗಿ ಚಂಪೂಕಾವ್ಯಗಳಿದ್ದುವು. ಪಂಪಾದಿಗಳಂತೆ ರಾಜನನ್ನು ವ್ಯಾಜವಾಗಿರಿಸಿಕೊಂಡು ಕಾವ್ಯ ರಚಿಸೋಣವೆಂದರೆ, ಈ ಕವಿಗೆ ಅದು ಎರಡು ಕಾರಣಗಳಿಂದ ಸಾಧ್ಯವಿರಲಿಲ್ಲ. ಮೊದಲನೆಯದಾಗಿ ಸಮಕಾಲೀನ ದೊರೆಗಳೊಡನೆ ಬೆಸುಗೆ, ಮಧುರ ಬಾಂಧವ್ಯ ಇರಲಿಲ್ಲ; ಅರಮನೆಗಳು ಈತನನ್ನು ಕವಿಯಾಗಿ ಆದರಿಸಲಿಲ್ಲ. ಅರಮನೆಯಲ್ಲಿ ಈತ ಇದ್ದಷ್ಟು ಕಾಲ ಸಾಹಿತ್ಯ ಪ್ರೇರಣೆ ಒದಗಿ ಬಂದಿರಲಿಲ್ಲ. ಎರಡನೆಯದಾಗಿ, ಈತ ಸಾಹಿತ್ಯರಚನೆಗೆ ಇಳಿದ ಕಾಲದಲ್ಲಿದ್ದ ಮನೋಧರ್ಮವೇ ಬೇರೆಯಾಗಿತ್ತು. ಈಗ ಭಕ್ತಿ ಅವನಲ್ಲಿ ಸ್ಥಾಯಿಯಾಗಿತ್ತು. ಅದರಿಂದ ಪಂಪಾದಿ ಕವಿಗಳಂತೆ ಲೌಕಿಕ ಕಾವ್ಯ ರಚನೆಗೆ ತೊಡಗುವ ಪ್ರಸಂಗ ಒದಗಿ ಬರದಿರಲಿಲ್ಲ. ಆದರೆ ಪಂಪಾದಿಗಳು ಮತೀಯ ಕಾವ್ಯಗಳ ಮಾದರಿಗಳನ್ನೂ ಬಿಟ್ಟಿದ್ದರು. ಈತ ಕೂಡ ಅವರಂತೆ ಮತೀಯ ಕಾವ್ಯ ಬರೆಯಬಹುದಿತ್ತು; ಈ ದಾರಿ ಸುಗಮವಾಗಿ ತೆರೆದಿತ್ತು. ಹರಿಹರ ಮೊದಲು ಮಾಡಿದ್ದೂ ಈ ಕೆಲಸವನ್ನೇ. ಆದಿಪುರಾಣಾದಿಗಳಂತೆ ಹರಿಹರನೂ ತನ್ನ ಗಿರಿಜಾಕಲ್ಯಾಣವನ್ನು ಚಂಪೂ ರೂಪದಲ್ಲಿ ಬರೆದ. ಹೀಗಿದ್ದೂ ಅನಂತರ ಚಂಪೂ ರೂಪವನ್ನು ಈತ ನಿರಾಕರಿಸಿದ್ದಕ್ಕೆ ಪ್ರಬಲವಾದ ಕಾರಣಗಳಿರಬೇಕಾಗುತ್ತದೆ.

ಚಂಪೂರೂಪದಲ್ಲಿ ಗಿರಿಜಾಕಲ್ಯಾಣವನ್ನು ಬರೆದಮೇಲೂ ಕವಿಗೆ ಇಲ್ಲಿ ಯಶಸ್ಸು ಸಿಗಲಿಲ್ಲ. ಅವಕ್ಕೆ ರಾಜಾಶ್ರಯ ಸಿಗದಿದ್ದರೂ. ಕವಿಗೆ ಅದು ಬೇಕಿರಲೂ ಇಲ್ಲ; ಆದರೆ ಅದಕ್ಕೆ ಪಂಡಿತ ಮರ್ಯಾದೆಯೂ ಪೂರ್ಣವಾಗಿ ಸಿಗಲಿಲ್ಲವೆಂದೂ ತೋರುತ್ತದೆ. ಇದಕ್ಕಿಂತ ಮುಖ್ಯವಾದ ಮಾತೆಂದರೆ ಕವಿಯ ಆತ್ಮವಿಮರ್ಶಕ ಪ್ರಜ್ಞೆಯ ಪರಿಣಾಮ. ತನ್ನ ಇತಿಮಿತಿಗಳ ಅರಿವು ಕವಿಗೇ ಮನವರಿಕೆಯಾಗಿದೆ. ಚಂಪೂರೂಪ ತನಗೆ ಸಮರ್ಥ ಅಭಿವ್ಯಕ್ತಿ ಮಾಧ್ಯಮವಾಗಲಾರದೆನ್ನಿಸಿದೆ; ಅದರಂತೆ ಆ ಪ್ರಭೇದದ ಪೂರ್ಣ ಸಾಧ್ಯತೆಗಳನ್ನು ಪಂಪಕವಿ ಲೂಟಿಮಾಡಿರುವುದೂ ಮನದಟ್ಟಾಗಿದೆ. ಪಂಪಾದಿಗಳ ಗುಹಾಧ್ವನಿಯಾಗುವುದಕ್ಕೆ ಮಹತ್ವಾಕಾಂಕ್ಷಿಯಾದ ಕವಿಮನ ಒಪ್ಪಲಿಲ್ಲ. ಇನ್ನು ತನ್ನ ಕಾಲದ ವಚನಗಳಲ್ಲೇ ಬರೆಯೋಣವೆಂದರೆ ಅದು ಮಹಾಕಾವ್ಯದ ವ್ಯಾಪ್ತಿಗೆ ತಾಳುವುದಿಲ್ಲ. ಭಾವಗೀತೆ ಮುಕ್ತಕ ಸುಭಾಷಿತಗಳಂತೆ ಈ ವಚನಗಳು ಕಿರಿಯ ಪ್ರಮಾಣದಲ್ಲಷ್ಟೇ ಹಿರಿಯ ಕೆಲಸ ಮಾಡುತ್ತವೆ. ಅದರಾಚೆಗೆ ಅವನ್ನು ವಿಸ್ತರಿಸುವುದು ಕಷ್ಟಸಾಧ್ಯ.

ಆದರಿಂದ ಚಂಪೂಕಾವ್ಯಗಳಲ್ಲೇ ಇರುವ ಛಂದೋವೈವಿಧ್ಯಗಳಲ್ಲಿ ಒಂದನ್ನು ಅರಸಿದಾಗ ಅಲ್ಲಿ ಬರುವ ರಗಳೆ ಯೋಗ್ಯವೆನಿಸಿ ಮನಸ್ಸಿಗೆ ಹಿಡಿಸಿರಬೇಕು. ಪಂಪನಂತಹವರು ರಗಳೆಯನ್ನು ಮನೋಜ್ಞವಾಗಿ, ಯಶಸ್ವಿಯಾಗಿ ಬಳಸಿದ್ದರೂ ಅದಕ್ಕೆ ನಾಲ್ಕರಲ್ಲಿ ಒಂದು ಎಂಬಂತೆ ಆನುಷಂಗಿಕ ಸ್ಥಾನಕೊಟ್ಟಿದ್ದರು. ಈ ಕವಿ ರಗಳೆಗಿರುವ ಸಾಧ್ಯತೆಗಳನ್ನು ಅರಿತು ಅದನ್ನು ಗೌಣಸ್ಥಾನದಿಂದ ಬಿಡಿಸಿ, ಸ್ಥಳಾಂತರಿಸಿ, ತನ್ನ ಇಡಿಯ ಕಾವ್ಯದ ಶರೀರವನ್ನಾಗಿರಿಸಿದ. ರಗಳೆ ಪಂಪನಿಂದ ಪ್ರಚಾರ ಪಡೆದರೂ ಅದಕ್ಕೆ ನೂತನ ಆಯಾಮ ತಂದುಕೊಟ್ಟವನು ಹರಿಹರ. ಚಂಪೂರೂಪದ ಸಾಧ್ಯತೆಗಳನ್ನು ಆತ ಸೂರೆ ಮಾಡಿದ. ಈತ ರಗಳೆಯ ಸೌಕರ್ಯಗಳನ್ನು ಸಾಕಷ್ಟು ಬಳಸಿಕೊಂಡ. ಉತ್ಸಾಹ ಮಂದಾನಿಲ ಲಲಿತ ರಗಳೆಗಳು ತಮ್ಮ ಪರಮಾವಧಿಯನ್ನು ಕಂಡುಕೊಂಡಿದ್ದು ಈತನ ಕಾವ್ಯಗಳಲ್ಲಿ.

ಆದರೆ ಇಲ್ಲಿಯೂ ಅಪಾಯಗಳಿದ್ದುವು. ಉತ್ಸಾಹರಗಳೆಗಿಂತ ಮಂದಾನಿಲದಲ್ಲಿ, ಅದಕ್ಕಿಂತ ಲಲಿತರಗಳೆಯಲ್ಲಿ ವೈವಿಧ್ಯಕ್ಕೆ ಅವಕಾಶಗಳಿದ್ದರೂ ಅವುಗಳಿಗೆ ಒಂದು ಎಲ್ಲೆಯಿದೆ. ಅಲ್ಲದೆ ಸಾವಿರಾರು ಸಾಲುಗಳ ಕಾವ್ಯಕ್ಕೆ ಇವನ್ನು ತೊಡಗಿಸಿದರೆ ಏಕತಾನವಾಗುತ್ತದೆ. ಒಂದೇ ಮಾದರಿಯಲ್ಲಿ ಇಡೀ ಕಾವ್ಯ ಹೊರಟಾಗ ಬೈರಿಗೆ ಹಿಡಿದಂತೆ ಬೇಸರವಾಗುತ್ತಿದೆಯೆಂಬ ಎಚ್ಚರ, ಓದುಗನಿಗಿಂತ ಹೆಚ್ಚಾಗಿ ಪ್ರಜ್ಞಾಶಾಲಿಯಾದ ಹರಿಹರ ಕವಿಗೂ ಇದೆ. ಅದಕ್ಕಾಗಿ ಕಾವ್ಯದ ಆರಂಭ ಅಂತ್ಯಗಳಲ್ಲಿ ಒಂದೆರಡು ಕಂದ ವೃತ್ತಗಳನ್ನು ಇಟ್ಟ. ಅದೂ ಸಾಲದೆಂದಾಗ ಚಂಪೂವಿನಂತೆ ಗದ್ಯವನ್ನು ತಂದಿರಿಸಿದ. ಕಡೆಗೆ ನಂಬಿಯಣ್ಣನ ರಗಳೆಯಲ್ಲಿ ರಗಳೆಗಿಂತ ಗದ್ಯಕ್ಕೆ ಪಟ್ಟಬಿಟ್ಟುಕೊಟ್ಟ. ಆದರೂ ಹರಿಹರನ ರಗಳೆಗಳು ಛಂದಸ್ಸಿನಲ್ಲಿ ಕೂಡ ಏಕತಾನದ ಹೊಡೆತ ತಪ್ಪಿಸಿಕೊಳ್ಳಲು ಆಗಲಿಲ್ಲ. ಇದಕ್ಕೆ ಕಾರಣ ಕವಿಯ ಪ್ರತಿಭೆಯಲ್ಲಿರುವ ಕೊರತೆಯಲ್ಲ, ಕವಿ ಮಾಡಿಕೊಂಡ ವ್ಯವಸ್ಥೆಯಲ್ಲಿ ಕೊರತೆಯೇ ಕಾರಣ. ರಗಳೆಗೆ ಈ ಕವಿ ಆದಿಪ್ರಾಸ-ಅಂತ್ಯಪ್ರಾಸಗಳ ಮಿತಿಗಳನ್ನು ತಾನಾಗಿ ಹೇರಿಕೊಂಡಿದ್ದಾನೆ. ಅಲ್ಲದೆ ಪಂಪನೇ ಪ್ರಾಸವಿಲ್ಲದ ರಗಳೆಗೂ ಮೇಲ್ಪಂಕ್ತಿ ಹಾಕಿಕೊಟ್ಟಿದ್ದ. ಒಂದು ವೇಳೆ ಹರಿಹರ ತನ್ನ ರಗಳೆಯನ್ನು ಆದಿ-ಅಂತ್ಯ ಪ್ರಾಸಗಳ ಶೃಂಖಲೆಯಿಂದ ಬಿಡಿಸಿ ಮುಕ್ತ ಪ್ರಾಸಕ್ಕೆ ಒದಗಿಸಿದ್ದರೆ ಅವನ ಬರವಣಿಗೆಗೇ ಹೊಸ ಆಯಾಮ ದೊರೆಯುತ್ತಿತ್ತು. ಅಂಥದೊಂದು ಸರಳ ರಗಳೆಯ ಬರುವಿಕೆಗಾಗಿ ಕನ್ನಡ ಛಂದಸ್ಸು ಇಲ್ಲಿಂದ ಇನ್ನೂ ಏಳುನೂರು ವರುಷ ಕಾಯಬೇಕಾಯಿತು.

ಇನ್ನು ಹರಿಹರನ ಕಾವ್ಯದ ವಸ್ತುವಿನ ವಿಚಾರವಾಗಿ ವಿವೇಚಿಸಬಹುದು. ತನ್ನ ಕಾಲದ ತನಕ ಬಂದ ಸಾಹಿತ್ಯಕ್ಕೆ ಸಂಸ್ಕೃತವೇ ಮೂಲ ಆಕರವಾಗಿದ್ದುದನ್ನು ಕವಿ ಚೆನ್ನಾಗಿ ಗುರುತಿಸಿದ್ದಾನೆ. ಅದರಂತೆ ಗಿರಿಜಾಕಲ್ಯಾಣಕ್ಕೆ ಸಂಸ್ಕೃತ ಮೂಲವನ್ನು ತಾನೂ ಹಿಡಿದು ಸೋತಿದ್ದ. ಈ ಸೋಲಿನಿಂದ ಕವಿ ಕಲಿತ ಪಾಠವೆಂದರೆ ಸಂಸ್ಕೃತ ಮೂಲವನ್ನು ಬಿಟ್ಟು ಬೇರೆ ಆಧಾರವನ್ನು ಹಿಡಿಯುವುದು ಲಾಭವೆಂಬುದು. ತನ್ನ ಶೈವ ಸಂಪ್ರದಾಯದ ಸಾಹಿತ್ಯ ಸಾಮಗ್ರಿ ಇರುವ ಸಂಸ್ಕೃತೇತರ ಭಾಷೆಗಾಗಿ ಕಣ್ಣಾಡಿಸಿದಾಗ ನೆರೆಯ ನಾಡಿನ ತಮಿಳು ಭಾಷೆ ಸಮೃದ್ಧವಾಗಿರುವುದು ಗೋಚರವಾಯಿತು. ಅದರಿಂದ ತಮಿಳು ಆಕರಗಳಿಗೆ ಮನಸ್ಸುಮಾಡಿದ.

ಜೈನರಲ್ಲಿ 'ತ್ರಿಷಷ್ಟಿ ಶಲಾಕಾ ಪುರುಷ ಚರಿತೆ'ಗಳು ಮಾನ್ಯವಾಗಿದ್ದುವು. ಅವರ ವಿಷಯಗಳನ್ನೊಳಗೊಂಡ 'ಮಹಾಪುರಾಣ' ಪ್ರಚಾರ ಪಡೆದಿತ್ತು. ಜೈನರಲ್ಲಿ ಪಂಚ ಪರಮೇಷ್ಠಿಗಳಿರುವಂತೆ ತಮ್ಮಲ್ಲಿ ಪಂಚಾಚಾರ್ಯರನ್ನೂ, ಪಂಚನಮಸ್ಕಾರದಂತೆ ಪಂಚಾಕ್ಷರಿಯನ್ನೂ, ಸಮವಸರಣಮಂಟಪದಂತೆ ಅನುಭವ ಮಂಟಪವನ್ನೂ ಗಂಧಕುಟಿ ಸಿದ್ಧಶಿಲೆಗಳಂತೆ ಶೂನ್ಯಸಿಂಹಾಸನವನ್ನೂ ಆಹಾರದಾನದಂತೆ ದಾಸೋಹವನ್ನೂ ಒಪ್ಪಿಕೊಂಡಿದ್ದು ಆಗಲೇ ರೂಢಿಗೆ ಬಂದಿತ್ತು. ಹಾಗೆಯೇ ಜೈನರ ಮಹಾಪುರಾಣದಂತೆ ಈತನೂ ತಮಿಳಿನಲ್ಲಿ ಶೇಕ್ಕಿಳಾರ್ ಕವಿ ಬರೆದ ಪೆರಿಯಪುರಾಣವನ್ನು ಆಶ್ರಯಿಸಿದನು. ಮಹಾಪುರಾಣ ಎಂಬ ಸಂಸ್ಕೃತ ರೂಪದ ತಮಿಳು ರೂಪಾಂತರ ಪೆರಿಯಪುರಾಣ.

ಜೈನ ಪುರಾಣಗಳಲ್ಲಿ ಬರುವ ಭವಾವಳಿ ಈ ಕವಿಯ ಮನಸೆಳೆದಿದ್ದರೂ ಅನೇಕ ಭವಗಳ ಪುನರಾವೃತ್ತಿಯನ್ನು ಒಪ್ಪದೆ ಎರಡು ಭವಗಳಷ್ಟನ್ನು ಮಾತ್ರ ಸ್ವೀಕರಿಸಿದ್ದಾನೆ; ಶಿವನಲೋಕ (ಇದು ಜೈನ ಪುರಾಣ

ಗಳಲ್ಲಿ ಕಲ್ಪಗ್ರೈವೇಯಕಗಳಿದ್ದಂತೆ) ಮತ್ತು ಭೂಲೋಕ. ಅಂದರೆ ಶಿವಭಕ್ತನ ಸಂಚಾರ ಈ ಭೂ ಕೈಲಾಸಗಳಲ್ಲಿ ಮಾತ್ರ. ಜೈನಪುರಾಣಗಳಲ್ಲಿ ಜೀವವೊಂದು ಭವಭವಗಳಲ್ಲಿ ತೊಳಲಾಡಿ, ಕರ್ಮದ ಕಾಳಿಕೆಯನ್ನು ಕಳೆದುಕೊಂಡು ಮತ್ತೆ ಮುಕ್ತಾವಸ್ಥೆಗೆ ಹೋಗುತ್ತದೆ. ಮುಕ್ತಾವಸ್ಥೆಯಿಂದ ಬಂದ ಜೀವ ಮತ್ತೆ ಮುಕ್ತಾವಸ್ಥೆಗೆ ಹೋಗುವ, ಜೀವದ ಊರ್ಧ್ವಯಾತ್ರೆಯ ಚಿತ್ರಣ ಅಲ್ಲಿರುತ್ತದೆ. ಇಲ್ಲಿ ಕೂಡ ಶಿವಲೋಕದಿಂದ, ಶಿವ ಸುಖದಿಂದ ಶಾಪಗ್ರಸ್ತ ವ್ಯಕ್ತಿ (ಕರ್ಮಬಂಧ) ಮಾಡಿದ ತಪ್ಪಿನ (ಆಸ್ರವ) ಪ್ರಾಯಶ್ಚಿತ್ತಕ್ಕಾಗಿ (ನಿರ್ಜರೆ) ಪೃಥ್ವಿಗೆ ಬರುತ್ತಾನೆ. ಇಲ್ಲಿನ ಬದುಕು ಪೂರೈಸಿದ ಮೇಲೆ ಶಾಪ ಬಿಡುಗಡೆಯಾಗಿ (ನಿರ್ವಾಣ) ಮತ್ತೆ ಕೈಲಾಸಕ್ಕೆ (ಮೋಕ್ಷ) ಹೋಗುತ್ತಾನೆ. ಈ ಕೈಲಾಸವೇ ಸಿದ್ಧಶಿಲೆ.

ಹರಿಹರನ ರಗಳೆಗಳ ಪಾತ್ರಗಳು ಚರಮದೇಹಧಾರಿಗಳು, ಅಂದರೆ ಇವರು ಪುನರ್ಜನ್ಮಗಳನ್ನೆತ್ತುವ ಅಗತ್ಯವಿಲ್ಲ. ಒಂದೇ ಭವದಲ್ಲಿ ಭವಗಳನ್ನು ದಾಟಿ ಮುಕ್ತಾತ್ಮರಾಗುತ್ತಾರೆ. ಅಂತೂ ಭವಾವಳಿಯ ಪರಿಣಾಮ, ಕರ್ಮಸಿದ್ಧಾಂತದ ಪರೋಕ್ಷ ಪುರಸ್ಕಾರ ಇಲ್ಲಿಯೂ ಧ್ವನಿತವಾಗಿದೆ. ಅಲ್ಲಿ ಜಿನ–ಜಿನಭಕ್ತ–ಜಿನಭಕ್ತಿ ; ಇಲ್ಲಿ ಶಿವ–ಶಿವಭಕ್ತ–ಶಿವಭಕ್ತಿ; ಮುಕ್ತಾತ್ಮರು, ಮುಕ್ತ ಜೀವರು ಅಪಾರ ; ಶಿವಭಕ್ತರೂ ಅನಂತ. ಮುಕ್ತಾತ್ಮರಲ್ಲಿ 63 ಜನರನ್ನು ಮಾತ್ರ ಆರಿಸಿ ತ್ರಿಷಷ್ಟಿಶಲಾಕಾ ಪುರುಷರೆಂದು ಜೈನರು ಕರೆದಿದ್ದಾರೆ. ಶಿವಭಕ್ತರಲ್ಲಿ 63 ಜನರನ್ನು ಆರಿಸಿ '63 ಜನ ಪುರಾತನರು' ಎಂದು ವೀರಶೈವರೂ ಕರೆದಿದ್ದಾರೆ. ಸುರಂಗ ಕವಿಯ ತ್ರಿಷಷ್ಟಿ ಪುರಾತನ ವಿಳಾಸ, ವೀರಭದ್ರಕವಿಯ ಅರವತ್ತು ಮೂವರ ಚರಿತ್ರೆ, ಶಿವಯೋಗಿ ಸೋಮೇಶನ ಅರುವತ್ತುಮೂವರ ಸಾಂಗತ್ಯ ಮುಂತಾದುವನ್ನು ಇಲ್ಲಿ ಹೆಸರಿಸಬಹುದು.

ಹಾಗಾದರೆ ಹರಿಹರ ಕವಿ ಬರೆದ ರಗಳೆಗಳು ಎಷ್ಟು ಎಂದು ಯೋಚಿಸಬೇಕು. ಇಲ್ಲಿ ಎರಡು ಸಾಧ್ಯತೆಗಳಿವೆ: ಹರಿಹರ ಕವಿ ಕೂಡ ಮೇಲಿನ ಚೌಕಟ್ಟಿಗೆ ಬದ್ಧನಾಗಿ, ಬಹುಶಃ 'ತ್ರಿಷಷ್ಟಿ ಪುರಾತನ ಚರಿತೆ' ಎಂಬ ಹೆಸರಿನಿಂದ 63 ಜನ ಪುರಾತನರನ್ನು ಕುರಿತು ರಗಳೆಗಳನ್ನು ಬರೆದಿರಬಹುದು; ಇಲ್ಲವೇ ಜೈನರಲ್ಲಿ ಚೌವ್ವೀಸ (24) ತೀರ್ಥಂಕರರ ಚರಿತೆಗಳಿರುವಂತೆ 'ಇಪ್ಪತ್ತು ನಾಲ್ಕು ಪುರಾತನರ ಚರಿತೆ' ಬರೆದಿರಬಹುದು. ಅನ್ಯಮತಗಳನ್ನು ಅವಹೇಳನ ಮಾಡುವ ಕಥಾಭಾಗಗಳಿರುವ ವಾಗೀಶದೇವರು ಮುಂತಾದ ರಗಳೆಗಳನ್ನು ಹರಿಹರನೇ ಬರೆದನೆಂದು ತಿಳಿಯಲು ಆಧಾರಗಳನ್ನು ಕೊಟ್ಟಿದ್ದಾರೆ. ಇದರಿಂದ ಈತ ತ್ರಿಷಷ್ಟಿ ಪುರಾತನರ ಚರಿತೆಯನ್ನು ಬರೆದನೆಂಬ ನಂಬಿಕೆಗೆ ಒಂದು ಆಂತರಿಕ ಆಧಾರ ದೊರೆತಂತೆ ಆಗುತ್ತದೆ. ಏಕೆಂದರೆ ಈತ ರಗಳೆಗಳಿಗೆ ಇಂಥಿಂಥ ಪುರಾತನ ಮಹಾತ್ಮನ ಚರಿತೆಯಷ್ಟೇ ಸಾಕು ಎಂದು ಒಂದುವೇಳೆ ಆಯ್ಕೆಗೆ ತೊಡಗಿದ್ದರೆ ಆಗ ಜಾತ್ಯಂಧ ಭಾಗಗಳನ್ನು ಕೈಬಿಡುತ್ತಿದ್ದನೆಂದು ತೋರುತ್ತದೆ. ಅರುವತ್ತು ಮೂರೂ ಜನರ ಚರಿತೆ ಬಿತ್ತರಿಸುವ ಅನಿವಾರ್ಯತೆಗೆ ಕಟ್ಟುಬಿದ್ದ ಕವಿ ಸ್ವಂತ ಬುದ್ಧಿ, ಹೃದಯ ವೈಶಾಲ್ಯ ತೋರಲು ಅವಕಾಶವಾಗಿಲ್ಲದಿರಬಹುದು.

ತನ್ನ ರಗಳೆ ಕಾವ್ಯದ ಆರಂಭ ವಿಧಾನವನ್ನು ನಿರ್ಧರಿಸಿಕೊಳ್ಳುವುದರಲ್ಲಿ ಈ ಕವಿ ದುರ್ಗಸಿಂಹನ ಪಂಚತಂತ್ರ ಕಾವ್ಯದ ಆರಂಭ ಮಾದರಿಯಾಗಿ ನಿಂತು ಸ್ಫೂರ್ತಿ ಕೊಟ್ಟಂತೆ ತೋರುತ್ತದೆ '—ಹರಂ ದರಹಸಿತ ವದನಾರವಿಂದನಾಗಿ ಪಾರ್ವತಿಗಪೂರ್ವಮಪ್ಪ ಕಥೆಗಳಂ ಪೇಳುತ್ತಿರಲಾ ಕಥಾಗೋಷ್ಠಿಯೊಳ್ ಪುಷ್ಪದಂತನೆಂಬಂ ಗಣಪ್ರಧಾನನಿರ್ದಲ್ಲಮಂ ಕೇಳ್ದಾತನೇನಾನುಮೊಂದು ಕಾರಣದಿಂ ಮಾನವ ಲೋಕದೊಳ್ ಪುಟ್ಟಿ....'. ಪಂಚತಂತ್ರದ ಈ ಆರಂಭ ಭಾಗವನ್ನು ಸ್ವೀಕರಿಸಿದ ಹರಿಹರ ಕವಿ ತನ್ನ ಉನ್ನತೋನ್ನತವಾದ ಸ್ವಂತ ಸ್ಫೂರ್ತಿಯಿಂದ ಕೆಲವು ಮಾರ್ಪಾಟುಗಳನ್ನು ತಂದುಕೊಂಡು ತನ್ನ ಕಾವ್ಯ ಪದ್ಧತಿಯನ್ನು ನಿರ್ಮಿಸಿಕೊಂಡಂತೆ ತಿಳಿಯಬಹುದು. ಸ್ವಪ್ರತಿಭೆ ಅಗಾಧವಾಗಿ ಇರುವ ಕವಿಗೆ ಇಷ್ಟು ಪ್ರಸಂಗದ ರೂಪರೇಖೆ ಸಿಕ್ಕರೆ ಸಾಲದೆ ?

ಆದರೆ ಈ ರೀತಿ ಒಂದೇ ಎರಕದ ಚೌಕಟ್ಟಿನಿಂದ ರಗಳೆಗಳಿಗೆ ಸ್ವಲ್ಪ ಹಾನಿಯೂ ತಟ್ಟಿದೆ. ಎಲ್ಲ ರಗಳೆಗಳೂ ಇದೇ ಮಾದರಿಯ ಸಿದ್ಧ ಎರಕದಲ್ಲಿಯೇ ಬಿದ್ದೇಳುತ್ತವೆ. ಅದರಿಂದ ವೈವಿಧ್ಯಕ್ಕೆ ಕೊರತೆ ಕಾಣಿಸಿದೆ.

ಪ್ರಾರಂಭದಲ್ಲೊಂದು ಪದ್ಯ ಕಡೆಯಲ್ಲೊಂದು ಪದ್ಯ, ನಡುವೆ ರಗಳೆ; ಆ ರಗಳೆಗೂ ಪ್ರಾಸದ ಸಂಕೋಲೆ. ಮೂರು ನಾಲ್ಕು ರಗಳೆ ಓದುವ ಹೊತ್ತಿಗೆ ಕವಿಯ ಪಟ್ಟುಗಳು ಬಯಲಾಗುತ್ತವೆ. ಏಕತಾನದ ಚಿಟ್ಟು ಹಿಡಿಯುತ್ತದೆ. ತಂತ್ರ ಭಾಷೆ ಪದಪುಂಜಗಳು ಶಿವ (ಬಹುವಾಗಿ ಮುದುಕನಾಗಿ) ಕಾಣಿಸಿಕೊಳ್ಳುವುದು, ಭಕ್ತನನ್ನು ಪರೀಕ್ಷಿಸುವುದು, ಮತ್ತೆ ಕೈಲಾಸಕ್ಕೆ ಕರೆದುಕೊಂಡು ಹೋಗುವುದು, ಜೋಳ ದೇಶ, ಭಕ್ತನಿಗೇ ಗೆಲುವು—ಇವುಗಳ ಪುನರಾವೃತ್ತಿಯಿಂದ ವೈವಿಧ್ಯ ತಪ್ಪಿಹೋಗಿದೆ. ಹರಿಹರ ಬರೆದದ್ದು ಒಂದೇ ರಗಳೆ ಇರಬೇಕೆಂದು ಹೇಳುವಷ್ಟು ಏಕತಾನದ ಅನುಭವವಾಗುತ್ತದೆ. ಪಂಚಕಲ್ಯಾಣ, ಭವಾವಳಿ ಮೊದಲಾದ ಸಮಾನ ಚೌಕಟ್ಟಿನಿಂದ ಜೈನ ಪುರಾಣಗಳಿಗೆ ಒದಗಿದ ಗತಿಯೇ ಈತನ ರಗಳೆಗಳಿಗೂ ಉಂಟಾಯಿತು.

ಇಷ್ಟೆಲ್ಲಾ ಇತಿಮಿತಿಗಳಿದ್ದೂ, ಇವುಗಳನ್ನು ಜೀರ್ಣಿಸಿಕೊಂಡು ಹರಿಹರ ಕನ್ನಡದ ಸಾಹಿತ್ಯ ಶಿಖರಗಳಲ್ಲಿ ಒಬ್ಬನಾಗಿ ನಿಂತಿರುವುದು ಆತನ ವಿನೂತನ ಕವಿತನಕ್ಕೆ ದಿವ್ಯಸಾಕ್ಷಿಯಾಗಿದೆ.

ಯಾವನು ಸೃಷ್ಟಿಯ ಆರಂಭದಲ್ಲಿ ಬ್ರಹ್ಮನನ್ನು ಸೃಷ್ಟಿಸಿದನೊ, ಯಾವನು ವೇದಗಳನ್ನು ಅವನಿಗೆ ಕೊಟ್ಟನೊ, ಯಾವನ ಪ್ರಕಾಶವು ಬುದ್ಧಿಯು ಆತ್ಮದ ಕಡೆಗೆ ತಿರುಗುವಂತೆ ಮಾಡುತ್ತದೊ ಆ ದೇವನಲ್ಲಿ ಮೋಕ್ಷಾಕಾಂಕ್ಷಿತನಾಗಿ ನಾನು ಶರಣಾಗುವೆನು.

ಕೆ. ರಾಘವೇಂದ್ರರಾವ್

“ಕನ್ನಡ ಗದ್ಯಸಾಹಿತ್ಯದಲ್ಲಿ ಹರಿಹರನ ರಗಳೆಗಳಲ್ಲಿಯ ಗದ್ಯದ ಸ್ಥಾನ”

ಹರಿಹರನ ರಗಳೆಯಲ್ಲಿನ ಗದ್ಯವು ಕನ್ನಡ ಗದ್ಯಸಾಹಿತ್ಯಚರಿತ್ರೆಗೆ ಒಂದು ಹಿರಿದಾದ ಕೊಡುಗೆ. ವಚನಕಾರರಲ್ಲಿ ಲಯಾನ್ವಿತವಾಗಿ ಅಂಕುರಿಸಿದ ಗದ್ಯವು ಇಲ್ಲಿ ಪುಷ್ಪವಾಗಿ ಪರಿಮಳಿಸಿದೆ. ವಚನಗಳಲ್ಲಿ ಪುಟ್ಟ ಪುಟ್ಟ ವಾಕ್ಯಗಳು, ಸರಳವಾದ ನಿರೂಪಣೆ, ನಾದಮಾಧುರ್ಯ, ಭಕ್ತಿಯ ಅಬ್ಬರ, ಅಲಂಕಾರಗಳ ಸುರಿಮಳೆ—ಇವೆಲ್ಲವೂ ಇಲ್ಲಿ ವಿಸ್ತಾರಗೊಂಡಿವೆ. ರಸಭಾವಗಳು ಇಲ್ಲಿ ಚಿಲುಮೆಯಂತೆ ಚಿಮ್ಮುತ್ತವೆ. ರಸವತ್ತಾದ ಸನ್ನಿವೇಶಗಳು ಉಕ್ಕಂದವಾಗಿ ಇಲ್ಲಿ ಹರಿದುಬಂದಿವೆ. ಹರಿಹರನು ಮುಂಬರುವ ಗದ್ಯಸಾಹಿತ್ಯಕ್ಕೆ ರಗಳೆಗಳಲ್ಲಿಯ ಗದ್ಯದ ಮೂಲಕ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾನೆ.

ಕನ್ನಡ ಸಾಹಿತ್ಯದಲ್ಲಿ ರಗಳೆ ಛಂದಸ್ಸು ಮೊದಲಿನಿಂದಲೂ ಬಳಕೆಯಲ್ಲಿ ಇತ್ತು. ಹರಿಹರನು ಇದಕ್ಕೆ ಜೀವಕಳೆಯನ್ನು ತುಂಬಿ ಹಲವಾರು ಶಿವಶರಣರ ಚರಿತೆಯನ್ನು ಈ ಛಂದಸ್ಸಿನಲ್ಲಿ ಬರೆದನು. ಇದೊಂದು ದಿಟ್ಟ ಸಾಹಸವೇ ಸರಿ. ಕೆಲವು ಶಿವಶರಣರ ಕಥೆಗಳು ದೀರ್ಘವಾದಾಗ ಒಂದು ಸ್ಥಲ ರಗಳೆಯಲ್ಲಿಯೂ ಒಂದು ಸ್ಥಲ ಗದ್ಯದಲ್ಲಿಯೂ ಬರೆದನು. ಬಸವರಾಜ, ನಂಬಿಯಣ್ಣ, ಅಕ್ಕಮಹಾದೇವಿ, ಮಲುಹಣದೇವನ ಚರಿತೆ—ಮೊದಲಾದುವನ್ನು ಹೆಸರನ್ನು ಇಲ್ಲಿ ಉದಾಹರಿಸಬಹುದು.ಇವರ ಕಥೆಗಳಲ್ಲಿ ರಗಳೆಯೂ ಗದ್ಯವೂ ಜತೆಜತೆಯಾಗಿ ಬರುತ್ತದೆ. ಹೀಗೆ ಬರುವುದರಿಂದ ಇಲ್ಲಿಯ ಗದ್ಯದಲ್ಲಿ ರಗಳೆಯ ಧಾಟಿಯನ್ನು ಅಲ್ಲಲ್ಲಿ ಕಾಣುತ್ತೇವೆ.

ರಗಳೆ ಛಂದಸ್ಸಿನಲ್ಲಿ ಕಾವ್ಯಗಳನ್ನು ಬರೆಯುವುದೊಂದು ನೂತನ ಪ್ರಯೋಗ. ಇವುಗಳಲ್ಲಿ ಗದ್ಯವನ್ನು ಬಳಸಿ ಹೊಸ ಬಗೆಯ ಚಂಪೂ ಪ್ರಕಾರವನ್ನೇ ನಿರ್ಮಿಸಿದ್ದಾನೆ ಹರಿಹರ. ಪದ್ಯಗದ್ಯಗಳ ಮಿಶ್ರಣವೇ ಚಂಪೂ ಎಂದು ಹೇಳುವುದುಂಟು. ಚಂಪೂವಿನಲ್ಲಿ ವೃತ್ತ, ಕಂದ, ರಗಳೆ, ತ್ರಿವಿಧಿ, ಅಕ್ಕರಗಳಿಂದ ಕೂಡಿದ ಪದ್ಯಗಳಿರುತ್ತವೆ. ಇಲ್ಲಿ ಕೇವಲ ರಗಳೆ, ಗದ್ಯ, ಮಾತ್ರ. ಚಂಪೂಕಾವ್ಯಗಳಲ್ಲಿ ಗದ್ಯವನ್ನು ತರುವುದು ಕೆಲವು ನಿಯತವಾದ ಸ್ಥಳಗಳಲ್ಲಿ. ಅದು ಪದ್ಯಗಳ ಮಧ್ಯದಲ್ಲಿ ಅಲ್ಪಸ್ವಲ್ಪ ಬರುತ್ತದೆ. ಆದರೆ ಇಲ್ಲಿ ಆ ನಿಯಮವಿಲ್ಲ. ಇದರಲ್ಲಿ ಗದ್ಯಪದ್ಯಗಳೆರಡೂ ಸಮ.

ಇಲ್ಲಿಯ ಗದ್ಯಕ್ಕೂ ಚಂಪೂಕಾವ್ಯಗಳಲ್ಲಿ ಬರುವ ಗದ್ಯಕ್ಕೂ ವ್ಯತ್ಯಾಸವಿದೆ. ಚಂಪೂ ಕಾವ್ಯಗಳಲ್ಲಿಯ ಗದ್ಯವು ಉದ್ದವಾದ ವಾಕ್ಯಗಳಿಂದಲೂ, ದೀರ್ಘ ಸಮಾಸಗಳಿಂದಲೂ, ಕ್ಲಿಷ್ಟವಾದ ಪದಗಳಿಂದಲೂ, ಶ್ಲೇಷ, ವಿರೋಧಾಭಾಸ, ಉತ್ಪ್ರೇಕ್ಷೆ—ಇವುಗಳ ಅಲಂಕಾರಗಳಿಂದಲೂ ಕೂಡಿದ್ದಾಗಿದೆ. ಇಲ್ಲಿಯ ವಾಕ್ಯಗಳು ಬಿಡಿಬಿಡಿಯಾಗಿ ಕಟ್ಟಿದ ಮಲ್ಲಿಗೆಯ ಮಾಲೆಯಂತೆ ಮನೋಹರವಾಗಿವೆ. ದೀರ್ಘ ಸಮಾಸಗಳು, ಕ್ಲಿಷ್ಟವಾದ ಪದಗಳಂತೂ ಇಲ್ಲವೇ ಇಲ್ಲ. ಅಲಂಕಾರಗಳಿದ್ದರೂ ಬೇಸರವನ್ನು ತರುವಂಥವಲ್ಲ. ಎಲ್ಲವೂ ಸರಳವೂ ಸುಲಭವೂ ಆದುವು. ಇಲ್ಲಿಯ ಗದ್ಯಕ್ಕೆ ಟೀಕೆ ಟಿಪ್ಪಣಿಗಳೇ ಬೇಡ. ಅಷ್ಟು ಸುಲಭಗ್ರಾಹ್ಯವಾದುದು ಈ ಗದ್ಯ.

ಹರಿಹರನ ರಗಳೆಗಳಲ್ಲಿಯ ಗದ್ಯದಲ್ಲಿ ತೂಕಮಾಡಿ ಆರಿಸಿದ ಉಚಿತ ಪದಪ್ರಯೋಗಗಳಿವೆ. ಕಿವಿಗೆ ಇಂಪಾದ ಸರಣಿಯಿದೆ. ಸರಳವಾದ ನಿರೂಪಣೆ ಇದೆ. ಸಂದರ್ಭಕ್ಕೆ ತಕ್ಕಂತೆ ವಾಕ್ಯಗಳ ವೈವಿಧ್ಯವಿದೆ. ಇವುಗಳ ಜತೆಗೆ ಕವಿಯ ಸ್ಫೂರ್ತಿ ಆವೇಶಗಳೂ ಸೇರಿ ಇಲ್ಲಿಯ ಶೈಲಿಯು ಜೀವಂತವಾಗಿ ಕಳಕಳಿಸುತ್ತದೆ.[1] ಇಲ್ಲಿ ಇವನು ಬಳಸಿದ ಭಾಷೆಯು ಸುಲಭವಾದುದು. ಆಗಿನ ಕಾಲದ ಜನರಾಡುವ ಭಾಷೆಯನ್ನು ಮೇಲಿಂದ ಮೇಲೆ ಬಳಸಿದ್ದಾನೆ. ಕೆಲವು ಸಲ ವ್ಯಾಕರಣದ ನಿಯಮವನ್ನು ಮೀರಿದ್ದಾನೆ. ಅಲ್ಲಲ್ಲಿ ವರ್ಣನೆಗಳು ಬಂದರೂ ಅವು ಹಿತಮಿತವಾಗಿವೆ. ಚಂಪೂ ಕಾವ್ಯಗಳಂತೆ ಎಲ್ಲಿಯೂ ಎಲ್ಲೆಯನ್ನು ಮೀರಿಲ್ಲ. ಇವನು ಚಿತ್ರಿಸುವ ಚಿತ್ರಗಳು ಛಾಯಾಚಿತ್ರಗಳಂತೆ ಸಜೀವವಾಗಿ ಸಂಚಾರಮಾಡುತ್ತವೆ. ಮಹಾದೇವಿಯಕ್ಕನ ಯೌವನದ ಒಂದು ಚಿತ್ರವನ್ನು ಇಲ್ಲಿ ಉದಾಹರಿಸಬಹುದು...."ಉರವಣಿಪ ನಡೆ ಮಂದಗತಿಯನೆಳಸಲಿರ್ದಪ್ಪುದು. ಮನದ ಲಲ್ಲೆ ಸಿಂಗರದತ್ತ ಸೇರಲಿರ್ದಪುದು. ಬಾಸೆಯ ಸೀಮೆ ಸಾಲಳಿಯಲಿರ್ದಪುದು. ಕುಚಸ್ಥಲಂ ಸೀಮಾರೇಖೆಯಂ ಕುರುಹಿಡಲಿರ್ದಪುವು. ಒರಿಯ ಮೇಲುದು ವಕ್ಷದೇಶಮಂ ಬಾಸಣಿಸಲಿರ್ದುದು. ಕಕ್ಷಮೂಲಂ ಕರ್ಬೊಗರನೆಳಸಲಿರ್ದಪ್ಪುವು. ತೋಳು ಥಾಳವೇರಲಿರ್ದಪ್ಪುವು. ಕೈಗಳು ವೈಸಿಂಗರಮನಳವಡಿಸಲಿರ್ದಪುವು....ಚೆಲುವು ನುಡಿಗಳು ಸುಖಮನೊತ್ತುಗೊಳಿರ್ದಪುವು.... ದಶನ ದ್ಯುತಿ ಮುಸುಂಕುಗಳೆಯಲಿರ್ದಪ್ಪುವು. ಬಿಂಬಾಧರಂ ಬಣ್ಣವೇರಲಿರ್ದುದು....ಕಪೋಲಸ್ಥಲಂ ಕಾಂತಿಯಿಡಲಿರ್ದುದು. ನಾಸಿಕಂ ಸುಗಂಧಮಂ ಬಯಸಲಿರ್ದುದು, ಸೂಸುವ ನೋಟಂ ವಕ್ರತೆಯಂ ಮರೆಗೊಳಲಿರ್ದುದು, ಮುಖರಸಂ ಮಡುಗಟ್ಟಲಿರ್ದುದು....ಅಂಗರುಚಿ ಮದನನ ಮುಕುರವಾಗಲಿರ್ದಪ್ಪುದು"[2] ಇಲ್ಲಿ ಕವಿ, ಅಕ್ಕನ ತಾರುಣ್ಯದ ಚಿತ್ರವನ್ನು ಪುಟ್ಟ ಪುಟ್ಟ ವಾಕ್ಯಗಳಲ್ಲಿ ಕಂಡರಿಸಿ ನಿಲ್ಲಿಸಿದ್ದಾನೆ. ಹೇಳುವ ಮಾತು ಸುಲಭವೂ ಸರಳವೂ ಆದುದರಿಂದ ಈ ಚಿತ್ರವು ತಟ್ಟನೆ ಕಣ್ಣೆದುರಿಗೆ ಕಟ್ಟಿದಂತಾಗುತ್ತದೆ. ಇಲ್ಲಿ ಬರುವ ಇರ್ದುದು, ಇರ್ದುವು, ಇರ್ಪುವು ಎಂಬ ಪದಗಳನ್ನು ಗಮನಿಸಬೇಕು. ಇವುಗಳ ಮೂಲಧಾತು 'ಇರ್' ಈ ಒಂದೇ ಧಾತುವನ್ನು ಮೇಲಿರುವ ಎಲ್ಲ ವಾಕ್ಯಗಳಲ್ಲಿ ಉಪಯೋಗಿಸಿರುವುದುಂಟು. ಈ ರೀತಿಯಾಗಿ ಮಹತ್ವದ ಶಬ್ದಗಳನ್ನೋ ಧಾತುಗಳನ್ನೋ ಅಲಂಕಾರಗಳನ್ನೋ ಉಪಯೋಗಿಸುವುದು ಈ ಕವಿಯ ವೈಶಿಷ್ಟ್ಯ. ಇವುಗಳಿಂದ ಇವನ ಶೈಲಿಗೆ ಮೆರಗು ದೊರೆತಂತೆ ಆಗುತ್ತದೆ.

ಹರಿಹರನ ಮತ್ತೊಂದು ಚಿತ್ರವನ್ನು ಇಲ್ಲಿ ಎತ್ತಿ ಹೇಳಬಹುದಾಗಿದೆ. ಅದು ಮಲುಹಣ, ಮಲುಹಣಿಯರ ಪ್ರಣಯ ಜೀವನ ಚಿತ್ರ. ಅದು ಇಂತಿದೆ—"ಬೇಡಿ ಕೂಡುವಲ್ಲಿ ನೋಟವಱಿದಪ್ಪುವ, ಸೈರಣೆಯಱಿದು ಸೋಂಕುವ, ಆಸೆಯಱಿದು ಆಲಂಗಿಸುವ, ಬಯಕೆಯಱಿದು ಬೆರಸುವ, ಮನವಱಿದನುಭವಿಸುವ, ಸುಖವಱಿದು ಪುಳಕಿಸುವ, ತನವಱಿದು ಜೀವಿಸುವ, ಹಮ್ಮದವಱಿದು ನೆಮ್ಮುವ, ಇಚ್ಛೆಯಱಿದು ಹೆಚ್ಚುವ, ಅಗ್ಗಳಿಕೆಯಱಿದು ಬೋಳೈಸುವ, ಎಚ್ಚರಿಕೆಯ ಸಮರತಿಸುಖದೊಳದ್ದು ಹೋಗಿ, ಸುಖದ ಸೋಂಕು ಸೊಕ್ಕುಮೀಱಿನಲಿವು ತಲೆಗತ್ತಿ ನಖಮುಖದಿಂ ಸೆಳೆಯಲನುಮಾನಿಪಲ್ಲಿಂ ನರೆವ ಸುಖಸಮಯದೊಳ್, ಕರಣವೆಲ್ಲಂ ನೋಟಂ, ನೋಟವೆಲ್ಲಂ ನುಡಿ, ನುಡಿಯೆಲ್ಲಂ ವಿರಹಂ, ವಿರಹವೆಲ್ಲಂ ದೈನ್ಯಂ, ದೈನ್ಯವೆಲ್ಲಂ ಸಾತ್ವಿಕ, ಸಾತ್ವಿಕವೆಲ್ಲಂ ಮೆಯ್, ಮೆಯ್ಯೆಲ್ಲಂ ಕೂಟಂ, ಕೂಟವೆಲ್ಲಂ ಮನಂ, ಮನವೆಲ್ಲಂ ಮೆಚ್ಚು, ಮೆಚ್ಚೆಲ್ಲಂ ಸೋಲಂ, ಸೋಲವೆಲ್ಲಂ ರಸಮಯವಾಗೆ"[3] ಇಲ್ಲಿಯ ಈ ಪ್ರಸಂಗವು ಸೊಗಸಾದ ಒಂದು ಪ್ರಣಯ ಸೂಕ್ತವಾಗಿದೆ. "ಮೆಯ್ಯೆಲ್ಲಂ ಕೂಟಂ, ಕೂಟವೆಲ್ಲಂ ಮನಂ....ಸೋಲವೆಲ್ಲಂ ರಸಮಯವಾಗೆ" ಎಂಬ ಈ ಮಾತು ಎಂಥವರ ಮನಸ್ಸನ್ನೂ ಆಕರ್ಷಿಸದೆ ಇರದು. ಇಂಥ ಪ್ರಸಂಗಗಳೇ ವಿರಹಿಗಳ

---

[1] ಹಂಪೆಯ ಹರಿಹರ–ಪ್ರೊ. ಡಿ. ಎಲ್. ಎನ್.

[2] ಮಹಾದೇವಿಯಕ್ಕನ ರಗಳೆ ಸ್ಥಲ 2, ಪುಟ 14–15–ಹರಿಹರ

[3] ಮಲುಹಣದೇವ ಚರಿತೆ ಸ್ಥಲ 3, ಪುಟ 14–ಹರಿಹರ

ವಿರಹವನ್ನು ವಿಲಂಬಿಸುವುವು. ಈ ಬಗೆಯ ಚಿತ್ರಗಳು ಹರಿಹರನ ರಗಳೆಯಲ್ಲಿ ಸುರುಳಿ ಸುರುಳಿಯಾಗಿ ಬಂದಿವೆ. ಇವನ್ನು ಬಿಡಿಬಿಡಿಯಾಗಿ ಬಿಚ್ಚಿ ಹರವಿದಂತೆಲ್ಲ ಕವಿಯ ಮಹೋನ್ನತಿ ಗೊತ್ತಾಗುತ್ತದೆ. ಮೇಲಿನ ಪ್ರಸಂಗದ ಕೊನೆಯ ಭಾಗದಲ್ಲಿ ಪದಗಳ ಸಮತೂಕವಿದೆ. ಒಂದು ಶಬ್ದವು ಮುಂದಿನ ಶಬ್ದಕ್ಕೆ ಪುಷ್ಟಿಕೊಡಲು ಕುಪ್ಪಳಿಸುತ್ತದೆ. ಕಿವಿಗೆ ಇಂಪಾದ ಸರಣಿಯೂ ಇದೆ. ವಾಕ್ಯಗಳ ವೈವಿಧ್ಯವಿದೆ. ಉತ್ತಮ ಗದ್ಯಕ್ಕೆ ಬೇಕಾಗುವ ಎಲ್ಲ ಲಕ್ಷಣಗಳೂ ಇಲ್ಲಿವೆ.

ಶ್ರೇಷ್ಠಗದ್ಯಕ್ಕೆ ಬಳಕೆಯ ಭಾಷೆ ನಾಣ್ಣುಡಿಗಳ ಜಾಣ್ಣುಡಿಗಳು ಬೇಕೇಬೇಕು. ಹರಿಹರನು ಇವುಗಳಿಂದಲೂ ಹೊರತಾಗಿಲ್ಲ. ಸಂಗಮೇಶ್ವರನು ಮಂಗಳವಾಡಕ್ಕೆ ಹೋಗು ಎಂದು ಬಸವಣ್ಣನಿಗೆ ಹೇಳಿದಾಗ ಅವನ ಪ್ರಲಾಪದ ಮಾತುಗಳು ಇಂತಿವೆ—"....ದೇವ ದೇವ ಸಂಗ, ಕಂಡ್ಯೆ, ಕೆಟ್ಟೆ ಕೆಟ್ಟೆಂ, ತೊಟ್ಟನಿಂತು ಕಣ್ ನೋಡದೆ ಹುಣ್ಣ ನೋಡದೆ ಹೋಗೆಂಬರೆ ? ಗಗನದಿಂದಿಳಿವಂಗಾಧಾರಮಾಗುತ್ತೆ ತಪ್ಪುವರೆ ? ಕಾಳ್ಕಿಚ್ಚಿನಿಂ ಜೀವಂಗೆ ತಂಪಿನ ಸೋನೆಯ ಮಳೆಯಾಗುತ್ತೆ ಮಾಣ್ಬರೆ ? ಇಂತು ನಡುಗಡಲೊಳಾಳುವಂಗೆ ತೆಪ್ಪವಾಗುತ್ತೆ ಪಿಂಗುವರೆ ? ನರಕದೊಳಾಳಲೀಯದೆ ಚಂಡಿಕೆವಿಡಿದುದ್ಧರಿಸಲೆಂದಾಳ್ಗೊಂಡ ಗುರುವೆ ಪರಮ ಬಂಧುವೆ ಪ್ರಾಣವೆ ; ಬೆಳದಿಂಗಳೇಕೆ ಬಿಸುಪೇಕೆ? ಅಮೃತವೇಕೆ ವಿಷವೇಕೆ? ಬೆಳಗೇಕೆ ತಮವೇಕೆ? ನೀನೇಕೆ ಈ ನುಡಿಯೇಕೆ? ಹೊದ್ದಿದರಂ ಹೋಗೆಂಬರೆ ? ಸಾರ್ದರಂ ಸೈರಿಸೆಂಬರೆ ? ನಂಬಿದವರ ಗೋಣಂ ಕೊಯ್ವರೆ? ಶಿಶುವನಿಜೀವರೆ ? ಪಶುವಂ ಕೊಲುವರೆ ?"[1] ಇಲ್ಲಿ ಜನಸಾಮಾನ್ಯರಾಡುವ ನಾಣ್ಣುಡಿಗಳು ಸಿವುಡಃ ಸಿವುಡಾಗಿ ಬಂದಿವೆ. ಯಾವುದಕ್ಕೂ ಅರ್ಥ ವಿವರಣೆ ಬೇಡ. ಅಷ್ಟನ್ನೂ ಸುಲಭವಾಗಿ ಅರಿಯಬಹುದಾಗಿದೆ. ಈ ಜಾಣ್ಣುಡಿಗಳು ಜಾಣರನ್ನು ತಲೆದೂಗಿಸಿ ವಿಚಾರಪರರನ್ನಾಗಿ ಮಾಡುತ್ತವೆ.

ಹರಿಹರನ ಗದ್ಯಗಳಲ್ಲಿಯ ಅಲಂಕಾರಗಳು ಚಂಪೂ ಕಾವ್ಯಗಳಲ್ಲಿಯ ಅಲಂಕಾರಗಳಂತೆ ದುಶ್ಯಾ್ರವ್ಯವಲ್ಲ. ಇವನ ಅಲಂಕಾರಗಳು ಕೇಳಲು ಇಂಪಾಗಿರುತ್ತವೆ ; ಸರಳವೂ ಸುಲಭವೂ ಆಗಿರುತ್ತವೆ, ಸೊಂಪಾಗಿಯೂ ಇರುತ್ತವೆ. ಬಸವಣ್ಣನು ಸಮಸ್ತ ಶರಣರ ಮಧ್ಯವಲ್ಲಿ ಮನೋಹರ ಮೂರ್ತಿಯಾಗಿ ಹೇಗಿದ್ದನೆಂಬುದನ್ನು ಕವಿ ಹೀಗೆ ಬಣ್ಣಿಸಿದ್ದಾನೆ—"ಸಂಗನ ಬಸವಂ ಬಸವಿದೇವಂ ಹಾರದ ನಡುವಣ ನಾಯಕ ರತ್ನದಂತೆ, ಅವಯವದ ನಡುವಣ ಉತ್ತಮಾಂಗದಂತೆ, ನವರತ್ನದ ನಡುವಣ ಚಿಂತಾರತ್ನದಂತೆ, ಗೋಕುಲದೊಳಗಣ ಕಾಮಧೇನುವಿನಂತೆ, ತರುಕುಲದ ನಡುವಣ ಸುರಕುಜದಂತೆ, ಗಿರಿಗಳ ನಡುವಣ ಮೇರುಗಿರಿಯಂತೆ, ಸುವರ್ಣದ ನಡುವಣ ಪರುಷದಂತೆ, ನಕ್ಷತ್ರಂಗಳ ನಡುವಣ ಚಂದ್ರದಂತೆ, ನವಗ್ರಹಂಗಳ ನಡುವಣ ಭಾಸ್ಕರನಂತೆ, ಅನುಲೇಪನಂಗಳ ನಡುವಣ ಭಸಿತ ಮಂಡನದಂತೆ, ಕಾಂತಿಗಳ ನಡುವಣ ಸ್ವಯಂಜ್ಯೋತಿಯಂತೆ"[2] ಇಲ್ಲಿ ಕವಿ ಉಪಮಾಲಂಕಾರಗಳ ಮಾಲೆಯನ್ನೇ ಹೆಣೆದಿದ್ದಾನೆ. ಈ ಅಲಂಕಾರಗಳು ವಾಚಕರಿಗೆ ಬೇಸರವನ್ನುಂಟುಮಾಡುವುದಿಲ್ಲ. ಇಲ್ಲಿಯ ಗದ್ಯವು ರಗಳೆಯ ಓಟಕ್ಕೆ ಸಮಾನವಾಗಿದೆ. ಗದ್ಯ ರಗಳೆಗಳೆರಡೂ ಹಾಲ್ಜೇನಿನಂತೆ ಹೊಂದಿಕೊಂಡು ಕಥಾನಾಯಕನ ಹಿರಿಮೆಯನ್ನು ಮುಗಿಲುದ್ದ ಒಯ್ಯುತ್ತವೆ. ಹರಿಹರನ ಉತ್ತಮ ಗದ್ಯಶೈಲಿಗೆ ಮತ್ತೊಂದು ಚಿತ್ರವನ್ನು ಇಲ್ಲಿ ಉದಾಹರಿಸಬಹುದಾಗಿದೆ. ಶಿವನು, ಚೋಳದೇಶದ ಮಣಮುಂದ ಪುತ್ತೂರ ಮದುವೆಯ ಚಪ್ಪರಕ್ಕೆ ಮಹಾವೃದ್ಧನ ವೇಷದಲ್ಲಿ ಹೀಗೆ ಬರುತ್ತಾನೆ—"ಕಯ್ಯ ಕೊಡೆಯಿಂ ಮಯ್ಯ ತೆರೆಯಿಂ ಜೋಲ್ವ ಪುರ್ವಿಂ ನೇಲ್ವ ತೋಳತೊವಲಿಂ ಇಟ್ಟ ವಿಭೂತಿಯಿಂ ಊಱುದ ಯಷ್ಟಿಯ ಕೋಲಿಂ ಪಿಡಿದ ಕಮಂಡಲದಿಂದಿಳಿವ ಬೆಳುಗಡ್ಡದಿಂ ನಡುಗುವ ನರೆವಲೆಯಿಂ ನರೆತು ಸಡಿಲ್ವ ಸರ್ವಾಂಗದಿಂ ಪುಣ್ಯಂ ಪಣ್ಣಿದಂತೆ ಒಮ್ಮೊಮ್ಮೆ ಕೆಮ್ಮುತ್ತೊಮ್ಮೊಮ್ಮೆ ಗೂಡೆಗೂಡೆ

1 ಬಸವರಾಜ ದೇವರರಗಳೆ ಸ್ಥಲ 4, ಪುಟ 20–ಹರಿಹರ

2 ಬಸವರಾಜದೇವರ ರಗಳೆ ಸ್ಥಲ 10, ಪುಟ 70–ಹರಿಹರ

ಗುಟ್ಟುತಂ ಶಿಥಿಲಾಕ್ಷರಗಳಿಂ ನಮಃ ಶಿವಾಯ ನಮಃ ಶಿವಾಯಯೆನುತ್ತೆಸಲಾಜಿದಂತೆ ನಡುಗುತ್ತುಂ ಹೊಜಿಗೆ ನೆರೆವ ನೆರವಿಗಳೆಲ್ಲಂ ನೋಡುತ್ತಿರಲು ಮೆಲ್ಲಮೆಲ್ಲನೆ ಚಪ್ಪರದ ಬಾಗಿಲ್ಗೆ ಬಂದೊಡೆ...."[1] ಇಲ್ಲಿಯ ಮಹಾ ವೃದ್ಧನ ಚಿತ್ರವು ಮನೋಜ್ಞವಾಗಿದೆ. ಇಲ್ಲಿಯ ಪದಗಳ ಜೋಡಣೆ ತೂಕಮಾಡಿ ಇಟ್ಟಂತೆ ಇವೆ. ಹರಿಹರನು ಇಂಥ ಚಿತ್ರಗಳನ್ನು ಚಿತ್ರಿಸುವಲ್ಲಿ ಸಮರ್ಥನಾಗಿದ್ದಾನೆ. ಚಿತ್ರಮಯವಾದ ಶೈಲಿ ದೊಡ್ಡ ಕವಿಯ ಆಸ್ತಿ[2] ಎಂದು ಹೇಳು ವುದುಂಟು. ಹರಿಹರನಿಗೆ ಈ ಶೈಲಿಯು ಕರಗತವಾಗಿವೆ.

ಹರಿಹರನು ಭಕ್ತ ಕವಿ. ಭಕ್ತಿ ನಿರ್ಭರತೆಯ ಒಂದು ಚಿತ್ರವನ್ನು ಇಲ್ಲಿ ಕೊಡದಿದ್ದರೆ ಆವನಿಗೆ ಅನ್ಯಾಯ ಮಾಡಿದಂತಾಗುತ್ತದೆ. ಕೌಶಿಕನ ಅರಮನೆಯಲ್ಲಿ ಮಹಾದೇವಿಯಕ್ಕನು ಜಂಗಮಗೋಷ್ಠಿಯಲ್ಲಿ ಹೀಗಿದ್ದಳು.— "ಬಳ್ಳಿವರಿವ ಗೋಷ್ಠಿಗಡರ್ಪಾಗಿ ಭಕ್ತಿಯ ಬೀಜಂಗಳಂತಿರ್ದ ಪುರಾತನರ ಗೀತಂಗಳಂ ಚಿತ್ರಭೂಮಿಯೊಳ್ ಬಿತ್ತಿ ಆನಂದಾಶ್ರುಗಳನೆರೆದು ಪುಳಕದಗೊಬ್ಬರವನಿಕ್ಕಿ ಶಿವ ಜ್ಞಾನ ಶಶಿರವಿಗಳಂ ಬೆಳೆಯಿಸಿ ಪ್ರಸಂಗ ಕುಸುಮ ಮನಲರ್ಚಿಸಿ ಪರಿಣಾಮ ಫಲಮನೆಯ್ದಿ ಗೀತಕಳೆ ವೃಕ್ಷಫಳರಸಮಂ ಸವಿಸವಿದಾಗಳಾಗಳಿನ ಶಿವಾನುಭವಕ್ಕೆ ನವಗೀತಮಂ ಪಾಡಿ ಶರಣರಂ ನೋಡಿ ತುಷ್ಟಿಯಂ ನೀಡಿ ನಿಷ್ಠೆಯಂ ಕೂಡಿ ಸಂತೋಷಮಂ ಮಾಡಿ ಭಕ್ತಿಯಂ ಬೇಡಿ ಸುಖರಸದೊಳ್ ಮೂಡಿ ಲೀಲೆ ವಿಕ್ರಾಡಿ ಭಕ್ತಿರಸದೊಳದ್ದು ಶಿವಜ್ಞಾನದೊಳೆಳ್ದು ವೈರಾಗ್ಯಮಂ ತಾಳ್ದು ಮಾಯೆಯ ತೂಳ್ದು ಪಾಪಮಂ ಪೋಳ್ದು ಜನನಮಂ ಸೀಳ್ದು ದುರಾಸೆಯಂ ಪೂಳ್ದು ನಿತ್ಯ ಸುಖದೊಳ್ ಬಾಳ್ದು ನಿಶ್ಚಿಂತ ನಿವಾತ ನಿರತಿಶಯ ಪರಮ ಗೋಷ್ಠಿ ಸಂತುಷ್ಟಚಿತ್ತೆಯಾಗಿ ಮಹಾದೇವಿಯಕ್ಕನಿಪ್ಪಲ್ಲಿ...."[3] ಇಲ್ಲಿ ಕವಿಯು ಭಕ್ತಿಯ ಮರ್ಮವನ್ನು ಎಷ್ಟು ರಮ್ಯವಾಗಿ ಚಿತ್ರಿಸಿದ್ದಾನೆ. ಸಮಂಜಸವಾದ ತುಂಬು ಹೋಲಿಕೆಗಳಿವೆ. "ಪಾಡಿ, ನೋಡಿ, ನೀಡಿ, ಕೂಡಿ, ಮಾಡಿ, ಬೇಡಿ, ಮೂಡಿ, ಆಡಿ ಎಂಬ ಎಂಟು ಶಬ್ದಗಳೂ, ಅದ್ದು, ಎಳ್ದು, ತಾಳ್ದು, ತೂಳ್ದು, ಪೋಳ್ದು, ಸೀಳ್ದು, ಪೂಳ್ದು, ಬಾಳ್ದು." ಎಂಬ ಎಂಟು ಶಬ್ದಗಳೂ ಗಮನಾರ್ಹವಾಗಿವೆ. ಹರಿಹರನು ಶಬ್ದಗಳನ್ನು ಮನಬಂದಂತೆ ತಕಪಕ ಕುಣಿಸಿದರೂ ಎಲ್ಲಿಯೂ ಆಭಾಸವಾಗುವುದಿಲ್ಲ. ಇವನ ಕೈಯಲ್ಲಿ ಶಬ್ದಗಳು ಪುಟಹೊಡೆದ ಚೆಂಡಿನಂತೆ ಚೆಂಡಾಟವಾಡುತ್ತವೆ. ಎಂಟೆಂಟು ಶಬ್ದಗಳ ಈ ಜೋಡಣೆ ಎಷ್ಟು ಸೊಗಸಾಗಿದೆ. ಲಲಿತವಾದ ಪದಗಳೂ ಇವೆ. ಕಿವಿಗೆ ಕೇಳಲು ಅದೆಷ್ಟು ಇಂಪು, ಅದೆಷ್ಟು ಸೊಂಪು.

ಹರಿಹರನ ಗದ್ಯದಲ್ಲಿ ಪುನರುಕ್ತಿಗಳು ಅನೇಕ ಕಡೆ ಬರುತ್ತವೆ. ಇವನು ಮಹತ್ವದ ಶಬ್ದಗಳನ್ನು ತಿರು ತಿರುಗಿ ಉಪಯೋಗಿಸುವುದುಂಟು. ಶಿಕ್ಷಕನು ಶಿಷ್ಯರಿಗೆ ಕಲಿಸುವ ಶೈಲಿಯಲ್ಲಿ ಪುನರುಕ್ತಿಗಳ ಜಾಲವನ್ನು ಹರಡಿ ವಾಚಕರ ಮನಃಪಟಲದ ಮೇಲೆ ಅಚ್ಚೊತ್ತುವಂತೆ ಮೂಡಿಸುತ್ತಾನೆ. ನಾಟಕೀಯ ಸನ್ನಿವೇಶಗಳೂ ಇವನ ಗದ್ಯ ದಿಂದ ದೂರಾಗಿಲ್ಲ. ಅವನ್ನೂ ಸಮರ್ಥ ರೀತಿಯಲ್ಲಿ ಚಿತ್ರಿಸಬಲ್ಲ.

ಒಟ್ಟನಲ್ಲಿ ಹರಿಹರನ ರಗಳೆಯಲ್ಲಿ ಬರುವ ಗದ್ಯವು ಪರಿಶುದ್ಧವಾದ ಗದ್ಯವು. ಗದ್ಯದ ಯಾವ ಭಾಗವನ್ನು ತಿರುಗಿಸಿದರೂ ಎಲ್ಲೆಲ್ಲಿಯೂ ಸಿದ್ಧಹಸ್ತವನ್ನು ಪಡೆದಿದೆ. ಅಪ್ಪಟ ಚಿನ್ನದಂತೆ ಚೆಲುವಾಗಿದೆ. ಮುಂಬರುವ ಗದ್ಯಕ್ಕೆ ಇವನದು ಹಿರಿದಾದ ಕಾಣಿಕೆ. ಮುಂದಿನ ಗದ್ಯಕಾರರಿಗೆ ಇವನು ಮಾರ್ಗದರ್ಶಕನಾಗಿದ್ದಾನೆ. ಇವನು ಸ್ವಾತಂತ್ರ್ಯ ಪ್ರಿಯನೂ ಕ್ರಾಂತಿಕಾರನು ಹೌದು. "ತನ್ನ ಕಾಲದ ಸಾಹಿತ್ಯಕ್ಕೆ ಸೀಮಾಪುರುಷ ಹರಿಹರ. ಕನ್ನಡ ಸಾಹಿತ್ಯ ಮಂದಿರದ ಚಿನ್ನದ ಕಲಶಗಳಲ್ಲಿ ಇವನು ಒಬ್ಬನು".[4] ಎಂದು ಹೇಳುವ ಮಾತಿನಲ್ಲಿ ಸತ್ಯಾಂಶವಿದೆ.

---

1 ನಂಬಿಯಣ್ಣನ ರಗಳೆ ಸ್ಥಲ 6 ಪುಟ 35-36–ಹರಿಹರ

2 ಹಂಪೆಯ ಹರಿಹರ, ಪುಟ 57–ಪ್ರೊ ಡಿ. ಎಲ್ ಎನ್.

3 ಮಹಾದೇವಿಯಕ್ಕನ ರಗಳೆ ಸ್ಥಲ 6 ಪುಟ 49–ಹಂಹರ

4 ಹಂಪೆಯ ಹಂಹರ ಪುಟ 63,–ಪ್ರೊ ಡಿ. ಎಲ್. ಎನ್.

ಪ. ನಾಗರಾಜಯ್ಯ

ಅಹಂಕಾರ ನಿರಸನ

'ಮಾನ' ಎಂಬುದು ಅಳತೆ. ನನ್ನ ಅಳತೆ ಇಷ್ಟು, 'ನನ್ನ ಯೋಗ್ಯತೆ ಇಷ್ಟು, ನನ್ನ ಮಾನ ಇಷ್ಟು', ಎಂದು ತಿಳಿದವನು ಮಾನಿ : ಮಾನಿಷ್ಠ, ಮಾನವಂತ. ತನಗೆ ಇರುವುದಕ್ಕಿಂತ ಹೆಚ್ಚಿನ ಮಾನವಿದೆಯೆಂದು ಭಾವಿಸಿ ಬದುಕುವವನು ಅಭಿಮಾನಿ. ಈ ಅಭಿಮಾನ ಸದಭಿಮಾನವಾಗಬಹುದು; ಇಲ್ಲವೆ, ದುರಭಿಮಾನವಾಗಬಹುದು. ಈ ದುರಭಿಮಾನ–ಅಹಂಕಾರ ಲೋಕಕಂಟಕ ; ಆತ್ಮ ಕಂಟಕವೂ ಹೌದು. ಹೀಗೆ ತಮ್ಮ ತಮ್ಮ ದುರಭಿಮಾನದಿಂದ ಮೆರೆದು ಲೋಕಕಂಟಕರಾದವರ ಕತೆ ನಿತ್ಯಜೀವನದಲ್ಲಿ ಅವಿರಳವೇನಲ್ಲ, ಎಂದ ಮೇಲೆ ಸಮಕಾಲೀನ ಇತಿಹಾಸವೂ ಗತಕಾಲದ ಇತಿಹಾಸವೂ, ಇಂತಹ ಅನೇಕ ನಿದರ್ಶನಗಳನ್ನು ಸಾರಿಹೇಳುತ್ತಿವೆ ; ಕೂಗಿ ಎಚ್ಚರಿಸುತ್ತಿವೆ-ಮುಂದೆ ಯಾರೂ ಆ ದಾರಿ ತುಳಿಯದಿರಲೆಂದು. ಇಂತಹ ನಿದರ್ಶನ ಲೌಕಿಕಕ್ಕೆ ಮಾತ್ರ ಮೀಸಲಲ್ಲ; ಅಲೌಕಿಕದತ್ತ ಆತ್ಮನನ್ನು ಒಯ್ಯುವವೆನ್ನಿಸಿರುವ ಪುರಾಣಾದಿಗಳಲ್ಲೂ ಕಾಣಬಹುದಾಗಿದೆ.

ಕನ್ನಡ ಸಾಹಿತ್ಯ ಹಳಮೆಯಲ್ಲಿ ಭಾರತೀಯ ಸಾಹಿತ್ಯಗಳಲ್ಲಿಯೇ ಹೆಮ್ಮೆ ಪಟ್ಟುಕೊಳ್ಳಬಹುದಾದುದು ಮಾತ್ರವಲ್ಲ, ಹಿರಿಮೆಯಲ್ಲಿ ಕೂಡ. ಸುಮಾರು ಎರಡು ಸಾವಿರ ವರ್ಷಗಳ ಹಳಮೆಯುಳ್ಳ ಈ ಸಾಹಿತ್ಯದ ಇತಿಹಾಸದಲ್ಲಿ 'ವಿಶ್ವ ಕವಿಗಳ ವಿರಳ ಪಂಕ್ತಿಯಲ್ಲಿ' ರಾರಾಜಿಸುವ ಯೋಗ್ಯತೆಯುಳ್ಳ ಕವಿಗಳಿದ್ದಾರೆ; ಅವರಿಂದ ರಚಿತವಾದ ಕೃತಿರತ್ನಗಳಿವೆ. ಈ ಕವಿಪಂಕ್ತಿಯಲ್ಲಿ ಕನ್ನಡದ ಪ್ರತಿನಿಧಿಯಾಗಿ ನಾಯಕ ಪಟ್ಟವಹಿಸುವವ ಆದಿಕವಿ--ಅಗ್ರಕವಿ ಎನಿಸಿರುವ ಪಂಪ ಮಹಾಕವಿ; ಈ ಕೃತಿಪಂಕ್ತಿಯಲ್ಲಿ ಸೇರಲರ್ಹವಾದ ಈತನ ಕೃತಿರತ್ನ 'ವಾಗ್ವಧೂಮುದ್ರೆಯೊಳ್ ಮುದ್ರಿಸಿನಿಂದ' 'ವಾಕ್ಯ ಮಾಣಿಕ್ಯ ಕೋಶಂ' ಎನಿಸಿದ ಆದಿ ತೀರ್ಥೇಶ್ವರನ ಚರಿತವನ್ನೊರೆದ ಆದಿಪುರಾಣ. ಇದರ ಪೂರ್ವಾರ್ಧ, 'ಸುಪಕ್ವ ಚೇತನರಿಗೆ ಮೆಚ್ಚಾಗುವ' ಆದಿ ತೀರ್ಥಂಕರನ ಚರಿತೆಯಾದರೆ, ಉತ್ತರಾರ್ಧ 'ಅಧ್ಯಯನ ಯೋಗ್ಯವಾದ ಆದರ್ಶ ಚರಿತ್ರೆ' ಎನಿಸಿದ ಭರತ ಬಾಹುಬಲಿಗಳ ಚರಿತ್ರೆ. ಈ ಚರಿತ್ರೆಯಿಂದಲೇ ಅಹಂಕಾರನಿರಸನಕ್ಕೆ ಕಾರಣವಾದ ಒಂದೆರಡು ರಸಸನ್ನಿವೇಶಗಳ ಪರಿಚಯವೇ ಈ ಅಲ್ಪ ಪ್ರಯತ್ನದ ವಸ್ತು.

ತಂದೆಯಿಂದ ಚಕ್ರವರ್ತಿಪದದಲ್ಲಿ ಪಟ್ಟಾಭಿಷಿಕ್ತನಾದ ಭರತ ಏಕಚ್ಛತ್ರಾಧಿಪತಿಯಾಗಿ ಮೆರೆಯುವ ಹೆಬ್ಬಯಕೆಗೆ ಬಲಿಯಾಗುತ್ತಾನೆ. ಇದಕ್ಕೆ ಪ್ರೋಷಕವಾಗಿಯೋ ಎಂಬಂತೆ ಚಕ್ರರತ್ನವೂ ಒದಗಿದೆ. ರಾಜನಾದವನಿಗೆ ಬಂದ ಬಯಕೆಗಳೆಲ್ಲವೂ ಈಡೇರಲೇಬೇಕಷ್ಟೆ ? ಇನ್ನು ಚಕ್ರವರ್ತಿಗೆ ಕೇಳಬೇಕೆ ? ವಿಜಯಪ್ರಸ್ಥಾನ ನಾಲ್ಕೂದಿಕ್ಕುಗಳಲ್ಲಿ ನಿರಾತಂಕವಾಗಿ ಸಾಗಿಬಂದಿತು. ಕೆಲವರು ಈತನ ಬರವನ್ನು ಕೇಳಿ ಶರಣಾಗತರಾದರೆ, ಮತ್ತೆ ಕೆಲವರು ದರ್ಪದಿಂದ ಎದುರಾಗಿ ಸೋತು ಶರಣಾಗತರಾದರು. ಹೀಗೆ ದಿಗ್ವಿಜಯವನ್ನು ಮುಗಿಸಿ, ವೃಷಭಾಚಲಕ್ಕೆ ಬಂದು ಬಹುಶಃ ಹಿಂದೆಂದೂ ಯಾರೂ ಇಂತಹ ಹೆಗ್ಗಳಿಕೆಯನ್ನು ಹೊಂದಿದವರಿಲ್ಲ ಎಂಬ ಹೆಮ್ಮೆಯಿಂದಲೊ ಏನೊ –ತುಂಬು ಆಸೆಯಿಂದ ತನ್ನ ವಿಜಯಪ್ರಶಸ್ತಿಯನ್ನು ಬರೆಯಿಸುವೆನೆಂದು ಹೋಗಿ ನೋಡುವಷ್ಟರಲ್ಲಿ ಕಂಡುದಾದರೂ ಏನು ?

ಅದಱೊಳನೇಕ ಕಲ್ಪ ಶತಕೋಟಿಗಳೊಳ್ ಸಲೆ ಸಂದ
ಚಕ್ರಿವೃಂದದ ಚಲದಾಯದಾಯತಿಯ ಬೀರದ ಚಾಗದ
ಮಾತುಗಳ್ ಪೊದಱ್ದಿದವಿ'ರುವುದಸ್ನು !

ಪಾಪ ! ಹಿಂದೆ ಅನೇಕಾನೇಕ ಚಕ್ರವರ್ತಿಗಳು ಇಂತೆಯೇ ಸಾಧಿಸಿ ಬರೆಸಿದ್ದ ಪ್ರಶಸ್ತಿಗಳಿಂದ ತುಂಬಿ ಹೋಗಿದೆ ಆ ಪರ್ವತ ; ಇವನದಕ್ಕೆ ಎಡೆಯೇ ಇಲ್ಲ 'ಒಯ್ಯನೆ ನೋಡಿ ನೋಡಿ ಸೋರ್ದುದು ಕೊಳಗೊಂಡ ಗರ್ವರಸಮಾ ಭರತೇಶ್ವರ ಚಕ್ರವರ್ತಿಯಾ' (13–71) ಎನ್ನುತ್ತಾನೆ ನಮ್ಮ ಕವಿ ಪಂಪ ! ಅವನ್ನು ನೋಡು-ನೋಡುತ್ತಿದ್ದಂತೆಯೇ ಆತನ ಗರ್ವರಸವೆಲ್ಲ ಸೋರಿಹೋಯಿತಂತೆ !

ಭರತೇಶ್ವರನ ಜೀವಿತದಲ್ಲೇ ವಿಧಿ ಮೊಟ್ಟಮೊದಲ ಬಾರಿಗೆ ಆತನಿಗೆ ಪ್ರತಿಕೂಲವಾಗಿ ನಿಂತು ಆತನನ್ನು ಸತ್ವಪರೀಕ್ಷೆಗೊಳಪಡಿಸಿದೆ. ಆದಿ ತೀರ್ಥೇಶ್ವರನ ಮಗನಾಗಿ, ಆದಿ ಚಕ್ರವರ್ತಿಯಾಗಿರುವುದಕ್ಕೆ ಆದರ್ಶವಾಗಿ ನಡೆದು ಮೇಲೇರುವುದು ; ಇಲ್ಲವೆ, ಅತಿ ಸಾಮಾನ್ಯನಂತೆ ಹೀನಾಯವಾಗಿ ನಡೆದು ಕೆಳಗೆ ಜಾರಿ ಹೋಗುವುದು ಎರಡೇ ದಾರಿ. ನಿಂತು ಯೋಚಿಸುವುದೆ ? ತಡಮಾಡುವುದೆ ? ಅದು ತನ್ನತನಕ್ಕೆ-ಅಹಂಕಾರಕ್ಕೆ ಅವಮಾನವೆನಿಸಿತೊ ಏನೊ ! 'ಗಳಿತ ಗರ್ವನಾಗಿ ಸಿಗ್ಗಾಗಿ, ಪೂರ್ವಾವನೀಪಾಳ ಪ್ರಶಸ್ತಿಯೊಳೊಂದೊಂದಂ ದಂಡರತ್ನದಿಂ ಸೀಂಟಿ ಕಳೆದು ನಿಜ ಪ್ರಶಸ್ತಿಗೆಡೆಮಾಡಿ' (13–71 ವ) ಸಿದನಂತೆ ! ಅಲ್ಲಿ 'ನೆಗಟ್ದ ತನ್ನ ಕೀರ್ತಿಯನೀ ವಿಖ್ಯಾತ ವೃಷಭಾದ್ರಿಯೊಳ್ ಸುರಗೀತ ಯಶಂ ನಿಜಾಸಿಡಂ ನೆಲಂ ನಿಲ್ವನೆಗಂ' (13–77)—ಎಂದು ಅಣಕಿಸುತ್ತಾನೆ ನಮ್ಮ ಕವಿ. ಈ ಭೂಮಂಡಲವಿರುವ ತನಕವೂ ಇರಬೇಕಂತೆ ಈತನ ಯಶಸ್ಸು ! ಈ ಹಿಂದಿನ ಚಕ್ರವರ್ತಿಗಳೂ ಹೀಗೆಂದೇ ತಮ್ಮ ಶಾಸನ ಹಾಕಿಸಿದ್ದಿರಲಾರರೆ ? ಅಂಥವಕ್ಕೆ ತಾನು ಮಾಡಿದ ಗತಿಯೇ ಮುಂದೆ ತನ್ನದಕ್ಕೂ ಕಾದಿರಲಾರದೆ ?

ದಿಗ್ವಿಜಯವನ್ನು ಮುಗಿಸಿದ ಭರತಚಕ್ರೇಶ್ವರ ಕೈಲಾಸ ಪರ್ವತದಲ್ಲಿ 'ಜಗತ್ರಯ ತಿಳಕನಾದ' ವೃಷಭನಾಥನ ಪಾದಪದ್ಮಗಳಿಗೆ ಎರಗಿ, ಅಲ್ಲಿಂದ ಹೊರಟು ಅಯೋಧ್ಯಾಭಿಮುಖನಾಗಿದ್ದಾನೆ. ಇನ್ನೇನು ಪುರಪ್ರವೇಶ ಮಾಡಬೇಕು ಎನ್ನುವಷ್ಟರಲ್ಲಿ ಚಕ್ರರತ್ನ ತಡೆದು ನಿಂತಿತಂತೆ! ಕಂಡ ಎಲ್ಲರಿಗೆ ಅಚ್ಚರಿ, ತಳಮಳ. ಹಾಗೆ ಉಳಿದಿರುವ ಶತ್ರು ಯಾರು ಎಂದು ? ಪುರೋಹಿತರತ್ನವನ್ನು ಕರೆಸಿ ವಿಚಾರ ಮಾಡುತ್ತಿರುವ ಚಕ್ರಿಯ ಮಾತಿನ ಧಾಟಿ ಇದು :

ಎನಗಮರಾತಿಗಳೊಳರೆಂ | ಬಿನಿತು ಪರಾಭವಮನೀಗಳೀ ಚಕ್ರಂ ಸೂ
ಚನೆಗೈದುದಿನ್ನಾವಂ | ತನಗಿರಲೆಡೆ ಮಾಡಿದಪ್ಪನಂತಕ ಮುಖಮಂ (14-9)

ನನಗೂ ಶತ್ರುಗಳಿದ್ದಾರೆ ಎಂಬ ಈ ಅವಮಾನವನ್ನು ಈ ಚಕ್ರ ಸೂಚನೆ ಮಾಡುತ್ತಿದೆಯಲ್ಲ ! (ಇಲ್ಲಿ 'ನನಗೂ' ಎಂಬಲ್ಲಿನ ಅಹಂಕಾರವನ್ನು ಗಮನಿಸಬೇಕು) ತನಗೆ ಹಗೆಗಳಿರುವುದನ್ನು ಈ ಚಕ್ರಸ್ಖಲನ ಸೂಚಿಸುತ್ತಿದೆ ಎಂದು ಪುರೋಹಿತರಿಂದ ಕೇಳಿ, ಅವನಿಗಾದ ಆತಂಕ ಅಷ್ಟಿಷ್ಟಲ್ಲ—

ಎನಿಬರರಸುಗಳುಮೆಱಗಿದೊ | ಡೆನೆಗೇವಂದಪುದೊ ಬಾಹುಬಲಿ ಪೊಱಗೆನೆ ಪೇ
ೞಿಸಿತುಂ ಪುರಮೇವುದೊ ಪೌ- | ದನಪುರ ಮೆನ್ನಾಳ್ಕೆಗಿಂತು ಪೊಱಗೆನಿಪಾಗಳ್ (14-28)

ಬಾಹುಬಲಿಯಿಂದಲೂ, ಪೌದನಪುರದಿಂದಲೂ ಹೊರಗು ಎನಿಸಿದ ತನ್ನ ಆಳಿಕೆಯಿಂದೇನು ಪ್ರಯೋಜನ ಎನ್ನುತ್ತಾನೆ. ಎಷ್ಟಾದರೂ ಶತ್ರುನಿಶ್ಶೇಷ ಎನಿಸದಷ್ಟೆ? ಆಗ ಒಂದು ಕಾಗದ ಬರೆದು ಕಳುಹಿದರೆ ತೀರುವ ಈ ಒಂದು ಮನೆವಾರ್ತೆಗೆ ಏಕೆ ಇಷ್ಟೊಂದು ಆತಂಕ ಎಂದ ಪುರೋಹಿತರ ಸಲಹೆಗೆ ಒಪ್ಪಿ ಶಾಸನಹರರನ್ನಟ್ಟಿದ. ಅವರಾದರೂ ಆಡುವುದೇನು ? 'ಎನಗೊರ್ವಂಗುಪಭೋಗಮಲ್ತು ವಸುಧಾ ಸಾಮ್ರಾಜ್ಯಮೋರಂತೆನಿ | ಮ್ಮನಿಬರ್ಗಂ ಪಿರಿಯಣ್ಣನೇಂ ಜನಕನೇನೆಂಬೊಂದು ಕೊಂಡಾಟದಿಂ | ವಿನಯಂ ಸಲ್ವುದು ತಾಮುಮಾಮುಮೊಡನಿರ್ಪಂ ಬರ್ಪುದೆಂ

ಬೀಶಾ । ಸನಮಂ ನೆತ್ತಿಯೊಳಾಂತು ಬನ್ನಿಮೆಱಗಿಂ ಚಕ್ರೇಶ ಪಾದಾಬ್ಜದೊಳ್' (14–31) ಒಡೆಯನ ಅಪ್ಪಣೆಯನ್ನು ಶಿರಸಾವಹಿಸಿ ಬಂದು ನಮಸ್ಕಾರ ಮಾಡಬೇಕಂತೆ! ಇದಕ್ಕೆ ಅವರ ಉತ್ತರ–

> ಪಿರಿಯಣ್ಣಂ ಗುರು ತಂದೆಯೆಂದೆಱಗುವಂ ಮುನ್ನೆಲ್ಲಮಿಂತೀಗಳಾ ।
> ಆರಸಂಬೊಂದು ವಿಭೇದ ಮಾದೊಡೆಱಕಂ ಚೀ ಕಷ್ಟಮುತ್ತೆ ವಸುಂ–
> ಧರೆಗಯ್ಯಂ ದಯೆಗೆಯ್ಯ ಮುನ್ ಪಡೆದುದರ್ಕಿಂತೀತನೊಳ್ ಕೊಟ್ಟ ಕಿಂ
> ಕರಭಾವಂ ನಮಗಕ್ಕಿಕೊಟ್ಟು ಮುದಗೂಯಿಣ್ಬಂದಮುಂ ಪೋಲದೇ ॥ (14–32)

ಹೀಗೆಂದು ನಿರ್ಧರಿಸಿದ ಅಳಿಕಮನರಾದ ನೂರು ಮಂದಿ ಸೋದರರೂ ವೈರಾಗ್ಯದಿಂದ ತಂದೆಯಲ್ಲಿಗೆ ಹೋಗಿ ತಪೋನಿರತರಾದರು. ಕೆಚ್ಚೆದೆಯ ಕಲಿ ಬಾಹುಬಲಿಯೊಂದಿಗೆ ಯುದ್ಧವೇ ಕೈಗಟ್ಟಿತು. ಎರಡೂ ಪಕ್ಷಗಳ ಮಂತ್ರಿಮುಖ್ಯರ ವಿವೇಚನೆಯ ಫಲವಾಗಿ ಧರ್ಮಯುದ್ಧವೇ ನಿಶ್ಚಯವಾಗಿ ಅದರಂತೆ ಇಬ್ಬರೂ 'ನೀಲ ನಿಷಧ ಗಿರಿಗಳೊಂದೊಂದಱೊಳ್ ಬಂದು ಪೂರ್ಣರ್ಮ ನಿಲ್ವಂತೆ ನಿಂದು' ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧಗಳನ್ನೆಸಗಿದರು. ಪರಿಣಾಮ! ಮೂರರಲ್ಲೂ ಬಾಹುಬಲಿಗೇ ವಿಜಯ; ಭರತನಿಗೆ ಸೋಲು! ಮಲ್ಲಯುದ್ಧದ ಕಡೆಗೆ 'ಕನಕಾಚಳಮಂ ಪೊಕ್ಕುದು ಘನಮರಕತ ಶೈಲಂ' ಎಂಬಂತೆ ಅಣ್ಣನನ್ನು ಮೇಲೆತ್ತಿ ಹೊತ್ತಿದ್ದು ವಿಜಯೋತ್ಸಾಹದ ಉತ್ಕರ್ಷನಲ್ಲಿಯೂ,

> ಭರತಾವನೀಶ್ವರಂ ಗುರು । ಪಿರಿಯಣ್ಣಂ ಚಕ್ರವರ್ತಿ ಮಹಿಮಾಕರನೀ
> ದೊರೆಯನುಮಳವಱಯೆ ವಸುಂ । ಧರೆಯೊಳ್ ತಂದಿಕ್ಕ ಭಂಗಮುಂ ಮಾಡುವೆನೇ (14–117)

ಎಂದು ವಿವೇಚನಾರಹಿತನಾಗದೆ 'ಒಯ್ಯನಿೞಪೆ ನೆಲದೊಳ್' ದೇವ ದುಂದುಭಿ ಆಯಿತು. ಸೋಲನ್ನಪ್ಪಿದ ಭರತ ತನ್ನ ಸೋಲನ್ನೊಪ್ಪದೆ 'ಮುನಿಸಿನ ದಳ್ಳುರಿಗಳನುಗುಳುತ್ತುಂ' ಚಕ್ರರತ್ನಕ್ಕೆ ಅಪ್ಪಣೆಮಾಡಿದ್ದಾನೆ. ಆದರೆ ಬಾಹುಬಲಿಯ ದೈಹಿಕ–ನೈತಿಕ ಬಲಗಳೆದುರು ಅದು ಏನೂ ಮಾಡಲಾರದಾಯಿತು, ಪ್ರದಕ್ಷಿಣೆಮಾಡಿ ಬಂದು ಬಲಭಾಗದಲ್ಲಿ ನಿಂತಿತು! ಈ ದುರ್ಭರ ಪ್ರಸಂಗದಲ್ಲಿ ಒಮ್ಮೆ ವಿವೇಚನೆಗೆ ಪಕ್ಕಾಗಿದ್ದ ಬಾಹುಬಲಿ ವಿರಾಗಕ್ಕೆ ಪಕ್ಕಾಗುತ್ತಾನೆ; ಗೆದ್ದು ಸೋಲುತ್ತಾನೆ. ಅಣ್ಣನ ಅಕೃತ್ಯವನ್ನು ಕಂಡು ಆಗ್ರಹವೆ? ಇಲ್ಲ, ಚಂಚಲ ರಾಜ್ಯಲಕ್ಷ್ಮಿಯನ್ನು ಕಂಡು ತಿರಸ್ಕಾರ—

> ಸೋದರರೊಳ್ ಸೋದರರಂ । ಕಾದಿಸುವುದು ಸುತನ ತಂದೆಯೊಳ್ ಬಿಡದು-
> ತ್ಪಾದಿಸುವುದು ಕೋಪಮುನಳ । ವೀ ದೊರೆತೆನೆ ತೊಡರ್ವುದೆಂತು ರಾಜ್ಯಶ್ರೀಯೊಳ್ (14–122)

ಮಾತ್ರವಲ್ಲ,—'ಧರ್ಮದ್ರುಮಚ್ಛೇದ ಪರಶುಧಾರೆ, ವಿಷಯವಿಷ ದ್ರುಮಕಂದಳಿ, ದುರ್ಯಶಃ ಪಾಂಶು ಪ್ರಸರ ಮಹಾವಾತ್ಯೆ'—(14–122ವ) ಒಡಹುಟ್ಟಿದವರು, ತಂದೆಮಕ್ಕಳು ಪರಸ್ಪರ ಹೋರಾಡುವಂತೆ ಮಾಡುತ್ತದೆ; ಧರ್ಮವೃಕ್ಷವನ್ನು ಕತ್ತರಿಸುವ ಆಯುಧದ ಅಲಗು, ವಿಷಯೋಪಭೋಗಗಳೆಂಬ ವಿಷವೃಕ್ಷಗಳ ತೋಪು, ಅಪಯಶಸ್ಸನ್ನು ಹರಡುವ ಬಿರುಗಾಳಿ—ಇಂತಹ ರಾಜ್ಯಲಕ್ಷ್ಮಿಯೊಂದಿಗೆ ಕೂಡಿ ಬಾಳುವುದೇ? ಅಣ್ಣನಂತೆ ನಾನೆಂದಿಗೂ 'ಅಳಿಪಂ ಬಗೆಯೆಂ' ಎಂಬ ಅಚಲ ಸಿದ್ಧಾಂತ!

> ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮಿಾ ಭಟ ಖಡ್ಗ ಮಂಡಲೋ
> ತ್ಪಲವನ ವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ ಭೂ
> ತಲಮುಮನಯ್ಯನಿತ್ತುದುಮನಾಂ ನಿನಗಿತ್ತೆನಿದೇವುದಣ್ಣನೀ
> ನೊಲಿದ ಲತಾಂಗಿಗಂ ಧರೆಗಮಾಟಿಸದಂದು ನೆಗೞ್ತೆಮಾಸದೇ' (14–130)

'ಅಣ್ಣ, ಈ ನಿತ್ಯ ಚಂಚಲೆ, ಮನೋಹರಿ ರಾಜ್ಯಲಕ್ಷ್ಮಿ ನಿನ್ನ ವಕ್ಷಸ್ಥಲಾಭೋಗದಲ್ಲೇ ನೆಲಸಲಿ, ವಿಹರಿಸಲಿ' ತಂದೆ ನನಗೆ ಕೊಟ್ಟ ಭೂಮಂಡಲವನ್ನು 'ಇದೊ ಎದೆಯೊಪ್ಪಿ ನಿನಗರ್ಪಿಸಿದ್ದೇನೆ' ನೀನು ಒಲಿದ ಹೆಣ್ಣಿಗೂ

ಭೂಕಾಂತೆಗೂ ನಾನು ಆಳಿಸಿದರೆ ಬಾಹುಬಲಿಯ ಹೆಸರು ಮಾಸುವುದಿಲ್ಲವೆ ?' ಹೀಗೆ ಎಲ್ಲಿ ನೆಗಚ್ಚೆ ಮಾಸಿತೋ ಎಂಬ ಭಯ. 'ವಜ್ರಮನನಪ್ಪ' ಭರತನನ್ನು ಕುರಿತು 'ಅವಧರಿಸದೆ' ತಾನೆಸಗಿದ ಅವಿನಯಕ್ಕೆ ಪಶ್ಚಾತ್ತಾಪ—

ಅವಧರಿಸದೆ ನಿನ್ನೊಳ್ ಪರಿ । ದ ವಿನಯಮುಮಂ ನೆಗಟ್ದ ದೋಸಮುಮಂ ತಪದೊಳ್ ನೀ
ಗುವೆನಸದಾಗ್ರಹಮಂ ಬಿಸು । ಡುಪುದೊರ್ಮೆಗೆ ಮಱವುದೆನ್ನ ದುರ್ವಿಳಸನಮಂ (14–131)

ಅಹಂಕಾರವೇ ಮೂರ್ತಿವೆತ್ತ ಭರತೇಶ ಆ 'ಅಹಂಕಾರ ನಿರಸನಕ್ಕೆ' ಕಾರಣವಾದ ಒಂದಲ್ಲ, ಹಲವು ಪ್ರಸಂಗಗಳು 'ಮುಟ್ಟಿವಂದ'ರೂ ವಿಚಲಿತನಾಗಲಿಲ್ಲ. ಅಹಂಕಾರ–ಗರ್ವರಸ ಮುಳಿಸಾಗಿ, ಮುಳಿನು ಕ್ರೋಧವಾಗಿ, ಕ್ರೋಧ–ಕ್ರೋಧೋತ್ಕರ್ಷವಾಗಿ, ಕ್ರೋಧರಸವಾಗಿ 'ಕೊಳಗೊಂಡು' ನಿಂತಿದೆ. ಕವಿ ಮೊಟ್ಟ ಮೊದಲ ಪ್ರಸಂಗದಲ್ಲಿಯೇ ಹೇಳುತ್ತಾನೆ–'ಅಂತವನೊಯ್ಯನೆ ನೋಡಿ ನೋಡಿ ಸೋರ್ದುದು ಕೊಳಗೊಂಡ ಗರ್ವರಸಂ ಆ ಭರತೇಶ್ವರ ಚಕ್ರವರ್ತಿಯಾ'—ಎಂದು. ಇಲ್ಲ, ಖಂಡಿತವಾಗಿ ಇಲ್ಲ ; ಗರ್ವರಸ ಸೋರಿ ಹೋಗಲಿಲ್ಲ. ಅಲ್ಲಿಯೇ ಅದು ಸೋರಿ ಹೋಗಿದ್ದರೆ ಈ ಕ್ರೋಧರಸ 'ಕೊಳಗೊಂಡು' ನಿಲ್ಲುವ ಪರಿಯಾದರೂ ಒದಗುತ್ತಿತ್ತೆ ? ಉತ್ತುಂಗ ಶಿಖರದ ತುತ್ತ ತುದಿಯನ್ನು ಈಗ ಏರಿದ್ದಾಗಿದೆ ; ಮುಂದೇನು ? 'ಮನದೊಳ್ ಮುನ್ ಪುದಿದಿರ್ದ ಕೋಪಮುಸಿತುಂ ತೂಳ್ದಾಗಳೆತ್ತೆತ್ತಗೆಯ್ದೆ ನಿದಂ ತಮ್ಮನೊಳ್ ಎಂಬೊಂದುಪಶಮಂ ಕೈಗಣ್ಮೆ' ದಾಗ_ಮನದಲ್ಲಿ ಹುದುಗಿ ನಿಂತಿದ್ದ ಕೋಪವನ್ನು ಹೊರಹರಿಸಿದಾಗ ತಮ್ಮನಲ್ಲಿ ನಾನೇನೆಸಗಿದೆ ಎಂದು 'ಉಪಶಮವು ಹೆಚ್ಚು ಹೆಚ್ಚಾದಾಗ ಆ 'ಕೊಳಗೊಂಡ ಗರ್ವರಸ'–ಅಲ್ಲ ಕ್ರೋಧರಸ ನಿಜವಾಗಿ ಸೋರತೊಡಗುತ್ತದೆ ; "ನೀನೊರ್ಬನಯ್ ಮನುವಂಶಕ್ಕೆ ಲಲಾಮನಪ್ಪನುಜನಯ್ ಬೇಡಮ್ಮ ನೀನುಂ ತಪೋವನಮುಂ ಸಾರ್ವುದುಂ ಆನ್ ಅದಾರ್ಗೆ ಮೆಱೆವೆಂ ಮತ್ಪ್ರಾಜ್ಯ ಸಾಮ್ರಾಜ್ಯಮಂ" ಎಂದು ಬೇಡುವಂತಾಗುತ್ತದೆ. ಆದರೂ 'ಪರಿಣಾಮರಮಣೀಯವಾಗಿದೆ.'

'ನಿಜಪಾದಾಂಬುರುಹಕ್ಕೆ ಪಾದ್ಯವಿಧಿಯಂ ನೇತ್ರಾಂಬುವಿಂ ಮಾಡುವ
ಗ್ರಜನತ್ಯುನ್ನತಮಪ್ಪ ಮಸ್ತಕದ ಮೇಗೋರಂತೆ ಪಾಯ್ವಾತ್ಮಬಾ ।
ಷ್ಪಜಳೌಘಂಗಳಿಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ವಂ
ಶಜ ರಾಜ್ಯಾಭಿಷವೋತ್ಸವಂ ನೆಗೞ್ದದೆಂಬಾಶಂಕೆಯಂ ಮಾಡಿದಂ" (14–133)

ತಮ್ಮನನ್ನು ಸಮಾಧಾನ ಪಡಿಸುತ್ತಿರುವ ಅಣ್ಣ ಸನಿಹದಲ್ಲೇ ನಿಂತು ತನ್ನ ಕಣ್ಣೀರಿನಿಂದ ಅವನ ಪಾದ ಕಮಲಗಳಿಗೆ ಪಾದ್ಯವಿಧಿಯನ್ನು ಮಾಡುತ್ತಿರುವನೋ ಎಂಬತಿದ್ದರೆ,ಅಣ್ಣನ ಮಸ್ತಕದ ಮೇಲೆ ತಮ್ಮನ ಕಣ್ಣೀರು ಬೀಳುತ್ತಾ ತಾನು ಗೆದ್ದಿದ್ದ ರಾಜ್ಯವನ್ನು ಆತನಿಗೆ ಧಾರೆಯೆರೆದು ಕೊಡುತ್ತಿರುವನೋ ಎಂಬಂತಿದೆ! ಇಲ್ಲಿಗೆ ನಿಜವಾಗಿ ಪೂರ್ಣಗೊಂಡಿದೆ ಭರತ ಚಕ್ರೇಶ್ವರನ "ಅಹಂಕಾರ ನಿರಸನ". ಇದೊಂದು ಸಾರ್ವಕಾಲಿಕ ಆದರ್ಶ. ಇದೇ ಈ ಮಹಾ ಮಹಿಮರ ಜೀವನ ಇಂದಿಗೂ ಜಗತ್ತಿಗೆ ನೀಡುತ್ತಿರುವ ಸಂದೇಶ. ಇದನ್ನೇ ಮಹಾಕವಿ ಕುವೆಂಪು ಅವರ ವಾಣಿಯಲ್ಲಿ ಆಲಿಸಿ.'ರಾಜಿಕ ಆರ್ಥಿಕ ಸಾಮಾಜಿಕ ಕ್ಷೇತ್ರಗಳಲ್ಲಿ ಕಕ್ಷಿ ಕಕ್ಷಿಗಳ, ಪಕ್ಷ ಪಕ್ಷಗಳ ಖಂಡನ ಮಂಡನಗಳಿಂದಲೂ, ಆಘಾತ, ಪ್ರತ್ಯಾಘಾತಗಳಿಂದಲೂ, ಕ್ಷಣ ಕ್ಷಣಕ್ಕೂ ಹುಟ್ಟುತ್ತಿರುವ ಸಹಸ್ರ ಸಹಸ್ರ ವಿಷಯ ವಿರೋಧಗಳಿಗೆ ಏಕೈಕ ಬೀಜಮದ್ದು ತ್ಯಾಗ. ವೀರನಾದ ಬಾಹುಬಲಿಯ ಚರಿತ್ರಪಠನ, ನಮ್ಮ ನಮ್ಮ ಹಮ್ಮು ಬಿಮ್ಮಗಳನ್ನು ಮುರಿಯುವುದಕ್ಕೂ, ನಮ್ಮ ನಮ್ಮ ಸ್ವಾರ್ಥ, ಅಸೂಯೆ, ದರ್ಪ ಕೋಪಾದಿಗಳನ್ನು ನಿಗ್ರಹಿಸುವುದಕ್ಕೂ, ನಮಗೆ ಬಾಹುಬಲಿಯಂತಹ ವ್ಯಕ್ತಿ ಆರಾಧ್ಯ ದೈವವಾಗಬೇಕು. ಬಾಹುಬಲಿಯ ಕೃಪಾ ಹಸ್ತಾವಲಂಬಿಯಾದಲ್ಲದೆ ರಾಜಿಕ ಸಾಮಾಜಿಕ ಕ್ಷೇತ್ರಗಳ ಹೊಲಸಿನಿಂದ ನಾವು ಮೇಲೇಳಲಾರೆವಲ್ಲವೆ ?

ಸಾ. ಶಿ. ಮರುಳಯ್ಯ

ಗಾಥಾಸಪ್ತಶತಿಯಲ್ಲಿ ಕನ್ನಡದ ಮಾತುಗಳು

ಕ್ರಿ. ಶ. 1ನೆಯ ಶತಮಾನದಲ್ಲಿ ಜನ್ಮತಾಳಿದ ಪ್ರಾಕೃತ ಗಾಥಾಸಪ್ತಶತಿಯಲ್ಲಿ ಕನ್ನಡದ ಮಾತುಗಳಿವೆ ಎಂದು ಮೊಟ್ಟಮೊದಲು ಘೋಷಿಸಿ ಕನ್ನಡಿಗರ ಕುತೂಹಲವನ್ನು ಕೆರಳಿಸಿದವರು ರಾಷ್ಟ್ರಕವಿ ಗೋವಿಂದಪೈ.[1] ಶ್ರೀಯುತರ ಹೇಳಿಕೆ ಸಾಹಿತ್ಯ ರಚಕರಿಗೆ ಹೊಸ ಹುರುಪು ತುಂಬಿದರೂ, ಸಂಶೋಧಕರಿಗೆ ಸಮಾಧಾನ ತರಲಿಲ್ಲ. ಕಾರಣ ಅವರ ಹೇಳಿಕೆ ಸತ್ಯಕ್ಕೆ ದೂರವಾದದ್ದು. ಅದು ತಮ್ಮ ಆತುರದ ನಿರ್ಧಾರವೆಂದು ಅರಿತಿದ್ದರಿಂದಲೋ ಏನೋ ಶ್ರೀಯುತರು ಉದಯಭಾರತ ಪತ್ರಿಕೆಯಲ್ಲಿ ಪ್ರಕಟವಾದ ತಮ್ಮ ಸುವಿಸ್ತಾರವಾದ ಲೇಖನದಿಂದ 'ಗಾಥಾಸಪ್ತಶತಿ'—ಎಂಬ ಭಾಗವನ್ನು ತೆಗೆದುಹಾಕಿ ಉಳಿದ ಭಾಗವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದರೆಂದು ತೋರುತ್ತದೆ.[2] ತಮ್ಮ ವಾದದಲ್ಲಿ ತಿರುಳಿದ್ದಿದ್ದರೆ ಕನ್ನಡದ ದುರ್ವಾಸ ಗೋವಿಂದಪೈ ಸದ್ದುಗದ್ದಲವಿಲ್ಲದೆ ತಮ್ಮ ಹೇಳಿಕೆಯನ್ನು ವಾಪಸ್ ತೆಗೆದುಕೊಳ್ಳುತ್ತಿರಲಿಲ್ಲ. ಇರಲಿ ಅವರ ಮೊದಲ ಘೋಷಣೆ ಹೀಗಿದೆ—

'ಈ ಪ್ರಾಕೃತ ಕಾವ್ಯದಿಂದ ನಮ್ಮ ಲೇಖನಕ್ಕೆ ಉಪಯುಕ್ತವಾಗಿರುವ ವಿಷಯವೆಂದರೆ, ಇದರಲ್ಲಿ ಕೆಲವು ಅಚ್ಚಗನ್ನಡದ ಶಬ್ದಗಳಿವೆ ಎಂಬುದೇ.

ಉದಾ : 1. ಪೊಟ್ಟಪಡಿ ಏಹಿದುಖ್ಖಂ—I(-83)
2. ತುಪ್ಪಾಣಣಾ—(III-89)
3. ಪೊಟ್ಟಂ ಚ ಪಿಟ್ಟೇ ಇ—(II-71)
4. ಜೆತ್ತಿ ಅ ಮೆತ್ತಂ ತೀರ ಇ—(I-71)
5. ಅಣ್ಣಹನ ತೀರ ಇ—(IV-49)

(ಇವರ ಅಡಿ ಟಿಪ್ಪಣಿಯಲ್ಲಿ ಪೊಟ್ಟ (ಉದರ) > ಪೊಟ್ಟೆ, ಹೊಟ್ಟೆ.

ತುಪ್ಪ = ಘೃತ

'ಪಿಟ್ಟೇ ಇ' > ಪೆಟ್ಟು (ಹೊಡೆ, ಬಡೆ)-ಎಂಬ ಧಾತುವಿನಿಂದ ಮಾಡಿದ ಕ್ರಿಯಾಪದ

'ತೀರ್ ಇ' = (ತೀರ್) (ತೀರು) to be able.

ಅಚ್ಚಗನ್ನಡ ಧಾತುವಿನಿಂದಾದ ಕ್ರಿಯಾರೂಪವೇ ಎಂದಿದ್ದಾರೆ)

---

1 ಉದಯಭಾರತ, ಕನ್ನಡ ಸಾಹಿತ್ಯದ ಪ್ರಾಚೀನತೆ (ವಿಭವ-ಶ್ರಾವಣ) ಒಗಸ್ಟ್ (1928) ಸಂ. 2, ಸಂಚಿಕೆ 5.

2 ಗೋವಿಂದಪೈ, ಮೂರು ಉಪನ್ಯಾಸಗಳು : (ಕನ್ನಡ ಸಾಹಿತ್ಯದ ಪ್ರಾಚೀನತೆ-ಲೇಖನ ನೋಡಿ).

ಮುಂದುವರಿದು—

'ಕನ್ನಡ ಕಾವ್ಯಗಳಲ್ಲಿ ಆಯಾ ಸಂದರ್ಭಾನುಸಾರವಾಗಿ ವಿಭಕ್ತಿ, ವಚನ ಮೊದಲಾದ ಪ್ರತ್ಯಯಗಳನ್ನು ಹೊಂದಿರುವ ನಾಮರೂಪಗಳಿಂದ, ಆಯಾ ರೂಪದ ಪ್ರಾತಿಪದಿಕ (Base) ರೂಪವನ್ನು ಕಂಡುಹಿಡಿಯುವುದು ಅಷ್ಟು ದುಸ್ಸಾಧ್ಯವಲ್ಲವಾದರೂ, ಹಾಗೆಯೇ ಕಾಲ ವಚನ ಮೊದಲಾದವುಗಳ ಪ್ರತ್ಯಯಗಳನ್ನು ಹೊಂದಿ ಕಾವ್ಯಗಳಲ್ಲಿ ಪ್ರಯೋಗಿಸಲ್ಪಟ್ಟಿರುವ ಕ್ರಿಯಾರೂಪಗಳಿಂದ ಆಯಾ ಕ್ರಿಯಾರೂಪದ ಮೂಲಧಾತು ರೂಪವನ್ನು ಕಂಡುಹಿಡಿಯುವುದೇನೂ ಸುಕರವಲ್ಲ. ಅದನ್ನು ವ್ಯಾಕರಣಗಳಿಂದ, ಅಲ್ಲವೆ ಬಲ್ಲವರಿಂದ ಅಲ್ಲದೆ ಅನ್ಯಥಾ ತಿಳಿದುಕೊಳ್ಳ ಶಕ್ಯವೂ ಅಲ್ಲ. ಆದುದರಿಂದ ಈ 'ಗಾಥಾಸಪ್ತಶತಿ'ಯಲ್ಲಿ ಅಚ್ಚಗನ್ನಡ ಧಾತುಗಳಿಂದ ಆಗಿಸಿಕೊಂಡ ಪ್ರಾಕೃತ ಕ್ರಿಯಾರೂಪಗಳು ಇರುವುದಾದರೆ, ಆ ಕಾಲಕ್ಕೆ ಹಿಂದೆ ಇದ್ದಿರಬೇಕಾದ ಕನ್ನಡನುಡಿಯ ವ್ಯಾಕರಣ ಗ್ರಂಥಗಳಿಂದ ಆಯಾ ಧಾತುವಿನ ಸರಿಯಾದ ಮೂಲರೂಪವನ್ನು ಕಂಡುಕೊಳ್ಳದ ಮುಂಚೆ ಅವುಗಳಿಂದ ಪ್ರಾಕೃತ ಕ್ರಿಯಾರೂಪಗಳು ನಿರ್ಮಿಸಲ್ಪಡಲಾರವು ಎಂದೇ ಅನುಮಾನಿಸಬೇಕಾಗುತ್ತದೆ. ಏಕೆಂದರೆ ಈ 'ಗಾಥಾಸಪ್ತಶತಿ' ಉಚ್ಚವಾದೊಂದು ಕಾವ್ಯವೆಂಬುದೂ ಸರಿಯೇ, ಉಚ್ಚಕವಿಗಳು ಯಥಾಯೋಗ್ಯವಾದ ಆಧಾರ ವಿನಾ ಯಾವುದೊಂದು ಬಗೆಯ ವಿಶೇಷ ಪ್ರಯೋಗವನ್ನು ಮಾಡರೆಂಬುದೂ ಸರಿಯೇ, ಮತ್ತು ಅಂತಹ ಕವಿಗಳಿಗೆ ತಂತಮ್ಮ ಕಾವ್ಯ ರಚನೆಯಲ್ಲಿ ತತ್ತದ್ವಿಷಯಕವಾದ ಅಧಿಕಾರ ಗ್ರಂಥಗಳೇ ಅನನ್ಯವಾದ ಆಧಾರವೆಂಬುದೂ ಸರಿಯೇ.

ಆದುದರಿಂದ ಈ 'ಗಾಥಾಸಪ್ತಶತಿ' ರಚಿಸಲ್ಪಟ್ಟ ಕ್ರಿ. ಶ. 1ನೆಯ, 3ನೆಯ ಶತಕಗಳ ಒಂದೆರಡು ಶತಮಾನಗಳ ಮುಂಚಿನಿಂದಲೆ ಅಂದರೆ ಕ್ರಿಸ್ತಶಕವು ಉಪಕ್ರಮಿಸುವುದಕ್ಕೆ ಮುಂಚೆಯೇ, ಕನ್ನಡದಲ್ಲಿ ಕಾವ್ಯ ಸಾಹಿತ್ಯವು ಇದ್ದಿರಬೇಕೆಂದು ನಿರ್ಧರಿಸಬಹುದು.[3]

—ಎಂದು ಸ್ಪಷ್ಟಪಡಿಸಿದ್ದಾರೆ.

ಈಗ ಪೈ ಅವರ ವಿವರವನ್ನು ಕೊಂಚ ಚಿಕಿತ್ಸೆಗೆ ಒಳಗುಮಾಡಿ ನೋಡೋಣ :

ನಾಮಪದಗಳು : ಮೊದಲನೆಯದಾಗಿ, ಪ್ರಾಕೃತ ಗಾಥಾಸಪ್ತಶತಿಯಲ್ಲಿ ಅಡಗಿರುವ ಪೊಟ್ಟ, ತುಪ್ಪ—ಎಂಬ ನಾಮಪದಗಳು. ಇವು ಪ್ರಾಯಶಃ, ಸಂಸ್ಕೃತ ಮತ್ತು ಪ್ರಾಕೃತ ಮೂಲಗಳಿಂದ ಬಂದವುಗಳೇ ಹೊರತು ಕನ್ನಡದ ಕೋಶದವುಗಳಲ್ಲ ಅನ್ನಿಸುತ್ತದೆ. ಪೊಟ್ಟ ಶಬ್ದವು ಪೊಟ್ಟೆ, ಹೊಟ್ಟೆ ಎಂಬ ಶಬ್ದಗಳೊಡನೆ ಸಾಮ್ಯತೆ ತೋರಿದರೂ ಅದು ಸಂಸ್ಕೃತದ ಪೃಷ್ಠದ ತದ್ಭವ ಶಬ್ದ ಆಗಿರಬಹುದು. ಪೃಷ್ಠ ಶಬ್ದಕ್ಕೆ ಸಂಸ್ಕೃತದಲ್ಲಿ ಹಿಂಭಾಗ ಎಂದಷ್ಟೇ ಅರ್ಥವಲ್ಲ, ಅದು ಮುಂಭಾಗವೂ ಆಗಬಹುದು. ಅದಕ್ಕೆ ಹಿಂದು ಅಥವಾ ಮುಂದು ಎಂಬ ಒಂದೇ ನಿರ್ಧಾರಾರ್ಥವಲ್ಲ. ಹೀಗೆ ಪರಸ್ಪರ ವಿರುದ್ಧಾರ್ಥ ಕೊಡುವ ಅನೇಕ ಪದಗಳು ಸಂಸ್ಕೃತ ಸಾಹಿತ್ಯಕೋಶದಲ್ಲಿವೆ. ಉದಾಹರಣೆ–ವೃದ್ಧಿ—ಎಂಬುದಕ್ಕೆ ಬೆಳವಣಿಗೆ ಎಂಬುದೊಂದೇ ಅರ್ಥವಲ್ಲ; ತದ್ವಿರುದ್ಧವಾದ ಕೆಳಗಣಿಗೆ—ಎಂಬ ಅರ್ಥವೂ ಇದೆ. ವಾಲ್ಮೀಕಿ ರಾಮಾಯಣದಲ್ಲಿ 'ಕೇಶವರ್ಧಕ' ಎಂಬ ಶಬ್ದವು 'ಕೂದಲು ತೆಗೆಯುವುದು' ಎಂಬರ್ಥದಲ್ಲಿ ಬಳಕೆಯಾಗಿದೆ. ಅದು ವಾಸ್ತವವಾಗಿ 'ಕೇಶಖಂಡನ' ಎಂದಿದ್ದಿರಬೇಕಾಗಿತ್ತು. ಆದರೆ ಅದಕ್ಕೆ ವಿರುದ್ಧವಾದ ಅರ್ಥದಲ್ಲಿ ಆ ಪದ ಬಳಕೆಯಾಗಿದೆ. ಅದೇ ರೀತಿ ಅಷ್ಟಾಕ್ಷರೀ ಮಂತ್ರದ ಧ್ಯಾನ ಶ್ಲೋಕದಲ್ಲಿ—

> ಸವ್ಯಂ ಪಾದಂ ಪ್ರಸಾರ್ಯಾಶ್ರಿತದುರಿತಹರಂ
> ದಕ್ಷಿಣಂ ಕುಂಚಯಿತ್ವಾ ॥

ಅಂದರೆ ಎಡಗಾಲನ್ನು ಮುಂದೆ ಚಾಚಿ, ಪಾಪ ನಿವಾರಕವಾದ ಬಲಗಾಲನ್ನು ಮಡಿಸಿಕೊಂಡು—ಎಂದು

---

[3] ಗೋವಿಂದಪೈ, ಕನ್ನಡ ಸಾಹಿತ್ಯದ ಪ್ರಾಚೀನತೆ, ಜಯಭಾರತ (ವಿಭವ–ಶ್ರಾವಣ) ಓಗಸ್ಟ್ (1928) ಸಂಚಿಕೆ 2, ಸಂಪುಟ 5, ಪುಟ 116–117

ನಿರ್ದೇಶಿಸುವಲ್ಲಿ—'ಸವ್ಯ' ಎಂಬ ಪದವು ಎಡ ಎಂಬರ್ಥದಲ್ಲಿ ಪ್ರಯೋಗವಾಗಿದೆ. ರೂಢಿಯಲ್ಲಿ 'ಸವ್ಯ' ಎಂದರೆ ಬಲ. ಆದರೆ ಪ್ರಕೃತ ಮಂತ್ರದಲ್ಲಿ 'ಎಡ' ಎಂಬೇ ಅರ್ಥ ನೀಡುತ್ತದೆ. ಹೀಗೆ ಹಲವು ಪದಗಳು ವಿರುದ್ಧಾರ್ಥ ನೀಡುವುದೂ ಉಂಟು. ಇಂಥವುಗಳಲ್ಲಿ ಪೃಷ್ಠವು ಒಂದು. ಪೃಷ್ಠದ ಅರ್ಥ ಶರೀರದ ಹಿಂಭಾಗವೂ ಆಗಬಹುದು, ಮುಂಭಾಗವೂ ಆಗಬಹುದು. ಅಲ್ಲದೆ ಹರಿಯುವ ನದಿಗೆ ಎಡ ಯಾವುದು ? ಬಲ ಯಾವುದು ? ಹೇಳುವುದು ಕಷ್ಟ. ನಾವು ನಿಂತ ನೆಲೆಯ ಆಧಾರದ ಮೇಲೆ, ಇಲ್ಲವೇ ಗೊತ್ತುಪಡಿಸಿದ ಒಂದು ವಸ್ತುವಿನ ಆಧಾರದ ಮೇಲೆ ಸವ್ಯಾಪಸವ್ಯಗಳನ್ನು ನಿರ್ಧರಿಸಬೇಕಾಗುತ್ತದೆ. ಮನುಷ್ಯ ಅಥವಾ ಪ್ರಾಣಿಯ ಹಿಂದು ಮುಂದು ಎಂಬುದೂ ಅಷ್ಟೇ. ಆದ್ದರಿಂದ ಪೃಷ್ಠದ ಅರ್ಥ ಎರಡೂ ಆಗುವುದರಿಂದ ಸಂಸ್ಕೃತದ ಪೃಷ್ಠ ಪ್ರಾಕೃತದಲ್ಲಿ ಪೊಟ್ಟ ಎಂದಾಗಿರಬಹುದು. ಪ್ರಾರಂಭದ 'ಪೃ' ಎಂಬ ಪರುಷವಾದ ಸಂಯುಕ್ತಾಕ್ಷರ 'ಪೊ' ಎಂಬ ಸರಳಾಕ್ಷರವಾಗಿದೆ. 'ಷ್ಠ' ಎಂಬ ಮಹಾಪ್ರಾಣಪೂರ್ಣ ವಿಜಾತೀಯ ದ್ವಿತ್ವಾಕ್ಷರ 'ಟ್ಟ' ಎಂಬ ಅಲ್ಪಪ್ರಾಣ ಸಜಾತೀಯವಾಗಿದೆ. ಆದ್ದರಿಂದ ಪ್ರಾಕೃತ ಗಾಥಾಸಪ್ತಶತಿಯಲ್ಲಿ ಬರುವ 'ಪೊಟ್ಟ'ದ ಮೂಲ ಸಂಸ್ಕೃತದ 'ಪೃಷ್ಠ'ದಲ್ಲಿ ಅಡಗಿದೆ; ಕನ್ನಡದ ಪೊಟ್ಟೆ ಅಥವಾ ಹೊಟ್ಟೆಯಲಲ್ಲ ಎಂದು ಹೇಳಬಹುದು.

'ತುಪ್ಪ' ಮತ್ತೊಂದು ನಾಮಪದ. ಇದು ಪ್ರಾಕೃತವೇ ಅಥವಾ ಕನ್ನಡವೇ ಹೇಳಬರುವುದಿಲ್ಲ. ಮಹಾರಾಷ್ಟ್ರದಲ್ಲಿ ತುಪ್ಪಕ್ಕೆ 'ತೂಪ್' ಎನ್ನುತ್ತಾರೆ. ಅಂದರೆ ಅದು ಮಹಾರಾಷ್ಟ್ರಿಯೆ ? ಹೇಳಬರುವುದಿಲ್ಲ. ಹೇಳಿದರೂ ಮಹಾರಾಷ್ಟ್ರ ಎಂದರೆ ಯಾವುದು ? ಎಂಬ ಪ್ರಶ್ನೆ ಏಳುತ್ತದೆ. ದಂಡಿ ಒಂದೆಡೆಯಲ್ಲಿ

ಮಹಾರಾಷ್ಟ್ರೋದ್ಭವಾಂ ಭಾಷಾಂ
ಪ್ರಕೃತಂ ಪ್ರಾಕೃತಂ ವಿದುಃ ॥[4]

ಎಂದಿದ್ದಾನೆ. ಆದರೆ ಅಂದಿನ ಮಹಾರಾಷ್ಟ್ರ ಇಂದಿನ ಮರಾಠಿ ಭಾಷೆಯನ್ನಾಡುವ ಜನರಿರುವ ಭಾಷಾಪ್ರಾಂತವಲ್ಲ. ಅಂದು ಮಹಾರಾಷ್ಟ್ರವೇ ಇರಲಿಲ್ಲ. ಕರ್ನಾಟಕವನ್ನೊಳಗೊಂಡ ಅನೇಕ ರಾಷ್ಟ್ರಗಳ ಒಂದು ಬೃಹತ್ ಭಾಗಕ್ಕೆ ಮಹಾರಾಷ್ಟ್ರವೆಂದು ಅಂದು ಕರೆಯುತ್ತಿದ್ದರು. ಅಂದಮೇಲೆ 'ಮಹಾರಾಷ್ಟ್ರೋದ್ಭವಾಂ ಭಾಷಾಂ'—ಕನ್ನಡದ ಜೊತೆಗೂಡಿದ ಒಂದು ಪ್ರಾಕೃತ ಪ್ರಾಂತವಾಗಿದ್ದಿರಬಹುದು ಅಥವಾ ಕನ್ನಡವೇ ಆಗಿದ್ದರೂ ಆಗಿರಬಹುದು. ಆದ್ದರಿಂದ 'ತುಪ್ಪ' ಎಂಬ ಪದವು ಪ್ರಾಕೃತ ಶಬ್ದ ಇರಬಹುದು, ಇಲ್ಲವೇ ಸವಿಯನ್ನು ಚಪ್ಪರಿಸುವುದರಿಂದ ಬಂದ ದ್ರಾವಿಡದ ಭಾವಸೂಚಕ ಪದವಿದ್ದರೂ ಇರಬಹುದು. ಆದರೆ ದ್ರಾವಿಡದಲ್ಲಿ ಅದರ ರೂಪನಿಷ್ಪತ್ತಿ ಹೇಳುವುದು ಸುಲಭವಲ್ಲ. ಕನ್ನಡದಲ್ಲಿ 'ನೆಯ್' ಎಂಬ ಪದ ಇದೆ. ಇದು ಸಂಸ್ಕೃತದ ಸ್ನಿಗ್ಧ–ಸ್ನೇಹ–ನೇಹ–ನೆಯ್ ಆಗಿದೆ. ನೆಯ್ ದ್ರಾವಿಡ ಅಥವಾ ಕನ್ನಡದ ಸ್ವತಂತ್ರ ಪದವಲ್ಲ. ತುಪ್ಪ ಎಂಬುದು ದ್ರಾವಿಡವೇ ಅಲ್ಲವೇ ಅನುಮಾನ ಅಂದಮೇಲೆ ದ್ರಾವಿಡದಲ್ಲಿ ಅಥವಾ ಕನ್ನಡದಲ್ಲಿ 'ತುಪ್ಪ'ದ ಬಳಕೆ ಇರಲಿಲ್ಲವೇ ? ಇದ್ದರೆ ಅದನ್ನು ಏನೆಂದು ಸಂಬೋಧಿಸುತ್ತಿದ್ದರು ? ತುಪ್ಪ ಎಂದೇ ? ಅಥವಾ ಬೇರೆಯೇ?—ಸ್ಪಷ್ಟವಾಗಿ ಹೇಳಲು ಸಾಧ್ಯವಾಗುತ್ತಿಲ್ಲ. ಒಂದು ವೇಳೆ ತುಪ್ಪ ದ್ರಾವಿಡ ಪದವೇ ಆಗಿದ್ದರೆ ಪ್ರಾಕೃತಕ್ಕೆ ಕೊಟ್ಟ ಏಕೈಕ ಕನ್ನಡ ನಾಮಪದ ಎಂದು ಹೇಳಬಹುದು. ಬಹುಶಃ ಕನ್ನಡನಾಡಿನಲ್ಲಿ ಅಂದು ಪ್ರಚಲಿತವಿದ್ದ ಪ್ರಾಕೃತದ ಜೊತೆಯಲ್ಲಿ ಕನ್ನಡದ ಆಡುನುಡಿ ಸೇರಿಕೊಂಡಿರಬಹುದು ಅಷ್ಟೇ. ಆದರೆ ಪೈ ಅವರು ಹೇಳುವಂತೆ ಕನ್ನಡಸಾಹಿತ್ಯ ಕಾವ್ಯರೂಪದ ಸಾಹಿತ್ಯ ಇತ್ತೆಂದು ಹೇಳುವುದು ಕಷ್ಟ. ಏಕೆಂದರೆ ಆ ಕಾಲದ ಯಾವ ಕನ್ನಡಕೃತಿಯೂ ದೊರೆತಿಲ್ಲ, ಒಂದು ; ಕೃತಿ ಇತ್ತೆಂದು ಹೇಳುವ ಯಾವ ಮಾಹಿತಿಯೂ ಇಲ್ಲ ಎರಡು ; ಆ ಕಾಲದ ಎಲ್ಲ ಶಾಸನಗಳೂ ಪ್ರಾಕೃತದಲ್ಲೇ ಇವೆ, ಮೂರು; ಆದರೆ ಈ ಹೇಳಿಕೆಗೆ ಅಪವಾದ ಎನ್ನುವಂತೆ ಕದಂಬರ ಕಾಲದ ಹಲ್ಮಿಡಿಶಾಸನ ಒಂದಿದೆ ಕನ್ನಡದಲ್ಲಿ. ಅದೂ ಸಹ ಅದು ಪ್ರಚಲಿತವಿದ್ದ ಸಂಸ್ಕೃತದೊಡನೆ

---

[4] ದಂಡಿ, ಕಾವ್ಯ. ದರ್ಶ I–34

ಹೊಂದಿಕೊಳ್ಳಲು ಹೆಣಗುತ್ತಿರುವ ಕಾಲದ ಕನ್ನಡ ಶಾಸನವಾಗಿದೆ. ಅದಕ್ಕೂ ಹಿಂದಿನ ಮೌರ್ಯರ, ಶಾತವಾಹನರ ಮತ್ತು ಕದಂಬರ ಎಲ್ಲ ಶಾಸನಗಳೂ ಪ್ರಾಕೃತದಲ್ಲಿರುವುದು ಇಲ್ಲಿ ಗಮನಿಸಬೇಕಾದ ಅಂಶ. ಆ ಕಾರಣ ಕದಂಬರ ಹಾಗೂ ಶಾತವಾಹನರ ಕಾಲದ ಆಡಳಿತಭಾಷೆ ಪ್ರಾಕೃತವಾಗಿತ್ತೇ ಹೊರತು ಕನ್ನಡವಲ್ಲ. ಆದರೆ ಕದಂಬರ ಕಾಲದಲ್ಲಿ ಕನ್ನಡಕ್ಕೆ ರಾಜಮನ್ನಣೆ ದೊರೆತಂತೆ ತೋರುತ್ತದೆ. ಅದಕ್ಕೆ ಹಲ್ಮಿಡಿಶಾಸನ ಸಾಕ್ಷಿ. ಆದರೂ ಕನ್ನಡ ಅಂದು ಆಡುನುಡಿಯಾಗಿತ್ತೇ ಹೊರತು ಸಾಹಿತ್ಯಸಂಪದವುಳ್ಳ ಭಾಷೆಯಾಗಿದ್ದಿರಲಾರದು. ಅದು ಸಾಹಿತ್ಯಸಿಂಹಾಸನವನ್ನೇರಿದ್ದು ಬಾದಾಮಿಯ ಚಾಲುಕ್ಯ ಚಕ್ರವರ್ತಿಗಳ ಕಾಲದಲ್ಲಿ. ಆದ್ದರಿಂದ ಶ್ರೀ ಪೈಯವರು ಹೇಳುವಂತೆ ಕನ್ನಡದ ಪ್ರಾಚೀನತೆ ಕ್ರಿ.ಶ. 1 ಅಥವಾ 2ನೆಯ ಶತಮಾನದಷ್ಟು ಹಿಂದಕ್ಕೆ ಹೋಗಲಾರದು. ಹೆಚ್ಚೆಂದರೆ ಕ್ರಿ. ಶ. 7ನೆಯ ಶತಮಾನದಿಂದ ಈಚೆಗೆ ಎಂದು ಹೇಳಬಹುದು.

ಕ್ರಿಯಾಪದಗಳು : ಈಗ ಗಾಥಾಸಪ್ತಶತಿಯಲ್ಲಿವೆ ಎನ್ನುವ ಕನ್ನಡ ಕ್ರಿಯಾಧಾತುಗಳ ಕಡೆಗೆ ನಮ್ಮ ಗಮನ ಹರಿಸೋಣ :

ಒಂದು ಬೆಳೆಯುವ ಭಾಷೆ ಆಂತರಿಕವಾಗಿ ಕಾಲಕಾಲಕ್ಕೆ ಬದಲಾವಣೆ ಪಡೆಯಬೇಕಷ್ಟೆ. ಆ ರೀತಿಯ ಬದಲಾವಣೆಯೇ ಅದರ ಬದುಕು; ಅದು ಜೀವಂತವಾಗಿರುವುದಕ್ಕೆ ಸಾಕ್ಷಿ. ಅಂತೆಯೇ ಅದು ಕಾಲಕಾಲಕ್ಕೆ ಸಂಸರ್ಗ ಹೆಚ್ಚಿದಂತೆ ಅನ್ಯಭಾಷಾ ಪದಗಳನ್ನು ತಿಂದು ಜೀರ್ಣಿಸಿಕೊಳ್ಳಲೂ ಬೇಕು. ಅದು ಜೀವಂತಭಾಷೆಯ ಕರ್ತವ್ಯ. ಆದರೆ ಹಾಗೆ ಅನ್ಯಭಾಷಾಪದಗಳನ್ನು ಸಿಕ್ಕಸಿಕ್ಕ ಹಾಗೆ ತಿನ್ನಲು ಯತ್ನಿಸುವುದಿಲ್ಲ. ಕಾರಣ ತನ್ನ ಜಾಯಮಾನಕ್ಕೆ ಒಗ್ಗುವ ಪದಗಳನ್ನು ಮಾತ್ರ ಸ್ವೀಕರಿಸುತ್ತದೆ. ತಾನು ಜೀರ್ಣಿಸಿಕೊಳ್ಳಲಾಗದ ಪದವನ್ನು ಅದು ತೆಗೆದುಕೊಳ್ಳುವುದೇ ಇಲ್ಲ. ಅಂತಹ ಒಂದು ಭಾಷೆ ಜೀರ್ಣಿಸಿಕೊಳ್ಳಲಾಗದ ಅನ್ಯಭಾಷಾಪದವೆಂದರೆ ಕ್ರಿಯಾಪದ ಅಥವಾ ಕ್ರಿಯಾಧಾತು. ಒಂದು ಭಾಷೆ ಬೇರೆ ಭಾಷೆಯ ನಾಮಪದಗಳನ್ನು ಧಾರಾಳವಾಗಿ ಬಳಸಿಕೊಂಡು ತನ್ನದನ್ನಾಗಿ ಮಾಡಿಕೊಂಡಂತೆ, ಅನ್ಯಭಾಷೆಯ ಕ್ರಿಯಾಪದಗಳನ್ನೂ ಧಾತುಗಳನ್ನೂ ಬಳಸಿಕೊಳ್ಳಲಾರದು. ಒಂದು ಭಾಷೆಯ ಸರ್ವನಾಮಗಳು ಹೇಗೆ ಆ ಭಾಷೆಯ ಸ್ವಂತಿಕೆಯ ಸ್ವತ್ತೋ ಹಾಗೆ ಕ್ರಿಯಾಪದಗಳೂ ಸಹ ಬೇರೆ ಭಾಷೆಯೊಡನೆ ಸುಲಭವಾಗಿ ಬೆರೆಯದ ಸ್ವತಂತ್ರ ಪ್ರಯೋಗಗಳು. ಅಂದಮೇಲೆ ಪ್ರಾಕೃತ ಗಾಥಾಸಪ್ತಶತಿಯಲ್ಲಿ ಕನ್ನಡದ ಕ್ರಿಯಾಪದಗಳು ಸೇರಿವೆ ಎನ್ನುವುದು ಸತ್ಯಕ್ಕೆ ದೂರವಾದ ಮಾತು. ಅದನ್ನೇ '... ಕಾಲ ವಚನ ಮೊದಲಾದವುಗಳ ಪ್ರತ್ಯಯಗಳನ್ನು ಹೊಂದಿ ಕಾವ್ಯಗಳಲ್ಲಿ ಪ್ರಯೋಗಿಸಲ್ಪಟ್ಟಿರುವ ಕ್ರಿಯಾರೂಪಗಳಿಂದ ಆಯಾ ಕ್ರಿಯಾರೂಪದ ಮೂಲಧಾತು ರೂಪವನ್ನು ಕಂಡುಹಿಡಿಯುವುದೇನೂ ಸುಕರವಲ್ಲ"— ಎಂದು ಶ್ರೀ ಪೈ ಅವರೇ ಸಂದೇಹಿಸಿದ್ದಾರೆ. ಆದರೂ 'ಪಿಟ್ಟೇ ಇ' 'ತೀರ್ ಇ'—ಎಂಬುವು ಕನ್ನಡದ ಕ್ರಿಯಾಧಾತು ಮೂಲವಾದವುಗಳೆಂಬ ಆತುರದ ನಿರ್ಧಾರಕ್ಕೆ ಬಂದಿದ್ದಾರೆ. ಅದು ಅಷ್ಟಾಗಿ ಸಾಧುವೆನಿಸುವುದಿಲ್ಲ. ಒಂದುವೇಳೆ ಅವು ಅನ್ಯಭಾಷಾ ಮೂಲವನ್ನುಳ್ಳವಾಗಿದ್ದರೆ ಪ್ರಾಕೃತ–ಸಂಸ್ಕೃತ ಒಂದು ಕುಟುಂಬದ ಭಾಷೆಗಳಾದ್ದರಿಂದ ಅವು ಸಂಸ್ಕೃತದ ಮೂಲಕ್ಕೆ ಸರಿಹೋಗುತ್ತವೆ ಎಂಬುವನ್ನು ಆಧಾರಸಹಿತವಾಗಿ ಸಾಧಿಸಿ ತೋರಿಸಬಹುದು. ಅಲ್ಲದೆ ಮೇಲಿನ ಪದಗಳ ಮೂಲ ಕನ್ನಡಕ್ಕಿಂತಲೂ ಸಂಸ್ಕೃತದಲ್ಲಿ ಎಂದು ಅರಿಯಲು ಈ ವಿವರಣೆ ನೋಡಿ :

'ಪಿಟ್ಟೇ ಇ'—ಎಂಬ ಪದ ಕನ್ನಡದ ಪೆಟ್ಟು > ಹೊಡೆ ಎಂಬ ಧಾತುವಿನಿಂದ ಮೂಡಿದ ಕ್ರಿಯಾಪದ ಎನ್ನುವುದಕ್ಕಿಂತ ಸಂಸ್ಕೃತದ 'ಪಿಟ' ಶಬ್ದದಿಂದ ಬಂದಿದೆ ಎಂದು ಹೇಳುವುದು ಹೆಚ್ಚು ಸೂಕ್ತ. 'ಪಿಟ' ಶಬ್ದಕ್ಕೆ 'ಹೊಡೆ' ಎಂಬ ಅರ್ಥ ಸಂಸ್ಕೃತದಲ್ಲಿದೆ. 'ಪಿಟ ಶಬ್ದ ಸಂಘಾತಯೋಃ' ಎಂದು ಧಾತು ಪ್ರಕಾಶಿಕಾ ತಿಳಿಸುತ್ತದೆ.[5] 'ಪಿಟ'ದಿಂದ 'ಚಪೇಟಿಕಾ' ಎಂಬ ಕ್ರಿಯಾರೂಪ ನಿಷ್ಪನ್ನವಾಗುತ್ತದೆ. ಅದರ ಅರ್ಥ ಹೊಡೆಯುವುದು ಎಂದು

[5] ಧಾತು ಪ್ರಕಾಶಿಕಾ (ತೆಲುಗುಲಿಪಿ) ಪು. 312 (1898)

ಅಂದಮೇಲೆ ಗಾಥಾಸಪ್ತಶತಿ—ಪ್ರಾಕೃತ 'ಪಿಟ್ಟೇಇ' ಸಂಸ್ಕೃತದ 'ಪಿಟ' ಧಾತುವಿನಿಂದ ಬಂದ ಕ್ರಿಯಾರೂಪ ಎಂದು ಹೇಳಬಹುದೇ ಹೊರತು, ಕನ್ನಡದ 'ಪೆಟ್ಟು' (ಹೊಡೆ)—ಎಂಬ ಪದದಿಂದಲ್ಲ.

ಇಂಥದೇ ಮತ್ತೊಂದು ಕ್ರಿಯಾಪದ 'ತೀರ್ಇ' ಇದು 'ತೀರ್' (ಶಕ್ಯವಾಗು, to be able) ಎಂಬ ಧಾತುವನ್ನುಳ್ಳ ಪದ ನಿಜ. ಆದರೆ 'ತೀರ್' ಎಂಬುದು ಕನ್ನಡದ ಧಾತುವೇ ? ಎಂಬುದು ಪ್ರಶ್ನೆ. ಕನ್ನಡದಲ್ಲಿ 'ತೀರ್' ಎಂಬುದಕ್ಕೆ ಮುಗಿಸು, ತೀರಿಸು ಎಂದರ್ಥವಿದೆ. ರನ್ನನ ಗದಾಯುದ್ಧದಲ್ಲಿ—

ತ್ರಿದಶನದೀಸುತನಿಂ ತೀ
ರದ ಕಜ್ಜಂ ಮುನ್ನ ಕಳಶಸಂಭವನಿಂ ತೀ !
ರದ ಕಜ್ಜಮಿನಜನಿಂ ತೀ
ರದ ಕಜ್ಜಂ ದ್ರೋಣ ಪುತ್ರನಿಂ ತೀರ್ದಪುದೆ ‖[6]

ಅಂದರೆ ದೇವಗಂಗಾತನಯನಿಂದ ಮುಗಿಯದ ಕಾರ್ಯ, ಕುಂಭೋದ್ಭವನಿಂದ ಮುಗಿಯದ ಕಾರ್ಯ, ಸೂರ್ಯಸುತನಿಂದ ಸಾಧ್ಯವಾಗದ ಕಾರ್ಯ, ದ್ರೋಣಪುತ್ರನಿಂದ ಸಾಧ್ಯವಾಗುತ್ತದೆಯೇ ಎಂದಿರುವುದನ್ನು ನೋಡಬಹುದು. ಸಂಸ್ಕೃತದಲ್ಲಿ 'ತೄ' ಎಂಬ ಧಾತು ಇದೆ. ಇದರಿಂದ ಸಕರ್ಮಕಕ್ರಿಯೆ 'ತರಣಯೋಃ' (ದಾಟು) ಪ್ಲವನ (ತೇಲು, ಜಿಗಿ) ಎಂದಾಗುತ್ತದೆ ಕರ್ತರಿ ವರ್ತಮಾನದಲ್ಲಿ 'ತರತಿ' (ದಾಟುತ್ತಾನೆ) ಎಂದು ಪ್ರಥಮ ಪುರುಷ ಏಕವಚನವಾಗುತ್ತದೆ. ಕರ್ಮಣಿಯಲ್ಲಿ 'ತೀರ್ಯತೆ' (ದಾಟಲ್ಪಡುತ್ತಾರೆ) ಎಂದಾಗುತ್ತದೆ. ಇದೇ ರೀತಿ 'ತಾರಯತಿ' (ದಾಟಿಸುತ್ತಾನೆ), ತಿತಿರಿಷತಿ, ತಿತಿರೀಷತಿ, ತಿತೀರ್ಷತಿ (ದಾಟಲು ಇಚ್ಛಿಸುತ್ತಾನೆ.) ಇತ್ಯಾದಿ ರೂಪ ತಳೆಯುತ್ತದೆ. 'ತರನ್' (ದಾಟುವವನು) ಎಂದು ಕೃಲ್ಲಿಂಗವೂ ಆಗುತ್ತದೆ. ಅಂತೆಯೇ ಸಂಸ್ಕೃತದಲ್ಲಿ ತೀರಕ್ಕೆ 'ಕರ್ಮಸಮಾಪ್ತೌ' ಎಂಬ ಅರ್ಥ ಹೇಳುತ್ತದೆ ಧಾತು ಪಾಠ. ಅಂದರೆ 'ಮುಗಿಯುವ' ಎಂಬ ಅರ್ಥದಲ್ಲೇ ಅಲ್ಲೂ ಪ್ರಯೋಗವಾಗಿದೆ. ಹೀಗೆ ಕನ್ನಡ ಮತ್ತು ಸಂಸ್ಕೃತ ಎರಡು ಭಾಷೆಗಳಲ್ಲೂ 'ತೀರ್'ಗೆ ಒಂದೇ ಅರ್ಥ ಇದೆ. ಅಂದಮೇಲೆ ಈ 'ತೀರ್' ಯಾವ ಭಾಷೆಯ ಧಾತು ? ಎರಡೂ ಬಿಟ್ಟು ಪ್ರಾಕೃತದ್ದೇ ಇರಬಹುದೇ ? ಹೇಳುವುದು ಕಷ್ಟ. ಆದ್ದರಿಂದ ಈ ಅಂಶಗಳ ಆಧಾರದಿಂದ ಪ್ರಾಕೃತದ ಮೂಲಧಾತುವೇ ಆಗಿರಬಹುದು. ಇಲ್ಲವೇ ಸಂಸ್ಕೃತದ 'ತೄ' ಎಂಬ ಧಾತುವಿನಿಂದ ಬಂದ ಪದವಾಗಿರಬಹುದು. ಒಟ್ಟಿನಲ್ಲಿ ಪ್ರಾಕೃತ ಗಾಥಾಸಪ್ತಶತಿಯಲ್ಲಿ ಬರುವ ಕೆಲವು ಪದಗಳು ಕನ್ನಡದ ಮೂಲವುಳ್ಳವಲ್ಲ ; ಸಂಸ್ಕೃತದ ಅಥವಾ ಪ್ರಾಕೃತದವುಗಳೇ ಎಂದು ಹೇಳಬಹುದು. ಗಾಥಾಸಪ್ತಶತಿಯಲ್ಲಿ ಅಚ್ಚಗನ್ನಡ ಪದಗಳಿವೆ ಎಂದು ಹೇಳುವುದು ಮಾತ್ರ ತುಂಬಾ ಕಷ್ಟದ ಮಾತು.

---

[6] ರನ್ನನ ಗದಾಯುದ್ಧ ಸಂಗ್ರಹಂ III–44

ಪಂಪ–ಅಭಿನವ ಪಂಪರ ಎರಡು ಪದ್ಯಗಳು

ಕನ್ನಡ ಸಾಹಿತ್ಯದಲ್ಲಿ ಪಂಪನ ಪ್ರತಿಭಾ ವಿಶಿಷ್ಟತೆ,ಅವನ ನಂತರ ಪಂಪ ಮಾರ್ಗವನ್ನನುಸರಿಸಿದ ಕವಿಗಳ ಮೇಲಿನ ಪ್ರಭಾವ–ಪ್ರೇರಣೆ, ಆತನ ಧರ್ಮ ಹಾಗೂ ಕಾವ್ಯಚಿಂತನೆ, ಮಾನವೀಯ ಸೂಕ್ಷ್ಮತೆಗಳು ಇವುಗಳ ಬಗ್ಗೆ ಬರೆಯುವುದು ಪ್ರಾಯಶಃ ಒಂದು ರೀತಿಯಲ್ಲಿ ಈಗಾಗಲೇ ರೂಢವಾದ ಅಭಿಪ್ರಾಯಗಳ ಪುನರ್ ನಿವೇದನೆಯಷ್ಟೇ ಆಗುತ್ತದೆ. ಅದನ್ನು ಕೈಬಿಟ್ಟು, ಪಂಪ ಪರಂಪರೆಯ ಅಗ್ರಕವಿ ಎಂಬುದನ್ನು ಒಪ್ಪಿಕೊಂಡು ಆತನ ನಂತರ ಉದಯಿಸಿದ 'ಅಭಿನವ ಪಂಪ'ನೆಂಬ ಅಭಿದಾನದ ಕವಿ ನಾಗಚಂದ್ರ ಎಷ್ಟರಮಟ್ಟಿಗೆ ಪಂಪನಿಗೆ ಸಮಾನಸ್ಕಂದನಾಗುತ್ತಾನೆ ಅಥವಾ ಇಲ್ಲ ಎಂದು ನೋಡುವ ಪರೀಕ್ಷಾ ಪ್ರಯತ್ನಗಳು ಆಗತ್ಯವಾಗುತ್ತವೆ. ಇಂಥ ವಿಮರ್ಶಾಪ್ರಯತ್ನಗಳು ಅಲ್ಲಲ್ಲಿ ನಡೆದಿವೆ.[1] ಕೆಲವು ವಿಮರ್ಶಕರು ಪಂಪನಂತೆ ಅಭಿನವ ಪಂಪನದು ಮಹಾಕವಿ ಪ್ರತಿಭೆ ಅಲ್ಲವೆಂತಲೂ, 'ದ್ವಿತೀಯ ವರ್ಗದ ಅಗ್ರಪೂಜ್ಯ ಕವಿ' ಎಂತಲೂ ನಿರ್ಣಯಕ್ಕೆ ಬಂದಿದ್ದಾರೆ. ಪಂಪ ಕನ್ನಡಕ್ಕೆ ಭಾರತವನ್ನುತಂದು ಕೊಟ್ಟಂತೆ ನಾಗಚಂದ್ರ ಜೈನರಾಮಾಯಣವನ್ನು ಕನ್ನಡಕ್ಕೆ ತಂದುಕೊಟ್ಟ. ಪಂಪನ ಬರವಣಿಗೆಯ ಸಿದ್ಧಮಾದರಿ ಅವನನ್ನು ನೆನಪಿಸುವ ಬರವಣಿಗೆಯ ಶಕ್ತಿ ಯೋಗ್ಯತೆಗಳು ಅಲ್ಲಲ್ಲಿ ಕಂಡುಬರುತ್ತವೆ. ಬಹುಶಃ ಅಷ್ಟನ್ನು ಬಿಟ್ಟರೆ ಪಂಪನೊಂದಿಗೆ ಸರಿಹೋರಾಟ ಕೊಡುವ ಪ್ರತಿಭೆಯ ಪ್ರಕರತೆ ಇಲ್ಲ ಎಂಬುವನ್ನು ಕಾವ್ಯಾಭ್ಯಾಸಿಗಳು ಒಪ್ಪಿಕೊಳ್ಳಬೇಕಾಗುತ್ತದೆ. 'ಅಭಿನವ ಪಂಪ'ನೆಂದು ತನ್ನನ್ನು ಕರೆದುಕೊಂಡರೂ ಅವನ ಸಮಗ್ರ ಕಾವ್ಯವ್ಯವಸಾಯದಲ್ಲಿ, ಅದರಲ್ಲೂ ಮುಖ್ಯವಾಗಿ ಮಲ್ಲಿನಾಥ ಪುರಾಣದಲ್ಲಿ ಆ ಮಾತು ಸುಳ್ಳಾಗಿ ತೋರುತ್ತದೆ. ಬಹಳಸಾರಿ ಅಭಿನವಪಂಪ ಹೋಗಲಿ ಅಭಿನಯ ಪಂಪನೂ ಆಗುವುದಿಲ್ಲ

"ಯಾವುದೋ ಒಬ್ಬ ಕವಿಕೃತಿಯನ್ನೇ ಆಗಲಿ ಅದನ್ನೊಂದು ಪ್ರತ್ಯೇಕ ಘಟಕವಾಗಿ ನೋಡದೆ, ಹಿಂದಿನ ಕವಿಕೃತಿಗಳ ಸಾಲಿನಲ್ಲಿರಿಸಿ ತೌಲನಿಕ ಕ್ರಮದಲ್ಲಿ ಪರಿಭಾವಿಸಬೇಕು,[2]ಎನ್ನುವ ಟಿ.ಎಸ್. ಎಲಿಯಟ್‌ನ ಮಾತನ್ನು

---

[1]ನೋಡಿ, [1] ಅಭಿನವ ಪಂಪ–(ಕನ್ನಡ ಸಂಘ, ಕರ್ನಾಟಕ ಕಾಲೇಜು ಧಾರವಾಡ)
[2] ಕವಿನಾಗಚಂದ್ರ–ಡಿ. ವಿ. ಶೇಷಗಿರಿರಾವ್
[3] ಪಂಪರಾಮಾಯಣ ಸಂಗ್ರಹ ಪೀಠಿಕೆ–ಡಿ. ಎಲ್.ಎನ್.
[4] ನಾಗಚಂದ್ರ–ಸಿ. ಪಿ. ಕೆ.
[5] ನಾಗಚಂದ್ರ--ವಿ. ಸೀತಾರಾಮಯ್ಯ (ಸಂ) ಐ.ಬಿ.ಎಚ್. ಪ್ರಕಾಶನ.

[2] 'No Poet no artist of any art, has his complete meaning alone, His significance, his appreciation is the appreciation of his relation to dead poets and artists, you cannot value him alone, you must set him for contrast and comparison among dead"

ಇಲ್ಲಿ ಸ್ಮರಿಸಿಕೊಂಡು ವಿಚಾರಿಸುವಾಗ ಮೌಲ್ಯಮಾಪನಕ್ಕೆ ಇಂಥ ಕ್ರಮ ಅಗತ್ಯವಾಗುತ್ತದೆ. ಅದರಲ್ಲೂ ತಾನು 'ಮತ್ತೊಬ್ಬ ಕವಿಯಂತೆ' ಎಂದು ಕರೆದುಕೊಳ್ಳುವುದರಿಂದ,ಬೇರೆ ಬೇರೆಯುಗದ ಈ ಇಬ್ಬರು ಕವಿಗಳನ್ನು ಒತ್ತೊತ್ತಿಗಿಟ್ಟು ವಿವೇಚಿಸುವುದು ಅಸಂಗತ ಎನಿಸುವುದಿಲ್ಲ. ಸಮಗ್ರವಾಗಿ ಪಂಪ ನಾಗಚಂದ್ರರ ಕಾವ್ಯಗಳ ಮೌಲಿಕಗುಣ ನಿರ್ದೇಶನ ಈ ಸಂಕ್ಷಿಪ್ತ ಲೇಖನದ ಉದ್ದೇಶವಲ್ಲ. ವಿಭಿನ್ನ ಮನೋಧರ್ಮದ ಮತ್ತು ವಿಭಿನ್ನ ಕಾಲ–ಪರಿಸರದ ಈ ಇಬ್ಬರು ಕವಿ ಮಹನೀಯರ ಎರಡು ಪದ್ಯಗಳನ್ನಷ್ಟೇ ಎತ್ತಿಕೊಂಡು ವಿಚಾರಮಾಡಿ ಕವಿಪ್ರತಿಭೆಗಳ ತಾರತಮ್ಯವನ್ನು ಗುರುತಿಸುವುದು ಈ ಲೇಖನದ ಆಶಯವಾಗಿದೆ.

ಮೊದಲು ಪಂಪನ ಒಂದು ಪದ್ಯ :

'ಮೃಗಯಾವ್ಯಾಜದಿನೊರ್ಮೆ ಶಂತನು ತೊಳಲ್ತಿರ್ಪಂ ಪಳಂಚಲ್ಕೆ ತ
ನ್ಮೃಗ ಶಾಬಾಕ್ಷಿಯ ಕಂಪುತಟ್ಟೆ ಮಧುಪಂ ಬೋಲ್ ಸೋಲ್ತು ಕಂಡೊಲ್ದು ನ
ಲ್ಮೆಗೆ ದಿಬ್ಯಂ ಬಿಡಿವಂತೆವೋಲ್ ಪಿಡಿದು ನೀಂ ಬಾ ಪೋಪಮೆಂದಂಗೆ ಮೆ
ಲ್ಲಗೆ ತತ್ಕನ್ಯಕೆ ನಾಣ್ಚಿ ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ, (ಅ. 1 ಪದ್ಯ 70)

ಎರಡನೆಯದು ನಾಗಚಂದ್ರನ ಒಂದು ಪದ್ಯ :

ತೊಡೆತಡಮಾಗೆ ಕೆಂದಳಿರ್ಗಳಂದದ ಮೆಲ್ಲಡಿ ಮೇಖಳಾರವಂ
ಗೆಡೆಗೊಳೆ ನೂಪುರಕ್ವಣಿತಮಂ ನಡೆತಂದೊಲವಿಂಗೆ ದಿವ್ಯವಂ
ಪಿಡಿದವೊಲಂದು ಕಾಲ್ಪಿಡಿದ ಕಾಂತೆಯುಂ ಕಣ್ಬನಿ ಕಾಂತನೇವಮಂ
ತೊಡೆದು ನಿರಾಕುಳಂ ತೊಡೆಪುದಾಕೆಯು ಲಜ್ಜೆಯ ಪೋದ ಪಜ್ಜೆಯಂ(ಮಲ್ಲಿನಾಥ ಪುರಾಣ ;7–43)

ಪಂಪಭಾರತದ ಮೊದಲ ಆಶ್ವಾಸದಲ್ಲಿ ಈ ಮೇಲಿನ ಪದ್ಯ ಬರುತ್ತದೆ. ಪಂಪನ ಹಿತಮಿತಗುಣಕ್ಕೆ,ನಾಟಕೀಯ ಸಂವೇದನೆಗೆ, ಭಾವಗೀತಾತ್ಮಕ ಅಭಿವ್ಯಕ್ತಿಗೆ ಅತ್ಯುತ್ತಮ ಪದ್ಯವೆಂದು ಈಗಾಗಲೆ ಸಾಬೀತುಪಡಿಸಲಾಗಿದೆ.[3] ಯಾವುದೇ ವಿಮರ್ಶೆಯ ನೆರವನ್ನು ಅಪೇಕ್ಷಿಸದೆ ಪದ್ಯವನ್ನು ಓದಿ ಅನುಭವಿಸುವಾಗಲೂ ಅದರ ಗುಣಾಂಶ ತಟ್ಟನೆ ಮನಸ್ಸಿಗೆ ವೇದ್ಯವಾಗುತ್ತದೆ.

ಏನೇನೊ ಹಲವನ್ನು ಏಕಕಾಲಕ್ಕೆ ಧ್ವನಿಸಿ ಬಿಡುವ ಈ ವೃತ್ತ ಭಾಷೆಯ ದುಂಡಿನಿಂದ ತಪ್ಪಿಸಿಕೊಂಡಿದೆ. ಸಾಮಾನ್ಯ ಮಾತುಗಳಲ್ಲಾದರೊ ವಿವರವಾಗಿ ಹೇಳದೆ ಸಾಧ್ಯವಾಗದಿರುವ ಈ ಒಂದು ಘಟನೆ ಸಂಕ್ಷಿಪ್ತ ನಿರೂಪಣೆಗೆ ಸೀಮಿತಗೊಂಡು ಸಂಕೀರ್ಣರೂಪು ತಳೆದಿದೆ. 'ಒಂದು ಬಾರಿ ಬೇಟೆಯ ನೆವದಲ್ಲಿ ಸುತ್ತುತ್ತಾ ಬರುತ್ತಿದ್ದ ಶಂತ ಮಹಾರಾಜನಿಗೆ ಮರಿಜಿಂಕೆಯಂತೆ ಕಣ್ಣುಳ್ಳ ಯೋಜನಗಂಧಿಯ ಕಂಪು ತಟ್ಟುತ್ತದೆ' ಎಂದು ಕಥಾನಿರೂಪಣೆಯಲ್ಲಿ ತೊಡಗುವ ಪದ್ಯ ಪಕ್ಕನೆ ಭಾವಗೀತಾತ್ಮಕ ಹಾಗೂ ನಾಟಕೀಯ ನಿರೂಪಣೆಗೆ ಪದ್ಯ ಮಗ್ಗಲು ಬದಲಾಯಿಸುತ್ತದೆ. 'ಮಧುಪಂಬೋಲ್ ಸೋಲ್ತು ಕಂಡೊಲ್ದು' ಎಂಬ ಮಾತೇ ಯೋಜನಗಂಧಿಯ ರೂಪು ಮನಸ್ಸನ್ನು ಸೆರೆಹಿಡಿದ ಬಗೆಯನ್ನು, ಆ ಕ್ಷಣದ ಆತನ ಚಿತ್ತಚಾಂಚಲ್ಯವನ್ನು ಸಮರ್ಥವಾಗಿ ಬಿಂಬಿಸುತ್ತದೆ. ತಾಕ್ಷಣಿಕ ಭಾವನೆ ಮನಸ್ಸಿನಲ್ಲಿ ಮಥನಗೊಂಡು ಕ್ರಿಯಾರೂಪ ತಾಳಲು ಎಡಬಿಡದೆ ಹವಣಿಸಿದೆ. ಪರಿಣಾಮ 'ನಲ್ಮೆಗೆ ದಿಬ್ಯಂ ಬಿಡಿವಂತೆ ವೋಲ್ ಪಿಡಿದು ನೀಂ ಬಾ ಪೋಪಂ' ಎನ್ನುತ್ತದೆ. ಅವಸರ ಮತ್ತು ಆಶ್ವಾಸನೆ ಎರಡೂ ಏಕಕಾಲದಲ್ಲಿ ಹೊಮ್ಮುವ, ಪ್ರೀತಿಯನ್ನು ಪ್ರಾಮಾಣೀಕರಿಸುವ ದಿವ್ಯದ ಮಾತು[4] ಪಂಪನಿಗಿದ್ದ ಭಾಷಾಭಿವ್ಯಕ್ತಿಯ ಸಾಮರ್ಥ್ಯವನ್ನು, ಜನಸಮುದಾಯದ ನಂಬಿಕೆಯ ಆಳವಾದ ತಿಳಿವನ್ನು ಸಮಯೋಚಿತವಾಗಿ ಬಳಸುವ ಜಾಣ್ಮೆಯನ್ನು

---

3 ನೋಡಿ : ಪಂಪ ಒಂದು ಮೌಲ್ಯವಿವೇಚನೆ–ಪೂಚಂತೇ ಪ್ರಾಯೋಗಿಕವಿಮರ್ಶೆ (ಬೆಂಗಳೂರು ವಿಶ್ವವಿದ್ಯಾನಿಲಯ)

4 ಪಂಪಭಾರತ ದೀಪಿಕೆ–ಡಿ. ಎಲ್. ಎನ್. ಪು. 25

ತೋರಿಸುತ್ತದೆ. 'ನೀಂ ಬಾ ಪೋಪಂ ಎಂದಂಗೆ ತತ್ಕನ್ಯಕೆ ನಾಣ್ಚಿ ಬೇಡುವೊಡೆ ನೀವೆಮಯ್ಯನಂ ಬೇಡಿರೇ'ಎಂಬಲ್ಲಿ ಭಾವ ಮತ್ತು ಭಾಷೆ ನಾಟ್ಯೈಕ್ಯತಗೊಂಡು ಹೊಸದೊಂದು ಮಗ್ಗುಲು ಪ್ರಾಪ್ತವಾಗುತ್ತದೆ. 'ತತ್ಕನ್ಯಕೆ ನಾಣ್ಚಿ' ಪದಪುಂಜಗಳು ಪಂಪನ ಬರವಣಿಗೆಯ ಸೂಕ್ಷ್ಮ ಎಚ್ಚರದಿಂದ ಬಂದದ್ದು ಎನ್ನಬೇಕು. ಅರಣ್ಯದ ಏಕಾಂತ. ಎದುರಿನಲ್ಲಿ ಪರ–ಪುರುಷ ಒಬ್ಬನೇ. ಅದರಲ್ಲೂ ಆಕೆ ಕನ್ಯೆ. (ದೋಣಿ ದಾಟಿಸುವ ಈ ಮತ್ಸ್ಯಗಂಧಿಯನ್ನು ಯೋಜನಗಂಧಿಯಾಗಿ ಪರಿವರ್ತಿಸಿ ಮಂಜುಕವಿಸಿ ಪರಾಶರಮುನಿ ದೋಣಿಯಲ್ಲೆ ಕೂಡುವುದು, ವೇದವ್ಯಾಸನ ಜನನವಾಗುವುದು, ಮರಳಿ ಆಕೆಗೆ ಕನ್ಯತ್ವವನ್ನು ನೀಡುವುದು ಇವೆಲ್ಲವನ್ನು ಕಥಾಭಿತ್ತಿಯಲ್ಲಿ ನಿರೂಪಿಸಿರುವ ಪಂಪ ಇಲ್ಲಿ ಕನ್ಯೆ ಎಂದು ಕರೆದಿರುವುದು ಅನುಮಾನಕ್ಕೆ ಆಸ್ಪದವಾದರೂ ಮುನಿಗಳು 'ಏಗೆಯ್ದೊಡಂ ತೀರದೆ' ಎಂದು ಆ ಸಂದರ್ಭವನ್ನು ಅಲೌಕಿಕ ನೆಲೆಗೆ ಏರಿಸಿ ಬಿಡುತ್ತಾನೆ. ಇಲ್ಲಿ ಮತ್ತೊಮ್ಮೆ ಕವಿ ಆಕೆಯನ್ನು ಲೋಕದ ಗಂಡು–ಹೆಣ್ಣುಗಳ ಸಹಜ ಸಂದರ್ಭದಲ್ಲಿ ನಿಲ್ಲಿಸಿ ನೋಡಿದ್ದಾನೆ ಎಂಬುದನ್ನು ದೃಷ್ಟಿಯಲ್ಲಿಡಬೇಕು) ಹಾಗೆ ನಾಚಿದ್ದು ಹಾಗೂ ನಾಚಬೇಕಾದ್ದು ನಿಸರ್ಗ ಸ್ವಾಭಾವಿಕ. ಇಂದ್ರಿಯಗೋಚರವಾಗುವಂತೆ ಭಾವನೆಗಳನ್ನು ಭಾಷೆಯಲ್ಲಿ ಮೂರ್ತೀಕರಿಸುವ ಬಗೆ ಇದು. ಇದು ವಿವಾಹಕ್ಕೆ ಸಂಬಂಧಿಸಿದ ಅಂಗೀಕೃತ ಸಾಮಾಜಿಕ ಪದ್ಧತಿ–ತಾಯಿತಂದೆಯರ ಅನುಮತಿ ಪಡೆದು ವಿವಾಹ ನಿಶ್ಚಯಿಸುವ ರೂಢಮಾರ್ಗ–ಸಮುದಾಯ ಒಪ್ಪಿಕೊಂಡ ಮೌಲ್ಯವೊಂದನ್ನು ಸೂಚಿಸುವುದಷ್ಟೇ ಅಲ್ಲ, ಅದನ್ನು ಹೇಳುವ ಕ್ರಮವೂ ಆಕರ್ಷಕವಾಗಿಯೇ ಇದೆ. ಪ್ರಾಯಶಃ ಅಂತಹ ಪದಜ್ಞಾನ,ಸನ್ನಿವೇಶ ಕೌಶಲ ಪಂಪನಿಗೊಬ್ಬನಿಗೆ ವಿಶಿಷ್ಟವಾದದ್ದೆಂದು ಹೇಳಬೇಕು.

ಪಂಪನ ಪ್ರೋಜ್ವಲ ಪ್ರತಿಮೆಯ ಯಶಸ್ವಿ ರೂಪಧಾರಣೆ ಸಂತತವಾಗಿ ನಡೆದಿದ್ದರೂ ಅಭಿನವ ಪಂಪನೆಂದು ಹೇಳಿಕೊಂಡ ನಾಗಚಂದ್ರ ಬಹಳ ದುರ್ಬಲವಾಗಿ ಅಂಥ ಹಲಕೆಲವು ಸನ್ನಿವೇಶಗಳನ್ನು ಅನುಕರಿಸಿದ್ದಾನೆ. 'ಪ್ರಸಿದ್ಧಕವಿ ಪದ್ಧತಿ'ಯಿಂದ ತನ್ನಕಾವ್ಯರಚನೆಗೊಂಡಿದೆ ಎಂದು ನಾಗಚಂದ್ರ ಹೇಳಿಕೊಂಡರೂ ಪಂಪ ಪದ್ಧತಿಯ ಯಾವುದೇ ಸಂದರ್ಭವನ್ನು ಮೀರಿ ಮೇಲೇರುವ ಪ್ರತಿಭಾಪ್ರಕರತೆ ಗೋಚರಿಸುವುದಿಲ್ಲ. ಅವನ ಪಂಪರಾಮಾಯಣ ಈ ಬಗೆಯ ನಿಲುವಿಗೆ ಅಪವಾದವಾಗಬಹುದಾದರೂ 'ಮಲ್ಲಿನಾಥ ಪುರಾಣ'ದಲ್ಲಿ ಈ ಮಾತಿಗೆ ನಿದರ್ಶನಗಳು ಸಿಗುತ್ತವೆ. ಪಂಪನ ಭಾವ ಭಾಷೆಗಳ ಅನುಕರಣೆಯ ಹಲವು ಸನ್ನಿವೇಶಗಳಲ್ಲಿ ಆತನನ್ನು ನಾಗಚಂದ್ರ ನೆನಪಿಸುತ್ತಾನೆಯೆ ಹೊರತು ಮನಸ್ಸಿನಿಂದ ಆ ಚಿತ್ರವನ್ನು ಅಳಿಸಿಹಾಕುವ ಮಟ್ಟದಲ್ಲಿ ಅಲ್ಲ. ಮೇಲಿನ ವಿಶ್ಲೇಷಣೆಯಲ್ಲಿ ಒಂದು ವೃತ್ತದ ಮೂಲಕ ಪಂಪ ಸಾಧಿಸಿರುವ ಯಶಸ್ಸನ್ನು ಗುರುತಿಸಿದೆವು. ನಾಗಚಂದ್ರನು ಪಂಪ ಬಳಸಿರುವ 'ನಲ್ಮೆಗೆ ದಿಬ್ಯಂ ಬಿಡಿವಂತೆ ವೋಲ್', ಎಂಬ ಮಾತನ್ನೆ ಮಲ್ಲಿನಾಥ ಪುರಾಣದ 7ನೆ ಆಶ್ವಾಸದ 43ನೆ ಪದ್ಯದಲ್ಲಿ 'ಒಲವಿಂಗೆ ದಿವ್ಯಮಂ ಪಿಡಿದವೊಲು' ಎಂದು ಬಳಸಿದ್ದಾನೆ.

ನಲ್ಮೆಗೆ–ಒಲವು ಎಂಬ ಪರ್ಯಾಯಪದ ಬಿಟ್ಟರೆ ಯಥಾವತ್ತಾಗಿ ಪಂಪನ ಭಾವ ಭಾಷೆಯ ನಕಲೇ ಆಗಿದೆ. ಇಂಥ ನಕಲು ಸಾಮಾನ್ಯವಾಗಿ ಎರಡು ಕಾರಣಗಳಿಗಾಗಿ ಆಗಬಹುದು. ಒಂದು : ಹಿಂದಿನ ಕವಿ ಪ್ರಯೋಗವನ್ನು ವಿಶೇಷವಾಗಿ ಮೆಚ್ಚಿಕೊಂಡು ಅದನ್ನು ಎಲ್ಲಾದರೂ ಬಳಸಿಕೊಳ್ಳಬೇಕೆಂಬ ತೀವ್ರ ಹಂಬಲದಿಂದಾಗಿ. ಎರಡನೆಯದು ಸಿದ್ಧಮಾದರಿಯ ಬಳಕೆಯ ಸುಲಭೀಕರಣಕ್ಕಾಗಿ.ಪ್ರಾಯಶಃ ಈ ಎರಡು ಉದ್ದೇಶಗಳೂ ಕವಿಗಿದ್ದಿರಬೇಕೆಂದು ಊಹಿಸಬೇಕಾಗಿದೆ. ಆದರೆ ಇಂಥ ಪ್ರಯೋಗಗಳ ಸಾರ್ಥಕತೆ ಬಳಸಿಕೊಳ್ಳುವ ಸನ್ನಿವೇಶ ಸಂದರ್ಭಗಳ ಮೇಲೆ ನಿರ್ಧಾರಗೊಳ್ಳುತ್ತವೆ. ಮೇಲಿನ ಪದ್ಯದ ಸನ್ನಿವೇಶ ಬರುವುದು ನಾಗಚಂದ್ರನ ಸೂಳೆಗೇರಿ ವರ್ಣನೆಯಲ್ಲಿ. ಕಡುಮುಳಿದ ಕಾದಲನನ್ನು ಒಲಿಸಲು ಹೆಣ್ಣೊಬ್ಬಳು ವೈಯಾರದಿಂದ ನಡೆತಂದು ಕಾಲಿಗೆ ಅಡ್ಡ ಬಿದ್ದದ್ದು ನಲ್ಮೆಗೆ ದಿವ್ಯವನ್ನು ಹಿಡಿದಂತಿತ್ತು ಎಂದಿದ್ದಾನೆ. 'ಕೆಂದಳಿರ್ಗಳಂದದ ಮೆಲ್ಲಡಿ' 'ಮೇಖಳಾರವಂ' 'ನೂಪುರ ಕ್ವಣಿತ' ಸಾಮಾನ್ಯವಾದ ಶಬ್ದ ಚಿತ್ರ ಕೊಟ್ಟರೂ ; 'ತೊಡೆತಡಮಾಗೆ' 'ಲಜ್ಜೆಯ ಪೋದ ಪಜ್ಜೆ' ಪದಗಳು ಪಂಪನಲ್ಲಿಯಂತೆ ಹೆಣ್ಣಿನ ಸಹಜ ಭಾವನೆಗಳನ್ನು ಅಭಿನಯಿಸಿ ತೋರಿಸಲು ಸಮರ್ಥವಾಗುವುದಿಲ್ಲ.

ಒಟ್ಟಂದದ ಒಂದು ಚಿತ್ರ ಮೂಡಿನಿಲ್ಲದೆ ಪದ್ಯ ಸೋಲುತ್ತದೆ. ಅದು ಹೋಗಲಿ, ಸನ್ನಿವೇಶದ ಔಚಿತ್ಯವಾದರೂ ಎಂಥದು ? ಸೂಳೆ ಎಲ್ಲಿ ದಿವ್ಯವೆಲ್ಲಿ ? ಪಂಪನನ್ನು ಅನುಕರಿಸಿರುವುದನ್ನು ಬಿಟ್ಟರೆ ಯಾವ ವಿಶೇಷವೂ ಇಲ್ಲಿ ಕಂಡು ಬರುವುದಿಲ್ಲ.ಇಂಥ ದುರ್ಬಲ ಅನುಕರಣೆಯ ಹತ್ತಾರು ಉದಾಹರಣೆಗಳು ನಾಗಚಂದ್ರನಲ್ಲಿ ಸಿಗುತ್ತವೆ.ಶ್ರೀಮತಿ ವಜ್ರ ಜಂಘರ ಸಹಮರಣ ಪಂಪ ಕಂಡರಿಸಿದ ಅತ್ಯುತ್ತಮ ಕಾವ್ಯಭಾಗಗಳಲ್ಲಿ ಒಂದು. ಸೆಜ್ಜೆಮನೆಯನ್ನು ಸುತ್ತಿಕೊಂಡ ಕೇಶ ಸಂಸ್ಕಾರ ಧೂಪ ; ಅದು ಹಮ್ಮಿಕೊಂಡ ಬಗೆ; ಗಂಡಹೆಂಡಿರನ್ನು ಕೃಷ್ಣೋರಗ ಕೊಂದ ರೀತಿಯ ಹೋಲಿಕೆ; ಅಲ್ಲಿನ ಶಬ್ದಚಿತ್ರ–ಪಂಪನ ಶಕ್ತಿಯ ಪ್ರತೀಕ. 'ಓಪರೋಪರೊಳೊಡಸಾಯಲ್ ಪಡೆದರಿನ್ನವೇಂ ಸಯ್ಪೊಳವೇ' ಎಂಬ ಕವಿಯ ಉದ್ಗಾರ ಸಮಯೋಚಿತವೂ,ಅದರ ಹಿನ್ನೆಲೆಯಿಂದಾಗಿ ಸ್ಮರಣೀಯವೂ ಆಗಿದೆ.ಅವೇ ಮಾತುಗಳನ್ನು ಮನ್ಮಥ ದಹನ ಪ್ರಸಂಗದಲ್ಲಿ ನಾಗಚಂದ್ರ ಬಳಸಿದ್ದಾನೆ.[7] ಮಲ್ಲಿನಾಥನ ತಪೋಪ್ರಭೆಯಿಂದ ನಾಶವಾದ ಮಾತು ಗಳನ್ನುಮನ್ಮಥ, ಅವನನ್ನು ಅನುಸರಿಸಿ ರತಿ ಜೀವ ತೊರೆದದ್ದನ್ನು ತಿಳಿಸುವಾಗ ಪಂಪನ ಮಾತೇ ಪುನರ್‌ಉಲ್ಲೇಖ ಗೊಂಡಿದೆ. ಅನುಕರಣೆ ಅಭಿವ್ಯಕ್ತಿಗೆ ಪೋಷಕವಾಗಿ ಬಂದರೂ ಪಂಪನಲ್ಲಿಯಂತೆ ತಾಗುವ ತಟ್ಟುವ ಗುಣ ಇಲ್ಲಿ ಇಲ್ಲ ವಾಗಿದೆ. ಪಂಪನಂತೆ ರನ್ನನಿಂದಲೂ ಆರಿಸಿಕೊಂಡ 'ನೀರೊಳಗಿರ್ದುಂ ಬೆಮರ್ತನುರಗಪತಾಕಂ'[8] ಎಂಬ ಶಕ್ತಿಯುತ ಧ್ವನಿಪ್ರಚುರ ಮಾತು ಕೂಡ ಸಮಯ ಔಚಿತ್ಯವಿಲ್ಲದೆ ಬಳಸಬಾರದ ಕಡೆ ಪೇಲವವಾಗಿ ಬಳಕೆಯಾಗಿ ಅರ್ಥ ಗೌರವದಿಂದ ವಂಚಿತವಾಗಿದೆ. ಇಂಥ ಹತ್ತಾರು ಉದಾಹರಣೆಗಳಿಂದ ನಾಗಚಂದ್ರನ ಬರವಣಿಗೆಯ ಇತಿಮಿತಿಗಳನ್ನು ಸಾಧಾರವಾಗಿ ಗುರುತಿಸಬಹುದು.

ಇಷ್ಟೆಲ್ಲಾ ಮಾತುಗಳ ಬೆಳಕಿನಲ್ಲಿ ಸ್ಪಷ್ಟಪಡುವುದಿಷ್ಟೆ. ಇಂಥ ಹಲಕೆಲವು ವಿಮರ್ಶೆಯ ಮಾತುಗಳಷ್ಟೆ ನಾಗಚಂದ್ರನ ಸ್ಥಾನಮಾನ ನಿರ್ದೇಶನಕ್ಕೆ, ಬರವಣಿಗೆಯ ಮೌಲಿಕತೆಗೆ ಅಳತೆಗೋಲಾಗುವುದಿಲ್ಲ. ಇನ್ನು ಬೇರೆ ಬೇರೆ ವಿಮರ್ಶೆಯ ಮುಖಗಳಲ್ಲಿ ಆತನ ಶಕ್ತಿ ಸಾಫಲ್ಯವನ್ನು ನಿರ್ದೇಶಿಸಲು ಸಾಧ್ಯವಿದೆ. ಅದರಲ್ಲೂ ಆತನ ರಾಮ ಚಂದ್ರ ಚರಿತ ಪುರಾಣ ಈ ನಿಲುವಿಗೆ ಆಹಾರ ಒದಗಿಸುತ್ತದೆ. ಆದರೆ ನಾಗಚಂದ್ರನನ್ನು ಪಂಪನ ಪಕ್ಕಕ್ಕೆ ತಂದು ಕೂರಿಸುವಾಗಲೊ, ಸಮಾನಸ್ಕಂದನನ್ನಾಗಿ ಮಾಡುವ ವಿಮರ್ಶೆಯ ಉದಾರ ನೀತಿಯ ಅಪಾಯದಲ್ಲಿ ಈ ಬಗೆಯ ಚಿಂತನೆ ಅಗತ್ಯವಾಗುತ್ತದೆ.ಹಾಗೆಯೇ ಸಮಗ್ರ ಸಾಹಿತ್ಯ ಪರಂಪರೆಗೂ ಅನ್ವಯಿಸುವ ಮಾತು ಹೊರಬೀಳುತ್ತದೆ. ಅದೆಂದರೆ ಮಹಾಕವಿಯೊಬ್ಬ ಯುಗಶಕ್ತಿಯನ್ನು, ಭಾಷೆಯ ಎಲ್ಲಾ ಸಾಧ್ಯತೆಯನ್ನು ಸೂರೆಗೊಂಡು ನಿಂತಮೇಲೆ ಆತನ ಪ್ರತಿಭೆಯ ಮಹಾಪ್ರಕಾಶದಲ್ಲಿ ಮುಂಬರುವ ಕವಿ ಎಷ್ಟು ಮೇಲೇರುವ ಪ್ರಯತ್ನಮಾಡಿದರೂ ಪೇಲವ ವಾಗಿಯೇ ಕಾಣುತ್ತಾನೆ. ಅದರಲ್ಲೂ ಸಿದ್ಧಮಾದರಿಗಳನ್ನನುಕರಿಸಿದಾಗಲಂತೂ ಈ ಅಪಾಯ ಇನ್ನೂ ಹೆಚ್ಚೆಂದು ತೋರುತ್ತದೆ.

---

7 'ಓಪರೊಡಸಾವುದು ಸೈಪಿನೊಳಲ್ಲದಕ್ಕುಮೇ' ಮಲ್ಲಿನಾಥ ಪುರಾಣ. ಆ 14 ಪದ್ಯ 37.

8 'ನೀರೊಳಗಿರ್ದುಮುದೇಂ ಬೆಮರ್ತಳೊ, ಮ. ಪು. ಅ. 8 ಪದ್ಯ 83

ನಾ. ನಾಗಚಂದ್ರ

ನಾಗಚಂದ್ರನ ರಾವಣ

ನಮ್ಮ ಎಲ್ಲ ಕಾವ್ಯಗಳೂ 'ಭದ್ರಂ ಶುಭಂ ಮಂಗಳಂ' ಎಂಬ ತಾತ್ತ್ವಿಕ ನಿಲುವನ್ನಾಧರಿಸಿ ರಚಿತವಾಗಿವೆ. ಆದರೆ ಪಾಶ್ಚಾತ್ಯ ಸಾಹಿತ್ಯದಲ್ಲಿ ನಾವು ದುರಂತ ದೃಷ್ಟಿಯನ್ನು ಕಾಣಬಹುದು. ನಮ್ಮ ಕವಿಗಳು ಯಾರೂ 'ದುರಂತ'ವೆಂಬ ಪ್ರಜ್ಞೆಯನ್ನಾಧರಿಸಿ ಕಾವ್ಯವನ್ನು ಬರೆದಿಲ್ಲ. ಕನ್ನಡ ಸಾಹಿತ್ಯಕ್ಕೆ ಈ ದುರಂತದ ಪ್ರಜ್ಞೆ ಒದಗಿ ಬಂದದ್ದು ಹೊಸಗನ್ನಡದ ಆಚಾರ್ಯಪುರುಷ ಬಿ. ಎಂ. ಶ್ರೀಕಂಠಯ್ಯನವರಿಂದ. ರನ್ನನ 'ಗದಾಯುದ್ಧ' ಕಾವ್ಯವನ್ನು ಹಳಗನ್ನಡದ ಗಂಭೀರ ಶೈಲಿಯಲ್ಲಿ ಹಲ ಕೆಲವು ಬದಲಾವಣೆಗಳೊಂದಿಗೆ ಪರಿವರ್ತಿಸಿ ಬರೆಯುವುದರ ಮೂಲಕ 'ಕನ್ನಡ ಸಾಹಿತ್ಯ'ದಲ್ಲಿ ದುರಂತತೆಯನ್ನು ಬಿ. ಎಂ. ಶ್ರೀಯವರು ಗುರುತಿಸಿದರು. 'ಏಜಾಕ್ಸ್' ನಾಟಕವನ್ನಾಧರಿಸಿ 'ಅಶ್ವತ್ಥಾಮನ್', ನಂತರ 'ಪಾರಸಿಕರು' ಹಾಗೂ 1923ರಲ್ಲಿ Tragic Ravana ಎಂಬ ಲೇಖನ ಬರೆದು ದುರಂತ ದೃಷ್ಟಿಗೆ ಹೆಚ್ಚು ಒತ್ತು ಕೊಟ್ಟರು.

ಗ್ರೀಕರ 'ದುರಂತ' ಲಕ್ಷಣಗಳನ್ನು ಬಿ. ಎಂ. ಶ್ರೀ ಮೊದಲಾದವರು ಜೈನ ಕವಿಗಳ ಕಾವ್ಯಗಳಿಗೆ ಅನ್ವಯಿಸಲಾರಂಭಿಸಿದರು. ಜೈನ ಕವಿಗಳು ತಮ್ಮ ಕಾವ್ಯಗಳಲ್ಲಿ ಖಳನಾಯಕನನ್ನು ಚಿತ್ರಿಸುವಾಗ ಆವಶ್ಯಕತೆ ಬಂದಾಗ ಅವನ ಮಾನವೀಯ ಗುಣಗಳನ್ನು ಹೃದಯಸ್ಪರ್ಶಿಯಾಗುವಂತೆ ಚಿತ್ರಿಸಿದ್ದಾರೆ, ಮನಕರಗುವಂತೆ ಮಾಡಿದ್ದಾರೆ. ಇಂತಹ ಸನ್ನಿವೇಶಗಳಲ್ಲಿ ನಾವು ಆತನ ದುರ್ಗುಣಗಳನ್ನು ಮರೆಯುತ್ತೇವೆ. ಅವನಲ್ಲಿರುವ ಮಾನವೀಯತೆಗೆ ಪ್ರಾಶಸ್ತ್ಯ ಕೊಡುತ್ತೇವೆ. ಆದುದರಿಂದ ದುರಂತ ದೃಷ್ಟಿಯನ್ನು ಕನ್ನಡ ಕವಿಗಳು ಚಿತ್ರಿಸಿದ ಎಲ್ಲ ದುಷ್ಟ ಪಾತ್ರಗಳಿಗೂ ಅನ್ವಯಿಸುವುದು ಸರಿಯಲ್ಲ.

ನಾಗಚಂದ್ರನು ಜೈನ ಕವಿ. ಕನ್ನಡದಲ್ಲಿ ಇವನಿಗಿಂತ ಪೂರ್ವದಲ್ಲಿ ಯಾವ ಜೈನ ರಾಮಾಯಣವೂ ಇದುವರೆಗೆ ಉಪಲಬ್ಧವಾಗಿಲ್ಲ. ಇವನು ವಿಮಲಸೂರಿಯ 'ಪಉಮಚರಿಯ'ಕ್ಕೆ ಸಾಕಷ್ಟು ಋಣಿಯಾಗಿದ್ದಾನೆ.

"ಪಂಪ ರಾಮಾಯಣದಂಥ ಬೇರೊಂದು ಜೈನ ರಾಮಾಯಣ ಕಾವ್ಯವಿರಲಿಲ್ಲ. ದುರಂತ ರಾವಣನ ಪರಿಚಯವೂ ಇರಲಿಲ್ಲ. ಈ ನವ ಸೌಂದರ್ಯದ ಅನುಭವವನ್ನು ಮೊಟ್ಟಮೊದಲು ನಮಗೆ ಮಾಡಿಕೊಟ್ಟ ಕೀರ್ತಿ ನಾಗಚಂದ್ರನಿಗೆ ಸೇರಿದ್ದು"[1]—ಎಂದು ಡಿ.ಎಲ್. ಎನ್.ರವರು ಅಭಿಪ್ರಾಯಿಸುತ್ತಾರೆ. ಈ ಹೇಳಿಕೆಯು ಡಿ.ಎಲ್. ಎನ್‌ರವರಿಗೆ 'ದುರಂತ'ದ ಬಗ್ಗೆ ಇದ್ದ ಒಲವನ್ನು ಸಾಬೀತುಪಡಿಸುತ್ತದೆ. ಆದರೆ ನಾಗಚಂದ್ರನು 'ದುರಂತ' ದೃಷ್ಟಿಯಲ್ಲಿ ಕಾವ್ಯವನ್ನು ಬರೆದ ಎಂದು ಹೇಳಲಾಗುವುದಿಲ್ಲ. "ಜೈನ ಧರ್ಮದಲ್ಲಿ ಹೇಳಿದ 14 ಗುಣಸ್ಥಾನಗಳಲ್ಲಿ 6ನೆಯ ಸ್ಥಾನವು 'ಪ್ರಮತ್ತ' ಎಂಬುದಾಗಿದೆ. ಇದರಲ್ಲಿ ಆತನ ಹಿಂದಿನ ಜನ್ಮದ ಅಶುಭಕರ್ಮವು ಬಲವತ್ತರವಾಗಿ

---

[1] ಪಂಪ ರಾಮಾಯಣ ಸಂಗ್ರಹ—ಡಿ. ಎಲ್. ಎನ್. ಪೀಠಿಕೆ

ದ್ದರೆ ಅದರಿಂದ ಅವನು ಎಷ್ಟೇ ಪ್ರಯತ್ನಪಟ್ಟರೂ ವ್ರತಭಂಗವನ್ನು ಹೊಂದಿ, ಅಧೋಗತಿಗೆ ಇಳಿಯುವಂತಾಗುತ್ತದೆ. ಇದೇ ಮಾತು ರಾವಣನ ಪಾತ್ರದಲ್ಲಿ ಕಂಡುಬರುತ್ತದೆ."[2]

ವಾಲ್ಮೀಕಿ ಚಿತ್ರಿಸಿದ ರಾವಣನಂತೆ ನಾಗಚಂದ್ರನು ಚಿತ್ರಿಸಿದ ರಾವಣ ಸ್ವಭಾವತಃ ದುಷ್ಟನಲ್ಲ. ಸದ್ಗುಣಗಳ ಸಾಕಾರಮೂರ್ತಿಯಾಗಿದ್ದಾನೆ ಇಲ್ಲಿನ ರಾವಣ.

ರಾವಣ ವೈಶ್ರವಣನನ್ನು ಗೆಲ್ಲುವುದಕ್ಕಾಗಿ ತಪಸ್ಸು ಕೈಗೊಂಡು ಸಿದ್ಧಿಯನ್ನು ಪಡೆದು ನಂತರ ವೈಶ್ರವಣನೊಡನೆ ಕಾದಿ, ಅವನನ್ನು ಕೊಂದು ಹಿಂದಿನ ವೈರವನ್ನು ಮುಕ್ತಾಯಗೊಳಿಸುತ್ತಾನೆ. ನಂತರ ಪ್ರಾರಂಭವಾದ ಇವನ ದಿಗ್ವಿಜಯದ ಎದುರು ನಿಂತವರೇ ಇಲ್ಲ. "ರಾವಣ ತನ್ನ ಪೌರುಷವನ್ನು ಮೆರೆಯಲು ದಿಗ್ವಿಜಯ ಕೈಗೊಳ್ಳುತ್ತಾನೆಯೆ ಹೊರತು ಯಾರನ್ನೂ ಕೊಲ್ಲುವುದಕ್ಕಲ್ಲ. ತಾನು ಗೆದ್ದು ಸೆರೆ ಹಿಡಿದ ರಾಜರನ್ನೆಲ್ಲ ಅವನು ದಯೆಯಿಂದ ಬಿಡುಗಡೆ ಮಾಡುತ್ತಾನೆ. ಸಹಸ್ರಬಾಹು, ಇಂದ್ರ, ನಳಕೂಬರ ಮೊದಲಾದವರು ಅವನಿಂದ ಪರಾಭವಗೊಂಡರೂ ಅವನ ಗೌರವಾದರಗಳನ್ನು ಪಡೆಯುತ್ತಾರೆ. ಅವನು ಹೋದ ಕಡೆಯಲ್ಲೆಲ್ಲ ಯಜ್ಞ ಯಾಗಾದಿಗಳನ್ನು ತಪ್ಪಿಸಿ ಅಹಿಂಸೆಯ ಧ್ವಜವನ್ನೆತ್ತಿ ಹಿಡಿಯುತ್ತಾನೆ."[3] ವರುಣನೊಡನೆ ಕಾದಿ ಅವನನ್ನು ಗೆದ್ದು ಅವನ ರಾಜ್ಯವನ್ನು ಅವನಿಗೇ ಹಿಂತಿರುಗಿಸುತ್ತ "ಕಲಿ ಸಾವಂ ಪಿಡಿವಡೆವಂ, ಕಲಹದೊಳಿದು ಭಂಗಮಲ್ತು ನೀನ್ ಮುನ್ನಿನವೊಲ್, ನೆಲಸಿರ್ದು ನಿಜರಾಜ್ಯದೊಳ್ ಒಲವಿಂವಂ" ಎನ್ನುತ್ತಾನೆ. ರಾವಣನ ಔದಾರ್ಯಕ್ಕೆ ಇದಕ್ಕಿಂತಲೂ ಉದಾಹರಣೆ ಬೇಕೆ?

ರಾವಣನು ಯಾವ ಅನ್ಯ ಸ್ತ್ರೀಯನ್ನೂ ಬಲಾತ್ಕಾರದಿಂದ ತನ್ನ ಅಂತಃಪುರಕ್ಕೆ ಸೇರಿಸಿಕೊಂಡವನಲ್ಲ. ಅನಂತವೀರ್ಯ ಕೇವಲಿಗಳಿಂದ 'ಪರಾಂಗನಾ ವಿರತಿ' ವ್ರತವನ್ನು ಕೈಗೊಂಡವನು ಅವನು. ಇವನ ಈ ವ್ರತವನ್ನು ಒರೆಗೆ ಹಚ್ಚಲೋ ಎಂಬಂತೆ ಒಂದು ಸನ್ನಿವೇಶ ಆತನಿಗೆದುರಾಗುತ್ತದೆ. ದಿಗ್ವಿಜಯ ಯಾತ್ರೆ ಕೈಗೊಳ್ಳುತ್ತ ಪ್ರವೇಶಿಸಲೂ ದುರ್ಗಮವಾದ ನಳಕೂಬರನ ದುರ್ಲಂಘ್ಯಪುರಕ್ಕೆ ಮುತ್ತಿಗೆ ಹಾಕಿದಾಗ ಪ್ರವೇಶಿಸಲರಿಯದೆ ರಾವಣ ದಿಕ್ಕುಗಾಣದಿರಲು, ಮೊದಲಿನಿಂದಲೂ ರಾವಣನಲ್ಲಿ ಮೋಹಪರವಶಳಾದ, ರೂಪಿನಲ್ಲಿ ರಂಭೆಯನ್ನೂ ತಿರಸ್ಕರಿಸಿದ ನಳಕೂಬರನ ಹೆಂಡತಿ ಉಪರಂಭೆಯು ಪ್ರಣಯಭಿಕ್ಷೆಗಾಗಿ ದೂತಿ ಚಿತ್ರಮಾಲೆಯನ್ನು ರಾಯಭಾರಕ್ಕಾಗಿ ಅಟ್ಟುತ್ತಾಳೆ. ರಾವಣ ಮನಸ್ಸು ಮಾಡಿದ್ದರೆ ಉಪರಂಭೆ ಅವನ ಅಂತಃಪುರದ ಸ್ತ್ರೀಯರಲ್ಲೊಬ್ಬಳಾಗಬಹುದಿತ್ತು. ಆದರೆ ರಾವಣನ ವ್ರತಕ್ಕೆ ಭಂಗ ತರುತ್ತದೆ ಇದು. ಅವನ ಸಂಯಮವನ್ನು ಪರೀಕ್ಷಿಸುವ ಕಾಲವಿದು. ವಿಭೀಷಣನ ಸಲಹೆಯಂತೆ ಪುಸಿನುಣ್ಪುದೋರಿ ಉಪರಂಭೆಯಿಂದ ಕೋಟೆ ಗೆಲ್ಲುವ ವಿದ್ಯೆಯನ್ನು ಕಲಿತು, ನಂತರ ಗೆದ್ದು ಉಪರಂಭೆಯನ್ನು ರಹಸ್ಯದಿಂದ ಬರಮಾಡಿ 'ನೀನೆನಗೆ ವಿದ್ಯೋಪದೇಶಂಗೆಯ್ದುದಱಿಂ ಗುರುವಾದೆ. ಪೆಱತೇನುಮಂ ಬಗೆಯದೆ, ನಳಕೂಬರನೊಳ್ ಕೂಡಿ ಸುಖಮಿರು' ಎಂದು ಬುದ್ಧಿ ಹೇಳುತ್ತಾನೆ. ರಾವಣನ ಉದಾತ್ತಚರಿತಕ್ಕೆ ಇದು ಉತ್ತಮ ನಿದರ್ಶನ.

ಇಂತಹ ರಾವಣನ ಬದುಕಿನಲ್ಲಿ ಕ್ರೂರವಿಧಿ ಪ್ರವೇಶಿಸುತ್ತದೆ. ಅನುಪಮ ಸುಂದರಿಯರನ್ನು ತಿರಸ್ಕರಿಸಿದ ರಾವಣನಿಗೆ ಜಾನಕಿಯನ್ನು ಕಂಡಾಗ "ಪದ್ಮ ಪತ್ರದ ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ" ಪರಾಂಗನಾ ವಿರತಿ ವ್ರತವನ್ನು ಇದುವರೆಗೆ ನಿಷ್ಠೆಯಿಂದ ಪಾಲಿಸಿ ಸತ್ಯ, ಶೌಚ, ಗುಣ ಸಂಪತ್ತಿಗೆ ಹೆಸರಾದ ರಾವಣನ ಚಿತ್ತ ಚಂಚಲವಾಗುವುದೆ! "ಕಾಲ ವಶದಿಂ ಲಂಕೇಶ್ವರಂ ವಿಸ್ಮಯಾವಹಮಲ್ತಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ."

ಸೀತೆಯಲ್ಲಿ ಅನುರಕ್ತನಾದ ಈ ಒಂದು ತಪ್ಪು ಅವನ ನಾಶಕ್ಕೆ ಕಾರಣವಾಗುತ್ತದೆ. ಇಲ್ಲಿಂದ ಅವನು

---

[2] ಸಾಹಿತ್ಯ ಸುಧೆ–ಬಿ. ಎಸ್. ಕುಲಕರ್ಣಿ. ಪು. 103

[3] ನಾಗಚಂದ್ರ–ಸಿ. ಪಿ. ಕೆ. ಪು. 38-9

ಸೀತೆಯಲ್ಲಿ ಅತಿ ಮೋಹಗೊಂಡು ಯಾರ ಮಾತಿಗೂ ಬೆಲೆ ಕೊಡದಾಗುತ್ತಾನೆ. ಅವಲೋಕಿನೀ ದೇವತೆ ಮಾಡಿದ ಉಪದೇಶಗಳೊಂದೂ ಅವನಿಗೆ ಹಿಡಿಸುವುದಿಲ್ಲ. "ಬಿದಿಯುಂ ಮಿಱುಗುಮೆ ಪೆಱರ ಪೇೞ್ದುಪದೇಶಂ," "ಪುರಾತನ ಕರ್ಮಾಯತ್ತಮಲ್ತೆ ದೇಹಿಗಳೆಸಕಂ"—ಈ ಹೇಳಿಕೆಗಳೂ ಸಹ ರಾವಣನ ಪಾತ್ರ ದುರಂತವಲ್ಲ ಎಂಬುದಕ್ಕೆ ಸಮರ್ಥನೆಯನ್ನೊದಗಿಸುತ್ತವೆ. ಏಕೆಂದರೆ ಗ್ರೀಕರಲ್ಲಿ ಜನ್ಮಾಂತರಗಳಲ್ಲಿ ನಂಬಿಕೆ ಇರುವುದಿಲ್ಲ.

ರಾವಣನ ಮುಂದಿನ ಪಾತ್ರ ಚಿತ್ರಣದಲ್ಲೂ ದುರಂತವನ್ನು ಕಾಣಲಾಗುವುದಿಲ್ಲ. "ಪಂಪರನ್ನರ ದುರಂತ ದುರ್ಯೋಧನನಂತೆ ಹಿಡಿದ ಪಟ್ಟನ್ನೇ ಹಿಡಿದು 'ಗುರುವೃದ್ಧರ ಪೇೞ್ದ' ಹಿತೋಪದೇಶವನ್ನೂ ತಿರಸ್ಕರಿಸಿ ಕೊನೆಯ ವರೆಗೂ ಛಲವನ್ನೇ ಸಾಧಿಸಿದ ಏಕಗ್ರಾಹಿ ಅವನಲ್ಲ. ಸೀತೆಯನ್ನು ಕದ್ದು ತಂದದ್ದು ಧರ್ಮವೆಂದು ಅವನೆಂದೂ ಪ್ರಯತ್ನಿಸಲಿಲ್ಲ. ಸ್ವಾಭಿಮಾನದಿಂದ 'ಸ್ತ್ರೀರತ್ನಕ್ಕಾನಿರೆ ಪೆಱರಾರೊಡೆಯರ್', ಪೌಲಸ್ತ್ಯನಂ ಸಮರದೊಳ್ ಮಾನವರ್ ಮಿಱುವರೆ!" ಎಂದು ಸೀತಾಪಹರಣವಾದ ಹೊಸದರಲ್ಲಿ ಅವನು 'ಮುಂದಱಿಯದೆ' ತನ್ನ ಕಾರ್ಯವನ್ನು ಸಮರ್ಥಿಸಿಕೊಳ್ಳುತ್ತಿದ್ದರೂ ಬರಬರುತ್ತ ಸಂಗ್ರಾಮರಂಗದಲ್ಲಿ ತನ್ನ ನೆಚ್ಚಿನ ಬಂಟರೆಲ್ಲ ಕಳಿತ ಹಣ್ಣುಗಳಂತೆ ಕಳಚಿ ಬೀಳಲು ಅವನ ಅಭಿಮಾನ ಆಶೆಗಳು ಮಾಯವಾಗುತ್ತ ಬಂದುವು. ರಾಮನನ್ನು ಗೆಲ್ಲುವುದು ಅಸಾಧ್ಯವೆಂದು ಅವನಿಗೆ ಕಂಡುಬಂತು. ಈ ಸಮಯದಲ್ಲಿ ಅವನು ಸಂಧಿ ಮಾಡಿಕೊಳ್ಳುವುದಕ್ಕೂ ಪ್ರಯತ್ನಿಸುವನು. ಆದದ್ದಾಗಲಿ, "ಯುದ್ಧವನ್ನು ಕೊನೆಮುಟ್ಟ ಮಾಡಿಯೇ ಬಿಡಬೇಕೆಂಬ ಛಲವಿಲ್ಲ."[4] ಈ ಕಾರಣಗಳಿಂದಾಗಿ ದುರಂತ ರಾವಣನೆಂದು ನಾಗಚಂದ್ರನ ರಾವಣನನ್ನು ಬೊಟ್ಟು ಮಾಡುವುದು ಸರಿಯಲ್ಲ "...ಅವನನ್ನು 'ದುರಂತ ರಾವಣ' ಎನ್ನಬಹುದೇ ಎಂಬುದೇ ವಿಚಾರಾರ್ಹ. ಅವನು ದೌರ್ಬಲ್ಯಕ್ಕೆ ಒಮ್ಮೆ ತುತ್ತಾದುದು ನಿಜ. ಆದರೆ ಆ ದೌರ್ಬಲ್ಯ ಕಡೆಯತನಕ ನಿಲ್ಲಲಿಲ್ಲ. ನಡುವೆಯೇ ಅವನು ಎಚ್ಚೆತ್ತುಕೊಂಡು ಪರಿವರ್ತಿತನಾಗಿ ಸನ್ಮಾರ್ಗಗಾಮಿಯಾದುದನ್ನು ಕಾಣುತ್ತೇವೆ. ಅವನ ಸಾವು ವಿನಾಶವಲ್ಲ, ದುರಂತವಲ್ಲ; ಅವನು ಸತ್ತೂ ಬದುಕಿದಂತೆಯೆ. ಒಂದು ರೀತಿಯಿಂದ ಮಂಗಳಾಂತವೆ ಆಗಿರುವ ಈ ರಾವಣ ಪಾತ್ರವನ್ನು 'ದುರಂತ'ವೆಂದು ಕರೆಯುವುದು ಉಚಿತವೆನಿಸುವುದಿಲ್ಲ."[5] "ಪಾಶ್ಚಾತ್ಯ ರುದ್ರ ನಾಟಕಗಳಲ್ಲಿ ಕಾಣುವ ದುರಂತ ನಾಯಕರಂತೆ ವಿಮಲಸೂರಿಯೇ ಮುಂತಾದ ಜೈನ ಕವಿಗಳು ರಾವಣನ ಪಾತ್ರವನ್ನು ನಿರ್ಮಿಸಲು ಸಂಕಲ್ಪಿಸಿ ಹೊರಟರೆಂದು ಹೇಳುವುದಕ್ಕಾಗುವುದಿಲ್ಲ. ಆ ದೃಷ್ಟಿಯನ್ನು ಹೊಂದಿದ ಇಂದಿನವರಾದ ನಮಗೆ ಆ ರಾವಣನ ಪಾತ್ರ ಹಾಗೆ ಕಾಣುತ್ತದೆ."[6]—ಈ ಮಾತು ನಾಗಚಂದ್ರನ ರಾವಣನಿಗೂ ಅನ್ವಯಿಸುತ್ತದೆ.

Hindus infact have no tragedy — ಎಂದು H. H. Wilson ರವರು ಹೇಳಿರುವುದನ್ನು ಇಲ್ಲಿ ನೆನೆಯಬಹುದು. 'ದುರಂತ'ವೆಂಬ ಕನ್ನಡಕವನ್ನು ನಮ್ಮ ಕಣ್ಣಿಗೆ ಹಾಕಿಕೊಂಡು ನೋಡಿದಾಗ ಇಂತಹ ಪಾತ್ರಗಳು 'ದುರಂತ' ಪಾತ್ರಗಳಂತೆಯೇ ನಮಗೆ ಗೋಚರಿಸುತ್ತವೆ. ನಮಗೆ ಆ ಬಗೆಯ ಭ್ರಮೆಯನ್ನುಂಟುಮಾಡುತ್ತವೆ. ವಾಸ್ತವವಾಗಿ ಅವು ಮಂಗಳ ದೃಷ್ಟಿಯನ್ನುಳ್ಳವು.

ಆದುದರಿಂದ ಪಾಶ್ಚಾತ್ಯ ಚಿಂತನವಾದ 'ದುರಂತ'ವನ್ನು ನಾಗಚಂದ್ರನ ರಾವಣನಿಗೂ ಆರೋಪಿಸುವುದು ವಾಸ್ತವಕ್ಕೆ ದೂರಾಗುತ್ತದೆ.

---

4 ಪಂ. ರಾ. ಸಂ—ಡಿ. ಎಲ್. ಎನ್. ಪೀಠಿಕೆ.

5 ನಾಗಚಂದ್ರ—ಸಿ. ಪಿ. ಕೆ. ಪು, 42

6 ಪಂ. ರಾ. ಸಂ—ಡಿ. ಎಲ್. ಎನ್. ಪೀಠಿಕೆ xvii

ಬಿ. ಎಸ್. ಸಣ್ಣಯ್ಯ

ಬಂಧುವರ್ಮ ವಿರಚಿತ ಸತಿಧರ್ಮಸಾರ

ಸುಮಾರು 1200 ರಲ್ಲಿದ್ದ ಬಂಧುವರ್ಮನು ರಚಿಸಿರುವ ಕೃತಿಗಳು ಹರಿವಂಶಾಭ್ಯುದಯ[1] ಮತ್ತು ಜೀವ ಸಂಬೋಧನೆ[2] ಎಂದು ಇದುವರೆಗೆ ವಿದ್ವಜ್ಜನರಿಗೆ ತಿಳಿದು ಬಂದಿದ್ದಿತು. ಈಗ ಆತನ ಮತ್ತೊಂದು ಕೃತಿ ಸಂಶೋಧಕರಿಗೆ ಲಭ್ಯವಾಗಿದೆ.

ಚಿಕ್ಕದಾದರೂ ಮಹಿಳೆಯರಿಗೆ ಅತ್ಯುಪಯುಕ್ತವಾದ, ಸುಲಭ ಶೈಲಿಯಲ್ಲಿ ರಚಿತವಾದ ಈ ಗ್ರಂಥ 189 ಕಂದ ಪದ್ಯಗಳು ಹಾಗೂ ಒಂದು ಪ್ರಾಕೃತ ಗಾಹೆಯನ್ನು ಒಳಗೊಂಡಿದೆ. ಇದರಲ್ಲಿ ಸ್ತ್ರೀಯು ಮನೆಯ ನಿತ್ಯ ಕೆಲಸಗಳಲ್ಲಿ ನಡೆದುಕೊಳ್ಳಬೇಕಾದ ರೀತಿನೀತಿಗಳನ್ನೂ, ವಹಿಸಬೇಕಾದ ಅಗತ್ಯ ಎಚ್ಚರಿಕೆಯನ್ನೂ ಮನಮುಟ್ಟುವಂತೆ ನಿರೂಪಿಸಿರುವ ಕವಿ ಒಳ್ಳೆಯದಾವುದು ? ಕೆಟ್ಟದಾವುದು ? ಎಂಬ ಬಗ್ಗೆ ಪ್ರಸ್ತಾಪ ಮಾಡಿದ್ದಾನೆ.

ಸಾಹಿತ್ಯದಲ್ಲಿ ಇಂಥ ಕೃತಿಗಳು ತೀರಾ ವಿರಳವೆಂದೇ ಹೇಳಬೇಕಾಗಿದೆ. ಅದರಲ್ಲಿಯೂ ಕನ್ನಡ ಸಾಹಿತ್ಯದಲ್ಲಿ 12ನೆಯ ಶತಮಾನದ ಕೃತಿ ದೊರೆತಿರುವುದು ಅತ್ಯಂತ ವಿಶೇಷವೆಂದೇ ಗಣಿಸಬೇಕಾಗಿದೆ. ಏಕೆಂದರೆ, ಇದರಲ್ಲಿ ಅಂದಿನ ಸಾಮಾಜಿಕ ಕಟ್ಟುಕಟ್ಟಳೆಗಳು ನಮಗೆ ಸ್ಪಷ್ಟವಾಗಿ ಗೋಚರಿಸುತ್ತವೆ.

ಬಂಧುವರ್ಮನ ಕಾಲ, ದೇಶಾದಿಗಳ ವಿವರವಾಗಲಿ, ಆತನ ವೈಯಕ್ತಿಕ ವಿಷಯವಾಗಲಿ ಉಳಿದ ಎರಡು ಕೃತಿಗಳಂತೆಯೇ ಇದರಲ್ಲಿಯೂ ಸೊನ್ನೆಯಾಗಿಯೇ ಉಳಿದಿದೆ. ತನ್ನ ಪೂರ್ವ ಕವಿಗಳಾರನ್ನೂ ಇಲ್ಲಿಯೂ ನೆನೆಯುವುದಿಲ್ಲ.

ಈ ಕವಿಯು ಹರಿವಂಶಾಭ್ಯುದಯ ಮತ್ತು ಜೀವಸಂಬೋಧನೆಗಳ ಮೊದಲಲ್ಲಿ ಜಿನರು, ಸಿದ್ಧರು, ಆಚಾರ್ಯರು, ಉಪದೇಶಕರು, ಸಾಧುಗಳನ್ನು ಕ್ರಮವಾಗಿ ಸ್ತುತಿಸುವಂತೆಯೇ ಸತಿಧರ್ಮಸಾರದಲ್ಲಿಯೂ ಮಾಡಿದ್ದಾನೆ. ಅನಂತರ ಇತರ ಎರಡು ಕೃತಿಗಳಲ್ಲಿಯಂತೆಯೇ ಶಾರದಾದೇವಿಯನ್ನು ನೆನೆದಿರುತ್ತಾನೆ. ಹರಿವಂಶಾಭ್ಯುದಯದಲ್ಲಿ

> ದುರಿತಕುಳವಿಜಯ ಸಮುದಿತ । ನಿರುಪಮಗುಣನಿಳಯ ಭಗವದಭಿಮತ ವಿಳಸ
> ಚ್ಚರ ಸುಖಕರಮೆಂಬುವಱಿಂ । ಹರಿವಂಶಾಭ್ಯುದಯ ಕೃತಿಯನಾಂ ವಿರಚಿಸುವೆಂ ॥ (1-17)

ಎಂದು ಹೇಳಿದ ಕವಿಯು 'ಜೀವಸಂಬೋಧನೆ'ಯಲ್ಲಿ

> ಅಱಿವಿಲ್ಲದೆ ತಕ್ಕೆಡೆಂಗೊಳ್ । ತಱಿಸಲ್ಲದೆ ಕೊಡದರ್ ನಮೆವ ಜೀವಕ್ಕೆಲ್ಲಂ
> ನೆಱೆಯೆ ಹಿತಮೆಂದು ಬಗೆದಿದ । ನಱಿಪುವೆನಱಿವಂತು ಜೀವಸಂಬೋಧನೆಯಂ ॥ (1-7)

---

1 ಹರಿವಂಶಾಭ್ಯುದಯಂ : ಸಂ. ಬಿ. ಎಸ್. ಸಣ್ಣಯ್ಯ, ಕನ್ನಡ ಅಧ್ಯಯನಸಂಸ್ಥೆ, ಮೈಸೂರು 1974

2 ಜೀವಸಂಬೋಧನಂ : ಸಂ. ಎಚ್. ಶೇಷಯ್ಯಂಗಾರ್, ಮದರಾಸು ವಿಶ್ವವಿದ್ಯಾನಿಲಯ, ಮದರಾಸು, 1955

ಎಂದು ಹೇಳುತ್ತಾನೆ. ಹಾಗೆಯೇ 'ಸತಿಧರ್ಮಸಾರ'ದಲ್ಲಿ

ಪೃಥವಿಯೊಳು ಜೈನರೆನಿಸುವ | ಸತಿಯರಿಗಿದನಲ್ಪದಿಂದ ಧರ್ಮಾಧರ್ಮ
ಸ್ಥಿತಿಯು ಜಿನಪತಿಯು ನುಡಿಯಿಂ | ಹಿತವಹ ಸತಿಧರ್ಮಸಾರವಂ ವಿರಚಿಸುವೆಂ || (8)

ಎಂದು ಹೇಳಿಕೊಳ್ಳುತ್ತಾನೆ.

ಇಲ್ಲಿ ಈ ಬಗೆಯ ಹೇಳಿಕೆಗಳನ್ನು ಕೊಟ್ಟಿರುವ ಉದ್ದೇಶವೆಂದರೆ ಈ ಮೂರು ಕೃತಿಗಳ ಕರ್ತೃ ಬಂಧುವರ್ಮನೇ ಎಂಬ ಬಗ್ಗೆ ಅನುಮಾನಕ್ಕೆ ಆಸ್ಪದವಿರಬಾರದೆಂಬುದೇ ಆಗಿದೆ. ಜೊತೆಗೆ ಕವಿಯು ಗ್ರಂಥದ ಕೊನೆಯಲ್ಲಿ,

ಅನಿತನುಪ್ರೇಕ್ಷೆಯುಮೆಲ್ಲಮಂ | ಸಲೆವಾಗಿರೆ ಪೇಳ್ದ ಬಂಧುವರ್ಮ ಕವೀಂದ್ರಂ
ಮನವೊಲಿದು ಕೇಳ್ವುದೆಲ್ಲರು | ಘನಸಾರ ಸುಬೋಧೆ ಜೀವಸಂಬೋಧನೆಯಂ || (190)

ಎಂದು ಹೇಳಿರುವುದರಿಂದ ಈ ಕೃತಿಯ ಹೆಸರು 'ಜೀವಸಂಬೋಧನೆ'ಯೆಂದೂ ಹೇಳಲು ಅವಕಾಶವಿದೆ. ಆದರೆ ಹನ್ನೆರಡು ಅನುಪ್ರೇಕ್ಷೆಗಳ ನಿರೂಪಣೆಗಳನ್ನೊಳಗೊಂಡ 'ಜೀವಸಂಬೋಧನೆ'ಯೆಂಬ ಈತನದೇ ಮತ್ತೊಂದು ಕೃತಿಯಿರುವುದರಿಂದಲೂ, ಈ ಕೃತಿಯ ಮೊದಲಲ್ಲಿ "ಸತಿಧರ್ಮಸಾರವಂ ವಿರಚಿಸುವೆಂ" ಎಂದು ಹೇಳಿರುವುದರಿಂದಲೂ ಪ್ರಕೃತ ಕೃತಿಯನ್ನು 'ಸತಿಧರ್ಮಸಾರ'ವೆಂದೇ ಕರೆಯುವುದು ಉಚಿತವೆಂದು ತೋರುತ್ತದೆ. ಮೇಲಾಗಿ ಇದರಲ್ಲಿ ಹೇಳಿರುವ ಅಂಶಗಳು ಎಲ್ಲ ಜೀವಗಳನ್ನು ಕುರಿತದ್ದಾಗಿರದೆ, ಸತಿಯರಿಗೆ ಮಾತ್ರ ನಿರ್ದೇಶಿತವಾಗಿರುವುದರಿಂದ ಸತಿಧರ್ಮಸಾರ ಎಂಬ ಹೆಸರೇ ಔಚಿತ್ಯಪೂರ್ಣವಾದುದೂ ಆಗಿದೆ. ಇಲ್ಲಿ ಬರುವ ಕೊನೆಯ ಪದ್ಯದಿಂದ ಬಂಧುವರ್ಮನು ಜೀವಸಂಬೋಧನೆಯೆಂಬ ಕೃತಿಯಲ್ಲಿ ಅನುಪ್ರೇಕ್ಷೆಗಳನ್ನು ಹೇಳಿದ್ದೇನೆ ಎಂಬುದನ್ನು ಸೂಚಿಸುವಂತೆ ತೋರುತ್ತದೆ. ಎಂದರೆ, ಈ ಕೃತಿಗಿಂತ ಮೊದಲೇ ಜೀವಸಂಬೋಧನೆ ರಚಿತವಾಗಿದೆ ಎಂದು ಹೇಳಬೇಕಾಗುತ್ತದೆ.

ಆದರೆ ಇವೆಲ್ಲಾ ಊಹೆಗಳೇ ಹೊರತು ಖಚಿತವಾದ ಅಭಿಪ್ರಾಯಗಳಾಗುವುದಿಲ್ಲ. ಏನೇ ಆಗಲಿ, ಇಂಥ ಒಂದು ಅಪೂರ್ವ ಕೃತಿಯನ್ನು ರಚಿಸಿ 12ನೆಯ ಶತಮಾನದಲ್ಲಿಯೇ ಶ್ರಾವಕಿಯರಿಗೆ ಹಿತೋಕ್ತಿಗಳನ್ನು ನೀಡಿದ ಕವಿ ಬಂಧುವರ್ಮನು ತನ್ನದೇ ಆದ ವೈಶಿಷ್ಟ್ಯತೆಯಿಂದ ಗೌರವಾರ್ಹನಾಗಿದ್ದಾನೆ. ಇದರಲ್ಲಿ ಕಂಡುಬರುವ ಕೆಲವು ವಿಷಯಗಳು ಶ್ರಾವಕಿಯರಿಗೇ ಮೀಸಲಾಗಿದ್ದರೂ ಉಳಿದ ವಿಷಯಗಳು ಎಲ್ಲ ವರ್ಗದ ಸ್ತ್ರೀಯರಿಗೂ ಉಪಯುಕ್ತವಾದುದಾಗಿವೆ.

ಜಿನರಲ್ಲದನ್ಯದೈವ | ಮನವಚನ ಕಾಯವೆಂಬ ತ್ರಿಕರಣದಿಂದಂ
ನೆನೆಯದಿರು ಪೂಜೆಮಾಡದಿ | ರನವರತಂ ಮಾಡು ಜಿನರ ಪದಪೂಜೆಗಳಂ 16

ಜೈನರಲ್ಲದರ ಮನೆಯಲಿ | ಜೈನರ್ ಕೊಳಲಹುದೆ ಪಾಲು ತುಪ್ಪದ ಮೊಸರಂ
ಜೈನರಲ್ಲಿ ಶುದ್ಧ ದುರ್ಲಭ | ಜೈನರುಮಲ್ಲದರ ಮನೆಯ ರಸ ತ್ರಸದ ಮಯಂ 80

ಎಂಬಂಥ ಕೆಲವು ಹೇಳಿಕೆಗಳನ್ನು ಬಿಟ್ಟರೆ ಉಳಿದವೆಲ್ಲ ಎಲ್ಲ ಮಹಿಳೆಯರಿಗೂ ಅನ್ವಯಿಸುವಂಥವಾಗಿವೆ.

ನೆಲದ ಮೇಲಿರಿಸಿ ಮೊಸೆಯಂ | ಬಳಕೆಯ ಅಡಿಗೆಗಳ ನೀರೊಳದ್ದಲು ಬೇಡಂ
ತೊಳದದ್ದು ಜತನವಿರಿಸುಂ | ಜಲಶುದ್ಧಂ ನಾರಿಯರ್ಗೆ ಪುಣ್ಯಂ ಸಿದ್ಧಂ 64

ಹೊಸದಾಗಿಯೆಮ್ಮೆ ಈಯಲ್ | ಹಸುವೀಯಲ್ ಗಿಣ್ಣುಬೇಡ ಹದಿನೈದು ದಿನಂ
ಹಸನಲ್ಲ ಪಾಲಭೋಜ್ಯಂ | ವಸುಧೆಯೊಳುಂ ಪಾಪಬೀರುಗಳ್ ಕೇಳಿವಿಡಾ 75

ಅಡಿಗೆಯ ಮಡಕೆಯ ಮುಜಿಲೆಯ | ಕಡುಬೇಗಂ ತೊಳೆಯದಿರ್ದಡಾ ಮಡಕೆಗಳಂ
ಪಿಡಿವವು ತ್ರಸ ನೊಣ ನೊರಜುಂ | ತಡೆಯದೆ ನೀಂ ತಂಗಿ ಮಡಕೆಗಳ ತೊಳೆ ನಿಚ್ಚಂ 100

ಊರುಂಬ ಬಾವಿಗಿಂದಂ | ಆರೊಬ್ಬರು ಬಳಸದಿರ್ದ ಬಾವಿಯ ನೀರಂ
ಹೇರಾಳಸಹುವೆ ತಂಗೀ | ಧಾರುಣಿಯೊಳ್ ದಾನಿ ಲೋಭಗಳಿಗಿದು ದೃಷ್ಟಂ 151

ಮೊದಲಾದ ಪದ್ಯಗಳಲ್ಲಿ ಕಂಡುಬರುವ ಹೇಳಿಕೆಗಳು ಎಲ್ಲ ಜನರ ಮೆಚ್ಚುಗೆಗೆ ಪಾತ್ರವಾಗಿವೆ.

ಈ ಕೃತಿಯಲ್ಲಿ ಕವಿಯ ಲೋಕಾನುಭವವನ್ನೂ, ಉತ್ತಮರೀತಿಯ ನಡವಳಿಕೆಯಲ್ಲಿ ಆತನಿಗಿರುವ ಆಸಕ್ತಿಯನ್ನೂ ಮನಗಾಣಬಹುದಾಗಿದೆ. ಮೇಲಾಗಿ ಜೈನಧರ್ಮದ ಶ್ರೇಷ್ಠತೆಯ ಬಗ್ಗೆ ಅಗಾಧ ನಂಬುಗೆಯನ್ನು ತಳೆದಿದ್ದಾನೆ.

ಇಲ್ಲಿಯ ಕಂದಪದ್ಯಗಳಲ್ಲಿ ನಾಲ್ಕು ನಾಲ್ಕು ಮಾತ್ರೆಗಳ ಗಣಗಳಿಗೆ ಬದಲಾಗಿ ಕೆಲವೆಡೆ 3+5 ಅಥವಾ 5+3 ಗಣಗಳನ್ನು ಕಾಣುತ್ತೇವೆ. ಇಂತಹ ಪ್ರಯೋಗಗಳು ಬೇರೆ ಕಾವ್ಯಗಳಲ್ಲಿಯೂ ಕಂಡುಬರುತ್ತವೆ. ಏಳನೆಯ ಸ್ಥಾನದಲ್ಲಿ ಜಗಣ ಅಥವಾ ಸರ್ವಲಘು ಬರುವ ನಿಯಮವನ್ನು ಮೀರಿರುವುದು ಎಲ್ಲಿಯೂ ಕಂಡುಬರುವುದಿಲ್ಲ.

ಇದರ ಹಸ್ತಪ್ರತಿ ಮೂಡಬಿದರೆಯ ಶ್ರೀ ದಿಗಂಬರ ಜೈನ ಧರ್ಮಶಾಲೆಯ ಗ್ರಂಥಭಂಡಾರದಲ್ಲಿದೆ. ಇದನ್ನು ಇದುವರೆಗೆ ಯಾರೂ ನೋಡಿರಲಿಲ್ಲವೆಂದಲ್ಲ. ಇದನ್ನು ಪರಿಶೀಲಿಸಿ ಕನ್ನಡ ಪ್ರಾಂತೀಯ ತಾಡಪತ್ರಿ ಗ್ರಂಥಸೂಚಿಯಲ್ಲಿ ಸೇರಿಸಿದೆ. ಆದರೆ, ಅಲ್ಲಿ ಇದನ್ನು ಬಂಧುವರ್ಮನ ಜೀವಸಂಬೋಧನೆಯೆಂದೂ, ಅಸಮಗ್ರವೆಂದೂ ನಮೂದಿಸಲಾಗಿದೆ. ಅದನ್ನು ನಾನು ಪರಿಶೀಲಿಸಿದಾಗ ಈ ಗ್ರಂಥ ಜೀವಸಂಬೋಧನೆಯಲ್ಲದೆ ಬೇರೆ ಕೃತಿಯಾಗಿರುವುದು ಕಂಡುಬಂದಿತು. ಇದರಿಂದ ಬಂಧುವರ್ಮನ ಮೂರನೆಯ ಕೃತಿಯೊಂದು ಕನ್ನಡಿಗರಿಗೆ ದೊರೆತಂತಾಯಿತು. ಅದರಲ್ಲಿಯೂ ಕನ್ನಡ ಸಾಹಿತ್ಯದಲ್ಲಿಯೇ ವಿಶಿಷ್ಟವಾದಂಥ ಈ ಕೃತಿಯನ್ನು ಸಹೃದಯರು ಸಂತೋಷದಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇನೆ.

ವಿಗ್ರಹ ಒಬ್ಬ ದೇವತೆಯದ್ದಾದರೆ ಅಥವಾ ಮಹಾತ್ಮನದ್ದಾದರೆ ಅದಕ್ಕೆ ಮಾಡುವ ಪೂಜೆ ಭಕ್ತಿಯಿಂದ ಪ್ರೇರಿತವಾದುದಲ್ಲ; ಅದರಿಂದ ಮುಕ್ತಿ ಲಭಿಸುವುದಿಲ್ಲ. ಆದರೆ ಅದು ಸರ್ವೇಶ್ವರನಿಗೆ ಅನ್ವಯಿಸಿದರೆ ಭಕ್ತಿ ಮುಕ್ತಿಗಳೆರಡೂ ಪ್ರಾಪ್ತವಾಗುವುವು.

ಎಂ. ಎ. ಜಯಚಂದ್ರ

ಆಕಳ ಹಾಡು-ಗೋವಿನ ಹಾಡು

ಪುಣ್ಯಕೋಟಿ ಗೋವಿನ ಕಥೆ ಕನ್ನಡಿಗರೆಲ್ಲರಿಗೂ ಸುಪರಿಚಿತವಾಗಿದೆ. ಈ ಕಥೆ ಸಂಸ್ಕೃತ ವಾಙ್ಮಯದಲ್ಲು ಅನೇಕ ಕಡೆ ಬರುತ್ತದೆ. "ಮಹಾಭಾರತ, ಸ್ಕಾಂದಪುರಾಣ, ಪದ್ಮಪುರಾಣ ಹಾಗು ಪುರಾಣಸಾರದಲ್ಲಿ" ಈ ಕಥೆಯ ವಿವಿಧ ರೂಪಗಳನ್ನು ನಾವು ಕಾಣಬಹುದು. ಮಹಾಭಾರತದ ಅನುಶಾಸನ ಪರ್ವದ 150 ನೇ ಅಧ್ಯಾಯದ ಉಳಿಕೆಯ ಭಾಗದಲ್ಲಿ ಮತ್ತು ಮಾಧವಾಚಾರ್ಯರ ಅಥವಾ ವಿದ್ಯಾರಣ್ಯರ ಪುರಾಣಸಾರ ಕೃತಿಯಲ್ಲಿ ಸತ್ಯ ವ್ರತದ ಮಹತ್ವವನ್ನು ತಿಳಿಸುವ ಉದ್ದೇಶವನ್ನಿಟ್ಟುಕೊಂಡರೆ ; ಸ್ಕಾಂದಪುರಾಣದ ಪ್ರಭಾಸ ಖಂಡದ ಉಪಖಂಡ ಅರ್ಬುದ ಖಂಡದಲ್ಲಿ ಕಪಿಲ ತೀರ್ಥ ಮಹತ್ವದ ಕಾರಣವನ್ನು, ಅದೇ ಪುರಾಣದ ನಾಗರಖಂಡದಲ್ಲಿ ಕಲಶೇಶ್ವರ ಕ್ಷೇತ್ರದ ಮಹತ್ವವನ್ನೂ ; ಪದ್ಮಪುರಾಣದಲ್ಲಿ ನಂದಾ ಸರಸ್ವತಿಯೆಂಬ ನದಿಯ ಉಗಮದ ವಿಚಾರವನ್ನು ಈ ಗೋವಿನ ಕಥೆ ಪ್ರತಿಪಾದಿಸುತ್ತದೆ. ಆಯಾಯ ಉದ್ದೇಶಗಳಿಗೆ ತಕ್ಕಂತೆ ಗೋವಿನ ಹೆಸರೂ ಸಹ–ಬಹುಲಾ, ಕಪಿಲಾ, ನಂದಿನೀ ಎಂದು ಮುಂತಾಗಿ ಬೇರೆ ಬೇರೆಯಾಗುತ್ತದೆ [1]

ಮಹಾಭಾರತದಲ್ಲಿ ಭೀಷ್ಮರು ಯುಧಿಷ್ಠಿರನಿಗೆ ಸತ್ಯವ್ರತದ ಮಹಿಮೆಯನ್ನು ಹೇಳುವ ಸಂದರ್ಭದಲ್ಲಿ ಈ ಗೋವಿನ ಕಥೆಯನ್ನು ಹೇಳುತ್ತಾರೆ. ಅದರ ರೂಪರೇಖೆ ಈ ಕೆಳಗಿನಂತಿದೆ—

"ಮಾಥುರಾ ದೇಶದಲ್ಲಿ ಸ್ವಾತೀನಕ್ಷತ್ರ ನಿರ್ಮಿತವಾದ ಸುಂದರನಗರ ಚಂದ್ರಾವತಿ, ದೊರೆ ಇಂದ್ರಸೇನ, ಯಮುನೆಯ ತೀರದಲ್ಲಿದ್ದ ನಗರಿಯ ಧ್ವಜ ಕಾಮನ ಬಿಲ್ಲು. ಸುಂದರ ನಗರಕ್ಕೆ ಪರಿಸರದ ಹಲವು ಹತ್ತು ವಿಧದ ಮಂದಾರಾದಿ ಕುಸುಮಗಳಿಂದಲೂ ಫಲಭರಿತ ತರುನಿಕರದಿಂದಲೂ ಸೌಂದರ್ಯಾತಿಶಯ. ಸಮೀಪದ ಕಾಡಿನಲ್ಲಿ ಕಾಮರೂಪನೆಂಬ ಹುಲಿಯ ನಿವಾಸ. ಆ ರಾಜ್ಯದ ವಿಪ್ರನೊಬ್ಬನ ಹಸುವಿನ ಹೆಸರು ಬಹುಲೆ. ಸರ್ವಲಕ್ಷಣ ಸಂಪನ್ನೆಯಾದ ಈಕೆಯನ್ನು ನಂದಿಯೆಂಬ ಗೋವಳನು ರೋಹಿತ ಪರ್ವತಕ್ಕೆ ಮೇಯಿಸಲು ಕೊಂಡುಹೋದಾಗ ಕಾಮರೂಪದ ಕುದೃಷ್ಟಿಪಾತ. ಸತ್ಯಶಪಥಗಳಿಂದ ಪುನಃ ಗೋಕುಲದಿಂದ ಹಿಂದಿರುಗಿದಾಗ ತನ್ನನ್ನು ಭಕ್ಷಿಸುವಂತೆ ಗೋವಿನ ವಾಗ್ದಾನ–ಗೆಳತಿಯರನ್ನು, ಕರುವನ್ನು ಸಂತೈಸಿ ಹಿಂದಿರುಗಿದ ಹಸುವನ್ನು ನೋಡಿದ ಹುಲಿಗೆ ಪೂರ್ವ ಜನ್ಮ ಸ್ಮೃತಿ ಮಿತಿಮೀರಿತು. ಹತ್ಯೆಯಿಂದ ದೇವತೆಗಳ ಶಾಪಕ್ಕೆ ತುತ್ತಾದ ನೆನಪು. ಗೋವಿನ ಸತ್ಯಸಂಧತೆಯನ್ನರಿತ ಯೋಗಾಭ್ಯಾಸದಿಂದ ಮುಕ್ತಿ–ಬಹುಲೆಯು ಗೋಲೋಕಕ್ಕೆ ಹೋದುದು." ಈ ರೀತಿಯಾಗಿ ಕಥೆಯು ವಿಸ್ತಾರ ಗೊಳ್ಳುತ್ತದೆ.[2]

---

[1] ಹೆಚ್. ಎಸ್. ಘಾಟಕ್, 'ಬಹುಲೋಪಾಖ್ಯಾನ' ಜೀವನ ಮಾಸಪತ್ರಿಕೆ, ಸೆಪ್ಟೆಂಬರ್ 1973. 33_9

[2] ಅದೇ ಪು 2-3.

ಸಂಸ್ಕೃತ ಭಾಷೆಯ ಇತಿಹಾಸಸಮುಚ್ಚಯವೆಂಬ ಗ್ರಂಥದ 30ನೆಯ ಅಧ್ಯಾಯದಲ್ಲಿ ಬರುವ 'ಬಕುಳೋಪಾಖ್ಯಾನ' ನಮ್ಮ ಕನ್ನಡದ ಪುಣ್ಯಕೋಟಿ ಗೋವಿನ ಕಥೆಗೆ ಆಕರವಾಗಿದ್ದಿರಬೇಕು ಎಂದು ದಿವಂಗತ ಪ್ರಾಚಾರ್ಯ ಡಿ. ಎಲ್. ನರಸಿಂಹಾಚಾರ್ಯರು ಅಭಿಪ್ರಾಯಪಟ್ಟಿದ್ದಾರೆ. ಇವರು ಸಂಪಾದಿಸಿರುವ ಕೃತಿಯಲ್ಲಿ 114+23 ಪದ್ಯಗಳಿದ್ದರೆ, ಇತ್ತೀಚೆಗೆ 1971ರಲ್ಲಿ ಶ್ರೀ ಟಿ. ಕೇಶವಭಟ್ಟರು ಸಂಪಾದಿಸಿರುವ 'ಗೋವಿನ ಕತೆ ಹಾಡು' ಎಂಬ ಕೃತಿಯಲ್ಲಿ 237 ಪದ್ಯಗಳಿವೆ. ಪ್ರಕ್ಷಿಪ್ತ ಪದ್ಯಗಳು ಈ ಕಥೆಯ ಜನಪ್ರಿಯತೆಯನ್ನು ಸಾರುತ್ತವೆ. ಈ ಕಥೆಯ ಕವಿಯ ಹೆಸರು ನಮಗೆ ಗೊತ್ತಿಲ್ಲದಿದ್ದರೂ, ಆತ ನಿಸ್ಸಂಶಯವಾಗಿ ಜಾನಪದ ಸತ್ವವನ್ನು ಚೆನ್ನಾಗಿ ಮೈಗೂಡಿಸಿಕೊಂಡಿರುವ ಕವಿ.

ಕನ್ನಡ ಜಾನಪದ ಸಾಹಿತ್ಯದಲ್ಲೂ ಗೋವಿನ ಕಥೆಯ ಆಶಯವುಳ್ಳ 'ಕವುಲಿ ಹಾಡು'[1] 'ಆಕಳ ಹಾಡು'[2] ಮೊದಲಾದ ಕಥನ ಗೀತೆಗಳು ದೊರೆಯುತ್ತವೆ.[3] ಇಲ್ಲಿ ಆಕಳಹಾಡು ಮತ್ತು ಗೋವಿನ ಹಾಡು ಇವುಗಳ ತೌಲನಿಕ ಸಂಕ್ಷಿಪ್ತ ಪರಿಚಯವನ್ನು ಮುಖ್ಯವಾಗಿ ಮಾಡಲಾಗಿದೆ.

'ಆಕಳ ಹಾಡು'—ಒಂದು ಜಾನಪದ ಕಥನಗೀತೆ, ಆದರೆ 'ಗೋವಿನ ಹಾಡು'–ಒಂದು ಜನಪ್ರಿಯ ಕಥನ ಗೀತೆ (Popular tale song). ಈ ಎರಡು ಕಥನ ಗೀತೆಗಳ ಮೂಲ ಆಶಯ ಒಂದೇ ಆದರೂ ನಿರೂಪಣಾ ವಿಧಾನದಲ್ಲಿ ಸಾಕಷ್ಟು ವ್ಯತ್ಯಾಸವುಂಟು. ಈ ಎರಡು ಹಾಡುಗಳನ್ನು ಬರೆದವರು ಯಾರೆಂಬುದು ಗೊತ್ತಿಲ್ಲ. ಆದರಿಷ್ಟು ನಿಜ ಎನಿಸುತ್ತದೆ. ಆಕಳ ಹಾಡಿನಂತಹ ಜಾನಪದ ಕಥನ ಗೀತೆಗಳಿಂದ ಸ್ಫೂರ್ತಿ ಹೊಂದಿ, ಅಲ್ಪಸ್ವಲ್ಪ ವಿದ್ಯಾವಂತನಾದ ಅಜ್ಞಾತ ಕವಿಯೊಬ್ಬ ಬರೆದ ಜನಪ್ರಿಯ ಹಾಡು–ಗೋವಿನ ಹಾಡು. ತ್ರಿಪದಿಯಲ್ಲಿರುವ ಆಕಳ ಹಾಡಿನ ಸಂಗ್ರಹದ ಸಮಯದಲ್ಲಿ ಅನೇಕ ಪದ್ಯಗಳು ಕೈಬಿಟ್ಟು ಹೋಗಿರುವಂತೆ ಗೋಚರಿಸುತ್ತದೆ. ಒಂದನ್ನು ಜಾನಪದ ಸ್ತ್ರೀ ಬಿತ್ತರಿಸುವಂತಿದ್ದರೆ, ಮತ್ತೊಂದನ್ನು ಪುರುಷನು ಬಿತ್ತರಿಸುವಂತಿದೆ. ಈ ಎರಡು ಹಾಡುಗಳ ಪರಿಸರದ ಚಿತ್ರಣದಲ್ಲಿ ಅನೇಕ ವ್ಯತ್ಯಾಸಗಳು ಕಂಡುಬರುತ್ತವೆ. ಈ ಎರಡೂ ತಮ್ಮದೇ ಆದ ರೀತಿಯಲ್ಲಿ ಪರಿಪೂರ್ಣತೆಯನ್ನು ಹೊಂದಿವೆ. ಗೋವಿನ ಹಾಡಿನ ಕೊನೆಯ ಪದ್ಯಗಳು ಸಂಕ್ರಾಂತಿ ಹಬ್ಬಕ್ಕೂ ಗೋವುಗಳಿಗೂ ಸಂಬಂಧವನ್ನು ಕಲ್ಪಿಸುತ್ತದೆ. ಎರಡರ ಮೂಲ ಉದ್ದೇಶ ಸತ್ಯವ್ರತದ ಮಹಿಮೆಯ, ಹಿರಿಮೆಯ ವೈಜಯಂತಿಯನ್ನು ಎತ್ತಿ ಹಿಡಿಯುವುದೇ ಆಗಿದೆ.

ಗೋವಿನ ಹಾಡಿನಲ್ಲಿ–ಕಳಿಂಗನೆಂಬ ಗೊಲ್ಲ, ಪುಣ್ಯಕೋಟಿಯೆಂಬ ಹಸು, ಅರ್ಬುತನೆಂಬ ಹುಲಿ–ಈ ಮೂರು ಪಾತ್ರಗಳು ಕಂಡು ಬಂದರೆ, ಆಕಳ ಹಾಡಿನಲ್ಲಿ–ಹಸು, ಹುಲಿ ಈ ಎರಡು ಮುಖ್ಯ ಪಾತ್ರಗಳು ಕಂಡು ಬರುತ್ತವೆ. ಆಕಳ ಹಾಡಿನಂತಹ ಹಾಡುಗಳ ಆಧಾರದ ಮೇಲೆ ಗೋವಿನ ಹಾಡು ಬೆಳೆದದ್ದು ಎಂದು ಭಾವಿಸಲು ಅದರ ಗೊಲ್ಲನ ಪಾತ್ರವೇ ಒಂದು ದೊಡ್ಡ ಸಾಕ್ಷಿಯಾಗಬಹುದೇನೊ. ಇದಕ್ಕೆ ಅದರ ಭಾಷೆ ಹಾಗು ಕಥಾ ನಿರೂಪಣೆಯೂ ಧ್ವನಿಗೂಡಿಸಬಹುದು. ಗೊಲ್ಲನ ಪಾತ್ರವಿಲ್ಲದಿದ್ದರೂ ಆ ಹಾಡಿನ ಮುಖ್ಯ ಆಶಯಕ್ಕೆ ಯಾವ ಧಕ್ಕೆಯೂ ಆಗುತ್ತಿರಲಿಲ್ಲ. ಆದರೆ ಗೋವಿನ ಕಥೆಯೆಂಬ ಚಿತ್ರಕ್ಕೆ ಆಕರ್ಷಕ ಚೌಕಟ್ಟಾಗಿದೆ.

ಕಾಳಿಂಗ ಕರ್ನಾಟಕದ ಒಬ್ಬ ಗೊಲ್ಲ. ಅವನ ವೈಭವ ಹೇಳತೀರದು. ಆದ್ದರಿಂದಲೇ ಅವನ 'ಪರಿಯ ನಾನೆಂತು ಪೇಳ್ವೆನು' ಎನ್ನುತ್ತಾನೆ ಕವಿ. ಗೊಲ್ಲಗೌಡನಾದ ಕಾಳಿಂಗ, ಪದಕ, ಕಡಗ, ಬಿಲ್ಲೆಸರ, ಮುತ್ತಿನ ಸರ,

---

[1] ನೋಡಿ 'ಗಾಡಿನ ಚೂಡಾಮಣಿ' ಸಂ. ಟಿ. ಕೇಶವಭಟ್ಟ, 1971, ಪುಟ 195

[2] ನೋಡಿ. 'ಮಲ್ಲಿಗೆ ದಂಡೆ' ಸಂ. ಕಾಪಸೆ ರೇವಪ್ಪ 1948, ಪುಟ 30

[3] ಶ್ರೀ ಮತಿಘಟ್ಟ ಕೃಷ್ಣಮೂರ್ತಿಯವರ ಸಂಗ್ರಹದಲ್ಲಿ ಹುಲಿ–ಹಸುವಿನ ಕೋಲಾಟದ ಪದವಿರುವಂತೆ ತಿಳಿದು ಬರುತ್ತದೆ. ನೋಡಿ 'ಹೊನ್ನಬಿತ್ತೇವು ಹೊಲಕೆಲ್ಲ.' ಪುಟ 655

ಮುದ್ರಿಕೆಯುಂಗುರ ಮುಂತಾದ ಆಭರಣಗಳಿಂದ, ಚಂದ್ರಗಾವಿಯ ಅಂಗಿ, ಇಂದ್ರನೀಲದ ಪಾಂಗು, ಚಂದ್ರಕಾಂತಿಯ ದುಪಟಿಗಳಿಂದ ಚೆನ್ನಾಗಿ ಶೋಭಿಸುತ್ತಾನೆ. ಈತ ಉದಯ ಕಾಲದಲ್ಲೆದ್ದು ನದಿಯಲ್ಲಿ ಸ್ನಾನಮಾಡಿ, ಹಣೆಯಲ್ಲಿ ಮದನ ತಿಲಕವನ್ನಿಟ್ಟು ಎಳೆಯ ಮಾವಿನ ಮರದ ಕೆಳಗೆ ಕೊಳಲನೂದುತ್ತಾನೆ. ಆಗ ಬಳಸಿ ಬರುವ ತುರುಗಳನ್ನು ಹೆಸರಿಡಿದು ಕರೆಯುತ್ತಾನೆ—

ಗಂಗೆ ಬಾರೇ ಗೌರಿ ಬಾರೇ । ತುಂಗಭದ್ರೆ ನೀನು ಬಾರೇ
ಅಂಗನಾಮಣಿ ನೀನು ಬಾರೆಂದು । ಅಂಗವಿಸಿ ಗೊಲ್ಲ ಕರೆದನು.
ಪುಣ್ಯಕೋಟಿಯೆ ನೀನು ಬಾರೆ । ಪುಣ್ಯವಾಹಿನಿ ನೀನು ಬಾರೆ
ಪೂರ್ಣಗುಣ ಸಂಪನ್ನೆ ಬಾರೆಂದು । ನಾಣ್ಯದಿಂ ಗೊಲ್ಲ ಕರೆದನು

ಗೊಲ್ಲ ಕರೆದ ಆ ಧ್ವನಿಗೆ ಪಶುಗಳೆಲ್ಲ ಬರುತ್ತವೆ. ಆಗ ಹಾಲನ್ನು ಕರೆಯುತ್ತಾನೆ. 'ಅಲ್ಲಿ ತುಂಬಿತು ಬಿಂದಿಗೆ'. ಬೆಳಿಗ್ಗೆ ಈ ಕಾರ್ಯಕ್ರಮ ಆದನಂತರ ಎಲ್ಲ ಹಸುಗಳು ಕಾಡಿಗೆ ಮೇಯಲು ಹೋಗುತ್ತವೆ. ಮತ್ತೆ ಸಂಜೆಗೆ ದೊಡ್ಡಿಗೆ ಹಿಂತಿರುಗಿ ಬರುತ್ತವೆ. ಹೀಗೆ ಬರುವಾಗ ಒಂದು ದಿನ ಪುಣ್ಯಕೋಟಿ ಹುಲಿಯ ಕೈಗೆ ಸಿಕ್ಕಿಬೀಳುತ್ತದೆ.

ಆಕಳ ಹಾಡಿನ ಕಥಾ ಪ್ರಾರಂಭವೇ ಬೇರೊಂದು ರೀತಿ. ಇಲ್ಲಿಯ ಆಕಳು ಋಷಿ ಆಶ್ರಮದ 'ಬವಲಿ'. ಇದಕ್ಕೆ ಯಾವ ಹೆಸರೂ ಇಲ್ಲ. ಆದರೆ 'ಬಳಲ್ದೇವಿ' ಎಂದು ಆತ್ಮೀಯತೆಯಿಂದ ಕರೆಯಲಾಗಿದೆ. ಕಥೆ, ಬವಲಿ ಕರುವನ್ನು ಹಾಕುವ ಸಂದರ್ಭದಿಂದ ಆರಂಭವಾಗುತ್ತದೆ. ಬವಲಿಗೆ ಸ್ತ್ರೀಯ ಸ್ಥಾನವನ್ನು ಕೊಟ್ಟಿರುವುದರಿಂದ 'ನಾರೀ' ಎಂದು ಸಹ ಸಂಬೋಧಿಸಲಾಗಿದೆ. ಕರುವನ್ನು ಪುತ್ರ, ಕಂದ, ಬಾಲ ಎಂದು ಕರೆಯಲಾಗಿದೆ.

ಬವಲಿ ಹಡೆಯುವಾಗ ಅದನ್ನು ನಡುಮನಿಯಲ್ಲಿ ಕಟ್ಟಿದ್ದಾರೆ.[1] ಅದರ ಸುತ್ತ ಒಳ್ಳೆಯ ಬಟ್ಟೆಯನ್ನು ಕಟ್ಟಿ ಮರೆಮಾಡಿದ್ದಾರೆ.

ಪಟ್ಟೋಲಿ ಗುಡಿ ತಂದು ಕಟ್ಟ್ಯಾರ ನಡುಮನಿ ।
ಸುತ್ತಸಾರುವ ಹೊಳಿಯುವ । ಗುಡಿಗೋಳು ।
ಕಟ್ಟ್ಯಾರ ಬವಲಿ ನಡುಮನಿಯ ॥

ಅನಂತರ ಬವಲಿನಾರಿ ಪುತ್ರನನ್ನು ಹೇಗೆ ಹಡೆದಳು ? ಹೇಗೆ ಬೆವತಳು ?

ತಟ್ಟಾನೆ ಈ ಕಾಲ ತಪ್ಪಾನೆ ತೊಯ್ದ್ಯಾವ ।
ಮುತ್ತಸುರದಂಗ ಬೆವತಾಳ । ಬವಲಿ ತಾ ।
ಪುತ್ರನ ಈಗ ಹಡದಾಳ ॥

ಇಲ್ಲಿ 'ಮುತ್ತ ಸುರದಂಗ ಬೆವತಾಳ' ಎಂಬ ಸಾದೃಶ್ಯ ಅರ್ಥಪೂರ್ಣವಾಗಿ ಸೊಗಯಿಸುತ್ತದೆ. ಇಂಥ ಸನ್ನಿವೇಶಗಳಲ್ಲಿ ಸರಳ ನುಡಿಗಳಲ್ಲಿ ಅಶ್ಲೀಲತೆಯ ಸೋಂಕಿಲ್ಲದೆ ಬಂದಿರುವ ಗಾಂಭೀರ್ಯ ಸ್ತುತ್ಯಾರ್ಹವಾದುದಾಗಿದೆ.

ಹಡೆದ ಹಸುವಿಗೆ ಮಾಡಬೇಕಾದ ಕ್ರಿಯೆಯನ್ನು ಮಾಡುತ್ತಾರೆ—

[1] ಕವುಲಿ ಹಾಡಿನಲ್ಲಿ ಹಸುವಿನ ಗಬ್ಬದ ತಿಂಗಳುಗಳ ಪ್ರಸ್ತಾಪ ಬರುತ್ತದೆ. ಅಲ್ಲದೆ ಮನೆಯೊಡತಿ ಹಾಲು ಕರೆಯಲು ಹೋದಾಗ ಆಕಳು ಒದ್ದುದರಿಂದ, 'ಹೋದಲ್ಲಿ ನಿನ್ನ ಹುಲಿ ತಿನ್ನಲಿ' ಎಂದು ಶಾಪಕೊಟ್ಟ ಸಂಗತಿ ಇದೆ.

ಉಚ್ಚಾಯ ದಿನದಲ್ಲಿ ದಡ್ಡಿಯ ಉಡುಗೂಸಿ।
ಉಪ್ಪ ಅಂಬೀಲ ಕರಿಯ ಬೇವನೆ ತರಿಸಿ।
ಕೆಂಚಲ ಮ್ಯಾಲ ಇಳವ್ಯಾರ॥

ಆಮೇಲೆ ಹಾಲನ್ನು ಕರೆದು, ಗಿಣ್ಣನ್ನು ಕಾಯಿಸಿ, ಋಷಿ ಆಶ್ರಮದ ನಡುಮನಿಯಲ್ಲಿ ತಂದಿಟ್ಟಿದ್ದಾರೆ. ಸುತ್ತ ಮುತ್ತಲ ಗೋವಳರೆಲ್ಲ ಸೇರಿದ್ದಾರೆ. ಬಾಳೆ ಎಲೆಯನ್ನು ಹಾಸಿ ಗಿಣ್ಣನ್ನು ಊಟಮಾಡಿದ್ದಾರೆ. ಎಲ್ಲರೂ, 'ಬಾಲನ ತಾಯಿ ಸುಖನಿರ' 'ಕಂದನ ತಾಯಿ ಸುಖನಿರ' 'ಪುತ್ರನ ತಾಯಿ ಸುಖನಿರ'—ಎಂದು ಹರಸಿ,ಆಶೀರ್ವದಿಸಿದ್ದಾರೆ. ಕೆಲದಿನಗಳನಂತರ ಆಶ್ರಮದ ಮುನಿಯು,

ಲಕ್ಷಣವಂತಿ ಗುಣವಂತಿ । ಬವಲಿ ತಾ । ಹೊಕ್ಕೊವ್ಮೆ ಬಾರ ಹೊಲಗೋಳ॥

—ಎಂದು ಆರತಿಯನ್ನು ಎತ್ತಿ ಮೇವಿಗೆ ಕಳಿಸಿದ್ದಾನೆ. ಇದು 'ಲಕ್ಷಣವಂತಿ ಗುಣವಂತಿ' ಅಷ್ಟೆ ಅಲ್ಲ. 'ಬರದ ಬತ್ತಿಸಿದಂತಾ ಕರ ಚೆಲುವಿ ಬವಲಿ'. ಈ 'ಬಳಲ್ದೇವಿ' ಬಾವಂಜಿ ಬನಕ್ಕೆ 'ಮುಂದ ಹಿಂಡsನ್ನಾಕಿ, ಹಿಂದ ತಾ ಆಗಿ' 'ಪರದಕ್ಷದಿಂದ ನಡದಾಳ'. ಕಾಡಿನಲ್ಲಿ 'ಹಿರಿದೊಂದು ಕಿರಿದೊಂದು ತೆನಿಯ ಹುಲ್ಲನೆ ಮೆಯ್ದು'

ಒಳಿಯ ಒಳಿಯ್ಯಾಕ್ಹೋಗಿ ಹೊಡಿಯ ಹುಲ್ಲನೆ ಮೆಯ್ದು।
ಒಪ್ಪುಳ್ಳ ಕೊಡವ ತಿಳಿಯ ನೀರನೆ। ಕುಡಿದು।
ಕೆಂಚಲ ತುಂಬಿ ಬಿಗಿದಾವ॥

ಹುಲುಸಾಗಿ ಬೆಳೆದಿದ್ದ ಹುಲ್ಲನ್ನು ತಿಂದು, ಹೊಳೆಯಲ್ಲಿ ತಿಳಿಯಾದ ನೀರನ್ನು ಕುಡಿದುದರಿಂದ ಕೆಚ್ಚಲು ಬಿಗಿಯಿತು. ಏರಿಯನ್ನು ಇಳಿದು ಬರಬೇಕಾಗಿರುವುದರಿಂದ ಅದರ ನಡೆಗೆ ಮಂದಗತಿಯಾಯಿತು. ಆಗ,

ಮುಂದ ಹಿಂಡನ್ನಾಕಿ, ಹಿಂದೆ ತಾ ಆದಾsಳ।
ಏರೊಮ್ಮಿ ಇಳಿದು ಬರುವಾಗ।
ನಾರಿ ಕಂಡಾಳ ಹುಲಿಗೋಳ॥

ಗೋವಿನ ಹಾಡಿನಲ್ಲಿ ಹುಲಿಯ ಕೈಗೆ ಹಸುವು ಸಿಕ್ಕಿಬೀಳುವುದಕ್ಕೆ ದೊರೆಯುವ ಕಾರಣ, ಆಕಳ ಹಾಡಿನಲ್ಲಿರುವಂತೆ ಸೊಗಸಾಗಿ ಸಕಾರಣವಾಗಿಲ್ಲ. ಆದರೆ ಇವೆರಡರ ನಡುವೆ ನಡೆಯುವ ಸಂಭಾಷಣೆ ಸೊಗಸಾಗಿ ಬಂದಿದೆ.

ಹಸಿದ ಹುಲಿ : ಬೀಳ ಹೊಯ್ವೆನು ನಿನ್ನನೀಗಲೆ ಸೀಳಿಬಿಡುವೆನು....

ಪುಣ್ಯಕೋಟಿ: ಒಂದು ಬಿನ್ನಹ ಹುಲಿಯೆ ಕೇಳು। ಕಂದನಿರುವನು ದೊಡ್ಡಿಯೊಳಗೆ
ಒಂದು ನಿಮಿಷದಿ ಮೊಲೆಕೊಟ್ಟು। ಬಂದು ನಾನಿಲ್ಲಿ ನಿಲ್ಲುವೆ.
ಮಗನ ನೆನೆದು ಮೋಹ ಬಲಿದು। ಹೋಗುತಲಿದೆ ಮೊಲೆಯ ಹಾಲು
ಮಗನಿಗೀಗಲೆ ಮೊಲೆಯ ಕೊಟ್ಟು। ಮಗುಳೆ ಬಂದಿಲ್ಲಿ ನಿಲುವೆನು*

ಹುಲಿ : ಹಸಿದ ವೇಳೆಗೆ ಸಿಕ್ಕಿದೊಡವೆಯ। ವಶವಮಾಡದೆ ಬಿಡಲು ನೀನು
ನುಸುಳಿ ಹೋಗುವೆ ಮತ್ತೆ ಬರುವೆಯ। ಹುಸಿಯನಾಡುವೆ...

ಹಸು : ಸತ್ಯವೆಂಬುದೆ ತಾಯಿತಂದೆ। ಸತ್ಯವೇ ನಮ್ಮ ಬಂಧು ಬಳಗವು
ಸತ್ಯ ವಾಕ್ಯಕೆ ತಪ್ಪಿನಡೆದರೆ। ಸತ್ಯ ಶ್ರೀಹರಿ ಮೆಚ್ಚನು*

---

*ಈ ಗುರುತಿರುವ ಪದ್ಯಗಳನ್ನೆಲ್ಲ ಶ್ರೀ. ಟಿ. ಕೇಶವ ಭಟ್ಟರ. 'ಗೋವಿನ ಕತೆ ಹಾಡು' ಎಂಬ ಹಾಡಿನಿಂದ ಆಯ್ದಿದೆ.

ಕಡೆಗೆ ಹುಲಿಯು ಕಾರುಣ್ಯದಿಂದ ಪುಣ್ಯಕೋಟಿ ಕಂದನಿಗೆ ಮೊಲೆಯೂಡಿಸಲು ದೊಡ್ಡಿಗೆ ಹಿಂದಿರುಗುತ್ತದೆ. ಮೇಲಿನ ಸಂಭಾಷಣೆಗಿಂತ ಮೊದಲು ವ್ಯಾಘ್ರ,'ಹೊಲನ ಗದ್ದೆಯ ಹಾಳುಮಾಡಿದೆ, ಬೆಳೆದ ಪೈರನು ಸವಿದು ಕೆಡಿಸಿದೆ'-ಎಂದು ದೂರು ಹೊರಿಸುತ್ತದೆ. ಆಗ ಪುಣ್ಯಕೋಟಿಯು,

ಹಾಳು ಮಾಡುವ ಗರತಿಯಲ್ಲ । ಬೀಳು ಮಾಡುವ ಗೈನೆಯಲ್ಲ
ಬಾಳುವಂತೆ ಮಾಳ್ಪೆ ಧರೆಯೊಳು । ಕೇಳಯ್ಯ ಹುಲಿರಾಯನೆ

—ಎಂದು ಮುಂತಾಗಿ ಉತ್ತರಿಸುತ್ತದೆ. ಈ ಭಾಗವು ಸಹ ಆಕಳ ಹಾಡಿನಲ್ಲಿ ಇಲ್ಲ. ಆದರೆ ಗೋವಿನ ಹಾಡಿನಲ್ಲಿ ಇಲ್ಲದ ವಿಧಿಯ ಪ್ರಸ್ತಾಪ ಇದರಲ್ಲಿದೆ. ಬವಲಿ ಹುಲಿಯನ್ನು ಕಂಡಾಗ ಹೆದರುವುದಿಲ್ಲ. ಅದನ್ನು ನಿಂದಿಸುವುದೂ ಇಲ್ಲ. ಆಗ ಅದರ ಮನಸ್ಸು ಹೀಗೆ ಯೋಚಿಸುತ್ತಿತ್ತು—

ಎತಲೀದು ಹುಲ್ಲೀದು ಎತಲೀದು;ನೀರೀದು ।
ಎತಲೆನ್ನ ಇದಿಯು ಎಳೆದೆನ್ನ । ತಂದೀತು ।
ಪುತ್ರನ ಇಂದ ಅಗಲೀವ ॥

ಅನಂತರ, 'ಕರುವಿಗೆ ಮೊಲೆಕೊಟ್ಟು ಬರುತ್ತೇನೆ. ಅಲ್ಲಿಯವರೆಗೂ ಅವಕಾಶಕೊಡು. ಈ ಮಾತು, ಬಾಳಿಯ ನಿಂಬಿಯ ಅತ್ತಿಯ ಬನಗಳ ತಂಪಿನಲ್ಲಿ ಆಡುವ ಬಾಲಯ್ಯನಾಣೆ, ಕಂದಯ್ಯನಾಣೆ, ಪುತ್ರಯ್ಯನಾಣೆ, ಹುಸಿಯಲ್ಲ'—ಎಂದು ಬೇಡಿಕೊಂಡು, ಹುಲಿಯ ದಯೆಯಿಂದ ತನ್ನ ಕರುಳಕುಡಿಯಲ್ಲಿಗೆ ಬರುತ್ತದೆ.

ಹುಲಿಗೆ ವಿಶ್ವಾಸ ಮೂಡುವಂತೆ ಬವಲಿ ನುಡಿಯುವ ರೀತಿ ಬಹು ಸಹಜವಾಗಿದೆ,ಸರಳವಾಗಿದೆ. ಇದನ್ನು ತಿಳಿಸುವ ಆ ಮೂರು ತ್ರಿಪದಿಗಳೂ ಆ ಬವಲಿ ತನ್ನ ಕರುವಿನ ಬಗ್ಗೆ ಎಂಥ ವಾತ್ಸಲ್ಯ ಹೊಂದಿತ್ತೆಂಬುದನ್ನು ತಿಳಿಸುವೆತ್ತ. ಅಲ್ಲದೆ ಮುದ್ದಾದ ಕರುವಿನ ಕಲ್ಪನೆಯನ್ನು ನಮ್ಮಲ್ಲಿ ಮೂಡಿಸುತ್ತದೆ. ಇಲ್ಲಿಯ ಸೊಗಸು ಅಲ್ಲಿಲ್ಲ. ಆದರೆ ಅಲ್ಲಿಯ 'ಸತ್ಯವೆಂಬುದೆ ತಾಯಿ ತಂದೆ'-ಎಂಬ ಮಂತ್ರಸದೃಶ ಪದ್ಯ ಇಲ್ಲಿಲ್ಲ.

ಪುಣ್ಯಕೋಟಿ ದೊಡ್ಡಿಗೆ ಬಂದೊಡನೆಯೇ,'ಮುದ್ದು ಮೊಗದ ಮಗನೆ ಬಾರೋ, ಗುದ್ದಿ ಮೊಲೆಯನುಣ್ಣು ಬಾರೋ'* ಎಂದು ಕರೆದು,

ಕಟ್ಟಕಡೆಯಲಿ ಮೇಯಬೇಡ ಬೆಟ್ಟದೊತ್ತಿಗೆ ಹೋಗಬೇಡ
ದುಷ್ಟವ್ಯಾಘ್ರನು ಹೊಂಚುತಿರುವನು:। ನಟ್ಟನಡುವಿರು ಕಂದನೆ*

—ಎಂದು ಎಚ್ಚರಿಕೆಯ ಉಪದೇಶ ನೀಡುತ್ತದೆ. ಅಲ್ಲದೆ ತಾನು ಹುಲಿಗೆ ತುತ್ತಾಗಬೇಕಾಗಿರುವುದನ್ನು ಸಹ ತಿಳಿಸುತ್ತದೆ. ಆಗ ಕರು,

ಅಮ್ಮ ನೀನು ಸಾಯಲೇಕೆ
ನಮ್ಮ ತಬ್ಬಲಿ ಮಾಡಲೇಕೆ
ಸುಮ್ಮನಿಲ್ಲಿಯೆ ನಿಲ್ಲು*

—ಎನ್ನುತ್ತದೆ. ಪುಣ್ಯಕೋಟಿಗೆ ಇದೊಂದು ಪ್ರಲೋಭನೆ. ಆದರೆ ಅದರ ಸ್ವಭಾವ ಚಂಚಲವಲ್ಲ. ಸತ್ಯಧರ್ಮದಲ್ಲಿ ಅದಕ್ಕೆ ಪೂರ್ಣ ನಿಷ್ಠೆ. ಆದ್ದರಿಂದಲೇ ಹೇಳುತ್ತದೆ—

ಕೊಟ್ಟ ಭಾಷೆಗೆ ತಪ್ಪಲಾರೆನು । ಕೆಟ್ಟಯೋಚನೆ ಮಾಡಲಾರೆನು
ನಿಷ್ಠೆಯಿಂದಲಿ ಪೋಪೆನಲ್ಲಿಗೆ । ಕಟ್ಟಕಡೆಗಿದು ಖಂಡಿತ

ಕೊಟ್ಟ ಭಾಷೆಗೆ ತಪ್ಪಿದಾರೆ | ಸೃಷ್ಟಿಯೊಳು ಶ್ರೀಹರಿಯು ಮೆಚ್ಚನು
ಎಷ್ಟು ಕಾಲ ಇರುವುದೀ ಕಾಯ | ಕಟಕಟಾ ಕಂದಯ್ಯನೆ.

ಮಕ್ಕಳಿಗೆ ತಾಯಿಯೇ ಸರ್ವಸ್ವ. ಅಂತಹದರಲ್ಲಿ ಕಣ್ಣ ಮುಂದೆಯೇ ತಾಯಿ ಹುಲಿಯ ತುತ್ತಾದರೆ, ಮಕ್ಕಳ ಗತಿಯೇನು ? ಅವರ ಸಮಸ್ಯೆಯೇನು ಸಾಮಾನ್ಯವಾದುದೇ ? ಆದ್ದರಿಂದಲೇ ಪುಣ್ಯಕೋಟಿಯ ಕಂದ ಪ್ರಶ್ನಿಸುತ್ತದೆ—

ಆರ ಮೊಲೆಯುಲಿ ಕುಡಿಯಲಮ್ಮ ? | ಆರ ಸೇರಿ ಬದುಕಲಮ್ಮ ?
ಆರ ಬಳಿಯುಲಿ ಮಲಗಲಮ್ಮ ? | ಆರು ನನಗೆ ಹಿತವರು ?

ಆಗ ಪುಣ್ಯಕೋಟಿ ತನ್ನ ಒಡಹುಟ್ಟಿದವರೊಡನೆ, ಹಿರಿಯರೊಡನೆ ತನ್ನ ತಬ್ಬಲಿ ಮಗುವನ್ನು ರಕ್ಷಿಸಲು ಪ್ರಾರ್ಥಿಸಿಕೊಳ್ಳುತ್ತದೆ—

ಮುಂದೆ ಬಂದರೆ ಹಾಯಬೇಡಿರಿ | ಹಿಂದೆ ಬಂದರೆ ಒದೆಯ ಬೇಡಿರಿ
ನಿಮ್ಮ ಕಂದಾನೆಂದು ಕಾಣಿರಿ | ತಬ್ಬಲಿಯನೀ ಕರುವನು.

ಇಲ್ಲಿ ಪುಣ್ಯಕೋಟಿ ಯಾವುದೋ ಸ್ವಕೀಯವಾದ ಆದರ್ಶದ ಸಾಧನೆಗಾಗಿ ಇನ್ನಿತರ ವಿಷಯಗಳಲ್ಲಿ ಬೇಜವಾಬ್ದಾರಿಯುತಳಾಗಿ ವರ್ತಿಸುವುದಿಲ್ಲ. ತನ್ನ ಸತ್ಯವಾಕ್ಯ ಪರಿಪಾಲನೆಗೆ ತೋರುವ ನಿಷ್ಠೆ ಅಷ್ಟೇ ತನ್ನ ಮಗನ ಪಾಲನೆಯ ವ್ಯವಸ್ಥೆಗೂ ತೋರಿಸುತ್ತಾಳೆ. ಇದು ಪರಮೋತ್ಕೃಷ್ಟ ವರ್ತನೆಯಾಗಿದೆ.[1] ಅನಂತರ ಪುಣ್ಯಕೋಟಿ ಅರ್ಭುತನಿದ್ದೆಡೆಗೆ ತೆರಳುತ್ತದೆ.

ಆಕಳ ಹಾಡಿನಲ್ಲಿ ಕರುವಿಗೆ ತನ್ನ ತಾಯಿಹುಲಿಯ ಕ್ರೂರದವಡೆಗೆ ಹಿಂದಿರುಗುವುದು ಸ್ಪಷ್ಟವಾಗಿ ಗೊತ್ತಾಗುವುದೇ ಇಲ್ಲ. ಬವಲಿ ತಿಳಿಸದಿರುವುದೇ ಅದರ ಪಾತ್ರಚಿತ್ರಣಕ್ಕೊಂದು ಮೆರುಗು ಬಂದಿದೆ. ಅದು ಆಶ್ರಮಕ್ಕೆ ಬಂದೊಡನೆಯೇ ತನ್ನ ಹಿರಿಯ ಬವಲಿಗಳೊಡನೆ ತನ್ನ 'ಅರಬಕ್ಷಿ ಪರಬಕ್ಷಿ' ಕುಮಾರನನ್ನು ನೋಡಿಕೊಳ್ಳುವಂತೆಯೂ, ಒಬ್ಬೊಬ್ಬರು ಒಂದೊಂದು ದಿನ ಮೊಲೆ ಕುಡಿಸಬೇಕೆಂತಲೂ ಪ್ರಾರ್ಥಿಸಿ, ತನ ಕರ್ತವ್ಯವನ್ನು ನೆರವೇರಿಸುತ್ತಾಳೆ. ಅನಂತರ,

ಬೇಲಿಮಾಲೀನ್ಹುಲ್ಲ ಚಾಯದಲೆಯ್ದಾವೆಂದು ।
ಹೋಗಿ ಮೆಲಿಬ್ಯಾಡ ಬಾಲಮಲ್ಲಿಗಿ ನಿನ್ನ |
ನಾಲೀಗ್ಗಿ ಮುಳ್ಳ ಮುರದ್ಯಾವ ||

ಹುತ್ತಿನ ಮ್ಯಾಲೀನ್ಹುಲ್ಲ ಹಚ್ಚಗೆಯ್ದಾವೆಂದು |
ಹೋಗಿ ಮೆಲಿಬ್ಯಾಡ ಬಾಲಮಲ್ಲಿಗಿ ನಿನ್ನ |
ಕುತ್ತೀಗಿ ಸರಪ ಹರದಾsವ ||

ಭಾಂವಿ ಮ್ಯಾಲಿನ ಹುಲ್ಲ ಚಾಯದಲೆಯ್ದಾವೆಂದು |
ಹೋಗಿ ಮೆಲಿಬ್ಯಾಡೊ ಬಾಲಮಲ್ಲಿಗಿ ನಿನ್ನ |
ಕಾಲ ಜಾರಿದರ ಮುಣಗೀಯೊ ||

—ಎಂದು ತನ್ನ 'ಬಾಲಮಲ್ಲಿಗಿ' ಕಂದನಿಗೆ ಉಪದೇಶಿಸುತ್ತಾಳೆ. ಇದನ್ನೆಲ್ಲ ಆಲಿಸುತ್ತಿದ್ದ ಮುದ್ದು ಕರುವಿಗೆ ಏನೆನಿಸಿತೋ, ಯಾವ ಅಗಲಿಕೆಯ ಮೂಕವೇದನೆ ಆಯಿತೋ,

---

[1] ಎಸ್. ವಿ. ಪರಮೇಶ್ವರ ಭಟ್ಟ, 'ಕನ್ನಡದಲ್ಲಿ ಕಥನ ಕವನ: ಗೋವಿನ ಹಾಡು' 'ಹೊನ್ನಬಿತ್ತೇವು ಹೊಲಕೆಲ್ಲ' ಪುಟ 649.

ಇಷ್ಟನ್ನೆಲ್ಲಾ ಹೇಳಿ ನೀ ಎಲ್ಹೋಗತಿ ತಾಯಿ । ನೀಹ್ವಾದಲಿ ನಾನು ಬದುವ್ಯೇನ ।

—ಎಂದು ಹೃದಯ ಕಲಕುವ ಮಾತನಾಡುತ್ತದೆ. ಒಂದೆಡೆ ಎಲ್ಲಿ ತನ್ನ ತಾಯಿ ತನ್ನನ್ನು ಬಿಟ್ಟು ಹೋಗುತ್ತಾಳೋ ಎಂಬ ಕಳವಳ, ಗಾಬರಿ ಕರುವಿನಲ್ಲಿ ಉಂಟಾದರೆ, ಮತ್ತೊಂದೆಡೆ ಮೃತ್ಯುದೇವತೆಯ ಔತಣವಾಗಿ ಹೋಗುತ್ತಿರುವ ಬವಲಿಗೆ, ತನ್ನ ಕರುಳ ಕುಡಿ ತನ್ನನ್ನೆಲ್ಲಿ ಹಿಂಬಾಲಿಸುವುದೋ ಎಂಬ ಭೀತಿ ಉಂಟಾಗುತ್ತದೆ. ಆದ್ದರಿಂದಲೆ ಹುಲಿಯ ವಿಷಯ ಹೇಳದೆ ತಕ್ಷಣ ಬಾವಂಜಿ ಬನಕ್ಕೆ ಅಭಿಮುಖವಾಗುತ್ತದೆ.

ಗೋವಿನ ಹಾಡಿನಲ್ಲಿ ಪುಣ್ಯಕೋಟಿ ಹುಲಿರಾಯನನ್ನು ಕರೆದು—

ಅಣ್ಣ ಬಾರೋ ಹುಲಿಯ ರಾಯನೆ । ಹಸಿದೆಯಲ್ಲೋ ದೋಷ ಬಂದಿತು
ಎನ್ನ ಆಹಾರವನು ಬೇಗನೆ । ಕೊಳ್ಳೆಲೋ ಹುಲಿರಾಯನೆ
ಖಂಡವಿದೆಕೊ ರಕ್ತವಿದೆಕೊ । ಗುಂಡಿಗೆಯ ಕೊಬ್ಬಾಗಳಿದೆ ಕೊ
ಉಂಡು ಸಂತಸಗೊಂಡು ನೀ ಭೂ । ಮಂಡಲದೊಳು ಬಾಳಯ್ಯನೆ

—ಎನ್ನುತ್ತ ತನ್ನನ್ನು ತಾನೇ ವ್ಯಾಘ್ರನಿಗೆ ಅರ್ಪಿಸಿಕೊಳ್ಳುತ್ತದೆ. ಆತ್ಮ ಬಲಿದಾನಕ್ಕೆ ಸಿದ್ಧವಾಗಿ ನಿಂತಿದೆ. ಆದರೆ ಹುಲಿ, ಸತ್ಯವಾಕ್ಯದಂತೆ ಹಿಂದಿರುಗಿ ಬಂದಿರುವ ಗೋವನ್ನು ನೋಡಿ, 'ಕನ್ಯೆಯಿವಳನು ಕೊಂದು ತಿಂದರೆ ಎನ್ನನಾ ಹರಿ ಮೆಚ್ಚನು'—ಎಂದು ಮನದಲ್ಲಿ ನಿರ್ಧರಿಸಿ, 'ಹಾರಿ ಆಕಾಶಕ್ಕೆ ನೆಗೆದು ತನ್ನ ಪ್ರಾಣವ ಬಿಟ್ಟಿತು.'

ಆಕಳ ಹಾಡಿನಲ್ಲಿ ಬವಲಿ ಮೃಗರಾಜನಲ್ಲಿಗೆ ಬಂದು,
ಮಲಗಿರುವ ಹುಲಿರಾಜನ ತೊಡಿ ಬಡೆದು ಎಬ್ಬಿಸಿ ।
ಅನ್ಯವನಾಡದೆ ಕರತಿನ್ನ ।

—ಎನ್ನುತ್ತದೆ. ಆದರೆ ಹುಲಿ—

ನನ್ನವ್ವ ನನ ತಾಯಿ ನಾ ನಿನ್ನ ತಿನಲಾರ । ಇನ್ನಾರ ತಿಂಗಳುಪ್ವಾಸ ।

—ಎಂದು ಬಿಡುತ್ತದೆ. ಇಲ್ಲಿ ಹುಲಿಯ ಒಳತೋಟಿ ವಾಚ್ಯವಾಗಿ ಚಿತ್ರಣಗೊಳ್ಳದೆ ಸೂಚ್ಯವಾಗಿರುವುದನ್ನು ಗಮನಿಸಬಹುದು. ಹುಲಿಯ ಸಾವಿನ ಮಾತಿಲ್ಲ, ಆರು ತಿಂಗಳು ಉಪವಾಸಮಾಡುವಂತೆ ಹೇಳಲಾಗಿದೆ.

'ಗೋವಿನಷ್ಟು ಸಾಧುವಾದ ಪ್ರಾಣಿ ಇನ್ನೊಂದಿಲ್ಲ. ವ್ಯಾಘ್ರದಷ್ಟು ಕ್ರೂರವಾದ ಪ್ರಾಣಿ ಮತ್ತೊಂದಿಲ್ಲ. ಈ ಎರಡು ವಿರುದ್ಧ ಸ್ವಭಾವದ ಪ್ರಾಣಿಗಳಿಗೆ ಸಂಬಂಧಿಸಿದ ಕಥೆಯಲ್ಲಿ ಸತ್ಯದ ವೈಭವವನ್ನು, ಮಹತ್ವವನ್ನು ಹೃದಯಂಗಮವಾಗಿ ಚಿತ್ರಿಸಿದ'[1] ಹಾಡುಗಳಾಗಿವೆ ಮೇಲಿನವರೆಡು.

ಆಕಳಹಾಡಿನಲ್ಲಿ ಒಟ್ಟು 31 ಪದ್ಯಗಳಿವೆ. ಇವುಗಳಲ್ಲಿ ಕಥೆಗೆ ಸಂಬಂಧಿಸದ ಮೊದಲಿನ ಮೂರು, ಕಡೆಯ ಒಂದು ಪದ್ಯವನ್ನು ಕಳೆದರೆ 27 ಪದ್ಯಗಳಾಗುತ್ತವೆ.ಕಾಕತಾಳೀಯ ನ್ಯಾಯದಂತೆ ಕನ್ನಡ ಬಾವುಟದಲ್ಲಿ 29 ಪದ್ಯಗಳಲ್ಲಿ ಬಿ. ಎಂ. ಶ್ರೀ. ಅವರು ಗೋವಿನ ಹಾಡನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಇದರಿಂದ ಒಂದು ವಿಷಯ ವ್ಯಕ್ತವಾಗುತ್ತದೆ. ಅದೇನೆಂದರೆ, ಮೇಲಿನ ಹಾಡ್ಗತೆಗಳ ಮೂಲಆಶಯ ಕೇವಲ 25-30 ಪದ್ಯಗಳಲ್ಲಿ ನಿರೂಪಿತವಾಗಿರಬೇಕೆಂದು. 30 ಪದ್ಯಗಳ ಕಥೆಯನ್ನುಗೋವಿನ ಹಾಡಿನ ಕವಿ, ಪ್ರೌಢ ಕಾವ್ಯಗಳ ಮಾದರಿಯಲ್ಲಿ ಪುಟ್ಟಕಾವ್ಯವನ್ನು ರಚಿಸಲು ಹವಣಿಸಿರುವಂತೆ ತೋರುತ್ತದೆ. 114+23 ಪದ್ಯಗಳವರೆಗೆ ಬೆಳೆದಿರುವ ಡಿ. ಎಲ್. ಎನ್ ಸಂಪಾದಿತ 'ಗೋವಿನ ಹಾಡಿನಲ್ಲಿ' ಕಥೆಯನ್ನು ಸಂಕ್ರಾಂತಿಯ ಪ್ರಾಶಸ್ತ್ಯವನ್ನು ಅಭಿವ್ಯಕ್ತಗೊಳಿಸುವುದಕ್ಕೂ ಬಳಸಿಕೊಂಡಿರು

[1] ರಂ. ಶ್ರೀ. ಮುಗಳಿ ಗೋವಿನ ಹಾಡು ಪುಸ್ತಕದ ಮುನ್ನುಡಿಯಲ್ಲಿ. ಕಸಾಪ. 1972.

ವುದನ್ನು ಗಮನಿಸಬಹುದಾಗಿದೆ. 237 ಪದ್ಯಗಳಲ್ಲಿ ಶ್ರೀ ಟಿ. ಕೇಶವಭಟ್ಟರು ಸಂಪಾದಿಸಿರುವ ಗೋವಿನ ಕತೆ ಹಾಡಿನಲ್ಲಿ,

ಎನ್ನ ಉಚ್ಛ್ವಾಸಗಳೆ ವೇದವು । ಎನ್ನ ನೇತ್ರವೆ ಸೂರ್ಯಚಂದ್ರರು
ಎನ್ನ ಕರ್ಣವೆ ಇಂದ್ರಲೋಕವು । ಎನ್ನ ದೇಹವಿದೊಳ್ಳಿತು

—ಎಂದು ಪ್ರಾರಂಭವಾಗುವ ಪದ್ಯಗಳಲ್ಲಿ ಗೋಮಹಾತ್ಮೆಯನ್ನು ಪ್ರಕಟಿಸಲು ಪ್ರಯತ್ನಿಸಿರುವುದನ್ನು ಸಹ ಗುರುತಿಸಬಹುದಾಗಿದೆ.

ಮಹಾಭಾರತ, ಸ್ಕಾಂದಪುರಾಣದ ಎರಡುಕಡೆ ಮತ್ತು ಪದ್ಮಪುರಾಣದಲ್ಲಿ ಬರುವ ಬಹುಲೋಪಾಖ್ಯಾನದಲ್ಲಿ, ಕೊಟ್ಟ ಮಾತಿನಂತೆ ಹಿಂದಿರುಗಿ ಬಂದ ಹಸುವನ್ನು ಕಂಡ ಹುಲಿ ತನ್ನ ಪೂರ್ವಜನ್ಮದ ಸ್ಮರಣೆಹೊಂದುವ ಸಂಗತಿ ಉಂಟು. ಅಲ್ಲದೆ ಹುಲಿ ಶಾಪಗ್ರಸ್ತನಾಗಿದ್ದ ರಾಜ ಎಂಬುದೂ ತಿಳಿಯುವುದು. ಈ ಅಂಶಗಳು ಕನ್ನಡದ ಹಸುವಿನ ಹಾಡ್ಗತೆಗಳಲ್ಲಿ ಕಂಡುಬಾರದಿರುವುದೊಂದು ಗಮನಾರ್ಹವಾದುದಾಗಿದೆ.

—ಹೀಗೆ ಬಹುಳೋಪಾಖ್ಯಾನಗಳನ್ನು ತೌಲನಿಕವಾಗಿ ಗಮನಿಸುತ್ತಾ ಹೋದರೆ, ಅನೇಕ ಸ್ವಾರಸ್ಯ ಸಂಗತಿಗಳು ಗೋಚರಿಸುತ್ತಾ ಹೋಗುತ್ತವೆ. ಅದೇನೆ ಇರಲಿ, ಮೆಲುಪು ಬಲುಪನ್ನು ಗೆಲ್ಲುವುದಕ್ಕೆ, ಅಹಿಂಸೆ ಹಿಂಸೆಯನ್ನು ಗೆಲ್ಲುವುವಕ್ಕೆ ಉತ್ತಮ ಪ್ರತಿಮೆಯಾಗಿದೆ ಪುಣ್ಯಕೋಟಿಯ ಕಥೆ. ಪುಣ್ಯಕೋಟಿ ಆಕಳಿನಂತೆ ಯಾರು ಸತ್ಯಕ್ಕೆ ತಮ್ಮನ್ನು ತಾವು ಅರ್ಪಿಸಿಕೊಂಡು, ಪ್ರಲೋಭನೆಗಳನ್ನು ಗೆದ್ದು, ಸತ್ಯಧರ್ಮಾಚರಣೆಯ ಎದುರಿನಲ್ಲಿ ತಮ್ಮ ಕಾಯವನ್ನು ಸಹ ಅಲ್ಪವೆಂದು ಭಾವಿಸುವರೋ ಅವರಿಗೆ ಕೋಟಿ ಪುಣ್ಯ ಮೀಸಲಾದುದೆಂದು ಧ್ವನಿಸುವಂತಿವೆ ಕನ್ನಡದ ಜಾನಪದ ಹಾಡ್ಗತೆಗಳು.

ಎಸ್. ಶ್ರೀನಿವಾಸನ್.

ರತ್ನಾಕರವರ್ಣಿಯ ಶತಕತ್ರಯ

ಕನ್ನಡ ಸಾಹಿತ್ಯವು ಚಂಪೂ, ರಗಳೆ, ಷಟ್ಪದಿ, ಸಾಂಗತ್ಯ, ತ್ರಿಪದಿ ಮುಂತಾದ ವಿವಿಧ ಪ್ರಕಾರಗಳಲ್ಲಿ ಪ್ರವರ್ಧಮಾನವಾಗಿ ಬೆಳೆದು ನಿಂತಿರುವ ಒಂದು ಮಹಾ ವಿಶಾಲ ವಾರಿಧಿ. ಹೀಗೆ ಹಲವಾರು ಮುಖಗಳಲ್ಲಿ ಪ್ರಗತಿಯನ್ನು ಸಾಧಿಸುತ್ತ ಮುನ್ನಡೆಯುತ್ತಿರುವ ಈ ವಿಸ್ತೀರ್ಣವಾದ ಸಾಹಿತ್ಯವಾರಾಶಿಯಲ್ಲಿ 'ಶತಕ' ಎಂಬ ಒಂದು ಪ್ರಕಾರ ಪ್ರತಿಫಲನಗೊಂಡು ಕನ್ನಡ ಸಾಹಿತ್ಯವನ್ನಷ್ಟೇ ಅಲ್ಲದೆ ಕನ್ನಡಿಗರ ಬದುಕನ್ನೂ ಶ್ರೀಮಂತಗೊಳಿಸಿದೆ. ಶೃಂಗಾರ, ಭಕ್ತಿ, ಜ್ಞಾನ, ತತ್ತ್ವ, ನೀತಿ, ವೈರಾಗ್ಯ—ಇವೇ ಮೊದಲಾದ ವಿವಿಧ ಛಂದಗಳಲ್ಲಿ ಹರಿದುಬಂದ ಶತಕ ಸಾಹಿತ್ಯ ಮಾನವನ 'ಮುಕ್ತಿ' ಸಾಧನೆಗೆ ಮೂಲವಾಗಿದೆ.

ಸಾಮಾನ್ಯವಾಗಿ ಶತಕಗಳನ್ನು ರಚಿಸಿದ ಕವಿಗಳು 'ನೂರು' ಸಂಖ್ಯೆಯನ್ನೇ ಪರಿಮಿತವಾಗಿ ಬಳಸಿಕೊಂಡು ಕೆಲವು ವೇಳೆ ನೂರೊಂದು, ನೂರೆಂಟು ಮತ್ತೆ ಕೆಲವು ಬಾರಿ ನೂರಿಪ್ಪತ್ತೆಂಟು ಪದ್ಯಗಳವರೆವಿಗೂ ಮುಂದುವರಿಸಿಕೊಂಡು ಹೋಗಿರುವುದನ್ನು ನಾವು ಕಾಣುತ್ತೇವೆ. ಈ ಶತಕಗಳು ಸಾಮಾನ್ಯವಾಗಿ ಶೃಂಗಾರ ವೈರಾಗ್ಯ ಹಾಗೂ ನೀತಿಶತಕಗಳಾಗಿಯೇ ಇರುತ್ತವೆ. ನೂರು ವರುಷ ಪರಿಪೂರ್ಣವಾದ ಬಾಳನ್ನು ಬಾಳಬೇಕೆಂದು, ಬಾಳಬೇಕೆಂಬ ಗುರಿಯನ್ನು ಗಮನದಲ್ಲಿರಿಸಿಕೊಂಡು 'ಶತಮ್ ಎಂಬುದು ಪಶ್ಯೇಮ, ಜೀವೇಮ, ನಂದಾಮ, ಮೋದಾಮ,ಭವಾಮ,ಶ್ರುಣುವಾಮ, ಪ್ರಬ್ರವಾಮ, ಅಜೀತಾಸ್ಯಾಮ ಶರದಃ ಶತಮ್ ಎಂಬ ತಾತ್ಪರ್ಯವನ್ನೊಳಗೊಂಡು ಶತಕಗಳ ವಿರಚನೆಯಾಗಿದೆಯೆನ್ನಬಹುದು. ಕನ್ನಡ ಶತಕಗಳಲ್ಲಿ ಮುಕುಟ ನಿಯಮವನ್ನು ಕೊನೆಯ ಪಾದದಲ್ಲಿ ಪಾಲಿಸಿಕೊಂಡು ಬಂದಿದ್ದಾರೆ.ಇದುವರೆವಿಗೆ ಕನ್ನಡ ಸಾಹಿತ್ಯದಲ್ಲಿ ಸುಮಾರು 143 ಶತಕಗಳು ದೊರೆತಿವೆ.

ಈ ಶತಕಗಳನ್ನು (ಅ) ಭಕ್ತಿ-ಜ್ಞಾನ-ವೈರಾಗ್ಯ ನಿರೂಪಕ ಶತಕಗಳು, (ಇ) ಮತ-ಧರ್ಮ-ತತ್ತ್ವ ನಿರೂಪಕ ಶತಕಗಳು (ಉ) ಲೋಕನೀತಿ ಅಥವಾ ಅನುಭವ ನಿರೂಪಕ ಶತಕಗಳು (ಎ) ಶೃಂಗಾರನಿರೂಪಕ ಅಥವಾ ಅಪವಾದ ಶತಕಗಳೆಂದು ವಿಭಾಗಮಾಡಿಕೊಂಡು ಅಭ್ಯಾಸಮಾಡಲು ಸೂಕ್ತವಾಗಿ ಕಂಡುಬರುತ್ತದೆ.

ರತ್ನಾಕರ ಮಹಾಕವಿ ವಿಶ್ವಕವಿ ಪಂಕ್ತಿಯಲ್ಲಿ ರಾರಾಜಿಸುತ್ತಿರುವನು. ಆತನ ಪಾಂಡಿತ್ಯ, ಪ್ರತಿಭೆ, ದೃಷ್ಟಿ, ಮನೋಧರ್ಮ, ಶೈಲಿ—ಇವುಗಳು ವಿಶ್ವಕವಿಯ ಮಹೋನ್ನತ ಸ್ಥಾನವನ್ನು ಈತನಿಗೆ ಒದಗಿಸಿಕೊಟ್ಟಿವೆ. ಆತನ ಶತಕ ಸಾಹಿತ್ಯ ಕನ್ನಡಸಾಹಿತ್ಯ ದೇವಿಗೆ ಹಿಡಿದಿರುವ ರನ್ನಗನ್ನಡಿ. ಈತನ ಶತಕವನ್ನು ತಮಿಳು ಸಾಹಿತ್ಯದ 'ಕುರಳ್'ಗೆ ಹೋಲಿಸಬಹುದು. ಏಕೆಂದರೆ ಅದು ಮಾನವನಿಗೆ ಬೇಕಾದ ನೀತಿಯನ್ನು ಬೋಧಿಸುತ್ತದೆ. ದಾಂಪತ್ಯ ವಿಜ್ಞಾನ, ರಾಜನೀತಿ, ಪ್ರೇಮಸಾಮ್ರಾಜ್ಯದ ಉನ್ನತಸ್ಥಾನ, ವಿಷಯಲೋಲುಪತೆಯ ವಿಡಂಬನೆ—ಇವುಗಳನ್ನು ರತ್ನಾಕರವರ್ಣಿಯು 'ತಿರುವಳ್ಳುವರಂ'ತೆಯೇ ಸ್ವಾನುಭವಪೂರ್ವಕವಾದ ನಿದರ್ಶನಗಳೊಡನೆ ಮನ ಮುಟ್ಟುವಂತೆ ಚಿತ್ರಿಸಿದ್ದಾನೆ.

ಕ್ರಿ. ಶ. 1457 ರಲ್ಲಿ ಬದುಕಿ ಬಾಳಿದ ರತ್ನಾಕರವರ್ಣಿಯು ಸೂರ್ಯವಂಶಕ್ಕೆ ಸೇರಿದ ದೇವರಾಜನ ಮಗ. ಕಾರ್ಕಳದ ಅರಸು ಭೈರವರಾಜನ ಆಸ್ಥಾನ ಕವಿಯಾಗಿ 'ಶೃಂಗಾರಕವಿ' ಎಂಬ ಬಿರುವನ್ನು ಪಡೆದಿದ್ದ. ಕಾರಣಾಂತರದಿಂದ ಕುಪಿತನಾಗಿ ಜೈನಧರ್ಮಕ್ಕೆ ತಿಲಾಂಜಲಿಯನ್ನಿತ್ತು ವೀರಶೈವ ಮತವನ್ನು ಸ್ವೀಕರಿಸಿದನಾದರೂ ಸಾಯುವ ಮುನ್ನ ಜೈನಮತಕ್ಕೆ ಹಿಂದಿರುಗಿದ. ಭರತೇಶ ವೈಭವ, ಅಪರಾಜಿತೇಶ್ವರಶತಕ, ತ್ರಿಲೋಕಶತಕ, ರತ್ನಾಕರಾಧೀಶ್ವರ ಶತಕ ಮತ್ತು ಎರಡು ಸಹಸ್ರ ಅಧ್ಯಾತ್ಮಗೀತೆಯನ್ನು ರಚಿಸಿದ್ದಾನೆ. ತ್ರಿಲೋಕಶತಕದಿಂದ ಈತನ ಸ್ಥಳ ಮೂಡಬಿದರೆ ಎಂಬುದು ತಿಳಿಯುತ್ತದೆ. ಕೆಲವರ ಪ್ರಕಾರ ಸೋಮೇಶ್ವರಶತಕದ ಕರ್ತೃವೂ ಈತನೇ ಎಂಬುದು ನಿಜವಾದಲ್ಲಿ ರತ್ನಾಕರವರ್ಣಿಯನ್ನು 'ಶತಕಸಾಹಿತ್ಯ ಸಾಮ್ರಾಟ'ನೆಂದು ಕರೆಯುವುದರಲ್ಲಿ ಯಾವ ತಕರಾರೂ ಇರಲಾರದು.

ರತ್ನಾಕರನ ಶತಕತ್ರಯದಲ್ಲಿ ಒಂದೊಂದು 128 ಪದ್ಯಗಳನ್ನು ಒಳಗೊಂಡಿದೆ. ಜೈನಮತಾನುಸಾರವಾದ ಲೋಕದ ಸ್ಥಿತಿಯನ್ನು ತಿಳಿಸುವ ತ್ರಿಲೋಕಶತಕವು ಕಂದಪದ್ಯದಲ್ಲಿದೆ. ಉಳಿದುವೆರಡೂ ವೃತ್ತಗಳಲ್ಲಿವೆ. ಇವೆರಡೂ ವೈರಾಗ್ಯ ಬೋಧಗೆ ಹೊರಟವೆಯಾದರೂ ರತ್ನಾಕರಶತಕದಲ್ಲಿ 'ವ್ಯವಹಾರ ದೃಷ್ಟಿ'ಯನ್ನು ಬೋಧಿಸಿದರೆ ಅಪರಾಜಿತೇಶ್ವರ ಶತಕದಲ್ಲಿ 'ಶುದ್ಧ ನಿಶ್ಚಯ ದೃಷ್ಟಿ'ಯನ್ನು ಪ್ರತಿಪಾದಿಸಿದ್ದಾನೆ. ಅಪರಾಜಿತೇಶ್ವರ ಶತಕ ಇನ್ನೂ ಎಳಸು. ವಿಷಯ ನಿರೂಪಣಾ ಸರಣಿಯಲ್ಲಿ ಜಾಣ್ಮೆಯಿಲ್ಲ; ನವೀನತೆಯಿಲ್ಲ. ರತ್ನಾಕರಶತಕವು ಕವಿಯ ಪರಿಣತಿಯನ್ನು ಪ್ರತಿಬಿಂಬಿಸುವ ಅತ್ಯುತ್ತಮ ಶತಕ ಮತ್ತು ಕನ್ನಡ ಸಾಹಿತ್ಯದಲ್ಲಿ ಮೇಲ್ಪಂಕ್ತಿಯನ್ನೂ ಪಡೆದಿದೆ.

ಕವಿಯು ನೇರವಾಗಿ ರತ್ನಾಕರಾಧೀಶ್ವರ ಶತಕದಲ್ಲಿ ವೈರಾಗ್ಯವನ್ನೇ ಪ್ರತಿಪಾದಿಸಿರುವುದು ಆತನ ವೈಶಿಷ್ಟ್ಯ.

ಶ್ರೀ ರಾಗಂ ಸಿರಿಗಂಪು ಮಾಲೆ ಮಣಿಹಾರಂ ವಸ್ತ್ರಂ ಅಂಗಕ್ಕಳಂ
ಕಾರಂ ಹೇಯಮಿವಾತ್ಮ ತತ್ತ್ವರುಚಿ ಬೋಧೋದ್ಯಚ್ಚರಿತ್ರಂಗಳೀ
ತ್ರೈರತ್ನಂ ಮನಸಿಂಗೆ ಸಿಂಗರಮುಪಾದೇಯಂಗಳೆಂದಿತ್ತೈಶ್ಯಂ
ಗಾರಶ್ರೀಕವಿ ಹಂಸರಾಜನೊಡೆಯಾ ರತ್ನಾಕರಾಧೀಶ್ವರಾ ॥

ಇಲ್ಲಿ ಶೋಭಾಯಮಾನವಾದ ಲೇಪನ ದ್ರವ್ಯಗಳು, ಸುಗಂಧಭರಿತವಾದ ಪುಷ್ಪಗಳು, ರತ್ನಹಾರ, ವಸ್ತ್ರ ಮುಂತಾದ ಬಾಹ್ಯ ಶೃಂಗಾರಗಳು ಶರೀರಕ್ಕೆ ಮಾತ್ರ ಅಲಂಕಾರಗಳೇ ವಿನಾ ಆತ್ಮನಿಗೆ ಹೇಯವಾದುವು. ಆತ್ಮಸ್ವರೂಪದ ಶ್ರದ್ಧೆ, ಶ್ರೇಷ್ಠ ಜ್ಞಾನ, ಚಾರಿತ್ರ— ಇವೇ ಎಂದರೆ ಸಂಯಕ್ ದರ್ಶನ, ಜ್ಞಾನ, ಚಾರಿತ್ರಗಳೆಂಬ ಮೂರು ಅಲಂಕಾರಗಳು ಆತ್ಮನಿಗೆ ಬೇಕಾದ ಮೋಕ್ಷಾಲಂಕಾರಗಳೆಂಬುದನ್ನು ಮನದಟ್ಟು ಮಾಡಿದ್ದಾನೆ.

ಇಂದ್ರಿಯಾತೀತವಾದ, ಅಗೋಚರವೆನಿಪ ಜೀವಾತ್ಮ ಪರಮಾತ್ಮ ಮೊದಲಾದ ವಿಷಯ ವರ್ಣನೆ ಕಷ್ಟಮಯವಾದುದು. ಇದನ್ನು ಕೂಡ ವಿಶದವಾಗಿ ವರ್ಣಿಸುವಲ್ಲಿ ಕವಿ ಮೇಲ್ಮೆಯನ್ನು ಮೆರೆದಿದ್ದಾನೆ. ಅಸ್ಥಿರವಾದ ದೇಹದಲ್ಲಿ ನೆಲಸಿರುವ ಸ್ಥಿರವಾದ ಆತ್ಮನನ್ನು ಗುರುತಿಸುವ ಗುಟ್ಟನ್ನೂ ಆತ್ಮದ ಸ್ವರೂಪವನ್ನೂ ಸೊಗಸಾಗಿ ವಿವರಿಸಿದ್ದಾನೆ.

ಅರಿವಿಂದೀಕ್ಷಿಸಲಕ್ಕುಮಾತ್ಮನಿರವಂ ದೇಹಂಬೊಲೀ ಕಣ್ಗೆ ತಾಂ
ಗುರಿಯಾಗಂ ಶಿಲೆಯೊಳ್ ಸುವರ್ಣಂ ಅರಲೊಳ್ ಸೌರಭ್ಯಮಾ ಕ್ಷೀರದೊಳ್
ನರುನೆಯ್ ಕಾಷ್ಠದೊಳಗ್ನಿಯಿರ್ಪ ತೆರದಿಂದಂ ಈ ಮೆಯ್ಯೊಳೊಂದಿರ್ಪನೆಂ
ದರಿದಭ್ಯಾಸಿಸೆ ಕಾಣ್ಗುಮೆಂದರಿಪಿದೈ ರತ್ನಾಕರಾಧೀಶ್ವರಾ ॥

ಶರೀರವೆಂಬ ಅಶಾಶ್ವತವೂ ದುಃಖಾಲಯವೂ ಆದ ಗೇಹದಲ್ಲಿರುವ ಆತ್ಮದ ಸ್ಥಿತಿಯನ್ನು ರಮ್ಯವಾಗಿ ಹೀಗೆ ಹೇಳಿದ್ದಾನೆ.

ಕಲ್ಲೊಳ್ ತೋರ್ಪ ಪೊಗರ್ ಸುವರ್ಣದ ಗುಣಂ ಕಾಷ್ಠಂಗಳೊಳ್ ತೋರ್ಪ ಕಿ
ಚ್ಚೆಲ್ಲಾ ಕಿಚ್ಚಿನ ಚಿಹ್ನಮಾ ಕೆನೆಯಿರಲ್ ಪಾಲೊಳ್ ಘೃತಚ್ಛಾಯೆ ಯೆಂ
ದೆಲ್ಲರ್ ಬಣ್ಣಿಪರಂತುಟೇ ತನುವಿನೊಳ್ ಚೈತನ್ಯಮುಂ ಬೋಧಮುಂ
ಸೊಲ್ಲುಂ ಜೀವಗುಣಂಗಳೆಂದರುಪಿದೈ ರತ್ನಾಕರಾಧೀಶ್ವರಾ ॥

ಎಂಬುದಾಗಿ ಸ್ವಾನುಭವದಿಂದ ಆತ್ಮಸ್ವರೂಪವನ್ನು ಕಂಡುಕೊಳ್ಳುವ ಉಪಾಯವನ್ನು ಶಾಸ್ತ್ರೋಕ್ತವಾಗಿ ನಿರೂಪಿಸಿರುವುದನ್ನು ಮನಗಾಣಬಹುದು. ನಮ್ಮ ದೇಹದಲ್ಲೂ ಜೀವ ಚೇತನವಾಗಿ, ಜ್ಞಾನವಾಗಿ, ವಚನವಾಗಿ ತನ್ನ ಅಸ್ತಿತ್ವವನ್ನು ಪ್ರದರ್ಶಿಸುತ್ತದೆ. ಹೇಗೆಂದರೆ :

ಮತ್ತಾ ಕಲ್ಲನೆ ಸೋದಿಸಲ್ ಕನಕಮುಂ ಕಾಣ್ಬಂತೆ ಪಾಲಂ ಕ್ರಮಂ
ಬೆತ್ತೊಳ್ಪಿಂ ಮಥನಗೆಯ್ಯಲ್ ಘೃತಮುಮಂ ಕಾಣ್ಬಂತೆ ಕಾಷ್ಠಂಗಳಂ
ಒತ್ತಂಬದಿಂ ಪೊಸೆದಗ್ನಿ ಕಾಣ್ಬ ತೆಱದಿಂ ಮೆಯ್ ಬೇರಾನ್ ಬೇರೆ
ನುತ್ತಿತ್ತಭ್ಯಾಸಿಸಲ್ ಎನ್ನ ಕಾಣ್ಬುದರಿದೇ ರತ್ನಾಕರಾಧೀಶ್ವರಾ ॥

ಯೋಗ್ಯವಾದ ರೀತಿಯಲ್ಲಿ ಬಂಗಾರ, ತುಪ್ಪ. ಬೆಂಕಿಗಳನ್ನು ಬೇರ್ಪಡಿಸುವಂತೆ ಆತ್ಮವನ್ನೂ ದೇಹದಿಂದ ಬೇರ್ಪಡಿಸಿ ಕಾಣುವುದು ಕಷ್ಟವೇನೂ ಅಲ್ಲವೆಂದು ಹೇಳುತ್ತಾನೆ. ಈ ಆತ್ಮ ಅವಿನಾಶಿ, ನಿತ್ಯ :

ಬಿಸಿಲಿಂ ಕಂದದ ಬೆಂಕಿಯಿಂ ಸುಡದ ನೀರಿಂ ನಾಂದದುಗ್ರಾಸಿ ಭೇ
ದಿಸಲುಂ ಬಾರದ ಚಿನ್ಮಯಂ ಮರೆದು ತನ್ನೊಳ್ಪಂ ಪರಧ್ಯಾನದಿಂ
ಪಸಿವಿಂದೀ ಬಹುಬಾಧೆಯಿಂ ರುಜೆಗಳಿಂ ಕೇಡಾಗುವೀ ಮೆಯ್ಗೆ ಸಂ
ದಿಸಿದಂ ತನ್ನನೆ ಚಿಂತಿಸಲ್ ಸುಖಿಯಲಾ ರತ್ನಾಕರಾಧೀಶ್ವರಾ ॥

ಎಂಬುದಾಗಿ ರತ್ನಾಕರನು ಪ್ರವಾದಿಯಂತೆ ಜೀವಕೋಟಿಯನ್ನು ಎಚ್ಚರಿಸಿರುವನು. 'ತನ್ನನೆ ಚಿಂತಿಸಲ್ ಸುಖಿಯಲಾ' ಎಂಬ ಮಾತುಗಳು ಕೈಗಂಬದಂತಿವೆ.

ಮುಂದೆ ಎಂಥ ಬಾಳನ್ನು ಬಾಳಿದರೆ ಉದಾತ್ತ ಶ್ರೇಯಸ್ಸು ದೊರೆಯುತ್ತದೆ ಎಂದು ಹೇಳಿ ಮಾನವ ಜನ್ಮದ ಮಹತ್ವವನ್ನು ನಿರೂಪಿಸಿದ್ದಾನೆ. ಇದನ್ನೇ ಭಗವತ್ ಶಂಕರರು 'ಜಂತೂನಾಂ ನರಜನ್ಮ ದುರ್ಲಭಂ' ಎಂದೂ ಪುರಂದರದಾಸರು 'ನರಜನ್ಮ ಬಂದಾಗ ನಾಲಗೆ ಇರುವಾಗ ಕೃಷ್ಣಾ ಎನಬಾರದೇ' ಎಂದೂ ಹೇಳಿರುವುದು.

ಪ್ರಾಣಂ ಮಾನವ ಜನ್ಮಮಂ ಪಡೆದ ಮೆಯ್ಯೊಳ್ ನಿಚ್ಚಲುಂ ಪಂಚ
ಕಲ್ಯಾಣಂ ಪಂಚಗುರುಸ್ತವಂ ಪರಮಶಾಸ್ತ್ರಂ ಮೋಕ್ಷಸಂಧಾನ ಚಿ
ತ್ರಾಣಂ ಚಿತ್ತಿನರತ್ನ ಮೂರಿವನಲಂಪಿಂ ಚಿಂತನಂ ಗೆಯ್ವನೇ
ಜಾಣಂ ಮತ್ತಿನ ಚಿಂತಕರ್ ಮರುಳರ್ಕೈ ರತ್ನಾಕರಾಧೀಶ್ವರಾ ॥

ಮಾನವನಾಗಿ ಹುಟ್ಟುವುದೇ ದುರ್ಲಭ. ಅಂಥ ಅವಕಾಶ ದೊರೆತಾಗ ಅನುದಿನವೂ ತೀರ್ಥಂಕರನಿಗಾಗುವ ಸುರಲೋಕಾವತರೋತ್ಸವಂ, ಪರಿಕೃತಂ ಜನ್ಮಾಭಿಷೇಕೋತ್ಸವಂ, ಪರಿನಿಷ್ಕ್ರಾಂತಿ ಮಹೋತ್ಸವಂ, ಪ್ರವಿಮಲಂ ಕೈವಲ್ಯಬೋಧೋತ್ಸವಂ, ಪರಿನಿರ್ವಾಣ ಮಹೋತ್ಸವಂ—ಎಂಬ ಜಿನ ಮಹಾಕಲ್ಯಾಣಗಳು ಅಥವಾ ಪಂಚ ಕಲ್ಯಾಣಗಳನ್ನು ನೆನೆದು ಪಂಚಪರಮೇಷ್ಠಿಗಳನ್ನು ಕೊಂಡಾಡಿ ಜಿನವಾಣಿಯನ್ನು ಮನನಮಾಡಿ ಮೋಕ್ಷಲಾಭವನ್ನು ಮಾಡಿಕೊಳ್ಳಬೇಕು. ಏಕೆಂದರೆ ನಮ್ಮ ಹಿಂದೆ ಬರುವುದು ನಾವು ಸಂಪಾದಿಸಿದ ಪುಣ್ಯ, ಪಾಪಗಳಲ್ಲದೆ ಇನ್ನಾವುದೂ ಅಲ್ಲ.

ಸದ್ಗೃಹಸ್ಥರು ತ್ರಿಕರಣ ಪೂರ್ವಕವಾಗಿ ಅನುಸರಿಸಬೇಕಾದ ರೀತಿನೀತಿಗಳನ್ನು ತಿಳಿಸಿ ಗೃಹಸ್ಥರಾಗಿದ್ದುಕೊಂಡೇ 'ಕರ್ಮನಿರ್ಜರೆ' ಮಾಡುವ ಮಾರ್ಗವನ್ನು ಹೀಗೆ ವಿವರಿಸಿದ್ದಾನೆ :

ತನುವಂ ಸಂಘಡ ಸೇವೆಯೊಳ್ ಮನಮನಾತ್ಮಧ್ಯಾನದಭ್ಯಾಸದೊಳ್
ಧನಮಂ ದಾನಸುಪೂಜೆಯೊಳ್ ದಿನಮನರ್ಹದ್ಧರ್ಮಕಾರ್ಯ ಪ್ರವ
ರ್ತನೆಯೊಳ್ ಪರ್ವವನೊಲ್ದು ನೋಂಪಿಗಳೊಳಿರ್ದಾಯುಷ್ಯಮಂ ಮೋಕ್ಷಚಿಂ
ತನೆಯೊಳ್ ತೀರ್ಚುವ ಸದ್ಗೃಹಸ್ಥನನಘಂ ರತ್ನಾಕರಾಧೀಶ್ವರಾ ॥

'ಧನಮಂ ದಾನಸುಪೂಜೆಯೊಳ್' ಎಂದಾಗ ದಾನಚಿಂತಾಮಣಿ ಅತ್ತಿಮಬ್ಬೆಯ ಗುಣಗಣವನ್ನು ಹೊಗಳುವಾಗ ಮಹಾಕವಿ ರನ್ನ ಹೇಳುವ 'ಗುಣದಂತಾ ಪಣಂ ಅನ್ಯರಿಂದರಸರಿಂ। ದಾಯಾದ್ಯರಿಂ ಕೆಡುಗುಂ ಉಳ್ಳ ಗುಣಕೇಂ ಕೇಡುಂಟೆ । ನಿಲ್ವೊಡೆ ಗುಣಂ ನಿಲ್ಕುಂ ಪಣಂ ನಿಲ್ಕುಮೇ' ಎಂಬ ವಾಣಿಯೂ ದಾನದ ಬಗ್ಗೆ ಹೇಳುವಾಗ ಸೋಮೇಶ್ವರ ಶತಕದ 'ಚರಿಪಾರಣ್ಯದ ಪಕ್ಷಿಗೊಂದು ತರುಗೊಡ್ಡಾಗಲ್ ಫಲಂ ತೀವಿದಾ ಮರಗಳ್ ಪುಟ್ಟವೆ ? ಧರೆಯೊಳ್ ದಾತರು ಪುಟ್ಟರೇ !' ಎಂಬ ವಾಣಿಯೂ ನಮ್ಮ ಮುಂದೆ ಬಂದು ನಿಲ್ಲುತ್ತವೆ.

ಶ್ರಾವಕ ಶ್ರಾವಿಕೆಯರು ಮುನಿ ಅಜ್ಜಿಕೆಯರ ಸೇವೆಯಲ್ಲಿ ದೇಹವನ್ನು ಸವೆಸಬೇಕು. ಆತ್ಮ ಚಿಂತನೆಯಲ್ಲಿ ಮನ ಲೀನವಾಗಬೇಕು. ದಿನವೆಲ್ಲ ಜಿನಧರ್ಮದ ಪ್ರಭಾವನೆಯಲ್ಲಿ ಕಳೆಯಬೇಕು. ಪರ್ವದಿನಗಳಲ್ಲಿ ನೋಂಪಿಗಳ ನ್ನಾಚರಿಸಬೇಕು. ಹೀಗೆ ಬಾಳಿದ ಗೃಹಸ್ಥನನ್ನು ಮುಕ್ತಿವನಿತೆ ಒಲಿಯುವಳು.

ಮುಂದೆ ಪೂರ್ವದಲ್ಲಿ ನರರು ಪಡೆದಷ್ಟನ್ನು ಅನುಭವಿಸುತ್ತಾರೆಂದೂ, 'ನಾರೀರತಂ ಮುದವಲ್ತು' ಎಂಬುದಾಗಿ :

ಎತ್ತೆತ್ತಂ ಲಲಿತಾಂಗಿಯರ್ ಸುಳಿದಡತ್ತತ್ತಾಡುಗುಂ ಕಣ್ಗಳ್
ಎತ್ತೆತ್ತಂ ಕಾಮಿನಿಯರ್ ಮೊಗಂ ತೆಗೆದಡತ್ತತ್ತೊಂದುಗುಂ ಜಿಹ್ವೆ
ಮತ್ತೆತ್ತಂ ಸಂಮಿಂಡಿಯರ್ ತೆಗೆದಡತ್ತತ್ತಂ ಎಯ್ದುಗುಂ ಬುದ್ಧಿ ನಿ
ಮ್ಮತ್ತಂ ಬಾರದು ಕೆಟ್ಟೆನೇವೆನಕಟಾ ರತ್ನಾಕರಾಧೀಶ್ವರಾ ॥

ತನ್ನ ಅಂತರಂಗವನ್ನು ಲೋಕದ ಎದುರಿಗೆ ತೆಗೆದಿಟ್ಟು ತನ್ನ ಮನೋದೌರ್ಬಲ್ಯಕ್ಕೆ ತಾನೇ ಮರುಗುತ್ತಾ ವಿಷಯ ವ್ಯಾಪಾರದಲ್ಲಿ ತೊಡಗಿದ ಮನಸ್ಸನ್ನು ಪರಾತ್ಪರ ಸ್ವರೂಪನತ್ತ ತಿರುಗಿಸಿದರೆ ಗರುಡೋಚ್ಚಾರಣ ಮಂತ್ರ ದಿಂದ ವಿಷವಿಳಿವಂತೆ ಎಲ್ಲವೂ ದೂರವಾಗುತ್ತದೆನ್ನುವನು.

ಶಾಸ್ತ್ರಜ್ಞರನ್ನು ಕುರಿತು ಆಡಿರುವ ಮಾತು ನೋಡಿ,

ಶಾಸ್ತ್ರಂ ಬಂದೊಡೆ ಶಾಂತಿ ಸ್ಥೈರಣೆ ನಿಗರ್ವಂ ನೀತಿ ಮೇಲ್ವಾತು ಮು
ಕ್ತಿಸ್ತ್ರೀ ಚಿಂತೆ ನಿಜಾತ್ಮಚಿಂತೆ ನಿಲವೇಳ್ಕುಂ ಅಂತಲ್ಲದಾ ಶಾಸ್ತ್ರದಿಂ
ದುಸ್ತ್ರೀಚಿಂತನೆ ದುರ್ಮುಖಂ ಕಲಹಮುದ್ಗರ್ವಂ ಮಸಂಗೊಂಡೊಡಾ
ಶಾಸ್ತ್ರಂ ಶಸ್ತ್ರಮೆ ಶಾಸ್ತ್ರಿ ಶಸ್ತ್ರಿಕನಲಾ ರತ್ನಾಕರಾಧೀಶ್ವರಾ ॥

ಇಲ್ಲಿನ ಮಾತುಗಳಲ್ಲಿ ಹೊಳಪಿದೆ, ಹರಿತವಿದೆ. ಅದರಲ್ಲಿಯೂ ಕಡೆಯ ಪಾದದಲ್ಲಿ ಕಾಣಬರುವ ಕಿಡಿ ಹೊತ್ತ ನುಡಿಗಳ ಬೆಡಗು ಗಮನಾರ್ಹವಾದುದು. ಕವಿಯ ಮಾತು ಹರಿತವಾದರೂ ಆತನ ಧರ್ಮಪ್ರತಿಪಾದನೆ, ಧರ್ಮ ಜಿಜ್ಞಾಸೆಗಳಲ್ಲಿ ಔದಾರ್ಯವಿದೆ. ಆತನಿಗೆ ನಿರ್ದಾಕ್ಷಿಣ್ಯವಾಗಿ ನುಡಿಯಬಲ್ಲ ಕೆಚ್ಚೆದೆಯಿದೆ. ಮತ್ತಾವ ಜೈನ ಕವಿಯಲ್ಲಿಯೂ ಕಾಣಬರದ ಸ್ವತಂತ್ರ ಮನೋವೃತ್ತಿಯಿದೆ. ಜೀವನವು ಕ್ಷಣಿಕವೆಂಬ ಜೈತತ್ತ್ವವನ್ನು ಆತ ಒಪ್ಪು ತ್ತಾನೆ. ಆದರೆ ಅದಕ್ಕಾಗಿ ಭೋಗವಿರತಿಯನ್ನು ಕೈಕೊಳ್ಳಬೇಕೆಂಬುದನ್ನು ಆತ ಒಪ್ಪುವುದಿಲ್ಲ. ಭೋಗವಿಮುಖ ನಾಗದೆ ಶಾಶ್ವತ ಸುಖವನ್ನು ಅರಸುತ್ತಾ ಹೋಗಬೇಕೆಂಬುದು ಆತನ ಸಂದೇಶ. ಇದು ರತ್ನಾಕರಶತಕದಲ್ಲಿ ಬೀಜ ರೂಪವಾಗಿ ಕಂಡರೆ ಭರತೇಶ ವೈಭವದ ಸಾರ ಸರ್ವಸ್ವವೇ ಇದಾಗಿದೆ.

ಕವಿತಾಶಕ್ತಿ ಕಲ್ಪಲತೆಯಿದ್ದಂತೆ. ಅದನ್ನು ಸದ್ಧರ್ಮದ ಮೇರುವಿನಲ್ಲಿ ನೆಡಬೇಕು. ಅದರ ಫಲವಾದ ಮನೋವಿಶುದ್ಧತೆ ಬಲವೀರ್ಯಾದಿಗಳನ್ನು ಕವಿಯೂ ಅನುಭವಿಸಿ ನಾಡಿಗೂ ನೀಡಲಿ. ಹಾಗಾಗದೆ ಅದನ್ನು

ಮಿಥ್ಯಾತ್ವವೆಂಬ ಮರುಭೂಮಿಯಲ್ಲಿ ನೆಟ್ಟಾಗ ಕವಿಗೂ ನಷ್ಟ, ನಾಡಿಗೂ ನಷ್ಟವೆಂಬುದನ್ನು ಬಹು ಸುಂದರವಾಗಿ ಚಿತ್ರಿಸಿದ್ದಾನೆ :

ಕವಿತಾಶಕ್ತಿಯೆ ಕಲ್ಪವಲ್ಲಿಯದನಾ ಸದ್ಧರ್ಮಮೆಂದೆಂಬ ಮೇ
ರುವಿನೊಳ್ ಬಿತ್ತೆ ಮನೋವಿಶುದ್ಧಿ ಬಲವೀರ್ಯಂ ಬುದ್ಧಿಸಾಫಲ್ಯ ಮಾ
ಕವಿಯಂ ಸರ್ವರು ಮುಣ್ಬರಾ ಫಲಮನಿತ್ತಲ್ಲಾಣ್ದು ಮಿಥ್ಯಾತ್ವ ಮಾ
ರವದೊಳ್ ಬಿತ್ತಿ ಬಳಲ್ವರೇಕೆಯಕಟಾ ರತ್ನಾಕರಾಧೀಶ್ವರಾ ||

ಇನ್ನು ರಾಜ್ಯಲಕ್ಷ್ಮಿಯೇನು ಸ್ಥಿರವೇ ?

ಪಡೆಯೊಳ್ ಬಲ್ಲಿದನಾದೊಡಾ ಪಡೆಯಿನೇಂ ಪಾಪಾರಿಯಂ ಗೆಲ್ವನೇ
ಕಡುಪಿಂದಂ ಜವನಂ ತೆರಳ್ಚುವನೆ ! ಬಲ್ಪಿಂ ಮೋಕ್ಷಮಂ ಕೊಂಬನೇ
ಕಡೆಗಾಭೂಪನ ಶಕ್ತಿ ನಾಲ್ಗಳಿಗೆ ಸಲ್ಗುಂ ಮರ್ತ್ಯಕೀಟಂಗಳೊಳ್
ಬಿಡು ಯೋಗೀಂದ್ರನ ಶಕ್ತಿಗಾವುದು ಸಮಂ ರತ್ನಾಕರಾಧೀಶ್ವರಾ ||

ಕಡುಗಲಿಯಾದ ರಾಜ ಯಮನನ್ನು ಸೋಲಿಸಲು ಸಮರ್ಥನೇನು ? ಕ್ಷಾತ್ರಬಲದಿಂದ ಮುಕ್ತಿಯನ್ನು ಸೂರೆಗೊಳ್ಳಲಾದೀತೇ ? ರಾಜನ ಸೊಕ್ಕೆಲ್ಲಾ ಮರ್ತ್ಯ ಕೀಟಗಳ ಮೇಲೆ ಕೇವಲ ಒಂದೆರಡು ಗಳಿಗೆ ನಡೆದೀತಷ್ಟೆ ? ಯೋಗೀಂದ್ರನ ಬಲದ ಮುಂದೆ ಯಾವುದು ತಾನೆ ನಿಂತೀತು? ಎಂಬಲ್ಲಿ 'ಧಿಕ್‌ಬಲಂ ಕ್ಷತ್ರಿಯ ಬಲಂ, ಬ್ರಹ್ಮತೇಜೋ ಬಲಂ ಬಲಂ' ಎಂಬ ವಿಶ್ವಾಮಿತ್ರನ ಉಕ್ತಿ, ವಸಿಷ್ಠರಂಥ ಮುನೀಂದ್ರರ ಪ್ರಭಾವ ನೆನಪಿಗೆ ಭಾಸವಾಗುವುದಿಲ್ಲವೆ ?

ಕಣ್ಣಿಗೆ ಕಂಡ ಕನ್ಯೆಯರನ್ನೆಲ್ಲ ಬಯಸಿ ಪಡೆದರೂ ಅಲ್ಲಿ ಹೊಸ ಸುಖವೇನಾದರೂ ದೊರಕೀತೆ ? ಕಳ್ಳು ಕುಡಿದು ಲಂಪಟತನದಿಂದ ಪರಿತಪಿಸುವ ಬಾಳ್ವೆಯನ್ನು ಕಂಡು ರತ್ನಾಕರವರ್ಣಿ ರೋಸಿ ಹೋಗಿ :

ಆವಾವಂಗನೆಯರಲ್ಲಿ ಕೂಡಿದೊಡಮಾ ಪಾಡಲ್ಲದೇಂ ಕಂಡನೇ
ಆವಾವೂಟಮನುಂಡೊಡಂ ಸವಿಗಳೊಳ್ ಬೇರೊಂದನೇಂ ಉಂಡನೇ
ಆವಾವಾಭರಂಣಗಳಂ ತೊಡೆ ತೊವಲ್ ಪೊನ್ನಾದುವೇ ಕಂಡು ಮೀ
ಜೀವಂ ಕಾಣದು ಉಂಡುಮೇಂ ದಂಣಿಯದೋ ರತ್ನಾಕರಾಧೀಶ್ವರಾ ||

ಎಂದು ಹೇಳುತ್ತಾನೆ.

ಯತಿಗಳು 'ಭಾವಪೂಜೆ'ಯನ್ನಾಚರಿಸಿದರೆ ಶ್ರಾವಕರು 'ದ್ರವ್ಯಪೂಜೆ'ಯನ್ನಾಚರಿಸುತ್ತಾರೆ. ಇವೆರಡರ ಗುರಿಯು ಒಂದೇ. ಭಾವಪೂಜೆ ಸೂಕ್ಷ್ಮಮತಿಗಳಿಗಾದರೆ ದ್ರವ್ಯಪೂಜೆ ಸ್ಥೂಲಮತಿಗಳಿಗೆ—ಇಲ್ಲಿ ಬೇಕಾದುದು ಅಹಂಕಾರರಹಿತವಾದ ನಿಷ್ಕಳಂಕವಾದ ಚಿತ್ತವೆಂಬುದನ್ನು ರತ್ನಾಕರ ಬಹುಮನೋಜ್ಞವಾಗಿ ಹೀಗೆ ಹೇಳುತ್ತಾನೆ:

ಮುನಿಗಳ್ ಮಾಡುವ ಭಾವಪೂಜೆ ರುಚಿಯೋ ಸದ್ಭವ್ಯಸಂ
ತಾನಮರ್ಚನೆಗೆಯ್ವ ಉತ್ತಮ ವಸ್ತು ಪೂಜೆ ರುಚಿಯೋ ಪೇಳಯ್ಯ
ನೀನೇಕೆ ಸುಮ್ಮನೆ ಇರ್ಪೆ ಇದರಂದಮಂ ತಿಳಿದೆನಯ್ ನೀಂ ನಿಷ್ಕಾಂಕ್ಷಕಂ ಅವರ್
ಮನಮಂ ನಿರ್ಮೋಹದಲ್ಕೆ ಸಾಧಿಪರಲಾ ರತ್ನಾಕರಾಧೀಶ್ವರಾ ||

ಜಿನನಾಮದ ಮಹಿಮೆಯನ್ನು ತಿಳಿಸುತ್ತಾ :

ನಿನ್ನಂ ಚಿಂತಿಸುತಿರ್ಪವಂಗೆ ಪರದೇಶಂ ತನ್ನ ದೇಶಂ ಪರರ್
ತನ್ನಿಷ್ಟರ್ ಪಗೆಗಳ್ ಭಟರ್ ದೊರೆಗಳಾತ್ಮಸ್ನೇಹಿತರ್ ಕಿಚ್ಚು ಬಾ
ವನ್ನಂ ವ್ಯಾಧಿ ಸುಖಂ ವಿಷಂ ಸುಧೆಯೆನಿಕ್ಕುಂ ನೋಡೆ ನೀನಿರ್ದು
ಮಾನಿನ್ನೊಂದಕ್ಕೆಳಸಿರ್ಪೆನೇಕೆಯಕಟಾ ರತ್ನಾಕರಾಧೀಶ್ವರಾ ||

ಎಂದು ಜಿನೇಂದ್ರನ ನೆರವನ್ನು ಉತ್ತಮತೆಯನ್ನಡರಲು ಬಯಸಿದ್ದಾನೆ. ಅಷ್ಟೇ ಅಲ್ಲದೆ ಉದ್ಧಾರ ಆಕಾಂಕ್ಷೆಯಿಂದ ಕೂಡಿದವನಾಗಿ ನಡೆದೆ ನಾನು ಮನಬಂದಂತೆ—ನುಡಿದೆ ನಾನು ಬಾಯಿಹೋದಂತೆ. ಈ ಅಶಾಶ್ವತವಾದ ಸಂಸಾರಬಂಧನದಲ್ಲಿ ತಿರಿದುದಾಯಿತು, ದೇವ—ಈಗ ತಮ್ಮ ಪಾದ ಸಿಕ್ಕಿದುದು ಕುರುಡನಿಗೆ ಕಣ್ಣು ಬಂದಂತಾಗಿದೆ—ಈಗ ದೊರಕಿರುವ ಈ ಪಾದವನ್ನು ಬಿಡಲಾರೆ. ಏಕೆಂದರೆ ನೀವು ಉದಾರಿಗಳು ಎಂಬುದು ನನಗೆ ತಿಳಿದಿದೆ. ನನ್ನೊಡೆಯಾ—ತಡಮಾಡದೆ ಕಾಪಾಡು ಎಂಬುದಾಗಿ ಶತಕದ ಚರಮಗೀತೆಯನ್ನು ಅತ್ಯಂತ ಸಮರ್ಪಕವಾಗಿ ಹಾಡಿದ್ದಾನೆ.

ನಡೆದೆಂ ಚಿತ್ತಕೆ ಬಂದವೋಲ್ ನುಡಿದೆನಾಂ ಬಾಯ್ಗಿಚ್ಚೈ ಬಂದಂತೆ ಸೈ
ಗೆಡೆದೆಂ ದುಃಖಸಮುದ್ರದೊಳ್ ಪಡೆದೆನಂಥಂ ಕಣ್ಬೆತ್ತವೊಲ್
ಬಿಡೆ ನಿಮ್ಮಂಘ್ರಿಗಳಂ ಬಿಡೆಂ ಬಿಡೆನುದಾರಂ ನೀನಹೋ ಬಲ್ಲೆನೆ
ನ್ನೊಡೆಯಾ ರಕ್ಷಿಸಾ ತಳುವಿದೇಂ ರತ್ನಾಕರಾಧೀಶ್ವರಾ ||

ಅನೇಕ ಮಹಾನುಭಾವರು ಸಂಸಾರದ ಅಸಾರತೆಯನ್ನು ಕುರಿತು ಹೇಳಿರುವ 'ಶ್ರೀ ರೂಪಲೀಲಾಧನ ವಿಭವ ಮಹಾರಾಶಿಗಳ್ ಸ್ಥಿಲ್ಲವಾರ್ಗಂ'—ಎಂಬ ಮಥಿಥಾರ್ಥ ಇಲ್ಲಿ ದೃಗ್ಗೋಚರವಾಗಿರುವುದು. ವ್ಯಾಮೋಹ ಹಾಗೂ ವಿದ್ಯಾಮೋಹ ಹುಚ್ಚು ಹೊಳೆಯಂತೆ ಹರಿದು ನಮ್ಮನ್ನು ಕಣ್ಗುರುಡರನ್ನಾಗಿಸಿ ಜಾಡುಗೆಡಿಸುತ್ತದೆ. ಆದಕಾರಣ ಅನವರತವೂ ನಮ್ಮನ್ನು ನೀನು ಕೈಹಿಡಿದು ಕಾಪಾಡು ಕರುಣಾಳು ಈ ಮುಸುಕಿದ ಮಬ್ಬಿನಿಂದ ಆತ್ಮಸಾಕ್ಷಾತ್ಕಾರದತ್ತ ಕೊಂಡೊಯ್ಯಿ ಎಂಬ ಪ್ರಾರ್ಥನೆ ಬಹು ಅರ್ಥಪೂರ್ಣವಾಗಿದೆ. ಈ ಕವಿವಾಣಿ ಎಂದೆಂದೂ ನಮ್ಮನ್ನು ಉದಾರದತ್ತ ಕೊಂಡೊಯ್ಯಲಿ ಎಂಬುದೇ ನಮ್ಮೆಲ್ಲರ ಪ್ರಾರ್ಥನೆ.

ಶ್ರೇಯಃ ಪದ್ಮವಿಕಾಸವಾಸರಮಣಿ ಸ್ಯಾದ್ವಾದ ರಕ್ಷಾಮಣಿಃ
ಸಂಸಾರೋರಗ ದರ್ಪಗಾರುಡಮಣಿ ಭವ್ಯೌಘ ಚಿಂತಾಮಣಿ
ಅಶಾಂತಾಕ್ಷಯಶಾಂತಿ ಮುಕ್ತಿ ಮಹಿಷೀ ಸೀಮಂತ ಮುಕ್ತಾಮಣಿ
ಶ್ರೀಮದ್ದೇವಶಿಖಾಮಣಿರ್ವಿಜಯತೇ ಶ್ರೀವರ್ಧಮಾನೋ ಜಿನಃ

ಧ್ಯಾನ ಎಂದರೆ ಧ್ಯಾನಿಸುವ ವಸ್ತುವಿನ ನಿರಂತರ ಸ್ಮರಣೆ. ಒಂದು ಪಾತ್ರೆಯಿಂದ ಮತ್ತೊಂದು ಪಾತ್ರೆಗೆ ಬೀಳುವ ಅವಿಚ್ಛಿನ್ನ ತೈಲಧಾರೆಯಂತೆ ದೇವರಿಗೆ ಸಂಬಂಧಪಟ್ಟ ಇಂತಹ ಸ್ಮರಣೆ ನಮಗೆ ಪ್ರಾಪ್ತವಾದರೆ ಬಂಧನವೆಲ್ಲ ನಾಶವಾಗುವುದು.

ಡಾ. ಸರ್ಜಾ. ಚಂದ್ರಶೇಖರಯ್ಯ

ಶರಜಾ ನಾಗಮಂತ್ರಿಯ ಕನ್ನಡ "ಶುಕಸಪ್ತತಿ" ಕಾವ್ಯ

"ಶುಕಸಪ್ತತಿ"ಯು ಎಪ್ಪತ್ತು ಕತೆಗಳ ಗುಚ್ಛವಾಗಿದೆ. ಕಾಮಾಂಧನಾಗಿ ಪರಸತಿ ವ್ಯಾಮೋಹಕ್ಕೊಳಗಾದ ವಹ್ನಿರಾಜನಿಗೆ ಶುಕವು (ಗಿಳಿ) ಎಪ್ಪತ್ತು ರಾತ್ರಿಗಳಲ್ಲಿ ನೀತಿಬೋಧಪ್ರದವಾದ ಎಪ್ಪತ್ತು ಕತೆಗಳನ್ನು ಹೇಳಿ ಅವನನ್ನು ಸನ್ಮಾರ್ಗಕ್ಕೆ ಒಯ್ಯುತ್ತದೆ. ಶುಕಸಪ್ತತಿಯು ಮೂಲವು ಸಂಸ್ಕೃತದಲ್ಲಿದೆ. ಕಾವ್ಯವು ಕಾಂತಾವಚನ ಸಮ್ಮಿತ ರೀತಿಯಲ್ಲಿದ್ದು ನೀತಿಯ ಉಪದೇಶವು ಇವರ ಉದ್ದೇಶವಾಗಿದೆ. ಸಂಸ್ಕೃತದಲ್ಲಿದ್ದ ಶುಕಸಪ್ತತಿಯು ಭಾರತದ ಇತರ ಭಾಷೆಗಳಲ್ಲಿ ಅನುವಾದಿತವಾಗಿದೆ. ಪಾರ್ಸಿ, ಉರ್ದು ಭಾಷೆಗಳಲ್ಲಿಯೂ ಅನುವಾದಿತವಾಗಿತ್ತೆಂದಾಗ ಇದು ಎಷ್ಟು ಜನಪ್ರಿಯವಾಗಿತ್ತೆಂದು ವೇದ್ಯವಾಗುತ್ತದೆ.ನಮ್ಮ ಕನ್ನಡದಲ್ಲಿ ಶರಜಾ ನಾಗಪ್ಪಯ್ಯನು ಪದ್ಯರೂಪದಲ್ಲಿ ಸರಳವಾಗಿಯೂ, ಸುಂದರವಾಗಿಯೂ ಬರೆದಿದ್ದಾನೆ. ಚಿಕ್ಕುಪಾಧ್ಯಾಯನು (ಕ್ರಿ.ಶ. 1672) ಗದ್ಯದಲ್ಲಿ ಬರೆದಿದ್ದಾನೆ. ಮುಮ್ಮಡಿಕೃಷ್ಣರಾಜರೂ (ಇ.1820) ಗದ್ಯರೂಪದಲ್ಲಿ ಬರೆದಿದ್ದಾರೆ. ಹೀಗಿರುವಾಗ ಕನ್ನಡಸಾಹಿತ್ಯದಲ್ಲಿ ಶುಕಸಪ್ತತಿಯನ್ನು ಪದ್ಯರೂಪದಲ್ಲಿ ಬರೆದಿರುವವನು ಶರಜಾ ನಾಗಪ್ಪಯ್ಯನೊಬ್ಬನೆ ಎಂದು ಹೇಳಬಹುದಾಗಿದೆ. "ಧರಣಿಗುತ್ತಮನಾಗಿ ರಾಜಿಪ ದೊರೆ ಕೆಳದಿ ಬಸವ ಕ್ಷಿತೀಶನ ಚರಣ ಕಮಲದ ಭೃಂಗ ಶರಜಾ ನಾಗಮಂತ್ರೀಶ ವಿರಚಿಸಿದನೀ ಪುಣ್ಯ ಕತೆಯನು...."ಎಂದು ಈ ಕಾವ್ಯದಲ್ಲಿ ಉಲ್ಲೇಖವಿರುವುದರಿಂದ ಕವಿಯು ಕೆಳದಿಯ ಅರಸನಾದ ಬಸಪ್ಪನಾಯಕನ (ಇ. 1698–1715) ಮಂತ್ರಿಯಾಗಿದ್ದನೆಂದು ಸ್ಪಷ್ಟವಾಗುತ್ತದೆ. ಕೆಳದಿ ಅರಸರಲ್ಲಿ ಇಬ್ಬರು ಬಸಪ್ಪನಾಯಕರಿದ್ದಾರೆ. ಅವರಲ್ಲಿ ಹಿರಿಯ ಬಸಪ್ಪನಾಯಕನ ಕಾಲದಲ್ಲಿ ನಿಯೋಗಿ ಶರಜಾ ನಾಗಪ್ಪಯ್ಯನಿದ್ದನೆಂದು "ಕೆಳದಿನೃಪ ವಿಜಯ" ತಿಳಿಸುವುದರಿಂದ ಹಿರಿಯ ಬಸಪ್ಪನಾಯಕನ ಕಾಲದಲ್ಲಿಯೇ ಕವಿಯು ಇದ್ದನೆಂಬುದು ಸುಸ್ಪಷ್ಟ. ಸ್ವತಃ ಹಿರಿಯ ಬಸಪ್ಪನಾಯಕನು ಕವಿಯಾಗಿದ್ದು "ಶಿವತತ್ತ್ವ ರತ್ನಾಕರ"ವೆಂಬ ಅಮೋಘವಾದ ಸಂಸ್ಕೃತಗ್ರಂಥವನ್ನು ಬರೆದಿದ್ದಾನೆ. ಕವಿಗಳಿಗೆ ಆಶ್ರಯದಾತನಾಗಿದ್ದು "ಸೂರಿನಿಕರ ಕಲ್ಪದ್ರುಮ"ವೆಂದು ಪ್ರಸಿದ್ಧಿ ಪಡೆದಿದ್ದ. ಕೆಳದಿ ನೃಪವಿಜಯ (ದಶಮಾಶ್ವಾಸಂ, 10ನೇ ಪದ್ಯ)ದಲ್ಲಿ "ನಿಯೋಗಿ ಶರಜಾ ನಾಗಪ್ಪಯ್ಯನ ಮುಖದೊಳ್ಕ್ರಿಯಾಪೂರ್ವಕವಾಗಿ ಭಾಷಾ ಪತ್ರಿಕೆಯಂ ರಚಿಯಿಸಿ..." ಎಂದು ಉಕ್ತವಾಗಿರುವುದರಿಂದ ಆತನು ಕೆಲವು ಕಾಲ ನಿಯೋಗಿಯೂ ಆಗಿದ್ದನೆಂದು ಊಹಿಸಬಹುದು.

ಕವಿಕಾವ್ಯವನ್ನು ಮತ್ತಷ್ಟು ಪರಿಶೀಲಿಸುವ ಮುನ್ನ ಶುಕಸಪ್ತತಿಯ ಮೂಲ ಆರಂಭ ಹೇಗೆ ಎಂಬುದನ್ನು ತಿಳಿಯೋಣ. ಶುಕಸಪ್ತತಿಯು ಪಂಚತಂತ್ರದಂತೆ ಬಹುರೂಪಿಯಾಗಿದೆ. ಅದರಲ್ಲಿ ಉತ್ತರ ಭಾರತದ ಶುಕಸಪ್ತತಿ ಮತ್ತು ದಕ್ಷಿಣ ಭಾರತದ ಶುಕಸಪ್ತತಿ ಪ್ರಮುಖವಾಗಿದೆ. ಹೆಸರು ಒಂದೇ ಆಗಿದ್ದರೂ ಉತ್ತರ ಭಾರತದ ಪ್ರತಿಯು ದಕ್ಷಿಣ ಭಾರತದ್ದಕ್ಕಿಂತ ತೀರ ವಿಭಿನ್ನವಾಗಿದೆ. ಎರಡರಲ್ಲಿಯೂ ಗಿಳಿ ಕತೆ ಹೇಳುತ್ತದೆ. ಕತೆಗಳ ಸಂಖ್ಯೆಯೇನೊ ಎಪ್ಪತ್ತು–ಎಪ್ಪತ್ತು ಇವೆ. ಆದರೆ ಉತ್ತರ ಭಾರತದ ಪ್ರತಿಯಲ್ಲಿ ನಾವು ಕಾಣುವುದು ಕಾಮಭರಿತ

ಶೃಂಗಾರ, ದಕ್ಷಿಣ ಭಾರತದ ಶುಕಸಪ್ತತಿಯನ್ನು "ವೇದಾಂತ ಶುಕಸಪ್ತತಿ"ಯೆಂದು ಕರೆಯುತ್ತಾರೆ. ಉತ್ತರ ಭಾರತದ ಕೃಶಿಯು ಬುದ್ಧಿಪ್ರಧಾನವಾಗಿದ್ದರೆ, ದಕ್ಷಿಣ ಭಾರತದ ಕೃತಿಯು ಧರ್ಮಪ್ರಧಾನವಾಗಿದೆ. ಅಂತೆಯೆ 'ಶರಜಾ ನಾಗಮಂತ್ರಿ'ಯು ಪ್ರತಿ ಸಂಧಿಯ ಕೊನೆಯಲ್ಲಿ 'ವೇದಶಾಸ್ತ್ರ ಪುರಾಣದರ್ಶಗಳಾದಿಗೊಂಡಿಹವೀ ಕೃತಿಯೊಳು' ಎಂದು ಸಮಯೋಚಿತವಾಗಿ ಹೇಳುತ್ತಾನೆ.

ಉತ್ತರಭಾರತದ ಶುಕಸಪ್ತತಿಯು ಆರಂಭ ಹೀಗಿದೆ : ಮದನ ವಿನೋದನೆಂಬ ಸುಪುತ್ರನನ್ನು ಪಡೆದ ಹರದತ್ತನಿಗೆ ಅವನ ಗೆಳೆಯ ಒಂದು ಗಿಳಿ ಮತ್ತು ಒಂದು ಸಾರಿಕೆ ಇವುಗಳನ್ನು ಕೊಡಲು, ಹರದತ್ತಾ ಸೆಟ್ಟಿಯು ಅವೆರಡನ್ನೂ ತನ್ನ ಕಾಮಾಂಧ ಪುತ್ರ ಮದನ ವಿನೋದನಿಗೆ ಕೊಡುತ್ತಾನೆ. ಗಿಳಿಯು ಧರ್ಮವ್ಯಾಘನ ಕತೆಯನ್ನು ಚಮತ್ಕಾರಯುಕ್ತವಾಗಿ ಹೇಳಿ ಆತನನ್ನು ಧಾರ್ಮಿಕನನ್ನಾಗಿ ಮಾಡಿತು. ಧರ್ಮಜ್ಞನಾದ ಮದನ ವಿನೋದನು ಆ ಎರಡು ಪಕ್ಷಿಗಳನ್ನು ತನ್ನ ಹೆಂಡತಿ ಪ್ರಭಾವತಿಗೆ ಕೊಟ್ಟು ದೇಶಾಂತರಕ್ಕೆ ಹೊರಟು ಹೋಗುತ್ತಾನೆ. ಬಹಳ ದಿನಗಳ ವಿಯೋಗದಿಂದಲೂ, ಸ್ವೈರಿಣೆಯರ ಪ್ರೇರಣೆಯಿಂದಲೂ ಕಾಮೋದ್ರೇಕಭರಿತಳಾದ ಪ್ರಭಾವತಿಯು ಪರಪುರುಷನೊಡನೆ ರಮಿಯಿಸಲು ಹೊರಟಾಗ, ಸಾರಿಕೆ ಹಿತೋಪದೇಶಕ್ಕೆ ಮೊದಲು ಮಾಡುತ್ತದೆ. ಅವಳು ಕುಪಿತಳಾಗಿ ಅದನ್ನು ಕೊಲ್ಲಲು ಹೋದಾಗ ತಪ್ಪಿಸಿಕೊಂಡು ಹೊರಟುಹೋಗುತ್ತದೆ. ಆದರೆ ಗಿಳಿ ಬಹಳ ಜಾಣತನದಿಂದ ಅವಳ ಕಾರ್ಯವನ್ನು ಅನುಮೋದಿಸುವಂತೆ ನಟಿಸಿ, ಅವಳಿಗೆ ಒಂದು ಸಮಸ್ಯೆಯನ್ನು ತಂದೊಡ್ಡಿ, ಅಥವಾ ಒಂದು ಒಗಟನ್ನು ಅವಳ ಮುಂದಿಟ್ಟು, ಅದನ್ನು ತಾನೇ ಬಿಡಿಸಿ, ಬಿಡಿಸುವಾಗ ನಿದರ್ಶನಕ್ಕಾಗಿ ಒಂದು ಕಥೆ ಹೇಳಿ ಮುಗಿಸುತ್ತಿತ್ತು. ಈ ರೀತಿ ಕತೆ ಮುಗಿಯುತ್ತಿದ್ದಂತೆಯೇ ಪ್ರಭಾವತಿ ನಿದ್ದೆ ಹೋಗುತ್ತಿದ್ದಳು. ಎಪ್ಪತ್ತು ದಿನಗಳ ನಂತರ ಅವಳ ಗಂಡ ಬಂದು ಸೇರುತ್ತಾನೆ.

ದಾಕ್ಷಿಣಾತ್ಯ ಶುಕಸಪ್ತತಿಯು ಪೀಠಿಕೆ ಪುರಾಣದೋಪದಿಯಲ್ಲಿದೆ : ಒಮ್ಮೆ ಓಲಗಂಗೊಟ್ಟ ದೇವೇಂದ್ರನು"ತತ್ವದಸುಕರ ಸಾರವ ಕೇಳಬೇಕೆಂಬಿಚ್ಛೆ ಇದೆ. ಯಾರು ತಿಳಿಸಬಲ್ಲರು" ಎಂದು ನಾರದನನ್ನು ಕೇಳಲು, ನಾರದನು 'ಶುಕನಿಂದಲ್ಲದೆ ಬೇರೆ ಯಾರಿಂದಲೂ ಸಾಧ್ಯವಿಲ್ಲ ಎನ್ನುತ್ತಾನೆ. ಅವನ್ನು ಅಗ್ನಿಯು ಪ್ರತಿಭಟಿಸಲು, ಎಲ್ಲರೂ ಪರೀಕ್ಷಿಸಲು ಭೂತಳಕ್ಕಿಳಿಯುತ್ತಾರೆ. ಅಗ್ನಿ ವಹ್ನಿರಾಜನಾಗಿಯೂ, ದೇವೇಂದ್ರನು ದೇವದಾಸನೆಂಬ ಭೃತ್ಯನಾಗಿಯೂ, ಶಚಿಯೂ ಆ ಭೃತ್ಯನ ಪತ್ನಿಯಾಗಿಯೂ, ವಸಿಷ್ಠಮುನಿಯ ಸೂಚನೆಯಂತೆ ಶುಕಮುನಿಯು ಶುಕವಾಗಿಯೂ ಜನ್ಮತಳೆಯುತ್ತಾರೆ. ದೇವದಾಸನ ಪತ್ನಿಯ ಸೌಂದರ್ಯಾದಿಗಳನ್ನು ಕೇಳಿ ಮೋಹಗೊಂಡ ವಹ್ನಿ ರಾಜನು ಅವಳನ್ನು ಹೇಗಾದರೂ ಮಾಡಿ ವಶಪಡಿಸಿಕೊಳ್ಳಬೇಕೆಂದು ಚಿಂತಿಸಿ ತನ್ನ ಭೃತ್ಯನಾದ ದೇವದಾಸನನ್ನು ಕರೆದು "ಸಪ್ತಸಾಗರದಾಚೆಯ ಚಂದ್ರಿಕಾಗಿರಿಯಲ್ಲಿ ಶ್ರೀ ವಿಷ್ಣುವನ್ನು ಪೂಜಿಸಿ ಬಾ" ಎಂದು ಅಜ್ಞಾಪಿಸುತ್ತಾನೆ. ದೇವದಾಸನಿಗೆ ಶುಕವು ಏಳು ಗರಿಗಳನ್ನು ಕೊಡುತ್ತದೆ. ಅವುಗಳ ಸಹಾಯದಿಂದ ಆತನು ನಿಯೋಜಿತ ಕಾರ್ಯದಲ್ಲಿ ಜಯಶೀಲನಾಗಿ ಎಪ್ಪತ್ತನೆಯ ದಿನಕ್ಕೆ ಹಿಂತಿರುಗುತ್ತಾನೆ. ಈ ಮಧ್ಯೆ ಅವನ ಪತ್ನಿಯನ್ನು ವಶಪಡಿಸಿಕೊಳ್ಳಲು ಬಂದ ರಾಜನನ್ನು ಕುರಿತು ಶುಕವು ನಿತ್ಯವೂ ಕತೆ ಹೇಳಲು ಆರಂಭಿಸುತ್ತದೆ. ಪ್ರತಿದಿನವೂ ಕತೆ ಮುಗಿಯುವ ಹೊತ್ತಿಗೆ ಸರಿಯಾಗಿ ಬೆಳಗಾಗುತ್ತಿತ್ತು. ರಾಜ "ನಾಳೆ ಬರೋಣ"ವೆಂದು ಅಂದುಕೊಂಡು ಹಿಂದಿರುಗುತ್ತಿದ್ದನು. ಈ ರೀತಿ ಎಪ್ಪತ್ತು ನೀತಿಬೋಧಕ ಕತೆಗಳನ್ನು ಕೇಳಿದ ನಂತರ ರಾಜನ ಪರಸತಿ ವ್ಯಾಮೋಹವು ಸಂಪೂರ್ಣವಾಗಿ ತೊಡೆದು ಹಾಕಲ್ಪಡುತ್ತದೆ. ಅವನು ಅದರಿಂದ ಸನ್ಮಾರ್ಗ ಅವಲಂಬಿಯಾಗುತ್ತಾನೆ.

ಔತ್ತರೇಯ ಕೃತಿಯಲ್ಲಿ ಬರುವ ಕತೆಗಳು ನೀತಿಗೆಟ್ಟ ಅಸಂಬದ್ಧ ಅಶ್ಲೀಲದ ಕತೆಯಾಗಿದ್ದರೆ, ದಾಕ್ಷಿಣಾತ್ಯ ಕೃತಿಯ ಒಂದೊಂದು ಕತೆಯೂ ಪತಿವ್ರತಾ ಧರ್ಮವನ್ನು ಎತ್ತಿ ಹಿಡಿಯುತ್ತದೆ. ಶರಜಾ ನಾಗ ಮಂತ್ರಿಯು "ಹಾದರದ ಕತೆಯಲ್ಲ, ಪರಮ ವಿನೋದವಾಗಿಹುದೀ ಕೃತಿಗೆ ಸಮವಾದ ಕೃತಿಯಿಲ್ಲೆಂದು ಕೊಂಡಾಡುವರು ಕೋವಿದರು" (ಪೀಠಿಕಾ ಸಂಧಿ,ಪದ್ಯ 15) ಎಂದು ತನ್ನಕಾವ್ಯದಲ್ಲಿ ಹೇಳಿರುವುದರಲ್ಲಿ ಅತಿಶಯೋಕ್ತಿಯಿಲ್ಲ.

ಕವಿಯ ಸ್ಥಳ: ಕವಿ ಶರಜಾ ನಾಗಮಂತ್ರಿಯು ತನ್ನ ಕೃತಿಯ ಆರಂಭದಲ್ಲಿ "ಕೊಡಗಿಯ ಪುರದ ಶಂಕರ ನಾರಾಯಣ ಪಾಲಿಪುದು ಸಂಪದವ" ಎಂದು ಸ್ತುತಿಸಿದ್ದಾನೆ. ಇಲ್ಲಿ ಕೊಡಗಿ ಎಂದರೆ ದಕ್ಷಿಣ ಕನ್ನಡದ ಕುಂದಾಪುರ ತಾಲ್ಲೋಕಿನ ಶಂಕರನಾರಾಯಣ ಎಂಬ ಊರಿಗೆ ಅನ್ವಯವಾಗುತ್ತದೆ. ಇದರ ಆಧಾರದ ಮೇಲೆ ಸುರತ್ಕಲ್ ಕೆ. ವೆಂಕಟರಾಯಾಚಾರ್ಯರು ಕವಿಯ ಸ್ಥಳ ಶಂಕರನಾರಾಯಣವೆಂದೂ, ಗದುಗಿನ ನಾರಣಪ್ಪನಂತೆ ಶಂಕರ ನಾರಾಯಣ ಕ್ಷೇತ್ರದಲ್ಲಿ ಕುಳಿತು ಕವಿಯು ಇದನ್ನು ರಚಿಸಿರಬೇಕೆಂಬುದು ಸಂಭವನೀಯವೆಂದೂ ಅಭಿಪ್ರಾಯ ಪಡುತ್ತಾರೆ. (ಶುಕಸಪ್ತತಿ-ಸಂಪಾದಕ ಕೆ. ವೆಂಕಟರಾಯಾಚಾರ್ಯ) ಶಂಕರನಾರಾಯಣ ದೇವರು ಕವಿಯ ಮನೆತನದ ದೇವರು. ಆದ್ದರಿಂದ ಶರಜಾ ನಾಗಪ್ಪಯ್ಯನು ಶಂಕರನಾರಾಯಣನನ್ನು ಕಾವ್ಯದ ಆರಂಭದಲ್ಲಿ ಸ್ತುತಿಸಿದ್ದಾನೆ. ಇಂದಿಗೂ ಅವನ ವಂಶಜರಿಗೆ ಈ ಶಂಕರನಾರಾಯಣದೇವರೇ ಕುಲದೇವತೆ. ಕವಿಯು ಮಂತ್ರಿಯಾಗಿ ರಾಜಧಾನಿಯಾದ ಬಿದನೂರು ನಗರದಲ್ಲಿದ್ದನು. ಅವನು ಕೆಲವುಕಾಲ ನಿಯೋಗಿಯೂ ಆಗಿದ್ದರಿಂದ ರಾಜಕಾರಣ ನಿಮಿತ್ತವಾಗಿ ಬೇರೆಬೇರೆ ಸ್ಥಳಗಳಿಗೆ ಪ್ರವಾಸಮಾಡುವ ಸಂಭವವಿದ್ದಿತು. ಆದ್ದರಿಂದ ಅವನು ಕುಲದೇವತೆಯ ಕ್ಷೇತ್ರದಲ್ಲಿಯೆ ಇದ್ದು ಬರೆದನೆಂದು ಹೇಳುವುದು ಸಂಭವನೀಯವಲ್ಲ. ಕವಿಯ ವಂಶಜರು ಕೆಳದಿಯ ಅರಸರಲ್ಲಿ ನಿಯೋಗಿಗಳೂ, ಮಂತ್ರಿಗಳೂ ಆಗಿದ್ದು ಕೆಳದಿ ರಾಜ್ಯದ ಪತನಾನಂತರ ನಗರಕ್ಕೆ ಸಮೀಪವಾದ ಹುಲಿಕಲ್ ಗ್ರಾಮಕ್ಕೆ ಹೋದರು. ಸುಮಾರು 19ನೆಯ ಶತಮಾನದ ಆದಿಭಾಗದಲ್ಲಿ ಹುಲಿಕಲ್‌ನಿಂದ ತೀರ್ಥಹಳ್ಳಿ ತಾಲ್ಲೋಕಿನ ಸದಾಶಿವಪುರ ಅಗ್ರಹಾರ (ಆರಗ)ದಲ್ಲಿ ನೆಲೆಯಾಗಿ ನಿಂತರು. ಆದ್ದರಿಂದ ಶ್ರೀಯುತ ಆಚಾರ್ಯರು ಹೇಳುವಂತೆ ಕವಿಯು ಕುಂದಾಪುರ ತಾಲ್ಲೋಕಿನವನಲ್ಲ. ಕೆಳದಿ ಅರಸರ ರಾಜಧಾನಿಯಾದ ನಗರಕ್ಕೆ ಸಮೀಪ ವಾಗಿರುವ ಕೊಲ್ಲೂರು ಮೂಕಾಂಬಿಕೆ, ಕೊಡಗಿಯ ಶಂಕರನಾರಾಯಣನನ್ನು ಕವಿಯು ಸ್ತುತಿಸುವುದು ಸಹಜ ವಾಗಿಯೇ ಆಗಿದೆ.

ಶರಜಾ : 'ಶರಜಾ' ಎಂಬುದು ನಾಗಪ್ಪಯ್ಯನ ವಂಶದ ಬಿರುದಾಗಿದೆ. ಒಂದು ಸಮಯದಲ್ಲಿ ಶರಜಾ= ಸ್ಕಂದ+ನಾಗ = ಸುಬ್ರಮಣ್ಯನೆಂದಿರಬೇಕೆಂದು ವೆಂಕಟರಾಯಾಚಾರ್ಯರು ಅರ್ಥವಿಸಿದ್ದರು. ಶರಜಾ ಎನ್ನುವುದು ಇಲ್ಲಿ ಸಂಸ್ಕೃತ ಪದವಲ್ಲ. ಅದು ಉರ್ದು ಮೂಲವಾದದ್ದು. ಶರಜಾ ಎಂದರೆ ಉರ್ದುವಿನಲ್ಲಿ ಸಿಂಹ ಎಂದು ಅರ್ಥ. ಈ ಮನೆತನದ ಅನೇಕರಿಗೆ ಕೆಳದಿಯ ಇತಿಹಾಸದಲ್ಲಿ ಅವರ ಹೆಸರಿನ ಹಿಂದೆ ಶರಜಾ ಎಂದು ಬರುತ್ತದೆ. ಕೆಳದಿಯ ಅರಸ ವೀರಭದ್ರನಾಯಕನ ಕಾಲದಲ್ಲಿ (ಕ್ರಿ. ಶ. 1630–1646) ಸಿಂಹಾಸನದ ಹಕ್ಕುದಾರಿಕೆಯ ಬಗ್ಗೆ ವಿವಾದ ಉಂಟಾಯಿತು. ವಿಜಯನಗರ ಪತನಾನಂತರ ಈ ಪ್ರಾಂತ್ಯಗಳು ಬಿಜಾಪುರದ ಆದಿಲ್‌ಶಹನ ಅಂಕೆಗೆ ಒಳ ಪಟ್ಟಿತ್ತಾದ್ದರಿಂದ ವೀರಭದ್ರನಾಯಕನ ಪರವಾಗಿ ನಿಯೋಗಿಶಂಕರನಾರಾಯಣಯ್ಯನು ಬಿಜಾಪುರದ ಬಾದಶಹನನ್ನು ಭೇಟಿಮಾಡುತ್ತಾನೆ. ವೀರಭದ್ರನಾಯಕನೇ ದೊರೆತನಕ್ಕೆ ಸಲ್ಲುವನೆಂದು ಒಡಂಬಡಿಸುತ್ತಾನೆ. ಶಂಕರನಾರಾಯಣ ಯ್ಯನ ವಾಕ್‌ಚಾತುರ್ಯ ದೃಢತೆಗಳು ಮೆಚ್ಚುಗೆಯಾಗಲು ಬಾದಶಹನು ಈತನಿಗೆ 'ಶರಜಾರಾಯ'ನೆಂದು ಬಿರುದನ್ನು ನೀಡುತ್ತಾನೆ. (ಕೆ. ನೃ. ವಿ. ಷಷ್ಠಾಶ್ವಾಸಂ, ಪದ್ಯ-29) ಈತನ ನಂತರದ ವಂಶಸ್ಥರು ಇದೇ ಹೆಸರನ್ನು ಮುಂದುವರೆಸಿಕೊಂಡು ಬರುತ್ತಾರೆ. ವೀರಭದ್ರನಾಯಕನಿಂದ ಹಿರಿಯ ಬಸಪ್ಪನಾಯಕನ ಕಾಲದವರೆಗೆ ಶಂಕರನಾರಾಯಣಯ್ಯನ ವಂಶದವರಾದ ಶರಜಾ ತಿರುಮಲಯ್ಯ, ಶರಜಾ ವೆಂಕಟಯ್ಯ, ಶರಜಾ ಹೂವಯ್ಯ, ಶರಜಾ ನಾಗಪ್ಪಯ್ಯ, ಶರಜಾ ನರಸಪ್ಪಯ್ಯ ಮುಂತಾದವರು ನಿಯೋಗಿಗಳು, ಮಂತ್ರಿಗಳು ಆಗಿದ್ದರು. ಶರಜಾ ಎಂದರೆ ಸರದಾರನೆಂಬ ಹಿಂದೀ ಭಾಷೆಯ ಅರ್ಥಗಾರಿಕೆ ಇಲ್ಲಿ ಚೆನ್ನಾಗಿ ಒಪ್ಪುತ್ತದೆ—ಎಂದು ಶ್ರೀ ವೆಂಕಟರಾಯಾಚಾರ್ಯರು ಅಭಿಪ್ರಾಯಪಡುವುದು ಯೋಚಿಸಬೇಕಾದ ವಿಷಯವಾಗಿದೆ ಕರ್ನಾಟಕ ಭಾರತಿ 1970ರ ನವೆಂಬರ್ ಸಂಚಿಕೆ) ಇವರೆಲ್ಲರೂ ಒಂದೇ ಕುಟುಂಬದವರೋ, ಬೇರೆ ಬೇರೆ ಕುಟುಂಬ ದವರೋ ಎಂಬ ಸಂಶಯ ಉಂಟಾಗುತ್ತದೆಯೆಂದು (ಶುಕಸಪ್ತತಿ ಪ್ರಕಟಣೆ ಕೆ. ವೆಂಕಟರಾಯಾಚಾರ್ಯ

ಅಭಿಪ್ರಾಯ ಪಡುತ್ತಾರೆ. ವೀರಭದ್ರನಾಯಕನ ಕಾಲಕ್ಕಿಂತ ಮುಂಚೆ ಈ ಹೆಸರು ಕಾಣದೇ ಇದ್ದು ಅನಂತರ ಕಂಡು ಬರುವುದರಿಂದ ಈ ಮನೆತನದ ವಂಶದ ಹಿರಿಯನಾದ ಶರಜಾ ಶಂಕರನಾರಾಯಣಯ್ಯನ ಬಿರುದನ್ನೇ ಇವನ ವಂಶಸ್ಥರು ಮುಂದುವರೆಸಿಕೊಂಡು ಹೋಗುತ್ತಾರೆ ಎನ್ನುವುದು ಸ್ಪಷ್ಟ. ಆದ್ದರಿಂದ ಇವರೆಲ್ಲ ಒಂದೇ ಕುಟುಂಬಕ್ಕೆ ಸೇರಿದವರೆಂದು ಹೇಳಬಹುದು.

ಕವಿಯ ಮತ : ಕವಿಯು ಸ್ಮಾರ್ತ ಬ್ರಾಹ್ಮಣನು. "ಹರಕವಿಗಳಂಘ್ರಿಯನು ಜಾನಿಸಿ ಹರಿಕವಿಗಳಡಿಗೆರಗಿ" ಎಂದು ಕವಿಯು ಹೇಳಿರುವುದು ಇದನ್ನು ಪುಷ್ಟೀಕರಿಸುತ್ತದೆ. ಶ್ರೀ ಆಚಾರ್ಯರು ಅಭಿಪ್ರಾಯ ಪಡುವಂತೆ ಕವಿಯು ಭಾಗವತ ಸಂಪ್ರದಾಯದವನಲ್ಲ.

ಕನ್ನಡ ಶುಕಸಪ್ತತಿಯ ವೈಶಿಷ್ಟ್ಯ ಮತ್ತು ಹಿರಿಮೆ : ಶರಜಾ ನಾಗಮಂತ್ರಿಯ ಶುಕಸಪ್ತತಿಯು ಅತಿ ಸುಂದರವೂ ಸರಳವೂ ಆದ ಕೃತಿಯೆಂದು ಕೆಳದಿ ಅರಸರ ಕಾಲದ ಸಾಹಿತ್ಯವನ್ನು ಆಮೂಲಾಗ್ರವಾಗಿ ಅಧ್ಯಯನ ಮಾಡಿರುವ ಡಾ|| ಸಾ. ಶಿ. ಮರುಳಯ್ಯನವರು ಅಭಿಪ್ರಾಯ ಪಡುತ್ತಾರೆ. ಈ ಶುಕಸಪ್ತತಿಯಲ್ಲಿ ಬರುವ ಕತೆಗಳ ನಿರೂಪಣೆಯೂ ವೈಶಿಷ್ಟ್ಯಪೂರ್ಣವಾಗಿದೆ. ಶಕುಂತಲೋಪಖ್ಯಾನ, ಅಹಲ್ಯಾವೃತ್ತಾಂತ, ಅನುಸೂಯ ಮಹಾತ್ಮೆ, ಅಂಬರೀಷೋಪಾಖ್ಯಾನ, ರಾಮಾಯಣದ ಕತೆ ಇವುಗಳ ನಿರೂಪಣೆಯಲ್ಲಿ ವ್ಯತ್ಯಾಸವಿದೆ. ಉದಾಹರಣೆಗೆ ಪ್ರಸ್ತುತ ಶುಕಸಪ್ತತಿಯ ಶಕುಂತಲೆಯ ಕತೆಯು, ಮಹಾಭಾರತದಲ್ಲಿ ಬರುವ ಶಕುಂತಲೆಯ ಕತೆ ಮತ್ತು ಕಾಳಿದಾಸನ ಅಭಿಜ್ಞಾನ ಶಾಕುಂತಲಕ್ಕಿಂತ ವಿಭಿನ್ನವಾಗಿದೆ. ಶರಜಾ ನಾಗಮಂತ್ರಿಯು ನಿರೂಪಿಸುವ ಶಾಕುಂತಲೆಯ ಕತೆಯಲ್ಲಿ ಉಂಗುರದ ಅವಾಂತರವಿಲ್ಲ. ಇಲ್ಲಿ ಮಗಳ ಇಂಗಿತವನ್ನರಿತ ಕಣ್ವನೆ ದುಷ್ಯಂತನನ್ನು ಬರಮಾಡಿಕೊಂಡು ಶಕುಂತಲೆಯೊಡನೆ ಮದುವೆಮಾಡಿಸುವನು. ಬಸಿರಾದ ಶಕುಂತಲೆಯು ಕಣ್ವನ ಆಶ್ರಮದಲ್ಲಿಯೇ ಉಳಿಯುತ್ತಾಳೆ. "ಧರೆಗವಳು ಬಲು ಚೆಲುವೆ"ಯೆಂದು ಇಂದ್ರನು ಶಕುಂತಲೆಯ ಬಳಿಗೆ ಹೋಗಿ ಕಾಮಿಸುತ್ತಾನೆ. "ಪರಸತಿಯ ಬಯಸುವುದು ಮತವಲ್ಲೆ"ಂದು ಆಕೆಯು ರಾವಣ, ಕೀಚಕರ ಕತೆಯನ್ನು ಹೇಳಿ ಗೌತಮನ ಸತಿಯ ಕಾಮಿಸಿ ಅವನು ಪರಿತಪಿಸಿದುದನ್ನು ಜ್ಞಾಪಕಕ್ಕೆ ತಂದು ಕೊಡುತ್ತಾಳೆ. 'ಪತಿವ್ರತೆ ಮುಳಿಯಲುಳಿದವರಾರು?' ಎಂದು ಇಂದ್ರನು ಅಲ್ಲಿಂದ ಕಾಲ್ತೆಗೆಯುತ್ತಾನೆ. ಸಪ್ತರ್ಷಿಗಳ ಶಾಪದಿಂದ ದುಷ್ಯಂತನು ಶಕುಂತಲೆಯನ್ನು ಮರೆಯುತ್ತಾನೆ. ಪತಿವ್ರತೆಯಾದ ಶಕುಂತಲೆಯು ಸಪ್ತರ್ಷಿಗಳನ್ನು ಶಾಪಿಸುವ ಶಪಥ ಮಾಡುತ್ತಾಳೆ. ಅದನ್ನು ಕೇಳಿದ ಅವರು ಶಕುಂತಲೆಯ ಕಾಲಿಗೆ ಎರಗಿ ತಾವು ಕೊಟ್ಟ ಶಾಪವನ್ನು ನಿಷ್ಕ್ರಿಯಗೊಳಿಸುತ್ತಾರೆ. ಹೀಗೆ ಉದ್ದಕ್ಕೂ ಪತಿವ್ರತಾ ಧರ್ಮವನ್ನು ಕವಿಯು ಎತ್ತಿಹಿಡಿಯುವುದಲ್ಲದೆ ಅದಕ್ಕೆ ತಕ್ಕಂತೆ ಕತೆಯನ್ನು ಅರ್ಥಪೂರ್ಣವಾಗಿ ಸರಿಹೊಂದಿಸಿಕೊಳ್ಳುತ್ತಾನೆ. ಶುಕಸಪ್ತತಿಯ ಸತ್ಕತೆಯು ಮನೋರಂಜಕವೂ, ಮನೋಬೋಧಕವೂ ಆಗಿದ್ದು ಇದನ್ನು ಕನ್ನಡಿಸಿದ ಶರಜಾ ನಾಗಸನ್ಮಂತ್ರಿಯು ಕನ್ನಡಸಾಹಿತ್ಯ ಭಂಡಾರಕ್ಕೆ ಉತ್ತಮ ಕೃತಿರತ್ನವನ್ನು ಒದಗಿಸಿದ್ದಾನೆಂದು ಕೆ. ವೆಂಕಟರಾಯಾಚಾರ್ಯರು ಅಭಿಪ್ರಾಯಪಡುತ್ತಾರೆ. "ಪರ ಸತಿಗೆ ಕಣ್ಣಿಟ್ಟ ಮಾತ್ರಕೆ ಪಿರಿದು ಪಾಪಗಳೊದಗಿ ಮಿಗೆ ಪರಿಪರಿಯ ಯಾತನೆಯಿಂದ ನರಕದೊಳಾಳಿ ಮುಳುಗುವರು|| ಮರುಳುತನವನು ಬಿಟ್ಟು ನೀ ನಿನ್ನರಮನೆಗೆ ನಡೆಯೆಂದು ಶುಕ ವಿಸ್ತರಿಸಿ ಪೇಳಲು ಮರಳಿ ಬಂದನು ತನ್ನ ಅರಮನೆಗೆ" ಎಂಬ ಪದ್ಯವೊಂದೇ ಈ ಕವಿಯ ಉದ್ದೇಶ, ಶೈಲಿ, ಭಾಷಾಂತರೇತ್ಯಾದಿಗಳನ್ನು ತಿಳಿಯುವುದಕ್ಕೆ ಸಾಕೆಂದು ಶ್ರೀ ಎಸ್.ವಿ. ಪರಮೇಶ್ವರಭಟ್ಟರು ಹೇಳಿದ್ದಾರೆ.

ಕರ್ನಾಟಕ ಕವಿಚರಿತೆ: ಕರ್ನಾಟಕ ಕವಿಚರಿತೆಯಲ್ಲಿ ಶುಕಸಪ್ತತಿ-1650 ಎಂದು ಸೂಚಿತವಾಗಿದ್ದರೂ ಕವಿಚರಿತೆಕಾರರು ಕವಿಯ ಹೆಸರನ್ನು ಬಿಟ್ಟಿರುವುದು ಆಶ್ಚರ್ಯವಾಗಿದೆ. ಡಾ|| ಸಾ. ಶಿ. ಮರುಳಯ್ಯನವರು ಹೇಳುವಂತೆ ಮದ್ರಾಸಿನ ಹಸ್ತಪ್ರತಿಗಳನ್ನು ಪ್ರತಿ ಮಾಡಿದವರೂ ತುಂಬಾ ತಪ್ಪುಮಾಡಿದ್ದಾರೆ. ಅಜ್ಞಾತವಾಗಿ ಉಳಿದಿದ್ದ ಶುಕಸಪ್ತತಿ ಕಾವ್ಯವನ್ನು ಸುರತ್ಕಲ್ ವೆಂಕಟಾಚಾರ್ಯರು ಸಂಪಾದಿಸಿ ಕನ್ನಡಿಗರಿಗೆ ಮಹೋಪಕಾರಮಾಡಿದ್ದಾರೆ.

ಡಾ. ಆರ್ವಿ. ಯೆಸ್. ಸುಂದರಂ

ಆಧುನಿಕ ತೆಲುಗು ಕವಿಗಳು—ಒಂದು ಪರಿಚಯ

ಇಪ್ಪತ್ತನೆಯ ಶತಮಾನಕ್ಕೆ ಮೊದಲೇ ತೆಲುಗು ಕಾವ್ಯದಲ್ಲಿ ಕೆಲವು ನವೀನ ಗುಣಗಳನ್ನು ಗುರುತಿಸಬಹುದು. ಆಧುನಿಕಾಂಧ್ರ ಸಾಹಿತ್ಯಕ್ಕೆ ಹಲವು ಹೊಸ ಪ್ರಕಾರಗಳನ್ನು ನೀಡಿದ ಕಂದುಕೂರಿ ವೀರೇಶಲಿಂಗಂ ಪಂತುಲು ಅವರ ಪದ್ಯರಚನೆಯಲ್ಲಿ ಅಲ್ಲಲ್ಲಿ ಈ ಆಧುನಿಕತೆ ಕಾಣುತ್ತಾ ಇರುತ್ತದೆ. 20ನೆಯ ಶತಮಾನದ ಉದಯಕ್ಕೆ ಒಂದೆರಡು ವರ್ಷಗಳ ಮೊದಲೇ ಕಟ್ಟಮಂಚಿ ರಾಮಲಿಂಗಾರೆಡ್ಡಿ ಅವರು ಬರೆದ 'ಮುಸಲಮ್ಮ ಮರಣಮು' ಹೆಸರಿಸಬೇಕಾದ ಒಂದು ಕಾವ್ಯ. ಜನಪದ ಕಥನಗೀತೆಯೊಂದರ ಆಧಾರದಿಂದ ರಚಿತವಾದ ಈ ಕಾವ್ಯ ವಿಷಾದಾಂತ್ಯವಾಗಿರುವುದೇ ಎದ್ದು ಕಾಣುವ ಒಂದು ನವೀನ ಗುಣ. ಇವೇನಿದ್ದರೂ ಆಧುನಿಕಾಂಧ್ರಕಾವ್ಯ ಒಂದು ಸ್ಪಷ್ಟ ರೂಪನ್ನು ತಳೆದದ್ದು ಇಪ್ಪತ್ತನೆಯ ಶತಮಾನದಲ್ಲೇ ಎಂದು ಹೇಳಬೇಕು.

ಆಧುನಿಕ ಆಂಧ್ರಕಾವ್ಯದ ಆದ್ಯಪ್ರವರ್ತಕರೆಂದು ಪ್ರಸಿದ್ಧರಾದವರು ಗುರಜಾಡ ಅಪ್ಪಾರಾವು (1862–1915). ಇವರು ಬರೆದದ್ದು ಸ್ವಲ್ಪವಾದರೂ ಅಲ್ಪವಲ್ಲ. ತೆಲುಗು ಕಾವ್ಯದ ಎರಡು ಮುಖ್ಯ ಮಾರ್ಗಗಳಾದ ಭಾವಕವಿತ್ವ ಪಂಥ (ರೊಮ್ಯಾಂಟಿಕ್), ಪ್ರಗತಿಶೀಲ ಪಂಥಗಳಲ್ಲಿ ಎರಡನೆಯ ಮಾರ್ಗದ ಕವಿಗಳಿಗೆ ಇವರದೇ ಸ್ಫೂರ್ತಿ. ಆಡುಮಾತಿನಲ್ಲೇ ಬರೆಯಬೇಕೆಂದು ಗಿಡುಗು ರಾಮಮೂರ್ತಿ ಅವರು ಆರಂಭಿಸಿದ ಚಳುವಳಿಗೆ ಇವರ ರಚನೆಗಳಿಂದ ಒಳ್ಳೆಯ ಬೆಂಬಲ ದೊರಕಿತು. ಅಪ್ಪಾರಾಯರು 1910ರಲ್ಲಿ ಬರೆದ ದೇಶಭಕ್ತಿಗೀತೆ ನವೀನ ತೆಲುಗು ಕಾವ್ಯಕ್ಕೆ ನಾಂದಿಗೀತವಾಯಿತು. 'ದೇಶವನ್ನು ಪ್ರೀತಿಸು, ಒಳ್ಳೆಯದನ್ನು ಬೆಳೆಸು' ಎಂದು ಆರಂಭವಾಗುವ ಈ ಹಾಡು 'ದೇಶವೆಂದರೆ ಮಣ್ಣಲ್ಲ–ಮನುಷ್ಯರು' ಎಂಬ ಸತ್ಯವನ್ನು ಅತ್ಯಂತ ಪರಿಣಾಮಕಾರಿಯಾಗಿ ಸಾರಿದೆ. ಷಟ್ಪದಿಯ ಧಾಟಿಯಲ್ಲಿ ಅಪ್ಪಾರಾಯರು ಬಳಸಿದ 'ಮುತ್ಯಾಲಸರಮು' (ಮುತ್ತಿನ ಸರಪಣಿ) ಎಂಬ ಛಂದಸ್ಸು ಅವರ ಕಾವ್ಯಕ್ಕೆ ಹೊಸ ಮೆರಗನ್ನು ಕೊಟ್ಟಿತು. 'ಪೂರ್ಣಮ್ಮ ಕಥೆ' ಎಂಬ ಹೆಸರಿನ ಅವರ ಕಥನಗೀತೆ ಸಾಮಾಜಿಕ ವಸ್ತುವಿನಲ್ಲಿ ರಚಿತವಾದ ಕರುಣರಸ ಪ್ರಧಾನದ ಹೊಸ ರೀತಿಯ ಹಾಡು. ಮಹಾಕಾವ್ಯವನ್ನು ರಚಿಸಿದವರೇ ಮಹಾಕವಿ ಎಂಬ ವಾದ ಸುಳ್ಳು ಎಂದು ನಿರೂಪಿಸಿ, ಅನೇಕ ರೀತಿಯ ನವೀನ ಪ್ರಯೋಗಗಳಿಂದ ಮಹಾಕವಿ ಗುರಜಾಡ ಎಂಬ ಹೆಸರನ್ನು ಗಳಿಸಿಕೊಂಡವರು ಅಪ್ಪಾರಾಯರು.

ಆಧುನಿಕ ಆಂಧ್ರಕಾವ್ಯದ ಒಂದು ಪಂಥಕ್ಕೆ ಅಪ್ಪಾರಾಯರು ಆದ್ಯರಾಗಿ ಅನೇಕರನ್ನು ಆಕರ್ಷಿಸುವ ಕಾಲದಲ್ಲೇ ರಾಯಪ್ರೋಲು ಸುಬ್ಬಾರಾವು ಎಂಬುವರು ಇನ್ನೊಂದು ಮುಖ್ಯಪಂಥಕ್ಕೆ ಆದ್ಯರಾಗಿ ನಿಂತರು. ಈಗ 85 ಪ್ರಾಯದಲ್ಲಿರುವ ಈ ಕವಿ (1892) ತಮ್ಮ 18-20 ವಯಸ್ಸಿನಲ್ಲಿ ಬರೆದ ಕಾವ್ಯಗಳು ಅಸಂಖ್ಯಾತ ಆಂಧ್ರ ಕವಿಗಳ ಕಾವ್ಯರಚನೆಗೆ ಸ್ಫೂರ್ತಿಯನ್ನು ಕೊಟ್ಟಿವೆ. ರವೀಂದ್ರರ ಶಿಷ್ಯರಾದ ಈ ಕವಿ ಆಂಧ್ರಾವಳಿ,ತೆನುಗು ತೋಟ, ತೃಣ ಕಂಕಣಂ ಮುಂತಾದ ರಚನೆಗಳಲ್ಲಿ ಅತ್ಯಂತ ಉಚ್ಚಮಟ್ಟದ ಕಾವ್ಯವನ್ನು ತೆಲುಗರಿಗೆ ನೀಡಿದ್ದಾರೆ.

ಆಧುನಿಕ ತೆಲುಗು ಕಾವ್ಯದ ಭಾನೂದಯವನ್ನು ಸಮನ್ವಯ ಮಾರ್ಗದಲ್ಲಿ ನಿರೂಪಿಸಲು ಯತ್ನಿಸುವ ವಿಮರ್ಶಕರು ಗುರಜಾಡ ಅಪ್ಪಾರಾಯರು, ರಾಯಪ್ರೋಲು ಸುಬ್ಬಾರಾಯರು—ಇಬ್ಬರೂ ಆದ್ಯ ಪ್ರವರ್ತಕರೇ ಎಂದು ಹೇಳುವುದುಂಟು. ಈ ಇಬ್ಬರೂ ಆಧುನಿಕ ತೆಲುಗು ಕಾವ್ಯದಲ್ಲಿ ಅತ್ಯಂತ ಮುಖ್ಯವಾದ ಸ್ಥಾನಗಳನ್ನು ಆಕ್ರಮಿಸುವರೆಂಬುದೇನೋ ನಿಜ.

1910ರಿಂದ ವೈವಿಧ್ಯಪೂರ್ಣವಾಗಿ ಮುಂದುವರೆದ ತೆಲುಗು ಕಾವ್ಯಕ್ಷೇತ್ರದಲ್ಲಿ ಕೃಷಿ ಮಾಡಿದ ಮಹನೀಯರು ಅನೇಕರಿದ್ದಾರೆ. ಇವರಲ್ಲಿ ಕೆಲವರು 'ಭಾವ ಕವಿಗಳು' (ರೊಮಾಂಟಿಕ್ ಸಂಪ್ರದಾಯಕ್ಕೆ ಸೇರಿದವರು); ಕೆಲವರು 'ಅಭ್ಯುದಯ ಕವಿಗಳು' (ಪ್ರಗತಿಶೀಲ ಪಂಥದವರು). ಇನ್ನೂ ಕೆಲವರು ಈ ಪಂಥಗಳನ್ನು ಮೀರಿದ ವ್ಯಕ್ತಿತ್ವವುಳ್ಳವರು. ಆಧುನಿಕಾಂಧ್ರ ಕಾವ್ಯದ ಪ್ರಮುಖ ವ್ಯಕ್ತಿಗಳ ಸಂಕ್ಷಿಪ್ತ ಪರಿಚಯ ಇಲ್ಲಿ ಕೊಟ್ಟಿದೆ.

ಶಿವಶಂಕರಶಾಸ್ತ್ರಿ : ಈಗ ಶಿವಶಂಕರ ಸ್ವಾಮೀ ಆಗಿರುವ ಇವರು (1882) ಏಳೆಂಟು ಭಾಷೆಗಳಲ್ಲಿ ಪಾಂಡಿತ್ಯವನ್ನು ಗಳಿಸಿದ್ದಾರೆ. ಆಧುನಿಕ ತೆಲುಗು ಸಾಹಿತ್ಯಕ್ಕೆ ಸೇವೆ ಮಾಡಲು ಹೊರಟ ಸಾಹಿತೀ ಸಮಿತಿ, ನವ್ಯಸಾಹಿತೀ ಸಮಿತಿ ಮುಂತಾದ ಸಂಸ್ಥೆಗಳ ಅಧ್ಯಕ್ಷರಾಗಿದ್ದರು. ವ್ಯಾಕರಣ, ತರ್ಕ, ವೇದಾಂತಾದಿ ಅನೇಕ ಶಾಸ್ತ್ರಗಳಲ್ಲಿ ನಿಷ್ಣಾತರಾದವರು. ರೊಮಾಂಟಿಕ್ ಸಂಪ್ರದಾಯದ ಅನೇಕ ಕವನಗಳನ್ನು ಇವರು ಬರೆದಿದ್ದಾರೆ.

ನಂಡೂರಿ ಸುಬ್ಬಾರಾವು: (1895-1957) ಜನಪದ ಗೀತೆಗಳ ಮುಗ್ಧ ಸೌಂದರ್ಯವನ್ನು ಆಧುನಿಕ ಆಂಧ್ರ ಕಾವ್ಯದಲ್ಲಿ ಪರಿಚಯ ಮಾಡಿದ ಕವಿ ಇವರು. 'ಯೆಂಕಿಪಾಟಲು' ಎಂಬ ಹೆಸರಿನಲ್ಲಿ ಇವರು ಬರೆದ ಹಾಡುಗಳು 1920-30ರ ಅವಧಿಯ ತೆಲುಗು ಸಾಹಿತ್ಯಲೋಕದಲ್ಲಿ ಒಂದು ಬಿರುಗಾಳಿಯನ್ನೇ ಎಬ್ಬಿಸಿದುವು. ಸಾಹಿತ್ಯದಲ್ಲಿ ಅವರ ಹಾಡುಗಳಿಗೆ ಸ್ಥಾನಕೊಡಬೇಕೇ ಬೇಡವೇ ಎಂಬ ವಿಷಯವಾಗಿ ಆಗ ವಾದ ಪ್ರತಿವಾದಗಳು ನಡೆದುವು. ಅವರ ಹಾಡುಗಳಲ್ಲಿ ನಾಯಿಕೆ 'ಯೆಂಕಿ', ನಾಯಕ 'ನಾಯುಡುಬಾವ'. ಇವರಿಬ್ಬರ ಪ್ರಣಯ ಹಳ್ಳಿಯ ಬಾಳಿಗೆ ಒಂದು ರಸಪೂರ್ಣದ ಪ್ರತೀಕೆ.

ನಾಯನಿ ಸುಬ್ಬರಾವು : ತೆಲುಗಿನ ರೊಮಾಂಟಿಕ್ ಸಂಪ್ರದಾಯದ ಕವಿಗಳಲ್ಲಿ ಇವರಿಗೂ ಒಂದು ಪ್ರಮುಖಸ್ಥಾನವಿದೆ. ಎದೆಯನ್ನು ಮುಟ್ಟುವ ಧಾಟಿ ಇವರದು. ಈಗ ಸ್ತಬ್ಧವಾಗಿರುವ ಇವರ ಲೇಖನಿಯಿಂದ ಸುಮಾರು 50 ವರ್ಷಗಳ ಹಿಂದೆ (ಜನನ 1899) ಮಾತೃಗೀತಮುಲು, ವೇದನಾ ವಾಸುದೇವಮು, ವಿಷಾದ ಮೋಹನಮು, ಸೌಭದ್ರುನಿ ಪ್ರಣಯಯಾತ್ರ ಮುಂತಾದ ಮಧುರ ಕಾವ್ಯಗಳು ಹೊರಬಂದುವು.

ವಿಶ್ವನಾಥ ಸತ್ಯನಾರಾಯಣ : (1895-1976) ಎರಡು ಪದ್ಯಗಳು ಅಥವಾ ಹತ್ತು ಸಾಲುಗಳು ಓದಿದರೆ ಇದು ವಿಶ್ವನಾಥ ಅವರದು ಎಂದು ಹೇಳುವಷ್ಟು ಸ್ವತಂತ್ರ ರೀತಿಯ ಶೈಲಿ ಇವರದು. ಸುಮಾರು 60 ವರ್ಷ ಸಾಹಿತ್ಯ ಕೃಷಿ ಮಾಡಿದ ವಿಶ್ವನಾಥರು ಯುಗಕವಿ, ಮಹಾಕವಿ ಎಂಬ ಹೆಸರನ್ನು ಪಡೆದಿದ್ದಾರೆ. ನೂರಕ್ಕೂ ಹೆಚ್ಚಾದ ಇವರ ರಚನೆಗಳಲ್ಲಿ ಕಾವ್ಯಭಾಗ ಅರ್ಧವಾದರೆ, ಕಾದಂಬರಿ ಮುಂತಾದ ಇತರ ಪ್ರಕಾರಗಳು ಇನ್ನರ್ಧವಾಗಿವೆ. ಇವರ ಒಂದೊಂದು ರಚನೆಯೂ ಒಂದೊಂದು ರೀತಿ ವಿಶಿಷ್ಟವಾಗಿದೆ. 'ಆಂಧ್ರ ಪ್ರಶಸ್ತಿ' ಅತೀವ ಆಂಧ್ರಾಭಿಮಾನಕ್ಕೆ ಪ್ರತೀಕೆಯಾಗಿ ನಿಂತಿದೆ. ಇವರ 'ಕಿನ್ನೆರಸಾನಿ ಪಾಟಲು' ಹಾಡಿನ ರೂಪದಲ್ಲಿರುವ ಮಧುರ ಕಾವ್ಯ. 'ಗಿರಿಕುಮಾರುನಿ ಪ್ರೇಮಗೀತಾಲು' ಮುಗ್ಧ ಪ್ರಣಯವನ್ನು ಪ್ರತಿಬಿಂಬಿಸುವ ಗೀತೆಗಳು. 'ಋತು ಸಂಹಾರಂ' ಪ್ರಕೃತಿಯನ್ನು ವಿಶ್ವನಾಥರ ಕಣ್ಣಿಗೆ ತೋರಿದ ಹಾಗೆ ಪ್ರತಿಬಿಂಬಿಸುವ ಉತ್ತಮ ಕಾವ್ಯ. ಇವೆಲ್ಲವನ್ನೂ ಮೀರಿದ ಮಹಾಕಾವ್ಯ 'ಶ್ರೀಮದ್ರಾಮಾಯಣ ಕಲ್ಪವೃಕ್ಷಮು.' ಈ ಕಾವ್ಯದ ರಚನೆಯನ್ನು ವಿಶ್ವನಾಥ ಸತ್ಯನಾರಾಯಣರು ಒಂದು ತಪಸ್ಸೆಂದು ಭಾವಿಸಿದರು. ಅವರಿಗೆ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಈ ಚಂಪೂಕಾವ್ಯ ವಿಶ್ವನಾಥರ ಪ್ರಗಾಢ ಪಾಂಡಿತ್ಯದ ಫಲವಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪುರಸ್ಕಾರ

ಪಡೆವ ಆನರ 'ವಿಶ್ವನಾಥ ಮಧ್ಯಾಕ್ಕರಲು' ತೆಲುಗಿನ ಮಧ್ಯಾಕ್ಕರ ಛಂದಸ್ಸಿಗೆ ಪ್ರಾಶಸ್ತ್ಯವನ್ನು ತಂದುಕೊಟ್ಟಿದೆ. ಸತೀವಿಯೋಗದ ದುಃಖದ ಫಲವಾಗಿ 'ವರಲಕ್ಷ್ಮೀ ತ್ರಿಶತಿ' ಎಂಬ ಕಾವ್ಯವನ್ನು ಬರೆದು 'ಎಲಿಜಿ' ಎಂಬ ಆಂಗ್ಲ ಕಾವ್ಯ ಪ್ರಕಾರಕ್ಕೆ ವಿಶ್ವನಾಥರು ತೆಲುಗಿನಲ್ಲಿ ಉತ್ತಮ ಲಕ್ಷ್ಯವನ್ನು ಕೊಟ್ಟಿದ್ದಾರೆ. ಆಧುನಿಕ ಕಾಲದ ಪಂಡಿತ ಕವಿಗಳಲ್ಲಿ ವಿಶ್ವನಾಥ ಸತ್ಯನಾರಾಯಣ ಅವರ ವ್ಯಕ್ತಿತ್ವ ಹಿಮಾಲಯದಷ್ಟು ಎತ್ತರ

ದೇವುಲಪಲ್ಲಿ ಕೃಷ್ಣಶಾಸ್ತ್ರಿ: ಇಂಗ್ಲೀಷಿನ, ಕೀಟ್ಸ್-ಶೆಲ್ಲಿ ಮುಂತಾದವರ ಸಾಲಿಗೆ ಸೇರತಕ್ಕ ಉತ್ತಮ ಕವಿ ಕೃಷ್ಣಶಾಸ್ತ್ರಿ. 1897ರಲ್ಲಿ ಹುಟ್ಟಿ ಈಗಲೂ ಚಲನಚಿತ್ರಗೀತೆಗಳ ರಚನೆಯ ಮೂಲಕ ತಮ್ಮ ಕಾವ್ಯರಚನೆ ಮುಂದುವರೆಸುತ್ತಿರುವ ಇವರು 1920–30 ಅವಧಿಯಲ್ಲಿ ಅತ್ಯುತ್ತಮ ಕವನ ಸಂಕಲನಗಳನ್ನು ಪ್ರಕಟಿಸಿದರು. ಕೃಷ್ಣ ಪಕ್ಷಂ, ಊರ್ವಶಿ, ಕನ್ನೀರು, ಮಹತಿ ಮುಂತಾದ ಇವರ ರಚನೆಗಳು ಪ್ರಣಯ ಮತ್ತು ವೇದನೆಗಳ ಅಪರೂಪ ಸಂಯೋಗವಾಗಿ ನಿಂತಿವೆ. ಇವರು ಪಡೆದ ಶಿಲ್ಪಸಿದ್ಧಿ ಬೇರೆ ಅನೇಕ ಕವಿಗಳಲ್ಲಿ ಕಾಣುವುದು ಕಷ್ಟ. ತೆಲುಗು ದೇಶದ ಯುವ ಕವಿಗಳು 1920 ಪ್ರಾಂತ್ಯದ ಕೃಷ್ಣಶಾಸ್ತ್ರಿಯ ಕಾವ್ಯ ರೀತಿಯನ್ನು ಮಾತ್ರವಲ್ಲದೆ ಅವರ ವೇಷಭೂಷಣ ಗಳನ್ನೂ ಅನುಕರಿಸುವಷ್ಟು ಪ್ರಭಾವ ಬೀರಿದ್ದಾರೆ. ತಮ್ಮ ಅನುಭವಗಳಲ್ಲಿಯೂ, ಅಭಿವ್ಯಕ್ತಿಯಲ್ಲಿಯೂ ವೈಶಿಷ್ಟ್ಯ ವನ್ನು ತೋರಿಸಿದ ಈ ಕವಿ ಕಾವ್ಯ ರಚನೆ ಮತ್ತು ವಾಚನವನ್ನು ಊರೂರಲ್ಲಿ ಪ್ರಚುರಪಡಿಸಿ ಒಂದು ಚಳುವಳಿ ಯನ್ನೇ ಮಾಡಿದ್ದಾರೆ. ಕ್ಯಾನ್ಸರ್‌ನಿಂದ ಈಗ ಈ ಕವಿಯ ಕಂಠ ಮೂಕವಾಗಿದೆ; ಆದರೆ ಲೇಖನಿ ಇನ್ನೂ ಅತೀವ ವೇದನೆಯನ್ನೂ ಮಾಧುರ್ಯವನ್ನೂ ಪ್ರಕಟಿಸುತ್ತಿದೆ.

ಶ್ರೀರಂಗಂ ಶ್ರೀನಿವಾಸರಾವು: ಶ್ರೀ ಶ್ರೀ ಎಂದು ಪ್ರಸಿದ್ಧರಾಗಿರುವ ಈ ಕವಿ 1910ರಲ್ಲಿ ಹುಟ್ಟಿ ದ್ದಾರೆ. ಅದು ಗುರಜಾಡ ಅಪ್ಪಾರಾಯರ 'ದೇಶಭಕ್ತಿ' ಗೀತೆ ಹೊರಬಂದ ವರ್ಷ. ಅಪ್ಪಾರಾಯರ ದನಿಯನ್ನು ಮುಂದುವರೆಸಿ, ತಮ್ಮ ಸ್ವಂತಿಕೆಯನ್ನೂ ಮೆರೆಸಿ, ಇತ್ತೀಚಿನ (1930 ರಿಂದ) ತೆಲುಗು ಕಾವ್ಯವನ್ನು ಆಳುತ್ತಿರು ವವರು ನಿರ್ದ್ವಂದ್ವವಾಗಿ ಶ್ರೀ ಶ್ರೀ. ಇವರಷ್ಟು ಪ್ರಭಾವ ಬೀರಿದ, ಬೀರುತ್ತಿರುವ ಕವಿ ಆಧುನಿಕ ತೆಲುಗು ಸಾಹಿತ್ಯ ದಲ್ಲಿ ಇನ್ನೊಬ್ಬರಿಲ್ಲ. ಪ್ರಗತಿಶೀಲ ಕವಿಗಳ ಸಂಘದ ಅಧ್ಯಕ್ಷರಾಗಿದ್ದ ಶ್ರೀ ಶ್ರೀ ಅವರು ಜಗತ್ತಿನ ಅನುಕಂಪಶೀಲ ವಾದ ಪ್ರತಿಯೊಂದು ಘಟನೆಗೂ ಸ್ಪಂದಿಸುವ ಚಿತ್ತವೃತ್ತಿಯವರು. ಇವರು ತಮ್ಮ ಇಪ್ಪತ್ತನೆಯ ವಯಸ್ಸಿನಿಂದ ಬರೆಯುತ್ತಿರುವ ಕವನಗಳು ತೆಲುಗು ಯುವಕವಿಗಳಿಗೆ ಮಾರ್ಗದರ್ಶನ ನೀಡಿವೆ. ಮಹಾಪ್ರಸ್ಥಾನಂ, ದೇಶ ಚರಿತ್ರಲು, ಋಕ್ಕುಲು, ಜಗನ್ನಾಥುನಿ ರಥ ಚಕ್ರಾಲು, ಕವಿತಾ ಓ ಕವಿತಾ—ಮುಂತಾದ ಕವನಗಳಿಂದ ಕೂಡಿದ ಇವರ 'ಮಹಾಪ್ರಸ್ಥಾನಂ' ಎಂಬ ಕವನ ಸಂಕಲನ ತೆಲುಗಿನ ನೂರಾರು ಕವಿಗಳಿಗೆ ಪವಿತ್ರ ಗ್ರಂಥ. ತೆಲುಗು ಕಾವ್ಯ ರಚನೆಯಲ್ಲಿ ಎಲ್ಲಾ 'ಇಜಮ್'ಗಳನ್ನೂ ಬರೆದು ತೋರಿಸಿದ್ದಾರೆ ಶ್ರೀ ಶ್ರೀ. ಇವರಷ್ಟು ಪ್ರಯೋಗಗಳನ್ನು ಕಾವ್ಯದಲ್ಲಿ ಮಾಡಿದವರು ಕಡಮೆ. ಏನೇ ಬರೆದರೂ ಇವರ ಮುಖ್ಯ ಆಶಯ ಸಮಸಮಾಜ. ಇತ್ತೀಚೆಗೆ ಕ್ರಾಂತಿಕಾರೀ ಲೇಖಕರ ಸಂಘಕ್ಕೂ ಶ್ರೀ ಶ್ರೀ ಅವರು ಅಧ್ಯಕ್ಷರಾದರು. ಕೇಂದ್ರಸಾಹಿತ್ಯ ಅಕಾಡೆಮೀ ಬಹುಮಾನ, ಸೋವಿಯಟ್‌ಲ್ಯಾಂಡ್ ನೆಹ್ರೂ ಬಹುಮಾನ ಮುಂತಾದುವನ್ನು ಪಡೆದರೂ ಎಲ್ಲಕ್ಕಿಂತ ಹೆಚ್ಚಾಗಿ ಯುವಜನರ ಹೃದಯದಲ್ಲಿ ಮಹಾಕವಿ ಶ್ರೀ ಶ್ರೀ ಸ್ಥಾನಪಡೆದಿದ್ದಾರೆ.

ಪಠಾಭಿ: (1919) ಕನ್ನಡಿಗರಿಗೂ ಚಲನಚಿತ್ರ ನಿರ್ಮಾಪಕರಾಗಿ ಪರಿಚಿತರಾಗಿರುವ ಪಟ್ಟಾಭಿರಾಮ ರೆಡ್ಡಿ ಅವರು ಪಠಾಭಿ ಎಂಬ ಹೆಸರಿನಲ್ಲಿ ಅನೇಕ ತರುಣ ಕವಿಗಳಿಗೆ ಮಾರ್ಗದರ್ಶಕರಾಗಿದ್ದಾರೆ. 1939ರಲ್ಲಿ ಇವರು ಪ್ರಕಟಿಸಿದ 'ಫಿಡೇಲು ರಾಗಾಲ ಡಜನ್' ಎಂಬ ಕವನಸಂಕಲನ ಅನೇಕರ ದೂಷಣಭೂಷಣಗಳಿಗೆ ಆಸ್ಪದ ವಾಗಿದೆ. ಕಯಿತ+ನಾದಯಿತ, ಪಠಾಭಿ+ಪನ್‌ಚಾಂಗಂ ಎಂಬ ಇನ್ನೆರಡು ಅಮುದ್ರಿತ ಕವನ ಸಂಕಲನಗಳು ಪತ್ರಿಕೆ ಗಳಲ್ಲಿ ಮಾತ್ರ ಪ್ರಕಟಿತವಾಗಿ ಪ್ರಸಿದ್ಧವಾಗಿದೆ. ಇಲಿಯಟ್, ಫ್ರಾಯಿಡ್ ಅವರ ಪ್ರಭಾವ ಇವರ ಮೇಲಿದೆ.

ಬಾಲಗಂಗಾಧರ ತಿಲಕ್ : ತೆಲುಗಿನ ಉತ್ತಮ ಕವಿಗಳ ಶ್ರೇಣಿಯಲ್ಲಿ ಇವರೊಬ್ಬರು. ಇವರು ಯಾವ 'ಇಜಮ್'ಗೂ ಸೇರಿದವರಲ್ಲ. ಅನುಭೂತಿ ಪ್ರಧಾನವಾದ ಇವರ ಕಾವ್ಯ ಭಾವಗಳ ಗಾಂಭೀರ್ಯ, ಮಧುರಶೈಲಿಯಿಂದ ಕೂಡಿದ್ದು. ಕೇಂದ್ರ ಸಾಹಿತ್ಯ ಅಕಾಡೆಮೀ ಬಹುಮಾನ ಪಡೆದ 'ಅಮೃತಂ ಕುರಿಸಿನ ರಾತ್ರಿ' ಎಂಬುದೊಂದೇ ಇವರ ಪ್ರಕಟಿತ ಕವನ ಸಂಕಲನವಾದರೂ ಇವರು ಯುವಕವಿಗಳ ಮೇಲೆ ಬೀರಿದ ಪ್ರಭಾವ ಮಾತ್ರ ಅಪಾರವಾಗಿದೆ.

ಈಗ ಪ್ರಸಿದ್ಧರಾಗಿರುವ ಕವಿಗಳಲ್ಲಿ ಇನ್ನೂ ಅನೇಕರಿದ್ದಾರೆ. ತೆಲಂಗಾಣಾ ಚಳುವಳಿಯ ಕಾಲದಲ್ಲಿ ಹೈದರಾಬಾದ್ ನವಾಬ್‌ನ ವಿರುದ್ಧ ದಂಗೆ ಎದ್ದು 'ಅಗ್ನಿಧಾರ' ಮುಂತಾದ ಕವನ ಸಂಕಲನಗಳಿಂದ ಪ್ರಸಿದ್ಧರಾದ ದಾಶರಥಿ ಹೆಸರಿಸತಕ್ಕವರು. ಡಾ. ಸಿ. ನಾರಾಯಣರೆಡ್ಡಿ ಅವರ 'ನಾಗಾರ್ಜುನಸಾಗರಂ' ಮುಂತಾದುವು ಸ್ಮರಣಾರ್ಹ ಕಾವ್ಯಗಳು. ಗುಂಟೂರು ಶೇಷೇಂದ್ರಶರ್ಮ ಎಂಬುವರು ಇತ್ತೀಚೆಗೆ ಉತ್ತಮ ಕವನಸಂಪುಟಗಳನೇಕವನ್ನು ಪ್ರಕಟಿಸುತ್ತಿದ್ದಾರೆ. ತೆಲುಗಿನ ಸಾಹಿತಿಗಳಲ್ಲಿ ಹೆಸರುವಾಸಿಯಾಗಿರುವ ಆರುದ್ರ 'ತ್ವಮೇವಾಹಂ' ಇತ್ಯಾದಿ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ.

ತೆಲುಗಿನ ಆಧುನಿಕ ಕಾವ್ಯದಲ್ಲಿ ಕೆಲವು ಮೈಲಿಗಲ್ಲುಗಳನ್ನು ಗುರುತಿಸುವ ಪ್ರಯತ್ನ ಮಾಡಬಹುದು. ಗುರಜಾಡ ಅಪ್ಪಾರಾಯರಿಂದ ಪ್ರಾರಂಭವಾದ ಆಧುನಿಕ ತೆಲುಗು ಕಾವ್ಯದಲ್ಲಿ 1920–30ರ ಅವಧಿಯ ಕಾಲವನ್ನು ರ್‍ಯೊಮಾಂಟಿಕ್ ಸಂಪ್ರದಾಯದ ಕವಿಗಳು ಆಳಿದರು. ಅದು 'ಭಾವಕವಿ'ಗಳ, ಪ್ರಣಯಗೀತೆಗಳ ಕಾಲ. ದೇಶಭಕ್ತಿ, ಪ್ರಕೃತಿ ಪ್ರೇಮ ಮುಂತಾದುವೂ ಈ ಸಂಪ್ರದಾಯದ ಅಂಗಗಳಾಗಿ ಬಂದುವು. 1930ರ ಪ್ರಾಂತ್ಯದಲ್ಲಿ ಶಿಷ್ಟ್ಲಾ, ನಾರಾಯಣಬಾಬು, ಪಠಾಭಿ ಮುಂತಾದವರು ಅನೇಕ ಪ್ರಯೋಗಗಳನ್ನು ನಡೆಸಿದರು. ಇದೇ ಕಾಲದಲ್ಲಿ ಶ್ರೀ ಶ್ರೀ ಅವರು ತಮ್ಮ ಪ್ರಗತಿಶೀಲ ಕಾವ್ಯದ ಪ್ರಭಾವಕ್ಕೆ ತೆಲುಗು ಯುವಕವಿಗಳನ್ನು ಒಳಪಡಿಸಿದರು. ಆಮೇಲೆ ಬಂದ ತಿಲಕ್ 1955ರ ಸುಮಾರರಿಂದ 'ವಚನ ಪದ್ಯ'ಗಳನ್ನು ಪ್ರಚುರಪಡಿಸಿದರು. 1968ರ ಸುಮಾರಿನಿಂದ 'ದಿಗಂಬರ ಕವಿಗಳು' ಎಂಬ ಹೆಸರಿನಲ್ಲಿ ಆರು ಜನ ಯುವಕವಿಗಳು ವಿಜೃಂಭಣೆಯಿಂದ ಕ್ರಾಂತಿಕಾರಿ ಕವಿತೆಯನ್ನು ಬರೆದರು. 1971ರಿಂದ ಶ್ರೀ ಶ್ರೀ ಅವರ ನೇತೃತ್ವದಲ್ಲಿ 'ವಿಪ್ಲವ ರಚಯಿತಲ ಸಂಘಂ' (ವಿರಸಂ) ಏರ್ಪಟ್ಟು ತೆಲುಗು ಕವಿತೆಯಲ್ಲಿ ಕ್ರಾಂತಿಕಾರಿ ಮನೋಭಾವವನ್ನು ಹೆಚ್ಚಿಸಿತು. ಇವೆಲ್ಲ ಚಳುವಳಿಗಳ ನಡುವೆ ವೈಯಕ್ತಿಕವಾಗಿ ಅನೇಕ ಕವಿಗಳು ತಮ್ಮ ಸ್ವಂತಿಕೆಯನ್ನು ಮೆರೆದಿದ್ದಾರೆ.

ನಮ್ಮ ಸಂಸ್ಕೃತಿಯ ಸಂಪೂರ್ಣ ಮಥಿತಾರ್ಥವೆಂದರೆ ಇಷ್ಟೆ, ಸಾಕ್ರಟಿಸನು ಹೇಳುವಂತೆ ಹಿರಿತನದ ಜಾಳ್ಮೆಯನ್ನು ಅಳಿಸಿ, ಕಿರಿತನಗಳು ಮೇಲಕ್ಕೇರಿಸುವ ಮಹಾ ಪಾಪ ಕಾರ್ಯಗಳ ಪಾಲಿಗೆ ಸೇರಬೇಡ ಎಂಬ ಎಚ್ಚರಿಕೆ.

ಈಶ್ವರಚಂದ್ರ

ಕನ್ನಡ ಕಾದಂಬರಿಗಳು ಮತ್ತು ಸಾಮಾಜಿಕ ಕ್ರಾಂತಿ

ಕ್ಷಿಪ್ರವಾಗಿ ಆಗುವ ಬದಲಾವಣೆಯೇ ಕ್ರಾಂತಿ. ನೈಸರ್ಗಿಕವಾಗಿ ಜ್ವಾಲಾಮುಖಿಯ ಆಸ್ಫೋಟ, ಹಿಮಪಾತ, ಭೂಕಂಪ, ಮಳೆ ಮೊದಲಾದವೆಲ್ಲ ಒಂದು ಸ್ಥಿತಿಯಿಂದ ಇನ್ನೊಂದು ಸ್ಥಿತಿಗೆ ಆಗುವ ಕ್ಷಿಪ್ರ ಬದಲಾವಣೆಗಳಾದರೂ ಅವಕ್ಕೆಲ್ಲಾ ಕ್ರಮಬದ್ಧವಾದ ಪೂರ್ವಸಿದ್ಧತೆಗಳಿರುವುದನ್ನು ಗುರುತಿಸಬಹುದು. ಆ ದೃಷ್ಟಿಯಿಂದ ಪ್ರಾಕೃತಿಕ ಬದಲಾವಣೆಗಳು ಉತ್ಕ್ರಾಂತಿ ಎನ್ನಿಸಿಕೊಳ್ಳುತ್ತವೆ. ಮನುಷ್ಯನ ಬದುಕಿನ ವ್ಯವಸ್ಥೆಗಳಲ್ಲಿ ತೀವ್ರವಾದ ಬದಲಾವಣೆಗಳು ಕ್ಷಿಪ್ರವಾಗಿ ಆಗುವುದಕ್ಕೂ ಹಿನ್ನೆಲೆಯಲ್ಲಿ ಕ್ರಮಾಗತ ಪೂರ್ವಸಿದ್ಧತೆಗಳಿರಬೇಕಾಗುತ್ತದೆ. ಇವು ಎಲ್ಲರ ಅರಿವಿದ್ದೋ ಇಲ್ಲದೆಯೋ ತಮ್ಮ ಪಾಡಿಗೆ ತಾವೇ ರೂಪಗೊಳ್ಳುತ್ತಿರುತ್ತವೆ. ಆದರೂ ಈ ಬದಲಾವಣೆಗಳು ಕ್ರಾಂತಿ ಎನ್ನಿಸಿಕೊಳ್ಳುತ್ತವೆ.

ಕ್ರಾಂತಿಗೆ ವಿವಿಧ ಮುಖಗಳು. ಅದು ಧಾರ್ಮಿಕವಾಗಿರಬಹುದು, ರಾಜಕೀಯವಾಗಿರಬಹುದು, ಆರ್ಥಿಕವಾಗಿರಬಹುದು ಅಥವಾ ಸಾಮಾಜಿಕವಾಗಿರಬಹುದು. ಬಸವಣ್ಣನವರ ಕಾಲದಲ್ಲಿ ಧಾರ್ಮಿಕ ಕ್ರಾಂತಿಯಾಯಿತು. ಬೇರೆ ಬೇರೆ ಮತಾಚಾರ್ಯರು ಬಂದಾಗಲೂ ತಕ್ಕಮಟ್ಟಿಗೆ ಧಾರ್ಮಿಕ ಬದಲಾವಣೆಗಳು ನಡೆದವು. ಬಸವಣ್ಣನವರ ಕಾಲದಲ್ಲಾದ ಧಾರ್ಮಿಕಕ್ರಾಂತಿಯ ಪ್ರಭಾವವನ್ನು ಆ ಕಾಲದಲ್ಲಿ ರಚಿತವಾದ ವಚನಗಳಲ್ಲಿ ಗುರುತಿಸಬಹುದು. ಗಾಂಧೀಜಿಯವರ ಕಾಲದಲ್ಲಿ ರಾಜಕೀಯ ಕ್ರಾಂತಿಯಾಯಿತು. ಬ್ರಿಟಿಷರ ಆಳಿಕೆ ಬದಲಾಗಿ ಪ್ರಜಾತಂತ್ರ ಬಂತು. ದಾಸ್ಯ ಹೋಗಿ ಸ್ವಾತಂತ್ರ್ಯ ಬಂತು. ಈಗ (1975) ಆರ್ಥಿಕ ಕ್ರಾಂತಿ ನಡೆಯುತ್ತಿರುವಂತಿದೆ. ಕಳ್ಳಸಾಗಾಣಿಕೆದಾರರ ಸೆರೆಯಾಗಿ ಕಪ್ಪು ಹಣದ ಚಲಾವಣೆ, ವಿದೇಶೀ ವಸ್ತುಗಳ ಕಳ್ಳ ವ್ಯಾಪಾರಕ್ಕೆ ತಡೆ ಬಂದಿದೆ. ದೇಶದ ಆದಾಯ ಸೋರಿಹೋಗುವುದು ಕಡಮೆಯಾಯಿತು. ಇನ್ನೂ ಅನೇಕ ಬದಲಾವಣೆಗಳನ್ನು ನಿರೀಕ್ಷಿಸಬಹುದು.

ಧಾರ್ಮಿಕ, ರಾಜಕೀಯ, ಆರ್ಥಿಕ ಕ್ರಾಂತಿಗಳು ಬಿಡಿಯಾಗಿ ಮತ್ತು ಇಡಿಯಾಗಿ ಸಮಾಜದ ಮೇಲೆ ಪ್ರಭಾವ ಬೀರುತ್ತವೆ. ಆದರೆ ಸಾಮಾಜಿಕ ಕ್ರಾಂತಿ ಎನ್ನುವಾಗ ಇವೆಲ್ಲವೂ ಸೇರಿದಂತೆ ಹಾಗೂ ಸಮಾಜದ ರೂಢಮೂಲ ಸಮಸ್ಯೆಗಳನ್ನು ಅಲ್ಲಾಡಿಸುವ, ಬುಡಮೇಲುಮಾಡುವ ಬದಲಾವಣೆಗಳು ಮುಖ್ಯವಾಗುತ್ತವೆ. ದಡ್ಡುಬಿದ್ದ ಎಷ್ಟೋ ಪರಂಪರಾಗತ ಸಾಮಾಜಿಕ ವ್ಯವಸ್ಥೆಗಳು ಮಾನವನ ಸರ್ವತೋಮುಖ ಪ್ರಗತಿಗೆ ಮಾರಕವಾಗಿವೆ. ಸಮಾಜಕಾಯದ ಕೆಲವು ಭಾಗಗಳು ಮಾತ್ರ ಸುಪುಷ್ಟವಾಗಿ ಬೆಳೆದು ಉಳಿದವು ಸೀಕಾಗಿ, ಒಟ್ಟು ಚಿತ್ರ ವಿಕಾರವಾಗಿ ಕಾಣುತ್ತಿದೆ. ಜಾತಿಪದ್ಧತಿ, ಜೀತಪದ್ಧತಿ, ವರ್ಗಭೇದ, ಉಳ್ಳವರಿಂದ ಇಲ್ಲದವರ ಶೋಷಣೆ, ವೇಶ್ಯಾ ಸಮಸ್ಯೆ, ನಿರುದ್ಯೋಗ ಸಮಸ್ಯೆ ಮೊದಲಾದ ಹಲವಾರು ಅನಿಷ್ಟಗಳು ಸಮಾಜದ ಹುಣ್ಣುಗಳಾಗಿವೆ. ಇವನ್ನೆಲ್ಲಾ

ತೊಳೆದು ತೆಗೆದು, ಶಸ್ತ್ರಚಿಕಿತ್ಸೆ ಮಾಡಿ ಸುಂದರವಾದ,ಸುಪುಷ್ಟವಾದ ಸಮಾಜಕಾಯದ ಪುನರ್ನಿರ್ಮಾಣವಾದಾಗ ಅದು ಸಾಮಾಜಿಕ ಕ್ರಾಂತಿ ಎನ್ನಿಸಿಕೊಂಡೀತು.

ಇಂಥ ಕ್ರಾಂತಿಯನ್ನು ಕನ್ನಡ ಕಾದಂಬರಿಗಳು ಮಾಡಿವೆಯೇ ಎನ್ನುವುದು ಮೊದಲ ಪ್ರಶ್ನೆ. ಅದಕ್ಕೆ ಪೂರಕವಾಗಿ ಕನಿಷ್ಠ ಪಕ್ಷ ಇಂಥ ಕ್ರಾಂತಿಯ ಚಿತ್ರ ಕನ್ನಡ ಕಾದಂಬರಿಗಳಲ್ಲಿ ಕಾಣುತ್ತಿದೆಯೇ ಎಂಬ ಪ್ರಶ್ನೆಯೂ ಹುಟ್ಟಿಕೊಳ್ಳುತ್ತದೆ. ಮೊದಲ ಪ್ರಶ್ನೆಗೆ ಉತ್ತರ ಎಲ್ಲರಿಗೂ ಗೊತ್ತು. ಕನ್ನಡ ಕಾದಂಬರಿಗಳಿಂದ ಸಾಮಾಜಿಕ ಕ್ರಾಂತಿಯಾಗಿಲ್ಲ.

19ನೆಯ ಶತಮಾನದ ಕೊನೆಯಲ್ಲಿ ಉದಯವಾದ ಹೊಸಗನ್ನಡ ಕಾದಂಬರಿ 20ನೆಯ ಶತಮಾನದ ಎರಡು ಮೂರನೆಯ ದಶಕದ ಹೊತ್ತಿಗೆ ತಕ್ಕಷ್ಟು ರೆಕ್ಕೆಪುಕ್ಕಗಳನ್ನು ಕೂಡಿಸಿಕೊಂಡಿತು. ಅನುವಾದಿತ–ಐತಿಹಾಸಿಕ ಕಾದಂಬರಿಗಳು ಜನಪ್ರಿಯತೆಗಳಿಸಿದವು. ಸಾಮಾಜಿಕ ಕಾದಂಬರಿಗಳು ಅನಂತರದ ದಿನಗಳಲ್ಲಿ ಹೆಚ್ಚು ಪ್ರಚಾರಕ್ಕೆ ಬಂದವು. ಅಂದಿನ ಸಾಮಾಜಿಕ ಕಾದಂಬರಿಗಳಲ್ಲಿ ಕೌಟುಂಬಿಕ ಜೀವನ, ವ್ಯಕ್ತಿ ವ್ಯಕ್ತಿಗಳ ಸಮಸ್ಯೆ ಮುಂತಾದವು ಗಳೇ ಚಿತ್ರಿತವಾಗುತ್ತಿದ್ದವು. ಬರವಣಿಗೆ ಹೆಚ್ಚುಪಾಲು ಆದರ್ಶೀಕೃತವಾಗಿತ್ತು. ಮಧ್ಯಮ ವರ್ಗ ಮತ್ತು ಉಚ್ಚ ವರ್ಗದ ಜನಜೀವನ ಕಾದಂಬರಿಗಳಿಗೆ ವಸ್ತುಗಳನ್ನು ಒದಗಿಸುತ್ತಿದ್ದವು. ಆಗ ಅ.ನ.ಕೃ. ಅವರ ನೇತೃತ್ವದಲ್ಲಿ ಕೆಲವು ಬರಹಗಾರರು ಸೇರಿ ಪ್ರಗತಿಶೀಲ ಚಳವಳಿ ಆರಂಭಿಸಿದರು. ಕೆಳವರ್ಗದ ಜನರ ಜೀವನದ ಕರಾಳ ಮುಖ ಗಳನ್ನ, ಅವರ ಸಮಸ್ಯೆಗಳನ್ನ ಎತ್ತಿಕೊಂಡು ಕಾದಂಬರಿ ಬರೆಯಬೇಕು ಎಂದು ನಿರ್ಧರಿಸಿದರು. ಸಾಮಾಜಿಕ ಸಮಸ್ಯೆಗಳನ್ನು ಚಿತ್ರಿಸುವ ಕಾದಂಬರಿಗಳು ಇಲ್ಲಿಂದಲೇ ಆರಂಭವಾದವೆಂದು ಹೇಳಬಹುದು. ಅನಂತರ ಎಷ್ಟೋ ಕಾದಂಬರಿಗಳು ಬಂದಿವೆ.

ಅನೀತಿಯುತ ಮಠದ ಗುರುಗಳು, ವೇಶ್ಯಾ–ಸಮಸ್ಯೆ, ಹರಿಜನ ಸಮಸ್ಯೆ, ಕೃಷಿಕರು ಮತ್ತು ಕಾರ್ಮಿಕರ ಸಮಸ್ಯೆ, ಎಂಜಲೆಲೆಗೆ ಕಿತ್ತಾಡುವವರ ಪಾಡು ಮುಂತಾಗಿ ಹಲವಾರು ವಸ್ತುಗಳನ್ನು ಎತ್ತಿಕೊಂಡು ದಿಟ್ಟವಾಗಿ ಚರ್ಚಿಸಿದ ಕಾದಂಬರಿಗಳು ಬಂದವು. ಅ.ನ.ಕೃ., ಕಾರಂತ, ತ.ರಾ.ಸು, ನಿರಂಜನ, ಪುರಾಣಿಕ, ಕಟ್ಟೀಮನಿ, ಮಿರ್ಜಿ ಅಣ್ಣಾರಾಯ,ರಂ. ಶ್ರೀ. ಮುಗಳಿ, ಭೈರಪ್ಪ,ಅನಂತಮೂರ್ತಿ ಈ ಸಮಸ್ಯೆಗಳನ್ನು ಎತ್ತಿಕೊಂಡು ಕಾದಂಬರಿ ಬರೆದವರಲ್ಲಿ ಮುಖ್ಯರು. ಈ ಕಾದಂಬರಿಗಳಿಂದ ಆಯಾ ಕ್ಷೇತ್ರದಲ್ಲಾದರೂ ಕ್ರಾಂತಿಯಾಯಿತೇ ಎಂದು ಸಮೀಕ್ಷಿಸಿದರೆ ನಿರಾಸೆ ಎದುರಾಗುತ್ತದೆ. ಒಂದು ಜಾತಿಯ ಗುರುಗಳನ್ನು ಬಯಲು ಮಾಡಿ ಬರೆದ ಕಾದಂಬರಿಯನ್ನು ಇನ್ನೊಂದು ಜಾತಿಯವರು ಓದಿ ಲೇವಡಿ ಮಾಡಿ ನಕ್ಕರು. ಅನೀತಿಯುತ ಗುರುಗಳ ಮೇಲೆ ಯಾರೂ ಸಿಡಿದೇಳಲಿಲ್ಲ; ಮಠವನ್ನು ನೆಲಸಮ ಮಾಡಲಿಲ್ಲ. ವೇಶ್ಯಾ ಸಮಸ್ಯೆ ಕುರಿತ ಕಾದಂಬರಿಗಳನ್ನು ಒಳಕೋಣೆಗಳಲ್ಲಿ ಕದ್ದು ಓದಿ ಖುಷಿ ಪಟ್ಟರು, ವೇಶ್ಯೆಯರ ಗೋಳು ನಿವಾರಣೆಯಾಗಲಿಲ್ಲ. ಹರಿಜನ ಸಮಸ್ಯೆಯ ಕಾದಂಬರಿಗಳೂ ಕಾವು ಕೆರಳಿಸಲಿಲ್ಲ. ರೈತರ ಸಮಸ್ಯೆ ಕುರಿತು ಬರೆದ ಕಾದಂಬರಿಗಳು ಒಳ್ಳೆಯ ಕಥೆಗಳಂತೆ ಓದಿಸಿಕೊಂಡವು.

‘ಚೆನ್ನಬಸವನಾಯಕ’, ‘ಸಂಸ್ಕಾರ’, ‘ಕರಾವಳಿ’ ಕಾದಂಬರಿಗಳು ಅಲ್ಲಿಲ್ಲಿ ಅಷ್ಟಿಷ್ಟು ಗಲಿಬಿಲಿ ಮಾಡಿದ್ದುಂಟು. ‘ಚೆನ್ನಬಸವನಾಯಕ’ ಬೇರೆ ಭಾಷೆಗಳಿಗೆ ಅನುವಾದವಾಗಬೇಕಾದಾಗ, ಒಂದು ಜಾತಿಯ ಜನರಿಗೆ ನೋವಾಗುವಂತೆ ಚಿತ್ರಣ ಮಾಡಲಾಗಿದೆಯೆಂಬ ಕಾರಣಕ್ಕೆ ಗದ್ದಲವಾಯಿತು. ‘ಸಂಸ್ಕಾರ’ ಬ್ರಾಹ್ಮಣರ ಒಂದು ಒಳಪಂಗಡಕ್ಕೆ ಅಪಚಾರ ಮಾಡುವಂತಿದೆಯೆಂದು ಅಲ್ಲಲ್ಲಿ ಬಿರುಸಾಗಿ ಚರ್ಚಿತವಾಯಿತು. ‘ಕರಾವಳಿ’ ಪತ್ರಿಕೆಯೊಂದರಲ್ಲಿ ಧಾರಾವಾಹಿಯಾಗಿ ಪ್ರಕಟವಾಗುತ್ತಿದ್ದಾಗ, ಒಂದು ಜಾತಿಯ ಜನರಿಗೆ ನೋವುಂಟು ಮಾಡುವಂತಿದೆಯೆಂಬ ಕಾರಣದಿಂದ ತಡೆಹಿಡಿಯಲ್ಪಟ್ಟು ಜನಗಳ ಗಮನ ಸೆಳೆಯಿತು. ಈ ಮೂರೂ ಕಾದಂಬರಿಗಳು ಜಾತೀಯ ಕಾರಣದಿಂದಾಗಿ ಗಲಿಬಿಲಿ ಮಾಡಿದ್ದನ್ನು ಗಮನಿಸಬೇಕು. ಅಷ್ಟರ ವಿನಾ ಬೇರೇನೂ ತೀವ್ರ ಪರಿಣಾಮ ತರಲಿಲ್ಲ.

ಕರ್ನಾಟಕ ಏಕೀಕರಣದ ಹೋರಾಟದ ಸಂದರ್ಭದಲ್ಲಿ ಆಲೂರು ವೆಂಕಟರಾಯರ 'ಕರ್ನಾಟಕದ ಗತವೈಭವ' ಕನ್ನಡಿಗರ ಅಭಿಮಾನವನ್ನು ಬಡಿದೆಚ್ಚರಿಸಿದ ಸಂಗತಿಯನ್ನು ಇಲ್ಲಿ ನೆನೆಯಬಹುದು.

ಒಂದು ಮಠದ ಗುರುಗಳು ಪೀಠತ್ಯಾಗ ಮಾಡಿ ಸಂಸಾರಿಯಾದ ಘಟನೆ ನಮ್ಮ ಸಮಾಜದಲ್ಲಿ ಘಟಿಸಿದೆ. ಇನ್ನೊಂದು ಮಠದ ಗುರುಗಳು ಹರಿಜನ ಕೇರಿಯಲ್ಲಿ ಅಡ್ಡಾಡಿ ಧರ್ಮೋಪದೇಶ ಮಾಡಿದ್ದೂ ಉಂಟು. ಇಂಥ ಸಂಗತಿಗಳು, ಘಟಿಸಿದ ಗಳಿಗೆಯಲ್ಲಿನ ಕಾವು ಕಳೆದುಕೊಂಡು ಕಮರಿವೆ. ಯಾವ ಘಟನೆಗಳು ಸತ್ತ್ವ ಕೂಡಿಸಿಕೊಂಡು ಒಂದು ಸಾಮಾಜಿಕ ಆಂದೋಲನಕ್ಕೆ ನಾಂದಿಯಾಗಬಹುದಾಗಿದ್ದವೋ ಅವು ಇತಿಹಾಸದಲ್ಲಿ ಮರೆಯಾಗಿವೆ. ವರದಕ್ಷಿಣೆ ಕೇಳಿದ ವರನನ್ನು ಮದುವೆ ಮಂಟಪದಲ್ಲೇ ತಿರಸ್ಕರಿಸಿದ ವಧು ಸಾಮಾಜಿಕ ಮೆಚ್ಚುಗೆಗೆ ಪಾತ್ರಳಾದರೂ, ಹೆಚ್ಚಿನ ಸಂಖ್ಯೆಯ ಹಿಂಬಾಲಕರನ್ನು ಇನ್ನೂ ಪಡೆದಿಲ್ಲ. ಮತಾಂತರ ತರುವ ಇಬ್ಬಂದಿ ಸ್ಥಿತಿ, ಗೋಹತ್ಯೆಯ ದೌಷ್ಟ್ಯ, ಮದ್ಯಪಾನದ ಅನಿಷ್ಟಗಳನ್ನು ಕುರಿತ ಕಾದಂಬರಿಗಳು ಕನ್ನಡದಲ್ಲಿ ಬಂದಿದ್ದರೂ ಬದಲಾವಣೆ ತಂದಿಲ್ಲ.

ಸಾಹಿತ್ಯದಿಂದ ಸಾಮಾಜಿಕ ಕ್ರಾಂತಿಯನ್ನು ನಿರೀಕ್ಷಿಸುವುದೇ ತಪ್ಪಾದೀತೇನೋ ! ವಿಶ್ವದ ಇತಿಹಾಸದಲ್ಲಿ ಸಾಹಿತ್ಯ ಆಂಶಿಕ ಸಾಮಾಜಿಕ ಬದಲಾವಣೆಗೆ ಕಾರಣವಾದುದು ಕಾಣುತ್ತದೆ. ಫ್ರಾನ್ಸಿನ ಕ್ರಾಂತಿಗೆ ವಾಲ್ಟೇರ್ ಎಂಬ ಬರಹಗಾರ ಗಾಳಿಹಾಕಿದಮೇಲೆ 'ಕತ್ತಿಗಿಂತ ಲೇಖನಿ ಮಿಗಿಲು' ಎಂಬ ಮಾತಿಗೆ ಹೆಚ್ಚು ಅರ್ಥ ಬಂದದ್ದುಂಟು. ಅಪ್ರಾಪ್ತ ವಯಸ್ಸಿನ ಬಾಲಕರಿಂದ ಗಣಿಗಳಲ್ಲಿ, ಹೊಗೆ ಕೊಳವೆಗಳಲ್ಲಿ ಕೆಲಸ ಮಾಡಿಸುತ್ತಿದ್ದುದನ್ನು ಚಿತ್ರಿಸಿದ ಕಾದಂಬರಿಗಳು ಪ್ರಕಟವಾದ ಮೇಲೆ ಆ ಪಿಡುಗು ತಪ್ಪಿತು. ವರ್ಣಸಮಸ್ಯೆ ಕುರಿತ ಬರಹಗಳು, ಸಂಪೂರ್ಣ ನಿವಾರಣೆ ಮಾಡದಿದ್ದರೂ ಸಮಸ್ಯೆಯ ತೀವ್ರತೆಯನ್ನು ತಿಳಿ ಮಾಡಿದವು. ಜಾನ್ ಸ್ಟೇನ್‌ಬೆಕ್ ಕಿತ್ತಲೆತೋಟದ ಕಾರ್ಮಿಕರ ದುಃಸ್ಥಿತಿಯನ್ನು ಕುರಿತು ಕಾದಂಬರಿ (ಗ್ರೇಪ್ಸ್ ಆಫ್ ರ್‍ಯಾತ್) ಬರೆದಾಗ ಅಮೆರಿಕೆಯ ಸರ್ಕಾರ ಆ ಕಡೆ ಗಮನ ಹರಿಸಿ ಆ ಕಾರ್ಮಿಕರ ಹಿತ ರಕ್ಷಿಸಿತು. ಇಂಥ ಉದಾಹರಣೆಗಳು ವಿಶ್ವಸಾಹಿತ್ಯದಲ್ಲಿ ನೂರು, ಸಾವಿರ ಇರಬಹುದು. ವ್ಯಾಸಂಗದ ಪರಿಮಿತಿಯಿಂದ ಹೆಚ್ಚು ಉದಾಹರಿಸುವುದು ಸಾಧ್ಯವಾಗುತ್ತಿಲ್ಲ. ನಮ್ಮಲ್ಲಿ ಇಂಥ ದೃಷ್ಟಾಂತಗಳಿವೆಯೇ ಎಂದು ಪ್ರಶ್ನಿಸಿಕೊಂಡಾಗ ಉತ್ತರ ಹೊಳೆಯುವುದಿಲ್ಲ. ಅಂಥ ಕೆಲವು ಉರಿಯುತ್ತಿರುವ ಸಮಸ್ಯೆಗಳನ್ನು ಕನ್ನಡ ಕಾದಂಬರಿಗಳೂ ಚರ್ಚಿಸಿವೆ. ಆದರೆ ಅವುಗಳಿಂದ ಯಾವ ಬದಲಾವಣೆಯೂ ಘಟಿಸಿಲ್ಲ. ಅದಕ್ಕೆ ಕೆಲವು ಕಾರಣಗಳನ್ನು ಪಟ್ಟಿಮಾಡಬಹುದು. ಮೊದಲ ಮುಖ್ಯ ಕಾರಣ ಸಾಕ್ಷರತೆಯ ಮಿತಿ. ಯಾರು ಏನೇ ಬರೆದರೂ ಜನಗಳಿಗೆ-ಸಮಸ್ಯೆ ಯಾರನ್ನು ಕುರಿತದ್ದಾಗಿರುತ್ತದೋ ಆ ಜನಗಳಿಗೆ-ತಲುಪದಿದ್ದರೆ ಅಪಾತ್ರದಲ್ಲಿ ವ್ಯರ್ಥ. ನಮ್ಮಲ್ಲಿ ಓದುಗರ ಸಂಖ್ಯೆ ಕಡಮೆ. ಪ್ರಚಾರ ಮತ್ತೂ ಕಡಮೆ. ಇವೆಲ್ಲದರ ಜೊತೆಗೆ ಸರ್ಕಾರದ ದಿವ್ಯ ನಿರ್ಲಕ್ಷ್ಯ. ಅಲ್ಲದೆ ನಮ್ಮ ಕಥಾ ಲೇಖಕರಲ್ಲಿ ಸಂಶೋಧಕ ಪ್ರವೃತ್ತಿ ಕಡಮೆ. ಎಮಿಲಿ ಜೋಲಾ 'ಜೆರ್ಮಿನಲ್' ಕಾದಂಬರಿ ಬರೆವಾಗ ಕಲ್ಲಿದ್ದಲ ಗಣಿಯಾಳಕ್ಕಿಳಿದು ಗಣಿಕಾರ್ಮಿಕರ ಜೀವನ ಹೋರಾಟವನ್ನು ಕಣ್ಣು ಮುಟ್ಟ ಕಂಡುಬಂದ. ಸಮಸ್ಯೆಯ ಕೇಂದ್ರ ಯಾವುದೋ ಅಲ್ಲಿಗೇ ನೇರವಾಗಿ ಧುಮುಕಿ, ಅದರ ಎಲ್ಲ ಮುಖಗಳನ್ನು ಅಧ್ಯಯನ ಮಾಡಿ ತೀವ್ರ ಹೃದಯ ಸ್ಪಂದನದೊಡನೆ ಬರೆದಾಗ ಕೃತಿ ಪಡೆಯುವ ರೂಪವೇ ಬೇರೆ. ನಮ್ಮ ಲೇಖಕರಿಗೆ ಸಮಸ್ಯೆಯನ್ನು ಕಲಾತ್ಮಕವಾಗಿ ಹೇಳುವುದು ಮುಖ್ಯವಾಗುತ್ತದೆ. ತಮ್ಮ ಕೃತಿ ಸುಂದರವಾಗಿರಬೇಕೆನ್ನುವ ಕಾಳಜಿಯೇ ಅವರಿಗೆ ಪ್ರಧಾನವಾಗುತ್ತದೆ. ಸಾಮಾಜಿಕ ಅರಿವನ್ನು ಮೂಡಿಸಿ ಓದುಗರನ್ನು ಬಡಿದೆಬ್ಬಿಸುವ ಕೆಲಸ ಬರೀ ವಿಚಾರ ಸಾಹಿತ್ಯಕ್ಕಷ್ಟೇ ಮೀಸಲಲ್ಲ. ಕಥಾ ಮಾಧ್ಯಮ ಇದನ್ನು ಇನ್ನೂ ಪ್ರಭಾವಶಾಲಿಯಾಗಿ ಮಾಡಬಲ್ಲದು ಲೇಖಕ ದಿಟ್ಟನಾಗಬೇಕು. ಸ್ವಾತಂತ್ರ್ಯ ಹೋರಾಟ ಕುರಿತ ಕಾದಂಬರಿಯನ್ನು ಸ್ವಾತಂತ್ರ್ಯ ಬಂದಮೇಲೆ ಬರೆದರೆ ಪ್ರಯೋಜನವಿಲ್ಲ. ಏನನ್ನಾದರೂ ಎದುರಿಸಬಲ್ಲೆನೆಂಬ ದಿಟ್ಟ ಸ್ಥಿತಿಗೆ ಮುಟ್ಟಬೇಕು. ಸರ್ಕಾರವನ್ನು ಟೀಕಿಸಿ ಕೊನೆಗೆ ಮಾತೃಭೂಮಿಯನ್ನೇ ತೊರೆಯಬೇಕಾಗಿ ಬಂದರೂ ಹಿಂದೆಗೆಯದ ರಷ್ಯಾದ ಅಲೆಕ್ಸಾಂಡರ್

ಸೋಲ್ಜೆನಿಟ್ಸಿನ್ನನ ಧೈರ್ಯ ಎಷ್ಟು ಜನ ಲೇಖಕರಿಗಿದೆ? ಬರಹದಿಂದಲೇ ಬದುಕಬಲ್ಲ ಸ್ಥಿತಿಯನ್ನು ಕನ್ನಡ ಓದುಗರು ಸಾಹಿತಿಗಳಿಗೆ ತಂದುಕೊಟ್ಟಿಲ್ಲದಿರುವುದೂ ಲೇಖಕರ ಅಂಜುಬುರುಕುತನಕ್ಕೆ ಕಾರಣವೆನ್ನಬಹುದು.

ಕ್ರಾಂತಿಕಾರಿ ವಸ್ತುವನ್ನುಳ್ಳ ಕಾದಂಬರಿ ದೃಶ್ಯಮಾಧ್ಯಮವಾದ ಚಲನಚಿತ್ರದ ರೂಪತಾಳಿದಾಗ ಅನಕ್ಷರಸ್ಥರಿಗೂ ತಲುಪಿ ಕ್ರಾಂತಿಯ ಬೀಜ ಬಿತ್ತಲು ನೆರವಾಗಬಹುದೇನೋ. ಅಂಥ ಪ್ರಯತ್ನಗಳೂ ಹೆಚ್ಚಿನ ಸಂಖ್ಯೆಯಲ್ಲಿ ನಡೆದಿಲ್ಲ.

ಕ್ರಾಂತಿಗೆ ಈಗ ಕಾಲ ಪಕ್ವವಾದಂತಿದೆ. ಒಂದು ಕಡೆ ವರ್ತಕರಿಂದ ಶೋಷಣೆ, ಇನ್ನೊಂದು ಕಡೆ ಶ್ರೀಮಂತರಿಂದ ಶೋಷಣೆ, ಬೆಲೆಯೇರಿಕೆ, ಆಹಾರದ ಕೊರತೆ, ಪೋಲಿಸ್ ದೌರ್ಜನ್ಯ, ಲಂಚದ ಸರ್ವವ್ಯಾಪಕತೆ ಮೊದಲಾದ ಆತಂಕಗಳ ನಡುವೆ ಶ್ರೀಸಾಮಾನ್ಯನ ಬದುಕು ದುರ್ಭರವಾಗಿದೆ. ಸದ್ಯದ ವ್ಯವಸ್ಥೆಯಲ್ಲಿ ಶ್ರೀಮಂತರು ಹೆಚ್ಚು ಶ್ರೀಮಂತರಾಗಲು, ಬಡವರು ಹೆಚ್ಚು ಬಡವರಾಗಲು ಎಲ್ಲ ಅನೀತಿಯುತ ಮಾರ್ಗಗಳನ್ನು ನೇರಗೊಳಿಸಿರುವಂತೆ ಕಾಣುತ್ತಿದೆ. ಜನರಲ್ಲಿ ನಂಬಿಕೆ ಹಾರಿಹೋಗಿದೆ. ಭವಿಷ್ಯ ಊಹೆಗೆ ನಿಲುಕದ ಹಾಗೆ ಮಬ್ಬಾಗಿದೆ. ಎಲ್ಲೂ ಪ್ರಾಮಾಣಿಕತೆಯೇ ಕಾಣುವುದಿಲ್ಲ. ಯಾವ ಸಾರ್ವಜನಿಕ ಕಚೇರಿಯಲ್ಲೂ ಲಂಚ ಕೊಡದೆ ಕೆಲಸವಾಗದು ಎನ್ನುವಂಥ ದುರಂತ. ವಸ್ತುಗಳ ಬೆಲೆ ವರ್ತಕರ ಮರ್ಜಿಯಂತೆ ಏರಿಳಿಯುತ್ತಾ ಚೌಕಾಶಿಗೆ ಕುಗ್ಗುವ ದುರಂತ, ತಾನು ಮುಂದೆ ಬರಲು ಬೇರೆ ಯಾರಿಗೆ ಮೋಸ ಮಾಡಿದರೂ ಪರವಾಗಿಲ್ಲ ಎನ್ನುವ ಮನೋವೃತ್ತಿ ಜನಗಳಲ್ಲಿ ಬೆಳೆಯುತ್ತಿರುವ ದುರಂತ—ನಮ್ಮ ಸಮಾಜ ತೀರಾ ಕುಸಿದು ಬಿದ್ದಿರುವುದನ್ನು ತೋರಿಸುತ್ತಿವೆ. ಇವೆಲ್ಲಾ ಸರಿಯಾಗುವುದು ಯಾವಾಗ? ಯಾವ ಕ್ರಾಂತಿ ಇವನ್ನು ಸರಿಮಾಡೀತು? ಕನ್ನಡ ಕಾದಂಬರಿಗಳು ಇಂಥ ಸಾಮಾಜಿಕ ಕ್ರಾಂತಿಯನ್ನು ಮಾಡಬಲ್ಲವೆ?

ಎಲ್ಲಿಯವರೆವಿಗೂ ನಮ್ಮನ್ನು ಸುಖಿಗಳನ್ನಾಗಿ ಮಾಡುವುದಕ್ಕೆ ಮತ್ತೊಂದು ವಸ್ತುವಿನ ಆಸರೆ ಬೇಕೊ ಅಲ್ಲಿಯವರೆಗೆ ನಾವು ಗುಲಾಮರು. ಪುರುಷನು ತಾನು ಮುಕ್ತ, ತನ್ನನ್ನು ಪೂರ್ಣ ಮಾಡುವುದಕ್ಕೆ ಮತ್ತಾವುದೂ ಬೇಕಾಗಿಲ್ಲ, ಈ ಪ್ರಕೃತಿ ಅನಾವಶ್ಯಕ ಎಂದು ಅರಿತಾಗ ಕೈವಲ್ಯವನ್ನು ಪಡೆಯುವನು.

ಡಾ. ನ. ಸುಬ್ರಹ್ಮಣ್ಯಂ

ಸಂಸ್ಕೃತದಲ್ಲಿ ನಗೆ

ನಗೆ ಮಾನವನು ವಿಶಿಷ್ಟವಾಗಿ ಪಡೆದುಕೊಂಡು ಬಂದಿರುವ ವರ. ಅದು ಜೀವನದ ಮರುಭೂಮಿಯನ್ನು ನಂದನವಾಗಿಸುವುದು.

ನಗುವುದರಿಂದ ಹೃದಯ ಶ್ವಾಸಕೋಶ ಮತ್ತಿತರ ಉದರದ ಅಂಗಾಂಗಗಳಿಗೆ ಒಳ್ಳೆಯ ವ್ಯಾಯಾಮವಾಗಿ ಶರೀರಸ್ಥಿತಿ ಸುಧಾರಿಸಿ ಆರೋಗ್ಯ ವರ್ಧಿಸುತ್ತದೆಯೆಂದು ಶರೀರ ತಜ್ಞರ ಅಭಿಪ್ರಾಯ. ಇನ್ನು ಮಾನಸಿಕವಾದ ಪ್ರತಿಫಲವಂತೂ ಅದ್ಭುತ.

ನಕ್ಕರೆ ತಿಂದ ಅನ್ನ ಅರಗುತ್ತೆ, ಉಸಿರಾಟ ನಿರಾಳವಾಗುತ್ತೆ, ಶ್ರಮ ಪರಿಹಾರವಾಗುತ್ತೆ, ನೋವಿನ ಭಾರ ಕಳೆಯುತ್ತೆ, ಬಾಳು ಹಗುರಾಗುತ್ತೆ, ಉಲ್ಬಣಿಸಿದ ಕಾಯಿಲೆ ಸೋಜಿಗವೆಂಬಂತೆ ಗುಣವಾಗುತ್ತೆ, ಹ್ಯಾಪ ಮೋರೆಗೆ ಗೆಲುವೇರುತ್ತೆ, ದೇಹದಲ್ಲಿ ಹೊಸ ಚೈತನ್ಯ ಮೂಡುತ್ತೆ, ಮನಸ್ಸು ಪ್ರಸನ್ನವಾಗುತ್ತೆ, ಕೆಲಸದಲ್ಲಿ ಹೊಸ ಹುರುಪು ಹುಟ್ಟುತ್ತೆ!

Laugh a while and keep the doctor away—ಕ್ಷಣಕಾಲ ನಕ್ಕು ವೈದ್ಯರನ್ನು ದೂರವಿಡಿ ಎಂಬುದೊಂದು ಸಾಮತಿ.

ಕಷ್ಟ ಮನುಷ್ಯನಿಗಲ್ಲದೆ ಮರಕ್ಕೆ ಬರುತ್ತೆಯೇ? ಕಷ್ಟವಿಲ್ಲದ ಮನುಷ್ಯನಾವನು? ಆದರೆ ಎಷ್ಟೇ ಕಷ್ಟ ಬಂದರೂ ಅವನ್ನು ನಗೆಯ ಹೊಗೆಯಲ್ಲಿ ತೇಲಿಸಿ ಉಲ್ಲಾಸದಿಂದಿರಬಲ್ಲಾತನೇ ರಸಿಕ. ಅವನೇ ಸ್ಥಿತಪ್ರಜ್ಞ. ದೇಹದ ಅಥವಾ ಹೃದಯದ ಯಾತನೆ ಎಷ್ಟೇ ಇದ್ದರೂ ಅದನ್ನು ಅದುಮಿಟ್ಟು ಅವನು ಪ್ರಸನ್ನ ಚಿತ್ತನಾಗಿರಬಲ್ಲ. ವಿಷವನ್ನು ಕಂಠದಲ್ಲಿ ಹಿಡಿದಿಟ್ಟು ತಲೆಯ ಮೇಲೆ ಚಂದ್ರನನ್ನು ಬೆಳಗಿಸಿರುವ ಶಿವನು ಜಗತ್ತಿಗೆ ಬೀರುತ್ತಿರುವ ಸಂದೇಶವೂ ಅದೇ.

ನಗುವುದು ನಗಿಸುವುದು ರಸಿಕತೆಯ ಕುರುಹು. ರಸಿಕತೆ ಹುಟ್ಟುಗುಣವಾಗಿ ಬರಬಹುದು, ಜೀವನದಲ್ಲಿ ಪಡೆದ ಸಂಸ್ಕಾರದಿಂದ ಬರಬಹುದು. ಒಟ್ಟಿನಲ್ಲಿ ರಸಿಕ ಸುಸಂಸ್ಕೃತ. ಸಂಸ್ಕೃತಿಯುಳ್ಳವನು.

> ರಸಿಕನಾಡಿದ ನುಡಿಯು ಶಶಿಯುದಿಸಿಬಂದಂತೆ
> ರಸಿಕನಲ್ಲದನ ಬರುಮಾತು ಕಿವಿಯೊಳ್ ಕೂ
> ದರ್ಸಿಯ ಬಡಿದಂತೆ ಸರ್ವಜ್ಞ

ಇನ್ನು ಸಂಸ್ಕೃತನಾದ ರಸಿಕನ ಭಾಷೆ ಸಂಸ್ಕೃತವೇ ಆಗಿದ್ದರೆ ಕೇಳಬೇಕಾದದ್ದೇನು!

ಸಂಸ್ಕೃತದಲ್ಲಿ ನಗೆಗೆ ಕಾರಣವಾಗದ ವಿಷಯವೇ ಇಲ್ಲ. ತ್ರಿಮೂರ್ತಿಗಳಿಂದ ಹಿಡಿದು ತಿಗಣೆಯವರೆಗೂ ಯಾವುದು ಬೇಕಾದರೂ ಆಗಬಹುದು. ಪ್ರಾಚೀನತಮವಾದ ವೈದಿಕ ಸಾಹಿತ್ಯದಿಂದ ಹಿಡಿದು ಅರ್ವಾಚೀನ

ಲೌಕಿಕ ಸಾಹಿತ್ಯದವರೆಗೆ ಅಲ್ಲಲ್ಲಿ ನಗೆ ಅಥವಾ ಹಾಸ್ಯ ವ್ಯಾಪಿಸಿದೆ. ಗ್ರಂಥಾಂತರಂಗದಲ್ಲಿ ಅಲ್ಲಲ್ಲಿ ಮಿಂಚುವ ಹಾಸ್ಯ ಪ್ರಸಂಗಗಳೇ ಅಲ್ಲದೆ, ಸಮಯಸ್ಫೂರ್ತಿಯಿಂದ ಉದಿಸಿದ ಆಶುಕವಿತ್ವಗಳೂ ಉಂಟು. ಪ್ರಕೃತ ಅಲ್ಲೊಂದು ಇಲ್ಲೊಂದು ಅಂತಹ ಪ್ರಸಂಗಗಳನ್ನು ಇಲ್ಲಿ ಪರಿಶೀಲಿಸಲಾಗಿದೆ.

ಪ್ರಾರ್ಥನೆಯ ವ್ಯಾಜದಲ್ಲಿ ಪರಿಹಾಸ : ಶಿವ ಗಿರಿಜೆಯರ ಕಲ್ಯಾಣ ನಡೆಯುತ್ತಿದೆ. ಬ್ರಹ್ಮನೇ ಪುರೋಹಿತನಾಗಿ ವಿವಾಹವನ್ನು ಮಾಡಿಸುತ್ತಿದ್ದಾನೆ. ಅಗ್ನಿಸಾಕ್ಷಿಯಾಗಿ ಶಿವ ಗಿರಿಜೆಯ ಕೈ ಹಿಡಿಯಲಿದ್ದಾನೆ. ಹಸೆಯ ಮೇಲೆ ಗಿರಿಜೆಯನ್ನು ಪಕ್ಕದಲ್ಲಿ ಕುಳ್ಳಿರಿಸಿಕೊಂಡು, ಮುಂದಿದ್ದ ಅಗ್ನಿಕುಂಡದಲ್ಲಿ ಹೋಮ ಮಾಡುತ್ತಿದ್ದಾನೆ. ಆಗ—

ಧೂಮವ್ಯಾಕುಲದೃಷ್ಟಿಃ, ಇಂದುಕಿರಣೈಃ, ಆಹ್ಲಾದಿತಾಕ್ಷೀ ಪುನಃ,
ಪಶ್ಯಂತೀ ವರಂ—ಉತ್ಸುಕಾ, ಆನತಮುಖೀ ಭೂಯೋ ಹ್ರಿಯಾ ಬ್ರಹ್ಮಣಃ,
ಸೇರ್ಷ್ಯಾ ಪಾದನಖೇಂದುದರ್ಪಣಗತೇ ಗಂಗಾಂ ದಧಾನೇ ಹರೇ
ಸ್ಪರ್ಶಾದುತ್ಪುಲಕಾ ಕರಗ್ರಹವಿಧೌ ಗೌರೀ ಶಿವಾಯಾಸ್ತು ವಃ

ಹೋಮಕುಂಡದಿಂದೇಳುತ್ತಿದ್ದ ಹೊಗೆ ಮುಖಕ್ಕೆ ಬಡಿಯುತ್ತಿದ್ದುದರಿಂದ ಗಿರಿಜೆಗೆ ಕಣ್ಣು ಬಿಡಲಾಗದೆ, ಕಣ್ಣು ಉರಿಯತೊಡಗಿತು. ಹಾಗೇ ಮೇಲಕ್ಕೆ ಕಣ್ಣಾಡಿಸಿದಳು. ಶಿವನ ತಲೆಯಿಂದ ಚಂದ್ರಕಿರಣಗಳು ಬಿದ್ದುದರಿಂದ ಅವಳ ಕಣ್ಣುಗಳು ತಂಪಾದುವು. ವರನನ್ನು ನೋಡುವ ಕೂತೂಹಲವಾಯಿತು ಅವಳಿಗೆ. ಮೆಲ್ಲನೆ ವರನ ಕಡೆಗೆ ದೃಷ್ಟಿ ಹರಿಸಿದಳು! ಆದರೆ, ಅಯ್ಯೋ ಬ್ರಹ್ಮ ನೋಡಿಬಿಟ್ಟ! ನಾಚಿಕೆಯಿಂದ ತಲೆತಗ್ಗಿಸಿಬಿಟ್ಟಳು! ಅವಳ ದೃಷ್ಟಿ ತನ್ನ ಕಾಲ ಹೆಬ್ಬೆರಳಲ್ಲಿ ನಟ್ಟಿತು. ಕನ್ನಡಿಯಂತೆ ಹೊಳೆಯುತ್ತಿದ್ದ ಆ ಬೆರಳ ಉಗುರಿನಲ್ಲಿ ಶಿವನ ಮುಖ ಪ್ರತಿಫಲಿಸುತ್ತಿದೆ! ನೋಡಿದಳು! ಆದರೆ ಇದೇನು? ತನ್ನ ಕೈಹಿಡಿಯುವ ಮೊದಲೇ ಶಿವ ಗಂಗೆಯನ್ನು ತಲೆಯ ಮೇಲೇರಿಸಿಕೊಂಡಿದ್ದಾನೆ! ಗಿರಿಜೆಗೆ ಈರ್ಷೆ ಬಂತು. ಅಷ್ಟರಲ್ಲಿ ಅಗ್ನಿಯ ಸುತ್ತ ಸಪ್ತಪದಿ ಬರುವಂತೆ ನವವಧೂವರರಿಗೆ ಬ್ರಹ್ಮ ಸೂಚಿಸಿದ. ಶಿವ ಗಿರಿಜೆಯ ಕೈಹಿಡಿದ. ಅವನ ಸ್ಪರ್ಶದಿಂದ ರೋಮಹರ್ಷಿತಳಾದಳು ಅವಳು! ಅಂತಹ ಗೌರಿ ನಿಮ್ಮನ್ನೆಲ್ಲ ಕಾಪಾಡಲಿ!

* * * *

ಮುದ್ದು ಕೃಷ್ಣನ ಬಾಲಲೀಲೆಗಳನ್ನು ಸವಿದು ಆನಂದಿಸದವರಾರು? ಇಲ್ಲಿ ಒಂದು ಮುಗ್ಧ ಸನ್ನಿವೇಶವನ್ನು ನೋಡಿ

ಮಾತಃ, ಕಿಂ ಯದುನಾಥ? ದೇಹಿ ಚಷಕಂ, ಕಿಂ ತೇನ?—ಪಾತುಂ ಪಯಃ—
ತನ್ನಾಸ್ತ್ಯದ್ಯ, ಕದಾಸ್ತಿ ವಾ? ನಿಶಿ, ನಿಶಾ ಕಾ ವಾ?—ಅಂಧಕಾರೋದಯೇ,
ಆಮೀಲ್ಯಾಕ್ಷಿಯುಗಂ ನಿಶಾಪ್ಯುಪಗತಾ ದೇಹೀತಿ ಮಾತುಃ ಪುನಃ—
ವಕ್ಷೋಜಾಂಬರಕರ್ಷಣೋದ್ಯತಕರಃ ಕೃಷ್ಣಃ ಸ ಪುಷ್ಣಾತು ನಃ

ಯಶೋದೆ ಕಂದ ಕೃಷ್ಣನನ್ನು ಕಂಕುಳಲ್ಲಿ ಎತ್ತಿಕೊಂಡಿದ್ದಾಳೆ. ಆಗ ಕೃಷ್ಣ "ಅಮ್ಮಾ" ಎಂದ. "ಏನು ಯದುನಾಥಾ" ಎಂದಳು ಅವಳು.

"ಬಟ್ಟಲನ್ನು ಕೊಡು" "ಏತಕ್ಕೆ ಬಟ್ಟಲು?" "ಹಾಲು ಕುಡಿಯುವುದಕ್ಕೆ"
"ಈಗಿಲ್ಲ ಅದು" "ಇನ್ನು ಯಾವಾಗ?" "ರಾತ್ರಿ" "ರಾತ್ರಿ ಎಂದರೆ ಯಾವಾಗ?"
"ಕತ್ತಲಾಗುತ್ತಲ್ಲಾ ಆಗ"

ಎರಡು ಕಣ್ಣುಗಳನ್ನೂ ಮುಚ್ಚಿಕೊಂಡು "ಕತ್ತಲಾಯಿತು, ಕೊಡು" ಎಂದು ಆ ತಾಯಿಯ ಎದೆಯ ಮೇಲಿನ ಸೆರಗನ್ನು ಹಿಡಿದು ಜುಂಗಿಸುತ್ತಿದ್ದ ಕೃಷ್ಣನು ನಮ್ಮನ್ನು ಪೋಷಿಸಲಿ!

* * * *

ಕೌಟುಂಬಿಕ ವಿಷಯಗಳು : ಗಂಡ ಹೆಂಡತಿಯರ ಸರಸ ವಿರಸ, ಕುಟುಂಬದ ಕಷ್ಟ ಕಾರ್ಪಣ್ಯ ಬಡತನ 'ಸಂಸಾರ ತಾಪತ್ರಯ'ಗಳು ನಗೆಗೆ ವಿಷಯವಾಗುವುದು ಸ್ವಾಭಾವಿಕ. ಶಿವನ ಮನೆಯ ಕಷ್ಟ ಏನು ಹೇಳುತ್ತೀರಿ!

ಸ್ವಯಂ ಪಂಚಮುಖಃ ಪುತ್ರೌ ಗಜಾನನ ಷಡಾನನೌ
ದಿಗಂಬರಃ ಕಥಂ ಜೀವೇತ್–ಅನ್ನಪೂರ್ಣಾ ನ ಚೇತ್–ಗೃಹೇ

ಶಿವ ಸ್ವಯಂ ಪಂಚಮುಖ. ಅವನಿಗೆ ಐದು ಬಾಯಿ! ಮಕ್ಕಳಿಗೋ ತಿನ್ನುವುದಕ್ಕೆ ಒಬ್ಬನಿಗೆ ಆರುಬಾಯಿ! ಇನ್ನೊಬ್ಬನಿಗೆ ಆನೆಯ ಬಾಯಿ! ಉಡುವುದಕ್ಕೆ ಅವನಿಗೆ ಬಟ್ಟೆಯೇ ಇಲ್ಲ, ದಿಗಂಬರ! ಅವನು ಹೇಗೆ ಬದುಕ ಬೇಕು? ಪುಣ್ಯವಶಾತ್ ಮನೆಯಲ್ಲಿ ಅನ್ನಪೂರ್ಣೆ ಇದ್ದುದಕ್ಕಾಯಿತು!

ಶಿವನು ಅರ್ಧನಾರೀಶ್ವರನಾದದ್ದು ಯಾಕೆ ಗೊತ್ತೇ?

ಉದರದ್ವಯಭರಣಭಯಾತ್—ಅರ್ಧಾಂಗಾಹಿತದಾರಃ
ಯದಿ ನೈವಂ ತಸ್ಯ ಸುತಃ ಕಥಮದ್ಯಾಪಿ ಕುಭಾರಃ

ಎರಡು ಹೊಟ್ಟೆ ತುಂಬಬೇಕಾಗುತ್ತದಲ್ಲ ಎಂಬ ಭಯದಿಂದ ತನ್ನ ಅರ್ಧಾಂಗದಲ್ಲಿಯೇ ಹೆಂಡತಿಯನ್ನು ಸೇರಿಸಿ ಕೊಂಡು ಬಿಟ್ಟ! ಹಾಗಲ್ಲದಿದ್ದಲ್ಲಿ ಅವನ ಮಗನನ್ನು ಈಗಲೂ 'ಕುಭಾರ' ಎಂದೇಕೆ ಕರೆಯುತ್ತಾರೆ? (ಆ ಮಾತಿಗೆ ಷಣ್ಮುಖನೆಂದು ಒಂದು ಅರ್ಥ, ಭೂಮಿಗೆ ಭಾರ ಎಂದು ಇನ್ನೊಂದರ್ಥ!)

ಶಿವ ವಿಷವನ್ನು ಕುಡಿದದ್ದು ಏಕೆ ಗೊತ್ತೇನು?

ಅತ್ತುಂ ವಾಂಛತಿ ವಾಹನಂ ಗಣಪತೇಃ, ಆಖುಂ ಕ್ಷುಧಾರ್ತಃ ಫಣೀ,
ತಂ ಚ ಕ್ರೌಂಚಪತೇಃ ಶಿಖೀ ಚ, ಗಿರಿಜಾ ಸಿಂಹೋಽಪಿ ನಾಗಾನನಂ.
ಗೌರೀ ಜಹ್ನುಸುತಾಮಸೂಯತಿ, ಕಲಾನಾಥಂ ಕಪಾಲಾನಲಃ,
ನಿರ್ವಿಣ್ಣಃ ಸ ಪಪೌ ಕುಟುಂಬಕಲಹಾತ್–ಈಶೋಽಪಿ ಹಾಲಾಹಲಂ

ಅಯ್ಯೋ, ಶಿವನ ಮನೆಯ ರಾದ್ಧಾಂತ ಹೇಳತೀರದು! ಹಸಿವಿನಿಂದ ಬಳಲಿದ ಸರ್ಪ ಗಣಪತಿಯ ವಾಹನವಾದ ಇಲಿಯನ್ನು ತಿನ್ನಲು ಅಟ್ಟಿಸಿಕೊಂಡು ಹೋಯಿತು! ಷಣ್ಮುಖನ ನವಿಲು ಸರ್ಪವನ್ನು ತಿನ್ನಲು ಬೆನ್ನಟ್ಟಿತು! ಗಿರಿಜೆಯ ವಾಹನ ಸಿಂಹವಾದರೋ ಗಜಾನನನ ಮುಖಕ್ಕೇ ಬಾಯಿ ಹಾಕಲು ಹೋಯಿತು! ಗಂಗೆಯನ್ನು ಕಂಡು ಗೌರಿಗೆ ಹೊಟ್ಟೆ ಕಿಚ್ಚು! ಹಣೆಗಣ್ಣಿನ ಜ್ವಾಲೆ ಚಂದ್ರನಿಗೆ ಪೀಡೆ! ಈ ಕುಟುಂಬ ಕಲಹವನ್ನು ನೋಡಲಾರದೆ ದಿಕ್ಕು ತೋಚದ ಶಿವ ಹೋಗಿ ಹಾಲಾಹಲವನ್ನು ಕುಡಿದು ಬಿಟ್ಟ!

ಗಂಡು ಹೆಣ್ಣಿನ ಪ್ರಣಯ : ವಿಟ ವೇಶ್ಯೆಯರ ವ್ಯವಹಾರ, ಗಂಡು ಹೆಣ್ಣಿನ ಪ್ರಣಯ ವಿನೋದಕ್ಕೆ ವಿಪುಲವಾದ ರಂಗಭೂಮಿ.

ಒಬ್ಬಳು ವೇಶ್ಯೆ ಇನ್ನೊಬ್ಬಳೊಡನೆ ಹೇಳಿಕೊಳ್ಳುತ್ತಿದ್ದಾಳೆ

ಶೃಣು ಸಖಿ ಕೌತುಕಮೇಕಂ
ಗ್ರಾಮ್ಯೇಣ ಕುಕಾಮಿನಾ ಯದದ್ಯ ಕೃತಮ್
ಸುರತಸುಖಮೀಲಿತಾಕ್ಷೀ
ಮೃತೇತಿ ಭೀತೇನ ಮುಕ್ತಾಸ್ಮಿ

ಸಖಿ, ಈ ದಿನ ನಡೆದ ಒಂದು ತಮಾಷೆಯನ್ನು ಹೇಳುತ್ತೇನೆ ಕೇಳು. ಒಬ್ಬ ಹಳ್ಳಿಮುಕ್ಕ ನನ್ನ ಬಳಿ ಬಂದಿದ್ದ. ಸುರತಸುಖವನ್ನನುಭವಿಸುತ್ತಾ ನಾನು ಕಣ್ಣು ಮುಚ್ಚಿಕೊಂಡಿದ್ದಾಗ, 'ಅಯ್ಯೋ ಇವಳು ಸತ್ತು ಹೋದಳು' ಎಂದು ಭೀತಿಯಿಂದ ನನ್ನನ್ನು ಬಿಟ್ಟು ಓಡಿದ!

ಸಾಮವೇದಿಯೊಬ್ಬನ ಆತಂಕವಿದು. ವೇಶ್ಯೆಯ ಬಳಿಗೆ ಹೋಗುವುದೇನೋ ಹೋದ. ಸುರತಕ್ರೀಡೆಯ ಸಮಯದಲ್ಲಿ ಅವನಿಗೆ ಚಿಂತೆ ಹತ್ತಿತು. ವೇಶ್ಯೆಯನ್ನು ಕುರಿತು ಹೇಳಿದ.

> ಸಾಮಗಾನಪೂತಂ ಮೇ ನೋಚ್ಛಿಷ್ಟಮಧರಂ ಕುರು
> ಉತ್ಕಂಠಿತಾಸಿ ಚೇತ್–ಭದ್ರೇ ವಾಮಂ ಕರ್ಣಂ ದಶಸ್ವ ಮೇ

ಭದ್ರೇ, ಸಾಮಗಾನ ಹೇಳಿ ಪವಿತ್ರವಾದ ನನ್ನ ಅಧರವನ್ನು ಎಂಜಲು ಮಾಡಬೇಡ. ನಿನಗೆ ಅಷ್ಟೊಂದು ಉತ್ಕಂಠೆಯಿರುವುದಾದರೆ ನನ್ನ ಎಡಗಿವಿಯನ್ನು ಕಚ್ಚು!

ಅಹಿಂಸಾ ಪರಮೋ ಧರ್ಮಃ ಎಂಬುದನ್ನು ಅನುಷ್ಠಾನ ಮಾಡುವ ಶ್ರಮಣನೊಬ್ಬನ ನಿಸ್ಸೀಮ ಶ್ಲಾಘನೀಯ ವಾದುದು. ರಾತ್ರಿಯ ವೇಳೆ ಆಹಾರವನ್ನು ಸೇವಿಸುತ್ತಾರೆಯೆ? ಅದೂ ಮಾಂಸವನ್ನು?

> ಶ್ರಮಣಃ ಶ್ರಾವಕವಧ್ವಾಃ ಸುರತವಿಧೌ ದಶತಿ ನಾಧರಂ ದತ್ತಂ
> ಮದಿರಾಕ್ಷಿ ಮಾಂಸಭಕ್ಷಣಮಸ್ತ್ಮಿನ್ಸಮಯೇ ನಿಷಿದ್ಧಮಿತಿ

ಒಂದು ರಾತ್ರಿ ಒಬ್ಬ ಶ್ರಮಣ ಶ್ರಾವಕ ವಧುವಿನ ಬಳಿಗೆ ಕಾಮಕ್ರೀಡೆಗೆ ಹೋದ. ಸುರತ ಸಮಯದಲ್ಲಿ ಚುಂಬನಕ್ಕೆಂದು ಆಕೆ ತನ್ನ ಅಧರವನ್ನು ಚಾಚಿದಳು. ಆಗ ಆತ "ಮದಿರಾಕ್ಷಿ, ಈ ಸಮಯದಲ್ಲಿ ಮಾಂಸಭಕ್ಷಣ ನಿಷಿದ್ಧವಲ್ಲವೇ?" ಎಂದು ಅವಳ ಅಧರವನ್ನು ತನ್ನ ಹಲ್ಲಿಗೆ ತಾಗಿಸಲೇ ಇಲ್ಲ!

ವಿಷ್ಣುಶರ್ಮನಿಗೆ ಪ್ರಾಪ್ತವಾದ ದುಃಖವಿದು

> ಆಕುಂಚ್ಯ ಪಾಣಿಮಶುಚಿಂ ಮಮ ಮೂರ್ಧ್ನಿ ವೇಶ್ಯಾ
> ಮಂತ್ರಾಂಭಸಾಂ ಪ್ರತಿಪದಂ ಪೃಷತೈಃ ಪವಿತ್ರೇ
> ತಾರಸ್ವರಂ ಪ್ರಹಿತಥೂತ್ಕಮದಾತ್ ಪ್ರಹಾರಂ
> ಹಾ ಹಾ ಹತೋಽಹಮಿತಿ ರೋದಿತಿ ವಿಷ್ಣುಶರ್ಮಾ

ವಿಷ್ಣುಶರ್ಮನಿಂದ ತನಗೆ ತೃಪ್ತಿಯಾಗಲಿಲ್ಲವೋ ಅಥವಾ ತಾನು ಅವನಿಂದ ಅಪೇಕ್ಷಿಸಿದ ಪ್ರತಿಫಲ ದೊರೆಯ ಲಿಲ್ಲವೋ, ವೇಶ್ಯೆಯೊಬ್ಬಳು ಅವನನ್ನು ಬಡಿದಟ್ಟಿದಳು. ಆಗ ಅವನು "ಮಂತ್ರಪೂತವಾದ ನೀರಿನ ಹನಿಗಳಿಂದ ಪದೇ ಪದೇ ಪವಿತ್ರಗೊಂಡ ನನ್ನ ತಲೆಯಮೇಲೆ ಥೂತ್ ಎಂದು ಉಗಿದು ತನ್ನ ಅಶುಚಿಯಾದ ಹಸ್ತವನ್ನು ಮುಷ್ಟಿ ಕಟ್ಟಿ ಗಟ್ಟಿಯಾಗಿ ಬಡಿದಳೋ, ಅಯ್ಯೋ ಅಯ್ಯೋ ನಾನು ಹತನಾದೆ!" ಎಂದು ರೋದಿಸಿದ.

ವೇಶ್ಯೆಯರ ಪ್ರಸೂತಿ ವೈರಾಗ್ಯವಿದು

> ಗತ್ವಾ ದ್ವಾರವತೀಂ ನಯಾಮಿ ದಿವಸಾನ್-ಆರಾಧಯಂತೀ ಹರಿಂ
> ತ್ಯಕ್ತ್ವಾ ವಾ–ಅನಶನೇನ ಜೀವಿತಮಿದಂ ಮುಂಚಾಮಿ ಭಾಗೀರಥೀಂ
> ಪ್ರಾತಃ ಪ್ರಾತರಿತಿ ಪ್ರವರ್ತಿತ ಕಥಾ ನಿರ್ವೇದವಾತಸ್ವತೀ
> ರಂಡಾ ನಕ್ತಮನಂತಜಾರಸುರತಪ್ರೀತಾ ಸುಖಾಯಾಸ್ತು ವಃ

ದ್ವಾರವತಿಗೆ ಹೋಗಿ ಹರಿಯನ್ನು ಆರಾಧಿಸುತ್ತಾ ಉಳಿದ ದಿನಗಳನ್ನು ಕಳೆಯುತ್ತೇನೆ, ಇಲ್ಲವೇ ಉಪವಾಸಮಾಡಿ ಜೀವಿತವನ್ನು ತೊರೆಯುತ್ತೇನೆ, ಅಥವಾ ಗಂಗೆಗೆ ಬಿದ್ದು ಒಡಲನ್ನು ತ್ಯಜಿಸುತ್ತೇನೆ. ಹೀಗೆ ಪ್ರತಿ ಹಗಲೂ ವೈರಾಗ್ಯವಂತರಾಗುತ್ತಾರೆ, ರಾತ್ರಿಯಾಯಿತೆಂದರೆ ಲೆಕ್ಕವಿಲ್ಲದಷ್ಟು ವಿಟರೊಡನೆ ಸುರತಕ್ರೀಡೆಯಾಡಿ ಸುಪ್ರೀತ ರಾಗುತ್ತಾರೆ! ಎಲೈ ವೇಶ್ಯೆಯರೆ, ನಿಮಗೆ ಸುಖವಾಗಲಿ.

ಸ್ತ್ರೀ ಸ್ವಭಾವ : ಮೂವರು ಸ್ತ್ರೀಯರು ಪರಸ್ಪರ ತಮ್ಮ ಪತಿಗಳ ವಿದ್ಯಾಪ್ರೌಢಿಮೆಯನ್ನು ಪ್ರಶಂಸೆ ಮಾಡಿಕೊಳ್ಳುತ್ತಿದ್ದಿರಬೇಕು !

ವಾಚಯತಿ ನ ಅನ್ಯಲಿಖಿತಂ ಲಿಖಿತಮನೇನಾಪಿ ವಾಚಯತಿ ನಾನ್ಯಃ
ಅಯಮಪರೋಽಸ್ಯ ವಿಶೇಷಃ ಸ್ವಯಮಪಿ ಲಿಖಿತಂ ಸ್ವಯಂ ನ ವಾಚಯತಿ

ಮೊದಲನೆಯವಳ ಪತಿ ಅನ್ಯರು ಬರೆದುದನ್ನು ಓದುವುದಿಲ್ಲವಂತೆ, ಎರಡನೆಯವಳ ಪತಿಯು ಬರೆದುದನ್ನು ಅನ್ಯರು ಓದಲಾರರಂತೆ ! ಮೂರನೆಯವಳ ಪತಿಯದು ಇನ್ನೂ ವಿಶೇಷ, ತಾನು ಬರೆದದ್ದನ್ನು ತಾನೇ ಓದಲಾರನಂತೆ ! (ಮೂವರೂ ಅಕ್ಕರವರಿಯದ ಘನ ಪಂಡಿತರು!)

ಸೀತೆಗೆ ಮದುವೆಯಾದಾಗ, ಪತಿಗೆ ಕಾಲಿಗೆರಗುವಂತೆ ಅವಳ ಸಖಿಯರು ಅವಳನ್ನು ಪ್ರೇರಿಸಿದರು. ಆದರೆ ಅವಳು ಮಾತ್ರ ಎರಗಲಿಲ್ಲ. ಏಕೆ ಗೊತ್ತೆ ?

ಶಿಕ್ಷಿತಾಪಿ ಸಖಿಭಿಃ, ನನು ಸೀತಾ ರಾಮಚಂದ್ರ ಚರಣೌ ನ ನನಾಮ
ಕಿಂ ಭವಿಷ್ಯತಿ ಮುನಿವರವಧೂವತ್–ಛಾಲರತ್ನಮಿಹ ತದ್ರಜಸೇತಿ

ಅವನ ಪಾದಧೂಳಿನ ಮಹಿಮೆಯಿಂದ ಮುನಿವರ ಗೌತಮನ ಪತ್ನಿ ಅಹಲ್ಯೆ ಸೃಷ್ಟಿಯಾಗಿ ಬಂದಂತೆ ತನ್ನ ಪೈತಲೆ ಬೊಟ್ಟಿನ ರತ್ನ ತಗುಲಿ ತನ್ನ ಜೊತೆಗೆ ಬೇರೊಬ್ಬಳು ಬಂದು ಕೂತರೆ?

ಭೋಜನಪ್ರಿಯತೆ : ಹಿಂದೆ ಸಮಾಜದಲ್ಲಿ ಬ್ರಾಹ್ಮಣನನ್ನು ಕಂಡರೆ ಬಹು ಜನರಿಗೆ ಪ್ರೀತಿಯಿತ್ತು. ಆಗ "ಬ್ರಾಹ್ಮಣೋ ಬಹುಜನಪ್ರಿಯಃ" ಎನ್ನುತ್ತಿದ್ದರು. ಈಗ ಬಹುಜನಪ್ರಿಯನೆಂಬುದು ಹೋಗಿ ಭೋಜನ ಪ್ರಿಯನಾಗಿದ್ದಾನೆ ! ಸಮಾಧಾನವಾಗಿದ್ದಾಗಲೇ ಅವನ ಭೋಜನಪ್ರಿಯತೆ ಅತಿಶಯವಂತೆ, ಇನ್ನು ಆವೇಶ ಬಂದಾಗ ಕೇಳಬೇಕೇ ?

ಭ್ರುಕುಟೀಕುಟಿ ಲಲಾಟಃ ಕಂಟಕಿತಾಂಗಃ ಕಟಾಕ್ಷವಿಕಟಾಕ್ಷಃ
ಕವಲಯತಿ ಪೃಥುಲಕವಲೈಃ–ತಂಡುಲಮಚಲಂ ದ್ವಿಜಃ ಕ್ರುದ್ಧಃ

ಹುಬ್ಬುಗಂಟಿಕ್ಕಿದ ಹಣೆ, ರೋಮಾಂಚನಗೊಂಡ ದೇಹ, ಭಯಂಕರವಾದ ಕಡೆಗಣ್ಣೋಟ ! ಕ್ರುದ್ಧನಾಗಿದ್ದ ಆ ಬ್ರಾಹ್ಮಣ ದೊಡ್ಡ ದೊಡ್ಡ ತುತ್ತುಗಳನ್ನು ಮಾಡಿಕೊಂಡು ಅನ್ನದ ಪರ್ವತವನ್ನೇ ತಿಂದುಹಾಕಿಬಿಟ್ಟನಂತೆ !

ಮಾವನ ಮನೆ : ಮಾವನ ಮನೆಯ ಅಳಿಯ ಎನ್ನುವುದು ಪ್ರಸಿದ್ಧಿ ತಾನೇ ? ಹೊಸದಾಗಿ ಮದುವೆಯಾಗಿ ಮಾವನ ಮನೆಯ ಉಪಚಾರವನ್ನು ಸವಿದ ಅಳಿಯನೊಬ್ಬ "ಶ್ವಶುರಗೃಹನಿವಾಸೋ ಸ್ವರ್ಗತುಲ್ಯೋ ನರಾಣಾಂ" (ಮಾನವರಿಗೆ ಮಾವನ ಮನೆಯೆಂದರೆ ಸ್ವರ್ಗಕ್ಕೆ ಸಮಾನ) ಎಂದು ಗೋಡೆಯ ಮೇಲೆ ಬರೆದನಂತೆ ! ಅವನತ್ತ ಹೋದಮೇಲೆ ಅಲ್ಲಿಗೆ ಬಂದ ಇನ್ನೊಬ್ಬ ಅನುಭವಿ, ಅದರ ಕೆಳಗೆ

"ಯದಿ ವಸತಿ ದಿನಾನಿ ತ್ರೀಣಿ ಪಂಚಾಥ ಸಪ್ತ"

ಎಂದು ಬರೆದನಂತೆ—ಕೇವಲ ಮೂರು ಅಥವಾ ಐದು, ಇನ್ನೂ ಹೆಚ್ಚೆಂದರೆ ಏಳು ದಿನಗಳಿದ್ದರೆ ಮಾತ್ರ ಎಂದು !

ಆಮೇಲೂ ಇದ್ದರೆ ? ಆ ಮಾವ 'ಇರಲಿ' ಎಂದು ಅನುಭವಿಸಲೇ ಬೇಕಾಗುತ್ತದೆ ! ಅಳಿಯನ ಮೇಲೆ ಅಕ್ಕರೆ ಹೋದರೂ ಮಗಳ ಹಿತವನ್ನು ನೋಡಬೇಕೋ ಬೇಡವೋ ? ಆದ್ದರಿಂದ ಅಳಿಯನನ್ನು ಗೌರವಿಸಿ ಉಪಚಾರ ಮಾಡಿಯೇ ಮಾಡಬೇಕಾಗುತ್ತದೆ. ಆ ರಹಸ್ಯವನ್ನು ತಿಳಿದೇ ಶಿವ ವಿಷ್ಣುಗಳು ಬುದ್ಧಿ ಉಪಯೋಗಿಸಿದ್ದು :

ಅಸಾರೇ ಖಲು ಸಂಸಾರೇ ಸಾರಂ ಶ್ವಶುರಮಂದಿರಂ
ಹರೋ ಹಿಮಾಲಯೇ ಶೇತೇ ಹರಿಃ ಶೇತೇ ಮಹೋದಧೌ

ಸಾರಹೀನವಾದ ಈ ಪ್ರಪಂಚದಲ್ಲಿ ಮಾವನ ಮನೆಯೇ ಸಾರವತ್ತಾದುದು ! ಆದ್ದರಿಂದಲೇ ಹರ ಹಿಮಾಲಯದಲ್ಲೇ ಮಲಗಿದ, ಹರಿ ಕ್ಷೀರಸಾಗರದಲ್ಲೇ ಮಲಗಿದ !

ಚಟ : ಏನಾದರೂ ಚಟ ಅಥವಾ ಗೀಳಿರತಕ್ಕವರಿಗೆ ಅದು ನಡೆಯಲೇಬೇಕು. ಇಲ್ಲವಾದರೆ ಚಡಪಡಿಸ ಹತ್ತುತ್ತಾರೆ. ಬೇರೆ ಯಾವುದರಿಂದಲೂ ಅವರಿಗೆ ಸಮಾಧಾನವಾಗದು. ಒಬ್ಬ 'ದಿವಿರ'ನ ಚಿಂತೆಯನ್ನು ನೋಡಿ.

ವಿನಾ ಮದ್ಯಂ ವಿನಾ ಮಾಂಸಂ ಪರಸ್ವಹರಣಂ ವಿನಾ
ವಿನಾ ಪರಾಪಕಾರೇಣ ದಿವಿರೋ ದಿವಿ ರೋದಿತಿ

ಸ್ವರ್ಗ ಪ್ರಾಪ್ತವಾಗಿದೆ. ಅಲ್ಲಿ ಅವನಿಗೇನು ಕಡಮೆ ? ಕಾಮಧೇನು ಕಲ್ಪವೃಕ್ಷ ಚಿಂತಾಮಣಿ ಅಮೃತ ರಂಭೆ ಊರ್ವಶಿ ಮೊದಲಾದವರು ನಿರೋಗತ್ವ ನಿರ್ಜರತ್ವ ಅಮರತ್ವ ಇವುಗಳಿಗಿಂತ ಇನ್ನೇನುಬೇಕು ? ಆದರೂ ಆ ದಿವಿರ (ಕಾಯಸ್ಥ) "ಅಯ್ಯೋ ಮದ್ಯವಿಲ್ಲದೆ, ಮಾಂಸವಿಲ್ಲದೆ, ಪರರ ಸ್ವತ್ತನ್ನು ಕದಿಯದೆ, ಪರರಿಗೆ ಅಪಕಾರ ಮಾಡದೆ ಹೇಗಪ್ಪಾ ಇರುವುದು ?" ಎಂದು ಒಂದೇ ಕಣ್ಣಲ್ಲಿ ಅಳುತ್ತಿದ್ದನಂತೆ !

ಅಕ್ಕಸಾಲಿಗ : ಅಕ್ಕಸಾಲಿಗ ಚಿಪ್ಪಿಗ ಅಗಸ ಮೊದಲಾದವರ ವಂಚನೆ ಜನಜನಿತವಾದ ವಿಷಯ ವಷ್ಟೆ ? ಮೇರುಪರ್ವತ ಚಿನ್ನದ ಪರ್ವತ ! ಅದು ಬಹಳ ದೂರದಲ್ಲಿದೆ ಏಕೆಂದರೆ

ಮೇರುಃ ಸ್ಥಿತೋಽತಿದೂರೇ ಮನುಷ್ಯಭೂಮಿಂ ಪರಾಂ ಪರಿತ್ಯಜ್ಯ
ಭೀತೋ ಭಯೇನ ಚೌರ್ಯಾದ್ಘೋರಾಣಾಂ ಹೇಮಕಾರಾಣಾಮ್

ಭಯಂಕರರಾದ ಅಕ್ಕಸಾಲಿಗರ ಚೌರ್ಯಭಯದಿಂದ ಭೀತವಾದುದರಿಂದಲೇ ಮನುಷ್ಯರು ವಾಸಿಸುವ ಭೂಮಿಯನ್ನೆಲ್ಲ ಬಿಟ್ಟು ಮೇರು ಅತಿ ದೂರದಲ್ಲಿರುವುದು !

ತಿಗಣೆ : ರಕ್ತಬೀಜಾಸುರನ ವಂಶಕ್ಕೆ ಸೇರಿದ್ದು ತಿಗಣೆ ! ಮನೆಯಲ್ಲಿ ಅದಿದ್ದ ಮೇಲೆ ಅದರ ಪಾಲಿನ ರಕ್ತ ವನ್ನು ನಾವು ಕೊಟ್ಟು ಸುಮ್ಮನಿರಬೇಕೇ ಹೊರತು ನಮಗೆ ಬೇರೆ ಮಾರ್ಗವಿಲ್ಲ ; ಹೆಚ್ಚೆಂದರೆ ಮನೆಯನ್ನು ಅದಕ್ಕೇ ಬಿಟ್ಟುಕೊಟ್ಟು ದೂರ ಎಲ್ಲಾದರೂ ಅದು ಬರಲಾಗದಿದ್ದ ಜಾಗಕ್ಕೆ ಹೋಗಿ ಮಲಗಬೇಕಷ್ಟೆ !

ಕಮಲೇ ಕಮಲಾ ಶೇತೇ ಹರಃ ಶೇತೇ ಹಿಮಾಲಯೇ
ಕ್ಷೀರಾಬ್ಧೌ ಚ ಹರಿಃ ಶೇತೇ ಮನ್ಯೇ ಮತ್ಕುಣಶಂಕಯಾ

ತಿಗಣೆಯ ಭಯದಿಂದ ಲಕ್ಷ್ಮಿ ನೀರ ನಡುವಿರುವ ಕಮಲದಲ್ಲಿ ಹೋಗಿ ಮಲಗುತ್ತಾಳೆ. ಹರನೋ ಮಂಜಿನಬೆಟ್ಟದ ಮೇಲೆ ಮಲಗುತ್ತಾನೆ. ಹರಿಯಾದರೋ ಕ್ಷೀರಸಾಗರದ ನಡುವೆ ಮಲಗುತ್ತಾನೆ!

ಒಟ್ಟನಲ್ಲಿ ನಗುವಿಲ್ಲದವನ ಜೀವನ ಮರಳುಕಾಡಿದ್ದಂತೆ ಶುಷ್ಕ, ಬರಡು. ಹಾಸ್ಯಮನೋವೃತ್ತಿ ಯಿಂದಲೇ ಜೀವನದಲ್ಲಿ ಹಸಿರು ಮೊಳೆಯಬೇಕು ; ಸಂಪತ್ಸಮೃದ್ಧವಾಗಬೇಕು !

"ಹಾಸ್ಯ ಮನೋವೃತ್ತಿ ನನ್ನಲ್ಲಿ ಒಂದು ವೇಳೆ ಇಲ್ಲದೆ ಹೋಗಿದ್ದರೆ ನಾನು ಎಂದೋ ಆತ್ಮಹತ್ಯೆ ಮಾಡಿ ಕೊಳ್ಳುತ್ತಿದ್ದೆ" ಎಂದಿದ್ದಾರೆ ಗಾಂಧೀಜಿ.

ನ ಪ್ರಾಪ್ನೋತಿ ಮುನಯೋ ರುದಿತೇನ ಮೋಕ್ಷಮ್
ಸ್ವರ್ಗಾಯತಂ ನ ಪರಿಹಾಸಕಥಾ ರುಣದ್ಧಿ

ಅಳುವಿನಿಂದ ಋಷಿಗಳೇನೂ ಮೋಕ್ಷವನ್ನು ಪಡೆದು ಬಿಡುವುದಿಲ್ಲ. ಪರಿಹಾಸದ ಕಥೆ ಸ್ವರ್ಗಕ್ಕೆ ಹೋಗು ವವರನ್ನೇನೂ ತಡೆಗಟ್ಟುವುದಿಲ್ಲ !

ಡಾ. ಜೀ. ಶಂ. ಪರಮಶಿವಯ್ಯ

ಕರ್ನಾಟಕದಲ್ಲಿ ಜಾನಪದ ಅಧ್ಯಯನ

ಕರ್ನಾಟಕದಲ್ಲಿ ಇಂದು ಜಾನಪದ ಅಧ್ಯಯನ ಅತ್ಯಂತ ಶಾಸ್ತ್ರೀಯವಾಗಿ ನಡೆಯುತ್ತಿದೆ. ಡಾ. ಹಾ. ಮಾ. ನಾಯಕರ ಜಾನಪದ ಗ್ರಂಥಸೂಚಿ (1974)ಯ ಪ್ರಕಾರ ಕನ್ನಡದಲ್ಲಿ ಐನೂರಕ್ಕೂ ಹೆಚ್ಚು ಜಾನಪದ ಕೃತಿಗಳು ಪ್ರಕಟವಾಗಿವೆ. ಜನಪದಗೀತೆ, ಲಾವಣಿ, ಖಂಡಕಾವ್ಯ, ಮಹಾಕಾವ್ಯ, ಜನಪದ ಕಥೆಗಳು, ನಂಬಿಕೆಗಳು, ಗಾದೆಗಳು, ಒಗಟುಗಳು, ಸಂಪ್ರದಾಯಗಳು, ಶಿಶುಪ್ರಾಸಗಳು, ಜನಪದ ಕಲೆಗಳು, ಜನಪದ ನಾಟಕಗಳು ಹೀಗೆ ಜಾನಪದದ ಹತ್ತಾರು ಪ್ರಕಾರಗಳಿಗೆ ಸಂಬಂಧಿಸಿದ ಸಂಗ್ರಹಗಳೂ, ಅಧ್ಯಯನಗಳೂ ಅಪಾರ ಸಂಖ್ಯೆಯಲ್ಲಿ ಪ್ರಕಟವಾಗಿವೆ, ಆಗುತ್ತಿವೆ. ಕನ್ನಡದಲ್ಲಿ ಜಾನಪದ ಅಧ್ಯಯನ ಕಳೆದ ಒಂದೂವರೆ ಶತಮಾನದುದ್ದಕ್ಕೂ ಹರಡಿಕೊಂಡಿರುವುದನ್ನು ನೋಡಬಹುದು. ಕಾಲದೃಷ್ಟಿಯಿಂದ ಕರ್ನಾಟಕ ಜಾನಪದ ಅಧ್ಯಯನವನ್ನು ಈ ಕೆಳಕಂಡಂತೆ ವರ್ಗೀಕರಿಸಿಕೊಳ್ಳಬಹುದು :

1. 1800–1930—ಆರಂಭಯುಗ
2. 1930–1947—ನವೋದಯ ಯುಗ
3. 1947–1966— ಪೂರಕಯುಗ
4. 1946ರಿಂದ ಈಚೆಗೆ—ವೈಜ್ಞಾನಿಕ ಯುಗ

ಹತ್ತೊಂಬತ್ತನೆ ಶತಮಾನದ ಜಾನಪದ ಕೃತಿಗಳನ್ನು ಪರಿಗಣಿಸುವಾಗ ಆ ಅವಧಿಯಲ್ಲಿ ಪ್ರಕಟವಾದ ಕೆಲವು ಅತ್ಯುತ್ತಮ ಲೇಖನಗಳನ್ನು ಪರೀಕ್ಷಿಸಬೇಕು. ಕಿಟ್ಟೆಲ್, ಮೆಕಾಂಜಿ, ನರಸಿಂಹಅಯ್ಯಂಗಾರ್ ಮುಂತಾದವರು ಇಂಡಿಯನ್ ಆಂಟಿಕ್ವರಿಯೆ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟಿಸಿದ ಲೇಖನಗಳು ಮಹತ್ವಪೂರ್ಣವಾದುವು. ಭೂತಾರಾಧನೆ, ಸ್ಮಾರಕ ಶಿಲೆಗಳು, ಮೊರಸು ಒಕ್ಕಲಿಗರು, ಹಾಸನಜಿಲ್ಲೆಯ ಕುಲವಾಡಿಗಳು ಮೊದಲಾದ ವಿಷಯಗಳ ಮೇಲೆ ಜಾನಪದ ಲೇಖನಗಳು ಆಗಾಗ ಬೆಳಕು ಕಾಣುತ್ತಲೇ ಇದ್ದುವು.

ಹತ್ತೊಂಬತ್ತನೆಯ ಶತಮಾನದ ಜಾನಪದ ಅಧ್ಯಯನ ಜನಪದಗೀತೆ, ಗಾದೆ, ಕತೆ, ಲಾವಣಿಗಳ ವ್ಯಾಪ್ತಿಯಲ್ಲಿ ನಡೆದರೂ ಪ್ರೌಢ ಪತ್ರಿಕೆಗಳಲ್ಲಿ ಪ್ರಕಟಗೊಂಡ ಅನೇಕ (ಸಂಶೋಧನಾತ್ಮಕ) ಲೇಖನಗಳನ್ನೂ, ಕನ್ನಡದಲ್ಲಿ ಪ್ರಕಟವಾದ ಗೀತೆ, ಲಾವಣಿಗಳ ಕೆಲವು ಸಂಕಲನಗಳನ್ನೂ ಈ ಸಾಲಿನಲ್ಲಿ ಪರಿಗಣಿಸಬೇಕು. ಮಂಗಳೂರಿನ ಬಾಸೆಲ್ ಮಿಷನ್ನಿನವರು ಹೊರತಂದ ಗಾದೆಗಳ ಸಂಕಲನಗಳು ಇಪ್ಪತ್ತನೆಯ ಶತಮಾನಕ್ಕೂ ಸೇರುತ್ತವೆ. ಕಲ್ಗಿ–ತುರಾ ಸಂಪ್ರದಾಯದ ಲಾವಣಿಗಳನ್ನೂ ಇತರ ಸಂಪ್ರದಾಯದ ಲಾವಣಿಗಳನ್ನೂ ಒಳಗೊಂಡ ಕಿರುಹೊತ್ತಗೆಗಳು 1918ರವರೆಗೆ ಪ್ರಕಟವಾಗಿವೆ. ಕರ್ನಾಟಕದಲ್ಲಿ ಜಾನಪದ ಅಧ್ಯಯನದ ಆರಂಭ ಜನಪದ ಸಾಹಿತ್ಯ ಸಂಗ್ರಹಣೆಯ ಮೂಲಕ ಕಳೆದ ಶತಮಾನದಲ್ಲಿಯೇ ಆಯಿತು ಎನ್ನಬಹುದು. ಜಾನ್‌ಲೇಡನ್

(1803) ಶ್ರೀರಂಗಪಟ್ಟಣದ ಪತನಾನಂತರ ಆ ಸಂಬಂಧವಾದ ಲಾವಣಿಯೊಂದನ್ನು ಸಂಗ್ರಹಿಸಿ ಇಂಗ್ಲಿಷಿಗೆ ಅನುವಾದಿಸುತ್ತಾನೆ. ಅವನ ಅನಂತರ ಕರ್ನಾಟಕಕ್ಕೆ ಬಂದ ಅಬ್ಬೆಡುಬೋಯಿ ತನ್ನ Hindu Cutoms Manners & Ceremonies ಎಂಬ ಗ್ರಂಥದಲ್ಲಿ ಜಾನಪದ ಸಂಬಂಧವಾದ ಅನೇಕ ವಿಷಯಗಳನ್ನು ಪ್ರಕಟಿಸಿ, ಭಾರತದ ಆದ್ಯ ಜಾನಪದ ಸಂಗ್ರಹಕ ಎನಿಸುತ್ತಾನೆ. ಇವನ ಕಾರ್ಯಕ್ಷೇತ್ರ ಕರ್ನಾಟಕದ ಶ್ರೀರಂಗಪಟ್ಟಣ ಮತ್ತು ಹಾಸನಜಿಲ್ಲೆಯ ಶೆಟ್ಟಿಹಳ್ಳಿ. ಅವನ ಕೃತಿಯಲ್ಲಿ ಕಂಡುಬರುವ ಅನೇಕ ಜಾನಪದ ಪ್ರಕಾರಗಳಿಗೆ ಇಲ್ಲಿನ ಸಂಬಂಧವನ್ನು ಸ್ಪಷ್ಟವಾಗಿ ಆರೋಪಿಸಬಹುದು.

ಜಾನಪದ ಕ್ಷೇತ್ರದಲ್ಲಿ ಹತ್ತೊಂಬತ್ತನೆಯ ಶತಮಾನದ ಮತ್ತೊಂದು ಗಮನಾರ್ಹ ಹೆಸರು Charles E. Gover ಅವನದು. 'The Folksongs of Southern India' ಎಂಬ ತನ್ನ ಕೃತಿಯಲ್ಲಿ Gover, ದಕ್ಷಿಣದ ಪ್ರಮುಖ ಭಾಷೆಗಳ ಜನಪದ ಗೀತೆಗಳನ್ನೆಲ್ಲ ಒಂದೆಡೆ ಕಲೆಹಾಕುವ ಪ್ರಯತ್ನ ಕಾಣುತ್ತದೆ. ಮೂಲದ ಗೀತೆಗಳನ್ನೇ ಅಳವಡಿಸಲಾಗಿದೆ. ಇಲ್ಲಿನ ಕೊಡವಸಂಸ್ಕೃತಿಗೆ ಸಂಬಂಧಿಸಿದ ಗೀತೆಗಳು ಶುದ್ಧ ಜಾನಪದ ಮೂಲಕ್ಕೆ ಸಂಬಂಧಪಟ್ಟು ಕನ್ನಡಕ್ಕೆ ಸಂಬಂಧಪಡುವ ಭಾಗ ದಾಸರ ಕೀರ್ತನೆಗಳಿಂದ ಕೂಡಿದೆ. ಗೋವರನ ಅನಂತರ ಎಫ್. ಎಂ. ಫ್ಲೀಟ್ ಕನ್ನಡ ಜಾನಪದಕ್ಷೇತ್ರದಲ್ಲಿ ಗಣ್ಯವಾದ ಹೆಸರಾಗಿ ಉಳಿಯುತ್ತದೆ. ಉತ್ತರ ಕರ್ನಾಟಕದ ಎಂಟು ಲಾವಣಿಗಳನ್ನು ಫ್ಲೀಟ್ ಸಂಗ್ರಹಿಸಿ ಅವುಗಳಲ್ಲಿ ಐದನ್ನು ಇಂಡಿಯನ್ ಆಂಟಿಕ್ವರಿಯಲ್ಲಿ (1885ರಿಂದ 1890) ಪ್ರಕಟಿಸಿದ್ದಾನೆ. ಇವೆಲ್ಲ ಒಂದು ರೀತಿಯಲ್ಲಿ 1885ಕ್ಕೆ ಹತ್ತಿರದಲ್ಲಿ ನಡೆದ ಘಟನೆಗಳನ್ನು ಅವಲಂಬಿಸಿ ರಚಿತವಾದ ಲಾವಣಿಗಳು. ಫ್ಲೀಟ್ ಈ ಲಾವಣಿಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿ, ಕನ್ನಡ ಮೂಲದೊಡನೆ ಇಂಗ್ಲಿಷ್ ಸಾರಾಂಶವನ್ನು ನೀಡಿರುವುದು ಮೆಚ್ಚತಕ್ಕ ಅಂಶವಾಗಿದೆ. ತುಂಬ ಐತಿಹಾಸಿಕ ಮಹತ್ವವುಳ್ಳವು.

Mary Frereಯ Old Deccan Days, (1881) 25 ಜನಪದ ಕಥೆಗಳ ಸಂಕಲನ. ಅನ್ನಲಿಬೆರ್ಟಾ ಡಿಸೌಜ ಎಂಬ ವಕ್ತೃ (Informent) ಈ ಕತೆಗಳನ್ನು ಫ್ರೀರಿಗೆ ಹೇಳಿದವಳು. ಮೂಲತಃ ಲಿಂಗಾಯತ ಧರ್ಮಕ್ಕೆ ಸೇರಿದ ಅವಳು ಕನ್ನಡತಿ ಎಂಬುದು ಸ್ಪಷ್ಟ.

ತಮ್ಮ ಕನ್ನಡ–ಇಂಗ್ಲಿಷ್ ಅರ್ಥಕೋಶದಿಂದ ಕನ್ನಡ ಜನಮನದಲ್ಲಿ ಇಂದಿಗೂ ಉಳಿದಿರುವ ರೆ. ಎಫ್. ಕಿಟ್ಟೆಲ್ ಜಾನಪದ ಕ್ಷೇತ್ರಕ್ಕೂ ಸಾಕಷ್ಟು ಸೇವೆ ಸಲ್ಲಿಸಿದ್ದಾರೆ. ಕಿಟ್ಟೆಲ್ ಕೋಶದ ಗಾದೆಗಳು 1894ಕ್ಕೂ ಮುಂಚೆಯೇ ಸಂಗ್ರಹಿಸಿದುವು. ನಾಲ್ಕು ಸಾವಿರಕ್ಕೂ ಹೆಚ್ಚು ಕನ್ನಡ ಗಾದೆಗಳನ್ನು ಕಿಟ್ಟೆಲ್ ಒಂದೊಂದು ಶಬ್ದದ ಸಹಜ ಪ್ರಯೋಗವನ್ನು ಅರಿಯಲು ಬಳಸಿದ್ದಾರೆ. ಆಡುಮಾತಿನಲ್ಲಿ ದೊರೆಯುವ ಗಾದೆಗಳನ್ನು ಶಬ್ದಗಳ ಅರ್ಥ ಖಚಿತತೆಗಾಗಿ ಬಳಸಿಕೊಳ್ಳುವುದರ ಮೂಲಕ ಕಿಟ್ಟೆಲ್ ಅವರು ತೋರಿದ ಶ್ರದ್ಧೆ ಗಮನಾರ್ಹ.

1924ರಲ್ಲಿ ಕೊಡುವ ಸಂಸ್ಕೃತಿಗೆ ಸಂಬಂಧಿಸಿದ 'ಪಟ್ಟೋಲೆ ಪಳಮೆ' ಎಂಬ ಕೃತಿಯನ್ನು ನಡಕೇರಿಯಂಡ ಚಿಣ್ಣಪ್ಪ ಅವರು ಪ್ರಕಟಿಸಿ, ಕನ್ನಡ ಜಾನಪದದ ಹೊಸಶಕೆಯನ್ನು ಆರಂಭಿಸಿದರು. ಮೌಖಿಕ ಸಂಸ್ಕೃತಿಯ ಕೊಡಗಿನ ಸಮಸ್ತ ಆಚಾರವಿಚಾರಗಳನ್ನೂ ಅಭ್ಯಸಿಸಿ, ಅವುಗಳನ್ನೆಲ್ಲ ಪರಿಚಯಿಸುವುದರ ಜೊತೆಗೆ, ಕೊಡವ ಭಾಷೆಯ ಜನಪದ ಸಾಹಿತ್ಯ, ಇತರ ನಂಬಿಕೆ ಸಂಪ್ರದಾಯ ಮುಂತಾದುವು ಜಾನಪದ ಪ್ರಮುಖ ಪ್ರಕಾರಗಳನ್ನೆಲ್ಲ ಒಳಕೊಳ್ಳುವಂಥ ಕೃತಿಯೊಂದನ್ನು ತುಂಬ ಹಿಂದೆಯೇ ಪ್ರಕಟಿಸುವ ಪ್ರಯತ್ನ ಮಾಡಿರುವ ಚಿಣ್ಣಪ್ಪನವರ ಸಾಧನೆ ಗಮನಾರ್ಹವಾದುದು.

1920ರಿಂದ 1930ರ ಅವಧಿಯಲ್ಲಿ ಲಾವಣಿಗಳ ಮೇಲೆ ಒಂದೆರಡು ಲೇಖನಗಳು ಪ್ರಕಟವಾದರೂ ಮುಂದೆ 1931ರಿಂದ ಆರಂಭವಾಗುವ ಜಾನಪದ ನವೋದಯ ನಮ್ಮ ದೃಷ್ಟಿಯನ್ನು ಸೆಳೆದುಕೊಳ್ಳುತ್ತದೆ.

1930ರ ಈಚೆಗೆ ಕನ್ನಡ ಜನಪದ ಗೀತೆಗಳ ಸಾಹಿತ್ಯಿಕ ಮೌಲ್ಯದ ಕಡೆ ನವೋದಯ ಸಾಹಿತಿಗಳ ದೃಷ್ಟಿ ಹರಿದು ಮೌಖಿಕ ಸಂಪ್ರದಾಯದ ಭಾವಗೀತೆಗಳ, ಲಾವಣಿಗಳ ಸಂಗ್ರಹ, ಪ್ರಕಟಣೆಯ ಕಡೆ ಕೆಲವರು ಆಸಕ್ತಿ

ತೋರಿದವರು. ಇದಕ್ಕೆ ಮೊದಲೇ ಹಣಮಂತಗೌಡ, ಮಾಸ್ತಿ ಮೊದಲಾದವರು ತಮ್ಮ ಲೇಖನಗಳಲ್ಲಿ ಜನಪದ ಸಾಹಿತ್ಯದ ಮೌಲ್ಯವನ್ನು ಎತ್ತಿ ಹಿಡಿದಿದ್ದರು. ಮುಂದೆ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬಿ. ಎಂ. ಶ್ರೀಕಂಠಯ್ಯ, ದ. ರಾ. ಬೇಂದ್ರೆ, ಮಧುರಚೆನ್ನ ಮುಂತಾದ ಸಾಹಿತ್ಯಕ್ಷೇತ್ರದ ದಿಗ್ಗಜಗಳು ಜನಪದ ಗೀತೆಗಳಿಂದ ಆಕರ್ಷಿತರಾಗಿ ಅವರ ಮೌಲ್ಯವನ್ನು ಎತ್ತಿಹಿಡಿಯುತ್ತಾ ಬಂದರು. ಮಧುರಚೆನ್ನ, ಕಾಪಸೆ ರೇವಪ್ಪ, ಸಿಂಪಿ ಲಿಂಗಣ್ಣ ಅವರು ಗರತಿಯ ಹಾಡು ಸಂಕಲನವನ್ನು 1931ರಲ್ಲಿ ಪ್ರಕಟಿಸಿ ಕನ್ನಡ ಸಾರಸ್ವತಲೋಕದಲ್ಲಿ ಒಂದು ಹೊಸ ರೋಮಾಂಚನವನ್ನು ತಂದರು. ಅವರು ಬಿಜಾಪುರ ಜಿಲ್ಲೆಯಲ್ಲಿ ಸಂಗ್ರಹಿಸಿದ ಅಪಾರ ಜನಪದ ಗೀತೆಗಳಲ್ಲಿ ಕೆಲವನ್ನು ಆಯ್ದು ಈ ಸಂಕಲನದಲ್ಲಿ ಪ್ರಕಟಿಸಿದರು. ಹೆಂಗಸರ ಹಾಡುಗಳನ್ನು ಮಾತ್ರ ಇಲ್ಲಿ ಅಳವಡಿಸಿಕೊಡಲಾಯಿತು. ಇಲ್ಲಿನ ಒಂದೊಂದು ತ್ರಿಪದಿಯೂ ಅಪೂರ್ವ ಅರ್ಥಸೌಂದರ್ಯದಿಂದ, ಸಾಹಿತ್ಯರಸಿಕರ ಹೃದಯವನ್ನು ಸೂರೆಗೊಂಡವು. ಮಲ್ಲಿಗೆದಂಡೆ (1935), ಜೀವನ ಸಂಗೀತ (1936) ಕೂಡ ಹಲಸಂಗಿ ಸೋದರರ ಮತ್ತೆರಡು ಉತ್ತಮ ಸಂಕಲನಗಳು. ಉತ್ತರ ಕರ್ನಾಟಕದ ಜನಪದ ಗೀತೆಗಳ ವೈವಿಧ್ಯ ಮತ್ತು ವೈಶಿಷ್ಟ್ಯಗಳನ್ನು ಈ ಮೂರು ಸಂಕಲನಗಳೂ ಪರಿಚಯಿಸುತ್ತವೆ. ಇಲ್ಲಿನ ಜನಪದ ಗೀತೆಗಳನ್ನು ಕಾವ್ಯ ಮೀಮಾಂಸೆಯ ಸೂತ್ರಗಳಿಗೂ ಅನ್ವಯಿಸಿ ಧ್ವನಿ, ರಸ ಮುಂತಾದುವುಗಳನ್ನು ಗುರುತಿಸುವ ಪ್ರಯತ್ನವೂ ನಡೆಯಿತು.

ಉತ್ತರ ಕರ್ನಾಟಕದಲ್ಲಿ ಈ ಕಾರ್ಯ ನಡೆಯುತ್ತಿದ್ದ ಅವಧಿಯಲ್ಲೇ ದಕ್ಷಿಣ ಕರ್ನಾಟಕದಲ್ಲಿಯೂ ಜನಪದ ಸಾಹಿತ್ಯ ಸಂಗ್ರಹದ ಚಟುವಟಿಕೆಗಳು ಕಂಡುಬರತೊಡಗಿದುವು. ಗೊರೂರು ಸೋದರರು, ಮತಿಘಟ್ಟ ಸೋದರರು, ಅರ್ಚಕ ರಂಗಸ್ವಾಮಿಯವರು ಸಂಗ್ರಹ ಕಾರ್ಯವನ್ನು ಆರಂಭಿಸಿದ್ದರು. ಅರ್ಚಕರಂಗಸ್ವಾಮಿಯವರ "ಹುಟ್ಟಿದ ಹಳ್ಳಿಹಳ್ಳಿಯ ಹಾಡು". 1933ರಲ್ಲಿ ಪ್ರಕಟವಾದ, ಜಾನಪದದ ಸಮಸ್ತ ಮುಖಗಳನ್ನೂ ಪರಿಚಯಿಸುವ ಈ ಕೃತಿಯಲ್ಲಿ ಒಂದು ಹಳ್ಳಿಯ ಜೀವನಚರಿತ್ರೆಯನ್ನೇ ಹಿಡಿದಿಡಲಾಗಿದೆ. ಗೊರೂರರ ಹಳ್ಳಿಯ ಹಾಡುಗಳು (1936), ಬಿ. ಎಸ್. ರಂಗಸ್ವಾಮಿಯವರು "ಹಳ್ಳಿಯ ಪದಗಳು" (1940) ಇವು ದಕ್ಷಿಣ ಕರ್ನಾಟಕದ ಒಳ್ಳೆಯ ಜನಪದ ಗೀತಸಂಗ್ರಹಗಳು. ಈ ಅವಧಿಯಲ್ಲಿ ದಕ್ಷಿಣ ಕರ್ನಾಟಕದಿಂದ ಪ್ರಕಟವಾದ ಮತ್ತೊಂದು ಮಹತ್ವದ ಕೃತಿ "ಕರ್ಣಾಟಕ ಸಂಸ್ಕೃತಿ" (1936). ಜನಪದ ಸಾಹಿತ್ಯವನ್ನು ಆಧಾರವಾಗಿಟ್ಟುಕೊಂಡು ಸಂಸ್ಕೃತಿಯನ್ನು ವ್ಯಾಖ್ಯಾನಿಸಲು ಮಾಡಿದ ಪ್ರಥಮ ಪ್ರಯತ್ನವನ್ನು ಇಲ್ಲಿ ಕಾಣಬಹುದು. ನವೋದಯ ಯುಗದ ಜನಪದ ಸಾಹಿತ್ಯ ಸಂಕಲನಗಳಲ್ಲೆಲ್ಲ ಆಚಾರ್ಯ ಕೃತಿಯೆನಿಸುವ "ನಾಡಪದಗಳು" ಸಂಕಲನ ಪ್ರಕಟವಾದುದು 1947ರಲ್ಲಿ. ಜನಪದ ಗೀತೆಗಳನ್ನು ಅವುಗಳ ಸಂಪ್ರದಾಯಗಳ ಹಿನ್ನೆಲೆಯಲ್ಲಿ, ಅವುಗಳ ಸಹಜತೆ ಮುಕ್ಕಾಗದಂತೆ ಶಾಸ್ತ್ರೀಯವಾಗಿ ಇಲ್ಲಿ ಸಂಪಾದಿಸಲಾಗಿದೆ. ಜನಪದ ಗೀತೆಗಳ ಸಮರ್ಪಕ ವರ್ಗೀಕರಣದ ಪ್ರಯತ್ನವೂ ಈ ಕೃತಿಯಲ್ಲಿ ನಡೆದಿದೆ.

ನವೋದಯ ಯುಗದ ಆರೇಳು ಸಂಕಲನಗಳು ಕನ್ನಡ ಜನಪದ ಸಾಹಿತ್ಯಚರಿತ್ರೆಯಲ್ಲಿ ಮಹತ್ವದ ಉಲ್ಲೇಖಕ್ಕೆ ಕಾರಣವಾಗಿರುವುದು ಮೂರು ದೃಷ್ಟಿಯಿಂದ: 1. ಅವುಗಳ ಕಾಲದೃಷ್ಟಿ 2. ಅವುಗಳ ಸಾಹಿತ್ಯಿಕ ಮೌಲ್ಯ 3 ಸಂಗ್ರಹಕರು, ಸಂಪಾದಕರು ಅವುಗಳನ್ನು ಕಲೆಹಾಕುವಲ್ಲಿ ತೋರಿರುವ ಅನನ್ಯಶ್ರದ್ಧೆ.

ಮೇಲಿನ ಕೃತಿಗಳು ಮುಂದೆ ಕರ್ನಾಟಕದಲ್ಲಿ ಜಾನಪದ ಅಧ್ಯಯನ ಮೈಗೂಡಿಕೊಳ್ಳಲು ಒಳ್ಳೆಯ ಅಡಿಪಾಯವನ್ನು ಹಾಕಿದುವು. ಅವುಗಳಿಗೆ ದೊರೆತ ಮನ್ನಣೆ, ಲಭ್ಯವಾದ ಜನಪ್ರಿಯತೆ ಮುಂದೆ ಆ ಕ್ಷೇತ್ರಕ್ಕೆ ಅನೇಕರು ಕಾಲಿಡಲು ಸ್ಫೂರ್ತಿಯನ್ನು ನೀಡಿದುವು. ಆ ಕೃತಿಗಳ ಗಂಧ, ಗಾಳಿ ಇಂದಿಗೂ ಕನ್ನಡ ಸಾಹಿತ್ಯಪ್ರಿಯರಿಗೆ, ಜನಪದ ಸಾಹಿತ್ಯಾಭಿಮಾನಿಗಳಿಗೆ ಉಲ್ಲಾಸವನ್ನೂ ಮುದವನ್ನೂ ತರುತ್ತವೆ. ಇನ್ನೂ ತರುವ ಉತ್ಸಾಹಿಗಳಾಗಿದ್ದಾರೆ.

ಕರ್ನಾಟಕ ಜಾನಪದ ಅಧ್ಯಯನದ ಪೂರಕಯುಗ 1947ರ ಈಚೆಗೆ ಆರಂಭವಾಗುತ್ತದೆ. ಕಾಳೇಗೌಡ ನಾಗವಾರ,

ಕರೀಂಖಾನ್, ಕೆ. ಆರ್. ಲಿಂಗಪ್ಪ ಮುಂತಾದವರು ಜನಪದ ಗೀತೆಗಳನ್ನು ಹಾಡಿ, ನಾಡಿನಾದ್ಯಂತ ಅವುಗಳಿಗೆ ಒಳ್ಳೆಯ ಜನಪ್ರಿಯತೆಯನ್ನು ದೊರಕಿಸುವಲ್ಲಿ ಶ್ರಮಿಸುತ್ತಾ ಬಂದರು. ಕರೀಂಖಾನರೂ, ಲಿಂಗಪ್ಪನವರೂ ಸ್ವತಃ ಸಂಗ್ರಹಕರಾಗಿಯೂ ಕೆಲವು ಕೃತಿಗಳನ್ನು ಪ್ರಕಟಿಸಿದವರು. ಇವರ ಪ್ರಯತ್ನದ ಫಲವಾಗಿ ಸ್ವಾತಂತ್ರ್ಯಪೂರ್ವದಲ್ಲಿ ಪ್ರಕಟವಾದ ಜನಪದ ಗೀತಸಂಕಲನಗಳಿಗೆ ವಿಶೇಷವಾದ ಪ್ರಚಾರ ಲಭ್ಯವಾಗಿ ಜನಪದ ಗೀತೆಗಳ ಕಡೆ ಜನತೆಯ ಲಕ್ಷ್ಯ ಹೆಚ್ಚಾಗಿ ಹರಿಯಿತು.

ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ಲೇಖಕರು ಒಳ್ಳೆಯ ಸಂಕಲನಗಳನ್ನು ಹೊರತಂದರೂ ಜಾನಪದವನ್ನು 1950ಕ್ಕೆ ಹಿಂದೆ ಯಾರೂ ತಮ್ಮ ಪೂರ್ಣಕಾಲದ ಅಧ್ಯಯನವನ್ನಾಗಿ ಮಾಡಿಕೊಳ್ಳಲಿಲ್ಲ. ಮತಿಘಟ್ಟ ಕೃಷ್ಣಮೂರ್ತಿಯವರು ಮಾತ್ರ ನಿರಂತರವಾಗಿ ಸಂಗ್ರಹಿಸುತ್ತಾ ಬಂದರು. 1950ರ ಈಚೆಗೆ ಡಾ. ಗದ್ಗಿಮಠ, ಜೀ. ಶಂ. ಪರಮಶಿವಯ್ಯ, ಕರಾಕೃ, ಪಿ. ಆರ್. ತಿಪ್ಪೇಸ್ವಾಮಿ ಮುಂತಾದವರು ಜಾನಪದ ಕ್ಷೇತ್ರವನ್ನು ಪ್ರವೇಶಿಸಿದರು. ಡಾ. ಗದ್ಗಿಮಠರು ಕನ್ನಡದಲ್ಲಿ ಪ್ರಥಮವಾಗಿ ಜಾನಪದ ವಿಷಯವನ್ನು ಆರಿಸಿಕೊಂಡು ಪಿ. ಎಚ್. ಡಿ. ಪ್ರಬಂಧವನ್ನು ರಚಿಸಿ, ಡಾಕ್ಟರೇಟ್ ಪ್ರಶಸ್ತಿ ಪಡೆದು ಈ ದಿಕ್ಕಿನಲ್ಲಿ ಒಂದು ಹೊಸ ಅಧ್ಯಾಯವನ್ನು ಆರಂಭಿಸಿದರು. ಅವರು ಉತ್ತರ ಕರ್ನಾಟಕದ ಗೀತ ಸಂಪ್ರದಾಯಗಳನ್ನು ಕುರಿತು ಅಧ್ಯಯನ ಮಾಡಿದರೂ ಜೊತೆಗೆ ಸಂಕಲನಗಳನ್ನೂ ಪ್ರಕಟಿಸಿದರು. ಅವರ ಅನಂತರ ಪ್ರಕೃತ ಲೇಖಕ ಜಾನಪದ ವಿಷಯವನ್ನೇ ಆರಿಸಿ ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳನ್ನು ಅಭ್ಯಸಿಸಿ, ವೃತ್ತಿಗಾಯಕ ಪರಂಪರೆಯನ್ನು ಬೆಳಕಿಗೆ ತಂದರೆ, ಕರಾಕೃ ಅವರು ಶ್ರೀ ಪಿ. ಆರ್. ತಿಪ್ಪೇಸ್ವಾಮಿ ಮೊದಲಾದವರನ್ನು ಕೂಡಿಕೊಂಡು ದಕ್ಷಿಣ ಕರ್ನಾಟಕದ ನಾನಾ ಭಾಗಗಳಲ್ಲಿ ಸಂಚರಿಸಿ ಅನೇಕ ಗೀತ ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ಅನೇಕ ಸಂಕಲನಗಳನ್ನು ಹೊರತಂದರು. ಜನಪದಗೀತೆ, ಲಾವಣಿ, ಖಂಡಕಾವ್ಯ, ಕಾವ್ಯಗಳಿಗೆ ಸಂಬಂಧಿಸಿದಂತೆ ಕನ್ನಡ ಜನಪದ ಸಾಹಿತ್ಯದ ಒಂದು ಸ್ಥೂಲಚಿತ್ರ ಇದರಿಂದ ಲಭ್ಯವಾಗುವಂತಾಯಿತು. ಹಿಂದಿನವರು ಕುತೂಹಲಕ್ಕಾಗಿ ಆರಂಭಿಸಿದ ಜಾನಪದ ಸಂಗ್ರಹಕಾರ್ಯ 1950 ಮತ್ತು 1965ರ ಅವಧಿಯಲ್ಲಿ ಮೇಲಿನ ಉತ್ಸಾಹಿಗಳ ಕಾರ್ಯದಿಂದ ಮುಂದಿನ ಅಧ್ಯಯನಕ್ಕೆ ಒಂದು ಸೇತುವೆಯನ್ನು ನಿರ್ಮಿಸಿತು.

ಕರ್ನಾಟಕದಲ್ಲಿ ಜಾನಪದ ಅಧ್ಯಯನಕ್ಕೆ ವೈಜ್ಞಾನಿಕ ಸ್ವರೂಪ ಮೂಡಿದುದು 1966ರ ಈಚೆಗೆ. ಅಲ್ಲಿಯವರೆಗೆ ನಡೆದ ಕೆಲಸವೆಲ್ಲ ಗೀತೆ, ಕಾವ್ಯಗಳಿಗೆ ಮಾತ್ರ ಸೀಮಿತವಾಗಿ ಸಮಗ್ರ ಜಾನಪದದ ಹಿನ್ನೆಲೆಯಲ್ಲಿ ಸಂಗ್ರಹವಾಗಲೀ ಅಧ್ಯಯನವಾಗಲೀ ನಡೆಯಲಿಲ್ಲ. ಜಾನಪದದ ಇತರ ಶಾಖೆಗಳ ಸ್ಪಷ್ಟ ವಿವೇಚನೆ ಕರ್ನಾಟಕದಲ್ಲಿ ಆವರೆಗೆ ಎಲ್ಲಿಯೂ ಪ್ರಸ್ತಾಪವಾಗಿರಲಿಲ್ಲ. 1966ರಲ್ಲಿ ಪ್ರಕೃತಲೇಖಕ 'Festival of Dances' ಎಂಬ ಬೆಂಗಳೂರಿನಿಂದ ಪ್ರಕಟವಾದ ವಿಶೇಷಾಂಕವೊಂದಕ್ಕೆ ಕರ್ನಾಟಕ ಜಾನಪದ ಅಧ್ಯಯನವನ್ನು ಕುರಿತು ಬರೆದ ಲೇಖನದಲ್ಲಿ ಈ ಸಂಬಂಧವಾಗಿ ಪ್ರಸ್ತಾಪಿಸಿ ಕನ್ನಡದಲ್ಲಿ ಗೀತಸಾಹಿತ್ಯಕ್ಕೆ ಮಾತ್ರ ಸೀಮಿತಗೊಂಡಂತಿರುವ ಜಾನಪದ ಸಂಗ್ರಹ, ಅಧ್ಯಯನಗಳು ಜಾನಪದದ ಸಮಸ್ತ ಪ್ರಕಾರಗಳಿಗೂ ವ್ಯಾಪಿಸಬೇಕು ಎಂದು ಕರೆನೀಡಿದ ಸಂದರ್ಭ ಗಮನಾರ್ಹವಾದುದು. ಪಾಶ್ಚಾತ್ಯದೇಶಗಳಲ್ಲಿ ಈ ಕ್ಷೇತ್ರದಲ್ಲಿ ನಡೆದ ಕಾರ್ಯದ ಕಡೆ ಕನ್ನಡ ಜಾನಪದ ವಿದ್ವಾಂಸರ ಆಸಕ್ತಿಯನ್ನು ಸೆಳೆಯುವಲ್ಲಿ ಈ ಲೇಖನ ಸಹಾಯಕವಾಯಿತು. ಇದೇ ವರ್ಷ ಮೈಸೂರು ವಿಶ್ವವಿದ್ಯಾನಿಲಯ ಏರ್ಪಡಿಸಿದ್ದ ಜಾನಪದ ಸಾಹಿತ್ಯ ಗೋಷ್ಠಿಯಲ್ಲಿ ಡಾ. ಹಾ. ಮಾ. ನಾಯಕರು ತಮ್ಮ ಐತಿಹಾಸಿಕ ಮಹತ್ವದ 'ಜನಪದ ಸಾಹಿತ್ಯ ಮತ್ತು ಅದರ ಸ್ವರೂಪ' ಎಂಬ ಪ್ರಬಂಧವನ್ನು ಮಂಡಿಸಿ, ನಮ್ಮ ಜಾನಪದ ಅಧ್ಯಯನಕ್ಕೆ ಒಂದು ಹೊಸ ತಿರುವನ್ನು ಕೊಟ್ಟರು. Folklore ಶಬ್ದದ ಹಿನ್ನೆಲೆ, ಒಂದು ವಿಜ್ಞಾನವಾಗಿ ಅದು ಬೆಳವಣಿಗೆಯನ್ನು ಪಡೆದುಕೊಂಡಿರುವ ರೀತಿ, ಅದರ ಪ್ರಕಾರಗಳು ಮುಂತಾದ ವಿಷಯಗಳನ್ನು ಅತ್ಯಂತ ಶಾಸ್ತ್ರೀಯವಾಗಿ ಪರಿಶೀಲಿಸಿದ ಅವರು ಕನ್ನಡದಲ್ಲಿ Folklore ಗೆ ಸಂವಾದಿಯಾಗಿ "ಜಾನಪದ" ಎಂಬ ಶಬ್ದವನ್ನು ಬಳಸಬಹುದೆಂದು

ಸೂಚನೆ ನೀಡಿದರು. ಇದಾದ ಅನಂತರ ಮರುವರ್ಷವೇ ಡಾ. ದೇ. ಜವರೇಗೌಡರು "ಜನಪದ ಸಾಹಿತ್ಯ ಸಮೀಕ್ಷೆ" ಎಂಬ ಪ್ರಕೃತ ಲೇಖಕನ ಕೃತಿಗೆ ಸುದೀರ್ಘವಾದ ಮುನ್ನುಡಿಯನ್ನು ಬರೆದು, ಜಾನಪದ ವಿರಾಟ್‌ಸ್ವರೂಪವನ್ನು ವಿದ್ವತ್ಪೂರ್ಣವಾಗಿ ಪರಿಚಯ ಮಾಡಿ ನಮ್ಮಲ್ಲಿ ಆಗಬೇಕಾದ ಕೆಲಸದ ಬಗ್ಗೆ ಸ್ಪಷ್ಟವಾದ ನಿರ್ದೇಶನವನ್ನು ನೀಡಿದರು. ಜಾನಪದ ಆಸಕ್ತಿ ನಮ್ಮಲ್ಲಿ ಕೆರಳುವಂತೆ ಮಾಡಿದರು.

"ಜಾನಪದ" 1966ರ ಸುಮಾರಿಗೆ ಹಾಗೂ ಅನಂತರ ಕರ್ನಾಟಕದಲ್ಲಿ ಸತ್ವಪೂರ್ಣ ಹೆಜ್ಜೆಯನ್ನು ಇಡ ತೊಡಗಿತು. ಕರ್ನಾಟಕದಲ್ಲಿ ಜಾನಪದ ಅಧ್ಯಯನದ ವೈಜ್ಞಾನಿಕ ಯುಗದ ಪುಟಗಳು ಕ್ರಮಕ್ರಮವಾಗಿ ತೆರೆಯ ತೊಡಗಿದುವು.

ಕರ್ನಾಟಕ ಜಾನಪದ ಅಧ್ಯಯನ ಶಾಸ್ತ್ರೀಯವಾಗಿ ಆರಂಭವಾದುದು ಮೈಸೂರು ವಿಶ್ವವಿದ್ಯಾನಿಲಯ ದಲ್ಲಿಯೇ. ಪ್ರೊ. ದೇಜಗೌ ಹಾಗೂ ಡಾ. ಹಾ. ಮಾ ನಾಯಕರ ದೂರದೃಷ್ಟಿಯ ಫಲವಾಗಿ ಸ್ನಾತಕೋತ್ತರ ಶಿಕ್ಷಣದಲ್ಲಿ ಜನಪದ ಸಾಹಿತ್ಯ ಸ್ಥಾನವನ್ನು ಪಡೆದುಕೊಂಡಿತು (1966). ಕನ್ನಡ ಎಂ. ಎ. ತರಗತಿಗೆ ಜನಪದ ಸಾಹಿತ್ಯದ ಒಂದು ಪತ್ರಿಕೆಯನ್ನು ಅಳವಡಿಸಲಾಯಿತು. 1968–69 ಪ್ರಕೃತ ಲೇಖಕ ಜಾನಪದ ಅಧ್ಯಾಪಕನಾಗಿ ಸೇರಿದ ಮೇಲೆ ಜನಪದ ಸಾಹಿತ್ಯದ ಪತ್ರಿಕೆ "ಜಾನಪದ" ಪತ್ರಿಕೆಯಾಗಿ ಬದಲಾಯಿತು. 1970–71ರಿಂದ "ಜಾನಪದ" ತತ್ತ್ವಗಳು ವಿಧಾನಗಳ ಒಂದು ಪತ್ರಿಕೆಯ ಜೊತೆಗೆ, ಅದಕ್ಕೆ ಪೂರಕವಾಗಿ ಬೇಕಾಗುವ ಸಾಂಸ್ಕೃತಿಕ ಮಾನವ ಶಾಸ್ತ್ರವನ್ನೊಳಗೊಂಡಂತೆ "ಸಂಸ್ಕೃತಿಯ ಅಧ್ಯಯನ" ಎಂಬ ಪತ್ರಿಕೆಯನ್ನೂ ಅಳವಡಿಸಲಾಯಿತು. ಮರುವರ್ಷ "ಜನಪದ ಸಾಹಿತ್ಯ" ಎಂಬ ಮತ್ತೊಂದು ಪತ್ರಿಕೆ ಈ ಸಾಲಿಗೆ ಸೇರಿತು. 1972–73ರಿಂದ ಸ್ನಾತಕೋತ್ತರ ಜಾನಪದ ಡಿಪ್ಲೊಮಾ ಶಿಕ್ಷಣವನ್ನೂ ಜಾರಿಗೆ ತರಲಾಯಿತು. 1973–74ರಿಂದ ಸ್ವತಂತ್ರವಾದ ಜಾನಪದ ಸ್ನಾತಕೋತ್ತರ ಪದವಿ ಶಿಕ್ಷಣವನ್ನೂ ಆರಂಭಿಸಲಾಯಿತು. ಕ್ರಮಕ್ರಮವಾಗಿ ಜಾನಪದ ಅಧ್ಯಯನ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ರೂಪುಗೊಂಡು ಕರ್ನಾಟಕದಲ್ಲಿ ಜಾನಪದ ಸಂಬಂಧವಾದ ಎಲ್ಲ ಚಟುವಟಿಕೆಗಳಿಗೂ ಮೂಲಪ್ರೇರಣೆಯನ್ನು ನೀಡಿತು. ಇಲ್ಲಿನ ಜಾನಪದ ವಸ್ತುಸಂಗ್ರಹಾಲಯ ಈಗಾಗಲೇ ತುಂಬ ಜನಪ್ರಿಯವಾಗಿದೆ. ಇಲ್ಲಿ ಸಂಗ್ರಹಿತವಾಗಿರುವ ವಸ್ತುವಿಶೇಷಗಳು ಕರ್ನಾಟಕದ ಪರಂಪರಾನುಗತ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಇಲ್ಲಿನ ಪ್ರಕೃತ ಲೇಖಕ ಮತ್ತು ಹೆಸರಾಂತ ಕಲಾವಿದ ಪಿ. ಆರ್. ತಿಪ್ಪೇಸ್ವಾಮಿ ವಸ್ತು ಸಂಗ್ರಹಾಲಯದ ಬೆಳವಣಿಗೆಗಾಗಿ ಅವಿರತವಾಗಿ ಶ್ರಮಿಸಿದ್ದಾರೆ. ಈ ವಸ್ತುಸಂಗ್ರಹಾಲಯದ ಜೊತೆಗೆ ಜಾನಪದ ಸಂಶೋಧನೆ ವಿಭಾಗ ಸಮಗ್ರ ಕರ್ನಾಟಕಕ್ಕೆ ತನ್ನ ಸಂಶೋಧಕರನ್ನು ಕಳುಹಿಸಿ ಜಿಲ್ಲಾವಾರು ಜಾನಪದ ಪರಿವೀಕ್ಷಣೆಯನ್ನು ನಡೆಸುತ್ತಿದೆ. ಅಖಿಲ ಕರ್ನಾಟಕ ಮಟ್ಟದ ವಾರ್ಷಿಕ ಕಲಾಮಹೋತ್ಸವ ಆಗಿದೆ.

ಕರ್ನಾಟಕ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಪೀಠವೂ ಜನಪದ ಸಾಹಿತ್ಯದ ಅಧ್ಯಯನಕ್ಕೆ ವಿಶೇಷ ಮಹತ್ವವನ್ನು ನೀಡಿದೆ. ಅಲ್ಲಿ ಜನಪದ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆಯುವ ವಿರಳ ಅವಕಾಶ ವೊಂದನ್ನು ಕಲ್ಪಿಸಿದೆ. ಈಗಾಗಲೇ ನಾಲ್ಕು ಜಾನಪದ ಸಮ್ಮೇಳನಗಳನ್ನು ನಡೆಸಿ ಉತ್ತರ ಕರ್ನಾಟಕದ ಜಾನಪದ ಚಟುವಟಿಕೆಗಳಿಗೆ ಒಳ್ಳೆಯ ಚಾಲನೆಯನ್ನು ನೀಡಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿಯೂ ಜಾನಪದ ಕನ್ನಡ ಸ್ನಾತಕೋತ್ತರ ಶಿಕ್ಷಣದಲ್ಲಿ ಅಳವಟ್ಟಿದೆ. ಅಲ್ಲಿಯೂ ಪ್ರಕಟಣೆಗಳು ಹೊರಬರುತ್ತಿವೆ. ಭಾರತೀಯ ಜಾನಪದ ಪರಿಷತ್ತಿನ ಸ್ಥಾಪನೆಯ ದಿಕ್ಕಿನಲ್ಲಿಯೂ ಈಗಾಗಲೇ ಪ್ರಯತ್ನಗಳು ನಡೆಯುತ್ತಿವೆ.

ಕರ್ನಾಟಕದ ವಿಶ್ವವಿದ್ಯಾನಿಲಯಗಳು ಜಾನಪದ ಕ್ಷೇತ್ರದಲ್ಲಿ ತೋರಿದ ಉತ್ಸಾಹದಂತೆಯೇ ಇತರ ಸಂಘ ಸಂಸ್ಥೆಗಳ ಚಟುವಟಿಕೆಗಳನ್ನೂ ಇಲ್ಲಿ ನಿರ್ಲಕ್ಷಿಸುವಂತಿಲ್ಲ. ಅಖಿಲ ಕರ್ನಾಟಕ ಜಾನಪದ ಸಮ್ಮೇಳನ ಪ್ರಥಮ ಬಾರಿಗೆ ತರೀಕೆರೆಯಲ್ಲಿ ನಡೆಯಿತು (1967). ಅಲ್ಲಿ ರೂಪಿತವಾದ ಕರ್ನಾಟಕ ಜಾನಪದ ಪರಿ

ಪತ್ರಿಸಲ್ಲಿ ಕರ್ನಾಟಕದ ಸುಪ್ರಸಿದ್ಧ ವಿದ್ವಾಂಸರೆಲ್ಲ ಸಂಘಟಿತರಾದರು. ಮಂಗಳೂರು (1969) ಮತ್ತು ನಾಗ ಮಂಗಲಗಳಲ್ಲಿ (1971) ಮತ್ತೆರಡು ಸಮ್ಮೇಳನಗಳು ನಡೆದುವು. ಜಾನಪದ ಪರಿಷತ್ತು ಹೊರತರುತ್ತಿರುವ 'ಜಾನಪದ' ಉತ್ಕೃಷ್ಟವಾದ ಸಂಶೋಧನಾತ್ಮಕ ಪತ್ರಿಕೆ ಎನಿಸಿದೆ.

ಜನಪದ ಕಲೆಗಳ ಪರಿವೀಕ್ಷಣೆ, ಪ್ರದರ್ಶನಗಳ ವ್ಯವಸ್ಥೆ ಮುಂತಾದುವುಗಳ ಕಡೆಯೂ ಕರ್ನಾಟಕದಲ್ಲಿ ಎರಡೂವರೆ ದಶಕಗಳಿಂದ ಆಸಕ್ತಿ ಹರಿದಿದೆ. ವಯಸ್ಕರ ಶಿಕ್ಷಣ ಸಮಿತಿ, ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ, ನಾಡಿನ ಪ್ರಮುಖ ಜನಪದ ಕಲೆಗಳನ್ನೆಲ್ಲ ಗುರುತಿಸಿ ಪ್ರದರ್ಶನಗಳನ್ನು ಏರ್ಪಡಿಸಿ ಅವನ್ನು ಜನಪ್ರಿಯಗೊಳಿಸಿವೆ. ಕನ್ನಡ ಸಾಹಿತ್ಯ ಪರಿಷತ್ತು ಪ್ರತಿ ಜಿಲ್ಲೆಯಲ್ಲಿಯೂ ಸಂಗ್ರಹಕರನ್ನು ನೇಮಿಸಿ ಸಮಗ್ರ ಜನ ಪದ ಕಲೆಗಳ ಪರಿವೀಕ್ಷಣೆಯನ್ನು ನಡೆಸುವತ್ತ ದಿಟ್ಟ ಹೆಜ್ಜೆಯನ್ನು ಇಟ್ಟಿದೆ.

ಕರ್ನಾಟಕ ಜಾನಪದ ಪರಿಷತ್ತಿನಂತೆಯೇ ಇನ್ನೂ ಅನೇಕ ಸಂಸ್ಥೆಗಳು ಜಾನಪದ ಚಟುವಟಿಕೆಗಳಲ್ಲಿ ತೊಡಗಿವೆ. ಮೈಸೂರಿನ 'ಜಾನಪದ ಒಳಗ', ಮೈಸೂರು ವಿಶ್ವವಿದ್ಯಾನಿಲಯದ ಜನಪದ ಕಲಾಕೂಟ ಮುಂತಾದ ಸಂಘಗಳು ಜಾನಪದ ಕ್ಷೇತ್ರದಲ್ಲಿ ಗಮನಾರ್ಹಕಾರ್ಯ ಮಾಡಿವೆ. ಜನಪದ ಕಲಾಕೂಟದ ಮೂಲಕ ವಿಶ್ವವಿದ್ಯಾ ನಿಲಯದ ವಿದ್ಯಾರ್ಥಿಗಳಿಗೆ, ಅಧ್ಯಾಪಕರಿಗೆ ಜನಪದ ಕಲೆಗಳ ಶಿಕ್ಷಣವನ್ನು ನೀಡಿ ಕೆಲವು ಜನಪದ ಕಲೆಗಳನ್ನು ಈಗಾಗಲೇ ಜನಪ್ರಿಯಗೊಳಿಸಲಾಗಿದೆ. ಇಂಥ ಪ್ರಯೋಗ ಭಾರತದಲ್ಲಿಯೇ ಮೊದಲು ಎನ್ನಬಹುದು.

ಬೆಂಗಳೂರಿನ ಚಿತ್ರಕಲಾಪರಿಷತ್ತು. ರಾಜ್ಯ ಸಾಹಿತ್ಯ ಅಕಾಡಮಿ, ಆಕಾಶವಾಣಿ ಕೇಂದ್ರಗಳು ಜಾನಪದ ಸಂಬಂಧವಾದ ಅನೇಕ ಚಟುವಟಿಕೆಗಳನ್ನು ನಡೆಸುತ್ತಾ ಬಂದಿವೆ. 1963ರಲ್ಲಿ ಆಕಾಶವಾಣಿ ಏರ್ಪಡಿಸಿದ ಅಖಿಲ ಕರ್ನಾಟಕ ಜನಪದ ಸಾಹಿತ್ಯಗೋಷ್ಠಿ ಒಂದು ಒಳ್ಳೆಯ ಪ್ರಯತ್ನ. ನಾಡಿನ ಗಣ್ಯ ವಿದ್ವಾಂಸರೆಲ್ಲ ಈ ಗೋಷ್ಠಿ ಯಲ್ಲಿ ಭಾಗವಹಿಸಿ ಜನಪದ ಸಾಹಿತ್ಯದ ವಿವಿಧ ಪ್ರಕಾರಗಳ ಮೇಲೆ ಪ್ರಬಂಧಗಳನ್ನು ಮಂಡಿಸಿದರು. ರಾಜ್ಯ ಸಾಹಿತ್ಯ ಅಕಾಡಮಿ ಕೋಲಾರದಲ್ಲಿ ಈ ವರ್ಷ ಎರಡು ದಿನಗಳ ಜನಪದ ಸಾಹಿತ್ಯ ಸಮ್ಮೇಳನವೊಂದನ್ನು ನಡೆಸಿ ನಾಡಿನ ಹೆಸರಾಂತ ವಿದ್ವಾಂಸರಿಂದ ಉಪನ್ಯಾಸವನ್ನು ಏರ್ಪಡಿಸಿತ್ತು. ವಿಶ್ವವಿದ್ಯಾನಿಲಯಗಳ ವಿಚಾರಗೋಷ್ಠಿ ಗಳು, ಸಾಹಿತ್ಯ ಸಮ್ಮೇಳನಗಳು, ಇತರ ಜಾನಪದ ಗೋಷ್ಠಿಗಳು ಅಪಾರ ಸಂಖ್ಯೆಯಲ್ಲಿ ಈ ದಶಕದಲ್ಲಿ ನಡೆದು ಕನ್ನಡದಲ್ಲಿ ಜಾನಪದ ಅಧ್ಯಯನ ರೂಪುಗೊಳ್ಳಲು, ಜಾನಪದ ವಿದ್ವತ್ತು ಬೆಳೆಯಲು ಪ್ರೇರಕವಾಗಿವೆ. ಜಾನಪದದ ಎಲ್ಲ ಪ್ರಕಾರಗಳನ್ನೂ ದೃಷ್ಟಿಯಲ್ಲಿಟ್ಟುಕೊಂಡು ನಾಡಿನಾದ್ಯಂತ ವಿದ್ವಾಂಸರು ಅತ್ಯಂತ ಶಾಸ್ತ್ರೀಯವಾಗಿ ಜಾನ ಪದ ಸಂಗ್ರಹವನ್ನು ನಡೆಸಿದ್ದಾರೆ, ಪ್ರತಿವರ್ಷವೂ ಕೃತಿಗಳು ಪ್ರಕಟವಾಗುತ್ತಿವೆ. ಸಂಗ್ರಹಗಳ ಜೊತೆಗೆ ವಿಚಾರ ವಿಮರ್ಶೆ, ಸಂಶೋಧನೆ, ವ್ಯಾಖ್ಯಾನಗಳಿಗೆ ಸಂಬಂಧಿಸಿದ ಕೃತಿಗಳೂ ಬೆಳಕು ಕಾಣುತ್ತಿವೆ. ಆ ಪ್ರಕಟಣೆಗಳನ್ನು ಈ ಕೆಳಕಂಡಂತೆ ವರ್ಗೀಕರಿಸಿಕೊಳ್ಳಬಹುದು :

1. ಜನಪದ ಗದ್ಯಕಥನಗಳು
2. ಜನಪದ ಗೀತೆ, ಲಾವಣಿ, ಖಂಡಕಾವ್ಯ, ಕಾವ್ಯ.
3. ಜನಪದ ಕಲೆಗಳು–ಜನಪದ ನೃತ್ಯ, ನಾಟಕ.
4. ಜನಪದ ನಂಬಿಕೆಗಳು, ಸಂಪ್ರದಾಯಗಳು.
5. ಗಾದೆಗಳು.
6. ಒಗಟುಗಳು.
7. ಒಡಪುಗಳು.
8. ಶಿಶುಪ್ರಾಸಗಳು.

9. ಪಡೆನುಡಿಗಳು, ನುಡಿಗಟ್ಟುಗಳು.

10. ಜಾನಪದ ಸಂಶೋಧನೆ, ವಿಮರ್ಶೆ, ವ್ಯಾಖ್ಯಾನಗಳು.

ಈ ದಶಕದ ಮಹತ್ತರವಾದ ಸಾಧನೆಯೆಂದರೆ ಪೂರ್ಣವಾಗಿ ನಿರ್ಲಕ್ಷಿತವಾಗಿದ್ದ ಜನಪದ ಗದ್ಯಕಥನಗಳ ಕಡೆ ಸಂಗ್ರಹಕರು ದೃಷ್ಟಿಯನ್ನು ಹರಿಸಿದುದು. ಜನಪದ ಕಥೆಗಳ ದೊಡ್ಡ ಭಂಡಾರವೇ ಕರ್ನಾಟಕದಲ್ಲಿ ಈಗ ಸಂಶೋಧಿತವಾಗಿದ್ದು ಎಲ್ಲ ಪ್ರಕಾರದ ಕಥೆಗಳೂ ಗುರುತಿಸಲ್ಪಟ್ಟಿವೆ. ಅತಿಮಾನುಷಕಥೆಗಳು, ರಮ್ಯಕಥೆಗಳು, ಅದ್ಭುತ ಕಥೆಗಳು, ವಾಸ್ತವಿಕಥೆಗಳು. ಬುದ್ಧಿವಂತಿಕೆ ಕಥೆಗಳು, ಹಾಸ್ಯಕಥೆಗಳು, ಪ್ರಾಣಿಕಥೆಗಳು, ವಿವರಣಾತ್ಮಕ ಕಥೆಗಳು, ಸಂಚಿತಕಥೆಗಳು, ಸೂತ್ರ ಕಥೆಗಳು–ಹೀಗೆ ಅಪಾರ ವೈವಿಧ್ಯದ ಕಥೆಗಳು ಲಭ್ಯವಾಗಿವೆ.

ವಿಶ್ವದ ಜನಪದ ಕಥೆಗಳನ್ನು ಕನ್ನಡಕ್ಕೆ ಭಾಷಾಂತರಿಸುವುದು ತೌಲನಿಕ ಅಧ್ಯಯನ ದೃಷ್ಟಿಯಿಂದ ಮುಖ್ಯವಾದುದು. ಶ್ರೀ ಹ. ಕ ರಾಜೇಗೌಡ ಮುಂತಾದವರು ಈ ಕಾರ್ಯವನ್ನು ಅತ್ಯಂತ ಸಮರ್ಥನೀಯವಾಗಿ ಮಾಡುತ್ತಿದ್ದಾರೆ.

ಜನಪದ ಗೀತೆಗಳ ಕ್ಷೇತ್ರದಲ್ಲಿ ಮತ್ತಷ್ಟು ಸಂಕಲನಗಳು ಈ ದಶಕದಲ್ಲಿಯೂ ಹೊರಬಂದಿವೆ. ಸಂಗ್ರಹವಾಗದೆ ಉಳಿದಿದ್ದ ಭಾಗಗಳು ಈಚಿನ ಸಂಕಲನಗಳಲ್ಲಿ ಪೂರ್ಣಗೊಂಡು ಪ್ರಕಟಗೊಂಡಿವೆ. ಹಾಡುಗಳನ್ನು ಧ್ವನಿಮುದ್ರಣಮಾಡಿ ಅವುಗಳ ಆಧಾರದ ಮೇಲೆ ಸಂಗೀತ ದೃಷ್ಟಿಯಿಂದ ಸ್ವರ ಪ್ರಸ್ತಾರ ಹಾಕಿ ಪ್ರಕಟಿಸುವ ಪ್ರಯತ್ನವೂ ನಡೆದಿದೆ. ಹಿಂದಿನ ಸಂಕಲನಗಳಲ್ಲಿ ಸಾಹಿತ್ಯಿಕ ದೃಷ್ಟಿಯ ಆಯ್ಕೆ ಕಂಡುಬಂದರೆ ಈಗಿನ ಸಂಕಲನಗಳಲ್ಲಿ ಜಾನಪದದ ವಿವಿಧ ದೃಷ್ಟಿಯ ಅಧ್ಯಯನಕ್ಕೆ ಪೂರಕವಾಗುವಂತೆ, ದೊರೆತ ಸಾಹಿತ್ಯವನ್ನೆಲ್ಲ ಸರಿಯಾಗಿ ಸಂಪಾದಿಸಿ ಪ್ರಕಟಿಸುವ ಪ್ರಯತ್ನವನ್ನು ಮಾಡಲಾಗಿದೆ.

ಜನಪದ ಲಾವಣಿಗಳ ಕ್ಷೇತ್ರದಲ್ಲಿ ಈಗ ಕರ್ನಾಟಕದ ಎಲ್ಲ ಕಡೆಯ ಸಾಹಿತ್ಯವೂ ಲಭ್ಯವಾಗಿದೆ. ಪೌರಾಣಿಕ, ಐತಿಹಾಸಿಕ, ವಾಸ್ತವಿಕ, ರಮ್ಯ, ಅದ್ಭುತ, ಹಾಸ್ಯ ಮೊದಲಾದ ಎಲ್ಲ ಪ್ರಕಾರದ ಹಾಡ್ಗತೆಗಳೂ ಸಾಕಷ್ಟು ಸಂಖ್ಯೆಯಲ್ಲಿ ಗುರುತಿಸಲ್ಪಟ್ಟಿವೆ. ಒಂದೊಂದು ಹಾಡ್ಗತೆಯ ವಿಭಿನ್ನ ಪಾಠಗಳೂ ದೊರೆತಿವೆ. ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕಗಳಲ್ಲಿ ಬೇರೆ ಬೇರೆ ಸಂಪ್ರದಾಯದ ಹಾಡ್ಗತೆಗಳು ಬೆಳಕಿಗೆ ಬಂದಿವೆ. ಜಿಲ್ಲಾವಾರು ಸಂಕಲನಗಳೂ ಪ್ರಕಟವಾಗಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ವಿವಿಧ ಜನಾಂಗಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಅನೇಕ ಹಾಡ್ಗತೆಗಳ ಸಂಕಲನಗಳನ್ನು ಹೊರತರಲಾಗಿದೆ. ಕಲ್ಗಿ-ತುರಾ ಸಂಪ್ರದಾಯ, ಗೀಗೀ ಸಂಪ್ರದಾಯ, ಭೂತೇರ ಸಂಪ್ರದಾಯ, ಗೊಂದಲಿಗರ ಸಂಪ್ರದಾಯ ಮುಂತಾದ ವಿಶಿಷ್ಟ ಸಂಪ್ರದಾಯುಗಳ ಅಧ್ಯಯನ ನಡೆದಿದೆ. ಹಾಡುಗೊಲ್ಲರ ಹಾಡ್ಗತೆಗಳನ್ನು ಸಮಗ್ರವಾಗಿ ಸಂಗ್ರಹಿಸುವ ಪ್ರಯತ್ನವೂ ನಡೆದಿದೆ. ಸಮಗ್ರ ವರ್ಗೀಕರಣ ಈಗ ಸುಲಭ ಸಾಧ್ಯವಾಗುವ ಮಟ್ಟಿಗೆ ನೂರಾರು ಸಂಖ್ಯೆಯಲ್ಲಿ ಹಾಡ್ಗತೆಗಳು ಈಗ ಕನ್ನಡದಲ್ಲಿ ಲಭ್ಯವಾಗುತ್ತವೆ.

ಜನಪದ ಕಾವ್ಯಗಳ ಕ್ಷೇತ್ರದಲ್ಲಿ ಕರ್ನಾಟಕದಲ್ಲಿ ಹನ್ನೆರಡಕ್ಕೂ ಹೆಚ್ಚಾಗಿ ವೃತ್ತಿಗಾಯಕ ಸಂಪ್ರದಾಯಗಳು ಗುರುತಿಸಲ್ಪಟ್ಟು ಆ ಸಂಪ್ರದಾಯಗಳಲ್ಲಿ ದೊರೆಯುವ ಸಮಗ್ರಕಾವ್ಯಗಳನ್ನು ಸಂಗ್ರಹಿಸುವ ಪ್ರಯತ್ನಗಳು ನಡೆದಿವೆ. 'ಮಲೆಯ ಮಾದೇಶ್ವರ ಕಾವ್ಯ' 'ಮಂಟೇಸ್ವಾಮಿ ಕಾವ್ಯ' ಮುಂತಾದ ಸುದೀರ್ಘ ಕಾವ್ಯಗಳ ಜೊತೆಗೆ, 'ಪಿರಿಯಾಪಟ್ಟಣದ ಕಾಳಗ' ಮುಂತಾದ ವೀರ ಕಾವ್ಯಗಳೂ ಕನ್ನಡದಲ್ಲಿ ಪ್ರಕಟವಾಗಿವೆ. ಹೆಂಗಸರು ಹಾಡುವ 'ಕೆರೆ ಹೊನ್ನಮ್ಮ' 'ಗುಣಸಾಗರಿ' 'ಕಾಳಿಂಗರಾಯ' ಇಂಥ ಕಾವ್ಯಗಳು ಸಾಕಷ್ಟು ಸಂಗ್ರಹಗೊಂಡು ಪ್ರಕಟವಾಗಿವೆ.

ಜನಪದ ನಂಬಿಕೆ, ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ಸಾಕಷ್ಟು ಅಧ್ಯಯನಗಳು ನಡೆಯುತ್ತಿವೆ. ಸಂಪ್ರದಾಯಗಳಿಗೆ ಸಂಬಂಧಿಸಿದಂತೆ ಮೂರು ಸಂಕಲನಗಳು ಹೊರಬಂದಿವೆ. ಗಾದೆ, ಒಗಟುಗಳ ಕ್ಷೇತ್ರದಲ್ಲಿ ಈ ದಶಕದಲ್ಲಿ ನಡೆದ ಕಾರ್ಯ ಗಮನಾರ್ಹವಾದುದು. ಗ್ರಂಥಸ್ಥ ಮೂಲದಲ್ಲಿ, ಮೌಖಿಕ ಮೂಲದಲ್ಲಿ ಗಾದೆಗಳ ಸಂಗ್ರಹವನ್ನು ನಡೆಸಿ ಅನೇಕ ಉತ್ಸಾಹಿಗಳು ಸಂಕಲನಗಳನ್ನು ಪ್ರಕಟಿಸಿದ್ದಾರೆ. 'ಗ್ರಂಥಸ್ಥ ಗಾದೆಗಳು, ಒಂದು ಬೃಹತ್

ಸಂಕಲನವಾದರೆ ಅನೇಕ ಕಿರುಸಂಕಲನಗಳೂ ಹೊರಬಂದಿವೆ. ಒಗಟುಗಳ ಸಂಕಲನ ಈ ದಶಕದಲ್ಲಿ ಸಾಕಷ್ಟು ಪ್ರಕಟವಾಗಿವೆ.

ಮೇಲಿನ ಪ್ರಸಿದ್ಧ ಜಾನಪದ ಪ್ರಕಾರಗಳ ಜೊತೆಗೆ ಅನೇಕ ಬಗೆಯ ಹೊಸಪ್ರಕಾರಗಳನ್ನೂ ಗುರುತಿಸಿ ಕೆಲವರು ಸಂಕಲನಗಳನ್ನು ತರುತ್ತಿದ್ದಾರೆ. 'ಒಡಪುಗಳು' ಇಂಥ ಒಂದು ಪ್ರಕಾರ. ಗಂಡನ ಅಥವಾ ಹೆಂಡತಿಯ ಹೆಸರನ್ನು ನೇರವಾಗಿ ಹೇಳದೆ, ಬಳಸುಮಾತಿನಲ್ಲೋ, ಕಿರುಪದ್ಯದಲ್ಲೋ, ಸೂತ್ರಪ್ರಾಯವಾಕ್ಯಗಳಲ್ಲೋ ಸೇರಿಸಿ ಹೇಳಲಾಗುತ್ತವೆ. ಇಂಥ ರಚನೆಗಳನ್ನು ಒಡಪುಗಳು ಎಂದು ಕರೆಯಲಾಗಿದೆ. ಇಂಥ ಎರಡು ಸಂಕಲನಗಳು ಕನ್ನಡದಲ್ಲಿ ಪ್ರಕಟಗೊಂಡಿವೆ. 'ಶಿಶುಪ್ರಾಸಗಳು' ಮತ್ತೊಂದು ಗಮನಾರ್ಹವಾದ ಪ್ರಕಾರ. ಕನ್ನಡದಲ್ಲಿ ಅಪಾರಸಂಖ್ಯೆಯ ಶಿಶುಪ್ರಾಸಗಳು ಕಂಡುಬರುತ್ತವೆ. ಈಗಾಗಲೇ ಕೆಲವು ಸಂಕಲನಗಳು ಈ ಕ್ಷೇತ್ರದಲ್ಲಿಯೂ ಪ್ರಕಟಗೊಂಡಿವೆ. ಪಡೆನುಡಿಗಳು, ನುಡಿಗಟ್ಟುಗಳು ಜನಪದ ಭಾಷೆಯ ಅಧ್ಯಯನದಲ್ಲಿ ಮಹತ್ವದ ಪಾತ್ರವಹಿಸುತ್ತವೆ. ಈ ನಿಟ್ಟಿನಲ್ಲಿಯೂ ಈಗ ಅನೇಕರು ಕೆಲಸಮಾಡುತ್ತಿದ್ದು, 'ಕನ್ನಡ ಪಡೆನುಡಿಗಳ ಕೋಶ' ವೊಂದು ಈಗಾಗಲೇ ಬೆಳಕು ಕಂಡಿದೆ.

ಜಾನಪದ ಸಂಗ್ರಹದಂತೆಯೇ, ಅದರ ಅಧ್ಯಯನವೂ ಮುಖ್ಯವಾದುದು. ಕನ್ನಡದಲ್ಲಿ ಪ್ರಕಟವಾಗಿರುವ ಹೇರಳ ಸಂಕಲನಗಳ ಹಿನ್ನೆಲೆಯಲ್ಲಿ ಜಾನಪದ ಅಧ್ಯಯನವೂ ನಡೆಯುತ್ತಿದೆ. ಸಮ್ಮೇಳನಗಳಲ್ಲಿ, ವಿಚಾರಗೋಷ್ಠಿಗಳಲ್ಲಿ ವಿದ್ವಾಂಸರು ಮಂಡಿಸಿದ ಪ್ರಬಂಧಗಳು ಕೃತಿರೂಪದಲ್ಲಿ ಪ್ರಕಟವಾಗುತ್ತಿವೆ, ನೆನಪಿನ ಸಂಚಿಕೆಗಳು ಗ್ರಂಥಗಳೂ ಇಲ್ಲಿ ಹೆಸರಿಸಬಹುದಾದ ಕೃತಿಗಳಾಗಿವೆ. ಕರ್ನಾಟಕದಲ್ಲಿ ಜಾನಪದ ವಿಷಯಗಳನ್ನು ಆರಿಸಿಕೊಂಡು ಈಗಾಗಲೇ ಅನೇಕರು ಪಿಎಚ್. ಡಿ. ಪದವಿಗಾಗಿ ಕೆಲಸಮಾಡಿದ್ದಾರೆ, ಮಾಡುತ್ತಿದ್ದಾರೆ. ಡಾಕ್ಟರೇಟ್ ಪದವಿಗಳನ್ನು ಪಡೆದವರ ಪಟ್ಟಿಯೊಂದನ್ನು ಇಲ್ಲಿ ನೋಡಬಹುದು :

1. ಡಾ. ಬಿ. ಎಸ್. ಗದ್ದಿಗೀಮಠ : ಕನ್ನಡ ಜಾನಪದ ಗೀತೆಗಳು
2. ಡಾ. ಜೀ. ಶಂ. ಪರಮಶಿವಯ್ಯ : ದಕ್ಷಿಣ ಕರ್ನಾಟಕ ಜನಪದಕಾವ್ಯಪ್ರಕಾರಗಳು
3. ಡಾ. ಡಿ. ಕೆ. ರಾಜೇಂದ್ರ : ದಕ್ಷಿಣ ಕರ್ನಾಟಕದ ಜನಪದ ರಂಗಭೂಮಿ
4. ಡಾ. ಚಂದ್ರಶೇಖರ ಕಂಬಾರ : ಕರ್ನಾಟಕ ಜನಪದ ರಂಗಭೂಮಿಯ ಮೂಲ ಮತ್ತು ಬೆಳವಣಿಗೆ
5. ಡಾ. ಮಾರ್ತಾ ಆಸ್ಟಿನ್ : ಕರ್ನಾಟಕ ಯಕ್ಷಗಾನ ಕಲೆ
6. ಡಾ. ಎಲ್. ಜಿ ಸುಮಿತ್ರ : ಕನ್ನಡ ಜನಪದ ಗೀತೆಗಳ ಸಂಗೀತ
7. ಡಾ. ನಂ. ತಪಸ್ವೀಕುಮಾರ್ : ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ

ಯಕ್ಷಗಾನ ಬಯಲಾಟ ಮತ್ತು ಬೊಂಬೆಯಾಟಗಳಿಗೆ ಸಂಬಂಧಪಟ್ಟಂತೆಯೂ ಅನೇಕ ವಿದ್ವತ್ಪೂರ್ಣ ಕೃತಿಗಳು, ಸಂಪಾದಿತಕೃತಿಗಳೂ ಪ್ರಕಟವಾಗಿವೆ. ಡಾ. ಶಿವರಾಮ ಕಾರಂತ, ಕುಕ್ಕಿಲ ಕೃಷ್ಣಭಟ್ಟ ಮುಂತಾದವರು ಈ ಕ್ಷೇತ್ರದಲ್ಲಿ ವಿಶೇಷವಾಗಿ ಕೆಲಸಮಾಡಿದ್ದಾರೆ. ಭಾರತದಲ್ಲಿ ಕರ್ನಾಟಕ ಜಾನಪದ ಅಧ್ಯಯನದ ದೃಷ್ಟಿಯಿಂದ ಒಂದು ಗಣನೀಯ ಪಾತ್ರವನ್ನು ವಹಿಸಿದೆ. ಇನ್ನೊಂದು ದಶಕದಲ್ಲಿ ಇಲ್ಲಿನ ಸಂಗ್ರಹ, ಅಧ್ಯಯನಗಳು ಒಂದು ಘಟ್ಟವನ್ನು ಮುಟ್ಟುತ್ತವೆ. ಹೊಸ ಸಾಹಿತ್ಯದ ಜೊತೆಗೆ, ಹೊಸ ಪ್ರಕಾರಗಳೂ ಬೆಳಕಿಗೆ ಬರುತ್ತವೆ. ನಾನಾ ಉದ್ದೇಶಗಳಿಗಾಗಿ ಜಾನಪದ ಸಾಮಗ್ರಿಯನ್ನು ಬಳಸಿಕೊಂಡು ಸಂಶೋಧನೆಗಳನ್ನು ನಡೆಸುವ ಕಾರ್ಯ ತೀವ್ರಗೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಈಗಾಗಲೇ ಕರ್ನಾಟಕ ದಿಟ್ಟಹೆಜ್ಜೆಯನ್ನು ಇಟ್ಟಿರುವುದು ಅಭಿನಂದನೀಯ.

ಸಿಂಪಿ ಲಿಂಗಣ್ಣ

ಜಾನಪದ ಕಲೆಗಳ ಪರಮಪ್ರಯೋಜನ

ಯಾವ ಸಾಧನೆಯು ವಿಶ್ವಕವಿ ರವೀಂದ್ರನಾಥರು ಹೇಳಿದಂತೆ, 'ಒಂದೇ ಶಿರ। ಒಂದೇ ಸರ। ಭಾರತನರ। ನಾರಾಯಣ' ಎಂಬ ತಿಳುವಳಿಕೆಯನ್ನು ಅಳವಡಿಸುವದೋ, ಯಾವ ಸಾಧನೆಯು ಶ್ರೀಹೊಯಿಸಳರು ಉಸುರಿದಂತೆ, 'ಎಲ್ಲರು ಒಂದೇ। ನಾವೆಲ್ಲರು ಒಂದೇ' ಎಂಬ ಭಾವನೆಯನ್ನು ಅರಳಿಸುವದೋ, ಯಾವ ಸಾಧನೆಯು ಮಧುರ ಚೆನ್ನರು ನುಡಿದಂತೆ, 'ನಾವು ಒಂದೇ ದೇಟಿನ ಕಾಲುಗಳು। ನಾವು ದೇವನ ದೇಟಿನ ಮಾಪ್ಪಗಳು' ಎಂಬ ಅರಿವನ್ನು ಮೂಡಿಸುವದೋ ಆ ಸಾಧನೆಯನ್ನು ಋಷಿ-ಮುನಿಗಳೇ ಮಾಡಬೇಕೆಂದಿಲ್ಲ. ಶರಣ ಸಜ್ಜನರಿಗಾಗಿ ಅದನ್ನು ಕಾಯ್ದಿರಿಸಿಲ್ಲ. ಮಹಾತ್ಮ–ಮಹನೀಯರಿಗಾಗಿ ಅದನ್ನು ಮೀಸಲಾಗಿರಿಸಿಲ್ಲ. ಅದು ಸರ್ಕಾರದ ಕಾಯ್ದೆ ಕಟ್ಟಳೆಗಳಿಗೆ ಸಿಲುಕುವ ಸಿದ್ಧಿಯಲ್ಲ; ಸಮಾಜದ ಅತ್ಯುನ್ನತ ನಿಬಂಧನೆಗಳಿಗೆ ಎಟಕುವ ಸಿದ್ಧಿಯಲ್ಲ. ಅದು ಸಂಸಾರದ ಜಂಜಡಕ್ಕೆ ಜಬ್ಬಿಹೋದ ಹಳೆ ಮುದುಕರು ಅನುಸರಿಸುವ ನೀತಿಸಂಹಿತೆಗೆ ಬಗೆ ಹರಿಯುವ ಸಂಗತಿಯಲ್ಲ. ಅದು ಪುರುಷರಿಗಾಗಿ ಮಾತ್ರ ಕಾಯ್ದಿರಿಸಿದ ಸಂಪ್ರದಾಯವಾಗಿರದೆ, ಬಾಲ ಯುವಕರೆನ್ನದೆ, ಕೊಡಗೂಸು ಯುವತಿಯರೆನ್ನದೆ ಸರ್ವರಿಗೂ ತೆರೆದಿಟ್ಟ ಮಾರ್ಗವಾಗಿದೆ. ಅಂಥ ಸರ್ವತೋಮುಖವಾದ ಸ್ವಾಭಾವಿಕ ಸಹಜ ಧರ್ಮದ ಪಥ ಯಾವುದು? ಜನಾಂಗದ ಜೀವಾಳವೆನಿಸಿದ ಜನಪದವು ಬಾಳಿನ ಒಂದಂಗವಾಗಿಸಿಕೊಂಡು ಅನುಸರಿಸಿದ ಕಲಾರಾಧನೆಯೇ ಆ ರಾಜಪಂಥ. ಅದನ್ನು ಸಾಧಿಸಿಕೊಳ್ಳುವುದೇ ಜನಪದ ಜೀವನಕ್ಕೆ ಪರಮಪ್ರಯೋಜನ.

ಸ್ವಾಭಾವಿಕ ಸಂಚಲನೆ : ಜನಪದವೆಂದರೆ ಮಣ್ಣುಮುದ್ದೆಯಂತೆ ತೋರುವ ಈ ಪೃಥ್ವಿಯ ಪ್ರಥಮ ವರ್ಗದ ಸಂತಾನ. ಪೃಥ್ವಿಗೆ ಸ್ವಾಭಾವಿಕವಾದ ಎರಡು ಸಂಚಲನೆಗಳಿವೆ. ತನ್ನ ಮೈಸುತ್ತು ತಿರುಗುವುದು ಒಂದು; ಮಹಾ ಪ್ರಕಾಶವನ್ನು ಬಲಗೊಳ್ಳುವುದು ಇನ್ನೊಂದು. ಒಂದರಿಂದ ಹಗಲು ರಾತ್ರಿಗಳ ಸೊಗಸು. ಇನ್ನೊಂದರಿಂದ ಋತು ಮಾಸಗಳ ಸೊಬಗು. ವೈಯಕ್ತಿಕ ಸಾಧನೆಯಲ್ಲಿ ಜನಪದವು ತನ್ನ ಮೈಸುತ್ತು ತಿರುಗುತ್ತ –

ಕಳ್ಳ್ಯಾ ಮಿಳ್ಳ್ಯಾ ಚಿಪಾಟಿ ಮಿಳ್ಳ್ಯಾ ।
ಬಸರೀ ಗಿಡದಾಗ ಬಸಪ್ಪ ಕೂತಾನ ॥
ಮಳಿಹೊಡಿಲೋ ಮಳಿಹೊಡಿಲೋ ।
ಮಳಿ ಬಾರೋ ಮಾರಯ್ಯ । ಗುಡಿಕಟ್ಸ್ಯೋ ಸಂಗಯ್ಯ ॥

ಎಂದು ಹಾಡುತ್ತದೆ. ಅದರಂತೆ ಸಾಮೂಹಿಕವಾಗಿ ಪ್ರಕಾಶವನ್ನು ಬಲಗೊಳ್ಳುವಾಗ

ನಾವು ಮೂರು ಮಂದಿ ವಾರಿಕಾರರಿರುವೆವು
ಸಾವಕಾಶ ಭೂಮಿಯನ್ನು ಸುತ್ತುತಿರುವೆವು

ಎಂಬ ಪಲ್ಲವಿಯನ್ನು ಅನುಸರಿಸಿ, ಆರು ಋತುಗಳ ಮೂರುಕಾಲಗಳನ್ನು ಒಣ್ಣಿಸುವರು. ಈ ಸುತ್ತು

ವರಿಕೆಗಳು ನೈಸರ್ಗಿಕವಾಗಿವೆ. ಹೃದಯದಲ್ಲಿ ಭಕ್ತಿಯನ್ನು ಕೇಂದ್ರಗೊಳಿಸಿಕೊಂಡು ಬಾಯಲ್ಲಿ ಹಾಡು, ಕೈಯಲ್ಲಿ ತಾಳ, ಕಾಲಲ್ಲಿ ಕುಣಿತ, ದನಿಯಲ್ಲಿ ರಾಗ ಇವು ಮೂಡಿಬರುತ್ತವೆ. ಹಾಡು ಹಿಗ್ಗಿನ ಕುರುಹಾದರೆ, ಕುಣಿತ ಉಲ್ಲಾಸದ ಲಕ್ಷಣ. ಆನಂದದೊಳಗಿಂದ ಬಂದವರು ಆನಂದದೊಳಕ್ಕೆ ಹೋಗುವವರೆಗಿನ ನೂರುವರ್ಷ ಆಯುಷ್ಯದ ಕಾಲಾವಧಿಯಲ್ಲಿ ಏಕೆ ಬೇಡ ಆನಂದ ? 'ಮೇಲೆ ನಲಿವ ನೀಲಗಗನ ಗೋಪುರಾಗಿ, ಕಡಲು-ತೊರೆ-ತಟಾಕ ಪಂಚ ಪಾತ್ರೆಯಾಗಿ, ರವಿಚಂದ್ರರೇ ನಂದಾದೀಪವಾಗಿರುವ ಜಗದ ಗುಡಿಯಲ್ಲಿ ಅಖಂಡವಾದ ಪೂಜಾಸಂಭ್ರಮ ನಡೆದಿದೆ.' ಗಾಳಿ ಕೊಳಲೂದುತ್ತಿರುವಾಗ, ತರಗೆಲೆ ತಾಳಬಾರಿಸುತ್ತಿರುವಾಗ, ಕೊಳದಲೆಗಳು ಚಪ್ಪಳಿಕ್ಕುತ್ತಿರುವಾಗ, ಜಲ ಪಾತಗಳು ಧೀಂಕಿಟ್ಟು ಕುಣಿಯುತ್ತಿರುವಾಗ, ಹಕ್ಕಿಗಳು ಚಿಲಿಪಿಲಿಯೆಂದು ಹಾಡುತ್ತಿರುವಾಗ ಮನುಷ್ಯನಾದವನು ತೆಪ್ಪಗೆ ಕುಳಿತುಕೊಳ್ಳಬಹುದೇ ? ಅದನ್ನು ಕಂಡು ಶ್ರೀ ವಿವೇಕಾನಂದ ಸ್ವಾಮಿಗಳು—

> ಥಾತಯ್ಯ ಥಾತಯ್ಯ
> ಎನುತ ಶಿವಕುಣಿದ
> ಎನುತ ಶಿವಕುಣಿದ ॥

ಎಂದು ನಿಬ್ಬೆರಗಿನಿಂದ ಹಾಡಿದರು. ಅಂಬಿಕಾತನಯರಂಥ ಕವಿಗಳು—

> ಕುಣಿತಕ್ಕೆ ಇತಿಯಿಲ್ಲ
> ಕುಣಿತಕ್ಕೆ ಮಿತಿಯಿಲ್ಲ
> ಕುಣಿತಿಲ್ದ ಜಗಯಿಲ್ಲ

ಎಂಬುದನ್ನು ಮನಗಂಡು "ಕುಣಿಯೋಣ ಬಾರ। ಕುಣಿಯೋಣ ಬಾ" ಎಂದು ಜೀವನದ ಜೊತೆ ಗಾರ್ತಿಯನ್ನು ಆಹ್ವಾನಿಸಿ ಬಿಡದೆ "ಚಿಗರ್‍ಯಾಗಿ, ತಿಗರ್‍ಯಾಗಿ, ನಿದ್ದೀಯ ಬಗರ್‍ಯಾಗಿ, ಗಾಳಿಗು ಹಗುರಾಗಿ ಕುಣಿ ಯೋಣ" ಎಂಬ ಸಂಕಲ್ಪವನ್ನು ದೃಢಪಡಿಸುತ್ತಾರೆ.

ಹಾಡುತ್ತಲೇ ಮಾಡುವ ಹವ್ಯಾಸ ಜನಪದಕ್ಕೆ ಹುಟ್ಟಿನಿಂದಲೇ ಸಂಗಡಿಸ ಬದುಕಾಗಿದೆ. ದುಡಿಮೆಯ ಶ್ರಮವನ್ನೂ ಬೇಸರವನ್ನೂ ಲೆಕ್ಕಿಸದೆ ಹಾಡುವವನು, ವಿಶ್ರಾಂತಿಯಲ್ಲಿ ಹೊತ್ತುಗಳೆಯುವ ಹೊಸ ಹಾದಿಯನ್ನು ಎಲ್ಲಿ ಹುಡುಕಿಯಾನು? ಜನಪದಕ್ಕೆ ವಿಶ್ರಾಂತಿಯ ಕಾಲವೆಂದರೆ ಹಬ್ಬ-ಹುಣ್ಣಿಮೆ, ಉತ್ಸವ-ಜಾತ್ರೆ, ಮಂಗಲ-ಮಹೋತ್ಸವಗಳ ಸಂದರ್ಭ. ಅವೆಲ್ಲ ದೇವನಿಗೆ ಭಯ-ಭಕ್ತಿಯಿಂದ ತೋರ್ಪಡಿಸುವ ಕೃತಜ್ಞತಾ ಭಾವದ ಆಚರಣೆ ಗಳೇ ಆಗಿವೆ ಮತ್ತು ಅವು ದೇವನನ್ನು ತೃಪ್ತಿಗೊಳಿಸಿ, ಒಲಿಸಿಕೊಳ್ಳುವ ಉಪಾಯಗಳೇ ಆಗಿವೆ. ರೊಟ್ಟಿ-ನುಚ್ಚುಗಳನ್ನು ತಿನ್ನುವ ದೈನಿಕಜೀವನದಲ್ಲಿ ಹಾಡು ಹೊಮ್ಮಿಸುವವನು, ಹುಗ್ಗಿಹೋಳಿಗೆಗಳನ್ನು ಉಣ್ಣುವ ಹಬ್ಬದ ದಿನದಲ್ಲಿ ಹಾಡಿನೊಂದಿಗೆ ಕುಣಿಯದೆ ಬಿಟ್ಟಾನೇ ?

ನಗುವವರನ್ನು ಕಂಡು ನಗೆಗೆ ಪಕ್ಕಾಗುವಂತೆ, ಆಕಳಿಸುವವರನ್ನು ಕಂಡು ತೂಕಡಿಕೆಗೆ ಈಡಾಗುವಂತೆ, ಹಾಡಿ ಕುಣಿಯುವವರನ್ನು ಕಂಡಾಗ ಯಾರ ಉತ್ಸಾಹ ನೆಲಹಿಡಿಯುವದು ? ಇಳಿವಯಸ್ಸಿನವರು ಮಣಿಮಣಿದು ಭಜನೆ ಮಾಡಿದರೆ, ಯುವಕರು ಕುಣಿಕುಣಿದು ಹಾಡಲಾರರೇ ? ಬಾಲಕರು ನೆಗೆದಾಡಿ ಕೇಕೆ ಹಾಕಲಾರರೇ ? ಇನ್ನುಳಿದ ಅಕ್ಕ-ತಂಗಿಯರು ನುಣ್ಣಗಿನ ಸಣ್ಣಗಿನ ಹೆಣ್ಣುದನಿಯಲ್ಲಿ ಹಾಡಿ, ಕೋಲು ಹಾಕಿ, ಇಳಿಗೂದಲನ್ನು ಗಾಳಿಯಲ್ಲಿ ಈಸಾಡಿಸಲಾರರೇ ? "ಹುಸಿನಗುತ ಬಂದೇವ ! ನಸು ನಗುತ ಬಾಳೋಣ। ತುಸು ನಗುತ ತೆರಳೋಣ" ಎಂಬ ಕವಿವಾಣಿಗೆ ಸ್ಪಷ್ಟೀಕರಣವೇ ಆಗಿದೆ ಈ ಜನಪದ ಜೀವನ.

ವಾದ್ಯಗಳದೇ ಒಂದು ವೈಖರಿ : ಹಾಡು ಕುಣಿತ, ತಾಳ ಝಣಿತ; ತಂಬೂರಿಯ ಮಿಡಿತ,ದಮಡಿಯ ಕಡತ ಇವೆಲ್ಲವೂ ಸುಪ್ತಆನಂದವನ್ನು ನವುರಾಗಿ ಅರಳಿಸಬಲ್ಲವು. ಕೊಂಬುಕಹಳೆಗಳು ಉತ್ಸಾಹವನ್ನು ಚಂಗನೆ ಕೆರಳಿಸಬಲ್ಲವು. ಅವೆಲ್ಲವುಗಳಿಗೆ ಹಿನ್ನೆಲೆಯಾಗಿರುವ ವಾದ್ಯಗಳನ್ನು ಬಿಟ್ಟರೂ, ಚರ್ಮ ವಾದ್ಯಗಳದೇ ಒಂದು

ವೈಖರಿಯಾಗಿದೆ. ಕುರುಬರ ಡೊಳ್ಳು, ವಿಲಾಸಿಗಳ ಕರಡಿ, ಮೇಳದವರ ಊಡಕ, ಜೋಗಿತಿಯರ ಚೌಡಿಕೆ ಮೊದಲಾದ ಚರ್ಮವಾದ್ಯಗಳಿಗೆ ಒಂದು ವೈಶಿಷ್ಟ್ಯವಿದೆ. ಕುರುಬರ ಡೊಳ್ಳು "ಬ್ರಹ್ಮ ದೊಡ್ಡಾಂವ" ಎಂದು ಉಗ್ಗಡಿಸಿದರೆ, ವಿಲಾಸಿಗಳ ಕರಡಿ "ಸಿಕ್ಕಲೆ ಹುಡಿಗಿ । ಸಿಕ್ಕಲೆ ಹುಡಿಗಿ" ಎಂದು ಕಟ್ಟಾಡಿಸುವದು. ಮೇಳದವರ ಊಡಕ "ಊರ ಒತ್ತಟ್ಟಿಗೆ । ಊಡಕ ಒತ್ತಟ್ಟಿಗೆ" ಎನ್ನುವ ಲೋಕೋಕ್ತಿಗೆ ಸಾಕ್ಷಿಯಾಗಿದ್ದರೂ ಪೆಟ್ಟುತಾಳ-ಹುಸಿತಾಳಗಳನ್ನು ಮೇಳವಿಸಿ ಸಮಾಂತರದಲ್ಲಿ ಉಲ್ಲಾಸವನ್ನು ಹೊಡೆದೆಬ್ಬಿಸುತ್ತದೆ. ಇನ್ನು ಚೌಡಿಕೆಯೆನ್ನುವುದು-"ದಂಡ ದೈತ್ಯರ ಹೊಡೆದು । ದುಂಡ ಚೌಡಿಕಿ ಮಾಡಿ । ಪರಶುರಾಮನ ಪಡೆದೀ । ಆನಂದಾದೇವಿ । ಪರಶುರಾಮನ ಪಡೆದೀ" ಎಂದು ಎಲ್ಲಮ್ಮನ ಆಗ್ಗಳಿಕೆಯನ್ನು ದುಮುದುಮಿಸುತ್ತದೆ.

ಕುಣಿಸುವ ಸಲುವಾಗಿಯೇ ಹುಟ್ಟಿಕೊಂಡ ತಿಲ್ಲಾಣ ಎಂಬ ಧ್ವನಿಮುದ್ರಿಕೆ ರೂಢಿಯಲ್ಲಿತ್ತೆಂದು ತಿಳಿಯುತ್ತದೆ. ಇಂದಿನ ಧೂಳಿಯಲ್ಲಿ ಅದರ ಹೆಜ್ಜೆಗಳು ಸಹ ಅಳುಕಿ ಹೋದಂತಿವೆ.

ಝೂಂತತ ಝುಣತತ್ತಾ । ಕಡಕಡ । ಝೂಂತತ ಝುಣತಾ।
ಝುಂತತ ಝುಣತಾ । ತತಾ । ಝೂಂತತ ಝುಣತಾ ॥
ಝೂನತಾ । ಕಡಕಡ ತಾ । ಜಿಗಿತಾ ।
ತೋಮ್ಲುದರಿನಲಾ .. ..

ಎಂದು ಹರಕು ಮುರಕಾಗಿ ಉದಾಹರಿಸಬಹುದು. ಅದರ ಅಣಕುನುಡಿ ಮಾತ್ರ ಕೇಳಸಿಗುತ್ತದೆ. ಅದಕ್ಕೆ ರಾತ್ರಿರಾಜನ ಕಥೆಯೇ ಸಾಕ್ಷಿ. ಆ ಕಥೆ ನನ್ನ "ಉತ್ತರ ಕರ್ನಾಟಕದ ಜಾನಪದಕಥೆಗಳು" ಎಂಬ ಪುಸ್ತಕದ 81ನೇ ಪುಟದಲ್ಲಿ ನೋಡಿಕೊಳ್ಳಬಹುದು.

ಬುಳಗೆಗಳು, ಕೊಜ್ಜೆಯರು ಗಂಡಸಾಗಿಯೂ ಸೀರೆಯುಟ್ಟು ಹೆಂಗಸಿನ ಹಾವಭಾವಗಳನ್ನು ತೋರ್ಪಡಿಸುತ್ತ, ಜೋಗಿತಿಯರ ಮೇಳದಲ್ಲಿ ಚೌಡಿಕೆಯ ವಾದ್ಯಬಾರಿಸಿ, ಎಲ್ಲಮ್ಮನ ಸೇವೆಗಾಗಿ ಜೀವನವನ್ನೇ ಬಳದುಕಟ್ಟಿ ವಿರಾಸಲಿಟ್ಟಿದ್ದಾರೆನ್ನಬಹುದು. ಹೆಣ್ಣುಲಕ್ಷಣದ ಆ ಶಾಪವೂ ಎಲ್ಲಮ್ಮನ ಸೇವೆಯಿಂದ ತೊಲಗುವದೆಂದು ಅವರು ನಂಬುತ್ತಾರೆ. ಗಂಡುಜೋಗಿಯಲ್ಲಿ ನಿಶ್ಚೇಷ್ಟಿತವಾಗಿ ಬಿದ್ದ ಪ್ರಾಣಕೇಂದ್ರವನ್ನು ಕೆಣಕಿ, ಚೌಡಿಕೆಯ ನಾದದ ಪೆಟ್ಟು ಅಥವಾ ಪೆಟ್ಟಿನ ನಾದ ಚೈತನ್ಯವನ್ನು ಜಾಗೃತಗೊಳಿಸಬಲ್ಲದೆಂದು ಬಲ್ಲವರು ಹೇಳುತ್ತಾರೆ.ಚೌಡಿಕೆವಾದ್ಯದ ನಾದ ಪೆಟ್ಟು-ಲಯಗಳನ್ನು ಆಕಲಿಸಿ, ನಾನೂ ಜೋಗಿತಿಯಾಗಿರಬಾರದಿತ್ತೇ-ಎಂದು ಸಹಜವಾಗಿ ನುಡಿದವರಿದ್ದಾರೆಂದರೆ ಆಶ್ಚರ್ಯವಲ್ಲವೇ ?

ಊಡಕದ ಗತ್ತಿಗೆ ನೆಲವೆದ್ದು ಕುಣಿದಂತಾಗುತ್ತಿದ್ದರೆ, ನೆಲದಲ್ಲಿ ಹೂಳಿದ್ದು ಎದ್ದು ಆದೇಕೆ ಕುಣಿಯಲಾರದು.

ಡೊಳ್ಳಿನ ಮೊಳಗು ಮುಗಿಲಿಗೆ ಅಪ್ಪಳಿಸಿ, ಪಡಿನುಡಿ ಕೊಡುತ್ತಿರುವಾಗ ಉತ್ಸಾಹವನ್ನು "ಮತ್ತೇತಕೆ ತಡೆ ಬಯಲಿಗೆ ಬಾ ನೀನು" ಎಂದು ಆಹ್ವಾನಿಸಿದಂತಾಗುತ್ತದೆ.

ಕರಡಿವಾದ್ಯವು ಗುಡುಗುತ್ತ ಸಾಗಿದಾಗ ಹಿಂಡುವ ದನಗಳು ತೊರೆವುಬಿಡುತ್ತಿದ್ದುದನ್ನು ಕಂಡಿದ್ದೇವೆ. ಚಡಚಣದಲ್ಲಿ ಸಿದರಾಯನೆಂಬ ಸಮರ್ಥ-ಕರಡಿವಾದಕನು, ಕರಡಿವಾದ್ಯವನ್ನು ಗುಡುಗಿಸುತ್ತ ಅಲ್ಲಿ ಹೊರಟಿದ್ದಾನೆಂದರೆ, ಇಲ್ಲಿ ಕೇರಿಮನೆಯವರ ಎಮ್ಮೆ ಎದ್ದುನಿಂತು ಅದ್ದ ಹೊತ್ತಿನಲ್ಲಿ ತೊರೆವು ಬಿಡುವದು. ಆಗ ಮನೆಯೊಡತಿ ಅಲಕ್ಷ್ಯಮಾಡದೆ ಅವಸರದಿಂದ ಎಮ್ಮೆ ಹಿಂಡಿ, ಹಾಲತಂಬಿಗೆಯನ್ನು ಹಿಡಕೊಂಡು ನಿಲ್ಲುವಳು. ಕರಡಿಮಜಲು ಅಲ್ಲಿಗೆ ಬಂದು, ಸಿದರಾಯನು ಕುಡಿಯಲು ನೀರು ಕೇಳುವಷ್ಟರಲ್ಲಿ ಆತನ ಕೈಗೆ ಹಾಲಿನ ತಂಬಿಗೆ ಇಡುವುದನ್ನೂ, ಆತನು ಆ ಹಾಲನ್ನೆಲ್ಲ ಒಂದೇ ಉಸಿರಿನಲ್ಲಿ ಕುಡಿಯುವುದನ್ನೂ ಕಂಡು ಮನೆಯವರಿಗೆಷ್ಟು ಆನಂದ ! ನೆರೆಯವರಿಗೆಷ್ಟು ಹರುಷ !!

ಸಾಮರಸ್ಯದ ಸಹಜಪಾಠ : ಜಾನಪದ ಕಲಾಪ್ರದರ್ಶನವು ಸಾಮೂಹಿಕವಾಗಿ ನಡೆಯುವುದೇ ಹೆಚ್ಚು. ಹಾಡುಗಾರಿಕೆ ಮುಖ್ಯವಿರಲಿ, ವಾದ್ಯಗಾರಿಕೆ ಮುಖ್ಯವಿರಲಿ, ಅಲ್ಲಿ ತಾಳ–ರಾಗ–ಲಯ–ಕುಣಿತಗಳು ಇರಲೇಬೇಕು. ಒಂದು ಭಜನಾಮೇಳವನ್ನು ಇಲ್ಲಿ ಉದಾಹರಿಸಬಹುದು. ಆ ಮೇಳದಲ್ಲಿ ಮುದುಕರು–ಯುವಕರು, ಬಾಲಕರು- ಬಾಲಿಕೆಯರು ಸಹ ಇರುವುದುಂಟು.ಒಬ್ಬೊಬ್ಬರ ದನಿ ಒಂದೊಂದು ವಿಧ.ಏರುದನಿ,ಚೀರುದನಿ, ದಪ್ಪದನಿ–ಸಪ್ಪದನಿ, ಸೀರುದನಿ–ಕೇರುದನಿ ಮೊದಲಾದವುಗಳೆಲ್ಲ ಒಂದೇ ಶ್ರುತಿಯಲ್ಲಿ ಹೊಂದಿಕೊಳ್ಳಬೇಕು. ತಾಳ ಹೆಜ್ಜೆ ಹುಸಿಯದಂತೆ ಒಂದುಗೂಡಬೇಕು. ಒಬ್ಬನೇ ಹಾಡಿದಂತೆ ದನಿಗಳೆಲ್ಲ ಬೆರೆತು,ಒಂದಾಗಬೇಕು. ಇದು ಅನೇಕದಲ್ಲಿ ಏಕವನ್ನು ಕಾಣುವ ಸಾಧನೆಯೆನಿಸಲಾರದೇ ? ಆ ಐಕ್ಯಸಾಧನೆಯನ್ನು ಉದ್ದೇಶಪೂರ್ವಕ ಮಾಡದಿದ್ದರೂ, ಅದರ ಪರಿಣಾಮ ಎಲ್ಲರಿಗೂ ದೊರಕೊಳ್ಳುವದು. ಭಾವೈಕ್ಯವನ್ನು ಸಾಧಿಸುವ ಪ್ರಯತ್ನ ಬಯಲಾಟಗಳಲ್ಲಿಯೂ ಕಂಡು ಬರುವದು. ಉದಾ—ಶ್ರೀಕೃಷ್ಣಪಾರಿಜಾತ ಬಯಲಾಟವು ಹಳ್ಳಿಯೊಳಗಿನ ಸರ್ವಧರ್ಮದವರಿಗೂ ಪ್ರಿಯವಾಗುವಂತೆ ಅದರ ರಚನೆಯಾಗಿದೆ. ಶೈವ–ವೈಷ್ಣವರಿಗೆ ಯಾವನಾಮವೂ ಅಡ್ಡನಿಡಿದು ಅನಿಸುವುದೇ ಇಲ್ಲ. ಸತ್ಯಭಾಮೆಯ ಮನೆಗೆ ಬಂದ ಕೊರವಂಜಿಯು (ಆ ವೇಷದ ಕೃಷ್ಣನೇ) ತನ್ನ ಮಾತಿಗೆ ಮಹತ್ವ ಒದಗಿಸಲು, ಮಾಹುರಿಯ ಎಲ್ಲಮ್ಮ, ಆಲ್ಲಿಪುರಿಯ ಜೋಗುಳಾಂಬೆ, ಸನ್ನತಿಯ ಚಂದಮ್ಮ, ತುಳಜಾಪುರದ ಅಂಬಾಭವಾನಿ, ಕೊಲ್ಲಾಪುರದ ಮಹಾಲಕ್ಷ್ಮಿ, ಎಲ್ಲರನ್ನೂ ಪ್ರಾರ್ಥಿಸುತ್ತಾಳೆ. ಸತ್ಯಭಾಮೆಯಾದರೋ ಕೃಷ್ಣನ ಮನಸ್ಸು ತಿರುಗಿಸುವ ಸಲುವಾಗಿ ಪಾರ್ವತಿಯನ್ನು ಪೂಜಿಸಿ ವರಪಡೆಯುತ್ತಾಳೆ. ಶ್ರೀಕೃಷ್ಣನನ್ನು ಕರೆತರಲು ಹೋಗುವ ದೂತಿಯಂತೂ ಫಾಲಾಕ್ಷನಿಗೆ ಗುಗ್ಗುಳ ಹೊರವುದಾಗಿ ಹರಕೆ ಹೊರುತ್ತಾಳೆ.

"ಗೋಕುಲಾಷ್ಟಮಿ" ಲಾವಣಿಯಲ್ಲಿ ಬಂದ ಪುಗಡಿಮಾಟದ ಪ್ರಸಂಗವನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬಹುದಾಗಿದೆ. ಗೋಪಿಕಾ ಸ್ತ್ರೀಯರ ಪುಗಡಿಮಾಟವು—

ತಾಳಗತ್ತ ಮಾಡಿದಂಗ । ನಗಾರಿ ನುಡಿದಂಗ ।
ದುಮುದುಮಿ ಹೊಡಿದಂಗ । ಚಿಟ್ಟಿಓಡ್ಲ ಸಿಡಿದಂಗ ।
ಸಿಡ್ಲಮಿಂಚ ಕಡಿದಂಗ । ಮುಗ್ಗಿಪಾಟ್ಲ ಹೆಣೆದಂಗ ।
ಸುದ್ದಾ ನವಿಲು ಕುಣಿದಂಗ । ತಿಪ್ಪರಲಾಗ ಹೊಡಿದಂಗ ॥

ಈ ಎಲ್ಲ ಬಗೆಗಳನ್ನು ಒಳಗೊಂಡು, ಸಾಮರಸ್ಯ ತಳೆದಿರುವುದನ್ನು ಕಾಣಬಹುದು. ಏಕವನ್ನು ಅನೇಕದಲ್ಲಿ, ಅನೇಕವನ್ನು ಏಕದಲ್ಲಿ ಮಾರ್ಪಡಿಸುವ ತೋರ್ಪಡಿಸುವ ರೀತಿಯುಳ್ಳದೆ

ಆಟದ ಬಯಲಿನಲ್ಲಿ (ಕ್ರೀಡಾರಂಗ) ಮೈಗೂಡಿಸಿಕೊಂಡ ಕೆಲವು ಮಹತ್ತಮ ಗುಣಗಳು ಯುದ್ಧರಂಗದಲ್ಲಿ ವಿಜಯಸಂಪಾದನೆಗೆ ಕಾರಣವಾಗುತ್ತವಂತೆ. ಅದರಂತೆ ಭಜನಾಮಂಡಲಿಯಲ್ಲಿ ಸಾಧಿಸಿಕೊಂಡ ಸಾಮರಸ್ಯ–ಭಾವೈಕ್ಯಾದಿ ಗುಣಗಳು ಜೀವನರಂಗದಲ್ಲಿ, ರಾಷ್ಟ್ರೀಯ ರಂಗದಲ್ಲಿ ಸಮೃದ್ಧಿಯನ್ನು ಉಂಟು ಮಾಡುವುದಕ್ಕೆ ಕಾರಣವಾಗಲಾರವೇ ? ಈ ಸಿದ್ಧಿಯನ್ನು ಸಂಪೂರ್ಣವಾಗಿ ದೊರಕಿಸಿಕೊಡಬಲ್ಲ ಶರಣರ ಶಿವಯೋಗ, ಅರವಿಂದರ ಪೂರ್ಣಯೋಗಗಳನ್ನು ಬಿಟ್ಟರೆ, ಜನಪದಕ್ಕೆ ಜಾನಪದ ಕಲಾರಾಧನೆಯೇ ಸಹಜಯೋಗ ಅಂಥ ಮಹತ್‌ಸಿದ್ಧಿಯ ಪ್ರಾಥಮಿಕ ಪಾಠವಂತೂ ಅಲ್ಲಿ ಸಿಗುವುದರಲ್ಲಿ ಸಂಶಯವೇ ಇಲ್ಲ.

ಸಾಮೂಹಿಕ ಸಾಮರಸ್ಯವು ರಾಷ್ಟ್ರಕಲ್ಯಾಣಕ್ಕೂ, ವ್ಯಕ್ತಿ ಕಲ್ಯಾಣಕ್ಕೂ ಅತ್ಯಗತ್ಯವಾದ ಸಂಗತಿ. ಇಲ್ಲಿ ಶ್ರೀಅರವಿಂದ ಆಶ್ರಮದ ಶ್ರೀಮಾತೆಯವರು ಹೇಳಿದ ಒಂದು ಮಾತನ್ನು ಅವಶ್ಯವಾಗಿ ಗಮನಿಸುವಂತಿದೆ—"ಅಸಾಮರಸ್ಯವೇ ದೈಹಿಕ–ಮಾನಸಿಕ ಸಕಲ ಅಸ್ವಾಸ್ಥ್ಯಗಳಿಗೆ ಮೂಲಕಾರಣ. ಅದು ವ್ಯಕ್ತಿಯದಿರಬಹುದು, ದೇಶದ್ದಿರಬಹುದು. ಅಸಾಮರಸ್ಯವನ್ನು ಹುಡುಕಿಕೊಂಡು ಸಾಂಸರ್ಗಿಕ ರೋಗಾಣುಗಳೂ, ರೋಗಜಂತುಗಳೂ ಬರುವುದುಂಟು. ಆದ್ದರಿಂದ ಸಾಮರಸ್ಯವನ್ನು ಗಳಿಸಿ, ಕಾಪಾಡಿಕೊಂಡು ಬರುವುದೇ ವ್ಯಕ್ತಿ ಧರ್ಮ–ರಾಷ್ಟ್ರಧರ್ಮಗಳಾಗಿವೆ"

ಭಿನ್ನ ಭಿನ್ನ ವ್ಯಕ್ತಿಗಳಲ್ಲಿ ಸಮರಸತೆಯನ್ನು ಒದಗಿಸಿಕೊಡಬಲ್ಲ ಜಾನಪದ ಕಲಾರಾಧನೆ ವ್ಯಕ್ತಿಯ ಬುದ್ಧಿ-ಭಾವ ಪ್ರಾಣ-ದೇಹಗಳಲ್ಲಿಯೂ ಸಮರಸತೆಯನ್ನು ಉಂಟುಮಾಡುವುದೆಂದು ಬೇರೆ ಹೇಳುವ ಕಾರಣವಿಲ್ಲ. ಭಾವೈಕ್ಯ ಸಾಮರಸ್ಯಗಳನ್ನು ರಾಷ್ಟ್ರಕ್ಕೆ, ಜನಾಂಗಕ್ಕೆ ಸಾಧಿಸಿಕೊಡಲು, ಲೋಕಸಭೆಯಂಥ ರಾಷ್ಟ್ರಸಂಸ್ಥೆಗಳು ತಿಣುಕುತ್ತಿರುವಾಗ, ಕೈಯೂರಿ ಕುಳಿತಿರುವಾಗ ಜಾನಪದಕಲಾರಾಧನೆಯು ಆ ದಿಶೆಯಲ್ಲಿ ಆಶಾದಾಯಕವಾದ ಭರವಸೆಕೊಡುವುದರಲ್ಲಿ ಸಂಶಯವೇ ಇಲ್ಲ.

ಜಾನಪದವೆಂದರೆ ಅನಾಗರಿಕತೆಯೇ : ನಾಗರಿಕತೆ ನಗರದ ಸೊತ್ತು ಎಂದೂ, ಹಳ್ಳಿ ಅಥವಾ ಜಾನಪದವು ಶುದ್ಧ ಅನಾಗರಿಕವೆಂದೂ ತಿಳಿದುಕೊಂಡ ನಾವು, ಹಳ್ಳಿಯ ಕಲೆಗಳನ್ನು ಅನಾಗರಿಕವೃತ್ತಿಯೆಂದು ಭಾವಿಸತೊಡಗಿ, ಎಂದು ನಕ್ಕುಬಿಟ್ಟೆವೋ, ಮೂಗುಮುರಿದೆವೋ ಅಂದೇ ಜಾನಪದ ಕಲೆಗಳು ಕಳೆಗುಂದತೊಡಗಿದವು. ಅವುಗಳತ್ತ ಇತ್ತೀಚೆಗೆ ಕ. ಸಾ. ಪರಿಷತ್ತು, ಕ.ವಿ ವ.ಸಂಘ, ಕರ್ನಾಟಕ ಸರಕಾರ ಇವು ಸೂಕ್ಷ್ಮ ದೃಷ್ಟಿಯಿಂದ ನೋಡಲಾರಂಭಿಸಿದ್ದು ಶುಭಪ್ರದವಾಗಿದೆ. ಆದರೆ ನಮ್ಮ ಜಾನಪದಕಲೆಗಳಲ್ಲಿ ಕೆಲವು ಈಗಾಗಲೇ ಅರೆಜೀವಿಯಾಗಿವೆ. ಕೆಲವು ನಿರ್ಜೀವಿಯೂ ಆಗಿವೆ. ಗಮನ ಹರಿಸುವುದಕ್ಕೆ ಇನ್ನಷ್ಟು ತಡೆದಿದ್ದರೆ ನಿರ್ಯಾಣಮಹೋತ್ಸವವನ್ನೇ ಪೂರಯಿಸಬಹುದಾಗಿತ್ತು. ಅರೆಜೀವಿಯಾಗಿದ್ದ ಕಲೆಗಳನ್ನಾದರೂ ಯೋಗ್ಯ ಚಿಕಿತ್ಸೆಯಿಂದ, ಸಂಜೀವಿನಿಗೊಳಿಸಿಕೊಳ್ಳಬಹುದಾಗಿದೆ. ಐವತ್ತು ವರ್ಷಗಳ ಹಿಂದೆಯೇ ನಮ್ಮವರಲ್ಲಿ ಇಂದಿನ ಬುದ್ಧಿ ಬಂದಿದ್ದರೆ ಯಾವ ಕಲೆಯೂ ಬಹುಶಃ ಕೈಬಿಡುತ್ತಿದ್ದಿಲ್ಲ.

ಕಲಾವಿದರನ್ನು ಮೊದಲು ಬದುಕಿಸೋಣ : ಕುಗ್ರಾಮವಾಸಿಯಾಗಿ, ಕುಲಹೀನನ ಸೇವೆಮಾಡಿ ದುರ್ದೆಶೆಗೆ ಈಡಾದವರ ಹಾಗೆ ಉಸಿರಾಡಿಸುತ್ತಿರುವ ಕಲೆಗಳನ್ನೂ, ಕಲಾವಿದರನ್ನೂ ಗುರುತಿಸಿ, ಅವರು ಮೈ-ಮನ-ಮಾತುಗಳಿಂದ ಬದುಕುವಂತೆ ಆರ್ಥಿಕಸಹಾಯವನ್ನು ಸರ್ಕಾರದವರಂತೆ, ಸಾರ್ವಜನಿಕರೂ ಒದಗಿಸಬೇಕು. ಜಾನಪದ ಕಲೆಗಳು ಮತ್ತೆ ದಿನಬಳಕೆಯಲ್ಲಿ ಬರುವಂತೆ ಸಾಮಾಜಿಕರು ಆಸಕ್ತಿ ವಹಿಸಬೇಕು. ಮಕ್ಕಳು, ಯುವಕರು, ಹೆಣ್ಣುಗಂಡನ್ನದೆ ಜಾನಪದಕಲೆಯತ್ತ ಒಲಿದು ಬರುವಂತೆ ವಿದ್ಯಾರ್ಥಿದೆಶೆಯಿಂದಲೇ ಯೋಜಿಸಲ್ಪಡಬೇಕು. ಅದನ್ನು ಕಲಿತುಕೊಳ್ಳುವಂತೆ, ತರುಣರಲ್ಲಿ, ವಿದ್ಯಾರ್ಥಿಗಳಲ್ಲಿ ಸ್ಪರ್ಧೆ, ಬಹುಮಾನ, ಪ್ರಚಾರ ಮೊದಲಾದ ಕಾರ್ಯಕ್ರಮಗಳನ್ನು ಹೂಡಬೇಕು. ಹಾಗೆ ಮಾಡಿದರೆ ಬದುಕಿಗೆ ಪರಮ ಪ್ರಯೋಜನವೂ ಅನಿವಾರ್ಯವೂ ಆದ ಸಾಮರಸ್ಯ-ಭಾವೈಕ್ಯಗಳು ಸುಲಭವಾಗಿ ಸಾಧಿಸಿ, ರಾಷ್ಟ್ರದೇಳಿಗೆಗೆ ಕಾರಣವಾಗುವುದರಲ್ಲಿ ಸಂದೇಹವಿಲ್ಲ.

ಧರ್ಮವಿಲ್ಲದ ವಿದ್ಯೆಯಿಂದ ಪಿಶಾಚಿಗಳ ಸೃಷ್ಟಿಯಾಗುತ್ತದೆ

— ಆರ್ಥರ್ ವೆಲ್ಲಿ

ಜಿ. ವರದರಾಜರಾವ್

ಆಧುನಿಕ ಕವಿಗಳ ಗಣೇಶ ಚಿತ್ರಣ

೧

ವಿಘ್ನೇಶ್ವರನನ್ನು ಕುರಿತು ಹಿಂದಿನ ಕವಿಗಳ ಕೃತಿಗಳಲ್ಲಿ ಸಾಕಷ್ಟು ಉದಾಹರಣೆಗಳು ಲಭಿಸುತ್ತವೆ. ನಮ್ಮ ಆದಿಕವಿಯಾದ ಪಂಪನು ಜೈನನಾದರೂ ಅವನು ವಿನಾಯಕನನ್ನು ಕೊಂಡಾಡುವ ಕ್ರಮ ವಿನೂತನ ವಾಗಿದೆ.

ಎನ್ನ ದಾನಮಿದಾಗಳುಂ ಮಧುಪಾತ್ರಯುಂ ಧರೆಗವ್ಯವ
ಚ್ಛಿನ್ನ ದಾನಮಿದಾಗಳುಂ ವಿಬುಧಾಶ್ರಯುಂ ಗೆಲವಂದನೆ
ನ್ನನ್ನಿಜೋನ್ನತಿಯಿಂದ ಮಿಾ ಪತಿಯೆಂದು ಮೆಚ್ಚಿ ವಿನಾಯಕಂ
ತಾನ್ನಿಮಿರ್ಕುಗೆ ಕಬ್ಬಮುಂ ನಯದಿಂ ಗುಣಾರ್ಣವ ಭೂಪನಾ (I, 2)

ಗುಣಾರ್ಣವನ ದಾನಕ್ರಿಯೆ ಗಣಪತಿಯ ಕುಂಭಸ್ಥಳದಿಂದ ಸಂತತವಾಗಿ ಸುರಿಯುವ ದಾನವಾರಿಯನ್ನೂ ಮಿಾರಿಸಿತ್ತು ಎನ್ನುವಲ್ಲಿ ಗಣಪತಿಯನ್ನು ಕೊಂಡಾಡಿದಂತೆಯೂ ಆಯಿತು ; ತನ್ನ ಪ್ರಭುವಿನ ಪ್ರಶಸ್ತಿಯನ್ನು ಮಿಗಿಲಾಗಿ ಮೆರೆಸಿದಂತೆಯೂ ಆಯಿತು.

ಮಲ್ಲಿಕಾರ್ಜುನನ 'ಸೂಕ್ತಿ ಸುಧಾರ್ಣವ'ದಲ್ಲಿ ದೊರೆಯುವ ಮತ್ತೊಂದು ಸ್ತುತಿ ಯಾವ ಕವಿಕೃತಿಯದೆಂದು ತಿಳಿದುಬಾರದಿದ್ದರೂ ತುಂಬ ಮನೋಜ್ಞವಾಗಿದೆ.

ಉದಧಿಗಳೇಳುಮೆಯ್ದೆ ತೊವರಾದುವು ದಾನಜಲೌಘದಿಂ, ಸುವ
ರ್ಣದಿ ತನಗೊರ್ಮೆ ಪೀರಲಣಮುಯ್ದದು, ಬೃಂಹಿತದಬ್ಬರಕ್ಕದಿ
ಙ್ಮದ ಕರಿ ಭೀತಿಯಿಂದೆ ಸರವಿಟ್ಟುವು, ಚಂಚಲ ಕರ್ಣತಾಳವಾ
ತದೆ ಸುಳಿಗೊಂಡರ ಭ್ರಗರೆನಿಪ್ಪ ಗಜಾನನಿಗೆ ಭೋಗಮುಂ.

ವಿನಾಯಕನ ದಾನಜಲಸಮೂಹದಿಂದ ಸಪ್ತ ಸಮುದ್ರಗಳೂ ಉಪ್ಪೇಪ್ಪಾದುವು ಎನ್ನುವ ಮೊತ್ತ ಮೊದಲಿನ ಚಿತ್ರವೇ ಗಣಪತಿಯ ಭವ್ಯ ಚಿತ್ರವನ್ನು ಕಣ್ಣಿನ ಮುಂದೆ ತಂದು ನಿಲ್ಲಿಸುತ್ತದೆ. ಆತನ ಸೊಂಡಲಿಗೆ ಹೀರಲು ಗಂಗಾನದಿ ಸಾಲದಂತೆ! ಗಜಮುಖನಾದ ಗಣಪತಿ ಬೃಂಹಿತ ಶಬ್ದ ಮಾಡಿದೊಡನೆಯೇ ದಿಗ್ಗಜಗಳಿಗೆ ದಿಗ್ಭ್ರಮೆಯಾದುವಂತೆ ! ಕಡೆಯದಾಗಿ ಗಣಪತಿಯ ಕಿವಿಗಳ ಅಲುಗಾಟದಿಂದ ಉದ್ಭವಿಸಿದ ಗಾಳಿಯ ಸುಳಿಗೆ ಸಿಕ್ಕಿ ದೇವತೆಗಳು ದಿಕ್ಕುಗೆಟ್ಟರೆಂಬ ನಿರೂಪಣೆ ವಿಘ್ನರಾಜನ ಸತ್ವವೇನೆಂಬುದನ್ನು ಸೂಚಿಸುತ್ತದೆ.

ಕವಿ ಲಕ್ಷ್ಮೀಶನಂತೂ ಗಣಪತಿಯ ವದನಾರವಿಂದದ ಉಜ್ವಲತೆಯನ್ನು ಉದಿಸುವ ಸೂರ್ಯನಿಗೆ ಹೋಲಿಸಿದ್ದಾನೆ.

ಪ್ರಸ್ತುತದೊಳೊಗೆದ ಮುಂಬೆಳಗಮುಲದಂತದ ಗ
ಭಸ್ತಿ, ನವ ಪೂರ್ವ ಸಂಧ್ಯಾರುಣಂ ಭಾಳವಿ ।
ನ್ಯಸ್ತ ಸಿಂಧೂರಮಂಕುರಿಪ ಪೊಂಬಿಸಿಲೊಡನೆ ಮೂಡುವೆಳನೇಸರೆಸೆವ
ಮಸ್ತಕದ ಮಣಿಮುಕುಟಮಾಗಲುದಯಾಚಲದ
ವಿಸ್ತಾರದಂತ ಭದ್ರಾಕೃತಿಯೊಳೊಪ್ಪುವ ಸ
ಮಸ್ತ ಸಿದ್ಧಿ ಪ್ರದಾಯಕ ಮಾಳ್ಪುದೆಮಗೆ ನಿರ್ವಿಘ್ನತೆಯನು (I. 2)

ಈ ರೀತಿ ಹುಡುಕತೊಡಗಿದರೆ ನಮ್ಮ ಹಳೆಯ ಕವಿಗಳಲ್ಲಿ, ಜನಪದ ಸಾಹಿತ್ಯದಲ್ಲಿ ಇನ್ನೂ ಅನೇಕ ನಿದರ್ಶನಗಳು ದೊರೆಯಬಲ್ಲವು.

ಪ್ರಕೃತದಲ್ಲಿ, ನಮ್ಮ ಆಧುನಿಕ ಕವಿಗಳು ಈ ದೇವತೆಯನ್ನು ಯಾವ ದೃಷ್ಟಿಯಿಂದ ಚಿತ್ರಿಸುವರೆಂಬುದನ್ನು ಕಂಡರೆ ನಮ್ಮ ಹೃದಯ ಮತ್ತಷ್ಟು ಹಿಗ್ಗುತ್ತದೆ. ಮುಖ್ಯವಾಗಿ ಅಗ್ರಪಂಕ್ತಿಗೆ ಸೇರಿದ ಇಂದಿನ ಕವಿಗಳಲ್ಲಿ ಕುವೆಂಪು ಅವರು 'ಗಣೇಶಗಾಥಾ' ಎಂಬ ಒಂದು ನೀಳ್ಗವಿತೆಯನ್ನು ಬರೆದು ನಮ್ಮ ಮನಸ್ಸನ್ನು ತಣಿಸಿದರೆ, ಪು. ತಿ. ನ. ಅವರು 'ಗಣೇಶ ದರ್ಶನ' ಎಂಬ ಮತ್ತೊಂದು ದೀರ್ಘ ಕವನವನ್ನೇ ರಚಿಸಿ ನಮ್ಮನ್ನು ಬೇರೊಂದು ವಿಸ್ಮಯಲೋಕಕ್ಕೆ ಕರೆದೊಯ್ಯುತ್ತಾರೆ. ಒಂದೇ ವಸ್ತುವನ್ನು ಕುರಿತ ಈ ಎರಡು ರಚನೆಗಳೂ ಛಂದೋಸಾಮ್ಯವೊಂದನ್ನು ಬಿಟ್ಟರೆ, ಇತರ ಎಲ್ಲ ಅಂಕಗಳಲ್ಲಿಯೂ ಭಿನ್ನ ದೃಷ್ಟಿಕೋನದಿಂದ ಕೂಡಿದುವು. ಉಭಯಕವಿಗಳೂ ಗಣಪತಿಯನ್ನು ತುಂಬ ಆತ್ಮೀಯವಾಗಿ ಚಿತ್ರಿಸಿರುತ್ತಾರೆ. ಕವಿತೆ ಮುಂದುವರಿದಂತೆಲ್ಲ ಗಣಪತಿಯ ಹಿರಿಮೆ ಗರಿಮೆಗಳೂ ಈಶ್ವರ, ಪಾರ್ವತಿಯರ ದಿವ್ಯ ದರ್ಶನವೂ ಆಗುತ್ತವೆ.

೨

ಕುವೆಂಪು ಅವರು ತಮ್ಮ ಕೃತಿಗೆ 'ಗಣೇಶಗಾಥಾ' ಎಂದು ಹೆಸರಿಟ್ಟಿರುವುದನ್ನು ಮನಗಂಡರೆ* ಅದು ಗಣಪತಿಗೆ ಅವರು ಸಲ್ಲಿಸಿರುವ ಭಕ್ತಿ ಪೂರ್ವಕವಾದ ಒಂದು ಪ್ರಗಾಥದ ಪ್ರಶಂಸೆಯ ಪುಷ್ಪಮಾಲೆಯೆಂದು ವೇದ್ಯವಾಗುತ್ತದೆ. ಗೌರಿ ಗಣಪತಿಯ ಹಬ್ಬಗಳು ಒಂದಕ್ಕೊಂದು ಹೊಂದಿಕೊಂಡು ಬರುವ ಸಡಗರ ಸಂಭ್ರಮಗಳೆಲ್ಲ ಕವಿಯ ದಿವ್ಯದೃಷ್ಟಿಯ ಸಂಸ್ಪರ್ಶದಿಂದ ಒಂದು ಅಮೂಲ್ಯವಾದ ಸನ್ನಿವೇಶವಾಗಿ ಗೋಚರಿಸುತ್ತವೆ. ಆ ದೇವತೆಗಳ ಆಗಮನವನ್ನು ಕುರಿತ ಮೊದಲ ಭಾಗ ಎಷ್ಟು ಸಡಗರದಿಂದ ಶೋಭಿಸುತ್ತದೆಯೋ, ಅವರಿಗೆ ಭೂಲೋಕದವರು ನೀಡುವ ಆದರ ಆತಿಥ್ಯಗಳ ವರ್ಣನೆಯಲ್ಲಿ ಅತಿಶಯವಾದ ಆತ್ಮೀಯತೆಯ ಅನುಭವವಾಗುತ್ತದೆ. ತಾಯಿ ಮಗ ಇಬ್ಬರೂ ತಮ್ಮ ದೇವಲೋಕಕ್ಕೆ ಹಿಂದಿರುಗುವ ಕ್ಷಣದಲ್ಲಿ ಮಾನವರ ಮನಸ್ಸಿನ ಮಾರ್ದವತೆ ಸ್ವವಿದಿತವಾಗುತ್ತದೆ. ನಮ್ಮ ಪಾಲಿಗೆ ಈ ದೇವತೆಗಳು ಆತ್ಮೀಯರಾದ ಬಂಧು ಬಳಗದವರೇ ಹೊರತು ದೂರದ ವಿಗ್ರಹಗಳಲ್ಲ.

ಶ್ರಾವಣ ಮಾಸದ ಮೋಡಗಳನ್ನೇ ರಥವನ್ನಾಗಿ ಕಲ್ಪಿಸಿಕೊಂಡು ಭಾದ್ರಪದದ ವೇಳೆಗೆ ಭೂಲೋಕಕ್ಕೆ ವರ್ಷವರ್ಷವೂ ಇಳಿದು ಬರುವ ಈ ತಾಯಿ ಮಕ್ಕಳ ಆಗಮನ, ಕವಿಗೆ ಶ್ರೀಕೈಲಾಸವೇ ಭೂಮಿಗೆ ಅವತರಿಸಿದಂತೆ ಅನುಭವವಾಗುತ್ತದೆ. ಪ್ರಕೃತಿದೇವಿ ಪವಿತ್ರಳಾಗಿ ಅವರಿಗೆ ಬೆಳ್ಳಕ್ಕಿಯ ತೋರಣ ಮಾಲೆಯನ್ನು ಕಟ್ಟಿ, ಗಿಳಿವಿಂಡ ಕ್ಷತೆಯನ್ನು ನೀಡಿ ಬರಮಾಡಿಕೊಂಡರೆ, ಬನದೇವಿ ಈ ಅತಿಥಿಗಳನ್ನು ಆದರದಿಂದ ಸತ್ಕರಿಸುತ್ತಾಳೆ. ಸಮಸ್ತ ಪೃಥ್ವಿಯೇ ಈ ಕಾರ್ಯದಲ್ಲಿ ನಿರತವಾಗಿದೆಯೆಂದು ಕವಿ ಒಂದು ಮಾತಿನಲ್ಲಿ ಹೇಳಿ ಮುಗಿಸದೆ, ಸ್ವಾಭಿಮಾನದಿಂದ ಈ ದೇವತೆಗಳು ಕನ್ನಡ ನಾಡಿನತ್ತ ಸಾಗಿ ಬರುತ್ತಿರುವರೆಂದೂ, ಸಹ್ಯಾದ್ರಿಯನ್ನು ದಾಟಿ, ಕಾವೇರಿಯನ್ನು ಕಂಡು, ನಮ್ಮಲ್ಲಿಯೇ ಬರುತ್ತಿರುವರೆಂದು ತಮ್ಮ ಕಂದನನ್ನು ಎಚ್ಚರಿಸಿ ಪುಳಕಿತರಾಗುವರು.

* ಅಗ್ನಿ ಹಂಸ–1956. ಎರಡನೆಯ ಮುದ್ರಣ ಪು. 31–39

ಭಾರತಭೂಮಿಯ ಗಿರಿನದಿವನಗಳು ಚರಿಸಿ|
ಕಡೆಗೈತಂದಿದೆ ಕನ್ನಡ ನಾಡನ್ ವರಿಸಿ
ಕೈಲಾಸವನುಳಿದೈತಂದವನನ್|
ಕಂಡಾ ನಿನ್ನನ್ ಸ್ಮರಿಸಿ ।

ಗೌರಿ–ಗಣೇಶರು ಕುಳಿತಿರುವ ಆ ತೇರು ಇತರ ರಥಗಳಂತಲ್ಲ. ಪ್ರಕೃತಿ ನಿರ್ಮಿತವಾದ ಸಹಜವಾದ ತೇರದು !

ಅಡಕೆಯ ಹೂವಿನ ಹಿಂಗಾರದ ತೇರ್|
ತೆಂಗಿನ ಹೂವಿನ ಬಂಗಾರದ ತೇರ್
ಬಾಳೆಯ ಹೂವಿನ ಸಿಂಗಾರದ ತೇರ್ |
ಮಲ್ಲಿಗೆ ತಾವರೆ ಸಂಪಗೆ ಕೇದಗೆ
ಸೇವಂತಿಗೆ ಸೀತಾಳಿಯ ತೇರ್ ;|
ಮಾವಿನ ಹಲಸಿನ ತಳಿರಿನ ತೋರಣ
ಮಿಳಿರುವ ಚಂದದ ಗಂಧದ ತೇರ್ ;

ಮಲೆನಾಡಿನಲ್ಲಿ ಹುಟ್ಟಿ, ಬೆಳೆದು, ಅಲ್ಲಿನ ಸೌಂದರ್ಯವನ್ನು ಕಣ್ಣಾರೆ ಕಂಡು ಮೈಮರೆತಿರುವ ಕವಿ ಚೇತನಕ್ಕೆ ಮಾತ್ರ ಇಂಥ ತೇರಿನ ಕಲ್ಪನೆ ಸಾಧ್ಯವಾದೀತು ! 'ಬೇಲೂರಿನ ದೇವಾಲಯ ರಚನೆಗೆ ಕನ್ನಡಿ ಹಿಡಿದಿಹ ಕನ್ನಡ ತೇರ್' ಎಂಬ ಒಂದು ಪಂಕ್ತಿಯಲ್ಲಿ ಆ ತೇರಿನ ಸಮಸ್ತ ಚಿತ್ರಕಲಾ ವೈಭವವೂ ಅನುಭವ ವೇದ್ಯವಾಗುತ್ತದೆ.

ತೇರು ತಿರೆಗಿಳಿದ ಬಳಿಕ ಕವಿಗಳು ಮನೆಮಂದಿಯನ್ನೆಲ್ಲ ಬರಮಾಡಿಕೊಂಡು ಪಾರ್ವತಿಯ ಮಹಿಮೆಯನ್ನು ಪರಿಚಯ ಮಾಡಿಕೊಡುತ್ತ ತಮ್ಮ ಭಕ್ತಿಯನ್ನು ಸಮರ್ಪಿಸುವರು. ಕಡೆಯಲ್ಲಿ,

ನಮಸ್ಕಾರ ನಮಸ್ಕಾರ
  ನಮಸ್ಕಾರ, ದೇವಿ !
ಮಕ್ಕಳು ನಾವ್ ಚಿಕ್ಕವರನ್
  ಅಕ್ಕರೆಯಿಂದೋವಿ,
ಪೊರೆ ತಿರೆಯನ್; ಪೊರೆ ನೆರೆಯನ್ ;
  ಪೊರೆ ನಮ್ಮನ್, ತಾಯಿ !
ತಂದೆಯ ಕಾಯ್, ತಾಯಿಯ ಕಾಯ್,
  ಒಲವನ್ ಕಾಯ್, ತಾಯಿ !
ನಮಸ್ಕಾರ, ನಮಸ್ಕಾರ,
  ನಮಸ್ಕಾರ, ದೇವಿ !

ಎಂದು ಸ್ತೋತ್ರಮಾಡಿ, ತಮ್ಮ ಬೇಡಿಕೆಯನ್ನು ಸಲ್ಲಿಸುವರು.

ಮನೆಗೆ ಬಂದ ನಂಟರನ್ನು ಹೇಗೆ ಹಲವಾರು ರೀತಿಗಳಲ್ಲಿ ಕುಶಲಪ್ರಶ್ನೆ ಮಾಡಿಸತ್ಕರಿಸುತ್ತೇವೆಯೋ, ಅದೇ ರೀತಿ ಗೌರಿಯನ್ನು, ಗಣೇಶನನ್ನೂ ಆದರಿಸುವರು ಮಂತ್ರ ಪೂರ್ವಕವಾಗಿ. ನಾನಾ ವಾದ್ಯ ಸಮೇತವಾಗಿ ಪೂಜಿಸಿ, ಕೈಲಾಸದಲ್ಲಿ ಎಲ್ಲರೂ ಕ್ಷೇಮವೆ ಎಂದು ಕೇಳಿಕೊಳ್ಳುವರು. ಅವರಿಂದ ಸದುತ್ತರವನ್ನು ಪಡೆದ ಬಳಿಕ, ಗಣೇಶನನ್ನು ಬಾಯ್ತುಂಬ ಕೊಂಡಾಡಿ,'ಕೈಕಾಲ್ ತೊಳೆಯಲು ಬಿಸಿನೀರಿದೆ ಕೋ, ಒದ್ದೆಯನಾರಿಸೆ ವಸ್ತ್ರವ ಕೋ, ಶ್ರಾವಣ ನೀರದ ಯಾತ್ರೆಯ ದೂರದ ದಣಿವಾರಿಸೆ ತೃಣಮಂಚವ ಕೋ' ಎಂದು ಉಪಚರಿಸತೊಡಗುವರು. ಸಾಮಾನ್ಯವಾಗಿ ಹಬ್ಬದ ಹೆಸರಿನಲ್ಲಿ ನಾವು ಏನೇನು ಆಚರಿಸುತ್ತೇವೆಯೋ ಅವೆಲ್ಲವನ್ನೂ ಆತ್ಮೀಯತೆಯಿಂದ ಆ ದೇವಕುಮಾರನಿಗೆ ನೀಡುವರು. ಆದರೂ ಕವಿಗೆ ಸಮಾಧಾನವಿಲ್ಲ. ಗಣೇಶನ ಮೌನವನ್ನು ಕಂಡು ಅವರ ಮನಸ್ಸು

ಮಿಡಿಯುವುದು. 'ರಜತಾದ್ರಿಯ ಸಿರಿಯ ಕಂಡವ ನೀನ್ ನಮ್ಮ ಬಡತನಕೆ ಪೇಸುವೆಯೇನ್ ? ನಿನ್ನ ತಂದೆಯಾ ಭಿಕ್ಷಾಟನೆಯನೆ ಕೈಕೊಂಡಿಹಳಯ್ ಭಾರತಿ ತಾನ್ !' ಎಂದು ತಮ್ಮ ಸಂಕಟವನ್ನು ಅತ್ಯಂತ ಸೋಜಿಗವಾದ ರೀತಿಯಲ್ಲಿ ಹೇಳಿಕೊಂಡು, 'ಭಾರತ ಮಾತೆಗೆ ಸ್ವಾತಂತ್ರ್ಯದ ಶ್ರೀಯೈತರಲು, ಕಾಮಧೇನುವಿನ ಕೆಚ್ಚಲಿನಮೃತವ ಕೊಡುವೆವೊ ಜೆಳ್ಳಿಯ ಬಟ್ಟಲಲಿ ! ಕಲ್ಪವೃಕ್ಷದಾ ರಸಘನ ಫಲವನೆ ಇಡುವೆವೊ ಚಿನ್ನದ ತಟ್ಟೆಯಲಿ !' ಎಂದು ತಮ್ಮ ಆಶಾವಾದವನ್ನು ಎತ್ತಿ ಹಿಡಿಯುವರು. ಅನಂತರ ಹಬ್ಬದ ಸಂತೋಷಕ್ಕೆ ಬಂದತಿಥಿಗೆ 'ಕೊರತೆಯನೊರೆದೆನ್ ತಪ್ಪಾಯ್ತು ! ನಾಡಿನ ಎದೆಯನ್ ಕೊರೆಯುವ ನೋವಿಗೆ ನಾಲಗೆಯಿತ್ತೆನ್ ; ತಪ್ಪಾಯ್ತು ! ಬಡತನವಿರಲಿ, ದಾಸ್ಯವೆ ಇರಲಿ ಸಂಕಟವಿರಲಿ, ಏನೇ ಇರಲಿ, ನಮ್ಮಾತಿಥ್ಯಕೆ ಕುಂದಿಲ್ಲ' ಎಂದು ನೊಂದುಕೊಂಡು ಸಮಾಧಾನ ಹೇಳುವರು. ಇತರ ದೇಶಗಳಲ್ಲಿ ಆಗುತ್ತಿರುವ ಅನ್ಯಾಯ, ಅನಾಹುತ, ಅತ್ಯಾಚಾರಗಳನ್ನು ವರದಿಮಾಡಿ, ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ತಮ್ಮ ದೇಶದಲ್ಲಿ ನಡೆಯುತ್ತಿರುವ ಪ್ರಗತಿಯನ್ನು ಪ್ರಸ್ತಾಪಿಸಿ, ತಾವು ಬರೆಯತೊಡಗಿರುವ 'ಹೊಸ ರಾಮಾಯಣವನ್ ಓದುವೆ ಬಾ, ತಾಯಿ. ಕೈಲಾಸದೊಳೂ ಯಾರೂ ಕೇಳದ ಹೊಸಗನ್ನಡ ಹೊಸ ಹೊಸ ಹಾಡುಗಳನ್ ಹಾಡುವೆ ಕೇಳ್, ತಾಯಿ.' ಎಂದುಹಿಗ್ಗಿ ಹರುಷ ಪಡುವರು. ದೇವತೆಗಳ ಕಿವಿಗೆ ತಮ್ಮ ಕಾವ್ಯ ಒಪ್ಪಿದ್ದೇ ಆದರೆ ಅದು ಸಫಲವೆಂದು ಭಾವಿಸುವರು.

ಆತಿಥ್ಯದ ಸಡಗರ ಸಂಭ್ರಮಗಳು ಮುಗಿಯುವಷ್ಟರಲ್ಲಿಯೆ, ಈಶ್ವರನ ಅಣತಿಯಂತೆ ಗೌರಿ–ಗಣೇಶರು ಹಿಂತಿರುಗಲು ಅಣಿಯಾಗುವರು. ಕವಿಗಾದರೋ ಇನ್ನೂ ತೃಪ್ತಿಯಾಗಿಲ್ಲ ! 'ಏತರ ವೈರಾಗಿಯೊ ಅವನು ! ನೀವ್ ಬಂದೆಲ್ಲಾ ವಾರವು ಮುಗಿದಿಲ್ಲ.' ಎಂದು ಗೊಣಗಿಕೊಳ್ಳುವರು. ಆದರೆ ಅವರನ್ನು ಕಳುಹಿಸದೆ ವಿಧಿಯಿಲ್ಲ. 'ಸ್ವರ್ಗವೆ ಕಿಂಕರವಾಗಿತ್ತೆಮಗೆ ; ಕೈಲಾಸವೆ ಕಯ್ಗೂಡಿತ್ತೆಮ್ಮಾ ಬಡಮನೆಗೆ, ತಾಯಿ, ನೀವೈತಂದು, ನಿಮ್ಮಾ ಸಂಗದ ಪುಣ್ಯಸ್ಮರಣೆಯೆ ಜೊತೆ ಬಂದು ಸವಿ ಸೊದೆಯಾಗಲಿ ಈ ವಿಷು ಸಂವತ್ಸರವೊಂದು' ಎಂದು ಹರ್ಷಚಿತ್ತರಾಗಿ, ಕೃತಕೃತ್ಯ ಭಾವನೆಯಿಂದ ಆ ದೇವ ಬಂಧುಗಳನ್ನು ಬೀಳ್ಕೊಡುವರು.

೩

ಪು. ತಿ. ನ. ಅವರು 'ಗಣೇಶ ದರ್ಶನ' ಎಂಬ ತಮ್ಮ ನಿಡಿದಾದ ಕವಿತೆಯಲ್ಲಿ* ಗಣಪತಿಯೊಂದಿಗೆ ಬಹಳ ಸಲಿಗೆಯಿಂದ ವರ್ತಿಸುವರು. ಇದ್ದಕ್ಕಿದ್ದಂತೆಯೇ ಕಾವ್ಯದ ರಚನೆಗೆ ಮೊದಲು ದೇವರೊಬ್ಬನನ್ನು ಸ್ಮರಿಸಬೇಕೆಂದು ಸ್ಫುರಿಸಿದ ಕೂಡಲೆ ವಿಘ್ನೇಶ್ವರನ ನೆನಪಾಗುವುದು. ಸಾಧಾರಣವಾಗಿ ಶ್ರೀವೈಷ್ಣವರು ಗಜಮುಖನನ್ನು ಪೂಜಿಸುವುದು ವಿರಳ. ಆದ್ದರಿಂದ ಕವಿಗಳು 'ಆಚಾರ್ಯರ ಅನುಮತಿ ಇಲ್ಲದೆ, ಸಮ್ಮತ ವಿಷ್ವಕ್ಸೇನರನೊಲ್ಲದೆ' ಚೌತಿಯ ದಿನ ವಿನಾಯಕನನ್ನು ಕುರಿತು ಚಿಂತಿಸಲು, ಮೊದಲು ಒಂದು ಇಲಿ ಕಾಣಿಸಿಕೊಳ್ಳುತೆಂದೂ, ತರುವಾಯ ಸಾಕ್ಷಾತ್ ಗಣಪತಿಯ ಆಗಮನವೇ ಆಯಿತೆಂದೂ ನಿವೇದಿಸುವರು. ಮನೆಯಾಕೆ ಏನನ್ನೂ ಅಣಿಮಾಡಿಕೊಳ್ಳದೆ ಇರುವಂದು ಗಣಪತಿಯೇ ಧುಮುಕ್ಕಿದರೆ ಕವಿ ತಾನೆ ಏನು ಮಾಡಬೇಕು ? ಮಗನನ್ನು ನಿಮಿತ್ತ ಮಾಡಿಕೊಂಡು, 'ಮುದ್ದನ ಹರಸಲು ಗಣಪನ ಕರೆದೆ. ನಿರ್ವಿಧಿಯಾದರು ಕಡುಬನು ಮಾಡಿ, ಪೂಜಿಪುದೊಳ್ಳಿತು ಸುತನಂ ಕೂಡಿ' ಎಂದು ಗೃಹಿಣಿಯನ್ನು ಒಪ್ಪಿಸಲು, ಆಕೆ ಗಣಪತಿಯ ಆರಾಧನೆಗೆ ಸಿದ್ಧ ಮಾಡತೊಡಗಿದಳು. ಈ ಮಧ್ಯೆ, ಕವಿಗೂ, ಗಣಪತಿಗೂ ಮಾತು ಕತೆಗಳು ನಡೆಯುತ್ತವೆ. ಅವುಗಳ ಸವಿಯೇ ಸವಿ ! ಗಣಪತಿ ಆ ದಂಪತಿಗಳ ಅನುರೂಪವಾದ ದಾಂಪತ್ಯವನ್ನು ಕಂಡು ಹಿಗ್ಗುತ್ತಿರಲು, ಅದೇ ಸುಸಮಯವೆಂದು ಭಾವಿಸಿ ಕವಿಗಳು ಗಣಪತಿಯನ್ನು 'ಒಂದೆರಡಪ್ಪುದೆ ಲೇಸೆಂದೆನ್ನುವೆ, ಒಂಟಿಯಾಗಿ ನೀನುಳಿದಿರೆ ಚೆನ್ನವೆ ? ಗಜಮುಖನೇ ನಿನಗೆಂದಿಗೆ ಮದುವೆ, ನಿನ್ನಿಂದಾಪಪ್ಪರಸಿಯು ಸಧವೆ ?" ಎಂದು ಪ್ರಶ್ನಿಸುವರು. ಗಣಪತಿಗಾದರೋ ಎಂಥ ಪೇಚಿನಲ್ಲಿ ಸಿಕ್ಕಿಕೊಂಡೆ ಎನ್ನಿಸಿರಬೇಕು !

* ಗಣೇಶ ದರ್ಶನ–1947, ಪು. 1–21

“ಎಲ ದಿಟ್ಟ, ನಗುವೆಯ ನನ್ನ, ಎನಗೇತಕೆಯೋ ಮದುವೆಯ ಬನ್ನ ! ನನಗೀ ಗಣದೊಡೆತನವೇ ಸಾಕು, ನನ್ನೊಡೆತನ ಯಾವಬಲೆಗೆ ಬೇಕು, ಲಂಬೋದರಗೇತಕೆ ತರಳೋದರೆ, ಕುಂಭ ಶಿರಂಗೇತಕೆ ಬಿಂಬಾಧರೆ, ವಕ್ರ ತುಂಡಗಕ್ಕರಿಸುವರಿಹರೇ, ಮರುಳ್ಗಳೊಡೆಯಗೆ ಮರುಳಹರಿಹರೇ ? ನನ್ನನು ನೆನೆಯುತ ನಾನೇ ನಗುವೆ, ಹೆಣ್ಣೊಲ್ಲದ ರೂಪಕೆಗೆಲ್ ಎನುವೆ, ಈ ನಿಡುಮೂಗನು ನಾನೇ ಬಯಸಿದೆ, ಈ ಹಿರಿ ಕಿವಿಯನು ನಾನೇ ಬಯಸಿದೆ, ಈ ಕಿರುಕಂಗಳ ನಾನೇ ಬಗೆದೆ, ಗುಜ್ಜುಕಾಲು ಪೇರುದರಕ್ಕೊಲಿದೆ, ವಾಹನಕಿಲಿಯನೆ ನಾನಾರಿಸಿದೆ, ಎಡೆರೊಡೆತನವನು ನಾನೇ ಪರಿಸಿದೆ, ಎನ್ನ ಕಜ್ಜಕೀ ಪರಿಕರ ಹವಣು” ಎಂದು ಆತ್ಮ ಪ್ರಶಂಸೆಯನ್ನು ಮಾಡಿಕೊಳ್ಳಲು ಆರಂಭಿಸಿದನು. ಕವಿಗಳು ಮಧ್ಯದಲ್ಲಿ ಪ್ರವೇಶಿಸಿ “ಕ್ಷಮಿಸು ಗಣಪ ನಾನರಿತುದೆ ಬೇರೆ, ನಿನ್ನ ಕುರಿತು ನೀನೊರೆವುದೆ ಬೇರೆ” ಎಂದು ಮಾತೆತ್ತಿ ರೂಢಿಯಲ್ಲಿರುವ ಗಣಪತಿಯ ಕಥೆಯನ್ನು ಹೇಳಿ, “ನಿನ್ನಿಚ್ಛೆಗೆ ನೀನಾದುದು ನನ್ನಿಯೊ, ನಿನ್ನ ಕುರಿತಿಂಥ ಕತೆಗಳೆ ನನ್ನಿಯೊ” ಎಂದು ಕೇಳುವರು. ಕವಿಗಳ ದಿಟ್ಟತನಕ್ಕೆ ಮೆಚ್ಚಿದ ಗಣೇಶ “ಎಲ, ಎನಗಿಡುತಿಹೆ ದುರ್ಬಿನ, ಎನ್ನ ನುಡಿಸೆ ನಿನಗಿಲ್ಲ ಸಮಾನ” ಎಂದು ಅಂದುಕೊಂಡು ತನ್ನ ಜನ್ಮರಹಸ್ಯವನ್ನು ತಾನೇ ಅರಿಯನೆಂದು ತಿಳಿಸಿ, ತನ್ನ ಮಹತ್ವದೆಡೆಗೆ ಕವಿಗಳ ಮನಸ್ಸನ್ನು ಸೆಳೆಯುವನು.

ವಿಘ್ನೇಶ್ವರನು ತನ್ನ ವಕ್ರತುಂಡ ಮಹಾಕಾಯದ ಮಹತ್ವವನ್ನು ತಾನೇ ಸಮರ್ಥಿಸಿಕೊಳ್ಳುವ ಒಂದೊಂದು ಅಂಶವೂ ಅತಿಶಯವಾಗಿದೆ. ಈ ನವೀನ ವ್ಯಾಖ್ಯಾನದಲ್ಲಿ ಕವಿಗಳ ಉಕ್ತಿಚಾತುರ್ಯ ಎದ್ದು ಕಾಣುತ್ತದೆ. ಈ ನೀಳ್ಗವಿತೆ ವಿನಾಯಕನ ವಿಸ್ಮಯ ಸ್ವರೂಪವನ್ನು ಹೊಗಳುವುದರಲ್ಲಿಯೇ ವಿರಮಿಸದೆ, ಕೈಲಾಸದಲ್ಲಿ ವಿಘ್ನೇಶ್ವರನು ಹೇಗೆ ತನ್ನ ಕೆಲಸವನ್ನು ನಿರ್ವಹಿಸುವನು ಎನ್ನುವುದರತ್ತಲೂ ತಿರುಗುತ್ತದೆ. ಭೂತಗಣಗಳನ್ನು ಗಣಪತಿ ಹೇಗೆ ತನ್ನ ಹತೋಟಿಯಲ್ಲಿಟ್ಟುಕೊಳ್ಳುವನೆಂದು ವಿವರಿಸುತ್ತಾನೆ. ಇನ್ನು ಗಣಪತಿಗೆ ಕಡುಬಿನ ಕಡೆ ಗಮನ ಹೊರಳುತ್ತದೆ. ಕವಿಗಳನ್ನು ಆ ಬಗ್ಗೆ ಎಚ್ಚರಿಸಲು, ಆ ವೇಳೆಗೆ ಗೃಹಿಣಿ ಎಲ್ಲವನ್ನೂ ಅಣಿಮಾಡಿರುವುದರ ಅರಿವಾಗುತ್ತದೆ. ವಿನಾಯಕನು ನೈವೇದ್ಯವನ್ನೆಲ್ಲ ಸ್ವೀಕರಿಸಿ, ಸಂತೃಪ್ತಿ ಪಟ್ಟು ಸ್ವಲ್ಪಕಾಲ ವಿಶ್ರಮಿಸಿಕೊಳ್ಳುವನು. ಕವಿಗೆ, ಅದೇ ಸಂದರ್ಭದಲ್ಲಿ ಶಿವನ ನಾಟ್ಯದ ವಿವರಣೆಯನ್ನು ಆ ಮಹೇಶಪುತ್ರನಿಂದಲೇ ಕೇಳಿ ತಿಳಿಯಬೇಕೆನ್ನಿಸಲು, ತಮ್ಮ ಆ ಕೋರಿಕೆಯನ್ನು ಆತನಿಗೆ ತಿಳಿಸುವರು. ಗಣಪತಿಯು ಶಿವನ ತಾಂಡವ ನೃತ್ಯವನ್ನು ಅತ್ಯದ್ಭುತವಾಗಿ ವಿವರಿಸುವನು. ಆ ನಿಡಿದಾದ ವರ್ಣನೆಯೊಂದಿಗೆ ಗಣಪತಿಯು ವ್ಯೋಮರೆತಿರಲು, ಕವಿಗಳೂ ದಿಙ್ಮೂಢರಾಗಿರುವರು. ಕಡೆಗೆ ಆ ಈಶಪುತ್ರ ಇದ್ದಕ್ಕಿದ್ದಂತೆಯೇ ಅಂತರ್ಧಾನನಾಗುವನು. ಕವಿಗೆ ಭಾವದ ಸಂಪತ್ತು ತುಂಬಿ ತುಳುಕುವಂತಿರಲು ‘ಓಂ ಶಿವಮಸ್ತು’ ಎಂದು ಕೃತಾರ್ಥರಾಗಿ ವಿರಮಿಸುವರು.

ಪ್ರಾಚೀನ ಕಾವ್ಯಗಳಲ್ಲಿ ಇಷ್ಟದೇವತಾಸ್ತುತಿ ಪರಂಪರೆಯಲ್ಲಿ ತೋರಿಬರುವ ವಿನಾಯಕನ ವರ್ಣನೆಗೂ, ಗಣಪತಿಯನ್ನು ತಮ್ಮ ಆಪ್ತ ಬಂಧುವೆಂದೋ, ಆಪ್ತ ಮಿತ್ರನೆಂದೋ ಎಣಿಸಿ ಚಿತ್ರಿಸಿರುವ ಈ ಆಧುನಿಕ ಕವಿವರ್ಯರಿಬ್ಬರ ಚಿತ್ರಣಗಳಿಗೂ ಸಹಜವಾಗಿ ಅಂತರವಿದ್ದು ಇವು ನವೀನವಾಗಿವೆ. ಕೇಳುವವರ ಆಧ್ಯಾತ್ಮಿಕ ದೃಷ್ಟಿಯನ್ನು ಪುಷ್ಟಿಗೊಳಿಸುವಂತಿರುವ ಈ ಎರಡು ರಚನೆಗಳೂ ಕನ್ನಡಕ್ಕೆ ಅಮೂಲ್ಯ ಕೊಡುಗೆಗಳಾಗಿವೆ.

ಕೆ. ವಿ. ಶ್ರೀನಿವಾಸ ಪ್ರಭು

ಸಂಗ್ಯಾ-ಬಾಳ್ಯಾ ಒಂದು ವಿಚಾರ

ಸಂಗ್ಯಾ-ಬಾಳ್ಯಾ ಉತ್ತರ ಕರ್ನಾಟಕ ಜಾನಪದ ರಂಗಭೂಮಿಯ ಒಂದು ಜನಪ್ರಿಯ ನಾಟಕ. ನಡೆದ ಘಟನೆಯೊಂದನ್ನು ಆಧರಿಸಿ ರಚಿತವಾದ ಈ ಗೀತನಾಟಕ 80-100 ವರ್ಷಗಳ ಹಿಂದೆ ತುಂಬಾ ಜನಪ್ರಿಯವಾಗಿದ್ದು, ಈಗ ಮತ್ತೆ ರಂಗದ ಮೇಲೆ ಪ್ರದರ್ಶಿತವಾಗುತ್ತಿದೆ. ವಾಸ್ತವತೆ ಇದರ ಹಿಂದಿನ ಜನಪ್ರಿಯತೆಗೆ ಕಾರಣವಾಗಿದ್ದರೆ, ಬಯಲಾಟ-ಗೀತನಾಟಕವಾದ್ದರಿಂದ ಇಂದು ಆಧುನಿಕ ರಂಗಭೂಮಿಯ ಮೇಲೆ ಒಂದು 'ನೂತನ' ಹಾಗೂ ರಂಜನೀಯ ಪ್ರಯೋಗವಾಗಿ ಗಮನಸೆಳೆದಿದೆ. ಜನಪ್ರಿಯತೆಯೇ ಶ್ರೇಷ್ಠತೆಯ ಮಾನದಂಡವಲ್ಲವಾದ್ದರಿಂದ ಸಂಗ್ಯಾ-ಬಾಳ್ಯಾ ಒಂದು ಶ್ರೇಷ್ಠಕೃತಿಯೇನೂ ಅಲ್ಲದಿದ್ದರೂ, ಕೆಲ ಗಮನಾರ್ಹವಾದ ಅಂಶಗಳು ಈ ಕೃತಿಯಲ್ಲಿ ಅಡಕವಾಗಿವೆ. ಈ ಕೃತಿಯನ್ನು ಚಂದ್ರಶೇಖರ ಕಂಬಾರರೊಂದಿಗೆ ಸಂಪಾದಿಸಿರುವ ಕೀರ್ತಿನಾಥ ಕುರ್ತಕೋಟಿಯವರು ಕೃತಿಯ ವಿಚಾರವಾಗಿ ಈ ಕೆಲವು ಅಭಿಪ್ರಾಯಗಳನ್ನು ಹೊರಚೆಲ್ಲಿದ್ದಾರೆ :

'ಸಂಗ್ಯಾ-ಬಾಳ್ಯಾ ರೂಪಕದ ಕತೆ ಮೇಲೆ ಕಾಣುವಂತೆ ದುರಂತವಾಗಿದೆ. ಆದರೆ ಹಾಗೆಂದು ರುದ್ರನಾಟಕಗಳ ಲಕ್ಷಣಗಳನ್ನು ಈ ಕೃತಿಯಲ್ಲಿ ಹುಡುಕಹೋಗುವದು ತಪ್ಪಾದೀತು. ನಾಟಕದ ಕೊನೆಯಲ್ಲಿ ಬರುವ ಸಂಗ್ಯಾನ ಕೊಲೆ ಗ್ರೀಕ್ ನಾಟಕಗಳಲ್ಲಿಯಂತೆ ನಿಷ್ಠುರವಾದ ದೈವವೊಂದರಿಂದ ನಿಯಮಿತವಾದದ್ದಲ್ಲ ; ಅಥವಾ ಶೇಕ್ಸಪಿಯರನ ರುದ್ರನಾಟಕಗಳಲ್ಲಿಯಂತೆ ನಾಯಕನ ಸಂಕೀರ್ಣ ಮನೋಭಾವದ ಫಲಶ್ರುತಿಯೂ ಅಲ್ಲ. ಕೊಲೆ ಎಷ್ಟೇ ಅಮಾನುಷವಾಗಿದ್ದರೂ ಅದೊಂದು ಹಚ್ಚ ಹಸಿಯ ವಾಸ್ತವ ಸಂಗತಿಯಾಗಿದೆ....ಹಾದರ ಮತ್ತು ಕೊಲೆ ಇವೆರಡು ಇಲ್ಲಿಯ ಪ್ರಮುಖ ಘಟನೆಗಳಾಗಿದ್ದು ಒಂದಕ್ಕೊಂದು ಬಿಡಿಸಬಾರದಂತೆ ಸಂಬದ್ಧವಾಗಿವೆ. ಇವುಗಳಲ್ಲಿ ಮೊದಲನೆಯದು ನಾಟಕದ ಶಿಖರವಾಗಿದ್ದು, ಎರಡನೆಯದು ಮೊದಲನೆಯದರ ಅನಿವಾರ್ಯವಾದ ಫಲವಾಗಿದೆ.... ಹಾದರಕ್ಕೆ ಕೊಲೆಯೇ ಶಿಕ್ಷೆಯಾಗಿರುವುದು ನಾಟಕದಲ್ಲಿಯ ಪಾತ್ರಗಳು ನಂಬಿರುವ ನೀತಿಗೆ ಉಚಿತವಾಗಿದೆ.'

ಕುರ್ತಕೋಟಿಯವರು ತಮ್ಮ ವಿಮರ್ಶೆಯಲ್ಲಿ ಎರಡು ಸಂದರ್ಭಗಳಲ್ಲಿ ದುಃಶಾಸನನ ವಿಚಾರವನ್ನು ಪ್ರಸ್ತಾಪಿಸಿರುವ ರೀತಿಯು ಸಂಗ್ಯಾನ ಪಾತ್ರವನ್ನು ಕುರಿತ ಅವರ ಕಲ್ಪನೆಯನ್ನು ಪರೋಕ್ಷವಾಗಿಯೇ ಸ್ಪಷ್ಟಪಡಿಸುತ್ತದೆ. ಆದರೆ ಕೃತಿ ಇಷ್ಟರಮಟ್ಟಿಗಿನ ಸರಳೀಕರಣಕ್ಕೆ ದಕ್ಕುವುದಿಲ್ಲ ಎಂಬುದು ನನ್ನ ಭಾವನೆ. ಮೇಲ್ನೋಟಕ್ಕೆ ಅತ್ಯಂತ ಸರಳ-ನೇರ ನಿರೂಪಣೆಯುಳ್ಳ ಕೃತಿಯಾದರೂ ಒಂದೆರಡು ಮಹತ್ವದ ಅಂಶಗಳು ಕೃತಿಯಲ್ಲಿ ಅಂತರ್ಗತವಾಗಿರುವುದರಿಂದ ಬಹಳ ಸುಲಭವಾಗಿ 'ಸಂಗ್ಯಾ-ಬಾಳ್ಯಾ ರುದ್ರನಾಟಕವಾಗಲಾರದು' ಎಂದು ಹೇಳಿಬಿಡುವುದು ಆತುರದ ತೀರ್ಮಾನವಾಗುತ್ತದೆ.

ಸಂಗ್ಯಾ-ಬಾಳ್ಯಾ ಕೃತಿಯಲ್ಲಿ ಅತ್ಯಂತ ಸ್ಪಷ್ಟವಾಗಿ ಎರಡು ಸಂಬಂಧಗಳು ಹೆಣೆದುಕೊಂಡಿವೆ : ಒಂದು, ಸಂಗ್ಯಾ-ಗಂಗಿಯರ ಪ್ರಣಯ ಹಾಗೂ ತತ್ಪರಿಣಾಮವಾದ ಕೊಲೆ; ಎರಡನೆಯದು ಸಂಗ್ಯಾ-ಬಾಳ್ಯಾ ಇವರ

ಸ್ನೇಹ ಸಂಬಂಧ ಹಾಗೂ ತತ್ಪರಿಣಾಮವಾದ ಕೊಲೆ. ಸಂಪೂರ್ಣ ಭಿನ್ನ ಸಂಬಂಧಗಳೇ ಆದರೂ ಇವೆರಡೂ ಕೃತಿಯಲ್ಲಿ ಅವಿಭಾಜ್ಯವಾಗಿ ಹೆಣೆದುಕೊಂಡುಬಿಟ್ಟಿವೆ. ಕುರ್ತುಕೋಟಿಯವರು ತಮ್ಮ ವಿಮರ್ಶೆಯಲ್ಲಿ ಕೇವಲ ಸಂಗಣ್ಣ–ಗಂಗಿಯರ ಪ್ರಣಯ ಪ್ರಸಂಗವನ್ನು ಮಾತ್ರ ಗಮನಿಸುತ್ತಾರೆ. ಸಂಗ್ಯಾ–ಬಾಳಣ್ಣರ ಸ್ನೇಹ, ಅದರಲ್ಲಿ ಅಡಕವಾಗಿರುವ ಸೂಕ್ಷ್ಮ ವಿಚಾರಗಳು ಅವರಿಗೆ ಮುಖ್ಯವಾಗಿಲ್ಲ. ಆದರೆ ನಾಟಕ ತನ್ನ ನಿಜವಾದ ರುದ್ರತೆಯ ಅಂಶಗಳನ್ನು ಮೈಗೂಡಿಸಿಕೊಂಡಿರುವುದು ಇವರಿಬ್ಬರ ಸಂಬಂಧ ಹಾಗೂ ಅವರ ವಿಷಮತೆಯಲ್ಲಿಯೇ ಎಂಬುದನ್ನು ಗಮನಿಸಬೇಕು.

ಸಂಗ್ಯಾನ ವಿಶ್ವಾಸ–ಸ್ನೇಹಗಳಿಗೆ ಪ್ರತಿಯಾಗಿ ಬಾಳಣ್ಣನ ವಿಶ್ವಾಸಘಾತ–ದ್ರೋಹಗಳು ಒಡೆದು ತೋರುವಂತೆ ಕೃತಿಯಲ್ಲಿ ಚಿತ್ರಿತವಾಗಿವೆ. ಮೊದಲಿನಿಂದ ಸಂಗ್ಯಾನ ಆಶ್ರಯದ ನೆರಳಲ್ಲೇ ಬೆಳೆದ ಬಾಳಣ್ಣ ಕೊನೆಯಲ್ಲಿ ಈರಣ್ಣನ ಬೆದರಿಕೆ–ಪ್ರಲೋಭನೆಗಳಿಗೆ ಸುಲಭವಾಗಿ ಬಗ್ಗಿಬಿಡುತ್ತಾನೆ; 'ನೂರಾರು ರೂಪಾಯಿ ಕೊಡರೆಪ್ಪಾ ಕೈಯಾಗ, ಮಸಿ ಹೊಲಾ ಎತ್ತಾ ಬಂಡಿ ಬರೆದು ಕೊಡಿರಿ ಈಗಾ' ಎಂದವನೇ ಸಂಗ್ಯಾನನ್ನು ಅವರಿಗೊಪ್ಪಿಸಲು ತೀರ್ಮಾನಿಸಿ ಬಿಡುತ್ತಾನೆ. ಹಿಂದೆ ಗಂಗಿ ಸಂಗಣ್ಣನನ್ನು ಒಲಿಯಲು ನಿರ್ಧರಿಸಿದಾಗ ಸಂಗ್ಯಾನೇ ಪಾಪಭೀತಿಯಿಂದ ಹಿಂಜರಿದರೂ ಹಿಡಿದ ಕೆಲಸ ಬಿಡಬಾರದೆಂದು ಅವನನ್ನು ಪ್ರಚೋದಿಸಿದ್ದವನು ಬಾಳಣ್ಣನೇ. ಗಂಗಾ ಸಂಗ್ಯಾನ ಜೀವವುಳಿಸುವ ಬಯಕೆಯಿಂದ ಬೈಲವಾಡಕ್ಕೆ ಬರಬೇಡಿರೆಂದು ಅವನಿಗೆ ಬರೆಯಿಸಿ ಕಳಿಸಿದ ಪತ್ರ ಬಾಳಣ್ಣನ ಕೈಸೇರಿ, ಅವನು ಅದನ್ನು ಹರಿದು, ಬೈಲವಾಡಕ್ಕೆ ನಾಗರ ಪಂಚಮಿಗೆ ಬರಬೇಕೆಂದು ಗಂಗಿ ಬರೆದ ಹಾಗೆ ತಾನೇ ಒಂದು ಪತ್ರ ಬರೆದು ಸಂಗಣ್ಣನಿಗೆ ಕೊಡುತ್ತಾನೆ. ದುಃಸ್ವಪ್ನ ಅಪಶಕುನಗಳಿಂದ ಪೀಡಿತನಾದ ಸಂಗ್ಯಾನನ್ನು ಗಂಗಿಯ ನೆನಪಿನಿಂದ ಪ್ರಚೋದಿಸಿ ಕರೆದುಕೊಂಡು ಹೋಗುವವನೂ ಅವನೇ. ಬೈಲವಾಡದಲ್ಲಿ ಗಂಗಿ ಸಂಗ್ಯಾನನ್ನು ಸಂಧಿಸಿ ವೀರಣ್ಣ-ಬಾಳ್ಯಾರ ಹಂಚಿಕೆಯನ್ನು ತಿಳಿಹೇಳಿದರೂ ಸಂಗನಿಗೆ ತನ್ನ ಗೆಳೆಯನ ಮೇಲೆ ಅಪಾರ ನಂಬಿಕೆ, ವಿಶ್ವಾಸ: 'ಚಿಕ್ಕಂದಿರತ ಕೂಡಿದ ಮೈತ್ರಿ ಅಗಲಿಸಬೇಕಂತಿ___ಇಸವಾಸ ಗೆಳಿತಾನ ಭಾಳ್ಯೆತಿ ಬಾಳ್ಯಂದಾ' ಎಂದು ನುಡಿದು ಗೆಳೆಯನೊಡನೆ ತೆರಳುತ್ತಾನೆ. ಮುಂದೆ ಬಾಳಣ್ಣನ ನೆರವಿನಿಂದ ಈರಣ್ಣ ಮತ್ತು ಅವನ ತಮ್ಮಂದಿರು ಸಂಗ್ಯಾನ ಕೊಲೆ ಮಾಡುವಾಗ, ಬಾಳಣ್ಣನನ್ನು ಕುರಿತು 'ಸಾಯೂತನಕ ಇರಲಿ ಪ್ರೀತಿ ನನ್ನ ಮ್ಯಾಗ', 'ಇಸವಾಸ ಗೆಳಿತಾನ ಭಾಳ್ಯೆತಿ ಬಾಳ್ಯಾಂದಾ' ಎಂದಿದ್ದ ಸಂಗ್ಯಾನ ಮಾತುಗಳು ಮತ್ತು ಅದರ ಹಿಂದಿನ ನಂಬಿಕೆ ಎಲ್ಲವೂ ದುರಂತ ವ್ಯಂಗ್ಯವಾಗಿ ಪರಿಣಮಿಸಿಬಿಡುತ್ತವೆ. ಸಂಗ್ಯಾನ ನಂಬಿಕೆಗಳ ಹಿನ್ನೆಲೆಯಲ್ಲಿ ಬಾಳಣ್ಣನ ದ್ರೋಹ ಕಣ್ಣಿಗೆ ಬಡಿಯುವ ರೀತಿಯಲ್ಲಿದ್ದು, ಸಂಗ್ಯಾನ ಅಸಹಾಯ ಸ್ಥಿತಿಯ ಬಗೆಗೆ ಮರುಕವುಕ್ಕಿಸುತ್ತದೆ.

ಇನ್ನು ಕೃತಿಯ ಕೇಂದ್ರದಲ್ಲಿರುವ ನೈತಿಕ ಸಮಸ್ಯೆ–ಸಂಗ್ಯಾ ಹಾಗೂ ಗಂಗಿಯರ ಸಂಬಂಧವನ್ನು ಕುರಿತಾದ್ದು. ಯಾವುದೇ ಸಮಾಜ ತನ್ನದೇ ಆದಂತಹ ನೈತಿಕ ಮೌಲ್ಯಗಳನ್ನು ಹೊಂದಿರುತ್ತದೆ, ಆ ಮೌಲ್ಯಗಳ ಗಡಿಗಳಲ್ಲಿ ಜನತೆಯನ್ನು ನಿಯಂತ್ರಿಸುತ್ತದೆ. ಆದರೆ ಈ ನೈತಿಕ ಮೌಲ್ಯಗಳೂ ಕೂಡಾ ತೀರಾ ಮೂಲಭೂತವಾದುವು ಕೆಲವನ್ನು ಬಿಟ್ಟರೆ–ಸಮಾಜದಿಂದ ಸಮಾಜಕ್ಕೆ ವ್ಯತ್ಯಾಸವಾಗುತ್ತಾ ಹೋಗುತ್ತವೆ. ಅಂದರೆ, ಒಂದು ಸಮಾಜದ ಚೌಕಟ್ಟಿನಲ್ಲಿ ಸಹಜ ಸಾಧಾರಣವಾಗಿ ಘಟಿಸಿಬಿಡಬಹುದಾದ ಘಟನೆ ಮತ್ತೊಂದು ಚೌಕಟ್ಟಿನಲ್ಲಿ ಪಾಪವಾಗಿಬಿಡಬಹುದು. ಸಂಗ್ಯಾ–ಬಾಳ್ಯದಲ್ಲಿನ ಪ್ರಣಯ ಸಮಸ್ಯೆ ಸಹಾ ಇಂಥದೇ ಗುಂಪಿಗೆ ಸೇರುವಂತಹುದು. ಅಂದರೆ ಸಮಸ್ಯೆ ತನ್ನ ಸಾರ್ವಜನೀನ–ಸಾರ್ವದೇಶಿಕ ಮುಖವನ್ನು ಕಳೆದುಕೊಂಡಂತಾಯಿತು. ಕೃತಿಯನ್ನು ಓದಿದಾಗಲಾಗಲೀ ರಂಗದ ಮೇಲೆ ನಾಟಕವನ್ನು ನೋಡಿದಾಗಲಾಗಲೀ ಸಂಗಣ್ಣನ ಬಗ್ಗೆ ಉಕ್ಕುವ ನಮ್ಮ ಸಹಾನುಭೂತಿಗೆ ಪ್ರಾಯಶಃ ಇದೂ ಒಂದು ಕಾರಣವಾಗಬಹುದು—ಎಂದು ಹೇಳಿದರೆ, ಹಾದರದ ಸಮರ್ಥನೆ ಮಾಡಿದಂತೇನೂ ಆಗುವುದಿಲ್ಲ. ಇದಕ್ಕಿಂತ ಮುಖ್ಯವಾಗಿ ಸಂಗ್ಯಾ ಗಂಗಿಯರ ಸಂಬಂಧ ಹಾದರ ಎನ್ನುವುದಕ್ಕಿಂತ ಪ್ರೇಮಿಗಳ ಮಿಲನ ಎಂದು ಸೂಚಿಸುವಂಥ ಅನೇಕ ಘಟನೆಗಳು ನಾಟಕದ ಶಿಲ್ಪದಲ್ಲಿಯೇ ಅಡಕವಾಗಿವೆ.

ಸಂಗ್ಯಾ ಸುಂದರ–ಶ್ರೀಮಂತ ತರುಣ. ಈರ್‍ಯನ ಹೆಂಡತಿಯಾದ ಗಂಗಿ ಅಪಾರ ರೂಪವತಿ. ಅವಳ

ರೂಪಕ್ಕೆ ಸಂಗ್ಯಾ ಸಹಜವಾಗಿಯೇ ಮರುಳಾದ. "ಕೈಯ ಮುಗಿವೆ ಕೈಯ ಮುಗಿವೆ ಮಾಡು ಗೆಣೆತಾನಾ, ಕಾಲ ಬೀಳುವೆ ಕಾಲ ಬೀಳುವೆ ತೋರಿಸು ದಯಾ ಕರುಣಾ"—ಜಿಗುಪ್ಸೆ ಹುಟ್ಟಿಸುವಷ್ಟರ ಮಟ್ಟಿಗಿನ ಸಂಗ್ಯಾನ ಈ ದೈನ್ಯ, ಗಂಗಿಯ ಮೇಲಣ ಅವನ ಹುಚ್ಚನ್ನು ತೋರಿಸುತ್ತದೆ. ಆದರೆ ಗಂಗಿ ಯಾವುದಕ್ಕೂ ಜಗ್ಗುವುದಿಲ್ಲ, ಖಡಾಖಂಡಿತವಾಗಿ ನಿರಾಕರಿಸಿಬಿಡುತ್ತಾಳೆ. ಆದರೆ ಈ ಎಲ್ಲ ನಿರಾಕರಣೆಯ ಹಿಂದೆ ಇರುವುದು ದೃಢಮನಸ್ಸಿನ ನಿರ್ಧಾರವಲ್ಲ, ಪರಿಸರ-ಗಂಡ ಇವರ ಬಗೆಗಿನ ಹೆದರಿಕೆ. ಪರಮ್ಮ ಸುಳ್ಳುಸುದ್ದಿ ಹರಡುತ್ತೇನೆಂದು ಹೆದರಿಸಿದ ಒಡನೆ, ಈಗಾಗಲೇ ಸಂಗ್ಯಾನ ರೂಪಿಗೆ ಅರ್ಧ ಸೋತಿದ್ದ ಗಂಗಿ, ಅವನೊಡನೆ ಸೇರಲು ಥಟ್ಟನೆ ಒಪ್ಪಿಕೊಂಡುಬಿಡುತ್ತಾಳೆ. ತಾನು ಮನಸಾರೆ ಮೆಚ್ಚಿದ ಸಂಗ್ಯಾನೊಡನೆ ಬೆರೆಯಲು ಗಂಗಿಗೆ ಪರಮ್ಮನ ಹೆದರಿಕೆ ಒಂದು ಉಪಾಯವಾಗುತ್ತದೆ, ಅಷ್ಟೇ. ಇದರ ಜತೆಗೆ ಕೃತಿಯಲ್ಲಿ ಎಲ್ಲಿಯೂ ಈರ್ಯಾ-ಗಂಗಿಯರ ದಾಂಪತ್ಯ ಸುಖಕರವಾಗಿತ್ತೆಂಬುದಕ್ಕೆ ನಿದರ್ಶನಗಳಿಲ್ಲ. ಮಕ್ಕಳಿಲ್ಲದ ಹೆಣ್ಣು ಗಂಗಿ, ಗಂಡ ಊರಿಗೆ ಹೊರಟು ನಿಂತಾಗ, 'ಮೂರಂತಸ್ತಿನ ಮಾಲಿಯೊಳು ನಾ ಒಬ್ಬಳೇ ಇರಲ್ಹ್ಯಾಂಗ' ಎಂದು ಮಾತ್ರವೇ ಶೋಕಿಸುತ್ತಾಳೆ! ಕೊನೆಯಲ್ಲಿ ಅವಳು ಹೇಳುವ 'ಸೇರಲಾರದ ಗಂಡ ಹಾವರ ಹೊರಿಸಿದನೋ' ಎಂಬ ಮಾತು ಕೂಡಾ ಈ ಕಡೆಗೇ ಬೊಟ್ಟುಮಾಡಿ ತೋರಿಸುತ್ತದೆ. ಹೀಗೆ ರೂಪವತಿಯಾದ-ಮಕ್ಕಳಿಲ್ಲದ ಹೆಣ್ಣೊಂದು ತನ್ನ ಗಂಡನಿಲ್ಲದ ಹೊತ್ತಿನಲ್ಲಿ ಸಂಗ್ಯಾನಂಥ ಸುಂದರ ತರುಣನಿಗೆ ಮರುಳಾದದ್ದು ಸಹಜವೆನ್ನಿಸಿಬಿಡುತ್ತದೆ. ಮುಂದೆ ಈರ್ಯಾ ಗಂಗಿಯನ್ನು ಮನೆಬಿಟ್ಟು ಓಡಿಸಿದ ನಂತರ, ಗಂಗಿ ತನ್ನ ಬಾಳು ಅಗಡಾದದ್ದನ್ನು ಮರೆತು ಸಂಗ್ಯಾವನ್ನು ಕೊಲೆಯಿಂದ ಉಳಿಸಲು ಪ್ರಯತ್ನಿಸುತ್ತಾಳೆ. ಅವರಿಬ್ಬರಲ್ಲಿ ಮೊದಲಿನ ಆಕರ್ಷಣೆಯಾಗಲೀ ಉನ್ಮಾದವಾಗಲೀ ಇಲ್ಲ. ಅದರ ಬದಲಾಗಿ ಮೃದುತ್ವ ಅವರಿಬ್ಬರ ಅಂತರಂಗದಲ್ಲಿ ತುಂಬಿಕೊಂಡಿದೆ. ಈ ಕಾರಣಗಳಿಗಾಗಿಯೇ 'ಸಂಗ್ಯಾನ ಪ್ರಾಣ ಸುಳ್ಳ ತಕ್ಕೊಂಡೆವೊ ನಾವಾ' ಎಂದು ಪ್ರಾಣಭಯದಿಂದ ಈರ್ಯಾ ನುಡಿದ ಮಾತು ಓದುಗ-ಪ್ರೇಕ್ಷಕನ ಎದೆಯಲ್ಲಿ ಮಾರ್ನುಡಿಗೊಳ್ಳುವ ಸಾಧ್ಯತೆಯಿರುವುದು. ಒಟ್ಟಿನಲ್ಲಿ ಇದು ಬೇರೆ ಬೇರೆ ಸಮಾಜದ ರೀತಿನೀತಿಗಳು-ಮನೋಧರ್ಮಗಳ ವ್ಯಕ್ತಿಗಳ ಪರಿಭಾವನೆಗೆ ಬೇರೆ ಬೇರೆಯಾಗಿಯೇ ದಕ್ಕುವ ವಿಚಾರ ಎಂದಷ್ಟನ್ನಂತೂ ಖಚಿತವಾಗಿ ಹೇಳಬಹುದು.

ಸಂಗ್ಯಾನ ಪಾತ್ರದ ಬಗ್ಗೆಯೇ ನೋಡುವುದಾದರೆ, ಮೇಲ್ನೋಟಕ್ಕೆ ತುಂಬ ಸರಳವ್ಯಕ್ತಿತ್ವ ಆತನದೆಂಬಂತೆ ಕಂಡುಬಂದರೂ, ಅಂತರಂಗದಲ್ಲಿ ಗೊಂದಲಗಳಿಂದ ತುಂಬಿದವನು. 'ಈ ಜನುಮದಾಗ ಏನತೀ ಮೂರು ದಿನದ ಸಂತಿ' ಎಂದು ತತ್ತ್ವ ಹೇಳುತ್ತಿದ್ದ ವ್ಯಕ್ತಿ, ಈರಣ್ಣನ ಕಾಲುಕಾಲಿಗೆ ಬಿದ್ದು ಪ್ರಾಣಭಿಕ್ಷೆ ಬೇಡಿಕೊಳ್ಳುತ್ತಾನೆ! ಗಂಗಿಯ ಬಗ್ಗೆ ಅತ್ಯುತ್ಕಟ ಪ್ರೇಮೋನ್ಮಾದವನ್ನು ಮೆರೆದವನು, ಇದ್ದಕ್ಕಿದ್ದಂತೆ ವಿರಾಗಿಯಾಗಿ ರಾವಣನ ದುರ್ಗತಿಯ ಬಗ್ಗೆ ಚಿಂತಿಸುತ್ತಾನೆ! ಗಂಗಿ ಈರಣ್ಣನಿಂದ ಸಂಗ್ಯಾನನ್ನು ಉಳಿಸುವ ಸಲುವಾಗಿ ಅವನನ್ನು ಮುಚ್ಚಿಡಲು ಯತ್ನಿಸಿದಾಗ 'ಹೊಂಗಲದೂರಾಗೆ ಬೆಳೆದ ಹಡುಗ ಬಚ್ಚಲಾಗ ಹ್ಯಾಂಗ ಡೊಗ್ಗಲೆ....ಚಾಪ್ಯಾಗ ಹೆಂಗ ಡೊಗ್ಗಲೆ' ಎಂದು ಪರಾಕ್ರಮವನ್ನು ಮೆರೆದವನು 'ಒಂದ ಹೆಣ್ಣಿಗೆ ನಾನು ಎರಡು ಹೆಣ್ಣು ಮಾಡುವೆನು, ಹೊಂಗಲದೂರಾಗೆ ಬೇಡಿದ್ದ ಕೊಡುವೆನು' ಇತ್ಯಾದಿಯಾಗಿ ಈರ್ಯನನ್ನು ಯಾಚಿಸುತ್ತಾನೆ! ಹೀಗಾಗಿ ಅವನ ಸ್ವಭಾವದಲ್ಲಿ ಏನೂ ಸಂಕೀರ್ಣತೆಯಿಲ್ಲ, ಕೊನೆಯವರೆಗೂ ಅವನಲ್ಲಿರುವ ಗುಣವೆಂದರೆ ಧೈರ್ಯವೊಂದೇ' ಎಂಬ ಕುರ್ತುಕೋಟಿಯವರ ಅಭಿಪ್ರಾಯ ಕೂಡಾ ಅಷ್ಟು ಸಾಧುವಾದ್ದಲ್ಲ. ವಾಸ್ತವವಾಗಿ ಸಂಗ್ಯಾನ ಧೈರ್ಯ ಅವನ ಸಂಪತ್ತು-ದೌಲಿನ ಮೂಲವಾದ್ದೇ ಹೊರತು ತಾತ್ತ್ವಿಕವಾದ್ದಲ್ಲ. ಮಹಾ ಅಂಜುಬುರುಕನಾಗಿ, ಸಂಕೀರ್ಣವಲ್ಲದಿದ್ದರೂ ಗೊಂದಲಗಳಿಂದ ತುಂಬಿದ ವ್ಯಕ್ತಿಯಾಗಿ ಆತ ಕೃತಿಯಲ್ಲಿ ಚಿತ್ರಿತನಾಗಿದ್ದಾನೆ.

ಇನ್ನು ಉದ್ದೇಶಪೂರ್ವಕವಾಗಿ ಎಳೆದು ತಂದಂತಿದ್ದರೂ ಕತೆಗೆ ಒಂದು ತಿರುವು ಕೊಡುವ ಕೊರವಂಜಿಯ ಪ್ರಸಂಗ ದೈವದ ಮೂರ್ತ ಪ್ರವೇಶ ಎನ್ನಬಹುದಾದರೆ, ಗಂಗಿ ಬರೆದು ಕಳುಹಿಸಿದ ಪತ್ರ ಸಂಗ್ಯಾನ ಬದಲು ಬಾಳಣ್ಣನ ಕೈ ಸೇರಿದ್ದು ವಿಧಿಯ ಕೈವಾಡವೇ ಸರಿ-ಎಂದೂ ಸಾಧಿಸಿಬಿಡಬಹುದು ಒಟ್ಟನಲ್ಲಿ ರುದ್ರನಾಟಕದ ಒಂದೆರಡು ಎಳೆಗಳನ್ನಾದರೂ ಈ ಕೃತಿಯಲ್ಲಿ ಗುರುತಿಸಬಹುದು ಎಂದರೆ ತಪ್ಪಾಗಲಾರದು.

ಕೆ. ಆರ್. ಲಿಂಗಪ್ಪ

ಜಾನಪದ ಸಾಹಿತ್ಯದಲ್ಲಿ ಜನಜೀವನ

ಸಾಹಿತ್ಯಕ್ಕೆ ಸೂತ್ರವನ್ನು ಹೇಳಿದವರು ಅದು ಜನಜೀವನದ ಪ್ರತಿಬಿಂಬ ಅಂದರು. ಇಂತಹ ನೈಜ ಜೀವನದ ವಿವಿಧ ಮುಖಗಳನ್ನು ನಾವು ಕಾಣಬೇಕಾವಲ್ಲಿ ಯಾವ ಭಾಷೆಯಲ್ಲೇ ಆಗಲಿ ಜಾನಪದ ಸಾಹಿತ್ಯಕ್ಕೇ ಬರಬೇಕು. ಅದು ಸಮಸ್ತ ಸಾಹಿತ್ಯದ ಮೂಲಾಧಾರ; ಅದನ್ನು ಹಾಡಿದವರು ಅಕ್ಷರಸ್ಥರಲ್ಲವೇ ಅಲ್ಲ; ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳು. ಆಡುಮಾತಿನಲ್ಲಿ ನಾಡಜನತೆಯ ಹೃದಯಸ್ಥ ಭಾವನೆಗಳನ್ನು ಪ್ರತಿಬಿಂಬಿಸಿದರು. ತಿಳಿ ಮಾತಿನಲ್ಲಿ. ಸವಿಸೊಲ್ಲಿನಲ್ಲಿ ನಮ್ಮ ಜನತೆಯ ಜೀವನದ ವಿವಿಧ ಮುಖಗಳ ಬಗ್ಗೆ ಅಂತಃಕರಣ ಪೂರ್ವಕವಾಗಿ ಅವರು ವಿಶ್ಲೇಷಿಸಿದರು. ಇದರ ಮೋಡಿಯನ್ನು ಒಮ್ಮೆ ಹಾಡಿ, ನೋಡಿ, ಕೇಳಿವರೆ ಸಾಕು; ಅದನ್ನು ಪುನಃ ಪುನಃ ಉಜ್ಜಿ, ಜಜ್ಜಿ, ಅಗೆದು, ಬಗೆದು, ಜಗಿದು ನೋಡಬೇಕೆನಿಸುತ್ತದೆ. ಜಾನಪದದ ಮೋಡಿಯೇ ಹಾಗೆ! ಜೀವನದ ಅನೇಕ ಮುಖಗಳ ವಿಶ್ಲೇಷಣೆ ಅಲ್ಲಿ ಇರುವಂತೆ, ಅವುಗಳಿಗೆ ಪರಿಹಾರವೂ ಇದೆ. ಚಿರಂತನವಾದ ಜೀವನದ ಮೌಲ್ಯಗಳನ್ನು ಕುರಿತ ವಸ್ತು ವಿನ್ಯಾಸವೂ ಅಲ್ಲಿ ಎದ್ದು ಕಾಣುತ್ತದೆ.

ಅನುಭವವೇ ಜೀವಾಳವಾದ ಜಾನಪದ ಸಾಹಿತ್ಯ ಎಲ್ಲಿದೆ, ಎಷ್ಟಿದೆ ಇದಕ್ಕೆ ಮರುಪ್ರಶ್ನೆಯೇ ಉತ್ತರವಾಗಬೇಕು. ಎಲ್ಲಿಲ್ಲಿ ಜಾನಪದ ಸಾಹಿತ್ಯ? ಮನೆಮನೆಯಲ್ಲಿ, ಮನಮನದಲ್ಲಿದೆ ಜಾನಪದ ಸಾಹಿತ್ಯ. ಅದರ ಪ್ರಕಾರಗಳು ಒಂದೇ, ಎರಡೇ; ನೂರಾರು; ಸಾವಿರಾರು. ಗರತಿಯ ಹಾಡುಗಳು, ಹೆಣ್ಣುಮಕ್ಕಳ ಪದಗಳು, ಬೀಸುವ ಕಲ್ಲಿನ ಪದಗಳು—ಎಲ್ಲಾ ಒಂದೇ. ಇದೇ ಜಾನಪದ ಸಾಹಿತ್ಯದ ಪ್ರಮುಖ ಹಾಗೂ ಹೃದಯಂಗಮವಾದ ಜೀವನಾನುಭವದ ಭಾಗ. ಇವಲ್ಲದೆ ಪ್ರಾದೇಶಿಕವಾಗಿ ಎಷ್ಟೋ ಬಗೆಯ ಹಾಡುಗಳಿವೆ. ಕೊಂತಮ್ಮನ ಪದ, ಕಳೆ ಕೀಳುವ ಪದ, ಬಿತ್ತುವ ಪದ, ಕೊಯ್ಲಿನ ಹಾಡುಗಳು, ಗಾಡಿಪದ, ಸುಗ್ಗಿ ಕುಣಿತದ ಹಾಡು, ಶೋಭಾನೆಗಳು, ಮಾನವಮಿ ಪದಗಳು, ಮಂಗಳಾರತಿಗಳು, ಕೋಲಾಟದ ಹಾಡುಗಳು, ಲಾವಣಿಗಳು, ಗೀಗೀಪದಗಳು, ಬೆಡಗಿನ ಹಾಡುಗಳು, ಗಾದೆಗಳು, ಹವ್ಯಕರ ಹಾಡುಗಳು—ಹೀಗೆ ಸಾಗುತ್ತದೆ ಈ ಪಟ್ಟಿ-ಒಂದೇ ಎರಡೇ! ನೂರಾರು ಬಗೆಯ ಹಾಡುಗಳು. ಇದು ಜೀವನಾನುಭವವನ್ನು ಹಾಡುವಲ್ಲಿಯೇ ಕಾವ್ಯದ ಚಿಲುಮೆಯೂ ಹೊರಹೊಮ್ಮಿತು. ಇಲ್ಲಿ ಮಿಂಚೂ ಇದೆ; ಬೆಳಕೂ ಇದೆ. ಎಲ್ಲ ಭಾಗಗಳಿಂದಲೂ ಕೆಲವನ್ನು ಕುರಿತು ಬರೆಯುತ್ತಾ ಹೋದರೂ ಅದು ಮುಗಿಯದ ಕತೆಯಾಗುತ್ತದೆ. ಕಾರಣ, ಗರತಿಯ ಹಾಡಿನಿಂದಲೇ ನನ್ನ ಈ ಲೇಖನವನ್ನು ಪ್ರಾರಂಭಿಸಿ ಅದರಿಂದಲೇ ಮುಗಿಸುತ್ತೇನೆ.

ಗರತಿಯ ಹಾಡಿನ ಸೃಷ್ಟಿಯ ಕಾರ್ಖಾನೆ ಜಾನಪದದ "ಬೀಸೆಕಲ್ಲು." ಅದು ಕನ್ನಡದ ಹೆಣ್ಣುಮಗಳಿಗೆ ಬರಿಯ ಕಲ್ಲಲ್ಲ; ಅದು ಅವಳ ತಾಯಿ; ಹೆತ್ತ ತಾಯಿಗೆ ಸಮಾನ. ದಿನನಿತ್ಯದ ಬದುಕಿನಲ್ಲಿ ಮೈಮುರಿಯೆ ಕೆಲಸ ಮಾಡಿ; ಇಡೀ ರಾತ್ರಿಯ ಸುಖನಿದ್ರೆಯನ್ನನುಭವಿಸಿ ಮುಂಜಾನೆ ಕನ್ನಡನಾಡಿನ ಹೆಣ್ಣುಮಗಳೊಬ್ಬಳು,

ಹೊತ್ತಾರೆ ಎದ್ದು ಕಣ್ಣು ಹೊಸೆಯುತ್ತ ಎದ್ದಿದ್ದಾಳೆ. ದಿನನಿತ್ಯಕ್ಕೆ ಬೇಕಾಗುವ ರಾಗಿಯನ್ನೋ, ಜೋಳವನ್ನೋ ಬೀಸಬೇಕಾಗಿದೆ. ಆಗಿನ್ನೂ ಮುಂಜಾನೆಯ ಸಮಯ. ಅದನ್ನು ನಮ್ಮ ಹಳ್ಳಿಗರು ಈ ರೀತಿ ಚಿತ್ರಿಸುತ್ತಾರೆ—

ಮುಂಗೋಳಿ ಕುಗ್ಯಾವೋ, ಮೂಡುಕೆಂಪ್ಪುರಿದಾವೋ ।
ಮಂಜುನಾಥಯ್ಯ ಸ್ವಾಮಿ ರಥವೇರಿ । ಬರುವಾಗ ।
ನಾವೆದ್ದು ಕೈಯ ಮುಗಿದೇವು ॥

"ಕೋಳಿ ಕೂಗುವ ಮುನ್ನ ಏಳಬೇಕಯ್ಯ" ಇದು ನಮ್ಮ ನಾಡಿನ ಜಾನಪದಸಂದೇಶ. "ಲೋಕದ ಚೇಷ್ಟೆಗೆ ರವಿ ಬೀಜವಾಗಿರುವುದನ್ನು" ಗ್ರಹಿಸಿ ಆತನಿಗೆ ಮೊದಲು ನಮಿಸುವ ನಮ್ಮವರ ಕಲ್ಪನೆಯೇ ಅನುಪಮ. ಮೂಡಣ ದಿಕ್ಕಿನ ಉದಯ ರವಿ ಸ್ವಾಮಿಗೆ ಮೊದಲ ನಮನ. ಆತನಿಗೆ ಕೈಯ ಮುಗಿದು ಮುಂದಿನ ಹವ್ಯಾಸ. ಅನಂತರ ತನ್ನೂರಿನ ಹಾಗೂ ಸಮಸ್ತ ದೇವತೆಗಳಿಗೂ ಶರಣು ಸಮರ್ಪಿಸುತ್ತಾಳೆ–

ಶರಣೆಂಬೆ ಗುರುವಿಗೆ, ಶರಣೆಂಬೆ ಶಿವನಿಗೆ ।
ಶರಣೆಂಬೆ ಶಿವನ ಮಡದಿ । ಗೌರಮ್ಮಗೆ ।
ಶರಣೆಂದು ಕಲ್ಲ ಹಿಡಿದೇವು॥

ಗಣಪ ಹಾಗೂ ಸರಸತಿಯರನ್ನೂ ಸ್ಮರಿಸುತ್ತಾಳೆ—

ಬಾಣಾವರದವೊಳಗೆ । ಬಾಗಿಲಲ್ಲಿರುವೋನೇ ।
ಬಾಲೆಯಮಗನೇ ಬೆನವಣ್ಣ । ಬೆಳ್ಳಿ ದೇವಾ ।
ಮೇಲಾದ ಪದನ ಬರುಕೊಡೋ ।
ಎಂಟೆಲೆ ಮಾವಿನ । ದಂಟನಾಗಿರುವೋಳೆ ।
ಗಂಟೆಯ ದನಿಗೆ ಒದಗೋಳೆ ಸರಸತಿಯೇ ॥
ಗಂಟಲ ತೊಡಿರ ಬಿಡಿಸಮ್ಮ ॥

ಜಾನಪದ ಸಾಹಿತ್ಯದ ಶ್ರೇಷ್ಠತೆಯನ್ನು ತನ್ನ ಮೊಲೆಹಾಲಿನಿಂದ ನನಗೆ ಮೈಗೂಡಿಸಿದ ನನ್ನ ಹೆತ್ತ ತಾಯಿ ಕಲ್ಲೇನ ಹಳ್ಳಿಯ ಪೂಜ್ಯಳಾದ ಶ್ರೀಮತಿ ಬಸಮ್ಮನನ್ನೂ ನಾನು ಇಲ್ಲಿ ನೆನೆಯುತ್ತೇನೆ–

ಕಲ್ಹೂಡಿ ನೆನದೇನು, ಕಲ್ಯಾಣದಯ್ಯನ ।
ಕಲ್ಲೇನಹಳ್ಳಿಯ ತಾಯಿ । ಬಸಮ್ಮನ ।
ಸೊಲ್ಲು ಸೊಲ್ಲಿಗೆ ನೆನದೇವೋ ।

ಈ ರೀತಿ ಹತ್ತಾರು ದೇವರಿಗೆ ಸ್ಮರಿಸಿ, ಹರಕೆ ಹಾಕಿ, ದಿನ ನಿತ್ಯದ ಬದುಕನ್ನು ಪ್ರಾರಂಭಿಸುವ ಮೊದಲು ಯಾರನ್ನು ನೆನೆಯಲಿ ? ಇದು ಅವಳ ಮುಖ್ಯ ಪ್ರಶ್ನೆ.

ಎದ್ದೊಂದು ಗಳಿಗೇಲಿ ! ಯಾರ್ಯಾರ ನೆನೆಯಾಲಿ !
ಎಳ್ಳು ಜೀರಿಗೆ ಬೆಳಿಯೋಳ ಭೂಮಿ ತಾಯ!
ಎದ್ದೊಂದು ಗಳಿಗೆ ನೆನದೇನ ॥

ಪ್ರಾತಃ ಸ್ಮರಣೀಯರು ಯಾರು ? ಹೆತ್ತ ತಾಯಿ ಮತ್ತು ನನ್ನನ್ನು ಹೊತ್ತ ಭೂಮಿ ತಾಯಿ. ಜನನೀ–ಜನ್ಮಭೂಮಿ ; ತಾಯಿ–ಭೂಮಿತಾಯಿ ; ತಾಯಿ ಮತ್ತು ಭೂತಾಯಿಯನ್ನು ನೆನೆ ; ಹೆತ್ತ ತಾಯಿ ಆದಿ ; ಮತ್ತು ಭೂತಾಯಿ ಅಂತ್ಯದ ಸಂಕೇತ. ಹೆತ್ತ ತಾಯಿಯ ಗರ್ಭದಿಂದ ಭೂಗರ್ಭದವರೆಗೆ—ಇಷ್ಟೇ ಮನುಷ್ಯ ಜೀವನದ ತುದಿ ಮೊದಲುಗಳು. ತಾಯಿಗರ್ಭಕ್ಕಿಂತ ಹಿಂದಿಲ್ಲ ಮತ್ತು ಅಂತ್ಯದ ನಂತರ ಭೂಗರ್ಭಕ್ಕಿಂತ ಮುಂದಿಲ್ಲ. ಒಂದು ಆದಿ ಮತ್ತೊಂದು ಮಾನವ ಜೀವಿತದ ಅಂತ್ಯ. ಆದ್ದರಿಂದ ಆದಿ, ಅಂತ್ಯ ಸ್ವರೂಪ ಹಾಗೂ ಸಂಕೇತಗಳಾದ ಹೆತ್ತ ತಾಯಿಯನ್ನು ನೆನೆ, ಭೂಮಿತಾಯಿಯನ್ನು ನೆನೆ—ಇದು ನಮ್ಮೆಲ್ಲರಿಗೆ ಜಾನಪದ ಜನತೆ ನೀಡಿದ ಜೀವನ ಸಂದೇಶ ಮತ್ತು ಕೃತಜ್ಞತೆಯ ಕುರುಹು.

ಅನಂತರ ಜೀವನದ ಹಲವು ಹತ್ತು ಮುಖಗಳನ್ನು ನೆನೆಯುತ್ತಾ ಬೀಸೆಕಲ್ಲು ತಿರುಗುತ್ತಾ ಹೋಗುತ್ತದೆ. ಕಾಯಕಶೀಲರಾದ ನಮ್ಮ ಜನ ಸತ್ಯ ಶುದ್ಧ ಕಾಯಕವನ್ನು ನಡೆಸಿ ನೂರ್ಕಾಲ ಬಾಳಿದವರು. ಮುಂಜಾನೆಯ ನಿಸರ್ಗದ ಸೊಬಗಿನಿಂದ ಪ್ರಾರಂಭವಾದ ಆಕೆಯ ಕಾಯಕದಲ್ಲಿ ಬೀಸೋಕಲ್ಲೇ ಪ್ರಧಾನ. ಅದು ಗರತಿಗೆ ಬರಿಯ ಕಲ್ಲಲ್ಲ ; ಅದು ಹೆತ್ತ ತಾಯಿಗೆ ಸಮಾನನೆಂದು ಹಿಂದೆಯೇ ಹೇಳಿದೆ.

ಕಲ್ಲವ್ವ ನನ ತಾಯಿ । ಮೆಲ್ಲವ್ವ ರಾಗಿಯ ।
ಜಲ್ಲುಜಲ್ಲನೆ ಉದುರವ್ವ । ನಾ ನಿನಗೆ ।
ಬೆಲ್ಲದಾರತಿಯ ಬೆಳಗೇನೆ ॥

ಉಪಕಾರ ಸ್ಮರಣೆ ಮಾನವ ಜೀವಿತದಲ್ಲಿ ಅಮೂಲ್ಯವಾದ ಗುಣ. ಇಲ್ಲದವಳೊಬ್ಬಳು ಇದ್ದವಳ ಮನೆಯಿಂದ ಬೀಸೋ ಕಲ್ಲೊಂದನ್ನು ತೆಗೆದುಕೊಂಡು ಬಂದು ಬೀಸಿ ಆದನಂತರ ಆ ಬೀಸೆಕಲ್ಲನ್ನು ವಾಪಸು ಕೊಡುವಾಗ ಹಾಡಿದ ಕೃತಜ್ಞತೆಯ ಸ್ಮರಣೆಯಿದು—

ಕಲ್ಲುಕೊಟ್ಟವ್ವಗೆ ಎಲ್ಲ ಭಾಗ್ಯವು ಬರಲಿ ।
ಪಲ್ಲಕ್ಕಿ ಮ್ಯಾಲೆ ಮಗ ಬರಲಿ ಆ ಮನೆಗೆ ॥
ಮಲ್ಲಿಗೆ ಮುಡಿಯೋ ಸೊಸೆ ಬರಲಿ ॥

ಇಂತಹ ಹಾಡುಗಳನ್ನು ಹಾಡಿದ ನಮ್ಮ ಜನಕ್ಕೆ ಭಾವನೆ, ಭಾಷೆ ಯಾವುದಕ್ಕೂ ಕೊರತೆಯಿದ್ದಿರಲಾರದು. ಭಾಷಾ ಬಂಧುರತೆ, ಪದಲಾಲಿತ್ಯ, ಹೃದಯಾಂತರಾಳದ ಆಸೆಯ ಪ್ರಕಟನೆ ಮತ್ತು ಜೊತೆಯಲ್ಲಿಯೇ ಅಲೆಅಲೆಯಾಗಿ, ಸೆಲೆಸೆಲೆಯಾಗಿ ತೇಲಿಬರುವ ಕಾವ್ಯ ಸೃಷ್ಟಿಯ ಸವಿ, ತನಿ–ಇದು ಜಾನಪದ ಶೈಲಿಗೆ ಮಿಾಸಲು.

ನಮ್ಮ ಹಳ್ಳಿಗರು ಅರ್ಥಮಾಡಿಕೊಂಡಂತೆ ಅವರ ಸಂಸಾರ ಜೀವನದ ಚಿತ್ರಣ ಇದು. ಇಲ್ಲಿ ಪ್ರಜ್ಞೆ ಇದೆ, ಪರಿಪೂರ್ಣತೆ ಇದೆ.

ತಾಯಿದ್ರೆ ತವರ್ಹೆಚ್ಚು । ತಂದಿದ್ರೆ ಬಳಗ್ಹೆಚ್ಚು ।
ಸಾವಿರಕೆ ಹೆಚ್ಚು ಪತಿಪುರುಷ । ಹೊಟ್ಟೆಯ ।
ಮಾಣಿಕದ ಹರಳು ಮಗ ಹೆಚ್ಚು ॥

ತಾಯಿಯಿದ್ದ ತವರಿನ ಬಗ್ಗೆ ನಮ್ಮ ಹೆಣ್ಣುಮಕ್ಕಳು ಜೀವನದ ರಸಪಾಕವನ್ನೇ ನಮ್ಮ ಮುಂದಿಟ್ಟಿದ್ದಾರೆ.ಯಾವ ಕವಿಯೂ ಇಷ್ಟು ಸಹಜ ಸುಂದರವಾಗಿ, ಸುಲಭ, ಸುಭಗವಾಗಿ ಹೇಳಲು ಸಾಧ್ಯವಿಲ್ಲವೇನೋ ಎನಿಸುತ್ತದೆ. ತೌರೆಂದರೆ ಏನು ? ಯಾವುದು ?

ಹೆಣ್ಣಿಗೆ ತವರೂರು, ರಸಬಾಳೆ ಹಣ್ಣಂತೆ ।
ಮಲೆನಾಡ ತುದುಬೆ ಜೇನಂತೆ । ತಾಯ ।
ಎದೆಹಾಲ ರುಚಿಯ ಸವಿದಂತೆ ॥

ಎದೆ ಹಾಲಿಗೆ ಸಮನಾದುದು ಭಗವಂತನ ಸೃಷ್ಟಿಯಲ್ಲಿ, ಇಲ್ಲವೆ ಮಾನವ ನಿರ್ಮಿತದಲ್ಲಿ ಯಾವುದೂ ಇಲ್ಲ. ಅದು ಅದೇ. ಹಾಗೆಯೇ ತಾಯಿಯಿದ್ದ ತವರಿಗೆ ಇನ್ನಾವುದೂ ಸರಿಸಾಟಿಯೆನಿಸದು. ತವರೂರಿಗೆ ಹೋಗುವುದೆಂದರೆ ಮನಸ್ಸಿನ ವೇಗಕ್ಕೆ ಕಾಲು ಸರಿಸಾಟಿಯಾಗಿ ಓಡುವುದಿಲ್ಲವಲ್ಲಾ ಎಂದು ಹೆಣ್ಣುಮಕ್ಕಳು ಅನ್ನುತ್ತಾರೋ ಏನೋ ! ಹೆತ್ತತಾಯಿಯನ್ನು ಕಾಣುವ ತವಕ ಹಾಗೂ ತಾನು ಆಡಿ ಬೆಳೆದ ಆಡುಂಬೊಲವನ್ನು ಕ್ಷಿಪ್ರವೇ ಮುಟ್ಟುವ ಹಂಬಲ ಮತ್ತು ಎಲ್ಲರ ನಡುವೆ ಎಷ್ಟು ಬೇಗ ತವರಿನಲ್ಲಿ ಇದ್ದೇನೋ ಎಂಬ ಕಾತರ–ಇಷ್ಟಲ್ಲದೆ ಆಗ ಇನ್ನೇನೂ ಕಾಣಿಸುವುದಿಲ್ಲ.

ತವರೂರ ದಾರೀಲಿ ಕಲ್ಲಿಲ್ಲ ಮುಳ್ಳಿಲ್ಲ ।
ಸಾಸಿವೆಯಷ್ಟು ಮರಳಿಲ್ಲ । ಬಾನಿಲಿ ।
ಬಿಸಿಲಿನ ಬೇಗೆ ಸುಡಲಿಲ್ಲ ॥

ಎಲ್ಲ ಇರುತ್ತದೆ. ಆದರೆ, ಹೆಣ್ಣು ಮಗಳ ತವಕ, ಆ ಬಿಸಿಲು, ಬೇನೆಗಳೆಲ್ಲವನ್ನೂ ನುಂಗಿರುತ್ತದೆ. ತವರಿಗೆ ಬಂದವಳು ಚೊಚ್ಚಲುಮಗುವನ್ನು ಹಡೆದು ಆ ವಂಶದ ಕುಡಿಯನ್ನು ಹೊತ್ತು ಗಂಡನಮನೆಗೆ ಹೊರಟ ದೃಶ್ಯ ಅನುಪಮ.

ತೊಟ್ಟಿಲ ಹೊತ್ತುಕೊಂಡು । ತೌರು ಬಣ್ಣ ಉಟ್ಟುಕೊಂಡು
ಅಪ್ಪಕೊಟ್ಟೆಮ್ಮೆ ಹೊಡಕೊಂಡು । ತಂಗ್ಯವ್ವ ।
ತಿಟ್ಹತ್ತಿ ತಿರುಗಿ ನೋಡ್ಯಾಳೋ ॥

ನಮ್ಮ ಜನ ಬಂಜೆಯರಾಗಿ ಅಳುತ್ತ ಹೋಗಿರಲಿಕ್ಕಿಲ್ಲ. ಅದಕ್ಕಾಗಿಯೇ ತೊಟ್ಟಿಲನ್ನು ತಲೆಯ ಮೇಲೆ ಹೊತ್ತು ಹೊರಟಿದ್ದಾಳೆ. ಹೊರಟ ಹೆಣ್ಣುಮಗಳು ತವರಿನವರು ಕೊಟ್ಟ ಬಣ್ಣ ಅಂದರೆ ಬಟ್ಟೆಯನ್ನು ಉಟ್ಟು ಹೊರಟಿದ್ದಾಳೆ. ಲಕ್ಷಾಧೀಶನ ಮನೆಗೆ ಮಗಳನ್ನು ಕೊಟ್ಟಿದ್ದರೂ ಸಹ–ಗಂಡ ಸಹಸ್ರಾರು ರೂ. ಬಾಳುವ ಸೀರೆಯನ್ನು ತಂದು ಕೊಟ್ಟಿದ್ದರೂ ಸಹ, ತವರಿನವರು ಸ್ಥಿತಿವಂತರಿಲ್ಲದಿದ್ದರೂ ಅವರು ಉಡಿಸಿದ ಸಾಮಾನ್ಯ ಹತ್ತು ರೂ.ನ ಸೀರೆಯೇ ಇರಲಿ ! ಅದನ್ನು ಮಾತ್ರವೇ ನಮ್ಮ ಹೆಣ್ಣುಮಕ್ಕಳು ಉಟ್ಟುಕೊಂಡು ತವರಿನಿಂದ ಹೊರಡುತ್ತಾರೆ. ಇದು ಇಂದೂ ಸತ್ಯ ; ಎಂದೆಂದೂ ಸತ್ಯ. ಅದರಲ್ಲಿ ಹತ್ತೆಂಟು ಕೋಟಿ ರೂ.ಗಳ ಪ್ರೇಮದ ಹಾಗೂ ಹರಕೆಯ ಕಣಕಣ ತುಂಬಿದೆ ; ಎಳೆಗಳಿರುತ್ತವೆ. ಆದ್ದರಿಂದ ತವರಿನವರು ಉಡಿಸಿದ ಸೀರೆ ಉತ್ತುಂಗ ; ಉನ್ನತಾದರ್ಶಗಳ ಹಾಗೂ ಮಮತೆಯ ಪ್ರತೀಕ.

ತವರನ್ನು ಬಿಟ್ಟ ಮೇಲೆ ಹೆಣ್ಣುಮಗಳಿಗೆ ಗಂಡನ ಮನೆಯೇ ನೆಲೆ. ಪತಿಯದೇ ಆಶ್ರಯ. ವಂಶದ ಕುಡಿಯಾದ ತನ್ನ ಕಂದನ ಬಗ್ಗೆ ಅವಳಿಗೆ ಎರಡರಿಯದ ಮಮತೆ. ಜಗತ್ತಿನ ಸಮಸ್ತ ಜೀವರಾಶಿಗಳೆಲ್ಲವೂ ತನ್ನ ಹೆತ್ತ ಕರುಳಿನ ಬಗ್ಗೆ ತೋರುವ ಆ ನಂಟು ವರ್ಣಿಸಲಾಗದ ಗಂಟು.

ತಾಯಿ ಮಕ್ಕಳ ದನಿಯು ತಾಳ ಬಾರಿಸಿದ್ಹಾಂಗ ।
ಜೋಡ ಕಿನ್ನೂರಿ ನುಡಿದ್ಹಾಂಗ ।
ಎಲ್ಲ ಮಕ್ಕಳ ಹಾಂಗೆ ಅಲ್ಲ ಕಣೆ ನನ್ನಯ್ಯ॥

ಇದು ತಾಯಿಯ ಮೊದಲ ಉದ್ಗಾರ. ಇಂತಹ ತ್ಯಾಗದ ಆತ್ಮಶ್ರೀಯೇ ನಮ್ಮೆಲ್ಲರನ್ನೂ ಉಳಿಸಿ, ಬೆಳೆಸಿರುವುದು. ಇದಲ್ಲದೆ ಸ್ವಲ್ಪ ಅಸಡ್ಡೆ ತಾಯಿಗೆ ಇದ್ದರೂ ಆ ಮಗುವಿನ ಕಥೆ ಮುಗಿದಂತೆಯೇ—ಅಷ್ಟೇ ಅಲ್ಲ–ಜಗತ್ತಿನ ಬೆಳವಣಿಗೆಯೇ ಮುಗಿದಂತೆ. ತನ್ನ ಕಂದನ ಹೊಟ್ಟೆ ಎಂದೂ ಭರ್ತಿಯಿರಬೇಕು. 'ತಾಯಿ ಹೊಟ್ಟೆ ನೋಡ್ತಾಳೆ–ಹೆಂಡತಿ ಪಟ್ಟೆ ನೋಡ್ತಾಳೆ' ಇದು ನಮ್ಮವರ ಗಾದೆ. ಮಗು ಎಳೆಯ ಗೆಳೆಯರೊಂದಿಗೆ ಆಟವಾಡಲು ಹೋಗಿದೆ. ಉಂಡಿಲ್ಲ. ಕೂಡಲೆ ಬಿಟ್ಟದ್ದನ್ನು ಬಿಟ್ಟು ತಾಯಿಗೆ ತನ್ನ ಕಂದನ ನೆನಪು. ಹೊರಗೆ ಬಂದು ಉಳಿದ ಮಕ್ಕಳನ್ನು ಕೇಳುತ್ತಾಳೆ.

ಆಡೋಮಕ್ಕಳಿರ, ನನ್ನರಗಿಣಿಯ ಕಾಣೇರ ।
ಕಂಡ ಮಕ್ಕಳಿರ ಕರತನ್ನಿ । ಕಂದಯ್ಯ ।
ಉಂಡ್ಹೋಗಲಿಲ್ಲ ಹಸಿದಾನು ॥

ಸ್ವಲ್ಪ ತಡವಾಗಲು ತನ್ನ ಕಂದನನ್ನೇ ಕೂಗಿ ಕರೆಯುತ್ತಾಳೆ.

ಬಾರಯ್ಯ ಬಾ ನನ್ನ, ಬಾಲ ಚಕ್ರವರ್ತಿ।
ನಾಲಿಗೆ ಮ್ಯಾಲೆ ಸರಸೋತಿ । ಇರುವಂತ
ನನ ಬಾಲ ಹಾಲ ಕುಡಿ ಬಾರೋ॥

ತನ್ನ ಕಂದನಿಗೆ ಸರಿಸಾಟಿಯಾದವರು ಇರುವುದಾದರೂ ಉಂಟೆ ? ಸಾಧ್ಯವೇ ಇಲ್ಲ. ಅವನ ರೂಪೇ ರೂಪ, ಮಾಟವೇ ಮಾಟ, ಆಟವೇ ಆಟ. ಆತನನ್ನು ನೋಡಿದಾಕ್ಷಣವೇ ಮುಗುದೆಯರಾದ ಬಾಲೆಯರಿಗೂ, ಹಡೆದರೆ ಇಂತಹ ಮಗನನ್ನು ಹಡೆಯಬೇಕೆಂಬ ಆಸೆ ಸ್ಫುರಿಸುವುದಂತೆ '

ಬಾಲ ಹನುಮನ ಮುಂದೆ। ಬಾಗಿ ಚಂಡಾಡೋನೆ।
ಬಾವುಲಿ ಕಿವಿಯ ನನ ಬಾಲನ । ಕಂಡರೆ ।
ಬಾಲೇರು ಬಸಿರ ಬಯಸ್ಯಾರು ॥

ಕಾವ್ಯಶ್ರೀಯ ದೃಷ್ಟಿಯಿಂದ ಇಂತಹ ಧ್ವನಿಪೂರ್ಣವಾದ ಮಾತನ್ನು ಆಡುವ ಜಾನಪದದ ಮೋಡಿ ಅನುಪಮವಾದುದೇ. ಇಂತಹ ಮಕ್ಕಳು ಬಯಲಿನಲ್ಲಿ ಆಡುತ್ತಿದ್ದರೆ ಅದನ್ನು ನೋಡಿ ನಲಿಯುವ ಆಸೆ ಯಾರಿಗಿಲ್ಲ! ಸನ್ಯಾಸಿಯೂ ಅದಕ್ಕೆ ಮಾರುಹೋಗುತ್ತಾನಂತೆ

ನನ್ನಯ್ಯನಂತೋರು ಹನ್ನೆರಡು ಮಕ್ಕಳು।
ಹೊನ್ನೆಯ ಮರದ ನೆರಳಲ್ಲಿ । ಆಡುವಾಗ ।
ಸನ್ಯಾಸಿ ಜಪವ ಮರೆತಾನು।

ಜಗತ್ತಿನಲ್ಲಿ ಅತಿ ಶ್ರೇಷ್ಠವಾದ ಗಾಳಿ ಇದಂತೆ

ಯಾತಯಾತರ ಗಾಳಿ । ಎಲೆಯ ತೋಟದ ಗಾಳಿ ।
ಸುತ್ತಲಾ ಗಾಳಿ ಸುಳಿಗಾಳಿ । ಕಂದಯ್ಯ ।
ತೊಟ್ಟೀಲ ಗಾಳಿ ಮನೆ ತುಂಬ ॥

ಹೀಗೆ ಅವಳ ಹಾಡು ಅನೇಕ–ಅನಂತ.

ಸಾಂಸಾರಿಕ ಜೀವನದ ಅನೇಕ ಮುಖಗಳ ಉತ್ತುಂಗ ಪರಿಚಯ ಗರತಿ ಹಾಡುಗಳಲ್ಲಿ ಪರಿಪೂರ್ಣವಾಗಿ ಬಂದಿದೆ. ಇಲ್ಲಿ ಅವೆಲ್ಲವನ್ನೂ ಸೂಕ್ಷ್ಮವಾಗಿಯಾದರೂ ಹೇಳಲು ಶಕ್ಯವಿಲ್ಲವಾಗಿದೆ. ಗಂಡನ ಮನೆ ಎಷ್ಟೇ ಹಿರಿದಾದರೂ, ಹೆಣ್ಣು ಹಣ್ಣು ಹಣ್ಣು ಮುದುಕಿಯಾದರೂ 'ತವರು' ಎಂದಾಕ್ಷಣವೇ ರಕ್ತಗತವಾದ ಅಭಿಮಾನ ಅವಳಿಗೆ. ಬಳೆಗಾರ ತನ್ನ ಮನೆಯ ವಿಳಾಸವನ್ನು, ಗುರುತನ್ನು ಕೇಳಿದಾಗ ತವರನ್ನು ವರ್ಣಿಸುವ ಹೆಣ್ಣುಮಗಳ ಮಾತುಗಳಿವು,

ಹಂಚಿನ ಮನೆಕಾಣೋ । ಕಂಚಿನ ಕದ ಕಾಣೋ ।
ಇಂತಾಡುವೆರಡು ಗಿಣಿಕಾಣೋ । ಬಳೆಗಾರ ।
ಅದೆ ಕಾಣೋ ನನ್ನ ತವರೂರು-

ಅಲ್ಲಿ ಅತ್ತಿಗೆ ಇದ್ದಾಳೆ. ಅವಳು ಬಸುರಿ. ಮನೆ ಮುಂದೆ ಚಪ್ಪರ. ಅವರು ತುಂಬುಮನೆತನದವರು; ಗುಣವಂತರು ಉದಾರಿಗಳು–ಅವರೆಂದೂ ನನ್ನನ್ನು ಮರೆಯುವುದಿಲ್ಲವೆಂದು ಅಭಿಮಾನದಿಂದ ಹೇಳುತ್ತಾಳೆ.

ಬಂಗಾರ ಬಳೆಯವರು–ತಿಂಗಳ ಹಾದ್ಯವರು
ನನ್ನ ಕೋಟ್ಯಾಕ ಮರತಾರು । ಮಾವಿನ ।
ಹಣ್ಣು ಉಣುವಾಗ ನೆನಸ್ಯಾರು ।

ಹಡೆದ ಪಡೆದ ತಂದೆತಾಯಿಗಳನ್ನು, ಸಾಕಿಸಲಹಿದ ಎಳೆಯ ಗೆಳತಿಯರನ್ನು, ಪರಿಸರವನ್ನು ಅತಿ ಭಕ್ತಿಯಿಂದ ಆತ್ಮೀಯತೆಯಿಂದ ಗೌರವದಿಂದ ನಮ್ಮ ಹೆಣ್ಣುಮಕ್ಕಳು ಸ್ಮರಿಸುತ್ತಾರೆ. ಅದು ಎಷ್ಟು ಹಾಡಿದರೂ ತೀರದ ಋಣ. ಅದಕ್ಕಿಂತ ಮಿಗಿಲಾದುದು ಜಗತ್ತಿನಲ್ಲಿ ಹೆಣ್ಣಿಗಿಲ್ಲ. ಅದರ ಬಗ್ಗೆ ಹಾಡಿ, ತುಂಬು ಹೃದಯದಿಂದ ಹರಿಸಿದರೆ ಕೊಂಚವಾದರೂ ಋಣಭಾರ ತಗ್ಗುವುದೋ ಏನೋ. ತಗ್ಗಲಿ, ಬಿಡಲಿ; ಹೆಣ್ಣು ಮಗಳ ಮನಸ್ಸಿಗಾದರೂ ಒಂದು ನೆಮ್ಮದಿ; ಸಮಾಧಾನ.

ಅತ್ತಿಗೆ ಹಡೆಯಾಲಿ। ಹತ್ತೆಮ್ಮೆ ಕರೆಯಾಲಿ।
ಹಿತ್ತೀಲ ಬಾಳೆ ಚಿಗುರಲಿ। ಅತ್ತ್ಯೆಂದು
ಅತ್ತೀಗೆ ಮಗಳು ಕರೆಯಾಲಿ ॥

ಬಾಳೆಯ ಉದಾಹರಣೆ ಲೋಕೋತ್ತರವಾದ ಉದಾಹರಣೆ. ಮತ್ತೆ ಹಾಡುತ್ತಾಳೆ.

ಬಳಗವು ಹೆಚ್ಚಲಿ। ಬಂಧನ ತಗ್ಗಲಿ।
ಕೊಳಗದಲಿ ಹೊನ್ನ ಅಳೆಯಾಲಿ। ತೌರುರ।
ನಡುಮಾನೆ ಜ್ಯೋತಿ ಬೆಳಗಾಲಿ।

—ಇಂತಹ ಬೆಳಕು ನಾಡಿಗೆ ಆದರ್ಶವಾಗಿರಲಿ.

ಹಾಲುಂಡ ತೌರಿಗೆ। ಏನೆಂದು ಹಾಡಲೆ।
ಹೊಳೆದಂಡೆಲಿರುವ ಕರಿಕೀಯ। ಕುಡಿಹಾಂಗೆ।
ಹಬ್ಬಲೇ ಅವರ ರಸಬಳ್ಳಿ ॥

ಅಲ್ಲಿ ತಂಪಿರಲಿ, ಇಂಪಿರಲಿ, ಸೊಂಪಿರಲಿ—ಅವರ ಬಳ್ಳಿ, ಶಾಖೋಪಶಾಖೆಗಳಾಗಿ ವಿಶಾಲವಾಗಿ ಹಬ್ಬಲಿ, ಬೆಳೆಯಲಿ. ಇದಕ್ಕಿಂತ ಹಾರ್ದಿಕವಾದ ಹರಕೆ ಮತ್ತೊಬ್ಬರಿಂದ ಸಾಧ್ಯವಾಗದು.

ಇದು ಜಾನಪದ ಜೀವನದಲ್ಲಿನ, ಗರತಿಯ ಹಾಡಿನ ಸಮುದ್ರದಿಂದ ತೆಗೆದಿಟ್ಟ ಒಂದು ಹನಿ ಮಾತ್ರ. ಇನ್ನೆಷ್ಟೋ ಶಾಖೆಗಳಿವೆ. ಇದೊಂದು ಇಣುಕು ನೋಟ ಮಾತ್ರ. ಗಂಡಹೆಂಡಿರ ಸಂತಸ, ಸಲ್ಲಾಪ, ಅತ್ತೆ ಸೊಸೆಯರ ಬಾಳು, ಅತ್ತಿಗೆ ನಾದಿನಿಯರ ಸಹಜೀವನ, ನಾರಿಯ ಆದರ್ಶ, ಮನೆತನದ ಗೌರವದ ಬಾಳು, ಹೆಣ್ಣಾಗಿ ಹುಟ್ಟಿದ ನೋವು ನಲಿವು ಹೀಗೆ ಒಂದೇ ಎರಡೇ ; ಜೀವನದ ಎಲ್ಲ ಮುಖಗಳನ್ನೂ ಕುರಿತು ನಮ್ಮ ಜನ ಹಾಡಿದ್ದಾರೆ. ಹಾಡುತ್ತಲೇ ಜೀವನ ಸವೆಸಿ ಅಭಿಮಾನದಿಂದ ಬಾಳಿದ್ದಾರೆ. ಬಾಳುವೆಯ ನಿಜವಾದ ಅರ್ಥವೇ ಸರಸ—ವಿರಸಗಳ ಸಮ್ಮಿಳನ. ಇಂತಹ ಜೀವನ ಸಾಮರಸ್ಯವೇ ಜನಪದ ಜೀವನದ ಅಡಿಪಾಯ.

ಒಂದಲ್ಲ ಒಂದು ಅನುಭವವನ್ನು ಹಾಡುತ್ತ ಹೋಗುವುದರೊಳಗಾಗಿ ಬೀಸುತ್ತಲೇ ಕಾಳು ಮುಗಿಯುತ್ತದೆ. ಆದರೆ ಹಾಡುಗಳು ಮುಗಿಯದು. ಏಕೆಂದರೆ ಅವಳಲ್ಲಿನ ಹಾಡಿನ "ಸ್ಟಾಕು" ಹಾಡ ಹಗೇವು. ಅಲ್ಲಿಂದ ಒಂದು ಬಳ್ಳವನ್ನಾಗಲೀ ಅಳೆದು ಕೊಡಬಲ್ಲಳು. ಆದರೆ ಉಳಿದಿರುವುದು ಇನ್ನೆಷ್ಟೋ!

ಆದಾವು ನಮ್ಮ ಜೋಳ। ಉಳಿದಾವು ನಮ್ಮ ಹಾಡು।
ಈಗ ಸಾಕವ್ವ। ನಿನ್ನ ಕಲ್ಲ। ಕೈಯಿನ।
ಜೀಕಿನುಂಗುರ ಸವೆದಾವು ॥

ಆಗಲೂ ಬೀಸೆಕಲ್ಲನ್ನ ಬಿಡುವಾಗ

ಕಲ್ಲು ಬಿಟ್ಟೇನೆಂದು ಸಿಟ್ಯಾಕೆ ಸರಸತಿಯೆ।
ಕುಕ್ಕೇಲಿ ರಾಗಿ ಬೆಳಿಯಾಲಿ। ತಕ್ಕೊಂಡು।
ಮತ್ತೆ ರಾತ್ರೀಗೇ ಬರುತೀನಿ ॥

ಎಂದು ಶರಣು ಮಾಡಿ ನಿಲ್ಲಿಸುತ್ತಾಳೆ.

ಜಾನಪದ ಜೀವನಾನುಭವದ ಅನಂತ ಸಾಗರದಿಂದ ಒಂದು ಮುಖವಾದ ಗರತಿಯ ಹಾಡಿನಿಂದ ಒಂದೆರಡು ಹನಿಗಳನ್ನು ಕೊಟ್ಟಿದ್ದೇನೆ. ಇವುಗಳ ನೋಟ ಇನ್ನೂ ಓದಲು ಆಸೆ ಹುಟ್ಟಿಸಿದರೆ ಸಾಕು.

ಜಾನಪದ ರಸಗಂಗೆ ಬತ್ತದಂತೆ ನಿತ್ಯವಾಗಿ ಬೆಳೆಯಲಿ. ನಾಡು ಮತ್ತೆ ಚೇತನಗೊಂಡು ಹಿಂದಿನ ಜೀವನಾನುಭವದ ವಿಶಾಲತೆಯಲ್ಲಿ, ಮುಂದಿನ ಮುನ್ನೋಟದ ಅರಿವಿನಲ್ಲಿ ಅಖಂಡವಾಗಿ ಮುನ್ನಡೆಯಲಿ. ನಾಡಿನ ಸರ್ವತೋಮುಖವಾದ ಆತ್ಮಶ್ರೀಯ ಬೆಳವಣಿಗೆಗೆ ಜಾನಪದ ಶ್ರೀಯ ಕೃಪೆ ಚಿರವಾಗಿರಲಿ.

ಪಂಚಾಕ್ಷರಿ ಹಿರೇಮಠ

ಭಾರತದ ಶಿಲ್ಪಕಲೆ

ಲಲಿತಕಲೆ ಭಾರತದ ಹುಟ್ಟಿನೊಂದಿಗೇನೆ ಬೆಳೆದುಕೊಂಡು ಬಂದಿದೆ. ಈ ದೇಶದ ಸಂಸ್ಕೃತಿಯ ಇತಿಹಾಸ ಅದೆಷ್ಟು ಪುರಾತನವಾಗಿದೆಯೋ ಅಷ್ಟೇ ಪುರಾತನವಾಗಿದೆ—ಈ ಲಲಿತಕಲೆಯ ಪರಂಪರೆ ಕೂಡ. ಇಂಥ ಪುರಾತನ ವಾದ ಲಲಿತ ಕಲೆಗಳನ್ನು ಕುರಿತು ಅದರ ಮಹತ್ತನ್ನು ಕುರಿತು ಇಲ್ಲಿ ಬರೆಯುವ ಮುನ್ನ ಈ ಕಲೆಯನ್ನು ಕುರಿತು ಶ್ರೀ ಗೋರೂರು ರಾಮಸ್ವಾಮಿಯವರು ಒಂದುಕಡೆ ಪಟ್ಟಿರುವ ಅಭಿಪ್ರಾಯವನ್ನು ಇಲ್ಲಿ ಎತ್ತಿ ಬರೆಯು ತ್ತಿದ್ದೇನೆ. "ಸನ್ಮಾರ್ಗಜೀವನವೇ ಕಲೆ ಚಿತ್ರದಲ್ಲಿಯೂ ಶಿಲ್ಪದಲ್ಲಿಯೂ ಅನೇಕ ಜೀವರಾಶಿಗಳನ್ನು ಒಂದೇಕಡೆ ತೋರಿಸುವುದು ಭಾರತಕಲೆಯ ಲಕ್ಷಣ. ಮನುಷ್ಯ, ದೇವರು, ಪಶುಪಕ್ಷಿ ಪ್ರಕೃತಿಯೊಂದಿಗೆ ಒಂದಾಗಿ ಬಾಳುವುದೇ ಈ ಆದರ್ಶದ ಗುರಿ. ಅದೇ ಜಗತ್ತಿನ ಅಸ್ತಿತ್ವದ ಸತ್ಯದ ಅದ್ಭುತ ಕಲೆ !"

ಸತ್ಯಾನ್ವೇಷಕ ಕಾವ್ಯದಲ್ಲಿಯೂ, ಬಾಳಿನಲ್ಲಿಯೂ ಅಮೃತತ್ವವನ್ನೇ ಹುಡುಕುತ್ತಾನೆ. ಇಂದ್ರಿಯ ಗೋಚರವಾದುದು ಮಾತ್ರವೇ ಸತ್ಯವಲ್ಲ. ಇಂದ್ರಿಯ ಗೋಚರವಾಗದಿದ್ದರೂ ಹೃದಯಲ್ಲಿದ್ದುಕೊಂಡು 'ನಾನು ಇಲ್ಲಿ ದ್ದೇನೆ' ಎಂದು ಜ್ಞಾಪಕಕೊಡುವ ಅಂತರ್ ದೃಷ್ಟಿಯೊಂದಿದೆ. ಆ ಜ್ಞಾನ ಜ್ಯೋತಿಯೇ ಕಲಾ ಕೃತಿಯನ್ನು ಬರಿಯ ಕಾಗದ ಅಥವಾ ಕಲ್ಲಿನ ಬೊಂಬೆಯಾಗಿ ಮಾಡದೆ, ನಮ್ಮ ಹೃದಯದಲ್ಲಿ ಎಂದೆಂದೂ ನಿಲ್ಲುವ ಶಾಶ್ವತ ಪರಮಸತ್ವ ಕಲಾಕೃತಿಯಾಗಿ ಮಾಡುವದು. ಕಲೆಯಮೂಲಕ ಪರಮಾತ್ಮನ ದರ್ಶನ ಸಹ ಭಾರತೀಯ ಕಲೆಯ ಲಕ್ಷಣ !!

ಆಯಾಕಾಲದ ರಾಜಕೀಯ, ಸಾಮಾಜಿಕ ಜೀವನ ಆಯಾಕಾಲದ ಸಾಹಿತ್ಯದ ಮೇಲೆ ಪ್ರಭಾವ ಬೀರು ತ್ತದೆ ಎಂಬ ಮಾತನ್ನು ಈಗಾಗಲೇ ಒಪ್ಪಿಕೊಂಡಾಗಿದೆ. ಸಾಹಿತ್ಯ ಕಾಲಮಾನಕ್ಕನುಸಾರವಾಗಿ ಬೆಳೆದುಕೊಂಡು ಬರುವಂತೆಯೇ, ಕಲೆಯೂ ಕೂಡ ಕಾಲಮಾನಕ್ಕನುಸಾರವಾಗಿ ಆಯಾಕಾಲದ ಜೀವನವನ್ನು ಪ್ರತಿನಿಧಿಕರಿಸುತ್ತ ಬೆಳೆದು ಬರುತ್ತದೆ. ಹಾಗೆಂತಲೇ ಭಾರತೀಯಕಲೆ, ಮೊಗಲರು ಈ ದೇಶಕ್ಕೆ ಬರುವಮುನ್ನ ಒಂದು ತೆರನಾಗಿತ್ತು. ಅವರು ಬಂದನಂತರ ಒಂದು ಬೇರೆ ರೂಪ ತಾಳಿತು. ಆಂಗ್ಲರು ಬಂದನಂತರ ಒಂದು ಬೇರೆ ರೂಪ ಧಾರಣೆ ಮಾಡಿತು. ಸಾಹಿತ್ಯ, ಕಲೆ ಆಯಾಕಾಲದ ಪ್ರಭಾವಕ್ಕೊಳಗಾಗಲೇಬೇಕು ಎನ್ನುವ ಮಾತನ್ನು ನಾವು ಒಪ್ಪಿ ಕೊಳ್ಳುವುದಾದರೆ ಒಮ್ಮೆ ಉತ್ಕೃಷ್ಟ ಸಾಹಿತ್ಯಕಲೆ ನಿರ್ಮಾಣವಾಗಬಹುದು ; ಮತ್ತೊಂದು ಕಾಲದಲ್ಲಿ ಕೆಳಮಟ್ಟದ ಜೀವನವಿದ್ದಾಗ ಕೆಳಮಟ್ಟದ ಕಲೆ, ಸಾಹಿತ್ಯ ಹುಟ್ಟಿಬರಬಹುದು–ಎಂಬುವ ಮಾತನ್ನೂ ನಾವು ಪ್ರಾಂಜಲಮನಸ್ಕ ರಾಗಿ, ಒಪ್ಪಿಕೊಳ್ಳಲೇಬೇಕಾಗುತ್ತದೆ.

ಕ್ರಿ. ಶ. ಎರಡನೆಯ ಶತಮಾನದಲ್ಲಿ ಭಾರತೀಯ ಕಲೆ ರಾಜಕೀಯ ದರ್ಬಾರುಗಳಿಂದ ನುಸುಳಿ ಜನ ಮನದ ಮಧ್ಯ ಹಬ್ಬಲು ಪ್ರಾರಂಭಿಸಿತು. ಸಾಂಚಿಯ ದೊಡ್ಡ ದೊಡ್ಡ ಸ್ತೂಪಗಳು, ತೋರಣ ಮತ್ತು ವೇದಿಕೆಗಳ ಕಂಭಗಳ ಮೇಲೆ ಜನತೆಯ ಕಲೆ ರೂಪುಗೊಂಡಿವೆ. ಅವುಗಳ ಮೇಲೆಲ್ಲ ಬೇರೆಬೇರೆ ರೀತಿಯ ಆಭರಣಗಳನ್ನಿಟ್ಟು

ಕೊಂಡ ಸುಂದರ, ಕೋಮಲ ಸ್ತ್ರೀಪುರುಷನ ಸ್ವಾಸ್ಥ ಶರೀರ ಅಂಕಿತಗೊಂಡಿವೆ. ಪ್ರೇಮ, ಯುದ್ಧ, ಧಾರ್ಮಿಕ ಪೂಜೆ ಮತ್ತು ಆಚಾರ, ಅಲಂಕಾರ, ಮತ್ತು ವಸ್ತ್ರಗಳ ಅತುಲಸಾಮಗ್ರಿ ಭಾರತದ ಶಿಲ್ಪಕಲೆಗಳಲ್ಲಿ ಕಾಣಬಹುದಾಗಿದೆ. ಒಂದನೆಯ ಶತಮಾನದಲ್ಲಿ ಈ ಲಲಿತಕಲೆಗಳ ಕೇಂದ್ರ ಮಥುರಾದಲ್ಲಿ ಸ್ಥಾಪನೆಗೊಂಡಿತ್ತೆಂದು ಹಲವು ಸಂಶೋಧನಾ ಸಂಸ್ಥೆಗಳು ಅಭಿಪ್ರಾಯತಾಳಿವೆ. ಈ ಸಮಯದಲ್ಲಿಯೇ ಶಿಲ್ಪಕಲೆ, ಚಿತ್ರಕಲೆ ತನ್ನ ಸತ್ವಕಳೆದುಕೊಂಡಿತ್ತು. ಮಥುರಾದಲ್ಲಿ ಸ್ಥಾಪನೆಯಾದ ಈ ಕೇಂದ್ರ ಉತ್ತರ ಭಾರತದಲ್ಲೆಲ್ಲ ಮತ್ತೆ ಈ ಕಲೆಯ ಪುನರುತ್ಥಾನಗೊಳಿಸಿತು. ಈ ಮಾತನ್ನು ಸ್ಮರಿಸಿ ಕೊಂಡಾಗ ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮ ಹೇಳಿದ ಮಾತು ನೆನಪಾಗದಿರದು.

ಯದಾಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥

ಈ ದೇಶದ ಜನತೆ ದೇವರಲ್ಲಿ ಅನಂತ ವಿಶ್ವಾಸವನ್ನಿಟ್ಟುಕೊಂಡ ಕಾರಣದಿಂದಾಗಿಯೋ ಅಥವಾ ಈ ದೇಶದ ಭಾಗ್ಯವೇ ಅಂಥದೇನೋ, ದೇವರು ಎಲ್ಲ ಕಾಲದಲ್ಲೂ, ಎಲ್ಲ ಸಮಯದಲ್ಲೂ ರಕ್ಷೆಯ ಭರವಸೆಯನ್ನಿತ್ತು, ರಕ್ಷಿಸುತ್ತ ಬಂದಿದ್ದಾನೆ. ಹಾಗೆಯೇ ಶ್ರೀಕೃಷ್ಣ ಪರಮಾತ್ಮನ ಲೀಲಾ ನಾಡಾದ, ಪುಣ್ಯ ಕ್ಷೇತ್ರವಾದ ಮಥುರಾದಲ್ಲಿಯೇ, ಭಾರತದ ಲಲಿತಕಲೆಯಲ್ಲಿ ಗ್ಲಾನಿ ಉಂಟಾದಾಗ ಅದನ್ನು ಹೋಗಲಾಡಿಸಿ ಅದಕ್ಕೆ ಹೊಸಕಳೆ, ಹೊಸರೂಪ ಕೊಡಲು ಒಂದು ಕೇಂದ್ರ ಸ್ಥಾಪನೆಗೊಂಡಿತು. ಆ ಕೇಂದ್ರವೇ ಮುಂದೆ ಲಲಿತಕಲೆಯ ಪುನರುತ್ಥಾನಕ್ಕೆ ಕಾರಣೀಭೂತವಾಯಿತು—ಎಂಬುದನ್ನು ಅರಿತಾಗ ಭಗವಂತನ ಅಭಯಹಸ್ತ ಭಾರತೀಯರಿಗೆ ಸದಾಕಾಲವೂ ಇದೆ ಎನ್ನುವ ಮಾತಿನ ಬಗ್ಗೆ ಸಂಶಯ ತಾಳಬೇಕಾಗಿಲ್ಲವಷ್ಟೆ ?...

ಈ ಲಲಿತಕಲೆಯ ಪುನರುತ್ಥಾನಕ್ಕಾಗಿ ಮಥುರೆಯಲ್ಲಿ ಒಂದು ಕೇಂದ್ರ ಸ್ಥಾಪನೆಯಾದನಂತರ ಕೆಲಸ್ತೂಪಗಳು ನಿರ್ಮಾಣಗೊಂಡವು. ಆ ಸ್ತೂಪಗಳ ನಾಲ್ಕು ಗೋಡೆಗಳ ಕಂಭಗಳಮೇಲೂ ಸೃಷ್ಟಿಗೊಂಡಿರುವ ಸುಂದರ ಸ್ತ್ರೀ ಮೂರ್ತಿಗಳನ್ನು ನೋಡಿದರೆ, ಮಥುರಾದ ಸ್ತ್ರೀಪುರುಷರು ಚೆಲುವಿನ ಆರಾಧಕರಾಗಿರಬೇಕೆಂದು ಊಹಿಸಬಹುದು.

ಮೂರನೆಯ ಶತಮಾನದಲ್ಲಿ ರಾಜಾ ಅಶೋಕನ ಆಳ್ವಿಕೆಯಲ್ಲಿ ಭಾರತದ ಲಲಿತಕಲೆ ಬಹುಮುಖವಾಗಿ ಬೆಳೆಯುವಂತಾಯಿತೆಂದು ಹೇಳಬಹುದು. ದೇಶದ ತುಂಬೆಲ್ಲ ಶಿಲ್ಪಕಲೆಗೆ ಒಂದು ರೀತಿಯ ಮಹಾಪೂರವೇ ಬಂದ ಹಾಗಾಯ್ತು. ಅಷ್ಟು ಹಬ್ಬಿಕೊಂಡಿತು ಶಿಲ್ಪ ಕಲೆ....ಇವುಗಳಲ್ಲಿ ಅಪ್ರತಿಮ ಮತ್ತು ಅತೀವ ಸುಂದರವಾದುದೆಂದರೆ ಸಾರಾನಾಥದ ಸಿಂಹಸ್ಥಂಭ. ಈ ಸ್ಥಂಭ ಸೌಂದರ್ಯದಲ್ಲಿ, ಭಾವ ಮತ್ತು ಶಕ್ತಿ ವ್ಯಕ್ತಗೊಳಿಸುವಲ್ಲಿ ಶಿಲ್ಪಕಲಾ ಕೌಶಲ್ಯದಲ್ಲಿಯೇ ಒಂದು ಅದ್ವಿತೀಯ, ವಿಲಕ್ಷಣ ಮಾದರಿಯಾಗಿದೆ. ಈ ಸಿಂಹಸ್ಥಂಭವನ್ನೇ ನಮ್ಮ ದೇಶದ ಜನನಾಯಕರು ಈ ದೇಶದ ಗಣರಾಜ್ಯದ ರಾಜಕೀಯ ಮುದ್ರೆಯನ್ನಾಗಿ ಮಾಡಿಕೊಂಡಿದ್ದಾರೆ. ಮೌರ್ಯಶಿಲ್ಪಕಲೆಯ ಇನ್ನೂ ಒಂದು ವೈಶಿಷ್ಟ್ಯವೆಂದರೆ ಕಲ್ಲಿನ ಮೇಲಿನ ಹೊಳಪು ಮತ್ತು ಸೂಕ್ಷ್ಮತೆ. ಕನ್ನಡಿಯ ಹಾಗಿರುವ ಈ ಕಲ್ಲಿನ ಹೊಳಪಿನಲ್ಲಿ ನಮ್ಮ ಪ್ರತಿಬಿಂಬವನ್ನು ಕಾಣಬಹುದಾಗಿದೆ. ಕಾಡುಕಲ್ಲಿನಲ್ಲಿ ಇಂಥ ಅಪ್ರತಿಮ ದಿವ್ಯಬೆಳಕನ್ನೀಯುವ ಹೊಳಪನ್ನು ನಮ್ಮ ಪೂರ್ವಜರಾದ ಶಿಲ್ಪಿಗಳು ಹೇಗೆ ಸೃಷ್ಟಿಸುತ್ತಿದ್ದರೆಂಬುದು ಇಂದಿಗೂ ಸಮಸ್ಯೆಯಾಗಿದೆ, ಒಂದು ಅಗಾಧ ರಹಸ್ಯವಾಗಿದೆ. ಈ ರಹಸ್ಯ ನಮ್ಮ ಪಾಲಿಗೆ 'ಕೂಸುಕಂಡ ಕನಸಿನಂತಿದೆ !!

ನಾಲ್ಕನೆಯ ಶತಮಾನದಲ್ಲಿ ಗುಪ್ತವಂಶದ ಸಾಮ್ರಾಟ ಸಮುದ್ರಗುಪ್ತ, ಚಂದ್ರಗುಪ್ತರು ತುಂಬ ಪ್ರತಿಭಾವಂತರಾಗಿದ್ದಂತೆ, ಕಲೆ ಮತ್ತು ಸಾಹಿತ್ಯದ ಅಭಿಮಾನಿಗಳೂ ಆಗಿದ್ದರು. ಅವರ ಪರಾಕ್ರಮದೊಂದಿಗೆ ಸಾಹಿತ್ಯ, ಕಲೆಯೂ ಕೂಡ ದೇಶದಲ್ಲೆಲ್ಲಿ ಹಬ್ಬಿಕೊಂಡಿತು. ಸಿಂಧ್‌ನಿಂದ ಅಸ್ಸಾಂನವರೆಗೂ, ಪಂಜಾಬ್‌ನಿಂದ ಸಿಂಹಳದವರೆಗೂ ಕಲೆ ಜನಜೀವನದ ಒಂದು ಮುಖ್ಯ ಅಂಗವಾಗಿ ಬೆಳೆಯಲಾರಂಭಿಸಿತು. ಗುಪ್ತಕಾಲ ಶಿಲ್ಪಕಲೆಯ ಸುವರ್ಣ ಯುಗನೆಂದು ಕರೆದರೂ ಸಂದೀತು. ಆ ಕಾಲದ ಶಿಲ್ಪಕಲೆ, ಅತ್ಯಂತ ಸುಂದರವಾಗಿದೆ, ಲಾಲಿತ್ಯ ಪೂರ್ಣವಾಗಿದೆ

ಯೆಂದು ಯಾರೂ ಹೇಳಬಹುದಾಗಿದೆ. ಶಿವ, ಬುದ್ಧ, ಕಾರ್ತಿಕೇಯ, ವಿಷ್ಣು ಹೀಗೆ ಅನೇಕ ಸ್ಥಾನಗಳಲ್ಲಿ ಮೂರ್ತಿಗಳು ದೊರೆತಿವೆ. ಈ ಮೂರ್ತಿಗಳಲ್ಲಿ ಶಿಲ್ಪಿಯ ಉಳಿ ಬಹು ಕಲಾತ್ಮಕವಾಗಿ ಹಾಗೂ ಬಹುಸೂಕ್ಷ್ಮವಾಗಿ ಕೆಲಸ ಮಾಡಿದೆ. ಈ ಮೂರ್ತಿಗಳು ತುಂಬ ರಮಣೀಯವಾಗಿವೆ. ಇಲ್ಲಿ ಸರಳತೆಯೊಂದಿಗೆ ಸೌಂದರ್ಯವಿದೆ; ಸಂಯಮದೊಂದಿಗೆ ರೂಪ ಸಾತ್ವಿಕವಾದ ಚೆಲುವು ಕೂಡಿಕೊಂಡಿದೆ. ಇದೂ ಅಲ್ಲದೆ ಗುಪ್ತಕಾಲದ ಕಲಾಕೃತಿಗಳಲ್ಲಿ ಆನಂದ, ವಿಸ್ಮಯತೆ, ಭವ್ಯತೆಗಳು ಮುಪ್ಪುರಿಗೊಂಡಿವೆ.

ಅಜಂತಾ ಗುಹೆಗಳಲ್ಲಿ ಚಿತ್ರಿತಗೊಂಡಿರುವ ಚಿತ್ರಗಳು ವಿಶ್ವಕ್ಕೇನೆ ಗುಪ್ತಯುಗದ ಮಹಾ ಕೊಡುಗೆ ಎಂದು ಹೇಳಬಹುದು. ಅಂಜತಾ ಶಿಲ್ಪಕಲೆ ಶತಮಾನಗಳುದ್ದಕ್ಕೂ ಒಂದು ಮಾದರಿಯ ಕಲೆಯಾಗಿ ಇಂದಿಗೂ ಬಾಳಿಕೊಂಡು ಬಂದಿದೆ. "ಈ ಚಿತ್ರಗಳಲ್ಲಿ ಕಾಣಿಸುವದು ಜೀವ ಜೀವಿಮಯವಾದ ಪ್ರಪಂಚ, ಬೆಳೆಯುತ್ತಿರುವ ಗಿಡಗಳು, ಅರಳುತ್ತಿರುವ ಕುಸುಮಗಳು, ವಿವಿಧ ಪಕ್ಷಿಗಳು, ಸುಂದರವಾದ ಹುಲ್ಲೆಗಳು, ಗಂಭೀರವಾದ ಆನೆಗಳು, ಮನೋಹರವಾದ ಬಣ್ಣಗಳಿಂದ ಅಲಂಕೃತವಾದ ಮಂಟಪಗಳು, ಗೃಹಗಳು, ನಗರಗಳು, ನಗರಗಳ ಮಹಾದ್ವಾರಗಳು, ಅರಮನೆಗಳು, ಇವುಗಳ ಮಧ್ಯ ಲಲಿತ-ಕಾಯರಾಗಿ ರಮ್ಯವಾದ ಭಾವಗಳನ್ನು ಸೂಚಿಸುತ್ತ ಸ್ವತಂತ್ರವಾಗಿ ಕ್ರೀಡಿಸುತ್ತಲೋ, ಧ್ಯಾನಿಸುತ್ತಲೋ ಇರುವ ಗಂಡಸರು, ಹೆಂಗಸರು ಮಕ್ಕಳು, ಸುಖದುಃಖಗಳನ್ನು ಅನುಭವಿಸುತ್ತಿರುವ ಜೀವಿಲೋಕ. ಈ ನಿಬಿಡವಾದ ಲೋಕದ ಮಧ್ಯವಲ್ಲಿ ದಯಾಪೂರಿತವಾದ, ಧ್ಯಾನಾಸಕ್ತವಾದ, ಮಹಾತ್ಮನಾದ ಬುದ್ಧದೇವನ ಬದುಕು. ಇಂತಹ ದೃಶ್ಯವು ಅಜಂತದ ಚಿತ್ರಗಳಲ್ಲಿ ಪ್ರತ್ಯಕ್ಷವಾಗುತ್ತದೆ. ಈ ಚಿತ್ರಗಳ ಪ್ರಧಾನಭಾವವು ವೈರಾಗ್ಯ. ಇದು ಜಗತ್ತಿನ ರಮ್ಯತೆಗೆ ಬೇಸರಗೊಂಡು ಓಡಿಹೋಗತಕ್ಕ ಅಶಕ್ತನ ವೈರಾಗ್ಯವಲ್ಲ. ಜಗತ್ತಿನ ರಮ್ಯತೆಯ ಮಧ್ಯದಲ್ಲಿ ಬದುಕಿ ಪ್ರಕೃತಿಯ ಮತ್ತು ಜೀವಿಗಳ ಸುಖ ದುಃಖಗಳಲ್ಲಿ ಅನಂತವಾದ ಕರುಣೆಯಿಂದ ಕೂಡಿ, ಸುಂದರವಾದ ರಾಜಕುಮಾರನಾಗಿ ಬೆಳೆದ ಸರ್ವಶಕ್ತಿಯುಕ್ತನಾದ ಮಹಾಪುರುಷನ ವೈರಾಗ್ಯ ....ಎಲ್ಲಕ್ಕಿಂತಲೂ ಮೇಲಾಗಿ ಅಜಂತದ ಚಿತ್ರಗಳಲ್ಲಿ ಕಾಣಬರುವದು ಬುದ್ಧದೇವನ ಅಮೋಘವಾದ ಆತ್ಮವಿಕಾಸ....

ವಿವಿಧ ಗಿರಿಗಳೂ, ವೃಕ್ಷಗಳೂ, ಪುಷ್ಪಗಳೂ ನೆರಳು ಬೆಳುಕುಗಳೂ, ನಾನಾ ಪ್ರಾಣಿಗಳೂ ತಮ್ಮಷ್ಟಕ್ಕೆ ತಾವು ಬದುಕಿ ಉಳಿಯುವುದಲ್ಲದೆ ಒಟ್ಟುಗೂಡಿ ಪ್ರಕೃತಿಗೆ ಸೌಂದರ್ಯವನ್ನು ಕೊಟ್ಟಿರುವಂತೆ ಈ ಚಿತ್ರಗಳಲ್ಲಿಯೂ ಜೋಡಣೆಯಾಗಿವೆ. ಈ ಪ್ರಕೃತಿಯ ನಡುವೆ ಅದರ ಅತ್ಯಂತ ರಮ್ಯವಾದ ರೂಪವಾಗಿ ಮನುಷ್ಯವ್ಯಕ್ತಿಗಳನ್ನು ಕಾಣಿಸಿದೆ. ಜನಜೀವನವು ಪ್ರಕೃತಿಯ ರಮ್ಯತಮವಾದ ಒಂದುಭಾಗ. ಇಂತಹ ಸಂಯೋಜನೆಯನ್ನು ಅಜಂತದ ಚಿತ್ರಗಾರರು ರಚಿಸುವಾಗ ತಾವು ಮಾಡಿದ ಪ್ರಯತ್ನವು ನಮಗೆ ಕಾಣದಂತೆಯೂ, ತಮ್ಮ ಕೌಶಲ್ಯದ ಫಲವು ಮಾತ್ರ ಸ್ವಾಭಾವಿಕವಾಗಿ ತೋರುವಂತೆಯೂ ನಿರ್ಮಿಸಿದ್ದಾರೆ. ಒಂದೊಂದು ವ್ಯಕ್ತಿಯೂ ಲಾಲಿತ್ಯ ಸೌಂದರ್ಯ ಭಾವಗಳಿಂದ ಗರ್ಭಿತವಾಗಿದೆ.

....ಈ ಗುಹೆಗಳಲ್ಲಿರುವ ಬೋಧಿಸತ್ವ ಪದ್ಮಪಾಣಿಯ ಚಿತ್ರವು ಈ ಜಗತ್ತಿನ ಚಿತ್ರಗಳಲೆಲ್ಲ ಅತ್ಯಂತ ಉತ್ತಮವಾಗಿದೆಯೆಂದು ಪ್ರಸಿದ್ಧವಾಗಿದೆ. ಸುಂದರವೂ, ಪ್ರತಿಭಾಯುಕ್ತವೂ ಆದ ಮುಖ, ವಿಶಾಲ ಕುತ್ತಿಗೆ, ಮುಕ್ತಾಫಲ ಸದೃಶವಾದ ದೇಹಕಾಂತಿ, ದೀರ್ಘವಾದ ಕಪ್ಪುಕೂದಲು, ಕಿರೀಟ ಕಂಠಿ ಮೊದಲಾದ ಆಭರಣಗಳು ಇವುಗಳಿಂದ ಶೋಭಾಯಮಾನವಾಗಿದ್ದಾನೆ. ಪದ್ಮಪಾಣಿ....ಕೈಯಲ್ಲಿ ಬಿಳಿಯ ಪದ್ಮವೊಂದನ್ನು ಹಿಡಿದು, ಅರೆಗಣ್ಣು ಮುಚ್ಚಿ ಚಿಂತನಶೀಲನಾಗಿದ್ದಾನೆ....

....ಮಿಕ್ಕ ಚಿತ್ರಗಳಲ್ಲಿ ಬುದ್ಧದೇವನ ಜನನದ ಸಮಯದಲ್ಲಿ ಬಳುಕಿದ ಶರೀರದಿಂದ ಕೂಡಿ ನಿಂತಿರುವ ಸುಂದರಿಯಾದ ಮಾಯಾದೇವಿಯ ಚಿತ್ರವೂ ಬಹಳ ರಮ್ಯವಾಗಿದೆ. ಇವೂ ಅಲ್ಲದೆ ಭಿಕ್ಷು ಬುದ್ಧಪತ್ನೀಪುತ್ರರು,

ನಟರಾಜ, ನೃತ್ಯ, ಅಲಂಕರಣ, ಉಪದೇಶಿಸುತ್ತಿರುವ ಬುದ್ಧ, ಆಕಾಶದಲ್ಲಿ ಸಂಚರಿಸುವ ಅಪ್ಸರೆಯರು, ಬಹು ಮೋಹಕವಾಗಿದೆ. ಚೆಲುವಾಗಿದೆ.

ಎಲ್ಲೋರ : ಕಲಾಪ್ರಪಂಚದಲ್ಲಿ ಬಣ್ಣದಚಿತ್ರಗಳಿಂದ ಅಜಂತಕ್ಕೆ ಉತ್ಕೃಷ್ಟತೆಯು ಬಂದಿರುವಂತೆ ವಾಸ್ತುಶಿಲ್ಪದಿಂದ ಎಲ್ಲೋರಕ್ಕೆ ಪ್ರಸಿದ್ಧಿ ಬಂದಿದೆ. ಬೌದ್ಧ ಗವಿಗಳನ್ನು ಸುಮಾರು ಕ್ರಿ. ಶ. 400 ರಿಂದ 600 ರವರೆಗೂ ಪೌರಾಣಿಕ ಗವಿಗಳನ್ನು ಸುಮಾರು 700 ರಿಂದ 800 ರವರೆಗೂ ತರುವಾಯ ಜೈನಗವಿಗಳನ್ನು 800 ರಿಂದ ಒಂದು ನೂರು ವರ್ಷಗಳೊಳಗಾಗಿಯೂ ಕೊರೆದಂತೆ ತೋರುತ್ತದೆ.ಇವುಗಳನ್ನುಕೊರೆದ ಕಾಲದಲ್ಲಿ ಮೊದಲು ಬಾದಾಮಿಯ ಚಾಲುಕ್ಯರೂ ತರುವಾಯ ಮಾನ್ಯಖೇಡದ ರಾಷ್ಟ್ರಕೂಟರೂ ರಾಜ್ಯವಾಳುತ್ತಿದ್ದುದರಿಂದ ಈ ಗವಿಗಳು ಇರುವ ತಾಲ್ಲೂಕಿಗೆ ಈಗಲೂ ಕನ್ನಡ ತಹಶೀಲ ಎಂದು ಹೆಸರು.

....ಎಲ್ಲೋರ ಗವಿಗಳಲ್ಲಿ ಅತ್ಯಂತ ರಮಣೀಯವಾದ ಗವಿಯೆಂದರೆ ಕೈಲಾಸ ದೇವಾಲಯವೊಂದೇ, ಭೂಲೋಕದ ವಾಸ್ತುಶಿಲ್ಪದಲ್ಲಿ ಇದೊಂದು ವಿಚಿತ್ರವೆನಿಸುವುದು. ಏಕೆಂದರೆ ಇದರಲ್ಲಿ ಒಂದೇ ಒಂದು ಹುಟ್ಟು ಬಂಡೆಯಿಂದ ಮಹಾದ್ವಾರ, ಪ್ರಾಕಾರ, ಶಿಬಿರ, ಕಲಶ, ಲಿಂಗ ಮೊದಲಾದ ಸರ್ವಾಂಗಗಳಿಂದ ಕೂಡಿದ ಎರಡು ಅಂತಸ್ತಿನ ದೊಡ್ಡ ದ್ರಾವಿಡ ದೇವಾಲಯವು ಕೊರೆಯಲ್ಪಟ್ಟಿದೆ.

ಅಜಂತಾ ಮತ್ತು ಎಲ್ಲೋರ ಗುಹೆಗಳಲ್ಲಿರುವ ಶಿಲ್ಪ ಕಲಾಕೌಶಲ್ಯವನ್ನು ಚೀನರು, ಜಪಾನರು ಅನುಸರಿಸಿದರೆಂದು ಹ್ಯುಯೆಯೂ ಎಂಬ ಚೀನನು ಅಭಿಪ್ರಾಯಪಟ್ಟಿದ್ದಾನೆ. ಅಜಂತಾ ಗುಹಾಂತರ ದೇವಾಲಯದ ಚಿತ್ರಗಳೆಲ್ಲ ಬುದ್ಧನ ಜಾತಕ ಕತೆಗಳಿಗೆ ಸಂಬಂಧಿಸಿದವಾದರೂ, ವಿಶ್ವದ ಶಿಲ್ಪಕಲಾ ಕೌಶಲ್ಯದಲ್ಲಿಯೇ ಅವುಗಳನ್ನು ಸರಿಗಟ್ಟುವ ಬೇರೆ ಇನ್ನಾವ ಶಿಲ್ಪ ಕಲಾಕೃತಿಗಳೂ ಇಲ್ಲವೆಂದು ಧಾರಾಳವಾಗಿ ಹೇಳಬಹುದು. ಅಜಂತಾ ಶಿಲ್ಪಕಲೆಯನ್ನು ಅನುಸರಿಸಿಯೇ ಭಾರತದ ಕಲೆಯೂ ಮುಂದೆ ವಿಕಸಿತಗೊಂಡಿತು. 11ನೇ ಶತಮಾನದ ತಂಜೋರದ ಬ್ರಹ್ಮದೀಶ್ವರ ಮಂದಿರದ ಚಿತ್ರಗಳಲ್ಲಿಯೂ ಕೂಡ ಅಜಂತಾ ಕಲೆಯ ಪರಂಪರೆ ನಮಗೆ ಕಾಣದಿರದು ಕಲೆ ಸಾಹಿತ್ಯ ಇದೇ ರೀತಿಯಾಗಿಯೇ ಬೆಳವಣಿಗೆ ಹೊಂದುತ್ತವೆ. ಹಳೆಹೊಸಗಳ ಸಮನ್ವಯವಾಗಿ ಮತ್ತೊಂದು ಹೊಸ ಮಾರ್ಗದಲ್ಲಿ ವಿಕಾಸಹೊಂದುತ್ತ ಹೋಗುತ್ತದೆ. ಆದುವೇ ಜೀವಂತಸಾಹಿತ್ಯ ಜೀವಂತಕಲೆಯ ಕಣ !

"....ಅಜಂತಾ ಕಲೆಯ ಪ್ರಭಾವ ಗ್ವಾಲಿಯರ್ ಸಂಸ್ಥಾನದ ಬಾಗ್, ಪುದಕೋಟೆ ಸಂಸ್ಥಾನದ ಸಿತ್ತನ್ ವಾಸಿಲ್, ಸಿಂಹಳದ್ವೀಪದ ಪರ್ವತ ಮಧ್ಯದಲ್ಲಿರುವ ಸಿಂಹಗಿರಿ ಗುಹೆಗಳಲ್ಲಿ ಕೆತ್ತಿರುವ ಶಿಲ್ಪತ್ರಗಳ ಮೇಲೂ ಮೂಡಿದೆ" ಯೆಂದು ಸಂಶೋಧಕರ ಅಭಿಪ್ರಾಯವಾಗಿದೆ.

ಶಿಲ್ಪಕಲೆಯಲ್ಲಿ ಹಲವು ರೀತಿಗಳ ಕಲೆಯುಂಟು. ಅವಕ್ಕೆ ಬೌದ್ಧರೀತಿ, ಗುಹಾ ಶಿಲ್ಪ, ಔತ್ತರೇಯ ರೀತಿ, ದ್ರಾವಿಡರೀತಿ, ಕರ್ನಾಟಕ ರೀತಿ, ಅಥವಾ ಚಾಲುಕ್ಯರೀತಿ ಇವುಗಳನ್ನು ಅನುಸರಿಸಿ ಸುಮಾರು ಎರಡು ಸಾವಿರ ವರ್ಷಗಳಿಂದ ಭಾರತೀಯ ಸ್ಥಪತಿಗಳು ಕಟ್ಟಿದ ಕಟ್ಟಡಗಳು ನಮ್ಮ ದೇಶದ ವಾಸ್ತುಶಿಲ್ಪದ ಔನ್ನತ್ಯವನ್ನು ಇಂದಿಗೂ ಸಾರುತ್ತಿವೆ.

ಕರ್ನಾಟಕ, ಶಿಲ್ಪಕಲೆಯಲ್ಲಿ ಬಹು ಹೆಸರುಗಳಿಸಿದೆ. ಹಳೇಬೀಡು, ಬೇಲೂರು, ಐಹೊಳೆ, ಪಟ್ಟದಕಲ್ಲು, ಬಾದಾಮಿ, ವಿಜಯನಗರ, ಇಟಗಿ, ಲಕ್ಕುಂಡಿ, ಕನಕಗಿರಿ, ಬನವಾಸಿ, ಗದಗು, ಶ್ರವಣಬೆಳಗೊಳ, ಶ್ರೀರಂಗಪಟ್ಟಣ, ಕಾರ್ಕಳ ಇವೇ ಮುಂತಾದ ಸ್ಥಳಗಳು ಶಿಲ್ಪಕಲೆಯ ಆಗರಗಳಾಗಿವೆ ; ರಮಣೀಯ ಸ್ಥಾನಗಳಾಗಿವೆ. ಇವುಗಳಲ್ಲೆಲ್ಲ ಬೇಲೂರು ಮತ್ತು ಹಳೇಬೀಡುಗಳಲ್ಲಿರುವ ಅಪೂರ್ವ ಶಿಲ್ಪಕಲೆ ಜಗತ್ತನ್ನೇ ವಿಸ್ಮಯಗೊಳ್ಳುವಂತೆ ಮಾಡಿದೆ.

ಗುಡಿಯಲ್ಲಿ ನಿಂತು ನೋಡಿದರೆ ಅಲ್ಲಿರುವುದು ಕೇವಲ ಸುಂದರನಾಡು. ಸೌಂದರ್ಯವೇ ಅಲ್ಲಿ ಮೈವೆತ್ತಿ ಬಂದಂತಿದೆ. ಶ್ರೀ ಗುಂಡಪ್ಪನವರು ಹೇಳುವಂತೆ ಕಣ್ಣೆತ್ತಿ ನೋಡಿದರೆ ಕಾಣುವುದು ಭಾವಾನಂದ ಲೋಕ. ಅದು

ಗಾಂಧರ್ವ ಲೋಕ. ಅಪ್ಸರೆಯರಂತಹ ಮದನಿಕೆಯರು ಅಲ್ಲಿ ಹಾವಭಾವ ವಿಲಾಸಗಳನ್ನು ತೋರುತ್ತಿದ್ದಾರೆ. ಒಬ್ಬಾಕೆ ಕನ್ನಡಿ ನೋಡಿಕೊಂಡು ತನ್ನ ಮೈ ಬೆಡಗಿಗೆ ತಾನೇ ಮನಸೋತಿದ್ದಾಳೆ. ಇನ್ನೊಬ್ಬಳು ಆಭರಣ ಧರಿಸಿಕೊಳ್ಳುವ ಸಂಭ್ರಮದಲ್ಲಿದ್ದಾಳೆ. ಒಬ್ಬಳು ಓಕುಳಿಯಾಟದಲ್ಲಿದ್ದಾಳೆ. ಕೆಲವರು ಗಾನಪರವಶರಾಗಿದ್ದಾರೆ. ಕೆಲವರು ನರ್ತನೋನ್ಮತ್ತರಾಗಿದ್ದಾರೆ. ಒಬ್ಬಳು ಸೀರೆಯಲ್ಲಿ ಚೇಳು ಕಾಣಿಸಿದ ನೆವದಿಂದ, ಒಬ್ಬಳು ಕೋತಿಯ ಕಾಟದ ನೆವದಿಂದ ಭಯಕೋಪಗಳ ಆವೇಶವನ್ನು ತಾಳಿ ಮೈ ಸೊಬಗನ್ನು ವಿಕಾಸಗೊಳಿಸುತ್ತಿದ್ದಾಳೆ. ಎಲ್ಲರೂ ಪರಮ ಸುಂದರಿಯರು, ಮನಮೋಹಿನಿಯರು. ಇದೂ ಅಲ್ಲದೆ ದಿವ್ಯಾಭರಣಗಳಿಂದಲೂ ವಸ್ತ್ರಗಳಿಂದಲೂ ಅಲಂಕೃತವಾದ ಶ್ರೀ ಚೆನ್ನಕೇಶವ ದೇವನ ವಿಗ್ರಹ, ತನ್ನ ಮುದ್ದಿನ ಗಿಣಿಯನ್ನು ಬಲಗೈಮೇಲೆ ಕೂಡಿಸಿಕೊಂಡಿರುವ ಮದನಿಕೆ, ತ್ರಿಭಂಗಿ ನೃತ್ಯದಲ್ಲಿ ತನ್ಮಯಳಾಗಿರುವ ಚೆಲುವೆ, ವೀಣೆಯನ್ನು ನುಡಿಸುತ್ತಿರುವ ಕಲಾವಿದೆ—ಇವೆಲ್ಲವೂ ಭವ್ಯವಾಗಿವೆ ; ಸೌಂದರ್ಯದ ಆಗರವಾಗಿವೆ. ವಿಶ್ವದ ಶಿಲ್ಪಕಲೆಗೆ ಕನ್ನಡನಾಡು ನೀಡಿರುವ ಈ ಶಿಲ್ಪಕಲಾಕೃತಿಗಳು—ಅಮೋಘ ಕಾಣಿಕೆಗಳಾಗಿವೆ !

ಬಾದಾಮಿಯ ಮೇಶ ಬಸದಿ, ಅಲ್ಲಿಯ ನಟರಾಜ, ವಿಜಯನಗರದ ವಿಠ್ಠಲರಾಯನ ಗುಡಿ, ಕಲ್ಲುತೇರು, ಶ್ರವಣಬೆಳಗೊಳದ ಗೋಮಟೇಶ್ವರ, ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯಗಳೂ ಕೂಡ ತುಂಬ ಹೆಸರುವಾಸಿಗಳಾಗಿವೆ. ಇದೂ ಅಲ್ಲದೆ ಲಕ್ಷ್ಮೇಶ್ವರದ ಸೋಮನಾಥ ದೇವಾಲಯ, ಮಹಾಕೊಷಣ ನಗರದಲ್ಲಿ ಒಂದೇ ಹಾಸು ಬಂಡೆಯಲ್ಲಿ ಕೊರೆದು ಕಟ್ಟಿರುವ ಶ್ರೀ ಗವಿಸಿದ್ಧೇಶ್ವರ ಮಠ ಕೂಡ ಒಂದು ವಿಸ್ಮಯಕಾರಕವಾಗಿದೆಯೆಂದು ಹೇಳಬಹುದು.

....ಪ್ರಕೃತಿಯಲ್ಲೂ, ಮನುಷ್ಯರಲ್ಲೂ, ಜೀವಜಂತುಗಳಲ್ಲೂ ನೈಸರ್ಗಿಕವಾದ ವಿಶ್ವಾಸವನ್ನಿಟ್ಟು, ಲೋಕದ ಸೌಂದರ್ಯವನ್ನು, ಭಗವಂತನ ಔದಾರ್ಯವನ್ನೂ ಜನ ಸಾಮಾನ್ಯರ ಸುಖದುಃಖಗಳನ್ನೂ ತಮ್ಮ ಹೃದಯದಲ್ಲಿ ಅನುಭವಿಸಿ, ಆ ಮನೋಭಾವಗಳನ್ನು ಕಾಡುಕಲ್ಲಿನಲ್ಲಿ ಒಡಮೂಡಿಸಿ, ಜೀವಂತಗೊಳಿಸಿದ ಶ್ರೇಯಸ್ಸು ಭಾರತದ ಶಿಲ್ಪಿಗಳಿಗೆ ಅದರಲ್ಲೂ ಕರ್ನಾಟಕದ ಶಿಲ್ಪಿಗಳಿಗಿದೆ.

ಇಂಥ ಶಿಲ್ಪಕಲೆಯನ್ನು ಉಳಿಸಿಕೊಂಡು ಬರುವಲ್ಲಿ ಸರ್ಕಾರ, ಜನತೆ ಹೆಚ್ಚೆಚ್ಚು ಶ್ರಮಿಸುವಂತಾಗಲೆಂದು ಬಯಸುತ್ತೇನೆ.

ಕನ್ನಡನಾಡಿನ ಕಷ್ಟ, ಕಾರ್ಪಣ್ಯ, ದುಃಖದುಮ್ಮಾನಗಳೆಲ್ಲ ಇಂದು ಮಾಯವಾಗಿ, ಸುಖ, ಸಂತೃಪ್ತಿಯ ಬೀಡಾಗಬೇಕೆಂದೂ ಹಂಬಲಿಸಿ, ತನ್ನ ಗತವೈಭವವನ್ನು ಮತ್ತೆ ಪಡೆದು ಮೆರೆಯುವಂತಾಗಲೆಂದು ಹಗಲಿರುಳೂ ನಮ್ಮ ಜನತೆ, ಜನನಾಯಕರು ಶ್ರಮಿಸಿದ ಫಲವಾಗಿ, ಭುವನೇಶ್ವರಿಯಲ್ಲಿ ಸಲ್ಲಿಸಿದ ಪ್ರಾರ್ಥನೆಯ ಫಲವಾಗಿ, ಇಂದು ಮತ್ತೆ ನವೋದಯದ ಪೂರ್ವ ಬೆಳಕಿನಲ್ಲಿ ಕಾಲಿರಿಸುತ್ತಿದ್ದೇವೆ. ಇಂಥ ಪುಣ್ಯದ ಸಮಯದಲ್ಲಿ ತಾಯಿ ಭುವನೇಶ್ವರಿಯನ್ನು ಕುರಿತು ಮತ್ತೆ ಮತ್ತೆ ಪ್ರಾರ್ಥನೆ ಸಲ್ಲಿಸುತ್ತೇನೆ. ಕನ್ನಡದ ಕಲೆ, ಕನ್ನಡದ ಸಾಹಿತ್ಯ, ಕನ್ನಡದ ಜನಮನ, ಹೊಸಕಳೆ, ಹೊಸ ಚೈತನ್ಯ ಪಡೆಯಲೆಂದು ಇದೋ....

"ಓ ! ತಾಯಿ ಭಗವತಿಯೆ ! ಕನ್ನಡ ಕೌಮಾರಿ ! ನಿನ್ನ ಅಮೃತ ಪುತ್ರರು ನಾವು....ನಿನ್ನ ನೆಲದ ನೀರಿನಲಿ, ಬಯಲು ಗಾಳಿಯಲಿ ಬಿಸಿಲು ಬೆಳುದಿಂಗಳಲಿ ತುಂಬಿರುವ ನಿನ್ನ ಮಧುರ ಪ್ರೇಮದಿಂದ ನಮ್ಮ ಜೀವನವು ಮಧುಮಯವಾಗಲಿ, ತಾಯಿ ! ಓ ! ತಾಯಿ ನಿನ್ನ ನಂಬಿದ ನಮ್ಮ ಮೈಮನವನ್ನು ತುಂಬಿ ಬಾ [ಲೇಖಕರ ಬರಲಿರುವ ಕೃತಿ 'ಚೆಲುವಿನ ಅಲೆಗಳು' ಕೃಪೆಯಿಂದ]

ಪಿ. ಆರ್. ತಿಪ್ಪೇಸ್ವಾಮಿ

ಮೈಸೂರು ವಿ. ವಿ. ಜಾನಪದ ವಸ್ತು ಸಂಗ್ರಹಾಲಯ

ನಾಡಿನ ಸಂಸ್ಕೃತಿಯ ಅಧ್ಯಯನದಲ್ಲಿ ಜಾನಪದ ವಸ್ತು ಸಂಗ್ರಹಾಲಯಗಳ ಪಾತ್ರ ವಿಶಿಷ್ಟವಾದುದು. ರಾಷ್ಟ್ರೀಯ ಸಂಸ್ಕೃತಿಯ ಪರಂಪರಾನುಗತ ಜೀವನಕ್ಕೆ ಹಿಡಿದ ಕನ್ನಡಿ ಈ ವಸ್ತು ಸಂಗ್ರಹಾಲಯ. ಜೀವನ ಕ್ಷೇತ್ರದಲ್ಲಿ ವಸ್ತುಗಳನ್ನೂ ಸಾಧನ ಸಲಕರಣೆಗಳನ್ನೂ ಸಾಧಿಸಿಕೊಂಡ ಬಗೆ ಮುಂತಾದುವನ್ನು ಜನಪದ ವಸ್ತುಸಂಗ್ರಹಾಲಯಗಳು ಸಮರ್ಥವಾಗಿ ಪರಿಚಯ ಮಾಡಿಕೊಡುತ್ತವೆ. ಪಾಶ್ಚಾತ್ಯ ದೇಶಗಳು ಇಂಥ ವಸ್ತು ಸಂಗ್ರಹಾಲಯಗಳ ಸ್ಥಾಪನೆಯ ಮೂಲಕ ತಮ್ಮ ಸಂಸ್ಕೃತಿಯ ಕುರುಹುಗಳನ್ನು ಸಂರಕ್ಷಣೆ ಮಾಡಿಕೊಂಡಿವೆ.

ಕರ್ನಾಟಕದಲ್ಲಿ ಇಂಥ ಒಂದು ವಸ್ತು ಸಂಗ್ರಹಾಲಯದ ಸ್ಥಾಪನೆಯ ಕೀರ್ತಿ ಪ್ರೊ. ದೆ.ಜ.ಗೌ. ಅವರಿಗೆ ಸಲ್ಲಬೇಕು. ಡಾ. ಹಾ. ಮಾ. ನಾಯಕರಂಥ ಜಾನಪದ ಗದ್ಯ ವಿದ್ವಾಂಸರ ಮಾರ್ಗದರ್ಶನ, ಪ್ರೊ. ದೆ. ಜ. ಗೌ. ಅವರ ಪ್ರೋತ್ಸಾಹ, ಡಾ. ಜೀ. ಶಂ. ಪರಮಶಿವಯ್ಯ ಮತ್ತು ಪಿ. ಆರ್. ತಿಪ್ಪೇಸ್ವಾಮಿಯರ ದುಡಿಮೆಯಿಂದಾಗಿ ವಸ್ತು ಸಂಗ್ರಹಾಲಯ ವ್ಯಾಪಕವಾಗಿ ಬೆಳೆದಿದೆ. ಪ್ರೊ. ದೇ. ಜವರೇಗೌಡ ಅವರು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದಾಗ ತಮ್ಮ ಪತ್ನಿಯವರು ಬಳಸುತ್ತಿದ್ದ ಒಡವೆಗಳನ್ನೇ ಪ್ರಥಮ ಬಾರಿಗೆ ದಾನವಾಗಿ ನೀಡಿ ಜಾನಪದ ವಸ್ತುಸಂಗ್ರಹಾಲಯವನ್ನು ಬೆಳೆಸಲು ದಾರಿ ಮಾಡಿಕೊಟ್ಟರು. ಜೊತೆಗೆ ಅವರಿಗೆ ಬಂದ ನೆಹರು ಪ್ರಶಸ್ತಿಯ ಹಣವನ್ನೆಲ್ಲ ಈ ಮ್ಯೂಜಿಯಂಗೆ ಮೀಸಲಿರಿಸಿಕೊಟ್ಟರು. ಇವರ ನಿರ್ದೇಶನದಲ್ಲಿ ಆರಂಭವಾದ ಈ ಸಂಗ್ರಹಾಲಯ ಬಹು ಬೇಗ ಬೆಳವಣಿಗೆಯನ್ನು ಸಾಧಿಸಿತು. ಸಂಗ್ರಹ ಕೆಲಸ ಜಿಲ್ಲೆಯಿಂದ ಜಿಲ್ಲೆಗೆ ಬಹಳ ತ್ವರಿತ ಗತಿಯಲ್ಲಿ ಸಾಗತೊಡಗಿತು. ಅಲ್ಪ ಕಾಲದಲ್ಲೆ ಅಪೂರ್ವ ವಸ್ತುಗಳ ಸಂಗ್ರಹಣೆ ಮಾಡಲಾಯಿತು. ಕನ್ನಡ ಅಧ್ಯಯನ ಸಂಸ್ಥೆಯ ಹಳೆಯ ಭವ್ಯಕಟ್ಟಡ ಇದಕ್ಕಾಗಿ ಮೀಸಲಾಯಿತು. ನಾಗರಿಕತೆಯ ಈ ದಿನಗಳಲ್ಲಿ ಕಾಲನ ದವಡೆಯಲ್ಲಿ ನಶಿಸಿ ಹೋಗುತ್ತಿರುವ ಅಪೂರ್ವ ಜನಪದ ವಸ್ತುಗಳ ಸಂಗ್ರಹ ಶೀಘ್ರವಾಗಿ ಆಗಬೇಕಾದುದೆಂದು ಇಲ್ಲಿಗೆ ಬಂದ ಗಣ್ಯ ವಿದ್ವಾಂಸರೆಲ್ಲ ಅಭಿಪ್ರಾಯ ಪಟ್ಟು ಇಲ್ಲಿಯ ಕಾರ್ಯವನ್ನು ಪ್ರಶಂಸಿಸಿದ್ದಾರೆ.

ಡೆನ್ಮಾರ್ಕಿನ ಪ್ರಸಿದ್ಧ ಜಾನಪದ ವಿದ್ವಾಂಸರಾದ ಎನ್. ಕೆ. ಸರೆನ್‌ಸೇನ್ ಅವರು "ಭಾರತೀಯ ನೃತ್ಯ ನಾಟಕ. ಗೊಂಬೆಯಾಟಗಳ ಸಂಶೋಧನಾರ್ಥವಾಗಿ ನಾನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಸ್ತು ಸಂಗ್ರಹಾಲಯಕ್ಕೆ ಅನೇಕ ಸಲ ಭೇಟಿ ನೀಡಿದ್ದೇನೆ. ಭಾರತೀಯ ಜಾನಪದವ ಬಗ್ಗೆ ಅಧ್ಯಯನ ನಡೆಸುವ ವಿದ್ಯಾರ್ಥಿಗಳಿಗೂ ಸಂಶೋಧಕರಿಗೂ ಅತ್ಯಗತ್ಯವಾದ ಅತಿ ಮುಖ್ಯ ಸಂಗ್ರಹ ಇಲ್ಲಿ ದೊರೆಯುತ್ತದೆ" ಎಂದು ಹೃದಯ ತುಂಬ ನುಡಿದಿದ್ದಾರೆ.

ಇಲ್ಲಿಗೆ ಸಂಗ್ರಹಿಸಿ ತಂದ ವಸ್ತುಗಳನ್ನು ಶಾಸ್ತ್ರೀಯ ಕ್ರಮಗಳನ್ನು ಅನುಸರಿಸಿ ವಿಭಜನೆ ಮಾಡಿಕೊಳ್ಳಲಾಗಿದೆ. ಯಕ್ಷಗಾನ ಸಾಧನಗಳು, ಸೂತ್ರದ ಗೊಂಬೆಗಳು, ಚರ್ಮದ ಗೊಂಬೆಗಳು, ಕೀಲುಗೊಂಬೆಗಳು, ನವರಾತ್ರಿ

ಗೊಂಬೆಗಳು, ಗೌರಿಗೊಂಬೆಗಳು, ಲೋಹದ ಸಾಮಗ್ರಿಗಳು, ವಾದ್ಯ ವಿಶೇಷಗಳು ಧಾರ್ಮಿಕ ಸಾಮಗ್ರಿಗಳು, ಜನಪದ ಚಿತ್ರಕಲೆ, ಆಯುಧ ವಿಶೇಷಗಳು, ವೃತ್ತಿ ಸಾಮಗ್ರಿಗಳು, ಹೆಣಿಗೆ ಸಾಮಗ್ರಿಗಳು, ನಿತ್ಯಬಳಕೆಯ ವಸ್ತುಗಳು, ವಸ್ತ್ರಾಭರಣಗಳು, ವ್ಯವಸಾಯಸಾಧನಗಳು-ಇನ್ನೂ ಅನೇಕ ಭಾಗಗಳಾಗಿ ವಿಂಗಡಿಸಿ ಓರಣವಾಗಿ ಜೋಡಿಸಲಾಗಿದೆ.

ಕರ್ನಾಟಕದ ನಾನಾ ಭಾಗಗಳಲ್ಲಿ ಪ್ರಚಲಿತವಾಗಿರುವ ಯಕ್ಷಗಾನ, ಬಯಲಾಟದ ಕಿರೀಟ, ಭುಜಕೀರ್ತಿ, ಎದೆಹಾರ, ವೀರಗಾಸೆ ಮುಂತಾದ ಕಲಾತ್ಮಕ ವಸ್ತುಗಳನ್ನು ಇಲ್ಲಿ ಪ್ರದರ್ಶಿಸಲಾಗಿದೆ. ಕೇರಳದ ಕಥಕಳಿ ಮತ್ತು ಆಂಧ್ರ ಪ್ರದೇಶದ ವಿವಿಧ ನಾಟಕದ ವೇಷಭೂಷಣಗಳನ್ನು ಇಲ್ಲಿ ಗಮನಿಸಬಹುದಾಗಿದೆ. ಕರಾವಳಿ ಪ್ರದೇಶದ ತೆಂಕತಿಟ್ಟು ಹಾಗು ಬಡಗತಿಟ್ಟಿನ ಯಕ್ಷಗಾನ ನಾಟಕದ ವೇಷಭೂಷಣಗಳು ಇಲ್ಲಿ ಎದ್ದು ತೋರುವಂತೆ ಬೆಳಗಾಂ ಮತ್ತು ಬಳ್ಳಾರಿ ಕಡೆಯ ದೊಡ್ಡಾಟದ ಕಿರೀಟ, ಭುಜಕೀರ್ತಿಗಳು ಜೀರಿಂಬೆ ರೆಕ್ಕೆಗಳಿಂದ ಅಲಂಕೃತವಾಗಿ ಶೋಭಿಸುತ್ತವೆ. ಮಂಡ್ಯ, ಮೈಸೂರು, ತುಮಕೂರು ಜಿಲ್ಲೆಗಳ ಬಯಲು ಸೀಮೆಗಳ ಮೂಡಲ ಪಾಯ ಹಾಗೂ ಘಟ್ಟದಕೋರೆ ಯಕ್ಷಗಾನ ನಾಟಕಗಳ ವೇಷಾಲಂಕರಣಗಳು ಇಲ್ಲಿ ತಮ್ಮ ಸ್ಥಾನವನ್ನು ಪಡೆದು ರಂಜಿಸುತ್ತಿವೆ. ಕೂಗಲಬಳ್ಳಿಯಲ್ಲಿ ರಚಿಸಲಾದ ಹನುಮಂತನ ಕಿರೀಟ ಅಪರೂಪವಾದುದು. ಉತ್ತರ ಕನ್ನಡ ಜಿಲ್ಲೆಯ ಅಪರೂಪ ಕೊಡುಗೆ ಇದು. ಮುನ್ಮಡಿಯವರ ಕಾಲದಲ್ಲಿ ಧರ್ಮಸ್ಥಳ ಮೇಳದವರು ಬಳಸಿದ ಮರದ ಕಿರೀಟಗಳು ಗದೆಗಳು ಮುಂತಾದುವು ಕಲಾದೃಷ್ಟಿಯಿಂದ ಹಿರಿಯ ಸ್ಥಾನವನ್ನು ಪಡೆದಿವೆ.

ಇಲ್ಲಿಯ ಸೂತ್ರದ ಗೊಂಬೆಗಳು ಅಪರೂಪದ ಆಕರ್ಷಣೆ ಎನ್ನಬಹುದು. ಬಳ್ಳಾರಿ,ತುಮಕೂರು, ಮಂಡ್ಯ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಗೊಂಬೆಗಳನ್ನು ನಾವಿಲ್ಲಿ ಈಕ್ಷಿಸುತ್ತೇವೆ. ಒಂದೊಂದು ಸಂಪ್ರದಾಯದ ಗೊಂಬೆಗಳೂ ತಮ್ಮದೇ ಆದ ವೈವಿಧ್ಯವನ್ನು ಹೊಂದಿವೆ. ಅವುಗಳ ರಚನೆ, ವರ್ಣಲೇಪ, ವಸ್ತ್ರಾಲಂಕರಣ ಎಲ್ಲವೂ ಅಪೂರ್ವವಾದುವು. ಬೆಳ್ಳೂರು ಹಾಗೂ ತಿಪಟೂರು ಸೂತ್ರದ ಗೊಂಬೆಗಳ ಮಾಟ, ವರ್ಣಸಂಯೋಜನೆ ಅಮೋಘವಾದುದು. ಕುಂದಾಪುರ ದೇವಣ್ಣ ಕಾಮತರ ಗೊಂಬೆಗಳು ಪ್ರೇಕ್ಷಕರ ಕಣ್ಣನ್ನು ಬಹುಬೇಗ ತಮ್ಮೆಡೆಗೆ ಸೆಳೆಯುವಂತಿವೆ. ಹದಿನೆಂಟು ಅಂಗುಲದ ನೃತ್ಯವಾಡುವ ಕುತೂಹಲಕಾರಿ ಕೀಲುಗೊಂಬೆಗಳು ಕನ್ನಡ ನಾಡಿನಲ್ಲೇ ಎಲ್ಲೂ ಕಾಣದ ವಿಶಿಷ್ಟ ಗುಣಗಳನ್ನು ಪಡೆದಿವೆ. ಗಾನಕ್ಕೆ ತಕ್ಕಂತೆ ಕಣ್ಣು, ಗಡ್ಡ ಚಲಿಸಿ ನೃತ್ಯ ಮಾಡುವ ಈ ಪುಟ್ಟ ಗೊಂಬೆಗಳು ಪ್ರೇಕ್ಷಕರ ಕುತೂಹಲವನ್ನು ಕೆರಳಿಸುತ್ತವೆ.

ತೊಗಲುಗೊಂಬೆಗಳು ಇಲ್ಲಿ ಪ್ರಮುಖ ಸ್ಥಾನವನ್ನು ಗಳಿಸಿವೆ. ಇವು ಯಕ್ಷಗಾನ ಸಂಪ್ರದಾಯದ ನಾಟಕ ಪ್ರಕಾರಕ್ಕೆ ಸೇರುವ ಜನಪದ ಕಲಾಕೃತಿಗಳು. ಭಾರತೀಯ ಚಿತ್ರಕಲೆಯ ಉನ್ನತ ಪರಂಪರೆಯನ್ನು ಸಾರುವ ಈ ಗೊಂಬೆಗಳು ತಮ್ಮ ರೇಖಾವಿನ್ಯಾಸಕ್ಕೆ, ಕಲ್ಪನಾರಮ್ಯತೆಗೆ, ವರ್ಣವೈಖರಿಗೆ ಹೆಸರಾದುವು. ಕರಾವಳಿ ಮತ್ತು ಮಲೆನಾಡು ಭಾಗಗಳ ಹೊರತು ಕರ್ನಾಟಕದ ಉಳಿದೆಲ್ಲಾ ಕಡೆಗಳಲ್ಲೂ ಜೀವಂತವಾಗಿರುವ ಕಲೆ 'ತೊಗಲು ಗೊಂಬೆಯಾಟ'. ಇಲ್ಲಿ ರಾಮಾಯಣ, ಮಹಾಭಾರತ,ಭಾಗವತಗಳಿಗೆ ಸಂಬಂಧ ಪಡುವ ಚರ್ಮದ ಗೊಂಬೆಗಳನ್ನು ನಾವು ಕಾಣಬಹುದು. ಜಿಂಕೆ, ಮೇಕೆಯ ಚರ್ಮದ ಮೇಲೆ ರಚಿತವಾಗುವ ಈ ಕೃತಿಗಳು ಉನ್ನತ ಕಲಾಸಿದ್ಧಿಯನ್ನು ಪಡೆದಿವೆ. ಪಾರದರ್ಶಕದ ಈ ತೆಳುಗೊಂಬೆಗಳು ದೀಪದ ಬೆಳಕಿನಲ್ಲಿ ಉಜ್ವಲವಾಗಿ ತೋರುತ್ತವೆ. ಕೆಲವು ಗೊಂಬೆಗಳು ದೊಡ್ಡ ಆಕಾರದಿಂದ ಕೂಡಿರುತ್ತವೆ. ಕೈ ಕಾಲು ಕತ್ತು ಚಲಿಸುವ ವರ್ಣ ಸಂಯೋಜನ ಕ್ರಮ ಒಂದು ಅಪರೂಪದ ಕಲೆಯಾಗಿದೆ ಈ ವಸ್ತು ಸಂಗ್ರಹಾಲಯಕ್ಕೆ ಬರುವ ಪ್ರೇಕ್ಷಕರು ಈ ವಿಭಾಗಕ್ಕೆ ಕಾಲಿಟ್ಟೊಡನೆಯೇ ಯಾವುದೋ ಮಾಂತ್ರಿಕ ಲೋಕದಲ್ಲಿರುವಂತೆ ಭ್ರಮೆ ಆಗದಿರದು.

ಮತ್ತೊಂದು ಮುಖ್ಯ ಭಾಗ ಎಂದರೆ ಜಾನಪದ ವಾದ್ಯ ವಿಭಾಗ. ಇಲ್ಲಿ ಜಾನಪದ ನೃತ್ಯಗಳಲ್ಲಿ, ಮೇಳಗಳಲ್ಲಿ, ಉತ್ಸವಗಳಲ್ಲಿ ಉಪಯೋಗಿಸುವ ವಿವಿಧ ರೀತಿಯ ವಾದ್ಯಗಳು ತಮ್ಮ ಸ್ಥಾನಗಳನ್ನು ಪಡೆದುಕೊಂಡು

ಮೆರೆಯುತ್ತಿವೆ. ಜೋಗಿಗಳ ಕಿನ್ನರಿ ಅಪರೂಪದ ವಾದ್ಯ. ಜುಂಜಪ್ಪನ ಗಣಿ, ಎಲ್ಲಮ್ಮನ ಚೌಡಿಕೆ, ಬೀರಪ್ಪನ ಡೊಳ್ಳು, ಗೊಂದಲಿಗರ ಸಂಬಾಳ, ಹಾಲಕ್ಕಿ ಗೌಡರ ಸುಗ್ಗಿ ಕುಣಿತದ ಗುಮ್ಮಟೆವಾದ್ಯ, ರಣಕಹಳೆ, ಕೊಂಬು, ಜೀರಂಗಾಳೆ, ಪುಂಗಿ, ಸೀನಿ, ಚಂಡೆ, ತಾಸೆ, ದಿಮ್ಮಿ, ತಮಟೆ, ಕರಡೆ, ಬುಡುಬುಡಿಕೆ, ಜುಡಬುಡಿ, ಹರೆ, ಉರವರ ದುಡಿ, ಕಂಸಾಳೆ, ಹೆಳವರ ಗಂಟೆ, ಜೇನು ಕುರುಬರ ದೇವರು ಕರೆಸುವ ತೊರಪೆ, ಸೀಲಗಾರ ಸಂಪ್ರದಾಯದ ತಂಬೂರಿ–ಹೀಗೆ ನಾನಾ ನಮೂನೆಯ, ನಾನಾ ಸಂಪ್ರದಾಯದ ವಾದ್ಯಗಳನ್ನು ಇಲ್ಲಿ ಗಮನಿಸಬಹುದು. ಬಹು ಪಾಲು ಇಲ್ಲಿಯ ವಾದ್ಯಗಳಿಗೆ ಎಮ್ಮೆ. ಎತ್ತು, ಮೇಕೆ, ಕೋತಿ, ಸಮುದ್ರತೀರದ ಕಪ್ಪೆ ಹಾಗು ಉಡ ಮುಂತಾದವು ಗಳ ಚರ್ಮವನ್ನೇ ಬಳಸಲಾಗಿದೆ.

ಪಸರ ಮತ್ತು ಗೌರಿ ಗೊಂಬೆಗಳನ್ನು ಇಲ್ಲಿ ನಾವು ಅಲಕ್ಷಿಸುವಂತಿಲ್ಲ. ಮರದ ಹೊಟ್ಟಿನಿಂದ ತಯಾರಿಸಿದ ಈ ಗೊಂಬೆಗಳು ವಿವಿಧ ಬಣ್ಣಗಳಿಂದ ಕೂಡಿ ಸ್ವಾಭಾವಿಕವಾಗಿ ತೋರುತ್ತವೆ. ಚಾಮರಗಿತ್ತಿ, ವೇಣುಗೋಪಾಲ, ತಾಯಿ–ಮಗು, ಹನುಮಂತ, ಕಾಮದೇವ, ಅಂಬೆಗಾಲ ಕೃಷ್ಣ, ಸನ್ಯಾಸಿ, ಜಟ್ಟಿಗಳು, ನಾಯಿಂದ, ಅಗಸ, ಹಲ್ಲು ಬೀರ, ಗೋಪಿಕಾ ಸ್ತ್ರೀಯರೊಡನೆ ಇರುವ ಕೃಷ್ಣನ 'ರಾಸಕ್ರೀಡೆ' ಗೊಂಬೆ ಮೊದಲಾದುವು ಇಲ್ಲಿನ ಆಕರ್ಷಣೆ.

ತಲೆಭೂತ (ಸೋಮ), ಕೈಭೂತ (ಹಲಗಿ) ಮುಂತಾದವು ವಿಶಿಷ್ಟ ದೈವಗಳು. ಕೊಡಗಿನ ಅಯ್ಯಪ್ಪ ಸ್ವಾಮಿ ಸಂಪ್ರದಾಯದ ಕುದುರೆ, ಬೇಟೆನಾಯಿಗಳು, ಮಣ್ಣಿನ ಕಲಾಮಯ ಪ್ರತಿರೂಪದ ದೈವಗಳು. ಉತ್ತರ ಕನ್ನಡ ಜಿಲ್ಲೆಯಲ್ಲಿ ಊರಿಂದ ಊರಿಗೆ ಸಾಗುವ 'ಉಡುಗೋಲಜ್ಜ' ಮರದ ಗೊಂಬೆ ಮತ್ತು ದೇವಾಲಯಗಳಲ್ಲಿ ಪೂಜಿಸುವ ಭರ್ಗಿಚೋಮ, ಹುಲಿದೇವರು, ಮೈಲಾರ ದೇವರ ಪವಾಡದ ಸಾಮಗ್ರಿಗಳು ಇಲ್ಲಿದ್ದು ಜನರ ಆಸಕ್ತಿ ಯನ್ನು ಕೆರಳಿಸುತ್ತವೆ.

ಲೋಹದ ವಸ್ತುಗಳಲ್ಲಿ ನಾನಾ ರೀತಿಯ ಕಬ್ಬಿಣದ ಕೀಲಿಗಳು, ಸುಣ್ಣಕಾಯಿಗಳು, ಅಡಕತ್ತಿಗಳು, ಕುಟ್ಟಾಣಿಗಳು; ಊಟದ ತಣಿಗೆಗಳು, ಗಿಂಡಿಗಳು, ಪೀಕದಾನಿಗಳು, ಕೋಳಿ ಅಂಕದ ಕತ್ತಿಗಳು, ಭೂತಾರಾಧನೆಯ ಮೂರ್ತಿಗಳು, ಕೊಡಗಿನ ಬಾಲುರುಳಿ, ಆನೆಗಂಟೆ, ಎಣ್ಣೆಗುಜ್ಜಣಿಗೆಗಳು, ದೀವಟಿಗೆಗಳು ಮುಂತಾದುವನ್ನು ಯಾರೂ ಮರೆಯುವಂತಿಲ್ಲ.

ನಿತ್ಯಬಳಕೆಯ ವಸ್ತುಗಳ ವಿಭಾಗ ತನ್ನದೇ ಆದ ಸ್ಥಾನವನ್ನು ಪಡೆದಿದೆ. ವಿವಿಧ ಪ್ರದೇಶಗಳಲ್ಲಿ ಪ್ರಚಲಿತ ವಾಗಿರುವ ಕಳಸಿಗೆ, ಪರೆ, ಪಡಿ, ಮುಂತಾದ ಅಳತೆಯ ಸಾಧನಗಳನ್ನು ನಾನಾ ನಮೂನೆಯ ತೀವಟಿಗೆ ಮಣೆ ಗಳನ್ನೂ, ಶ್ಯಾವಿಗೆ ಒರಳು (ನ್ಯೂಪುಟ್ಟು) ಬಿದಿರಂಡೆ, ಸಾಂಬಾರ್ ಬಟ್ಟಲುಗಳು, ತೆಂಗಿನ ಕರಟದ ಬಟ್ಟಲುಗಳು, ಅಪರೂಪದ ನೆಲವುಗಳು, ಸಿಕ್ಕಗಳು, ತಾಯಿ ಮಕ್ಕಳ ನೆಲವುಗಳು, ಕವಳದ ಸಿಬ್ಬೆ ಮುಂತಾದುವು ಈ ವಿಭಾಗದ ಮುಖ್ಯ ಆಕರ್ಷಣೆ.

ಇನ್ನು ಮಣ್ಣಿನ ಮಕ್ಕಳ ಜೀವನಾಡಿಯಂತಿರುವ ವ್ಯವಸಾಯ ಸಾಧನಗಳೂ ಅಷ್ಟೇ ಪ್ರಮುಖವಾದುವು. ಎತ್ತುಗಳ ಶೃಂಗಾರಕ್ಕೆ ಬಳಸಲಾಗುವ ಅನೇಕ ಬಗೆಯ ಹಣೆಪಟ್ಟಿಗಳು, ಮುಖರಂಭಗಳು, ಕೊಂಚೌರ, ಕೊಂಬು ಕಳಸಗಳು, ಮಾಗಾಯಿಗಳು, ಗೊಳಗಳೆ, ಗಂಟೆಸರಗಳು, ತಟ್ಟಿಗಳು; ಎಂಟು ಜೊತೆ ಎತ್ತುಗಳನ್ನು ಕಟ್ಟಿ ವ್ಯವಸಾಯ ಮಾಡುವ ಬೆಳಗಾಂ ಭಾಗದ ಅಪೂರ್ವ ರೆಂಟೆ (ನೇಗಿಲು) ಇದಕ್ಕೆ ಬಳಸುವ ಚರ್ಮದ ಮಿಣಿ ಹಾಗೂ ಎತ್ತಿನ ಕೊರಳಿಗೆ ನೊಗ ಬಿಗಿಯುವ ಸುಪ್ಪತ್ತಿಗೆ ನೋಡುವವರಿಗೆ ದಂಗು ಬಡಿಸುತ್ತವೆ. ಬಂಡಿಯ ಹುಲ್ಲು ಬಿಗಿಯುವ ಗಡಗಡೆ, ನೀರು ತರುವ ಲಗಳೆ, ಓರಿಬೀಜ ಹೊಡೆಯುವ ಹೋರುಗೋಲು, ದನಗಳ ಗಂಟಲಿನಲ್ಲಿನ ಮುಳ್ಳು ಹೊರ ತೆಗೆಯುವ ಕೈ ನಳಗ, ಅಕ್ಕಿ ಮೂಟೆ ಕಟ್ಟುವ ಕೋದಂಟೆ, ನಾಗರ ಸೆಡೆ ನೊಗ, ನೀರು ಎತ್ತುವ ಬುದ್ಧಿಮಂತ, ಮಂತ್ರದ ಬಳ್ಳಿ, ಧಾನ್ಯದ ರಾಶಿಗೆ ಸೀಲು ಮಾಡುವ ಶ್ರೀ ಮುದ್ರೆಕೋಲು, ಚಬಕ, ಕವಣೆಗಳು, ಬೋರ್ಗಣೆ ಮುಂತಾದುವನ್ನು ಇಲ್ಲಿ ಮುಖ್ಯವಾಗಿ ಹೆಸರಿಸಬಹುದಾಗಿದೆ.

ಇಷ್ಟೇ ಅಲ್ಲದೆ ಅನೇಕ ರೀತಿಯ ಕಲಾತ್ಮಕ ಹೆಣಿಗೆ ಸಾಮಾನುಗಳು, ಮಣ್ಣಿನ ಹಣತೆಗಳು, ಬುದ್ಧಲಿಗಳು, ಭಸ್ಮದ ಮರೈ, ಉಪ್ಪಿನಕಾಯಿ ಮರಿಗೆ, ತುಪಾಕಿ ಮದ್ದಿನ ಕುಡಿಕೆಗಳು, ಹಿಟ್ಟು ತುಂಬುವ ರನ್ನದ ಗಡಿಗೆಗಳು, ಗುಡಾಣಗಳು, ಆನೆಹುಲ್ಲು ಕೊಯ್ಯುವ ದಂತದ ಹಿಡಿಯುಳ್ಳ ದರಾತಿ, ವಡಿಕತ್ತಿ, ವೀರಗತ್ತಿ, ಪೀಚುಕತ್ತಿ, ಮಲ್ಲಕತ್ತಿ, ಅಡಕತ್ತಿ, ಡೊಕ್ಕುರುಪೆ, ವರನ ಕಠಾರಿ, ಭೂತನೇಮದ ಕತ್ತಿ, ಪರಶು ಮುಂತಾದ ಆಯುಧಗಳನ್ನು ಸಂಗ್ರಹಿಸಿ ಪ್ರದರ್ಶಿಸಲಾಗಿದೆ. ವಿಜಯನಗರ, ಕೊಡುಗು ಹಾಗು ಬಹಮನಿ ಅರಸರ ಕಾಲದ ಸಿಕ್ಕ (ನಾಣ್ಯ)ಗಳೂ, ಸುಗಂಧದ್ರವ್ಯದ ಅತ್ತರ್‌ದಾನ್ ಪೆಟ್ಟಿಗೆಗಳೂ, ತೇಲುವ ಇಟ್ಟಿಗೆ, ವಿಮಾನ ಹಿಡಿಯುವ ಸಾಧನಗಳೂ, ನೇಯಿಗೆ ಸಾಮಗ್ರಿಗಳೂ ಕಾಣಸಿಗುತ್ತವೆ. ಜೊತೆಗೆ ಹಣ ಸಂಗ್ರಹಿಸುವ ಹೆಮ್ಮಿಣಿಗಳು, ಪವಿತ್ರ ಕೌದಿಗಳು, ಕೋರಿ ನಿಶಾನಿ, ಪರ್ವಂತರ ದಟ್ಟಿ, ಬಗಲಬಂದಿ, ಲಂಬಾಣಿ ಹೆಂಗಸರ ಹಾಗೂ ಕೊಡಗರ ಉಡುಗೆ ತೊಡುಗೆಯನ್ನು, ಬಜ್ಜೆ ಕಾನೆ ದೊತ್ರ ಒಂದು ಅಪರೂಪದ ಪಂಚೆಯನ್ನೂ ಸಂಗ್ರಹಿಸಿ ಪ್ರದರ್ಶಿಸಲಾಗಿದೆ.

ಕರ್ನಾಟಕದ ಚಿತ್ರಕಲೆ ಇಲ್ಲಿ ಒಂದು ಸ್ಥಾನ ಪಡೆದುಕೊಂಡಿದೆ. ಬೂಟಾರೇಖೆಗಳ ಮೇಲೆ ಸ್ವರ್ಣ ಲೇಪನದ ಕುಸುರಿನ ಚಿತ್ರಕಲೆ ಇದರ ಹಿರಿಮೆ. ಪಂಚನಾರಿ ತುರಗ, ಮುಮ್ಮಡಿ, ಶಿವಪಾರ್ವತಿ ಕಲ್ಯಾಣ, ಗೋಪಾಲ ಮುಂತಾದ ಜಲವರ್ಣ ಚಿತ್ರಗಳು ಹೆಸರಿಸುವಂತಿವೆ. ಓಲೆಗರಿಯ ಅತಿ ಸೂಕ್ಷ್ಮ ರೇಖಾಚಿತ್ರಗಳೂ, ಗಿಡಮೂಲಿಕೆಗಳ ರಸದಿಂದ ರಚಿತವಾದ ಅಲಂಕಾರಿ ಚಿತ್ರಗಳೂ, ವಿವಿಧ ವರ್ಣಗಳ ಪುಟಾಣಿ ಮಣಿಗಳ ಹೆಣಿಗೆ, ಕಲಾಕೃತಿಗಳೂ, ನಾಲ್ಕು ಅಡಿ ಉದ್ದನೆಯ ಸೋರೆಕಾಯಿ ಮೇಲೆ ಕೃಷ್ಣಲೀಲೆಯ ಚಿತ್ರಗಳೂ ಈ ವಿಭಾಗದಲ್ಲಿ ಗಮನಿಸಬೇಕಾದ ಕಲಾರತ್ನಗಳಾಗಿವೆ.

ಇತ್ತೀಚೆಗೆ ಸಂಗ್ರಹವಾಗಿರುವ ದಕ್ಷಿಣ ಕನ್ನಡ ಜಿಲ್ಲೆಯ ಮೆಕ್ಕೆ ಕಟ್ಟೆಯ ನಂದಿಕೇಶವ ಸಂಪ್ರದಾಯದ ೬೦೦ ವರ್ಷಗಳ ಹಳೆಯ ಸುಮಾರು ಐವತ್ತು ಮರದ ಗೊಂಬೆಗಳು ಈ ಸಂಗ್ರಹಾಲಯದ ಒಂದು ದೊಡ್ಡ ನಿಧಿ ಎಂದರೂ ತಪ್ಪಾಗದು. ಸಮುದ್ರಕ್ಕೆ ವಿಸರ್ಜಿಸಲಿದ್ದ ಈ ಅಪರೂಪದ ಬೆಲೆಬಾಳುವ ಗೊಂಬೆಗಳು ಕಲಾದೃಷ್ಟಿಯಿಂದಲೂ ಪ್ರಾದೇಶಿಕ ಹಿನ್ನೆಲೆಯ ದೃಷ್ಟಿಯಿಂದಲೂ ಇಲ್ಲಿ ಸಂರಕ್ಷಿಸಲಾಗಿದೆ. ೧೪ ಅಡಿ ಎತ್ತರದ ಗೊಂಬೆಯೊಂದು ಪ್ರೇಕ್ಷಕರನ್ನು ಹಿಡಿದು ನಿಲ್ಲಿಸಿಬಿಡುವಂತಿದೆ. ಇವು ಜಾನಪದ ವಸ್ತು ಸಂಗ್ರಹಾಲಯಕ್ಕೆ ಕೊಳಕೆ ಬೈಲ್ ಬಂಧುಗಳ ಅಮೋಘ ಕಾಣಿಕೆ.

ಜಾನಪದ ವಸ್ತು ಸಂಗ್ರಹಾಲಯದಲ್ಲಿ ಈಗಾಗಲೇ ಸುಮಾರು ನಾಲ್ಕು ಸಾವಿರಕ್ಕೂ ಮೀರಿ ಜಾನಪದ ವಸ್ತುಗಳನ್ನು ಸಂಗ್ರಹಿಸಿ ಶಾಸ್ತ್ರೀಯವಾಗಿ ವಿಭಜಿಸಿ ಪ್ರದರ್ಶಿಸಲಾಗಿದೆ. ದಕ್ಷಿಣ ಕನ್ನಡ, ಉತ್ತರ ಕನ್ನಡ, ಬೆಳಗಾಂ, ಬಿಜಾಪುರ, ಬೀದರ್, ಬಳ್ಳಾರಿ, ಶಿವಮೊಗ್ಗ ಮತ್ತು ಕೊಡಗು ಜಿಲ್ಲೆಗಳಲ್ಲಿ ಸಂಗ್ರಹ ಕಾರ್ಯವನ್ನು ನಡೆಸಲಾಗಿದೆ. ವಸ್ತುವಿಶೇಷಗಳನ್ನು ಬಹುಪಾಲು ದಾನರೂಪದಲ್ಲಿಯೇ ಲಭ್ಯವಾಗುವಂತೆ ನೋಡಿಕೊಳ್ಳಲಾಗಿದೆ. "ನಾಡಿನ ಸಂಸ್ಕೃತಿಯ ಅಧ್ಯಯನದಲ್ಲಿ ಈ ವಸ್ತು ಸಂಗ್ರಹಾಲಯ ಅತ್ಯಂತ ಗಣ್ಯವಾದ ಪಾತ್ರವನ್ನು ವಹಿಸಬಲ್ಲುದು"— ಎಂದು ಅನೇಕ ಗಣ್ಯರು ಅಭಿಪ್ರಾಯ ಪಟ್ಟಿದ್ದಾರೆ. ಅನೇಕ ವಿಶ್ವವಿದ್ಯಾನಿಲಯಗಳ ಉಪಕುಲಪತಿಗಳೂ, ವಿದ್ವಾಂಸರೂ, ಕೇಂದ್ರ ಸರ್ಕಾರದ ಉನ್ನತಾಧಿಕಾರಿಗಳೂ ಈ ಜಾನಪದ ವಸ್ತು ಸಂಗ್ರಹಾಲಯವನ್ನು ನೋಡಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ.

ಈ ಸಂಗ್ರಹಾಲಯವನ್ನು ಇತ್ತೀಚೆಗೆ ಈಕ್ಷಿಸಿದ ರಾಜ್ಯದ ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು 'ನೋಡಲೇ ಬೇಕಾದಂಥ ಅಪೂರ್ವ ಜಾನಪದ ವಸ್ತುಸಂಗ್ರಹ ಇದು' ಎಂದು ಹೃದಯ ತುಂಬಿ ನುಡಿದು ಹರಸಿದ್ದಾರೆ.

ಪ್ರಧಾನ್ ಗುರುದತ್ತ

ಸಂಸ್ಕೃತ ರಾಮಾಯಣದ ಒಂದು ಕನ್ನಡ ಭಾಷಾಂತರ

ಭಾಷಾಂತರ ಕಾರ್ಯ ಅತ್ಯಂತ ತೀವ್ರವಾಗಿ ನಡೆಯುತ್ತಿರುವ ಅವಧಿಯಲ್ಲಿ ನಾವಿಂದು ಹಾಯ್ದು ಹೋಗುತ್ತಿದ್ದೇವೆ. ಉಳಿದ ಸಾಹಿತ್ಯ ಪ್ರಕಾರಗಳೊಡನೆ ಹೊಯ್‌ಕಯ್ಯಾಗಿ ಸಾಗುತ್ತಿದೆಯೋ ಎಂಬ ಅನುಮಾನವನ್ನು ಉಂಟುಮಾಡುವಷ್ಟರ ಮಟ್ಟಿಗೆ ಗುಣ, ಗಾತ್ರಗಳಲ್ಲಿ, ಸಂಖ್ಯೆಯಲ್ಲಿ ಗಮನಾರ್ಹ ಕೃತಿಗಳು ಹೊರಬಂದಿವೆ, ಹೊರಬರುತ್ತಲಿವೆ. ಕೇಂದ್ರ ಸಾಹಿತ್ಯ ಅಕಾದಮಿ, ನ್ಯಾಷನಲ್ ಬುಕ್ ಟ್ರಸ್ಟ್, ರಾಜ್ಯದ ನಾಲ್ಕೂ ವಿಶ್ವವಿದ್ಯಾನಿಲಯಗಳು, ಭಾರತೀಯ ಇತಿಹಾಸ ಮಂಡಲ, ಖಾಸಗಿ ಪ್ರಕಾಶಕರು, ನಾಡಿನ ಖ್ಯಾತ ಪತ್ರಿಕೆಗಳು,ಸಾಪ್ತಾಹಿಕಗಳು–ಇವೆಲ್ಲ ಒಂದಲ್ಲ ಒಂದು ಯೋಜನೆಯ ಅಂಗವಾಗಿ, ಒಂದಲ್ಲ ಒಂದು ರೂಪದಲ್ಲಿ ಅನುವಾದಕಾರ್ಯಕ್ಕೆ ಒತ್ತಾಸೆಯನ್ನು ನೀಡುತ್ತ ಬಂದಿವೆ. ಹೀಗಾಗಿ, ಹಲವು ಭಾಷೆಗಳಿಂದ ಏಕಕಾಲದಲ್ಲಿ ಅನುವಾದಕಾರ್ಯ ನಡೆಯುತ್ತ ಬಂದಿದೆ. ಕಳೆದ ಮೂರು ವರ್ಷಗಳ ಅವಧಿಯಲ್ಲಿಯೇ, ನನ್ನ ಅಂದಾಜಿನಂತೆ, ಸುಮಾರು ಎಂಬತ್ತು ಅನುವಾದ ಗ್ರಂಥಗಳು ಬೆಳಕು ಕಂಡಿವೆ. ಅಂದರೆ, ಪ್ರತಿ ಪಕ್ಷಕ್ಕೊಮ್ಮೆ ಒಂದಲ್ಲ ಒಂದು ಅನುವಾದ, ಒಂದಲ್ಲ ಒಂದು ಕಡೆಯಿಂದ ಪ್ರಕಾಶಿತವಾಗುತ್ತಿದೆ. ಆದ್ದರಿಂದ ನನ್ನ ಆಯ್ಕೆಯನ್ನು ಸುಲಭವಾಗಿಸಿಕೊಳ್ಳುವ ದೃಷ್ಟಿಯಿಂದ ಸಾಹಿತ್ಯೇತರ ಗ್ರಂಥಗಳ ಅನುವಾದಗಳನ್ನು ಹೊರತುಪಡಿಸಿದೆ. ಸಾಹಿತ್ಯಗ್ರಂಥಗಳಲ್ಲಿ ಒಂದು ಕಾವ್ಯವನ್ನು ಮಾತ್ರ ಇಲ್ಲಿ ಆಯ್ದುಕೊಂಡಿದ್ದೇನೆ. ಅದು—'ಕನ್ನಡ ವಾಲ್ಮೀಕಿ ರಾಮಾಯಣ'—ಖಾಸಗಿ ಪ್ರಕಾಶನ ಸಂಸ್ಥೆಯಿಂದ ಹೊರಬಂದಿದೆ. ಒಂದು ಸಂಸ್ಕೃತದಿಂದ, ಇನ್ನೊಂದು ಇಂಗ್ಲಿಷ್‌ನಿಂದ, ಮತ್ತೊಂದು ಮಲೆಯಾಳಮ್‌ನಿಂದ ಬಂದಿವೆ. ಇದು ಸಂಸ್ಕೃತದಿಂದ ಆಯ್ದುಕೊಂಡುದು. ಇದರ ಸಂಕ್ಷಿಪ್ತ ಸಮೀಕ್ಷೆ ಈ ಕಿರು ಪ್ರಬಂಧದ ಉದ್ದೇಶ.

* * *

'ಕನ್ನಡ ವಾಲ್ಮೀಕಿ ರಾಮಾಯಣ' (1971) ಹೆಸರೇ ಸೂಚಿಸುವಂತೆ, ಆದಿಕವಿ ವಾಲ್ಮೀಕಿ ಸಂಸ್ಕೃತದಲ್ಲಿ ರಚಿಸಿರುವ 'ರಾಮಾಯಣ' ಮಹಾಕಾವ್ಯದ ಸಮಗ್ರಾನುವಾದ. ಈ ಅನುವಾದವನ್ನು ಸಿದ್ಧಪಡಿಸಿರುವವರು ದಿ|| ಡಾ. ಸಿ. ಎನ್. ಶ್ರೀನಿವಾಸ ಅಯ್ಯಂಗಾರ್ ಅವರು. ಪ್ರಕಾಶಕರು : ಡಿ. ವಿ.ಕೆ. ಮೂರ್ತಿ, ಕೃಷ್ಣಮೂರ್ತಿಪುರಂ, ಮೈಸೂರು. ಇದು ಡೆಮಿ ಅಷ್ಟದಳದ ಆಕಾರದ ಎರಡು ಸಂಪುಟಗಳಲ್ಲಿ ಪ್ರಕಟವಾಗಿದೆ. ಅನುವಾದ ಭಾಗ 1481 ಪುಟಗಳನ್ನು ಆಕ್ರಮಿಸಿಕೊಂಡಿದೆ.

ಇದು 'ವಾಲ್ಮೀಕಿ ರಾಮಾಯಣ'ದ ಸಮಗ್ರಾನುವಾದ. "ನಾನು ಗಣಿತಶಾಸ್ತ್ರದ ವಿದ್ಯಾರ್ಥಿ, ಸಾಹಿತ್ಯ ಕ್ಷೇತ್ರದಲ್ಲಿ ನನಗೆ ಯಾವ ಸ್ಥಾನಮಾನವೂ ಇಲ್ಲ" (ಪುಟ vii) ಎಂಬ ವಿನಯಪೂರ್ಣ ಅಳುಕಿನೊಂದಿಗೆ ಅವರು ಅನುವಾದವನ್ನು ಮುಂದಿರಿಸಿದ್ದಾರಾದರೂ, ಅವರು ಸಮರ್ಥವಾಗಿ ತಮ್ಮ ಕಾರ್ಯವನ್ನು ನಿರ್ವಹಿಸಿದ್ದಾರೆಂಬು

ದಕ್ಕೆ ಈ ಗ್ರಂಥದ ಪುಟಪುಟವೂ ಸಾಕ್ಷಿಯನ್ನು ನುಡಿಯುತ್ತದೆ. ಕನ್ನಡ ರಾಮಾಯಣದ ಅನುವಾದಗಳ ಇತಿಹಾಸದಲ್ಲಿ ವಿಶೇಷ ಉಲ್ಲೇಖಕ್ಕೆ ಅರ್ಹವಾಗುವ ಕೃತಿಯೆಂಬುದರಲ್ಲಿ ಅನುಮಾನವಿಲ್ಲ. ಇದುವರೆಗೆ ಇಷ್ಟು ಸಮಗ್ರವಾದ, ಯಥಾರ್ಥವಾದ ಅನುವಾದ ಬಂದಿರಲಿಲ್ಲವೆಂಬುದು ಈ ಕೃತಿಯ ಹಿರಿಮೆಯನ್ನು ಹೆಚ್ಚಿಸಿದೆ.

ಇಂಥ ಸಾಹಸಕ್ಕೆ ಪ್ರೇರಣೆ ನೀಡಿದ ಸಂಗತಿಗಳಾವುವೆಂಬುದನ್ನೂ, ಅನುವಾದವನ್ನೂ ಸಿದ್ಧಪಡಿಸುವಲ್ಲಿ ತಾವು ಇರಿಸಿಕೊಂಡಿದ್ದ ಧ್ಯೇಯವೇನೆಂಬುದನ್ನೂ ಅನುವಾದಕರು ಈ ಮಾತುಗಳಲ್ಲಿ ಸ್ಪಷ್ಟಪಡಿಸಿದ್ದಾರೆ: "ಬಹಳ ಕಾಲ, ವಾಲ್ಮೀಕಿ ರಾಮಾಯಣದ ಕನ್ನಡ ಅನುವಾದ ಗ್ರಂಥಗಳು ದೊರಕುತ್ತಿರಲಿಲ್ಲ. ಇದ್ದ ಗ್ರಂಥಗಳು ಅಚ್ಚಿನಿಂದ ಹೊರಗಾಗಿ, ಯಾವುವೂ ಸಿಗುತ್ತಿರಲಿಲ್ಲ. ಇಂಥ ಅನುವಾದ ಗ್ರಂಥವನ್ನು ನಾನೇ ಬರೆದು, ಶೇಖರಣೆ ಮಾಡಿದ್ದ ವಿಶೇಷಾರ್ಥಗಳನ್ನೂ ಅಭಿಪ್ರಾಯಗಳನ್ನೂ ಸೂಕ್ತ ಸ್ಥಳಗಳಲ್ಲಿ ಸೇರಿಸಿ 'ಕನ್ನಡ ವಾಲ್ಮೀಕಿ ರಾಮಾಯಣ'ವನ್ನು ಬರೆಯಬೇಕೆಂಬ ಆಶೆ ಮೂಡಿತು. ಸುಪ್ರಸಿದ್ಧ ಗ್ರಂಥಕರ್ತರು ಬರೆದಿದ್ದ ಕನ್ನಡ ಅನುವಾದಗಳನ್ನು ಪರಿಶೀಲಿಸಿದೆನು. ಸಂಸ್ಕೃತದ ಮೂಲಗ್ರಂಥದಿಂದ ಸಣ್ಣಪುಟ್ಟ +, —ಗಳು ಉದ್ದಕ್ಕೂ ಆಗಿರುವುದು ಕಂಡುಬಂದಿತು. ಸಾಹಿತ್ಯದ ದೃಷ್ಟಿಯಿಂದ ಭಾಷೆಯ ಶೈಲಿಯನ್ನು ಸುಲಭಗೊಳಿಸಿ ಜನಸಾಮಾನ್ಯರಿಗೆ ಸುಲಭವಾಗಿ ಅರ್ಥವಾಗುವುದಕ್ಕಾಗಿ ಈ ಹೆಜ್ಜೆ ಕಡಮೆಗಳನ್ನು ಮಾಡಿದ್ದಾರೆಂಬುದು ಸ್ಪಷ್ಟವಾಗಿತ್ತು. ಆದರೆ ಗಣಿತದ ಮನೋಭಾವದಿಂದ ತುಂಬಿರುವ ನನಗೆ ಇದು ಹಿಡಿಸಲಿಲ್ಲ. ಮೂಲದಲ್ಲಿ ಹೇಗಿದೆಯೋ ಹಾಗೆ ಚಾಚೂ ತಪ್ಪದಂತೆ ಅನುವಾದವಿರಬೇಕೆಂಬ ಭಾವನೆ ಉಂಟಾಯಿತು, ಎಂದರೆ ನಾನು ಕೋರಿದುದು ಸರಳಾನುವಾದ (free translation) ಅಲ್ಲ, ನಿಖರವಾದ ವಾಸ್ತವಾನುವಾದ (strict literal translation), ಅಥವಾ ಪದಶಃ ಅನುವಾದ" (ಪುಟ iii)

'ವಾಲ್ಮೀಕಿ ರಾಮಾಯಣ'ದಂಥ ಚಿರಕಾವ್ಯಗಳನ್ನು ಬೇರೊಂದು ಭಾಷೆಗೆ ಅನುವಾದಿಸುವುದು ಭಾಷಾಂತರಕಾರನಿಗೆ ಒಂದು ಸವಾಲೇ ಆಗುತ್ತದೆಂಬುದನ್ನೂ, ಹಲವಾರು ಸಮಸ್ಯೆಗಳನ್ನು ಇಲ್ಲಿ ಎದುರಿಸಬೇಕಾಗುತ್ತದೆಂಬುದನ್ನೂ ಅವರು ಬಲ್ಲವರಾಗಿದ್ದರು. ಅವರೇ ಹೇಳಿಕೊಂಡಿರುವಂತೆ "ಒಂದು ಭಾಷೆಯ ಪದ್ಯ ಗ್ರಂಥವನ್ನು ಅದೇ ಭಾಷೆಯ ಗದ್ಯಕ್ಕೆ ವಾಸ್ತವಾನುವಾದ ಮಾಡುವುದೇ ಅಷ್ಟು ಸುಲಭವಲ್ಲ, ಬೇರೊಂದು ಭಾಷೆಯ ಗದ್ಯಕ್ಕೆ ಅನುವಾದ ಮಾಡುವುದು ಕ್ಲಿಷ್ಟತರವಾದ ಕೆಲಸ ಹಲವು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಶ್ಲೋಕರೂಪದಲ್ಲಿರುವ ವಾಲ್ಮೀಕಿಯ ವಾಕ್ಯಗಳು ಅನೇಕ ಕಡೆ ಬಹಳ ಉದ್ದ. ಒಂದು ಕಡೆ, 19 ಶ್ಲೋಕಗಳಿಗೆ ಒಂದೇ ವಾಕ್ಯವಾಗುತ್ತದೆ. ಇದನ್ನು ಹಾಗೆಯೇ ಪರಿವರ್ತಿಸುವುದು ಸಾಧ್ಯವೇ ಆಗಲಾರದು, ಒಂದು ವೇಳೆ ಆದರೂ ಭಾಷೆಯ ಶೈಲಿ, ವ್ಯಾಕರಣಗಳು ತೀರಾ ಅಂದಗೆಡುತ್ತವೆ....ಬಹು ದೀರ್ಘ ವಾಕ್ಯಗಳನ್ನು ಸಣ್ಣ ಸಣ್ಣ ವಾಕ್ಯಗಳನ್ನಾಗಿ ಒಡೆದಿದ್ದೇನೆ. ಅಲ್ಲಲ್ಲಿ ತಕ್ಕಮಟ್ಟಿನ ದೀರ್ಘ ವಾಕ್ಯಗಳು ಉಳಿದುಕೊಂಡಿವೆ" (ಪುಟ iii-iv). ಹೀಗಾಗಿ, ಅವರ ಭಾಷಾಂತರ ಅನೇಕ ಉಪಾದೇಯ ಗುಣಗಳನ್ನು ಒಳಗೊಂಡಿದೆ.

ಯಾವುದೇ ಭಾಷಾಂತರದ ಯಶಸ್ಸು, ಅದರ ಯಥಾರ್ಥತೆಯನ್ನು, ವಾಚನೀಯತೆಯನ್ನು ಆಧರಿಸಿರುತ್ತದೆ. ಈ ದೃಷ್ಟಿಯಿಂದ ಪರಿಶೀಲಿಸಿದಾಗ, ಅವರ ಭಾಷಾಂತರ ಅತ್ಯಂತ 'ವಿಧೇಯ'ವೂ, ಬಹುಮಟ್ಟಿಗೆ ವಾಚನೀಯವೂ ಆಗಿದೆ ಎಂಬುದು ಮನದಟ್ಟಾಗುತ್ತದೆ. ಅಲಂಕಾರ ವಿರಹಿತವಾದ ಸಹಜಕಾವ್ಯ ಸ್ಫುರಿಸಿರುವ ಅನೇಕ ಪ್ರಸಂಗಗಳಲ್ಲಿ ಒಂದಾದ 'ನಾರುಡೆ ಧಾರಣ'ದ ಪ್ರಸಂಗವನ್ನು ಹೇಗೆ ಭಾಷಾಂತರಿಸಿದ್ದಾರೆಂಬುದನ್ನು ಇಲ್ಲಿ ತೌಲನಿಕವಾಗಿ ಪರಿಶೀಲಿಸಬಹುದು :

ಕಥಂ ನು ಚೀರಂ ಬಧ್ನಂತಿ ಮುನಯೋ ವನವಾಸಿನಃ ।
ಇತಿ ಹ್ಯಕುಶಲಾ ಸೀತಾ ಸಾ ಮುಮೋಹ ಮುಹುರ್ಮುಹುಃ ॥

ಕೃತ್ವಾ ಕಂಠೇ ಚ ಸಾ ಚೀರಮೇಕಮಾದಾಯ ಪಾಣಿನಾ ।
ತಸ್ಥೌ ಹ್ಯಕುಶಲಾ ತತ್ರ ವ್ರೀಡಿತಾ ಜನಕಾತ್ಮಜಾ ॥

ತಸ್ಯಾಸ್ತತ್ ಕ್ಷಿಪ್ರಮಾಗತ್ಯ ರಾಮೋ ಧರ್ಮಭೃತಾಂ ವರಃ ।
ಚೀರಂ ಬಬಂಧ ಸೀತಾಯಾಃ ಕೌಶೇಯಸ್ಯೋಪರಿ ಸ್ವಯಂ ॥

ರಾಮಂ ಪ್ರೇಕ್ಷ್ಯತು ಸೀತಯಾ ಬಧ್ನಂತಂ ಚೀರಮುತ್ತಮಂ ।
ಅಂತಃಪುರಗತಾ ನಾರ್ಯೋ ಮುಮುಚುರ್ವಾರಿ ನೇತ್ರಜಂ ॥ (2.37.121–4)

ಇದನ್ನು ಶ್ರೀನಿವಾಸ ಅಯ್ಯಂಗಾರರು ಹೀಗೆ ಅನುವಾದಿಸಿದ್ದಾರೆ :

"ವನದಲ್ಲಿ ವಾಸಮಾಡುವ ಋಷಿಪತ್ನಿಯರು ನಾರುಸೀರೆಯನ್ನು ಹೇಗೆ ಕಟ್ಟಿಕೊಳ್ಳುವರೋ ತಿಳಿಯದು' ಎಂದಳು. ಈ ಪ್ರಕಾರ ಒಂದು ನಾರುಸೀರೆಯನ್ನು ಕೈಯಿಂದ ಕತ್ತಿಗೆ ಸಿಲುಕಿಸಿಕೊಂಡು, ಉಟ್ಟುಕೊಳ್ಳಲು ಬಾರದೆ ಬಾರಿಬಾರಿಗೂ ಕಷ್ಟಪಡುತ್ತಾ ಕಡೆಗೆ ಆ ಜಾನಕಿಯು ತನಗೆ ಅವುಗಳನ್ನು ಉಡಲು ತಿಳಿಯದೆಂದು ನಾಚಿಕೆಯಿಂದ ಅಲ್ಲಿ ನಿಂತುಬಿಟ್ಟಳು. ಧರ್ಮಿಷ್ಠರಲ್ಲಿ ಉತ್ತಮನಾದ ರಾಮನು ಅವಳ ಬಳಿಗೆ ಕೂಡಲೇ ಬಂದು, ಸೀತೆಯ ರೇಷ್ಮೆ ಸೀರೆಯ ಮೇಲೆ ನಾರುಸೀರೆಯನ್ನು ತಾನಾಗಿಯೇ ಉಡಿಸಿದನು. ರಾಮನು ಸೀತೆಗೆ ಶ್ರೇಷ್ಠವಾದ ನಾರುಸೀರೆಯನ್ನು ಉಡಿಸುತ್ತಿದ್ದುದನ್ನು ಕಂಡು, ಅಂತಃಪುರದಲ್ಲಿದ್ದ ಸ್ತ್ರೀಯರೆಲ್ಲಾ ಕಣ್ಣೀರು ಸುರಿಸಿದರು." (ಪುಟ 303)

ತೀ. ನಂ. ಶ್ರೀಕಂಠಯ್ಯನವರು ಈ ಭಾಗವನ್ನು ಈ ರೀತಿ ಅನುವಾದಿಸಿಕೊಟ್ಟಿದ್ದಾರೆ :

"ನಾರುಮುಡಿಯನ್ನು ವನವಾಸಿಗಳಾದ ಮುನಿಗಳು ಹೇಗೆ ಉಡುತ್ತಾರೆ?— ಹೀಗೆನ್ನುತ್ತಾ ಕುಶಲೆಯಲ್ಲದೆ ಸೀತೆ ಮತ್ತೆ ಮತ್ತೆ ಭ್ರಮೆಗೊಂಡಳು. ಒಂದು ಚೀರವನ್ನು ಕೊರಳಿಗೆ ಸುತ್ತಿಕೊಂಡು ಇನ್ನೊಂದನ್ನು ಕೈಯಲ್ಲಿ ಹಿಡಿದು, ಕುಶಲೆಯಲ್ಲದ ಜನಕಾತ್ಮಜೆ ಅಲ್ಲಿ ನಾಚುತ್ತಾ ನಿಂತಳು. ಧರ್ಮನಿಷ್ಠರಲ್ಲಿ ಶ್ರೇಷ್ಠನಾದ ರಾಮನು ಬೇಗ ಬಂದು ಆಕೆಗೆ ಪಟ್ಟೆಯ ಸೀರೆಯ ಮೇಲೆ ಆ ನಾರುಮುಡಿಯನ್ನು ತಾನೇ ಉಡಿಸಿದನು. ಸೀತೆಗೆ ನಾರುಸೀರೆಯನ್ನುಡಿಸುವ ರಾಮನನ್ನು ಕಂಡು ಅಂತಃಪುರದ ನಾರಿಯರೆಲ್ಲ ಕಣ್ಣೀರು ಸುರಿಸಿದರು" (ಭಾರತೀಯ ಕಾವ್ಯಮೀಮಾಂಸೆ, ಪುಟ 33)

ತೀ. ನಂ ಶ್ರೀಯವರ ಅನುವಾದದಲ್ಲಿ 'ಚೀರಮುತ್ತಮಮ್' ಎಂಬುದು 'ನಾರುಸೀರೆ' ಎಂಬುದಾಗಿ ಮಾತ್ರ ಭಾಷಾಂತರಗೊಂಡಿರುವುದರಿಂದ ವಿಶೇಷಣವೊಂದು ಬಿಟ್ಟುಹೋಗಿದೆ. ಉಳಿದಂತೆ, ಅನುವಾದ ಅತ್ಯಂತ ಸರಸವೂ, ಯಥಾವತ್ತಾದುದೂ ಆಗಿದೆ. ಶ್ರೀನಿವಾಸ ಅಯ್ಯಂಗಾರರ ಅನುವಾದದಲ್ಲಿ ಈ ವಿಶೇಷಣವೂ ಯಥಾವತ್ತಾಗಿ ಬಂದಿದೆ; 'ಅಕುಶಲಾ' ಎಂಬುವನ್ನು 'ತನಗೆ ಅವುಗಳನ್ನು ಉಡಲು ತಿಳಿಯದೆ'ಂದು ವಿಸ್ತಾರಾನುವಾದವಾಗಿಸಿಕೊಂಡಿದ್ದಾರೆ. 'ಮುನಯಃ' ಎಂಬುದಕ್ಕೆ ಬಹುಶಃ ಪ್ರಾಸಂಗಿಕವಾಗಿ ಉಚಿತವೆಂದು 'ಮುನಿಪತ್ನಿಯರು' ಎಂದು ಭಾಷಾಂತರ ಕೊಟ್ಟಿದ್ದಾರೆ. ಬಹುಶಃ, ಸೀರೆಯನ್ನುಡಲು ತಿಳಿಯದೆ ಹೋದ ಪರಿಸ್ಥಿತಿಯನ್ನು 'ಭ್ರಮೆಗೊಂಡಳು' ಎಂಬುದು 'ಕಷ್ಟಪಡು' ಎಂಬುದಕ್ಕಿಂತ ಹೆಚ್ಚು ಧ್ವನಿಪೂರ್ಣವಾಗಿ ಸೂಚಿಸುತ್ತದೆ ಎಂದು ಹೇಳಬಹುದು. ಇಂಥ ಅತ್ಯಂತ ಸೂಕ್ಷ್ಮ ಅಂಶವೊಂದನ್ನು ಬಿಟ್ಟರೆ, ಉಳಿದಂತೆ ಅಯ್ಯಂಗಾರರ ಭಾಷಾಂತರ ಉತ್ತಮಾಂಶಗಳಿಂದ ಕೂಡಿದೆ ಎಂಬುದರಲ್ಲಿ ಅನುಮಾನವಿಲ್ಲ. ('ಕೃತ್ವಾ ಕಂಠೇ ಚ ಸಾ ಚೀರಮೇಕಮಾದಾಯ ಪಾಣಿನಾ' ಎಂಬ ಮೂಲದ ಪಂಕ್ತಿಗೆ ಎರಡೂ ವಿಧವಾಗಿ ಅರ್ಥ ಮಾಡಲು ಸಾಧ್ಯವಿರುವುದರಿಂದ, ಆ ಪಂಕ್ತಿಯ ಅನುವಾದವನ್ನು ಚರ್ಚೆಗೊಳಪಡಿಸುವ ಅಗತ್ಯವಿಲ್ಲ.) ವಿಜ್ಞಾನಿಯೊಬ್ಬರ ಅನುವಾದ, ಭಾಷಾಪ್ರಾಧ್ಯಾಪಕರೂ ಹೊಸಗನ್ನಡ ಸರಸಶೈಲಿಯ ನಿರ್ಮಾಪಕರಲ್ಲೊಬ್ಬರೂ ಆದಂಥ ಸಿದ್ಧ ಲೇಖಕರ ಅನುವಾದದ ಹತ್ತಿರ ಹತ್ತಿರ ಬರುತ್ತದೆಂಬ ಸಂಗತಿ ಅನುವಾದ ಶ್ರೇಷ್ಠತೆಗೆ ಅಸಂದಿಗ್ಧ ಪ್ರಮಾಣವನ್ನು ಒದಗಿಸುತ್ತದೆ.

ವರ್ಣನೆಯ ಹಾಗೂ ಸಂಭಾಷಣೆಯ ಪ್ರಸಂಗಗಳಲ್ಲಿಯೂ ಅನುವಾದದ ಭಾಷೆ ಎಷ್ಟು ಜೀವಂತವಾಗಿ ಸ್ಪಂದಿಸುತ್ತದೆಂಬುದನ್ನು ಈ ಕೆಳಗಿನ ಪ್ರಸಂಗಗಳು ಸ್ಪಷ್ಟಪಡಿಸುತ್ತವೆ :

೧) "ಆಗ ಮದವನ್ನೂ ಕಾಮವನ್ನೂ ವೃದ್ಧಿಗೊಳಿಸತಕ್ಕ ಮಳೆಗಾಲವು ಪ್ರಾಪ್ತವಾಯಿತು. ಸೂರ್ಯನು ಭೂಮಿಯ ಮೇಲಿನ ನೀರನ್ನು ಹೀರಿ ಜಗತ್ತೆಲ್ಲವನ್ನು ತನ್ನ ಕಿರಣಗಳಿಂದ ಕಾಯಿಸಿ ಯಮನು ಸಂಚರಿಸತಕ್ಕ ಭಯಂಕರವಾದ ದಕ್ಷಿಣ ದಿಕ್ಕನ್ನು ಪ್ರವೇಶಿಸಿದನು. (ದಕ್ಷಿಣಾಯನವು ಒದಗಿತೆಂದು ಅರ್ಥ.) ಕೂಡಲೇ ಸೆಕೆಯು ಮಾಯವಾಯಿತು, ಮೇಘಗಳು ಒತ್ತಾಗಿ ಕಾಣಿಸಿಕೊಂಡವು, ಆಗ ಕಪ್ಪೆಗಳೂ ಚಾತಕಪಕ್ಷಿಗಳೂ ನವಿಲುಗಳೂ ಎಲ್ಲವೂ ಆನಂದವನ್ನು ಹೊಂದಿದುವು. ಪಕ್ಷಿಗಳು ನೆನೆದು ಹೋದ ಮೇಲುರೆಕ್ಕೆಗಳುಳ್ಳವಾಗಿ ಮೈಯೆಲ್ಲಾ ನೆನೆದು ಕಷ್ಟಪಡುತ್ತಿರುವಂತೆ ಕಾಣುತ್ತ ಮಳೆಗಾಳಿಗಳಿಂದ ಕೊಡಹಲ್ಪಟ್ಟ ತುದಿಗಳುಳ್ಳ ಮರಗಳಿಗೆ ಹೋಗಿ ಸೇರಿಕೊಂಡುವು. ಬಿದ್ದಿರುವ ಮಳೆನೀರಿನಿಂದಲೂ ಮುಚ್ಚಿಹೋಗಿ, ಕದಲದೆ ನಿಂತಿರುವ ಮದದಾನೆಯಂತೆ ನೀರಿನ ರಾಶಿಯು ಪ್ರಕಾಶಿಸುತ್ತಿತ್ತು. ಹೊಳೆಗಳು ನಿರ್ಮಲವಾಗಿದ್ದರೂ ಕೂಡ ಬೆಟ್ಟದಿಂದ ಬರುವ ಧಾತುಗಳಿಂದ (minerals) ಕೂಡಿ ಕೆಂಪು, ಬಿಳಿಪು ಮಿಶ್ರವಾದ ಬಣ್ಣದಿಂದ ಕೂಡಿ ಅರಣ್ಯದ ಧೂಳು ಮತ್ತು ಭಸ್ಮಗಳನ್ನೊಳಗೊಂಡು ಸರ್ಪದಂತೆ ಹರಿದುವು." (ಭಾಗ 1 ಪುಟ 372)

2) "ನೀನು ಚಕ್ರವರ್ತಿಯ ಮಗನು, ಪ್ರಸಿದ್ಧನಾದವನು, ಮನೋಹರವಾದ ನೋಟವುಳ್ಳವನು, ಸತ್ಕುಲ ಪ್ರಸೂತನು, ಬಲಶಾಲಿಯು, ತೇಜೋವಂತನು, ಸದಾಚಾರಸಂಪನ್ನನು, ನಾನು ಯುದ್ಧದಲ್ಲಿ ತೊಡಗಿರುವಾಗ ನನ್ನ ಎದೆಗೆ ಬಾಣ ಹೊಡೆದೆ. ಮರೆಯಲ್ಲಿ ನಿಂತು ನನ್ನನ್ನು ಕೊಂದು ನಿನಗೇನು ಹಿರಿಮೆ ಬಂತು? ರಾಮನು ದಯೆಯನ್ನರಿತವನು, ಪ್ರಜೆಗಳ ಹಿತದಲ್ಲಿ ಅನುರಕ್ತನು, ದಯಾಮಯನು, ಥಟ್ಟನೆ ಉದ್ವೇಗಗೊಳ್ಳುವವನಲ್ಲ, ಸಮಯವನ್ನರಿತವನು, ದೃಢಸಂಕಲ್ಪವುಳ್ಳವನು, ಹೀಗೆಂದು ನಿನ್ನ ಕೀರ್ತಿಯನ್ನು ಜಗತ್ತಿನಲ್ಲಿ ಸಕಲ ಪ್ರಾಣಿಗಳೂ ಸಾರುತ್ತವೆ. ಎಲೈ ರಾಜನೆ, ಇಂದ್ರಿಯನಿಗ್ರಹ, ಸಹನೆ, ಕ್ಷಮೆ, ಧರ್ಮ, ಧೈರ್ಯ, ಸತ್ಯ. ಪರಾಕ್ರಮ, ಅಪರಾಧ ಮಾಡಿದವರನ್ನು ಶಿಕ್ಷಿಸುವುದು ಈ ಗುಣಗಳು ನಿನ್ನಲ್ಲಿರುವುವೆಂದು ನಂಬಿ ನಿನ್ನ ಉತ್ತಮವಾದ ವಂಶವನ್ನು ಗಮನಿಸಿ ತಾರೆಯು ತಡೆದರೂ ಸುಗ್ರೀವನೊಡನೆ ಯುದ್ಧಕ್ಕೆ ತೊಡಗಿದೆ. ಮತ್ತೊಬ್ಬನೊಡನೆ ನಾನು ಯುದ್ಧಾಸಕ್ತನಾಗಿದ್ದು ಮೈಮರೆತಿರುವಾಗ ನೀನು ಕಾಣಿಸಿಕೊಳ್ಳದಿರುವಾಗ ನೀನು ಯುದ್ಧ ಮಾಡುವುದಿಲ್ಲವೆಂಬ ಬುದ್ಧಿಯುಂಟಾಗಿತ್ತು. ನಿನ್ನನ್ನು ಆತ್ಮರಹಿತನೆಂದೂ ಧರ್ಮವನ್ನು ಸಾರುತ್ತಿರುವ ಅಧರ್ಮಿಯೆಂದೂ ಪಾಪಕರವಾದ ನಡತೆಯುಳ್ಳವನೆಂದೂ ಹುಲ್ಲಿನಿಂದ ಮುಚ್ಚಲ್ಪಟ್ಟ ಬಾವಿಯೆಂದೂ, ಸತ್ಪುರುಷರ ವೇಷವನ್ನು ಧರಿಸಿ ಬಂದಿರುವ ಬೂದಿ ಮುಚ್ಚಿದ ಅಗ್ನಿಯೆಂದೂ ನಾನು ತಿಳಿಯದೆ ಹೋದೆನು. ಧರ್ಮದ ನೆಪ ಮಾಡುವವನು ನೀನೆಂದು ನಾನು ತಿಳಿಯದೆ ಹೋದೆ. ದೇಶದಲ್ಲಿಯೇ ಆಗಲಿ ನಗರದಲ್ಲಿಯೇ ಆಗಲಿ ನಿನಗೆ ನಾನು ಏನೊಂದು ಅಪಕಾರವನ್ನೂ ಮಾಡಲಿಲ್ಲ ನಿನ್ನನ್ನು ಅವಮಾನಪಡಿಸಲಿಲ್ಲ ಹಾಗಿರುವಾಗ ನಿರಪರಾಧಿಯಾಗಿ ಕಾಡಿನಲ್ಲಿ ಸಂಚರಿಸುವ ವಾನರನಾದ ನನ್ನನ್ನು. ನಿನ್ನೊಡನೆ ಯುದ್ಧ ಮಾಡದಿರುವ ನನ್ನನ್ನು, ಬೇರೊಬ್ಬನೊಡನೆ ಕಲೆತಿರುವ ನನ್ನನ್ನು, ಏತಕ್ಕಾಗಿ ಹೊಡೆದೆ ?" (ಭಾಗ 1 ಪುಟ 724).

ಲೇಖಕರೇ ಹೇಳಿಕೊಂಡಿರುವಂತೆ "ಈ ಗ್ರಂಥದಲ್ಲಿ ಅಲ್ಲಲ್ಲೇ ಕರ್ಮಣಿಯನ್ನು ಕರ್ತರಿಗೆ ಬದಲಾಯಿಸಿರುವ"ರಾದರೂ, ಕರ್ಮಣಿ ಪ್ರಯೋಗದ ಬಗೆಗಿನ ವಿಶೇಷ ಒಲವಿನಿಂದಾಗಿ "ಕರ್ಮಣಿಯನ್ನು ಹೇರಳವಾಗಿ

ಉಪಯೋಗಿಸಿ"ದ್ದಾರೆ. ಕೆಲವೊಮ್ಮೆ ಇದೇ ಕೊಂಚ ಕೃತಕತೆಯನ್ನುಂಟುಮಾಡಿರುವ ಅಂಶ. ವಾಸ್ತವವಾಗಿ, ಇಂಥ ಚಿರಕಾವ್ಯಗಳನ್ನು ಬೇರೊಂದು ಭಾಷೆಗೆ ಅನುವಾದಿಸುವುದು ಭಾಷಾಂತರಕಾರನಿಗೆ ಒಂದು ಸವಾಲೇ ಆಗುತ್ತದೆಂಬುದನ್ನೂ, ಇಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆಂಬುದನ್ನೂ, ಭಾಷೆಯ ಸಾಧ್ಯತೆಗಳೆಲ್ಲವನ್ನೂ ಬಳಸಿನೋಡಬೇಕಾಗುತ್ತದೆಂಬುದನ್ನೂ ಅಯ್ಯಂಗಾರರು ಬಲ್ಲವರಾಗಿದ್ದರು. ಅವರೇ ಹೇಳಿಕೊಂಡಿರುವಂತೆ "ಒಂದು ಭಾಷೆಯ ಪದ್ಯಗ್ರಂಥವನ್ನು ಅದೇ ಭಾಷೆಯ ಗದ್ಯಕ್ಕೆ ವಾಸ್ತವಾನುವಾದ ಮಾಡುವುದು ಕ್ಲಿಷ್ಟಕರವಾದ ಕೆಲಸ. ಹಲವು ಸಮಸ್ಯೆಗಳನ್ನು ಎದುರಿಸಬೇಕಾಯಿತು. ಶ್ಲೋಕರೂಪದಲ್ಲಿರುವ ವಾಲ್ಮೀಕಿಯ ವಾಕ್ಯಗಳು ಅನೇಕ ಕಡೆ ಬಹಳ ಉದ್ದ. ಒಂದು ಕಡೆ 19 ಶ್ಲೋಕಗಳಿಗೆ ಒಂದೇ ವಾಕ್ಯವಾಗುತ್ತದೆ. ಇದನ್ನು ಹಾಗೆಯೇ ಕನ್ನಡಕ್ಕೆ ಪರಿವರ್ತಿಸುವುದು ಸಾಧ್ಯವೇ ಆಗಲಾರದು, ಒಂದು ವೇಳೆ ಆದರೂ ಭಾಷೆಯ ಶೈಲಿ, ವ್ಯಾಕರಣಗಳು ತೀರ ಅಂದಗೆಡುತ್ತವೆ....ಬಹು ದೀರ್ಘವಾಕ್ಯಗಳನ್ನು ಸಣ್ಣ ವಾಕ್ಯಗಳನ್ನಾಗಿ ಒಡೆದಿದ್ದೇನೆ. ಅಲ್ಲಲ್ಲೇ ತಕ್ಕಮಟ್ಟಿನ ದೀರ್ಘವಾಕ್ಯಗಳು ಉಳಿದುಕೊಂಡಿವೆ....ಪದ್ಯ ರೂಪದಲ್ಲಿರುವ ವಾಲ್ಮೀಕಿಯ ಶ್ಲೋಕಗಳಲ್ಲಿ ಗುಣವಾಚಕಗಳು ಅಧಿಕವಾಗಿ ಬರುತ್ತವೆ. ಈ ಗುಣವಾಚಕಗಳು ಶ್ಲೋಕಕ್ಕೆ ಅಂದಕೊಡುವುದು ಮಾತ್ರವಲ್ಲದೆ, ಒಂದೊಂದು ಗುಣವಾಚಕವೂ ಸಮಯೋಚಿತವಾದ ವಿಶೇಷಾರ್ಥವನ್ನು ಸೂಚಿಸುತ್ತವೆ....ಕೇವಲ ಪದ್ಯವನ್ನು ತುಂಬುವುದಕ್ಕಾಗಿ ಹೀಗೆ ಗುಣವಾಚಕಗಳನ್ನು ಹೆಣೆದಿಲ್ಲ ಎನ್ನುತ್ತಾರೆ. ಉದಾಹರಣೆಗಾಗಿ "ಧೀರನೂ, ಶೂರನೂ, ತೇಜೋವಂತನೂ, ಧೀಮಂತನೂ, ಪರಾಕ್ರಮಿಯೂ ಆದ ವಾಯುಪುತ್ರನಾದ ಕಪಿಯಾದ ಹನುಮಂತ" ಇಷ್ಟೊಂದು ಗುಣವಾಚಕಗಳನ್ನು ಗದ್ಯಗ್ರಂಥದಲ್ಲಿ ಯಾರೂ ಉಪಯೋಗಿಸುವುದಿಲ್ಲ. ವಾಲ್ಮೀಕಿಯ ಹೃದಯವನ್ನು ತಿಳಿಸಬೇಕು, ಭಾಷೆ ಅಂದ ಕೆಟ್ಟರೂ ಚಿಂತೆಯಿಲ್ಲ ಎಂಬ ದೃಷ್ಟಿಯಿಂದ ಆದಷ್ಟುಮಟ್ಟಿಗೆ ಎಲ್ಲ ಗುಣವಾಚಕಗಳನ್ನೂ ಕೊಡುತ್ತಲೇ ಬರೆದಿರುವೆನು. ಸಾಧ್ಯವೇ ಆಗದೆ ಒಂದೆರಡು ಗುಣವಾಚಕಗಳನ್ನು ಅಲ್ಲಲ್ಲೇ ಬಿಡಬೇಕಾಗಿ ಬಂತು." ಮೇಲೆ ಉದಾಹರಿಸಲಾಗಿರುವ ಪ್ರಸಂಗಗಳು ಲೇಖಕರು ಎಷ್ಟು ಶ್ರಮವಹಿಸಿದ್ದಾರೆಂಬುದಕ್ಕೂ ವಾಲ್ಮೀಕಿಯ ಹೃದಯವನ್ನು ತೆರೆದು ತೋರುವಲ್ಲಿ ಎಷ್ಟು ಯಶಸ್ವಿಯಾಗಿದ್ದಾರೆಂಬುದಕ್ಕೂ ನಿದರ್ಶನಗಳಾಗಿವೆ. ಮೂಲದ ಬಗೆಗಿನ ಈ ನಿಷ್ಠೆ, ಉದ್ದಿಷ್ಟ ಭಾಷೆಯ ಓದುಗರ ಬಗೆಗಿನ ಈ ಕಾಳಜಿ ಭಾಷಾಂತರದ ಗುಣಮಟ್ಟವನ್ನು ತುಂಬ ಮೇಲೆತ್ತಿವೆ. ಹೀಗಾಗಿ, ಈ ಭಾಷಾಂತರ ಅನೇಕ ಉಪಾದೇಯ ಅಂಶಗಳನ್ನು ಒಳಗೊಂಡಿದ್ದು, ಈ ಯುಗದ ಅಗತ್ಯವನ್ನು ಅಂದರೆ ಪ್ರತಿಯೊಂದು ಯುಗವೂ ಚಿರಂತನಕಾವ್ಯಗಳ ತನ್ನದೇ ಆದ ಭಾಷಾಂತರವನ್ನು ಸಿದ್ಧಪಡಿಸಿಕೊಳ್ಳಬೇಕೆಂಬ ಅಗತ್ಯವನ್ನೂ—ಸಮರ್ಥವಾಗಿ ಪೂರೈಸಿದೆ. ಅನುವಾದಕರು ಒದಗಿಸಿರುವ ಟಿಪ್ಪಣಿಗಳೂ ಅನುಬಂಧದಲ್ಲಿ ಚರ್ಚಿಸಿರುವ ಅಂಶಗಳೂ ಗಮನಾರ್ಹವಾಗಿದ್ದು ಒಟ್ಟಿನಲ್ಲಿ ಈ ಕೃತಿಯ ಮೌಲ್ಯವನ್ನೂ ಹೆಚ್ಚಿಸಿವೆ.

* * *

ಎಸ್. ಬಾಲಸುಬ್ರಹ್ಮಣ್ಯ

ಕಾಳಿದಾಸನ ಭರತವಾಕ್ಯಗಳು

ಸಂಸ್ಕೃತ ನಾಟಕಗಳು ಪ್ರಾರಂಭವಾಗುವುದು ಒಂದು ಪದ್ಯದಿಂದ, ಮುಗಿಯುವುದು ಇನ್ನೊಂದರಿಂದ. ಮೊದಲನೆಯದನ್ನು ನಾಂದೀ ಶ್ಲೋಕ ಎನ್ನುತ್ತಾರೆ. ಅದನ್ನು ಹಾಡುವವನು ಸೂತ್ರಧಾರ ಅಥವಾ ನಾಟಕದ ನಿರ್ದೇಶಕ. ಅದು ಒಂದು ಮಂಗಳಾಚರಣೆ, ಯಾವುದೋ ದೇವತೆಯ ಸ್ತೋತ್ರ. ಈ ಸ್ತೋತ್ರದಲ್ಲಿ ನಾಟಕದ ವಸ್ತು ಸೂಚಿತವಾಗಿರುತ್ತದೆಯೆಂದು ವ್ಯಾಖ್ಯಾನಗಳು ತಿಳಿಸುತ್ತವೆ. ನಾಟಕದ ಕೊನೆಯ ಪದ್ಯವನ್ನು ಭರತ ವಾಕ್ಯ ಎನ್ನುತ್ತಾರೆ. ಅದನ್ನು ಆಡುವುದು ನಾಟಕದ ಒಂದು ಪಾತ್ರ. ಆದರೆ ನಾಟಕದ ಕ್ರಿಯೆ ಅಷ್ಟು ಹೊತ್ತಿಗೆ ಮುಗಿದಿರುವುದರಿಂದ, ಆ ಪಾತ್ರ ಅದನ್ನು ನಾಟಕದಲ್ಲಿ ಅಭಿನಯಿಸಿರುವ ನಟನಾಗಿ ಅಥವಾ ನಟರ ಪ್ರತಿನಿಧಿಯಾಗಿ ಆಡುತ್ತದೆಯೇ ವಿನಾ ನಾಟಕದ ಕ್ರಿಯೆಯಲ್ಲಿ ಪಾಲುಗೊಳ್ಳುವ ಪಾತ್ರವಾಗಿ ಅಲ್ಲ. ಇದು ಸಾಮಾನ್ಯ ನಿಯಮ. ಇದಕ್ಕೆ ಒಂದೆರಡು ಅಪವಾದಗಳೂ ಇಲ್ಲದಿಲ್ಲ. ಆದರೂ ನಿಜದಲ್ಲಿ ಭರತವಾಕ್ಯ ನಾಟಕ ಕಾರನ ವಾಕ್ಯ. ನಾಂದಿಯಂತೆ ಅದು ಸಹ ಒಂದು ಮಂಗಳಾಚರಣೆ, ಶುಭಾಶಂಸನೆ, ಸಾಮಾಜಿಕರನ್ನು ಕುರಿತು ನಟನ, ನಾಟಕಕಾರನ ಹಾರೈಕೆ. ಆದರೆ ನಾಂದಿಯಂತೆ ಭರತವಾಕ್ಯಕ್ಕೂ ನಾಟಕದ ವಸ್ತುವಿಗೂ ವಾಚ್ಯವೇ ಆಗಲಿ ಸೂಚ್ಯವೇ ಆಗಲಿ ಯಾವ ಸಂಬಂಧವೂ ಕಂಡುಬರುವುದಿಲ್ಲ. ಅದೊಂದು ಕೇವಲ ಫಲಶ್ರುತಿ. ಎಲ್ಲ ಕಾರ್ಯಗಳೂ ಮಂಗಳದಿಂದ ಪ್ರಾರಂಭವಾಗಬೇಕು, ಮಂಗಳದಿಂದ ಮುಕ್ತಾಯವಾಗಬೇಕು ಎನ್ನುವ ಭಾರತೀಯ ಸಂಪ್ರ ದಾಯಕ್ಕೆ ಈ ವ್ಯವಸ್ಥೆ ಅನುಗುಣವಾಗಿರುವುದು ಸ್ಪಷ್ಟವೇ.

ಇನ್ನು ಕಾಳಿದಾಸನ ಈ ಹಾರೈಕೆ ಎಂತಹದು ಎಂಬುದನ್ನು ಅವನ ನಾಟಕಗಳ ಭರತವಾಕ್ಯಗಳಲ್ಲಿ ನೋಡೋಣ. ಅವನ ಮೂರು ನಾಟಕಗಳ ಭರತವಾಕ್ಯಗಳಲ್ಲಿ ಕೆಲವು ಸಮಾನವಾದ ಅಂಶಗಳಿವೆ. ಈ ವಾಕ್ಯ ಗಳನ್ನು ಆಡುವುದು ಆ ನಾಟಕಗಳ ನಾಯಕ ಪಾತ್ರಗಳು. ನಾಟಕದ ಕಥೆ ಮುಗಿದು, ಅವನ ಪಾತ್ರದ ವೈಯಕ್ತಿಕ ಅಪೇಕ್ಷೆಗಳು ಪೂರೈಸಿದ ತರುವಾಯ, ಇನ್ನೇನಾದರೂ ಕೋರುವುದು ಇದೆಯೇ ಎಂಬ ಸಮಾನವಾದ ಪ್ರಶ್ನೆಗಳಿಗೆ ಉತ್ತರವಾಗಿ ನುಡಿಯುವ ವಾಕ್ಯಗಳು ಅವು. ಸಂದರ್ಭಸಾಮ್ಯದ ಜೊತೆಗೆ ಅವುಗಳಲ್ಲಿ ಶಬ್ದ ಸಾಮ್ಯವನ್ನೂ ಗಮನಿಸಬಹುದು. ಮಾಲವಿಕಾಗ್ನಿಮಿತ್ರದಲ್ಲಿ ರಾಣಿ ಧಾರಿಣಿಯು "ಆಜ್ಞಾಪಯತ್ವಾರ್ಯಪುತ್ರಃ ಕಿಂ ಭೂಯೋಪಿ ಪ್ರಿಯಮನುತಿಷ್ಠಾಮಿ" ಎಂದು ಅಗ್ನಿಮಿತ್ರನಿಗೆ ಹೇಳುತ್ತಾಳೆ. ಅದಕ್ಕೆ ಅಗ್ನಿಮಿತ್ರನು "ಕಿಮತಃ ಪರಮಪಿ ಪ್ರಿಯಮಸ್ತಿ ? ತಥಾಪೀದಮಸ್ತು" ಎನ್ನುತ್ತಾನೆ. ವಿಕ್ರಮೋರ್ವಶೀಯದಲ್ಲಿ ನಾರದನು ಪುರೂರವನನ್ನು "ಕಿಂ ತೇ ಭೂಯಃ ಪಾಕಶಾಸನಃ ಪ್ರಿಯಂ ಕರೋತು ?" ಎಂದು ಕೇಳುತ್ತಾನೆ. ಅದಕ್ಕೆ ಉತ್ತರವಾಗಿ ಪುರೂರವನು "ಯದಿ ವಾ ಮಘವಾ ಪ್ರಸನ್ನಃ ಕಿಮತಃ ಪರಮಿಚ್ಛಾಮಿ ? ತಥಾಪೀದಮಸ್ತು" ಎನ್ನುತ್ತಾನೆ. ಅಭಿಜ್ಞಾನ ಶಾಕುಂತಲ ದಲ್ಲಿ ಮಾರೀಚ ಮಹರ್ಷಿಯು ದುಷ್ಯಂತನನ್ನು "ವತ್ಸ, ಕಿಂ ತೇ ಭೂಯಃ ಪ್ರಿಯಮುಪಕರೋಮಿ ? " ಎಂದು

ಕೇಳುತ್ತಾನೆ. ಅದಕ್ಕೆ ದುಷ್ಯಂತನು "ಅತಃ ಪರಮಪಿ ಪ್ರಿಯಮಸ್ತಿ ? ಯದಿಹ ಭಗವಾನ್ ಪ್ರಿಯಂ ಕರ್ತುಮಿಚ್ಛತಿ, ತರ್ಹೀದಮಸ್ತು" ಎನ್ನುತ್ತಾನೆ. ಅನಂತರ ಅವರು ತಮ್ಮ ಆಶಯಗಳನ್ನು ವ್ಯಕ್ತಪಡಿಸುತ್ತಾರೆ.

ಮೂರು ನಾಟಕಗಳ ಭರತವಾಕ್ಯಗಳ ಸಾಂದರ್ಭಿಕ ಮತ್ತು ಶಾಬ್ದಿಕ ಚೌಕಟ್ಟು ಒಂದೇ ತೆರನಾಗಿದ್ದರೂ, ಅವುಗಳಲ್ಲಿ ವ್ಯಕ್ತಪಡಿಸಿರುವ ಆಶಯಗಳಲ್ಲಿ ಗಮನಾರ್ಹವಾದ ವ್ಯತ್ಯಾಸವಿದೆ. ಈಗ ಅದನ್ನು ವಿವೇಚಿಸಬಹುದು. ಮಾಲವಿಕಾಗ್ನಿಮಿತ್ರದ ಭರತವಾಕ್ಯ ಇಂತಿದೆ—

> ತ್ವಂ ಮೇ ಪ್ರಸಾದಸುಮುಖೀ ಭವ ದೇವಿ ನಿತ್ಯ—
> ಮೇತಾವದೇವ ಹೃದಯೇ ಪರಿಪಾಲನೀಯಂ ।
> ಆಶಾಸ್ಯಮೀತಿವಿಗಮಪ್ರಭೃತಿ ಪ್ರಜಾನಾಂ
> ಸಂಪದ್ಯತೇ ನ ಖಲು ಗೋಪ್ತರಿ ನಾಗ್ನಿಮಿತ್ರೇ ॥

(ದೇವಿ, ನೀನು ನನ್ನ ಬಗ್ಗೆ ಸದಾ ಪ್ರಸನ್ನವದನಳಾಗಿರು ; ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕಾದದ್ದು ಇದಿಷ್ಟೇ. ಅಗ್ನಿಮಿತ್ರನು ರಕ್ಷಕನಾಗಿರುವಾಗ ಈತಿ ಬಾಧೆಗಳ ಪರಿಹಾರವೇ ಮೊದಲಾದ ಪ್ರಜೆಗಳ ಆಸೆಗಳು ಕೈಗೂಡುವುದಿಲ್ಲ ಎನ್ನುವುದು ಇಲ್ಲ)

ಇದರಲ್ಲಿ ಮೊದಲಿನ ಎರಡು ಸಾಲುಗಳು ನಾಟಕದಲ್ಲಿನ ಪಾತ್ರದ ಜೀವನಕ್ಕೆ ಸಂಬಂಧಿಸಿದ್ದು. ಕೊನೆಯ ಎರಡು ಸಾಲುಗಳು ಮಾತ್ರವೇ ಭರತವಾಕ್ಯ ಎಂದು ವ್ಯಾಖ್ಯಾನಕಾರರ ಅಭಿಪ್ರಾಯ. ಇದೊಂದು ಐತಿಹಾಸಿಕ ನಾಟಕ, ಕಾಳಿದಾಸನು ಅಗ್ನಿಮಿತ್ರನ ಸಮಕಾಲೀನ ಎಂದು ಒಪ್ಪಿದರೂ ಅಗ್ನಿಮಿತ್ರನು ಇಲ್ಲಿ ಆಡುತ್ತಿರುವ ಮಾತು ನಾಟಕದಲ್ಲಿನ ಪಾತ್ರಗಳಿಗೆ ಸಂಬಂಧಿಸಿರದೆ, ನಾಟಕದ ಹೊರಗಿರುವ ಪ್ರಜಾಸಾಮಾನ್ಯಕ್ಕೆ ಸಂಬಂಧಿಸಿದೆ. ಈಗ ಅವನು ನಾಟಕದಲ್ಲಿನ ಒಂದು ಪಾತ್ರದಂತೆ ಅಲ್ಲದೆ, ರಾಜರ ಪ್ರತಿನಿಧಿಯಂತೆ, ರಾಜತ್ವದ ಸಂಕೇತದಂತೆ, ಒಬ್ಬ ಆದರ್ಶರಾಜನಂತೆ ನುಡಿಯುತ್ತಿದ್ದಾನೆ. ಅವರಲ್ಲಿ ಅಭಿವ್ಯಕ್ತವಾಗಿರುವುದು ರಾಜನ ಕರ್ತವ್ಯ, ಹೊಣೆ ಏನು ಎನ್ನುವುದು. ಅದು ಪ್ರಜಾರಕ್ಷಣೆ, ಪ್ರಜಾಪರಿಪಾಲನೆ. ಪ್ರಜೆಗಳಿಗೆ ಯಾವುದೇ ಈತಿಬಾಧೆಗಳಿಲ್ಲದೆ ಅವರ ಇಷ್ಟಾರ್ಥಗಳು ನೇರವೇರುವಂತೆ ನೋಡಿಕೊಳ್ಳುವುದು. ರಾಜನ ಈ ಕರ್ತವ್ಯವನ್ನು ಕಾಳಿದಾಸನು ರಘುವಂಶದಲ್ಲಿ ದಿಲೀಪನು ವಸಿಷ್ಠನಿಗೆ "ಪುರುಷಾಯುಷ ಜೀವಿನ್ಯಃ ನಿರಾತಂಕಾ ನಿರೀತಯಃ। ಯನ್ಮದೀಯಾ ಪ್ರಜಾಸ್ತಸ್ಯ ಹೇತುಸ್ತ್ವದ್ ಬ್ರಹ್ಮವರ್ಚಸಂ ॥" (I. 63) ಎಂದು ಹೇಳಿರುವುದರಲ್ಲಿ ಸೂಚಿಸಿದ್ದಾನೆ. ಈ ಭರತವಾಕ್ಯ ಪ್ರಜೆಗಳ ಬಗ್ಗೆ ರಾಜನಿಗೆ ಇರುವ ಹೊಣೆಯನ್ನು ತಿಳಿಸುತ್ತದೆ. ಅದರ ಮೂಲಕ ಕವಿಯ ಆಶಯದಂತೆ ಸಮಾಜದ ಸ್ಥಿತಿ ಎಂತಿರಬೇಕು ಎನ್ನುವುದನ್ನು ಸೂಚಿಸುತ್ತದೆ. ಕವಿಯ ಸಾಮಾಜಿಕ ಪ್ರಜ್ಞೆಯನ್ನು ಪ್ರಕಟಿಸುತ್ತದೆ.

ವಿಕ್ರಮೋರ್ವಶೀಯದ ಭರತವಾಕ್ಯ ಇಂತಿದೆ—

> ಪರಸ್ಪರ ವಿರೋಧಿನ್ಯೋರೇಕ ಸಂಶ್ರಯದುರ್ಲಭಂ ।
> ಸಂಗತಂ ಶ್ರೀ ಸರಸ್ವತ್ಯೋಃ ಭೂತಯೇಽಸ್ತು ಸದಾ ಸತಾಂ ॥

(ಪರಸ್ಪರ ವಿರೋಧಿಗಳಾದ ಲಕ್ಷ್ಮೀ ಸರಸ್ವತಿಯ ಸಮಾಗಮ ಒಂದೇ ಜಾಗದಲ್ಲಿ ಆಗುವುದು ದುರ್ಲಭ. ಸಜ್ಜನರ ಏಳಿಗೆಗಾಗಿ ಅದು ಸದಾ ಆಗಲಿ)

ಮಾಲವಿಕಾಗ್ನಿಮಿತ್ರದ ಭರತವಾಕ್ಯದಲ್ಲಿ ರಾಜ್ಯವೊಂದರ ಪ್ರಜೆಯಾಗಿ ಕಾಳಿದಾಸನ ಆಶಯ ವ್ಯಕ್ತವಾಗಿದ್ದರೆ, ವಿಕ್ರಮೋರ್ವಶೀಯದಲ್ಲಿ ಒಬ್ಬ ಕವಿಯಾಗಿ ಕಾಳಿದಾಸನ ಆಶಯ ಅಭಿವ್ಯಕ್ತವಾಗಿದೆ. ಈ ಆಶಯ ಎಲ್ಲ ಕಾಲದ ಎಲ್ಲ ಕವಿಗಳ ಹಂಬಲವೇ ಆಗಿದೆ. ತಮ್ಮ ಕಲೆಗೆ ತಕ್ಕ ಗೌರವ, ಪುರಸ್ಕಾರ, ಬೆಲೆ ಸಮಾಜದಲ್ಲಿ ಸಿಗಬೇಕು ಎನ್ನುವುದೇ ಆ ಹಂಬಲ. ನಿಜಜೀವನದಲ್ಲಿ ಸಾಹಿತ್ಯಕ್ಕೂ ಸಿರಿತನಕ್ಕೂ ಎಷ್ಟು ದೂರ ಎಂದರೆ ಅವು ಒಟ್ಟಿಗೆ ಒಬ್ಬನಲ್ಲಿ ಇರುವುದು ನಿಸರ್ಗದ ನಿಯಮವೊಂದಕ್ಕೆ ಅಪವಾದ ಎನಿಸುವಷ್ಟು ಅಪರೂಪ. ಈ ಅಭಿಪ್ರಾಯವನ್ನು ಕಾಳಿದಾಸನು

ಇದೇ ಶಬ್ದಗಳ ಮೂಲಕವೇ ರಘುವಂಶದಲ್ಲಿ ಅಂಗರಾಜನನ್ನು ವರ್ಣಿಸುವಲ್ಲಿ ನಿರೂಪಿಸಿದ್ದಾನೆ: "ನಿಸರ್ಗಭಿನ್ನಾಸ್ಪದ ಮೇಕಸಂಸ್ಥ ಮಸ್ಮಿನ್ ದ್ವಯಂಶ್ರೀಶ್ಚ ಸರಸ್ವತೀಚ "(VI·29) ಅದು ಹೀಗಿರಬಾರದು ಎನ್ನುವುದು ಕಾಳಿದಾಸನ ಆಶಯ. ಆದರಿಂದ ಕವಿಯ, ಕಲಾವಿದನ ಸ್ಥಿತಿ ಉತ್ತಮಗೊಳ್ಳುವುದಲ್ಲದೆ ಸಮಾಜದಲ್ಲಿ ಸಜ್ಜನಿಕೆಯೂ ಬೆಳೆಯುತ್ತದೆ ಎಂದು ಹೇಳಿರುವುದು ಕಲೆಯ ಅಭಿವೃದ್ಧಿಗೂ ಸಮಾಜದ ಸುಸ್ಥಿತಿಗೂ ಇರುವ ಜೀವಂತ ಸಂಬಂಧವನ್ನು ಸೂಚಿಸುತ್ತದೆ. ಕಾಳಿದಾಸನ ವ್ಯತ್ತಿಪ್ರಜ್ಞೆ, ವಿವೇಕದೃಷ್ಟಿಗಳನ್ನು ಪ್ರಕಟಿಸುತ್ತದೆ.

ಶಾಕುಂತಲದ ಭರತವಾಕ್ಯ ಇದು—

ಪ್ರವರ್ತತಾಂ ಪ್ರಕೃತಿಹಿತಾಯ ಪಾರ್ಥಿವಃ
ಸರಸ್ವತೀ ಶ್ರುತಿಮಹತಾಂ ಮಹೀಯತಾಂ ।
ಮಮಾಪಿ ಕ್ಷಪಯತು ನೀಲಲೋಹಿತಃ
ಪುನರ್ಭವಂ ಪರಿಗತಶಕ್ತಿರಾತ್ಮಭೂಃ ॥

(ರಾಜನು ಪ್ರಜೆಗಳ ಹಿತದಲ್ಲಿ ತೊಡಗಲಿ. ಆರ್ಷದೃಷ್ಟಿಯ ಮಹಾಕವಿಗಳ ಸಾಹಿತ್ಯ ವರ್ಧಿಸಲಿ. ಶಕ್ತಿ ವಿಶಿಷ್ಟನಾದ ಸ್ವಯಂಭು ನೀಲಲೋಹಿತನು ನನಗೂ ಪುನರ್ಜನ್ಮ ತಪ್ಪಿಸಲಿ.)

ಇದರಲ್ಲಿ ಕವಿ ಮೂರು ಆಶಯಗಳನ್ನು ವ್ಯಕ್ತಪಡಿಸಿದ್ದಾನೆ. ಮೊದಲನೆಯದು ಸಮಾಜದ ಸ್ಥಿತಿಗೆ ಸಂಬಂಧಿಸಿದೆ. ಎರಡನೆಯದು ಸಾಹಿತ್ಯರಚನೆಗೆ ಸಂಬಂಧಿಸಿದೆ. ಮೂರನೆಯದು ವ್ಯಕ್ತಿಜೀವನಕ್ಕೆ ಸಂಬಂಧಿಸಿದೆ. ಇವುಗಳಲ್ಲಿ ಮೊದಲನೆಯದು ಮಾಲವಿಕಾಗ್ನಿಮಿತ್ರದ ಭರತವಾಕ್ಯದ, ಎರಡನೆಯದು ವಿಕ್ರಮೋರ್ವಶೀಯದ್ದರ ಅನುವಾದವಾಗಿರುವುದು ಸ್ಪಷ್ಟವಾಗಿದೆ. ಇವನ್ನು ಸ್ವಲ್ಪ ವಿಶದವಾಗಿ ವಿವೇಚಿಸಬಹುದು.

ಮೊದಲನೆಯದಾಗಿ ಸಮಾಜದ ಸ್ಥಿತಿ ಎಂತಿರಬೇಕೆಂದರೆ ರಾಜನು ಪ್ರಜೆಗಳ ಹಿತಕ್ಕಾಗಿ, ಅವರಿಗೆ ಹಿತವಾಗುವಂತೆ ಆಳಬೇಕು. ಅಂದರೆ ಪ್ರಜೆಗಳ ಹಿತಾಸಕ್ತಿಯೇ ರಾಜ್ಯದ ಗುರಿ. ಇದೇ ಇಂದಿನ ಸರ್ಕಾರದ ಧರ್ಮದರ್ಶಿತ್ವದ, ಸುಖೀರಾಜ್ಯದ ಕಲ್ಪನೆ. ಆದರೆ ಅದು ಅಭಿವ್ಯಕ್ತವಾಗಿರುವುದು ಅಂದು ಪ್ರಚಲಿತವಾಗಿದ್ದ ರಾಜಪ್ರಭುತ್ವದ ಪರಿಭಾಷೆಯಲ್ಲಿ. ಇಂದಿನ ಭಾಷೆಯಲ್ಲಿ ಹೇಳುವುದಾದರೆ ಆಡಳಿತಗಾರರು ಜನಗಳ ಒಳಿತಿಗಾಗಿ, ಕಲ್ಯಾಣಕ್ಕಾಗಿ ರಾಜ್ಯಭಾರ ಮಾಡಬೇಕು. ಇದು ಕಾಳಿದಾಸನ ಲೋಕಪ್ರಜ್ಞೆ ಅಥವಾ ಸಾಮಾಜಿಕಪ್ರಜ್ಞೆಯನ್ನು ಸೂಚಿಸುತ್ತದೆ.

ಇದು ಈ ಪಂಕ್ತಿಯ ಒಂದು ಸ್ತರದ ಅರ್ಥವಾದರೆ, ಕಾಳಿದಾಸನು ಬಳಸಿರುವ ಪದಗಳ ಧ್ವನಿಯಿಂದ ಇನ್ನೆರಡು ಅರ್ಥಸ್ತರಗಳನ್ನು ಅದರಲ್ಲಿ ಗುರುತಿಸಬಹುದು. ಚರಾಚರಾತ್ಮಕವಾದ ಈ ಬ್ರಹ್ಮಾಂಡ ಉತ್ಪನ್ನವಾಗಿರುವುದು ಆದ್ಯ ಪ್ರಕೃತಿಪುರುಷರ ಸಂಯೋಗದಿಂದ. ಅವುಗಳಲ್ಲಿ ಪ್ರಕೃತಿ ಜಡ, ಅಧಿಷ್ಠಾನ ; ಪುರುಷ ಚೇತನ ಅಧಿಷ್ಠಾತಾ. ಪುರುಷನ ನಿರ್ದೇಶನವಿಲ್ಲದೆ ಪ್ರಕೃತಿ ಕೆಲಸ ಮಾಡಲಾರದು. ಆದ್ದರಿಂದ ಸಮಷ್ಟಿಜಗತ್ತಿನ ವ್ಯವಹಾರದಲ್ಲಿ, ಸೃಷ್ಟಿಸ್ಥಿತಿ ಕಾರ್ಯದಲ್ಲಿ ಪುರುಷ ಅಥವಾ ಜಗನ್ನಿಯಾಮಕನಾದ ಈಶ್ವರ ಪ್ರಕೃತಿಗೆ ಅನುಕೂಲವಾಗಿ, ವರ್ತಿಸಲಿ ಎನ್ನುವುದೂ ಕವಿಯ ಆಶಯ. ಅಂತೆಯೇ ಮಾನವವ್ಯಕ್ತಿಯೂ ಪ್ರಕೃತಿಪುರುಷರ ಒಂದು ಸಮಾಯೋಗವೇ. ಜೀವನು ಚೇತನಾತ್ಮಕಪುರುಷ; ಶರೀರವು ಜಡ ಪ್ರಕೃತಿ. ಆದ್ದರಿಂದ ಪಿಂಡಾಂಡದಲ್ಲಿ, ವ್ಯಷ್ಟಿ ಜೀವನದಲ್ಲಿ ಪುರುಷನು ಪ್ರಕೃತಿಗೆ ಅನುಕೂಲವಾಗಿ ವರ್ತಿಸಲಿ ಎನ್ನುವುದೂ ಕವಿಯ ಹಾರೈಕೆಯಲ್ಲಿ ಸೇರಿದೆ. ಹೀಗೆ ವ್ಯಕ್ತಿ, ಸಮಾಜ ವಿಶ್ವಗಳಲ್ಲಿ ಸಮರಸಸ್ಥಿತಿಗೆ ಆತ್ಮ ದೇಹ, ರಾಜ ಪ್ರಜೆ, ಈಶ್ವರ ಜಗತ್ತುಗಳ ನಡುವೆ ಯಾವ ಬಗೆಯ ಸಂಬಂಧ ಇರಬೇಕೆಂಬುದನ್ನು ಕಾಳಿದಾಸನು ಈ ಪಂಕ್ತಿಯಲ್ಲಿ ಸೂಚಿಸಿದ್ದಾನೆ.

ಎರಡನೆ ಪಂಕ್ತಿಯಲ್ಲಿ ಸಾಹಿತ್ಯಕ್ಕೆ ಎಂಥ ಮನ್ನಣೆ ಸಿಗಬೇಕು, ಎಂಥ ಸಾಹಿತ್ಯಕ್ಕೆ ಅದು ಸಿಗಬೇಕು ಎನ್ನುವುದನ್ನು ಹೇಳಿದೆ. ಸಾಹಿತ್ಯವು ಕೇವಲ ಶಬ್ದಕೌಶಲವಲ್ಲ, ಮನರಂಜನೆಯೂ ಅಲ್ಲ. ಅದು ಬದುಕಿನ ನಿಗೂಢಸತ್ಯ

ಗಳ ಸುಂದರ ಅಭಿವ್ಯಕ್ತಿ. ಆದ್ದರಿಂದ ಅಂಥ ಆರ್ಷ ಸಾಹಿತ್ಯ ಬೆಳೆಯಬೇಕು, ಅದಕ್ಕೆ ಮಹತ್ವ ದೊರೆಯಬೇಕು. ಇದು ಸಾಹಿತಿಯಾಗಿ ಕಾಳಿದಾಸನ ಆಶಯ.

ಕೊನೆಯ ಎರಡು ಪಂಕ್ತಿಗಳು ಕಾಳಿದಾಸನ ವ್ಯಕ್ತಿಪ್ರಜ್ಞೆಯನ್ನು, ಮಾನವವ್ಯಕ್ತಿಯಾಗಿ ಅವನ ಆಶಯವನ್ನು ಪ್ರಕಟಿಸುತ್ತವೆ. ಸುಸ್ಥಿತ ಸಮಾಜ, ಲಾಭದಾಯಕ ವೃತ್ತಿ ವ್ಯಕ್ತಿಯ ಆದ್ಯ ಆವಶ್ಯಕತೆಗಳಾದರೂ ಅವು ಅವನ ಅಂತಿಮ ಗುರಿ ಆಗಲಾರವು. ಅದು ಅವನ ಆಂತರಿಕ ಜೀವನಕ್ಕೆ ಸಂಬಂಧಿಸಿರುತ್ತದೆ ; ಅವನ ಪ್ರಕೃತಿ ಪ್ರವೃತ್ತಿ ಸಂಸ್ಕಾರಗಳಿಂದ ಪ್ರಭಾವಿತವಾಗಿರುತ್ತದೆ. ಬಹುತೇಕವಾಗಿ ಈ ಗುರಿಯು ವ್ಯಕ್ತಿ ಹುಟ್ಟಿದ ದೇಶ, ಬೆಳೆದ ಸಂಸ್ಕೃತಿಗಳಿಂದ ರೂಪಿತವಾಗಿರುತ್ತದೆ. ಕೆಲವು ವೇಳೆ ವ್ಯಕ್ತಿಯ ಸ್ವಂತ ಅನ್ವೇಷಣೆ, ಸಾಧನೆಗಳಿಂದಲೂ ರೂಪಿತವಾಗಿರಬಹುದು. ಕಾಳಿದಾಸನ ಮಟ್ಟಿಗೆ ಆ ಗುರಿ ಸಂಸಾರದಿಂದ, ಜನನಮರಣ ಚಕ್ರಭ್ರಮಣದಿಂದ ಬಿಡುಗಡೆ, ಭಾರತೀಯರ ಪರಮಪುರುಷಾರ್ಥವಾದ ಮೋಕ್ಷ. ಅದಕ್ಕಾಗಿ ಅವನು ಪ್ರಾರ್ಥಿಸುವ ದೇವತೆಯಂತೂ ಪ್ರಕೃತಿ ಪುರುಷರ ಆದರ್ಶ ಸಂಯೋಗದ ಮೂರ್ತಿರೂಪ, ಅವನೇ ವರ್ಣಿಸಿರುವ ಪ್ರಕಾರ ವಾಗರ್ಥಗಳಂತೆ ಕೂಡಿಕೊಂಡಿರುವ, ಕಾಂತಾಸಮ್ಮಿಶ್ರದೇಹಿ, ಜಗತ್ತಿನ ಮಾತಾಪಿತೃಸ್ವರೂಪಿ ಶಿವಶಕ್ತಿಗಳ ಮಹಾಸಾಮರಸ್ಯದ ಪ್ರತೀಕ, ಅರ್ಧನಾರೀಶ್ವರ.

ಹೀಗೆ ಶಾಕುಂತಲದ ಭರತವಾಕ್ಯ ಪ್ರಜೆಯಾಗಿ, ಸಾಹಿತಿಯಾಗಿ, ಮಾನವ ವ್ಯಕ್ತಿಯಾಗಿ ಕಾಳಿದಾಸನ ಆಶಯವನ್ನು ತಿಳಿಸುತ್ತದೆ. ಅದರ ಜೊತೆಗೇ ಕವಿಯ ಹೊಣೆಯನ್ನೂ ಸೂಚಿಸುತ್ತದೆ. ಪ್ರತಿಯೊಬ್ಬ ಕವಿಯೂ ಒಂದು ಸಮಾಜದ ಸದಸ್ಯ, ಒಬ್ಬ ವೃತ್ತಿಗ, ಹಾಗೂ ಒಬ್ಬ ವ್ಯಕ್ತಿ. ಅವನು ಪೂರ್ಣ ಜೀವನ ನಡೆಸಬೇಕಾದಲ್ಲಿ ಈ ಮೂರರ ಕರ್ತವ್ಯಗಳನ್ನು ನೆರವೇರಿಸಬೇಕು. ಅವನ್ನೂ ಸ್ವತಂತ್ರವಾಗಿ, ಪರಸ್ಪರ ನಿರಪೇಕ್ಷವಾಗಿ, ಒಂದರ ಅನಂತರ ಇನ್ನೊಂದರಂತೆ ನೆರವೇರಿಸದೆ ಏಕಕಾಲದಲ್ಲಿ, ಪರಸ್ಪರ ಪೂರಕವಾಗುವಂತೆ ನಿರ್ವಹಿಸಬೇಕು. ಮೊದಲು ಈ ಮೂರು ವಿಭಾಗಗಳಲ್ಲಿ ಸರಿಯಾದ ಆದರ್ಶಗಳನ್ನು ಅವನು ರೂಪಿಸಬೇಕು. ತರುವಾಯ ಅವುಗಳ ಸಾಧನೆಯಲ್ಲಿ ತೊಡಗಬೇಕು. ಸಮಾಜವು ವ್ಯವಸ್ಥಿತವಾಗಿಲ್ಲದಿದ್ದರೆ ಕವಿಯು ಜೀವಿಸಲು ಸಾಧ್ಯವಿಲ್ಲ. ಅಂಥ ವ್ಯವಸ್ಥೆ ರೂಪುಗೊಳ್ಳಲು ಕವಿಯು ಸಕ್ರಿಯ ಪ್ರಜೆಯಾಗಿ ತನ್ನ ಹೊಣೆ ಹೊರಬೇಕು. ಸಮಾಜದ ಕಾರ್ಯಗಳಲ್ಲಿ ತನ್ನ ಪ್ರಕೃತಿಗೆ, ಶಕ್ತಿಗೆ ಅನುಗುಣವಾದ ಕಾರ್ಯವೊಂದನ್ನು ವೃತ್ತಿಯನ್ನಾಗಿ ಆರಿಸಿಕೊಂಡು ಅದನ್ನು ಯಶಸ್ವಿಯಾಗಿ ನಿರ್ವಹಿಸಬೇಕು. ಅದರಿಂದ ಅವನ ಐಹಿಕ ಜೀವನವೂ ಸಾಗುತ್ತದೆ. ಆದರೆ ಸಮಾಜದ ಸುಭದ್ರತೆ ಮತ್ತು ಜೀವಿಕೆಯ ವೃತ್ತಿ ಅವನ ಜೀವನಧರ್ಮವಾಗಲಾರದು. ಆ ಧರ್ಮಕ್ಕೆ ಬೇಕಾದ ಪೂರ್ವಸಿದ್ಧತೆಯನ್ನಷ್ಟೆ ಅವು ಮಾಡಿಕೊಡಬಲ್ಲವು. ಆ ಧರ್ಮ ಪ್ರತಿ ವ್ಯಕ್ತಿನಿಷ್ಠ, ಪ್ರತಿ ಪುರುಷ ಸಮಾಪ್ತ. ಅದರ ಸಾಧನೆಗಾಗಿ ಅವನು ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಬೇಕು, ಮಾನವನಾಗಿ ಹುಟ್ಟಿದ್ದರ ಸಾರ್ಥಕ್ಯ ಗಳಿಸಬೇಕು. ಇವುಗಳಲ್ಲಿ ಯಾವ ಒಂದು ನ್ಯೂನವಾದರೂ ಮಾನವಜನ್ಮ ಅಪೂರ್ಣ. ಒಟ್ಟಿನಲ್ಲಿ ಕಾಳಿದಾಸನ ಆಶಯ ಇದು. ಭಾರತದ ಮಹಾಕವಿಯ ಈ ಆಶಯ ಭಾರತ ಸಂಸ್ಕೃತಿಯ ಆದರ್ಶವೂ ಆಗಿತ್ತೆನ್ನುವುದು ಅನ್ಯಥಾಸಿದ್ಧ.

ಎಸ್. ಎಸ್. ಲಕ್ಷ್ಮೀನಾರಾಯಣಭಟ್ಟ

ಎಪ್ಪತ್ತೇಳರಲ್ಲಿ ಬೇಂದ್ರೆ

'ಮತ್ತೆ ಶ್ರಾವಣ ಬಂತು' ಎಂಬ ಕವನ ಸಂಕಲನ ಬೇಂದ್ರೆಯವರು ತಮ್ಮ ಎಪ್ಪತ್ತೇಳನೆಯ ವಯಸ್ಸಿನಲ್ಲಿ ಹೊರ್ಹತಂದ ಸಂಕಲನ. ಇದು ಅವರ ಹಿಂದಿನ ಪ್ರಸಿದ್ಧ ಸಂಕಲನವಾದ ಸಖೀಗೀತವನ್ನು ನೆನಪಿಸುವಂಥ ಕೃತಿ. ಇದರಲ್ಲಿರುವ ಹದಿನಾಲ್ಕು ಕವನಗಳೂ ಅವರು ಈಚೆಗೆ ಬರೆಯುತ್ತಿದ್ದ ತತ್ವಪ್ರಧಾನವಾದ ಪದ್ಯಗಳಿಗಿಂತ ಹಿಂದಿನ ರಸಮಯ ಕವಿತೆಗಳಿಗೆ ಹೆಚ್ಚು ಹತ್ತಿರವಾಗಿವೆ. ಈ ಸಂಗ್ರಹದಲ್ಲಿ ಎರಡು ಭಾಗಗಳಿವೆ. ಮೊದಲಿನ ಭಾಗವಾದ 'ಶ್ರಾವಣ ಬಂತು' ನಾನೂರ ಐವತ್ತು ಸಾಲುಗಳ ಒಂದು ನೀಳ್ಗವನ. ಇದು ಕವಿಯ ಆತ್ಮವೃತ್ತಕ್ಕೆ ಸಂಬಂಧಿಸಿದ ಕವನ. ಇದರಲ್ಲಿ ಬೇಂದ್ರೆಯವರ ಬಾಲ್ಯದ ಮುಖ್ಯ ಘಟನೆಗಳು ಅಕ್ಕರ ಸಾಂಗತ್ಯಗಳ ಒಂದು ಮಧುರ ಮಿಶ್ರಣ ದಲ್ಲಿ ಮೂಡಿಬಂದಿದೆ. ಇದರ ವಸ್ತು, ಛಂದಸ್ಸು, ಮಾತಿನ ಥಾಟಿ ಎಲ್ಲವೂ ಬಹಳ ಹಿಂದೆ ಅವರು ಬರೆದ ಸಖೀಗೀತ ಕವನವನ್ನು ಹೋಲುತ್ತವೆ. ಇದು ಹೀಗಿರುವುದು ನ್ಯಾಯವೇ. ಏಕೆಂದರೆ ಈ ನೀಳ್ಗವನ ಸಖೀಗೀತದಲ್ಲಿ ನಿರೂಪಿತ ವಾದ ಕವಿಯ ಆತ್ಮವೃತ್ತದ ಮುಂಚೆ ಬರಬೇಕಾದ ಭಾಗ. ಇದು ಕೊನೆಯಾಗುವಲ್ಲಿಂದ ಮುಂದಕ್ಕೆ ಸಖೀಗೀತ ಆರಂಭವಾಗುತ್ತದೆ. ಕವಿ ಇದನ್ನು ಬಾಲ್ಯಕಾಂಡವೆಂದು ಕರೆದಿರುವುದನ್ನು ಗಮನಿಸಬೇಕು. ಇದು ಅವರ ದೀರ್ಘ ಜೀವನಗೀತೆಯ ಆರಂಭ ಭಾಗ ಎನ್ನುವುದನ್ನು ಆ ಮಾತು ಸೂಚಿಸುತ್ತದೆ.

'ಶ್ರಾವಣ ಬಂತು' ಒಂದು ಸೊಗಸಾದ ನೀಳ್ಗವನ. ದಾರುಣ ಅನುಭವಗಳಿಂದ ಕೂಡಿದ ಗತಜೀವನ ನೋವಿನ ಸಂಗತಿಯೇ ಆದರೂ ಕಾಲದ ಅಂತರದಲ್ಲಿ ನಿಂತು ನೋಡುತ್ತಿರುವ ಕವಿಗೆ 'ಪಟ್ಟಪಾಡೆಲ್ಲವು ಹುಟ್ಟು ಹಾಡಾಗಿ' 'ಬಸಿರು ಬೇನೆಯ ಕಳೆದು ಬೇರೆ ರೂಪವ ತಳೆದು ಮುದ್ದೆ ಮೂರ್ತತೆಗೊಂಡು ಕೂಸಾಗಿದೆ.' ಕವನದ ಆರಂಭದಲ್ಲಿ 'ಹುಲಿಹಾಲು ಕುಡಿಸಿದ, ತಂತಿಯಲಿ ನಡೆಸಿದ, ಸೂಜಿಯ ಮೊನೆಯಲ್ಲಿ ನಿಲ್ಲಿಸಿದ' ಕವಿಯ ಪೂರ್ವಿಕರ ಮಾತು ಬರುತ್ತದೆ. ಮುಂದೆ ಕವಿಯ ಮನಸ್ಸಿನ ಮೇಲೆ ಪರಿಣಾಮ ಮಾಡಿದ ಘಟನೆಗಳು, ಪ್ರಭಾವ ಬೀರಿದ ಗೆಳೆಯರು, ಕವಿಗಳು, ಕೃತಿಗಳು—ಹೀಗೆ ತಾಯಿಯ ದೇಹಾವಸಾನದವರೆಗೆ ಅನೇಕ ಸಂಗತಿಗಳ ಮನೋಜ್ಞ ನಿರೂಪಣೆಯಿದೆ.

ಬೇಂದ್ರೆಯವರ ಕಾವ್ಯವಿಶಿಷ್ಟತೆಗೆ ಕಾರಣವಾದ ಅದರ ಅನನ್ಯಾಂಶಗಳೆಲ್ಲ ಈ ನೀಳ್ಗವನದಲ್ಲಿವೆ. ಭಾವದೀಪ್ತವಾದ ಚಿಂತನೆ, ಮಾತಿನಲ್ಲಿ ಅಲ್ಲಲ್ಲಿ ಚಿಮ್ಮುವ ಮಿಂಚು, ದೇಸಿ ಮಾತಿನ ಅಚ್ಚಗನ್ನಡದ ಹೆಣಿಗೆ, ಧ್ವನಿಪೂರಕವಾದ ನಾದದ ಕುಣಿತ ಇವುಗಳಿಂದ ಬೇಂದ್ರೆ ತಾವು ಹಿಂದೆ ಬರೆದಂಥ ಕಾವ್ಯವನ್ನು ಮತ್ತೊಮ್ಮೆ ಸೃಷ್ಟಿಸಿದ್ದಾರೆ.

ಕಾವ್ಯ ಮೀಮಾಂಸೆಗೆ ಸಲ್ಲುವ ಎಷ್ಟೋ ಮಾತುಗಳು ಈ ಪದ್ಯದಲ್ಲಿ ಅಲ್ಲಲ್ಲಿ ಮಿನುಗುತ್ತವೆ.

ತೆಯ್ದ್ ದ್ದೆ ತೆನ್ನು ದ್ದು ತುಟಿಗೆರೆ ಬಿಚ್ಚಿರಲು
ಉಸಿರೆ ಆಗುವುದಣ್ಣ ಸಾಕಾರವು
ಯಾವ ತಿಪ್ಪೆಯ ಬಸಿರ ಬಿರುಕಿಗೆ ಮೂಡಿತ್ತೊ
ಮಾವಿನ ಪೀಪಿಯ ಆಕಾರವು

ಎಂಬ ಸಾಲುಗಳಾಗಲೀ

ನೆನಸಿದ ಹಾಗೆಯೆ ಕನಸಿನ ನೆಲೆಯೇರಿ
ಬೆಲೆಬಂತು ನೆನಪಿನ ಪೇಟೆಯಲು

ಎಂಬ ಸಾಲುಗಳಾಗಲೀ ಅರ್ಥಗರ್ಭಿತವಾದ ಕಾವ್ಯಜಿಜ್ಞಾಸೆಯ ಮಾತುಗಳಾಗಿವೆ.

ಬೇಂದ್ರೆಯವರ ವೈಯಕ್ತಿಕ ಜೀವನ ಸಂಗತಿಗಳ ಜೊತೆಗೆ ಆ ಕಾಲದ ಕೆಲವು ರೀತಿನೀತಿಗಳ ಚಿತ್ರಣ ಸಹ ಬರುತ್ತದೆ.

ಕರಿಯಿತ್ತು ಮೆರಿಯಿತ್ತು ಕಾರ ಹುಣ್ಣಿವಿಯಿತ್ತು
ಯಾರ ಹಂಗೂ ಇಲ್ಲ ಎರಡು ದಿನಾ
ಎತ್ತಿನ ಕುದುರಿಯ ಕೊರಳಿಗೂ ಹೂಹಾರ
ಯಾರು ಅಂದಾರಣ್ಣಾ ಇವಕೆ ದನಾ ?

ಎಂಬ ರೀತಿಯ ಮಾತು ಆ ಕಾಲದ ಸಂಗತಿಗಳ ನಿರೂಪಣೆಯ ಜೊತೆಗೆ ಅದರ ವಿಮರ್ಶೆಯನ್ನೂ ಮಾಡುತ್ತದೆ. ಕವನದ ತುಂಬ ಅದರ ಚೌಕಟ್ಟಿನ ಆಚೆಗೂ ಅರ್ಥವತ್ತಾಗಿ ಉಳಿಯುವ ಸೂತ್ರರೂಪದ ರಸಾತ್ಮಕ ವಾಕ್ಯಗಳಿವೆ.

ಉಳಿದ ಹದಿಮೂರು ರಚನೆಗಳು ಚಿಕ್ಕ ಕವನಗಳು. ಇವುಗಳಲ್ಲಿ ಪತ್ನೀ–ವಿಯೋಗದ ಸಂಬಂಧದಲ್ಲಿ ಬರೆದ 'ಹೋದ ಬುಧವಾರ ಬರಲೊಲ್ಲು' ಮತ್ತು 'ಅಮವಾಸಿ ದಾಟಿತ್ತು' ಎಂಬ ಕವಿತೆಗಳು ಹೆಚ್ಚು ಗಮನಾರ್ಹವಾಗಿವೆ. ಮೊದಲಿನದು ಸಂಯಮದಲ್ಲಿ ಸೆರೆಹಿಡಿದಿಟ್ಟ ದುಃಖಜ್ವಾಲೆಯಾಗಿದ್ದರೆ ಎರಡನೆಯದು ಅಲೌಕಿಕ ವಿವೇಕ ದುಃಖವನ್ನು ನಿವಾರಿಸಿಕೊಂಡ ಶಾಂತರೂಪದ್ದಾಗಿದೆ. 'ನನಗೂ ನಿನಗೂ ಹಬ್ಬಿದ ನಂಟಿದು ಮಲ್ಲಿಗೆಯಂಟಾಗಿ ಗಂಟೊಡೆಯಲಿ' ಎಂಬ ಮಾತಿನಲ್ಲಿ ಸಾವನ್ನು ಗೆದ್ದು ನಿಲ್ಲುವ ಜೀವನಸತ್ವದ ಪರಿಭಾವನೆ ಕಾಣುತ್ತದೆ.

ಈಚೆಗೆ ಬೇಂದ್ರೆಯವರು ಬರೆದ ಕೃತಿಗಳಲ್ಲಿ ಕಾವ್ಯದಿಂದ ತತ್ವಕ್ಕೆ, ಲೋಕದಿಂದ ಸ್ವಂತಕ್ಕೆ, ರಸ ಪರ್ಯವಸಾಯಿಯಾಗದ ಶ್ಲೇಷೆ ನಾದಗಳಿಗೆ ಕವಿ ಹೊರಳಿದಂತಿತ್ತು. ಆದರೆ ಈ ಸಂಕಲನ ಜೀವನದ ಸುಖದುಃಖಗಳ, ಗಾಢ ಅನುಭವಗಳ ಹಂದರಕ್ಕೆ ಹಬ್ಬಿದ ಲವಲವಿಕೆಯ ನುಡಿಬಳ್ಳಿಯಾಗಿದೆ. ಜ್ಞಾನಪೀಠ ಪ್ರಶಸ್ತಿ ಪಡೆಯುವ ಸ್ವಲ್ಪ ಮುಂಚೆಯೇ ಬೇಂದ್ರೆ ಇಂಥ ಸಂಕಲನವನ್ನು ಹೊರತಂದದ್ದು ಕಾವ್ಯಪ್ರೇಮಿಗಳಿಗೆ ಸಮಾಧಾನ ತರುವ ವಿಷಯವಾಗಿದೆ.

ಭಾಗ ೨

ಎಚ್. ಜಿ. ಲೊಕೂರ

ಧರ್ಮಸೂಕ್ಷ್ಮ

೧

ಧರ್ಮವೆಂಬುದು ಎಲ್ಲರನ್ನೂ ಚೆನ್ನಾಗಿ ಧರಿಸತಕ್ಕುದಲ್ಲವೇ ? ಅದಕ್ಕೆ ಗ್ಲಾನಿಯೊದಗಿದಾಗ ತಾನೇ ಅವತರಿಸಿ ಅದನ್ನು ಸಂಸ್ಥಾಪಿಸುವೆನೆಂದ ಗೀತಾಚಾರ್ಯ. ಗೀತೆ ಇರುವುದು ಮಹಾಭಾರತದಲ್ಲಿ. ಎಂದ ಮೇಲೆ ಭಾರತವು ಗೀತೋಕ್ತಿಗೆ ವ್ಯಾಖ್ಯಾನವಷ್ಟೇ ? ಧರ್ಮರಾಜ್ಯಸಂಸ್ಥಾಪಕನಾದ ಕೃಷ್ಣನು ಗೀತೆಯಲ್ಲಿ ನುಡಿದಂತೆ ಭಾರತದಲ್ಲಿ ನಡೆದು ತೋರಿಸಿದ್ದಾನೆ. ಮಾತ್ರವಲ್ಲ, ಸ್ವಧರ್ಮ-ಸತ್ಯಧರ್ಮ-ನಿಷ್ಕಾಮಧರ್ಮಗಳಿಗೆ ಭಾರತದ ಮೂರು ಸೂಕ್ಷ್ಮ ಸಂದರ್ಭಗಳಲ್ಲಿ ಸರಿಯಾದ ದಾರಿ ತೋರಿಸಿದ್ದಾನೆ. ಅವುಗಳ ಅವಲೋಕನ ನಮಗೂ ಮಾರ್ಗದರ್ಶಕ.

೨

ಉದ್ಯೋಗಪರ್ವದಲ್ಲಿ ದ್ರುಪದರಾಜನ ಪುರೋಹಿತನು ಪಾಂಡವರ ನ್ಯಾಯವಾದ ರಾಜ್ಯವನ್ನು ಕೇಳಬರಲು, ಕೌರವರು ಕಾಳಗವಿಲ್ಲದೆ ಸೂಜಿಯೂರುವಷ್ಟು ನೆಲ ನೀಡಲೊಪ್ಪಲಿಲ್ಲ. ಧೃತರಾಷ್ಟ್ರನು ಅಂಜಿ ಸಂಜಯನನ್ನು ಸಂಧಿಗೆ ಕಳಿಸಲು ಆತ ಉಪಪ್ಲವ್ಯಕ್ಕೈತಂದು 'ಪಾಪಕರವಾದ ಯುದ್ಧಪ್ರವರ್ತನವು ಅಧರ್ಮ' ಎನ್ನುವನು. ಅದಕ್ಕೆ ಧರ್ಮಜನು 'ಅಧರ್ಮಮೂಲಕದ ದೇವಲೋಕವೂ ನನಗೆ ಬೇಡ, ಧರ್ಮತಃ ಬಂದ ಗ್ರಾಮಾಧಿಪತ್ಯ ಇಂದ್ರಪದವಿಗೂ ಮೇಲು. ಆದರೆ ಧರ್ಮಾಧರ್ಮನಿರ್ಣಯ ಕಠಿಣ. ನಾನೀಗ ಧರ್ಮ ಬಿಟ್ಟಿರುವೆನಾದರೆ, ಧರ್ಮ-ಕರ್ಮನಿಶ್ಚಯಜ್ಞನಾದ ಕೃಷ್ಣನುಸುರಿದಂತೆ ನಡೆಯುವೆ' ಎಂದ. ಕೃಷ್ಣ ನುಡಿದ : 'ಸಂಜಯ, ನಾನಿಬ್ಬರಿಗೂ ಹಿತೇಚ್ಛು. ಆದರೆ ಕೌರವರ ನೆಲದಾಸೆಯಿಂದ ಶಾಂತಿ ಕಠಿಣವೆನಿಸಿದೆ. ಧರ್ಮ ಮೀರದೆ ಸ್ವಕರ್ಮಸಾಧನೆ, ಸ್ವಜನಪಾಲನೆಗೆಳಸಿದ ಧರ್ಮಜನನ್ನು ಅಧರ್ಮಿ ಎನ್ನಬಹುದೇ ?'

ಇಲ್ಲಿ ನ್ಯಾಯವಾಗಿ ಪಾಂಡವರಿಗೆ ಸಲ್ಲಬೇಕಿದ್ದ ರಾಜ್ಯವನ್ನು ಕೌರವರಿಗೆ ಬಿಟ್ಟರೆ ಕೃಷ್ಣನೂ ಲೋಕಕ್ಕೆ ಕೆಟ್ಟದಾರಿ ತೋರಿದಂತೆ. ಆದರಿಂದ ಕರ್ಮಪದಕ್ಕಿದ್ದ ವೈದಿಕ ಯಜ್ಞಕ್ರಿಯಾಕಲಾಪವೆಂಬರ್ಥವನ್ನಳಿದು ಗೀತಾಚಾರ್ಯನು ಕರ್ತವ್ಯಾನುಷ್ಠಾನದ (duty) ಅಭಿಪ್ರಾಯ ತಳೆದಿದ್ದಾನೆ. ಉಣ್ಣದ ಹೊರತು ತೃಪ್ತಿಯಾಗದಂತೆ ಕರ್ಮಾಚರಣೆಯಿಂದಲ್ಲದೆ ಬರಿ ವೇದ ಓದುವುದರಿಂದ ಮುಕ್ತಿಯಿಲ್ಲ ; ನೀರು ಕುಡಿದರೇ ದಾಹಶಮನ, ಕರ್ಮದಿಂದಲೇ ಫಲ. ಆದ್ದರಿಂದ ಫಲಪ್ರದಕರ್ಮವು ಕರ್ತವ್ಯ. ಲೋಕದಲ್ಲಿ ಕರ್ಮವೇ ಮುಖ್ಯ; ಅದರ ಬಲದಿಂದಲೇ ಗಾಳಿ ಸುಳಿವುದು, ಸೂರ್ಯ ಹೊಳೆವುದು, ಬೆಂಕಿ ಸುಡುವುದು, ಹೊಳೆ ಹರಿವುದು, ಭೂಮಿ ಧರಿಸುವುದು. ಇವರಂತೆಯೇ ನಮ್ಮ ಕರ್ತವ್ಯಕರ್ಮವು ಸ್ವಧರ್ಮಪಾಲನೆಯಾಗಿದೆ. ಕಾರಣ ಕೃಷ್ಣನು ಕೇಳಿದ : 'ಸಂಜಯ, ನೀನು ಚಾತುರ್ವರ್ಣ್ಯ

ಧರ್ಮವನ್ನರಿತೂ ಪಾಂಡವರ ಪ್ರಯತ್ನವನ್ನೇಕೆ ತಡೆಯುವಿ ? ಅವರೀಗ ಭೀಮನನ್ನು ಶಾಂತಗೊಳಿಸಿ ಉಪಾಯದಿಂದ ರಾಜ್ಯವನ್ನು ಪಡೆದರೆ ಧರ್ಮರಕ್ಷಣೆಯಾಗಿ ಪುಣ್ಯ ಬರುವುದು ನಿಜ ; ಆದರೆ ಕ್ಷತ್ರಿಯರು ಸ್ವಕರ್ಮಸಾಧನೆಗೆ ಹೋರಾಡುತ್ತ ಮಡಿದರೂ ಒಳ್ಳೆಯದೇ. ಅವರಿಗೆ ಹೋರಾಟದಿಂದಲೇ ಧರ್ಮಪಾಲನೆಯಲ್ಲವೇ ?' ಗೀತೆಯಲ್ಲಿ ಅರ್ಜುನನಿಗೆ ಹೇಳಿದ್ದೂ ಇದೇ ಮಾತು'--ಸ್ವಧರ್ಮೇ ನಿಧನಂ ಶ್ರೇಯಃ.'

ದುಷ್ಟರು ಪರರಾಜ್ಯಕ್ಕೆ ಆಶಿಸಿ ಆಕ್ರಮಿಸಿದರೆ ಯುದ್ಧವು ಅನಿವಾರ್ಯ ; ಇಂಥಲ್ಲಿ ದುಷ್ಟರನ್ನು ಕೊಂದರೆ ಪುಣ್ಯವೇ ಬರುತ್ತದೆ. ನೆಲದಾಸೆಯಿಲ್ಲದೆ ಪ್ರಜಾಪೀಡಕರನ್ನು ನೆಲಸಮಗೊಳಿಸಿ ಪರೋಪಕಾರಗೈಯುವ ಯುದ್ಧವು ಧರ್ಮವೆನಿಸಬಹುದಾದರೂ, ದಿಗ್ವಿಜಯ, ರಾಜ್ಯ ವಿಸ್ತರಣದ ಸಂದರ್ಭಗಳು ಅನೇಕರನ್ನು ಮೋಹಗೊಳಿಸಿ ದರೋಡೆ ಖೋರರನ್ನಾಗಿಸಿವೆ. ಕಳ್ಳನು ಮುಚ್ಚುಮರೆಯಲ್ಲಿ ಕದ್ದರೆ ದರೋಡೆಖೋರನು ಕಣ್ಣೆದುರಿಗೇ ಅಪಹರಿಸುವ; ಎರಡೂ ಪರಸ್ವಾಪಹರಣ, ಗರ್ಹಣೀಯವೇ. ಕೌರವರು ಪಾಂಡವರಾಜ್ಯವನ್ನು ಇರಿಸಿಕೊಂಡುದು ಬೇರೆ ಏನು ? ಮೋಸದ ಆಟದಿಂದ ಅದನ್ನು ಸೆಳೆದುಕೊಂಡುದಲ್ಲದೆ, ಪಾಂಡವರು ಸೋತು ವನವಾಸ ಹೋಗಿ ಬಂದರೂ ಒಪ್ಪಂದದಂತೆ ನ್ಯಾಸವಾಗಿದ್ದ ರಾಜ್ಯವನ್ನು ಮರಳಿಸದಿರುವುದು ಲೋಭವಲ್ಲವೇ ? ಇಂಥವರಿಂದ ತಮ್ಮ ಸ್ವತ್ತನ್ನು ಪಡೆದು ಕೊಳ್ಳುವುದು ಪಾಂಡವರ ಅವಶ್ಯಕರ್ತವ್ಯ, ಪರಮಧರ್ಮ. ಕಳ್ಳರನ್ನು ಶಿಕ್ಷಿಸಬೇಕಾದ್ದು ನ್ಯಾಯ ; ಅವಧ್ಯನನ್ನು ವಧಿಸಿದರೆ ಬರುವ ಪಾಪವು ವಧ್ಯನನ್ನು ವಧಿಸದಿದ್ದರೂ ಬರುವುದು.

ಅಂತೆಯೇ ಕೃಷ್ಣನು ಸಂಜಯನಿಗೆ ನಿಷ್ಠುರವಾಗಿ ಹೇಳಿದ : 'ದ್ರೌಪದಿಗೆ ಅವಮಾನವಾದಾಗ ಸುಮ್ಮನಿದ್ದ ನೀನು ಈಗ ಪಾಂಡವರಿಗೆ ಬುದ್ಧಿ ಹೇಳಬಂದೆಯಾ ? ಕೌರವರಿಗೇ ಹೇಳು ಸಂಧಿಯ ಮಾತನ್ನು ; ನಾನೂ ಯತ್ನಿಸುವೆ. ಪಾಂಡವರು ಧರ್ಮಬುದ್ಧಿಯಿಂದ ತಾಳ್ಮೆ ವಹಿಸಿದ್ದರೂ ಯುದ್ಧಸಮರ್ಥರು.'

ಹೀಗೆ ಯುದ್ಧವನ್ನು ತಪ್ಪಿಸಲೆತ್ನಿಸಿದರೂ, ಅದು ಅನಿವಾರ್ಯವಾದಾಗ ಅವಶ್ಯಕರ್ತವ್ಯ–ಸ್ವಧರ್ಮ ಎಂದೊರೆದ ಗೀತಾಚಾರ್ಯನ ಸೂಕ್ತಿ ಕೆಚ್ಚಿನಿಂದ ಕೂಡಿದ್ದು, ನಮ್ಮ ವ್ಯಾವಹಾರಿಕ ಜೀವನಕ್ಕೂ ಉಪಯುಕ್ತವಾಗಿದೆ.

೨

ಕರ್ಣಪರ್ವದಲ್ಲಿ ಗಾಯವಡೆದು ಶಿಬಿರಕ್ಕೆ ಬಂದೊರಗಿದ ಧರ್ಮಜನು, ಕೃಷ್ಣಾರ್ಜುನರು ತನ್ನನ್ನು ಕಾಣ ಬಂದಾಗ ಕರ್ಣನಿನ್ನೂ ಬದುಕಿದ್ದುದನ್ನರಿತು, 'ಗಾಂಡೀವವನ್ನು ಕೃಷ್ಣನಿಗೆ ಕೊಟ್ಟುಬಿಡೆ'ಂದು ತಮ್ಮನನ್ನು ಮೂದಲಿಸಿದ. ಅರ್ಜುನನೂ ಕುಪಿತನಾಗಿ 'ಹೀಗೆಂದವರನ್ನು ಕೊಲ್ಲುವುದು ನನ್ನ ಪ್ರತಿಜ್ಞೆ, ಸತ್ಯವಾಕ್ಯನೆನಿಸುವುದೀಗ ನನ್ನ ಕರ್ತವ್ಯ' ಎಂದು ಅಣ್ಣನ ಮೇಲೆ ಖಡ್ಗ ಹಿರಿದನು. ಈ ಸಂದರ್ಭದಲ್ಲಿ ಧರ್ಮಜನು ಕರ್ಣನ ಮೇಲಿನ ಆಗ್ರಹದಿಂದಲೂ ಪಾರ್ಥನನ್ನು ಹುರಿದುಂಬಿಸಲೂ ಹಾಗೆ ನುಡಿದನೆಂಬಾಶಯವನ್ನರಿಯದೆ, ಹುಚ್ಚು ಪ್ರತಿಜ್ಞೆಯ ಸತ್ಯವನ್ನುಳಿಸಿಕೊಳ್ಳಹೊರಟುದು ಅರ್ಜುನನ ತಪ್ಪೆನಿಸದೇ ? ಕೃಷ್ಣನೂ ಹಾಗೆಂದೇ ತಡೆದೊಡ್ಡಿ ಅವನನ್ನು ತಿದ್ದಬೇಕಾಯಿತು. ಅವನ ವಿವೇಚನೆ ಸತ್ಯಧರ್ಮದ ಸೂಕ್ಷ್ಮಗಳನ್ನರುಹಿ ತೀರ್ಮಾನ ಕೊಡುವಂಥದು.

'ನ ಸತ್ಯಾದ್ವಿದ್ಯತೇ ಪರಂ' ಎಂಬುದು ಸಾಮಾನ್ಯಧರ್ಮ. ಅದರೆ 'ಅಹಿಂಸಾ ಪರಮೋ ಧರ್ಮಃ' ಎಂಬುದೂ ಉಂಟಲ್ಲ ? ಇವುಗಳ ಅರ್ಥವನ್ನು ನಮ್ಮ ಲೋಕಜೀವನದ ಹಿನ್ನೆಲೆಗೆ ಗ್ರಹಿಸದಿದ್ದರೆ ವಿರೋಧಾಭಾಸವೆನಿಸೀತು. ನಮ್ಮ ಊಟ ಉಸಿರಾಟಗಳಲ್ಲಿ ಕ್ರಿಮಿಕೀಟಗಳ ಹಿಂಸೆ ತಿಳಿಯದೆಯೂ, ದುಷ್ಟಪ್ರಾಣಿಗಳಿಂದ ಸಂರಕ್ಷಿಸಿಕೊಳ್ಳುವಲ್ಲಿ ಜ್ಞಾನಪೂರ್ವಕವಾಗಿಯೂ ನಡೆದಿರುವುದು ; ನ್ಯಾಯಾಧೀಶ ಹಿಂಸಕನಿಗೆ ಗಲ್ಲು ವಿಧಿಸುವಲ್ಲಿ, ಕೆಲಸದವರು ಅದನ್ನು ನಿರ್ವಹಿಸುವಲ್ಲಿ ಕರ್ತವ್ಯ ಎನಿಸಿರುವುದು ; ಪರಾಕ್ರಮಿತ ದೇಶಕ್ಕೆ ಹೋರಾಡುವಲ್ಲಿ ಧರ್ಮವಾಗಿರುವುದು. ಆದರೆ ತಮ್ಮಷ್ಟಕ್ಕೆ ತಾವು ವಿಹರಿಸುವ ಜೀವಿಗಳನ್ನು ನಮ್ಮ ಸ್ವಾರ್ಥ-ಕ್ರೀಡೆಗಳಿಗೆ ಹಿಂಸಿಸುವಲ್ಲಿ ಧರ್ಮಪ್ರಯೋಜನ

ವಿರದು, ಸಮರ್ಥನೆಯೊದಗದು. ಇಂಥಲ್ಲಿಯೇ ಅಹಿಂಸೆ ಹಿರಿಯ ಧರ್ಮವಾಗುವುದು. ಅಂತೆಯೇ ಎಲ್ಲರನ್ನೂ ಧರಿಸತಕ್ಕ ಧರ್ಮದ ಹೆಸರಿನಲ್ಲಿ ಮನುಜರನ್ನು ಕೊಲ್ಲುವುದೂ ಸಲ್ಲದು.

ಪ್ರಸ್ತುತ ಸತ್ಯವನ್ನುಳಿಸಿಕೊಳ್ಳಲು ಅಣ್ಣನನ್ನೇ ಹಿಂಸಿಸ ಹೊರಟ ಅರ್ಜುನನಿಗೆ ಕೃಷ್ಣ ಹೇಳುತ್ತಾನೆ: 'ಪ್ರಾಣಿನಾಮವಧಸ್ತಾತ ಸರ್ವಜ್ಯಾಯಾನ್ಮತೋ ಮಮ। ಅನೃತಂ ವಾ ವದೇದ್ವಾಚಂ ನ ತು ಹಿಂಸ್ಯಾತ್ಕಥಂ ಚ ನ ॥' ಎಂದರೆ ಇನ್ನೂ ಸುಳ್ಳನ್ನಾಡಬಹುದೇ ಹೊರತು, ಪ್ರಾಣಿಗಳನ್ನು ಹಿಂಸಿಸಕೂಡದು. ತೌಲನಿಕವಾಗಿ ಶೌಚ-ದಾನಾದಿಗಳಿಗಿಂತ ಸತ್ಯ-ಅಹಿಂಸಾಧರ್ಮಗಳು ಶ್ರೇಷ್ಠವಾಗಿರುವಂತೆ, ತಾರತಮ್ಯ ಒದಗಿದ್ದಾಗ ಸತ್ಯಕ್ಕಿಂತ ಅಹಿಂಸೆಯೇ ಪ್ರಶಸ್ತ. ಸುಳ್ಳುಗಾರನಿಗಿಂತ ಕೊಲೆಪಾತಕಿ ಹೆಚ್ಚು ಪಾಪಿಷ್ಠ ಹಾಗೂ ಶಿಕ್ಷಾರ್ಹ. ಸುಳ್ಳು ಸಹ ಸರಿಯಲ್ಲದಿದ್ದರೂ, ಅದರಿಂದ ಹಿಂಸೆ ತಪ್ಪುತ್ತಿದ್ದರೆ ಸ್ತುತ್ಯವೆನಿಸೀತು ; ಅದರ ಬದಲು ಹಿಂಸೆಗೆಡೆಯಿತ್ತು ಸತ್ಯ ಉಳಿಸಿಕೊಂಡರೆ ವಿಹಿತವೆನಿಸದು. ಉದಾ.—ತಪಸ್ವಿಯ ಬಳಿ ಬಂದಡಗಿದ ಕೆಲವರನ್ನು ಕುರಿತು ಬೆನ್ನಟ್ಟಿ ಬಂದ ಕಳ್ಳರು ಪ್ರಶ್ನಿಸಿದರೆ, ಆತ ಸುಮ್ಮನಿದ್ದು ತನಗೇ ಹಿಂಸೆಯಾಗುವುದೆನಿಸಿದಲ್ಲಿ ಸುಳ್ಳು ಹೇಳಿ ಜನರನ್ನುಳಿಸುವುದೇ ಸತ್ಯ-ಧರ್ಮವಾಗುವುದು. ಹೀಗೆ ಜೀವಿಗಳನ್ನು ರಕ್ಷಿಸುವುದೇ ಧರ್ಮ. ಅದರ ಸುಳ್ಳು ಹೇಳಿ ಕೊಲೆಗಡುಕರನ್ನುಳಿಸಿಕೊಳ್ಳುವಲ್ಲಿ, ಬಹುಜನ ಸಮಾಜದ ಹಿತಕ್ಕೆ ಧಕ್ಕೆಯಾಗುವುದರಿಂದ, ಅಸತ್ಯವು ಅಧರ್ಮ. ಒಟ್ಟಿನಲ್ಲಿ, ಸತ್ಯಾಸತ್ಯಗಳು ಸಂದರ್ಭತಃ ಧರ್ಮವೆನಿಸುವುದರಿಂದ, ಅವುಗಳ ಕಾರ್ಯಾಕಾರ್ಯನಿರ್ಣಯವು ಲೋಕಸಂದರ್ಭವನ್ನನುಸರಿಸಿದೆ. ಕಾರಣ, ಲೋಕಹಿತಕರವಾದುದೇ ಧರ್ಮ, ಧರ್ಮಸಮ್ಮತವಾದುದೇ ಸತ್ಯ. ಇದೇ ಉದಾರ ನೀತಿ.

ಅಂತೆಯೇ ಲೋಕಹಿತವನ್ನು ಲಕ್ಷಿಸಿ ಸತ್ಯಧರ್ಮದ ಕೆಲವು ನಿರ್ಣಯಗಳನ್ನು ಹೀಗೆ ಅನುಮಾನಿಸಿದ್ದಾರೆ, ಹಿರಿಯರು : 'ವಿವಾಹಕಾಲೇ ರತಿಸಂಪ್ರಯೋಗೇ ಪ್ರಾಣಾತ್ಯಯೇ ಸರ್ವಧನಾಪಹಾರೇ। ವಿಪ್ರಸ್ಯಚಾರ್ಥೇ ಹ್ಯನೃತಂ ವದೇತ ಪಂಚಾನೃತಾನ್ಯಾಹುರಪಾತಕಾನಿ ॥' ಮದುವೆ, ರತಿ, ಮರಣ, ಸರ್ವಾಪಹಾರ, ಬ್ರಾಹ್ಮಣಾರ್ಥಗಳಲ್ಲಿ ಹೇಳುವ ಸುಳ್ಳು ಪಾಪವಲ್ಲ. 'ಸಾವಿರ ಸುಳ್ಳು ಹೇಳಿ ಒಂದು ಕಲ್ಯಾಣ ಕಟ್ಟಿ'ಎಂಬುದು ಲೋಕೋಕ್ತಿ. (ದಾನಾದಿಗಳೂ ಹೀಗೆಯೇ ಅಪಾತ್ರಾದಿ ಅವಸ್ಥಾಂತರದಲ್ಲಿ ಅಧರ್ಮ.) ಆದ್ದರಿಂದ ಲೋಕಹಿತಾನುಸಾರಿಯಾದ ಸಂದರ್ಭಗಳಿಂದ ನಿರ್ಣಯವಾಗತಕ್ಕುವು ಈ ಧರ್ಮಸೂಕ್ಷ್ಮ. ಇವುಗಳನ್ನು ಔಚಿತ್ಯಪೂರ್ವಕ ವಿವೇಚಿಸಿ ಆಚರಿಸಬೇಕಲ್ಲದೆ, 'ಸತ್ಯವು ನಿತ್ಯ, ಸತ್ಯ ರಕ್ಷಣೀಯ—ಮಿಥ್ಯವಾಗದು, ಮಿಥ್ಯವು ಮಿಥ್ಯವೇ' ಎಂದುಪದೇಶಿಸಿ ಬಿಟ್ಟರೆ, ಅದರ ಆಚರಣೆ ವ್ಯವಹಾರದಲ್ಲಿ ಅಶಕ್ಯವಾದಾಗ ಉಪದೇಶಿಸದಂತೆಯೇ ಆಗುವುದು.

ಇಂಥ ವಿಶೇಷ ವಿಧಿಯನ್ನು ವಿಚಾರಿಸದೆ ಅರ್ಜುನನು ಶಾಸ್ತ್ರದ ಸಾಮಾನ್ಯ ವಿಧಿಗೆ ಕಟ್ಟುಬಿದ್ದು ಸತ್ಯರಕ್ಷಣೆಗೆ ಧರ್ಮಜನನ್ನೇ ಬಲಿ ತೆಗೆದುಕೊಳ್ಳಹೊರಟುದು ಎಂತಹ ಅಹಿತಕರ ಅಧರ್ಮ ! ಧರ್ಮಾಧರ್ಮಗಳ ಸೂಕ್ಷ್ಮವನ್ನು ಅರಿತು ಆಚರಿಸಬೇಕೆಂದ ಕೃಷ್ಣಸೂಕ್ತಿ ಲೌಕಿಕರಿಗೆಲ್ಲ ಎಷ್ಟು ಸಮುಚಿತ !

೪

ಆಶ್ವಮೇಧಿಕ ಪರ್ವದಲ್ಲಿ ಧರ್ಮಜನು ದುಃಖದಿಂದ 'ಕೃಷ್ಣ, ಭೀಷ್ಮ-ಕರ್ಣರನ್ನು ಕೊಲ್ಲಿಸಿ ನನ್ನ ಮನಸ್ಸು ನೆಮ್ಮದಿಯಿಲ್ಲದಾಗಿದೆ ; ಈ ಪಾಪದಿಂದ ನನಗೆ ದುಃಖ ಒದಗಿತು ; ನಾನು ತಪೋವನಕ್ಕೆ ಹೋಗಿ ಬಿಡುವೆ'— ಎಂದನು. ನಾನು-ನನಗೆ ಎಂಬಂಥ ಅಹಂಕಾರದ ಮೂಲಕಾರಣವಿರುವನಕ ಅವನ ದುಃಖ ಹೇಗೆ ತಪ್ಪೀತು ? ಅಂತೆಯೇ ಕೃಷ್ಣನೆಂದ : "ನೀನು ಶತ್ರುಗಳನ್ನೆಲ್ಲ ಗೆದ್ದಿಲ್ಲ ; ನಿನ್ನ ದೇಹದಲ್ಲಿನ್ನೂ ಅಹಂಕಾರದ ಶತ್ರು ಉಳಿದಿರುವುದು ಕಾಣಲಿಲ್ಲವೇ ? ಶೀತೋಷ್ಣಾದಿ ದೇಹಗುಣ ಸಮತೋಲ ತಪ್ಪಿದರೆ ದೇಹವೂ, ಸತ್ವಾದಿ ಮನೋಗುಣ ಏರುಪೇರಾದರೆ ಮನವೂ ಅಸ್ವಸ್ಥವಾಗುತ್ತವೆ ; ಹರ್ಷ ಹೆಚ್ಚಿದರೆ ಶೋಕವೂ, ಶೋಕ ಹೆಚ್ಚಿದರೆ ಹರ್ಷವೂ ನಾಶವಾಗುತ್ತವೆ ; ಸುಖದಲ್ಲಿ ಹಿಂದಿನ ದುಃಖ ನೆನೆದರೆ ಸುಖ ಹೇಗೆ ಒದಗೀತು ? ಕಾರಣ ಹಿಂದಿನದನ್ನು ಚಿಂತಿಸದೆ ಈಗ

ಸುಖದುಃಖಾತೀತವಾದ ಪರತತ್ತ್ವವನ್ನು ನೆನೆವುದು ನಿನ್ನ ಕರ್ತವ್ಯ. ಭೀಷ್ಮಾದಿ ಬಾಹ್ಯಶತ್ರುಗಳಿಗಿಂತ ಭಯಂಕರವಾದ ಯುದ್ಧವನ್ನು ನೀನೀಗ ಅಹಂಕಾರದ ಅಂತಶ್ಶತ್ರುವಿನೊಡನೆ ಹೂಡಬೇಕಿದೆ; ಮನಸ್ಸು ಮತ್ತು ನಿರ್ಮಮತೆಗಳ ಯುಕ್ತಿಯ ಯೋಗದಿಂದಲೇ ಗೆದ್ದು ಆಚೆಯ ತೀರ (ಪರಬ್ರಹ್ಮ)ವನ್ನು ಹೊಂದಬೇಕಿದೆ. ಅಂತರಂಗವನ್ನು ಗೆಲ್ಲದೆ ನಿನಗೆ ಚಿತ್ತಸ್ವಾಸ್ಥ್ಯವೆಲ್ಲಿ ?

ಈ ಮನೋಭಾವವಿರಿಸಿಕೊಂಡು ಹೊರಗಿನ ವಿಷಯ (ರಾಜ್ಯ)ವನ್ನು ಬಿಟ್ಟು ನೀನು ಅಡವಿಗೈದಿದರೂ ದುಃಖ ತಪ್ಪದು. 'ಮಮ' ಎಂಬೆರಡು ಅಕ್ಷರ ಸಂಸಾರಬಂಧನಕ್ಕೂ 'ನ ಮಮ' ಎಂಬ ಮೂರಕ್ಷರ ಬ್ರಹ್ಮಲಾಭಕ್ಕೂ ಕಾರಣ. ಸಾಮ್ರಾಟನಾದರೂ 'ಮಮ ಕಿಂಚಿತ್ ನ ದಹ್ಯತೇ' ಎಂದ ಜನಕನಂತೆ ನಿರ್ಮಮನಾದವನು ಸಂಸಾರಿಯಂತೆ ಒದ್ದಾಡುವುದಿಲ್ಲ ; ಅಡವಿಗೆ ಹೋದರೂ ಮಮಕಾರ ಬಿಡದವನಿಗೆ ದುಃಖ ತಪ್ಪುವುದಿಲ್ಲ. ಇದನ್ನು ಜನ್ಮಜನ್ಮಗಳ ಅಭ್ಯಾಸಬಲದಿಂದರಿತವರು ವೇದಾಧ್ಯಯನ-ತಪಸ್ಸು-ಯಜ್ಞ–ವ್ರತ–ನಿಯಮ-ಧ್ಯಾನ-ಯೋಗಾದಿಗಳಿಂದ ನಿಗ್ರಹಿಸಿ ಗೆಲ್ಲುವರು. ಈ ಮನೋನಿಗ್ರಹವೇ ಮೋಕ್ಷಮೂಲವಾದ ಬೀಜ–ಧರ್ಮ. ಆತ್ಮವು ನಿತ್ಯಮುಕ್ತವಾದರೂ ಅಹಂಕಾರಾದಿರೂಪವಾದ ಕಾಮವು ಮನೋಜನ್ಯಪ್ರವೃತ್ತಿ ಎನಿಸಿ ಸದಾ ಶಾಶ್ವತವಾಗಿರುವುದು. 'ನಾಹಂ ಶಕ್ಯೋ ನಾಪಾಯೇನ ಹಂತುಂ ಭೂತೇನ ಕೇನಚಿತ್' ಎನ್ನುವ ಕಾಮವನ್ನು ನಿಗ್ರಹಾದಿ ಉಪಾಯಗಳಿಂದ ಗೆಲ್ಲಬಹುದೇ ಹೊರತು ಕೊಲ್ಲಲಾಗುವುದಿಲ್ಲ.

"ಆದುದರಿಂದ ನೀನು ಕೂಡ ನಿಷ್ಕಾಮವಾದ ಅಶ್ವಮೇಧಯಾಗದಿಂದ ಚಿತ್ತಶುದ್ಧಿ ಹೊಂದು, ಕಾಮವನ್ನು ಧರ್ಮದಲ್ಲಿ ತಿರುಗಿಸು. ಯುದ್ಧದಲ್ಲಿ ಸತ್ತವರನ್ನು ಮತ್ತೆ ನೋಡಲಾರೆಯಾಗಿ ದುಃಖಿಸದಿರು. ದೇವರ್ಷಿಪಿತೃಗಳನ್ನು ಧರ್ಮಕಾರ್ಯಗಳಿಂದ ತೃಪ್ತಿಪಡಿಸಿ ಸ್ವಸ್ಥಚಿತ್ತದಿಂದ ರಾಜ್ಯವಾಳು. ಇದರಿಂದಲೇ ನಿನಗೆ ಇಹದಲ್ಲಿ ಕೀರ್ತಿ, ಪರದಲ್ಲಿ ಸದ್ಗತಿ." ಇದೇ ಗೀತಾಯೋಗದ ಮರ್ಮವಲ್ಲವೇ ?

ಏಳು ಸಾಮಾಜಿಕ ಪಾಪಗಳು

ಉದಾತ್ತ ತತ್ತ್ವವಿಲ್ಲದ ರಾಜಕೀಯ, ದುಡಿಮೆ ಇಲ್ಲದ ಶ್ರೀಮಂತಿಕೆ, ನೀತಿ ಇಲ್ಲದ ವ್ಯಾಪಾರ, ನಡತೆ ಇಲ್ಲದ ವಿದ್ಯೆ, ಪ್ರಜ್ಞೆ ಇಲ್ಲದ ವಿಷಯಸುಖ, ಮಾನವೀಯತೆ ಇಲ್ಲದ ವಿಜ್ಞಾನ, ತ್ಯಾಗವಿಲ್ಲದ ಪೂಜೆ ಅಥವಾ ಪ್ರಾರ್ಥನೆ.

—ಮಹಾತ್ಮ ಗಾಂಧಿ

ಕರ್ಮ ಮತ್ತು ಅದರ ಗುಟ್ಟು

ನಾವು ಪರಿಣಾಮದತ್ತ ಎಷ್ಟು ಲಕ್ಷ್ಯ ಕೊಡುವೆವೋ ಕರ್ಮದ ಸಾಧನದತ್ತ ಅಷ್ಟೇ ಗಮನ ಕೊಡಬೇಕು ಎಂಬುದು ದೊಡ್ಡ ನೀತಿ. ಯಾವಾಗಲಾದರೂ ಸೋಲು ಒದಗಿದರೆ ನಾವು ಸಾಧನದತ್ತ ಲಕ್ಷ್ಯ ಕೊಡದಿರುವುದೇ ಕಾರಣವೆಂಬುದು ವಿಮರ್ಶಾತ್ಮಕದೃಷ್ಟಿಯಿಂದ ಪರಿಶೀಲಿಸಿದಾಗ ಬಹಳ ಸಂದರ್ಭಗಳಲ್ಲಿ ನಮಗೆ ವೇದ್ಯವಾಗುವುದು. ಕರ್ಮದ ಪೂರ್ಣತೆಯೊಂದಿಗೆ ಫಲ ಬಂದೇ ಬರಬೇಕು. ಕಾರಣವು ಪರಿಣಾಮವನ್ನುಂಟುಮಾಡುವುದೆಂಬುದನ್ನು ನಾವು ಮರೆಯುತ್ತೇವೆ. ಶಕ್ತಿಯುತವಾದ ಪರಿಪೂರ್ಣ ಕಾರಣಗಳಿಲ್ಲದೆ ಸತ್ಫಲ ಪ್ರಾಪ್ತಿಯಾಗದು. ಒಮ್ಮೆಗೆ ಆದರ್ಶವನ್ನು ಹುಡುಕಿ ಸಾಧನ ನಿಶ್ಚಿತ ಮಾಡಿ ಕಾರಣವನ್ನು ಎಚ್ಚರಿಕೆಯಿಂದ ನಾವು ಕಂಡರೆ ಫಲ ತನ್ನನ್ನು ತಾನೇ ನೋಡಿಕೊಳ್ಳುತ್ತದೆ. ನಾವು ಏನೇ ಮಾಡುವುದಿದ್ದಲ್ಲೂ, ಭಗವಂತನಾದ ಶ್ರೀಕೃಷ್ಣ ಪವಿತ್ರವಾದ ಗೀತೆಯಲ್ಲಿ ಅಪ್ಪಣೆ ಕೊಡುವಂತೆ :

> ತಸ್ಮಾದಸಕ್ತಃ ಸತತಂ ಕಾರ್ಯಂ ಕರ್ಮ ಸಮಾಚರ ।
> ಅಸಕ್ತೋಹ್ಯಾಚರನ್ ಕರ್ಮ ಪರಮಾಪ್ನೋತಿ ಪೂರುಷಃ ॥೩-೧೯॥

ಪೂರ್ಣ ಮನವನ್ನು ಕರ್ಮಕ್ಕೆ ಅರ್ಪಿಸಿ ನಿಷ್ಫಲಾಪೇಕ್ಷನಾಗಿ ಅಲಿಪ್ತ ನೆಲೆಯಲ್ಲಿ ಮುಂದುವರಿಯಬೇಕು. ಕರ್ಮದಿಂದ ಸೆಳೆಯಲ್ಪಡಬಾರದು ; ಇಚ್ಛಿಸಿದಾಗ ಅದರಿಂದ ಬಿಡುಗಡೆ ಹೊಂದಲು ಶಕ್ತಿಯುಳ್ಳವರಾಗಬೇಕು. ಅಂತಹ ಕರ್ಮ ಮೋಕ್ಷಕಾರಣವಾಗುವುದು.

ದುಂಬಿಯೊಂದು ಮಧು ಹೀರಲು ಬಂದು ತನ್ನ ಕಾಲು ಮಧುವಿನಾವಾಸಸ್ಥಾನದಲ್ಲಿ ಸಿಕ್ಕಿಕೊಂಡಾಗ ಹೋಗಲಾರದೆ ಪಾಡುಪಡುತ್ತದೆ. ಅಂತೆಯೇ ಆಗಿದೆ ನಮ್ಮ ಸ್ಥಿತಿ. ನಾವು ಸಂಸಾರದಲ್ಲಿ ಸುಖ ಪಡಲು ಬಂದೆವು. ಆದರೆ ಸುಖಿಸಲ್ಪಟ್ಟೆವು, ಆಳಲ್ಪಟ್ಟೆವು. ಜೀವನದ ಸುಖವನ್ನು ಅನುಭವಿಸಲು ಇಚ್ಛಿಸುತ್ತೇವೆ ; ಅವು ನಮ್ಮನ್ನೇ ತಿನ್ನುತ್ತವೆ. ಪ್ರಕೃತಿಯಿಂದ ಎಲ್ಲವನ್ನೂ ಪಡೆಯಬಯಸಿದರೆ ಅದೇ ಕೊನೆಗೆ ನಮ್ಮನ್ನು ದಣಿಸುತ್ತದೆ. ನಾವು ಲಿಪ್ತರಾದ್ದರಿಂದ ದುಃಖಿಗಳಾಗಿದ್ದೇವೆ.

ದುರ್ಬಲರಿಗೆ ಈ ಜೀವನದಲ್ಲಿ ನೆಲೆಯಿಲ್ಲ. ದೌರ್ಬಲ್ಯವು ನಮ್ಮನ್ನು ಗುಲಾಮಗಿರಿಯತ್ತ ಕೊಂಡೊಯ್ಯುವುದು. ಶಾರೀರಕ, ಮಾನಸಿಕ ಮತ್ತು ಎಲ್ಲಾ ರೀತಿಯ ದುಃಖಕ್ಕೆ ದುರ್ಬಲತೆಯೇ ಕಾರಣ. ನಮ್ಮಲ್ಲಿ ಧೈರ್ಯವಿದ್ದಲ್ಲಿ ಯಾವ ರೋಗಾಣುಗಳೂ ನಮಗೆ ಯಾವ ರೋಗವನ್ನೂ ತರಲಾರವು. ಶಕ್ತಿಯೇ ಚಿರಸುಖದಾಯಕ, ಅಮರತ್ವ, ಅದೇ ಜೀವನ.

ಆನಂದ ಒದಗಬೇಕಾದರೆ ನಾವು ಅಲಿಪ್ತರಾಗಬೇಕು. ಒಂದು ವಸ್ತುವಿಗೆ ಅಂಟಿದಂತೆ ಅದನ್ನು ತ್ಯಜಿಸಬೇಕಾದ ಸಂದರ್ಭ ಬಂದಾಗ ಅಷ್ಟೇ ನಿರಾತಂಕವಾಗಿ ಬಿಡಲು ಯಾವಾತನಿಗೆ ಶಕ್ತಿಯಿದೆಯೋ ಆತ ಪ್ರಕೃತಿ

ಯಿಂದ ಉತ್ತಮವನ್ನು ಪಡೆಯುತ್ತಾನೆ. ಬುದ್ಧನಾಗುವುದಕ್ಕೆ ಎಷ್ಟು ಶಕ್ತಿ ಬೇಕೋ ಅಷ್ಟೇ ಶಕ್ತಿ ಬದ್ಧನಾಗುವುದಕ್ಕೂ ಅಗತ್ಯ. ಕೆಲವರು ಕಠಿಣ ಹೃದಯಿಗಳಿದ್ದಾರೆ; ದಯೆಾರಹಿತರಾದ ಅವರು ಹೆಚ್ಚು ದುಃಖಗಳನ್ನು ಜೀವನದಲ್ಲಿ ತಪ್ಪಿಸಿಕೊಳ್ಳುವರು. ಗೋಡೆಯಂತೆ ಜಡರಾದ ಅವರು ದುಃಖದ ಜೊತೆಗೆ ಆನಂದವನ್ನೂ ಕಳೆದುಕೊಳ್ಳುವರು. ನಮಗೆ ಅದು ಬೇಡ. ಅಂತಹ ಜೀವ ಜಾಗೃತವಾಗಿಲ್ಲವೆಂದರ್ಥ. ಅದೂ ಒಂದು ದೌರ್ಬಲ್ಯವೆ.

ಅದೇ ವೇಳೆ ನಮಗೆ ಸಬಲಪ್ರೇಮ ಬೇಕು. ಒಂದು ವಸ್ತುವಿಗಾಗಿ ಇಡೀ ಜೀವವನ್ನು ಧಾರೆಯೆರೆಯುವ ಶಕ್ತಿಯುಳ್ಳವನು ಪೂರ್ಣನೂ, ನಿಷ್ಕಳಂಕನೂ ಆದವನು. ಆತ ನಿರ್ಲಿಪ್ತನಾಗಬಲ್ಲ. ಇದನ್ನು ಅರಿಯುವ ರಹಸ್ಯವೇನು ?

ಭಿಕ್ಷುವಿಗೂ, ವ್ಯಾಪಾರಿಗೂ ಬರುವ ವಸ್ತುಗಳಿಂದ ನಿಜಸುಖವಿಲ್ಲ. ಏಕೆಂದರೆ ಪ್ರತಿಫಲದ ಬಯಕೆಯಿದೆ. ಪ್ರೇಮದಲ್ಲಿಯೂ ವ್ಯಾಪಾರವಿದ್ದರೆ ಸುಖವೆಂತು ಬಂದೀತು ? ಕನ್ನಡಿಯಲ್ಲಿ ಚಿಂತೆಯ ವದನದಿಂದ ನಿಂತರೆ ಹಾಗೇ ಕಾಣುವುದು ; ನಕ್ಕರೆ ಅದೂ ನಗುವುದು. ನಾವು ಏನನ್ನು ನಿರೀಕ್ಷಿಸುವೆವೋ ಅದರಿಂದ ನಾವು ಬಂಧಿಸಲ್ಪಡುತ್ತೇವೆ ; ಕೊಡುವುದರಿಂದಲ್ಲ. ನಾವು ಪ್ರೀತಿಸುವಾಗ ನಮ್ಮನ್ನು ಇತರರು ಪ್ರೀತಿಸಬೇಕೆಂದು ಬಯಸುವೆವು. ಅಂತಹ ಬಯಕೆ, ಆಶೆಗಳಿಂದಲೇ ಎಲ್ಲಾ ದುಃಖ ಬರುವಂಥಾದ್ದು.

ನಿಸ್ವಾರ್ಥಿಯಾದವನಿಗೆ, ಪ್ರತಿಫಲ ಬಯಸದಿರುವವನಿಗೆ ಜಯ, ಫಲ, ಹೆಚ್ಚು ಲಭಿಸುವುದು. ಇದು ವಿರೋಧಾಭಾಸವಾಗಿ ಕಾಣುವುದು. ನಿಸ್ವಾರ್ಥಿಗೆ ವೇದನೆ, ದುಃಖ, ಆಘಾತ ಎಲ್ಲಾ ಇರುವಂತೆ ತೋರುವುದು. ಕ್ರಿಸ್ತನಿಗೆ ಶಿಲುಬೆ, ನಿಸ್ವಾರ್ಥಿಯಾದ ಗಾಂಧೀಜಿಗೆ ಗುಂಡೇಟು ; ಆದರೆ ಮಿಲಿಯಗಟ್ಟಲೆ ಜೀವಿಗಳಿಗೆ ನಿಜಗೆಲುವಿನ ಅನುಗ್ರಹದ ಕಿರೀಟ ಇಟ್ಟುದಕ್ಕೆ ಕಾರಣ ಕ್ರಿಸ್ತನ ನಿಸ್ವಾರ್ಥತೆ ; ಸಕಲ ಜ್ಞಾನಿಗಳೂ ಗಾಂಧಿಯನ್ನು 'ಮಹಾತ್ಮ'ರೆಂದು ಪರಿಗಣಿಸಲು ಕಾರಣ ಅವರ ನಿಸ್ವಾರ್ಥ ಸೇವೆ.

ಏನನ್ನೂ ಕೇಳಬೇಡ; ನಿನ್ನಲ್ಲಿರುವುದನ್ನು ಕೊಡು; ಅದು ನಿನಗೇ ಹಿಂದಕ್ಕೆ ಬರುವುದು ; ಅದನ್ನು ಕುರಿತು ಯೋಚಿಸಬೇಡ, ಸಾವಿರ ಪಾಲು ದ್ವಿಗುಣಿತವಾಗಿ ಅದು ಹಿಂದೆ ಬರುವುದು. ಕೊಡು ಮತ್ತು ಅದು ಅಲ್ಲಿಗೆ ಮುಗಿಯಿತು. ಇಲ್ಲವಾದರೆ ಪ್ರಕೃತಿ ನೀನು ಕೊಡುವಂತೆ ಬಲಾತ್ಕರಿಸುವುದು. ಕೊನೆಗಾದರೂ ಒಂದೊಮ್ಮೆಗೆ ಎಲ್ಲವನ್ನೂ ತ್ಯಜಿಸಿ ಹೋಗಬೇಕು. ಸೂರ್ಯ ಸಾಗರದಿಂದ ನೀರನ್ನು ಆವಿಯಾಗಿ ಪಡೆಯುವುದು ಮರಳಿ ಕೊಡಲೋಸುಗವಾಗಿ. ಕೋಣೆಯ ಕದಗಳೂ ಕಿಟಕಿಗಳೂ ತೆರೆದಷ್ಟೂ ಪರಿಶುದ್ಧ ಗಾಳಿ ಪ್ರವೇಶಿಸುವಂತೆ, ತ್ಯಾಗವನ್ನು ಜೀವನಕ್ಕೆ ಅಳವಡಿಸಿಕೊಳ್ಳಬೇಕು. ಆಗ ನಾವು ಪರಿಶುದ್ಧರು. ಅನೇಕ ಕಷ್ಟಗಳ ಮಧ್ಯೆ ನಮ್ಮ ದೇವತ್ವವನ್ನು ನಾವು ಉಳಿಸಿಕೊಳ್ಳಬೇಕು. ಕೊನೆಯ ತನಕ ಉತ್ತಮಗುಣಗಳಲ್ಲಿ ವಿಶ್ವಾಸವನ್ನಿಟ್ಟು ಬಾಳುವುದೇ ದೊಡ್ಡತನ ; ಹೃದಯ ದಯಾರ್ದ್ರವಾಗಿರುವುದೇ ಸಾಹಸ.ಗರ್ವವನ್ನು ತ್ಯಜಿಸಿ, ಬರಬಹುದಾದ ಜೀವನದ ಎಲ್ಲಾ ಆಘಾತಗಳನ್ನೂ ಎದುರಿಸಲು ಕಲಿಯಬೇಕು. ಕರ್ಮದಲ್ಲಿ ಸೋಲು ಒದಗಿದರೆ ಪ್ರಪಂಚ ಮತ್ತು ತಾನು ಎರಡೂ ಅದಕ್ಕೆ ಕಾರಣ ; ತನ್ನ ಮೇಲೆ ನಿಗ್ರಹ ಶಕ್ತಿ ಇದ್ದರೆ ಸೋಲಿಗೆ ಕಾರಣ ಇಲ್ಲ.

ಇತರರನ್ನು ನಾವು ದೂರಬಾರದು. ಪ್ರಪಂಚವನ್ನು ದೂರಿದರೆ ಅಂತಹ ಪ್ರಪಂಚದಲ್ಲಿರುವ ನಾವು ನಮ್ಮನ್ನೇ ದೂರಿಕೊಂಡಂತಾಗುವುದು. ನಮ್ಮ ಅರ್ಹತೆಗನುಗುಣವಾದ್ದನ್ನು ನಾವು ಪಡೆಯುವೆವು. ಪ್ರಪಂಚ ಕೆಟ್ಟದ್ದು ; ನಾವು ಒಳ್ಳೆಯವರೆನ್ನುವುದು ದೊಡ್ಡ ಸುಳ್ಳು. ನಿನ್ನ ಮೇಲೆ ತಪ್ಪನ್ನು ಹೊರಿಸಿಕೋ ; ಅದು ಯಾವಾಗಲೂ ಸತ್ಯವೆಂಬುದನ್ನು ನೀನು ಕಾಣುವೆ. ನನಗೆಲ್ಲ ತಿಳಿದಿದೆ, ತಪ್ಪೇ ಮಾಡುವುದಿಲ್ಲ, ದೋಷರಹಿತ ತಾನು ಎನ್ನುವುದಿದ್ದರೆ ಮರುಕ್ಷಣದಲ್ಲಿ ಸಣ್ಣ ಮಗುವಿನ ಚಿಕ್ಕ ಕ್ರೋಧ ನಮಗೆ ನೋವುಂಟುಮಾಡುವುದು. ಇದು ಹೇಡಿತನವಲ್ಲವೇ? ನೀನು ನಿಸ್ವಾರ್ಥಿಯಾದರೆ ನೀನು ದೇವರಂತೆಯೆ. ಯಾವ ನರಕವೂ ನಿನ್ನನ್ನು ಮುಟ್ಟಲಾರದು.

ನಮ್ಮ ಜೀವನವು ನಿಷ್ಕಲ್ಮಷವೂ, ಶುಭ್ರವೂ ಇದ್ದರೆ ಮಾತ್ರ ಪ್ರಪಂಚವೂ ಒಳ್ಳೆಯದೂ ಪರಿಶುದ್ಧವೂ

ಆಗಿ ಕಾಣುವುದು. ಅದೊಂದು ಪರಿಣಾಮ; ನಾವೆ ಸಾಧನಗಳು. ಹೌದು. ನಮ್ಮನ್ನು ನಾವು ತಿದ್ದಿ ಕೊಳ್ಳೋಣ, ಪರಿಪೂರ್ಣರಾಗೋಣ. ಆದ್ದರಿಂದ ನಮ್ಮ ಮನಸ್ಸಿಗೆ ಹೇಳಬೇಕಾದ ನೀತಿ ಇದು:–

ಕಳವಳಿಸಬೇಡ ಮನವೆ । ನಳಿನನಾಭನ ಮೂರ್ತಿ ಕಾಣಲೆಂತೆಂದು ನೀ ||ಪ||
ವೇದ ಶಾಸ್ತ್ರದ ನುಡಿಯೊಳಚಲ ಶ್ರದ್ಧೆಯನಿರಿಸು । ಸಾಧು ಸಜ್ಜನ ಸಂಗ ಬಯಸು ಸತತ ||
ಮೋದದಿಂ ಬಹ ದುಃಖ ಸುಖಗಳನ್ನನುಭವಿಸು । ಮಾಧವನೆ ಕೃಪೆದೋರ್ವ ವಿಶ್ವಾಸವಿರಲು ||೧||
ಉತ್ಸಾಹ ತಂದುಕೋ ಅಧ್ಯಾತ್ಮ ಪಥದೊಳಗೆ । ಸತ್ಸಹವಾಸದಿಂ ಸತತ ಸಾಧನೆಯಿಂ ||
ಮತ್ಸರಾದಿಗಳನ್ನು ಹತ್ತಿಕ್ಕು ಹೃದಯದಲಿ । ಉತ್ಸವದೊಳಿರು ರಾಮಸ್ಪೂರೆವನೆಂತೆಂದು ||೨||
ದೇವರೇ ಬಂದು ತಾ ಗುರು ಹೃದಯದಲಿ ನಿಂದು । ಭಾವನೆ ಪ್ರಚೋದಿಸುವ ತನ್ನೆಡೆಗೆ ತಾನೇ ।
ಭಾವಭಕ್ತಿಯೊಳ್ನಿತ್ಯ ಶ್ರವಣಿಸಿ ಮನನ ಗೈಯು । ದೇವರನು ತೋರ್ವ ಗುರು ದೇವದಯೆಯಿಂದೆ ||೩||
ಕಾಲ ಜೇಕೆಲ್ಲಕೂ ಕಾಲವೇ ಪರಮಾತ್ಮ । ಕಾಲಕಾಲನು ಆತ ತಾ ಕಾಲಾತೀತ ।
ಕಾಲ ಕಾಲಕು ಬಿಡದೆ ಕಾಲ್ಪಿಡಿದು ಕೊಂಡಾಡು । ಕಾಲ ಬರೆ ಕಾಂಬ ದಾಸಕೇಶವಸುತನು ||೪||

ಗೋಡೆಯ ಮೇಲಿರುವ ಗಡಿಯಾರ **ಟಿಕ್** ಎನ್ನುತ್ತದೆ; ಅದು **ಟಿಕ್** ಎನ್ನುವಾಗ ನೀನು ಭೂಮಿಯ ಮೇಲಿರಬೇಕಾದ ಜೀವನದ ಕ್ಯಾಲೆಂಡರಿನಲ್ಲಿ ನಿಮಿಷ, ಗಂಟೆ, ದಿನ, ವಾರ, ತಿಂಗಳು, ವರ್ಷಗಳನ್ನು **ಟಿಕ್** ಎಂದು ಕತ್ತರಿಸುತ್ತದೆ.

— ಆರ್ ಕೆ. ದಲಾಲ್

ಮಲ್ಲಿಕಾರ್ಜುನ ಪರಡ್ಡಿ

ಭಗವದ್‌ಗೀತೆಯ ವ್ಯಾವಹಾರಿಕ ಉಪದೇಶ

ವೇದಾಂತವೆಂದು ಹೆಸರಾದ ಉಪನಿಷತ್ತುಗಳು, ಬ್ರಹ್ಮಸೂತ್ರ ಮತ್ತು ಭಗವದ್‌ಗೀತೆ ಇವು ಹಿಂದೂ ದರ್ಶನದ ಪ್ರಸ್ಥಾನತ್ರಯವೆಂದು ಹೆಸರಾಗಿವೆ. ಬೃಹದ್‌ಗಾತ್ರದ ಉಪನಿಷತ್ತುಗಳಾಗಲೀ ಕಬ್ಬಿಣದ ಕಡಲೆಯಂತಿರುವ ಬ್ರಹ್ಮಸೂತ್ರವಾಗಲೀ ಶ್ರೀಸಾಮಾನ್ಯನಿಗೆ ಎಟುಕದ ವಿಷಯವಾಗಿದೆ. ಆದರೆ ಮುಮುಕ್ಷುವಾದ ಯಾವುದೇ ವ್ಯಕ್ತಿ, ಜಾತಿ, ಮತ, ಲಿಂಗ, ವಯಸ್ಸುಗಳ ಭೇದವಿಲ್ಲದೆ ಗೀತೆಯ ಸಹಾಯದಿಂದ ಮೋಕ್ಷ ಸಾಧನೆಯಲ್ಲಿ ತೊಡಗಬಹುದು.ಸಂಸ್ಕೃತ ವ್ಯಾಕರಣದ ಮೂಲತತ್ತ್ವಗಳನ್ನುಅರಿತ ಯಾವನೊಬ್ಬ ವ್ಯಕ್ತಿಯೂ ಗೀತಾರ್ಥವನ್ನರಿಯಬಲ್ಲ. ಅತ್ಯಂತ ಸುಲಭವಾದ ಅನುಷ್ಟುಪ್ ಛಂದಸ್ಸಿನಲ್ಲಿ ರಚಿತವಾದ ಸುಮಾರು ೭೦೦ ಶ್ಲೋಕಗಳಿಂದ ಕೂಡಿದ ಗೀತೆಯು ಶ್ರೀಕೃಷ್ಣಾರ್ಜುನರ ಸಂವಾದರೂಪದಲ್ಲಿದೆ. ಸಾಧಕನ ಮನಸ್ಸಿನಲ್ಲಿ ಉದ್ಭವಿಸಬಹುದಾದ ಎಲ್ಲ ಶಂಕೆಗಳಿಗೂ ಸಮಾಧಾನ ಇಲ್ಲಿ ದೊರೆಯುತ್ತದೆ. ಗೀತಾಧ್ಯಯನಕ್ಕೆ ಒಂದೇ ಒಂದು ಅಧಿಕಾರ ಮೋಕ್ಷದ ಇಚ್ಛೆ.

ವೈದಿಕಸಾಹಿತ್ಯದ ಕೊನೆಯೆಂದು ಪ್ರಸಿದ್ಧವಾದ ಉಪನಿಷತ್ತುಗಳನ್ನು ಅರಿಯಲಿಲ್ಲವೆಂಬ ವ್ಯಥೆ ಸಲ್ಲದು. ಏಕೆಂದರೆ ಅವುಗಳ ಸಾರವಾಗಿರುವ ಗೀತಾಧ್ಯಯನ ಮೋಕ್ಷಸಾಧನೆಗೆ ಸಾಕು.

> ಸರ್ವೋಪನಿಷದೋ ಗಾವಃ ದೋಗ್ಧಾ ಗೋಪಾಲನಂದನಃ ।
> ಪಾರ್ಥೋ ವತ್ಸಃ ಸುಧೀಃ ಭೋಕ್ತಾ ದುಗ್ಧಂ ಗೀತಾಮೃತಂ ಮಹತ್ ॥
> ಗೀತಾ ಸುಗೀತಾ ಕರ್ತವ್ಯಾ ಕಿಮನ್ಯೈಃ ಶಾಸ್ತ್ರವಿಸ್ತರೈಃ ॥
> ಯಾ ಸ್ವಯಂ ಪದ್ಮನಾಭಸ್ಯ ಮುಖಪದ್ಮಾದ್ ವಿನಿಃಸೃತಾ ॥

ಎಂಬ ಗೀತಾಮಾಹಾತ್ಮ್ಯಶ್ಲೋಕಗಳು ಇದನ್ನೇ ಸಮರ್ಥಿಸುತ್ತವೆ. ಸರ್ವಶಾಖೀಯ ಉಪನಿಷತ್ ಇದು ಎನ್ನುವದಕ್ಕೆ ಅದ್ವೈತಾದಿ ಎಲ್ಲ ಮತಾಚಾರ್ಯರೂ ಇದಕ್ಕೆ ಟೀಕೆ ಬರೆದಿರುವದೇ ಸಾಕ್ಷಿಯಾಗಿದೆ.

ಕೆಲ ವ್ಯಕ್ತಿಗಳ ಪ್ರಕಾರ ಇದರ ಅಧ್ಯಯನ ಕೇವಲ ಕೆಲವೇ ವ್ಯಕ್ತಿಗಳಿಗೆಂದು, ವಿರಕ್ತರಾದವರಿಗೆ ಮಾತ್ರವೆಂದು ಭಾವಿಸುವದು ತಪ್ಪಾಗುವದು. ರಣರಂಗದಲ್ಲಿ ಧನುರ್ಬಾಣಗಳನ್ನು ಎಸೆದು ಅಸಹಾಯನಾಗಿ ವೈರಾಗ್ಯಶಾಲಿಯಂತೆ ಕುಳಿತ, ಸಾಮಾನ್ಯ ಜನತೆಯನ್ನು ಪ್ರತಿನಿಧಿಸುವ ಅರ್ಜುನನಿಗೆ ಉಪದೇಶಿಸಲ್ಪಟ್ಟುದನ್ನು ನೋಡಿದರೆ ಈ ಮಾತಿನ ಸತ್ಯ ವ್ಯಕ್ತವಾಗುತ್ತದೆ. ಆದ್ದರಿಂದ ಗೀತೆಯು ಕೆಲವರ ಸೊತ್ತೆಂದು ವಾದಿಸುವದಾಗಲಿ ಸಂಸಾರಿಗಳಿಗಲ್ಲವೆಂದು ಹೆದರುವದಾಗಲಿ ಅರ್ಥವಿಲ್ಲದ್ದು:

> "ತದೇಕಂ ವದ ನಿಶ್ಚಿತ್ಯ. ಯೇನ ಶ್ರೇಯೋ ಹಿ ಮಾಪ್ನುಯಾಮ್ !" (2-3)

ಎಂದು ಅರ್ಜುನ ಕೇಳಿದಾಗ 'ಯುದ್ಧಮಾಡು' ಎಂದಿಷ್ಟೇ ಹೇಳಿದ್ದರಾಗುತ್ತಿರಲಿಲ್ಲ. ಲಕ್ಷಶ್ಲೋಕಾತ್ಮಕವಾದ ಮಹಾಭಾರತವನ್ನೂ, ಹದಿನೆಂಟುಪುರಾಣಗಳನ್ನೂ ಬರೆದ ವ್ಯಾಸ ಮಹರ್ಷಿಗಳು,

'ಶ್ಲೋಕಾರ್ಧೇನ ಪ್ರವಕ್ಷ್ಯಾಮಿ ಯದುಕ್ತಂ ಗ್ರಂಥಕೋಟಿಭಿಃ ।
ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ ॥

(ಗ್ರಂಥಕೋಟಿಗಳಿಂದ ಹೇಳಿದ ಮಾತನ್ನೇ ಅರ್ಧಶ್ಲೋಕದಲ್ಲಿ ನಾನು ಹೇಳುತ್ತೇನೆ. ಅದೇನೆಂದರೆ ಪರೋಪಕಾರ ಪುಣ್ಯಕರವೂ, ಪರಪೀಡನೆ ಪಾಪಕರವೂ ಆಗಿದೆ) ಎಂದು ನುಡಿಯುತ್ತಾರೆ. ಆದರೆ ನಮ್ಮ ಮನಸ್ಸು ಎಷ್ಟು ಚಂಚಲವಾಗಿದೆಯೆಂದರೆ ಸಮಾಧಿ (ಹೂಳುವದು) ಹೊಂದಿದಾಗಲೇ ಅದು ಸಮಾಧಿಸ್ಥವಾಗುವದು. ಎಷ್ಟೇ ನೀತಿಯ ಮಾತುಗಳೂ ಕಡಿಮೆಯೇ. ಅಲ್ಲದೆ ಮನಸ್ಸಿನ ಶಂಕೆಗಳು ಹಾಗೆಯೇ ಉಳಿದಿರುವಾಗ ಕೇವಲ ಒಬ್ಬರ ಮಾತಿಗೆ ಕಟ್ಟುಬಿದ್ದು ಕಾರ್ಯಪ್ರವೃತ್ತನಾಗುವದು ಸಮಂಜಸವಾಗುವದಿಲ್ಲ. ಮನಸ್ಸಿನ ಎಲ್ಲ ಸಂಶಯಗಳು ನಿವೃತ್ತವಾದಾಗಲೇ ವ್ಯಕ್ತಿ ಕಾರ್ಯಪ್ರವೃತ್ತನಾದರೆ ಸರಿಯಾದ ರೀತಿಯಾಗುವದು. ಹೇಳಬೇಕಾದುದನ್ನು ಹೇಳಿಯಾದ ಮೇಲೆ ಶ್ರೀಕೃಷ್ಣ ಅರ್ಜುನನಿಗೆ ಹೀಗೆ ನುಡಿಯುತ್ತಾನೆ.

ವಿಮೃಶ್ಯೈತತ್ ಅಶೇಷೇಣ ಯಥೇಚ್ಛಸಿ ತಥಾ ಕುರು । (18-63)

(ನಾನು ಹೇಳಿದುದನ್ನು ವಿಮರ್ಶಿಸಿ, ನಿನ್ನ ಇಷ್ಟದಂತೆ ನಡೆದುಕೋ) ಭಗವಂತನಾದರೂ ಶ್ರೀಕೃಷ್ಣ ಮಾನವನ ವಿಚಾರ ಸ್ವಾತಂತ್ರ್ಯವನ್ನು ಅಪಹರಿಸುವದಿಲ್ಲ. ಆದರೆ ಅರ್ಜುನನ ಮನಸ್ಸಿಗೆ ನಾಟುವಂತೆ ಉಪದೇಶ ಮಾಡಿದಾಗ ಕೊನೆಗೆ ಅರ್ಜುನನೇ ಒಪ್ಪುತ್ತಾನೆ.

ನಷ್ಟೋ ಮೋಹಃ ಸ್ಮೃತಿರ್ಲಬ್ಧಾ ತ್ವತ್ ಪ್ರಸಾದಾತ್ ಜನಾರ್ದನ ।
ಸ್ಥಿತೋಽಸ್ಮಿ ಗತಸಂದೇಹಃ ಕರಿಷ್ಯೇ ವಚನಂ ತವ ॥ (18-73)

ಮಾನವನು ಎಷ್ಟೇ ಬುದ್ಧಿಶಾಲಿಯಾಗಲಿ, ಎಷ್ಟೇ ಬಲಿಷ್ಠನಾಗಲೀ ಅವನಿಗೆ ಜೀವನದಲ್ಲಿ ಒಮ್ಮೆಯಾದರೂ ಸಂದಿಗ್ಧ ಪರಿಸ್ಥಿತಿಯುಂಟಾಗುತ್ತದೆ, ಎನ್ನುವುದಕ್ಕೆ ಅರ್ಜುನವಿಷಾದಯೋಗವೇ ಸಾಕ್ಷಿ. ಯಾವ ಉದಾತ್ತಗುಣಗಳು ಅರ್ಜುನನನ್ನು ಉನ್ನತ ವ್ಯಕ್ತಿಯನ್ನಾಗಿ ಮಾಡಿದ್ದವೋ ಅವೇ ಈಗ ಅವನ ವಿರುದ್ಧ ಪಿತೂರಿ ನಡೆಸಿ ಅವನನ್ನು ಶೋಚನೀಯಸ್ಥಿತಿಗೆ ತರುವದನ್ನು ಕಾಣುತ್ತೇವೆ. ದಯಾರ್ದ್ರಹೃದಯದವನೂ ಪರೋಪಕಾರಿಯೂ ಆದ ಅರ್ಜುನ ತಾನು 'ರಾಜ್ಯಕ್ಕೋಸುಗ ಇಷ್ಟೆಲ್ಲ ಜನರನ್ನು ಕೊಲ್ಲುವದೇ ?' ಎಂದು ಚಿಂತಾಪರನಾಗುತ್ತಾನೆ. "ಶ್ರೇಯೋ ಹಿ ಭೋಕ್ತುಂ ಭೈಕ್ಷಮಪೀಹ ಲೋಕೇ |" ಎನ್ನುವ ಮಾತಿಗೂ ಅಪಾರ್ಥ ಕಲ್ಪಿಸುವದೂ ಯೋಗ್ಯವಲ್ಲ. ಯುದ್ಧದಲ್ಲಿಯ ಅಪಾರ ಜೀವಹಾನಿ, ಭಿಕ್ಷೆಬೇಡುವದು, ಇವೆರಡರಲ್ಲಿ ಕಡಮೆ ಅನಿಷ್ಟವಾದುವನ್ನೇ ಆರಿಸಿಕೊಳ್ಳುತ್ತಾನೆ. ಅಲ್ಲದೆ ಅರ್ಜುನವಿಷಾದವನ್ನೂ ಯೋಗವೆಂದು ಕರೆದಿರುವದೂ ಮಹತ್ವಪೂರ್ಣವಾಗಿದೆ. ಯೋಗಶಬ್ದ 'ಯುಜ್'ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ; ಅಗಲು, ಕೂಡು ಎಂಬ ಪರಸ್ಪರ ವಿರುದ್ಧವಾದ ಎರಡು ಅರ್ಥಗಳನ್ನು ಕೊಡುತ್ತದೆ. ಯಾವ ರಾಜ್ಯಸುಖಕ್ಕಾಗಿ ಅರಸುಮನೆತನದವರು ತಂದೆ ತಾಯಿ ಬಂಧುಬಳಗವನ್ನು ಕೊಲ್ಲಲೂ ಹೇಸುವದಿಲ್ಲವೋ, ಆ ರಾಜ್ಯವನ್ನೇ ಅಲ್ಲ, ತ್ರೈಲೋಕ್ಯರಾಜ್ಯವನ್ನೂ ಕಡೆಗಣಿಸಲು ಸಿದ್ಧನಿದ್ದಾನೆ, ಅರ್ಜುನ-ಕರುಣೆಯಿಂದಾಗಿ ಹೀಗೆ ತನ್ನ ಕಾರುಣ್ಯದಿಂದ ರಾಜ್ಯದ ದುರಾಶೆಯನ್ನು ಅಗಲಿದ ಅರ್ಜುನ-ಪರಮಾತ್ಮ ಸಂಬಂಧಬೆಳೆಸಲು ಯೋಗ್ಯನಾಗಿದ್ದಾನೆ.

ಬಾಂಧವರ, ಗುರುಹಿರಿಯರ ಮೇಲಿನ ಮಮತೆಯಿಂದ, ಮೋಹದಿಂದ ಅರ್ಜುನ ಶೋಕಕ್ಕೆ ಈಡಾಗುತ್ತಾನೆ. ಆದರೆ ತನ್ನ ತಪ್ಪಿನ ಅರಿವಿಲ್ಲದೆ ಪ್ರಾಜ್ಞನಂತೆ ಭಾಷಣ ಮಾಡಲು ತೊಡಗಿದಾಗ, ಶ್ರೀಕೃಷ್ಣ ನಗದೆ ಏನು ಮಾಡಿಯಾನು ?

"ಅಶೋಚ್ಯಾನ್ ಅನ್ವಶೋಚಸ್ತ್ವಂ, ಪ್ರಜ್ಞಾವಾದಾನ್ ಚ ಭಾಷಸೇ" (2-11)

ಅರ್ಜುನ ಯುದ್ಧಮಾಡಲೇಬೇಕು ಎಂಬುದನ್ನು ಅನೇಕ ವ್ಯಾವಹಾರಿಕ ಪ್ರಯೋಜನಗಳನ್ನು ವಿವರಿಸಿ

ತೀಸುತ್ತಾನೆ. ಕೌರವಾದಿಗಳು ಅಶೋಚ್ಯರು. ಅಂದರೆ ಅವರ ಮರಣದಿಂದ ಸಮಾಜಕ್ಕೆ ಕಲ್ಯಾಣವೇ ಹೊರತು, ಕೇಡಿಲ್ಲ; ಆದುದರಿಂದ ಅವರ ನಾಶಕ್ಕೆ ಕೊರಗುವದು ಸರಿಯಲ್ಲ.

೨. ಯುದ್ಧವಲ್ಲಿ ಕಾದುವದೇ ಕ್ಷತ್ರಿಯನ ಧರ್ಮ. ಆದ್ದರಿಂದ ಕ್ಷತ್ರಿಯವೀರನಾದ ಅರ್ಜುನ ಕಾದದೇ ಹೋದರೆ ಅವನು ತನ್ನ ಕರ್ತವ್ಯದಲ್ಲಿ ಚ್ಯುತನಾಗುತ್ತಾನೆ.

"ಸ್ವಧರ್ಮಮಪಿ ಚಾವೇಕ್ಷ್ಯ ನ ವಿಕಂಪಿತುಮರ್ಹಸಿ ।" (2-30)

೩. ಹುಟ್ಟಿದ ಪ್ರತಿಜೀವಿಯೂ ಮರಣಹೊಂದಲೇಬೇಕು.

'ಜಾತಸ್ಯ ಹಿ ಧ್ರುವೋ ಮೃತ್ಯುಃ' (2-27), ಆದ್ದರಿಂದ ಅಪರಿಹಾರ್ಯವಾದ ವಿಷಯವಲ್ಲಿ ತಲೆ ಕೆಡಿಸಿ ಕೊಳ್ಳುವದು ಸರಿಯೇ ? ಅದೂ ಅರ್ಜುನನಂಥ ಧೀರನಿಗೆ ?

೪. ಯುದ್ಧವಲ್ಲಿ ಗೆಲವು ನಿಶ್ಚಿತವಲ್ಲವೆನ್ನುವದೇನೋ ನಿಜ. ಆದರೆ ಯುದ್ಧದಲ್ಲಿ ನಿಷ್ಫಲತೆಯಿಲ್ಲವೆನ್ನುವ ಮಾತೂ ಅಷ್ಟೇ ನಿಜ.

ಹತೇ ವಾ ಪ್ರಾಪ್ಸ್ಯಸಿ ಸ್ವರ್ಗಂ । ಜಿತ್ವಾ ವಾ ಭೋಕ್ಷ್ಯಸೇ ಮಹೀಮ್ ॥ (2-37)

೫. ಆತ್ಮ ಅಮರವಾಗಿದ್ದು, ಶರೀರ ಬಟ್ಟೆಯಂತೆ ಆಗಾಗ ಬದಲಾಗುತ್ತಿರುತ್ತದೆ. ಆದಕ್ಕಾಗಿ ದುಃಖಿಸುವದು ಸರಿಯಲ್ಲ.

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಽಪರಾಣಿ ।
ತಥಾ ಶರೀರಾಣಿ ವಿಹಾಯ ಜೀರ್ಣಾ
ನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥ (2-22)

೬. ಇದುವರೆಗೆ ಎಲ್ಲರ ಪ್ರಶಂಸೆಗೆ ಪಾತ್ರನಾದ ಪಾರ್ಥ ಯುದ್ಧಭೂಮಿಯಿಂದ ಪಲಾಯನ ಮಾಡುವದು ಎಂಥ ನಾಚಿಕೆಗೇಡು ? ಪ್ರಸಿದ್ಧನಾದ ವ್ಯಕ್ತಿ ಅಪಕೀರ್ತಿಗೆ ಗುರಿಯಾಗುವದು ಮರಣಹೊಂದುವದಕ್ಕಿಂತಲೂ ಹೆಚ್ಚು ವ್ಯಥೆಯನ್ನುಂಟುಮಾಡುವದು.

"ಸಂಭಾವಿತಸ್ಯ ಚಾಕೀರ್ತಿಃ ಮರಣಾದತಿರಿಚ್ಯತೇ ।" (2-34)

ಯುದ್ಧಮಾಡುವದೇ ಸರಿಯಾದ ಕ್ರಮವಲ್ಲದಿದ್ದರೂ ಧರ್ಮ ರಕ್ಷಣೆಗಾಗಿ,ಸಮಾಜದ ಒಳಿತಿಗಾಗಿ ಯುದ್ಧಮಾಡಲೇ ಬೇಕಾಗಿ ಬಂದಾಗ ಹಿಂದೇಟು ಹಾಕುವದು ಅರ್ಜುನನಂಥ ಅನುಪಮ ಕ್ಷತ್ರಿಯವೀರನಿಗೆ ಶೋಭಿಸದು. ಜ್ಞಾನೋದಯವಾಗುತ್ತಿರುವ ಅರ್ಜುನನನ್ನು ಕೃಷ್ಣ ಪುನಃ ಅಡ್ಡದಾರಿಗೆ ಎಳೆಯುತ್ತಿದ್ದಾನೆ, ಎಂಬ ಆಕ್ಷೇಪ ಹೀಗೆ ಹುರುಳಿಲ್ಲದ್ದು ವ್ಯಕ್ತವಾಗುತ್ತದೆ. "ಕ್ಷತಾತ ತ್ರಾಯತೇ ಇತಿ ಕ್ಷತ್ರಿಯಃ ।" ಎಂಬಂತೆ, ಆತತಾಯಿಗಳಿಂದ ಸಮಾಜವನ್ನು ರಕ್ಷಿಸುವದೇ ಕ್ಷತ್ರಿಯರ ಕರ್ತವ್ಯ. ಅಲ್ಲದೆ ತನ್ನ ಸ್ವಭಾವಕ್ಕೆ ಅನುಗುಣವಾಗಿ ಅರ್ಜುನ ಯುದ್ಧ ಮಾಡಿಯೇತೀರುತ್ತಾನೆ, ಕ್ಷಣಹೊತ್ತು ಸುಮ್ಮನಿದ್ದರೂ ಕೂಡ.

ಇನ್ನು ಆಸಕ್ತಿಯಿಂದ ಉಂಟಾಗುವ ಹಂತಹಂತವಾದ ಅಧೋಗತಿಯನ್ನು, ಅದು ಅಕಾಲಮರಣದಲ್ಲಿ ಪರ್ಯವಸಾನ ಹೊಂದುವದನ್ನು ಗೀತೆ ಕೆಳಗಿನ ಶ್ಲೋಕಗಳಲ್ಲಿ ಬಹು ಚೆನ್ನಾಗಿ ವಿವರಿಸಿದೆ.

ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ ।
ಸಂಗಾತ್ ಸಂಜಾಯತೇ ಕಾಮಃ ಕಾಮಾತ್ ಕ್ರೋಧೋಽಭಿಜಾಯತೇ ॥
ಕ್ರೋಧಾದ್, ಭವತಿ ಸಂಮೋಹಃ ಸಂಮೋಹಾತ್ ಸ್ಮೃತಿವಿಭ್ರಮಃ ।
ಸ್ಮೃತಿಭ್ರಂಶಾತ್ ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ ॥ (2-62,63)

ಯಾವುದೋ ಒಂದು ವಿಷಯದಲ್ಲಿ ಆಸಕ್ತಿಯುಂಟಾಗಿ, ಆ ವಿಷಯವನ್ನೇ ಧ್ಯಾನಿಸಲು ಕಾಮವುಂಟಾಗುವುದು. ಕಾಮ ಸಫಲವಾಗದಿದ್ದರೆ ಕ್ರೋಧವೂ, ಕ್ರೋಧದಿಂದ ಸಂಮೋಹವೂ, ಸಂಮೋಹದಿಂದ ಸ್ಮೃತಿಭ್ರಂಶವೂ, ಸ್ಮೃತಿನಾಶದಿಂದ ಬುದ್ಧಿನಾಶವೂ, ಬುದ್ಧಿನಾಶದಿಂದ ಸರ್ವನಾಶವೂ ಉಂಟಾಗುವದೆಂಬ ಕ್ರಮಶಃ ಅಧೋಗತಿಯನ್ನು ಇದಕ್ಕೂ ವೈಜ್ಞಾನಿಕವಾಗಿ ಹೇಳಲು ಸಾಧ್ಯವೇ? ಕಾಮವು ಭೋಗದಿಂದ ಶಮನವಾಗುವದಿಲ್ಲವೆಂಬದೂ ಗಮನಾರ್ಹ.

ಹವಿಷಾ ಕೃಷ್ಣವರ್ತ್ಮೇವ ಭೂಯೋಭೂಯೋಭಿವರ್ಧತೇ ॥

'ಬೇಕು' ಎಂಬ ಬಯಕೆ ಬೇಡ ಎನ್ನುವದನ್ನು ಒಳಗೊಂಡಿರುತ್ತದೆ. ಬೇಕಾದದ್ದು ದೊರೆಯದಿದ್ದಾಗ, ಬೇಡವಾದುದು ಪ್ರಾಪ್ತವಾದಾಗ ಸಹಜವಾಗಿಯೇ ಕ್ರೋಧವುಂಟಾಗುವದು. ಸುಖದ ಬಳಿಕ ದುಃಖವುಂಟಾಗುವದು ಸಹಜ. ಕೆಲಸಲ ದುಃಖ ಕಲ್ಪನೆಯಿಂದ ಅನುಭವಿಸುವ ಸುಖವೂ ದುಃಖವಾಗಿಯೇ ಪರಿಣಮಿಸುವದು. ಆದ್ದರಿಂದಲೇ ಸುಖದುಃಖಗಳ ಬೇಕು ಬೇಡವೆಂಬ ಭವಬೀಜಗಳನ್ನು ಹುರಿಯಬೇಕೆಂದು ಶರಣರು ಹೇಳುತ್ತಾರೆ.

"ಬೆಟ್ಟದ ಮೇಲೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆಂತಯ್ಯ
....ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು ಬಂದರೆ ಕೋಪವ
ತಾಳದೆ ಸಮಾಧಾನಿಯಾಗಿರಬೇಕು."

ಎಂದು ಅಕ್ಕಮಹಾದೇವಿ ಹೇಳುವದನ್ನು ಇಲ್ಲಿ ಸ್ಮರಿಸಬಹುದು.

ಸ್ಥಿತಪ್ರಜ್ಞನ ಲಕ್ಷಣ, ವರ್ತನೆ ನಮ್ಮದಾದರೆ ನಾವು ಸುಖ ಶಾಂತಿಯಿಂದ ಪುರುಷಪೂರ್ಣಾಯುಷ್ಯವನ್ನು ಬದುಕಲು ಸಹಾಯಕವಾಗುತ್ತದೆ. ಇಲ್ಲದಿದ್ದರೆ ಅಕಾಲಮುಪ್ಪು, ಮರಣ ಅನಿವಾರ್ಯ. ಇಲ್ಲಿ ಒಂದು ವೈಜ್ಞಾನಿಕ ಉದಾಹರಣೆಯನ್ನು ಪರಿಶೀಲಿಸಬಹುದು. ಒಂದು ಕಲ್ಲು ಸದಾ ಬಿಸಿಲಿನಿಂದ ಪ್ರಸರಣ (expansion) ಮತ್ತು ಚಳಿಯಿಂದ ಆಕುಂಚನ (contraction) ಹೊಂದುತ್ತಿದ್ದರೆ, ಅದು ಕ್ರಮೇಣ ಚಿಕ್ಕ ಚಿಕ್ಕ ಕಣಗಳಾಗಿ ಮಾರ್ಪಡುವದು. ಅದೇರೀತಿ ಸುಖದಿಂದ ಹಿಗ್ಗುವದರಿಂದಲೂ, ದುಃಖದಿಂದ ಕುಗ್ಗುವದರಿಂದಲೂ ಮೈಮನಸ್ಸುಗಳೆರಡೂ ಅಕಾಲ ಮುಪ್ಪಿಗೆ ಈಡಾಗುತ್ತವೆ. ಅಶಾಂತಿಪರ್ವಕ್ಕೆ ಆಸ್ಪದ ದೊರೆಯುತ್ತದೆ.

ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ (2–4)

ಎಂಬ ಗೀತೋಕ್ತಿಯ ವ್ಯಾವಹಾರಿಕ ಉಪಯುಕ್ತತೆಯನ್ನು ಪರಿಶೀಲಿಸೋಣ. ವ್ಯಕ್ತಿ ಯಾವಾಗಲೂ ಫಲದ ಬಗ್ಗೆಯೇ ಯೋಚಿಸುತ್ತಿದ್ದರೆ, ಅವನು ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಲಾರ. ಆಗ ಆ ಕಾರ್ಯ ಪೂರ್ಣವಾಗುವದೇ ದುಸ್ತರ. ಫಲಾಸಕ್ತಿಯಿಂದ ಮನಸ್ಸು ತುಂಬಿರುವಾಗ ಕಾರ್ಯ ಮಾಡುವಲ್ಲಿ ಅಷ್ಟೊಂದು ನಿಗಾ ವಹಿಸಲು ಸಾಧ್ಯವಿಲ್ಲ. ಹೀಗೆಂದ ಮಾತ್ರಕ್ಕೆ ಮಾಡಿದ ಕಾರ್ಯಕ್ಕೆ ಫಲವಿಲ್ಲೆಂದು ಅರ್ಥವಲ್ಲ. ಕಾರ್ಯವನ್ನು ಸರಿಯಾದ ರೀತಿಯಲ್ಲಿ ತಕ್ಕಷ್ಟು ಮಾತ್ರೆಯಲ್ಲಿ ಮಾಡಿದಾಗ, ಅದರ ಫಲ ಸಿಕ್ಕೇ ಸಿಗುವದು. ಮಾಡಿದ ಕಾರ್ಯಕ್ಕೆ ಫಲಕೊಡದಿರುವಷ್ಟು ಬಡವನಾಗಲೀ, ಜಿಪುಣನಾಗಲೀ ಭಗವಂತನಾಗಿಲ್ಲವೆಂಬ ಶ್ರದ್ಧೆ ನಮ್ಮದಾಗಿರಬೇಕು. ಈಶ್ವರಾರ್ಪಣಬುದ್ಧಿಯಿಂದ ಮಾಡುವ ಕೆಲಸ ಕೈಗೂಡಿ ಸರಿಯಾದ ಫಲ ದೊರೆಯುವದಲ್ಲದೆ ಈಶ್ವರಾನುಗ್ರಹದಿಂದ ನಮ್ಮ ಮನಸ್ಸು ಸದಾ ಶಾಂತವಾಗಿರುವದು. ಕರ್ಮಸನ್ಯಾಸ ಸಾಧ್ಯವಿಲ್ಲದ ಸಂಗತಿ.

ನಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್ ।
ಕಾರ್ಯತೇ ಹ್ಯವಶಃ ಕರ್ಮ ಸರ್ವಃ ಪ್ರಕೃತಿಜೈಃ ಗುಣೈಃ ॥ (3–5)

ಅಂದರೆ ಯಾವ ವ್ಯಕ್ತಿಯೂ ಕರ್ಮಸನ್ಯಾಸಗೈಯಲು ಶಕ್ತನಾಗಿಲ್ಲ. ಪ್ರಕೃತಿಯ ಗುಣಗಳಿಂದ ಅಂದರೆ ಅವಶನಾಗಿ ಪ್ರತಿಯೊಬ್ಬನೂ ಕಾರ್ಯಮಾಡಲೇಬೇಕಾಗುವದು. ಆದರೆ ಫಲಾಪೇಕ್ಷೆಯನ್ನು ಬಿಟ್ಟು ಕಾರ್ಯಮಾಡಿದರೆ ವ್ಯಕ್ತಿ

ಯೆಂದೂ ಬಂಧಿತನಾಗದೆ, ಯಾವಾಗಲೂ ಶಾಂತಿಯಿಂದಲೇ ಬದುಕಬಲ್ಲ. ಫಲತ್ಯಾಗವೇ ನಿಜವಾದ ನೈಷ್ಕರ್ಮ್ಯಸಿದ್ಧಿಯೆಂದು ಹೇಳಬಹುದು. ದ್ವಂದ್ವಾತೀತನೂ ಅಫಲಾಸಕ್ತನೂ ಆಗಿರುವಾಗ ದುಃಖದುಮ್ಮಾನಗಳು, ತಾಪತ್ರಯಗಳು ತಾವೇ ದೂರವಾಗುವವು.

ಪ್ರಸಾದೇ ಸರ್ವದುಃಖಾನಾಂ ಹಾನಿರಸ್ಯೋಪಜಾಯತೇ ॥ (2–65)

ಅಂದರೆ ಅಕ್ಕಮಹಾದೇವಿ ಹೇಳುವಂತೆ ಹಾವಿನ ಹಲ್ಲು ಕಳೆದರೆ ಹಾವಿನ ಸಂಗವೇ ಲೇಸು. ಅನಾಸಕ್ತಿ, ಫಲಾಪೇಕ್ಷೆ ಇಲ್ಲದಿರುವಿಕೆ ಇದರಿಂದ ಕಾರ್ಯಮಾಡಿದರೆ ಕರ್ಮಬಂಧನವುಂಟಾಗುವುದಿಲ್ಲ. ಆದ್ದರಿಂದ ಸ್ಥಿತಪ್ರಜ್ಞನಿಗೂ, ಒಬ್ಬ ಸಾಮಾನ್ಯ ಮನುಷ್ಯನಿಗೂ ಕಾರ್ಯಮಾಡುವ ವಿಧಾನದಲ್ಲಿ ಯಾವ ಭೇದವೂ ಇಲ್ಲದಿರಬಹುದು. ಆದರೆ ಅವರ ಮನೋಭಾವದಲ್ಲಿಯ ವ್ಯತ್ಯಾಸ ಅಪಾರ. ಇಲ್ಲಿ ಜನಕ ಮಹಾರಾಜನ ಉದಾಹರಣೆಯನ್ನು ಸ್ಮರಿಸಬಹುದು.

ಮಿಥಿಲಾಯಾಂ ದಹ್ಯಮಾನಾಯಾಂ ನಮೇ ಕಿಂಚಿತ್ ಪ್ರಣಶ್ಯತಿ ।

ಎಂದರೆ "ಮಿಥಿಲೆ ಸುಟ್ಟರೂ ಎನಗೆ ಇನಿತೊಂದು ವ್ಯಥೆಯಿಲ್ಲ" ಎಂದು ಜನಕ ನುಡಿಯುವಲ್ಲಿ ಅವನ ಪ್ರಸಾದ ಸ್ಥಿತಿ, ಸ್ಥಿತಪ್ರಜ್ಞಲಕ್ಷಣ ಸುಲಭವಾಗಿ ವ್ಯಕ್ತವಾಗುವುದಿಲ್ಲವೇ ? ಎಲ್ಲವೂ ಭಗವಂತನದು, ನನ್ನದೇನೂ ಇಲ್ಲವೆಂಬ ಭಾವನೆ ನಮ್ಮಲ್ಲಿ ಯಾವಾಗ ರೂಢವಾಗುವದೋ ಆಗ ಶಾಂತಿ ತಾನೇ ತಾನಾಗಿ ನೆಲೆಸುವದು.

ಜನಕ ಮಹಾರಾಜನನ್ನು ಇನ್ನೊಂದು ದೃಷ್ಟಿಯಿಂದಲೂ ನಾವು ಸ್ಮರಿಸಬಹುದು. ಮಹಾತ್ಮರಿಗೆ ಮಾಡಲೇಬೇಕಾದ ಯಾವ ಕರ್ತವ್ಯವೂ ಇಲ್ಲದಿದ್ದರೂ ಅವರು ಜಗತ್ತಿನ ಕಲ್ಯಾಣಕ್ಕಾಗಿ ಕಾರ್ಯನಿರತರಾಗುತ್ತಾರೆ. ಆದುದರಿಂದಲೇ ಶ್ರೀಕೃಷ್ಣ ಅರ್ಜುನನಿಗೆ ನುಡಿಯುತ್ತಾನೆ.

ಕರ್ಮಣೈವ ಹಿ ಸಂಸಿದ್ಧಿಂ ಆಸ್ಥಿತಾಃ ಜನಕಾದಯಃ ।
ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ ॥ (3-20)

ಇನ್ನು ಮೋಕ್ಷ ಪ್ರಾಪ್ತಿಗೆ, ಶಾಂತಿ ಸಂಪಾದನೆಗೆ ಯಾರೂ ಕಾಡಿಗೆ ಹೋಗಬೇಕಿಲ್ಲ, ಸನ್ಯಾಸ ಸ್ವೀಕರಿಸಬೇಕಿಲ್ಲ. ಈ ಸಂಸಾರ ಸಾಗರಲ್ಲಿದ್ದ ಮನುಷ್ಯ ಈಜಿ ಆ ದಡ ಮುಟ್ಟಬೇಕು. "ಈಸಬೇಕು ಇದ್ದು ಜಯಿಸಬೇಕು" ಎಂಬ ದಾಸರು ಹಾಡಿದ ಮಾತಿನ ಮರ್ಮವನ್ನು ಮರೆಯಬಾರದು. ನಮ್ಮ ಪ್ರಾಕ್ತನಕರ್ಮದಿಂದಲೋ ಅಥವಾ ಮತ್ತಾವ ಕಾರಣದಿಂದಲೋ ನಾವು ಜಗತ್ತಿನಲ್ಲಿ ಹುಟ್ಟಿರುತ್ತೇವೆ. ನಮ್ಮ ಇರುವಿಕೆಯನ್ನು ಅಲ್ಲಗಳೆಯಲಾಗುವದಿಲ್ಲ. ಸಂಸಾರದಲ್ಲಿ ನಾವಿದ್ದರೂ, ನಮ್ಮಲ್ಲಿ ಸಂಸಾರ ಇರಬಾರದು. ಅಂದರೆ 'ಪದ್ಮಪತ್ರಮಿವಾಂಭಸಿ'–ಕೆಸರಿನಲ್ಲಿಯ ಕಮಲದಂತೆ ನಾವಿರಬೇಕು. ಈ ಮಾತನ್ನೇ ಗೀತೆ ಸ್ಥಿತಪ್ರಜ್ಞನ ಲಕ್ಷಣದಿಂದಲೂ ಲೋಕಸಂಗ್ರಹಕ್ಕಾಗಿ ಜೀವಿಸುತ್ತಿರುವ ಮಹಾತ್ಮರ ಉದಾಹರಣೆಗಳಿಂದಲೂ ಬಹು ಚೆನ್ನಾಗಿ ತಿಳಿಸುತ್ತದೆ. ಕಾಡಿಗೆ ಹೋಗಿ ಘೋರ ತಪಸ್ಸು ಮಾಡಿಯೂ ಸಿದ್ಧಿ ಪಡೆಯದ, ಕಾಮಾದಿಗಳ ದಾಸರಾಗಿರುವ ವ್ಯಕ್ತಿಗಳನೇಕರನು ನಾವು ಪುರಾಣಗಳಲ್ಲಿ ಕಾಣಬಹುದು. ಸೃಷ್ಟಿಯನ್ನು ಬದಲಾಯಿಸಲು ಸಾಧ್ಯವಿಲ್ಲದ್ದರಿಂದ ನಮ್ಮ ದೃಷ್ಟಿಯನ್ನು ಬದಲಾಯಿಸಬೇಕು. ಈರೀತಿ ನಿತ್ಯಶಾಂತಿಯನ್ನು ಪಡೆಯಬೇಕಾದುದು ನಮ್ಮ ಗುರಿಯಾಗಿರಬೇಕು. 'ಧರ್ಮಾವಿರುದ್ಧೋ ಕಾಮೋಽಸ್ಮಿ' ಎಂದು ಶ್ರೀಕೃಷ್ಣ ನುಡಿದು, ಕಾಮವೂ ಒಂದು ಪವಿತ್ರ ಭಾವನೆ, ಆದರೆ ಅದು ಧರ್ಮದ ಚೌಕಟ್ಟಿನಲ್ಲಿರಬೇಕು ಎಂದು ಹೇಳಿರುವ ಮಾತೂ ಬಹು ಮಾರ್ಮಿಕ, ಮನೋಜ್ಞ.

ಮತ್ತೊಂದು ವ್ಯಾವಹಾರಿಕ ಉಪಯುಕ್ತತೆಯನ್ನು ಗಮನಿಸೋಣ. ಈಶ್ವರೋಪಾಸನೆ ಸಗುಣ, ನಿರ್ಗುಣವೆಂದು ಎರಡು ಬಗೆಯಾಗಿದ್ದು. ನಿರ್ಗುಣೋಪಾಸನೆ ಬಹು ಕ್ಲಿಷ್ಟವಾಗಿದೆ. ಅದರಿಂದ ಸಿದ್ಧಿ ದೊರೆಯುವದೂ ಕಷ್ಟಸಾಧ್ಯವೆ.

"ಕ್ಲೇಶೋಽಧಿಕತರಸ್ತೇಷಾಮವ್ಯಕ್ತಾಸಕ್ತಚೇತಸಾಮ್ ॥"

ಆದರೆ ಸಗುಣೋಪಾಸನೆ ಸುಲಭ. ಸಿದ್ಧಿಯೂ ನಿಶ್ಚಿತ. ಮೂರ್ತಿಪೂಜೆ ಅವ್ಯಕ್ತ(ನಿರ್ಗುಣ) ಈಶ್ವರ ಸಾಕ್ಷಾತ್ಕಾರಕ್ಕೆ ಸಾಧನವಾಗಬೇಕೇ ವಿನಾ, ಅದೇ ಗುರಿಯಾಗಬಾರದೆಂಬ ಮಾತನ್ನು ನಿತ್ಯ ನೆನಪಿನಲ್ಲಿಟ್ಟರೆ, ಮತೀಯ ಗಲಭೆಗಳು ಇಲ್ಲವಾಗುತ್ತವೆ. ಅಲ್ಲದೆ ಭಕ್ತಿಭಾವ, ನಿಷ್ಠೆವೊಂದಿದ್ದರೆ, ಯಾವ ರೀತಿಯಿಂದಾದರೂ ಪೂಜಿಸಬಹುದು. "ಪತ್ರಂ ಪುಷ್ಪಂ ಫಲಂ ತೋಯಂ" ಎಂದು ಗೀತೆ ನುಡಿಯುವ ಮಾತು ಬಹು ಔಚಿತ್ಯಪೂರ್ಣ. ಭಕ್ತಿಯಿಂದ ಏನೇ ಅರ್ಪಿಸಿದರೂ ಭಗವಂತ ತುಷ್ಟನಾಗುತ್ತಾನೆ. 'ಮಾಪ್ರಯಚ್ಛೇಶ್ವರೇ ಧನಂ' ಎಂದು ಶ್ರೀಕೃಷ್ಣ ನುಡಿದು ಭಕ್ತಿಗೂ ಹಣಕ್ಕೂ ಯಾವ ನಂಟೂ ಇಲ್ಲವೆಂದು ಸಾರಿದ್ದಾನೆ.

ಈಶ್ವರಸಾಕ್ಷಾತ್ಕಾರಕ್ಕಾಗಿ, ಯೋಗಪ್ರಾಪ್ತಿಗಾಗಿ ಮನುಷ್ಯ ಯಾವ ರೀತಿ ವರ್ತಿಸಬೇಕೆಂಬುವನ್ನು ಗೀತೆ ಬಹು ವ್ಯಾವಹಾರಿಕವಾಗಿ ಉಪದೇಶಿಸುತ್ತದೆ.

ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ।
ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ ॥ (6-17)

'ಶರೀರಮಾದ್ಯಂ ಖಲು ಧರ್ಮಸಾಧನಮ್ ।' ಎಂದು ಕವಿಕುಲಗುರು ಕಾಳಿದಾಸ ಹೇಳಿರುವಂತೆ ಧರ್ಮಸಾಧನವಾದ ಈ ಶರೀರ ಸರಿಯಾಗಿ ಈಶ್ವರಾರ್ಚನೆ ಮಾಡಲು ಶಕ್ತವಾಗುವಂತೆ ಯುಕ್ತವಾದ (ಹೆಚ್ಚೂ ಅಲ್ಲ, ಕಡಿಮೆಯೂ ಅಲ್ಲ) ಆಹಾರ ಮೊದಲಾದವುಗಳನ್ನು ಸೇವಿಸಬೇಕು.ಶರೀರವನ್ನು ಬಳಲಿಸುವ ದುಸ್ತರವಾದ ಮಾರ್ಗವನ್ನು ಎಲ್ಲೂ ಹೇಳಿಲ್ಲ. ಈ ಸುವರ್ಣ ಮಾರ್ಗವನ್ನು ಯಾರಾದರೂ ಒಪ್ಪಲೇಬೇಕು. ಇಷ್ಟು ಸುಲಭವಾದ (ಅಂತೆಯೇ ಶ್ರೇಷ್ಠವಾದ) ಯೋಗಮಾರ್ಗವನ್ನು ಬಹು ಕಡಮೆ ದರ್ಶನಗಳಲ್ಲಿ ಕಾಣುತ್ತೇವೆ. ಬಂಧಮೋಕ್ಷಕ್ಕೆ ಕಾರಣವಾದ ಮನಸ್ಸು ಬಹು ಚಂಚಲವಾಗಿದ್ದು, ಅದರ ನಿಗ್ರಹ ವಾಯುವಿನಂತೆ ಕಷ್ಟಸಾಧ್ಯವೆಂದು ಅರ್ಜುನ ನುಡಿಯುತ್ತಾನೆ.

ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವದ್ದೃಢಮ್ ॥
ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಮ್ ॥ (6-34)

ಅದನ್ನೊಪ್ಪಿದ ಕೃಷ್ಣ ವ್ಯಾವಹಾರಿಕವಾಗಿ ಮನೋನಿಗ್ರಹ ಹೇಗೆ ಸಾಧ್ಯವೆಂಬುದನ್ನು ತಿಳಿಸುತ್ತಾನೆ.

ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ ॥ (6-35)

Where there is a will, there is a way ಎಂಬಂತೆ ನಮ್ಮ ನಿರ್ಧಾರ ದೃಢವಾಗಿದ್ದರೆ ಮನಸ್ಸನ್ನು ನಿಗ್ರಹಿಸುವದು ಕಷ್ಟವಾದರೂ ಅಸಂಭವವಾಗದು.

ಕೊನೆಯದಾಗಿ ಶ್ರದ್ಧೆಯಿಂದ ಒಳ್ಳೆಯ ಕೆಲಸವನ್ನು ಪ್ರಾರಂಭಿಸಿದಾಗ, ಆ ಕೆಲಸ ಪೂರ್ಣವಾಗದಿದ್ದರೂ ಯಾವ ತೊಂದರೆಯೂ ಇಲ್ಲವೆಂದು ತಿಳಿಸಿದ ಶ್ರೀಕೃಷ್ಣ ಕಲ್ಯಾಣಕಾರಿಯಾದ ಯಾವ ಮಹಾವ್ಯಕ್ತಿಯೂ ದುರ್ಗತಿಯನ್ನು ಹೊಂದುವದಿಲ್ಲವೆಂಬ ಅಭಯವನ್ನು ಈಯುತ್ತಾನೆ.

ನ ಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತ ಗಚ್ಛತೀ ॥ (6-40)

ಗೀತೆಯ ಉಪದೇಶವನ್ನು ಸರಿಯಾಗಿ ಅರಿತುಕೊಂಡು ನಡೆದರೆ ಶ್ರೀಶಂಕರಾಚಾರ್ಯರು ಹೇಳುವಂತೆ ನಮ್ಮ ಪ್ರತಿಯೊಂದು ವ್ಯವಹಾರವೂ ಈಶ್ವರಪೂಜೆಯಾಗುವಲ್ಲಿ ಯಾವ ಸಂಶಯವೂ ಇಲ್ಲ.

ಯದ್ ಯತ್ ಕರ್ಮ ಕರೋಮಿ ತತ್ ತದಖಿಲಂ
ಶಂಭೋ ತವಾರಾಧನಮ್ ॥

ಟಿ. ಎಸ್. ವೆಂಕಣ್ಣಯ್ಯ

'ಕೀರ್ತಿರ್ಯಸ್ಯ ಸ ಜೀವತಿ'

ಈ ಭೂಮಿಯಲ್ಲಿ ಕೀರ್ತಿಗೆ ಆಸೆಪಡದವನಾರು? ಪ್ರತಿಯೊಬ್ಬ ಮಾನವನಿಗೂ ತಾನೂ ಕೀರ್ತಿವಂತನಾಗಬೇಕೆಂಬ ಹಂಬಲವಿರುತ್ತದೆ. ಆದರೆ ಕೀರ್ತಿ ದೊರೆಯುವುದು ಆಸೆಪಡುವಷ್ಟು ಸುಲಭವಲ್ಲ. ಯಾವ ವ್ಯಕ್ತಿ ಕೀರ್ತಿಗಾಗಿ ತನ್ನ ಸರ್ವಸ್ವವನ್ನೂ ತೃಣಸಮಾನವಾಗಿ ಭಾವಿಸುವನೋ ಅಂತಹವನಿಗೇ ಕೀರ್ತಿ ಲಭಿಸುತ್ತದೆ. ಅದಕ್ಕಾಗಿ ಮಾನವ ಸಮಸ್ತ ಸಾಂಸಾರಿಕಸುಖಗಳನ್ನೂ ತ್ಯಜಿಸಬೇಕಾಗುತ್ತದೆ. ಮಾನ-ಸನ್ಮಾನಗಳನ್ನು ಬಯಸದ, ಪ್ರತಿಷ್ಠೆಯನ್ನಭಿಲಕ್ಷಿಸದ, ಐಶ್ವರ್ಯಾನುರಾಗವಿಲ್ಲದ, ಧನಾಕಾಂಕ್ಷೆಯಿಲ್ಲದ, ಪದವಿಯ ಕಾಮನೆಯಿಲ್ಲದ, ಭೌತಿಕ ಪದಾರ್ಥಗಳ ಬಗೆಗೆ ಅನಾಸ್ಥೆಯುಳ್ಳ, ಇಂದ್ರಿಯ ಸುಖಗಳತ್ತ ವಿಮುಖರಾದ, ಪ್ರಾಣಗಳಿಗಾಸೆಪಡದಂತಹ ವ್ಯಕ್ತಿಗಳೇ ಯಶಸ್ಸನ್ನು ಪಡೆಯಲು ಯೋಗ್ಯರಾಗುತ್ತಾರೆ. ಯಶಸ್ಸಿನಲ್ಲಿ ಸತ್ಯವೂ, ಸುದೃಢವೂ, ಅವಿಚಲವೂ ಆದ ಪ್ರೇಮವುಳ್ಳ ಆತ "ಈ ಸಂಸಾರದಲ್ಲಿ ಕಾಣಬರುವ ಸಮಸ್ತವಸ್ತುವೂ ಮಾಯಾವೃತವಾದ ಪ್ರಪಂಚದಿಂದ ವ್ಯತಿರಿಕ್ತವಾದದ್ದಲ್ಲ. ಇಲ್ಲಿ ಶಾಶ್ವತವಾಗಿ ಉಳಿಯುವ ವಸ್ತುವಾವುದೂ ಇಲ್ಲ. ಇಂದು ನಮ್ಮದೆಂಬ ದೃಷ್ಟಿಯಿಂದ ಕಾಣಬರುವ ಪದಾರ್ಥಗಳೆಲ್ಲವುಗಳ ಸ್ಥಿತಿ ಕ್ಷಣಿಕ. ಈ ಸಂಸಾರದ ಸಮಸ್ತ ವಸ್ತುಗಳೂ ಪರ್ವತದಿಂದ ಹರಿದುಬರುವ ನದಿಗೆ ಸಮಾನವಾದ ವೇಗವುಳ್ಳವು. ನೀರಿನ ಗುಳ್ಳೆಗಳಂತೆ ಕ್ಷಣವಿನಾಶಿ. ವಸ್ತುತಃ ಈ ಪ್ರಪಂಚವೊಂದು ಧರ್ಮಶಾಲೆಯಂತೆ. ದಿಗ್ದಿಗಂತಗಳಿಂದ, ದೇಶವಿದೇಶಾಂತರಗಳಿಂದ ಜನರು ಆಗಮಿಸಿ ಕೆಲವು ದಿನಗಳು ಅಲ್ಲಿ ವಾಸಮಾಡಿ ಮತ್ತೆ ತಮ್ಮ ತಮ್ಮ ಸ್ವಸ್ಥಾನಗಳಿಗೆ ಹಿಂದಿರುಗುವಂತೆ ಮಾನವರು ಸ್ವಕರ್ಮಫಲವಶದಿಂದ ಈ ಭೂಮಿಯಲ್ಲಿ ಜನಿಸಿ ಕರ್ಮಗಳನ್ನು ಸಂಪಾದಿಸಿ ಪುನಃ ಈ ಲೋಕವನ್ನು ತ್ಯಜಿಸಿ ತಮ್ಮ ಕರ್ಮಗಳಿಂದಾರ್ಜಿತವಾದ ಲೋಕಾಂತರವನ್ನು ಸೇರುತ್ತಾರೆ. ಈ ಸಂಸಾರ ಕೇವಲ ಸ್ವಪ್ನವಂತೆ. ಸ್ವಪ್ನದಲ್ಲಿ ಕಾಣಬರುವ ಸಮಸ್ತ ವಸ್ತುಗಳೂ ನಿದ್ರೆಯಲ್ಲಿಯೇ ಲೀನವಾಗುವಂತೆ ಸಂಸಾರದ ಸಮಸ್ತ ಪದಾರ್ಥಗಳೂ ಕ್ಷಣಾಂತರದಲ್ಲಿ ನಾಶವಾಗುತ್ತವೆ" ಎಂಬುದಾಗಿ ಎಲ್ಲವನ್ನೂ ಸೂಕ್ತವಾಗಿ ವಿಮರ್ಶಿಸಿ ಕೇವಲ ಯಶಸ್ಸಿನಲ್ಲಿಯೇ ಅನುರಾಗವುಳ್ಳವನಾಗಿ ಮಿಕ್ಕೆಲ್ಲವುಗಳ ಬಗೆಗೂ ವಿರಕ್ತಿ ಭಾವವನ್ನು ತಾಳುತ್ತಾನೆ.

ಯಶೋಪಾಸಕನಾದ ಮಾನವನು ಮಹಾತ್ಮನಾಗುತ್ತಾನೆ. ಆತನ ಮನಸ್ಸಿನಲ್ಲಿ

'ಗಂಧರ್ವನಗರಾಕಾರಃ ಸಂಸಾರಃ ಕ್ಷಣಭಂಗುರಃ ।
ಮನಸೋ ವಾಸನೈವೇಯಮುಭಯೋರ್ಭೇದ ಸಾಧನಮ್ ॥'[1]

---

[1] ಗಂಧರ್ವನಗರಾಕಾರವಾದ ಸಂಸಾರ ಕ್ಷಣವಿನಶ್ವರವಾದುದು. ಮನಸ್ಸಿನ ವಾಸನೆಯೇ ಈ ಎರಡರ ಭೇದಕ್ಕೂ ಸಾಧನೆ.

> ‘ಸರ್ವೇ ಕ್ಷಯಾಂತಾ ನಿಚಯಾಃ ಪತನಾಂತಾಃ ಸಮುಚ್ಛ್ರಯಾಃ ।
> ಸಂಯೋಗಾ ವಿಪ್ರಯೋಗಾಂತಾಃ ಮರಣಾಂತಂ ಹಿ ಜೀವಿತಂ ॥’[2]

ಎಂಬಿತ್ಯಾದಿ ಪ್ರಕಾಶಮಯವಾದ ವಿಚಾರಗಳು ಸದಾ ಪ್ರಫುಲ್ಲಿತವಾಗುತ್ತಿರುತ್ತವೆ.

> ‘ಚೇತೋಹರಾ ಯುವತಯಃ ಸ್ವಜನೋಽನುಕೂಲಃ
> ಸದ್ಬಾಂಧವಾಃ ಪ್ರಣತಿಗರ್ಭಗಿರಶ್ಚ ಭೃತ್ಯಾಃ ।
> ಗರ್ಜಂತಿ ದಂತಿನಿವಹಾಸ್ತರಲಾ ತುರಂಗಾಃ
> ಸಮ್ಮೀಲನೇ ನಯನಯೋರ್ನಹಿ ಕಿಂಚಿದಸ್ತಿ ॥’

ಎಂಬ ಸತ್ಯವನ್ನು ಚೆನ್ನಾಗಿ ಅರಿತಿರುವ ಅವರು ಕ್ಷಣಿಕವಾದ ಈ ಪದಾರ್ಥಗಳಿಗಾಗಿ ಅಜರಾಮರವಾದ ಕೀರ್ತಿಯನ್ನು ಪರಿತ್ಯಜಿಸುವುದಿಲ್ಲ.

ಮಾನವನು ಯಾವ ಸುಖ-ಸಂಪತ್ತುಗಳಿಗಾಗಿ ದುಷ್ಕರ್ಮಗಳನ್ನು ಮಾಡಲೂ ಹೇಸುವುದಿಲ್ಲವೋ ಆ ಸುಖ-ಸಂಪತ್ತುಗಳೆಲ್ಲವೂ ಕೇವಲ ಕ್ಷಣಮಾತ್ರದಲ್ಲಿ ಮಿಂಚಿನಂತೆ ಅಂತರ್ಧಾನವಾಗುವಂತಹುವು. ಹಿರಣ್ಯಕಶಿಪು, ರಾವಣ, ಬಾಣಾಸುರನೇ ಮೊದಲಾದ ಚಕ್ರವರ್ತಿಗಳ ವಿಷಯವನ್ನರಿಯದವರಾರು? ಆ ಚಕ್ರವರ್ತಿಗಳ ಬಳಿ ವಿಪುಲವಾದ ಐಶ್ವರ್ಯ, ಅಪರಿಮಿತವಾದ ಧನ, ಅಪಾರವಾದ ಭೌತಿಕಶಕ್ತಿಗಳು, ಇಂದ್ರನಿಗೂ ದುರ್ಲಭವಾದ ಸುಖ ಮೊದಲಾದವಿದ್ದುವು. ಸಮಸ್ತ ಭೂಮಂಡಲವೇ ಅವರ ಚರಣಗಳಿಗಧೀನವಾಗಿತ್ತು. ಪ್ರಪಂಚದ ಸಮಸ್ತ ಚಕ್ರವರ್ತಿಗಳೂ ಅವರಿಗೆ ಹೆದರಿ ನಡುಗುತ್ತಿದ್ದರು. ದೇವತೆಗಳೂ ಸಹ ಅವರಿಗೆ ತಮ್ಮ ತಮ್ಮ ಸೇವೆ ಸಲ್ಲಿಸುತ್ತಾ ತಮ್ಮನ್ನು ಧನ್ಯರೆಂದು ಭಾವಿಸುತ್ತಿದ್ದರು. ಅವರೆಲ್ಲ ಇಂದೆಲ್ಲಿದ್ದಾರೆ? ಸಿಕಂದರ್‌ನೇ ಮೊದಲಾದ ಅಜೇಯರಾಗಿದ್ದ, ಮದೋನ್ಮತ್ತರಾಗಿದ್ದ, ಭಾರತದ ಅತ್ಯಮೂಲ್ಯವಾದ ರತ್ನಗಳನ್ನೂ, ಪುಷ್ಕಲವಾದ ಧನವನ್ನೂ ಲೂಟಿಹೊಡೆದು ತಮ್ಮ ದೇಶಗಳಿಗೆ ಕೊಂಡೊಯ್ದ ಕ್ರೂರಿಗಳೆಲ್ಲಿದ್ದಾರೆ? ಅವರು ಕೊಂಡೊಯ್ದ ಆ ಸಂಪತ್ತಾಗಲಿ, ಅವರಾಗಲಿ ಇಂದಿಲ್ಲ. ಕಾಲ ಸಮಸ್ತ ವಸ್ತುಗಳನ್ನೂ ಕಬಳಿಸುತ್ತದೆ. ಮಾನವನು ಯಾವ ಸತ್-ಅಸತ್ ಕರ್ಮಗಳನ್ನಾಚರಿಸುತ್ತಾನೋ ಅವುಗಳಿಂದ ಉತ್ಪನ್ನವಾದ ಯಶಸ್ಸು-ಅಪಯಶಸ್ಸುಗಳು ಮಾತ್ರವೇ ಉಳಿಯುತ್ತವೆ. ಮೊದಲು ಮಾನವ ಮೃತನಾಗುತ್ತಾನೆ. ಅನಂತರ ಆತ ಕೂಡಿಟ್ಟ ಹಣ ಪರಾಧೀನವಾಗುತ್ತದೆ. ಆತ ನಿರ್ಮಿಸಿದ ಅರಮನೆ, ಕೋಟೆ-ಕೊತ್ತಲಗಳು, ಸರೋವರ, ಸೇತುವೆಯೇ ಮೊದಲಾದವುಗಳು ಕಾಲಕ್ರಮದಲ್ಲಿ ನಾಶಹೊಂದುತ್ತವೆ. ಉಳಿಯುವುದು ಆತ ಗಳಿಸುವ ಕೀರ್ತಿಯೊಂದೆ. ಇದೆಲ್ಲವನ್ನೂ ಗಮನಿಸಿಯೇ ಜ್ಞಾನವಂತರೂ, ವಿವೇಕಶಾಲಿಗಳೂ, ಸತ್ಯದ್ರಷ್ಟಾರರೂ ಆದ ಜನರು ತಮ್ಮ ಸಂಪೂರ್ಣಶಕ್ತಿಯನ್ನು ಯಶಸ್ಸಿನ ಸಂಪಾದನೆಗಾಗಿಯೇ ಪ್ರಯೋಗಿಸುತ್ತಾರೆ; ಅವರು ಪ್ರತಿಕ್ಷಣವೂ ಕೇವಲ ಅಪಯಶಸ್ಸಿಗೆ ಭಯಪಡುತ್ತಾರಾಗಲಿ ಮತ್ತಾವುದಕ್ಕೂ ಹೆದರುವುದಿಲ್ಲ. ಸಮಸ್ತವಸ್ತುಗಳೂ ನಾಶವಾದರೂ ವ್ಯಥೆಪಡದ ಅವರು ಯಶಸ್ಸಿನ ನಾಶವನ್ನು ಮಾತ್ರ ಸಹಿಸಲಾರರು. ರಾಜ್ಯಕೋಶಗಳು ಹೋದರೂ ಸರಿಯೆ, ಪ್ರಾಣಕ್ಕಿಂತಲೂ ಪ್ರಿಯರಾದ ಪುತ್ರ ಕಲತ್ರಾದಿಗಳ ವಿಯೋಗವಾದರೂ ಸರಿಯೆ, ಪ್ರಾಣವೇ ಹೋಗುವುದಾದರೂ ಸರಿಯೇ, ಆದರೆ ಯಾವುದೇ ರೀತಿಯಿಂದ ಯಶಸ್ಸಿಗೆ ಮಲಿನತೆಯುಂಟಾಗುವುದನ್ನು ಮಾತ್ರ ಅವರೆಂದಿಗೂ ಇಚ್ಛಿಸಲಾರರು.

---

[2] ಎಲ್ಲಾ ಸಂಪತ್ತುಗಳೂ ಕೊನೆಗೆ ನಾಶವಾಗುವಂತಹುವೇ, ಉನ್ನತಿಯೆಲ್ಲವೂ ಅವನತಿಯಲ್ಲಿಯೇ ಕೊನೆಗೊಳ್ಳುತ್ತದೆ. ಎಲ್ಲ ಸಂಯೋಗಗಳೂ ವಿಯೋಗದಲ್ಲಿಯೇ ಪರ್ಯವಸಾನವಾಗುತ್ತವೆ ಜೀವಿತವೂ ಮರಣದಲ್ಲಿಯೇ ಕೊನೆಗೊಳ್ಳುತ್ತದೆ.

ಸ್ವಲ್ಪ ಆಳವಾಗಿ ಆಲೋಚನೆ ಮಾಡಿದಲ್ಲಿ ಯಶಸ್ಸಿನಿಂದ ಆಗುವ ಮಹದುಪಕಾರದ ಅರಿವುಂಟಾಗುತ್ತದೆ. ಯಶಸ್ಸು ನಮ್ಮನ್ನು ನಿಂದ್ಯವಾದ ಕಾರ್ಯದಿಂದ ದೂರಮಾಡುತ್ತದೆ; ದುರಿತಗಳನ್ನು ನಿವಾರಣೆಮಾಡುತ್ತದೆ; ಅನ್ಯಾಯದಿಂದ ನಮ್ಮನ್ನು ದೂರ ಕೊಂಡೊಯ್ಯುತ್ತದೆ; ವ್ಯಭಿಚಾರದಿಂದ ನಮ್ಮನ್ನು ವಿಮುಖರನ್ನಾಗಿಸುತ್ತದೆ; ಸಮಸ್ತವಿಧವಾದ ಅತ್ಯಾಚಾರದಿಂದ ಹಿಂಜರಿಯುವಂತೆ ನಮ್ಮನ್ನು ತಂದೆಯಂತೆ, ಗುರುವಿನಂತೆ, ಮಿತ್ರನಂತೆ ಉಪದೇಶಿಸುತ್ತದೆ.

ಎಲ್ಲಿಯವರೆಗೆ ಮಾನವ ಜಗತ್ತಿನಲ್ಲಿ ನೆಲೆಸಿ ತನ್ನ ಭವಿಷ್ಯದ ಬದುಕನ್ನು ಉನ್ನತವಾಗಿ ಮಾಡಿಕೊಳ್ಳಲು, ತನ್ನ ಹಾಗೂ ಸಮಸ್ತ ಜಗತ್ತಿನ ಹಿತಕ್ಕಾಗಿ ಶ್ರೇಯಸ್ಸನ್ನು ಸಂಪಾದಿಸಲು, ಜರಾಮರಣಾದಿ ಕ್ಲೇಶಗಳಿಂದ ತನ್ನನ್ನು ಕಾಪಾಡಿಕೊಳ್ಳಲು ಭೌತಿಕ ಸುಖಗಳನ್ನು ಅನುಭವಿಸುತ್ತಾನೋ ಅಲ್ಲಿಯವರೆಗೆ ಅದು ಶ್ರೇಯಸ್ಕರವೇ. ಭೌತಿಕಬಲದ ಪ್ರಯೋಜನ ಭಾವೀಜನಾಂಗದ ಹಿತಾಚರಣೆಗಷ್ಟೇ ಹೊರತು ಅದರ ವಿನಾಶಕ್ಕಾಗಲಿ, ಪತನಕ್ಕಾಗಲಿ ಅಲ್ಲ. ಜ್ಞಾನಿಗಳಾದವರು ಭೌತಿಕಸಂಪತ್ತನ್ನೆಂದೂ ನಿಂದಿಸುವುದಿಲ್ಲ. ಆದರೆ ಯಾರು ಅವುಗಳ ಉಪಯೋಗವನ್ನು ತನ್ನ ಭವಿಷ್ಯಜೀವನವನ್ನು ಹಾಳುಮಾಡಿಕೊಳ್ಳಲು, ಮಾನವಜೀವನದ ಚರಮ ಲಕ್ಷ್ಯವಾದ ಮೋಕ್ಷವನ್ನು ಕೆಡಿಸಲು, ಪರಮಾತ್ಮನಿಂದ ದತ್ತವಾದ ಬುದ್ಧಿ–ಮನಸ್ಸು-ಅಹಂಕಾರ, ಇಂದ್ರಿಯ ಸತ್ವಾದಿ ಗುಣಗಳೇ ಮೊದಲಾದುವನ್ನು ನಾಶಮಾಡಲು ಪ್ರಯತ್ನಿಸುತ್ತಾರೋ ಅಂತಹ ಮಾನವನನ್ನು ನಿಂದಿಸುತ್ತಾರೆ. ಶಾಸ್ತ್ರಗಳೂ ಸಹ ಸಾಂಸಾರಿಕವಾದ ಭೋಗಗಳಿಂದ ಮಾನವನನ್ನು ತಡೆಯುವುದಿಲ್ಲ. ಆದರೆ ಅವು ವಿಷಯಭೋಗಗಳ ದುರುಪಯೋಗಗಳನ್ನು ಮಾತ್ರ ನಿಂದಿಸುತ್ತವೆ. ವ್ಯಕ್ತಿತ್ವದ ಕಲ್ಯಾಣ, ಭವಿಷ್ಯತ್ ಜೀವನ, ಮೋಕ್ಷಮಾರ್ಗ ಇವು ಕಲುಷಿತವಾಗದಿರಲಿ ಎಂಬುದೇ ಶಾಸ್ತ್ರಗಳ ಹಾಗೂ ಸತ್ಪುರುಷರ ಉಪದೇಶದ ಏಕೈಕ ಉದ್ದೇಶವಾಗಿದೆ. ಈ ಕಾರ್ಯ ಮಾನವನು "ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್, ತೇನ ತ್ಯಕ್ತೇನ ಭುಂಜೀಥಾಃ ಮಾ ಗೃಧಃ ಕಸ್ಯಸ್ವಿದ್ಧನಂ" ಎಂಬ ಉಪನಿಷದ್ವಾಣಿಯಲ್ಲಿ ಪೂರ್ಣದೃಷ್ಟಿಯನ್ನಿಟ್ಟು, ಪಾಪಗಳಿಗೆ ಹೆದರಿ, ದುರಾಚಾರಗಳಿಂದ ಹಿಂಜರಿದು, ಅನ್ಯಾಯಗಳಿಗೆ ಶಂಕಿಸಿ, ದುರ್ವ್ಯಸನಗಳಿಂದ ದೂರಾದಾಗ ಮಾತ್ರ ಸಾಧ್ಯ. "ದುಷ್ಕರ್ಮಗಳಲ್ಲಿ ತೊಡಗಿದಾಗ ಜಗತ್ತು ನನ್ನನ್ನು ಹಾಸ್ಯಮಾಡುತ್ತದೆ, ನಿಂದಿಸುತ್ತದೆ, ಅಪವಾದಕ್ಕೆ ಗುರಿಮಾಡುತ್ತದೆ. ಆ ಹಾಸ್ಯ, ಅಪವಾದ, ನಿಂದೆ ನನ್ನ ಕೀರ್ತಿಯನ್ನು ನಾಶಮಾಡುತ್ತದೆ. ನನ್ನ ಹೆಸರಿಗೆ ಕಳಂಕ ಅಂಟುತ್ತದೆ. ಕಳಂಕಿತವಾದ ಈ ನಾಮಧೇಯವನ್ನು ಹೊತ್ತು ನನ್ನ ಗುರು-ಹಿರಿಯರ ಮುಂದೆ ಹೇಗೆ ತಲೆಯೆತ್ತಿ ನಿಲ್ಲಲಿ? ಯಾವ ಧೈರ್ಯದಿಂದ ಮಾತನಾಡಲಿ?" ಎಂಬಿವೇ ಮೊದಲಾದ ಆತ್ಮವಿಮರ್ಶಾತ್ಮಕವಾದ ವಿಚಾರಗಳು ಯಾರ ಮನಸ್ಸನ್ನು ಪುನಃ ಪುನಃ ಪೀಡಿಸುತ್ತವೆಯೋ ಅಂತಹ ವ್ಯಕ್ತಿಗಳು ಮಾತ್ರ ತಮ್ಮ ವ್ಯಕ್ತಿತ್ವವನು ಕಳಂಕದಿಂದ ಕಾಪಾಡಿಕೊಳ್ಳಲು ಸಮರ್ಥರಾಗುತ್ತಾರೆ, ಹಾಗೂ ತಮ್ಮ ಕೀರ್ತಿಗೆ ಅಪವಾದ ಬಾರದಂತೆ ರಕ್ಷಿಸಿಕೊಳ್ಳಲು ಸಮರ್ಥರಾಗುತ್ತಾರೆ. ನಮ್ಮ ಪೂರ್ವಿಕರು ಯಶಸ್ಸಿನಲ್ಲಿ ಪ್ರೀತಿಯುಳ್ಳವರಾಗಿದ್ದರು. ತಮ್ಮ ಚಾರಿತ್ರ್ಯ ಕಳಂಕಿತವಾಗುವುದನ್ನು, ತಮ್ಮ ಕೀರ್ತಿ ದೂಷಿತವಾಗುವುದನ್ನು ಅವರೆಂದೂ ಸಹಿಸುತ್ತಿರಲಿಲ್ಲ. ತಮ್ಮ ಗೌರವವನ್ನು ಕಾಪಾಡಿಕೊಳ್ಳಲು, ವಂಶದ ಮಹಿಮೆಯನ್ನುಳಿಸಲು, ತಮ್ಮ ಹೆಸರನ್ನು ಶುದ್ಧವಾಗಿಟ್ಟುಕೊಳ್ಳಲು, ವ್ಯಕ್ತಿತ್ವ ಚಾರಿತ್ರ್ಯಗಳನ್ನು ಜಗತ್ತಿನಲ್ಲಿ ಶಾಶ್ವತವಾಗಿ ಉಳಿಯುವಂತೆ ಮಾಡಲು ಅವರು ಸದಾ ಪ್ರಯತ್ನಿಸುತ್ತಿದ್ದರು. "ಸಂಭಾವಿತಸ್ಯ ಚಾಕೀರ್ತಿಃ ಮರಣಾದತಿರಿಚ್ಯತೆ" ಎಂಬ ಗೀತಾವಾಣಿಯನ್ನು ಅವರೆಂದೂ ಮರೆತಿರಲಿಲ್ಲ. ಈ ದೃಢವಾದ ಕೀರ್ತಿ ರಕ್ಷಣಾ ಭಾವನೆ ಅವರನ್ನು ದುಷ್ಕರ್ಮಗಳಿಂದ ತಡೆಹಿಡಿದಿತ್ತು.

ಇಂದು ಈ ಬಗೆಯ ಭಾವನೆ ಪ್ರಾಯಶಃ ಜನತೆಯ ಮನಸ್ಸಿನಲ್ಲಿ ಕಾಣಬರುವುದೇ ಅಪರೂಪವೆಂಬಂತಾಗಿದೆ. ಒಂದು ವೇಳೆ ಇದ್ದರೂ ಅತ್ಯಲ್ಪವಾಗಿದೆ. ಕೀರ್ತಿ, ತಮ್ಮ ವಂಶದ ಹಿರಿಮೆ, ಸ್ವಜಾತಿಯ ಮಹಿಮೆ, ತಮ್ಮ ವ್ಯಕ್ತಿತ್ವದ ಮಹತ್ವದ ವಿಚಾರವಾಗಿ ಸ್ವಲ್ಪವಾದರೂ ಧ್ಯಾಸ ಯಾರಿಗೂ ಇದ್ದಂತೆ ತೋರುವುದಿಲ್ಲ. ಇಂದು

ಯಾರೇ ಆಗಲಿ ತಮ್ಮ ತಂದೆ-ತಾಯಿಗಳ ಪ್ರತಿಷ್ಠೆಯನ್ನಾಗಲಿ, ಗುರುವಿನ ಅಥವಾ ವಿದ್ಯಾಲಯದ ಮಹತ್ತ್ವವನ್ನಾಗಲಿ ದೊಡ್ಡದೆಂದು ಭಾವಿಸುತ್ತಿಲ್ಲ. ಅಪವಾದಕ್ಕಾಗಲಿ,ಅಪದಿ ಹಾಸ್ಯಕ್ಕಾಗಲಿ ಹೆದರುತ್ತಿಲ್ಲ. ಇಂದಿನಜನಗಳ ಅವನತಿ ಯಾವ ಮಟ್ಟವನ್ನು ಮುಟ್ಟಿದೆಯೆಂದರೆ ಇಂದು ಮಾನವರು ಅಹರ್ನಿಶಿ ದುಷ್ಕರ್ಮಗಳನ್ನಾಚರಿಸುತ್ತಿದ್ದರೂ ಯಾವ ಅಂಜಿಕೆಯೂ ಇಲ್ಲದೆ ನಿರ್ಭಯವಾಗಿ ತಮ್ಮ ತಲೆಯನ್ನೆತ್ತಿ ತಿರುಗುತ್ತಿದ್ದಾರೆ.ದೋಷಗಳನ್ನೇ ಗುಣಗಳೆಂದೂ ಗುಣಗಳನ್ನೇ ದೋಷಗಳೆಂದೂ ಭಾವಿಸಿದಂತಿದೆ. ಲಜ್ಜಾಹೀನರಾದ ಅವರ ರೀತಿ–ನೀತಿ, ಧರ್ಮವನ್ನು ನಿಂದಿಸುವ, ಸತ್ಯವನ್ನು ಅಪಹಾಸ್ಯಮಾಡುವ, ಸಚ್ಚಾರಿತ್ರ್ಯವನ್ನು ತಿರಸ್ಕಾರಮಾಡುವ, ಕೃತಜ್ಞತೆಯನ್ನು ಅವಹೇಳನೆ ಮಾಡುವ ಪ್ರವೃತ್ತಿ ತಲೆದೋರುತ್ತಿದೆ. ತ್ಯಾಗ-ಔದಾರ್ಯ-ಸೇವಾದಿ ಸದ್ಗುಣಗಳನ್ನು ಇಂದು ಕೀಳಾಗಿ ಕಾಣಲಾಗುತ್ತಿದೆ. ಶಾಸ್ತ್ರಗಳ ಶಾಶ್ವತ ಸತ್ಯವನ್ನೊಳಗೊಂಡ ಸೂಕ್ತಿಗಳನ್ನು ಹುಚ್ಚನೊಬ್ಬನ ಅಸಂಬದ್ಧ ಪ್ರಲಾಪವೆಂಬಂತೆ ಭಾವಿಸಿ ಅವುಗಳತ್ತ ಗಮನವನ್ನೇ ಕೊಡದಿರುವ ಪ್ರವೃತ್ತಿ ಬೆಳೆಯುತ್ತಿದೆ. ಇಂತಹ ಕೀಳು ಆಚಾರ-ವಿಚಾರಗಳನ್ನುಳ್ಳ ಜನ ಅಸಂಖ್ಯಾತ ಸಂಖ್ಯೆಯಲ್ಲಿ ಹುಟ್ಟಬಹುದು, ಸಾಯಬಹುದು. ಆದರೆ ಇಂತಹವರ ಹುಟ್ಟಿನಿಂದಾಗಲಿ, ಸಾವಿನಿಂದಾಗಲಿ ಯಾರಿಗೂ ಲಾಭವಾಗಲಿ, ನಷ್ಟವಾಗಲಿ, ಇಲ್ಲವೆಂಬುದು ಸತ್ಯಸಂಗತಿ. ಪಶುಗಳಂತೆ ಕೇವಲ ಆಹಾರನಿದ್ರಾದಿಗಳಿಗಾಗಿಯೇ ಹುಟ್ಟುವ, ಜೀವಿಸುವ, ಸಾಯುವ ಇಂತಹ ವ್ಯಕ್ತಿಗಳಿಂದ ಯಾವ ಉಪಕಾರವೂ ಆಗಲಾರದು. ಇಂತಹವರಿಂದ ಈ ಮಾನವಶರೀರ ಕೇವಲ ನಿರರ್ಥಕವಾಗುತ್ತದೆ. 'ಮಾನವಜನ್ಮ ದೊಡ್ಡದು' ಎಂದು ಹಾಡಿದ ದಾಸರ ವಾಣಿ ಅಸತ್ಯವೆಂಬಂತಾಗಿದೆ. ಭೂಮಿಗೆ ಭಾರವೆಂಬಂತಹ ಇಂತಹ ಜನರ ಜೀವನವನ್ನು ಕಂಡು ಶೋಕಿಸುವ ಕವಿಗಳು, ವಿದ್ವಾಂಸರು, ಯಾರಿಂದ ಮಾನವತೆ ಕೃತಾರ್ಥತೆಯನ್ನು ಪಡೆಯುತ್ತದೆಯೋ ಅಂತಹವರನ್ನೇ ಧನ್ಯರೆಂದು ಭಾವಿಸುತ್ತಾರೆ. ಮಾನವನಾಗಿ ಜನಿಸಿದಮೇಲೆ ಅಲ್ಪಸ್ವಲ್ಪವಾದರೂ ಪ್ರಯೋಜನವಾದರೆ ಅಂತಹ ಬಾಳು ಸಾರ್ಥಕ, ಹಾಗಿಲ್ಲದಿದ್ದಲ್ಲಿ ಹುಟ್ಟಿ ಸಾರ್ಥಕವೇನು ?

ಯಸ್ಮಿನ್ ಜೀವತಿ ಜೀವಂತಿ ಬಹವಃ ಸೋऽತ್ರ ಜೀವತು
ವಯಾಂಸಿ ಕಿಂ ನ ಕುರ್ವಂತಿ ಚಂಚ್ವಾ ಸ್ವೋದರಪೂರಣಮ್ ‖ [3]

ಯಜ್ಜೀವ್ಯತೇ ಕ್ಷಣಮಪಿ ಪ್ರಥಿತಂ ಮನುಷ್ಯೈ–
ರ್ವಿಜ್ಞಾನ ಶೌರ್ಯವಿಭವಾರ್ಯಗುಣೈಃ ಸಮೇತಮ್ ।
ತನ್ನಾಮ ಜೀವಿತಮಿಹ ಪ್ರವದಂತಿ ತಜ್ಜ್ಞಾಃ
ಕಾಕೋऽಪಿ ಜೀವತಿ ಚಿರಾಯ ಬಲಿಂ ಚ ಭುಂಕ್ತೇ ‖ [4]

'ಯೋ ನಾತ್ಮನಾ ನ ಚ ಪರೇಣ ಚ ಬಂಧುವರ್ಗೇ
ದೀನೇ ದಯಾಂ ನ ಕುರುತೇ ನ ಚ ಮರ್ತ್ಯವರ್ಗೇ ।
ಕಿಂ ತಸ್ಯ ಜೀವಿತಫಲಂ ಹಿ ಮನುಷ್ಯಲೋಕೇ
ಕಾಕೋऽಪಿ ಜೀವತಿ ಚಿರಾಯ ಬಲಿಂ ಚ ಭುಂಕ್ತೇ ‖' [5]

---

[3] ಯಾರು ಜೀವಿಸಿದಲ್ಲಿ ಅನೇಕರು ಜೀವಿಸುತ್ತಾರೋ ಅಂತಹವನು ಜೀವಿಸುವುದು ಸಾರ್ಥಕ. ಪಕ್ಷಿಗಳು ತಮ್ಮ ಕೊಕ್ಕಿನಿಂದ ಉದರಪೂರಣ ಮಾಡುವುದಿಲ್ಲವೇ ? (ಹಾಗೆಯೇ ಬರಿಯ ಉದರಂಭರಣಕ್ಕಾಗಿಯೇ ಜೀವಿಸುವವನ ಬಾಳು ನಿರರ್ಥಕ.)

[4] ವಿಜ್ಞಾನ, ಶೌರ್ಯ, ಸಂಪತ್ತೇ ಮೊದಲಾದ ಶ್ರೇಷ್ಠಗುಣಯುತನಾಗಿ ಯಾರು ಮನುಷ್ಯರ ಪ್ರಶಂಸೆಗೆ ಪಾತ್ರನಾಗಿ ಕ್ಷಣಕಾಲವಾದರೂ ಜೀವಿಸುವನೋ ಅದೇ ನಿಜವಾದ ಜೀವನವೆಂಬುದು ತಜ್ಞರ ಮತ. ಕಾಗೆಯೂ ಚಿರಕಾಲ ಜೀವಿಸುತ್ತದೆ, ಆಹಾರ ತಿನ್ನುತ್ತದೆ. ಅದರಿಂದ ಪ್ರಯೋಜನವೇನು ?

[5] ಯಾರು ತಾನಾಗಿಯಾಗಲಿ, ಪರರಿಂದಲಾಗಲಿ ಬಂಧುವರ್ಗದಲ್ಲಿ, ದೀನರಾದ ಮನುಷ್ಯರುಗಳಲ್ಲಿ ದಯೆಯನ್ನು ತೋರುವುದಿಲ್ಲವೋ, ಅಂತಹವನ ಜೀವಿತಫಲವಾದರೂ ಏನು ? ಕಾಗೆಯೂ ಚಿರಕಾಲ ಜೀವಿಸುವಂತೆ, ಆಹಾರವನ್ನು ತಿನ್ನುವಂತೆ ಅವನ ಬಾಳೂ ನಿರರ್ಥಕ.

ಯಾವ ವ್ಯಕ್ತಿಯಿಂದ ವಂಶದ ಕೀರ್ತಿ ವೃದ್ಧಿ ಹೊಂದುವುದಿಲ್ಲವೋ ಅಂತಹವನ ಜನ್ಮ ನಿರರ್ಥಕವೆಂದು ನೀತಿಜ್ಞರಾದವರು ನುಡಿಯುತ್ತಾರೆ. ಅವರು ಅಂತಹ ಮನುಷ್ಯನನ್ನು ಕೇವಲ ತಾಯಿಯ ಯೌವನನಾಶಕನೆಂದು ನಿಂದಿಸುತ್ತಾರೆ.

> 'ಕಿಂ ತೇನ ಜಾತು ಜಾತೇನ ಮಾತುರ್ಯೌವನಹಾರಿಣಾ ।
> ಆರೋಹತಿ ನ ಯಃ ಸ್ವಸ್ಯ ವಂಶಸ್ಯಾಗ್ರೇ ಧ್ವಜೋ ಯಥಾ ॥

ಮಹಾತ್ಮರ ದೃಷ್ಟಿಯಲ್ಲಿ ವಂಶವೃದ್ಧಿಕಾರಕನಾದವನೇ ಹುಟ್ಟಿದ್ದಕ್ಕೆ ಸಾರ್ಥಕ.

> 'ಪರಿವರ್ತಿನಿ ಸಂಸಾರೇ ಮೃತಃ ಕೋ ವಾ ನ ಜಾಯತೇ ।
> ಸ ಜಾತೋ ಯೇನ ಜಾತೇನ ವಂಶೋ ಯಾತಿ ಸಮುನ್ನತಿಮ್ ॥'

ಸಜ್ಜನಿಕೆಯಿಂದ ಮಾನವ ದೊಡ್ಡವನಾಗುತ್ತಾನೆ, ಕೀರ್ತಿಶಾಲಿಯಾಗುತ್ತಾನೆ. ಸೌಜನ್ಯಕ್ಕಿರುವ ಆಕರ್ಷಣೆ ರೂಪಕ್ಕಾಗಲಿ, ಬಟ್ಟೆಗಾಗಲಿ, ಆಭರಣಗಳಿಗಾಗಲಿ, ವಿದ್ವತ್ತಿಗಾಗಲಿ ಇಲ್ಲ. ಮಾನವನಿಗೆ ಸೌಜನ್ಯವೇ ಶ್ರೇಷ್ಠ ಭೂಷಣ. ಯಾರು ಪರೋಪಕಾರಿಯೂ, ಸದಾಚಾರಪರನೂ, ಉದಾರಮನಸ್ಸುಳ್ಳವನೂ, ದೀನ ದರಿದ್ರರಲ್ಲಿ ವಾತ್ಸಲ್ಯವುಳ್ಳವನೂ, ಆಪದ್ಗ್ರಸ್ತರನ್ನು ಕಾಪಾಡುವವನೂ ಆಗಿರುತ್ತಾನೋ ಅಂತಹವನೇ ಸಜ್ಜನನೆನಿಸಿಕೊಳ್ಳುತ್ತಾನೆ. ಮಾನವನೆಲ್ಲೇ ಇರಲಿ, ಎಂತೇ ಇರಲಿ ಜೀವನಸಾಫಲ್ಯದಾಯಕವಾದ ಸೌಜನ್ಯವನ್ನು ಮಾತ್ರ ಬಿಡಬಾರದು. ಸಜ್ಜನನೆಂದಿಗೂ ತನ್ನ ಜೀವನದಲ್ಲಿ ಅಸಫಲನಾಗಲಾರ. ಸೌಜನ್ಯ ಸಕಲಶಕ್ತಿಯನ್ನು ಮೀರಿದ ವಿಚಿತ್ರ ಶಕ್ತಿಯನ್ನು ಹೊಂದಿದೆ. ಆದ್ದರಿಂದ ಎಂದೂ, ಯಾವ ದೆಸೆಯಲ್ಲಿಯೂ ಸೌಜನ್ಯ ಹೇಯವಲ್ಲ. ಈ ಸೌಜನ್ಯಕ್ಕೆ ಮಹಾರಾಣಿ ಕುಂತಿ ಜ್ವಲಂತ ಉದಾಹರಣೆ. ಆಕೆ ವಿಪತ್ತಿನಲ್ಲಿಯೂ ಸೌಜನ್ಯವನ್ನು ಬಿಡಲಿಲ್ಲ. ಆಕೆ ಸೌಜನ್ಯದಿಂದಲೇ ಎಲ್ಲ ದಾಟಲಸಾಧ್ಯವಾದ ವಿಪತ್ತುಗಳನ್ನೂ ದಾಟಲು ಸಮರ್ಥಳಾದಳು. ಕೌರವರ ಕೃತ್ರಿಮಕ್ಕೊಳಗಾಗಿ ದಿಕ್ಕುದೆಸೆಯಿಲ್ಲದೆ ಅಲೆಯುತ್ತಿದ್ದ ಪಾಂಡವರು ಏಕಚಕ್ರಪುರದಲ್ಲಿದ್ದಾಗ ಆಕೆ ತೋರಿದ ಔದಾರ್ಯ ಸ್ತ್ರೀತ್ವಕ್ಕೆ ಹೆಮ್ಮೆಯನ್ನುಂಟುಮಾಡುವಂತಹುದು. ಬಕನೆಂಬ ರಾಕ್ಷಸನಿಗೆ ಬಲಿಯಾಗಬೇಕಿದ್ದ ಬ್ರಾಹ್ಮಣ ಕುಟುಂಬವನ್ನು ಕಾಪಾಡುವುದಕ್ಕಾಗಿ ತನ್ನ ಮಗ ಭೀಮನನ್ನೇ ರಾಕ್ಷಸನ ಬಳಿ ಕಳುಹಿಸುತ್ತಾಳೆ ಆಕೆ. ಆಗ ಹಿರಿಯನಾದ ಯುಧಿಷ್ಠಿರ ಹಾಗೆ ಮಾಡಿದುದು ಅನುಚಿತವೆನ್ನುತ್ತಾನೆ. ಆಗ ಕುಂತಿ ಭೀಮನ ಪರಾಕ್ರಮದ ಅರಿವು ತನಗಿದೆಯೆಂದೂ, ಆತ ಖಂಡಿತ ರಾಕ್ಷಸನನ್ನು ಸಂಹರಿಸುತ್ತಾನೆಂದೂ, ಒಂದು ವೇಳೆ ಹಾಗಾಗದಿದ್ದರೂ ಚಿಂತೆಯಿಲ್ಲವೆನ್ನುತ್ತಾ "ನೀವು ನಾಲ್ವರು ಮಕ್ಕಳು ನನಗಿದ್ದೀರಿ. ಕಷ್ಟದಲ್ಲಿರುವ ಮಾನವನನ್ನು ಕಾಪಾಡುವುದು ಧರ್ಮ. ಯಾರು ದುಃಖದಲ್ಲಿರುವವರಿಗೆ ಸಹಾಯವನ್ನೆಸಗುತ್ತಾರೋ ಅಂತಹವರನ್ನು ಪರಮೇಶ್ವರನೆಂದಿಗೂ ಕೈಬಿಡುವುದಿಲ್ಲ. ನಿಶ್ಚಯವಾಗಿಯೂ ಭಗವಂತ ಭೀಮಸೇನನಿಗೆ ಸಹಾಯಮಾಡುತ್ತಾನೆ" ಎನ್ನುತ್ತಾಳೆ. ಅಂತೆಯೇ ಭೀಮ ರಾಕ್ಷಸನನ್ನು ಕೊಂದು ಜಯಶಾಲಿಯಾಗಿ ಹಿಂತಿರುಗುತ್ತಾನೆ. ಈ ವೃತ್ತಾಂತವನ್ನು ತಿಳಿದ ಊರಜನರು ಭೀಮನ ಪರಾಕ್ರಮವನ್ನೂ, ಕುಂತಿಯ ಸೌಜನ್ಯವನ್ನೂ ಪ್ರಶಂಸಿಸುತ್ತಾರೆ. ಇಂದು ಮಹಾತಾಯಿ ಕುಂತಿಯ ನಶ್ವರ ಭೌತಿಕ ಶರೀರವಿಲ್ಲದಿದ್ದರೂ ಆ ನಶ್ವರಶರೀರದಿಂದ ಆಕೆ ಗಳಿಸಿದ ಕೀರ್ತಿ ಸಹಸ್ರಾರು ವರ್ಷಗಳನಂತರವೂ ಚಿರಂತನವಾಗಿ ಉಳಿದಿದೆ. ಆ ಕೀರ್ತಿಯಿಂದ ಕುಂತಿ ಇಂದೂ ಜೀವಿಸಿದ್ದಾಳೆ.

ನಮ್ಮ ದೇಶದಲ್ಲಿ ಇಂತಹ ಮಹಾಪುರುಷರೆಷ್ಟೋ ಜನ ಅವತರಿಸಿದರು. ಯಾವುದೇ ಮಹತ್ತರವಾದ ಲೋಭವೂ ಅವರನ್ನು ಕರ್ತವ್ಯಪಥದಿಂದ ಭ್ರಷ್ಟರಾಗಿಸಲು ಸಮರ್ಥವಾಗಲಿಲ್ಲ. ಗುರುವಾದ ವಸಿಷ್ಠರ ಮಾತಿನಂತೆ

ಗೋರಕ್ಷಣೆಯಲ್ಲಿ ತೊಡಗಿದ್ದ ದಿಲೀಪ ಅದರ ಮೇಲೆ ಆಕ್ರಮಣ ಮಾಡಿದ ಸಿಂಹವನ್ನುದ್ದೇಶಿಸಿ

> 'ಸತ್ವಂ ಮದೀಯೇನ ಶರೀರವೃತ್ತಿಂ ದೇಹೇನ ನಿರ್ವರ್ತಯಿತುಂ ಪ್ರಸೀದ ।
> ದಿನಾವಸಾನೋತ್ಸುಕ ಬಾಲವತ್ಸಾ ವಿಸೃಜ್ಯತಾಂ ಧೇನುರಿಯಂ ಮಹರ್ಷೇಃ ॥'

ಎಂದು ಪ್ರಾರ್ಥಿಸಿದಾಗ ಸಿಂಹ ಅನೇಕವಿಧವಾದ ಮಾತುಗಳಿಂದ ದಿಲೀಪನನ್ನು ಗೋರಕ್ಷಣಾರೂಪಿ ಕರ್ತವ್ಯದಿಂದ ಭ್ರಷ್ಟನನ್ನಾಗಿ ಮಾಡಲು ಯತ್ನಿಸುತ್ತದೆ. ಆದರೆ ಯಶೋಧನನಾದ ರಾಜ

> 'ಕ್ಷತಾತ್ ಕಿಲ ತ್ರಾಯತ ಇತ್ಯುದಗ್ರಃ ಕ್ಷತ್ರಸ್ಯ ಶಬ್ದೋ ಭುವನೇಷು ರೂಢಃ ।
> ರಾಜ್ಯೇನ ಕಿಂ ತದ್ವಿಪರೀತವೃತ್ತೇಃ ಪ್ರಾಣೈರುಪಕ್ರೋಶ ಮಲೀಮಸೈರ್ವಾ ॥ 7
>
> ಕಿಮಪ್ಯಹಿಂಸ್ಯಸ್ತವಚೇನ್ಮತೋಽಹಂ ಯಶಃಶರೀರೇ ಭವ ಮೇದಯಾಳುಃ ।
> ಏಕಾಂತ ವಿಧ್ವಂಸಿಷು ಮದ್ವಿಧಾನಾಂ ಪಿಂಡೇಷ್ವನಾಸ್ಥಾ ಖಲು ಭೌತಿಕೇಷು ॥' 8

ಎಂದು ತಿಳಿಸಿ ತನ್ನ ದೇಹವನ್ನು ಸಿಂಹಕ್ಕರ್ಪಿಸಲು ಸಂಸಿದ್ಧನಾಗುತ್ತಾನೆ. ತ್ಯಾಗದ ಹಾಗೂ ಕರ್ತವ್ಯದ ಪರಾಕಾಷ್ಠೆ ಇದು.

ಬೇಡಿದವರ ಮನೋರಥವನ್ನು ಪೂರೈಸಲು ಈ ದೇಶದ ತ್ಯಾಗಬುದ್ಧಿಯುಳ್ಳ ಮಾನವರು ಸಮಸ್ತವಿಧವಾದ ನ್ಯಾಯವಾದ ಪ್ರಯತ್ನಗಳನ್ನು ಮಾಡಿದ್ದಾರೆ. ಸಮಸ್ತ ಕಷ್ಟಗಳನ್ನು ಸಹಿಸಿಯೂ ಅವರು ಅರ್ಥಿಗಳ ಅಭಿಲಾಷೆಯನ್ನು ಈಡೇರಿಸಿದ್ದಾರೆ. ವಿಶ್ವಜಿದ್ಯಾಗದಲ್ಲಿ ತನ್ನ ಸರ್ವಸ್ವವನ್ನೂ ತ್ಯಾಗಮಾಡಿದ್ದ ರಘು ವರತಂತು ಮಹರ್ಷಿಯ ಶಿಷ್ಯನಾದ ಕೌತ್ಸನು ಇಷ್ಟಾರ್ಥ ಕೈಗೂಡದೆ ಹಿಂತಿರುಗುವುದನ್ನು ಸಹಿಸಲಿಲ್ಲ. ನಿರ್ಗತಿಕನಾಗಿದ್ದ ಪರಿಸ್ಥಿತಿಯಲ್ಲೂ ಆತನ ಮನಸ್ಸಿನಲ್ಲಿ ಮೂಡಿದ ವಿಚಾರವಿದು-

> 'ಗುರ್ವರ್ಥಮರ್ಥೀಃ ಶ್ರುತಪಾರದೃಶ್ವಾ ರಘೋಃ ಸಕಾಶಾದನವಾಪ್ತಕಾಮಃ ।
> ಗತೋ ವದಾನ್ಯಾಂತರಮಿತ್ಯಯಂ ಮೇ ಮಾಭೂತ್ಪರೀವಾದ ನವಾವತಾರಃ ॥' 9

ಆತ ಕುಬೇರನ ಮೇಲೆ ದಂಡೆತ್ತಿಹೋಗುವ ನಿರ್ಧಾರಮಾಡಿ, ಕೊನೆಗೆ ಕುಬೇರ ಸ್ವರ್ಣವೃಷ್ಟಿಗೈಯುವಂತೆಮಾಡಿ ಕೌತ್ಸನನ್ನು 'ಸಫಲಮನೋರಥ'ನನ್ನಾಗಿ ಮಾಡಿದ! ತನ್ನ ಯಶಸ್ಸನ್ನು ಕಾಪಾಡಿಕೊಂಡ.

ಮರ್ಯಾದಾ ಪುರುಷೋತ್ತಮನಾದ ರಾಮ ಯಶಸ್ಸಿನ ರಕ್ಷಣೆಗಾಗಿ, ಪ್ರಜೆಗಳ ಆನಂದಕ್ಕಾಗಿ, ಪ್ರಜಾರಂಜನತತ್ಪರನೆಂಬುದನ್ನು ಸಾರ್ಥಕಪಡಿಸಿಕೊಳ್ಳುವುದಕ್ಕಾಗಿ ತನ್ನ ಪತ್ನಿಯನ್ನೇ ತ್ಯಜಿಸುವುದಕ್ಕೂ ಸಿದ್ಧನಾದ.

> 'ಸ್ನೇಹಂ ದಯಾಂ ಚ ಸೌಖ್ಯಂ ಚ ಯದಿ ವಾ ಜಾನಕೀಮಪಿ ।
> ಆರಾಧನಾಯಲೋಕಾನಾಂ ಮುಂಚತೋ ನಾಸ್ತಿ ಮೇವ್ಯಥಾ ॥' 10

---

6 ಸಮಿಪಕ್ಕೆ ಬಂದ ಪ್ರಾಣಿಯೇ ಆಹಾರವಾಗುಳ್ಳವನಾದರೂ ನೀನು ಈಗ ನನ್ನ ಶರೀರವನ್ನು ಸ್ವೀಕರಿಸಿ ಹಸಿವೆ ನಿವಾರಿಸಿಕೊಳ್ಳುವುದರ ಮೂಲಕ ನನ್ನನ್ನು ಅನುಗ್ರಹಿಸು. ಮಹರ್ಷಿಯ ಈ ಹಸುವಿನ ಕರು ಸಾಯಂಕಾಲ ತನ್ನ ತಾಯಿ ಬರುತ್ತದೆ ಎಂಬ ಉತ್ಸಾಹದಿಂದ ಇದರ ಆಗಮನವನ್ನೇ ನಿರೀಕ್ಷಿಸುತ್ತಿರುತ್ತದೆ. ಆದ್ದರಿಂದ ಈ ಹಸುವನ್ನು ಬಿಟ್ಟುಬಿಡು.

7 ಉನ್ನತವಾದ ಕ್ಷತ್ರವೆಂಬ ಶಬ್ದವು ಹಿಂಸೆಯಿಂದ ಕಾಪಾಡುತ್ತಾನೆ ಎಂಬ ಅರ್ಥದಲ್ಲಿ ಲೋಕಗಳಲ್ಲಿ ಪ್ರಸಿದ್ಧವಾಗಿದೆ. ಅದಕ್ಕೆ ವಿರುದ್ಧವಾದ ಚಟುವಟಿಕೆಯುಳ್ಳವನಿಗೆ ರಾಜ್ಯದಿಂದ ಏನು ಫಲ ? ನಿಂದೆಯಿಂದ ಮಲಿನವಾದ ಪ್ರಾಣಗಳಿಂದಲಾದರೂ ಏನು ಪ್ರಯೋಜನ ?

8 ಏನಾದರೂ ನಾನು ನಿನಗೆ ಹಿಂಸೆಗೆ ಅರ್ಹನಾಗಿಲ್ಲವೆಂಬ ಅಭಿಪ್ರಾಯವಿರುವುದಾದರೆ ನನ್ನ ಕೀರ್ತಿಶರೀರದಲ್ಲಿ ಕರುಣಾಳುವಾಗು. ಅವಶ್ಯ ವಿನಾಶಹೊಂದುವ ಭೌತಿಕವಾದ ಶರೀರಗಳಲ್ಲಿ ನಮ್ಮಂತಹ ವಿವೇಕಿಗಳಿಗೆ ಉಪೇಕ್ಷೆಯಷ್ಟೆ.

9 ಶಾಸ್ತ್ರಪಾರಂಗತನಾದ, ಗುರುದಕ್ಷಿಣೆಗಾಗಿ ಯಾಚಿಸುತ್ತಿರುವ ವ್ಯಕ್ತಿ ರಘುವಿನಿಂದ ಇಷ್ಟಾರ್ಥವನ್ನು ಪಡೆಯದೆ ಮತ್ತೊಬ್ಬ ದಾನಿಯ ಬಳಿಗೆ ಹೋದನೆಂಬ ಅಪವಾದದ ನೂತನ ಆವಿರ್ಭಾವವು ನನಗೆ ಆಗದಿರಲಿ.

10 ಸ್ನೇಹ, ದಯೆ, ಸೌಖ್ಯವನ್ನೂ, ಒಂದುವೇಳೆ ಜಾನಕಿಯನ್ನೇ ಆದರೂ ಪ್ರಜೆಗಳ ಆನಂದಕ್ಕಾಗಿ ತ್ಯಜಿಸಲು ನನಗೆ ವ್ಯಥೆಯಿಲ್ಲ

ಪತ್ನೀ ಕೀರ್ತಿ ಇವುಗಳ ಸಂಘರ್ಷದಲ್ಲಿ ಕೀರ್ತಿಯೇ ಪ್ರಧಾನವಾಯಿತು, ಜಯ ಪಡೆಯಿತು.

"ನಿಶ್ಚಿತ್ಯ ಚಾನನ್ಯನಿವೃತ್ತಿ ವಾಚ್ಯಂ ತ್ಯಾಗೇನ ಪತ್ನ್ಯಾಃ ಪರಿಮಾಷ್ಟುರ್ಮೈಚ್ಛತ್ ।
ಅಪಿ ಸ್ವದೇಹಾತ್ ಕಿಮುತೇಂದ್ರಿಯಾರ್ಥಾತ್ ಯಶೋಧನಾನಾಂ ಹಿ ಯಶೋ ಗರೀಯಃ" [11]

'ಮಾನಶರೀರಾ ರಾಜಾನಃ' ಎಂಬ ಮಾತು ಇಂತಹ ಮಹಾತ್ಮರುಗಳ ನಡವಳಿಕೆಯಿಂದ ಸಾರ್ಥಕತೆಯನ್ನು ಪಡೆದಿದೆ.

ಯಶಃಶರೀರದ ರಕ್ಷಣೆಗಾಗಿಯೇ ಮಹಾರಾಣಿ ಪದ್ಮಿನಿ ಹಾಗೂ ಆಕೆಯ ಅನೇಕ ಗೆಳತಿಯರು ಜೀವಂತವಾಗಿಯೇ ಚಿತೆಯನ್ನು ಪ್ರವೇಶಿಸಿದರು. ಭಾರತಮಾತೆಯ ಸ್ವಾತಂತ್ರ್ಯಕ್ಕಾಗಿಯೇ ಭಗತ್‌ಸಿಂಹನಂತಹ ದೇಶಭಕ್ತರು ಪ್ರಾಣಾರ್ಪಣೆ ಮಾಡಿ ಹುತಾತ್ಮರಾದರು. ನಮ್ಮ ಶತಮಾನದವರೇ ಆದ ಮಹಾತ್ಮಾ ಗಾಂಧಿ, ಮೋತಿಲಾಲ್ ನೆಹರು, ಜವಾಹರಲಾಲ್ ನೆಹರು, ವಲ್ಲಭಭಾಯಿಪಟೇಲ್, ತಿಲಕ್, ಲಜಪತ್‌ರಾಯ್ ಮುಂತಾದ ಅಸಂಖ್ಯಾತವ್ಯಕ್ತಿಗಳು ಸುಖೀ-ಜೀವನ ನಡೆಸಲು ಬೇಕಾದ ಅನುಕೂಲತೆಗಳಿದ್ದಾಗ್ಯೂ ಅವುಗಳಿಗೆ ತಿಲಾಂಜಲಿಯನ್ನಿತ್ತು ಭಾರತಮಾತೆಯ ರಕ್ಷಣೆಗಾಗಿ ತಮ್ಮ ತನು-ಮನ-ಧನಗಳನ್ನರ್ಪಿಸಿ ಕೀರ್ತಿಗೆ ಭಾಜನರಾದರು.

ಯಶೋಭಿರುಚಿಯುಳ್ಳ ಮಾನವ ಯಶಸ್ಸಿನ ರಕ್ಷಣೆಗಾಗಿ ಉಂಟಾಗುವ ಮೃತ್ಯುವನ್ನು ಪುತ್ರಜನನಕ್ಕೆ ಸಮನಾದದ್ದೆಂದು ಭಾವಿಸುತ್ತಾನೆ. ಶೂದ್ರಕನ ಮೃಚ್ಛಕಟಿಕದ ನಾಯಕ ಚಾರುದತ್ತನ ಬಾಯಿಂದ ಇದೇ ಮಾತು ಹೊರಬರುತ್ತದೆ.

'ನ ಭೀತೋ ಮರಣಾದಸ್ಮಿ ಕೇವಲಂ ದೂಷಿತಂ ಯಶಃ ।
ವಿಶುದ್ಧಸ್ಯ ಹಿ ಮೇ ಮೃತ್ಯುಃ ಪುತ್ರಜನ್ಮಸಮೋ ಭವೇತ್ ॥

ಮಲ್ಲಾಡಿಹಳ್ಳಿಯ 'ಅನಾಥ ಸೇವಾಶ್ರಮ'ದ ಸಂಸ್ಥಾಪಕರಾದ ಶ್ರೀರಾಘವೇಂದ್ರಸ್ವಾಮಿಗಳು 'ಕೀರ್ತಿರ್ಯಸ್ಯ ಸ ಜೀವತಿ' ಎಂಬ ಮಾತಿಗೆ ಜೀವಂತ ಉದಾಹರಣೆಯಾಗಿದ್ದಾರೆ. ಮಲ್ಲಾಡಿಹಳ್ಳಿಯಂತಹ ಕುಗ್ರಾಮ ಇಂದು ಕರ್ಣಾಟಕದಾದ್ಯಂತ ಎಲ್ಲರ ನಾಲಿಗೆಯ ಮೇಲೆ ನರ್ತಿಸುವಂತೆ ಮಾಡಿದ ಶ್ರೀರಾಘವೇಂದ್ರಸ್ವಾಮಿಗಳ ಸಾಧನೆ ಅವರೆಂತಹ ಕಾರಣಪುರುಷರೆಂಬುದಕ್ಕೆ ಜ್ವಲಂತ ನಿದರ್ಶನವಾಗಿದೆ. ಶ್ರೀ ಸ್ವಾಮೀಜಿಯವರ ನಿಸ್ಸ್ವಾರ್ಥ ಸೇವೆ, ದೀನದಲಿತರ ಬಗೆಗೆ ಅವರಿಗಿರುವ ಅನುಕಂಪ, ಹಿಂದೂ ಧರ್ಮದ ಶಾಶ್ವತಮೌಲ್ಯಗಳ ಬಗೆಗೆ ಅವರು ಹೊಂದಿರುವ ಶ್ರದ್ಧೆ, ನಿಷ್ಠೆ ಎಂತಹವರನ್ನೂ ಪುಲಕಿತಗೊಳಿಸುವಂತಹುದು. ಬಿಡುವಿಲ್ಲದ ಕೆಲಸ ಕಾರ್ಯದ ನಡುವೆಯೂ ಅವರು ರಚಿಸಿರುವ ಯೋಗವನ್ನು ಕುರಿತ ಗ್ರಂಥಗಳೇ ಮೊದಲಾದುವು ಅವರು ಉತ್ತಮ ಬರೆಹಗಾರರೂ ಹೌದೆಂಬುದನ್ನು ಶ್ರುತಪಡಿಸುತ್ತಿವೆ. 'ಜರದ್ಗವಧನಃ ಶಂಭುಃ ತಥಾಪಿ ಪರಮೇಶ್ವರಃ' ಎಂಬಂತೆ 'ತಿರುಕ' ಎಂಬ ನಾಮಧೇಯದಿಂದ ಪ್ರಸಿದ್ಧರಾದ ಅವರು ಹೆಸರಿಗೆ ಮಾತ್ರ 'ತಿರುಕ'ರಷ್ಟೆ; ಅವರು ಗಳಿಸಿರುವ ಯೌಗಿಕ, ಆಧ್ಯಾತ್ಮಿಕ ಸಂಪತ್ತು, ಮಾನವ ಕೋಟಿಗಾಗಿ ಅವರು ನಿರ್ಮಿಸಿರುವ ಶಿಕ್ಷಣಕೇಂದ್ರಗಳು, ಆರೋಗ್ಯ ನಿಲಯಗಳು ನಮಗಾಗಿ ಅವರು ನೀಡಿರುವ ಶಾಶ್ವತನಿಧಿಗಳು. ಯಶಸ್ಸೇ ಮೂರ್ತಿವೆತ್ತಂತೆ ಇರುವ ಇಂತಹ ಸತ್ಪುತ್ರರನ್ನು ಪಡೆದಿರುವ ನಾವು ಪುಣ್ಯವಂತರು. ನಿಜಕ್ಕೂ 'ರತ್ನಗರ್ಭಾ ವಸುಂಧರಾ' ಎಂಬ ಮಾತು ಇಂತಹವರಿಂದ ಅರ್ಥಪೂರ್ಣವಾಗಿದೆ. ಈ ಮಹಾತ್ಮರ ನಡೆ-ನುಡಿ, ಸರಳಜೀವನ, ಉದಾತ್ತಚಿಂತನೆಗಳು ನಮ್ಮೆಲ್ಲರಿಗೂ ದಾರಿದೀಪವಾಗಲಿ, ಮಾನವನನ್ನು ಯಶಃಕಾಂಕ್ಷಿಯನ್ನಾಗಿ ಮಾಡಲಿ; ಅವರು ಚಿರಕಾಲ ಬಾಳಿ ನಮ್ಮನ್ನೂ, ಈ ನಾಡನ್ನೂ ಹರಸುತ್ತಿರಲಿ ಎಂಬುದೇ ಭಗವಂತನಲ್ಲಿ ನಮ್ಮ ಪ್ರಾರ್ಥನೆ.

---

[11] ಅಪವಾದವನ್ನು ಬೇರಾವರೀತಿಯಿಂದಲೂ ತೊಡೆದುಹಾಕುವುದು ಅಸಾಧ್ಯವೆಂದು ನಿರ್ಧರಿಸಿ ಪತ್ನೀತ್ಯಾಗದಿಂದಲೇ ಅದನ್ನು ತೊಡೆದುಹಾಕಲು ಬಯಸಿದನು. ಯಶೋಧನರಾದವರಿಗೆ ತಮ್ಮ ದೇಹಕ್ಕಿಂತಲೂ ಯಶಸ್ಸೇ ಗುರುತರವಾದುದು. ಇಂದ್ರಿಯಸುಖಗಳಿಗಿಂತಲೂ (ಯಶಸ್ಸು) ಹೆಚ್ಚೆಂಬುದನ್ನು ಹೇಳಲೇಬೇಕಾಗಿಲ್ಲ.

ಡಾ॥ ರಾಮಾನುಜಂ

ಯೋಗ ಶಾಸ್ತ್ರದ ಸಪ್ತ ಚಕ್ರಗಳು

ಯೋಗಶಾಸ್ತ್ರವು, ಭಾರತವು ಪ್ರಪಂಚಕ್ಕೆ ಕೊಟ್ಟಿರುವ ಒಂದು ಅದ್ಭುತವಾದ ಪ್ರಾಯೋಗಿಕ ವಿಜ್ಞಾನ. ಹಿಂದೆ ಭಾರತದಲ್ಲಿ ಸಾಧಾರಣವಾಗಿ ಅನೇಕರು ಅನುಷ್ಠಿಸುತ್ತಿದ್ದ ಏಕೈಕ ಪ್ರಯೋಗಮಾರ್ಗವೆಂದರೆ ಯೋಗ ಶಾಸ್ತ್ರವೇ ಎಂದು ನಿಸ್ಸಂಕೋಚವಾಗಿ ಹೇಳಬಹುದು. ಪತಂಜಲಿ ಮಹರ್ಷಿಯಿಂದ ಪ್ರವರ್ತಿತವಾದ ಈ ಶಾಸ್ತ್ರವು ವಿವಿಧರೀತಿಯಲ್ಲಿ ಬೆಳೆದು, ಅನೇಕ ಮಾರ್ಗಗಳಲ್ಲಿ ಕ್ರಮಿಸಿ ಸರ್ವವ್ಯಾಪಿಯಾಗಿ ನಮ್ಮ ದೇಶದಲ್ಲಿ ಬೆಳೆದು ಪರದೇಶ ಗಳಲ್ಲೂ ಕಾರ್ತವೀರ್ಯನಂತೆ ತನ್ನ ಸಹಸ್ರಬಾಹುಗಳನ್ನು ಪ್ರಸರಿಸಿದೆಯೆನ್ನಬಹುದು.

ಯೋಗದಲ್ಲಿ ಅನೇಕ ವಿಷಯಗಳು ವಿಮರ್ಶೆಗೆ ಯೋಗ್ಯವಾಗಿದ್ದರೂ, ಪ್ರಸ್ತುತ ಧ್ಯಾನದಲ್ಲಿ ಮತ್ತು ಕುಂಡಲಿನೀಶಕ್ತಿಯನ್ನು ಜಾಗ್ರತಮಾಡುವುದರಲ್ಲಿ ಸಂಬಂಧಪಟ್ಟಿರುವ 'ಚಕ್ರ'ಗಳೆಂಬ ಶಕ್ತಿಕೇಂದ್ರಗಳ ವೈಚಿತ್ರ್ಯ ವನ್ನು ವಿವರಿಸುವ ಸೀಮಿತವಾದ ಉದ್ದೇಶ, ವಿವರಗಳನ್ನು ತಿಳಿಯಬೇಕೆಂದೆಣಿಸುವ ಜಿಜ್ಞಾಸುಗಳ ದೃಷ್ಟಿಯಿಂದ ಸಾರ್ಥಕವೆನ್ನಬಹುದು.

ಯೋಗಿಯ ಸಾಧನಾಮಾರ್ಗದಲ್ಲಿ ಅನಿವಾರ್ಯ ಅಂಗವಾಗಿರುವ 'ಚಕ್ರ'ಗಳ ವಿಷಯಕ್ಕೆ ಬರುವ ಮುನ್ನ ಮನುಷ್ಯನ ಶರೀರದಲ್ಲಿ ಯೋಗಿಗಳ ಸಿದ್ಧಾಂತದ ಪ್ರಕಾರ ಇರುವುವೆಂದು ಹೇಳಲಾಗುವ 'ನಾಡಿ'ಗಳ ವಿಷಯವನ್ನು ಸಂಗ್ರಹವಾಗಿ ತಿಳಿಯುವುದು ಆವಶ್ಯಕ. ಮನುಷ್ಯಶರೀರದಲ್ಲಿ ಪ್ರಾಣಪ್ರವಾಹಿನಿಗಳಾದ ಅಸಂಖ್ಯ ನಾಡಿಗಳಿವೆ. ಇವುಗಳಲ್ಲಿ ಮುಖ್ಯವಾದುವು ಹದಿನೈದು–ಅವು :– 1) ಸುಷುಮ್ನಾ, 2) ಇಡಾ, 3) ಪಿಂಗಳಾ, 4) ಗಾಂಧಾರೀ, 5) ಹಸ್ತಜಿಹ್ವಾ, 6) ಪೂಷಾ, 7) ಯಶಸ್ವಿನೀ, 8) ಶೂರಾ, 9) ಕುಹೂ, 10) ಸರಸ್ವತೀ, 11) ವಾರುಣೀ, 12) ಅಲಂಬುಷಾ, 13) ವಿಶ್ವೋದರೀ, 14) ಶಂಖಿನೀ ಮತ್ತು 15) ಚಿತ್ರಾ ಎಂಬುವು. ಈ ಹದಿನೈದು ನಾಡಿ ಗಳಲ್ಲಿ ಸುಷುಮ್ನಾ, ಇಡಾ, ಪಿಂಗಳಾ ಬಹುಮುಖ್ಯವಾದುವು. ಈ ಮೂರೂ ಅಷ್ಟಾಂಗಗಳಲ್ಲಿ ಒಂದಾದ ಪ್ರಾಣಾ ಯಾಮಕ್ಕೆ ಸಂಬಂಧಪಟ್ಟಿವೆ. ಈ ಮೂರರಲ್ಲಿ ಸುಷುಮ್ನಾ ಅತಿಮುಖ್ಯ ಮತ್ತು ಸಾಧನೆಯ ದೃಷ್ಟಿಯಿಂದ ಸರ್ವಶ್ರೇಷ್ಠ. ಇದು ಪೃಷ್ಠಭಾಗದಲ್ಲಿ ಗುದದ ಸಮೀಪದಲ್ಲಿ ಪ್ರಾರಂಭವಾಗಿ ಮೇರುದಂಡದ ಒಳಗಿನಿಂದ ಹಾದು ಮಸ್ತಿಷ್ಕದ ಮೇಲೆ ಸೇರುತ್ತದೆ. ಇದೇ ಗುದಸ್ಥಾನದ ಹತ್ತಿರದಿಂದ, ಅದರ ಎಡಭಾಗದಿಂದ 'ಇಡಾ' ಮತ್ತು ಬಲಭಾಗದಿಂದ ಪಿಂಗಳಾ ಪ್ರಾರಂಭವಾಗಿ 'ನಾಸಿಕಾಮೂಲ'ದ ವರೆಗೆ ಹರಿಯುತ್ತವೆ. ಭ್ರೂಮಧ್ಯದಲ್ಲಿ ಮೇಲೆ ಹೇಳಿದ ಮೂರೂ ನಾಡಿಗಳು ಸೇರುತ್ತವೆ. ಸುಷುಮ್ನಾನಾಡಿಗೆ ಸರಸ್ವತೀ ಎಂದೂ, ಇಡಾನಾಡಿಗೆ ಗಂಗಾ ಎಂದೂ ಪಿಂಗಳಾ ನಾಡಿಗೆ ಯಮುನಾ ಎಂದೂ ಹೇಳುತ್ತಾರೆ. ಇದರಿಂದಲೇ ಈ ನಾಡಿಗಳು ಸೇರುವ ಸಂಗಮಕ್ಕೆ 'ಯುಕ್ತ ತ್ರಿವೇಣೀ' ಎನ್ನುತ್ತಾರೆ.

ಮೇಲೆ ಹೇಳಿದ ಸುಷುಮ್ನಾನಾಡಿಯು ಅನೇಕ ಸೂಕ್ಷ್ಮನಾಡಿಗಳನ್ನೊಳಗೊಂಡಿದೆ. ಸುಷುಮ್ನೆಯ ಒಳಗೆ

ಒಂದು 'ವಜ್ರನಾಡಿ'ಯು ಇದೆ. ಅದರೊಳಗೆ ಚಿತ್ರಿಣೀ ಎಂಬ ನಾಡಿಯೂ ಮತ್ತು ಅದರೊಳಗೆ ಬ್ರಹ್ಮನಾಡಿಯೂ ಇವೆ. ಇವುಗಳೆಲ್ಲಾ ಅತಿಸೂಕ್ಷ್ಮವಾದುದರಿಂದ ಕೇವಲ ಯೋಗಿಗಮ್ಯ. ಈ ನಾಡಿಗಳಲ್ಲಿ ಅನೇಕ ಶಕ್ತಿಕೇಂದ್ರಗಳಿವೆ. ಈ ಕೇಂದ್ರಗಳಿಗೆ ಕಮಲ, ಚಕ್ರ ಮುಂತಾದ ಹೆಸರುಗಳಿವೆ. ಈ ಚಕ್ರಗಳಲ್ಲಿ ಮುಖ್ಯವಾದುವು ಏಳು. ಅವು 1) ಮೂಲಾಧಾರ ಚಕ್ರ, 2) ಸ್ವಾಧಿಷ್ಠಾನ ಚಕ್ರ, 3) ಮಣಿಪೂರಕ ಚಕ್ರ, 4) ಅನಾಹತ ಚಕ್ರ, 5) ವಿಶುದ್ಧ ಚಕ್ರ, 6) ಆಜ್ಞಾ ಚಕ್ರ, 7) ಸಹಸ್ರಾರ ಚಕ್ರ.

ಈ ಯೋಗಿಗಮ್ಯವಾದ ಚಕ್ರಗಳು ಶಕ್ತಿಕೇಂದ್ರಗಳು. ಇವುಗಳಲ್ಲಿ ಅಲೌಕಿಕಶಕ್ತಿಯಡಗಿಸಿಡಲಾಗಿದೆ. ಸಾಧಕನಲ್ಲಿ ಸಿದ್ಧಿಗೆ ಮೊದಲು ಸಾಧಾರಣವಾದ ಅವಸ್ಥೆಯಲ್ಲಿ ಅರಳದೇ ಇರುವ ಕಮಲದ ಹೋಲಿಕೆಯಲ್ಲಿ ಅಧೋಮುಖವಾಗಿ ಇವು ಇರುತ್ತವೆ; ಧ್ಯಾನ ಮುಂತಾದ ಸಾಧನೆಯಿಂದ ಇವು ಮೇಲ್ಮುಖವಾಗಿ ವಿಕಸಿತಗೊಳ್ಳುತ್ತವೆ; ಆಗ ಸಾಧಕನಲ್ಲಿ ಅಲೌಕಿಕವಾದ ಶಕ್ತಿಗಳು ಉಂಟಾಗುತ್ತವೆ ಎನ್ನುತ್ತಾರೆ. ಸಾಧಕನು ಒಂದೊಂದು ಚಕ್ರವನ್ನೂ ಧ್ಯಾನಿಸಿ ಅದು ವಿಕಸಿತಗೊಳ್ಳುವಂತೆ ಮಾಡುತ್ತಾ ಬಂದಂತೆ ಅವುಗಳಿಂದ ಅವನಿಗೆ ಅಲೌಕಿಕಶಕ್ತಿಯು ಬರುತ್ತದೆ.

ಈ ಚಕ್ರಗಳ ಬಗ್ಗೆ ಯೋಗಶಾಸ್ತ್ರದಲ್ಲಿ ಬರುವ ವಿವರಗಳು ಬಹಳ ಸ್ವಾರಸ್ಯಕರ. ಪ್ರತಿಯೊಂದು ಚಕ್ರವೂ ಅನೇಕ ಪ್ರಕಾರದ ಅದ್ಭುತಶಕ್ತಿಗಳ ಕೇಂದ್ರ. ವೈದ್ಯನಿಗಾಗಲಿ, ಭೌತಿಕವಿಜ್ಞಾನಿಗಾಗಲೀ ಎಟುಕದಂತಹ ಅತಿಭೌತಿಕ ಶಕ್ತಿ ಕೇಂದ್ರಗಳಿವು. ತಂತ್ರ ಮತ್ತು ಹಠಯೋಗದ ಗ್ರಂಥಗಳಲ್ಲಿ ಕಂಡುಬರುವ ಇವುಗಳ ವಿಷಯ ಬಹಳ ರೋಚಕ. ಪ್ರತಿಚಕ್ರಕ್ಕೂ ಒಂದೊಂದು ಸ್ಥಾನವಿದೆ; ಒಂದೊಂದು ಅಧಿಷ್ಠಾತ್ರೀ ದೇವತೆಯಿದೆ; ಶಕ್ತಿ ಇದೆ; ಯಂತ್ರವಿದೆ; ಆಕೃತಿಯಿದೆ. ಅದನ್ನೆಲ್ಲಾ ತಿಳಿದು ಅದರ ಪ್ರಕಾರವೇ ಧ್ಯಾನಮಾಡಿದರೆ ಅವುಗಳ ಶಕ್ತಿಯು ವಿಕಸಿತವಾಗುತ್ತದೆ.

ಇನ್ನು ಮುಂದೆ ಒಂದೊಂದು ಚಕ್ರದ ವಿವರವನ್ನೂ ಸಂಗ್ರಹವಾಗಿ ಸಾಂಕೇತಿಕವಾಗಿ ವಿವರಿಸುವುದು ಅತ್ಯಾವಶ್ಯಕ. ಇವು ಸಾಧಕನಿಗೆ ಅನಿವಾರ್ಯ. ಮೊದಲು ಮೂಲಾಧಾರ ಚಕ್ರವನ್ನು ತೆಗೆದುಕೊಳ್ಳೋಣ.

೧) **ಮೂಲಾಧಾರ ಚಕ್ರ**: ಇದರ ಸ್ಥಾನ ಗುದದ ಮೂಲದಿಂದ ಎರಡಂಗುಲ ಮೇಲುಗಡೆ ಇದೆ. ಇದಕ್ಕೆ ಕೆಂಪುಬಣ್ಣದ ನಾಲ್ಕು ದಳಗಳಿವೆ-ಅವುಗಳಲ್ಲಿ ವಂ, ಶಂ, ಷಂ ಮತ್ತು ಸಂ ಎಂಬ ನಾಲ್ಕು ಅಕ್ಷರಗಳಿವೆ. ಚಿನ್ನದ ವರ್ಣದ ಚತುಷ್ಕೋಣ, ಪೃಥ್ವೀತತ್ತ್ವದ ಮುಖ್ಯಸ್ಥಾನ ಇದು. ಇದರ ತತ್ತ್ವಬೀಜವು 'ಲಂ' ಎಂಬುದು. ಇದರ 'ಗತಿ'ಯು ಐರಾವತದಂತೆ 'ಪುರೋಗತಿ'. ಇದರ ಗುಣ 'ಗಂಧ'. ಅಧೋಗಮನವುಳ್ಳ ವಾಯುವಿನ ಮುಖ್ಯಸ್ಥಾನ ಇದು. ಇದರ ಇಂದ್ರಿಯ ಘ್ರಾಣ. ಇದರ ಲೋಕ ಭೂಲೋಕ. ತತ್ತ್ವಬೀಜದ ವಾಹನ ಐರಾವತ. ಶಕ್ತಿಸಮನ್ವಿತನಾದ ಚತುರ್ಭುಜ ಬ್ರಹ್ಮನೇ ಇದರ ಅಧಿಪತಿ ದೇವತೆ. ಇದು ಚತುಷ್ಕೋಣ ಯಂತ್ರ. ಈ ಚಕ್ರದ ಧ್ಯಾನದಿಂದ ಆರೋಗ್ಯ, ಆನಂದಚಿತ್ತ, ಕವಿತಾಶಕ್ತಿಗಳು ಲಭಿಸುತ್ತವೆ. ಈ ಚಕ್ರವು ಕುಂಡಲಿನೀ ಶಕ್ತಿಗೆ ಆಧಾರವಾದುದರಿಂದ ಇದಕ್ಕೆ ಮೂಲಧಾರವೆಂದು ಹೆಸರು.

೨) **ಸ್ವಾಧಿಷ್ಠಾನ ಚಕ್ರ** : ಮೂಲಾಧಾರಚಕ್ರದಿಂದ ಎರಡಂಗುಲ ಮೇಲುಗಡೆ ಇದರ ಸ್ಥಾನ. ಸಿಂಧೂರ ವರ್ಣದ ಆರು ದಳಗಳ ಕಮಲದ ಆಕೃತಿಯಲ್ಲಿದೆ. ಅದರ ದಳಗಳಲ್ಲಿ ಬಂ, ಭಂ, ಮಂ, ಯಂ, ರಂ,ಲಂ ಎಂಬ ಆರು ಅಕ್ಷರಗಳಿವೆ. ಶ್ವೇತವರ್ಣದ ಅರ್ಧಚಂದ್ರಾಕಾರದ ಜಲತತ್ತ್ವದ ಮುಖ್ಯಸ್ಥಾನ ಇದು. 'ಬಂ' ಎಂಬುದು ತತ್ತ್ವಬೀಜ. ತತ್ತ್ವಬೀಜದ ಗತಿ ಅಧೋ ಮಾರ್ಗ. ರಸವೇ ಇದರ ಗುಣ. ವ್ಯಾನವಾಯುವಿನ ಮುಖ್ಯಸ್ಥಾನ ಈ ಚಕ್ರ. ಉಪಸ್ಥೇಂದ್ರಿಯದ ಸ್ಥಾನ. ಭುವರ್ಲೋಕವೇ ಇದರ ಲೋಕ. ಚತುರ್ಭುಜಾಶಕ್ತಿಯ ಸಹಿತ ಇರುವ ವಿಷ್ಣು ಇದರ ಅಧಿದೇವತೆ. ಈ ಚಕ್ರದ ಧ್ಯಾನದಿಂದ ಸೃಷ್ಟಿ ಸ್ಥಿತಿ ಲಯಗಳಲ್ಲಿ ಸಾಮರ್ಥ್ಯ ಮತ್ತು ವಿದ್ಯೆ ಇವುಗಳು ಲಭ್ಯವಾಗುತ್ತವೆ.

೩) **ಮಣಿಪೂರಕ ಚಕ್ರ**: ಇದರ ಸ್ಥಾನ ನಾಭೀಮೂಲ. ನೀಲವರ್ಣದ ಹತ್ತು ದಳಗಳುಳ್ಳ ಕಮಲದ ಆಕೃತಿಯಲ್ಲಿ ಈ ಚಕ್ರವಿದೆ. ಈ ದಳಗಳಲ್ಲಿ, ಡಂ, ಢಂ, ಣಂ, ತಂ, ಥಂ, ದಂ, ಧಂ, ನಂ, ಪಂ, ಫಂ ಎಂಬ ಅಕ್ಷರ

ಗಳಿವೆ. ಇದು ರಕ್ತವರ್ಣದ ತ್ರಿಕೋಣಾಕಾರದ ಅಗ್ನಿತತ್ತ್ವದ ಮುಖ್ಯಸ್ಥಾನ. 'ರಂ' ಎಂಬುದು ಇದರ ತತ್ತ್ವಬೀಜ. ಇದರ ಗತಿ ಮೇಷದ ಚಲನೆಯಂತೆ ನೆಗೆತದ ಚಲನೆ. ರೂಪವೇ ಇದರ ಗುಣ. ಸಮಾನವಾಯುವಿನ ಮುಖ್ಯಸ್ಥಾನ ಇದು. ಚಕ್ಷುರಿಂದ್ರಿಯದ ಸ್ಥಾನವೂ ಹೌದು. ಪಾದ ಇದರ ಕರ್ಮೇಂದ್ರಿಯ. ಸ್ವರ್ಲೋಕ ಇದರ ಲೋಕ. ಮೇಷ ಇದರ ವಾಹನ. ರುದ್ರ ಇದರ ಅಧಿದೇವತೆ. ಈ ಚಕ್ರದ ಧ್ಯಾನದಿಂದ ಶರೀರವ್ಯೂಹದ ಜ್ಞಾನವುಂಟಾಗುತ್ತದೆ ಹಾಗೂ ಅಜೀರ್ಣ ಮುಂತಾದ ರೋಗಗಳು ದೂರವಾಗುತ್ತವೆ.

೪) ಅನಾಹತ ಚಕ್ರ : ಇದರ ಸ್ಥಾನ ಹೃದಯದ ಬಳಿ. ಸಿಂಧೂರವರ್ಣದ ಹನ್ನೆರಡು ದಳವಿರುವ ಕಮಲದ ಆಕೃತಿಯಲ್ಲಿದೆ. ಈ ದಳಗಳಲ್ಲಿರುವ ಅಕ್ಷರಗಳು ಕಂ, ಖಂ, ಗಂ, ಘಂ, ಙಂ, ಚಂ, ಛಂ, ಜಂ, ಝಂ, ಞಂ, ಟಂ, ಠಂ, ಎಂಬುವು. ಇದು ಧೂಮ್ರವರ್ಣದ ಷಟ್ಕೋಣಾಕಾರದ ವಾಯುತತ್ತ್ವದ ಮುಖ್ಯಸ್ಥಾನ. 'ಯಂ' ಎಂಬುದು ತತ್ತ್ವಬೀಜ ಇದರ ಗುಣ ಸ್ಪರ್ಶ. ಇದು ಪ್ರಾಣವಾಯುವಿನ ಮುಖ್ಯಸ್ಥಾನ. ಸ್ಪರ್ಶೇಂದ್ರಿಯವೇ ಇದರ ಜ್ಞಾನೇಂದ್ರಿಯ. ಇದರ ಕರ್ಮೇಂದ್ರಿಯವು ಕೈ. ಮಹರ್ಲೋಕವು ಇದರ ಲೋಕ. ಜಿಂಕೆಯು ಈ ತತ್ತ್ವಬೀಜದ ವಾಹನ. ಈಶಾನರುದ್ರ ಇದರ ಅಧಿದೇವತೆ. ಈ ಚಕ್ರವನ್ನು ಧ್ಯಾನಿಸಿದರೆ, ಕವಿತಾಶಕ್ತಿ, ಜಿತೇಂದ್ರಿಯತ್ವ ಮುಂತಾದ ಫಲಗಳು ದೊರೆಯುತ್ತವೆ.

೫) ವಿಶುದ್ಧ ಚಕ್ರ : ಇದರ ಸ್ಥಾನ ಕಂಠದಲ್ಲಿ. ಇದು ಧೂಮ್ರವರ್ಣದ ಹದಿನಾರು ದಳಗಳ ಕಮಲದಂತಿದೆ. ಈ ದಳಗಳಲ್ಲಿ ಅ, ಆ, ಇ, ಈ, ಉ, ಊ, ಋ, ೠ, ಌ ೡ, ಏ, ಐ, ಓ, ಔ, ಅಂ, ಅಃ ಎಂಬ ೧೬ ಅಕ್ಷರಗಳಿವೆ. ಇದು ಆಕಾಶತತ್ತ್ವದ ಮುಖ್ಯಸ್ಥಾನ. 'ಹಂ' ಎಂಬುದು ತತ್ತ್ವಬೀಜ. ಶಬ್ದ ಇದರ ಗುಣ. ಉದಾನವಾಯುವಿನ ಮುಖ್ಯಸ್ಥಾನ ಇದು. ಶ್ರೋತ್ರ ಇದರ ಜ್ಞಾನೇಂದ್ರಿಯ. ವಾಗಿಂದ್ರಿಯ ಇದರ ಕರ್ಮೇಂದ್ರಿಯ. ಜನೋಲೋಕ ಇದರ ಲೋಕ. ಪಂಚಮುಖಗಳುಳ್ಳ ಸದಾಶಿವ ಇದರ ಅಧಿದೇವತೆ. ಈ ಚಕ್ರವನ್ನು ಧ್ಯಾನಿಸಿ ಸಿದ್ಧಿಸಿಕೊಂಡವನು ಕವಿ, ಮಹಾಜ್ಞಾನಿ, ರೋಗರಹಿತ, ಶೋಕರಹಿತ, ದೀರ್ಘಜೀವಿಯಾಗುತ್ತಾನೆ.

೬ ಆಜ್ಞಾ ಚಕ್ರ : ಹುಬ್ಬುಗಳ ನಡುವೆ ಇದರ ಸ್ಥಾನ. ಶ್ವೇತವರ್ಣದ ಎರಡು ದಳಗಳುಳ್ಳ ಕಮಲದಂತೆ ಇದರ ಆಕೃತಿ. ಹಂ, ಕ್ಷಂ ಎಂಬ ಎರಡು ಅಕ್ಷರಗಳು ಈ ದಳಗಳಲ್ಲಿವೆ. ಲಿಂಗಾಕಾರದ ಮಹತ್ ತತ್ತ್ವ ಇದರ ತತ್ತ್ವ. ಓಂಕಾರವೇ ತತ್ತ್ವಬೀಜ. ನಾದವೇ ತತ್ತ್ವಬೀಜದ ಗತಿ. ತಪೋಲೋಕವೇ ಇದರ ಲೋಕ. ಜ್ಞಾನದಾತೃವಾದ ಶಿವನೇ ಇದರ ಅಧಿಪತಿ ದೇವತೆ. ಈ ಚಕ್ರವನ್ನು ಧ್ಯಾನಿಸಿದವರಿಗೆ ಇತರ ಎಲ್ಲಾ ಚಕ್ರಗಳಿಂದ ಏನೇನು ಫಲವುಂಟೋ ಅವೆಲ್ಲವೂ ಸಿದ್ಧಿಸುತ್ತವೆ. ಇದರ ಧ್ಯಾನದಿಂದ ಸಂಪ್ರಜ್ಞಾತ ಸಮಾಧಿಯನ್ನು ಪ್ರವೇಶಿಸಬಹುದು.

೭ ಸಹಸ್ರಾರ ಚಕ್ರ : ಇದರ ಸ್ಥಾನ ಮಸ್ತಿಷ್ಕದಲ್ಲಿ ಬ್ರಹ್ಮರಂಧ್ರದ ಮೇಲೆ. ಇದು ಸಮಸ್ತ ಶಕ್ತಿಗಳ ಕೇಂದ್ರ. ನಾನಾವರ್ಣಗಳ ಸಹಸ್ರ ದಳಗಳು ಇದಕ್ಕುಂಟು. ದಳಗಳಲ್ಲಿ 'ಅ' ಇಂದ 'ಕ್ಷ' ವರೆಗೆ ಎಲ್ಲ ಅಕ್ಷರಗಳೂ ಇವೆ. ಇದು ತತ್ತ್ವಾತೀತ. ವಿಸರ್ಗವೇ ತತ್ತ್ವಬೀಜ. ಬಿಂದುವೇ ತತ್ತ್ವಬೀಜದ ಗತಿ. ಸತ್ಯಲೋಕ–ಇದರ ಲೋಕ. ಪರಬ್ರಹ್ಮನೇ ಇದರ ಅಧಿದೇವತೆ. ಇದರ ಧ್ಯಾನದಿಂದ ಮುಕ್ತಿ ಲಭಿಸುತ್ತದೆ. ಇದರಲ್ಲಿ ಪ್ರಾಣಮನಸ್ಸುಗಳು ಲಯಿಸಿದರೆ ಅಸಂಪ್ರಜ್ಞಾತ ಸಮಾಧಿಯ ಯೋಗ್ಯತೆ ಉಂಟಾಗುತ್ತದೆ.

ಇವೇ ಸಾಧಕನು ಕ್ರಮಿಸಬೇಕಾದ ಶಕ್ತಿಕೇಂದ್ರಗಳು. ಈ ಚಕ್ರಗಳ ಬಗ್ಗೆ ಮೇಲೆ ಹೇಳಿದ ವಿವರಗಳು ತಾಂತ್ರಿಕವೋ, ಸಾಂಕೇತಿಕವೋ ಎಂದೆನಿಸುತ್ತದೆ. ಆದರೆ ಯೋಗಮಾರ್ಗವು ಪ್ರಾಯೋಗಿಕವಾದ್ದರಿಂದ ಬರಿಯ ತರ್ಕವಿತರ್ಕಗಳಿಂದ ಮೇಲಿನ ವಿಷಯಗಳಿಗೆ ಅರ್ಥ ತಿಳಿಯಲು ಸಾಧ್ಯವಿಲ್ಲ. ಪ್ರಯೋಗಮಾಡಿಯೇ ತಿಳಿಯಬೇಕು. ಪ್ರತಿಯೊಂದು ಚಕ್ರವನ್ನೂ ಮೇಲೆ ಹೇಳಿರುವ ರೂಪದಲ್ಲೇ ಧ್ಯಾನಿಸಿ ಅದನ್ನು ಸಿದ್ಧಿಸಿಕೊಳ್ಳಬೇಕು. ಒಂದೊಂದು ಶಕ್ತಿಕೇಂದ್ರವನ್ನೂ ಜಾಗೃತಮಾಡಿ ಅದರ ಶಕ್ತಿಯು ತನ್ನಲ್ಲಿ ಪ್ರಕಟವಾಗುವಂತೆ ಮಾಡಿಕೊಂಡರೆ ಆತ ಯೋಗಿಯಾಗುತ್ತಾನೆ. ಕುಂಡಲಿನೀಶಕ್ತಿಯು ಜಾಗೃತವಾಗಿ ಈ ಶಕ್ತಿಕೇಂದ್ರಗಳೊಡನೆ ಸಮ್ಮಿಳಿತವಾದಾಗ ಸಾಧಕನಿಗೆ

ಪಂಚಭೂತಗಳ ಮೇಲೂ ಪ್ರಭುತ್ವಬರುತ್ತದೆ. ನಂತರ ಜ್ಞಾನಲಭಿಸುತ್ತದೆ. ಆತ ಮುಕ್ತನಾಗುತ್ತಾನೆ. ಈ ಸಿದ್ಧಿಗಳೂ ಕೂಡ ಮಾರ್ಗದಲ್ಲಿ ಲಭಿಸುವುವೇ ಹೊರತು ಅವೇ ಕೊನೆಯಲ್ಲ. ಅವುಗಳ ಆಕರ್ಷಣೆಯನ್ನು ದಾಟಿ ಜ್ಞಾನವನ್ನು ಹೊಂದಿದರೆ ಮಾತ್ರ ಸಾಧಕನು ಮುಕ್ತನಾಗುತ್ತಾನೆ. ಹೇಗೂ, ಮೇಲಿನ ಸಿದ್ಧಿಗಳು ಮನುಷ್ಯನನ್ನು ಸರ್ವಶಕ್ತನನ್ನಾಗಿ ಮಾಡುತ್ತವೆಯೆಂಬುದರಲ್ಲಿ ಸಂದೇಹವಿಲ್ಲ.

(ಈ ಲೇಖನಕ್ಕೆ, ಶ್ರೀಸ್ವಾಮಿ ಓಮಾನಂದತೀರ್ಥರ 'ಪಾತಂಜಲಯೋಗಪ್ರದೀಪ'ವನ್ನು ಆಧಾರವಾಗಿಟ್ಟುಕೊಂಡಿದೆ)

ನನಗೆ ಗೊತ್ತಿರುವುದು ಒಂದೇ ಒಂದು ವಿಷಯ — ನನಗೇನೂ ಗೊತ್ತಿಲ್ಲ ಎಂಬುದು.

ಪ್ರಕೃತಿಮಾತೆ ನಮಗೆ ಎರಡು ಕಿವಿಗಳನ್ನೂ ಎರಡು ಕಣ್ಣುಗಳನ್ನೂ ಕೊಟ್ಟವಳು ಒಂದೇ ಒಂದು ನಾಲಿಗೆಯನ್ನು ಕೊಟ್ಟಿದ್ದಾಳೆ ; ನಾವುಹೆಚ್ಚಾಗಿ ಕೇಳಬೇಕು, ಹೆಚ್ಚಾಗಿ ನೋಡಬೇಕು, ಮಾತು ಕಡಮೆಯಾಗಬೇಕು.

—ಸಾಕ್ರಟಿಸ್

ಅ. ರಾ. ಸೇ

ಯೋಗೀಶ್ವರರ ತತ್ತ್ವವಿಚಾರ

ಕುಮಾರವ್ಯಾಸ ಭಾರತವು ಮಾನ್ಯವಾಗಲು, ಅದು 'ಯೋಗೀಶ್ವರರ ತತ್ತ್ವವಿಚಾರ' ಎಂಬುದು ಮುಖ್ಯ ಕಾರಣ. ಮಹತ್ವ, ಭಾರವತ್ವಗಳಿಂದ ಕೂಡಿದ ಮಹಾಭಾರತದ ಮುಖ್ಯ ಸಂದೇಶ : ಮನಶ್ಶಾಂತಿಯನ್ನು ಹೊಂದುವುದು ಜೀವಿಯ ಕರ್ತವ್ಯ ಎಂಬುದು. ಕವಿ ಕ್ಷೇಮೇಂದ್ರನು ಹೀಗೆ ಹೇಳಿರುವುದನ್ನು ಗಮನಿಸಬೇಕು. ತನ್ನ ಗ್ರಂಥವು 'ಕೃಷ್ಣ ಕಥೆ' ಎಂದು ಕವಿಯು ಹೇಳಿರುವುದಕ್ಕೆ ಕಾರಣವೇನೆಂಬುದನ್ನೂ ನಾವು ವಿಚಾರಿಸಬೇಕು.

ಕವಿಯು ತನ್ನ ಕೃತಿಯಲ್ಲಿ ಅಳವಡಿಸಿರುವ ತತ್ತ್ವವಿಚಾರದ ಸ್ಥೂಲ ಸರಣಿಯನ್ನು ಅವಲೋಕಿಸೋಣ.

'ಜಗತ್ತೆಂದು ಕರೆಸಿಕೊಳ್ಳುವುದು ವಾಸ್ತವವಾಗಿ ಸನಾತನವಾದ ಪರಬ್ರಹ್ಮವೇ. ಎಲ್ಲಕ್ಕೂ ಅದು ಅದಿ· ಅದೇ 'ಪುರುಷ' ಎನ್ನಿಸಿಕೊಳ್ಳುವುದು. ಅದೇ ಸರ್ವಲೋಕಮಹೇಶ್ವರ. ಅದು ವ್ಯಕ್ತವೂ ಹೌದು, ಅವ್ಯಕ್ತವೂ ಹೌದು. (ಆ.ಪ. 2-10)

'ನಾನು' ಎಂಬ ಹೆಸರಿನಿಂದ ಕರೆಸಿಕೊಳ್ಳುವ ಆತ್ಮವೂ ಅದೇ. ಅದು ಹುಟ್ಟುವುದೂ ಅಲ್ಲ. ಸಾಯುವುದೂ ಇಲ್ಲ. ಅದು ಸಚ್ಚಿದಾನಂದರೂಪಿ. (ಭೀ. ಪ. 3-45)

ಜ್ಞಾನಿಯು ಪರಬ್ರಹ್ಮದ ಸಗುಣರೂಪ. "ಶ್ರೀ ಕೃಷ್ಣನೇ ಮಹಾಭಾರತದಲ್ಲಿ ಬರುವ ಇಂತಹ ಅವತಾರಿ." ಇವನ ನಿಜಸ್ವರೂಪವನ್ನು ಮನು, ಬ್ರಹ್ಮ, ನಾರದ, ಸನಕಾದಿಗಳೂ, ವಿದುರ, ಭೀಷ್ಮಾದಿಗಳೂ ಬಲ್ಲರು. ಜರಾಸಂಧ, ಶಿಶುಪಾಲ, ದುರ್ಯೋಧನಾದಿಗಳು ಅರಿಯರು. ಹಾಗೆ ತಿಳಿವು ಬಾರದಿರುವುದಕ್ಕೆ 'ವಿಪರೀತ ಮಿಥ್ಯಾಜ್ಞಾನ'ವೇ ಕಾರಣ. ಅಚ್ಯುತನಾದ ಪರಬ್ರಹ್ಮನು ಚ್ಯುತಿಯುಳ್ಳವನಂತೆ ಕಾಣುತ್ತಾನೆ. ಇದು ಚೈತನ್ಯದ ಸ್ವಭಾವ. ಶ್ರೀಕೃಷ್ಣನು ವಿಶ್ವದ 'ಅಂತಸ್ಸ್ಯೂತ ಚೇತನ' (ಸ.ಪ. 9-27) ತನ್ನ ತಲೆಯನ್ನು ತಾನೇ ಕತ್ತರಿಸಿಕೊಂಡು ಹೆದರಿದಂತೆ ಸ್ವಪ್ನವಾಗುತ್ತದೆ. ಅದರಿಂದ ಭಯವಾಗುವುದು ಮಿಥ್ಯಾಜ್ಞಾನ. "ಕನಸು ಎಚ್ಚರ, ಸುಷುಪ್ತಿಗಳಲ್ಲಿ ಏಕರೂಪವಾದ ಯಾವ ಅರಿವು ಇದೆಯೋ ಅದೇ ಆತ್ಮ".

ಸೂರ್ಯ ಮಂಡಲವು ಚಲಿಸುವ ನೀರಿನಲ್ಲಿ ನಡುಗುವ ಹಾಗೆ, ಪರಬ್ರಹ್ಮವು ಲೋಕರೂಪದಲ್ಲಿ ಲೀಲಾಮಗ್ನವಾದಂತೆ ತೋರುತ್ತದೆ (ಸ. ಪ. 9-14)

ಲೋಕವು ಮಿಥ್ಯೆಯಾಗಿದ್ದು ಮಾಯೆಯ ತ್ರಿಗುಣಗಳ ದೆಸೆಯಿಂದ ಇರುವಹಾಗೆ ತೋರುತ್ತದೆ. ತ್ರಿಗುಣಗಳ ವ್ಯಾಪಾರವನ್ನು ಆತ್ಮವಿಚಾರದಿಂದ ನಿರಾಕರಿಸಿದರೆ, ಸತ್ಯಸ್ವರೂಪವು ತಿಳಿಯುತ್ತದೆ. ಆತ್ಮನಿಂದ ಅಂಬರ, ವಾಯು ಮೊದಲಾದ ಕ್ರಮದಲ್ಲಿ ಲೋಕದ ಸೃಷ್ಟಿಯಾಯಿತೆಂದು ಹೇಳುವುದು, ಇಂದ್ರಿಯ ಜ್ಞಾನದಿಂದ ಜಗತ್ತು ಸತ್ಯವೆಂದು ನಿರ್ಧರಿಸಿದವರಿಗೆ ಈ ಸರ್ವಕ್ಕೂ ಆಧಾರವಾಗಿರುವ ಸತ್ಯ, ಆತ್ಮವೊಂದೇ ಎಂದು ತಿಳಿಸುವುದಕ್ಕಾಗಿ. ನಿಜವಾದ ಅರಿವು "ಮಾತು ಮನಸ್ಸುಗಳ ಆಚೆಗಿದೆ" (ಸ. ಪ-9-18)

ಸರ್ವವೂ ಬ್ರಹ್ಮವೇ ಆಗಿದೆ : ಯಜ್ಞ-ಯಜ್ಞಸಾಧನ-ಅಧಿಪತಿ-ಯಜ್ಞಪುರುಷ-ಯಜ್ಞಫಲ. (ಸ.ಪ. 9-19)

ಈ ಜಗತ್ತು ಮಿಥ್ಯೆ : ಇಲ್ಲವೆಂದರೆ ಕಾಣಿಸುತ್ತದೆ. ಸತ್ಯವೆಂದರೆ ತ್ರಿಕಾಲಾಬಾಧಿತವಲ್ಲ. ಬದಲಾವಣೆಗೊಳಗಾದಂತೆ ತೋರುತ್ತದೆ. ಇದಕ್ಕೆ ಉಪಾದಾನ-ಬ್ರಹ್ಮ.

ಜಗತ್ತನ್ನು ಸೃಷ್ಟಿಸಿ ಜೀವಿಯಾಗಿ ವಿಷಯಭೋಗವನ್ನನುಭವಿಸುವಂತೆ ತೋರಿದರೂ, ಅಕರ್ತನಾದ ಅವನು ಸೃಷ್ಟಿಸುವುದೂ ಇಲ್ಲ, ನಾಶಪಡಿಸುವುದೂ ಇಲ್ಲ. ಹೋಗುವವನೂ ಅಲ್ಲ ಬರುವವನೂ ಅಲ್ಲ. ಅವನು ಸೇರುವುದೂ ಇಲ್ಲ, ಅಗಲುವುದೂ ಇಲ್ಲ (ಅ.ಪ. 6-62)

ವಿಷಯ ಭೋಗದಲ್ಲಿ ಮಗ್ನನಾದವನಿಗೆ ಬ್ರಹ್ಮವು ದುರ್ಲಭ. ವಿಷಯವಿಮುಖನಾಗಿ, ಸಾಧನ ಸಂಪತ್ತನ್ನು ಹೊಂದಿ, ಗುರುಮುಖದಿಂದ ಅರಿತವನಿಗೆ ಚೈತನ್ಯದ ಇರುವಿಕೆಯ ಅರಿವು ಸುಲಭ. ಏಕೆಂದರೆ ಚೈತನ್ಯರೂಪವಾದ ಬ್ರಹ್ಮವೊಂದೇ ಈ ಎಲ್ಲ ವ್ಯಾಪಾರಗಳನ್ನೂ ಮಾಡುವಂತೆ ತೋರುತ್ತದೆ.

ವಿಷಯಸೌಖ್ಯದ ಮೋಹದಲ್ಲಿ ಮಗ್ನರಾಗಿ ಪರತತ್ತ್ವರೂಪಿಯಾದ ಬ್ರಹ್ಮವನ್ನು ಮರೆತವರು ಮಾಯೆಯ ಕೈಮುಸಕಿನಿಂದ ಹುಚ್ಚರಾಗುತ್ತಾರೆ. (ಸ. ಪ. 9-7) ಈ ಲೋಕದ ಎಚ್ಚರವು ಯೋಗಿಗೆ ಭ್ರಾಂತಿಯಂತೆ ತೋರುತ್ತದೆ (ಉ. ಪ. 1-23)

ವಿವೇಕಿಯಾದವನು ಆತ್ಮವಿಚಾರವು ತನ್ನ ಪ್ರಥಮಕರ್ತವ್ಯವೆಂದು ಭಾವಿಸಬೇಕು. (ಉ. ಪ.) ತನ್ನ ನಿಜಸ್ವರೂಪವನ್ನು ಉಪನಿಷತ್ತುಗಳು ಬೋಧಿಸುತ್ತಿದ್ದರೂ, ತಾನು ಅಖಂಡ ಚಿನ್ಮಾತ್ರನೆಂದು ಜೀವಿಯು ಅರಿಯುವುದಿಲ್ಲ (ಅ. ಪ. 6-60). ಮನುಷ್ಯಶರೀರವು ಶಾಶ್ವತವಲ್ಲ. ಐಶ್ವರ್ಯವು ಹುಸಿತೋರಿಕೆ. ಮರಣವು ಬಾಯಿಬಿಟ್ಟುಕೊಂಡು ಕಾದಿದೆ ಎಂದು ಯೋಚಿಸಿದ ಜೀವಿಯು ಈ ಆಪತ್ತನ್ನು ನಿವಾರಿಸಿಕೊಳ್ಳುವ ದಾಯವನ್ನು ಕಂಡುಹಿಡಿದು ಧರ್ಮವನ್ನು ಅವಲಂಬಿಸುತ್ತಾನೆ. (ಉ.ಪ 4-11) ಜಿಜ್ಞಾಸುವು ಸ್ವಧರ್ಮ ನಿರತನಾಗಿರಬೇಕು. (ದ್ರೋ.ಪ 18-57) ಈ ದೇಹವು ಪಂಚೇಂದ್ರಿಯಗಳ ಮನೆ; ಕರ್ಮಫಲದಿಂದ ಅನೇಕ ಜನ್ಮಗಳು ಸಂಭವಿಸುತ್ತವೆ. ಇಂದ್ರಿಯಗಮ್ಯವಾದ ಬಾಹ್ಯವಸ್ತುಗಳಿಂದಾರಂಭಿಸಿ ಅಹಂಕಾರದವರೆಗಿನ ಯಾವುದೂ ತಾನಲ್ಲ. ನಿತ್ಯನೂ ಜ್ಞಾನರೂಪಿಯೂ ಆದ ಆತ್ಮನೇ ತಾನು ಎಂದು ಅರಿಯಬೇಕು (ದ್ರೋ. ಪ. 18-59)

ಈ ಜಗತ್ತು ಈಶ್ವರನ ಲೀಲಾವಿನೋದ. ಭೂಯಂತ್ರದ ವಿನೋದಲೀಲೆ ಅವನದು ಎಂದು ಸಗುಣೋಪಾಸಕನು ಭಾವಿಸುವನು. ಅವನ ಯೋಗಕ್ಷೇಮ ಭಗವಂತನದು (ದ್ರೋ. ಪ-9, 62-63) ಸಗುಣೋಪಾಸನೆಯಿಂದ ಅವನು ನಿರ್ಗುಣೋಪಾಸನೆಗೆ ತಾನಾಗಿಯೇ ಹೋಗುತ್ತಾನೆ.

ತತ್ತ್ವವಿಚಾರವನ್ನು ಸರಿಯಾಗಿ ಮಾಡಲು ಮಹಾತ್ಮನಾದ ಸದ್ಗುರುವಿನ ಮೇಲ್ಪಂಕ್ತಿ ಬೇಕು. ಇರುವುದೊಂದೇ. ನಾನು ಅದೇ ಎಂದು ತಿಳಿಯುವುದೇ ನಿಜವಾದ ಅರಿವು. (ಉ. ಪ. 4-16)

ನಾನೇ ಎಲ್ಲೆಡೆಯಲ್ಲಿರುವವನು, ಜೀವಾತ್ಮ-ಪರಮಾತ್ಮರು ಒಂದಾಗುತ್ತಾರೆ ಎಂಬುದರ ತಾತ್ಪರ್ಯ. ನಿತ್ಯವೂ, ಅದ್ವಿತೀಯವೂ, ಪರಿಪೂರ್ಣವೂ, ಕೇವಲ ಜ್ಞಾನರೂಪವೂ ಆದ ಅರಿವೇ ತಾನು ಎಂಬ ಅನುಭವವೇ ಮುಕ್ತಿ (ದ್ರೋ. ಪ. 18-70). 'ಜೀರೆ ಜೀವ ಸುಳ್ಳೆಂಬುದೇ ಐಕ್ಯ ಕಂಡ್ಯ' (ಶ್ರೀ ಬ್ರಹ್ಮಾನಂದರು)

ಕುಮಾರವ್ಯಾಸ ಭಾರತದಲ್ಲಿ ತತ್ತ್ವವಿಚಾರದ ಸಮಗ್ರಸ್ವರೂಪವೂ ಸ್ಪಷ್ಟವಾಗಿ ಅಭಿವ್ಯಕ್ತಗೊಂಡಿದೆ. ನಮ್ಮ ದೇಶದ ಮಹಾ ಅನುಭಾವಿಗಳನೇಕರು ತತ್ತ್ವವಿಚಾರವನ್ನು ಈ ಗ್ರಂಥದ ಅವಲೋಕನ ಪೂರ್ವಕವಾಗಿ ಮಾಡಿದರೆಂಬುದು ಒಂದು ವಿಶೇಷ ಸಂಗತಿ. ಆದುದರಿಂದಲೇ ಸತ್ಸಂಗವನ್ನು ಕುಮಾರವ್ಯಾಸನು ಹೊಗಳುತ್ತಾನೆ; 'ತ್ಯಜಿಸುವುದು ದುಸ್ಸಂಗವನು ಮಿಗೆ ಭಜಿಸುವುದು ಸತ್ಸಂಗವನು'

ವೇದಾಂತದ ರಹಸ್ಯದ ವಸ್ತು ಆತ್ಮನೇ. 'ತತ್ತ್ವಮಸಿ' ಎಂಬ ಮಹಾವಾಕ್ಯದ ವಿವೇಚನೆಯೇ ತತ್ತ್ವವಿಚಾರ.

ಬಿ. ಕುಪ್ಪಸ್ವಾಮಿ

ಯೋಗವಾಸಿಷ್ಠದ ಪ್ರಕಾರ ಪೌರುಷ ಮತ್ತು ವಾಸನಾ

ಸರ್ವರಿಗೂ ತಿಳಿದಹಾಗೆ ಯೋಗವಾಸಿಷ್ಠ ಗ್ರಂಥವು ಅದ್ವೈತಸಿದ್ಧಾಂತಕ್ಕೆ ಸೇರಿದ ಪ್ರಕರಣಗ್ರಂಥ. ಸಾಹಿತ್ಯಶಾಸ್ತ್ರಜ್ಞರ ಪ್ರಕಾರ ಈ ಗ್ರಂಥವು ಕ್ರಿಸ್ತಶಕ ೬ ನೆಯ ಶತಮಾನದಲ್ಲಿ ರಚಿಸಿರಬಹುದು. ಆದರೆ ಇದನ್ನು ರಚಿಸಿದ ಗ್ರಂಥಕರ್ತರಾರೆಂಬುದನ್ನು ನಿರ್ಣಯಿಸಲು ಸಾಧ್ಯವಾಗಿಲ್ಲ. ಸಂಪ್ರದಾಯದ ಪ್ರಕಾರ ರಾಮಾಯಣವನ್ನು ರಚಿಸಿದ ಆದಿಕವಿ ವಾಲ್ಮೀಕಿಯೇ ಈ ಕಾವ್ಯವನ್ನು ರಚಿಸಿರುವರೆಂಬ ನಂಬಿಕೆ ಇದೆ.

ಸಾಧಾರಣವಾಗಿ ವಾಸನಾ ಎಂಬ ಪದವು ಮನಸ್ಸಿನ ಮೇಲೆ ಆಗುವ ಕರ್ಮದ ಸಂಸ್ಕಾರವೆಂಬುದಾಗಿಯೂ, ಈ ಕರ್ಮವು ಹಿಂದಿನ ಜನ್ಮಕ್ಕೆ ಸೇರಿದುದೆಂಬ ಅರ್ಥವೂ ರೂಢಿಯಲ್ಲಿರುವುದು. ಆದರೆ ವಾಸನಾ ಎಂಬ ಪದವು ಹಿಂದಿನ ಜನ್ಮಕ್ಕೆ ಸೇರಿದ ಅನುಭವಗಳ ಪ್ರಭಾವವೆಂದು ವೈಜ್ಞಾನಿಕ ಮಾರ್ಗದಿಂದ ನಿರ್ಣಯಿಸಲು ಸಾಧ್ಯವಾಗುವುದಿಲ್ಲ. ಆದರೆ ಈ ಜನ್ಮದಲ್ಲಿ ಶೈಶವಾವಸ್ಥೆಯಲ್ಲಿಯೂ ಬಾಲ್ಯಾವಸ್ಥೆಯಲ್ಲಿಯೂ ಉಂಟಾದ ಅನುಭವಗಳು ಪ್ರೌಢಾವಸ್ಥೆಯ ಮೇಲೆ ತಮ್ಮ ಪ್ರಭಾವವನ್ನು ಬೀರುವುವೆಂಬುದನ್ನು ವೈಜ್ಞಾನಿಕರೀತ್ಯಾ ನಿರ್ಣಯಿಸಲು ಸಾಧ್ಯವೆಂದು ಇಂದಿನ ಮನಃಶಾಸ್ತ್ರ ಮತ್ತು ಮನೋವಿಶ್ಲೇಷಣ ಶಾಸ್ತ್ರಗಳು ಸ್ಥಿರಪಡಿಸಿರುವುವು.

ಒಬ್ಬ ವ್ಯಕ್ತಿಯು ಯಾವ ಮನೆತನದಲ್ಲಿ ಹುಟ್ಟಿರುವನೋ ಆ ಮನೆತನದಲ್ಲಿ ಅವನು ಯಾವ ಸನ್ನಿವೇಶಗಳಲ್ಲಿ ಬೆಳೆವನೋ ಅವು ಅವನ ವ್ಯಕ್ತಿತ್ವವನ್ನೂ ನಿರ್ಣಯಿಸುವುವು. ಆದರೆ ಆ ವ್ಯಕ್ತಿಯ ಜೀವನವನ್ನು ಈ ವಾಸನಾಜಾಲವು ಸಂಪೂರ್ಣವಾಗಿ ನಿರ್ಣಯಿಸುವುವು ಎಂದು ಹೇಳಲು ಸಾಧ್ಯವಿಲ್ಲ. ನಮ್ಮ ಅನುಭವದಲ್ಲಿ ಇರುವ ಹಾಗೆ ಒಂದೇ ಮನೆತನದಲ್ಲಿ ಹುಟ್ಟಿ ಬೆಳೆದಿರುವ ಮಕ್ಕಳೆಲ್ಲರೂ ಒಂದೇ ಪಿತೃವಾದ ವ್ಯಕ್ತಿತ್ವವನ್ನು ಪಡೆಯುವುದಿಲ್ಲ. ಒಬ್ಬ ಕುಡುಕನಿಗೆ ನಾಲ್ಕು ಜನ ಮಕ್ಕಳಿದ್ದರೆ ಅವರಲ್ಲಿ ಒಬ್ಬರೋ ಇಬ್ಬರೋ ಕುಡುಕರಾಗಬಹುದು. ಆದರೆ ಉಳಿದವರು ತಮ್ಮ ಪ್ರಯತ್ನಪೂರ್ವಕವಾಗಿ ಕುಡಿಯುವುದನ್ನು ಅಭ್ಯಾಸಮಾಡದೆ ಸಜ್ಜನರಾಗಿ ಸಮಾಜದಲ್ಲಿ ಮುಂದಕ್ಕೆ ಬರಬಹುದು. ಹಾಗೆಯೇ ಅತಿ ಶಿಷ್ಟವಂತ ತಾಯಿತಂದೆಗಳಿಗೆ ಹುಟ್ಟಿದ ಮಕ್ಕಳೆಲ್ಲರೂ ಸಜ್ಜನರಾಗದೆ ಒಬ್ಬರೋ ಇಬ್ಬರೋ ದುರ್ಮಾರ್ಗಕ್ಕೆ ತುತ್ತಾಗುವುದು ಸಾಧ್ಯ. ಎಲ್ಲರಿಗೂ ಗೊತ್ತಿರುವ ಹಾಗೆ ಮಹಾತ್ಮ ಗಾಂಧೀಯವರ ಜೇಷ್ಠಪುತ್ರನು ಕುಡುಕನಾದನು, ಹಿಂದೂ ಮತವನ್ನು ಬಿಟ್ಟು ಮಹಮ್ಮದೀಯ ಮತವನ್ನು ಸ್ವೀಕರಿಸಿದನು. ಸಾಧಾರಣವಾಗಿ ಹೀಗೆ ಒಳ್ಳೆಯ ಮನೆತನದಲ್ಲಿ ಕೆಟ್ಟ ಮಕ್ಕಳು ಹುಟ್ಟಿದರೆ ಅಥವಾ ಗುಣರಹಿತ ಮನೆತನದಲ್ಲಿ ಒಳ್ಳೆಯ ಗುಣವಂತರಾವ ಮಕ್ಕಳು ಹುಟ್ಟಿದರೆ ಇವಕ್ಕೆ ಕಾರಣ ಪೂರ್ವಜನ್ಮದ ದುಷ್ಕೃತಿಗಳೋ ಅಥವಾ ಸುಕೃತಿಗಳೋ ಎಂಬುದಾಗಿ ಅಭಿಪ್ರಾಯವಿರುವುದು. ಆದರೆ ಈ ವಿಷಯವನ್ನು ಕುರಿತು ಕೂಲಂಕಷವಾಗಿ ಯೋಚನೆ ಮಾಡಿದರೆ ಎರಡು ನಿಯಮಗಳು ಕಂಡುಬರುವುವು. ಮೊದಲನೆಯದಾಗಿ ಒಬ್ಬ ವ್ಯಕ್ತಿಯ ವಾಸನೆಗಳು ಅಂದರೆ ಅವನ ಹಿಂದಿನ ಅನುಭವಗಳಿಂದ ಉಂಟಾದ ಭಾವನೆಗಳು ತಮ್ಮ ಪ್ರಭಾವ

ವನ್ನು ಮುಂದೆ ತೋರಿಸುವುವು. ಎರಡನೆಯವಾಗಿ ಈ ಪ್ರಭಾವವು. ಶಾಶ್ವತವಾದುದಲ್ಲ. ಬುದ್ಧಿಪೂರ್ವಕವಾಗಿ ಸ್ವಪ್ರಯತ್ನದಿಂದ ತನ್ನಲ್ಲಿರುವ ವಾಸನಾ ಪ್ರಭಾವವನ್ನು ಜಯಿಸಲು ಸಾಧ್ಯ.

ಈ ದೃಷ್ಟಿಯನ್ನೇ ಯೋಗವಾಸಿಷ್ಠವೂ ಪ್ರತಿಪಾದಿಸಿರುವುದು. ಈ ಗ್ರಂಥಕರ್ತರ ಪ್ರಕಾರ ಮನೋವಾಸನೆಯೇ ಮನುಷ್ಯರಿಗೆ ಕರ್ಮರೂಪವಾಗಿ ಪರಿಣಮಿಸುವುದು. ಆದುದರಿಂದ ವಾಸನೆವೊಂದು, ಕರ್ಮ ಮತ್ತೊಂದು ಎಂಬುವುದು ಸರಿಯಲ್ಲ. ಒಬ್ಬ ಮನುಷ್ಯನು ಆತನ ವಾಸನೆಯ ಪ್ರಕಾರ ಕೆಲಸ ಮಾಡುವನು. (II. 9, 13-15.)

ಚೆನ್ನಾಗಿ ಬಲಿತಿರುವ ಸ್ವವಾಸನೆಯೇ ಕರ್ಮವು. "ವಾಸನಾ ಮನಸೋ ನಾನ್ಯಾ"ಅಂದರೆ ಮನಸ್ಸಿನದು ಅಲ್ಲದೆ ಬೇರೆ ವಾಸನೆ ಇಲ್ಲ.ಆದುದರಿಂದಲೇ"ಮನೋ ಹಿ ಪುರುಷಃ ಸ್ಮೃತಃ"ಮನಸ್ಸೇ ಮನುಷ್ಯವೆನ್ನುವರು. (II. 9, 17.)

ಸಾಧಾರಣವಾಗಿ ವಾಸನಾ ಜಾಲವು ಮನುಷ್ಯನನ್ನು ಒಂದು ವಿಧವಾಗಿ ವರ್ತಿಸುವ ಹಾಗೆ ಮಾಡುವುದೆಂದೂ, ಅದರ ಮೇಲೆ ಆತನಿಗೆ ಯಾವ ವಿಧವಾದ ಹತೋಟಿಯೂ ಇಲ್ಲವೆಂದೂ ನಂಬಲಾಗಿದೆ. ಆದರೆ ಇಂತಹ ನಂಬಿಕೆಯನ್ನು ಯೋಗವಾಸಿಷ್ಠವು ನಿರಾಕರಿಸುವುದು. ಈ ಗ್ರಂಥಕರ್ತರ ಪ್ರಕಾರ ವಾಸನಾವ್ಯೂಹವು ಎರಡು ಅಂಶಗಳಿಂದ ಕೂಡಿರುವುದು-ಒಂದು ಶುಭವು ಮತ್ತೊಂದು ಅಶುಭವು. ಒಬ್ಬ ಮನುಷ್ಯನಲ್ಲಿ ಅಶುಭವಾಸನೆಯು ಇದ್ದರೆ ಅದರಿಂದ ಆತನಿಗೆ ಸಂಕಟವು ಪ್ರಾಪ್ತವಾಗುವುದು. (II. 9, 25-27) ಅದನ್ನು ಪ್ರಯತ್ನಪೂರ್ವಕವಾಗಿ ಗೆಲ್ಲಬೇಕು. ಇದು ಸಾಧ್ಯ. ಇದಕ್ಕೆ ಒಂದು ಉಪಮಾನವನ್ನೂ ಕೊಡಲಾಗಿದೆ. ವಾಸನಾ ನದಿಯು ಶುಭ ಮತ್ತು ಅಶುಭವೆಂಬ ಎರಡು ಮಾರ್ಗಗಳಲ್ಲಿ ಹರಿಯುವುದು. ಒಬ್ಬ ವ್ಯಕ್ತಿಯು ಅಶುಭ ವಾಸನೆಯನ್ನು ಪ್ರಯತ್ನ ಪೂರ್ವಕವಾಗಿ ಅಡ್ಡ ಕಟ್ಟಿ ಅದನ್ನು ಶುಭಮಾರ್ಗದಲ್ಲಿಯೇ ಹರಿಯುವಂತೆ ಮಾಡಿಕೊಳ್ಳಬಹುದು.(II. 9. 30.) ಮತ್ತೊಂದು ಉದಾ : ಮಗುವಿನ ವರ್ತನೆಯು ಅಶುಭವಾಗಿ ಇದ್ದರೆ ಅದನ್ನು ತಡೆಗಟ್ಟಿ ಶುಭದ ಹಾದಿಯನ್ನು ಪಡೆಯುವ ಹಾಗೆ ಮಾಡಬಹುದು. ಅಲ್ಲದೆ ಮಗುವಿನ ವರ್ತನೆಯನ್ನು ಅಶುಭ ಹಾದಿಯಲ್ಲಿಯೇ ಹೋಗುವಹಾಗೂ ಪ್ರೋತ್ಸಾಹಿಸಬಹುದು. ಬೆಳೆದ ಮೇಲೂ ಒಬ್ಬ ಮನ್ಯುಷನ ಚಿತ್ತವು ಬಾಲಕನ ವರ್ತನೆಯನ್ನು ಹೋಲಬಹುದು. ಆದುದರಿಂದ ಮನುಷ್ಯನು ತನ್ನ ಪೌರುಷದಿಂದ ಮೆಲ್ಲಮೆಲ್ಲಗೆ ತನ್ನ ಚಿತ್ತವನ್ನು ವಶಪಡಿಸಿಕೊಳ್ಳಬೇಕು. ಒಬ್ಬ ವ್ಯಕ್ತಿಯಲ್ಲಿ ಪ್ರಾಕ್ತನ ವಾಸನೆಯೂ ಅಶುಭವಾಗಿದ್ದರೆ ಅಭ್ಯಾಸದ ಮೂಲಕ ಅದನ್ನು ತಿದ್ದಲು ಸಾಧ್ಯ (II, 9.22-27.)ಹೀಗೆ ಅಭ್ಯಾಸದ ಮೂಲಕ ಪ್ರಯತ್ನಪೂರ್ವಕವಾಗಿ ಶುಭ ವಾಸನೆಯನ್ನು ಬೆಳೆಸಿಕೊಂಡು ಇಂದ್ರಿಯಗಳನ್ನು ಜಯಿಸಬಹುದು. (II. 9, 39-40.)

ಈ ವಿಧವಾಗಿ ಯೋಗವಾಸಿಷ್ಠವನ್ನು ರಚಿಸಿದ ಗ್ರಂಥಕರ್ತರ ಪ್ರಕಾರ ಒಬ್ಬ ಮನುಷ್ಯನು ಕೆಟ್ಟದಾರಿಯನ್ನು ಹಿಡಿದು ಹಾಳಾದರೆ ಇದಕ್ಕೆ ಕಾರಣ ಅವನ ಅಶುಭ ವಾಸನೆಯ ಬಲವಲ್ಲ. ಅದು ಆತನು ಬುದ್ಧಿಪೂರ್ವಕವಾಗಿ ತನ್ನಲ್ಲಿರುವ ಕೆಟ್ಟ ವಾಸನೆಯನ್ನು ಜಯಿಸದೆ ಹೋದುದೇ ಕಾರಣ. ಆದುದರಿಂದ ಈ ಗ್ರಂಥಕರ್ತರು ಮಾನವೀಯತೆಯನ್ನು ದೃಢಪಡಿಸಿ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಬುದ್ಧಿಯ ಆಧಾರದ ಮೇಲೆ ತನ್ನ ವರ್ತನೆಯನ್ನು ತಿದ್ದಿಕೊಳ್ಳಲು ಸಾಧ್ಯವೆಂದು ಸೂಚಿಸಿ ಪ್ರತಿಯೊಬ್ಬ ವ್ಯಕ್ತಿಯ ಮನಸ್ಸಿನಲ್ಲಿಯೂ ಉತ್ಸಾಹ ಉದ್ಭವಿಸುವ ಹಾಗೆ ಮಾಡಿರುವರು.

ಎಚ್. ಎಸ್. ಪಾರ್ವತಿ

ಜೈನಧರ್ಮ

ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ
ಅರ್ಹಶ್ಚೇತಿ ಹ ಜೈನಶಾಸನಮತಿಃ ಕರ್ಮೇತಿ ಮೀಮಾಂಸಕಾಃ
ಸೋಯಂ ವೋ ವಿದಧಾತು ವಾಂಛಿತಫಲಂ ಶ್ರೀ ಕೇಶವಸ್ಸದಾ ॥

[ಶೈವರು ಶಿವನೆಂದು, ವೇದಾಂತಿಗಳು ಬ್ರಹ್ಮನೆಂದು, ಬೌದ್ಧರು ಬುದ್ಧನೆಂದು, ಪ್ರಮಾಣದಲ್ಲಿ ಸಮರ್ಥರಾದ ನೈಯಾಯಿಕರು ಕರ್ತೃವೆಂದು, ಜೈನರು ಅರ್ಹನೆಂದು, ಮೀಮಾಂಸಕರು ಕರ್ಮವೆಂದು ಯಾವನನ್ನು ಉಪಾಸನೆ ಮಾಡುವರೋ ಆ ಶ್ರೀ ಕೇಶವನು ಎಲ್ಲರ ಇಷ್ಟಾರ್ಥವನ್ನು ಸಲ್ಲಿಸಲಿ.]

ಇಂತಹ ಉದಾರ ಮನೋಭಾವದ ಕರ್ನಾಟಕದಲ್ಲಿ ಬೆಳೆದುದು ಜೈನಧರ್ಮ. "ಊರಿಂಗೆ ದಾರಿಯನು ಯಾರು ತೋರಿದರೇನು?" ಎನ್ನುವ ಸರ್ವಜ್ಞನ ಉಕ್ತಿಗೆ ನೆಲೆವೀಡಾದ ನಾಡು ಇದು. ಇಲ್ಲಿ ಎಲ್ಲ ಧರ್ಮಗಳೂ ಒಟ್ಟೊಟ್ಟಿಗೆ, ಒಂದರ ಸಾರವನ್ನು ಒಂದು ಹೀರಿಕೊಂಡು, ಪರಸ್ಪರ ಪ್ರಭಾವ ಬೀರುತ್ತಾ ಬೆಳೆದಿವೆ.

ಜೈನಧರ್ಮವನ್ನು ಅವಲಂಬಿಸಿರುವವರು ಮಾತ್ರವಲ್ಲದೆ ಬೇರೆ ಮತದವರಿಗೂ ಕರ್ನಾಟಕದಲ್ಲಿ ಆ ಮತದ ಬಗ್ಗೆ ಅಷ್ಟಿಷ್ಟು ತಿಳುವಳಿಕೆ ಇದ್ದೇ ಇರುತ್ತದೆ; ಇರಲೇಬೇಕು. ಕಾರಣ, ಕನ್ನಡಸಾಹಿತ್ಯಕ್ಕೆ, ಕರ್ನಾಟಕದ ಶಿಲ್ಪಕಲೆಗೆ ಜೈನಧರ್ಮ ನೀಡಿರುವ ಕಾಣಿಕೆ ಅಪೂರ್ವ. ಆದಿಕವಿ ಪಂಪ, ಅವನೊಂದಿಗೇ ರತ್ನತ್ರಯರೆನ್ನಿಸಿಕೊಂಡ ರನ್ನ, ಪೊನ್ನರು, ಪ್ರಸಿದ್ಧ ಕವಿಗಳಾದ ನಾಗಚಂದ್ರ, ಜನ್ನ, ರತ್ನಾಕರವರ್ಣಿ–ಹೀಗೆ ಕನ್ನಡದ ಮೇರುಕವಿಗಳೆಲ್ಲಾ ಜೈನರೇ ಆದ್ದರಿಂದ, ಆ ಕವಿಶ್ರೇಷ್ಠರ ಸಾಹಿತ್ಯಸುಧೆ ಸವಿದವರಿಗೆಲ್ಲಾ ಜೈನಮತದ ಬಗ್ಗೆ ಅಷ್ಟೋ ಇಷ್ಟೋ ತಿಳುವಳಿಕೆ ಇದ್ದೇ ಇರುತ್ತದೆ. ಕ್ರಿಸ್ತಪೂರ್ವ ಮೂರನೆಯ ಶತಮಾನದಿಂದಲೂ ಜೈನಮತಾವಲಂಬಿಗಳು ಕರ್ನಾಟಕದಲ್ಲಿ ನೆಲಸಿದ್ದಾರೆ. ಇಲ್ಲಿನ ಅನೇಕ ರಾಜಮನೆತನಗಳ ಗುರುಗಳು ಜೈನಮುನಿಗಳು. ಗಂಗರು, ಹೊಯ್ಸಳರು ಜೈನಮತಾವಲಂಬಿಗಳಾಗಿದ್ದರು. ಕದಂಬರಾಜರು ಜೈನಮತಕ್ಕೆ ಒಳ್ಳೆಯ ಆಶ್ರಯವನ್ನೇ ನೀಡಿದರು. ಹೀಗಾಗಿ ಜೈನಧರ್ಮ ಕರ್ನಾಟಕದ ಜನಜೀವನದೊಂದಿಗೆ ಬೆರೆತುಹೋಗಿದೆ; ಸಮರಸವಾಗಿದೆ.

ಇನ್ನು ಕರ್ನಾಟಕ ವಾಸ್ತುಶಿಲ್ಪಕ್ಕೆ ಜೈನಧರ್ಮದ ಕೊಡುಗೆ ವರ್ಣನೆಗೆ ನಿಲುಕದ್ದು. ಶ್ರವಣಬೆಳುಗೊಳದ ಗೋಮಟೇಶ್ವರನ ಮೂರ್ತಿ ಒಂದು ಸಾಕು.

ಆದರೆ ಒಂದು ಪ್ರಶ್ನೆ ವಿಚಾರವಂತರ ಬುದ್ಧಿಯನ್ನು ಸದಾ ಕಲಕುತ್ತಲೇ ಇರುತ್ತದೆ. ನಮ್ಮ ಭಾರತದಲ್ಲಿ ಇಷ್ಟೊಂದು ಧರ್ಮಗಳು, ಜಾತಿಗಳು ಇರುವುದೇಕೆ? ಒಂದು ಧರ್ಮದ ತತ್ತ್ವದಲ್ಲಿ ದೋಷವಿದೆಯೆಂದು ಇನ್ನೊಂದು ಧರ್ಮ ಹುಟ್ಟಿತೇ? ಸ್ಥೂಲವಾಗಿ ಎಲ್ಲ ಧರ್ಮಗಳೂ ಬೋಧಿಸುವುದು ಸತ್ಯ, ದಯೆ, ಲೋಕಕಲ್ಯಾಣ

ಗಳನ್ನೇ. ಬೇರೆಯವರ ತಲೆ ಒಡೆದು, ಧನಸಂಗ್ರಹಿಸಿ ಶ್ರೀಮಂತರಾಗಿ ಎಂದು ಯಾವ ಧರ್ಮವೂ ಹೇಳುವುದಿಲ್ಲ. ಎಂದಮೇಲೆ ಇಷ್ಟೊಂದು ಮತಗಳು ಹುಟ್ಟಲು ಕಾರಣವೇನು ?

ಯಾವುದೇ ಪೂರ್ವಗ್ರಹವಿಲ್ಲದೆ ತಂಪಾದ ಮನಸ್ಸಿನಿಂದ ಆಲೋಚಿಸಿದಾಗ ಇದರ ಕಾರಣ ತಿಳಿಯು ತ್ತದೆ. ಧರ್ಮದಲ್ಲಿ ದೋಷವಿಲ್ಲ. ಧರ್ಮಬೋಧಕರಲ್ಲೂ ದೋಷವಿಲ್ಲ. ಆದರೆ ಮತದ ಅನುಯಾಯಿಗಳು ಆಯಾ ಧರ್ಮವನ್ನು ಅರ್ಥಮಾಡಿಕೊಳ್ಳುವುದರಲ್ಲಿ ಎಡವಿದ್ದಾರೆ, ಆಚರಣೆಯಲ್ಲಿ ತಪ್ಪಿದ್ದಾರೆ. ಕುತರ್ಕ ಪಂಡಿತರು, ಧರ್ಮ ಮುಖಂಡರೆನ್ನಿಸಿಕೊಂಡ ಸ್ವಾರ್ಥಿಗಳು ಮೂಲಧರ್ಮದ ಮುಖಕ್ಕೆ ಮಸಿಬಳಿಯುತ್ತಾರೆ. ಅಜ್ಞಾನಿ ಜನತೆಯನ್ನು ತಪ್ಪು ಮಾರ್ಗಕ್ಕೆ ಎಳೆಯುತ್ತಾರೆ. ಈ ಸಂದರ್ಭದಲ್ಲಿ ಶ್ರೀರಾಮಕೃಷ್ಣ ಪರಮಹಂಸರು ಹೇಳಿರುವ ಒಂದು ಕಥೆ ನೆನಪಿಗೆ ಬರುತ್ತದೆ.

"ಒಬ್ಬರು ಗುರುಗಳ ಹತ್ತಿರ ಒಬ್ಬ ಶಿಷ್ಯನಿದ್ದ. ಅವನಿಗೆ ಅದ್ವೈತ ಸಿದ್ಧಾಂತವನ್ನು ಉಪದೇಶಿಸುತ್ತಾ ಗುರುಗಳು "ಸರ್ವಂ ಬ್ರಹ್ಮಮಯಂ" "ಎಲ್ಲವೂ ಬ್ರಹ್ಮಮಯ" ಎಂದು ಉಪದೇಶಿಸಿದರು. ಶಿಷ್ಯನ ಮನಸ್ಸಿನಲ್ಲಿ ಈ ಮಾತು ನಾಟಿತು. ಒಂದು ದಿನ ರಸ್ತೆಯಲ್ಲಿ ಬರುತ್ತಿದ್ದಾಗ ಒಂದು ಆನೆ ಇದಿರಿಗೆ ಓಡುತ್ತಾ ಬರುತ್ತಿತ್ತು. ಮಾವಟಿಗ ಎಷ್ಟೋ ಪ್ರಯತ್ನಪಟ್ಟರೂ ಅದನ್ನು ತಡೆದು ನಿಲ್ಲಿಸುವುದಕ್ಕಾಗಲಿಲ್ಲ. ಜನರೆಲ್ಲಾ ಹೆದರಿ ಓಡಿಹೋದರು. ಆದರೆ ಈ ಶಿಷ್ಯನಿಗೆ ಎಲ್ಲವೂ ಬ್ರಹ್ಮಮಯ ಎನ್ನುವ ಮಾತು ಆಗಲೇ ನೆನಪಿಗೆ ಬರಬೇಕೆ ? ನಾನೂ ಬ್ರಹ್ಮ, ಈ ಆನೆಯೂ ಬ್ರಹ್ಮ. ನಾನೇಕೆ ದೂರ ಸರಿಯಬೇಕು." ಎಂದು ಮನಸ್ಸಿನಲ್ಲಿಯೇ ತರ್ಕಿಸಿಕೊಂಡು ನಿಂತಲ್ಲಿಯೇ ನಿಂತಿದ್ದ. ಮಾವಟಿಗ ಎಷ್ಟು ಕೂಗಿದರೂ ದೂರ ಸರಿಯಲಿಲ್ಲ. ಆನೆ ಅವನನ್ನು ಸೊಂಡಲಿನಲ್ಲೆತ್ತಿ ದೂರ ಅಪ್ಪಳಿಸಿತು. ಶಿಷ್ಯನ ಮೈಯೆಲ್ಲಾ ನಜ್ಜುಗುಜ್ಜಾಯಿತು. ಅವನ ಸ್ಥಿತಿಯನ್ನು ಕಂಡ ಗುರುಗಳು ಬುದ್ಧಿ ಹೇಳಿದರು. "ಅಯ್ಯೋ ಮೂರ್ಖ ನೀನು ತಿಳಿದಂತೆ, ಆ ಆನೆಗೂ ಜಗತ್ತೆಲ್ಲಾ ಬ್ರಹ್ಮ ಎನ್ನುವ ವಿಚಾರ ತಿಳಿದಿರಬೇಡವೇ ; ಮಾವಟಿಗಬ್ರಹ್ಮನ ಮಾತನ್ನು ಮಾತ್ರ ನೀನ್ಯಾಕೆ ಮೀರಿದೆ" ಎಂದು.

ಹೀಗೆ ಮೂರ್ಖತನದಿಂದ ತತ್ತ್ವದ ಅರ್ಥವನ್ನು ತಪ್ಪುತಪ್ಪಾಗಿ ತಿಳಿದುಕೊಂಡರೆ ಅದರಲ್ಲಿ ಧರ್ಮದ ದೋಷವೇನು ?

ಒಂದೊಂದು ಧರ್ಮದಲ್ಲೂ ದೋಷಕಾಣಿಸಿಕೊಳ್ಳಲು ಇನ್ನೊಂದು ಪ್ರಬಲಕಾರಣ ಜನ ಸಂಪ್ರ ದಾಯಕ್ಕೆ, ಬಾಹ್ಯ ಆಚರಣೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಡುವುದು. ಹೊರಗಿನ ಆಚರಣೆಗಳೇ ಪ್ರಧಾನವಾಗಿ ಅವುಗಳ ಗಲಾಟೆಯಲ್ಲಿ ಮೂಲ ಸತ್ತ್ವ ತತ್ತ್ವಗಳು ಹಿಂದೆ ಬೀಳುತ್ತವೆ. ಈ ಸಂಪ್ರದಾಯಪ್ರಿಯತೆಯನ್ನು, ಡಂಭಾಚಾರವನ್ನೂ ವಿರೋಧಿಸದ ಧರ್ಮಪ್ರವರ್ತಕರೇ ಇಲ್ಲ. ಹೆಚ್ಚು ಸಂದರ್ಭಗಳಲ್ಲಿ ಹೊಸದೊಂದು ಧರ್ಮ ಸ್ಥಾಪನೆಯಾಗಲು ಕಾರಣವಾಗುವುದು ಈ ಅರ್ಥಹೀನ ಸಂಪ್ರದಾಯಗಳೇ.

ವರ್ಧಮಾನ ಮಹಾವೀರ ಜನಿಸಿದ ಸಮಯದಲ್ಲೂ ಭಾರತ ಈ ವಿಚಿತ್ರ ಪರಿಸ್ಥಿತಿಯಲ್ಲೇ ಇತ್ತು. ಯಜ್ಞಯಾಗಾದಿಗಳ ಹೆಸರಿನಲ್ಲಿ ಹಿಂಸೆಯ ಘೋರನೃತ್ಯವೇ ನಡೆಯುತ್ತಿತ್ತು. ಜನ ಸುಖವಾಗಿರಲು ಮೂಕ ಪ್ರಾಣಿಗಳು ತಮ್ಮ ಪ್ರಾಣವನ್ನು ಬಲಿಕೊಡಬೇಕಾಗುತ್ತಿತ್ತು. ಜನರ ಮನಸ್ಸಿನಲ್ಲಂತೂ ಅಜ್ಞಾನದ ಅಂಧಕಾರ ತುಂಬಿತ್ತು. ಜಾತಿ ಪದ್ಧತಿಯಿಂದಾಗಿ ಮೇಲು ಕೀಳೆಂಬ ಭಾವನೆ ಪ್ರಬಲವಾಗಿತ್ತು. ಬೇರೆ ಬೇರೆ ವೃತ್ತಿಗಳಿಂದ ಹುಟ್ಟಿಕೊಂಡಿದ್ದ ವರ್ಣಾಶ್ರಮ ಪದ್ಧತಿ ವಿಕೃತರೂಪ ತಾಳಿತ್ತು. ಒಂದು ಜಾತಿಯಲ್ಲಿ ಹುಟ್ಟಿದವನು ಇಂತಹದೇ ವೃತ್ತಿಯನ್ನವಲಂಬಿಸಬೇಕೆನ್ನುವ ನಿಯಮ ಹುಟ್ಟಿತು. ಇಷ್ಟೇ ಸಾಲದೆನ್ನುವಂತೆ ಒಂದು ವೃತ್ತಿಯನ್ನು ಮಾಡು ವವನು ಶ್ರೇಷ್ಠ, ಇನ್ನೊಬ್ಬ ಕನಿಷ್ಠ–ಈ ರೀತಿಯ ಉಚ್ಚ ನೀಚ ಭಾವ ಸಮಾಜವನ್ನು ಹಣ್ಣು ಮಾಡಿತು. ವಿಧ ವಿಧವಾದ ಕಟ್ಟುಪಾಡುಗಳು ಹುಟ್ಟಿಕೊಂಡವು. ಮೇಲಿನ ವರ್ಣದವರ ಕೈಗೆ ಸಿಕ್ಕಿ ಮಿಕ್ಕ ಜಾತಿಯವರು, ವಿದ್ಯೆಗೂ ಅರ್ಹತೆಯಿಲ್ಲದೆ ದಾಸರಾಗಿ ಬಾಳಬೇಕಾಯಿತು. ಇಂತಹ ಪರಿಸ್ಥಿತಿಯಲ್ಲಿ ಜಾತಿಪದ್ಧತಿಯನ್ನು ನಿರ್ಮೂಲಮಾಡುವ,

'ಮನುಷ್ಯರೆಲ್ಲ ಸಮಾನರು, ಎಲ್ಲರಿಗೂ ಧಾರ್ಮಿಕ ಅಧಿಕಾರವಿದೆ, ಯಾರು ಬೇಕಾದರೂ ಪ್ರಯತ್ನಪಟ್ಟರೆ ಮುಕ್ತರಾಗಬಹುದು' ಎಂದು ಸಾರುವ ಪ್ರಬಲ ಧರ್ಮವೊಂದು ಜನ್ಮ ತಾಳಬೇಕಾಯಿತು. ಅಂತಹ ಧರ್ಮದ ಜ್ಯೋತಿಯನ್ನು ಹಿಡಿದು ವರ್ಧಮಾನ ಮಹಾವೀರ ಜನ್ಮತಾಳಿದ. ನೊಂದ ಜನತೆಗೆ ತಂಪಿನ ನೀರೆರೆದ. ಎಲ್ಲರಿಗೂ ಅರ್ಥವಾಗುವ ಜನಸಾಮಾನ್ಯರ ಭಾಷೆಯಲ್ಲಿ ಧರ್ಮವನ್ನುಪದೇಶಿಸಿದ.

ಜೈನರ ನಂಬುಗೆಯಂತೆ ವರ್ಧಮಾನ ಜೈನಮತಸ್ಥಾಪಕನೇನೂ ಅಲ್ಲ. ಜೈನಮತ ಅನಾದಿಯಾದವು. ಧರ್ಮದ ಗ್ಲಾನಿಯಾದಾಗಲೆಲ್ಲಾ ಒಬ್ಬೊಬ್ಬ ತೀರ್ಥಂಕರರು ಜನ್ಮವೆತ್ತಿ ಜನರನ್ನು ಉದ್ಧಾರಮಾಡುತ್ತಲೇ ಇದ್ದಾರೆ. ಮೊದಲನೆಯವರಾದ ವೃಷಭತೀರ್ಥಂಕರರಿಂದ ಹಿಡಿದು ೨೪ ಜನ ತೀರ್ಥಂಕರರು ಈ ಧರ್ಮವನ್ನು ನಿರಂತರವಾಗಿ ಬೋಧಿಸುತ್ತ ಬಂದಿದ್ದಾರೆ. ಇವರಲ್ಲಿ ವರ್ಧಮಾನನೇ ಕೊನೆಯವನು. ಆದರೆ ಈ ೨೪ ಜನರಲ್ಲಿ ಐತಿಹಾಸಿಕ ಕಾಲಕ್ಕೆ ಸಂಬಂಧಪಟ್ಟವರು ಪಾರ್ಶನಾಥ ಮತ್ತು ವರ್ಧಮಾನ ಇಬ್ಬರೇ.

ವರ್ಧಮಾನ ಮಹಾವೀರನ ಉಪದೇಶ ಆ ಕಾಲದ ಜನರಿಗಂತೂ ಬೆಳಕನ್ನು ನೀಡಿತು. ತಪ್ಪು ಮಾರ್ಗದಲ್ಲಿ ಹೆಜ್ಜೆ ಇಡುತ್ತಿದ್ದವರಿಗೆ ಸರಿದಾರಿ ತೋರಿತು. ಮುಖ್ಯವಾಗಿ ಮೇಲಿನವರ ದಬ್ಬಾಳಿಕೆಗೆ ಸಿಕ್ಕು ನೊಂದು ನವೆಯುತ್ತಿದ್ದ ಜನ ನೆಮ್ಮದಿಯ ಉಸಿರೆಳೆಯುವಂತಾಯಿತು.

ಮುಂದೆ ಆ ಮತವು ಮಿಕ್ಕ ಮತಗಳಂತೆಯೇ ಅನೇಕ ಏಳು ಬೀಳುಗಳನ್ನು ಕಾಣಬೇಕಾಯಿತು. ಆದರೆ ಜೈನಧರ್ಮದ ಮೂಲ ತತ್ತ್ವಗಳು ಎಲ್ಲ ಕಾಲಕ್ಕೂ ಸರ್ವಮಾನ್ಯವಾಗಿವೆ ಎನ್ನುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ. ಮುಖ್ಯವಾಗಿ ಜೈನರು ಪಂಚವ್ರತಗಳೆಂದು ಆಚರಿಸುವ ನಿಯಮಗಳ ಒಂದಂಶವನಾದರೂ ಇಂದಿನ ಜನ ಆಚರಿಸಿದರೆ ವೈಯಕ್ತಿಕವಾಗಿ ಜನರ ನೀತಿ ಉತ್ತಮವಾಗುವುದಲ್ಲದೆ, ಈಗ ನಡೆಯುತ್ತಿರುವ ಸಾಮಾಜಿಕ ಅನ್ಯಾಯಗಳೂ ಬಹುಮಟ್ಟಿಗೆ ಕಡಮೆಯಾಗಬಲ್ಲವು.

ಜೈನಮತದ ಪಂಚವ್ರತಗಳಿವು

೧. ಸತ್ಯ ಎಂದರೆ ನಿಜವನ್ನು ಹೇಳುವುದು.

೨. ಅಹಿಂಸೆ ಎಂದರೆ ಯಾರಿಗೂ ಯಾವರೀತಿಯಲ್ಲೂ ನೋವಾಗದಂತೆ ನಡೆದುಕೊಳ್ಳುವುದು.

೩. ಅಸ್ತೇಯ, ಇತರರಿಗೆ ಸೇರಿದ್ದನ್ನು ಕದಿಯದಿರುವುದು.

೪. ಬ್ರಹ್ಮಚರ್ಯ ಎಂದರೆ ಸಂಯಮ

೫. ಅಪರಿಗ್ರಹ ಎಂದರೆ ವಸ್ತುಗಳನ್ನು ಸಂಗ್ರಹಿಸದೆ ಇರುವುದು.

ವ್ಯಕ್ತಿಯ ಹಿತದೃಷ್ಟಿಯಿಂದ ಮಾತ್ರವಲ್ಲದೆ, ಸಮಾಜದ ಹಿತದೃಷ್ಟಿಯಿಂದಲೂ ಈ ಪಂಚವ್ರತಗಳೂ ಎಲ್ಲ ಕಾಲದಲ್ಲೂ ಅನುಕರಣೀಯ. ಇವುಗಳಲ್ಲಿ ಅಸ್ತೇಯ, ಅಪರಿಗ್ರಹ ಈ ಎರಡನ್ನು ಮನುಷ್ಯ ತನ್ನ ಕೈಲಾದಷ್ಟು ಆಚರಣೆಗೆ ತಂದರೆ ದೇಶದ ಆರ್ಥಿಕ ಸಮಸ್ಯೆಗೆ ಎಷ್ಟೋ ಪರಿಹಾರ ದೊರೆತಂತಾಗುತ್ತದೆ. ಈಗಂತೂ ಹೆಚ್ಚು ಹೆಚ್ಚು ಸಂಗ್ರಹಿಸಿಟ್ಟುಕೊಳ್ಳುವ ಚಟ ಜನರಲ್ಲಿ ಹೆಚ್ಚುತ್ತಿದೆ. ಆದ್ದರಿಂದಲೇ ಆರ್ಥಿಕ ಅಸಮಾನತೆಯು ದಿನದಿನಕ್ಕೆ ಹೆಚ್ಚುತ್ತಲೇ ಇದೆ. ಈ ಸಂದರ್ಭದಲ್ಲಿ ಟಾಲಸ್ಟಾಯ್ ಅವರು ಬರೆದ "ಒಬ್ಬನಿಗೆ ಎಷ್ಟು ನೆಲಬೇಕು." ಕಥೆ ನೆನಪಿಗೆ ಬರುತ್ತದೆ. ಆ ಕಥೆಯ ನಾಯಕ ಅನೇಕ ರೀತಿಗಳಿಂದ ನೂರಾರು ಎಕರೆ ಭೂಮಿ ಸಂಪಾದಿಸಿದ್ದ. ಇದಕ್ಕಿದ್ದಂತೆ ಒಂದು ದಿನ ಅವನು ಸತ್ತುಬಿದ್ದಾಗ ಅವನನ್ನು ಭೂಮಿಯಲ್ಲಿ ಹೂತರು. ಆಗ ಅವನಿಗೆ ಬೇಕಾದದ್ದು ಕೇವಲ ಆರು ಅಡಿ ನೆಲ ಮಾತ್ರ. ಈ ಕಥೆಯ ನೀತಿಯನ್ನು ಜನ ಸ್ವಲ್ಪವಾದರೂ ಅರ್ಥಮಾಡಿಕೊಳ್ಳಬೇಕು.

"ಕೊಲಲಾಗದೆಂಬ ಜೈನ ಮತವೆನ್ನ ತಲೆಯ ಮೇಲಿರಲಿ"

"ಕೊಲದಿಪ್ಪಾ ಧರ್ಮವೆಲ್ಲರಿಗೂ ಸನುಮತವು" ಎಂದಿದ್ದಾನೆ ಸರ್ವಜ್ಞ. ಆದರೆ ಈ ಅಹಿಂಸೆಯ

ಬಗೆಗೂ ಜನ ಒಂದು ಮಾತನ್ನು ಮರೆಯಬಾರದು. ಅಹಿಂಸೆಯೆಂದರೆ ಹೇಡಿತನವಲ್ಲ. ದುರ್ಬಲರು ಅನುಸರಿಸುವ ನೀತಿಯೂ ಅಲ್ಲ. ಹಾಗೆ ಹೇಡಿತನವೇ ಅಹಿಂಸೆಯಾಗಿದ್ದರೆ ವರ್ಧಮಾನ ಮಹಾವೀರ ಎನ್ನಿಸಿಕೊಳ್ಳುತ್ತಿರಲಿಲ್ಲ. ತನ್ನಲ್ಲಿರುವ ಶಕ್ತಿಯನ್ನು ಬೆಳೆಸಿಕೊಂಡೂ ಇನ್ನೊಬ್ಬರಿಗೆ ಹಿಂಸೆಯಾಗದಂತೆ ನಡೆದುಕೊಳ್ಳುವುದೇ ನಿಜವಾದ ಅಹಿಂಸೆ. ಅಷ್ಟೇ ಅಲ್ಲ, ಅಹಿಂಸೆಯೆಂದರೆ ಅದರಲ್ಲಿ ಮಾನಸಿಕವಾದ ಅಹಿಂಸೆಯೂ ಸೇರುತ್ತದೆ. ಬೇರೆಯವರಿಗೆ ಸದಾ ಕಿರುಕುಳ ಕೊಡುವವನು, ಯಾವ ಪ್ರಾಣಿಯನ್ನು ಕೊಲ್ಲದಿದ್ದರೂ, ಅಹಿಂಸಾವಾದಿ ಎನ್ನಿಸಿಕೊಳ್ಳಲಾರ.

ಜೈನಧರ್ಮದಲ್ಲಿರುವ ಇನ್ನೊಂದು ಅತಿ ಉತ್ತಮ ಅಂಶ ಕರ್ಮದ ಪ್ರಾಮುಖ್ಯತೆ. ಯಾರೇ ಆಗಲಿ ಅವನು ಮಾಡಿದ ಕರ್ಮಕ್ಕೆ ತಕ್ಕ ಫಲ ಅನುಭವಿಸಲೇ ಬೇಕು. ಕೇವಲಜ್ಞಾನ ಪಡೆದವನು ಮಾತ್ರ ಈ ಕರ್ಮ ಬಂಧನದಿಂದ ತಪ್ಪಿಸಿಕೊಳ್ಳಬಲ್ಲ. ಅದು ಹೊರತು ಮಿಕ್ಕ ಯಾವ ದೈವಿಕ ಶಕ್ತಿಯೂ ಜೀವಿಯನ್ನು ಕರ್ಮಬಂಧನ ದಿಂದ ಬಿಡುಗಡೆ ಮಾಡಲಾರದು. ಇದರ ಅರ್ಥವನ್ನು ಆಧುನಿಕಮಾನವ ಸರಿಯಾಗಿ ತಿಳಿದುಕೊಳ್ಳಬೇಕು. ಪ್ರತಿಯೊಬ್ಬನೂ ತನ್ನ ಕರ್ಮಕ್ಕೆ ತಾನೇ ಹೊಣೆ. ದೇವರ ಅನುಗ್ರಹ ಎಂಬ ಮಾತಿಗೆ ಅರ್ಥವಿಲ್ಲ. ಯಾವ ದಾನಧರ್ಮಗಳಿಂದಲೂ ತಾನು ಮಾಡಿದ ಪಾಪವನ್ನು ತೊಳೆದುಕೊಳ್ಳಲಾರ ಎಂಬ ಅರಿವು ಇಂದಿನ ಮಾನವನಿಗೆ ಮನದಟ್ಟಾದರೆ ತುಂಬಾ ಒಳ್ಳೆಯದು.

ಜೈನ ಸಿದ್ಧಾಂತ ದೇವರನ್ನು ಅಥವಾ ಸೃಷ್ಟಿಕರ್ತನನ್ನು ನಂಬುವುದಿಲ್ಲ. ಆದರೆ, ಸಂಪೂರ್ಣ ವ್ಯಕ್ತಿತ್ವ ವನ್ನು ಪಡೆದ ಶುದ್ಧ ಮಾನವರನ್ನು ತೀರ್ಥಂಕರರೆಂದು ಭಾವಿಸಿ ಪೂಜಿಸುತ್ತದೆ. ಇದನ್ನೇ ಇನ್ನೊಂದು ರೀತಿ ಯಲ್ಲಿ ಹೇಳುವುದಾದರೆ ಮನುಷ್ಯನೇ ಶುದ್ಧ ಸತ್ವದಿಂದ ಕೂಡಿದಾಗ ದೇವಪಟ್ಟವನ್ನೇರಬಲ್ಲ ಎನ್ನುವುದನು ಇದು ಸೂಚಿಸುತ್ತದೆ ಮತ್ತು ಹಾಗೆ ಏರಲು ಜಾತಿಮತಗಳ ಕೋಟೆ ಅಡ್ಡ ಬರುವುದಿಲ್ಲ.

ಹಿಂದುಗಳಿಗೂ ಪವಿತ್ರವಾದ ದೀಪಾವಳಿಯಂದು ವರ್ಧಮಾನ ಮಹಾವೀರನ ಪುಣ್ಯತಿಥಿ. ದೇಹರಹಿತ ರಾಗಿದ್ದರೂ, ದೇಹ ಸಹಿತವಾಗಿದ್ದರೂ ಮಹಾಪುರುಷರು ಜ್ಯೋತಿರೂಪರು, ಬೇರೆಯವರಿಗೆ ಬೆಳಕು ನೀಡು ವವರು, ಎನ್ನುವುದನ್ನು ಇದು ಸೂಚಿಸುತ್ತಿದೆ.

ಅದೃಷ್ಟವಂತನನ್ನು ಸಮುದ್ರಕ್ಕೆ ಎಸೆ, ಅವನು ಬಾಯಲ್ಲಿ ಮುತ್ತು ಕಚ್ಚಿಕೊಂಡು ಹೊರಬರುತ್ತಾನೆ.

—ಅರಬ್ಬರ ಗಾದೆ

ರಂ. ಶ್ರೀ. ಮುಗಳಿ

ಆಧುನಿಕ ಆಶ್ರಮಗಳು

ಪ್ರಾಚೀನಕಾಲದ ಆಶ್ರಮಪದ್ಧತಿಯಿಂದ ಸ್ಫೂರ್ತಿಪಡೆದು ಕೇವಲ ವಿದ್ಯಾದಾನಕ್ಕಾಗಲಿ ವಿದ್ಯೆಯೊಡನೆ ನೀಡುವ ಆಧ್ಯಾತ್ಮಿಕ ಸಾಧನೆಗಾಗಲಿ ಧಾರ್ಮಿಕ ಶಿಕ್ಷಣಕ್ಕಾಗಲಿ ಹಲಕೆಲವು ಆಧುನಿಕ ಆಶ್ರಮಗಳು ನಮ್ಮ ದೇಶದಲ್ಲಿ ತಲೆಯೆತ್ತಿವೆ. ಅವುಗಳನ್ನು ಪ್ರಾರಂಭಮಾಡಿ ನಡಸಿಕೊಂಡು ಬಂದಿರುವ ನಿಷ್ಠಾವಂತ ವ್ಯಕ್ತಿಗಳು ಇಟ್ಟುಕೊಂಡಿರುವ ಉದ್ದೇಶವೇನು ? ಅದು ಎಷ್ಟರಮಟ್ಟಿಗೆ ಕೈಗೂಡಿದೆ ? ಎಂದು ಕೇಳುವುದು ಸ್ವಾಭಾವಿಕ. ಅವುಗಳ ಮುಖ್ಯ ಉದ್ದೇಶವೆಂದರೆ ಗುರುಶಿಷ್ಯರನ್ನು ಒಂದೇ ಪರಿಸರದಲ್ಲಿಟ್ಟು ಗುರುಗಳ ಬೋಧನೆಯಿಂದ ಮಾತ್ರವಲ್ಲ ಅವರ ನಿತ್ಯಸಂಪರ್ಕ, ಸಾನ್ನಿಧ್ಯದಿಂದ ಶಿಷ್ಯಂದಿರ ಇಡೀ ವ್ಯಕ್ತಿತ್ವವು ಅವರವರ ಸ್ವಭಾವ ಮತ್ತು ಪ್ರವೃತ್ತಿಗಳಿಗೆ ಅನುಗುಣವಾಗಿ ಅರಳುವಂತೆ ನೆರವಾಗುವುದು. ಈ ಆಶ್ರಮ ಪದ್ಧತಿಯಲ್ಲಿ ಯಾವೊಂದು ಅಭ್ಯಾಸಕ್ರಮದ ಅನುಸರಣ, ಅವನ್ನು ಒರೆಹಚ್ಚಿ ನೋಡುವ ಪರೀಕ್ಷಣ, ಅದರಲ್ಲಿ ಪಡೆದ ಗುಣಗಳ ಆಧಾರದಿಂದ ಪದವಿಗಳ ವಿತರಣ ಇವು ಗೌಣವಾಗುತ್ತವೆ; ಚಾರಿತ್ರ್ಯಸಂಪಾದನೆ, ವ್ಯಕ್ತಿತ್ವವಿಕಾಸ ಇವು ಮುಖ್ಯವಾಗುತ್ತವೆ. ಅಂತೇ ಇಂಥ ವಿದ್ಯಾಲಯಗಳಲ್ಲಿ ಪ್ರತಿಯೊಂದು ನಿಮಿಷದ ಕಾರ್ಯಕ್ರಮಕ್ಕೆ ಅರ್ಥವಿರುತ್ತದೆ, ಪರಿಸರದ ಪ್ರತಿಯೊಂದು ಅಂಗಕ್ಕೆ ಮಹತ್ವವಿರುತ್ತದೆ. ಈ ಆಧುನಿಕ ಆಶ್ರಮಗಳು ಒಂದೇ ರೀತಿಯಾಗಿರುವುದಿಲ್ಲ. ಕೆಲವು ಅವಕ್ಕೆ ಪ್ರೇರಣೆ ನೀಡಿದ ಮಹಾವ್ಯಕ್ತಿಗಳ ಜೀವನದರ್ಶನಕ್ಕೆ ಹೊಂದಿಕೊಂಡು ಸ್ವತಂತ್ರ ಶಿಕ್ಷಣಕ್ರಮವನ್ನು ರೂಪಿಸಿಕೊಂಡು ಬಾಹ್ಯ ನಿಯಂತ್ರಣದಿಂದ ದೂರವಾಗಿರುತ್ತವೆ. ಬೇರೆ ಕೆಲವು ಪ್ರಚಲಿತವಾದ ಶಾಸನಮಾನ್ಯವಾದ ಶಿಕ್ಷಣಪದ್ಧತಿಯನ್ನು ಸ್ವೀಕಾರಮಾಡಿ ಅದರ ಚೌಕಟ್ಟಿನಲ್ಲಿ ನಡೆಯುತ್ತಲೆ ತಮ್ಮ ನೈತಿಕ, ಧಾರ್ಮಿಕ ಧ್ಯೇಯಗಳ ಈಡೇರಿಕೆಗಾಗಿ ಶ್ರಮಿಸುತ್ತವೆ. ಯಾವುದೇ ದೇಶದ ಜೀವನದಲ್ಲಿ ಇಂಥ ಸಂಸ್ಥೆಗಳು ಎಷ್ಟೇ ಸ್ವಲ್ಪವಾಗಿದ್ದರೂ ಅವು ಪ್ರಗತಿಪಥದಲ್ಲಿರುವ ಉನ್ನತ ಪ್ರಯೋಗಾಲಯಗಳಾಗಿ ಸ್ಫೂರ್ತಿದಾಯಕವಾಗಿರುತ್ತವೆ. ಅವನ್ನು ಇಂದಿಲ್ಲ ನಾಳೆ ಎಲ್ಲ ಕಡೆ ಅನ್ವಯಗೊಳಿಸಿ ಶಿಕ್ಷಣಪದ್ಧತಿಯಲ್ಲಿ ಕ್ರಾಂತಿಯನ್ನು ತರಬಹುದು ಎಂಬ ಆಶಾವಾದಕ್ಕೆ ಅವಕಾಶವಿದೆ. ಆದ್ದರಿಂದ ವಿಚಾರಶೀಲರೂ ಧ್ಯೇಯವಾದಿಗಳೂ ಆದ ಕಾರ್ಯಕರ್ತರು ಮತ್ತು ಆಡಳಿತಗಾರರು ಅವುಗಳಿಗೆ ಉತ್ತೇಜನವನ್ನೂ ಸಹಾಯವನ್ನೂ ಯಾವುದೇ ಬಗೆಯ ಅನಾವಶ್ಯಕ ಶರ್ತುಗಳನ್ನು ಹಾಕದೆ ನೀಡುತ್ತಿರಬೇಕು. ಅವುಗಳನ್ನು ನಡಸಿಕೊಂಡು ಹೊರಟಿರುವ ವ್ಯಕ್ತಿಗಳು ತಮ್ಮ ಧ್ಯೇಯವಾದದಿಂದ ಎಳ್ಳಷ್ಟೂ ವಿಚಲಿತರಾಗದೆ ಮುಂದುವರಿಯಬೇಕು.

ಸಾಮಾನ್ಯವಾಗಿ ಇದನ್ನು ಒಪ್ಪಿದರೂ ಈ ಸಂಸ್ಥೆಗಳನ್ನು ಪ್ರತ್ಯಕ್ಷವಾಗಿ ನಡೆಸಿಕೊಂಡು ಹೋಗುವಾಗ ಉಂಟಾಗುವ ಸಮಸ್ಯೆಗಳು ಮತ್ತು ತಲೆದೋರುವ ಅಡಚಣೆಗಳು ಸಾಕಷ್ಟಿರುತ್ತವೆ ಎಂಬುದನ್ನು ಅರಿತಿರಬೇಕು. ಮುಖ್ಯವಾಗಿ ಧ್ಯೇಯವಾದದ ಪಾಲನೆಗೆ ಬೇಕಾದ ಶ್ರದ್ಧೆನಿಷ್ಠೆಗಳು ಶಿಕ್ಷಕ ವರ್ಗದಲ್ಲಿ

ಮತ್ತು ಇತರ ಸೇವಕಜನರಲ್ಲಿ ಸತತವಾಗಿ ಉಳಿಯುವುದು ಕಷ್ಟ. ಸಂಬಳ ಸಾರಿಗೆಗಳ ವಿಚಾರದಲ್ಲಿ ಮನುಷ್ಯನ ವ್ಯವಹಾರವೃತ್ತಿ ಅನೇಕಸಲ ಪ್ರಭಾವಿಯಾಗುತ್ತದೆ. ಸ್ಥಾನಮಾನಗಳ ವ್ಯಾಮೋಹ ನಿಃಸ್ವಾರ್ಥಸೇವೆಯ ಮನೋಭಾವವನ್ನು ವಿಚಲಿತಗೊಳಿಸುತ್ತದೆ. ಸುತ್ತಮುತ್ತಲಿನ ವಾತಾವರಣದಲ್ಲಿಯ ವಿಲೋಭನಗಳು ಎಂಥವನನ್ನೂ ಸೆಳೆಯುತ್ತವೆ. ಹೊರಗಿನ ಸೆಳೆತಗಳು ಹೆಚ್ಚುತ್ತ ಹೋದಂತೆ ಒಳಗಿನ ಸಾತ್ವಿಕಪ್ರೇರಣೆಗಳು ದುರ್ಬಲವಾಗುತ್ತ ಸಾಗುತ್ತವೆ. ಇಂಥ ಸಂದರ್ಭಗಳಲ್ಲಿ ಗುರುಸ್ಥಾನದಲ್ಲಿರುವವರ ಗುರುತ್ವವು ಅಬಾಧಿತವಾಗಿರುವಂತೆ ನೋಡಿಕೊಳ್ಳಬೇಕಾದರೆ ತಾತ್ವಿಕ ಮತ್ತು ವ್ಯಾವಹಾರಿಕ ದೃಷ್ಟಿಗಳ ಸಮನ್ವಯವನ್ನು ಸಾಧಿಸುವ ನೇತೃತ್ವವಿರಬೇಕು. ಇದು ಒಬ್ಬ ವ್ಯಕ್ತಿಯದಾದರೆ ಆ ವ್ಯಕ್ತಿಯ ಜೀವಮಾನದಲ್ಲಿ ಮಾತ್ರ ಯಾವುದೊಂದು ಸಂಸ್ಥೆ ಸುಸೂತ್ರವಾಗಿ ನಡೆಯಬಹುದು. ಮುಂದೆ ಅದು ತನ್ನ ಚೈತನ್ಯವನ್ನು ಕಳೆದುಕೊಂಡು ಕಳೆಯಿಲ್ಲದ ಕಳೇವರವಾಗುವ ಸಂಭವವಿರುತ್ತದೆ. ಇದಕ್ಕಾಗಿ ಸಾಮೂಹಿಕನೇತೃತ್ವದ ಪರಂಪರೆಯೊಂದು ಬೆಳೆಯುವಂತೆ ಮಾಡುವುದು ಅವಶ್ಯ. ಸಮಕಾಲೀನ ವಿಲೋಭನಗಳಿಗೆ ವಶವಾಗದೆ ಇಂಥ ಕಾರ್ಯಕ್ಕೆ ತಮ್ಮನ್ನು ಸಮರ್ಪಿಸಿಕೊಳ್ಳಬೇಕೆನ್ನುವ ಯುವಕಯುವತಿಯರು ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಂಡು ಇಂಥ ಸಂಸ್ಥೆಗಳ ನೇತೃತ್ವವನ್ನು ಸಾಮೂಹಿಕವಾಗಿ ಸಾಮರಸ್ಯದಿಂದ ವಹಿಸಿಕೊಳ್ಳಲು ಅಣಿಯಾಗಬೇಕು. ಅವರು ಕೇವಲ ಒಬ್ಬ ಮಹಾವ್ಯಕ್ತಿಯ ನೆರಳುಗಳಂತೆಯೂ ಆಗಬಾರದು, ಸಿಡಿದು ಹೋಗುವ ಕಿಡಿಗಳಂತೆಯೂ ಆಗಬಾರದು.

ಇಂದು ಶಿಕ್ಷಣಕ್ಷೇತ್ರದಲ್ಲಿ ಉಂಟಾಗಿರುವ ಅನೇಕ ಸಮಸ್ಯೆಗಳಿಗೆ ಮೂಲಸಮಸ್ಯೆಯೆಂದರೆ ದೇಶದಲ್ಲಿ ಸಾರ್ವತ್ರಿಕವಾಗಿರುವ ಚಾರಿತ್ರ್ಯಶೀಲಗಳ ಕೊರತೆ. ಈ ಕೊರತೆ ಹೀಗೆ ಇರತಕ್ಕದ್ದೇ ಎನ್ನುವುದಾದರೆ ದೇಶದ ಭವಿಷ್ಯ ಒಳ್ಳೆಯದಾಗದು. ಇದನ್ನು ನಿವಾರಿಸುವುದು ಸಾಧ್ಯ ಎಂದು ನಂಬಿರುವವರೆಲ್ಲ ಕಠೋರಸಾಧನೆಯನ್ನು ಮಾಡಬೇಕಾಗಿದೆ; ಅವ್ಯಾಹತಪ್ರಯತ್ನ ಮಾಡಬೇಕಾಗಿದೆ. ಈ ದಿಶೆಯಲ್ಲಿ ಆಧುನಿಕ ಆಶ್ರಮಗಳು ಅತ್ಯಂತ ಮಹತ್ವದ ಪಾತ್ರ ವಹಿಸುತ್ತವೆ. ಇವುಗಳಲ್ಲಿ ಕೆಲಸಮಾಡುವ ಅಧ್ಯಾಪಕರು ಮತ್ತು ಇತರರು ತಮ್ಮ ಶ್ರದ್ಧೆ ನಿಷ್ಠೆಗಳಿಂದ, ಸೇವೆಯಿಂದ ದೇಶದ ಮುಂದೆ ನಿಜವಾದ ಮೇಲ್ಪಂಕ್ತಿಯನ್ನು ಇರಿಸುವಂಥವರಾಗಬೇಕು. ಅವರಿಂದ ಸ್ಫೂರ್ತಿಯನ್ನೂ ಸಹಾಯವನ್ನೂ ಪಡೆದು ಬೆಳೆಯುವ ಮಕ್ಕಳು ಇತರ ಶಿಕ್ಷಣಸಂಸ್ಥೆಗಳಲ್ಲಿ ಓದುತ್ತಿರುವ ಮಕ್ಕಳಿಗೆ ದಾರಿದೀಪವಾಗಬೇಕು. ಅಂದರೇನೇ ಇಂದಿನ ವಿಷಮವರ್ತುಲದಿಂದ ನಮ್ಮ ವಿದ್ಯಾಭ್ಯಾಸವ್ಯವಸ್ಥೆ ಬರಬರುತ್ತಾ ಹೊರಬರುತ್ತದೆ, ಅದರ ಸುಫಲಗಳು ಕಾಣಬರುತ್ತವೆ.

ಒಂದೊಂದು ಸಲ ಇಂಥ ಆಶ್ರಮಗಳಲ್ಲಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳು ಅವುಗಳ ಉನ್ನತ ಪರಿಸರದಲ್ಲಿರುವವರೆಗೆ ಸರಿಯಾಗಿದ್ದು ಅಲ್ಲಿಂದ ಹೊರಗೆ ಹೋದಾಗ ಮತ್ತು ವಿದ್ಯಾಭ್ಯಾಸವನ್ನು ಮುಗಿಸಿಕೊಂಡು ಹೊರಬಂದಾಗ ಕುಟುಂಬ, ಸಮಾಜ, ರಾಷ್ಟ್ರ ಇವುಗಳಲ್ಲಿಯ ಪ್ರಚಲಿತ ಪ್ರಭಾವಗಳಿಗೆ ಒಳಪಟ್ಟು ಕ್ರಮೇಣ ತಾವು ಪಡೆದ ಧ್ಯೇಯವಾದವನ್ನೂ ನೀತಿಮತ್ತೆಯನ್ನೂ ಕಳೆದುಕೊಂಡುಬಿಡುವ ಸಾಧ್ಯತೆಯಿರುತ್ತದೆ. ಹೀಗಾಗದಂತೆ ಈ ಆಶ್ರಮಗಳ ಕಾರ್ಯಕ್ರಮಯೋಜನೆಯಲ್ಲಿ ವಿಶಿಷ್ಟ ಪರಿಸರದ ಹೊರಗಿನ ಪರಿಸ್ಥಿತಿಯ ಅರಿವನ್ನು ಉಂಟುಮಾಡಿಕೊಡುವ ಮತ್ತು ಅದರಲ್ಲಿಯೂ ವಿದ್ಯಾರ್ಥಿ ತನ್ನ ನಿಲುವನ್ನು ಬಿಟ್ಟುಕೊಡದೆ ಗಟ್ಟಿಯಾಗಿ ಉಳಿಯುವಂತೆ ನೆರವಾಗುವ ಸಂಚಾರಗಳ ಮತ್ತು ಶಿಬಿರಗಳ ಏರ್ಪಾಟುಗಳನ್ನು ಸೇರಿಸಬೇಕು. ಅಲ್ಲದೆ ಆಗಾಗ ಈ ಆಶ್ರಮಗಳಿಗೆ ವಿದ್ಯಾರ್ಥಿಗಳ ಪಾಲಕರು ಮತ್ತು ಪಾಲಕರಲ್ಲದ ಇತರರು ಕೂಡ ಬಂದು ವಾಸಿಸುವ ಸೌಕರ್ಯಗಳನ್ನು ಕಲ್ಪಿಸಬೇಕು. ಇಲ್ಲಿಯ ಶಿಸ್ತು ಅತಿಯಾಗಿ ಕಟ್ಟುನಿಟ್ಟಾಗದಂತೆ ಸ್ವಯಂಸಂಯಮದಲ್ಲಿ ರೂಪಗೊಳ್ಳುವಂತೆ ನೋಡಿಕೊಳ್ಳಬೇಕು. ತನ್ನ ಬಗೆಯಲ್ಲಿ ಬೆಳೆಯುತ್ತಿರುವ ಒಬ್ಬ ವ್ಯಕ್ತಿಯಾದ ವಿದ್ಯಾರ್ಥಿ ತನ್ನ ತಿಳಿವಳಿಕೆಯಿಂದಲೆ ಪರರ ಒತ್ತಡವಿಲ್ಲದೆ ಅವಶ್ಯಕವಾದ ಕಟ್ಟುಪಾಡುಗಳನ್ನು ಅನುಸರಿಸಿಕೊಂಡು ನಡೆಯಲು ಕಲಿತನೆಂದರೆ ಯಾವ ಪರಿಸರದಲ್ಲಿಯೂ ಅವನು ತನ್ನ ವ್ಯಕ್ತಿತ್ವವನ್ನೂ ಚಾರಿತ್ರ್ಯವನ್ನೂ ಕಾಪಾಡಿಕೊಂಡು ಬದುಕುತ್ತಾನೆ, ಬೆಳೆಯುತ್ತಾನೆ.

ನೀಲತ್ತಹಳ್ಳಿ ಕಸ್ತೂರಿ

ಆಶ್ರಮ ಜೀವನ

“ ಆರಯೆ ಸೂಚಿಕುಂ ಗಿಳಿಗಳಿರ್ಪ ಅಗಕೋಟರದಿಂ ಜಗುಳ್ದ ನೀವಾರಮುಂ,
ಇಂಗುದೀ ಫಲವಿಭೇದದೆ ನುಣ್ಪಡಿದಿರ್ಪ ಕಲ್ಗಳುಂ,
ತೇರಿನ ಶಬ್ದಮುಂ ಸಹಿಸಿ ನಂಬುಗೆಯಿಂ ಸುಳಿವ ಏಣಬೃಂದಮುಂ,
ನಾರುಡೆಯಂಚಿನಿಂದಿಳಿದ ನೀರ್ಗ್ಗೆರೆಯಾಂತ ತಟಾಕಮಾರ್ಗಮುಂ ॥

ಗಾಳಿಯ ಸೋಂಕಿನಿಂ ಚಲಿಪ ಕಾಲುವೆ ನೀರೊಳೆ ಧೌತಮೂಲಮೀ ಸಾಲಸಮೂಹಂ,
ಈ ಕಿಸಲಯಂಗಳ ಕಾಂತಿ ಹುತಾಜ್ಯಧೂಮದಿಂ ಕಪ್ಪಿಳಿತರಾಗಂ,
ಏಣಶಿಶುಸಂತತಿ ಲೂನಕುಶಾಂಕರೋರ್ವಿಯೊಳ್ ಕಾಲನಿಡುತ್ತೆ
ಶಂಕೆಯುಣಮಿಲ್ಲದೆ ಮೆಲ್ಲಮೆಲ್ಲನೈದುಗುಂ ॥

ಮುನಿವಸತಿ ನಿರ್ವಿಕಾರಮಿದು, ಎನಗಾವೊಡೆ ತೋಳು ಪಾರ್ವುದು.
ಇದಕೆಲ್ಲಿಂದಂ ಜನಿಯಿಸುವುದೊ ಸುಫಲಂ, ಮೇಣ್
ತನಗಪ್ಪುದು ತಪ್ಪದಕ್ಕುವೆಲ್ಲೆಡೆಯೊಳ್ ॥”

ಕಾಳಿದಾಸ ಮಹಾಕವಿಯ ಲೋಕವಿಖ್ಯಾತಕೃತಿ ಶಾಕುಂತಲಾ ನಾಟಕ. ಅದರ ಮೊದಲನೆಯ ಅಂಕದಲ್ಲಿ ದುಷ್ಯಂತ ಮಹಾರಾಜ ಕಣ್ವರ ಆಶ್ರಮಕ್ಕೆ ಬಂದಾಗ ಆತ ಹೇಳುವ ಮಾತು ಇವು; ಬಸವಪ್ಪ ಶಾಸ್ತ್ರಿಗಳ ಅನುವಾದದಿಂದ ಎತ್ತಿಕೊಂಡವು. ಮೊದಲಿನ ಎರಡು ವೃತ್ತಗಳು ಆಶ್ರಮದ ಬಾಹ್ಯವರ್ಣನೆ ಮಾಡುತ್ತವೆ. ಅಲ್ಲಿನ ಮೃಗಪಕ್ಷಿಗಳು, ಆ ಪ್ರಶಾಂತತೆ, ತಿಳಿನೀರಿನ ಕಾಲುವೆ, ಎಳೆ ಚಿಗುರೆಗಳು, ನಾರು ಮಡಿಯ ಸಾಲು ಇತ್ಯಾದಿ. ಜೊತೆಗೇ ಅದು ಮುನಿವಸತಿ; ನಿರ್ವಿಕಾರಮ್. ಮೂಲದ ಮಾತು.‘ಶಾಂತಮಿದಾಶ್ರಮ ಪದಂ !’ ಆಶ್ರಮದಲ್ಲಿ ವಿಕಾರಕ್ಕೆ ಎಡೆಯಿಲ್ಲ. ಅದು ವೈರಾಗ್ಯದ ನೆಲೆವೀಡು. ತಪಸ್ಸು, ಧ್ಯಾನ, ಮೌನ, ಪ್ರಶಾಂತಿಗಳ ಸ್ಥಾನ. ನಾಗರಿಕ ಜೀವನದಿಂದ ದೂರವಾಗಿ, ಪಟ್ಟಣದ ಕೃತ್ರಿಮತೆಯಿಂದ ದೂರವಾಗಿ, ಪ್ರಕೃತಿಯ ಮಡಿಲಿನಲ್ಲಿ ಸಹಜತೆಯ ನಡುವೆ ಸಾಗುವ ಬದುಕು, ಸೃಷ್ಟಿಯೊಂದಿಗೆ ಒಂದಾಗಿ ಬೆರೆತು ಬಾಳುವ ಪರಿ. ಅಲ್ಲಿ ವಿಕೃತಿಗೆ ಎಡೆಯಿಲ್ಲ. ಎಲ್ಲೆಡೆ ಸಂಯಮ, ಶಾಂತಿ, ಸೌಹಾರ್ದ.

ಕಣ್ವಾಶ್ರಮ ಈ ಲೋಕದ್ದು. ಅಲ್ಲಿಯಾದರೂ ಸ್ವಲ್ಪ ಮಾನವೀಯ ರಾಗದ ರಂಗು ಇರಬಹುದು. ಆದರೆ ನಾಟಕದ ಕೊನೆಯ ಅಂಕ ನಡೆಯುವ ಮಾರೀಚಾಶ್ರಮವಾದರೊ ದೇವಲೋಕದ್ದು. ಶಕುಂತಲೆ ಶಾಪದ ಅಗ್ನಿಪರೀಕ್ಷೆಯಲ್ಲಿ ಹಾದು, ವಿಕಾರವಳಿದು, ಪರಿಶುದ್ಧಳಾಗಿ, ಕಾಮರಹಿತವಾದ ನಿರ್ಮಲ ದಿವ್ಯಪ್ರೇಮದ ಪುತ್ಥಳಿಯಾಗಿ ತೊಳಗಿ ಬೆಳಗುತ್ತಿದ್ದಾಳೆ. ಮುನಿಸಾನ್ನಿಧ್ಯ, ಆಶ್ರಮದ ಗಂಭೀರವಾತಾವರಣ, ಕಠೋರ ಸಂಯಮ, ಶಿಸ್ತು ಅವಳ ಮನಃಪರಿಪಾಕಕ್ಕೆ ಇಂಬುಗೊಟ್ಟವೆ. ಪಶ್ಚಾತ್ತಾಪದಗ್ಧನಾದ ದುಷ್ಯಂತನೂ ಹಣ್ಣಾ

ಗಿದ್ದಾನೆ. ಅಂಥಲ್ಲಿ ಅವರ ಸಮಾಗಮ ಆಗುತ್ತದೆ. ಇಬ್ಬರಲ್ಲೂ ಯೌವನದ ಉಬ್ಬರ, ರಾಗಮೋಹಗಳ ಬಿರುಸು ಇಳಿದು, ದೇಹಪ್ರೇಮದ ಹುಳಿ ಮಾಗಿ ಸಿಹಿಯಾಗಿ ಪರಿಪಕ್ವತೆ ಮೂಡಿದೆ, ಗಾಂಭೀರ್ಯ ಮೂಡಿದೆ. ಅವರ ಪ್ರೇಮ ಪುಟವಿಟ್ಟ ಚಿನ್ನದಂತೆ ಪರಿಶುದ್ಧವಾಗಿದೆ. ಮರ್ತ್ಯಲೋಕದಲ್ಲಿ ಮಣ್ಣಿನ ವಾಸನೆಯೊಂದಿಗೆ ಮೊಳೆತ ಪ್ರೇಮ ತನ್ನ ಕಾಮದ ಕಳಂಕವನ್ನು ಕಳೆದುಕೊಂಡು ದಿವ್ಯಪ್ರೇಮವಾಗಿರುವುದರ ಸಂಕೇತವೊ ಎಂಬಂತೆ, ದೇವ ಭೂಮಿಯ ಆಶ್ರಮದಲ್ಲಿ ಈ ಪ್ರಣಯಿಗಳ ಸಮಾಗಮ ಏರ್ಪಟ್ಟಿದೆ.

ಮಹಾಕವಿ ಕಾಳಿದಾಸನ ಅಮರಕೃತಿಗೆ ಆಶ್ರಮಗಳೇ ಹಿನ್ನೆಲೆ. ಅದರ ಆರಂಭವೂ ಅಲ್ಲೆ, ಅಂತ್ಯವೂ ಅಲ್ಲೆ.

ಆಶ್ರಮ ನಮ್ಮ ನಾಡಿನ ಸಂಸ್ಕೃತಿಯ ಒಂದು ವಿಶಿಷ್ಟಸಂಸ್ಥೆ. ನಮ್ಮ ಜ್ಞಾನಿಗಳೆಲ್ಲ ಇದ್ದುದು ಅಲ್ಲೆ. ನಮ್ಮ ರಾಮಾಯಣದ ಬಹುಪಾಲು ಭಾಗ ನಡೆದುದು ಅಲ್ಲೆ. ವಿಶ್ವಾಮಿತ್ರರ ಸಿದ್ಧಾಶ್ರಮವೇ ಶ್ರೀರಾಮನ ವಿದ್ಯಾಕ್ಷೇತ್ರ. ಗೌತಮರ ಆಶ್ರಮವೇ ರಾಮನ ಲೋಕಕಾರುಣ್ಯ ಕೊನರೊಡೆದ ಕ್ಷೇತ್ರ. ಶಾಪಗ್ರಸ್ತ ಅಹಲ್ಯೆ ಶುದ್ಧಿಪಡೆದುದು ಅಲ್ಲೆ. ಪಿತೃವಾಕ್ಯಪರಿಪಾಲನೆಗಾಗಿ ರಾಜ್ಯವನ್ನು ಬಿಟ್ಟು ರಾಮನು ಕಾಡಿಗೆ ಹೋದಾಗ ಉದ್ದಕ್ಕೂ ಆಶ್ರಮಗಳೇ. ಭರದ್ವಾಜರ ಆಶ್ರಮ, ಚಿತ್ರಕೂಟದ ಋಷಿಗಳ ಆಶ್ರಮಗಳು, ಶರಭಂಗ ಸುತೀಕ್ಷ್ಣರ ಆಶ್ರಮಗಳು, ಅಗಸ್ತ್ಯರ ಆಶ್ರಮ, ಅತ್ರಿ-ಅನಸೂಯೆಯರ ಆಶ್ರಮ, ಶಬರಿಯ ಕುಟೀರ ; ಒಂದಲ್ಲ ಎರಡಲ್ಲ. ಚಿತ್ರಕೂಟ, ಪಂಚವಟಿಗಳಲ್ಲಿ ರಾಮ ಇದ್ದುದೂ ಆಶ್ರಮಗಳಲ್ಲೆ. ಭರತ ರಾಮನಿಗಾಗಿ ಕಾದು ತಾಪಸಜೀವನ ನಡೆಸಿದ್ದೂ ನಂದಿಗ್ರಾಮದ ಆಶ್ರಮದಲ್ಲೆ. ಕೊನೆಗೆ ರಾಕ್ಷಸ ಮಾರೀಚನೂ ರಾಮನ ಬಾಣದ ಪೆಟ್ಟನ್ನು ತಿಂದು ಬುದ್ಧಿ ಕಲಿತು, ರಾಕ್ಷಸಪ್ರವೃತ್ತಿಯನ್ನು ಬಿಟ್ಟು ಸಾತ್ವಿಕನಾಗಿ ಇದ್ದುದೂ ಒಂದು ಆಶ್ರಮದಲ್ಲೆ ! ಇನ್ನು ಸೀತೆ ಗರ್ಭಿಣಿಯಾದಾಗ ಬಯಸಿದ್ದೂ ಆಶ್ರಮಕ್ಕೆ ಹೋಗಿಬರುವುದನ್ನೇ. ಅವಳು ಹೋಗಬೇಕಾಗಿ ಬಂದುದೂ ಗೊಂಡಾರಣ್ಯದ ಆಶ್ರಮಕ್ಕೇ. ವಾಲ್ಮೀಕಿ ಋಷಿಯ ಆಶ್ರಮವೇ ಅವಳಿಗೆ ಆಸರೆ ಆಯಿತು. ಅಲ್ಲೆ ಲವಕುಶರ ಜನನ. ಅದೇ ಹೆರಿಗೆ ಆಸ್ಪತ್ರೆ !

ಮಹಾಭಾರತದಲ್ಲೂ ಆಶ್ರಮಗಳದು ಪ್ರಧಾನಪಾತ್ರ. ಭೀಷ್ಮ ಕರ್ಣರ ಧನುರ್ವಿದ್ಯಾಭ್ಯಾಸ ಪರಶುರಾಮನ ಆಶ್ರಮದಲ್ಲಿ. ಪಾಂಡವರ ವನವಾಸದಲ್ಲಿ ಉದ್ದಕ್ಕೂ ಆಶ್ರಮಗಳ ದರ್ಶನ. ಶ್ರೀಕೃಷ್ಣನ ಕಲಿಕೆ ಸಾಂದೀಪನೀ ಋಷಿಯ ಆಶ್ರಮದಲ್ಲಿ. ಕೊನೆಗೆ ಧೃತರಾಷ್ಟ್ರ ಗಾಂಧಾರಿ ಕುಂತಿ ವಿದುರರು ಹೋಗುವುದೂ ಅರಣ್ಯದ ಆಶ್ರಮಕ್ಕೇ. ಭಾರತವನ್ನೇ ಬರೆದ ವ್ಯಾಸರದು ಬದರಿಕಾಶ್ರಮ. ಅವರ ಭಾರತರಚನೆ, ವೇದವಿಂಗಡಣೆ, ಅಷ್ಟಾದಶಪುರಾಣ ಕಲ್ಪನೆ ಎಲ್ಲ ಆದುದೂ ಆಶ್ರಮದಲ್ಲೆ.

ನಮ್ಮ ನಾಡಿನ ಪ್ರಾಚೀನಸಂಸ್ಕೃತಿ ಬೆಳೆದುದೇ ಆಶ್ರಮದಲ್ಲಿ ಎನ್ನಬಹುದು. ನಗರಗಳು ಇರಲಿಲ್ಲ ಎಂದಲ್ಲ. "ನಗರೇಷು ಕಾಂಚೀ" ಎಂಬ ಮಾತೇ ಇದೆಯಲ್ಲ. ಯೋಜನಗಟ್ಟಲೆ ಹರಡಿಕೊಂಡಿದ್ದ ನಗರಗಳು ಇದ್ದವು. ಮಾಹಿಷ್ಮತಿ, ಇಂದ್ರಪ್ರಸ್ಥ, ಹಸ್ತಿನಾವತಿ, ಮಧುರಾ, ದ್ವಾರಕೆ, ಗಿರಿವ್ರಜ, ಅಯೋಧ್ಯೆ, ಕೌಶಾಂಬಿ, ಉಜ್ಜಯಿನಿ. ಕಾಶಿ, ಕಾಂಚೀ ಲಂಕೆ, ಪ್ರಾಗ್ಜ್ಯೋತಿಷ, ಕಿಷ್ಕಿಂಧೆ ಇತ್ಯಾದಿ ಮಹಾನಗರಗಳೇ ಇದ್ದವು. ಸಕಲ ಸೌಭಾಗ್ಯಗಳ ನೆಲೆ ಅವು; ಎಲ್ಲ ಐಹಿಕಭೋಗಭಾಗ್ಯಗಳ ಆಗರ. ನಾಗರಿಕತೆಯ ಶೃಂಗಗಳು. ದೊರೆಗಳ ಆವಾಸಸ್ಥಾನಗಳು. ನಿಜ. ಆದರೆ ಅವೆಲ್ಲವೂ ನಾಗರಿಕತೆಯ ನೆಲೆವೀಡಾದರೂ, ನಮ್ಮ ನಿಜವಾದ ಸಂಸ್ಕೃತಿ ನೆಲೆಸಿದ್ದುದು ನಮ್ಮ ಆಶ್ರಮಗಳ ಎಲೆಮನೆಗಳಲ್ಲಿ. ನಮ್ಮ ಮಹಾಕಾವ್ಯಗಳ ಉಗಮ, ನಮ್ಮ ನಾಟ್ಯಶಾಸ್ತ್ರದ ಆಚಾರ್ಯ ಭರತಮುನಿಯ ಕಾರ್ಯರಂಗ, ಯಾಜ್ಞವಲ್ಕ್ಯ ಪರಾಶರಾದಿ ಸ್ಮೃತಿಕಾರರ ಸಾಧನಾಕ್ಷೇತ್ರ, ನಮ್ಮ ವೈದ್ಯ ವಿಜ್ಞಾನಿಗಳಾದ ಚರಕ ಸುಶ್ರುತರ ಪ್ರಯೋಗಶಾಲೆಗಳು,ವೇದವಿದರಉಪಾಸನಾಸ್ಥಾನ, ವಿದ್ಯಾಗುರುಕುಲಗಳು-ಎಲ್ಲ ಆಶ್ರಮಗಳೇ. ಸಂಯಮ, ನಿಗ್ರಹ, ಊರ್ಧ್ವಗಮನ, ಲೌಕಿಕ ಭೋಗಭಾಗ್ಯವಿಮುಖತೆ, ಸರಳಜೀವನ, ಉನ್ನತ

ಚಿಂತನ, ಪ್ರಕೃತಿಯ ಮಡಿಲಿನಲ್ಲಿ ಸಹಜೀವನ, ಪ್ರಕೃತಿಯೊಂದಿಗೆ ಸಹಬಾಳ್ವೆ, ಪ್ರಾಣಿ' ಸಸ್ಯ ಎಲ್ಲ ಸೃಷ್ಟಿಯೊಂದಿಗೂ ಹೊಂದಾಣಿಕೆ, ಸೃಷ್ಟಿಯೆಲ್ಲದರ ಬಗೆಗೆ ಗೌರವ, ಪವಿತ್ರಭಾವನೆ-ಇವೆಲ್ಲ ಭಾರತೀಯ ಸಂಸ್ಕೃತಿಯ ಲಕ್ಷಣಗಳು. ಇವನ್ನು ಕಾಣಲು ನಾವು ನಮ್ಮ ಆಶ್ರಮಗಳತ್ತಲೇ ನೋಡಬೇಕು; ಕೃತಕಜೀವನದ ಹುತ್ತಗಳಾದ ನಗರಗಳತ್ತ ಅಲ್ಲ. ನಗರಗಳು ಅರ್ಥ ಕಾಮಗಳ ನೆಲೆ, ದಿಟ. ಲೌಕಿಕಜ್ಞಾನ, ಸಂಘಟನೆ, ಸಮಾಜವ್ಯವಸ್ಥೆ, ಸೇನಾವ್ಯವಸ್ಥೆ, ಆಡಳಿತ ಎಲ್ಲವರ ಕೇಂದ್ರಗಳು, ನಿಜ. ಅಲ್ಲೆ ದೊರೆ ಇದ್ದುದು. ಆದರೂ ಅವೆಲ್ಲವೂ ಆಶ್ರಮದ ಸರಳ ಸಹಜ ಸಂಸ್ಕೃತಿಯ ಮುಂದೆ ತಲೆಬಾಗುತ್ತಿದ್ದವು. ದೊರೆ ಎಷ್ಟೇ ಪ್ರಬಲನಾಗಿರಲಿ, ಬಡಮುನಿಯ ಹರಕಲು ಎಲೆಮನೆಯ ಮುಂದೆ ಮಣಿಯುತ್ತಿದ್ದ. ದುಷ್ಯಂತ ಮಾಡಿದ್ದು ಇದನ್ನೇ. ಇದು ಕಣ್ವಾಶ್ರಮ ಎಂದು ತಿಳಿದೊಡನೆ, ದೂರದಲ್ಲಿಯೆ ರಥವನ್ನು ನಿಲ್ಲಿಸಿ, ಕೆಳಗಿಳಿದು, ಆಯುಧ ಆಭರಣಗಳನ್ನು ತೆಗೆದಿಟ್ಟು, ಸೌಮ್ಯವೇಷವನ್ನು ಧರಿಸಿ ಕಾಲುನಡೆಯಲ್ಲಿ ಹೋಗುತ್ತಾನೆ. ಕೊನೆಯ ಅಂಕದಲ್ಲಿ ಮಾರೀಚರ ಆಶ್ರಮವನ್ನು ಕಂಡಾಗಲೂ ಅಷ್ಟೆ. ತಾನು ಇಂದ್ರಮಿತ್ರನಾದರೂ ಇಂದ್ರಭೃತ್ಯ ಎಂದುಕೊಳ್ಳುತ್ತಾನೆ. ಮಾರೀಚ ಮುನಿಗಳ ಸಮಯಕ್ಕೆ ಕಾದು ವಿನಯದಿಂದ ನಿಲ್ಲುತ್ತಾನೆ. ನಾಡಪ್ರಭುವಾದರೂ ಜ್ಞಾನದ ಎದುರಿಗೆ, ಸಂಸ್ಕೃತಿಯ ಎದುರಿಗೆ, ತಲೆಬಾಗಿ ನಿಲ್ಲುವ ಚಿತ್ರ ನಮ್ಮಲ್ಲಿ ಹೇರಳ.

ಪುರಾಣದ ಮಾತು ಹಾಗಿರಲಿ. ಇತಿಹಾಸಯುಗದಲ್ಲೂ ಇದಕ್ಕೆ ನಿದರ್ಶನ ಇಲ್ಲದಿಲ್ಲ. ಮೌರ್ಯ ಸಾಮ್ರಾಜ್ಯವನ್ನೇ ಸ್ಥಾಪಿಸಿದ ಚಾಣಕ್ಯ ರಾಜಗುರು. ಚಕ್ರವರ್ತಿ ಚಂದ್ರಗುಪ್ತ ಅವನ ಕಿಂಕರ. ಆದರೆ ಚಾಣಕ್ಯ ಇದ್ದುದು ಊರ ಹೊರಗಿನ ಸಣ್ಣ ಎಲೆಮನೆಯಲ್ಲಿ. ಯವನವೀರ ಸೆಲ್ಯೂಕಸ್ ದೊರೆಯನ್ನು ಕಾಣಲು ಬಂದನಂತೆ. ಕಂಡ. ಈ ಸಾಮ್ರಾಜ್ಯದ ಸೂತ್ರಧಾರ ಎನಿಸಿಕೊಂಡ ಚಾಣಕ್ಯನನ್ನು ಕಾಣಬೇಕೆಂದು ಹೊರಟ. ಊರಾಚೆಯ ನಿರ್ಜನಪ್ರದೇಶದ ಕಾಡಿನ ಮಧ್ಯೆ ಇದ್ದ ಹರಕಲು ಗುಡಿಸಿಲಿಗೇ ಹೋಗಬೇಕಾಯಿತು! ಬುದ್ಧ ಭಗವಾನನು ಅರಣ್ಯಗಳಲ್ಲಿ ನೆಲೆಸಿದ್ದ ಆಶ್ರಮಗಳಿಗೇ ಹೋಗುತ್ತಿದ್ದರು ರಾಜಮಹಾರಾಜರು. ಇನ್ನೂ ಈಚೆಗೆ ನಮ್ಮ ಕರ್ನಾಟಕದಲ್ಲಿ ವಿಜಯನಗರ ಮಹಾಸಾಮ್ರಾಜ್ಯವನ್ನು ಸ್ಥಾಪಿಸಿದ ವಿದ್ಯಾರಣ್ಯರು ರಾಜ್ಯದ ಪ್ರಧಾನಿಗಳೇ ಆಗಿದ್ದರು. ಆದರೆ ಅವರು ಇದ್ದುದು ಹಂಪೆಯ ಮುತ್ತು ಹವಳಗಳು ಮೆರೆಯುತ್ತಿದ್ದ ಮಹಲುಗಳಲ್ಲಲ್ಲ, ರಾಜವೀದಿಯಲ್ಲಿ ಅಲ್ಲ, ತುಂಗಭದ್ರೆಯ ತಡಿಯ ಪರ್ಣಕುಟಿಯಲ್ಲಿ! ನಮ್ಮ ಪ್ರಾಚೀನ ಜ್ಞಾನ, ವಿಜ್ಞಾನ, ಕಾವ್ಯ, ಶಾಸ್ತ್ರ, ಕಲೆ, ಸಂಸ್ಕೃತಿ ಎಲ್ಲಕ್ಕೂ ಆಶ್ರಮಗಳೇ ತೊಟ್ಟಿಲುಗಳು! ಆಶ್ರಮ ಭಾರತೀಯ ಸಂಸ್ಕೃತಿಯ ಉಗಮಸ್ಥಾನ; ಭಾರತೀಯ ಶಿಕ್ಷಣದ ನೆಲೆ. ಆಧ್ಯಾತ್ಮ ಸಾಧನೆಯ ಸ್ಥಾನ, ತಪಸ್ಸಿನ ತಾಣ!

ಶಿಕ್ಷಣ ನಡೆಯಬೇಕಾದುದು ಶಾಂತವಾದ ವಾತಾವರಣದಲ್ಲಿ, ನಿಸರ್ಗದ ನಡುವೆ; ಕೃತ್ರಿಮ ಪ್ರಪಂಚದಿಂದ ದೂರವಾದ ಎಡೆಯಲ್ಲಿ. ಇತ್ತ ಜೈಲು, ಅತ್ತ ಸಿನೀಮಾ ಬೀದಿ, ಹತ್ತಿರದಲ್ಲೆ ರಾಜಕೀಯಸ್ಥರ ನಿಲಯ, ವ್ಯಾಜ್ಯದ ಕೋರ್ಟು ಕಚೇರಿ, ಸುತ್ತಲೂ ಬೊಬ್ಬಿರಿಯುವ ಬಸ್ಸು ಕಾರುಗಳು, ಕಣ್ಣು ಕುಕ್ಕುವ ಜಾಹೀರಾತುಗಳು-ಇಂಥ ವಾತಾವರಣದಲ್ಲಿ ಬರುವ ಶಿಕ್ಷಣವಾದರೂ ಎಂಥದು! ಅದಕ್ಕೇ ನಮ್ಮ ಹಳೆಯ ಆಶ್ರಮಗಳು ಪ್ರಶಾಂತಿ ನಿಲಯಗಳಾಗಿ, ವಿದ್ಯಾಭ್ಯಾಸಕ್ಕೆ ತಕ್ಕ ವಾತಾವರಣವನ್ನು ಒದಗಿಸುತ್ತಿದ್ದವು. ನಿರ್ವಿಕಾರವಾಗಿ, ಶುಚಿಯಾಗಿ, ಶಿಸ್ತು ಸಂಯಮಗಳಿಂದ ಕಲಿತ ವಿದ್ಯೆ ಅಮೂಲ್ಯವಾದುದಾಗಿತ್ತು. ಅಲ್ಲಿ ಗುರುವೇ ಸರ್ವಸ್ವ. ಶಿಷ್ಯನ ಬದುಕನ್ನೆಲ್ಲ ತಿದ್ದುವ, ರೂಪಿಸುವ ರೂವಾರಿ ಆತ. ಆತನ ಕೈಗೆ ಒಪ್ಪಿಸಿಕೊಂಡ ಶಿಷ್ಯನ ಜೀವ ಹದಗೊಳ್ಳುವ ಕರ್ಮಶಾಲೆ, ಕುಲುಮೆ-ಆಶ್ರಮ. ಆಧ್ಯಾತ್ಮಪರವಾದ ವಿದ್ಯೆ ಹಾಗಿರಲಿ; ಲೌಕಿಕವಾದ ಬಿಲ್ಲುವಿದ್ಯೆ, ಅಸ್ತ್ರಶಸ್ತ್ರಗಳ ಜ್ಞಾನ ಸಿಗುತ್ತಿದ್ದುದೂ ಆಶ್ರಮಗಳಲ್ಲೆ. ಶಿಸ್ತು ಸಂಯಮ ಇಲ್ಲದೆ ವಿದ್ಯೆ ಎಲ್ಲಿ? ವಿದ್ಯೆ ಹರಿಯಬೇಕಾದುದು ಈ ಎರಡು ದಂಡೆಗಳ ನಡುವೆಯೆ. ಶಿಸ್ತು ಸಂಯಮಗಳಿಗೆ ಆಶ್ರಮಗಳೇ ನೆಲೆ. ಅಂತೆಯೆ ಅವು ಶಿಕ್ಷಣಕ್ಕೆ ತಕ್ಕ ಸ್ಥಾನಗಳೇ ಆಗಿದ್ದವು. ಬೇರೆ ವಿಷಯಗಳ ಸೆಳೆತ ಏನೂ ಇರದೆ, ಏಕಾಗ್ರಚಿಂತನಕ್ಕೆ, ಮನನಕ್ಕೆ, ಸಾಧನೆಗೆ

ಅನುಕೂಲವಾದ ಪ್ರಶಾಂತವೂ ಸರಳವೂ ಸಹಜವೂ ಆದ ಆಶ್ರಮ ಅಧ್ಯಯನ ಅಧ್ಯಾಪನಗಳಿಗೆ ಹೇಳಿಮಾಡಿಸಿದ ಸ್ಥಳವಾಗಿತ್ತು.

ಕಾಲ ಬದಲಿಸಿತು. ಪಾಶ್ಚಾತ್ಯ ಅರ್ಥಪ್ರಧಾನ, ಭೋಗಪ್ರಧಾನ, ಉದ್ಯಮಪ್ರಧಾನ, ಸ್ಪರ್ಧಾತ್ಮಕ ಸಂಸ್ಕೃತಿಯ ಸಂಪರ್ಕ, ಸಂಘರ್ಷ ಹಾಗೂ ಸಾರ್ವಭೌಮತ್ವದಿಂದಾಗಿ ಭಾರತೀಯ ಜೀವನದೃಷ್ಟಿ ತನ್ನ ಮೂಲ ನೆಲೆಯಿಂದ ವಿಚಲಿತವಾಯಿತು. ಸರಳವೂ ಸಹಜವೂ ಆದ ಬದುಕು ಹಿಂದಾಗಿ ಸಂಕೀರ್ಣವೂ, ಸ್ಪರ್ಧಾತ್ಮಕವೂ ಆದ ನಾಗರಿಕಜೀವನ ಬಲಗೊಳ್ಳುತ್ತ ಬಂತು. ಉಳಿದ ಯಾವ ಆಕ್ರಮಣಕಾರರೂ ಮಾಡದಂಥ ಕೆಲಸವನ್ನು ಬ್ರಿಟಿಷರು ಮಾಡಿದ್ದರು. ದೇಶದ ಮೂಲಭೂತ ನಂಬಿಕೆಗಳಿಗೆ ಕೊಡಲಿಪೆಟ್ಟು ಹಾಕುವಂತೆ, ಇಲ್ಲಿನ ಸಾಂಪ್ರದಾಯಿಕ ಶಿಕ್ಷಣವನ್ನು ತಳ್ಳಿಹಾಕಿ, ತಮ್ಮ ಲೌಕಿಕಶಿಕ್ಷಣವನ್ನು ನೆಟ್ಟಿದ್ದರು. ಈ ಕ್ರಮದ ಆಚಾರ್ಯನಾದ ಲಾರ್ಡ್ ಮೆಕಾಲೆ ಹೇಳಿದ್ದಂತೆ, "ಭಾರತೀಯರಿಗೆ ತಮ್ಮ ವಿದ್ಯೆ, ತಮ್ಮ ಸಂಸ್ಕೃತಿ, ತಮ್ಮ ಮೌಲ್ಯಗಳಲ್ಲಿ ಅಶ್ರದ್ಧೆಯನ್ನು ಹುಟ್ಟಿಸುವುದೇ ನಮ್ಮ ಮೊಟ್ಟಮೊದಲನೆಯ ಹಾಗೂ ಮುಖ್ಯ ಕಾರ್ಯ". ಆತ ಕೊಟ್ಟ ನ್ಯಾಯಪದ್ಧತಿ ನಮ್ಮ ಪಂಚಾಯಿತಿ ಪದ್ಧತಿಯನ್ನು ಹಾಳುಮಾಡಿತು. ಶಿಕ್ಷಣಪದ್ಧತಿ ನಮ್ಮ ಆಶ್ರಮಗಳನ್ನು ದೂರಮಾಡಿತು. ಅಲ್ಲಿಂದ ಆಶ್ರಮಗಳ ಅವನತಿ ಆರಂಭ. ಅವು ಪೂರಾ ಮಾಯವಾಗದೆ ಹೋದರೂ, ತಮ್ಮ ವಿವಿಧೋದ್ದೇಶವನ್ನು ನೀಗಿಕೊಂಡವು. ಎಲ್ಲೋ ಅಲ್ಲೊಂದು ಇಲ್ಲೊಂದು ಕೇವಲ ಮತೀಯ ಇಲ್ಲವೇ ಆಧ್ಯಾತ್ಮಿಕ ಸಾಧನಾಕೇಂದ್ರ ಕುಟುಕು ಜೀವ ಹಿಡಿದುಕೊಂಡಿದ್ದವು ಅಷ್ಟೆ.

ನಮ್ಮ ಕೆಲವು ಮಠಗಳು ಆಶ್ರಮದ ಇನ್ನೊಂದು ರೂಪ. ಶ್ರೀ ಶಂಕರರು ತುಂಗೆಯ ತಡಿಯಲ್ಲಿ ಸ್ಥಾಪಿಸಿದ ಶೃಂಗೇರಿ ಮಠ ಒಂದು ಆಶ್ರಮವೆ. ಹಾಗೆಯೆ ಸಿದ್ಧಗಂಗೆಯ ಮಠ. ಹಿಮಾಲಯದ ತಪ್ಪಲಿನಲ್ಲಿ ಈಗಲೂ ಅನೇಕ ಮಠಮಂದಿರಗಳು ಆಶ್ರಮಗಳಂತೆಯೆ ಇವೆಯೆನ್ನುತ್ತಾರೆ. ನಾಡಿನಾದ್ಯಂತ ಅನೇಕ ಆಶ್ರಮ ಹರಡಿಕೊಂಡಿವೆ. ಆದರೆ ಬಹುತೇಕ ಮಠಗಳು ಕಾಲಕ್ರಮೇಣ ತಮ್ಮ ಆಶ್ರಮಸ್ವರೂಪವನ್ನು ನೀಗಿಕೊಂಡು, ಇತರ ಸಾರ್ವಜನಿಕ ಸಂಸ್ಥೆಗಳಂತೆಯೆ ಆದವು. ಜನ ಜಂಗುಳಿಯ ನಡುವೆ ಹೋಗಿ ನಿಂತವು. ಅಲ್ಲಿ ವಿದ್ವತ್ತು ಇರಬಹುದಾದರೂ, ಆಧ್ಯಾತ್ಮವಾಗಲಿ, ಆತ್ಮದ ಹಸಿವನ್ನು ತೀರಿಸುವ ವಾತಾವರಣವಾಗಲಿ ಬಹುಮಟ್ಟಿಗೆ ಇಲ್ಲವೆಂದೇ ಹೇಳಬಹುದು.

ಹಳೆಯ ಋಷ್ಯಾಶ್ರಮಗಳು ಕಣ್ಮರೆ ಆದವು. ಆದರೆ ಆಶ್ರಮದ ಕಲ್ಪನೆ ಭಾರತೀಯ ಮನಸ್ಸಿನಿಂದ ಅಳಿಸಿಹೋಗಲಿಲ್ಲ. ಆಧ್ಯಾತ್ಮಸಾಧನೆಗೆ, ಜ್ಞಾನಸಾಧನೆಗಂತೂ ಆಶ್ರಮವೇ ಬಹು ಸೂಕ್ತಸ್ಥಾನ ಎಂಬುದು ಎಲ್ಲ ಸಾಧಕರ ಮತ. ಅಂತೆಯೆ ಭಾರತೀಯ ಆಧ್ಯಾತ್ಮಪ್ರವಾಹದಲ್ಲಿ ಹೊಸ ಕವಲು ಒಡೆದಂತೆಲ್ಲ, ಅವುಗಳ ಪ್ರವರ್ತಕರು ಹೊಸ ಆಶ್ರಮಗಳನ್ನು ಕಟ್ಟಿದರು, ಇಲ್ಲವೇ ಕಟ್ಟಲು ಸ್ಫೂರ್ತಿಯಿತ್ತರು. ಈ ಶತಮಾನದಲ್ಲಿ ನಮ್ಮ ದೇಶ ಇಂಥ ಹಲವು ಆಶ್ರಮಗಳನ್ನು ಕಂಡಿದೆ. ಅವೆಲ್ಲ ಭಾರತೀಯರಿಗೆ ದೀಪಸ್ತಂಭಗಳು, ಸ್ಫೂರ್ತಿಯ ಸೆಲೆಗಳು. ಲೌಕಿಕಪ್ರಪಂಚದ ಕೃತ್ರಿಮತೆ, ಧಾವಂತ, ಅಶಾಂತಿಗಳಿಂದ ನೊಂದ ಬೆಂದ ಜೀವಗಳಿಗೆ ಈ ಆಶ್ರಮಗಳು ಶಾಂತಿಯನ್ನೂ ನೆಮ್ಮದಿಯನ್ನೂ ನೀಡಿ ಪುನಶ್ಚೇತನಗೊಳಿಸುವ ಕೇಂದ್ರಗಳಾಗಿವೆ. ಸ್ವಾಮಿ ವಿವೇಕಾನಂದರು ಸ್ಥಾಪಿಸಿದ ಶ್ರೀ ರಾಮಕೃಷ್ಣ ಆಶ್ರಮ, ನೈನಿತಾಲಿನ ಅದ್ವೈತ ಆಶ್ರಮ, ಋಷಿಕೇಶದ ಆಶ್ರಮಗಳು, ಸ್ವಾಮಿಶಿವಾನಂದರ ಆಶ್ರಮ, ಪಾಂಡಿಚೆರಿಯ ಶ್ರೀ ಅರವಿಂದಾಶ್ರಮ, ತಿರುವಣ್ಣಾಮಲೆಯ ಶ್ರೀ ರಮಣಾಶ್ರಮ ಇವೆಲ್ಲ ಇಂಥ ಆಧ್ಯಾತ್ಮ ದೀಪಸ್ತಂಭಗಳು. ಇವು ಒಂದೊಂದರ ಹಿಂದೆಯೂ ಒಬ್ಬ ಮಹಾಪುರುಷನ ವ್ಯಕ್ತಿತ್ವ ನಿಂತಿದೆ. ಈ ಆಶ್ರಮಗಳಲ್ಲಿ ಆಯಾ ಮಹಾತ್ಮರ ಚೇತನ ಇನ್ನೂ ಸುಳಿದಾಡುತ್ತಿದೆ, ಆವರಿಸಿಕೊಂಡಿದೆ.

ಶ್ರೀರಾಮಕೃಷ್ಣ ಆಶ್ರಮದ ವ್ಯಾಪ್ತಿ ಹಿರಿದು, ಅಂತರ್ರಾಷ್ಟ್ರೀಯ. ಅಮೆರಿಕಾ, ಫ್ರಾನ್ಸ್, ಆಫ್ರಿಕಾ ಇತ್ಯಾದಿ ಹೊರ ದೇಶಗಳಲ್ಲೂ ಅದು ಹಬ್ಬಿದೆ. ನಮ್ಮ ದೇಶದಲ್ಲಂತೂ ಹಲವಾರು ಕೇಂದ್ರ ಇವೆ. ಆಧ್ಯಾತ್ಮ

ಸಾಧನೆ, ಜ್ಞಾನಪ್ರಸಾರ ಅವುಗಳ ಮುಖ್ಯ ಉದ್ದೇಶವಾದರೂ, ಸಂಸ್ಕೃತಿಗೆ ಸಂಬಂಧಿಸಿದ ಕಾರ್ಯಕ್ರಮಗಳು, ಪುಸ್ತಕಭಂಡಾರ, ಪುಸ್ತಕಪ್ರಕಟಣೆಗಳು, ಸೇವಾವ್ಯವಸ್ಥೆ, ಭಜನೆ ಮೊದಲಾದ ಕೆಲಸಗಳೂ ಅಲ್ಲಿ ನಡೆಯುತ್ತವೆ. ಸ್ವಾಮಿ ವಿವೇಕಾನಂದರು ಲೋಕದಿಂದ ದೂರವಾಗಿ ಮೂಗು ಹಿಡಿದು ಕೂತ ಸಂನ್ಯಾಸಿಯನ್ನಲ್ಲ ಬಯಸಿದ್ದು. ಅವರ ಕಲ್ಪನೆಯ ಸಂನ್ಯಾಸಿ ಚೈತನ್ಯದ ಚಿಲುಮೆ. ಆತ ಆಂತರಿಕವಾಗಿ ಅತೀತನಾಗಿದ್ದು ಆಧ್ಯಾತ್ಮಸಾಧಕನೇ ಆಗಿದ್ದರೂ, ಬಾಹ್ಯದಲ್ಲಿ ಜನರ ಕಷ್ಟಸುಖಗಳಲ್ಲಿ ಮಿಳಿತಗೊಳ್ಳುವ ಪ್ರೇಮಮಯಿ. ಜನತೆಯ ನಡುವೆ ಇದ್ದು ಅವರ ಸೇವೆ ಮಾಡುವಂಥವ. ಅಂತೆಯೆ ರಾಮಕೃಷ್ಣ ಆಶ್ರಮ ಸೇವಾಸಂಸ್ಥೆಯೂ ಹೌದು. ಬರಗಾಲ, ನೆರೆ,ರೋಗ, ಬೊಂಬಿ ಇತ್ಯಾದಿ ಸಂಕಷ್ಟಗಳು ಒದಗಿದಾಗ, ಆಶ್ರಮದ ಸಂನ್ಯಾಸಿಗಳು ಓಡಿಹೋಗುತ್ತಾರೆ–ಜನತೆಗೆ ನೆರವೀಯಲು, ಅವರ ಕಣ್ಣೀರನ್ನು ಒರೆಸಲು. ರಾಮಕೃಷ್ಣ ಆಶ್ರಮ ಹಲವೆಡೆ ಶಾಲೆಗಳನ್ನು, ಆಸ್ಪತ್ರೆಗಳನ್ನು ನಡೆಸುತ್ತದೆ. ಮೈಸೂರಿನಲ್ಲಿ ವೇದಾಂತ ಕಾಲೇಜನ್ನೇ ಆರಂಭಿಸಿದೆ. ಅಲ್ಲಿನ ವಾತಾವರಣದ ಗಾಂಭೀರ್ಯ, ಪಾವಿತ್ರ್ಯ, ಪ್ರಶಾಂತತೆ, ಶುಚಿ ಮತ್ತು ಶಿಸ್ತು ಅವರ್ಣನೀಯ, ಕೇವಲ ಅನುಭವ ವೇದ್ಯ !

ಶ್ರೀ ಅರವಿಂದಾಶ್ರಮವೂ ಅಂತರ್ರಾಷ್ಟ್ರೀಯ ಸ್ವರೂಪದ್ದೇ. ಅಂದರೆ ಅಲ್ಲಿ ಎಲ್ಲ ದೇಶದ ಜನರೂ ಆಕರ್ಷಿತರಾಗಿದ್ದಾರೆ ಎಂಬ ಅರ್ಥದಲ್ಲಿ. ಈಗಂತೂ ಅಲ್ಲಿ ಎಲ್ಲ ಜನರೂ ನೆಲೆಸುವಂತೆ ಆರೋವಿಲ್ ಎಂಬ ಅಂತರಾಷ್ಟ್ರೀಯ ನಗರವೇ ರೂಪುಗೊಳ್ಳುತ್ತಿದೆ. ಶ್ರೀ ಅರವಿಂದರು ಹಾಗೂ ಶ್ರೀಮಾತೆಯವರು–ಇವರ ವೈಯಕ್ತಿಕ ಪ್ರತಿಭೆ ಸಾಧನೆಗಳೇ ಅರವಿಂದಾಶ್ರಮದ ಶ್ರೀರಕ್ಷೆ. ಈಗ ಆ ವ್ಯಕ್ತಿಗಳು ಇಲ್ಲ. ಅವರ ತಪಸ್ಸು ಇನ್ನೂ ನಡೆಸುತ್ತಿದೆ. ಸ್ವಾಮಿ ಶಿವಾನಂದರ ವ್ಯಕ್ತಿತ್ವವೂ ವಿಶ್ವದಾದ್ಯಂತ ಜನರನ್ನು ಆಕರ್ಷಿಸಿತ್ತು. ಅವರ ಆಶ್ರಮ ಆಧ್ಯಾತ್ಮ ಸಾಧನೆಯ, ಯೋಗಸಾಧನೆಯ ಕೇಂದ್ರವಾಗಿ ಬೆಳೆಯಿತು. ತಿರುವಣ್ಣಾಮಲೆಯ ಮಹಾಯೋಗಿ ಶ್ರೀರಮಣರು ಬಹುವಾಗಿ ಅಂತರ್ಮುಖಿಗಳು, ಮಹಾತಪಸ್ವಿಗಳು. ಜನತೆಯಿಂದ ದೂರ ಇದ್ದು ಸಾಧನೆ ನಡೆಸಿದವರು. ಆದರೂ ಅವರನ್ನು ಜನ ಬಿಡಲಿಲ್ಲ. ಅವರ ಮಹಾತ್ಮೆಗೆ ಮಾರುಹೋದ ಭಕ್ತಜನ ಸುತ್ತ ನೆರೆದರು. ಒಂದು ಆಶ್ರಮವೇ ರೂಪುಗೊಂಡಿತು. ಶ್ರೀರಮಣರ ವ್ಯಕ್ತಿತ್ವ ಮರೆಯಾದ ಮೇಲೆ ಆಶ್ರಮದ ಆಕರ್ಷಣೆ ಸಹಜವಾಗಿಯೆ ತಗ್ಗಿದರೂ ಇಂಗಿಲ್ಲ. ಇಂದಿಗೂ ಜ್ಞಾನಸಾಧಕರ ಯಾತ್ರಾಸ್ಥಾನವೇ ಆಗಿದೆ.

ಇವೆಲ್ಲ ಆಧ್ಯಾತ್ಮಪ್ರಧಾನ ಇಲ್ಲವೇ ಮತಪ್ರಧಾನ ಆಶ್ರಮಗಳು. ಆಶ್ರಮ ಎಂದರೆ ನಮಗೆ ಚಟ್ಟನೆ ಹೊಳೆಯುವುದೂ ಆ ಕಲ್ಪನೆಯೆ ; ಅದು ಆಧ್ಯಾತ್ಮಿಕ ಸಾಧನೆಯ ಸ್ಥಾನ ಎಂದು. ಆದರೆ ಈ ಶತಮಾನದಲ್ಲಿ ಆಶ್ರಮದ ಹಿನ್ನೆಲೆಯನ್ನೂ ರಚನೆಯನ್ನೂ ಉಳಿಸಿಕೊಂಡು, ಅಲ್ಲಿ ಆಧ್ಯಾತ್ಮದ ಜೊತೆಗೆ ಅಥವಾ ಅದಕ್ಕೆ ಬದಲಾಗಿ ಇತರ ಲೌಕಿಕ ಸಾಧನೆಗಳನ್ನು ನಡೆಸುವ ಪ್ರಯತ್ನ ಆದವು. ಗುರುದೇವ ರವೀಂದ್ರರು ಸಾಹಿತ್ಯ ಕಲೆಗಳಲ್ಲಿ ಇಂಥ ಪ್ರಯೋಗವನ್ನು ನಡೆಸಿದರು. ಅವರು ಆಧ್ಯಾತ್ಮದೂರರೇನೂ ಅಲ್ಲವಾದರೂ ಪ್ರಧಾನವಾಗಿ ಅವರದು ಸೌಂದರ್ಯೋಪಾಸನೆ, ರಸಿಕತೆ. ಆನಂದಾನುಭೂತಿಯನ್ನು ಅರಸುವ ಜೀವ. ಸಂಗೀತ, ಕಾವ್ಯ, ಚಿತ್ರಕಲೆ, ನಾಟ್ಯ ಮೊದಲಾದ ಕಲೆಗಳ ಮೂಲಕ ಆನಂದವನ್ನು ಹೊಂದುವ ಸಾಧನೆ, ಕಲಾತಪಸ್ಸು, ಕಲಾಸಾಧನೆ, ಕಲಾರಾಧನೆ ! ಭಾರತೀಯ ಸಾಂಸ್ಕೃತಿಕ ಪುನರುಜ್ಜೀವನದಲ್ಲಿ ರವೀಂದ್ರರು ನೀಡಿದ ಮಾರ್ಗದರ್ಶನ, ಇತ್ತ ಕೊಡುಗೆ ಹಿರಿಯಮಟ್ಟದ್ದು. ಅವರ 'ವಿಶ್ವ ಭಾರತಿ' ಆಶ್ರಮ ಎಂದು ಹೆಸರಿಡದಿದ್ದರೂ ನಿಜಕ್ಕೂ ಆಶ್ರಮವೇ. ನಗರದ ಜಂಜಡದಿಂದ ದೂರವಾಗಿದ್ದು ಪ್ರಶಾಂತವಾದ ವಾತಾವರಣದಲ್ಲಿ ನಿಸರ್ಗದ ನಡುವೆ ಸರಳಜೀವನ ನಡೆಸುತ್ತ ಕಲಾರಾಧನೆಯನ್ನು, ಸೌಂದರ್ಯಸಾಧನೆಯನ್ನು ಮಾಡುವುದೇ ಅದರ ಗುರಿ. ಜೊತೆಗೇ ಅದು 'ವಿಶ್ವಭಾರತಿ'. ಜಾತಿ ಮತ ದೇಶಗಳನ್ನೆಲ್ಲ ಮೀರಿದ ವಿಶ್ವಕಲ್ಪನೆಯ ತಾಣ. ಕೇವಲ ಆಧ್ಯಾತ್ಮವೇ ಪ್ರಧಾನವಾಗಿದ್ದ ಆಶ್ರಮಜೀವನ ಇಲ್ಲಿ ಕಲಾತ್ಮಕವೂ, ಕಲಾಸಾಧಕವೂ ಆಗಿರುವುದನ್ನು ಕಾಣಬಹುದು. ಶಾಂತಿನಿಕೇತನಕ್ಕೆ ಅನತಿದೂರದಲ್ಲೆ ಇರುವ ಶ್ರೀನಿಕೇತನ ಇನ್ನೊಂದು ಬಗೆಯ ಆಶ್ರಮ. ಅಲ್ಲಿ ಸಾಮಾಜಿಕ ರೀತಿನೀತಿಗಳ ಅಧ್ಯಯನ, ಸಮಾಜಸೇವೆ ಇವು ಪ್ರಧಾನ.

ಈ ಒಂದೆರಡು ಪ್ರಯೋಗ ವಿನಾ, ಆಶ್ರಮ ಮುಖ್ಯವಾಗಿ ಆಧ್ಯಾತ್ಮಿಕವಾಗಿಯೆ ಉಳಿಯಿತು. ಆದರೆ ಗಾಂಧೀಜಿ ಅದಕ್ಕೆ ಹೊಸ ಸ್ವರೂಪವನ್ನೇ ಕೊಟ್ಟರು. ಭಾರತೀಯ ಪರಂಪರೆಯಲ್ಲಿ ಅನೇಕ ಮೌಲ್ಯಗಳು ಭದ್ರವಾಗಿ ನೆಲೆಗೊಂಡಿವೆ. ದೈವಭಕ್ತಿ, ಸರಳಜೀವನ, ಗುರುಹಿರಿಯರ ಬಗೆಗೆ ಭಕ್ತಿ ಇತ್ಯಾದಿ. ಗಾಂಧೀಜಿ ಈ ಮೌಲ್ಯಗಳನ್ನು ಹಿಡಿದುಕೊಂಡು ಅವುಗಳಿಗೆ ಹೊಸ ಶಕ್ತಿಯನ್ನೂ ರೂಪವನ್ನೂ ಕೊಟ್ಟು ನವೀಕರಿಸಿದರು. ಎಂತಲೇ ಅವರು ಭಾರತೀಯ ಸಂಸ್ಕೃತಿಯ ಪುನರುತ್ಥಾನದಲ್ಲಿ ಮುಖ್ಯಪಾತ್ರವನ್ನು ವಹಿಸಿದರು. ಪರಂಪರೆಯಲ್ಲಿನ ಗ್ರಾಹ್ಯವಾದ ಸದಂಶಗಳನ್ನೆಲ್ಲ ಉಳಿಸಿಕೊಳ್ಳಬೇಕು, ಸಾರವನ್ನು ಗ್ರಹಿಸಬೇಕು, ಅಸಾರವನ್ನು ಅಗ್ರಾಹ್ಯವನ್ನು ಮೂಢವೂ ಕ್ರೂರವೂ ಆದ ಸಂಪ್ರದಾಯಗಳನ್ನು ಬಿಡಬೇಕು, ಹೊಸಕಾಲದ ಹಾಗೂ ಬೇರೆ ದೇಶಗಳಲ್ಲಿನ ಉತ್ತಮ ಗುಣಗಳನ್ನೂ ಗ್ರಹಿಸಬೇಕು, ಎಲ್ಲವನ್ನೂ ಸಮನ್ವಯಗೊಳಿಸಿ ಹೊಸಜೀವನವನ್ನು ರೂಪಿಸಬೇಕು-ಎಂಬುದು ಅವರ ವಿಚಾರ. ಆಶ್ರಮಜೀವನ ಗಾಂಧೀಜಿಯವರಿಗೆ ಪ್ರಿಯವಾದುದು ಹೀಗೆ. ಅವರು ಹಲವು ಆಶ್ರಮಗಳನ್ನು ಕಟ್ಟಿದರು. ಅವೆಲ್ಲಕ್ಕೂ ಆಧ್ಯಾತ್ಮಿಕ ಹಿನ್ನೆಲೆ ಇತ್ತೇ ವಿನಾ ಅಲ್ಲಿನ ಕಾರ್ಯವೆಲ್ಲ ಲೌಕಿಕವೇ ; ಉದ್ದೇಶವೆಲ್ಲ ಲೌಕಿಕವೇ. ದಕ್ಷಿಣ ಆಫ್ರಿಕಾದಲ್ಲಿ ಇದ್ದಾಗಲೇ ಅವರಿಗೆ ಆಶ್ರಮದ ಗೀಳು ಹುಟ್ಟಿತು. ರಷ್ಯಾದ ಮಹರ್ಷಿ ಟಾಲ್‌ಸ್ಟಾಯಿಯ ವಿಚಾರಧಾರೆಯಲ್ಲಿ ಮಿಂದಮೇಲಂತೂ ಆ ಗೀಳು ಬಲಗೊಂಡಿತು. ಅವರ ಜೀವನಕ್ರಮವೇ ಬದಲಾಯಿತು. ಹಣಸಂಪಾದನೆ, ಲೌಕಿಕ ಸಾಧನೆ ಹಿಂದಾಗಿ, ಸೇವೆ ಸರಳಜೀವನ ಪ್ರಧಾನವಾಯಿತು. ಮೊದಲು ಫೀನಿಕ್ಸ್ ಆಶ್ರಮ, ಅನಂತರ ಟಾಲ್ಸ್‌ಟಾಯಿಫಾರಂ. ಅಲ್ಲಿ ಪ್ರವೇಶ ಎಲ್ಲರಿಗೂ ! ಕಾಯಕ ಅಲ್ಲಿನ ಮುಖ್ಯಲಕ್ಷಣ. ತಮ್ಮ ಅನ್ನಕ್ಕಾಗಿ ಎಲ್ಲರೂ ಏನಾದರೂ ಶ್ರಮ ಮಾಡಲೇಬೇಕು. ದುಡಿಯದೆ ಉಣ್ಣುವುದು ಕಳ್ಳತನ ಎಂದು ಗಾಂಧೀಜಿಯವರ ಭಾವನೆ. ಸ್ವಯಂಪರಿಪೂರ್ಣತೆ, ಸ್ವಾವಲಂಬನೆ, ಸೇವಾದೃಷ್ಟಿ, ಪರಸ್ಪರ ಸಹಕಾರ, ಸಹಯೋಗ ಈ ಆಶ್ರಮದ ಇತರ ಲಕ್ಷಣಗಳು. ಅಲ್ಲಿ ನಡೆದ ಕೆಲಸವೆಲ್ಲ ಎಲ್ಲರೂ ಸೇರಿ ಮಾಡಿದ್ದೇ. ಎಲ್ಲದರಲ್ಲೂ ಅರ್ಪಣೆಯ ಭಾವ. ಸೇವೆಯ ಭಾವ. ದಕ್ಷಿಣ ಆಫ್ರಿಕಾ ಸತ್ಯಾಗ್ರಹದಲ್ಲಿ ಈ ಆಶ್ರಮ ವಹಿಸಿದ ಪಾತ್ರ ದೊಡ್ಡದು. ಅದು ಸತ್ಯಾಗ್ರಹಿಗಳ ತರಬೇತಿ ಕೇಂದ್ರವಾಗಿತ್ತು. ಅಲ್ಲದೆ ಹೋರಾಟದಲ್ಲಿ ನೊಂದವರಿಗೂ ನೆಲೆ ಆಗಿತ್ತು. ಎಲ್ಲಕ್ಕಿಂತಲೂ ಮಿಗಿಲಾಗಿ ನಾನಾ ಕುಟುಂಬಗಳು ಒಟ್ಟಾಗಿ ಬದುಕುವ ಪ್ರಯೋಗ, ಸಹಜೀವನದ ಪ್ರಯೋಗಕ್ಷೇತ್ರವಾಗಿತ್ತು. ಭಿನ್ನಭಿನ್ನ ಜನ ಒಟ್ಟಾಗಿ ಬದುಕಬೇಕು ಎಂಬ ಬಗೆ. ಕುಟುಂಬ ಎಂದರೆ ರಕ್ತ ಸಂಬಂಧಿಗಳು ಮಾತ್ರವಲ್ಲ; ಇತರರೂ ಒಳಗೊಳ್ಳಬೇಕು. ಕೌಟುಂಬಿಕ ಪ್ರೀತಿ ವಿಶ್ವಾಸಗಳೇ ಬದುಕಿಗೆ ಆಧಾರವಾಗಿರಬೇಕು. ಅಂತೆಯೆ ಇಡೀ ಆಶ್ರಮ ಹೀಗೆ ಹೊಸ ವಿಸ್ತೃತ ಕುಟುಂಬಜೀವನದ ಪ್ರಯೋಗ ಕ್ಷೇತ್ರವಾಗಬೇಕು. ಇಂಥ ಪ್ರಯೋಗ ಗಾಂಧೀಜಿಯದು. ಅವರ ಆಶ್ರಮದಲ್ಲಿ ಹಿಂದೂಗಳಷ್ಟೆ ಅಲ್ಲ, ಪಾರ್ಸಿಗಳು, ಮಹಮದೀಯರು, ಕ್ರೈಸ್ತರು, ಗಂಡಸರು ಹೆಂಗಸರು ಎಲ್ಲರೂ ಇದ್ದರು. ತಮಿಳರು, ತೆಲುಗರು, ಗುಜರಾತಿಗಳು, ಹಿಂದೀ ಮಾತಾಡುವವರು ಎಲ್ಲರೂ. ಕಲೆಗಾರರು, ಚಿಂತನಶೀಲರು, ಸೇವಾಸಕ್ತರು ಎಲ್ಲರೂ. ಹರೆಯದ ಪ್ರಣಯಿಗಳು ಇಲ್ಲದಿರಲಿಲ್ಲ. ವಿಭಿನ್ನ ಜನ, ವಿಭಿನ್ನ ಮನ, ಎಲ್ಲರೂ ಒಂದೇ ! ಒಂದೇ ಕುಟುಂಬದ ವಿಶ್ವಾಸದ ತಂತು ಎಲ್ಲರ ನಡುವೆ. ಈಶಾವಾಸ್ಯವನ್ನು ಬದುಕುವ ಹಂಬಲ !

ದಕ್ಷಿಣ ಆಫ್ರಿಕಾವನ್ನು ಬಿಟ್ಟುಬಂದ ಮೇಲೆ, ಗಾಂಧೀಜಿ ಭಾರತದಲ್ಲಿ ಕಟ್ಟಿದ ಆಶ್ರಮಗಳು ಲೋಕ ವಿಖ್ಯಾತ. ಅಲ್ಲಿನ ಜೊತೆಗಾರರಿಗೆ ನೆಲೆ ಆಗಲೆಂದು ಕಟ್ಟಿದ ಸಬರಮತಿ ಆಶ್ರಮ ತಾನೇ ದೊಡ್ಡ ಸಂಸ್ಥೆ ಆಗಿ ಬೆಳೆಯಿತು. ಉಪ್ಪಿನ ಸತ್ಯಾಗ್ರಹಕ್ಕಾಗಿ ದಾಂಡೀಯಾತ್ರೆ ಹೊರಡುವವರೆಗೂ ಅದು ಗಾಂಧೀಜಿಯ ಸಾಧನಾಕ್ಷೇತ್ರವಾಗಿತ್ತು. ಮುಂದೆ ಸೇವಾಗ್ರಾಮದ ಆಶ್ರಮ. ಅದಂತೂ ಭಾರತದ ರಾಜಧಾನಿಯೆ ಆಗಿತ್ತೆನ್ನಬೇಕು. ಮಹತ್ವದ ರಾಜಕೀಯ ನಿರ್ಧಾರ ಆದುದೆಲ್ಲ ಅಲ್ಲೆ. ಸತ್ಯಾಗ್ರಹಕ್ಕೆ ಜನರನ್ನು ಅಣಿಮಾಡುವ ಮಹಾಕಾರ್ಯದ ಉಗಮಸ್ಥಾನ ಅದೇ. ಜೊತೆಗೆ ಅದು ಆಧ್ಯಾತ್ಮಿಕ ಪ್ರಯೋಗಶಾಲೆ ಸಹ. ಖಾದಿ, ಗ್ರಾಮೋದ್ಯೋಗ, ಗ್ರಾಮ

ಸೇವೆ, ಪ್ರಕೃತಿಚಿಕಿತ್ಸೆ ಮೊದಲಾದ ಹಲವು ಬಗೆಯ ಚಟುವಟಿಕೆಯ ಕೇಂದ್ರವಾಗಿತ್ತು. ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಸಂಗ್ರಹ, ಶರೀರಶ್ರಮ, ಅಸ್ವಾದ, ಸರ್ವತ್ರಭಯವರ್ಜನ, ಸರ್ವಧರ್ಮ ಸಮಾನತ್ವ, ಸ್ವದೇಶೀ, ಸ್ಪರ್ಶಭಾವನಾ–ಈ ಏಕಾದಶವ್ರತಗಳ ಸಾಧನೆಯ ಕ್ಷೇತ್ರವಾಗಿತ್ತು. ಇವುಗಳಲ್ಲಿ ಹಲವು ನಮ್ಮ ಪರಂಪರೆಯಲ್ಲಿ ಬೆಳೆದುಬಂದಿದ್ದ ವ್ರತಗಳೇ. ಇನ್ನು ಹಲವು ಗಾಂಧೀಜಿ ಸೇರಿಸಿದ್ದು. ಲೌಕಿಕ ಆಧ್ಯಾತ್ಮಗಳ ಸಮನ್ವಯ, ಸಹಜೀವನದ ಸಾಧನೆ, ಸರಳಜೀವನ, ತ್ಯಾಗಶೀಲಜೀವನ, ಸಂಯಮದ ಜೀವನ ಹಾಗೂ ಸ್ವಾವಲಂಬನ–ಇವು ಗಾಂಧೀ ಆಶ್ರಮದ ವೈಶಿಷ್ಟ್ಯಗಳು. ಕೋಚ್ರಬ್‌ನಲ್ಲೂ ಒಂದು ಆಶ್ರಮ ಕಟ್ಟಿದ್ದರು. ಪ್ರಕೃತಿ ಚಿಕಿತ್ಸೆಗಾಗಿಯೆ ಉರುಳಿಕಾಂಚನ ಆಶ್ರಮವನ್ನು ಆರಂಭಿಸಿದರು.

ಹೀಗೆ ಗಾಂಧೀಜಿ ನಮ್ಮ ಆಶ್ರಮಜೀವನದ ಕಲ್ಪನೆಗೆ ಹೊಸ ಅರ್ಥವನ್ನು ಕೊಟ್ಟರು. ಸ್ವಾಮಿ ವಿವೇಕಾನಂದರು ಯಾವ ಆಧ್ಯಾತ್ಮಸಾಧನೆ ಲೋಕಸೇವೆಗಳ ಸಮನ್ವಯ ಕಾರ್ಯವನ್ನು ಆರಂಭಿಸಿದ್ದರೊ, ಅದನ್ನೇ ಗಾಂಧೀಜಿ ಮುಂದುವರಿಸಿದರು, ವಿಸ್ತಾರಗೊಳಿಸಿದರು. ಬಡತನದ ನಿರ್ಮೂಲನಕ್ಕಾಗಿ ಆಶ್ರಮಜೀವನವನ್ನು ಬಳಸಿದರು. ತಾವು ತಮ್ಮ ಬದುಕಿನಲ್ಲಿ ಕಟ್ಟಿಕೊಂಡ ಸರಳತೆಯನ್ನೇ ಇಲ್ಲಿ ಸಾಮೂಹಿಕವಾಗಿ ಪ್ರಯೋಗ ಮಾಡಿದರು. ಶ್ರೀಮಂತಿಕೆಯ ಭೋಗವಿಲಾಸಕ್ಕೆ, ಶೋಷಣೆಯ ಜೀವನಕ್ಕೆ ಪ್ರತಿಯಾಗಿ ಬಡವರ ಸರಳಜೀವನವನ್ನೇ ತಾವೂ ನಡೆಸಿ, ಅದಕ್ಕೇ ಜೀವವನ್ನು ತುಂಬಿದರು, ಗೌರವದ ಸ್ಥಾನವನ್ನು ರೂಪಿಸಿಕೊಟ್ಟರು.

ಗಾಂಧೀಜಿಯ ಮೇಲ್ಪಂಕ್ತಿಯನ್ನೇ ಅನುಸರಿಸಿ, ಹಲವು ಕಡೆ ಆಶ್ರಮಜೀವನದ ಪ್ರಯೋಗ ನಡೆದವು. ಇನ್ನೂ ಅಲ್ಲಲ್ಲಿ ನಡೆಯುತ್ತಿವೆ. ಗಾಂಧೀಜಿಯ ಐರೋಪ್ಯಶಿಷ್ಯೆ ಮೀರಾ ಬಹೆನ್ ಪಶುಲೋಕ ಆಶ್ರಮವನ್ನು ಕಟ್ಟಿದರು. ವಿನೋಬಾ ಪರಂಧಾಮ ಪವನಾರ್ ಆಶ್ರಮವನ್ನು ಬೆಳೆಸಿದರು. ನಮ್ಮ ಕರ್ಣಾಟಕದ ದತ್ತಾತ್ರೇಯ ಬುರುಡೇಜಿ ಅವರು ಗೋಸೇವೆಗಾಗಿ ಪಂಚವಟಿ ಆಶ್ರಮಗಳನ್ನು ನಡೆಸುತ್ತಿದ್ದಾರೆ. ಕಾಕಾ ಕಾಲೇಲಕರರ ಆಶ್ರಮವೂ ಇದೆ. ಇನ್ನೂ ಇಂಥವು ಎಷ್ಟೋ. ಶ್ರೀ ಸತ್ಯಸಾಯಿಬಾಬಾ ಅವರ ಪ್ರಶಾಂತಿ ನಿಲಯವೂ ಒಂದು ಆಶ್ರಮವೇ. ಭಕ್ತಿ-ಜ್ಞಾನ-ಸೇವೆ ಅಲ್ಲಿನ ತ್ರಿವೇಣಿ. ಅದರ ಆಕರ್ಷಣೆ ಪ್ರಭಾವಗಳೂ ವಿಶ್ವವ್ಯಾಪಕವಾಗಿವೆ. ನಮ್ಮ ಸಿದ್ಧಗಂಗೆಯ ಸ್ವಾಮಿಗಳ ಮಠ ಜ್ಞಾನದಾಸೋಹದ ಆಶ್ರಮ. ಗುಬ್ಬಿಯ ಚಿದಂಬರಾಶ್ರಮ ಆಧ್ಯಾತ್ಮ ಜ್ಞಾನದ ಪ್ರಸಾರಕೇಂದ್ರ. ನಮ್ಮ ಹಲವು ಶಿಕ್ಷಣಸಂಸ್ಥೆಗಳು ಆಶ್ರಮಗಳೇ ಎನ್ನುವಂತಿಲ್ಲವಾದರೂ ಆ ಮಾದರಿಯಲ್ಲಿ ನಡೆಯಲು ಪ್ರಯತ್ನಿಸುತ್ತಿವೆ. ಲೋನಾವಳದಲ್ಲಿ ಯೋಗಾಭ್ಯಾಸಕ್ಕೇ ಮೀಸಲಾದ ಆಶ್ರಮವಿದೆ. ಪುದುಕೋಟೆಯ ನಿಸರ್ಗಜೀವನ ಕೇಂದ್ರ ಪ್ರಕೃತಿಚಿಕಿತ್ಸೆಗೆ ಮೀಸಲಾದ ಆಶ್ರಮ. ಹಿಮಾಲಯದಲ್ಲಿ ಇದ್ದಕ್ಕೂ ನೂರಾರು ಆಶ್ರಮ ಇಂದಿಗೂ ಇವೆಯೆಂದು ನೋಡಿದವರು ಹೇಳುತ್ತಾರೆ.

ಕನ್ನಡನಾಡಿನ ಶಿಕ್ಷಣರಂಗದಲ್ಲಿ ಹೇಗೊ ಹಾಗೆಯೆ ಆಶ್ರಮ ಕ್ಷೇತ್ರದಲ್ಲೂ, ಮಲ್ಲಾಡಿಹಳ್ಳಿಯ ಶ್ರೀ ರಾಘವೇಂದ್ರಸ್ವಾಮಿಗಳ ಸಾಧನೆ ಅಪಾರ, ವಿಶಿಷ್ಟ. ಸ್ವಾಮಿಗಳು ಯಾವುದೇ ಮತ ಸಂಪ್ರದಾಯಗಳಿಗೆ ದಾಸರಾಗದೆ, ಆದರೆ ಎಲ್ಲ ಸಂಪ್ರದಾಯದ ಉತ್ತಮಾಂಶಗಳನ್ನು ಗ್ರಹಿಸಿ, ಯೋಗಸಾಧನೆಯಿಂದ, ವೈದ್ಯವಿದ್ಯೆಯಿಂದ, ಸೇವಾಸೌರಭದಿಂದ ನಮ್ಮ ನಾಡಿನ ದಿವ್ಯಜ್ಯೋತಿಗಳಲ್ಲೊಬ್ಬರಾಗಿದ್ದಾರೆ. ಹಿಮಾಲಯದಲ್ಲಿ ತಪಸ್ಸು ಮಾಡಿದರು. ಆಧ್ಯಾತ್ಮದ ಹಂಬಲ ಎಷ್ಟೇ ಇದ್ದರೂ, ಜನಸೇವೆಗೆ ನಿಂತರು. ಸೇವೆಯೆ ಸಾಕ್ಷಾತ್ಕಾರಕ್ಕೆ ಸೋಪಾನ ಅವರಿಗೆ. ಕಾಯಕವೇ ಕೈಲಾಸ ಎಂಬ ಮಾತಿಗೆ ಸಾಕ್ಷಾತ್ ನಿದರ್ಶನವಾದರು. ಹೊಳಲಕೆರೆಯ ಕುಗ್ರಾಮ ಮಲ್ಲಾಡಿಹಳ್ಳಿ, ಶಂಕರನನ್ನು ಶೃಂಗೇರಿ ಆಕರ್ಷಿಸಿದಂತೆ ಸ್ವಾಮಿಗಳನ್ನು ಸೆಳೆಯಿತು. ಮಾತ್ರವಲ್ಲ ಅಲ್ಲೆ ಹಿಡಿದು ನಿಲ್ಲಿಸಿತು. ಅದೇ ಅವರ ತಪೋಭೂಮಿ, ಕರ್ಮಕ್ಷೇತ್ರ ಆಯಿತು. ಅವರ ತಪೋಸಿದ್ಧಿ ಆ ಬರಡು ನೆಲವನ್ನು ಫಲವತ್ತಾಗಿಸಿತು. ಅಲ್ಲೆ ಅವರ ಆಶ್ರಮ ತಲೆಯೆತ್ತಿತು. ಶಿಕ್ಷಣಸಂಸ್ಥೆ ಹೆಮ್ಮರವಾಗಿ ಬೆಳೆಯಿತು. ಅವರು ಸುತ್ತಲ ಹಳ್ಳಿಗಳಿಗೆಲ್ಲ ಮದ್ದು ಕೊಡುವ ವೈದ್ಯರು, ವಿದ್ಯೆ ಕಲಿಸುವ ಗುರು, ದಾರಿ ತೋರುವ

ಸಂನ್ಯಾಸಿ | ತಿರುಳುಗನ್ನಡದ ತಿರುಕ ! ಅನಾಸಕ್ತ ಕರ್ಮದ ಸಾಕಾರರೂಪ. ಬಡವರ ಸೇವೆಯೇ ಅಲ್ಲಿನ ಮಂತ್ರ. ಆಶ್ರಮದ ಹೆಸರೇ "ಅನಾಥ ಸೇವಾಶ್ರಮ". ತನ್ನ ಉದ್ದೇಶದಲ್ಲಿ ಆಸ್ಥೆ, ತನ್ನ ಮಾರ್ಗದಲ್ಲಿ ವಿಶ್ವಾಸ, ತನ್ನ ಕೆಲಸದಲ್ಲಿ ನಿಷ್ಠೆ, ಜೊತೆಗೆ ಸತ್ಯಕ್ಕೆ ವಿನಾ ಇನ್ನಾವುದಕ್ಕೂ ಬಾಗದ ನಿರ್ಭಯತೆ–ಇವು ಏನನ್ನು ಸಾಧಿಸಬಲ್ಲವು, ಇವುಗಳ ಶಕ್ತಿ ಎಂಥದು ಎಂಬುದನ್ನು ಕಾಣಬೇಕಾದರೆ ಮಲ್ಲಾಡಿಹಳ್ಳಿಯತ್ತ ದೃಷ್ಟಿ ಹರಿಸಬೇಕು. ಕರ್ತೃತ್ವ ಶಾಲಿಯಾದ ಒಬ್ಬ ಸಾಹಸಿ ಎಂಥದನ್ನು ಸಾಧಿಸಬಲ್ಲ ಎಂಬುದನ್ನು ಅಲ್ಲಿ ಕಾಣಬೇಕು. ಆಧ್ಯಾತ್ಮಸಾಧನೆಯ ಶಕ್ತಿ ಎಂಥದು, ಅದನ್ನು ಲೌಕಿಕ ಸೇವೆಗೆ ತೊಡಗಿಸಿದರೆ ಅದು ಎಷ್ಟು ಹಿರಿದಾದುದನ್ನು ಸಾಧಿಸಬಲ್ಲದು ಎಂಬುವಕ್ಕೆ ಸ್ವಾಮಿಜಿಯವರ ಬದುಕು ಸಾಕ್ಷಿ. ಅವರಲ್ಲಿ ನಾವು ಕಾಣುವುದು ಸಂನ್ಯಾಸಿಯ ಲೋಕವಿಮುಖತೆ ಯನ್ನಲ್ಲ, ಲೋಕಪ್ರೇಮವನ್ನು. ಇಡೀ ವಿಶ್ವವೇ ಅವರ ಕುಟುಂಬ ! ನಮ್ಮ ಪರಂಪರೆಯ ಆಧ್ಯಾತ್ಮಪ್ರಧಾನ ಆಶ್ರಮ ಜೀವನದ ಕಲ್ಪನೆಗೆ ರವೀಂದ್ರರು ಯಾವ ಸಂಸ್ಕೃತಿಯ, ಕಲೆಯ ಕಂಪನ್ನು ಇತ್ತರೊ, ಗಾಂಧೀಜಿ ಯಾವ ಸೇವೆ ಸಹಜೀವನ, ಈಶಾವಾಸ್ಯಗಳ ಹೂರಣ ತುಂಬಿದರೊ, ಆ ಎಲ್ಲವನ್ನೂ ಮೈಗೂಡಿಸಿಕೊಂಡು ಆಧ್ಯಾತ್ಮ, ಶಿಕ್ಷಣ, ಸೇವೆ, ಸಾಹಿತ್ಯಸೃಷ್ಟಿ ಈ ನಾಲ್ಕೂಗದ ಕ್ಷೇತ್ರವಾಗಿದೆ ಮಲ್ಲಾಡಿಹಳ್ಳಿಯ ಈ ಆಶ್ರಮ, ಈ ದೀಪಸ್ತಂಭ !

ಆಶ್ರಮ ಇಂದಿಗೆ ಬೇಡವೆ ? ಇಂದಿನ ಧಾವಂತದ, ನಗರ ಪ್ರಧಾನವಾದ, ಅರ್ಥಪ್ರಧಾನವಾದ, ಸ್ಪರ್ಧೆಯ ಲೌಕಿಕಜೀವನದಲ್ಲಿ ಆಶ್ರಮದ ಈ ನಿಧಾನ, ಶಾಂತಿ, ಈ ನಿರ್ಲಿಪ್ತತೆ, ಸರಳತೆ ಬೇಕೆ ಬೇಡವೇ ? ಈ ಪ್ರಶ್ನೆಗೆ ಉತ್ತರ ಹುಡುಕುವುದಕ್ಕಿಂತ, ನಮ್ಮ ಗಮನವನ್ನು ಅಮೆರಿಕಾದಂತಹ ಸಂಪತ್ತಿನ ಆಗರದತ್ತ ಹರಿಸು ವುದು ಮೇಲು. ಅಲ್ಲಿನ ಜನ ಸಕಲ ಸಿರಿ ಸೌಭಾಗ್ಯಗಳಿದ್ದರೂ ಅಶಾಂತರು, ಅತೃಪ್ತರು. ನೆಮ್ಮದಿಯಿಲ್ಲದೆ ತೊಳಲುವವರು. ಅಲ್ಲಿ ವಾರವಿಡೀ ದುಡಿದು ಭಾನುವಾರ ಎಲ್ಲಿಯಾದರೂ ಊರ ಹೊರಗೆ ದೂರ ಕಾಡಿನಲ್ಲಿ ನಿರ್ಜನಪ್ರದೇಶದಲ್ಲಿ ಇರಲು ಓಡುತ್ತಾರೆ. ನಿಸರ್ಗದ ನಡುವೆ ಕಾಲಕಳೆಯಲು ಹಾತೊರೆಯುತ್ತಾರೆ. ನಿಸರ್ಗ ಸಹಜ ಜೀವನ ನಡೆಸಲು ಬಾಯಿಬಾಯಿ ಬಿಡುತ್ತಾರೆ. ಅಲ್ಲಿನ ಆರೋಗ್ಯವನ್ನು ಕುರಿತ ಅನೇಕ ಪತ್ರಿಕೆಗಳಲ್ಲಿ ಇಂಥ ಅನೇಕ ಸ್ಥಾನಗಳ ಉಲ್ಲೇಖವನ್ನು ಕಾಣಬಹುದು. ಅಮೆರಿಕಾದ ಋಷಿ ಎಮರ್ಸನ್ ಇಂಥವೇ ಕ್ಷೇತ್ರ ವನ್ನು ಕಟ್ಟಿಕೊಂಡಿದ್ದ. ಥೋರೊ ಅಂತೂ ನಿಸರ್ಗದ ಭಕ್ತ, ಆಶ್ರಮವನ್ನೇ ಕಟ್ಟಿಕೊಂಡಿದ್ದ. ಅಮೆರಿಕಾದ ಅನೇಕ ಜನ ನಮ್ಮ ನಾಡಿನ ಆಶ್ರಮಗಳಿಗೆ ಬರುವುದನ್ನು ಕಾಣುತ್ತೇವೆ. ಬೃಹತ್ ಅರ್ಥವ್ಯವಸ್ಥೆ, ಬೃಹತ್ ನಗರಗಳು, ಉದ್ಯಮಗಳು ಇವೆಲ್ಲ ಮನುಷ್ಯನ ಮಾನವೀಯತೆಗೆ ಮಾರಕ. ಇವಕ್ಕೆ ಬದಲಾಗಿ ಸ್ವಯಂಪೂರ್ಣ ವಾದ ಸಣ್ಣಸಣ್ಣ ಜೀವನ ಘಟಕಗಳಲ್ಲಿನ ಸರಳ ಸಹಜ ಜೀವನವೇ ಸುಂದರ ಎಂಬ ವಿಚಾರ ಅನೇಕರನ್ನು ಆಕರ್ಷಿಸುತ್ತಿದೆ. ಅರ್ಥಪ್ರಧಾನ ಬದುಕಿನ ಬೆನ್ನು ಹತ್ತಿರುವ ನಾವು, ಆ ದಿಸೆಯಲ್ಲಿ ಬಹುಮುಂದೆ ಸಾಗಿ ಕೈಸುಟ್ಟು ಕೊಂಡಿರುವ ಜನದ ಅನುಭವದಿಂದ ಪಾಠ ಕಲಿಯದೆ ಹೋದರೆ ಅನರ್ಥಕ್ಕೆ ಈಡಾದೇವು. ಇಂದು ನಮ್ಮ ನಾಡಿನಲ್ಲಿ ಅವಿಭಕ್ತ ಕುಟುಂಬ ಅಳಿದಿದೆ. ಕುಟುಂಬಜೀವನ ವೈಯುಕ್ತಿಕವಾಗಹತ್ತಿದೆ, ಕಿರಿದಾಗ ಹತ್ತಿದೆ. ಇದರಿಂದಾಗಿ ಕುಟುಂಬದ ರಕ್ಷಣೆಯಿಂದ ನೆಮ್ಮದಿಯಾಗಿ ಇದ್ದ ವೃದ್ಧರಿಗೆ, ಅಂಗವಿಕಲರಿಗೆ, ಮನೋವಿಕಲರಿಗೆ, ಆಸರೆ ತಪ್ಪುತ್ತಿದೆ. ಉದ್ಯೋಗಕ್ಕಾಗಿ ದೂರದೂರವಾಗುವ ಮಕ್ಕಳು ತಂದೆತಾಯಿಯರ ಸೇವೆಗೆ ನಿಲ್ಲುವುದಾದರೂ ಹೇಗೆ ? ಅಂಥ ವೃದ್ಧರಿಗೆ ಆಸರೆ ಎಲ್ಲಿ ? ಅವರಿಗಾಗಿ ನೆಲೆಗಳು ಆಶ್ರಮಗಳು ವ್ಯವಸ್ಥೆಯಾಗುವ ಕಾಲವೂ ದೂರ ವಿಲ್ಲ. ಅದೇ ರೀತಿ ಪಟ್ಟಣಗಳ ಮಲಿನವಾದ ವಾತಾವರಣ, ಶಬ್ದ, ಧಾವಂತ, ನರಗಳನ್ನು ನಿಷ್ಕ್ರಿಯಗೊಳಿಸು ವಂಥ ಓಟ ಇವುಗಳಿಂದ ದೂರವಾಗಿ, ಕೆಲದಿನವಾದರೂ ಶಾಂತಿನಿಧಾನ ನಿಸರ್ಗಸಹಜತೆಗಳ ನಡುವೆ ನಿರಾಳವಾಗಿ ಇದ್ದು ಬರುವ ಅಗತ್ಯವೂ ಹೆಚ್ಚುತ್ತಿದೆ. ನಿಸರ್ಗಜೀವನದ ಅಗತ್ಯ ಇಂದು ಬಹಳ ಹೆಚ್ಚಿದೆ. ಆಳವಾದ ಅಧ್ಯಯನಕ್ಕೂ ಆಶ್ರಮಜೀವನವೇ ಉತ್ತಮ. ಪಟ್ಟಣಗಳ ಗೊಂದಲದಲ್ಲಿ ನೂರೆಂಟು ಸೆಳೆತಗಳ ಸುಳಿಯಲ್ಲಿ

ಏಕಾಗ್ರತೆ ಬರುವುದಾದರೂ ಹೇಗೆ? ಅಂತೆಯೆ ಅಧ್ಯಯನಕ್ಕೂ ಆಶ್ರಮಗಳಾಗಬೇಕಾಗಿದೆ. ಕೀರ್ತಿಶೇಷ ತಿರುಮಲೆ ತಾತಾಚಾರ್ಯಶರ್ಮರು ಕವಿಗಳಿಗೆ, ಸಾಹಿತಿಗಳಿಗೆ ಇಂಥ ಅಧ್ಯಯನ–ಮನನ–ಚಿಂತನ–ಸೃಜನ ಕೇಂದ್ರವಾಗಿರಬೇಕೆಂದೇ 'ಕವಿಜನಾಶ್ರಯ'ವನ್ನು ಕಲ್ಪಿಸಿಕೊಂಡಿದ್ದರು. ಅದೂ ಒಂದು ಬಗೆಯ ಆಶ್ರಮವೇ. ಇವೆಲ್ಲ ವಿಚಾರವೂ ಇನ್ನೂ ಗಾಳಿ ಮಾತೇ ! ಕೃತಿಗೆ ಇಳಿದಾಗ ತಾನೇ ಸಾರ್ಥಕ !

ಆಶ್ರಮಜೀವನ ನಮ್ಮ ನಾಡಿನ ಒಂದು ಸಾವಿಲ್ಲದ ಮೌಲ್ಯ. ಎಲ್ಲ ವಿಶ್ವಕ್ಕೂ ಬೇಕಾದುದೇ. ಹಿಂದೆ ಅದರ ವ್ಯಾಪ್ತಿ ಆಧ್ಯಾತ್ಮಕ್ಕೆ ಸೀಮಿತವಾಗಿತ್ತು. ಆಧ್ಯಾತ್ಮಸಾಧಕರಿಗೆ, ಸಂನ್ಯಾಸಿಗಳಿಗೆ ಅಗತ್ಯವಾಗಿತ್ತು. ಆದರೆ ಇಂದು ಅದರ ವ್ಯಾಪ್ತಿ ವಿಸ್ತರಿಸಿದೆ. ಲೌಕಿಕರಿಗೆ ಅದು ಬೇಕಾಗಿದೆ. ನಗರಗಳ ವ್ಯವಹಾರ ಜಗತ್ತಿನ ಜಂಜಾಟದಲ್ಲಿ ಆಗುವ ಸವಕಳಿಯನ್ನು ತುಂಬಿಕೊಳ್ಳಲು, ಶಕ್ತಿಯನ್ನು ಪಡೆದುಕೊಳ್ಳಲು ಆಶ್ರಮಗಳ ಪುನರ್ವ್ಯವಸ್ಥೆ ಅತ್ಯಗತ್ಯವಾಗಿ ಆಗಬೇಕಾಗಿದೆ.

ಮಲ್ಲಾಡಿಹಳ್ಳಿಯ ಕರ್ಮಸಿದ್ಧರ ಪವಾಡ ನಮ್ಮ ನಿರಾಸೆಯ ಕತ್ತಲೆಯನ್ನು ಕಳೆದು ಭರವಸೆಯ ಬೆಳಕನ್ನು ಬೀರುತ್ತಿದೆ. ಅದು ಆರದ ಬೆಳಕಾಗಬೇಕು. ಆರದಂತೆ ನೋಡಿಕೊಳ್ಳುವುದು ನಾಡಿನ ಕರ್ತವ್ಯ.

ತಮಸೋಮಾ ಜ್ಯೋತಿರ್ಗಮಯ !

ಮದುವೆಯಾಗಿ ಕೆಲಕಾಲವಾದ ಮೇಲೆ ಅವನನ್ನು ಒಬ್ಬ ಗೆಳೆಯ ಸಂಧಿಸಿ 'ವೈವಾಹಿಕ ಜೀವನ ಹೇಗಿದೆ ?' ಎಂದು ಪ್ರಶ್ನಿಸಿದ. ಆಗ ಆ ವಿವಾಹಿತ ಹೇಳಿದ "ಮಧುಚಂದ್ರದ ಕಾಲದಲ್ಲಿ ನಾನು ಮಾತನಾಡುತ್ತಿದ್ದೆ. ಅವಳು ಕೇಳುತ್ತಿದ್ದಳು ; ಮದುವೆಯಾದ ಮೇಲೆ ಅವಳು ಮಾತನಾಡುತ್ತಿದ್ದಳು, ನಾನು ಕೇಳುತ್ತಿದ್ದೆ. ಈಗಲಾದರೋ ನಾವಿಬ್ಬರೂ ಒಟ್ಟಿಗೇ ಮಾತನಾಡುತ್ತೇವೆ. ಅಕ್ಕಪಕ್ಕದವರು ನಮ್ಮ ಮಾತನ್ನು ಕೇಳುತ್ತಾರೆ ಎಂದು ಸಿಟ್ಟುಸಿರು ಬಿಟ್ಟ.

ಡಾ|| ಕೆ. ಕೃಷ್ಣಮೂರ್ತಿ

"ಲೋಕಸಂಗ್ರಹ"

ಭಗವದ್ಗೀತೆಗೆ ಭಾರತದ ಸನಾತನಧರ್ಮದ ಸಾರಸರ್ವಸ್ವವೆಂಬ ಹೆಗ್ಗಳಿಕೆಯಿರುವಂತೆಯೇ, ಸರಸ ಸಾಹಿತ್ಯರೂಪದ ಸಂವಾದವೆಂಬ ಅಗ್ಗಳಿಕೆಯೂ ಇದೆ. ಎಲ್ಲಕ್ಕಿಂತ ಹೆಚ್ಚಾಗಿ ಅದು ಹಿಂದಿನಂತೆ ಇಂದೂ, ಮುಂದೆಯೂ ಎಂದೆಂದೂ ಮಾನವನ ಆದರ್ಶ ಲೌಕಿಕ ಜೀವನಕ್ಕೆ ಕೂಡ ಆದರ್ಶವನ್ನು ನೀಡಬಲ್ಲ ಮಹಾಜ್ಯೋತಿಯೆಂದು ಸರ್ವರಿಂದಲೂ ಮಾನ್ಯವಾಗಿದೆ. ಅದಕ್ಕೆ ಹಿಂದಿನ ಮಹಾಮಹಿಮ ಆಚಾರ್ಯ ಪರಂಪರೆಯವರಂತೆ ಇಂದಿನ ಮಹನೀಯರ ವಿವರಣೆಗಳ ಸಂಖ್ಯೆಯೂ ಸಾವಿರವನ್ನು ಮೀರುತ್ತಿರುವುದೇ ಅದಕ್ಕೆ ಸಾಕ್ಷಿ. ನಮ್ಮ ವೈಯಕ್ತಿಕ ಜೀವನವನ್ನು ಅಮರಗೊಳಿಸಿ ಪಾವನವಾಗಿಸುವದಷ್ಟೇ ಅಲ್ಲದೆ ಸಮಷ್ಟಿಜೀವನಕ್ಕೂ ದಾರಿದೀಪವಾಗಬಲ್ಲ ಅದರ ಸಂದೇಶವೇ 'ಕರ್ಮಯೋಗ'. ಕರ್ಮಯೋಗದ ಗುರಿಯೇ 'ಲೋಕಸಂಗ್ರಹ'.

ನಾವು ಇಂದು 'ಸಂಗ್ರಹ' ಶಬ್ದವನ್ನು ಬಹಳ ಸಡಿಲವಾಗಿ ಬಳಸುತ್ತೇವೆ. 'ಕಲೆ ಹಾಕುವುದು, ಕೂಡಿಸುವುದು, ಒಟ್ಟುಮಾಡುವದು, ಇಲ್ಲವೆ ಸಂಕೋಚಗೊಳಿಸುವದು' ಮುಂತಾದ ಸಾಮಾನ್ಯಾರ್ಥಗಳಲ್ಲಿ ಸಂಗ್ರಹ ಶಬ್ದವನ್ನು ಬಳಸುತ್ತೇವೆ. ಆದರೆ ಭಗವದ್ಗೀತೆಯ ಮೂರನೆಯ ಅಧ್ಯಾಯದಲ್ಲಿ ಎರಡು ಸಲ ಬರುವ ಈ ಶಬ್ದಕ್ಕೆ ಪಾರಿಭಾಷಿಕವೂ ಸಂದರ್ಭೋಚಿತವೂ ಆಗಿರುವ ವಿಶೇಷಾರ್ಥ ಬೇರೆಯೇ ಇದೆ. ಅದನ್ನು ದಿಗ್ದರ್ಶನ ಮಾಡುವದಷ್ಟೇ ಈ ಸಣ್ಣ ಲೇಖನದ ಉದ್ದೇಶ.

ಕರ್ಮಯೋಗದ ಮಹತ್ತ್ವವನ್ನು ಅರ್ಜುನನಿಗೆ ಭಗವಂತನು ಬಿಂಬಿಸಿ ಹೇಳುವ ಸಂದರ್ಭದಲ್ಲಿ ಮೊದಲು ಬರುವ 3ನೆಯ ಅಧ್ಯಾಯದ 20ನೆಯ ಶ್ಲೋಕ ಹೀಗಿದೆ —

> **ಕರ್ಮಣೈವ ಹಿ ಸಂಸಿದ್ಧಿಮಾಸ್ಥಿತಾ ಜನಕಾದಯಃ ।**
> **ಲೋಕಸಂಗ್ರಹಮೇವಾಪಿ ಸಂಪಶ್ಯನ್ ಕರ್ತುಮರ್ಹಸಿ ॥**

ಜ್ಞಾನವು ಕರ್ಮಕ್ಕಿಂತ ಶ್ರೇಷ್ಠವೆಂಬ ಭಾವನೆ ಬರುವ ಕೆಲವು ಮಾತುಗಳು ಹಿಂದಿನ ಅಧ್ಯಾಯದಲ್ಲಿರುವಂತೆ ನಿಷ್ಕಾಮಕರ್ಮ ಕೂಡ ಸಿದ್ಧಿಗೆ ಪರಮಸಾಧನವೆನ್ನುವ ಮಾತುಗಳೂ ಬರುತ್ತವೆ. ಈ 'ವ್ಯಾಮಿಶ್ರ' ವಾಕ್ಯಗಳಿಂದ ಅರ್ಜುನನಿಗೆ ಏನುಮಾಡಬೇಕೆಂಬ ಬಗೆಗೆ ಮನಸ್ಸಿನಲ್ಲಿ ಗೊಂದಲವುಂಟಾಗುತ್ತದೆ. ಈ ಗೊಂದಲವನ್ನು ಪರಿಹರಿಸುವುದಕ್ಕಾಗಿ ಜ್ಞಾನ–ಕರ್ಮನಿಷ್ಠೆಗಳಲ್ಲಿ ಆಪಾತತಃ ತೋರುವ ವಿರೋಧವನ್ನು ಪರಿಹರಿಸಲು, ಕರ್ಮನಿಷ್ಠೆಯೇ ಇಹ-ಪರಗಳೆರಡಕ್ಕೂ ಪರಮ ಸಾಧನವಾಗಬಲ್ಲವೆಂಬುದನ್ನು ಎತ್ತಿಹಿಡಿಯಲು ಹೊರಟಿದೆ ಈ ಮೂರನೆಯ ಅಧ್ಯಾಯ. ಈ ಸಂದರ್ಭದ ಹಿನ್ನೆಲೆಯಲ್ಲಿ ಬರಿಯ ಕರ್ಮಸಂನ್ಯಾಸದಿಂದ ಜ್ಞಾನನಿಷ್ಠೆಯಾಗದೆಂಬ ಮಾತೂ, ಜ್ಞಾನಹೀನ ಕರ್ಮಾಚರಣೆಯಿಂದಾಗಲಿ ಭಗವಂತನಲ್ಲಿ ಭಕ್ತಿಯಿಂದ ಸಮರ್ಪಿತಭಾವವಿಲ್ಲದೆ ಸ್ವೈರ ಕರ್ಮದಿಂದಾಗಲಿ 'ಕರ್ಮಯೋಗ'ವಾಗದೆಂಬ ವಿವರಣೆಗಳು ಸ್ಪಷ್ಟವಾಗಿ ಎದ್ದುನಿಲ್ಲುತ್ತವೆ. ಹೀಗೆ ಜ್ಞಾನ,

ಕರ್ಮ, ಭಕ್ತಿ ಈ ಮೂರು ಸಾಧನಗಳೂ ಪರಸ್ಪರ ನಿರಪೇಕ್ಷವಾದ ಸ್ವತಂತ್ರಸಾಧನಗಳಾಗದೆ ಒಂದೊಂದೂ ಇನ್ನೊಂದರಲ್ಲಿ ಪರ್ಯವಸನ್ನವಾಗುವ ಸಾಪೇಕ್ಷತೆಯನ್ನು ಒಳಗೊಂಡಿರುವ ಮರ್ಮ ಭಗವದ್ಗೀತೆಯ ತಿರುಳಾಗಿದೆ. ಪರಮಸಿದ್ಧಿಯಾದ ಮೋಕ್ಷಕ್ಕೆ ಈ ಮಾತು ಅನ್ವಯಿಸುವುದು ನಿಜ ; ಆದರೆ ಅದು ನಮ್ಮ ದೈನಂದಿನ ನಿತ್ಯ ಜೀವನಕ್ಕೂ, ಲೌಕಿಕವ್ಯವಹಾರಕ್ಕೂ ಅಷ್ಟೇ ಸಾರ್ಥಕವಾಗಿ ಅನ್ವಯಿಸುವದೆಂದು ಎತ್ತಿ ತೋರಿಸುವ ಶಬ್ದವೇ "ಲೋಕಸಂಗ್ರಹ".

ಭಾರತೀಯ ಧರ್ಮದ ಇತಿಹಾಸದಲ್ಲಿ 'ಕರ್ಮ' ಶಬ್ದಕ್ಕೆ ಶ್ರುತಿಸ್ಮೃತಿವಿಹಿತವಾದ ವರ್ಣಾಶ್ರಮ 'ಧರ್ಮ'ದ ಆಚರಣೆ ಎಂಬ ಅರ್ಥವೇ ಆದಿಕಾಲವಲ್ಲಿದ್ದುದನ್ನು ನೋಡುತ್ತೇವೆ. ಆದರೆ ಆ ಯಜ್ಞಾದಿ ಧರ್ಮವನ್ನು ಕೇವಲ ಸಂಕುಚಿತ ಕರ್ಮಕಾಂಡದ ಬಾಹ್ಯದೃಷ್ಟಿಯಿಂದ ನೋಡಿದಾಗ ಅದರ ಅಂತಸ್ಸತ್ವ ಮರೆಯಾಗುತ್ತಿದ್ದುದನ್ನು ಮನಗಂಡ ಶ್ರೀಕೃಷ್ಣನು ನಿಜವಾಗಿ ಯಜ್ಞವೆಂದರೆ ಲೋಕವಲ್ಲೆಲ್ಲ ನಡೆದಿರುವ ನಿಯಮಬದ್ಧ ಸೃಷ್ಟಿಲೀಲೆಯೇ ಎಂಬ ವ್ಯಾಪಕಾರ್ಥವನ್ನು ಈ ಮೊದಲೇ ತಿಳಿಯ ಹೇಳಿದ್ದಾನೆ- ಯಜ್ಞಚಕ್ರವೆಂಬ ಸುಂದರ ರೂಪಕದಿಂದ, ಒಂದರಲ್ಲೊಂದು ಒಳಗೊಳ್ಳುವಂತೆ ನಿಯತಿಬದ್ಧವಾಗಿ ನಿಸರ್ಗದ ಚರಾಚರಗಳೆಲ್ಲ ವಿಶ್ವದಲ್ಲಿ ಸಾಗುತ್ತಿವೆ. ಮಳೆ-ಬೆಳೆ, ಅನ್ನ-ಪ್ರಾಣ, ಇತ್ಯಾದಿಯಾಗಿ ಒಂದಕ್ಕೊಂದು ಪರತಂತ್ರವಾಗಿವೆ. ಜೀವನವೆಂದರೇ ಕ್ರಮಬದ್ಧವಾದ ಕರ್ಮ ; ನಮಗೆ ಅರಿವಿಲ್ಲದೆ ನಾವು ಉಸಿರಾಡಿಸುತ್ತಿರುವದೂ ಕ್ರಮಬದ್ಧವಾದ ಕರ್ಮವೇ. ಇದನ್ನು ಬಿಟ್ಟು ಜೀವನವೆಂಬುದು ಇರಲು ಶಕ್ಯವಿಲ್ಲ. ಆದರೆ ಬುದ್ಧಿಪೂರ್ವಕವಾದ ಕರ್ಮದಲ್ಲೂ ವಿಶ್ವನಿಯಮವನ್ನು, ಭಗವಂತನ ಸಾನ್ನಿಧ್ಯವನ್ನು ಅನುಸರಿಸಿ ನಡೆಯುವಾಗ ಭಕ್ತಿಜ್ಞಾನಗಳೂ ಬಂದು ಸೇರುತ್ತವೆ. ವೈಯಕ್ತಿಕವಾಗಿ ಇಂತಹ ಅನುಸಂಧಾನಪೂರ್ವಕವಾದ ನಿಷ್ಕಾಮಕರ್ಮದಿಂದ ಅಥವಾ "ಅನಾಸಕ್ತಿಯೋಗ"ದಿಂದ ಪರಮ ಪುರುಷಾರ್ಥವಾದ ನಿಃಶ್ರೇಯಸ ಇಲ್ಲವೆ ಮೋಕ್ಷ ದೊರೆಯುವದೆಂಬ ಅಭಯವಾಣಿಯುಂಟೇ ಉಂಟು. ಸಕಲ ವ್ಯಕ್ತಿಗಳು ಕರ್ಮ ಮಾಡಿದರೂ ಫಲಾಪೇಕ್ಷೆಯಿಂದ ಮಾಡುವದು ಸಾಮಾನ್ಯವೇ ಹೊರತು ಫಲದ ಮೇಲೆ ದೃಷ್ಟಿಯನ್ನಿರಿಸದೆ ಮಾಡುವದು ಅಪರೂಪ. ಇಂತಹ ಅಪರೂಪ ಕರ್ಮನಿಷ್ಠರಿಗೆ ಮಾತ್ರ 'ಕರ್ಮಯೋಗಿ'ಗಳೆಂಬ ಹೆಸರು ಸಾರ್ಥಕವಾಗುತ್ತದೆ. ಫಲದಲ್ಲಿ ಆಸೆಯಾಗಲಿ ಆಸ್ಥೆಯಾಗಲಿ ಇಲ್ಲದೆಯೇ ನಿರಂತರವಾಗಿ ಕರ್ಮ ಮಾಡುವುದರಿಂದ ಮೋಕ್ಷ ಅವನ ವೈಯಕ್ತಿಕ ಪ್ರಯೋಜನವಾಗಬಹುದೆಂದರೂ ಲೋಕಕ್ಕೆ ಅದರಿಂದೇನು ಲಾಭವೆಂಬ ಸಂಶಯ ತಲೆದೋರಬಹುದಷ್ಟೆ. ಅದನ್ನು ನಿವಾರಿಸುವುದಕ್ಕಾಗಿಯೇ ಭಗವಂತನು ಸ್ಪಷ್ಟವಾಗಿ ಸಾರಿರುವ ಉತ್ತರ — "ಲೋಕಸಂಗ್ರಹ"—

"ಜನಕನೇ ಮುಂತಾದ ರಾಜರ್ಷಿಗಳು ಹಿಂದೆಯೂ ಕರ್ಮದಿಂದಲೇ ಸಿದ್ಧಿಯನ್ನು ಗಳಿಸಿದರು ;
ಆದ್ದರಿಂದ 'ಲೋಕಸಂಗ್ರಹ'ಕ್ಕಾಗಿ ನೀನೂ ಕರ್ಮಮಾಡುವದು ಯೋಗ್ಯ"

ಎಂದು 3. 20ರಲ್ಲಿ ಹೇಳಿದ್ದರೆ, ಇಲ್ಲಿಯೇ ಇನ್ನು ಸ್ವಲ್ಪ ಮುಂದೆ 25ನೆಯ ಶ್ಲೋಕದಲ್ಲಿ ಮತ್ತೆ ಹೀಗೆ ಹೇಳಲಾಗಿದೆ —

> "ಸಕ್ತಾಃ ಕರ್ಮಣ್ಯವಿದ್ವಾಂಸೋ ಯಥಾ ಕುರ್ವಂತಿ ಭಾರತ ।
> ಕುರ್ಯಾದ್ವಿದ್ವಾಂಸ್ತಥಾಸಕ್ತಶ್ಚಿಕೀರ್ಷುರ್ಲೋಕಸಂಗ್ರಹಮ್ ॥"

"ಅಜ್ಞಾನಿಗಳು ಫಲಾಸಕ್ತಿಯಿಂದ ಯಾವಾಗಲೂ ಕರ್ಮನಿರತರಾಗುವಂತೆ, ಜ್ಞಾನಿಗಳು ಫಲದಲ್ಲಿ ಅನಾಸಕ್ತಿಯಿಂದಲೇ ಕರ್ಮ ಮಾಡುತ್ತಾರೆ — ಲೋಕಸಂಗ್ರಹವಾಗಬೇಕೆಂದು-"

ಸಾಕ್ಷಾದ್ ಭಗವಂತನಿಗೆ ಯಾವ ಫಲದ ಅಪೇಕ್ಷೆಯಿದೆ ? ಆದರೆ ಅವನೇ ವಿಶ್ವದ ಸೃಷ್ಟಿ, ಸಂರಕ್ಷಣೆ, ಪ್ರಳಯಾದಿ ಕರ್ಮದಲ್ಲಿ ಸದಾ ಮಗ್ನನಾಗಿರುತ್ತಾನೆ ! ಇದಕ್ಕೆಲ್ಲ ಏನು ಪ್ರಯೋಜನವೆಂಬುದಕ್ಕೂ ಲೋಕಸಂಗ್ರಹವೆಂಬುದೇ ಉತ್ತರ- ಸಾಕ್ಷಾತ್ ಕೃಷ್ಣಾವತಾರದಲ್ಲಿ ಮನುಷ್ಯನಂತೆ ಧರ್ಮರಕ್ಷಣೆಗಾಗಿ,ಅಧರ್ಮನಾಶಕ್ಕಾಗಿ ಉದ್ಯೋಗನಿರತನಾಗಿರುವ ಭಗವಂತನ ಉದಾಹರಣೆ ಇಲ್ಲಿ ಅತ್ಯಂತ ಪ್ರಸಕ್ತ.

ಈ "ಲೋಕಸಂಗ್ರಹ"ದ ಸ್ಪಷ್ಟ ತಾತ್ಪರ್ಯವೇನು ? ಸಾಮಾನ್ಯವಾಗಿ 'ಲೋಕಹಿತ', 'ಲೋಕಾನುಗ್ರಹ', 'ಲೋಕೋದ್ಧಾರ' ಎಂದು ಟೀಕಾಕಾರರು ಅರ್ಥಮಾಡಿದ್ದಾರೆ. ಆದರೆ ಅದರ ತಾತ್ಪರ್ಯ ಇನ್ನೂ ಗೂಢವಿದೆ ; ಗಾಢವೂ ಇದೆ.

'ತಾನು' – 'ಲೋಕ', 'ವ್ಯಕ್ತಿ – ಸಮಾಜ', 'ವ್ಯಷ್ಟಿ–ಸಮಷ್ಟಿ'ಗಳ ಸ್ಪಷ್ಟ ಭೇದಕಲ್ಪನೆ ಈ 'ಲೋಕಸಂಗ್ರಹ' ಶಬ್ದದಲ್ಲಿ ಹುದುಗಿದೆ. ವೈಯಕ್ತಿಕ ಲಾಭವೇ ಬೇರೆ ಪರಹಿತವೇ ಬೇರೆ. ಸ್ವಹಿತಕ್ಕೂ ಪರಹಿತಕ್ಕೂ ವಿರೋಧವುಂಟಾಗುವ ಪ್ರಸಂಗಗಳೇ ಹೆಚ್ಚು. ಆದ್ದರಿಂದ ಈ ವಿರೋಧ ನಿಶ್ಶೇಷವಾಗಿ ಪರಿಹಾರವಾಗಲು ಇರುವ ಒಂದೇ ಮಾರ್ಗ ಪರಹಿತವೇ ಸ್ವಹಿತವೆಂದು ಭಾಪಿಸಿರುವ ಮೇಲ್ಮಟ್ಟದ ಅರಿವು. ಇದು ಮಾಡಿದವನೇ ಕರ್ಮಯೋಗಿ. ಸಂಕುಚಿತವಾದ ವೈಯಕ್ತಿಕ ಅಪೇಕ್ಷೆಗಳನ್ನೆಲ್ಲ ಮನಸ್ಸಿನಿಂದ ನಿರ್ಮೂಲಗೊಳಿಸಿಕೊಂಡ ಸ್ಥಿತಪ್ರಜ್ಞನು ಮಾತ್ರ ಕರ್ಮಯೋಗಿಯೆನಿಸಬಲ್ಲನು. ಅವನು ಸ್ವಹಿತವನ್ನು ಮರೆತು ಮಾಡುವ ಕಾರ್ಯ ಸರ್ವಹಿತವನ್ನೂ ಸಾಧಿಸುವದು ಸೋಜಿಗವೇನೂ ಅಲ್ಲ. ಇಲ್ಲಿ ಉಕ್ತವಾದ ಸಮಚಿತ್ತ ಎಂಥದಿರಬೇಕೆನ್ನಲು ಜನಕಮಹಾರಾಜನ ಉದಾಹರಣೆಯನ್ನು ಮೊದಲು ಪರಿಭಾವಿಸಿ. ಇವನ ಸಮಚಿತ್ತದ ವರ್ಣನೆ ಮಹಾಭಾರತದಲ್ಲಿ ಎರಡು ಮೂರು ವೇಳೆ ಬಂದಿದೆ. 12ನೆಯ ಪರ್ವ, 276ನೆಯ ಅಧ್ಯಾಯ ನಾಲ್ಕನೆಯ ಶ್ಲೋಕವಿದು —

> "ಸುಸುಖಂ ಬತ ಜೀವಾಮಿ ಯಸ್ಯಮೇ ನಾಸ್ತಿ ಕಿಂಚನ ।
> ಮಿಥಿಲಾಯಾಂ ಪ್ರದೀಪ್ತಾಯಾಂ ನ ಮೇ ದಹ್ಯತಿ ಕಿಂಚನ ॥"

ಇದೊಂದು ಗಾದೆಯ ಮಾತಿನಂತೆ ಮಹಾಭಾರತದಲ್ಲಿ ಮತ್ತೆ ಮತ್ತೆ ಉಕ್ತವಾಗಿದೆ :

" 'ನನ್ನದು' ಎನ್ನುವುದು ಏನೂ ಇಲ್ಲದ್ದರಿಂದ ನನಗೆ ಯಾವಾಗಲೂ ಸುಖವೇ ಹೊರತು ದುಃಖವೆಂಬುದೇ ಇಲ್ಲ. ಮಿಥಿಲೆಯೆಲ್ಲ ಸುಟ್ಟುಬೂದಿಯಾದರೂ ನನ್ನದೇನೂ ಸುಟ್ಟಿತೆಂಬ ದುಃಖ ನನಗಿಲ್ಲ."

ಇನ್ನೊಂದೆಡೆಯಲ್ಲಿ–

'ನನ್ನ ಬಲಗೈ ಸುಟ್ಟು ಉರಿದುಹೋದರೂ ನನ್ನ ಎಡಗೈಗೆ ಯಾವ ನೋವೂ ಆಗದು'

ಎಂದು ಅವನು ಹೇಳಿದ ಪ್ರಸ್ತಾಪ ಬರುತ್ತದೆ. ಆದ್ದರಿಂದ ಜನಕನು ಪಡೆದ 'ಸಂಸಿದ್ಧಿ' ಇಂತಹ ನಿರ್ಮಮತೆಯಿಂದ ಕೂಡಿದ ನಿಷ್ಕಾಮಕರ್ಮ. ಇದರ ಸುಖ-ದುಃಖಗಳೊಂದೂ ಅವನ ವ್ಯಕ್ತಿಜೀವನದಲ್ಲಿ ಕಾಣಸಿಗುವುದಿಲ್ಲ. ಆದರೆ ಅದರ ಪರಿಣಾಮ ಲೋಕಕ್ಕೆ ಎಂದರೆ ಜನಕ್ಕೆ ಸತ್ಪರಿಣಾಮವೇ. ಅದೇ "ಲೋಕಸಂಗ್ರಹ." ಅಂತಹ ಆದರ್ಶರಾಜನ ಯಾವ ಪ್ರಜೆಯೂ ಸನ್ಮಾರ್ಗವನ್ನು ಬಿಟ್ಟು ನಡೆಯುವುದು ಶಕ್ಯವಲ್ಲ. ಮಹನೀಯರು ತೋರಿಸಿದ ಆಚರಣೆಯ ಮಾರ್ಗವನ್ನೇ ಸಾಮಾನ್ಯ ಜನರು ಅನುಸರಿಸಿಯೇ ತೀರುತ್ತಾರೆ :

> "ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ
> ಸ ಯತ್ಪ್ರಮಾಣಂ ಕುರುತೇ ಲೋಕ ಸ್ತದನುವರ್ತತೇ ॥" (3-21)

ಮಹಾತ್ಮನ ಆದರ್ಶಜೀವನ ಮಿಕ್ಕವರಿಗೆಲ್ಲ ಮಾರ್ಗದರ್ಶನ ನೀಡುತ್ತದೆ ; ಬಾಳಿನ ದಾರಿದೀಪವಾಗುತ್ತದೆ. ಈ ಮಾತನ್ನು ಹಿಂದಿನ ಎಲ್ಲ ಆಚಾರ್ಯರೂ ಏಕಕಂಠದಿಂದ ಒಪ್ಪಿದ್ದಾರೆನ್ನುವದು ಮಾತ್ರವಲ್ಲ ; ಇಂದಿನ ಮಹನೀಯರೂ ತಂತಮ್ಮ ರೀತಿಯಿಂದ ನುಡಿದು, ನಡೆದು ತೋರಿಸಿದ್ದಾರೆ. ಲೋಕಮಾನ್ಯ ಬಾಲಗಂಗಾಧರ ತಿಲಕ್, ಮಹಾತ್ಮ ಗಾಂಧೀಜಿ, ಶ್ರೀ ವಿನೋಬಾಭಾವೆ—ಇವರು ತ್ರಿಮೂರ್ತಿಗಳಂತೆ 'ಲೋಕ'–ಸಂಗ್ರಹದ ಸಂದೇಶವನ್ನು ಇಂದಿನ ಜನತೆಗೂ ಬಿಂಬಿಸಿ ತೋರಿಸಿದ್ದಾರೆ.

"ಲೋಕ" ಎಂದರೆ ಸಮಾಜ, ಉಚ್ಚ-ನೀಚ, ಜಾತಿ-ಪಂಥ ಭೇದಗಳಿಲ್ಲದ ಸಾರ್ವತ್ರಿಕ ಜನತೆ ಎಂದೇ ಮೂಲಾರ್ಥ. "ಸಂಗ್ರಹ" ಎಂದರೆ ಅದರ ಧಾರಣೆ, ಪಾಲನೆ, ಪೋಷಣೆ, ಉಜ್ಜೀವನ, ಉದ್ಧರಣ. 'ಸಂಗ್ರಹ'ದ ವಿರುದ್ಧ ಶಬ್ದವೇ ಗೀತೆಯಲ್ಲಿ "ಸಂಕರ". ಸ್ವಾರ್ಥ ಜೀವನದಿಂದ ಆಗುವ ಹಾನಿಯೇ ಲೋಕ–ಸಂಕರ ;

ನಿಷ್ಕಾಮಕರ್ಮದಿಂದ ಬರುವ ಲಾಭವೇ 'ಲೋಕ-ಸಂಗ್ರಹ'. ಮನುಸ್ಮೃತಿಯಲ್ಲಿ (7–114) ಇದೇ ಅರ್ಥದಲ್ಲಿ 'ರಾಷ್ಟ್ರ-ಸಂಗ್ರಹ' ಎಂಬ ಶಬ್ದದ ಪ್ರಯೋಗ ಬಂದಿದೆ. ಮಹಾಭಾರತದ ಶಾಂತಿ ಪರ್ವದಲ್ಲಿ ಕೂಡ (258ನೆಯ ಅಧ್ಯಾಯ 25ನೆಯ ಶ್ಲೋಕ) 'ಲೋಕ-ಸಂಗ್ರಹ'ವೇ ಭಗವಂತನು ಮಹಾಪುರುಷರಿಗೆ ಒಪ್ಪಿಸಿಕೊಟ್ಟಿರುವ ಹೊಣೆಯೆಂದು ಸ್ಪಷ್ಟವಾಗಿ ಹೇಳಲಾಗಿದೆ.

'ಲೋಕಸಂಗ್ರಹಸಂಯುಕ್ತಂ ವಿಧಾತ್ರಾ ವಿಹಿತಂ ಪುರಾ |
ಸೂಕ್ಷ್ಮಧರ್ಮಾರ್ಥನಿಯತಂ ಸತಾಂ ಚರಿತಮುತ್ತಮಮ್' ||'

ಇದನ್ನು ಮನಗಂಡುದರಿಂದಲೇ ಭರ್ತೃಹರಿಯೆಂಬ ಮಹಾಕವಿ ಸತ್ಪುರುಷರು ಯಾರೆಂದು ನೀತಿಶತಕದಲ್ಲಿ ಹೇಳುವಾಗ ಕೆಳಗಿನ ಲಕ್ಷಣವನ್ನು ಕೊಟ್ಟಿದ್ದಾನೆ :–

"ಏತೇ ಸತ್ಪುರುಷಾಃ ಪರಾರ್ಥಘಟಕಾಃ ಸ್ವಾರ್ಥಾನ್ ಪರಿತ್ಯಜ್ಯ ಯೇ "

ಸ್ವಾರ್ಥವನ್ನು ಸಂಪೂರ್ಣವಾಗಿ ತ್ಯಜಿಸಿ ಕೇವಲ ಪರಹಿತಕ್ಕಾಗಿಯೇ ದುಡಿಯುವವರು ಯಾರೋ ಅವರೇ ಸಜ್ಜನರು. ಸಜ್ಜನರ ಕಾರ್ಯವೆಲ್ಲ ಲೋಕಸಂಗ್ರಹವೇ. ಇಂತಹ ಲೋಕಸಂಗ್ರಹದ ಧ್ಯೇಯಕ್ಕಾಗಿ ಜೀವನವನ್ನು ಮುಡಿಪಿಟ್ಟ ಮಹನೀಯರಲ್ಲಿ ಮಲ್ಲಾಡಿಹಳ್ಳಿಯ ಶ್ರೀರಾಘವೇಂದ್ರಸ್ವಾಮೀಜಿ ಅವರು ಅಗ್ರಗಣ್ಯರಷ್ಟೇ ಅಲ್ಲ ಅಗ್ರಗಾಮಿಗಳೂ ಆಗಿದ್ದಾರೆ. ಅವರ ಆದರ್ಶಜೀವನಜ್ಯೋತಿ ಇಂದೂ ನೂರಾರು ಜನರ ಹೃನ್ಮಂದಿರಗಳಲ್ಲಿ ಬೆಳಕು ನೀಡುತ್ತಿದೆ. ಆ ಬೆಳಕು ಹೆಚ್ಚಿ ಳಕಾಗಲೆಂದು ಹಾರೈಸುತ್ತೇವೆ.

ಜೀವನದ ಸಾರವನ್ನು ಅನುಭವವಾಣಿಯಿಂದ ಸುಂದರವಾಗಿ ಪ್ರಶ್ನೋತ್ತರರೂಪದಲ್ಲಿ ಹೇಳುವ 'ಪ್ರಶ್ನೋತ್ತರ-ರತ್ನಮಾಲೆ'ಯೆಂಬ ಒಂದು ಕಾವ್ಯ ಸಂಸ್ಕೃತ ಸಾಹಿತ್ಯದಲ್ಲಿದೆ. ಇದರ ಕೆಲವು ಅವತರಣಿಕೆಗಳಿಂದ ಈ ಲೇಖನವನ್ನು ಉಪಸಂಹರಿಸಬಹುದಾಗಿದೆ :–

"ಕಿಂ ಸಂಸಾರೇ ಸಾರಂ ?"
"ಬಹುಶೋऽಪಿ ವಿಚಿಂತ್ಯಮಾನಮಿದಮೇವ !–
ಮನುಜೇಷು ದೃಷ್ಟತತ್ವಂ
ಸ್ವಪರಹಿತಾಯೋದ್ಯತಂ ಜನ್ಮ ||"

ಪ್ರಶ್ನೆ :–"ಸಂಸಾರದಲ್ಲಿ ಸಾರವಾದ್ದೇನು !"

ಉತ್ತರ :–"ಎಷ್ಟು ವಿಚಾರಮಾಡಿದರೂ ಬರುವ ಉತ್ತರ ಒಂದೇ :–ಸ್ವಹಿತದಂತೆ ಪರಹಿತಕ್ಕಾಗಿ ಮುಡಿಪಾದ ಮನುಷ್ಯ ಜನ್ಮ !"

"ಕಃ ಪೂಜ್ಯಃ ?" "ಸದ್ವೃತ್ತಿಃ"
"ಕೇನ ಜಿತಂ ಜಗದೇತತ್ " "ಸತ್ಯತಿತಿಕ್ಷಾವತಾ ಪುಂಸಾ"
"ಕುಲಶೈಲನಿಷ್ಪ್ರಕಂಪಾಃ
ಕೇ ?" "ಕಲಿಕಾಲೇऽಪಿ ಸತ್ಪುರುಷಾಃ ||"

ಪ್ರಶ್ನೆ :–"ಪೂಜ್ಯರು ಯಾರು ?"

ಉತ್ತರ :–"ಸದ್ವರ್ತನೆಯಿರುವವರು."

ಪ್ರಶ್ನೆ :–"ಜಗತ್ತನ್ನೇ ಗೆಲ್ಲುವವರು ಯಾರು ?"

ಉತ್ತರ :–"ಯಾರಲ್ಲಿ ಸತ್ಯ, ಸಹನೆಗಳಿವೆಯೋ ಅವರು."

ಪ್ರಶ್ನೆ :–"ಕುಲಾಚಲಗಳಂತೆ ಎಂದೆಂದೂ ಶಾಶ್ವತವಾಗಿ ನಿಲ್ಲುವವರು ಯಾರು ?"

ಉತ್ತರ :–"ಕಲಿಕಾಲದಲ್ಲಿಯೂ ಸತ್ಪುರುಷರಾದವರು."

ಅಂತಹವರನ್ನು ನೋಡಿದಾಗ ಈ ಹಿಂದಿನ ಮಾತುಗಳಿಗೆ ಇಂದಿನ ನಿದರ್ಶನವನ್ನು ಕಂಡಂತಾಗುವುದಿಲ್ಲವೆ ?

ಸತ್ಯಂ-ಶಿವಂ-ಸುಂದರಂ

ಸಚ್ಚಿದಾನಂದಸ್ವರೂಪ ಪರಮಾತ್ಮನೇ ಈ ಪ್ರಪಂಚವಾಗಿ ತೋರಿಕೊಳ್ಳುತ್ತಿದ್ದಾನೆ–ಎಂಬಿದು ವೇದಾಂತದ ಸಿದ್ಧಾಂತ. ಆದ್ದರಿಂದ,

ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾಂತ ಉಪಾಸೀತ ।

(ಛಾಂ, 3-14-1)

ಈ ಪ್ರಪಂಚವೆಲ್ಲವೂ ಬ್ರಹ್ಮದಿಂದ ಹುಟ್ಟಿ ಬ್ರಹ್ಮದಲ್ಲಿಯೇ ಇದ್ದು ಬ್ರಹ್ಮದಲ್ಲಿಯೇ ಲಯವಾಗುತ್ತಿರುವದರಿಂದ (ತಜ್ಜ–ತಲ್ಲ-ತದನ), ಸರ್ವವೂ ಬ್ರಹ್ಮವೇ ಆಗಿದೆಯೆಂದು ಶಾಂತನಾಗಿ ನಿಶ್ಚಯಮಾಡಿ (ಹಾಗೆಂದೇ) ಉಪಾಸನೆಮಾಡಬೇಕು.

ಅನಂತ ಗುಣ-ಶಕ್ತಿಗಳುಳ್ಳ ಬ್ರಹ್ಮವನ್ನು ಅಸಾಧಾರಣವಾದ (ಮಹಾವಿಭೂತಿ) ಗುಣ–ಶಕ್ತಿಗಳುಳ್ಳದ್ದೆಂದೂ, "ಈ ಬ್ರಹ್ಮವೇ ನನ್ನ ಆತ್ಮ" ಎಂದೂ ಉಪಾಸನೆ ಮಾಡಬೇಕೆಂದು ಛಾಂದೋಗ್ಯ-ಉಪನಿಷತ್ತಿನ ಶಾಂಡಿಲ್ಯವಿದ್ಯೆಯಲ್ಲಿ ಹೇಳಿದೆ. ಸಮಸ್ತವಾದ ಗುಣ-ಶಕ್ತಿಗಳೂ ಸತ್ಯಂ-ಶಿವಂ-ಸುಂದರಂ ಎಂಬೀ ಮೂರು ಮಹದ್ವಿಭೂತಿಗುಣಗಳಲ್ಲಿಯೇ ಅಡಗಿವೆ, ಎನ್ನಬಹುದು. ಪರಮಾತ್ಮನ ಸತ್-ಚಿತ್-ಆನಂದ ಸ್ವರೂಪವೇ ಸತ್ಯಂ, ಶಿವಂ, ಸುಂದರಂ ಆಗಿ ತೋರಿಕೊಳ್ಳುತ್ತಿದೆ.

ವೇದವನ್ನು ಹೇಳಿಕೊಡುವ ಆಚಾರ್ಯನು ಶಿಷ್ಯನಿಗೆ,

ಸತ್ಯಂ ವದ । ಧರ್ಮಂ ಚರ । ಸ್ವಾಧ್ಯಾಯಾನ್ಮಾ ಪ್ರಮದಃ ।

(ತೈ, 1–11)

ಎಂದು ಮೊದಲಾಗಿ ಅನುಶಾಸನ ಮಾಡುತ್ತಾನೆ. ಇಲ್ಲಿ ಸತ್ಯವೆಂದರೆ, (ಪ್ರತ್ಯಕ್ಷಾದಿ) ಪ್ರಮಾಣಗಳಿಂದ ಹೇಗೆ ನಿಶ್ಚಿತವಾಗಿರುವದೋ (ಯಥಾ ಪ್ರಮಾಣಾವಗತಂ ವಕ್ತವ್ಯಮ್ ತತ್ ವದ।) ಹಾಗೆಯೇ ಹೇಳಬೇಕು, ಎಂದು ಅರ್ಥ. ಅಂದರೆ, ತಿಳಿದುದನ್ನು ತಿಳಿದಂತೆ, ಕಂಡುದನ್ನು ಕಂಡಂತೆ ಕೇಳಿದ್ದನ್ನು ಕೇಳಿದಂತೆ, ಪ್ರಾಮಾಣಿಕವಾಗಿ ಹೇಳಬೇಕು,–ಇದೇ ಸತ್ಯ. ಅಂತು, ಸತ್ಯವು ವಾಕ್ ಪ್ರಧಾನವಾದುದು.

ಸತ್ಯಕ್ಕೆ ಈ ವಿವರಣೆಯು ಸಾಲದೆಂದು ಗೀತೆಯಲ್ಲಿ ಭಗವಂತನು,

ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯಹಿತಂ ಚ ಯತ್ ।

(ಗೀ, 17-15)

"ನಮ್ಮ ಮಾತು ಸತ್ಯವಾಗಿದ್ದರೆ ಸಾಲದು ; ಅದರಿಂದ ಯಾರಿಗೂ ನೋವಾಗಬಾರದು ; ಇಷ್ಟೇ ಅಲ್ಲ,

ಅದು ಸದ್ಯಕ್ಕೆ ಸಂತೋಷವನ್ನುಂಟುಮಾಡುವುದರಿಂದ ಪ್ರಿಯವೂ, ಮುಂದೆಯೂ ಜನ್ಮಾಂತರ-ಲೋಕಾಂತರಗಳಲ್ಲಿಯೂ ಒಳ್ಳೆಯ ಪರಿಣಾಮವನ್ನುಂಟುಮಾಡುವುದರಿಂದ ಹಿತವೂ ಆಗಿರಬೇಕು"–ಎಂದು ಹೇಳಿದ್ದಾನೆ.

ಮಹಾಭಾರತದ ಕರ್ಣಪರ್ವದಲ್ಲಿ-ಕುರುಕ್ಷೇತ್ರಯುದ್ಧದ ಹದಿನಾರನೆಯ ದಿನ ಪ್ರಸಂಗವಶಾತ್ ಧರ್ಮರಾಜನ ಮೇಲೇ ಅರ್ಜುನನು ಕೋಪಗೊಂಡಾಗ ಕೃಷ್ಣನು ಹೇಳಿರುವದೇನೆಂದರೆ,

"ಸತ್ಯಮೇವ ಹಿ ವಕ್ತವ್ಯಂ । ವಕ್ತವ್ಯಂ ಚಾನೃತಂ ಭವೇತ್ ।
ಯತ್ರಾನೃತಂ ಭವೇತ್ ಸತ್ಯಂ । ಸತ್ಯಂ ಚಾನೃತಂ ಭವೇತ್ ॥

ಸತ್ಯವನ್ನೇ ಸರ್ವದಾ ಹೇಳಬೇಕು ಎಂಬುದು ಪ್ರಸಿದ್ಧವಾದುದು; ಆದರೆ, ದೀರ್ಘಕಾಲದ ವಿಶಾಲವಾದ ಜೀವನಾನುಭವದ ಅನಂತ ಜಟಿಲಸಮಸ್ಯೆಗಳನ್ನು ಆಳವಾಗಿ ವಿಚಾರಮಾಡಿದರೆ, ಸುಳ್ಳನ್ನೂ ಹೇಳಬೇಕಾದ ಸಂದರ್ಭ ಒದಗುತ್ತದೆ. ಏಕೆಂದರೆ, ಕೆಲವು ವಿಶೇಷ ಪ್ರಸಂಗಗಳಲ್ಲಿ ಅನೃತವಚನವೇ ಸತ್ಯವಚನದ ಸತ್‌ಪರಿಣಾಮವನ್ನೂ ಮತ್ತೆ ಕೆಲವು ಅಸಾಧಾರಣ ಪ್ರಸಂಗಗಳಲ್ಲಿ ಸತ್ಯವಾದ ನುಡಿಯೇ ಅಸತ್ಯವಾಕ್ಕಿನ ದುಷ್ಟಫಲಗಳನ್ನೂ ಉಂಟುಮಾಡುವದು ಲೋಕಾನುಭವದಲ್ಲಿ ಕಂಡುಬಂದಿದೆ. ಇದರಿಂದ,

ವಿವಾಹಕಾಲೇ ರತಿಸಂಪ್ರಯೋಗೇ । ಪ್ರಾಣಾತ್ಯಯೇ ಸರ್ವಧನಾಪಹಾರೇ ॥
ವಿಪ್ರಸ್ಯ ಚಾರ್ಥೇ ಹ್ಯನೃತಂ ಬ್ರುವೀತ । ಪಂಚಾನೃತಾನ್ಯಾಹುರಪಾತಕಾನಿ ॥

ವಿವಾಹಕಾಲದಲ್ಲಿಯೂ ಪ್ರಿಯ-ಪ್ರೇಯಸಿಯರ ರತಿಸಮಯದಲ್ಲಿಯೂ ಪ್ರಾಣಾಪಾಯದ ಸಂದರ್ಭದಲ್ಲಿಯೂ ಸರ್ವಸಂಪತ್ತೂ ಅಪಹೃತವಾಗುವ ಭಯವಿರುವಾಗಲೂ ಸತ್ಪುರುಷನ ಪ್ರಾಣ-ಮಾನಾದಿಗಳನ್ನು ಉಳಿಸುವದಕ್ಕಾಗಿಯೂ ಅನೃತವನ್ನು ಹೇಳಬಹುದು; ಈ ಐದು ಸಂದರ್ಭಗಳಲ್ಲಿ ಹೇಳಿದ ಅನೃತವು ಪಾಪವಲ್ಲ. (ಮ. ಭಾ. ಕ. ಪ).

ಆದರೆ, ವಿಷವನ್ನಾದರೂ ಬಹಳ ಎಚ್ಚರದಿಂದ ಮಿತವಾಗಿ ಶಾಸ್ತ್ರೋಕ್ತಕ್ರಮದಲ್ಲಿ ಉಪಯೋಗಿಸಿದರೆ ಔಷಧವಾಗುವಂತೆ ಅನೃತವನ್ನು ಉಪಯೋಗಿಸಿದರೆ ಮಾತ್ರ ಪಾಪವಾಗಲಾರದು. ಆದ್ದರಿಂದ,

ಯದ್ಭೂತಹಿತಮತ್ಯಂತಂ ತತ್ ಸತ್ಯಮಿತಿಧಾರಣಾ ।

'ಪ್ರಾಣಿಗಳಿಗೆ ಯಾವುದು ಅತ್ಯಂತ ಹಿತವೋ ಅದೇ ಸತ್ಯವೆಂದು ತಿಳಿಯಬೇಕು'–ಎಂದು ಶ್ರೀಕೃಷ್ಣ ಹೇಳಿದ್ದಾನೆ. ಇದರಿಂದ ಧರ್ಮವೇ ಸತ್ಯವೆನಿಸುತ್ತದೆ; ಧರ್ಮಕ್ಕೆ ವಿರೋಧವಲ್ಲದ ಸತ್–ಪರಿಣಾಮದಿಂದಲೇ ಸತ್ಯವನ್ನು ನಿರ್ಣಯಿಸಬೇಕಾಗಿದೆ. ಇದಿಷ್ಟೂ ಸತ್ಯದ ವ್ಯಾವಹಾರಿಕ ದೃಷ್ಟಿಯ ವಿಚಾರವಾಯಿತು.

ಪಾರಮಾರ್ಥಿಕ ದೃಷ್ಟಿಯಿಂದ ಸತ್ಯವೆಂದರೆ,

ಯದ್ರೂಪೇಣ ಯನ್ನಿಶ್ಚಿತಂ ತದ್ರೂಪಂ ನ ವ್ಯಭಿಚರತಿ ತತ್ ಸತ್ಯಮ್ ।
ಯದ್ರೂಪೇಣ ನಿಶ್ಚಿತಂ ಯತ್ ತದ್ರೂಪಂ ವ್ಯಭಿಚರತ್ 'ಅನೃತಮ್'
ಇತ್ಯುಚ್ಯತೇ । ಅತೋ ವಿಕಾರೋ ಅನೃತಮ್ । ವಾಚಾರಮ್ಭಣಂ....

(ತೈ, ಶಾಂ-ಭಾ 2–1).

ಯಾವ ರೂಪದಿಂದ ಇರುವದೆಂದು ಯಾವದು ಗೊತ್ತಾಗಿರುವದೋ ಮತ್ತು ಆ ರೂಪವನ್ನು ಯಾವದು ಬಿಟ್ಟು ಹೋಗದಿರುವದೋ ಅದು ಸತ್ಯವು; ಯಾವ ರೂಪದಿಂದ ಕೂಡಿರುವದೆಂದು ಯಾವದು ಗೊತ್ತಾಗಿದ್ದು ಆ ರೂಪವನ್ನು ಬಿಟ್ಟು ಹೋಗುವದೋ, ಅದು ಅನೃತವು. ಆದ್ದರಿಂದ ಕಾರ್ಯವಾದುದು

ಅನೃತವು. ಏಕೆಂದರೆ, ಶೃತಿಯಲ್ಲಿ "ವಿಕಾರವು ಹೆಸರು ಮಾತ್ರ, ಮಾತಿನ ಕಾರ್ಯವು ; ಮಣ್ಣು ಎಂಬುದೇ ಸತ್ಯವು" (ಛಾಂ-6-1-4-) ಎಂದು ಹೇಳಿದೆ.

ಸತ್ಯಂ ಜ್ಞಾನಮನನ್ತಂ ಬ್ರಹ್ಮ।... (ತೈ, 2-1)

ಸತ್ಯವೂ ಜ್ಞಾನವೂ ಅನಂತವೂ ಆನಂದವೂ ಆಗಿರುವದೇ ಬ್ರಹ್ಮವು. ಚೈತನ್ಯಸ್ವರೂಪವಾದ ಬ್ರಹ್ಮ ಒಂದೇ ನಿತ್ಯ ನಿರ್ವಿಕಾರವಾದುದು ; ಆದುದರಿಂದಲೇ ಅದು ಸತ್ಯವಾದುದು. ಅದರ ಹೊರತು ಪ್ರಕೃತಿಜನ್ಯವಾದ ಮಿಕ್ಕ ಎಲ್ಲವೂ ಬದಲಾವಣೆ ಹೊಂದತಕ್ಕವು ; ವಿಕಾರಿಯಾದ ಕಾರ್ಯರೂಪವಾದುವು, ಆದ್ದರಿಂದ ಅನೃತ ವಾದುವು, ತೋರಿ ಅಡಗತಕ್ಕವು. ಅವಿದ್ಯಾಕಲ್ಪಿತವಾದ ಪ್ರಕೃತಿಯಾಗಲೀ ಅದರ ವಿಕೃತಿಯಾದ ಪ್ರಪಂಚವಾಗಲೀ (ಕಾರಣವಾದ) ಬ್ರಹ್ಮವನ್ನು ಬಿಟ್ಟು ಬೇರೆ ಸ್ವತಂತ್ರವಾಗಿ ಇಲ್ಲವಾದುದರಿಂದ ಅನೃತ (ಹುಸಿ ತೋರಿಕೆ) ಆಗಿವೆ. ಸತ್ಯವು ದೇಶ–ಕಾಲ–ಕಾರಣ–ಕಾರ್ಯ ಭಾವಾದಿಗಳನ್ನು ಮೀರಿ ನಮ್ಮೆಲ್ಲರ ಆತ್ಮವಾದ ಬ್ರಹ್ಮವಾಗಿದೆ. ಇದೇ ಸತ್ಯದ ಪರಮಾರ್ಥರೂಪ ; ಇದರ ವ್ಯಾವಹಾರಿಕ ರೂಪವು ಸತ್ಯದ ಪರಮಾರ್ಥ ಸ್ವರೂಪದ ಜ್ಞಾನಕ್ಕೆ ಸಾಧನ ವಾಗಿರಬೇಕು.

ಇನ್ನು 'ಶಿವಂ' ಎಂದರೆ ಮಂಗಳಸ್ವರೂಪ. ಅಮೃತನೂ ನಿತ್ಯಾನಂದಸ್ವರೂಪನೂ ಆದ ಪರಮಾತ್ಮ ನೊಬ್ಬನೇ ಮಂಗಳಸ್ವರೂಪ. ವಿಕಾರಿಯೂ ವಿನಾಶಿಯೂ ದುಃಖರೂಪವೂ ಆದ ಅನಾತ್ಮವೆಲ್ಲಾ ಅಮಂಗಳವೇ.

ಮಾಂಡೂಕ್ಯೋಪನಿಷತ್ತಿನ ತುರೀಯ ಮಂತ್ರದಲ್ಲಿ,

ನಾನ್ತಃ ಪ್ರಜ್ಞಂ....। ಅದೃಷ್ಟಂ ಅವ್ಯವಹಾರ್ಯಂ....ಏಕಾತ್ಮ ಪ್ರತ್ಯಯಸಾರಂ ಪ್ರಪಂಚೋಪಶಮಂ
ಶಾನ್ತಂ ಶಿವಂ ಅದ್ವೈತಂ ಚತುರ್ಥಂ ಮನ್ಯನ್ತೇ ಸ ಆತ್ಮಾ ಸ ವಿಜ್ಞೇಯಃ (ಮಾ–7)

ಕನಸಿನ ತೈಜಸನೂ ಎಚ್ಚರದ ವಿಶ್ವನೂ ನಿದ್ರೆಯ ಪ್ರಾಜ್ಞನೂ ಅಲ್ಲದ....। ಆದ್ದರಿಂದಲೇ ಕಾಣದಿರುವ, ವ್ಯವಹಾರಕ್ಕೆ ಸಿಕ್ಕದಿರುವ....(ಮೂರು–ಅವಸ್ಥೆಗಳಲ್ಲಿಯೂ ಇರತಕ್ಕವನು,) ಚೈತನ್ಯಸ್ವರೂಪ ಆತ್ಮ ಒಬ್ಬನೇ ಎಂಬ ತಪ್ಪದೆ ಇರುತ್ತಿರುವ ಪ್ರತ್ಯಯದಿಂದ (ಅರಿವಿನಿಂದ) ಅನುಸರಿಸಿ ಅವನನ್ನು ತಿಳಿಯಬೇಕಾದುದು ; (ಅಥವಾ ಆತ್ಮನೆಂಬ ಪ್ರತ್ಯಯವೊಂದೇ ಯಾವ ತುರೀಯನನ್ನು ಅರಿಯುವದಕ್ಕೆ ಸಾರವೋ–ಪ್ರಮಾಣವೋ–ಆ ತುರಿಯವೇ ಏಕಾತ್ಮಪ್ರತ್ಯಯ ಸಾರವು). ಆತ್ಮನೆಂಬ ಪ್ರತ್ಯಯ–(ವೃತ್ತಿ) ಶಬ್ದಗಳೂ ಆತ್ಮಸ್ವರೂಪವನ್ನು ತಿಳಿಸಲಾರವೆಂದು ಸಿದ್ಧವಾಗಿದ್ದರೂ ಆ ಸ್ವರೂಪವನ್ನು ತಿಳಿದುಕೊಳ್ಳುವದಕ್ಕೆ ಈ ಪ್ರತ್ಯಯವೊಂದೇ ಸಾಧಕ ವಾಗಿರುತ್ತದೆ. ಎಚ್ಚರ-ಕನಸುಗಳ ಪ್ರಪಂಚವು ತುರೀಯನಲ್ಲಿ ಇಲ್ಲದಿರುವದರಿಂದಲೇ ಅದು (ಆ ಸ್ಥಿತಿಯು) ಶಾಂತವೂ ಶಿವವೂ ಆಗಿರುತ್ತದೆ. ಇದರಿಂದ ಇದು ಭೇದಗಳೆಂಬ ವಿಕಲ್ಪಗಳಿಲ್ಲದ ಅದ್ವೈತವು. ಏಕೆಂದರೆ, ತೋರು ತ್ತಿರುವ ವಿಶ್ವಾದಿ ಮೂರು ಪಾದಗಳಿಗಿಂತ ಬೇರೆಯ ಸ್ವರೂಪದವನಾದ ಈ ತುರೀಯನೇ ಆತ್ಮನು ; ಇವನನ್ನೇ ಅರಿತುಕೊಳ್ಳಬೇಕು.

ಮನೆಯೊಳಗೆ ಸಂಜೆಯ ಮಂದಪ್ರಕಾಶದಲ್ಲಿ ಒಮ್ಮೆ ಹಾವಾಗಿಯೂ ಇನ್ನೊಮ್ಮೆ ಹೂವಿನ ಹಾರ ವಾಗಿಯೂ ಮತ್ತೊಮ್ಮೆ ನೆಲದ ಬಿರುಕಾಗಿಯೂ ತೋರುವ ಹಗ್ಗವನ್ನು ದೀಪದ ಬೆಳಕಿನಲ್ಲಿ ಆ ಹಾವು ಮೊದಲಾದ ಮೂರು ಹುಸಿ ತೋರಿಕೆಗಳಿಗಿಂತ ಬೇರೆ ನಾಲ್ಕನೆಯದಾದ ಹಗ್ಗವೆಂದೇ ನಿಶ್ಚಯಿಸುವಂತೆ **ಶಿವ** (ಮಂಗಳ) ಸ್ವರೂಪ ನಾದ ತುರೀಯಾತ್ಮನನ್ನು ಅರಿಯಬೇಕು.

ಆತ್ಮಜ್ಞಾನಕ್ಕೆ ಸಾಧನಗಳಾದ ವಿವೇಕ-ವೈರಾಗ್ಯಗಳೂ ಭಗವದ್-ಭಕ್ತಿ ವಿರಕ್ತಿಗಳೂ ಮಾತ್ರ ಮೃತ್ಯುವಿ ನಿಂದ ಅಮಂಗಳ (ಅಶಿವ)ವಾದ ಈ ಮರ್ತ್ಯಲೋಕದಲ್ಲಿ ಶಿವಮಯವಾಗಿವೆ. ಆಧ್ಯಾತ್ಮಜ್ಞಾನ ಪ್ರಸಾರವೂ

ನಿಸ್ವಾರ್ಥವಾದ ಲೋಕಸೇವೆಯೂ ಉದಾರೋನ್ನತ ಸದ್ಗುಣಸಂಪತ್ತೂ ಕೂಡ ವ್ಯವಹಾರದೃಷ್ಟಿಯಿಂದ ಶಿವಮಯವಾದುವೆ ಆಗಿವೆ.

ಇರುವಿಕೆಯನ್ನು ಸತ್ಯಂ, ಶಿವಂ, ಸುಂದರಂ ಎಂದು ವಿವರಿಸುತ್ತಾರೆ. ಧರ್ಮೋಪದೇಶವನ್ನು ಮಾಡಿರುವ ಎಲ್ಲಾ ಆಚಾರ್ಯರೂ ಸತ್ಯಂ ಮತ್ತು ಶಿವಂ ಎಂಬ ಎರಡು ಲಕ್ಷಣಗಳನ್ನು ಒತ್ತಿ ಹೇಳಿದ್ದಾರೆ ; ಎತ್ತಿ ಹಿಡಿದಿದ್ದಾರೆ. ಆದರೆ, ಸುಂದರಂ ಎಂಬ ಮೂರನೆಯ ಲಕ್ಷಣವನ್ನು ಹೆಚ್ಚಾಗಿ ವಿವರಿಸಿದಂತೆ ತೋರುವದಿಲ್ಲ. ಇರುವಿಕೆಯ ಅನುಭವ ಪಡೆಯುವವರಲ್ಲಿ ಸೌಂದರ್ಯದ ಸ್ಥಾನವೇನು ? ಅದರ ಅರ್ಥವೇನು ?–ಇದನ್ನು ವಿಚಾರಮಾಡಬೇಕು.

ಸತ್ಯಂ ಶಿವಂ ಸುಂದರಂ ಇವು ಒಂದರಿಂದ ಒಂದು ಬೇರೆ ಬೇರೆಯೆ ? ಇವು ಮೂರು ಬೇರೆ ಬೇರೆ ವಸ್ತುಗಳೆ ? ಅಥವಾ ಲಕ್ಷಣಗಳೆ ? ಅಥವಾ ಒಂದೇ ವಸ್ತುವೇ ಈ ಮೂರು ಹೆಸರುಗಳಿಂದ ಕರೆಯಲ್ಪಡುತ್ತಿದೆಯೆ ?

ಸುಂದರಂ ಎಂದರೆ ಅಥವಾ ಸೌಂದರ್ಯವೆಂದರೆ ಏನು ? ಇದು ನಿಜವಾಗಿಯೂ ಬಹಳ ತೊಡಕಾದ ಪ್ರಶ್ನೆ. ಸೌಂದರ್ಯವಾದರೋ ಎಲ್ಲರನ್ನೂ ಆಕರ್ಷಿಸುತ್ತದೆ, ಎಲ್ಲರನ್ನೂ ಉಲ್ಲಾಸಪಡಿಸುತ್ತದೆ, ಸಂತೋಷ ಪಡಿಸುತ್ತದೆ, ಮೆಚ್ಚಿಸುತ್ತದೆ, ಮೈಮರೆಸುತ್ತದೆ. ಸೌಂದರ್ಯವು ಇಂಥಾ ಅಸಾಧಾರಣವಾದುದು, ಅಲೌಕಿಕವಾದುದು, ಆಶ್ಚರ್ಯವಾದುದು, ಆನಂದಮಯವಾದುದು. ಇದು ಸಕಲರ ಮನಸ್ಸನ್ನೂ ಸಮಾನವಾಗಿಯೇ ಸೆಳೆಯುವದರಿಂದ ಇಂಥಾ ಅದ್ಭುತಶಕ್ತಿಯುಳ್ಳ ಸೌಂದರ್ಯದ ಸ್ವರೂಪವೇನೆಂದು ತಿಳಿಯಲು ಸರ್ವರಿಗೂ ಕುತೂಹಲವಿರುವುದು ಸ್ವಾಭಾವಿಕ. ಆದರೆ ಎಲ್ಲರೂ ಸೌಂದರ್ಯದ ಪ್ರಭಾವಕ್ಕೆ ಒಳಗಾದರೂ ಅದರ ಸ್ವರೂಪವನ್ನೂ, ಸ್ವಭಾವವನ್ನೂ ಪ್ರಭಾವದ ಕಾರಣವನ್ನೂ ರಹಸ್ಯವನ್ನೂ ವಿಚಾರಮಾಡಿ ತಿಳಿಯುವ ಆಸಕ್ತಿಯಾಗಲೀ ಶಕ್ತಿಯಾಗಲೀ ಎಲ್ಲರಿಗೂ ಇರುವದಿಲ್ಲ. ಪಾಂಡಿತ್ಯವಿಲ್ಲದಿದ್ದರೂ ಅದನ್ನು ತಿಳಿಯುವ ಇಚ್ಛೆಯುಳ್ಳ ಸಾಮಾನ್ಯರು ಅದರ ಸ್ವಭಾವಾದಿಗಳನ್ನು ಕಂಡುಹಿಡಿಯುವ ಬಗೆಯೇನು ? ಬರಿ ಮಾತಿನಿಂದಾಗಲೀ ಬುದ್ಧಿಯಿಂದಾಗಲೀ ಅಲ್ಲದೆ ನಿಜವಾಗಿಯೂ ವಾಸ್ತವವಾಗಿಯೂ ಸೌಂದರ್ಯದ ಅನುಭವವನ್ನು ನೇರಾಗಿ ಪಡೆಯುವುದು ಹೇಗೆ ?

ನಾವು ರೂಪದಲ್ಲಿ ಸೌಂದರ್ಯವನ್ನು ಕಾಣುವದೇ ಹೆಚ್ಚು. ಒಂದು ಪ್ರಫುಲ್ಲವಾದ ಗುಲಾಬಿ ಹೂವಿನಲ್ಲಿರುವ ಸೌಂದರ್ಯವೂ ಸೌಗಂಧವೂ ನಮ್ಮನ್ನು ಆಹ್ಲಾದಪಡಿಸುತ್ತದೆ. ಅದನ್ನು ನೋಡಿ ಮೆಚ್ಚದವನೇ ಇಲ್ಲ ; ಪಾಮರರನ್ನೂ ಅದು ಉಲ್ಲಾಸಪಡಿಸುತ್ತದೆ. ಅದರ ಪ್ರಭಾವ ಸಾರ್ವತ್ರಿಕವಾದುದು, ಪ್ರಬಲವಾದುದು. ಶರತ್ಕಾಲದ ಚಂದ್ರಿಕೆಯ ಸೌಂದರ್ಯವೂ ಅಂಥದೇ. ನಾವು ವನದಲ್ಲಿಯೂ ಪರ್ವತಗಳಲ್ಲಿಯೂ ನದಿಗಳಲ್ಲಿಯೂ ಜಲಪಾತಗಳಲ್ಲಿಯೂ ಸಮುದ್ರದ ರುದ್ರಗಾಂಭೀರ್ಯದಲ್ಲಿಯೂ ಅಪಾರತೆಯಲ್ಲಿಯೂ ಕ್ಷೋಭೆಯಲ್ಲಿಯೂ ಸೌಂದರ್ಯವನ್ನು ಅನುಭವಿಸುತ್ತೇವೆ. ಇದೆಲ್ಲಾ ಪ್ರಕೃತಿಸೌಂದರ್ಯ. ನವಿಲು, ಗಿಳಿ, ಜಿಂಕೆ ಮೊದಲಾದ ಪ್ರಾಣಿಗಳಲ್ಲಿರುವ ಸೌಂದರ್ಯದಿಂದ ಮುಗ್ಧರಾಗುತ್ತೇವೆ. ಸ್ತ್ರೀಪುರುಷರಲ್ಲಿರುವ ಸೌಂದರ್ಯವನ್ನು ನೋಡಿ ಮರುಳಾಗುತ್ತೇವೆ. ಮಾನವಕೃತವಾದ ದೇವಾಲಯ, ದೇವತಾಮೂರ್ತಿ, ತಾಜ್‌ಮಹಲ್ ಮೊದಲಾದ ಶಿಲ್ಪದಲ್ಲಿಯೂ ಚಿತ್ರದಲ್ಲಿಯೂ ಕಾವ್ಯದಲ್ಲಿಯೂ ಸೌಂದರ್ಯವನ್ನು ಅನುಭವಿಸಿ ಭಾವೋನ್ನತಿಯನ್ನು ಪಡೆಯುತ್ತೇವೆ. ಆ ಸೌಂದರ್ಯದಲ್ಲಿ ಭವ್ಯತೆಯನ್ನೂ ದಿವ್ಯತೆಯನ್ನೂ ಕಾಣುತ್ತೇವೆ. ಇವೆಲ್ಲಾ ರೂಪವಿಷಯಕವಾದ ಸೌಂದರ್ಯ.

ಹೀಗೆಯೇ ಶಬ್ದದಲ್ಲಿ ನಮಗೆ ಪ್ರಿಯವಾದುದೂ ಇಂಪಾದುದೂ, ಸ್ಪರ್ಶದಲ್ಲಿ ಕೋಮಲವಾದುದೂ ಮೃದುವಾದುದೂ ಇಷ್ಟವಾದುದೂ ರೋಮಾಂಚಕವಾದುದೂ, ರಸದಲ್ಲಿ ರುಚಿಯಾದುದೂ, ಹಿತವಾದುದೂ ಗಂಧದಲ್ಲಿ ಉಲ್ಲಾಸಕರವೂ ಉತ್ತೇಜಕವೂ ಮೋಹಕವೂ ಆದುದೂ ಆಯಾ ವಿಷಯಗಳಲ್ಲಿರುವ ಸೌಂದರ್ಯ.

ಹೀಗೆ ಭೌತಿಕಭೂಮಿಕೆಯಲ್ಲಿ ಮಾತ್ರವಲ್ಲದೆ ಭಾವಭೂಮಿಕೆಯಲ್ಲಿಯೂ ಬೌದ್ಧಿಕ ಭೂಮಿಕೆಯಲ್ಲಿಯೂ ಕಲಾರಂಗದಲ್ಲಿಯೂ ಸಾಹಿತ್ಯ ಕ್ಷೇತ್ರದಲ್ಲಿಯೂ ಸಂಗೀತಶಾಸ್ತ್ರದಲ್ಲಿಯೂ ಸೌಂದರ್ಯವನ್ನು ಗ್ರಹಿಸಿ, ಗುರುತಿಸಿ

ಗೌರವಿಸಿ ಆನಂದಪಡುತ್ತೇವೆ. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಸೌಂದರ್ಯವು ಸರ್ವವ್ಯಾಪಿ. ಅನೇಕ ಬಗೆಯ ಕ್ಲೇಶಗಳಿಂದ ನೀರಸವಾದ ನಮ್ಮ ಜೀವನವನ್ನು ರಸಮಯವಾಗಿ ಮಾಡುತ್ತಿರುವುದೇ ಸೌಂದರ್ಯದೃಷ್ಟಿ–ಸೌಂದರ್ಯ ಸೃಷ್ಟಿ. ಹೀಗೆ ಹೊರಗೂ ಒಳಗೂ ತುಂಬಿರುವ ಸೌಂದರ್ಯವನ್ನು ಸವಿದು, ಸಂತೋಷಪಡದವನ ಬಾಳು ಬರಿ ಬರಡು. ಅಂಥವನ ಹೃದಯವು ಸಂಸ್ಕಾರ ರಹಿತವೂ ಸಂಸ್ಕೃತಿ ಶೂನ್ಯವೂ ಆದ ಪಾಷಾಣ.

ಇದೆಲ್ಲಾ ಸರಿಯೇ. ಆದರೆ, ಈ ನಮ್ಮ ಸೌಂದರ್ಯಾನುಭವದಲ್ಲಿ ಇರುವ ತತ್ತ್ವವೇನು ? ನಾವು ಸೌಂದರ್ಯವನ್ನು ಕಾಣುತ್ತಿರುವುದು ಕಾರ್ಯರೂಪವಾದ ವಸ್ತುಗಳಲ್ಲಿ, ಸಾವಯವವಾದ ವಸ್ತುಗಳಲ್ಲಿ, ದೃಶ್ಯ ವಿಲಾಸದಲ್ಲಿ ಅಥವಾ ಇಂದ್ರಿಯ ಗೋಚರವಾದ ವಸ್ತುಗಳಲ್ಲಿ ಅಥವಾ ವಿದ್ಯಮಾನಗಳಲ್ಲಿ ಆಗಿದೆ. ಆದರೆ, ವಸ್ತುವಿನಲ್ಲಿ ಸೌಂದರ್ಯವಿದ್ದರೂ ಗ್ರಹಿಸಲಾರದ ಮನಸ್ಸಿಗೆ ಅದರ ಅನುಭವವಾಗುವುದಿಲ್ಲ. ಆದ್ದರಿಂದ, ಮನಸ್ಸಿನ ಸಂಸ್ಕಾರವೂ ಸೂಕ್ಷ್ಮ ಸಂವೇದಕ ಶಕ್ತಿಯೂ ಆಸಕ್ತಿಯೂ ಸೌಂದರ್ಯಾನುಭವಕ್ಕೆ ಮುಖ್ಯವಾದ ಆವಶ್ಯಕತೆಗಳು. ಇದರ ಸಾರಾಂಶವೇನೆಂದರೆ, ಸೌಂದರ್ಯಾನುಭವವು ಮುಖ್ಯವಾಗಿ ನಮ್ಮ ಮನಸ್ಸಿನ ಪ್ರತಿಕ್ರಿಯೆಯಲ್ಲಿದೆ–ಎಂದು ಸಿದ್ಧವಾಗುತ್ತದೆ. ಹೊರಗಿನ ವಸ್ತುಗಳಿಂದ ಇಂದ್ರಿಯಗಳ ಮೂಲಕ ನಮ್ಮ ಮನಸ್ಸಿನ ಮೇಲೆ ಆಗುವ ಸಮಾಘಾತವೇ-ಪ್ರಚೋದನೆಯೇ–ಕ್ರಿಯೆ ; ಇದರಿಂದ ಆಯಾ ವ್ಯಕ್ತಿಗಳ ಸಂಸ್ಕಾರಾನುಗುಣವಾಗಿ ಅವರವರ ಮನಸ್ಸಿನಲ್ಲಿ ಉಂಟಾಗುವ ಪರಿಣಾಮವೇ ಪ್ರತಿಕ್ರಿಯೆ. ಹೊರಗಿನ ಪ್ರಚೋದನೆಯು ಒಂದೇ ಬಗೆಯಾಗಿದ್ದರೂ ಒಂದೊಂದು ಮನಸ್ಸಿನಲ್ಲಿ ಒಂದೊಂದು ಬಗೆಯ ಪ್ರತಿಕ್ರಿಯೆ ಉಂಟಾಗಬಹುದು. ಅಂತು, ನಮ್ಮ ನಮ್ಮ ಅನುಭವಕ್ಕೆ ನಮ್ಮ ನಮ್ಮ ಮನಸ್ಸಿನ ಪ್ರತಿಕ್ರಿಯೆಯೇ ಕಾರಣ. ಆದರೆ, ಹೊರಗಿನ ವಿಷಯಗಳನ್ನು ಅವಲಂಬಿಸಿರುವ ಸೌಂದರ್ಯಾನುಭವವು ಆಹ್ಲಾದವನ್ನು ಉಂಟುಮಾಡಿದರೂ ಪರತಂತ್ರವಾದುದು, ಕ್ಷಣಿಕವಾದುದು, ಅಲ್ಪವಾದುದು, ಮನಸ್ಸಿನ ಮೇಲ್ಮೈಯಿಗೆ ಮಾತ್ರ ಸಂಬಂಧಪಟ್ಟುದು. ಹೊರಗಿನ ಯಾವದೊಂದು ವಸ್ತುವಿನಲ್ಲಿ ಸುರೂಪದ, ಸಲ್ಲಕ್ಷಣದ ಸೌಂದರ್ಯವಿರುವಂತೆ ಕುರೂಪವೂ ಅವಲಕ್ಷಣವೂ ಅಸಹ್ಯತೆಯೂ ಇರಬಹುದು. ಪ್ರತಿಯೊಂದು ವಸ್ತುವಿನಲ್ಲಿಯೂ ಪ್ರಿಯಲಕ್ಷಣವೂ ಅಪ್ರಿಯ ಲಕ್ಷಣವೂ ಮಿಶ್ರವಾಗಿಯೇ ಇರುತ್ತವೆ. ಆದ್ದರಿಂದ, ಸೌಂದರ್ಯವನ್ನು ಗ್ರಹಿಸಿ ಸಂತೋಷಪಡಬಲ್ಲ ಸೂಕ್ಷ್ಮಸಂವೇದನಾಶಕ್ತಿಯುಳ್ಳ ಮನಸ್ಸು ಒಂದು ವಸ್ತುವಿನಲ್ಲಿರುವ ಅನಿಷ್ಟವಾದ ವಿಕೃತರೂಪವನ್ನೂ ಗ್ರಹಿಸಿ ಸಂಕಟಪಡುತ್ತದೆ.

ಆದ್ದರಿಂದ ವಿಷಯಾಧೀನವಲ್ಲದ, ಸಂತೋಷಕ್ಕೂ ಸಂಕಟಕ್ಕೂ ಕಾರಣವಾದ ಮನಸ್ಸಿನ ಪ್ರತಿಕ್ರಿಯಾರೂಪವಲ್ಲದ, ಕ್ಷಣಿಕವಲ್ಲದ, ಅಲ್ಪವಲ್ಲದ, ಆದರೆ, ಸತ್ಯಂ ಎಂದಾಗಲೀ ಶಿವಂ ಎಂದಾಗಲೀ ಸುಂದರಂ ಎಂದಾಗಲೀ ಹೇಳಬಹುದಾದ ಯಾವದಾದರೂ ಒಂದು ಅಸಾಧಾರಣ ಮನಸ್ಥಿತಿ ಇದೆಯೆ ?—ಎಂದು ನಾವು ಗಂಭೀರವಾಗಿ ವಿಚಾರಮಾಡಬೇಕು.

ನಾವು ಒಂದು ಮರವನ್ನು ನೋಡಿ ಅಥವಾ ಒಂದು ಹೂವನ್ನು ನೋಡಿ "ಆಹಾ ! ಅದೆಷ್ಟು ಸುಂದರವಾಗಿದೆ !" ಎಂದು ಸಂತೋಷದಿಂದ ಉದ್ಗಾರಮಾಡಿ, ಮುಂದಕ್ಕೆ ಹೋಗುತ್ತೇವೆ ; ಅಥವಾ "ಆ ಹಂದಿಯನ್ನು ನೋಡು ಎಷ್ಟು ಕುರೂಪವಾಗಿದೆ ! ಎಷ್ಟು ಅಸಹ್ಯವಾಗಿದೆ !" ಎಂದು ಜಿಗುಪ್ಸೆಯನ್ನು ತೋರಿಸುತ್ತೇವೆ. ಮರವಾಗಲೀ ಹೂವಾಗಲೀ ಹಂದಿಯಾಗಲೀ ಕಾರ್ಯರೂಪವಾದ ಸೃಷ್ಟಿ. ಅವುಗಳ ಪ್ರಚೋದನೆಯಿಂದ ನಮ್ಮ ಮನಸ್ಸಿನಲ್ಲಿ ಇಷ್ಟವೋ ಅನಿಷ್ಟವೋ ಆದ ಪ್ರತಿಕ್ರಿಯೆ ಉಂಟಾಗುತ್ತದೆ. "ಆಹಾ ! ಎಷ್ಟು ಸುಂದರವಾಗಿದೆ !" ಎನ್ನುವುದೂ ನಮ್ಮ ಮನಸ್ಸಿನ ಪ್ರತಿಕ್ರಿಯೆಯೇ ; "ಅಯ್ಯೋ ! ಎಷ್ಟು ಅಸಹ್ಯವಾಗಿದೆ !" ಎನ್ನುವದೂ ಮಾನಸಿಕ ಪ್ರತಿಕ್ರಿಯೆಯೇ. ಹಾಗಾದರೆ, ಸೌಂದರ್ಯವೆಂದರೆ ಕೇವಲ ಮಾನಸಿಕ ಪ್ರತಿಕ್ರಿಯೆಯೆ ? ಸೃಷ್ಟಿಯಾದ ಕಾರ್ಯರೂಪ ಒಂದು ವಸ್ತುವಿನ ಪ್ರಚೋದನೆಯಿಂದ ಉಂಟಾಗುವ ಮನಸ್ಸಿನ ಪರಿಣಾಮ ಮಾತ್ರ ಸೌಂದರ್ಯವೆ ?

ಎಷ್ಟೆಂದರೂ ನಮ್ಮ ಮನಸ್ಸುಗಳು ಹೊರಗಿನ ಆಘಾತಗಳಿಂದಲೂ ಆಹ್ವಾನಗಳಿಂದಲೂ ಹೊಡೆದೆಬ್ಬಿಸಲ್ಪಟ್ಟ ಸಾಕು ಸಾಲದ ಪರಿಣಾಮಗಳು ವೃತ್ತಿಗಳೂ ತರಂಗಾಳಿಗಳೂ ಆಗಿವೆ. ಆದ್ದರಿಂದ ನಮ್ಮ ಮನಸ್ಸಿನಲ್ಲಿ ತಿಕ್ಕಾಟವೂ ಹೋರಾಟವೂ ನೋವೂ ಇವೆ. ನಮ್ಮ ಮನಸ್ಸಿನ ಭಾವವು ವಿಶಾಲವಾಗಲೀ ಸಂಕುಚಿತವಾಗಲೀ ಹೊರ ವಿಷಯಗಳ ಪ್ರಚೋದನೆಯನ್ನೂ ಒಳ ಮನಸ್ಸಿನ ಪ್ರತಿಕ್ರಿಯೆಯನ್ನೂ ನಾವು ಕೊಡುವ ಲಕ್ಷ್ಯದ ಬಗೆಯನ್ನೂ ಅವಲಂಬಿಸಿದೆ.

ಯಾವ ಬಗೆಯ ಮನೋವ್ಯಾಪಾರಕ್ಕಾಗಲೀ ಪ್ರತಿಕ್ರಿಯೆಗಾಗಲೀ ನಾವು ಕೊಡುವ ಗಮನವೂ ಲಕ್ಷ್ಯವೂ ಪ್ರಾಮುಖ್ಯತೆಯೂ ಬಹಳ ಮುಖ್ಯ. ಅಂಗಡಿಯಲ್ಲಿ ಅನೇಕ ವಸ್ತುಗಳಿರಬಹುದು ; ಆದರೆ ನಮಗೆ ಬೇಕಾದ ವಸ್ತುವಿನಲ್ಲಿ ಮಾತ್ರ ನಾವು ಲಕ್ಷ್ಯವನ್ನಿಡುತ್ತೇವೆ ; ಲಕ್ಷ್ಯವಿಟ್ಟ ವಸ್ತುವು ಮಾತ್ರ ನಮ್ಮ ಮನಸ್ಸಿನಲ್ಲಿ ಮೂಡಿ, ಇಷ್ಟವಾದ ಅಥವಾ ಅನಿಷ್ಟವಾದ ಪ್ರತಿಕ್ರಿಯೆಗಳನ್ನು ಉಂಟುಮಾಡುತ್ತದೆ. ರಸ್ತೆಯಲ್ಲಿ ನಿಂತಿರುವ ನಮ್ಮೊಡನೆ ನಮ್ಮ ಸ್ನೇಹಿತನು ಮಾತನಾಡುತ್ತಿರುವಾಗ ನಮ್ಮ ಆಸಕ್ತಿಯೂ ಲಕ್ಷ್ಯವೂ ಅವನ ಮಾತಿನಲ್ಲಿ ಇದ್ದರೆ, ಸುತ್ತಲ ಮರಗಳಲ್ಲಿ ಹಕ್ಕಿಗಳು ಚಿಲಿಪಿಲಿಗುಟ್ಟುತ್ತಿದ್ದರೂ ದೂರದಲ್ಲಿ ನಾಯಿ ಬೊಗಳುತ್ತಿದ್ದರೂ ಕತ್ತೆ ಕಿರಿಚುತ್ತಿದ್ದರೂ ಪಕ್ಕದಲ್ಲಿ ಕಾರುಗಳು ಭರ್ರನೆ ಓಡುತ್ತಿದ್ದರೂ ಬೇರೆ ಜನರು ಅಲ್ಲಿಯೇ ಮಾತನಾಡುತ್ತಾ ಹೋಗುತ್ತಿದ್ದರೂ ತಲೆಯ ಮೇಲೆ ಅಂತರಿಕ್ಷದಲ್ಲಿ ವಿಮಾನವು ಹಾರಾಡುತ್ತಾ ಭಯಂಕರ ಶಬ್ದಮಾಡುತ್ತಿದ್ದರೂ ದೂರದಲ್ಲಿ ರೈಲು ಕೂಗುತ್ತಿದ್ದರೂ ಇವೆಲ್ಲಾ ನಮ್ಮ ಅರಿವಿನಲ್ಲಿ ಮೇಲೆ ಮೇಲೆ ತೇಲುವಾಗಿ ಮೂಡಿದರೂ ಆ ಸ್ನೇಹಿತನ ಮಹತ್ತ್ವದ ಮಾತುಗಳೇ ನಮ್ಮ ಮನಸ್ಸಿನಲ್ಲಿ ಆಳವಾಗಿ ಅಚ್ಚೊತ್ತಿದಂತೆ ಮುಖ್ಯವಾದ ಪ್ರತಿಕ್ರಿಯೆಯನ್ನು ಉಂಟುಮಾಡುತ್ತವೆ. ಇದರಿಂದ ಮನಸ್ಸಿನ ಪ್ರತಿಕ್ರಿಯೆಗೆ ನಮ್ಮ ಲಕ್ಷ್ಯವೇ ಮುಖ್ಯವೆಂಬುದು ಸ್ಪಷ್ಟವಾಗುತ್ತದೆ. ಇದು ಎಲ್ಲರ ಸಾಮಾನ್ಯವಾದ ಅನುಭವ. ಈ ಅನುಭವದಲ್ಲಿ ಪ್ರತಿಕ್ರಿಯಾರೂಪವಾದ ಒಂದೊಂದು ಮನೋವೃತ್ತಿಯೂ ನಮಗೆ ಸತ್ಯ. ಪ್ರತಿಯೊಂದು ಮನೋವೃತ್ತಿಯಲ್ಲಿಯೂ ನಾವು ಬೆರೆತು-ಪೂರಾ ಬೆರೆತು—ಒಂದಾಗಿರುತ್ತೇವೆ. ಒಂದೊಂದು ಪ್ರತಿಕ್ರಿಯೆಯೂ ವೃತ್ತಿಯೂ ನಾವೇ ಆಗಿರುತ್ತೇವೆ. ನಮ್ಮ ಪೂರ್ಣ ಲಕ್ಷ್ಯವನ್ನು ಹೊರಗಿನ ವಿಷಯವೇ ಸೆಳೆದು ಹೀರಿಕೊಂಡಿರುವುದರಿಂದಲೂ ಮನಸ್ಸು ಅದರಲ್ಲಿಯೇ ಮುಳುಗಿ ಒಂದಾಗಿ ಆಯಾ ವಿಷಯಾಕಾರದ ಪ್ರತಿಕ್ರಿಯೆಯನ್ನು ಹೊಂದುತ್ತಿರುವುದರಿಂದಲೂ ಆ ಮನೋವೃತ್ತಿಗಳ ಒಳಗೆ, ಮತ್ತು ಹಿನ್ನೆಲೆಯಲ್ಲಿ ಏನಿದೆ ?—ಎಂಬುದು ನಮಗೆ ತಿಳಿಯದು.

ವಸ್ತುವೇ ಪ್ರಧಾನವಾಗಿರುವುದಕ್ಕೆ—ಸತ್ಯವಾಗಿರುವುದಕ್ಕೆ—ನಾವದಕ್ಕೆ ಕೊಡುವ ಲಕ್ಷ್ಯವೇ ದೃಷ್ಟಿಯೇ, ಮಹತ್ತ್ವವೇ ಕಾರಣವೆಂಬುದು ನಮಗೆ ಮರೆತುಹೋಗುತ್ತದೆ. ಆದರೆ, ನಮ್ಮ ನಮ್ಮ ದೃಷ್ಟಿಯಂತೆ ನಮನಮಗೆ ಸೃಷ್ಟಿಯು ಕಾಣುತ್ತಿದೆ ಎಂಬುದು ಎಲ್ಲರ ಅನುಭವ. ಆದ್ದರಿಂದ ಒಬ್ಬರಿಗೆ ಅಥವಾ ಒಂದು ದೃಷ್ಟಿಗೆ ಸುರೂಪವಾಗಿ, ಸುಂದರವಾಗಿ, ಪ್ರಿಯವಾಗಿ ಕಾಣುವದು ಇನ್ನೊಬ್ಬರಿಗೆ ಅಥವಾ ಇನ್ನೊಂದು ದೃಷ್ಟಿಗೆ ಕುರೂಪವಾಗಿ, ಅಪ್ರಿಯವಾಗಿ ಕಾಣಬಹುದು. ಹೀಗೆ ದೃಷ್ಟಿಯೇ, ಲಕ್ಷ್ಯವೇ ಪ್ರಧಾನವೆಂದು ಇಟ್ಟುಕೊಂಡಾಗ ವಸ್ತುವು ಪ್ರಧಾನವಾಗುವದಿಲ್ಲ ; ವಸ್ತುವು ಛಾಯಾರೂಪವೂ, ಕೊನೆಗೆ ಮಾಯಾರೂಪವೂ ಆಗುತ್ತದೆ ; ಅಂದರೆ, ವಸ್ತುವು ಸತ್ಯವೆಂಬ ಭ್ರಮೆಯು ಶಿಥಿಲವಾಗಿ, ಕ್ರಮೇಣ ವಸ್ತುವು ಕಣ್ಮರೆಯಾಗುತ್ತದೆ. ಆಗ ಲಕ್ಷ್ಯ ಒಂದೇ ನಿಲ್ಲುತ್ತದೆ. ಅದು ವಸ್ತುಶೂನ್ಯವೂ ವಿಷಯಶೂನ್ಯವೂ ಆಗುತ್ತದೆ. ಲಕ್ಷ್ಯವೆಂದರೆ ಮನಸ್ಸಿನ ಕೇಂದ್ರೀಕರಣ ಅಥವಾ ಅರಿವಿನ ಕೇಂದ್ರೀಕರಣ ಅಥವಾ ಅರಿವು. ಒಂದು ವಿಷಯದಲ್ಲಿಯೇ ಅರಿವು ಮೀಸಲಾಗಿ ನಿಂತಾಗ ಕೇಂದ್ರೀಕರಣವೆನಿಸುತ್ತದೆ, ಏಕಾಗ್ರವೆನಿಸುತ್ತದೆ. ಅರಿವು ತನ್ನ ಗುರಿಯಾದ ವಿಷಯದಲ್ಲಿ ಬೆರೆತು ವಿಷಯಾಕಾರವೇ ಆದಾಗ ಅರಿವೆಂಬುದನ್ನು ಬೇರೆಯಾಗಿ ಗುರುತಿಸುವುದಕ್ಕೇ ಆಗುವದಿಲ್ಲ. ಆದ್ದರಿಂದ ಅದು ಅರಿವೇ ಅಲ್ಲ, ವಿಷಯವೇ ಸರಿ ಅದು. ಏಕೆಂದರೆ, ವಿಷಯವು ಅರಿವನ್ನು ಹೀರಿಕೊಂಡು ಬಿಟ್ಟಿರುತ್ತದೆ.

ಆದರೆ, ಅರಿವು ವಿಷಯದ ಕಡೆ ಲಕ್ಷ್ಯ ಕೊಡದೆ, ಹರಿಯದೆ, ತನ್ನಷ್ಟಕ್ಕೆ ತಾನಿರುವಾಗ, ತಾನೇ ತಾನಾಗಿರುವಾಗ, ಅದರಲ್ಲಿ ಪ್ರತಿಕ್ರಿಯೆಯಿಲ್ಲ. ಅರಿವು ಒಂದೇ ಸತ್ಯ ಎನ್ನುವ ನಿಶ್ಚಯಜ್ಞಾನದಲ್ಲಿ ಗ್ರಾಹ್ಯವಾದ ವಿಷಯವಿಲ್ಲದ್ದರಿಂದ ಗ್ರಹಿಸುವ ಕ್ರಿಯೆಯೂ ಇಲ್ಲ; ಹೊರಗಿನ ಪ್ರಚೋದನೆಯಿಂದ ಉಂಟಾಗುವ ಪ್ರತಿಕ್ರಿಯೆಯೂ ಇಲ್ಲ; ಒಳಹೊರಗೆಂಬುದೇ ಇಲ್ಲ. ಇದು ಎಚ್ಚರದಲ್ಲಿ ಎಚ್ಚರ, ತುಂಬು ಎಚ್ಚರ, ತೀವ್ರತರವಾದ ಎಚ್ಚರ; ಇದು ಯಾವ ನೆನಸೂ ಇಲ್ಲದ ಎಚ್ಚರ, ಆಗ ನಮ್ಮ ಮೈ ರೋಮರೋಮವೆಲ್ಲಾ ಎಚ್ಚರದಿಂದ ತುಂಬಿದೆ, ಅರಿವಿನಿಂದ ತುಂಬಿದೆ. ನಮ್ಮ ಪೂರ್ಣ ಇರುವಿಕೆಯೇ ಅರಿವಿನ ಗಟ್ಟಿಯಾಗಿದೆ. ಈ ಸ್ಥಿತಿಯಲ್ಲಿ ಸುರೂಪವೆಲ್ಲಿ, ಕುರೂಪವೆಲ್ಲಿ? ಸೌಂದರ್ಯವೆಲ್ಲಿ, ವಿಕಾರವೆಲ್ಲಿ? ಇಷ್ಟವೆಲ್ಲಿ, ಅನಿಷ್ಟವೆಲ್ಲಿ? ಆದರೆ, ಸೌಂದರ್ಯವಿಕಾರಗಳ ಮನೋವೃತ್ತಿಗಳಲ್ಲಿ ಆ ಅರಿವು ತುಂಬಿಕೊಂಡು, ಅವುಗಳನ್ನೇ ವಿಷಯಮಾಡಿಕೊಂಡು ಅದು ಸಾಕ್ಷಿಯಾಗಿಯೂ ನೋಡುತ್ತದೆ. ಸಾಕ್ಷಿಯಾದ ಈ ಅರಿವು ಪೂರ್ಣವೂ ಅಖಂಡವೂ ಇರುವುದರಿಂದ, ಸೌಂದರ್ಯ-ವಿಕಾರ, ಪ್ರಿಯ-ಅಪ್ರಿಯ ಎಂಬ ವಿಭಾಗವನ್ನು ಮಾಡಿಕೊಳ್ಳುವದಿಲ್ಲ. ಈ ಸಾಕ್ಷಿಯ ಸ್ಥಿತಿಯಲ್ಲಿರುವ ಮನಸ್ಸು ತನ್ನ ಪ್ರತಿಕ್ರಿಯೆಗಳನ್ನೂ ವಿಕಾರಗಳನ್ನೂ ತಾನೇ ಅರ್ಥಮಾಡಿಕೊಂಡು ಅರಿಯುತ್ತದೆ. "ಈ ಸೌಂದರ್ಯವನ್ನು ನಾನು ಅನುಭವಿಸಿದೆ;" ಅಥವಾ "ಈ ವಿಕಾರವನ್ನು ನಾನು ಅನುಭವಿಸಿದೆ."—ಎನ್ನುವುದಕ್ಕೆ ಆ ಅಖಂಡ ಅರಿವಿನ ಪೂರ್ಣಾನುಭವದಲ್ಲಿ ಜ್ಞಾತೃವೂ ಭೋಕ್ತೃವೂ ಆದ "ನಾನು" ಎನ್ನುವದೇ ಇಲ್ಲ. ಆದರೂ ಸೌಂದರ್ಯವನ್ನಾಗಲೀ ವಿಕಾರವನ್ನಾಗಲೀ ಗ್ರಹಿಸಬಲ್ಲ ಸೂಕ್ಷ್ಮ ಸಂವೇದನಾಶಕ್ತಿಯು ಅದರಲ್ಲಿ ನಾಶವಾಗಿರುವುದಿಲ್ಲ. ಅಖಂಡವಾದ ಅರಿವು ಪ್ರತಿಕ್ರಿಯೆಯಲ್ಲ, ಒಂದು ಕಾರಣದಿಂದ ಹುಟ್ಟಿದ ಕಾರ್ಯವಲ್ಲ.

ತಿಕ್ಕಾಟದಲ್ಲಿಯೂ ಆಶೆಯಲ್ಲಿಯೂ ಆಶಾತೃಪ್ತಿಯಲ್ಲಿಯೂ ಆಶಾಭಂಗದಲ್ಲಿಯೂ ಸಿಕ್ಕಿಕೊಂಡ ಮನಸ್ಸೇ ಸುರೂಪ-ಕುರೂಪ, ಸೌಂದರ್ಯ-ವಿಕಾರ ಮೊದಲಾದ ದ್ವಂದ್ವಗಳನ್ನು ಸೃಷ್ಟಿಮಾಡಿಕೊಳ್ಳುತ್ತದೆ.

ಸತ್ಯಂ-ಶಿವಂ-ಸುಂದರಂ ಎಂಬಿದರ ನಿಜಾರ್ಥವನ್ನು ತಿಳಿಯಬೇಕಾದರೆ, ಈ ಶಬ್ದಗಳಿಂದಲೂ ಇವುಗಳಿಂದ ಉಂಟಾಗುವ ಪ್ರತಿಕ್ರಿಯೆಯಿಂದಲೂ ಮನಸ್ಸು ಖಾಲಿ ಆಗಬೇಕು. ಆ (ಶಬ್ದಶೂನ್ಯದ-ಸಂಕಲಶೂನ್ಯದ-ಪ್ರತ್ಯಯರಹಿತ) ಪೂರ್ಣಾನುಭವದಲ್ಲಿ ಅನುಭವಿಸುವ ಭೋಕ್ತೃ ಇಲ್ಲ. ಆದರಲ್ಲಿ ಅಪಾರ ಸೃಷ್ಟಿಶಕ್ತಿ ಇದೆ. ಆದರೆ, ತನ್ನ ಸುತ್ತಲಿರುವ ಪ್ರಕೃತಿಸೌಂದರ್ಯವನ್ನು ಸವಿದು, ಸುಖಿಸಿ, ಚಿತ್ರ-ಶಿಲ್ಪ-ಸಂಗೀತ ಮೊದಲಾದ ಕಲೆಗಳ ಮೂಲಕವೂ ಸಾಹಿತ್ಯ, ಕಾವ್ಯ ಇತ್ಯಾದಿಗಳ ಮೂಲಕವೂ ಅದರ ಕಳೆಯನ್ನು ಹೊರಹೊಮ್ಮಿಸಿ, ತನ್ನ ಸೌಂದರ್ಯಾಭಿರುಚಿಯನ್ನೂ ಸೌಂದರ್ಯಾಭಿಜ್ಞತೆಯನ್ನೂ ಸೌಂದರ್ಯ ಪ್ರೇಮವನ್ನೂ ಅಭಿವ್ಯಕ್ತಮಾಡಿ, ಸಾರ್ಥಕತೆಯ ಕೃತಕೃತ್ಯತೆಯನ್ನು ಪಡೆಯುವ ಸೌಂದರ್ಯೋಪಾಸಕ ಮನಸ್ಸಿನ ಪ್ರತಿಕ್ಷಣದ ಪ್ರತಿಯೊಂದು ದ್ವಂದ್ವಾತ್ಮಕ ವೃತ್ತಿ-ವ್ಯಾಪಾರಗಳಲ್ಲಿಯೂ ಜೀವರಸವಾಗಿ ತುಂಬಿ, ಅರಿಯುತ್ತಿರುವ ಸಾಕ್ಷಿಚೈತನ್ಯದಲ್ಲಿ ಅಸತ್ಯ-ಅಶಿವ-ಅಸುಂದರ ಲಕ್ಷಣಗಳ ಸೆಲೆಯೂ ಸೋಂಕೂ ಇಲ್ಲದಿರುವದರಿಂದ, ಈ ಆತ್ಮನಲ್ಲಿ ನಿಜವಾದ ಸತ್ಯಂ-ಶಿವಂ-ಸುಂದರಂ ಸತ್ತ್ವದ ಸುಧಾಸಾರವೇ, ಸಾಗರವೇ ಲಾಸ್ಯಮಾಡುತ್ತಿದೆ!

ಓಂ ತತ್‌ಸತ್

ಸ. ವೆಂಕಟಾಚಲಪತಿ

ಭಾರತೀಯ ಸಂತರ ಉಪದೇಶ ಮಾರ್ಗ

ಸಂತರು ಎಂದರೆ ಯಾರು ? ಪ್ರಪಂಚದಲ್ಲಿ ಎಲ್ಲಿನೋಡಿದರೂ ಜನ ಕೆಲವರನ್ನು ಸಂತರೆಂದು ಹೊಗಳುತ್ತ ತಮ್ಮ ಬಾಳಿಗೆ ಅವರನ್ನು ಮಾದರಿ ಎಂದುಕೊಳ್ಳುತ್ತಾರಲ್ಲ, ಅವರ ಸ್ವಭಾವ ಎಂಥಾದ್ದು ? ಇಂಗ್ಲಿಷಿನಲ್ಲಿ 'ಸೇಯ್ಂಟ್' ಎಂದು ಎಂಥವರನ್ನು ಕರೆಯುತ್ತಾರೋ ಅಂಥವರು ನಮ್ಮ ಭಾಷೆಯಲ್ಲಿ ಸಂತರು. ಭಾರತೀಯ ಸಂತರ ದಾರಿ ಯಾವುದು ? ನಮ್ಮ ದೇಶದಲ್ಲಿ ವೇದಕಾಲದಿಂದ ಸಾಂಪ್ರತಕಾಲದವರೆಗೆ ಸಂತರು ಹುಟ್ಟುತ್ತಲೇ ಇದ್ದಾರೆ. ಬಂದ ಹುಟ್ಟನ್ನು ಸಾರ್ಥಕ ಪಡಿಸಿಕೊಂಡು, ಹೆಸರನ್ನುಳಿಸಿ, ಕಣ್ಮರೆಯಾಗುತ್ತಲೆ ಇದ್ದಾರೆ.

ಶ್ರೀ ಶಂಕರಾಚಾರ್ಯರು ಸಂತರನ್ನು ವರ್ಣಿಸುವುದು ಹೀಗೆ :

> **ಶಾಂತಾ ಮಹಾಂತೋ ನಿವಸಂತಿ ಸಂತಃ ।**
> **ವಸಂತವಲ್ಲೋಕಹಿತಂ ಚರಂತಃ ॥**

ಸಂತರು ವಸಂತ ಋತುವಿನಂತೆ ಜನಕ್ಕೆ, ನೆಮ್ಮದಿಕೊಡುತ್ತ ಲೋಕದಲ್ಲಿ ಬಾಳುವವರು. ಋತುಗಳಲ್ಲೆಲ್ಲ ವಸಂತನನ್ನು ನಾವು ತುಂಬ ಮೆಚ್ಚಿಕೊಳ್ಳುತ್ತೇವೆ. ವಸಂತ ಬಂದಾಗ ಪ್ರಕೃತಿಯಲ್ಲಿ ಕಾಣುವ ಚೆಲುವು ಹಸಿರು ಹೂ ಕಂಪು ತಂಗಾಳಿ ಹಣ್‌ಸವಿ — ಎಲ್ಲವೂ ವರ್ಷವರ್ಷವೂ ನಮಗೆ ಹೊಸದೆಂಬಂತೆ ಅನುಭವಕ್ಕೆ ಬರುತ್ತಿರುತ್ತದೆ. ವಸಂತದ ಹಾಗೆ ಸಂತರು ಒಬ್ಬೊಬ್ಬರೂ ನಮಗೆ ಹಿತೈಷಿಗಳೇ.

ಸಂತರ ಸ್ವಭಾವವನ್ನು ತಿಳಿಸುವ ವೇದಮಂತ್ರ ಒಂದುಂಟು. ಈ ಮಂತ್ರ ಆಚಾರ್ಯ ಶಂಕರರು ವರ್ಣಿಸುವ ಸಂತರ ಜನ್ಮಸಾರ್ಥಕ್ಯವನ್ನು ಹಾಡುತ್ತದೆ.

> **ಯಥಾ ವೃಕ್ಷಸ್ಯ ಸಂಪುಷ್ಪಿತಸ್ಯ ದೂರಾದ್ಗಂಧೋ ।**
> **ವಾತ್ಯೇವಂ ಪುಣ್ಯಸ್ಯ ಕರ್ಮಣೋ ದೂರಾದ್ಗಂಧೋ ।**
> **ವಾತಿ —— ಯಥಾಸಿಧಾರಾಂ ಕರ್ತೇऽವ ಹಿತಾಮವಕ್ರಾಮೇ ।**
> **ಯದ್ಯುವೇಯುವೇ ವಿಹ್ವಯಿಷ್ಯಾಮಿ ಕರ್ತಂ ಪತಿ–**
> **ಷ್ಯಾಮೀತ್ಯೇವಮಮೃತಾದಾತ್ಮಾನಂ ಜುಗುಪ್ಸೇತ್ ॥**

ಈ ಮಂತ್ರ ಮಹಾನಾರಾಯಣೋಪನಿಷತ್ತಿನಲ್ಲಿ ಬರುತ್ತದೆ : ಹೂಗಳಿಂದ ತುಂಬಿದ ಮರದಿಂದ ಹೊರಡುವ ಕಂಪು ಹೇಗೆ ಎಲ್ಲರಲ್ಲಿ ಬೆರೆತು ದಿಗಂತಗಳನ್ನು ದಾಟಿ ಹರಡುತ್ತದೆಯೋ ಹಾಗೆ ಪುಣ್ಯಕಾರ್ಯ ಮಾಡಿದವನ ಕೀರ್ತಿಗಂಧ ಸ್ವರ್ಗವನ್ನು ಸೇರುತ್ತದೆ. ನಾನೀಗ ಕತ್ತಿಯ ಮೇಲೆ ನಡೆದು ಕಮರಿಯನ್ನು ದಾಟಬೇಕಾಗಿದೆಯಲ್ಲ! ನಾನು ಅಲಗಿನ ಮೇಲೆ ಅಡಿಯಿಡುತ್ತೇನೆ. ಮನಸ್ಸು ವ್ಯಗ್ರವಾಗುತ್ತದೆ. ಕಾಲಿಗೆ ಗಾಯವಾಗಿ ಹಳ್ಳಕ್ಕೆಲ್ಲಿಬಿದ್ದೇನೋ

ಎಂದು ಅಂಜಿ ತಲ್ಲಣಿಸುತ್ತೇನೆ. ಬಾಳಪಯಣ ಹೀಗೆ. ನಾನು ಪಾಪ ಮಾಡುವುದು ಬೇಡ. ಅಪ್ರತಿಮ ಲಾಭವಾಗುವಂತೆ ಆತ್ಮರಕ್ಷಣೆ ಮಾಡಿಕೊಳ್ಳುವುದು ನನಗೆ ಸಾಧ್ಯವಾಗಲಿ. ನಾನು ಧರ್ಮಜೀವನ ನಡಸಬೇಕು .

ಮಂತ್ರವನ್ನು ಮನನ ಮಾಡೋಣ : ಅಶೋಕವೋ ಕೇದಗೆಯೋ ಪಾದರಿಯೋ ಸಂಪಗೆಯೋ ಪಾರಿಜಾತವೋ-ಯಾವುದಾದರೂ ಮರದ ತುಂಬ ಹೂಗಳು ಬಿರಿದಿದ್ದರೆ ಅವು ಎಷ್ಟೇ ದೂರದಲ್ಲಿದ್ದರೂ ಹೂಗಳು ಬಿಡುವ ಕಂಪು ತೀಡುವ ಗಾಳಿಯಲ್ಲಿ ಬೆರೆತು ದಿಕ್ಕುಗಳನ್ನು ಹಾದು ಹರಡಿಕೊಳ್ಳುತ್ತದೆ. ಹಾಗೆಯೇ ವಿಧಿನಿಷೇಧಗಳನ್ನು ತಿಳಿಸುವ ಶಾಸ್ತ್ರಗಳಿಗೆ ಒಪ್ಪಿಗೆಯಾಗುವ ಪುಣ್ಯಕರ್ಮಗಳನ್ನು ಮಾಡುವವನ ಕೀರ್ತಿ ಕಂಪಾಗಿ ಇಳೆಯಿಂದ ಹೊರಟು ಸ್ವರ್ಗವನ್ನು ಮುಟ್ಟುತ್ತದೆ.

ಜನ್ಮಕ್ಕೆ ಬಂದವರೆಲ್ಲ ಪುಣ್ಯಕರ್ಮದಲ್ಲೇ ನಿರತರಾಗಿರುವುದಿಲ್ಲ. ಪಾಪಕರ್ಮದಲ್ಲಿ ತೊಡಗುವ ಸಂದರ್ಭ ಸನ್ನಿವೇಶಗಳಲ್ಲಿ ಹಲವರು ಸಿಕ್ಕಿಕೊಳ್ಳುತ್ತಾರಲ್ಲ ! ಅವರ ನಡೆ ಹರಿತವಾದ ಕತ್ತಿಯಮೇಲೆ ನಡೆಯಬೇಕಾದಷ್ಟು ಹೊಣೆಯಿಂದ ಕೂಡಿರುತ್ತದೆ. ಈ ಕತ್ತಿಯೇ ಆಳವಾದ ಕಮರಿಯ ಮೇಲೆ ಸೇತುವೆಯ ದಾರಿಯಂತೆ ಇರುತ್ತದೆ. ಅದರ ಮೇಲೆ ನಡೆಯದೆ ಈ ದಡದಿಂದ ಹೊರಟು ಆ ದಡವನ್ನು ಮುಟ್ಟಲಾರೆವು.ಅಡಿಗೆ ಪೆಟ್ಟಾಗಿ, ಅಂಗಾಂಗಗಳಲ್ಲಿ ನಡುಕ ಹುಟ್ಟಿ ಕಮರಿಯೊಳಕ್ಕೆ ಬೀಳುವ ಅಂಜಿಕೆ. ತುಂಬ ಸಾಹಸಮಾಡಿ ಪಯಣ ಮಾಡಬೇಕು.

ಸಂಸಾರಯಾತ್ರೆಗೆ ವೇದದ ಋಷಿ ಬಳಸಿರುವ ಸುಂದರ ರೂಪಕ ಇದು. ನಡೆಯನ್ನು ಕ್ಷೇಮದಿಂದ ನಿರ್ವಹಿಸಬಲ್ಲವನು ನಿರಾತಂಕನಾಗಿರುತ್ತಾನೆ ; ಯಾತ್ರೆಯ ಕ್ಲೇಶವನ್ನು ಸಹಿಸಿಕೊಂಡು, ಬೀಳದಂತೆ ನಡೆಯನ್ನು ತಿದ್ದಿಕೊಳ್ಳುತ್ತಾನೆ. ನಿತ್ಯಜಾಗರೂಕನಾಗಿ, ಒಳ್ಳೆಯ ಗುರಿಯನ್ನು ಬಾಳಿಗಿರಿಸಿಕೊಂಡು, ಧರ್ಮಕ್ಕೆ ವಿರೋಧವಲ್ಲದ ಅರ್ಥಕಾಮಗಳನ್ನು ನಿರ್ವಾಹಮಾಡುತ್ತ, ಕಡೆಗೆ ಗುರಿಮುಟ್ಟಿ ಸವಿಯುಂಡು ಹಾಯಾಗಿರುತ್ತಾನೆ. ಅಸಿಧಾರಾವ್ರತಕ್ಕೆ ಹೆದರದೆ ಗುರಿಯನ್ನು ನೋಡುತ್ತ, ನಡೆಯುವ ದಾರಿಯನ್ನು ನೇರ್ಪಡಿಸಿಕೊಳ್ಳುತ್ತ, ಅಂತರಂಗ ಬಹಿರಂಗಗಳಲ್ಲಿ ಪಾಪಕ್ಕೆ ಹಿಮ್ಮೆಟ್ಟಿ, ಪುಣ್ಯಕರ್ಮಗಳನ್ನು ಮಾಡಿ, ಬೀಳನ್ನು ತಪ್ಪಿಸಿಕೊಂಡು ಚೆನ್ನಾಗಿ ಬದುಕಿ ಕೃತಕೃತ್ಯನೆನ್ನಿಸಿಕೊಳ್ಳುತ್ತಾನೆ. ಹೀಗೆ ಜೀವನಧರ್ಮ ಪರಾಯಣರಾದವರು ಸಂತ ಪದವಿಯನ್ನು ಪಡೆಯದಿರರು.

ಸಂತರ ಸಂಗ ಲೋಕ ಜನದ ಅನೇಕ ಸಮಸ್ಯೆಗಳನ್ನು ಬಿಡಿಸುತ್ತದೆ. ಸಮಸ್ಯೆಗಳು ಹೆಣೆದುಕೊಂಡು ಎಷ್ಟೇ ಕಗ್ಗಂಟಾಗಿ ಹೋಗಿರಲಿ — ಸಂತರು ಸುಲಭವಾಗಿ ಬಿಡಿಸಿಬಿಡುತ್ತಾರೆ. ಏಕೆಂದರೆ ಸಂತರು ಲೋಕದಲ್ಲಿ ಅಲೌಕಿಕವಾಗಿ ಬಾಳುವವರು. ಲೋಕಜನದ ಬಾಳು ಹಸನಾಗುವ ಬಗೆಯನ್ನು ಅನುಭವದಿಂದ ತಿಳಿದು ವಿವಿಧ ಜಟಿಲ ಜಗತ್‌ಸಂದರ್ಭಗಳನ್ನು ವ್ಯಾಸಂಗಮಾಡಿ, ಈಗ ಬಾಳುವ ಲೋಕಕ್ಕೆ ಕೊಡಬೇಕಾದ ಬೆಲೆಯೇನು, ಮುಂದೆ ಸಲ್ಲಬೇಕಾದ ಲೋಕಾತೀತಕ್ಕೆ ಕೊಡಬೇಕಾದ ಬೆಲೆಯೇನು ಎಂದು ಸಮ್ಯಕ್ಕಾಗಿ ತಿಳಿದುಕೊಂಡಿರುವವರು ಸಂತರು. ಜೊತೆಯ ಜನಕ್ಕೆ ಜೀವನದ ಕ್ಲೇಶಗಳನ್ನು ತಪ್ಪಿಸುವವರು, ಇಲ್ಲವೆ ಅವು ಸಹ್ಯವಾಗುವಂತೆ ಕಡಮೆ ಮಾಡುವವರು. ಮಬ್ಬಿನಲ್ಲಿ ಬೆಳಕನ್ನು ಚೆಲ್ಲುವವರು. ಸಾಮಾನ್ಯ ಜನ ಹಿಡಿದ ದಾರಿ ಕವಲೊಡೆದಾಗ ಕಾಣಿಸುವ ಎರಡು ದಾರಿಗಳಲ್ಲಿ ಒಂದು ಪುಣ್ಯದ ಕಡೆಗೂ ಇನ್ನೊಂದು ಪಾಪದ ಕಡೆಗೂ ಕರೆದೊಯ್ಯುತ್ತವೆ. ಗುರಿಯ ತಿಳಿವಳಿಕೆ ಇಲ್ಲದ ಜನ ಯಾವ ದಾರಿಯನ್ನು ಹಿಡಿಯೋಣ ಎಂದು ತಬ್ಬಿಬ್ಬಾಗುತ್ತಾರೆ. ಹೀಗೆ ಪೇಚಾಡುವ ಜನ ಸಂತರನ್ನು ಆಶ್ರಯಿಸಬೇಕು.

* * *

ಸಂತರು ಭಕ್ತರೋ ? ಹೌದು. ಅವರು ಜ್ಞಾನಿಗಳೋ ? ಹೌದು. ಅವರು ಕರ್ಮಯೋಗಿಗಳೋ ? ಹೌದು. ಅವರು ಲೋಕಾಸಕ್ತರಾಗಿರುವರಲ್ಲದೆ ಲೋಕಾತೀತರೂ ಆಗಿರುತ್ತಾರೆಂಬುದು ಒಂದು ವಿಶೇಷ. ಅವರ ಆಸಕ್ತಿ ಇಳೆಯ ಕೊಳೆಗೆ ಅಂಟದೆ ಅರಳಿರತಕ್ಕದ್ದು — ಕೊಳೆ ನೀರಿನ ಸೋಂಕಿಲ್ಲದೆ ಚೊಕ್ಕಟವಾಗಿ ಚೆಲುವಾಗಿ ಇರತಕ್ಕ ತಾವರೆಯೆಲೆಯಂತೆ, ತಾವರೆ ಹೂವಿನಂತೆ. ಅವರ ಲೋಕಾರಾಧನೆ ಈಶ್ವರಾರಾಧನೆಯೇ. ಜಗದ್ವಸ್ತು

ಗಳಲ್ಲೆಲ್ಲ ಜಗದೀಶ್ವರನನ್ನು ಕಾಣುವ ಕಣ್ಣು ಅವರದು. ಅವರು ಒಲೈಸುವ ದೀನಜನರನ್ನೂ-ಅಮೃತ ಪುತ್ರರೆಂದೇ ಭಾವಿಸುತ್ತಾರೆ. ಜಗದ್ವಸ್ತುಗಳನ್ನು ನೋಡಿ ಮೋಹಗೊಳ್ಳುವ ಜನರ ವಿಷಯದಲ್ಲಿ ಸಂತರಿಗೆ ತುಂಬ ಮರುಕ. "ನೀವು ಬರಿಯ ಮರ್ತ್ಯರಲ್ಲ. ಮರಣಪೂರ್ವವೋ ಮರಣಾನಂತರವೋ ಅಮೃತಾನುಭವಕ್ಕೆ ನೀವು ಬಾಧ್ಯರು. ಇಳೆ ಕೊಡುವುದು ಕ್ಷಣಿಕವಾದ ಆನಂದ, ಕ್ಷುದ್ರವಾದ ಆನಂದ. ಈ ಹುಸಿ ನಲಿವು ಸವೆದು ಹೋಗುತ್ತದೆ. ಅದಕ್ಕೋಸ್ಕರ ಹೆಚ್ಚು ಹೆಣಗಬೇಡಿ. ನೀವು ನಿಜವಾಗಿ ಹೆಣಗಬೇಕಾದದ್ದು ಸವೆಯದ ಸವಿಗಾಗಿ, ಅವಧಿಯಿಲ್ಲದ ಆನಂದಕ್ಕಾಗಿ. ಆದದ್ದರಿಂದ ಲೋಕದಲ್ಲಿ ಬಾಳುವಾಗ ಚೊಕ್ಕಟವಾಗಿ ಬಾಳಿರಿ; ಒಳ್ಳೆಯ ರುಚಿಗಳನ್ನು ಗ್ರಹಿಸಿರಿ. ದೊಡ್ಡ ಜೆಲಿಗಳನ್ನರಿಯಿರಿ. ಒಳ್ಳೆಯ ಗುರಿಗಳನ್ನು ಕಟ್ಟಿಕೊಳ್ಳಿರಿ. ಒಡಲಿಗೆ ಊಟವೋ ಇಂದ್ರಿಯಗಳ ಆಟವೋ ಮನಸ್ಸಿನ ಓಟವೋ ಯಾವುದಾದರೂ ಶುಚಿಯಾದ ರುಚಿಗಳನ್ನು ಅಭ್ಯಾಸಕ್ಕೆ ತಂದುಕೊಳ್ಳಿರಿ." — ಇದು ಸಂತರ ಉಪದೇಶದ ದಾರಿ.

ಉಪದೇಶಕರಾಗಲು ಸಂತರು ಅಧಿಕಾರಿಗಳು. ಇತರರಿಗೆ ಉಪದೇಶಮಾಡುವುದಕ್ಕೆ ಮುಂಚೆ ತಾವು ಅನುಷ್ಠಾನದಲ್ಲಿರಿಸಿಕೊಂಡ ಜೀವನತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳಲು ಅವರು ತುಂಬ ಹೆಣಗಿರುತ್ತಾರೆ. ಇವರ ಲೋಕಸಂಗ್ರಹ ಕಾರ್ಯಕ್ಕೆ ಈಶ್ವರನ ಅನುಮೋದನೆಯಿರುತ್ತದೆ. ಈಶ್ವರನಿಂದ ಅಧಿಕಾರಪಡೆದುಬಂದವರು ಇವರು ಎನ್ನಿಸುವ ಅಧಿಕಾರವಾಣಿ ಅವರದು.

ಸಂತರ ಬದುಕು ಸಾಮಾನ್ಯಜನದ ಬದುಕಿನಂತೆಯೇ ಮೊದಲಾಗುತ್ತದೆ. ಸಾಮಾನ್ಯರಲ್ಲಿ ಇರುವಂತೆಯೇ ಇವರಲ್ಲೂ ಇಂದ್ರಿಯಗಳು ಇರುತ್ತವೆ. ಇಂದ್ರಿಯಗಳು ಬಹಿರ್ಮುಖವಾಗಿ ಹರಿದರೆ ಜೀವನು ಪಡೆಯುವುದೇನು, ಅವು ಅಂತರ್ಮುಖವಾಗಿ ತಿರುಗಿದರೆ ಅವನು ಪಡೆಯುವುದೇನು ಎಂಬ ತಾರತಮ್ಯ ವಿವೇಕ ಸಾಮಾನ್ಯರಿಗೆ ಇರುವುದಿಲ್ಲ. ಸಂತರಿಗೆ ಈ ವಿವೇಕ ಇರುತ್ತದೆ.

ಸಾಮಾನ್ಯರು ನಿದ್ರಿಸುವಾಗ ಸಂತರು ಎಚ್ಚರವಾಗಿರುತ್ತಾರೆ. ಸಾಮಾನ್ಯರು ಎಚ್ಚತ್ತು ಚಟುವಟಿಕೆಯಲ್ಲಿರುವಾಗ ಸಂತರು ನಿದ್ರಿಸುತ್ತಾರೆ-ಎಂಬ ಮುನಿಗಳ ವಿಚಿತ್ರವರ್ತನೆಯ ವರ್ಣನೆ ಗೀತೆಯಲ್ಲಿ ಬರುತ್ತದೆ.

> ಯಾ ನಿಶಾ ಸರ್ವಭೂತಾನಾಂ ತಸ್ಯಾಂ ಜಾಗರ್ತಿ ಸಂಯಮೀ।
> ಯಸ್ಯಾಂ ಜಾಗ್ರತಿ ಭೂತಾನಿ ಸಾ ನಿಶಾ ಪಶ್ಯತೋ ಮುನೇಃ ॥

ಸಂತರ ಜಗದ್ವ್ಯಾಪಾರವನ್ನು ಈ ಶ್ಲೋಕ ವಿವರಿಸುತ್ತದೆ. ಎಲ್ಲ ಜೀವಭೂತಗಳಿಗೂ ಇರುಳಾದದ್ದು ಸಂತರಿಗೇಕೆ ಹಗಲು? ಹಾಗೆಯೇ ಇತರ ಜೀವಭೂತಗಳನ್ನು ಚಟುವಟಿಕೆಯಲ್ಲಿ ಇರಿಸುವ ಹಗಲೇಕೆ ಸಂತರಿಗೆ ಇರುಳು? ಈ ಗುಟ್ಟನ್ನು ತಿಳಿದುಕೊಳ್ಳಬೇಕಾದರೆ ಭಗವದ್ಗೀತೆಯ ಇನ್ನು ಕೆಲವು ಶ್ಲೋಕಗಳನ್ನೂ ಶ್ಲೋಕಭಾಗಗಳನ್ನೂ ನಾವು ಜ್ಞಾಪಿಸಿಕೊಳ್ಳಬೇಕಾಗುತ್ತದೆ. ಏಕೆಂದರೆ ಜಗತ್ತು-ಜೀವ-ಈಶ್ವರ ಎಂಬ ಮುಕ್ಕೂಟದಲ್ಲಿಯ ವಸ್ತುಗಳು ಹೇಗೆ ಹೇಗೆ ಯಾವ ಯಾವ ನಂಟಿನಲ್ಲಿ ಇರುತ್ತವೆ ಎಂಬುದನ್ನು ನಾವು ಮನಸ್ಸಿಗೆ ವಿಶದಪಡಿಸಿಕೊಳ್ಳಬೇಕಾದ ಪ್ರಶ್ನೆ ಇದು.

ಜಗತ್ತು ಬ್ರಹ್ಮವಸ್ತು ಮಾಡಿರಿಸಿದ ಕೃತಿ. ಇದು ಜೀವನಿಗೆ ಗರುಡಿಯೂ ಹೌದು. ಅಲ್ಲಿ ಅವನು ದೇಹಕ್ಕೂ ಮನಸ್ಸು ಬುದ್ಧಿಗಳಿಗೂ ವ್ಯಾಯಾಮ ಪಡೆಯುತ್ತಾನೆ. ಜಗತ್ತು ಜೀವನಿಗೆ ಉಲ್ಲಾಸ ತರುವ ತೋಟವೂ ಹೌದು. ಜೀವನು ಜಗತ್ತನ್ನು ಎಷ್ಟುಮಟ್ಟಿಗೆ ನಂಬಿಕೊಳ್ಳಬೇಕು? ಜಗತ್ತನ್ನು ನಂಬುವಾಗ, ಅದನ್ನು ಮಾಡಿದ ಕರ್ತನನ್ನು—ಆತ ಕಣ್ಣೆದುರಿಗಿರದೆ ಅರುಗಿನಲ್ಲಿದ್ದರೂ-ನಂಬದೆ, ಆತನನ್ನು ಮರೆತು, ಆತನ ಸೃಷ್ಟಿಯ ಉದ್ದೇಶವನ್ನು ಅಸಡ್ಡೆ ಮಾಡಿ, ತನ ಜೀವಿತ ನಿರ್ವಾಹಕ್ಕೆ ಜಗತ್ತು ಕೊಡುವ ಪ್ರಯೋಜನವಷ್ಟು ಸಾಕು ಎಂದು ಜೀವನು ತನ್ನ ದೃಷ್ಟಿಯನ್ನು ಸಂಕೋಚಪಡಿಸಿಕೊಳ್ಳುವುದು ಸರಿಯೆ?

ಜೀವನು ಜಗತ್ತನು ಇಂದ್ರಿಯಗಳ ಮೂಲಕ ಗ್ರಹಿಸುತ್ತಾನೆ. ಈಶ್ವರನನ್ನು ಅವನು ಗ್ರಹಿಸಬೇಕಾದರೆ

ಅವನು ಬಳಸುವ ಇಂದ್ರಿಯಗಳಿಗಿರುವ ಮಿತಿಯನ್ನು ಮೀರಬೇಕಾಗುತ್ತದೆ. ಆದದ್ದರಿಂದ ಕರಣೀಯವೇ ಆದ ಲೋಕವನ್ನು ತನ್ನ ಇಂದ್ರಿಯಶಕ್ತಿಗಳಿಂದ ನಿರ್ವಹಿಸುವಾಗ, ತನ್ನಲ್ಲಿರುವ ಇಂದ್ರಿಯಾತೀತದ ಶಕ್ತಿಗಳನ್ನೂ ಪಟುವಾಗಿರಿಸಿಕೊಂಡು ಮನಸ್ಸಿನ ಯಾವುದೋ ಒಂದು ಹದದಿಂದ ವ್ಯಾಪಾರ ಮಾಡಬೇಕಾಗುತ್ತದೆ. ಗೀತೆಯ ಇನ್ನೊಂದು ಶ್ಲೋಕ ಇದು :

ಮಯಾ ತತಮಿದಂ ಸರ್ವಂ ಜಗದವ್ಯಕ್ತ ಮೂರ್ತಿನಾ।
ಮತ್ಸ್ಥಾನಿ ಸರ್ವಭೂತಾನಿ ನ ಚಾಹಂ ತೇಷ್ವವಸ್ಥಿತಃ ॥

ಈಶ್ವರನು ವಿಶ್ವಜಗತ್ತಿನಲ್ಲಿ ಹರಡಿಕೊಂಡಿದ್ದಾನೆ. ಜಗದಾರಾಧಕರಿಗೆ ನಿಜವಾಗಿ ಕಾಣಿಸಬೇಕಾದದ್ದೆ ಜಗದಾಕಾರದಲ್ಲಿರುವ ಈಶ್ವರನನೇ. ಎಷ್ಟು ಮಂದಿ ಜಗತ್ತನ್ನು ನೋಡುವಾಗ, ಪ್ರಲೋಭನಗಳಿಗೆ ಸಿಕ್ಕದಿರ ಬೇಕೆಂಬ ಉಪಾಯವೆಂದಾದರೂ ಈಶ್ವರನನ್ನೇಕೆ ಸ್ಮರಿಸಿ, ಪ್ರಲೋಭನಗಳನ್ನು ಸೋಲಿಸಲಾರರು? ಜಗದ್ವಸ್ತುಗಳ ಸ್ವಭಾವ ಈಶ್ವರನನ್ನು ಮರೆಯಿಸಿ ಜೀವನನ್ನು ವಶಪಡಿಸಿಕೊಳ್ಳುವುದು. ಹೀಗಿರುವಾಗ ಜೀವನು ಜಗತ್ತನ್ನು ಮುಟ್ಟುವುದು ಹೇಗೆ? ಮುಟ್ಟದರೂ ಮೈಲಿಗೆಯಾಗಲಿಲ್ಲವೆಂದು ಅವನು ಒಳನೆಮ್ಮದಿಯಲ್ಲಿರುವುದು ಹೇಗೆ? ಈ ಪ್ರಶ್ನೆಗಳಿಗೆ ಉತ್ತರ ಹೇಳಬಲ್ಲವರು ಸಂತರೇ. ಸಾಮಾನ್ಯರನ್ನು ಕಂಗೆಡಿಸುವ ಕತ್ತಲನ್ನು ನುಂಗಿ ದಾರಿಯನ್ನು ತೋರಿಸುವ ಕೈ ಬೆಳಕು ಸಂತರ ಸಹವಾಸ.

* * *

ಕಡಲು ನೀರಿನಿಂದ ತುಂಬಿರುತ್ತದೆ. ತುಳುಕಾಡದೆ ಗಂಭೀರವಾಗಿ ಮೊರೆಯುತ್ತ ಇರುವ ಕಡಲಿಗೆ ಹೊಳೆ ನೀರುಗಳು ಹರಿದುಬಂದು ಸೇರುತ್ತಲೇ ಇರುತ್ತವೆ. ತನ್ನೊಳಕ್ಕೆ ನೀರು ಬೀಳಬೇಕೆಂಬ ಕೋರಿಕೆ ಕಡಲಿಗಿಲ್ಲ. ಸಂತನು ಯಾವಾಗಲೂ ಸಾಗರದಂತೆ ಗಂಭೀರನು. ಚಡಪಡಿಸಿ ಆತ ಸುಖಗಳನ್ನು ಹಾರೈಸುವುದಿಲ್ಲ. ಸಣ್ಣ ಸುಖಗಳನ್ನು ಆತ ಲೆಕ್ಕಿಸುವುದೇ ಇಲ್ಲ. ದೊಡ್ಡ ಸುಖಗಳು, ಮನಸ್ಸನ್ನು ನೆಮ್ಮದಿಯಲ್ಲಿರಿಸುವ ದಿವ್ಯಸುಖಗಳು ಆತನ ಬಳಿಗೆ ತಾವಾಗಿ ಬರುತ್ತವೆ. ತನ್ಮಯನಾಗಿ ನೆಮ್ಮದಿಯಲ್ಲಿದ್ದುಕೊಂಡೇ ಲೋಕವ್ಯಾಪಾರಕ್ಕೆ ತಿರುಗಬಲ್ಲ ನೆಲೆಗೆ ಆತ ಏರಿರುತ್ತಾನೆ. ಆತನ ಈ ಆಪ್ತ ಕಾಮತ್ವದ, ನಿರೀಹತ್ವದ ಗುಟ್ಟೇನು?

ವಿಷಯಾಸಕ್ತನು ಕೋರಿದ್ದನ್ನು ಪಡೆದರೂ ಏಕೆ ಅಡಿಗಡಿಗೆ ಕೊರತೆಯನ್ನು ಅನುಭವಿಸುತ್ತಿರುತ್ತಾನೆ? ಲೋಕ ಕೊಡುವ ಅಲ್ಪಸುಖಗಳಿಗೆ ಮೂಲಾಧಾರವಾದ ಮಹಾಸುಖದ ಗುಟ್ಟನ್ನು ಸಂತನು ಅರಿತಿರುತ್ತಾನೆ. ಈಶ್ವರನ ಏರ್ಪಾಟನ್ನು ತಿಳಿದು, ಜೀವನದಲ್ಲಿ ಪ್ರಕೃತಿವ್ಯಾಪಾರಕ್ಕಿರುವ ಪೂರ್ವಯೋಜನೆಯನ್ನು, ಅದಕ್ಕೆ ಜೀವನು ನಡಸಬೇಕಾದ ಚಿಕಿತ್ಸೆಯನ್ನು ಸಂತನು ತಿಳಿದಿರುತ್ತಾನೆ. ಪ್ರಕೃತಿಯನ್ನೂ ಗುಣಗಳನ್ನೂ ಮೀರಿ ನಿಸ್ತ್ರೈಗುಣ್ಯನಾಗುವ ಹದನನ್ನು ಸಂತನು ತಿಳಿದಿರುತ್ತಾನೆ. ವಿಷಯಾಸಕ್ತರಿಗೆ ಈ ತಿಳಿವಳಿಕೆಯಿರುವುದಿಲ್ಲ. ಆದದ್ದರಿಂದ ಲಾಭವಿಲ್ಲದ, ನಷ್ಟವೇ ಹೆಚ್ಚಾದ ವ್ಯಾಪಾರ ವಿಷಯಾಸಕ್ತನದು.

ನದಿಗಳ ಸಂತತಪ್ರವಾಹದಿಂದ ಸಮುದ್ರವು ಹೆಚ್ಚು ಹೆಚ್ಚು ಆಢ್ಯವಾಗುತ್ತಿದ್ದರೂ, ಈ ಅಗಾಧತೆಯಲ್ಲೂ ನಿರ್ವಿಕಾರವಾಗಿರುತ್ತದೆ. ಸಂತನು ಹಾಗೆ ವಿಷಯಪ್ರಪಂಚದ ಸಂಪರ್ಕದಲ್ಲಿದ್ದರೂ ವಿಕಾರಗೊಳ್ಳದೆ ನಿರ್ವಿಷಯನಾಗಿ, ಸ್ಪರ್ಶಕ್ಕೆ ಪ್ರತಿಕ್ರಿಯೆ ತೋರಿಸುವ ಇಂದ್ರಿಯಗಳನ್ನೂ ಮನಸ್ಸನ್ನೂ ಆಳುತ್ತಾನೆ. ಈ ಆಳಿಕೆ ಆತನಿಗೆ ಸಾಧ್ಯವಾಗಿರುವುದು ಈಶ್ವರನು ಜಗತ್ತಿಗಿಂತ ಮೇಲ್ಪಟ್ಟವನು—'ಪಾದೋಽಸ್ಯ ವಿಶ್ವ ಭೂತಾನಿ........ ಅತ್ಯತಿಷ್ಠದ್ದಶಾಂಗುಲಮ್'–ಎಂದು ಅರಿತು ನಂಬಿಕೊಂಡದ್ದರಿಂದ, ಅಥವಾ ನಂಬಿ ಅರಿತುಕೊಂಡದ್ದರಿಂದ. ಪ್ರಾಪಂಚಿಕ ದೃಷ್ಟಿಯುಳ್ಳ ಸಾಮಾನ್ಯನು ಇಂದ್ರಿಯಗಳನ್ನಟ್ಟಿ ಅರ್ಥಕಾಮಗಳನ್ನು ಸಂಪಾದಿಸಲು ಹಾತೊರೆಯುತ್ತಾನೆ. ವಿಷಯಾನ್ವೇಷಣೆಯಲ್ಲಿ ಅವನು ಬಳಲುವನೇ ಹೊರತು ತಣಿಯನು. ಅಂದಂದು ಇಳೆ ಕೊಟ್ಟ ಸವಿಯಲ್ಲಿ ತಣಿದರೂ ಅವನ ತಣಿವಿಳಿದು ಮತ್ತೆ ಮತ್ತೆ ಹಸಿವೇರುತ್ತದೆ, ಹಂಬಲವೇರುತ್ತದೆ. ಹಂಬಲಿಸಬಾರದ

ಕಡೆ ಈ ಅತಿಹಂಬಲ. ಸಂತರು ಈ ಪ್ರಾಪಂಚಿಕರ ಕಷ್ಟವೇನೆಂದು ಬಲ್ಲವರು. ಕನಿಕರದಿಂದ ಅವರಿಗೆ ತಿಳಿವಳಿಕೆ ಕೊಟ್ಟು ನೆಮ್ಮದಿಯ ದಾರಿಯನ್ನು ತೋರಿಸುತ್ತಾರೆ.

ಗುಣ, ಗುಣಾತೀತ ; ತ್ರಿಗುಣಬಂಧನ, ನಿಸ್ತ್ರೈಗುಣ್ಯ ; ಲೋಕ, ಲೋಕಾತೀತ ; ಇಂದ್ರಿಯ, ಇಂದ್ರಿಯಾತೀತ ; ಸ್ಪರ್ಶಕ್ಲೇಶ, ತತ್ಕ್ಲೇಶನಿವಾರಣೆ — ಇಂಥ ಮಾತುಗಳಿಗೆ ಅರ್ಥವೇನೆಂಬುದನ್ನು ನಾವು ಸಂತರ ಸಹವಾಸದಲ್ಲಿದ್ದು, ಅವರ ನಡೆನುಡಿಗಳನ್ನು ನೋಡಿಯೇ ತಿಳಿದುಕೊಳ್ಳಬೇಕು. ನಮ್ಮ ಶಾಸ್ತ್ರವ್ಯಾಸಂಗ ಬರಿಯ ಶುಕಪಾಠ ಮಾತ್ರವೆನ್ನಿಸಿದಾಗ ಸಂತರು ಶಾಸ್ತ್ರವಾಕ್ಯಗಳಿಗೆ ಜೀವಂತ ವ್ಯಾಖ್ಯಾನವಾಗಿ, ಶಾಸ್ತ್ರಾರ್ಥವು ನಮಗೆ ಗೋಚರವಾಗುವಂತೆ ನೆರವು ಕೊಡುತ್ತಾರೆ. ಗ್ರಂಥವ್ಯಾಸಂಗಾನಂತರವೂ ಭ್ರಾಂತಿಯಲ್ಲಿರುವವರಿಗೆ ಸಂತರೇ ದಿಕ್ಕು.

* * *

ಸಂತರು "ಸ್ವವಿಮುಕ್ತಿಕಾಮ"ರಾಗಿ ತಪಸ್ಸಿನಲ್ಲಿರಬಹುದು. ಪರಾರ್ಥನಿಷ್ಠರಾಗಿ ತಮ್ಮ ತಪಸ್ಸಿನ ಫಲವನ್ನು ಹೆರವರಿಗೆ ಧಾರೆಯೆರೆಯಲೂ ತಪಿಸಬಹುದು. ತಪಸ್ಸಿನ ಫಲ ಲೋಕಸೇವೆ, 'ಲೋಕಸಂಗ್ರಹ' ಆಗಬಹುದು. ಲೋಕಸಂಗ್ರಹದ ಗುರಿಯು ಮುಕ್ತಿಯೇ. ಬರಿಯ ಹೃಷೀಕ (ಇಂದ್ರಿಯ) ಸುಖಾರಾಧಕರನ್ನು ದಿವ್ಯಮಾರ್ಗಕ್ಕೆ ತಿರುಗಿಸಿ ಹೃಷೀಕೇಶನ ರಾಜ್ಯದ ಪ್ರಜೆಗಳನ್ನಾಗಿ ಮಾಡುವ ಸೇವೆಯಲ್ಲಿ ಸಂತರು ತುಂಬ ಪರಿಣತರು.

ಧ್ರುವನು ಪ್ರಹ್ಲಾದನೂ ಭಕ್ತರೆಂದು ಭಗವಂತನು ಅವರಿಗೆ ಮೈದೋರಿದ ಕೂಡಲೇ ಮುಕ್ತಿಯನ್ನು ಕೊಡಲಿಲ್ಲ- ಇಬ್ಬರನ್ನೂ ರಾಜ್ಯದ ಹೊಣೆಯಲ್ಲಿರಿಸಿ, ಆತನಿಗೆ ಸಕಾಲವೆನ್ನಿಸಿದಾಗ ಅವರಿಗೆ ತನ್ನ ಸನ್ನಿಧಿಯನ್ನು ಕರುಣಿಸಿದನು. ಜನ್ಮಋಣವನ್ನು ಹೊಣೆಯರಿತು ಪೂರ್ತಿಯಾಗಿ ತೀರಿಸುವವರೆಗೆ ಮುಕ್ತಿ ಇಲ್ಲ.

ಧ್ರುವನೂ ಪ್ರಹ್ಲಾದನೂ ಭಾರತದ ಅನೇಕ ಸಂತರಿಗೆ ನಿದರ್ಶನರೇ ಆದರು. ವಾಲ್ಮೀಕಿ ಮುನಿಗಳು ಭರತನನ್ನೂ ಆಂಜನೇಯನನ್ನೂ ದೊಡ್ಡ ಉದಾಹರಣೆಗಳಾಗಿ ಎತ್ತಿ ಹಿಡಿದಿದ್ದಾರೆ.

ವಿದ್ಯಾರಣ್ಯರ ತಪಃಪ್ರಭಾವ ಎರಡು ಮುಖಗಳಲ್ಲಿ ಬೆಳೆಯಿತು. ಲೋಕಜನದ ಐಹಿಕಸುಖಕ್ಕೆ ಸಾಧನವಾದ ರಾಜ್ಯಸ್ಥಾಪನೆ ; ಹಾಗೆಯೇ ಪಾರಮಾರ್ಥಿಕ ಸುಖಕ್ಕೆ ಸಾಧಕವಾದ ಶಾಸ್ತ್ರರಚನೆ.

ಗೋಖಲೆಯವರೂ ಗಾಂಧಿಯವರೂ ಸಾರ್ವಜನಿಕ ಜೀವನವನ್ನು ಶೋಧಿಸಿ ಚೊಕ್ಕಟವಾಗಿರಿಸಿಕೊಂಡಲ್ಲದೆ ಪ್ರಭುತ್ವದಲ್ಲಿ ಕೈವಾಡ ನಡಸುವ ರಾಜಕೀಯಸ್ಥರಿಂದ ಸಮಾಜಕ್ಕೆ ಉಪಕಾರಕ್ಕಿಂತ ಅಪಕಾರವೇ ಹೆಚ್ಚಾಗುತ್ತದೆ ಎಂದು ಭಾವಿಸಿದ್ದರು. ಅವರಿಬ್ಬರೂ ಬಯಸಿದ್ದು ಜನಜೀವನದಲ್ಲಿ ಅಧ್ಯಾತ್ಮವಿದ್ಯಾಪ್ರಭಾವವನ್ನು. ರಾಜಕೀಯದಲ್ಲಿ ಈ ಗುರುಶಿಷ್ಯರ ಚಟುವಟಿಕೆ ಸಂತರ ಮಾರ್ಗವನ್ನು ಅವಲಂಬಿಸಿತು.

ಭಗವಾನ್ ಬುದ್ಧನು ನಿರ್ವಾಣಸುಖವನ್ನು ತೊರೆದು ಪದೇ ಪದೇ ಏಕೆ ಹುಟ್ಟನ್ನು ಬಯಸಿದನು ? ಲೋಕಜನವನ್ನು ಸಂಸಾರದ ಕಷ್ಟದಲ್ಲಿ ಇದ್ದುಕೊಂಡಿರಲು ಬಿಟ್ಟು, ತಾನೊಬ್ಬನೇ ಆನಂದ ಸಮುದ್ರದಲ್ಲಿ ಹೇಗೆ ಆಡಿಕೊಂಡಿದ್ದಾನು ? ಬುದ್ಧನ ಈ ಆರ್ತಜನ ಸೇವಾತುರತೆ ಕಾತರತೆಗಳನ್ನು ಜಾತಕ ಕಥೆಗಳಿಂದ ತಿಳಿಯಬಹುದು.

* * *

ಸಂತರಲ್ಲಿ ಸಾಧಕದ ನೆಲೆ, ಆಮೇಲೆ ಸಿದ್ಧಿಯ ನೆಲೆ ಹೀಗೆ ಎರಡು ನೆಲೆಗಳಿರುತ್ತವೆ. ಮೊದಲನೆಯದು ಎಡರುಗಳನ್ನು ದಾಟಿ ಗುರಿಯ ಕಡೆಗೆ ಪಯಣ. ಎರಡನೆಯದು ಎಣೆಯೂ ಎಲ್ಲೆಯೂ ಇಲ್ಲದ ಸವಿಯಲ್ಲಿ ತಾನೇ ತಾನಾಗಿ ಇದ್ದು ಬಿಡುವುದು. ಸಾಧನದೆಶೆ, ಸಿದ್ಧಿದೆಶೆ ಎರಡನ್ನೂ ಕಂಡವರ ಚರಿತೆಯೇ ಭರತಖಂಡದ ಚರಿತೆ.

ಸಾಮಾನ್ಯ ಮಾನವನಾಗಿದ್ದವನು ಸಂತರ ದಾರಿ ಹಿಡಿದು ಬೆಳೆಯುತ್ತ ಅರಳುತ್ತ ಅತಿಮಾನವನಾಗು

ತ್ತಾನೆ. ಸಮಾಜದಲ್ಲಿ ಅವನ ನೆಲೆ ಕೆಳಮಟ್ಟದಲ್ಲಿ ಮೊದಲಾಯಿತೋ, ಮೇಲ್ಮಟ್ಟದಲ್ಲಿ ಮೊದಲಾಯಿತೋ ? ಸಾಧಕ ವ್ಯಕ್ತಿ ಹೆಣ್ಣೋ ಗಂಡೋ ? ಎಂಬ ಹೊರ ಎಣಿಕೆ ಇಲ್ಲಿ ಮುಖ್ಯವಲ್ಲ. ಮುಖ್ಯವಾದದ್ದು ಮನುಷ್ಯನ ಒಳ ಹುರುಳಿನ ಬೆಳವಣಿಗೆ, ಅರಳಿಕೆ, ಅಂತಸ್ಸತ್ತ್ವ ವಿಕಾಸ.

ಬೋಧಿಸತ್ತ್ವನು ಶುದ್ಧಸತ್ತ್ವವನ್ನು ಅವಲಂಬಿಸಿ ಜ್ಞಾನಿಯಾಗುತ್ತಾನೆ, ಎಚ್ಚೆತ್ತು ಬುದ್ಧನಾಗು ತ್ತಾನೆ. ಲೋಕಕ್ಕೆ ಬದ್ಧರಾದ ಇತರರನ್ನು ಬಿಡುಗಡೆ ಮಾಡಿ ಅವರನ್ನೆಲ್ಲ ಬುದ್ಧಪದವಿಗೇರಿಸುವ ನೆರವನ್ನು ಕೊಡುತ್ತಾನೆ.

ಸಂತರು ಸರ್ವರ ಮುಕ್ತಿಗೋಸ್ಕರ ಪರಿಶ್ರಮಿಸುತ್ತಾರೆ. ಸ್ವವಿಮುಕ್ತಿಯಷ್ಟರಲ್ಲಿ ಅವರ ಚಟುವಟಿಕೆ ಮುಗಿಯದು. ಪತಂಜಲಿ ಮಹರ್ಷಿಗಳ ಯೋಗ ಸೂತ್ರವೊಂದರ ಮಾತಿನಂತೆ ಸಂತರು 'ಧರ್ಮಮೇಘರು'. ಧರ್ಮದ ಮಳೆಗರೆದು ಜೊತೆ ಮನುಷ್ಯರ ಹೃದಯಕ್ಷೇತ್ರದಲ್ಲಿ ಬೇಸಾಯ ಮಾಡುತ್ತಾರೆ. ಅವರದು ಬಾನಿಂದ ಬರುವಂತೆ ಗುಡುಗುದನಿ, ಕಿವಿಯದನ್ನು ಆಲಿಸಲೇಬೇಕಾಗುತ್ತದೆ; ಅವರ ಮಾತಿನಲ್ಲಿ ಸಿಡಿಲ ಬೆಳಕು ಮಿಂಚು ತ್ತದೆ. ಆ ಕಾಂತಿ ಜನರ ಹೃದಯರಂಗವನ್ನು ಪ್ರವೇಶಿಸಿ ಅಲ್ಲಿ ಮನೆ ಮಾಡಿಕೊಂಡಿರುವ ಕತ್ತಲನ್ನು ನುಂಗು ತ್ತದೆ.

* * *

ಸಾಮಾನ್ಯವಾಗಿ ಲೋಕಜನ ಹೃಷೀಕ ಶರಣರು. ಅವರು ಇಂದ್ರಿಯಗಳನ್ನು ಅತಿಯಾಗಿ ನಂಬಿದವರು. ಇವರಿಗೆ ಸೈನ್ಸ್ (ಪ್ರಕೃತಿವಿಜ್ಞಾನದ) ತಾಟಸ್ಥ್ಯವಾಗಲಿ ಅಧ್ಯಾತ್ಮಜ್ಞಾನದ ಸ್ವಾರಸ್ಯವಾಗಲಿ ಹೆಚ್ಚಾಗಿ ತಿಳಿ ಯದೆ, ತಂತಮ್ಮ ಇಂದ್ರಿಯಗಳನ್ನು ತೋಚಿದಂತೆ ಹೂಡಿ ಕೃತಾರ್ಥರಾಗುವವರು. ಆದರೆ ನಾವು ಹೃಷೀಕೇಶ ಶರಣರಾಗಿ, ಇಂದ್ರಿಯಗಳನ್ನು ಹದ್ದಿನಲ್ಲಿ ನಡಸುತ್ತ ಯುಕ್ತಾಯುಕ್ತಾ ವಿವೇಕದಿಂದ ವರ್ತಿಸಲಾರೆವಾದರೆ, ನಮ್ಮ ಎಸಗಿದ ಲೋಕವ್ಯಾಪಾರ ನಿರ್ಮಲವೂ ಪ್ರಮಾದದೂರವೂ ಆಗುವುದಿಲ್ಲ. ಚಿತ್ತನೈರ್ಮಲ್ಯವಿಲ್ಲದಿದ್ದಾಗ ಇಂದ್ರಿಯನೈರ್ಮಲ್ಯವೂ ಇರುವುದಿಲ್ಲ. ಕೊಳಕುಕರಣಗಳು ಸ್ವಾರ್ಥಸಾಧಕಗಳಾಗುತ್ತವೆ, ಪರಾರ್ಥವನ್ನು ಬಲಿ ತೆಗೆದುಕೊಳ್ಳುತ್ತವೆ. ಸ್ವಾರ್ಥಿಯ ಚಿತ್ತಕ್ಕೇನಾದರೂ ಸಮಾಧಾನ ಸೇರಿಕೊಳ್ಳುತ್ತದೆಯೆ ? ವಿತ್ತಾದಿ ಲಾಭಕ್ಕಿಂತ ಚಿತ್ತಪ್ರಸನ್ನತೆಯ ಲಾಭಕ್ಕೆ ಹೆಚ್ಚು ಬೆಲೆಯಿಲ್ಲವೆ ? ಸ್ವಾರ್ಥಸಾಧಕನ ಚಿತ್ತಕ್ಕೆ ಲಭಿಸಿದ ತಾತ್ಕಾಲಿಕವಾದ ಅಷ್ಟಿಷ್ಟು ಸಮಾಧಾನ ಇಂಗಿ ಚಡಪಡಿಕೆ ಎದ್ದುಕೊಳ್ಳುತ್ತದೆ. ಆಗ ಅವನು ತಾನಾಗಿ ಮಾಡಿಕೊಂಡ ಬೋನಿ ನೊಳಕ್ಕೆ ಬಿದ್ದು ಇಲಿಯಂತೆ ಬಂದಿಯಾಗುತ್ತಾನೆ. ಇವನಿಗೆ ಬಂಧನದ ಸಂಕಟದಿಂದ ಬಿಡುಗಡೆ ಕೊಡಬಲ್ಲವರು ಇದುವರೆಗೆ ಇವನು ಯಾರ ಹಿತೋಪದೇಶವನ್ನು ಅಸಡ್ಡೆ ಮಾಡಿದನೋ ಅಥವಾ ಯಾರ ಸಂಗವು ದುರ್ದೈವದಿಂದ ಇವನಿಗೆ ಲಭಿಸಲಿಲ್ಲವೋ ಆ ಸಂತರೇ.

* * *

ಸಂತರ ದಾರಿ ಹೀಗೆ ವೇದಗಳ ಕಾಲದಲ್ಲಿ ಮೊದಲಾಗಿ ರಾಮಾಯಣ ಭಾರತಗಳ ಕಾಲದಲ್ಲಿ ರಾಜ ಮಾರ್ಗವಾಗಿ ಬೆಳೆಯಿತು. ಶ್ರುತಿಮತವನ್ನು ಸ್ಮೃತಿಗಳು–ಕಾವ್ಯೇತಿಹಾಸ ಪುರಾಣಗಳು–ಜೀವನಕ್ಕೆ ಅನ್ವಯಿ ಸುತ್ತ ಬಂದವು. ಪಾಶ್ಚಾತ್ಯರ ಭೌತಸುಖಮಾತ್ರದ ವಿದ್ಯಾ ಪ್ರಭಾವಕ್ಕೆ ಇಂದು ಪರವಶವಾಗಿದ್ದರೂ ಭಾರತವು ಸಂತರನ್ನು ಮರೆಯುವುದು ತಪ್ಪಾಗುತ್ತದೆ. ಸಾಂಪ್ರತ ಕಾಲದ ಅನೇಕ ರಾಜಕೀಯ ಆರ್ಥಿಕ ಸಾಮಾಜಿಕ ಸಮಸ್ಯೆ ಗಳು ಪರಿಹಾರವನ್ನು ಕಾಣಬೇಕಾದರೆ, ಸಮಸ್ಯೆಗೆ ಸಿಕ್ಕಿ ಪೇಚಾಡುವವರು ಸಂತರ ಮನೋಧರ್ಮವನ್ನು ತಳೆಯು ವುದು ಅನಿವಾರ್ಯವಾಗಿದೆ. ಸಂತರು 'ಪ್ರಾಕ್ಟಿಕಲ್' ಅಲ್ಲ, ವ್ಯವಹಾರ ಕುಶಲರು ಅವರಲ್ಲ–ಎಂದು ಆಧುನಿಕರು ಅವರನ್ನು ಟೀಕಿಸುತ್ತಾರಷ್ಟೆ ? ಆದರ್ಶವನ್ನು ಅಷ್ಟಿಷ್ಟಾದರೂ ಎಣಿಕೆಗೆ ಎತ್ತಿಕೊಳ್ಳದೆ ಕೈಕೊಂಡ ವ್ಯವಹಾರವು ಉದ್ದೇಶಕ್ಕೆ ಅನುಗುಣವಾಗಿ ಹೇಗೆ ಬಹುಜನಸುಖವನ್ನು ಸಾಧಿಸೀತು ? ಆದರ್ಶಕ್ಕೆ ಬರಿಯ ಬಾಯುಪಚಾರ

ಸಾಕೆ ? ಪುರುಷಾರ್ಥ ಕಲ್ಪನೆಯನ್ನು ಪ್ರಪಂಚಕ್ಕೆ ಕೊಟ್ಟ ಭಾರತೀಯ ಮಹರ್ಷಿಗಳು ಆದರ್ಶಕ್ಕೂ ವ್ಯವಹಾರಕ್ಕೂ ಎಂಥ ಸಂಬಂಧವಿರಬೇಕೆಂದು ನಿರ್ಣಯ ಮಾಡಿದ್ದಾರೆ. ಅಂದಿನ ನಿರ್ಣಯ ಇಂದಿಗೆ ಯಾವ ಅಂಶದಲ್ಲಾದರೂ ಹೊಂದದಿದ್ದರೆ, ಸರಿಯಾದ ಸಂಬಂಧವನ್ನು ಸಾಂಪ್ರತಕಾಲಕ್ಕೆ ಹೊಂದುವಂತೆ ಪ್ರಯೋಗಿಸಿ ಕೃತಕೃತ್ಯವಾಗ ಬಲ್ಲದ್ದು ಸಂತರ ಮನೋಧರ್ಮವೇ.

ವ್ಯಾಸರು ಮಹಾಭಾರತದ ಕಡೆಯಲ್ಲಿ "ಧರ್ಮಾದರ್ಥಶ್ಚ ಕಾಮಶ್ಚ" ಎಂದು ನಿರ್ಣಯ ಹೇಳಿದರು. ಭಾರತದ ನಡುವೆ ಬರುವ ಕುರುಕ್ಷೇತ್ರದ ಯುದ್ಧಪ್ರಸಂಗದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಜೀವನಧರ್ಮೋಪದೇಶ ಮಾಡುವಾಗ, "ಧರ್ಮಾವಿರುದ್ಧೋ ಕಾಮೋಽಸ್ಮಿ" ಎಂದು ಧರ್ಮಕ್ಕೆ ಜೀವನದಲ್ಲಿರುವ ಸ್ಥಾನವನ್ನು ಪ್ರತಿಪಾದಿಸಿದನು. ಅರ್ಥಕಾಮಗಳ ಸಂಧಾನವು ಧಾರ್ಮಿಕವಾಗಬೇಕು ಎಂಬುದು ವ್ಯಾಸ-ಕೃಷ್ಣರಿಬ್ಬರ ಆಶಯ. ನಮ್ಮ ಜನ ಇಷ್ಟೊತ್ತೂ ಧರ್ಮಕ್ಕೆ ತಿರುಗಿ ಲೋಕ ವ್ಯಾಪಾರ ಮಾಡಬೇಕು, ಧರ್ಮವನ್ನು ಅಸಡ್ಡೆ ಮಾಡಿ ಬಾಳಬಹುದಾದ ಕಾಲ ಮುಂದೆಯೂ ಬರುವುದಿಲ್ಲ ಎಂದು ಜ್ಞಾಪಕದಲ್ಲಿರಿಸಿಕೊಳ್ಳಬೇಕು.

* * *

ಸಂತರು ಧರ್ಮಮರ್ಯಾದೆಯನ್ನು ಬಲ್ಲವರು ; ಸಂಯಮಕ್ಕಿರುವ ಬೆಲೆಯನ್ನು ಅನುಭವದಿಂದ ತಿಳಿದವರು. ಲೋಕವೊಡ್ಡುವ ಸೆಳವುಗಳನ್ನೂ ಗಾಳಗಳನ್ನೂ ಎದುರಿಸಿ ತಮ್ಮ ಬಾಳಹೊಳೆಗೆ ಇಳೆಯಲ್ಲಿರುವ "ಪಾತ್ರ" ವನ್ನೂ, ಬಾಳಹೊಳೆ ಸೇರಬೇಕಾದ ಸಚ್ಚಿದಾನಂದ ಸಮುದ್ರದ ಗುರಿಯನ್ನೂ ನಿರ್ಧರವಾಗಿ ತಿಳಿದವರು. ಜಗದಾರಾಧನೆಯ ಮರ್ಮವನ್ನು ಭೇದಿಸಿ ಅರಿತವರು. ಜಗದೀಶ್ವರನನ್ನು ಮರೆತ ಜಗದಾರಾಧನೆ ಪಾಪವಾಗುತ್ತದೆ ಎಂಬ ನಿಶ್ಚಯ ಜ್ಞಾನವುಳ್ಳವರು. ಜಗದ್ವೈಭವವನ್ನು ನಡಸುವುದು ತಾ ಅರುಗಾಗಿದ್ದು ಅದನ್ನು ಮಾಡಿದ ಪರಮಾತ್ಮ ; ಆದದ್ದರಿಂದ ಬ್ರಹ್ಮಕೃತಿಯಾದರೂ ಜಗತ್ತು ಬ್ರಹ್ಮೇತರ ಕೃತಿಯೇ ಎಂಬ ಗಟ್ಟಿ ತಿಳಿವಳಿಕೆಯಿಂದ ಜಗದ್ವ್ಯವಹಾರವನ್ನು ಒಂದು ಮಿತಿಯಲ್ಲಿ ನಡಸಬೇಕು ; ಲೋಕಕ್ಕೆ ಲೋಕಾತೀತವನ್ನು ಗಂಟುಹಾಕುವ ಹದವನ್ನು ಗೊತ್ತುಮಾಡಿಕೊಳ್ಳಬೇಕು. ಪ್ರಕೃತಿ ಬೀಸುವ ಬೆಡಗಿಗೂ ಬೆರಗಿಗೂ ಮರುಳಾಗಬಾರದು. ಆ ಬೆಡಗು ಬೆರಗುಗಳ ಹಿಂದೆ ಇರುವ ಬ್ರಹ್ಮವಸ್ತುವಿನದು ಬಹು ದೊಡ್ಡ ಬೆಡಗು, ಬೆರಗು ಎಂದು ಮಂಗಳದ ಬೀಡಾದ ಆ ಬೆಡಗುಗಳಿಗೆ ಪೂಜೆ ಸಲ್ಲಿಸಬೇಕು. ಇಳೆಯ ಬೆಡಗು ಬೆರಗುಗಳು ದುರುಪಯೋಗವಾಗದೆ ಇದ್ದಾಗ ಜಗದಾರಾಧನೆ ಜಗದೀಶ್ವರನ ಆರಾಧನೆಯೇ ಆಗುತ್ತದೆ. ಹೀಗೆ ಸಂತರು ಸಂದರ್ಭಕ್ಕೆ ಉಚಿತವಾದ ತಿಳಿವಳಿಕೆಕೊಟ್ಟು ಲೋಕ ಜನವನ್ನು ತಿದ್ದುತ್ತಾರೆ.

* * *

ಭರತವರ್ಷದ ಚರಿತ್ರೆ ಈ ಒಂದು ದೃಷ್ಟಿಯಿಂದ ಸಂತರ ಚರಿತ್ರೆಯೇ. ಸಂತರ ಕಾಲದ ಜನಜೀವನದ ಸಂಗತಿಯೂ, ಜನರ ನಡುವೆ ಬಾಳುತ್ತ ಅವರು ಬೀರಿದ ಪ್ರಭಾವವೂ ದೇಶಚರಿತ್ರೆಗೆ ತಕ್ಕ ಸಾಮುಗ್ರಿಗಳೇ. ಚರಿತ್ರೆಯ ಪುಟಗಳಲ್ಲಿ ನಿಜವಾಗಿ ಸ್ವಾರಸ್ಯವನ್ನು ತಂಬತಕ್ಕವು ಸಂತರ ಚಟುವಟಿಕೆಗಳು ; ಮತ್ತು ಸಂತರ ಮನೋಧರ್ಮವನ್ನು ತಿಳಿದು ವ್ಯವಹಾರ ನಡಸುವ ಲೌಕಿಕರ ಚಟುವಟಿಕೆಗಳು.

ಭರತವರ್ಷದ ಒಂದೊಂದು ಪ್ರಾಂತ್ಯವೂ ಸಂತರನ್ನು ಹೆತ್ತು ಆಯಾ ಪ್ರದೇಶ ಪರಿಸರದಲ್ಲಿ ಅವರನ್ನು ಅರಳಿಸಿ ಕಾಯಕಕ್ಕೆ ಹೂಡಿದೆ. ಪೂರ್ವದಲ್ಲಿ ಚೈತನ್ಯ ದೇವ, ಉತ್ತರದಲ್ಲಿ ತುಲಸಿ, ಪಶ್ಚಿಮದಲ್ಲಿ ನಾಮದೇವ ತುಕಾರಾಮರು, ದಕ್ಷಿಣದಲ್ಲಿ ಕೇರಳ ತಮಿಳು ಕನ್ನಡ ತೆಲುಗುಗಳ ಸಂತರ ದೊಡ್ಡ ಮೆರವಣಿಗೆಯೇ ನಮ್ಮ ಧ್ಯಾನ ನೇತ್ರಗಳಿಗೆ ವಿಷಯವಾಗುತ್ತವೆ. ಗಂಡಸರಂತೆ ಹೆಂಗಸರೂ ಸಂತರೆ. ಉತ್ತರದಲ್ಲಿ ಮೀರಾ ; ದಕ್ಷಿಣದಲ್ಲಿ ಆಂಡಾಳ್, ಅಕ್ಕಮಹಾದೇವಿ; ಹೀಗೆ ಈಶ್ವರ ಶರಣ ಶರಣೆಯರ ಹೆಸರುಗಳನ್ನು ಹೇಳುತ್ತ ಹೋದರೆ ಸಹಸ್ರ ನಾಮ ಜಪವಾಗು

ತ್ತವೆ. ನಮ್ಮ ಭಕ್ತಿತಂತು ಸಾಲದೆಂಬಂತೆ ನಾಮಮಾಣಿಕ್ಯಗಳು ಪೋಣಿಕೆಗೆ ಹೇರಳವಾಗಿರುತ್ತವೆ. ನಾಲಗೆ ಬಳಲದೆ ಉಚ್ಚರಿಸಬಲ್ಲ ಸವಿಹೆಸರುಗಳು ಇವೆಲ್ಲ.

ಶ್ರೀರಾಮಕೃಷ್ಣ ಪರಮಹಂಸರನ್ನು ಆಧುನಿಕ ಕಾಲದ ಆದಿಸಂತರೆಂದು ನೆನೆದು ನಮ್ಮ ಕಾಣಿಕೆಯನ್ನು ಅವರಿಗೆ ಸಲ್ಲಿಸೋಣ. ಆಮೇಲೂ ಸಾಲು ಸಾಲಾಗಿ ಸಂತರು ಅವತರಿಸುತ್ತಲೇ ಬಂದಿದ್ದಾರೆ. ಇನ್ನೆರಡು ಹೆಸರುಗಳು ನೆನಪಿಗೆ ಬರುತ್ತವೆ. ರಮಣಮಹರ್ಷಿಗಳು, ಅರವಿಂದ ಯೋಗಿಗಳು. ಹೀಗೆ ಎಲ್ಲೆಲ್ಲೂ ಸಂತರ ಪ್ರಭಾವಕ್ಕೆ ಸಿಕ್ಕಿದ ಭಕ್ತಜನ ತಮ್ಮ ಬದುಕನ್ನು ನೆಮ್ಮದಿಸಿಕೊಳುತ್ತಿದ್ದಾರೆ. ಭರತವರ್ಷದ ಯಾವ ನೆಲವೂ ಸಂತರ ಕಾಯಕದ ತಸಿಗಂಧವಿಲ್ಲದೆ ಮರುಭೂಮಿಯಾಗಿಲ್ಲ. ಅಲ್ಲಲ್ಲಿಯ ಸಂದರ್ಭ, ಅಲ್ಲಲ್ಲಿಯ ಕೊರತೆ ಒಬ್ಬೊಬ್ಬ ಸಂತರನ್ನು ಪ್ರೈದೋರಿಸುತ್ತದೆ.

ಮಲ್ಲಾಡಿಹಳ್ಳಿಯ ಪೂಜ್ಯ ಶ್ರೀ ರಾಘವೇಂದ್ರ ಸ್ವಾಮಿಗಳು ಸಂತರ ಸಾಲಿನಲ್ಲಿ ಬಂದವರು. ಸಾರಸ್ವತ ಪ್ರಪಂಚದಲ್ಲಿ ಅವರು 'ತಿರುಕ' ಎಂದು ಪ್ರಸಿದ್ಧರು. ಅಧ್ಯಾತ್ಮ ಪ್ರಪಂಚದಲ್ಲೂ ಅವರು 'ತಿರುಕ'ರೇ. ಸಮಾಜದಿಂದ ಅವರು ತಿರಿಯುವುದು ಹಣಕ್ಕಿಂತ ಹೆಚ್ಚಾಗಿ ಅರಿವನ್ನು. ತಾವು ಜನಕ್ಕೆ ಕೊಟ್ಟ ಅರಿವನ್ನೇ ಅವರಿಂದ ಕಾಣಿಕೆಯಾಗಿ ಪಡೆಯುತ್ತಾರೆ ಸಂತರು. ಚಿತ್ರದುರ್ಗದ ಒಂದು ಹಳ್ಳಿಯನ್ನು ಶ್ರೀರಾಘವೇಂದ್ರ ಸ್ವಾಮಿಗಳು ಯಾತ್ರಾ ಸ್ಥಳವನ್ನಾಗಿ ಮಾಡಿದ್ದಾರೆ. ಅವರ ಬಳಿಗೈದುವವರ ಎದೆ ತಣಿದು ನೆಮ್ಮದಿಯಾಗಿ ಹಿಂದಿರುಗುತ್ತದೆ.

> ಯತಃ ಪ್ರವೃತ್ತಿ ರ್ಭೂತಾನಾಂ
> ಯೇನ ಸರ್ವಮಿದಂ ತತಮ್ ।
> ಸ್ವಕರ್ಮಣಾ ತಮಭ್ಯರ್ಚ್ಯ
> ಸಿದ್ಧಿಂ ವಿಂದತಿ ಮಾನವಃ ॥

ಭಗವಂತನ ಈ ಭರವಸೆಯ ಮಾತಿಗೆ ಮಲ್ಲಾಡಿಹಳ್ಳಿಯ ಈ ಕರ್ಮಯೋಗಿ-ಸಂತರ ಆಯಾಸ ಕಾಣದ ಚಟುವಟಿಕೆ ಸಾಕ್ಷ್ಯಹೇಳುತ್ತಿದೆ.

> ಕಟ್ಟುಕಥೆ ಹೇಗೊ ಜೀವನ ಹಾಗೆ ; ಅದು ಎಷ್ಟು ದೀರ್ಘ ಎನ್ನುವುದು ಮುಖ್ಯನಲ್ಲ ; ಅದೆಷ್ಟು ಸೊಗಸಾಗಿದೆ- ಒಳ್ಳೆಯದಾಗಿದೆ ಎಂಬುದು ಮುಖ್ಯ.
>
> -ಸೆನೆಕ

ಎ. ಪಂಕಜ

ಭ್ರಮೆ

ಇದು ಇಪ್ಪತ್ತನೆಯ ಶತಮಾನ. ನವನಾಗರೀಕತೆಯು ತುಂಬಿ ತುಳುಕುವ ಆಧುನಿಕಕಾಲ. ಇಂತಹ ಕಾಲದಲ್ಲೂ ದೇವರಿದ್ದಾನೆ ಎನ್ನುವುದು ಬರಿಯ ಭ್ರಮೆ ; ಭಕ್ತಿ, ವೈರಾಗ್ಯವೆಲ್ಲಾ ಕೆಲಸಕ್ಕೆ ಬಾರದ ಹುಚ್ಚುತನ; ದೇವರ ಪೂಜೆ ಪುರುಸ್ಕಾರ ಎಂದು ಕಾಲ ಕಳೆಯುವುದು ಮೂರ್ಖತನ ಎಂದು ಮೂದಲಿಸುವ ಜನತೆಯನ್ನು ನಾವು ಇಂದು ಹೆಚ್ಚು ಹೆಚ್ಚಾಗಿ ಕಾಣುತ್ತಿದ್ದೇವೆ. ಹೀಗೆ ಹೇಳುವರು ನಾಸ್ತಿಕರಾದರೂ ಕೂಡ, ಅವರ ಮಾತಿನಲ್ಲೂ ಸ್ವಲ್ಪಮಟ್ಟಿಗೆ ಸತ್ಯವಿದೆ ಏನೋ ಎಂದು ಒಮ್ಮೊಮ್ಮೆ ಅನ್ನಿಸುತ್ತದೆ. ಆದರೆ ಆ ಮಾತು ಪೂರ್ಣ ಸತ್ಯವಾಗಲಾರದು.

ಬದುಕಿನ ಭ್ರಮೆಯಲ್ಲಿ ಮೈಮರೆತು ರಾಜಕೀಯ, ಸಮಾಜಕೀಯ, ಆರ್ಥಿಕ ಜಂಜಾಟಗಳಲ್ಲಿ ನೊಂದು ಬಳಲಿದ ಮಾನವನಿಗೆ ದೇವರ ಬಗ್ಗೆ ತಿಳಿಯಲು, ಅವನಿಗೆ ಕೈಮುಗಿಯಲು, ಧಾರ್ಮಿಕ ವಿಚಾರಗಳನ್ನು ಕುರಿತು ಪರಿಶೀಲಿಸಲು ಪುರುಸೊತ್ತು ಇಲ್ಲವಾಗಿದೆ. ಬದಲಾಗಿ ನಿಜವಾಗಿಯೂ ದೇವರಿದ್ದಿದ್ದರೆ ನಾವು ಹೀಗೇಕೆ ಪರದಾಡಬೇಕಾಗಿತ್ತು ಎಂಬ ಯೋಚನೆ ಮಾಡುವುದೂ ಸಹಜ.

ಮನುಷ್ಯನ ಆಯುಸ್ಸು ಸರಾಸರಿ ಅರವತ್ತು ವರ್ಷಗಳು ಎನ್ನಬಹುದು. ಇವರಲ್ಲಿ ಬಾಲ್ಯ, ಯೌವ್ವನ, ಮುಪ್ಪು ಎಂಬ ಹಂತಗಳು. ಆಟಪಾಠಗಳಲ್ಲಿ, ಓದಿನಲ್ಲಿ ಬಾಲ್ಯ ಕಳೆದುಹೋಗುತ್ತದೆ. ತಾರುಣ್ಯದಲ್ಲಿ ಯೌವ್ವನದ ಬಿಸಿರಕ್ತ ಮೈಯಲ್ಲಿ. ಜಗತ್ತೇ ತನ್ನ ಕೈಯಲ್ಲಿದೆ, ತಾನು ಎಂತಹ ಸವಾಲನ್ನು ಬೇಕಾದರೂ ಎದುರಿಸಿ ಜಯಿಸಬಲ್ಲೆ ; ಆ ಸಾಮರ್ಥ್ಯ ತನಗಿದೆ ಎನ್ನುವ ಅಹಂಭಾವ. ಆಗಿನದು ವಿವೇಚನಾಶಕ್ತಿಯನ್ನು ಕಳೆದುಕೊಂಡ ಮೂರ್ಖತ್ವ. ನಂತರ ಮುಪ್ಪಿನಲ್ಲಿ ದೇಹಸೋತು ಶಕ್ತಿ ಕುಂದಿರುತ್ತದೆ. ಆಗ ಕಳೆದ ದಿನಗಳ ಸ್ಮೃತಿ, ಅದಕ್ಕಾಗಿ ಚಿಂತೆ, ಪಶ್ಚಾತ್ತಾಪ. ಇದು ಮಾನವನ ಜೀವಿತದ ಚಕ್ರ.

ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗುವಾಗ ಸಹಪ್ರಯಾಣಿಕರ ಸ್ನೇಹವಾಗುತ್ತದೆ. ಸಾಕಷ್ಟು ಮಾತುಕತೆ, ಒಟ್ಟಿಗೆ ಊಟ ತಿಂಡಿ ಎಲ್ಲಾ ನಡೆಯುತ್ತದೆ. ಅವರವರ ಊರು ಬಂದಾಗ ತಮ್ಮ ತಮ್ಮ ನಿಲ್ದಾಣಗಳಲ್ಲಿ ಇಳಿದು ಹೊರಟುಹೋಗುತ್ತಾರೆ. ಅಲ್ಲಿಗೆ ನಮ್ಮ ಅವರ ಪರಿಚಯ ಮುಗಿದಂತೆಯೇ. ಬದುಕಿನ ಪಯಣದ ಹಾದಿಯಲ್ಲಿ ಕೂಡ ಗಂಡ–ಹೆಂಡತಿ ; ಮಕ್ಕಳು–ಮೊಮ್ಮಕ್ಕಳು ; ಅಕ್ಕ–ತಂಗಿ ; ಅಣ್ಣ–ತಮ್ಮ ; ಎಂಬ ರಕ್ತ ಸಂಬಂಧ. ಇದರಿಂದ ಬಹಳ ಸಮೀಪದವರು, ನಮ್ಮವರು ಎಂಬ ಪ್ರೇಮಪಾಶ ; ಮಮತೆಯ ಬಂಧನ. ಸರಪಳಿಯ ಕೊಂಡಿಗಳು ಕಳಚಿದಂತೆ ಒಬ್ಬೊಬ್ಬರಾಗಿ ಕೈಬಿಟ್ಟುಹೋಗುತ್ತಾರೆ. ಈ ಭೂಮಿಯ ಮೇಲೆ ಜನಿಸಿ ಬಂದಾಗ ಏನೂ ಅರಿಯದ ಅಜ್ಞರು, ಪಶುಳಿಗಳು. ಕೊನೆಯ ಪಯಣದ ಹಂತದಲ್ಲಿ ರುದ್ರ

ಭೂಮಿಗೆ ತೆರಳುವಾಗ, ನಮ್ಮೊಂದಿಗೆ ಜೊತೆಯಲ್ಲಿ ಬರುವುದು, ನಮ್ಮಿಂದ ಬದುಕಿರುವಾಗ ನಡೆದ ಕೆಲಸ ಕಾರ್ಯಗಳು. ಜರಾ ಮರಣಗಳಿಂದ ಯಾರಿಗೂ ಬಿಡುಗಡೆ ಇಲ್ಲ.

ಹುಟ್ಟು-ಸಾವು ; ಸುಖದುಃಖ ; ನೋವು-ನಲಿವು ; ನಗು-ಅಳು ; ಇವೆಲ್ಲದರ ಹಿಂದೆಯೂ ಕಾಣದ ಕೈವಾಡವಿದೆ. ತನ್ನಿಷ್ಟ ಬಂದಂತೆ ಅದು ನಡೆಸಿಕೊಂಡು ಹೋಗುತ್ತದೆ. ಆ ಶಕ್ತಿಯನ್ನು ಎದುರಿಸಿ ಹೋರಾಡುವ ಶಕ್ತಿ ಯಾರಿಗಾದರೂ ಇವೆ ಎಂದು ಭಾವಿಸಿದರೆ ಅದು ಭ್ರಮೆಯಲ್ಲದೆ ಮತ್ತೇನು ?

ದೇವರು ಇಲ್ಲ ಎಂಬ ನಂಬಿಕೆ ಸತ್ಯವಾಗಿದ್ದರೆ ಪ್ರತಿಯೊಬ್ಬ ಮಾನವನು ತನ್ನ ಸ್ವಶಕ್ತಿಯಿಂದ ಉತ್ತುಂಗ ಶಿಖರವನ್ನು ಏರಬಹುದಾಗಿತ್ತಲ್ಲ. ಸಾಕಷ್ಟು ಸಿರಿವಂತನಾಗಿ ಜಗತ್ತಿನಲ್ಲಿರುವ ಎಲ್ಲಾ ಸುಖಭೋಗಗಳನ್ನು ಅನುಭವಿಸಿ ಆನಂದವಾಗಿ ಇರಬಹುದಾಗಿತ್ತಲ್ಲ. ಒಂದೇ ಮನೆಯಲ್ಲಿ ಹುಟ್ಟಿ ಬೆಳೆದ ಅಣ್ಣತಮ್ಮಂದಿರಲ್ಲಿ ವ್ಯತ್ಯಾಸವೇಕೆ ; ಒಬ್ಬ ದೊಡ್ಡ ಹುದ್ದೆಯಲ್ಲಿದ್ದು ಅನುಕೂಲವಾಗಿದ್ದರೆ ಇನ್ನೊಬ್ಬನಿಗೆ ಸಾಮಾನ್ಯ ಜೀವನ ನಡೆಸಲೂ ಕಷ್ಟ ಪರದಾಟಗಳೇಕೆ ? ಇದಕ್ಕಾಗಿಯೇ ಹಿಂದಿನಿಂದ ಹೇಳುತ್ತಾ ಬಂದಿರುವುದು, ಪ್ರಾಚೀನ ಕರ್ಮ ಎಂದು. ಕರ್ಮ ಎಂದರೆ ಕೆಲಸ. ಹಿಂದೆ ನಾವು ಮಾಡಿದ ಕೆಲಸ ಕಾರ್ಯಗಳ ಮೇಲೆ ನಮ್ಮ ಇಂದಿನ ಜೀವನ ನಡೆಯುತ್ತದೆ. 'ಇಂದಿನದು ಮುಂದಕ್ಕೆ ಬುತ್ತಿ'. 'ಆಗಾಮಿ', 'ಸಂಚಿತ', ಮತ್ತು 'ಪ್ರಾರಬ್ಧ ಕರ್ಮ' ಇವು ಮೂರು ಯಾರನ್ನೂ ಬಿಟ್ಟದ್ದು ಅಲ್ಲ. ಆಗಾಮಿ ಎಂದರೆ ಮುಂದಿನದು, ಸಂಚಿತ, ಹಿಂದಿನಿಂದ ಕಲೆತು ಬಂದದ್ದು ಪ್ರಾರಬ್ಧ ಕರ್ಮ ಎನ್ನುವುದು ಜನ್ಮಜನ್ಮಾಂತರದ್ದು. ಈ ವಿಚಾರವೆಲ್ಲಾ ಬಹಳ ಗಹನವಾದದ್ದು. ಬಹು ಬೇಗನೆ ತಲೆ ಹೋಗುವಂತಹ ವಿಚಾರಗಳೂ ಅಲ್ಲ.

ನಮ್ಮ ಎಲ್ಲ ಕೆಲಸಗಳ ಪ್ರೇರಕ ಶಕ್ತಿ ನಮ್ಮ ಕಣ್ಣಿಗೆ ಕಾಣದ ಅಗೋಚರ ಶಕ್ತಿ. ಮನುಷ್ಯ ಮಾಡುವ ಎಲ್ಲಾ ಪ್ರಯತ್ನಗಳಿಗೂ ಗೆಲುವುಂಟಾದಾಗ ಈ ಶಕ್ತಿಯ ಬಗ್ಗೆ ಕುರಿತು ಯೋಚಿಸುವುದಕ್ಕೆ ಅವನು ಹೋಗುವುದಿಲ್ಲ. ಪ್ರತಿ ಹೆಜ್ಜೆಯಲ್ಲೂ ಸೋಲಾದಾಗ ಮಾತ್ರ ಈ ದೈವೀಕ ಶಕ್ತಿಯ ಮೇಲೆ, ದೇವರ ಮೇಲೆ ಮನಸ್ಸು ಹೋಗುತ್ತದೆ,

ಎಂದಿಗೆ, ಸೃಷ್ಟಿ-ಲಯಗಳನ್ನು ಮಾನವ ತನ್ನ ಕೈಗೆ ತಗೆದುಕೊಂಡು ಹುಟ್ಟು ಸಾವುಗಳನ್ನು ಜಯಿಸಿದ ಧೀರ ವ್ಯಕ್ತಿ ಆಗಿ ನಿಲ್ಲಬಲ್ಲನೋ ಅಂದು ಬೇಕಾದರೆ ದೇವರು ಎನ್ನುವುದು ಭ್ರಮೆ ಎಂದು ಒಪ್ಪಬಹುದು. ಆದರೆ ಆ ದಿನ ಬರುತ್ತದೆ ಎಂದು ತಿಳಿದಿದ್ದರೆ ಅದೂ ಸಹ ಭ್ರಮೆಯೇ ಅಲ್ಲವೆ ?.

ಯಾವ ಮನುಷ್ಯನ ಜೀವನದಲ್ಲಿಯೇ ಆಗಲಿ, ಅವನ ಜೀವನದ ಅತ್ಯಂತ ವಿಷಮದ (Darkest) ಘಳಿಗೆಯೆಂದರೆ–ಸಂಪಾದನೆ ಮಾಡದೆಯೆ ಶ್ರೀಮಂತನಾಗುವುದು ಹೇಗೆಂದು ಲೆಕ್ಕಹಾಕುವ ಹೊತ್ತು.

–ಹೊರೆಸ್ ಗ್ರೂಲಿ

ಡಾ॥ ಎಂ. ಚಿದಾನಂದಮೂರ್ತಿ

ಆರು ದಿನ ವೀರಶೈವರು, ಒಂದು ದಿನ ವೈಷ್ಣವರು

"ವಾರದ ಆರು ದಿನ ವೀರಶೈವರು ; ಒಂದು ದಿನ ವೈಷ್ಣವರು"–ಇದನ್ನು ಕೇಳಿದ ಜನ ಒಂದು ಕ್ಷಣ ಅವಾಕ್ಕಾಗುತ್ತಾರೆ; ಅದು ಹೇಗೆ ಸಾಧ್ಯ ಎನ್ನುತ್ತಾರೆ. ವೀರಶೈವ ಮತವೂ ವೈಷ್ಣವ ಮತವೂ ಎಣ್ಣೆ ನೀರು ಇದ್ದಂತೆ-ಒಂದರ ಜೊತೆ ಇನ್ನೊಂದು ಬೆರೆಯದು. ಇದು ಸಾಮಾನ್ಯ ತಿಳಿವಳಿಕೆ. ಆದರೆ ಎಷ್ಟೋ ಸಾರಿ ಸಾಮಾನ್ಯ ತಿಳಿವಳಿಕೆಗಳು ಸಂಗತಿಗಳನ್ನು ಸರಳಗೊಳಿಸಿ ಜೀವನದ ಎಷ್ಟೋ ಸಂಕೀರ್ಣಮುಖಗಳನ್ನು ಮುಚ್ಚಿಬಿಡುತ್ತವೆ. ವಾಸ್ತವವಾಗಿ ಸ್ವಾರಸ್ಯವಿರುವುದು ಈ ಮುಚ್ಚಿಹೋದ ಮುಖಗಳಲ್ಲೇ. ಅಂತಹುದಕ್ಕೆ ಮೇಲಿನದೊಂದು ಒಳ್ಳೆಯ ನಿದರ್ಶನ. ಜಾತಿ ಜಾತಿಗಳ ಮಧ್ಯೆ ಎದ್ದಿರುವ ಗೋಡೆಗಳು ಇನ್ನೂ ಬಲವಾಗುತ್ತಲೇ ಹೋಗುತ್ತಿರುವಾಗ, ಗ್ರಾಮ ಜೀವನವನ್ನು ಸ್ವಲ್ಪ ಒಳಹೊಕ್ಕು ನೋಡಿದಾಗ ಅಲ್ಲಿ ಕಂಡು ಬರುವ (ಅಥವಾ ಕಂಡುಬರುತ್ತಿದ್ದು, ಈಗ ಹೊರ ಪ್ರಭಾವಗಳಿಂದ ದುರದೃಷ್ಟವಶಾತ್ ಕಂದುತ್ತಿರುವ) ಸಾಮರಸ್ಯ, ಹೊಂದಾಣಿಕೆಗಳು ಆಶ್ಚರ್ಯವನ್ನು ಹುಟ್ಟಿಸುತ್ತವೆ.

ವೀರಶೈವರು ಶಿವನ ನಿಷ್ಠಾವಂತ ಭಕ್ತರು. ಶಿವನನ್ನಲ್ಲದೆ ಅನ್ಯದೈವದ ಪಾರಮ್ಯವನ್ನು ಅವರು ಒಪ್ಪರು. ಶಿವನಾಮಸ್ಮರಣೆ, ಭಸ್ಮಧಾರಣೆ ಇವು ಅವರ ಪ್ರಮುಖ ಲಕ್ಷಣಗಳು. ವಿಷ್ಣು ಪಾರಮ್ಯವನ್ನೂ ನಾಮಧಾರಣೆಯನ್ನೂ ವೈಷ್ಣವಮತ ಪ್ರತಿಪಾದಿಸುತ್ತದೆ. ಇವೆರಡೂ ಒಟ್ಟಿಗೆ, ಒಂದೇ ಕುಟುಂಬದಲ್ಲಿ, ಒಬ್ಬನೇ ವ್ಯಕ್ತಿಯಲ್ಲಿ ಯಾವುದೇ ತಿಕ್ಕಾಟವಿಲ್ಲದೆ ಬದುಕುತ್ತಿರುವ ಒಂದು ಅಪೂರ್ವನಿದರ್ಶನ ನನ್ನ ಗಮನಕ್ಕೆ ಬಂದಿತು. ಅದರ ಬಗ್ಗೆ ಇನ್ನೂ ಹೆಚ್ಚಿನ ಸಂಶೋಧನೆ ಅಗತ್ಯವಾಗಿದ್ದರೂ, ಅದರ ನವೀನತೆಯ ದೃಷ್ಟಿಯಿಂದಾಗಿ ಅದನ್ನು ಓದುಗರ ಗಮನಕ್ಕೆ ತರುತ್ತಿದ್ದೇನೆ.

ಚನ್ನಗಿರಿ ತಾಲೂಕಿನ ಹಿರೇ ಕೋಗಲೂರು ನಾನು ಬಾಲ್ಯವನ್ನು ಕಳೆದ ಊರು. ಅಲ್ಲಿ ಸಂಖ್ಯೆ ಮತ್ತು ಪ್ರಾಬಲ್ಯಗಳಲ್ಲಿ ವೀರಶೈವರೇ ಮುಂದು. ಅವರಲ್ಲಿ ಕೆಲವು ಮನೆತನದವರು ತಮ್ಮನ್ನು 'ತಿರುಪತಿ ತಿಮ್ಮಪ್ಪನ ಒಕ್ಕಲು' ಎಂದು ಕರೆದುಕೊಳ್ಳುತ್ತಾರೆ. (ತಮ್ಮ ಒಕ್ಕಲಿನವು ನೂರಹತ್ತು ಮನೆಗಳು ಎಂದು ಹೇಳಿಕೊಳ್ಳುವುದು ಒಂದು ಸಂಪ್ರದಾಯ) ಇಲ್ಲಿಯ 'ಒಕ್ಕಲು' ಮಾತಿನ ಮೂಲಾರ್ಥವೇನೋ ತಿಳಿಯದು. ಈಗ ಅದು 'ಗುಂಪು, ಕುಲ, lineage' ಎಂಬ ಅರ್ಥಗಳನ್ನು ಹೊಂದಿದೆ (ಬಹುಶಃ 'ಉಗು' ಎಂಬ ಧಾತುವಿನಿಂದ ಬಂದಿದೆ. 'ಉಗು' ಎಂದರೆ ಹೊರಗೆ ಬಾ, ಸುರಿ ಎಂದರ್ಥ). ಹೀಗೆ ತಿಮ್ಮಪ್ಪನ ಒಕ್ಕಲಿಗೆ ಸೇರಿದ ಅನೇಕ ವಂಶಗಳು ಬೇರೆ ಕಡೆಗಳಲ್ಲೂ ವೀರಶೈವರಲ್ಲಿ ಉಂಟು. ನಾನು ಇಲ್ಲಿ ಹೇಳುವ ಮಾತುಗಳು ಅವರಿಗೆಲ್ಲ ಎಷ್ಟು ಅನ್ವಯವಾಗುತ್ತವೆಯೋ ತಿಳಿಯದು.

ಇವರೆಲ್ಲ ನೂರಕ್ಕೆ ನೂರರಷ್ಟು ವೀರಶೈವರು. ತಿಮ್ಮಪ್ಪನ ಒಕ್ಕಲಿಗೆ ಸೇರದ ಇತರ ವೀರಶೈವರಿಗೂ ಇವರಿಗೂ ಯಾವುದೇ ಮತಾಚಾರ, ಲಾಂಛನ, ನಂಬಿಕೆಗಳಲ್ಲಿ ಭೇದವಿಲ್ಲ. ಅವರಿಗೂ ಇವರಿಗೂ ನಿರಾಬಾಧಿತವಾಗಿ ವಿವಾಹಗಳು ನಡೆಯುತ್ತವೆ. ಇವರು ತಮ್ಮನ್ನು ತಾವು ವೀರಶೈವಮತದೊಡನೆ ಸಂಪೂರ್ಣವಾಗಿ ಸಮೀಕರಿಸಿ ಕೊಂಡಿದ್ದಾರೆ. ಇತರರಂತೆಯೇ ಇವರಿಗೂ ಶಿವನೇ ಪರಮದೈವ. ಆದರೆ ಎಲ್ಲೋ ಒಳಗೆ, ಅಂತರಂಗದಲ್ಲಿ, ಶಿವನಷ್ಟೇ ವಿಷ್ಣುವೂ ದೊಡ್ಡವನು ಎಂಬ ನಂಬಿಕೆ ಪ್ರಬಲವಾಗಿದೆ. ಉಳಿದವರೆಲ್ಲ ಶಿವಪರರಾಗಿರುವಾಗ, ಒಂದು ರೀತಿಯಲ್ಲಿ ಇವರು ಅಲ್ಪಸಂಖ್ಯಾತರಾಗಿರುವುದರಿಂದ ('ಅಲ್ಪಸಂಖ್ಯಾತ'ರೆಂಬುದು ಕೇವಲ ಸಂಖ್ಯೆಯಲ್ಲಿ ಎಂಬುದನ್ನು ಸೂಚಿಸುತ್ತದೆ) ಅವರು ವಿಷ್ಣುವಿನ ಬಗ್ಗೆ ಸ್ವಲ್ಪ ಹೆಚ್ಚಿನ ಆದರವನ್ನೇ ತೋರುತ್ತಾರೆಂದರೂ ತಪ್ಪಾಗದು. ಆದರೆ ಇದು ಕೇವಲ ನನ್ನ ಅನ್ನಿಸಿಕೆ ಮತ್ತು ಹಾಗನ್ನಿಸಲು ಮುಂದೆ ಕಾರಣವನ್ನು ಕೊಟ್ಟಿರುವೆನಾದರೂ, ಈ ಹೇಳಿಕೆಯನ್ನು ಅಷ್ಟಾಗಿ ಲಕ್ಷಿಸಬೇಕಾಗಿಲ್ಲ.

ಇವರು ಶನಿವಾರ ಬಿಟ್ಟು ಉಳಿದ ಆರು ದಿನಗಳಲ್ಲಿ ವೀರಶೈವರು. ಇತರ ವೀರಶೈವರ ಹಾಗೆ ಸೋಮವಾರ ಇವರಿಗೆ ಪವಿತ್ರ ದಿನ. ಆ ದಿನ ಸ್ನಾನಮಾಡಿ, ವಿಭೂತಿಧರಿಸಿ, ಮನೆಯಲ್ಲಿ ಪೂಜೆ ಮುಗಿದ ಬಳಿಕ ಶಿವದೇವಾಲಯಕ್ಕೆ ಹೋಗಿ ದೀಪಕ್ಕೆ ಎಣ್ಣೆ ಬಿಟ್ಟು, ಎಡೆ ಹಿಡಿದು ಬಂದು ಊಟಮಾಡುತ್ತಾರೆ. ಅವನ್ನೆಲ್ಲ ವಿವರಿಸುವುದು ಅನಗತ್ಯ, ಏಕೆಂದರೆ ಅವೆಲ್ಲ ನಿರೀಕ್ಷಿತವೇ. ಆದರೆ ಶನಿವಾರದ ದಿನ ಮಾತ್ರ ಅವರು ವೈಷ್ಣವರಾಗುತ್ತಾರೆ. ಆ ದಿನ ಎಲ್ಲರೂ ಸ್ನಾನಮಾಡಿ ಹಣೆಗೆ ನಾಮ ಧರಿಸುತ್ತಾರೆ. ಗೋವಿಂದನ ನಾಮಸ್ಮರಣೆ ಮಾಡುತ್ತಾರೆ. ಮನೆಯಲ್ಲಿರುವ ತಿಮ್ಮಪ್ಪನ ಪಟಕ್ಕೆ ಪೂಜೆ ಮಾಡುತ್ತಾರೆ. ತಿರುಪತಿಯಿಂದ ತಂದ ವಿಗ್ರಹಗಳಿಗೆ ಅವರು ಪೂಜೆ ಸಲ್ಲಿಸುತ್ತಾರೆ. ತಮ್ಮ ಮನೆಯ ಸಮೀಪದಲ್ಲಿ ಕಟ್ಟಿಕೊಂಡಿರುವ ಚಿಕ್ಕ ಕೊಠಡಿಯಂತಿರುವ ದೇವಾಲಯದ ಚಿಕ್ಕ ವಿಷ್ಣುವಿಗ್ರಹಗಳ ದರ್ಶನ ಮಾಡುತ್ತಾರೆ. ಆ ದಿನ, ಅವರಲ್ಲಿಯೇ 'ದಾಸಯ್ಯ' ಎಂದು ತಿರುಪತಿಯಲ್ಲಿ ಕಾಸಿದ ಶಂಖ, ಚಕ್ರಗಳ ಮುದ್ರೆಯೊತ್ತಿಸಿಕೊಂಡಿರುವ ವ್ಯಕ್ತಿ ಆ ಒಕ್ಕಲಿನ ಮನೆಗಳಿಗೆ ಕೈಯಲ್ಲಿ ಬವನಾಸಿ ಬೆತ್ತ ಹಿಡಿದುಕೊಂಡು ಬಂದು 'ಗೋವಿಂದ ಗೋವಿಂದ' ಎಂದು ತಿರುನಾಮವನ್ನು ಬಳಿದಿರುವ ಜಾಗಟೆಯನ್ನು ಬಡಿಯಬೇಕು. ಅವನಿಗೆ ಮನೆಯ ಜನ ನಮಸ್ಕಾರಮಾಡಿ ಭಿಕ್ಷೆ ಹಾಕಿ ಕಳುಹಿಸುತ್ತಾರೆ. ಅಲ್ಲಿಗೆ ಅವರ 'ಶನಿವಾರದ ದಿನ' ಮುಗಿಯಿತು. ಶ್ರಾವಣದ ಐದು ಸೋಮವಾರಗಳಂತೆಯೇ ಐದು ಶನಿವಾರಗಳೂ ಅವರಿಗೆ ಪವಿತ್ರದಿನಗಳು. ಆ ದಿನ ಅವರ ಮನೆಗೆ ವೀರಶೈವರ ಜಂಗಮಯ್ಯ ಬಂದರೆ ಅವನಿಗೂ ಭಿಕ್ಷೆ ಹಾಕುತ್ತಾರೆ. ಎಂದರೆ, ಶನಿವಾರದ ವಿಷ್ಣುಭಕ್ತಿಯು ಶಿವಭಕ್ತಿಯನ್ನು ಸ್ಥಳಾಂತರಗೊಳಿಸುವುದಿಲ್ಲ, ಅದರ ಜೊತೆ ಸಹಜೀವಿಯಾಗಿರುತ್ತದೆ. ದೇಹದ ಮೇಲೆ ಶಿವಲಿಂಗ; ಹಣೆಯ ಮೇಲೆ ನಾಮ. ಅದೇ ಶನಿವಾರ ಶಿವದೇವಾಲಯದಲ್ಲಿ ವಿಶೇಷಪೂಜೆಗಳಾದರೆ ಅಲ್ಲಿಗೆ ಹೋಗಲಿಕ್ಕೂ ಯಾವುದೇ ಅಡ್ಡಿಯೂ ಇಲ್ಲ. ದಾಸಯ್ಯನೂ ಕೂಡ ಆ ದಿನಕ್ಕೆ ಮಾತ್ರ ವಿಷ್ಣುಭಕ್ತ. ಉಳಿದಂತೆ ಅವನೂ ವೀರಶೈವನೇ. ವಿಶೇಷದಿನಗಳಲ್ಲಿ ಮತ್ತು ಮದುವೆಗಳಲ್ಲಿ ಈ ಜನಗಳು ಜಂಗಮಯ್ಯ ಮತ್ತು ದಾಸಯ್ಯರಿಬ್ಬರನ್ನೂ ಕರೆಯುತ್ತಾರೆ. ಈ ಇಬ್ಬರಲ್ಲಿ ಅವರಿಗೆ ದಾಸಯ್ಯನೇ ಶ್ರೇಷ್ಠನಾದರೂ ಜಂಗಮಯ್ಯನಿಗೆ ಹೆಚ್ಚಿನ ಪ್ರಾಮುಖ್ಯವೆಂಬುದನ್ನು ಹೇಳಬೇಕಾಗಿಲ್ಲ. ನಾಮಕರಣ ಮತ್ತು ಮದುವೆ ಮಾಡಿಸುವಾತ ವೀರಶೈವ ಪುರೋಹಿತನೇ.

ಇವರು ಮಕ್ಕಳಿಗೆ ಸಾಮಾನ್ಯವಾಗಿ ಶಿವಪರವಾದ ಹೆಸರನ್ನೇ ಇಡುತ್ತಾರೆ.ಉದಾ: ಶಿವಲಿಂಗಪ್ಪ, ರೇವಪ್ಪ ಏಕಾಂತಪ್ಪ, ಬಸವಲಿಂಗಪ್ಪ, ಬಸಪ್ಪ ಇತ್ಯಾದಿ. ಆದರೆ ಪ್ರತಿ ಸಂಸಾರದಲ್ಲೂ ಕೊನೆಯ ಪಕ್ಷ ಒಬ್ಬ ಹುಡುಗನಿಗಾದರೂ ವಿಷ್ಣುಪರವಾದ ಹೆಸರನ್ನಿಟ್ಟಿರುತ್ತಾರೆ. ಉದಾ: ಗೋವಿಂದಪ್ಪ, ತಿಮ್ಮಯ್ಯ, ಹನುಮಂತಪ್ಪ, ರಾಮಪ್ಪ, ದಾಸಪ್ಪ, ಶೇಷಪ್ಪ. ಇವರಲ್ಲಿ ಎಷ್ಟೇ ಬಡವರಾದರೂ ಒಮ್ಮೆಯಾದರೂ ತಿರುಪತಿಗೆ ಹೋಗಿ ಕಾಣಿಕೆ ಅರ್ಪಿಸಿ ಬರಬೇಕೆಂಬ ಪ್ರಬಲ ಆಸೆಯಿರುತ್ತದೆ; ತಿಮ್ಮಪ್ಪನ ದರ್ಶನ ಮಾಡಿ ತಮ್ಮ ಜೀವನ ಸಾರ್ಥಕವಾಯಿತೆಂದು ಭಾವಿಸುತ್ತಾರೆ. ತಿಮ್ಮಪ್ಪನ ಆಕರ್ಷಣೆ ಅಪಾರ. ತಿರುಪತಿಗೆ ಹೋಗಿ ಬಂದವರನ್ನು ಹಿಂದೆ ವಾದ್ಯಸಮೇತ ಎದುರುಗೊಂಡು

ಮೆರವಣಿಗೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರಂತೆ. ಹಿಂದೆ ತಿರುಪತಿಗೆ ಹೋಗಿ ಬರುವುದು ಸುಲಭವಿರಲಿಲ್ಲ, ಈಗ ಲಕ್ಸುರಿ ಬಸ್ಸುಗಳನ್ನು ಬಾಡಿಗೆಗೆ ತೆಗೆದುಕೊಂಡು ಹೋಗಿ ತಿಮ್ಮಪ್ಪನ ದರ್ಶನ ಮಾಡಿಕೊಂಡು ಬರುತ್ತಾರೆ. ಇಂತಹ ಪ್ರಬಲ ಆಕರ್ಷಣೆಯನ್ನು ಶಿವಪರವಾದ ಯಾವುದೇ ದೈವವೂ ಹೊಂದಿದಂತಿಲ್ಲ.

"ಶಿವನ ಬಗ್ಗೆ ನಿಷ್ಠಾಭಾವವನ್ನು ಹೊಂದಿರುವ ವೀರಶೈವರಾಗಿ ನೀವು ವಿಷ್ಣುವಿನ ಪೂಜಿಸುವಿರಲ್ಲಾ-ಆ ಕುರಿತು ನಿಮಗೆ ಏನನ್ನಿಸುತ್ತದೆ" ಎಂದು ವೃದ್ಧರೊಬ್ಬರನ್ನು ಪ್ರಶ್ನಿಸಿದಾಗ, ಅವರು ಯಾವುದೇ ಮಾನಸಿಕ ತಾಕಲಾಟವೂ ಇಲ್ಲದೆ "ನಮಗೆ ಈಬತ್ತಿ ದೇವರಾದರೇನು, ನಾಮದ್ದೇವರಾದರೇನು ? ಎಲ್ಲ ಒಂದೇ" ಎಂದು ಉತ್ತರಿಸಿದರು. ಅದೇ ಪ್ರಶ್ನೆಯನ್ನು ಒಬ್ಬ ವಿದ್ಯಾವಂತ ಮಧ್ಯಪೂರ್ವ ವಯಸ್ಸಿನವರನ್ನು ಕೇಳಿದಾಗ ಅವರು ಸ್ವಲ್ಪ ತಳ್ಳಂಕಗೊಂಡಂತೆ ಕಂಡಿತು. "ನಾವು ಹಾಗಿರುವುದು ಸರಿಯಲ್ಲವೆಂದು ನಿಮ್ಮ ಭಾವನೆಯೇ ?" ಎಂದು ನನಗೆ ಮರುಪ್ರಶ್ನೆ ಹಾಕಿದರು. ವ್ಯಕ್ತಿ ಯಾವುದೇ ದೈವದ ಅಥವಾ ದೈವಗಳ ಬಗ್ಗೆ ಶ್ರದ್ಧೆಯಿಟ್ಟಿರುವುದರಲ್ಲಿ ತಪ್ಪೇನೂ ಇಲ್ಲ, ಹಾಗೆ ನೋಡಿದರೆ ಎಲ್ಲ ದೈವಗಳೂ ಒಂದೇ ಎಂದು ನಾನು ಉತ್ತರಿಸಿದಾಗ ಅವರಿಗೆ ಸ್ವಲ್ಪ ಸಮಾಧಾನವಾಯಿತು. ಆದರೆ, ವೀರಶೈವಮತ, ಬಸವ, ವಚನಕಾರರು, ವೈದಿಕ ಸಂಪ್ರದಾಯಗಳ ವಿರುದ್ಧ ನಡೆದ ಆಂದೋಲನ ಇವುಗಳ ಪರಿಚಯ ಹಳ್ಳಿಯವರಿಗೆ ಹೆಚ್ಚು ಹೆಚ್ಚಾಗಿ ಆಗುತ್ತಿದೆ. ವಿಷ್ಣುವು ಬ್ರಾಹ್ಮಣರ ದೇವತೆ ಎಂಬ ಭಾವನೆ ಅವರಿಗಿರುವುದರಿಂದ (ಇದಕ್ಕೆ ಕಾರಣ, ಆ ಪರಿಸರದಲ್ಲಿರುವ ವಿಷ್ಣು ದೇವಾಲಯಗಳಿಗೆಲ್ಲ ಬ್ರಾಹ್ಮಣರು ಅರ್ಚಕರು ; ಶಿವ ದೇವಾಲಯಗಳಿಗೆಲ್ಲ ವೀರಶೈವರೇ ಅರ್ಚಕರು), ವಿಷ್ಣು ಪೂಜೆಯು ಅ-ವೀರಶೈವ ಪದ್ಧತಿ ಎಂಬ ಭಾವನೆ ಪ್ರಬಲವಾಗುತ್ತಿದೆ, ಉಳಿದ ಜನ ತಮ್ಮ ಆಚರಣೆಗಳನ್ನು ಪ್ರಶ್ನಿಸುತ್ತಿರುವರೆಂದು ಆ ವ್ಯಕ್ತಿ ಸೂಕ್ಷ್ಮವಾಗಿ ಸೂಚಿಸಿದ.

ಆದರೆ, ಶಿವನಿಷ್ಠೆಗೆ ವಿರೋಧವಲ್ಲದ ಈ ಜನರ ವಿಷ್ಣುನಿಷ್ಠೆ ಅಷ್ಟು ಸುಲಭವಾಗಿ ಹೋಗುವುದಿಲ್ಲ (ಹೋಗಬೇಕಾಗಿಲ್ಲ ಎಂಬ ಮಾತು ಬೇರೆ). ಆದರೆ ಅವರ ವಿಷ್ಣುನಿಷ್ಠೆ ಸಾಮಾಜಿಕವಾದುದಲ್ಲ, ಆ ವಿಶಿಷ್ಟವರ್ಗಕ್ಕೆ ಸೀಮಿತವಾದುದು. ತಾವು ಕಟ್ಟಿಕೊಂಡಿರುವ ಚಿಕ್ಕ ವಿಷ್ಣುಗೃಹದ ಯಾವುದೇ ಉತ್ಸವವನ್ನು ಅವರು ವೈಭವದಿಂದ ಆಚರಿಸುವುದಿಲ್ಲ. ನಿಷ್ಠೆ ಅಂತರಂಗದ್ದಾಗಿರುವುದರಿಂದಲೇ ಅದು ಸುಲಭವಾಗಿ ನಶಿಸುವುದಿಲ್ಲ. ಒಟ್ಟಾರೆ ಊರಿನ ಜನ ಅವರ ಈ ವಿಷ್ಣುನಿಷ್ಠೆಯನ್ನು ಒಪ್ಪಿಕೊಂಡಿರುತ್ತಾರೆ.

ವೀರಶೈವರಲ್ಲಿ ಕೆಲವರು ತಿಮ್ಮಪ್ಪನ ಭಕ್ತರಾಗಿರುವುದಕ್ಕೆ ಕಾರಣ ಹಲವಿರಬಹುದು. ಒಂದು ಕಾಲಕ್ಕೆ ವಿಷ್ಣುಭಕ್ತರಾಗಿದ್ದು, ಮುಂದೆ ವೀರಶೈವರಾಗಿ ಮತಾಂತರ ಹೊಂದಿದಮೇಲೂ ತಮ್ಮ ಹಿಂದಿನ ನಿಷ್ಠೆಯನ್ನು ಬಿಡದೆ ಉಳಿಸಿಕೊಂಡಿರಬಹುದು. ಅಥವಾ ಆ ಒಕ್ಕಲಿನ ಜನರ ಮೂಲ ಪುರುಷನೊಬ್ಬ ಯಾವುದೋ ಕಾರಣದಿಂದ ತಿಮ್ಮಪ್ಪನ ಭಕ್ತನಾಗಿರಬಹುದು. ಏಕೆಂದರೆ, ತಿಮ್ಮಪ್ಪ ದಕ್ಷಿಣಭಾರತದ ಅತ್ಯಂತ ಪ್ರಭಾವಶಾಲೀ ದೈವವೆಂಬಲ್ಲಿ ಅನುಮಾನವಿಲ್ಲ. ಆದರೆ, ನಮ್ಮ ಊರಿನ ತಿಮ್ಮಪ್ಪನ ಭಕ್ತರಿಗೆ ಸಂಬಂಧಿಸಿದ ಒಂದು ಸಂಗತಿ ಗಮನಾರ್ಹವಾಗಿದೆ. ಈ ಒಕ್ಕಲಿನ ಜನ ವಿಶೇಷವಾಗಿರುವ ಊರಿನ ಭಾಗದಲ್ಲಿ, ಅವರ ಮನೆಗಳ ಮಧ್ಯದ ಒಂದು ಇಕ್ಕಟ್ಟಾದ ಓಣಿಯಲ್ಲಿ ಒಂದು ಪೀಠದ ಮೇಲೆ ಬಹು ಸುಂದರವಾದ ಲಕ್ಷ್ಮೀನಾರಾಯಣನ ವಿಗ್ರಹವಿದೆ. ಆ ವಿಗ್ರಹದ ಪಾದದ ಬಳಿ ಗರುಡಲಾಂಛನವಿದೆ. ಪೂರ್ವಾಭಿಮುಖಿಯಾಗಿ ಬಯಲಲ್ಲಿ ಕುಳಿತಿರುವ ವಿಗ್ರಹದ ಜಾಗದಲ್ಲಿ ಹಿಂದೆ ಒಂದು ದೊಡ್ಡ ದೇವಾಲಯವಿದ್ದಿರಬೇಕು. ಏಕೆಂದರೆ, ವಿಗ್ರಹ ನೆಲದ ಮೇಲಿಲ್ಲ, ಒಂದು ದೊಡ್ಡ ವೇದಿಕೆಯ ಮೇಲಿದೆ. ಅದೇ ಅದರ ಮೂಲಸ್ಥಾನವಾಗಿದ್ದು, ಆ ದೇವಾಲಯದ ಗರ್ಭಗುಡಿಯ ಜಾಗ ಅದೇ ಆಗಿರಬೇಕು. ಆ ವಿಗ್ರಹಕ್ಕೆ ಪೂಜೆ ಇಲ್ಲ. ನಾನು ನೋಡಿದಾಗ ಯಾರೋ ಹಚ್ಚಿದ ವಿಭೂತಿ ಮಾತ್ರ ವಿಷ್ಣು, ಲಕ್ಷ್ಮಿಯರ ಹಣೆಯಲ್ಲಿ ಮಸುಕಾಗಿ ಕಾಣಿಸುತ್ತಿತ್ತು. ಆ ವಿಗ್ರಹದ ಬಗ್ಗೆ ಆ ಒಕ್ಕಲಿನ ಒಂದಿಬ್ಬರು ಹಿರಿಯರಿಗೆ ಮಮತೆಯಿದೆ. ಆದರೆ ಉಳಿದಂತೆ ಆ ಒಕ್ಕಲಿನ ಜನಕ್ಕೇ ಅದರ ಬಗ್ಗೆ ಉದಾಸೀನವಿದೆ. ಅದರ ದೇವಸ್ಥಾನ ವಿದ್ದಿರಬಹುದಾದ ಜಾಗದಲ್ಲೆಲ್ಲ ಮನೆಗಳು ತುಂಬಿವೆ. ಒಂದು ಕಾಲಕ್ಕೆ ಅಲ್ಲಿದ್ದ ವಿಷ್ಣುದೇವಾಲಯ ಹಾಳಾಗಲು

ಆ ಊರಿಗೆ ಪ್ರವೇಶಿಸಿದ ವೀರಶೈವಧರ್ಮ ಕಾರಣವಿರಬಹುದು. ವಿಷ್ಣುಭಕ್ತರು ಮುಂದೆ ವೀರಶೈವಧರ್ಮವನ್ನು ಒಪ್ಪಿಕೊಂಡಮೇಲೂ ತಮ್ಮ ಹಿಂದಿನ ಪದ್ಧತಿಗಳನ್ನು ಅವಶೇಷರೂಪದಲ್ಲಿ ಉಳಿಸಿಕೊಂಡು ಬಂದರೆಂದು ತೋರುತ್ತದೆ.

ಬೇರೆ ಬೇರೆ ಮತದವರು ಒಂದು ಹಳ್ಳಿಯಲ್ಲಿ ಸಮರಸದಿಂದಿರುವುದು ಗೊತ್ತು. ಅಥವಾ, ಒಕ್ಕಲಿಗರಂತಹ ಜಾತಿಗಳಲ್ಲಿ ಕೆಲವು ಮನೆತನಗಳು ಶೈವರೂ ಇನ್ನು ಕೆಲವು ವೈಷ್ಣವರೂ ಆಗಿರಬಹುದು. ಅಥವಾ ಅವರಲ್ಲಿ ಒಬ್ಬನೇ ವ್ಯಕ್ತಿ ಅಥವಾ ಒಂದು ಸಂಸಾರವೇ ಏಕಕಾಲಕ್ಕೆ ಶೈವ ಮತ್ತು ವೈಷ್ಣವ ಆಗಿರುವುದು ಸಾಧ್ಯ. ಏಕೆಂದರೆ ಒಕ್ಕಲಿಗ ಎಂಬುದು ಮತವಲ್ಲ, ಒಂದು ಜಾತಿ. ವೀರಶೈವ ಎಂಬುದು ಒಂದು ಖಚಿತವಾದ ಮತ. ದೈವ, ಲಾಂಛನ, ಧಾರ್ಮಿಕ ಗ್ರಂಥ, ಆಚರಣೆ, ತತ್ತ್ವ ಇವೆಲ್ಲ ಬಹುಮಟ್ಟಿಗೆ ನಿರ್ದಿಷ್ಟ. ಹೀಗಿರುವಾಗ, ಯಾವ ವೈಷ್ಣವಧರ್ಮಕ್ಕೆ ವಿರೋಧವನ್ನು ತೋರಿಸಿತೋ ಆ ಮತದಲ್ಲೇ ಕೆಲವರು ಏಕಕಾಲಕ್ಕೆ ಶೈವರೂ ವೈಷ್ಣವರೂ ಆಗಿರುವುದು ಒಂದು ಅತ್ಯಂತ ವಿಚಿತ್ರ ಸಂಗತಿ. ಸಮಾಜಶಾಸ್ತ್ರಜ್ಞರು ಈ ವಿಚಿತ್ರ ಸನ್ನಿವೇಶಕ್ಕೆ ಏನು ಹೆಸರಿಡುತ್ತಾರೋ ತಿಳಿಯದು. ಅವರು ಈ ಕಡೆ ಗಮನಹರಿಸಿ ಹೆಚ್ಚಿನ ಕಾರ್ಯವನ್ನು ಮಾಡಲವಕಾಶವಿದೆ. ಹಿಂದೂಧರ್ಮದ ಒಂದು ವಿಶಿಷ್ಟ ಲಕ್ಷಣವೆಂದರೆ ಎಲ್ಲವನ್ನೂ ಒಳಗೊಳ್ಳುವುದು. ಅಲ್ಲಿ ತನಗೆ ವಿರುದ್ಧವಾದ ತತ್ತ್ವಗಳಿಗೂ ಒಂದು ಸ್ಥಾನವಿದ್ದೇ ಇದೆ. (ಉದಾ : ಚಾರ್ವಾಕದರ್ಶನ). ಈ ಗುಣ ವೀರಶೈವದಂತಹ ಒಂದು ಪ್ರತಿಭಟನಾತ್ಮಕಮತದಲ್ಲೂ ಕಂಡುಬರುವುದು ಅತ್ಯಂತ ಸ್ವಾರಸ್ಯವಾಗಿದೆಯೆಂಬಲ್ಲಿ ಸಂದೇಹವಿಲ್ಲ.

ಸಾವಿನ ವಿಚಾರದಲ್ಲಿ ಸ್ಪೇನ್ ದೇಶದ ಒಂದು ಗಾದೆ ಇದು–ರಂಗಭೂಮಿಯ ಮೇಲೆ ಪ್ರಥಮ ಪ್ರವೇಶದಲ್ಲಿ ದೊರೆಯುವ ಪ್ರಶಂಸೆಗಿಂತ ನಾಟಕದ ಕೊನೆಯಲ್ಲಿ ನಿರ್ಗಮಿಸುವ ದೃಶ್ಯದಲ್ಲಿ ದೊರೆವ ಪ್ರಶಂಸೆಯೇ ಹೆಚ್ಚು ಮಹತ್ವ ಉಳ್ಳದ್ದು.

ಜಿ. ನಾರಾಯಣ

ದೇವನೊಬ್ಬ—ನಾಮ ಹಲವು

ದೇವನೊಬ್ಬನೇ ಎಂಬ ಭಾವನೆ ಎಲ್ಲ ಮತಗಳ ಮೂಲತತ್ತ್ವವಾಗಿದೆ. ಪ್ರಪಂಚದ ಎಲ್ಲ ಆಗುಹೋಗುಗಳಿಗೆ ಕಾರಣಕರ್ತನಾಗಿರುವ ಶಕ್ತಿ ಒಂದಲ್ಲದೆ ಹಲವಾಗಿರಬೇಕೆಂಬ ಆಲೋಚನೆ ಕೂಡ ನಮಗೆ ವಿಚಿತ್ರವಾಗಿ ಕಾಣಬೇಕು. ಯಾರೇ ಆಗಲೀ ತಮ್ಮ ಅಭಿಮಾನ, ಭಕ್ತಿ, ಶ್ರದ್ಧೆ, ನಂಬಿಕೆ ಮುಂತಾದುವುಗಳನ್ನೆಲ್ಲ ಒಟ್ಟುಗೂಡಿಸಿ ಪೂಜೆ ಮಾಡುವುದು ಒಂದೇ ಒಂದು ದೇವತೆಯನ್ನೇ. ಆದರೆ ಆಯಾ ಜನಾಂಗದ, ಆಯಾ ಮತದ, ಆಯಾ ದೇಶದ ಜನ ಅದೇ ಮೂಲತತ್ತ್ವವನ್ನೂ ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ ಅಷ್ಟೆ.

ಈ ವಿಚಾರವು ಇಷ್ಟು ಸುಲಭಗ್ರಾಹ್ಯವಾಗಿದ್ದರೂ ಇದರ ವಿಚಾರವಲ್ಲಿರುವಷ್ಟು ಅಜ್ಞಾನ ಮತ್ತಾವ ವಿಷಯವಲ್ಲಿಯೂ ಪ್ರಕಟವಾಗಿಲ್ಲ. ನಾನು ಪೂಜಿಸುವ ದೈವವೇ ಸರ್ವೋತ್ತಮವಾದುದು, ಮಿಕ್ಕೆಲ್ಲ ದೇವತೆಗಳೂ ಕೀಳು ಎಂಬ ಭಾವನೆಯ ಹಿಂದೆ ಇರುವುದು ಮುಖ್ಯವಾಗಿ ಅಜ್ಞಾನ, ಮೌಢ್ಯ. ಅದನ್ನು ಗುರುತಿಸುವ ಶಕ್ತಿ ಬರಬೇಕಾದರೆ ಈ ಮೌಢ್ಯ ತೊಲಗಬೇಕು. ಇದಕ್ಕೆ ಚಿಂತನೆ ಅತಿ ಅಗತ್ಯವಾಗಿದೆ.

ದೇವರು ಎಂದರೆ ಏನು ? ಈ ಪ್ರಶ್ನೆಗೆ ಉತ್ತರ ಎಂದೂ ಸರ್ವಸಮರ್ಪಕವಾಗಿರುವುದಿಲ್ಲ. "ದೇವರು ಇದ್ದಾನೆ" ಎಂಬ ಬಗ್ಗೆ ಮಾತ್ರ ಸಾರ್ವತ್ರಿಕವಾದ ಸಮ್ಮತಿ ಇರುವುದು ಕಂಡುಬರುತ್ತದೆ. ಇದನ್ನೂ ವಿರೋಧಿಸುವವರೂ ಇಲ್ಲದಿಲ್ಲ. ಆದರೆ ಅವರ ಸಂಖ್ಯೆ ಕಡಮೆ.

ದೇವರ ಬಗ್ಗೆ ಸತ್ಯವೇನೆಂಬುದು ದೇವರಿಗೇ ಗೊತ್ತು. ನಮ್ಮ ಅಲ್ಪಜ್ಞಾನದಲ್ಲಿ ನಾವು ಆ ದೈವ ತತ್ತ್ವದ ಕಡೆಗೆ ಕೆಲವು ತೋರ್ಗುರುತುಗಳನ್ನು ಮಾತ್ರ ಹೇಳಬಹುದು. ನಮ್ಮ ವೇದಗಳು, ಇತರ ದೇಶಗಳ ಪವಿತ್ರಗ್ರಂಥಗಳು, ಎಲ್ಲ ದೇಶಗಳ ಸಾಧುಸಂತರು ದೇವರನ್ನು ಕುರಿತ ಅನೇಕ ಬಗೆಯಲ್ಲಿ ವರ್ಣನೆಗಳನ್ನು ಮಾಡಿದ್ದಾರೆ. ಈ ವರ್ಣನೆಗಳಿಗೆ ಇನ್ನೂ ಮುಕ್ತಾಯವೆಂಬುದು ಉಂಟಾಗಿಲ್ಲ. ಆದುದರಿಂದ ಈ ವರ್ಣನೆಗಳ ಮೂಲಕ ನಾವು ದೇವರ ಸ್ವರೂಪ ನಿರ್ಧಾರ ಮಾಡುವುದು ಕಷ್ಟ. ಈ ಕಾರಣಕ್ಕಾಗಿಯೇ ಬಹುಜನರು ದೇವರನ್ನು ಒಂದು ಪ್ರತೀಕದ ಮೂಲಕ ಸಾಕ್ಷಾತ್ಕರಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ದೈವಶಕ್ತಿಗೂ ಇದೇ ಪ್ರಿಯವಾಗಿರುವಂತೆ ಕಾಣುತ್ತದೆ. ಭಗವದ್ಗೀತೆಯಲ್ಲಿ ಬರುವ ಈ ಮಾತುಗಳನ್ನೆ ನಾವು ನೆನಪುಮಾಡಿಕೊಳ್ಳಬಹುದು.

> ಮಯ್ಯಾವೇಶ್ಯಮನೋ ಯೇ ಮಾಂ ನಿತ್ಯಯುಕ್ತಾ ಉಪಾಸತೇ
> ಶ್ರದ್ಧಯಾ ಪರಯೋಪೇತಾಸ್ತೇ ಮೇಯುಕ್ತತಮಾ ಮತಾಃ ।

ಪೂರ್ಣಶ್ರದ್ಧೆಯಿಂದ ನನ್ನನ್ನು ಪ್ರಾರ್ಥಿಸಿ ನನ್ನಲ್ಲಿ ಮನಸ್ಸಿಟ್ಟು ಪೂಜಿಸುವವರೇ ಅತ್ಯುತ್ತಮರಾದ ಯೋಗಿಗಳು ಎಂಬುದು ಈ ಮಾತಿನ ಅಭಿಪ್ರಾಯ.

ಹಿಂದೂ ಮತದಲ್ಲಿ 'ಓಂ'ಕಾರಕ್ಕೆ ಬಹು ಮಹತ್ವವಿದೆ. ಮಹರ್ಷಿ ಪತಂಜಲಿಯು ತನ್ನ ಯೋಗ ದರ್ಶನವೆಂಬ ಗ್ರಂಥದಲ್ಲಿ "ತಸ್ಯ ವಾಚಕಃ ಪ್ರಣವಃ ತಜ್ಜಪಃ ತದರ್ಥಭಾವನಂ" ಎಂದು ವಿವರಿಸಿದ್ದಾನೆ. ಓಂಕಾರವು ದೈವಪ್ರತೀಕ. ಅದನ್ನೇ ಜಪಿಸಬೇಕು. ಅದನ್ನೇ ಕುರಿತು ಚಿಂತಿಸಬೇಕು. ಇತರ ಮತಗಳಲ್ಲಿಯೂ ಹೀಗೆಯೇ ಜಪ, ಚಿಂತನೆಗಳ ಸ್ವರೂಪ ನಿರೂಪಣೆಯಿದೆ. ಈ ಎಲ್ಲ ಪ್ರತೀಕಗಳ, ಎಲ್ಲ ಜಪಮಂತ್ರಗಳ, ಎಲ್ಲ ಚಿಂತನಮಾರ್ಗಗಳ ಪೂರ್ಣಜ್ಞಾನ ಯಾರೊಬ್ಬರಿಗೂ ಸುಲಭ ಸಾಧ್ಯವಲ್ಲ. ಆದುದರಿಂದಲೇ ಮತಾಚಾರ್ಯರು ನಮಗೆ ಆಗಾಗ ನೆನಪು ಮಾಡುತ್ತಾರೆ. "ದೇವನೊಬ್ಬ—ನಾಮ ಹಲವು".

ಬಸವಣ್ಣನವರ ಈ ಮಾತಿನ ಮುಂದಿನ ಭಾಗವೂ ಕೂಡ ಅರ್ಥಪೂರ್ಣವಾಗಿದೆ. ಆ ವಚನವನ್ನೇ ಪೂರ್ತಿ ಗಮನಿಸುವುದು ಒಳ್ಳೆಯದು.

"ದೇವನೊಬ್ಬ ನಾಮ ಹಲವು
ಪರಮ ಪತಿವ್ರತೆಗೆ ಗಂಡನೊಬ್ಬ
ಮತ್ತೊಂದಕ್ಕೆರಗಿದರೆ
ಕಿವಿಮೂಗ ಕೊಯ್ವನು
ಹಲವು ದೈವದ ಎಂಜಲ
ತಿಂಬುವರನೇನೆಂಬೆ ಕೂಡಲಸಂಗಮದೇವ"

ದೈವ ಸಾಕ್ಷಾತ್ಕಾರಕ್ಕೆ ನಮಗೆ ಈ "ದೇವನೊಬ್ಬ ನಾಮ ಹಲವು" ತಿಳಿವಳಿಕೆ ಅತಿ ಅಗತ್ಯವಾಗುತ್ತದೆ.

ಭಾರತ ಹಲವು ಮತಗಳ ಕಣಜ. ಎಲ್ಲ ಮತಗಳ ಉದಾತ್ತಭಾವಗಳನ್ನೂ ಭಾರತದ ಚೈತನ್ಯ ಸ್ವಾಗತಮಾಡಿದೆ. ಅಲ್ಲದೆ ಇತರ ಮತಗಳ ಮೇಲೆ ನಮ್ಮ ಆಂದೋಳನ ನಡೆಸಲು ಎಂದೂ ಮುಂದುವರಿದಿಲ್ಲ. ಇಂತಹ ವಿಶಾಲಮನೋಭಾವದ ಜನತೆಯಲ್ಲಿ ಇಂದಿಗೂ ಇದೇ ಸರ್ವೋತ್ಕೃಷ್ಟವಾದ ಮಾರ್ಗವೆಂಬ ಭಾವನೆ ವ್ಯಾಪಕವಾಗಿದೆ.

ದೇವರ ಹೆಸರಿನಲ್ಲಿ ದ್ವೇಷ, ಹೊಡೆದಾಟ ಸಲ್ಲದು. ಇದು ಪ್ರಗತಿಯಲ್ಲ, ವಿಗತಿ. ಸಾಕ್ಷಾತ್ಕಾರ ಮಾರ್ಗ ವಲ್ಲ, ತಿರಸ್ಕಾರ ಮಾರ್ಗ.

ಮದ್ಭಕ್ತಾ ಯತ್ರ ಗಾಯಂತಿ ತತ್ರ ತಿಷ್ಠಾಮಿ ನಾರದ"

ಎಂಬುದು ಪರಮಾತ್ಮನ ದೃಷ್ಟಿಯೆಂದು ಭಕ್ತರು, ಸಂತರು ನುಡಿದಿದ್ದಾರೆ. ಪ್ರಾಚೀನಕಾಲದ ಸಂತರ ಮಾತುಗಳು ಈಗಿನ ಕಾಲದ ಸಂತರ ಮಾತಿಗೆ ವಿರೋಧವಾಗಿಲ್ಲ. ಮಹಾತ್ಮಾಗಾಂಧಿಯವರು ಪ್ರಾರ್ಥನೆ ಮಾಡಲಿಲ್ಲವೆ ?

"ಸಬಕೋ ಸನ್ಮತಿ ದೇ ಭಗವಾನ್"

ದೈವ ಸಾಕ್ಷಾತ್ಕಾರ ಹೇಗಾದರೂ ಇರಲಿ, ಸಾಮಾನ್ಯವಾದ ದೈನಂದಿನ ಜೀವನದಲ್ಲಿಯೂ ಈ ಭಾವನೆ ನಮಗೆ ಸುಖದಾಯಕವಾಗಿದೆ. ಅವರವರ ಪೂಜಾಕರ್ಮಗಳು ಅವರವರ ಅಂತರಂಗದ ವಿಚಾರ. ಅವರವರು ಅವರವರ ಅಂತರಂಗದ ನಂಬಿಕೆಗಳಿಗೆ ಬೇಕಾದ ಹೆಸರಿಟ್ಟು ಕರೆಯಲಿ. ಅದು ಮುಖ್ಯವಲ್ಲ. ಆ ಪೂಜೆಯ, ಆ ಜಪದ, ಆ ನಂಬಿಕೆಯ ಹಿಂದಿನ ಶುದ್ಧಚೇತನ ನಮಗೆ ಮುಖ್ಯ.

ಈಗಂತೂ ನಮಗೆ ಭಾರತಮಾತೆಯೇ ಪ್ರಧಾನ ದೇವತೆಯಾಗಿಬಿಟ್ಟಿದ್ದಾಳೆ. ಆಕೆಯ ಪ್ರಾರ್ಥನೆ, ಸೇವೆ, ಭಕ್ತಿಗಳಲ್ಲಿ ದುಡಿದರೆ, ನಮ್ಮ ಬಾಳು ಸಾರ್ಥಕ. ಚರ್ಚೆಯನ್ನು ಗಾಳಿಗೆ ತೂರಿ, ದುಡಿಮೆಯ ಮೂಲಕವೇ ನಾವು ನಮ್ಮ ದೇವರನ್ನೇ ತೃಪ್ತಿಪಡಿಸಬಹುದು.

ಎಂ. ವಿ. ಸೀತಾರಾಮಯ್ಯ

ಕನ್ನಡಸಾಹಿತ್ಯದಲ್ಲಿ ಮಾನವಭ್ರಾತೃತ್ವದ ಕಲ್ಪನೆ

ಇಂದಿನದು ವೈಜ್ಞಾನಿಕ ಯುಗ, ಯಂತ್ರಶಿಲ್ಪದ ಪವಾಡಗಳ ಯುಗ. ಭೌಗೋಳಿಕ ಎಲ್ಲೆಕಟ್ಟುಗಳು ಅಳಿಸಿಹೋಗಿವೆ. ಚಂದ್ರನ ಮೇಲೂ ಹೆಜ್ಜೆಯೂರಿದ್ದಾನೆ ಮಾನವ. ಮಾನವನ ಹೊರಮೈ ಬಣ್ಣ ಬೇರೆ ಬೇರೆಯಾದರೂ ಒಳಗಿನ ರಕ್ತ ಒಂದೇ ಎಂಬುದು ಕಣ್ಣು ಕಾಣುವ ಸತ್ಯಮಾತ್ರವಾಗಿರದೆ, ಜೈವಿಕಶಾಸ್ತ್ರ–ಸತ್ಯವೂ ಆಗಿದೆ. ಚಾರ್ಲ್ಸ್‌ಡಾರ್ವಿನ್ನನ ಪರಿಣಾಮವಾದ, ಭೌತಶಾಸ್ತ್ರಜ್ಞರ ಅಣುವಾದ – Atomic Theory – ಮತ್ತು ಸಾಪೇಕ್ಷ ಸಿದ್ಧಾಂತ – Theory of Relativity – ಇವೆಲ್ಲ ಭರತಖಂಡದ ಪ್ರಾಚೀನ ಮಹರ್ಷಿಗಳು ಕಂಡು ಸಾರಿದ ಜೀವಬ್ರಹ್ಮೈಕ್ಯ ವಾದವನ್ನು – ವಿಶ್ವೈಕ್ಯವಾದವನ್ನು – ಸಮರ್ಥಿಸಿವೆ.

ವಿಶ್ವ ಎರಡು ಮಹಾಯುದ್ಧಗಳ ಬಿಸಿಯುಂಡಿದೆ; ವಿಶ್ವದ ಸಾಮಾನ್ಯ ಜನ ಚಿರಕಾಲ ನಿಲ್ಲುವ ಶಾಂತಿಯ ತಂಪಿಗಾಗಿ ಹಂಬಲಿಸುತ್ತಿದೆ.

ವಿಶ್ವಶಾಂತಿಗೆ – ವಿಶ್ವಮೈತ್ರಿಗೆ – ಮಾನವಭ್ರಾತೃತ್ವಭಾವನೆ – ಮಾನವರೆಲ್ಲ ಒಂದೇ ಕುಲಕ್ಕೆ ಸೇರಿದ, ಒಬ್ಬಳೇ ನೆಲತಾಯಿ ಬಸಿರಿಂದ ಬಂದ ಮಕ್ಕಳು, ಅಣ್ಣತಮ್ಮಂದಿರು ಎಂಬ ಭಾವನೆ ನಮ್ಮ ಮನಸ್ಸಿನಲ್ಲಿ ಬಲಿಯಬೇಕು; ನುಡಿಯಲ್ಲಿ ಅರಳಿ ಪರಿಮಳಿಸಬೇಕು; ನಡೆಯಲ್ಲಿ ಹಣ್ಣಾಗಿ ಎಲ್ಲರಿಗೂ ರುಚಿಯೆನಿಸಬೇಕು.

ಮಾನವ ಕುಲದ ಉಳಿವಿಗೆ ಮಾನವ ಭ್ರಾತೃತ್ವದ ಸಿದ್ಧಿ – ಇದೊಂದೇ ದಾರಿ.

* * *

ನಮ್ಮ ಕನ್ನಡ ಜನ ಈ ದಾರಿಯನ್ನು ಗುರುತಿಸಿಕೊಂಡಿದ್ದಾರೆ; ಈ ದಾರಿಯಲ್ಲಿ ನಡೆದಿದ್ದಾರೆ; ಹೆಜ್ಜೆ ಗುರುತನ್ನು ಶಾಸನಗಳಲ್ಲಿ, ಕಾವ್ಯಗಳಲ್ಲಿ, ಗ್ರಂಥಗಳಲ್ಲಿ ಬಿಟ್ಟು ಹೋಗಿದ್ದಾರೆ. ವೇದ, ಪುರಾಣ, ಉಪನಿಷತ್ತು, ಭಗವದ್ಗೀತೆ, ರಾಮಾಯಣ, ಭಾರತ, ಭಾಗವತ ಮುಂತಾದ ದಿವ್ಯ ಗ್ರಂಥಗಳಲ್ಲಿ ತುಂಬಿ ತುಳುಕುವ ವಿಶ್ವಕಲ್ಯಾಣತೀರ್ಥ ಕನ್ನಡದ 'ಉದ್ಧರಣೆ'ಯಲ್ಲಿ ನಮಗೆ ದೊರಕುತ್ತಿದೆ.

ಮಾನವಭ್ರಾತೃತ್ವ ಸಿದ್ಧಿಸಬೇಕಾದರೆ —

'ಸರ್ವಂ ಖಲ್ವಿದಂ ಬ್ರಹ್ಮ'

ಎಂಬ ವೇದಾಂತವಾಣಿ ನಮಗೆ ಎಂದೂ ದೀಪದಂಡ. ಎಲ್ಲವೂ ಬ್ರಹ್ಮಮಯವಾಗಿರುವಾಗ, ಜಾತಿ ಮತ ಕುಲಗಳ ಮಾತಿರಲಿ, ಚೇತನ ಅಚೇತನ ಎಂಬ ಭೇದ ಭಾವಕ್ಕೂ ಎಡೆಯಿಲ್ಲ. ಇದು ಅದ್ವೈತ ಭಾವ; ಜೀವನ್ಮುಕ್ತನ ದೃಷ್ಟಿ. ಆರ್ಥಿಕ ಸಮಾನತೆ ಇಂದಿನ ಯುಗಧರ್ಮ; ಆಧ್ಯಾತ್ಮಿಕ ಸಮತಾ ದೃಷ್ಟಿ ನೆಲೆಗೊಳ್ಳದೆ,

ಆರ್ಥಿಕ ಸಮಾನತೆ ಊರ್ಜಿತವಾಗದು. ಮಾನವನ ಪೂರ್ಣವಿಕಾಸಕ್ಕೆ ಎರಡೂ ಅಗತ್ಯ. ಆಧ್ಯಾತ್ಮಿಕಸಮತೆಯನ್ನು, ೧೭ ನೆಯ ಶತಮಾನದ ಮಹಲಿಂಗರಂಗ ಮನೋಜ್ಞವಾಗಿ ನಮ್ಮ ಮುಂದಿಟ್ಟಿದ್ದಾನೆ :

"ಹಾವಿನಲಿ, ಹಾರದಲಿ, ಶಿಲೆಯಲಿ,
ಹೂವಿನಲಿ, ಹೆಂಟೆಯಲಿ, ಮಣಿಯಲಿ,
ಭಾವೆಯಲಿ, ತೃಣದಲ್ಲಿ, ಶತ್ರುವಿನಲ್ಲಿ ಮಿತ್ರರಲಿ
ಭಾವಭೇದವ ಬಿಟ್ಟು, ಸಮತೆಯ
ಸಾವಧಾನದಿ ವಿಹರಿಸುತ್ತಿಹ
ಪಾವನಾಶ್ರಮಗಳಲಿ ಜೀವನ್ಮುಕ್ತ ಕೇಳೆಂದ ॥

ಜೀವನ್ಮುಕ್ತನ ಈ ದೃಷ್ಟಿ ಲಭಿಸಬೇಕಾದರೆ ಸಂನ್ಯಾಸಿಯೇ ಆಗಬೇಕಾಗಿಲ್ಲ ; ಗೃಹಸ್ಥನಿಗೂ ಇದು ಸಾಧ್ಯ.

"ಆವನೊಬ್ಬ ಗೃಹಸ್ಥಧರ್ಮದಿ
ವ್ಯಾವಹಾರಿಕನಾಗಿ, ಮಿಗೆ ಸದ್
ಭಾವ ಶಮ ದಮ ಶಾಂತಿ ವೈರಾಗ್ಯಗಳನಳವಡಿಸಿ
ಜೀವ ಪರಮಾತ್ಮೈಕ್ಯಪದವನು
ಭಾವಿಸುತ್ತಹನವನೆ ಸಂನ್ಯಾ
ಸಾವಲಂಬನನವನೆ ಜೀವನ್ಮುಕ್ತ ನೋಡೆಂದ."

ಪ್ರತಿಯೊಬ್ಬ ಗೃಹಸ್ಥನೂ ಇಂತಹ ಅಂತರಂಗ ಸಂನ್ಯಾಸವನ್ನು ಸಾಧಿಸಬೇಕು. ಕನ್ನಡ ಸಾಹಿತ್ಯದಲ್ಲಿ ಉನ್ನತ ಸ್ಥಾನವನ್ನು ಪಡೆದಿರುವ ಪಂಪಾದಿ ಕವಿಗಳೂ, ಬಸವೇಶ್ವರರೇ ಮೊದಲಾದ ಶಿವಶರಣರೂ, ಪುರಂದರದಾಸರೇ ಮುಂತಾದ ಹರಿದಾಸರೂ ಇಂತಹ ಜೀವನ್ಮುಕ್ತರಾಗಿದ್ದರು. 'ಉದಾರಚರಿತಾನಾಂ ತು ವಸುಧೈವ ಕುಟುಂಬಕಂ' ಎಂಬ ವಿಶ್ವವಿಶಾಲವಾದ ಮನೋಭಾವ ಅಳವಡಬೇಕಾದರೆ ಅಂತರಂಗಶುದ್ಧಿ ಅಗತ್ಯ. ಅಂತರಂಗದಲ್ಲಿ ಉದಾರತೆಯಿಲ್ಲದೆ, ಬಾಹ್ಯದಲ್ಲಿ ಮಾತ್ರ ಹೇಗೆ ಸಾಧ್ಯ? ಎಲ್ಲರನ್ನೂ ಅಣ್ಣತಮ್ಮಂದಿರಂತೆ ಕಾಣಿ ಎಂದು ಹೇಳುವುದು ಸುಲಭ ; ಆಚರಿಸುವುದು ಕಷ್ಟ. ಪುರಂದರದಾಸರು ಹೇಳುವಂತೆ, 'ಮನದ ಮುಸುರೆ' ಯನ್ನು ತೊಳೆಯುವುದೆ ಅಂತರಂಗ ಶುದ್ಧಿ, ಬಸವಣ್ಣನವರು ಇನ್ನೂ ಸ್ಪಷ್ಟವಾಗಿ ವಿವರಿಸಿದ್ದಾರೆ :

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ...."

ಪಂಪಕವಿ ಅಂತರಂಗ ಶುದ್ಧಿಯನ್ನು ಸಾಧಿಸಿ ಉದಾರ ಚರಿತನಾಗಿದ್ದವನು ಎಂದೇ,

"ಮನುಷ್ಯಜಾತಿ ತಾನೊಂದೆ ವಲಂ"

ಎಂದು ನುಡಿಯಬಲ್ಲವನಾಗಿದ್ದನು. ಈ ಮಾತು ಬರುವ ಸಂದರ್ಭವೂ ಗಮನಾರ್ಹ :

ಆದಿಪುರಾಣದಲ್ಲಿ, ಭರತಚಕ್ರವರ್ತಿ ಸಮಾಜದ ವ್ಯವಹಾರವ್ಯವಸ್ಥೆಗೋಸ್ಕರ ವ್ರತನಿಷ್ಠರನ್ನು ಪ್ರತ್ಯೇಕಿಸಿ, ವಿಪ್ರಕುಲವನ್ನು ನಿಯೋಜಿಸುತ್ತಾನೆ. ಆ ಸಂದರ್ಭದಲ್ಲಿ ಭರತನೆನ್ನುವ ಮಾತು :

"ಆಱುಂ ವೃತ್ತಿಗಳನಿವಂ
ಮೀಱುದರಲ್ಲರ್ ದ್ವಿಜನ್ಮರ್ ; ಈ ವೃತ್ತಿಗಳಿಂ

ಬೇಱಾದರ್ ದ್ವಿಜರ್ ; ಉಂತೇಂ
ಬೇಱುಂಟೆ ? ಮನುಷ್ಯಜಾತಿ ತಾನೊಂದೆ ವಲಂ."*

ಪರ್ವದಿನಗಳಲ್ಲಿ ಜೀವಸಂಕುಲವುಳ್ಳ ಹೂ ಹಣ್ಣು ಚಿಗುರುಗಳನ್ನು ಕೂಡ ತುಳಿಯಲೊಲ್ಲದ ವ್ರತನಿಷ್ಠರನ್ನು ಅವರ ಸದ್ವೃತ್ತಿಯ ಕಾರಣದಿಂದ ದ್ವಿಜರೆಂದು ಬೇರ್ಪಡಿಸಲಾಯಿತೆ ಹೊರತು, ಭರತನ ಅರ್ಥಾತ್ ಪಂಪನ ದೃಷ್ಟಿಯಲ್ಲಿ, ಮನುಷ್ಯಜಾತಿಯೆಲ್ಲ ಒಂದೆ. ಭಗವದ್ಗೀತೆಯ ಮಾತೂ ಇದೆ :

"ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣ ಕರ್ಮ ವಿಭಾಗಶಃ"

ಕಾಲಕ್ರಮದಲ್ಲಿ ಈ ಉಕ್ತಿಯ ನಿಜವಾದ ಅರ್ಥ ನಾಶವಾಗಿ, ಹುಟ್ಟಿನಿಂದ ನಿರ್ಧಾರವಾಗುವ ನಾಲ್ಕು ವರ್ಣಗಳ ಉಕ್ಕಿನಗೋಡೆಯ ಕೋಟೆಗಳೂ, ಅದರೊಳಗಿನ ಜಾತಿ ಉಪಜಾತಿಗಳೂ, ಪೂಜಿಸುವ ದೇವರ ಹೆಸರಿನಲ್ಲಿ ಮತಧರ್ಮದ ಹೆದ್ದಾರಿ ಕವಲುದಾರಿಗಳೂ ಕಲ್ಪಿತವಾದವು. ಬಸವಣ್ಣನವರ ಕಾಲಕ್ಕೆ ಮುಂಚೆಯೇ ಚತುರ್ವರ್ಣಗಳೊಂದಿಗೆ ಪಂಚಮವರ್ಣವೂ ಹುಟ್ಟಿಕೊಂಡು ಸಮಾವೇಶವಾಗಿತ್ತು. ಬಸವಣ್ಣನವರ ಮುಂದಾಳುತನದಲ್ಲಿ ಶಿವಶರಣರು ಈ ಕೋಟೆಯ ಮೇಲೆ ದಾಳಿಮಾಡಿ ಸರ್ವಸಮಾನತೆಯ ಧ್ವಜವನ್ನು ಹಾರಿಸಿದರು :

"ಕೊಲ್ಲುವನೇ ಮಾದಿಗ, ಹೊಲಸು ತಿಂಬುವನೆ ಹೊಲೆಯ,
ಕುಲವೇನೋ, ಅವಂದಿರ ಕುಲವೇನೋ ? ಸಕಲ
ಜೀವಾತ್ಮರಿಗೆ ಲೇಸನೇ ಬಯಸುವ ನಮ್ಮ ಕೂಡಲ
ಸಂಗನ ಶರಣರೇ ಕುಲಜರು."
"ಕಾಸಿ ಕಮ್ಮಾರನಾದ, ಬೀಸಿ ಮಡಿವಳನಾದ,
ಹಾಸನಿಕ್ಕಿ ಸಾಲಿಗನಾದ, ವೇದವನೋದಿ
ಹಾರುವನಾದ....ಇದು ಕಾರಣ, ಕೂಡಲಸಂಗಮ
ದೇವಾ, ಲಿಂಗಸಂಗವನರಿತವನೆ ಕುಲಜನು"

ಎಂದು ಬಸವಣ್ಣನವರು ಸಾರಿ, ಕುಲಾಭಿಮಾನಕ್ಕೆ ಕೊಡಲಿಪೆಟ್ಟು ಕೊಟ್ಟರು.

ಇದಕ್ಕೂ ಮೊದಲೆ ಆದಿಕವಿ ಪಂಪ — ವಿಪ್ರಕುಲಾಭಿಮಾನಿಯಾದ ಪಂಪ — ಅರ್ಥವಿಲ್ಲದ ಕುಲಾಭಿಮಾನವನ್ನು ಪರ್ಯಾಯವಾಗಿ ಹೀಗಳೆದಿದ್ದ. ತನ್ನ ಸೂತಕುಲವನ್ನು ಎತ್ತಿ ಆಡಿದ್ದ ವಿಪ್ರರಾದ ದ್ರೋಣರಿಗೆ ಕರ್ಣನ ಕಿಡಿನುಡಿಯ ಉತ್ತರ ಪಂಪನ ಮನೋಭಾವದ ಪ್ರತೀಕವೂ ಹೌದು :

ಕುಲಮನೆ ಮುನ್ನಮುಗ್ಗಡಿಪಿರೇಂ ಗಳ ! ನಿಮ್ಮ ಕುಲಂಗಳಾಂತು ಮಾ-
ರ್ಮಲೆವನನ್ ಅಟ್ಟಿತಿಂಬುವೆ ? ಕುಲಂ ಕುಲಮಲ್ತು ! ಚಲಂ ಕುಲಂ, ಗುಣಂ
ಕುಲಂ, ಅಭಿಮಾನಮೊಂದೆ ಕುಲಂ, ಅಣ್ಮು ಕುಲಂ ಬಗೆವಾಗಳ್ ಈಗಳ್ ಈ
ಕಲಹದೊಳಣ್ಣ ನಿಮ್ಮ ಕುಲಮಾಕುಲಮಂ ನಿಮಗುಂಟುಮಾಡುಗುಂ

'ಹಿತಮಿತ ಮೃದುವಚನ' ನಾದ ಪಂಪ ಕೂಡ ಕುಲದ ಹಮ್ಮಿನ ಬಗೆಗೆ ಕೆರಳಿ ನುಡಿದಿದ್ದಾನೆ.

ಹರಿದಾಸರು ಸ್ವಧರ್ಮನಿಷ್ಠರಾದರೂ ಸಮಾಜವ್ಯವಸ್ಥೆಯಲ್ಲಿ ಕುಲಭೇದವನ್ನು ಸಹಿಸಿದವರಲ್ಲ. ಪುರಂದರದಾಸರು, "ಆವ ಕುಲವಾದರೇನು ಭಾವದ ವಿಜ್ಞಾನ ತಿಳಿದವನಿಗೆ ? ಅಸು ಡೊಂಕು ಕಬ್ಬು ಇರಲು ಅದರೊಳಗಿದ್ದ ರಸ ತಾನು ಡೊಂಕೇನೆಲೆ ಮರುಳೆ ? ನಾನಾ ವರ್ಣದ ಆಕಳ ಕ್ಷೀರದಲಿ ನಾನಾ ವರ್ಣಗಳಿಹುವೆ?

---

* ಈ ಮಾತು ಜಿನಸೇನರ ಪೂರ್ವಪುರಾಣದಲ್ಲಿಯೇ ಬಂದಿದೆ. ಆದರೂ ಕನ್ನಡದ 'ಆದಿಪುರಾಣ'ವನ್ನು ಇಡಿಯಾಗಿ ಒಂದು ಕವಿಕೃತಿ ಎಂದು ನಾವು ಸ್ವೀಕರಿಸಿರುವಾಗ, ಈ ಬಿಡಿಮಾತೂ ಕನ್ನಡ ಕವಿಯದು ಎಂದು ಭಾವಿಸಿದರೆ ತಪ್ಪಾಗದು.

ಶರಧಿಯೊಳು ತೆರೆನೊರೆಗಳಾಪರಿಯಂತೆ ಶರೀರವಲ್ಲದೆ ಬೇರಿಹುದೆ ?" ಎಂಬ ತತ್ತ್ವನಿಷ್ಠ ಪ್ರಶ್ನೆಗಳಲ್ಲಿಯೇ ಉತ್ತರವನ್ನೂ ಅಡಗಿಸಿದ್ದಾರೆ.

ಕುಲಾಭಿಮಾನದ ಕತ್ತಲೆಯನ್ನು ಚೆದರಿಸುವ ಕನಕದಾಸರ ಹಾಡು ಸುಪ್ರಸಿದ್ಧ :

ಕುಲ ಕುಲ ಕುಲವೆನ್ನುತಿಹರು
ಕುಲ ಯಾವುದು ಸತ್ಯಸುಖವುಳ್ಳ ಜನರಿಗೆ ‖ ಪ ‖
ಕೆಸರೊಳು ತಾವರೆ ಪುಟ್ಟಲು ಅದ ತಂದು
ಬಿಸಜನಾಭನಿಗರ್ಪಿಸಲಿಲ್ಲವೆ
ಹಸುವಿನ ಮಾಂಸದೊಳುತ್ಪತ್ತಿ ಕ್ಷೀರವು
ವಸುಧೆಯೊಳಗೆ ಭೂಸುರರುಣ್ಣಲಿಲ್ಲವೆ
ಮೃಗಗಳ ಮೈಯಲ್ಲಿ ಪುಟ್ಟಲು ಕಸ್ತೂರಿ
ತೆಗೆದು ಪೂಸುವರು ದ್ವಿಜರೆಲ್ಲರು
ಬಗೆಯಿಂದ ನಾರಾಯಣನಾವ ಕುಲವಯ್ಯ
ಜಗವಲ್ಲಭನಾವ ಕುಲ ಪೇಳಿರಯ್ಯ
ಆತ್ಮ ಯಾವ ಕುಲ ಜೀವ ಯಾವ ಕುಲ
ತತ್ತ್ವೇಂದ್ರಿಯಗಳ ಕುಲ ಪೇಳಿರಯ್ಯ
ಆತ ಮಹಾತ್ಮನು ನೆಲೆಯಾದಿ ಕೇಶವ
ಯಾತರ ಕುಲವಯ್ಯ ಆತನೊಲಿದಮೇಲೆ

ಕುಲ, ಗೋತ್ರ, ಜಾತಿ — ಇವಕ್ಕೆ ಅಂಟಿಕೊಂಡ ಅಭಿಮಾನಗಳನ್ನಾದರೂ ಬಿಡಬಹುದು. ಸಾಮಾನ್ಯ ಜನ ಮತಾಭಿಮಾನ ಧರ್ಮಾಭಿಮಾನಗಳಿಂದ ಇನ್ನೂ ಮುಕ್ತರಾಗಿಲ್ಲ. ತನ್ನ ಮತಧರ್ಮದ ಪ್ರೇಮ, ಅಭಿಮಾನಗಳು ನಿಂದ್ಯವಲ್ಲ ; ಪರಮತ ಪರಧರ್ಮಗಳ ದ್ವೇಷಗಳು ಮಾತ್ರ ಮಾನವಭ್ರಾತೃತ್ವಕಲ್ಪನೆಗೆ ಕಂಟಕಪ್ರಾಯ. ಮಾನವ ಕುಲಕ್ಕೆಲ್ಲ ಒಬ್ಬಳೇ ತಾಯಿ — ಪ್ರಕೃತಿ ಮಾತೆ ; ಒಬ್ಬನೇ ತಂದೆ — ಪರಮಾತ್ಮ, ಅಥವಾ ಜಗದೀಶ್ವರ-ಎಂಬ ಅರಿವು ಮೂಡಿ ನಿಚ್ಚಳ ನಿಲ್ಲಬೇಕು. ನಮ್ಮ ಋಷಿಗಳು, ಸಂತರು, ಕವಿಗಳು — ಈ ಅರಿವಿನ ನಂದಾದೀಪವನ್ನು ಹೊತ್ತಿಸಿಟ್ಟಿದ್ದಾರೆ. ಸರ್ವಧರ್ಮಸಮನ್ವಯಾಚಾರ್ಯರಾದ ರಾಮಕೃಷ್ಣ ಪರಮಹಂಸರು ಜನಿಸುವುದಕ್ಕೆ ಎಷ್ಟೋ ಶತಮಾನ ಪೂರ್ವದಲ್ಲಿಯೆ ಧರ್ಮಸಮನ್ವಯದೃಷ್ಟಿ ಕನ್ನಡ ನಾಡಿನಲ್ಲಿ ಮೆರೆದಿದೆ.

ಧರ್ಮಕರ್ಮ ಸಂಯೋಗದಿಂದ ಸರ್ವ ಧರ್ಮಗಳ ಕೂಡಲ ಸಂಗಮವಾಯಿತು ಕನ್ನಡನಾಡು ; 'ಸರ್ವ ಧರ್ಮ ನಿವಹಕ್ಕಾಡುಂಬೊಲ' ಎನಿಸಿತು. ಅಂದೂ ಹಾಗೆಯೆ ; ಇಂದೂ ಹಾಗೆಯೆ. ವಿಷ್ಣುಭಕ್ತಿಪಂಥಕ್ಕೂ ಶಿವಭಕ್ತಿಪಂಥಕ್ಕೂ ಘರ್ಷಣೆಯುಂಟಾದಾಗ, ಶಂಕರನಾರಾಯಣ, ಹರಿ-ಹರಮೂರ್ತಿ- ಈ ಭವ್ಯಕಲ್ಪನೆ ರೂಪ ಗೊಂಡಿತು. ದಾವಣಗೆರೆಯ ಶಾಸನವೊಂದು ಹರಿಹರಾಭೇದವನ್ನು ಹೀಗೆ ಕೊಂಡಾಡಿದೆ :

ಸಂದಶಿವಂಗೆ ವಿಷ್ಣುವಿನ ರೂಪಸಾದುದು, ವಿಷ್ಣುವಿಂಗೆ ಪೆಂ-
ಪೊಂದಿ ನೆಗೞ್ತೆವೆತ್ತ ಶಿವರೂಪವಾದುದು ವೇದವಾಕ್ಯದಿಂ-
ದೆಂದದನೆಯ್ದೆ ನಿಶ್ಚಯಿಸುವಂತಿರೆ ಕೂಡಲೊಳೇಕ ಮೂರ್ತಿಯಿಂ
ನಿಂದ ಜಗನ್ನುತ ಹರಿಹರಂ ಪರಿರಕ್ಷಿಸುತಿರ್ಕೆ ಧಾತ್ರಿಯಂ.

ಧರ್ಮಸಹಿಷ್ಣುತೆಯ ವಿಶ್ವವಿಶಾಲ ಮನೋಭೂಮಿಕೆ ಬಹು ಪ್ರಾಚೀನಕಾಲದಿಂದಲೂ ಕನ್ನಡ ನಾಡಿನಲ್ಲಿ ಏರ್ಪಟ್ಟಿದೆ. ಕನ್ನಡದ ಆದ್ಯಗ್ರಂಥವಾದ ಕವಿರಾಜಮಾರ್ಗದಲ್ಲಿ ಅದರ ಕವಿ — "ಕಸವರಮೆಂಬುದು ನೆಱೆ ಸೈರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ" — ಎಂದು ೯ನೆಯ ಶತಮಾನವನ್ನು ಹಿಂದೆಯೇ

ಘೋಷಿಸಿದ್ದಾನೆ. ಪ್ರಜಾಪ್ರಭುತ್ವದ ಮೂಲಸೂತ್ರಗಳು ಇವೇ ತಾನೆ? ವಿಚಾರಸ್ವಾತಂತ್ರ್ಯ, ಮತ್ತು ಧಾರ್ಮಿಕಸ್ವಾತಂತ್ರ್ಯ.

ಸರ್ವಧರ್ಮಗಳೂ ಸಮಾನ ಎಂಬ ಭಾವನೆ ಜನಮನದಲ್ಲಿ ಬೇರೂರದೆ, ವಿಶ್ವಮಾನವಭ್ರಾತೃತ್ವ ಕಲ್ಪನೆ ಬೆಳೆಯಲಾರದು. ಹೊಯ್ಸಳರ ಕಾಲದ ಬೇಲೂರಿನ ಒಂದು ಶಾಸನ ಸರ್ವಧರ್ಮಸಮನ್ವಯದೃಷ್ಟಿಯನ್ನು ನಮ್ಮ ಮುಂದೆ ಇಟ್ಟಿರುವ ಬಗೆ ಬಂಧುರವಾಗಿದೆ :

ಯಂ ಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾಃ
ಅರ್ಹನ್ನಿತ್ಯಥ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ
ಸೋsಯಂ ವೋ ವಿದಧಾತು ವಾಂಛಿತಫಲಂ ಶ್ರೀ ಕೇಶವೇಶಸ್ಸದಾ.

'ದೇವನೊಬ್ಬ ನಾಮ ಹಲವು' — ಇದೇ ನಿಜದ ನಿಲವು. ಕನ್ನಡನಾಡಿನಲ್ಲಿ, ಒಂದೇ ಕುಟುಂಬದಲ್ಲಿ ಬೇರೆ ಬೇರೆ ಧರ್ಮಾನುಯಾಯಿಗಳಿದ್ದುಕೊಂಡು, ತಮ್ಮ ತಮ್ಮ ದರ್ಶನದಂತೆ ದೇವತಾರಾಧನೆ ಮಾಡುತ್ತಿದ್ದರು ಎಂಬುದಕ್ಕೆ ಕನ್ನಡ ಶಾಸನಸಾಹಿತ್ಯದಲ್ಲಿ, ಕಾವ್ಯಗಳಲ್ಲಿ ನಿದರ್ಶನಗಳಿವೆ. ಕುಟುಂಬದಲ್ಲಿ ಸಾಧ್ಯವಾದ ಸಾಮರಸ್ಯ ಕೇರಿಯಲ್ಲಿ, ಊರಿನಲ್ಲಿ, ರಾಜ್ಯದಲ್ಲಿ, ರಾಷ್ಟ್ರದಲ್ಲಿ, ವಿಶ್ವದಲ್ಲಿ ಸಾಧ್ಯವಾಗದೆ? ಸಾಧ್ಯವಾಗಬೇಕು. ಧಾರ್ಮಿಕ ಸಾಮರಸ್ಯ ಸಿದ್ಧಿಸದೆ ವಿಶ್ವಕೌಟುಂಬಿಕಭಾವನೆ ಬೆಳೆಯದು. ಈ ವಿಚಾರದಲ್ಲಿ ವಿಜಯನಗರದ ಅರಸರು ಹಿರಿಯ ಆದರ್ಶವನ್ನು ಬಿಟ್ಟು ಹೋಗಿದ್ದಾರೆ. ಕ್ರಿ. ಶ. ೧೩೬೮ರ ಬುಕ್ಕರಾಯನ ಶಾಸನದಲ್ಲಿ —

"....ಶ್ರೀ ವೀರ ಬುಕ್ಕರಾಯನು ಪೃಥ್ವಿರಾಜ್ಯವ
ಮಾಡುವಲ್ಲಿ, ಜೈನರಿಂಗೂ ಭಕ್ತರಿಂಗೂ ಸಂವಾದವಾದಲ್ಲಿ,
....ಭಕ್ತರು ಮಾಡುವ ಅನ್ಯಾಯಂಗಳನು ಬಿನ್ನಹಂ
ಮಾಡಲಾಗಿ....ಹದಿನೆಂಟುನಾಡ
ಶ್ರೀ ವೈಷ್ಣವರ ಕೈಯಲು ಮಹಾರಾಯನು ವೈಷ್ಣವರ
ದರ್ಶನಕ್ಕೆಯೂ ಜೈನದರ್ಶನಕ್ಕೆಯೂ ಭೇದವಿಲ್ಲ
ವೆಂದು ರಾಯನು ವೈಷ್ಣವರ ಕೈಯಲು ಜೈನರ
ಕೈವಿಡಿದುಕೊಟ್ಟು... ಜೈನದರ್ಶನಕ್ಕೆ ಭಕ್ತರ
ದೆಸೆಯಿಂದ ಹಾನಿವೃದ್ಧಿಯಾದರೂ ವೈಷ್ಣವಹಾನಿ
ವೃದ್ಧಿಯಾಗಿ ಪಾಲಿಸುವರು"—...

ಎಂಬ ಅಭಯಪ್ರದಾನದ ಉಲ್ಲೇಖವಿದೆ.

ಧರ್ಮಸಮದೃಷ್ಟಿಯನ್ನು ಸಾರುವ ದೃಷ್ಟಾಂತಗಳಿಗೆ ಪ್ರಾಚೀನ ಕನ್ನಡಸಾಹಿತ್ಯದಲ್ಲಿ ಕೊರತೆಯಿಲ್ಲ. ನಿತ್ಯಸತ್ಯವನ್ನು ಬೆಳಗುವ ಮುಪ್ಪಿನ ಷಡಕ್ಷರಿಯ ಈ ಹಾಡಿಗೂ ಮುಪ್ಪಿಲ್ಲ :

ಸಕಲಕೆಲ್ಲಕೆ ನೀನೆ ಅಕಳಂಕ ಗುರುವೆಂದು ।
ನಿಖಿಳ ಶಾಸ್ತ್ರವು ಪೇಳುತಿರಲರಿದೆನು ॥

ಅವರವರ ದರುಶನಕೆ ಅವರವರ ವೇಷದಲಿ ।
ಅವರವರಿಗೆಲ್ಲ ಗುರು ನೀನೊಬ್ಬನೇ ॥

ಅವರವರ ಭಾವಕ್ಕೆ ಅವರವರ ಅರ್ಚನೆಗೆ ।
ಅವರವರಿಗೆಲ್ಲ ದೇವ ನೀನೊಬ್ಬನೇ ॥

ಹೋರಾಟವಿಕ್ಕಿಸಲು ಬೇರಾದೆಯಲ್ಲದೆ ।
ಬೇರುಂಟೆ ಜಗದೊಳಗೆ ಎಲೆ ದೇವನೇ ॥

ಯಾರು ಅರಿಯರು ನೀನು ಬೇರಾದ ಪರಿಗಳನು ।
ಮಾರಾರಿ ಶಿವ ಷಡಕ್ಷರಿ ಲಿಂಗವೇ ॥

ಸಾರೋದ್ಧಾರವಾಗಿ ಸಾಗಿಬರುತ್ತಲೇ ಇದೆ, ಕನ್ನಡನಾಡಿನಲ್ಲಿ, ಮಾನವಭ್ರಾತೃತ್ವಪೋಷಕವಾದ ನೀತಿಗಳನ್ನುಳ್ಳ ಈ ದಿವ್ಯಸಂದೇಶ. ಆದರೆ, ಮನುಷ್ಯಸ್ವಭಾವ ಸುಲಭವಾಗಿ ತಿದ್ದುವುದಿಲ್ಲ. ಕಾಲಕಾಲಕ್ಕೆ ಜಾತಿ ಮತ ಕುಲಭೇದಗಳ ವಿಷದ ಬಳ್ಳಿ ಹುಟ್ಟಿಕೊಳ್ಳುತ್ತಲೆ ಇರುತ್ತದೆ; ಅದನ್ನು ಕತ್ತರಿಸುವ ಮಹನೀಯರೂ ಹುಟ್ಟಿಕೊಳ್ಳುತ್ತಿರುತ್ತಾರೆ. ಶಿವಶರಣರ ಕಾಲದಲ್ಲಿ ಹರಿದಾಸರ ಕಾಲದಲ್ಲಿ ಭೇದಭಾವ ಉಗ್ರವಾಗಿತ್ತೆಂದು ಕಾಣುತ್ತದೆ.

ಸರ್ವಜ್ಞನ ಕಾಲದಲ್ಲಿಯೂ ಜಾತಿಯ, ಮತಭೇದಗಳ ಹಾವಳಿ ಇದ್ದಿರಬೇಕು. ಅದಕ್ಕೆ ಅವನ ವಚನಗಳೇ ಸಾಕ್ಷಿ:

ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು
ಸುಡುವಗ್ನಿಯೊಂದೆ — ಇರುತಿರಲು ಕುಲಗೋತ್ರ
ನಡುವೆ ಎತ್ತಣದು ? ಸರ್ವಜ್ಞ.

ಕನ್ನಡ ಜನಕ್ಕೆ ಮಾತ್ರವಲ್ಲ, ಸಕಲ ವಿಶ್ವಕ್ಕೂ ಅನ್ವಯಿಸುವ ಮಾತಿದು.

*   *   *

ಜಾತಿ ಮತ ಕುಲಭೇದ ಭಾವನೆಗಳು ನಮ್ಮ ಸಮಾಜದಲ್ಲಿ ಎಂದಿನಿಂದಲೂ ಇದ್ದವೇ. ಇದನ್ನು ಹೋಗಲಾಡಿಸಿ ಮಾನವಜಾತಿಯ ಏಕತ್ವವನ್ನು ಸ್ಥಾಪಿಸಲು ಪ್ರಾಚೀನ ಕನ್ನಡಕವಿಗಳು ಹೇಗೆ ಯತ್ನಿಸಿದರು ಎಂಬುದನ್ನು ಈ ವರೆಗೆ ಪರಿಶೀಲಿಸಿದ್ದೇವೆ. ಅನೇಕ ಶತಮಾನಗಳ ಹಿಂದೆಯೇ ಮಹಮ್ಮದೀಯಧರ್ಮ ನಮ್ಮ ದೇಶಕ್ಕೆ ಕಾಲಿಟ್ಟಿತು; ಅನಂತರ ಕ್ರೈಸ್ತಧರ್ಮ. ಹೀಗೆ, ಬ್ರಿಟಿಷರು ಭರತಖಂಡವನ್ನು ಆಳತೊಡಗಿದಾಗ ನಮ್ಮ ದೇಶದ ಧಾರ್ಮಿಕಸಮಸ್ಯೆ ಇನ್ನಷ್ಟು ಜಟಿಲವಾಯಿತು. ಒಡೆದು ಆಳುವ ತಮ್ಮ ರಾಜಕೀಯನೀತಿಗೆ ಅನುಗುಣವಾಗಿ ಬ್ರಿಟಿಷರು ಭಾರತೀಯರ ಜಾತೀಯ ಮತೀಯ ಭಾವನೆಗಳಿಗೆ ಪುಟಕೊಟ್ಟರು. ಹಿಂದೂ ಮುಸಲ್ಮಾನ, ಸವರ್ಣೀಯ ಅವರ್ಣೀಯ, ಬ್ರಾಹ್ಮಣ ಬ್ರಾಹ್ಮಣೇತರ ಮುಂತಾದ ದ್ವೈಧೀಭಾವ ಪ್ರತ್ಯಯಗಳು ಜನಮನದಲ್ಲಿ ಬೆಳೆದು ಬಲಿಯಲು ಬೇಕಾದ್ದನ್ನೆಲ್ಲ ಮಾಡಿದರು. ಸ್ವಾತಂತ್ರ್ಯಹೋರಾಟದ ಕಾಲದಲ್ಲಿ ಭಾರತೀಯರನ್ನು ಸಂಘಟಿಸುವ ಕಾರ್ಯದ ಅಂಗವಾಗಿ ಈ ಭೇದಭಾವನೆಗಳ ಕೃತಕತೆಯನ್ನು ರಾಷ್ಟ್ರನಾಯಕರು ಎತ್ತಿ ತೋರಿಸಿದರು. ಕ್ರಮಕ್ರಮವಾಗಿ ಹರಡುತ್ತಿದ್ದ ಆಂಗ್ಲ ವಿದ್ಯಾಭ್ಯಾಸದ ಪರಿಣಾಮ ಫಲವಾದ ವಿಚಾರಬುದ್ಧಿ, ವೈಜ್ಞಾನಿಕ ದೃಷ್ಟಿ, ವಿದ್ಯಾವಂತ ವರ್ಗದ ಕಣ್ಣು ತೆರೆಯಿಸಿ, ಸಮಾಜದ ಲೋಪದೋಷಗಳತ್ತ ಅವರ ಚಿಕಿತ್ಸಕದೃಷ್ಟಿಯನ್ನು ಹಾಯಿಸಿತು.

ಇದೇ ವೇಳೆಗೆ, ರಷ್ಯದ ಕ್ರಾಂತಿಯ ಪ್ರಭಾವವೂ ನಮ್ಮ ದೇಶದಲ್ಲಿ ವ್ಯಾಪಿಸಿತು. ಆರ್ಥಿಕಸಮಾನತೆಯ ತತ್ತ್ವ ವಿದ್ಯಾವಂತ ತರುಣರ ದೃಷ್ಟಿಯನ್ನು ಸೆಳೆಯಿತು.

ಸಮಾಜದ ಕಣ್ಣಾದ ಸಾಹಿತಿ ನೂತನಯುಗಧರ್ಮವನ್ನು ದೇಶದ ಸ್ವಾತಂತ್ರ್ಯಸಾಧನೆಗೂ ದೇಶಹಿತಕ್ಕೂ ಜಗತ್ಕಲ್ಯಾಣಕ್ಕೂ ಸಾಧಕವಾದ ಮಾನವಭ್ರಾತೃತ್ವದ ಅಗತ್ಯತೆಯನ್ನು–ಗುರುತಿಸಿ, ಮನಗಂಡ. ಮಾನವೀಯತೆ ಆಧುನಿಕ ಕನ್ನಡಸಾಹಿತ್ಯದ ಆಧಾರಶ್ರುತಿಯಾಯಿತು.

"ಜಾತಿ ಮತಗಳ ಹೊದಿಕೆಯನು ತೆಗೆದು ಹರಿದು, ಕುಲಗೋತ್ರವೆಂಬ ಹುಸಿಹೆಸರ ಕಿತ್ತೊಗೆದು, ಬಾಳು ಧರ್ಮದಲಿ" ಎಂಬುದು ಒಬ್ಬ ಕವಿಗೆ ಅವನ ಒಳದನಿಯ ಕರೆ. "ಶುನಿಚೈವ ಶ್ವಪಾಕೇ ಚ ಪಂಡಿತಾಃ ಸಮ

ದರ್ಶಿನಃ"— ಬ್ರಹ್ಮಜ್ಞಾನಿಯ ದೃಷ್ಟಿಯಲ್ಲಿ ಶ್ವಾನವೂ ಒಂದೆ, ಶ್ವಪಚನೂ ಒಂದೆ. ಬಸವಣ್ಣ, ಪುರಂದರಾದಿಗಳು ಅಂಥ ಜ್ಞಾನಿಗಳಾದ್ದರಿಂದ ಅವರು ಹೊಲೆಯನನ್ನು ಊರೊಳಕ್ಕೆ ಬರಮಾಡಿಕೊಂಡರು. ಆದರೆ, ಜನ ಮಾತ್ರ ದೂರವಿಡುತ್ತಲೇ ಬಂತು—೨೦ ನೆಯ ಶತಮಾನದಲ್ಲಿ ಕೂಡ. ಅಸ್ಪೃಶ್ಯತಾ ನಿವಾರಣೆಗಾಗಿ ಹೋರಾಡಿದ ಮಹಾತ್ಮ ಗಾಂಧಿಯವರ ಪ್ರಭಾವ ನಮ್ಮ ಕವಿಗಳಮೇಲೆ, ಸಾಹಿತಿಗಳಮೇಲೆ ಆಗದೆಹೋಗಲಿಲ್ಲ. 'ಜೋಮನ ದುಡಿ', 'ಮಾದನ ಮಗಳು', 'ನೀ ನನ್ನ ಮುಟ್ಟಬೇಡ' ಮುಂತಾದ ಕಾದಂಬರಿಗಳಲ್ಲಿ ಕನ್ನಡ ಕಾದಂಬರಿಕಾರರು ಹರಿಜನಸಮಸ್ಯೆಯನ್ನು ಮಾರ್ಮಿಕವಾಗಿ ನಮ್ಮ ಮುಂದಿಟ್ಟು, ಮಾನವೀಯತೆಗೆ ಮನ್ನಣೆಕೊಟ್ಟಿದ್ದಾರೆ. 'ಹೊಲೆಯನಾರೂರ ಹೊರಗಿರುವವನೆ ಗೆಳೆಯ ? ಜಾತಿಯಿಂದಲ್ಲ ಗುಣದಿಂದಹನು ಹೊಲೆಯ' ಎಂಬ ವಿಶಾಲ ಮನೋಭಾವಕ್ಕೆ ಮತ್ತೆ ಹೊಳಪುಕೊಟ್ಟಿದ್ದಾರೆ ಗೋವಿಂದ ಪೈ ಮುಂತಾದ ಕವಿಗಳು. ಮಾಸ್ತಿಯವರ 'ತಿರುಪಾಣಿ' ನಾಟಕವೂ ಇದೇ ತತ್ತ್ವವನ್ನು ಚಿತ್ರಿಸಿದೆ.

ಹಿಂದೂ ಮುಸ್ಲಿಮರ ಐಕ್ಯಭಾವನೆಯ ಅಗತ್ಯವೂ ಇಂದಿನ ಲೇಖಕರ ಗಮನಕ್ಕೆ ಬಾರದೆ ಹೋಗಿಲ್ಲ. ಹಾರುವರ ಕೇರಿಯಲ್ಲಿ ಭಿಕ್ಷೆಬೇಡಬಂದ ಬಡ ಮುಸ್ಲಿಂ ಹುಡುಗಿಗೆ ಭಿಕ್ಷೆಯನ್ನು ನಿರಾಕರಿಸುತ್ತಿದ್ದುದನ್ನು ಕಂಡು,

"ಮನೆಮನೆಯ ಬಾಗಿಲಿಗೆ ಹೋಗಿ ಹಾಡುವಳು
ಒಂದೆ ಹಿಡಿಯಕ್ಕಿಯನು ಬರಿದೆ ಬೇಡುವಳು
ಬೇರೆ ಮತದವಳೆಂದು ಭಿಕ್ಷೆಯನು ಕೊಡರು
ದೂರನಡೆ ತೊಲಗೆಂದು ಗದರಿಸುವರು
ತಮ್ಮಂತೆ ಜೀವಿಯೆಂದೆಣಿಸದಿಹರು"

ಎಂದು ಮಮ್ಮಲ ಮರುಗಿ, ನೀತಿ ಸಮ್ಮತವಲ್ಲದ ನಡತೆಯ ಕಡೆಗೆ ನಮ್ಮ ಗಮನ ಸೆಳೆದಿದ್ದಾನೆ ಕವಿ. ಕೈಲಾಸಂ, ಗೋಪಾಲಕೃಷ್ಣರಾವ್, ಗೊರೂರು ರಾಮಸ್ವಾಮಯ್ಯಂಗಾರ್ ಮುಂತಾದ ಲೇಖಕರು ಗಡಫ್ ಖಾನ್, ಜಟಕಾ ಸಾಹೇಬು ಶಾಲುಸಾಬಿ ಮುಂತಾದ ಪಾತ್ರಗಳನ್ನು ಸಹಾನುಭೂತಿಯಿಂದ ಚಿತ್ರಿಸಿ, ಹಿಂದೂ ಮುಸ್ಲಿಂ ಬಾಂಧವ್ಯದ ಕಡೆಗೆ ಬೆರಳು ತೋರಿದ್ದಾರೆ.

"ಶರೀರಮಾದ್ಯಂ ಖಲು ಧರ್ಮಸಾಧನಂ"

ಒಡಲು ಸೊರಗಿರುವಾಗ, ಮೇಲೆ ನಿರೂಪಿಸಿದಂಥ ಉಪದೇಶವೆಲ್ಲ, "ಗೋರ್ಕಲ್ಲ ಮೇಲೆ ಮಳೆಗರೆದಂತೆ." ಬಡಜನಕ್ಕೆ ಅನ್ನಬ್ರಹ್ಮದ ಸಾಕ್ಷಾತ್ಕಾರ ಮೊದಲು ; ಬಳಿಕ ಪರಬ್ರಹ್ಮ. ಕಾರಣಬ್ರಹ್ಮ ಹಸಿವು ; ಕಾರ್ಯಬ್ರಹ್ಮ, ಅನ್ನದಾನ, ಪರೋಪಕಾರ.

ಕನ್ನಡ ಜನರ ಸಂಸ್ಕೃತಿ ಅನ್ನದಾನಕ್ಕೆ ಉನ್ನತಸ್ಥಾನವನ್ನು ಕೊಟ್ಟಿತ್ತು ; ಪರೋಪಕಾರಕ್ಕೆ ಪಟ್ಟ ಗಟ್ಟಿತ್ತು. "ಅನ್ನವನು ಇಕ್ಕುವನು ಉನ್ನತವ ಪಡೆಯುವನು" ಎಂದು ಸರ್ವಜ್ಞನು ಸಾರಿದನು. ಕೆರೆಕಟ್ಟಿಸು ವುದು, ಬಾವಿ ತೋಡಿಸುವುದು, ದೇವಾಲಯ ಕಟ್ಟಿಸುವುದು, ಮದುವೆ ಮಾಡಿಸುವುದು—ಇವು ಕರ್ಮಯೋಗಿಗಳ ಕಾರ್ಯರಂಗ ಅಂದು.

"ಕಾಯಕವೇ ಕೈಲಾಸ" ಎಂದರು ಶಿವಶರಣರು. ಪರೋಕ್ಷವಾಗಿ, ಸರ್ವಸಮಾನತಾ ತತ್ತ್ವದ ಅಡಿಗಲ್ಲು ಈ ಸಿದ್ಧಾಂತ. ಅಣ್ಣನೂ ದುಡಿಯಬೇಕು, ತಮ್ಮನೂ ದುಡಿಯಬೇಕು. ಅದಿಲ್ಲವೋ, ದಾಯಾದ ಕಲಹ.

ಮಾನವಭ್ರಾತೃತ್ವದ ಕಲ್ಪನೆಯ ಕನಸು ನನಸಾಗಬೇಕಾದರೆ, ಯುಗವಾಣಿಯ ಕರೆಗೆ ನಾವು, ಓಗೊಡ ಬೇಕು. ಕುವೆಂಪು ಕವಿವಾಣಿ ಹೊಸಬಾಳಿನ ಗೀತೆಯನ್ನು ಹೀಗೆ ಹಾಡಿತು ಒಮ್ಮೆ, ಬಡವಬಲ್ಲಿದರೆಂಬ ಭೇದವನ್ನು ಕಂಡು ರೊಚ್ಚಿಗೆದ್ದು :

"ಸರ್ವರಿಗೆ ಸಮುಬಾಳು ! ಸರ್ವರಿಗೆ ಸಮುಪಾಲು !"
ಎಂಬ ನವಯುಗವಾಣಿ ಘೋಷಿಸಿದೆ ಕೇಳಿ !
ಯುಗಯುಗದ ದಾರಿದ್ರ್ಯ ಭಾರದಿಂ ಬೆನ್‌ಬಾಗಿ
ಗೋಳಿಡುವ ಬಡಜನರೆ, ಏಳಿರೈ ಏಳಿ !
ಶ್ರೀಮಂತರಡಿಗಳಡಿಹುಡಿಯಲ್ಲಿ ಹೊರಳಾಡಿ
ಕುಸಿದು ಕುಗ್ಗಿದರೆಲ್ಲ ಸಂತಸವ ತಾಳಿ !
ಕಂಗೆಟ್ಟ ಸೋದರರೆ, ಬರುತಿಹಳು ಕಾಣಿರೈ
ದಾನವರ ಸೀಳಿ ಅದು ವಿಪ್ಲವದ ಕಾಳಿ !

"ಇಂದು ನೆತ್ತರು ಚೆಲ್ಲಿ ಮುಂದೆ ಬಹ ಮಕ್ಕಳಿಗೆ ಹೊಟ್ಟೆಗನ್ನವ, ಮೈಗೆ ಬಟ್ಟೆಯನು ನೀಡುವ" ಈ ಮಾರ್ಗ ನಮ್ಮ ಸಂಸ್ಕೃತಿಗೆ ಒಗ್ಗದ ಮಾರ್ಗ. ಇನ್ನುಳಿದಿರುವುದು ಒಂದೇ ಮಾರ್ಗ : ಗಾಂಧಿಯವರ ಅಹಿಂಸಾ ಮಾರ್ಗ; ಅದನ್ನು ಅವಲಂಬಿಸಿ ವಿನೋಬಾಭಾವೆ ನಮ್ಮ ಮುಂದೆ ಇಟ್ಟಿರುವ ಸರ್ವೋದಯತತ್ತ್ವ.

ಕವಿಹೃದಯ ಇದನ್ನು ಗ್ರಹಿಸಿದೆ ; 'ಕೊಟ್ಟು ಬದುಕು' ಎಂದು ಸಾರಿದೆ. ಸರ್ವೋದಯತತ್ತ್ವವನ್ನು ರಾಘವರ ಈ ಸಾಲುಗಳು ಘೋಷಿಸಿವೆ, ಎಚ್ಚರಿಕೆಯೊಡನೆ :

ಕುಳಿತಕಡೆ ಕುಳಿತು ಕಟ್ಟಿರೆಯುಂಬ ನೆಲದೊಡೆಯ,
ಕಾಣು, ಕಾಲನ ಕೈಯ ಬರಹದೆಚ್ಚರಿಕೆ ;
ಅಳಿವುಳಿವುಗಳ ಆಯ್ಕೆ ನಿನ್ನ ಮುಂಗಡೆಯಿಹುದು,
ಆಗು ಕೊಟ್ಟುಳಿದರೂ ಬೆಳೆವ ಗರಿಕೆ.

ಮಳೆ ಬಂದು ಕೆರೆ ತುಂಬಿ ಕಟ್ಟೆಯೊಡೆಯದೆ ನಿಲ್ಲೆ
ಹೆಚ್ಚುನೀರಿನ ಹರಿವಿಗಿರಬೇಕು ತೂಬು :
ಗಳಿಕೆಯುಳಿಕೆಗಳಲ್ಲಿ ಕೈಬೊಗಸೆ ತುಂಬಿರಲು
ನೀಡುವುದೆ ನಿನ್ನ ಇಹಪರದ ಕಾಪು.

ಕೊಟ್ಟು ಕೆಟ್ಟವರಿಲ್ಲ ; ಕೊಡದೆ ಒಡನೊಯಲಿಲ್ಲ ;
ಕೊಟ್ಟು ಕಟ್ಟಿಕೊ ನಿನ್ನ ಪಯಣಬುತ್ತಿ.
ಪೆಟ್ಟಿಗೆಯ ಧನವಿಟ್ಟು ಕಟ್ಟಿಗೆಯ ಮೇಲ್ಮಲಗಿ
ಎಂತು ಸಾಧಿಸಬಹುದು ನಿನ್ನ ಮುಕ್ತಿ ?

* * *

ದೇವನೆ ಸರ್ವಸ್ವಕು ಆದಿಮೂಲ
ದೈವರೂಪ ದೀನಾರ್ತಜನ ;
ಕೆರೆಯ ನೀರನ್ನು ಕೆರೆಗೆ ಚೆಲ್ಲುವೊಡೆ
ಅವರಿಗೆ ಮೀಸಲು ನಿನ್ನ ಧನ.

ಎಲ್ಲರಿಗೊಬ್ಬಳೆ ನೆಲತಾಯಿ
ನನ್ನವಳೆನಲಾದೀತೆ ?
ಸೋದರರಿಗೆಲ್ಲ ಸಮುಪಾಲಿರಲಿ,
ಎಲ್ಲರನೂ ಹರಸಲಿ ಮಾತೆ.

* * *

ಸರ್ವರಿಗೆ ಸಮ ಸಮುಬಾಳು ! ಸರ್ವರಿಗೆ ಸಮುಪಾಲು !
ಸೋದರರಿಗೆಲ್ಲ ಸಮುಪಾಲಿರಲಿ !

ಇವು ಒಳ್ಳೆಯ, ಹಿರಿಯ ಆದರ್ಶಗಳು; ಅಗತ್ಯವಾಗಿ ಅನುಸರಣೀಯ. ಆದರೆ, ಗಣಿತದ ಲೆಕ್ಕಾಚಾರದ

ಸಮತೆಯನ್ನು ಹೊರಿಸಿದರೆ ಪ್ರಕೃತಿ ಪ್ರತಿಭಟಿಸುತ್ತಾಳೆ. ವಿಷಮತೆಯಲ್ಲಿ ಸಮತೆಯನ್ನು, ವೈವಿಧ್ಯದಲ್ಲಿ ಐಕ್ಯವನ್ನು, ಕಂಡು ಪ್ರಕೃತಿ ಧರ್ಮವನ್ನು ಪಾಲಿಸಿದರೆ ನಿಜವಾದ ಮಾನವೀಯತೆಯನ್ನು ಅರಿಯಬಹುದು. ಇದು ವ್ಯವಹಾರ್ಯವಾದ ಸಮತಾದೃಷ್ಟಿ, ಐಕ್ಯದೃಷ್ಟಿ. ಮಾನವಭ್ರಾತೃತ್ವದ ಯೋಗಸೂತ್ರ ಇದು :

ಮನುಜ ಕುಲವೊಂದೊಬ್ಬನಿನ್ನೊಬ್ಬನಂತಿಲ್ಲ
ತನುವಂಗಗಳೊಳೊಂದು, ರೂಪಗುಣ ಬೇರೆ ;
ಮನದೊಳೊಬ್ಬೊಬ್ಬನೊಂದೊಂದು*ಪ್ರಪಂಚವಿಂ
ತನುವೇಕದೊಳು ಬಹುಳ—ಮಂಕುತಿಮ್ಮ

ಅಸಮದಲಿ ಸಮತೆಯನು ವಿಷಮದಲಿ ಮೈತ್ರಿಯನು
ಅಸಮಂಜಸದಿ ಸಮನ್ವಯ ಸೂತ್ರ ನಯವ
ವೆಸನಮಯ ಸಂಸಾರದಲಿ ವಿನೋದವ ಕಾಣ್ಬ
ರಸಿಕತೆಯೆ ಯೋಗವೆಲೊ—ಮಂಕುತಿಮ್ಮ.

ಸರ್ವೇ ಜನಾಸ್ಸುಖಿನೋ ಭವಂತು !
ಸಮಸ್ತ ಸನ್ಮಂಗಳಾನಿ ಭವಂತು !
ಓಂ ಶಾಂತಿ ಶ್ಶಾಂತಿ ಶ್ಶಾಂತಿಃ !

* ಪ್ರಪಂಚವು + ಇಂತು + ಅನುವು + ಏಕದೊಳು + ಬಹುಳ

ಪಿ. ಎಂ. ಗಿರಿರಾಜು

ಶರಣಸಂಪ್ರದಾಯದಲ್ಲಿ 'ಯೋಗ ಸಾಗಿದ ಬಗೆ'

'ಶರಣಸಂಪ್ರದಾಯ'ವು ಭಾರತೀಯ ಧಾರ್ಮಿಕರಂಗದಲ್ಲಿನ ಕೋಲಾಹಲಮಯ ಮಹಾಕ್ರಾಂತಿಯಾಗಿದೆ. ಹಿಂದೂಧರ್ಮವನ್ನು ತಿರಸ್ಕರಿಸಿ ಸಿಡಿದು ನಿಂತ ನಿರೀಶ್ವರ ಬೌದ್ಧ ಜೈನಸಂಪ್ರದಾಯಗಳ ಸಾಲಿನಲ್ಲಿಯೇ ಸೇಶ್ವರ ಶರಣ ಸಂಪ್ರದಾಯವೂ ನಿಲ್ಲುತ್ತದೆ.

ಸುಪ್ರಸಿದ್ಧ ವೇದಾಗಮ ಪುರಾಣಸ್ಮೃತಿ ಇತಿಹಾಸಗಳಲ್ಲಿ ವರ್ಣ ಆಶ್ರಮ ಜಾತಿಕುಲಗಳ ತಾರತಮ್ಯಕ್ಕನು ಗುಣವಾಗಿ ಪ್ರತಿಪಾದಿತವಾದ ಹಿಂದೂಧರ್ಮದ ಸಕಲ ಆಚಾರ ವಿಚಾರಗಳನ್ನೂ ಶರಣ ಸಂಪ್ರದಾಯ ಧಿಕ್ಕರಿಸುತ್ತದೆ ಇಲ್ಲವೆ ವಿಡಂಬನಗೈಯ್ಯುತ್ತದೆ ಎಂಬುದು ಆ ಸಂಪ್ರದಾಯದ ಏಕಮೇವಾದ್ವಿತೀಯ 'ಮೂಲ ವಾಙ್ಮಯ'ವಾದ 'ವಚನಶಾಸ್ತ್ರ'ದ ಅವಲೋಕನದಿಂದ ತಿಳಿದುಬರುತ್ತದೆ. ಹಿಂದೂಧರ್ಮದ ಯುಗಯುಗಾಂತರದ ವಿಶಿಷ್ಟ ನಂಬಿಕೆಗಳಾದ ಜನ್ಮಾಂತರ, ಲೋಕಾಂತರ, ಮೂರ್ತಿಪೂಜೆ, ಬಹುದೈವವಾದ, ವರ್ಣಾದಿ ತಾರತಮ್ಯತೆ ಇತ್ಯಾದಿ ಇತ್ಯಾದಿಗಳೆಲ್ಲವನ್ನೂ ಧಿಕ್ಕರಿಸುವ, ವಿಡಂಬನಗೈಯ್ಯುವ[1] ಶರಣಸಂಪ್ರದಾಯ ಬಾಹ್ಯ, ಸ್ಥೂಲ, ಮಂದವಾದ ದೃಷ್ಟಿ ವಿವೇಚನೆ ಬುದ್ಧಿಗಳಿಗೆ 'ಎಲ್ಲದರಲ್ಲಿಯೂ ತಪ್ಪನ್ನು ಹುಡುಕುವ ಅತ್ತೆಯಂತೆ', ಹಿಂದೂಧರ್ಮದ ಅದರಲ್ಲೂ ಪುರೋಹಿತ ವರ್ಗದ ಪ್ರಬಲ ಎದುರಾಳಿಯಾಗಿ ತೋರುತ್ತದೆ ! ಕೂಲಂಕಷವಾಗಿ ಪರಿಶೀಲಿಸಿದರೆ ಶರಣಸಂಪ್ರದಾಯದ ಎಲ್ಲ ಆಕ್ಷೇಪ ವಿಡಂಬನೆ ಧಿಕ್ಕಾರ ನಿರಸನಗಳೂ 'ಆಚಾರವಿಚಾರ ಅನುಭಾವ' ಗಳಲ್ಲಿನ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ವಿವಿಧರೂಪಗಳಾಗಿ ತೋರುತ್ತವೆ.

ಬಾಹ್ಯವಾದ ಆಚಾರಸಂಬಂಧಿ ಭಿನ್ನಾಭಿಪ್ರಾಯಗಳನ್ನು ಪ್ರಾಕೃತಭಕ್ತಿಕಾಂಡದ ಹಿನ್ನೆಲೆಯಲ್ಲಿ ಸಿದ್ಧಾಂತ (ದ್ವೈತ–ಶೈವ) ನಿರಸನವೆಂದೂ, ಆಂತರಿಕವಾದ ವಿಚಾರ ಸಂಬಂಧಿ ಭಿನ್ನಾಭಿಪ್ರಾಯಗಳನ್ನು ಪ್ರಾಕೃತ ಜ್ಞಾನಕಾಂಡದ ಹಿನ್ನೆಲೆಯಲ್ಲಿ ವೇದಾಂತ (ಅದ್ವೈತ-ವಾಗದ್ವೈತ) ನಿರಸನವೆಂದೂ, ತಾತ್ತ್ವಿಕವಾದ ಅನುಭಾವ ಸಂಬಂಧಿ ಭಿನ್ನಾಭಿಪ್ರಾಯಗಳನ್ನು ಪ್ರಾಕೃತ ಕರ್ಮಕಾಂಡದ ಹಿನ್ನೆಲೆಯಲ್ಲಿ ಯೋಗ (ವಿಶಿಷ್ಟಅದ್ವೈತ–ಜಡಕರ್ಮ) ನಿರಸನವೆಂದೂ ಶರಣಸಂಪ್ರದಾಯ ಪರಿಭಾಷೆಯಲ್ಲಿ ಸಂಕೇತಿಸಲಾಗಿದೆ.[2] ಬಸವಾದಿ ಪ್ರಮಥರು ಪ್ರತಿಪಾದಿಸುವ ಸಕಲನಿರಸಗಳೂ ಈ ಮೂರು ಪ್ರಭೇದಗಳಲ್ಲಿಯೇ ಅಂತರ್ಗತವಾಗುತ್ತವೆ. ಮೂರನೆಯದಾದ ಯೋಗನಿರಸನವು ಶರಣಸಂಪ್ರದಾಯದಲ್ಲಿ ಸಾಗಿಬಂದ ಬಗೆಯನ್ನು ಸ್ಥೂಲವಾಗಿ ಪರಿಶೀಲಿಸೋಣ.

---

[1] 'ಸದ್ಭಕ್ತಚಾರಿತ್ರ್ಯ' (ಪಿ. ಎಂ. ಗಿರಿರಾಜು) 1973 ಪರಿಶಿಷ್ಟ. 7

[2] ಸ್ವಾರಸ್ಯ ಅಂಶವೆಂದರೆ ಮಿಶ್ರಪಂಥಿಯಾದ ನಿಜಗುಣ ಶಿವಯೋಗಿಯಲ್ಲಿ 'ವೇದಾಂತ (ಅದ್ವೈತ), ಸಿದ್ಧಾಂತ (ಶೈವ), ಯೋಗ (ಕರ್ಮ)ಗಳೆಲ್ಲವೂ ಕೂಡಿ ತ್ರಿವೇಣೀಸಂಗಮವಾಗಿದೆ !

ಈ ಪರಿಶೀಲನೆಗೆ ಪೂರ್ವದಲ್ಲಿ ಶರಣಸಂಪ್ರದಾಯದ ಕೆಲವೊಂದು ಧೋರಣೆಗಳನ್ನು ಅವಶ್ಯವಾಗಿ ಮನದಟ್ಟು ಮಾಡಿಕೊಳ್ಳಲೇಬೇಕು. ಶರಣಸಂಪ್ರದಾಯವು ತನ್ನದೇ ಆದ ವೈಶಿಷ್ಟ್ಯಪೂರ್ಣ 'ಆಚಾರ-ವಿಚಾರ-ಅನುಭಾವ'ಗಳನ್ನು ಹೊಂದಿ ಸರ್ವತಂತ್ರಸ್ವತಂತ್ರವಾಗಿದ್ದಿತು. ಈ ಸಂಪ್ರದಾಯವನ್ನು ಶೈವದ ಒಂದು ಪ್ರಭೇದವೆಂದಾಗಲಿ, ಒಂದು ಸಾಮಾನ್ಯ 'ಭಕ್ತಿಪಂಥ' ವೆಂದಾಗಲಿ ಭ್ರಮಿಸಿದರೆ ಪ್ರಮಾದವಾಗುತ್ತದೆ.[1] ಬಸವಾದಿ ಪ್ರಮಥರಿಂದ ಪ್ರಣೀತವಾದಂದಿನಿಂದ ತೊಡಗಿ ಇಂದಿನವರೆವಿಗೂ ಹೊರಗಿನ ಹಾಗು ಒಳಗಿನ ಆಘಾತಗಳಿಗೆ ಗುರಿಯಾದುದರ ದೆಸೆಯಿಂದ ಶರಣಸಂಪ್ರದಾಯ ಸತತವಾಗಿ ಜರ್ಜರಿತವಾಗಿಹೋಗಿದೆ. ಈ ಸಂಪ್ರದಾಯದ ಗ್ರಂಥಗಳು ನೆಲಬಲಾಗದಷ್ಟು ಪ್ರಮಾಣದಲ್ಲಿ ಸಾಂಕರ್ಯ, ಪ್ರಕ್ಷೇಪ, ಅನ್ಯಪ್ರಭಾವಗಳಿಗೆ ತುತ್ತಾಗಿ ಹೋಗಿರುವುದರಿಂದ, ಈ ಸಂಪ್ರದಾಯದ ಯಾವುದೇ ವಿಚಾರವನ್ನು ಪರಿಶೀಲಿಸಬೇಕಾದರೂ ಸಂಪೂರ್ಣಸಾವಧಾನ, ಪೂರ್ವಗ್ರಹ ರಹಿತ ಅವಲೋಕನ ಪರಾಮರ್ಶೆಗಳು ಅತ್ಯಾವಶ್ಯಕವೆನಿಸುತ್ತವೆ.

ಈ 'ಯೋಗನಿರಸನ'ದ ಹಿನ್ನೆಲೆಯನ್ನು ಗಮನಿಸಬೇಕು. ಬಸವಾದಿ ಪ್ರಮಥರ ಕಾಲದಲ್ಲಿ ಸಿದ್ಧಾಂತ, ಪಾಶುಪತ, ಲಾಕುಳ, ಸೋಮ, ವಾಮ, ದಕ್ಷಿಣ, ಮಿಶ್ರ, ಗಾರುಡ, ಮಹಾವ್ರತ, ಸಿದ್ಧ (ನಾಥ) ವೆಂಬ 'ದಶವಿಧ ಶೈವ'ಗಳು ಪ್ರಬಲವಾಗಿದ್ದು, ಸಾಮಾನ್ಯನಿಂದ ಸಾರ್ವಭೌಮನವರೆವಿಗೆ ಸರ್ವರ ಮೇಲೂ ಪ್ರಭಾವ ಬೀರುತ್ತಿದ್ದವು. ಧರ್ಮಾಚರಣೆ ಅತಿಕ್ಲಿಷ್ಟ, ಜಟಿಲ, ದುಬಾರಿ, ವಿಚಾರಶೂನ್ಯ ಅಂಧಾನುಕರಣೆಯಾಗಿದ್ದು ಏಗಲಾಗದ ಹೊರೆಯಾಗಿತ್ತು. ಧರ್ಮ ದಾಂಗಾಣದ, ಮೇರೆ ಇಲ್ಲದ ಘೋರಾರಣ್ಯವಾಗಿತ್ತು. ಪುರೋಹಿತವರ್ಗ ಹೇಳಿದ್ದೆಲ್ಲಾ ಪ್ರಮಾಣವೆನಿಸಿ ಅನುಲ್ಲಂಘನೀಯ ಶಾಸನವಾಗಿಹೋಗಿತ್ತು. ಬೌದ್ಧಿಕ ಬಂಡವಾಳಷಾಹಿಗಳು ಸ್ವಾರ್ಥಕ್ಕಾಗಿ ಧರ್ಮದ ಮರೆಯಲ್ಲಿ ಶೋಷಣೆಮಾಡುತ್ತಿದ್ದರು. ಬಸವಾದಿ ಪ್ರಮಥರು ಹಾಡುಹಗಲಿನಲ್ಲಿಯೇ ನಡೆಯುತ್ತಿದ್ದ ಧರ್ಮದ ಹೆಸರಿನ ಅಧರ್ಮವನ್ನು, ಆಚಾರದ ನೆವದ ಅತ್ಯಾಚಾರವನ್ನು ಪ್ರತಿಭಟಿಸಲು ನಿಶ್ಚಯಿಸಿದರು. ಶೋಷಣೆ ರಹಿತವಾದ 'ಕಲ್ಯಾಣ ಪಟ್ಟಣ ಸ್ಥಾಪನೆ' ಅವರ ಗುರಿಯಾಗಿತ್ತು. ದಶವಿಧ 'ಶೈವ'ದ ಮುನಿ ಪ್ರತಿ ಆಚಾರ್ಯರುಗಳೆಲ್ಲ ಸಾಮಾನ್ಯವಾಗಿ 'ಯೋಗಮಾರ್ಗರತ'ರಾಗಿದ್ದರು. ಅವರ ತೇಜೋವಧೆಗಾಗಿ ಬಸವಾದಿಪ್ರಮಥರು 'ಯೋಗಮಾರ್ಗ'ದ ಮೇಲೆ ಧಾಳಿ ನಡೆಸಿದರು. ಈ 'ಕಾರ್ಯಾಚರಣೆ' ಎಷ್ಟು ವ್ಯವಸ್ಥಿತವೂ ಪರಿಪೂರ್ಣವೂ ಪ್ರಬಲವೂ ಆಗಿತ್ತೆಂದರೆ ಅನತಿ ಕಾಲದಲ್ಲಿಯೇ, ರಾಜಾಧಿರಾಜ ಪೂಜಿತರೂ ಶಾಸನ ಸ್ತುತಿತರೂ ಆದ ದಶವಿಧ ಶೈವಾವಲಂಬಿ ಮಹಾಮಹಾ ವ್ಯಕ್ತಿಗಳೂ ಶರಣಸಂಪ್ರದಾಯದ ಹುಚ್ಚು ಹೊಳೆಯಲ್ಲಿ ಕೊಚ್ಚಿಹೋದರು ; ಅಸಂಖ್ಯಾತ ದಶವಿಧ ಶೈವಾನುಯಾಯಿಗಳು ಶರಣ ಸಂಪ್ರದಾಯದಲ್ಲಿಯೇ ವಿಲೀನರಾಗಿ ಹೋದರು ! ಯೋಗ ಕರ್ಮ ಸುಕೌಶಲದಲ್ಲಿ ಅದ್ವಿತೀಯನೇ ಆಗಿದ್ದ ಸಿದ್ಧ (ನಾಥ) ಸಂಪ್ರದಾಯದ ಕಲಿ, ಕವಿ, ಮಹಾಯೋಗಿ, 27 ಯೋಗ (ಸ್ಥಾವರ) ಲಿಂಗ ಸ್ಥಾಪಕ, ಭೂತದಯಾಪಾರಿ ಸಿದ್ಧ'ರಾಮ'ನು, ಅಲ್ಲಮಪ್ರಭು ಚನ್ನಬಸವ ಅಮುಗಿದೇವಾದಿ ಮಹಾಶರಣರ ಪ್ರಭಾವ ಪ್ರಬೋಧೆಗಳಿಗೊಳಗಾಗಿ ಶೈವ'ಕರ್ಮ' ಯೋಗಮಾರ್ಗವನ್ನೂ ತ್ಯಜಿಸಿ ಮಹಾಶರಣನೇ ಆದದ್ದು ಶರಣಸಂಪ್ರದಾಯದ ಅತ್ಯುನ್ನತ ದಿಗ್ವಿಜಯವಾಗಿ ಪರಿಣಮಿಸಿತು.

ಸಿದ್ಧ'ರಾಮ'ನು ಶರಣ'ರಾಮ'ನಾದ ಪ್ರಸಂಗವನ್ನು ಸಂಪ್ರದಾಯಗ್ರಂಥಗಳು[2] ವಿಶೇಷ ಹೆಮ್ಮೆಯಿಂದ 'ಮಹಾಸಾಧನೆ'ಯೆಂಬ ಅಭಿಮಾನದಿಂದ ವಿವರಿಸುತ್ತವೆ. ಈ ಮರ್ಮವನ್ನರಿಯದೇ ಹೋದ ಕೆಲವು ವಿದ್ವಾಂಸರು ಅನ್ಯಥಾಜ್ಞಾನದಿಂದ ಭ್ರಮಿತರಾಗಿ ಪೂರ್ವಗ್ರಹಪೀಡೆಗೊಳಗಾಗಿ 'ಸಿದ್ಧರಾಮಪ್ರಸಂಗ'

---

[1] 'ಸದ್ಭಕ್ತ ಚಾರಿತ್ರ್ಯ' (ಪಿ.ಎಂ. ಗಿರಿರಾಜು) 1973 ಸಮಗ್ರಗ್ರಂಥ

[2] ಚೆನ್ನಬಸವಪುರಾಣ, ಪ್ರಭುಲಿಂಗಲೀಲೆ, ಲಿಂಗಲೀಲಾವಿಲಾಸಚಾರಿತ್ರ, ಶೂನ್ಯಸಂಪಾದನೆಗಳು (ಗೂಳೂರು, ಗುಮ್ಮಳಾಪುರ, ಹಲಗೆದೇವ) ಪ್ರಭುನಟನ ತಾರಾವಳಿ, ಇತ್ಯಾದಿ ಇತ್ಯಾದಿ.

ಸಂಪ್ರದಾಯವ 'ಕಲ್ಪನೆ' ಎಂದು ಅಪಪ್ರಚಾರ ಮಾಡಿದುದೂ ಮಾಡುತ್ತಿರುವುದೂ ವಿಷಾದನೀಯವೆನಿಸುತ್ತದೆ!' ಮಿಶ್ರಸಂಪ್ರದಾಯವ ಗ್ರಂಥಗಳ 'ಮೌನ'ವನ್ನು ವಿದ್ವಾಂಸರು ದುರುಪಯೋಗಪಡಿಸಿಕೊಂಡರು !

ಬಸವ, ಚೆನ್ನಬಸವ, ಅಲ್ಲಮ, ಸಿದ್ಧರಾಮರು ಭಕ್ತಿ ಜ್ಞಾನ ವೈರಾಗ್ಯ ಕರ್ಮಗಳಿಗೆ ಪ್ರಸಿದ್ಧರಾಗಿದ್ದಾರೆ. ಶರಣಪರಿಭಾಷೆಯಲ್ಲಿ ಕರ್ಮವೆಂದರೆ 'ಯೋಗ'ವೆಂದೇ ಅರ್ಥ. ಪೂರ್ವದಲ್ಲಿ ಸಿದ್ಧ(ನಾಥ) ಸಂಪ್ರದಾಯದ ಕರ್ಮಾಷ್ಟಾಂಗಯೋಗಿಯಾಗಿದ್ದ ಸಿದ್ಧ'ರಾಮ'ನು ಶರಣನಾಗಿ ಪ್ರಖ್ಯಾತ ಶಿವಯೋಗಿಯೆನಿಸಿದನು. ಕರ್ಮಾಷ್ಟಾಂಗಯೋಗ ನಿರಸನ ಬೋಧಾರ್ಥವಾಗಿಯೇ ಪ್ರಭುವಿನಿಂದ ಮಂತ್ರಗೋಪ್ಯ, ಚನ್ನಬಸವನಿಂದ ಹಿರಿಯ ಮಂತ್ರಗೋಪ್ಯ, ಪದಮಂತ್ರಗೋಪ್ಯ ಸಂವಾದಿವಚನಗಳು ಸಿದ್ಧರಾಮನಿಗೆ ಬೋಧಿಸಲ್ಪಟ್ಟವು.

ಆದಿಯಲ್ಲಿ ಯಮಾದ್ಯಷ್ಟಾಂಗಯೋಗಕ್ಕೆ ಶರಣಸಂಪ್ರದಾಯದ ಸಹಮತವಾಗಲೀ ಸಹಾನುಭೂತಿಯಾಗಲೀ ಕಿಂಚಿತ್ತೂ ಇರಲಿಲ್ಲ !

'ಮಂತ್ರಗೋಪ್ಯಸಾಹಿತ್ಯ' ಸಂಪೂರ್ಣವಾಗಿ ಕರ್ಮಯೋಗಾಷ್ಟಾಂಗನಿರಸನಕ್ಕಾಗಿಯೇ ಪ್ರಣೀತವಾದವು ಎಂಬ ಅಂಶ ಅವಕ್ಕಿರುವ ಪ್ರಾಚೀನ ಟೀಕೆಗಳಿಂದ ವಿದಿತವಾಗುತ್ತದೆ.

ಚನ್ನಬಸವನು ಪದಮಂತ್ರಗೋಪ್ಯದಲ್ಲಿ 'ಯೋಗ ಯೋಗವೆಂದು ಏಕೆ ಬಳಲುವೆ ಯೋಗಿ' ಎಂದು ಸಿದ್ಧರಾಮನನ್ನು ಪ್ರಶ್ನಿಸುತ್ತಾನೆ.

'ಮಂತ್ರಗೋಪ್ಯ'ದ ಅಜ್ಞಾತಕರ್ತೃಕವಾದ ಟೀಕೆಯಲ್ಲಿ 'ಆ ಪ್ರಸಿದ್ಧವಾದ ಬ್ರಹ್ಮವು ವೀರಶೈವ ವ್ಯತಿರಿಕ್ತವಾದ ಜ್ಞಾನ-ಕ್ರಿಯೆಗಳನುಳ್ಳಂಥಾ ಯಮ....ಸಮಾಧಿಗಳೆಂಬ ಎಂಟಾದ ಅವಯವಂಗಳನುಳ್ಳಂಥಾ ಭಿನ್ನ ಜ್ಞಾನಿಗಳ ಜ್ಞಾನಕ್ಕೆ ವಿಷಯವಿಲ್ಲದಿದ್ದಂಥಾದ್ದು ಹೀಗೆಂದು ಶ್ರೀಗುರುವು ನಿರೂಪಿಸಿದನು' ಎನ್ನಲಾಗಿದೆ.

ಮೂಲಸಿದ್ಧಾಂತ ಶಿಖಾಮಣಿಯೆನಿಸಿದ ಏಕೋತ್ತರಶತಸ್ಥಲದ ಪ್ರಾಣಲಿಂಗಿಸ್ಥಲದ ಶಿವಯೋಗಸಮಾಧಿಸ್ಥಲ 'ಸ್ವರಪದ'ದ ಟೀಕೆಯೊಂದು—'ಏಕಲಿಂಗನಿಷ್ಠಾಪರನಾದಂಥ ಪ್ರಾಣಲಿಂಗಿಯು ಸ್ವಚ್ಛಂದನಾದಂಥಾತನು ; ಸರ್ವೋತ್ಕೃಷ್ಟವಾದ ಯಥಾರ್ಥ ಸ್ವರೂಪವಾದ ಬ್ರಹ್ಮವು ಸ್ವಯವೇ ಆದಂಥಾತನಾಗಿ ಕೇವಲವಾದಂಥ ಯಮ....ಸಮಾಧಿಗಳೆಂಬ ಅಷ್ಟಾಂಗಯೋಗಂಗಳಿಂದೆ ಹೊರತಾದಂಥ, ಇಷ್ಟಪ್ರಾಣಭಾವ ಸ್ವರೂಪವಾದ ಬ್ರಹ್ಮದಲ್ಲಿ ಸಂಬಂಧವುಳ್ಳಂಥ ಪ್ರಾಣಲಿಂಗಿಯು ಪರಮಾನಂದ ಲೀಲೆಯಲ್ಲಿ, ಚಿದಾನಂದಾಚರಣೆಯಲ್ಲಿ ಪ್ರವರ್ತಿಸಿದನು' ಎನ್ನುತ್ತದೆ.

ಆದಯ್ಯನು ತತ್ಕಾಲದ ಸುಪ್ರಸಿದ್ಧ ಷಡ್ವಿಧ ಕರ್ಮಯೋಗಗಳಾದ 'ಹಠ, ಅಭ್ಯಾಸ, ಅಂಬಿಕಾ, ಆತ್ಮ, ಸಿದ್ಧ, ಪಿಶಾಚ' ಯೋಗಗಳನ್ನೂ ಯಮಾದ್ಯಷ್ಟಾಂಗಯೋಗಗಳನ್ನೂ ವಿವರಿಸಿ 'ಇಂತಪ್ಪ ಅಷ್ಟಾಂಗ ಯೋಗದೊಳಗಾದ ಷಡುವಿಧ ಕರ್ಮಯೋಗಂಗಳಂ ಮೆಟ್ಟಿ' ಎಂದು ತಿರಸ್ಕರಿಸಿ 'ನಿಜಯೋಗ'ವನ್ನು ಸ್ತುತಿಸುತ್ತಾನೆ.[1] ಶಿವಲಿಂಗಾರ್ಚನ, ಶಿವಪ್ರಸಾದಾಮೃತಸೇವನೆ, ಪ್ರಾಣಲಿಂಗೈಕ್ಯ ಸಂಬಂಧಯೋಗಗಳಿಗೆ ಅಭ್ಯಾಸಯೋಗ, ಯೋಗಾಮೃತ ಸೇವನೆ, ಬ್ರಹ್ಮರಂಧ್ರಾತ್ ಪ್ರಾಣೋತ್ಕ್ರಮಣಗಳು ಸರಿಯಲ್ಲವೆಂದು ತಿಳಿಸಿ ಶಿವಾನುಭಾವಕ್ಕೆ, ಯೋಗಕ್ಕೆ ಎಷ್ಟು ಅಂತರವು ನೋಡಯ್ಯಾ' ಎಂದು ಆಶ್ಚರ್ಯದಿಂದ ಉದ್ಗರಿಸುತ್ತಾನೆ.[2]

ಅಲ್ಲಮಪ್ರಭುವು ಹಠಯೋಗ ಲಂಬಿಕೆ ಆಕುಂಚನ ವಜ್ರಿ ಅಮರಿಯ ಕಲ್ಪ ಮುಂತಾದವುಗಳನ್ನು ಮಲಮೂತ್ರ ಸೇವನೆ, ಬಿಸುಗು ದೃಷ್ಟಿ, ಭೂತಚೇಷ್ಟೆ, ಕಾಕು, ಸಟೆ, ಭ್ರಾಂತೆಂದು ಕ್ರೂರವಾಗಿ ವಿಡಂಬಿಸುತ್ತಾನೆ.[3]

---

[1] ಆದಯ್ಯನ ವಚನಗಳು (1957) ವಚನ 231.

[2] ಅದೇ, ವಚನ 272.

[3] ಅಲ್ಲಮನ ವಚನ ಚಂದ್ರಿಕೆ (1960) ವಚನ 724.

ಅಲ್ಲದೆ 'ಶಿವನಡಿಯ ಕಾಣದೆ ತೊಳಲಿ ಬಳಲುತ್ತಿರುವ ಶ್ರುತಿತತಿಯ ನಂಬಲಾಗದು ! ವಸ್ತುವನ್ನು ಹೃದಯ ಭ್ರೂಮಧ್ಯ, ಬ್ರಹ್ಮರಂಧ್ರಗಳಲ್ಲಿ ನೆನೆಯಲಾಗದು, ಭ್ರಮಿಸಲಾಗದು, ಹೊಲಬುಗೆಡಲಾಗದು. ವಸ್ತುನಿಶ್ಚಯವ ಕಾಣುವುದಾದರೆ ಕರಸ್ಥಲದಲ್ಲಿ ನಿಶ್ಚೈಸಿ ಕಂಡು ನಿಬ್ಬೆರಗಾಗಬೇಕು' ಎನ್ನುತ್ತಾನೆ.[1]

ಬಸವರು–ಗುರುವು ತೋರಿದ ಲಿಂಗವು ಮನಸ್ಥಲವಾಗಿರಲು ಪವನಭೇದದಿಂದ ಅರಿದೆಹೆನೆಂದಡೆ ಅದೆ ಪ್ರೋಹ ! ಇಡಾ ಪಿಂಗಳಾ ಸುಷುಮ್ನಾನಾಳವಿಡಿದು ಅರಿದಿಹೆನೆಂದಡೆ ಕೂಡಲಸಂಗಮದೇವ ಮೂಗಕೊಯ್ಯದೆ ಮಾಣ್ಬನೆ ! ಎನ್ನುತ್ತಾರೆ.[2]

ಉರಿಲಿಂಗಪೆದ್ದಿ–ಯೋಗಾಭ್ಯಾಸ ಯೋಗಾಭ್ಯಾಸವೆಂದೆಂಬಿರಿ ! ಯೋಗವು ಅಭ್ಯಾಸವೆ ? ಅಭ್ಯಾಸ ಯೋಗವೆ ? ಯೋಗಾಭ್ಯಾಸವೆಂದೆಂಬನ್ನಕ್ಕರ ಆನು ಯೋಗಿಯೇ ? ಎಂದು ವಿಡಂಬಿಸುತ್ತಾನೆ.[3]

ಮಧ್ಯಕಾಲದಲ್ಲಿದ್ದ ಶರಣಸಂಪ್ರದಾಯನಿಷ್ಠರೂ ಯೋಗ ಯೋಗ ಪ್ರಕ್ರಿಯೆಗಳ ನೈರರ್ಥ್ಯವನ್ನು ಸೊಗಸಾಗಿ ನಿರ್ವಚಿಸಿದ್ದಾರೆ.

ಕರಸ್ಥಲದ ವೀರಣ್ಣೊಡೆಯರು (?) 'ಲಿಂಗನಿಜಸ್ಥಲ ತ್ರಿವಿಧಿ'ಯ 4ನೇ ಸ್ಥಲದ ಅವತಾರಿಕೆಯಲ್ಲಿ ಹಾಗೂ ೧೫ ತ್ರಿವಿಧಿಗಳಲ್ಲಿ, ಕರಸ್ಥಲದಲ್ಲಿರ್ದ ಲಿಂಗವ ಮರದು ಷಣ್ಮುಖೀ ಶಾಂಭವೀ ಖೇಚರಿಯೆಂಬ ಮುದ್ರೆಯನಿಕ್ಕಿ ಬ್ರಹ್ಮರಂಧ್ರದಲ್ಲಿ ಬೆಳಗನರಸುವ ಅಜ್ಞಾನಿಗಳ ನಿರಸನವನ್ನು ಮಾಡುತ್ತಾರೆ.[4]

ಗುಬ್ಬಿಮಲ್ಲಣ್ಣನು 'ಗಣಭಾಷಿತರತ್ನಮಾಲೆಯ' 31ನೇ ಕರ್ಮಯೋಗ ನಿರಸನಸ್ಥಲದಲ್ಲಿ ಅವತಾರಿಕೆಯ ಕಾರಿಕೆಗಳನ್ನು ಅನುವಾದಿಸುತ್ತಾ 'ಅಷ್ಟಾಂಗಯೋಗ ಸಲ್ಲದೆಂದು ಕರ್ಮಯೋಗದ ಭಾವ, ಭಾವನೆ, ಅನ್ಯಕ್ರಿಯೆ, ಪರಾಂಬರಿಕೆ, ಊಹೆ, ಬುದ್ಧಿ, ಮನ, ದೊಡ್ಡಸ್ತಿಕೆಗಳೆಲ್ಲವನ್ನೂ ತ್ಯಾಜ್ಯವೆಂದು' ತಿರಸ್ಕರಿಸುತ್ತಾನೆ ; ಮಲಸ್ಥಾನ, ಮೂತ್ರಸ್ಥಾನ, ಹೊಕ್ಕಳು, ಹೃದಯ, ಕಂಠ, ಹುಬ್ಬುಗಳ ನಡುವೆ, ನೆತ್ತಿ, ತೂರ್ಯ, ಸೋಮ, ಶೂನ್ಯಗಳೆಂಬ ದಶಸ್ಥಾನಗಳ ದಶಚಕ್ರಸಾಧನೆಗಳನ್ನು ತಿರಸ್ಕರಿಸುತ್ತಾನೆ; ಕರ್ಮಯೋಗದ ಆಸನ, ಪವನಪ್ರಕಾರ, ಕರಣ, ವಿಜ್ಞಾನ, ಮಾನಿಸಿ, ಬಿಂದುಭೇದಗಳೆಲ್ಲವನ್ನೂ ತ್ಯಜಿಸಬೇಕೆನ್ನುತ್ತಾನೆ.

ಶಾಂತ ಬಸವೇಶನ 'ಲಿಂಗಚಿದಮೃತಬೋಧೆ'ಯಲ್ಲೂ 'ಕರ್ಮಯೋಗ ನಿರಸನ'ಕ್ಕಾಗಿ ಸ್ಥಲವೊಂದು ಮೀಸಲಾಗಿದೆ.

ಅರ್ವಾಚೀನರಲ್ಲೂ ಅನೇಕರು 'ಯಮಾದ್ಯಷ್ಟಾಂಗಯೋಗ'ವನ್ನು ಹೊಲ್ಲವೆಂದು ತಿರಸ್ಕರಿಸಿದ್ದಾರೆ. ಶಿವಾನುಭಾವದೀಪಿಕೆಯ 225ನೆಯ ಕಂದವು :

ಅಷ್ಟಾಂಗ ಯೋಗಮೆಂಬಾ । ಕಷ್ಟದ ಕರ್ಮಕ್ಕೆ ಬಿದ್ದು ಬಳಲುವುದೇಕೈ ।
ಶ್ರೇಷ್ಠವಹ ವೀರಶೈವದ । ನಿಷ್ಠೆಯಲಿ ಇರುವುದುಚಿತವು ಬಸವ ಪ್ರಭುವೇ ! ಎನ್ನುತ್ತದೆ.

ಮೈಲಾರದ ಬಸವಲಿಂಗ ಶರಣರು 'ಯಮಾದ್ಯಷ್ಟಾಂಗ'ಗಳನ್ನು ಅನುಕ್ರಮವಾಗಿ ಪಾಪದಕ್ರಮ, ಭವದಾಲಯ, ಆಯಾಸ, ತ್ರಾಣಗುಂದು, ಮಿಥ್ಯೆ, ವ್ಯರ್ಥ ಮೌನ, ದುರ್ವಿಚಾರಣ, ತಾಮಸವೆಂದು ಹಳಿದು ಶಾಂಭವಿಯ ವಿಡಂಬಿಸಿ, ಷಣ್ಮುಖಿಯ ತಿಣ್ಣವೆಂದು, ಖೇಚರಿಯ ವ್ಯರ್ಥವೆಂದು, ಹಠವು ಸಟೆಯೆಂದು, ಹಲವು ಯೋಗವು ವ್ಯರ್ಥವೆಂದು ನಿಶ್ಚಯಿಸಿ :

---

[1] ಅಲ್ಲಮನ ವಚನ ಚಂದ್ರಿಕೆ (1960) ವಚನ 928 ಮತ್ತು ಸದ್ಭಕ್ತಚಾರಿತ್ರ್ಯ (1973) ವಚನ 15ರ ವ್ಯಾಖ್ಯಾನ.

[2] ಬಸವ ಷಟ್ಸ್ಥಲವಚನ 799.

[3] ಉರಿಲಿಂಗ ಪೆದ್ದಿಯ ವಚನಗಳು (1936) ವಚನ 54

[4] ಹಸ್ತಪ್ರತಿ.

ಅಷ್ಟಾಂಗಯೋಗ ಬಲುಕಷ್ಟವೆಲೊ ಮಗನೆ ಎಂ ।
ದಿಷ್ಟ ಲಿಂಗವನು ಸೃಷ್ಟಿಸಿ ಕರಕಿತ್ತ
ಶ್ರೇಷ್ಠ ಶ್ರೀಗುರುವೆ ಕೃಪೆಯಾಗು -ಎಂದು ಪ್ರಾರ್ಥಿಸುತ್ತಾರೆ [1]

ತನುಮನ ಭಾವಾದಿಗಳ ವಿಕಾರವನ್ನು ಹೋಗಲಾಡಿಸುವುದೆಂಬ ನೆಚ್ಚಿಕೆಯಿಂದ ದಶವಿಧಶೈವಾದಿ ನಾನಾಧರ್ಮೀಯರು ಯುಗ ಯುಗಾಂತರದಿಂದ 'ಕಣ್ಣು ಮುಚ್ಚಿ' ಆಚರಿಸುತ್ತಿರುವ 'ಯಮಾದ್ಯಷ್ಟಾಂಗ ಯೋಗ'ಗಳನ್ನು ಹೀಗೆ ವಾಚಾಮಗೋಚರವಾಗಿ ವಿಡಂಬಿಸಿ ತಿರಸ್ಕರಿಸುವುದು ವೈಚಾರಿಕತೆಯೇ ? ಶರಣಸಂಪ್ರದಾಯಕ್ಕೆ ಇದು ಸಾಧುವೆ ? ಸಭ್ಯವೆ ? ಬಸವಾದಿ ಪ್ರಮಥರಂತಹ 'ಸಕಲಜೀವಾತ್ಮರಿಗೆ ಲೇಸನೆ ಬಯಸುವ ಶರಣರು' ಹೀಗೇಕೆ ಕ್ರೂರರಾದರು ? ಎಂಬ ಸಂಶಯಗಳು ನಮ್ಮ ಮನದಲ್ಲಿ ಸಹಜವಾಗಿಯೇ ಉದ್ಭವಿಸುತ್ತವೆ ! ಅವಕ್ಕೆ ಪ್ರಾಯಶಃ ಹೀಗೆ ಸಮಾಧಾನವನ್ನು ಹೇಳಬಹುದು.

ತನುಮನ ಭಾವಾದಿಗಳು ವಿಕಾರವಾದವು ಎಂಬ ಪ್ರಾಕೃತಭಾವನೆಯನ್ನೂ, ವಿಕಾರವಾದಾವು ಎಂಬ ಪ್ರಾಕೃತಭಯವನ್ನೂ ಶಾಶ್ವತವಾಗಿ ತೊಡೆದುಹಾಕಲು, ಮಾನವಜನಾಂಗದ ನಿರಾಧಾರಭಯ ವ್ಯರ್ಥ ನೈಚ್ಯಾನುಸಂಧಾನಗಳನ್ನು ನಿರ್ಮೂಲ ಮಾಡಲು ಬಸವಾದಿ ಪ್ರಮಥರು ನಿರ್ವ್ಯಾಜದಿಂದ ಶ್ರಮಿಸಿದರು. ಅಂಗ ಮನಭಾವ ಪ್ರಾಣಾದಿ ಸರ್ವಾಂಗಗಳನ್ನು ಲಿಂಗಮಯವನ್ನಾಗಿಸುವುದರಿಂದ ಶಾಶ್ವತವಾಗಿ ವಿಕಾರರಹಿತವನ್ನಾಗಿಸ ಬಹುದು ; ಸ್ವಯಂ ಲಿಂಗಭಾವದಿಂದ ಇರಲು ನಡೆ ನುಡಿ ರುಚಿ ನೋಟ ಸಂಗ ತೃಪ್ತಿಗಳಾವುವು ಕಲುಷಿತವಾಗವು. ಲಿಂಗ ಮುಂತಾಗಿ ನಡೆವ ನಡೆ, ನುಡಿದ ನುಡಿ, ರುಚಿಸಿದ ರುಚಿ, ನೋಡಿದ ನೋಟ, ಸಂಗಿಸಿದ ಸಂಗ, ತೃಪ್ತಿಸಿದ ತೃಪ್ತಿಗಳು ಪರಮಪವಿತ್ರವೆನಿಸುವುವು ಎಂಬುದೆ ಶರಣರ 'ಲಿಂಗಾಂಗ ಸಾಮರಸ್ಯ'ದ ರಹಸ್ಯವೆನಿಸಿತ್ತು. ಇದನ್ನೇ 'ಲಿಂಗಧಾರಿ ಸದಾ ಶುಚಿಃ' ಎಂಬ ಸೂತ್ರದಿಂದ ಹೇಳಲಾಯಿತು ; ಇಂತಹ ಪರಮಪವಿತ್ರ ನಿಷ್ಕಳಂಕ ಸ್ಥಿತಿಯನ್ನು 'ಸರ್ವಾಂಗ ಲಿಂಗಸ್ಥಿತಿ' ಎನ್ನಲಾಯಿತು ; ಅಂತಹ ನಿಲವುಳ್ಳವನನ್ನು 'ಅಕಾಯ ಚರಿತ್ರ ಶರಣ'ನೆನ್ನಲಾಯಿತು. ಮಾನವನು ಶರೀರಭಾವದಿಂದ ವ್ಯವಹರಿಸಿದರೆ ರಾಗದ್ವೇಷಾದಿ ವಿಕಾರಗಳಿಗೆ ಪಕ್ಕಾಗಿ ಭೂತಕಾಯ, ವಾಯು ಪ್ರಾಣಿ, ವಿಷಯಭ್ರಾಂತನೆನ್ನಿಸುವನು; ಲಿಂಗಭಾವದಿಂದ ಪವಿತ್ರಸ್ಥಿತಿಯಲ್ಲಿ ಲಿಂಗವೇ ಆಗಿ ವ್ಯವಹರಿಸಿದರೆ ಪ್ರಸಾದ ಕಾಯ, ಲಿಂಗಪ್ರಾಣಿ, ಲಿಂಗವಿಷಯಿ ಎನ್ನಿಸುತ್ತಾನೆ. ತನುಮನಪ್ರಾಣಾದಿಗಳು ಮಲಿನವೆಂದು ಭಾವಿಸಿದರೆ ಪಶುಭಾವವೇ ಉಂಟಾಗುತ್ತದೆ ; ಲಿಂಗಮಯ ಪವಿತ್ರವೆಂದು ಭಾವಿಸಿದರೆ ಲಿಂಗಭಾವವುಂಟಾಗುತ್ತದೆ. ಇದು ಮನೋವಿಜ್ಞಾನವೂ ಒಪ್ಪಬೇಕಾದ ಅಂಶವಾಗಿದೆ. ಸಕಲ ಜೀವರಾಶಿಗಳಲ್ಲಿಯೂ ಭಗವಂತನನ್ನು ಕಾಣುವುದು ಹಿಂದೂದರ್ಶನ ತತ್ತ್ವವಾದರೆ ಸ್ವಯಂ ಭಗವಂತನಾಗಿಯೇ ಸಕಲಜೀವರಾಶಿಗಳೊಡನೆ ವಿಕಾರರಹಿತನಾಗಿ ವ್ಯವಹರಿಸುವುದು ಶರಣತತ್ತ್ವದರ್ಶನವಾಗಿದೆ. ಸರ್ವಾಂಗಲಿಂಗಸ್ಥಿತಿಯಿಂದ ಶಾಶ್ವತವಾಗಿ ಶಾರೀರಿಕ ಮಾನಸಿಕ ಭಾವಿಕ ಸಕಲವಿಕಾರಗಳಿಂದಲೂ ಮುಕ್ತನಾಗಬಹುದು. ಆದುದರಿಂದಲೇ ಶರಣರು 'ಯಮಾದ್ಯಷ್ಟಾಂಗಯೋಗ' 'ನಾನಾಯೋಗ'ಗಳನ್ನೂ ಇತರ ಪ್ರಾಕೃತ ತಾತ್ಕಾಲಿಕ 'ವಿಕಾರ ನಿವಾರಣೋಪಾಯ'ಗಳನ್ನೂ ಒಪ್ಪದೆ ತಿರಸ್ಕರಿಸುತ್ತಾರೆ. ಭಯವನ್ನು ಉಪಶಮನಗಳಿಂದ ತಾತ್ಕಾಲಿಕವಾಗಿ ನಿವಾರಿಸುವುದನ್ನು ಶರಣರು ಒಪ್ಪುವುದಿಲ್ಲ ! ಭಯವೇ ಉಂಟಾಗದಂತಹ 'ನಿರ್ಭಯಸ್ಥಿತಿ'ಯನ್ನು ಶಾಶ್ವತವಾಗಿ ಹೊಂದಬೇಕೆಂದು ಪ್ರತಿಪಾದಿಸುವ ಶರಣರು ಅತ್ಯುತ್ತಮ ಮನೋವಿಜ್ಞಾನಿಗಳಾಗಿದ್ದಾರೆ ! ವಿಕಾರ ಉಪಶಮನಗಳಿಗಿಂತ ನಿರ್ವಿಕಾರಸ್ಥಿತಿ ಅತ್ಯುತ್ತಮವಾದುದು ಎಂಬುದನ್ನು ಯಾರೂ ಅಲ್ಲಗಳೆಯಲು ಶಕ್ಯವಿಲ್ಲ !

ಶರಣಸಂಪ್ರದಾಯ 'ಯಮಾದ್ಯಷ್ಟಾಂಗ ಕರ್ಮಯೋಗ ನಿರಸನ'ವನ್ನು ಮೂಲದಂತೆಯೇ ಹಾಗೆಯೇ ಉಳಿಸಿಕೊಂಡು ಬಂದಿದ್ದರೆ ಯಾವ ಸಂಕಷ್ಟಗಳೂ ಉದ್ಭವಿಸುತ್ತಲೇ ಇರಲಿಲ್ಲ ! 'ಶೈವಕರ್ಮಯೋಗ'ವನ್ನು ಆಪ್ರೋ

---

[1] ಗುರುಕರುಣ ತ್ರಿವಿಧಿ 93 ರಿಂದ 106.

ಶನ ತೆಗೆದುಕೊಳ್ಳುವ ಛಲದಲ್ಲಿ, ಪ್ರಾಕೃತ ಕರ್ಮಯೋಗೋದಿತ 'ಧ್ಯಾನ ಧಾರಣ ಸಮಾಧಿ'ಗಳ ಗರ್ಹಣೆಗಾಗಿ, ಅತ್ಯುತ್ಸಾಹದಲ್ಲಿ ಮೈಮರೆತು 'ಪರಿಣಾಮ'ವನ್ನು ಆಲೋಚಿಸದೆ, ಮುಗ್ಗಿಯ ಮಾಯಿದೇವಾದಿ ಮಹಾಮನೀಷಿಗಳು 'ಧ್ಯಾನ ಧಾರಣ ಸಮಾಧಿ'ಗಳಿಗೆ ಶರಣಸಂಪ್ರದಾಯರೀತ್ಯ 'ಹೊಸ ಪರಿಭಾಷೆ'ಯನ್ನು ನೀಡಿದುದೇ ಮಹಾಪ್ರಮಾದವಾಗಿ ಪರಿಣಮಿಸಿತು. ಆ ಸಣ್ಣ ತಪ್ಪು ಮುಂದಿನ ಮಹಾದುರಂತಕ್ಕೆ ನಾಂದಿಯೇ ಆಗಿಹೋಯಿತು. ಶರಣರ ಮಾತುಗಳಲ್ಲಿ ಹೇಳಬಹುದಾದರೆ ತಾನಿಟ್ಟ ಭೇತಾಳ ತನ್ನನೇ ನುಂಗಿತು; ಸುಖಕ್ಕೆ ತುಂಬಿದ ದೀವಿಗೆ ಮನೆಯೆಲ್ಲವ ಸುಟ್ಟಿತು; ಹಲವುಕಾಲ ಧಾವತಿಗೊಂಡು ಒಟ್ಟಿದ ಹಿದಿರೆಯು ಒಂದು ಮಿಡುಕುರಲ್ಲಿ ಬೇಯಿತು! ಸಾಲದ್ದಕ್ಕೆ ಅಂದಿನ ದೇಶಕಾಲ ಸನ್ನಿವೇಶಗಳು ಶರಣಸಂಪ್ರದಾಯಕ್ಕೆ ಅತ್ಯಂತ ಪ್ರತಿಕೂಲವಾಗಿದ್ದವು. ಹಿಂದೂ ಧರ್ಮದ ವೇದಾಗಮ ಪುರಾಣೇತಿಹಾಸಗಳ ಪುನರುಜ್ಜೀವನ ಕಾಲವದು; ಬ್ರಾಹ್ಮಣ ಸಂಪ್ರದಾಯದ ರಾಮಾಯಣ ಭಾರತಾದಿ 'ಪುರಾಣಸಾಹಿತ್ಯ' ಕನ್ನಡಕ್ಕೆ ಅನುವಾದವಾಗಿ ಬಹುಸಂಖ್ಯಾತ ಶೂದ್ರಾದಿ ಪಾಮರ ಜನಸಾಮಾನ್ಯರು ಮರುಳಾಗಿ ಹೋಗುತ್ತಿದ್ದ ಕಾಲವದು. ಅವನ್ನು ತಡೆಗಟ್ಟುವ ಪ್ರಯತ್ನದಲ್ಲಿಯೆ ಶರಣಸಂಪ್ರದಾಯ 'ಪುರಾಣರಚನಾದಿ ಜನಪ್ರಿಯಮಾರ್ಗ'ಗಳನ್ನು ಅವಲಂಬಿಸಿ ದುರಂತಕ್ಕೀಡಾಗಿ ತನ್ನ ಪರಮ ವಿಪಕ್ಷಿಯಾದ 'ಶೈವ'ಕ್ಕೇ ಅಂಗವಾಗಿ ಹೋಯಿತು! ಬಸವಾದಿ ಪ್ರಮಥರು ಸುಪ್ರಸಿದ್ಧ ಸ್ಥಾವರಲಿಂಗಗಳ ಗರ್ಹಣೆಗಾಗಿ, ತಮ್ಮ ತಮ್ಮ ಕರಸ್ಥಲ ಲಿಂಗಗಳನ್ನು ಪ್ರಸಿದ್ಧ ಕ್ಷೇತ್ರ ಸ್ಥಾವರಲಿಂಗಗಳ ಹೆಸರಿನಿಂದ ಸಂಬೋಧಿಸಿ 'ಅಂಕಿತ'ಗಳನ್ನು ರಚಿಸಿಕೊಂಡರು. ಕ್ರೈಸ್ತರು ಬೈಬಲ್ಲಿಗೆ 'ಸತ್ಯವೇದ'ವೆಂದು, ವೇದಗಳ ಗರ್ಹಣೆಗಾಗಿ ಕರೆದುದನ್ನೇ ಇದು ಹೋಲುತ್ತದೆ! ಕ್ರಮಕ್ರಮೇಣ ಸಂಪ್ರದಾಯ ಶಿಥಿಲವಾದಂತೆ 'ಶರಣರು ಸ್ಥಾವರ ಲಿಂಗೋಪಾಸಕರಾಗಿದ್ದರು' ಎಂಬ ತಿರುಗುಬೊಬ್ಬೆ ಪ್ರಾರಂಭವಾಯಿತು![1] ನಾಮ ಸಾದೃಶ್ಯಗಳಿಂದ ಭ್ರಮಿತರಾದ ಪಂಡಿತವರ್ಗ ಶರಣರು ಖಂಡಿಸಿದ 'ಸ್ಥಾವರ ಲಿಂಗಾರ್ಚನೆ'ಯನ್ನು ಶರಣರ ತಲೆಗೇ ಕಟ್ಟಿಬಿಟ್ಟರು! ಇದೇ ರೀತಿಯಲ್ಲಿ ಮುಗ್ಗಿಯ ಮಾಯಿದೇವಾದಿ ಶರಣರು ಗರ್ಹಣೆಗಾಗಿ 'ಧ್ಯಾನ ಧಾರಣ ಸಮಾಧಿ'ಗಳಿಗೆ ಹೊಸಪರಿಭಾಷೆಯನ್ನು ನೀಡಿದುದರ ದುಷ್ಪರಿಣಾಮವಾಗಿ ಕ್ರಮಕ್ರಮೇಣ ಇಡೀ 'ಯಮಾದ್ಯಷ್ಟಾಂಗ ಕರ್ಮಯೋಗ' ಶರಣಸಂಪ್ರದಾಯದಲ್ಲಿ ಆವಾಹಿತವಾಯಿತು, ಸ್ಥಾಪಿತವಾಯಿತು, ಸನ್ನಿಹಿತವಾಯಿತು, ಸಮ್ಮುಖನಾಯಿತು, ಅವಕುಂಠಿತವಾಯಿತು ಕೊನೆಗೆ 'ವರದ'ವಾಯಿತು! ಯಾವ 'ಯಮಾದ್ಯಷ್ಟಾಂಗ ಯೋಗ'ವನ್ನು ಬಸವಾದಿ ಪ್ರಮಥರು ಕುತ್ತಿಗೆ ಹಿಡಿದು ಆಚೆಗೆ ನೂಕಿದ್ದರೋ, ಆ 'ಅಷ್ಟಾಂಗಯೋಗ' ಶರಣಸಂಪ್ರದಾಯದಲ್ಲಿನ ಸಣ್ಣ ತಪ್ಪಿನಿಂದಾಗಿ ಮತ್ತೆ ಗವಾಕ್ಷಿಯಿಂದ ಪ್ರತ್ಯಕ್ಷವಾಯಿತು! ಕಂಬಳಿಯೆಂದು ಭ್ರಮಿಸಿದ್ದು ಬಿಡಿಸಿಕೊಳ್ಳಲೀಯದ ಕರಡಿಯಾಯಿತು!

ಶರಣಸಂಪ್ರದಾಯದಲ್ಲಿ ಆಗಿಹೋದ ಈ 'ಯೋಗದ ದುರಂತ'ವನ್ನು ಸ್ಥೂಲವಾಗಿ ಅವಲೋಕಿಸೋಣ.

ಬಸವಾದಿ ಪ್ರಮಥರು 'ಯಮಾದ್ಯಷ್ಟಾಂಗ ಯೋಗ' ವನ್ನು ಸಂಪೂರ್ಣವಾಗಿ ನಿರಸನಗೈದಿದ್ದರು. ಮುಗ್ಗಿಯ ಮಾಯಿದೇವರು ಸ್ವಲ್ಪ ಉದಾರಿಗಳಾಗಿ 'ಧ್ಯಾನ ಧಾರಣ ಸಮಾಧಿ'ಗಳನ್ನು ಶರಣಸಂಪ್ರದಾಯ ದೀಕ್ಷೆ ನೀಡಿ 'ನಾಮ ಮಾತ್ರ'ದಲ್ಲಿ ಸ್ವೀಕರಿಸಿದರು. ಮಾಯಿದೇವರು ಸ್ವೀಕರಿಸಿದ್ದು 'ಧ್ಯಾನ ಧಾರಣ ಸಮಾಧಿ'ಗಳನ್ನಲ್ಲ. ಅವುಗಳ 'ಪ್ರಸಿದ್ಧ ನಾಮ'ಗಳನ್ನು ಮಾತ್ರ ಎಂಬುದು ಅವರ ವಿವರಣೆಗಳಿಂದಲೇ ತಿಳಿದುಬರುತ್ತದೆ! ಅವರ ವಾದವನ್ನು ಕ್ರೋಢೀಕರಿಸುವುದಾದರೆ– ಅಷ್ಟಾಂಗ ಯೋಗದ ಪ್ರಥಮ ಪಂಚಕವು ಪೂರ್ವ 'ಕರ್ಮಯೋಗ' ವೀರಶಿವ ಯೋಗ ತತ್ಪರರಿಗೆ ಇದರ ಆಚರಣೆಯೇಕೆ ? ಮಾತು ಸಹ ಇಲ್ಲ![2] 'ಧ್ಯಾನ ಧಾರಣಸಮಾಧಿ'ಗಳು ಉತ್ತರ 'ಜ್ಞಾನಯೋಗ' ತ್ರಯಗಳಾದುದರಿಂದ, ವಿಶಿಷ್ಟಾರ್ಥದಲ್ಲಿ ಭಿನ್ನ ಪರಿಭಾಷೆಯಲ್ಲಿ ವೀರಶೈವಕ್ಕೂ ಮಾನ್ಯವಾದ ಶಿವಯೋಗ

---

1 'ಲಿಂಗವಂತ ಧರ್ಮ–ಸ್ಥಾವರಲಿಂಗಾರ್ಚನೆ–' ಶರಣ ತ್ರೈ ಮಾಸಿಕ (1976. ಜುಲೈ ಸಂಚಿಕೆ)

2 ಶಿವಾಧವ ಶತಕ 50ನೇ ವೃತ್ತ.

ತ್ರಯಗಳು.[1] ಅಂತರಂಗ ಯಜನ–ಸೂಕ್ಷ್ಮ ಶರೀರದಲ್ಲಿ ಪ್ರಾಣಲಿಂಗ ಪೂಜೆಯೇ ಧ್ಯಾನ ; ಬಹಿರಂಗ ಪೂಜೆ–ಸ್ಥೂಲ ಶರೀರದಲ್ಲಿ ಇಷ್ಟಲಿಂಗ ಪೂಜೆಯೇ ಧಾರಣ ; ಆತ್ಮಲಿಂಗ ಸಂಧಾನ ಸಮಾಹಿತ ಕ್ರಿಯೆ–ಭಾವಲಿಂಗ ಸ್ಮರಣೆಯಲ್ಲಿ ಸಾವಧಾನವೇ ಸಮಾಧಿ[2] ಇಷ್ಟಲಿಂಗವನ್ನು ಹಗಲಿರುಳೂ ಏಕನಿಷ್ಠೆಯಲ್ಲಿ ನೆನೆವುದೇ ಧ್ಯಾನ ; ಆ ಇಷ್ಟಲಿಂಗ ಜ್ಞಾನದಲ್ಲಿ ನಿರ್ಮಲ ಮನವನ್ನು ಲಯಿಸುವುದೇ ಸಮಾಧಿ ; ಮನೋಲಯ ಸ್ಥಾನವೆನಿಸಿದ ಇಷ್ಟ ಲಿಂಗವನ್ನು ಎಡೆಬಿಡದೆ ಭಕ್ತಿಯಿಂದ ಧರಿಸುವುದೇ ಧಾರಣ.[3] ಪೂಜಾಪೂರ್ವಕ ಇಷ್ಟಲಿಂಗ ಈ ಕ್ಷಣವೇ ಧಾರಣ ; ಸ್ಮರಣಪೂರ್ವಕ ಪ್ರಾಣಲಿಂಗ ಈಕ್ಷಣವೇ ಧ್ಯಾನ ; ಮನೋಲಯ ಪೂರ್ವಕ ಭಾವಲಿಂಗ ಈಕ್ಷಣವೇ ಸಮಾಧಿ ![4] ಧ್ಯಾನವೇ ಧಾರಣ ; ಧಾರಣವೇ ಸಮಾಧಿ ; ಸಮಾಧಿಯೇ ಧಾರಣ ; ಧಾರಣವೇ ಧ್ಯಾನ ; ಈ ಮೂರರ ಅನ್ಯೋನ್ಯಾಶ್ರಯವೆ ಶಿವಯೋಗ.[5] ಯೋಗಮಾರ್ಗಿಗಳಿಗೆ ಗಲಿಬಿಲಿ ಭ್ರಮೆಗಳನ್ನು ಹುಟ್ಟಿಸಲೆಂದೇ ಮಾಯಿದೇವ 'ಬಹು ನಿರ್ವಚನ ತಂತ್ರ' ವನ್ನು ಪ್ರಯೋಗಿಸಿದನು ! ಈ ರಹಸ್ಯವನ್ನು ಅರಿಯದೆ ಹೋದುದರಿಂದ ಶರಣಸಂಪ್ರದಾಯದಲ್ಲಿ ಪಾಂಡಿತ್ಯಪ್ರದರ್ಶನಕ್ಕಾಗಿಯೇ ಹುರುಡಿನಲ್ಲಿ ಅಷ್ಟಾಂಗ ಯೋಗದ 'ಧ್ಯಾನ ಧಾರಣ ಸಮಾಧಿ'ಗಳಿಗೆ ಪರಿಭಾಷೆಯಲ್ಲಿ ಸ್ವತಂತ್ರ ಸ್ವತಂತ್ರ ವ್ಯಾಖ್ಯೆಗಳು ಹುಟ್ಟಿಕೊಂಡವು ! ತಂತ್ರ ತಿರುಗುತಂತ್ರವಾಗಿ ಪರಿಣಮಿಸಿತು ! ಇಂತಹ ವಿಪುಲ ಭಿನ್ನಭಿನ್ನ ವ್ಯಾಖ್ಯೆಗಳಿಂದ ಶರಣಸಂಪ್ರದಾಯ ದಲ್ಲಿಯೂ ಯಮಾದ್ಯಷ್ಟಾಂಗ ಯೋಗದ 'ಧ್ಯಾನ ಧಾರಣ ಸಮಾಧಿ'ಗಳು ಮಾನ್ಯವೆಂಬ ಭ್ರಮೆಯು ಉಂಟಾ ಯಿತು ! ಶರಣಸಂಪ್ರದಾಯದ 'ಅಭೇದ್ಯ ಕೋಟೆ'ಯ ಕಲ್ಲುಗಳು ಸಡಿಲಗೊಂಡುದನ್ನು ಇಲ್ಲಿ ಕಾಣಬಹುದು !

ತತ್ಕಾಲೀನನೇ ಆದ ಮಹಾಪ್ರಾಜ್ಞ ಕಲ್ಲುಮಠದ ಪ್ರಭುದೇವ 'ಮಂತ್ರಗೋಪ್ಯ'ವನ್ನು ವ್ಯಾಖ್ಯಾನಿಸುವ ಮುನ್ನ ಪೀಠಿಕಾಸೂತ್ರದಲ್ಲಿ 'ಪ್ರಭು–ಸಿದ್ಧರಾಮ' ಸಂವಾದದಲ್ಲಿ (ಪ್ರಭು ಸಿದ್ಧರಾಮನನ್ನು ಕುರಿತು)–'ನೀನು ಮಾಡುವ ಅಷ್ಟಾಂಗ ಯೋಗಮಾರ್ಗದ 'ಧ್ಯಾನ ಧಾರಣ ಸಮಾಧಿ'ಯಿಂದ ಶಿವತತ್ತ್ವದ ನಿಜಸಮಾಧಿ ನಿನಗೆಂದೂ ಘಟಿಸದು ! ಯಮ ನಿಯಮ ಆಸನ ಪ್ರಾಣಾಯಾಮ ಪ್ರತ್ಯಾಹಾರ ಈ ಐದು ಕರ್ಮಯೋಗಂಗಳು,ಧ್ಯಾನ ಧಾರಣ ಸಮಾಧಿ ಈ ಮೂರು ಯೋಗಂಗಳು, ತಮ್ಮ 'ಲಕ್ಷ್ಯ'ದಲ್ಲಿ ಕೂಡುವ ಯೋಗಂಗಳು. ಐದು ಪೂರ್ವ ಯೋಗಂಗಳ ಬಿಟ್ಟು ಉತ್ತರವಾದ ಧ್ಯಾನಧಾರಣ ಸಮಾಧಿ ಯೋಗಗಳು ಷಟ್ಸ್ಥಲ ಲಿಂಗಾಂಗಯೋಗಿಗಳಿಗೆಯೂ ಉಂಟು. ಅದೆಂತೆಂದೊಡೆ ಅಷ್ಟಾಂಗಯೋಗಿಗಳ ಲಕ್ಷ್ಯಾನು ಸಂಧಾನದ ಪರಿಯಲ್ಲ ; ಷಟ್ಸ್ಥಲ ಜ್ಞಾನಿಗಳ ಧ್ಯಾನಧಾರಣ ಸಮಾಧಿಗಳ ಪರಿಬೇರೆ....ಗುರುಕರುಣದಿಂದ ಸಮ್ಯಜ್ಞಾನಮಂ ಪಡೆದು, ಆ ಗುರುಕರುಣದಿಂದಲೇ ಅಖಂಡ ಮಹಾ ಪ್ರಕಾಶ ಲಿಂಗವಂ ಪ್ರತ್ಯಕ್ಷವಂ ಮಾಡಿಕೊಂಡು, ಆ ಸಮ್ಯಜ್ಞಾನ ದೃಕ್ಕಿಂದ ಆ ಲಿಂಗವಂ ನೋಡಿ ಶಿವಮಂತ್ರ ಯುಕ್ತರಾಗಿ ಧ್ಯಾನಿಸುವುದೇ ಧ್ಯಾನಯೋಗವೆಂದೂ, ಆ ಸಮ್ಯಜ್ಞಾನದಿಂದ ಷಟ್ಸ್ಥಲ ಲಿಂಗಾಂಗ ಸಂಯೋಗಾನು ಭಾವಿಯಾಗಿ ಆ ಲಿಂಗ ಸುಖವನನುಭವಿಸುತ್ತಿರ್ಪುದೀಗ ಧಾರಣಯೋಗವೆಂದೂ, ಇಂತು ಲಿಂಗಾಂಗ ಸಂಗದಿಂದ ಲಿಂಗಸ್ವರೂಪನಾಗಿ ಲಿಂಗಸುಖವನರಿದನುಭವಿಸುತ್ತಿರ್ಪ ಅರಿವಡಗಿ ನಿಂದುದೇ ಸಮಾಧಿಯೋಗವೆಂದೂ ಉಪ ದೇಶಿಸಲು....'ಎಂಬುದಾಗಿ ಚಿತ್ರಿಸುತ್ತಾನೆ. ಮಂತ್ರಗೋಪ್ಯದ ಪಲ್ಲವಿಯನ್ನು ನಿರ್ವಚಿಸುವಾಗ 'ಜ್ಞಾನವೇ ಧ್ಯಾನ; ಅನುಭಾವವೇ ಧಾರಣ ; ಆನಂದನಿಂದ ನಿಜವೇ ಸಮಾಧಿ'ಯೆನ್ನುತ್ತಾನೆ. ಈ ಮಂತ್ರಗೋಪ್ಯದ 27 ಚರಣಗಳ

---

[1] ಶಿವಾಧವ ಶತಕ 51ನೇ ವೃತ್ತ

[2] ಅಲ್ಲೇ, 52ನೇ ವೃತ್ತ

[3] ಅಲ್ಲೇ, 53ನೇ ವೃತ್ತ

[4] ಅಲ್ಲೇ, 54ನೇ ವೃತ್ತ

[5] ಅಲ್ಲೇ, 55ನೇ ವೃತ್ತ (ವಿರಕ್ತತೋಂಟದಾರ್ಯನ ಟೀಕೆ ಸಹಿತವಾಗಿ)

ಪ್ರತಿ ತಾತ್ಪರ್ಯದಲ್ಲಿಯೂ 'ಕರ್ಮಯೋಗ'ದ ಪರಿಭಾಷೆಗಳನ್ನು ನಿರಾಕರಿಸಿ 'ಧ್ಯಾನ ಧಾರಣ ಸಮಾಧಿ' ನಾಮವನ್ನುಳ್ಳ ಶಿವಯೋಗವನ್ನೇ ಎತ್ತಿ ಎತ್ತಿ ಹಿಡಿಯುತ್ತಾನೆ.

ಎರಡನೆಯ ಚನ್ನಬಸವನು ಪದಮಂತ್ರಗೋಪ್ಯದ 'ಯೋಗ ಯೋಗವು ಎಂದು ಏಕೆ ಬಳಲುವೆ ಯೋಗಿ ಸಾಕು ಗುರು ಹೇಳಿದಂತಿಹುದು ಯೋಗ' ಎಂಬ ನುಡಿಯನ್ನು 'ಪೂರ್ವಯೋಗ ಪಂಚಕ ಉತ್ತರಯೋಗ ತ್ರಿವಿಧ ಹೀಗೆಂದು ಎಲೈ ಪೂರ್ವಯೋಗ ಪಂಚಯೋಗವನುಳ್ಳ ಹಠಯೋಗಿಯೇ ಏಸು ಕಾರಣ ನೀನು ದೇಹಾತ್ಮರುಗಳನ್ನು ದಂಡಿಸುತ್ತಿರುವೆ ? ಪೂರ್ವಯೋಗ ಪಂಚಕವು ಸಾಕು. ಶ್ರೀಗುರುದೇವನು ನಿರೂಪಿಸಿದ ಹಾಗೆ 'ಧ್ಯಾನ ಧಾರಣ ಸಮಾಧಿ'ಯೆಂಬ ಉತ್ತರ ಯೋಗತ್ರಯದಲ್ಲಿ ಸಮರಸವಾಗಿಹುದು ಅದೇ ಶಿವಯೋಗವು' ಎಂದು ನಿರ್ವಚಿಸುತ್ತಾನೆ.

ಅದೇ ವಾಕ್ಯಕ್ಕೆ ಮತ್ತೋರ್ವ ಅಜ್ಞಾತ ವ್ಯಾಖ್ಯಾತೃವಿನ ಟೀಕೆಯನ್ನು ನೋಡಿ, 'ಎಲೈ ಭಿನ್ನಯೋಗಿ, ಯಮಾದಿ ಕರ್ಮಯೋಗ ಪಂಚಕವು ಧ್ಯಾನಧಾರಣ ಸಮಾಧಿಯೆಂಬ ತ್ರಿವಿಧಯೋಗವು ಹೀಗೇದು ಆವ ಪ್ರಯೋಜನಕ್ಕೆ ದೇಹವ ದಂಡಿಸಿ ಕಷ್ಟಬಡುವೆ ದಣಿಯಬೇಡ' ಎಂದು ಹೇಳಿ ಅಷ್ಟಕ್ಕೆ ಸುಮ್ಮನಿರದೆ, ಮತ್ತೆ 'ಕಾರಿಕೆ'ಗಳಲ್ಲಿ 'ಯಮನಿಯಮಗಳಿಂದ ಭಕ್ತನೆನಿಸುವ ; ಆಸನಯುಕ್ತ ಮಾಹೇಶ್ವರ ; ಪ್ರಾಣಾಯಾಮದಿಂದ ಪ್ರಾಣಲಿಂಗಿ ; ಪ್ರತ್ಯಾಹಾರ ಯುಕ್ತ ಪ್ರಸಾದಿ ; ಧ್ಯಾನ ಧಾರಣಸಂಪನ್ನನು ಶರಣನು ; ಐಕ್ಯನು ಸಮಾಧಿಸ್ಥನೆಂದು ಹೇಳಿ

ಏವಮಷ್ಟಾಂಗ ಯೋಗೇನ ವೀರಶೈವೋ ಭವೇನ್ನರಃ ।
ತಸ್ಮಾತ್ಸರ್ವ ಪ್ರಯತ್ನೇನ ಕರ್ಮಣೋ ಜ್ಞಾನತೋಽಪಿವಾ ।
ತ್ವಮಪ್ಯಷ್ಟಾಂಗ ಮಾರ್ಗೇಣ ಶಿವಯೋಗಿ ಭವಾನಘ

ಎಂದುದಾಗಿ ಯಮಾದಿ ಕರ್ಮಯೋಗ ಪಂಚಕವು ಕ್ರಿಯಾಸ್ವರೂಪವು ; ಧ್ಯಾನಧಾರಣ ಸಮಾಧಿಗಳೆಂಬ ತ್ರಿವಿಧ ಯೋಗವು ಜ್ಞಾನಸ್ವರೂಪವು. ಆ ಕ್ರಿಯಾಜ್ಞಾನಗಳೆಂಬುಭಯವು ಒಂದೇ ಸ್ವರೂಪವೆಂದು ಆಚಾರ್ಯನು ನಿರೂಪಿಸಿದ ಹಾಗೆ ಇರುವಂಥಾದ್ದೆ ಶಿವಯೋಗವಾದಂಥ ರಾಜಯೋಗವು ಎಂದು ವಿರೋಧಾಭಾಸದ ವಿಪರೀತವಾದ ಭಿನ್ನ ವ್ಯಾಖ್ಯೆಯನ್ನು ಅನುವಾದ ಮಾಡುತ್ತಾನೆ. ಈ 'ರಾಜಯೋಗ' ಅಪವ್ಯಾಖ್ಯೆಯಲ್ಲಿ ಶರಣಸಂಪ್ರದಾಯದ 'ಪತನ' ಸ್ಪಷ್ಟವಾಗಿದೆ ![1] ಮಹಾಮೇಧಾವಿಯಾದ ಚೆನ್ನವೃಷಭೇಂದ್ರ ಯೋಗೀಂದ್ರನು 'ಕ್ಷೇತ್ರಜ್ಞಸುಮನೋವಾದ'ದ 7ನೇ ಲಿಂಗ ನಿಜಸ್ಥಾಪನಸ್ಥಲದಲ್ಲಿ ಅನೇಕ ಯೋಗ ಸಾಧನ ಪ್ರಕ್ರಿಯೆಗಳನ್ನು 'ವಾದ' ಪೂರ್ವಕವಾಗಿ ವಿಡಂಬಿಸಿ, ಪ್ರಾಣಲಿಂಗಿ ಸ್ಥಲದಲ್ಲಿ ನಿಜಶಿಷ್ಯಕೃತ 'ಪ್ರಾಕೃತ ಯಮಾದ್ಯಷ್ಟಾಂಗ ಕರ್ಮಯೋಗ ಪ್ರಶಂಸೆ'ಯನ್ನು ವಾದಪೂರ್ವಕವಾಗಿ ಖಂಡಿಸುತ್ತಾನೆ ; ದೇಹೇಂದ್ರಿಯ ವೈರಾಗ್ಯ, ಪರಮಾತ್ಮಾಭಿರತಿ, ಸಕಲ ನಿರತೋದಾಸೀನ, ವಾಸನಕರಣಜಯ, ನಿರ್ವಿಷಯ, ಕರ (ಸ್ಥಲ) ನಿಷ್ಠೆ, ಶಿವನಾನೆಂಬಿರುವು, ಚಿನ್ಮಾತ್ರಗಳೇ ಅನುಕ್ರಮವಾಗಿ ಯಮಾದ್ಯಷ್ಟಾಂಗ ಯೋಗಗಳೆಂದು ವಿವರಿಸುತ್ತಾನೆ.

ತೋಂಟದ ಸಿದ್ಧಲಿಂಗಯತಿಯು ಇದೇ 'ಧ್ವನಿ'ಯಲ್ಲಿ ಭಿನ್ನ ರೀತಿಯಲ್ಲಿ ಶರಣ ಪರಿಭಾಷೆಯಲ್ಲಿ ಯಮಾದ್ಯಷ್ಟಾಂಗ ಯೋಗವನ್ನು ವಿವರಿಸಿ, 'ಇಂತೀ ಅಷ್ಟಾಂಗ ಯೋಗದಲ್ಲಿ ಶಿವಲಿಂಗಾರ್ಚನೆಯ ಮಾಡಿ ಶಿವ ತತ್ತ್ವ

---

[1] ಇಲ್ಲಿ ಉಕ್ತವಾದ ಭಿನ್ನಮತದ 5 ಶ್ಲೋಕಗಳು ಶ್ರೀ ಚೆನ್ನಸದಾಶಿವಯೋಗಿಯ 'ಶಿವಯೋಗ ಪ್ರದೀಪಿಕೆ'ಯ (1913) ತೃತೀಯ ಪಟಲದ ಕೊನೆಯ 5 ಶ್ಲೋಕಗಳಾಗಿವೆ ! ನಿಜಗುಣನ 'ಪರಮಾರ್ಥ ಪ್ರಕಾಶಿಕೆ'ಗೆ ಮೂಲವಾದ ಈ ಗ್ರಂಥವು 'ಸಿದ್ಧಸಿದ್ಧಾಂತ ಪದ್ಧತಿ' [ಸಿದ್ಧ (ನಾಥ) ಸಂಪ್ರದಾಯದ ಸಿದ್ಧಾಂತ ಯೋಗಗ್ರಂಥ !] ಯ ಸಾರವಾಗಿರುತ್ತದೆ ! ಈ ಗ್ರಂಥದ ವಸ್ತು 'ಮಂತ್ರಲಯ ಹಠರಾಜಯೋಗಗಳು'. ಅಮನಸ್ಕ ರಾಜಯೋಗ ಪ್ರಶಸ್ತಿ. (ಇವೆಲ್ಲವೂ ತೋಂಟದ ಯತಿ, ಆದಯ್ಯಾದಿಗಳಿಂದ ಖಂಡಿಸಲ್ಪಟ್ಟಿವೆ !)

ದೊಡನೆ ಕೂಡುವುದೀಗ 'ಲಿಂಗಾಂಗ ಯೋಗ' ಎನ್ನುತ್ತಾನೆ. ಕರ್ಮಕಾಂಡಿಗಳು ಆಚರಿಸುವ ಲಿಂಗ ವಿರಹಿತ 'ಕರ್ಮಯೋಗ' ಪೂರ್ವ ಪಂಚಕಗಳನ್ನು ಉಲ್ಲೇಖಿಸಿ, ಉತ್ತರಯೋಗತ್ರಯಗಳಾವ ನಾದಲಕ್ಷ್ಯ, ಬಿಂದುಲಕ್ಷ್ಯ ಕಳಾಲಕ್ಷ್ಯ'ಗಳನ್ನು ವಿವರಿಸಿ ಲಿಂಗವಿರಹಿತವಾಗಿ ಮಾಡುವ 'ಈ ಎಂಟು ಕರ್ಮಯೋಗ'ಗಳನ್ನು ಮುಟ್ಟಲಾಗದು ಎಂದು ಎಚ್ಚರಿಸಿ ಲಿಂಗಸಂಧಾನವೆಂಬ ಯೋಗಸಂವಾದಿ 'ಶಿವಯೋಗ'ವನ್ನು ಸ್ಪಷ್ಟವಾಗಿ ನಿರ್ವಚಿಸುತ್ತಾನೆ.[1] ಅಂಬಿಕಾಯೋಗ, ಹಠಯೋಗ, ಅಷ್ಟಾಂಗಯೋಗ, ಪವನಯೋಗ. ಲಯಯೋಗ,ಮಂತ್ರಯೋಗ, ರಾಜಯೋಗ ಗಳನ್ನು ಅನುಕ್ರಮವಾಗಿ ಡೊಂಬತನ, ಆಟಮಟತನ, ಕಷ್ಟಕರ್ಮ, ಪ್ರಪಂಚು, ಶ್ವಾನಾತ್ ನಿಕೃಷ್ಟ, ಸರ್ವ ಸಂದೇಹಕಾರಣ, ಗಾಜುಗೋಜು ಎಂದು ವಿಡಂಬಿಸಿ, ಲಯಮಂತ್ರ ರಾಜಯೋಗಗಳು ಏಕೆ ತ್ಯಾಜ್ಯವೆಂಬುದನ್ನು ವಿವರಿಸಿ ನಿರಸನಗೈಯ್ಯುತ್ತಾನೆ.

ಹೀಗೆ ಶರಣಸಂಪ್ರದಾಯ 'ಯಮಾದ್ಯಷ್ಟಾಂಗ ಕರ್ಮ'ಯೋಗ 'ಸಂಪೂರ್ಣನಿರಸನ'ದಿಂದ, ಗರ್ಹಣೆ ಗಾಗಿ 'ಪೂರ್ವಯೋಗ'ನಿರಸನ ಯೋಗ್ಯವೆಂದುದು ನಿಜವೇ ಆಗಿ ಕೆಳಕ್ಕೆ ಇಳಿಯುತ್ತದೆ. ಅದು ಮುಂದುವರಿದು ಭಿನ್ನಪರಿಭಾಷೆಯಲ್ಲಿ 'ಇಷ್ಟಲಿಂಗಯುಕ್ತ ಅಷ್ಟಾಂಗಯೋಗದ ಸ್ಥಾಪನೆ'ಯ ಮಟ್ಟಕ್ಕೆ ಕೆಳಕ್ಕೆ ಇಳಿಯುತ್ತದೆ. ಇನ್ನೂ ಒಂದು ಹೆಜ್ಜೆ ಮುಂದೆ ಬಂದಾಗ ಉಳಿಯುವುದು ಕಥೆಯಲ್ಲ ಬರಿ ವ್ಯಥೆ ! ಪ್ರಸಿದ್ಧ ಅಷ್ಟಾಂಗಯೋಗಿ ಸಿದ್ಧರಾಮನಂತಹ ಮಹಾಪುರುಷನನ್ನೂ ಪ್ರಭಾವಬೀರಿ ಅಷ್ಟಾಂಗಯೋಗಮುಕ್ತ ಶಿವಯೋಗಿಯನ್ನಾಗಿಸಿದ ಶರಣಸಂಪ್ರದಾಯ ರಾಜತೇಜವನ್ನು ಕಳೆದುಕೊಂಡು ವಿರೂಪಹೊಂದಿ, ಅಪಖ್ಯಾತಿ, ಅನುಸರಣಸಾಂಕರ್ಯ ಗಳಿಂದಾಗಿ 'ಅಷ್ಟಾಂಗಯೋಗ'ದ ಹಿಂದೆಯೇ ಹುಚ್ಚುಹಿಡಿದು ಹಿಂಬಾಲಿಸುವುದು ಕಂಡುಬರುತ್ತದೆ !

ಷಣ್ಮುಖ ಶಿವಯೋಗಿಯಿಂದ ಅಖಂಡೇಶ್ವರ ವಚನಗಳಲ್ಲಿ 'ಯಮಾದಿ ಅಷ್ಟಾಂಗಯೋಗನಿರಸನ'ವೇ ಸಂಪೂರ್ಣವಾಗಿ ನಿರಸಿತವಾದುದ್ದು ಶೋಚನೀಯ, ವಿಷಾಧಾಂತವಾಗಿ ಕಂಡುಬರುತ್ತದೆ.[2]

ಮಂತ್ರಯೋಗ, ಲಯಯೋಗ, ಹಠಯೋಗ, ಹಠಯೋಗದ ನಿಜದಂಗವಾದ ಯಮಾದ್ಯಷ್ಟಾಂಗ ಯೋಗ, ತತ್ಸಾಧನೆಯಿಂದಾಗುವ ಅದ್ಭುತ ಹಠಯೋಗಸಿದ್ಧಿಗಳು, ಸಾಂಖ್ಯ ತಾರಕ ಅಮನಸ್ಕವೆಂಬ ರಾಜಯೋಗ ತ್ರಯಗಳು, ಅಂತರ್ಲಕ್ಷ್ಯ ಬಹಿರ್ಲಕ್ಷ್ಯ ಮಧ್ಯಲಕ್ಷ್ಯವೆಂಬ ತಾರಕ ಬ್ರಹ್ಮತ್ರಯಗಳು, ಅಮನಸ್ಕ ರಾಜಯೋಗ, ಭ್ರೂಮಧ್ಯಲಕ್ಷ್ಯವಾದ ಉನ್ಮನಿಗಳೆಲ್ಲವನ್ನೂ (ಲಿಂಗವಿರಹಿತವಾದುವುಗಳನ್ನೇ ! ?) ಅತ್ಯುತ್ಸಾಹದಿಂದ ವಿವರಿಸಿ 'ಭ್ರೂಮಧ್ಯಲಕ್ಷ್ಯವಾದ ಉನ್ಮನಿಯೇ ಪರಮಪದ, ಜ್ಞಾನ, ಮೋಕ್ಷ, ಪರಮರಹಸ್ಯ, ಶಿವಯೋಗ ! ಆದರಿಂದೆ ಅನ್ಯಮಾದ ಅರ್ಥಮಂ ಪೇಳ್ವ ಗ್ರಂಥ ವಿಸ್ತಾರವೆಲ್ಲವೂ ವ್ಯರ್ಥಮಪ್ಪುದಾಗಿ ಈ ಉನ್ಮನಿಯ ಸಾಧಿಸುವಾತನೆ ಜೀವನ್ಮುಕ್ತ ನೋಡಾ ![3] ಎಂದು ಹುಚ್ಚಾಗಿ ಪೆಚ್ಚಾಗಿ ಘೋಷಿಸಿ, ಅಲ್ಲಮಪ್ರಭುವಿನಿಂದ ತೊಡಗಿ ತೋಂಟದ ಯತಿಯವರೆಗೂ ಬಂದಿದ್ದ 'ಅಷ್ಟಾಂಗ ಯೋಗಾದಿ ನಾನಾ ಕರ್ಮಯೋಗ ನಿರಸನ ಪರಂಪರೆಯ ಮುಖಕ್ಕೆ ಮಸಿ ಯನ್ನೇ ಬಳಿಯುತ್ತಾರೆ, ಪ್ರಚಛನ್ನರಾಜಯೋಗಿ ಮಹಾಪುರುಷ ಷಣ್ಮುಖ ಶಿವಯೋಗಿ'.

ಹೀಗೆ ಕೇವಲ ಗರ್ಹಣೆಗಾಗಿ 'ಧ್ಯಾನಧಾರಣ ಸಮಾಧಿ' 'ಶಬ್ದ'ಗಳಿಗೆ ಹೊಸ ಪರಿಭಾಷೆಯನ್ನು ನೀಡಿದ

---

[1] ಷಟ್ಸ್ಥಲಜ್ಞಾನ ಸಾರಾಮೃತ–ವಚನ 364

[2] ಅಖಂಡೇಶ್ವರ ವಚನಗಳು– ವಚನ52 ರಿಂದ 77

[3] ಇದು ಸಿದ್ಧ(ನಾಥ) ಯೋಗಸಂಪ್ರದಾಯದ 'ಮಂತ್ರಲಯಹಠ ರಾಜಯೋಗಗಳ ಮತವಾಗಿದೆ ! ಈ ಭಿನ್ನ ಯೋಗಗಳನ್ನು ಬಸವಾದಿ ಪ್ರಮಥರಿಂದ ತೋಂಟದ ಯತಿಯವರೆವಿಗೆ ಸಕಲ ಶರಣರೂ ಖಂಡಿಸಿರುತ್ತಾರೆ. ಪ್ರಖ್ಯಾತ ನಿಜಗುಣ ಶಿವಯೋಗಿಯು ಈ ಚತುರ್ವಿಧ ಭಿನ್ನ ಕರ್ಮಯೋಗಗಳಲ್ಲಿ ಆದರವುಳ್ಳ ಮಿಶ್ರಪಂಥಿ, ಆದುದರಿಂದಲೆ ಈ ಪ್ರಬಂಧ ದಲ್ಲಿ ಅವನ ಮತ ಅನುಲ್ಲೇಖಗೊಂಡಿದೆ !

ಸಣ್ಣ ತಪ್ಪು ಇಷ್ಟು ದೊಡ್ಡ ದುರಂತದಲ್ಲಿ ಪರ್ಯಾವಸಾನವಾಗುತ್ತದೆ ! ಇಂದಿಗೂ ಶರಣಸಂಪ್ರದಾಯದ ನೆವದಲ್ಲಿ 'ಯಮಾದ್ಯಷ್ಟಾಂಗ ಕರ್ಮಯೋಗ' ಪ್ರಚಾರಕ್ಕಾಗಿಯೇ ದೊಡ್ಡ ದೊಡ್ಡ 'ಶಿವಯೋಗ' ಮಠ ಮಂದಿರಗಳಿವೆ !

ವೇದಾಂತ (ವಾಗದ್ವೈತ-ಪ್ರಾಕೃತಜ್ಞಾನ) ನಿರಸನ ; ಸಿದ್ಧಾಂತ (ಶೈವ ದ್ವೈತ-ಪ್ರಾಕೃತಭಕ್ತಿ) ನಿರಸನ ; ಯೋಗ (ಯಾಮಾದ್ಯಷ್ಟಾಂಗ ನಾನಾಭೇದಯೋಗ-ಪ್ರಾಕೃತ ಕರ್ಮ) ನಿರಸನಗಳು ಶರಣಸಂಪ್ರದಾಯದ ಮೂರು ಅಭೇದ್ಯ ಸಂರಕ್ಷಕ ಕೋಟೆಗಳೆನಿಸಿದ್ದವು.[1] ಆ 'ಪುರತ್ರಯ'ಗಳು ಪತನವಾಗುತ್ತಿದ್ದಂತೆಯೇ ಅಜೇಯವಾಗಿದ್ದ ಶರಣಸಂಪ್ರದಾಯ ಅಸ್ತಂಗತವಾಗಿ ನಾಮಾವಶೇಷವಾಗಿ ಹೋಯಿತು ! ರಾಮಾಯಣಾದಿ 'ಅನ್ಯಗ್ರಂಥ'ಗಳ ಬೌದ್ಧೀಕರಣದಿಂದ ಬೌದ್ಧರೂ ಜೈನೀಕರಣದಿಂದ ಜೈನರೂ ಸೋತುಹೋದಂತೆ, ಅನ್ಯವಾದ ಯಮಾದ್ಯಷ್ಟಾಂಗ ಯೋಗದ 'ಧ್ಯಾನ ಧಾರಣ ಸಮಾಧಿ'ಗಳನ್ನು ಗರ್ಹಣೆಗಾಗಿ ನಾಮಮಾತ್ರ ಸ್ವೀಕರಿಸಿದ ಸಣ್ಣ ತಪ್ಪಿಗಾಗಿ ಶರಣ ಸಂಪ್ರದಾಯ ಸರ್ವತಂತ್ರ ಸ್ವತಂತ್ರತ್ವವನ್ನೇ ಕಳೆದುಕೊಂಡಿತು !

ಇದೇ ಶರಣಸಂಪ್ರದಾಯದಲ್ಲಿನ ಯೋಗ-ದುರಂತದ ನಿಜೇತಿಹಾಸ ಕಾರುಣ್ಯ ಕಥೆಯಾಗಿದೆ !

---

1 ಕಾಡಸಿದ್ಧೇಶ್ವರವಚನ. ಪ್ರಾಣಲಿಂಗಿಸ್ಥಲ 14ನೇ ವಚನ ಹಾಗೂ ಭಕ್ತಸ್ಥಲ 20,15, ಮಾಹೇಶ್ವರಸ್ಥಲ, 6 ಪ್ರಾಣ ಲಿಂಗಿಸ್ಥಲ 7,11 ರ ಟೀಕೆಗಳು.

ವಾರಿಜ ಭೀಮದೇವ ಭಟ್

ಮಹಿಳೆಯರಿಗಾಗಿ ಯೋಗ

ಪರಮೇಶ್ವರನಾದ ಶಿವನು ಪಾರ್ವತಿಗೆ ಹೇಳಿಕೊಟ್ಟ 64 ಲಲಿತಕಲೆಗಳಲ್ಲಿ ಯೋಗಶಾಸ್ತ್ರವು ಒಂದು.

"ಜ್ಞಾನೇಂದ್ರಿಯಾಣಿ ಸರ್ವಾಣಿ ನಿಗೃಹ್ಯ ಮನಸಾ ಸಹ ।
ಏಕತ್ವ ಭಾವನಾ ಯೋಗಃ ಕ್ಷೇತ್ರಜ್ಞ ಪರಮಾತ್ಮಯೋಃ ।"

ಮನಸ್ಸಿನೊಂದಿಗೆ ಜ್ಞಾನೇಂದ್ರಿಯಗಳನ್ನೆಲ್ಲ ನಿಗ್ರಹಿಸಿ ಮಾಡುವ ಜೀವಪರಮಾತ್ಮರ ಏಕತ್ವ ಭಾವನೆಯೇ–ಯೋಗವೆಂದು ವಿಷ್ಣು ಪುರಾಣ ಹೇಳುತ್ತದೆ.

"ತಂ ವಿದ್ಯಾ ದುಃಖ ಸಂಯೋಗಂ ವಿಯೋಗಂ ಯೋಗ ಸಂಜ್ಞಿತಮ್"

ದುಃಖ ಸಂಬಂಧವನ್ನು ದೂರಮಾಡುವುದನ್ನು ಯೋಗವೆಂದು ತಿಳಿಯಬೇಕೆಂದು ಗೀತೆಯು ಹೇಳುತ್ತದೆ.

"ಯೋಗಶ್ಚಿತ್ತವೃತ್ತಿ ನಿರೋದಃ"

ಯೋಗವು ಚಿತ್ತವೃತ್ತಿಗಳ ನಿರೋಧ ಎಂದು ಪಾತಂಜಲಿಸೂತ್ರ ಹೇಳುತ್ತದೆ.

ಪರಮೇಶ್ವರನಾದ ಶಿವನು, ಶಿವಸಮ್ಮಿತಿಯಲ್ಲಿ ಶಾಸ್ತ್ರಗಳ ಪ್ರಕಾರ ಯೋಗಶಾಸ್ತ್ರಕ್ಕಿಂತ ಮಿಗಿಲಾದ ವಿದ್ಯೆ ಬೇರೆ ಯಾವುದೂ ಇಲ್ಲವೆಂದು ಹೇಳಿರುತ್ತಾನೆ, ಮತ್ತು

"ಆಲೋಕ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಪುನಃ ಪುನಃ। ಇದಮೇಕಂ ಸುನಿಷ್ಪನ್ನಂ ಯೋಗ ಶಾಸ್ತ್ರಂ ಪರಂ ಮತಮ್ ||"

ಎಲ್ಲಾ ವಿದ್ಯೆಗಳನ್ನು ನಾನು ಕೂಲಂಕಷವಾಗಿ ಅಭ್ಯಾಸ ಮಾಡಿನೋಡಿದ ಮೇಲೆ ಯಾವ ಶಾಸ್ತ್ರವೂ ಯೋಗ ಶಾಸ್ತ್ರದಷ್ಟು ಬೆಲೆಯುಳ್ಳದ್ದಲ್ಲ ಎಂದು ಹೇಳಿರುತ್ತಾನೆ.

ನಮ್ಮ ದೇಶದಲ್ಲಿ ಪುರಾತನ ಕಾಲದಿಂದಲೂ ಈ ವಿದ್ಯೆಯು ಇದ್ದರೂ, ಅದು ಇಲ್ಲಿಯವರೆಗೂ ಹೆಚ್ಚಾಗಿ ಪ್ರಚಾರದಲ್ಲಿ ಇರಲಿಲ್ಲವೆಂದು ಹೇಳುವುದು ಶೋಚನೀಯವಾದ ವಿಷಯ. ಇತ್ತೀಚೆಗೆ ಕೆಲವು ಭಾಗಗಳಲ್ಲಿ ಮಾತ್ರ ಈ ವಿದ್ಯೆಗೆ ಪ್ರಾಧಾನ್ಯತೆ ಕೊಟ್ಟು ಅತ್ಯಲ್ಪ ಜನರು ಕಲಿಯುತ್ತಿದ್ದಾರೆ.

ನಮ್ಮ ದೇಶದಲ್ಲಿ ಹುಟ್ಟಿ ಬೆಳೆದ ವಿದ್ಯೆಯನ್ನು ಪಾಶ್ಚಾತ್ಯರು ಈಗಾಗಲೆ ಕಲಿತು ಅವರ ದೇಶದಲ್ಲಿ ಹರಡುತ್ತಿರುವುದು ಸಂತೋಷದ ವಿಷಯ. ಆದರೆ ನಾವೆಲ್ಲಿ ನಮ್ಮ ವಿದ್ಯೆಯನ್ನು ಮರೆತು, ಆಮೇಲೆ ಅವರಿಂದಲೇ ಕಲಿಯಬೇಕಾಗುತ್ತದೆಯೋ ಗೊತ್ತಿಲ್ಲ. ಆದ್ದರಿಂದ ನಾವೆಲ್ಲರು ನಮ್ಮ ವಿದ್ಯೆಯು ಭದ್ರವಾಗಿ ಉಳಿಯುವ ಹಾಗೆ, ಅಭ್ಯಾಸ ಮತ್ತು ಪ್ರಚಾರದಲ್ಲಿ ಇಟ್ಟುಕೊಳ್ಳಬೇಕು.

ಜನಗಳ ತಪ್ಪು ತಿಳಿವಳಿಕೆಯಿಂದ ಈ ವಿದ್ಯೆ ಕುಗ್ಗುತ್ತಾ ಬಂತು.

ಕೆಲವರಿಗೆ ಯೋಗವೆಂದರೆ

೧. ಇದು ಬರಿಯ ಸನ್ಯಾಸಿಗಳಿಗೇ ಮೀಸಲಾದ ವಿದ್ಯೆ.

೨. ಹೆಂಗಸರು ಮಾಡಿದರೆ ಅಪಾಯವಾದುದೆಂದು, ಮತ್ತು

೩. ಬರಿಯ ಕಸರತ್ತು

ಎಂದು ತಿಳಿದಿದ್ದಾರೆ. ಇನ್ನೂ ಅನೇಕ ಕಾರಣಗಳಿಂದ ಈ ವಿದ್ಯೆಯು ಶೂನ್ಯವಾಗುತ್ತ ಬಂತು.

ಯೋಗವಿದ್ಯೆ ಗಂಡಸರಿಗೆ ಎಷ್ಟು ಅವಶ್ಯಕ ಮತ್ತು ಪ್ರಯೋಜನವೊ, ಹೆಂಗಸರಿಗೆ ಅದಕ್ಕಿಂತಲೂ ಮುಖ್ಯ.

ಪಾಶ್ಚಾತ್ಯಮಹಿಳೆಯರು ಯೋಗಾಭ್ಯಾಸವನ್ನು ಮಾಡಲು ಪ್ರಾರಂಭಿಸಿದ್ದಾರೆ. ಮೊದಲು, ಯೋಗವನ್ನು ಇದೇ ಮಹಿಳೆಯರು ಹೆದರಿಕೊಂಡು ದೊಡ್ಡದಾಗಿ ಕಣ್ಣುಗಳನ್ನು ಬಿಡುತ್ತಾ, ಅನುಮಾನ ಪಡುತ್ತಾ ಪರಿಹಾಸ್ಯ ಮಾಡುತಿದ್ದರು. ಯೋಗಿಗಳು ಎಂದರೆ ಕಟ್ಟು ಕತೆ ಹೇಳುವವರು, ಮತಭ್ರಾಂತರು, ಗಾಜಿನ ಚೂರಿನ ಹಾಸಿಗೆಯ ಮೇಲೆ ಕುಳಿತುಕೊಳ್ಳುವರು ಮತ್ತು ವರ್ಷಗಟ್ಟಲೆ ಒಂದು ಕೈಯನ್ನು ಮೇಲೆ ಎತ್ತಿಕೊಂಡು ಕುಳಿತುಕೊಳ್ಳುವರು ಎಂದು ಹೇಳುತ್ತಿದ್ದರು. ಅವರಲ್ಲಿ ಯೋಗವಿದ್ಯೆಯನ್ನು ಕಲಿಯುವರನ್ನು ಮಂತ್ರವಿದ್ಯೆ ಕಲಿಯುವರು ಎಂದು ಟೀಕಿಸುತಿದ್ದರು. ಆದರೆ ಇವರಲ್ಲಿ ಇದ್ದ ಈ ಅಪನಂಬಿಕೆ ಸಂಪೂರ್ಣವಾಗಿ ಬದಲಾಯಿಸಿದೆ. ಪ್ರತಿಯೊಂದು ನಗರದಲ್ಲಿಯೂ, ಹಳ್ಳಿಯಲ್ಲಿಯೂ, ಜನರು ಯೋಗಾಭ್ಯಾಸವನ್ನು ಮಾಡಲು ಪ್ರಾರಂಭಿಸಿರುತ್ತಾರೆ. ಅದೇ ಮಹಿಳೆಯರು ಈಗ, ಈ ವಿದ್ಯೆಯು ವಿವೇಕವುಳ್ಳದ್ದು, ಮತ್ತು ಪ್ರಾಕೃತಿಕವಾದುದ್ದು ಎಂದು ತಿಳಿದು ಅದರಿಂದ ಆರೋಗ್ಯಕ್ಕೆ, ದೇಹದ ಆಕೃತಿಗೆ ಮತ್ತು ಮನಶ್ಶಾಂತಿಗೆ ಸಾಧನವೆಂದು ತಿಳಿದಿದ್ದಾರೆ.

ಅನೇಕ ಮಹಿಳೆಯರಿಗೆ ಯೋಗ ಮಾಡಲು ನಮ್ಮ ವಯಸ್ಸು ಸರಿಯಾಗಿದೆಯೇ ಇಲ್ಲವೇ ಎನ್ನುವ ಅನುಮಾನ! ಯಾವ ವಯಸ್ಸಾದರೂ ಸರಿಯಾದ ವಯಸ್ಸೆ. ಸರಿಯಾದ ಆರೋಗ್ಯವಿರುವ, ಚಿಕ್ಕ ವಯಸ್ಸಿನವರು ಮತ್ತು ಮಧ್ಯಸ್ತರು ಯಾವ ಆಸನವನ್ನಾದರೂ ಮಾಡಬಹುದು. ಅಶಕ್ತರು, ವಯಸ್ಸಾದವರು, ದೇಹದಲ್ಲಿ ಕೆಲವು ತೊಂದರೆ ಇರುವವರು ಎಲ್ಲಾ ಆಸನಗಳನ್ನು ಮಾಡಲು ಆಗುವುದಿಲ್ಲ. ಎಲ್ಲರೂ ಮಾಡಬಹುದಾದ ಆಸನವೆಂದರೆ ಶವಾಸನ, ಮತ್ತು ಪ್ರಾಣಾಯಾಮ.

ಅತಿ ಕಷ್ಟವಾದ ಆಸನವನ್ನು ಮಾಡಲು ಆಗದಿದ್ದರೆ, ಅದಕ್ಕೋಸ್ಕರವಾಗಿ ಕುಗ್ಗಬಾರದು. ಯೋಗವಿದ್ಯೆಯು ಪೈಪೋಟಿ ಮಾಡುವ ವಿದ್ಯೆಯಲ್ಲ. ನಾವು ಪಡುವ ಶ್ರಮಕ್ಕೆ ಸರಿಯಾದ ಪ್ರಯೋಜನ ಸಿಕ್ಕುತ್ತದೆ.ಯೋಗಾಭ್ಯಾಸ ಮಾಡಲು ದೇಹ ಎಷ್ಟು ಮುಖ್ಯವೊ ಅಷ್ಟೆ ಆಹಾರ, ಗುಣ ಮತ್ತು ಮನಸ್ಸು ಮುಖ್ಯ; ಗ್ರಹಿಸುವ ಶಕ್ತಿ ಮುಖ್ಯವಾದುದು. ಸ್ವಂತ ಅನುಭವವಾದರೆ ಅದರ ಪ್ರಯೋಜನ ಹೆಚ್ಚು. ಮಕ್ಕಳಿಗಿಂತ, ದೊಡ್ಡವರ ಬುದ್ಧಿ ಬೆಳೆದಿರುತ್ತದೆಯಾದುದರಿಂದ, ಮಹಿಳೆಯರಿಗೆ ಇದರ ಪ್ರಯೋಜನ ಹೆಚ್ಚು ಸಿಕ್ಕುತ್ತದೆ. ಇದು ದೊಂಬರ ಆಟವೆಂದು ತಿಳಿಯದೆ ಸರಿಯಾದ ರೀತಿಯಿಂದ ಇದರ ಪ್ರಯೋಜನ ಪಡೆಯಬೇಕು.

ಯೋಗಾಭ್ಯಾಸದಿಂದ ಮುಪ್ಪನ್ನು ತಡೆಗಟ್ಟಬಹುದು. ಯೌವನವನ್ನು ಉಳಿಸಿಕೊಳ್ಳುವ ಉಪಾಯಕ್ಕೆ ಗಂಡಸರಿಗಿಂತ ಹೆಂಗಸರು ಮೊದಲು ಕಿವಿಗೊಡುತ್ತಾರೆ. ಯಾವ ಹೆಂಗಸಿಗೂ ಯೌವನವನ್ನು ಕಳೆದುಕೊಳ್ಳುವ ಅಭಿಲಾಷೆ ಇರುವುದಿಲ್ಲ. ಪುರುಷರಿಗಿಂತ ಸ್ತ್ರೀಯರಿಗೆ ಚರ್ಮ ಬೇಗ ಸುಕ್ಕುಗಟ್ಟುತ್ತದೆ, ಮುಖದ ಕಳೆ ಕುಗ್ಗುತ್ತದೆ, ದೇಹ ಸವೆಯುತ್ತದೆ, ಸ್ವಲ್ಪ ಯೌವನವನ್ನು ತಾಯಿಯಾದ ಮೇಲೆ ಕಳೆದುಕೊಳ್ಳುತ್ತಾಳೆ ಮತ್ತು ಪ್ರಕೃತಿಯ ಬದಲಾವಣೆ ಹೊಂದಿಕೊಳ್ಳಲೂ ಕಷ್ಟ. ಈ ಎಲ್ಲಾ ಕೊರತೆಗಳನ್ನು ಯೋಗಾಭ್ಯಾಸದಿಂದ ಹೋಗಲಾಡಿಸಬಹುದು.

ಕೆಲವು ಅಲಂಕಾರ ಸಾಮಗ್ರಿಗಳಿಂದ ಮುಖದ ಸುಕ್ಕು ಕಾಣದ ಹಾಗೆ ಮಾಡಿಕೊಳ್ಳಬಹುದು. ಆದರೆ ಇದು ತಾತ್ಕಾಲಿಕವಾದುದು ಮತ್ತು ಇದಕ್ಕೆ ಹಣ ವೆಚ್ಚಮಾಡಬೇಕು. ಹಣದ ವೆಚ್ಚವಿಲ್ಲದೆ, ಕಷ್ಟ ಪಡದೆ, ಸ್ಥಿರವಾಗಿ ಸುಕ್ಕನ್ನು ಹೋಗಲಾಡಿಸಲು ಯೋಗಾಭ್ಯಾಸ ಸಹಾಯ ಮಾಡುತ್ತದೆ, ಮತ್ತು ಸೌಂದರ್ಯವನ್ನು ಹೆಚ್ಚಿಸುತ್ತದೆ.

ವಯಸ್ಸಾದ ಹಾಗೆ ಶಕ್ತಿ ಕಡಮೆಯಾಗುತ್ತದೆ, ಕೆಲವು ಭಾಗಗಳಲ್ಲಿ ಚರ್ಮ ಜೋಲು ಬೀಳುತ್ತದೆ, ಬೆನ್ನು ಬಗ್ಗುತ್ತದೆ, ಮತ್ತು ಹೆಂಗಸರಲ್ಲಿ ಅನೇಕ ಪರಿವರ್ತನೆಗಳು ಆಗುತ್ತವೆ. ಇವನ್ನೆಲ್ಲ ಯೋಗಾಭ್ಯಾಸದಿಂದ ಮುಂದಕ್ಕೆ ಹಾಕಬಹುದು.

ವಯಸ್ಸಾದ ಹಾಗೆ ನಿದ್ದೆ, ಕಡಮೆಯಾಗುತ್ತದೆ. ಯೋಗಾಭ್ಯಾಸ ಮಾಡುವುದರಿಂದ ಮುದಕರಿಗೂ ಸಹ ಸರಿಯಾಗಿ ನಿದ್ದೆ ಬರುತ್ತದೆ.

ರಕ್ತಸಂಚಾರ ಸರಿಯಾಗಿ ಆಗದಿದ್ದರೆ ಚರ್ಮ ಸುಕ್ಕುಗಟ್ಟುತ್ತದೆ. ಸರಿಯಾಗಿ ರಕ್ತ ಸಂಚಾರವಾಗುವುದಕ್ಕೆ ಯೋಗಾಭ್ಯಾಸ ಬಹಳ ಮುಖ್ಯವಾದುದು. ಇದು ಹೆಂಗಸರಿಗೆ ಬಹಳ ಮುಖ್ಯವಾದ ವಿಷಯ.

ಮಾನಸಿಕವಾದ ತೊಂದರೆಗಳು ಹೆಂಗಸಿಗೆ ಹೆಚ್ಚಾಗಿ ಬರುವುದರಿಂದ ಅವನ್ನು ಹೋಗಲಾಡಿಸಲು ಯೋಗಾಭ್ಯಾಸ ಬಹಳ ಒಳ್ಳೆಯದು. ಆಸನಗಳನ್ನು ಮಾಡಿ ಮುಗಿಸಿದ ಮೇಲೆ ಮನಸ್ಸಿಗೆ ಒಂದು ತರವಾದ ಶಾಂತಿ ಸಿಕ್ಕುತ್ತದೆ. ಸ್ತ್ರೀಗೆ ಹೊರಗೆ ಹೋಗಿ ತಿರುಗಾಡಲು ಹೆಚ್ಚು ಅವಕಾಶವಿರುವುದಿಲ್ಲ. ಮನೆಯಲ್ಲೇ ಶಾಂತಿಕೊಡುವ ವಿದ್ಯೆ ಎಂದರೆ ಯೋಗ. ಮನಸ್ಸು ಮತ್ತು ದೇಹ ಎರಡಕ್ಕೂ ಸುಖಸಿಕ್ಕುತ್ತದೆ, ದೇಹ ಲವಲವಿಕೆಯಾಗಿ, ಮನಸ್ಸು ಮುಂದಿನ ಕೆಲಸಕ್ಕೆ ಪ್ರೋತ್ಸಾಹ ಕೊಡುತ್ತದೆ.

ಯೋಗಾಭ್ಯಾಸವು ನಮ್ಮ ದೇಹದಲ್ಲಿ ಇರುವ ಗ್ರಂಥಿಗಳು ಉತ್ಪತ್ತಿ ಮಾಡುವ ರಸಗಳನ್ನು ಸರಿಯಾಗಿ ಕೆಲಸ ಮಾಡುವ ಹಾಗೆ ಮಾಡುತ್ತದೆ. ನರಗಳ ದೌರ್ಬಲ್ಯತೆಯನ್ನು ಕಡಮೆ ಮಾಡುತ್ತದೆ. ರಕ್ತ ಸಂಚಾರ ಸರಿಯಾಗಿ ನಡೆಯಲು ಸಹಾಯವಾಗುತ್ತದೆ. ಬೆನ್ನೆಲುಬು, ಕೀಲುಗಳು, ಎಲುಬುಗಳು ಮತ್ತು ನಮ್ಮ ದೇಹದಲ್ಲಿ ಇರುವ ಅನೇಕ ಅವಯವಗಳಿಗೆ ಸರಿಯಾದ ರೀತಿಯಲ್ಲಿ ಶಕ್ತಿಕೊಡುತ್ತದೆ. ಹೆಂಗಸಿನ ಮುಖದ ಸೌಂದರ್ಯ, ದೇಹದ ಆಕೃತಿ, ಮಾನಸಿಕ ಶಕ್ತಿ, ಮತ್ತು ಯೌವನವನ್ನು ಉಳಿಸಿಕೊಳ್ಳಲು ಯೋಗಾಭ್ಯಾಸವು ಬಹಳ ಸುಲಭವಾದ ಆಧಾರ.

ಈ ವಿದ್ಯೆಯನ್ನು ಕಲಿಯುವುದಕ್ಕೆ ಸಂಪೂರ್ಣ ವಿದ್ಯೆ ಕಲಿತಿರುವ ಗುರು ಬಹಳ ಮುಖ್ಯ. ಇತ್ತೀಚೆಗೆ ಯೋಗದ ಮೇಲೆ ಅನೇಕ ಪುಸ್ತಕಗಳು ಅಚ್ಚಾಗಿ ಬಂದಿವೆ. ಯಾರೂ ಪುಸ್ತಕ ನೋಡಿ ಆಸನ ಮಾಡಲು ಹೋಗಬಾರದು. ಸರಿಯಾದ ಆಸನ ಮಾಡುವುದರಿಂದ ಅದರ ಪ್ರಯೋಜನ ಎಷ್ಟು ಸಿಕ್ಕುತ್ತದೆಯೋ, ತಪ್ಪು ಆಸನ ಮಾಡುವುದರಿಂದ ಅಷ್ಟೆ ಹಾನಿಕರ. ಇದು ಬಹುಮುಖ್ಯವಾಗಿ ಎಲ್ಲಾ ಮಹಿಳೆಯರುಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕಾದ ವಿಷಯ.

ಕೆಳಗೆ ಕೆಲವು ಕಷ್ಟಗಳನ್ನು ಹೋಗಲಾಡಿಸುವ ಆಸನಗಳನ್ನು ಕೊಟ್ಟಿದೆ.

೧. **ಉಬ್ಬಸ :** ಪ್ರಾಣಾಯಾಮ, ಶೀರ್ಷಾಸನ, ಮತ್ಸ್ಯಾಸನ, ಭುಜಂಗಾಸನ, ಶವಾಸನ.

೨. **ಬೆನ್ನುನೋವು :** ಭುಜಂಗಾಸನ, ಮತ್ಸ್ಯಾಸನ, ಗೋಮುಖಾಸನ, ಸುಪ್ತವಜ್ರಾಸನ.

೩. **ಸೊಂಟದಲ್ಲಿ ಇರುವ ಕೊಬ್ಬನ್ನು ಕರಗಿಸಲು :** ಧನುರಾಸನ, ತ್ರಿಕೋಣಾಸನ, ಹಲಾಸನ, ಅರ್ಧಮತ್ಸ್ಯೇಂದ್ರಾಸನ,ದಂಡಾಸನ.

೪. **ವಿಶ್ರಾಂತಿ :** ಶವಾಸನ.

೫. **ನರಗಳ ದೌರ್ಬಲ್ಯತೆಗಾಗಿ (ಮರೆವು, ಚಿಂತೆ) :** ಶೀರ್ಷಾಸನ, ಸರ್ವಾಂಗಾಸನ, ಶವಾಸನ, ಪ್ರಾಣಾಯಾಮ.

೬. **ಹೊಟ್ಟೆಯ ಬೊಜ್ಜು ಕರಗಿಸಲು :** ಸರ್ವಾಂಗಾಸನ, ವಿಪರೀತಕರಿಣಿ, ಧನುರಾಸನ, ಹಲಾಸನ, ಶಲಭಾಸನ. ಪಶ್ಚಿಮೋತ್ತಾಸನ,

೭. **ಗ್ರಂಥಿಗಳ ತೊಂದರೆಗೆ :** ಭುಜಂಗಾಸನ, ಶೀರ್ಷಾಸನ, ಹಲಾಸನ, ಸರ್ವಂಗಾಸನ, ಪಶ್ಚಿಮೋತ್ತಾಸನ.

೮. **ಚರ್ಮದ ಸುಕ್ಕನ್ನು ಹೋಗಲಾಡಿಸಲು :** ವಿಪರೀತಕರಿಣಿ, ಯೋಗಮುದ್ರ, ಗೋಮುಖಾಸನ.

ಹೆಂಗಸಿನ ನಿಜವಾದ ಸೌಂದರ್ಯ ಎದುರಿಗೆ ಕಾಣಿಸುವ ಅವಳ ಮುಖದ ರೂಪವಲ್ಲ. ದೇಹ ಮತ್ತು ಮಾನಸಿಕ ಸಂಪೂರ್ಣ ಆರೋಗ್ಯ. ದೇಹದ ಆಕೃತಿಯ ಹೊಂದುವಳಿಕೆ ಇದ್ದರೆ ಆಗ ಅವಳಿಗೆ ನಿಜವಾದ ಸೌಂದರ್ಯ ಇರುತ್ತದೆ. ಹೆಂಗಸಿಗೆ ರೂಪವಿರಬಹುದು. ಆದರೆ ಮಾನಸಿಕವಾದ ಯೋಚನೆ ಇದ್ದರೆ ಅವಳ ಸೌಂದರ್ಯ ಕೆಡುತ್ತದೆ. ಆದ್ದರಿಂದ ಮನಶ್ಶಾಂತಿಯು ಬಹಳ ಮುಖ್ಯವಾದುದು.

ಸ್ತ್ರೀ ಸ್ವಭಾವಕ್ಕೆ-ನಿಶ್ಚಿತವಾದ, ಗಂಭೀರವಾದ, ಸ್ಥಿರವಾಗಿ ಆರೋಗ್ಯಕೊಡುವ ಆದರ್ಶಮಯವಾದ ವಿದ್ಯೆ ಯಾವುದು ಎಂದರೆ ಯೋಗವಿದ್ಯೆ.

ಪಿಯಾನೋ ಬಾರಿಸುವವಳೊಬ್ಬಳು ಡಾ॥ ಜಾನ್ಸನ್ನನ ಎದುರಿಗೆ ಸೊಗಸಾದ ಒಂದು ಸುನೀತವನ್ನು (Sonnet) ಬಾರಿಸಿದ ಮೇಲೆ ಡಾ॥ ಜಾನ್ಸನ್ ಕಡೆಗೆ ತಿರುಗಿ ಸಂಗೀತದಿಂದ ನಿಮಗೆ ಬೇಸರವಾಯಿತೆ ? ಎಂದು ಕೇಳಿದಳು. ಆಗ ಉತ್ತರ ಕೊಟ್ಟ :

"ಇಲ್ಲ ತಾಯಿ, ಗದ್ದಲಗಳಲ್ಲೆಲ್ಲಾ ಸಂಗೀತ ಸಾಕಷ್ಟು ಸಮಾಧಾನಕರವಾದದ್ದು" ಎಂದು.

ಕೆ. ತಿಮ್ಮಣಾಚಾರ್

ಶ್ರೀಮದ್ಭಗವದ್ಗೀತೆ

ಸರ್ವೋಪನಿಷದೋ ಗಾವೋ ದೋಗ್ಧಾ ಗೋಪಾಲನಂದನಃ
ಪಾರ್ಥೋ ವತ್ಸಃ ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್

ಮಾನವನು ಬುದ್ಧಿಜೀವಿ. ಕೇವಲ ಆಹಾರ ನಿದ್ರಾ ಭಯ ಮೈಥುನಗಳಿಂದ ಆತನು ತೃಪ್ತನಾಗನು. ಈ ಜೀವನದರ್ಥವೇನು ? ಏನು ಪ್ರಪಂಚಾರ್ಥ ? ಈ ಜೀವಪ್ರಪಂಚಗಳ ಸಂಬಂಧವೇನು ? "ಕಾಣದಿಲ್ಲಿರ್ಪುದೇನಾನುಮುಂಟೆ ? ಅದೇನು ?" "ದೇವರೆಂಬುದದೇನು ಕಗ್ಗತ್ತಲೆಯ ಗವಿಯೇ ? ನಾವರಿಯಲಾರದೆಲ್ಲದರೊಟ್ಟು ಹೆಸರೆ ?" "ಕಾವನೋರ್ವನಿರಲ್ಕೆ ಜಗದ ಕಥೆಯೇಕಿಂತು ?" ಸಾವು ಹುಟ್ಟುಗಳೇನು ? ಈ ಸೃಷ್ಟಿಯ ಒಗಟೇನು ? ಬಾಳಿನರ್ಥವೇನು ? ಈ ಸೋಜಿಗವನು ಬಿಡಿಸುವವರಾರು ? ಈ ಬದುಕಿಗೆ ನಾಯಕರು ಯಾರು ? "ಏಕನೋ ಅನೇಕರೋ ? ವಿಧಿಯೋ ಪೌರುಷವೋ ಧರುಮವೋ ಅಂಧಬಲವೋ ?" ಪಾಪಪುಣ್ಯಗಳೆಂಬುವುಂಟೇ ? ಧರ್ಮಾಧರ್ಮಗಳುಂಟೇ ? ಇತ್ಯಾದಿ ಇತ್ಯಾದಿ ಅನೇಕ ಕ್ಲಿಷ್ಟವಾದ ಸಮಸ್ಯೆಗಳು ಮಾನವನ ಮನಸ್ಸನ್ನು ಬಹುಕಾಲದಿಂದಲೂ ಕಾಡಿದೆ. ಪುರಾತನ ಭಾರತೀಯ ಋಷಿಗಳು, ಜ್ಞಾನಿಗಳು ಈ ಸಮಸ್ಯೆಗಳನ್ನು ತಮ್ಮದೇ ಆದ ರೀತಿಯಲ್ಲಿ ಬಿಡಿಸಲೆತ್ನಿಸಿದ್ದಾರೆ. ಈ ಯತ್ನವು ನಮ್ಮ ದೇಶದಲ್ಲಿ ನಡೆದಷ್ಟು ಆಳವಾಗಿ, ವಿಸ್ತಾರವಾಗಿ, ತರ್ಕಬದ್ಧವಾಗಿ, ವಸ್ತುನಿಷ್ಠವಾಗಿ, ಸಮಂಜಸವಾಗಿ ಬೇರೆ ಎಲ್ಲೂ ನಡೆದಂತೆ ತೋರುವುದಿಲ್ಲ. ಭಾರತೀಯರು ಇಂದಿನ ಇಹಲೋಕದ ಜೀವನಕ್ಕಿಂತ ಮುಂದಿನ ಯಾವುದೋ ಕಾಣದ ಜೀವನಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಲಿದ್ದಾರೆಂದು ಕೆಲವು ಪಾಶ್ಚಾತ್ಯ ಪಂಡಿತರು ಆಕ್ಷೇಪಮಾಡುತ್ತಾರೆ.

ಅದೇನೇ ಇರಲಿ, ಭಾರತವು ಮಾನವನ ಆಧ್ಯಾತ್ಮ ಜ್ಞಾನಾನ್ವೇಷಣೆಯ ತೌರೂರು ಎಂದರೆ ತಪ್ಪಾಗಲಾರದು, ಅತಿಶಯೋಕ್ತಿಯಾಗಲಾರದು. ಎಂದರೆ ಭಾರತೀಯರಿಗೆ ಮಾತ್ರ ಸೇರಿದ ಹಕ್ಕು ಆಧ್ಯಾತ್ಮ ಚಿಂತನವೆಂದು ಯಾರೂ ಭಾವಿಸಬಾರದು. ಚಿಂತನಶೀಲರಾದ ಜೀವರು ಪ್ರಪಂಚದ ನಾನಾ ಎಡೆಗಳಲ್ಲಿದ್ದಾರೆಂಬುವರಲ್ಲಿ ಸಂಶಯವಿಲ್ಲ.

ಭಾರತೀಯರ ಆಧ್ಯಾತ್ಮಜೀವನದ ಚಿರಂತನ ಚಿಂತನೆಗೆ ಉಪನಿಷತ್ತುಗಳು, ಬ್ರಹ್ಮಸೂತ್ರಗಳು, ಗೀತಾ ಇವು ಮೂರು ಸುಭದ್ರ ಅಡಿಗಲ್ಲುಗಳು. ಇವುಗಳನ್ನು ಪ್ರಸ್ಥಾನತ್ರಯಗಳು ಎನ್ನುವರು.

ಇದರಲ್ಲಿ ಭಗವದ್ಗೀತೆಯು 702 ಅನುಷ್ಟುಪ್ ಶ್ಲೋಕಗಳಿಂದ ಕೂಡಿದ ಶ್ರೀಕೃಷ್ಣಾರ್ಜುನ ಸಂವಾದ ರೂಪವಾದುದು. ನೋಡಲು ಚಿಕ್ಕದಾಗಿ ಸುಲಭವಾಗಿ ತೋರುವ ಈ ಗ್ರಂಥವು ಬಹು ಗಂಭೀರವಾಗಿ, ಬಹು ಆಳವಾಗಿ ಜೀವನದ ಸಮಸ್ಯೆಗಳನ್ನು ವಿಚಾರಕ್ಕೊಳಗುಮಾಡಿದೆ. ಇದು ಸುಮಾರು 200 ಭಾಷೆಗಳಲ್ಲಿ ತರ್ಜಿಮೆಯಾಗಿದೆಯೆಂದು ತಿಳಿದುಬರುತ್ತೆ. ಭಾಷೆ ಸ್ವಲ್ಪ ಸುಲಭವಾಗಿ ತೋರುವುದರಿಂದ ಅನೇಕರು ಇದನ್ನು

ವ್ಯಾಖ್ಯಾನ ಮಾಡಲು ಹೊರಟು ತಮಗೆ ತೋರಿದಂತೆ ಬರೆದಿದ್ದಾರೆ. ಈ ಎಲ್ಲ ವ್ಯಾಖ್ಯಾನಕಾರರ ಅರ್ಥವನ್ನು ವಿಮರ್ಶಿಸಲು ಯತ್ನಿಸಿದರೆ ವನಸೌಂದರ್ಯವನ್ನು ಸವಿಯಲು ಹೊರಟವನು ಅಲ್ಲಿರುವ ಮರಗಳನ್ನು ಮರಗಳಲ್ಲಿರುವ ಎಲೆಗಳನ್ನೇ ಎಣಿಸುತ್ತಾ ಕಾಲ ಕಳೆಯುತ್ತಾ ಮುಖ್ಯವಾದ ತಿರುಳನ್ನೇ ಕಳೆದುಕೊಳ್ಳುವವನಂತೆ ಆದೀತು. ಸ್ವಾನುಭವಯುಕ್ತ ವಿಮರ್ಶೆಯೇ ಅತ್ಯುತ್ತಮವಾದುದು.

ಮಹಾಭಾರತದ ಪಾರಿಜಾತ ಮಕರಂದಭೂತವಾದ ಈ ಭಗವದ್ಗೀತೆಯು ಒಂದು ಮದ್ದಿನ ಕುಡುಕೆಯಿದ್ದಂತೆ. ಇದಕ್ಕೆ ಸ್ವಾನುಭವದ ಜ್ಞಾನದೀವಿಗೆಯನ್ನು ತಗುಲಿಸಿದರೆ ಶಾಖವನ್ನು ತಗುಲಿಸಿದ ಮದ್ದಿನ ಕುಡಿಕೆಯು ಬಣ್ಣಬಣ್ಣದ ಹೂಗಳನ್ನೆರಚುವಂತೆ, ಇದೂ ಸುಂದರವೂ ಮನೋಹರವೂ ಆದ ಅನೇಕ ಮಾನವ ಜೀವನ ಮೌಲ್ಯಗಳನ್ನು ಹೊರಗೆಡವುತ್ತದೆ. ಗೀತೋಪದೇಶ ನಡೆದದ್ದು ಮಹಾಭಾರತದ ಯುದ್ಧಕ್ಕೆ ಸ್ವಲ್ಪ ಮುಂಚಿತವಾಗಿ. "ಪ್ರವೃತ್ತೇ ಶಸ್ತ್ರಸಂಪಾತೇ"-ಶಸ್ತ್ರಾಸ್ತ್ರಗಳ ತುವಲವು ಪ್ರಾರಂಭವಾಗುವುದರಲ್ಲಿದೆ. ಇನ್ನೇನು ಬಾಂಬುಗಳು ಸಿಡಿಯಬೇಕು, ಯುದ್ಧ ಪ್ರಾರಂಭವಾಗಬೇಕು, ಆಗ ಅರ್ಜುನನ ಕ್ಲೈಬ್ಯವನ್ನರಿತ ಶ್ರೀಕೃಷ್ಣನು ಇದನ್ನು ಉಪದೇಶಗೈದನೆಂದು ನಿರೂಪಿತವಾಗಿದೆ. ಅಂತಹ ಸಂದರ್ಭದಲ್ಲಿ ಹದಿನೆಂಟು ಅಧ್ಯಾಯಗಳಿಂದ ಕೂಡಿದ 702 ಶ್ಲೋಕಗಳನ್ನು ಶ್ರೀಕೃಷ್ಣನು ಅರ್ಜುನನಿಗೆ ಉಪದೇಶ ಮಾಡಿದನೆಂದರೆ ನಂಬುವುದೆಂತು ? ಈ ಉಪದೇಶವೆಲ್ಲವೂ ಮುಗಿಯುವವರೆಗೂ ಶತ್ರುಸೈನ್ಯದವರು ಸುಮ್ಮನಿದ್ದರೇ ? ಹಾಗೆ ಸುಮ್ಮನಿರಲು ಸಾಧ್ಯವೇ ? ಇವುಗಳನ್ನು ಪರೀಕ್ಷಿಸಿದರೆ ಈ ಗೀತೆಯೆಂಬ ಭಾಗವು ನಿಜವಾಗಿಯೂ ಭಾರತದ್ದಲ್ಲವೇ ಅಲ್ಲ, ಇದು ಪ್ರಕ್ಷಿಪ್ತ, ಯಾರೋ ನಂತರ ಸೇರಿಸಿದ್ದಿರಬೇಕೆಂದು ವಾದಿಸುವ ಅನೇಕ ಪಂಡಿತರುಗಳಿದ್ದಾರೆ. ಆದರೆ ಇಲ್ಲಿ ವಿಚಾರಮಾಡಬೇಕಾದ ವಿಷಯವಿದೆ. ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ನಡೆದ ಧರ್ಮಯುದ್ಧವಿದು. ಆದುದರಿಂದ ಯುದ್ಧವನ್ನು ಪ್ರಾರಂಭಿಸಲು ಕೆಲವು ಕಟ್ಟುಕಟ್ಟಳೆಗಳಿಂದ ಕೂಡಿದ ಘೋಷಣೆ ಆವಶ್ಯಕ.

ಇದಲ್ಲದೆ ಇಲ್ಲಿ ವಿಚಾರಣೀಯವಾದ ಮತ್ತೆ ಕೆಲವಂಶಗಳಿವೆ. ಉಪದೇಶವನ್ನು ಯಾರು ಮಾಡಬೇಕು ? ಯಾರಿಗೆ ಮಾಡಬೇಕು ? ಮತ್ತು ಯಾವಾಗ ಮಾಡಬೇಕು ? ಈ ಮೂರನ್ನೂ ಚೆನ್ನಾಗಿ ಅರ್ಥಮಾಡಿ ತಿಳಿದುಕೊಳ್ಳಬೇಕು. ಉಪದೇಶವು ನಿಜವಾಗಿಯೂ ಫಲಕಾರಿಯಾಗಬೇಕಾದರೆ ಪೌಲ್ಯ ಸುಗಂಧವನಿತಾಸಕ್ತನಾದ ಯುವಕನಿಗೆ ಪರತತ್ತ್ವೋಪದೇಶವು ಗೋರ್ಕಲ್ಲಮೇಲೆ ಮಳೆ ಸುರಿದಂತಾದೀತು. ಉಪದೇಶ ಮಾಡುವವನಿಗೆ ತಾನು ಹೇಳಲಿರುವ ವಿಷಯದಲ್ಲಿ ಸಂಪೂರ್ಣ ಜ್ಞಾನವಿರಬೇಕು. ತನಗೇ ಈಜು ಬರದಿದ್ದರೆ ಬೇರೆಯವರಿಗೆ ಅದನ್ನು ಕಲಿಸುವುದೆಂತು ? ಇದರೊಂದಿಗೆ ಗುರುವಿಗೆ ಶಿಷ್ಯವಾತ್ಸಲ್ಯವಿರಬೇಕು. ಈ ಶಿಷ್ಯನು ಯೋಗ್ಯನಾಗಿದ್ದರೆ ಈತನಿಗೆ ನಿಜತತ್ತ್ವದ ತಿರುಳನ್ನು ತಿಳಿಸಬೇಕೆಂಬ ಇಚ್ಛೆ ಗುರುವಿಗಿರಬೇಕು. ಹಣಕ್ಕೋ ಇನ್ನೊಂದಕ್ಕೋ ಶಿಷ್ಯನನ್ನು ಮೋಸಗೊಳಿಸಲಿಚ್ಛಿಸುವ ಗುರುವು ಆತನಿಗೆ ನಿಜವಾಗಿಯೂ ತತ್ತ್ವವನ್ನು ಬೋಧಿಸಲಾರನು. ಗುರುವಿಗೆ ಉಪದೇಶಿಸುವ ವಿಷಯದಲ್ಲಿ ಸಂಶಯವಾಗಲೀ ವಿಪರೀತ ಜ್ಞಾನವಾಗಲೀ ಇರಕೂಡದು. ತಾನು ಅಸಂಶಯದಿಂದಿರುವುದಲ್ಲದೇ ಶಿಷ್ಯ ಸಂಶಯವನ್ನು ಕಳೆಯುವ ಚಾತುರ್ಯವನ್ನು ಹೊಂದಿರಬೇಕು. ಇದರೊಂದಿಗೆ ಶಿಷ್ಯನಿಗೆ ತಿಳಿಯಬೇಕೆಂಬ ಜ್ಞಾನದಾಹವಿರಬೇಕು. ಬೋಧಿಸುವ ಸಂದರ್ಭ ಉಚಿತವಾಗಿರಬೇಕು. ವಕ್ತಾ, ಶ್ರೋತಾ, ಪ್ರಸಂಗ ಈ ಮೂರರ ತ್ರಿವೇಣೀ ಸಂಗಮವಿಲ್ಲದುದರಿಂದಲೇ ನಮ್ಮ ವಿದ್ಯಾಭ್ಯಾಸ ಪದ್ಧತಿಯ ಮೇಲೆ ವೆಚ್ಚ ಮಾಡುತ್ತಲಿರುವ ಕೋಟ್ಯಾಂತರ ರೂಪಾಯಿಗಳಿಗೆ ಸರಿಯಾದ ಪ್ರತಿಫಲ ದೊರೆಯುತ್ತಿಲ್ಲ. ಅನೇಕ ಸಂದರ್ಭಗಳಲ್ಲಿ ಗುರುವಿಗೇ ತಾನು ಕಲಿಸಬೇಕಾಗಿರುವ ವಿಷಯದಲ್ಲಿ ಸಂಪೂರ್ಣಜ್ಞಾನವಿರುವುದಿಲ್ಲ. ಇದಕ್ಕಾಗಿ ಅವನು ಪಠ್ಯಪುಸ್ತಕಗಳನ್ನು ಊರುಗೋಲಿನಂತೆ ಆಶ್ರಯಿಸುತ್ತಾನೆ. ಕಲಿಯುವ ಮಕ್ಕಳಲ್ಲಿ ಎಷ್ಟು ಜನಕ್ಕೆ ಜ್ಞಾನದಾಹ ಉಂಟು ? ಮೂರುಪಾಲು ಜನರಿಗೆ ಪರೀಕ್ಷೆಯಲ್ಲಿ ತೇರ್ಗಡೆಯಾಗಿ ಯೋಗ್ಯತಾಪತ್ರವನ್ನು ಪಡೆಯುವುದೇ

ತಮ್ಮ ಗುರಿಯಾಗಿರುತ್ತದೆ. ವಿದ್ಯಾಭ್ಯಾಸವನ್ನು ನಡೆಯಿಸುತ್ತಲಿರುವ ಕಾಲ ದೇಶಗಳಂತೂ ನಮ್ಮ ಮಕ್ಕಳಿಗೆ ಎಷ್ಟರಮಟ್ಟಿಗೆ ಸಹಜಾನುಕೂಲತೆಯಿಂದ ಕೂಡಿದೆಯೆಂಬುದನ್ನು ವಿದ್ಯಾತಜ್ಞರು ಚಿಂತಿಸುವುದು ಅನಿವಾರ್ಯವೂ ಆವಶ್ಯಕವೂ ಆಗಿದೆ, ಇರಲಿ.

ಇಲ್ಲಿ ಈ ಗೀತೋಪದೇಶ ಸಂದರ್ಭದಲ್ಲಿ ಸರ್ವಜ್ಞಚೂಡಾಮಣಿಯಾದ ಗೀತಾಚಾರ್ಯನೇ ಗುರುವು, ಉಪದೇಶಕನು. ಆತನ ಪ್ರಿಯಸಖನೂ, ಮೈದುನನೂ ಆದ ಅರ್ಜುನನೇ ಶಿಷ್ಯ. ಅರ್ಜುನನ ಅಂತಃಕರಣವು ಕಲಕಿಹೋಗಿದೆ. ಶ್ವೇತಹಯಯುಕ್ತವಾದ ಆತನ ರಥವನ್ನು ಶತ್ರುಸೈನ್ಯದ ಮುಂದೆ ನಿಲ್ಲಿಸಿ "ಪಾರ್ಥ, ಪಶ್ಯೈತಾನ್ ಸಮವೇತಾನ್ಕುರೂನಿತಿ" ಎಂದು ಪಾರ್ಥಸಾರಥಿಯಾದ ಶ್ರೀಕೃಷ್ಣನು ನುಡಿದನು. ಅರ್ಜುನನ್ನು ಕಂಡುದಾರನ್ನು ? "ತತ್ರಾಪಶ್ಯತ್ಸ್ಥಿತಾನ್ ಪಾರ್ಥಃ ಪಿತೄನಥ ಪಿತಾಮಹಾನ್ ಆಚಾರ್ಯಾನ್ಮಾತುಲಾನ್ ಭ್ರಾತೄನ್‌ಪುತ್ರಾನ್‌ಪೌತ್ರಾನ್ ಸಖೀಂಸ್ತಥಾ ಶ್ವಶುರಾನ್ಸುಹೃದಶ್ಚೈವ" ಅರ್ಜುನನು ಅಲ್ಲಿ ಕಂಡದ್ದು ತನ್ನ ಅಣ್ಣತಮ್ಮಂದಿರು–ಮಕ್ಕಳು, ಮೊಮ್ಮಕ್ಕಳು, ಸ್ನೇಹಿತರು, ಮಾವಂದಿರು, ಅಜ್ಜ, ಗುರುಗಳು, ಗುರುಪುತ್ರರು ಇತ್ಯಾದಿಗಳನ್ನು. ಇಷ್ಟೊಂದು ಜನ ಇಷ್ಟಮಿತ್ರರನ್ನು ಕೊಂದು ಅವರ ರಕ್ತಸಿಕ್ತವಾದ ವಿಷಯೋಪಭೋಗಗಳನ್ನು ಅನುಭವಿಸುದು ಯುಕ್ತವೆ? ಧರ್ಮವೇ? ಎಂದು ಸಂಶಯವು ಅವನ ಮನಸ್ಸಿನಲ್ಲಿ ಉದಯವಾಗಿದೆ. ಆತತಾಯಿಗಳಾದ ಶತ್ರುಗಳನ್ನು ಕೊಲ್ಲುವುದು ಸರಿಯೇ ಎಂಬ ಭ್ರಮೆ ಆತನಿಗುಂಟಾಗಿದೆ. ಧರ್ಮಸಂಕಟದಲ್ಲಿ ಸಿಕ್ಕಿಕೊಳ್ಳುತ್ತಾನೆ. ಶರೀರೇಂದ್ರಿಯಗಳು ನಡಗುತ್ತವೆ. ಮುಖವು ಒಣಗುತ್ತದೆ. ಕೈಯಿಂದ ಗಾಂಡೀವವು ಕೆಳಕ್ಕೆ ಬೀಳುತ್ತದೆ. ನಿಲ್ಲಲಾಗುವುದಿಲ್ಲ. ಮನಸ್ಸು ಭ್ರಮೆಗೊಳ್ಳುತ್ತದೆ. ಕಾರ್ಪಣ್ಯದೋಷೋಪಹತನಾಗಿ, ಧರ್ಮಸಂಮೂಢಚಿತ್ತನಾಗಿ ಶ್ರೀಕೃಷ್ಣನನ್ನು "ಏನು ಮಾಡಬೇಕು? ನನಗೆ ಶ್ರೇಯಸ್ಕರವಾದುದನ್ನು ನೀನೇ ಹೇಳು. ನಿನ್ನ ಶಿಷ್ಯನಾಗಿ ನಿನ್ನನ್ನು ಮರೆಹೊಕ್ಕಿದ್ದೇನೆ" ಎಂದು ಬೇಡುತ್ತಾನೆ. ಆಗ ಗೀತಾಚಾರ್ಯನಾದ ಶ್ರೀಕೃಷ್ಣನು ಗೀತಾಮೃತವನ್ನು ಉಪದೇಶಿಸುತ್ತಾನೆ. ಶಿಷ್ಯನು ಹೀಗೆ ವಿವಿಧ ಸಾಂಸಾರಿಕ ದುಃಖಗಳನ್ನನುಭವಿಸಿ ಬೇರೆ ದಾರಿ ಕಾಣದೆ ತನಗೆ ಪ್ರಿಯತಮನಾದ ಗುರುವಿನಲ್ಲಿಗೆ ಹೋಗುತ್ತಾನೆ. ಆ ಗುರುವಿನ ಉಪದೇಶವು ಫಲಕಾರಿಯಾಗುವುದು. ಆದುದರಿಂದ ಇದೇ ಉಪದೇಶಕ್ಕೆ ನುಸಮಯ. ಹೀಗೆ ನಮ್ಮ ಆಧುನಿಕ ವಿದ್ಯಾಭ್ಯಾಸವು ಫಲಕಾರಿಯಾಗಬೇಕಾದರೆ ವಿದ್ಯಾರ್ಥಿಗಳಿಗೆ ಅದರಲ್ಲಿ ಅದಮ್ಯ ಆಸಕ್ತಿ ಇರಬೇಕು. ವಿದ್ಯಾರ್ಜನೆಯನ್ನು ಮಾಡಲೇಬೇಕೆಂಬ ಮನಸ್ಸಂಕಲ್ಪವಿರಬೇಕು. ಪಾಠ ಹೇಳುವ ಉಪಾಧ್ಯಾಯನಿಗೆ ತಾನು ಬೋಧಿಸುವ ವಿಷಯದಲ್ಲಿ ನಿಸ್ಸಂಶಯವಾದ ಪೂರ್ಣಜ್ಞಾನವಿರಬೇಕು. ಬೋಧಿಸಬೇಕೆಂಬ ಸದಿಚ್ಛೆ ಇರಬೇಕು. ಇದಿರಲಿ, ಇಲ್ಲಿ ಅರ್ಜುನನನ್ನು ನಿಮಿತ್ತವಾಗಿಟ್ಟುಕೊಂಡು ಶ್ರೀಕೃಷ್ಣನು ಮಾನವಜೀವನದ ಅತಿಕ್ಲಿಷ್ಟವಾದ, ತೊಡಕಾದ, ಗಡುಚಾದ ಸಮಸ್ಯೆಗಳ ಮೇಲೆ ಬೆಳಕನ್ನು ಚೆಲ್ಲಿದ್ದಾನೆ. ನಾವು ಸುಖದುಃಖಗಳೆನ್ನುತ್ತೇವೆ. ಪ್ರತಿ ನಿತ್ಯದಲ್ಲಿಯೂ ಇವುಗಳನ್ನು ಒಂದಲ್ಲೊಂದು ರೀತಿಯಲ್ಲನುಭವಿಸುತ್ತೇವೆ. ಸುಖಕ್ಕಾಗಿ ಏನೆಲ್ಲವನ್ನೂ ಮಾಡುತ್ತೇವೆ. ಈ ಸುಖವೆಂದರೇನು? ಏತಕ್ಕಾಗಿ ಈ ಸುಖ? ಇತ್ಯಾದಿಗಳು ಬಹು ಜಟಿಲವಾದ ಪ್ರಶ್ನೆಗಳು. ಕಾಮಿನಿ ಕಾಂಚನಗಳು ನಮ್ಮ ಸುಖಕ್ಕಾಗಿ ಎಂದು ತಿಳಿದಿದ್ದೇವೆ. ಇದಕ್ಕಾಗಿ ಹಗಲಿರುಳೂ ಧರ್ಮಾಧರ್ಮಗಳ ಭೀತಿಯಿಲ್ಲದೆ, ಪಾಪಪುಣ್ಯಗಳ ಅರಿವಿಲ್ಲದೆ ದುಡಿಯುತ್ತೇವೆ. ನಾವು ನಂಬಿರುವ ಈ ವೈಷಯಿಕ ಸುಖವು ನಮಗೆ ಹೇಗೆ ದೊರಕುತ್ತದೆ?

ಮಾನವನಿಗೆ ಪಂಚೇಂದ್ರಿಯಗಳುಂಟಷ್ಟೆ? ಕಣ್ಣು–ಕಿವಿ–ನಾಲಿಗೆ–ಮೂಗು–ಚರ್ಮ. ಇವುಗಳು ಒಂದೊಂದಕ್ಕೂ ಒಂದೊಂದು ಗ್ರಹಿಸುವ ವಿಷಯ ಉಂಟು. ಕಣ್ಣು ರೂಪವನ್ನು ಗ್ರಹಿಸುತ್ತದೆ. ಕಿವಿ ಧ್ವನಿಯನ್ನು ತಿಳಿಯುತ್ತದೆ. ಹೀಗೆಯೇ ನಾಲಿಗೆಯು ರುಚಿಯನ್ನೂ, ಮೂಗು ವಾಸನೆಯನ್ನೂ, ಚರ್ಮವು ಸ್ಪರ್ಶವನ್ನೂ ತಿಳಿಯುತ್ತವೆ. ಸಾಮಾನ್ಯವಾಗಿ ನಮಗೆ ತೋರುವುದು ಈ ವಿಷಯೇಂದ್ರಿಯಗಳ ಸನ್ನಿಕರ್ಷವಾದಾಗ ಸುಖದುಃಖಗಳುಂಟಾಗುತ್ತದೆ ಎಂದು. ಎಂದರೆ ಕಣ್ಣು ಸುಂದರವಾದುದನ್ನು ಕಂಡರೆ ಸಂತೋಷಗೊಳ್ಳುತ್ತದೆ.

ವಿರೂಪವಾದುದನ್ನು ಕಂಡರೆ ಅಸಹ್ಯಗೊಳ್ಳುತ್ತದೆ, ದುಃಖಿತಾಳುತ್ತದೆ. ಹೀಗೆಯೇ ಕಿವಿಯು ಮಧುರಗಾನವನ್ನು ಕೇಳಿದರೆ ಸಂತೋಷವಾಗುತ್ತದೆ, ಕರ್ಕಶಭೀಕರಧ್ವನಿಯು ದುಃಖವನ್ನುಂಟುಮಾಡುತ್ತದೆ. ಹೀಗೆಯೇ ನಾಲಿಗೆಯು ಸುಖಕ್ಕಾಗಿ ರುಚಿಯಾದುದನ್ನೇ ಬಯಸುತ್ತದೆ. ಸ್ಪರ್ಶೇಂದ್ರಿಯಕ್ಕೂ ಮೃದುಸ್ಪರ್ಶದಿಂದ ಸುಖವೂ ಕಠಿಣ ಸ್ಪರ್ಶದಿಂದ ದುಃಖವೂ ಉಂಟಾಗುತ್ತದೆ. ಇದು ನಮ್ಮ ಸಾಮಾನ್ಯ ತಿಳುವಳಿಕೆ. ಇದಕ್ಕಾಗಿಯೇ ಹಗಲಿರುಳೂ ವಿಷಯಸುಖಸಾಮಗ್ರಿಗಳನ್ನರಸುತ್ತೇವೆ. ಅವುಗಳನ್ನು ಪಡೆಯಲು ಮಾನವನು ಮಹಾ ಪ್ರಯತ್ನಮಾಡುತ್ತಾನೆ. ಹೆಣ್ಣು-ಹೊನ್ನು-ಮಣ್ಣುಗಳಿಗಾಗಿ ಒಮ್ಮೊಮ್ಮೆ ಜೀವನವನ್ನೇ ಪಣವಾಗಿಟ್ಟು ದುಡಿಯುತ್ತಾನೆ.

ಈ ತಿಳುವಳಿಕೆ ಎಂದರೆ ವಿಷಯೇಂದ್ರಿಯಗಳ ಸನ್ನಿಕರ್ಷವು ಸುಖದುಃಖಗಳಿಗೆ ಕಾರಣವೆಂಬಂತೆ ಕಂಡರೂ ವಿಚಾರವಂತನು ಇದನ್ನು ಹೀಗೆಂದು ಭ್ರಮಿಸನು ; ತಿಳಿದು ತೃಪ್ತನಾಗನು. ವಿಚಾರಣೀಯವಾದ ಇನ್ನೊಂದಂಶ ಇದರಲ್ಲಿ ಒಳಗೊಂಡಿದೆ. ಒಬ್ಬ ಒಂದು ಹೊಸ ಅಂಬ್ಯಾಸಿಡರ್ ಕಾರನ್ನು ಕೊಂಡನೆನ್ನೋಣ. ಆತನು ತನ್ನ ಪ್ರಿಯತಮೆಯೊಡನೆ ಅದರಲ್ಲಿ ಸವಾರಿಹೊರಡುತ್ತಾನೆನ್ನೋಣ. ಅವನಿಗೆ ಒಂದು ವಿಧವಾದ ಸಂತೋಷವಾಗುತ್ತೆ. ಆ ಸಂತೋಷಕ್ಕೆ ಕಾರಣವೇನು ? ಕಾರನ್ನು ಹೊಂದಿರುವುದೇ ? ಹಾಗಾದರೆ ಈ ಸಂತೋಷವು ಕಾರನ್ನು ಹೊಂದಿರುವ ಕಾರನ್ನು ನಡೆಯಿಸುವವನಿಗೂ ಉಂಟಾಗುತ್ತದೆಯೇ ? ಇಲ್ಲ. ಇನ್ನೊಂದು ಉದಾಹರಣೆಯನ್ನು ವಿಚಾರಿಸೋಣ. ಒಬ್ಬನು ಒಂದು ಅತಿ ಜೆಲೆಬಾಳುವ ಕುದುರೆಯನ್ನು ಬಹು ಅಭಿಮಾನದಿಂದ ಸಾಕಿದ್ದಾನೆನ್ನೋಣ. ಅದಕ್ಕೆ ಕಾಲಕಾಲಕ್ಕೆ ಹುರುಳಿ ಹುಲ್ಲು ಹಾಕಿ ಮೈ ತಿಕ್ಕಿ ಬಹು ಎಚ್ಚರಿಕೆಯಿಂದ ಸಾಕಿರುತ್ತಾನೆ. ಒಳ್ಳೆ ಜೆಲೆ ಬಂದಾಗ ಅದನ್ನು ಮಾರಿ ಲಾಭವನ್ನು ಪಡೆಯುತ್ತಾನೆ. ಮಾರಿದ ನಂತರ, ಆದರ ಜೆಲೆಯನ್ನು ಪಡೆದನಂತರ, ಆ ಕುದುರೆ ಸತ್ತು ಹೋಯಿತೆಂದು ಭಾವಿಸೋಣ. ಆಗ ಮೊದಲಿನ ಮಾಲಿಕನಿಗೆ ದುಃಖವಾಗುವುದಕ್ಕೆ ಬದಲಾಗಿ ಸಂತೋಷವಾಗುವುದು ಕಂಡುಬರುತ್ತೆ. ಅದು ಅವನಲ್ಲಿದ್ದಾಗಲೇ ಮೃತಪಟ್ಟಿದ್ದರೆ ಅಪಾರದುಃಖವನ್ನು ಹೊಂದುತ್ತಾನೆ. ಹೀಗಾಗಲು ಕಾರಣವೇನು ? ಸುಖಕ್ಕಾಗಲೀ ದುಃಖಕ್ಕಾಗಲೀ ಆ ವಸ್ತುವಿನಲ್ಲಿರುವ "ಮಮತೆ"ಯೇ ಕಾರಣವೆಂದು ಸ್ಪಷ್ಟವಾಗುತ್ತೆ. ಹೀಗೆ ನಾವು ನಿದ್ರೆಯಲ್ಲಿ ವಿವಶರಾದಾಗ ಸ್ರಕ್ ಚಂದನಾದಿಗಳಿಂದ ನಮ್ಮ ಶರೀರವನ್ನು ಯಾರಾದರೂ ಸೇವಿಸಿದರೆ ನಮಗೆ ಸುಖಾನುಭವವಾಗುವುದಿಲ್ಲ. ಕೆಲವೇ ದಿನಗಳ ಹಿಂದಿರದ ಪರಸ್ಪರ ಸುಖದುಃಖಾನುಭವಗಳು ನೂತನದಂಪತಿಗಳಾದೊಡನೆಯೇ ಪರಸ್ಪರರಿಗುಂಟಾಗುವುದು ಕಂಡುಬರುತ್ತೆ. ಇನ್ನೊಂದು ಸಂದರ್ಭವನ್ನು ಪರಿಕಿಸುವ. ಮನೆಯೊಂದರಲ್ಲಿ ಕೆಲವು ಹೆಂಗೆಳೆಯರು ಹರಟೆಕೊಚ್ಚುತ್ತಾ ಕುಳಿತಿದ್ದಾರೆನ್ನಿ. ಅವರ ಚಿಕ್ಕಚಿಕ್ಕ ಮಕ್ಕಳೆಲ್ಲಾ ಹೊರಗಡೆ ಬಯಲಿನಲ್ಲಿ ಆಡುತ್ತಲಿದ್ದಾರೆ. ಸ್ವಲ್ಪಹೊತ್ತಿನಲ್ಲಿ ವಾಹನವೊಂದು ಆ ಮಕ್ಕಳಮೇಲೆ ಹರಿದು ಒಂದು ಮಗು ಸತ್ತುಹೋಗುತ್ತೆ. ಹೊರಗಿನವರೊಬ್ಬರು ಬಂದು ಆ ಹೆಂಗೆಳೆಯರೆದುರಿನಲ್ಲಿ ಈ ಸಮಾಚಾರವನ್ನು ಹೇಳುತ್ತಾರೆ. ಗಾಬರಿಗೊಂಡ ಅವರೆಲ್ಲರೂ ಹೊರಕ್ಕೋಡುತ್ತಾರೆ. ಚಕ್ರದ ಬುಡದಲ್ಲಿ ಸಿಕ್ಕಿ ಸತ್ತಿರುವ ಮಗುವು ತನ್ನದಲ್ಲವೆಂಬುದನ್ನು ಖಚಿತಮಾಡಿಕೊಂಡು ಸಮಾಧಾನಗೊಳ್ಳುತ್ತಾರೆ. ವಾಹನದ ಬುಡದಲ್ಲಿ ಸಿಕ್ಕು ಮೃತಪಟ್ಟ ಮಗುವಿನ ತಾಯಿಯ ಒಡಲು ದುಃಖದಿಂದ ಕುದಿಯುತ್ತೆ. ಉಳಿದವರೆಲ್ಲಾ ತಮ್ಮ ಕನಿಕರವನ್ನು ತೋರಿದರೂ ಇಂದ್ರಿಯಶೋಷಕವಾದ ಅಪಾರ ದುಃಖವಾಗುವುದು ಆ ಮಗುವನ್ನು ಕಳೆದುಕೊಂಡ ತಾಯಿಗೆ ಮಾತ್ರ.

ಇದರಿಂದ ಸುಖದುಃಖಗಳಿಗೆ ವಿಷಯೇಂದ್ರಿಗಳ ಸನ್ನಿಕರ್ಷಮಾತ್ರವಾದರೆ ಸಾಲದು. ಮಮತಾಬುದ್ಧಿಯಿಂದಲೇ ಸುಖದುಃಖಗಳು ಉಂಟಾಗುವುದು. ಸುಖವಾದಾಗ ಹಿಗ್ಗು, ದುಃಖವಾದಾಗ ಕುಗ್ಗುವುದು. ಈ ಹಿಗ್ಗುಕುಗ್ಗುಗಳನ್ನು ತೊಡೆದುಹಾಕಿ ಮಾನಸಿಕ ಸಮತೋಲನವನ್ನು ಪಡೆಯಲು 'ನಾನು' ಮತ್ತು 'ನನ್ನದು' ಈ ಭಾವನೆಯನ್ನು ತೊರೆಯಬೇಕೆಂಬುದು ಗೀತೆಯ ಉಪದೇಶ.

ಹೀಗೆ ಶ್ರೀಮದ್ಭಗವದ್ಗೀತೆಯು ಜೀವನದ ಅನೇಕ ಕ್ಲಿಷ್ಟ ಸಮಸ್ಯೆಗಳನ್ನು ಉತ್ತರಿಸಿದೆ. ಸುಲಭವಾದ ಅನುಷ್ಟುಪ್ ಶ್ಲೋಕಗಳಲ್ಲಿರುವುದರಿಂದಲೋ ಏನೋ ಸ್ವಲ್ಪಮಟ್ಟಿನ ಸಂಸ್ಕೃತ ತಿಳಿದವನೂ ಗೀತೆಯನ್ನು

ವ್ಯಾಖ್ಯಾನಗೈಯುತ್ತೇನೆಂದು ಹೊರಡುತ್ತಾನೆ. ಹೀಗಾಗಿ ಅನೇಕ ಸಂದರ್ಭಗಳಲ್ಲಿ ಈ ಪವಿತ್ರಗ್ರಂಥವು ದುರುಪಯೋಗಕ್ಕೆ ಗುರಿಯಾಗಿದೆ. ಇದರ ಭಾಷೆ ಸುಲಭವಾದರೂ ವಿಮರ್ಶಿತವಾದ ವಿಷಯ ತೊಡಕಾದುದು, ಗಡುಚಾದುದು, ಸಂಕೀರ್ಣವಾದುದೆಂದರಿಯಬೇಕು. ಅರ್ಥಗೈಯ್ಯುವಾಗ ಹಿಂದೆ ಮುಂದೆ ನೋಡಿ ಚಿಂತನಗೈಯಬೇಕು. ಉದಾಹರಣೆಯೊಂದನ್ನು ಇಲ್ಲಿ ಸೂಚಿಸಲಿಚ್ಛಿಸುತ್ತೇನೆ.

ವಿದ್ಯಾವಿನಯಸಂಪನ್ನೇ ಬ್ರಾಹ್ಮಣೇ ಗವಿ ಹಸ್ತಿನಿ
ಶುನಿ ಚೈವ ಶ್ವಪಾಕೇ ಚ ಪಂಡಿತಾಸ್ಸಮದರ್ಶಿನಃ ॥ಅ 5 ಶ್ಲೋ 18 ॥

ಈ ಶ್ಲೋಕವು ಸಮತಾವಾದವನ್ನು ಬೋಧಿಸುತ್ತದೆ ಎಂದು ವ್ಯಾಖ್ಯಾನಗೈವ ಪಂಡಿತೋತ್ತಮರಿದ್ದಾರೆ. ಪಶ್ಚಿಮ ದೇಶದ ಸಮತಾವಾದವು ಕೇವಲ ಮನುಷ್ಯರಲ್ಲಿ ಸಮತ್ವವನ್ನು ಹೇಳಿದರೆ ಇದು ಮನುಷ್ಯ ಮತ್ತು ಇತರ ಪ್ರಾಣಿಗಳಲ್ಲಿಯೂ ಸಮಾನತೆಯನ್ನು ಬೋಧಿಸುತ್ತೆ ಎಂದು ಅವರ ವಾದ. ವಿದ್ಯಾವಿನಯಸಂಪನ್ನನಾದ ಬ್ರಾಹ್ಮಣ, ಗೋವು, ಆನೆ, ನಾಯಿ, ಶ್ವಪಾಕ ಇವರೆಲ್ಲರನ್ನೂ ಜ್ಞಾನಿಯಾದವನು ಒಂದೇ ರೀತಿಯಲ್ಲಿ ಕಾಣುತ್ತಾನೆ. ಆದುದರಿಂದ ಜ್ಞಾನಿಯ ದೃಷ್ಟಿಯಿಂದ ಇವೆಲ್ಲವೂ ಒಂದೇ ಸಮನಾದವುಗಳು ಎಂದು ಅವರ ಅಭಿಪ್ರಾಯ. ಇವರೆಲ್ಲರಲ್ಲೂ ಇರುವ ಆ "ಸಮತ್ವ" ವೆಂದರೇನು ? ಇಲ್ಲಿರುವ ಐದು ಪ್ರಾಣಿಗಳೂ ದೈಹಿಕವಾಗಿ, ಮಾನಸಿಕವಾಗಿ, ಗಾತ್ರದಲ್ಲಿ ಭೌದ್ಧಿಕವಾಗಿ ಭಿನ್ನಭಿನ್ನ ಆಕಾರ, ಆಚಾರವಿಚಾರಗಳನ್ನು ಹೊಂದಿರುವುದು ನಮಗೆ ಕಾಣುತ್ತದೆ. ನಮ್ಮ ಅನುಭವಕ್ಕೆ ಬರುತ್ತದೆ. ಹಾಗಿದ್ದರೂ ಇವುಗಳೆಲ್ಲಾ ಸಮವೆಂದು ತಿಳಿಯುವುದೆಂದರೆ ಅರ್ಥವೇನು ? ಈ ಸಮತ್ವವೆಂದರೇನೆಂಬುದನ್ನು ಗೀತೆಯ ಮುಂದಿನ ಶ್ಲೋಕವೇ ವಿವರಿಸುತ್ತದೆ.

ಇಹೈವ ತೈರ್ಜಿತಸ್ಸರ್ಗೋ ಯೇಷಾಂ ಸಾಮ್ಯೇ ಸ್ಥಿತಂ ಮನಃ
ನಿರ್ದೋಷಂ ಹಿ ಸಮಂ ಬ್ರಹ್ಮ ತಸ್ಮಾದ್ಬ್ರಹ್ಮಣಿ ತೇ ಸ್ಥಿತಾಃ ॥ ಅ 5 ಶ್ಲೋ 19 ॥

ಭಿನ್ನಭಿನ್ನ ಆಕಾರದ ಭಿನ್ನಭಿನ್ನ ಸ್ವಭಾವಗಳಿಂದ ಕೂಡಿದ ಈ ಪ್ರಾಣಿಗಳಲ್ಲಿರುವ ಪರಬ್ರಹ್ಮತತ್ತ್ವವು ಒಂದೇ ಸಮನಾದುದು. ನಿರ್ದೋಷವಾದುದು ಎಂದರಿಯಬೇಕು. ಜ್ಞಾನಿಯು ಹೀಗೆ ತಿಳಿಯುತ್ತಾನೆ. ಹೊರಗೆ ತೋರುವ ವಸ್ತುಗಳು ಗಾತ್ರ ಸ್ವಭಾವದಲ್ಲಿ ಬೇರೆಬೇರೆಯಾಗಿರುವುದರಿಂದ ಅವುಗಳಲ್ಲಿ ವ್ಯಾಪ್ತನಾಗಿರುವ ಪರಬ್ರಹ್ಮತತ್ತ್ವವೂ ಬೇರೆಬೇರೆಯೆಂದು ತೋರಬಹುದು. ಇದು ಸರಿಯಲ್ಲ. ಇವುಗಳಲ್ಲಿ ವ್ಯಾಪ್ತವಾಗಿರುವ ನಿರ್ದೋಷವಾದ ಪರಿಪೂರ್ಣವಾದ ಪರಬ್ರಹ್ಮವಸ್ತುವು ಒಂದೇ ಆಗಿದೆ. ನಾವೆಲ್ಲರೂ ಆ ಪರಮಾತ್ಮನ ಮಕ್ಕಳಂತೆ. ಆದುದರಿಂದ ನಮ್ಮಲ್ಲಿ ಭೇದಭಾವ ಸಲ್ಲದು, ವೈಷಮ್ಯ ಸಲ್ಲದು.

ಇನ್ನು ಈ ಪವಿತ್ರಗ್ರಂಥವು ಜೀವನದ ಇನ್ನೂ ಅನೇಕ ಕ್ಲಿಷ್ಟಸಮಸ್ಯೆಗಳನ್ನು ಚರ್ಚಿಸಿದೆ, ಬಿಡಿಸಿದೆ. ನಿಜವಾದ ಜೀವನದ ಮೌಲ್ಯಗಳೇನೆಂಬುದನ್ನು ಬೋಧಿಸಿದೆ.

ಅನೇಕ ಮಹಾತ್ಮರು ಇದರ ಬೋಧನೆಯನ್ನು ತಮ್ಮ ಜೀವನಜ್ಯೋತಿಯನ್ನಾಗಿಟ್ಟುಕೊಂಡು ಯಶಸ್ವಿ ಜೀವನವನ್ನು ಬಾಳಿದ್ದಾರೆ. ಆದುದರಿಂದ ಮಾನವ ವೈಚಾರಿಕತೆಗೆ ಬಹುಬೆಲೆಯ ಕೊಡುಗೆಯಾದ ಈ ಗ್ರಂಥವನ್ನು ಆಳವಾಗಿ ಅಭ್ಯಸಿಸಿ ಯಾವ ಆಗ್ರಹದಿಂದಲೂ ಪೀಡಿತರಾಗದೆ ವಿಮರ್ಶಿಸಿ ಅದರ ನಿಜತತ್ತ್ವದ ನೆಲೆಯನ್ನರಿದು ಜೀವನದ ಸನ್ಮಾರ್ಗವನ್ನು ಕಂಡುಕೊಳ್ಳುವುದು ಮಾನವರಾದ ನಮ್ಮ ಕರ್ತವ್ಯವಾಗಿದೆ.

ಎಸ್. ಪಿ. ಪಾಟೀಲ

ಜೈನಧರ್ಮ – ಅಹಿಂಸೆ

ಮಾನವನ ನಿತ್ಯಜೀವನ ಸುಖ-ದುಃಖಗಳ ಮಿಶ್ರಣವಾಗಿದೆ. ಸುಖದ ಕ್ಷಣವನ್ನು ಬಯಸುವಂತೆಯೇ ಕಷ್ಟ ನೋವುಗಳಿಗಾಗಿ ದುಃಖಿಸುವುದು ಸರ್ವಸಾಮಾನ್ಯರ ರೀತಿ. ಆದರೆ ಈ ಜಗತ್ತಿನಲ್ಲಿ ಜೀವಿಸುವವರೆಗೆ ಇದೆಲ್ಲ ಬಿಟ್ಟುದಲ್ಲವೆಂಬ ವಿಷಯ ತಿಳಿಯದೆ ಹೋಗುವದು. ಅದಕ್ಕಾಗಿ ಹುಟ್ಟು-ಸಾವುಗಳಿಂದ ಮುಕ್ತಿಯನ್ನು ಪಡೆಯುವದೇ ಮಾನವನ ಪರಮಗುರಿಯಾಗಿರಬೇಕೆಂದು ಸಾಮಾನ್ಯವಾಗಿ ಎಲ್ಲ ಮತ–ಧರ್ಮಗಳು ಪ್ರತಿಪಾದಿಸುತ್ತವೆ. ಈ ಉದ್ದೇಶವನ್ನು ಸಾಧಿಸಲು ಆ ಮತಗಳು ಬೇರೆಬೇರೆ ಮಾರ್ಗವನ್ನು ತೋರಿರುತ್ತವೆ. ಈ ರೀತಿ ಮಾನವನ ಕಲ್ಯಾಣವನ್ನೇ ಪರಮಗುರಿಯಾಗಿಟ್ಟು ಮಾರ್ಗದರ್ಶನವನ್ನೀಯುವ ಪ್ರಾಚೀನಪರಂಪರೆಯಲ್ಲಿ ಜೈನಧರ್ಮವೂ ಒಂದು. ಸೃಷ್ಟಿಯ ಆರಂಭಕಾಲದಲ್ಲಿಯೇ ಶ್ರವಣ ಪರಂಪರೆಯ ರೂಪದಲ್ಲಿದ್ದ ಜೈನಧರ್ಮದ ತತ್ತ್ವಗಳು ಆದಿತೀರ್ಥಂಕರ ವೃಷಭದೇವರನ್ನೊಳಗೊಂಡು ಕೊನೆಯ, ಇಪ್ಪತ್ತನಾಲ್ಕನೆಯ ತೀರ್ಥಂಕರ ಮಹಾವೀರರವರೆಗೆ ಎಲ್ಲರಿಂದಲೂ ಉಪದೇಶಿಸಲ್ಪಟ್ಟವೆ.

'ಜಿನ'ನಿಂದ ಉಪದೇಶಿಸಲ್ಪಟ್ಟ ಧರ್ಮವೇ ಜೈನಧರ್ಮ. 'ಜಿನ'ನೆಂದರೆ ರಾಗ–ದ್ವೇಷಗಳನ್ನು, ಹುಟ್ಟು-ಸಾವುಗಳನ್ನು ಗೆದ್ದವನು. ಇಂಥ ವೀತರಾಗ, ಮುಕ್ತಾತ್ಮನು ಸರ್ವಜ್ಞನಾಗಿರುವನು. ಅವನು ಕಂಡ ದರ್ಶನ ಸರ್ವರ ಕಲ್ಯಾಣಕ್ಕೆ ಪ್ರೇರಕವಾಗುವಂಥದು. ಅದರಿಂದಾಗಿ ಕಾಲಕಾಲಕ್ಕೆ ಜನಿಸಿದ ತೀರ್ಥಂಕರರು ಮಾನವಕುಲದ ಉನ್ನತಿಗಾಗಿ ಉಪದೇಶಿಸಿದರು. ಅದೇ ಈ ಹೊತ್ತಿಗೂ ನಮಗೆಲ್ಲರಿಗೂ ದಾರಿದೀಪವಾಗಬೇಕು. ಎರಡುವರೆ ಸಾವಿರ ವರ್ಷಗಳ ಹಿಂದೆ ಆಗಿಹೋದ ತೀರ್ಥಂಕರ ಮಹಾವೀರರ ೨೫ನೆಯ ನಿರ್ವಾಣ ಶತಮಾನೋತ್ಸವದ ಸಿದ್ಧತೆ ದೇಶದಲ್ಲೆಲ್ಲ ಚಟುವಟಿಕೆಯಿಂದ ಆರಂಭವಾದ ಈ ಸಂದರ್ಭದಲ್ಲಿ, ಹಾಗೂ ಭಗವಾನ್ ಮಹಾವೀರರ ಜಯಂತಿಯಾದ ಈಹೊತ್ತು ಅವರು ಉಪದೇಶಿಸಿದ ತತ್ತ್ವಗಳ ಕುರಿತು, ತಿಳಿದು ಆಚರಿಸಲು ಪ್ರಯತ್ನಿಸುವುದು ಸೂಕ್ತವಾಗಿದೆ. ಈ ದಿಶೆಯಲ್ಲಿ ಆಲೋಚಿಸುವಾಗ ಜೈನದರ್ಶನದ ಅಮೌಲ್ಯತತ್ತ್ವವಾದ ಅಹಿಂಸೆ ಪ್ರಪ್ರಥಮವಾಗಿ ಗೋಚರವಾಗುವದು.

ಪ್ರಚಲಿತ ಜಗತ್ತಿನ ಬಹುತರ ಎಲ್ಲ ರಾಷ್ಟ್ರದವರು ಎಂದಿಗಿಂತಲೂ ಇಂದು ಹೆಚ್ಚಿನ ಪ್ರಮಾಣದಲ್ಲಿ ಶಾಂತಿ, ಅಹಿಂಸೆ, ಸಮತೆಯ ಕುರಿತಾಗಿ ವಿಶೇಷವಾಗಿ ಪ್ರತಿಪಾದಿಸುತ್ತಿರುವುದು ಕಂಡುಬರುವುದು. ಮಾನವಕುಲದ ಸುಖ–ಶಾಂತಿಗಾಗಿ ಇವೆಲ್ಲ ಅವಶ್ಯ ಅಂಗಗಳಾಗಿವೆ ಎಂಬುದನ್ನು ಪ್ರತಿಯೊಬ್ಬರು ಒಪ್ಪುತ್ತಲಿದ್ದಾರೆ. ವಿಶ್ವದ ಎಲ್ಲ ಮತ–ಪಂಥಗಳೂ ಅವನ್ನು ಆತ್ಮೋನ್ನತಿಗೆ ಸಾಧನಗಳೆಂದು ಪರಿಗಣಿಸಿವೆ. ಅಹಿಂಸೆ, ಶಾಂತಿ, ಸಮತೆ ಮೊದಲಾದವುಗಳ ಆಚರಣೆಯಿಂದ ವ್ಯಕ್ತಿಯ ವೈಯಕ್ತಿಕ ಕಲ್ಯಾಣವಾಗುವಂತೆಯೇ ಸರ್ವರ ಕಲ್ಯಾಣವಾಗುವುದು ವಿದಿತವಾಗುವುದು. ವಿಶ್ವಕಲ್ಯಾಣವನ್ನು ಸಾಧಿಸಲು ಅಹಿಂಸೆಯನ್ನು ಎಲ್ಲ ಮತ–ಧರ್ಮಗಳು ಒಪ್ಪಿಕೊಂಡಿದ್ದರೂ, ಜೈನದರ್ಶನವು

ಅಹಿಂಸೆಯನ್ನು ನಿರೂಪಿಸುವ ರೀತಿಯಲ್ಲಿ ವಿಶೇಷತೆಯಿದೆ. ಅಹಿಂಸೆಯನ್ನು ಯಾವುದೇ ಸಂಕುಚಿತ ದೃಷ್ಟಿಯಿಂದ ಪ್ರತಿಪಾದಿಸದೆ, ವಿಶಾಲ ಮನೋಭೂಮಿಕೆಯಿಂದ, ವೈಜ್ಞಾನಿಕವಾಗಿಯೂ, ತರ್ಕಸಮ್ಮತವಾಗಿಯೂ, ವಿವರಿಸು ವದರಿಂದ ಜೈನಧರ್ಮವು ವಿಶ್ವಧರ್ಮದ ಬೇಡಿಕೆಯ ಬಹುಪಾಲನ್ನು ಪ್ರತಿಪಾದಿಸಿದಂತಾಗಿದೆ.

ವೈದಿಕ ಯಜ್ಞ-ಯಾಗಾದಿಗಳಲ್ಲಿ ಉಂಟಾಗುತ್ತಿದ್ದ ಹಿಂಸೆಯನ್ನು ಕಂಡು ಅದನ್ನು ತಡೆಯಲೆಂದೇ ಜೈನ ಹಾಗೂ ಬೌದ್ಧ ಧರ್ಮಗಳು ತಲೆಯೆತ್ತಿ ನಿಂತವೆಂಬ ಮಾತನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪಿಕೊಂಡಿದ್ದಾರೆ. ಆದರೆ ಆರಂಭಕಾಲದಿಂದಲೂ ಜೈನಧರ್ಮವು ಅಹಿಂಸಾ ತತ್ತ್ವವನ್ನು ಪ್ರಬಲವಾಗಿ ಪ್ರತಿಪಾದಿಸಿದುದಾಗಿದೆ.

ಅಹಿಂಸೆಯನ್ನು ಕ್ರಮಬದ್ಧವಾಗಿ ವಿವರಿಸಿ ಅದರಂತೆ ಸಂಪೂರ್ಣವಾಗಿಯೂ, ಸೂಕ್ಷ್ಮವಾಗಿಯೂ ಆಚರಣೆಯಲ್ಲಿ ತಂದ ಶ್ರೇಯವು ಜೈನಧರ್ಮದುದಾಗಿದೆ. ಹಿಂಸೆಯು ಕೃತಿ-ರೂಪಕ್ಕಿಳಿಯುವ ಮುಂಚೆ ಮನಸ್ಸಿನಲ್ಲಿ ವಿಚಾರದಲ್ಲಿ ರೂಪತಾಳುತ್ತದೆ. ವೈಚಾರಿಕಭಿನ್ನತೆವಿರೋಧವನ್ನು ನಿರ್ಮಿಸುವುದು. ಅದರಂತೆ ಇನ್ನೊಬ್ಬರ ಬಗೆಗೆ ಅಸಂತೋಷ, ಅತೃಪ್ತಿ, ಮತ್ಸರ, ದ್ವೇಷ ಮೊದಲಾದ ಭಾವನೆಗಳೇ ಪ್ರೀತಿ-ವಿಶ್ವಾಸ ಕಡಿಮೆ ಯಾಗುವುದಕ್ಕೆ ಕಾರಣವಾಗಿ ಹಿಂಸೆಗೆ ಅವಕಾಶವನ್ನು ಒದಗಿಸಿಕೊಡುವವು. ಆದರೆ ಈ ರೀತಿಯ ವೈಚಾರಿಕ ಭಿನ್ನತೆಯನ್ನು ತೊರೆಯಲು ಸರಿಯಾದ ಜ್ಞಾನದ ಆವಶ್ಯಕತೆಯಿದೆ. ಯಥಾರ್ಥಜ್ಞಾನವಾದಾಗ ವಿಪರೀತ ಭಾವ ಉಂಟಾಗಲಾರದು. ಆದುದರಿಂದ ಇಂಥ ಪರಿಪೂರ್ಣ ಜ್ಞಾನವುಂಟಾಗಲು ಜೈನಧರ್ಮವು ಪ್ರಚುರಪಡಿಸಿದ ಅನೇಕಾಂತವಾದವು ತುಂಬ ಉಪಯುಕ್ತವಾಗಿದೆ. ಈ ರೀತಿಯ ಸರಿಯಾದ ಜ್ಞಾನ ಉಂಟಾದರೆ ಹಿಂಸೆಯ ವಿಚಾರವೇ ಇಲ್ಲವಾಗುವುದು. ಆದುದರಿಂದ ಈ ಜ್ಞಾನವನ್ನು ಪಡೆಯಲು, ಚಾರಿತ್ರವನ್ನು ರೂಪಿಸಿಕೊಳ್ಳಲು ಜೈನಧರ್ಮವು ಸರಿಯಾದ ದಾರಿಯನ್ನು ತೋರುವಲ್ಲಿ ಯಶಸ್ವಿಯಾಗಿದೆ.

ಚಾರಿತ್ರವೇ ನಿಜವಾದ ಧರ್ಮವೆಂದು ಜೈನಧರ್ಮದಲ್ಲಿ ಆಚರಣೆಗೆ ವಿಶೇಷ ಮಹತ್ವ. ಸದಾಚಾರ ದಿಂದ ಮಾನವನು ತನಗೂ ಅನ್ಯರಿಗೂ ಸುಖವನ್ನೀಯಬಲ್ಲನು. ಸದಾಚಾರವೆಂದರೆ ಮನ-ವಚನ-ಕಾರ್ಯ ಗಳ ಸತ್‌ಪ್ರಯೋಗ. ಆದುದರಿಂದ ಸದಾಚಾರವೇ ಅಹಿಂಸೆಯ ಜೀವಾಳವಾಗಿದೆ. ಸಾಮಾನ್ಯವಾಗಿ ಜೀವ ವಧೆ ಮಾಡುವುದೆಂದರೇನೇ ಹಿಂಸೆಯೆಂದು ಭಾವಿಸಲಾಗುವುದು. ಆದರೆ ಜೈನಧರ್ಮದಲ್ಲಿ ಅಹಿಂಸೆಯ ವ್ಯಾಪ್ತಿ ತುಂಬ ವಿಸ್ತಾರವಾಗಿದೆ. ಆಚಾರ್ಯ ಉಮಾಸ್ವಾಮಿಯವರು 'ತತ್ತ್ವಾರ್ಥಸೂತ್ರ'ದಲ್ಲಿ "ಪ್ರಮತ್ತ ವಿಯೋಗದಿಂದ ಪ್ರಾಣದ ನಾಶವಾಗುವುದೇ ಹಿಂಸೆ" (7-13) ಎಂದು ಅಹಿಂಸೆಯ ಕುರಿತು ವಿವರಿಸುವಾಗ ಕೇವಲ ಒಂದು ಪ್ರಾಣಿಯ ವಧೆಯಾಗದೇ ಹೋದರೂ ಅವನ ನಿರ್ಮಲ ಮನೋವೃತ್ತಿಯು ನಾಶವಾಗುವುದೇ ಹಿಂಸೆಯೆನಿಸು ವುದು ಎಂದು ಸ್ಪಷ್ಟಪಡಿಸಿದ್ದಾರೆ. ಹಿಂಸೆ-ಅಹಿಂಸೆಗಳ ಮೂಲವು ಮನಸ್ಸಿನೊಳಗಿನ ಭಾವವೇ ಆಗಿರುವುದರಿಂದ ನಿರ್ಮಲ ಆಚರಣೆಗೆ ನಿರ್ಮಲ ಹೃದಯ-ಮನಸ್ಸು ಅವಶ್ಯ. ಅದನ್ನೇ ಅಮೃತಚಂದ್ರಸೂರಿಯವರು 'ಪುರುಷಾರ್ಥ ಸಿದ್ಧ್ಯುಪಾಯ'ದಲ್ಲಿ 'ಅಭಿಮಾನ, ಭಯ, ಜಿಗುಪ್ಸೆ, ಹಾಸ್ಯ, ರತಿ, ಶೋಕ, ಕಾಮ, ಕೋಪ ಇತ್ಯಾದಿಗಳು ಹಿಂಸೆಯ ಪರ್ಯಾಯ'ಗಳೆಂದು ಪ್ರತಿಪಾದಿಸಿದ್ದಾರೆ.

ಮನಸ್ಸಿನಲ್ಲಿ ದುರ್ಭಾವನೆಯಿಲ್ಲದಾಗ ಒಂದು ಜೀವಕ್ಕೆ ನಮ್ಮಿಂದ ದುಃಖಉಂಟಾದಲ್ಲಿ ಆ ಕೃತಿಗೆ ಹಿಂಸೆಯೆಂದು ಹೇಳಲಿಕ್ಕೆ ಆಗದು. ಆದರೆ ಉದ್ದೇಶಪೂರ್ವಕ ಯಾರಾದರೂ ಘಾತಮಾಡಬೇಕೆಂದು ಪ್ರಯತ್ನಿಸು ವುದು, ಹಾಗೂ ಆ ಪ್ರಯತ್ನ ಈಡೇರದೆ, ಆ ಜೀವಿಗೆ ಯಾವುದೇ ಅಪಾಯವಾಗದಿದ್ದರೂ ಆಗ ಹಿಂಸೆಯ ದೋಷ ತಟ್ಟುವುದು. ಆದುದರಿಂದ ಜೀವದ ವಧೆಯಾಗಲಿ, ಆಗದಿರಲಿ, ಪ್ರಮಾದದಿಂದ ಕಾರ್ಯಮಾಡುವವರಿಂದ ಹಿಂಸೆಯ ಪಾಪವು ನಿಶ್ಚಿತವಾಗಿ ತಟ್ಟುವುದು. ಆದರೆ ಯಾರು ಸಮಭಾವದಿಂದ, ಸಾವಧಾನದಿಂದ ಕಾರ್ಯ ಮಾಡುವರೋ ಅವರಿಂದ ಪ್ರಾಣಿವಧೆಯಾದರೂಕೂಡ ಅವರಿಗೆ ಹಿಂಸೆಯ ಪಾತಕವು ತಟ್ಟುವದಿಲ್ಲ. ಆದರೂ

ಹಿಂಸೆಯ ಸಾಧನಗಳಾದ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವುದೂ, ಇತರರಿಗೆ ದಾನಮಾಡುವುದೂ ಸಾಧುವಲ್ಲ ವೆಂಬುದೇ ಜೈನಧರ್ಮದ ನಿಲುಮೆಯಾಗಿದೆ.

ತಾತ್ತ್ವಿಕ ದೃಷ್ಟಿಯಿಂದ ಭಾವಹಿಂಸೆ, ದ್ರವ್ಯಹಿಂಸೆ ಎಂದು ಹಿಂಸೆಯಲ್ಲಿ ಮುಖ್ಯವಾಗಿ ಎರಡು ಭೇದ ಗಳಿವೆ. ಆದರೆ ವ್ಯವಹಾರದೃಷ್ಟಿಯಿಂದ, ಗೃಹಸ್ಥನ ಜೀವನವನ್ನು ಲಕ್ಷ್ಯದಲ್ಲಿರಿಸಿಕೊಂಡು ಹಿಂಸೆಯಲ್ಲಿ ಆರಂಭಿ, ಉದ್ಯೋಗಿ, ವಿರೋಧಿ ಹಾಗೂ ಸಂಕಲ್ಪಿ ಎಂದು ನಾಲ್ಕು ಭೇದಗಳನ್ನು ಸೂಚಿಸಿದ್ದಾರೆ.

೧. **ಆರಂಭಿಹಿಂಸೆ :** ಉಪಜೀವನಕ್ಕೆ ಅವಶ್ಯವಾದ ಒಂದಿಲ್ಲ ಒಂದು ಕೆಲಸವನ್ನು ಪ್ರತಿಯೊಬ್ಬನು ಮಾಡಬೇಕಾಗುವುದು. ಒಕ್ಕಲುತನ, ವ್ಯಾಪಾರ ಮುಂತಾದ ಕೆಲಸವನ್ನು ಮಾಡಬೇಕಾಗುವುದು. ಒಕ್ಕಲಿಗ ನಾದವನು ಹೊಲವನ್ನು ಉಳುವಾಗ, ಬಿತ್ತುವಾಗ, ಭೂಮಿಯಲ್ಲಿಯ ಸೂಕ್ಷ್ಮಜೀವಿಗಳ ಹಿಂಸೆಯಾಗುವುದುಂಟು. ಹೀಗೆ ಉಪಜೀವನಕ್ಕಾಗಿ ಕೆಲಸ ಮಾಡುವಾಗ ಅಪ್ರತ್ಯಕ್ಷವಾಗಿ ಆಗುವ ಹಿಂಸೆಯನ್ನು ಆರಂಭಿಹಿಂಸೆಯೆಂದು ಕರೆಯಲಾಗಿದೆ.

೨. **ಉದ್ಯೋಗಿಹಿಂಸೆ :** ಗೃಹಸ್ಥರಾದವರು ಸಾರಿಸುವುದು, ಉಡಗುವುದು, ನೀರು ತರುವುದು, ಬೀಸುವುದು, ಕುಟ್ಟುವುದು ಮೊದಲಾದ ಉದ್ಯೋಗಗಳನ್ನು ಮಾಡುವಾಗ ಅವರಿಗೆ ತಿಳಿಯದ ರೀತಿಯಲ್ಲಿ ಸೂಕ್ಷ್ಮಜೀವಿಗಳ ಹಿಂಸೆಯಾಗುವ ಸಂಭವವಿರುತ್ತದೆ. ಈ ಪ್ರಕಾರವಾಗುವ ಹಿಂಸೆಯನ್ನು ಉದ್ಯೋಗಿ ಹಿಂಸೆ ಯೆಂದು ಕರೆಯಲಾಗಿದೆ.

೩. **ವಿರೋಧಿ ಹಿಂಸೆ :** ಸ್ವದೇಶ, ಸ್ವಧರ್ಮ, ಸ್ವಗ್ರಹದ ಮೇಲೆ ದುಷ್ಟರಿಂದ ಆಕ್ರಮಣವಾದಾಗ ಅವನ್ನು ರಕ್ಷಿಸುವುದಕ್ಕಾಗಿ ಹೋರಾಟ ಮಾಡಲೇಬೇಕಾಗುವುದು. ಅದು ಪ್ರತಿಯೊಬ್ಬನ ಆದ್ಯ ಕರ್ತವ್ಯವಾಗಿದೆ. ಈ ಉದ್ದೇಶಕ್ಕಾಗಿ ಹೋರಾಡುವಾಗ ಆಗುವ ಹಿಂಸೆಯು ವಿರೋಧಿಹಿಂಸೆಯು.

೪. **ಸಂಕಲ್ಪಿಹಿಂಸೆ :** ಉದ್ದೇಶಪೂರ್ವಕವಾಗಿ ಇನ್ನೊಬ್ಬರಿಗೆ ತೊಂದರೆಕೊಡುವುದು ಅಥವಾ ಹಿಂಸೆಯನ್ನೀಯುವುದು ಸಾಧುವಾದುದಲ್ಲ. ಇಲ್ಲಿ ಹಿಂಸೆ ಅವನಿಂದ ಕಾರ್ಯರೂಪಕ್ಕಿಳಿಯಲಿ ಅಥವಾ ಇಳಿಯ ದಿರಲಿ, ಮನಸ್ಸಿನಲ್ಲಿ ಅಂಥ ಭಾವ ಮೂಡಿದರಾಯಿತು. ಆ ಹಿಂಸೆಯ ಫಲ ತಟ್ಟುವುದು. ಸಂಕಲ್ಪಿಹಿಂಸೆಯ ಘೋರ ಪರಿಣಾಮವನ್ನು ಕನ್ನಡ ಕವಿ ಜನ್ನನು "ಯಶೋಧರ ಚರಿತೆ"ಯಲ್ಲಿ ಪ್ರಭಾವಿಯಾಗಿ ಚಿತ್ರಿಸಿರುವುದನ್ನು ಕಾಣಬಹುದು. ಸಂಕಲ್ಪಿ ಹಿಂಸೆಯು ತೀವ್ರ ಪರಿಣಾಮಕಾರಿಯಾಗಿದೆ. ಇದನ್ನು ಗೃಹಸ್ಥನಾದವನು ತೊರೆಯು ವುದು ಅವಶ್ಯ. ಆಗಲೇ ಅವನಲ್ಲಿ ಮದ-ಮತ್ಸರ-ಕ್ರೋಧ-ಲೋಭ-ಮೊದಲಾದ ಕಷಾಯಗಳು ದೂರವಾಗಿ ಸಮಭಾವ ಬರಲು ಸಾಧ್ಯವಾಗುವದು. ಅದೇ ಗೃಹಸ್ಥನಾದವನಿಗೆ ಆರಂಭಿ, ಉದ್ಯೋಗಿ, ಹಾಗೂ ವಿರೋಧಿ ಹಿಂಸೆಗಳನ್ನು ತೊರೆಯುವುದು ಸಾಧ್ಯವಾಗಲಾರದು. ಅದರಂತೆ ಇವುಗಳಲ್ಲಿ ಹಿಂಸೆ ಮಾಡುವ ಉದ್ದೇಶ ಅವನ ದಾಗಿರುವುದಿಲ್ಲ. ಆದುದರಿಂದ ಈ ಮೂರು ಪ್ರಕಾರದ ಹಿಂಸೆಗಳ ವಿಷಯದಲ್ಲಿ ಗೃಹಸ್ಥನಿಗೆ ರಿಯಾಯತಿಯನ್ನು ತೋರಿ, ಸಂಕಲ್ಪಿಹಿಂಸೆಯನ್ನು ಮಾತ್ರ ತೊರೆಯಬೇಕೆಂದು ವಿಧಿಸಲಾಗಿದೆ. ಆದರೆ ಮುನಿಯಾದವನು ಈ ನಾಲ್ಕೂ ಪ್ರಕಾರದ ಹಿಂಸೆಯನ್ನು ಅತಿಸೂಕ್ಷ್ಮ ರೀತಿಯಲ್ಲಿ ವರ್ಜಿಸಿ, ಪರಿಪೂರ್ಣ ಅಹಿಂಸೆ ಯನ್ನು ಆಚರಿಸಲು ಸಾಧ್ಯ. ಅದರಿಂದಾಗಿ, ಜೈನಧರ್ಮವು ಗೃಹಸ್ಥನಿಗೆ ವಿಧಿಸಿರುವ ನಿಯಮಗಳಿಗಿಂತ ಅತಿ ಕಟ್ಟುನಿಟ್ಟಿನ ನಿಯಮಗಳನ್ನು ಮುನಿಗಳಿಗೆ ವಿಧಿಸಿದೆ. ಹೀಗೆ ಗೃಹಸ್ಥನ ಜೀವನಕ್ರಮವನ್ನು ಅರಿತು, ಹಿಂಸೆಯ ಮೂಲವನ್ನು ಸರಿಯಾಗಿ ಕಂಡುಹಿಡಿದು, ಅದರ ನಿವಾರಣೋಪಾಯವನ್ನು ವಿಧಿಸಿ, ಅಹಿಂಸೆಯ ಧ್ವಜವನ್ನು ಎತ್ತಿ ಹಿಡಿಯುವಲ್ಲಿ ಜೈನಧರ್ಮವು ತೋರಿದ ವ್ಯವಸ್ಥಿತಸ್ವರೂಪವನ್ನು ನಾವು ಇಲ್ಲಿ ಕಾಣಬಹುದು.

"ಸಮ್ಯಕ್ ದರ್ಶನ ಜ್ಞಾನ ಚಾರಿತ್ರಾಣಿ ಮೋಕ್ಷಮಾರ್ಗಃ" ಎಂಬ ಆಚಾರ್ಯ ಉಕ್ತಿಯು ಮೋಕ್ಷ ಮಾರ್ಗದ ನೇರ ಹಾಗೂ ಖಚಿತ ಮಾರ್ಗವನ್ನು ತೋರುವುದು. ಮದ, ಮತ್ಸರ, ಲೋಭ, ಕ್ರೋಧ ಭಾವಗಳು ಅಳಿದಾಗಲೇ ಸಮ್ಯಕ್ ದರ್ಶನವಾಗುವುದು. ಅದರಂತೆ ಕೇವಲಜ್ಞಾನ ಹಾಗೂ ದರ್ಶನವಿದ್ದರೂ ಆ ತತ್ತ್ವ ಪರಿಪೂರ್ಣವಾಗಬೇಕಾದರೆ ಚಾರಿತ್ರ್ಯದ ಬೆನ್ನೆಲುಬು ಅದಕ್ಕೆ ಅವಶ್ಯ. ಚಾರಿತ್ರ್ಯವೇ ಅವನು ಕಂಡುಂಡ ದರ್ಶನಜ್ಞಾನದ ಪರಿಣಾಮವನ್ನು ದರ್ಶಿಸುವುದು. ಅದರಂತೆ ಕೇವಲ ತರ್ಕಕ್ಕೆ ಸೀಮಿತವಾಗದಂತೆ, ನಿತ್ಯ ಜೀವನ ಕ್ರಮದಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗಬಹುದಾದ ತತ್ತ್ವಜ್ಞಾನವೇ ಉಪಯುಕ್ತವಾದುದರಿಂದ ಅಹಿಂಸೆಯನ್ನು ಜೈನಧರ್ಮವು ನಿರೂಪಿಸಿದೆ.

ಪ್ರತಿಯೊಬ್ಬ ಮಾನವನು ಎಲ್ಲ ಜೀವಿಗಳಲ್ಲಿ ದಯೆಯುಳ್ಳವನಾಗಿರಬೇಕು. ಎಲ್ಲರೊಂದಿಗೂ ಸಮಭಾವವನ್ನಿಟ್ಟುಕೊಳ್ಳಬೇಕು. ವಿರೋಧ ಕೂಡದು. ಯಾವ ಪ್ರಾಣಿಗಳಿಗೂ ನೋವನ್ನುಂಟು ಮಾಡಕೂಡದು. ಸುಖದುಃಖಗಳಲ್ಲಿ ಸಮಭಾವದಿಂದ ವರ್ತಿಸಬೇಕು. ಅಪ್ರಿಯವಾದ ವ್ಯವಹಾರವನ್ನು ಮಾಡಕೂಡದು. ನೀರಿನಲ್ಲಿಯ ಕ್ರಿಮಿಗಳಿಗೂ ಹಿಂಸೆಯಾಗಬಾರದೆಂದು ನೀರನ್ನು ಸೋಸಿ ಕುಡಿಯಬೇಕು—ಎಂಬ ಭಗವಾನ್ ಮಹಾವೀರ ತೀರ್ಥಂಕರರ ಈ ಮಾತುಗಳಲ್ಲಿ ವಿಶ್ವಪ್ರೇಮ, ವಿಶ್ವಬಂಧುತ್ವದ ಜೀವಾಳವನ್ನು ಕಾಣಬಹುದು.

ಅಹಿಂಸೆಯ ಕುರಿತು ಮಾತನಾಡುವಾಗ ಕೆಲವು ಸಾಮಾನ್ಯ ಜನರು ಅದು ಹೇಡಿಗಳ, ಕೈಲಾಗದವರ ಧರ್ಮವೆಂದೂ ಹೀಯಾಳಿಸುವುದುಂಟು. ಆದರೆ ಈ ಅಭಿಪ್ರಾಯ ಸಾಧುವಾದುದಲ್ಲ. ಕಾಯಾ, ವಾಚಾ, ಮನಸಾ ಹಿಂಸೆಯನ್ನು ತೊರೆಯುವುದು ಸಾಮಾನ್ಯನಿಂದ ಸಾಧ್ಯವಾಗಲಾರದು. ಆದುದರಿಂದ ಈ ರೀತಿ ಇಂದ್ರಿಯ ನಿಗ್ರಹ ಮಾಡುವುದು ಅತಿ ಸಂಯಮಿ ಹಾಗೂ ವ್ರತಿಕನಿಗೆ ಮಾತ್ರ ಸಾಧ್ಯ. ಆದುದರಿಂದ ರಾಗಗಳನ್ನು ಗೆಲ್ಲುವ ವೀತರಾಗರಂಥ ವೀರರಿಗೆ ಅದನ್ನು ಆಚರಿಸುವುದು ಸಾಧ್ಯ. ತನ್ನ ವೈರಿಯನ್ನು ದ್ವೇಷಿಸಕೂಡದು. ಅವನು ಕ್ಷಮಾಮೂರ್ತಿಯಾಗಿರಬೇಕು. ಕ್ಷಮೆಯೆಂದರೆ ತನಗೆ ತೊಂದರೆಕೊಟ್ಟ ಅಥವಾ ನೋಯಿಸಿದ ವ್ಯಕ್ತಿಯನ್ನು ಕೇವಲ ಕ್ಷಮಿಸಿದರೆ ಅವನ ಕಾರ್ಯ ಮುಗಿಯಲಿಲ್ಲ. ಹಿಂದಿನ ತನ್ನ ಕರ್ಮಫಲವಾಗಿಯೇ ತಾನು ಇಂಥ ದುಃಖವನ್ನು ಅನುಭವಿಸಬೇಕಾಯಿತು ; ಅಲ್ಲದೆ ತನ್ನ ಪೂರ್ವಜನ್ಮದ ಪಾಪಕರ್ಮದ ಪರಿಹಾರಕ್ಕಾಗಿ ಇಂಥ ತೊಂದರೆಯನ್ನುಂಟುಮಾಡಿ ಆ ವ್ಯಕ್ತಿ ಉಪಕರಿಸಿದನೆಂದು ಅವನ ಬಗೆಗೆ ಭಾವಿಸಬೇಕು. ಈ ರೀತಿ ಅಹಿಂಸೆಯ ಅಂಗವಾಗಿ ಕ್ಷಮಾಧರ್ಮದ ಮಹತ್ವವನ್ನು ಇಲ್ಲಿ ಕಾಣಬಹುದು.

ಜೈನಧರ್ಮವು ಅಹಿಂಸೆಯ ಮಹತ್ವವನ್ನು ಅರಿತಿರುವಂತೆ ವಿಶ್ವದ ಎಲ್ಲ ಧರ್ಮಗಳು ಅಹಿಂಸೆಯನ್ನು ಪ್ರತಿಪಾದಿಸಿರುವುದನ್ನು ಕಾಣಬಹುದು. 'ಬಾಳು ಹಾಗೂ ಬಾಳಗೊಡು', 'ನಿನ್ನಂತೆ ನಿನ್ನ ನೆರೆಹೊರೆಯವರನ್ನೂ ಪ್ರೀತಿಸು' ಎಂಬ ಕ್ರಿಸ್ತನ ಸಂದೇಶವೂ ಅಹಿಂಸೆ–ಸಮಭಾವವನ್ನೇ ಪ್ರತಿಪಾದಿಸುವುದಿಲ್ಲವೆ ? 'ಮಹಾಭಾರತದಲ್ಲಿಯೂ ಅಹಿಂಸೆಗೆ ಪರಮಧರ್ಮವೆಂದು ಹೇಳಲಾಗಿದೆ.' ಧಾರ್ಮಿಕ ಕಂದಾಚಾರಗಳನ್ನು ನಿರ್ಮೂಲಗೊಳಿಸಲೆಂದು, 12ನೆಯ ಶತಮಾನದಲ್ಲಿ ಕರ್ನಾಟಕದಲ್ಲಿ ಸಾಮಾಜಿಕ ಧಾರ್ಮಿಕ ಕ್ರಾಂತಿಯನ್ನುಂಟುಮಾಡಿದ ಬಸವಣ್ಣನವರೂ 'ದಯವಿಲ್ಲದ ಧರ್ಮವಾವುದಯ್ಯ' ಎಂದು ದಯೆ–ಸಮಭಾವ–ಅಹಿಂಸೆಯೇ ಪ್ರತಿಯೊಂದು ಧರ್ಮದ ತಿರುಳೆಂಬ ಮಹತ್ವದ ಅಂಶವನ್ನು ಜನಸಾಮಾನ್ಯರಿಗೂ ತಿಳಿಯುವಂತೆ ಹೇಳಿದ್ದಾರೆ. ಜೈನಮುನಿಗಳ ಅಹಿಂಸೆಯ ಆಚರಣೆಯನ್ನು ಅರಿತ 'ಮೊಗಲ ಬಾದಶಹರೂ ಜೈನಕ್ಷೇತ್ರಗಳಲ್ಲಿ ಹಿಂಸೆಯಾಗಕೂಡದೆಂದು ಆಜ್ಞೆಗಳನ್ನು ಹೊರಡಿಸಿದುದೂ ಉಂಟು.' 'ಪರ್ಯೂಷಣಪರ್ವ'ದಲ್ಲಿ ಜೈನರು ವಾಸಿಸುವ ಯಾವ ನಗರದಲ್ಲಿಯೂ ಪಶುಹತ್ಯೆಯನ್ನು ಮಾಡಕೂಡದೆಂದು ಆಜ್ಞೆಯನ್ನು ಹೊರಡಿಸಿದ್ದರು. ಈ ರೀತಿ ಅಹಿಂಸೆಯನ್ನು ಎಲ್ಲರೂ ಮನ್ನಿಸಿರುವರು. "ಜೀವದಯೆಯೇ ಜೈನಧರ್ಮ" ಎಂದು ಕನ್ನಡ ಕವಿ ಜನ್ನನು ಹೇಳುವಂತೆ ಜೀವದಯೆ ಎಂದರೆ ಅಹಿಂಸೆಯೇ ಜೈನಧರ್ಮ ಹಾಗೂ ಪರಮಧರ್ಮ ಎಂಬ ಅಭಿಪ್ರಾಯ ವ್ಯಕ್ತವಾಗಿದೆ. "ದಯೆ ದಮಂ

ದಾನಂ ತಪಂ ಶೀಲಮೆಂಬಿವೆ ಮೆಯ್ಯಾಗಿರೆ ಸಂದ ಧರ್ಮಮೆ ವಲಂ" ಹಾಗೂ "ಮನುಷ್ಯ ಜಾತಿ ತಾನೊಂದೆ ವಲಂ" ಎಂದು ವಿಶ್ವಧರ್ಮದ ತತ್ತ್ವಗಳು ಜೈನಧರ್ಮದಲ್ಲಿ ರೂಪತಳೆದುದನ್ನು ಕನ್ನಡದ ಆದಿಮಹಾಕವಿ ಪಂಪನು ಪ್ರಭಾವಿಯಾಗಿ ವಿವರಿಸಿದ್ದಾನೆ. ಹೀಗೆ ಆತ್ಮನು ಸ್ವಸ್ವರೂಪದಲ್ಲಿ ನೆಲಸುವುದೇ ನಿರ್ವಾಣವು. ಆ ನಿರ್ವಾಣ ಪದ ಪಡೆಯುವುದೇ ಜೈನದರ್ಶನದ ಪರಮಧ್ಯೇಯವು. ಆ ಧ್ಯೇಯಸಾಧನೆಗೆ ಭಾವವು ಕಾರಣವಾಗಿದೆ. ಭಾವವು ವಿಶುದ್ಧವಾಗಿರಬೇಕು; ಅಹಿಂಸೆಯಿಂದ ಕೂಡಿರಬೇಕು. ಆದುದರಿಂದ ಅಹಿಂಸೆಯೇ ನಿರ್ವಾಣದ ಪರಮಸಾಧನವಾಗಿದೆ, ಜೈನದರ್ಶನ ಆತ್ಮವಾಗಿದೆ. ಆದುದರಿಂದಲೇ ಅಹಿಂಸೆಯೇ ಪರಮಧರ್ಮವಾಗಿದೆ ಎಂಬ ಹೇಳಿಕೆ ಸರ್ವಗ್ರಾಹ್ಯವಾಗುವುದರಲ್ಲಿ ಸಂಶಯವಿಲ್ಲ.

ಬರ್ನಾರ್ಡ್‌ಷಾನಿಗೆ 1925ರಲ್ಲಿ ನೋಬಲ್ ಬಹುಮಾನ ಬಂದಿತು, 'ಸಾಹಿತ್ಯ ಸೃಷ್ಟಿಗಾಗಿ', ಅಲ್ಲಿಂದ ಮುಂದೆ ಆತ ಯಾವ ಬಹುಮಾನವನ್ನೂ ಸ್ವೀಕರಿಸಲಿಲ್ಲ. ಬಹುಮಾನ ನೀಡಲು ಬಂದವರನ್ನು ಕುರಿತು ಆತನು ತನ್ನ ಗ್ರಂಥದ ವಾಚಕರಿಂದಲೂ ತನ್ನ ನಾಟಕದ ಪ್ರೇಕ್ಷಕರಿಂದಲೂ ತನಗೆ ಬೇಕಾದಷ್ಟು ಹಣ ಬರುತ್ತಿದೆಯೆಂದು ಹೇಳುತ್ತಿದ್ದ. ತನಗೆ ಬಹುಮಾನ ಕೊಡುವುದೆಂದರೆ, ಸಮುದ್ರವನ್ನು ಈಜಿ ದಡ ಸೇರಿದವನಿಗೆ ಈಜು ಬುರುಡೆಯನ್ನುಕೊಟ್ಟಂತೆ ಎಂದು ಆತ ಹೇಳುತ್ತಿದ್ದ.

ಜಿ. ವಿ. ಗಣೇಶಯ್ಯ

ಭಾರತೀಯ ಜಾತಿ ಪದ್ಧತಿ—ಒಂದು ವಿವೇಚನೆ

"ಮೊದಲು ಮಾನವರಲ್ಲಿ ಜಾತಿಭೇದವೇ ಇರಲಿಲ್ಲ; ಬ್ರಹ್ಮದಿಂದ ಉತ್ಪನ್ನರಾದ ಕಾರಣ ಎಲ್ಲರೂ ಬ್ರಾಹ್ಮಣರೇ ಆಗಿರುತ್ತಿದ್ದರು. ತರುವಾಯ ಸ್ವಭಾವಜನ್ಯ ಗುಣಕರ್ಮಗಳ ಕಾರಣ ಅವರಲ್ಲಿ ವರ್ಣಭೇದ ಉಂಟಾಯಿತು."—ಮಹಾಭಾರತ.

ಆದಿಯಲ್ಲಿ ಜಾತಿಭೇದವೇ ಇರಲಿಲ್ಲವೆಂದೂ ಅದು ನಂತರ ಉದಯವಾದುದೆಂದೂ ಮಹಾಭಾರತದ ಈ ಹೇಳಿಕೆಯಿಂದ ಸ್ಪಷ್ಟವಾಗುವುದು.

ಜಾತಿ ಪದ್ಧತಿಯ ಉಗಮ

ಆದಿಯಲ್ಲಿ ಮಾನವರು ಕಾಡು-ಮೇಡುಗಳಲ್ಲಿ ಅಲೆದು, ಹಣ್ಣು-ಹಂಪಲು, ಗೆಡ್ಡೆ-ಗೆಣಸುಗಳೇ ಮುಂತಾದ ಆಹಾರ ಪದಾರ್ಥಗಳನ್ನು ಹುಡುಕಿ ತಿಂದು ಜೀವಿಸುತ್ತಿದ್ದರು. ಹೀಗೆ ಆಹಾರಕ್ಕಾಗಿ ಕಾಡಿನಲ್ಲಿ ಅಲೆಯುತ್ತಿದ್ದಾಗ ಅವರು ಒಂದು ವಿಚಾರವನ್ನು ಅಚ್ಚರಿಯಿಂದ ಗಮನಿಸಿದರು. ಅದಾವುದೆಂದರೆ, ಗಿಡದಲ್ಲಿರುವ ಬೀಜವೊಂದು ನೆಲದ ಮೇಲೆ ಬಿದ್ದು, ಮಣ್ಣಿನೊಡನೆ ಬೆರೆತು, ನೀರಿನ ಸಂಪರ್ಕದಿಂದ ಮೊಳೆತು, ಮತ್ತೊಂದು-ಮೊದಲಿನಂತಹುದೇ ಗಿಡವಾಗಿ ಫಲ ಬಿಡುವುದು. ಈ ಅಚ್ಚರಿಯನ್ನು ಸೂಕ್ಷ್ಮವಾಗಿ ಗಮನಿಸಿದ ಕೆಲಜನರು ಗಿಡಗಳಿಂದ ಬೀಜಗಳನ್ನು ತೆಗೆದುಕೊಂಡುಹೋಗಿ ತಮ್ಮ ವಾಸ್ತವ್ಯದ ಹತ್ತಿರ ಒಂದು ಗೊತ್ತಾದ ಸ್ಥಳದಲ್ಲಿ ಹಾಕತೊಡಗಿದರು. ಆಗ ಆ ಬೀಜಗಳು ಮೊಳೆತು ಗಿಡವಾಗಿ ಫಲಿಸತೊಡಗಿದವು. ಇದರಿಂದ ಆ ಜನರಿಗೆ ಅರಣ್ಯಗಳಲ್ಲಿ ಅಲೆದಾಡಿ ಆಹಾರಾನ್ವೇಷಣೆ ಮಾಡುವ ಕಷ್ಟ ತಪ್ಪಿತು. ಹೀಗಾಗಿ ಬೀಜಗಳನ್ನು ನಿರ್ದಿಷ್ಟ ಸ್ಥಳಗಳಲ್ಲಿ ಚೆಲ್ಲಿ ಆಹಾರ ಬೆಳೆದುಕೊಳ್ಳುವ ಕೆಲಸ ಜನಪ್ರಿಯವಾಯಿತು. ಈ ರೀತಿ ಬೆಳೆತೆಗೆಯುತ್ತಿದ್ದ ಸಂದರ್ಭದಲ್ಲಿ ಕೆಲವರಿಗೆ ಅಧಿಕ ಫಸಲು ಬಂದಿತು. ಅವರ ಆವಶ್ಯಕತೆ ಪೂರೈಸಿ ಬಹಳಷ್ಟು ಆಹಾರಪದಾರ್ಥ ಉಳಿಯಿತು. ಬಿಸಾಡಲು ಮನಸ್ಸು ಬಾರದು; ಕಷ್ಟಪಟ್ಟು ದುಡಿದುದಷ್ಟೇ? ಬೆಳೆ ಕಡಿಮೆ ಬಂದವರಿಗೋ, ಆಯುಧ, ಸಾಮಗ್ರಿ, ಪಾತ್ರೆ-ಪಡಗ ತಯಾರಿಕೆಯಂಥ ಇತರ ಕೆಲಸಗಳಲ್ಲೇ ನಿರತರಾದವರಿಗೋ ಅದನ್ನು ಕೊಟ್ಟು, ಬದಲಿಗೆ ಅವರಿಂದ ಬೇರೇನನ್ನಾದರೂ-ತಮ್ಮಲ್ಲಿಲ್ಲದುದನ್ನು-ಪಡೆಯುವ ಪರಿಪಾಟ ಬೆಳೆದುಬಂದಿತು. ಜೊತೆಯಲ್ಲೇ ಈ ಜನ ಕಾಡಿನಲ್ಲಿದ್ದ ಸಾಧುಪ್ರಾಣಿಗಳನ್ನು ಪಳಗಿಸಿ ಅವುಗಳಿಂದ ಕೆಲಸ ಮಾಡಿಸಿಕೊಳ್ಳುವುದು, ಅವುಗಳ ಹಾಲು, ಚರ್ಮ ಮಾಂಸ, ಉಣ್ಣೆಗಳನ್ನು ಉಪಯೋಗಿಸಿಕೊಳ್ಳುವುದು ಮೊದಲಾಯಿತು. ಹೀಗೆ ವ್ಯವಸಾಯ, ಪಶುಪಾಲನೆ, ವ್ಯಾಪಾರಾದಿಗಳು ಹುಟ್ಟಿಕೊಂಡವು.

ಇನ್ನು ಕೆಲವರು 'ಈ ಸೃಷ್ಟಿ ಹೇಗಾಯಿತು? ಯಾತರಿಂದ ಆಯಿತು? ನಮ್ಮ ಜೀವಿತದ ಗುರಿ,

ಯೇನು ? ನಮಗೂ ಸೃಷ್ಟಿಗೂ ಕಾರಣವಾದ ಶಕ್ತಿಗೂ ಇರುವ ಸಂಬಂಧವೇನು ? ಮನುಷ್ಯ ಹೇಗೆ ಹೇಗೆ ಜೀವಿಸಿದರೆ ಪರಸ್ಪರರಿಗೆ ಅನುಕೂಲವಾದೀತು ?' ಇವೇ ಮುಂತಾದ ಪ್ರಶ್ನೆಗಳಿಗೆ ಅಂತರ್ಮುಖರಾಗಿದ್ದು ಕೊಂಡು ಉತ್ತರಗಳನ್ನು ಕಂಡುಹಿಡಿದು ಇತರರಿಗೆ ಅವನ್ನು ಬೋಧಿಸತೊಡಗಿದರು. ಇವರ ಕೆಲಸ ಮುಖ್ಯವಾಗಿ ಬೌದ್ಧಿಕವಾಗಿತ್ತು.

ಈ ಎರಡೂ ರೀತಿಯ ಜನರು ಪರಸ್ಪರ ಸಹಕಾರದಿಂದ ಕಾಲ ಕಳೆಯುತ್ತಿರಲು ಇವರಿಗೆ ಶತ್ರುಗಳ ಹಾಗೂ ಕ್ರೂರಪ್ರಾಣಿಗಳ ಕಿರುಕುಳ, ದಾಳಿಗಳನ್ನೆದುರಿಸಬೇಕಾಗುವ ಸಂದರ್ಭ ಆಗಾಗ ಉಂಟಾಗುತ್ತಿತ್ತು. ಮೇಲೆ ವಿವರಿಸಿದ ಕಾರ್ಯಗಳಲ್ಲೇ ಸದಾ ನಿರತರಾದವರಿಗೆ ಈ ವಿಚಾರದಲ್ಲಿ ತಲೆಕೆಡಿಸಿಕೊಳ್ಳಲು ಅವಕಾಶವಿರುತ್ತಿರಲಿಲ್ಲ. ಆಗ ಬೇರೆ ಕೆಲವು ಜನ ಸಾಹಸಿಗರು ಆ ಕಾರ್ಯಕ್ಕೆ, ಎಂದರೆ ಶತ್ರು ಹಾಗೂ ಕ್ರೂರಪ್ರಾಣಿಗಳ ದಾಳಿಯನ್ನು ತಡೆದು ತಮ್ಮವರನ್ನು ರಕ್ಷಿಸುವ ಹೊಣೆ ಹೊತ್ತರಲ್ಲದೆ ಈ ಕೆಲಸವನ್ನೇ ತಮ್ಮ ಜೀವನೋಪಾಯಕ್ಕಾಗಿ ಆರಿಸಿಕೊಂಡರು ಕೂಡ.

ಸ್ವತಂತ್ರವಾಗಿ ಯಾವ ಕಾರ್ಯವನ್ನೂ ಮಾಡಲಾರದವರಾಗಿ, ಮೇಲೆ ವಿವರಿಸಿದ ಮೂರೂ ವೃತ್ತಿಗಳಲ್ಲಿದ್ದ ಜನರು ಹೇಳಿದ ಕೆಲಸಗಳನ್ನು ಮಾತ್ರ ಯಥಾವತ್ತಾಗಿ ನಿರ್ವಹಿಸುವುದರಲ್ಲೇ ನಿರತರಾದ ಇನ್ನೊಂದು ಜನಸಮುದಾಯ ಅಸ್ತಿತ್ವಕ್ಕೆ ಬಂತು. ಇವರಿಗೆ ಬೌದ್ಧಿಕ ಕೆಲಸಗಳಿಗಿಂತ ದೈಹಿಕಕೆಲಸಗಳೇ ಸುಲಭಸಾಧ್ಯವಾಗಿದ್ದುವು. ಉಳಿದ ಮೂರು ಪಂಗಡಗಳವರು ತಮ್ಮತಮ್ಮ ಕೆಲಸಕಾರ್ಯಗಳಲ್ಲಿ ಪ್ರವೃತ್ತರಾಗಿದ್ದಾಗ ಸ್ವಾಭಾವಿಕವಾಗಿ ಅವರ ಸ್ವಂತ ಕೆಲಸಗಳನ್ನು (ಗೃಹಶುದ್ಧಿ, ಬಟ್ಟೆಬರೆ ಒಗೆಯುವುದು, ಪಾತ್ರೆ ತೊಳೆಯುವುದು, ಇತ್ಯಾದಿ) ನಿರ್ವಹಿಸಲು ಬೇರೆಯವರ ಸಹಾಯ ಬೇಕಾಗಿತ್ತು. ತಾವೇ ಅವುಗಳನ್ನು ನಿರ್ವಹಿಸುವಷ್ಟು ಸಮಯ, ಸಂಯಮ ಅವರಲ್ಲಿರಲಿಲ್ಲ. ಈ ಆವಶ್ಯಕತೆಯನ್ನು ಪೂರೈಸಿದವರು ಈ ಕೊನೆಗೆ ವಿವರಿಸಿದ ಜನ.

ಈ ರೀತಿ ವಿವಿಧವೃತ್ತಿನಿರತ ಜನರನ್ನು ಗುರುತಿಸುವುದಕ್ಕಾಗಿ ಒಂದೊಂದು ವೃತ್ತಿಯವರಿಗೂ ಒಂದೊಂದು ಹೆಸರಿಡುವುದು ಅವಶ್ಯವಾಯಿತು. ವ್ಯವಸಾಯ, ವ್ಯಾಪಾರ, ಪಶುಪಾಲನೆ–ಇತ್ಯಾದಿ ವೃತ್ತಿನಿರತರನ್ನು ವೈಶ್ಯರೆಂದೂ, ದೈವಚಿಂತನೆ, ಅಧ್ಯಯನ–ಅಧ್ಯಾಪನ ಮುಂತಾದ ಬೌದ್ಧಿಕ ಕ್ರಿಯಾಶೀಲ ಜನರನ್ನು ಬ್ರಾಹ್ಮಣರೆಂದೂ, ಶಸ್ತ್ರವಿದ್ಯೆ, ಯುದ್ಧ, ರಕ್ಷಣೆ—ಮುಂತಾದ ಕಾರ್ಯಗಳಲ್ಲಿ ತೊಡಗಿದ ಸಾಹಸಿಗರನ್ನು ಕ್ಷತ್ರಿಯರೆಂದೂ, ಈ ಮೂರೂ ವೃತ್ತಿಯ ಜನ ಹೇಳಿದ ಕೆಲಸಗಳನ್ನು (ಅವರ ಸೇವೆಯನ್ನು) ಮಾಡಿಕೊಂಡಿದ್ದ ಜನರನ್ನು ಶೂದ್ರರೆಂದೂ ಕರೆಯುವುದು ರೂಢಿಗೆ ಬಂತು.

ಜಾತಿಯ ಬೆಳವಣಿಗೆ

ಇವೆಲ್ಲ ಆದಮೇಲೆ ಕೆಲವು ಬುದ್ಧಿವಂತರು ಮಾನವರಲ್ಲಿ ಸಾತ್ವಿಕ, ರಾಜಸ, ತಾಮಸ (ಸತ್ವಗುಣ, ರಜೋಗುಣ, ತಮೋಗುಣ)—ಎಂಬ ಮೂರು ಪ್ರಕಾರವಾದ ಗುಣವಿಶೇಷಗಳಿರುವುದನ್ನು ಕಂಡುಕೊಂಡರಲ್ಲದೆ ಪ್ರತಿಯೊಬ್ಬ ಮಾನವನೂ ಪ್ರವೃತ್ತನಾಗಿರುವ ವೃತ್ತಿಗೂ ಅವನಲ್ಲಿರುವ ಗುಣವಿಶೇಷಗಳಿಗೂ ಪರಸ್ಪರ ಸಂಬಂಧವಿದೆ ಎಂಬುದನ್ನು ಪತ್ತೆಹಚ್ಚಿದರು. (ಈ ವಿಚಾರದಲ್ಲಿ 'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣ ಕರ್ಮ ವಿಭಾಗಶಃ' ಎಂದರೆ ಗುಣಕರ್ಮಗಳ ವಿಭಾಗದ ಮೂಲಕ ಚಾತುರ್ವರ್ಣ್ಯವು ನನ್ನಿಂದ ಸೃಷ್ಟಿಸಲ್ಪಟ್ಟಿತು—ಎಂಬ ಗೀತಾ ವಾಕ್ಯವನ್ನು ಗಮನಿಸಬಹುದು.)

ಸತ್ವಗುಣವುಳ್ಳವರು ವೇದಾಧ್ಯಯನ ಹಾಗೂ ಅಧ್ಯಾಪನ ; ಯಜ್ಞ ಮಾಡುವುದು ಹಾಗೂ ಮಾಡಿಸುವುದು ; ದಾನ ಮಾಡುವುದು, ತೆಗೆದುಕೊಳ್ಳುವುದು (ಅಧ್ಯಾಪನಮಧ್ಯಯನಂ ಯಜನಂ ಯಾಜನಂ ತಥಾ । ದಾನಂ ಪ್ರತಿಗ್ರಹಂ ಚೈವ ಬ್ರಾಹ್ಮಣಾನಾಮ ಕಲ್ಪಯತ್–ಮನಸ್ಮೃತಿ) ಮನೋನಿಗ್ರಹ, ಹಾಗೂ ಇಂದ್ರಿಯ

ನಿಗ್ರಹ; ಪವಿತ್ರತೆ, ತಪಸ್ಸು, ಶಾಂತಿ, ಸರಳತ್ವ, ಶಾಸ್ತ್ರಜ್ಞಾನ, ಆಸ್ತಿಕತೆ, ಶ್ರದ್ಧೆ ಮೊದಲಾದ ಲಕ್ಷಣಗಳಿಂದ ಕೂಡಿರುತ್ತಿದ್ದರು. ಇವರೇ ಬ್ರಾಹ್ಮಣರೆನಿಸಿಕೊಂಡವರು. (ಶಮೋ ದಮಸ್ತಪಃ ಶೌಚಂ ಕ್ಷಾನ್ತಿರಾರ್ಜವಮೇವ ಚ ಜ್ಞಾನಂ ವಿಜ್ಞಾನಮಾಸ್ತಿಕ್ಯಂ ಬ್ರಹ್ಮಕರ್ಮ ಸ್ವಭಾವಜಮ್—ಗೀತೆ)

ಸತ್ವಮಿಶ್ರಿತ ರಜೋಗುಣವುಳ್ಳವರು ಪ್ರಾಣರಕ್ಷಣೆ, ದಾನ, ಯಜ್ಞ, ವೇದಾಧ್ಯಯನ ವಿಷಯದಲ್ಲಿ ಅನಾಸಕ್ತಿ (ಪ್ರಜಾನಾಂ ರಕ್ಷಣಂ ದಾನಮಿಜ್ಯಾಧ್ಯಯನಮೇವ ಚ। ವಿಷಯೇಷ್ವಪ್ರಸಕ್ತಿಂ ಚ ಕ್ಷತ್ರಿಯಸ್ಯ ಸಮಾದಿಶತ್–ಮನುಸ್ಮೃತಿ). ಶೌರ್ಯ, ತೇಜಸ್ಸು, ಕಾರ್ಯದಕ್ಷತೆ, ಯುದ್ಧದಲ್ಲಿ ಹಿಮ್ಮೆಟ್ಟದಿರುವಿಕೆ, ದಾನ ಹಾಗೂ ಪ್ರಭುತ್ವಶಕ್ತಿ–ಮುಂತಾದ ಲಕ್ಷಣಗಳಿಂದ ಕೂಡಿರುತ್ತಿದ್ದು ಕ್ಷತ್ರಿಯರೆನಿಸಿಕೊಂಡರು. (ಶೌರ್ಯಂ ತೇಜೋ ಧೃತಿರ್ದಾಕ್ಷ್ಯಂ ಯುದ್ಧೇ ಚಾಪ್ಯಪಲಾಯನಮ್। ದಾನಮೀಶ್ವರ ಭಾವಶ್ಚ ಕ್ಷಾತ್ರಂ ಕರ್ಮ ಸ್ವಭಾವಜಮ್–ಗೀತೆ).

ತಮ ಮಿಶ್ರಿತ ರಜೋಗುಣವುಳ್ಳವರು ಕೃಷಿ, ಗೋರಕ್ಷಣ, ದಾನ, ಯಜ್ಞ, ಅಧ್ಯಯನ, ವ್ಯಾಪಾರ, ಬಡ್ಡಿ ವ್ಯವಹಾರ ಮುಂತಾದ ಕಾರ್ಯಗಳಲ್ಲಿ ಪ್ರವೃತ್ತರಾಗಿರುತ್ತಿದ್ದು ವೈಶ್ಯರೆಂಬ ಹೆಸರು ಪಡೆದಿದ್ದರು. (ಪಶೂನಾಂ ರಕ್ಷಣಂ ದಾನಮಿಜ್ಯಾಧ್ಯಯನಮೇವ ಚ। ವಾಣಿಜ್ಯಂ ಚ ಕುಸೀದಂ ಚ ವೈಶ್ಯಸ್ಯ ಕೃಷಿಮೇವ ಚ॥–ಮನುಸ್ಮೃತಿ; ಕೃಷಿಗೌರಕ್ಷ್ಯವಾಣಿಜ್ಯಂ ವೈಶ್ಯಕರ್ಮ ಸ್ವಭಾವಜಮ್–ಗೀತೆ)

ರಜಮಿಶ್ರಿತ ತಮೋಗುಣವುಳ್ಳವರು ಸ್ವತಂತ್ರವಾಗಿ ಯಾವ ಕಾರ್ಯ ಮಾಡಲೂ ಅಶಕ್ತರಾಗಿದ್ದರಲ್ಲದೆ ಮೇಲೆ ವಿವರಿಸಿದ ಮೂರೂ ವರ್ಣಗಳವರು ಹೇಳಿದ್ದನ್ನು ಅಸೂಯೆಯಿಲ್ಲದೆ ನಿಷ್ಠೆಯಿಂದ ಮಾಡುತ್ತಿದ್ದರು, ಎಂದರೆ ಪರಿಚರ್ಯೆಯಲ್ಲಿ ನಿರತರಾಗಿರುತ್ತಿದ್ದರು. ಇವರನ್ನು 'ಶೂದ್ರರು' ಎಂದು ಕರೆಯಲಾಗುತ್ತಿತ್ತು. (ಏಕಮೇವ ತು ಶೂದ್ರಸ್ಯ ಪ್ರಭುಃ ಕರ್ಮ ಸಮಾದಿಶತ್। ಏತೇಷಾಮೇವ ವರ್ಣಾನಾಂ ಶುಶ್ರೂಷಾಮನಸೂಯಯಾ।–ಮನುಸ್ಮೃತಿ; ಪರಿಚರ್ಯಾತ್ಮಕಂ ಕರ್ಮ ಶೂದ್ರಸ್ಯಾಪಿ ಸ್ವಭಾವಜಮ್–ಗೀತೆ)

(ಮನುಸ್ಮೃತಿಯಲ್ಲಿ ಇನ್ನೊಂದು ವಿಚಾರವಿದೆ. ಬ್ರಹ್ಮದ ಮುಖದಿಂದ ಬ್ರಾಹ್ಮಣರೂ, ಭುಜಗಳಿಂದ ಕ್ಷತ್ರಿಯರೂ, ತೊಡೆಗಳಿಂದ ವೈಶ್ಯರೂ, ಪಾದಗಳಿಂದ ಶೂದ್ರರೂ ಬಂದರು–ಎಂದು. ಇದನ್ನು ಸ್ವಲ್ಪ ಇಲ್ಲಿ ವಿಚಾರ ಮಾಡುವುದಗತ್ಯ. ಎಲ್ಲಿಯಾದರೂ,ಬ್ರಹ್ಮಕ್ಕೆ ಮುಖ, ಭುಜ,ತೊಡೆ, ಪಾದಾದಿ ಅಂಗಾಂಗಗಳು ಮಾನವನಿಗಿರುವಂತೆ ಇರಲು ಶಕ್ಯವೇ ? ಹಾಗಿದ್ದ ಪಕ್ಷದಲ್ಲಿ ಆತ ಸಾಕಾರನಾಗಿಯೂ ಏಕದೇಶೀಯನಾಗಿಯೂ ಇದ್ದು, ನಿರಾಕಾರ–ಸರ್ವಾಂತರ್ಯಾಮಿತ್ವವು ಸಂಗತವಾಗಲಾರದಲ್ಲಾ ?–ಎಂದು ಪ್ರಶ್ನಿಸಬಹುದು. ಇಲ್ಲಿ ವಿಚಾರವಿಷ್ಟೇ : ಸಮಸ್ತ ಮಾನವನ ಸುಸಂಘಟಿತ ಸಮಾಜವನ್ನೇ ಅಂಗಾಂಗಸಹಿತ ಬ್ರಹ್ಮವೆಂದು ಕಲ್ಪಿಸಿ, ಬೌದ್ಧಿಕ ಕ್ರಿಯಾಶೀಲ ಬ್ರಾಹ್ಮಣನು ಬುದ್ಧಿಯು ಸ್ಥಿತವಾಗಿರುವ ಮುಖಕ್ಕೆ ಸಮ ಅಥವಾ ಸಮಾಜ ಬ್ರಹ್ಮದ ಆ ಸ್ಥಾನದಿಂದ ಬಂದನೆಂದೂ, ಪರಾಕ್ರಮಶಾಲಿಯಾದ ಕ್ಷತ್ರಿಯನು ಪರಾಕ್ರಮದ ಸ್ಥಾನಗಳಾದ ಭುಜಗಳಿಂದ ಬಂದನೆಂದೂ, ಪಶುಪಾಲನೆ, ವ್ಯವಸಾಯ, ವ್ಯಾಪಾರಾದಿ ಕಸುಬಿನ ವೈಶ್ಯನಿಗೆ ತೊಡೆಗಳಲ್ಲಿರುವ ಕಸುವೇ ಪ್ರಾಮುಖ್ಯವಾದ್ದರಿಂದ ಆತ ಸಮಾಜದ (ಬ್ರಹ್ಮದ) ತದ್ಭಾಗದಿಂದ ಬಂದನೆಂದೂ, ಈ ಮೂರೂ ವರ್ಣಗಳವರು ತಮ್ಮ ತಮ್ಮ ವೃತ್ತಿಯಲ್ಲಿ ಅವಿಚ್ಛಿನ್ನವಾಗಿ ಪ್ರವೃತ್ತರಾಗಿರಬೇಕಾದರೆ ಅವರ ಸ್ವಂತ ಆವಶ್ಯಕತೆಗಳನ್ನು ಪೂರೈಸಲು ಶೂದ್ರರು ಅವರಲ್ಲಿ ಸೇವಾತತ್ಪರರಾಗಿರಬೇಕಾಯಿತು. ಅವರು ಮಾಡುವ ಈ ಸೇವೆಯು ಇಡೀ ಶರೀರದ ಚಲನೆಗೆ ಪಾದಗಳು ಹೇಗೆ ಸಹಕರಿಸುವುವೋ ಹಾಗೆ ಸಮಾಜಬ್ರಹ್ಮದ ಶಿರ (ಬ್ರಾಹ್ಮಣ), ಭುಜ (ಕ್ಷತ್ರಿಯ), ತೊಡೆ (ವೈಶ್ಯ)–ಮುಂತಾದ ಅಂಗಾಗ ಸಹಿತ ಶರೀರದ ಸಂಪೂರ್ಣ ಚಾಲನೆಗೆ ಕಾರಣವಾಗಿದೆಯಾದ್ದರಿಂದ ಅವರು ಸಮಾಜ ಬ್ರಹ್ಮದ ಪಾದ ಸ್ಥಾನದಿಂದ ಬಂದವರೆಂದು ಅರ್ಥಪೂರ್ಣವಾಗಿ ಹೇಳಲಾಗಿದೆ. ಇಲ್ಲಿ ಇನ್ನೂ ಒಂದು ವಿಚಾರ ಮಾಡಬೇಕಾದ ಅಂಶ ವಿದೆ. ಅದೆಂದರೆ, ಶರೀರದಲ್ಲಿನ ಮುಖ, ಭುಜ, ತೊಡೆ, ಪಾದ–ಇವುಗಳಲ್ಲಿ ಯಾವುದು ಹೆಚ್ಚು ? (ಅರ್ಥಾತ್ 'ಯಾವ ವರ್ಣದವ ಹೆಚ್ಚಿನವ' ಎಂಬುದು ಅಧ್ಯಾಹಾರ) ಎಂದು ಪ್ರಶ್ನಿಸಿದರೆ, ಇಲ್ಲಿ ಹೆಚ್ಚು–ಕಡಿಮೆಯ ಪ್ರಶ್ನೆ

ಯಿಲ್ಲ ; ಪ್ರತಿ ಅಂಗದಿಂದಲೂ ಒಂದೊಂದು ವಿಶಿಷ್ಟಕೆಲಸ ನಡೆಯುತ್ತಿರುತ್ತದೆ. ಯಾವ ಅಂಗವಿಲ್ಲದಿದ್ದರೂ ತೊಂದರೆ ತಪ್ಪದು. ಕೈನ ಕೆಲಸ ಕಾಲಿನಿಂದಾಗದು ; ಕಾಲಿನದು ಕೈಯಿಂದಾಗದು. ಹೆಚ್ಚೇಕೆ ಬಲಗೈನ ಕೆಲಸ ಎಡಗೈನಿಂದಾದೀತೇ ? ಹಾಗೆಯೇ ಸಮಾಜವೆಂಬ ಶರೀರಕ್ಕೆ ಈ ನಾಲ್ಕೂ ವರ್ಣಗಳೆಂಬ ಅಂಗಗಳು ಅತ್ಯಾವಶ್ಯಕವೆಂದು ಭಾವಿಸಬೇಕು.)

ಒಂದು ತಪ್ಪು ತಿಳಿವಳಿಕೆ

ತಮ್ಮತಮ್ಮ ಗುಣಕ್ಕನುಗುಣವಾದ ವೃತ್ತಿಯಲ್ಲಿ ಪೂರ್ವದಲ್ಲಿ ಜನ ನಿರತರಾಗಿ ಪರಸ್ಪರ ಸಹಕಾರದಿಂದ ತೃಪ್ತಿ ಜೀವನ ನಡೆಸುತ್ತಿರಲು ಕ್ರಮೇಣ ಅವರಲ್ಲಿ ಆ ವೃತ್ತಿ ಮೇಲು, ಇದು ಕೀಳು ಎಂಬ ಭೇದಭಾವ ಹುಟ್ಟಿಕೊಂಡಿತು. ಹಾಗಾಗಿ ಕೀಳೆಂದು ಪರಿಗಣಿತವಾದ ವೃತ್ತಿಮಾಡುತ್ತಿದ್ದವರು ಅದನ್ನು ಬಿಟ್ಟು ಉತ್ತಮವೆಂದು ಪರಿಗಣಿಸಲ್ಪಟ್ಟ ವೃತ್ತಿ ಹಿಡಿಯಲು ಪ್ರಾರಂಭ ಮಾಡಿದರು. (ಇಲ್ಲಿ ಗುಣಕ್ಕೆ ತಕ್ಕ ವೃತ್ತಿ ಎಂಬ ನಿಯಮ ಸಡಿಲವಾಗಿ ಯಾವುದೇ ಗುಣದವನು ಪ್ರಯತ್ನಿಸಿದರೆ ಯಾವುದೇ ವೃತ್ತಿಯನ್ನು ಮಾಡಬಹುದೆಂಬ ಅನಿಸಿಕೆ ಹುಟ್ಟಿಕೊಂಡಿತು. ಆನುವಂಶಿಕವಾದ ವೃತ್ತಿ ಒಬ್ಬನಿಗೆ ಸುಲಭವಾಗಿ ಬಂದುಬಿಡುವುದು. ಆದರೆ, ಸತತ ಪ್ರಯತ್ನದಿಂದ ಆತ ಬೇರೊಂದು ವೃತ್ತಿವಿದ್ಯೆ ಕಲಿಯಬಹುದು). ಹೀಗಾಗಿ ಕೀಳೆಂದು ಪರಿಗಣಿತವಾಗಿದ್ದ ವೃತ್ತಿನಿರತರ ಸಂಖ್ಯೆ ಕ್ರಮೇಣ ಕ್ಷೀಣಿಸುತ್ತಾ ಹೋಗಿ, ಆ ಕೆಲಸಗಳನ್ನುಮಾಡುವವರೇ ದುರ್ಲಭರೆನಿಸಿ, ಆ ಕೆಲಸಗಳೆಲ್ಲ ಉಳಿದುಹೋಗತೊಡಗಿದವು. ಇದರಿಂದ ಸಾಮಾಜಿಕ ಸಮತೋಲ ತಪ್ಪತೊಡಗಿತು. ಕ್ಷತ್ರಿಯನಾಗಿದ್ದ ವಿಶ್ವಾಮಿತ್ರ ಬ್ರಾಹ್ಮಣನಾದದ್ದು ; ಜನ್ಮತಃ ಬ್ರಾಹ್ಮಣನಾದ ಪರಶುರಾಮ ಕ್ಷತ್ರಿಯವೃತ್ತಿಪರನಾದುದು–ಮುಂತಾದ ಉದಾಹರಣೆಗಳನ್ನಿಲ್ಲಿ ಗಮನಿಸಬಹುದು.

ಸಾಮಾಜಿಕ ಅಸಮತೋಲ

ಇಷ್ಟೇ ಅಲ್ಲದೆ ಮಹಾಭಾರತದಲ್ಲಿ ಬರುವ ಧರ್ಮವ್ಯಾಧನ ಮಾತುಕೇಳಿ–'ಶೂದ್ರಯೋನೌ ಹಿ ಜಾತಸ್ಯ ಸದ್ಗುಣಾನುಪತಿಷ್ಠತಃ। ವೈಶ್ಯತ್ವಂ ಲಭತೇ ಬ್ರಹ್ಮನ್ ಕ್ಷತ್ರಿಯತ್ವಂ ತಥೈವ ಚ । (ಜನ್ಮತಃ ಶೂದ್ರನಾದವನು ಸದ್ಗುಣಾನುಷ್ಠಾನಿಯಾದಲ್ಲಿ ಅವನು ವೈಶ್ಯ, ಕ್ಷತ್ರಿಯ ಅಥವಾ ಬ್ರಾಹ್ಮಣನೂ ಆಗಬಹುದು.)

(ಇಲ್ಲಿ ಇನ್ನೊಂದು ವಾದವಿದೆ : ಧರ್ಮವ್ಯಾಧನ ಮೇಲಿನ ಹೇಳಿಕೆಯ ಅಂತರಾರ್ಥ 'ಜನ್ಮತಃ ಶೂದ್ರನಾದವನು ಸದ್ಗುಣಾನುಷ್ಠಾನ ಮಾಡಿದರೆ ಮುಂದಣ ಜನ್ಮದಲ್ಲಿ ಉಚ್ಚವರ್ಣದಲ್ಲಿ ಜನಿಸುತ್ತಾನೆಂದೇ ವಿನಃ ಪ್ರಸ್ತುತ ಜನ್ಮದಲ್ಲೇ ಬೇರೆ ಉಚ್ಚವರ್ಣದವನಾಗುತ್ತಾನೆಂದಲ್ಲ ; ಹಾಗಿದ್ದಲ್ಲಿ ಮಹಾ ಪ್ರಾಜ್ಞನಾದ, ಧರ್ಮಸೂಕ್ಷ್ಮಗಳನ್ನರಿತ ಅವನು ಸ್ವತಃ ಬ್ರಾಹ್ಮಣನಾಗಬಹುದಿತ್ತು. ಆದರೆ ಅವನು ಹಾಗೆ ಬ್ರಾಹ್ಮಣನಾಗದೆ–ಹೀನವೆನಿಸಿದರೂ ಸ್ವಧರ್ಮದಲ್ಲೇ ಮುಂದುವರಿದ ಎಂಬುದು, ಆದರೆ ಜನ್ಮತಃ ಕ್ಷತ್ರಿಯನಾಗಿದ್ದ ವಿಶ್ವಾಮಿತ್ರ ಬ್ರಾಹ್ಮಣಕರ್ಮಾನುಷ್ಠಾನ ಮಾಡುತ್ತಿದ್ದುದು, ಬ್ರಾಹ್ಮಣರಾಗಿದ್ದ ಪರಶುರಾಮ, ದ್ರೋಣ, ಅಶ್ವತ್ಥಾಮಾದಿಗಳು ಕಾರಣಾಂತರಗಳಿಂದ ಕ್ಷತ್ರಿಯಯೋಗ್ಯ ಕರ್ಮಾನುಷ್ಠಾನಿಗಳಾದುದನ್ನು ನೋಡುವಾಗ ಒಂದು ವರ್ಣದವ ಇನ್ನೊಂದನ್ನು ಸರಿಸುವುದು ತಪ್ಪೆಂದು ಹೇಳಲು ಬಾರದು. ಏಕೆಂದರೆ ಮೇಲೆ ಉದಾಹರಿಸಿದವರೆಲ್ಲರೂ ತಿಳಿವಳಿಕೆಯಿಲ್ಲದವರೇನಲ್ಲ. ಆದರೆ ಧರ್ಮವ್ಯಾಧನೇಕೆ ಬ್ರಾಹ್ಮಣನಾಗಲಿಲ್ಲ ? ಇದಕ್ಕೆ ಕಾರಣವನ್ನು ಹೀಗೆ ಊಹಿಸಬಹುದು. ಯಾವುದೇ ಕಾಲದಲ್ಲಿ ಸಾಮಾಜಿಕವಾಗಿ ಉನ್ನತಸ್ಥಾನದಲ್ಲಿರುವವರು ಯಾವುದೇ–ಸಮಾಜದ ದೃಷ್ಟಿಯಲ್ಲಿ ತಪ್ಪೆನಿಸುವ-ಕಾರ್ಯವನ್ನು ಮಾಡಿದರೂ ನಡೆಯುವುದು.ಏಕೆಂದರೆ ಅವರು ತುಂಬ ಪ್ರಭಾವಶಾಲಿಗಳಾಗಿರುತ್ತಾರಲ್ಲದೆ ಸಾಮಾನ್ಯವಾಗಿ ಅಂಥವರು ಶ್ರೀಮಂತರೂ ಆಗಿರುತ್ತಾರೆ. ಮೇಲಿನ ಉದಾಹರಣೆಗಳಲ್ಲಿ ಕೂಡ ವರ್ಣಬದಲಾವಣೆ ಮಾಡಿ

ಕೊಂಡವರಲ್ಲಿ ಪ್ರಭಾವೀ ವರ್ಣದವರೇ ಇದ್ದಾರೆಂಬುದು ಗಮನಾರ್ಹ. ಕರ್ಣ-ಸೂತನೆಂದು ತಿಳಿಯಲ್ಪಟ್ಟವನು-ಕ್ಷತ್ರಿಯ ಕರ್ಮಾನುಷ್ಠಾನಕ್ಕೆ ಉಪಕ್ರಮಿಸಿದಾಗ ಅದೆಷ್ಟು ಅವಹೇಳನಕ್ಕೆ ಗುರಿಯಾಗಬೇಕಾಯಿತೆಂಬುದನ್ನೂ, ತಪನಿರತ ಶೂದ್ರನು ತನ್ನ ತಲೆಯನ್ನೇ ಹೇಗೆ ಶ್ರೀರಾಮನ ಖಡ್ಗಕ್ಕೆ ದಂಡತೆರಬೇಕಾಯಿತೆಂಬುದನ್ನೂ ವಿಚಾರ ಮಾಡಿದಾಗ ಒಂದು ಅಂಶ ಸ್ಪಷ್ಟವಾಗುವುದು. ಕೀಳೆಂದು ಪರಿಗಣಿತವಾದ ವರ್ಣದವರು ಸಾಮಾನ್ಯವಾಗಿ ಆರ್ಥಿಕ ವಾಗಿಯೂ ಬೌದ್ಧಿಕವಾಗಿಯೂ ಹಿಂದುಳಿದಿರುತ್ತಾರಾದ್ದರಿಂದ ಅವರು ಪ್ರಭಾವಶಾಲಿಗಳಾಗಿರುವುದಿಲ್ಲ. ಹಾಗಾಗಿ ಒಬ್ಬ ಬುದ್ಧಿವಂತ ಅವರಲ್ಲಿ ಜನಿಸಿದರೂ ಅವನಿಗೆ ಉತ್ತಮ ವರ್ಣದವರು ಮಾಡುವ ಕಾರ್ಯಗಳನ್ನು ಮಾಡಲು ಸಮಾಜ ಬಿಡುವುದಿಲ್ಲ. ಸಮಾಜವನ್ನು ಎದುರಿಸಿ ಹೋರಾಡುವ ಚೈತನ್ಯ ಅವನಲ್ಲಿಲ್ಲದೆ ಬೌದ್ಧಿಕವಾಗಿ ಆತ ಯಾವ ಮೇಲ್ಜಾತಿಯವನಿಗೆ ಕಡಿಮೆಯಿಲ್ಲದಂತಿದ್ದರೂ ಸಮಾಜದ ಭಯದಿಂದ ಕುಲಕಸುಬನ್ನೇ ಮುಂದುವರಿಸಬೇಕಾಗುತ್ತದೆ. ಇದಕ್ಕೆ ಧರ್ಮದ ಭಯ ಕಾರಣವಲ್ಲ. ಈ ಮಾತು ಧರ್ಮವ್ಯಾಧನಿಗೂ ಅನ್ವಯಿಸುವುದು. ಇಂದಿಗೂ ಈ ಮಾತು ಅನ್ವಯವಾಗುವುದು. ಆದರೂ (ವೈಯಕ್ತಿಕ ಸುಖಕ್ಕಾಗಿ) ಸ್ವಧರ್ಮ ಭ್ರಷ್ಟನಾಗಿ ಸಾಮಾಜಿಕ ಸಮತೋಲ ತಪ್ಪಿಸಿದ ಪಾಪಕ್ಕೆ ತಾನು ಗುರಿಯಾಗಬೇಕಾದೀತೆಂದು ಧರ್ಮವ್ಯಾಧ ಭಾವಿಸಿದ್ದರೆ ಒಂದು ರೀತಿ ಸರಿ ಎನ್ನಬಹುದು. ಇರಲಿ.)

ಹುಟ್ಟಿನಿಂದಲೇ ವರ್ಣ ನಿರ್ಣಯ

ಈ ವಿಧವಾದ ಸಮಾಜದ ಸಮತೋಲ ತಪ್ಪಿಸುವ ವೈಪರೀತ್ಯಗಳನ್ನು ಮನಗಂಡ ಮನುವು 'ಸರ್ವ ವರ್ಣೇಸು ತುಲ್ಯಾಸು ಪತ್ನೀಷ್ವಕ್ಷತ ಯೋನಿಷು । ಆನುಲೋಮ್ಯೇನ ಸಂಭೂತಾ ಜಾತ್ಯಾ ಜ್ಞೇಯಾಸ್ತ ಏವತೇ ॥' ಎಂದರೆ ಆಯಾ ಸಮಾನ ಜಾತಿಗಳಲ್ಲಾದ ಯಥಾಶಾಸ್ತ್ರ ವಿವಾಹದಿಂದಾದ ಸತಿಪತಿ ಸಂಜಾತ ಸಂತತಿಯು ಆಯಾ ಜಾತಿಯದಾಗಿರುತ್ತದೆ- ಎಂದರೆ ಜಾತಿ ಹುಟ್ಟಿನಿಂದಲೇ ಎಂದೂ, 'ಯೋ ಲೋಭಾದಧಮೋ ಜಾತ್ಯಾ ಜೀವೇದುತ್ಕೃಷ್ಟಕರ್ಮಭಿಃ । ತಂ ರಾಜಾ ನಿರ್ಧನಂ ಕೃತ್ವಾ ಕ್ಷಿಪ್ರಮೇವ ಪ್ರವಾಸಯೇತ್ ।' ಎಂದರೆ ಕೀಳ್ಜಾತಿ ಜನ್ಯನೊಬ್ಬ ಲೋಭದಿಂದ ಉತ್ಕೃಷ್ಟ ಜಾತಿಯ ಕರ್ಮಾಚರಣೆ ಮಾಡಿದರೆ ಅವನನ್ನು ಊರ ಹೊರಗೆ ಹಾಕಬೇಕೆಂದೂ ಘೋಷಿಸಿದನು.

ಶ್ರೀಕೃಷ್ಣನೂ ಕೂಡ ಇದೇರೀತಿ ಸ್ವಧರ್ಮಭ್ರಷ್ಟರ ವಿರುದ್ಧ ದಾಳಿ ನಡೆಸಿದ್ದನ್ನು ಕಾಣಬಹುದು ! 'ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ । ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ॥' 'ಚೆನ್ನಾಗಿ ಅನುಷ್ಠಾನ ಮಾಡಿದ ಪರಧರ್ಮಕ್ಕಿಂತಲೂ ಗುಣವಿಲ್ಲದ ಸ್ವಧರ್ಮವೇ ಶ್ರೇಯಸ್ಕರವಾದುದು. ಸ್ವಧರ್ಮದಲ್ಲಿ ನಿಧನರಾದಾಗ್ಯೂ ಶ್ರೇಯಸ್ಸಿದೆ; ಆದರೆ ಪರಧರ್ಮವು ಭಯಂಕರವಾದುದು' ಎಂದು ಸಾರಿದನು. ಅಷ್ಟೇ ಅಲ್ಲದೆ ಶ್ರೀಕೃಷ್ಣನು ಇನ್ನೂ ಮುಂದುವರಿದು 'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮ ವಿಭಾಗಶಃ' (ಗುಣಕರ್ಮ ವಿಭಾಗದ ಮೂಲಕ ನಾಲ್ಕೂ ವರ್ಣಗಳು ನನ್ನಿಂದ ಸೃಷ್ಟಿಸಲ್ಪಟ್ಟವು) ಎಂದೂ ಹೇಳಿದ. (ಈ ಮಾತನ್ನು ಹೀಗೂ ತರ್ಕಿಸಬಹುದು : ಶ್ರೀಕೃಷ್ಣನು ತಾನೇ ನಾಲ್ಕು ವರ್ಣಗಳ ಕರ್ತೃವೆಂದಿದ್ದಾನೆ. ಇದನ್ನು ಗೀತೆಯಲ್ಲಿನ 'ಅದ್ವೈತಾಮೃತ ವರ್ಷಿಣೀಂ ಭಗವತೀಂ ಅಷ್ಟಾದಶಾಧ್ಯಾಯಿನೀಂ' (ಹದಿನೆಂಟಧ್ಯಾಯಗಳುಳ್ಳ ಅದ್ವೈತವೆಂಬ ಅಮೃತಧಾರೆ ಹರಿಸುವ ಭಗವತಿಯಾದ ಗೀತೆಯೇ) ಎಂಬುವನ್ನನುಸರಿಸಿಯೇ ಅದ್ವೈತ ದೃಷ್ಟಿಯಿಂದ ನೋಡಿದಾಗ ಹೀಗೆನಿಸುತ್ತದೆ. ಶ್ರೀಕೃಷ್ಣ-ಅವನೇ ಹೇಳಿಕೊಂಡಿರುವಂತೆ-ದೇವರೆಂದೇ ಇಟ್ಟುಕೊಂಡರೆ, ಅವನೇ ಜಾತಿ ವ್ಯವಸ್ಥೆ ಮಾಡಿದ್ದಾನೆಂದಾಗ, ಮಾನವ ಜೀವಿಯೂ, ದೇವನೂ-ಅದ್ವೈತದ ಪ್ರಕಾರ-ಬೇರೆ ಬೇರೆಯಲ್ಲವಾದ್ದರಿಂದ ಜಾತಿ ವ್ಯವಸ್ಥೆ ಮಾನವನಿರ್ಮಿತ.

ಶ್ರೀಕೃಷ್ಣನು ತುಂಬ ಪ್ರಭಾವಶಾಲಿಯಾಗಿದ್ದನಲ್ಲದೆ ಮಾತಿನ ಮೋಡಿಯಿಂದ ಎಂಥವರನ್ನೂ ತನ್ನೆಡೆಗೆ

ಸೆಳೆದುಕೊಳ್ಳಬಲ್ಲ ಸಮರ್ಥನೂ ಆಗಿದ್ದ. ಇಷ್ಟೇ ಅಲ್ಲದೆ ಸಮ್ಮೋಹಿನೀ (Hypnotism) ವಿದ್ಯಾಬಲದಿಂದ ಪವಾಡಗಳ ಭ್ರಮೆ ಬೇರೆ ಹುಟ್ಟಿಸಿ, ತನ್ನನ್ನು ಜನ ದೇವರೆಂದು ನಂಬುವಂತೆಕೂಡ ಮಾಡಿದ್ದ. ಹಾಗಾಗಿ ಅವನ ಮಾತನ್ನು ಬಹುಪಾಲು ಜನ ಭಯ-ಭಕ್ತಿಗಳಿಂದ ಅಂಗೀಕರಿಸುತ್ತಿದ್ದರು (ದೇವರೇ ಹೀಗೆಂದ ಮೇಲೆ ನಮ್ಮದೇನು ತಕರಾರು ?)

'ಸ್ವಧರ್ಮೇ ನಿಧನಂ ಶ್ರೇಯಃ' ಎಂಬ ಕೃಷ್ಣ ವಚನವನ್ನು ಅತಿಕ್ರಮಿಸಿದಾಗ ಏನಾದೀತು ? ಅದನ್ನೂ ಸ್ವಲ್ಪ ವಿಚಾರ ಮಾಡೋಣ. ಈಗ ಒಬ್ಬ (ಹುಟ್ಟಿನಿಂದಲೇ ಎನ್ನೋಣ) ಕ್ಷತ್ರಿಯಧರ್ಮಾವಲಂಬಿಯ ಸೇವಾವೃತ್ತಿಯನ್ನು ಇನ್ನೊಬ್ಬ ಮನುಷ್ಯ (ಜನ್ಮತಃ ಶೂದ್ರ) ಮಾಡುತ್ತಿರುತ್ತಾನೆಂದಿಟ್ಟುಕೊಳ್ಳೋಣ. ಕಾಲಾನುಕ್ರಮದಲ್ಲಿ ಆ ಶೂದ್ರನ ಬುದ್ಧಿಮಟ್ಟ ಹೆಚ್ಚಿ ಉಚ್ಚವರ್ಣದ ಕರ್ಮಾವಲಂಬಿಯಾಗಿ ಕ್ಷತ್ರಿಯನ ಸೇವಾವೃತ್ತಿ ತ್ಯಜಿಸುತ್ತಾನೆ. ಬೇರೊಬ್ಬ ಶೂದ್ರ ಕ್ಷತ್ರಿಯನಿಗೆ ದುರ್ಲಭನಾಗುತ್ತಾನೆ. ಆಗ ಅವನು ಶೂದ್ರಮಾಡುತ್ತಿದ್ದ ಕೆಲಸಗಳನ್ನು ತಾನೇ ಮಾಡಿಕೊಳ್ಳಬೇಕಾಗುತ್ತದೆ. ಆಗ ಏನಾಗುವುದು ? ರಾಜಕಾರಣಕ್ಕೆ ಮೀಸಲಾದ ತನ್ನ ಸಮಯವನ್ನು ತನ್ನ ಸೇವಾಕಾರ್ಯಕ್ಕೇ ವಿನಿಯೋಗಿಸುವಂತಾದ್ದರಿಂದ ರಾಜಕಾರಣವನ್ನು ಅಷ್ಟರಮಟ್ಟಿಗೆ ಮುಂದೂಡಬೇಕು, ಇಲ್ಲವೇ ನಿಲ್ಲಿಸಬೇಕು. ಆಗ ಒಂದು ವಿಧವಾದ ಅವ್ಯವಸ್ಥೆಯುಂಟಾಗುವುದು. ಈ ಒಬ್ಬ ಕ್ಷತ್ರಿಯನ ಪರಿಸ್ಥಿತಿಯೇ ದೇಶಾದ್ಯಂತ ಉಂಟಾದಾಗ ಏನಾದೀತೆಂದು ಊಹಿಸುವುದು ಕಷ್ಟ. (ಇದೇ ಸಾಮಾಜಿಕ ಅಸಮತೋಲ)

ಈ ವಿಚಾರದಲ್ಲಿ ಇನ್ನೂ ಒಂದು ದೃಷ್ಟಾಂತ ನೋಡಿ : ಬೌದ್ಧಿಕ ಕ್ರಿಯಾನಿರತ ವಿಜ್ಞಾನಿಯೊಬ್ಬನಿಗೆ (ಬ್ರಾಹ್ಮಣನೆಂದಿಟ್ಟುಕೊಳ್ಳಿ) ಈ ಗತಿ ಬಂದು ಶೂದ್ರ ಮಾಡುತ್ತಿದ್ದ ಕಾರ್ಯಗಳನ್ನು ತಾನೇ ಮಾಡಿಕೊಳ್ಳುತ್ತಾ ಕುಳಿತರೆ ಅವನ ಬೌದ್ಧಿಕಕ್ರಿಯೆಗೆ ಸಮಯವೇ ಸಿಗದಂತಾಗುವುದು. ಅದರಿಂದ ಅವನಿಗಾಗುವ ವೈಯಕ್ತಿಕ ನಷ್ಟಕ್ಕಿಂತ ಹೆಚ್ಚಿನ ನಷ್ಟ ಸಮಾಜಕ್ಕೇ ಆದೀತು ! (ಅಮೂಲ್ಯ ಬುದ್ಧಿಯನ್ನು ಅಲ್ಪಕೆಲಸಕ್ಕೆ ಉಪಯೋಗಿಸಲು ಬರುವುದು ; ಆದರೆ ಅಲ್ಪಬುದ್ಧಿಯನ್ನು ಮಹದ್‌ಕಾರ್ಯಕ್ಕೇ ವಿನಿಯೋಗಿಸಲು ಬಾರದು. ಯಾವುದು ವಿಹಿತ ?) ಆದ್ದರಿಂದ ಯಾರ ಬುದ್ಧಿ ಅಷ್ಟು ಉಪಯುಕ್ತವಲ್ಲವೋ ಅಂತಹವರನ್ನು ಬೌದ್ಧಿಕಕ್ರಿಯಾಶೀಲನ ಸೇವಾಕಾರ್ಯಕ್ಕೆ ನಿಯೋಜಿಸಿದರೆ ಎರಡೂ ವರ್ಗದ ಜನರಿಂದ ಸಮಾಜ ತಕ್ಕ ಉಪಯೋಗ ಪಡೆದಂತಾಗುವುದು.

ಅಸ್ಪೃಶ್ಯತೆಯ ಉದಯ

ವೃತ್ತಿಯಲ್ಲಿ ಮೇಲುಕೀಳೆಂಬ ಭಾವನೆ ಬೇರೂರಿದ ಕಾರಣ, ಕೀಳುವೃತ್ತಿ ನಿರತರು (ಶೂದ್ರರು) ಪ್ರಯತ್ನಪೂರ್ವಕವಾಗಿ ಜ್ಞಾನಾರ್ಜನೆ ಮಾಡಿ, ಬುದ್ಧಿಬಲ ಹೆಚ್ಚಿಸಿಕೊಂಡು ಉಚ್ಚವೃತ್ತಿಗಳಲ್ಲಿ ಪ್ರವೃತ್ತರಾಗತೊಡಗಿದರು. ಇದು ಅವ್ಯಾಹತವಾಗಿ ಸಾಗತೊಡಗಿದಾಗ ಶೂದ್ರರು ಅಲ್ಪಸಂಖ್ಯಾತರಾದರು. ನಂತರ 'ಸ್ವಧರ್ಮೇ ನಿಧನಂ ಶ್ರೇಯಃ' ಹಾಗೂ "ಪೂರ್ವಾರ್ಜಿತ ದುಷ್ಕರ್ಮಫಲದಿಂದ ನೀವು ಶೂದ್ರರಾಗಿ ಜನಿಸಿದ್ದೀರಿ. ಇದೇ ವೃತ್ತಿಯನ್ನು ಶ್ರದ್ಧಾಭಕ್ತಿಗಳಿಂದ ಮಾಡುತ್ತಾ ಮರಣಿಸಿದಿರಾದರೆ ಮುಂದೆ ನಿಮಗೆ ಉನ್ನತ ಜನ್ಮಪ್ರಾಪ್ತಿ ಖಂಡಿತ ; ಅದಿಲ್ಲದೆ ದುರಾಶೆಯಿಂದ ಪರಧರ್ಮಾವಲಂಬಿಗಳಾದರೆ ನರಕಪ್ರಾಪ್ತಿಯಾಗುವುದಲ್ಲದೆ ನಾಯಿ–ನರಿಗಳಂತಹ ಇನ್ನೂ ಹೀನ ಜನ್ಮ ನಿಮಗೆ ನಿಶ್ಚಿತ"—ಎಂಬಿತ್ಯಾದಿ ಪ್ರಭಾವೀಜನರ ವಚನಗಳನ್ವಯ ವೃತ್ತಿಬದಲಾವಣೆಯನ್ನು ಉಳಿದ ಶೂದ್ರರು ನಿಲ್ಲಿಸಿದ್ದರು. ಅಲ್ಪ ಸಂಖ್ಯಾತರಾದ ಶೂದ್ರರ ತಲೆಯ ಮೇಲೆ ಅಗಾಧವಾದ ಸೇವಾಕಾರ್ಯದ ಹೊರೆ ಬಿತ್ತು. ಹೀಗಾಗಿ ಅವರು ಬಿಡುವಿಲ್ಲದೆ ದುಡಿಯಬೇಕಾಯಿತು. (ಒಬ್ಬ ಮನುಷ್ಯ ಪ್ರತಿದಿನವೂ ಅನೇಕ ಮನೆಗಳಲ್ಲಿ ಚಾಕರಿ ಮಾಡಬೇಕಾಗುತ್ತಿತ್ತು.) ಆದ್ದರಿಂದ ಅವರಿಗೆ ಶುಚಿತ್ವದ ಕಡೆಗೆ ಗಮನಹರಿಸುವುದು ಸಾಧ್ಯವಾಗಲಿಲ್ಲ. ಇದರಿಂದ ಅವರ ಶರೀರ, ಬಟ್ಟೆಬರೆ, ಗೃಹ ಇತ್ಯಾದಿಗಳೆಲ್ಲಾ ಕೊಳಕಾಗಿರು

ತ್ತಿದ್ದವು. ಇದರಿಂದಾಗಿ ಇತರ ವರ್ಣಗಳವರು ಅವರೊಡನೆ ಬೆರೆಯುವುದು ಕ್ರಮೇಣ ಕಡಮೆಯಾಗತೊಡಗಿತು. ಕಾಲಾನುಕ್ರಮದಲ್ಲಿ ಶೂದ್ರರು ಸಭೆ-ಸಮಾರಂಭಗಳಲ್ಲಿ ಭಾಗವಹಿಸುವುದು, ಮನೆಯೊಳಗೆ ಕಾಲಿಡುವುದು, ಇತರ ವರ್ಣೀಯರನ್ನು ಸ್ಪರ್ಶಿಸುವುದು-ಮುಂತಾದುವನ್ನು ನಿಷೇಧಿಸಲಾಯಿತು. ಅವರ ಸ್ಪರ್ಶವಾದರೆ ಸ್ನಾನಮಾಡಿ ಯಜ್ಞೋಪವೀತ ಬದಲಿಸಬೇಕೆನ್ನುವವರೆಗೂ ಅಸ್ಪೃಶ್ಯತೆಯ ಆಚರಣೆ ಬಲಿಯಿತು. ಊರ ಹೊರಗೆ ಅವರಿಗೆ ವಸತಿಯ ವ್ಯವಸ್ಥೆಯೂ ಆಯಿತು. ನನ್ನ ಅಭಿಪ್ರಾಯದಲ್ಲಿ ಅಸ್ಪೃಶ್ಯತೆಯ ಮೂಲ ಹೀಗಿರಬಹುದು.

ವರ್ಣಾಶ್ರಮ ಧರ್ಮದ ಬದಲಿ ವ್ಯವಸ್ಥೆ

ವರ್ಣಾಶ್ರಮ ಧರ್ಮದ ಜೊತೆ ಅಂದಿನಿಂದ ಬಂದ ಅಸಮಾನತೆಯು ನಮ್ಮಲ್ಲಿ ಇಂದೂ (ಬೇರೆ ಬೇರೆ ವೇಷ ತೊಟ್ಟುಕೊಂಡು) ಇದೆ ಎಂದಾಗ ಅದರ ಬುಡ ಎಷ್ಟು ಭದ್ರವಾಗಿದೆ ಎಂಬುದು ಅರಿವಾಗುವುದು. ಉದಾಹರಣೆಗೆ ನಮ್ಮ ಸರ್ಕಾರಿ ಕಛೇರಿಗಳಲ್ಲೇ ನೋಡಿ. ನೌಕರರಲ್ಲಿ ನಾಲ್ಕು ದರ್ಜೆಗಳಿವೆ. ಸಂಬಳ ಹಾಗೂ ಅಂತಸ್ತುಗಳಲ್ಲೂ ಈ ನಾಲ್ಕು ದರ್ಜೆಗಳಲ್ಲಿ ವ್ಯತ್ಯಾಸವಿದೆ. ನಾಲ್ಕನೇ ದರ್ಜೆ ನೌಕರ ಏನು ಕೆಲಸ ಮಾಡುತ್ತಾನೆ, ಹಾಗೂ ಕಛೇರಿಯಲ್ಲಿನ ಅವನ ಸ್ಥಾನಮಾನಗಳೇನು ಎಂಬುದನ್ನು ವಿಚಾರ ಮಾಡಿದಾಗ ಅನಧಿಕೃತ ಶೂದ್ರನೇ ಇವನೆಂದು ಅರಿವಾಗುವುದು. ಪ್ರಥಮ ದರ್ಜೆಯ ನೌಕರ (ಬ್ರಾಹ್ಮಣ ?)ನ ಎದುರು ಈ ನಾಲ್ಕನೇ ದರ್ಜೆಯ ನೌಕರ ನೆಟ್ಟಗೆ ನೆಟೆದು ನಿಲ್ಲುವಂತಿಲ್ಲ (ಕೈಕಟ್ಟಿ ವಿಧೇಯನಂತಿದ್ದಲ್ಲಿ ಉತ್ತಮ) ; ಆತನ ಪಕ್ಕದಲ್ಲಾಗಲೀ, ಎದುರಿನಲ್ಲಾಗಲೀ ಆಸೀನನಾಗುವಂತಿಲ್ಲ. ಆತನ ಮಾತಿಗೆ ಎದುರಾಡುವುದೂ ಅಷ್ಟು ಸರಿಯಲ್ಲ (ಈ ವಿಚಾರದಲ್ಲಿ ಅಲಿಖಿತ ನಿಯಮ ಪ್ರಚಲಿತವಿದೆ) ! ಇನ್ನು ಅವನ ಕಾರ್ಯ ಶೂದ್ರರಿಗೆ ಹೇಳಿದ ಕಾರ್ಯಕ್ಕಿಂತ ವ್ಯತ್ಯಾಸದ್ದೇನಲ್ಲ. ಇಷ್ಟೇ ಅಲ್ಲದೆ ಉಳಿದ ಮೂರು ದರ್ಜೆಯ ನೌಕರರ ದಬ್ಬಾಳಿಕೆಯನ್ನು ಈ ನಾಲ್ಕನೇ ದರ್ಜೆಯ ಪ್ರಾಣಿ ಮೌನದಿಂದ ಸಹಿಸಿಕೊಂಡಿರಬೇಕು ಕೂಡ. (ಬಡವ ನೀ ಮಡಗಿದ್ಹಾಂಗಿರು !). ಇಂತಹ ಕಾಯಕ ಕೈಗೊಂಡಿರುವವನನ್ನು 'ಶೂದ್ರ'ನೆಂದು ಗುರುತಿಸುವ ಬದಲಿಗೆ 'class four' ಎಂದು ಕರೆಯಲಾಗುತ್ತದೆ ಅಷ್ಟೆ ! ಪುಣ್ಯಕ್ಕೆ ಅಸ್ಪೃಶ್ಯತೆಯಿಂದ ಮಾತ್ರ ಇವ ಹೊರತಾಗಿದ್ದಾನೆ. ಉಳಿದ ಮೂರು ದರ್ಜೆಯ ನೌಕರರ ನಡುವೆಯೂ ವಿವಿಧ ಹಂತದಲ್ಲಿ ಅಸಮಾನತೆ ಗುರುತಿಸಬಹುದು. ಇದು ವರ್ಣಾಶ್ರಮ ಧರ್ಮದ ಬದಲಿ ವ್ಯವಸ್ಥೆಯಲ್ಲದೆ ಇನ್ನೇನು ? ಪಾತ್ರಧಾರಿ ಅವನೆ, ಪಾತ್ರ ಬೇರೆ, ಅಷ್ಟೇ.

ಈಚೆಗೆ ಅಸ್ಪೃಶ್ಯತೆಯ ಆಚರಣೆ ಕಡಮೆಯಾಗಿದ್ದರೂ ಅಸಮಾನತೆ ಇದ್ದೇ ಇದೆ. ಅದಕ್ಕೆ ಕಾರಣವೇನಿರಬಹುದು ? ನಿಮ್ನವರ್ಗದಲ್ಲಿನ ಆರ್ಥಿಕ ದುರ್ಬಲತೆ ಎಂದೇ ಹೇಳಬೇಕು. ವಿದ್ಯೆಯಿಂದ ಅಂತಸ್ತು ಬರುವುದು. ವಿದ್ಯಾರ್ಜನೆಗೆ ವಿತ್ತಬೇಕು. ದುರ್ಬಲ ವರ್ಗದವರಲ್ಲಿ ಈ ವಿತ್ತವಿಲ್ಲ, ಅದು ಸಿಗುವಂತೆಯೂ ಇಲ್ಲ ; ಏಕೆಂದರೆ ಅವರಲ್ಲಿ ಧನಾರ್ಜನೆಗೆ ತಕ್ಕ ವಿದ್ಯೆಯಾಗಲೀ ಬುದ್ಧಿವಂತಿಕೆ (?)ಯಾಗಲೀ ಇಲ್ಲ. (ಮದುವೆಯಾಗಲು ಹುಚ್ಚು ಬಿಡಬೇಕು.... ಎಂಬಂಥ ಪರಿಸ್ಥಿತಿ !) ವಿದ್ಯೆ, ಜಾಣ್ಮೆಗಳಿಲ್ಲದ ಕೇವಲ ದೈಹಿಕ ಕೆಲಸಕ್ಕೆ (ಹಗಲು ರಾತ್ರಿ ದುಡಿದರೂ ಎಷ್ಟು ಪ್ರತಿಫಲ ಸಿಗುತ್ತದೆಂಬುದು ಎಲ್ಲರಿಗೂ ಗೊತ್ತು. ಹಾಗಾಗಿ ಅವರಿಗೆ ಸರಿಯಾದ ವಾಸಯೋಗ್ಯ ಮನೆಯಿಲ್ಲ, ಬಟ್ಟೆಯಿಲ್ಲ, ವಿದ್ಯೆಯಿಲ್ಲ. ಇವೆಲ್ಲ ಇಲ್ಲದ್ದರಿಂದ ಸಮಾಜದಲ್ಲಿ ಅವರಿಗೆ ಸ್ಥಾನಮಾನಗಳಿಲ್ಲ! ಒಟ್ಟಿನಲ್ಲಿ ಎಲ್ಲಕ್ಕೂ ಅವರ ಆರ್ಥಿಕ ದುರ್ಬಲತೆಯೇ ಕಾರಣವೆಂದು ಸಿದ್ಧವಾಗುತ್ತದೆ.

ಹಣವೇ ಎಲ್ಲಕ್ಕೂ ಮೂಲ

'ಯಸ್ಯಾಸ್ತಿ ವಿತ್ತಂ ಸ ನರಃ ಕುಲೀನಃ ಸ ಪಂಡಿತಃ ಸ ಶ್ರುತವಾನ್ ಗುಣಜ್ಞಃ ॥ ಸ ಏವ ವಕ್ತಾ ಸ ಚ ದರ್ಶನೀಯಃ ಸರ್ವೇ ಗುಣಾಃ ಕಾಂಚನಮಾಶ್ರಯನ್ತೇ ।' ಎಂದರೆ, ಯಾವನ ಹತ್ತಿರ ಹಣವಿದೆಯೋ

ಅವನೇ ಸತ್ಕುಲಪ್ರಸೂತನು, ಅವನೇ ಪಂಡಿತನು, ಜ್ಞಾನಿ ಮತ್ತು ಗುಣಜ್ಞನು. ವಿತ್ತವುಳ್ಳವನೇ ವಾಗ್ಮಿ ಹಾಗೂ ಸುಂದರ. ಏಕೆಂದರೆ ಎಲ್ಲಾ ಗುಣಗಳೂ ಹಣವನ್ನಾಶ್ರಯಿಸಿವೆ ಎಂದರ್ಥ. ('ದುಡ್ಡಿದ್ದವನೇ ದೊಡ್ಡಪ್ಪ ಎಂಬ ಕನ್ನಡ ಗಾದೆಯೂ ಇದೇ ಅರ್ಥ ಧ್ವನಿಸುತ್ತದೆ.) ಈ ಆರ್ಯೋಕ್ತಿಯಿಂದ ಹಣಕ್ಕಿರುವ ಪ್ರಾಧಾನ್ಯತೆ ಅರಿವಾಗುವುದು. (ಇಂದಿನ ಕಾಲಕ್ಕೆ ಈ ಶ್ಲೋಕಾರ್ಥ ಎಷ್ಟು ಸಮಂಜಸವಾಗಿದೆ!). 'ಧನಾತ್ ಧರ್ಮಂ ತತಃ ಸುಖಂ (ಧನದಿಂದ ಧರ್ಮ ಆದರಿಂದ ಸುಖ) ಎಂಬ ನುಡಿಯಲ್ಲಂತೂ ಧರ್ಮಕ್ಕೂ ಧನವೇ ಮೂಲ ಎಂಬರ್ಥ ಹೊರಡುತ್ತದೆ ಎಂದಾಗ ಹಣವೇ ದೇವರು ಎನಿಸಿಬಿಡುತ್ತದೆ!

ಇದರಿಂದ ತಿಳಿಯುವುದೇನೆಂದರೆ ಸಮಾನತೆ ಸಾಧಿಸಬೇಕಾದ್ದು ಆರ್ಥಿಕವಾಗಿ ಮಾತ್ರ; ಉಳಿದ ವಿಚಾರಗಳಲ್ಲಿ ಸಮಾನತೆಯನ್ನು ಅರ್ಥವೇ ಸಾಧಿಸುವುದು. ಹೀಗೆಂದಾಗ ನಾವು ಮೊದಲನೇ ದರ್ಜೆ ನೌಕರನಿಗೂ ಎರಡು, ಮೂರು ಹಾಗೂ ನಾಲ್ಕನೇ ದರ್ಜೆಯ ನೌಕರರಿಗೂ ಒಂದೇ ರೀತಿಯ ಸಂಬಳ ನಿಗದಿ ಮಾಡಬೇಕಾದೀತು! ನಂತರ ಏನಾಗುವುದೆಂದರೆ, ಹೆಚ್ಚು ಕಲಿತು ಉನ್ನತ ಬೌದ್ಧಿಕಮಟ್ಟ ಗಳಿಸಿದವನಿಗೂ ಒಂದೇ ಬೆಲೆ, ಏನೂ ಕಲಿಯದ (class four)ವನಿಗೂ ಒಂದೇ ಬೆಲೆ ಆಗುವುದು. ಇದರಿಂದ ಕಷ್ಟಪಟ್ಟು ವಿದ್ಯೆ ಕಲಿಯುವುದಕ್ಕಿಂತ ಏನೂ ಕಲಿಯದೆ ಹೆಚ್ಚು ಧನ ಸಂಪಾದನೆಯೇ ಬುದ್ಧಿವಂತಿಕೆ ಎನಿಸಿ ಯಾರೂ ಉನ್ನತ ವಿದ್ಯಾಭ್ಯಾಸದ ಗೋಜಿಗೇ ಹೋಗದೆ ಸಮಾಜದಲ್ಲಿ ಬೌದ್ಧಿಕ ಮಟ್ಟ ಇಳಿಮುಖವಾಗುತ್ತಾ ಹೋಗಿ, ದೇಶವು ಪ್ರಪಾತದಲ್ಲಿ ಬೀಳುವುದು! (ಏಕೆಂದರೆ 'ಉದರ ನಿಮಿತ್ತಂ ಬಹು ಕೃತವೇಷಂ' ತಾನೆ? ವೇಷ ಹಾಕದೆಯೇ ಉದರಂಭರಣ ಸಾಧ್ಯವಾದರೆ ಯಾರಿಗೆ ಬೇಡ!) ಈ ಕಾರಣಗಳಿಂದ ಧನದಿಂದ ಸಮಾನತೆ ಸಾಧಿಸಬಹುದಾದರೂ ನಂತರದ ಫಲಿತ ಭಯಾನಕ ಎಂದು ತಿಳಿಯುವುದು. ಆದ್ದರಿಂದ ಈ 'ಸಮಾನತೆ' ಎಂಬುದು ಒಂದು ಕೇಳಲು ಸುಂದರಭಾವ ಹುಟ್ಟಿಸುವ ಪದವೇ ಪರಂತು ವ್ಯಾವಹಾರಿಕವಾಗಿ ಅದು ನಿರರ್ಥಕವೆನಿಸುವುದು.

ಈ ಮೇಲಿನ ಎಲ್ಲ ವಿಚಾರಗಳನ್ನೂ ಕೂಲಂಕಷವಾಗಿ ವಿಮರ್ಶಿಸಿದಾಗ ಒಂದು ತೀರ್ಮಾನಕ್ಕೆ-ಅದು ಅಪ್ರಿಯವೆನಿಸಿದರೂ-ಬರಬಹುದು. ಸಾಮಾಜಿಕವಾಗಿ, ಆರ್ಥಿಕವಾಗಿ ಇರುವ ಅಂತಸ್ತು-ಅಸಮಾನತೆಗಳೇ ಸಮಾಜದ ಸುವ್ಯವಸ್ಥೆಗೆ, ಸಮತೋಲಕ್ಕೆ ಕಾರಣ; ಅಂತಸ್ತೇ ಬೌದ್ಧಿಕ ಔನ್ನತ್ಯಕ್ಕೆ ಕಾರಣ. ಮೆಟ್ಟಲುಗಳೇ ಇಲ್ಲದಿದ್ದಲ್ಲಿ ಮೇಲೇರುವುದೆಂತು? ಒಟ್ಟಿನಲ್ಲಿ ಅಸಮಾನತೆ-ಅಂತಸ್ತುಗಳು ಕೇವಲ ಕರ್ಮಫಲಜನ್ಯವೆಂದು ಭಾವಿಸಿ ನಮ್ಮ ಪಾಲಿನ ಕೆಲಸ ಶ್ರದ್ಧೆಯಿಂದ ನಿರ್ವಹಿಸಿಕೊಂಡು ಹೋದರೆ ಕ್ಷೇಮವೇನೋ ಎನ್ನಿಸುತ್ತೆ. ಸಾವಿನಲ್ಲಂತೂ ಸಮಾನತೆ ಇದ್ದೇ ಇದೆ! ಆದರೆ ಸ್ವಕರ್ಮನಿಷ್ಠನಿಗೆ ಮರಣಾನಂತರ ಆವನು ಯಾವ ವರ್ಣದವನೇ ಇರಲಿ-ಮುಕ್ತಿಯಲ್ಲಿ ಭೇದವಿಲ್ಲವೆಂದು ನಮ್ಮವರ ಅಭಿಪ್ರಾಯ. ಈ ಮುಕ್ತಿ ಎಂಬುದು ದೃಷ್ಟಫಲವಲ್ಲದ್ದರಿಂದ ಈ ವಾದ ಕೇವಲ ನಂಬಿಕೆಯ ಆಧಾರದಿಂದ ನಿಲ್ಲಬೇಕಾಗಿದೆ. ಏನೇ ಆದರೂ ಅಸ್ಪೃಶ್ಯತೆ ಮಾತ್ರ ಯಾವ ಸಮಾಜಕ್ಕೂ ಮರ್ಯಾದೆ ತರುವಂಥದಲ್ಲ.

ಡಾ. ಎಚ್. ತಿಪ್ಪೇರುದ್ರಸ್ವಾಮಿ

ಪವಾಡಗಳು-ಒಂದು ವಿವೇಚನೆ

'ಪವಾಡ' ಎಂದರೆ ವಿಸ್ತಾರವಾದ ಅರ್ಥದಲ್ಲಿ ಅಘಟಿತ ಘಟನಾ ಸಾಮರ್ಥ್ಯವೆಂದು ಹೇಳಬಹುದು. ಇವು ಅನೇಕ ಹಂತಗಳಲ್ಲಿ ನಡೆಯಬಹುದು. ದೈಹಿಕ ಮಾನಸಿಕ ಬೌದ್ಧಿಕ ಮತ್ತು ಇನ್ನೂ ಆಂತರಿಕ ವಲಯಗಳಲ್ಲಿ ಇವು ಸಂಚರಿಸಬಹುದು. ಆದರೆ ದೈಹಿಕವಾದ ನಿರಂತರ ಅಭ್ಯಾಸಗಳಿಂದ ಸಾಧ್ಯವಾಗಬಹುದಾದ ಸಾಮರ್ಥ್ಯ, ಅದು ಅಸಾಧಾರಣವಾದುದಾದರೂ ಸಹ, ಬಹುಮಟ್ಟಿಗೆ ಪವಾಡಗಳ ಗುಂಪಿಗೆ ಸೇರುವುದಿಲ್ಲ. ಸರ್ಕಸ್ಸಿನಲ್ಲಿ ಒಬ್ಬ ಒಂದು ಹಲಗೆಯನ್ನು ಎದೆಯಮೇಲಿಟ್ಟುಕೊಂಡು ಆನೆಯಿಂದ ತುಳಿಸಿಕೊಳ್ಳುತ್ತಾನೆ. ಇನ್ನೊಬ್ಬ ಕಣ್ಣು ಕಟ್ಟಿಕೊಂಡು ಒಬ್ಬ ವ್ಯಕ್ತಿಯ ದೇಹವಿನ್ಯಾಸಕ್ಕೆ ಸರಿಯಾಗಿ ಹೊಂದುವಂತೆ, ಆದರೆ ಅವನಿಗೆ ತಾಗದಂತೆ ಹಲಗೆಯ ಮೇಲೆ ಹೊಡೆಯುತ್ತಾನೆ. ಇಂತಹ ಅನೇಕ ರೋಮಾಂಚಕರವಾದ ಘಟನೆಗಳನ್ನು ಅಲ್ಲಿ ಕಾಣುತ್ತೇವೆ. ಇನ್ನು ಕೆಲವರು ಬ್ಲೇಡುಗಳನ್ನು ಕರಕರನೆ ಕಡಿದು ತಿನ್ನುತ್ತಾರೆ, ಮೊಳೆಗಳನ್ನು ನುಂಗುತ್ತಾರೆ, ನಾಲ್ಕು ಹನಿ ಸಿಡಿದಲ್ಲಿ ಮೈಯನ್ನು ಸುಡುವ ತೀಕ್ಷ್ಣವಾದ ಆಮ್ಲಗಳನ್ನು ನೀರಿನಂತೆ ಕುಡಿಯುತ್ತಾರೆ. ಆದರೆ ಇವನ್ನು ಪವಾಡ ಎನ್ನುವುದಿಲ್ಲ ; ಇವು ದೈಹಿಕವಾದ ಸಾಧನೆಯ ಫಲ. ಸತತವಾದ ಪ್ರಯತ್ನದಿಂದ ಇವುಗಳನ್ನು ಸಾಧಿಸಿಕೊಳ್ಳಬಹುದು. ಆದರೆ ಬರಿಗೈಯಿಂದ ಬೂದಿಯನ್ನೋ ಅಥವಾ ಇನ್ನಾವುದಾದರೂ ವಿಗ್ರಹವನ್ನೋ ಉಂಗುರವನ್ನೋ ಕೊಟ್ಟರೆ, ನಾವು ಬಳಿಗೆ ಹೋಗುತ್ತಿದ್ದಂತೆಯೇ ನಮ್ಮ ಮನಸ್ಸಿನಲ್ಲಿದ್ದುದನ್ನು ಹೇಳಿದರೆ, ಇನ್ನೆಲ್ಲೋ ನಡೆದುದನ್ನು ಪ್ರತ್ಯಕ್ಷ ಕಂಡಂತೆ ವರ್ಣಿಸಿದರೆ, ಋತ ನಿಯಮವನ್ನೇ ಮೀರಿ ಗರಿಹಗುರವಾಗಿ ಆಕಾಶದಲ್ಲಿ ತೇಲಿದರೆ, ಬೆಂಕಿಯಮೇಲೆ ನಡೆದರೆ ಅವುಗಳನ್ನು ಪವಾಡಗಳೆನ್ನುತ್ತೇವೆ. ಅಂದರೆ ಪವಾಡಗಳು ಆಂತರಂಗಿಕವಾದ ಮನೋಮಯ ಪ್ರಾಣಮಯ ವಲಯಗಳಲ್ಲಿ ಮೂಡುವ ವಿಶಿಷ್ಟಶಕ್ತಿಯ ಫಲ ಎನ್ನಬಹುದು.

ಈ ಪವಾಡಗಳನ್ನು ನೋಡುವಲ್ಲಿ ಎರಡು ಅತಿರೇಕದ ದೃಷ್ಟಿಗಳಿವೆ. ಒಂದು– ಈ ಪವಾಡಗಳೆಲ್ಲಾ ಮೋಸ, ಕಣ್ಣುಕಟ್ಟು, ಇಲ್ಲವೇ ಕೈಚಳಕ ಎನ್ನುವುದು. ಇಂದಿನ ವೈಜ್ಞಾನಿಕ ದೃಷ್ಟಿ ಅನೇಕ ವೇಳೆ ಈ ತೀರ್ಮಾನದಲ್ಲಿ ಪರ್ಯವಸಾನವಾಗುತ್ತದೆ. ವೈಜ್ಞಾನಿಕತರ್ಕಕ್ಕೆ ಸಿಕ್ಕದ ಇವುಗಳನ್ನು ನಂಬುವುದು, ಅಂಧಶ್ರದ್ಧೆ, ಮೂಢನಂಬಿಕೆ, ಮೂರ್ಖತನ ಎಂದು ಅದು ಘೋಷಿಸುತ್ತದೆ. ಇನ್ನೊಂದು ದೃಷ್ಟಿ ಪವಾಡಗಳಲ್ಲಿಯೇ ಮಾನವನ ಮಹತ್ಸಾಧನೆಯನ್ನು ಕಾಣುತ್ತದಲ್ಲದೆ, ಸಾಕ್ಷಾತ್ ದೈವಶಕ್ತಿಯ ಆವಿರ್ಭಾವವನ್ನು ಕಂಡು ಅದನ್ನು ಆಶ್ರಯಿಸುತ್ತದೆ. ಪವಾಡಗಳಿಗೆ ಧಾರ್ಮಿಕಹಿನ್ನೆಲೆಯನ್ನು ಕೊಟ್ಟೊಡನೆ ಆ ಪವಾಡಪುರುಷ, ಭಗವಂತನ ಅವತಾರವಾಗಿ ಬಿಡುತ್ತಾನೆ. ಇದು ನಮ್ಮ ಧಾರ್ಮಿಕ ಇತಿಹಾಸದಲ್ಲಿ ಉದ್ದಕ್ಕೂ ಬೆಳೆದುಬಂದಿದೆ. ಧರ್ಮದ ವೈಚಾರಿಕ ವಿಶ್ಲೇಷಣೆ ಪವಾಡಗಳ ಮಿತಿಯನ್ನು ಮೊದಲಿನಿಂದ ಸೂಚಿಸುತ್ತ ಬಂದಿದ್ದರೂ ಅವು ಧರ್ಮದ ಅಂಗಳದಲ್ಲಿ ಮುಳ್ಳುಕಂಟಿಯ ಗಿಡಗಳಂತೆ ಎಲ್ಲೆಲ್ಲಿಯೂ ವ್ಯಾಪಿಸಿ ತಮ್ಮ ಆಕರ್ಷಕ ಬಣ್ಣದಿಂದ ಧರ್ಮದ ಫಲಗಳನ್ನೇ

ಅಡಗಿಸುವಷ್ಟು ದಟ್ಟವಾಗಿವೆ. ಎಷ್ಟೋವೇಳೆ 'ಪವಾಡಪುರುಷ' ಎನ್ನುವ ಮಾತು 'ಮಹಾತ್ಮ' ಎನ್ನುವುದಕ್ಕೆ ಸಂವಾದಿಯಾಗಿ ಅಥವಾ ಅದಕ್ಕಿಂತ ಮಿಗಿಲಾದ ಅರ್ಥವನ್ನುಳ್ಳದ್ದಾಗಿ ಪರಿಣಮಿಸಿದೆ.

ಹೀಗೆ 'ಪವಾಡಗಳೆಲ್ಲಾ ಸುಳ್ಳು' ಎಂಬುದು ಒಂದು ಅಭಿಪ್ರಾಯವಾದರೆ 'ಪವಾಡಗಳೇ ಪರಮಸತ್ಯ' ಎಂಬುದು ಇನ್ನೊಂದು ನಿರ್ಧಾರ. ಇವುಗಳಲ್ಲಿ ನಂಬಲು ಅರ್ಹವಾದದ್ದು ಯಾವುದು ? ಎಂಬ ಪ್ರಶ್ನೆ ಎದುರಾಗುತ್ತದೆ. ಸಮಗ್ರದೃಷ್ಟಿಯ ವಿಚಾರಶೀಲತೆಗೆ ಈ ಎರಡರಲ್ಲೂ ಅರಕೆ ಕಾಣುತ್ತದೆ. ಅದು ಈ ಯಾವ ಘೋಷಣೆಗೂ ತನ್ನ ಪೂರ್ಣ ಸಮ್ಮತಿಯ ಸಹಿಯನ್ನು ಹಾಕುವುದಿಲ್ಲ. ಕೆಲವು ವೈಜ್ಞಾನಿಕ ಸಾಧನೆಗಳನ್ನು ಮುಂದಿಟ್ಟುಕೊಂಡು ಆ ಸೂತ್ರಗಳಿಂದ ಇಡೀ ಸೃಷ್ಟಿರಹಸ್ಯವನ್ನೆಲ್ಲಾ ಅಳೆಯಬಲ್ಲೆವೆನ್ನುವುದು ಅವೈಜ್ಞಾನಿಕ. ವಿಜ್ಞಾನವೇ ಅದನ್ನು ಒಪ್ಪುವುದಿಲ್ಲ. ಈ ವಿವಿಧ ಭೌತಶಕ್ತಿಗಳಿಗೆ ಅತೀತವಾದ ಮಹಾಶಕ್ತಿಯೊಂದನ್ನು, ಅದನ್ನು ಯಾವ ಹೆಸರಿನಿಂದ ಬೇಕಾದರೂ ಕರೆಯಲಿ, ವಿಜ್ಞಾನ ಒಪ್ಪಿಕೊಳ್ಳಬೇಕಾಗುತ್ತದೆ. ಪ್ರನಾಳಿಕೆಯಲ್ಲಿ ನೀಲಿ ಲಿಟ್ಮಸ್ಸನ್ನು ಕೆಂಪು ಬಣ್ಣಕ್ಕೆ ತಿರುಗಿಸುವ ಮರಿವಿಜ್ಞಾನಿಗಳು ಒಪ್ಪದಿದ್ದರೂ ಜಗತ್ತೆ ತಲ್ಲಣಿಸುವಂತಹ ಶಕ್ತಿಸೂತ್ರಗಳನ್ನಿತ್ತ ಐನ್‌ಸ್ಟೈನ್‌ನಂತಹ ಮಹಾ ವಿಜ್ಞಾನಿಗಳು ಅದನ್ನು ಒಪ್ಪಿಕೊಂಡಿದ್ದಾರೆ. ಆ ಅಗಾಧವಾದ ಅಲೌಕಿಕ ಆದಿಶಕ್ತಿಯನ್ನು (Primordial power) ಈ ಲೋಕ ನಿಯಮಗಳ ಗಜಕಡ್ಡಿಯಿಂದ ಅಳೆಯಲಾಗುವುದಿಲ್ಲ. ಇದಕ್ಕೆ ಬೇರೆಯ ಅಳತೆಯಪಟ್ಟಿ ಬೇಕಾಗುತ್ತದೆ. ಹೀಗೆಂದೊಡನೆ ವಿಚಾರವಂತಿಕೆಯನ್ನು ಹೊಡೆದೋಡಿಸಿ ತಲೆ ತಗ್ಗಿಸಿದ ಕುರಿಯಂತೆ ವ್ಯರ್ಥ ಪವಾಡಗಳ ಒಣಗಿದ ಗರಿಯನ್ನು ಮೆಲುಕಿರಿಯಬೇಕೆಂದಲ್ಲ. ಕೇವಲ ಹೊರಗಿನ ಗರಿಯನ್ನು ತಿನ್ನುವುದು ಅಲ್ಪತನವಾಗುವಂತೆ, ಆ ಸಿಪ್ಪೆಯಿದೆ ಎಂಬ ಕಾರಣಕ್ಕಾಗಿ ಕಬ್ಬಿನ ಜಲ್ಲೆಯನ್ನೇ ಎಸೆಯುವುದು ಅವಿವೇಚಿತ ದುಡುಕುತನವಾಗಿ ಅಪುಷ್ಟಿಗೆ ಕಾರಣವಾಗುತ್ತದೆ. ನಿಜವಾದ ವೈಚಾರಿಕತೆ ಸಿಪ್ಪೆಯನ್ನೆಸೆದು ಕಬ್ಬಿನ ರಸವನ್ನು ಹೀರುತ್ತದೆ. ಪವಾಡಗಳ ವಿವೇಚನೆಯಲ್ಲಿಯೂ ಈ ದೃಷ್ಟಿ ಅವಶ್ಯಕ.

ಪವಾಡಗಳು ಸಾಧ್ಯವೆ ? ಧರ್ಮಸಾಧನೆಯ ಹೆಸರಿನಲ್ಲಿ ಅವುಗಳ ಪ್ರದರ್ಶನ ಸಾಧುವೆ ? ಈ ಪ್ರಶ್ನೆಗಳನ್ನು ಮೊದಲು ವಿವೇಚಿಸಬೇಕಾಗುತ್ತದೆ. ಇವುಗಳಲ್ಲಿ ಮೊದಲನೆಯದು ಸಾಕಷ್ಟು ಚರ್ಚೆಯ ವಿಷಯವಾಗಿದೆ. ಕಾರ್ಯಕಾರಣ ಸಂಬಂಧವಿಲ್ಲದ ಘಟನೆಗಳನ್ನು ವಿಜ್ಞಾನ ನಂಬುವುದಿಲ್ಲ. ಈ ಮಟ್ಟದ ವೈಜ್ಞಾನಿಕದೃಷ್ಟಿಗೆ ಪವಾಡಗಳು ಅಸಂಭವವೆಂದು ತೋರುತ್ತದೆ. ಪವಾಡಗಳೆಂದು ತೋರುವುದೆಲ್ಲಾ ಒಂದು ರೀತಿಯ ನಟನೆಯೆಂದು ಅದು ಭಾವಿಸುತ್ತದೆ. ಇದರ ಸತ್ಯಾಸತ್ಯತೆಯನ್ನು ಗಮನಿಸುವಾಗ ಸ್ವಾಮಿ ವಿವೇಕಾನಂದರ ಅನುಭವವನ್ನು ಮುಂದಿಟ್ಟುಕೊಂಡು ನೋಡುವುದು, ಅವರ ಸ್ವಾನುಭವದ ಬೆಳಕಿನಲ್ಲಿ ಮಾರ್ಗದರ್ಶಕವಾಗಬಹುದು.

ತಮ್ಮ ಒಂದು ಭಾಷಣವಲ್ಲಿ ಅವರು ತಾವು ಪ್ರತ್ಯಕ್ಷವಾಗಿ ಕಂಡ ಪವಾಡಗಳಲ್ಲಿ ಕೆಲವನ್ನು ಉದಾಹರಿಸಿ ಅವುಗಳ ಇತಿಮಿತಿಗಳನ್ನು ವಿವೇಚಿಸಿದ್ದಾರೆ.[1] ನಮ್ಮ ಮನಸ್ಸಿನಲ್ಲಿರುವ ಆಲೋಚನೆಗಳನ್ನು ಓದಿ ನಾವು ಕೇಳುವ ಮುನ್ನವೇ ನಮ್ಮ ಪ್ರಶ್ನೆಗಳಿಗೆ ಉತ್ತರಕೊಡುವ ಸಾಮರ್ಥ್ಯವಿರುವವರನ್ನು ನಾವು ಈಗಲೂ ಅಲ್ಲಲ್ಲಿ ಕಾಣಬಹುದು. ಅಂತಹ ಒಬ್ಬನನ್ನು ಪರೀಕ್ಷಿಸುವ ಕುತೂಹಲದಿಂದ ವಿವೇಕಾನಂದರು ಅವರ ಮಿತ್ರರೊಡನೆ ಹೋಗುತ್ತಾರೆ. ಹೋಗುವಾಗ ಒಬ್ಬೊಬ್ಬರು ಒಂದೊಂದು ಪ್ರಶ್ನೆಯನ್ನು ಕೇಳಬೇಕೆಂದು ಉದ್ದೇಶಿಸಿಕೊಂಡು ಆ ಪ್ರಶ್ನೆಯನ್ನು ಮೊದಲೇ ಬರೆದು ಜೇಬಿನಲ್ಲಿಟ್ಟುಕೊಂಡಿರುತ್ತಾರೆ. ಇವರನ್ನು ಕಾಣುತ್ತಿದ್ದಂತೆಯೇ ಆತ ಇವರು ಬರೆದಿಟ್ಟುಕೊಂಡಿದ್ದ ಪ್ರಶ್ನೆಗಳನ್ನೇ ಹೇಳಿ ಅವುಗಳಿಗೆ ಉತ್ತರವನ್ನೂ ಹೇಳುತ್ತಾನೆ. ಅಲ್ಲದೆ ಆತ ಇವರೆಲ್ಲರಿಗೂ ಒಂದೊಂದು ಕಾಗದವನ್ನು ಕೊಡುತ್ತಾನೆ. ಅದಕ್ಕೆ ಮುನ್ನ ತಾನು ಏನನ್ನೋ ಅದರ ಮೇಲೆ ಬರೆಯುತ್ತಾನೆ. ಅನಂತರ ಅದರ ಸಹಿ ಹಾಕಿಸಿ ಅವರು ಅದನ್ನು ಜೇಬಿನಲ್ಲಿಟ್ಟುಕೊಳ್ಳುವಂತೆ ಹೇಳುತ್ತಾನೆ. ಸ್ವಲ್ಪ ಕಾಲ ಅದು

---

1. Powers of the mind ; complete works of Swami Vivekananda. vol II.

ಇದು ಮಾತನಾಡುವುದರಲ್ಲಿ ಕಳೆಯುತ್ತದೆ. ಅನಂತರ "ನಿಮಗೆ ಇಷ್ಟವಾದ ಭಾಷೆಯಲ್ಲಿ ಒಂದು ಶಬ್ದವನ್ನೋ ವಾಕ್ಯವನ್ನೋ ಕಲ್ಪಿಸಿಕೊಳ್ಳಿ" ಎಂದು ಎಲ್ಲರಿಗೂ ಹೇಳುತ್ತಾನೆ. ವಿವೇಕಾನಂದರು ಬೇಕೆಂದೇ ಸಂಸ್ಕೃತದಲ್ಲಿ ಒಂದು ದೀರ್ಘವಾದ ವಾಕ್ಯವನ್ನು ಕಲ್ಪಿಸಿಕೊಳ್ಳುತ್ತಾರೆ. ಆ ಭಾಷೆ ಆತನಿಗೆ ಬಾರದೆಂಬುದು ಇವರಿಗೆ ಗೊತ್ತು. ಈಗ ಜೇಬಿನಲ್ಲಿದ್ದ ಚೀಟಿಯನ್ನು ತೆಗೆಯುವಂತೆ ಹೇಳುತ್ತಾನೆ. ವಿವೇಕಾನಂದರು ಅದನ್ನು ತೆಗೆದುನೋಡಿದರೆ, ಇವರು ಸೃಷ್ಟಿಸಿಕೊಂಡ ಸಂಸ್ಕೃತವಾಕ್ಯವನ್ನೇ ಆತ ಮೊದಲೇ ಬರೆದಿಟ್ಟಿದ್ದಾನೆ! ಇವರ ಸ್ನೇಹಿತರು ಅರ್‍ಯಾಬಿಕ್ ಭಾಷೆಯಲ್ಲಿ ಒಂದು ವಾಕ್ಯವನ್ನು ಆಲೋಚಿಸಿಕೊಂಡರು. ಅವರಿಗೂ ಒಂದು ಚೀಟಿಯನ್ನು ಮೊದಲೇ ಬರೆದು ಕೊಟ್ಟಿದ್ದ. ಅದನ್ನು ತೆಗೆದು ನೋಡಿದರೆ ಅದೇ ವಾಕ್ಯ ಅಲ್ಲಿದೆ. ಇವರ ಇನ್ನೊಬ್ಬ ಸ್ನೇಹಿತ ವೈದ್ಯ. ವೈದ್ಯಶಾಸ್ತ್ರಕ್ಕೆ ಸಂಬಂಧಪಟ್ಟ ವಾಕ್ಯವನ್ನು ಜರ್ಮನ್ ವೈದ್ಯಗ್ರಂಥದಿಂದ ಆತ ನೆನಸಿಕೊಳ್ಳುತ್ತಾನೆ. ಯಥಾ ಪ್ರಕಾರ ಅದೇ ವಾಕ್ಯ ಆತನ ಜೇಬಿನಲ್ಲಿರುವ ಚೀಟಿಯಲ್ಲಿದೆ. ಸಂಸ್ಕೃತ, ಅರಾಬಿಕ್, ಜರ್ಮನ್ ಈ ಯಾವ ಭಾಷೆಯನ್ನೂ ತಿಳಿಯದ ಆ ವ್ಯಕ್ತಿ ಅದನ್ನು ಬರೆದದ್ದು ಹೇಗೆ? ಮುಂದೆ ಇದೇ ವಾಕ್ಯಗಳನ್ನು ಇವರು ಕಲ್ಪಿಸಿ ಕೊಳ್ಳುತ್ತಾರೆಂದು ಆತ ಕಂಡದ್ದು ಹೇಗೆ? ಇಲ್ಲಿಗೂ ಬಿಡದೆ ವಿವೇಕಾನಂದರು ಇನ್ನೊಮ್ಮೆ ಆತನ ಬಳಿಗೆ ಹೋಗಿ ಪರಿಪರಿಯಾಗಿ ಪರೀಕ್ಷಿಸಿದುದಾಗಿಯೂ ಒಂದೊಂದು ಸಲವೂ ಅದ್ಭುತ ಪವಾಡಗಳನ್ನು ಮೆರೆಯುವುದರಲ್ಲಿ ಆತ ಯಶಸ್ವಿಯಾದುದಾಗಿಯೂ ಅವರು ಹೇಳುತ್ತಾರೆ.

ಇನ್ನೊಮ್ಮೆ ವಿವೇಕಾನಂದರು ಹೈದರಾಬಾದಿನಲ್ಲಿರುವಾಗ ಒಬ್ಬ ವ್ಯಕ್ತಿಯನ್ನು ನೋಡುವ ಸಂದರ್ಭ ಬಂದಿತು. ಆತ ಕುಳಿತಲ್ಲಿಯೇ ಅನೇಕ ವಸ್ತುಗಳನ್ನು ಎಲ್ಲಿಂದಲೋ ಬರಮಾಡಿಕೊಳ್ಳುವ ಪವಾಡದಲ್ಲಿ ಪರಿಣತ ನಾಗಿದ್ದನೆಂಬ ಕೀರ್ತಿ ಹಬ್ಬಿತ್ತು. ಅವನನ್ನು ಪರೀಕ್ಷಿಸುವುದಕ್ಕಾಗಿ ವಿವೇಕಾನಂದರು ಬಂದರು. ಉಟ್ಟ ತುಂಡು ಬಟ್ಟೆಯೊಂದನ್ನು ಬಿಟ್ಟು ಎಲ್ಲವನ್ನೂ ಆತನಿಂದ ತೆಗೆದುಕೊಳ್ಳಲಾಯಿತು. ಆತ ಒಂದು ಮೂಲೆಯಲ್ಲಿ ಕುಳಿತು ಕೊಂಡ. ವಿವೇಕಾನಂದರು ತಮ್ಮ ಬಳಿ ಇದ್ದ ಹೊದಿಕೆಯೊಂದನ್ನು ಕೊಟ್ಟರು. ಅದನ್ನು ಆತ ತನ್ನ ಸುತ್ತ ಸುತ್ತಿಕೊಂಡ. ಅಲ್ಲಿದ್ದ ಇಪ್ಪತ್ತೈದು ಜನ ಅವನನ್ನೇ ದಿಟ್ಟಿಸಿ ನೋಡುತ್ತಿದ್ದರು. ಆಗ ಆತ "ನಿಮಗೆ ಏನೇನು ಬೇಕೋ ಎಲ್ಲವನ್ನೂ ಬರೆದಿಟ್ಟುಕೊಳ್ಳಿ" ಎಂದು ಹೇಳಿದ. ಆ ಕಾಲದಲ್ಲಿ ಸಿಕ್ಕದಿರುವ, ಅಲ್ಲೆಲ್ಲೂ ಇಲ್ಲದಿರುವ ಬಗೆಬಗೆಯ ಹಣ್ಣುಗಳ ಹೆಸರುಗಳನ್ನು ಎಲ್ಲರೂ ಬರೆದಿಟ್ಟುಕೊಂಡರು. ದ್ರಾಕ್ಷಿ, ಕಿತ್ತಳೆ ಮೊದಲಾದ ಹಣ್ಣುಗಳು ಆ ಪಟ್ಟಿಯಲ್ಲಿದ್ದವು. ಆ ಚೀಟಿಗಳನ್ನೆಲ್ಲಾ ಆತ ತೆಗೆದುಕೊಂಡ. ಅನಂತರ ಪ್ರಾರಂಭವಾಯಿತು ಅದ್ಭುತ ಘಟನೆ. ತನ್ನ ಹೊದಿಕೆಯೊಳಗಿನಿಂದ ಆ ಹಣ್ಣುಗಳನ್ನೆಲ್ಲಾ ತೆಗೆಯತೊಡಗಿದ. ಒಂದೆರಡಲ್ಲ, ಗೊಂಚಲು ಗೊಂಚಲು ದ್ರಾಕ್ಷಿ, ಕಿತ್ತಲೆ ಇತ್ಯಾದಿ ಬಗೆಬಗೆಯ ಹಣ್ಣುಗಳ ರಾಶಿಯೇ ಬೀಳತೊಡಗಿತು. ಅವನ್ನು ತಿನ್ನು ವಂತೆಯೂ ಸೂಚಿಸಿದ. ಅದು ಕಣ್ಣುಕಟ್ಟಿರಬಹುದೆಂದು ಕೆಲವರು ಹಿಂದೆ ಮುಂದೆ ನೋಡಿದರು. ತಾನೇ ಅವು ಗಳನ್ನು ತಿನ್ನತೊಡಗಿದ. ಆಗ ಧೈರ್ಯಗೊಂಡು ಇವರೆಲ್ಲರೂ ತಿಂದರು. ಎಲ್ಲವೂ ರುಚಿಕರವಾಗಿದ್ದ ಸೊಗಸಾದ ಹಣ್ಣುಗಳು. ಕೊನೆಯಲ್ಲಿ ಆತ ಒಂದು ರಾಶಿ ಗುಲಾಬಿ ಹೂವನ್ನು ಸುರಿಯುವುದರ ಮೂಲಕ ತನ್ನ ಕಾರ್ಯಕ್ರಮ ವನ್ನು ಮುಕ್ತಾಯಗೊಳಿಸಿದ. ಒಂದೊಂದು ಹೂವು ಸಹಜ ಸುಂದರವಾಗಿದ್ದ ಸುಗಂಧವನ್ನು ಬೀರುತ್ತಿದ್ದುವು. ಪ್ರತ್ಯಕ್ಷವಾಗಿ ಇದನ್ನು ಕಂಡ ವಿವೇಕಾನಂದರು ವಿಸ್ಮಯಮೂಕರಾದರು. "ಇದರ ರಹಸ್ಯವೇನು?" ಎಂದು ಆತನನ್ನು ಕೇಳಿದರು. ಅದರೆ ಆತ ಹೇಳುವುದಕ್ಕೆ ಇಷ್ಟಪಡದೆ ಇದೆಲ್ಲಾ ಕೈಚಳಕ ಎಂದು ಹೇಳಿ ತಪ್ಪಿಸಿಕೊಂಡ.

"ಆದರೆ ಅದೇನೆಂಬುದು ನಮಗೆ ತಿಳಿಯದಿದ್ದರೂ ಕೈಚಳಕ ಮಾತ್ರ ಅಲ್ಲವೆಂಬುದು ಸ್ಪಷ್ಟವಾಗಿತ್ತು" ಎಂದು ವಿವೇಕಾನಂದರು ಹೇಳುತ್ತಾರೆ. ಬರಿಗೈಯಲ್ಲಿ ಕುಳಿತ ಒಬ್ಬ ವ್ಯಕ್ತಿ ಕೇಳಿದಷ್ಟು ಬಗೆಯ ಹಣ್ಣುಗಳನ್ನು, ಹೂವಿನ ರಾಶಿಯನ್ನು ಮುಂದೆ ಸುರಿಯುವುದು ಕೇವಲ ಕೈಚಳಕದಿಂದ ಸಾಧ್ಯವಿಲ್ಲ. ಇದು ಯಾವ ವೈಜ್ಞಾನಿಕ ವಿವರಣೆಗೂ ಸಿಕ್ಕುವುದಿಲ್ಲ. ವಿಜ್ಞಾನದ ಜಗತ್ತಿಗೆ ಅತೀತವಾದ ಇದೇ ಒಂದು ಸ್ವತಂತ್ರ ಜಗತ್ತು.

ಆ ಜಗತ್ತಿನ ವಿವಿಧ ವಲಯಗಳಲ್ಲಿ ಸಂಚರಿಸುವ ಇಂತಹ ಜನ ಭಾರತದ ಆದ್ಯಂತವೂ ಇದ್ದಾರೆ. ಪಾಲ್ ಬ್ರಂಟನ್ ಅವರ 'A Search in Secret India' ಎಂಬ ಗ್ರಂಥದಲ್ಲಿ ಇದರ ಬಹುಮುಖವ್ಯಾಪ್ತಿಯನ್ನು ಕಾಣಬಹುದು.

ಇದು ಬಾಹ್ಯವಿಜ್ಞಾನದ ಸ್ಥೂಲನಿಯಮಗಳ ವ್ಯಾಪ್ತಿಯೊಳಗೆ ಬರುವುದಿಲ್ಲ. ನೇರವಾದ ರೀತಿಯಲ್ಲಿ ನೋಡಿದಾಗ ಇದೂ ಒಂದು ರೀತಿಯ ವಿಜ್ಞಾನವೇ. ಇದು ಆಂತರಿಕವಿಜ್ಞಾನ; ಮನೋವಿಜ್ಞಾನ. ಮನಸ್ಸಿನ ಸೂಕ್ಷ್ಮಶಕ್ತಿಗಳಿಂದ ನಿಯಂತ್ರಿಕವಾದುದು. ಮನಸ್ಸಿನ ಶಕ್ತಿಯನ್ನು ಅದರ ವಿವಿಧ ಪದರಗಳ ಸಂಕೀರ್ಣತೆಯನ್ನೂ, ಅವುಗಳ ಸಾಧ್ಯತೆಗಳನ್ನು ಕುರಿತ ಕೊನೆಯಮಾತುಗಳನ್ನು ಬಾಹ್ಯವಿಜ್ಞಾನ ಹೇಳಲಾರದು. ಅದಕ್ಕೆ ನಿರಂತರ ಚಲನೆಯಲ್ಲೂ ಅಚಲತತ್ತ್ವವನ್ನು ಕಂಡು ವಿಶ್ಲೇಷಿಸುವ ಆಂತರಿಕ ವಿಜ್ಞಾನ ಸೂತ್ರಗಳ ಅನ್ವೇಷಣೆ ಅಗತ್ಯ. ಭಾರತೀಯ ತಾತ್ತ್ವಿಕದರ್ಶನ ತನ್ನ ಯೋಗಸಾಧನೆಯಲ್ಲಿ ಇದನ್ನು ಬಹಳ ಹಿಂದೆಯೇ ಸಾಧಿಸಿಕೊಂಡಿತು. ಮನಸ್ಸಿನ ಶಕ್ತಿಗಳ ವ್ಯವಸ್ಥಿತ ವಿಕಾಸಕ್ಕೆ ರಾಜಮಾರ್ಗವನ್ನು ರೂಪಿಸಿತು ರಾಜಯೋಗ. ಮಹಾ ಮನಸ್ಸಿನ ಒಂದು ಅಂಶವಾದ ವೈಯ್ಯಕ್ತಿಕ ಮನಸ್ಸು ತನ್ನ ಪರಿಧಿಯನ್ನು ಹಿಗ್ಗಿಸಿಕೊಳ್ಳುತ್ತಾ ಮಹಾಮನಸ್ಸಿನತ್ತ ತಿರುಗುವ ಮಹತ್ಸಾಧನೆ ಇಲ್ಲಿ ಬರುತ್ತದೆ. ವ್ಯಕ್ತಿ ಈ ಯೋಗ ಸಾಧನೆಯನ್ನು ಕೈಕೊಂಡಾಗ ಅನೇಕ ಅಪೂರ್ವವಾದ ಶಕ್ತಿಗಳು ಲಭಿಸುತ್ತವೆ. ಅಣಿಮಾದಿ ಅಷ್ಟಸಿದ್ಧಿಗಳು ಎಂದು ಯೋಗಶಾಸ್ತ್ರ ಅವುಗಳನ್ನು ಕರೆದಿದೆ. ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶತ್ವ, ವಶಿತ್ವ—ಈ ಎಂಟು ಸಿದ್ಧಿಗಳಲ್ಲಿ ಒಂದೊಂದೂ ಅದ್ಭುತ ಪವಾಡ ಸಾಮರ್ಥ್ಯವನ್ನು ತಂದುಕೊಡುತ್ತವೆ. ಆದರೆ ನಿಜವಾದ ಯೋಗಿ ಇವುಗಳನ್ನು ಲೌಕಿಕಕಾರ್ಯಗಳಿಗಾಗಿ ಬಳಸಿಕೊಳ್ಳುವುದಿಲ್ಲ. ಇವುಗಳನ್ನು ಮೆಟ್ಟಿ ಮೇಲೇರುತ್ತಾನೆ. ಇವುಗಳ ಆಕರ್ಷಣೆಗೆ ಒಳಗಾದವನು ಇವುಗಳ ಪ್ರದರ್ಶನದ ಚಟಕ್ಕೆ ಬಲಿಯಾಗಿ ಯೋಗಭ್ರಷ್ಟನಾಗುತ್ತಾನೆ.

ಇದರಿಂದ ಒಂದು ಅಂಶ ಸ್ಪಷ್ಟವಾಗುತ್ತದೆ. ಪವಾಡ ಎಂದು ಕರೆಯುವ ಶಕ್ತಿಗಳು ಅಸಂಗತಮನಸ್ಸಿನ ಹುಸಿ ಕಲ್ಪನೆಗಳಲ್ಲ; ಅಥವಾ ಮೋಸದ ನಟನೆಗಳಲ್ಲ. ಅವು ಮಾನಸಿಕ ಸಾಧನೆಯ ಒಂದು ಹಂತದಲ್ಲಿ ಲಭ್ಯವಾಗುವ ವಿಶಿಷ್ಟಶಕ್ತಿಗಳು. ಯಂತ್ರ, ಮಂತ್ರ, ತಂತ್ರ ಇತ್ಯಾದಿಗಳನ್ನೂ ಒಳಗೊಂಡಂತೆ ಇವುಗಳದೇ ಒಂದು ರಹಸ್ಯ ಲೋಕ ಬೆಳೆದುಬಂದಿತು. ಇವುಗಳನ್ನು ಕೇವಲ ಮೋಸವೆಂದು, ನಟನೆಗಳೆಂದು, ಕೈಚಳಕವೆಂದು ತಳ್ಳಿಹಾಕುವಂತಿಲ್ಲ. ಆದರೆ ಅನೇಕ ವೇಳೆ ಮೋಸ ನಟನೆಗಳಲ್ಲೇ ಇವು ಬೆಳೆಯುವುದೂ ನಿಜ. ಆ ಶಕ್ತಿ ಕರಗತವಾಗದಿದ್ದರೂ ಜನಸಾಮಾನ್ಯರನ್ನು ಆಕರ್ಷಿಸುವುದಕ್ಕಾಗಿ ಅದನ್ನು ಆರೋಪಿಸಿಕೊಂಡು ನಟಿಸುವ ವೇಷಧಾರಿಗಳೂ ಇಲ್ಲದಿಲ್ಲ. ಯಾರೂ ಕಾಣದಂತೆ ಬೂದಿಯಚೀಲಗಳನ್ನು ಕಟ್ಟಿಕೊಂಡು ಬೂದಿಯನ್ನು ಉದುರಿಸುವ ಪವಾಡವನ್ನು ಅಂತಹವರು ಮಾಡಬಹುದು. ಆದರೆ ಸಹಜವಾಗಿಯೇ ಅಂತಹ ಶಕ್ತಿಯನ್ನು ಪಡೆಯುವದು ಸಾಧ್ಯ ಎಂಬುವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ವಿವೇಕಾನಂದರು ನೋಡಿದ ಆ ವ್ಯಕ್ತಿ ಅಂತಹ ಶಕ್ತಿಯನ್ನು ಪಡೆದವನು. ಎಲ್ಲಿಂದಲೋ ಹಣ್ಣುಗಳನ್ನು, ಹೂವುಗಳನ್ನು ಸಂಕಲ್ಪಮಾತ್ರದಿಂದ ತಂದುಕೊಡಬಲ್ಲನು. ಅದು ಸ್ವತಂತ್ರ ಸೃಷ್ಟಿ ಶಕ್ತಿಯಲ್ಲ; ಸ್ಥಳಾಂತರ ಶಕ್ತಿ. ಇದು ಮೇಲಿನ ಅಷ್ಟಸಿದ್ಧಿಗಳಲ್ಲಿ ಒಂದಾದ 'ಪ್ರಾಪ್ತಿ' ಎಂಬ ಶಕ್ತಿ. ಹಾಗೆ, ಅಣುವಿನಂತಾಗುವುದು, ಬೃಹತ್ತಾಗಿ ಬೆಳೆಯುವುದು, ಗರಿಹಗುರವಾಗುವುದು, ಗಿರಿಭಾರವಾಗುವುದು, ಅಂತೆಯೇ ತನ್ನ ಕಾಮನೆಗಳನ್ನು ತೀರಿಸಿಕೊಳ್ಳುವುದು, ಪ್ರಕೃತಿ ವಸ್ತುಗಳ ಮೇಲೆ ಖಚಿತ ನಿಯಮವನ್ನು ಮೀರಿದ ಪ್ರಭುತ್ವವನ್ನು ಪಡೆಯುವುದು, ಇತರ ಯಾವ ಶಕ್ತಿಯ ಪ್ರಭಾವಕ್ಕೂ ಒಳಗಾಗದೆ ಸ್ವಾತ್ಮಶಕ್ತಿಯನ್ನು ವಶೀಕರಿಸಿಕೊಳ್ಳುವುದು—ಈ ಮೊದಲಾದ ಶಕ್ತಿಗಳನ್ನು ಪಡೆಯಬಹುದೆಂಬುದನ್ನು ಯೋಗಶಾಸ್ತ್ರ ಹೇಳುತ್ತದೆ. ಅದನ್ನು ಸಾಧಿಸಿದವರೂ ಅನೇಕರು ಆಗಿ ಹೋಗಿದ್ದಾರೆ.

ಆದರೆ ಎಲ್ಲ ರಂಗಗಳಲ್ಲಿಯೂ ಭ್ರಷ್ಟಾಚಾರವಿರುವಂತೆ ಇಲ್ಲಿಯೂ ಇವರ ದುರುಪಯೋಗ ನಡೆಯುತ್ತಾ ಬಂದಿದೆ. ಇದನ್ನು ಎರಡು ರೀತಿಯಲ್ಲಿ ಕಾಣಬಹುದು. ಒಂದು ನಿಜವಾಗಿ ಆ ಶಕ್ತಿ ಕರಗತವಾಗದಿದ್ದರೂ ಇದ್ದಹಾಗೆ ನಟಿಸಿ ತಮ್ಮ ಕುಶಲತೆಯಿಂದ ಮುಗ್ಧ ಜನರನ್ನು ಮೋಸಗೊಳಿಸುವುದು. ಆ ಶಕ್ತಿಗಳನ್ನು ಸ್ವಲ್ಪ ಮಟ್ಟಿಗೆ ಕರಗತಗೊಳಿಸಿಕೊಂಡು ಸಾಮಾನ್ಯರನ್ನಲ್ಲದೆ ವಿದಗ್ಧರನ್ನೂ ಆಕರ್ಷಿಸಿ ಆಧ್ಯಾತ್ಮದ ಜಾಲವನ್ನು ಸೃಷ್ಟಿಸುವುದು ಇನ್ನೊಂದು ಬಗೆ. ಈ ಎರಡರ ಉದ್ದೇಶವೂ ಜನರನ್ನು ಒಂದು ರೀತಿಯಲ್ಲಿ ಶೋಷಣೆಗೆ ಒಳಪಡಿಸುವುದೇ ಆಗಿದೆ. ಆಧ್ಯಾತ್ಮ ಸಾಧನೆಯ ದೃಷ್ಟಿಯಿಂದ ಈ ಎರಡೂ ಖಂಡನಾರ್ಹ. ಮೊದಲನೆಯದಂತೂ ಶುದ್ಧ ಮೋಸ; ಎರಡನೆಯದು ದೋಷಪೂರ್ಣ, ಏಕೆಂದರೆ ಆ ಶಕ್ತಿ ಲಭಿಸಿದ್ದರೂ ಜನಪ್ರಿಯತೆಯ ಲೌಕಿಕ ಆಕರ್ಷಣೆಗಾಗಿ ಬಳಸಬಾರದೆಂಬುದು ಯೋಗ ದರ್ಶನದ ಉದಾತ್ತ ದೃಷ್ಟಿ.

ಪವಾಡಗಳು ಜನಸಾಮಾನ್ಯರನ್ನು ಆಕರ್ಷಿಸುವ ಸುಲಭವಾದ ಮಾರ್ಗವಾಗಿ, ಅವು ಶೋಷಣೆಯ ಮಾಧ್ಯಮಗಳೂ ಆಗುತ್ತವೆ. ಧರ್ಮದ ಹೆಸರಿನಲ್ಲಿ ದುರ್ವ್ಯವಹಾರಗಳಿಗೂ ದಾರಿ ಮಾಡಿಕೊಡುತ್ತವೆ. ಆದ್ದರಿಂದಲೇ ನಮ್ಮ ಮಹಾಯೋಗಿಗಳೂ, ಮಹಾತ್ಮರೂ ಆಧ್ಯಾತ್ಮಗುರುಗಳೂ ಇವುಗಳನ್ನು ದೂರ ವಿಡಲು ಸದಾ ಪ್ರಯತ್ನಿಸಿದ್ದಾರೆ. ಲೋಕ ಸಂಗ್ರಹಕ್ಕಾಗಿ ಕೆಲವರು ಒಮ್ಮೊಮ್ಮೆ ಅವುಗಳನ್ನು ಬಳಸಿಕೊಂಡಿರಬಹುದು. ಆದರೆ ಅವುಗಳನ್ನೇ ಪ್ರಧಾನವಾಗಿಸಿಕೊಂಡು ಜನರನ್ನು ಆಕರ್ಷಿಸಿಲ್ಲ. ಅವುಗಳ ಮಿತಿಯನ್ನು ಮನಗಾಣಿಸುತ್ತಾ ಅವುಗಳಿಗೆ ಅತೀತವಾದವರು ಮಾತ್ರ ಲೋಕಗುರುಗಳಾಗಿದ್ದಾರೆ. ಅವರ ಆಧ್ಯಾತ್ಮಿಕ ಜೀವನವೇ ಎಲ್ಲಕ್ಕಿಂತ ಹೆಚ್ಚಿನ ಪವಾಡವಾಗಿದೆ. ಬುದ್ಧನ ಜೀವನದ ಉದಾತ್ತ ಸಾಧನೆಯೇ ಅದ್ಭುತ ಪವಾಡ. ಉಳಿದ ಯಾವ ಪವಾಡಗಳನ್ನು ಆತ ನಂಬಿದವನೂ ಅಲ್ಲ, ನಂಬಲು ಹೇಳಿದವನೂ ಅಲ್ಲ. ಏಸುಕ್ರಿಸ್ತ ಅನೇಕ ಪವಾಡಗಳನ್ನು ಮಾಡಿದ ವರ್ಣನೆಯಿದೆ. ಆದರೆ ಅವನ ನಿಜವಾದ ವ್ಯಕ್ತಿತ್ವ ಅವುಗಳ ಆಚೆಯಿದೆ. ಶಿಲುಬೆಗೇರಿಸಿ ಮೊಳೆ ಹೊಡೆಯುತ್ತಿರುವಾಗ "ದೇವರೇ ಅವರನ್ನು ಕ್ಷಮಿಸು, ಅವರೇನು ಮಾಡುತ್ತಿರುವರೆಂಬುದನ್ನು ಅರಿಯರು" ಎಂದ ಆತನ ಮಾನವೀಯ ಅನುಕಂಪ ಎಲ್ಲಕ್ಕಿಂತ ಹೆಚ್ಚಿನ ಪವಾಡ. ಬಸವಣ್ಣ ಜೋಳವನ್ನು ಮುತ್ತನ್ನಾಗಿ ಪರಿವರ್ತಿಸಿದ ಪವಾಡ, ಮತ್ತು ಇನ್ನೂ ಅನೇಕ ಪವಾಡಗಳು ವರ್ಣಿತವಾಗಿದೆ. ಜನಸಾಮಾನ್ಯರ ಪವಾಡ ಪ್ರಿಯತೆಗೆ ಅವು ಸಾಕ್ಷಿಯೇ ಹೊರತು ಅವನ ವ್ಯಕ್ತಿತ್ವಕ್ಕಲ್ಲ. ಆ ಯುಗದಲ್ಲಿ ದೀನರನ್ನು ದುಃಖಿಗಳನ್ನು ಅಸ್ಪೃಶ್ಯರನ್ನೂ ಮೇಲೆತ್ತಿ ಧಾರ್ಮಿಕ ಸಾಧನೆಯನ್ನು ಸಾರ್ವತ್ರಿಕಗೊಳಿಸಿದ ಮಾನವಧರ್ಮದ ಅನುಷ್ಠಾನ ಆತ ಮಾಡಿದ ಎಲ್ಲಕ್ಕಿಂತ ಹೆಚ್ಚಿನ ಪವಾಡ.

ಯೋಗಶಕ್ತಿಗಳ ಅಲ್ಪ ಆಕರ್ಷಣೆಗಳಿಗೆ ಒಳಗಾಗದೇ ಅದನ್ನು ಮೆಟ್ಟಿ ಮೇಲೇರಿದವರು ಮಾತ್ರ ಈ ವಿಶ್ವಪ್ರಜ್ಞೆಯ ಪವಾಡವನ್ನು ಸಾಧಿಸಲು ಸಮರ್ಥರಾಗುತ್ತಾರೆ. ಆ ಆಕರ್ಷಣೆಗಳ ಹಿಡಿತಕ್ಕೆ ಸಿಕ್ಕವರು ಬೂದಿ ಪವಾಡಗಳಿಗೆ ಇಳಿಯುತ್ತಾರೆ. ಇದೂ ಒಂದು ಶಕ್ತಿ ಎಂಬುದನ್ನು ನಾವು ಒಪ್ಪಿಕೊಳ್ಳಬಹುದು. ಹಿಂದೆ ಹೇಳಿದಂತೆ ಮಾನಸಿಕ ಸಾಧನೆಯ ಒಂದು ಹಂತದಲ್ಲಿ ಅವು ಲಭ್ಯವಾಗುತ್ತವೆ. ಅವುಗಳದೇ ಒಂದು ಪ್ರಪಂಚವಿದೆ. ಬೀದಿಯ ಬದಿಯಲ್ಲಿ ಪ್ರದರ್ಶನವನ್ನು ಕೊಡುವ ಹಾವಾಡಿಗರೂ ಇಂತಹ ಅದ್ಭುತ ಪವಾಡಗಳನ್ನು ಮಾಡುತ್ತಾರೆ. ಮಣ್ಣನ್ನು ಮೇಲೆಸೆದು ಝಣ ಝಣ ದುಡ್ಡನ್ನು ಸುರಿಸುತ್ತಾರೆ. ಆದರೆ ಅನಂತರ ಪಾತ್ರೆ ಹಿಡಿದು ಭಿಕ್ಷಕ್ಕೆ ಬರುತ್ತಾರೆ. ಆಧ್ಯಾತ್ಮ ಗುರುಗಳೂ ಇಂತಹ ಪವಾಡಗಳಿಗೆ ಇಳಿದರೆ ಆಗ ಅವರು ಕಾವಿ ಹಾಕಿದ ಹಾವಾಡಿಗರಾಗಿ ಪರಿಣಮಿಸುತ್ತಾರೆ. ಅಂತಹ ಹಾವಾಡಿಗರ ಸುತ್ತ ಜನ ಸೇರುವುದೂ ಹೆಚ್ಚೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಇಂತಹ ಪವಾಡಗಳ ಬೆಲೆ ಏನೆಂಬುದನ್ನು ಒಮ್ಮೆ ರಾಮಕೃಷ್ಣರು ಹಠಯೋಗಿಯೊಬ್ಬನಿಗೆ ಸೂಚ್ಯವಾಗಿ ನಿರೂಪಿಸುವ ಪ್ರಸಂಗ ಬರುತ್ತದೆ. ಆತ ರಾಮಕೃಷ್ಣರ ಬಳಿಗೆ ಬಂದು ತಾನು ಕರಗತಗೊಳಿಸಿಕೊಂಡ ಅದ್ಭುತ ಶಕ್ತಿಯನ್ನು ಪ್ರದರ್ಶಿಸಲು ಬಯಸುತ್ತಾನೆ. ಅವರನ್ನೊಡಗೊಂಡು ನದಿಯ ದಡಕ್ಕೆ ಬರುತ್ತಾನೆ. ಅವರು ನೋಡುತ್ತಿ

ರಲು ನೆಲದಮೇಲೆ ನಡೆದಷ್ಟೇ ಸುಲಭವಾಗಿ ನದಿಯಮೇಲೂ ನಡೆಯುತ್ತಾ ಆಚೆಯ ದಡವನ್ನು ಸೇರುತ್ತಾನೆ. ಹಿಂದೆ ಹೇಳಿದ ಅಷ್ಟಸಿದ್ಧಿಗಳಲ್ಲಿ ಲಘಿಮಾ ಸಿದ್ಧಿಯನ್ನು ಪಡೆದ ಹೆಮ್ಮೆ ಆತನಿಗೆ. ರಾಮಕೃಷ್ಣ ಪರಮಹಂಸರು ಅಂಬಿಗನನ್ನು ಕರೆದು ದೋಣಿಯಲ್ಲಿ ಕುಳಿತು ನದಿಯನ್ನು ದಾಟಿ ತಾವೂ ಆಚೆಯ ದಡಕ್ಕೆ ಹೋಗುತ್ತಾರೆ. ನದಿಯನ್ನು ದಾಟಿಸಿದುದಕ್ಕಾಗಿ ಕೂಲಿ ಎಷ್ಟೆಂದು ಅಂಬಿಗನನ್ನು ಕೇಳುತ್ತಾರೆ. ಅತ "ಆರುಕಾಸು" ಎಂದು ಹೇಳುತ್ತಾನೆ. ಅಷ್ಟನ್ನು ಆತನಿಗೆ ಕೊಟ್ಟು ಈ ಯೋಗಿಯ ಕಡೆ ತಿರುಗಿ ಹೇಳುತ್ತಾರೆ : "ನೋಡು ನಿನ್ನ ಯೋಗದ ಬೆಲೆ ಇಷ್ಟು" ಎಂಬುದಾಗಿ. ಪವಾಡಗಳ ಸ್ಥಾನವನ್ನು ಇದಕ್ಕಿಂತ ಹೆಚ್ಚು ಅರ್ಥವತ್ತಾಗಿ ನಿರ್ದೇಶಿಸುವುದು ಸಾಧ್ಯವಿಲ್ಲವೆಂದು ತೋರುತ್ತದೆ.

ಸ್ವಾಮಿ ವಿವೇಕಾನಂದರು ಒಂದು ಕಡೆ ಹೀಗೆ ಹೇಳಿದ್ದಾರೆ "I look upon miracles as the greatest stumbling blocks in the way of truth". ಸತ್ಯಮಾರ್ಗದಲ್ಲಿ ಪವಾಡಗಳು ಪ್ರಬಲವಾದ ಆಕರ್ಷಕ ಆತಂಕಗಳಾಗಿ ಪರಿಣಮಿಸುತ್ತವೆಂದು ಹೇಳುತ್ತಾ ಪವಾಡಕ್ಕೆ ಮಾರುಹೋದ ತನ್ನ ಶಿಷ್ಯನೊಬ್ಬನನ್ನು ಬುದ್ಧ ತಿದ್ದಿದ ರೀತಿಯನ್ನು ಉದಾಹರಿಸುತ್ತಾರೆ. ಬಹುಶಃ ಇದು ಇಂದಿನ ವೈಚಾರಿಕದೃಷ್ಟಿಗೆ ಹೆಚ್ಚು ಸೂಕ್ತವೆಂಬಂತೆ ತೋರುತ್ತದೆ.

ಪವಾಡ ವಿರೋಧಿಗಳಲ್ಲಿ ಕೆಲವರು ಪವಾಡಕ್ಕೂ ಆಧ್ಯಾತ್ಮಕ್ಕೂ ಗಂಟುಹಾಕಿ ಆಧ್ಯಾತ್ಮ ವಿರೋಧಿಗಳಾಗಿ ಪರಿಣಮಿಸುವುದುಂಟು. ಇದು ಕೊಳೆಯ ನೀರಿನ ಜೊತೆಗೆ ತೊಳೆದ ಶಿಶುವನ್ನು ಎಸೆಯುವ ಕ್ರಮ. ಪೂರ್ಣದೃಷ್ಟಿಯ ವಿವೇಚನೆಗೆ ಇದು ಸಂಗತವಾಗಲಾರದು. ಪವಾಡಗಳು ಮೂಢನಂಬಿಕೆಗಳನ್ನು ಬೆಳೆಸುವುದಕ್ಕೂ ಲೌಕಿಕ ವಿಷಯಾಕರ್ಷಣೆಗೂ ಕಾರಣವಾಗಿರುವುದನ್ನು ನಾವು ಒಪ್ಪಿಕೊಳ್ಳಬೇಕು. ಪವಾಡಗಳೇ ಸರ್ವಸ್ವವಾಗಿ ಅದರಿಂದ ಸ್ವಾತ್ಮಾವಲಂಬನೆ ಕುಗ್ಗುವುದಕ್ಕೆ ಕಾರಣವಾಗುವ ಪವಾಡಪುರುಷರ ಇತಿ ಮಿತಿಗಳನ್ನು ವೈಚಾರಿಕವಾಗಿ ವಿವೇಚಿಸಬೇಕು. ಆ ಭರದಲ್ಲಿ ಪವಾಡಗಳೇ ಸುಳ್ಳು ಎನ್ನುವ ಅಗತ್ಯವಿಲ್ಲ. ಸುಳ್ಳು ಪವಾಡಗಳ ಕೌಶಲ್ಯದಿಂದ ಮೆರೆಯುವವರಿರಬಹುದು. ಅವರನ್ನು ಬಯಲಿಗೆಳೆಯುವುದೂ ಅಗತ್ಯ. ಆದರೆ ಸತ್ಯಸ್ಯಸತ್ಯವಾದ ಯೋಗವಿಜ್ಞಾನದ ಶಕ್ತಿಯನ್ನು ಅಲ್ಲಗಳೆಯಬೇಕಾಗಿಲ್ಲ. ಆ ಶಕ್ತಿಯನ್ನು ಅಲ್ಪ ವಿಷಯಗಳಿಗೆ ಬಳಸುವ ಪವಾಡಗಳ ಚಾಪಲ್ಯಕ್ಕೆ ಉಕ್ಕಿನ ಪೆಟ್ಟನ್ನು ಕೊಟ್ಟು ಅದನ್ನು ನಿಜವಾದ ಆಧ್ಯಾತ್ಮದ ಒರೆಗಲ್ಲಿನ ಮೇಲೆ ಉಜ್ಜಿ ನೋಡಬಹುದು.

ಒಟ್ಟಿನಲ್ಲಿ ಪವಾಡಗಳೆಲ್ಲವನ್ನೂ ಮೋಸ ಎಂದು ತಿರಸ್ಕರಿಸುವುದು ಪ್ರಾಮಾಣಿಕ ವಿವೇಚನೆಗೆ ಕಷ್ಟವಾಗುತ್ತದೆ. ಬಹು ಸಂಖ್ಯೆಯ ಪವಾಡಗಳ ಹಿಂದೆ ಮೋಸ, ಕೈಚಳಕ, ಕಣ್ಣು ಕಟ್ಟು ಇರಬಹುದು. ಆದರೆ ಬುದ್ಧಿಯನ್ನು ತಬ್ಬಿಬ್ಬುಗೊಳಿಸುವಂತಹ, ವಿಜ್ಞಾನ ಮೂಕವಾಗುವಂತಹ ಅಘಟಿತ ಘಟನೆಗಳನ್ನು ಸಹಜವಾಗಿ ನಿರ್ವಹಿಸುವ ಪವಾಡಶಕ್ತಿ ಅಲ್ಲಲ್ಲಿ ಗೋಚರವಾಗುತ್ತದೆ. ಅದರ ಸಾಧ್ಯತೆಗಳನ್ನು ಅದರವೇ ಆದ ವೈಜ್ಞಾನಿಕ ಸೂತ್ರಗಳ ಹಿನ್ನೆಲೆಯಲ್ಲಿ ನಮ್ಮ ಧರ್ಮಗ್ರಂಥಗಳು ವಿವೇಚಿಸಿವೆ ; ಅದರ ಇತಿಮಿತಿಗಳನ್ನು ಸೂಚಿಸಿವೆ. ಆಧ್ಯಾತ್ಮಿಕ ಸಾಧನೆಯಲ್ಲಿ ಅವುಗಳನ್ನು ತಿರಸ್ಕರಿಸಿವೆ. ಈ ವೈಚಾರಿಕ ದೃಷ್ಟಿಯನ್ನು ಇಂದು ನಾವು ಬಳಸಿಕೊಳ್ಳಬೇಕು. ಹುಸಿ ಪವಾಡಗಳ ಆಕರ್ಷಣೆಯಿಂದ ಜನರನ್ನು ವಂಚಿಸುವವರನ್ನು ಬಯಲಿಗೆಳೆಯುವುದರ ಜೊತೆಗೆ ಪವಾಡಗಳ ಸ್ಥಾನವನ್ನೂ ನಿರ್ದೇಶಿಸುವುದು ಒಳಿತು. ಬೂದಿಯನ್ನು ಸುರಿಸುತ್ತಿದ್ದುದು ಮೋಸವೆಂದು ಸಾಬೀತು ಮಾಡಿದರೆ ಸಾಲದು ; ನಿಜವಾಗಿಯೂ ಬೂದಿಯನ್ನು ಸುರಿಸುವ ಶಕ್ತಿಯನ್ನು ಪಡೆದಿದ್ದರೂ ಸಹ ಅದು ಮಹತ್ವದ್ದಲ್ಲವೆಂಬುದನ್ನೂ, ಅದು ಬೀದಿಯ ಡೊಂಬರಾಟದ ಮಟ್ಟಕ್ಕೆ ಸೇರಿದ ವಿದ್ಯೆ ಎಂಬುದನ್ನೂ ಮನವಟ್ಟು ಮಾಡಿಕೊಡಬೇಕು. ಆಗ ನಮ್ಮೆದುರಿನಲ್ಲಿಯೇ ಅದ್ಭುತ ಪವಾಡಗಳನ್ನು ಮಾಡಿದರೂ ಸಹ ಅವುಗಳಿಗೆ ಮಾರುಹೋಗಿ ಭೂಮಿಗೆ ಬಂದ ಭಗವಂತ ಎಂದು ಆತನಿಗೆ ಶರಣಾಗುವುದಿಲ್ಲ. ಆತನ ಯಕ್ಷಿಣಿ ವಿದ್ಯೆಯನ್ನು ಕಂಡು ನಾವು ಮೆಚ್ಚೋಣ, ಅಗತ್ಯವಿದ್ದರೆ ನಾಲ್ಕು ಪುಡಿಗಾಸುಗಳನ್ನು ಕೊಟ್ಟು ಆತನನ್ನು ಪ್ರೋತ್ಸಾಹಿಸೋಣ. ಆದರೆ ಅಂತರಿಕ ಸಾಧನೆಯಲ್ಲಿ ಮಗ್ನವಾದ ಸ್ವಾವಲಂಬನೆಯ ಕಾಯಕದ ಮುಂದೆ ಇದು ತೀರ ಅಲ್ಪವಾದುದೆಂಬುದನ್ನು ಮರೆಯದಿರೋಣ. ಪವಾಡಗಳ ವಿವೇಚನೆ ಈ ದೃಷ್ಟಿಯನ್ನು ಜನತೆಯಲ್ಲಿ ಜಾಗ್ರತಗೊಳಿಸಬೇಕಾಗಿದೆ.

ಶಾಂತಾದೇವಿ ಮಾಳವಾಡ

ಶಿವಶರಣೆಯರ ಶಿವಯೋಗ

ವೇದಕಾಲದಲ್ಲಿ ಮೈತ್ರೇಯಿ, ಗಾರ್ಗಿ, ವಿಶ್ವವಾರಾ, ಲೋಪಾಮುದ್ರೆ ಮೊದಲಾದ ಮಹಿಳೆಯರು ವೇದಾಭ್ಯಾಸದಲ್ಲಿ ಬಲ್ಲಿದವರಾಗಿದ್ದರು. ತತ್ತ್ವದರ್ಶನ ಪಡೆದ ಈ ಮಹಿಳೆಯರು ಆಧ್ಯಾತ್ಮಮಾರ್ಗದಲ್ಲಿ ಉನ್ನತಿಯನ್ನು ಪಡೆದಿದ್ದರು. ಕೆಲವರು ವೇದಮಂತ್ರಗಳನ್ನು ರಚಿಸಿದರು. ಇನ್ನೂ ಕೆಲವರು ಯಜ್ಞಯಾಗಾದಿಗಳಲ್ಲಿ ಪತಿಗೆ ಸಹಧರ್ಮಿಣಿಯರಾಗಿ ಬಾಳಿದರು. ಸ್ಮೃತಿಕಾರರ ಕಾಲದಲ್ಲಿ ಹೆಣ್ಣು ಧಾರ್ಮಿಕ ಕಾರ್ಯಗಳಲ್ಲಿ ಸಹಚರಿಯಾಗಲಿಲ್ಲ, ಸಹಾಯಕಳಾದಳು. ಜೈನ, ಬೌದ್ಧ ಯುಗಗಳಲ್ಲಿ ಆಧ್ಯಾತ್ಮಜ್ಞಾನ ಮಹಿಳೆಯರಿಗೂ ದೊರೆಯಿತು. ನಂತರ ಮತ್ತೆ ಮಹಿಳೆ ಆಧ್ಯಾತ್ಮಜೀವನದಿಂದ ವಿಮುಖಳಾಗಬೇಕಾಯಿತು.ಆಗ ಹೆಣ್ಣನ್ನು ಶೂದ್ರಸಮ ಎಂದು ಭಾವಿಸಲಾಯಿತು.

ಅಂಥ ಸಂದಿಗ್ಧ ಸಮಯದಲ್ಲಿ ಕರ್ನಾಟಕದಲ್ಲಿ ಧಾರ್ಮಿಕಕ್ರಾಂತಿ ನಡೆಯಿತು. ಬಸವಣ್ಣ, ಚನ್ನಬಸವಣ್ಣ, ಪ್ರಭುದೇವರು ಮೊದಲಾದ ೭೭೦ ಶರಣರು ಹೊಸ ಸಮಾಜರಚನೆಗೈದರು. ಆ ಸಮಾಜದಲ್ಲಿ ಬಡವ–ಬಲ್ಲಿದ ಹೆಣ್ಣು–ಗಂಡು, ಹಿರಿಯರು-ಕಿರಿಯರು ಎಂಬ ಭೇದಕ್ಕೆ ಆಸ್ಪದವಿರಲಿಲ್ಲ. ಆಧ್ಯಾತ್ಮಜ್ಞಾನ ಸಂಪಾದನೆ ಮಾಡಬೇಕೆನ್ನುವ ಪ್ರತಿಯೊಬ್ಬರಿಗೂ ಆ ಸಮಾಜದಲ್ಲಿ ಸ್ಥಾನದೊರೆಯಿತು. ಬಸವಣ್ಣನವರು ಪರಸತಿಯನ್ನು ಮಹದೇವಿಯಂತೆ ಕಂಡರು. ಸಿದ್ಧರಾಮೇಶ್ವರರು “ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧಮಲ್ಲಿಕಾರ್ಜುನ” ಎಂದರು. “ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯಲ್ಲ, ಹೊನ್ನು ಮಾಯೆಯಲ್ಲ ಮನದ ಮುಂದಣ ಆಶೆ ಮಾಯೆಕಾಣಾ” ಎಂದು ಜನತೆಗೆ ಪ್ರಭುದೇವರು ತಿಳಿಹೇಳಿದರು. ಆದರಿಂದಾಗಿ ಬಸವಣ್ಣನವರು ರಚಿಸಿದ ಅನುಭವಮಂಟಪದಲ್ಲಿ ಮಹಿಳೆಯರಿಗೆ ಸಮಾನಸ್ಥಾನಮಾನಗಳು ದೊರೆತವು. ಹೆಣ್ಣುಮಕ್ಕಳು ಸಾಮಾಜಿಕ, ಆರ್ಥಿಕ, ಧಾರ್ಮಿಕ ಜೀವನದಲ್ಲಿ ಉನ್ನತಿಯನ್ನು ಪಡೆಯುವ ಮಾರ್ಗವನ್ನು ಶರಣರು ತೋರಿಸಿಕೊಟ್ಟರು.

೧ ಸದಾಚಾರವೇ ಸ್ವರ್ಗ.
೨ ದಯವೇ ಧರ್ಮದ ಮೂಲ.
೩ ಕಾಯಕವೇ ಕೈಲಾಸ.
೪ ನುಡಿದರೆ ಮುತ್ತಿನ ಹಾರದಂತಿರಬೇಕು.
೫ ನುಡಿದಂತೆ ನಡೆಯಬೇಕು.
೬ ಸರ್ವಜೀವಾತ್ಮನಿಗೆ ಲೇಸನ್ನು ಬಯಸಬೇಕು.

ಬಸವಣ್ಣನವರ ಈ ಬಗೆಯ ವಿಶಾಲಮನೋಭಾವದ ತತ್ತ್ವಗಳ ಮೂಲಕ ಹನ್ನೆರಡನೆಯ ಶತಮಾನದಲ್ಲಿ ನೂರಾರು ಮಹಿಳೆಯರು ಆತ್ಮೋನ್ನತಿಯನ್ನು ಪಡೆದರು, ವಚನಕಾರ್ತಿಯರಾದರು, ಮುಕ್ತಿವನಿತೆಯರಾದರು. ಆ ಶರಣೆಯರು ಶಿವಯೋಗವನ್ನು ಆಚರಿಸಿದರು.

ಈ ಮೊದಲು ಹಠಯೋಗ, ರಾಜಯೋಗ, ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗಗಳು ರೂಢಿಯಲ್ಲಿದ್ದವು. ಹಠಯೋಗದಂಥ ದೈಹಿಕಶ್ರಮದ ಯೋಗ ಮಹಿಳೆಯರಿಗೆ ಕಠಿಣವಾದುದು. ರಾಜಯೋಗದಂಥ ಮಾನಸಿಕಯೋಗಕ್ಕೆ ಕರ್ಮಯೋಗ, ಜ್ಞಾನಯೋಗ ಇವುಗಳಲ್ಲಿ ಬಲ್ಲಿದರಾಗಲು ಸ್ಮೃತಿಕಾರರ ಕಾಲದ ಮಹಿಳೆಯರಿಗೆ ಅವಕಾಶವಿರಲಿಲ್ಲ. ಶರಣರ ಕಾಲದಲ್ಲಿ ಶಿವಾನುಭವದ ತಿರುಳನ್ನು ತಿಳಿದುಕೊಂಡು ಮಹಿಳೆಯರು ಶಿವಯೋಗಸಾಧನೆಯಲ್ಲಿ ಮುಂದುವರಿದರು. ನಿತ್ಯಜೀವನದಲ್ಲಿ ಸತ್ಯ, ಸದಾಚಾರ, ಸದ್ಭಕ್ತಿಗಳ ಮೂಲಕ ಇಷ್ಟಲಿಂಗಪೂಜಾನಿರತರಾದರು. ಇಷ್ಟಲಿಂಗದ ಮೂಲಕ, ಪ್ರಾಣಲಿಂಗ, ಭಾವಲಿಂಗಗಳ ಅರ್ಚನೆಗೆ ತೊಡಗಿದ ಶರಣೆಯರೂ ಶಿವಯೋಗವನ್ನು ಸಾಧಿಸಿದರು. ಇಷ್ಟಲಿಂಗ ಪ್ರಾಣಲಿಂಗಗಳ ಸಂಯೋಗವೆಂದರೆ ಆತ್ಮ-ಪರಮಾತ್ಮರ ಸಂಯೋಗವಾಪಂತೆ. ಇಷ್ಟಲಿಂಗದ ಮೂಲಕ ಧ್ಯಾನ, ಧಾರಣ, ಸಮಾಧಿಗಳಲ್ಲಿ ತೊಡಗಿ ಅಂಗ ಲಿಂಗಗಳ ಸಾಮರಸ್ಯ ಪಡೆಯುವುದೇ ಶಿವಯೋಗ. ಈ ಶಿವಯೋಗವನ್ನು ಸಹಜಯೋಗವೆಂದೂ ಕರೆಯಬಹುದು. ನಾವು ವೇಳೆಯನ್ನು ಅರಿತುಕೊಳ್ಳಬೇಕಾದರೆ ಗಡಿಯಾರವನ್ನು ನೋಡುವದಿಲ್ಲವೆ ? ಅದೇ ರೀತಿ ಗುರುಕೊಟ್ಟ ಇಷ್ಟಲಿಂಗವನ್ನು ಕೈಯಲ್ಲಿ ಹಿಡಿದು ಲಿಂಗದಲ್ಲಿ ದೃಷ್ಟಿಯನ್ನಿರಿಸಿದರೆ ದೇವರನ್ನು ಕಾಣಬಹುದು. ಈ ರೀತಿ ತಮ್ಮ ಕರದಿಷ್ಟಲಿಂಗವಲ್ಲಿ ದೇವರನ್ನು ಕಂಡ ಶರಣೆಯರು ತಮ್ಮ ಅನುಭವವನ್ನು ವಚನಗಳ ಮೂಲಕ ಹೊರಹೊಮ್ಮಿಸಿದ್ದಾರೆ. ಅವರಲ್ಲಿ ಅಕ್ಕಮಹಾದೇವಿ, ನೀಲಾಂಬಿಕೆ, ನಾಗಲಾಂಬಿಕೆ, ಮೋಳಿಗೆ ಮಹಾದೇವಿ, ಹಡಪದ ಲಿಂಗಮ್ಮ, ಆಯ್ದಕ್ಕಿ ಲಕ್ಕಮ್ಮ ಇವರು ಪ್ರಮುಖರಾಗಿದ್ದಾರೆ. ಅಕ್ಕಮಹಾದೇವಿ ತನ್ನ ಅಂತರಂಗದ ಅನುಭಾವವನ್ನು ಯೋಗಾಂಗ ತ್ರಿವಿಧಿಯಲ್ಲಿ ನಿರೂಪಿಸಿದ್ದಾಳೆ. ಯೋಗಾಂಗ ತ್ರಿವಿಧಿಯ ಪ್ರಾರಂಭಲ್ಲಿ–

"ಎಲ್ಲ ದೇವರ ದೇವ ವಲ್ಲಭನೆ ಗುರುಚೆನ್ನ
ಮಲ್ಲಿಕಾರ್ಜುನನೆ ಮನದೊಳಗೇ ಇರು ಕಂಡಾ
ಬಲ್ಲಂತೆ ನಿಮ್ಮ ಸ್ತುತಿಸುವೆನು"

ಎಂದು ತನ್ನ ಇಷ್ಟದೈವವಾದ ಚನ್ನಮಲ್ಲಿಕಾರ್ಜುನನನ್ನು ಸ್ತುತಿಸುತ್ತ ತನ್ನ ಅನುಭವಗಳನ್ನು ವಿವರಿಸಿದ್ದಾಳೆ.

"ಒಂಭತ್ತು ವೆಜ್ಜದ ತುಂಬಿದ ಕೊಡದೊಳಗೆ
ಸಂಭ್ರಮದ ಮುತ್ತು ಇರುತಿಹುದು ಅದರನುವ
ನಂಬಿಕೊಂಡವನೆ ಕಡುಜಾಣ"

ಆ ಮುತ್ತಿನಿರವನರಿತ ಅಕ್ಕಮಹಾದೇವಿ

"ಅಷ್ಟದಳ ಕಮಲದ ಬಟ್ಟಬಯಲೊಳಗೊಂದು
ಮಟ್ಟುಬಾರದ ಘನವಿಹುದು ! ಅದರೊಳಗೆ
ದೃಷ್ಟಿ ಇಟ್ಟವನೆ ನಿಜಮುಕ್ತ"

ಎಂದು ಹೇಳಿದ್ದಾಳೆ. ಈ ರೀತಿ ಕರದಿಷ್ಟ ಲಿಂಗದಲ್ಲಿ ದೃಷ್ಟಿಯನಿರಿಸಿದಾಗ

"ಕೋಟಿ ರವಿ ಶಶಿಗಳಿಗೆ ಮೀಟಿದ ಪ್ರಭೆ ಬಂದು
ನಾಟಿತ್ತು ಎನ್ನ ಕರದೊಳಗೆ । ಅದರಿಂದ
ದಾಟಿದೆನು ಭವದ ಕುಳಗಳ"

ದೈವಿಶಕ್ತಿಯ ತೇಜಸ್ಸು ಕೋಟಿ ರವಿಶಶಿಗಳಿಗೆ ಮೀರಿದುದೆಂಬುದನ್ನು ಶಿವಯೋಗಸಾಧನೆಯಿಂದ ಅಕ್ಕ ಅರಿತು ಹೇಳಿದ್ದಾಳೆ.

ಯೋಗಮಾರ್ಗದಲ್ಲಿ ಮುಂದುವರೆದವರೆಲ್ಲ ಅನಾಹತನಾದವನ್ನು ಕೇಳಿದ್ದಾರೆ; ದಿವ್ಯಜ್ಯೋತಿಯ ಬೆಳಕನ್ನು ಕಂಡಿದ್ದಾರೆ. ಅದೇರೀತಿ ಅಕ್ಕ ಯೋಗಮಾರ್ಗದಲ್ಲಿ ಮುಂದೆ ಸಾಗಿದಾಗ

"ಮೊರೆವ ನಾದನ ಕೇಳಿ ಉರಿವಜ್ಯೋತಿಯ ನೋಡಿ
ಸುರಿವ ಅಮೃತದ ದಣಿದುಂಡ । ಕಾರಣವು
ತೊರೆದೆನು ಜನನ ಮರಣಗಳ"

ಎಂದು ಹೇಳಿದ್ದಾಳೆ. ಸುಷುಮ್ನಾನಾಡಿ ಜಾಗೃತಗೊಂಡಾಗ ಅಮೃತದ ಸುರಿಮಳೆಯ ಸವಿಯನ್ನು ಸವಿದು, ಹಸಿವೆ ನೀರಡಿಕೆಗಳನ್ನು ಮೀರಿ ನಿಲ್ಲಬಲ್ಲ ಮಹಾದೇವಿಯ "ಕುಂಡಲಿನಿಯ ಸರ್ಪ" ಜಾಗೃತವಾದುದರಿಂದ ದಿವ್ಯಜ್ಯೋತಿಯಲ್ಲಿ ಬದಲಾದೆ ಎಂದು ವಿವರಿಸಿದ್ದಾಳೆ. ಆಕೆಯ ವಚನಗಳಿಂದ ಈ ಮಾತು ನಮಗೆ ಸ್ಪಷ್ಟವಾಗುತ್ತದೆ.

"ಮೂಲದ್ವಾರದ ಬೇರ ಮೆಟ್ಟಿ ಭೂಮಂಡಲವನೇರಿದೆ
ಆಚಾರದ ಬೇರ ಹಿಡಿದು, ಐಕ್ಯದ ತುದಿಯನೇರಿದೆ
ವೈರಾಗ್ಯದ ಸೋಪಾನದಿಂದ ಶ್ರೀಗಿರಿಯನೇರಿದೆ
ಕೈವಿಡು ತೆಗೆದುಕೊಳ್ಳಾ ಚೆನ್ನಮಲ್ಲಿಕಾರ್ಜುನಾ"

ಎಂದು ಅಕ್ಕಮಹಾದೇವಿ ಸುಷುಮ್ನಾನಾಡಿಯ ಆಧಾರದಿಂದ ಮೇಲೇರಿ ಬ್ರಹ್ಮರಂಧ್ರದಿಂದ ಹೊರಹೊಮ್ಮಿದ ಬೆಳಕನ್ನು ಕಂಡಳು. ಶಿವಯೋಗಸಾಧನೆಯ ತುತ್ತತುದಿಯನೇರಿದಳು. ಚನ್ನಮಲ್ಲಿಕಾರ್ಜುನನ ಸಾಕಾರ ದರ್ಶನವ ಪಡೆದಳು.

ಬಸವಣ್ಣನವರ ಪತ್ನಿ ನೀಲಾಂಬಿಕೆ ಮಹಾಶರಣೆ. ಬಸವಣ್ಣನವರ ಮಹಾಮನೆಗೆ ಬರುವ ಸಾವಿರಾರು ಜನ ಜಂಗಮರಿಗೆ, ಅತಿಥಿಗಳಿಗೆ ಇಷ್ಟಾರ್ಥಗಳನ್ನು ಉಣಬಡಿಸುತ್ತಿದ್ದಳು. ಮಹಾಮನೆಯ ದಾಸೋಹದ ಅನ್ನಪೂರ್ಣೆಯಾಗಿದ್ದಳು ನೀಲಾಂಬಿಕೆ. ಕಲ್ಯಾಣದಲ್ಲಿ ನಡೆದ ಕ್ರಾಂತಿಯನ್ನು ಕಂಡ ಬಸವಣ್ಣನವರು ಕೂಡಲ ಸಂಗಮಕ್ಕೆ ಹೊರಟುಹೋದರು. ಅಲ್ಲಿಗೆ ಹೋದಮೇಲೆ ತಾವು ಮಾಡುವ ಕಾರ್ಯಗಳನ್ನೆಲ್ಲ ಮಾಡಿ ಮುಗಿಸಿದ ಸಂತೃಪ್ತಭಾವ ಅವರ ಮನದಲ್ಲಿ ಮೂಡಿತು. ಆಗ ಬಸವಣ್ಣನವರು ತಮ್ಮ ಇಷ್ಟದೈವವಾದ ಕೂಡಲ ಸಂಗಮನಾಥನ ಸಾನ್ನಿಧ್ಯದಲ್ಲಿ ಐಕ್ಯರಾಗಬೇಕೆಂದು ನಿಶ್ಚಯಿಸಿದರು. ಜೊತೆಗಿದ್ದ ಹಡಪದ ಅಪ್ಪಣ್ಣನವರನ್ನು ಕಲ್ಯಾಣಕ್ಕೆ ಕಳುಹಿ ನೀಲಾಂಬಿಕೆಯನ್ನು ಕರೆತರಲು ಹೇಳಿದರು. ನೀಲಾಂಬಿಕೆ ಈ ಮಾತನ್ನು ಕೇಳಿ ನಕ್ಕಳು. ಬಲ್ಲ ಮಹಾತ್ಮರಿಗೆ ಅಲ್ಲಿ, ಇಲ್ಲಿ ಎಂಬ ಸಂದೇಹವೇಕೆ? ನನ್ನ ಕರವಸ್ಥಲಿಂಗದಲ್ಲಿ ಸಂಗಮನಾಥನಿದ್ದಾನೆ, ಬಸವೇಶ್ವರರಿದ್ದಾರೆ. ನಾನು ಇಲ್ಲಿಯೇ ಅವರನ್ನು ಕಂಡು ಐಕ್ಯಳಾಗುವೆನೆಂದು ಹೇಳಿದಳು. ಲಿಂಗಪೂಜೆ ನಿರತಳಾಗಿ ಲಿಂಗದಲ್ಲಿ ದೃಷ್ಟಿಯನ್ನಿರಿಸಿ ಐಕ್ಯಳಾದಳು. ಆಗ ಅವಳು ಕಂಡ ದೃಶ್ಯವನ್ನು ವಚನರೂಪದಲ್ಲಿ ಹೀಗೆ ಹೇಳಿದ್ದಾಳೆ.

ಹೃದಯ ಮಧ್ಯದಲ್ಲೊಂದು ಜ್ಯೋತಿಯ ಮನೆ ಹುಟ್ಟಿತ್ತು
ಆ ಜ್ಯೋತಿಯ ಮಧ್ಯದಲ್ಲಿ ಸ್ಫಟಿಕದ ತನು ಬೆಳಗಿತ್ತು
ಆ ಬೆಳಗಿದ ತನುಮಧ್ಯದಲ್ಲಿ ಮರುಜೀವಣಿಯ ಕುಡಿ
ಹೆಸರಿಲ್ಲದೆ ರೂಪಾಯಿತ್ತು, ಬಸವಂಗೆ ಸಂಗಯ್ಯ"

ಹೀಗೆ ಹೃದಯಮಧ್ಯದ ಜ್ಯೋತಿಯನ್ನು ನೀಲಾಂಬಿಕೆ ಕಂಡುಕೊಂಡಳು.

"ಪರಿಣಾಮಮೂರ್ತಿ ಬಸವನ ರೂಪು ಕರಸ್ಥಲದಲ್ಲಿ ಬೆಳಗಿದ ಬಳಿಕ ಸಂಗಯ್ಯನ ಹಂಗು ನಮಗೇಕೆ ಅಪ್ಪಣ್ಣ" ಎಂದು ಹೇಳಿದಳು. ಇಷ್ಟಲಿಂಗದಲ್ಲಿ ಬಸವೇಶ್ವರನನ್ನೂ ಸಂಗಮನಾಥನನ್ನೂ ಕಂಡು ಹಾಲಿನಲ್ಲಿ ಹಾಲು ಬೆರೆದಂತೆ ದಿವ್ಯಜ್ಯೋತಿಯಲ್ಲಿ ಲೀನಳಾದಳು.

ಹಡಪದ ಅಪ್ಪಣ್ಣನವರು ಬಸವಣ್ಣನವರ ಸಾಮಾಜಿಕ, ಧಾರ್ಮಿಕ ಕಾರ್ಯಗಳಲ್ಲಿ ಸಹಭಾಗಿಯಾಗಿದ್ದರು. ಬಸವಣ್ಣನವರ ಜೊತೆಗೆ ಸದಾ ಇರುತ್ತಿದ್ದರು. ಅವರ ಆಪ್ತಕಾರ್ಯದರ್ಶಿಯಂತೆ ಕಾರ್ಯಗೈಯು

ತ್ತಿದ್ದರು. ಬಸವಣ್ಣನ ನಡೆ ಪರುಷ, ಬಸವಣ್ಣನ ನುಡಿ ಪರುಷ; ಆ ಪರುಷಮಣಿಯಂಥ ಬಸವಣ್ಣನವರ ಸಾನ್ನಿಧ್ಯದಿಂದ ಅಪ್ಪಣ್ಣ ಮಹಾಶರಣನಾದ. ಅಪ್ಪಣ್ಣನ ಸಹವಾಸದಿಂದ ಅವನ ಪತ್ನಿ ಲಿಂಗಮ್ಮ ಲಿಂಗಾಂಗ ಸಾಮರಸ್ಯವನ್ನರಿತು ಮಹಾಸಾಧಕಳಾಗಿದ್ದಳೆಂಬುದಕ್ಕೆ ಅವಳ ಅನುಭವದ ವಚನಗಳು ಸಾಕ್ಷಿಯಾಗಿವೆ.

"ನರರ ಬೇಡೆನು, ಸುರರ ಹಾಡೆನು, ಕರಣಂಗಳ ಹರಿಯಬಿಡೆನು
ಕಾಮನ ಬಲೆಗೆ ಸಿಲ್ಕೆನು ಮರವೆಗೊಳಗಾಗೆನು
ಪ್ರಣವ ಪಂಚಾಕ್ಷರಿಯ ಜಪಿಸಿಹೆನೆಂದು
ತನುವ ಮರೆದು ನಿಜಮುಕ್ತಳಾದನೆಯ್ಯ
ಅಪ್ಪಣ್ಣಪ್ರಿಯ ಚನ್ನಬಸವಣ್ಣಾ"

ಎಂದು ಹೇಳಿದ ಲಿಂಗಮ್ಮ ಛಲಗಾರ್ತಿ. ನರರನ್ನು ಬೇಡದೆ, ಸುರರನ್ನು ಹಾಡದೆ, ಪಂಚೇಂದ್ರಿಯಗಳನ್ನು ಗೆದ್ದು ಪಂಚಾಕ್ಷರಿಯ ಜಪದ ಮೂಲಕ ಶಿವಕಾರುಣ್ಯವನ್ನು ಪಡೆದ ಲಿಂಗಮ್ಮ ಹೇಳುತ್ತಾಳೆ :

ದೈವೀ ಸಾಕ್ಷಾತ್ಕಾರ ಪಡೆಯಬೇಕಾದರೆ "ಕಾಮ ಕ್ರೋಧವ ನೀಗಿ ಮೋಹ ಮದ ಮತ್ಸರವ ಬೇಧಿಸಿ, ಆಶೆ ರೋಷವಳಿದು, ಜಗದ ಪಾಶವ ಬಿಟ್ಟು" ಬಿಡಬೇಕು. ಆಗ ಚಿತ್ತ ಶುದ್ಧವಾಗುವದು.

ಚಿತ್ತ—

"ಜಲದೊಳಗಣ ಸೂರ್ಯನ ಪ್ರತಿಬಿಂಬದಂತಿರಬೇಕು
ಮೋಡವಿಲ್ಲದ ಚಂದ್ರಮನಂತಿರಬೇಕು.
ಬೆಳಗಿದ ದರ್ಪಣದಂತಿರಬೇಕು."

ಮನಸ್ಸು—

ಅಕ್ಕಿಯ ಥಳಿಸಿದಂತೆ, ಅಲ್ಲವ ಸುಲಿದಂತೆ, ಕನ್ನಡಿಯ ನೋಡಿದಂತೆ
ಮನ ನಿರ್ಮಲವಾದಲ್ಲದೆ ಘನವ ಕಾಣಬಾರದು

ಎಂದು ಹೇಳಿದ ಲಿಂಗಮ್ಮನ ಮನ ಶುದ್ಧವಾಗಿತ್ತು, ಚಿತ್ತ ನಿರ್ಮಲವಾಗಿತ್ತು.

"ಉಸರ ಉನ್ಮನಿಗಿತ್ತು ಶಶಿ ರವಿಯೊಡಗೂಡಿ, ಕುಶಲವ ತಿಳಿದು
ಮಿತ್ರವವರಿದು ಮಹಾಬೆಳಗಿನೊಳಗೆ ಹೆಜ್ಜೆವಿಡಿದು ಹೋಗಿ ಅಜನ ಕಂಡಳು"

"ಸಾಸಿರದಳ ಕಮಲವೆಂದಡೆ ಸೂಸಿಕೊಂಡಿರುವ ಮನ
ಪವನವೆಂವೆಡೆ ಎಲ್ಲೆಡೆಯಲ್ಲಿ ಸೂಸಿ ಆಡುವಂತಹದು
ಬಿಂದುವೆಂದಡೆ ಆಗ ಮಾಡುವಂತಹದು"

"ಈ ಮನ ಪವನ ಬಿಂದು ಮೂರನು ಒಡಗೂಡಿ ನೋಡಲು
ಪರಂಜ್ಯೋತಿಯ ಪ್ರಕಾಶದಂತಹ ಬೆಳಗು ಎನ್ನ
ಕಂಗಳ ಮುಂದೆ ನಿಂತಿತ್ತು"

ಎಂದು ತನ್ನ ಶಿವಯೋಗದ ಅನುಭವವನ್ನು ವರ್ಣಿಸಿದ್ದಾಳೆ.

ಹನ್ನೆರಡನೆಯ ಶತಮಾನದಲ್ಲಿ ಶಿವಯೋಗ ಸಾಧನೆಗೈದು ಅಂಗೈಯಲ್ಲಿ ಲಿಂಗಾಂಗಸಾಮರಸ್ಯಪಡೆದ ಅನೇಕ ಜನ ತಾಯಂದಿರ ವಚನಗಳು ಆ ಮಾರ್ಗದಲ್ಲಿ ಮುನ್ನಡೆವವರಿಗೆ ದಾರಿದೀಪವಾಗಿ ನಿಂತಿವೆ. ಸಾಧನೆಯಿಂದ ಅರಿವೇ ಗುರುವಾಗಬಲ್ಲ ಮಹಾಶಕ್ತಿ ಶಿವಯೋಗದಲ್ಲಿದೆ. ಭಕ್ತಿ, ಜ್ಞಾನಗಳನ್ನು ಪಡೆವವರು ದೇಹದಂಡನೆಗೈಯದೆ ಚಿತ್ತ,ಮನ, ಶುದ್ಧರಾಗಿ ಕಾಯಕನಿರತರಾಗಿ "ಆಚರವೇ ಸ್ವರ್ಗ"ವೆಂದು ಭಾವಿಸಿ ಸತ್ಯಸದಾಚಾರಿಗಳಾಗಿ ಬಾಳಿದರೆ, ಶಿವಯೋಗ ನಿರತರಾದರೆ, ಮರ್ತ್ಯಲೋಕ ದೇವಲೋಕಗಳ ಭೇದವನ್ನು ಮರೆತು ಬಾಳಬಹುದಾಗಿದೆ. ಪವಿತ್ರವಾದ ದೇಹವೇ ದೇವಾಲಯವಾಗಬಲ್ಲದು, ಆತ್ಮವೇ ಲಿಂಗವಾಗಬಲ್ಲದು, ಈ ಲೋಕದ ಬಾಳು ಬಂಗಾರವಾಗಬಲ್ಲದು. ಈ ಲೋಕದಲ್ಲಿ ಬಾಳಿ ಶಿವಯೋಗಸಾಧನೆಯಿಂದ ಮುಕ್ತಿವನಿತೆಯರಾಗಿ ಶೋಭಿಸುತ್ತಿರುವ ಶಿವಶರಣೆಯರ ಬಾಳು ನಂದಾದೀಪವಾಗಿದೆ.

ಡಿ. ವಿಜಯ

ವಡ್ಡಾರಾಧನೆಯ ತಾತ್ತ್ವಿಕ ಹಿನ್ನೆಲೆಯ ಕೆಲವು ಅಂಶಗಳು

ಉಪಲಬ್ಧವಿರುವ ಪಂಪಪೂರ್ವಯುಗದ ಕೃತಿಯಾದ ವಡ್ಡಾರಾಧನೆ ಒಂದು ಅಪೂರ್ವಗ್ರಂಥ. ಈ ಯುಗದಲ್ಲಿ ಕನ್ನಡಸಾಹಿತ್ಯದ ಸೃಷ್ಟಿ ಜೈನಮತೀಯ ಹಿನ್ನೆಲೆಯಿಂದ ರೂಪುಗೊಂಡಿದ್ದಿತ್ತೆನ್ನಲು ಸಾಕಷ್ಟು ಸಾಕ್ಷ್ಯಗಳಿವೆ. ಈ ದಿಕ್ಕಿನಲ್ಲಿ ವಡ್ಡಾರಾಧನೆ ಒಂದು ಮಹತ್ತ್ವದ ಮೈಲಿಗಲ್ಲು. ಜೈನಧರ್ಮದ ಹಿನ್ನೆಲೆಯಲ್ಲಿ ಈ ಹೊತ್ತಿನಲ್ಲಿ ಕನ್ನಡವಲ್ಲಿ ನಡೆದ ಸಾಹಿತ್ಯದ ಸಾಧನೆಯ ಉಪಲಬ್ಧ ಮಹತ್ತ್ವಪೂರ್ಣ ಸಾಕ್ಷ್ಯ. ಈ ಕೃತಿಯ ನಂತರ ಇದೇ ಹಿನ್ನೆಲೆಯಿಂದ ಅನೇಕ ಕಥಾಸಂಗ್ರಹಗಳು ಬಂದರೂ ಸಾಹಿತ್ಯಿಕವಾಗಿ ವಡ್ಡಾರಾಧನೆಯನ್ನು ಮೀರಿಸುವ ಕೃತಿ ಬರಲಿಲ್ಲ ಎಂಬುದು ಈ ಕೃತಿಯ ಸಾಹಿತ್ಯಿಕ ಪ್ರಾಮುಖ್ಯತೆಯನ್ನು ಹೇಳುತ್ತದೆ.

ವಡ್ಡಾರಾಧನೆಯ ಕರ್ತೃತ್ವ, ಕಾಲ ಮುಂತಾದ ಅಂಶಗಳ ಬಗ್ಗೆ ಇರುವ ಚರ್ಚೆಯಾಗಲೀ ಈ ಕೃತಿಯ ಸಾಹಿತ್ಯಿಕ ಮೌಲ್ಯಮಾಪನವಾಗಲೀ ನನ್ನ ಪ್ರಸ್ತುತ ಲೇಖನದ ಉದ್ದೇಶವಲ್ಲ. ವಡ್ಡಾರಾಧನೆಗಿರುವ ತಾತ್ತ್ವಿಕ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಈ ಹಿನ್ನೆಲೆ ಹೇಗೆ ಕಥೆಯ ಓಟ, ಬಂಧ, ಪಾತ್ರ ಇತ್ಯಾದಿ ಒಟ್ಟು ಕಥೆಯ ಸ್ವರೂಪವನ್ನು ನಿಯಂತ್ರಿಸಿತು, ರೂಪಿಸಿತು ಎಂಬುದನ್ನು ಅಂಶಿಕವಾಗಿ ಗಮನಿಸುವುದು ಇಲ್ಲಿ ನನ್ನ ಉದ್ದೇಶ. ಇಲ್ಲಿ ಈ ಕೃತಿಯ ಸುಕುಮಾರಸ್ವಾಮಿಯ ಕಥೆಯನ್ನು ಮಾತ್ರ ವಿಶ್ಲೇಷಿಸುವುದರ ಮೂಲಕ ಇಲ್ಲಿಯ ಕಥಾಸ್ವರೂಪದ ಮುಖ್ಯ ಎಳೆಗಳನ್ನೂ ಒಟ್ಟು ಧೋರಣೆಗಳನ್ನೂ ಗುರುತಿಸಲು ಯತ್ನಿಸಿದ್ದೇನೆ.

ವಡ್ಡಾರಾಧನೆ 'ಮಹಾ ಪುರುಷರ್ಕಳ' ಕಥೆ. ಈ ಮಹಾಪುರುಷರು ಯಾರು ಮತ್ತು ಹೇಗೆ ಮಹಾಪುರುಷರಾದರು ಎಂಬ ಮಾತಿಗೆ ಕೃತಿಕಾರನೇ ಪ್ರಾರಂಭದಲ್ಲಿ ಸ್ಪಷ್ಟವಾದ ಉತ್ತರವನ್ನು ನೀಡಿದ್ದಾನೆ. ಇವರು ಚತುರ್ವಿಧವಾದ ಉಪಸರ್ಗಗಳನ್ನು ಸೈರಿಸಿ ಐದು ಇಂದ್ರಿಯಗಳನ್ನು ಗೆದ್ದು ಬಾಹ್ಯಾಭ್ಯಂತರ ಪರಿಗ್ರಹಗಳನ್ನು ತೊರೆದು ಹನ್ನೆರಡು ರೀತಿಯ ತಪಸ್ಸನ್ನು ಮಾಡಿ ಪ್ರಾಯೋಪಗಮನದಿಂದ ಸನ್ಯಸನವನ್ನು ಸ್ವೀಕರಿಸಿ ಕರ್ಮಕ್ಷಯವನ್ನು ಗೆಯ್ದು ಮೋಕ್ಷಕ್ಕೆ ಹೋಗಿ ಮತ್ತೆ ಸರ್ವಾರ್ಥಸಿದ್ಧಿಯಲ್ಲಿ ಹುಟ್ಟಿದವರು. ಇಂಥ ಮಹಾಪುರುಷರ ಕಥೆಯನ್ನು ಇಲ್ಲಿ ಕಾಣುತ್ತೇವೆ ಮತ್ತು ಹೀಗಾದವರೇ ಇಲ್ಲಿ ಮಹಾಪುರುಷರಾಗುತ್ತಾರೆ. ಈ ಮಾತುಗಳು ಕಥೆಯ ಒಟ್ಟುದಾರಿಯನ್ನು ನಿರ್ಣಯಿಸಿತು.ಇಲ್ಲಿಯ ಪ್ರತಿಕಥೆಯೂ ಓಡಬೇಕಾದ್ದು ಯಾವ ನಿಟ್ಟಿನಲ್ಲಿ, ಸೇರಬೇಕಾದ ಗುರಿ ಯಾವುದು ಎಂಬುದನ್ನು ಸ್ಪಷ್ಟ ಪಡಿಸಿದಂತಾಯ್ತು. ಈ ನಿಲವಿಗೆ ಬದ್ಧನಾಗಿಯೆ ಈ ಕೃತಿಕಾರ ತನ್ನ ಎಲ್ಲ ಕಥೆಗಳನ್ನು ರಚಿಸಿದ್ದಾನೆ.

ಇದು ಉಪಸರ್ಗ ಕೇವಲಿಗಳ ಕಥೆ. ಈ ಮೇಲೆ ಹೇಳಿದ ಮಾರ್ಗದಲ್ಲಿ ಕರ್ಮಕ್ಷಯವನ್ನು ಮಾಡಿಕೊಂಡ ವ್ಯಕ್ತಿಗಳೇ ಕಥೆಯ ಕೇಂದ್ರಪಾತ್ರಗಳು. ಹಾಗೆ ಮಾಡುವುದನ್ನು ಹೇಳುವುದೇ ಕಥೆಯ ಮುಖ್ಯಉದ್ದೇಶವಾದ್ದರಿಂದ ಉಪಸರ್ಗ ಸೈರಣೆ, ಇಂದ್ರಿಯಜಯ, ತಪಸ್ಸು, ಮೋಕ್ಷ ಇವುಗಳನ್ನೊಳಗೊಂಡ ಕಥಾಭಾಗ ಇಲ್ಲಿಯ

ಎಲ್ಲ ಕಥೆಗಳ ಸಾಮಾನ್ಯ ಅಂಶ. ಯಾವುದೇ ವ್ಯಕ್ತಿ ಈ ಹಂತವನ್ನು ತಲುಪುವುದು ಸಾಧನೆಯ ಅಂತ್ಯದಲ್ಲಿ. ಆದ್ದರಿಂದ ಕಥೆಯ ಉತ್ತರಭಾಗ ಅಥವಾ ಕೊನೆಯ ಭಾಗ ಈ ಸಾಮಾನ್ಯ ಚೌಕಟ್ಟಿನಲ್ಲಿಯೇ ಹೆಣೆದದ್ದು ಎಂಬುದು ಸ್ಪಷ್ಟ. ಆದರೆ ಎಲ್ಲ ಕಥೆಗಳೂ ಈ ಚೌಕಟ್ಟಷ್ಟನ್ನೇ ಯಾಂತ್ರಿಕವಾಗಿ ನಮ್ಮ ಮುಂದಿಟ್ಟದ್ದರೆ ಈ ಕಥೆಗಳು ಏಕತಾನತೆಯಷ್ಟನ್ನೇ ಪಡೆದು ವೈವಿಧ್ಯರಹಿತವಾಗಿ ಈಗಿರುವ ವರ್ಣಮಯತೆಯನ್ನೂ ತನ್ನ ಸಾಹಿತ್ಯಕ ಮೌಲ್ಯವನ್ನೂ ಕಳೆದುಕೊಳ್ಳುತ್ತಿತ್ತು. ಹಾಗಾದರೆ ವಡ್ಡಾರಾಧನೆಯ ಕಥೆಗಳು ಇಂಥದೊಂದು ಸಾಮಾನ್ಯಚೌಕಟ್ಟನ್ನು ಒಪ್ಪಿಕೊಂಡೂ ವೈವಿಧ್ಯವನ್ನೂ ಸಾಹಿತ್ಯಿಕ ಸತ್ತ್ವವನ್ನು ಉಳಿಸಿಕೊಳ್ಳುವ ಅವಕಾಶವನ್ನೂ ಸಾಧಿಸಿಕೊಂಡದ್ದು ಹೇಗೆ? ಇದಕ್ಕೆ ಪರಿಹಾರವನ್ನು ಸೂಚಿಸಿದ್ದು ಈ ಉಪಸರ್ಗ ಕೇವಲಿಗಳು ಉಪಸರ್ಗವನ್ನು ಸೈರಿಸಿ ಕೇವಲಿಗಳಾಗುವ ಹಿಂದಿನ ಹಂತ. ಯಾವುದೇ ಸಾಮಾನ್ಯ ಜೀವಿ ತನ್ನ ಸಂಕಲ್ಪದಿಂದ, ಪ್ರಯತ್ನದಿಂದ, ಸಾಧನೆಯಿಂದ ಪರಮ ಸೋಪಾನವನ್ನು ಏರಬಹುದು ಎಂಬುದೇ ಜೈನಧರ್ಮದ ನಂಬಿಕೆ. ಈ ಹಿನ್ನೆಲೆಯಲ್ಲಿ ಚಿತ್ರಿಸಲಾದ ಮಹಾಪುರುಷರೆಲ್ಲರೂ ಸಾಮಾನ್ಯನೆಲೆಯಿಂದಲೇ ಅಸಾಮಾನ್ಯನೆಲೆಗೆ ಏರಿದವರು. (ತೀರ್ಥಂಕರರೂ ಕೂಡ ಇದಕ್ಕೆ ಅಪವಾದವಲ್ಲ.) ಆದ್ದರಿಂದ ಈ ಕೇವಲಿಗಳು ಕೇವಲಿಯ ಹಂತವನ್ನು ತಲುಪುವ ಮೊದಲು ಇದ್ದ ಸಾಮಾನ್ಯಸ್ತರದ ಚಿತ್ರಣವನ್ನು ಇಲ್ಲಿ ಆಯ್ದುಕೊಳ್ಳಲಾಗಿದೆ. ಹೀಗೆ ಕೇವಲಿಗಳ ಪೂರ್ವಸ್ಥಿತಿಯನ್ನು ಆಯ್ದುಕೊಳ್ಳುವುದರಿಂದ ಸಾಮಾನ್ಯ ಓದುಗನಿಗೂ ಆಕರ್ಷಕವಾಗುವ ಕಥಾಭಾಗವನ್ನು ಸೇರಿಸುವುದು ಸಾಧ್ಯವಾಗಿದೆ ; ಕಥೆಗಳಲ್ಲಿ ವೈವಿಧ್ಯವಿದೆ. ಹೀಗಾಗುವುದರಿಂದ ಕೃತಿಕಾರನ ಧಾರ್ಮಿಕ ಉದ್ದೇಶವೂ ಸಫಲವಾಗಿ ಈಡೇರುವುದು ಸಾಧ್ಯ. ಯಾಕೆಂದರೆ ಕೇವಲಿಗಳಾದವರೂ ಒಮ್ಮೆ ನಮ್ಮಂತೆ ಸಾಮಾನ್ಯ ಮನುಷ್ಯರಾಗಿದ್ದು ಮನುಷ್ಯಸ್ವಭಾವದ ಎಲ್ಲ ಗುಣಾವಗುಣಗಳನ್ನು ಹೊಂದಿದ್ದು ನಂತರ ಕೇವಲಿಗಳಾದರು ಎಂಬುದು ಓದುಗರಲ್ಲಿ ಆತ್ಮವಿಶ್ವಾಸವನ್ನು ಹುಟ್ಟಿಸುತ್ತದೆ. ಅಲ್ಲದೆ ಬೇರೆ ಎಲ್ಲ ಸುಖಗಳೂ ನಶ್ವರ, ಜೀವಿ ನಡೆಯಬೇಕಾದ್ದು ಆತ್ಯಂತಿಕದೆಡೆಗೆ ಎಂಬುದನ್ನು ಪರಿಣಾಮಕಾರಿಯಾಗಿ ಬೊಟ್ಟುಮಾಡಿ ತೋರಿಸಲು ಈ ಮೂಲಕ ಸಾಧ್ಯವಾಗಿದೆ. ಹೀಗಾಗಿ ಇಲ್ಲಿಯ ಕಥೆಗಳಲ್ಲಿ ಕೇವಲಿಪೂರ್ವ ಹಾಗೂ ಕೇವಲಿಯ ಘಟ್ಟಗಳನ್ನು ಕಾಣುತ್ತೇವೆ. ಇದಕ್ಕೆ ಕೆಲವು ಅಪವಾದಗಳೂ ಇವೆ. ಕೇವಲಿಪೂರ್ವದ ಘಟ್ಟವನ್ನು ಸಂಪೂರ್ಣವಾಗಿ ಕೈಬಿಟ್ಟು ಉಪಸರ್ಗ, ಸೈರಣೆ, ತಪಸ್ಸು, ಮೋಕ್ಷಗಳನ್ನೇ ನೇರವಾಗಿ ಚಿತ್ರಿಸುವ ಕಥೆಗಳೂ ಇವೆ. ಕೇವಲಿಪೂರ್ವದ ಘಟ್ಟವನ್ನು ಉಳಿಸಿಕೊಂಡ ಕಥೆಗಳಲ್ಲಿ ಎರಡು ರೀತಿಯ ಕಥೆಗಳನ್ನು ಗುರುತಿಸಬಹುದು. ಜೀವಿ ಜನ್ಮಜನ್ಮಾಂತರಗಳಲ್ಲಿ ಸಾಗಿಬಂದು ಕೈವಲ್ಯಾಕಾಂಕ್ಷಿಯಾದದ್ದು ಕೆಲವೆಡೆಯೂ, ಒಂದೇ ಜನ್ಮದಲ್ಲಿ ಆತ ಲೌಕಿಕದಿಂದ ಅಲೌಕಿಕದೆಡೆಗೆ ತಿರುಗಿದ್ದು ಕೆಲವೆಡೆಯೂ ಇದೆ. ಅಂದರೆ ಹೀಗೆ ಇಲ್ಲಿನ ಕೇವಲಿಗಳ ಕಥೆಯನ್ನು ಮೂರು ಗುಂಪು ಮಾಡಬಹುದು. ೧. ಭವಾವಳಿಗಳನ್ನುಳ್ಳ ಕಥೆಗಳು. ೨. ಒಂದೇ ಭವದಲ್ಲಿ ಚಿತ್ರಿತವಾದ್ದು. ೩. ಸನ್ಯಸನ ಸ್ವೀಕಾರದಿಂದಲೇ ಪ್ರಾರಂಭವಾಗುವ ಕಥೆಗಳು.

ಸುಕುಮಾರ ಸ್ವಾಮಿಯ ಕಥೆ ಮೊದಲಗುಂಪಿನ ಒಳ್ಳೆಯ ಕಥೆಗಳಲ್ಲೊಂದು. ವಾಯುಭೂತಿಯು ಪೆಣ್ಗತ್ತೆ, ಪೇಸಂದಿ, ಪೆಣ್ಣಾಯಾಗಿ ಹುಟ್ಟಿ, ಆನಂತರ ಪೊಲತಿಯಾಗಿ ನಾಗಶ್ರೀಯಾಗಿ ಸುಕುಮಾರನಾದ. ಈ ಜನ್ಮಾಂತರಗಳನ್ನು ಲೇಖಕ ತನ್ನ ಧಾರ್ಮಿಕೋದ್ದೇಶಕ್ಕೆ ತುಂಬ ಯಶಸ್ವಿಯಾಗಿ ಬಳಸಿಕೊಂಡಿದ್ದಾನೆ. ವಾಯುಭೂತಿಯ ಭವದಿಂದ ಕಥೆ ಪ್ರಾರಂಭವಾಗುತ್ತದೆ. ಈ ಭವದಲ್ಲಿ ಆತ ವೈದಿಕಮತಾನುಯಾಯಿ. ಇಲ್ಲಿ ಆತ ತನ್ನ ಮಾವನ ಬಗೆಗೆ ವೈಯಕ್ತಿಕ ಕ್ರೋಧವನ್ನು ಹೊಂದಿದ್ದ. ಜೈನಮುನಿಯಾಗಿ ಮಾವನಾದ ಸೂರ್ಯಮಿತ್ರನು ತನ್ನ ಮನೆಗೆ ಬಂದಾಗ ಜಿನಧರ್ಮವನ್ನು ಹಳಿದು ಅದರ ಬಗ್ಗೆ ಕನಿಷ್ಠ ನಿಷ್ಠುರ ವಚನಗಳನ್ನಾಡಿದ. ಇಂಥ ಪಾತ್ರಗಳೇ ಲೇಖಕನ ಮುಂದಿನ ಸವಾಲುಗಳು. ಇವರನ್ನು ಕ್ರಮೇಣ ಭವಭವಗಳಲ್ಲಿ ಬಡಿದು ಹದಮಾಡಬೇಕು. ಇಂಥವರೇ ಕೊನೆಗೆ ಜಿನಮಾರ್ಗವನ್ನು ಒಪ್ಪಿ ಕೇವಲಿಗಳಾಗಬೇಕು. ಇಂಥ ಪರಿಸರಗಳಲ್ಲಿ ಲೇಖಕ ದುಡುಕುವುದಿಲ್ಲ, ಒರಟಾಗುವುದಿಲ್ಲ. ಸಾವಧಾನದಿಂದ ಕ್ರಮೇಣ ಆತನೇ ಪರಿವರ್ತಿತನಾಗುವಂತೆ ಮಾಡುತ್ತಾನೆ. ಈ

ಎಲ್ಲ ಕಥೆಗಳೂ ಇಂಥ ಆಂತರಿಕವಾದ, ನಿಧಾನವಾದ ಪರಿವರ್ತನೆಯ ಮೂಲಕ ವ್ಯಕ್ತಿಯು ಮಾನಸಿಕವಾಗಿ ಸಿದ್ಧನಾಗುವುದರ ಮೇಲೆ ಹೆಚ್ಚಿನ ಒತ್ತು ಹಾಕಲಾಗುತ್ತವೆ. ವಾಯುಭೂತಿಯದಾದರೂ ಇದೇ ಕಥೆ. ವಾಯುಭೂತಿಯ ಭವದಲ್ಲಿ ಆತನಿಗೆ ಕರ್ಮಕ್ಷಯದ ಬಗ್ಗೆ ಯೋಚನೆಯೇ ಇಲ್ಲ. ಬದಲಿಗೆ ಆತ ಕರ್ಮವನ್ನು ಸಂಚಯಿಸಿದ ಪರಿಣಾಮವಾಗಿ ಆತ ಇನ್ನೂ ದುಃಖಕರವಾದ ಭವಗಳಲ್ಲಿ ಹುಟ್ಟಿಬಂದ. ಹೊಲತಿಯ ಭವಕ್ಕೆ ಬರುವವರೆಗೂ ಆತನಿಗೆ ಸ್ವಲ್ಪವೂ ಎಚ್ಚರವಿಲ್ಲ. ಹೊಲತಿಯ ಭವದಲ್ಲಿ ಮೊದಲಬಾರಿಗೆ ಈ ಜೀವಕ್ಕೆ ಸ್ವಲ್ಪ ತಿಳಿವುಂಟಾಯಿತು. ಪುಣ್ಯದ ಕಡೆಗೆ ತಲೆ ಎತ್ತಿ ನೋಡಿತು. ಇಂಥ ತಿರುವೇ ಇಲ್ಲಿ ಬಹಳ ಮುಖ್ಯ. ಒಮ್ಮೆ ಇತ್ತ ತಿರುಗಿದರೆ ಜೀವಕ್ಕೆ ವಿವೇಕೋದಯ ಸಾಧ್ಯ ಎಂಬುದು ತಾನೆ ಈ ಧರ್ಮದ ನಂಬುಗೆ? ಈ ಪ್ರಸಂಗವನ್ನು ಲೇಖಕ ಎಷ್ಟು ಜಾಗರೂಕನಾಗಿ ಚಿತ್ರಿಸಿರುತ್ತಾನೆ ನೋಡಿ—"ತಿಳಿಯೆ ಧರ್ಮಮಂ ಪೇೞ್ದೊಡೆರ್ದೆಯೊಳ್ ಮೆಲ್ಲಿದಳಾಗಿ ತನ್ನ ಭವಾಂತರಗಳಿಂ ಧರ್ಮಮುಮಂ ಕೇಟ್ಟಱಿದು ಸಂಸಾರಶರೀರ ವೈರಾಗ್ಯಮಾದಮಾನುಂ ಪೆರ್ಚೆ ತನ್ನಂ ತಾನೆ ಪೞಿದು ನಿಂದಿಸಿ ಪಾಪಕ್ಕಂಜಿ ಅಣುವ್ರತಂ ಮೊದಲಾಗೊಡೆಯ ಶ್ರಾವಕಬ್ರತಂಗಳಂ ಕೈಕೊಂಡಾಗಳ್" (ವಡ್ಡಾರಾಧನೆ—ಸಂ. ಡಿ. ಎಲ್. ನರಸಿಂಹಾಚಾರ್—1970.) ಪೊಲತಿಯ ಭವದಿಂದ ನಾಗಶ್ರೀಭವಕ್ಕೆ ಬಂದುದು ಈ ಎಚ್ಚರದ ಫಲವಾಗಿಯೆ. ಇಲ್ಲಿ ನಾಗಶ್ರೀಯ ಜೀವ ಜಿನಧರ್ಮದೆಡೆಗೆ ತಾನೇ ಅಭಿಮಾನವನ್ನು ತಾಳಿತ್ತು. ಅಷ್ಟೇ ಅಲ್ಲ ತಪಂಬಟ್ಟು ರತ್ನತ್ರಯವನ್ನು ಸಾಧಿಸಿ ಅಚ್ಯುತಕಲ್ಪದಲ್ಲಿ ದೇವನಾಗಿ ಹುಟ್ಟಿದಳು. ಆಮೇಲೆ ಸುಕುಮಾರಸ್ವಾಮಿಯಾದನು. ಈ ಭವದಲ್ಲಿ ಉಪಸರ್ಗಸೈರಣೆಮಾಡಿ ಸನ್ಯಸನವನ್ನು ಸ್ವೀಕರಿಸಿ ಉಗ್ರೋಗ್ರ ತಪದಿಂದ ಅಪೂರ್ವಾಪವರ್ಗಸುಖವನ್ನು ಪಡೆದ. ಹೀಗೆ ವಡ್ಡಾರಾಧನೆಯ ಕೃತಿಕಾರ ತನ್ನ ತಾತ್ತ್ವಿಕನಿಲವನ್ನು ಪರಿಣಾಮಕಾರಿಯಾಗಿಸಲು ಈ ದಾರಿಯನ್ನು ಬಳಸಿಕೊಂಡಿದ್ದಾನೆ.

ಈ ಭವಾವಳಿಗಳಲ್ಲಿನ ಇನ್ನೂ ಒಂದು ಅಂಶ ನಮ್ಮ ಗಮನ ಸೆಳೆಯುತ್ತದೆ. 'ಈ ಮೆಯ್ಗೆ ಆದ ವಾಸನೆ ಮರುಮೆಯ್ಗುಮಕ್ಕುಂ' ಎಂಬ ಮಾತಿನ ಸುಳುಹುಗಳು ಇಲ್ಲೂ ಇವೆ. ರಾಗ, ಕ್ರೋಧಗಳು ಜನ್ಮಜನ್ಮಕ್ಕೆ ಹರಿದು ಬರುತ್ತವೆ. ಮನುಷ್ಯ ಇವುಗಳಿಂದ ಮುಕ್ತನಾಗದಿದ್ದರೆ ಹೀಗೆ ಹರಿದು ಬಂದ ರಾಗ ಕ್ರೋಧಗಳಿಗೆ ಬದ್ಧನಾಗಿ ಅಭವ್ಯನಾಗಿ ಉಳಿಯುತ್ತಾನೆ. ವಾಯುಭೂತಿಯ ಜೀವ ಹುಟ್ಟು ಕುರುಡಿಯೂ ಹೊಲತಿಯೂ ಆದ ಭವದಲ್ಲಿ ಅಗ್ನಿಭೂತಿ ಋಷಿಗಳಿಗೆ ಆ ಬಾಲಕಿಯ ಬಗ್ಗೆ ವಿಶೇಷ ಕರುಣೆ ಉಂಟಾಗುತ್ತದೆ. ಅದಕ್ಕೆ ಕಾರಣ ಕಳೆದ ಭವದ ಸಂಬಂಧ. ವಾಯುಭೂತಿಯ ಅತ್ತಿಗೆ ತನ್ನನ್ನು ಒದ್ದ ವಾಯುಭೂತಿಯನ್ನು ಆತ ಸುಕುಮಾರ ಋಷಿಯಾದಾಗ ಬಂದು ತಿಂದು ತನ್ನ ಪ್ರತಿಜ್ಞೆಯನ್ನು ಪೂರೈಸಿಕೊಳ್ಳುತ್ತಾಳೆ. ಆದರೆ ಈ ಕ್ರೋಧಕ್ಕೆ ತುತ್ತಾದ ಸುಕುಮಾರನಾದರೋ ಈಗ ನಿರ್ವಿಕಾರಿ. ಈಗ ಆತ ವೀತರಾಗ. ಅಂತೆಯೇ ರಾಗಕ್ರೋಧಗಳು ಹರಿದುಬರುವ ಭವಗಳಲ್ಲಿ ಆತ ಹುಟ್ಟಿಬರಲಿಲ್ಲ.

ಇಲ್ಲಿಯೇ ನಾವು ಗಮನಿಸಬೇಕಾದ ಇನ್ನೊಂದು ಅಂಶ–ಸಂಕಲ್ಪ. ಉತ್ತಮಗತಿಯನ್ನು ಪಡೆಯಲು ಪುಣ್ಯಪ್ರಾಪ್ತಿ ಹೇಗೆ ಅಗತ್ಯವೋ ಜೀವಿಯ ಸಂಕಲ್ಪ ಕೂಡ ಅಷ್ಟೇ ಮುಖ್ಯ. ಸೋಮದತ್ತೆ ತನ್ನ ಸಂಕಲ್ಪದಿಂದ ಪೆಣ್ಣರಿಯಾದಳು.

ಕಥೆಯ ತಾತ್ತ್ವಿಕೋದ್ದೇಶಕ್ಕೆ ದುಡಿಯುವ ಕಥಾಭಾಗಗಳು ಇಲ್ಲಿಲ್ಲ. ಅಗ್ನಿಭೂತಿ ವಾಯುಭೂತಿಯರಿಗೆ ಸಂಬಂಧಿಸಿದ ಕಥೆಯ ಪ್ರಾರಂಭಭಾಗ ಕಥೆಯ ಒಟ್ಟುಉದ್ದೇಶಸಾಧನೆಗೆ ದೂರವಾಗಿ ಕಾಣಿಸಬಹುದು; ಆದರೆ ಸೂರ್ಯಮಿತ್ರ, ಅಗ್ನಿಭೂತಿ, ವಾಯುಭೂತಿ ಈ ಮೂವರ ಸುತ್ತ ಹೆಣೆಯಲ್ಪಡುವ ಕಥಾಕೇಂದ್ರಕ್ಕೆ ವೇದಿಕೆಯನ್ನು ಕಲ್ಪಿಸಿಕೊಡುತ್ತದೆ. ಈ ಮೂವರ ವ್ಯಕ್ತಿತ್ವದ ಭಿನಾಂಶಗಳು ಅವರ ಮುಂದಿನ ನಡವಳಿಕೆಗಳಲ್ಲಿನ ಭಿನ್ನಾಂಶಗಳ ಸೂಚಿಗಳಾಗಿವೆ.

ಇಲ್ಲಿ ಬರುವ ಮೂವರೂ ವೈದಿಕ ಪರಿಸರಕ್ಕೆ ಸೇರಿದವರು. ಅವರು ಕ್ರಮೇಣ ಜಿನಮತಾವಲಂಬಿ

ಗಳಾಗುತ್ತಾರೆ. ಹೆಚ್ಚು ಕಥೆಗಳಲ್ಲಿ ಹೀಗೆ ಜೈನಧರ್ಮಕ್ಕೆ ಸವಾಲಿನಂತೆ ಬರುವ ವ್ಯಕ್ತಿಗಳು ಬ್ರಾಹ್ಮಣವ್ಯಕ್ತಿಗಳೇ ಆಗಿದ್ದು ಅವರ ಪರಿವರ್ತನೆಯನ್ನೇ ಚಿತ್ರಿಸಿರುವುದನ್ನು ಗಮನಿಸಿದರೆ ಕೆಲವು ಅನುಮಾನಗಳೇಳುವುದು ಸಹಜ. ಪ್ರಾಯಃ ಜೈನಧರ್ಮ ಈ ನಾಡಿಗೆ ಬಂದಾಗ ಬೌದ್ಧಿಕವಾದ ವಿಷಯಗಳ ಬಗ್ಗೆ ಆಸಕ್ತವಾದ ಈ ವರ್ಗ ಮಾತ್ರ ಪ್ರತಿಭಟನೆಯನ್ನು ಸೂಚಿಸಿತೆ? ಇವರು ಸಾಂಸ್ಕೃತಿಕ ವಲಯದ ಮಾವರಿವರ್ಗಗಳಾಗಿದ್ದು ಇವರ ಬೆಂಬಲ ಉಳಿದ ಶ್ರಮಜೀವಿವರ್ಗಗಳಿಗೆ ಮಾದರಿಯಾಗಿ ಅವರೂ ಒಪ್ಪುವಂತಾಗುತ್ತದೆಂದೆ? ಒಟ್ಟಾರೆ ಈ ವರ್ಗದ ಮೇಲೆ ಕೃತಿಕಾರನ ಗಮನ ಸ್ವಲ್ಪ ಹೆಚ್ಚಿದೆ ಎಂಬುದನ್ನು ಇಲ್ಲಿ ಆಯ್ಕೆ ಮಾಡಿಕೊಂಡ ಪಾತ್ರಗಳು ಸೂಚಿಸುತ್ತವೆ. ಅಂದರೆ ಈ ವರ್ಗದ ಪಾತ್ರಗಳು ಮಾತ್ರ ಈ ಕಥೆಯಲ್ಲಿವೆ ಎಂದು ಮೇಲಣ ಮಾತಿನ ಅರ್ಥವಲ್ಲ. ಕ್ಷತ್ರಿಯ ಹಾಗೂ ವೈಶ್ಯಗುಂಪಿನಿಂದ ಬಂದ ಪಾತ್ರಗಳೂ ಇಲ್ಲಿವೆ. ಒಟ್ಟಾರೆ ಸಮಾಜದ ಬೌದ್ಧಿಕ, ಆಡಳಿತ ಹಾಗೂ ಆರ್ಥಿಕ ಕೇಂದ್ರಗಳನ್ನು ಗಮನಿಸಿ ತಮ್ಮ ಪ್ರಭಾವವನ್ನು ಬೀರುವುದನ್ನು ಇಂಥ ಲೇಖಕರು ಮರೆಯಲಿಲ್ಲ. ಪಾಪದ ಫಲವನ್ನು ಚಿತ್ರಿಸುವಾಗ ಆ ವ್ಯಕ್ತಿಗಳನ್ನು 'ಪುಟ್ಟುಂಗುರುಡಿ ಪೊಲತಿ'ಯಾಗಿ ಚಿತ್ರಿಸುವಿಕೆ ಇತ್ಯಾದಿ ಅಂಶಗಳನ್ನು ಗಮನಿಸಿದರೆ ಎಲ್ಲ ಜಾತಿ ವರ್ಗಕ್ಕೆ ಮುಕ್ತವಾಗಿ ಬಾಗಿಲುತೆರೆದ ಈ ಧರ್ಮೀಯರಲ್ಲೂ ಅವರನ್ನು ಕುರಿತಾಗಿ ಯಾವುದೋ ಮೂಲೆಯಲ್ಲಿ ಕೀಳುಗ್ರಹಿಕೆಯೊಂದು ಇದ್ದಂತೆ ತೋರುತ್ತದೆ—ಅಥವಾ ಆ ವರ್ಗದ ಪಾತ್ರಗಳ ನ್ನಾಯ್ದುಕೊಂಡು ಹೆಚ್ಚಾಗಿ ಉದಾತ್ತೀಕರಿಸಹೊರಟರೆ ತಾವು ಸಮಾಜದ ಇನ್ನುಳಿದ ವರ್ಗಗಳ ಆಕ್ಷೇಪಕ್ಕೆ ಪಕ್ಕಾಗೇವೆಂಬ ಆತಂಕವೇನಾದರೂ ಇದ್ದಿರಬಹುದು.

ಮೊದಲಭಾಗದಲ್ಲಿ ಧರ್ಮೋಪದೇಶವಾಗಲಿ ಧರ್ಮಪ್ರಚಾರವಾಗಲಿ ನೇರವಾಗಿ ಕಥೆಯಲ್ಲಿ ಪ್ರವೇಶಿಸಿಲ್ಲ. ಜಿನಧರ್ಮಪರವಾದ ಒಂದು ಮಾತು ಕೂಡ ಇಲ್ಲಿಲ್ಲ. ಇಲ್ಲಿಯವರೆಗಿನ ಬರೆವಣಿಗೆ ಯಾವುದೇ ಲೌಕಿಕ ಕಥೆಯಂತಿದ್ದು ಮುಂದಿನ ಧಾರ್ಮಿಕತಿರುವಿಗೆ ವೇದಿಕೆಯನ್ನು ಕಲ್ಪಿಸಿದೆ. ಇಲ್ಲಿ ಪರಿಚಯಿಸಲಾದ ಅಗ್ನಿಭೂತಿ, ವಾಯುಭೂತಿ, ಸೂರ್ಯಮಿತ್ರ ಈ ಪಾತ್ರಗಳು ಕ್ರಮೇಣ ಧರ್ಮದತ್ತ ಒಲಿಯುತ್ತಹೋಗಿ ಸಾಧನೆಯ ತುದಿಯನ್ನು ಮುಟ್ಟುವುದೇ ಈ ಕಥೆಗಳ ಒಟ್ಟು ಬಂಡವಾಳ. ಆನಂತರದ ಈ ಪಾತ್ರಗಳ ಧರ್ಮಪರವಾದ ನಡವಳಿಕೆಗಳ ದಿಕ್ಕನ್ನು ಸೂಚಿಸುವ ಈ ಪಾತ್ರಗಳ ಮೂಲಸ್ವಭಾವ ಇಲ್ಲಿದೆ. ಈ ಸ್ವಭಾವವನ್ನು ಚಿತ್ರಿಸುವಲ್ಲಿ ಕವಿಯ ಮನಸ್ಸಿನಲ್ಲಿ ಮುಂದಿನ ಆಯಾ ಪಾತ್ರಗಳ ಧಾರ್ಮಿಕ ನಡವಳಿಕೆ ಆತನ ಗಮನದಲ್ಲಿದೆ. ಉದಾ—ಮುಂದೆ ಜಿನಧರ್ಮವನ್ನು ಹಳಿಯುವ ಅವಿವೇಕವನ್ನು ತೋರುವ ಅಗ್ನಿಭೂತಿ ತನ್ನ ಸ್ವಭಾವವನ್ನು ಮೊದಲೇ ತೋರಿದ್ದಾನೆ. ತಮ್ಮನ್ನು ಒಳ್ಳೆಯ ಹಾದಿಗೆ ತಂದ ಸೂರ್ಯಮಿತ್ರನ ಬಗ್ಗೆ ಅಗ್ನಿಭೂತಿಗೆ ಅಪಾರವಾದ ಕೃತಜ್ಞತೆ. ಆದರೆ ವಾಯುಭೂತಿ ಅಷ್ಟೇ ಕೃತಘ್ನ; ಸೂರ್ಯಮಿತ್ರನನ್ನು 'ಪಂಚಮಹಾಪಾತಕನ್' ಎಂದು ಹಳಿದು ಅವನ ಬಗ್ಗೆ ಕ್ರೋಧವನ್ನೇ ಬೆಳೆಸಿಕೊಳ್ಳುತ್ತಾನೆ. ಈ ಅವಿಚಾರಿಯೂ ಅವಿವೇಕಿಯೂ ಆದ ವ್ಯಕ್ತಿಯೇ ಜಿನಧರ್ಮವನ್ನು ಹಳಿದು ಅದರ ಫಲವನ್ನುಂಡು ಆನಂತರ ವಿವೇಕಿಯಾಗಿ ಜಿನಧರ್ಮವನ್ನೊಪ್ಪಿ ಸದ್ಗತಿಯನ್ನು ಪಡೆವ ಎಂದು ಚಿತ್ರಿಸುವಲ್ಲಿ ಅವನ ಈ ಪೂರ್ವಭಾಗದ ಚಿತ್ರ ಕವಿಯ ಉದ್ದೇಶಕ್ಕೆ ಎಷ್ಟು ಸಹಾಯಕವಾಗಿದೆ ಎಂಬುದು ಸ್ಪಷ್ಟವೇ ಇದೆ.

ಈಗ ಕಥೆಯ ಎರಡನೆಯ ಘಟ್ಟಕ್ಕೆ ಬರುತ್ತೇವೆ. ಇಲ್ಲಿ ಸೂರ್ಯಮಿತ್ರ ವೈದಿಕಮತಾನುಯಾಯಿಯಾಗಿದ್ದವನು ಜಿನಧರ್ಮವನ್ನು ಒಪ್ಪಿಕೊಂಡು ಜಿನಮುನಿಯಾದ. ಈತ ಜಿನಧರ್ಮದತ್ತ ತಿರುಗಲು ಒದಗಿ ಬಂದ ಸನ್ನಿವೇಶ ಸ್ವಾರಸ್ಯವಾದ್ದು ಹಾಗೂ ಮಹತ್ತ್ವವಾದ್ದು, ಈ ಕಥೆಯ ವಲಯದಲ್ಲಿ ಮೊದಲು ಜಿನಧರ್ಮಕ್ಕೆ ಒಳಗಾದ ವ್ಯಕ್ತಿ ಈತ. ಸೂರ್ಯಮಿತ್ರನೇ ಈ ಪ್ರಭಾವಕ್ಕೆ ಮೊದಲು ಒಳಗಾದ್ದು ಬಹಳ ಮುಖ್ಯ. ಆತ ಬ್ರಾಹ್ಮಣ, ಮಂತ್ರಿ, ರಾಜನಿಗೆ ಬಹಳ ಆಪ್ತನಾದವನು. ಅಂದಾಗ ಸಾಮಾಜಿಕವಾಗಿ ಈತ ಗಮನಾರ್ಹ ವ್ಯಕ್ತಿ ಅಲ್ಲದೆ ಕಥೆಯಲ್ಲಿ ಬರುವ ಮುಂದಿನ ಪಾತ್ರಗಳಾದ ವಾಯುಭೂತಿ, ಅಗ್ನಿಭೂತಿಯರು ಈತನಿಂದ ಉಪಕೃತ

ರಾಪನರು. ಇಷ್ಟು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ನೋಡಿದಾಗ ಸೂರ್ಯಮಿತ್ರನೇ ಮೊದಲು ಈ ಧರ್ಮವನ್ನು ಒಪ್ಪಿಕೊಳ್ಳುವುದರಲ್ಲಿ ವಿಶೇಷವಾದ ಅರ್ಥವಿದೆ.

ಸೂರ್ಯಮಿತ್ರನೇನೂ ಜಿನಧರ್ಮವನ್ನು ಅರಸಿಕೊಂಡು ಬರಲಿಲ್ಲ. ಯಾರೂ ಅವನ ಮೇಲೆ ಆ ಧರ್ಮವನ್ನು ಹೇರಲಿಲ್ಲ. ಉದ್ದೇಶಪೂರ್ವಕವಾಗಿ ಆತನಲ್ಲಿಗೆ ಹೋಗಿ ಆ ಧರ್ಮವನ್ನು ಬೋಧಿಸಲಿಲ್ಲ. ಆದರೆ ಜಿನಧರ್ಮದತ್ತ ಆತ ವಾಲಬೇಕಾಗಿ ಬಂದ ಪ್ರಸಂಗವೊಂದು ಒದಗಿತು. ಆತ ಧರಿಸಿದ್ದ ಉಂಗುರ ಸೂರ್ಯನಿಗೆ ಅರ್ಘ್ಯ ಕೊಡುವಲ್ಲಿ ಬಿದ್ದು ಹೋಯಿತು. ಅದೂ ಎಂಥ ಉಂಗುರ? 'ಸುಬಲ ಮಹಾರಾಜನು ಕೊಟ್ಟ ಅನರ್ಘ್ಯಮಪ್ಪ ಮಾಣಿಕ್ಯದುಂಗುರ'. ಅದನ್ನು ರಾಜನು 'ಕಳೆದು ತನಗೆ ತುಡಲ್ಕೆಂದು ಕೊಟ್ಟ' ಈ ವಿವರ ಬರಿಯ ಉಂಗುರದ ವರ್ಣನೆಯಲ್ಲ. ಹೀಗಾಗಬೇಕಾದರೆ–ಒಬ್ಬ ರಾಜ ತನ್ನ ಕೈಉಂಗುರವನ್ನು ಕಳೆದು ಈತನಿಗೆ ತುಡಲು ಕೊಡಬೇಕಾದರೆ–ಅವರಿಬ್ಬರ ನಡುವಣ ಸ್ನೇಹ ಹೇಗಿದ್ದಿರಬೇಕು ? ಈ ಸ್ನೇಹ ಸೂರ್ಯಮಿತ್ರನ ಅಂತಸ್ತನ್ನು ಏರಿಸುವಂಥದು ತಾನೆ. ಇಂಥ ವ್ಯಕ್ತಿ ಕೂಡ ಹೇಗೆ ಈ ಧರ್ಮದತ್ತ ವಾಲಿದ ಎಂಬುದು ಕಡಮೆ ಮಹತ್ತ್ವದ ಸಂಗತಿಯೆ? ಅಲ್ಲದೆ ಹಾಗೆ ರಾಜನು ಕೊಟ್ಟ ಉಂಗುರವಾದ್ದರಿಂದ ಅದನ್ನು ಕಳೆದುಕೊಂಡಾಗ ಸೂರ್ಯಮಿತ್ರನಿಗಾದ ಆತಂಕ ಹೆಚ್ಚಿನದಾಗುತ್ತದೆ. ಹೀಗೆ ಹಿರಿದಾದ ಆತಂಕಕ್ಕೆ ಒಳಗಾದ ಹೊತ್ತಿನಲ್ಲಿ ನೆರವಿಗೆ ಬಂದ ಜಿನಧರ್ಮ ಆತನನ್ನು ಕ್ರಮೇಣ ಆಕರ್ಷಿಸಿದ್ದು ತೀರಾ ಸಹಜ ಎಂಬ ಧ್ವನಿಯೂ ಇಲ್ಲಿದೆ ಎಂದು ತೋರುತ್ತದೆ.

ಹಾಗೆ ಕಳೆದು ಹೋದ ಉಂಗುರದ ಬಗ್ಗೆ ಅವಧಿಜ್ಞಾನದಿಂದ ತಿಳಿದು ಸುಧರ್ಮಚಾರ್ಯರು ಅದು ಮತ್ತೆ ಅವರಿಗೆ ದೊರಕುವುದೆಂಬ ಮತ್ತು ಹೇಗೆ ದೊರಕುವುದೆಂಬ ಭವಿಷ್ಯವನ್ನು ಹೇಳಿದರು. ಅದು ಸತ್ಯವಾದಾಗ ಸೂರ್ಯಮಿತ್ರನಿಗೆ ಇಂಥ ಜ್ಯೋತಿಷ್ಯದತ್ತ ಕುತೂಹಲ ಹೆಚ್ಚಿತು. ಈ ಅಂಶದ ಮೂಲಕ ಕೂಡ ಕೆಲವು ಸಾರ್ವಕಾಲಿಕ ಸತ್ಯಸಂಗತಿಗಳನ್ನು ಹೇಳುತ್ತಾರೆಂದು ನಮಗೆ ತೋರುತ್ತದೆ. ಜಿನಧರ್ಮದತ್ತ ಜನರ ಗಮನ ಹರಿಸಲು, ಅವರನ್ನು ಆಸಕ್ತರನ್ನಾಗಿಸಲು ಇಂಥ ಪವಾಡಸದೃಶ ಮಾರ್ಗಗಳನ್ನು ಬಳಸಿಕೊಳ್ಳುವುದು ಇಲ್ಲಿಯ ಬೇರೆ ಕಥೆಗಳಲ್ಲೂ ಇದೆ. ಪ್ರಾಯಃ ಇದಕ್ಕೆ ಕಾರಣ ಹೀಗಿರಬಹುದೆಂದು ತೋರುತ್ತದೆ—ಸಾಮಾನ್ಯ ಜನತೆ ಒಂದು ಮತದ ಮೂಲತತ್ತ್ವಗಳಿಂದ ಆಕರ್ಷಿತರಾಗಿ ಅದನ್ನು ಮನನಮಾಡಿಕೊಂಡು ಆ ಧರ್ಮದತ್ತ ವಾಲುವುದು ಅಪರೂಪ. ಸಾಮಾನ್ಯಜನರ ಗಮನವನ್ನು ಸೆಳೆಯುವುದು ಇಂಥ ಆಶ್ಚರ್ಯಕಾರಿ ಘಟನೆಗಳೇ. ಹಾಗೆ ಆಕರ್ಷಿತರಾಗಿ ಬಂದ ಜನರನ್ನು ಮುಂಬಾಗಿಲಿನಿಂದ ಒಳಕ್ಕೆ ಕರೆದೊಯ್ಯುವುದು ಸುಲಭ. ಅಲ್ಲದೆ ಜನರ ದಿನನಿತ್ಯದ ಬೇಕುಗಳನ್ನು ಧರ್ಮವು ಪೂರೈಸಬೇಕೆಂದು, ಹಾಗೂ ಹಾಗೆ ಪೂರೈಸುವ ಧರ್ಮದ ಕಡೆಗೆ ಜನವಾಲುತ್ತಾರೆಂದು ಇತಿಹಾಸ ನಮಗೆ ತೋರುತ್ತದೆ. ಹೀಗೆ ಜನರನ್ನು ಆಕರ್ಷಿಸಲು ಎಲ್ಲ ಧರ್ಮಗಳು ತೋರಿದ ಪವಾಡ, ಮಾಡಿದ ತಂತ್ರ, ಒಂದೆರಡಲ್ಲ. ಆದರೆ ಬೇರೆ ಮತಗಳಷ್ಟು ಪವಾಡಗಳನ್ನು ಈ ಹೊತ್ತಿನಲ್ಲಿ ಈ ಧರ್ಮ ಸೃಷ್ಟಿಸಲು ಹೋಗದಿದ್ದರೂ ತನ್ನ ಉಳಿವಿಗೆ ಇಂಥ ಕೆಲವುಮಾರ್ಗಗಳು ಆವಶ್ಯಕ ಎಂಬುದನ್ನು ಜಿನಧರ್ಮ ತನ್ನ ಅನುಭವದಿಂದ ಕಂಡುಕೊಂಡಿತು. ಅದರೊಂದಿಗೆ ಪರಿಸರದ ಪ್ರಭಾವವೂ ಅದರ ಮೇಲಿತ್ತು. ಹೀಗಾಗಿ ಜಿನಧರ್ಮದ ಚರಿತ್ರೆಯ ಪುಟಗಳಲ್ಲಿ ಇಂಥ ಕೆಲವು ಅನಿವಾರ್ಯವಾದ ಅಂಶಗಳು ಸೇರಿಹೋದವು. ಪ್ರಸ್ತುತ ಕೃತಿಕಾರನು ಇಂಥ ಆಶ್ಚರ್ಯದ ಮೂಲಕ ಸೂರ್ಯಮಿತ್ರ ಇತ್ತ ವಾಲುವುದನ್ನು ಚಿತ್ರಿಸಿದ್ದಾನೆ. ಹೀಗೆ ಆತ ಈ ಧರ್ಮದತ್ತ ಬರುವ ಹೊತ್ತಿನಲ್ಲಿ ಆತನ ಮನಸ್ಸಿನಲ್ಲಿ ಕುಹಕವೇ ತುಂಬಿತ್ತು. ಕ್ಷಪಣಕನನ್ನು ಮಿಥ್ಯಾವಿನಯದಿಂದ ಚಲಿಸಿ ಈ ವಿದ್ಯೆಯನ್ನು ಕಲಿಯುವುದೆಂದು ಹೊರಟನು. ಆದರೆ ಭಟಾರಕರು "ತಮ್ಮಾ, ಎಮ್ಮ ಜೋಯಿಸಮುಮ್ಮಂತಪ್ಪ ರೂಪಿನ ಋಷಿಯಗ್ಗಲ್ಲದೆ ಪೇೞಲುಂ ಕಲಲುಂ ಮಾಗದು" ಎಂದರು. ಸರಿ, ದೀಕ್ಷೆಯನ್ನು ಪಡೆದು ಚರಣಗ್ರಂಥಗಳು ಕರಣಗ್ರಂಥಗಳನ್ನೆಲ್ಲ ಓದುತ್ತಾ ಓದುತ್ತಾ ಹೋದಂತೆ ಆತನ ಮಿಥ್ಯತ್ವವು ಇನಿಸಿನಿಸಾಗಿ ಹಿಂಗಿತು. ನಂಬಿಕೆ ಉದಯಿಸಿತು. ತಾನು ಉಕ್ಕೆವದಿಂದ ತಪಸ್ಸನ್ನು ಮಾಡಿದ್ದಕ್ಕೆ ಪಶ್ಚಾತ್ತಾಪಪಟ್ಟು ತಪಸ್ಸನ್ನು ಒಪ್ಪಿಕೊಂಡ.

ಈ ಪ್ರಸಂಗವನ್ನು ಎಚ್ಚರಿಕೆಯಿಂದ ಗಮನಿಸಿದರೆ ವಡ್ಡಾರಾಧನೆಯ ಧರ್ಮಪ್ರಚಾರದ ಮಾರ್ಗ ಎಷ್ಟು ನಯವಾದದ್ದು, ಜಾಗರೂಕವಾದದ್ದು ಎಂಬುದು ತಿಳಿಯುತ್ತದೆ. ಇದೇ ಕ್ರಮ ಕೃತಿಯ ಉದ್ದಕ್ಕೂ ಇದೆ. ಎಲ್ಲಿಯೂ ದುಡುಕಿಲ್ಲ. ಹೊರ ಒತ್ತಡವಿಲ್ಲ. ಇದು ನಿಧಾನವಾಗಿ ತನಗೆ ತಾನೇ ಆಗುವ ಆಂತರಿಕ ಪರಿವರ್ತನೆ. ಕೃತಿಕಾರ ಈ ಸೌಜನ್ಯವನ್ನು ದಾಟುವುದಿಲ್ಲ. ಈ ಮತದ ಬಗ್ಗೆ ಉಗ್ರ ಪ್ರತಿಭಟನೆ ಇದ್ದಾಗಲೂ ಇಲ್ಲಿಯ ವರ್ತನೆ ಆಕ್ರೋಶದಿಂದ ಕೂಡಿದ್ದಲ್ಲ. ಇದು ಮೂಲತಃ ಮಿಲಿಟೆಂಟ್ ಅಲ್ಲದ ಜೈನಧರ್ಮದ ಸ್ವಭಾವದಲ್ಲೇ ಇರುವಂಥದು. ಈ ಸೌಮ್ಯಪ್ರಧಾನ ಶಾಂತಿ ಮಾರ್ಗವನ್ನು ಇಲ್ಲಿನ ಈ ಧರ್ಮದ ಪ್ರತಿನಿಧಿಗಳಾದ ಆಚಾರ್ಯರ ವ್ಯಕ್ತಿತ್ವದಲ್ಲಿ ತುಂಬಲಾಗಿದೆ. ಸಹನೆ, ಸ್ನೇಹ, ಕರುಣೆಯಿಂದ ಮನುಷ್ಯನ ಮನಸ್ಸನ್ನು ಸ್ಥಿರವಾಗಿ ಗೆಲ್ಲಬಹುದೇ ವಿನಃ ಒತ್ತಡ, ಹಿಂಸೆ ಬಲಾತ್ಕಾರದಿಂದಲ್ಲ ಎಂಬ ನಂಬಿಕೆ ಈ ಕಥೆಗಳ ಹಿನ್ನೆಲೆಯಲ್ಲಿರುವಂತಿದೆ. ಇಂಥ ಪರಿವರ್ತನೆ ನಿಧಾನ ನಿಜ. ಆದರೆ ಶಾಶ್ವತವಾದ್ದು. ಈ ಹಿನ್ನೆಲೆಯಲ್ಲಿ ರೂಪಿತವಾದ ಜೈನಭಟಾರಕರ ವ್ಯಕ್ತಿತ್ವ ಬಹಳ ಪರಿಣಾಮಕಾರಿಯಾಗಿದೆ. ಅಗ್ನಿಭೂತಿಯು ವಾಯುಭೂತಿಯನ್ನು, 'ಭಟಾರರನ್ನು ವಂದಿಸು' ಎಂದಾಗ ಅವನಾಡಿದ ಮಾತು–'ಇದೇ ನೊಳ್ಪಿದರ್ಗೆನ್ನಂ ಪೊಡವಡಿಸಿದಪ್ಪೈ ಪೇಜಱಿಂದುಮಶುಚಿಗಳ್ ಮಲಗ್ರಸ್ತರೆಂದಪ್ಪೊಡಂ ಮಿಂದ ಱಿಯದವರಿವರ ಕಾಲ್ಗೆ ಎಱಗುವೆಂ ಗಡ !" ಈ ಕನಿಷ್ಠ ನಿಷ್ಠುರದ ವಚನಕ್ಕೆ ಪ್ರತಿಯಾಗಿ ಅಗ್ನಿಭೂತಿ–"ಕೊರ್ಯ್ ತಲೆಯಧವಾ ನೀಚಾ ಸ್ವಾಮಿಯನಿಂತೆಂಬಾ" ಎಂದು ಬಯ್ವ. ಆದರೆ ಭಟಾರಕರು ಹೇಳಿದ್ದೇನು ? ಅವರು ಸಮ ಭಾವದಿಂದ ಕ್ಷಮೆಯನ್ನು ಭಾವಿಸಿದರು. ಈ ಭಟಾರಕರ ಇಂಥ ಹಿರಿತನ, ಸಮತ್ವಭಾವವೇ ಅಗ್ನಿಭೂತಿಯಂಥ ಅನೇಕರನ್ನು ಜಿನಧರ್ಮದೆಡೆಗೆ ಎಳೆದದ್ದರಲ್ಲಿ ಆಶ್ಚರ್ಯವಿಲ್ಲ.

ಇಲ್ಲಿ ವಿಶೇಷವಾಗಿ ನಮ್ಮ ಗಮನಸೆಳೆಯುವ ಮತ್ತೊಂದು ಅಂಶ–ಜೀವಿಗೆ ಒದಗಿದ ದುಃಖದ ಪರಮಾವಧಿಯನ್ನು ತೋರಿ, ಅದನ್ನು ಕರುಣೆ ಚಿಮ್ಮುವಂತೆ ಚಿತ್ರಿಸಿ ಆ ಹೊತ್ತಿನಲ್ಲಿ ಆ ಜೀವಿಯ ಬಗ್ಗೆ ದಯಾಪೂರ್ಣವಾದ ಒಬ್ಬ ಜಿನಋಷಿಯ ಅನುಕಂಪವನ್ನು ಸೂಚಿಸಿ ಜಿನಧರ್ಮದ ಕಡೆಗೆ ಜೀವಿಯು ವಾಲುವ ಸನ್ನಿವೇಶದ ಮಹತ್ತ್ವದ ತಿರುವನ್ನು ಬಹಳ ಸಹಜವಾಗಿ ಕಾಣುವಂತೆ ಎಚ್ಚರಿಕೆಯಿಂದ ಕಥೆಗಾರ ಚಿತ್ರಿಸಿದ್ದಾನೆ. ಇವಕ್ಕೆ ನಿದರ್ಶನವಾಗಿ ಸುಕುಮಾರಸ್ವಾಮಿಯ ಕಥೆಯ ಈ ಸನ್ನಿವೇಶವನ್ನು ಗಮನಿಸಬಹುದು—"....ನೇಱಿಲ ಮರದ ಕೆಳಗೆ ನೇಱಿಲ ಪಣ್ಗಳಂ ತಡವರಿಸಿ ಆಯ್ದು ತಿನ್ಬ ಜಾತ್ಯಂಧೆಯಪ್ಪ ಪೊಲೆಯರ ಕೂಸಂ ಕಂಡತ್ಯಂತ ಸ್ನೇಹಮಾಗಿ ಪರವಸದಿಂದಂ ಕಣ್ಣೀರ್ಗಳಂ ಸೂಸಿಯೆಸ್ತುಂದು ಮನ್ನುಮಿಕ್ಕು ಕರುಣದಿಂದೆ ಕುಂಚದ ಕೋಲೊಳ್ ಪರೆವಿರ್ದ ಪಣ್ಗಳಂ ಕೂಸಿನ ಮುಂದೆ ಸಾಚ್ಯುರ್ತ್ತಂ ನೀಡುಂ ಬೇಗಮಿರ್ದ್ದಿರ್ದೇಂ ಪಾಪದ ಫಲಮೋ ಎಂದು ಸಂಸಾರನಿರ್ವೇಗ ಮಾಗೆಯಂದಿನ ದಿವಸಮುಲಾಭಂ ಮಾಡಿ ತಮ್ಮ ವಾಸಕ್ಕೆ ಪೋದೊಡೆ...."

ಇಲ್ಲಿ ಜೀವದ ವಿಕಾಸಕ್ಕೂ ಕೆಲವು ನಿರ್ದಿಷ್ಟ ಹಂತಗಳಿವೆ. ಭವಾಂತರಗಳನ್ನು ಅರಿದು, ಧರ್ಮವನ್ನು ತಿಳಿದು, ಸಂಸಾರಶರೀರದಲ್ಲಿ ವೈರಾಗ್ಯವುಂಟಾಗಿ, ತನ್ನನ್ನು ತಾನು ಹಳಿದು ನಿಂದಿಸಿ ಪಾಪಕ್ಕಂಜಿ ಅಣುವ್ರತ ಮೊದಲಾದ ಶ್ರಾವಕ ವ್ರತವನ್ನು ಸ್ವೀಕರಿಸಿ ದೃಢವ್ರತನಾಗಿ ನಂತರ ಭವಾಂತರಗಳಲ್ಲಿ ಸಾಗಿ ಅಥವಾ ನೇರವಾಗಿ ಮಹಾವ್ರತಕ್ಕೆ ಸಾಗಿ ಬಂದು ಸನ್ಯಸನವನ್ನು ಪಡೆಯುವುದು—ಇದು ಇಲ್ಲಿಯ ಸಾಧಾರಣವಾದ ಒಂದು ಕ್ರಮ.

ಒಂದೊಂದು ಕಥೆಯೂ ಒಂದೊಂದು ಲೌಕಿಕ ಸಂಗತಿಯ ಉತ್ಕರ್ಷದ ಪರಮಾವಧಿಯನ್ನು ತೋರಿ ಆ ಬಗ್ಗೆ ನಿರಸನವನ್ನುಂಟು ಮಾಡುತ್ತದೆ. ಸುಕುಮಾರ ಸ್ವಾಮಿಯು ಭೋಗೋಪಭೋಗಗಳನ್ನು ಇನ್ನಿಲ್ಲದಂತೆ ಅನುಭವಿಸಿದವ, ಸೌಕುಮಾರ್ಯತೆಯಿಂದ ಬೆಳೆದವ. ಆತನನ್ನು ಕಂಡ ದೊರೆ—"ಈತನ ಕ್ಷಣಮಾತ್ರದ ಭೋಗಕ್ಕಂ ಸುಖಕ್ಕಂ ಎಮ್ಮೆಲ್ಲಾ ಕಾಲಮಾಸುತನಂ ಗೆಯ್ವಲ್ಲಿಯೊಳಪ್ಪ ಭೋಗೋಪಭೋಗಂಗಳ್ ದೊರೆಯಲ್ಲವದಱಿಂದೀ ಲೋಕದೊಳೀತನೆ ಪರಮಾರ್ಥಂ ಸುಖಿ...." ಎಂದು ಹೇಳಬೇಕಾದರೆ ಅವನ ಭೋಗಸುಖ ಎಂಥದ್ದಿರಬೇಕು. ಆದರೆ ಮನುಷ್ಯನಿಗೆ ಸಿಗಬೇಕಾದ ಪರಮಾರ್ಥಸುಖ ಈ ತೆರದ್ದಲ್ಲ. ಈ ತೆರನಾದ ಭೋಗ ಕ್ಷಣಿಕ. ಸುಕುಮಾರನ

ಆಯುಸ್ಸು ಮೂರುದಿನ ಮಾತ್ರ ಉಳಿಯುತ್ತದೆ. ಹೀಗಾಗಿ ಇದೇ ಸುಖ ಎಂದುಕೊಂಡ ಈ ಹಂತದಿಂದ ಮುಂದೆ ಸಾಗಿ "ಸುರಲೋಕ ಸುಖವೆಂಬಮೃತ ಸಮುದ್ರದ ನೀರೆಲ್ಲಮಂ ಕುಡಿದು ತಣಿಯದಸೀ ಮನುಷ್ಯಭವದ ಸುಖಮೆಂಬ ಪುಲ್ಲುಸಿಯೊಳ್ ಸಿಲ್ಕಿ ಶಿವಸುಖಮನೆಯ್ದಿಸುವ ಸಚ್ಚಾರಿತ್ರದಿಂ ಬಟ್ಟಿದೆ...." ಎಂಬ ತಿಳಿವಳಿಕೆ ಮೂಡುತ್ತದೆ.

ಈ ಉಪಸರ್ಗ ಕೇವಲಿಗಳ ಕಥೆಯಲ್ಲಿ ಒತ್ತು ಬೀಳಬೇಕಾದ್ದು ಆ ಕೇವಲಿ ಸೈರಿಸಬೇಕಾಗಿ ಬಂದ ಉಪಸರ್ಗಗಳ ಮೇಲೆ. ಈ ಎಲ್ಲ ಕಥೆಗಳಲ್ಲಿ ಉಪಸರ್ಗವನ್ನು ಒಡ್ಡುವಿಕೆ ಆದಷ್ಟು ರೌದ್ರವಾಗಿ ಬಂದಿದೆ ಹಾಗೂ ಇಂಥ ರೌದ್ರತೆಯನ್ನು ಜೀವ ತಾನೇ ಎದುರಿಸಬೇಕು, ನಿರ್ವಿಕಾರವಾಗಿ ಸಹಿಸಬೇಕು. ಈ ಉಪಸರ್ಗಗಳನ್ನು ಸೈರಿಸುವಲ್ಲಿ ಯಾವ ಹೊರಗಿನ ಶಕ್ತಿಯೂ ಇಲ್ಲಿ ಸಹಾಯಮಾಡುವುದಿಲ್ಲ ಎಂಬುದನ್ನು ಗಮನಿಸಬೇಕು. ಸುಕುಮಾರ ಸ್ವಾಮಿಯು ಸೇಸೆಯಿಕ್ಕಿದ್ದಕ್ಕೂ ಸೊಡರ ಬೆಳಗಿಗೂ ಸೈರಿಸದವನು ; ಕಮಲದಲ್ಲಿ ಬೆಳೆದ ಅಕ್ಕಿಯನ್ನಲ್ಲದೆ ಮತ್ತೊಂದನ್ನು ತಿನ್ನದವನು ; ರತ್ನದ ಹಾಸಿನ ಮೇಲಷ್ಟೇ ನಡೆಯುತ್ತಿದ್ದ ತನ್ನ ಮೃದುಲಲಿತಪಾದಗಳನ್ನು, ಹಿಂದೆಂದೂ ಭೂಮಿಗೆ ಸ್ಪರ್ಶಿಸದ ತನ್ನ ಕಾಲುಗಳನ್ನು ಕಠಿನ ಭೂಮಿಯ ಮೇಲೆ ನಡೆಸುತ್ತಿದ್ದಾನೆ. ಕಾಲಿಂದ ರಕ್ತ ಸೋರುತ್ತದೆ. ನರಿಗಳು ಆತನ ಎರಡು ಕಾಲುಗಳನ್ನೂ ಒಂದು ದಿನ, ಕಟಿಯವರೆಗೆ ಒಂದು ದಿನ ತಿಂದು ಮತ್ತೊಂದು ದಿನ ಬಸಿರನ್ನು ಸೀಳಿ ಕರುಳನ್ನು ತೋಡಿ ತಿಂದವು. ಈ ಘೋರ ಉಪಸರ್ಗವನ್ನು ಸೈರಿಸಿದ ಸುಕುಮಾರನು ರತ್ನತ್ರಯವನ್ನು ಸಾಧಿಸಿದ. ಈ ಉಪಸರ್ಗಗಳ ಕಾರಣ, ರೀತಿ ಬೇರೆಬೇರೆಯಾದರೂ ಎಲ್ಲ ಕಥೆಗಳಲ್ಲೂ ನಾವು ಕಾಣಲೇಬೇಕಾದ ಭಾಗ ಇದು. ಭವಾವಳಿಗಳನ್ನುಳ್ಳ ಸನತ್ಕುಮಾರನ ಕಥೆಗಳಂಥ ಕಥೆಗಳಾಗಲಿ ಗಜಕುಮಾರನ ಕಥೆಯಂತೆ ಸನ್ಯಸನದ ಹಿಂದಿನ ದಿನಗಳನ್ನು ಮಾತ್ರ ಚಿತ್ರಿಸುವ ಕಥೆಯಾಗಲಿ ಈ ಯಾವುದೇ ರೀತಿಯ ಕಥೆಯಾದರೂ ಉಪಸರ್ಗದ ಸೈರಣೆ ಮಾತ್ರ ಬಂದೇ ಬರುತ್ತದೆ. ಭವಾವಳಿ ಇಲ್ಲದ ಕಥೆ ಅಥವಾ ಸನ್ಯಸನದ ಪೂರ್ವಜೀವನದ ಕಥೆ ಇಲ್ಲದ ಕಡೆ ರಕ್ತಮಾಂಸಗಳಿಲ್ಲದ ಅಸ್ಥಿಪಂಜರದಂತಾಗುತ್ತದೆ. ಸಾಹಿತ್ಯಿಕಸ್ವಾರಸ್ಯ ಕಡಮೆಯಾಗಿ ಧಾರ್ಮಿಕ ಚೌಕಟ್ಟಷ್ಟೇ ಉಳಿಯುತ್ತದೆ.

ಹೀಗೆ ಉಪಸರ್ಗಗಳನ್ನು ಸೈರಿಸಿ ಕೇವಲಿಯಾದವನ ಪ್ರಭಾವದಿಂದ ಆತನ ಸುತ್ತಲಿನ ಅನೇಕರು ದೀಕ್ಷೆ ಪಡೆದು ಉಗ್ರೋಗ್ರ ತಪಸ್ಸನ್ನು ಮಾಡಿ ಸದ್ಗತಿಯನ್ನು ಪಡೆಯುತ್ತಾರೆ ಮತ್ತು ಸಮಾಧಿಮರಣವನ್ನು ಹೊಂದುತ್ತಿರುವ ಋಷಿಗಳು ಈ ಕೇವಲಿಗಳ ಸಾಧನೆಯನ್ನು ಕೇಳಿ ತಮ್ಮ ಮಾರ್ಗದಲ್ಲಿ ದೃಢತೆಯನ್ನು ಹೆಚ್ಚಿಸಿಕೊಳ್ಳಬೇಕೆಂಬುದು ಕಥೆಗಾರನ ಆಶಯ.

ಈ ಮೇಲಿನ ಎಲ್ಲ ವಿವರಗಳಿಂದ ವಡ್ಡಾರಾಧನೆಯ ಕರ್ತೃವಿನ ತಾತ್ತ್ವಿಕ ಹಿನ್ನೆಲೆ ಎಂಥದು ಮತ್ತು ಆ ಹಿನ್ನೆಲೆಯಿಂದ ರೂಪಿತವಾದ ಆತನ ಕಥೆ ಹಿಡಿದ ದಾರಿ ಯಾವುದು ಎಂಬುದನ್ನು ಸ್ಥೂಲವಾಗಿಯಾದರೂ ಕಲ್ಪಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದುಕೊಂಡಿದ್ದೇನೆ.

ತ. ಶ್ರೀಕಂಠಯ್ಯ

ಸಹಜಮಾರ್ಗ (ಒಂದು ಸಂಕ್ಷಿಪ್ತ ಪರಿಚಯ)

ಮಾನವರಾಗಿ ಹುಟ್ಟಿದ ಮೇಲೆ ನಮ್ಮ ಜೀವನದ ಗುರಿಯೇನೆಂದು ತಿಳಿದುಕೊಳ್ಳುವುದು ಸಹಜವಾದುದು. ಆ ಗುರಿ ಅಂತಿಮವಾಗಿ ಒಂದೇ ಆದರೂ ಅದಕ್ಕೆ ಪೂರ್ವಪೀಠಿಕೆಯಾಗಿ ಹಲಕೆಲವು ಉಪಗಮ್ಯಗಳೂ ಇವೆ. ಇವನ್ನೆಲ್ಲಾ ಒಟ್ಟುಗೂಡಿಸಿ ಆಧುನಿಕ ಕಾಲದಲ್ಲಿ ಜೀವನದ ಮೌಲ್ಯಗಳು ಎಂದು ಕರೆಯುತ್ತಾರೆ. ಈ ಜೀವನದ ಮೌಲ್ಯಗಳನ್ನೇ ನಮ್ಮ ಹಿರಿಯರು ಪುರುಷಾರ್ಥಗಳೆಂದು ಕರೆಯುತ್ತಿದ್ದರು. ಧರ್ಮ, ಅರ್ಥ, ಕಾಮ ಮತ್ತು ಮೋಕ್ಷ ಎಂಬುವುಗಳೇ ಪುರುಷಾರ್ಥಗಳು. ಇವು ನಾಲ್ಕು ಇರುವುದರಿಂದ ಚತುರ್ವಿಧ ಪುರುಷಾರ್ಥವೆಂದೂ ಹೇಳುತ್ತಾರೆ.

'ಧರ್ಮ' ಎನ್ನುವ ಶಬ್ದ ಬಹಳ ವಿಶಾಲಾರ್ಥವನ್ನು ಒಳಗೊಂಡಿದೆ. ಅದಕ್ಕೆ ಸ್ವಭಾವ, ಗುಣ, ಕರ್ತವ್ಯ ಮೊದಲಾಗಿ ಅನೇಕ ಅರ್ಥಗಳು ಇವೆ. ಪ್ರತಿಯೊಬ್ಬನೂ ತನ್ನ ಧರ್ಮವೇನೆಂದು ಅರ್ಥಮಾಡಿಕೊಂಡು ಅದಕ್ಕೆ ಅನುಸಾರವಾಗಿ ನಡೆದು ಅರ್ಥವನ್ನು ಆರ್ಜಿಸಿ, ಧರ್ಮದ ತಳಹದಿಯ ಮೇಲೆ ಕಾಮವನ್ನು ಅನುಭವಿಸಿ, ಮೋಕ್ಷವನ್ನು ಪಡೆದುಕೊಳ್ಳುವುದೇ ಪರಮಪುರುಷಾರ್ಥ. ಈ ಪರಮಪುರುಷಾರ್ಥವನ್ನು ಪಡೆದುಕೊಳ್ಳುವುದಕ್ಕಾಗಿ ನಮ್ಮ ಋಷಿಮುನಿಗಳು ವೇದಶಾಸ್ತ್ರಗಳ ಅಭ್ಯಾಸವನ್ನು ಮಾಡಿ ಅದರ ಸಾರವನ್ನು ಅನುಭವಕ್ಕೆ ತಂದುಕೊಳ್ಳುತ್ತಿದ್ದರು. ಆದ್ದರಿಂದಲೇ—

> ಆಲೋಡ್ಯ ಸರ್ವಶಾಸ್ತ್ರಾಣಿ ವಿಚಾರ್ಯ ಚ ಮುಹುರ್ಮುಹುಃ ।
> ಇದಮೇಕಂ ಸುನಿಷ್ಪನ್ನಂ ಧ್ಯೇಯೋ ನಾರಾಯಣಃ ಸದಾ ॥

ಎಂಬ ಆರ್ಷವಾಣಿ ಪ್ರಸಿದ್ಧವಾಗಿದೆ.

ಎಲ್ಲ ಶಾಸ್ತ್ರಗಳನ್ನು ವ್ಯಾಸಂಗ ಮಾಡಿ, ಅನೇಕಬಾರಿ ವಿಚಾರಮಾಡಿ, ತಿಳಿದುಕೊಳ್ಳುವುದೇನೆಂದರೆ ನಾರಾಯಣನೇ ಯಾವಾಗಲೂ ನಮ್ಮ ಧ್ಯೇಯವೆಂದು (ಧ್ಯಾನಯೋಗ್ಯನು, ಗುರಿಗಮ್ಯನು). ಆದರೆ ಈ ಕಾಲದಲ್ಲಿ ಎಲ್ಲರೂ ವೇದಶಾಸ್ತ್ರಗಳನ್ನು ಓದುವುದು ಸುಲಭವಲ್ಲ; ಓದಿದರೂ ಅರ್ಥಮಾಡಿಕೊಳ್ಳುವುದಂತೂ ಅಸಾಧ್ಯ.

ಅಲ್ಲದೇ ಈ ಕಾಲದಲ್ಲಿ ಜೀವನೋಪಾಯ ಬಹಳ ಕಷ್ಟವಾಗಿ, ನಮ್ಮ ಎಲ್ಲ ಪ್ರಯತ್ನವೂ ಅದನ್ನು ಸಂಪಾದಿಸುವುದರಲ್ಲಿಯೇ ಪರ್ಯವಸಾನವಾಗುತ್ತದೆ. ಆದ್ದರಿಂದ ಶಾಸ್ತ್ರಜ್ಞಾನ ಸಂಪಾದಿಸುವುದೆಲ್ಲಿ ಬಂತು? ಯಾರೋ ಎಲ್ಲಿಯೋ ಕೆಲವು ಮಂದಿ ಶಾಸ್ತ್ರ ಕಲಿತರೂ ಅವರು ಕಲಿತ ತತ್ತ್ವಗಳನ್ನು ಅನುಭವಕ್ಕೆ ತಂದುಕೊಂಡು ಆತ್ಮಸಾಕ್ಷಾತ್ಕಾರ ಪಡೆಯಬೇಕೆನ್ನುವವರಂತೂ ವಿರಳ. ಯಾರಾದರೂ ಹಾಗೆ ಬಯಸಿದರೂ ಮಾರ್ಗದರ್ಶನ ಮಾಡುವ ಸಮರ್ಥ ಗುರುಗಳಂತೂ ಸಿಕ್ಕುವುದೇ ಇಲ್ಲ. 'ಆಚಾರ್ಯವಾನ್ ಪುರುಷೋ ವೇದ" ಎಂಬ ಶಾಸ್ತ್ರೋಕ್ತಿಯಂತೆ ಆತ್ಮಜ್ಞಾನಿಯಾದ ಗುರುವೇ ಬೇಕು, ಆತ್ಮಸಾಕ್ಷಾತ್ಕಾರಕ್ಕೆ.

ಈಶ್ವರಪ್ರಾಪ್ತಿ, ಆತ್ಮಸಾಕ್ಷಾತ್ಕಾರ, ದೇವಸಾಕ್ಷಾತ್ಕಾರ—ಇತ್ಯಾದಿ ಶಬ್ದಗಳೆಲ್ಲ ಒಂದೇ ಅರ್ಥವುಳ್ಳವು. ಈ ಆತ್ಮಸಾಕ್ಷಾತ್ಕಾರಕ್ಕೆ ಒಂದೇ ಉಪಾಯ ಧ್ಯಾನ. ಧ್ಯಾನದಿಂದ ಆತ್ಮಸಾಕ್ಷಾತ್ಕಾರವಾಗುತ್ತದೆ. ಇದು ಸಿದ್ಧಿಸಬೇಕಾದರೆ ನಮ್ಮಲ್ಲಿ ಮೋಕ್ಷ ಬೇಕೆಂದು ಬಲವಾದ ಇಚ್ಛೆ ಇರಬೇಕು. ಇದನ್ನೇ ಮುಮುಕ್ಷುತ್ವ ಎಂದು ಪ್ರಾಚೀನರು ಕರೆಯುತ್ತಿದ್ದರು. ಆತ್ಮಜ್ಞಾನಕ್ಕೆ ವಿವೇಕ, ವೈರಾಗ್ಯ, ಷಟ್‌ಸಂಪತ್ತಿ, ಮುಮುಕ್ಷುತ್ವ ಎಂಬ ಸಾಧನಚತುಷ್ಟಯ ಬೇಕೆಂದೂ ಹೇಳುತ್ತಿದ್ದರು. ಮುಮುಕ್ಷುತ್ವವೆಂಬ ಒಂದು ಗುಣವಿದ್ದರೆ, ಅದನ್ನು ಬೆಳಸಿಕೊಂಡು ಉಳಿದವುಗಳನ್ನು ಅನಾಯಾಸವಾಗಿ ಪಡೆಯಬಹುದು ಎಂಬುದು ಈಗಿನ ಮತ.

ಅಂತೆಯೇ ವೇದಾಂತತತ್ತ್ವಗಳನ್ನೆಲ್ಲ ಗುರುಮುಖೇನ ತಿಳಿದು ಮನಸ್ಸಿನಲ್ಲಿ ಅವುಗಳ ಅರ್ಥವನ್ನು ಚಿಂತಿಸಿ, ಅದನ್ನು ಅನುಭವಕ್ಕೆ ತಂದುಕೊಳ್ಳುವ ಸಲುವಾಗಿ ಧ್ಯಾನಮಾಡುವ ಪರಿಪಾಠವಿತ್ತು. ಇದನ್ನೇ ಶ್ರವಣ, ಮನನ, ನಿದಿಧ್ಯಾಸನ ಎಂದು ಕರೆಯುತ್ತಿದ್ದರು. ಈಗಲಾದರೋ ಮುಮುಕ್ಷುವಾದವನು ಧ್ಯಾನದಿಂದಲೇ ತನ್ನ ಸಾಧನೆಯನ್ನು ಪ್ರಾರಂಭಿಸುವನು. ಎಂದರೆ, ಸಾಧನ ಚತುಷ್ಟಯವನ್ನು ಅಳವಡಿಸಿಕೊಂಡು ಶ್ರವಣ, ಮನನಗಳನ್ನು ಕಳೆಯಬೇಕಾಗಿದ್ದ ಕಾಲವನ್ನೆಲ್ಲ ಉಳಿಸಿ ಧ್ಯಾನದಿಂದಲೇ ನಮ್ಮ ನಿಜವಾದ ಸಾಧನೆ ಪ್ರಾರಂಭವಾಗುತ್ತದೆ. ಇದೇ ಸಹಜಮಾರ್ಗ. ಇದು ಸರಳಗೊಳಿಸಿದ ರಾಜಯೋಗ. ರಾಜಯೋಗದಲ್ಲಿ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣಾ, ಧ್ಯಾನ, ಸಮಾಧಿಗಳೆಂಬ ಎಂಟು ಅಂಗಗಳಿವೆ. ಅವುಗಳಲ್ಲಿ ಯಾವುದಾದರೂ ಸುಖಾಸನದಲ್ಲಿ ಕುಳಿತು ಧ್ಯಾನಮಾಡಬೇಕೆಂದು ಏಳನೇ ಅಂಗದಿಂದ ಸಹಜಮಾರ್ಗ ಪ್ರಾರಂಭವಾಗುತ್ತದೆ. ಧ್ಯಾನವನ್ನು ರಾಜಯೋಗದಲ್ಲಿ ಹೇಳಿರುವಂತೆಯೇ ಹೃದಯದ ಮೇಲೆ ಮಾಡುತ್ತೇವೆ. ಹೃದಯದಲ್ಲಿ ದೈವೀಪ್ರಕಾಶವಿದೆಯೆಂದು ಭಾವಿಸಿಕೊಂಡು ಧ್ಯಾನ ಮಾಡುತ್ತೇವೆ.

ಸಹಜಮಾರ್ಗದಲ್ಲಿ ಬೆಳಗ್ಗೆ ೧ಘಂಟೆಯ ಕಾಲ ಸುಖಾಸನದಲ್ಲಿ ಕುಳಿತು ಹೃದಯದಲ್ಲಿ ಈಶ್ವರೀ ಪ್ರಕಾಶವಿದೆಯೆಂದು ಧ್ಯಾನಮಾಡುತ್ತೇವೆ. ಬೇರೆಯ ವಿಚಾರಗಳು ಧ್ಯಾನಕಾಲದಲ್ಲಿ ಬರುವುದು ಸಹಜ. ಅವುಗಳಿಗೆ ಲಕ್ಷ್ಯಕೊಡದೇ ಅವುಗಳನ್ನು ತಳ್ಳಿಹಾಕಿ ದೈವೀಪ್ರಾಕಾಶವಿದೆಯೆಂಬ ವಿಚಾರದಲ್ಲೇ ಮಗ್ನವಾಗಲು ಪ್ರಯತ್ನಮಾಡುತ್ತೇವೆ. ಚಿತ್ತೈಕಾಗ್ರತೆಗಾಗಿ ಪ್ರಯತ್ನಪಡುವುದಿಲ್ಲ, ಧ್ಯಾನದ ಫಲವಾಗಿ ಚಿತ್ತೈಕಾಗ್ರತೆ ಬರಬಹುದು.

ಸಾಯಂಕಾಲ ಸುಮಾರು ಅರ್ಧಘಂಟೆಯಕಾಲ ಸುಖಾಸನದಲ್ಲಿ ಕುಳಿತು ನಮ್ಮಲ್ಲಿರುವ ಮಲ, ವಿಕಾರ, ಜಟಿಲತೆ, ಸ್ಥೂಲತೆಗಳೆಲ್ಲಾ ಹೊಗೆಯ ರೂಪದಲ್ಲಿ ಅಥವಾ ಆವಿಯ ರೂಪದಲ್ಲಿ ಹಿಂಬಾಗದಿಂದ ಹೋಗುತ್ತಿದೆ ಎಂದು ಭಾವಿಸಿಕೊಂಡು ಕೂಡಬೇಕು. ಅದನ್ನೇ ಕುರಿತು ಧ್ಯಾನಮಾಡಬಾರದು. ಇದರಿಂದ ನಮ್ಮ ಮನಸ್ಸಿನಲ್ಲಿರುವ ಕಶ್ಮಲವೆಲ್ಲ ಹೋಗಿ ಮಾರನೆಯದಿನ ಬೆಳಗ್ಗೆ ಧ್ಯಾನ ಮಾಡುವುದಕ್ಕೆ ಬಹಳ ಸಹಾಯಕವಾಗುತ್ತದೆ. ಇಷ್ಟಲ್ಲದೆ, ರಾತ್ರಿ ಮಲಗುವ ವೇಳೆಯಲ್ಲಿ ಆರ್ತಭಾವದಿಂದ ಕುಳಿತು ಬಹಳ ದೈನ್ಯದಿಂದ ತನ್ನ ಮುಂದೆ ದೇವರಿರುವಂತೆ ಭಾವಿಸಿಕೊಂಡು 'ಹೇ ನಾಥ, ನೀನೇ ಮಾನವಜೀವನದ ನಿಜವಾದ ಗುರಿ ; ನಮ್ಮ ಇಚ್ಛೆಗಳು ನಮ್ಮ ಆತ್ಮೋನ್ನತಿಯಲ್ಲಿ ಬಾಧಕವಾಗಿವೆ ; ನೀನೇ ನಮ್ಮ ಏಕಮಾತ್ರ ಸ್ವಾಮಿ ಮತ್ತು ಇಷ್ಟದೈವ ; ನಿನ್ನ ಸಹಾಯವಿಲ್ಲದೆ ; ನಿನ್ನ ಪ್ರಾಪ್ತಿ ಅಸಂಭವ." ಎಂಬ ಪ್ರಾರ್ಥನೆಯನ್ನು ಒಂದೆರಡು ಬಾರಿ ಹೇಳಿ ಅದರ ಅರ್ಥವನ್ನೇ ಚಿಂತಿಸುತ್ತಾ ಅದರಲ್ಲಿಯೇ ಮುಳುಗಿ ಮಲಗಬೇಕು. ಈ ಪ್ರಾರ್ಥನೆಗೆ ಮೊದಲು ತಾನು ಮಾಡಿದ ತಪ್ಪಿಗಾಗಿ ಕ್ಷಮೆ ಬೇಡಿ, ಪುನಃ ಅಂತಹ ತಪ್ಪು ಮಾಡದಂತೆ ಅನುಗ್ರಹಿಸೆಂದು ಕೇಳಿಕೊಳ್ಳುವುದು. ಈ ರೀತಿಯಲ್ಲಿ ಬೆಳಗ್ಗೆ ೧ ಘಂಟೆ, ಸಂಜೆ (ರಾತ್ರಿ) ಅರ್ಧ ಘಂಟೆ ಮತ್ತು ಮಲುಗವಾಗ ಐದು ನಿಮಿಷಗಳು ಸಾಧನೆಮಾಡಬೇಕು. ಇದಕ್ಕೆ ಒಬ್ಬ ಸಮರ್ಥ ಗುರುವಿನ ಮಾರ್ಗದರ್ಶನಬೇಕು. ಇಲ್ಲದಿದ್ದರೆ ಸಾಧ್ಯವಿಲ್ಲ. ಇದಕ್ಕೆ ಜಾತಿ, ಮತ, ಪಂಥ, ಜನಾಂಗ, ಲಿಂಗ–ಯಾವ ಬಂಧನವೂ ಇಲ್ಲ. ಹಿಂದೆ ಹೇಳಿದಂತೆ ಮುಮುಕ್ಷುತ್ವ ಒಂದೇ ಬೇಕಾದ ಅರ್ಹತೆ. ಅದು ಇದ್ದವನಿಗೆ ಸಹಜಮಾರ್ಗದಲ್ಲಿ ಗುರು ಪ್ರಾಣಾಹುತಿಯಿಂದ (ಯೋಗಶಕ್ತಿ) ಅಧ್ಯಾತ್ಮಶಕ್ತಿಯನ್ನೇ ಧಾರೆಯೆರೆಯುತ್ತಾನೆ.

ಈ ಪ್ರಾಣಾಹುತಿ ಕಾರಣಶರೀರದಲ್ಲಿ ಅಧ್ಯಾತ್ಮದ ಬೀಜವನ್ನು ಬಿತ್ತಿ, ಕಾರಣಶರೀರದಿಂದ ಸೂಕ್ಷ್ಮಶರೀರಕ್ಕೆ ವ್ಯಾಪಿಸಿ ಸ್ಥೂಲಶರೀರಕ್ಕೆ ಹರಿದು ಸಾಧಕನ ಶರೀರವನ್ನೆಲ್ಲಾ ದೈವೀಕರಿಸುತ್ತದೆ. ಈ ಶಕ್ತಿಯಿಂದ ಹೃದಯದಲ್ಲಿನ ಧ್ಯಾನ ಮುಂದೆ ಸಾಗಿ, ಪರಮಾತ್ಮನನ್ನು ತಲುಪುತ್ತದೆ. ಹೀಗೆ ಹೃದಯದಿಂದ ಜೀವಾತ್ಮನು ಹೊರಟು ಸ್ಥೂಲ, ಸೂಕ್ಷ್ಮ, ಕಾರಣ ಶರೀರಗಳ ಮೂಲಕ ಹಾದು ಹೋಗಿ ಕೇಂದ್ರವಾದ ಪರಮಾತ್ಮನನ್ನು ಸೇರುತ್ತಾನೆ. ಇದೇ ಆಧ್ಯಾತ್ಮಿಕ ಪ್ರಯಾಣ.

ಈ ಪ್ರಯಾಣದಲ್ಲಿ ಯಶಸ್ವಿಯಾಗಲು ಈಗಾಗಲೇ ಯಶಸ್ವಿಯಾಗಿ ಪ್ರಯಾಣ ಮಾಡಿ ಗುರಿ ತಲುಪಿರುವ ಸಮರ್ಥ ಮಾರ್ಗದರ್ಶಕನೊಬ್ಬ ಬೇಕು.

ಉತ್ತರಪ್ರದೇಶದ ಷಹಜಹಾನ್ ಪುರದಲ್ಲಿ ಶ್ರೀ ರಾಮಚಂದ್ರಜೀ ಎಂಬ ಒಬ್ಬ ಸಮರ್ಥ ಗುರುವಿದ್ದಾರೆ. ಅವರ ಗುರುಗಳು ಉತ್ತರ ಪ್ರದೇಶದ ಫತೇಗಡದಲ್ಲಿದ್ದರು. ಅವರ ಹೆಸರೂ ಕೂಡ ಶ್ರೀರಾಮಚಂದ್ರಜೀ ಮಹಾರಾಜ್ ಎಂದಿದ್ದಿತು. ಅವರ ಹೆಸರಿನಲ್ಲಿ ಷಹಜಹಾನಪುರದ ಶ್ರೀ ರಾಮಚಂದ್ರಜೀಯವರು ೧೯೪೫ರಲ್ಲಿ "ಶ್ರೀ ರಾಮಚಂದ್ರ ಮಿಷನ್" ಎಂಬ ಆಧ್ಯಾತ್ಮಿಕ ಸಂಸ್ಥೆಯನ್ನು ಸ್ಥಾಪಿಸಿದರು. ಆ ಸಂಸ್ಥೆಯ ಮುಖ್ಯಗುರಿ ಆಧ್ಯಾತ್ಮಿಕ ಶಿಕ್ಷಣ. ಈಶ್ವರಪ್ರಾಪ್ತಿ ಅಥವಾ ಆತ್ಮಸಾಕ್ಷಾತ್ಕಾರ ಸಹಜಮಾರ್ಗದ ಗುರಿ. ಅದಕ್ಕೆ ಸಾಧನೋಪಾಯ ಧ್ಯಾನ. ಧ್ಯಾನದಿಂದ ಸಮಾಧಿ ಆಳವಡುತ್ತದೆ. ಸಮಾಧಿಯೇ ಆಧ್ಯಾತ್ಮಿಕ ಪ್ರಯಾಣದ ಮೊದಲ ಮೆಟ್ಟಲು. ಅಲ್ಲಿಂದ ಜೀವಾತ್ಮನು ಪರಮಾತ್ಮನನ್ನು ಸೇರಲು ಅನೇಕ ಆವರಣಗಳನ್ನು ದಾಟಬೇಕು. ಹೀಗೆ ದಾಟಲು ನಮ್ಮ ಗುರುವಿನ ಪ್ರಾಣಾಹುತಿ ತುಂಬ ಸಹಾಯಮಾಡುತ್ತದೆ. ಈ ಪ್ರಾಣಾಹುತಿ ಪ್ರಾಚೀನ ಕಾಲದಲ್ಲಿ ಪ್ರಚಲಿತವಿದ್ದು ಈಗ್ಗೆ ಅನೇಕ ಶತಮಾನಗಳಿಂದ ಮಾಯವಾಗಿತ್ತು. ಆದರೆ ನಮ್ಮ ಸಮರ್ಥ ಪರಮಗುರುಗಳಿಂದ ನಮ್ಮ ಗುರುಗಳು ಪಡೆದು ಅದನ್ನು ಅತಿ ಸಾಮಾನ್ಯವಾಗಿ ಬಳಸುತ್ತಿದ್ದಾರೆ. ಇದರಿಂದ ನಾವು ಎಷ್ಟೋ ಜನ್ಮಗಳು ಸಾಧನೆಮಾಡಿ ಮೋಕ್ಷ ಪಡೆಯಬೇಕೆಂದು ಇದ್ದ ನಂಬಿಕೆಯು ದೂರವಾಗಿ, ಇದೇ ಜನ್ಮದಲ್ಲಿ–ಇದೇ ಜನ್ಮದ ಸ್ವಲ್ಪವೇ ಅವಧಿಯಲ್ಲಿ–ಮೋಕ್ಷ ಪಡೆಯಲು ಸಾಧ್ಯವಾಗಿದೆ.

ಈ ಸರಳ ಯೋಗಾಭ್ಯಾಸವನ್ನು ಜನಪ್ರಿಯಗೊಳಿಸಲು ಶ್ರೀರಾಮಚಂದ್ರ ಮಿಷನ್ನನ್ನು ಸ್ಥಾಪಿಸಿದ ನಮ್ಮ ಸಮರ್ಥಗುರು ಶ್ರೀರಾಮಚಂದ್ರ ಜಿ ಮಹಾರಾಜ್ ಅವರು ನಮ್ಮ ದೇಶದ ಅನೇಕ ಕಡೆ ಈ ಯೋಗಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಿದ್ದಾರೆ. ಆ ಕೇಂದ್ರಗಳಲ್ಲಿ ಪ್ರಶಿಕ್ಷಕರನ್ನು ನೇಮಿಸಿ ಅವರ ಮೂಲಕ ಪ್ರಾಣಾಹುತಿ ನೀಡುತ್ತಿದ್ದಾರೆ. ಇವರನ್ನು ನಾವು ಪ್ರೀತಿಯಿಂದ ಬಾಬೂಜಿ ಎಂದು ಕರೆಯುತ್ತೇವೆ. ಹಾಗೆಯೇ ನಮ್ಮ ಪರಮಗುರುಗಳನ್ನು ಎಲ್ಲರೂ ಲಾಲಾಜಿ ಎಂದು ಕರೆಯುತ್ತಿದ್ದರು. (ಈ ಕೇಂದ್ರಗಳು ಯೂರೋಪು ಅಮೇರಿಕ ಮೊದಲಾದ ಹೊರದೇಶಗಳಲ್ಲಿಯೂ ಸ್ಥಾಪಿತವಾಗಿವೆ. ಅಲ್ಲಿಯೂ ಪ್ರಶಿಕ್ಷಕರಿದ್ದಾರೆ.)

"ಅಯಂ ಹಿ ಪರಮೋ ಧರ್ಮಃ ಯದ್ಯೋಗೇನ
ಆತ್ಮದರ್ಶನಂ"—

ಯೋಗಾಭ್ಯಾಸದಿಂದ ಆತ್ಮದರ್ಶನ ಪಡೆಯುವುದೇ ಪರಮಧರ್ಮವೆಂದೂ "ಆತ್ಮ ಲಾಭಾತ್ ಪರಂ ನ ವಿದ್ಯತೇ"—ಆತ್ಮ ಲಾಭಕ್ಕಿಂತ ಹೆಚ್ಚಿನದು ಇಲ್ಲವೆಂದೂ ಹೇಳಿರುವ ಋಷಿವಾಣಿ ಈಗಲೂ ಸತ್ಯವಾದುದೇ ಅಲ್ಲವೇ ?

ಆದುದರಿಂದ ಈ ಕೈಗಾರಿಕಾ ಪ್ರಧಾನವಾದ ಕಾಲದಲ್ಲಿ ಜನರು ಶಾಸ್ತ್ರಾಭ್ಯಾಸಮಾಡಿ ಗುರುಗಳನ್ನು ಹುಡುಕಿ ಬಹುಕಾಲ ಸಾಧನೆ–ತಪಸ್ಸುಗಳನ್ನು ಆಚರಿಸುವುದು ಸಾಧ್ಯವಿಲ್ಲ. ಮನಸ್ಸೊಂದಿದ್ದರೆ ಸಹಜಮಾರ್ಗದ ಮೂಲಕ ನಾವು ಸುಲಭವಾಗಿ ಮೋಕ್ಷ ಪಡೆದುಕೊಳ್ಳಬಹುದು.ಅದಕ್ಕೆ ಬೇಕಾದುದು ಚಿತ್ತಶುದ್ಧಿ.ಪ್ರಶಿಕ್ಷಕರು ನಮ್ಮ ಸಂಸ್ಕಾರಗಳನ್ನು ಹೋಗಲಾಡಿಸಿ, ಹೊಸ ಸಂಸ್ಕಾರಗಳು ಉಂಟಾಗದಂತೆ ಮಾಡಿ ಚಿತ್ತಶುದ್ಧಿಯನ್ನು ನೀಡಿ ಪ್ರಾಣಾಹುತಿಯಿಂದ ನಮ್ಮ ಅಧ್ಯಾತ್ಮಯಾನವನ್ನು ಸುಲಭಮಾಡುತ್ತಾರೆ. ಇದೇ ಸಹಜಮಾರ್ಗದ ವೈಶಿಷ್ಟ್ಯವೆನ್ನಬಹುದು.

ಡಿ. ಟಿ. ರಂಗಸ್ವಾಮಿ

ಗಾಂಧೀಜಿ ಮತ್ತು ಗೀತೆ

ಸದ್ಗ್ರಂಥಗಳು ಯಾವಾಗಲೂ ಚಿರಕಾಲಿಕ ಸತ್ವ ಮತ್ತು ಸತ್ಯಗಳನ್ನೊಳಗೊಂಡು ಸಹೃದಯರೆಲ್ಲರ ವ್ಯಕ್ತಿತ್ವದ ವಿಕಾಸಕ್ಕೆ ಸಾಧನವೂ ಮಾರ್ಗದರ್ಶಕವೂ ಆಗಿವೆ. ಸದ್ಗ್ರಂಥಗಳಿಂದ ಪಡೆಯಬಹುದಾದ ಪ್ರಯೋಜನ ಅನಂತವಾಗಿದೆ. ಅವರವರ ಅಭಿರುಚಿ ಮತ್ತು ಸಂಸ್ಕಾರಗಳಿಗನುಗುಣವಾಗಿ ಯಾವುದೇ ಸತ್ಕೃತಿಗಳು ಉತ್ತಮ ಪ್ರಭಾವವನ್ನು ಬೀರುವುದುಂಟು. ಇವು ಮಹಾ ಮೇಧಾವಿಗಳ ಬುದ್ಧಿ-ಭಾವ-ಪ್ರತಿಭೆಗಳ ತ್ರಿವೇಣೀ ಸಂಗಮ ಪುಣ್ಯಕ್ಷೇತ್ರಗಳಂತಿವೆ ; ಪ್ರತಿಭಾವಂತರ ರಕ್ತಸಂದೇಶಗಳಾಗಿವೆ. ಇವು ಸನ್ಮಿತ್ರರಂತೆಯೂ ಯೋಗ್ಯರಾದ ಅಧ್ಯಾಪಕರಂತೆಯೂ ಓದುಗರಿಗೆ ಎಲ್ಲ ಕಾಲ ದೇಶಕ್ಕೂ ಮಾರ್ಗದರ್ಶನ ನೀಡುತ್ತವೆ. ಬುದ್ಧ ಬಸವಾದಿಗಳು, ಕಾಳಿದಾಸ, ಪಂಪಾದಿಗಳು, ಗಾಂಧಿ, ತಿಲಕ್ ಮೊದಲಾದವರ ಜೀವನದ ಮೇಲೆ ಸದ್ಗ್ರಂಥಗಳು ಪ್ರಭಾವ ಬೀರಿವೆ. ಅವರ ವಿಚಾರಪರತೆ, ಲೋಕಾನುಕಂಪೆ, ಲೋಕಸಂಗ್ರಹ ಕಾಯಕಗಳಿಗೆ ತಮ್ಮದೇ ಆದ ರೀತಿಯಲ್ಲಿ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಇವು ಕಾರಣವಾಗಿವೆ. ಅವರ ಬದುಕುಗಳೂ ಸಾಕ್ಷಿಯಾಗಿವೆ. ಇತರ ವ್ಯಕ್ತಿಗಳೂ, ಇತರ ಸನ್ನಿವೇಶಗಳೂ ಕಾರಣವಾಗಿರುವಂತೆಯೇ ಉನ್ನತ ಗ್ರಂಥಗಳೂ ಕಾರಣವಾಗಿರುತ್ತವೆ.

ಭಾರತದ ಹಲವಾರು ಸದ್ಗ್ರಂಥಗಳಲ್ಲಿ ಭಗವದ್ಗೀತೆಯೂ ಒಂದಾಗಿದೆ. ಇದು ಗಾಂಧೀಜಿಯವರ ಜೀವನದ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿರುವುದುಂಟು. ಗಾಂಧೀಜಿಯವರು ಸೆರೆಮನೆಯಲ್ಲಿದ್ದಾಗ ಇದನ್ನು ತಮ್ಮ ವಿರಾಮಕಾಲದ ಓದುವ ಪುಸ್ತಕವಾಗಿ ಓದಲಿಲ್ಲ ; ಬಹು ಶ್ರದ್ಧೆಯಿಂದ ಅಧ್ಯಯನ ಮಾಡಿದರು. ಗೀತೆಯ ಬೆಳಕು-ನುಡಿಯಂತೆಯೇ ಆದರು. ಈ ಬೆಳಕು-ನುಡಿಯ ಫಲಶ್ರುತಿಯನ್ನೇ ತಮ್ಮ ಸಮಷ್ಟಿ ಬದುಕಿನಲ್ಲಿ ತೋರಿದರು. ಗಾಂಧೀಜಿಯವರು ಕೇವಲ ರಾಜಕಾರಣಿ ಮಾತ್ರವಲ್ಲ ; ಬ್ಯಾರಿಸ್ಟರ್ ಮಾತ್ರವಲ್ಲ ; ಸಮಾಜ ಸುಧಾರಕ ಮಾತ್ರವಲ್ಲ ; ಪತ್ರಿಕೋದ್ಯಮಿ ಮಾತ್ರವಲ್ಲ ; ಹರಿಜನಬಂಧು ಮಾತ್ರವಲ್ಲ ; ಸ್ವಾತಂತ್ರ್ಯಯೋಧ ಮಾತ್ರವಲ್ಲ; ವಿಶೇಷವಾಗಿ ಆಧ್ಯಾತ್ಮಜೀವಿಯೂ ವೀರಸನ್ಯಾಸಿಯೂ ಮಹಾಪರಿವ್ರಾಜಕರೂ ಆಗಿದ್ದರು. ತಮ್ಮ ವ್ಯಷ್ಟಿಜೀವನದಲ್ಲಿ ಸಮಷ್ಟಿಬದುಕಿನ ಗುರಿಯನ್ನೇ ಹೊಂದಿದ್ದರು. ಗೀತೆಯಲ್ಲಿ ಹೇಳಿರುವ ಹಾಗೆ ನಿಜವಾದ ಸ್ಥಿತಪ್ರಜ್ಞರೇ ಆಗಿದ್ದರು. ಸತ್ಯಾಗ್ರಹಿಗೆ ಬೇಕಾದ ಸಿದ್ಧತೆಗಳೆಲ್ಲವೂ ಇವರಿಗೆ ಗೀತೆಯಿಂದಲೇ ಬಂದಿವೆ.

ಗೀತೆಯು ಅರ್ಜುನನಿಗೆ ಉಂಟಾದ ವಿಷಾದಯೋಗವನ್ನು ಬಗೆಹರಿಸಲೂ ಕರ್ತವ್ಯನಿಷ್ಠೆಯನ್ನು ವಿವರಿಸಲೂ ಸಾರಿದ ಶ್ರೀಕೃಷ್ಣೋಪದೇಶ. ಇದು ಉಪನಿಷತ್ತುಗಳ ಸಾರವೇ ಆಗಿದೆ. ಅರ್ಜುನ ಇಲ್ಲಿ ನಿಮಿತ್ತ ಮಾತ್ರ, ಇದು ಯುದ್ಧಗೀತೆಯೂ, ಕ್ರಾಂತಿಗೀತೆಯೂ ಆಗಿದೆ. ಆತ್ಮತತ್ತ್ವವನ್ನು ತಿಳಿದು, ಸ್ಥಿತಪ್ರಜ್ಞನಾಗಿ, ಸ್ವಧರ್ಮ ಪಾಲನೆಗಾಗಿ ಅನಾಸಕ್ತರೀತಿಯಿಂದ ಕರ್ತವ್ಯವನ್ನು ನಿಷ್ಠೆಯಿಂದ ಪಾಲಿಸಬೇಕೆಂಬುದನ್ನು ಉಪದೇಶಿಸುತ್ತದೆ. ಗೀತೆಯ ಅಂತರಾರ್ಥವನ್ನೆಲ್ಲಾ ಬಹು ಸಂಗ್ರಹವಾಗಿ ಹೇಳುವುದು ಬಹು ಕಷ್ಟ ; ದೊಡ್ಡ ಹಿಮಾಲಯವನ್ನು

ಕುರುಡನೊಬ್ಬನು ತಡವರಿಸಿಕೊಂಡು ಹೇಳಿದಂತಾಗುತ್ತದೆ. ಇದೊಂದು ಧರ್ಮಗ್ರಂಥ, ಜೀವನ ವಿವೇಕಕ್ಕೆ ಅಗತ್ಯವಾದ ಗ್ರಂಥವೆನಿಸಿದೆ. ಧರ್ಮವು ಯಾವಾಗಲೂ ಬಹು ಸೂಕ್ಷ್ಮ, ನಿಗೂಢವಾದುದು. ಇದರ ಶಕ್ತಿ ಅನಂತ. ಗೀತೆಯು ಹೇಳುವ ಉಪದೇಶವೂ ಬಹು ವ್ಯಾಪಕವೂ ಶಕ್ತಿಯುತವೂ ಆಗಿದೆ. ಅರ್ಜುನನೊಬ್ಬನೇ ಗೀತೋಪದೇಶದಿಂದ ಪರಿಣಾಮಗೊಂಡಿಲ್ಲ ; ಅನೇಕ ಪ್ರಮುಖರು, ಮಹಾನುಭಾವರು ಪರಿಣಾಮಗೊಂಡಿದ್ದಾರೆ. ಈ ಎಲ್ಲರಿಗಿಂತ ಗಾಂಧೀಜಿಯವರು ಅಧಿಕರೀತಿಯಲ್ಲಿ ಪರಿಣಾಮಗೊಂಡಿರುವುದನ್ನು ಕಾಣಬಹುದಾಗಿದೆ.

ಅರ್ಜುನನಿಗೆ ಅಲ್ಲಿ ಕುರುಕ್ಷೇತ್ರವಿದೆ, ಗಾಂಧೀಜಿಗೆ ಇಲ್ಲಿ ಭಾರತಕ್ಷೇತ್ರವಿದೆ ; ಅಲ್ಲಿ ಶತ್ರುಗಳು ಕೌರವರು ಇಲ್ಲಿ ದಾಸ್ಯ, ಅನಕ್ಷರತೆ, ಸಾಮ್ರಾಜ್ಯಶಾಹಿ, ಮತೀಯತೆ, ಅಸ್ಪೃಶ್ಯತೆ ಮೊದಲಾದ ಮಹಾಶತ್ರುಗಳು ಇದ್ದಾರೆ. ಅಲ್ಲಿ ಕೃಷ್ಣ, ಇಲ್ಲಿ ಭಾರತಾಂಬೆ ; ಅಲ್ಲಿ ಕೃಷ್ಣಭಕ್ತಿಯಿಂದ ಅರ್ಜುನ ಪ್ರಚೋದಿತ, ಇಲ್ಲಿ ರಾಷ್ಟ್ರಭಕ್ತಿಯಿಂದ ಗಾಂಧೀಜಿ ಪ್ರಚೋದಿತರು ; ಅಲ್ಲಿ ವಿಶ್ವರೂಪ ದರ್ಶನಪ್ರಾಪ್ತಿ, ಇಲ್ಲಿ ದರಿದ್ರನಾರಾಯಣನ ನಿಜರೂಪ ದರ್ಶನ ಪ್ರಾಪ್ತಿ; ಅಲ್ಲಿಯೂ ಮಹಾಕರ್ತವ್ಯ, ಇಲ್ಲಿಯೂ ಮಹಾಕರ್ತವ್ಯ–ಹೀಗೆ ಅರ್ಜುನನಿಗಿಂತ ಮಿಗಿಲಾಗಿ ಗಾಂಧೀಜಿಯು ಗೀತೆಯನ್ನು ಆರಾಧಿಸಿದ ಪರಿಣಾಮವಾಗಿ ಪ್ರಭಾವಗೊಂಡಿದ್ದಾರೆ.

ಗಾಂಧೀಜಿಯವರು ಗೀತೆಯನ್ನು 'ಗೀತಾಮಾತೆ' ಎಂದೇ ಕರೆದಿದ್ದಾರೆ. ಇವರ ಪೂಜ್ಯಭಾವಕ್ಕೆ ಇದು ಕುರುಹು ಮಾತ್ರನಲ್ಲ ; ಹೆತ್ತತಾಯಿಯು ಜನ್ಮ ನೀಡಿದ ಮಾತೆಯಾದರೆ ಗೀತೆಯು ಆತ್ಮಸ್ವರೂಪದ ದರ್ಶನ ಮಾಡಿಸಿ ನಿಜವಾದ 'ದ್ವಿಜ' ನನ್ನಾಗಿಸುವ ಮಹಾಮಾತೆ. ಕಾಮಧೇನುವಿನಂತೆ ಗೀತೆಯು ಸಂಪೂರ್ಣವಾಗಿ ನಮ್ಮ ಇಚ್ಛೆಗಳನ್ನು ಪೂರ್ಣಗೊಳಿಸುತ್ತದೆ. ನಮ್ಮ ಆಧ್ಯಾತ್ಮಿಕ ಜೀವನದಲ್ಲಿ ದೃಢಗೊಳಿಸಲು ಬೇಕಾದ ಹಾಲಿಗಾಗಿ ಕರುಗಳಂತೆ ಸಾಧಕರೂ ಬೇಡಿದರೆ ಈ ಅಮರಮಾತೆ ಯಥೇಷ್ಟವಾಗಿ ನೀಡಬಲ್ಲಳು. ಆದ್ದರಿಂದ ಇದಕ್ಕೆ 'ಗೀತಾಮಾತೆ' ಎಂದು ಹೆಸರು ಕೊಟ್ಟಿರುವುದೂ ಉಚಿತವಾಗಿದೆ.

ಗೀತೆಯನ್ನು ಕುರಿತು ಹಿಂದಿನ ಆಚಾರ್ಯತ್ರಯರೂ ಪ್ರಸಿದ್ಧ ವಿದ್ವಾಂಸರೂ ಭಾಷ್ಯ, ವಿವರಣೆ ರಚಿಸಿರುವುದುಂಟು. ವಿವಿಧ ಭಾಷೆ, ಸಂಪ್ರದಾಯ,ಮತಧರ್ಮದವರೆಲ್ಲರೂ ಈ ಗೀತೆಯನ್ನುಅನುವಾದಿಸಿರುವುದುಂಟು,ವ್ಯಾಖ್ಯಾನಗೈದಿರುವುದುಂಟು. ಅರವಿಂದರು, ತಿಲಕ್, ಸ್ವಾಮಿ ವಿವೇಕಾನಂದ ಮೊದಲಾದವರೂ ಇದರಿಂದ ಹೆಚ್ಚಿನ ಪರಿಣಾಮ ಪಡೆದಿದ್ದಾರೆ.

ಗೀತೆಯು ವೇದೋಪನಿಷತ್ತುಗಳ ಸಾರ ; ಭಾರತೀಯ ತತ್ತ್ವಜ್ಞಾನ ಹಾಗೂ ಸಾಧನಾಮಾರ್ಗಗಳ ಸಮನ್ವಯ ಮಾರ್ಗದರ್ಶನವೂ ಆಗಿದೆ. ಉಪನಿಷತ್ತು, ಬ್ರಹ್ಮಸೂತ್ರಗಳಷ್ಟೇ ಮುಖ್ಯವಾಗಿ ಪ್ರಸ್ಥಾನತ್ರಯಗಳಲ್ಲಿ ಒಂದೆನಿಸಿದೆ, ಮಹಾನ್ ಆಚಾರ್ಯತ್ರಯರೂ ಇದಕ್ಕೆ ವ್ಯಾಖ್ಯಾನ ಬರೆದಿದ್ದಾರೆ. ದೇಶ, ವಿದೇಶಗಳ ಅನೇಕ ಭಾಷೆಗಳಲ್ಲಿ ಇದರ ಅನುವಾದ, ವಿವರಣೆಗಳು ಪ್ರಕಟವಾಗಿವೆ. ಯಾವ ಮಹಾಕಾವ್ಯಕ್ಕೂ ದೊರೆಯದಿರುವಷ್ಟು ಪೂಜ್ಯತೆಯು ಗೀತೆಗೆ ದೊರೆತಿದೆ.

ಗಾಂಧೀಜಿಯವರು ಗೀತೆಗೆ ಪೂಜ್ಯತೆಯನ್ನು ದೊರಕಿಸುವುದಕ್ಕೆ ಶ್ರಮಿಸಿದ್ದಾರೆಂದು ಪರಿಶೀಲಿಸಬೇಕಾಗಿಲ್ಲ; ಇದರಿಂದ ಹಿರಿದಾದ ವ್ಯಕ್ತಿತ್ವವನ್ನು ಅವರು ಪಡೆದಿದ್ದಾರೆ. ಗೀತೆಯಲ್ಲಿ ಬರುವ ಒಂದೊಂದು ತತ್ತ್ವದರ್ಶವೂ ಅವರ ಭವ್ಯಬಾಳಿಗೆ ಕಾರಣವಾಗಿದೆಯೆಂಬುದನ್ನು ಕಾಣಬಹುದು. ಕೆಲವು ಶ್ಲೋಕಗಳಿಗೆ ಅವರೇ ಕೊಟ್ಟಿರುವ ಅರ್ಥ ವಿಶೇಷಗಳು ಗಮನಾರ್ಹವಾಗಿವೆ.ಉದಾಹರಣೆಗೆ–ಮೊದಲನೆಯ ಶ್ಲೋಕಕ್ಕೆ ತಾತ್ಪರ್ಯವನ್ನು ಪದಶಃ ವಿವರಿಸಿ, ಅನಂತರ ಟಿಪ್ಪಣಿಯಾಗಿ 'ಶರೀರವೇ ಧರ್ಮ ಕ್ಷೇತ್ರ.ಇದು ಮೋಕ್ಷಕ್ಕೆದ್ವಾರವಾಗಬಲ್ಲುದು.ಪಾಪದಿಂದ ಇದರ ಉತ್ಪತ್ತಿ. ಇದು ಪಾಪಭಾಜನ, ಆದುದರಿಂದ ಇದು ಕುರುಕ್ಷೇತ್ರ.ಕೌರವರು ಎಂದರೆ ಆಸುರೀವೃತ್ತಿಗಳು, ಪಾಂಡವರು ದೈವೀವೃತ್ತಿಗಳು. ಪ್ರತಿಯೊಂದು ಶರೀರದಲ್ಲಿಯೂ ಒಳ್ಳೆಯವೃತ್ತಿ ಕೆಟ್ಟವೃತ್ತಿಗಳಿಗೆ ಕಲಹ ನಡೆಯುತ್ತಿರುವುದನ್ನು ಅನುಭವಿಸದವರು ಯಾರು ?'–ಎಂದು ವಿವರಿಸಿದ್ದಾರೆ. ಇದು ಗಮನಾರ್ಹವಾಗಿದೆ. ಹೀಗೆಯೇ ಗೀತೆಯ ಕೆಲವು ಶ್ಲೋಕ

ಗಳಿಗೆ ಅಲ್ಲಲ್ಲಿ ವಿಶೇಷ ಟಿಪ್ಪಣಿಯನ್ನು ಇವರು ಬರೆದಿದ್ದಾರೆ. ಸೋದರ್ಯದ ಧರ್ಮ ಕ್ಷೇತ್ರವು ದಾಯಾದಿಮಾತ್ಸರ್ಯದಿಂದ ಪರ್ಯವಸಾನಗೊಂಡು ಕುರುಕ್ಷೇತ್ರದ ರಕ್ತರಣಮಹೋತ್ಸವವಾಯಿತು. ಪ್ರತಿಯೊಬ್ಬನ ಜೀವನವೂ ಬರಿಯ ಕುರುಕ್ಷೇತ್ರವಾಗದೆ ಅದನ್ನು ಧರ್ಮ ಕ್ಷೇತ್ರವನ್ನಾಗಿ ಪರಿವರ್ತಿಸಿಕೊಳ್ಳುವುದೇ ಪರಮಪುರುಷಾರ್ಥ. ಈ ದೇಹವನ್ನು ದೇವರ ನಿವಾಸವೆಂದು ತಿಳಿದು ಹಾಗೆ ಮಾಡಿದರೆ ಇದು ಧರ್ಮ ಕ್ಷೇತ್ರ. ಹೀಗೆ ವ್ಯಷ್ಟಿಜೀವನದಲ್ಲಿ ಮಾತ್ರವಲ್ಲದೆ ಸಮಷ್ಟಿ ಜೀವನದಲ್ಲಿಯೂ ಕೇವಲ ಕುರುಕ್ಷೇತ್ರಕ್ಕೆ ಕಾರಣವಾಗದೆ ಧರ್ಮ ಕ್ಷೇತ್ರವಾಗಬೇಕು. ಇದೇ ರಾಷ್ಟ್ರಜೀವನದ ರಾಷ್ಟ್ರೀಯತೆಯ, ರಾಷ್ಟ್ರೀಯ ಶೀಲದ ಬೆಳವಣಿಗೆಗೆ ಸಾರ್ಥಕ ನೆಲೆ.

ಗಾಂಧೀಜಿಯವರು ಗೀತೆಗೆ 'ಗೀತಾಮಾತೆ' ಎಂದು ಕರೆದುದು ಮಾತ್ರವಲ್ಲದೆ ಇದನ್ನು 'ಅನಾಸಕ್ತಿ ಯೋಗ' ವೆಂದೇ ಕರೆದರು. ಇದೇ ಅರ್ಥದಲ್ಲಿಯೇ ಇವರು ಅನಾಸಕ್ತಯೋಗಿಯೂ ಆಗಿದ್ದರು. ಲೌಕಿಕವಾದ ಯಾವ ಸ್ವಾರ್ಥ–ಸಕಾಮಗಳಿಗೂ ಇವರು ಮನಸ್ಗೊಟ್ಟವರಲ್ಲ.

ಗೀತೆಯನ್ನು ಅಭ್ಯಾಸಮಾಡುವುದರಿಂದ ಪ್ರತಿಯೊಬ್ಬನ ಬಾಳಿಗೂ ದಿವ್ಯವಾದ ಭರವಸೆ ದೊರೆಯುತ್ತದೆ. ಗೀತೆಯ ಭಕ್ತನಿಗೆ ಎಂದೂ ನಿರಾಸೆಗೆ ಎಡೆಯಿಲ್ಲ; ಸದಾ ಆನಂದದಿಂದ ಇರಬಲ್ಲನೆಂಬುದು ಗಾಂಧೀಜಿಯವರ ಅಭಿಪ್ರಾಯವಾಗಿದೆ. ಏಕೆಂದರೆ ಇದು ಬುದ್ಧಿಪೂರ್ವಕವಾದುದಲ್ಲ, ಭಕ್ತಿಪೂರ್ಣವಾದುದು. ಅನನ್ಯಭಕ್ತಿಯಿಂದ ಶ್ರೇಷ್ಠ ಭರವಸೆ ದೊರೆತೇ ದೊರೆಯುತ್ತದೆ. ಗೀತಾಭ್ಯಾಸಿಗಳ ಎಂತಹ ಕ್ಲಿಷ್ಟಸಮಸ್ಯೆಯಲ್ಲಿಯೂ ಇದರಿಂದ ಸಮರ್ಪಕ ಉತ್ತರ ದೊರೆಯುತ್ತದೆ.

ಗೀತೆಯ ರಹಸ್ಯವನ್ನು ಅರಿತುಕೊಳ್ಳುವ ಆವಶ್ಯಕತೆಯು ಗಾಂಧೀಜಿಯವರಿಗೆ ಕಂಡುಬಂದು, ಎಲ್ಲ ಗೀತಾಭ್ಯಾಸಿಗಳಂತೆ ಬರಿಯ ಪಾರಾಯಣವನ್ನು ಮಾಡದೆ, ರಹಸ್ಯವನ್ನರಿತುಕೊಳ್ಳಲು ಪ್ರಯತ್ನಿಸಿದರು. ಇದರಿಂದ ಸತ್ಯಾಗ್ರಹ ರೂಪಿತವಾಯಿತು. ಈ ಸಂಕಲ್ಪವು ಪೂರ್ಣವಾಗಿ ಕಾರ್ಯಗತವಾಗುತ್ತ ಇದಕ್ಕೆ ಹೆಚ್ಚಿನ ಬೆಲೆ ತಂದಿತು. ನಿಜವಾದ ಅಪರಿಗ್ರಹಿ, ಟ್ರಸ್ಟಿ, ಧರ್ಮದರ್ಶಿ–ಇವುಗಳ ಅರ್ಥವು ಗೀತಾರ್ಥಚಂದ್ರಿಕೆಯಲ್ಲಿ ಸುಸ್ಪಷ್ಟವಾಯಿತು. ಗಾಂಧೀಜಿಯವರಿಗೆ ಗೀತೆಯ ತಿರುಳು ಅಪಾರವಾದ ಭಕ್ತಿ, ಶ್ರದ್ಧೆ, ವಿವೇಕಗಳನ್ನುಂಟುಮಾಡಿತು. ಗೀತೆಯು ವಿವರಿಸುವ ಸ್ವಧರ್ಮನಿಷ್ಠೆಯು ಪರಧರ್ಮದ ಎಂಥ ಮೋಹಗಳನ್ನೂ ಇಕ್ಕಿಮೆಟ್ಟಬಲ್ಲದು ; ಧರ್ಮವೇ ಜಯವೆಂಬ ದಿವ್ಯ ಮಂತ್ರವನ್ನು ಹಾಡಬಲ್ಲುದೆಂಬುದಕ್ಕೆ ಗಾಂಧೀಜಿಯವರ ಜೀವನದಲ್ಲಿ ನಡೆದ ಮತಾಂತರಗೊಳಿಸುವ ಪ್ರಯತ್ನದ ಸನ್ನಿವೇಶವನ್ನು ನೋಡಬಹುದು. ಗಾಂಧೀಜಿ ವಿಲಾಯಿತಿಯಲ್ಲಿದ್ದಾಗ ಒಮ್ಮೆ ಬೇಕರ್ ಎಂಬ ಮಿತ್ರರು ವೆಲಿಂಗ್ಟನ್ ಕನ್‌ವೆನ್‌ಷನ್‌ಗೆ ಗಾಂಧೀಜಿಯವರನ್ನು ಕರೆದೊಯ್ದಿದ್ದರು. ಇವರನ್ನು ಮತಾಂತರಗೊಳಿಸಲು ಅವರು ಸರ್ವ ಪ್ರಯತ್ನ ಮಾಡಿದ್ದರು. ಅವರು ಇವರಿಗೆ ಯಾವುದೇ ರೀತಿಯಲ್ಲಿ ಪ್ರಚೋದನೆ ಕೊಟ್ಟಿದ್ದರೂ 'ಆದದ್ದೆಲ್ಲ ಒಳಿತೇ ಆಯಿತು' ಎಂಬಂತೆ ಗೀತೆಯ ಬಗ್ಗೆ ಮತ್ತಷ್ಟು ಹೆಚ್ಚಿನ ಶ್ರದ್ಧೆಯೇ ಬೆಳೆಯಲು ಕಾರಣವಾಯಿತು.

ಗೀತೆಯ ಒಟ್ಟು ತಾತ್ಪರ್ಯ ಅಹಿಂಸೆ ಎಂದು ಸಾರಿ ಹೇಳುತ್ತಾರೆ ಗಾಂಧೀಜಿ. ಗೀತೆಯು ಯುದ್ಧವನ್ನು ಮಾಡು ಎಂದು ಪ್ರಚೋದಿಸುವುದರ ಮೂಲಕ ಹಿಂಸೆಯ ಪಾಠ ಬೋಧಿಸಿಲ್ಲ. ದುರ್ಯೋಧನಾದಿಗಳು ಆಸುರೀವೃತ್ತಿ, ಅರ್ಜುನಾದಿಗಳು ದೈವೀವೃತ್ತಿ. ಈ ಶರೀರವೇ ಧರ್ಮ ಕ್ಷೇತ್ರ. ಇಲ್ಲಿ ಈ ಎರಡು ಗುಣವಿಭಾಗಗಳಿಗೂ ಹೋರಾಟ ನಡೆದೇ ಇರುತ್ತದೆ. ಋಷಿಕವಿ ಇದನ್ನು ಪ್ರತಿಮಾರೂಪದಲ್ಲಿ ಸಂಕೇತಗಳ ಮೂಲಕ ವರ್ಣಿಸುತ್ತಾನೆ. ಕೃಷ್ಣನಂತೂ ಅಂತರ್ಯಾಮಿ. ಯಾವಾಗಲೂ ಶುದ್ಧಚಿತ್ತದಲ್ಲಿ ಗಡಿಯಾರದಂತೆ ಟಿಕ್, ಟಿಕ್ ಮಾಡುತ್ತಿರುತ್ತಾನೆ. ಚಿತ್ತಕ್ಕೆ ಬುದ್ಧಿಯ ಕೀಲಿ ಕೊಡದಿದ್ದರೆ ಅಂತರ್ಯಾಮಿ ಅಲ್ಲೇ ಇದ್ದರೂ ಟಿಕ್ ಟಿಕ್ ನಿಂತುಹೋಗುತ್ತದೆ. ಭಯಪಡುವವನು, ವಿಷಯರತನಾದವನು, ಸ್ವಾರ್ಥಸಂಗ್ರಹಮಾಡುವವನು, ಹಿಂಸಾಮಯ ಯುದ್ಧವನ್ನು ಮಾಡಿಯಾನು. ಆದರೆ ಅದು ಧರ್ಮವಲ್ಲ. ಧರ್ಮದ ಸ್ವರೂಪ ಅಹಿಂಸೆ. ಅಹಿಂಸೆಯೆಂದರೆ ಮೋಕ್ಷ. ಮೋಕ್ಷವೆಂದರೆ ಸತ್ಯನಾರಾಯಣನ ಸಾಕ್ಷಾತ್ಕಾರ–ಹೀಗೆ ಅಭಿಪ್ರಾಯಪಡುತ್ತಾರೆ ಗಾಂಧೀಜಿ.

ಈಶ್ವರ ಲಾಭವೇ ಮಾನವ-ಜೀವನದ ಗುರಿಯೆಂದು ಎಲ್ಲ ಅನುಭಾವಿಗಳೂ ಹೇಳುತ್ತಾರೆ. ಇದಕ್ಕಾಗಿಯೆ ಆತ್ಮದರ್ಶನ. ಆತ್ಮದರ್ಶನವೇ ಎಲ್ಲ ಧರ್ಮಗ್ರಂಥಗಳ ಸಾರ. ಗೀತೆಯೂ ಇದನ್ನೇ ಸಾರುತ್ತದೆ. ಆದರೆ ವಿಶಿಷ್ಟವಾದ ರೀತಿಯಲ್ಲಿ ಹೇಳುತ್ತದೆ. ಈಶ್ವರರೂಪ ಹೊಂದದ ಮಾನವನಿಗೆ ಹಿತವಿಲ್ಲ, ಶಾಂತಿಯಿಲ್ಲ. ಈಶ್ವರರೂಪ ಹೊಂದುವ ಪ್ರಯತ್ನವೇ ನಿಜವಾದ ಪುರುಷಾರ್ಥ. ಇದೇ ಆತ್ಮದರ್ಶನ. ಗೀತೆಯು ಭೌತಿಕಯುದ್ಧದ ಲಕ್ಷಣ ಪರಿಣಾಮಗಳನ್ನು ಹೇಳುವ ಬದಲು ಸ್ಥಿತಪ್ರಜ್ಞನ ಲಕ್ಷಣಗಳನ್ನು ತಿಳಿಸುತ್ತದೆ. ಆತ್ಮದರ್ಶನಕ್ಕಾಗಿ ಸಾಧನೆಗೈವ ಸ್ಥಿತಪ್ರಜ್ಞನಿಗೆ ಮೊದಲು ಬೇಕಾದುದು ಕರ್ಮಫಲತ್ಯಾಗ. ನಿಷ್ಕಾಮ ಕರ್ಮದಿಂದ, ಯಜ್ಞಾರ್ಥವಾಗಿ ಕರ್ಮಮಾಡಿ ಕರ್ಮಫಲವನ್ನು ತ್ಯಜಿಸಿ, ಸರ್ವಕರ್ಮಗಳನ್ನು ಕೃಷ್ಣಾರ್ಪಣಮಾಡಿ ಶುದ್ಧಜೀವನ ನಡೆಸಬೇಕು. ಇದು ಬುದ್ಧಿಯ ಕೆಲಸವಲ್ಲ. ಭಕ್ತಿ, ಜ್ಞಾನ, ತಪಸ್ಸಿನ ಕೆಲಸ. ಏನೇನೋ ಓದಿದರೇನು ಬಂತು ? ಗೀತೆಯನ್ನು ಕಂಠಪಾಠ ಮಾಡಿದರೇನು ? ಭಕ್ತಿ, ಜ್ಞಾನ, ಕರ್ಮಗಳ ಅತ್ಯಂತ ಸೊಗಸಾದ ಕೂಡಲ ಸಂಗಮ ಶ್ರೀಕ್ಷೇತ್ರ ಗೀತೆ. ಭಕ್ತಿ, ಜ್ಞಾನ, ಕರ್ಮಗಳು ಬುದ್ಧಿಯ ಸಾಮಗ್ರಿಗಳಲ್ಲ ; ಅನುಭಾವದ ಸಾಮಗ್ರಿಗಳಾಗಿವೆ. ಭಕ್ತಿಯೆಂಬುದು ಮಿಥ್ಯಾವಸ್ತುವಲ್ಲ, ಅಂಧಶ್ರದ್ಧೆಯೂ ಅಲ್ಲ. ಸ್ಥಿತಪ್ರಜ್ಞನ ಲಕ್ಷಣಗಳೆಲ್ಲವೂ ಭಕ್ತನ ಲಕ್ಷಣಗಳೇ ಆಗಿವೆ. ಭಕ್ತನು ಉನ್ನತರೀತಿಯಲ್ಲಿ ಸ್ಥಿತಪ್ರಜ್ಞನೇ ಆಗಿರಬೇಕು. ಯಾರನ್ನೂ ದ್ವೇಷಿಸದೆ, ಕರುಣೆಯ ಭಂಡಾರವೇ ಆಗಿದ್ದಾನೋ, ಮಮತಾರಹಿತನೋ, ನಿರಹಂಕಾರಿಯೋ, ಯಾರಿಗೆ ಸುಖ-ದುಃಖ ಶೀತ- ಉಷ್ಣಗಳು ಸಮಾನವೋ, ಯಾರು ಕ್ಷಮಾಶೀಲ, ಸದಾಚಾರಿ, ಸಂತೃಪ್ತ, ದೃಢಸಂಕಲ್ಪ ಆಗಿ, ತನ್ನ ಮನಸ್ಸು-ಬುದ್ಧಿಗಳನ್ನು ಈಶ್ವರಾರ್ಪಣ ಮಾಡಿದ್ದಾನೋ, ಯಾರಿಂದ ಜನರಿಗೆ ಕಷ್ಟವಾಗದೋ, ಯಾರು ಇತರರಿಗೆ ಭಯಪಡನೋ, ಯಾರು ಹರ್ಷ, ಶೋಕ, ಭಯ, ಮೋಹಗಳಿಂದ ಮುಕ್ತನಾಗಿ ಪವಿತ್ರನಾಗಿರುತ್ತಾನೋ, ಕಾರ್ಯದಕ್ಷನಾಗಿದ್ದರೂ ತಟಸ್ಥನೋ, ಯಾರು ಶುಭಾಶುಭಗಳನ್ನು ತ್ಯಜಿಸಿ, ಶತ್ರು-ಮಿತ್ರರಲ್ಲಿ ಸಮಭಾವವನ್ನಿಡುತ್ತಾನೆಯೋ, ಯಾರಿಗೆ ಮಾನಾಪಮಾನಗಳು ಸಮಾನವೋ, ಯಾರು ಸ್ತುತಿಯಿಂದ ಉಬ್ಬದೆ, ನಿಂದೆಯಿಂದ ಕುಗ್ಗದೆ ಇರುತ್ತಾನೆಯೋ, ಯಾರು ಮೌನಧಾರಿಯೋ, ಏಕಾಂತ ಯಾರಿಗೆ ಪ್ರಿಯವೋ, ಯಾರು ಸ್ಥಿರ ಬುದ್ಧಿಯುಳ್ಳವನೋ-ಅವನೇ ಭಕ್ತ ಎಂದಿದ್ದಾರೆ ಗಾಂಧೀಜಿ.

ಆತ್ಮದರ್ಶನವೇ ಜ್ಞಾನ, ಶುಷ್ಕಪಾಂಡಿತ್ಯವೇ ಜ್ಞಾನವಲ್ಲ. ಭಕ್ತನು ಆತ್ಮದರ್ಶನಾರ್ಥಿಯಾಗಿ ಜ್ಞಾನವನ್ನು ಸಂಪಾದಿಸಬೇಕು. ಶ್ರದ್ಧಾವಂತನೂ, ಈಶ್ವರ ಪರಾಯಣನೂ, ಜಿತೇಂದ್ರಿಯನೂ ಆದವನು ಜ್ಞಾನವನ್ನು ಗಳಿಸುತ್ತಾನೆ ; ಪರಮಶಾಂತಿ ಪಡೆಯುತ್ತಾನೆ. ಜ್ಞಾನಕ್ಕಿಂತ ಪವಿತ್ರವಾದ ವಸ್ತು ಈ ಜಗತ್ತಿನಲ್ಲಿ ಮತ್ತೊಂದಿಲ್ಲ.

ಕರ್ಮವೆಂದರೇನು ? ಕರ್ಮಮಾಡುವುದು ಹೇಗೆ ? ಗೀತೆ ಬಹು ಸೊಗಸಾಗಿ ಉತ್ತರ ಹೇಳುತ್ತದೆ. 'ಫಲದ ಆಸಕ್ತಿಯನ್ನು ಬಿಟ್ಟು ಕರ್ಮ ಮಾಡು, ನಿಷ್ಕಾಮವಾಗಿ ಕರ್ಮಮಾಡು' ಎನ್ನುತ್ತದೆ ಗೀತೆ. ಕರ್ಮ ಮಾಡುವ ಕೌಶಲವೇ ಗೀತೆಯ ರಹಸ್ಯ. ಕರ್ಮಮಾಡದಿರುವವನು ಮೂರ್ಖ. ಕರ್ಮ ಮಾಡದೆ ಉಣ್ಣುವವನು ಕಳ್ಳ. ಕರ್ಮವನ್ನು ಮಾಡಿ ಫಲದ ಆಸೆಯನ್ನು ಬಿಟ್ಟವನು ಉನ್ನತಿ ಪಡೆಯುತ್ತಾನೆ. ಹೀಗೆ ಅನಾಸಕ್ತನಾಗಿ ಸದಾ ಸತ್ಕರ್ಮಗಳನ್ನು ಮಾಡಬೇಕು. ಕರ್ಮ, ನಿಷಿದ್ಧಕರ್ಮ, ಅಕರ್ಮಗಳ ಭೇದವನ್ನು ಸರಿಯಾಗಿ ಅರಿಯಬೇಕು. ಕರ್ಮದಲ್ಲಿ ಅಕರ್ಮವನ್ನೂ ಅಕರ್ಮದಲ್ಲಿ ಕರ್ಮವನ್ನೂ ಕಾಣುವವನು ಜಾಣ. ಆತನೇ ಕರ್ಮಯೋಗಿ. ವ್ಯವಹಾರ ಮತ್ತು ಧರ್ಮ ಬೇರೆ ಬೇರೆಯಲ್ಲ. ಗೀತಾಕಾರ ವ್ಯವಹಾರದಲ್ಲಿ ಧರ್ಮವನ್ನು ಸೇರಿಸಿದ್ದಾನೆ. ವ್ಯವಹಾರದಲ್ಲಿ ಉಪಯೋಗಕ್ಕೆ ಬಾರದ ಧರ್ಮ ಧರ್ಮವೇ ಅಲ್ಲ. ಸತ್ಯ, ಅಹಿಂಸೆಗಳನ್ನು ಪಾಲಿಸಿದ ಹೊರತು ಸಂಪೂರ್ಣ ತ್ಯಾಗ ಅಸಂಭವವೆಂದು ಗಾಂಧೀಜಿ ಅಭಿಪ್ರಾಯಪಟ್ಟಿದ್ದಾರೆ.

ಕರ್ಮಗಳ ಫಲಕ್ಕಾಗಿ ಎಂದಿಗೂ ಹಂಬಲಿಸಬಾರದು. ಯಾವುದೇ ಉದ್ಯೋಗ, ವೃತ್ತಿ, ಪದವಿಯಲ್ಲಿದ್ದರೂ ಪ್ರಾಮಾಣಿಕವಾಗಿ ಶ್ರದ್ಧೆಯಿಂದ ಪರಹಿತಕ್ಕಾಗಿ, ಲೋಕಸಂಗ್ರಹಕ್ಕಾಗಿ ಕೆಲಸಮಾಡುತ್ತಿರಬೇಕು. ಕರ್ಮವನ್ನು ಎಂದೂ ಸ್ವಾರ್ಥಕ್ಕಾಗಿ ಮಾಡಬಾರದು; ಪರಹಿತಕ್ಕಾಗಿ ಮಾಡುತ್ತಿರಬೇಕು. ಸ್ವಾರ್ಥಕರ್ಮವು ಬಂಧನ ; ಪರಾರ್ಥ ಕರ್ಮ ಬಿಡುಗಡೆಯದು.ಹೀಗೆ ಪರಾರ್ಥಕ್ಕಾಗಿ ಕರ್ಮಮಾಡಬೇಕು. ಕರ್ಮಗಳ ಫಲಕ್ಕೆ ಮನುಷ್ಯ ಎಂದೂ ಒಡೆಯನಲ್ಲ. ಕರ್ಮಮಾಡುವಾಗ ವ್ಯಕ್ತಿ ಕೇವಲ ನಿಮಿತ್ತ ಮಾತ್ರವೆಂದು ತಿಳಿಯಬೇಕು.

ಗೀತೆಯಲ್ಲಿ ಭಕ್ತಿ-ಜ್ಞಾನ-ಕರ್ಮಯೋಗಗಳ ವಿವರಣೆಯಲ್ಲದೆ ಜ್ಞಾನವಿಜ್ಞಾನ, ಅಕ್ಷರಬ್ರಹ್ಮ, ರಾಜವಿದ್ಯಾ, ವಿಭೂತಿ-ಮೊದಲಾದ ಯೋಗಗಳ ವಿವರಣೆಯನ್ನೂ ಕಾಣಬಹುದು. ಇವೆಲ್ಲವೂ ಪುರುಷನು ಪುರುಷೋತ್ತಮನಾಗಲು ಅಗತ್ಯ. ಶ್ರೀಕೃಷ್ಣನು ಎಂತಹ ಅದ್ಭುತ ರೀತಿಯ ಅನಾಸಕ್ತ ಕರ್ಮಯೋಗಿ! ಅವನ ಜೀವನವೇ ಅವಿಚ್ಛಿನ್ನವಾದ ಒಂದು ಗೀತೆ ಆಗಿದೆ. ಎಲ್ಲವೂ ಪರಹಿತಕ್ಕಾಗಿ. ಇಂಥ ಮಹತ್‍ಕೃತಿ ಗೀತೆಯನ್ನು ಗಾಂಧೀಜಿಯವರು ತಮ್ಮ ಬಾಳಿನಲ್ಲಿ ಚಾಚೂತಪ್ಪದೆ ಅನುಸರಿಸಿದರು. ಗೀತೆಯ ತತ್ತ್ವಗಳೆಲ್ಲವೂ ಇವರ ಬಾಳಿನಲ್ಲಿ ಹಾಸುಹೊಕ್ಕಾಗಿದ್ದುವು. ಇವರ ಜೀವನವೇ ಸತ್ಯದ ಪ್ರಯೋಗಶಾಲೆಯಾಗಿದ್ದಿತು; ಅಹಿಂಸೆಯ ಆಗರವಾಗಿದ್ದಿತು; ದಾಸ್ಯ ವಿಮೋಚನೆಯ ಕಾರ್ಯರಂಗವಾಗಿದ್ದಿತು. ಗೀತೆಯ ಕರ್ಮಯೋಗವು ಇವರ ಧೀರ ಕಾಯಕಕ್ಕೆ ದಾರಿಮಾಡಿಕೊಟ್ಟಿದೆ. ಇವರು ಸ್ಥಿತಪ್ರಜ್ಞರಾಗಿ ರಾಜಕೀಯ, ಸಾಮಾಜಿಕ, ಧಾರ್ಮಿಕ, ನೈತಿಕ ಶುಭೋದಯಕ್ಕಾಗಿ ಶ್ರಮಿಸಿದರು. ಗಾಂಧೀಜಿಗೆ ಸತ್ಯವೇ ದೇವರಾಯಿತು. ಸತ್ಯಸಾಕ್ಷಾತ್ಕಾರವೇ ಅವರ ಜೀವಿತದ ಧ್ಯೇಯವಾಯಿತು. ಭಾರತದ ಸ್ವಾತಂತ್ರ್ಯ, ಹರಿಜನೋದ್ಧಾರ, ಹಿಂದೂ ಮುಸ್ಲಿಂ ಐಕ್ಯತೆ, ಭಾರತಮಾತೆಯ ವಿಜಯ-ಇವುಗಳ ಸಾಧನೆಯ ಮೂಲಕ ತಮ್ಮ ಗುರಿಯನ್ನು ಸಾಧಿಸಿದರು. ಜೀವನವು ಸತ್ಯಮಯವಾಗಲು ಅಹಿಂಸೆಯೊಂದೇ ಮಾರ್ಗವೆಂದು ಗಾಂಧೀಜಿ ಸಾರಿದ್ದಾರೆ. ಸತ್ಯಾಗ್ರಹ ಮತ್ತು ಖಾದಿಯ ವೀರವ್ರತಗಳನ್ನು ಎಲ್ಲರೂ ಅನುಷ್ಠಾನದಲ್ಲಿ ತರಲು ಇವರು ಕರೆಯಿತ್ತರು. ಆಳವಾದ ಪಾಂಡಿತ್ಯ, ವಿಶಾಲದೃಷ್ಟಿ, ಮಾನವೀಯ ಸದ್ಗುಣಗಳು-ಇವುಗಳ ನಿಧಿಯಾಗಿದ್ದು ಕ್ರಾಂತಿಕಾರಿ ಮನೋಭಾವದಿಂದ, ಸಂಯಮದಿಂದ, ಅದ್ಭುತವಾಗಿ ವರ್ತಿಸಿದರು. ಅವರೊಂದು ವ್ಯಕ್ತಿಯೇ ಅಲ್ಲ ; ಅದ್ಭುತ ಶಕ್ತಿಯೆನಿಸಿದ್ದರು. ರಾಜಕಾರಣದಲ್ಲಿ ಮಾತ್ರವಲ್ಲದೆ ಆಧ್ಯಾತ್ಮದ ಸಾಧನೆಯಲ್ಲಿಯೂ ಇವರು ನಿಷ್ಣಾತರಾಗಿದ್ದರು. ಇವರ ಅಮೋಘ ಸೇವೆಗಾಗಿ ರಾಷ್ಟ್ರದ ಜನತೆಯು ಅವರನ್ನು ಪ್ರೀತಿಗೌರವದಿಂದ ರಾಷ್ಟ್ರಪಿತ, ಮಹಾತ್ಮ ಎಂದು ಗೌರವಿಸಿದೆ. ಇಡೀ ಭಾರತೀಯರ, ವಿಶ್ವದ ಹಿತವನ್ನೇ ತಮ್ಮ ಹಿತವೆಂದು ಬಗೆದು ಹಗಲಿರುಳೂ ಶ್ರಮಿಸಿದ ಈ ಮಹಾತ್ಮನನ್ನು ಮಹಾಯೋಗಿಯೆಂದೂ ಹೇಳಬಹುದು. ಗೀತೆಯ ಅಧ್ಯಯನ ಮತ್ತು ಅನುಷ್ಠಾನದಿಂದ ಹೇಗೆ ಪರಿಣಾಮಗೊಳ್ಳಬೇಕೆಂಬುದಕ್ಕೆ ಗಾಂಧೀಜಿಯಿವರ ಮಹಾಜೀವನವೇ ಅದ್ವಿತೀಯವೂ ಅದ್ಭುತವೂ ಆದ ನಿದರ್ಶನವಾಗಿದೆ.

"ಅಯ್ಯೋ ನಾನು ಪಾಪ ಮಾಡಿರುವೆ; ಅನೇಕ ತಪ್ಪುಗಳನ್ನು ಮಾಡಿರುವೆ" ಎಂದು ನೀವು ಬದುಕಿರುವತನಕ ಆಲೋಚಿಸುತ್ತಿದ್ದರೆ ಅದರಿಂದ ಏನು ಒಳ್ಳೆಯದಾಗುವುದು ? ಪಾಪಿಗಳೆಂದು ನಮಗೆ ಹೇಳಲು ಯಾವ ಭೂತವೂ ಬೇಕಾಗಿಲ್ಲ. ಜ್ಞಾನ-ಜ್ಯೋತಿಯನ್ನು ತಂದರೆ ಪಾಪ ಮರುಕ್ಷಣವೇ ಮಾಯವಾಗುವುದು.

ಬಿ ಆರ್. ಪ್ರಾಣೇಶರಾವ್

ಗಾಂಧೀಜಿ ಮತ್ತು ಸರ್ವೋದಯ ಆರ್ಥಿಕ ಜೀವನ

ವಿಕಾಸಶೀಲ ಸಿದ್ಧಾಂತ: ಮಾನವಕುಲಕ್ಕೆ ಗಾಂಧೀಜಿಯವರ ಅತ್ಯಮೌಲ್ಯ ಕೊಡುಗೆ ಸರ್ವೋದಯ. ಸರ್ವೋದಯ ಎಂದರೆ ಸರ್ವರ ಅಭ್ಯುದಯ. ಸಕಲ ವ್ಯಕ್ತಿಗಳ ಆಧ್ಯಾತ್ಮಿಕ, ಆರ್ಥಿಕ ಸಾಮಾಜಿಕ ಹಾಗೂ ಸಾಂಸ್ಕೃತಿಕ ಮುನ್ನಡೆಯೇ ಸರ್ವೋದಯದ ಗುರಿ. ಸಮಾಜದಲ್ಲಿ ಕಟ್ಟಕಡೆಯಲ್ಲಿರುವವರಿಗೆ ಪ್ರಪ್ರಥಮ ಗಮನ ಕೊಟ್ಟು, ಅವರು ಮೊದಲುಗೊಂಡು ಮಿಕ್ಕೆಲ್ಲರ ಸರ್ವಾಂಗೀಣ ವಿಕಾಸ ಸಾಧಿಸುವುದು ಸರ್ವೋದಯದ ವಿಶಿಷ್ಟ ಪ್ರಕ್ರಿಯೆ.

ಸರ್ವೋದಯ ಸಿದ್ಧಾಂತದ ಕೆಲವು ಮೂಲ ಅಂಶಗಳನ್ನು ರಸ್ಕಿನ್ನನ Unto This Lost ಕೃತಿಯಿಂದ ತೆಗೆದುಕೊಂಡ ಗಾಂಧೀಜಿ ತಮ್ಮ ಅಮೂಲ್ಯ ಅನುಭವ ಹಾಗೂ ವಿಚಾರಗಳನ್ನು ಅಳವಡಿಸಿ ಒಂದು ಸುಸಂಬದ್ಧವಾದ ದರ್ಶನವನ್ನು ನೀಡಿದರು. ಸರ್ವೋದಯ ದರ್ಶನವು ಉದ್ಧತತತ್ತ್ವ (dogmatic) ಆಗಿರದೆ ವಿಕಾಸಶೀಲ ಸಿದ್ಧಾಂತವಾಗಿದೆ. ಆದ್ದರಿಂದಲೇ ವಿನೋಬಾಜಿ, ಜಯಪ್ರಕಾಶ್ ಮತ್ತಿತರ ಧ್ರಷ್ಟಾರರ ಪ್ರಯೋಗಗಳು ಹಾಗೂ ವಿಚಾರಗಳು ಸರ್ವೋದಯದ ಹೊಸ ದಿಗಂತಗಳನ್ನು ಸೂಚಿಸಿವೆ.

ಆತ್ಮ-ಸಾಕ್ಷಾತ್ಕಾರ : ಸರ್ವೋದಯ ಸಮಾಜದ ಆರ್ಥಿಕನೆಲಗಟ್ಟು ಎಂತಹುದೆಂಬುದು ವಿಚಾರಾರ್ಹ. ಮಾನವನ ಜೀವನವನ್ನು ಧಾರ್ಮಿಕ, ಆರ್ಥಿಕ, ರಾಜಕೀಯ, ಸಾಮಾಜಿಕ ಎಂದು ಪ್ರತ್ಯೇಕ ಪ್ರತ್ಯೇಕವಾಗಿ ನೋಡುವುದಿಲ್ಲ ಈ ಸಿದ್ಧಾಂತ. ಬದಲಾಗಿ ಮಾನವನ ಬಾಳನ್ನು ಒಟ್ಟಾಗಿ ನೋಡುತ್ತದೆ. ಮಾನವನ ಪೂರ್ಣ ವಿಕಾಸಕ್ಕೆ ಆರ್ಥಿಕ, ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಮೌಲ್ಯಗಳು ಹೇಗೆ ಅಳವಡಿಸಲ್ಪಡಬೇಕು ಎಂಬುದನ್ನು ಪರಿಗಣಿಸುತ್ತದೆ. ಈ ವಿವಿಧ ಮೌಲ್ಯಗಳ ಅನುಷ್ಠಾನ ಕೇವಲ ಸಾಧನವೇ ಹೊರತು ಸಾಧ್ಯವಲ್ಲ. ಮಾನವನ ಪರಮಗುರಿ 'ಆತ್ಮಸಾಕ್ಷಾತ್ಕಾರ'. ಈ ಗುರಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಮನುಷ್ಯನು ತನ್ನ ಬದುಕಿಗೆ ಅವಶ್ಯವಾದಷ್ಟು ಮಾತ್ರ ಆರ್ಥಿಕ ಹಾಗೂ ಸಾಮಾಜಿಕ ಸೌಕರ್ಯಗಳನ್ನು ಬಳಸಿಕೊಳ್ಳಬೇಕು.

ಸರಳ ಜೀವನ-ಉಚ್ಚ ವಿಚಾರ : ಮನುಷ್ಯನ ಮೂಲಭೂತ ಆರ್ಥಿಕ ಆವಶ್ಯಕತೆಗಳಾದ ಅನ್ನ, ವಸತಿ ಮುಂತಾದುವುಗಳು ಪ್ರತಿಯೊಬ್ಬನಿಗೂ ಒದಗಿಸಿದ ಹೊರತು ವ್ಯಕ್ತಿಯ ಯಾವುದೇ ವಿಕಾಸವೂ ಸಾಧ್ಯವಿಲ್ಲ ಎಂಬುದನ್ನು ಸರ್ವೋದಯಸಿದ್ಧಾಂತ ಮನಗಾಣುತ್ತದೆ. ಗಾಂಧೀಜಿ ಹೇಳಿದಂತೆ, ಬಡವನಿಗೆ "ಅರ್ಥವೇ ಪರಮಾರ್ಥ" (To the poor the economic is the spiritual) ಮನುಷ್ಯನ ಮೂಲ ಆರ್ಥಿಕ ಆವಶ್ಯಕತೆಗಳ ಪೂರೈಕೆಗೆ ಪರಮಲಕ್ಷ್ಯ ಇರಬೇಕು.ಆದರೆ ಈ ಸಿದ್ಧಾಂತ ಆವಶ್ಯಕತೆಗಳ ಸೋಗಿನಲ್ಲಿ ಅಪೇಕ್ಷೆಗಳ ನಿರಂತರ ಆರೋಹಣವನ್ನು ಒಪ್ಪುವುದಿಲ್ಲ. 'ಸರಳ ಜೀವನ-ಉಚ್ಚ ವಿಚಾರ' ಇದು ಸರ್ವೋದಯದ ಜೀವನಸೂತ್ರ. ಮನುಷ್ಯ ಕೇವಲ ಭೋಗವಿಲಾಸಕ್ಕೆ ಲಕ್ಷ್ಯ ಕೊಟ್ಟರೆ ಅವನ ಬೌದ್ಧಿಕ ಹಾಗೂ ಆಧ್ಯಾತ್ಮಿಕ ವಿಕಾಸ ಕುಂಠಿತವಾಗುತ್ತದೆ.

ಜೊತೆಗೆ ಭೋಗವಿಲಾಸಕ್ಕಾಗಿ ಧನಕನಕ ವಸ್ತುಗಳ ಸಂಗ್ರಹಣೆಯನ್ನೇ ಮಾಡುತ್ತಾ ಹೋದರೆ ಸಮಾಜದಲ್ಲಿ ವಿಷಮತೆಯೂ ಬೆಳೆಯುತ್ತದೆ. ಬಲಿಷ್ಠರು ಅತಿಯಾಗಿ ಬಾಳಿ ಸಂಗ್ರಹಿಸಿಕೊಂಡರೆ ಬಡವರ ಆವಶ್ಯಕತೆಗಳೂ ಪೂರೈಸದೆ ಆರ್ಥಿಕ ಅನಿಷ್ಟಗಳು ತಲೆದೋರುತ್ತವೆ.ಆದ್ದರಿಂದ 'ಅಪರಿಗ್ರಹ' ತತ್ತ್ವವನ್ನು ಒಪ್ಪಿಕೊಳ್ಳುವುದು ಅತ್ಯ ಗತ್ಯ. ಅಪರಿಗ್ರಹ, ಎಂದರೆ ಮನುಷ್ಯ ತಾನು ಸಂಪಾದಿಸಿದ ಸಂಪತ್ತಿನಲ್ಲಿ ಕೇವಲ ಅವಶ್ಯವಾದಷ್ಟನ್ನುಮಾತ್ರ ತನ ಗಾಗಿ ಬಳಸಬೇಕು. ಉಳಿದ ಸಂಪತ್ತಿಗೆ ತಾನು 'ಧರ್ಮದರ್ಶಿ' ಯೆಂದು ಭಾವಿಸಿ ಅದನ್ನು ಸಮಾಜದಲ್ಲಿ ಇತರರ ಒಳಿತಿಗೆ ವಿನಿಯೋಗಿಸಬೇಕು.

ಶರೀರಶ್ರಮ : ವ್ಯಕ್ತಿಯು ತನ್ನ ಮೂಲಭೂತ ಅವಶ್ಯವಸ್ತುಗಳಾದ ಅನ್ನ, ಬಟ್ಟೆ ಮತ್ತು ವಸತಿ ಯನ್ನು ಗಳಿಸಲು ಸಾಧ್ಯವಾದ ಮಟ್ಟಿಗೂ ಶರೀರಶ್ರಮ ಮಾಡಬೇಕು. ಇದಕ್ಕೆ ಅನ್ನಕಾಯಕ (Bread Labour) ಎನ್ನುತ್ತಾರೆ ಗಾಂಧೀಜಿ. ಇದರಲ್ಲಿ ಆರ್ಥಿಕ ತತ್ತ್ವವೇ ಅಲ್ಲದೆ ಉನ್ನತ ಸಾಮಾಜಿಕ ಮೌಲ್ಯವೂ ಸೇರಿದೆ. ತನ್ನ ಆವಶ್ಯಕತೆಗಳನ್ನು ಪೂರೈಸಿಕೊಳ್ಳಲು ಶರೀರಶ್ರಮ ಮಾಡುವುದರಿಂದ ವ್ಯಕ್ತಿ ಬಹುಮಟ್ಟಿಗೆ ಸ್ವಾವಲಂಬಿಯಾಗಿ ಸ್ವತಂತ್ರವಾಗಿರುತ್ತಾನೆ. ಪ್ರತಿಯೊಬ್ಬರೂ ಶಕ್ತ್ಯಾನುಸಾರ ಶರೀರಶ್ರಮ ಮಾಡುವುದರಿಂದ ಸಮಾಜದಲ್ಲಿ ಮೇಲು-ಕೀಳುಗಳ ಭಾವನೆ ಅಳಿದು ಶ್ರಮನಿಷ್ಠ ಕಾರ್ಯಕ್ಕೆ ಘನತೆ ದೊರೆಯುತ್ತದೆ. ನಮ್ಮ ಭಾರತೀಯ ಸಮಾಜ ದಲ್ಲಂತೂ ವರ್ಣಸಿದ್ಧಾಂತದ ವಿಕೃತಿಯಿಂದಾಗಿ ಶರೀರಶ್ರಮ ಮಾಡುವವರೆಲ್ಲ ಕೀಳೆಂಬುದಾಗಿಯೂ ಮನೋ ಭಾವ ಬೆಳೆದು ಸಾಮಾಜಿಕ ಅಸಮತೆ ಮತ್ತು ವಿಷಮತೆ ತುಂಬಿದೆ. ಈ ಅನಿಷ್ಟವನ್ನು ಹೋಗಲಾಡಿಸಲು ಗಾಂಧೀಜಿ ಯವರು ಶರೀರಶ್ರಮದ ಮೇಲ್ಮೆಯನ್ನು ಎತ್ತಿಹಿಡಿದು ತಮ್ಮ ಕೃತಿಗಳಿಂದ ಮೇಲ್ಪಂಕ್ತಿ ಹಾಕಿಕೊಟ್ಟರು. ಗಾಂಧೀಜಿಯವರು ಮಾಡದಿದ್ದ ಶರೀರಶ್ರಮವೇ ಇಲ್ಲ. ಭಂಗಿ ಕೆಲಸ, ಮೋಚಿ ಕೆಲಸ, ನೂಲುವುದು, ನೇಯು ವುದು, ಹೊಲಿಯುವುದು, ಬಡಗಿ ಕೆಲಸ ಮಾಡುವುದು, ವ್ಯವಸಾಯ, ಪಶುಸಂಗೋಪನೆ, ದಾದಿಯ ಕೆಲಸ-ಎಲ್ಲ ವನ್ನೂ ಮಾಡಿ ಶರೀರಶ್ರಮದ ಉನ್ನತ ಮೌಲ್ಯವನ್ನು ಪ್ರತಿಷ್ಠಿಸಿದರು. ಶರೀರಶ್ರಮಧರ್ಮದ ಸಾರ್ವತ್ರಿಕ ಅನು ಷ್ಠಾನವಾದ ಹೊರತು ಸಾಮಾಜಿಕ ಸಮಾನತೆ ಸಾಧ್ಯವಾಗುವುದಿಲ್ಲ.

ಸ್ವದೇಶಿ : ಸ್ವದೇಶೀ ವ್ರತ ಸರ್ವೋದಯ ಅರ್ಥಶಾಸ್ತ್ರದ ಮತ್ತೊಂದು ಪ್ರಮುಖ ಅಂಶ. ಸ್ವದೇಶಿ ಎಂದರೆ ವ್ಯಕ್ತಿಯು ತನ್ನ ಸುತ್ತಮುತ್ತಲಿನಲ್ಲಿ ಉತ್ಪಾದನೆಯಾಗುವ ಮತ್ತು ಲಭಿಸುವ ವಸ್ತುಗಳನ್ನು ಕೊಂಡು ಬಳಸಬೇಕು ಎನ್ನುವುದು. ಇದರಿಂದ ತಾನು ವಾಸಿಸುವ ಗ್ರಾಮ ಅಥವಾ ಪ್ರದೇಶದಲ್ಲಿ ಉತ್ಪಾದಿತವಾಗುವ ವಸ್ತು ಗಳಿಗೆ ಪರಿಣಾಮಕಾರಿ ಬೇಡಿಕೆ (effective demand) ದೊರೆತು ಉದ್ಯೋಗಾವಕಾಶಗಳ ಹೆಚ್ಚಳ ಆಗುತ್ತದೆ ವಿತರಣೆಯನ್ನು ವ್ಯವಸ್ಥೆ ಮಾಡುವ ಖರ್ಚು ಕನಿಷ್ಠವಾಗುತ್ತದೆ. "ಸ್ವದೇಶಿಯು ನಮ್ಮ ನಿಕಟ ವಾತಾವರಣಕ್ಕೆ ಅನ್ವಯಿಸುವ ಸ್ವಧರ್ಮ" ಎಂದಿದ್ದಾರೆ ಗಾಂಧೀಜಿ. ಆದರೆ ಸ್ವದೇಶಿಯ ಕಲ್ಪನೆ ಸಂಕುಚಿತ ದೃಷ್ಟಿಯಿಂದ ಕೂಡಿರು ವುದಿಲ್ಲ. ಯಾವ ಯಾವ ವಸ್ತುಗಳು ನಮ್ಮ ಸುತ್ತಮುತ್ತಲಿನಲ್ಲಿ ದೊರೆಯುವುದಿಲ್ಲವೋ ಅಂತಹ ವಸ್ತುಗಳನ್ನು ಇತರ ಪ್ರದೇಶಗಳಿಂದಾಗಲೀ ಬೇರೆ ದೇಶಗಳಿಂದಾಗಲೀ ತರಿಸಿಕೊಳ್ಳುವುದಕ್ಕೆ ಅಭ್ಯಂತರವಿರುವುದಿಲ್ಲ. ಆದರೆ ನಮಗೆ ಬೇಕಾದ ವಸ್ತುಗಳು ಅಥವಾ ಸೇವೆಗಳು ನಾವಿರುವ ಸಮೀಪದಲ್ಲೇ ದೊರೆಯುವುದಿದ್ದರೆ ಅವನ್ನು ನಿರಾಕರಿಸಿ ಬೇರೆಡೆಯಿಂದ ಅಥವಾ ವಿದೇಶದಿಂದ ಆಮದು ಮಾಡಿಕೊಳ್ಳುವುದು ಸ್ವದೇಶಿಧರ್ಮಕ್ಕೆ ವಿರೋಧವಾಗಿರುತ್ತದೆ.

ಅರ್ಥಶಾಸ್ತ್ರದ ನಿಯಮಗಳ ವ್ಯಾಪ್ತಿ : ಗಾಂಧೀಜಿಯವರ ಅಭಿಪ್ರಾಯದಲ್ಲಿ ಅರ್ಥಶಾಸ್ತ್ರದ ನಿಯಮಗಳೆಲ್ಲವೂ ಸರ್ವಕಾಲಕ್ಕೂ ಸರ್ವದೇಶಗಳಿಗೂ ಸಮಾನವಾಗಿ ಅನ್ವಯಿಸುವ ಸೂತ್ರಗಳಲ್ಲ. ಆಯಾ ದೇಶದ ಪ್ರಾಕೃತಿಕ, ಭೌಗೋಳಿಕ ಪರಿಸ್ಥಿತಿ ಹಾಗೂ ಆರ್ಥಿಕ ಸಾಧನಗಳನ್ನವಲಂಬಿಸಿ ಅರ್ಥಶಾಸ್ತ್ರದ ನಿಯಮಗಳನ್ನು ರೂಪಿಸಿ ಅನ್ವಯಿಸಬೇಕಾಗುತ್ತದೆ. ಉದಾಹರಣೆಗೆ, ಜನಶಕ್ತಿ ಕಡಮೆ ಇರುವ ಪಾಶ್ಚಾತ್ಯದೇಶಗಳ ಆರ್ಥಿಕ

ವ್ಯವಸ್ಥೆಗೂ ಜನಬಾಹುಳ್ಯವಿರುವ ಭಾರತದಂತಹ ದೇಶಗಳ ಆರ್ಥಿಕ ವ್ಯವಸ್ಥೆಗೂ ಬೇರೆ ಬೇರೆ ಉತ್ಪಾದನಾ ನಿಯಮ ಹಾಗೂ ಪ್ರಕ್ರಿಯೆಗಳು ಅನ್ವಯಿಸುತ್ತವೆ. ಚಳಿದೇಶದ ಜನರ ಉಡಿಗೆ ತೊಡಿಗೆ, ತಿಂಡಿ ತಿನಿಸುಗಳೇ ಬೇರೆ ; ಉಷ್ಣ ದೇಶದವರ ಅನ್ನ, ಬಟ್ಟೆ, ವಸತಿಗಳ ಆವಶ್ಯಕತೆಗಳ ಸ್ವರೂಪವೇ ಬೇರೆ. ಈ ಭೇದಗಳಿಗನುಗುಣವಾಗಿ ಉತ್ಪಾದನೆ ಏನು, ಹೇಗೆ ಎಂಬುದು ನಿರ್ಣಯಿಸಲ್ಪಡುತ್ತದೆ.

ಸರ್ವದೇಶಕ್ಕೂ ಸರ್ವಕಾಲಕ್ಕೂ ಅನ್ವಯಿಸಬೇಕಾದುದು ಏನೆಂದರೆ ಅರ್ಥಶಾಸ್ತ್ರ ನೀತಿನಿಷ್ಠವಾಗಿರಬೇಕು, ಧರ್ಮನಿಷ್ಠವಾಗಿರಬೇಕು. ನೀತಿನಿಷ್ಠವಲ್ಲದ ಧರ್ಮಬಾಹಿರವಾದ ಅರ್ಥಶಾಸ್ತ್ರ ಪಾಶವೀಶಾಸ್ತ್ರವಾಗುತ್ತದೆ.

ಉತ್ಪಾದನೆ ಮತ್ತು ವಿತರಣೆ : ಆರ್ಥಿಕವಸ್ತುಗಳ ಉತ್ಪಾದನೆ ಗುರಿ ಲಾಭಕೋರತನವಾಗಿರದೆ ಸಮಾಜದ ಆವಶ್ಯಕತೆಗಳ ಪೂರೈಕೆ ಆಗಿರಬೇಕು. ಉತ್ಪಾದನೆ ಮತ್ತು ವಿತರಣ ವ್ಯವಸ್ಥೆಯು ಆರ್ಥಿಕಶಕ್ತಿಯ ಕೇಂದ್ರೀಕರಣಕ್ಕೆ ಆಸ್ಪದ ಕೊಡಬಾರದು. ಅಂದರೆ ಉತ್ಪಾದನೆ ವಿತರಣೆ ವ್ಯವಸ್ಥೆ ಶೋಷಣರಹಿತವಾಗಿರಬೇಕು. ಉತ್ಪಾದನೆಯಾದ ವಸ್ತುಗಳು ನ್ಯಾಯೋಚಿತವಾಗಿ ವಿತರಣೆಯಾಗಬೇಕು. ಎಲ್ಲ ಆವಶ್ಯಕತೆಗಳನ್ನು ಪೂರೈಸುವ ಮಟ್ಟಿಗಾದರೂ ದೇಶವು ಸ್ವಾವಲಂಬಿಯಾಗಿರಬೇಕು. ಈ ಮೂಲಭೂತ ಆವಶ್ಯಕತೆಗಳ ಬಗ್ಗೆ ಬೇರೆ ದೇಶಗಳ ಮೇಲೆ ಅವಲಂಬನೆ ಮಾಡುವುದಾದರೆ ನಿಜವಾಗಿ ನಾವು ಸ್ವತಂತ್ರರಾಗಿ ಬಾಳಲು ಅಸಮರ್ಥರಾಗುತ್ತೇವೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಆಹಾರದ ಬಗ್ಗೆ ಸ್ವಾವಲಂಬನೆಯನ್ನು ಸಾಧಿಸಲು ಪ್ರಾಮಾಣಿಕ ಪ್ರಯತ್ನ ನಡೆಸಿಲ್ಲವಾದ್ದರಿಂದ ಕಳೆದ ಇಪ್ಪತ್ತು ವರ್ಷಗಳಿಂದ ನಿರಂತರವಾಗಿ ಆಹಾರಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಿದ್ದೇವೆ. ಪಿ. ಎಲ್. ೪೮೦ರ ಪ್ರಕಾರ ಭಾರತಕ್ಕೆ ಆಮದು ಮಾಡಿಕೊಂಡಿರುವ ಆಹಾರಧಾನ್ಯಗಳ ಮೌಲ್ಯ ೧೯೬೮ರ ಹೊತ್ತಿಗೆ ಸುಮಾರು ೨೫೦೦ ಕೋಟಿ ರೂಪಾಯಿಗಳಷ್ಟಾಗಿದೆ ! ಇಷ್ಟೊಂದು ಭಾರತೀಯ ಹಣ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಪ್ರಭುತ್ವದ ಲೆಖ್ಖದಲ್ಲಿ ಇದೆ. ಇದರಲ್ಲಿ ಗಣನೀಯ ಭಾಗವನ್ನು ಕೇಂದ್ರ ಮತ್ತು ರಾಜ್ಯಸರ್ಕಾರಗಳಿಗೆ ಸಾಲವಾಗಿ ಕೊಡಲಾಗಿದೆ ನಿಜ. ಆದರೆ ಈ ಹಣದ ಅತಿಪ್ರಸರಣ ಹೆಚ್ಚಿದೆ. ಅಲ್ಲದೆ ಕೆಲವು ರೀತಿಯ ಒತ್ತಡಗಳಿಗೂ ಅವಕಾಶವಾಗಿದೆ. ಇವಕ್ಕೆಲ್ಲ ಕಾರಣ ನಾವು ಆಹಾರದ ಬಗ್ಗೆ ಸ್ವಾವಲಂಬಿ ಆಗದೆ ಇರುವುದು.

ಪಾಶ್ಚಾತ್ಯ ದೇಶಗಳ ಮಾದರಿಯಲ್ಲಿ ಕೈಗಾರಿಕಾಕರಣದ ಯೋಜನೆಗಳನ್ನು ಕೈಗೊಂಡಿರುವುದರಿಂದ ಈ ವಿಷಯದಲ್ಲೂ ನಮ್ಮದೇಶವು ಪೂರ್ಣ ಅವಲಂಬನೆಯ ಸ್ಥಿತಿಯಲ್ಲಿದೆ. ಯಂತ್ರಗಳು ತಂತ್ರಜ್ಞಾನ, ತಾಂತ್ರಿಕ ಸೇವೆ ಎಲ್ಲ ಬಾಬುಗಳಲ್ಲೂ ವಿದೇಶಿಯರನ್ನು ನೆಚ್ಚಿದೆ. ವಿದೇಶೀಯರೊಡನೆ ಸಹ-ಉದ್ಯೋಗ (Collabaration) ಕಾರ್ಯಕ್ರಮದ ಹೆಸರಿನಲ್ಲಿ ವಿದೇಶಗಳಿಂದ ಒಟ್ಟಾರೆ ಯಂತ್ರಗಳನ್ನು ಮುಕ್ಕಾಲುಮೂರುವೀಸೆ ತಯಾರಾದ ಭಾಗಗಳನ್ನು ವಸ್ತುಗಳನ್ನು ತರಿಸಿ ಭಾರತದಲ್ಲಿ ಜೋಡಿಸಿ ನಾವು ಕೈಗಾರಿಕಾಕರಣ ಮಾಡುತ್ತಿದ್ದೇವೆಂಬ ಭ್ರಾಂತಿಯಲ್ಲಿದ್ದೇವೆ. ಈ ರೀತಿಯ ಅವಲಂಬನೆಯಿಂದ ಭಾರಿ ಋಣಭಾರವನ್ನು ಹೊರುತ್ತಿದ್ದೇವೆ. ಕೈಗಾರಿಕಾಕರಣದಿಂದ ಲಭಿಸಬೇಕಾದ ಉದ್ಯೋಗಾವಕಾಶಗಳಾಗಲೀ, ಜನಸಾಮಾನ್ಯರಲ್ಲಿ ಆರ್ಥಿಕ ಶಕ್ತಿಯಾಗಲೀ ಹೆಚ್ಚದೆ ಇಂದು ದೇಶದಲ್ಲಿ ನಿರಾಸೆ ಮೂರ್ತಿವೆತ್ತಿದೆ. ಏರುತ್ತಿರುವ ಬೆಲೆಗಳಿಂದ ಅಧೋಗತಿಗಿಳಿದಿರುವ ಸಾಮಾನ್ಯಜನತೆಯ ಜೀವನ ಕಂಗಾಲಾಗಿದೆ. ಈ ಆರ್ಥಿಕ ದುರ್ದೆಸೆಯಿಂದ ದೇಶವು ಪಾರಾಗಿ ಭಾರತವು ಘನತೆಯಿಂದ ವಿಜೃಂಭಿಸಬೇಕಾದರೆ ಗಾಂಧೀ ಆರ್ಥಿಕ ವಿಚಾರಧಾರೆಯನ್ನು ಒಪ್ಪಿ ಅನ್ವಯಮಾಡತಕ್ಕದ್ದು ಅನಿವಾರ್ಯ.

ವಿಕೇಂದ್ರೀಕರಣ : ಬಂಡವಾಳಶಾಹಿ ಆರ್ಥಿಕವ್ಯವಸ್ಥೆಯಲ್ಲಿ ಹಿಡಿಜನ ಬಂಡವಾಳಗಾರರಲ್ಲಿ ಆರ್ಥಿಕ ಶಕ್ತಿ ಕೇಂದ್ರೀಕೃತವಾದರೆ ಸಮತಾವಾದಿ ವ್ಯವಸ್ಥೆಯಲ್ಲಿ ಪ್ರಭುತ್ವದಲ್ಲಿ ಆರ್ಥಿಕಶಕ್ತಿಯ ಕೇಂದ್ರೀಕರಣವಾಗುತ್ತದೆ. ಇವೆರಡು ಪದ್ಧತಿಗಳಲ್ಲೂ ಶ್ರಮಜೀವಿ ವರ್ಗ ಹಾಗೂ ಜನಸಾಮಾನ್ಯರು ಶೋಷಣೆಗೆ ಒಳಗಾಗುತ್ತಾರೆ.

ಅಹಿಂಸಾತ್ಮಕ ತಳಹದಿಯಮೇಲೆ ಶೋಷಣರಹಿತ ಸಮಾಜದ ರಚನೆ ಆಗಬೇಕಾದರೆ, ರಾಜಕೀಯ ಮತ್ತು ಆರ್ಥಿಕಶಕ್ತಿಯ ವಿಕೇಂದ್ರೀಕರಣವಾಗಬೇಕು. ರಾಜಕೀಯ ಅಧಿಕಾರದ ವಿಕೇಂದ್ರೀಕರಣವೆಂದರೆ, ಆಡಳಿತಾಧಿಕಾರಿಗಳು ಬಹುಮಟ್ಟಿಗೆ ಕೇಂದ್ರದಿಂದ ಕೆಳಮಟ್ಟದ ಪ್ರಾದೇಶಿಕ ಹಾಗೂ ಗ್ರಾಮ ಘಟಕಗಳಿಗೆ ಇಳಿದು ಬರಬೇಕು. ಆರ್ಥಿಕಶಕ್ತಿಯ ವಿಕೇಂದ್ರೀಕರಣವೆಂದರೆ, ಉತ್ಪಾದನೆ ವಿತರಣೆಯ ಕಾರ್ಯಗಳು ಸಣ್ಣ ಪ್ರಮಾಣದ ಉತ್ಪಾದನಾ ಕೇಂದ್ರಗಳಲ್ಲಿ, ಗ್ರಾಮಗಳಲ್ಲಿ, ಹಾಗೂ ಕುಟೀರಗಳಲ್ಲಿ ಆಗತಕ್ಕದ್ದು.

ಹಳ್ಳಿಗಳ ದೇಶವಾದ ಭಾರತದಲ್ಲಿ ಪ್ರತಿಯೊಂದು ಗ್ರಾಮವೂ ಸ್ವಾವಲಂಬಿ ಘಟಕವಾಗಬೇಕು. ಅನ್ನ, ಬಟ್ಟೆ ಮತ್ತು ವಸತಿ–ಈ ಮುಖ್ಯ ಆವಶ್ಯಕತೆಗಳ ಬಗ್ಗೆ ಪ್ರತಿ ಗ್ರಾಮವೂ ಸ್ವಾವಲಂಬಿಯಾಗುವುದು ಅಗತ್ಯ. ಗ್ರಾಮದಲ್ಲೇ ಪಡೆಯಲಾಗದ ಅವಶ್ಯವಸ್ತುಗಳನ್ನು ಸುತ್ತಮುತ್ತಲ ಗ್ರಾಮಗಳಿಂದಾಗಲೀ, ಪ್ರದೇಶಗಳಿಂದಾಗಲೀ ತರಿಸಿಕೊಳ್ಳಲು ಅಭ್ಯಂತರವಿರುವುದಿಲ್ಲ.

ಗ್ರಾಮದ ಆರ್ಥಿಕವ್ಯವಸ್ಥೆ ಕೃಷಿ ಮತ್ತು ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ಮೇಲೆ ನಿಂತಿರತಕ್ಕದ್ದು. ಕೃಷಿ ಮತ್ತು ಗ್ರಾಮೋದ್ಯೋಗ ಕೇವಲ ಆರ್ಥಿಕಚಟುವಟಿಕೆಗಳೇ ಆಗಿರದೆ ಜೀವನವಿಧಾನವೂ ಆಗಿರುತ್ತದೆ. ಗಾಂಧೀಜಿಯವರ ಪ್ರಕಾರ ಎಲ್ಲ ಆರ್ಥಿಕ ಉದ್ಯೋಗಗಳೂ ಸಮಾನ ಗೌರವವುಳ್ಳದ್ದಾದರೂ ರೈತನ ಮತ್ತು ಕುಶಲ ಕಾರ್ಮಿಕನ ಜೀವನ ಸಾರ್ಥಕಜೀವನ.

ಅಜ್ಞಾನ; ಅಸಮಾನತೆ, ಪಟ್ಟಭದ್ರ ಹಿತಗಳಿಂದ ಶೋಷಣೆಗೊಳಗಾಗಿರುವ ಇಂದಿನ ಗ್ರಾಮಜೀವನ ಅಸಹನೀಯವಾಗಿದೆ. ಈ ಪರಿಸ್ಥಿತಿಯಲ್ಲಿ ಕ್ರಾಂತಿಕಾರಿ ಬದಲಾವಣೆಯಾಗುವುದು ಅಗತ್ಯ. ಮೊಟ್ಟಮೊದಲನೆಯದಾಗಿ, ಅತ್ಯಂತ ಕ್ಲಿಷ್ಟವಾಗಿರುವ ಭೂಹಿಡುವಳಿ ಪದ್ಧತಿಯಲ್ಲಿ ಬದಲಾವಣೆ ಆಗಬೇಕು. ಕಳೆದೆರಡು ದಶಕಗಳಿಂದ ಭೂಹಿಡುವಳಿ ಪದ್ಧತಿಯ ಬಗ್ಗೆ ಆಗಿರುವ ಭೂಸುಧಾರಣಾ ಕಾನೂನುಗಳು ಅಷ್ಟಿಷ್ಟಲ್ಲ. ಆದರೆ ಈ ಸುಧಾರಣೆಗಳ ಮೂಲಉದ್ದೇಶವಾದ 'ಉಳುವವನಿಗೇ ಭೂಮಿ' ಎನ್ನುವುದು ಇನ್ನೂ ಗಗನಕುಸುಮವೇ ಆಗಿದೆ. ಸಾಹುಕಾರ ದಳ್ಳಾಳಿಗಳ ಉಪಟಳ ಕಡಮೆಯಾಗಿಲ್ಲ. ಭೂಹಿಡುವಳಿ ಪದ್ಧತಿಯಲ್ಲಿ ತೃಪ್ತಿಕರ ಸುಧಾರಣೆ ಆದ ಹೊರತು ಗ್ರಾಮದ ಪುನರುದ್ಧಾರ ಸಾಧ್ಯವಿಲ್ಲ. ವಿನೋಬಾಜಿಯವರು ಕೈಗೊಂಡಿರುವ ಗ್ರಾಮದಾನ ಚಳುವಳಿಯ ವ್ಯಾಪಕ ಅನ್ವಯದಿಂದ ಇದು ಸಾಧ್ಯ. ಇದರಿಂದ ಗ್ರಾಮದಾನದಲ್ಲಿ, ಭೂಹಿಡುವಳಿಗೆ ಸಂಬಂಧಿಸಿದಂತೆ ಹೊಸ ಮೌಲ್ಯಗಳ ಅನ್ವಯವಾಗುತ್ತದೆ.ಗ್ರಾಮದಾನದ ಹಳ್ಳಿಯಲ್ಲಿ ಭೂಹಿಡುವಳಿಗಳ ಮೇಲೆ ವೈಯಕ್ತಿಕ ಒಡೆತನ ಹೋಗಿ ಗ್ರಾಮ ಸಮೂಹದ ಒಡೆತನ ಜಾರಿಗೆ ಬರುತ್ತದೆ. ಸ್ವಶ್ರಮದಿಂದ ಅಥವಾ ಸಹಕಾರದಿಂದ ಸಾಗುವಳಿ ಮಾಡುವ ಕುಟುಂಬಗಳಿಗೆ ಅವಶ್ಯವಿದ್ದಷ್ಟು ಭೂಮಿ ದೊರಕುವುದು ; ಭೂಮಿಯಲ್ಲಿ ಸಾಗುವಳಿ ಮಾಡಿ ಉತ್ಪನ್ನವನ್ನು ಭೋಗಿಸುವ ಹಕ್ಕಿರುವುದು. ಆದರೆ ಹಿಡುವಳಿಯನ್ನು ಪರಭಾರೆ ಮಾಡುವ ಹಾಗಿರುವುದಿಲ್ಲ. ಗ್ರಾಮದ ಹಳೆಯ ಸಾಲವನ್ನು ತೀರಿಸುವ ಜವಾಬ್ದಾರಿ ಗ್ರಾಮಸಭೆಗೆ ಸೇರಿರುತ್ತದೆ. ವ್ಯವಸಾಯಕ್ಕೆ ಬೇಕಾದ ಬಿತ್ತನೆಬೀಜ, ಸಾರಪೋಷಕಗಳು, ಸಾಲ ಇವುಗಳನ್ನು ಒದಗಿಸಲು ಮತ್ತು ಉತ್ಪನ್ನಗಳನ್ನು ಮಾರಾಟಮಾಡಲು ಸಹಕಾರಸಂಘಗಳು ಇರುವುವು. ಸಾಗುವಳಿದಾರರು ಇಷ್ಟಪಟ್ಟರೆ ಸಾಮೂಹಿಕ ಅಥವಾ ಸಹಕಾರಿ ಬೇಸಾಯದಲ್ಲಿ ತೊಡಗಬಹುದು. ಆದರೆ ವೈಯಕ್ತಿಕ ಬೇಸಾಯಕ್ಕೂ ಅಡ್ಡಿ ಇರುವುದಿಲ್ಲ. ಬೇಸಾಯದ ಜೊತೆಗೆ ಗ್ರಾಮದಲ್ಲಿರುವ ಶ್ರಮಶಕ್ತಿ ಹಾಗೂ ಕಚ್ಚಾವಸ್ತು ಇತ್ಯಾದಿ ಸೌಲಭ್ಯಗಳಿಗನುಗುಣವಾಗಿ ಗ್ರಾಮ ಮತ್ತು ಕುಟೀರ ಕೈಗಾರಿಕೆಗಳನ್ನು ನಡೆಸಲಾಗುವುದು. ಶ್ರಮಶಕ್ತಿ ಮತ್ತಿತರ ಸಾಧನಸೌಲಭ್ಯಗಳ ಪೂರ್ಣಬಳಕೆ ಗ್ರಾಮಯೋಜನೆಯ ಗುರಿಯಾಗುತ್ತದೆ. ಪ್ರತಿಯೊಂದು ಗ್ರಾಮದಾನಿ ಹಳ್ಳಿಯೂ ಸ್ವಾವಲಂಬಿ ಘಟಕವಾಗಿ ನಿರ್ಮಾಣ ಹೊಂದುತ್ತವೆ. ಇಂತಹ ಗ್ರಾಮಗಳಲ್ಲಿ ಹಿಡುವಳಿಗಳ ಭಿನ್ನಭಿನ್ನತೆಯ ಸಮಸ್ಯೆ ಆಗಲೀ, ಸಾಹುಕಾರ–ದಳ್ಳಾಳಿಗಳ ಉಪಟಳವಾಗಲೀ, ಸರ್ಕಾರದ ಅತಿಕ್ರಮ ಪ್ರವೇಶವಾಗಲೀ ಇರುವುದಿಲ್ಲ.

ಯಂತ್ರ–ತಂತ್ರಜ್ಞಾನ–ಮಾನವಶಕ್ತಿ : ಸರ್ವೋದಯ ಆರ್ಥಿಕ ವ್ಯವಸ್ಥೆಯಂತೆ ಯಂತ್ರ–ತಂತ್ರಜ್ಞಾನ ಹಾಗೂ ಮಾನವಶಕ್ತಿಯ ಸ್ಥಾನಗಳೇನೆಂಬುದು ಜಿಜ್ಞಾಸೆಗೆ ಒಳಗಾಗಿರುವ ಪ್ರಶ್ನೆ. ಗಾಂಧೀಜಿಯವರು ಎಲ್ಲರೀತಿಯ ಯಂತ್ರ ಹಾಗೂ ತಂತ್ರಜ್ಞಾನದ ಬಳಕೆಗೆ ವಿರೋಧವಾಗಿದ್ದರೆಂಬ ಮೂಢನಂಬಿಕೆ ಹಲವರಲ್ಲಿ ಮೂಡಿದೆ. ಇದು ಸತ್ಯಕ್ಕೆ ದೂರವಾದ ಮಾತು. ಎಲ್ಲ ಯಂತ್ರಗಳನ್ನೂ, ತಂತ್ರಜ್ಞಾನವನ್ನೂ ನಿಷೇಧಿಸಬೇಕೆಂದು ಗಾಂಧೀಜಿ ಎಂದೂ ಹೇಳಿರಲಿಲ್ಲ. ಆದರೆ ಭಾರತದಂತಹ ಜನಬಾಹುಳ್ಯವುಳ್ಳ ದೇಶದಲ್ಲಿ ನಿರುದ್ಯೋಗ, ಮರೆಮಾಚಿದ ನಿರುದ್ಯೋಗ, ಅರೆನಿರುದ್ಯೋಗ ತುಂಬಿರುವಾಗ ಯಂತ್ರಗಳ ಸ್ಥಾನವೇನೆಂಬುದನ್ನು ವಾಸ್ತವವಾಗಿ ನೋಡಬೇಕು ಎಂಬುದನ್ನು ಮಹಾತ್ಮಾಜಿಯವರು ಮನಗಾಣಿಸಿದರು. ಮಾನವಶಕ್ತಿಯ ಪೂರ್ಣ ಉಪಯೋಗವಾಗದೆ, ನಿರುದ್ಯೋಗ ಹಾಗೂ ಕಡುಬಡತನದಿಂದ ಜನಕೋಟಿಯು ನರಳುತ್ತಿರುವಾಗ ಉದ್ಯೋಗಾವಕಾಶಗಳನ್ನು ಹೆಚ್ಚಿಸಿ ಜನರ ಆರ್ಥಿಕ ಶಕ್ತಿಯನ್ನು ಹೆಚ್ಚಿಸುವ ಕಡೆ ಗಮನಕೊಡಬೇಕು. ಬದಲಾಗಿ ಭಾರಿ ಯಂತ್ರೋಪಕರಣಗಳನ್ನು ವ್ಯಾಪಕವಾಗಿ ಬಳಸಿದರೆ ಉತ್ಪಾದನೆಯೇನೋ ಹೆಚ್ಚಬಹುದು; ಆದರೆ ನಿರುದ್ಯೋಗ ಹಾಗೂ ಬಡತನ ಮಾತ್ರ ಹಾಗೆಯೇ ಉಳಿದಿರುತ್ತದೆ. ಇದರಿಂದ ರಾಜಕೀಯ ಆರ್ಥಿಕ ಹಾಗೂ ಸಾಮಾಜಿಕ ದುಷ್ಪರಿಣಾಮಗಳು ಉಂಟಾಗುತ್ತವೆ. ಆದ್ದರಿಂದ ಯಾವ ಯಾವ ಕ್ಷೇತ್ರಗಳಲ್ಲಿ ಮನುಷ್ಯಶಕ್ತಿಯನ್ನು ಬಳಸಲು ಸಾಧ್ಯವಿಲ್ಲವೋ ಅಂತಹಕಡೆ ಯಂತ್ರಗಳನ್ನು ಉಪಯೋಗಿಸುವುದು ಅನಿವಾರ್ಯ. ಮಾನವಶಕ್ತಿಯ ಉಪಯೋಗದಿಂದ ಸುಲಭವಾಗಿ ಗ್ರಾಹ್ಯವಸ್ತುಗಳನ್ನು ತಯಾರಿಸಬಹುದಾದ ಸಂದರ್ಭಗಳಲ್ಲೆಲ್ಲ ಶ್ರಮಶಕ್ತಿಯನ್ನೇ ಉಪಯೋಗಿಸಬೇಕು. ಜನರ ಶ್ರಮಶಕ್ತಿಯನ್ನು ಉಪಯೋಗಮಾಡುವುದೆಂದರೆ, ಮನುಷ್ಯನ ಶ್ರಮಶಕ್ತಿಗೆ ಪೂರಕವಾಗಿ ಉಪಕರಣಗಳನ್ನೂ ಸಣ್ಣಪುಟ್ಟ ಯಂತ್ರಗಳನ್ನೂ ವಿದ್ಯುತ್ ಅಥವಾ ಇತರ ಇಂಧನಗಳನ್ನೂ ಉಪಯೋಗಿಸಬಾರದೆಂದಿಲ್ಲ; ಅವುಗಳ ಉಪಯೋಗ ಅನಿವಾರ್ಯ. ಮನುಷ್ಯಶಕ್ತಿಯನ್ನು ಬಳಸುವ ಅವಕಾಶವಿದ್ದೆಡೆ ದೊಡ್ಡ ಯಂತ್ರಾಗಾರಗಳು ವರ್ಜ್ಯ ಅಷ್ಟೆ.

ಭಾರಿ ಪ್ರಮಾಣದ ಯಂತ್ರೋದ್ಯಮ ವ್ಯವಸ್ಥೆಯಲ್ಲಿ ಜೀವನವಿಧಾನ ಎಂತಹುದು ಎಂಬುದರ ಬಗ್ಗೆ ವಿಲ್‌ಡುರ್‍ಯಾಂಟ್‌ರ ವ್ಯಾಖ್ಯೆ ಮಾನವೀಯವಾಗಿದೆ. 'The Confinement of men and women in factories, making with machines owned by others fraction, of articles whose finished form will never cease, seemed to Gandhi a round-about way of burying humanity under a pyramid of shoddy goods.' [Ref : 'The Story of Civilization-Our Oriental Heritage,' Page 631]

ಸಣ್ಣ ಪ್ರಮಾಣದ ಉದ್ಯಮ ಹಾಗೂ ಸಣ್ಣ ಯಂತ್ರಗಳ ಬಳಕೆ ಬಗ್ಗೆ ಬ್ರಿಟನ್ನಿನ ಅರ್ಥಶಾಸ್ತ್ರಜ್ಞ S. Moor ಎಂಬುವರು 'Gandhi, Keynes and the spinning wheel' ಎಂಬ ಶೀರ್ಷಿಕೆಯಲ್ಲಿ ಬರೆಯುತ್ತಾ ಹೀಗೆ ಹೇಳಿದ್ದಾರೆ : Experience in Switzerland and Japan goes to prove that suitable machines can be devised for cottage industries, provided inventors free themselves from their Pre-conceived notion that large scale machines are always preferable. They would have to apply their ingenuity to the problems of the village-industry and invest small machines of simple design with as few parts as possible and with rotational motion. Full employment in India will not be possible without inventions of this type.'

ಮಾನವನ ಶ್ರಮಶಕ್ತಿಯನ್ನು ಕೇಂದ್ರವಾಗಿಟ್ಟುಕೊಂಡು ಅದಕ್ಕೆ ಪೂರಕವಾಗಿ ನವೀನ ಉಪಕರಣಗಳನ್ನು, ಸಣ್ಣ ಯಂತ್ರಗಳನ್ನು ಬಳಸುವುದರ ಮೂಲಕ ಗ್ರಾಮಗ್ರಾಮಗಳಲ್ಲೂ ಕುಟೀರಗಳಲ್ಲೂ ಉತ್ಪಾದನೆ ಮಾಡಬಹುದು. ಲಕ್ಷಲಕ್ಷ ಹಳ್ಳಿಗಳಲ್ಲಿ ಕೋಟ್ಯಂತರ ಕುಟೀರಗಳಲ್ಲಿ ತಯಾರಾಗುವ ವಸ್ತುಗಳ ಉತ್ಪನ್ನ ಸಮೃದ್ಧಿ

ಯಾಗಿರುವುದಲ್ಲದೆ ಜತೆ ಜತೆಯಲ್ಲೇ ಗ್ರಾಹಕರಿಗೆ ವಿವರಣೆಯೂ ಆಗುತ್ತದೆ. ಇದರಿಂದ ಸಮೃದ್ಧ ಉತ್ಪಾದನೆ, ನ್ಯಾಯೋಚಿತ ವಿತರಣೆ, ಪರಮಾವಧಿ ಉದ್ಯೋಗ, ಆರ್ಥಿಕ ಶಕ್ತಿಯ ವಿಸ್ತೃತ ಹಂಚಿಕೆ ಎಲ್ಲವೂ ಸಾಧಿತವಾಗುತ್ತದೆ.

ಸಮಾಜವಾದ ಹಾಗೂ ಧರ್ಮದರ್ಶಿತ್ವ: ಸಮಾಜವಾದ ಇಂದು ಆಕರ್ಷಣೀಯ ಸಿದ್ಧಾಂತವಾಗಿದೆ. ನಮ್ಮ ದೇಶದಲ್ಲಿ ಸಮಾಜವಾದಿ ಸ್ವರೂಪದ ಸಮಾಜ ರೂಪಿಸುವ ಸಂಕಲ್ಪವನ್ನು ಘೋಷಿಸಲಾಗಿದೆ. ಸಮಾಜವಾದದ ಬಗ್ಗೆ ಚರ್ಚೆ ಆದಾಗಲೆಲ್ಲ ಗಾಂಧೀಜಿಯವರು "ನಾನೂ ಕೂಡ ಒಬ್ಬ ಸಮಾಜವಾದಿ" ಎಂದು ಹೇಳುತ್ತಿದ್ದರು. ಸಮಾಜವಾದ ಒಂದು ತೆರನಾದ ಆರ್ಥಿಕವ್ಯವಸ್ಥೆ ಮಾತ್ರ ಆಗಿರದೆ ಜೀವನದ ಒಂದು ಪ್ರಧಾನ ಮೌಲ್ಯವಾಗಿರುತ್ತದೆ. ಸಮಾಜವಾದವು ವ್ಯಾಪಕವಾಗಿ ಅನ್ವಯವಾಗಬೇಕಾದರೆ ಸಮಾಜದಲ್ಲಿನ ವ್ಯಕ್ತಿಗಳು ಪರಿಗ್ರಹದ ಲಾಲಸೆ (acquisitiveness) ತೊರೆಯಬೇಕು. ವಿಕೇಂದ್ರೀಕರಣ, ಶರೀರ ಶ್ರಮ, ಅಪರಿಗ್ರಹ, ಸ್ವದೇಶಿ ಹಾಗೂ ಸ್ವಾವಲಂಬನೆಯ ತತ್ತ್ವಗಳನ್ನು ಸಮಾಜ ಒಪ್ಪಿಕೊಂಡು ಕಾರ್ಯಾನ್ವಯ ಮಾಡಿದರೆ ನೈಜಸಮಾಜವಾದ ಮೂಡಿಬರುತ್ತದೆ. ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡುವುದರಿಂದ ಸಮಾಜವಾದದ ಸ್ಥಾಪನೆ ಆಗುತ್ತದೆಂಬ ಭ್ರಾಂತಿ ಅನೇಕರಿಗೆ ಇದೆ. ಕೈಗಾರಿಕೆಗಳು ಮತ್ತು ಇತರ ಉತ್ಪಾದನಾ ಕೇಂದ್ರಗಳನ್ನು ಸರ್ಕಾರದ ವಶಕ್ಕೊಳಪಡಿಸುವುದರಿಂದ ಅಧಿಕಾರಶಾಹಿ ಸಮಾಜವಾದ ಉದ್ಭವವಾಗುತ್ತದೇ ಹೊರತು ಸಮಾಜವಾದದ ಮೌಲ್ಯಗಳು ಮೂಡಿಬರುವುದಿಲ್ಲ. ನೈಜಸಮಾಜವಾದದ ಮೌಲ್ಯಗಳು ರೂಢಮೂಲವಾಗಬೇಕಾದರೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನಲ್ಲಿರುವ ದೈಹಿಕ ಬೌದ್ಧಿಕ ಶಕ್ತಿಗೂ ವಸ್ತುಸಂಪತ್ತಿಗೂ ತಾನು ಕೇವಲ ಧರ್ಮದರ್ಶಿ ಎಂದು ಭಾವಿಸಿ ಅವುಗಳನ್ನು ತನ್ನ ಆತ್ಮಶ್ರೀಯ ವಿಕಾಸಕ್ಕೂ ಸಮಾಜದ ಒಳಿತಿಗೂ ಉಪಯೋಗಿಸಬೇಕು. ಹಾಗಾದರೆ ಉಚ್ಚ ಸಮಾಜವಾದಿ ಸಮಾಜ ಅರ್ಥಾತ್ ಸರ್ವೋದಯ ಸಮಾಜ ರೂಪುಗೊಳ್ಳುತ್ತದೆ.

ಸೃಷ್ಟಿಯಲ್ಲೆಲ್ಲ ಈ ಎರಡು ಶಕ್ತಿಗಳು ಅಕ್ಕಪಕ್ಕದಲ್ಲಿಯೇ ಕೆಲಸ ಮಾಡುತ್ತಿರುವುವು. ಎಲ್ಲಿ ನೀವು ಒಂದನ್ನು ನೋಡುತ್ತೀರೋ, ಅಲ್ಲಿ ನೀವು ಮತ್ತೊಂದನ್ನೂ ನೋಡುತ್ತೀರಿ. ಒಂದು ಸ್ವಾರ್ಥತೆ, ಮತ್ತೊಂದು ನಿಃಸ್ವಾರ್ಥತೆ; ಒಂದು ಅರ್ಜನೆ, ಮತ್ತೊಂದು ತ್ಯಾಗ.

ಕೆ. ಎಸ್. ನಾರಾಯಣಸ್ವಾಮಿ

"ಜೀವನನಿಷ್ಠ ನೈತಿಕ ಸಾಧನೆ–ಗಾಂಧೀ ಮಾರ್ಗ"

"ಕುರ್ವನ್ನೇವೇಹ ಕರ್ಮಾಣಿ
ಜಿ ಜೀವಿಷೇಚ್ಛತಂ ಸಮಾಃ
ಏವಂ ತ್ವಯಿ ನಾನ್ಯಥೇ ತೋಸ್ತಿ
ನ ಕರ್ಮ ಲಿಪ್ಯತೇ ನರೇ"—ಈಶಾವಾಸ್ಯ

ಸಂತತ ಕರ್ಮನಿರತನಾಗಿ ನೂರು ವರ್ಷ ಬಾಳು. ಇದು ಆರ್ಷೇಯಜೀವನ ಸಿದ್ಧಾಂತ. ಸಾಯುವ ವರೆಗೆ ಅವಿರತಕರ್ಮ ಮಾಡುತ್ತಿದ್ದರೂ ಅದರಿಂದ ಅಲಿಪ್ತನಾಗಿಯೇ ಉಳಿಯಬೇಕು; ಇದು ಬಾಳಿನ ಕಲೆ. ಉಪನಿಷತ್ತಿನ ಈ ಮಂತ್ರ ಖಚಿತವಾಗಿ ನಿರ್ದೇಶಿಸಿದೆ; 'ನ, ಅನ್ಯಥಾ, ಇತಃ, ಅಸ್ತಿ.' ಬೇರಾವ ಮಾರ್ಗವೂ ಇಲ್ಲ. ಜೀವಿಸಿರುವ ಪರ್ಯಂತ ಕರ್ಮದ ಚಿಂತನೆ, ಕರ್ಮದ ವ್ಯವಸ್ಥೆ, ಕರ್ಮದ ಹಿತ–ಅಹಿತ ವಿವೇಕ ಎಲ್ಲರಿಗೂ ಸಮಾನ. ಇದು ವ್ಯಾವಹಾರಿಕ ಅದು ಪಾರಮಾರ್ಥಿಕ ಎಂಬ ಭೇದ ಕಲ್ಪಿಸಿಕೊಂಡರೆ ಬಾಳು ಹೋಳಾಗುತ್ತದೆ. ತಾತ್ತ್ವಿಕ ಹಿನ್ನೆಲೆ ಇಲ್ಲದೆ ಇಹ–ಪರಗಳನ್ನು ಜೋಡಿಸಿಕೊಂಡರೆ ಸಿಕ್ಕಾಗುತ್ತದೆ, ಗೊಂದಲ ಮಯವಾಗುತ್ತದೆ. ಭೌತಿಕ ದೇಹದ ಜೀವಂತ ಸ್ಥಿತಿಯಲ್ಲಿ ದೇಹದ ಭಾಗ ಬೇರೆ, ಆತ್ಮದ ಭಾಗ ಬೇರೆ ಎಂದುಕೊಳ್ಳುವುದು ವಿಚಾರ ಸೌಲಭ್ಯಕ್ಕೆ ಮಾತ್ರ. ವಾಸ್ತವಿಕವಾಗಿ ದೇಹದ ಪ್ರತಿಯೊಂದು ಕರ್ಮವೂ ಆತ್ಮೋನ್ನತಿಯ ಸಾಧನೆಯ ಮೇಲೆ ಪರಿಣಾಮ ಮಾಡುತ್ತಲೇ ಹೋಗುತ್ತಿರುತ್ತದೆ. ಕೇವಲ ದೈಹಿಕ ಜೀವನ ನಿಷ್ಠೆ ಅನ್ನುವುದು ಮರೀಚಿಕೆ, ಎಂತಹ ಪಶುಸದೃಶ ಜೀವಿಗೂ ತನ್ನ ಅಂತರಂಗ ಜೀವನವನ್ನು ಮೆಟ್ಟಿ ನಾಶಗೊಳಿಸುವುದು ಅಸಾಧ್ಯ. ದಿನನಿತ್ಯದ ಭೌತಿಕಾವಶ್ಯಕತೆಗಳನ್ನು ಪೂರೈಸಿಕೊಳ್ಳುವ ಜೀವನವ್ಯಾಪಾರ ಅಂತರಂಗಜೀವನಕ್ಕೆ ಪೋಷಕ, ಪೂರಕ, ಚೈತನ್ಯದಾಯಕ ಆಗಬೇಕು. ಆಗಲೇ ಬಾಳು ಅರ್ಥಪೂರ್ಣವಾದೀತು. ಆನಂದದಾಯಕವಾದೀತು. ತನ್ನ ವ್ಯವಹಾರಗಳನ್ನೆಲ್ಲ ಶುದ್ಧವಾಗಿ ನಡೆಸಿ, ಅದರಲ್ಲಿ ಶಾಂತಿ ಹೇಗೆ ದೊರೆತೀತೆಂಬುದನ್ನು ಕಲಿಸುವುದೇ ಪರಮಾರ್ಥ. ವ್ಯವಹಾರವನ್ನು ಹೀಗೆ ಶುದ್ಧಿ ಗೊಳಿಸುವುದೇ ನೀತಿ. ಇಂಥ ನೈತಿಕಸಾಧನೆಯ ಜ್ವಲಂತ ಸಮಕಾಲೀನ ಉದಾಹರಣೆ ಗಾಂಧೀಜಿಯ ಬಾಳು, ಬದುಕು. ಈ ದೃಷ್ಟಿ ಆಕಾಂಕ್ಷೆ ಈ ಮಹೋನ್ನತ ಭಾವನೆ ಅವರ ಬಾಳಿನ ಚಿರಂತನ ಶ್ರುತಿ. ಬಾಹ್ಯಕರ್ಮ, ಮಾನಸಿಕ ಸಾಧನೆ, ಆತ್ಮಸಾಕ್ಷಾತ್ಕಾರ ಏಕೀಭವಿಸಿ ಲೋಕಕಲ್ಯಾಣ ಸಾಧಿಸಿದ ಜೀವನನಿಷ್ಠ ನೈತಿಕಸಾಧನೆ ಗಾಂಧೀ ಮಾರ್ಗ.

ಗೀತಾ ಪ್ರವಚನದಲ್ಲಿ ಆಚಾರ್ಯ ವಿನೋಬಾ ಒಂದು ಕಡೆ ಹೀಗೆ ಹೇಳಿದ್ದಾರೆ:

"ನಮ್ಮ ಮನಸ್ಸಿನ ಸ್ವರೂಪವನ್ನರಿಯಲು ಕರ್ಮ ಬಹಳ ಉಪಯೋಗಿ, ದೋಷಕಂಡರೆ ಅದನ್ನು ನಿವಾರಿಸಲುಬಹುದು. ದೋಷವೇ ಕಾಣದಿದ್ದರೆ ಪ್ರಗತಿ ಕುಂಠಿತವಾಗುತ್ತದೆ, ವಿಕಾಸ ನಿಲ್ಲುತ್ತದೆ. ಕರ್ಮ ಮಾಡುತ್ತಿದ್ದರೆ

ದೋಷ ಕಾಣುತ್ತದೆ. ಅದನ್ನು ನಿವಾರಿಸಲು ವಿಕರ್ಮದ ಪ್ರಯತ್ನ ಹಗಲೂಇರುಳೂ ನಡೆದರೆ, ಕಾಲಾನುಕಾಲ ದಲ್ಲಿ ಸ್ವಧರ್ಮವನ್ನು ಆಚರಿಸುತ್ತ ಹೇಗೆ ಅಲಿಪ್ತನಾಗಿರಬಹುದೋ, ಕಾಮಕ್ರೋಧಾತೀತನಾಗಿ, ಲೋಭಮೋಹ ರಹಿತನಾಗಿ, ಹೇಗೆ ಇರಬಹುದೋ ತಿಳಿದುಬರುತ್ತದೆ. ಕರ್ಮವನ್ನು ನಿರ್ಮಲಗೊಳಿಸುವ ಪ್ರಯತ್ನ ನಿರಂತರ ನಡೆದರೆ ನಿರ್ಮಲ ಕರ್ಮವೇ ಸಹಜವಾಗುತ್ತದೆ. ಸಹಜಕರ್ಮವೇ ಅಕರ್ಮ. ಕರ್ಮ ಹೇಗೆ ಅಕರ್ಮವಾಗು ತ್ತದೋ ಅವನ್ನು ಶರಣರ ಪಾದದಿಂದ ಕಲಿಯಬೇಕು ಎಂದು ನಾಲ್ಕನೆಯ ಅಧ್ಯಾಯದ ಕೊನೆಯಲ್ಲಿ ಭಗವಂತ ಹೇಳಿದ್ದಾನೆ. ಈ ಅಕರ್ಮ ಸ್ಥಿತಿಯನ್ನು ವರ್ಣಿಸಲು ಮಾತಿಗೆ ಅಳವಲ್ಲ."

ನೈತಿಕನಿಷ್ಠೆ, ನೀತಿಶಾಸನದಲ್ಲಿ ಜೀವಂತಶ್ರದ್ಧೆ, ಭಗವಂತನ ಸೃಷ್ಟಿಯಲ್ಲಿ ಸರ್ವವನ್ನೂ ವ್ಯಾಪಿಸಿ ನಿಂತಿ ರುವ ಒಂದು ಅಪ್ರತಿಹತ ನೀತಿನಿಯಮದ ವಿವೇಕ-ಇವುಗಳ ಸಾದೃಶ್ಯಮೂರ್ತಿ ಗಾಂಧೀಜಿ. ನೈತಿಕಶಕ್ತಿಗೆ ಮಿಗಿಲಾದ ಶಕ್ತಿ ಇಲ್ಲ. ಇದು ಆತ್ಮಶ್ರೀನಿಯಮ; ಇದಕ್ಕೆ ಹೊರತಾದ ಯಾವ ಜೀವನ ಕ್ಷೇತ್ರವೂ ಇಲ್ಲ; ಇರ ಲಾರದು, ಇಂಥ ಪ್ರಚಂಡಶಕ್ತಿಗೆ ಸಾಕ್ಷಿ ನಮ್ಮ ಸಂಸ್ಕೃತಿಯ ಈ ಸಾಕಾರರೂಪಿ.

ನೈತಿಕ ನಿಷ್ಠೆಯ ಆಧಾರ : ಗಾಂಧೀಜಿಯ ದೃಷ್ಟಿಯಲ್ಲಿ ಜೀವನದ ಮೂಲ ಆಕಾಂಕ್ಷೆಗಳು ನಾಲ್ಕು: ಅನ್ನ, ಬಲ, ಪ್ರೇಮ, ಜ್ಞಾನ. ಇವುಗಳನ್ನು ಗರಿಷ್ಠಪ್ರಮಾಣದಲ್ಲಿ ಗಳಿಸುವ ಪ್ರಯತ್ನದಲ್ಲಿ ಪ್ರತಿಮಾನವನೂ ತೊಡಗಿರುತ್ತಾನೆ. ಆದರೆ ಮಾರ್ಗಗಳು ಅಸಂಖ್ಯಾತ. ಪ್ರಧಾನವಾಗಿ ಕೆಲವು ಶುದ್ಧ, ಕೆಲವು ಅಶುದ್ಧ; ಕೆಲವು ನೈತಿಕ ಕೆಲವು ಅನೈತಿಕ. ಪರಮ ಮೌಲ್ಯಗಳ ಮಾನದಂಡದಿಂದ ನೋಡಿದರೆ ಎಲ್ಲರಲ್ಲಿಯೂ ಎಲ್ಲ ಅಂಶಗಳೂ ಉಂಟು. ಇದು ಅನಿವಾರ್ಯ. ಆದರೆ ಮಾನವತೆಯ ವಿಕಾಸ ದೃಷ್ಟಿ ಅವ್ಯಾಹತವಾಗಿ ಪ್ರವಹಿಸುತ್ತಿರುವುದರಿಂದ ಪ್ರತಿಯೊಬ್ಬ ಜೀವಿಯೂ ಸತ್ಯನಿಷ್ಠನಾಗಲು ಹಂಬಲಿಸುತ್ತಿರುತ್ತಾನೆ. ಕರ್ಮನಿರತನಾಗಿ ಫಲಾಕಾಂಕ್ಷೆಯ ಆತುರ ಅವನನ್ನು ಹಿಡಿದು ಕಾಡಿದಾಗ ಮಾರ್ಗ ಮೂರಾಬಟ್ಟೆಯಾಗುತ್ತದೆ; ನೈತಿಕ ನಿಷ್ಠೆಗಳೆಲ್ಲ ಸಡಿಲವಾಗುತ್ತದೆ. ಮೂಲ ಮೌಲ್ಯಗಳೇ ದೃಷ್ಟಿ ಪಥದಿಂದ ಅಳಿಸಿಹೋಗುತ್ತವೆ. ಬಯಸಿದ ಫಲ ಅನಿರೀಕ್ಷಿತವಾದ ನಿಲ್ದಾಣಕ್ಕೆ ಕರೆದೊಯ್ದು ಬಿಡುತ್ತದೆ. ಅಂತೆಯೇ ನಮ್ಮ ಜೀವನಾಕಾಂಕ್ಷೆಗಳನ್ನು ಪೂರೈಸಿಕೊಳ್ಳುವಾಗ ಕಠಿಣತರವೆನಿಸಿದರೂ ಒಂದು ಸಾಪೇಕ್ಷ ಸತ್ಯದ ನೈತಿಕಾಧಾರವನ್ನು ಎಂದಿಗೂ ಸಡಿಲಗೊಳಿಸಬಾರದು. ಅನೇಕ ವೇಳೆ ಸುಶಿಕ್ಷಿತ ಬುದ್ಧಿವಂತಿಕೆ ಅತಿ ಸುಲಭವಾಗಿ ನಮ್ಮನ್ನು ಪರಾಭವಗೊಳಿಸುತ್ತದೆ. ಹೃದಯ ಒಪ್ಪದಿದ್ದರೂ ಬುದ್ಧಿ ಸಮರ್ಥಿಸುತ್ತದೆ. ಇಂಥ ಪರೀಕ್ಷಾ ಸಮಯ ಗಳಲ್ಲಿ ನಮಗಿರುವ ಆಧಾರ ಒಂದೇ : ವಿಶ್ವವ್ಯಾಪಿಯೂ,ವಿಶ್ವಾತ್ಮಕವೂ ಆದ ಈಶ್ವರಶಕ್ತಿಯಲ್ಲಿ ಜೀವಂತನಂಬಿಕೆ, ಭಗವಂತನ ಅದಮ್ಯ ನೈತಿಕಶಾಸನದ ಪ್ರಭುತ್ವಕ್ಕೆ ಶರಣು ಹೋಗುವ ನಮ್ರತೆ. ಗಾಂಧೀಜಿ 'ಭಗವಂತನೇ ಸತ್ಯ' ಎಂದರು. ಕೊನೆಕೊನೆಗೆ 'ಸತ್ಯವೇ ದೇವರು' ಎಂಬುದನ್ನೇ ಅಂಗೀಕರಿಸಿದರು. ಆತನನ್ನು 'ನಮ್ರತೆಯ ಸಾಮ್ರಾಟ' ಎಂದು ಭಾವಿಸಿ ಒಂದು ಸುಂದರ ಹಿಂದಿ ಕವನವನ್ನೇ ರಚಿಸಿದರು. ಸತ್ಯನಿಷ್ಠೆ ಹಾಗೂ ನಮ್ರತೆ ಈ ಗುಣಗಳೇ ನೀತಿವಂತಿಕೆಯ ಮೂಲಧಾರ, ಅದೇ ನೈತಿಕ ಶಕ್ತಿಯ ಚಿರಂತನ ಚಿಲುಮೆ.

ಅಜೇಯ ಶಕ್ತಿ: ನೀತಿವಂತಿಕೆ ತನಗೆ ತಾನೇ ಶಕ್ತಿ ಉತ್ಪಾದನೆ ಮಾಡಿಕೊಳ್ಳಬಲ್ಲ ಯುಕ್ತಿವಿಶೇಷ. "ತನ್ನ ದೌರ್ಬಲ್ಯಗಳ ಅರಿವಾಗುವುದೇ ಮಾನವನಿಗೆ ಒಂದು ಅಪೂರ್ವಬಲ" ಅನ್ನುತ್ತಾರೆ ಗಾಂಧೀಜಿ. ಮುಂದು ವರೆದು,

"ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಅತ್ಯಂತ ಋಜುವಾಗಿ, ಅತ್ಯಂತ ಅಹಿಂಸಕವಾಗಿ ನಡೆಯ ಬೇಕೆಂದು ಹೋರಾಡುತ್ತಿದ್ದರೂ, ನನಗೆ ಸರಿಯೆಂದು ತಿಳಿದ ಗುರಿಯನ್ನು ಮುಟ್ಟಲು ಹಂಬಲಿಸಿ ಹೆಣಗುತ್ತ ಸತತವೂ ಸೋಲುತ್ತಿರುವ ನಾನು ಒಬ್ಬ ಸಾಮಾನ್ಯ ಚೇತನ. ಆ ಯಾತ್ರೆಯೇನೋ ಕ್ಲೇಶಕರವೇ ; ಆದರೆ ಆ ಯಾತನೆಯಲ್ಲಿ ನನಗೆ ಒಂದು ಅಪೂರ್ವ ಆನಂದ ಅನುಭವವಾಗುತ್ತದೆ. ಏರುವ ಒಂದೊಂದು ಹೆಜ್ಜೆಯೂ ನನ್ನನ್ನು ಬಲಿಷ್ಠನನ್ನಾಗಿ ಮಾಡಿ ಮುಂದಣ ಹೆಜ್ಜೆಗೆ ಸಾಮರ್ಥ್ಯವೀಯುತ್ತದೆ" ಎಂದಿದ್ದಾರೆ.

ಈ ಶ್ರದ್ಧೆ ಕೇವಲ ಕುರುಡುನಂಬಿಕೆಯೆಂದಿಗೂ ಆಗಲಾರದು. ಒಂದು ಅವ್ಯಾಹತ ಪರಂಪರೆಯಾಗಿ ನಡೆದುಬರುತ್ತಿರುವ ಮಾನವಕುಲಪ್ರದೀಪಕರಾದ ಸಾಧುಸಂತರ ಪಂಕ್ತಿಯೇ ಇದಕ್ಕೆ ಸಾಕ್ಷಿ. "ತನ್ನ ಪತಿಯ ಪ್ರೇರೇಪಣೆಯಿಂದ ತನಗೆ ಕೊಡಲ್ಪಟ್ಟ ಹಿಂಸೆಯನ್ನು ಮೀರಾಬಾಯಿ ಎಂದಿಗೂ ಅನುಭವಿಸಲೇ ಇಲ್ಲ ಎಂಬುದನ್ನು ನಾನು ಅಕ್ಷರಶಃ ನಂಬುತ್ತೇನೆ" ಎನ್ನುತ್ತಾರೆ ಗಾಂಧೀಜಿ. ಆಕೆಯ ಭಗವತ್ಪ್ರೇಮ ಆಕೆಯನ್ನು ಸದಾ ಆನಂದ ಮಯಿಯನ್ನಾಗಿಟ್ಟದ್ದಿತು. ಪಾಶ್ಚಾತ್ಯ ಸಂತ ಲ್ಯಾಟಿಮರ್ ಗಂಭೀರವಾಗಿ ಅಗ್ನಿಯೊಳಕ್ಕೆ ತನ್ನ ಕೈಚಾಚಿದಾಗ ನಿಜವಾಗಿಯೂ ನೋವನ್ನನುಭವಿಸಲಿಲ್ಲ. ಅವನಲ್ಲಿದ್ದ ಋಜುತ್ವ, ಸಂಕಲ್ಪಶಕ್ತಿ ಆ ನೋವಿಗಿಂತ ಮಿಗಿಲಾದ ಶಕ್ತಿ ಯುಳ್ಳುದಾಗಿತ್ತು. ತಮ್ಮ ಅನುಭವಗಳಿಂದಲೇ ಈ ನಂಬಿಕೆಯನ್ನು ಅಚಲವಾಗಿ ಬೆಳೆಸಿಕೊಂಡಿದ್ದ ಗಾಂಧೀಜಿಗೆ ಮಾನವನ ಅಂತಃಕರಣ ಶುದ್ಧವಾದಂತೆಲ್ಲ, ಅವನ ನೈತಿಕಶಕ್ತಿ ವರ್ಧಿಸಿದ ಹಾಗೆಲ್ಲ, ಅವನಿಗೆ ಅಜೇಯ ಆತ್ಮ ಶಕ್ತಿಯು ಅರಿವಾಗುತ್ತದೆಂಬುದರಲ್ಲಿ ಸಂದೇಹವೇ ಇರಲಿಲ್ಲ. ಆದುದರಿಂದಲೇ ಅವರನ್ನುತ್ತಿದ್ದರು :

'ಅಹಿಂಸೆಗೆ ಅಧಿಕಾರಶಕ್ತಿ ತಾನಾಗಿಯೇ ಬರುತ್ತದೆ
ಹಿಂಸೆ ಆ ಶಕ್ತಿಯನ್ನರಸಿ ಧಾವಿಸುತ್ತಿರುತ್ತದೆ'

ಕಾರಣ ಸ್ಪಷ್ಟ. ಅಹಿಂಸೆಯ ಗಮ್ಯಸ್ಥಾನ ಮಾನವಹೃದಯ. ತನ್ನ ನೈತಿಕ ಋಜುತೆಯಲ್ಲಿ ವಿಶ್ವಾಸ ವುಳ್ಳ ಅಹಿಂಸಾಯೋಧ ಹೃದಯಸಾಮ್ರಾಜ್ಯವನ್ನು ಗೆದ್ದು ದ್ವೇಷವನ್ನೇ ನಿರಸನ ಮಾಡುತ್ತಾನೆ. ಸೋತ ಎದು ರಾಳಿಗೆ ಅಪಜಯವಾಯಿತೆಂಬ ಭಾವನೆಯೇ ಉಳಿಯದು. ಆದರೆ ಹಿಂಸಾಶಕ್ತಿ ಎಲ್ಲಿ ದಮನವಂಡವಾಗುತ್ತದೋ ಅಲ್ಲಿ ದ್ವೇಷದ ಕಿಡಿ ಅಂತರ್ಗತವಾಗಿ ಧಗಧಗಿಸುತ್ತಲೇ ಇದ್ದುಬಿಡುತ್ತದೆ. ಇದರ ಆಸ್ಫೋಟನವನ್ನು ಕಾಯಲು ಹಿಂಸೆ ಸಂತತವಾಗಿ ದಂಡಧಾರಿಯಾಗಿಯೇ ನಿಲ್ಲುತ್ತದೆ ; ನಿಲ್ಲಬೇಕಾಗುತ್ತದೆ. ಇಲ್ಲಿ ಜಯಲಭಿಸುವುದು ತತ್ತ್ವ ಕ್ಕಲ್ಲ, ದಂಡಕ್ಕೆ; ಉದ್ದೇಶಿತ ಫಲ ದೂರಸರಿದು ಗೆದ್ದವನು ನಿರಾಶನಾಗುತ್ತಾನೆ. ಸೋತವನು ಅಶಾಂತನಾಗು ತ್ತಾನೆ. ಗಾಂಧೀಜಿಯ ಮಾತಿನಲ್ಲಿ "ಆತ್ಮ ಅಥವ ಸತ್ಯಶಕ್ತಿ ಹೇಗೋ ಹಾಗೆಯೇ ಪ್ರೇಮಶಕ್ತಿಯೂ. ಇದರ ಪ್ರಭಾವದ ನಿದರ್ಶನ ನಮಗೆ ಹೆಜ್ಜೆ ಹೆಜ್ಜೆಗೂ ಸಿಕ್ಕುತ್ತದೆ. ಈ ಶಕ್ತಿ ಇಲ್ಲದಿದ್ದರೆ ವಿಶ್ವವೇ ಶೂನ್ಯವಾದೀತು."

ವಿಶ್ವದ ಕಥೆ ಯುದ್ಧಗಳಿಂದಲೇ ಆರಂಭವಾಗಿದ್ದರೆ, ನೀತಿಪಥದ ವಿರೋಧವೇ ಸಹಜವಾಗಿ ಬಿಟ್ಟದ್ದರೆ, ಇಂದು ಮಾನವಲೋಕ ಅಳಿಸಿಹೋಗಿರುತ್ತಿತ್ತು. ಜಗತ್ತಿನಲ್ಲಿ ಅಸಂಖ್ಯಜನ ಇನ್ನೂ ಜೀವಂತವಾಗಿರುವು ದನ್ನು ನೋಡಿದರೆ ಅದು ಶಸ್ತ್ರಶಕ್ತಿಯ ಆಧಾರದ ಮೇಲೆ ನಿಂತಿಲ್ಲವೆಂದೂ ಸತ್ಯ ಅಥವಾ ಪ್ರೇಮಶಕ್ತಿಯ ಮೇಲೆಂದೂ ಗೋಚರವಾಗುತ್ತದೆ. ಆದುದರಿಂದ ಜಗತ್ತಿನಲ್ಲಿ ಯುದ್ಧಗಳು ನಡೆದರೂ ಈ ಶಕ್ತಿ ಜೀವಂತ ವಾಗಿದೆ ಎಂಬುದೇ ಇದರ ಯಶಸ್ಸಿಗೆ ಜೀವಂತಸಾಕ್ಷಿ. ಲಕ್ಷಾಂತರ ಕುಟುಂಬಗಳಲ್ಲಿ ದಿನವಹಿ ನಡೆಯುವ ಸಣ್ಣ ಪುಟ್ಟ ಹೋರಾಟಗಳು ಮಾಯವಾಗುತ್ತವೆ. ನೂರಾರು ಜನಾಂಗಗಳು ಶಾಂತಿಯಿಂದ ಬಾಳುತ್ತವೆ. ಇತಿಹಾಸ ಇದನ್ನು ಗಣನೆಗೆ ತೆಗೆದುಕೊಂಡಿಲ್ಲ, ತೆಗೆದುಕೊಳ್ಳಲೂ ಆಗದು. ನಿಜವಾಗಿಯೂ ಇತಿಹಾಸ ಎಂಬುವುದು ಈ ಪ್ರೇಮ ಅಥವಾ ಆತ್ಮಶಕ್ತಿಯ ಸುಗಮನಡೆಯ ಮಧ್ಯೆ ಬಂದ ಅಡಚಣೆಗಳನ್ನು ಕುರಿತ ದಾಖಲೆ ಮಾತ್ರ. ಪ್ರಕೃತಿಯ ನೀತಿಶಾಸನಕ್ಕೆ ಅಡ್ಡಬಂದ ಅಡಚಣೆಗಳ ದಾಖಲೆಯನ್ನೇ ಇತಿಹಾಸ ಅನ್ನುತ್ತಾರೆ. ಪ್ರಕೃತಿಸಿದ್ಧವಾದ, ಮಾನವ ಸಹಜವಾದ ಆತ್ಮಶಕ್ತಿಯ ವಿಕಾಸದ ಪಥ ಇತಿಹಾಸದ ದಾಖಲೆಗಳಲ್ಲಿ ಕಾಣುವುದೇ ಇಲ್ಲ.

ಈ ಯುಗದ ಸವಾಲು : ಪ್ರಸಿದ್ಧ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಅವರು ಅಮೆರಿಕದ ತರುಣ ವಿದ್ವಾಂಸರಾದ ಜೀನ್‌ಶಾರ್ಪ್ ಅವರ 'Gandhi wields the weapon of Moral Power' ಎಂಬ ಪುಸ್ತಕಕ್ಕೆ ಮುನ್ನುಡಿ ಬರೆಯುತ್ತಾ,

'A cause which was clearly embodied in Gandhi's unique personality ; to overcome by means of the awakening of moral forces, the danger of self destruction by

which humanity is threatened through breath-taking technical developments. The threatenning downfall is characterised by such terms as 'depersonalization', 'Regimentation', 'total war', 'salvation by the words', 'personal responsibility together with non-violence, and 'service to mankind' is the spirit of Gandhi.

'Each individual must come to a clear decision for himself in this important matter ; there is no middle ground' ಎಂದಿದ್ದಾರೆ.

ನಮ್ಮ ಸಮಕಾಲೀನ ಯುಗ ಮಾನವ ಇತಿಹಾಸದಲ್ಲಿ ಒಂದು ಮಹಾಪರಿವರ್ತನೆಯ ಪರ್ವಕಾಲವಾಗಿ ಪರಿಣಮಿಸುವ ಹಾಗೆ ಕಾಣುತ್ತದೆ. ಐಹಿಕಜೀವನದ ಪರಿಸರಗಳು ಮಿಂಚಿನವೇಗದಲ್ಲಿ ಬದಲಿಸುತ್ತವೆ. ಹಾಗೆಯೇ ಜಗತ್ತಿನ ರಾಜಕೀಯ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಗಳು ಸಾಂಪ್ರದಾಯಕ ಚೌಕಟ್ಟುಗಳನ್ನು ಬಿರಿದು ಮುಗ್ಗುರಿಸುವಂತಾಗಿದೆ. ಹಿಂದೆಂದೂ ಮಾನವಕುಲ ಊಹಿಸಲಾಗದಿದ್ದಂಥ ಬೃಹತ್ಪ್ರಮಾಣದ ಮಾನವವಿಶ್ವ ಒಂದು ಶತಮಾನದೊಳಗೆ ಹಠಾತ್ತನೆ ನಮ್ಮಮುಂದೆ ಬಂದು ನಿಂತುಬಿಟ್ಟಿದೆ. ಭೂಮಂಡಲವೇ ಒಂದು ಅತಿ ನಿಕಟ ಮಾನವೀಯಸಂಪರ್ಕ ಸಮಷ್ಟಿಯಾಗಿ ಪರಿಣಮಿಸಿದೆ. ವಿಜ್ಞಾನದ ವರಪ್ರಸಾದ ಇದು. ಈ ಕಾರಣದಿಂದಲೇ ಮಾನವ ಒಂದು ಅನಿರೀಕ್ಷಿತ ಅತ್ಯುತ್ಕಟ ಅಪಾಯಕ್ಕೂ ಈಡಾಗುವ ಅಂಚಿಗೆ ಬಂದು ನಿಂತಿದ್ದಾನೆ. ನಮ್ಮ ಬಾಹ್ಯ ಸ್ವರೂಪವನ್ನು ನೋಡಿಯೇ ನಾವು ಭೀತರಾಗುತ್ತಿದ್ದೇವೆ. ಮಾನವನ ವಿಕಾಸಮಾರ್ಗದಲ್ಲಿ ಅವನ ಊರ್ಧ್ವಮುಖ ನೈತಿಕಶಕ್ತಿ ಪರಾಭವಗೊಂಡು ಆಧುನಿಕ ಸಮಾಜವೆಂಬ ಬೃಹದ್‌ಯಂತ್ರದಲ್ಲಿ ಅವನೊಂದು ಅಣುವಾಗಿ ಸ್ವತಂತ್ರ ವ್ಯಕ್ತಿತ್ವವನ್ನೇ ಕಳೆದುಕೊಳ್ಳುವ ವಿಷಮಸ್ಥಿತಿ ಬಂದೊದಗಿದಂತಿದೆ. ಐನ್‌ಸ್ಟೀನರಂವಂತೆ ಈ 'ವ್ಯಕ್ತಿತ್ವ ವಿನಾಶ'ವನ್ನು (depersonalization) ತಡೆಗಟ್ಟಲು ನಮಗಿರುವ ಏಕೈಕ ಅಕ್ಷಯಪಾತ್ರೆ ಸತ್ಯ-ಅಹಿಂಸಾನಿಷ್ಠವಾದ ನೈತಿಕಶಕ್ತಿ. ಸಾಮೂಹಿಕ ಸಂಘಟಿತ ಸ್ವರೂಪದಲ್ಲಿ ಆ ಶಕ್ತಿ ಅವತರಿಸಿಬರಲು ನಮಗಿಂದು ದೊರಕಿರುವ ವಿಶಿಷ್ಟಮಾರ್ಗ ಗಾಂಧೀಮಾರ್ಗ. ಇಡೀ ಮಾನವಕುಲದಲ್ಲಿ ಈ ನೈತಿಕ ಜಾಗೃತಿಯುಂಟಾಗಬೇಕಾದರೆ ಗಾಂಧೀಜಿಯವರೆಂದಂತೆ ಎಲ್ಲ ಆಧ್ಯಾತ್ಮಿಕ ಶಕ್ತಿಗಳೂ ಜೀವನನಿಷ್ಠವಾಗಿ ಹರಿಯಬೇಕು. ಅಹಿಂಸಾಪ್ರವೃತ್ತಿ ಸ್ವಭಾವ ಸಹಜವಾಗಬೇಕು. ಭಗವಂತ ಅವತರಿಸಿಬಂದರೂ ಶ್ರೀಸಾಮಾನ್ಯನ ಜೀವನದಲ್ಲಿ ಸಂಪೂರ್ಣ ಲೀನವಾಗುವ ಸ್ವರೂಪದಲ್ಲೇ ಬರಬೇಕು ; ಇದು ಅವರ ಗಾಢವಿಶ್ವಾಸ. ದೇವರ ಬಗ್ಗೆ ಮಾತನಾಡುತ್ತ ಅವರೆಂದರು : 'He is no God who merely satisfies the intlelect, God to be God must rule the heart and transform it ; He must express himself in the smallest act of his votary.' ನೀತಿನಿಯಮಗಳನ್ನೂ ನೈತಿಕ ಶಾಸನದ ಅತ್ಯದ್ಭುತ ಮೌಲ್ಯಗಳನ್ನೂ ಬುದ್ಧಿಯಿಂದ ಗ್ರಹಿಸುತ್ತಿದ್ದೇವೆ. ಆದರೆ ಅವು ಯಾವುವೂ ಇನ್ನೂ ಈ ಯುಗದ ಸವಾಲುಗಳನ್ನು ಎದುರಿಸಿ ನಿಂತು ಅಜೇಯವಾಗುವಂತಹ ಕ್ರತುಶಕ್ತಿಯ ಸ್ಫೂರ್ತಿ ಚಿಲುಮೆಯಾಗಿ ನಮ್ಮ ಹೃದಯಗಳಲ್ಲಿ ಸ್ಥಾಯಿಯಾಗಿಲ್ಲ. ಅಮೆರಿಕದ ಗಾಂಧೀವಾದಿ ಅರ್ಥಶಾಸ್ತ್ರಜ್ಞ ರಿಚರ್ಡ್ ಗ್ರೆಗ್ 'A compass for civilization' ಗ್ರಂಥದಲ್ಲಿ ಬರೆಯುತ್ತಾರೆ :

'In olden times man's great problem was how to control the forces of exterior nature so that he could have a longer and more secure life. The major part of that problem has now been solved by science and technology. We may be able even to master the Malthusian dilemma of food and population. The big problem now is how to use wisely the powers we have acquired, how to solve the inner conflicts and avoid insanity, how to improve the moral relations between individuals, groups and nations, how to maintain the support of our natural environment. This problem

includes psychology and psychiatry but it goes deeper. Meditation is the way.' ಎಂದಿದ್ದಾರೆ.

ಬಹುಸಂಖ್ಯಾತ ಮಾನವರು ಕ್ರಿಯಾಶೀಲ ಚೇತನರು. ಮನುಷ್ಯ ಸಮಚಿತ್ತದ ಸಮಾಧಾನಿಯಾಗಿ ಬಾಳಬೇಕಾದರೆ ಬುದ್ಧಿಭಾವನೆ ಹಾಗೂ ಆದರ್ಶಗಳನ್ನು ಪೋಷಿಸಿಕೊಂಡರೆ ಸಾಲದು. ಅವನು ಪ್ರಥಮತಃ ಕ್ರಿಯಾಶೀಲನಾಗಬೇಕು. ಆದರೆ ಕ್ರಿಯಾವಾನ್ ಆದವನು ತನ್ನ ಕ್ರಿಯೆ ತನ್ನ ವಿಚಾರಕ್ಕೂ ಭಾವನೆಗಳಿಗೂ ಎಷ್ಟು ಹೊಂದಿಕೊಳ್ಳುತ್ತದೆ ? ಎಂಬ ಎಚ್ಚರವನ್ನು ಸದಾ ಜಾಗೃತವಾಗಿ ಉಳಿಸಿಕೊಳ್ಳುವುದೇ ನಮ್ಮ ವಿಕಾಸಕ್ಕೆ ಆಧಾರ. ಪಾಲ್‌ವೇಲಂ ಅಂದಂತೆ : 'You must live as you think ; if you do not, sooner or later you will end by thinking as you have lived.'

ಆದ್ದರಿಂದ ಸಮಕಾಲೀನ ಮಾನವ ಸಮಾಜಕ್ಕೆ ತನ್ನನ್ನಾವರಿಸಿನಿಂತ ಪ್ರಚಂಡ ಅಶಾಂತಿಯನ್ನೆದುರಿಸಲು ಇರುವ ಪ್ರಜ್ವಲಿತ ತಾರಕಶಕ್ತಿ ನೈತಿಕ ಪ್ರಜ್ಞೆಯೊಂದೇ. ನಾವು ಹುಟ್ಟಬಂದ ಕಾಲದ ಸವಾಲುಗಳನ್ನೆದುರಿಸಿ ಸರ್ವಗ್ರಾಹ್ಯವೂ ವ್ಯಾವಹಾರಿಕವೂ ಆದ ಪರಿಣಾಮಗಳನ್ನು ಅರಿತು ಪರಿಹಾರಮಾರ್ಗವನ್ನು ಅನುಷ್ಠಾನಮಾಡುವುದು ನಮ್ಮ ಅನಿವಾರ್ಯಕರ್ತವ್ಯ. ಗಾಂಧೀಜಿ ದೃಷ್ಟಿಯಲ್ಲಿ ಈ ಕರ್ತವ್ಯದಿಂದ ಪರಾಙ್ಮುಖನಾಗುವ ವ್ಯಕ್ತಿ ಜಡ, ಕೇವಲ ಯಾಂತ್ರಿಕ ದೇಹಧಾರಿ. ಜಗತ್ತು ಸಂತತ ಪರಿವರ್ತನಶೀಲ. ಈ ಪರಿವರ್ತನೆಯ ರೂಪರೇಷೆಗಳು ಖಚಿತವಾಗಿ ನಿರ್ಧಾರವಾಗುವುದು ಮಾನವನ ಆಂತರ್ಯದಲ್ಲಿ, ಅವನ ಸಚ್ಚಾರಿತ್ರದಲ್ಲಿ. ಎರಡು ಮಹಾಯುದ್ಧಗಳ ನಂತರ ನಾವೇ ಸೃಷ್ಟಿಸಿಕೊಂಡ ವಿಶ್ವಸಂಸ್ಥೆಯ ಪ್ರಣಾಳಿಕೆಯ ನಮ್ಮ ಘೋಷಣೆಯಲ್ಲಿ, "ಮಾನವನ ಆಂತರ್ಯದಲ್ಲೇ ಯುದ್ಧದಬೀಜ ಮೊಳಕೆಯಾಗಿ ಚಿಗುರುತ್ತದೆ. ಅಂತೆಯೇ ಶಾಂತಿಯಬೀಜವೂ ಅಲ್ಲೇ ಅಂಕುರಿಸಬೇಕು" ಎಂದಿದ್ದೇವೆ. ಇದರ ಅರ್ಥ ಮೂಲತಃ ವ್ಯಕ್ತಿವ್ಯಕ್ತಿಯ ವಿಚಾರ ಪ್ರಪಂಚ ಲೋಕ ಕ್ಷೇಮದ ಅವಶ್ಯಕತೆಗಳನ್ನರಿತು ನೀತಿಶಾಸ್ತ್ರವನ್ನು ರಚಿಸಿಕೊಳ್ಳಬೇಕು. ಅದರಂತೆ ಬಾಳುವ ಸಂಕಲ್ಪವನ್ನು ನಡೆಸಿಕೊಡಬೇಕು ಎಂದಿದ್ದಾರೆ ತಮ್ಮ ನೀತಿ-ಧರ್ಮ (Ethical Religion) ಎಂಬ ಗ್ರಂಥದಲ್ಲಿ ಮಹಾತ್ಮಗಾಂಧಿ.

"ಮನುಷ್ಯನ ಮನಸ್ಸಿಗೆ ಎರಡು ಗವಾಕ್ಷಗಳಿವೆ. ಒಂದರಲ್ಲಿ ತಾನು ಇದ್ದಂತೆಯೇ ಕಾಣಬರುತ್ತಾನೆ, ಇನ್ನೊಂದರಲ್ಲಿ ತಾನು ಇರಬೇಕಾದ ಎರಕದಂತೆ ಕಾಣಬರುತ್ತಾನೆ. ಸಾಮಾನ್ಯವಾದ ವಿಜ್ಞಾನಶಾಸ್ತ್ರವೆಲ್ಲ ಈ ಲೋಕವನ್ನು ಇರುವ ಹಾಗೆ ಚರ್ಚಿಸುತ್ತದೆ. ಈ ಲೋಕ ಹೇಗೆ ಇರಬೇಕು ಎಂಬುದನ್ನು ಚರ್ಚಿಸುವುದು ನೀತಿಶಾಸ್ತ್ರ"—ಎಂದಿದ್ದಾರೆ.

ಮುಂದುವರೆದು—

"ಯುಕ್ತಜೀವನ, ಯುಕ್ತಭಾವನೆ, ಯುಕ್ತಕ್ರಿಯೆ ಇವು ಬಾಳಿನ ಪ್ರಧಾನ ಉದ್ದೇಶ. ಶರೀರದ ಉಪಚಾರವೇ ನಮ್ಮ ಭಾವನೆಯನ್ನೆಲ್ಲವನ್ನೂ ಆಕ್ರಮಿಸಿದರೆ ಆತ್ಮ ಕೊರಗೀತು, ನಶಿಸಿಹೋದೀತು" "ಜೀವನದ ಮೌಲ್ಯಗಳು ವೇಗವಾಗಿ ಪರಿವರ್ತನ ಹೊಂದುತ್ತಿರುವ ಕಾಲದಲ್ಲಿ ನಾವು ಜೀವಿಸುತ್ತಿದ್ದೇವೆ. ನಿಧಾನವಾದ ಪರಿಣಾಮಗಳಿಂದ ನಮಗೆ ತೃಪ್ತಿಯಿಲ್ಲ. ಸಮಸ್ತ ಮಾನವಕೋಟಿಯ ಬಗೆಗೆ ಅನುಕಂಪ ಪಡುತ್ತೇವೆ ಅಥವಾ ಪಡಲು ಬಯಸುತ್ತೇವೆ. ಇವೆಲ್ಲ ತನ್ನ ಗುರಿಯೆಡೆಗೆ ಹೆಜ್ಜೆಯಿಡುತ್ತಿರುವ ಮಾನವತೆಗೆ ಅದ್ಭುತ ಲಾಭ" ಎಂದು ಹೇಳಿದ್ದಾರೆ.

ಧರ್ಮ-ಆಚಾರ-ನೀತಿ : ಬಾಳಿಗೆ ಅತಿ ನಿಕಟವಾಗಿ ಅನೂಚಾನವಾಗಿ ಹೆಣೆದುಕೊಂಡು ಬಂದಿರುವ ದಿಕ್ಸೂಚಿಯೇ ಧರ್ಮ. ಅದರ ಬೆಳಕಿನಲ್ಲಿ ರೂಪಿಸಿಕೊಂಡ ಆಚಾರಸಂಹಿತೆ, ಅನುಷ್ಠಾನವಿಧಾನ, ಶಾಸ್ತ್ರ ಪ್ರಮಾಣಗಳು ಒಂದೊಂದು ಕಾಲಕ್ಕೂ ಒಂದೊಂದು ಸಮಾಜವನ್ನು ರಕ್ಷಿಸಿ ಪೋಷಿಸಿ ವಿಕಾಸಗೊಳಿಸುತ್ತ ಬಂದಿವೆ.

ಗಾಂಧೀಜಿಗೆ ಈ ಧರ್ಮ ಪರಂಪರೆಯಲ್ಲಿ ಅವು, ಧಾರೆಯರೆದಿರುವ ಶಾಶ್ವತ ಸನಾತನ ಮೌಲ್ಯಗಳಲ್ಲಿ, ಅವಿಚಲ ಶ್ರದ್ಧೆ, ಸಚ್ಚಾರಿತ್ರ್ಯ ಅವರ ಪಾಲಿಗೆ ಬಾಳಿನ ಅನುಲ್ಲಂಘನೀಯ ನಿಯಮ. ಇವು ಅವರ ವಾಕ್ಯಗಳು.

"ಶೀಲನಿಯಮ, ನೀತಿಶಾಸ್ತ್ರ, ಧರ್ಮ—ಇವು ಸಮಾನಾರ್ಥಕ ಶಬ್ದಗಳು. ಧರ್ಮಬಾಹಿರವಾದ ನೈತಿಕಜೀವನವು ಮರಳಿನ ಮೇಲೆ ಕಟ್ಟಿದ ಮನೆಯನ್ನು ಹೋಲುತ್ತದೆ. ಹಾಗೆಯೇ ನೀತಿಬಾಹಿರವಾದ ಧರ್ಮವನ್ನು ಕೇವಲ ಸಪ್ಪಳ ಮಾಡುವುದಕ್ಕೂ, ಒಬ್ಬರನ್ನೊಬ್ಬರು ತಲೆ ಒಡೆದುಕೊಳ್ಳುವುದಕ್ಕೂ ಉಪಯುಕ್ತವಾಗುವ ತಾಳ-ಜಾಗಟೆ ಎನ್ನಬಹುದು. ಸತ್ಯ-ಅಹಿಂಸೆ ಇಂದ್ರಿಯ ನಿಗ್ರಹಗಳು ನೀತಿನಿಷ್ಠೆಯ ಭಾಗಗಳು. ಮನುಷ್ಯಕುಲ ಎಂದೆಂದೋ ಅನುಷ್ಠಾನಕ್ಕೆ ತಂದಿರುವ ಪ್ರತಿಯೊಂದು ಸದ್ಗುಣವೂ ಆಶ್ರಯಭೂತವಾದ ಈ ಮೂಲ ಸುಗುಣತ್ರಯದಿಂದಲೇ ಬಂದದ್ದು. ಅಲ್ಲದೇ, ನಾನು ದೇವರೆಂದು ಪರಿಗಣಿಸಿರುವ ಸತ್ಯದಿಂದ ಅಹಿಂಸೆಯೂ, ಇಂದ್ರಿಯನಿಗ್ರಹವೂ ಉತ್ಪನ್ನವಾಗುತ್ತದೆ.

"ಜಗತ್ತಿನ ಎಲ್ಲ ಅತ್ಯುಚ್ಚಧರ್ಮಗಳೂ ವಿಧಿಸಿರುವ ನಡವಳಿಯ ನಿಯಮಗಳೂ ನಿತ್ಯನಿಷ್ಠೆಯೂ ಕಾರ್ಯತಃ ಒಂದೇ ಎಂಬುದು ನಮಗೆ ವಿದಿತವಾಗುತ್ತದೆ. ಎಲ್ಲ ಧರ್ಮಬೋಧಕರೂ ನೀತಿಯ ಆಧಾರದ ಮೇಲೆ ನಿಂತು ಧರ್ಮವು ನೀತಿಯೆಂದು ಘೋಷಿಸಿದ್ದಾರೆ. ತನ್ನ ತಳಪಾಯ ಜಗ್ಗಿದಾಗ ಕಟ್ಟಡವು ನೆಲಕ್ಕೆ ಕುಸಿಯುವಂತೆ ನೀತಿಯ ಆಧಾರ ತಪ್ಪಿದರೆ ಎಲ್ಲ ಧರ್ಮಗಳೂ ಕೆಳಗುರುಳಿ ಮಣ್ಣುಪಾಲಾಗಲೇ ಬೇಕು. ನೀತಿಯ ಆಧಾರ ತಪ್ಪಿದ ಕೂಡಲೇ ನಾವು ಧರ್ಮಭ್ರಷ್ಟರಾಗುತ್ತೇವೆ.

"ರೂಢಿಯಾದ ಅರ್ಥವನ್ನು ಬಿಟ್ಟು ವಿಶಾಲವಾದ ಅರ್ಥದಲ್ಲಿ ತೆಗೆದುಕೊಂಡರೆ ಧರ್ಮವು ದಿವ್ಯಸತ್ಯದ ಇಣುಕುದರ್ಶನವನ್ನು ಪಡೆಯಲು ನೆರವಾಗುತ್ತದೆ. ನೀತಿನಿಷ್ಠೆಯ ಪೂರ್ಣವಿಕಾಸವಿಲ್ಲದಿದ್ದರೆ ಅಂಥ ದರ್ಶನವು ಅಸಾಧ್ಯವಾಗುತ್ತದೆ. ಆದ್ದರಿಂದ ಧರ್ಮ ಮತ್ತು ನೀತಿತತ್ತ್ವ ಇವು ಸಮಾನ ಅರ್ಥವುಳ್ಳ ಪದಗಳು ನನ್ನ ದೃಷ್ಟಿಯಲ್ಲಿ" (ನೀತಿಧರ್ಮ)

ಸುವ್ಯವಸ್ಥಿತ ನೈತಿಕಪ್ರಭುತ್ವದಲ್ಲಿ ಗಾಂಧೀಜಿಗೆ ಅಚಲ ವಿಶ್ವಾಸ. ಅದೇ ಸತ್ಯಸಾಕ್ಷಾತ್ಕಾರಕ್ಕೆ ಸಾಧನ ಎಂದರು. ವ್ಯಕ್ತಿ ಮತ್ತು ಸಮಾಜದ ಅವಿಭಾಜ್ಯ ಸಂಬಂಧ ಪರಸ್ಪರ ಪೂರಕವೂ ಉದ್ಧಾರಶೀಲವೂ ಆಗಲು ನೀತಿಯ ನೆಲಗಟ್ಟು ಆಧಾರಭೂತವಾದುದು. ಬಾಳಿಗೆ ವಿಮುಖನಾಗಿ ಸಮಾಜದಿಂದ, ಅದರ ವ್ಯವಹಾರ ಜೀವನದಿಂದ ಮುಕ್ತನಾಗಿ ಜನಸಂಪರ್ಕವೇ ಇಲ್ಲದವನಿಗೆ ನೀತಿಶಾಸ್ತ್ರದ ಅಗತ್ಯವಿರಲಾರದು. ಆದರೆ ಹೀಗೆ ವಿಮುಖರಾದವರೆಲ್ಲ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಬಲ್ಲರು ಎಂಬ ವಾದಕ್ಕೆ ಹುರುಳಿಲ್ಲ. ಜೀವನದ ಅತಿ ನಿಕಟ ಸಂಬಂಧದಿಂದಲೇ ಹುಟ್ಟಿಬರುವ ಅತ್ಯಂತ ಗಹನವಾದ, ಆಳವಾದ ಅಂತರಂಗ ಶೋಧನೆಯಿಂದ ಬಾಳು ಪರಿಷ್ಕಾರವಾಗುತ್ತ ಮೋಕ್ಷಪಥ ಗೋಚರವಾದೀತು. "ಕರ್ತಾರನ ಕಮ್ಮಟ"ದಿಂದ ಹೊರಗೆ ಈ ಲೋಹ ತುಕ್ಕುಹಿಡಿದೀತು. "ಇಲ್ಲಿಯೇ ಸಲ್ಲಬೇಕು" ಅದು ನಿಯಮ. ಇಲ್ಲಿ ಸಲ್ಲುವವರು ಮಾತ್ರವೇ ಅಲ್ಲಿ ಸಲ್ಲುವರು ಎಂಬ ಮಹತ್ತ್ವಪೂರ್ಣ ವಚನಕ್ಕೆ ಸಾಕ್ಷಿಯಾಗಿ ಬಾಳಿದರು ಗಾಂಧೀಜಿ. ನಮ್ಮ ಪಾಲಿಗೆ ಬಂದ ಜೀವನ ಕರ್ತವ್ಯಗಳನ್ನು ನೀತಿಪಥದ ಮೇಲೆ ನಿರ್ಭಯವಾಗಿ ಕೊಂಡೊಯ್ಯುವ ಯುಕ್ತಾತ್ಮನೇ ಸಾರ್ಥಕಜೀವಿ. ಸಾಧಾರಣ ಜನ ಬಹುಪಾಲು ಜೀವನನಿಷ್ಠರು. ಅವರು ತತ್ತ್ವನಿಷ್ಠರೂ ಅಲ್ಲ, ವಾದನಿಷ್ಠರೂ ಅಲ್ಲ. ಅವರ ಪಾಲಿಗೆ ಯಾವ ಸುವ್ಯವಸ್ಥೆಯ ಅಡ್ಡಿಯಲ್ಲಿ ಬಾಳು ಸುಗಮವೋ ಶಾಂತಮಯವೋ ಘರ್ಷಣರಹಿತವೋ ಅದೇ ಪರಮಗುರಿ. ಈ ಶ್ರೀಸಾಮಾನ್ಯನಂತೆಯೇ ಜೀವನನಿಷ್ಠರು ಗಾಂಧೀಜಿ; ಆದರೆ ಅವರ ಪರಮಗುರಿ ಸಾಧನಶುದ್ಧಿ ; ಸತ್ಯಶೋಧನೆ. ಜೀವನವೇ ಆ ಮಹಾಯಾತ್ರೆಗೆ ಸ್ಫೂರ್ತಿ; ಇಲ್ಲಿ ಈ ಬಾಳಿನಲ್ಲಿ ಸಾಧಿಸಲಾಗುವೇ ಆತ್ಮ ತನೋಹಾರಿಯಾಗಬಲ್ಲುದು. ಸುಂದರಬಾಳಿಗೆ ನೈತಿಕಸಾಧನೆ ಅವಿಭಾಜ್ಯವಾದುದು. ಪ್ರತಿಯೊಂದು ಚಿಕ್ಕ ಕ್ರಿಯೆಯೂ ಸಹಜವಾಗಿ ನಮ್ಮ ನೀತಿವಂತಿಕೆಯ ಪ್ರತಿಬಿಂಬವಾದಾಗ ಮಾತ್ರವೇ ಬಾಳಿನ ಸಂತೋಷ ಪೂರ್ಣವಾಗಬಲ್ಲುದು. ಇದನ್ನು ಅನುಭವಿಸಿ ಲೋಕಕ್ಕೆ ಧಾರೆಯೆರೆದ ಮಹಾಸಾಧಕರೆಂದೇ ಅವರು ಪೂಜ್ಯರು.

ನೀತಿ-ಕೃತಿ : ಸ್ವತಂತ್ರವಲ್ಲದ, ಆತ್ಮಸಂತೋಷಪ್ರೇರಿತವಲ್ಲದ, ಕೃತಿ ನೀತಿಕೃತಿಯಲ್ಲ. ಯಂತ್ರದಂತೆ ನಡೆದರೆ ನೀತಿಯ ಮಾತೇನು ಬಂತು ? ಮನಃಪೂರ್ವಕವಾಗಿ ಕರ್ತವ್ಯಭಾವನೆಯಿಂದ ಮಾಡಿದ್ದು ನೀತಿಕೃತಿ. ಒಬ್ಬ ದೊರೆ ಅಪರಾಧಿಯನ್ನು ಕ್ಷಮಿಸಿದರೆ ಒಳ್ಳೆಯ ಕೆಲಸವಾಯಿತು. ಆ ಕ್ಷಮೆಯ ಸಂದೇಶವನ್ನು ಹೊತ್ತು ತಂದ ಆಳು ಬರೀ ಯಂತ್ರ. ಅದೇ ಆಳು ಆ ಸಂದೇಶವನ್ನು ತಿಳಿಸುವುದು ತನ್ನ ಪವಿತ್ರಕರ್ತವ್ಯ ಎಂಬ ಭಾವನಾಪೂರ್ಣ ಅರಿವಿನಿಂದ ಮಾಡಿದರೆ ಆಗ ಯಾಂತ್ರಿಕತೆ ತಪ್ಪಿ ಅವನ ಕೃತಿ ನೀತಿಕೃತಿಯಾಗುತ್ತದೆ.

"ಇದು ನೀತಿ, ಇದು ಅನೀತಿ ಎಂದು ನಿರ್ಧರಿಸಲು ಆ ಕೆಲಸದ ಉದ್ದೇಶವನ್ನು ಪ್ರಧಾನವಾಗಿ ಗಮನಿಸಬೇಕು. ನೈತಿಕ ಉದ್ದೇಶದಿಂದ ಮಾಡದ ಕೆಲಸ ಯಾವುದೂ ನೀತಿವಂತವಾಗಲಾರದು. ಫಲ ಒಳಿತಾದರೂ ಉದ್ದೇಶ ಸಾಧುವಲ್ಲದಿದ್ದರೆ ಅದು ನೀತಿಸಮ್ಮತವಲ್ಲ" ಎನ್ನುತ್ತಾರೆ ಗಾಂಧೀಜಿ, ತಮ್ಮ ನೀತಿಧರ್ಮ ಪ್ರತಿಪಾದನೆಯಲ್ಲಿ. ಭೋಗವಿಲಾಸ ಲಾಲಸೆಯನ್ನು ಮಾನಸಿಕವಾಗಿ ಬೆಳಸಿಕೊಳ್ಳುತ್ತಾ ಅಭಾವದ ಕಾರಣವಾಗಿ ನಾನೂ ಸರಳಜೀವಿಯಾದರೆ ಅದೊಂದು ಗುಣವೆನ್ನಲು ಆದೀತೆ ? ಹಣವಂತನಾಗಿದ್ದರೂ ನೆರೆಹೊರೆಯ ಇತರ ಸಹಜೀವಿಗಳಿಗೆ ದೊರಕುವುದನ್ನು ತಾನು ಅನುಭವಿಸುವುದು ಅಧರ್ಮ ಎಂದರಿತು ಸಂಕಲ್ಪ ಪೂರ್ವಕವಾಗಿ ಸರಳಜೀವಿಯಾದರೆ ಅದು ನೀತಿಕೃತಿ. ಹೆದರಿಕೆಯಿಂದಲೋ, ಲೋಭದಿಂದಲೋ, ಖ್ಯಾತಿಯ ಆಕಾಂಕ್ಷೆಯಿಂದಲೋ ಮಾಡಿದ ಕೃತಿ ಎಂದೂ ನೈತಿಕ ಸಾಧನೆಗೆ ನೆರವಾಗಲಾರದು. ನಿಷ್ಠುರವಾಗಿ ಎಲ್ಲ ಸನ್ನಿವೇಶಗಳಲ್ಲೂ ಪ್ರಾಮಾಣಿಕತೆಯನ್ನು ಪರಮಮೌಲ್ಯವೆಂದು ಅಂಗೀಕರಿಸಿದವನಿಗೆ ಅದರಿಂದ ಆಗುವ ಪರಿಣಾಮಗಳನ್ನು ಸ್ವಾಗತಿಸುವುದಕ್ಕೆ ಎಳ್ಳಷ್ಟೂ ಹಿಂಜರಿಕೆಯಾಗಲಾರದು. ಇಂಗ್ಲಿಷಿನ ಪ್ರಸಿದ್ಧ ಗಾದೆ" Honesty is the best policy" ಎನ್ನುತ್ತದೆ. ಗಾಂಧೀಜಿ ಅದಕ್ಕೆ ಪ್ರತಿ ಸವಾಲಾಗಿ 'If it is not the best policy you need not be honest' ಎಂದು ನಾವು ಆತ್ಮವಂಚನೆ ಮಾಡಿಕೊಳ್ಳಲು ಇಂಥ ನೀತಿಯಲ್ಲಿ ಅವಕಾಶವಾಗುವುದಿಲ್ಲವೇ ? ಎಂದು ಕೇಳುತ್ತಾರೆ. ಪ್ರಾಮಾಣಿಕತೆಯ ಲಾಭದ ದೃಷ್ಟಿ ಒಂದು ಒಳ್ಳೆಯ ಗುಣವನ್ನೂ ಅನೀತಿಯ ಪಥಕ್ಕೆ ಎಳೆದುಬಿಡಬಹುದು. ಹಾಗೆಯೇ ಸ್ವಾರ್ಥದ ಸೊಂಕು ತಗಲಿದರೆ ಎಂಥ ಉತ್ತಮಕಾರ್ಯವಾದರೂ ನೀತಿಯ ಜಾಡು ಬಿಡುತ್ತದೆ.

ನೀತಿಗೆ ಪ್ರಾಮಾಣ್ಯ : ನೀತಿಯ ಶಾಸನಪೀಠ, ಧರ್ಮಪೀಠ ಮಾನವನ ಅಂತರಂಗವೇ. ನಾನು ತಪ್ಪು ಮಾಡುತ್ತಿದ್ದೇನೆ ಎಂದು ಪ್ರತಿಯೊಬ್ಬ ತಪ್ಪುಗಾರನಿಗೂ ಗೊತ್ತು. ಅಸತ್ಯವನ್ನು ಸತ್ಯವೆಂದು ಯಾರೂ ಭ್ರಾಂತಿಗೊಳ್ಳುವುದಿಲ್ಲ. ಸದ್ಗುಣ ಎಂಬ ರಕ್ಷಾಕವಚ ನೀಚಾತಿನೀಚರಿಗೂ ತಮ್ಮ ಅನೀತಿ ಕೃತಿಗಳನ್ನು ಮರೆಮಾಚಲು ಬೇಕಾಗಿರುವುದೇ ಇದಕ್ಕೆ ಸಾಕ್ಷಿ.

ಮನಸ್ಸನ್ನು ನಿರ್ಮಲವಾಗಿಟ್ಟುಕೊಂಡವನಿಗೆ ತನ್ನ ಬಾಳ ಗುರಿ ಏನೆಂಬುದು ಸ್ಪಷ್ಟವಾಗಿ ತಿಳಿದೀತು. ತನ್ನ ಕೃತಿಯಿಂದ ಮನಸ್ಸು ನಿರ್ಮಲವಾಯಿತೇ ? ಆತ್ಮಕ್ಕೆ ಸಂತೋಷವಾಯಿತೇ ? ಪರಹಿತ ಸಾಧಿತವಾಯಿತೇ ? ಎಂಬುದೇ ಸುವರ್ಣ ನಿಯಮ. "ಪರೋಪಕಾರಃ ಪುಣ್ಯಾಯ ಪಾಪಾಯ ಪರಪೀಡನಂ". ನಾವೆಷ್ಟು ರೀತಿಯಲ್ಲಿ ಎಷ್ಟು ಜನರನ್ನು ಶೋಷಣೆಮಾಡಿ ಜೀವಿಸುತ್ತೇವೆಂದು ನಮಗೆ ಅರಿವಾಗುವುದೇ ಇಲ್ಲ. ಅತ್ಯಂತ ಸೂಕ್ಷ್ಮವಾಗಿ ನಮ್ಮ ಅರ್ಥಶಾಸ್ತ್ರ, ಶರೀರಶಾಸ್ತ್ರ, ಸಮಾಜಶಾಸ್ತ್ರಗಳನ್ನು ಪರಿಶೀಲಿಸಿ ನೋಡಬೇಕು. ಎಲ್ಲದರಲ್ಲೂ ಅನೀತಿ ತುಂಬಿದೆ. ಲಕ್ಷಾಂತರ ಹಸಿದ ಜೀವಿಗಳ ಮೂಕಸಂಕಟ ನಮ್ಮನ್ನು ತಟ್ಟುವುದೇ ಇಲ್ಲ. ನನ್ನ ಸಮಾಜ ನನಗಾಗಿ ಪ್ರತಿ ವಸ್ತುವನ್ನೂ ಸೃಷ್ಟಿಸುತ್ತಿದೆ; ನಾನು ಅತ್ಯಂತ ಅಲ್ಪಪ್ರಮಾಣದಲ್ಲಿ ಬಳಸಿಕೊಂಡು ನನ್ನ ಸಾಮರ್ಥ್ಯವನ್ನೆಲ್ಲ ಸಮಾಜಕ್ಕೆ ಧಾರೆಯೆರೆಯುತ್ತೇನೆ ಎಂಬ ಮನೋಧರ್ಮವೇ ನಮ್ಮನ್ನು ನೀತಿಪಥಕ್ಕೆ ಒಯ್ದೀತು. ಈ ನೈತಿಕ ದೃಷ್ಟಿ ಬರುವುದಾದರೂ ಹೇಗೆ ? "ದಿನದಿನವೂ ಪ್ರಾರ್ಥನಾ ಪೂರ್ವಕವಾಗಿ ವಿನಮ್ರವಾಗಿ ಪ್ರಾಮಾಣಿಕ ಮನೋವೃತ್ತಿಯಿಂದ ಸಂಕಲ್ಪವನ್ನು ಕೈಕೊಂಡು ಅದರಂತೆ ನಡೆಯಿರಿ" ಅಂದರು ಗಾಂಧೀಜಿ. ತಾವೂ ನಡೆದು ಹೋಗಿ ನಮ್ಮನ್ನೂ ಪಾಲ್ಗೊಳ್ಳಲು ಕರೆಯಿತ್ತರು.

ಅಹಿಂಸಾ ಸತ್ಯ ಅಸ್ತೇಯ ಬ್ರಹ್ಮಚರ್ಯ ಅಸಂಗ್ರಹಃ
ಶರೀರಶ್ರಮ ಅಸ್ತೇಯ ಸರ್ವತ್ರ ಭಯವರ್ಜನ
ಸರ್ವಧರ್ಮೀ ಸಮಾನತ್ವ ಸ್ವದೇಶೀ ಸ್ಪರ್ಶಭಾವನಾ
ಹೀ ಏಕಾದಶ ಸೇವಾವೀ ನಮ್ರತ್ವೇ ವ್ರತನಿಶ್ಚಯೇ ||

(ಏಕಾದಶವ್ರತ ಶ್ಲೋಕ)

ಇದರಲ್ಲಿ ಗಾಂಧೀಜಿಯ ವಿಶಿಷ್ಟಕೊಡುಗೆ ನಾಲ್ಕು ಮಹಾವ್ರತಗಳು ನಮ್ಮ ಸಮಕಾಲೀನ ಸಮಾಜಕ್ಕೆ ಅನ್ವಯಿಸಿ ರೂಪಿಸಿಕೊಟ್ಟಂತಹವು.ಶರೀರಶ್ರಮ,ಸರ್ವಧರ್ಮಸಮಭಾವ,ಸ್ವದೇಶೀ,ಸ್ಪರ್ಶಭಾವನೆ–ಈ ಒಂದೊಂದೂ ನಮ್ಮ ನಿತ್ಯಕರ್ಮಗಳಲ್ಲಿ ಹಾಸುಹೊಕ್ಕಾಗಿ ಸ್ವಭಾವ-ಸಹಜವಾಗಿ ನೆಲೆಗೊಂಡು ಪ್ರತಿಫಲಿತವಾಗಬೇಕು. ಸಂಘಟಿತವಾಗಿ ಸಾಮೂಹಿಕವಾಗಿ ಸರ್ವೋದಯಕಾರಿಯಾಗುವಂತೆ ಈ ನಿಯಮಗಳ ಪಾಲನೆಮಾಡುವ ಮಾರ್ಗವೇ ಗಾಂಧೀಮಾರ್ಗ. ಅದರ ಆಧಾರಶಿಲೆ ನೈತಿಕಶಕ್ತಿ, ಅದರ ನೆಲೆ ಇಂದಿನ ಇಲ್ಲಿಯ ಜೀವನ ; ಅಂತೆಯೇ ಅದು ಜೀವನನಿಷ್ಠ ನೈತಿಕಸಾಧನೆಯ ಮಾರ್ಗ.

ಗಾಂಧೀಜಿಯ ಮಾತಿನಲ್ಲಿಯೆ ಹೇಳುವುದಾದರೆ—

"ಆತ್ಮಶ್ರೀ ನಿಯಮಕ್ಕೆ ತನ್ನದೇ ಆದ ಒಂದು ಪ್ರತ್ಯೇಕ ಕ್ಷೇತ್ರವಿದೆ ಎಂಬುದನ್ನು ನಾನು ನಂಬುವುದಿಲ್ಲ. ಬದಲು ಅದು ಜೀವನದ ಸಾಮಾನ್ಯ ವ್ಯಾಪಾರಗಳ ಮೂಲಕ ವ್ಯಕ್ತಗೊಳ್ಳುತ್ತದೆ ಆರ್ಥಿಕ, ರಾಜಕೀಯ, ಸಾಮಾಜಿಕ ಎಲ್ಲ ವಲಯಗಳ ಮೇಲೂ ಪರಿಣಾಮವನ್ನುಂಟು ಮಾಡುತ್ತದೆ."

"ಈಶ್ವರದರ್ಶನಕ್ಕಿರುವ ಏಕೈಕ ಮಾರ್ಗವೆಂದರೆ ಆತನ ಸೃಷ್ಟಿಯಲ್ಲೇ ಆತನನ್ನು ಕಂಡು ಅದರಲ್ಲಿಯೇ ಒಂದಾಗಿರುವುದು. ಸರ್ವರ ಸೇವೆಯೊಂದೇ ಅದಕ್ಕೆ ಸಾಧನ. ನಾನು ಈ ಸರ್ವರ ಒಂದು ಅಂಶ, ಇತರರನ್ನು ಬಿಟ್ಟು ನಾನೊಬ್ಬನೇ ಅದನ್ನು ಪಡೆಯಲಾರೆ.

ಸಾಂಪ್ರದಾಯಿಕತೆ ಮತ್ತು ನೀತಿ : ಬಹಳ ಹಿಂದಿನ ಕಾಲಕ್ಕೇ ಈ ಮಾತು ಜನಜನಿತವಾಗಿತ್ತು– "ಪುರಾಣ ಮಿತ್ಯೇವ ನ ಸಾಧು ಸರ್ವಂ". ಗಾಂಧೀಜಿಯ ನೀತಿನಿಷ್ಠೆ ಇದೇ ಜಾಡನ್ನು ಮುಂದೆ ಸಾಗಿಸಿ "ನೀತಿ ಶಾಸನಕ್ಕೆ ವಿರೋಧವಾದ ಯಾವ ಶಾಸ್ತ್ರ ಪ್ರಮಾಣವನ್ನೂ ನಾನು ಒಪ್ಪಲಾರೆ" ಎಂದರು. "ವೈಯಕ್ತಿಕ ಧಾರ್ಮಿಕ ಭಾವನೆಗಳನ್ನು ನಮ್ಮನಮ್ಮಲ್ಲಿ ಇಟ್ಟುಕೊಳ್ಳಬಹುದು ; ಆದರೆ ಹೃದಯಗಳು ಮಿಲನವಾಗುವುದಕ್ಕೆ ಅವೇಕೆ ತಡೆಯಾಗಬೇಕು ?" ಎಂದು ಪ್ರಶ್ನಿಸಿದರು. ಈ ದೋಷ ಇರುವುದು ಪ್ರಧಾನವಾಗಿ ನಮ್ಮ ಕುರುಡುತನದಲ್ಲಿ. ಧರ್ಮಸೂಕ್ಷ್ಮವನ್ನರಿತು ಜೀವನನಿಷ್ಠರಾಗಿರುವ ಪ್ರಬುದ್ಧಜೀವಿಗಳ ನೈತಿಕ ನಡತೆಯೇ ನಮಗೆ ಮಾರ್ಗದರ್ಶಕ. ಸಮಕಾಲೀನಪ್ರಜ್ಞೆಯೂ ಧಾರ್ಮಿಕಮನೋವೃತ್ತಿಯೂ ಸಮ್ಮಿಳಿತವಾಗಿರುವ ಸಾಧುಸಂತರ ಜೀವನಮಾರ್ಗ ನಮಗೆ ಪರಮಪ್ರಾಮಾಣ್ಯ. ಅಂಥವರು ಸಾಂಪ್ರದಾಯಿಕತೆಯ ಚೌಕಟ್ಟನ್ನು ಮೀರಿ ಮಾನವೀಯತೆಯ ವಿಕಾಸವನ್ನೇ ಗುರಿಯಾಗಿಟ್ಟುಕೊಂಡು ನೀತಿಪಥವನ್ನು ನಿರ್ಧರಿಸಿಕೊಳ್ಳುತ್ತಾರೆ. ಈ ದೃಷ್ಟಿ ಜೀವನನಿಷ್ಠ ಆಧ್ಯಾತ್ಮಿಕತೆಯ ದೃಷ್ಟಿ, ನಿರಂತರ ಸೇವಾದೃಷ್ಟಿ. ಮಾನವಕುಲ ಒಂದು ಎಂಬ ಜೀವಂತನಿಷ್ಠೆ, ನಮ್ಮ ಬಾಳು ನಮ್ಮ ಸುತ್ತಲಿನವರ ಬಾಳು ನಿರ್ಮಲವಾಗಬೇಕು, ಆನಂದದಾಯಕವಾಗಬೇಕು, ಅರ್ಥಪೂರ್ಣವಾಗಬೇಕು ಎಂಬ ತೀವ್ರಾಕಾಂಕ್ಷೆ–ಈ ತ್ರಿವೇಣೀಮಾರ್ಗ ಗಾಂಧೀಜಿಯ ಬಾಳಸೂತ್ರ. ದಿನನಿತ್ಯದ ಜೀವನಾನುಭವಗಳ ತಳಹದಿಯ ಮೇಲೆಯೇ ಅವರು ನೀತಿಶಾಸ್ತ್ರವನ್ನು ರೂಪಿಸಿಕೊಟ್ಟರು. ಸಂಪ್ರದಾಯ ಶರಣತೆ ಯಾವ ರೀತಿಯಲ್ಲೂ ಅನೀತಿಗಳನ್ನು ರಕ್ಷಿಸುವ ಸಾಧನವಾಗಬಾರದೆಂಬ ಎಚ್ಚರಿಕೆಯನ್ನು ತಂದು ಕೊಟ್ಟರು. ಈ ನೈತಿಕಸಾಧನೆ ಈ ಯುಗದ ಅಪೂರ್ವ ಕೊಡುಗೆ; ಜಗತ್ತಿನ ವಿಕಾಸಮಾರ್ಗದಲ್ಲಿ ಒಂದು ವಿಶಿಷ್ಟ ಮೈಲಿಗಲ್ಲು. ಮಾನವನ ಮಾನವೀಯತೆಯ ಪುನರುತ್ಥಾನಕ್ಕೆ ನಾಂದಿ.

ಚಿ. ನ. ಮಂಗಳ

ಶಿಕ್ಷಣಕ್ಷೇತ್ರದಲ್ಲಿ ಅಷ್ಟಾಂಗಯೋಗ

"ಸಾಧಕನು ಯಮ, ನಿಯಮಗಳಿಂದ ತನ್ನ ಅಭ್ಯಾಸವನ್ನು ಪ್ರಾರಂಭಿಸಿ ಹಂತಹಂತವಾಗಿ ಮುಂದು ವರಿದು ಕೊನೆಯ ಗುರಿಯಾದ ಸಮಾಧಿಯನ್ನು ಮುಟ್ಟಬೇಕು. ಅಥವಾ ಎಂಟು ಮೆಟ್ಟಲುಗಳನ್ನು ಏರಿ ನಿಂತಾಗಲೇ ಆತನಿಗೆ ಆತ್ಮಸಾಕ್ಷಾತ್ಕಾರ. ಮುಮುಕ್ಷುವಿಗೆ ಇಲ್ಲಿ ಯಾವ ಮೆಟ್ಟಲೂ ತ್ಯಾಜ್ಯವಲ್ಲ. ಎಲ್ಲವೂ ಅನುಸರಣೀಯವೆ. ಏಕೆಂದರೆ ಇವೆಲ್ಲವೂ ಒಂದಕ್ಕೊಂದು ಪೂರಕ ಮತ್ತು ಪೋಷಕಗಳು. ಹಲವು ಕೊಂಡಿ ಗಳು ಒಂದಕ್ಕೊಂದು ಸೇರಿಕೊಂಡರೇನೇ ಒಂದು ಸರಪಣಿಯಾಗುವಂತೆ ಯಮ ನಿಯಮಾದಿಗಳ ಎಂಟು ಕೊಂಡಿ ಗಳು ಕೂಡಿಕೊಂಡೇ ರಾಜಯೋಗವೆಂಬ ಮಹತ್ತರವಾದ ಒಂದು ಸರಪಣಿಯಾಗಿದೆ."[1]

ಈ ಸರಪಣಿಯ ಎಂಟು ಕೊಂಡಿಗಳು ಯಾವವು? ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ ಮತ್ತು ಸಮಾಧಿ. ಇವು ರಾಜಯೋಗದ ಸರಪಣಿಯ ಕೊಂಡಿಗಳು ಮಾತ್ರವಲ್ಲ, ಜೀವನ ಯೋಗದ ಸರಪಣಿಯ ಕೊಂಡಿಗಳು ಕೂಡ ಶಿಕ್ಷಣಜೀವನ ಯೋಗದ ಒಂದು ಅವಿಭಾಜ್ಯ ಅಂಗ.

ಇಂದು ನಾವು ತರಗತಿಯ ನಾಲ್ಕು ಸುಣ್ಣ ಬಣ್ಣ ಹೋದ ಗೋಡೆಗಳ ನಡುವೆ ಗೀರಿ ಗೀಚಿದ ಸವೆದ ಬೆಂಚುಗಳ ಮೇಲೆ ಗೊತ್ತುಗುರಿಗಳಿಲ್ಲದೆ ತೂಕಡಿಸುವ 'ವಿದ್ಯಾರ್ಥಿ' 'ವಿದ್ಯಾರ್ಥಿನಿ'ಯರಿಗೆ ಕಲಿಸುತ್ತಿರುವುದಾದರೂ ಏನನ್ನು? ನಾವು ಕಲಿಸುತ್ತಿರುವ ಶಿಕ್ಷಣಕ್ಕೆ ಹಿನ್ನೋಟವಾಗಲಿ ಮುನ್ನೋಟವಾಗಲಿ ಇದೆಯೆ?

ಇಂದು ವಿದ್ಯಾರ್ಥಿಗಳು ನೂರು ಸಂಖ್ಯೆಯಲ್ಲಿ, ಸಾವಿರ ಸಂಖ್ಯೆಯಲ್ಲಿ ಪದವಿಯ ಫಲಕಗಳನ್ನು ಹಚ್ಚುವ ಅಕ್ಷರಜ್ಞಾನಕ್ಕಾಗಿ ಹಂಬಲಿಸುತ್ತಿದ್ದಾರೆ ನಿಜ. ಇವರೇ ನಮ್ಮ ಭಾವಿ ಭಾರತದ ಆಶಾಕಿರಣಗಳು.

ಆದರೆ ಈ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸಾಧಕರೆ? ಸಾಧಕರಲ್ಲದಿದ್ದರೆ ಕಾರಣವೇನು? ಇಂದು ನಾವು ಜೀವನದಲ್ಲಿ ಕಾಣುವ ಅಶಿಕ್ಷೆಗೆ, ಅಶಿಸ್ತಿಗೆ, ಅಶಾಂತಿಗೆ ಕಾರಣ ನಾವು ನಮ್ಮ ಯುವಜನಾಂಗವನ್ನು ಸಾಧಕ ರನ್ನಾಗಿ ಮಾಡದಿರುವುದು.

ವಿದ್ಯಾಭ್ಯಾಸದ ರೂಪುರೇಖೆಗಳು, ವಿದ್ಯಾರ್ಥಿಗಳ ಜೀವನದ ಮೌಲ್ಯಗಳು ಇಂದು ಬದಲಾಗುತ್ತಿವೆ ನಿಜ. ಆದರೆ ಬದಲಾಗುತ್ತಿರುವ ಈ ಪರಿಸರದಲ್ಲೂ ವಿದ್ಯಾರ್ಥಿ ಸಾಧಕನಾಗಿಯೇ ಉಳಿಯಬೇಕು. ಪರಿಸರ, ಪರಿಕರಣಗಳು ಬೇರೆಯಾದರೂ ಮಾನವನ ಅಂತರಂಗದ ವ್ಯಕ್ತಿತ್ವ, ಆ ವ್ಯಕ್ತಿತ್ವಕ್ಕೆ ಮೂಲಭೂತವಾದ ಭಾವ

---

[1] ಪ್ರಾಣಾಯಾಮ,ದೇಹಸ್ವಾಸ್ಥ್ಯ ಮತ್ತು ಸಾಕ್ಷಾತ್ಕಾರ:ತಿರುಕ, ಅನಾಥ ಸೇವಾಶ್ರಮ ವಿಶ್ವಸ್ತ ಸಮಿತಿ,ಮಲ್ಲಾಡಿಹಳ್ಳಿ. ಈ ಗ್ರಂಥ ಈ ಲೇಖನಕ್ಕೆ ಆಧಾರ.

ರಾಗಗಳು ಎಂದಿನಿಂದ ಇಂದಿನವರೆಗೂ ಒಂದೇ ಆಗಿರುವುದರಿಂದ ವಿದ್ಯಾಭ್ಯಾಸ—ಅದು ಜೀವನೋಪಾಯಕ್ಕೆ ಕಾರಣವಾಗುವ ವಿದ್ಯಾಭ್ಯಾಸವೇ ಆಗಲಿ ಚಿಂತೆಯಿಲ್ಲ—ಸಾಧನೆಯ ಪಥವಾಗಬೇಕು. ಈ ಸಾಧನೆಯ ಪಥದ ಎಂಟು ಅಂಗಗಳಾವರೂ ಯಾವವು ?

ರಾಜಯೋಗದ ಮೊದಲ ಅಂಗ 'ಯಮ'ವಾದಂತೆ ಶಿಕ್ಷಣಯೋಗದ ಮೊದಲ ಅಂಗವೂ 'ಯಮ'ವೆ. ರಾಜಯೋಗದಲ್ಲಿ ಮನಶ್ಶಕ್ತಿಯೇ ಸಾಧನವಾಗಿರುವಂತೆ ಶಿಕ್ಷಣಯೋಗದಲ್ಲೂ ಮುಖ್ಯ ಸಾಧನ ಮನಶ್ಶಕ್ತಿ. ವಿದ್ಯಾರ್ಥಿಯ ಮನಃಶಕ್ತಿವೃದ್ಧಿಯಾಗಲು ಸಾಧನೆಯ ಮೊದಲ ಹಂತ 'ಯಮ'. 'ಯಮ' ಎಂದರೆ ಬಾಹ್ಯ ಶುದ್ಧಿ. ಅಂತರಂಗದ ಶುದ್ಧಿಯಷ್ಟೇ ಮುಖ್ಯ ಬಾಹ್ಯಶುದ್ಧಿ.

'ಯಮ' ಗಾಂಧೀಜಿಯವರ ನಿತ್ಯಜೀವನದ ಜೀವನಸೂತ್ರವಾಗಿತ್ತು. ಅಹಿಂಸೆ, ಸತ್ಯ, ಅಸ್ತೇಯ ಬ್ರಹ್ಮಚರ್ಯ, ಅಪರಿಗ್ರಹ 'ಯಮ'ದ ಐದು ವಿಧಿಗಳು. ಶಿಕ್ಷಣಯೋಗದಲ್ಲಿ ಕಲಿಸುವವರು ಕಲಿಯುವವರು ಇಬ್ಬರೂ ಸಾಧಿಸಬೇಕಾದವು.

ಅಹಿಂಸೆಯೆಂದರೆ ಬರೀ ಶಾರೀರಿಕ ಹಿಂಸೆಯಲ್ಲ; ಮಾನಸಿಕ ಹಿಂಸೆಯೂ ಹಿಂಸೆಯೆ. ಶಿಕ್ಷಣರಂಗದಲ್ಲಿನ ಪ್ರತಿಯೊಬ್ಬನೂ 'ಯಮ'ದ ಐದು ವಿಧಿಗಳನ್ನು ಪಾಲಿಸಲೇಬೇಕು. ಇದು ಸಾಧನೆಯ ಮೊದಲ ಹಂತ.

ನಮ್ಮ ಯುವಜನಾಂಗ ಇಂದು ಶಾಲಾ ಕಾಲೇಜುಗಳಲ್ಲಿ ಅಭ್ಯಾಸ ಮಾಡಬೇಕಾಗಿರುವುದು ಈ ಐದು ವಿಧಿಗಳು: ಹಂಗಿಸಿ ಮಾತಾಡುವುದು, ಬಾಯಿಗೆ ಬಂದ ಹಾಗೆ ಹರಟುವುದು, ಅವಿಧೇಯರಾಗಿ ವರ್ತಿಸುವುದು, ತರಗತಿಗೆ ತಡವಾಗಿ ಬಂದದ್ದಕ್ಕೆ ಕಾರಣ ಹೇಳುವುದರಿಂದ ಹಿಡಿದು ಸುಳ್ಳು ಹೇಳುವುದು, ಕಣ್ಣುಗಳನ್ನೂ, ಮನವನ್ನೂ, ಕೆಲವೊಮ್ಮೆ ದೇಹವನ್ನುಕೂಡ ಹೋದತ್ತ ಹರಿಯಬಿಟ್ಟು ಬ್ರಹ್ಮಚರ್ಯದ ಯಾವ ನಿಯಮವನ್ನೂ ಪಾಲಿಸದಿರುವುದು, ಸ್ವಾರ್ಥಕ್ಕಾಗಿ ಸಂಗ್ರಹಿಸುವುದು–ಇವು ಇಂದಿನ ಯುವಜನಾಂಗಕ್ಕೆ ಅಭ್ಯಾಸವಾಗಿ ಸಾಧಾರಣವಾಗಿಬಿಟ್ಟಿರುವ ವಿಷಯ.

ಶಾಲಾಕಾಲೇಜುಗಳ ಆವರಣಗಳಲ್ಲಿ, ಸುತ್ತಮುತ್ತ ಇರುವ ಉಪಹಾರಗೃಹಗಳು, ಹೋಟಲುಗಳ ಆಕರ್ಷಣೆಯಿಂದ ಬಿಡಿಸಿಕೊಂಡು ಇಂದಿನ ವಿದ್ಯಾರ್ಥಿ 'ಹಿತಭುಕ್, ಮಿತಭುಕ್, ಋತಭುಕ್' ಆಗಿರಲು ಮನಸ್ಸು ಮಾಡಿದರೆ ಅದೇ ಒಂದು ಮಹತ್ಸಾಧನೆ. ಪಟ್ಟಣಗಳಲ್ಲಿರುವ ಅಧ್ಯಾಪಕ-ವಿದ್ಯಾರ್ಥಿ ವರ್ಗಕ್ಕೆ ಗಂಟೆಗೊಂದು ಸಲ ಕಾಫಿ, ಸಮಯ ಸಿಕ್ಕಾಗಲೆಲ್ಲ ಕುರುಕಲು ಕರಿದ ತಿಂಡಿ, ಜೊತೆಗೆ ಸಿಗರೇಟು, ಇನ್ನೂ ಒಂದು ಹೆಜ್ಜೆ ಮುಂದೆ ಹೋದರೆ 'ಕುಡಿಯಲು' ಪಾನೀಯ ಇವು ಗಾಳಿ ನೀರುಗಳಷ್ಟೇ ಆವಶ್ಯಕವಾಗಿವೆ. ಬೇಕಾದಾಗ ಬೇಕಾದ್ದನ್ನು ತಿನ್ನುವ ಸೌಲಭ್ಯವಿರುವ ಯುವಜನಾಂಗಕ್ಕೆ 'ಮಿತಾಹಾರ'ದ ಸಂದೇಶ ಹಿಡಿಸುವುದಿಲ್ಲ. ಆದರೆ ಈ ಸಂದೇಶದ ಹಿತವರಿಯದ ಹೊರತೂ ಶಿಕ್ಷಣಯೋಗದಲ್ಲಿ ದೈಹಿಕನಿಯಮ ಸಾಧ್ಯವಿಲ್ಲ.

ಇವುಗಳ ಜೊತೆಗೆ ಕ್ಷಮಾ–ಧೃತಿ–ಆರ್ಜವ ಇವೂ ಶಿಕ್ಷಣಯೋಗಕ್ಕೆ ಬೇಕಾದ ಅತ್ಯವಶ್ಯ ಸಾಧನಗಳು. ಪರರಿಗಾಗಿ ಕನಿಕರಿಸುವ ಸ್ವಭಾವ, ಕ್ಷಮಿಸುವ ಗುಣ, ಧೈರ್ಯ, ಸಹಜತೆ, ನಿಸ್ಪೃಹತೆ ಈ ಎಲ್ಲ ಮೌಲ್ಯಗಳಿಂದಲೂ ಇಂದಿನ ವಿದ್ಯಾರ್ಥಿವೃಂದ ಬಹಳಮಟ್ಟಿಗೆ ವಂಚಿತವಾಗುತ್ತಿದೆ. ಕಾರಣ ಅಧ್ಯಾಪಕರಾದ ನಮ್ಮಲ್ಲೇ ಈ ಗುಣಗಳು ಇಲ್ಲದಿರುವುದು. ಮನೆಯಲ್ಲಾಗಲಿ, ಶಾಲೆಯಲ್ಲಾಗಲಿ, ಬದುಕಿನಲ್ಲಾಗಲಿ ಈ ಗುಣಗಳನ್ನು ಕಾಣದೆ ವಿದ್ಯಾರ್ಥಿ ದಂಗಾಗುತ್ತಾನೆ; ಬದುಕು ಜಟಿಲವಾಗುತ್ತ ಹೋದಹಾಗೆಲ್ಲ ಧೈರ್ಯ ಕಳೆದುಕೊಳ್ಳುತ್ತಾನೆ. ವಿದ್ಯಾರ್ಥಿಗಳಲ್ಲಿ ಧೈರ್ಯ ತುಂಬುವ ಶಿಕ್ಷಣ ನಮ್ಮದಾಗಿಲ್ಲ. ನಾವು ಅವರಿಗಾಗಿ ಒದಗಿಸುವ ಪಠ್ಯ ಪುಸ್ತಕಗಳ ಅಂತರಂಗವೂ ಬದಲಾಗಬೇಕು. ವಿದ್ಯಾರ್ಥಿ ಬರೀ ಬುದ್ಧಿಜೀವಿಯಾದರೆ ಸಾಲದು. ಬೌದ್ಧಿಕ ಆಹಾರದಿಂದ ಅವನು ಕಂಪ್ಯೂಟರ್ ಆಗಬಹುದಷ್ಟೆ. ಆದರೆ ಕಂಪ್ಯೂಟರಿನಷ್ಟು ಪರಿಪೂರ್ಣನಾಗಲಾರ. ಹೀಗಾಗಿ ಅವನಿಗೆ ನೈತಿಕಮೌಲ್ಯಗಳಿಲ್ಲದೆ, ಹೃದಯವಂತಿಕೆಯಿಲ್ಲದೆ ಕಂಗಾಲಾಗುತ್ತಾನೆ. ಅನೇಕರಿಗೆ ಸಾವಿನ

ಯೋಚನೆಯೂ ಬರುತ್ತದೆ. ಬದುಕಿಗಿಂತ ಸಾವು ಹಿತವಾಗುತ್ತದೆ. ಅನೇಕ ವಿದ್ಯಾರ್ಥಿ ವಿದ್ಯಾರ್ಥಿನಿಯರು ಆತ್ಮಹತ್ಯೆಯ ಮಾರ್ಗಗಳನ್ನು ಹುಡುಕಲು ಅವರಲ್ಲಿ ಇಂದಿನ ಶಿಕ್ಷಣ'ಧೃತಿ'ಯನ್ನು ಮೂಡಿಸದಿರುವುದೇ ಕಾರಣ.

ಇನ್ನು ನಿಯಮ. ಯಮದಿಂದ ಬಾಹ್ಯಶುದ್ಧಿ. ನಿಯಮದಿಂದ ಆಂತರಿಕ ಶುದ್ಧಿ. ನಿಯಮ ದಲ್ಲಿ ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ, ಈಶ್ವರಪ್ರಣಿಧಾನ—ಈ ಐದು ಕಟ್ಟಲೆಗಳಿವೆ.

ಶಿಕ್ಷಣಯೋಗದಲ್ಲಿ ಈ ಐದರ ಅವಶ್ಯಕತೆ ಎಷ್ಟಿದೆಯೆಂದರೆ ಇವಿಲ್ಲದ ಶಿಕ್ಷಣ ಬೆಳಗಲಾರದ ಬತ್ತಿ ಯಂತೆ.

ದೇಹ ಮನಸ್ಸುಗಳನ್ನು ಶುಚಿಯಾಗಿಡುವುದು ಅತಿಮುಖ್ಯ. ಪಟ್ಟಣಗಳಲ್ಲಿ ಹೆಚ್ಚುತ್ತಿರುವ 'ಹಿಪ್ಪಿ ಸಂಸ್ಕೃತಿ'ಯನ್ನು ಗಮನಿಸಿದಾಗ, ಅದಕ್ಕೆ ಬಲಿಯಾಗುತ್ತ ನಾರುವ ಬಟ್ಟೆಗಳನ್ನೂ, ಎಣ್ಣೆ ಬಾಚಣಿಗೆಗಳನ್ನು ಕಾಣದ ಕೇಶರಾಶಿಯನ್ನೂ, ಮುಖದ ತುಂಬ ಮೇಲೆದ್ದು ಮೆರೆಯುವ ಕೂದಲನ್ನೂ ಗಮನಿಸಿದಾಗ ಶಿಕ್ಷಣಯೋಗ ಮೊದಲು ಇವರಿಗೆ ಶುಚಿತ್ವವನ್ನು ಕಲಿಸಬೇಕು ಎನಿಸುತ್ತದೆ.

ತಪಸ್ಸೆಂದರೆ ಕಣ್ಣುಮುಚ್ಚಿ ಕೂಡುವುದಲ್ಲ. "ತಪಿಸುವುದೆಂದರೆ ಸುಡುವುದು" : ಇಂದ್ರಿಯ ಸುಖವನ್ನು, ವಿಷಯಾಸಕ್ತಿಯನ್ನು ಸುಡುವುದು. 'ಕಾಮ' ಮಾನವನಿಗೆ ಸಹಜ. ಕಾಮ ಪುರುಷಾರ್ಥಗಳಲ್ಲಿ ಒಂದು. ಆದರೆ ಅತಿಕಾಮ ದುಃಖಕ್ಕೆ ಮೂಲ. ಇಂದಿನ ಯುವಜನಾಂಗದಲ್ಲಿ ವಿಷಯಾಸಕ್ತಿ ಉಲ್ಬಣವಾಗಿರುವುದಕ್ಕೆ ಬಹುಮಟ್ಟಿಗೆ ಕಾರಣ ಅಂತಹ ರಾಗಭಾವಗಳನ್ನು ಪ್ರಚೋದಿಸುವ ಸಿನಿಮಗಳು, ಪತ್ರಿಕೆಗಳು, ಚಿತ್ರಪಟಗಳು. ಪ್ರಾಯದಲ್ಲಿರುವ ವಿದ್ಯಾರ್ಥಿ ಇವುಗಳ ಬಲೆಗೆ ಸಿಗದಿರುವುದು ಬಹಳ ಕಷ್ಟ. ಮನಸ್ಸನ್ನು ಕ್ಷೋಭೆಗೊಳಿಸುವ ವಾತಾವರಣದ ನಡುವೆ ಇರುವ ವಿದ್ಯಾರ್ಥಿಸಮುದಾಯಕ್ಕೆ ನಿಯಮವನ್ನು ಕಲಿಸುವುದು ಶಿಕ್ಷಣಯೋಗದ ಅಮೂಲ್ಯ ಅಂಗ.

ಇನ್ನು ಪರಮಾತ್ಮಚಿಂತೆ. ತರಗತಿಯಲ್ಲಿ ಬೋಧಿಸಲಾಗುವ ವಿಜ್ಞಾನದ ಚೌಕಟ್ಟಿನಲ್ಲಿರುವ ವಿದ್ಯಾರ್ಥಿಗೆ ಶಾಲಾಕಾಲೇಜುಗಳ ಪ್ರಯೋಗಶಾಲೆಯಲ್ಲಿನ ವಿಜ್ಞಾನದ ಪ್ರಯೋಗಾಲಯಗಳ ಪ್ರಯೋಗಗಳನ್ನು ಮಾತ್ರ ಅರಿತ, ಅರಿಯಲು ಪ್ರಯತ್ನಿಸುವ ವಿದ್ಯಾರ್ಥಿಗಳಿಗೆ 'ಪರಮಾತ್ಮ'ನ ಇರವು, ಅರಿವು ಒಂದು ದೊಡ್ಡ ಪ್ರಶ್ನೆ. ಆದರೆ ಈ ಪ್ರಶ್ನೆ ಅವರನ್ನು ಸತ್ಯಶೋಧಕನನ್ನಾಗಿ ಮಾಡುತ್ತಿಲ್ಲ. ಪರಮಾತ್ಮನನ್ನು ಅರಸಿಕೊಂಡು ಹೋಗುವ ಸಾಧಕ-ನನ್ನಾಗಿ ಮಾಡುತ್ತಿಲ್ಲ. ಪರಮಾತ್ಮನ ಇರುವಿಕೆಯನ್ನು ಅಲ್ಲಗಳೆಯುವುದು ಸುಲಭದ ಕೆಲಸವೆನಿಸಿದರೂ ಇರುವಿಕೆ ಯನ್ನು ಸ್ಥಿರಪಡಿಸಿಕೊಳ್ಳುವುದು ಸಾಧಕನ ಕಾರ್ಯ. ಪರಮಾತ್ಮನನ್ನು ಜೀವಿ ತನ್ನ ಜೀವಾತ್ಮದಲ್ಲೇ ಕಾಣು ವುದೇ, ಎಲ್ಲರ ಜೀವಾತ್ಮದಲ್ಲಿ ಕಾಣುವುದೇ ಶಿಕ್ಷಣಯೋಗದ ಗುರಿಯಾಗಬೇಕು.

ಇನ್ನು ಆಸನ. ಇಂದು ನಮ್ಮ ಶಿಕ್ಷಣದಲ್ಲಿ ದೈಹಿಕಶಿಕ್ಷಣವನ್ನು ಬಹಳವಾಗಿ ಕಡೆಗಣಿಸಿದ್ದೇವೆ. ನೆಟ್ಟಗೆ ನಿಲ್ಲುವುದಾಗಲಿ, ಕೂಡುವುದಾಗಲಿ ನಮ್ಮಲ್ಲಿನ ಅನೇಕ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸಾಧ್ಯವಿಲ್ಲ. ಒರಗಲು ಗೋಡೆ ಬಯಸುವ ಯುವಜನಾಂಗ ದೇಶದ ಬೆನ್ನೆಲುಬು ಆಗುವುದಾದರೂ ಹೇಗೆ ಸಾಧ್ಯ? ಯೋಗಾಸನ ಗಳಲ್ಲಿ ಅನೇಕ ಆಸನಗಳು ರೋಗನಿವಾರಣೆಗೂ ಆರೋಗ್ಯಪಾಲನೆಗೂ ಅವಶ್ಯ. ಯೋಗಾಭ್ಯಾಸ, ಆಸನಗಳ ಪರಿಚಯ ಶಿಕ್ಷಣಯೋಗದ ಅವಿಭಾಜ್ಯ ಅಂಗವಾಗಬೇಕು. ಶಾರೀರಿಕಶಿಕ್ಷಣ ಐಚ್ಛಿಕವಾಗದೆ ಕಡ್ಡಾಯವಾಗ ಬೇಕು. ಯೋಗಾಭ್ಯಾಸ ಅದರ ಭಾಗವಾಗಬೇಕು.

ತರಗತಿಗಳಲ್ಲಿ ಅಟೆಂಡೆನ್ಸ್—ಹಾಜರಾತಿಯನ್ನು ತೆಗೆದುಕೊಳ್ಳುತ್ತೇವೆ. ಆದರೆ ಅನೇಕಸಲ ಈ ಹಾಜರಾತಿ ವಿದ್ಯಾರ್ಥಿಯ ದೈಹಿಕ ಹಾಜರಾತಿಯೇ ಹೊರತು ಮಾನಸಿಕ ಹಾಜರಾತಿಯಲ್ಲ. ಮನಸ್ಸು ಬಹಳ

ಚಂಚಲ. ಚಂಚಲವಾದ ಮನಸ್ಸನ್ನು ಒಂದು ಬಿಂದುವಿನಲ್ಲಿ, ತರಗತಿಯಲ್ಲಿ ನಡೆಯುತ್ತಿರುವ ಪಾಠದಲ್ಲಿ ಕೇಂದ್ರೀಕೃತವಾಗುವಂತೆ ಮಾಡುವುದು ಶಿಕ್ಷಣಯೋಗದ ಒಂದು ಮಹತ್ತರ ಅಂಗ.

ಪ್ರಾಣಶಕ್ತಿಯ ನಿಯಂತ್ರಣದಿಂದ, ಪ್ರತ್ಯಾಹಾರದಿಂದ ನಾವು ಮನಸ್ಸನ್ನು ಗುರಿಯಲ್ಲಿ ನಿಲ್ಲಿಸಬೇಕು ; ಚಿತ್ತೈಕಾಗ್ರತೆಯನ್ನು ಬೆಳೆಸಿಕೊಳ್ಳಬೇಕು. ವಿದ್ಯಾರ್ಥಿಗಳಿಗೆ ತರಗತಿಗಳಲ್ಲಿ ನಡೆಯುವ ಪಾಠಗಳು ಧಾರಣೆಗೆ ಶಕ್ಯವಾಗುವ ಹಾಗೆ ಅಧ್ಯಾಪಕರಾದ ನಾವು ಪ್ರಯತ್ನ ಪಡಬೇಕು.

ಇನ್ನು ಧ್ಯಾನ. ವಿದ್ಯಾಭ್ಯಾಸದ ವಿಷಯಗಳನ್ನೇ ಕುರಿತ ಚಿಂತನೆ ವಿದ್ಯಾರ್ಥಿಗೆ ಮೂಲವಾಗಿ ಬೇಕಾದ್ದು. ತರಗತಿಗಳಲ್ಲಿ ಕುಳಿತಾಗಲೂ ವಿದ್ಯಾರ್ಥಿ ರಾಜಕೀಯ ಚಟುವಟಿಕೆಗಳ ಧ್ಯಾನದಲ್ಲೋ, ಸಿನಿಮಾರಂಗದ ಧ್ಯಾನದಲ್ಲೋ, ಇಲ್ಲವೆ ಇನ್ನಾವುದಾವರೂ ವಿಷಯದ ಧ್ಯಾನವಲ್ಲೋ ಇರುವುದು ಸಾಮಾನ್ಯ. ಶಿಕ್ಷಣಯೋಗದಲ್ಲಿ ಇದು ತಪ್ಪಬೇಕು.

ಯಾವುದಾದರೂ 'ನೋಟ್ಸ್' ಓದಿಕೊಂಡು, ಐದು ಪ್ರಶ್ನೆಗಳಲ್ಲಿ ಮೂರು ಪ್ರಶ್ನೆಗಳನ್ನು ಉತ್ತರಿಸುವ ಬಗೆಯನ್ನು, 'ಹೇಗಾದರೂ ತಿಳಿದರೆ ಸಾಕು' ಎಂಬ ಮನೋಭಾವ ವಿದ್ಯಾರ್ಥಿಯಲ್ಲಿ ಬೇರೂರಲು ಕಾರಣವಾಗಿರುವ ವಿದ್ಯಾಭ್ಯಾಸದಿಂದ ಆದಷ್ಟು 'ಪರಾವಲಂಬನ' ಪದ್ಧತಿಗಳನ್ನು ತೊಡೆದುಹಾಕಿ ವಿದ್ಯಾರ್ಥಿ ಸ್ವಾವಲಂಬಿಯಾಗುವಂತೆ ಮಾಡಬೇಕು. ಚಿಂತನಕ್ಕೆ ಪಠ್ಯಕ್ರಮದಲ್ಲಿ ಅವಕಾಶವಿರಬೇಕು. ಅಧ್ಯಾಪಕರಾದರೂ ಗಂಟೆಗಟ್ಟಲೆ ತಾವು ಉರುಹಚ್ಚಿದ ಪಾಠವನ್ನು ಹೊರಗೆಹಾಕುವ ಪದ್ಧತಿ ಬಿಡಬೇಕು. ವಿದ್ಯಾರ್ಥಿಗಳಲ್ಲಿ ಯೋಜನಾಶಕ್ತಿ ಚಿಂತನಪ್ರವೃತ್ತಿ ಬೆಳೆದಾಗ ಮಾತ್ರ ಧಾರಣ, ಧ್ಯಾನ ಇವು ಸಾಧ್ಯವಾಗುವುದು.

ಹೀಗಾದಾಗ ಶಿಕ್ಷಣಯೋಗದಲ್ಲಿ ಕೂಡ ಧ್ಯಾನಿಸುವ ವಸ್ತುವಿನಲ್ಲೇ ಮನಸ್ಸು ಲೀನಹೊಂದಿ ವಿದ್ಯಾರ್ಥಿ ಸಮಾಧಿಸ್ಥನಾಗುವುದು ಸಾಧ್ಯ.

ತಾವು ಕಲಿಯುತ್ತಿರುವ ವಿಷಯಗಳಲ್ಲೇ ಸಂಪೂರ್ಣ ಲೀನವಾಗುವ ವಿದ್ಯಾರ್ಥಿವೃಂದಕ್ಕೆ ಆ ವಿಷಯದ ಸಂಪೂರ್ಣ ಪರಿಚಯವೂ ಸಾಧ್ಯ. ಜೊತೆಗೆ ಅದಕ್ಕೆ ಸಂಬಂಧಪಟ್ಟ ಸಮಸ್ಯೆಗಳಿದ್ದರೆ ಮುಂದೆ ಅವುಗಳೊಳಗಿನ ಪರಿಹಾರದ ಚಿಂತನೆಯೂ ಸಾಧ್ಯ.

ಒಟ್ಟಿನಲ್ಲಿ ಇಂದಿನ ಶಿಕ್ಷಣ ತಾನು ಈಗಿರುವಂತೆ 'casual exercise' ಆಗದೆ, ರಾಜಯೋಗವಾದಾಗ ಮಾತ್ರ ಕಲಿಯುವ ವಿದ್ಯೆಗೂ ಕಲಿಸುವ ಅಧ್ಯಾಪಕರಿಗೂ, ಕಲಿತ ವಿದ್ಯಾರ್ಥಿವೃಂದಕ್ಕೂ ವಿಮೋಚನೆ ಸಾಧ್ಯ.

ನಿಜವಾದ ಪಂಡಿತನ ಗುಟ್ಟು ಏನೆಂಬುದನ್ನು ನಿನಗೆ ಹೇಳಲೇನು ? ಅದು ಇಷ್ಟೆ–ನಾನು ಕಾಣುವ ಪ್ರತಿಯೊಬ್ಬನೂ ನನಗೆ ಗುರು ; ಹೀಗೆಂದುಕೊಂಡಾಗ ಪ್ರತಿಯೊಬ್ಬನಿಂದಲೂ ಕಲಿತುಕೊಳ್ಳುತ್ತೇವೆ.

ಮ. ಗಂ. ರೇಣುಕ ಪ್ರಸನ್ನ

ಕರ್ನಾಟಕದಲ್ಲಿ ಉನ್ನತ ಶಿಕ್ಷಣ ಮತ್ತು ಖಾಸಗಿಕ್ಷೇತ್ರ ; ಅಂದು-ಇಂದು

ಕರ್ನಾಟಕದ ಶಿಕ್ಷಣಕ್ಷೇತ್ರವನ್ನು ಸಮೀಕ್ಷಿಸುವ ಯಾರಿಗಾದರೂ ಇಡೀ ಶಿಕ್ಷಣರಂಗದಮೇಲೆ ಖಾಸಗಿ ಕ್ಷೇತ್ರವು ತನ್ನ ಪ್ರಭುತ್ವವನ್ನು ಸ್ಥಾಪಿಸಿಕೊಂಡಿರುವುದು ಮನದಟ್ಟಾಗುತ್ತದೆ. ಸೆಕೆಂಡರಿ ಶಿಕ್ಷಣದವರೆಗೆ ತಕ್ಕ ಮಟ್ಟಿಗೆ ಸರ್ಕಾರಿ ಶಾಲೆಗಳು ಕಂಡುಬರುತ್ತವೆಯಾದರೂ ವಿಶ್ವವಿದ್ಯಾನಿಲಯದ ಮಟ್ಟಕ್ಕೆ ಬಂದಾಗ ಶೇಕಡ ಎಪ್ಪತ್ತೈದಕ್ಕಿಂತ ಹೆಚ್ಚು ಕಾಲೇಜುಗಳು ಖಾಸಗಿಕಾಲೇಜುಗಳೆಂಬುದು ಸ್ಪಷ್ಟವಾಗುತ್ತದೆ.

ಪ್ರತಿವರ್ಷವೂ ಸಹಸ್ರಾರು ಪದವೀಧರರು ಈ ಕಾಲೇಜುಗಳಿಂದ ಹೊರಬರುತ್ತಿರುವುದನ್ನೂ, ಜೀವನದ ನಾನಾಕ್ಷೇತ್ರಗಳಲ್ಲಿ ಉದ್ಯೋಗಗಳನ್ನು ಗಳಿಸುತ್ತಿರುವುದನ್ನೂ ಕಂಡ ಯಾರಿಗಾದರೂ ಖಾಸಗಿ ಶಿಕ್ಷಣಸಂಸ್ಥೆಗಳು ರಾಜ್ಯಕ್ಕೆ, ಆ ಮೂಲಕ ರಾಷ್ಟ್ರಕ್ಕೆ ಅಪಾರಸೇವೆಯನ್ನು ಸಲ್ಲಿಸುತ್ತಿವೆಯೆನ್ನಿಸಿದರೆ ಆಶ್ಚರ್ಯವಿಲ್ಲ. ನಿಜ ; ಒಂದು ಪರಿಮಿತಾರ್ಥದಲ್ಲಿ-ವಿವಿಧ ಜಿಲ್ಲೆ ತಾಲ್ಲೂಕುಗಳ ಶೈಕ್ಷಣಿಕ ಅಗತ್ಯಗಳನ್ನು ತಕ್ಕಮಟ್ಟಿಗೆ ಪೂರೈಸಲು ಹಲವಾರು ಕುಟುಂಬಗಳಿಗೆ ಅಶನ-ವಸನಾದಿಗಳಿಗೆ ದಾರಿಮಾಡಿಕೊಡಲು ಖಾಸಗಿಕಾಲೇಜುಗಳು ಸೇವೆ ಸಲ್ಲಿಸುತ್ತಿವೆಯೆಂಬುದನ್ನು ಯಾರಾದರೂ ಒಪ್ಪಲೇಬೇಕು.

ಆದರೆ ಶಿಕ್ಷಣದ ಬಗ್ಗೆ ಪ್ರಾಚೀನ ಭಾರತೀಯ ಆದರ್ಶದ ಸ್ವರೂಪವೇನು ? (ಅಂತೆಯೇ ಕರ್ನಾಟಕದ) ಈ ಹಿನ್ನೆಲೆಯಲ್ಲಿ ಪ್ರಾಚೀನ ಕರ್ನಾಕಟದಲ್ಲಿ ಉನ್ನತ ಶಿಕ್ಷಣದ ಸ್ವರೂಪ ಹೇಗಿತ್ತು ? ಇಂದಿನ ಸ್ವರೂಪ ಹೇಗಿದೆ ? ಇತ್ಯಾದಿಯಾಗಿ ಈ ರೀತಿಯ ಪ್ರಶ್ನೆಗಳನ್ನು ಹಾಕಿಕೊಂಡಾಗ, ಉತ್ತರ ಕೊಡಲು ಪ್ರಯತ್ನಿಸಿದಾಗ ಇಂದಿನ ಖಾಸಗಿಕ್ಷೇತ್ರದ ಒಡೆತನಕ್ಕೊಳಗಾಗಿರುವ ಉನ್ನತಶಿಕ್ಷಣರಂಗ ಎಲ್ಲಿ ನಿಲ್ಲಬಹುದೆಂಬುದನ್ನು ತೌಲನಿಕವಾಗಿ ವಿವೇಚಿಸುವುದು ಈ ಲೇಖನದ ಉದ್ದೇಶ. ಇಡೀ ಶಿಕ್ಷಣವ್ಯವಸ್ಥೆಯಲ್ಲಿನ-ಸರ್ಕಾರಿ ಒಡೆತನದ್ದಾಗಿರಲಿ ಅಥವಾ ಖಾಸಗಿಕ್ಷೇತ್ರದ್ದಾಗಿರಲಿ, ಲೋಪದೋಷಗಳನ್ನೊಳಗೊಂಡು ಅವುಗಳ ಜೊತೆಜೊತೆಗೇ ಖಾಸಗಿಕ್ಷೇತ್ರ ಎಷ್ಟರ ಮಟ್ಟಿಗೆ ಶೈಕ್ಷಣಿಕ ಆದರ್ಶವನ್ನು ಮುಟ್ಟಿದೆ ಮತ್ತು ಮುಟ್ಟುತ್ತಿದೆಯೆಂಬುವನ್ನು ವಿಶ್ಲೇಷಿಸಲು ಇಲ್ಲಿ ಪ್ರಯತ್ನಿಸಲಾಗಿದೆ.

ಪ್ರಾಚೀನ ಕರ್ನಾಟಕದಲ್ಲಿ ಅತ್ಯಂತ ಪ್ರಸಿದ್ಧವಾಗಿದ್ದ, ಹಲವಾರು ಅಗ್ರಹಾರಗಳಿಂದ ಕೂಡಿದ್ದ ಬೆಳ್ಳಿಗಾವೆಯ ವಿದ್ಯಾಕೇಂದ್ರದ ವರ್ಣನೆ ಕೆಳಕಂಡಂತಿದೆ:

> "ಯಮ ನಿಯಮ ಗುಣೋಪೇತರ್, ಬ್ರಹ್ಮೇಂದ್ರ ಚಂದ್ರಾಯಮಾಗ್ನಿ ಪ್ರತಿಷ್ಠಿತ
> ಪಂಚಮಹಾಲಿಂಗ ಸನ್ನಿಹಿತ ಪುಣ್ಯತೀರ್ಥೋದಕಾವಗಾಹನ ಪವಿತ್ರೀಕೃತಗಾತ್ರರ್,
> ಧರಾಮರ ಸತ್ಪಾತ್ರರ್, ಮಯೂರವರ್ಮ ನೃಪಸ್ಯಷ್ಟಾದಶಾಶ್ವಮೇಧಾಧ್ವರ

> ದಕ್ಷಿಣೋಪಲಬ್ಧ ಚತುಶ್ಚತ್ವಾರಿಂಶದುತ್ತರ ಶತಗ್ರಾಮಾಧಿಷ್ಠಾಯಕರ್, ಸಂದಿಗ್ಧ ವಿಪುಲಧರ್ಮ ನಿರ್ಣಾಯಕರ್, ಅನೇಕ ಯಜ್ಞಾವಭೃಥ ಪುಣ್ಯಾಂಬು ನಿಯತಾಭಿಷಿಕ್ತ ಮೃದ್ಧ ಮೂರ್ಧಜರ್, ಮಹಾವೀರ ವೇದಿ ಧ್ವಜರ್, ಬ್ರಹ್ಮರಾಜಸಭಾ ಪೂಜಾಗ್ರ ಗ್ರಾಹಿಗಳ್, ಆಶ್ರಿತಜನ ಮನೋರಂಜಿತ ಫಲದಾಯಿಗಳ್, ವೇದವೇದಾಂಗೋಪಾಂಗ ಮೀಮಾಂಸಾದಿ ಶಾಸ್ತ್ರಷಟ್ಕರ್ಮ ಸ್ಮೃತಿ ಪುರಾಣ ಕಾವ್ಯ ನಾಟಕ ವಿಷಯ ಸರೋಜಿನೀ ಭಾಸ್ಕರರ್, ಬುಧಹೃದಯ ಕುಮುದವನ ಮುಕುಳ ನಿಕರ ವಿಕಸಿತ ಸುಧಾಕರರ್, ದಂಭ ದರ್ಪ ಕ್ರೋಧ ಲೋಭ ಮದ ಮಾತ್ಸರ್ಯ ದುರ್ವಿನಯ ದುರಿತಗುಣದೂರರ್"[1]

ಶಾಸನವೊಂದರಲ್ಲಿ ಬರುವ ಈ ವರ್ಣನೆಯಲ್ಲಿ ಬಳ್ಳಿಗಾವೆಯ ವಿದ್ಯಾಕೇಂದ್ರದ ವಿದ್ವಾಂಸರ ವಿದ್ವತ್ತು ಹಿರಿಮೆಗಳನ್ನೂ ಅಲ್ಲಿನ ಅಧ್ಯಯನ ವಿಷಯಗಳ ವೈವಿಧ್ಯವನ್ನೂ ಪರಿಚಯ ಮಾಡಿಕೊಳ್ಳಬಹುದಾಗಿದೆ.

ಇಷ್ಟೇ ಪ್ರಸಿದ್ಧವಾದ ಮತ್ತೊಂದು ಪ್ರಾಚೀನ ವಿದ್ಯಾಕೇಂದ್ರ ಬಳ್ಳಿಗಾವೆಯ ಮಠಗಳಲ್ಲಿ ಪ್ರಸಿದ್ಧವಾದ ಕೋಡಿಯ ಮಠ ; ಶಾಸನದಲ್ಲಿ ಬರುವ ಈ ಮಠದ ವರ್ಣನೆ ಕೆಳಕಂಡಂತಿದೆ :

> "ದಕ್ಷಿಣ ಕೇದಾರಸ್ಥಾನಮುಂ,ಶಿವಲಿಂಗಪೂಜಾಪುಳಕ ಸಸ್ಯಸರಸಕೇದಾರ ಸ್ಥಾನಮುಂ, ನೈಷ್ಠಿಕಬ್ರಹ್ಮಚರ್ಯ ಶಿವಮುನಿ ಜನಾನುಷ್ಠಾನ ನಿಷ್ಠಿತ ಸ್ಥಾನಮುಂ, ಸಾಂಗಋಗ್ಯಜುಸ್ಸಾಮಥರ್ವ ಚತುರ್ವೇದ ಸ್ವಾಧ್ಯಾಯ ಸ್ಥಾನಮುಂ, ಕೌಮಾರ ಪಾಣಿನೀಯ, ಶಾಕಟಾಯನ ಶಬ್ದಾನುಶಾಸನಾದಿ ವ್ಯಾಕರಣ ವ್ಯಾಖ್ಯಾನ ಸ್ಥಾನಮುಂ, ಲಾಕುಲ ಸಿದ್ಧಾಂತ ಪಾತಂಜಲಾದಿ ಯೋಗಶಾಸ್ತ್ರ ವ್ಯಾಖ್ಯಾನಸ್ಥಾನಮುಂ, ಅಷ್ಟಾದಶ ಪುರಾಣ ಧರ್ಮಶಾಸ್ತ್ರ ಸಕಳ ಕಾವ್ಯನಾಟಕ ನಾಟಕಾದಿ ವಿವಿಧ ವಿದ್ಯಾಸ್ಥಾನಮುಂ, ದೀನಾನಾಥ ಪಂಗ್ವಂಧ ಬಧಿರ ಕಥಕಗಾಯಕ ವಾದಕ ವಾಂಶಿಕ ನರ್ತಕ ವೈತಾಳಿಕ ನಗ್ನಭಗ್ನಕ್ಷಪಣಕೈಕದಂಡಿ ಹಂಸ ಪರಮಹಂಸಾದಿ ನಾನಾನಾದೇಶ ಬಿಕ್ಷುಕ ಜನಾನಿವಾರ್ಯಾನ್ನದಾನ ಸ್ಥಾನಮುಂ, ನಾನಾನಾಥ ರೋಗಿಜನ ರೋಗ ಭೈಷಜ್ಯಸ್ಥಾನಮುಂ, ಸಕಲ ಭೂತಾಭಯ ಪ್ರಧಾನ ಸ್ಥಾನಮುಮಾಗಿ ಕೋಡಿಯ ಮಠವಿರ್ಪುದು"[2]

ಈ ವರ್ಣನೆಯು ಕೋಡಿಯ ಮಠದ ಕಾರ್ಯಕ್ಷೇತದ ವಿವಿಧ ಮುಖಗಳನ್ನುಪರಿಚಯ ಮಾಡಿಕೊಡುತ್ತದೆ. ಈ ಮಠವು ಕೇವಲ ಶಾಸ್ತ್ರಗಳ ಅಧ್ಯಯನಕ್ಕಷ್ಟೇ ಮೀಸಲಾಗಿರದೆ ಮಾನವ ಸೇವೆಗೂ ಆದ್ಯತೆ ನೀಡಿತ್ತೆಂಬುದನ್ನು, ಅಲ್ಲಿ ದೀನರಿಗೆ ಅನಾಥರಿಗೆ ಕುಂಟ–ಕುರುಡರಿಗೆ ಹೆಳವರಿಗೆ ಆಶ್ರಯ ದೊರಕುತ್ತಿತ್ತೆಂಬ ಮತ್ತು ರೋಗಪೀಡಿತರಾಗಿದ್ದವರಿಗೆ ಚಿಕಿತ್ಸೆಯೂ ದೊರಕುತ್ತಿತ್ತೆಂಬ ವರ್ಣನೆಯಿಂದ ಮನವರಿಕೆ ಮಾಡಿಕೊಳ್ಳಬಹುದಾಗಿದೆ.

ಈಗಿನ ಚಿತ್ರದುರ್ಗ ಜಿಲ್ಲೆಯ ಮಲ್ಲಾಡಿಹಳ್ಳಿಯ ಅನಾಥಸೇವಾಶ್ರಮವು ಶಿಕ್ಷಣಸಂಸ್ಥೆಗಳನ್ನು ನಡೆಸುವುದರ ಜೊತೆಗೆ ರೋಗಿಗಳಿಗೆ ಚಿಕಿತ್ಸೆನೀಡುತ್ತಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದಾಗಿದೆ.

"ವಿದ್ಯೆಗಿಂತ ಶ್ರೇಷ್ಠವಾದುದು ಮತ್ತೊಂದಿಲ್ಲ. ಸರ್ವ ದ್ರವ್ಯಗಳಲ್ಲಿ ವಿದ್ಯೆಯೇ ನಿಜವಾದ ಧನ. ಏಕೆಂದರೆ ಅದನ್ನು ಯಾರೂ ಅಪಹರಿಸಲಾರರು. ಅದು ಅನರ್ಘ್ಯವಾದುದು ಮತ್ತು ಅಕ್ಷಯವಾದುದು.

---

[1] ಕರ್ನಾಟಕ ಸಂಸ್ಕೃತಿ ಸಮೀಕ್ಷೆ—ಡಾ. ಎಚ್. ತಿಪ್ಪೇರುದ್ರಸ್ವಾಮಿ

[2] ಕರ್ನಾಟಕ ಸಂಸ್ಕೃತಿ ಸಮೀಕ್ಷೆ—ಡಾ. ಎಚ್. ತಿಪ್ಪೇರುದ್ರಸ್ವಾಮಿ.

ವಿದ್ಯೆಯಿಂದ ಬರುವ ಸುಖವೇ ನಿಜವಾದ ಸುಖ. ಅದರ ಮೆಟ್ಟಿಲುಗಳನ್ನು ಹೀಗೆ ಗುರುತಿಸಬಹುದು. ವಿದ್ಯೆಯಿಂದ ವಿನಯ, ವಿನಯದಿಂದ ಪಾತ್ರತೆ, ಪಾತ್ರತೆಯಿಂದ ಧನ, ಧನದಿಂದ ಧರ್ಮ, ಧರ್ಮದಿಂದ ಸುಖ. ವಿದ್ಯೆಯು ಕಲ್ಪಲತೆಯಂತೆ ಯಾವುದನ್ನು ತಾನೇ ಕೊಡುವುದಿಲ್ಲ ? ಅದು ತಾಯಿಯಂತೆ ಕಾಪಾಡುತ್ತದೆ, ತಂದೆಯಂತೆ ಸರಿಯಾದ ಮಾರ್ಗದಲ್ಲಿ ನಿಯೋಜಿಸುತ್ತದೆ, ಪ್ರಿಯೆಯಂತೆ ಕಷ್ಟಗಳನ್ನು ಹೋಗಲಾಡಿಸಿ ಸಂತೋಷಗೊಳಿಸುತ್ತದೆ, ಐಶ್ವರ್ಯವನ್ನು ತರುತ್ತದೆ, ದಿಕ್ಕುಗಳಲ್ಲಿ ಕೀರ್ತಿಯನ್ನು ಹರಡುತ್ತದೆ. ವಿದ್ಯಾಹೀನನಾದವನು ಪಶುವಿಗೆ ಸಮಾನ"[1]

ವಿದ್ಯೆಯ ಬಗೆಗಿದ್ದ ಪ್ರಾಚೀನಭಾರತದ ಈ ಆದರ್ಶಸ್ವರೂಪವನ್ನು ಮೇಲಿನ ಬಳ್ಳಿಗಾವೆ ಮತ್ತು ಕೋಡಿಯ ಮಠದ ವಿದ್ಯಾಕೇಂದ್ರಗಳ ವರ್ಣನೆಯಲ್ಲಿ ಕಾಣಬಹುದೆಂದರೆ ಉತ್ಪ್ರೇಕ್ಷೆಯಾಗಲಾರದು.

ಪ್ರಾಚೀನ ಕರ್ನಾಟಕದಲ್ಲಿ ಉನ್ನತಶಿಕ್ಷಣ ಕೇಂದ್ರಗಳಾಗಿದ್ದ ಅಗ್ರಹಾರ, ಬ್ರಹ್ಮಪುರಿ ದೇವಸ್ಥಾನ (ಕ್ರಮೇಣ ಮಠವೆಂಬ ಹೆಸರು ಬಂದಿತು) ಮತ್ತು ಘಟಿಕಾಸ್ಥಾನಗಳು ಸರ್ಕಾರದಿಂದ ಮತ್ತು ಸಾರ್ವಜನಿಕರಿಂದ ಅಗತ್ಯವಾದ ನೆರವನ್ನು ಪಡೆಯುತ್ತಿದ್ದರೂ, ಸ್ವತಂತ್ರವಾಗಿ ಆಡಳಿತ ನಿರ್ವಹಿಸುವ ಖಾಸಗಿ ಶಿಕ್ಷಣ ಸಂಸ್ಥೆಗಳಾಗಿದ್ದುವು. ಅಂದಿನ ಈ ಖಾಸಗಿ ಶಿಕ್ಷಣಸಂಸ್ಥೆಗಳು ಮತ್ತು ಇಂದಿನ ಖಾಸಗಿ ಕಾಲೇಜುಗಳು, ಈ ಮೊದಲು ವಿವರಿಸಿದ ಭಾರತೀಯಶಿಕ್ಷಣದ ಆದರ್ಶ ಸ್ವರೂಪವನ್ನು ಎಷ್ಟರಮಟ್ಟಿಗೆ ಕಾರ್ಯಗತಗೊಳಿಸಿವೆ ಮತ್ತು ಕಾರ್ಯಗತಗೊಳಿಸುತ್ತಿವೆಯೆಂಬುದನ್ನು ವಿಶ್ಲೇಷಿಸಲು ಪ್ರಾಚೀನ ವಿದ್ಯಾಕೇಂದ್ರಗಳಲ್ಲಿ ಮುಖ್ಯವಾದ ಅಗ್ರಹಾರ ಮತ್ತು ದೇವಸ್ಥಾನ (ಮಠ)ಗಳ–

1) ಆಡಳಿತಕ್ರಮ
2) ಆರ್ಥಿಕವ್ಯವಸ್ಥೆ
3) ಶೈಕ್ಷಣಿಕಮಟ್ಟ–ಇವುಗಳನ್ನು ಸಂಕ್ಷಿಪ್ತವಾಗಿಯಾದರೂ ಅವಲೋಕಿಸುವುದು ಅಗತ್ಯವಾಗಿದೆ.

ಅಗ್ರಹಾರ : ಅತ್ಯಂತ ಶ್ರೇಷ್ಠರಾದ ಬ್ರಾಹ್ಮಣವಿದ್ವಾಂಸರು ವಾಸಿಸುತ್ತಿದ್ದ ಊರುಗಳೇ ಅಗ್ರಹಾರಗಳು. ರಾಜನು ದತ್ತಿಯ ರೂಪದಲ್ಲಿ ಬಿಟ್ಟುಕೊಟ್ಟ ಹಳ್ಳಿಗಳಿಂದ ಅಗ್ರಹಾರಗಳಾಗುತ್ತಿದ್ದುವು. ಅಗ್ರಹಾರವನ್ನು ದಾನವಾಗಿ ಪಡೆದ ಬ್ರಾಹ್ಮಣರನ್ನು 'ಮಹಾಜನ' ಎಂದು ಕರೆಯುತ್ತಿದ್ದರು. ಅಗ್ರಹಾರದ ಸಮಸ್ತ ಆಡಳಿತವೂ ಮಹಾಜನರಿಗೇ ಸೇರಿರುತ್ತಿತ್ತು. ಅಗ್ರಹಾರಗಳಿಂದ ಬರುವ ಆದಾಯವನ್ನು ರಾಜನಿಗೆ ಸಲ್ಲಿಸಬೇಕಾಗಿರಲಿಲ್ಲ. ಅಗ್ರಹಾರಗಳ ಮೇಲೆ ಯಾವುದೇ ರೀತಿಯ ತೆರಿಗೆಗಳನ್ನೂ ವಿಧಿಸುವಂತಿರಲಿಲ್ಲ.

ಮಹಾಜನರ ಸಾಮಾಜಿಕಕಾರ್ಯ ಮತ್ತು ಧಾರ್ಮಿಕಸಹನೆಯನ್ನು ಕುರಿತು ಈ ಮಾತುಗಳನ್ನು ಗಮನಿಸಿ : "ಊರಿನಲ್ಲಿ ಯಾವುದೇ ಕಾರ್ಯವಾದರೂ ಅದು ಮಹಾಜನರ ಸನ್ನಿಧಿಯಲ್ಲಿ ನಡೆಯುತ್ತಿತ್ತು. ಅವರು ಹೋರಾಟದಲ್ಲಿ ಸತ್ತ ವೀರನ ಸ್ಮಾರಕವಾಗಿ ವೀರಗಲ್ಲನ್ನು ಇಕ್ಕಿಸುತ್ತಿದ್ದರು. 'ಗ್ರಾಮ ಕಾರ್ಯ ನಿಮಿತ್ತವಾಗಿ' ಯಾರಾದರೂ ಹಣವನ್ನೋ ಭೂಮಿಯನ್ನೋ ದಾನಮಾಡಿದರೆ ಅದನ್ನು ಸ್ವೀಕರಿಸುತ್ತಿದ್ದವರು, ಅದನ್ನು ರಕ್ಷಿಸುತ್ತಿದ್ದವರು, ವಿನಿಯೋಗ ಮಾಡುತ್ತಿದ್ದವರೂ ಇವರೇ. ಹಣವನ್ನು ಬಡ್ಡಿಗೆ ಸಾಲವಾಗಿ ಕೊಟ್ಟು ಅವನ್ನು ಧಾರ್ಮಿಕ ಕಾರ್ಯಗಳಿಗಾಗಿ ಬಳಸುತ್ತಿದ್ದರು. ಭೂಮಿಯನ್ನು ದತ್ತಿಯಾಗಿ ಕೊಟ್ಟಿದ್ದರೆ ಅವನ್ನು ಉಳುಮೆಗೆ ಕೊಡುವುದು, ಅದರಿಂದ ಬರುವ ಆದಾಯವನ್ನು ನಿರ್ದಿಷ್ಟ ಧಾರ್ಮಿಕಕಾರ್ಯಕ್ಕಾಗಿ ಬಳಸುವುದು ಮಹಾಜನರ ಕರ್ತವ್ಯವಾಗಿದ್ದುವು"[2]

---

[1] ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ—ಡಾ. ಎಂ. ಚಿದಾನಂದಮೂರ್ತಿ

[2] ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ—ಡಾ ಎಂ. ಚಿದಾನಂದಮೂರ್ತಿ

ಅಗ್ರಹಾರಗಳಲ್ಲಿ ಬ್ರಾಹ್ಮಣರಲ್ಲದೆ ಇತರರೂ ಇರುತ್ತಿದ್ದರು. ಅವರೊಂದಿಗೆ ಬ್ರಾಹ್ಮಣರು ಉದಾರವಾಗಿ ವರ್ತಿಸುತ್ತಿದ್ದರು.

ದೇವಸ್ಥಾನ (ಮಠ) : ದೇವಸ್ಥಾನದ ಆಡಳಿತವು 'ಸ್ಥಾನಪತಿ' ಯ ನಿರ್ದೇಶನದಲ್ಲಿ ಜರಗುತ್ತಿತ್ತು. ದೇವಸ್ಥಾನದಲ್ಲಿ ವಾಸಿಸುತ್ತಿದ್ದ ಯತಿಗಳಲ್ಲಿ ಹಿರಿಯನಾದವನು ಸ್ಥಾನಪತಿಯಾಗುತ್ತಿದ್ದ. ಈ ಯತಿಗಳು ಕೇವಲ ಯತಿಗಳಷ್ಟೇ ಆಗಿರದೆ ಮಹಾ ವಿದ್ವಾಂಸರೂ ಆಗಿರುತ್ತಿದ್ದುದರಿಂದ ತಮ್ಮ ಮೋಕ್ಷಸಾಧನವಾದ ತಪಸ್ಸಿನ ಜೊತೆಗೆ ವಿದ್ಯಾದಾನವನ್ನೂ ಕೈಗೊಂಡರು.

ಆರ್ಥಿಕ ವ್ಯವಸ್ಥೆ : ಕನ್ನಡ ಶಾಸನಗಳನ್ನು ಅವಲೋಕಿಸಿದಾಗ ಅಗ್ರಹಾರ ಬ್ರಹ್ಮಪುರಿ, ದೇವಸ್ಥಾನ ಮತ್ತು ಘಟಿಕಾಸ್ಥಾನಗಳಲ್ಲಿ ಜರುಗುತ್ತಿದ್ದ ವಿದ್ಯಾಭ್ಯಾಸ ಆರ್ಥಿಕ ಕಾರಣಗಳಿಗಾಗಿ ಕುಂಠಿತವಾದದ್ದು ಕಂಡುಬರುವುದಿಲ್ಲ. ಅಗ್ರಹಾರಗಳಿಗಂತೂ ತೆರಿಗೆಯನ್ನೂ ವಿಧಿಸುವಂತಿರಲಿಲ್ಲವೆಂಬುದನ್ನು ಗಮನಿಸಿದಾಗ ಮತ್ತು ಅಲ್ಲಿನ ಮಹಾಜನರೇ ಅಗ್ರಹಾರಗಳ ಒಡೆಯರೂ ಆಗಿದ್ದರೆಂಬುದನ್ನು ನೋಡಿದಾಗ ಅಗ್ರಹಾರಗಳ ಆರ್ಥಿಕ ಪರಿಸ್ಥಿತಿ ಸುವ್ಯವಸ್ಥಿತವಾಗಿತ್ತೆನ್ನಲು ಹಿಂದೆಗೆಯಬೇಕಾಗಿಲ್ಲ. ಬ್ರಹ್ಮಪುರಿಗಳಿಗೆ ಇಷ್ಟು ಆದಾಯವಿರದಿದ್ದರೂ ತೊಂದರೆಯಂತೂ ಇರಲಿಲ್ಲವೆನ್ನಬಹುದಾಗಿದೆ. ಅಂತೆಯೇ ದೇವಸ್ಥಾನ ಮತ್ತು ಘಟಿಕಾಸ್ಥಾನಗಳಿಗೂ ಅಲ್ಲಿನ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ದತ್ತಿಗಳನ್ನು ಬಿಟ್ಟುಕೊಡುತ್ತಿದ್ದರೆಂಬುದನ್ನು ಶಾಸನಗಳಲ್ಲಿ ಗಮನಿಸಿದಾಗ ಅಲ್ಲಿನ ವಿದ್ಯಾಭ್ಯಾಸವೂ ನಿರಾಬಾಧಿತವಾಗಿ ನಡೆಯುತ್ತಿತ್ತೆನ್ನಬಹುದು.

"ಪ್ರಾಚೀನ ಕಾಲದಲ್ಲಿ ರಾಜ್ಯವು ವಿದ್ಯಾಭ್ಯಾಸದ ಹೊಣೆಯನ್ನುಪ್ರತ್ಯಕ್ಷವಾಗಿ ವಹಿಸದಿದ್ದರೂ ಅಗ್ರಹಾರಗಳನ್ನುಸ್ಥಾಪಿಸುವುದರ ಮೂಲಕ ಪರೋಕ್ಷವಾಗಿ ಸಹಾಯ ಮಾಡಿದೆ ಎನ್ನಬಹುದು.ಹೊಟ್ಟೆಬಟ್ಟೆಗಳ ಚಿಂತೆಯನ್ನು ರಾಜ್ಯವು ಹೋಗಲಾಡಿಸಿದ್ದರಿಂದ ಅಗ್ರಹಾರಗಳ ಬ್ರಾಹ್ಮಣರು ತಮ್ಮ ಸಂಪೂರ್ಣ ಗಮನವನ್ನು ವಿದ್ಯಾವ್ಯಾಸಂಗದ ಕಡೆಗೆ ವಿನಿಯೋಗಿಸಲು ಸಾಧ್ಯವಾಯಿತು."[1] ಅಗ್ರಹಾರಗಳನ್ನು ಕುರಿತು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೂ ಉಳಿದ ವಿದ್ಯಾಕೇಂದ್ರಗಳಿಗೂ ಆರ್ಥಿಕವ್ಯವಸ್ಥೆ ಒಂದು ಸಮಸ್ಯೆಯಾಗಿರಲಿಲ್ಲವೆನ್ನಬಹುದು.

ಶೈಕ್ಷಣಿಕ ಮಟ್ಟ ಮತ್ತು ಅಧ್ಯಯನ ವಿಷಯಗಳು : ದೇವಸ್ಥಾನಗಳಲ್ಲಿ ಉನ್ನತ ವ್ಯಾಸಂಗ ಮಾಡುವ 'ವಿದ್ಯಾರ್ಥಿತಪೋಧನ'ರೊಂದಿಗೆ ಆಗತಾನೇ ವಿದ್ಯಾಭ್ಯಾಸವನ್ನಾರಂಭಿಸುತ್ತಿದ್ದ 'ವಿದ್ಯಾರ್ಥಿಮಣಿ'ಗಳಿರುತ್ತಿದ್ದರಾದರೂ ಒಟ್ಟಾರೆ ನೋಡಿದಾಗ ಅಗ್ರಹಾರ, ಬ್ರಹ್ಮಪುರಿ, ದೇವಸ್ಥಾನಗಳು ಉನ್ನತ ವ್ಯಾಸಂಗದ ಕೇಂದ್ರವಾಗಿದ್ದುವು.

ಈ ಲೇಖನದ ಮೊದಲಭಾಗದಲ್ಲಿ ಉದ್ಧರಿಸಿರುವ ಅನೇಕ ಅಗ್ರಹಾರಗಳಿಂದ ಕೂಡಿದ್ದ ಬಳ್ಳಿಗಾವೆಯ ವಿದ್ಯಾಕೇಂದ್ರದ ವರ್ಣನೆ ಮತ್ತು ಕೋಡಿಯ ಮಠದ ವರ್ಣನೆಯನ್ನು ಗಮನಿಸಿದರೆ ಆ ಕಾಲದ ಅಧ್ಯಯನ ವಿಷಯಗಳ ಮತ್ತು ಶೈಕ್ಷಣಿಕ ಮಟ್ಟದ ಪರಿಚಯವಾಗುತ್ತದೆ.

ಅಗ್ರಹಾರಗಳ ಮಹಾಜನರು ಘನ ವಿದ್ವಾಂಸರಾಗಿರುತ್ತಿದ್ದು ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹಗಳೆಂಬ ಷಟ್ಕರ್ಮಗಳಲ್ಲಿ ನಿರತರಾಗಿರುತ್ತಿದ್ದರು. ಮಂತ್ರವಾದಿ ಲಖ್ಖಣ್ಣ, ಸೋಮೇಶ್ವರ ವೈದ್ಯ, ನರಸಿಂಹ ಭಟ್ಟೋಪಾಧ್ಯಾಯ, ಸಾಮವೇದಿ ಮಲ್ಲಿಭಟ್ಟ, ಕವಿತಿಲಕ ವಿಶ್ವೈಯ, ಸರ್ವಶಾಸ್ತ್ರದ ಆದಿತ್ಯಭಟ್ಟ, ಚಂಗದೇವ ಕ್ರಮಿತ, ಶ್ರೀಕರಣಸಾಯಿದೇವ, ಭಾಸ್ಕರಘಳಿಸ, ಭಾಗವತ ಶ್ರೀರಂಗ ಭಟ್ಟ—ಅಗ್ರಹಾರಗಳಲ್ಲಿ ವಾಸಿಸುತ್ತಿದ್ದ ಮಹಾಜನರ ಈ ಹೆಸರುಗಳನ್ನೋದಿದಾಗ ಅವರ ವಿದ್ವತ್ತಿನ ಪರಿಚಯ

[1] ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ—ಡಾ. ಎಂ. ಚಿದಾನಂದ ಮೂರ್ತಿ

ವಾಗದಿರದು. ಶಸ್ತ್ರಾಸ್ತ್ರಗಳನ್ನು ಪ್ರಯೋಗಿಸುವುದರಲ್ಲೂ ಇವರಲ್ಲಿ ಕೆಲವರು ನಿಷ್ಣಾತರಾಗಿದ್ದರೆಂಬುದು ಗಮನಾರ್ಹ ಸಂಗತಿ. ದೇವಸ್ಥಾನಗಳ ಸ್ಥಾನಪತಿಗಳೂ ಇತರ ಯತಿಗಳೂ ನೈಷ್ಠಿಕ ಬ್ರಹ್ಮಚಾರಿಗಳೂ ಘನ ವಿದ್ವಾಂಸರೂ ಆಗಿದ್ದರೆಂಬುದನ್ನು ಹಿಂದೆಯೇ ಪ್ರಸ್ತಾಪಿಸಲಾಗಿದೆ.

ಅಂದಿನ ವಿದ್ವತ್ತಿಗಿದ್ದ ಮಹತ್ವವನ್ನು ನಿರೂಪಿಸುವ ಕೆಳಗಿನ ನಿದರ್ಶನವನ್ನು ಗಮನಿಸಿ : ರುದ್ರಭಟ್ಟನೆಂಬ ಘನವಿದ್ವಾಂಸನಿಗೆ ಒಮ್ಮೆ ಹಣದ ಕೊರತೆ ಬಿದ್ದಾಗ ಸಾಲಪಡೆಯಲು ಒತ್ತೆಯಿಡಲು ಏನೂ ಇಲ್ಲದೆ ತನ್ನ ಹೆಸರಿನಲ್ಲಿದ್ದ ವಿದ್ವತ್‌ಸೂಚಕ 'ಭಟ್ಟ' ಪದದ ಒಂದಕ್ಷರ 'ಭ'ವನ್ನು ಒತ್ತೆಯಿಟ್ಟು ಸಾವಿರ ಹೊನ್ನನ್ನು ಸಾಲವಾಗಿ ಪಡೆದನಂತೆ ! ಸಾಲತೀರುವ ತನಕ ಜನ ಅವನನ್ನು ರುದ್ರಭಟ್ಟನೆನ್ನುವುದರ ಬದಲು 'ರುದ್ರಟ' ಎಂದಷ್ಟೇ ಕರೆಯುತ್ತಿದ್ದರೆಂದು ಶಾಸನವೊಂದು ತಿಳಿಸುತ್ತದೆ.

ಪ್ರೌಢ ವಿದ್ಯಾರ್ಥಿಗಳ ವ್ಯಾಸಂಗಕ್ಕಾಗಿ ದತ್ತಿ ಬಿಡುವ ಪದ್ಧತಿಯಿತ್ತು. ಕೆಲವು ಕಡೆ ವಿದ್ಯಾರ್ಥಿಗಳು ಸತ್ರಗಳಲ್ಲಿದ್ದುಕೊಂಡು ವಿದ್ಯಾಭ್ಯಾಸಮಾಡುತ್ತಿದ್ದರು. ಸತ್ರಗಳಿಲ್ಲದ ಕಡೆ ಭಿಕ್ಷೆಬೇಡಿ ವ್ಯಾಸಂಗ ಮಾಡುತ್ತಿದ್ದರು.

ಅಂದಿನ ಕಾಲಧರ್ಮಕ್ಕನುಗುಣವಾಗಿ ವೈದಿಕವಿದ್ಯೆಯೇ ಪ್ರಧಾನ ಅಧ್ಯಯನ ವಿಷಯವಾಗಿದ್ದು ಇತರ ವೃತ್ತಿಸಂಬಂಧವಾದ ವಿದ್ಯೆಗಳನ್ನು (ಕುಲಕಸುಬುಗಳು—ಇವುಗಳನ್ನೇ ತಾಂತ್ರಿಕವಿದ್ಯೆಗಳೆನ್ನಬಹುದು) ಮಕ್ಕಳು ತಮ್ಮ ಹಿರಿಯರಿಂದ ಕಲಿಯುತ್ತಿದ್ದರು.

ಕರ್ನಾಟಕದ ಪ್ರಾಚೀನ ವಿದ್ಯಾಕೇಂದ್ರಗಳ ಸಮೀಕ್ಷೆಯಿಂದ ಕೆಳಕಂಡ ಅಂಶಗಳು ವ್ಯಕ್ತವಾಗುತ್ತವೆ :

1) ವಿದ್ಯಾಕೇಂದ್ರಗಳ ಆಡಳಿತದಲ್ಲಿ ಸರ್ಕಾರವಾಗಲೀ ಅಥವಾ ಇನ್ನಾವ ಸಂಸ್ಥೆಗಳಾಗಲೀ ಪ್ರವೇಶಿಸಿ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಈ ಇಪ್ಪತ್ತನೆಯ ಶತಮಾನದ ಕನಸಾದ ಶಿಕ್ಷಣಸಂಸ್ಥೆಗಳಿರಬೇಕಾದ ಸ್ವಾಯತ್ತತೆಯನ್ನು ಎಂಟು ಹತ್ತು ಶತಮಾನಗಳ ಹಿಂದೆಯೇ ಕರ್ನಾಟಕದ ವಿದ್ಯಾಕೇಂದ್ರಗಳು ಹೊಂದಿದ್ದುವು.

2) ಆರ್ಥಿಕ ಕಾರಣಗಳಿಗಾಗಿ ವಿದ್ಯಾಪ್ರಸಾರಕ್ಕೆ ಎಂದೂ ಭಂಗವುಂಟಾಗಿರಲಿಲ್ಲ. ವಿದ್ವಾಂಸರು ತಮ್ಮ ಹೊಟ್ಟೆಪಾಡಿಗಾಗಿ ಇನ್ನೊಬ್ಬರ ಮುಂದೆ ಕೈಕಟ್ಟಿ ನಿಲ್ಲಬೇಕಾದ ಪರಿಸ್ಥಿತಿಯಿರದೆ, ಸಂತೃಪ್ತರಾಗಿ ನಿಶ್ಚಿಂತೆಯಿಂದ ವಿದ್ಯಾದಾನದಲ್ಲಿ ತೊಡಗಲವಕಾಶವಾಗುವಂತೆ ಮತ್ತು ವಿದ್ಯಾರ್ಥಿಗಳಿಗೂ ಅನುಕೂಲವಾಗುವಂತೆ ಸರ್ಕಾರ ಮತ್ತು ಸಮಾಜ ಹೊಣೆ ಹೊತ್ತಿದ್ದುವು.

3) ಘನವಿದ್ವಾಂಸರಾದ 'ಮಹಾಜನ'ರೂ, ನೈಷ್ಠಿಕಬ್ರಹ್ಮಚಾರಿಗಳಾದ ಸ್ಥಾನಪತಿಗಳೂ ವಿದ್ಯಾದಾನವನ್ನು ಕೈಗೊಂಡದ್ದರಿಂದ ವಿದ್ಯಾಭ್ಯಾಸದ ಮಟ್ಟ ಉನ್ನತವಾಗಿತ್ತು.

4) ವೈದಿಕವಿದ್ಯೆಯೇ ಪ್ರಧಾನವಾಗಿದ್ದು ಬ್ರಾಹ್ಮಣರಿಗೆ ಮಾತ್ರ ಇದು ಮೀಸಲಾಗಿತ್ತೆನ್ನಬಹುದು.

ಕರ್ನಾಟಕದ ಪ್ರಾಚೀನ ವಿದ್ಯಾಕೇಂದ್ರಗಳ ಆಡಳಿತಕ್ರಮ, ಆರ್ಥಿಕವ್ಯವಸ್ಥೆ, ಶಿಕ್ಷಣವಿಧಾನ ಮತ್ತು ಮಟ್ಟಗಳನ್ನು ಬದಲಾದ ಇಂದಿನ ಪರಿಸ್ಥಿತಿಯೊಂದಿಗೆ ತೌಲನಿಕವಾಗಿ ವಿವೇಚಿಸಬೇಕಾಗಿದೆ.

ಇಂದಿನ ಉನ್ನತ ವಿದ್ಯಾಕೇಂದ್ರಗಳಾದ ಖಾಸಗಿಕಾಲೇಜುಗಳ ಆಡಳಿತಕ್ರಮವನ್ನು ಪ್ರಾಚೀನ ವಿದ್ಯಾಕೇಂದ್ರಗಳ ಆಡಳಿತದೊಂದಿಗೆ ಹೋಲಿಸಿ ನೋಡಿದಾಗ, ಶೈಕ್ಷಣಿಕವಾಗಿ ಇಂದಿನ ಖಾಸಗಿಕಾಲೇಜುಗಳ ಮೇಲೆ ವಿಶ್ವವಿದ್ಯಾನಿಲಯಗಳ ಹತೋಟಿ ಇರುವುದಾದರೂ ಕಾಲೇಜಿನ ಆಂತರಿಕ ಆಡಳಿತದಲ್ಲಿ ಖಾಸಗಿಕಾಲೇಜುಗಳು ಅನಭಿಷಿಕ್ತ ಸಾರ್ವಭೌಮತ್ವವನ್ನು ಹೊಂದಿವೆ. ಭಾರತದ ಸಂವಿಧಾನವು, ಧಾರ್ಮಿಕವಾಗಿ ಮತ್ತು ಭಾಷಾ ದೃಷ್ಟಿಯಿಂದ ಅಲ್ಪಸಂಖ್ಯಾತರಾದವರು (Religious and linguistic minorities) ತಮ್ಮ ಶಿಕ್ಷಣಸಂಸ್ಥೆ

ಗಳನ್ನು ಹೊಂದಿರುವ ಹಕ್ಕನ್ನು ನೀಡಿರುವುದೂ, ಈ ಹಕ್ಕಿಗೆ ಚ್ಯುತಿಯೊದಗುವುದಾದಲ್ಲಿ, ಉನ್ನತಶಿಕ್ಷಣವನ್ನು ತನ್ನ ವ್ಯಾಪ್ತಿಯಲ್ಲಿಟ್ಟುಕೊಂಡಿರುವ ರಾಜ್ಯಸರ್ಕಾರಗಳು ಹೊರಡಿಸುವ ಶಾಸನಗಳು ಅನೂರ್ಜಿತವಾಗುವುದೂ, ಅಲ್ಪಸಂಖ್ಯಾತರ ಶಿಕ್ಷಣಸಂಸ್ಥೆಗಳಿಗೆ ಅನ್ವಯಿಸಲಾಗದ ಶಾಸನವನ್ನು ಬಹುಸಂಖ್ಯಾತರ ಶಿಕ್ಷಣಸಂಸ್ಥೆಗಳಿಗೂ ಅನ್ವಯಿಸಲಾಗದೆಂಬ ಇತ್ತೀಚಿನ ಸರ್ವೋಚ್ಚನ್ಯಾಯಾಲಯದ ತೀರ್ಪು ಪ್ರಕಟವಾಗಿರುವುದೂ ಖಾಸಗಿ ಕಾಲೇಜುಗಳು ಹೊಂದಿರುವ ಪರಮಾಧಿಕಾರವನ್ನು ಸೂಚಿಸುತ್ತವೆ. ವಿಪರ್ಯಾಸವೆಂದರೆ ಇಂತಹ ಅಧಿಕಾರವನ್ನು ಶೈಕ್ಷಣಿಕ ಕ್ಷೇತ್ರದ ಪ್ರಗತಿಗಾಗಿ ವಿನಿಯೋಗಿಸುವುದರ ಬದಲು ಬಹುತೇಕ ಖಾಸಗಿಕಾಲೇಜುಗಳು ತಮ್ಮ ನೌಕರರನ್ನು ಮತ್ತು ವಿದ್ಯಾರ್ಥಿಗಳನ್ನು ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಶೋಷಿಸಲು ಬಳಸಿಕೊಳ್ಳುತ್ತಿರುವುದಾಗಿದೆ.

ದೇಶದ ಬದಲಾದ ಆಡಳಿತ ವ್ಯವಸ್ಥೆಯಲ್ಲಿ ಅಗ್ರಹಾರಗಳಿಗಿದ್ದಂತಹ ಸಾರ್ವಭೌಮತ್ವಆಧಿಕಾರ ಇಂದಿನ ಖಾಸಗಿಕಾಲೇಜುಗಳಿಗೆ (ಅಥವಾ ಕಾಲೇಜುಗಳ ಆಡಳಿತ ಮಂಡಳಿಗಳಿಗೆ) ಲಭ್ಯವಾಗುವುದು ಸಾಧ್ಯವಿಲ್ಲವಾದರೂ, ಪ್ರಾಚೀನ ವಿದ್ಯಾಕೇಂದ್ರಗಳಿಗಿದ್ದ ಶೈಕ್ಷಣಿಕ ಸ್ವಾಯತ್ತತೆಯು ಅನುಕರಿಸಲರ್ಹವಾಗಿದೆ. ಆದರೆ ಪ್ರಾಚೀನ ವಿದ್ಯಾಕೇಂದ್ರಗಳ ಆಡಳಿತವೇನಿದ್ದರೂ ವಿದ್ಯಾಭ್ಯಾಸಕ್ಕಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟ ಮಹಾಜನಗಳ ಮತ್ತು ಸ್ಥಾನಪತಿಗಳ ಕಯ್ಯಲಿತ್ತೆಂಬುದನ್ನು ಗಮನಿಸಿದಾಗ ಇಂದಿನ ಖಾಸಗಿ ಕಾಲೇಜುಗಳನ್ನು ನಡೆಸುವ ಎಷ್ಟು ಆಡಳಿತಮಂಡಳಿಗಳಿಗೆ (Managements) ಈ ಅರ್ಹತೆಯಿದೆಯೆಂಬುದು ವಿಚಾರಾರ್ಹವಾಗುತ್ತದೆ. ಬಹುಮಟ್ಟಿಗೆ ತಮ್ಮ ರಾಜಕೀಯ ಭವಿಷ್ಯವನ್ನು ಉಜ್ವಲಗೊಳಿಸಿಕೊಳ್ಳಲು ಕೆಲವರು, ಸಾಮಾಜಿಕ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳಲು ಕೆಲವರು, ಮತೀಯ ಪ್ರಾಬಲ್ಯವನ್ನು ಬಲಪಡಿಸಿಕೊಳ್ಳಲು ಕೆಲವರು, ಶಿಕ್ಷಣದ ಬಗೆಗೆ ಎಷ್ಟೋಸಲ ಯಾವ ನಿರ್ದಿಷ್ಟಕಲ್ಪನೆಯೂ ಸ್ವರೂಪವೂ ತಮಗಿರದಿದ್ದರೂ,ತಮ್ಮ ಆಸಕ್ತಿ ಅಭಿರುಚಿಗಳಿಗೂ ಶಿಕ್ಷಣಕ್ಕೂ ಯಾವ ಸಂಬಂಧವಿಲ್ಲವೆಂಬುದರ ಅರಿವಿದ್ದರೂ ಕಾಲೇಜುಗಳ 'ಒಡೆಯ'ರಾಗುವ 'ಮಹತ್ವಾಕಾಂಕ್ಷೆ' ಯಿಂದ ಕಾಲೇಜುಗಳನ್ನಾರಂಭಿಸಿ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡಲು ಅಸಮರ್ಥರಾಗುವವರ, ಬೋಧನೆಗೆ ಆಗತ್ಯವಾದ ಮಾನಸಿಕ ಶಾಂತಿಯನ್ನು ಅಧ್ಯಾಪಕರಿಗೆ ನೀಡಲು (ಅಧ್ಯಾಪಕರ ಅಶನ-ವಸನಗಳನ್ನು ಪೂರೈಸುವುದರ ಮೂಲಕ) ವಿಫಲರಾಗುವವರು, ಒಟ್ಟಿನಲ್ಲಿ ಶಿಕ್ಷಣ ಬಡವಾಗಲು ಕಾರಣವಾಗುವಂತಹವರ ಕೈಯಲ್ಲಿಯೇ ಹೆಚ್ಚಾಗಿ ಖಾಸಗಿಕಾಲೇಜುಗಳಿರುವಾಗ ಎಷ್ಟರಮಟ್ಟಿಗೆ ಈ ಆಡಳಿತಮಂಡಳಿಗಳಿಗೆ ಸ್ವಯಮಾಧಿಕಾರವಿರಬೇಕೆಂಬುದು ವಿಚಾರಾರ್ಹವಾಗುತ್ತದೆ.

ಪ್ರಾಚೀನ ವಿದ್ಯಾಕೇಂದ್ರಗಳ ಆಡಳಿತದಲ್ಲಿ ಬೋಧಿಸುವವರ ಹೊರತು ಸರ್ಕಾರವಾಗಲೀ, ಇನ್ನಾವುದೇ ಸಂಸ್ಥೆಯಾಗಲೀ ಮಧ್ಯೆ ಪ್ರವೇಶಿಸುತ್ತಿರಲಿಲ್ಲವೆಂಬುದನ್ನು ಗಮನಿಸಿದಾಗ ಇಂದು ಖಾಸಗಿಕಾಲೇಜುಗಳಿಗೂ ಸರ್ಕಾರಕ್ಕೂ ಮಧ್ಯೆ ಈ "ಆಡಳಿತ ಮಂಡಳಿ" ಇರಬೇಕಾದುದು ಅನಿವಾರ್ಯವೇ ? ಅಪರಿಹಾರ್ಯವೇ ? ಎಂಬುದೂ ಪರಿಶೀಲನಾರ್ಹವಾದ ಪ್ರಶ್ನೆ. ಬೋಧಿಸುವ ಅಧ್ಯಾಪಕರಿಗೇ ಏಕೆ ಕಾಲೇಜಿನ ಆಡಳಿತವನ್ನು ವಹಿಸಬಾರದೆಂಬುದು ನನ್ನ ಪ್ರಶ್ನೆ. ಇಲ್ಲಿ ಖಾಸಗಿಕಾಲೇಜುಗಳ ಆಡಳಿತಮಂಡಳಿಗಳು ಎತ್ತಬಹುದಾದ ಒಂದು ಪ್ರಬಲ ಆಕ್ಷೇಪವನ್ನು ನಿರ್ವಿಕಾರಚಿತ್ತದಿಂದ ಪರಿಶೀಲಿಸಲೇಬೇಕು. ಕಾಲೇಜುಗಳನ್ನಾರಂಭಿಸಲು ಅಗತ್ಯವಾದ ಮೂಲಧನವನ್ನು, ಆರಂಭದ ವರ್ಷಗಳಲ್ಲಿ ಸಹಾಯಧನ ಬಾರದಿದ್ದಾಗ ಅಗತ್ಯವಾದ ಧನವನ್ನು, ಅನಂತರ ಸಹಾಯಧನದಲ್ಲಿ ಖೋತಾಬೀಳುವ ಶೇಕಡ ಹದಿನೈದರಷ್ಟು ಧನವನ್ನು ಆಡಳಿತಮಂಡಳಿಗಳು ತುಂಬಿಕೊಂಡು ಕಾಲೇಜುಗಳನ್ನು ನಡೆಸುತ್ತಿಲ್ಲವೇ ? ಈ ಜವಾಬ್ದಾರಿಯನ್ನು ಅಧ್ಯಾಪಕರು ಹೊರಲು ಸಮರ್ಥರೇ ? ಸಮರ್ಥರಾದಲ್ಲಿ ಕಾಲೇಜುಗಳನ್ನು ಅಧ್ಯಾಪಕರಿಗೆ ವಹಿಸಿಕೊಡಲು ಸಿದ್ಧವಾಗಿ ಕೆಲವು ಆಡಳಿತ ಮಂಡಳಿಗಳು ಮುಂದೆ ಬರಬಹುದು.

ಈ ಆಡಳಿತಮಂಡಳಿಗಳೆತ್ತುವ ಪ್ರಶ್ನೆಗಳು ಅರ್ಥಪೂರ್ಣವೆಂಬುದೂ, ಅವುಗಳು ಸಲ್ಲಿಸುತ್ತಿರುವ ಸೇವೆ ಗಮನಾರ್ಹವೆಂಬುದೂ ಒಪ್ಪತಕ್ಕದ್ದಾಗಿದೆ. ಆದರೆ ಇಡೀ ವ್ಯವಸ್ಥೆಯಲ್ಲಿನ ಒಂದು ಪ್ರಮುಖ ದೋಷವನ್ನು

ಗುರುತಿಸಲು ಮತ್ತು ಗುರುತಿಸಿದರೂ ಅದಕ್ಕೆ ಸೂಕ್ತಪರಿಹಾರ ಕಂಡುಹಿಡಿಯಲು ಆಡಳಿತವರ್ಗಗಳು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿಲ್ಲವೆಂಬುದು ಅಪ್ರಿಯವಾದರೂ ಸತ್ಯಸಂಗತಿ. ಇಲ್ಲವಾದಲ್ಲಿ ಸರ್ಕಾರವೇ ನೇರವಾಗಿ ಚೆಕ್ ಮೂಲಕ ವೇತನ ಪಾವತಿ ಮಾಡಲಿ ಎಂಬ ಸಲಹೆಗೆ ಆಡಳಿತವರ್ಗದ ಕಡೆಯಿಂದ ವಿರೋಧ ಬರುತ್ತಿರಲಿಲ್ಲ !

ಇಂದು ಖಾಸಗಿಕಾಲೇಜುಗಳಲ್ಲಿ ಕಂಡುಬರುತ್ತಿರುವ ಅಕ್ರಮಗಳು ನಿವಾರಣೆಯಾಗಬೇಕಾದರೆ ಅವುಗಳಿಗೆ ಪ್ರಾಚೀನ ವಿದ್ಯಾಕೇಂದ್ರಗಳಿಗೆ ಲಭ್ಯವಾಗಿದ್ದಂತಹ ಆರ್ಥಿಕಭದ್ರತೆಯೊದಗಲೇಬೇಕು. ಖಾಸಗಿಕಾಲೇಜುಗಳಿಗೇನಿದ್ದರೂ ಇಂತಿಷ್ಟು ಸಹಾಯಧನ ನೀಡುವುದಷ್ಟೇ ತನ್ನ ಜವಾಬ್ದಾರಿ, ಉಳಿದುದೇನಿದ್ದರೂ ಆಯಾಯ ಕಾಲೇಜುಗಳ ಆಡಳಿತ ಮಂಡಳಿಗಳಿಗೇ ಸೇರಿದ್ದು ; ಪೂರ್ಣ ಸಹಾಯವನ್ನು ಸರ್ಕಾರವೇ ನೀಡುವುದಾದಲ್ಲಿ 'ಖಾಸಗಿ' ಎಂಬ ಮಾತಿನ ಅರ್ಥವಾದರೂ ಏನು ? ಎಂಬ ಧೋರಣೆ ಬದಲಾಗಬೇಕು. ಅಧ್ಯಾಪಕರು ಮತ್ತಿತರ ನೌಕರರಿಗೆ ನಾವು ಕೆಲಸ ಕೊಡದಿದ್ದರೆ ಅವರ ಕುಟುಂಬಗಳ ಗತಿ ಏನಾಗುತ್ತಿತ್ತೆಂಬ ಔದಾರ್ಯದ ಉರುಳಲ್ಲಿ ನೇಣಿಕ್ಕುವ ಆಡಳಿತವರ್ಗಗಳ ಧಾರ್ಷ್ಟ್ಯ ದೂರವಾಗಬೇಕು.

ಕಾಲೇಜುಗಳನ್ನು ಖಾಸಗಿಆಡಳಿತವರ್ಗಗಳು ನಡೆಸಬೇಕೇ ಅಥವಾ ಅಧ್ಯಾಪಕರೇ ನಡೆಸಬೇಕೇ ಎಂಬುದು ಅಷ್ಟು ಮುಖ್ಯ ಪ್ರಶ್ನೆಯಲ್ಲ. ಈ ಕಾಲೇಜುಗಳಲ್ಲಿ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಬಯಸಿ ಅಧ್ಯಯನ ಮಾಡುತ್ತಿರುವ ಸಹಸ್ರಾರು ವಿದ್ಯಾರ್ಥಿಗಳ ಭವಿಷ್ಯವನ್ನು ಕಾರಣ ಏನೇ ಇರಲಿ—ಮಂಕುಗೊಳಿಸುವ ಹಕ್ಕು ಹೊಣೆಯರಿತ ಯಾವ ವ್ಯಕ್ತಿಗೂ ಇಲ್ಲವೆಂಬುದನ್ನು ಸಂಬಂಧಪಟ್ಟವರೆಲ್ಲರೂ ಮನನಮಾಡಿಕೊಳ್ಳಬೇಕಾಗಿದೆ. ಈ ಉದ್ದೇಶ ಕುಂಠಿತವಾಗದಿರಬೇಕಾದರೆ ಪ್ರಾಚೀನ ವಿದ್ಯಾಕೇಂದ್ರಗಳಿಗಿದ್ದಂತಹ ಆರ್ಥಿಕಭದ್ರತೆಯನ್ನೊದಗಿಸಿ ಅಧ್ಯಾಪಕರಿಗೇ ಕಾಲೇಜುಗಳನ್ನು ವಹಿಸಿಕೊಟ್ಟರೆ ಮತ್ತೊಮ್ಮೆ ಗತಕಾಲದ ಶೈಕ್ಷಣಿಕ ಔನ್ನತ್ಯವನ್ನು ಸಾಧಿಸಲು ಸಾಧ್ಯವಾದೀತು !

'ಇಂಗು ತೆಂಗು ಇದ್ದರೆ ಮಂಗವೂ ಅಡಿಗೆ ಮಾಡುತ್ತದೆ' ಎಂಬ ಗಾದೆಯನ್ನು ಯಾರಾದರೂ ಉಲ್ಲೇಖಿಸಿ ಎಲ್ಲ ಅನುಕೂಲತೆಗಳನ್ನು ಒದಗಿಸಿಕೊಟ್ಟರೆ ಅಧ್ಯಾಪಕರೇ ಕಾಲೇಜುಗಳನ್ನುನಡೆಸುವ ಅಗತ್ಯವೇನು ಎಂದು ಪ್ರಶ್ನಿಸಬಹುದು. ಆಡಳಿತಕ್ಕೂ ಮತ್ತು ಸಂಬಂಧಪಟ್ಟ ಕ್ಷೇತ್ರದಲ್ಲಿ ದುಡಿಯುವ ವ್ಯಕ್ತಿಗೂ ಮಧುರ ಬಾಂಧವ್ಯವಿಲ್ಲದಿರುವುದರಿಂದಲೇ ಇಂದು ವಿವಿಧಕ್ಷೇತ್ರಗಳಲ್ಲಿ ಅತೃಪ್ತಿ ತಲೆದೋರುತ್ತಿರುವುದನ್ನು ಗಮನಿಸಿದಾಗ ನನ್ನ ಸಲಹೆಯ ಮಹತ್ವ ಅರ್ಥವಾದೀತು. ಕಾಲೇಜುಗಳು, ಅಧ್ಯಾಪಕರನ್ನು ಕೇವಲ ಸಂಬಳಕ್ಕಾಗಿ ದುಡಿಯುವವರು, ಕಾಲೇಜಿನ ನೀತಿನಿರೂಪಣೆಯಲ್ಲಿ, ಆಡಳಿತದಲ್ಲಿ ಅವರಿಗೆ ಯಾವ ಪಾಲೂ ಇಲ್ಲವೆಂಬಂತೆ ನಡೆಸಿಕೊಂಡಲ್ಲಿ ಅಧ್ಯಾಪಕರು ಕೇವಲ ಕೂಲಿಗಾಗಿ ಕೆಲಸಮಾಡುವಂತಹವರಾಗಿ ಹೊರವಲಯದಲ್ಲಿಯೇ ನಿಲ್ಲಬೇಕಾಗುತ್ತದೆ. ಈ ಪರಿಸ್ಥಿತಿಯು ನಿವಾರಣೆಯಾಗಿ ಪ್ರಾಚೀನ ಉನ್ನತ ವಿದ್ಯಾಕೇಂದ್ರಗಳಿಗೂ ಅಲ್ಲಿನ ವಿದ್ವಾಂಸರಿಗೂ ಇದ್ದಂತಹ ಅವಿನಾಸಂಬಂಧ ಏರ್ಪಟ್ಟಲ್ಲಿ ಮಾತ್ರ ಇಂದಿನ ಖಾಸಗಿಕಾಲೇಜುಗಳ ಹಿರಿಮೆಯೂ ಹೆಚ್ಚಬಹುದಾಗಿದೆ.

ಆದರೆ ಚೆಕ್ ಮೂಲಕ ವೇತನ ಪಾವತಿಯಾಗುವುದಾದಲ್ಲಿ ಅಧ್ಯಾಪಕರ ಮೇಲಿನ ತಮ್ಮ ಹಿಡಿತ ಸಡಿಲವಾಗುತ್ತದೆ; ತಮ್ಮ ಒಡೆತನಕ್ಕೆ ಅಡ್ಡಿಯುಂಟಾಗುತ್ತದೆ ; ಕಡಮೆ ವೇತನ ಕೊಟ್ಟು ಹೆಚ್ಚು ಮೊತ್ತಕ್ಕೆ ಸಹಿ ಹಾಕಿಸಿಕೊಳ್ಳಲು ಸಾಧ್ಯವಾಗಲಾರದು—ಇತ್ಯಾದಿಯಾಗಿ ಈ ಧಾಟಿಯಲ್ಲಿಯೇ ಚಿಂತಿಸುವ ಆಡಳಿತ ವರ್ಗಗಳೇ ಅಧಿಕವಾಗಿರುವಾಗ ಪ್ರಾಚೀನ ವಿದ್ಯಾಕೇಂದ್ರಗಳನ್ನು ಮತ್ತೆ ಕಾಣುವ ಕನಸು ಕನಸಾಗಿಯೇ ಉಳಿಯಬಹುದೆನ್ನಿಸುತ್ತದೆ.

ಇಲ್ಲಿ ಇನ್ನೂ ಒಂದು ಆಕ್ಷೇಪವನ್ನು ಯಾರಾದರೂ ಎತ್ತಬಹುದು. ಪ್ರಾಚೀನ ವಿದ್ಯಾಕೇಂದ್ರಗಳಲ್ಲಿದ್ದಂತಹ ಘನವಿದ್ವಾಂಸರಾದ, ನೈತಿಕ ನೆಲೆಗಟ್ಟನ್ನುಳ್ಳ ಹಾಗೂ ಶಿಕ್ಷಣಕ್ಕಾಗಿ ತಮ್ಮನ್ನು ತಾವು ಅರ್ಪಿಸಿ

ಕೊಳ್ಳುವ ಸೇವಾಮನೋಭಾವದ ಅಧ್ಯಾಪಕರು ಇಂದು ದೊರಕುತ್ತಾರೆಯೇ ಎಂದು ಕೇಳಬಹುದು. ಅಂದಿನ ಮಟ್ಟಕ್ಕೇರುವ ಅಧ್ಯಾಪಕರು ಆ ಸಂಖ್ಯೆಯಲ್ಲಿ ಇಂದು ದೊರಕುವುದು ವಿರಳವಾದರೂ ಇಲ್ಲವೇ ಇಲ್ಲವೆನ್ನಲಾಗದು. ವಿರಳವಾಗಿ ದೊರಕುವ ಉತ್ತಮ ಅಧ್ಯಾಪಕರಿಗೆ ತಕ್ಕ ಬೆಂಬಲ ಪ್ರೋತ್ಸಾಹಗಳಿಲ್ಲವೆಂಬುದನ್ನು ನೆನಪಿನಲ್ಲಿಟ್ಟು ಕೊಳ್ಳಬೇಕು. ಅಲ್ಲದೆ, ಇಂದು ಸಾಮಾಜಿಕಪರಿಸರ ಕಲುಷಿತವಾಗಿದೆಯೆಂದೊಪ್ಪಿಕೊಳ್ಳುವುದಾದಲ್ಲಿ–ಅಂತಹ ಪರಿಸರದಲ್ಲಿ, ಅದೇ ಸಮಾಜದ ಒಂದು ಭಾಗವಾಗಿರುವ ಅಧ್ಯಾಪಕನಿಂದ ಮಾತ್ರ ಆದರ್ಶವನ್ನು ನಿರೀಕ್ಷಿಸಿದರೆ ತಪ್ಪಾಗುತ್ತದೆ.

ಪ್ರಥಮ, ದ್ವಿತೀಯ ದರ್ಜೆಯ ಎಂ. ಎ., ಎಂ. ಎಸ್‌ಸಿ. ಪದವೀಧರರು ಹೇರಳವಾಗಿ ಸಿಕ್ಕುವಾಗಲೂ, ತೃತೀಯ ದರ್ಜೆಯ ಪದವೀಧರರನ್ನು ಪ್ರಿನ್ಸಿಪಾಲರನ್ನಾಗಿ ನೇಮಿಸಿಕೊಳ್ಳುವ ಆಡಳಿತವರ್ಗಗಳಿರುವಾಗ, ಕಾಲೇಜಿನ ಯಾವ ಅನುಭವವೂ ಇಲ್ಲದ ಪ್ರೌಢಶಾಲಾ ಅಧ್ಯಾಪಕರನ್ನು ಪ್ರಿನ್ಸಿಪಾಲರನ್ನಾಗಿ ಮಾಡಲು ತಮ್ಮ ಪ್ರಭಾವಬೀರಿ, ಅಂತಹ ನೇಮಕವನ್ನು ಮಾನ್ಯಮಾಡಿಸಿಕೊಳ್ಳುವ ಆಡಳಿತವರ್ಗಗಳಿರುವಾಗ, ಉತ್ತಮ ಶ್ರೇಣಿಯ ಅಧ್ಯಾಪಕರನ್ನು ನೇಮಿಸಿಕೊಂಡರೆ ಅವರು ಪೂರ್ಣ ಸಂಬಳ ಕೇಳುತ್ತಾರಷ್ಟೇ ಅಲ್ಲದೆ ಡೊಗ್ಗು ಸಲಾಮು ಹೊಡೆಯದೆ ಸ್ವಾಭಿಮಾನದಿಂದ ತಲೆಯೆತ್ತಿ ನಡೆಯುತ್ತಾರಾದ್ದರಿಂದ ಅವರು ಬೇಡವೆಂದು, ಇಂಟರ್‌ವ್ಯೂ ಕಾರ್ಡುಗಳನ್ನು ಕಳಿಸುವಾಗಲೇ ತಮಗೆ ಬೇಕಾದ ತೃತೀಯ ದರ್ಜೆಯ ಪದವೀಧರನಿಗಿಂತ ಕಡಮೆ ಅಂಕ ಗಳಿಸಿದವರಿಗೇ ಇಂಟರ್‌ವ್ಯೂ ಕಾರ್ಡುಗಳನ್ನು ಕಳಿಸಿ, ಸೂಕ್ತ ಅಭ್ಯರ್ಥಿ ಸಿಕ್ಕದೆ ಅನಿವಾರ್ಯವಾಗಿ ತಾವು ಆಯ್ಕೆಮಾಡಿದ ತೃತೀಯದರ್ಜೆಯ ಪದವೀಧರನನ್ನೇ ಆರಿಸಬೇಕಾಯಿತೆಂದು ಹೇಳುವ ಆಡಳಿತಮಂಡಳಿಗಳಿರುವಾಗ ಉತ್ತಮ ಅಧ್ಯಾಪಕರು ಬೆಳಕಿಗೆ ಬರುವುದಾದರೂ ಹೇಗೆ ?

ಪಂಪಭಾರತವನ್ನು ರಚಿಸಿದ್ದಕ್ಕೆ ಪಂಪನು ಅರಿಕೇಸರಿಯಿಂದ ಬಚ್ಚೆಸಾಸಿರದೊಳಗಿದ್ದ ಧರ್ಮಪುರ ಎಂಬ ಅಗ್ರಹಾರವನ್ನು ಸಂಭಾವನಾ ರೂಪವಾಗಿ ಪಡೆಯುತ್ತಾನೆ.[1] ಆದರೆ ಇಂದು ? ಒಬ್ಬ ಕಾಮರ್ಸ್ ಅಧ್ಯಾಪಕ ವಿಶ್ವವಿದ್ಯಾನಿಲಯ ಪ್ರಕಟಿಸುವಂತಹ (ಪ್ರಕಟಿಸಿದೆ) ಮೂರು ಉತ್ತಮ ಗ್ರಂಥಗಳನ್ನು ರಚಿಸಿದಾಗ ಅವನ ಖಾಸಗಿಕಾಲೇಜು ಅವನಿಗೆ ಕೊಟ್ಟಸಂಭಾವನೆ ; ಒಂದು ಹಿಂಬಡ್ತಿ ! ಆ ಅಧ್ಯಾಪಕನು ಮಾಡಿದ ಘೋರ ಅಪರಾಧವೆಂದರೆ ನಿಯಮಾನುಸಾರವಾಗಿ ನ್ಯಾಯವಾಗಿ ತನಗೆ ಲಭ್ಯವಾಗಬೇಕಾಗಿದ್ದ ಬಡ್ತಿ (promotion) ಯನ್ನು ಬೇರೆಯವರಿಗೆ ಕೊಟ್ಟದ್ದನ್ನು ಪ್ರಶ್ನಿಸಿದ್ದು. ಹೀಗಾದಲ್ಲಿ ವಿದ್ವತ್ತು ವೃದ್ಧಿಯಾಗುವುದಾದರೂ ಹೇಗೆ ?

ಖಾಸಗಿಕಾಲೇಜಿನ ಅಧ್ಯಾಪಕರ ಸಂಘವೊಂದು ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳನ್ನು ಕುರಿತ ವಿಶ್ವವಿದ್ಯಾನಿಲಯ ಮಟ್ಟದ ಅಧ್ಯಾಪಕರ ಸಮ್ಮೇಳನವನ್ನು ಸಂಘಟಿಸಿದಾಗ, ಸಮ್ಮೇಳನಕ್ಕೆ ಸಂಬಂಧಿಸಿದ ಎಲ್ಲ ಕೆಲಸಕಾರ್ಯಗಳನ್ನೂ ಕೇವಲ ಪ್ರಿನ್ಸಿಪಾಲರ ಮೂಲಕ ಅಧ್ಯಾಪಕರ ಸಂಘ ಮಾಡುತ್ತಿದೆಯೆಂದೂ, ತಮ್ಮ ಮೂಲಕ ಆಗಬೇಕೆಂದೂ, ಪ್ರತಿಷ್ಠೆಯ ವಿಷಯವನ್ನಾಗಿ ಮಾಡಿಕೊಂಡ ನಾಲ್ಕಾರು ಕಾಲೇಜುಗಳನ್ನು ನಡೆಸುತ್ತಿರುವ ಆಡಳಿತವರ್ಗದ ಕಾರ್ಯದರ್ಶಿಯೊಬ್ಬರು, "ನಿಮ್ಮ ಕೆಲಸವೇನಿದ್ದರೂ ವಿಶ್ವವಿದ್ಯಾನಿಲಯ ನಿಯಮಿಸಿದ್ದನ್ನು ಪಾಠಹೇಳುವುದೇ ಹೊರತು ವಿಶ್ವವಿದ್ಯಾನಿಲಯದ ಪಠ್ಯಕ್ರಮ, ಪಠ್ಯಪುಸ್ತಕಗಳನ್ನು ಚರ್ಚಿಸುವುದಲ್ಲ" ಎಂದಾಗ ಖಾಸಗಿಕಾಲೇಜುಗಳ ಅಧ್ಯಾಪಕರ ಶೈಕ್ಷಣಿಕ ಚಟುವಟಿಕೆಗಳು ವಿಸ್ತರಿಸುವುದಾದರೂ ಹೇಗೆ ?

'ಮೈಸೂರು ವಿಶ್ವವಿದ್ಯಾನಿಲಯ ಖಾಸಗಿಕಾಲೇಜು ಅಧ್ಯಾಪಕರ ಸಂಘ'ವು 1974ನೇ ಫೆಬ್ರವರಿಯಲ್ಲಿ ಶಿವಮೊಗ್ಗದಲ್ಲಿ ಜರುಗಿಸಿದ ಅಧ್ಯಾಪಕರ ಸಮ್ಮೇಳನದ ಅಂಗವಾಗಿ ಪ್ರಕಟವಾದ ನೆನಪಿನ ಸಂಚಿಕೆಯ ಸಂಪಾದಕೀಯದ ಕೆಳಕಂಡ ಮಾತುಗಳು ಈ ಸಂದರ್ಭದಲ್ಲಿ ಉಲ್ಲೇಖನಾರ್ಹವಾಗಿವೆ :

---

[1] ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ—ಡಾ|| ಎಂ. ಚಿದಾನಂದಮೂರ್ತಿ

"ಅಧ್ಯಾಪಕರ ಸಂಘಗಳಿಂದ ಅಧ್ಯಾಪಕರಿಗೆ ಬರುವ ಕಾಗದ ಪತ್ರಗಳನ್ನು ತಪಾಸಣೆಮಾಡುವ ಅಥವಾ ಮುಚ್ಚಿ ಹಾಕುವ, ಅಧ್ಯಾಪಕರ ಸಂಘಗಳ ಸದಸ್ಯರಾಗದಂತೆ ಬೆದರಿಕೆ ಹುಟ್ಟಿಸಿ 'ನಾನು ಸದಸ್ಯನಾಗುತ್ತೇನೆ ಆದರೆ ನನ್ನ ಹೆಸರನ್ನು ದಯಪಿಟ್ಟು ಬಹಿರಂಗಗೊಳಿಸಬೇಡಿ' ಎಂಬ ದೀನವಾಣಿಯನ್ನು ಅಧ್ಯಾಪಕರ ಬಾಯಿಂದ ಹೊರಡಿಸುವ, ಅಧ್ಯಾಪಕರ ಸಂಘಗಳ ಚಟುವಟಿಕೆಗಳಲ್ಲಿ ನಿರತರಾದ ಅಪರಾಧಕ್ಕಾಗಿ ಬಡ್ತಿ ರದ್ದುಪಡಿಸುವ, ಅಧ್ಯಾಪಕರ ಸಂಘಟನೆಯನ್ನು ಮುರಿಯಲು ಅಕ್ರಮವಾಗಿ ಬಡ್ತಿ ನೀಡುವ ಧೋರಣೆಯೊಂದಿಗೆ ಇಂದು ಅಧ್ಯಾಪಕರ ಸಂಘಗಳು ಸೆಣಸಬೇಕಾಗಿದೆ.

ವಿದ್ಯಾರ್ಥಿ ನೀಡುವ ಡೊನೇಷನ್ ಮತ್ತು ಕ್ಯಾಪಿಟೇಷನ್‌ಫೀಯನ್ನು ಕುರಿತು ಒಂದೆರಡು ಮಾತು ಹೇಳಿದರೆ ಅಪ್ರಸ್ತುತವಾಗಲಾರದು. ಸಾಮಾನ್ಯವಾಗಿ ಎಲ್ಲ ಖಾಸಗಿಕಾಲೇಜುಗಳಲ್ಲೂ ಒಂದು ವರ್ಷಕ್ಕೆ ನೂರರಿಂದ ನೂರೈವತ್ತು ರೂಪಾಯಿ ಅಧಿಕಶುಲ್ಕವನ್ನು ಡೊನೇಷನ್ ರೂಪದಲ್ಲಿ ವಿದ್ಯಾರ್ಥಿಗಳಿಂದ ಸಂಗ್ರಹಿಸುವುದನ್ನು ಅಷ್ಟಾಗಿ ಪರಿಗಣಿಸದಿದ್ದರೂ ಇಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಐದುಸಾವಿರದಿಂದ ಮೂವತ್ತೈದು ಸಾವಿರದವರೆಗೆ ಕ್ಯಾಪಿಟೇಷನ್‌ಫೀಯನ್ನು ವಸೂಲು ಮಾಡುತ್ತಿರುವುದು ವಿದ್ಯಾರ್ಥಿಗಳಲ್ಲಿ ಎಂತಹ ಮನೋಭಾವವನ್ನು ಮೂಡಿಸುತ್ತಿದೆಯೆಂಬುದನ್ನು ಕುರಿತು ಯಾರೂ ಗಂಭೀರವಾಗಿ ಯೋಚಿಸಿದಂತಿಲ್ಲ.

ಹಣದ ಬಲದಿಂದ ಪ್ರವೇಶಪಡೆದ ವಿದ್ಯಾರ್ಥಿ ತರಗತಿಗಳಲ್ಲಿ ಎಷ್ಟರಮಟ್ಟಿಗೆ ನಿಜವಾದ ವಿದ್ಯಾರ್ಥಿಯಾಗಿರಬಲ್ಲ ? ಅಧ್ಯಾಪಕ ಇಂತಹ ವಿದ್ಯಾರ್ಥಿಗಳನ್ನು ಮಾತನಾಡಿಸುವಂತೆಯೇ ಇಲ್ಲ. ಒಮ್ಮೆ ಅಧ್ಯಾಪಕನೊಬ್ಬ ತರಗತಿಯಲ್ಲಿ ತಪ್ಪು ಮಾಡಿದ ಇಂತಹ ವಿದ್ಯಾರ್ಥಿಯೊಬ್ಬನನ್ನು ಗದರಿಸಿದಾಗ ಆ ವಿದ್ಯಾರ್ಥಿಯು ಮಾತನ್ನು ಆಡದೆ ತಾನು ಕೊಟ್ಟಿದ್ದ ಕ್ಯಾಪಿಟೇಷನ್‌ಫೀಗನುಗುಣವಾಗಿ ಬೆರಳುಗಳನ್ನು (ಎಷ್ಟು ಸಾವಿರ ಕೊಟ್ಟಿದ್ದನೋ ಅಷ್ಟು ಬೆರಳುಗಳನ್ನು) ತೋರಿಸಿ ಸೂಚ್ಯವಾಗಿ ನೀವೇನು ಮಾಡಲಾರಿರಿ ಎಂಬರ್ಥ ಬರುವಂತೆ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದನಂತೆ ! ಒಂದಷ್ಟು ಹಣ ಕೊಟ್ಟು ಪ್ರವೇಶಪಡೆದ ವಿದ್ಯಾರ್ಥಿಯಲ್ಲಿ ಮೂಡಿದ ಈ ಧಾರ್ಷ್ಟ್ಯ ಇನ್ನೊಂದಷ್ಟು ಹಣ ಕೊಟ್ಟು ಡಿಗ್ರಿ ಪಡೆಯಲು ಪ್ರಯತ್ನಿಸಲಾರದೇ ? ಈ ರೀತಿ ಡಿಗ್ರಿ ಪಡೆಯುವುದು ಸಾಧ್ಯವಿರಲಿ-ಇಲ್ಲದಿರಲಿ, ಪದವೀಧರನಾದಮೇಲೆ ತಾನು ಹೂಡಿದ ಬಂಡವಾಳವನ್ನು ಬಡ್ಡಿಸಮೇತ ಮರಳಿ ಪಡೆಯಲು ಭ್ರಷ್ಟಾಚಾರದ ಮಾರ್ಗಕ್ಕಿಳಿದರೆ ಹೊಣೆ ಹೊರುವವರು ಯಾರೆಂಬುದನ್ನು ಇಂದು ಗಂಭೀರವಾಗಿ ಯೋಚಿಸಬಹುದಾಗಿದೆ.

ಇತ್ತೀಚೆಗೆ ಇನ್ನೊಂದು ಭಯಂಕರವಾದ ಪಿಡುಗು ಹಲವಾರು ಖಾಸಗಿಕಾಲೇಜುಗಳಲ್ಲಿ ಕಂಡುಬರುತ್ತಿದೆ. ಪದವೀಧರರ ಸಂಖ್ಯೆ ವಿಪುಲವಾಗಿರುವುದರ ಮತ್ತು ಉದ್ಯೋಗಾವಕಾಶಗಳು ಕಡಮೆಯಿರುವುದರ ದುರ್ಲಾಭವನ್ನು ಖಾಸಗಿಕಾಲೇಜುಗಳ ಆಡಳಿತಮಂಡಳಿಗಳು ಚೆನ್ನಾಗಿ ಪಡೆಯಲಾರಂಭಿಸಿವೆ. ಅಧ್ಯಾಪಕರನ್ನು ನೇಮಿಸಿಕೊಳ್ಳಲು ಅಭ್ಯರ್ಥಿಗಳಿಂದ ಐದರಿಂದ ಹತ್ತುಸಾವಿರ ಒತ್ತಾಯದ ಡೊನೇಷನ್ ವಸೂಲಿ ಮಾಡಿಕೊಳ್ಳುವವರೂ ಇದ್ದಾರೆ. ಈ ವಿಷಯದಲ್ಲಿ ಸ್ವಲ್ಪ ಔದಾರ್ಯವನ್ನು ತೋರಿಸಿ ಒಟ್ಟಿಗೇ ಕೊಡಲಾಗದಿದ್ದರೆ ಹಲವಾರು ಕಂತುಗಳಲ್ಲಿ ನೀಡುವ ಅವಕಾಶ ಕೊಡುವವರೂ ಇದ್ದಾರೆ !

ಇದು ಒಂದು ರೀತಿಯಾದರೆ, ಜಾತಿಯ ಬಲದಿಂದಲೇ ಕೆಲಸಗಳಿಸಿಕೊಳ್ಳಬೇಕಾಗಿರುವುದು ಮತ್ತೊಂದು ವಿಧಾನ. ಈ ವಿಧಾನದಿಂದ ಅಧ್ಯಾಪಕನಾದವನು ತನ್ನ ಆಡಳಿತವರ್ಗದ ಪಟ್ಟಭದ್ರ ಜಾತೀಯ ಹಿತಾಸಕ್ತಿಗಳಿಗೆ ಹೊಂದಿಕೆಯಾಗುವ ತನ್ನ ಸಹೋದ್ಯೋಗಿಗಳನ್ನು ಒಡೆದು ಆಳುವ ಗುಂಪುಗಾರಿಕೆಯ ಚಟುವಟಿಕೆಗಳಲ್ಲಿ ನಿರತನಾದರೆ, ಕೆಲವೊಮ್ಮೆ ಈ ಉದ್ದೇಶಕ್ಕಾಗಿ ವಿದ್ಯಾರ್ಥಿಗಳನ್ನು ಬಳಸಿಕೊಳ್ಳುವಷ್ಟು ಕೀಳು ಮಟ್ಟಕ್ಕಿಳಿದರೆ ಆಶ್ಚರ್ಯವಿಲ್ಲವಷ್ಟೆ.

ತನ್ನ ಜೀವಮಾನವನ್ನೆಲ್ಲಾ ತತ್ತ್ವಬೋಧನೆಯಲ್ಲಿಯೇ ಕಳೆಯಬೇಕಾಗಿರುವ ಅಧ್ಯಾಪಕನನ್ನು, ಯೌವನದ ಹೊಸಿಲಲ್ಲಿ ನಿಂತು ಎಲ್ಲವನ್ನೂ ಆದರ್ಶದ ಕಣ್ಣಿಂದ ನೋಡುವ ವಿದ್ಯಾರ್ಥಿವೃಂದಕ್ಕೆ ಮಾದರಿಯಾಗಬೇಕಾಗುವ ಅಧ್ಯಾಪಕನನ್ನು ಭ್ರಷ್ಟಾಚಾರದ ಮೂಲದಿಂದಲೇ ಕೆಲಸ ಪಡೆದುಕೊಳ್ಳುವಂತಹ ಮತ್ತು ಅದನ್ನೇ ಉಸಿರಾಡುತ್ತ ಹೊಟ್ಟೆಹೊರೆದುಕೊಳ್ಳುವಂತಹ ಪರಿಸ್ಥಿತಿಗೆ ದೂಡಿದರೆ ಸಮಾಜ ಅದರಿಂದ ನಿರೀಕ್ಷಿಸುವುದಾದರೂ ಏನನ್ನು ?

ಇಡೀ ಶಿಕ್ಷಣಕ್ಷೇತ್ರದಲ್ಲಿನ ಈ ರೀತಿಯ ದೋಷಗಳನ್ನು ನಿವಾರಿಸುವುದು ಕಷ್ಟವಾದರೂ ಅಸಾಧ್ಯವೇನಲ್ಲ. ಪ್ರಾಚೀನ ವಿದ್ಯಾಕೇಂದ್ರಗಳಲ್ಲೊಂದಾಗಿದ್ದ ಮಠ (ಅಥವಾ ದೇವಸ್ಥಾನ)ದ ಪರಂಪರೆಯನ್ನೇ ಇಂದಿನ ಮಠಗಳೂ ಅನುಸರಿಸುವುದಾದರೆ ಪರಿಸ್ಥಿತಿ ಉತ್ತಮವಾದೀತು. ಪ್ರಾಚೀನ ಕಾಲದಲ್ಲಿ ಶಿಕ್ಷಣದಮಟ್ಟ ಉತ್ತಮವಾಗಿದ್ದರೂ ವೈದಿಕರಿಗಷ್ಟೇ ಮೀಸಲಾಗಿತ್ತಾದ್ದರಿಂದ ಆ ಜಾತೀಯ ಶೃಂಖಲೆಯನ್ನು ಕಿತ್ತೊಗೆದು [ಇಂದು ವಿದ್ಯಾಭ್ಯಾಸ ಎಲ್ಲರಿಗೂ ಲಭ್ಯವಾಗಿದ್ದರೂ ಜಾತೀಯ ಪ್ರಭಾವ ಬೇರೆ ರೂಪದಲ್ಲಂತೂ ಇದ್ದೇ ಇದೆ] ಧರ್ಮದ ತಳಹದಿಯ ಮೇಲೆ ಮಠಗಳು ಶಿಕ್ಷಣಕ್ಷೇತ್ರವನ್ನು ಸಂಪೂರ್ಣವಾಗಿ ತಮ್ಮ ಕೈಗೆತ್ತಿಕೊಳ್ಳಬೇಕಾಗಿದೆ.

ಧರ್ಮವೆಂದರೆ ಜಾತಿಯಲ್ಲ ; ಜಾತಿಸೂಚಕವಾದ ಜನಿವಾರ, ಶಿವದಾರ, ನಾಮ, ವಿಭೂತಿ, ಮುದ್ರೆ, ಶಿಲುಬೆಗಳಿಗೆ ಮೀರಿದ್ದು. ಧರ್ಮವೆಂಬುದನ್ನು ಮನವರಿಕೆ ಮಾಡಿಕೊಳ್ಳುವುದಷ್ಟೇ ಅಲ್ಲದೆ, ಸರ್ವಸಂಗಪರಿತ್ಯಾಗಿಗಳೂ, ಅರಿಷಡ್ವರ್ಗವನ್ನು ಗೆದ್ದವರೂ ಜಿತೇಂದ್ರಿಯರೂ ಆದ ಎಲ್ಲ ಮಠಾಧಿಪತಿಗಳೂ ಒಟ್ಟಾಗಿ ತಮ್ಮ ಮಠಗಳ ಹೆಸರುಗಳೇ ಶಿಕ್ಷಣ ಸಂಸ್ಥೆಗಳ ಮೇಲೆ ತೂಗಬೇಕೆಂಬ ಹೆಸರಿನ ವ್ಯಾಮೋಹಕ್ಕೊಳಗಾಗದಂತೆ ಶುದ್ಧ ಮಾನವ ಧರ್ಮದ ತಳಹದಿಯ ಮೇಲೆ ಶಿಕ್ಷಣಸಂಸ್ಥೆಗಳನ್ನಾರಂಭಿಸುವುದಾದಲ್ಲಿ ಕಲುಷಿತಗೊಂಡಿರುವ ಶಿಕ್ಷಣಕ್ಷೇತ್ರದಲ್ಲಿ ಆರೋಗ್ಯಕರವಾದ ಗಾಳಿ ಬೀಸಬಹುದು.

ಪಾಶ್ಚಾತ್ಯ ನಾಗರಿಕತೆಯ ಅಂಧಾನುಕರಣೆಯಿಂದ ನಮ್ಮ ಯುವಜನಾಂಗ ದಿಕ್ಕು ತಪ್ಪುತ್ತಿದೆಯೆಂದು ನೊಂದು ನುಡಿಯುವ ಮಠಾಧಿಪತಿಗಳು ಈ ಗಂಡಾಂತರದಿಂದ ಯುವಜನಾಂಗವನ್ನು ರಕ್ಷಿಸಲು ಪ್ರಾಚೀನ ಶಿಕ್ಷಣ ಪದ್ಧತಿಯ ಮಾದರಿಯಲ್ಲಿ ಗುರು–ಶಿಷ್ಯರು ಒಟ್ಟಿಗೆ ಇರುವಂತಹ ರೆಸಿಡೆನ್ಶಿಯಲ್ ಶಿಕ್ಷಣ ಸಂಸ್ಥೆಗಳನ್ನು ಪ್ರಾಥಮಿಕ ಹಂತದಿಂದ ಸ್ನಾತಕೋತ್ತರ ಘಟ್ಟದವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ಆರಂಭಿಸಲು ಸಂಕಲ್ಪ ಕೈಗೊಳ್ಳಬೇಕಾಗಿದೆ.

ಇದಕ್ಕೆಲ್ಲ ಎಲ್ಲಿಂದ ಹಣ ತರುವುದೆಂಬ ಪ್ರಶ್ನೆ ಥಟ್ಟನೆ ಉದ್ಭವವಾಗುತ್ತದೆಯೆಂಬುದು ನನಗೆ ತಿಳಿದಿದೆ. ಆದರೆ ಕರ್ನಾಟಕದಲ್ಲಿ ಎಲ್ಲ ಮಠಗಳೂ ಶ್ರೀಮಂತವಲ್ಲದಿದ್ದರೂ ಹಲವಾದರೂ ಸಾಕಷ್ಟು ಶ್ರೀಮಂತವಾಗಿವೆಯೆಂಬುದು ಎಲ್ಲರಿಗೂ ತಿಳಿದ ಸತ್ಯಸಂಗತಿಯೇ ಆಗಿದೆ. ಅಲ್ಲದೆ ಅತ್ಯಂತ ಹೆಚ್ಚಿನ ಸಂಘಟನಾ ಸಾಮರ್ಥ್ಯವುಳ್ಳ ಪ್ರಭಾವಶಾಲೀ ಮಠಗಳಿರುವುದೂ ಕರ್ನಾಟಕದ ಪುಣ್ಯ. ಆದಾಗ್ಯೂ ಮೂಢನಂಬಿಕೆಗಳಲ್ಲಿಯೇ ತೊಳಲಾಡುತ್ತ, ಸಂಪ್ರದಾಯಗಳ ಹಿಂದಿರುವ ತತ್ತ್ವಕ್ಕಿಂತ ಬಾಹ್ಯಾಡಂಬರಗಳಿಗೆ ಪ್ರಾಧಾನ್ಯತೆಯನ್ನು ನೀಡುತ್ತ, ಉತ್ಸವ, ವರ್ಧಂತಿ ಕುಂಭಾಭಿಷೇಕಗಳೇ ಭಕ್ತಿಯೆಂದು ಭ್ರಮಿಸುತ್ತ ವಿಪುಲ ಧನ ಮತ್ತು ಮಾನವಶಕ್ತಿಯನ್ನು ವ್ಯರ್ಥಗೊಳಿಸುತ್ತಿರುವ ಭಕ್ತಕೋಟಿಯನ್ನು ರಚನಾತ್ಮಕ ಕಾರ್ಯಕ್ರಮಗಳತ್ತ ತಿರುಗಿಸಲು ಎಲ್ಲ ಮಠಾಧಿಪತಿಗಳೂ ತಮ್ಮ ಲಾಂಛನಗಳನ್ನು ಬದಿಗಿಟ್ಟು ಒಂದೇ ವೇದಿಕೆಯ ಮೇಲೆ ಆಸೀನರಾಗುವುದಾದಲ್ಲಿ ನನ್ನ ಕನಸು ನನಸಾಗುವ ದಿನ ದೂರವಿರಲಾರದು.

ಕಾಲಕೆಡುತ್ತಿದೆ ; ಧರ್ಮ ಹಾಳಾಗುತ್ತಿದೆಯೆಂದು ಭಾವಿಸುವ ಈ ದಿನಗಳಲ್ಲೂ ಒಂದೊಂದು ಮಠಕ್ಕೆ ಸೀಮಿತವಾದ ಮಠಾಧಿಪತಿಗಳ ಹೆಸರಿನಲ್ಲೂ ಲಕ್ಷ–ದಶಲಕ್ಷಗಳಲ್ಲಿ ಹಣ ಸಂಗ್ರಹವಾಗುತ್ತಿರುವಾಗ, ಮಠೀಯವಲಯದಿಂದ ಹೊರಬಂದು ಪ್ರಯತ್ನಿಸಿದರೆ ಇಡೀ ಮಾನವಜನಾಂಗವೇ ಸಾಷ್ಟಾಂಗ ನಮಸ್ಕಾರ ಹಾಕುವುದರಲ್ಲಿ ಸಂಶಯವಿಲ್ಲ.

ರಾಷ್ಟ್ರನಿರ್ಮಾಣದಲ್ಲಿ, ರಕ್ಷಣೆಯಲ್ಲಿ ಇಬ್ಬರು ಪ್ರಮುಖಪಾತ್ರ ನಿರ್ವಹಿಸುತ್ತಾರೆ ; ಒಬ್ಬ ರಾಷ್ಟ್ರದ ಹೊರಮೈಯ್ಯನ್ನು ರಕ್ಷಿಸುವ ಯೋಧ ; ಇನ್ನೊಬ್ಬ ಅದರ ಒಳಮೈಯಾದ ಆತ್ಮವನ್ನು ಸಂರಕ್ಷಿಸುವ ಶಿಕ್ಷಕ. ಸೈನ್ಯದ ಅಗತ್ಯ ದೈನಂದಿನ ವ್ಯವಹಾರಗಳಿಂದ ದೂರವಾಗಿದ್ದರೂ ತನ್ನನ್ನು ತಾನು : ರಕ್ಷಿಸಿಕೊಳ್ಳಲಿಚ್ಛಿಸುವ ಮುಂದಾಲೋಚನೆಯುಳ್ಳ ಯಾವುದೇ ರಾಷ್ಟ್ರವಾದರೂ, ತನ್ನ ಇತರ ಅಗತ್ಯಗಳನ್ನು ಕಡಿತಗೊಳಿಸಿಕೊಂಡಾದರೂ ಅಥವಾ ಅನಿವಾರ್ಯವಾದಲ್ಲಿ ವಿಶೇಷ ತೆರಿಗೆಗಳನ್ನು ವಿಧಿಸಿಯಾದರೂ ಸೈನ್ಯದ ಅಗತ್ಯಗಳನ್ನು ಪೂರೈಸಿಯೇ ತೀರುತ್ತದೆ. ಅಂತೆಯೇ ರಾಷ್ಟ್ರಜೀವನದ ಎಲ್ಲ ಕ್ಷೇತ್ರಗಳಿಗೂ ಅಡಿಪಾಯವಾದ, ಮಾನವನನ್ನು ಪಶುತನದಿಂದ ದೈವತ್ವಕ್ಕೇರಿಸಲು ಮಾಧ್ಯಮವಾಗುವ ಶಿಕ್ಷಣಕ್ಕೂ ಸೈನ್ಯಕ್ಕೆ ಕೊಡುವಷ್ಟೇ, ಏಕೆ ಇನ್ನೂ ಹೆಚ್ಚು ಮಹತ್ವವನ್ನು ಕೊಡಬೇಕಾಗಿದೆ. ಯೋಧನನ್ನು ಆರಿಸುವಾಗ ಏನೆಲ್ಲಾ ಎಚ್ಚರಿಕೆಯನ್ನು ವಹಿಸಲಾಗುವುದೋ ಅಷ್ಟೇ ಜಾಗರೂಕತೆಯನ್ನು ಅಧ್ಯಾಪಕರನ್ನು ಆರಿಸುವಾಗ ವಹಿಸಿದಲ್ಲಿ ಉತ್ತಮ ಅಧ್ಯಾಪಕರೂ ರೂಪುಗೊಳ್ಳದಿರಲಾರರು.

ಪ್ರಾಚೀನ ವಿದ್ಯಾಪದ್ಧತಿ, ಅಂದಿನ ಅಧ್ಯಯನ ವಿಷಯಗಳು ಬದಲಾದ ಇಂದಿನ ಪರಿಸ್ಥಿತಿಗೆ ಸಂಪೂರ್ಣವಾಗಿ ಹೊಂದಿಕೆಯಾಗದಿದ್ದರೂ, ಆ ವಿದ್ಯಾಪದ್ಧತಿಗೆ ಭದ್ರಬುನಾದಿಯಾಗಿದ್ದ ತಾತ್ತ್ವಿಕವಾದ ನೈತಿಕ ನೆಲೆಗಟ್ಟನ್ನಂತೂ ಯಾರೂ ಯಾವತ್ತೂ ಅಳವಡಿಸಿಕೊಳ್ಳಬಹುದಾಗಿದೆ. ಈ ಆದರ್ಶವನ್ನು ನಾಡಿಗೆ ಮಾರ್ಗದರ್ಶನ ನೀಡುವ ಅರ್ಹತೆಯುಳ್ಳ ಧರ್ಮಪೀಠಗಳು ಸಾಧಿಸಬಹುದೆಂಬುದು ನನ್ನ ನಿರೀಕ್ಷೆ. ಧರ್ಮಪೀಠಗಳೂ ಆದರ್ಶವನ್ನು ಸಾಧಿಸಲಾರದೆ ಹೋದಲ್ಲಿ ಮಾನವ ಜನಾಂಗದ ದೃಷ್ಟಿ ಕುರುಡಾಗುತ್ತದೆ ; ಮಾತು ಮೂಕವಾಗುತ್ತದೆ ; ಪ್ರತಿಕ್ರಿಯೆ ಮೌನವಾಗುತ್ತದೆ.

ಮನುಷ್ಯನು ಸ್ವಾರ್ಥಪರನಾದಷ್ಟೂ ಅಧರ್ಮಿಯಾಗುವನು. ಅದರಂತೆಯೇ ಜನಾಂಗವೂ ಕೂಡಾ. ತನ್ನ ಸುಖವೇ ಪರಮಾವಧಿ ಎಂದು ತಿಳಿದುಕೊಂಡ ಜನಾಂಗವು ಪ್ರಪಂಚದಲ್ಲೆಲ್ಲ ಅತಿಕ್ರೂರವಾದುದು.

"ಸಾಹಿತ್ಯೋಪಾಸನೆ ಮತ್ತು ಶಿಕ್ಷಣ"

ವೈಜ್ಞಾನಿಕ ಯುಗದಲ್ಲಿ ನಾವಿಂದು ಬದುಕುತ್ತಿದ್ದೇವೆ. ವಿಶ್ವಮಾನವ ವೈಜ್ಞಾನಿಕವಾಗಿ ಬಹು ಮುಂದುವರಿದಿದ್ದಾನೆ. ಪ್ರಗತಿಪರ ರಾಷ್ಟ್ರಗಳು ಗ್ರಹಾಂತರಯಾನದಂಥ ಅದ್ಭುತ ವಿಜಯವನ್ನು ಸಾಧಿಸಿ, ಗ್ರಹಗಳಿಗೆ ವಲಸೆಹೋಗುವ ಸಾಹಸದ ಯೋಜನೆಯನ್ನು ಹಮ್ಮಿಕೊಂಡಿವೆ. ಈ ವೈಜ್ಞಾನಿಕಯುಗದಲ್ಲಿ ವಿದ್ಯಾವಂತನಲ್ಲದ ಮಾನವನ ಸ್ಥಿತಿ ಹೇಗಿದೆಯೆಂದರೆ ಜನಸಂದಣಿಯಿಂದ ಕಿಕ್ಕಿರಿದು, ವಾಹನಗಳ ಸಂಚಾರದಿಂದ ನಿಬಿಡವಾದ ದೊಡ್ಡ ನಗರವೊಂದರ ಬೀದಿಯ ಮಧ್ಯೆ ಇದ್ದಕ್ಕಿದ್ದಂತೆ ಬಂದುನಿಂತ ಅಂಧನ ಸ್ಥಿತಿಯಂತಾಗಿದೆ. ಆಧುನಿಕ ಮಾನವನ ಜೀವನಕ್ರಮದಲ್ಲಿ ವಿಜ್ಞಾನದ ಅರಿವು, ಅಗತ್ಯತೆ ಎಷ್ಟೆಂಬುದು ಹೆಜ್ಜೆಹೆಜ್ಜೆಗೂ ನಮಗೆ ಗೋಚರವಾಗದಿರುವುದಿಲ್ಲ. ಆದ್ದರಿಂದ ಆಧುನಿಕ ಮಾನವ ಅಕ್ಷರಸ್ಥನಾಗಲೇಬೇಕು. ವಿದ್ಯಾವಂತನಾಗದೆ ಬದುಕಿರಲು ಸಾಧ್ಯವೇ ಇಲ್ಲವೇನೋ ಎನ್ನುವಂತಹ ಸ್ಥಿತಿಯಲ್ಲಿ ಇಂದು ನಾವಿದ್ದೇವೆ. ಆದರೆ ಹಿಂದಿನ ಕಾಲದಲ್ಲಿ ಪರಿಸ್ಥಿತಿ ಹೀಗಿರಲಿಲ್ಲ. ಎಷ್ಟೋ ಶತಮಾನಗಳವರೆಗೆ ವಿದ್ಯೆ ಕೇವಲ ಕೆಲವರ ಸೊತ್ತಾಗಿತ್ತು. ಕಾರಣ ಅಂದು ವಿದ್ಯೆ ಜೀವನನಿರ್ವಹಣೆಗೆ, ಹೊಟ್ಟೆಯಪಾಡಿಗೆ ಸಾಧನವಾಗಿರಲಿಲ್ಲ. ಇಂದು ಕಾಲ ಬದಲಾಗಿದೆ. ಸಮಾಜ ಯುಗಯುಗಾಂತರಗಳಿಂದಲೂ ಅನೇಕ ಬಗೆಯ ಸ್ಥಿತ್ಯಂತರಗಳಿಗೆ ಒಳಗಾಗಿದೆ. ಈ ಆಧುನಿಕ ಜಗತ್ತಿನಲ್ಲಿ ಇಂದು ಯಾರು ವಿದ್ಯಾವಂತನೋ, ಪದವಿಧರನೋ ಅವನಿಗೆ ಉದ್ಯೋಗ. ಹಾಗಾಗಿ ವಿದ್ಯೆ ಮಾನವನಿಗೆ ಅನ್ನವನ್ನೊದಗಿಸಿ ಆ ಮೂಲಕ ಅವನ ಐಹಿಕಜೀವನದ ಸುಖಸಮೃದ್ಧಿಗೆ ಕಾರಣವಾಗುತ್ತಿದೆ. ಇದನ್ನರಿತು ಪಾಶ್ಚಿಮಾತ್ಯದೇಶಗಳಲ್ಲಿ ಈ ಶತಮಾನದ ಆದಿಯಿಂದಲೇ ಜನತೆಯನ್ನು ವಿದ್ಯಾವಂತರನ್ನಾಗಿ ಮಾಡುವ ಪಣತೊಟ್ಟರು. ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ೨೦ನೆಯ ಶತಮಾನದ ಉತ್ತರಾರ್ಧದಲ್ಲೂ ಅನಕ್ಷರತೆಯನ್ನು ಮೂಲೋತ್ಪಾಟಿಸುವ ಪ್ರಯತ್ನದಲ್ಲಿವೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ, ಜನತೆಯ ವಿದ್ಯಾಭ್ಯಾಸದ ಕಡೆ ಹೆಚ್ಚು ಗಮನಹರಿಸಲಾಗಿದೆ. ದೇಶದಲ್ಲಿ ಕಡ್ಡಾಯ ಪ್ರಾಥಮಿಕಶಿಕ್ಷಣ ಜಾರಿಗೆ ತರಲಾಗಿದೆ. ಪ್ರತಿಯೊಬ್ಬ ಪ್ರಜೆಯನ್ನೂ ಸಾಕ್ಷರರನ್ನಾಗಿ ಮಾಡಬೇಕೆಂಬುದು ಸರ್ಕಾರದ ಧ್ಯೇಯವಾಗಿದೆ. ವಯಸ್ಕರಾದ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿ ಮಾಡುವ ಪ್ರಯತ್ನವೊಂದು ಕಡೆ ನಡೆದೇ ಇದೆ. ಆದರೂ ಶಿಕ್ಷಣ ಕ್ಷೇತ್ರಕ್ಕಾಗಿ ಸರಕಾರ ವೆಚ್ಚಮಾಡುವ ಕೋಟ್ಯಂತರ ರೂಪಾಯಿಗಳು ಉದ್ದೇಶಿತ ಪ್ರಯೋಜನ ಸಾಧಿಸಿವೆ ಎಂದು ಹೇಳಲಾಗುವುದಿಲ್ಲ. ಸ್ವಾತಂತ್ರ್ಯ ಪಡೆದು ಕಾಲುಶತಮಾನ ಸಂದರೂ ಭಾರತೀಯ ಶಿಕ್ಷಣ ಕ್ರಮದಲ್ಲಿ ಯಾವ ಗಮನಾರ್ಹವಾದ ಬದಲಾವಣೆಗಳೂ ಆಗಿಲ್ಲದಿರುವುದು ನಮ್ಮ ಮಾನಸಿಕ ದಾಸ್ಯದ ಸಂಕೇತ. ಬ್ರಿಟಿಷರು ನಮ್ಮ ಆಳರಸರಾಗಿದ್ದಾಗ ತಮ್ಮ ಆಡಳಿತವ್ಯವಸ್ಥೆಯ ನಿರ್ವಹಣೆಯ ಸಲುವಾಗಿ ಭಾರತೀಯರಿಗೆ ಶಿಕ್ಷಣ ಕೊಡಲು ಆರಂಭಿಸಿದರು. ಅವರು ತಮ್ಮ ಅಸ್ತಿತ್ವದ ಅನುಕೂಲಕ್ಕಾಗಿ ತಂದ ಶಿಕ್ಷಣಪದ್ಧತಿ ನಮ್ಮ

ರಾಷ್ಟ್ರದ ಪ್ರಾಚೀನ ಶಿಕ್ಷಣಪದ್ಧತಿಯ ಸ್ವರೂಪವನ್ನೇ ಬದಲಿಸತೊಡಗಿತು. ಇದರ ದೆಸೆಯಿಂದ ಸಾಮಾಜಿಕ ಜೀವನದಲ್ಲಿ ವಿದ್ಯೆಗಿದ್ದ ಮೌಲ್ಯ ಕಾಲಕ್ರಮೇಣ ಕುಂದುತ್ತಾ ಬಂದು, ವಿದ್ಯೆ ಕೇವಲ ಹೊಟ್ಟೆಯಪಾಡಿನ ಸಾಧನ ವಾಗಿ ಪರಿಣಮಿಸಿತು. ಹಾಗಾಗಿ ನಿಜವಾದ ಅರ್ಥದಲ್ಲಿ ವಿದ್ಯಾಕ್ಷೇತ್ರದಲ್ಲಿ ನಾವು ನಿರೀಕ್ಷಿಸಿದ ಫಲವನ್ನು ಪಡೆಯ ಲಾಗಿಲ್ಲ. ಇದಕ್ಕೆ ಕಾರಣವೇನು? ದೋಷವೆಲ್ಲಿದೆ? ಎಂದು ಶಿಕ್ಷಣತಜ್ಞರು ಕಂಡುಹಿಡಿದು ಶಿಕ್ಷಣಕ್ಷೇತ್ರದಲ್ಲಿ ಆಗಬೇಕಾದ ಬದಲಾವಣೆಗಳ ಬಗ್ಗೆ ಚರ್ಚಿಸಿ ತೀರ್ಮಾನಕ್ಕೆ ಬಂದಿದ್ದರೂ, ಅದರಿಂದ ಯಾವ ವಿಧವಾದ ಪ್ರಯೋಜನವೂ, ಫಲವೂ ಈವರೆಗೆ ದೊರಕಿದಂತೆ ಕಂಡುಬರುತ್ತಿಲ್ಲ.

ಶಿಕ್ಷಣಕ್ಷೇತ್ರದಲ್ಲಿ ಇಷ್ಟೆಲ್ಲಾ ಲೋಪ–ದೋಷಗಳು, ಕುಂದುಕೊರತೆಗಳು ಇದ್ದರೂ ನಮ್ಮಲ್ಲಿ ಸ್ವಾತಂತ್ರ್ಯಾನಂತರ ವಿದ್ಯಾವಂತರಾಗಬೇಕೆಂಬ ಬಯಕೆ ಎಲ್ಲ ವರ್ಗ, ಎಲ್ಲ ಜನಾಂಗಗಳಲ್ಲೂ ಕಂಡುಬರುತ್ತಿದೆ. ಜನತೆಯ ಹಂಬಲದ ಈಡೇರಿಕೆಗೆ ಸರ್ಕಾರವೂ ಪ್ರತಿಜ್ಞಾಬದ್ಧವಾಗಿ ನಿಂತಿದೆ. ಹಳ್ಳಿಹಳ್ಳಿಗಳಲ್ಲೂ ಶಾಲಾಕಾಲೇಜು ಗಳು ತೆರೆಯಲ್ಪಟ್ಟಿವೆ. ಎಲ್ಲೆಲ್ಲೂ ಜನತೆಯಲ್ಲಿ ತೋರಿಬರುವ 'ವಿದ್ಯಾದಾಹ'ವನ್ನು ತೀರಿಸುವ ಪ್ರಯತ್ನ ನಾನಾ ರೂಪಗಳಲ್ಲಿ ನಡೆಯುತ್ತಿದೆ. ದೇಶದಾದ್ಯಂತ ಎಷ್ಟು ವಿದ್ಯಾಕೇಂದ್ರಗಳನ್ನು ತೆರೆದರೂ ನೂಕುನುಗ್ಗಲು ಕಡಮೆ ಯಾಗಿಲ್ಲ. ವಿದ್ಯೆಯನ್ನು ಅರಸಿಕೊಂಡು ಬರುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ದಿನೇದಿನೇ ಅಧಿಕವಾಗುತ್ತಿದೆ. ಅಷ್ಟೇ ಅಲ್ಲ, ಪ್ರತಿವರ್ಷವೂ ವಿಶ್ವವಿದ್ಯಾನಿಲಯಗಳು ಸಹಸ್ರಾರು ವಿದ್ಯಾರ್ಥಿಗಳಿಗೆ 'ಪದವಿ ಮುದ್ರೆ'ಯೊತ್ತಿ ಕಳಿಸಿ ಕೊಡುತ್ತಿವೆ. ಅಲ್ಲಿಗೆ ಅವರ ವಿದ್ಯೆಗೆ ಪೂರ್ಣವಿರಾಮ. ಪದವಿ ಪಡೆಯುವ ನೆಪವಾಗಿ ವಿದ್ಯಾಭ್ಯಾಸ, ಉದ್ಯೋಗ ಗಿಟ್ಟಿಸುವ ನೆಪವಾಗಿ ಪದವಿ. ಇಲ್ಲಿಗೆ ಸೀಮಿತ ನಮ್ಮ 'ವಿದ್ಯಾದಾಹ'. ಅಂದಮೇಲೆ ನಾವು ಕಲಿಯುತ್ತಿರುವ, ಪಡೆಯುತ್ತಿರುವ ಶಿಕ್ಷಣ ಕೇವಲ ಹೊಟ್ಟೆಯಪಾಡಿಗಾಗಿ. ಇಂದಿನ ವಿದ್ಯಾರ್ಥಿಸಮುದಾಯ ದಲ್ಲಿ ನೂರಕ್ಕೆ ಒಂದು ಭಾಗ 'ಜ್ಞಾನದಾಹ'ದಿಂದ ವಿದ್ಯಾಭ್ಯಾಸ ಮಾಡುವವರನ್ನು ಕಾಣುವುದು ದುರ್ಲಭವಾಗಿದೆ. ನಾವು ಕಲಿಯುವ ವಿದ್ಯೆ, ಪಡೆಯುವ ಶಿಕ್ಷಣ ಉದ್ಯೋಗಕ್ಕೆ ಒಂದು ರಹದಾರಿಯಾಗಿ ಪರಿಣಮಿಸಿದೆ. ಬಹುಶಃ ಆಧುನಿಕ ಪ್ರಪಂಚದ ಸಮಾಜಿಕ ರಚನೆ ಹಾಗೂ ಜೀವನ ವಿಧಾನವೇ ಇದಕ್ಕೆ ಕಾರಣವೆಂದರೂ ತಪ್ಪಲ್ಲ. ಅಷ್ಟು ಮಾತ್ರವಲ್ಲ ಸುಖಸಮೃದ್ಧಿಗಳೇ ಜೀವನದ ಪರಮಗುರಿ ಎಂಬ ಧೋರಣೆಯೂ ಕಾರಣವಾಗಿದೆ.

'ವಿದ್ಯೆ'ಯ ಕಲಿಕೆಯ ಬಗ್ಗೆ ಇರುವ ಈ ಅಪೇಕ್ಷೆ ತೊಲಗದ ಹೊರತು, ಜ್ಞಾನಸಂಪಾದನೆಯ ಬಗ್ಗೆ ತೀವ್ರ ವಾದ ಆಸಕ್ತಿ, ಶ್ರದ್ಧೆಗಳು ಬೆಳೆಯದ ಹೊರತು ನಮ್ಮ ಉದ್ಧಾರವಾಗಲಿಕ್ಕಿಲ್ಲ. ಜ್ಞಾನವಿಲ್ಲದ ವಿದ್ಯೆ ಮನುಷ್ಯನಲ್ಲಿ ದುರಂಹಕಾರಕ್ಕೆ ಎಡೆಮಾಡಿಕೊಟ್ಟು ಜೀವನದ ನೆಮ್ಮದಿ ಶಾಂತಿಗಳಿಗೆ ಪೆಟ್ಟುಕೊಡುತ್ತದೆ. ಇಂದಿನ ವಿದ್ಯಾವಂತರು ಎಂದು ಹೇಳಿಕೊಳ್ಳುವ ಜನರ ಬದುಕಿನ ರೀತಿನೀತಿಗಳನ್ನು ಗಮನಿಸಿದರೆ "ಸಾಕ್ಷರಾ ವಿಪರೀತಾ ಶ್ಚೇತ್ ರಾಕ್ಷಸಾ ಏವ ಕೇವಲ" ಎಂದು ಕೇವಲ ಚಮತ್ಕಾರಕ್ಕಾಗಿ ಆಡಿದಂತೆ ತೋರುವ ಮಾತು, ಇಂದು ನಿಜ ವಾಗಿಬಿಟ್ಟದೆಯೇನೋ ಎನ್ನಿಸುತ್ತದೆ. ವಿದ್ಯಾಭ್ಯಾಸ ಎಂದರೇನು ಎಂಬುದಾಗಿ ಹೇಳುತ್ತಾ, ಜೆ. ಎಚ್. ನ್ಯೂಮನ್ ಮಹಾಶಯನು "Education does not mean passing examinations and being stuffed with factual knowledge; it means being able to live justly" ಎಂದಿರುವ ಮಾತುಗಳನ್ನು ಮನನಮಾಡಬೇಕು. ವಿದ್ಯಾಭ್ಯಾಸ ಪ್ರಾಮಾಣಿಕ ಬದುಕಿಗೆ ಮಾರ್ಗದರ್ಶನವಾಗಬೇಕು.

ಇಂದು ದೇಶದಲ್ಲಿ ಒಂದುಕಡೆ ಲಂಗುಲಗಾಮಿಲ್ಲದ ಸ್ವೇಚ್ಛಾವೃತ್ತಿಯಿಂದ ಕೂಡಿದ, ಬೇಜವಾಬ್ದಾರಿ ಯುತ ತರುಣಜನಾಂಗ, ಮತ್ತೊಂದು ಕಡೆ ಅಧಿಕಾರಲಾಲಸೆ, ಅರ್ಥರಹಿತ ಜೀವನ, ಸ್ವಾರ್ಥಮನೋಭಾವ, ಸ್ವಪ್ರತಿಷ್ಠೆಗಳಿಂದ ಧ್ಯೇಯ ಆದರ್ಶಗಳ ಬದುಕಿಗೆ ತಿಲಾಂಜಲಿಯಿತ್ತು, ತಾತ್ಕಾಲಿಕ ಸುಖದ ಮರೀಚಿಕೆಯ ಬೆನ್ನು ಹತ್ತಿ ಹೊರಟಿರುವ ನಾಯಕವರ್ಗ. ಈ ಮಧ್ಯೆ ಜನತೆಯ ನಿರಂತರ ಶೋಷಣೆಗಾಗಿ ಪ್ರತಿಜ್ಞಾಬದ್ಧರಾಗಿ ನಿಂತಿ ರುವ, ಜಿಗಣೆಗಳ ಅಪರಾವತಾರದಂತಿರುವ ಕಾಳಸಂತೆಕೋರ, ಕಳ್ಳಸಾಗಣೆದಾರ, ಕೇವಲ ವ್ಯಾಪಾರೀ ಮನೋ

ಧರ್ಮದ ಶ್ರೀಮಂತ ಪ್ರತಿಷ್ಠಿತವರ್ಗ. ಇವರುಗಳ ಕಾಲ್ತುಳಿತಕ್ಕೆ ಸಿಕ್ಕು ರಾಷ್ಟ್ರದ ಸಾಮಾಜಿಕ ಜೀವನ ತತ್ತರಿಸಿಹೋಗಿದೆ. ಜನತೆ ಸ್ಥೈರ್ಯಗೆಟ್ಟು ಕಂಗಾಲಾಗಿದ್ದಾರೆ. ಎಲ್ಲೆಲ್ಲೂ ಅನ್ಯಾಯ, ಅಧರ್ಮ, ಅಸತ್ಯ ತಾಂಡವವಾಡುತ್ತಿವೆ. ಅಶಾಂತಿ, ಭಯಾಕುಲಿತ ವಾತಾವರಣ, ಕ್ರಾಂತಿ ಕೋಲಾಹಲಗಳ ತುತ್ತೂರಿಯ ಮೊಳಗು ಕೇಳಿಬರುತ್ತಿದೆ. ಹೀಗೆ ಕ್ಷೋಭೆಗೊಂಡಿರುವ ವಾತಾವರಣ ತಿಳಿಯಾಗಬೇಕು. ಕಂಗೆಟ್ಟಿರುವ ಜನತೆಗೆ ಬದುಕಿನಲ್ಲಿ ನೆಮ್ಮದಿ, ಶಾಂತಿ ಸಿಕ್ಕಬೇಕು. ಸಾಮಾಜಿಕಜೀವನದಲ್ಲಿ ನ್ಯಾಯ, ಸತ್ಯ, ಧರ್ಮಗಳು ತಮ್ಮ ಪೌಲ್ಯವನ್ನು ಮತ್ತೆ ಪಡೆಯಬೇಕು. ಲೋಕಜೀವನದ ಈ ಹೊಲಸು ತೊಳೆದು, ಜನತೆಯಲ್ಲಿ ಬೇರೂರಿರುವ ಈ ಭಯವನ್ನು ತೊಡೆದು, ರಾಷ್ಟ್ರವನ್ನು ಸನ್ಮಾರ್ಗದತ್ತ ಕೊಂಡೊಯ್ಯುವ ಪವಿತ್ರ ಕಾರ್ಯದಲ್ಲಿ ತೊಡಗುವ ಜನ ಸುಸಂಸ್ಕೃತರೂ, ಉದಾರ ಹೃದಯರೂ, ವಿಚಾರಪರರೂ, ಜ್ಞಾನಿಗಳೂ ಇರಬೇಕು. ಈ ಬಗೆಯ ಶ್ರೇಷ್ಠ ಗುಣಗಳನ್ನು ಮಾನವ 'ಸಾಹಿತ್ಯಾಭ್ಯಾಸ'ದಿಂದ ಮಾತ್ರ ಪಡೆಯಲು ಸಾಧ್ಯವಾಗುತ್ತದೆ. ಮಾನವನಲ್ಲಿ ಶಾಶ್ವತವಾಗಿ ಮನೆಮಾಡಿಕೊಂಡಿರುವ ರಾಕ್ಷಸೀ ಪ್ರವೃತ್ತಿಯನ್ನು ಸಮೂಲ ನಾಶಮಾಡಿ, ಮನಸ್ಸನ್ನು ಸಂಸ್ಕಾರಗೊಳಿಸಿ, ಹೃದಯಪರಿವರ್ತನೆ ಮಾಡುವ ಶಕ್ತಿ ಸಾಹಿತ್ಯಕ್ಕುಂಟು. ಆದ್ದರಿಂದಲೇ "Literature is one of the instruments, and one of the most powerful instruments, for forming character, for giving us men and women armed with reason, braced by knowledge, clothed with steady fastness and courage, and inspired by that public spirit and public virtue of which it has been well said that they are brightest ornaments of the mind of man." ಎಂದು ಮಾರ್ಲೆ ಹೇಳುತ್ತಾನೆ. ಹೀಗೆ ಮಾನವರನ್ನು ಸುಸಂಸ್ಕೃತರನ್ನಾಗಿ, ಉದಾರಹೃದಯಿಗಳನ್ನಾಗಿ, ಜ್ಞಾನಿಗಳನ್ನಾಗಿ ರೂಪಿಸಿ, ಅವರ ಸುಖದ, ನೆಮ್ಮದಿಯ ಬದುಕಿಗೆ ಕಾರಣವಾಗುವಂಥ ಸಾಹಿತ್ಯ ಹಾಗೂ ಸಾಹಿತ್ಯೋಪಾಸನೆ ನಮ್ಮ ಶಿಕ್ಷಣಕ್ರಮದ ಅಂಗವಾಗಬೇಕು. ನಾಳಿನ ನಾಡಿನ ಭವ್ಯಶಿಲ್ಪಿಗಳಾದ ಇಂದಿನ ವಿದ್ಯಾರ್ಥಿಜನಾಂಗಕ್ಕೆ, ಯುವಪೀಳಿಗೆಗೆ ಅಂತಹ ಉತ್ತಮ ಶಿಕ್ಷಣ ನೀಡಬೇಕು. ಶಿಕ್ಷಣದ ಮೂಲಕ ಅವರ ಮನಸ್ಸನ್ನು ಸಾಹಿತ್ಯಾಭ್ಯಾಸದ ಕಡೆ ತೊಡಗಿಸಬೇಕು. ಆಧುನಿಕ ಶಿಕ್ಷಣಪದ್ಧತಿಯಲ್ಲಿ ವಿಜ್ಞಾನದ ವಿಷಯಗಳ ಕಲಿಕೆಗೆ ಹೆಚ್ಚು ಗಮನ ನೀಡಲಾಗುತ್ತಿದೆ. ವಿಜ್ಞಾನಶಿಕ್ಷಣಕ್ಕೆ ನೀಡುವಷ್ಟೇ ಪ್ರಾಮುಖ್ಯತೆಯನ್ನು 'ಸಾಹಿತ್ಯ ಶಿಕ್ಷಣ'ಕ್ಕೂ ನೀಡಬೇಕು. ಏಕೆಂದರೆ ವೈಜ್ಞಾನಿಕವಾಗಿ ನಾವು ಎಷ್ಟೇ ಪ್ರಗತಿ ಸಾಧಿಸಿದರೂ ಅದು ಕೇವಲ ಬದಲಿ ಹೃದಯ ಜೋಡಣೆಗೆ ನೆರವಾಗಬಹುದೇ ಹೊರತು ಮಾನವನ 'ಹೃದಯಪರಿವರ್ತನೆ' ಮಾಡುವ ಶಕ್ತಿ ಪಡೆದಿಲ್ಲ. ಮಾನವನ ಹೃದಯ ಪರಿವರ್ತನೆ ಮಾಡಿ, ಸನ್ಮಾರ್ಗದತ್ತ ನಡೆಸುವ ಶಕ್ತಿ ಸಾಹಿತ್ಯಕ್ಕಿದೆ. ಅಂತಹ ವಿದ್ಯೆಯನ್ನು, ಶಿಕ್ಷಣವನ್ನು ನಮ್ಮ ಮಕ್ಕಳಿಗೆ ಕೊಡಬೇಕೇ ಹೊರತು ಬದುಕಿಗೆ ಮಾರ್ಗದರ್ಶಕವಲ್ಲದ ವಿದ್ಯೆಯನ್ನಲ್ಲ.

ಭಾರತೀಯ ಶಿಕ್ಷಣಪದ್ಧತಿಯಲ್ಲಿ ಇಂದು ಆಮೂಲಾಗ್ರ ಬದಲಾವಣೆ ಅನಿವಾರ್ಯವಾಗಿದೆ. ವಿದ್ಯಾರ್ಥಿಗಳಿಗೆ ಕಣ್ಣುಪಟ್ಟಿಕಟ್ಟಿ ಪರೀಕ್ಷೆಗೆ ಸಿದ್ಧಗೊಳಿಸುವ ಓಬಿರಾಯನ ಕಾಲದ ಶಿಕ್ಷಣಕ್ರಮಕ್ಕೆ ಮೊದಲು ಪೂರ್ಣವಿರಾಮ ಹಾಕಬೇಕು. ತಮ್ಮ ಪರೀಕ್ಷೆಗೆ ಗೊತ್ತುಪಡಿಸಿದ ಪಠ್ಯವಿಷಯಗಳಷ್ಟರಲ್ಲಿ, ಕೇವಲ ಊಹೆಮಾಡಿ 10-15 ಪ್ರಬಂಧಗಳನ್ನು ಉರುಹಚ್ಚಿ ಶೇಕಡ 75-80 ಅಂಕಗಳನ್ನು ಗಿಟ್ಟಿಸುವ 'ಜಾಣವಿದ್ಯಾರ್ಥಿ'ಗಳಿಂದಾಗಲಿ, ಅಂತಹ ಶಿಕ್ಷಣದಿಂದಾಗಲೀ ಆಗುವ ಪ್ರಯೋಜನ ಎಷ್ಟೆಂಬುದನ್ನು ಶಿಕ್ಷಣವೇತ್ತರು ಆಲೋಚಿಸಬೇಕು. ಇಂದಿನ ಪರೀಕ್ಷಾಪದ್ಧತಿಯಲ್ಲಿ ಮೂಲಭೂತ ಮಾರ್ಪಾಟುಗಳಾಗಬೇಕು. ವಿದ್ಯಾರ್ಥಿಯ ಸ್ಮರಣಶಕ್ತಿಯನ್ನಳೆಯುವ ಶಿಕ್ಷಣಕ್ರಮಕ್ಕೆ ಬದಲಾಗಿ ಬುದ್ಧಿಮತ್ತೆಯನ್ನು, ಪ್ರತಿಭಾ ಸಂಪತ್ತನ್ನು ಗುರುತಿಸುವಂಥ ಪರೀಕ್ಷಾ ಪದ್ಧತಿಯನ್ನು ಜಾರಿಗೆ ತರಬೇಕು. ಹಾಗೆ ಮಾಡದ ಹೊರತು ನಮ್ಮ ವಿದ್ಯಾರ್ಥಿಗಳಲ್ಲಿ 'ಜ್ಞಾನದಾಹ' ಮೂಡುವುದಿಲ್ಲ.

ವಿದ್ಯಾರ್ಥಿಗಳಲ್ಲಿ ಜ್ಞಾನದಾಹ ಮೂಡದ ಹೊರತು, ನಾವು ಕೊಡುವ ಶಿಕ್ಷಣವಾಗಲೀ ಅವರು ಕಲಿಯುವ ವಿದ್ಯೆಯಾಗಲಿ ಸಾರ್ಥಕತೆ ಪಡೆದಂತಾಗುವುದಿಲ್ಲ. ಯಾವನಲ್ಲಿ 'ಜ್ಞಾನದಾಹ' ಹೆಚ್ಚುತ್ತದೋ ಅಂತಹವನಿಗೆ ಓದಿನಲ್ಲಿ ಆಸಕ್ತಿ ಮೂಡುತ್ತದೆ. ಜ್ಞಾನದಾಹ ಬೆಳೆಸಿಕೊಂಡ ವಿದ್ಯಾರ್ಥಿ, ನಾನಾ ವಿಷಯಗಳ ಅಭ್ಯಾಸದಲ್ಲಿ ತೊಡಗುತ್ತಾನೆ. ಜ್ಞಾನವೃದ್ಧಿಗೆ ಸಂಜೀವಿನಿಯಂತಿರುವ ಸಾಹಿತ್ಯವನ್ನು ಅಭ್ಯಸಿಸುತ್ತಾನೆ. ಈ ಬಗೆಯಲ್ಲಿ ಉತ್ತಮ ಸಾಹಿತ್ಯದ ಅಭ್ಯಾಸದಿಂದ ಅವನ ಮನಸ್ಸು ಸುಸಂಸ್ಕೃತವಾಗುತ್ತದೆ. ರಾಗದ್ವೇಷಗಳನ್ನು ದೂರಮಾಡಿ ಸೌಂದರ್ಯಾಭಿರುಚಿಯನ್ನು ಉತ್ತಮಗೊಳಿಸಿ, ಅವನ ಅನುಭವಪ್ರಪಂಚವನ್ನು ವಿಸ್ತಾರಗೊಳಿಸಿ, ಉತ್ತಮ ಬದುಕನ್ನು ನಡೆಸಲು ಅವನನ್ನು ಸಿದ್ಧಗೊಳಿಸುತ್ತದೆ. ಸಾಹಿತ್ಯವ್ಯಾಸಂಗ ವ್ಯಷ್ಟಿಜೀವನದ ಉತ್ತಮ ಪರಿಣಾಮ ಬೀರುವುದಷ್ಟೇ ಅಲ್ಲ, ಸಮಷ್ಟೀ ಜೀವನದ ಮೇಲೂ ಉತ್ತಮ ಪರಿಣಾಮ ಬೀರುತ್ತವೆ. ಒಂದು ರಾಷ್ಟ್ರದ ಜೀವನ ಉತ್ತಮಮಟ್ಟದ್ದಾಗಿರಬೇಕಾದರೆ ಅದನ್ನಾಳುವ ನಾಯಕರು ನೀತಿಪರರೂ, ಸುಸಂಸ್ಕೃತರೂ, ಉದಾರ ಹೃದಯಿಗಳೂ ಆಗಿರಬೇಕು. ಈ ಎಲ್ಲ ಸದ್ಗುಣಗಳನ್ನೂ ಮಾನವ ಸಾಹಿತ್ಯಾಭ್ಯಾಸದಿಂದ ಪಡೆಯಲು ಸಾಧ್ಯ. ಲೋಕ ಇಂದು ಅಶಾಂತಿಯ ಮಡುವಾಗಿದೆ. ಎಲ್ಲೆಲ್ಲೂ ಅಶಾಂತಿ, ಸಂಕ್ಷೋಭೆಯನ್ನು ಕಾಣುತ್ತೇವೆ. ಜನತೆ ಸ್ಥೈರ್ಯಗೆಟ್ಟು ಕಂಗಾಲಾಗಿ ಕುಳಿತಿದೆ. ಅಂತಹ ಜನತೆಗೆ ಬದುಕಿನಲ್ಲಿ ಭರವಸೆಯನ್ನು ಹುಟ್ಟಿಸುವ ದಿವ್ಯಶಕ್ತಿ ಸಾಹಿತ್ಯಕ್ಕಿದೆ, ಕವಿವಾಣಿಗಿದೆ. ಅಂತಹ ಸಾಹಿತ್ಯದ ಉಪಾಸನೆ ಇಂದು ನಮ್ಮ ಶಿಕ್ಷಣಕ್ರಮದ ಅಂಗವಾಗಬೇಕು. ಭಾರತೀಯ ಶಿಕ್ಷಣಕ್ರಮದಲ್ಲಿ ಸಾಹಿತ್ಯಕ್ಕೆ ಆದ್ಯತೆ ದೊರೆಯಬೇಕು. ಲೋಕಜೀವನದ ಸರ್ವರೋಗಗಳನ್ನೂ ನಿವಾರಿಸಬಲ್ಲ ಶಕ್ತಿ ಸಾಹಿತ್ಯಕ್ಕಿದೆ. ಅಂತಹ ಸಾಹಿತ್ಯಾಭ್ಯಾಸಕ್ಕೆ ಇಂದಿನ ಶಿಕ್ಷಣಕ್ರಮದಲ್ಲಿ ಮನ್ನಣೆ ದೊರೆಯಬೇಕು.

ಬುದ್ಧಿಯಿಲ್ಲದ ಮೂಢರು ಇಪ್ಪತ್ತುಸಾವಿರ ಸಿದ್ಧಾಂತಗಳನ್ನು ಪ್ರಚಾರಕ್ಕೆ ತರುವರು. ತಮ್ಮ ದೃಷ್ಟಿಗೆ ತೋರಿದಂತೆ ಅವನ್ನು ವಿವರಿಸಿ ಅವನ್ನೆಲ್ಲ ಅವರ ದೂತರು ಹೇಳಿದರೆಂದು ಸಾರುವರು. ಅವರು ಪ್ರವಾದಿಗಳ ಸಂದೇಶವನ್ನು ತೆಗೆದುಕೊಂಡು ತಮ್ಮ ತಪ್ಪು ಅಭಿಪ್ರಾಯಗಳನ್ನು ಕೊಡುವರು. ಪ್ರತಿಯೊಬ್ಬ ದೇವದೂತನಿಗೂ ಅವನ ಜೀವನವೇ ಅವನ ಸಂದೇಶಕ್ಕೆ ಬರೆದ ಭಾಷ್ಯ. ಅವರ ಜೀವನವನ್ನು ನೋಡಿ ಅವರೇನೇನು ಮಾಡಿದರೊ ಅದು ಅವರ ಶಾಸ್ತ್ರದಲ್ಲಿದೆ.

ಎ. ಕೃಷ್ಣಮೂರ್ತಿ

ಸಮಾಜ ಶಿಕ್ಷಣ–ಅನೌಪಚಾರಿಕ ಶಿಕ್ಷಣ

ಮನುಷ್ಯ ಸ್ವಭಾವತಃ ಸಂಘಜೀವಿ. ಸನ್ಯಾಸಿಗಳು ಕೂಡ ತಮ್ಮದೇ ಆದ ಒಂದು ಪರಿವಾರವನ್ನು ವ್ಯವಸ್ಥೆಗೊಳಿಸಿಕೊಂಡಿರುತ್ತಾರೆ. ಆದುದರಿಂದ ಪ್ರತಿಯೊಬ್ಬ ವ್ಯಕ್ತಿಯೂ ತನ್ನಸುತ್ತಲಿರುವ ಜನರೊಡನೆ ಹೊಂದಿಕೊಂಡು ಇರಬೇಕಾದುದು ಅಗತ್ಯವಾಗುತ್ತದೆ. ಹಾಗಾಗದೆ ಒಬ್ಬೊಬ್ಬನೂ ತನಗೆ ತೋಚಿದಂತೆ ಇದ್ದರೆ ಪರಸ್ಪರ ಘರ್ಷಣೆಗಳಾಗಿ ಸಂಘಜೀವನವು ಅಸಾಧ್ಯವಾಗುತ್ತದೆ. ಎಲ್ಲರೂ ತಾವಿರುವ ಸಮಾಜದೊಡನೆ ಬೆರೆತು ಇತರರ ಹಿತವನ್ನು ಬಯಸಿ ತಂತಮ್ಮ ಬದುಕನ್ನು ನಿರ್ವಹಿಸಿದರೆ ಇತರರ ನೆರವು ಅವರಿಗೆ ದೊರೆಯುತ್ತದೆ; ಸಮಾಜ ಜೀವನ ಸಂತೋಷಕರವಾಗುತ್ತದೆ. ಇದಕ್ಕೆ ಬೇಕಾದ ಸಾಮರ್ಥ್ಯವನ್ನು ಶಿಕ್ಷಣ ಒದಗಿಸುತ್ತದೆ. ನಾವೆಲ್ಲರೂ ನಾವಿರುವ ಪರಿಸರಕ್ಕೆ ಹೊಂದಿಕೊಂಡಿರಬೇಕಾದ ಮನೋಭಾವವನ್ನು ರೂಪಿಸಿಕೊಳ್ಳಬೇಕಾಗುತ್ತದೆ; ನಮ್ಮ ಸ್ವಭಾವವನ್ನು ಸೂಕ್ತರೀತಿಯಲ್ಲಿ ಮಾರ್ಪಾಟು ಮಾಡಿಕೊಳ್ಳಬೇಕಾಗುತ್ತದೆ. ಈ ಸಾಧನೆ ಸೂಕ್ತಶಿಕ್ಷಣದಿಂದ ಸಾಧ್ಯ. ಜೀವನವನ್ನು ಸುಗಮವಾಗಿ ನಡೆಸಲು ಬೇಕಾದ ಶಿಕ್ಷಣವನ್ನು ಒದಗಿಸುವುದು ಶಿಕ್ಷಣದ ಇನ್ನೊಂದು ಗುರಿ. ಈ ಎರಡು ಗುರಿಗಳನ್ನು ಸಾಧಿಸಿಕೊಂಡ ವ್ಯಕ್ತಿಯು ಸಮಾಜದ ಆಗುಹೋಗುಗಳಲ್ಲಿ ಪ್ರಭಾವಯುತವಾಗಿ ಭಾಗಿಯಾಗಬಲ್ಲ. ತನ್ನ ಸ್ವಂತಜೀವನವನ್ನು ನೆಮ್ಮದಿಯಿಂದ ನಡೆಸಿಕೊಂಡು ತನ್ನ ಸುತ್ತಲೂ ಇರುವ ಜನರ ಜೀವನ ಸುಖಮಯವಾಗಲು ಮಾಡಬೇಕಾದ ಕರ್ತವ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲ.

ಜೀವನದ ಪ್ರತಿಯೊಂದು ಸನ್ನಿವೇಶವೂ ಒಂದು ಪಾಠವೇ ಸರಿ. ಹಾಗಿರುವಾಗ ಶಿಕ್ಷಣ ಯಾವಾಗ ಪ್ರಾರಂಭ ಮತ್ತು ಕೊನೆ ಯಾವಾಗ ಎಂಬ ಪ್ರಶ್ನೆಯೇ ಏಳುವುದಿಲ್ಲ. ಅದೊಂದು ನಿರಂತರ ನಡೆಯುವ ಚಟುವಟಿಕೆ. ಶಿಕ್ಷಣತಜ್ಞರು ಹೇಳುವಂತೆ ಶಿಕ್ಷಣ ತೊಟ್ಟಿಲಲ್ಲಿ ಪ್ರಾರಂಭವಾಗಿ ಆಜೀವಪರ್ಯಂತ ನಡೆಯುತ್ತಲೇ ಇರುತ್ತದೆ.

ಮಗುವಿಗೆ ಮೊದಲ ಗುರು ತಾಯಿ ಮತ್ತು ಮನೆಯೇ ಮೊದಲ ಪಾಠಶಾಲೆ. ತಾಯಿ ಮಗುವನ್ನು ಬೆಳೆಸುವಾಗ ಅದಕ್ಕೆ ಅನೇಕ ಒಳ್ಳೆಯ ಅಭ್ಯಾಸಗಳನ್ನು ಮಾಡಿಸುತ್ತಾಳೆ. ಆ ಅಭ್ಯಾಸಗಳು ಮಗುವಿನಲ್ಲಿ ಭವಿಷ್ಯ ಜೀವನಕ್ಕೆ ಬೇಕಾದ ತಿಳುವಳಿಕೆಗಳನ್ನು ಕೊಡುತ್ತವೆ. ಹಾಗೆಯೇ ಮನೆಯಲ್ಲಿ ಮಗು ದಿನನಿತ್ಯದ ಆಟಪಾಟಗಳಿಂದ ಅನೇಕ ವಿಷಯಗಳನ್ನು ಕಲಿಯುತ್ತದೆ. ಉರಿಯುವ ದೀಪವನ್ನು ನೋಡಿ ಹಿಡಿಯಲು ಪ್ರಯತ್ನಿಸುತ್ತದೆ. ಒಮ್ಮೊಮ್ಮೆ ಹಿಡಿಯಲೂಬಹುದು. ಕೈ ಬೆಚ್ಚಗಾದಾಗ ಅದಕ್ಕೆ ಆದ ಆ ಅನುಭವ ಮನಸ್ಸಿನಲ್ಲಿ ನಿಲ್ಲುತ್ತದೆ: ಮತ್ತೆ ಅಂಥ ಪ್ರಯತ್ನಕ್ಕೆ ಹೋಗುವುದಿಲ್ಲ.ಈ ಬಗೆಯ ಅನುಭವಗಳು ಕಲಿಕೆಗೆ ಅವಕಾಶ ಕೊಡುತ್ತವೆ. ಹೀಗೆ ಜೀವನದಲ್ಲಿ ಶಿಕ್ಷಣ ಅನೇಕವಿಧಗಳಲ್ಲಿ ದೊರೆಯುತ್ತದೆ. ಜಾತ್ರೆಗಳು, ಸಂತೆಗಳು ಮುಂತಾದ ಜನಸಂದಣಿ ಸೇರುವ ಸ್ಥಳಗಳಲ್ಲಿ ನಾಲ್ಕಾರು ಜನ ಕುಳಿತು ಮಾತನಾಡುವಾಗ ರೇಡಿಯೋ ಕೇಳುವುದರ ಮೂಲಕ, ಪರಿಸರದಲ್ಲಿ ಒದಗುವ ಸನ್ನಿವೇಶ

ಗಳಿಂದ ಜ್ಞಾನ ಸಂಗ್ರಹವಾಗುತ್ತದೆ. ಈ ರೀತಿಯಲ್ಲಿ ನಮ್ಮ ಪೂರ್ವಪ್ರಯತ್ನವಿಲ್ಲದೆ ಪ್ರಾಸ್ತಾವಿಕವಾಗಿ ಲಭಿಸುವ ಶಿಕ್ಷಣವನ್ನು ಲೋಕಾಭಿರಾಮ (Informal) ಶಿಕ್ಷಣವೆಂದು ಎನ್ನಬಹುದು. ಎದುರಿಗೆ ಬಂದವರನ್ನು ನಗುಮುಖದಿಂದ ಸ್ವಾಗತಿಸುವುದು, ಅತಿಥಿಗಳಿಗೆ ಸೌಜನ್ಯ ತೋರಿಸುವುದು, ದಿನನಿತ್ಯದ ಜೀವನದಲ್ಲಿ ಕೆಲವು ಅಭ್ಯಾಸಗಳನ್ನು ಅನುಸರಿಸುವುದು, ಬಸ್ ನಿಲ್ದಾಣಗಳು ರೈಲ್ವೆ ಸ್ಟೇಷನ್‌ಗಳಲ್ಲಿ ತಮ್ಮ ಸರದಿಗಾಗಿ ಕಾಯುವುದು ಇವೆಲ್ಲಾ ಲೋಕಾಭಿರಾಮ ಶಿಕ್ಷಣದ ಕೊಡುಗೆಗಳು.

ಹಲವಾರು ಮಕ್ಕಳನ್ನು ಒಂದೆಡೆ ಸೇರಿಸಿ ವಿಷಯಗಳನ್ನು ಕ್ರಮಬದ್ಧವಾಗಿ ಬೋಧಿಸುವುದು ಶಾಲಾ ಶಿಕ್ಷಣ. ಇದನ್ನು ಸಾಂಪ್ರದಾಯಿಕ (Formal) ಶಿಕ್ಷಣವೆಂದು ಕರೆಯಬಹುದು. ಈ ಶಿಕ್ಷಣವು ಎಲ್ಲ ಮಕ್ಕಳು ಮತ್ತು ಯುವಕರಿಗೂ ಆವಶ್ಯಕ. ಶಾಲಾಶಿಕ್ಷಣವಲ್ಲಿ ಅಕ್ಷರಾಭ್ಯಾಸ ಒಂದೇ ಗುರಿಯಲ್ಲ. ವಿಷಯಜ್ಞಾನಕ್ಕೂ ಮುಖ್ಯಸ್ಥಾನವಿದೆ. ಈ ಶಿಕ್ಷಣಕ್ಕೆ ಸಂಪೂರ್ಣಗಮನ ಅಗತ್ಯ; ಮತ್ತು ವ್ಯವಸ್ಥಿತವಾಗಿಯೇ ನಡೆಯಬೇಕಾಗುತ್ತದೆ. ಈ ಕ್ರಮದಲ್ಲಿ ನಿಯಮಿತವಾದ ಪಾಠದ ಪಟ್ಟಿಯಿದೆ. ಬೆಳೆಯುವ ವಿದ್ಯಾರ್ಥಿಗಳಿಗೆ ದೇಶದ ಇತಿಹಾಸ ಭೂವಿವರಣೆ, ವಿಜ್ಞಾನ, ಗಣಿತ, ಪೌರಾಡಳಿತ ಮತ್ತು ಭಾಷೆ (ಸಾಹಿತ್ಯ) ಇವುಗಳನ್ನು ಮನನ ಮಾಡಿಕೊಡುವುದು ಮುಖ್ಯ ಉದ್ದೇಶ. ಈ ವಿಷಯಗಳ ಜೊತೆಯಲ್ಲಿ ಪಾಠೇತರ ಚಟುವಟಿಕೆಗಳಾಗಿ ದೈಹಿಕಶಿಕ್ಷಣ, ಭಾಷಣಕಲೆ, ಮತ್ತು ವಿದ್ಯಾರ್ಥಿಗಳಲ್ಲಿರಬಹುದಾದ ಇತರ ಕೌಶಲಗಳನ್ನು ಬೆಳೆಸಿಕೊಳ್ಳಲು ಅವಕಾಶವಿರುತ್ತದೆ. ಶಾಲಾ ಶಿಕ್ಷಣವನ್ನು ಕೊಡುವವರು ಬೋಧನಾಕ್ರಮದಲ್ಲಿ ತರಬೇತಾದವರು. ವಿದ್ಯಾರ್ಥಿಗಳಿಗೆ ಶಿಕ್ಷಕನೇ ಮಾದರಿ, ಅನುಕರಣೀಯ ವ್ಯಕ್ತಿ. ಆದುದರಿಂದ ಗುರು ತನ್ನ ಜೀವನವನ್ನು ಸ್ವಚ್ಛವಾಗಿಟ್ಟುಕೊಂಡಿರಬೇಕು. ಹಾಗೆಯೇ ತನ್ನ ವಿದ್ಯಾರ್ಥಿಗಳ ಬಗ್ಗೆ ಆಸಕ್ತಿ, ಪ್ರೀತ್ಯಾದರಗಳನ್ನು ಹೊಂದಿರಬೇಕು. ಆಗ ಗುರುವು ವಿದ್ಯಾರ್ಥಿಯ ಪಾಲಿಗೆ ದೇವರೇ ಸರಿ.

ನಮ್ಮ ದೇಶದಲ್ಲಿ ಶಾಲಾಶಿಕ್ಷಣವನ್ನು ಎಲ್ಲರೂ ಪಡೆಯುತ್ತಿಲ್ಲ. ಕೇವಲ ರೂಢಿಯಾದ, ಲೋಕಾಭಿರಾಮವಾಗಿ ಪಡೆದ ತಿಳುವಳಿಕೆಯಿಂದ ಬಹಳ ಜನ ತಮ್ಮ ದಿನನಿತ್ಯದ ವ್ಯವಹಾರವನ್ನು ಸಾಗಿಸುತ್ತಿದ್ದಾರೆ. ನಮಗೆ ಸ್ವಾತಂತ್ರ್ಯ ಲಭಿಸಿದಾಗ (೧೯೪೭) ನಮ್ಮ ದೇಶದ ಸಾಕ್ಷರಸ್ಥರ ಸಂಖ್ಯೆ ಕೇವಲ ಶೇ ೧೨ ಆಗಿತ್ತು. ಶಾಲೆಗೆ ಹೋಗುವವರಲ್ಲಿ ಕೆಲವರು ಒಂದು ಘಟ್ಟ ಮುಟ್ಟದೇ, ಮಧ್ಯೆ ಕಳಚಿಕೊಂಡು ಕ್ರಮೇಣ ಅನಕ್ಷರಸ್ಥರೇ ಆಗುತ್ತಾರೆ. ಹೀಗಾಗಿ ಅನಕ್ಷರತೆ ನಮ್ಮ ಜನರ ಪ್ರಗತಿಗೆ ದೊಡ್ಡ ಅಡ್ಡಿಯಾಗಿದೆ. ಅದರ ಜೊತೆಗೆ ಸಂಪ್ರದಾಯಶರಣತೆ ಮೂಢನಂಬಿಕೆಗಳು ಜನಮನದಲ್ಲಿ ಬೇರೂರಿ ಬೆಳವಣಿಗೆಯನ್ನು ಇನ್ನೂ ಕುಂಠಿತವನ್ನಾಗಿ ಮಾಡಿವೆ. ಪ್ರಗತಿ ಹೊಂದಿದ ದೇಶಗಳಲ್ಲಿ ವಿಶೇಷ ಬದಲಾವಣೆಗಳುಂಟಾಗಿ ಅಲ್ಲಿನ ಜನ ಮುಂದುವರಿಯುತ್ತಿದ್ದರೆ ಅದರ ಪ್ರಭಾವ ನಮ್ಮ ದೇಶದ ಜನರಮೇಲೆ ಆಗುವ ಅವಕಾಶವೇ ಇಲ್ಲದಾಗಿದೆ. ಈ ಪರಿಸ್ಥಿತಿಯನ್ನು ಸುಧಾರಿಸಿ ನಮ್ಮ ಜನರು ದೇಶದ ಆಗುಹೋಗುಗಳಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುವಂತೆ ಮಾಡಬೇಕಾಗಿದೆ.

ಜನರನ್ನು ಸಾಕ್ಷರಸ್ಥರನ್ನಾಗಿ ಮಾಡಿದರೆ ನಮ್ಮ ಸಮಸ್ಯೆಗಳು ಬಗೆಹರಿಯುತ್ತವೆ ಎಂಬ ಕಾಲವೊಂದಿತ್ತು. ಆದರೆ ಅನಕ್ಷರತೆಯೊಂದೇ ಪ್ರಗತಿಗೆ ಅಡ್ಡಿಯಾಗಿಲ್ಲ. ಜನರಿಗೆ ತಮ್ಮ ವೃತ್ತಿಯಲ್ಲಿ ಹೆಚ್ಚಿನ ಕುಶಲತೆ, ಆರೋಗ್ಯದ ಬಗ್ಗೆ ಸೂಕ್ತ ತಿಳುವಳಿಕೆ, ಪೌರತನದ ಹಕ್ಕುಬಾಧ್ಯತೆಗಳ ಅರಿವು ಮತ್ತು ವಿರಾಮದ ಸದುಪಯೋಗ ಇವುಗಳ ಅರಿವು ಮಾಡಿಕೊಟ್ಟರೆ ನಮ್ಮ ಪ್ರಗತಿ ಸುಲಭಸಾಧ್ಯ. ಇದನ್ನರಿತ ನಮ್ಮ ಶಿಕ್ಷಣವೇತ್ತರು ನಮ್ಮ ವಯಸ್ಕರಿಗೆ ಉತ್ತಮ ಪ್ರಜೆಗಳಾಗಿ, ಉತ್ತಮ ಸಂಸಾರಿಗಳಾಗಿ, ಉತ್ತಮ ಉದ್ಯೋಗಸ್ಥರಾಗಿ ಜೀವನ ನಡೆಸುವುದಕ್ಕೆ ನೆರವಾಗುವಂತಹ ವಯಸ್ಕರ ಶಿಕ್ಷಣವನ್ನು ರೂಪಿಸಿದರು.

ನಮ್ಮ ದೇಶದಲ್ಲಿರುವಂತಹ ಸಮಸ್ಯೆಗಳು ಇನ್ನೂ ಅನೇಕ ಪ್ರಗತಿಪರ-ರಾಷ್ಟ್ರಗಳಲ್ಲಿವೆ. ಆಯಾ ರಾಷ್ಟ್ರಗಳ ಪರಿಸ್ಥಿತಿಗನುಗುಣವಾಗಿ ವಯಸ್ಕರ ಶಿಕ್ಷಣಕ್ರಮವೊಂದನ್ನು ರೂಪಿಸಲು ಸಂಯುಕ್ತರಾಷ್ಟ್ರಸಂಘದವರು

ಪ್ರೋತ್ಸಾಹ ಮತ್ತು ನೆರವನ್ನು ಕೊಡಲಾರಂಭಿಸಿದರು. ನಮ್ಮ ದೇಶ ಸ್ವತಂತ್ರವಾದಾಗ ಹೊಸ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಅನಕ್ಷರಸ್ಥರೂ ಬಡವರೂ ಆದ ನಮ್ಮ ಜನಸಮುದಾಯವನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಉತ್ತಮವಾಗುವಂತೆ ಶಿಕ್ಷಣಕ್ರಮದ ವ್ಯವಸ್ಥೆ ಮಾಡಬೇಕಾಯಿತು. ಅಲ್ಲದೆ ಪ್ರಜಾಪ್ರಭುತ್ವ ಮತ್ತು ರಾಜ್ಯಾಡಳಿತಗಳ ಬಗ್ಗೆ ಜನರಿಗೆ ತಿಳುವಳಿಕೆ ನೀಡಬೇಕಾಯಿತು. ಈ ಹೊಸ ಪರಿಸ್ಥಿತಿಗೆ ಅನುಗುಣವಾಗಿ ಮತ್ತು ದಿನದಿನಕ್ಕೂ ಬದಲಾಗುತ್ತಿರುವ ಜೀವನಕ್ರಮಕ್ಕೆ ಹೊಂದಿಕೊಳ್ಳುವಂತೆ ನಮ್ಮ ಜನರನ್ನು ಸಿದ್ಧಪಡಿಸಬೇಕಾಯಿತು. ಮಕ್ಕಳಿಗೇನೋ ಶಾಲೆಯ ಪಠ್ಯಕ್ರಮದಲ್ಲಿ ಹೊಸ ವಿಷಯಗಳನ್ನು ಸೇರಿಸಿ ಬೋಧಿಸಬಹುದು. ಆದರೆ ಶಾಲೆಗೆ ಹೋಗದವರು ಮತ್ತು ವಯಸ್ಕರಿಗಾಗಿ ಬೇರೆ ರೀತಿಯಲ್ಲಿ ಶಿಕ್ಷಣ ಕೊಡುವ ಅವಶ್ಯಕತೆ ಕಂಡಿತು. ಹೀಗೆ ರೂಪಗೊಂಡಿದ್ದೇ ಸಮಾಜ ಶಿಕ್ಷಣ. ಇದು ಭಾರತಕ್ಕೇ ವಿಶಿಷ್ಟವಾದ ಕ್ರಮವೆಂದು ಹೇಳಬಹುದು.

ಸಮಾಜಶಿಕ್ಷಣದ ಗುರಿಯನ್ನು ಹೀಗೆ ವಿವರಿಸಬಹುದು :

೧. ಬೇರೆ ಬೇರೆ ಪ್ರಾಂತಗಳ, ಬೇರೆ ಬೇರೆ ಮಾತನಾಡುವ ಭಿನ್ನವಾದ ಆಸಕ್ತಿಯುಳ್ಳ ಜನ ಬೇರೆ ಬೇರೆ ಕಾರಣಗಳಿಂದ ಒಟ್ಟಾಗಿ ವಾಸಿಸುತ್ತಿರುತ್ತಾರೆ. ಅವರು ಸಾಮರಸ್ಯದಿಂದ ಇದ್ದು ರಾಷ್ಟ್ರೀಯ ಮನೋಭಾವ ಬೆಳೆಸುವಂತೆ ಮಾಡುವುದು.

೨. ಸ್ವತಂತ್ರಭಾರತದ ಜನರ ಏಳಿಗೆಗಾಗಿ ಸುಭದ್ರ ಪ್ರಜಾಹಿತ ಆಡಳಿತ ರೂಪಿಸಿಕೊಳ್ಳಲು, ಮತ್ತು ಆವಶ್ಯಕವಾದ ವಸ್ತುಗಳನ್ನು ಸಿದ್ಧಪಡಿಸಿಕೊಳ್ಳಲು ಬೇಕಾದ ಚಟುವಟಿಕೆಗಳನ್ನು ಕೈಗೊಳ್ಳುವುದು. ಅದರಲ್ಲೂ ಮುಖ್ಯವಾಗಿ ಅವರನ್ನು ಸಾಕ್ಷರಸ್ಥರನ್ನಾಗಿ ಮಾಡಿದರೆ ಅವರು ಇತರ ಪ್ರಗತಿಶೀಲರಾಷ್ಟ್ರಗಳಲ್ಲಿ ನಡೆಯುತ್ತಿರುವ ಪ್ರಗತಿಯನ್ನು ಓದಿತಿಳಿದು ತಾವೂ ಮುಂದುವರಿಯಲು ಕಾರ್ಯಕ್ರಮಗಳನ್ನು ಕೈಗೊಳ್ಳಬಹುದು.

೩. ನಮ್ಮ ದೇಶದಲ್ಲಿರುವ ಅಗಾಧ ನೈಸರ್ಗಿಕಸಂಪತ್ತನ್ನು ದೇಶದ ಏಳಿಗೆಗಾಗಿ ಪೂರ್ಣ ಬಳಕೆ ಮಾಡಿಕೊಳ್ಳುವ ಸಾಮರ್ಥ್ಯವನ್ನು ಒದಗಿಸುವುದು. ಇದರಿಂದ ನಿರುದ್ಯೋಗದ ಸಮಸ್ಯೆ ತಕ್ಕಮಟ್ಟಿಗೆ ಪರಿಹಾರವಾದೀತೆಂದು ನಿರೀಕ್ಷೆ.

೪. ವಿಜ್ಞಾನದ ಮುನ್ನಡೆಯಿಂದಾಗಿ ಲಭಿಸಿರುವ ಹೊಸಜ್ಞಾನ ಪಡೆದುಕೊಳ್ಳುವಂತೆ ಮಾಡುವುದು– ಇವಕ್ಕೆ ಬೇಕಾದುದು ತೆರೆದ ಮನೋಭಾವ. ಅಲ್ಲದೆ ಮೂಢನಂಬಿಕೆಗಳು ಮತ್ತು ಸಂಪ್ರದಾಯಶರಣತೆಯನ್ನು ಬಿಟ್ಟು ವಿಚಾರ ವಿಮರ್ಶೆ ಮಾಡಿ ಹೊಸ ಕ್ರಮಗಳಿಗೆ ಹೊಂದಿಕೊಳ್ಳುವಂತೆ ಮಾಡುವುದು.

೫. ನಮ್ಮ ಜನರು ವಿರಾಮವನ್ನು ಸದುಪಯೋಗಪಡಿಸಿಕೊಳ್ಳುವಂತೆ ಅವರನ್ನು ಉಪಯುಕ್ತ ಉಪ ಉಪಕಸಬುಗಳಲ್ಲಿ ತೊಡಗಿಸುವುದು.

೬. ಸಾಮಾನ್ಯವಾಗಿ ಗ್ರಾಮಸ್ಥರು ಹತ್ತಿರದ ನಗರಗಳಿಗೆ ಮನರಂಜನೆಗಾಗಿ ಹೋಗಿ ವಿಶೇಷ ಕಾಲ ಮತ್ತು ಹಣವನ್ನು ವ್ಯಯಮಾಡುತ್ತಿದ್ದಾರೆ. ಇದನ್ನು ತಡೆಯಲು ನಮ್ಮ ಜಾನಪದಕಲೆ, ಯಕ್ಷಗಾನ ಮತ್ತು ಬಯಲಾಟ ಇವುಗಳನ್ನು ಪುನರುಜ್ಜೀವನಗೊಳಿಸಿ ಹಿತಕರವಾದ ಮನರಂಜನೆ ಅವರಲ್ಲಿಯೇ ದೊರೆಯುವಂತೆ ಮಾಡುವುದು.

ಈ ಗುರಿಯ ಸಾಧನೆಗಾಗಿ ಸಮಾಜಶಿಕ್ಷಣವನ್ನು ಹಲವಾರು ನಿಯೋಜಿತ ಚಟುವಟಿಕೆಗಳ ಮೂಲಕ ಒದಗಿಸಲಾಗುತ್ತದೆ. ವಯಸ್ಕ ನಿರಕ್ಷರಸ್ಥರಿಗೆ ಓದು ಬರಹ ಕಲಿಸುವುದೊಂದು ಮುಖ್ಯಕೆಲಸ. ಈಗಿನಕಾಲದಲ್ಲಿ ವಿಷಯ ಸಂಗ್ರಹಣೆಗೆ ಸಾಕ್ಷರತೆ ಬಹಳ ಸಹಕಾರಿ. ಆದರೂ ಅಕ್ಷರಸ್ಥನಾದೊಡನೆಯೇ ಅದರ ಫಲ ಪ್ರತ್ಯಕ್ಷವಾಗಿ ದೊರಕುವುದಿಲ್ಲ. ಆದುದರಿಂದ ದಿನವಿಡೀ ದುಡಿದು ಆಯಾಸಪಟ್ಟಿರುವ ಜನರಿಗೆ ರಾತ್ರಿ ಹೊತ್ತಿನಲ್ಲಿ ಶಾಲೆಗೆ ಬರಮಾಡು

ವುದು ಕಷ್ಟ. ಆದುದರಿಂದ ನಮ್ಮ ಗ್ರಾಮಸ್ಥರ ಮುಖ್ಯ ಕಸುಬಾಗಿರುವ ವ್ಯವಸಾಯದಲ್ಲಿ ಹೆಚ್ಚು ಲಾಭಗಳಿಸಲು ಅನುಕೂಲವಾಗುವಂತೆ ಕ್ರಿಯಾತ್ಮಕ ಸಾಕ್ಷರತಾ ಯೋಜನೆಯನ್ನು ಪ್ರಾರಂಭಿಸಲಾಗಿದೆ. ರೈತರು ಸುಧಾರಿತ ವ್ಯವಸಾಯ ಕೈಕೊಳ್ಳುವುದಕ್ಕೆ ಸಾಕ್ಷರತೆ ನೆರವಾಗುವಂತೆ ಈ ಕ್ರಮ ರೂಪಿತವಾಗಿದೆ. ಓದುಕಲಿತವರು ಆ ಕುಶಲತೆಯನ್ನು ಬಳಸದೆ ಹೋದರೆ ಕಲಿತ ಓದುಬರಹ ಮರೆತುಹೋಗುತ್ತದೆ. ಆದುದರಿಂದ ಕಲಿತ ಕೌಶಲ್ಯ ಮನಸ್ಸಿನಲ್ಲಿ ನಿಲ್ಲುವಂತೆ ನೂತನ ಸಾಕ್ಷರಸ್ಥರಿಗೆ (New lieterates) ಪ್ರತ್ಯಕ್ಷ ಸಾಹಿತ್ಯ ರಚಿತವಾಗುತ್ತಿದೆ. ಹಾಗೇ ಅವರ ಆಸಕ್ತಿಗಳಿಗನುಗುಣವಾದ ಪುಸ್ತಕಗಳನ್ನೊಳಗೊಂಡ ಪುಸ್ತಕ ಭಂಡಾರಗಳನ್ನು ತೆರೆಯಲಾಗುತ್ತಿದೆ.

ಓದಿ ತಿಳಿಯುವುದು ಸ್ವಲ್ಪವಾದರೆ ಕೇಳಿ, ನೋಡಿ ಕಲಿಯಲು ವಿಶೇಷ ಅವಕಾಶವಿದೆ. ಆದುದರಿಂದ ಮುಂಚಿತವಾಗಿಯೇ ಯೋಚಿಸಿ ಪರಿಣಾಮಕಾರಿಯಾದ ಶ್ರವ್ಯದೃಶ್ಯ ಉಪಕರಣಗಳು ಜನರಿಗೆ ಅನೇಕ ವಿಷಯಗಳನ್ನು ತಿಳಿಸಬಹುದು. ಶೈಕ್ಷಣಿಕಚಲನಚಿತ್ರಗಳು, ರೇಡಿಯೋಪ್ರಸಾರ, ಸ್ವಲ್ಪಕಾಲ ರಾಯಚೂರಿನಲ್ಲಿ ನಡೆದ 'ಸ್ಯಾಟಲೈಟು' ಕಾರ್ಯಕ್ರಮ ಇವು ಜನಸಾಮಾನ್ಯರಿಗೆ ಅನೇಕ ವಿಷಯಗಳನ್ನು ತಿಳಿಸುತ್ತವೆ. ಈ ದಿಸೆಯಲ್ಲಿ ಹೊಸಹೊಸ ಸಂಶೋಧನೆ ನಡೆಯುತ್ತಿದೆ.

ಪ್ರಾತ್ಯಕ್ಷಿಕೆ (Demonstration plots) ಗಳನ್ನು ಏರ್ಪಡಿಸುವುದು, ಉತ್ತಮ ಕಾರ್ಯಕ್ಷೇತ್ರಗಳಿಗೆ ವ್ಯವಸಾಯಗಾರರನ್ನು ಪ್ರವಾಸಕ್ಕೆ ಕರೆದುಕೊಂಡುಹೋಗುವುದು, ಸಾರ್ವಜನಿಕಆರೋಗ್ಯ, ಕುಟುಂಬಯೋಜನೆ ಮುಂತಾದ ವಿಷಯಗಳ ಮೇಲೆ ಚರ್ಚಾಗೋಷ್ಠಿಗಳನ್ನೇರ್ಪಡಿಸುವುದು ಮುಂತಾದ ರೀತಿಗಳಲ್ಲೂ ಸಮಾಜಶಿಕ್ಷಣ ಒದಗಿಸಬಹುದು.

ಈಗ ಮೇಲೆ ಹೇಳಿದ ಚಟುವಟಿಕೆಗಳನ್ನು ಸಾಮಾನ್ಯವಾಗಿ ಎಲ್ಲೆಡೆಗಳಲ್ಲೂ ರೂಪಿಸಬಹುದು. ಆದರೆ ಆಯಾ ಸ್ಥಳದ ಅವಶ್ಯಕತೆಗಳಿಗನುಗುಣವಾಗಿ ವಿಶೇಷಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗುತ್ತದೆ.

ಸಾಮಾನ್ಯವಾಗಿ ಊರಿನ ಜನ ಆಗಾಗ ಬಂದು ಕಲೆಯುವ ಸ್ಥಳಗಳಿರುತ್ತವೆ. ಅನೇಕ ಸ್ಥಳಗಳಲ್ಲಿ ಊರಿನ ದೇವಸ್ಥಾನದಲ್ಲಿ ಆಗಾಗ ಜನರು ಭಜನೆಗೆ ಸೇರುತ್ತಾರೆ; ಗ್ರಾಮಠಾಣೆಯಲ್ಲಿ ಕುಳಿತು ಮಾತನಾಡುತ್ತಾರೆ. ಇಂಥ ಸ್ಥಳಗಳಲ್ಲಿಯೇ ಸಾಮೂಹಿಕ ಚಟುವಟಿಕೆಗಳನ್ನೇರ್ಪಡಿಸುವುದು ಒಳ್ಳೆಯದು. ಮುಖ್ಯವಾಗಿ ಭಜನಮಂದಿರಗಳನ್ನು ಊರ್ಜಿತಗೊಳಿಸಿದರೆ ಅವು ನಮ್ಮ ಕಾರ್ಯಕ್ಷೇತ್ರಕ್ಕೆ ಬೇಕಾದ ಸಹಕಾರವನ್ನು ಕೊಡಬಲ್ಲವು. ಈಗೀಗ ಸುಮಾರು ಒಂದು ದಶಕದಿಂದ ಊರಿನ ತರುಣತರುಣಿಯರೂ ಯುವಕಸಂಘ ಮಹಿಳಾಸಮಾಜಗಳನ್ನೇರ್ಪಡಿಸಿಕೊಂಡು ತಮ್ಮ ಪ್ರದೇಶದ ತರುಣತರುಣಿಯರನ್ನು ಸಮಾಜಶಿಕ್ಷಣ ಕಾರ್ಯದಲ್ಲಿ ಭಾಗವಹಿಸಲು ಪ್ರೇರೇಪಿಸುತ್ತಿದ್ದಾರೆ, ಇದೊಂದು ಶುಭಸೂಚನೆ. ಗ್ರಾಮಗಳಲ್ಲಿ ಯುವಕಮಂಡಲಗಳೇ ಶಿಕ್ಷಣಕೇಂದ್ರಗಳಾದರೆ ಅದು ಬಹಳ ಪ್ರಯೋಜನಕರ.

ನಮ್ಮ ವಿಶ್ವವಿದ್ಯಾನಿಲಯಗಳು, ಪೌರಸಭೆಗಳು, ಗ್ರಾಮಪಂಚಾಯಿತಿಗಳು ಮತ್ತು ಇತರ ಖಾಸಗೀಸಂಸ್ಥೆಗಳು ಸಮಾಜಶಿಕ್ಷಣದಲ್ಲಿ ಬಹಳ ಪ್ರಭಾವಯುತವಾಗಿ ಪಾತ್ರವಹಿಸಬಹುದು. ರಾತ್ರಿಯ ಶಾಲೆಗಳನ್ನುನಡೆಸುವುದು, ವಾಚನಾಲಯ ಮತ್ತು ಪುಸ್ತಕ ಭಂಡಾರಗಳನ್ನು ವ್ಯವಸ್ಥೆ ಮಾಡುವುದು ಈ ಕೆಲಸಗಳನ್ನುನಿರ್ವಹಿಸಲು ಮೇಲ್ಕಂಡ ಶಾಲಾಕಾಲೇಜುಗಳು ಮತ್ತು ಖಾಸಗೀಸಂಸ್ಥೆಗಳು ಮುಂದೆ ಬಂದರೆ ಸರ್ಕಾರಕ್ಕೆ ಬಹಳ ಅನುಕೂಲವಾಗುವುದು. ಈಗೀಗ ಈ ದಿಸೆಯಲ್ಲಿ ಪ್ರಗತಿ ಕಂಡುಬರುತ್ತಿರುವುದು ಆಶಾದಾಯಕವಾಗಿದೆ.

ಸಮಾಜಶಿಕ್ಷಣ ಈಗ ಹೊಸದೊಂದು ರೂಪತಾಳಿದೆ. ಅದೇ ಅನೌಪಚಾರಿಕ ಶಿಕ್ಷಣ (Non formal Education) ಸಾಕ್ಷರತೆ,ವೃತ್ತಿಕೌಶಲ್ಯ,ಸಮಾಜಕಲ್ಯಾಣ,ಪೌರಾಡಳಿತದ ಸಮರಸ ಜೀವನ-ಇವಕ್ಕೆಸಮಾಜಶಿಕ್ಷಣದಲ್ಲಿ ಆದ್ಯತೆ ಕೊಡಲಾಗುತ್ತಿದೆ. ಈ ಬಗೆಯ ಶಿಕ್ಷಣ ಪಡೆಯಲು ನಮ್ಮಗ್ರಾಮಸ್ಥರು ನಿರೀಕ್ಷಿಸಿದಷ್ಟುಆಸಕ್ತಿ ತೋರಿಸುತ್ತಿಲ್ಲ. ಈ ಕ್ರಮದಲ್ಲಿ ಜನರಿಗೆ ಕೂಡಲೇ ನೇರವಾದ ಪ್ರಯೋಜನ ಕಾಣುತ್ತಿರಲಿಲ್ಲವೆಂಬುದೇ ಆ ಅನಾಸಕ್ತಿಗೆ

ಕಾರಣವಿರಬಹುದು. ಅವೂ ಅಲ್ಲದೆ ಈ ಶಿಕ್ಷಣದಲ್ಲಿ ಅವರ ಪಾತ್ರ ಅಷ್ಟಾಗಿಇರದೆ ವ್ಯವಸ್ಥಾಪಕರದೇ ಹೆಚ್ಚಾಗಿತ್ತು ಈ ಕೊರತೆಗಳನ್ನು ಹೋಗಲಾಡಿಸಿ ಎಲ್ಲ ಬಗೆಯ ಜನರಿಗೂ ಅಗತ್ಯವೆನಿಸುವಂತಹ ಶಿಕ್ಷಣವನ್ನು ರೂಪಿಸಲು ಸಮಾಜಶಿಕ್ಷಣತಜ್ಞರು ಯೋಚಿಸಿದರು. ಅದರ ಫಲವಾಗಿ ಸಮಾಜಶಿಕ್ಷಣ ಹೊಸದೊಂದು ರೂಪತಾಳಿ ಅನೌಪಚಾರಿಕ ಶಿಕ್ಷಣ (Non formal Education)ವಾಗಿ ಬಂದಿದೆ.

ನಮ್ಮ ಸಮಾಜದಲ್ಲಿ ಅಕ್ಷರಸ್ಥರಿದ್ದಾರೆ. ಆದರೆ ಅವರಿಗೆ ಈಗಿನ ಹೊಸ ವಿಷಯಗಳು ತಿಳಿಯದಿರಬಹುದು, ಅಥವಾ ಇನ್ನೂ ಹೆಚ್ಚು ಕುಶಲತೆಯನ್ನು ಪಡೆಯುವ ಆವಶ್ಯಕತೆ ಇರಬಹುದು. ಕೆಲವರು ಒಂದೆರಡು ವರ್ಷ ಓದು ನಿಲ್ಲಿಸಿರಬಹುದು. ಅವರ ಓದು ಅವರ ಜೀವನಸುಧಾರಣೆಗೆ ಸಾಲದೆ ಇರಬಹುದು. ಅನಕ್ಷರಸ್ಥರಿಗಂತೂ ಅಡಚಣೆಗಳು ಇದ್ದೇಇವೆ. ಈ ಎಲ್ಲರಿಗೂ ಒಂದಲ್ಲ ಒಂದು ಬಗೆಯ ಸಮಸ್ಯೆ ಕಾಡುತ್ತಲೇ ಇದೆ. ಅಲ್ಲದೆ ಅನಾರೋಗ್ಯ, ಬಡತನ ಮತ್ತು ಹಸಿವು ನಮ್ಮ ದೇಶದಲ್ಲಿ ಸರ್ವವ್ಯಾಪಿಯಾಗಿದೆ. ನಮ್ಮ ದೇಶದ ಪ್ರಗತಿಗೆ ಇವೆಲ್ಲವೂ ಪ್ರತಿಕೂಲಗಳೇ ಸರಿ. ಇವುಗಳ ಜೊತೆಗೆ ನಮ್ಮ ಜನ ದೇಶದ ಆಡಳಿತದಲ್ಲಿ ಪಾಲುದಾರರಾಗಿಲ್ಲ. ರಾಷ್ಟ್ರಪ್ರಗತಿಗೆ ನಮ್ಮ ಪ್ರಯತ್ನವೂ ಇದೆ ಎಂಬ ಅರಿವೇ ಅನೇಕರಿಗಿಲ್ಲ. ಈ ಪರಿಸ್ಥಿತಿಯನ್ನು ಸುಧಾರಿಸುವುದು ಅನೌಪಚಾರಿಕಶಿಕ್ಷಣದ ಗುರಿ. ಹೀಗೆಂದಮೇಲೆ ಅನೌಪಚಾರಿಕಶಿಕ್ಷಣವು ಎಲ್ಲ ಜನರಿಗೂ ಆವಶ್ಯಕ ಸರಿ. ಆದರೆ ಈ ಶಿಕ್ಷಣವನ್ನು ಎಲ್ಲರಿಗೂ ಒದಗಿಸಬೇಕಾದರೆ ಕೋಟ್ಯಾಂತರ ರೂಪಾಯಿಗಳು ಬೇಕು. ಆದುದರಿಂದ ಈಗ ಅನಕ್ಷರಸ್ಥರು ಮತ್ತು ಅರೆಸಾಕ್ಷರಸ್ಥರಿಗೆ ಮಾತ್ರ ಈ ಹೊಸ ಶಿಕ್ಷಣದ ಪ್ರಯೋಜನವನ್ನೊದಗಿಸಲು ನಿರ್ಧರಿಸಿದ್ದಾರೆ. ಅದರಲ್ಲೂ ಶಕ್ತಿ ಸಾಮರ್ಥ್ಯ ಉತ್ಸಾಹಹೊಂದಿ ಕೂಡಲೇ ದೇಶದ ಪ್ರಗತಿಗೆ ನೆರವಾಗಬಲ್ಲ ೧೫-೩೫ ವಯೋಮಿತಿಯ ತರುಣರಿಗೆ ಪ್ರಮುಖವಾಗಿ ಈ ಯೋಜನೆಯನ್ನು ಅನ್ವಯಿಸುವುದು ಪ್ರಥಮಕರ್ತವ್ಯ ಎನಿಸಿದೆ.

ಅನೌಪಚಾರಿಕಶಿಕ್ಷಣವು, ಆ ಹೆಸರೇ ಸೂಚಿಸುವಂತೆ ಯಾವ ನಿರ್ದಿಷ್ಟಕ್ರಮವನ್ನೂ ನೆಚ್ಚಿರುವುದಿಲ್ಲ. ಸಮಯೋಚಿತವಾಗಿ, ಜನರ ಜ್ಞಾನದ ಮಟ್ಟ ಅಭಿರುಚಿ ಆವಶ್ಯಕತೆಗಳನ್ನು ಗಮನಿಸಿ ಅದಕ್ಕೆ ತಕ್ಕಂತೆ ಬೋಧನಾಕ್ರಮವನ್ನು ರೂಪಿಸಿಕೊಳ್ಳಬೇಕಾಗುತ್ತದೆ. ಅಂದರೆ ಎಲ್ಲ ಕಡೆಗೂ ಒಂದೇ ರೀತಿಯ ಶಿಕ್ಷಣವನ್ನು ಏರ್ಪಡಿಸುವಂತಿಲ್ಲ. ಅದಕ್ಕೆ ಕಾರಣ ಎಲ್ಲ ಕಡೆಗಳಲ್ಲಿಯೂ ಪರಿಸರ ಒಂದೇ ರೀತಿ ಇರುವುದಿಲ್ಲ, ಜನಜೀವನ ಒಂದೇ ಮಟ್ಟದಲ್ಲಿರುವುದಿಲ್ಲ. ಸಮಸ್ಯೆಗಳು ಒಂದು ಕಡೆ ಇದ್ದಂತೆ ಇನ್ನೊಂದು ಕಡೆ ಇರುವುದಿಲ್ಲ. ಒಂದು ಊರಿನಲ್ಲಿ ಅನಾರೋಗ್ಯ ಮುಖ್ಯಸಮಸ್ಯೆ ಇರಬಹುದು. ಇನ್ನೊಂದು ಊರಿನಲ್ಲಿ ವ್ಯವಸಾಯ ಕ್ರಮದಲ್ಲಿ ಜನ ಹಿಂದುಳಿದಿರಬಹುದು. ಮತ್ತೊಂದು ಕಡೆ ಜನರಿಗೆ ಲಾಭದಾಯಕ ಉಪಕಸುಬು ಅತಿ ಅಗತ್ಯವಾಗಿರಬಹುದು. ಹೀಗೆ ಬೇರೆ ಬೇರೆ ಸ್ಥಳಗಳಲ್ಲಿರುವ ಜೀವನ ಸಮಸ್ಯೆಯನ್ನು ಪರಿಹರಿಸಿ ಅಲ್ಲಿನ ಜನರ ಜೀವನವು ಸುಗಮವಾಗುವಂತೆ ಶಿಕ್ಷಣ ಕೊಡುವುದೇ ಅನೌಪಚಾರಿಕ ಶಿಕ್ಷಣದ ವೈಶಿಷ್ಟ್ಯ. ಆದುದರಿಂದ ಎಲ್ಲ ಕಡೆಗಳಲ್ಲಿಯೂ ಒಂದೇ ರೀತಿಯ, ಒಂದೇ ವಿಷಯವನ್ನು ಕುರಿತ ಬೋಧನೆ ಇರಲು ಸಾಧ್ಯವಿಲ್ಲ. ಬೋಧನೆಯ ವಿಷಯ ಮತ್ತು ಕ್ರಮದಲ್ಲೂ ವೈವಿಧ್ಯತೆಯಿದೆ.

ಅನೌಪಚಾರಿಕ ಶಿಕ್ಷಣದಲ್ಲಿ ಅಧಿಕಾರದ ಸುಳಿವೂ ಇಲ್ಲ. ದರ್ಪಕ್ಕಂತೂ ಎಡೆಯೇ ಇಲ್ಲ. ಪ್ರೀತಿ ವಿಶ್ವಾಸಗಳ ಆಧಾರದ ಮೇಲೆ ಜೀವನಸಮಸ್ಯೆಗಳ ಬಗ್ಗೆ ಅನೌಪಚಾರಿಕವಾಗಿ ಜ್ಞಾನಪ್ರಸಾರವಾಗುತ್ತದೆ. ಅಲ್ಲದೆ ಈ ಶಿಕ್ಷಣದಲ್ಲಿ ಬೋಧಕನೊಬ್ಬನೇ ಮುಖ್ಯನಲ್ಲ. ಕಲಿಯುವವರೂ ಸಮಭಾಗಿಗಳು. ವಿಷಯಗಳನ್ನು ಕುರಿತು ತೆರೆದ ಮನೋಭಾವದ ಚರ್ಚೆ, ಅನುಭವಗಳ ವಿನಿಮಯ ಮತ್ತು ಆಯಾ ಪ್ರದೇಶಗಳಲ್ಲಿ ದೊರೆಯುವ ಸೌಲಭ್ಯಗಳು ಇವುಗಳನ್ನು ಸಾಧನವಾಗಿಟ್ಟುಕೊಂಡು ಶಿಕ್ಷಣ ಸಾಗುತ್ತದೆ. ಹಿಂದೆಯೇ ತಿಳಿಸಿದಂತೆ ೧೫-೩೫ ವಯೋಮಿತಿಯುಳ್ಳ ತರುಣರು ಮತ್ತುಹಿಂದುಳಿದವರಿಗೆ ಈ ಶಿಕ್ಷಣದಲ್ಲಿ ಆದ್ಯತೆ ಕೊಡಲಾಗಿದೆ. ನಮ್ಮದೇಶದಲ್ಲಿ ಈಗ ಸುಮಾರು

ತೊಂಭತ್ತು ಮಿಲಿಯ ಯುವಕರಿದ್ದಾರೆ. ಇವರಲ್ಲಿ ಸುಮಾರು ೫೦ ಮಿಲಿಯ ತರುಣರು ಅನಕ್ಷರಸ್ಥರು. ಸುಮಾರು ಇಪ್ಪತ್ತುಮಿಲಿಯ ಜನ ಅರ್ಧಂಬರ್ಧ ಓದಿದವರು. ಇವರಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಗ್ರಾಮಾಂತರ ಜನರಾದುವರಿಂದ ಅವರಿರುವ ಈಗಿನ ಪರಿಸರದಿಂದ ಅವರಿಗೇನೂ ಪ್ರಯೋಜನವಿಲ್ಲ. ರಚನಾತ್ಮಕ ಕಾರ್ಯಗಳಲ್ಲಿ ನಿರತರಾಗುವಂತೆ ಅವರಿಗೆ ಕೂಡಲೇ ಮಾರ್ಗದರ್ಶನ ನೀಡದಿದ್ದರೆ ಅವರಿಂದ ಸಮಾಜಕ್ಕೆ ಅಪಾಯ ಸಂಭವಿಸುವ ಸಾಧ್ಯತೆಯಿದೆ.

ಈಗ ಅನೌಪಚಾರಿಕಶಿಕ್ಷಣವನ್ನು ದೇಶದ ಎಲ್ಲಾ ರಾಜ್ಯಗಳಲ್ಲಿಯೂ ಎರಡೆರಡು ಜಿಲ್ಲೆಗಳಲ್ಲಿ ಪ್ರಾರಂಭಿಸಲಾಗಿದೆ. ಸಾಮಾನ್ಯವಾಗಿ ಹಿಂದುಳಿದ ಜಿಲ್ಲೆಗಳನ್ನೇ ಆರಿಸಿಕೊಳ್ಳಲಾಗಿದೆ. ಈ ಯೋಜನೆಯ ಕಾರ್ಯಾಚರಣೆಗೆ ತಗಲುವ ವೆಚ್ಚದಲ್ಲಿ ಒಂದು ಜಿಲ್ಲೆಯ ವೆಚ್ಚವನ್ನು ಕೇಂದ್ರವೂ ಇನ್ನೊಂದು ಜಿಲ್ಲೆಯ ವೆಚ್ಚವನ್ನು ಸಂಬಂಧಪಟ್ಟ ರಾಜ್ಯವೂ ವಹಿಸಿಕೊಳ್ಳುತ್ತದೆ. ಕರ್ನಾಟಕದಲ್ಲಿ ಶಿವಮೊಗ್ಗ ಮತ್ತು ರಾಯಚೂರು ಜಿಲ್ಲೆಗಳನ್ನು ಆರಿಸಿ ಅಲ್ಲಿ ತರಗತಿಗಳನ್ನಾಗಲೇ ಆರಂಭಿಸಲಾಗಿದೆ.

ಅನೌಪಚಾರಿಕಶಿಕ್ಷಣ ಎಲ್ಲಿ ನಡೆಯಬೇಕು ಮತ್ತು ಯಾವಾಗ ನಡೆಯಬೇಕೆಂಬ ಕಟ್ಟುಪಾಡುಗಳಿಲ್ಲ. ಕಾರ್ಖಾನೆಗಳಲ್ಲಿ, ಕಛೇರಿಗಳಲ್ಲಿ, ಶಾಲೆಗಳಲ್ಲಿ, ದೇವಸ್ಥಾನಗಳಲ್ಲಿ ಅಥವಾ ಪುಸ್ತಕಭಂಡಾರಗಳಲ್ಲಿ ಈ ಎಲ್ಲಾ ಎಡೆಗಳಲ್ಲಿಯೂ ನಡೆಯಬಹುದು. ಮುಖ್ಯವಾಗಿ ಆಯಾ ಪ್ರದೇಶದ ಜನರು ಯಾವ ನಿರ್ಬಂಧವೂ ಇಲ್ಲದೆ ಸುಲಭವಾಗಿ ಅಲ್ಲಿ ಸೇರುವಂತಿರಬೇಕು. ಹಾಗೆಯೇ ಅವರೆಲ್ಲರಿಗೂ ಬರಲು ಯಾವಾಗ ಪುರಸೊತ್ತೋ ಆಗ ಆ ತರಗತಿ ನಡೆಸಲು ಸರಿಯಾದ ಸಮಯ.

ಅನೌಪಚಾರಿಕ ಶಿಕ್ಷಣದ ಮುಖ್ಯ ಉದ್ದೇಶಗಳೇನೆಂದರೆ

೧. ತಮ್ಮ ಸುತ್ತಲಿನ ಪರಿಸರವನ್ನು ಚೆನ್ನಾಗಿ ತಿಳಿದು ಈಗಿನ ಸನ್ನಿವೇಶದಲ್ಲಿ ಆವಶ್ಯಕವಾದ ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಂಡು ಸ್ವತಂತ್ರವಾಗಿ ಯೋಚಿಸಿ ನಿರ್ಧಾರಗಳನ್ನು ಕೈಗೊಳ್ಳುವಂತೆ ಮಾಡುವುದು.

೨. ಸಮಾಜದಲ್ಲಿ ಸುಲಭವಾಗಿ ಬೆರೆತು ಅವರ ಪ್ರಗತಿಗಾಗಿ ಮತ್ತು ತನ್ನ ವೈಯುಕ್ತಿಕ ಅಭಿವೃದ್ಧಿಗೆ ಸಹಾಯಕವಾದ ಚಟುವಟಿಕೆಗಳನ್ನು ಕೈಕೊಳ್ಳುವುದು.

೩. ಆಯಾ ಸ್ಥಳದಲ್ಲಿ ಕೈಕೊಳ್ಳಬಹುದಾದ ಉದ್ಯೋಗವನ್ನು ಕುಶಲತೆಯಿಂದ ನಡೆಸುವುದರ ಮೂಲಕ ತನ್ನ ಜೀವನವನ್ನು ಸುಧಾರಿಸಿಕೊಳ್ಳುವುದು.

೪. ತಮ್ಮ ತಮ್ಮ ಸಂಸಾರಗಳನ್ನು ಚೆನ್ನಾಗಿ ವ್ಯವಸ್ಥೆಗೊಳಿಸಿಕೊಂಡು ಸುಗಮವಾಗಿ ನಡೆಸಲು ಬೇಕಾದ ತಿಳುವಳಿಕೆ ಪಡೆಯುವುದು.

ಈ ಉದ್ದೇಶಗಳ ಸಾಧನೆಗಾಗಿ ನಿರ್ದಿಷ್ಟ ಪಾಠದ ಚೌಕಟ್ಟು ಇರುವುದಿಲ್ಲ, ಯಾವ ನಿಯಮವೂ ಇರುವುದಿಲ್ಲ. ಅನೌಪಚಾರಿಕ ರೀತಿಯಲ್ಲೇ ಶಿಕ್ಷಣ ನಡೆಯುತ್ತದೆ. ಕಲಿಯುವವರ ಆಸಕ್ತಿ, ಮತ್ತು ಆಯಾ ಸ್ಥಳದ ಜನರ ಅವಶ್ಯಗಳನ್ನನುಸರಿಸಿ ಪಾಠಕ್ರಮವನ್ನು ನಿರ್ಧರಿಸಲಾಗುತ್ತದೆ. ಅಲ್ಲದೆ ಶಿಕ್ಷಣಕ್ಕಿರುವ ವಿಷಯವು ಕಲಿಯುವವರ ಪರಿಸರ,ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಸ್ಥಿತಿಗಳಿಗನುಗುಣವಾಗಿ ನಿರೂಪಿತವಾಗುತ್ತದೆ. ಬೋಧನೆಯ ತಂತ್ರಗಳನ್ನು (Techniques) ಸನ್ನಿವೇಶಕ್ಕೆ ತಕ್ಕಂತೆ ಬದಲಾಯಿಸಬೇಕಾಗುವುದು. ರಾಷ್ಟ್ರೀಯ ಸಮಸ್ಯೆಗಳು, ಪ್ರಸಕ್ತ ಸಾಮುದಾಯಿಕ ವಿಷಯಗಳು ಮತ್ತು ಕಲಿಯುವವರಿಗೆ ಆಗಾಗ ತೋರುವ ಆಸಕ್ತಿಗಳೇ ಆಯಾ ಕಾಲದ ಪಾಠದ ವಿಷಯಗಳಾಗುತ್ತವೆ. ಹೀಗಾದಾಗ ಕಲಿಯುವವರ ದಿನನಿತ್ಯದ ಜೀವನಕ್ಕೆ ಹತ್ತಿರವಾದ ಮತ್ತು ಅವರಿಗೆ ನೇರವಾಗಿ ಸಂಬಂಧಿಸಿದ ಸಮಸ್ಯೆಗಳ ಬಗ್ಗೆ ಚರ್ಚೆ, ತಿಳುವಳಿಕೆ, ಮಾರ್ಗದರ್ಶನ ಇವುಗಳನ್ನೇರ್ಪ

ಡಿಸುವುದು ಅನೌಪಚಾರಿಕ ಶಿಕ್ಷಣದ ಕ್ರಮ. ನಮ್ಮ ಜನರು ಹಿಂದೆ ತಿಳಿಸಿರುವ ಗುರಿಯನ್ನು ಸಾಧಿಸುವುದು ಮುಖ್ಯ. ಈ ಅನೌಪಚಾರಿಕ ಶಿಕ್ಷಣ ತರಗತಿ ಎಂಟರಿಂದ ಒಂಭತ್ತು ತಿಂಗಳವರೆಗೆ ನಡೆಯುತ್ತದೆ. ಶಿಕ್ಷಣ ಕೇಂದ್ರದ ಉಪಾಧ್ಯಾಯರಾಗಿ ಊರಿನ ಶಾಲಾ ಉಪಾಧ್ಯಾಯರೋ, ನಿರುದ್ಯೋಗಿ ಪದವೀಧರರೋ ಆಗಬಹುದು. ಸುಶಿಕ್ಷಿತ ಮಹಿಳೆಯರು ಅಥವಾ ನಿವೃತ್ತ ಅಧಿಕಾರಿಗಳನ್ನು ನೇಮಕ ಮಾಡುವುದು ಒಳ್ಳೆಯದು. ಊರಿನಿಂದ ಊರಿಗೆ ಕೇಂದ್ರದಿಂದ ಕೇಂದ್ರಕ್ಕೆ ಬೋಧನೆಯವಸ್ತು ಬೇರೆಬೇರೆಯಾಗುವುದರಿಂದ ನಿಯಮಿತ ಪಠ್ಯಪುಸ್ತಕಗಳೇನೂ ಇರುವುದಿಲ್ಲ. ಉಪಾಧ್ಯಾಯರೇ ಸಮಯೋಚಿತವಾಗಿ ಪಾಠಗಳನ್ನು ಸಿದ್ಧಪಡಿಸ ಬೇಕಾಗುತ್ತದೆ. ಆದರೆ ಅವರಿಗೆ ಸಹಾಯಕವಾಗುವಂತೆ ನಮ್ಮ ಪರಿಸರ, ಪ್ರಗತಿಸಾಧನೆ, ಸುಧಾರಿತ ವ್ಯವಸಾಯ, ತೋಟಗಾರಿಕೆ, ಸಹಕಾರ, ಪಶುಪಾಲನೆ, ಕೋಳಿ ಸಾಕಾಣಿಕೆ, ಉದ್ಯೋಗವಕಾಶಗಳು, ಗೃಹನಿರ್ವಹಣೆ, ಆರೋಗ್ಯ ಇವಕ್ಕೆ ಸಂಬಂಧಿಸಿದ ವಿಷಯಗಳ ಮೇಲೆ ತಜ್ಞರಿಂದ ಪುಸ್ತಕಗಳನ್ನು ಬರೆಸಿ ಆ ಪುಸ್ತಕಗಳನ್ನು ಉಪಾಧ್ಯಾಯರಿಗೆ ಒದಗಿಸಲಾಗಿದೆ. ಈ ಪುಸ್ತಕಗಳು ಪಠ್ಯಪುಸ್ತಕಗಳಲ್ಲ; ಆದರೆ ಇವು ಆಯಾ ವಿಷಯಕ್ಕೆ ಸಂಬಂಧಿಸಿದಂಥ ಕೈಪಿಡಿಗಳು ಎನ್ನಬಹುದು.

ಈ ಕೇಂದ್ರಗಳು ವಾರಕ್ಕೆ ಐದುದಿನಗಳು ನಡೆಯುತ್ತವೆ. ಆ ಅವಧಿಯಲ್ಲಿ ೧೮-೨೫ ವಯೋಮಿತಿಯ ಯುವಕರಿಗೆ ಅನೌಪಚಾರಿಕ ಶಿಕ್ಷಣದ ಪೂರ್ಣ ಲಾಭವನ್ನು ಒದಗಿಸಬಹುದೆಂಬ ನಿರೀಕ್ಷೆಯಿದೆ. ಈ ಅವಧಿಯಲ್ಲಿ ತರುಣರಿಗೆ ಮಾರ್ಗದರ್ಶನ, ಬೋಧನೆಗಾಗಿ ಒಬ್ಬರು ಉಪಾಧ್ಯಾಯರಿರುತ್ತಾರೆ. ಆದರೆ ಅವರು ಎಲ್ಲ ವಿಷಯಗಳನ್ನು ಪೂರ್ಣವಾಗಿ ತಿಳಿದಿರುವುದು ಸಾಧ್ಯವಿಲ್ಲ. ಬೇರೆ ಬೇರೆ ವಿಷಯಗಳ ಮೇಲೆ ಚರ್ಚೆ, ವಿಚಾರ ಗೋಷ್ಠಿ ಮುಂತಾದವುಗಳು ನಡೆಯುವಾಗ ಆಯಾ ಪ್ರದೇಶದ ಸಂಬಂಧಪಟ್ಟ ಅಧಿಕಾರಿಗಳು ಬಂದು ಭಾಗವಹಿಸಿದರೆ ಅದು ಬಹಳ ಲಾಭದಾಯಕವಾದೀತು. ಕೇಂದ್ರದ ಶಿಕ್ಷಣಾರ್ಥಿಗಳಿಗೆ ಬರುವ ಸಂದೇಹಗಳಿಗೆ ಸಂಬಂಧಪಟ್ಟ ಅಧಿಕಾರಿ ಆ ಕ್ಷಣವೇ ಪರಿಹಾರವನ್ನು ಸೂಚಿಸಬಹುದು. ಹೀಗೆ ಅಧಿಕಾರಿಗಳು ಅಥವಾ ಅವರ ಪ್ರತಿನಿಧಿಗಳಿಂದ ಕೂಡಿದ ಕೂಟಗಳು ಎರಡು ವಾರಕ್ಕೊಮ್ಮೆಯಾದರೂ ಸೇರಬೇಕು.

ಪರಿಣಾಮಕಾರಿಯಾದಂತಹ, ಮನಸ್ಸನ್ನು ಆಕರ್ಷಿಸುವಂತಹ, ಉಪಯುಕ್ತ ಚಟುವಟಿಕೆಗಳಲ್ಲಿ ಶಿಕ್ಷಣಾರ್ಥಿಗಳನ್ನು ತೊಡಗಿಸುವುದು ಬಹಳ ಪ್ರಯೋಜನಕರ.

ಅನೌಪಚಾರಿಕ ಶಿಕ್ಷಣ ಪ್ರಸಾರಮಾಡುವಾಗ ಕೆಲವು ಎಚ್ಚರಿಕೆಗಳನ್ನು ವಹಿಸುವುದು ಮೇಲು.

ಎಂಥ ಸಂದರ್ಭಗಳಲ್ಲೂ ಯಾವ ವಿಷಯವನ್ನೂ ಬಲವಂತವಾಗಿ ಯುವಕರ ಮೇಲೆ ಹೊರಿಸಬಾರದು. ಇನ್ನೊಬ್ಬರ ಬಲವಂತಕ್ಕಾಗಿ ಕಲಿಯಬೇಕಾದದ್ದು ಮನಸ್ಸಿಗೆ ನಾಟುವುದಿಲ್ಲ. ಪ್ರೀತಿಯ ಪ್ರಯತ್ನವಿದ್ದರೆ ಕಲಿಯುವಿಕೆ ಸುಲಭ ಮತ್ತು ಪರಿಣಾಮಕಾರಿ. ಅನೌಪಚಾರಿಕ ಶಿಕ್ಷಣದಲ್ಲಿ ಅಧಿಕಾರ, ದರ್ಪ ಇವುಗಳಿಗೆ ಸ್ಥಾನವೇ ಇಲ್ಲ. ಹಾಗೆ ಬೋಧನೆಯ ವಿಷಯ ಮತ್ತು ಅದರ ಸಾಧನೆ ಪ್ರತ್ಯಕ್ಷವಾಗಿ ಮಾಡುವಂತಹುದಾಗಿರಬೇಕು; ಕೇವಲ ಊಹೆಗೆ ಮಾತ್ರ ನಿಲುಕುವಂತಿರಬಾರದು. ತಿಳಿಸಿದ ವಿಷಯ, ಕೊಟ್ಟ ಸಲಹೆ ಮಾಡಿನೋಡುವಂತಾದರೆ ಅದನ್ನು ಜನ ಒಪ್ಪುತ್ತಾರೆ. ಈ ದೃಷ್ಟಿಯಿಂದ ಬೋಧನೆಯ ಕಾಲದಲ್ಲಿ ಸುಧಾರಿತ ಕ್ರಮಗಳ ಬಗ್ಗೆ ಚರ್ಚೆನಡೆಸುವಾಗ ಪ್ರತ್ಯಕ್ಷಿಕೆ (Demonstration) ಗಳನ್ನು ತೋರಿಸುವುದು ಬಹಳ ಒಳ್ಳೆಯದು.

ಕಲಿಯುವಿಕೆಯಲ್ಲಿ ವೈವಿಧ್ಯತೆಯಿರಬೇಕು. ಒಂದೇರೀತಿಯ ಬೋಧನಾಕ್ರಮ, ಒಂದೇವಿಧವಾದ ಅನುಭವ, ಕೆಲಸ ಇದ್ದರೆ ಸ್ವಲ್ಪ ಕಾಲದ ಮೇಲೆ ಆ ಬೋಧನೆಯಲ್ಲಿ ಬೇಸರ ಮತ್ತು ಅನಾಸಕ್ತಿಯುಂಟಾಗುತ್ತದೆ. ಮುಖ್ಯವಾಗಿ ಶಿಕ್ಷಣ ಜೀವನಕ್ಕೆ ಸಂಬಂಧಿಸಿರಬೇಕು. ಆಗ ಮಾತ್ರ ಶಿಕ್ಷಣದಲ್ಲಿ ಆಸಕ್ತಿ ಮೂಡುವುದಕ್ಕೆ ಸಾಧ್ಯ.

ಅನೌಪಚಾರಿಕ ಶಿಕ್ಷಣ ವ್ಯವಸ್ಥೆಯಲ್ಲಿ ಸರ್ಕಾರೀ ಸಂಸ್ಥೆಗಳು, ಖಾಸಗೀ ಉದ್ಯಮಗಳು ವಿಶ್ವವಿದ್ಯಾನಿಲಯಗಳು ಮತ್ತು ವಿದ್ಯಾಸಂಸ್ಥೆಗಳ ಪಾತ್ರ ಹಿರಿದು. ಲೌಕಿಕಜ್ಞಾನ, ವೃತ್ತಿಶಿಕ್ಷಣ, ಮತ್ತು ಸಾಕ್ಷರತೆಯನ್ನು ನಮ್ಮ ದೇಶದ ಜನರಿಗೆ ಎಷ್ಟು ಬೇಗ ಒದಗಿಸಿದರೆ ಅಷ್ಟು ಒಳ್ಳೆಯದು ; ನಮ್ಮ ಹಸಿವು ದಾರಿದ್ರ್ಯ ಹರಿದುಹೋಗಿ ನೆಮ್ಮದಿ ನೆಲೆಸಲು ಸಾಧ್ಯವಾಗುವುದು. ಅನೌಪಚಾರಿಕಶಿಕ್ಷಣ ಮತ್ತು ಶಾಲಾಶಿಕ್ಷಣ ಇವೆರಡರ ಸಂಪೂರ್ಣ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕೆಂಬುದು ಆಗದಮಾತು. ಕೋಟ್ಯಾಂತರ ರೂಪಾಯಿಗಳನ್ನು ಈ ಒಂದು ಬಾಬಿಗಾಗಿ ವೆಚ್ಚಮಾಡಬೇಕೆಂದು ನಿರೀಕ್ಷಿಸುವುದು ಸರಿಯಲ್ಲ. ಹಾಗೆಯೇ ನಿಧಾನವಾಗಿಯೇ ಆಗಲಿ, ಆತುರವೇನು ? ಎಂದು ಕಾಯ್ದುಕೂಡುವುದು ದೇಶದ ಹಿತದ ದೃಷ್ಟಿಯಿಂದ ತರವೂ ಅಲ್ಲ. ಅನೌಪಚಾರಿಕ ಶಿಕ್ಷಣವ ಮೂಲಕ ಜನರನ್ನು ಜಾಗೃತಗೊಳಿಸುವುದು ಎಲ್ಲರ, ಎಲ್ಲ ಸಂಘ ಸಂಸ್ಥೆಗಳ ಜವಾಬ್ದಾರಿ. ಆ ಕೆಲಸ ಚಳುವಳಿಯ ರೂಪದಲ್ಲಿ ನಡೆಯಬೇಕು.

ನಮ್ಮ ದೇಶದಲ್ಲಿ ಈಗ ಮಲ್ಲಾಡಿಹಳ್ಳಿಯ ಅನಾಥಾಶ್ರಮದಲ್ಲಿರುವ ವಿವಿಧರೀತಿಯ ಸಂಸ್ಥೆಗಳು ಜೀವನಕ್ಕೆ ಬೇಕಾದ ಶಿಕ್ಷಣದ ಮಧುರಮಿಲನ. ಮಕ್ಕಳಿಗೆ ಶಾಲೆಯಿದೆ, ಮಹಿಳೆಯರಿಗೆ ಮಹಿಳಾಸಮಾಜ, ವ್ಯಾಯಾಮಶಿಕ್ಷಣಕ್ಕೆ ಬಹಳ ಒಳ್ಳೆಯ ವ್ಯವಸ್ಥೆ ಇದೆ, ಕಾಯಕಲ್ಪಕೊಡುವ ವೈದ್ಯಶಾಲೆಯಿದೆ, ಜನರಲ್ಲಿ ಹುದುಗಿರುವ ಶಕ್ತಿಗಳನ್ನು ಬೆಳಸಿಕೊಳ್ಳಲು ವಿಶೇಷವಾದ ಅವಕಾಶವಿದೆ. ಇಡೀ ಜೀವನವನ್ನೇ ಮಾನವಕಲ್ಯಾಣಕ್ಕಾಗಿ ಮೀಸಲಾಗಿಟ್ಟಿರುವ ಕರ್ಮಯೋಗಿಯ ನಾಯಕತ್ವದಲ್ಲಿ ನಿಸ್ವಾರ್ಥಸೇವೆ ಸಲ್ಲಿಸಲು ಉತ್ಸಾಹಿಗಳಾದ ತರುಣರು ಇದ್ದಾರೆ. ಈ ಎಲ್ಲ ಸೌಭಾಗ್ಯವೂ ಇರುವಾಗ ಪರಿಸರ ಪರಿಶುದ್ಧವಾಗಿ ಸಮರಸವಾಗಿದೆಯೆಂದು ಹೇಳಬೇಕಾದುದೇನಿದೆ ? ಈ ರೀತಿಯ ಸಂಸ್ಥೆಗಳು ನಮ್ಮ ದೇಶದಲ್ಲಿ ಎಲ್ಲೆಲ್ಲೂ ಬೆಳೆದು ಬರಲಿ ಎಂದು ಹಾರೈಸೋಣ.

ಈ ಪ್ರಪಂಚದಲ್ಲಿ ಎಲ್ಲ ಸುಖವನ್ನೂ ದುಃಖವು ಛಾಯೆಯಂತೆ ಅನುಸರಿಸುತ್ತಿರುವುದನ್ನು ನೋಡುವೆವು. ಜೀವನಕ್ಕೆ ಮರಣವು ಛಾಯೆ. ಇವೆರಡೂ ಒಟ್ಟಿಗೆ ಹೋಗಬೇಕು. ಅವು ಪರಸ್ಪರ ವಿರೋಧವಾದುವಲ್ಲ, ಅವೆರಡೂ ಬೇರೆ ಸ್ಥಿತಿಗಳಲ್ಲ. ಅವೆರಡೂ ಅಂದರೆ ಜನನ ಮತ್ತು ಮರಣ, ಸುಖ ಮತ್ತು ದುಃಖ, ಒಳ್ಳೆಯದು ಮತ್ತು ಕೆಟ್ಟದ್ದು — ಎಲ್ಲ ಒಂದೇ ವಸ್ತುವಿನ ಬೇರೆ ಬೇರೆ ಸ್ಥಿತಿಗಳು ಮಾತ್ರ.

ಟಿ. ಆರ್. ನಾಗಪ್ಪ

ನಿರಕ್ಷರತಾ ನಿವಾರಣೆ-ಒಂದು ಸಮಸ್ಯೆ

ಮನಸ್ಸೇ ಎಲ್ಲಕ್ಕೂ ಮೂಲ. ಶಾಂತಿ, ಅಶಾಂತಿ, ಯುದ್ಧ ಮುಂತಾದ ಭಾವನೆಗಳ ಉಗಮಸ್ಥಾನ ಮನಸ್ಸು. ಅದನ್ನು ಸುಧಾರಿಸುವ ಸಾಧನವೇ ಶಿಕ್ಷಣ. ಇಂದಿನ ವೈಜ್ಞಾನಿಕ ಮತ್ತು ತಾಂತ್ರಿಕ ಯುಗದಲ್ಲಿ ಶಿಕ್ಷಣದ ಮೊದಲನೆಯ ಹಂತ ಸಾಕ್ಷರತೆ. ವಿಶ್ವದಲ್ಲಿ ಇಂದು 15-45 ವಯಸ್ಸಿನ ಮಿತಿಯ 1000 ಮಿಲಿಯನ್ ನಿರಕ್ಷರ ಕುಕ್ಷಿಗಳು ಇರುವರು. ನಿರಕ್ಷರತಾ ನಿವಾರಣೆ ಒಂದು ಬೃಹತ್ ಸಮಸ್ಯೆಯಾಗಿದೆ. ಅದು ಕೇವಲ ಸ್ಥಳೀಯ ಸಮಸ್ಯೆಯಾಗಿ ಉಳಿದಿಲ್ಲ. ಅದು ಯೂನೆಸ್ಕೊ ಗಮನವನ್ನೂ ಸಹ ಸೆಳೆದಿದೆ. ಯೂನೆಸ್ಕೊ ಮತ್ತು ಸಂಬಂಧಪಟ್ಟ ರಾಷ್ಟ್ರಗಳು ಅನಕ್ಷರಸ್ಥ ವಯಸ್ಕರಿಗೆ ಓದುಬರಹ ಕಲಿಸುವ ಕಾರ್ಯದಲ್ಲಿ ಸಾಕಷ್ಟು ಶ್ರದ್ಧಾಪೂರ್ವಕ ಪ್ರಯತ್ನಗಳನ್ನು ಮಾಡುತ್ತಿದೆ. ಆದರೂ ನಿರಕ್ಷರತೆ ಹೆಚ್ಚುತ್ತಲಿದೆ ಎಂಬುದನ್ನು ಕೆಳಗಿನ ತಃಖ್ತೆಯಿಂದ ಕಾಣಬಹುದು.

ಸಾಲು	15 ರಿಂದ 45 ವಯಸ್ಸಿನವರು (ಮಿಲಿಯನ್)	ಅಕ್ಷರಸ್ಥರು (ಮಿಲಿಯನ್)	ನಿರಕ್ಷರರು (ಮಿಲಿಯನ್)	ಅನಕ್ಷರತೆ (ಸೇಕಡ)
1950	1579	879	700	44.3
1960	1869	1134	735	39.3
1970	2287	1504	783	34.2

ಪ್ರತಿಯೊಂದು ದಶಕದಲ್ಲೂ ಅಕ್ಷರಸ್ಥರ ಸಂಖ್ಯೆಯ ಹೆಚ್ಚಳದ ಜೊತೆಗೆನಿರಕ್ಷರ ಕುಕ್ಷಿಗಳ ಸಂಖ್ಯೆಯೂ ಸಹ ಏರುತ್ತಲಿದೆ. 1950 ರಿಂದ 1970 ರ ಅವಧಿಯಲ್ಲಿ ನಿರಕ್ಷರತೆ ಸೇಕಡ 10 ರಷ್ಟು ಕಡಮೆಯಾಗಿದೆ. ಅಂದರೆ 625 ಮಿಲಿಯನ್ ವಯಸ್ಕರು ಅಕ್ಷರಸ್ಥರಾಗಿರುವರು. ತತ್ಪರಿಣಾಮವಾಗಿ ನಿರಕ್ಷರಿಗಳ ಸಂಖ್ಯೆ ಕುಗ್ಗದೆ 83 ಮಿಲಿಯನ್ ಹೆಚ್ಚಿದೆ. ಈ ವಿಪರ್ಯಾಸಕ್ಕೆ ಕಾರಣ ಜನಸಂಖ್ಯೆಯ ಹೆಚ್ಚಳ. 1950-70 ಅವಧಿಯಲ್ಲಿ 708 ಮಿಲಿಯನ್ ಜನಸಂಖ್ಯೆ ಹೆಚ್ಚಿದೆ. ಸಾಕ್ಷರತೆ ಪ್ರತಿಸಾಲಿನಲ್ಲಿ ಸೇಕಡ 0.5 ಏರುತ್ತಿದ್ದರೆ ಅದರ ನಾಲ್ಕು ಪಟ್ಟು ಅಂದರೆ ಸೇಕಡ 2 ರ ಪ್ರಮಾಣದಲ್ಲಿ ಜನಸಂಖ್ಯೆ ಹೆಚ್ಚುತ್ತಿದೆ. ಇದು ದೇಶದ ಪರಿಸ್ಥಿತಿ.

ಇಡೀ ವಿಶ್ವದಲ್ಲಿ ಆಫ್ರಿಕ, ಲ್ಯಾಟಿನ್ ಅಮೆರಿಕ, ಏಷ್ಯ ಮತ್ತು ಅರಬ್ ಗಣರಾಜ್ಯಗಳು ನಿರಕ್ಷರ ಕುಕ್ಷಿಗಳ ತವರು. ಉತ್ತರ ಅಮೆರಿಕ ಮತ್ತು ಯೂರೋಪು ಖಂಡಗಳೂ ಸಹ ನಿರಕ್ಷರತೆಗೆ ಹೊರತಾಗಿಲ್ಲ. ಆದರೆ

ಅಲ್ಲಿಯ ಅಲ್ಪಪ್ರಮಾಣದ ನಿರಕ್ಷರತೆಯಿಂದ ಆಯಾ ರಾಷ್ಟ್ರಗಳ ಪ್ರಗತಿ ಕುಂಠಿತವಾಗಿಲ್ಲ. ವಿವಿಧ ರಾಷ್ಟ್ರಗಳ ನಿರಕ್ಷರತೆಯ ಪ್ರಮಾಣವನ್ನು ಕೆಳಗೆ ಸೂಚಿಸಿದೆ.

ಪ್ರದೇಶಗಳ ಹೆಸರು	ನಿರಕ್ಷರತೆ (ಸೇಕಡ)
ಆಫ್ರಿಕಾ	73 7
ಅರಬ್ ಗಣರಾಜ್ಯ	73 0
ಏಷ್ಯ	46.8
ಲ್ಯಾಟಿನ್ ಅಮೆರಿಕ	23.6
ಓಷಿಯೇನಿಯ	10.3
ಯೂರೋಪು	3.6
ಉತ್ತರ ಅಮೆರಿಕ	1 5

ಭಾರತದಲ್ಲಿ ನಿರಕ್ಷರತೆ ಎಷ್ಟರಮಟ್ಟಿಗಿದೆ ಎಂಬುದನ್ನು ನೋಡೋಣ. ಪರಕೀಯರ ದಾಸ್ಯದಲ್ಲಿದ್ದ ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ ಸಾಕ್ಷರತೆ ಅಷ್ಟಾಗಿ ಮುಂದುವರಿಯಲಿಲ್ಲ. ಕಾರಣ, ಅವರು ಅದರ ಕಡೆಗೆ ಗಮನ ಕೊಡಲಿಲ್ಲ. ಆಡಳಿತವನ್ನು ನಡೆಸಲು ಬೇಕಾದ ನೌಕರರನ್ನು ತಯಾರುಮಾಡುವುದೇ ಅವರ ಗುರಿಯಾಗಿತ್ತು. 1911ರಲ್ಲಿ ಗೋಪಾಲಕೃಷ್ಣ ಗೋಖಲೆಯವರು ಇಂಪೀರಿಯಲ್ ಲೆಜಿಸ್ಲೆಟಿವ್ ಕೌನ್ಸಿಲ್ಲಿನಲ್ಲಿ ಕಡ್ಡಾಯ ಪ್ರಾಥಮಿಕ ಮಸೂದೆಯನ್ನು ಮಂಡಿಸಿದರು. ಆದರೆ ಅದು ಪಾಸಾಗಲಿಲ್ಲ. 1870 ರಿಂದ 1951ರ ವರೆಗೆ (1951 ಜನಗಣತಿಯ ಸಾಲು) ಸಾಕ್ಷರತೆ ಹೆಚ್ಚಿದ್ದು ಸೇಕಡ 13.29 ಮಾತ್ರ. ಸ್ವಾತಂತ್ರ್ಯಾನಂತರ ಭಾರತಸರಕಾರ ಮತ್ತು ರಾಜ್ಯಸರಕಾರಗಳ ಪ್ರಯತ್ನದ ಫಲವಾಗಿ ಕೇವಲ 20 ವರ್ಷಗಳಲ್ಲಿ ಅಂದರೆ 1951ರಿಂದ 1971 ರವರೆಗೆ ಸೇಕಡ 13ರಷ್ಟು ಸಾಕ್ಷರತೆ ಏರಿತು. ಆದರೂ ಅದರಿಂದ ನಾವು ಸಮಾಧಾನಪಟ್ಟುಕೊಳ್ಳುವಂತಿಲ್ಲ. ಭಾರತದಲ್ಲಿ 1951ರಿಂದ 1971ರ ಅವಧಿಯಲ್ಲಿ ಸಾಕ್ಷರತೆ ಯಾವ ಪ್ರಮಾಣದಲ್ಲಿ ಹೆಚ್ಚಿದೆ ಎಂಬ ಅಂಶವನ್ನು ಕೆಳಗಿನ ಪಟ್ಟಿಯಲ್ಲಿ ಕೊಟ್ಟಿದೆ.

ಸಾಲು	ಜನಸಂಖ್ಯೆ (ಮಿಲಿಯನ್)	ಅನಕ್ಷರಸ್ಥರು 15.44 (ಮಿಲಿಯನ್)	ಸಾಕ್ಷರತೆ (ಸೇಕಡ)
1951	361	105	16.6
1961	439	131	24.0
1971	520	150	29.35

1951ರಿಂದ 1971ರ ಅವಧಿಯಲ್ಲಿ ಸೇಕಡ 13 ರಷ್ಟು ಸಾಕ್ಷರತೆ ಏರಿದ್ದರೂ ಸಹ ನಿರಕ್ಷರಕುಕ್ಷಿಗಳ ಸಂಖ್ಯೆ 45 ಮಿಲಿಯನ್ ಹೆಚ್ಚಿದೆ. ಅದಕ್ಕೆ ಕಾರಣ ಇತರ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಂತೆ ಇಲ್ಲಿಯೂ ಸಹ ಜನಸಂಖ್ಯಾ ಸ್ಫೋಟವೇ ಆಗಿದೆ. ಸಾಕ್ಷರತೆ ವರ್ಷದಲ್ಲಿ ಸರಾಸರಿ ಸೇಕಡ 0.5 ರಷ್ಟು ಹೆಚ್ಚಿದ್ದರೆ ಜನಸಂಖ್ಯೆ ಅದರ 5 ಪಟ್ಟು ಅಂದರೆ ಸೇಕಡ 2.5 ರ ಪ್ರಮಾಣದಲ್ಲಿ ಏರಿದೆ.

ಭಾರತದಲ್ಲಿ ಪ್ರತಿ ಒಂದೂವರೆ ಸೆಕೆಂಡಿಗೆ ಒಂದುಮಗು ಹುಟ್ಟುತ್ತಿದೆ. ಅಂದರೆ ಪ್ರತಿದಿನ ಹುಟ್ಟುವ ಮಕ್ಕಳ ಸಂಖ್ಯೆ 57,000. ಪ್ರತಿವರ್ಷ 21 ಮಿಲಿಯನ್ ಮಕ್ಕಳು ಸೃಷ್ಟಿಯಾಗುವುವು; ಸಾಯುವವರ ಸಂಖ್ಯೆ 8 ಮಿಲಿಯನ್. ಒಟ್ಟನಲ್ಲಿ ಪ್ರತಿವರ್ಷ 13 ಮಿಲಿಯನ್ ಮಕ್ಕಳು ಹೆಚ್ಚಿದಂತಾಯಿತು. ಈ ಸಂಖ್ಯೆ ಆಸ್ಟ್ರೇಲಿಯ ಖಂಡದ ಜನಸಂಖ್ಯೆಗೆ ಸಮ. ಅಂದರೆ ಪ್ರತಿಸಾಲಿನಲ್ಲಿ ಒಂದು ಆಸ್ಟ್ರೇಲಿಯ ಖಂಡದಷ್ಟು ಜನಸಂಖ್ಯೆ ಭಾರತದಲ್ಲಿ ಉತ್ಪತ್ತಿಯಾಗುತ್ತಿದೆ. ಅದರ ಪರಿಣಾಮ ದೇಶದ ಆರ್ಥಿಕ, ಸಾಮಾಜಿಕ ಪರಿಸ್ಥಿತಿಯ ಮೇಲೆ ಎಷ್ಟರಮಟ್ಟಿನ ಪರಿಣಾಮವನ್ನು ಉಂಟುಮಾಡುತ್ತಿದೆ ಎಂಬುದನ್ನು ಪರಿಶೀಲಿಸಿದಲ್ಲಿ ನಿಜವಾಗಿಯೂ ಗಾಬರಿ ಆಗುವುದು. ಪ್ರತಿವರ್ಷ 12 ಮಿಲಿಯನ್ ಕ್ವಿಂಟಾಲ್ ಆಹಾರ, 189 ಮಿಲಿಯನ್ ಮೀಟರ್ ಬಟ್ಟೆ, 2.5 ಮಿಲಿಯನ್ ಮನೆಗಳು ಹೆಚ್ಚಾಗಿ ಬೇಕಾಗುವುವು. ನಾಲ್ಕು ಮಿಲಿಯನ್ ಜನರಿಗೆ ಉದ್ಯೋಗ ಒದಗಿಸಬೇಕಾಗಿದೆ. 126,500 ಶಾಲೆ ಮತ್ತು 372,500 ಹೆಚ್ಚು ಉಪಾಧ್ಯಾಯರ ಆವಶ್ಯಕತೆಯಿದೆ.

ಜನಸಂಖ್ಯೆಯ ಹೆಚ್ಚಳದ ಪರಿಣಾಮವಾಗಿ ಉಂಟಾಗುವ ದುಷ್ಪರಿಣಾಮಗಳನ್ನು ನಿವಾರಿಸಲು ಜನಸಂಖ್ಯೆಯನ್ನು ಹತೋಟಿಯಲ್ಲಿಡುವುದು ಅತ್ಯಗತ್ಯವಾಗಿ ಆಗಬೇಕಾದ ಕಾರ್ಯ. ಅದು ಅಷ್ಟೊಂದು ಸುಲಭಸಾಧ್ಯವಾದ ಕಾರ್ಯವಲ್ಲ. ಆದರೂ ಭಾರತಸರಕಾರ ಈ ದಿಸೆಯಲ್ಲಿ ವಿಶೇಷವಾದ ಪ್ರಯತ್ನಮಾಡುತ್ತಿದೆ. ಮಿತ ಕುಟುಂಬಯೋಜನೆಯ ವಿಚಾರದಲ್ಲಿ ತೀವ್ರವಾದ ಪ್ರಚಾರವನ್ನು ಕೈಕೊಂಡಿದೆ. 'ಎರಡು ಸಾಕು, ಮೂರರ ನಂತರ ಬೇಕಿಲ್ಲ' ಮುಂತಾದ ಭಿತ್ತಿಪತ್ರಗಳು ಎಲ್ಲೆಲ್ಲೂ ಎದ್ದು ಕಾಣುತ್ತಿವೆ. ಆದರೆ ಸಂಪ್ರದಾಯ ಶರಣತೆ ಮತ್ತು ಮೂಢನಂಬಿಕೆಗಳ ಕಾರಣವಾಗಿ 'ಮೂರರ ನಂತರ ಬ್ರೇಕಿಲ್ಲ' ಆಗಿದೆ. ಕಾರಣವೇನು ?

ಭಾರತದಲ್ಲಿ 15 ರಿಂದ 45 ವಯಸ್ಸಿನ 100 ಮಿಲಿಯನ್ ದಂಪತಿಗಳು ಇಲ್ಲವೆ ವಿವಾಹವಾಗುವ ವಯಸ್ಸಿನವರು ಇದ್ದಾರೆ ಎಂಬುದಾಗಿ ಅಂದಾಜು ಮಾಡಲಾಗಿದೆ. ಅವರಲ್ಲಿ ಬಹುಪಾಲು ಹಳ್ಳಿಗಾಡಿನವರು, ನಿರಕ್ಷರಕುಕ್ಷಿಗಳು. ಮಕ್ಕಳು ದೇವರು ಕೊಟ್ಟ ವರ ಎಂಬ ಕುರುಡುನಂಬಿಕೆಯುಳ್ಳವರು. ಗಂಡುಮಕ್ಕಳು ತಂದೆತಾಯಂದಿರನ್ನು ಸ್ವರ್ಗಕ್ಕೆ ಕಳುಹಿಸುವ ರಹದಾರಿ ಹೊಂದಿರುವವರು ಎಂಬ ಮೂಢಭಾವನೆ ಹೊಂದಿರುವವರು ಅನೇಕರು. ಈ ಭಾವನೆ ಸುಧಾರಿಸಿದ ಕುಟುಂಬಗಳಲ್ಲಿಯೂ ಸಹ ಇರುವಂತೆ ಕಾಣುವುದು. ಈ ತೆರನಾದ ಸಂಪ್ರದಾಯಶರಣತೆ ಮತ್ತು ಕುರುಡುನಂಬಿಕೆಗಳ ಕಾರಣ ಜನಸಂಖ್ಯೆ ನಾಗಾಲೋಟದಲ್ಲಿ ಏರುತ್ತಿದೆ. ಹೀಗಾಗದಿರಲು ಜನತೆಯಲ್ಲಿ ತೀವ್ರವಾದ ಶಿಕ್ಷಣಪ್ರಸಾರ ಅನಿವಾರ್ಯ.

ಭಾರತದಲ್ಲಿ ಶಿಕ್ಷಣ ಎರಡು ವಿಧದಲ್ಲಿ ನಡೆಯುತ್ತಿದೆ. 1) ಕಡ್ಡಾಯ ಪ್ರಾಥಮಿಕಶಿಕ್ಷಣ. 2) ವಯಸ್ಕರ ನಿರಕ್ಷರತಾನಿವಾರಣೆ. ಭಾರತದಲ್ಲಿ ಕಡ್ಡಾಯ ಪ್ರಾಥಮಿಕಶಿಕ್ಷಣ 1961ರಲ್ಲಿ ಜಾರಿಗೆ ಬಂದಿತು. ಅದರ ಪ್ರಕಾರ ಎಲ್ಲ ಮಕ್ಕಳಿಗೆ ಶಾಲೆಗಳನ್ನು 1976ನೆಯ ಸಾಲಿಗೆ ಒದಗಿಸಲು ಸಾಧ್ಯ ಎಂದು ಅಂದಾಜು ಮಾಡಲಾಗಿತ್ತು. ಈಗ ಅದರ ಅಂದಾಜು 1981ಕ್ಕೆ ಮುಂದುವರಿದಿದೆ ಅದಿರಲಿ, ಪ್ರಾಥಮಿಕ ಶಾಲೆಗೆ ಸೇರಿದ ಎಲ್ಲ ಮಕ್ಕಳು 7 ವರ್ಷದ ಪ್ರಾಥಮಿಕ ಶಿಕ್ಷಣವನ್ನು ಪೂರೈಸುವರೆ ? ಇಲ್ಲ. ಶಾಲೆಗೆ ಸೇರಿದ 100 ಮಕ್ಕಳಲ್ಲಿ ಸೇಕಡ 34 ಮಕ್ಕಳು ಮಾತ್ರ 7ನೆಯ ತರಗತಿ ಮುಟ್ಟುವರು. ಅಂದರೆ ಶಾಲೆಗಳನ್ನು ಸೇಕಡ 66 ಮಕ್ಕಳು ಬಿಟ್ಟಹಾಗಾಯಿತು. ಪ್ರಾಥಮಿಕ ಶಿಕ್ಷಣದಲ್ಲಿ ಎಷ್ಟೊಂದು ಪೋಲು ! ಒಂದು ಮಗುವಿಗೆ ಒಂದು ವರ್ಷದ ಪ್ರಾಥಮಿಕ ಶಿಕ್ಷಣ ನೀಡಲು ಸರಾಸರಿ 35 ರೂಪಾಯಿ ಖರ್ಚಾಗುವುದು. ಶಾಲೆಯನ್ನು ಮಧ್ಯದಲ್ಲೇ ಬಿಡುವ ಮಕ್ಕಳಿಂದ ಎಷ್ಟೊಂದು ಹಣ ಮತ್ತು ಶ್ರಮ ವ್ಯರ್ಥವಾಗಿ ಪೋಲಾಗುತ್ತಿದೆಯೆಂಬ ಅಂಶ ವ್ಯಕ್ತವಾಗುವುದು. ಈ ಶೋಚನೀಯ ಪರಿಸ್ಥಿತಿಗೆ ಪೋಷಕರ ಅಜ್ಞಾನವೂ ಸಹ ಒಂದು ಕಾರಣ. ಆದ್ದರಿಂದ ಪ್ರಾಥಮಿಕ ಶಿಕ್ಷಣದ ಯಶಸ್ಸಿಗೆ ವಯಸ್ಕರ ಅಕ್ಷರಪ್ರಚಾರ ಪೋಷಕ. ಅದನ್ನು ಕಡೆಗಣಿಸಲಾಗದು. ಒಬ್ಬ ವಯಸ್ಕನಿಗೆ ಓದುಬರಹ ಕಲಿಸಲು ಸರಾಸರಿ 30 ರೂಪಾಯಿ ಖರ್ಚಾಗುವುದು. ಭಾರತದಲ್ಲಿ ಅನೇಕ ರೀತಿಯಲ್ಲಿ ವಯಸ್ಕರ

ಅಕ್ಷರ ಪ್ರಚಾರ ಕಾರ್ಯಕ್ರಮಗಳು ನಡೆಯುತ್ತಿದೆ. ಸಾಂಪ್ರದಾಯಿಕ ಸಾಕ್ಷರತಾ ಕಾರ್ಯಕ್ರಮದಲ್ಲಿರುವ ನ್ಯೂನತೆಗಳನ್ನು ಸರಿಪಡಿಸಲು ರೈತರ ಕ್ರಿಯಾತ್ಮಕ ಸಾಕ್ಷರತಾಕಾರ್ಯಕ್ರಮಗಳು ಕಾರ್ಯಗತವಾಗುತ್ತಿವೆ. ವಯಸ್ಕರ ಸಾಕ್ಷರತೆ ಮತ್ತು ಸಮಾಜಶಿಕ್ಷಣ ಯೋಜನೆಗಳಲ್ಲಿ ಕಂಡುಬಂದ ಲೋಪದೋಷಗಳನ್ನರಿತು ಅನೌಪಚಾರಿಕ ಶಿಕ್ಷಣ ಯೋಜನೆಯನ್ನು 1976–77ರಿಂದ ಕಾರ್ಯಗತ ಮಾಡಲಾಗುತ್ತಿದೆ. ಇದುವರಿವಿಗೆ ಭಾರತಸರಕಾರ ವಯಸ್ಕರ ಶಿಕ್ಷಣಕ್ಕೆ ಖರ್ಚು ಮಾಡಿರುವ ಹಣವೆಷ್ಟು ಎಂಬುದನ್ನು ಕೆಳಗೆ ಕೊಟ್ಟಿರುವ ತಃಖ್ತೆಯಿಂದ ತಿಳಿಯಬಹುದು.

ಯೋಜನೆಯ ಅವಧಿ	ಶಿಕ್ಷಣಕ್ಕೆ ತಗುಲಿದ ವೆಚ್ಚ (ಕೋಟಿ ರೂ)	ನಿರಕ್ಷರತಾ ನಿವಾರಣೆ ಮತ್ತು ವಯಸ್ಕರ ಶಿಕ್ಷಣಕ್ಕೆ (ಕೋಟಿ ರೂ.)	ಶಿಕ್ಷಣದಲ್ಲಿ ಸೇಕಡ ಎಷ್ಟುಭಾಗ ವ.ಶಿ ಕ್ಕೆ ಖರ್ಚಾಗಿದೆ
1ನೆಯ ಯೋಜನೆ	153	5	3.3
2 ,, ,,	273	4	1.4
3 ,, ,,	589	2	0.3
4 ,, ,,	824 24	8.30	1.0
5 ,, ,,	580	50 (ಆಖೈರಾಗಿ ತೀರ್ಮಾನವಾಗಬೇಕಾಗಿದೆ.)	

ಭಾರತದ ಪ್ರಜಾಪ್ರಭುತ್ವ ವಿಶ್ವದಲ್ಲೇ ಅತಿದೊಡ್ಡದು. 1961ರಲ್ಲಿದ್ದ ಮತದಾರರ ಸಂಖ್ಯೆ 22.3 ಕೋಟಿ. ಅವರಲ್ಲಿ 5 8 ಕೋಟಿ ಮಂದಿ ಮಾತ್ರ ಅಕ್ಷರಸ್ಥರು. ಈಗ 1971ರ ಮತದಾರರ ಪಟ್ಟಿಯಪ್ರಕಾರ 285.98 ಮಿಲಿಯನ್ ಏರಿದೆ. ಅದರೊಂದಿಗೆ ಅಕ್ಷರಸ್ಥರ ಸಂಖ್ಯೆಯೂ ಸಹ ಸ್ವಲ್ಪಮಟ್ಟಿಗೆ ಏರಿರಬಹುದು. ಅನಕ್ಷರತೆ ಮತ್ತು ಅಜ್ಞಾನ ಪ್ರಜಾಪ್ರಭುತ್ವದ ಕಡುವೈರಿಗಳು. ನಿರಕ್ಷರಕುಕ್ಷಿ ರಾಜಕೀಯದಿಂದ ಹೊರಗೆ ಎಂಬುದಾಗಿ ಲೆನಿನ್ ಹೇಳಿರುವನು. ಪ್ರಜಾಪ್ರಭುತ್ವದಲ್ಲಿ ಪ್ರಜೆಯೇ ಪ್ರಭು. ಅವನೇ ಅಜ್ಞಾನಿಯಾದರೆ? 'ಯಥಾರಾಜ ತಥಾ ಪ್ರಜಾ' ಎಂಬ ನಾಣ್ಣುಡಿ ಇದೆ. ಈಗ ಅದನ್ನು 'ಯಥಾಪ್ರಜಾ ತಥಾ ಸರಕಾರ' ಎಂದು ಬದಲಾಯಿಸಿಕೊಳ್ಳಬೇಕಾಗಿದೆ. ಈಗ ಪ್ರತಿ ಸಾರ್ವಜನಿಕ ಚುನಾವಣೆಯಲ್ಲಿ ಅನಕ್ಷರಸ್ಥರು ಯಾವ ರೀತಿ ಮತದಾನ ಮಾಡುತ್ತಿರುವರು ಎಂಬುದು ಎಲ್ಲರಿಗೂ ತಿಳಿದಿರುವ ವಿಷಯ. 1952 ರ ಸಾರ್ವಜನಿಕ ಚುನಾವಣೆಯಲ್ಲಿ ಸೇಕಡ 2 ಮತಗಳು ಕುಲಗೆಟ್ಟವು. ಅದು 1957ರಲ್ಲಿ ಎರಡುಪಟ್ಟು ಹೆಚ್ಚಿತು. 1962ರಲ್ಲಿ ಅದು ಸೇಕಡ 5ಕ್ಕೆ ಹೆಚ್ಚಿತು. ಆದ್ದರಿಂದ ರಾಜಕೀಯ ದೃಷ್ಟಿಯಿಂದಲೂ ನಮ್ಮ 'ಪ್ರಭು'ವಿನ ನಿರಕ್ಷರತಾ ನಿವಾರಣೆಯ ಕಡೆಗೆ ಆದ್ಯಗಮನ ನೀಡಬೇಕಾಗಿದೆ. ವಯಸ್ಕರು ದೇಶದ ಆಗುಹೋಗುಗಳಿಗೆ ಪೂರ್ಣ ಜವಾಬ್ದಾರರು. ಭವಿಷ್ಯ ಭಾರತವನ್ನು ನಿರ್ಮಿಸುವವರು ಅವರೇ?

ಭಾರತದಲ್ಲಿ 1971ರ ಜನಗಣತಿಯ ಪ್ರಕಾರ 150 ಮಿಲಿಯನ್ ನಿರಕ್ಷರಕುಕ್ಷಿಗಳಿರುವರು. ಡಾ|| ವಿ. ಕೆ. ಆರ್. ವಿ. ರಾವ್‌ರವರ ಅಂದಾಜಿನ ಪ್ರಕಾರ ಅವರೆಲ್ಲರನ್ನೂ ಅಕ್ಷರಸ್ಥರನ್ನಾಗಿ ಮಾಡಲು 450 ಕೋಟಿ ರೂಪಾಯಿ ಹೊಂಚಬೇಕಾಗಿದೆ. ಪ್ರಸಕ್ತ ಪರಿಸ್ಥಿತಿಯಲ್ಲಿ ಅಷ್ಟೊಂದು ಹಣವನ್ನು ಹೊಂದಿಸುವುದು ಕಷ್ಟಸಾಧ್ಯವೇ ಸರಿ. ಅದರಿಂದ ನಿರಕ್ಷರತಾ ನಿವಾರಣಾ ಸಮಸ್ಯೆಯನ್ನು ನಿವಾರಿಸಲು ರಷ್ಯ, ಇಂಡೊನೇಷಿಯ ಮತ್ತು ಕ್ಯೂಬ ರಾಷ್ಟ್ರಗಳ ಮೇಲ್ಪಂಕ್ತಿಯನ್ನು ಅನುಸರಿಸುವುದು ಅನಿವಾರ್ಯ. ಆದರೆ "ಭಾರತದಲ್ಲ ವಯಸ್ಕರ ಶಿಕ್ಷಣ ಮತ್ತು ಸಾಕ್ಷರತಾ ಕಾರ್ಯಕ್ರಮಕ್ಕೆ ನಾಯಕತ್ವವಿಲ್ಲದೆ, ಅಗತ್ಯ ಜನಪ್ರಿಯತೆ ಇಲ್ಲದೆ, ಸಾರ್ವಜನಿಕ ಬೆಂಬಲ ಇಲ್ಲದೆ ಸೊರಗಿದೆ. ಈ ಬೃಹತ್ ಸಮಸ್ಯೆಯನ್ನು ರಾಜಕೀಯ ಮಟ್ಟದಲ್ಲಿ, ಜನಪ್ರಿಯ ನಾಯಕತ್ವದ ಮಟ್ಟದಲ್ಲಿ ಪರಿಶೀಲಿಸಿ ಪರಿಹಾರ ಹುಡುಕಬೇಕಾಗಿದೆ." ಎಂಬುದಾಗಿ ಡಾ|| ವಿ.ಕೆ. ಆರ್. ವಿ. ರಾವ್. ತಿಳಿಸಿರುವರು.

ಡಾ. ಸದಾನಂದ ನಾಯಕ

ಮಕ್ಕಳ ಬಗೆಗೆ ಜವಾಹರಲಾಲರ ಅಂತಃಕರಣ

ನೆಹರೂರವರು, ಜಗದ್ವಿಖ್ಯಾತ ವ್ಯಕ್ತಿಗಳು, ಮಹಾಪುರುಷರು. ಅವರ ಹುಟ್ಟುಹಬ್ಬವು ಹದಿನಾಲ್ಕನೆಯ ನವಂಬರದಂದು. ಪ್ರತಿ ವರುಷವೂ ಭಾರತದ ಮಕ್ಕಳು ಅವರ ಹುಟ್ಟುಹಬ್ಬವನ್ನು ಆಚರಿಸುವ ಇಂಥ ಸಂದರ್ಭದಲ್ಲಿ ಅವರ ಜೀವನದಲ್ಲಿ ಜರುಗಿದ ಹಲವಾರು ಘಟನೆಗಳನ್ನು ನೆನೆಸುವುದೂ, ಅವರ ಅನುಭವದ ವಿಷಯವಾಗಿ ಚಿಂತನೆ ಮಾಡುವುದೂ ಅವರ ಉದಾತ್ತ ಭಾವನೆಗಳನ್ನು ಮೆಲಕು ಹಾಕುವುದೂ ಸಮಯೋಚಿತವಾಗಿರುವುದು. ಅವರು ಮಕ್ಕಳ ವಿಷಯವಾಗಿ ಇಟ್ಟುಕೊಂಡಿದ್ದ ದೃಷ್ಟಿಯನ್ನು ಕುರಿತು ಕೆಲವೊಂದು ಮಾತುಗಳನ್ನು ಸ್ಮರಣೆಗೆ ತಂದುಕೊಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿರುವುದು.

ನೆಹರೂರವರು ಮಕ್ಕಳನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಹೋದಲ್ಲೆಲ್ಲ ಅವರನ್ನು ಕಾಣಲು ತವಕಿಸುತ್ತಿದ್ದರು. ಅವರ ಆಟಪಾಟಗಳಲ್ಲಿ ತಲ್ಲೀನರಾಗುತ್ತಿದ್ದರು. ದಿನವೆಲ್ಲ ಭಾರೀ ಕೆಲಸಗಳಲ್ಲಿ ತೊಡಗಿ ಉಂಟಾಗಿದ್ದ ಮೈಮನಸ್ಸುಗಳ ದಣಿವನ್ನೆಲ್ಲ ಮಕ್ಕಳ ಮನೋರಂಜನೆಯ ಮಧ್ಯದಲ್ಲಿ ಅವರು ಮರೆಯುತ್ತಿದ್ದರು. ಅಷ್ಟೇ ಅಲ್ಲ, ತಮ್ಮನ್ನು ತಾವೇ ಮರೆಯುತ್ತಿದ್ದರು. ಮಕ್ಕಳ ವಿಷಯವಾಗಿ ಅವರಲ್ಲಿರುವ ಅಪಾರವಾದ ಪ್ರೀತಿ, ಗೌರವಭಾವನೆಗಳು ದೇಶದ ಮಕ್ಕಳೆಲ್ಲ ಅವರನ್ನು 'ಚಾಚಾ' ಎಂದು ಸಂಬೋಧಿಸುವುದರಲ್ಲಿ ಪ್ರತಿಧ್ವನಿತವಾಗಿದ್ದವು. ನಮ್ಮ ದೇಶದಲ್ಲಿಯಷ್ಟೇ ಅಲ್ಲ, ಸಂಯುಕ್ತ ರಾಷ್ಟ್ರ ಸಂಘಟನೆಯೆಂಬ ವಿಶ್ವ-ಸಂಸ್ಥೆಯ ಮೂಲಕ ಇಡಿಯ ಜಗತ್ತಿನಲ್ಲಿಯೇ ಅವರ ಜನ್ಮದಿನವು ಮಕ್ಕಳ-ದಿನಾಚರಣೆಯೆಂಬ ಹೆಸರಿನಿಂದ ಎಲ್ಲೆಲ್ಲಿಯೂ ಆಚರಿಸಲ್ಪಡುತ್ತಿರುವುದು ಅವರಲ್ಲಿ ಮಕ್ಕಳ ವಿಷಯವಾಗಿ ನೆಲಸಿದ್ದ ಅಪಾರವಾದ ಪ್ರೀತಿಯ ದ್ಯೋತಕವಾಗಿರುವುದು.

ನೆಹರೂರವರು ರಾಜಕೀಯಧುರೀಣರಾಗಿದ್ದರೂ ಭಾವಜೀವಿಗಳು. ಅಗ್ರಗಣ್ಯವಾದ ಗದ್ಯಗ್ರಂಥಕಾರರೂ, ಉಜ್ವಲವಾಗ್ಮಿಗಳೂ ಆಗಿದ್ದರೂ ಅವರು ಕವಿಹೃದಯದ ಸಂವೇದನೆಯುಳ್ಳವರಾಗಿದ್ದರು. ಭಾರತದ ಮಕ್ಕಳನ್ನು ಉದ್ದೇಶಿಸಿ ಬರೆದ ಒಂದು ಪತ್ರದಲ್ಲಿ ಅವರು ಹೀಗೆ ಹೇಳಿರುವರು : "ನೀವು ನನ್ನ ಜೊತೆಗಿದ್ದರೆ ನಾನೇನು ಮಾಡುತ್ತಿದ್ದೆ ಬಲ್ಲಿರಾ ? ಸೌಂದರ್ಯಪೂರ್ಣವಾದ ನಮ್ಮೀ ಜಗತ್ತಿನ ವಿಷಯವಾಗಿ ನಿಮ್ಮೊಡನೆ ನಾನು ಎಷ್ಟೋ ಸಂಗತಿಗಳನ್ನು ಮಾತನಾಡುತ್ತಿದ್ದೆ. ಈ ಗಿಡ-ಮರಗಳು, ಹೂವುಗಳು, ಪಶುಗಳು, ಪಕ್ಷಿಗಳು, ಪರ್ವತಾವಳಿಗಳು, ಹಿಮನದಿಗಳು, ಇನ್ನೂ ಎಷ್ಟೋ ಸುಂದರವಾದ ವಸ್ತುಗಳು-ಇವೆಲ್ಲಾ ನಮ್ಮ ಸುತ್ತಮುತ್ತಲೂ ವ್ಯಾಪಿಸಿಕೊಂಡು ಇರುವವಲ್ಲಾ, ಅವೆಲ್ಲವುಗಳ ಬಗೆಗೆ ನಾನು ನಿಮ್ಮೊಡನೆ ಎಷ್ಟೋ ಮಾತುಗಳನ್ನು ಆಡುತ್ತಿದ್ದೆ. ನೀವು ಎಷ್ಟೋ ಅದ್ಭುತಕತೆಗಳನ್ನು ಓದಿರುವಿರಿ. ಈ ಜಗತ್ತಿನ ಕತೆಯಾದರೂ ಒಂದು ದೊಡ್ಡ ಮಾಯಾದೇವತೆಯ ಕಥೆಯೇ ಆಗಿದೆ. ಇಷ್ಟು ಅದ್ಭುತವಾದ ಸಾಹಸಕಥೆಯನ್ನು ಯಾವ ಕಥೆಗಾರನೂ ಇನ್ನೂ ಬರೆದಿರುವುದಿಲ್ಲ. ಅವನ್ನು ನೋಡುವ ಕಣ್ಣುಗಳು, ಕೇಳುವ ಕಿವಿಗಳು, ಈ ಸೃಷ್ಟಿಯ ಅದ್ಭುತ ಜೀವನ ಹಾಗೂ ಸೌಂದರ್ಯವನ್ನು ಗ್ರಹಿಸಲು ಯಾವಾ

ಗಲೂ ಆತುರವಾಗಿರುವ ಮನಸ್ಸು ಇವಷ್ಟು ನಮಗೆ ಅವಶ್ಯವಾಗಿ ಬೇಕು." ಈ ಸೌಂದರ್ಯ ದೃಷ್ಟಿಯೇ ಚಿಕ್ಕ ಮಕ್ಕಳಿಗೆಲ್ಲ ಅವರು ಕೊಟ್ಟ ಕಾಣಿಕೆಯಾಗಿರುವುದು. ಅದು ಅವರ ಹುಟ್ಟುಹಬ್ಬದ ಕಾಣಿಕೆ. ಮಕ್ಕಳೆಲ್ಲರೂ ತಮ್ಮ ಅಂತಃಕರಣದಲ್ಲಿ ಅದನ್ನು ಸದಾಕಾಲವೂ ಜತನವಾಗಿ ಇಟ್ಟುಕೊಂಡು ರಕ್ಷಿಸಬೇಕಾದ ಅಮೌಲ್ಯ ಕಾಣಿಕೆಯಾಗಿರುವುದು.

ಅವರ ಜೀವನದೃಷ್ಟಿಯೂ ಅದೇ ಆಗಿರುವುದು-ಜೀವನದಲ್ಲಿ ಸೌಂದರ್ಯವನ್ನು ಕಂಡುಕೊಳ್ಳುವ ದೃಷ್ಟಿ. ಪ್ರಾಕೃತಿಕ ಸ್ವರೂಪದಲ್ಲಿ ಸೌಂದರ್ಯವಿದೆ. ಅದನ್ನು ಅಂತಃಕರಣದಲ್ಲಿ ಅಳವಡಿಸಿಕೊಳ್ಳಬೇಕು. ಅದೇ ದೃಷ್ಟಿಯು ಸದ್ಗುಣಗಳ ವಿಷಯವಾಗಿಯೂ ಬೇಕು, ಸೌಜನ್ಯದ ವಿಷಯವಾಗಿಯೂ ಬೇಕು. ಸುಹೃತ್ ಅಂದರೆ ಹೃದಯವಂತರಾದ ಗೆಳೆಯರ ಸಹವಾಸದ ವಿಷಯವಾಗಿಯೂ ಬೇಕು. ಸಜ್ಜನರ ಸಮೂಹವನ್ನು ಸಮಾವೇಶಗೊಳಿಸುವುದರಲ್ಲಿಯೂ ಬೇಕು. ಅದಕ್ಕಿಂತಲೂ ಹೆಚ್ಚಾಗಿ ಒಳ್ಳೆಯದರ (ಅಂದರೆ ಸೌಂದರ್ಯಯುಕ್ತವಾಗಿರುವುದರ) ರಕ್ಷಣೆಗಾಗಿ ಹಾಗೂ ದುಷ್ಟಶಕ್ತಿಗಳ ಪ್ರತಿಭಟನೆಗಾಗಿ ಅದು ಬೇಕೇಬೇಕು. ಅವರು ಇಂಥ ಒಂದು ಮಹತ್ವದ ದೃಷ್ಟಿಯನ್ನು ಪಡೆದ ಮಹಾಸೇನಾನಿಯಾಗಿದ್ದರು ಎಂಬುದನ್ನು ನಾವು ಮರೆಯಬಾರದು.

ಸಣ್ಣ ಮಕ್ಕಳೆಂದರೆ ಸೌಂದರ್ಯದ ಅಪರೂಪ ಸಮೂಹ. ಪ್ರತಿಯೊಂದು ಮಗುವಿನ ನಗುಮುಖವೆಂದರೆ, ಒಂದೊಂದು ಅರಳುವ ಮಲ್ಲಿಗೆ-ಗುಲಾಬಿ ಹೂವು. ಸಾವಿರಾರು ಮಕ್ಕಳು ಕೂಡಿದಾಗ, ಅವು ನಗುನಗುತ್ತಾ ಆಡುವಾಗ, ಕುಣಿಯುವಾಗ, ಅದೆಂಥ ಸೌಂದರ್ಯದ ಅನುಪಮ ಸಮ್ಮೇಲನ ! ಜವಾಹರಲಾಲರಿಗೆ ಅವರ ಮಧ್ಯದಲ್ಲಿರುವುದೆಂದರೆ ಅಪಾರವಾದ ಸಂತೋಷ. ಅವರೊಡನೆ ಮಾತನಾಡುವುದು, ಪ್ರಶ್ನೆ ಕೇಳುವುದು, ಕತೆ ಕೇಳುವುದು, ಹಾಡುಗಳನ್ನು ಕೇಳುವುದು, ಅವರ ಮುದ್ದುಮುದ್ದು ಮಾತುಗಳನ್ನು ಆಲಿಸುವುದು,ಮಕ್ಕಳೊಡನೆ ಬೆರೆತು ಕಾಲ ಕಳೆಯುವುದೆಂದರೇ ಅವರಿಗೆ ಅಷ್ಟು ಪ್ರೀತಿ, ಆನಂದ. ಅಂತೆಯೇ ಅವರು ಮಕ್ಕಳಿಗೆಲ್ಲ 'ಚಾಚಾ' ಎಂದು ಹೆಸರಾಗಿರುವರು.

ಮಕ್ಕಳ ಮೇಲೆ ಅವರಿಗೆ ಎಷ್ಟೊಂದು ಪ್ರೀತಿಯಿತ್ತು ಎಂಬ ವಿಷಯವಾಗಿ ಒಂದು ಪ್ರತ್ಯಕ್ಷ ಉದಾಹರಣೆಯನ್ನು ಇಲ್ಲಿ ಕೊಡಬಹುದು. ಕೆಲವು ವರ್ಷಗಳ ಹಿಂದೆ ಹುಬ್ಬಳ್ಳಿಯಲ್ಲಿ ನಗರ ಸಭೆಯ ಶತಮಾನೋತ್ಸವದ ಸಿದ್ಧತೆಯು ಸಾಗಿತ್ತು. ಆಗ ಮುಖ್ಯ ಅತಿಥಿಗಳಾಗಿ ದಿಲ್ಲಿಯಿಂದ ಜವಾಹರಲಾಲ ನೆಹರುರವರು ಬರುವವರಿದ್ದರು. ಅವರ ವ್ಯಾಖ್ಯಾನಕ್ಕಾಗಿ ರೇಲ್ವೇ ಮೈದಾನದಲ್ಲಿ ಸಕಲ ಸಂಭ್ರಮವಾದ ವೇದಿಕೆಯ ಸಿದ್ಧತೆಯು ನಡೆದಿತ್ತು. ಲಕ್ಷಾವಧಿ ಜನರು ಆ ಸಮಾರಂಭದಲ್ಲಿ ಭಾಗವಹಿಸುವವರಿದ್ದರು. ಧಾರವಾಡದಿಂದ ಹುಬ್ಬಳ್ಳಿಯವರೆಗೆ ಹಲವಾರು ಸಂಸ್ಥೆಗಳಲ್ಲಿ ಅವರ ಭೆಟ್ಟಿ, ಉದ್ಘಾಟನೆ, ವ್ಯಾಖ್ಯಾನ ಇತ್ಯಾದಿ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು. ಆದರೆ ಅವರ ವಿಶ್ರಾಂತಿಗಾಗಿ ಹಾಗೂ ಮನಸ್ಸಿನ ನೆಮ್ಮದಿಗಾಗಿ ಯಾವುದಾದರೊಂದು ಕಾರ್ಯಕ್ರಮ ಬೇಕು ಎಂದು ಆಗಿನ ಧಾರವಾಡ ಜಿಲ್ಲೆಯ ಕಲೆಕ್ಟರಿಗೆ ತೋಚಿತು. ಮಕ್ಕಳ ಕೂಟವೇ (Childrens Rally) ಯೋಗ್ಯವೆಂದು ಅವರು ಎಣಿಸಿದರು. ಹುಬ್ಬಳ್ಳಿಯಲ್ಲಿಯೇ ಅದನ್ನು ಏರ್ಪಡಿಸಬೇಕೆಂದೂ ಹವಣಿಸಿದರು. ಆಗ ಶ್ರೀ ತೇರಗಾಂವಕರರು ಧಾರವಾಡ ಜಿಲ್ಲೆಯ ಶಿಕ್ಷಣಾಧಿಕಾರಿಗಳಾಗಿದ್ದರು. ಅವರನ್ನು ಕರೆದು ತಮ್ಮ ಆಶಯವನ್ನು ತಿಳಿಸಿದರು. ಶ್ರೀ ತೇರಗಾಂವಕರರು ಕೂಡಲೇ ಹುಬ್ಬಳ್ಳಿಗೆ ಬಂದು, ಈ ಕಾರ್ಯ ನಿರ್ವಹಣೆಗಾಗಿ ತಮ್ಮ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದರು. ಸರ್ವ ಶ್ರೀ ಹಾಲಪ್ಪನವರು, ಭಸ್ಮೆಯವರು, ಹಬೀಬ ಅವರು ಆ ಸಮಿತಿಯ ಸದಸ್ಯರೂ, ಹಾಗೂ ನಾನು ಕಾರ್ಯದರ್ಶಿಯಾಗಿಯೂ ಕಾರ್ಯಪ್ರವೃತ್ತರಾದೆವು. ಹುಬ್ಬಳ್ಳಿಯ ಏಳನೆಯ ಇಯತ್ತೆಯವರೆಗಿನ ಎಲ್ಲ ಪ್ರಾಥಮಿಕ ಶಾಲೆಯ ಮಕ್ಕಳೂ, ಹಾಯ್-ಸ್ಕೂಲುಗಳೊಳಗಿನ ಐದರಿಂದ ಏಳನೆಯ ಇಯತ್ತೆಯವರೆಗಿನ ಎಲ್ಲ ಮಕ್ಕಳೂ ಮಕ್ಕಳ ಕೂಟದಲ್ಲಿ ಭಾಗವಹಿಸುವಂತೆ ನಾವು ಸಂಘಟಿಸಿದೆವು. ಲೆಮಿಂಗ್ಟನ್ ಹಾಯ್‌ಸ್ಕೂಲಿನ ಮುಂದಿನ ಮೈದಾನವನ್ನು ಆ ಕಾರ್ಯಕ್ರಮಕ್ಕಾಗಿ ಆರಿಸಿಕೊಂಡೆವು. ಎಂಟು ದಿನ ಮುಂಚಿತವಾಗಿ ನಾವು ಮಾಡಿದ ವ್ಯವಸ್ಥೆಯ ಪೂರ್ವ

ಪರೀಕ್ಷೆಗಾಗಿ ಶ್ರೀ ನೆಹರೂರವರ ರಕ್ಷಣಾಪಡೆಯ ಮುಖ್ಯಸ್ಥರಾದ ಶ್ರೀ ಹಂಡಾ ಅವರು ಬಂದರು. ಮಕ್ಕಳ ಕೂಟವನ್ನು ಪ್ರದರ್ಶಿಸುವುದು ಸಾಮಾನ್ಯ ಕೆಲಸವಲ್ಲ. ಜಗತ್ತಿನಲ್ಲಿ ಎಲ್ಲಿಯೂ ಅದು ಯಶಸ್ವಿಯಾದದ್ದನ್ನು ನಾವು ಕಂಡಿಲ್ಲ. ನೆಹರೂರವರ ಜೊತೆಗೆ ಸಾವಿರಾರು ಮೈಲು ಪ್ರವಾಸದ ಮೂಲಕ ತಮಗೆ ಈ ಅನುಭವ ಬಂದಿದೆ ಎಂಬುದಾಗಿ ನಮಗೆ ಅವರು ಎಚ್ಚರಿಸಿದರು. ಅವರು ಹೇಳಿದ ಸೂಚನೆಗಳೆಲ್ಲವನ್ನೂ ನಾವು ಚಾಚೂ ತಪ್ಪದೇ ಪಾಲಿಸಿದೆವು. ಅವರ ಇಚ್ಛೆಯಂತೆ ಬಹು ಪ್ರಯಾಸಪಟ್ಟು ಇಪ್ಪತ್ತೈದುಸಾವಿರಕ್ಕೂ ಮೇಲ್ಪಟ್ಟು ಮಕ್ಕಳ ಕೂಟವನ್ನು ನಾವು ಅಲ್ಲಿ ಏರ್ಪಡಿಸಿದೆವು. ಅದಕ್ಕೂ ಹೆಚ್ಚಾಗಿ ಪ್ರೇಕ್ಷಕರು ಸುತ್ತಲೂ ನೆರೆದಿದ್ದರು. ನೆಹರೂರವರು ಬಂದರು. ಅವರ ಜೊತೆಗೆ ಅವರ ಮಗಳು ಶ್ರೀಮತಿ ಇಂದಿರಾಗಾಂಧಿಯವರೂ ಇದ್ದರು. ನಾವು ಅವರನ್ನು ವೇದಿಕೆಗೆ ಕರೆದೊಯ್ದೆವು. ಬಣ್ಣಬಣ್ಣದ ಸಮವಸ್ತ್ರಗಳನ್ನು ಧರಿಸಿದ ಮಕ್ಕಳು ಕೂಚು, ಕವಾಯಿತು, ನೃತ್ಯಗಳನ್ನು ಪ್ರದರ್ಶಿಸುತ್ತಿದ್ದಂತೆಯೇ, ನೆಹರೂರವರಿಗೆ ಯಾವ ಹುರುಪು ಬಂದಿತೋ ಏನೋ, ವೇದಿಕೆಯಿಂದ ಜಿಗಿದು ಓಡುತ್ತ ಹೋಗಿ, ಮಂದಿ ಮುನ್ನುಗ್ಗದಂತೆ ಕಟ್ಟಿದ ಕಂಬಗಳನ್ನೇರಿ ತೀರ ಸಮೀಪದಿಂದ ಮಕ್ಕಳ ವಂದನೆಗಳನ್ನು ಸ್ವೀಕರಿಸಿ, ಅವರ ಆಟಪಾಟಗಳನ್ನು ವೀಕ್ಷಿಸಿದರು. ಮುಂದೆ ಅವರ ಮನಸ್ಸು ತುಂಬ ಆಲ್ಹಾದದಾಯಕವಾಗಿತ್ತೆಂದು ಎಲ್ಲ ಮುಖಂಡರೂ ಪ್ರಶಂಸಿಸಿದರು. ನೆಹರೂರವರು ಸ್ವತಃ ಆ ಮಕ್ಕಳ ಕೂಟದ ವಿಷಯವಾಗಿ ತುಂಬ ಸಮಾಧಾನವನ್ನು ವ್ಯಕ್ತಪಡಿಸಿದರು. ಆ ಮೈದಾನಿಗೆ ನೆಹರೂ ಮೈದಾನವೆಂದು ಹೆಸರು ತಂದಿರುವುದು ಆ ಮಕ್ಕಳ ಕೂಟವೇ ಎಂಬುದು ಇಂದು ಎಷ್ಟೋ ಮಂದಿಗೆ ಗೊತ್ತಿರಲಿಕ್ಕಿಲ್ಲ.

ಮಕ್ಕಳು ಯಾವ ಪ್ರಕಾರದ ಕತೆ–ಸಿನೇಮಾ ನೋಡಬೇಕು, ಎಂಥ ಪುಸ್ತಕಗಳನ್ನು ಓದಬೇಕು ಎಂಬ ಬಗ್ಗೆ ಅವರು ತುಂಬ ಸೂಕ್ಷ್ಮ ಬುದ್ಧಿಯುಳ್ಳವರಾಗಿದ್ದರು. ಒಮ್ಮೆ ಅವರ ಚಿಕ್ಕ ಮೊಮ್ಮಕ್ಕಳು, ಸಂಜಯ ಮತ್ತು ರಾಜೀವರವರಿಗೆ ಯಾರೊ ಉಗ್ರವಾದ ಬಣ್ಣಬಣ್ಣದ ಹಾಗೂ ಭಯಂಕರವಾದ ಚಿತ್ರಗಳುಳ್ಳ ಪುಸ್ತಕಗಳನ್ನು ಕಾಣಿಕೆಯಾಗಿ ಕೊಟ್ಟಿದ್ದರು. ಆದರೆ ನೆಹರೂ ಅವರಿಗೆ ಅವು ಸರಿ ಬರಲಿಲ್ಲ. ಅಂಥ ಪುಸ್ತಕಗಳನ್ನು ಮಕ್ಕಳು ಓದಕೂಡದೆಂದು ಅವರು ಪ್ರತಿಭಟಿಸಿದರು.

ದಿಲ್ಲಿಯಲ್ಲಿ ಒಮ್ಮೆ ಮಕ್ಕಳ ಜೊತೆಯಲ್ಲಿ ಆಡುತ್ತಿದ್ದಾಗ ಕೆಲವು ಮಕ್ಕಳು ಅವರಿಗೆ ಕೇಳಿದರು : "ನೀವು ಜಪಾನಿನ ಮಕ್ಕಳಿಗೆ ಆನೆಯ ಮರಿಯನ್ನು ಕಳಿಸಿದಿರಿ. ಕೆಲವು ದೇಶದ ಮಕ್ಕಳಿಗೆ ಹುಲಿಯ ಮರಿಯನ್ನೂ ಕಳಿಸಿದಿರಿ, ನಮಗೆ ಏನು ಕೊಡುವಿರಿ ?" ನೆಹರೂರವರು ತಟ್ಟನೆ ಕೇಳಿದರು : "ಹಾಗಾದರೆ ನೀವೂ ಆ ಮರಿಗಳ ಸಂಗಡ ಪ್ರಾಣಿಸಂಗ್ರಹಾಲಯದಲ್ಲಿರಲು ಸಿದ್ಧರಿರುವಿರಾ ?" ನೆಹರೂರವರ ಗಂಭೀರವಾದ ಮುಖವನ್ನು ನೋಡಿ ಮಕ್ಕಳಿಗೆ ಮುಂದೆ ಮಾತಾಡುವುದು ಆಗಲಿಲ್ಲ.

ಹೆಣ್ಣುಮಕ್ಕಳ ಶಾಲೆಗೆ ಒಮ್ಮೆ ಅವರು ಭೆಟ್ಟಿಯನ್ನಿತ್ತಿದ್ದರು. ಅವರೊಡನೆ ಆಡುತ್ತಿದ್ದಾಗ, ಕೆಲವರು ಅವರಿಗೆ ಕೇಳಿದರು: "ಚಾಚಾ, ನಿಮಗೆ ಹೆಣ್ಣುಮಕ್ಕಳ ಮೇಲೆ ಹೆಚ್ಚು ಪ್ರೀತಿಯೋ, ಗಂಡುಮಕ್ಕಳ ಮೇಲೆಯೋ ?" ಚಾಚಾ ತುಸು ಹೊತ್ತು ನೋಡಿದರು. ಸುತ್ತಲೆಲ್ಲ ಹೆಣ್ಣುಮಕ್ಕಳೇ. ಕೂಡಲೇ ಹೇಳಿದರು : "ನನಗೆ ಹೆಣ್ಣುಮಕ್ಕಳ ಮೇಲೆಯೇ ಹೆಚ್ಚು ಪ್ರೀತಿ".

ಹಾಗೆಂದರೆ, ಅವರಿಗೆ ಮಕ್ಕಳ ವಿಷಯವಾಗಿದ್ದ ಪ್ರೀತಿಯನ್ನು ಅರಿತುಕೊಳ್ಳುವದಾದರೆ, ಅವರು ತಮ್ಮ ಮಗಳು ಇಂದಿರಾ–ಪ್ರಿಯದರ್ಶಿನಿ ಚಿಕ್ಕವಳಿದ್ದಾಗ ಅವಳಿಗೆ ತಾವು ಜೈಲಿನಿಂದ ಬರೆದ ಪತ್ರಗಳನ್ನು ಓದಿ ನೋಡಬೇಕು. ಅವರಿಗೆ ಒಬ್ಬಳೇ ಮಗಳು. ಅವಳು ಚಿಕ್ಕವಳಿದ್ದಾಗ ಅವರು ೩–೪ ಸಲ ಸೆರೆಮನೆಗೆ ಹೋದರು. ಅಲ್ಲಿಂದ ಅವರು ನೂರಾರು ಪತ್ರಗಳನ್ನು ಅವಳಿಗೆ ಬರೆದರು. ಜಗತ್ತಿನ ಇತಿಹಾಸ, ವಿಜ್ಞಾನ, ರಾಜನೀತಿ ಇವೇ ಅವುಗಳೊಳಗಿನ ವಿಷಯಗಳಾಗಿದ್ದವು. ಅವುಗಳನ್ನು ಹಿಂದಿನಿಂದ ಹಲವು ಸಂಪುಟಗಳಲ್ಲಿ ಪ್ರಕಟಿಸಲಾಗಿದೆ. 'Letters from a father to his daughter' ಹಾಗೂ 'Glimpses of world history'–ಇವು

ಅತ್ಯುತ್ತಮವಾದ ಗ್ರಂಥಗಳಾಗಿರುವವು. ಚಾಚಾ ನೆಹರೂರವರ ಮೇಲೆ ಪ್ರೀತಿಯಿದ್ದ ಪ್ರತಿಯೊಬ್ಬ ಮಗುವೂ ಅವುಗಳನ್ನು ಓದಲೇಬೇಕು. ಅಷ್ಟು ಅವು ಅಮೌಲ್ಯವಾಗಿರುವವು. 'ಇತಿಹಾಸವು ನಮ್ಮಲ್ಲಿ ಮಾನವನ ಅಭಿವೃದ್ಧಿಯ ಹಾಗೂ ಪ್ರಗತಿಯ ತಿಳುವಳಿಕೆಯನ್ನು ಉಂಟುಮಾಡುವುದಲ್ಲದೇ ಅದು ಮಾನವನಲ್ಲಿ ಹುದುಗಿರುವ ಅನಂತವಾದ ಪುರೋಗಾಮಿತ್ವದ ಸಾಮರ್ಥ್ಯವನ್ನೂ ನಮ್ಮಲ್ಲಿ ಒಡಮೂಡಿಸುವುದು.' ಎಂಬ ಅವರ ಇತಿಹಾಸದ ಪ್ರಜ್ಞೆಯು ನಮ್ಮಲ್ಲಿ ಪ್ರತಿಬಿಂಬಿಸುವಂತಾಗಬೇಕು.

'ಪ್ರಿಯದರ್ಶಿನಿ, ಇಂದು ಬೆಳಿಗ್ಗೆ ಸೆರೆಮನೆಯಿಂದ ಕುಳಿತಿದ್ದಂತೆ ದೂರದಿಂದ ಸಾವಿರಾರು ಜನ ಕೂಗುತ್ತಿರುವ ಧ್ವನಿಯೊಂದು ನನಗೆ ಬೆರಗುಗೊಳಿಸಿತು. 'ಇಂಕ್ವಿಲಾಬ್ ಝಿಂದಾಬಾದ್' ಎಂದು ಎಲ್ಲಿಂದಲೋ ಅದು ತೂರಿಬರುತ್ತಿತ್ತು. ನಮ್ಮ ದೇಶದ ಜನ ಎಚ್ಚೆತ್ತಿದೆ. ಸ್ವಾತಂತ್ರ್ಯಕ್ಕಾಗಿ ಅವರ ಹೋರಾಟ ನಡೆದಿದೆ. ಗಂಡಸರಂತೂ ಸರಿಯೇ, ಕೋಮಲ ಹೃದಯದ ಹೆಣ್ಣು ಮಕ್ಕಳೂ ಕೂಡ ಪರದೆಯೊಳಗಿಂದ ಹೊರಗೆ ಬಂದು ಪರಂಪರಾಗತವಾದ ಬಂಧನಗಳನ್ನು ಬದಿಗೊತ್ತಿ ರಾಷ್ಟ್ರೀಯ ಆಂದೋಲನದಲ್ಲಿ ಭಾಗವಹಿಸುತ್ತಿರುವರಲ್ಲಾ, ಅದು ದೇಶದ ಸೌಭಾಗ್ಯವೆಂದು ನಾನು ತಿಳಿಯುತ್ತೇನೆ" ಎಂದಿರುವರು ಒಂದು ಪತ್ರದಲ್ಲಿ.

ಜವಾಹರಲಾಲರು ಹುಟ್ಟಿದುದು ಅತಿ ಶ್ರೀಮಂತರ ಮನೆತನ. ಅಲಹಾಬಾದದೊಳಗಿನ ಅವರ ನಿವಾಸವಾದ ಆನಂದಮಹಲವು ಒಂದು ಅರಮನೆಯೇ ಆಗಿತ್ತು. ಅವರ ತಂದೆ ಮೋತೀಲಾಲರು ಮಹಾಮೇಧಾವಿಗಳು, ಭಾರತದೊಳಗಿನ ಒಬ್ಬ ಪ್ರಭಾವೀಧುರೀಣರು. ಜವಾಹರರು ಅವರಿಗೆ ಏಕಮೇವ ಪುತ್ರ. ಚಿಕ್ಕಂದಿನಲ್ಲಿ ಅವರನ್ನು ಎಷ್ಟು ಅಚ್ಚಾ ಮಾಡಿದ್ದರೆಂಬುದನ್ನು ಊಹಿಸಿಯೇ ತಿಳಿಯಬೇಕು. ಇಂಥವರು ಸೆರೆಮನೆಗೆ ಹೋಗುವರೆಂಬ ಕಲ್ಪನೆಯೇ ಅವರ ತಂದೆಯವರನ್ನು ನಡುಗಿಸಿತ್ತು. ಒಂದು ದಿನ ತಾವೇ ತಮ್ಮ ಮಂಚದ ಕೆಳಗೆ ನೆಲದ ಮೇಲೆ ಮಲಗಿ ಅದರ ಸಂಕಟವನ್ನು ಅನುಭವಿಸಿದ್ದರು. ಆ ಮೇಲೆ ಆ ಮನೆಯವರೆಲ್ಲರೂ ಒಬ್ಬೊಬ್ಬರಾಗಿ ಸೆರೆಮನೆಯ ವಾಸವನ್ನು ಅನುಭವಿಸಿ ಬಂದರು. ಇದು ಇತಿಹಾಸ ಪ್ರಸಿದ್ಧವಾದ ಸಂಗತಿಯಾಗಿರುವುದು. ಪುಟ್ಟ ಇಂದಿರಾಗೂ ಆ ಬಾಧೆ ತಟ್ಟದೆ ಇರಲಿಲ್ಲ. ಒಬ್ಬಳೇ ಮಗಳಾಗಿದ್ದುದರಿಂದ ಅವಳ ಮೇಲೆ ಜವಾಹರರ ಅಪಾರವಾದ ಪ್ರೇಮವು ಇದ್ದೇ ಇತ್ತು. ಆದರೆ ಅವರು ಅವಳನ್ನು ಅಚ್ಚಾ ಮಾಡಿ ಬೆಳಿಸಿರಲಿಲ್ಲ. ಮಕ್ಕಳು ಸ್ವಾವಲಂಬಿಗಳಾಗಬೇಕು, ಅಂಜಿಕೆಯಿಲ್ಲದವರಾಗಬೇಕು ಎಂಬುದು ಅವರ ಧ್ಯೇಯವಾಗಿತ್ತು. ಅವಳಿಗೆ ಸಾಯಕಲ್ಲು ಕಲಿಸುವಾಗ ನಡುವೇ ಕೈಬಿಡುತ್ತಿದ್ದರು. ಈಜು ಕಲಿಸುವಾಗಲೂ ಹಾಗೆಯೇ. ರೈಲು ಪ್ರವಾಸ ಮಾಡುವಾಗ ದೂರದ ಪ್ರವಾಸವಾದರೂ ಮೂರನೆಯ ವರ್ಗದ ಟಿಕೇಟನ್ನು ಕೊಂಡುಕೊಂಡು ಒಬ್ಬಳೇ ಹೋಗಲು ಹೇಳುತ್ತಿದ್ದರು. ವಿದ್ಯಾಭ್ಯಾಸಕ್ಕಂತೂ ಅವರು ಅವಳನ್ನು ಬಹಳೇ ದೂರ ದೂರ ಕಳುಹಿಸಿದ್ದರು—ಚಿಕ್ಕವಳಾಗಿದ್ದಾಗ ಪುಣೆ, ಆಮೇಲೆ ಶಾಂತಿನಿಕೇತನ, ಕೊನೆಗೆ ಒಕ್ಸಫೋರ್ಡು. ಸೆರೆಮನೆಯಿಂದ ಬರೆದ ಒಂದು ಪತ್ರದಲ್ಲಿ ಅವಳಿಗೆ ಹೀಗೆ ಬರೆದಿದ್ದಾರೆ : "ನೀನು ಅಂಜಿಕೆಯನ್ನು ಬಿಡಬೇಕು. ಧೈರ್ಯವನ್ನು ಬೆಳಿಸಿಕೊಳ್ಳಬೇಕು. ನಾವು ತಪ್ಪು ಮಾಡುತ್ತಿದ್ದರೆ, ಇತರರಿಗೆ ಅನ್ಯಾಯ ಮಾಡುತ್ತಿದ್ದರೆ-ಹೆದರಿಕೆ ನಮ್ಮ ಬೆನ್ನ ಹಿಂದೆಯೇ ಇರುವುದು. ಆದರೆ ನಮ್ಮ ವಿಚಾರಗಳನ್ನು ಯಾವಾಗಲೂ ನಾಲ್ಕು ಮಂದಿಯ ಮುಂದೆ ಸ್ಪಷ್ಟವಾಗಿ ಹೇಳುತ್ತಿದ್ದರೆ,ಹಾಗು ಅವುಗಳಲ್ಲಿ ಯಾವ ದೋಷವೂ ಇರದಿದ್ದರೆ, ಭೀತಿಗೆ ಆಸ್ಪದವೇ ಇರುವುದಿಲ್ಲ. ಬಾಪೂಜಿಯವರು ಅದಕ್ಕಾಗಿಯೇ ಯಾವಾಗಲೂ ತಮ್ಮ ವಿಚಾರಗಳನ್ನು ಸಾರ್ವಜನಿಕರ ಮುಂದೆ ಇಟ್ಟೇ ಮುಂದೆ ಅವುಗಳನ್ನು ಕಾರ್ಯರೂಪದಲ್ಲಿ ತರುವರು. ಆದುದರಿಂದಲೇ ಅವರು ನಿರ್ಭಯದಿಂದ ನಡೆಯುವರು. ಹೀಗೆ ಅವರ ಪತ್ರಗಳು ತಂದೆಯು ಮಕ್ಕಳಿಗೆ ಹೇಳಿಕೊಡಬೇಕಾದ ಬುದ್ಧಿಯ ಮಾತುಗಳನ್ನಲ್ಲದೆ, ಅವಳಿಗೆ ಚಿಕ್ಕವಯಸ್ಸಿನಲ್ಲಿಯೇ ಬಿ. ಎ., ಎಂ. ಎ. ಪದವಿಗಳಿಗಿಂತಲೂ ಹೆಚ್ಚಿನ ಜ್ಞಾನವನ್ನು ಒದಗಿಸಿದ್ದವು.

ಚಿಕ್ಕಮಕ್ಕಳ ಹುಟ್ಟುಹಬ್ಬಕ್ಕೆ ತಂದೆತಾಯಿಗಳು ಕಾಣಿಕೆಗಳನ್ನು ಕೊಡುವುದು ವಾಡಿಕೆ. ಆದರೆ ತಮ್ಮ ಮಗಳ ಹುಟ್ಟುಹಬ್ಬದ ಕಾಲಕ್ಕೆ ಎಷ್ಟೋ ಸಲ ಅವರು ಸೆರೆಮನೆಯಲ್ಲಿರುತ್ತಿದ್ದರು. ನೈನಿ ಸೆರೆಮನೆ

ಯಿಂದೊಮ್ಮೆ ಅವರು ಬರೆದರು : "For Indira Priyadarshini, on her 13th birthday—ಸೆರೆಮನೆಯಿಂದ ಕಳಿಸಬೇಕಾದ ನನ್ನ ಕಾಣಿಕೆಗಳು ಯಾವುದೇ ಬಗೆಯ ವಸ್ತುಗಳಾಗಲಾರವು. ಕೇವಲ ಅವು ವಾಯುವಿನಂತೆ ವಿಹರಿಸುವ ಹಾಗೂ ಆಕಾಶದಲ್ಲಿ ಗಮನಮಾಡುವ ಅಂತರಾತ್ಮನ ಸಂಬಂಧವುಳ್ಳವುಗಳಾಗಿರುವುವು. ಯಕ್ಷಣಿಯಂತೆ ಈ ಸೆರೆಮನೆಯ ಉನ್ನತವಾದ ಗೋಡೆಗಳನ್ನು ಜಿಗಿದು ಹಾರಾಡುತ್ತ ನಿನಗೆ ನನ್ನೀ ಪತ್ರರೂಪದ ಕಾಣಿಕೆಯನ್ನು ತಂದು ಕೊಡುವವು." ಒಂದು ಹೊಸ ವರುಷದ (ಯುಗಾದಿಯ) ದಿನ ಅವರು ಬರೆಯುತ್ತಾರೆ : "ನಿನ್ನನ್ನು ನೋಡದೆ ಈಗ ಏಳು ತಿಂಗಳಾಯಿತು. ಎಷ್ಟು ದೀರ್ಘವಾದ ಕಾಲವಿದು....ಇಂದು ಹೊಸವರುಷದ ದಿನ. ಹಿಂದಿನ ವರುಷಗಳ ಯುಗಾದಿಯ ದಿನಗಳನ್ನು ನೆನೆಸುತ್ತ ನಸುಕಿನಲ್ಲಿ ಹಾಗೆಯೇ ಹಾಸಿಗೆಯ ಮೇಲೆ ಬಿದ್ದುಕೊಂಡು ನೋಡಿದೆ. ಮುಗಿಲ ತುಂಬೆಲ್ಲ ನಕ್ಷತ್ರಗಳು. ವಿಶಾಲವಾದ ಆಕಾಶ. ತಂಗಾಳಿಯ ಸುಳಿತ, ಸುತ್ತಲಿನ ಗಿಡಮರಗಳ ಅಲೆದಾಟ. ಬೇಸಿಗೆ, ಮಳೆಗಾಲ, ಚಳಿಗಾಲ ಈ ಋತುಮಾನಗಳೆಲ್ಲಾ ಕಾಲಕ್ರಮದಂತೆ ಸರಿದು ಮುಂದೆ ಮುಂದೆ ಹೋಗುತ್ತಿರುವವು. ಪೃಥ್ವಿಯು ತನ್ನ ನಿಯಮಗಳನ್ನು ಚಾಚೂ ತಪ್ಪದಂತೆ ಚಲಿಸುತ್ತಿರುವುದು. ತನ್ನ ತೀಪ್ರಗತಿಯ ಅಮಲಿನಲ್ಲಿ ಅದು ಮಾನವನ ಬಾಳುವೆಯನ್ನೇ ಮರೆತಂತಿದೆ. ಅವನ ಗೋಳಿನ ಪರಿವೆಯೇ ಇಲ್ಲ ಅದಕ್ಕೆ. ಅದನ್ನು ಕಂಡು, ಕೇಳಿ, ಕರಳು ಕರಗುವ ಮಾನವರೇ ಅದನ್ನು ಬಗೆಹರಿಸಬೇಕು. ಜಗತ್ತಿನ ಅನ್ಯಾಯವನ್ನು ಪರಿಹಾರ ಮಾಡುವ ಹೃದಯವಂತಿಕೆಯ ಮಾನವತೆ ಬೆಳೆಯಬೇಕು. ಪ್ರತಿಯೊಬ್ಬನ ಬುದ್ಧಿಯಲ್ಲಿಯೂ ಅದು ಮೂಡಬೇಕು. ಹೃದಯದಲ್ಲಿ ಇಳಿಯಬೇಕು. ಅವನ ಕೃತಿಯಲ್ಲಿ ಅದರ ಪರಿಪಾಕ ಬೇಕು"....

ಮತ್ತೊಮ್ಮೆ ಬರೆದಿರುವರು : "ಜೀನ್ ಡಿ'ಆರ್ಕ" ಚರಿತ್ರೆಯನ್ನು ಓದಿದಾಗ ನೀನು ಎಷ್ಟು ಸ್ಫೂರ್ತಿಯನ್ನು ಪಡೆದಿದ್ದೆಯೆಂಬುದು ನಿನಗೆ ನೆನಪಿದೆಯೇ ? ಇತಿಹಾಸದಲ್ಲಿ ನಾವು ಸ್ಫೂರ್ತಿದಾಯಕವಾದ ವೃತ್ತಾಂತಗಳನ್ನೂ, ಅನೇಕ ದೇಶಗಳ ಸುವರ್ಣಯುಗಗಳ ಮಾಹಿತಿಯನ್ನೂ, ಹಲವಾರು ಮಹಾವ್ಯಕ್ತಿಗಳ ಚರಿತ್ರೆಗಳನ್ನೂ ಓದುವೆವು. ಸಾಮಾನ್ಯಜನರು ಅಷ್ಟು ಶೂರರೂ ದೇಶಪ್ರೇಮಿಗಳೂ ಆಗಿರುವುದಿಲ್ಲ. ಆದರೆ ಅಂಥವರೇ ಸಮಯವು ಒದಗಿಬಂದಾಗ ಮಹಾಶೂರರೂ ದೇಶೋದ್ಧಾರಕರೂ ಆಗುವರಲ್ಲದೇ, ಅವರ ಚಿರಸ್ಮರಣೀಯವಾದ ಕಾರ್ಯ ಸಾಹಸಗಳಿಂದ ಇತಿಹಾಸವು ಮುಂದಿನ ಪೀಳಿಗೆಯವರಿಗೆ ಸ್ಫೂರ್ತಿದಾಯಕವಾಗುವುದು. ನಮ್ಮ ದೇಶದಲ್ಲಿಯೂ ಅಂಥದೇ ಒಂದು ಸಮಯವು ಈಗ ಒದಗಿ ಬಂದಿದೆ. ಬಾಪೂಜಿಯವರ ನೇತೃತ್ವದಲ್ಲಿ ಹಿರಿಯರೂ, ಕಿರಿಯರೂ, ಗಂಡಸರೂ, ಹೆಂಗಸರೂ ಒಂದು ಮಹತ್ವದ ಹೋರಾಟದಲ್ಲಿ ಈಗ ತೊಡಗಿರುವರು. ನಮ್ಮ ದೇಶದಲ್ಲಿ ನಡೆದಿರುವ ಈ ಘೋರವಾದ ಸ್ವಾತಂತ್ರ್ಯದ ಹೋರಾಟವನ್ನು ನೋಡುವ ಭಾಗ್ಯವು ನಿನಗೆ ಲಭಿಸಿರುವುದು.... ಮುದ್ದು ಮಗು, ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ನೀನೂ ಒಬ್ಬ ಶೂರ ಸೇನಾನಿಯಾಗು...."

ಮತ್ತೊಂದರ ಒಕ್ಕಣಿಕೆ ಹೀಗಿದೆ : "ಧರ್ಮಶ್ರದ್ಧೆ ಪ್ರಾಚೀನಕಾಲದ ಕುರುಹಾಗಿತ್ತು. ಅದ್ಭುತವಾದ ದೇವಾಲಯಗಳು, ಚರ್ಚುಗಳು, ಮಸೀದಿಗಳು, ಮೂರ್ತಿಶಿಲ್ಪ, ಉನ್ನತ ಕಟ್ಟಡಗಳು, ಗೋಥಿಕ್ ಶಿಲ್ಪಕೃತಿಗಳು, ಗಗನವನ್ನು ಮುತ್ತಿಡುವ ಮಿನಾರುಗಳು—ಇವೆಲ್ಲವುಗಳಲ್ಲಿ ಕಂಡುಬರುವ ಪ್ರಬಲವಾದ ಧಾರ್ಮಿಕಭಾವನೆ, ಭಕ್ತಿಭಾವ—ಪ್ರಾಚೀನರು ಅರ್ಪಿಸುವ ಅನನ್ಯ ಪ್ರಾರ್ಥನೆಯೆಂಬಂತೆ ಈಗ ತೋರಿಬರುತ್ತಿದೆ. ಆದರೆ ಇಂದಿನ ಕಾಲವು ಬೇರೆಯಾಗಿದೆ. ಈಗ ಎಲ್ಲವೂ ಅಶ್ರದ್ಧೆ, ನಿರಾಶೆ, ಸಂದೇಹ ಮತ್ತು ಪ್ರಶ್ನಾರ್ಥಕತೆ. ಹಳೆಯ ನಂಬುಗೆಗಳನ್ನೂ ರೂಢಿಗಳನ್ನೂ ನಾವೀಗ ಸ್ವೀಕರಿಸಲಾರೆವು. ಅವುಗಳಲ್ಲಿ ನಮಗೀಗ ಶ್ರದ್ಧೆಯಿಲ್ಲ. ನಾವು ಹೊಸ ಜಗತ್ತಿನ ಶೋಧದಲ್ಲಿರುವೆವು. ನಮ್ಮ ಹೊಸಕಾಲದ ಪರಿಸರಕ್ಕೆ ಹೊಂದಿಕೆಯಾಗುವಂತಹ ಸತ್ಯದ ಹೊಸ ಹೊಸ ರೂಪಗಳನ್ನು ನಾವು ಹುಡುಕುತ್ತಿರುವೆವು. ಸೊಕ್ರೆಟೀಸನಂತೆ ಪ್ರಶ್ನೆಗಳ ಮಾಲಿಕೆಯನ್ನು ಕೇಳುತ್ತಿರುವ ಹೊಸದೊಂದು ಯುಗದಲ್ಲಿ ನಾವೀಗ ವಿಹರಿಸುತ್ತಿರುವೆವು. ಆದರೆ ನಮ್ಮ ಇಂದಿನ ಪ್ರಶ್ನೆಗಳು ಕ್ಷಿತಿಜದ ತುದಿಗಳಷ್ಟು ಅಗಲವೂ ಆಕಾಶದ ಎತ್ತರದಷ್ಟು ವಿಶಾಲವೂ ಆಗಿರುವವು."

ಇನ್ನೊಂದು ಪತ್ರವು ಹೀಗೆ ಹೇಳುತ್ತವೆ : "ಜಗತ್ತಿನ ಇತಿಹಾಸದಲ್ಲಿ ಹೆಮ್ಮೆಪಡುವಂತಹ ಹಲವಾರು ಪ್ರಗತಿಪರ ಅವಧಿಗಳು ತಲೆದೋರಿವೆ. ಇಂದಿನ ಯುಗದಲ್ಲಿಯಂತೂ ಮಾನವನು ಹಲವಾರು ಅದ್ಭುತವಾದ ಸಾಧನೆಗಳನ್ನು ಮಾಡಿದ್ದಾನೆ. ಆದರೆ ಪ್ರಾಣಿಗಳ ಇತಿಹಾಸವನ್ನು ಓದಿದಾಗ ನಮಗಿಂತಲೂ ಕೆಲವು ಪ್ರಾಣಿಗಳು ಶ್ರೇಷ್ಠವಾಗಿರುವುವೆಂಬುದು ಕಂಡುಬರುವುದು. ಉದಾಹರಣೆಗೆ, ನೀನು ಮೇಟರಲಿಂಕ್ ಎಂಬ ಲೇಖಕನು ಬರೆದ, ಜೇನ್ನೊಣದ ಜೀವನ, ಇರುವೆಯ ಜೀವನ ಹಾಗೂ ಗೆದ್ದಲಿಯ ಜೀವನ—ಈ ಪುಸ್ತಕಗಳನ್ನು ಓದಿರುವೆಯಲ್ಲಾ ? ಈ ಕ್ರಿಮಿಕೀಟಗಳಲ್ಲಿ ಸಹಕಾರದ ಭಾವನೆ ಎಷ್ಟು ಪ್ರಬಲವಾಗಿರುವುದು ಎಂಬುದನ್ನು ನೋಡಿರುವೆಯಲ್ಲವೇ ? ಅವುಗಳ ಒಂದು ದಶಮಾಂಶದಷ್ಟಾದರೂ ಸಹಕಾರವು ಮನುಷ್ಯನಲ್ಲಿ ಬೇಡವೇ ? ಬೇರೆ ಬೇರೆ ದೇಶಗಳು ಯುದ್ಧದಲ್ಲಿ ತೊಡಗುವುದೆಂದರೆ ಸಹಕಾರದ ಅಭಾವವೇ ಅಲ್ಲವೇ ? ಅದರಂತೆಯೇ, ಧನವಂತರಾದವರು ಬಡವರ ಶೋಷಣೆಯನ್ನು ಮಾಡುವುದೆಂದರೆ, ಅವರ ಬಾಳುವೆಯಲ್ಲಿ ಸಹಕಾರವನ್ನು ತೋರಿಸಿದಂತೆ ಆಗುವುದೇ ? ಸಾವಿರಾರು ವರ್ಷಗಳ ಪ್ರಗತಿಯ ಹೆಮ್ಮೆಯನ್ನು ಕೊಚ್ಚಿಕೊಳ್ಳುವ ನಾವು, ಇಂಥ ಅಭಾವಗಳಿಂದ ಪೀಡಿತರಾಗಿರುವೆವು ಅಂದಮೇಲೆ, ಜಗತ್ತಿನ ನಿಜವಾದ ಪ್ರಗತಿಯಾಗಲು ಇನ್ನೆಷ್ಟು ಸಾವಿರ ವರ್ಷಗಳು ಬೇಕಾಗುವವೋ ತಿಳಿಯದು. ಹಿಂದಿನ ಇತಿಹಾಸವನ್ನು ನೋಡಿದರೆ, ಹಿಂದೆ ಆಗಿಹೋದ ಕೆಲವು ಅವಧಿಗಳಂತೂ, ಇಂದಿನ ಪರಿಸ್ಥಿತಿಗಿಂತಲೂ ಬಹಳೇ ಉತ್ತಮವಾಗಿದ್ದುವೆಂಬುದು ಕಂಡು ಬರುವುದು. ಇದನ್ನು ನೋಡಿದಾಗ, ನಿಜವಾಗಿಯೂ ನಾವು ಕಾಲಗತಿಯಲ್ಲಿ ಮುಂದೆ ಹೋಗುತ್ತಿರುವೆವೋ, ಹಿಂದೆಯೇ ಸಾಗಿರುವೆವೋ ತಿಳಿಯದಂತಾಗಿದೆ...."

"ಬಿಚ್ಚು ಮನಸ್ಸಿನಿಂದ ಹೇಳಬೇಕೆಂದರೆ, ನಾನೊಬ್ಬ ಸಮಾಜವಾದಿಯು, ಪ್ರಜಾಸತ್ತೆಯಲ್ಲಿ ಶ್ರದ್ಧೆಯುಳ್ಳವನು ; ಮತ್ತು ಯಾವ ರಾಜಾಧಿರಾಜರಲ್ಲಿಯೂ ರಾಜಸಂತತಿಯಲ್ಲಿಯೂ ಅಭಿಮಾನವಿಲ್ಲದವನು. ಇಂದಿನ ದೊಡ್ಡ ದೊಡ್ಡ ಕಾರಖಾನೆಗಳು ಹುಟ್ಟಿಸುತ್ತಿರುವ ಆಧುನಿಕ ರಾಜರೆನಿಸುವ ಉದ್ಯೋಗಪತಿಗಳ ವಿಷಯವಾಗಿಯೂ ನನಗೆ ಅಭಿಮಾನವಿರುವುದಿಲ್ಲ. ಯಾಕೆಂದರೆ, ಅವರು ಮಧ್ಯಯುಗದ ಸರಂಜಾಮಿ ಪದ್ಧತಿಯ ಸರದಾರರಷ್ಟೇ ಹಿಂಸಕರುಗಳಾಗಿರುವರು" ಎಂದು ಇತಿಹಾಸದಿಂದ ನಾವು ಕಲಿಯಬೇಕಾದ ಪಾಠವನ್ನು ಕುರಿತು ಅವರು ಮತ್ತೊಂದೆಡೆಯಲ್ಲಿ ಹೇಳಿರುವುದನ್ನು ಇಲ್ಲಿ ನೆನೆಸಿಕೊಳ್ಳಬೇಕು.

ಮತ್ತೊಂದು ಪತ್ರದಲ್ಲಿ ಹೀಗೆ ಬರೆದಿದ್ದಾರೆ : "ಸೆರೆಮನೆಗೆ ಹೋದವರೂ ದೇಶಾಂತರದ ಶಿಕ್ಷೆಯನ್ನು ಹೊಂದಿದವರೂ, ಬದುಕಿ ಉಳಿದು ಪಾರಾಗಿ ಬಂದರೆಂದರೆ, ಅವರಿಗೆ ನಿರಾಶೆಯೇ ಗತಿ. ಆದರೆ ಸಾಹಿತಿಗಳಿಗೆ ಅದು ಬಲು ಮಧುರವಾದ ಕಾಲ" ಎಂದು ಶ್ರೇಷ್ಠ ರಾಜನೀತಿಜ್ಞರಾದ ಡಿಝ್ರಾಯಿಲಿ ಹೇಳಿದ್ದಾರೆ. ಸೆರೆಮನೆಯಲ್ಲಿ ಶ್ರೇಷ್ಠ ಸಾಹಿತ್ಯವನ್ನು ರಚಿಸಿದವರು ಇದ್ದಾರೆ. ಸರ್ವೆಂಟೀಸನ ಡೊನ್‌ಕ್ವಿಕ್ಸೋಟ್" (Don Quixote), ಬನಿಯನ್ನನ "ಪಿಲಿಗ್ರಿಮ್ಸ್ ಪ್ರೋಗ್ರೆಸ್" (Pilgrim's progress) ಇವು ಅಂಥ ಗ್ರಂಥಗಳು. ನಾನೇನೂ ಅಂಥ ಸಾಹಿತಿಯಲ್ಲ. ಆದರೂ ಓದುವುದೂ, ಬರೆಯುವುದೂ ನನಗೆ ತುಂಬ ಸಮಾಧಾನವನ್ನು ತಂದಿವೆ.... ಸೆರೆಮನೆಯಲ್ಲಿಯೇ ಆಗಲಿ, ಎಲ್ಲಿಯೇ ಆಗಲಿ, ನಿರಾಶೆಯಿಂದ ದಿನಕಳೆಯುವುದು ನನಗೆ ಸೇರುವುದಿಲ್ಲ. ಯಾವುದೊಂದು ಕಾರ್ಯ ಮಾಡುವುದೆಂದರೇ ನನಗೆ ಹಿಗ್ಗು. ವಿಚಾರವು ಕಾರ್ಯವನ್ನು ಪ್ರೇರಿಸಬೇಕು. ನಾವು ವಿಚಾರದ ಸೇವಕರಷ್ಟೇ ಅಲ್ಲ, ಕಾರ್ಯದ ಸ್ವಯಂಸೇವಕರೂ ಹೌದು. ಕಾರ್ಯಕ್ಕೆ ಸಾಹಸವೇ ಮೂಲ. ಸಾಹಸದಲ್ಲಿ ಪೌರುಷವಿದೆ. ಪರೋಪಕಾರಕ್ಕಾಗಿ ಮೀಸಲಾದ ಪೌರುಷದಲ್ಲಿ ಮಾನವ ಜಾತಿಯ ಕಲ್ಯಾಣವಿದೆ...." ಸಂಸಾರಸಾಗರವು ದುಃಖಪೂರಿತವಾಗಿದ್ದರೂ, ಆನಂದದಿಂದಾಗಲೀ, ಪ್ರೇಮದಿಂದಾಗಲೀ, ಬೆಳಕಿನಿಂದಾಗಲೀ, ಹಂಬಲಗಳಿಂದಲೇ ಆಗಲಿ ಅದು ವಂಚಿತವಾಗಿರುವುದಿಲ್ಲ" ಎಂದು ಅವರು ಮತ್ತೊಂದೆಡೆಗೆ ಹೇಳಿದ್ದುದನ್ನು ಈ ಪತ್ರವು ನೆನಪಿಗೆ ತಂದು ಕೊಡುತ್ತದೆ.

ಮತ್ತೊಂದು ಪತ್ರದಲ್ಲಿ ಹೀಗಿದೆ : "ಹಳೆಯ ಕಾಲವು ನಮಗೆ ಹಲವು ಬಗೆಯ ಕಾಣಿಕೆಗಳನ್ನು ಸಲ್ಲಿಸು

ತ್ರಪಿ. ನಮ್ಮ ಇಂದಿನ ಸುಧಾರಣೆ, ಸಂಸ್ಕೃತಿ, ಜ್ಞಾನ, ವಿಜ್ಞಾನ, ಕಲೆ, ಸಾಹಿತ್ಯ—ಇವೆಲ್ಲವೂ ಪ್ರಾಚೀನ ಕಾಲದ ಬೇರೆ ಬೇರೆ ಅವಧಿಗಳು ನಮಗೆ ಸಲ್ಲಿಸಿದ ಕಾಣಿಕೆಗಳೇ. ಆದರೆ ಪುರಾತನವೆಂಬುದೆಲ್ಲವೂ ಸಾಧುವಲ್ಲ. ನಮ್ಮ ಕರ್ತವ್ಯವು ಅವುಗಳೊಂದಿಗೇ ಮುಗಿಯಿತು ಎಂಬುದು ಸರಿಯಲ್ಲ. ಭವಿತವ್ಯದ ವಿಷಯವಾಗಿಯೂ ನಮ್ಮ ಮೇಲೆ ಕರ್ತವ್ಯದ ಹೊಣೆ ಇದೆ ಎಂಬುದನ್ನು ನಾವು ಮರೆಯಬಾರದು. ಅದನ್ನು ರೂಪುಗೊಳಿಸುವ ಭಾರವೂ ನಮ್ಮ ಮೇಲೆಯೇ ಇದೆ ಎಂಬುದನ್ನೂ ಮರೆಯಬಾರದು. ಆದರೆ ಪ್ರಾಚೀನವು ಭವಿಷ್ಯದ ಕಡೆಗೆ ಯಾವಾಗಲೂ ಹೊಟ್ಟೆಕಿಚ್ಚಿನಿಂದಲೇ ನೋಡುವುದು. ಆ ಪ್ರಾಚೀನದ ನಾಗಪಾಶದಲ್ಲಿ ಸಿಲುಕಿದ ನಾವು, ಅದರಿಂದ ಬಿಡಿಸಿ ಕೊಳ್ಳಲು ಅಸಮರ್ಥರಾಗಿರುವೆವು. ಅದಕ್ಕಾಗಿ ನಾವು ಹೋರಾಡಲೇಬೇಕಾಗುವುದು. ಅದರ ಪಾಶದಿಂದ ಬಿಡಿಸಿಕೊಳ್ಳಬೇಕಾಗುವುದು. ಅಂದರೆಯೇ ಭವಿಷ್ಯತ್ತನ್ನು ಪ್ರಗತಿಪರವಾಗಿ ರೂಪಿಸಲು ನಾವು ಸಮರ್ಥ ರಾಗುವೆವು...."

ಇಂಗ್ಲೆಂಡಿನ ಒಬ್ಬ ಪ್ರಸಿದ್ಧ ಪತ್ರಕರ್ತರಾದ ಬ್ರೇಲ್ಸಫೋರ್ಡ್ ಎಂಬುವರು ಜವಾಹರಲಾಲರ ವ್ಯಕ್ತಿತ್ವ ವನ್ನು ಕುರಿತು ಬರೆಯುತ್ತ ಒಮ್ಮೆ : "ತೀವ್ರ ಸಂವೇದನೆಯುಳ್ಳ ಈ ಮಹಾವ್ಯಕ್ತಿಯು ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳ ಸಮ್ಮುಖದಲ್ಲಿ ಸೂಕ್ಷ್ಮವಾದ ಸಮತೋಲವನ್ನು ಪಡೆದು ನಿಂತಿರುವನು. ಕೇಂಬ್ರಿಜ್ ವಿಶ್ವವಿದ್ಯಾನಿಲಯವು ಅವನಿಗೆ ಭೌತಶಾಸ್ತ್ರವನ್ನು ಬೋಧಿಸಿದೆ. ಸ್ವಂತ ಅಭಿರುಚಿಯಿಂದಾಗಿ ಪಾಶ್ಚಾತ್ಯ ಸಾಹಿತ್ಯ ಹಾಗೂ ಜಗತ್ತಿನ ಇತಿಹಾಸದ ತಾತ್ತ್ವಿಕ ಅಧ್ಯಯನವು ಅವನಿಗೆ ಅವಗತವಾಗಿದೆ. ಅದೃಷ್ಟವೂ ಆನುವಂಶಿಕತೆಯೂ ಈ ವಿಶ್ವಬಾಂಧವನನ್ನು ಭಾರತದಲ್ಲಿ ರಾಷ್ಟ್ರೀಯತೆಯ ನಾಯಕನನ್ನಾಗಿ ಮಾರ್ಪಡಿಸಿವೆ." ಎಂದು ಉದ್ಗರಿಸಿರುವುದನ್ನು ಈ ಸಂದರ್ಭದಲ್ಲಿ ನೆನಿಸುವುದು ಸಮಯೋಚಿತವೆನಿಸದೆ ಇರಲಾರದು.

ಅವರ ಕೊನೆಯ ಪತ್ರದಲ್ಲಿ ಅಡಕವಾಗಿರುವ ಸಂದೇಶವು ಬಹು ಮಾರ್ಮಿಕವಾಗಿರುವುದು : "ನಾನು ನಿನಗೆ ಅನೇಕ ವಿಷಯಗಳನ್ನು ಕುರಿತು ಬರೆದಿರುವೆನು. ಹಲವಾರು ಗ್ರಂಥಕರ್ತರ ಅವತರಣಿಕೆಗಳನ್ನು ಪೂರೈಸಿರು ವೆನು. ಆದರೆ ಗುರುದೇವ ರವೀಂದ್ರನಾಥಟಾಗೋರರ ಗೀತಾಂಜಲಿಯೊಳಗಿನ ಒಂದು ಪ್ರಾರ್ಥನೆಯಿಂದ ಈ ಪತ್ರವನ್ನು ಸಮಾಪ್ತಿಗೊಳಿಸುವೆನು. ಈ ಪ್ರಾರ್ಥನೆಯು ಹೀಗಿದೆ :—

ಎಲ್ಲಿ ಚಿತ್ತವು ನಿರ್ಭಯ, ತಲೆ ಎತ್ತಿ ನಿಲ್ಲುವ ಠೀವಿಯು ಎಲ್ಲಿ,
ಎಲ್ಲಿ ಜ್ಞಾನದ ಮೇರೆ ನಿರ್ಬಂಧವಾಗಿಹುದೋ,
ಎಲ್ಲಿ ಮನೆಮನೆಯ ಗೋಡೆಗಳು ತುಂಡು ತುಂಡಾಗಿರಿಸಿ
ಕುಗ್ಗಿಸಿದ ಜಗವೆಲ್ಲ ನುಚ್ಚುನೂರಾಗದಿಹುದೋ,
ಎಲ್ಲಿ ಅವಿರತ ಕರ್ಮ ನೀಳ್ದೋಳ ಅಲೆಗಳಲಿ
ಪೂರ್ಣತೆಯ ಸನ್ನಿಧಿಯ ಸಾರುತ್ತಲಿಹುದೋ,
ಎಲ್ಲಿ ಝುಳಪಿಸುವ ತರ್ಕಧಾರೆಯ ಪರಿಶುದ್ಧ ಹೊಳೆ ನೀರು.
ಹಳೆಯ ರೀತಿಯ ಹಾಳು ಭೂಮಿಯಲಿ ಹರಿಗಡಿಯದಿಹುದೋ,
ಎಲ್ಲಿ ಅಂತರಂಗದ ಬುದ್ಧಿ-ಕ್ರಿಯೆಗಳು ಗಂಗಾತರಂಗದೊಲು
ನಿತ್ಯ ನೂತನವಾಗಿ ವಿಸ್ತಾರದಿಂ ಹರಿಯುತಿಹವೋ,
ಅಲ್ಲಿ ಆ ಸ್ವರ್ಗಸ್ವಾತಂತ್ರ್ಯದಲಿ, ಓ ತಂದೆ,
ನನ್ನ ದೇಶವು ಅಲ್ಲಿ, ಆ ದಿವ್ಯ ಭಾವದಲಿ, ಎಚ್ಚರಗೊಳ್ಳಲಿ, !!

ಈ ಪ್ರಾರ್ಥನೆಯು ಮುಂದಿನ ಪೀಳಿಗೆಯ ಮಕ್ಕಳೆಲ್ಲರಿಗೂ ಅವರ ಭಾವೀಜೀವನದ ವಿಷಯವಾಗಿ ಉಜ್ವಲವಾದ ದಾರಿದೀಪವಾಗಿರುವುದೆಂಬುದರಲ್ಲಿ ಯಾವ ಸಂದೇಹವೂ ಇರಲಾರದು.

ಜಿ. ಬ್ರಹ್ಮಪ್ಪ

ಬಂಕಾಪುರದ ಅಜಿತಸೇನ ಗುರುಕುಲ*

ಬಂಕಾಪುರವು ಹತ್ತನೆಯ ಶತಮಾನದಲ್ಲಿ ಧಾರ್ಮಿಕ ಹಾಗು ವಿದ್ಯಾವರ್ಧಕ ಕೇಂದ್ರವಾಗಿದ್ದಿತು. 8–9 ನೆಯ ಶತಮಾನಗಳಿಂದಲೂ ಈ ಕ್ಷೇತ್ರ ಲೋಕದ ಗಮನವನ್ನು ಸೆಳೆದಿತ್ತು. 9 ನೆಯ ಶತಮಾನದ ಉತ್ತರಾರ್ಧ ದಲ್ಲಿ ಗುಣಭದ್ರಾಚಾರ್ಯರು ಬಂಕಾಪುರದಲ್ಲಿ ನೆಲಸಿದ್ದರು. ತಮ್ಮ ಗುರುಗಳಾದ ಜಿನಸೇನಾಚಾರ್ಯರು ಪ್ರಾರಂಭಿಸಿ ಮಧ್ಯದಲ್ಲಿ ನಿಂತು ಹೋಗಿದ್ದ ಮಹಾಪುರಾಣವನ್ನು ಗುಣಭದ್ರರು ಬಂಕಾಪುರದಲ್ಲೇ ಪೂರ್ಣಗೊಳಿಸಿದರು.

ಬಂಕಾಪುರವು ಲೋಕವಿಖ್ಯಾತವಾದುದು ಕ್ರಿ. ಶ. ಹತ್ತನೆಯ ಶತಮಾನದಲ್ಲಿ. ಅಜಿತಸೇನಾಚಾರ್ಯರು ಇಲ್ಲಿ ಗುರುಕುಲವನ್ನು ನಡೆಸಿದರು. ಈ ಗುರುಕುಲವು ಅನೇಕ ಧರ್ಮವೀರರಿಗೂ, ದಾನವೀರರಿಗೂ ಕೇಂದ್ರ ವಾಯಿತು. ಅಂದಿಗೆ ಇದು ಒಂದು ವಿಶ್ವವಿದ್ಯಾನಿಲಯವೇ ಆಗಿದ್ದಿತು. ದಿಗಂಬರಾಚಾರ್ಯರಾದ ಅಜಿತಸೇನರು ತಮ್ಮ ತಪಸ್ಸಿನಿಂದ, ತಮ್ಮ ತ್ಯಾಗದಿಂದ ಹಾಗೂ ವಿಶ್ವಾನುಕಂಪದಿಂದ ಈ ಗುರುಕುಲವನ್ನು ಬೆಳೆಸಿದರು.

ಶ್ರವಣಬೆಳಗುಳದ 59 (38) ನೆಯ ಶಾಸನದಲ್ಲಿ ಕಾಣಿಸಿಕೊಂಡಿರುವ ಸಾಹಸರಸಿಕನಾದ ಗಂಗರ ಮಾರ ಸಿಂಹನು[1] ಅಜಿತಸೇನಾಚಾರ್ಯರ ಶಿಷ್ಯ. ಅಂದಿಗೆ ದಕ್ಷಿಣಭಾರತಕ್ಕೆ ಸಿಂಹಸ್ವಪ್ನವಾಗಿದ್ದ ಮಾರಸಿಂಹನು ರಾಜ ಕೀಯ ದುರಂಧರನಾಗಿ ಚೋಳ, ಪಾಂಡ್ಯ, ಪಲ್ಲವ ನರೇಂದ್ರರನ್ನು ತರತರ ನಡುಗಿಸಿದನು. ಮುಳುಗಿಹೋಗುತ್ತಿದ್ದ ರಾಷ್ಟ್ರಕೂಟ ಸಾಮ್ರಾಜ್ಯಕ್ಕೆ ಕೆಲಕಾಲ ಜೀವದಾನ ಮಾಡಿದನು.

ಈ ಮಹಾಪುರುಷ 973 ರಲ್ಲಿ ಗಂಗರಾಜ್ಯವನ್ನು ತೊರೆದು ಬಂಕಾಪುರಕ್ಕೆ ಆಗಮಿಸಿ ತಮ್ಮ ನಚ್ಚಿನ ಗುರುವಾದ ಅಜೀತಸೇನರ ಪಾದಮೂಲದಲ್ಲಿ ಸಾಧನೆಯೆಸಗಿದನು. ಸಾಹಸ ರಸಿಕನಾದ ಇವನು ಈಗ ವೀತರಾಗ ರಸಿಕನಾದನು. ಬಾಹ್ಯಶತ್ರುಗಳೊಡನೆ ಹಣಾಹಣಿಯಾಡಿ ಸೈಯೆನಿಸಿಕೊಂಡ ಇವನು ಈಗ ಘಾತಿಕರ್ಮಗಳೊಡನೆ

---

* ಈಗ ಹರಿಹರ ಮತ್ತು ಹುಬ್ಬಳ್ಳಿಯ ಹೆದ್ದಾರಿಯಲ್ಲಿರುವ ಸಿಗ್ಗಾವಿಯೇ ಹಿಂದೆ ಬಂಕಾಪುರವಾಗಿದ್ದಿತು.

[1]....ಗಂಗವಿದ್ಯಾಧರಂ। ಗಂಗರೊಳ್‌ಗಂಡಂ। ಗಂಗರಸಿಂಗಂ। ಗಂಗಚೂಡಾಮಣಿ। ಗಂಗಕಂದರ್ಪಂ। ಗಂಗವಜ್ರಂ। ಚಲಮುತ್ತರಂಗ। ಗುತ್ತಿಯಗಂಗಂ। ಧರ್ಮಾವತಾರಂ। ಜಗದೇಕವೀರಂ। ನುಡಿದಂತೆಗಂಡಂ। ಅಹಿತಮಾರ್ತ್ತಂಡಂ। ಕದನಕರ್ಕಶಂ। ಮಂಡಳಿಕತ್ರಿಣೇಂತ್ರಂ, ಶ್ರೀಮನ್ಪೊಳಂಬಕುಳಾನ್ತ ದೇವಂ ಪಲವಡೆಗಳೊಳಂ ಬಸದಿಗಳಂ ಮಾನಸ್ತಂಬಂಗಳುಮಂ ಮಾಡಿಸಿದಂ।

ಧರ್ಮಂಗಳಂ ನಮುಸ್ಯಂ ನಡೆಯಿಸಿ ಬಳಿಯುವೊಂದು ವರ್ಷಂ ರಾಜ್ಯಮುಂ ಪತ್ತುವಿಟ್ಟು ಬಂಕಾಪುರದೊಳಜಿತ ಸೇನಭಟ್ಟಾರಕರ ಶ್ರೀಪಾದ ಸನ್ನಿಧಿಯೊಳಾಂರಾಧನಾ ವಿಧಿಯಿಂ ಮೂರು ದಿವಸಂ ನೋನ್ತು ಸಮಾಧಿಯಂ ಸಾಧಿಸಿದಂ। ಎಲೆಚೋಳಕ್ಷಿತಿಪಾಳಸನ್ತವೆರ್ದೆಯಂ ನೀಂ ನೀವಿಕೊಳ್। ನಿನ್ನನುಗೊಲೆಮಾಣ್ದತ್ತಿರುಪಾಂಡ್ಯ ಪಲ್ಲವ ಭಯಂಗೊಂಡೋಡ ದಿರ್। ನಿನ್ನ ಮಂಡಲದಿಂಸಿಗಡೆಸಲ್ವದೀಗನಿವನಿನ್ನುತ.....ಗಂಗಮಂಡಲಿಕಂ ದೇವಸಿವಾಸದತ್ತವಿಜಯಂಗೆಯ್ದಂ ನೊಳಂ ಬಾಂತಕಂ॥ ಶ್ರ. ಬೆ. 59(38)

ಖಾಡಾಖಾಡಿಗೆ ನಿಂತನು. ಮೂರುದಿವಸ ಉಪವಾಸವಿದ್ದು ಪಂಚನಮಸ್ಕಾರವನ್ನು ಜಪಿಸುತ್ತ, ಅಂತಃಕರಣವನ್ನು ಜಿನೇಂದ್ರಾವಾಸವಾದ ಸಮವಸರಣವಾಗಿ ರೂಪಿಸಿಕೊಂಡು ಬಂಕಾಪುರದಲ್ಲಿ ಅಜಿತಸೇನರ ಪಾದಮೂಲದಲ್ಲಿ ಈ ಭದ್ರಚೇತನ ಕ್ರಿ. ಶ. 974 ರಲ್ಲಿ ಸಲ್ಲೇಖನ ವಿಧಿಯಿಂದ ವೀರಸಮಾಧಿ ಮರಣವನ್ನು ಪಡೆದು ಪುನೀತನಾದನು. ಮಾರಸಿಂಹ ಸತ್ತು ಬದುಕಿದನು. ಇಂಥ ಮಹಾಪುರುಷನನ್ನು ಶಿಷ್ಯನನ್ನಾಗಿ ಪಡೆದು ಅಜಿತಸೇನರು ಅಜರಾಮರರಾದರು.

ಶ್ರವಣಬೆಳಗುಳದ ವಿಂಧ್ಯಗಿರಿಯ ಶಿಖರಕ್ಕೆ ಶಿಖರಪ್ರಾಯವಾದ ಗೋಮಟೇಶ್ವರ ಮಹಾಮೂರ್ತಿಯ ನಿರ್ಮಾಪಕನಾದ ಚಾಮುಂಡರಾಯನೂ ಅಜಿತಸೇನರ ಶಿಷ್ಯ. ಈತನ ಕೀರ್ತಿಪತಾಕಿ ಶ್ರವಣಬೆಳಗುಳದ 281 (109)ರ ಶಾಸನದಲ್ಲಿ ಹಾರಾಡಿದೆ[1]. ಚಾಮುಂಡರಾಯನು ಮಾರಸಿಂಹನ ಬಳಿ ಹಾಗೂ ಅವನ ಮಗ ರಾಜಮಲ್ಲನ ಬಳಿ ಸೇನಾಧಿಪತಿಯಾಗಿದ್ದನು. ಬ್ರಹ್ಮಕ್ಷತ್ರಿಯೋದ್ಭವನಾದ ಈ ಜಿನಭಕ್ತನನ್ನು ರೂಪಿಸಿದವರು, ಸಂಸ್ಕಾರ ಸಂಪನಗೊಳಿಸಿದವರು ಬಂಕಾಪುರದ ಅಜಿತಸೇನರು. ಚಾಮುಂಡರಾಯನು ಕವಿಚಕ್ರವರ್ತಿಯಾದ ರನ್ನನಿಗೆ ಆಶ್ರಯನೀಡಿ ಕನ್ನಡ ಸಾಹಿತ್ಯದ ಏಳಿಗೆಗೆ ನೆರವಾದನು. ಅಷ್ಟೇಅಲ್ಲ, ಚಾಮುಂಡರಾಯನು ಸಾಹಿತಿಯೂ ಅಹುದು. ಜೈನತ್ರಿಷಷ್ಟಿ ಶಲಾಕಾ ಪುರುಷರ ಚರಿತೆಯನ್ನು ಅಚ್ಚಗನ್ನಡದಲ್ಲಿ ಗದ್ಯರೂಪವಾಗಿ ಬರೆದು ಹಳಗನ್ನಡದ ಗದ್ಯಸಾಹಿತ್ಯದ ಸೀಮಾಪುರುಷನಾಗಿರುವನು.

ಕವಿಚಕ್ರವರ್ತಿಯಾದ ರನ್ನನೂ ಅಜಿತಸೇನರ ಶಿಷ್ಯನಾಗಿರುವನು[2]. ತನ್ನ ಗುರುವಿನ ಹೆಸರನ್ನು ಹೇಳುವಾಗ ರನ್ನಕವಿ ಪುಲಕಗೊಳ್ಳುವನು. ಅಜಿತಪುರಾಣದುದ್ದಕ್ಕೂ ಪ್ರತಿ ಅಶ್ವಾಸಾಂತ್ಯದಲ್ಲೂ ಅಜಿತಸೇನರನ್ನು ನೆನೆದು ಇವನು ಗುರುಕಾಣಿಕೆಯನ್ನು ಸಲ್ಲಿಸಿರುವನು. 982ರಲ್ಲಿ ಸಾಹಸಭೀಮವಿಜಯವನ್ನು ಬರೆದು ರನ್ನಕವಿ ಚಾಲುಕ್ಯ ಸತ್ಯಾಶ್ರಯ ಇರಿವಬೆಡಂಗನ ಬಳಿ ಕವಿಚಕ್ರವರ್ತಿಯಾದನು. ಉತ್ತಮೋತ್ತಮ ಸಾಹಿತ್ಯವನ್ನು ನಿರ್ಮಿಸಿ ಕನ್ನಡಿಗರ ಹೃದಯದಲ್ಲಿ ಸದಾ ಹಸುರಾಗಿರುವ ರನ್ನನಂಥ ಮಹಾಕವಿಯನ್ನು ಶಿಷ್ಯನನ್ನಾಗಿ ಪಡೆದ ಅಜಿತಸೇನಾಚಾರ್ಯರು ಅಮರರಾದರು.

---

[1]ಬ್ರಹ್ಮ ಕ್ಷತ್ರ ಕುಳೋದಯಾಚಳ ಶಿರೋಭೂಷಾಮಣಿರ್ಬ್ಭಾನುಮಾನ್
ಬ್ರಹ್ಮ ಕ್ಷತ್ರ ಕುಳಾಬ್ಧಿವರ್ಧನ ಯಶೋರೋಚಿಸ್ಸುಧಾಧೀದಿತಿಃ
ಬ್ರಹ್ಮಕ್ಷತ್ರ ಕುಳಾಕಾರಾಚಳ ಭವ ಶ್ರೀಹಾರವಲ್ಲೀಮಣಿಃ
ಬ್ರಹ್ಮಕ್ಷತ್ರ ಕುಳಾಗ್ನಿ ಚಂಡಪವನಶ್ಚಾವುಂಡ ರಾಜೋಣಿ ॥ ಶ್ರ. ಬೆ. 281 (109) ಕ್ರಿ. ಶ. 983
"ನಿಶ್ಶಂಕಾದಿ ಗುಣಪರಿರಕ್ಷಣೈಕ ಕಾರಣ ನಪ್ಪುದರಿಂ ಗುಣವಂಕಾರಂ ;
ಸತ್ಯತ್ಯಾಗಾದಿ ಸಮನ್ವಿತನಪ್ಪುದರಿಂ ಸಮ್ಯಕ್ತ್ವರತ್ನಾಕರಂ ;
ಪರಾಂಗನಾ ಪರದ್ರವ್ಯ ಪರಾಜ್ಮುಖನಪ್ಪುದರಿಂ ಶೌಚಾಭರಣಂ ;
ಪರಿಹಾಸದೊಳಂ ಸೂನ್ಯತವಚನನಪ್ಪುದರಿಂ ಸತ್ಯಯುಧಿಷ್ಠಿರಂ ;
ಅತಿ ಪ್ರಚಂಡ ವೀರಮಾಂಡಲಿಕ ಶಿಖಂಡ ಮಂಡನಮಣಿಯಪ್ಪುದರಿಂ ಸುಭಟಚೂಡಾಮಣಿ...."

"ಶ್ರೀಮದಜಿತಸೇನ ಭಟ್ಟಾರಕ ಪಾದಪದ್ಮ ಪ್ರಸಾದಾಸಾದಿತ ರತ್ನತ್ರಯಾಲಂಕೃತ ಧರ್ಮವಿಜಯ ಚಾವುಂಡರಾಯ ವಿರಚಿತಮಪ್ಪ"....ಚಾ. ರಾ. ಪುರಾಣ.

[2] ಇದು ಸಕಲಮುನೀಂದ್ರ ವೃಂದವೃಂದಾರಕ ಶ್ರೀಮದಜಿತಸೇನ ಭಟ್ಟಾರಕ ಶ್ರೀಪಾದಪದ್ಮ ಪ್ರಸಾದಾಸಾದಿತ ರತ್ನತ್ರಯಾಲಂಕೃತ ಶ್ರೀಮದಭಿನವ ಕವಿಚಕ್ರವರ್ತಿ ಕವಿರತ್ನನಿರ್ಮಿತ ಶ್ರೀದಾನ ಚಿಂತಾಮಣಿ ನಿರ್ಮಾಪಿತ ಶ್ರೀಮದಜಿತ ತೀರ್ಥಕರ ಪುರಾಣ ತಿಲಕದೊಳ್ ಅಜಿತಪುರಾಣ ಅಶ್ವಾಸಾಂತ್ಯಗದ್ಯ.

ಚಾಮುಂಡರಾಯನ ಮಗನಾದ ಜಿನದೇವಣ್ಣನಿಗೂ ಅಜಿತಸೇನರು ಗುರುವಾಗಿದ್ದರು[1]. ಜಿನದೇವಣ್ಣನು ಶ್ರವಣಬೆಳಗುಳದ ಚಂದ್ರಗಿರಿಯಲ್ಲಿರುವ ಚಾಮುಂಡರಾಯ ಬಸದಿಯ ಎರಡನೆಯ ಅಂತಸ್ತನ್ನು ಕಟ್ಟಿಸಿ ಪಾರ್ಶ್ವ ತೀರ್ಥಂಕರನನ್ನು ಸ್ಥಾಪಿಸಿರುವನು.

ಅಜಿತ ಸೇನಾಚಾರ್ಯರು ಸರ್ವೋದಯ ಸಾಧಕರು. ಪರಿಪೂರ್ಣ ಚೇತನಗಳನ್ನು ರೂಪಿಸಿ ಇವರು ಕರ್ಣಾಟಕಕ್ಕೆ ಮಹದುಪಕಾರವೆಸಗಿದರು. ಇವರ ಶಿಷ್ಯರೆಲ್ಲರೂ ಮಹಾಪರಾಕ್ರಮಿಗಳು. ಪರಾಕ್ರಮದಷ್ಟೇ ಪಾವನ ಚರಿತರು. ಇಹಪರವೆರಡನ್ನೂ ಸಾಧಿಸುವ ಸಾಹಸರಸಿಕರನ್ನು ಅಜಿತಸೇನರು ನಿರ್ಮಾಣ ಮಾಡಿದರು. ಸುಸಂಸ್ಕಾರ ಸಂಪನ್ನರನ್ನು ಇವರು ಸೃಷ್ಟಿಸಿದರು, ಕಗ್ಗಲ್ಲನ್ನು ಕಡೆದು ಲೋಕೋನ್ನತ ಮಹಾಶಿಲ್ಪವಾದ ಗೋಮಟದೇವನನ್ನು ನಿರ್ಮಿಸಿದ ಮಹಾಶಿಲ್ಪಿ ಎಷ್ಟು ದೊಡ್ಡವನೋ ಅಜಿತಸೇನರೂ ಅಷ್ಟೇ ದೊಡ್ಡವರು. ಸರ್ವಾರ್ಥ ಸಿದ್ಧಿಯನ್ನು ಪಡೆಯುವಂಥ ಮಹಾಮಹಿಮರನ್ನು ಶಿಷ್ಯರನ್ನಾಗಿ ಪಡೆದು ಅಜಿತಸೇನರು ಆಚಂದ್ರಾರ್ಕರಾಗಿರುವರು. ಬಂಕಾಪುರದಲ್ಲಿ ಬತ್ತಲೆಯಾಗಿ ನಿಂತು ಅಜಿತಸೇನರು ಲೋಕದ ಕತ್ತಲೆಯನ್ನು ನಿವಾರಿಸಲು ಪರಿತಪಿಸಿದರು. ಇಂಥ ಗುರುಗಳೇ ಜಗದ್ಗುರುಗಳು. ಇಂಥ ಗುರುಕುಲಗಳೇ ಜೀವಂತ ವಿಶ್ವ ವಿದ್ಯಾನಿಲಯಗಳು. ಎಲ್ಲಕಾಲಕ್ಕೂ ಅಜಿತ ಸೇನರು ಮಾದರಿಯಾಗಿರುವರು. ಅಂತೇ ಬಂಕಾಪುರುವೂ ಗುರುಕುಲದ ಮಾದರಿಯಾಗಿದೆ.

---

1 ಜಿನಗೃಹಮಂ ಬೆಳ್ಗೊಳದೊಳ್ ಜನಮೆಲ್ಲಂ ಪೊಗಳೆ ಮಂತ್ರಿ ಚಾಮುಂಡನನಂದನನೊಲವಿಂ ಮಾಡಿಸಿದಂ ಜಿನದೇವಣನಜಿತಸೇನ ಮುನಿಪರಗುಡ್ಡಂ ॥ ಶ್ರವಣಬೆಳಗುಳ 121 (67) ಕ್ರಿ. ಶ. 995

ಸಿ. ಕೃಷ್ಣ

ನಮ್ಮ ಮಕ್ಕಳ ಶಿಕ್ಷಣ

ಮಕ್ಕಳ ಶಿಕ್ಷಣ ಎಲ್ಲರಿಗೂ ಪರಿಚಿತನಾದ ವಿಷಯ. ಶಿಕ್ಷಣದಿಂದ ಪ್ರಯೋಜನವಿದೆ ; ಶಿಕ್ಷಣವಿಲ್ಲದಿದ್ದರೆ ಬಾಳು ದುಃಖಮಯವಾಗುತ್ತದೆ. ಈ ಭಾವನೆಯು ಎಲ್ಲರಿಗೂ ಅರ್ಥವಾಗುತ್ತದೆ. ಶಿಕ್ಷಣವೆಂದರೇನು ? ಸಮರ್ಪಕವಾದ ಶಿಕ್ಷಣ ಪಡೆಯುವುದು ಹೇಗೆ ? ಈ ಪ್ರಶ್ನೆಗಳಿಗೆ ಉತ್ತರಕೊಡುವುದು ಮಾತ್ರ ಬಹಳ ಕಷ್ಟ. ಹಾಗೆಯೇ, ಇಂದು ನಮ್ಮ ಮಕ್ಕಳಿಗೆ ದೊರೆಯುತ್ತಿರುವ ಶಿಕ್ಷಣ ಸಮರ್ಪಕವಾಗಿಲ್ಲವೆಂಬುದು ಎಲ್ಲರೂ ಒಂದಲ್ಲ ಒಂದು ವಿಧವಲ್ಲಿ ವ್ಯಕ್ತಪಡಿಸುತ್ತಿದ್ದಾರೆ. ತಿಳುವಳಿಕೆಯುಳ್ಳ ತಂದೆತಾಯಿಗಳು ಮಕ್ಕಳ ಶಿಕ್ಷಣಕ್ಕಾಗಿ ತಮ್ಮ ಕೈಲಾಗುವುದನ್ನೆಲ್ಲ ಮಾಡುತ್ತಾರೆ. ಆದರೂ ಅವರ ಮಕ್ಕಳ ಶಿಕ್ಷಣವನ್ನು ಕುರಿತು ಅವರಿಗೆ ಸಮಾಧಾನವಿಲ್ಲ. ಎಲ್ಲ ಮಕ್ಕಳಿಗೂ ಒಂದು ಹಂತದವರೆಗೆ ಶಿಕ್ಷಣ ಕೊಡುವುದು ತನ್ನ ಕರ್ತವ್ಯವೆಂದು ಸರಕಾರ ಘೋಷಿಸಿ ಕೊಂಡಿದೆ. ಮತ್ತು ಅದನ್ನೊದಗಿಸಲು ಪ್ರಯತ್ನಪಟ್ಟು, ಅದರಲ್ಲಿ ಇನ್ನೂ ಕೃತಕೃತ್ಯತೆಯನ್ನು ಪಡೆಯು ದಿದೆ. ಶಾಲಾಕಾಲೇಜುಗಳಲ್ಲಿರುವ ವಾತಾವರಣವೇ ವಿದ್ಯಾರ್ಥಿಗಳು ಸರಿಯಾದ ಶಿಕ್ಷಣ ಪಡೆಯುತ್ತಿಲ್ಲವೆಂಬು ದಕ್ಕೆ ಸಾಕ್ಷಿ. ಶಿಕ್ಷಣದ ವಿಷಯವಾಗಿ ಉಳಿದವರಿಗಿಂತ ಹೆಚ್ಚು ತಿಳಿದಿರುವ ಉಪಾಧ್ಯಾಯರನ್ನು ವೈಯಕ್ತಿಕ ವಾಗಿ ಭೇಟಿಮಾಡಿ ಮಾತನಾಡಿದರೆ ಇಂದಿನ ಶಿಕ್ಷಣದ ವಿಷಯವಾಗಿ ಅವರ ಅಭಿಪ್ರಾಯ ತಿಳಿಯಬಹುದು. ಶಿಕ್ಷಣ ಬೇಕು ಎಂಬ ವಿಷಯದಲ್ಲಿ ಒಮ್ಮತವಿದೆ. ಹಾಗೆಯೇ ಇಂದಿನ ಮಕ್ಕಳಿಗೆ ಕೊಡುತ್ತಿರುವ ಶಿಕ್ಷಣ ಅಸಮರ್ಪಕ ಎಂಬ ವಿಷಯದಲ್ಲಿಯೂ ಒಮ್ಮತವಿದೆ.

ಸಮರ್ಪಕವಾದ ಶಿಕ್ಷಣವನ್ನೊದಗಿಸುವುದು ಹೇಗೆ ? ಇದನ್ನು ನಾವು ಇಂದು ವಿಚಾರಮಾಡಬೇಕಾದುದು ಅತ್ಯಗತ್ಯ.

ವೈಯಕ್ತಿಕ ಮತ್ತು ಸಾಮಾಜಿಕ ಜೀವನಗಳಲ್ಲಿ ಕಾಣಬರುವ ನ್ಯೂನತೆಗಳಿಗೆಲ್ಲ ಶಿಕ್ಷಣವೇ ಕಾರಣ. ಆದುದರಿಂದಲೇ ಅದನ್ನು ಸರಿಪಡಿಸುವುದರಿಂದ ವ್ಯಕ್ತಿಗಳ ಅಭ್ಯುದಯವನ್ನು ಸಾಧಿಸಬಹುದು ಮತ್ತು ಸಮಾಜದಲ್ಲಿ ಶಾಂತಿ ಸುಖಗಳನ್ನು ಸ್ಥಾಪಿಸಬಹುದು. ರಾಜಕೀಯದಲ್ಲಿ ಕಾಣಬರುವ ಆತಂಕ ಭಯಭೀತಿ ಗಳನ್ನೂ ಅದು ದೂರಮಾಡಬಲ್ಲುದು. ಶಿಕ್ಷಣದಿಂದಲೇ ಬಹುಮುಖಪ್ರಗತಿ ಸಾಧ್ಯ. ಹೀಗೆ ಶಿಕ್ಷಣದ ಗುರಿ ಗಳನ್ನು ನಿರೂಪಿಸಿದರೆ ಯಾರೂ ಒಪ್ಪದಿರಲಾರರು. ಅಂದರೆ ಶಿಕ್ಷಣವು ಸರಳವಾದ ವಿಷಯವೆಂದು ಭಾವಿಸಿದರೆ ಬಹಳ ದೊಡ್ಡ ತಪ್ಪು ಮಾಡಿದಂತಾಗುತ್ತದೆ. ಜೀವನದಲ್ಲಿ ಹಾಸುಹೊಕ್ಕಾಗಿ ಬೆರತಿರುವ ಶಿಕ್ಷಣ ಜೀವನದಷ್ಟೆ ಬಿಡಿಸಲಸಾಧ್ಯವಾದ ಸಮಸ್ಯೆಯಾಗಿದೆ ; ಜೀವನದಷ್ಟೆ ಬಹುಮುಖವಾಗಿದೆ. ಆದರೆ ಶಿಕ್ಷಣಸಮಸ್ಯೆಗಳು ಬಿಡಿಸಲಾರದಂತಹುವು ಎಂದು ಸುಮ್ಮನಿರಲಾಗುವುದಿಲ್ಲ ಮತ್ತು ಚೆನ್ನಾಗಿ ಆಲೋಚಿಸದೆ ಈಗ ನಡೆಯುತ್ತಿರು ವಂತೆ ಅದನ್ನು ಮುಂದುವರಿಯಲು ಬಿಡುವುದೂ ವಿವೇಕವಿಲ್ಲ.

ಶಿಕ್ಷಣವು ಅನೇಕ ಹಂತಗಳಲ್ಲಿ ಬಹುಮುಖವಾಗಿ ಪ್ರಸರಿಸಿದೆ. ಜನನದಿಂದ ಪ್ರಾರಂಭವಾಗಿ ಮರಣ ಪರ್ಯಂತವೂ ಅದು ನಿರಂತರವಾಗಿ ಸಾಗುತ್ತಲೇ ಇರುತ್ತದೆ. ಆದರೆ ನಾವು ಇಲ್ಲಿ ಪರ್ಯಾಲೋಚಿಸುವ ಶಿಕ್ಷಣ ಆ ವಿಸ್ತಾರವಾದ ಅರ್ಥದ ಶಿಕ್ಷಣವಲ್ಲ ; ನಾವು ನಿರೂಪಿಸಿಕೊಂಡಿರುವ, ನಾವು ವಿದ್ಯಾಸಂಸ್ಥೆಗಳಲ್ಲಿ ಕೊಡುತ್ತಿರುವ ಶಿಕ್ಷಣ ಅಂದರೆ ನಮ್ಮ ವ್ಯವಸ್ಥಿತವಾದ ಶಿಕ್ಷಣಪದ್ಧತಿ. ಮೊದಲು ಬಾಲ್ಯವು ಮಾತ್ರ ಶಿಕ್ಷಣದ ಕಾಲವೆಂದು ಭಾವಿಸಲಾಗಿತ್ತು. ಈಗ ಅದು ಇನ್ನೂ ಮುಂಚಿನಿಂದಲೇ ಅಂದರೆ ಶೈಶವದಿಂದಿಲೇ ಪ್ರಾರಂಭವಾಗಿ ಯೌವನದೊಳಕ್ಕೂ ಪ್ರಸರಿಸಿದೆ. ಈ ಎರಡು ದಿಕ್ಕುಗಳಲ್ಲೂ ಇನ್ನೂ ಪ್ರಸರಿಸುತ್ತಲೇ ಇದೆ. ಹಿಂದೆ ಸಮಾಜದ ಒಂದು ಸಂಗಡ ಸುಶಿಕ್ಷಿತವಾಗಿದ್ದರೆ ಸಾಕೆಂದೂ(education of a class)ಅದರ ಫಲ ಇಡೀ ಸಮಾಜಕ್ಕೆದೊರಕುವುದೆಂದೂ ಭಾವನೆಯಿದ್ದು,ಈಗ ಸಾರ್ವತ್ರಿಕವಾಗಿ ಸಮಾಜದ ಎಲ್ಲ ವ್ಯಕ್ತಿಗಳಿಗೂ (universal education)ಕೊಡಬೇಕೆಂಬುದರ ಅಗತ್ಯತೆಯನ್ನು ಕಂಡುಕೊಂಡಿದ್ದೇವೆ. ಹಿಂದೆ ಯಾವುದೋ ಕೆಲವು ವೃತ್ತಿಗಳು ಮಾತ್ರ ಶಿಕ್ಷಣದ ಪರಿಧಿಯಲ್ಲಿ ಬಂದಿದ್ದುವು; ಈಗ ಎಲ್ಲ ವೃತ್ತಿಗಳೂ ಕ್ರಮಕ್ರಮವಾಗಿ ವ್ಯವಸ್ಥಿತ ಶಿಕ್ಷಣಪದ್ಧತಿಯಲ್ಲಿ ಐಕ್ಯವಾಗುತ್ತಿವೆ. ಹೀಗಿರುವಾಗ ಶಿಕ್ಷಣವು ಸರಳವೆಂದು ಪರಿಗಣಿಸುವುದು ಹೇಗೆ ? ಇಷ್ಟು ಉದ್ದಗಲಗಳ ಶಿಕ್ಷಣದ ನ್ಯೂನತೆಗಳನ್ನು ಸರಿಪಡಿಸಲು ಸುಲಭೋಪಾಯವನ್ನು ಸೂಚಿಸುವುದು ಹೇಗೆ ಸಾಧ್ಯ ?

ಶಿಕ್ಷಣವು ಬಹು ವಿಧವಾಗಿ, ಬಹುಮುಖವಾಗಿದ್ದರೂ ಎಲ್ಲ ಬಗೆಯ ಶಿಕ್ಷಣಕ್ಕೂ ಮೂಲಭೂತವಾದ ಅಂಶಗಳು ಕೆಲವಿರುತ್ತವೆ. ಅವುಗಳ ಅಧ್ಯಯನಕ್ಕೆ ಮೊದಲು ಗಮನಕೊಡಬೇಕು. ಶಿಕ್ಷಣದ ಬೇರೆ ಬೇರೆ ಶಾಖೆಗಳು ಒಂದರಿಂದೊಂದು ಭಿನ್ನವಾಗಿರುತ್ತವೆ. ಅವುಗಳಿಗೆ ತಮ್ಮದೇ ಆದ ಸಮಸ್ಯೆಗಳಿರುತ್ತವೆ. ಅವುಗಳಲ್ಲಿನ ದೋಷನಿವಾರಣೆಗೆ ಆಯಾಯ ಜ್ಞಾನಶಾಖೆಗಳ ತಜ್ಞರು ಪ್ರಯತ್ನಪಡಬೇಕು. ಮೊದಲಿನ ಸಾಮಾನ್ಯಶಿಕ್ಷಣ ದೋಷದೂರವಾಗಿದ್ದರೆ ಉಳಿದವುಗಳಲ್ಲಿನ ದೋಷಗಳನ್ನು ಸರಿಪಡಿಸಿಕೊಳ್ಳುವುದು ಅಷ್ಟು ಕಷ್ಟವಾಗುವುದಿಲ್ಲ. ಪ್ರಾಥಮಿಕ ಶಿಕ್ಷಣ ಎಲ್ಲ ಶಿಕ್ಷಣದ ತಳಹದಿ. ಅದಾದ ಮೇಲೆ ಬರುವ ಪ್ರೌಢಶಾಲಾ ಶಿಕ್ಷಣ ಮುಗಿದನಂತರವೇ ಶಿಕ್ಷಣದ ಶಾಖೋಪಶಾಖೆಗಳು ಕವಲೊಡೆಯುತ್ತವೆ. ಈ ಎರಡುಹಂತದ ಸಾಮಾನ್ಯಶಿಕ್ಷಣವು ಜೀವನವನ್ನು ಅರ್ಥಮಾಡಿಕೊಳ್ಳಲು ಬೇಕಾದ ಕನಿಷ್ಠ ಮಿತಿಯ ಜ್ಞಾನವನ್ನೊದಗಿಸುತ್ತದೆ, ಮತ್ತು ಉನ್ನತ ಶಿಕ್ಷಣಕ್ಕೆ ಬೇಕಾದ ಯೋಗ್ಯತೆಯನ್ನು ಪಡೆಯಲು ಅವಕಾಶ ಮಾಡಿಕೊಡುತ್ತದೆ.

ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣಗಳಿಗೆ ಅವಕಾಶ ಹಿಂದಿದ್ದುದಕ್ಕಿಂತ ಈಗ ಹೆಚ್ಚಾಗಿದೆ ಎಂಬುದು ನಿರ್ವಿವಾದವಾದುದು ಮತ್ತು ಅದನ್ನು ಅಂಕಿಅಂಶಗಳಿಂದಲೂ ಸ್ಥಿರಪಡಿಸಬಹುದು. ಶಾಲೆಗಳ ಸಂಖ್ಯೆ ಮತ್ತು ವಿದ್ಯಾರ್ಥಿಗಳ ಸಂಖ್ಯೆ ಅಗಾಧವಾಗಿ ಬೆಳೆದಿದೆಯಾದರೂ ಸ್ವಾತಂತ್ರ್ಯ ಬಂದ ತರುಣದಲ್ಲಿದ್ದ ಉತ್ಸಾಹ ಎಲ್ಲೋ ಮಾಯವಾಗಿದೆ. ಸಂವಿಧಾನದಲ್ಲಿ (constitution) ಘೋಷಿಸಿದ ನೂರಕ್ಕೆ ನೂರು ಮಕ್ಕಳನ್ನು ಪ್ರಾಥಮಿಕ ಶಾಲೆಗಳೊಳಗೆ ಕರೆತರಲು ಇನ್ನೂ ಸಾಧ್ಯವಾಗಿಲ್ಲ. ಅದು ಸಾಧ್ಯವಾಗದಿದ್ದರೆ ಚಿಂತೆಯಿಲ್ಲ. ಮಾಡಿದಷ್ಟು ಕೆಲಸವಾದರೂ ತೃಪ್ತಿಕರವಾಗಿದೆಯೆ ? ಸಂಖ್ಯೆಯಲ್ಲಿ ಪ್ರಗತಿಯಾಗಿದೆ ದಿಟ. ಶಿಕ್ಷಣದ ಗುಣಮಟ್ಟವೊ ? ಅದು ಬಿದ್ದು ಹೋಗಿದೆ ಎಂಬುದು ಎಲ್ಲರೂ ಒಪ್ಪಿಕೊಂಡಿರುವ ಸತ್ಯ. ಸರಿಯಾಗಿ ಕೆಲಸ ಮಾಡದ ಶಾಲೆಗೆ ಮಕ್ಕಳನ್ನು ಕಳುಹಿಸುವುದಕ್ಕಿಂತ ಕಳುಹಿಸದಿರುವುದೇ ಒಳ್ಳೆಯದೆಂಬ (No schooling is better than bad schooling) ಹೇಳಿಕೆಯೊಂದಿದೆ. ಶಾಲೆಯಿಂದ ಹೊರಗುಳಿದ ಮಕ್ಕಳು ತಂದೆ ತಾಯಿಗಳಿಗೆ ನೆರವಾಗಿ ಜೀವನಕ್ಕೆ ನೇರವಾಗಿ ಉಪಯೋಗವಾಗುವ ಸದ್ಗುಣಗಳನ್ನು ಕಲಿಯುತ್ತವೆ. ಇಂದಿನ ಶಾಲೆಗೆ ಹೋಗುವ ಮಕ್ಕಳು ಅಲಸಿಗಳಾಗುವುದರ ಸಾಧ್ಯತೆ ಹೆಚ್ಚು. ಕೆಲಸವನ್ನು ಹುಡುಕಿಕೊಂಡು ಮಾಡುವ ಅಭ್ಯಾಸ ಹೋಗಿ, ನಿರುದ್ಯೋಗಿಗಳಾಗಲು ಸಿದ್ಧತೆ ಪಡೆಯುತ್ತಾರೆ. ಪ್ರಾಥಮಿಕ ಶಾಲೆಯಲ್ಲಿ ಜ್ಞಾನಸಾಧನೆಗೆ ಬೇಕಾದ ಓದುಬರಹ ಲೆಕ್ಕಗಳನ್ನು ಚೆನ್ನಾಗಿ ಕಲಿತಲ್ಲಿ, ಪ್ರೌಢಶಾಲೆಗಳಲ್ಲಿ ಜೀವನವನ್ನರ್ಥಮಾಡಿಕೊಳ್ಳಬಹುದಾದ ವಿವಿಧ ಜ್ಞಾನಶಾಖೆಗಳ ಕನಿಷ್ಠ

ಮಿತಿಯ ಜ್ಞಾನವನ್ನು ಯಶಸ್ವಿಯಾಗಿ ಅಭ್ಯಸಿಸಬಹುದು. ಈ ಹಂತಗಳ ಅಭ್ಯಾಸ ಇಷ್ಟೇ ಅಲ್ಲ. ಬಹಳ ಸಂಕುಚಿತವಾದ ದೃಷ್ಟಿಯಿಂದ ಇದು ಸರಿ ಅಷ್ಟೆ. ಪರೀಕ್ಷೆ ಮಾಡಿ ಅಳೆಯಬಹುದಾದ ಜ್ಞಾನ ಇದು. ಅಳೆಯಲಾಗದ ಅಮೂಲ್ಯವಾದ ಒಳ್ಳೆಯ ಅಭ್ಯಾಸಗಳು ಒಳ್ಳೆಯ ನಡತೆ ಮತ್ತು ಆದರ್ಶಗಳು ರಕ್ತಗತವಾಗಬೇಕಾದುದೂ ಈ ಶಿಕ್ಷಣ ಕಾಲದಲ್ಲೆ. ಅಳೆಯಬಹುದಾದುದೇ ಸರಿಯಾದ ಪ್ರಮಾಣದಲ್ಲಿ ದಕ್ಕದಿರುವಾಗ ಇನ್ನು ಅಳೆಯಲಾಗದ ಸದ್ಗುಣಗಳ ಮಾತೆಲ್ಲಿ ? ಇವೆಲ್ಲವನ್ನೂ ಸರಿಯಾಗಿ ಸಾಧಿಸಲಾಗದಿದ್ದಾಗ ಉನ್ನತ ಶಿಕ್ಷಣವು ಕುಂಟಿದರೆ ಆಶ್ಚರ್ಯವೇನು ? ಉನ್ನತ ಶಿಕ್ಷಣ ಹದಗೆಟ್ಟಾಗ ಯಾವ ಶಿಕ್ಷಣ ಮಟ್ಟದ ಗುಣಮಟ್ಟ ತೃಪ್ತಿಕರವಾಗಿರುವುದು ಸಾಧ್ಯ ?

ಶಿಕ್ಷಣದಲ್ಲಿರುವ ಬಹುಮುಖ್ಯವಾದ ದೋಷವನ್ನು ಗಮನಿಸಿದುದಾಯಿತು. ಇದಕ್ಕೆ ಚಿಕಿತ್ಸೆಯೇನು ಎಂಬುದನ್ನು ಆಲೋಚಿಸಬೇಕು.

ವಿದ್ಯಾರ್ಥಿಗಳಿದ್ದರೆ ಶಿಕ್ಷಣ. ಆದುದರಿಂದ ಶಿಕ್ಷಣದಲ್ಲಿ ಪ್ರಥಮಸ್ಥಾನ ವಿದ್ಯಾರ್ಥಿಗಳದು. ಅಂದರೆ ವಿದ್ಯಾರ್ಥಿಗಳು ಹೇಳಿದಂತೆ ನಡೆಯಬೇಕೆಂದು ಅರ್ಥಮಾಡುವುದು ಸರಿಯಲ್ಲ. ವಿದ್ಯಾರ್ಥಿಗಳಿಗಾಗಿ ಶಿಕ್ಷಣ ಎಂಬ ದೃಷ್ಟಿಯಿಂದ ಅವರಿಗೆ ಪ್ರಾಧಾನ್ಯ. ವಿದ್ಯಾರ್ಥಿಗಳು ಶಿಕ್ಷಣದ ಒಂದು ತುದಿಯಾದರೆ ಉಪಾಧ್ಯಾಯರು ಇನ್ನೊಂದು ತುದಿ. ವಿದ್ಯಾರ್ಥಿಗಳು ಶಿಕ್ಷಣಾಭ್ಯರ್ಥಿಗಳು, ಉಪಾಧ್ಯಾಯರು ಶಿಕ್ಷಣ ಪ್ರದಾತರು. ಇಬ್ಬರನ್ನೂ ಬೆಸದಿರುವ ಕೊಂಡಿ ಶಿಕ್ಷಣ. ಶಿಕ್ಷಣವು ಬದುಕಿಗೆ ಸಂಬಂಧಿಸಿದುದು. ಬದುಕಿನ ಅನುಭವವಿರುವವರು, ಬದುಕನ್ನು ತಿಳಿದವರು, ಬದುಕಿನ ಹೊಸ್ತಿಲಿನಲ್ಲಿರುವ ವಿದ್ಯಾರ್ಥಿಗಳಿಗೆ ಏನುಬೇಕು ಎಂದು ತಿಳಿದು ನಿರ್ಧರಿಸಬೇಕು. ಒಂದು ಹಂತದಲ್ಲಿ ಶಿಕ್ಷಣತಜ್ಞರೇ ವಿದ್ಯಾರ್ಥಿಗಳಿಗೆ ಬೇಕಾದುದನ್ನೆಲ್ಲ ನಿರ್ಧರಿಸಿದರೆ, ಇನ್ನೊಂದು ಹಂತದಲ್ಲಿ ವಿದ್ಯಾರ್ಥಿಗಳ ಆಯ್ಕೆಗೆ ಸಹಾಯಕರಾಗಿ ನಿಲ್ಲಬೇಕು. ಉಪಾಧ್ಯಾಯರ ಪಾತ್ರ ಶಿಕ್ಷಣದಲ್ಲಿ ಹಿರಿದು. ಉಪಾಧ್ಯಾಯರು ಎಷ್ಟು ದಕ್ಷರೋ ವಿದ್ಯಾಭ್ಯಾಸದ ಗುಣಮಟ್ಟ ಅಷ್ಟೂ ಅಷ್ಟು ಮೇಲೇರುತ್ತದೆ. ಆದರೆ ಉಪಾಧ್ಯಾಯನು ಸರ್ವತಂತ್ರಸ್ವತಂತ್ರನಲ್ಲ. ಅವನಿಗೆ ತಂದೆತಾಯಿಗಳ ಮತ್ತು ಸಮಾಜದ ಸಹಕಾರವಿದ್ದಷ್ಟೂ ತನ್ನ ಕರ್ತವ್ಯವನ್ನು ಹೆಚ್ಚು ಪರಿಣಾಮಕಾರಿಯಾಗಿ ನಿರ್ವಹಿಸಬಲ್ಲ. ಸರಕಾರವು ಸಮಾಜದಲ್ಲಿ ಪ್ರತ್ಯಕ್ಷವಾದ ಪ್ರಧಾನವಾದ ನಿಯಂತ್ರಣ ಶಕ್ತಿ. ಇದರ ಹಿಡಿತ ಬಲವಾದಷ್ಟು ವ್ಯಕ್ತಿಯು ತನ್ನತನವನ್ನು ಕಳೆದುಕೊಂಡು ಯಾಂತ್ರಿಕವಾಗಿ ಜೀವನನಡೆಸುತ್ತಾನೆ. ಇದು ಉಪಾಧ್ಯಾಯನಿಗೂ ಅನ್ವಯಿಸುತ್ತದೆ. ವಿದ್ಯಾರ್ಥಿ, ಉಪಾಧ್ಯಾಯ, ಸಮಾಜ, ಸರಕಾರವೆಂಬ ಈ ಚತುರಂಗಬಲವು ಸಮರಸದಿಂದ ಕಾರ್ಯಸಾಧನೆಗೆ ಹೊರಟರೆ ವಿಜಯ ಖಂಡಿತ. ಯಾವುದೊಂದರಲ್ಲಿ ಕೊಂಕಿದ್ದರೂ ಅಷ್ಟಕಷ್ಟು ಹಾನಿ. ಸರಪಳಿಯ ಒಂದೇ ಒಂದು ಕೊಂಡಿ ದುರ್ಬಲವಾದರೂ ಸರಪಳಿಯೇ ನಿಷ್ಪ್ರಯೋಜಕ. ಎಲ್ಲವೂ ದುರ್ಬಲವಾದರಂತೂ ಕೇಳಬೇಕಾದ್ದೆ ಇಲ್ಲ.

ಎಲ್ಲವನ್ನೂ ಸರಕಾರದಿಂದ ನಿರೀಕ್ಷಿಸುವುದೇ ಈಗಿನ ನಮ್ಮ ಮನೋಭಾವ. ಸರಕಾರ, ಪಾಪ ! ಎಲ್ಲವನ್ನೂ ಹೇಗೆ ಮಾಡಬಲ್ಲುದು ? ಸರಕಾರವೂ ತಾನು ನಿರ್ವಹಿಸಲು ಯೋಗ್ಯತೆ ಪಡೆದುಕೊಳ್ಳದೆ ಜೀವನದ ಎಲ್ಲ ಕ್ಷೇತ್ರಗಳನ್ನೂ ತನ್ನ ಅಧೀನಕ್ಕೆ ತೆಗೆದುಕೊಳ್ಳಬಯಸಿದರೆ, ಎಲ್ಲವೂ ಹದಗೆಡುತ್ತದೆ. ಸರಕಾರವೆಂದರೆ,ನಮ್ಮ ದೃಷ್ಟಿಯಲ್ಲಿ, ನಮಗೆ ಪರಿಚಿತವಾಗಿರುವ ಅದರ ಅಧಿಕಾರಿಗಳು. ಅಧಿಕಾರಿಗಳ ಕಾರ್ಯನಿರ್ವಹಣೆಯೆಂದರೆ ಪರಿಸ್ಥಿತಿ ಉಲ್ಬಣಗೊಳ್ಳದಂತೆ ನೋಡಿಕೊಂಡು ಹೋಗುವುದು.ಮಾಡಿದ್ದನ್ನೇ ಮಾಡುವುದೇ ದಕ್ಷತೆಯೆನ್ನುವರು ಇಲ್ಲಿ. ಅಂತಹವರೇ ಇಲ್ಲಿ ಸಲ್ಲುವರು. ಎಲ್ಲರಿಗೂ ಈ ಕಾಲದಲ್ಲಿ ಸ್ವಹಿತರಕ್ಷಣೆಗೆ ಮೊದಲಿನ ಸ್ಥಾನ. ಶಿಕ್ಷಣಶಾಖೆಯ ಅಧಿಕಾರಿಗಳೂ ಅಷ್ಟೆ. ತಮ್ಮ ಮೇಲೆ ಆಪಾದನೆಗಳು ಬರದಂತೆ ವರ್ತಿಸುವುದು, ತಮ್ಮ ಸಂಬಳ ಸಾರಿಗೆ ಬಡತಿಗಳ ಮೇಲೆ ವಿಶೇಷ ಗಮನವಿಡುವುದು, ಇವು ಅವರ ಮುಖ್ಯವಾದ ಕೆಲಸ. ಯಾರಾದರೂ ಅಲ್ಲೊಬ್ಬ ಇಲ್ಲೊಬ್ಬ

ಶಿಕ್ಷಣದಲ್ಲಿ ವಿಶೇಷ ಶ್ರದ್ಧೆಯಿದ್ದು ಸ್ವತಂತ್ರವಾಗಿ ಯೋಚನೆ ಮಾಡುವವರಿದ್ದರೆ, ಅವರೂ ಕೂಡ ಪರಿಸರದ ಪ್ರಭಾವದಿಂದ ಸ್ವಲ್ಪ ದಿನಗಳ ಮೇಲೆ ಒಂದು ಸಣ್ಣ ಕೀಲಾಗಿ ಪರಿಣಮಿಸುತ್ತಾರೆ. ತಂದೆತಾಯಿಗಳು ತಮ್ಮ ಮಕ್ಕಳ ವಿದ್ಯಾಭ್ಯಾಸದ ಕಡೆಗೆ ವಿಶೇಷ ಗಮನಕೊಡಬೇಕಾದುದು ನ್ಯಾಯ. ಆದರೆ ಅವರು ಅದಕ್ಕೂ ಮೊದಲು ಜೀವನದ ಅಗತ್ಯತೆಗಳಿಗೆ ಗಮನಕೊಡಬೇಕು. ಆದುದರಿಂದಲೇ ಅವರು ತಮ್ಮ ಜವಾಬುದಾರಿಯನ್ನು ಉಪಾಧ್ಯಾಯರಿಗೆ ವರ್ಗಾಯಿಸುತ್ತಾರೆ. ಬಡಪಾಯಿಯಾದ ಉಪಾಧ್ಯಾಯನೂ ಜೀವನಸಮರದಲ್ಲಿ ಸೋತಿರುತ್ತಾನೆ ಇದರಮೇಲೆ ತಾನು ನೋಡಿಕೊಳ್ಳಲು ಸಾಧ್ಯವಾದ ಸಂಖ್ಯೆಗಿಂತಲೂ ಎರಡುಪಟ್ಟು ಸಂಖ್ಯೆಯ ವಿದ್ಯಾರ್ಥಿಗಳನ್ನು ಅವನು ತರಗತಿಯಲ್ಲಿ ಎದುರಿಸಿ ಹತಾಶನಾಗುತ್ತಾನೆ. ಅದೂ ಅಲ್ಲದೆ, ದರ್ಪಿಷ್ಠರೋ, ಅಜ್ಞಾನಿಗಳೋ ಆದ ವಿದ್ಯಾಧಿಕಾರಿಗಳ ಮರ್ಜಿಯನ್ನನುಸರಿಸಿ ಅವನು ಕೆಲಸಮಾಡಬೇಕು. ಶಿಕ್ಷಣಪದ್ಧತಿಯೇ ಬುಡದಿಂದ ತುದಿಯವರೆಗೂ ಕುಲಗೆಟ್ಟಿರುವಾಗ, ಈ ಶಿಕ್ಷಣಪದ್ಧತಿಯ ಫಲವಾದ ಉಪಾಧ್ಯಾಯನಿಂದಲಾದರೂ ಏನು ನಿರೀಕ್ಷಿಸಬಹುದು? ಸರಿಯಾದಶಿಕ್ಷಣ ದೊರೆಯದೆ, ಕಲಿಕೆಯಲ್ಲಿ ಆಸಕ್ತಿಯಿಲ್ಲದೆ ಇರುವ ವಿದ್ಯಾರ್ಥಿಗಳು ಅವಿಧೇಯರೂ, ಮಾಡಬಾರದುದನ್ನು ಮಾಡುವವರೂ ಆಗುವುದು ಸಹಜವೆ. ಇದು ಇಂದಿನ ಚಿತ್ರ. ಮೇಲೆ ಹೇಳಿದುದಕ್ಕೆ ಒಂದೊ ಎರಡೊ ಅಪವಾದಗಳಿರಬಹುದು. ವಿದ್ಯಾರ್ಥಿಗಳನ್ನು ದೂರುವುದೆಂದರೆ, ನಮ್ಮನ್ನೆ ದೂರಿಕೊಂಡ ಹಾಗೆ. ಒಂದರ ದುಷ್ಪರಿಣಾಮ ಇನ್ನೊಂದು. ಇದೊಂದು ವಿಷಚಕ್ರ. ಈ ವಿಷಚಕ್ರಕ್ಕೆ ಎಲ್ಲಿ ಕೊಡಲಿಪೆಟ್ಟು ಹಾಕಿದರೆ ಒಂದೊಂದಾಗಿ ಎಲ್ಲ ಸಮಸ್ಯೆಗಳೂ ಬಗೆಹರಿಯುವುವು?

ಸ್ವಾತಂತ್ರ್ಯಪೂರ್ವದಲ್ಲೆ ರಾಷ್ಟ್ರಪಿತರಾದ ಗಾಂಧೀಜೀ ಅಂದಿನ ಶಿಕ್ಷಣಪದ್ಧತಿಯ ದೌರ್ಬಲ್ಯವನ್ನು ಗುರುತಿಸಿ ಹೊಸ ಶಿಕ್ಷಣಪದ್ಧತಿಯನ್ನು ನಿರೂಪಿಸುವ ಪ್ರಯತ್ನವನ್ನು ಪ್ರಾರಂಭಿಸಿದರು. ಅದನ್ನೆ ಮೂಲಶಿಕ್ಷಣ, ನಯೀತಾಲಿಂ, ವರ್ಧಾಶಿಕ್ಷಣವೆಂದರು. ಗಾಂಧೀಜೀಯವರು ಪ್ರತಿಯೊಬ್ಬರನ್ನೂ ಸಮಸ್ಯೆಗಳನ್ನು ಕುರಿತು ಆಲೋಚಿಸುವಂತೆ, ಪ್ರಯೋಗ ನಡೆಸಿ ಸೂಕ್ತಮಾರ್ಗಗಳನ್ನು ಕಂಡುಕೊಳ್ಳುವಂತೆ ಹೇಳುತ್ತಿದ್ದರು. ಯಾರ ಮೇಲೂ ತಮ್ಮ ಅಭಿಪ್ರಾಯಗಳನ್ನು ಬಲಾತ್ಕಾರವಾಗಿ ಹೇರುತ್ತಿರಲಿಲ್ಲ. ಎಲ್ಲರಿಗೂ ವಿಚಾರಸ್ವಾತಂತ್ರ್ಯ ಕೊಟ್ಟಿದ್ದರು. ಆ ವಿಚಾರಸರಣಿಯು ಒಂದು ಪದ್ಧತಿಯಾಗಿ, ಯಾಂತ್ರಿಕವಾಗಿ ಕೆಲಸಮಾಡುವ ತಜ್ಞರನ್ನು ಮತ್ತು ಉಪಾಧ್ಯಾಯರನ್ನು ನಿರ್ಮಿಸಿತು. ಅದಕ್ಕೇ ಅದು ತಾನಾಗಿಯೇ ಕಣ್ಮರೆಯಾಯಿತು. ತಾವು ಯಾವ ಸಂಸ್ಥೆ ಕಟ್ಟಲೂ ಇಷ್ಟಪಡುವುದಿಲ್ಲವೆಂದೂ, ಯಾವ ಹೊಸ ತತ್ತ್ವವನ್ನೂ ಬೋಧಿಸುತ್ತಿಲ್ಲವೆಂದೂ ಗಾಂಧೀಜೀಯವರೆ ಸ್ಪಷ್ಟಪಡಿಸಿದ್ದರು. ಹಿಂದಿನ ಜ್ಞಾನಿಗಳು ಆಗಲೆ ತಿಳಿಸಿದ್ದ ಸತ್ಯವನ್ನು ತಮ್ಮಜೀವನದಲ್ಲಿ ಆಚರಣೆಗೆ ತರಲು ಪ್ರಯತ್ನಿಸುತ್ತಿರುವುದಾಗಿ ಅವರು ಸಾರಿಸಾರಿ ಹೇಳಿದರು. ಆದರೂ ನಾವು ಅಂಧಶ್ರದ್ಧೆಯಿಂದ ಅವರನ್ನು ಪೂಜಿಸಲು ಮತ್ತು ಅನುಕರಿಸಲು ತೊಡಗಿದೆವು. ವಿಗ್ರಹವನ್ನು ನಂಬಿ ದೇವರನ್ನು ಮರೆತೆವು. ಮಾತುಗಳನ್ನು ಪುನರುಚ್ಚರಿಸುತ್ತಾ ಅವುಗಳು ವ್ಯಕ್ತಪಡಿಸುವ ಸತ್ಯವನ್ನು ಕಡೆಗಣಿಸಿದೆವು.

ಸ್ವಾತಂತ್ರ್ಯಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ಬಂದ ತರುಣದಲ್ಲಿ ಗಾಂಧೀಜೀಯವರು ಕೊಟ್ಟ ಸ್ಫೂರ್ತಿಯಿಂದ ಕೆಲವು ಖಾಸಗಿವಿದ್ಯಾಸಂಸ್ಥೆಗಳು ಹುಟ್ಟಿಕೊಂಡು ಕೆಲಸಮಾಡಿದುವು; ಉಳಿದ ವಿದ್ಯಾಸಂಸ್ಥೆಗಳಿಗೆ ಮಾದರಿಯಾದುವು. ತ್ಯಾಗ ಸೇವೆಗಳಿಗೆ ಅಲ್ಲಿ ಅಲ್ಪಸ್ವಲ್ಪ ಸ್ಥಾನವಿತ್ತು ಅದರಿಂದಲೇ ಅವು ಉಳಿದ ವಿದ್ಯಾಸಂಸ್ಥೆಗಳಿಗಿಂತಲೂ ಉತ್ತಮವೆನಿಸಿಕೊಂಡುವು. ಈಗ ಆ ಸಂಸ್ಥೆಗಳೇನಾಗಿವೆ? ಅವಕ್ಕೂ ಸರಕಾರದ ವಿದ್ಯಾಸಂಸ್ಥೆಗಳಿಗೂ ಯಾವ ವ್ಯತ್ಯಾಸವೂ ಇಲ್ಲ. ಏನಾದರೂ ವ್ಯತ್ಯಾಸವಿದ್ದರೆ, ಶಾಲಾಮಂಡಲಿಯ ದುರ್ವ್ಯವಹಾರ ಇಲ್ಲವೆ ಉಪಾಧ್ಯಾಯ ಪುಢಾರಿಗಳ ದುರ್ವ್ಯಾಪಾರ.

ಶಿಕ್ಷಣದಲ್ಲಿ ನಿಜವಾದ ಆಸಕ್ತಿಯಿರುವವರು ಹೊಸ ಬಗೆಯ ವಿದ್ಯಾಸಂಸ್ಥೆಗಳನ್ನು ನಿರ್ಮಾಣಮಾಡಿ, ಸತ್ತು ಹೋಗಿರುವ ಶಿಕ್ಷಣಪದ್ಧತಿಗೆ ಜೀವಕಳೆ ತುಂಬಬೇಕು. ಸರಕಾರದಿಂದ ಧನಸಹಾಯ ಅಪೇಕ್ಷಿಸಿ ವಿದ್ಯಾಸಂಸ್ಥೆ

ಗಳನ್ನು ಪ್ರಾರಂಭಿಸಿದರೆ, ಹುಟ್ಟನಲ್ಲೆ ಆತ್ಮಹತ್ಯೆಮಾಡಿಕೊಂಡಂತೆಯೆ ಸರಿ. ಆದರೆ ವಿದ್ಯಾಭ್ಯಾಸ ಇಲಾಖೆ ನೀಡುವ ಸರ್ಟಿಫಿಕೇಟುಗಳಿಲ್ಲದ್ದಿದ್ದರೆ ಎಷ್ಟೇ ನಿಜವಾದ ಯೋಗ್ಯತೆಯಿದ್ದರೂ ಸಮಾಜದಲ್ಲಿ ಅದಕ್ಕೆ ಮಾನ್ಯತೆಯಿಲ್ಲ. ವಿದ್ಯಾಭ್ಯಾಸ ಇಲಾಖೆಯವರು ಕೇಳುವ ಯೋಗ್ಯತೆಯನ್ನು ಉಂಟುಮಾಡಿಕೊಟ್ಟು, ಈಗಿನ ಶಾಲಾ ವಿದ್ಯಾರ್ಥಿಗಳಲ್ಲಿಲ್ಲದಿರುವ ಅಳೆಯಲಾಗದ ಸದ್ಗುಣಗಳನ್ನು ಕಲಿಸಿಕೊಡುವ ಹೊಸ ವಿದ್ಯಾಸಂಸ್ಥೆಗಳು ಬೇಕು. ಇದನ್ನು ಕುರಿತು ಈಗಿನ ಪದ್ಧತಿಯಲ್ಲಿ ಬೇಸರಗೊಂಡವರು ಆಲೋಚಿಸಬೇಕು, ಪ್ರಯೋಗ ನಡೆಸಬೇಕು. ಮುಕ್ತವಿಶ್ವವಿದ್ಯಾನಿಲಯಗಳನ್ನು (open universities) ಪ್ರಾರಂಭಿಸುತ್ತಿರುವಾಗ ಮುಕ್ತಶಾಲಾಶಿಕ್ಷಣ (open school system) ವಿರಬೇಕಾದುದು ನ್ಯಾಯವಲ್ಲವೆ ? ಕಣ್ಣುಕಟ್ಟಿದ ಗಾಣದೆತ್ತುಗಳಿಗಾಗಲಿ, ಲಗಾಮು ಎಳೆದ ಕಡೆ ಮಾತ್ರ ನೋಡಬಲ್ಲ ಜಟಕಾಬಂಡಿಯ ಕುದುರೆಗಳಿಗಾಗಲಿ, ಹೊಸ ಮಾರ್ಗ ಕಾಣುವುದು ಅಥವಾ ನಡುವೆಯ ದಾರಿಯನ್ನು ತಾವೇ ಆಯ್ಕೆ ಮಾಡಿಕೊಳ್ಳುವುದಾಗಲಿ ಸಾಧ್ಯವಿಲ್ಲ. ಹಿಂದಿನವರು ನಡೆದ ದಾರಿಯಲ್ಲೆ ಅತ್ತಇತ್ತ ನೋಡದೆ ನಡೆಯುತ್ತಿರುವವರ ಪಾಡೂ ಅಷ್ಟೆ. ಶಿಕ್ಷಣ ಇತಿಹಾಸದಲ್ಲಿಯೂ ಅಷ್ಟೆ. ಪುಸ್ತಕಪಾಂಡಿತ್ಯದ ಹೊರೆಯಲ್ಲಿ ಸ್ವತಂತ್ರ ವಿಚಾರಶಕ್ತಿಯನ್ನು ಕಳೆದುಕೊಂಡವರಿಂದ ಪರಿಣಾಮಕಾರಿಯಾದ ಕ್ರಾಂತಿಯೇನೂ ಆಗಿಲ್ಲ.

ಶಿಕ್ಷಣಇಲಾಖೆಯ ನಿರ್ಬಂಧಗಳಿಂದ ಮುಕ್ತವಾದ ನಿಜವಾದ ಜೀವನ ಶಿಕ್ಷಣದೊಡನೆ ಸಾಂಪ್ರದಾಯಿಕ ಶಿಕ್ಷಣವನ್ನೂ ಕೊಡುವ ಹೊಸ ವಿದ್ಯಾಸಂಸ್ಥೆಗಳು ಹುಟ್ಟಿದಂದೆ ಶಿಕ್ಷಣಪ್ರಗತಿಯೂ ರಾಷ್ಟ್ರಪ್ರಗತಿಯೂ ಸಾಧ್ಯ.

ಜೀವನದಲ್ಲಿ ಎರಡು ದುರಂತಗಳಿವೆ. ಒಂದು ನೀವು ಬಯಸಿದ್ದು ದೊರೆಯದಿರುವುದು ; ಮತ್ತೊಂದು ಅದು ಸಿಕ್ಕುವುದು.

ಬೆಂಜಮಿನ್ ಫ್ರಾಂಕಲಿನ್

ಯುವಕರಿಗೆ ಸಂದೇಶ

ನಮ್ಮ ಸ್ವಾತಂತ್ರ್ಯಸಂಪಾದನೆಗೆ ನಮ್ಮ ರಾಷ್ಟ್ರಪಿತನನ್ನೇನೊ ಉಪಯೋಗಿಸಿಕೊಂಡೆವು, ಆತ ಬೋಧಿಸಿದ ಸ್ವದೇಶಿ, ಸತ್ಯಾಗ್ರಹ, ಅಹಿಂಸೆ, ಗ್ರಾಮಸ್ವರಾಜ್ಯ, ಸರಳಜೀವನ, ತ್ಯಾಗಬುದ್ಧಿ ಮೊದಲಾದ ಕೈದುಗಳನ್ನೂ ಅಂತು. ಆದರೆ ಸ್ವಾತಂತ್ರ್ಯಸಂಪಾದನೆ ಆದೊಡನೆಯೆ ಆತನನ್ನು ತೊಲಗಿಸಿದೆವು : ಆತನ ದೇಹಕ್ಕೆ ಗುಂಡಿಕ್ಕಿದವನೇನೊ ಒಬ್ಬನೆ ; ಆದರೆ ತರುವಾಯ ಆತನ ಧ್ಯೇಯಕ್ಕೆ ಉರುಳಿಕ್ಕಿಕೊಂಡವರು ಹಲವರು ಆತನ ಅನುಯಾಯಿಗಳೆ ! ನೆಹರೂ ಅವರ ಮುಂದಾಳುತನದ ನೇತೃತ್ವದಲ್ಲಿ ನಾವು ಗಾಂಧೀಜಿಯ ತತ್ತ್ವಗಳನ್ನೆಲ್ಲ ಮೂಲೆಗೊತ್ತಿ, ನಮ್ಮ ರಾಷ್ಟ್ರವನ್ನು ಏಕಾಏಕಿ ಅಭಿವೃದ್ಧ ಶ್ರೀಮಂತ ಪಾಶ್ಚಾತ್ಯ ದೇಶಗಳ ಸರಿಸಮಕ್ಕೇರಿಸುವ ಹುಮ್ಮಸ್ಸಿನಲ್ಲಿ ಸಂಪೂರ್ಣವಾಗಿ ಅವರ ಅನುಕರಣೆಗೆ ದೀಕ್ಷಿತರಾದೆವು. ತರುವಾಯ ಸ್ವದೇಶದ ಮತ್ತು ವಿದೇಶದ ಕೆಲವು ರಾಜಕೀಯ ಮತ್ತು ಆರ್ಥಿಕಪ್ರಾಜ್ಞರು ಕೊಟ್ಟ ಎಚ್ಚರಿಕೆಯನ್ನೂ ನಾವು ಲೆಕ್ಕಿಸಲಿಲ್ಲ ; ಪ್ರತಿಗಾಮಿ ಸೂಚನೆಗಳೆಂದೂ ಅವನ್ನು ತಿರಸ್ಕರಿಸಿದೆವು. ಆದರೂ ಗಾಂಧೀಜಿಯನ್ನು ಕೈಬಿಟ್ಟೆವು ಎಂದಾಗಬಾರದೆಂದು ಅವರ ಧ್ಯೇಯಗಳನ್ನು ಮ್ಯೂಸಿಯಂಗಳಲ್ಲಿ ಪ್ರದರ್ಶನಕ್ಕಿಟ್ಟೆವು : ಅಂದರೆ ಆ ಧ್ಯೇಯಗಳ ಜೀವ ತೆಗೆದು, ಜೀವವಿದ್ದರೆ ಅವುಗಳಿಂದ ತೊಂದರೆಯಾಗಬಹುದೆಂಬ ಮುಂದಾಲೋಚನೆಯಿಂದ ಅವುಗಳನ್ನು ಕೊಂದು, ಚರ್ಮ ಸುಲಿದು, ಹದಹಾಕಿ, ಪ್ರದರ್ಶನ ಮಂದಿರಗಳನ್ನು ಕಟ್ಟಿಸಿಟ್ಟೆವು. ಅವುಗಳ ಪೂಜೆಗೂ ಏರ್ಪಾಟು ಮಾಡಿ, ಅವರ ಭಕ್ತರನ್ನು ಸಮಾಧಾನಪಡಿಸಿ, ಮೂಲೆಗೆ ತಳ್ಳಿ, ಮತ್ತೆ ನಮ್ಮ ಪಾಶ್ಚಾತ್ಯರ ಅನುಕರಣೆಯ ಪಾಂಚವಾರ್ಷಿಕ ಯೋಜನೆಗಳ ಯಾಗಕ್ಕೆ ಶುರುಮಾಡಿದೆವು.

ಪರಕೀಯರ ಶೋಷಣೆಯಿಂದ ನಮ್ಮ ದೇಶ ಎಂತಹ ಬಡತನಕ್ಕೆ ಇಳಿದಿತ್ತು ಎಂದರೆ ಯಂತ್ರನಾಗರಿಕತೆಯಲ್ಲಿ ತುಂಬ ಮುಂದುವರಿದ ದೇಶಗಳಂತೆ ಮಹಾ ಮಹಾ ಕಾರ್ಖಾನೆಗಳ ಮತ್ತು ಕೈಗಾರಿಕೆಗಳ ಭಾರವನ್ನು ಹೊರುವ ತ್ರಾಣವೆ ಅದಕ್ಕಿರಲಿಲ್ಲ. ಆದರೂ ಅದರ ಹೆಗಲಮೇಲೆ ಅದನ್ನೆಲ್ಲ ಹೇರಿದೆವು, ಕೋಟ್ಯಂತರ ಧನದ ಸಾಲವೆತ್ತಿ. ನಮಗೆ ಆಗ ತುರುತ್ತಾಗಿ ಬೇಕಾಗಿದ್ದುದು ಅನ್ನ ನೀರು ಬಟ್ಟೆ ಗುಡಿಸಲು. ಆದರೆ ನಾವು ಮೋಟಾರು ಕಾರುಗಳನ್ನು ತಯಾರಿಸುವ ಏರ್ಪಾಡಿಗೆ ಬೆಂಬಲ ಕೊಟ್ಟೆವು. ನಾವೂ ಉಪಗ್ರಹಗಳನ್ನು ಹಾರಿಸಬೇಕೆಂದು ಹಠತೊಟ್ಟೆವು ನಾವೂ ರಿಯಾಕ್ಟರುಗಳನ್ನು ಸ್ಥಾಪಿಸಿದೆವು. ಕೊನೆಗೆ ಆಟಂ ಸಾಧನವನ್ನೂ ಸಿಡಿಸಿದೆವು. ಹೀಗೆ ಅನೇಕ ರೀತಿಯ ಭೋಗದ ಮತ್ತು ಷೋಕಿಯ ವಸ್ತುಗಳ ತಯಾರಿಕೆಗೆ ಬಡರೈತರ ತೆರಿಗೆಯ ಧನವನ್ನು ವ್ಯಯಮಾಡಿದೆವು, ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಭೋಗಜೀವನ ನಡೆಸುವ ಶ್ರೀಮಂತರ ಸುಖಕ್ಕಾಗಿ. ಹಳ್ಳಿಗಳನ್ನೂ ರೈತವರ್ಗವನ್ನೂ ಮರೆತುಬಿಟ್ಟೆವು, ಅಥವಾ ಮರೆತೇಬಿಟ್ಟೆವು ಎಂಬ ದೂರಿನಿಂದ ಪಾರಾಗುವುದಕ್ಕಾಗಿಯೂ ಮತ್ತು ಅವರು ಸಂಪೂರ್ಣವಾಗಿ ನಿರ್ಜೀವವಾದರೆ ನಮಗಾಗಿ ದುಡಿಯುವವರು ಯಾರೂ ಇಲ್ಲದಂತೆ ಆಗಬಾರದು ಎಂಬುದ

ಕ್ಕಾಗಿಯೂ ಜೀವಮಾಡುವಷ್ಟರ ಮಟ್ಟಿಗೆ ಅವರ ಭಿಕ್ಷಾಪಾತ್ರೆಗೂ ನಾಲ್ಕು ಕಾಸು ಎಸೆದದ್ದುಂಟು. ನಗರಗಳಲ್ಲಿ ಮಹಾ ಪರ್ವತೋಪಮ ಕಟ್ಟಡಗಳನ್ನು ಕಟ್ಟುವುದಕ್ಕೆ ನಮಗೆ ದುಡ್ಡು ಇತ್ತು. ಆದರೆ ಹಳ್ಳಿಗಳಲ್ಲಿ ಬಾವಿ ತೋಡಲು ಹಣವಿರಲಿಲ್ಲ. ಯಾವುದಕ್ಕೆ ಮೊದಲ ಗಮನ ಕೊಡಬೇಕಾಗಿತ್ತೊ ಅದಕ್ಕೆ ಕೊಡಲಿಲ್ಲ. ಬಡರೈತನನ್ನು ಹಿಂಡಿ ತೆಗೆದ ತೆರಿಗೆ ದವಸ ಧಾನ್ಯಗಳು ನಗರಗಳ ಶ್ರೀಮಂತವರ್ಗಕ್ಕೂ ಅಧಿಕಾರವರ್ಗದ ಧಾಳಾಧೂಳಿಗೂ ವ್ಯಯ ವಾಯಿತು. ರಾಷ್ಟ್ರಪತಿಯಿಂದ ಹಿಡಿದು ರಾಜ್ಯಪಾಲ, ಪ್ರಧಾನಿ, ಮಂತ್ರಿ, ಲೋಕಸಭಾ ಸದಸ್ಯ, ಮೇಲ್ಮನೆ, ಕೆಳ ಮನೆ, ಐಎಎಸ್, ಐಪಿಎಸ್ ಇತ್ಯಾದಿ ಅಧಿಕಾರಿಗಳವರೆಗೆ ಸಮೃದ್ಧ ಸಂಬಳ ಗಿಂಬಳಗಳ ಹಂಚಿಕೆ ನಡೆಯಿತು. ದೊಡ್ಡದೊಡ್ಡ ವಿದ್ವತ್ಪೂರ್ಣವಾದ ಹೆಸರು ಹೊತ್ತ ನಕಲಿ ಸಂಸ್ಥೆಗಳೂ ಈ ಲೂಟಿಯಲ್ಲಿ ಭಾಗಿಯಾಗುವುದನ್ನು ಮರೆಯಲಿಲ್ಲ. ಗ್ರಾಮಸ್ವರಾಜ್ಯ ಪರಿಕಲ್ಪನೆಯ ವಿಕೇಂದ್ರೀಕರಣದ ಸ್ಥಾನದಲ್ಲಿ ಸಂಪೂರ್ಣ ಕೇಂದ್ರೀಕರಣ ಸ್ಥಾಪನೆಯಾಗಿ, ದೆಹಲಿಗೆ ಹೋಗಿ ಬರುವುದೆ ಕರ್ತವ್ಯಕರ್ಮದ ಪ್ರಧಾನಭಾಗವಾಯಿತು. ಆಡಳಿತ ಮತ್ತು ನ್ಯಾಯ ವಿತರಣೆಗಳು ಬ್ರಿಟಿಷರ ಕಾಲದಲ್ಲಿದ್ದುದಕ್ಕಿಂತಲೂ ಜಟಿಲವಾಗಿ ಅನಕ್ಷರಸ್ಥ ಹಳ್ಳಿಗರು ಅಧಿಕಾರದ ಗಾಣಕ್ಕೆ ಸಿಕ್ಕಿ ನರಳುವಂತಾಯಿತು. ನಮ್ಮ ಹೊಟ್ಟೆಗೆ ಬೇಕಾದ ಕೆಲವು ಅತ್ಯಾವಶ್ಯಕ ವಸ್ತುಗಳನ್ನು ಮಾರಿ ಪಡೆದ ವಿದೇಶಿ ವಿನಿಮಯದಿಂದ ವರ್ಷವರ್ಷವೂ ೧೪೦೦ ಕೋಟಿ ರೂಪಾಯಿ ಪೆಟ್ರೋಲು ಎಣ್ಣೆ ತರಿಸಿ ಸುಡುತ್ತೇವಂತೆ ! ಹೀಗೆ ಹೇಳುತ್ತಾ ಹೋದರೆ ಕೊನೆಮುಟ್ಟುವುದೆಲ್ಲಿ ? ಈ ವಿಚಾರದಲ್ಲಿ ನನಗಿಂತಲೂ ಆ ಆ ಕ್ಷೇತ್ರಗಳಲ್ಲಿ ಪರಿಣತರಾದ ವರಿಂದ ಈಗ ಒದಗಿರುವ ದುಃಸ್ಥಿತಿಯ ಕಥೆಯ ವಿವರಗಳನ್ನು ನೀವು ಕೇಳಿದರೆ ಮೂರ್ಛೆ ಹೋಗುತ್ತೀರೊ ಏನೊ ?

ಇಂತಹ ಪರಿಸ್ಥಿತಿಯ ಪಿತ್ರಾರ್ಜಿತ ಆಸ್ತಿಗೆ ನೀವು ಹಕ್ಕುದಾರರಾಗಿ ಹೋಗುತ್ತಿದ್ದೀರಿ. ಏಕೆ ಹೀಗಾ ಯಿತು ? ಸಮಾಜವಾದವೆ ನಮ್ಮ ಗುರಿ ಎಂದು ಘೋಷಿಸಿದ್ದೆವು ; ಪ್ರಜಾಸತ್ತೆಯೆ ನಮ್ಮ ವಿಧಾನಮಾರ್ಗ ಎಂದೂ ಸಾರಿಸಾರಿ ಪ್ರತಿಜ್ಞೆ ಮಾಡಿದ್ದೆವು. ಆದರೂ ಹೀಗಾಯಿತಲ್ಲಾ ಏಕೆ ? ಇತರ ದೇಶಗಳು ಶತಮಾನಗಳ ವಿಕಾಸದಿಂದ ಸಾವಧಾನವಾಗಿ, ಆದರೂ ಸುದೃಢವಾಗಿ, ಸಾಧಿಸಿದ್ದನ್ನು ನಾವು ತಕ್ಷಣವೆ ಸಾಧಿಸಲು ಹೊರಟದ್ದು ನಮಗೊದಗಿ ರುವ ಅಪಘಾತಕ್ಕೆ ಮೂಲಕಾರಣವಾಯಿತು. ನೂರಕ್ಕೆ ತೊಂಬತ್ತರಷ್ಟು ಅನಕ್ಷರರಿರುವ ದೇಶದಲ್ಲಿ ಅದೆಂತಹ ಪ್ರಜಾಸತ್ತೆ ಸಾಧ್ಯವಾದೀತು ? ಅದರಲ್ಲಿಯೂ ನಮ್ಮ ದೇಶ, ಯಾವತ್ತೂ ಪ್ರಜಾಸತ್ತೆಯ ಗಾಳಿಯನ್ನು ಮೂಸಿ ನೋಡದಿದ್ದ ದೇಶ. ರಾಜರನ್ನು ಪ್ರತ್ಯಕ್ಷ ದೇವರೆಂದು ಪೂಜಿಸಿದ ದೇಶ ; ಪುರೋಹಿತರನ್ನು ಭೂಸುರರೆಂದು ಆರಾಧಿ ಸಿದ ದೇಶ ! ಮತಮೌಢ್ಯ ಎಂಬ ನಿತ್ಯರೋಗವು ಅದರ ನಾಡಿನಾಡಿಗಳಲ್ಲಿ ಮಾತ್ರವಲ್ಲದೆ ಎಲುಬಿನಲ್ಲಿಯೂ ಐದು ಸಾವಿರ ವರ್ಷಗಳಿಂದ ಸರ್ವವ್ಯಾಪಿಯಾಗಿದ್ದು ವರ್ಗ ವರ್ಣ ಮತ ಜಾತಿ ಪಂಥ ಪಂಗಡ ಎಂಬ ನೂರಾರು ಭೇದ ಗಳಿಂದ ನರಳುತ್ತಿರುವ ದೇಶ ! ಇಲ್ಲಿ “ಡೆಮಾಕ್ರಸಿ” (Democracy) ಬರಿಯ “ಮಾಕರಿ” (Mockery) ಆಗಿದೆ. ಅಮೇರಿಕಾದಂತಹ ಮುಂದುವರಿದ ದೇಶದಲ್ಲಿಯೆ ಅದರ ಮಹಾಧ್ಯಕ್ಷರ ಚುನಾವಣೆಯಲ್ಲಿ ಧನಸಂಪತ್ತಿಯೆ ನಿರ್ಣಾಯಕ ಶಕ್ತಿಯಾಗಿರುವುದನ್ನು ನಾವು ಕಾಣುತ್ತಿದ್ದೇವೆ. ಅಲ್ಲಿ ಹಿಂದೆ ಏಬ್ರಾಹಂ ಲಿಂಕನ್ ಅಂತಹ ಬಡವರೂ ನೀತಿ ಸಂಪನ್ನರಾಗಿದ್ದ ಪಕ್ಷದಲ್ಲಿ ಮಹಾಧ್ಯಕ್ಷತೆಗೆ ಏರುವ ಸನ್ನಿವೇಶವಿತ್ತು. ಈಗ ಕೋಟ್ಯಾಧೀಶ್ವರರಲ್ಲದವರಾರೂ ಚುನಾವಣೆಯನ್ನು ಗೆಲ್ಲುವುದಿರಲಿ, ಚುನಾವಣೆಗೆ ನಿಲ್ಲುವುದೂ ಅಸಾಧ್ಯ. ಇನ್ನು ನಮ್ಮ ದೇಶದಲ್ಲಿ ಆ ರೀತಿಯ ಚುನಾವಣಾ ಪದ್ಧತಿಯಿಂದ ಏನೇನು ಅನಾಹುತವಾಗಬಹುದೊ ಅದೆಲ್ಲ ಆಗಿದೆ ಮತ್ತು ಆಗುತ್ತಲೂ ಇದೆ. ಜಾತಿ, ಮತ,ಹೆಂಡ, ದುಡ್ಡು, ಇವೇ ಓಟರುಗಳು ; ಓಟು ಕೊಡುವ ಪ್ರಜೆಗಳು ಬರಿಯ ನಿಮಿತ್ತ ಮಾತ್ರ ಮೂಕ ವಾಹನ ಗಳಷ್ಟೆ ! ನಾಲ್ಕಾರು ಜನ ಯಾತಕ್ಕೂ ಹೇಸದ ಖದೀಮರು ಸೇರಿ, ಯಾವ ಉಪಾಯದಿಂದಾದರೂ, ಕಾಳಸಂತೆಯ ಕಪ್ಪುಹಣವೊ, ಕಳ್ಳಸಾಗಾಣಿಕೆಯ ಹಾದಿ ಹಣವೊ, ಅಂತೂ ಹೆಚ್ಚು ಹಣ ಒಟ್ಟುಮಾಡಿದರಾಯ್ತು, ನಮ್ಮ ಚುನಾವಣೆಗಳಲ್ಲಿ ಗೆಲ್ಲಬಹುದು. ಒಮ್ಮೆ ಗೆದ್ದು ಅಧಿಕಾರ ಸೂತ್ರವನ್ನು ಹಿಡಿದರಾಯ್ತು, ನಾಡಿನ ಸರ್ವ ಪ್ರಚಾರ ಮಾರ್ಗಗಳನ್ನೂ ಅಧಿಕಾರದ ಭಯದಿಂದಲೂ ದುಡ್ಡಿನ ಬಲದಿಂದಲೂ ವಶಪಡಿಸಿಕೊಂಡು ತಮ್ಮ ಸರ್ವಾಧಿಕಾರಕ್ಕೆ

ವ್ಯಾಘಾತ ಒದಗದಂತೆ ನೋಡಿಕೊಳ್ಳಬಹುದು. ಒಂದುವೇಳೆ ಜನಶಕ್ತಿ ಎಚ್ಚತ್ತು ಪ್ರತಿಭಟಿಸಿದರೂ ಅದನ್ನು ವಿಫಲಗೊಳಿಸಲು ವಿಶೇಷಾಜ್ಞೆಗಳನ್ನೂ ಪೋಲೀಸ್ ಪಡೆಯನ್ನೂ ಕಡೆಗೆ ಸೈನ್ಯಬಲವನ್ನೂ ಪ್ರಯೋಗಿಸಬಹುದು.

ನಿಜವಾದ ಪ್ರಜಾಸತ್ತೆ ಎಂದರೆ ಅನಿರ್ಬಾಧಿತ ಇಚ್ಛಾ ಸ್ವಾತಂತ್ರ್ಯದಿಂದ ಪ್ರಜೆಗಳು ಆಯುವ ಪ್ರಾಮಾಣಿಕ ವ್ಯಕ್ತಿಗಳಿಂದ ಸರ್ವರ ಅಭ್ಯುದಯಕ್ಕಾಗಿ ನಡೆಯುವ ರಾಜ್ಯಭಾರ. ಆ ದೃಷ್ಟಿಯಿಂದ ನೋಡಿದರೆ ಈಗ ನಡೆಯುವ ಚುನಾವಣೆಗಳು ಪ್ರಜಾಸತ್ತಾತ್ಮಕ ಎಂದು ಹೇಳಲಾಗುತ್ತದೆಯೆ ? Politics is the last resort of a scoundrel ಎಂದಿದ್ದನಂತೆ ಒಬ್ಬ ಪಾಶ್ಚಾತ್ಯ ಮನೀಷಿ. ನಮ್ಮ ಇಂದಿನ ರಾಜಕಾರಣರಂಗವನ್ನು ನೋಡಿದ್ದರೆ ಅವನು ತನ್ನ ಸೂಕ್ತಿಯನ್ನು ತಿದ್ದಿಕೊಳ್ಳುತ್ತಿದ್ದನು,-Politics is the first resort of a scoundrel ಎಂದು ಬದಲಾಯಿಸಿ ! ಈಗ ನಮ್ಮ ರಾಜಕೀಯ ರಂಗ ಹೇಗಾಗಿದೆ ಎಂದರೆ ಪ್ರಾಮಾಣಿಕರೂ ಸಂಭಾವಿತರೂ ಸುಸಂಸ್ಕೃತರೂ ಯಾರೂ ಅದರ ಹತ್ತಿರ ಸುಳಿಯಲೂ ಅಂಜುತ್ತಾರೆ. ಚುನಾವಣೆಯ ರೀತಿಯನ್ನೆ ಬದಲಾಯಿಸದಿದ್ದರೆ ಮಾನಮರ್ಯಾದೆಯುಳ್ಳ ಯಾವ ಪ್ರಾಮಾಣಿಕ ಯೋಗ್ಯನೂ ಅದರಲ್ಲಿ ಪಾಲುಗೊಳ್ಳುವ ಸಂಭವವಿಲ್ಲ. ಹಣದ ಹೊಳೆಹರಿಸಿ ಚುನಾವಣೆಯಲ್ಲಿ ಗೆಲ್ಲುವ ಯಾವ ವ್ಯಕ್ತಿಯಾಗಲಿ ಯಾವ ಪಕ್ಷವಾಗಲಿ ಭ್ರಷ್ಟಾಚಾರಕ್ಕೆ ಬಲಿಯಾಗದೆ ಇರಲು ಸಾಧ್ಯವೆ ಇಲ್ಲ. ಆದ್ದರಿಂದ ಭ್ರಷ್ಟಾಚಾರವನ್ನು ನಿರ್ಮೂಲಮಾಡುವ ಮತ್ತು ನಿಜವಾದ ಪ್ರಜಾಸತ್ತೆಯನ್ನು ರಕ್ಷಿಸುವ ಇಚ್ಛೆ ನಿಮಗಿದ್ದರೆ ಇಂದಿನ ರೀತಿಯ ಧನಾಶ್ರಿತ ಚುನಾವಣೆಯ ಪದ್ಧತಿಯನ್ನೆ ಬದಲಾಯಿಸಿ ಅದನ್ನು ಗುಣಾಶ್ರಿತವನ್ನಾಗಿ ಪರಿವರ್ತಿಸುವ ಕರ್ತವ್ಯ ನಿಮ್ಮ ಹೆಗಲ ಮೇಲೆ ಬೀಳುತ್ತದೆ. ಉಗ್ರ ಕ್ರಾಂತಿಯಿಂದಲಾದರೂ ನೀವು ಚುನಾವಣೆಯನ್ನು ಸಾತ್ತ್ವಿಕಮಾರ್ಗಕ್ಕೆ ತಿರುಗಿಸದಿದ್ದರೆ ಸ್ವಾರ್ಥಿಗಳೂ ಸಮಯಸಾಧಕರೂ ಗೂಂಡಾಗಳೂ, ಕಳ್ಳಸಂತೆಕೋರರೂ ಕಳ್ಳಸಾಗಣೆಯ ಖದೀಮರೂ, ಚಾರಿತ್ರಹೀನರೂ ಪ್ರಜಾಸತ್ತೆಯ ಹುಸಿ ಹೆಸರಿನ ಹಿಂದೆ ಪ್ರಚ್ಛನ್ನಸರ್ವಾಧಿಕಾರ ನಡೆಸುತ್ತಾರೆ.

ನಮ್ಮ ಪ್ರಜಾಸತ್ತೆ ಕಲುಷಿತವಾಗಲು ಹಣ ಒಂದೆಯೆ ಕಾರಣವೆಂದು ತಿಳಿಯುವುದು ತಪ್ಪಾಗುತ್ತದೆ. ಅದಕ್ಕಿಂತಲೂ ಮಹತ್ತಾದ ಮತ್ತು ಮೂಲಭೂತವಾದ ಮತ್ತೊಂದು ಕಾರಣವೂ ಇದೆ, ನಮ್ಮ ಪುಣ್ಯಭೂಮಿ ಭಾರತದಲ್ಲಿ. ಅದು ಒಂದು ಅಮೂರ್ತ ವಸ್ತು. ಅದು ಹಾಕಿಕೊಂಡಿರುವ ವೇಷದಿಂದ ತುಂಬ ಸಾಧು ಮತ್ತು ಪೂಜ್ಯ ಎಂಬಂತೆ ತೋರುತ್ತದೆ. ಅದು ಭಾವರೂಪಿಯಾದುದರಿಂದ ಅತಿ ಸೂಕ್ಷ್ಮವಾಗಿ ಹೃದಯಪ್ರವೇಶಮಾಡಿ ನಮ್ಮನ್ನು ಆಕ್ರಮಿಸುತ್ತದೆ. ಮತ್ತು ನಮ್ಮಲ್ಲಿ ನಿಜವಾಗಿಯೂ ಇರುವ ಒಂದು ಅನಿರ್ವಚನೀಯ— ಅತ್ಯಂತ ಅಂತರತಮ-ಸತ್ಯಸ್ಯಸತ್ಯವಾದ ಸನಾತನ ತತ್ತ್ವಕ್ಕೆ (ಅದನ್ನು ಅಧ್ಯಾತ್ಮ ಎಂದು ಹೆಸರಿಸುತ್ತೇವೆ.) ಅದು ತನ್ನ ಬಾಂಧವ್ಯವನ್ನು ಘೋಷಿಸುತ್ತಾ ಬಂದಿರುವುದರಿಂದಲೂ ಮತ್ತು ಅದನ್ನೆ ತಾನು ಪೋಷಿಸುತ್ತಿರುವುದಾಗಿ ಹೇಳುತ್ತಲೂ ಇರುವುದರಿಂದಲೂ ಅದರ ಪ್ರಚ್ಛನ್ನ ವಂಚನೆಯ ಮುಷ್ಟಿಯಿಂದ ತಪ್ಪಿಸಿಕೊಳ್ಳುವುದೂ ಕಷ್ಟಸಾಧ್ಯವಾಗಿದೆ. **ಅದರ ಹೆಸರು 'ಮತ' !** ಈ ಮತಭ್ರಾಂತಿಯಿಂದ ಲೋಕಕ್ಕೆ ಆಗಿರುವಷ್ಟು ಹಾನಿ ಮತ್ತಾವುದರಿಂದಲೂ ಆಗಿಲ್ಲ ಎಂದು ತೋರುತ್ತದೆ. ಇನ್ನುಮುಂದೆಯಾದರೂ ನೀವು ಅಧ್ಯಾತ್ಮವನ್ನು ಉಳಿಸಿಕೊಂಡು ಮತ ಮತ್ತು ಅದರಿಂದ ಜನ್ಯವಾದ ಮತಭ್ರಾಂತಿ ಮತ್ತು ಮತಮೌಢ್ಯಗಳನ್ನು ನಿರಾಕರಿಸದಿದ್ದರೆ ನಿಜವಾದ ಪ್ರಜಾಸತ್ತೆಯಾಗಲಿ ಸಮಾಜವಾದವಾಗಲಿ ಸಮಾನತಾಭಾವಸ್ಥಾಪನೆಯಾಗಲಿ ಎಂದೆಂದಿಗೂ ಸಾಧ್ಯವಾಗುವುದಿಲ್ಲ.

ಐಕ್ಯಕ್ಕೂ ಮೈತ್ರಿಗೂ ಸಾಧನವಾಗುವ ಆ ಚಿರಂತನ ಅಧ್ಯಾತ್ಮವನ್ನು ಈ ಅಜ್ಞಾನಜನ್ಯವಾದ ಮತಭಾವನೆ ಆಕ್ರಮಿಸಿ ವರ್ಣ ಜಾತಿ ಪಂಥ ಕೋಮು ಪಂಗಡಗಳೆಂಬ ನೂರಾರು ಭೇದಭಾವನೆಗಳ ಬಿರುಕು ಒಡಕುಗಳಿಗೆ ಸಮಾಜವು ಸಿಕ್ಕಿ ಛಿನ್ನಭಿನ್ನವಾಗುವಂತೆ ಮಾಡಿದೆ. ಈ ಭೇದಭಾವಗಳೂ ಛಿದ್ರಗಳೂ ಎಲ್ಲಿಯವರೆಗೆ ಇರುತ್ತವೆಯೊ ಅಲ್ಲಿಯವರೆಗೆ ನಿಜವಾದ ಸಮಾನತಾಭಾವನೆಯ ಪ್ರಜಾಸತ್ತೆ ಬರಿಯ ಮರುಮರೀಚಿಕೆಯ ಭ್ರಾಂತಿಜಲ

ವಾಗುತ್ತದೆ. ಆದ್ದರಿಂದ ಸಮಾಜವಾದದ ಪ್ರಜಾಸತ್ತೆ ನಿಮ್ಮ ಗುರಿಯಾಗಿದ್ದರೆ ಮತಭಾವನೆಂಬ ಶನಿಸಂತಾನವಾದ ಜಾತಿಪದ್ಧತಿಯ ಸಂಪೂರ್ಣ ವಿನಾಶಕ್ಕೆ ನೀವು ಕಂಕಣ ಕಟ್ಟಿಕೊಂಡು ಹೋರಾಡಬೇಕು.

ಈ ಬಿರುಕು ಒಡಕುಗಳಿಗೆ ಮತ್ತು ಭೇದಭಾವನೆಗಳಿಗೆ ಮೂಲಕಾರಣ ಎಲ್ಲಿದೆ ಎಂಬುದನ್ನು ಹುಡುಕಿ, ನೀವು ಅವರ ಬೇರಿಗೆ ಬೆಂಕಿ ಹೊತ್ತಿಸಿ ಸಮಾನತೆಯನ್ನು ಸಾಧಿಸಬೇಕಾಗಿದೆ. ಮೊದಲು ನಿಮ್ಮನಿಮ್ಮ ಹೃದಯಗಳನ್ನೆ ಶೋಧಿಸಿಕೊಳ್ಳಬೇಕು. ಶತಮಾನಗಳ ಬೋಧನೆ ಮತ್ತು ನಂಬಿಕೆಗಳ ಫಲವಾಗಿ ನಿಮ್ಮ ವಿಚಾರಶಕ್ತಿಯೆ ಕುಂಠಿತವಾಗಿಹೋಗಿದೆ. ವಿಜ್ಞಾನಸಂಪನ್ನವಾದ ಪಾಶ್ಚಾತ್ಯ ನಾಗರಿಕತೆ ನಮ್ಮನ್ನು ಇನ್ನೂರು ವರ್ಷ ಆಳಿದರೂ ಅವರ ವಿಜ್ಞಾನ ಸೃಷ್ಟಿಸಿದ ಯಂತ್ರನಾಗರಿಕತೆಯನ್ನು ಅನುಕರಿಸಿದೆವೆ ಹೊರತು ಅದರ ವೈಜ್ಞಾನಿಕದೃಷ್ಟಿ ನಮ್ಮದಾಗಲಿಲ್ಲ; ಮತ್ತು ಆ ವೈಜ್ಞಾನಿಕದೃಷ್ಟಿಗೂ ತಾಯಿಬೇರಾದ ವೈಚಾರಿಕತೆಯನ್ನೂ ನಾವು ಮೈಗೂಡಿಸಿಕೊಳ್ಳಲಿಲ್ಲ. ಇನ್ನು ಮುಂದಾದರೂ ನಾವು ವೈಜ್ಞಾನಿಕದೃಷ್ಟಿಯ ಮತ್ತು ವೈಚಾರಿಕಬುದ್ಧಿಯ ನೆರವಿನಿಂದ ನಮ್ಮ ನಾಡಿನ ರಾಜಕೀಯ, ಸಾಮಾಜಿಕ ಮತ್ತು ಮತಧಾರ್ಮಿಕ ರಂಗಗಳನ್ನು ಪರಿಶೋಧಿಸದಿದ್ದರೆ ನಮಗೆ ಕೇಡು ತಪ್ಪದು.

ನಾಲ್ವತ್ತು ವರ್ಷಗಳ ಪೂರ್ವದಲ್ಲಿಯೆ ನಾನು ಹಾಡಿದ ಒಂದು ಕವನದ ಕಡೆಗೆ ನಿಮ್ಮ ಗಮನ ಸೆಳೆಯಲು ಬಯಸುತ್ತೇನೆ. ಅದು ನಿಮ್ಮ ಮುಂದಣ ಮಾರ್ಗದರ್ಶಕ ಮಂತ್ರದೀಪವಾಗಿ ನಿಮಗೆ ದಾರಿತೋರಿ ನಡೆಸಲಿ ಎಂದು ಹಾರೈಸುತ್ತೇನೆ :

ಗುಡಿ ಚರ್ಚು ಮಸಜೀದಿಗಳ ಬಿಟ್ಟು ಹೊರಬನ್ನಿ,
ಬಡತನವ ಬುಡಮುಟ್ಟ ಕೀಳಬನ್ನಿ,
ಮೌಢ್ಯತೆಯ ಮಾರಿಯನು ಹೊರದೂಡಲೈತನ್ನಿ,
ವಿಜ್ಞಾನ ದೀವಿಗೆಯ ಹಿಡಿಯ ಬನ್ನಿ.
ಓ, ಬನ್ನಿ, ಸೋದರರೆ, ಬೇಗ ಬನ್ನಿ !

ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ ;
ಮತಿಯಿಂದ ದುಡಿಯಿರೈ ಲೋಕಹಿತಕೆ.
ಆ ಮತದ ಈ ಮತದ ಹಳೆಮತದ ಸಹವಾಸ
ಸಾಕಿನ್ನು ಸೇರಿರೈ ಮನುಜಮತಕೆ ;
ಓ, ಬನ್ನಿ, ಸೋದರರೆ, ವಿಶ್ವಪಥಕೆ !

ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ — ಈ ಪದಗಳು ಮಂತ್ರಗಳಾಗಿ ನಿಮ್ಮನ್ನು ಜಾತಿಮತಗಳಿಂದಲೂ ಭೇದಭಾವಗಳಿಂದಲೂ ಪಾರುಮಾಡಿ ನಿಮ್ಮಿಂದ ನಿಜವಾದ ಪ್ರಜಾಸತ್ತೆ ಮತ್ತು ಸಮಾಜವಾದ ಸ್ಥಾಪನೆಯಾಗಲಿ ಎಂದು ಹಾರೈಸುತ್ತೇನೆ.

ಸ. ಸ. ಮಾಳವಾಡ

ಲೌಕಿಕ ಜಯಶಾಲಿಗಳು

ಒಳಗಿನ ಪುಟಗಳಲ್ಲೆಲ್ಲ ಬರಿಯ ಪ್ರಶ್ನಾರ್ಥಕ ಚಿಹ್ನೆಗಳನ್ನು ಮುದ್ರಿಸಿದಂತಿದೆ, ಮಾನವೀಯ ಬಾಳಿನ ಹೊತ್ತಿಗೆ. ಪುಸ್ತಕದ ಹೊರಕಟ್ಟು ಆಕರ್ಷಕವೆನಿಸಬಹುದು. ಆದರೆ ಒಳಗಿನ ಪುಟಗಳನ್ನು ತೆಗೆದು ನೋಡು ವಾಗ ಬರಿಯ ಪ್ರಶ್ನಾರ್ಥಕ ಚಿಹ್ನೆಗಳು ಕಣ್ಣಿಗೆ ಬಿದ್ದಂತಾಗುತ್ತದೆ. ಇಂತಹ ಒಂದು ಸನ್ನಿವೇಶದ ಅನುಭವವು ಮಾನವ ಜೀವನದ ಬಗೆಗೆ ಗಂಭೀರವಾದ ಚಿಂತನೆ ನಡೆಸಿದಾಗ ಒದಗಿಬರುತ್ತಿದೆ. ಆದರೆ ಆಯೆಲ್ಲ ಚಿಹ್ನೆಗಳಿಗೆ ಮಾನವನು ಅರ್ಥವನ್ನು ಕಂಡುಕೊಳ್ಳುವುದೂ ಅನಿವಾರ್ಯವಾಗಿದೆ. ನಾವು ಕಂಡುಕೊಳ್ಳುವ ಅರ್ಥವು ನಮ್ಮ ನಿಲವು, ಅಭಿರುಚಿ, ಮೌಲ್ಯಗಳನ್ನು ಕುರಿತ ದೃಷ್ಟಿ ಇವುಗಳನ್ನು ಅವಲಂಬಿಸಿದೆ.

ಮಾನವೀಯ ಬಾಳಿನ ಸಮರ್ಪಕವಾದ, ಮೂಲಭೂತವಾದ ಅರ್ಥವನ್ನು ನಮಗೆ ಒದಗಿಸುವವರು ಅನುಭಾವಿಗಳು ಮಾತ್ರ. ಈ ಯುಗದ ಶ್ರೇಷ್ಠ ಅನುಭಾವಿಗಳಾದ ಶ್ರೀ ಅರವಿಂದರು ಬಾಳಿನ ವಿವಿಧ ಸಮಸ್ಯೆ ಗಳಿಗೆ ಸಾಕಲ್ಯವಾದ ಪರಿಹಾರವನ್ನು ತೋರಿಸಿ ಕೊಟ್ಟಿದ್ದಾರೆ. ಶ್ರೀ ಅರವಿಂದ ತತ್ತ್ವದರ್ಶನದ ಭಾಷ್ಯಕಾರ್ತಿ ಶ್ರೀ ಮಾತೆಯವರೂ ಶ್ರೇಷ್ಠ ಅನುಭಾವಿ. ಲೌಕಿಕ ಜೀವನದ ಮೇಲ್ಮಟ್ಟದ ಯಶಸ್ಸನ್ನು ಪಡೆದ ಕೆಲವು ವ್ಯಕ್ತಿ ಗಳು ಮೂಲಭೂತ ಸಮಸ್ಯೆಯ ದಿಸೆಯಲ್ಲಿ ಸೋತ ವಿಶಿಷ್ಟ ಸನ್ನಿವೇಶವನ್ನು ಕಲ್ಪಿಸಿ ಒಂದು ರೂಪಕ ರಚಿಸಿದ್ದಾರೆ. ಅದು ತಾತ್ತ್ವಿಕ ಗ್ರಂಥವಲ್ಲ. ಚಿಕ್ಕ ಸಾಹಿತ್ಯಕೃತಿ. ಅದರ ಹೆಸರು "The Great Secret". "ಮಹಾ ರಹಸ್ಯ" ಎಂಬ ಶೀರ್ಷಿಕೆಯಲ್ಲಿ ಅದು ಕನ್ನಡದಲ್ಲಿಯೂ ಶ್ರೀ ಅರವಿಂದಾಶ್ರಮದಿಂದ ಪ್ರಕಟವಾಗಿದೆ. ಆ ಕೃತಿ ಯನ್ನು ಗಮನಿಸಿ ಮಾನವೀಯ ಬಾಳಿನ ಸಮಸ್ಯೆಯ ಬಗೆಗೆ ಇಲ್ಲಿ ಕೆಲವೊಂದು ವಿವೇಚನೆಯನ್ನು ಮಾಡಲಾಗುತ್ತಿದೆ.

ಲೌಕಿಕ ಜೀವನದಲ್ಲಿ ಗೆಲವನ್ನು ಪಡೆಯಲು ಮಾನವನು ಹೋರಾಡುತ್ತಿರುವುದು ವಾಡಿಕೆಯಾಗಿದೆ. ಆದರೆ ಅಂತಹ ಗೆಲವನ್ನು ಪಡೆದವರೆಲ್ಲ ತೃಪ್ತಿಯನ್ನಾಗಲಿ, ಶಾಂತಿಯನ್ನಾಗಲಿ ಗಳಿಸುವರೆಂದು ಹೇಳುವಂತಿಲ್ಲ. ಕೆಲವೊಂದು ಶ್ರೇಷ್ಠಗುಣಗಳ ಮೂಲಕ ಕೀರ್ತಿವೆತ್ತವರೂ ಕೂಡ ಬಾಳಿನಲ್ಲಿ ನೋವಿನ ಅನುಭವಕ್ಕೆ ಒಳಗಾಗು ವುದುಂಟು. ನಮ್ಮ ಸುತ್ತಣ ಬಾಳಿನಲ್ಲಿ ಈ ಬಗೆಯ ಎಷ್ಟೋ ಉದಾಹರಣೆಗಳನ್ನು ನಾವು ಕಾಣುತ್ತೇವೆ.

ಕನ್ನಡದ ಆದಿಕವಿ, ಆಗ್ರಕವಿ ಪಂಪನ ಪದ್ಯವೊಂದು ಹೀಗಿದೆ :

> ಚಲದೊಳ್ ದುರ್ಯೋಧನಂ. ನನ್ನಿಯೊಳ್ ಇನತನಯಂ, ಗಂಡಿನೊಳ್ ಭೀಮಸೇನಂ
> ಬಲದೊಳ್ ಮದ್ರೇಶಂ, ಅತ್ಯುನ್ನತಿಯೊಳ್ ಅಮರಸಿಂಧೂದ್ಭವಂ ಚಾಪವಿದ್ಯಾ
> ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿ
> ರ್ಮಲಚಿತ್ತಂ ಧರ್ಮಪುತ್ರಂ ಮಿಗಿಲ್ ಇವರ್ಗಳಿಂ ಈ ಭಾರತಂ ಲೋಕಪೂಜ್ಯಂ

ಈ ಪದ್ಯದಲ್ಲಿ ಉಕ್ತವಾದ ಮಹಾಭಾರತದ ಮಹತ್ವದ ವ್ಯಕ್ತಿಗಳು ಒಂದೊಂದು ಶ್ರೇಷ್ಠಗುಣದಿಂದ ಕೂಡಿದವರಾಗಿದ್ದಾರೆ. ದುರ್ಯೋಧನನ ಛಲ, ಕರ್ಣನ ಸತ್ಯ, ಭೀಮಸೇನನ ಕೆಚ್ಚು, ಮದ್ರಭೂಪತಿಯ ಬಲ,

ಭೀಷ್ಮನ ಅತ್ಯುನ್ನತಿ, ದ್ರೋಣಾಚಾರ್ಯನ ಚಾಪವಿದ್ಯಾಬಲ, ಅರ್ಜುನನ ಸಾಹಸದ ಮಹಿಮೆ, ಧರ್ಮರಾಯನ ನಿರ್ಮಲ ಚಿತ್ತ–ಇವು ಶ್ರೇಷ್ಠಗುಣಗಳೇ ಅಹುದು. ಅವುಗಳಿಂದಾಗಿ ಅವರು ಪ್ರಶಂಸೆಗೆ ಪಾತ್ರರಾಗಿದ್ದಾರೆ. ಐಹಿಕ ಗೆಲವನ್ನೂ ಪಡೆದಿದ್ದಾರೆ. ಆದರೆ ಅವರಲ್ಲಿ ಒಬ್ಬೊಬ್ಬರೂ ಬಾಳಿನಲ್ಲಿ ದ್ವಂದ್ವವನ್ನು ಎದುರಿಸಬೇಕಾಯಿತು. ಒಂದಿಲ್ಲೊಂದು ಬಗೆಯ ದುಃಖಕ್ಕೆ, ನಿರಾಶೆಗೆ ಒಳಗಾಗಬೇಕಾಯಿತು. ಐಹಿಕ–ಜೀವನದ ಗೆಲವು ಆಂತರಿಕ ಬಾಳಿನ ಸಫಲತೆಯ ದೃಷ್ಟಿಯಿಂದ ಪ್ರಯೋಜನಕಾರಿಯಲ್ಲವೆಂಬ ಸಂಗತಿ ಇದರಿಂದ ತಿಳಿದುಬರುತ್ತದೆ. ಐಹಿಕ ಜೀವನದ ಸಂಪತ್ತು, ಸಾಹಸ, ಕೀರ್ತಿಗಳು ಕ್ಷಣಿಕವೆಂಬ ಮಾತೂ ಸ್ಪಷ್ಟವಾಗುತ್ತಿದೆ. ಚಿರಂತನ ಶಾಂತಿಯನ್ನು ಅರಸುವ ಮಾನವನಿಗೆ ಐಹಿಕ ಬಾಳಿನ ಯಶಸ್ಸು ಅರ್ಥರಹಿತವಾಗಿ ತೋರುವುದೂ ಉಂಟು. 'ನಾನಾ ಚಿಂತೆಯಳಿದು ಮನವು ಆತ್ಮಸಂಧಾನದೊಳು' ತೊಡಗಿದಾಗ ಮಾತ್ರ ಮಾನವನು ಜೀವನದ ದ್ವಂದ್ವಗಳನ್ನು ದಾಟಬಲ್ಲ, ಚಿರಂತನ ಶಾಂತಿಯನ್ನು ಪಡೆಯುವ ದಿಸೆಯಲ್ಲಿ ಸಾಗಬಲ್ಲ.

ಐಹಿಕ ಬಾಳಿನಲ್ಲಿ ಮತ್ತೆ ಮತ್ತೆ ತಲೆದೋರುವ ಸಮಸ್ಯೆಗಳಲ್ಲಿ ಕೆಲವನ್ನು ಹೀಗೆ ನಿರೂಪಿಸಬಹುದು: ಗೆಲವು ದೊರೆತ ಸಂದರ್ಭಗಳಲ್ಲಿಯೂ ನಲಿವು ಕೈಸೇರದೆ ಹೋಗುತ್ತಿದೆ. ಪ್ರಗತಿಯನ್ನು ಸಾಧಿಸಿದಾಗಲೂ ಪರಿಪೂರ್ಣತೆ ಕೈಗೂಡುವುದಿಲ್ಲ. ಸುಧಾರಣೆಯನ್ನು ಕೆಲಮಟ್ಟಿಗೆ ಸಾಧಿಸಿದಾಗಲೂ ನಿರಾಶೆಗೆ ಕಾರಣವುಳಿಯುತ್ತಿದೆ. ಶಕ್ತಿಸಂಗ್ರಹ ಸಾಧ್ಯವಾದಾಗಲೂ ಮಾನವಕಲ್ಯಾಣ ಸಾಧಿಸದೆ ಹೋಗುತ್ತಿದೆ. ಸತ್ಯನಿಷ್ಠವಾದ ಹೋರಾಟದಲ್ಲಿ ಸೋಲು ತಲೆದೋರುತ್ತಿದೆ. ಅನ್ಯಾಯವನ್ನು ಪ್ರತಿಭಟಿಸುವಲ್ಲಿ ವಿಫಲತೆ ಕಂಡುಬರುತ್ತಿದೆ. ಹೊರಗೆ ಕಣ್ಣು ಕೋರೈಸುವಂತೆ ಗಳಿಸಿದವರೂ ಅತೃಪ್ತಿಯಿಂದ ಕೂಡಿರುತ್ತಾರೆ. ವಾಗ್ವೈಭವದಲ್ಲಿ ಮೌನದ ಅಖಂಡ ಶಾಂತಿ ಮರೆಯಾಗುತ್ತಿದೆ. ವಿಭಾಗಿಸುವ ಚಾತುರ್ಯವು ಸಂಯೋಜನೆಯನ್ನು ಹಾಳುಮಾಡುತ್ತಿದೆ. ಧರ್ಮದ ಹೆಸರಿನಲ್ಲಿಯೂ ಕುಹಕತನ ನಡೆಯುತ್ತಿದೆ. ದೇಶಪ್ರೇಮ, ಲೋಕೋದ್ಧಾರಗಳ ಮಾತುಗಳಲ್ಲಿಯೂ ಸಂಕುಚಿತ ಸ್ವಾರ್ಥದೃಷ್ಟಿಯನ್ನು ನಾವು ಕಾಣುತ್ತೇವೆ. ವಿದ್ಯಾಬಲವು ಮದಕ್ಕೆ ಕಾರಣವಾಗುತ್ತಿದೆ. ಪರೋಪಕಾರದ ದೃಷ್ಟಿಯು ಅಹಂಕಾರ ವರ್ಧನೆಗೆ ಅವಕಾಶವೊದಗಿಸುತ್ತಿದೆ ಲೋಕಾರಾಧನೆಯ ಹೆಸರಿನಲ್ಲಿ ಆತ್ಮವಿನಾಶದ ಹೊಂಚಿದೆ. ಲೋಕಸೇವೆಯ ಹಂಬಲ ಸ್ವಕೀಯಪ್ರತಿಷ್ಠೆಯ ಸಾಧನವಾಗಿ ಪರಿಣಮಿಸುತ್ತಿದೆ. ಆತ್ಮಸಾಧನೆಗೆ ತೊಡಗುವವನು ಐಹಿಕಜೀವನದಿಂದ ಪಲಾಯನ ಕೈಕೊಳ್ಳುತ್ತಾನೆ ಇತ್ಯಾದಿ. ಬಾಳಿನಲ್ಲಿ ಈ ಬಗೆಯ ದ್ವಂದ್ವಗಳೇಕೆ? ಅವುಗಳನ್ನು ಮೀರಿ ನಿಲ್ಲುವುದು ಹೇಗೆ? ಬಾಳಿನಲ್ಲಿ ವಿಷಮತೆ, ನೋವು, ಕೆಡಕುಗಳು ಏಕಿವೆ? ನಾವು ನ್ಯಾಯವೆಂದು ಭಾವಿಸಿದುದು ಅಪಜಯಕ್ಕೆ ಏಕೆ ಪಕ್ಕಾಗಬೇಕು? ಇತ್ಯಾದಿ ಪ್ರಶ್ನೆಚಿಹ್ನೆಗಳಿಂದ ಈ ಬಾಳಿನ ಹೊತ್ತಿಗೆ ತುಂಬಿದೆ.

ಇಂತಹ ಪ್ರಶ್ನೆಗಳಿಗೆ ಋಷಿಗಳು, ಶರಣರು, ಅನುಭಾವಿಗಳು, ಘನತರ ಕವಿಗಳು ಸಮರ್ಪಕವಾದ ಉತ್ತರವನ್ನು ಒದಗಿಸಿದ್ದಾರೆ. ಭವರೋಗನಿದಾನದ ಬಗೆಗೆ 'ಭರತೇಶವೈಭವ'ದ ಕವಿ ರತ್ನಾಕರವರ್ಣಿಯ ಕವಿವಾಣಿ ಹೀಗೆ ಮೂಡಿ ಬಂದಿದೆ.

> **ಹೊಳೆವ ಕನ್ನಡಿ ಕೈಯೊಳಗಿರ್ದು ನೋಡದೆ ನೀರ**
> **ನೆಳಲಲ್ಲಿ ಮೊಗವ ನೋಳ್ಪಂತೆ,**
> **ಒಳಗಿದ್ದ ಚಿದ್ರೂಪ ನೋಡದೆ ಜಗವೆಲ್ಲ**
> **ಬಳಲುತಿಹುದು ಹೊರಗಾಡಿ.**

ಒಳಗಿದ್ದ ಚಿದ್ರೂಪವನ್ನು ನೋಡುವ ಸಾಧನೆಯಲ್ಲಿ ನಿರತವಾಗದೆ ಹೊರಗೆ ಆಡುತ್ತಿರುವುದರಿಂದಲೇ ಜಗವು—ಜಗತ್ತಿನಜನ–ಬಳಲುತಿಹುದು. ರತ್ನಾಕರವರ್ಣಿಯ ಈ ನುಡಿಯು ಮೌಲಿಕವಾಗಿದೆ. ಗಂಭೀರವಾದ ಚಿಂತನೆಯಲ್ಲಿ ತೊಡಗುವವರು ಈ ಬಗೆಯ ನುಡಿಯನ್ನೇ ಹೇಳಿದ್ದಾರೆ. ಒಳಗಿದ್ದ ಚಿದ್ರೂಪವನ್ನು 'ಕೂಡಲ ಸಂಗಮದೇವ' ಎಂದು ಕರೆದ ಬಸವಣ್ಣನವರ ವಚನಗಳಲ್ಲಿಯ ಇಂತಹ ವಾಣಿ ಪುನಃ ಪುನಃ ಹೊರಹೊಮ್ಮಿ ಬಂದಿದೆ.

ಒಳಗಿರುವ ಚಿದ್ರೂಪವನ್ನು ಗಮನಿಸದ ಮಾನವನು ಐಹಿಕ-ಬಾಳಿನಲ್ಲಿ ಎಂತಹ ಜಯವನ್ನು ಪಡೆದರೂ ಆತನು ಸುಖ ಸಮಾಧಾನಗಳಿಗೆ ಪಕ್ಕಾಗುವುದು ಅನಿವಾರ್ಯವಾಗುತ್ತಿದೆ. ಶ್ರೀ ಅರವಿಂದಾಶ್ರಮದ ಶ್ರೀಮಾತೆಯವರ 'ಮಹಾರಹಸ್ಯ' (The Great Secret) ಎಂಬ ಚಿಕ್ಕ ರೂಪಕದಲ್ಲಿ ಈ ಸಂದೇಶವನ್ನು ಸುಂದರವಾಗಿ ಮೂಡಿಸಲಾಗಿದೆ. ಲೌಕಿಕ ಜಯದ ಮಾತು ಹೇಗೇ ಇದ್ದರೂ ಚಿರಂತನ ಸುಖ ಶಾಂತಿಗಳನ್ನು ಪಡೆಯುವ ಪಥವನ್ನೂ ಸೂಚಿಸಲಾಗಿದೆ.

'ಮಹಾರಹಸ್ಯ' ರೂಪಕದ ಕಥಾಸಾರಾಂಶ ಹೀಗಿದೆ :

ಆರುಜನ ಸುಪ್ರಸಿದ್ಧ ವ್ಯಕ್ತಿಗಳು ಒಂದು ವಿಶ್ವಸಮ್ಮೇಲನಕ್ಕೆಂದು ಹಡಗದಲ್ಲಿ ಪ್ರಯಾಣ ಕೈಕೊಳ್ಳುತ್ತಾರೆ. ಸಾಗರದ ಮಧ್ಯದಲ್ಲಿ ಹಡಗು ಅಪಘಾತಕ್ಕೀಡಾಗುತ್ತದೆ. ಈ ಆರುಜನ ವ್ಯಕ್ತಿಗಳು ತಮ್ಮ ಕೊನೆಯ ಗಳಿಗೆಯನ್ನು ನಿರೀಕ್ಷಿಸುತ್ತ ಪ್ರಾಣರಕ್ಷಕ ನೌಕೆಯಲ್ಲಿರುವಾಗ ಒಬ್ಬ ಅಜ್ಞಾನ ವ್ಯಕ್ತಿಯೂ ಅಲ್ಲಿ ಇರುತ್ತಾನೆ. ಐಹಿಕ ಜೀವನದ ವಿವಿಧ ರಂಗಗಳಲ್ಲಿ ಯಶಸ್ಸಿನ ತುಟ್ಟತುದಿಯನ್ನು ಮುಟ್ಟಿದ ಆರುಜನರು ತಂತಮ್ಮ ಬಾಳಿನ ಅಸಫಲತೆಯನ್ನು ನಿರೂಪಿಸುತ್ತಾರೆ. ನೀರು-ಆಹಾರಗಳ ಸಂಗ್ರಹ ತೀರಿ ಮರಣ ಅತಿ ಸಮೀಪವೆನಿಸಿದ ಸನ್ನಿವೇಶದಲ್ಲಿ ಹೊರಹೊಮ್ಮಿದ ಆ ಆತ್ಮನಿವೇದನೆಯಲ್ಲಿ ಅಸಹಾಯಕತೆಯ ಧ್ವನಿಯಿದೆ. ಏಳನೆಯ ಅಜ್ಞಾತ ವ್ಯಕ್ತಿಯು ಮಾತ್ರ ಆಶಾದಾಯಕ ನಿಲುಮೆಯಲ್ಲಿದ್ದಾನೆ. ಶ್ರದ್ಧೆಯ ಬಲದಿಂದ ಪ್ರಾರ್ಥನೆಯ ನೆರವಿನಿಂದ ತಮಗೆ ರಕ್ಷಣೆ ದೊರೆಯುವುದೆಂದು ನಂಬಿದ್ದಾನೆ. ಆರುಜನ ಸುಪ್ರಸಿದ್ಧ ಲೌಕಿಕ-ಜಯಶಾಲಿಗಳ ಜೀವನದೃಷ್ಟಿಯಲ್ಲಿಯ ಲೋಪವನ್ನು ಎತ್ತಿ ತೋರಿಸುತ್ತಾನೆ. ಹೊಸ ಬೆಳಕಿನ ಪಥವನ್ನು ತಿಳಿಸಿಕೊಡುತ್ತಾನೆ. ಮಾನವ ಜೀವನದ 'ಮಹಾರಹಸ್ಯ'ವನ್ನು ಬಿತ್ತರಿಸುತ್ತಾನೆ. ಅವರೆಲ್ಲರ ಪ್ರಾರ್ಥನೆಯು ಸಫಲವಾಗಿ ಅವರಿಗೆ ಸಹಾಯವು ಒದಗಿ ಬರುತ್ತದೆ. ಅವರು ಅಪಘಾತದಿಂದ ಪಾರಾಗುತ್ತಾರೆ. ಬಾಳಿನ ಮಹಾರಹಸ್ಯವನ್ನು ಅರಿತುಕೊಂಡ ಅವರು ಹೊಸ ಬೆಳಕಿನಲ್ಲಿ ಹೊಸಬಾಳನ್ನು ನಡೆಯಿಸಲು ನಿರ್ಧರಿಸುತ್ತಾರೆ.

ಈ ರೂಪಕವು ಆರು ಏಕಪಾತ್ರ ಭಾಷಣ, ಒಂದು ತೀರ್ಮಾನ-ಇವುಗಳನ್ನು ಒಳಗೊಂಡಿದೆ.

1) ರಾಜನೀತಿಜ್ಞ 2) ಲೇಖಕ 3) ವಿಜ್ಞಾನಿ 4) ಕಲಾವಿದ 5) ಉದ್ಯಮಪಟು 6) ವ್ಯಾಯಾಮ ಪಟು—ಈ ಆರು ವ್ಯಕ್ತಿಗಳು ತಂತಮ್ಮ ರಂಗಗಳಲ್ಲಿ ಅಪ್ರತಿಮ ಯಶಸ್ಸನ್ನು ಪಡೆದವರಾಗಿದ್ದಾರೆ. ಆದರೆ ಅವರಾರೂ ಸಂತೃಪ್ತಿಯನ್ನು ಪಡೆದಿರಲಿಲ್ಲವೆಂಬುವನ್ನು ಒಪ್ಪಿಕೊಳ್ಳುತ್ತಾರೆ. ಮಾನವವರ್ಗದ ಶ್ರೇಷ್ಠ ಪ್ರತಿನಿಧಿಗಳಂತಿದ್ದ ಆ ಆರು ವ್ಯಕ್ತಿಗಳು ಮಾನವೀಯ ಶಕ್ತಿಗೆ ಸಾಧ್ಯವಿರುವುದನ್ನೆಲ್ಲ ಸಾಧಿಸಿದರು. ಜಯದ ಶಿಖರಕ್ಕೇರಿದರು. ಆ ಶಿಖರವನ್ನೇರಿದ್ದರೂ ಒಂದು ಅಗಾಧ ರೂಪವನ್ನು ಕಂಡಾಗ ಅವರು ಕಂಗೆಟ್ಟರು. ಆಗ ಅಜ್ಞಾತ-ವ್ಯಕ್ತಿ ಅವರ ಸಮಸ್ಯೆಯನ್ನು ಪರಿಹರಿಸುವ ತೀರ್ಮಾನವನ್ನು ಒದಗಿಸಿದ, ಮಾನವೀಯ ಬಾಳಿನ ಒಗಟಿಗೆ ಉತ್ತರವನ್ನು ಹೇಳಿದ.

ಈಗ ಆ ಆರು ವ್ಯಕ್ತಿಗಳ ಪರಿಚಯ, ಅವರ ಸಮಸ್ಯೆ ಅತೃಪ್ತಿಗಳನ್ನು ಅವರವರ ನಿರೂಪಣೆಯನ್ನು ಆಧರಿಸಿಯೇ ಅರಿತುಕೊಳ್ಳೋಣ.

ರಾಜನೀತಿಜ್ಞ : ರಾಜಕೀಯ ರಂಗದಲ್ಲಿ ಗೆಲವಿನ ಶಿಖರಕ್ಕೇರಿದಾತನೀತ. ಈತನ ಬಾಲ್ಯ ಜೀವನದಿಂದಲೂ ಅನುಕೂಲ ಪರಿಸ್ಥಿತಿಯಲ್ಲಿ ಬೆಳೆದು ಬಂದ. ಮುಂದೆ ರಾಷ್ಟ್ರದ ಪ್ರಧಾನ ಮಂತ್ರಿಯೂ ಆದ. ಬಾಳಿನ ಪ್ರತಿಯೊಂದು ಸಮಸ್ಯೆಗೂ ಸುಲಭ ಪರಿಹಾರ ಒದಗಿಸುವ ಉತ್ಸಾಹ ಈತನದಾಗಿತ್ತು. ಆದರೆ ವಾಸ್ತವಿಕ ವ್ಯವಹಾರದಲ್ಲಿ ಈತನು ಹಲವಾರು ಎಡರುಗಳನ್ನು ಎದುರಿಸಬೇಕಾಯಿತು. ತನ್ನ ವಿಚಾರಗಳನ್ನು ಕೃತಿರೂಪಕ್ಕೆ ತರುವ

ಸಂದರ್ಭಗಳಲ್ಲಿ ತೊಡಕಗಳನ್ನು ಕಂಡ ಈತನು ತನ್ನ ಧ್ಯೇಯವನ್ನು ಸಾಧಿಸುವಲ್ಲಿ ಅಸಮರ್ಥನಾದ. ಆತನ ಹೃದ್ಗತವಿಂತಿದೆ :

"ಯಶಸ್ಸು ವ್ಯಕ್ತಿಯೋಗ್ಯತೆಯ ಮಾನದಂಡವಲ್ಲ ; ಆದರೆ ಸನ್ನಿವೇಶಕ್ಕೆ ಹೊಂದಿಕೊಂಡು ಹೋಗುವ ಹಾಗು ಇತರರನ್ನು ಸಂತೋಷಪಡಿಸುವ ಸಾಮರ್ಥ್ಯದ ಪ್ರತೀಕವು ಅದೆಂದು ನಾನು ಕಂಡು ಹಿಡಿದೆನು. ಅದಕ್ಕಾಗಿ ಜನರ ಕುಂದುಕೊರತೆಗಳನ್ನು ತಿದ್ದುವದಕ್ಕಿಂತ ಅವರ ದೌರ್ಬಲ್ಯಗಳನ್ನೇ ದೊಡ್ಡ ಗುಣಗಳೆಂದು ಜಂಬ ಪೇಕ್ಷೆಯು ಹೊಗಳತಕ್ಕದ್ದು". ಈ ಯಶಸ್ವಿ ರಾಜಕೀಯ ಮುಖಂಡನು ಪಕ್ಷಾತೀತನಾಗಲು ಹೆಣಗಿ ಅಸಫಲತೆ ಪಡೆದ. ಯುದ್ಧಗಳನ್ನು ತಡೆಗಟ್ಟಬೇಕೆನ್ನುವುದು ಆತನ ಧ್ಯೇಯವಾಗಿತ್ತು. ಆದರೆ ಅದು ಸಾಧ್ಯವಾಗಲಿಲ್ಲ. "....ನನಗಿಂತ ಹೆಚ್ಚಿನದಾದ ಶಕ್ತಿಯ ಸೆಳೆತಕ್ಕೆ ಸಿಕ್ಕು ಯುದ್ಧವನ್ನು ಹೂಡಬೇಕಾಯಿತು; ಅಲ್ಲದೆ ನೀತಿ ನಿಷ್ಠೆಗಳಿಲ್ಲದ ಸಾಧನಗಳಿಂದ ಅನುದಾರ ನಿರ್ಣಯಗಳಿಂದ ವಿಜಯವನ್ನು ಸಂಪಾದಿಸಬೇಕಾಯಿತು–" ಈ ರಾಜಕೀಯ ಮುಖಂಡನನ್ನು ಮಾನವ ಕುಲದ ಹಿತಚಿಂತಕನೆಂದು, ರಾಜನೀತಿ ವಿಶಾರದನೆಂದು, ಮಹಾ ಮುತ್ಸದ್ದಿಯೆಂದು ಲೋಕವೆಲ್ಲ ಹೊಗಳುತ್ತಿತ್ತು. ಆದರೆ "....ನನ್ನ ಹುಳುಕು ನನಗೇ ಗೊತ್ತು. ಸತ್ಯಜ್ಞಾನದ ದಾರಿಯಲ್ಲಿ ನಾನು ತಪ್ಪಿಸಿಕೊಂಡಿದ್ದೇನೆ" ಎಂದು ಆತನೇ ಒಪ್ಪಿಕೊಂಡಿದ್ದಾನೆ.

ಲೇಖಕ : ತನ್ನ ರಂಗದಲ್ಲಿ ಉನ್ನತಯಶಸ್ಸು ಪಡೆದವನೀತ. ಬಗೆಬಗೆಯ ಪಾರಿತೋಷಕ, ಪ್ರಶಸ್ತಿಗಳನ್ನು ಪಡೆದಿದ್ದಾನೆ. ಮಹತ್ವಪೂರ್ಣ ಕಮಿಟಿಗಳಲ್ಲಿ ಸ್ಥಾನಗಳಿಸಿದುದೂ ಆಗಿದೆ. ಸಾಹಿತ್ಯವಲಯದಲ್ಲಿ ತನ್ನ ಹಿರಿಮೆಯನ್ನು ಹೀಗೆ ಬಣ್ಣಿಸಿದ್ದಾನೆ : "ಸಿಸಿರೋನ ಪ್ರೌಢಿಮೆ, ಮಿಲ್ಟನ್‌ನ ವೈಶಾಲ್ಯ, ರಾಸೀನನ ಮಾರ್ದವ ಇವುಗಳನ್ನು ತಕ್ಕಮಟ್ಟಿಗೆ ನಾನು ಪಳಗಿಸಿಕೊಂಡೆನು. ವರ್ಡ್ಸ್‌ವರ್ತ್‌ನ ಸರಲತೆಯೂ ನನಗೆ ಅಶಕ್ಯವಿದ್ದಿಲ್ಲ. ಷೇಕ್ಸ್‌ಪಿಯರ್‌ನ ಮೋಹಕತೆಯೂ ನನಗೆ ಅಸಾಧ್ಯವಾಗಿದ್ದಿಲ್ಲ. ವಾಲ್ಮೀಕಿಯ ಘನತೆಯಾಗಲಿ, ವ್ಯಾಸನ ಗೌರವವಾಗಲಿ ನನಗೆ ನಿಲುಕದ ಶಿಖರಗಳಾಗಿಲ್ಲ" ಇದಿಷ್ಟು ಅವನ ಯಶಸ್ಸಿನ ಮಾತಾಯಿತು. ಈ ಯಶಸ್ಸು ಅವನಿಗೆ ಸಂತೃಪ್ತಿಯನ್ನು ತಂದಿದೆಯೇ ? ಇಲ್ಲ. ಅವನು ಹೇಳುತ್ತಾನೆ: "ಹೀಗಿದ್ದರೂ ನನ್ನಿಂದೇನೂ ಆಗಿಲ್ಲ. ನನಗೆ ಸಮಾಧಾನವೇ ಇಲ್ಲ. ನಾನು ಬಹು ಖಿನ್ನನಾಗಿರುವೆ....ವಸ್ತುಗಳ ನಿಜವಾದ ಸತ್ಯವನ್ನಾಗಲಿ, ಅವುಗಳ ಆತ್ಮಸೌಂದರ್ಯವನ್ನಾಗಲಿ ನಾನು ತಿಳಿದುಕೊಳ್ಳಲೇ ಇಲ್ಲವೆಂದು ನನಗನಿಸುತ್ತಿದೆ. ಬರೀ ಹೊರಮೈ ಮೇಲೆ ಕೈಯಾಡಿಸಿದ್ದೇನೆ." ಲೌಕಿಕಜಯವು ಬರೀ ಹೊರಮೈಲೆ ಕೈಯಾಡಿಸಿದಂತೆಯೆಂಬುದು ಆತನ ಭಾವನೆಯಾಗಿದೆ. ಅಂತೆಯೇ ಆತನ ಸಿದ್ಧಾಂತ ಹೀಗೆ ಮೂಡಿಬಂದಿದೆ : "ಮಹಾ ಮೌನವೇ, ಕೇವಲ ಮೂಕತೆಯೇ ಪ್ರಪಂಚದ ಅಂತರಾತ್ಮಕ್ಕೆ ಸನಿಯದ ಸಂಬಂಧಿಯೆಂದು ಕೊಟ್ಟಕೊನೆಗೆ ನನಗನಿಸಿತು." ವಾಗ್ವಿಭವೋನ್ನತಿಯನ್ನು ಸಾಧಿಸಿದ ಈ ಸಾಹಿತಿಯ ಜೀವನದ ಕೊನೆಯಲ್ಲಿ ಪ್ರಶ್ನಾರ್ಥಕಗಳೇ ಉಳಿದಿವೆ. "ನನ್ನ ಜೀವನದ ಕೊನೆಯಲ್ಲಿ ಅಜ್ಞಬಾಲಕನಂತೆ ಇಂತು ಕೇಳುತ್ತಿದ್ದೇನೆ : ಇದೆಲ್ಲ ಏನು ? ಹುಟ್ಟಿದ್ದೇಕೆ ? ಸಾಯುವದೇಕೆ ? ಪೃಥ್ವಿಯ ಮೇಲಿನ ಈ ಕ್ಷಣಿಕ ಜೀವನದ ಉದ್ದೇಶವೇನು ? ಈ ಪ್ರಯತ್ನ, ಈ ಜೀವನಕಲಹ, ಈ ಸುಖದುಃಖ ದ್ವಂದ್ವ, ಯಶಾಪಯಶಗಳ ಸಂಘರ್ಷಣವೆಲ್ಲ ಯಾತಕ್ಕಾಗಿ ?"

ವಿಜ್ಞಾನಿ : ಜ್ಞಾನದ ಬೆಳವಣಿಗೆಯಿಂದ ಶಕ್ತಿಯನ್ನು ಅಭಿವೃದ್ಧಿಗೊಳಿಸಿ ಮಾನವಕುಲದ ಹಿತವನ್ನು ಸಾಧಿಸಬೇಕೆಂದವನೀತ. ವೈಜ್ಞಾನಿಕರಂಗದಲ್ಲಿ ಈತನು ಮಹಾಶೋಧಗಳನ್ನು ಕೈಕೊಂಡ. ಯಶಸ್ಸು ಪಡೆದ. ಆದರೆ ತನ್ನ ಶೋಧದ ಭೀಕರ ಸ್ವರೂಪದ ಅರಿವುಂಟಾದಾಗ ಈತನ ತಲೆಯೇ ತಿರುಗಹತ್ತಿತು. ತನ್ನ ಗೆಲವಿನ ವಿಫಲತೆಯನ್ನು ಅವನೇ ವಿವರಿಸುತ್ತಾನೆ :

"ನನ್ನ ಬುದ್ಧಿಯನ್ನು, ಅಂತಃಕರಣವನ್ನು ಸಮಾಧಾನಪಡಿಸುವಂತಹ ಯಾವದೇ ನಿರ್ಣಯಕ್ಕೆ

ನಾನಿನ್ನೂ ಬಂದಿಲ್ಲ....ಜ್ಞಾನದ ವಿಸ್ತಾರದಿಂದ ಶಕ್ತಿಯ ಆಧಿಕ್ಯವಾದರೆ ಸ್ವತಃ ಏವ ಮಾನವಕುಲವು ಅಭಿವೃದ್ಧಿಗೊಳ್ಳುವದೆಂದೆನ್ನಲಾಗದು. ವೈಜ್ಞಾನಿಕ ಪ್ರಗತಿಯೆಂದರೆ ಅವಶ್ಯವಾಗಿ ನೈತಿಕ ಪ್ರಗತಿಯೆಂದು ಹೇಳಲಾಗದು. ಮಾನವ ಸ್ವಭಾವವನ್ನು ಪಲ್ಲಟಿಸುವಲ್ಲಿ ವೈಜ್ಞಾನಿಕ ಮತ್ತು ಬೌದ್ಧಿಕ ಜ್ಞಾನವು ದುರ್ಬಲವಾಗಿದೆ....ಮೂಲಭೂತವಾದ ನೈತಿಕ ಸುಧಾರಣೆಯಾಗದಿದ್ದರೆ ಮನುಷ್ಯಕೋಟಿಯು ತನ್ನಕೈಗೆ ಬಂದ ಈ ಅದ್ಭುತಶಕ್ತಿಯಿಂದಲೇ ಅಳಿದು ಬಿಡುವದೆಂಬ ಅವಸ್ಥೆಗೆ ಇಂದು ಅದು ಬಂದಿದೆ." ವಿಜ್ಞಾನರಂಗದಲ್ಲಿ ಅತಿ ಉನ್ನತವಾದ ಜಯವನ್ನು ಗಳಿಸಿದ ಈತನು ವಿಜ್ಞಾನದ ಅಸಾಮರ್ಥ್ಯವನ್ನು ಒಪ್ಪಿಕೊಳ್ಳುತ್ತಾನೆ. ವಿಜ್ಞಾನದ ಪ್ರಮೇಯಗಳು ಮುನ್ನೋಟಕ್ಕೆ ಮಾತ್ರ ಪ್ರಯೋಜನಕಾರಿ. ವಿಷಯಗಳು ಹೇಗೆ ಸಂಭವಿಸುತ್ತಿವೆಯೆಂಬುದನ್ನು ಮಾತ್ರ ಅವು ತೋರಿಸಿಕೊಡಬಲ್ಲವು. ಆದರೆ ಅವು ಏಕೆ ? ಏತಕ್ಕಾಗಿ ? ಇರುವುವೆಂಬುದನ್ನು ಹೇಳಲಾರವು. "ಸತ್ಯದ ಸುತ್ತ, ತತ್ತ್ವದ ಸುತ್ತ ಗಾಣದೆತ್ತಿನಂತೆ ನಾವು ತಿರುಗುತ್ತಿರುವೆವೆಂಬ ಭಾವನೆಯನ್ನು ಮಾತ್ರ ಅವು ಉಂಟುಮಾಡುತ್ತಿವೆ. ವಿವಿಧ ದೃಷ್ಟಿಕೋನಗಳಿಂದಲೂ ವಿವಿಧ ಪಾರ್ಶ್ವಗಳಿಂದಲೂ ಸತ್ಯವನ್ನು ಅವಲೋಕಿಸುವೆವೇ ಹೊರತು ಅದನ್ನು ಸಮಗ್ರವಾಗಿ ಶೋಧಿಸುವಲ್ಲಿ ನಾವಾರೂ ಎಂದೂ ಯಶಸ್ವಿಯಾಗಿಲ್ಲ" ಇಂತಿದು ವಿಜ್ಞಾನಿಯ ಅಸಫಲತೆ.

ಕಲಾವಿದ : ಇತರರಂತೆ ಈತನೂ ಅತಿಶಯ ಯಶಸ್ಸನ್ನೇನೋ ಪಡೆದ. ಈ ತನ್ನ ಕಲಾಕೃತಿಗಳಿಗಾಗಿ ಮಹಾ ಪ್ರದರ್ಶನಗಳಲ್ಲಿ ಪಾರಿತೋಷ ದೊರೆತವು. ಗೌರವದ ಸ್ಥಾನಮಾನಗಳನ್ನು ಗಳಿಸಿದ. "ಕೀರ್ತಿ, ಕಾಂಚನ, ಪದವಿ, ಪ್ರಶಸ್ತಿ ; ಅಷ್ಟೆ ಏಕೆ? ಸಾಕ್ಷಾತ್ ಕಲಾದೇವತೆಯೆಂದೇ ನನ್ನನ್ನು ಕರೆಯತೊಡಗಿದರು.... ಆದರೇನು ? ನನಗೆ ಮಾತ್ರ ಸಮಾಧಾನವಿಲ್ಲ....ಮಾನವ್ಯದ ಬಂಧನಕ್ಕೆ ನಾನು ಒಳಗಾಗಿರುವವರೆಗೆ ಭೌತಿಕ ನಿಸರ್ಗದ ರೂಪರಚನೆಯಿಂದ ಸಂಪೂರ್ಣವಾದ ಬಿಡುಗಡೆಯನ್ನು ನಾನು ಪಡೆಯಲಾರೆನು" ಕೊನೆಗೆ ಈ ಕಲಾವಿದ ತನ್ನ ವಿಫಲತೆ ಅತೃಪ್ತಿಗಳನ್ನು ಒಪ್ಪಿಕೊಳ್ಳುತ್ತಾನೆ : "ಇಷ್ಟೆಲ್ಲ ಕೀರ್ತಿಯ ರಾಶಿಯನ್ನೇ ನನ್ನ ತಲೆಯ ಮೇಲೆ ಸುರುವಿದರೂ ನನ್ನಂತಹ ಅಯಶಸ್ವಿಯು ಬೇರೊಬ್ಬರಿಲ್ಲವೆಂದು ನನಗನಿಸುತ್ತಿದೆ."

ಉದ್ಯಮಪಟು : ಮುಟ್ಟಿದ್ದೆಲ್ಲ ಚಿನ್ನವಾಗುವಂತಹ ಯಶಸ್ಸನ್ನು ಈತನೂ ತನ್ನ ಉದ್ಯಮದಲ್ಲಿ ಪಡೆದ. ಕೀರ್ತಿಶಿಖರವನ್ನೇರಿದ. ಆದರೆ ಅವನ ಯಶಸ್ಸು ಕೀರ್ತಿಗಳು ಅವನ ತೊಂದರೆಗಳನ್ನೇ ಹೆಚ್ಚಿಸಿದವು.

"ನನ್ನ ಕೆಲಸಗಾರರಿಗೆ ವೇತನವೇನೋ ಚೆನ್ನಾಗಿದೆ. ಆದರೆ ಇನ್ನೂ ಹೆಚ್ಚು ಗಳಿಸಬೇಕೆಂಬ ಆಸೆಯನ್ನು ಮಾತ್ರ ಅವರಲ್ಲಿ ಬೆಳಸಿರುವೆನು. ಅವರು ಅತೃಪ್ತರಾಗಿರುವರಷ್ಟೇ ಅಲ್ಲ, ಅಸುಖಿಗಳೂ ಆಗಿರುವರು.... ನನ್ನ ಉದ್ದಿಮೆಯು ಬೆಳೆದು ಬೃಹದಾಕಾರವನ್ನು ತಾಳಿ ಒಂದು ದೊಡ್ಡ ಬಲೂನಿನಂತೆ ಕಾಣುತ್ತಿದೆಯೇ ಹೊರತು ಸಮರಸವಾಗಿ ಚಲಿಸುತ್ತ ಪಕ್ವತೆಯನ್ನೈದುವ ಸಜೀವ ಶರೀರದಂತೆ ತೋರುವುದಿಲ್ಲ" ಆತನನ್ನು ಎದುರಿಸಿದ ಸಮಸ್ಯೆಗೆ ಆತನು ಪರಿಹಾರವನ್ನು ಕಂಡುಕೊಳ್ಳುವಲ್ಲಿ ಅಸಮರ್ಥನಾದ. "ನಾನು ಎಣಿಸಿದ್ದೊಂದು. ಆದದ್ದು ಮಾತ್ರ ಇನ್ನೊಂದು. ಅವರ ಜೀವನದ ಮಟ್ಟವನ್ನು ಎತ್ತರಿಸುವುದರಿಂದಾಗಲಿ, ಅವರ ಕಲ್ಯಾಣದ ಆಶ್ವಾಸನದಿಂದಾಗಲಿ ಅವರ ಮನುಷ್ಯತ್ವದ ಪೋಷಣೆಗೇನೂ ಸಹಾಯವಾಗಿಲ್ಲ. ನಿಜವಾಗಿಯೂ ದುಃಖ, ಯಾತನೆಯ ಪ್ರಮಾಣವು ಎಂದಿನಂತೆ ಭೀಕರವಾಗಿಯೇ ಉಳಿದಿದೆ." ಉದ್ಯಮಪಟುವಿಗೂ ಬಾಳಿನ ಮಹಾರಹಸ್ಯ ಗೋಚರಿಸದೆ ಹೋಯಿತು.

ವ್ಯಾಯಾಮಪಟು : ಡ್ರಿಲ್‌ಮಾಸ್ತರ ಪದದಿಂದ ಶಾರೀರಕ ಮಂತ್ರಿಯ ಸ್ಥಾನದವರೆಗೆ ಏರಿದವನೀತ. ಎಲ್ಲ ಪಂದ್ಯಗಳಲ್ಲಿ ಪ್ರಥಮಸ್ಥಾನ ಗಳಿಸಿದ. ಅಂತರರಾಷ್ಟ್ರೀಯ ಪ್ರಶಸ್ತಿಗೂ ಪಾತ್ರನಾದ. ಹೀಗಿದ್ದೂ ವಿಷಣ್ಣತೆಯನ್ನೂ ಶೂನ್ಯತೆಯನ್ನು ಈತನೂ ಅನುಭವಿಸಿದ. ಕೊನೆಗೂ ಆತನು ಒಪ್ಪಿಕೊಂಡದ್ದು ಹೀಗೆ:

"ನಾನಿನ್ನೂ ಪ್ರಕೃತಿಯ ದಾಸ. ಓರ್ವ ಪಾಮರ, ಅಜ್ಞ, ಅಸಮಾಧಾನಿ. ನನ್ನ ಯೋಗ್ಯತೆಗೂ ಪರಿಮಿತಿಯಿದೆ. ನಾನು ಅಪಘಾತ, ಅನಾರೋಗ್ಯಗಳಿಗೂ ನನ್ನ ಶಕ್ತಿಯನ್ನು ಹ್ರಾಸಗೊಳಿಸುವ ಮಾನಸಿಕ ವಿಕಾರಗಳಿಗೂ ತುತ್ತಾಗಬಲ್ಲ ಸಾಮಾನ್ಯಮಾನವ."

ಹೀಗೆ ಈ ಸುಪ್ರತಿಷ್ಠಿತ ಆರು ವ್ಯಕ್ತಿಗಳು ತಂತಮ್ಮ ಅಸಮಾಧಾನವನ್ನು, ಅಶಕ್ತಿಯನ್ನು, ನಿರಾಶೆಯನ್ನು, ಕೊರಗನ್ನು ತೋಡಿಕೊಂಡರು. ಆಗ ಏಳನೆಯ ಅಜ್ಞಾತ ವ್ಯಕ್ತಿಯು ಹೇಳುತ್ತಾನೆ :

"ನೀವು ಅರಿಯಬಯಸಿದ್ದನ್ನು ನಾನು ಹೇಳಬಲ್ಲೆನು....ನೀವೆಲ್ಲರೂ ವಸ್ತುಗಳ ಹೊರನೋಟವನ್ನು ಮಾತ್ರ ಲಕ್ಷಿಸುತ್ತ ವಿಶ್ವದ ನಿಜಸತ್ಯವನ್ನು ಅರಿತುಕೊಳ್ಳದೆ ಕೇವಲ ಬಾಹ್ಯಪ್ರಪಂಚದಲ್ಲಿಯೇ ವರ್ತಿಸಿದಿರಿ. ಎಷ್ಟೇ ಶ್ರೇಷ್ಠನಾಗಿದ್ದರೂ ಕೇವಲ ಮನೋಮಯ ಮನುಷ್ಯನಿಂದ ಈ ಸಮಸ್ಯೆಯು ಬಿಡಲಾರದು. ಅದಕ್ಕಾಗಿ ನೂತನವಾದ, ಉದಾತ್ತತರವಾದ, ಜಾಗ್ರದವಸ್ಥೆಯಲ್ಲಿ ಅರ್ಥಾತ್ ಸತ್ಯಪ್ರಜ್ಞೆಯಲ್ಲಿ ಇಲ್ಲವೆ ಋತಚೇತನದಲ್ಲಿ ಅವನು ಅವತರಿಸಬೇಕಾಗುವುದು....ವ್ಯಕ್ತಪ್ರಪಂಚದ ಹಿಂದೆ ಅವ್ಯಕ್ತ, ಶಾಶ್ವತ ಸತ್ಯವೊಂದಿದೆ. ಈ ಸತ್ಯವು, ಸದ್ವಸ್ತುವು ನಿಮ್ಮ ಆತ್ಮದ ಅದರಂತೆ ವಿಶ್ವದ ಕೇಂದ್ರದಲ್ಲಿ ಅತಿ ಸಮೀಪದಲ್ಲಿ ಇದೆ. ನೀವು ಅದನ್ನು ಕಾಣಬೇಕು. ಕಂಡು ಅದನ್ನು ಮೈಗೂಡಿಸಿಕೊಳ್ಳಬೇಕು. ಅಷ್ಟೆ. ಅಂದರೆ ನಿಮ್ಮ ಎಲ್ಲ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಎಲ್ಲ ತೊಂದರೆಗಳನ್ನೂ ನೀಗುವಿರಿ."

ಅಜ್ಞಾತವ್ಯಕ್ತಿಯ ಈ ಮಾತುಗಳಲ್ಲಿ ಇಂದಿನ ವಿಶ್ವದ ವಿಷಮತೆ, ಕಷ್ಟ, ರೋಗಗಳನ್ನು ಸರಿಯಾಗಿ ಅರಿತುಕೊಂಡು ಅವುಗಳಿಗೆ ಸಮರ್ಪಕ ಪರಿಹಾರವನ್ನು ಒದಗಿಸುವ ಸಂದೇಶವಿದೆ. ಆ ಮಹಾರಹಸ್ಯದ ತಿರುಳು ಇಂತಿದೆ :

"ವಸ್ತುತಃ ಪ್ರಕೃತಿಯ ಪ್ರವೃತ್ತಿಯೆಲ್ಲ ಪರಮ ಸದ್ವಸ್ತುವಿನೆಡೆಗೆ ಸಾಗಿರುವ ಸಂಚಲನವೇ ಆಗಿದೆ.... ನಮ್ಮ ಜೀವಸತ್ತ್ವದ ಆಳದಲ್ಲಿ ಅವಿತಿರುವ ಸತ್ಯ, ಸೌಂದರ್ಯ, ಸಾಮರ್ಥ್ಯ, ಪರಿಪೂರ್ಣತೆಗಳನ್ನು ನಾವು ಸಮಗ್ರವಾಗಿ ಇದ್ದು ತೋರಿಸಬೇಕು. ಆಗ ಮಾತ್ರ ಜೀವನದಲ್ಲಿ ಮಹೋನ್ನತ ಶಾಶ್ವತ ದೈವೀ ಆನಂದದ ಆವಿಷ್ಕಾರವಾಗುವುದು."

ಮಾನವನ ಸಾಮರ್ಥ್ಯ ಪರಿಪೂರ್ಣತೆಗಳು ಅವನ ಜೀವಸತ್ತ್ವದ ಆಳದಲ್ಲಿವೆ. ಅವನ್ನು ಗುರುತಿಸಿಕೊಳ್ಳಬೇಕು. ಹಾಗೆ ಗುರುತಿಸಿಕೊಂಡು ಅವನು ಬಾಳಬೇಕು. ಹೊರಗಾಡಿ ದಣಿಯುವಲ್ಲಿ ಹುರುಳಿಲ್ಲ. ಆಂತರಿಕ ಬಾಳಿನಲ್ಲಿ ತನ್ನ ಆತ್ಮ ನಲೆಯಲ್ಲಿ ಸತ್ಯ, ಸೌಂದರ್ಯ, ಸಾಮರ್ಥ್ಯ ಪರಿಪೂರ್ಣತೆಗಳನ್ನು ಅರಿತುಕೊಳ್ಳಬೇಕು. ವಿಶ್ವದ ಕೇಂದ್ರದಲ್ಲಿಯೂ ಅವುಗಳನ್ನು ಕಾಣಬೇಕು. ಇದು ಶಾಶ್ವತ ದೈವೀ ಆನಂದದ ಆವಿಷ್ಕಾರದ ಪಥವಾಗಿದೆ.

ತ. ಚಿ. ಚಲುವೇಗೌಡ

ಹೆಚ್ಚು ಮಾಡುವುದು

ಹಳ್ಳಿಗಾಡಿನಲ್ಲಿ ರೈತಾಪಿಜನರು ಈ ಸಂಪ್ರದಾಯವನ್ನು ನಡಸುತ್ತಾರೆ. ಹದಿನೈದು ಇಪ್ಪತ್ತು ವರ್ಷಗಳ ಹಿಂದೆ ಇದರ ಆಚರಣೆ ತುಂಬ ಯಶಸ್ವಿಯಾಗಿ ತಪ್ಪದೆ ನಡೆಯುತ್ತಿತ್ತು. ಇತ್ತೀಚಿನ ದಿನಗಳಲ್ಲಿ ವಿರಳವಾಗಿ ನಡೆಯುತ್ತಿದೆ. ಇಲ್ಲವೇ ಇಲ್ಲವೆಂದರೂ ಆದೀತು !

ಯಾವುದಾದರೂ ಬೆಳೆಯನ್ನು ರೈತ ನಿರೀಕ್ಷಿಸಬೇಕಾದರೆ ಆ ವರ್ಷದಲ್ಲಿ ಬೀಳುವ ಮಳೆಯನ್ನು ಅವಲಂಬಿಸಬೇಕಾಗುತ್ತದೆ. ಈಗೀಗ ಅಲ್ಲಲ್ಲಿ ಅಣೆಕಟ್ಟುಗಳು ಹೆಚ್ಚಿ, ಬಂಜರು ಭೂಮಿಯೆಲ್ಲ ಸಾಗುವಳಿಯಾಗಿವೆ. ನಿಂತ ನೀರಿನಿಂದ ಬೆಳೆ ಬೆಳೆಯುವುದು ಹೆಚ್ಚಾಗಿದೆ. ಹಿಂದಿನ ಕಾಲದಲ್ಲಿ ಕೆರೆಯ ಬಯಲನ್ನು ಬಿಟ್ಟರೆ ಹೆಚ್ಚಾಗಿ ಅಣೆಕಟ್ಟುಗಳಿರಲಿಲ್ಲ. ಆದ್ದರಿಂದ ಮಳೆಯ ಆಶ್ರಯವನ್ನೇ ಅವಲಂಬಿಸಿ ಖುಷ್ಕಿ ಪ್ರದೇಶದಲ್ಲಿ ಬೆಳೆಯುವ ರಾಗಿ, ಹುರುಳಿ, ಜೋಳ, ಸಾಮೆ, ನವಣೆ, ಆರಕ ಮುಂತಾದ ಪದಾರ್ಥಗಳನ್ನು ಬೆಳೆಯಬೇಕಾಗುತ್ತಿತ್ತು. ಬಿತ್ತುವುದು ರೈತನ ಕೆಲಸ, ಬಿತ್ತನೆ ಮೊಳಕೆಯೊಡೆಯುವಂತೆ ಮಾಡುವುದು ಮಳೆರಾಯನ ಕೆಲಸ. ಈ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಮಳೆರಾಯನ ಕರುಣೆ ಇಲ್ಲದಿದ್ದರೆ ರೈತ ಆಕಾಶ ಭೂಮಿ ನೋಡಿ ಹಲ್ಲುಹಲ್ಲು 'ಕಿರಿದು'ಕೊಂಡು ಕುಳಿತುಕೊಳ್ಳಬೇಕಾಗುವ ಪರಿಸ್ಥಿತಿಗೇನು ಕಡಮೆ ಇಲ್ಲ.

ಆ ಸಾಲಿನಲ್ಲಿ ಮಳೆ ಬೆಳೆ ಚೆನ್ನಾಗಿ ಆದರೆ, ಆತನಿಗೆ ಎಲ್ಲಿಲ್ಲದ ಸಂತೋಷ-ಸಂಭ್ರಮ. ಆಗ ಅವನಿಗೆ ಸುಗ್ಗಿ. ಅಲ್ಲಿಂದ ಆತನ ಕುಣಿತ, ಹಾಡು, ನಲಿವು, ಆಚರಣೆ, ಹಬ್ಬಗಳು ಸಂಪ್ರದಾಯಗಳು—ಮುಂತಾದವು ಹುಟ್ಟಿಕೊಳ್ಳುತ್ತವೆ. ಅವುಗಳನ್ನು ನಿಷ್ಠೆಯಿಂದ ರೈತರು ಆಚರಿಸಿಸುತ್ತಾರೆ. ತಮ್ಮ ಸಂತೋಷ ನಲಿವುಗಳನ್ನು ಇಂಥ ಸಂದರ್ಭಗಳಲ್ಲಿ ತೋಡಿಕೊಳ್ಳುತ್ತ, ಸಹರೈತರಲ್ಲಿ ಹಂಚಿಕೊಂಡು ಕುಣಿದು ಕುಪ್ಪಳಿಸುತ್ತಾರೆನ್ನಬಹುದು.

ಬೆಳೆಯ ನಾಶ ಸನ್ನಿಹಿತವಾಗುತ್ತಿದೆ ಎಂದು ರೈತನಿಗೆ ಮನವರಿಕೆಯಾದರೆ : ಅಂಥ ಸಂದರ್ಭದಲ್ಲಿಯೂ ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಮಳೆರಾಯನ ಪೂಜೆ ಮಾಡಿ, ಬೀದಿಬೀದಿಯಲ್ಲಿ ಹೊತ್ತುಕೊಂಡು ಹೋಗಿ ಮೆರಸಿ, ಆರತಿ ಪಡೆದು ಆಕಾಶದತ್ತ ನೋಡುತ್ತ ತನ್ನ 'ಗೋಳ'ನ್ನು ಆ ಮಳೆರಾಯನಲ್ಲಿ ತೋಡಿಕೊಳ್ಳುತ್ತಾನೆ. ಎಷ್ಟೋ ಸಲ ಇಂಥ ಸಂದರ್ಭಗಳಲ್ಲಿ ಮೆರವಣಿಗೆಯಲ್ಲಿದ್ದವರೆಲ್ಲ ತೊಯ್ಯುವಂತೆ ಮಳೆ ಬೀಳುವುದುಂಟು. ಬೀದಿ ಬೀದಿಯಲ್ಲಿ ಕುಣಿದು ಕುಪ್ಪಳಿಸುತ್ತಾರೆ. ಈತನ ಮೊರೆ ಇಲ್ಲದಿದ್ದರೆ, ಪ್ರಪಂಚ ನಾಶವಾಗುತ್ತಿತ್ತು ! ಒಂದಲ್ಲ ಒಂದು ವಿಧದಲ್ಲಿ ಈತನ ಶ್ರಮ ಪ್ರಪಂಚದ ಮಿಕ್ಕೆಲ್ಲ ಜೀವಿಗಳಿಗೆ ಶ್ರಮ.

ಈ ಸಾಲಿನಲ್ಲಿ ಮಳೆರಾಯನ ಕರುಣೆಯಿಂದ ರೈತ ಬಿತ್ತಿದ ಬಿತ್ತನೆ ಮೊಳಕೆಯೊಡೆದು ಸಮೃದ್ಧಿಯಾಗಿ ಬೆಳೆದುನಿಂತರೆ, ಆತನ ಹಿಗ್ಗಿಗೆ ಪಾರವೇ ಇಲ್ಲ. ಈ ಸಂದರ್ಭದಲ್ಲಿಯೇ ಆತ, ಬೆಳೆದ ಬೆಳೆ ತನಗೆ ಮತ್ತು ತನ್ನ

ಇನ್ನಿತರ ಜೀವಿಗಳಿಗೆ ಇನ್ನೂ ಸಾಲದು ಎಂಬ ತಿಳಿವಳಿಕೆಯಿಂದಾಗಿ "ಹೆಚ್ಚು ಮಾಡುವುದು" ಆಚರಣೆಯನ್ನು ಮಾಡುತ್ತಾನೆ. ಇದನ್ನು ಸಾಮಾನ್ಯವಾಗಿ ಗಂಡಸು ಮಾಡುತ್ತಾನೆ. ಆ ಆಚರಣೆ ಹೀಗಿದೆ :

ಬೆಳಿಗ್ಗೆ ಎದ್ದು "ದನಿನವೊಖ" ನೋಡುತ್ತಾನೆ. ಸ್ನಾನ–ಮಡಿ ಮಾಡಿಕೊಂಡು ಮನೆಯಲ್ಲೇ ದೇವರಿಗೆ ಮೊದಲು ಪೂಜೆ ಸಲ್ಲಿಸುತ್ತಾನೆ. ಈತ ಇಷ್ಟು ಕೆಲಸಗಳನ್ನು ಮಾಡುವಷ್ಟರಲ್ಲಿ ಹೆಂಗಸು ಮೊದಲ್ಲೇ ಎದ್ದು ಸ್ನಾನ–ಮಡಿ ಮಾಡಿಕೊಂಡಿದ್ದವಳು ಒಂದೆರಡು ಸೇರು ಅಕ್ಕಿ ಹಾಕಿ, ಅನ್ನ ಮಾಡುತ್ತಾಳೆ. ಅದರ ಹಿಂದಿನ ದಿನವೇ ಒಳ್ಳೆಯ ಗಟ್ಟಿ ಹಾಲಿಗೆ ಹೆಪ್ಪುಹಾಕಿ ಮೊಸರು ಮಾಡಿಟ್ಟುಕೊಂಡಿರುತ್ತಾಳೆ. ಎರಡನ್ನೂ ಒಂದು 'ತಾಂಬಟ್ಟಲಿ'ಗೆ ಹಾಕಿ ಕಲಸುತ್ತಾಳೆ. ರುಚಿಗೆ ತಕ್ಕಷ್ಟು ಉಪ್ಪು ಹಾಕಿರುತ್ತಾಳೆ. ಒಂದು ಬಿದಿರುಬುಟ್ಟಿಯನ್ನು ಸೆಗಣಿಯಿಂದ ಸಾರಿಸಿ ಒಣಗಿಸಿಟ್ಟುಕೊಂಡಿರುವುದಕ್ಕೆ ಈ ಕಲಸಿದ ಮೊಸರನ್ನದ 'ತಾಂಬಟ್ಟಲ'ನ್ನು ಇಡುತ್ತಾಳೆ. ಒಂದು 'ಈಭೂತಿ' ಕಟ್ಟನ ಉಂಡೆಯನ್ನು ಒಂದು ಬದಿಯಲ್ಲಿ ಇರಿಸಿರುತ್ತಾಳೆ. ಸೆಗಣಿ ಉಂಡೆಯಿಂದ ವಿಘ್ನೇಶ್ವರನನ್ನು ಮಾಡಿ (ಈಶ್ವರ ಲಿಂಗದ ಆಕಾರದಲ್ಲಿ ಉಂಡೆ ಕಟ್ಟಿ) ಅದರ ನೆತ್ತಿಯ ಮೇಲೆ ಹಸಿರು ಗರಿಕೆಯನ್ನು ಸಿಕ್ಕಿಸಿ ಅದನ್ನೂ ಆ ಬುಟ್ಟಿಯ ಮತ್ತೊಂದು ಬದಿಯಲ್ಲಿ ಇಡುತ್ತಾಳೆ. ಅರಸಿನ–ಕುಂಕುಮದ ಬಟ್ಟಲನ್ನು ಸಹ ಇಡುತ್ತಾಳೆ (ಈ ಬಟ್ಟಲನ್ನು ಮರದ ಹಲಗೆಗೆ ಕುಳಿತೆಗೆದು ಮಾಡಿರುತ್ತಾರೆ). ತೆಂಗಿನಕಾಯಿ, ಗಂಧದಕಡ್ಡಿ ಮತ್ತು ಕರ್ಪೂರಗಳನ್ನು ಪೂಜೆಗಾಗಿ ಇರಿಸಿರುತ್ತಾಳೆ. ನೀರು ತುಂಬಿದ ಒಂದು 'ತಪ್ಪಲೆ' ಹಾಗೂ ಒಂದು 'ಕುಯ್ಗತ್ತಿ'ಯನ್ನು ಇಡುತ್ತಾಳೆ. ಇದು ಕಬ್ಬಿಣದ ಕುಡಲು. ಕುಡಲಿನ ಬಾಯನ್ನು ಗರಗಸದ ಹಲ್ಲಿನಂತೆ ಅರದಲ್ಲಿ ಉಜ್ಜಿ ಕೊರೆದಿರುತ್ತಾರೆ. ಈ 'ಕುಯ್ಗತ್ತಿ'ಯಿಂದ ರಾಗಿಯ 'ತೆಂಡೆ'ಯನ್ನೋ ಬತ್ತದ 'ತೆಂಡೆ'ಯನ್ನೋ ಕೊಯ್ದರೆ ತಕ್ಷಣ ಕೊಯ್ಯುತ್ತದೆ. ರೈತನ ಶ್ರಮವನ್ನು ಕಡಮೆ ಮಾಡುತ್ತದೆಂದು ಹೇಳಬಹುದು. ಆದ್ದರಿಂದ 'ಕುಡಲಿ'ಗೆ ಈ ರೀತಿ ಗರಗಸದ ಹಲ್ಲಿನಂತೆ ಅರದಿಂದ ಉಜ್ಜಿ ಮಾಡಿದ್ದಕ್ಕೆ 'ಕುಯ್ಗತ್ತಿ' ಎಂದು ವಿಶೇಷವಾಗಿ ಕರೆಯುತ್ತಾರೆ. ಈ ಬುಟ್ಟಿಯ ಹೊರಮೈಗೆ ವಿಭೂತಿಪಟ್ಟೆ ಬಳಿದು ಪೂಜೆ ಸಲ್ಲಿಸಿ ಇರಿಸಿದ್ದನ್ನು ಗಂಡಸು ಬಹಳ ಭಕ್ತಿಯಿಂದ ತಲೆಗೆ 'ಸಿಂಬಿ'ಯನ್ನು ಇಟ್ಟುಕೊಂಡು ಅದರ ಮೇಲೆ ಇದನ್ನು ಇರಿಸಿ ತನ್ನ ಹೊಲದ ಕಡೆಗೆ ಹೊರಡುತ್ತಾನೆ.

ಈತನ ಹಿಂದೆ ತನ್ನ ಮಕ್ಕಳ ಜತೆಗೆ ಅಕ್ಕಪಕ್ಕದ ಮನೆಯ ಮಕ್ಕಳೆಲ್ಲರೂ ಹೊರಡುತ್ತವೆ. "ಹೆಚ್ಚು ಮಾಡುವುದು" ಎಂದ ಮೇಲೆ, ಅವಕ್ಕೆ ಗೊತ್ತು, ಕಲಸಿದ ಮೊಸರನ್ನ ಸಿಗುತ್ತದೆಂದು. ಈತನನ್ನು ಹಾಗೂ ಈತನ ಹಿಂದೆ ಹೋಗುತ್ತಿರುವ ಮಕ್ಕಳನ್ನೂ ಕಂಡ ಇತರರಿಗೂ "ಹೆಚ್ಚು ಮಾಡಲು" ಹೋಗುತ್ತಿದ್ದಾರೆಂದು ಗೊತ್ತಾಗುತ್ತದೆ. ಹಳ್ಳಿಯಲ್ಲಿ ಇದು ಸರ್ವೇಸಾಮಾನ್ಯವಾದದ್ದು.

ಹೊಲದ ಹತ್ತಿರ ಹೋದ ಈತ, ಒಂದು ಒಳ್ಳೆಯ ದಿಟ್ಟವಾದ ಸ್ಥಳವನ್ನು ಹುಡುಕಿ ಉತ್ತರ ದಿಕ್ಕಿಗೆ ಮುಖವಾಗಿ ನಿಂತು, ತಲೆಯ ಮೇಲಿನ ಬುಟ್ಟಿಯನ್ನು ಕೆಳಗಿಳಿಸುತ್ತಾನೆ. ಮೊದಲು 'ಕುಯ್ಗತ್ತಿ'ಯನ್ನು ತೆಗೆದುಕೊಂಡು ತನ್ನ ಹಣೆಗೆ ಅದನ್ನು 'ಒತ್ತಿ'ಕೊಂಡು (ಶರಣು ಮಾಡಿಕೊಂಡು) ಮನಸ್ಸಿನಲ್ಲಿಯೇ 'ಮುಂದಿನ ಸಲಕ್ಕೂ ಇದೇ ರೀತಿ ಧಾನ್ಯ ಹೆಚ್ಚಲಿ' ಎಂದು ಹೇಳಿಕೊಳ್ಳುತ್ತ, ಅದರಿ ಹಿಡಿಯುವಷ್ಟು ಹಿಡಿಯನ್ನು ಮೂರು ಹಿಡಿ ಕೊಯ್ದು ಫಸಲಿಗೆ ಒಂದರ ಪಕ್ಕದಲ್ಲಿ ಒಂದನ್ನು ಇರಿಸಿ, ನೆಟ್ಟಗೆ ಉತ್ತರ ದಿಕ್ಕಿಗೆ ಒರಗಿಸುತ್ತಾನೆ. ಅಲ್ಲಿ ಇಲ್ಲಿ ಬಿದ್ದಿರುವ ಮೂರು ಸಣ್ಣಗಾತ್ರದ ಕಲ್ಲುಗಳನ್ನು ತೆಗೆದುಕೊಂಡು, ನೀರಿನಿಂದ ಚೆನ್ನಾಗಿ ಅವುಗಳನ್ನು ತೊಳೆದು ಒರಗಿಸಿರುವ ಮೂರು ಹಿಡಿಯ ಮುಂದೆಯೂ ಒಂದೊಂದು ಕಲ್ಲನ್ನು ನೆಟ್ಟಗೆ ನಿಲ್ಲಿಸುತ್ತಾನೆ. ಕಾಡಿನಲ್ಲೇ ಸಿಗುವ ಕುಂಬಳದ ಎಲೆಯೋ, ಬಾಳೆಯ ಎಲೆಯೋ, ಹರಳು ಎಲೆಯೋ, ಆಲದ ಎಲೆಯೋ ಕೊಯ್ದು ತಂದು ಆ ಕಲ್ಲಿನ ಮುಂದೆ ಒಂದೊಂದು ಅಗಲವಾದ ಎಲೆಯನ್ನು ಇರಿಸಿ, ನೀರು ಚಿಮುಕಿಸುತ್ತಾನೆ. ಅದರ ಮೇಲೆ ಒಂದೊಂದು ಮೊಸರನ್ನದ ಉಂಡೆಯನ್ನು ಕಟ್ಟಿ ಇಡುತ್ತಾನೆ. ವಿಭೂತಿ ಕಟ್ಟನ್ನು ಬೆರಳಿನಿಂದ ಉಜ್ಜಿಕೊಂಡು ಕಲ್ಲಿಗೆ,

ಕುಯ್ಗುತ್ತಿಗೆ ಹಾಗೂ ಕೊಯ್ದ ಫಸಲಿನ ತೆಂಡೆಗೆ ಇಡುತ್ತಾನೆ. ಅರಿಸಿನ ಕುಂಕುಮವನ್ನೂ ಹಾಗೇ ಇಡುತ್ತಾನೆ. ಅಲ್ಲಿದ್ದ ಮಕ್ಕಳ ಹಣೆಗೂ ಇಡುತ್ತಾನೆ. ವಿಘ್ನೇಶ್ವರನನ್ನು ಮಧ್ಯದಲ್ಲಿಟ್ಟಿರುವ ಕೊಯ್ದ ತೆಂಡೆಯ ಮುಂದೆ ಇರಿಸಿ, ಗಂಧದಕಡ್ಡಿ ಹೊತ್ತಿಸಿ ಪೂಜೆ ಸಲ್ಲಿಸುತ್ತಾನೆ. ಆನಂತರ ತೆಂಗಿನಕಾಯಿಯೊಡೆದು, ಬಾಳೆಹಣ್ಣಿನ ತೊಟ್ಟುಮುರಿದು ದೇವರ ಮುಂದೆ ಇಡುವ ರೀತಿಯಲ್ಲಿ ಇಡುತ್ತಾನೆ. ತಂದಿರುವ ಕರ್ಪೂರದ ಬಿಲ್ಲೆಯನ್ನು ಹೊತ್ತಿಸಿ, ತೆಂಗಿನ ಕಾಯಿಯ ಒಂದು ಹೋಳಿನ ಒಳತುದಿಯಲ್ಲಿ ಇಟ್ಟುಕೊಂಡು ಆರತಿ ಬೆಳಗುತ್ತಾನೆ. ಮಕ್ಕಳೆಲ್ಲರೂ ಕೈಮುಗಿದುಕೊಂಡು ನಿಲ್ಲುತ್ತವೆ.

ಆತ ಒಡ್ಡಿರುವ ತೊಳೆದ ಕಲ್ಲು, ಸೆಗಣಿ ಉಂಡೆಗಳು ದೇವರ ಪ್ರತೀಕವೆಂದು ಭಾವಿಸುತ್ತಾನೆ. ಪೂಜೆಸಲ್ಲಿಸಿ ನಂಬುತ್ತಾನೆ. ನಂಬಿ ಯಾವ ಕೆಲಸ ಮಾಡಿದರೂ ಅದರಲ್ಲಿ ಯಶಸ್ಸು ಖಂಡಿತ ಲಭಿಸುತ್ತದೆಂದು ಹಿರಿಯರ ಒಂದು ನಂಬಿಕೆ. ಅದರಂತೆ, ಈತ ನಂಬಿ ಈ ಕಾರ್ಯವನ್ನು ಮಾಡುವುದರಲ್ಲಿ ತಪ್ಪೇನಿದೆ ?

ಈತನ ಕೆಲಸವಾದನಂತರ ಮಕ್ಕಳಿಗೆ ಎಲೆಯನ್ನು ಕಿತ್ತುತರುವಂತೆ ಹೇಳುತ್ತಾನೆ. ಅವುಗಳೋ ಕಿಲಾಡಿ ಮಕ್ಕಳು. ಆತ ಹೇಳುವುದಕ್ಕಿಂತ ಮೊದಲೇ ಆ ಕೆಲಸವನ್ನು ಮಾಡಿಕೊಂಡು, ಈತ ಮೊಸರನ್ನ ಕೊಡುವುದನ್ನೇ ಕಾಯುತ್ತಿರುತ್ತವೆ. ಅಲ್ಲಿದ್ದ ಮಕ್ಕಳಿಗೆ ಕೊಟ್ಟನಂತರ ತಾನೂ ಪ್ರಸಾದವೆಂದು ಸ್ವಲ್ಪ ತೆಗೆದುಕೊಂಡು ತಿನ್ನುತ್ತಾನೆ. "ಹೆಚ್ಚುಮಾಡುತ್ತಿದ್ದಾರಂ"ತೆ ಎಂದು ಯಾರಿಂದಲಾದರೂ ತಿಳಿದರೆ, ಅಲ್ಲಿ ಇಲ್ಲಿ ಇದ್ದ ಹುಡುಗರೂ ಬಂದು ಬಿಡುತ್ತಾರೆ. ಆಗ ಎಲ್ಲರಿಗೂ ಕೊಟ್ಟು, ತಾನು ಸಂತೋಷಗೊಳ್ಳುತ್ತಾನೆ. ಒಂದು ರೀತಿಯಲ್ಲಿ ವನಭೋಜನವಾಗಿ ಪರಿಣಮಿಸುತ್ತದೆ, ಆ ಮಕ್ಕಳಿಗೆ.

ರೈತ ತಾನು ಇತರರಿಗೆ ಕೊಟ್ಟು, ಆನಂತರ ತಾನೂ ತಿನ್ನುತ್ತಾನೆ. ಬತ್ತ, ರಾಗಿ ಕೊಯ್ದು ಕಣದಲ್ಲಿ 'ಒಕ್ಕಣೆ' ಮಾಡಿದನಂತರ ಮನೆಗೆ ತರುತ್ತಾನೆ. ಕಣದಲ್ಲಿ 'ಒಕ್ಕಣೆ' ಮಾಡುತ್ತಿರುವಾಗಲೇ ಅನೇಕ ಭಿಕ್ಷುಕರು, ಸನ್ಯಾಸಿಗಳು, ಅಡಿದೆಯವರು, ಒಕ್ಕಲು ಮೇಲೆ ಬರುವ ಪೂಜಾರಿಗಳು-ಮುಂತಾದವರು ಬರುತ್ತಾರೆಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಇವರಿಗೆಲ್ಲ ದಾನ ಕೊಟ್ಟು ಮಿಕ್ಕಿದ್ದನ್ನು 'ಒಕ್ಕಿ' ತರುತ್ತಾನೆ.

ಬೆಳೆದು ನಿಂತಿರುವ ಫಸಲಿಗೆ ಈ ರೀತಿ ಪೂಜೆ ಸಲ್ಲಿಸಿದಾಕ್ಷಣ, ಅದು ಇನ್ನಷ್ಟು ಹೆಚ್ಚುವುದಿಲ್ಲ. ಅದು ಎಷ್ಟು ಕಾಳುಗಳನ್ನು ಒಂದೊಂದು ತೆನೆ ಅಥವಾ ಗೊನೆಯಲ್ಲಿ ಹೊಂದಿರುತ್ತದೋ ಅವನ್ನು 'ಒಕ್ಕಾ' ಗಲೂ ಅಷ್ಟೇ ಕಾಳುಗಳು ಇವನಿಗೆ ದೊರೆಯುತ್ತವೆ. ಆದರೆ, ಈತ ತನ್ನ ಹೊಲಗದ್ದೆಗಳು ಬೆಳೆಯಬೇಕಾದರೆ ವರ್ಷವಿಡೀ ಕೈಕಾಲುಗಳನ್ನು ಕೆಸರು ಮಾಡಿಕೊಂಡು ದುಡಿದಿರುತ್ತಾನೆ. ಸಮೃದ್ಧಿಯಾಗಿ ಬೆಳೆಯಬೇಕಾದರೆ, ಈತನ ಶ್ರಮ ಮುಖ್ಯ. ವೈಕೈ ಧೂಳಾಗುತ್ತದೆಂದು ಮಡಿಮಡಿ ಎಂದು ಅಡಿಗಡಿಗೆ ಹಾರಾಟ ನಡೆಸಿದ್ದರೆ, ಯಾವ ಜೀವಿಗೂ ಉಳಿಗಾಲವಿರುತ್ತಿರಲಿಲ್ಲ ಎಂದು ಎಂಥ ಹೆಗ್ಗನಿಗೂ ಗೊತ್ತಾಗುತ್ತದೆ. ಇಂಥ ಸಮೃದ್ಧಬೆಳೆ ಬೆಳೆಯುವಾಗ ಕೈಕೆಸರಾದವನಿಗೆ ಇಂದು ಬಾಯಿ ಮೊಸರಾಗಬೇಡವೆ ? ಆದ್ದರಿಂದಲೇ ಈ 'ಹೆಚ್ಚು ಮಾಡುವುದು' ಸಂಪ್ರದಾಯ ಆಚರಣೆಯಲ್ಲಿ ವಿಶೇಷವಾಗಿ ಮೊಸರನ್ನವನ್ನೇ ಕಲಸುತ್ತಾರೆ !

ರೈತನಿಗೆ ಇದರಿಂದಲೂ ತೃಪ್ತಿ ಇರುವುದಿಲ್ಲ. ಆತ ಕಣದಲ್ಲಿ ಒಕ್ಕಣೆ ಮಾಡುವಾಗ ಒಂದು ಮೊರದಲ್ಲಿ ಧಾನ್ಯವನ್ನು ತುಂಬಿಕೊಂಡು ಬೀಸುವಗಾಳಿಗೆ ತೂರುವ ಸಂದರ್ಭದಲ್ಲಿಯೂ ಜಳ್ಳು ಸಹ ಕಾಳಾಗಲಿ ಎಂದೋ ಏನೋ 'ಹೆಚ್ಚಲಿ' ಹಾಗೂ 'ಹುಯ್ಲೋ' ಎನ್ನುತ್ತಿರುತ್ತಾನೆ.

ಧಾನ್ಯ ಅಳತೆ ಮಾಡುವಾಗಲೂ ಅವರಿಗೆ ಬೆಸಸಂಖ್ಯೆ ಬರಬಾರದು. ಅದು, ಅವಲಕ್ಷಣದ ಲೆಕ್ಕವಾಗುತ್ತದೆ. ಐದು ಆರು ಎಂದು ಅಳತೆ ಲೆಕ್ಕಮಾಡಿ ಏಳಕ್ಕೆ 'ಹೆಚ್ಚಲಿ' ಎನ್ನುತ್ತಾರೆ. ಆಮೇಲೆ ಎಂಟು ಎಂದು ಲೆಕ್ಕ ಹಾಕುತ್ತಾರೆ. ಒಂಬತ್ತು ಹತ್ತು ಆದಮೇಲೆ ಹನ್ನೊಂದಕ್ಕೆ ಬದಲಾಗಿ 'ಮತ್ತೊಂದು' ಎಂದು ಹೇಳಿ ಹನ್ನೆರಡು ಎಂದು ಲೆಕ್ಕ ಹಾಕುತ್ತಾರೆ. ಒಟ್ಟಿನಲ್ಲಿ ಏಳು, ಹನ್ನೊಂದು, ಹದಿನೇಳು ಬೆಸಸಂಖ್ಯೆಗಳು ಬರಕೂಡದು. ಇದೆಲ್ಲವೂ

ಅವರಿಗೆ ಶುಭವಾಗಿಯೇ ಕಾಣಬೇಕು. ಅವರು ಬಳಸುವ ವಸ್ತುಗಳು, ವಾಸಿಸುವ ಮನೆ, ಕೆಲಸಕ್ಕೆ ಬಳಸುವ ಪ್ರಾಣಿಗಳು ಎಲ್ಲವೂ ಅವರಿಗೆ ಒಳ್ಳೆಯವನ್ನು ತರಬೇಕು. ಅವರೂ ಅವನ್ನು ಪೂಜ್ಯಭಾವನೆಯಿಂದ ನೋಡಬೇಕು. ಅಶುಭ ಯಾವುದರಿಂದಲಾದರೂ ಒದಗಬಹುದೇನೋ ಎಂಬ ಅಳುಕು ಆಗಾಗ ಅವರ ಮುಂದೆ ಸುಳಿಯುತ್ತಿರುತ್ತದೆ. ಆದ್ದರಿಂದಲೇ ಅವರು ಒಳ್ಳೆಯದಾಗಲಿ ಎಂದು ಮೊದಲೆ ಪೂಜೆ ಸಲ್ಲಿಸಿ ಹರಕೆ ಹೊರುತ್ತಾರೆ.

'ಹೇ ಭಾನು ! ಸತ್ಯವನ್ನು ಸ್ವರ್ಣಮಂಡಲದಿಂದ ಮುಚ್ಚಿರುವೆ. ಆ ಆವರಣವನ್ನು ಆಚೆ ಸರಿಸು. ನಿನ್ನಲ್ಲಿರುವ ಸತ್ಯವನ್ನು ನೋಡಲು ನನಗೆ ಸಾಧ್ಯವಾಗಲಿ. ನಿನ್ನಲ್ಲಿರುವ ಸತ್ಯವನ್ನು ನಾನರಿತೆ. ನಿನ್ನ ಕಿರಣದ ಮತ್ತು ಕಾಂತಿಯ ನಿಜವಾದ ಅರ್ಥ ನನಗೆ ತಿಳಿಯಿತು. ನಿನ್ನಲ್ಲಿ ಹೊಳೆಯುವುದನ್ನು ನೋಡಿದೆ. ನಿನ್ನಲ್ಲಿರುವ ಸತ್ಯವನ್ನು ಅರಿತೆ. ನಿನ್ನಲ್ಲಿ ಯಾವುದಿರುವುದೋ ಅದೇ ನನ್ನಲ್ಲಿಯೂ ಇರುವುದು. ಅದೇ ನಾನು.'

ಪರಿವರ್ತನೆಯ ಮಾಧ್ಯಮ

ನಾವು ಕೆಲವು ಗೆಳೆಯರು ಅದೂ ಇದೂ ಮಾತನಾಡುತ್ತಾ ಕುಳಿತಿದ್ದೆವು. ಮುಚ್ಚಂಜೆಯ ವೇಳೆ ಮನೆಯ ತಾರಸಿಯ ಮೇಲೆ ನಮ್ಮ ಗೋಷ್ಠಿ. ತಂಪು ಗಾಳಿಯಲ್ಲಿ ಮನಸ್ಸಿಗೆ ತೋಚಿದಂತೆಲ್ಲ ನಿಸ್ಸಂಕೋಚವಾಗಿ ಬಾಯಿಬಿಡುವುದು. ನಡುನಡುವೆ ಹಾರಿಬಂದು ಮೈಮುಟ್ಟುವ, ತಲೆತಾಗುವ ತರಗೆಲೆಗಳನ್ನು ಪುನಃ ಗಾಳಿಯಲ್ಲಿ ತೇಲಿಬಿಡುವುದು; ವಿಷಯಗಳನ್ನೂ ಅಷ್ಟೆ! ಆದರೆ ಒಂದು ವಿಷಯ ಮಾತ್ರ ಹತ್ತಿದ್ದು ಹರಿಯಲಿಲ್ಲ.

"ಈ ದೇಶದಲ್ಲಿ ಮೊದಲು ಪರಿವರ್ತನೆ ಆಗಬೇಕು. ಆಮೇಲೆ ಎಲ್ಲ ಸರಿಹೋಗುತ್ತೆ" ಅಂದರು ಒಬ್ಬರು.

"ಮೊದಲು ಎಲ್ಲ ಸರಿಹೋಗಬೇಕು. ಆಗ ಪರಿವರ್ತನೆ ತಂತಾನೆ ಆಗಿಬಿಡುತ್ತೆ" ಅಂದರು ಇನ್ನೊಬ್ಬರು.

"ಪರಿವರ್ತನೆ ಈಗಾಗಲೇ ಆಗುತ್ತಿದೆ. ದೊಡ್ಡ ದೊಡ್ಡ ಕಾರ್ಖಾನೆಗಳಾಗುತ್ತಿವೆ. ಭಾರಿಭಾರಿ ಅಣೆಕಟ್ಟುಗಳಾಗುತ್ತಿವೆ. ಕಾಡಿದ್ದಲ್ಲಿ ಊರುಗಳು ಬೆಳೆಯುತ್ತಿವೆ. ಕಗ್ಗಲ್ಲು ಬೆಟ್ಟಗಳು ಕರಗಿಹೋಗಿ ಸುಂದರ ಸೌಧಗಳು ಏಳುತ್ತಿವೆ. ಶಾಲೆ ಕಾಲೇಜುಗಳು ಹೆಚ್ಚುತ್ತಿವೆ."—ಮತ್ತೊಬ್ಬರ ವಾಗ್ಧಾರೆ.

"ಈ ತರಹದ ಪರಿವರ್ತನೆಯಲ್ಲ ನಾನು ಹೇಳಿದ್ದು. ಮುಖ್ಯವಾಗಿ ಮನುಷ್ಯರಲ್ಲಿ ಬದಲಾವಣೆಯಾಗ ಬೇಕು" ಎಂದರು ಮೊದಲನೆಯವರು.

"ಏಕೆ ?" ಅಂದರು ಉಳಿದವರೆಲ್ಲರೂ.

"ನಮ್ಮ ದೇಶದಲ್ಲಿ ಈಗಿನ ಜನ ನಿಜವಾದ ಮನುಷ್ಯರು ಹೇಗಿರಬೇಕೋ ಹಾಗಿಲ್ಲ, ಅದಕ್ಕೆ."

"ಹೌದು, ಹೌದು—ನಾವೂ ಸಹ" ಎಂದು ಎಲ್ಲರೂ ಗಂಭೀರವಾಗಿ ಮನಸ್ಸಿನಲ್ಲೆ ಅಂದುಕೊಂಡೆವು. ಆಮೇಲೆ ಆ ವಿಷಯ ಮುಂದುವರಿಸಲು ಯಾರೂ ಅಷ್ಟಾಗಿ ಇಷ್ಟಪಡಲಿಲ್ಲ.

ಪರಿವರ್ತನೆ ಆಗಬೇಕು ಅನ್ನುವುದೇನೋ ನಿಜ. ಆದರೆ, ಅದನ್ನು ಸಾಧ್ಯವಾಗಿಸುವುದು ಹೇಗೆ? ಪರಿವರ್ತನೆ ಅಗತ್ಯವಿದೆ ಎಂಬುದನ್ನು ಮನಗಾಣಿಸುವುದು ಹೇಗೆ? ಏನೆಲ್ಲ ಪರಿವರ್ತನೆ ಆಗಬೇಕೆಂಬುದನ್ನು ಪರಿಣಾಮಕಾರಿಯಾಗಿ ತಿಳಿಸುವುದಾದರೂ ಹೇಗೆ?

ಸಾಮಾನ್ಯವಾಗಿ ವಿಚಾರ ತಿಳಿಯಪಡಿಸುವ ಪ್ರಚಲಿತ ಮಾಧ್ಯಮಗಳೆಂದರೆ ಸಭೆಗಳು, ಪತ್ರಿಕೆಗಳು, ಪುಸ್ತಕಗಳು, ನಾಟಕ-ಸಿನಿಮಾ, ಶಿಕ್ಷಣ. (ಆಕಾಶವಾಣಿ ಮತ್ತು ಟೆಲಿವಿಜನ್‌ಗಳನ್ನು ಇಲ್ಲಿ ನಾನು ಬೇಕೆಂದೇ ಪ್ರಸ್ತಾಪಿಸಬಯಸುವುದಿಲ್ಲ.)

ಸಭೆಗಳಲ್ಲಿ ಭಾಷಣ ಮಾಡುವುದರಿಂದ ಕೆಲವರ ಮೇಲಾದರೂ ಪರಿಣಾಮವಾಗುತ್ತದೆ. ಭಾಷಣ ಪ್ರಭಾವಿಯಾಗಿದ್ದಷ್ಟೂ ಪರಿಣಾಮವೂ ಹೆಚ್ಚು. ಆದರೆ ಭಾಷಣದ ಅವಧಿಯಷ್ಟೇ ಅದು ಕ್ಷಣಿಕ. ಹೆಚ್ಚೆಂದರೆ ನಾಲ್ಕಾರು ದಿನ ಅದರ ಗುಂಗು ಇದ್ದೀತು. ಆಮೇಲೆ, ಬಹಳವಾದರೆ ಅದೊಂದು ಸವಿನೆನಪಾಗಿ ಉಳಿಯಬಹುದು. ಎಲ್ಲರೂ ಸಭೆಗೆ ಬರುವುದಿಲ್ಲ ; ಬಂದವರೆಲ್ಲರೂ ಭಾಷಣ ಕೇಳುವುದಿಲ್ಲ. ಕೇಳುವವರಲ್ಲಿ ನೆನಪಿಟ್ಟುಕೊಳ್ಳುವವರು ಸಾವಿರಕ್ಕೊಬ್ಬರು. ಅದರ ಬಗ್ಗೆ ಗಂಭೀರವಾಗಿ ಆಲೋಚಿಸುವವರು ಹತ್ತುಸಾವಿರಕ್ಕೊಬ್ಬರು. ಆಚರಣೆಗೆ ತರುವವರು ಲಕ್ಷಕ್ಕೊಬ್ಬರು—ಇರಬಹುದು, ಇಲ್ಲದೆಯೂ ಇರಬಹುದು.

ಇದರ ಇನ್ನೊಂದು ಮುಖ, ಭಾಷಣ ಮಾಡುವ ವ್ಯಕ್ತಿಯ ಹಿನ್ನೆಲೆ. ಅವನು ಗುಣವಂತನೋ ಅಲ್ಲವೋ ಅನ್ನುವುದು ಈ ಕಲಿಗಾಲದಲ್ಲಿ ಸಭಿಕನಿಗೆ ಸಭೆಯಲ್ಲೇ, ಅವನ ಮಾತುಗಳಿಂದಲೇ ತಿಳಿಯುವುದಿಲ್ಲ. ಭಾಷಣಗಾರ ಎಂಥ ದೊಡ್ಡ ಮನುಷ್ಯನೇ ಇರಲಿ, ಘನವಿದ್ವಾಂಸನೇ ಆಗಿರಲಿ, ಅವನು ಹೇಳುವುದನ್ನೆಲ್ಲ ಸಭಿಕನು ನಂಬುವಂತಿಲ್ಲ, ಈಗಿನ ಸ್ಥಿತಿ. ಭಾಷಣಗಾರನಿಗೆ, 'ಆಚಾರ ಹೇಳಿ ಬದನೇಕಾಯಿ ತಿನ್ನುವ' ಹಿನ್ನೆಲೆ ಇದ್ದು, ಅದು ಸಭಿಕನಿಗೂ ಗೊತ್ತಿದ್ದರಂತೂ, ಅಂಥ ಕಾರ್ಯಕ್ರಮ ದೊಡ್ಡ ಮನರಂಜನೆಯೇ ಸೈ.

ಇನ್ನು ಪತ್ರಿಕೆಗಳ ವಿಷಯಕ್ಕೆ ಬರೋಣ. ನಮ್ಮ ದೇಶದಲ್ಲಿ ಬಹುಶಃ ಮೂರನೇಎರಡುಪಾಲು ಜನ ಅಕ್ಷರವಿದ್ಯೆಗೆ ಅಪರಿಚಿತರು. ಇನ್ನು ಅಕ್ಷರಸ್ಥರೆಲ್ಲ ಪತ್ರಿಕೆ ಓದುತ್ತಾರೆ ಎಂದೇನಿಲ್ಲ. ಓದುವವರಲ್ಲೂ ಭವಿಷ್ಯ-ಪೇಟೆಧಾರಣೆ-ಕ್ರೀಡಾರಂಗ-'ಬೇಕಾಗಿದ್ದಾರೆ'-ಟಾರ್ಜಾನ್‌ಪ್ರಿಯರ ಲೆಕ್ಕ ಕಳೆಯಲೇಬೇಕು. ವಿದ್ಯಾವಂತರಲ್ಲೂ ಕೇವಲ ಚಿತ್ರಗಳನ್ನಷ್ಟೆ 'ಓದುವ' ಹವ್ಯಾಸ ಉಳ್ಳವರೂ ಉಂಟು. ವಾರ್ತೆ-ಲೇಖನ ಓದುವವರ ಸಂಖ್ಯೆ ಬಹು ಕಮ್ಮಿ. ವಿಚಾರ ಪರಿವರ್ತನೆ ಅನುಮಾನ. ಆಚಾರ ಪರಿವರ್ತನೆಯಂತೂ ದೂರವೇ ಉಳಿಯಿತು.

ಪತ್ರಿಕೆಗಳು ಎಂಥ ಸುದ್ದಿಗೆ ಮಹತ್ವ ನೀಡುತ್ತವೆ ಎಂಬುದು ಇನ್ನೊಂದು ಭಾಗ. ಮನುಷ್ಯನು ನಾಯಿಯನ್ನು ಕಡಿದರೆ ತಾನೇ ಸುದ್ದಿಯಾಗುವುದು ? ಆದ್ದರಿಂದ ರಾಘವೇಂದ್ರಸ್ವಾಮಿಗಳಂತಹವರು ಏನಾದರೂ ಹೇಳಿಕೆ ಕೊಟ್ಟರೆ, ಅದಕ್ಕೆ ಸುದ್ದಿಯಾಗುವ ಅರ್ಹತೆ ಲವಲೇಶವೂ ಇರುವುದಿಲ್ಲ. ಆದರೆ ಸಿನಿಮಾ ತಾರೆಯರ ನಗು-ಅಳು, ರಾಜಕೀಯ ಪುಢಾರಿಗಳ ತೇಗು-ಆಕಳಿಕೆ, ಮುಖಪುಟದ ಸುದ್ದಿಗಳಾಗುತ್ತವೆ ; ಚಿತ್ರಗಳೂ ಆಗುತ್ತವೆ. ವಿಷಯ-ಸಂದರ್ಭಗಳ ವಿವೇಚನೆ ಇಲ್ಲದ ಮಂತ್ರಿಗಳು ಗಹನ ಅಧ್ಯಾತ್ಮ ಸಾಧನೆಗಳನ್ನು ಕುರಿತೋ ಅಥವ ಅತ್ಯಾಧುನಿಕ ವೈದ್ಯಕೀಯ-ಗಣಿತ-ರಸಾಯನ-ಗಗನಯಾನ ಶಾಸ್ತ್ರಗಳ ಸಂಶೋಧನೆಗಳ ಬಗ್ಗೆಯೋ ನೀಡುವ ಸಲಹೆ, ಮಾಡುವ ಮಾರ್ಗದರ್ಶನಗಳಿಗೆ ದಪ್ಪ ತಲೆಬರಹಗಳು ಮೀಸಲು. 'ತಿರುಕ'ನನ್ನು ಯಾರು ಕೇಳುತ್ತಾರೆ ? ವಾರ್ತಾ ಪ್ರಪಂಚ ಬಳಸುವ ಅಳತೆಗೋಲಿನ ಅಳತೆ ಸಿಕ್ಕಿತಲ್ಲವೇ ?

100-200 ಕಾಲೇಜು ವಿದ್ಯಾರ್ಥಿಗಳು ಒಟ್ಟಿಗೆ ಸೇರಿಯೂ ಶಾಂತವಾಗಿ ಶಿಕ್ಷಣದ ವಿಷಯ ಚರ್ಚಿಸುತ್ತಾರೆನ್ನಿ ; ಪಠ್ಯವಿಷಯಗಳನ್ನು ಕುರಿತು ವಿಚಾರವಿನಿಮಯ ನಡೆಸುತ್ತಾರೆನ್ನಿ ; ಶ್ರದ್ಧೆಯಿಂದ ಯೋಗಾಸನ ಅಭ್ಯಾಸ ಮಾಡುತ್ತಾರೆನ್ನಿ. ಇವಾವುದಕ್ಕೂ ಪತ್ರಿಕೆಗಳಲ್ಲಿ ಮಹತ್ವವಿಲ್ಲ. ಮುಖಪುಟದಲ್ಲಂತೂ ಇವು ಬರಲೇಕೂಡದು. ಅದೇ 15-20 ಜನ ಘೋಷಣೆ ಹಾಕಿ ಮೆರವಣಿಗೆ ಹೊರಟರೆ, ಶಾಲೆ-ಅಂಗಡಿ-ಹೋಟೆಲುಗಳಿಗೆ ಕಲ್ಲು ತೂರಿದರೆ, ಅಧ್ಯಾಪಕರ ಮೇಲೆ ಹಲ್ಲೆ ಮಾಡಿದರೆ, ಬಸ್ಸು ಸುಟ್ಟರೆ, ಬ್ಯಾಂಕು ದರೋಡೆ ಮಾಡಿದರೆ, ವಿದ್ಯಾರ್ಥಿನಿಯರ ಮಾನಭಂಗ ಮಾಡಿದರೆ, ಒಬ್ಬಿಬ್ಬರು ನಗ್ನವಾಗಿ ಬೀದಿಯಲ್ಲಿ ಓಡಾಡಿದರೆ ಅದಕ್ಕೆ ಪ್ರಥಮ ಪ್ರಾಶಸ್ತ್ಯ. ಅದನ್ನು ಮುಖಪುಟದಲ್ಲಿ ಮೇಲುಭಾಗದಲ್ಲೆ ಹಾಕದಿದ್ದರೆ ಅವರ ಅಪ್ಪನಾಣೆ ! ಛಾಯಾಚಿತ್ರವಂತೂ ಬಂದೇ ಬರುತ್ತದೆ. ಇಂಥ ಸದವಕಾಶಕ್ಕೆ ಯಾರು ತಾನೇ ಹಾತೊರೆಯುವುದಿಲ್ಲ ? ಒಟ್ಟಿನಲ್ಲಿ ಪತ್ರಿಕೆಗಳ ಮೂಲಕ ಜನಜಂಗುಳಿಯ ಆಲೋಚನೆ-ಆಚರಣೆಗಳಲ್ಲಿ ಅಪೇಕ್ಷಿತ ಪರಿವರ್ತನೆ ಆದೀತೆಂಬ ನಿರೀಕ್ಷಣೆ ಯೋಗ್ಯವಲ್ಲ.

ಪುಸ್ತಕಗಳ ವಿಷಯಕ್ಕೆ ಬಂದರೆ, ಓದುವವರು ನೂರಕ್ಕೆ ಒಬ್ಬರಿರಹುದೇ ? ಅದರಲ್ಲಿ ಒಳ್ಳೆಯ ಪುಸ್ತಕಗಳನ್ನೇ ಆರಿಸಿಕೊಂಡು ಓದುವವರು ಯಾವ ಎಣಿಕೆಗೆ ಸಿಕ್ಕಬಹುದು ? ಪುಸ್ತಕವನ್ನು ಅರ್ಥಮಾಡಿಕೊಂಡು ತಮ್ಮ ನಡೆನುಡಿಗಳನ್ನು ತಿದ್ದಿಕೊಳ್ಳುವ ಮನಸ್ಸು, ಧೈರ್ಯ ಎಷ್ಟು ಜನಕ್ಕೆ ?

ನಾಟಕ-ಸಿನಿಮಾಗಳಲ್ಲಿ ವಿಚಾರ ಪ್ರಚೋದಕವಾದುವನ್ನು ವಿಶಿಷ್ಟ ದೃಷ್ಟಿ-ಅಭಿರುಚಿ ಉಳ್ಳವರು ಮಾತ್ರ ನೋಡುತ್ತಾರೆ.ಅವು classesಗೆ ಮಾತ್ರ ಸೀಮಿತ. ಆದರೆ masses ನೋಡುವ ಪ್ರದರ್ಶನಗಳು ಎಂತಹವು? ಅವು ಯಾವ ನೀತಿನಿಯಮಗಳನ್ನು ಇಟ್ಟುಕೊಳ್ಳದಿದ್ದರೂ, ಒಂದು ಕಟ್ಟುಪಾಡನ್ನಂತೂ ಹಾಕಿಕೊಂಡಿವೆ : ಮನರಂಜನೆ. ಸಂಪಾದನೆ. ಈ ಸೀಮಾರೇಖೆ ದಾಟುವ ಆವಶ್ಯಕತೆ ಅವಕ್ಕೆ ಒದಗಿಲ್ಲ. ಚಿಕ್ಕವರ ಬಾಯಿಗೆ ಸಣ್ಣ ಚಾಕೊಲೇಟ್ ಹೇಗೋ ಹಾಗೆ ದೊಡ್ಡವರ ಕಣ್ಣಿಗೆ ಇದು ದೊಡ್ಡ ಚಾಕೊಲೇಟ್. ಬಹಳವಾದರೆ, ಅಲ್ಲಿ ನಾಯಕ ನಾಯಕಿಯರು ಕ್ಯಾಮರಾ ಎದುರು ವಿಧಿಯಿಲ್ಲದೆ ಕೆಲವೇ ನಿಮಿಷಗಳು ಹಾಕಿಕೊಂಡು, ಆಮೇಲೆ ಬಿಸಾಡುವಂಥ ವೇಷಭೂಷಗಳನ್ನೆ ನಾವು ಇಲ್ಲಿ 'ಕ್ಯಾಚ್' ಹಿಡಿದು ತಿಂಗಳುಗಟ್ಟಲೆ, ವರ್ಷಗಟ್ಟಲೆ ಹೊತ್ತು ತಿರುಗುತ್ತೇವೆ. ನಟರು ವೇಷ ಹಾಕಿ ಹಣ ಗಳಿಸುತ್ತಾರೆ, ನಾವು ಅದೇ ವೇಷ ಹಾಕಲು ಹೋಗಿ ಹಣ ಕಳೆದುಕೊಳ್ಳುತ್ತೇವೆ.

ಶಿಕ್ಷಣದ ಕ್ಷೇತ್ರ ತೆಗೆದುಕೊಂಡರೆ, ಸದ್ಯದ ಸ್ಥಿತಿಯಲ್ಲಿ ಮನುಷ್ಯರನ್ನು ನಿರ್ಮಿಸುವ ವಿದ್ಯೆ ನಮ್ಮ ಜನಕ್ಕೆ ಬೇಡವೆಂದು ತಜ್ಞರು ತೀರ್ಮಾನಿಸಿದಂತಿದೆ. ವಿಶ್ವವಿದ್ಯಾನಿಲಯಗಳನ್ನು ಪ್ರವೇಶಿಸುವ ಹೊಳಪುಗಣ್ಣಿನ ಮುಗ್ಧ ಕಿಶೋರರು ರಾಕ್ಷಸಮನಸ್ಸಿನವರಾಗಿ ನಂಜುಗಣ್ಣಿನಿಂದ ಹೊರಬಂದು ಹೆತ್ತ ಸಮಾಜದ ಮೇಲೆ ಕತ್ತಿ ಹಿರಿಯುವುದನ್ನು ಕಾಣುತ್ತಿದ್ದೇವೆ. ಈ ವಿಷಯದಲ್ಲಿ ಉದಾಹರಣೆಗಳನ್ನು ಎಷ್ಟು ಕೊಟ್ಟರೂ ಕಡಮೆಯೇ. ಒಬ್ಬರ ವಿಷಯ ಹೇಳಿದರೆ, ಇನ್ನೊಬ್ಬರು 'ನನ್ನದೂ ಹೇಳು' ಅನ್ನುತ್ತಾರೆ. ಕ್ಯೂ ಮುಗಿಯುವುದೇ ಇಲ್ಲ.

ಬಹುಪಾಲು ಜನರು ಅವಿದ್ಯಾವಂತರೂ, ವಿದ್ಯಾವಂತರಲ್ಲೂ ಬಹು ಕಡಮೆ ವಿಚಾರವಂತರೂ, ಅವರಲ್ಲಿ ಸಹ ವಿಚಾರದಂತೆ ಆಚಾರ ಇಲ್ಲದ ಆಷಾಢಭೂತಿಗಳೂ ತುಂಬಿರುವ ನಮ್ಮ ದೇಶದಲ್ಲಿ ಭಾಷಣ-ಶಿಕ್ಷಣ, ಪತ್ರಿಕೆ-ಪುಸ್ತಕ, ಸಿನಿಮಾ—ನಾಟಕ ಇವು ಜನಸಾಮಾನ್ಯರ ಉತ್ತಮ ಪರಿವರ್ತನೆಯ–ಮನಃಪರಿವರ್ತನೆಯ–ಮಾಧ್ಯಮ ಆಗುವುದರಲ್ಲಿ ಪೂರ್ತಿ ವಿಫಲವಾಗಿವೆ, ಕೆಟ್ಟ ಪರಿವರ್ತನೆಯನ್ನೇ ಮಾಡಿವೆ ಅನ್ನುವುದು ಕಣ್ಣಿಗೆ ಕಟ್ಟುವಂತಿದೆ. ಒಳ್ಳೆಯ ಪರಿಣಾಮ ಅವುಗಳಿಂದ ಆಗಿಲ್ಲವೆಂದಲ್ಲ. ಆದರೆ ಜನಸಮೂಹದ ವಿಶಾಲತೆಗೆ ಹೋಲಿಸಿ ನೋಡುವಾಗ ಆ ಪರಿಣಾಮ ಗಣನೆಗೇ ಬಾರದಷ್ಟು ಸೀಮಿತ—ಗುಣದಲ್ಲಿ, ಪ್ರಮಾಣದಲ್ಲಿ ಸಹ.

ಹಾಗಾದರೆ ಮನುಷ್ಯತ್ವ ತಂದುಕೊಡುವಂಥ ಹೃದಯಪರಿವರ್ತನೆ ಸಾಧ್ಯವೇ ಇಲ್ಲವೇ ? ಇನ್ನು ಬೇರೆ ಮಾಧ್ಯಮವೇ ಇಲ್ಲವೇ ? ಅಪರೂಪದ ಕೆಲವು ನಿದರ್ಶನಗಳು ಸಾಧ್ಯತೆಯ ಭರವಸೆ ನೀಡುತ್ತವೆ ; ಪರಿಣಾಮಕಾರಿ ಮಾಧ್ಯಮ ತೋರುತ್ತವೆ.

ಈ ದೇಶದಲ್ಲಿ ಬಡವ-ಬಲ್ಲಿದ, ಅಶಿಕ್ಷಿತ-ಸುಶಿಕ್ಷಿತ, ಹಿರಿಯ-ಕಿರಿಯ, ರೈತ-ಕಾರ್ಮಿಕ, ನೌಕರ—ನಿರುದ್ಯೋಗಿ, ಹೆಣ್ಣು-ಗಂಡು ಎಲ್ಲರಿಗೂ ಸುಲಭವಾಗಿ, ಅರ್ಥವಾಗುವ ಒಂದು ಮಾಧ್ಯಮ ಇದೆ. ಎಲ್ಲರ ಜೀವನದಲ್ಲೂ ಉತ್ತಮ ಹೃದಯಪರಿವರ್ತನೆ ತರಬಲ್ಲಂತಹ ಅಮೂಲ್ಯ ಮಾಧ್ಯಮ ಇದೆ. ಅದರಷ್ಟು ಯೋಗ್ಯವೂ ಪ್ರಭಾವಿಯೂ ಆದ ಮಾಧ್ಯಮ ಇನ್ನೊಂದಿಲ್ಲ. ಅದೇ ಆದರ್ಶವಾದಿ ಜೀವನ. ತ್ಯಾಗಮಯ-ಕಷ್ಟಸಹಿಷ್ಣು-ಸರಳ ಜೀವನ ; ಮಾನವೀಯತೆಯ ತಿರುಳಾದ ಸ್ನೇಹ-ಪ್ರೀತಿ, ಸೇವೆ-ಸಹಕಾರ, ನೀತಿನಡತೆಗಳ ಮಾಧುರ್ಯ ಹೆಜ್ಜೆ ಹೆಜ್ಜೆಗೂ ಹೊರಸೂಸುವ ಜೀವನ ; ನಗುನಗುತ್ತಾ ತನ್ನೆಲ್ಲ ನೋವುಗಳನ್ನು ನುಂಗಿಕೊಂಡು ಸುತ್ತಲಿನವರನ್ನು ಸುಖದಿಂದಿಡುವ ದೃಢ ನಿಶ್ಚಯದ ಪರೋಪಕಾರಿ ಜೀವನ ; ಶೀಲಸದ್ಗುಣಗಳಿಂದ ತುಂಬಿ ತುಳುಕುವ ಪುಟಪುಟವೂ ಗುಟ್ಟಿಲ್ಲದೆ ತೆರೆದಿಟ್ಟ, ಬಾಳಿನ ಹಾಳೆಹಾಳೆಯೂ ನಿರ್ಮಲವಾಗಿ ಹೊಳೆಯುವ ಜೀವನ.

ದಿನ-ತಿಂಗಳು-ವರ್ಷಗಳ ಸತತ ಸಂಪರ್ಕದಿಂದ ಇಂಥ 'ಜೀವನಗ್ರಂಥ'ವನ್ನು ಜನರು ಓದತೊಡಗುತ್ತಾರೆ, ಅರ್ಥಮಾಡಿಕೊಳ್ಳುತ್ತಾರೆ; ಗೌರವಿಸುತ್ತಾರೆ, ಅನುಸರಿಸುತ್ತಾರೆ. ಹೀಗೆ ಸ್ವಂತ ಜೀವನವನ್ನೇ ಮೊದಲು ಪರಿವರ್ತಿಸಿಕೊಂಡು, ಅದನ್ನು ಜನಮನದ ಪರಿವರ್ತನೆಯ ಮಾಧ್ಯಮವಾಗಿ ತೆರೆದಿಡಬಲ್ಲ ಧೀರ ಸಾಧಕರು, ವೀರ ವ್ರತನಿಷ್ಠರು ಜನರೊಡನೆ ಒಂದಾಗಿ ಬೆವರು ಹರಿಸತೊಡಗಿದಾಗ ಕಾಲಿಡುತ್ತದೆ ಪರಿವರ್ತನೆ; ಮೂಡಿಬರುತ್ತದೆ ಬದಲಾವಣೆ. ಆದಕ್ಕೆ ನೇರಸಾಕ್ಷಿ—ಮಲ್ಲಾಡಿಹಳ್ಳಿಯ 'ತಿರುಕ'ನ ಪರಮಪಾವನ ಜೀವನ ಗ್ರಂಥ.

ಈ ವಿಶ್ವವೆಲ್ಲ ಒಂದು ವಿಚಿತ್ರರೀತಿಯಲ್ಲಿದೆ. ಪರಬ್ರಹ್ಮನೇ ಒಂದು ಸಾಗರ. ನಾವು ನೀವು ಸೂರ್ಯ ನಕ್ಷತ್ರ ಮುಂತಾದವುಗಳೆಲ್ಲ ಆ ಸಾಗರದ ಅಲೆಗಳು. ಅಲೆಯನ್ನು ಬೇರ್ಪಡಿಸುವುದಾವುದು ? ರೂಪವೊಂದೆ. ಅದೇ ಕಾಲ-ದೇಶ ಕಾರ್ಯ-ಕಾರಣ. ಎಲ್ಲ ಅಲೆಯ ಆಧಾರದ ಮೇಲಿದೆ. ಅಲೆ ನಿಂತೊಡನೆ ರೂಪ ಕೂಡ ಮಾಯವಾಗುತ್ತದೆ. ವ್ಯಕ್ತಿ ಮಾಯೆಯನ್ನು ತ್ಯಜಿಸಿದರೆ ಅವನು ಮುಕ್ತನಾಗುವನು. ತನ್ನ ಮಾರ್ಗದಲ್ಲಿ ಯಾವಾಗಲೂ ಕಂಟಕಪ್ರಾಯವಾಗಿರುವ ಕಾಲದೇಶ ಮತ್ತು ಕಾರ್ಯಕಾರಣ ಇವುಗಳಿಗೆ ಇರುವ ಆಸಕ್ತಿಯನ್ನು ತ್ಯಜಿಸುವುದಕ್ಕೆ ಮಾನವ ಹೋರಾಡುವನು.

ಡಿ. ಬಿ. ರಾಮಚಂದ್ರಾಚಾರ್

ಕೊಡವರ ಮಂಗಲ

ಕೊಡಗು ಕನ್ನಡ ನಾಡಿನ ಪುಟ್ಟ ಜಿಲ್ಲೆ. ಕಾವೇರಿ, ಕಿತ್ತಳೆ, ಕಾಫಿಗಳು ನಾಡಿನ ಸಂಪನ್ಮೂಲದ ಪ್ರತೀಕಗಳಾಗಿರುವಂತೆಯೇ ಕೊಡವ ಜನಾಂಗ ನಾಡಿನ ವೀರತ್ವದ, ಸೌಂದರ್ಯದ ಪ್ರತೀಕವಾಗಿದೆ. ಈ ಜನಾಂಗ ನಮ್ಮ ನಾಡಿನ ವಿಶಿಷ್ಟ ಜನಾಂಗವಾಗಿ ಉಳಿದು-ಬೆಳೆದು ಬರುವುದಕ್ಕೆ ಅವರ ಆಚಾರ-ವಿಚಾರ, ಸಂಪ್ರದಾಯ-ನಿಷ್ಠೆಗಳು ಕಾರಣಗಳಾಗಿವೆ. ಅವರ ಅನೇಕ ಸಂಪ್ರದಾಯಗಳಲ್ಲಿ ಮುಖ್ಯವಾದ ಅವರ ವಿವಾಹಪದ್ಧತಿಯ ಬಗೆಗೆ ವಿವೇಚಿಸುವುದೇ ಪ್ರಕೃತ ಲೇಖನದ ಉದ್ದೇಶ.

ಬೆಟ್ಟ-ಕಾಡುಗಳ ನಡುವೆ ಬೆಳೆದು ಬಂದ ಕೊಡವ ಜನಾಂಗ ಯಾವ ಪುರೋಹಿತಶಾಹಿಯ ಪ್ರಭಾವಕ್ಕೂ ಒಳಗಾಗದೆ, ಆರ್ಯ-ದ್ರಾವಿಡಗಳ ತೊಡಕಿಲ್ಲದೆ, ಎಲ್ಲಕ್ಕಿಂತ ಮುಖ್ಯವಾಗಿ ಯಾವನೊಬ್ಬ ಜಗದ್ಗುರುವಿನ ಸರ್ವಜ್ಞತ್ವದ ಛತ್ರಿಯ ನೆರಳಿಗೂ ಸಿಗದೆ ಪ್ರಕೃತಿಯ ನದಿ-ನಗಗಳಂತೆ ತಾವೇ ತಾವಾಗಿ, ತಮ್ಮ ಸುತ್ತಲ ಪ್ರಕೃತಿಯ ವಾತಾವರಣಕ್ಕೆ ತಕ್ಕಂತೆ ತಮ್ಮ ಸಂಪ್ರದಾಯಗಳನ್ನು ರೂಪಿಸಿಕೊಂಡ ಜನಾಂಗ ಇದು.

ಕೊಡವರ ಬದುಕಿನಲ್ಲಿ ಕುಟುಂಬಕ್ಕೆ ಅತಿಪ್ರಮುಖವಾದ ಸ್ಥಾನವಿದೆ. ಕೊಡವರ ಕುಟುಂಬ (ಒಕ್ಕ) ಒಂದು ಪುಟ್ಟ ರಾಜ್ಯದಂತೆ. ಅದರ ರೀತಿ ನಿಯಮಗಳು ರಾಜಶಾಸನದಂತೆ ಅನುಲ್ಲಂಘನೀಯ. ಪ್ರತಿಕುಟುಂಬಕ್ಕೂ ಅದರ ಸ್ಥಾಪಕನಿದ್ದು 'ಕಾರೊಣಿ' ಎಂಬ ಹೆಸರಿನಿಂದ ಕುಟುಂಬದ ಎಲ್ಲ ಸದಸ್ಯರಿಂದಲೂ ಪೂಜಿಸಲ್ಪಡುತ್ತಾನೆ. ಪ್ರತಿ ಕುಟುಂಬದ ಜೀವಂತ ಹಿರಿಯನನ್ನು ಕೊರವುಕಾರನೆನ್ನುತ್ತಾರೆ. ಆತನ ಹೆಂಡತಿ ಕೊರವುಕಾರ್ತಿ. ಇವರೇ ಕುಟುಂಬದ ನಿರ್ದೇಶಕರು. ಕುಟುಂಬ ಎಂಬುದು ಪಾರಂಪರ್ಯವಾಗಿ ನಡೆದು ಬರುವ ಒಂದು ಸಂಸ್ಥೆ.

ಮಾನವನ ಜೀವನದ ಪ್ರಮುಖ ಅಂಗವಾದ ಮದುವೆಯ ಬಗೆಗೂ 'ಒಕ್ಕ' ಬಹು ನಿರ್ಣಾಯಕ ಪಾತ್ರ ವಹಿಸುತ್ತದೆ. ಒಂದೇ ಒಕ್ಕಕ್ಕೆ ಸೇರಿದವರಲ್ಲಿಯಾಗಲಿ, ಇತರ ಒಕ್ಕಗಳಲ್ಲಾದರೂ ಸಹೋದರಿಯರ ಮಕ್ಕಳಲ್ಲಿಯಾಗಲಿ ಮದುವೆ ನಿಷಿದ್ಧ. ಕುಟುಂಬವು ಒಪ್ಪದ ಸಂಬಂಧಗಳಿಂದ ಜನಿಸಿದ ಮಕ್ಕಳಿಗೆ ಕುಟುಂಬದ ಸದಸ್ಯತ್ವ ದೊರೆಯದು. ಹೀಗಾಗಿ ಆಸ್ತಿಯ ಮೇಲೆ ಅವರ ಹಕ್ಕು ಉಳಿಯುವುದಿಲ್ಲ. ಮದುವೆಯಾದ ಹೆಣ್ಣು ಮಕ್ಕಳು ಗಂಡನ ಒಕ್ಕದ ಸದಸ್ಯರಾಗಿ ಸೇರುತ್ತಾರೆ. ಆದರೆ ಗಂಡನು ಮೃತನಾದರೆ, ಗುಣಪಡಿಸಲಾಗದ ಕಾಯಿಲೆಯವನಾದರೆ ಅಥವಾ ಗಂಡನಿಗೂ ಆಕೆಗೂ ಹೊಂದಿಬಾರದಿದ್ದರೆ ಆಕೆ ಗಂಡನ ಒಕ್ಕವನ್ನು ಬಿಟ್ಟು ತಾನು ಹುಟ್ಟಿದ ಒಕ್ಕದಲ್ಲಿಯೇ ಉಳಿಯಬಹುದು.

ಕೊಡವರಲ್ಲಿ 'ಮಂಗಲ' ಎನ್ನುವ ಪದ ಅನೇಕ ಮಂಗಳ ಕಾರ್ಯಗಳಿಗೆ ಪ್ರಯೋಗಿಸಲ್ಪಡುವಂತೆಯೇ 'ಮದುವೆ'ಗೂ ಬಳಸಲ್ಪಡುತ್ತದೆ.

ಕೊದಿಮಂಗಲ, ಕೆಮ್ಮಿಕುತ್ತಿಮಂಗಲ, ನರಿಮಂಗಲ, ಬಾಳೆಮಂಗಲ, ಕನ್ನಿಮಂಗಲ, ಕೂಡಾವಳಿಮಂಗಲ,

ಒಕ್ಕಪರಿಜೆ, ಮಕ್ಕಪರಿಜೆ, ಪೈತಾಂಡೆ ಕಳೆಪ ಮಂಗಲ ಮುಂತಾದ 'ಮಂಗಲಗಳು' ಕೊಡವ ಜನಾಂಗದಲ್ಲಿ ಬಳಕೆಯಲ್ಲಿವೆ.

ಕೊದಿಮಂಗಲ : ಚಿಕ್ಕಮಕ್ಕಳಲ್ಲಿ ಮದುವೆ ಸಮಾರಂಭವನ್ನು ಏರ್ಪಡಿಸುವಿಕೆ. ಇದು ಹಿಂದೊಮ್ಮೆ ಪ್ರಚಾರದಲ್ಲಿದ್ದ ಪದ್ಧತಿ. ಈಗ ಬಾಲ್ಯ ವಿವಾಹ ನಿಷೇಧಿಸಲ್ಪಟ್ಟಿರುವುದರಿಂದಲೋ ಏನೋ ಇತ್ತೀಚೆಗೆ ಈ ರೀತಿಯ ವಿವಾಹ ನಡೆಯುತ್ತಿಲ್ಲ.

ಕೆಮ್ಮಿಕುತ್ತಿಮಂಗಲ : ಹುಡುಗಿಯರಿಗೆ ಇಲ್ಲ. ಪ್ರತಿಕೊಡವನೂ ತನ್ನ ಕಿವಿಗಳನ್ನು ಚುಚ್ಚಿ ಕಿವಿಗೆ ಪತ್ತೊಂಟೆ ಕಡತನು ಧರಿಸುವ ಸಂದರ್ಭ ಇದು. ಮಕ್ಕಳು ಚಿಕ್ಕವಯಸ್ಸಿನಲ್ಲಿ ಇರುವಾಗ ನಡೆಸುವ ಸಮಾರಂಭ. ಕಿವಿಚುಚ್ಚದವರಿಗೆ ಹೆಣ್ಣು ಕೊಡಕೂಡದು ಎಂಬ ನಿಯಮ ಹಿಂದೆ ಇತ್ತು. ಕಿವಿಚುಚ್ಚಿಲ್ಲದೆ ಯಾರಾದರೂ ಸತ್ತರೆ, ಅಂತಹವರ ಶವಸಂಸ್ಕಾರದ ಸಂದರ್ಭದಲ್ಲಿ ಅವರ ಕಿವಿಯನ್ನು ಚುಚ್ಚಿ ನಂತರ ಸಂಸ್ಕಾರಕ್ರಿಯೆ ನಡೆಸುತ್ತಿದ್ದರು. ಕಿವಿಚುಚ್ಚುವ ಸಮಾರಂಭದ ಸಿದ್ಧತೆ ಮದುವೆಯ ಸಿದ್ಧತೆಯಂತೆಯೇ ಇರುವುದು. ಆಮಂತ್ರಣ ಪತ್ರವನ್ನು ಅಚ್ಚು ಹಾಕಿಸಿ ಬಂಧುಬಳಗದವರನ್ನು ಆಹ್ವಾನಿಸಿ, ಆಡಂಬರದ ಔತಣವನ್ನು ಏರ್ಪಡಿಸಿ, ಮದುವೆಯ ಕಾಲಕ್ಕೆ ಹಾಡುವ ಹಾಡನ್ನೇ ಹಾಡಿ, (ಆದರೆ ಹಾಡಿನಲ್ಲಿ ವಧುವಿನ ಪ್ರಸ್ತಾಪವಿರುವುದಿಲ್ಲ) ಈ ಮಂಗಲವನ್ನು ನಡೆಸುತ್ತಾರೆ.

ನರಿಮಂಗಲ : ಹುಲಿಯನ್ನು ಯಾವುದೇ ರೀತಿಯಿಂದ ಕೊಂದ ಹೆಂಗಸಾಗಲಿ, ಗಂಡಸಾಗಲಿ, ಇದಕ್ಕೆ ಅರ್ಹರಾಗುತ್ತಾರೆ. ನರಿಮಂಗಲವೆಂದರೆ ಸತ್ತ ಹುಲಿಯೊಡನೆ ಮದುವೆ ಎಂದು ಅರ್ಥವಲ್ಲ. ಹುಲಿಯನ್ನು ಕೊಂದ ವೀರನಿಗೆ ಅಥವಾ ವೀರರಮಣಿಗೆ ಸಮಾಜವು ನಡೆಸುವ ಅಭಿನಂದನಾ ಸಮಾರಂಭ. ಕೊಡವ ಸಮಾಜದಲ್ಲಿ ನರಿ ಮಂಗಲಕ್ಕೆ ಬಹುದೊಡ್ಡ ಗೌರವವಿದೆ. ಸತ್ತಹುಲಿ ಇಲ್ಲವೆ ಅದರ ಚರ್ಮ, ಅಥವಾ ಅದರ ಬಾಲದ ತುದಿಯಾಗಲಿ, ಮದುವೆ ನಡೆಯುವ ಸಂದರ್ಭದಲ್ಲಿ ವೀರನೊಡನೆ ಇರಬೇಕು. ನಾಡಿನ ಮಂದಿನಲ್ಲಿ (ಊರ ಮೈದಾನ) ದೊಡ್ಡ ಚಪ್ಪರಹಾಕಿ, ವೀರನನ್ನು ಸ್ನಾನಮಾಡಿಸಿ ಕುಪ್ಪಸ, ರುಮಾಲು ಮೊದಲಾದ ಪದ್ಧತಿಯ ಉಡುಗೆಯಿಂದ ಅಲಂಕರಿಸಿ, ವಾದ್ಯದೊಡನೆ ಮೆರವಣಿಗೆಯಲ್ಲಿ 'ನಾಡಮಂದಿ'ಗೆ ಕರೆತಂದು, ಚಪ್ಪರದಲ್ಲಿ ಕೂಡಿಸಿ, ತಲೆಯ ಮೇಲೆ ಅಕ್ಷತೆಯನ್ನು ಹಾಕಿ, ಬಹುಮಾನವಿತ್ತು ನಾಡವರು ವೀರನನ್ನು ಗೌರವಿಸುತ್ತಾರೆ. ಗುಂಡು ಹಾರಿಸಿ ಹುಲಿಯನ್ನು ಕೊಂದಿದ್ದರೆ, ಮೆರವಣಿಗೆ ಹೋಗುವಾಗ ಕೋವಿಯ 'ಮೊಗಬಾಯಿ'ಯನ್ನು ಮುಂದಕ್ಕೆ ಹಿಡಿದು, ಅದಕ್ಕೆ ಕೆಂಪು ಬಣ್ಣದ ವಸ್ತ್ರವೊಂದನ್ನು ಕಟ್ಟಿರುತ್ತಾರೆ. ಇದಕ್ಕೆ 'ಓಜ' ಕಟ್ಟುವುದು ಎನ್ನುತ್ತಾರೆ. 'ಹೆಣ್ಣು' ಹುಲಿಯನ್ನು ಗುಂಡಿಕ್ಕಿ ಕೊಂದಿದ್ದರೆ, 'ಓಜ'ವನ್ನು ಆಕೆಯ ತುರುಬಿಗೆ ಕಟ್ಟುತ್ತಾರೆ. ಕೋವಿಯಿಂದ ಅಲ್ಲದೆ ಬೇರೆ ವಿಧಾನದಿಂದ ಕೊಂದಿದ್ದರೆ ವೀರನ ತಲೆಯ ಮೇಲೆ ಕೆಂಪು ವಸ್ತ್ರವನ್ನು ಹೊದಿಸುತ್ತಾರೆ. ಈ ಸಂದರ್ಭದಲ್ಲಿ–

ಬಾಳೋ ಕೇಳಿ ಚರ್‌ಹಾದಿ
ಪಾಡುವ ಕತೆ ಕೇಳಿ
ಈ ನಾಡ್ ನಡುವುಲ್
ಬಾಂಗಾಡ್ ಬನತ್‌ಲ್
ಬಾಯಲಂದ ಪೆಬ್ಬುಲಿ—

ಮುಂತಾಗಿ ಹಾಡುಗಳನ್ನು ಉತ್ಸವದ ಕಾಲದಲ್ಲಿ ಹಾಡುತ್ತಾರೆ.

ಕನ್ನಿಮಂಗಲ : ಮದುವೆ, ವಿವಾಹ ಮುಂತಾದ ಪರ್ಯಾಯವಾಚಿಗಳಿಂದ ಕರೆಯಲ್ಪಡುವ ಹೆಣ್ಣು-ಗಂಡುಗಳ ಸಮಾಗಮದ ಸಮಾರಂಭವೇ 'ಕನ್ನಿಮಂಗಲ'. ಹಿರಿಯರು ವಧುವರರನ್ನು ನೋಡಿ, ಕುಟುಂಬ, ನೀತಿ ನಡತೆಗಳ ತುಲನೆಯ ನಂತರ ಜಾತಕ ತೋರಿಸುವುದು ಅಥವಾ ದೇವಸ್ಥಾನದಲ್ಲಿ ಹೂ ತೆಗೆಸುವುದು ಅಥವಾ

ಕಣಿಯವನು ಹೇಳಿದ ಪ್ರಕಾರ, ಮದುವೆ ನಡೆಸುತ್ತಿದ್ದುದು ಹಿಂದಿನ ಸಂಪ್ರದಾಯವಾಗಿದೆ. 'ಮನ ಒತ್ತ್‌ತೇಂಗಿ ಗಣ ಒತ್ತ್‌ತ್' ಎಂಬಂತೆ (ಮನ ಒಪ್ಪಿದರೆ ದೇವರೂ ಒಪ್ಪಿದ) ಈಗ ಹುಡುಗ ಹುಡುಗಿಯರು ಪರಸ್ಪರ ಮೆಚ್ಚಿದರೆ ಸಾಕು ಮದುವೆ ನಡೆಯುತ್ತಿದೆ.

ಹೆಣ್ಣು-ಗಂಡುಗಳು ಮೆಚ್ಚಿದ ತರುವಾಯ ಕುಟುಂಬಗಳ ಹಿರಿಯರು ಆರುವ (ಸ್ನೇಹಿತ ಕುಟುಂಬದ ವ್ಯಕ್ತಿ) ನನ್ನು ಕೂಡಿಕೊಂಡು ಮದುವೆಯ ಮುಹೂರ್ತವನ್ನು ನಿಶ್ಚಯಿಸುತ್ತಾರೆ. ಇದಕ್ಕೆ 'ಮಂಗಲ ಕುರಿಪ' ಎಂದು ಹೆಸರು. ಮದುವೆಯನ್ನು ನಿಶ್ಚಯಿಸಲು ಗಂಡಿನ ಕಡೆಯವರು ಹೆಣ್ಣಿನ ಮನೆಗೆ ಬರುತ್ತಾರೆ. ಜ್ಯೋತಿಷಿಯಿಂದ ನಾಳ್ ಮುಹೂರ್ತವನ್ನು ನಿಶ್ಚಯಿಸಿ, ಲಗ್ನಪತ್ರಿಕೆಯನ್ನು ಬರೆಸುವುದೇ ಈ ಸಂದರ್ಭದ ಮುಖ್ಯ ಕೆಲಸ. ಮುಹೂರ್ತ ನಿಶ್ಚಯವಾದ ನಂತರ ಗಂಡಿನ ಕಡೆಯವರು ಜ್ಯೋತಿಷಿಗೆ ದಕ್ಷಿಣೆಯನ್ನು ಕೊಡಬೇಕು. ಈ ಕಾರ್ಯಕ್ರಮದ ತರುವಾಯ ದೀಪಕ್ಕೆ ನಮಸ್ಕರಿಸಿ, ತಳಿಯಕ್ಕಿ ಬೊಳಚಕ್ಕೆ ಐದು ಹಣ ಅಥವಾ ಬೇರೆಯಾವುದಾದರೂ ಆಭರಣವೊಂದನ್ನು ಈಡ್ (ಸಂಕೇತ-ಸಾಕ್ಷಿ)ಆಗಿ ಇಡಬೇಕು. ಮದುವೆಯ ನಿರ್ಣಯಕ್ಕೆ ಬಂದವರು, ಅಂದಿನ ಹಗಲೂಟವಾದ ತರುವಾಯ ಹೆಣ್ಣಿನ ಮನೆಯಲ್ಲಾಗಲಿ, ಅಥವಾ ಅವರ ಹತ್ತಿರದವರ ಮನೆಯಲ್ಲಾಗಲಿ ಉಳಿಯದೆ ಹಿಂದಿರುಗಬೇಕು. ಮದುವೆ ನಿಶ್ಚಯವಾದ ತರುವಾಯ, ಹೆಣ್ಣಾಗಲಿ ಗಂಡಾಗಲಿ, ಹೊಳೆದಾಟುವುದಾಗಲಿ, ಕೊಡವರ ರಾಷ್ಟ್ರೀಯ ಉಡುಪನ್ನು ಧರಿಸುವುದಾಗಲಿ ಕೂಡದು. ಆ ಮನೆಗಳಿಗೆ ಬೇರೆಯವರು ಮೃತ ವರ್ತಮಾನವನ್ನು ಹೇಳಬಾರದು. ಆ ಮನೆಗಳಿಂದ ಕೆಲ್ಲಟ (ಸತ್ತವರ ಮನೆಯವರಿಗೆ ಮಾಡುವ ಹಣದ ಸಹಾಯ) ಸದೆಯೆ (ಸತ್ತವರ ಮನೆಗೆ ತೆಗೆದುಕೊಂಡು ಹೋಗುವ ಅಕ್ಕಿ, ಬೆಲ್ಲ, ಬಾಳೆಹಣ್ಣು, ಎಲೆ ಅಡಿಕೆ-ಗಳಕುಕ್ಕೆ) ಗಳನ್ನು ತೆಗೆದುಕೊಂಡು ಹೋಗಬಾರದು. ಕರಿಕ್ ಮುರಿಪ (ಮದುವೆಯ ಹಿಂದಿನ ದಿನ)ಕ್ಕೆ ಮೊದಲು ಮದುವೆ ನಿಶ್ಚಯವಾಗಿದ್ದ ಕುಟುಂಬಗಳಲ್ಲಿ ಯಾರಾದರೂ ನಿಧನರಾದರೆ ಹನ್ನೊಂದು ದಿನದವರೆಗೆ ಸೂತಕ ಇರುವುದರಿಂದ ಆ ಅವಧಿಯಲ್ಲಿ ಮದುವೆ ಮಾಡುವುದಿಲ್ಲ. ಕರಿಕ್ ಮುರಿಪದ ದಿನ ಊರಿನ ಪ್ರತಿ ಕುಟುಂಬದಿಂದ ಒಬ್ಬ ಹೆಂಗಸು, ಒಬ್ಬ ಗಂಡಸು ಮದುವೆಯ ಸಿದ್ಧತೆಗೆ ಸಹಾಯಕರಾಗುವುದು ಪದ್ಧತಿ.

ಚಪ್ಪರಕ್ಕೆ ಐದು ಅಥವಾ ಏಳು ಹೀಗೆ ಬೆಸಸಂಖ್ಯೆಯ ಕಂಬಗಳಿರಬೇಕು. ಅವರಲ್ಲಿ ಒಂದು ಯಾವುದಾದರೂ ಕಂಬ ಹಾಲು ಬರುವ ಮರದ್ದಾಗಿರಬೇಕು. ಕಂಬಗಳ ಬುಡಕ್ಕೆ ಮಾವಿನ ಸೊಪ್ಪನ್ನು ಕಟ್ಟಬೇಕು. ಚಪ್ಪರಕ್ಕಾಗಲಿ ಅಥವಾ ಬೇರೆ ಯಾವ ಅಲಂಕಾರಕ್ಕಾಗಲಿ ಜೈನ (ಬಯಿನೆ) ಮರದ ಸೊಪ್ಪನ್ನು ಕಟ್ಟಬಾರದು. ಕರಿಕ್ ಮುರಿಪ ದಿನದಿಂದ ಮದುವೆ ಮುಗಿಯುವವರೆಗೂ ಬಾಳೆಸಾರು, ದೋಸೆ, ಹೆಸರುಬೇಳೆಯ ಪಾಯಸ ಮೊದಲಾದುವನ್ನು ಮಾಡಬಾರದು. ಚಪ್ಪರದ ಕೆಲಸ ಮುಗಿದ ಮೇಲೆ ಎಲ್ಲರೂ ಮನೆಯ ನೆಲ್ಲಕ್ಕಿ ನಡುಬಾಡೆಯಲ್ಲಿ ಸೇರಬೇಕು.

ಕೊಡವರಲ್ಲಿ ಗಂಡಿನ ಮನೆಯಲ್ಲಿ ಗಂಡಿನ, ಹೆಣ್ಣಿನ ಮನೆಯಲ್ಲಿ ಹೆಣ್ಣಿನ ಮದುವೆಯ ಕಾರ್ಯಕ್ರಮ ನಡೆದು,ಅಂದು ರಾತ್ರಿ ಹೆಣ್ಣಿನ ಮನೆಯಲ್ಲಿ ದಂಪತಿ ಮುಹೂರ್ತ ಎಂಬ ಕಾರ್ಯಕ್ರಮದಲ್ಲಿ ಹೆಣ್ಣು—ಗಂಡುಗಳನ್ನು ಒಟ್ಟಿಗೆ ಒಂದೆಡೆ ಕಲೆಯುವಂತೆ ಮಾಡುತ್ತಾರೆ.

ಮದುವೆಯ ಹುಡುಗ ಬಿಳಿ ಕುಪ್ಪಸ (ಒಂದು ರೀತಿಯ ಉದ್ದನೆಯ ಅಂಗಿ) ಕೆಂಪು ವಸ್ತ್ರವನ್ನು ಧರಿಸಿ ನೆಲ್ಲಕ್ಕಿ ನಡುಬಾಡೆಯ (ಪೂಜಾಗೃಹ) ದೀಪಕ್ಕೆ ಪೂಜೆಮಾಡಿ, ಅಲ್ಲಿ ಸೇರಿರುವ ಹಿರಿಯರ ಕಾಲು ಮುಟ್ಟಿ ನಮಸ್ಕರಿಸಿದ ತರುವಾಯ 'ತೇರಣ'ವನ್ನು ಮೂರುಜನ ಮುತ್ತೈದೆಯರು, ವರ ಮತ್ತು ವಧುವಿನ ಕೈಕಾಲುಗಳಿಗೆ ಹಚ್ಚುತ್ತಾರೆ. (ತೇರಣ–ಮೇಂದಿಸೊಪ್ಪು, ಸುಣ್ಣ, ಸಿಂಜೀರಸ—ಇದರಿಂದ ಒಂದು ರೀತಿಯ ಕೆಂಪುಬಣ್ಣ ಉತ್ಪತ್ತಿಯಾಗುತ್ತದೆ ಇದಕ್ಕೆ 'ತೇರಣ ಮಂಗಲ' ಎನ್ನುತ್ತಾರೆ.) ಈ ಶಾಸ್ತ್ರ ನಡೆಯುವಾಗ ಊರಿನ ನಾಲ್ಕು ಜನ ದುಡಿಯನ್ನು ಬಡಿಯುತ್ತಾ–

ಬಾಳೋ ಬಾಳೋ ಚರ್‌ಹಾದಿ
ಪಾಡುವ ಮೊಳಿಯೇದ
ಅಲ್ಲತೊಂದೂ ಅಲ್ಲ ಬ
ಜಬ್ಬೂಮಿರ ಮಾದಲ್....

ಮುಂತಾಗಿ ಹಾಡುತ್ತಾ ಇರುತ್ತಾರೆ. ಅನಂತರ ಊಟವಾಗುತ್ತದೆ. ತರುವಾಯ ಊರುಪತ್ತಿ ಕೊಡುತ್ತಾರೆ. (ಊರುಪತ್ತಿ :-ಊರಿನ ಪ್ರತಿಕುಳಕ್ಕೆ ಐದು ವೀಳ್ಯದೆಲೆ, ಐದು ಅಡಿಕೆ, ಅರ್ಧಪಾವು ಹುರಿದ ಕಾಳು, ಬಾಳೆಹಣ್ಣು ಅರ್ಧ ತೆಂಗಿನಕಾಯಿಯ ಬಾಗಿನ) ಹುಡುಗಿಯ ಮದುವೆಯಾದರೆ ಊರವರೂ ನೆಂಟರಿಷ್ಟರೂ ಸೇರಿ ಪೆಟ್ಟಿಗೆ ತುಂಬಿಸುವ ಸಮಾರಂಭ ನಡೆಸುತ್ತಾರೆ.

ಮುಹೂರ್ತದ ದಿನ ಬೆಳಗ್ಗೆ ಅಗಸನು ಬಂದು, ಮನೆಯ ಮುಂಭಾಗದಲ್ಲಿ ಹಾಕಿರುವ ಚಪ್ಪರದಿಂದ ಹಿಡಿದು ನೆಲ್ಲಕ್ಕಿ ನಡುಬಾಡೆಯ ತನಕ, ಬಿಡಿಮಡಿ ಬಟ್ಟೆಯ ಮೇಲ್ಕಟ್ಟನ್ನು ಕಟ್ಟುತ್ತಾನೆ. ಮದುವೆ ಮುಹೂರ್ತಕ್ಕೆ ವಧು ಅಥವಾ ವರ ಕುಳಿತುಕೊಳ್ಳುವ ಸ್ಥಳದಲ್ಲಿ ಬಿಳಿ ಮೇಲ್ಕಟ್ಟಿನ ಕೆಳಗೆ ಕೆಂಪು ರೇಶ್ಮೆಯ ಮೇಲ್ಕಟ್ಟನ್ನು ಕಟ್ಟುತ್ತಾರೆ. ಈ ಕೆಂಪು ರೇಶ್ಮೆಯ ಮೇಲ್ಕಟ್ಟಿನ ಒಂದು ಮೂಲೆಗೆ ಒಂದು ಹಣ್ಣಾದ ಬಾಳೆಯ ಗೊನೆಯನ್ನೂ ಇನ್ನೊಂದು ಮೂಲೆಗೆ ಒಂದು ತೆಂಗಿನ ಕಾಯಿಯನ್ನೂ ಮತ್ತೊಂದು ಮೂಲೆಗೆ ಒಂದು ಬೆಳ್ಳರಿ ಕಾಯಿಯನ್ನೂ ನಾಲ್ಕನೆ ಮೂಲೆಗೆ ಮೂರು ವೀಳ್ಯದೆಲೆ, ಅಡಿಕೆ ಹಾಗೂ ಅಡಿಕೆ ಹೂವನ್ನು ತೂಗುತ್ತಿರುವಂತೆ ಕಟ್ಟುತ್ತಾರೆ.

ಲಗ್ನದ ದಿನ ಹೆಣ್ಣು ಮತ್ತು ಗಂಡಿಗೆ ಹತ್ತಿರದ ನೆಂಟರಲ್ಲಿ ಅತ್ತೆ ಅಥವಾ ಭಾವ ಸಹಾಯಕರಾಗಿರುತ್ತಾರೆ. ಈ ವ್ಯಕ್ತಿಗೆ ಬೋಜಕಾರ್ತಿ ಅಥವಾ ಬೋಜಕಾರ ಎನ್ನುತ್ತಾರೆ. ಮದುವೆಯ ದಿನದ ಪ್ರಥಮ ಶಾಸ್ತ್ರ, ಕ್ಷೌರಶಾಸ್ತ್ರ ; ಹುಡುಗ ಬಿಳಿಯ ಕುಪ್ಪಸ ಧರಿಸಿ, ತಲೆಗೆ ಕೆಂಪುವಸ್ತ್ರ ಕಟ್ಟಿಕೊಂಡು ಸೊಂಟಕ್ಕೆ ದಟ್ಟಿ ಸುತ್ತಿಕೊಂಡು, ಕನ್ನಿ ಕೋಂಬರೆಯಲ್ಲಿರುವ ದೀಪಕ್ಕೆ ಹಾಗೂ ಕನ್ನಿ ಕಂಬಗಳಿಗೆ ನಮಸ್ಕರಿಸಿ, ಹೊರಕ್ಕೆ ಹೊರಡುತ್ತಾನೆ. ಕ್ಷೌರಮಾಡುವ ಸ್ಥಳದಲ್ಲಿ ಒಂದು ಚಾಪೆ ಹಾಸಿ, ಅದರ ಮೇಲೆ ೩ ಕಾಲಿನ (ಮುಕ್ಕಾಲಿ) ಮಣೆಯನ್ನು ಇಟ್ಟು, ಅದರ ಹತ್ತಿರ ಕಂಚಿನ ಚಿಕ್ಕ ಪಾತ್ರೆಯಲ್ಲಿ ಹಾಲಿಟ್ಟಿರುತ್ತಾರೆ. ಒಂದು ಪುತ್ತರಿ ಪಚ್ಚ (ಕುಕ್ಕೆ)ಯಲ್ಲಿ ಒಂದು ಸೇರು ಅಕ್ಕಿ, ಒಂದು ತೆಂಗಿನಕಾಯಿ, ಒಂದು ಚಿಪ್ಪು ಬಾಳೆಹಣ್ಣು ಇಟ್ಟಿರುತ್ತಾರೆ. ಪಾತ್ರೆಯಲ್ಲಿರುವ ಹಾಲಿನಿಂದಲೇ ಅಂದಿನ ಕ್ಷೌರದ ಕಾರ್ಯಕ್ರಮ ನಡೆಯಬೇಕು. ಇದಕ್ಕೆ ಕೊಂಬಜವರ ಎನ್ನುತ್ತಾರೆ. ಕ್ಷೌರದ ಕಾರ್ಯಕ್ರಮದ ತರುವಾಯ ಕುಕ್ಕೆಯಲ್ಲಿರುವ ಪದಾರ್ಥಗಳು, ಹಾಲಿನ ಬಟ್ಟಲು, ಚಾಪೆ, ಜೊತೆಗೆ ನೂರು ಆಣೆ ಕ್ಷೌರಿಕನಿಗೆ ಸಲ್ಲುತ್ತದೆ.

ಕ್ಷೌರದ ತರುವಾಯ ಸ್ನಾನ. ನಂತರ ಬೋಜಕರ್ತ ಅಥವಾ ಬೋಜಕಾರ್ತಿ ವರ ಅಥವಾ ವಧುವನ್ನು ಅಲಂಕರಿಸಲು ನೆರವಾಗುತ್ತಾರೆ. ಹುಡುಗನನ್ನು ಬಿಳಿ ಅಥವಾ ಕೆಂಪುರೇಶ್ಮೆಯ ಕುಪ್ಪಸ, ಕೆಂಪು ರೇಶ್ಮೆಯ ಚೇಲೆ (ದಟ್ಟಿ), ಪಾಸಿಮುಂಡೆ ತುಣಿ, ಪೀಚೆಕತ್ತಿ ತೊಡಂಗ್ (ಒಂದು ಬಗೆಯ ಕತ್ತಿ) ಒಡಿಕತ್ತಿ, ಕತ್ತಿಗೆಗೆ ಚಿನ್ನದ ಸರ, ಕೈಗೆ ಚಿನ್ನದ ಕಟ್ಟಬಳೆ, ಮುಂತಾದುವುಗಳಿಂದ ಸಿಂಗರಿಸುತ್ತಾರೆ.

ಹುಡುಗಿಯನ್ನು ಕೆಂಪು ಜರಿಸೀರೆ (ಪಟ್ಟೆಪೊಡಿಯಾ) ಕೆಂಪು ಉದ್ದಕೈ ರವಿಕೆ, ಕುತ್ತಿಗೆಗೆ ಕೊಕ್ಕೆತಾತಿ, ಸರ, ಕರಿಮಣಿ ಮುಂತಾದುವುಗಳಿಂದ ಅಲಂಕರಿಸುತ್ತಾರೆ. ಕೆಲವು ಕಡೆ ಹುಡುಗ ಹುಡುಗಿಯರಿಗೆ ಕೆಂಪು ಜರತಾರಿ ಬಟ್ಟೆಯ ಮುಸುಕು ಹಾಕುತ್ತಾರೆ. ಹೀಗೆ ಅಲಂಕಾರಗೊಂಡ ವಧು ಅಥವಾ ವರನನ್ನು ಸ್ನಾನಗೃಹದಿಂದ ಮದುವೆಯ ಮುಹೂರ್ತ ನಡೆಯುವ ಚಪ್ಪರದೆಡೆಗೆ ವಾದ್ಯವೃಂದದ ಮಧ್ಯೆ ಕರೆತರುತ್ತಾರೆ. ಅಗಸ ನೆಲಕ್ಕೆ ಮಡಿ ಹಾಸಿರುತ್ತಾನೆ. ನಾಲ್ಕು ಜನ ಮಡಿ ಬಾರಿಸುತ್ತಾ-

ಲೇ ಲಾಲೆ ಲಾ ಲೇಲಾ ನಿ ಲೇ ಲೆಲಲೇಲೂ
ಪಾಡಿತರಕೊವ್ವ ಎಂಗ
ತಪ್ಪದೆ ನಾವು ಏಂಗಂಡು ತೊಂಡೆ....

ಇತ್ಯಾದಿಯಾಗಿ ಹಾಡುತ್ತಾ ಬರುತ್ತಾರೆ. ಇದಕ್ಕೆ ಬಟ್ಟೆಪಾಟ್ ಎನ್ನುತ್ತಾರೆ. ಹುಡುಗ ಅಥವಾ ಹುಡುಗಿ ಹಸೆಯ ಮೇಲೆ ಕುಳಿತ ನಂತರ, ಕರಿಕ್ ಮುರಿಪದ ದಿನ ಹಾಡಿದ ಹಾಡನ್ನೇ ಮತ್ತೆ ಹಾಡುತ್ತಾರೆ. ಅನಂತರ ಬಂದವರು ಹಣದ ರೂಪದಲ್ಲಿ, ಹುಡುಗ ಅಥವಾ ಹುಡುಗಿಯ ಬಳಿಗೆಹೋಗಿ ತಲೆಯ ಮೇಲೆ ಅಕ್ಷತೆ (ಅಕ್ಕಿ) ಯನ್ನು ಹಾಕಿ, ಬಹುಮಾನ ಕೊಡುತ್ತಾರೆ.

ಮೊದಲೇ ರೂಪವತಿಯಾದ ಕೊಡವರ ಹೆಣ್ಣು, ಮದುವೆಯಲ್ಲಿ ಸಾಲಂಕೃತಳಾಗಿ ಎಲ್ಲರ ಕಣ್ಣನ್ನು ಸೆಳೆದಿರುತ್ತಾಳೆ. ಮುಹೂರ್ತ ಮುಗಿದ ಮೇಲೆ ಹುಡುಗಿಯ ಅತ್ತಿಗೆ ಮದುಮಣಗಿತ್ತಿಯ ತಲೆಯಿಂದ ಒಂದೆರಡು ಕೂದಲು, ಕೈಕಾಲು ಬೆರಳುಗಳಿಂದ ಒಂದೆರಡು ಚೂರು ಉಗುರುಗಳನ್ನು ತೆಗೆದು,ಸ್ವಲ್ಪ ಹಾಲಿರುವ ಚಿಕ್ಕ ಪಾತ್ರೆಗೆ ಹಾಕಿ, ಅದನ್ನು ಹಾಲು ಒಸರುವ ಮರದ ಕೆಳಗೆ ಚೆಲ್ಲುವುದರ ಮೂಲಕ ದೃಷ್ಟಿ ತೆಗೆಯುತ್ತಾಳೆ. ಇವನ್ನು ಕೂರಂಗೊದಿ ಮುರಿಪ ಎನ್ನುತ್ತಾರೆ. ಮದುವೆಗೆ ಬರುವ ನೆಂಟರನ್ನು ಬಾಳೆಬಿರುದು ಕೊಟ್ಟು ಸ್ವಾಗತಿಸುತ್ತಾರೆ. ದಪ್ಪನಾದ ಬಾಳೆಕಾಂಡವನ್ನು ಸುಮಾರು ಮೂರು ಅಡಿ ಎತ್ತರದ ಗೂಟದ ಮೇಲೆ ಚುಚ್ಚಿ, ಬಾಳೆ ಪಟ್ಟೆಯಿಂದ ತಯಾರಿಸಿದ ಬಾಣ ಹಾಗೂ ಹೂವುಗಳಿಂದ ಅದರ ಮೇಲ್ಭಾಗವನ್ನು ಅಲಂಕರಿಸಿರುತ್ತಾರೆ. ನೆಂಟರು ಬಂದಾಗ ಬಟ್ಟೆಪಾಟ್ ಹಾಡುತ್ತಾ, ವಾದ್ಯ ಸಮೇತ ಎದುರುಗೊಂಡು ಮೂರು ವೀಳ್ಯದೆಲೆ ಅಡಿಕೆಗಳನ್ನು ಕೊಟ್ಟು ಸ್ವಾಗತಿಸಿ, ಮೂರು ಬಾಳೆದಿಂಡುಗಳನ್ನು ತೋರಿಸುತ್ತಾರೆ. ಮನೆ ತಲ್ಪುವಾಗ, ಮನೆಯ ಕನ್ಯೆಯೋರ್ವಳು ನೆಂಟರ ಕಾಲನ್ನು ತೊಳೆಯುತ್ತಾಳೆ. ಆಗ ನೆಂಟರು ಆಕೆಯ ಕೈಯಲ್ಲಿನ ತಂಬಿಗೆಗೆ ಹಣ ಹಾಕಿ ತಮ್ಮ ಗೌರವವನ್ನು ಸೂಚಿಸುತ್ತಾರೆ. ಹೀಗೆ ಕನ್ನಿಮಂಗಲ ದಂಪತಿ ಮುಹೂರ್ತ, ಪಲಂಪಣ, ಸಂಬಂಧ ಕೊಡುವುದು ಮುಂತಾದ ಕಾರ್ಯಕ್ರಮಗಳೊಡನೆ ಮುಗಿಯುತ್ತದೆ.

ಕೂಡಾವಳಿ ಮಂಗಲ : ಈ ಪದ್ಧತಿಯ ಮದುವೆಯಲ್ಲಿ ಮೂರು ವಿಧಗಳಿವೆ. 1) ಗಂಡನು ಸತ್ತುಹೋದಮೇಲೆ ವಿಧವೆಯು ಸತ್ತ ಗಂಡನ ಸಹೋದರ ಇಲ್ಲವೇ ಆ ಕುಟುಂಬದ ಇತರರನ್ನು ಮದುವೆಯಾಗುವುದು. 2) ಬೇರೆ ಕುಟುಂಬದವರನ್ನು ಮದುವೆಯಾಗುವುದು. 3) ಮದುವೆಯಾದವನು ಹೆಣ್ಣನ್ನು ಬಿಟ್ಟುಬಿಟ್ಟಾಗ ಆಕೆಯನ್ನು ಮತ್ತೊಬ್ಬ ಮದುವೆಯಾಗುವುದು.

ಮದುವೆಯಾಗದ ಕನ್ಯೆ ಅನೀತಿಯಿಂದ ಗರ್ಭಿಣಿಯಾದರೆ ಅಥವಾ ತನ್ನ ಸ್ವಂತ ಕುಟುಂಬದವನಿಂದಲೇ ಗರ್ಭವತಿಯಾದುದಾದರೆ, ಅದಕ್ಕೆ ಕಾರಣನಾದವನು ಆಕೆಯನ್ನು ಮದುವೆಯಾಗಬೇಕು ಆದರೆ ಈ ಮದುವೆ ವಿಧವೆಯರ ಪುನರ್ವಿವಾಹ ಪದ್ಧತಿಯಂತೆ ನಡೆಯುತ್ತದೆ. ಈ ಯಾವ ರೀತಿಯಿಂದ ಮದುವೆಯಾದರೂ ಮದುವೆಯಾದ ಹೆಣ್ಣಿಗೆ ಕನ್ನಿಮಂಗಲದ ಮುತ್ತೈದೆಯಂತೆಯೇ ಎಲ್ಲ ರೀತಿಯ ಕಾರ್ಯಕ್ರಮಗಳಲ್ಲೂ ಭಾಗವಹಿಸುವ ಹಕ್ಕು ಇರುತ್ತದೆ. ಇದನ್ನು ಬೆಂದ್ ಪರಜೆ ಎನ್ನುತ್ತಾರೆ.

ಸಂತಾನಕ್ಕಾಗಿ ಮಂಗಲ : ಒಂದು ಕುಟುಂಬದಲ್ಲಿ ಗಂಡು ಮಕ್ಕಳಿಲ್ಲದೆ ಅಥವಾ ಇದ್ದ ಗಂಡು ಮಕ್ಕಳೆಲ್ಲಾ ಸತ್ತು, ಹೆಣ್ಣು ಮಾತ್ರ ಇಡೀ ಮನೆತನಕ್ಕೆ ಉಳಿದಿದ್ದರೆ, ಆಗ ಬೇರೆ ಕುಟುಂಬಕ್ಕೆ ಸೇರಿದ ಗಂಡು, ತನ್ನ ಕುಟುಂಬವನ್ನು ಬಿಟ್ಟು, ಆಕೆಯನ್ನು ಮದುವೆಯಾಗಿ, ಆಕೆಯ ಕುಟುಂಬದ ಸದಸ್ಯನಾಗಿ ಉಳಿಯಬಹುದು. ಇದನ್ನು ಒಕ್ಕಪರಜೆ ಅಥವಾ ಕುತ್ತಿಕಸಿಪ್ಪೂ ಎನ್ನುತ್ತಾರೆ.

ಸಮಾಜದ ನಿಯಮಕ್ಕೆ ವಿರುದ್ಧ ಒಬ್ಬಾಕೆ ವಿವಾಹಪೂರ್ವದಲ್ಲಿಯೇ ಗರ್ಭವತಿಯಾಗಿ ಬೆಂದ ಪರಿಜೆಯಂತೆ ವಿವಾಹವಾಗುವ ಮುನ್ನವೇ ಮೃತಳಾದರೆ ಗಂಡಿನ ಕುಟುಂಬದವರು ಆಕೆಯಲ್ಲಿನ ಸಂತತಿಗೆ—

ತಮ್ಮ ಕುಟುಂಬದ ಸದಸ್ಯತ್ವ ಕೊಡಲು ಒಪ್ಪಿದರೆ, ಆಕೆ ಸತ್ತ ದಿನವೇ ಊರಿನವರ, ಸಂಬಂಧೀಕರ ಸಮ್ಮುಖದಲ್ಲಿ ತಮ್ಮ ಸಮ್ಮತಿಯನ್ನು ಕೊಡಬೇಕಾಗುತ್ತದೆ. ಇದನ್ನು ಕುಟ್ಟಪರಿಜೆ ಎನ್ನುತ್ತಾರೆ.

ಒಬ್ಬಾಕೆ ಹತ್ತು ಮಕ್ಕಳನ್ನು ಹೆತ್ತು ಆಕೆಯೂ, ಆಕೆಯ ಮಕ್ಕಳೂ ಚೆನ್ನಾಗಿದ್ದರೆ, ಹತ್ತನೆಯ ಮಗು ಹುಟ್ಟಿದ ಎರಡು ತಿಂಗಳುಗಳಲ್ಲಿ ಬಹು ವಿಜೃಂಭಣೆಯಲ್ಲಿ ಕನ್ನಿಮಂಗಲದಂತೆಯೇ ಆಕೆಗೆ ಉತ್ಸವವನ್ನು ಏರ್ಪಡಿಸುತ್ತಾರೆ. ಇದನ್ನು ಸೈತಾಂಡೆ ಕಳೆಪ ಮಂಗಲ ಎಂದು ಕರೆಯುತ್ತಾರೆ.

ಮುಂದುವರಿದ ಜನಾಂಗಗಳು ಎಂದೆನಿಸಿಕೊಂಡ ಬ್ರಾಹ್ಮಣಜನಾಂಗದಲ್ಲಿ ವಿಧವೆಯರಿಗೆ ಇರುವ ದಾರುಣ ಪರಿಸ್ಥಿತಿಯನ್ನು ಗಮನಿಸಿದಾಗ, ಕೊಡವರ ಮಂಗಲದ ಪದ್ಧತಿಯಲ್ಲಿ ಆ ಜನಾಂಗದ ಉದಾರನೀತಿ, ದೂರದೃಷ್ಟಿಗಳು ವ್ಯಕ್ತಗೊಂಡಿರುವುದನ್ನು ಕಾಣಬಹುದಾಗಿದೆ.

ಈ ಕೆಳಗಿನ ನಾಲ್ಕು ಅತ್ಯಂತ ದುಃಖಕರವಾದ ವಿಷಯಗಳು–ಬುದ್ಧಿಯಿಲ್ಲದ ತಲೆ, ನಯನೀತಿಯಿಲ್ಲದ ಕೌಶಲ್ಯ (wit without judgement), ಪ್ರಾಮಾಣಿಕತನವಿಲ್ಲದ ಹೃದಯ, ಹಣವಿಲ್ಲದ ಚೀಲ.

—ಅರ್ಲ್

ಶಾಲಿನಿ ರಘುನಾಥ

ಕೆಲವು ಬಂಧುತ್ವಸೂಚಕ ಶಬ್ದಗಳು

ಬಂಧುತ್ವಸೂಚಕ ಶಬ್ದಗಳು ಸಾಮಾನ್ಯವಾಗಿ ಪ್ರಪಂಚದ ಎಲ್ಲ ಭಾಷೆಗಳಲ್ಲಿಯೂ ಕಂಡುಬರುತ್ತವೆ. ಅವುಗಳ ಪ್ರಮಾಣ, ಒಂದು ಭಾಷೆಯಲ್ಲಿ ಹೆಚ್ಚಿರಬಹುದು· ಮತ್ತೊಂದರಲ್ಲಿ ಕಡಮೆ ಇರಬಹುದು ಅಷ್ಟೆ. ಈ ಪ್ರಮಾಣ ನಿರ್ಧಾರವಾಗುವುದು ಮುಖ್ಯವಾಗಿ ಜನರ ಸಾಮಾಜಿಕ ಆವಶ್ಯಕತೆ ಮತ್ತು ಭಾಷಿಕ ಸಾಮರ್ಥ್ಯಗಳಿಂದಾಗಿ. ಕೆಲವು ಭಾಷೆಗಳಲ್ಲಿ ಒಂದೇ ಸಂಬಂಧವನ್ನು ಸೂಚಿಸುವ ಅನೇಕ ಶಬ್ದಗಳು ಇರಬಹುದು. ಸಂಸ್ಕೃತದಲ್ಲಿ ಹೆಂಡತಿ, ಎನ್ನುವ ಅರ್ಥದಲ್ಲಿ ದಾರಾ, ಭಾರ್ಯಾ, ಕಳತ್ರಮ್, ಪತ್ನೀ, ಸಹಧರ್ಮಿಣೀ, ಜಾಯಾ, ಕುಟುಂಬಿನೀ ಮುಂತಾದ ಶಬ್ದಗಳಿವೆ. ಶಬ್ದಕೋಶದ ಎಲ್ಲ ರೀತಿಯ ಬದಲಾವಣೆಗಳನ್ನು ಈ ಬಂಧುತ್ವಸೂಚಕ ಶಬ್ದಗಳು ಪಡೆಯುತ್ತವೆ. ಅಂತೆಯೇ ಪದಗಳು ಕಾಲದಿಂದ ಕಾಲಕ್ಕೆ ಅರ್ಥಬದಲಾವಣೆಯನ್ನು ಹೊಂದುವ ಸಾಧ್ಯತೆ ಇದೆ. ಹಳಗನ್ನಡದ 'ಅಮ್ಮ' ಶಬ್ದ ಇದಕ್ಕೊಂದು ಉತ್ತಮ ಉದಾಹರಣೆ. ಹಳಗನ್ನಡದಲ್ಲಿ 'ಅಪ್ಪ' ಎಂಬ ಅರ್ಥವನ್ನು ಈ ಶಬ್ದ ಹೊಂದಿತ್ತು. ಇಷ್ಟೇ ಅಲ್ಲ, ಒಂದು ಭಾಷೆ ಬೇರೆ ಭಾಷೆಯಿಂದ ಬಂಧುವಾಚಕ ಶಬ್ದಗಳನ್ನು ಸ್ವೀಕರಿಸಲೂಬಹುದು. ಸಂಸ್ಕೃತದ ಪತಿ-ಪತ್ನಿ-ಪುತ್ರ–ಪುತ್ರಿಯರೆಲ್ಲ ಕೆಲವೊಮ್ಮೆ ಕನ್ನಡದಲ್ಲಿಯೂ ಬಳಕೆಯಾಗುತ್ತಾರೆ. ಮರಾಠಿಯ 'ಆಯಿ' ಉತ್ತರ ಕನ್ನಡಜಿಲ್ಲೆಯ ಕೆಲವು ಹವ್ಯಕ ಮಕ್ಕಳ 'ತಾಯಿ'ಯಾಗಿದ್ದಾಳೆ. ಬೇರೆ–ಬೇರೆ ಭಾಷೆಗಳಿಂದ ಎರವಲು ಪಡೆದ ಬಂಧುವಾಚಕ ಶಬ್ದಗಳ ಅರ್ಥವೂ ಕೆಲವೊಮ್ಮೆ ಬದಲಾವಣೆಯಾಗುತ್ತದೆ. ಸಂಸ್ಕೃತದಲ್ಲಿರುವ ಧನೀ (ಧನವುಳ್ಳವನು) ಶಬ್ದ ಗುಜರಾತಿಯಲ್ಲಿ (ಧನಿ) ಗಂಡ ಎಂಬ ಅರ್ಥ ಪಡೆದಿದೆ. ಈ ಶಬ್ದ ಕನ್ನಡದಲ್ಲಿ (ಧಣಿ) ಒಡೆಯ, ಯಜಮಾನ ಎಂಬ ಅರ್ಥವನ್ನು ಹೊಂದಿದೆ. ಸಂಸ್ಕೃತದ 'ವಧು' (ಹೆಂಡತಿ) ಎಂಬ ಮತ್ತೊಂದು ಶಬ್ದ ಹಿಂದಿ, ಗುಜರಾತಿ, ಓರಿಯಾ ಭಾಷೆಗಳಲ್ಲಿ 'ಸೊಸೆ' ಎಂಬ ಅರ್ಥದಲ್ಲಿ ಬಳಕೆಯಾಗುತ್ತಿದೆ. ಇದೇ ಅರ್ಥಕ್ಕೆ ಅಲ್ಲಿ, ಬಹು, ಬಹುಮಾ ಮುಂತಾದ ಇನ್ನಿತರ ಶಬ್ದಗಳೂ ಇವೆ. ಇವುಗಳಂತೆ, ಸಂಸ್ಕೃತದ ಆರ್ಯ (ಹಿರಿಯ, ಶ್ರೇಷ್ಠ) ಕನ್ನಡದಲ್ಲಿ ತದ್ಭವಗೊಂಡು ಅಜ್ಜನಾಗಿದ್ದಾನಲ್ಲದೆ ಅರ್ಥದಲ್ಲಿ ಮೂಲಕ್ಕಿಂತ ಸಂಕುಚಿತಗೊಂಡಿದ್ದಾನೆ.

ಸಾಮಾನ್ಯವಾಗಿ ಸಾಮಾಜಿಕವಾಗಿರುವ ಈ ಸಂಬಂಧಗಳು ಕೆಲವೊಮ್ಮೆ ಆಧ್ಯಾತ್ಮಿಕ ಸಂಬಂಧ-ಸ್ವರೂಪವನ್ನೂ ಪಡೆಯುತ್ತವೆ. ಆಧ್ಯಾತ್ಮಲೋಕದ ಸತಿ-ಪತಿ, ವಾತ್ಸಲ್ಯ ಮುಂತಾದ ಮಧುರಭಾವಗಳು ಅನುಭಾವಿಗಳಿಂದ ಆದರ್ಶದ ಔನ್ನತ್ಯಕ್ಕೇರಿ, ಶಾಶ್ವತ ಬಂಧುತ್ವವನ್ನು ಸಾರುತ್ತಿವೆ. ಅಕ್ಕಮಹಾದೇವಿ, ಮೀರಾ, ಆಂಡಾಳ್ ಮುಂತಾದವರು ಸಹಜಸತಿಗಳಾಗಿ, ಪರಮಾತ್ಮನನ್ನೇ ಪತಿಯನ್ನಾಗಿ ಸ್ವೀಕರಿಸಿ, ಲೌಕಿಕದಲ್ಲಿಯೇ ಅಲೌಕಿಕದ ಬಾಳನ್ನು ಬಾಳಿದಂಥವರು. ಕಾಳಿದಾಸನ ಶ್ಲೋಕವೊಂದರಲ್ಲಿ ಉಕ್ತವಾದಂತೆ ಪಾರ್ವತೀ

ಪರಮೇಶ್ವರರು ಜಗತ್ತಿನ ತಾಯಿ-ತಂದೆಗಳಾಗಿದ್ದಾರೆ. ಭಕ್ತಾದಿಗಳು ತಮ್ಮ ಬಾಳಿನ ಕೊರಗು-ಮರಗುಗಳನ್ನು ನಿವೇದಿಸಿಕೊಳ್ಳುವಾಗ ಅವರು ನಂಬಿದ ಶಕ್ತಿ, ತಂದೆಯೋ ತಾಯಿಯೋ ಆಗಲೇಬೇಕು.

ಹೀಗೆ ಕೆಲವು ಬಂಧುತ್ವದ ಶಬ್ದಗಳು ಲೌಕಿಕ ಮತ್ತು ಆಧ್ಯಾತ್ಮಿಕ ಅರ್ಥಗಳಲ್ಲಿ ಬಳಕೆಯಾದರೂ ಮೂಲದಲ್ಲಿ ಅವು ಸಾಮಾಜಿಕ ಆವಶ್ಯಕತೆಗನುಗುಣವಾಗಿಯೇ ಹುಟ್ಟಿರಬೇಕೆಂದೆನಿಸುತ್ತದೆ. ಮಾನವಶಾಸ್ತ್ರಜ್ಞರೂ ಕೂಡ ಇವು, 'ಮಕ್ಕಳ ಪಾಲನೆ-ಪೋಷಣೆಗಾಗಿ ಹುಟ್ಟಿಕೊಂಡ ಒಂದು ಭಾಷಾವೈಚಿತ್ರ್ಯ'ವೆಂದೇ ಅಭಿಪ್ರಾಯಪಟ್ಟಿದ್ದಾರೆ. ಮಾರ್ಗನ್ ಎಂಬ ಮಾನವಶಾಸ್ತ್ರಜ್ಞ 'ಸಾಮಾಜಿಕ ಆವಶ್ಯಕತೆಯಾಗಿ, ಸಮಾಜದ ಸ್ವಭಾವದಲ್ಲಿಯೇ ಹುಟ್ಟಿಕೊಂಡ ಸಮಾಜಭದ್ರತೆಯ ವ್ಯವಸ್ಥೆ' ಎಂದು ಬಂಧುತ್ವವನ್ನು ವ್ಯಾಖ್ಯಾನಿಸಿ, ಆದಿವಾಸಿಗಳಲ್ಲಿ ಎರಡು ಬಗೆಯ ಬಂಧುತ್ವವನ್ನು ಗುರುತಿಸಿದ್ದಾನೆ. ಮೊದಲನೆಯದು ತಂದೆ-ತಾಯಿ, ಗಂಡ-ಹೆಂಡತಿ, ಅಣ್ಣ-ತಂಗಿಯರಿಗೆ ಸಂಬಂಧಪಟ್ಟಿದ್ದರೆ, ಎರಡನೆಯದು, ಹೀಗೆ ನೇರವಲ್ಲದ ಸಂಬಂಧಿಕರಿಗೆ ಅನ್ವಯಿಸುವುದಾಗಿದೆ. ಫೋರ್ಟಸ್ ಎಂಬ ವಿದ್ವಾಂಸ 'ಬಂಧುತ್ವವೆನ್ನುವುದು ವ್ಯವಸ್ಥಿತ ಸಾಮಾಜಿಕ ಜೀವನಕ್ಕೆ ಅತ್ಯವಶ್ಯವಾದ ತತ್ತ್ವಗಳಲ್ಲೊಂದು' ಎಂದು ಬಗೆದಿದ್ದಾನೆ. 'ಬಾಂಧವ್ಯದ ಚೌಕಟ್ಟಿನಲ್ಲಿ ಬರುವವರೆಲ್ಲ ಬಂಧುಗಳು.' ಆದರಿಂದಾಗಿಯೇ ಬಂಧು-ಬಳಗ. ಸಾಂಪ್ರದಾಯಿಕವಾಗಿ ಪ್ರತಿಯೊಂದು ಸಂಸ್ಕೃತಿಯಲ್ಲೂ ಈ ಬಂಧುತ್ವವೆನ್ನುವುದು ಮೂಲಭೂತ ಹೊಂದಾಣಿಕೆಯಿಂದಾಗಿ ವಿಶಿಷ್ಟ ಮೂಲಪಂಗಡವೊಂದನ್ನು ನಿರ್ಮಿಸಿರುತ್ತದೆ ಎಂಬುದು ಸ್ಕ್ಯಾಟೆನ್ನನ ಅನ್ನಿಸಿಕೆ. ಒಟ್ಟಿನಲ್ಲಿ ಬಂಧುತ್ವವೆನ್ನುವುದು ಸಂತಾನೋತ್ಪತ್ತಿಯನ್ನು ಕುರಿತಾದುದು. ಇದರಲ್ಲಿ ವೈವಾಹಿಕ ಮತ್ತು ರಕ್ತಸಂಬಂಧಗಳೆಂಬ ಎರಡು ಮೂಲ ಎಳೆಗಳನ್ನು ಗುರುತಿಸಬಹುದು. ಪ್ರಸ್ತುತ ಲೇಖನದಲ್ಲಿ ಇಂಡೋಆರ್ಯನ್ ಗುಂಪಿನ ಭಾಷೆಗಳಲ್ಲಿ ಮುಖ್ಯವಾಗಿ ಸಂಸ್ಕೃತದಲ್ಲಿ ಕಂಡುಬರುವ ವೈವಾಹಿಕ ಸಂಬಂಧದ ಕೆಲವು ಶಬ್ದಗಳನ್ನು ಭಾಷಾಶಾಸ್ತ್ರದ ದೃಷ್ಟಿಯಿಂದ ವಿವೇಚಿಸಲಾಗಿದೆ.

ಪತಿ ಎಂಬ ಶುದ್ಧ ಸಂಸ್ಕೃತಶಬ್ದವನ್ನು ಸಾಮಾನ್ಯವಾಗಿ ಸಾಹಿತ್ಯದಲ್ಲಿ ಬಳಸುತ್ತಾರೆ. ಸಂಸ್ಕೃತದಲ್ಲಿ ಇದಕ್ಕೆ 'ಒಡೆಯ' ಮತ್ತು 'ಗಂಡ' ಎಂಬ ಎರಡೂ ಅರ್ಥಗಳಿವೆ. ಆದರೆ ಮೂಲದಲ್ಲಿ 'ತನ್ನದು' ಆತ್ಮ ಎಂಬ ಅರ್ಥವನ್ನು ಹೊಂದಿತ್ತೆಂದು ಕೆಲವು ವಿದ್ವಾಂಸರ ಅಭಿಪ್ರಾಯ. ಏಕೆಂದರೆ ಅಸ್ಸಾಮಿ ಭಾಷೆಯಲ್ಲಿರುವ 'ಪೈತಿ' ಎಂಬ ಶಬ್ದ ಆ ಅರ್ಥವನ್ನು ಉಳಿಸಿಕೊಂಡಿದೆ. ಮೆಯೊಫರ್ ಎಂಬ ವಿದ್ವಾಂಸನು 'ಒಡೆಯ' ಎಂಬುದು ಅದರ ಶಬ್ದಾರ್ಥವೆಂದಿದ್ದಾನೆ. ಆದುದರಿಂದ ಪತಿ ಎಂದರೆ ಒಂದು ಹೆಣ್ಣಿನ ಒಡೆಯ (ಗಂಡ) ಎಂಬ ಅರ್ಥ ಮೂಲದಲ್ಲಿ ಇದ್ದಿರಲಾರದು. ಪತಿ ಇದರ ಸ್ತ್ರೀಲಿಂಗರೂಪ ಪತ್ನಿ ಎಂಬುದು. ಇದು ಮನೆಯ ಒಡತಿ ಎಂಬ ಅರ್ಥದಲ್ಲಿ ಹುಟ್ಟಿರಬೇಕು. ಗಂಡ-ಹೆಂಡಿರಿಬ್ಬರೂ ಸೇರಿ 'ದಂಪತಿ' ಎಂಬ ಸಮಾಸಪದವಿದೆ. ಪ್ರಾಯಶಃ ಈ ಶಬ್ದ ಮೂಲದಲ್ಲಿ ಒಂದು ಮನೆಯ ಸಮಸ್ತ ಆಸ್ತಿಯ ಒಡೆಯ-ಒಡತಿಯರು ಎಂಬುದಾಗಿರಬೇಕು. ಆದರೆ ಈಗ ಒಡೆಯ ಮತ್ತು ಗಂಡ ಎಂಬ ಎರಡೂ ಅರ್ಥದಲ್ಲಿ ಸಂಸ್ಕೃತದಲ್ಲಿ ಪತಿ ಎಂಬ ಶಬ್ದವಿದೆ. ಮತ್ತು ಪತ್ನೀ ಎಂಬ ಶಬ್ದ ಕೇವಲ ಹೆಂಡತಿ ಎಂಬ ಅರ್ಥದಲ್ಲಿ ಉಪಯೋಗವಾಗುತ್ತಿದೆ. ಒಡತಿ ಎಂಬ ಅರ್ಥದಲ್ಲಿ ಉಪಯೋಗಿಸಿದ್ದು ತೀರ ವಿರಳವೆನ್ನಬೇಕು. ಸಿಂಧಿ ಮತ್ತು ಪಂಜಾಬಿ ಭಾಷೆಗಳಲ್ಲಿ ಪತಿ ಶಬ್ದ 'ಪಾಂಯ್' ಎಂಬ ರೂಪವನ್ನು ಹೊಂದಿ ಬಳಕೆಯಾಗುತ್ತಿದೆ. 'ದಂಪತೀ' ಎಂಬ ಶಬ್ದವಲ್ಲದೆ ಅದೇ ಅರ್ಥದಲ್ಲಿ ಸಂಸ್ಕೃತದಲ್ಲಿ ಜಂಪತೀ, ಜಾಯಾಪತೀ, ಭಾರ್ಯಾಪತೀ ಈ ಶಬ್ದಗಳೂ ಇವೆ.

ಮತ್ತೊಂದು ಸಂಸ್ಕೃತ ಶಬ್ದ 'ಸ್ವಾಮಿನ್' ಎಂಬುದು. ಪ್ರಾಚೀನ ಕಾಲದಲ್ಲಿ ಇದು ಸ್ವಾಮಿ, ಒಡೆಯ ಎಂಬ ಅರ್ಥವನ್ನು ಹೊಂದಿತ್ತು. ಮಹಾಭಾರತಕಾಲದಲ್ಲಿ ಇದಕ್ಕೆ ಗಂಡ ಎಂಬ ಅರ್ಥ ಬಂದಿತು. ಇದರ ತತ್ಸಮ ಶಬ್ದವಾದ 'ಶಾಮೀ' ಹೊಸ ಇಂಡೋಆರ್ಯನ್ ಭಾಷೆಗಳಲ್ಲಿ ಮತ್ತು ಬಂಗಾಲಿ, ಒರಿಸ್ಸಾ ಭಾಷೆಗಳಲ್ಲಿ

ಬಳಕೆಯಲ್ಲಿದೆ. ಆದರೆ ಬಂಗಾಲಿಯಲ್ಲಿ ಶ್ಯಾಮಿ ಶಬ್ದ ಕೆಲವೊಮ್ಮೆ ಕೀಳಾರ್ಥದಲ್ಲಿ ಉಪಯೋಗಿಸಲ್ಪಡುತ್ತದೆ. ಸುಸಂಸ್ಕೃತರಲ್ಲದ ಮಹಿಳೆಯರಿಂದ ಅದರ ಪ್ರಯೋಗ ಹೆಚ್ಚು. ಉದಾಹರಣೆಗೆ 'ಅಮುನ್ ಶ್ಯಾಮಿರ್ ಮುಖೆ ಆಗುನ್' (ಅಂಥ ಗಂಡನ ಮುಖಕ್ಕೆ ಬೆಂಕಿ ಹಚ್ಚು !)

'ಭರ್ತೃ' (ಒಡೆಯ, ಗಂಡ) ಎನ್ನುವುದು ಸಂಸ್ಕೃತದ ಇನ್ನೊಂದು ಶಬ್ದ. ಇದು ಬಂಗಾಲಿಯಲ್ಲಿ 'ಭಾತಾರ್' ಎಂದಾಗಿ ಕೀಳಾರ್ಥವನ್ನು ಹೊಂದಿದೆ. ಅಲ್ಲಿ ಅದರ ಸ್ತ್ರೀವಾಚಕ ಶಬ್ದ 'ಮಾಗ್' ಎಂಬುದು. ಇವೆರಡನ್ನೂ ಸುಸಂಸ್ಕೃತ ಮಹಿಳೆಯರೇ ಉಪಯೋಗಿಸುತ್ತಾರೆ. 'ಮಾಗ್ ಭಾತಾರೆ ಝಗ್ರಾ ಲೆಗೆಚೆ' (ಗಂಡ–ಹೆಂಡಿರ ನಡುವೆ ಜಗಳ ಶುರುವಾಯಿತು) ಅಂತೆಯೇ 'ಮಾಗಿ' ಎಂಬ ಶಬ್ದವನ್ನು ಪುರುಷರು ಕೀಳುಸ್ತ್ರೀ ಎಂಬ ಅರ್ಥದಲ್ಲಿ ಉಪಯೋಗಿಸುತ್ತಾರೆ. 'ಮನುಷ್ಯ' ಈ ಶಬ್ದದಿಂದ ಹುಟ್ಟಿಕೊಂಡ 'ಮಿನ್ಸೆ' ಎಂಬ ಶಬ್ದವನ್ನು ಸ್ತ್ರೀಯರು ಸಿಟ್ಟಿನಲ್ಲಿ ಬೈಗಳಾಗಿ ಉಪಯೋಗಿಸುವುದೂ ಉಂಟು.

ಹೆಂಡತಿ ಎಂಬ ಅರ್ಥದಲ್ಲಿ ಸ್ತ್ರೀ ಎಂಬ ಶಬ್ದ ಇಂಡೋಆರ್ಯನ್ ಭಾಷೆಗಳಲ್ಲಿ, ಮುಖ್ಯವಾಗಿ ಸಂಸ್ಕೃತದಲ್ಲಿ ವ್ಯಾಪಕ ಬಳಕೆಯಲ್ಲಿದೆ. ಪ್ರಾಯಶಃ ಇದು 'ಸು' ಧಾತುವಿಗೆ 'ತ್ರೀ' ಎಂಬ ಸ್ತ್ರೀವಾಚಕ ಪ್ರತ್ಯಯ ಸೇರಿಸಿ ಮಾಡಿಕೊಂಡಿದ್ದಿರಬೇಕು. ಇದರ ಶಬ್ದಾರ್ಥ 'ಮಗುವನ್ನು ಪಡೆಯುವವಳು' ಎಂದಿದೆ. ಅಂತೆಯೇ ಸುತ (ಮಗ) ಎಂಬುದು 'ಪಡೆದದ್ದು' ಎಂದಾಗುತ್ತದೆ. 'ಭಾರ್ಯಾ' ಎನ್ನುವುದು ಸಂಸ್ಕೃತದ ಇನ್ನೊಂದು ಶಬ್ದ. ಹೆಂಡತಿ ಎಂಬ ಅರ್ಥದಲ್ಲಿ ಬಳಕೆಯಾಗುತ್ತದೆ. ಅವಲಂಬಿಸಿ ಇರುವವಳು ಎಂದು ನಿಘಂಟಿನಲ್ಲಿ ಅರ್ಥವಿರುವುದರಿಂದ ಶಬ್ದೋತ್ಪತ್ತಿಯ ಮೂಲದ ಭಾವನೆ ಗೋಚರವಾಗುತ್ತದೆ. ಓರಿಯಾ ಭಾಷೆಯಲ್ಲಿ ಭಾರ್ಯಾ ಭಾರಿಜಾ ಎಂದಾಗಿದೆ.

'ಗೃ' ಎಂಬ ಧಾತುವಿನಿಂದ ಹುಟ್ಟಿದ 'ಗೃಹಿಣಿ' ಸಂಸ್ಕೃತದಲ್ಲಿ ಕುಟುಂಬದ ಮುಖ್ಯ ಸದಸ್ಯೆ ಎಂಬ ಅರ್ಥವನ್ನು ಪಡೆಯುತ್ತದೆ. ಆ ಅರ್ಥದಲ್ಲಿಯೇ ಸುಭಾಷಿತಕಾರ 'ಗೃಹಿಣೀ ಗೃಹಮುಚ್ಯತೇ' ಎಂದಿದ್ದಾನೆ. ಇದರ ತದ್ಭವಶಬ್ದವಾದ 'ಗಿನ್ನಿ' ಬಂಗಾಲಿಯಲ್ಲಿದೆ. ಅಸ್ಸಾಮಿಯಲ್ಲಿ 'ಘೈನಿಯಕ್' ಎಂದರೆ ಹೆಂಡತಿ ಎಂದೂ 'ಗಿರಿಯಕ್' ಎಂದರೆ ಗಂಡನೆಂದೂ ಅರ್ಥ. ಇದಕ್ಕೆ ಸಂವಾದಿಯಾಗಿ ಗುಜರಾತಿ ಪಂಜಾಬಿ ಭಾಷೆಗಳಲ್ಲಿ 'ಘರವಾಲಿ' (ಹೆಂಡತಿ) 'ಘರವಾಲ' (ಗಂಡ), ಮರಾಠಿ ಯಲ್ಲಿ 'ಘರಕಾರಿ' (ಹೆಂಡತಿ) ಎಂಬ ಶಬ್ದವೂ ಇದೆ. ಸಂಸ್ಕೃತದ ಗೃಹಸ್ಥ (ಯಜಮಾನ) ಓರಿಯಾ ಭಾಷೆಯಲ್ಲಿ 'ಗೆರಿಸ್ಥಾ' (ಗಂಡ) ಎಂಬ ರೂಪ ಪಡೆದಿದೆ. ಬಂಗಾಲಿ ಭಾಷೆಯಲ್ಲಿಯೂ ಕ್ವಚಿತ್ತಾಗಿ ಇದರ ಪ್ರಯೋಗವಿದೆ. ಅಲ್ಲಿ ಬಳಕೆಯಲ್ಲಿರುವ ಮತ್ತೊಂದು ಶಬ್ದ 'ಗೃಹಕರ್ತಾ' ಎಂಬುದು. ಪಹಾರಿಭಾಷೆಯಲ್ಲಿರುವ 'ಘರೇತ್' ಮತ್ತು ಸಿಂಧಿಯಲ್ಲಿರುವ 'ಘೋಟು' ಇವೆಲ್ಲ ಗೃಹಸ್ಥದಿಂದಲೇ ಬಂದವುಗಳಾಗಿವೆ. 'ಪರಿವಾರ್' (ಕುಟುಂಬದಸದಸ್ಯರು) ಎಂಬ ಶಬ್ದ ಬಂಗಾಲಿಯಲ್ಲಿ (ಪರಿಬಾರ್) ಮೊದಲು ಹೆಂಡತಿ ಎಂಬ ಅರ್ಥದಲ್ಲಿ ಬಳಕೆಯಾಗುತ್ತಿತ್ತು ; ಈಗ ಅದು ಕೀಳಾರ್ಥವನ್ನು ಹೊಂದಿ ಕೇವಲ ಅಶಿಕ್ಷಿತರಿಂದ ಬಳಸಲ್ಪಡುತ್ತದೆ.

ಗುಜರಾತಿಯಲ್ಲಿ 'ಧನಿ' 'ಧೈಯನ್' ಶಬ್ದಗಳು ಗಂಡ–ಹೆಂಡತಿ ಎಂಬ ಅರ್ಥದಲ್ಲಿ ಪ್ರಯೋಗಿಸಲ್ಪಡುತ್ತವೆ. ಇದೇ ರೀತಿ ಹಿಂದಿಯಲ್ಲಿ ಮರ್ದ/ಮರದ್ (ಗಂಡ) ಜನಾನಾ (ಹೆಂಡತಿ) ಶಬ್ದಗಳಿವೆ. ಮರಾಠಿಯಲ್ಲಿ 'ಬಾಯ್ಕೊ' (ಹೆಂಡತಿ) ಎಂಬ ಅಪರೂಪದ ಒಂದು ಶಬ್ದವಿದೆ. ಮರಾಠಿಯಲ್ಲಿ ಬಾಯು ಎಂದರೆ ಹೆಣ್ಣು ಎಂಬ ಅರ್ಥವಿದೆ. ಇದರಿಂದಲೇ ಬಾಯ್ಕೊ (ಒಬ್ಬನಿಗೆ ಸೇರಿದ ಹೆಣ್ಣು–ಹೆಂಡತಿ) ಉತ್ಪತ್ತಿಯಾಗಿದೆ. 'ನಾಗರಿಕ' ಈ ಶಬ್ದದಿಂದ ಹುಟ್ಟಿದ ನವ್ರಾ ಶಬ್ದ ಮರಾಠಿಯಲ್ಲಿ ಗಂಡ ಎಂಬ ಅರ್ಥದಲ್ಲಿ ಉಪಯೋಗದಲ್ಲಿದೆ. ಪಂಜಾಬಿ ಭಾಷೆಯಲ್ಲಿ 'ಖಸಮ್' (ಗಂಡ) ಎಂಬ ಮತ್ತೊಂದು ಶಬ್ದವಿದೆ. ಪ್ರಿಯ–ಪ್ರಿಯತಮೆಗಳೂ ಕೂಡ, ಕೆಲವೊಮ್ಮೆ ಗಂಡ–

ಹೆಂಡತಿ ಎಂಬ ಅರ್ಥದಲ್ಲಿ ಕೆಲವು ಭಾಷೆಗಳಲ್ಲಿ ಪ್ರಯೋಗವಾಗುತ್ತವೆ. ಸಂಸ್ಕೃತದಲ್ಲಿ ಕಾವ್ಯಮಯ ಶೈಲಿಯಲ್ಲಿ ರಮಣೀ, ನಾರಿ ಮುಂತಾದ ಶಬ್ದಗಳೂ ಬಳಕೆಯಾಗುತ್ತವೆ. ಸಂಸ್ಕೃತದ ವಧು–ವರ ಶಬ್ದಗಳು ಬಂಗಾಲಿಯಲ್ಲಿ (ಬಧು-ಬರ) ಮತ್ತು ಇನ್ನಿತರ ಕೆಲವು ಭಾಷೆಗಳಲ್ಲಿ ಗಂಡ-ಹೆಂಡತಿ ಎಂಬ ಅರ್ಥದಲ್ಲಿಯೇ ಬಳಕೆಯಾಗುತ್ತವೆ. ವಧು ಮತ್ತು ಅದರ ಉತ್ಪತ್ತಿಗಳು ಹಿಂದಿ, ಗುಜರಾತಿ, ಒರಿಯಾಗಳಲ್ಲಿ ಸೊಸೆ ಎಂಬ ಅರ್ಥದಲ್ಲಿ ಬಳಕೆಯಲ್ಲಿವೆ.

ಇದರಂತೆ ರಕ್ತಸಂಬಂಧದ ಶಬ್ದಗಳನ್ನು ಅಭ್ಯಾಸ ಮಾಡಿದಾಗ ಅವು ಹೆಚ್ಚು ಸಂಕೀರ್ಣವೂ, ವೈವಿಧ್ಯಪೂರ್ಣವೂ ಆಗಿರುವುದು ಕಂಡುಬರುತ್ತದೆ.

ಥಿಯಾಸಾಫಿಕಲ್ ಸೊಸೈಟಿಯ ಮುಖಂಡನಾದ ಜಿನರಾಜದಾಸನು ಮುಸಲೋನಿಯ ಬಳಿಗೆ ಹೋಗಿ, ವೇದಾಂತವನ್ನು ಕುರಿತು ಮಾತನಾಡಹೊರಟನು. ಆಗ ಮುಸಲೋನಿ ತನ್ನ ಜೋಬಿನಿಂದ ಗೀತೆಯ ಒಂದು ಇಟಲಿ ಭಾಷಾಂತರವನ್ನು ತೆಗೆದು ಜಿನರಾಜದಾಸನ ಕೈಲಿತ್ತನು. ಆಶ್ಚರ್ಯದಿಂದ ಮೂಕನಾದ ಜಿನರಾಜದಾಸನು ತಲೆತಗ್ಗಿಸಿಕೊಂಡು ಅಲ್ಲಿಂದ ಹೊರಟು ಬಂದನು.

ಎಂ. ಜಯಂತಿಬಾಯಿ

ಧಾರ್ಮಿಕ ಪ್ರಜ್ಞೆ-ಮಹಿಳೆಯ ಶ್ರೀರಕ್ಷೆ

ಭಾರತವು ಯುಗಯುಗಾಂತರಗಳಿಂದಲೂ ಧಾರ್ಮಿಕ ತಳಹದಿಯ ಮೇಲೆ ನಿಂತಿದೆ. ಆದ್ದರಿಂದಲೇ ಇಂದಿಗೂ ನಮ್ಮ ಸಂಸ್ಕೃತಿ ಭವ್ಯವೂ ಆಗಿದೆ; ದಿವ್ಯವೂ ಆಗಿದೆ; ಪಾಶ್ಚಾತ್ಯ ಸಂಸ್ಕೃತಿಗಿಂತ ಭಿನ್ನವಾಗಿ ವಿಶಿಷ್ಟ ರೂಪವನ್ನು ತಾಳಿ ನಿಂತಿದೆ. ಇಲ್ಲಿನ ಮಹಿಳೆಯರು ತಮ್ಮ ಧಾರ್ಮಿಕ ಮನೋಭಾವ, ಗೃಹಿಣೀಧರ್ಮದ ಪಾಲನೆ, ಸಚ್ಚಾರಿತ್ರ್ಯ-ಇವುಗಳಿಂದ ನಮ್ಮ ದೇಶದ ಶ್ರೇಯಸ್ಸಿಗೂ ಪುರೋಭಿವೃದ್ಧಿಗೂ ಕಾರಣರಾಗಿದ್ದಾರೆ. 'ಧರ್ಮೋ ರಕ್ಷತಿ ರಕ್ಷಿತಃ' ಎಂಬ ಆರ್ಷವಾಕ್ಯವನ್ನು ನಂಬಿ ಜೀವನರಂಗದಲ್ಲಿ ಮುಂಬರಿಯುತ್ತಿರುವ ಭಾರತೀಯ ಮಹಿಳೆಯರ ಜೀವನದ ಸಕಲ ಕ್ಷೇತ್ರಗಳಲ್ಲೂ ಧರ್ಮವು ಹಾಸುಹೊಕ್ಕಾಗಿ ಹೆಣೆದುಕೊಂಡಿದೆ. ವೈಭವೋಪೇತವಾದ ಸ್ತ್ರೀಪರಂಪರೆಗೆ ಧರ್ಮವೇ ಶ್ರೀರಕ್ಷೆಯಾಗಿದೆ. ಭಾರತೀಯ ಮಹಿಳೆಯರೆಲ್ಲ ಹೆಚ್ಚಾಗಿ ಗೃಹಿಣೀಧರ್ಮವನ್ನು ಪಾಲಿಸಿಕೊಂಡು ಬಂದಿದ್ದಾರೆ. ಅಂದು ಸಂಚಿಯ ಹೊನ್ನಮ್ಮ 'ಹದಿಬದೆಯ ಧರ್ಮ'ದಲ್ಲಿ ಹೇಳಿದಂತಹ 'ಮನೆಯೇ ಧರ್ಮಾಶ್ರಮ; ಮನೆವಾಳ್ತೆಯೆ ಧರ್ಮ' ಎಂಬ ಮಾತಿಗನುಗುಣವಾಗಿ ಭಾರತೀಯಸ್ತ್ರೀಯರು ನಡೆದುಕೊಂಡಿದ್ದಾರೆ. ಗೃಹಿಣೀ ಧರ್ಮವೇ ಮಹಿಳೆ ಪಾಲಿಸಬೇಕಾದ ಮುಖ್ಯಧರ್ಮವೆಂದಾದರೆ, ಧರ್ಮವೆಂದರೇನು ?

'ಧರ್ಮ'-ಎಂಬ ಪದವು ಬಹುವ್ಯಾಪಕ ಅರ್ಥವನ್ನು ಹೊಂದಿದೆ. 'ಧೃ' ಎಂಬ ಧಾತುವಿನಿಂದ ಈ ಧರ್ಮ ಎಂಬ ಪದ ನಿಷ್ಪನ್ನವಾಗಿದೆ. ಇದಕ್ಕೆ ಉದ್ಧರಿಸು, ಪೋಷಿಸು, ಸಂರಕ್ಷಿಸು ಎಂಬ ಅರ್ಥಗಳು ಸಾಧ್ಯ. ಧರ್ಮವೆಂಬುದು ಜಗತ್ತನ್ನು ನಿಯಂತ್ರಿಸುವ ಪ್ರಮಾಣ. ಯಾವ ತತ್ತ್ವದ ಮೂಲಕ ಒಂದು ವಸ್ತುವು ಆ ಗುಣಧರ್ಮವನ್ನು ಪಡೆದಿದೆಯೋ ಆ ತತ್ತ್ವವೇ ಧರ್ಮ. ವೇದಗಳಲ್ಲಿ ಈ ಪದವನ್ನು ಕರ್ಮಾಚರಣೆ ಎಂಬ ಅರ್ಥದಲ್ಲಿ ಬಳಸಲಾಗಿದೆ. ಛಾಂದೋಗ್ಯ ಉಪನಿಷತ್ತಿನಲ್ಲಿ ಬ್ರಹ್ಮಚರ್ಯಧರ್ಮ, ಗೃಹಸ್ಥಧರ್ಮ ಮತ್ತು ಸನ್ಯಾಸಧರ್ಮ ಎಂಬುದಾಗಿ ಧರ್ಮದ ಮೂರು ಅಂಗಗಳನ್ನು ಹೇಳಿದೆ. 'ತೈತ್ತಿರೀಯ ಉಪನಿಷತ್ತು'ನಲ್ಲಿ ಧರ್ಮಾಚರಣೆಯೆಂದರೆ ಬಾಳಿನಲ್ಲಿ ತನ್ನ ಹೊಣೆಗಾರಿಕೆಗಳನ್ನು ನಿರ್ವಹಿಸುವುದು ಎಂಬ ಅರ್ಥವಿದೆ. ಭಗವದ್ಗೀತೆ ಮತ್ತು ಧರ್ಮಶಾಸ್ತ್ರಗಳು ಇದೇ ಅರ್ಥದಲ್ಲಿ ಧರ್ಮ ಎಂಬ ಪದವನ್ನು ಬಳಸಿವೆ. ಬೌದ್ಧರ ರತ್ನತ್ರಯಗಳಲ್ಲಿ ಬುದ್ಧ ಮತ್ತು ಸಂಘದ ಜೊತೆಗೆ ಧರ್ಮವೂ ಸೇರಿದೆ. ಪೂರ್ವಮೀಮಾಂಸಕರ ಪ್ರಕಾರ ಧರ್ಮ ಎಂಬುದೇ ಪ್ರಿಯವೂ ಶ್ರೇಯಸ್ಕರವೂ ಆದ ಮಾರ್ಗ. ವೈಶೇಷಿಕರ ಪ್ರಕಾರ ಧರ್ಮ ಎಂಬುದು ಕ್ಷೇಮ ಮತ್ತು ಸಂತೋಷದ ಮೂಲ. ಜೈನರ ಪ್ರಕಾರ ಧರ್ಮವು ಅಹಿಂಸೆಯನ್ನು ಬೋಧಿಸುತ್ತದೆ. ಯಾರ ವಿಚಾರಕ್ಕಾಗಲಿ ಅನ್ಯಾಯವಾಗಬಾರದು, ಯಾವ ಪ್ರಾಣಿಯ ಜೀವನಕ್ಕೂ ಬಾಧೆತಟ್ಟಕೂಡದು ಎಂಬುದು ಅದರ ಉದ್ದೇಶ. ಅವರ ಪ್ರಕಾರ ಆಚಾರ ಮತ್ತು ಚಾರಿತ್ರ್ಯ ಇವು ಧರ್ಮವೆನಿಸುತ್ತವೆ. ಧರ್ಮ, ಅರ್ಥ, ಕಾಮಗಳು ಸುಖದ ಸಾಧನಗಳಾಗುತ್ತವೆ. ಇವುಗಳಲ್ಲಿ ಧರ್ಮವೇ ಮುಖ್ಯ. ಧರ್ಮದ ಬಂಧನವಿಲ್ಲದ ಧನಸಂಪಾದನೆ ವ್ಯಕ್ತಿಯ ಸುಖವನ್ನು ನಾಶಪಡಿಸುತ್ತದೆ. ಧರ್ಮದಿಂದ ಮರ್ಯಾದಿತವಾದ ಅರ್ಥಕಾಮ

ಗಳು ಸುಖದ ಸಾಧನಗಳಾಗಬಲ್ಲವು. ಇದು ಶ್ರೇಷ್ಠ ಸುಖದ ಸಾಧನ. ಶಿಷ್ಟಾಚಾರದಂತೆ ಆತ್ಮಸಾಕ್ಷಿಯೂ ಸಹ ಧರ್ಮಕ್ಕೆ ಆಧಾರವಾಗುತ್ತದೆ. ಶುದ್ಧವಾದ ವಿವೇಚನೆಯಿಂದ ಮೂಡಿಬಂದು ಆತ್ಮಸಮ್ಮತವೆನಿಸಿದ ಆಚರಣೆ ಧರ್ಮವೆನಿಸುತ್ತದೆ.

ಮಹಿಳೆಗೂ ಧರ್ಮಕ್ಕೂ ತೀರ ಬಿಡಿಸಲಾಗದ ಸಂಬಂಧವಿದೆ. ಮಹಿಳೆಯ ಧರ್ಮಪರಿಪಾಲನೆಯಿಂದಲೇ ಅನೇಕ ಮನೆತನಗಳು, ಕುಟುಂಬಗಳು ಸಂಪತ್ ಸಮೃದ್ಧಿ ಹೊಂದಿ, ಶ್ರೇಯಸ್ಸನ್ನೂ ಕೀರ್ತಿಯನ್ನೂ ಗಳಿಸಿವೆ. ಮಹಿಳೆಗೆ ಗೃಹಿಣೀಪದವಿಯು ಆಕೆಯ ಜೀವನದಲ್ಲಿನ ವಿಶಿಷ್ಟ ಹಂತ.ಸಂಭ್ರಮದ ದಿನ ಕಳೆದು ವೈವಾಹಿಕ ಬಂಧನದ ಮೂಲಕ ವಾಸ್ತವಜಗತ್ತನ್ನು ಎದುರಿಸಲು ಸಿದ್ಧಳಾಗಿ ನಿಂತ ಸೊಸೆಯೇ ಗೃಹಿಣಿ. ತವರು ಮನೆಯ ಹಂಬಲ ಕಡಮೆಯಾಗಿ ಗಂಡನ ಮನೆಯನ್ನೇ ತನ್ನ ಶಾಶ್ವತ ನಿಲಯವನ್ನಾಗಿ ಪರಿಗಣಿಸಿ, ಅಲ್ಲಿ ಆನಂದ, ಶಾಂತಿ, ಸುಖಗಳು ನೆಲಸುವಂತೆ ಮಾಡುವ ಮಹತ್ತರಜವಾಬ್ದಾರಿಯನ್ನು ಹೊತ್ತುಕೊಂಡುಅದಕ್ಕಾಗಿ ತನ್ನನ್ನೇ ಅರ್ಪಿಸಿಕೊಂಡ ಹೆಣ್ಣು ತನ್ನ ಮಹತ್ತರವಾದ ಗೃಹಿಣೀ ಧರ್ಮವನ್ನು ಅತ್ಯುತ್ತಮವಾಗಿ ಪರಿಪಾಲಿಸುತ್ತಾಳೆ. ತನ್ನ ಪಾವಿತ್ರ್ಯತೆಯಿಂದ ಸನ್ನಡತೆಯಿಂದ ಉತ್ತಮಿಕೆಯನ್ನು ಪಡೆದ ಗೃಹಿಣಿಯರು ನಿರಾತಂಕವಾಗಿ ಧರ್ಮವನ್ನು ಪಾಲಿಸಿರುವುದರಿಂದಲೇ ಅವರಿಗೆ'ಸಹಧರ್ಮಿಣಿ' ಎಂಬ ಹೆಸರು ಬಂದಿರಬಹುದೇನೋ ! ಗೃಹಕಾರ್ಯ ನಿರ್ವಹಣೆಯಿಂದ ಆಕೆಗೆ ಮುಕ್ತಿಯಿಲ್ಲ. ನಿಸರ್ಗ ಕರುಣಿಸಿದ ತಾಯ್ತನದ ಹೊರೆಹೊತ್ತು ತನ್ನ ಅಸೀಮ ತ್ಯಾಗದ ಬಲದಿಂದ ಮನೆಮಂದಿಯ, ಪತಿಯ ಅನುಕಂಪ, ಸಹಾನುಭೂತಿ, ಪ್ರೇಮಗಳನ್ನು ಗಳಿಸಿಕೊಳ್ಳುತ್ತಾಳೆ. ತ್ಯಾಗವೇ ತನ್ನ ಉಸಿರಾಗಿ ಬಾಳುವ ಗೃಹಿಣಿ ಅಮೋಘ ಆಧ್ಯಾತ್ಮಿಕ ಬಲವನ್ನು ಪಡೆದಿರುತ್ತಾಳೆ. ಯಾವುದು ಧರ್ಮ ಯಾವುದು ಅಧರ್ಮ, ಎಂಬುದನ್ನು ತಿಳಿದುಕೊಳ್ಳುವ ಅದ್ಭುತ ವಿವೇಚನಾಸಾಮರ್ಥ್ಯವನ್ನು ಪಡೆದಿರುತ್ತಾಳೆ. ಗೃಹದೇವತೆಯಾಗಿ ರಾರಾಜಿಸುತ್ತಾಳೆ. ಆದ್ದರಿಂದಲೇ 'ಗೃಹಿಣೀ ಗೃಹಮುಚ್ಯತೇ' ಎಂಬ ಉಕ್ತಿಯಂತೆ ಗೃಹಿಣಿಯೇ ಗೃಹಕ್ಕೆ ಶೋಭೆಯನ್ನೀಯುತ್ತಾಳೆ. ಮಾನವ ಜೀವನದಲ್ಲಿ ಸಮಾಜವೆಂಬುದು ಒಂದು ಅನಿವಾರ್ಯ ಅಂಗ; ಕುಟುಂಬವೊಂದು ಸಾಮಾಜಿಕ ಸಂಸ್ಥೆ; ಮನೆ ಎಂಬುದು ಸಮಾಜದ ಒಂದು ಭಾಗ; ಈ ಮನೆಯಲ್ಲಿ ವಾಸಮಾಡುವುದು ಒಂದು ಸಂಸಾರ ; ಈ ಸಂಸಾರದಲ್ಲಿ ಪುರುಷ ಮತ್ತು ಸ್ತ್ರೀ ಇವರು ವೈವಾಹಿಕ ಧರ್ಮಬಂಧನದಿಂದ ಬದ್ಧರಾಗಿ ದಾಂಪತ್ಯ ಜೀವನವನ್ನು ಅನುಭವಿಸುವುದು ನಿಯಮ ; ಇದು ಧರ್ಮಬದ್ಧವಾದುದು. ಸಂಸಾರರಥವು ಸುಗಮವಾಗಿ ಮುಂದೆ ಸಾಗಬೇಕಾದರೆ ಸ್ತ್ರೀ ಪುರುಷರೆಂಬ ಎರಡು ಗಾಲಿಗಳು ಸರಿಯಾಗಿ ಚಲಿಸಬೇಕು. ಧರ್ಮದೃಷ್ಟಿ ಅವರಲ್ಲಿರುವುದರಿಂದಲೇ ಸಂಸಾರವೆಂಬ ರಥ ಸುಸೂತ್ರವಾಗಿ ಮುಂದುವರಿಯುತ್ತದೆ; ಧಾರ್ಮಿಕ ಕಟ್ಟುಕಟ್ಟಳೆಗಳಿಗೆ ಬದ್ಧರಾಗಿರುವ ದಂಪತಿಗಳಿಗೆ ಸಮಾಜದಲ್ಲಿ ಒಳ್ಳೆಯ ಸ್ಥಾನಮಾನಗಳು ಲಭ್ಯವಾಗುತ್ತವೆ. ಸಾಮಾಜಿಕದೃಷ್ಟಿಯಿಂದ ನೋಡಿದರೆ ಪುರುಷನ ಜೀವನ ಮಹಿಳೆಯಿಂದ ಪೂರ್ಣವಾಗುತ್ತದೆ ; ಹಾಗೆಯೇ ಮಹಿಳೆಯ ಜೀವನವೂ ಸಹ. ಮನೆಯ ಶಾಂತಿ, ಸಮಾಧಾನ, ತೃಪ್ತಿ, ಸಂತೋಷಗಳು ಸಮಾಜದ ಮೇಲೂ ತಮ್ಮ ಪ್ರಭಾವವನ್ನು ಬೀರುತ್ತವೆ. ಗೃಹಿಣಿ ತನ್ನ ಮನೆಯ ಹಕ್ಕಿನ ಯಜಮಾನಿ. ವೈವಾಹಿಕ ಜೀವನದಲ್ಲಿ 'ಗೃಹಿಣಿ' ಎಂಬ ಅಭಿಧಾನವನ್ನು ಗಳಿಸಿದ ಮಹಿಳೆ ತನ್ನ ಧರ್ಮಬಲದಿಂದ ಮನೆಯ ಸುಖಶಾಂತಿಗಳನ್ನು ಹೆಚ್ಚಿಸುತ್ತಾಳೆ. ಆದ್ದರಿಂದಲೇ 'ಗೃಹಂ ತು ಗೃಹಿಣೀಹೀನಂ ಕಾಂತಾರಾದತಿರಿಚ್ಯತೇ' ಎಂಬ ಆರ್ಯೋಕ್ತಿಯಂತೆ ಗೃಹಿಣಿಯಿಲ್ಲದ ಮನೆ ಗೃಹವೆನಿಸಲಾರದು. ಗೃಹಿಣಿಗೆ ಸ್ವತಂತ್ರವಾದ ವ್ಯಕ್ತಿತ್ವವೊಂದಿದೆ. ಅವಳಲ್ಲಿರುವ ದೈಹಿಕ ಭಿನ್ನತೆಯು ಆಕೆಯ ಸ್ವಭಾವದಲ್ಲೂ, ನಡತೆಯಲ್ಲೂ, ವ್ಯಕ್ತಿತ್ವದಲ್ಲೂ ಒಂದು ಬಗೆಯ ವೈಶಿಷ್ಟ್ಯವನ್ನು ತರುತ್ತದೆ ; ಇದೇ ಆಕೆಯ ಬಾಳಿಗೆ ಶ್ರೀರಕ್ಷೆ. ಆಕೆ ಸ್ವಭಾವತಃ ಸ್ನೇಹಶೀಲೆ, ಸಹನಾಮಯಿ, ದಯೆ, ಕ್ಷಮೆ, ತಾಳ್ಮೆ ಮುಂತಾದ ಸದ್ಗುಣಗಳ ಖಣಿ ; ಆದ್ದರಿಂದಲೇ ಕುಟುಂಬದ ನಿರ್ವಹಣೆಯಂತಹ ಗುರುತರವಾದ ಹೊಣೆಗಾರಿಕೆಯನ್ನು ಆಕೆ ಅತ್ಯಂತ ಚಾಕಚಕ್ಯತೆಯಿಂದ ನಿರ್ವಹಿಸುತ್ತಾಳೆ. ತೊಡೆ ಬಿಟ್ಟು ಅಂಗಳಕ್ಕಿಳಿದ ಮಗುವಿನೊಡನೆ ಗೃಹಿಣಿಗೆ ಅನೇಕ ಮುಖಗಳ ಪರಿಚಯವಾಗುತ್ತದೆ. ಕುಟುಂಬ ಕುಟುಂಬ

ಗಳೊಳಗಿನ ಆಪ್ತಬಾಂಧವ್ಯ ಕುದುರುತ್ತದೆ. ಇದರಿಂದ ಸಮಾಜಕಲ್ಯಾಣವೂ ಆಗುತ್ತದೆ. ಬೆಳೆಯುತ್ತಿರುವ ಮಕ್ಕಳ ಶೀಲ, ನಡತೆಗಳನ್ನು ತಿದ್ದಿ, ರೂಪಿಸಿ, ಅವರನ್ನು ನಾಳಿನ ಸತ್‌ಪ್ರಜೆಗಳನ್ನಾಗಿ ಬೆಳೆಸುವ ಶ್ರಮಸಾಧ್ಯವಾದ ಕೆಲಸವನ್ನು ತನ್ನ ಧರ್ಮವೆಂದು ಮಹಿಳೆ ಪ್ರೀತಿಯಿಂದ ನಿರ್ವಹಿಸುತ್ತಾಳೆ. ಮಕ್ಕಳ ಪೋಷಣೆ, ಗೃಹನಿರ್ವಹಣೆ, ಗೃಹಿಣಿಯ ಸರ್ವಶಕ್ತಿಗಳನ್ನು ಆಕರ್ಷಿಸುತ್ತದೆ. ಮಕ್ಕಳ ಸುಖಸಂತೋಷಗಳಲ್ಲಿ ಧನ್ಯತೆಯನ್ನು ಕಂಡ ತಾಯಿಯನ್ನು ನೋಡಿಯೇ-'ಕುಪುತ್ರೋ ಜಾಯೇತ್; ಕುಮಾತಾ ನಭವತಿ' ಎಂಬ ನುಡಿ ಹೊರಮೂಡಿರಬೇಕು. ಆದ್ದರಿಂದಲೇ 'ಮಾತೃದೇವೋ ಭವ' ಎಂದು ತಾಯಿಗೆ ಪೂಜ್ಯಸ್ಥಾನ ಸಂದಿರಬೇಕು. ಆಕೆ "ರೂಪೇಷು ಲಕ್ಷ್ಮೀ, ಕಾರ್ಯೇಷು ದಾಸೀ, ಕರಣೇಷು ಮಂತ್ರಿ, ಕ್ಷಮಯಾ ಧರಿತ್ರೀ, ಭೋಜ್ಯೇಷು ಮಾತಾ, ಶಯನೇಷು ವೇಶ್ಯಾ"-ಆಗಿ ಮನೆಯನ್ನು ಬೆಳಗುತ್ತಾಳೆ. ಇದು ಆಕೆಯ ಧರ್ಮ. ಪ್ರೊ. ಕೆ. ಗಲಗಲಿಯವರು ಹೇಳಿರುವಂತೆ, "ಪತ್ನಿಯಿಂದ ಪತಿಗೆ ತೃಪ್ತಿ, ಪತಿಯಿಂದ ಪತ್ನಿಗೆ ತೃಪ್ತಿ. ಯಾವ ವಂಶದಲ್ಲಿ ಪ್ರೀತಿ, ತೃಪ್ತಿ, ತುಷ್ಟಿಗಳುಂಟಾಗುವುವೋ ಆ ವಂಶದಲ್ಲಿ ನಿತ್ಯ ಶ್ರೀ ಮಂಗಳಗಳು ನಿಶ್ಚಿತ. ಹೆಣ್ಣು ಕಣ್ಣೀರಿಟ್ಟ ಮನೆ ಉದ್ಧಾರವಾಗುವುದಿಲ್ಲವೆಂದು ಹೇಳಿ ಧರ್ಮಪ್ರತಿಪಾದಕರು

> "ಶೋಚಂತಿ ಜಾಮಯೋ ಯತ್ರ ವಿನಶ್ಯತ್ಯಾಶು ತತ್ಕುಲಂ ।
> ನ ಶೋಚಂತಿ ತು ಯತ್ರೈತಾ ವರ್ಧತೇ ತದ್ಧಿ ಸರ್ವದಾ ।"

ಎಂದು ಹೇಳಿದ್ದಾರೆ.

ನಮ್ಮ ಭವ್ಯಪರಂಪರೆಯಲ್ಲಿ ಮಹಾಸಾಧ್ವಿಯರೆಂದೂ ಧರ್ಮಪರಾಯಣೆಯರೆಂದೂ ಖ್ಯಾತಿವೆತ್ತ ಮಹಿಳೆಯರು ಆಗಿಹೋಗಿದ್ದಾರೆ. ವಿಶ್ವವರಾ, ಘೋಷಾ, ಲೋಪಾಮುದ್ರಾ ಮುಂತಾದ ಅನೇಕ ಸ್ತ್ರೀಯರು ವೇದಗಳ ಋಕ್ಕುಗಳನ್ನು ರಚಿಸಿದ್ದಾರೆ; ಉಜ್ವಲ ಬಾಳನ್ನು ನಡೆಸಿದ್ದಾರೆ. ಉತ್ತರ ವೈದಿಕಕಾಲದ ಛಾಂದೋಗ್ಯ ಉಪನಿಷತ್ತು ಮತ್ತು ಬೃಹದಾರಣ್ಯಕ-ಇವುಗಳಲ್ಲಿ ಸ್ತ್ರೀಯರ ಜೀವನಚರಿತ್ರೆಗಳು ನಿರೂಪಿತವಾಗಿವೆ. ಬೃಹದಾರಣ್ಯಕದ ೨ನೆಯ ಅಧ್ಯಾಯವನ್ನು 'ಮೈತ್ರೇಯುಪನಿಷತ್' ಎಂದು ಕರೆಯಲಾಗಿದೆ.

> "ಅಸತೋ ಮಾ ಸದ್ಗಮಯ, ತಮಸೋ ಮಾ ಜ್ಯೋತಿರ್ಗಮಯ,
> ಮೃತ್ಯೋರ್ಮಾಂ ಅಮೃತಂಗಮಯ'-

ಎಂಬ ಈ ವಿದ್ವತ್ ಮಾನ್ಯ ಶ್ಲೋಕವನ್ನು ಯಾಜ್ಞವಲ್ಕ್ಯನ ಪತ್ನಿಯಾದ ಮೈತ್ರೇಯಿ ರಚಿಸಿದ್ದಳೆಂದು ತಿಳಿದು ಬರುತ್ತದೆ. ಅಂದಿನ ಮಹಿಳೆಯರು ಮುಟ್ಟಿದ ಧಾರ್ಮಿಕ ಉನ್ನತಿಯನ್ನು ಈ ಶ್ಲೋಕದಲ್ಲಿ ಕಾಣಬಹುದು. ಆದ್ದರಿಂದಲೇ "ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ"-ಎಂಬ ಶ್ಲೋಕದಲ್ಲಿ ಸ್ತ್ರೀಯರಿಗೆ ಕೊಟ್ಟ ಉನ್ನತಸ್ಥಾನವನ್ನು ಕಂಡಾಗ ಅಚ್ಚರಿಯಾಗುತ್ತದೆ. ಯಾಜ್ಞವಲ್ಕ್ಯನೊಡನೆ ವಾದಮಾಡಿ ಮಹಾ ಪಂಡಿತೆಯೆನಿಸಿದ ಗಾರ್ಗಿ, ಮಹಾನ್‌ವಿಭೂತಿ ಪುರುಷರಾದ ಆದ್ಯ ಶಂಕರಾಚಾರ್ಯರಿಗೂ ಮಂಡನ ಮಿಶ್ರನಿಗೂ ನಡೆದ ಧಾರ್ಮಿಕ ಚರ್ಚೆಯಲ್ಲಿ ಮಧ್ಯವರ್ತಿಯಾಗುವ ಘನತೆಯನ್ನು ಪಡೆದು ತನ್ನ ಗಂಡನು ಚರ್ಚೆಯಲ್ಲಿ ಸೋತಾಗ, ಪಕ್ಷಪಾತವೆಸಗದೆ ಶಂಕರಾಚಾರ್ಯರಿಗೆ ಜಯಪತ್ರವನ್ನಿತ್ತು ಉನ್ನತ ಆದರ್ಶವನ್ನು ಮೆರೆದ ಭಾರತೀ-ಇವರೆಲ್ಲ ಧರ್ಮಪರಾಯಣೆಯರಾಗಿ ಭಾರತೀಯ ಧಾರ್ಮಿಕಕ್ಷೇತ್ರದಲ್ಲಿ ಅಜರಾಮರರಾಗಿದ್ದಾರೆ. ಧರ್ಮಭೀರುವಾದ ಮಹಿಳೆಗೆ ಎಲ್ಲ ಕಾಲಗಳಲ್ಲಿಯೂ ಆಕೆಯ ಧರ್ಮವೇ ರಕ್ಷಣೆ ನೀಡಿರುವುದನ್ನು ಪುರಾಣ ಇತಿಹಾಸಗಳಲ್ಲಿ ಕಾಣಬಹುದು.

ಬೌದ್ಧಾಗಮದಲ್ಲಿ ಸಮೂದಿತವಾದ ೭ ರತ್ನಗಳಲ್ಲಿ ಸ್ತ್ರೀರತ್ನವೂ ಒಂದೆಂದು ಪರಿಗಣಿಸಲಾಗಿದೆ. ಜೈನಾಗಮಗಳಲ್ಲಿ ವರ್ಣಿತವಾದ ೧೪ರತ್ನಗಳಲ್ಲಿ ಸ್ತ್ರೀರತ್ನವೂ ಒಂದೆಂದು ಪರಿಭಾವಿಸಲಾಗಿದೆ. ರಾಮಾಯಣದ ಸೀತೆ, ಮಂಡೋದರಿ, ತಾರಾ, ಊರ್ಮಿಳೆ ಮೊದಲಾದವರು ಆದರ್ಶಗೃಹಿಣಿಯರಾಗಿ, ಧರ್ಮಾಚರಣೆಗಳಿಂದ

ಚಿರಸ್ಮರಣೀಯರಾಗಿದ್ದಾರೆ. ಅಯೋಧ್ಯಾನಗರದ ಸಾಮ್ರಾಜ್ಞಿಯಾಗಿ ಮೆರೆಯಬೇಕಾಗಿದ್ದ ಸೀತಾದೇವಿ ತನ್ನ ಸತೀಧರ್ಮ ಪರಿಪಾಲನೆಗಾಗಿ ವನವಾಸಕ್ಕೆ ತೆರಳಿದರೆ, ಧರ್ಮೇಚ, ಅರ್ಥೇಚ, ಕಾಮೇಚ ಲಕ್ಷ್ಮಣನನ್ನು ವರಿಸಿದ ಊರ್ಮಿಳೆ ಲಕ್ಷ್ಮಣನು ಶ್ರೀರಾಮಸೀತೆಯರೊಡಗೂಡಿ ವನವಾಸಕ್ಕೆ ತೆರಳಿದಾಗ "ಪ್ರಾಣೇಶ ಲಕ್ಷ್ಮಣಂ ರಾಮಸೀತೆಯರೊಡನಯೋಧ್ಯೆಯಂ ಬಿಟ್ಟಂದು ತೊಟ್ಟು ಸರಯೂ ನದೀ ತೀರದೊಳ್ ಪರ್ಣಕುಟಿಯಂ ರಚಿಸಿ, ಚಿರತಪಸ್ವಿನಿಯಾಗಿ ಕಟ್ಟಿದಳ್ ಚಿತ್ತಪ್ರೇಮಂಗಳರಕ್ಷೆಯಂ ಮೈಥಿಲಿಗೆ ರಾಮಂಗೆ ಮೇಣ್ ತನ್ನಿನಿಪ ದೇವಂಗೆ"—* ಹೀಗೆ ಆಕೆ ನಿರವವಧಿಯಾಗಿ ತನ್ನ ಧರ್ಮವನ್ನು ಪಾಲಿಸಿದ್ದಾಳೆ. ಸೀತಾಮಾತೆಯು ತನ್ನ ನೈತಿಕಬಲ, ಮನೋಬಲ, ಹಾಗೂ ಪಾತಿವ್ರತ್ಯಗಳ ಬಲದಿಂದ ತನ್ನ ಸತೀತ್ವವನ್ನು ರಕ್ಷಿಸಿ, ದುಷ್ಟ ರಾವಣನ ನೀಚ ಹೃದಯದಲ್ಲೂ ದೈವಿಕತೆಯ ಬೆಳಕನ್ನು ಹರಡಿದರೆ, ಲೋಕೋತ್ತರನಾದ ಪತಿಯನ್ನೇ ಪಡೆದು ಲಂಕಾ ನಗರದ ರಾಣಿಯಾಗಿ, ವರಪುತ್ರನನ್ನೇ ಪಡೆದಿದ್ದರೂ, ಮಂಡೋದರಿಯು ಪತಿಯ ಮಹಾದೋಷದ ದೆಸೆಯಿಂದ ತಾನೂ ನೊಂದು, ಬೆಂದು, ಪತಿಯ ಉದ್ಧಾರಕ್ಕಾಗಿಯೂ ಮಹಾಸತಿ ಸೀತೆಯ ಸತೀತ್ವ ರಕ್ಷಣೆಗಾಗಿಯೂ ದೀಕ್ಷೆತೊಟ್ಟು, ಅದಕ್ಕಾಗಿ ತನ್ನ ಪ್ರಾಣವನ್ನೇ ಬಲಿಗೊಟ್ಟು ಜಗದ್ವಂದ್ಯಳಾಗಿದ್ದಾಳೆ. ಮಹಾಭಾರತದ ದ್ರೌಪದಿ ತನ್ನ ಧರ್ಮಬಲವೊಂದರಿಂದಲೇ ವಸ್ತ್ರಾಪಹರಣದಂತಹ ಭಯಂಕರ ಸನ್ನಿವೇಶವನ್ನು ಎದುರಿಸಿದ್ದಾಳೆ. ಅಂಧನಾದ ಧೃತರಾಷ್ಟ್ರನನ್ನು ವರಿಸಿ, ಪತಿಗಿಲ್ಲದ ದೃಷ್ಟಿಸುಖ ತನಗೂ ಬೇಡವೆಂದು ಜೀವಮಾನ ಪರ್ಯಂತ ಕಣ್ಣಿಗೆ ಬಟ್ಟೆಯನ್ನು ಕಟ್ಟಿಕೊಂಡು ಪತಿಪರಾಯಣೆಯೆನಿಸಿದ ಗಾಂಧಾರಿ ಅರಿವಿನ ಕಣ್ಣನ್ನು ನಿಚ್ಚಳವಾಗಿ ತೆರೆದಿದ್ದಾಳೆ. ನ್ಯಾಯದ ನಂದಾದೀವಿಗೆಯೆದುರು ನಿಚ್ಚಸಿಚ್ಚಳವಾದ ಅವಳ ಧರ್ಮದೃಷ್ಟಿಗೆ ದುರ್ಯೋಧನನೂ ಅಷ್ಟೇ, ಧರ್ಮರಾಜನೂ ಅಷ್ಟೇ. ಒಂದು ದೃಷ್ಟಿಯಿಂದ ಧರ್ಮನಂದನನೇ ಹತ್ತಿರ. ಆದ್ದರಿಂದಲೇ ವ್ಯಾಸನು ಆಕೆಯನ್ನು "ಧರ್ಮಜ್ಞಾ ದೂರದರ್ಶಿನೀ" ಎಂದಿದ್ದಾರೆ. ಯುದ್ಧಕ್ಕೆ ಹೊರಟ ಮಕ್ಕಳಿಗೆ—"ಯತೋಧರ್ಮ ಸ್ತತೋ ಜಯಃ" ಎಂದು ನಿರ್ಲಿಪ್ತಳಾಗಿ ಹರಸಿದ್ದಾಳೆ ಆಕೆ. ಹೀಗೆ ಧಾರ್ಮಿಕ ರಂಗದಲ್ಲಿ ನಮ್ಮ ಹಿಂದಿನ ಮಹಿಳೆಯರು ಪಡೆದ ಉನ್ನತಮಟ್ಟವನ್ನು ವಿಶದೀಕರಿಸಬಹುದು. ಶಿವಶರಣರಂತೂ ಧಾರ್ಮಿಕಕ್ಷೇತ್ರದಲ್ಲಿ ಮಹಿಳೆಯರಿಗೆ ಸಮಾನ ಸ್ಥಾನಮಾನವನ್ನಿತ್ತು "ಹೆಣ್ಣು ಮಾಯೆಯಲ್ಲ, ಮಣ್ಣು ಮಾಯೆಯಲ್ಲ, ಮನದ ಮುಂದಣ ಆಸೆಯೇ ಮಾಯೆ" ಎಂದೂ "ಹೆಣ್ಣು ಹೆಣ್ಣಲ್ಲ. ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ" ಎಂದು ಸಿದ್ಧರಾಮನು ಅವರ ಮಹತಿಯನ್ನು ಸಾರಿದರೆ, ಬಸವಣ್ಣನು "ಶರವಧುವನು ಮಹಾದೇವಿ ಎಂಬೆ ಕೂಡಲಸಂಗಮದೇವಾ" ಎಂದು ಧಾರ್ಮಿಕರಂಗದಲ್ಲಿ ಮಹಿಳೆಗೆ ಸಮಾನ ಸ್ಥಾನ ನೀಡಿದ್ದಾರೆ. 'ದಾನಚಿಂತಾಮಣಿ'ಯಾಗಿ ಅತ್ತಿಮಬ್ಬೆ ಖ್ಯಾತಿಪಡೆದರೆ "ದಾನಮೊಳನ್ನದಾನಮೆ, ಸಾನಂ ದೀನಾನಾಥರ್ಗೆ ತುಷ್ಟಿದಾನಂ" ಎನ್ನುವ ಜಕ್ಕಿಯಬ್ಬೆ, ತಿಬ್ಬಲದೇವಿ, ಚಂದ್ರಿಕಾದೇವಿ, ಶಾಂತಲಾ-ಇವರೆಲ್ಲ ತಮ್ಮ ಧರ್ಮ ಕಾರ್ಯಗಳಿಂದ ಶಾಸನಗಳಲ್ಲಿ ಅಮರರಾಗಿದ್ದಾರೆ. ಸತಿಯಾಗಿ ಮಹಿಳೆ ಹಿಂದಿನಿಂದ ಪುರುಷನೊಂದಿಗೆ ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕಾರ್ಯಗಳಲ್ಲಿ ಜೊತೆಜೊತೆಯಾಗಿ ನಡೆದು ಬಂದಿದ್ದಾಳೆಯಲ್ಲದೆ ಅನೇಕ ಸಲ ಅವನಿಗೆ ಮಾರ್ಗದರ್ಶಕಳೂ ಆಗಿದ್ದಾಳೆ.

ಹಾಗಿದ್ದರೆ ಧರ್ಮದ ಸಂದೇಶವೇನು? ಮಹಿಳೆಯರೇಕೆ ಇದನ್ನು ಪಾಲಿಸುತ್ತಾರೆ ಎಂದು? ವಿವೇಚಿಸಿದರೆ. ನಮ್ಮ ಜೀವನವು ಸುಭದ್ರವಾದ ತಳಹದಿಯಲ್ಲಿ ನಿಂತು ಮಾನಸಿಕ ತುಮುಲ, ಕ್ಷೋಭೆ, ಗೊಂದಲ, ಗಡಿಬಿಡಿಗಳಿಗೆ ಒಳಗಾಗದೆ, ಸಮಚಿತ್ತದಲ್ಲಿ ಮುಂದುವರಿಯಲು ಧರ್ಮ ನಮಗೆ ಮಾರ್ಗದರ್ಶನ ನೀಡುತ್ತದೆ. ಧರ್ಮ

---

*ಶ್ರೀರಾಮಾಯಣದರ್ಶನಂ—ಕುವೆಂಪು

ಮಾರ್ಗದಲ್ಲಿ ನಡೆದವನಿಗೆ ಕೇಡಾಗದೆಂಬ ಮನೋಭಾವನೆ ನಮ್ಮನ್ನು ಕ್ಷಣಕ್ಷಣಕ್ಕೂ ಧರ್ಮಮಾರ್ಗದಲ್ಲಿ ಮುಂದುವರಿಯಲು ಪ್ರಚೋದನೆಯನ್ನೀಯುತ್ತದೆ.

ಸರ್ವೇ ಭವಂತು ಸುಖಿನಃ ಸರ್ವೇಸಂತು ·ನಿರಾಮಯಾಃ
ಸರ್ವೇ ಪಶ್ಯೇತು ಭದ್ರಾಣಿ ಮಾಕಶ್ಚಿತ್ ದುಃಖಬಾಗ್ಭವೇತ್

ಎಂಬ ಶ್ಲೋಕದಂತೆ ಸರ್ವರೂ ಸುಖಶಾಂತಿಯಿಂದ ನಿರಾತಂಕವಾಗಿ ಬಾಳಬೇಕೆಂಬುದೇ ಧರ್ಮದ ಸಂದೇಶ ; ನಮ್ಮ ಬಾಳಿಗೆ ಧರ್ಮವೇ ಶ್ರೀರಕ್ಷೆ.

ಮಹಿಳೆಯರು ಮನೆಕಟ್ಟಬಲ್ಲರು ; ಮನಕೂಡಿಸಬಲ್ಲರು ; ರಚನಾತ್ಮಕ ಕಾರ್ಯಗಳಲ್ಲಿ ಅವರು ದೊಡ್ಡ ಶಕ್ತಿಯಾಗಿದ್ದಾರೆ. ಆದ್ದರಿಂದಲೇ 'A Woman can make a fool out of man or man out of a fool' ಎಂಬ ಉಕ್ತಿಯಂತೆ ಧರ್ಮಪರಾಯಣೆಯಾದ ಮಹಿಳೆ ಪತಿ ಎಷ್ಟೇ ದುಷ್ಟನಾದರೂ ಆತನನ್ನು ಸನ್ಮಾರ್ಗಕ್ಕೆ ತರಬಲ್ಲಳು. ಧರ್ಮಪಾಲನೆಯ ದೃಷ್ಟಿಯಲ್ಲಿ ಮಹಿಳೆ ಪುರುಷನಿಗಿಂತ ಹಿಂದೆ ಇಲ್ಲ. ಆಕೆಯ ಕೋಮಲಾಂತಃಕರಣ, ದಯಾಮಯ ಹೃದಯ, ಪ್ರೇಮಮಯ ಮನೋವೃತ್ತಿ, ಪರೋಪಕಾರ–ಮುಂತಾದ ಗುಣಗಳ ಮೂಲಕ ಭಾವಿಕತನವು ಹೆಚ್ಚಿ ಧರ್ಮತತ್ತ್ವಗಳು ಅವಳ ಹೃದಯದಲ್ಲಿ ಮನೆಮಾಡಿಕೊಳ್ಳುತ್ತವೆ. ಭರತಖಂಡದಲ್ಲಿ ಇಂತಹ ಸಂಧಿಕಾಲದಲ್ಲಿಯೂ ಧರ್ಮ ನಿಂತಿರುವುದಾದರೂ ಸ್ತ್ರೀಯರಿಂದಲೇ ಎಂದರೆ ತಪ್ಪಾಗದು. ಅನೇಕ ಧರ್ಮಗಳ ತವರಾಗಿರುವ ಭಾರತವು ಧರ್ಮಮಾರ್ಗಾವಲಂಬಿಗಳಾದ ಮಹಿಳಾಮಣಿಯರ ದಿವ್ಯ ಇತಿಹಾಸದಿಂದ ಕಂಗೊಳಿಸುತ್ತಿದೆ. ಶಾಂತಿಸಂದೇಶವನ್ನು ಬೀರುವಂತಹ ಮತ್ತು ಭಾರತೀಯರ ಜನಜೀವನಕ್ಕೆ ತಳಹದಿಯಾದ ಅನೇಕ ಧರ್ಮಗಳು ವಿದೇಶೀಯರ ಗಮನವನ್ನು ಸೆಳೆದಿವೆ.

ನಮ್ಮ ದೇಹಕ್ಕೆ ಅನ್ನ, ನೀರು,ಬೆಳಕು—ಇವು ಎಷ್ಟು ಅಗತ್ಯವೋ ಅಷ್ಟೇ ಅಧ್ಯಾತ್ಮ ಜೀವನವಿಕಾಸಕ್ಕೆ ಧರ್ಮಬೇಕು. ಇಂದು ಆಚಾರವೆಂಬುದು ಡಂಭಾಚಾರವಾಗಿ, ನಿಜವಾದ ತಿಳಿವಳಿಕೆಯನ್ನು ಕಳೆದುಕೊಂಡಿರುವುದರಿಂದ ಧರ್ಮಾಚರಣೆಯ ಹಿನ್ನೆಲೆಯಾಗಿರುವ ತತ್ತ್ವಗಳ ಅಭ್ಯಾಸ ಮಹಿಳೆಗಿಲ್ಲ. ಆದರೆ ನಮ್ಮ ಸಮಾಜವು ಧಾರ್ಮಿಕ ತಳಹದಿಯ ಮೇಲೆ ರಚಿತವಾಗಿದೆ. ನಾವು ಹಿಂದಿನಂತೆ ಇಂದೂ ಸಹ ಧರ್ಮಾಚರಣೆ ಮಾಡಲು ಸಾಧ್ಯವೇ ? ಗೃಹಿಣಿಯಾಗಿ ಕೇವಲ ಗೃಹವನ್ನಲಂಕರಿಸಿ ಮಕ್ಕಳ-ಪತಿಯ ಪಾಲನೆ-ಪೋಷಣೆ ಇವಿಷ್ಟೇ ಮಹಿಳೆಯ ಧರ್ಮವೇ ? ಎಂದು ಆಳವಾಗಿ ಚಿಂತಿಸಿದಲ್ಲಿ ಪ್ರಾಚೀನ ಕಾಲಕ್ಕೂ ಈಗಿನ ಕಾಲಕ್ಕೂ ಅಪಾರ ವ್ಯತ್ಯಾಸ ಕಾಣಬರುತ್ತವೆ. ಹಿಂದಿನ ಅರ್ಥದಲ್ಲೇ ನಾವು ಇಂದು ಧರ್ಮವನ್ನು ಪಾಲಿಸಲಾಗುವುದಿಲ್ಲ. ಇಂದು ದಿನದಿನಕ್ಕೆ ಮುಗಿಲಿಗೇರುತ್ತಿರುವ ಸಾಮಾನುಗಳ ಬೆಲೆ, ಮನೆಬಾಡಿಗೆ, ಮಕ್ಕಳ ಶಾಲಾಕಾಲೇಜು ಶಿಕ್ಷಣ ಶುಲ್ಕ, ಉಡುಗೆತೊಡುಗೆ–ಇವುಗಳಿಗೆ ತಾಗುವ ಖರ್ಚು, ಕಾಯಿಲೆ ಕಸಾಲೆಗಳು ಬಂದಾಗ ಆಗುವ ವೆಚ್ಚ ಹೀಗೆ ದೈನಂದಿನ ಜೀವನಾವಶ್ಯಕತೆಗಳಿಗಾಗಿ, ನಮ್ಮ ಜೀವನನಿರ್ವಹಣೆಗಾಗಿ ಖರ್ಚನ್ನು ತೂಗಿಸುವುದು ಕಷ್ಟವಾಗುತ್ತದೆ ; ಗಂಡನ ಸಂಪಾದನೆ ಸಾಲದಾದಾಗ ಮನೆಯಲ್ಲಿ ಸಹಜವಾಗಿಯೇ ಅಶಾಂತಿ ತಲೆದೋರುತ್ತದೆ. ಅಂತಹ ಸಂದರ್ಭಗಳಲ್ಲಿ ಮಹಿಳೆಯರು ತಾವು ಕಲಿತ ಹೊಲಿಗೆ, ಕಸೂತಿ ಮುಂತಾದ ಕಲೆಗಳನ್ನು ಉಪಯೋಗಿಸಿಕೊಂಡು ಒಪ್ಪೊತ್ತಿನ ಉದ್ಯೋಗಗಳನ್ನು ಕೈಗೊಳ್ಳಬೇಕು. ಅಥವಾ ಹೆಚ್ಚಿನ ವಿದ್ಯಾವತಿಯರು ಹಾಗೂ ವಯಸ್ಸು ಮೀರದವರು ಒಪ್ಪೊತ್ತಿನ ಉದ್ಯೋಗ ಕೈಗೊಳ್ಳಬಹುದು. ಆಗ ಅವರ ಕುಟುಂಬಜೀವನದಲ್ಲಿ ಸುಖಶಾಂತಿಗಳು ನೆಲಸುತ್ತವೆ. ಹೀಗೆ ಮಕ್ಕಳ ಹಾಗೂ ಮನೆಯ ಶಾಂತಿ ಸೌಲಭ್ಯಗಳಿಗಾಗಿ ದುಡಿಯುವುದು ಗೃಹಿಣಿಯ ಧರ್ಮವೆನಿಸುತ್ತದೆ.

ಹಿಂದೆ ಮನೆತುಂಬ ಮಕ್ಕಳಿದ್ದರೆ 'ನಂದಗೋಕುಲದಂತೆ' ಎನ್ನುತ್ತಿದ್ದರು. ಆದರೆ ಈ ಅಂಧಶ್ರದ್ಧೆಯಂತೆ ಮುಂದುವರಿದರೆ ಇಂದಿನ ಪರಿಸ್ಥಿತಿಯಲ್ಲಿ ಕಷ್ಟವಾಗುತ್ತದೆ. ತನ್ನ ಕುಟುಂಬದ ಭದ್ರತೆ, ಸುಖಶಾಂತಿ

ಗಳಿಗಾಗಿ, ಮಕ್ಕಳ ಶ್ರೇಯೋಭಿವೃದ್ಧಿಗಾಗಿ, ತನ್ನ ಆರೋಗ್ಯಕ್ಕಾಗಿ, ಮಹಿಳೆಯರಿಗಾಗಿ ಸರ್ಕಾರವು ಕೈಗೊಂಡಿರುವ ಕುಟುಂಬಯೋಜನೆಯನ್ನು ಅನುಷ್ಠಾನಕ್ಕೆ ತರುವುದು ಇಂದಿನ ಗೃಹಿಣಿಯರ ಧರ್ಮ. ಅನಾವಶ್ಯಕವಾದ ಆಡಂಬರಗಳಿಗೆ, ಮದುವೆಮುಂಜಿಗಳಿಗೆ ಹಣವನ್ನು ಪೋಲುಮಾಡದೆ ಸತ್ಕಾರ್ಯಗಳಿಗೂ, ತೀರ ಅಗತ್ಯಗಳಿಗೂ ಖರ್ಚುಮಾಡಿ ಮಕ್ಕಳ ಜೀವನ ಸುಭದ್ರವಾಗಲು ಅನುವಾಗುವಂತೆ ಉಳಿತಾಯ ಮಾಡಿ ಹಣವನ್ನು ಒಟ್ಟುಮಾಡುವುದು ವಿದ್ಯಾವಂತ ಮಹಿಳೆಯ ಇಂದಿನ ಧರ್ಮ. ಮನೆಯ ಬಾಗಿಲಿಗೆ ಬರುವ ಭಿಕ್ಷುಕರಿಗೆ ಧಾರ್ಮಿಕ ನಿಷ್ಠೆಯಿಂದ ಭಿಕ್ಷೆ ನೀಡಿದರೆ, ಆಗ ನಾವು ಅಪ್ರತ್ಯಕ್ಷವಾಗಿ ಸೋಮಾರಿಗಳ ಸಂಖ್ಯೆಯನ್ನು ಹೆಚ್ಚಿಸಿದಂತಾಗುವುದಲ್ಲದೆ, ನಾಳೆ ಅವರೇ ಮನೆಯನ್ನು ಕೊಳ್ಳೆಹೊಡೆಯುವುದೂ ಉಂಟು. ಆದ್ದರಿಂದ ಭಿಕ್ಷೆನೀಡುವುದು ಧರ್ಮಕಾರ್ಯವೆಂಬ ಹಿಂದಿನ ನಂಬಿಕೆಯನ್ನು ಈಗ ಮನಸ್ಸಿನಿಂದ ಪೂರ್ತಿಯಾಗಿ ಕಿತ್ತೊಗೆಯಬೇಕು. ಕುರುಡರಿಗೆ, ಹೆಳವರಿಗೆ, ಅಂಗವಿಕಲರಿಗೆ ಮಾತ್ರ ಭಿಕ್ಷೆ ನೀಡುವುದು ಇಂದು ಧರ್ಮವೆನಿಸುವುದು.

ಮನೆಯ ಹಿರಿಯರನ್ನು ಆತ್ಮೀಯತೆಯಿಂದ ನೋಡಿಕೊಳ್ಳಬೇಕು. ಅವರ ಕಣ್ಣಿನಿಂದ ನೀರು ತರಿಸಬಾರದು ; ಮನನೋಯಿಸಬಾರದು. ಜೀವನದ ಕರ್ತವ್ಯನಿರ್ವಹಣೆಯಲ್ಲಿ ಆಕೆಯ ಪಾತ್ರಹಿರಿದು. "ಬೆಚ್ಚನೆಯ ಮನೆಯಾಗಿ, ವೆಚ್ಚಕ್ಕೆ ಹೊನ್ನಾಗಿ, ಇಚ್ಛೆಯನರಿವ ಸತಿಯಾಗೆ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದ ಸರ್ವಜ್ಞ"–ಎಂಬ ಸರ್ವಜ್ಞನ ವಚನದಲ್ಲಿ ಸತಿಯಾಗಿ ಮಹಿಳೆಯ ಮಹತ್ವವೇನೆಂಬುದು ಅಭಿವ್ಯಕ್ತವಾಗುತ್ತದೆ. ಆದ್ದರಿಂದ ಇಂದಿನ ಮಹಿಳೆಯರು ಕೇವಲ ವಿದ್ಯಾವಂತರಾದ ಮಾತ್ರಕ್ಕೆ ನಮ್ಮ ಸಂಸ್ಕೃತಿಯ ಮೂಲವಾದ ಧರ್ಮವನ್ನು ಮೀರಿ ನಡೆಯಬೇಕಾಗಿಲ್ಲ ; ಅದು ನಮ್ಮ ಸಂಸ್ಕೃತಿಯ ಸಂವರ್ಧನೆಗೆ ಪ್ರೇರಕವೂ ಪೋಷಕವೂ ಆಗಿದೆ. ಧಾರ್ಮಿಕ ಪ್ರಜ್ಞೆಯಿದ್ದ ಮಹಿಳೆಯ ಮನಸ್ಸು ಎಂದೂ ಕೆಟ್ಟದಾರಿಗೆ ಹೊರಳುವುದಿಲ್ಲ ; ಅಸಭ್ಯರೀತಿಯಲ್ಲಿ ವರ್ತಿಸುವುದಿಲ್ಲ. ಆದ್ದರಿಂದ ಆಕೆ ಜ್ಞಾನಕ್ಕೆ ನಮೋ ಎಂದು ಧರ್ಮದ ನಿಜವಾದ ಅರ್ಥವನ್ನು ತಿಳಿದುಕೊಂಡು, ಅದನ್ನು ಅನುಷ್ಠಾನದಲ್ಲಿ ತರಬೇಕು. ಪಾಶ್ಚಾತ್ಯಸಂಸ್ಕೃತಿಯ ಅಂಧಾನುಕರಣೆಯೊಂದೇ ವಿದ್ಯಾವಂತ ಮಹಿಳೆಯ ಹೆಗ್ಗಳಿಕೆಯೆಂಬ ಸಂಕುಚಿತ ಮನೋಭಾವ ಆಕೆಗೆ ಸಲ್ಲದು. "ದಯೆಯೇ ಧರ್ಮದ ಮೂಲವಯ್ಯಾ" ಎಂಬ ಬಸವಣ್ಣನವರ ವಚನದಂತೆ ನಮ್ಮ ಸನಾತನ ಆದರ್ಶಗಳನ್ನು ಪರಿಪಾಲಿಸಿ ದೇಶದ ಜನಾಂಗದ ನಿಜವಾದ ಮಾತೆಯಾಗಿ ಬಾಳುವುದರಿಂದ ಭಾರತೀಯ ನಾರಿಗೆ ಶ್ರೇಯಸ್ಸು ದೊರೆಯುತ್ತದೆ. ಸಮಾಜದಲ್ಲಿ ಸೂಕ್ತಸ್ಥಾನಮಾನ ದೊರೆಯುತ್ತದೆ. ಆಕೆಗೆ ದೇವರ ದಯೆ ಇರುತ್ತದೆ ; ಧರ್ಮವೇ ಅವಳನ್ನು ನಿರಂತರವಾಗಿ ರಕ್ಷಿಸುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

ಸುದೀರ್ಘವಾದ ಜೀವನ ಅಷ್ಟೇನೂ ಒಳ್ಳೆಯದಲ್ಲದಿರಬಹುದು. ಆದರೆ ಒಳ್ಳೆಯ ಜೀವನ ಸಾಕಷ್ಟು ಸುದೀರ್ಘವಾದುದು.

ಎಂ. ರಾಮಕೃಷ್ಣ

ಅಭ್ಯಾಸೇನ ತು ಕೌಂತೇಯ....

ಅಭ್ಯಾಸದ ಬಗ್ಗೆ ಮಣಗಟ್ಟಲೆ ಮಾತನಾಡುವವರುಂಟು, ಆದರೆ ಆಚರಣೆಯಲ್ಲಿ ಬೆರಳೆಣಿಕೆಯಷ್ಟೇ ಸರಿ. ಅಭ್ಯಾಸದ ಅಭಾಸ ಅಗಾಧವಾಗಿ ಕಂಡುಬರುತ್ತದೆ. ಆ ಅಗಾಧತೆಯ ಆಳತೆ ಯಾವ ಮಾನದಂಡಕ್ಕೂ ಸಿಗದಂತಾಗಿದೆ. ಯಾಂತ್ರಿಕವೂ, ಯಂತ್ರಾತ್ಮಕವೂ ('ವೈಜ್ಞಾನಿಕ' ಅಲ್ಲ) ಆದ ಆಧುನಿಕ ಬದುಕಿನ ಜಟಕಾ ಕುದುರೆಗೆ ಕಣ್ಣಡಿಯಾಗಲೀ, ಲಗಾಮಾಗಲೀ ಇಲ್ಲದಿರುವುದರಿಂದ ಬಡ ದಾರಿಹೋಕರಿಗೆ ಪಾಡೋ ಪಾಡು. ಜಟಕಾದಲ್ಲಿ ಕುಳಿತವರಿಗೂ ಬಸವಪ್ಪಶಾಸ್ತ್ರಿಗಳ ಪಾಡಾದರೆ ? ಎಲ್ಲಾ ಕಾಲದಲ್ಲಿಯೂ ಎಲ್ಲಾ ಕಾಲಗಳಲ್ಲಿಯೂ ಅಭ್ಯಾಸದ ಬಗ್ಗೆ ಆಲೋಚನೆ, ಚರ್ಚೆ ನಡೆದಿದೆ. ಮನೋವಿಜ್ಞಾನವು ಅದನ್ನು ತಿರಸ್ಕರಿಸದೆ ಇನ್ನೂ ಹೆಚ್ಚಿನ ಸಾಧ್ಯತೆ, ಬಾಧ್ಯತೆಗಳನ್ನು ಆವಿಷ್ಕಾರಿಸಬೇಕಾಗಿದೆ.

"ಅಭ್ಯಾಸ ಎರಡನೆಯ ಸ್ವಭಾವವೆ ?" ಎಂಬ ಪ್ರಶ್ನೆಗೆ ಬಹಳಷ್ಟು ಜನರು ಹೌದು ಎಂದೇ ಹೇಳುತ್ತಾರೆ. ಡ್ಯೂಕ್ ಆಫ್ ವೆಲಿಂಗ್‌ಟನ್ ಅವರು "ಅದು ಹತ್ತುಪಟ್ಟು ಹೆಚ್ಚು ಸ್ವಭಾವ" ಎನ್ನುತ್ತಾರೆ. ನಮ್ಮ ಸ್ವಭಾವವನ್ನೂ ಬದಲಾಯಿಸುವಷ್ಟು ಶಕ್ತಿ ಅದಕ್ಕಿರುವಾಗ ಅದರ ಮಹತ್ವವನ್ನು ಗ್ರಹಿಸುವುದು ಸುಲಭಸಾಧ್ಯವಲ್ಲ. ಹೇಡಿಯು ಶೂರನಾಗುವ, ಕೃಶಕಾಯನು ದೃಢಕಾಯನಾಗುವ, ಕಳ್ಳನು ಒಳ್ಳೆಯವನಾಗುವ, ಪ್ರಕ್ರಿಯೆಯ ಮೂಲವೇ ಅಭ್ಯಾಸದಲ್ಲಿದೆ. ಅಭ್ಯಾಸ ಚರ್ಮಗತವಾಗಿದ್ದರೆ ಸಾಲದು, ಅದು ರಕ್ತಗತವಾದರೂ ಸಾಲದು, ಅಸ್ಥಿಗತವಾದರೆ ಆದೀಗ ಮಾತು. ಯಾರೋ ಒಬ್ಬ ಪುತ್ರವಿರಹಿ ಸತ್ತಾಗ ಅವನ ಮೂಳೆಯನ್ನು ನೋಡಿದರೆ ವಿರಹದಿಂದ ತೂತಾಗಿದ್ದುವಂತೆ ! ವಿರಹವೂ ಒಂದು ರೀತಿ ಅಭ್ಯಾಸವೇ. ಪುತ್ರನನ್ನು ಪ್ರೀತಿಸು ಎನ್ನುವುದು ಎಂದೋ ಹೇಗೋ ಸ್ವಭಾವವಾಗಿ, ಅಭ್ಯಾಸವಾಗಿ ಮತ್ತೆ ಸ್ವಭಾವವಾಗಿರಲಾರದೆ, ಇದರಿಂದ ಪಿತ-ಸುತರ ಸಂಬಂಧಕ್ಕೆ ಅಪಚಾರವಾಯಿತೆಂದು ಚಿಂತಿಸಬೇಕಾಗಿಲ್ಲ. ನಮ್ಮ ಇತಿಹಾಸದಲ್ಲಿ ರಕ್ತಸಂಬಂಧಿಗಳಾದ ರಾಜಮಹಾರಾಜ ಚಕ್ರವರ್ತಿಗಳನೇಕರ ನಡವಳಿಕೆಯನ್ನು ನೋಡಿದರೆ ತಿಳಿಯುತ್ತದೆ.

ಪ್ರವೃತ್ತಿಗಳು ಅಭ್ಯಾಸಗಳಾಗುವುದಾದರೆ ಅಭ್ಯಾಸಗಳು ಪ್ರವೃತ್ತಿಗಳಾಗುವುದೂ ಸಾಧ್ಯ. ಕೆಲವರು ಲೈಂಗಿಕ ಪ್ರವೃತ್ತಿ ಎಂದು ತಿಳಿಯುವುದುಂಟು. ಆದರೆ ಅದು ಅಭ್ಯಾಸವೆಂದು ? ತಿಳಿಯಬಾರದೇಕೆ ಪ್ರವೃತ್ತಿ ಎಂದೊಡನೆ ಮನ್ನಣೆಯಾಗಲೀ, ಅನಿವಾರ್ಯತೆಯಾಗಲೀ ಅದಕ್ಕೆ ಲಭಿಸಿಬಿಡುವುದುಂಟು. ಕೆಲವರಂತೂ ಪ್ರವೃತ್ತಿಗಳ ದಮನವನ್ನು ಖಂಡಿಸಿ ಬಿಸಾಡುತ್ತಾರೆ. ಒಂದು ಕಾಲದ ಅಭ್ಯಾಸವೇ ಇನ್ನೊಂದು ಕಾಲಕ್ಕೆ ಪ್ರವೃತ್ತಿಯೆಂಬ ಘನವಾದ ಹೆಸರು ಪಡೆದು ಮನುಷ್ಯನನ್ನು ದಿಕ್ಕು ತಪ್ಪಿಸುತ್ತದೆ. ಒಂದು ವಿಶ್ವವಿದ್ಯಾನಿಲಯದ ಘನ ಪ್ರಾಧ್ಯಾಪಕರೊಬ್ಬರು ತಮ್ಮ ಲೈಂಗಿಕ ಬಯಕೆಯನ್ನು ಸಮರ್ಥಿಸುತ್ತಾ ಅದು ಊಟತಿಂಡಿಗಳಂತೆ ದಿನ

ನಿತ್ಯದ ಒಂದು ನಿಯತಅಂಶವೆಂದು ಹೇಳಿರುವುದನ್ನು ನೋಡಿದರೆ ಮಾನವ ಶರೀರಶಾಸ್ತ್ರಜ್ಞರು, ಮನೋವಿಜ್ಞಾನಿಗಳು ತರಗೆಲೆಗಳಂತೆ ಹಾರಿಹೋಗುವುದಿಲ್ಲವೇಕೆ ?

ಅನುಕೂಲಕಾರಿಗಳಾದ ಅಭ್ಯಾಸಗಳನ್ನು ರೂಢಿಸಿಕೊಳ್ಳುವಂತೆಯೇ ಪ್ರತಿಕೂಲಕಾರಿಗಳಾದ ಅಭ್ಯಾಸಗಳನ್ನು ನಿವಾರಿಸಿಕೊಳ್ಳಲೇಬೇಕು. ಮಾನಸಿಕಶಕ್ತಿಯು ಕೇವಲ ಶುದ್ಧಶಕ್ತಿಯೇ. ಅದು ಪ್ರವಹಿಸುವ ಪ್ರಣಾಲಿಗಳ ಲಕ್ಷಣಗಳನ್ನು ನಾವು ನೋಡುತ್ತೇವೆ. ಅಭ್ಯಾಸಬಲದಿಂದ ದೈನಂದಿನ ಚಟುವಟಿಕೆಗಳನ್ನು ನಡೆಸುವುದು ಸುಲಭವೆಂದು ಎಲ್ಲರೂ ಒಪ್ಪುತ್ತಾರೆ. ಆದ್ದರಿಂದ ನಮ್ಮ ಮಾನಸಿಕಶಕ್ತಿಯನ್ನು ಅಭ್ಯಾಸರೂಪದಲ್ಲಿ ಕಾರ್ಯರೂಪಕ್ಕಿಳಿಸುವುದು ಉತ್ತಮವೆಂದಾಯಿತು. ಬೆಳಿಗ್ಗೆ ಏಳುವುದು, ರಾತ್ರಿ ಮಲಗುವುದು, ಕಾಫಿ ಸೇವನೆ ಮುಂತಾದ ಸಾಮಾನ್ಯ ಕ್ರಿಯೆಗಳು ಅಭ್ಯಾಸಬಲದಿಂದಲೇ ನಡೆಯುತ್ತವೆ. ಎಲ್ಲವಕ್ಕೂ ಯೋಚಿಸಿ, ಚಿಂತಿಸಿ, ನಿರ್ಧರಿಸಿ ಮಾಡುವುದೆಂದರೆ ಪ್ರಯಾಸಕರ. ಅಂತಹವನ ವೇಳೆ, ನಿರ್ಧರಿಸುವುದರಲ್ಲಿ ತಪ್ಪಾದರೆ ವಿಷಾದಿಸುವುದರಲ್ಲಿ, ಕಳೆದುಹೋಗುತ್ತದೆ. ಕ್ಷುದ್ರ ವಿಷಯಗಳ ಬಗ್ಗೆಯೂ ಪ್ರಜ್ಞಾಪೂರ್ವಕವಾಗಿಯೇ ಯೋಚಿಸಬೇಕಾಗುತ್ತದೆ. ಅದಕ್ಕೆ ಬದಲು 'ಇದನ್ನು ಮಾಡುತ್ತಿದ್ದೇನೆ' ಎಂಬ ಪ್ರಜ್ಞೆಯನ್ನಿಟ್ಟುಕೊಂಡೇ ಮಾಡದಿರುವುದೇ ಅಭ್ಯಾಸದ ಲಕ್ಷಣ. ಹೆಜ್ಜೆಹೆಜ್ಜೆಗೂ ನಿರ್ಧರಿಸುವ ಕಾರ್ಯಕ್ಕಿಳಿದರೆ ಸುಖವಿಲ್ಲ. ಡಿ. ವಿ. ಜಿ. ಹೇಳುವಂತೆ "ತಾನೆ ಕೈಬೀಸಿಕೊಳೆ ನೋವು ಜೀವರುಗಳೆ ಫಲ." ಗಾಳಿ ತಾನಾಗಿಯೇ ಬೀಸಿಬಂದರೆ ಎಷ್ಟು ಹಿತ. ಹಾಗೆ ಬೀಸಬೇಕಾದರೆ ತಕ್ಕ ವಾತಾವರಣ ಮುಖ್ಯ. ಅದಕ್ಕೆ ಅಭ್ಯಾಸವನ್ನು ರೂಢಿಸಿಕೊಳ್ಳುವುದೇ ಬೇಕಾದದ್ದು.

ಅಭ್ಯಾಸಗಳನ್ನು ರೂಢಿಸಿಕೊಳ್ಳುವುದು ಹೇಗೆ? ಇದಕ್ಕೂ ಒಂದು ನಿಯತವಾದ ಕ್ರಮವುಂಟೆ? ಪ್ರಜ್ಞಾಪೂರ್ವಕ ಪ್ರಯತ್ನ ಅವಶ್ಯಕವೆ? ಮೊದಲಾದ ಪ್ರಶ್ನೆಗಳಿಗೆ ಉತ್ತರವೆಂದರೆ ಕೆಲವು ಭಾರತೀಯ ವಿದೇಶೀಯ ಚಿಂತಕರ ಪ್ರಕಾರ 'ಹೌದು' ಎಂಬ ಉತ್ತರ ದೊರೆಯುತ್ತದೆ. ಮೊದಲು ದೃಢವಾದ ಹೆಜ್ಜೆಯಿಟ್ಟು ನುಗ್ಗಬೇಕು. 'ನಡೆಮುಂದೆ, ನಡೆಮುಂದೆ, ನುಗ್ಗಿ ನಡೆಮುಂದೆ' (ಕುವೆಂಪು) ಎಂಬ ಮಂತ್ರ, ಸನ್ನಿವೇಶಗಳ ಆಯ್ಕೆಯ ತಂತ್ರಗಳ ಸಮಾವೇಶ ಅಗತ್ಯ. ನಿರ್ಧಾರವನ್ನು ಉತ್ತಮ ಸಾಧನಗಳಿಂದ ದೃಢೀಕರಿಸಬೇಕು. ದೂರು ಅಥವಾ ಅಪಹಾಸ್ಯಗಳಿಗೆ ಸೊಪ್ಪು ಹಾಕಬಾರದು. ಹಿಡಿದ ಪಟ್ಟು ಬಿಡದ ಉಡದಂತೆ ಇದ್ದರೆ ಯಾರೂ ಎಳೆಯಲಾರರು. ಈ ನಿರ್ಧಾರ ಸುಲಭವಾಗಿ ದೃಢವಾಗಲಾರದು. ಅದಕ್ಕೆ ಮಿತಿಮೀರಿ ತೆರಿಗೆ ಕೊಡಬೇಕಾಗಬಹುದು. ನ್ಯಾಯವಾದ ತೆರಿಗೆಯನ್ನೂ ಕೊಡದೆ ತೆರಿಗೆ ಅಧಿಕಾರಿಗಳ ಕೈಗೆ ಬೀಳುವುದೇಕೆ? ಸ್ವಾಮಿ ವಿವೇಕಾನಂದರು ಒಂದು ಕಡೆ ಇಂತಹ ಪ್ರಸಂಗಗಳಲ್ಲಿ ಹೇಗೆ ವರ್ತಿಸಬೇಕೆಂಬುದನ್ನು ಸೂತ್ರಪ್ರಾಯವಾಗಿ ಹೇಳಿದ್ದಾರೆ. ಇದು ಎಲ್ಲ ಸಾಧಕರಿಗೂ ಅನ್ವಯಿಸುತ್ತದೆ. "ಲೋಕಕ್ಕೆ ಕೆಲವೊಮ್ಮೆ ವಿಲಕ್ಷಣವಾಗಿ ಕಾಣುವ ಮಾರ್ಗದಲ್ಲಿ ಹೊರಟವರನ್ನು ಕೆಲವರು ಅಥವಾ ತಿಳಿಯದ ಸಮಾಜ ಕೈತೋರಿ, ಅಪಹಾಸ್ಯಮಾಡಿ, ದಿಕ್ಕುದಾರಿಗಳಲ್ಲಿ ಛೇಡಿಸಿ ಅಪಮಾನಗೊಳಿಸಲು ಯತ್ನಿಸುತ್ತಾರೆ. ಅದಕ್ಕೆಲ್ಲಾ ಅಂಜದೆ, ಅಷ್ಟಕ್ಕೇ ಕೈಬಿಡದೆ ಮುಂದೆ ನಡೆದವರನ್ನು ಕಂಡು ಅವರ ಅಪಹಾಸ್ಯ ಪ್ರವೃತ್ತಿ ದ್ವೇಷವಾಗಿ ಮಾರ್ಪಡುತ್ತದೆ. ತೀವ್ರವಾಗಿ ದ್ವೇಷಿಸುತ್ತಾರೆ. ಎಲ್ಲಿಂದರಲ್ಲಿ ಗುಂಪು ಕಟ್ಟಿಕೊಂಡು ಹೊಂಚುಹಾಕುತ್ತಾರೆ. ಮಾತಿಗೆ ಮಾತು ಬೆಳೆದರೆ ಸಾಕೆಂದು ಕಾಯುತ್ತಾರೆ ಆಗಲೂ ಸಾಧಕರು (ಆಧ್ಯಾತ್ಮಿಕ ಮಾತ್ರವಲ್ಲ) ಶಾಂತರಾಗಿದ್ದುಕೊಂಡೇ ಜನರನ್ನು ದ್ವೇಷಿಸದೆ ತಮ್ಮ ದಾರಿಯಲ್ಲಿ ತಾವು ನಡೆದರೆ ಕೊನೆಗೆ ಅದೇ ಜನರು ಗೌರವಿಸುತ್ತಾರೆ" (ಸಾರಾಂಶ). ಇಂತಹ ಮಾತುಗಳು ನಮ್ಮ ಯೋಜನೆ ಕುಸಿಯದಂತೆ ಕಾಪಾಡುತ್ತವೆ ಅಥವಾ ಕುಸಿಯಲು ಬೇಕಾದ ಕಾರಣಗಳನ್ನೇ ಇಲ್ಲವಾಗಿಸುತ್ತವೆ.

"ಮುಂದೆ ಅಡಿಯಿಡೆ ಸ್ವರ್ಗ" (ಕುವೆಂಪು) ಎನ್ನುವುದನ್ನು ಮರೆಯದೆ, ಮಾರದೆ, ತೂರದೆ ಹೊಸ ಅಭ್ಯಾಸವು ರಕ್ತಗತವಾಗುವವರೆಗೆ ನಿರಂತರ ಅನುಸಂಧಾನ, ನಿರ್ವಹಣೆ ಮತ್ತು ಆಚರಣೆಗಳನ್ನು ಬಿಡಬಾರದು. ಈ ವಿಷಯದಲ್ಲಿ

ವಿನಾಯಿತಿ ಇರಲೇಬಾರದು. ಲೈಟು ಕಂಬವನ್ನು ಎತ್ತುವವರು ಹೇಗೆ ಒಂದೊಂದೇ ಹಾಡಿನ ಸಾಲಿಗೆ ಒಂದೊಂದು ಅಡಿ ಮೇಲೆ ಒಯ್ಯುವ ಕಾರ್ಯ ನಡೆಸುವರೆಂಬುದನ್ನು ನೋಡಿ. ವಿನಾಯಿತಿ ಎಂದರೇನೇ ಹಿನ್ನಡೆ. ಒಂದೊಂದು ಹಿನ್ನಡೆಯೂ ಮನಸ್ಸನ್ನುತಳಕ್ಕೆ ಬೀಳಿಸುತ್ತದೆ. ದಾರದ ಚಂಡಿಕೆಗೆ ಹತ್ತು ಸುತ್ತುದಾಗ ಸುತ್ತಿದ್ದಾಗ ಜಾರಿ ಬಿದ್ದರೆ ಇಪ್ಪತ್ತು ಸುತ್ತು ಬಿಚ್ಚಿ ಹೋಗುತ್ತದೆ. ಮತ್ತೆ ಸುತ್ತುವಾಗ ಗೋಜಲಾಗುತ್ತದೆ. ಆದ್ದರಿಂದ ಪ್ರಥಮ ಯತ್ನದಲ್ಲೇ ಜಯಶೀಲರಾಗಬೇಕು. ವಿದ್ಯಾರ್ಥಿ ಮೊದಲನೆಯ ಸಲವೇ ಪಾಸಾದರೆ ಅವನಿಗೆ ಸ್ಫೂರ್ತಿಬರುತ್ತದೆ. ವ್ಯಕ್ತಿಯು ಸೋತರೆ ಮುಂದಿನ ಹುಮ್ಮಸ್ಸು ಕುಗ್ಗುತ್ತದೆ. ಒಬ್ಬ ವ್ಯಕ್ತಿಗೆ ತನ್ನ ಉದ್ಯಮದ ಬಗ್ಗೆ ಸಾಕಷ್ಟು ವಿಶ್ವಾಸವಿಲ್ಲದೆ, ಕವಿ ಗಯಟೆಯವರನ್ನು ಏನು ಮಾಡಲಿ ಎಂದು ಕೇಳಿದಾಗ ಅವರು "ನಿನ್ನಕಟ್ಟೆದ ಕೈಗೆ ಮೊದಲು ಪೆಟ್ಟು ಹಾಕು" ಎಂದರಂತೆ. ದುರಭ್ಯಾಸಗಳನ್ನು (ಆರೋಗ್ಯ, ಸುಖ ಸಂತೋಷಗಳಿಗೆ ಹಾನಿಕಾರಕವಾದುವು) ಒಂದೇ ಏಟಿಗೆ ಬಿಡುವುದೋ, ಹಂತಹಂತವಾಗಿ ಬಿಡುವುದೋ ಎಂದು ಚಿಂತಿಸುವುದುಂಟು. ಒಂದೇ ಬಾರಿಗೆ ಬಿಡುವುದು ಆಘಾತವುಂಟುಮಾಡಬಹುದು. ಮನಸ್ಸನ್ನು ಆ ನಿಲುವಿಗೆ ತರಲು ಯತ್ನಿಸುತ್ತಾ ನಡೆಯಬೇಕು. ಹೊರೆ ಅತಿಯಾಗಿ ತೂಕ ತಪ್ಪಿದರೆ ಎತ್ತುಗಳು 'ಕಣಿ ಹಾಕುತ್ತವೆ'. ಹತ್ತರಿ ಹೊಡೆಯುವವರಾಗಲೀ,ಕಲ್ಲನ್ನು ಡ್ರೆಸ್‌ಮಾಡುವವರಾಗಲೀ ಒಂದೇ ಬಾರಿಗೆ ಮಾಡಲಾರರು.

ಕೆಲವರಿದ್ದಾರೆ, ದಿನಕ್ಕೊಂದು ನಿರ್ಣಯ,ಅದರಜತೆ ಪ್ರಣಯ, ಅನಂತರ ವಿಚ್ಛೇದ. ಅವರಿಗೆ ಸಂತಾನವೂ ಶೂನ್ಯ; ಸ್ಪರ್ಧೆಗಳಲ್ಲಿ ಲಾಂಗ್‌ಜಂಪ್ ಅಥವಾ ಹೈಜಂಪ್ ಮಾಡಲು ಓಡಿಬಂದ ಆಟಗಾರ ಹತ್ತಿರ ಬಂದಾಗ ನಿಂತು ಮತ್ತೆ ಹಿಂದಕ್ಕೆ ಹೋಗಿ ಪ್ರಾರಂಭಿಸುವಂತೆ. ನಾಲ್ಕಾರು ಸಾರಿ ಹೀಗೆ ಮಾಡಿದರೆ ಅವನಿಗೆ ಬಹುಮಾನವೂ ಇಲ್ಲ ಜೊತೆಗೆ ಫೌಲ್ ಕೂಡ. ಶೀಷೆಗೆ ಪೆಟ್ರೋಲ್ ತುಂಬುವಾಗ ಸ್ವಲ್ಪ ಸ್ವಲ್ಪ ಹಾಕುತ್ತಾ ಹೋದರೆ ಮೊದಲು ಹಾಕಿದ್ದು ಆವಿಯಾಗುತ್ತಾ ಹೋಗುತ್ತಿರುತ್ತದೆ. ಕೊಳವೆ ಬಾವಿ ತೆಗೆಯುವವರು ಒಂದು ಎಕರೆ ಪ್ರದೇಶದಲ್ಲಿ ಐವತ್ತು ಗುಂಡಿಗಳನ್ನು ಐವತ್ತೈವತ್ತು ಅಡಿ ತೆಗೆದರೆ ಬಂದದ್ದೇನು ? ಒಂದೇ ಕಡೆ ನೂರೈವತ್ತು ಅಡಿ ಕೊರೆದರೆ ಎಷ್ಟು ಉತ್ತಮ ಫಲ.

ಅಭ್ಯಾಸದ ತೀರ್ಮಾನ ಮೊದಲು ಮನಸ್ಸಿನಲ್ಲಿ ರೂಪತಾಳುತ್ತದೆ. ಅದನ್ನು ಕಾರ್ಯರೂಪಕ್ಕಿಳಿಸಲು ದೊರೆತ ಪ್ರಥಮ ಅವಕಾಶವನ್ನು ಕಳೆದುಕೊಳ್ಳಬಾರದು. ಒಂದು ನಿರ್ಣಯದ ಶಕ್ತಿ ಅದರ ಯಶಸ್ಸಿನ ಮೇಲೆ ಉತ್ತಮ ಫಲ ದೊರೆತಾಗಲೇ ಸಮರ್ಥನೀಯವಾಗುತ್ತದೆ. ಕೇವಲ ಆದರ್ಶವಾಕ್ಯ ಮಾಣಿಕ್ಯಕೋಶ, ಉತ್ತಮ ಮನೋಭಾವ ಲೆಕ್ಕಕ್ಕೆಬಾರವು. ಸಮಯ ಬಂದಾಗ ಅಭ್ಯಾಸವನ್ನು ಕೃತಿಗಿಳಿಸದೆ ಹೋದರೆ ವ್ಯಕ್ತಿತ್ವವೂ ಮಂಕಾಗುತ್ತದೆ. ಅಹಿಂಸೆಯ ಬಗ್ಗೆ ಭಾಷಣಮಾಡುವ ಮನುಷ್ಯ ತನ್ನ ನೆರೆಯವನು ಕಷ್ಟದಲ್ಲಿದ್ದರೂ ಸಾಲ ತೀರಿಸಲಿಲ್ಲವೆಂದು ಮನೆಯನ್ನು ಜಪ್ತಿ ಮಾಡಿಸಿದರೆ, ದಯೆಯ ಬಗ್ಗೆ ಸಭೆಯಲ್ಲಿ ಮಾತನಾಡಿ ಮನೆಗೆ ಹಸಿದ ಕುರುಡ ಭಿಕ್ಷುಕ ಬಂದರೆ ನಾಯಿ ಛೂ ಬಿಡುವುದಾದರೆ ಬಂದದ್ದೇನು? ದಯೆ, ದಾನ ಮೊದಲಾದುವೂ ಸಹ ಕಾರ್ಯರೂಪಕ್ಕಿಳಿದಾಗಲೇ ತಾನೆ ಬೆಲೆ ? ಕಾರ್ಯ ಸಾಧಿತವಾದಾಗ ಪ್ರವೃತ್ತಿಗಳು ರಕ್ತಗತವಾಗುತ್ತವೆ. ಅವು ಬುದ್ಧಿಗಮ್ಯವೂ ಆಗುತ್ತವೆ. 'ನಾಳೆಯಿಂದ ಬ್ರಾಂದಿ ಕುಡಿಯಬಾರದು' ಎಂದು ನಮ್ಮ ಉಷ್ಣದೇಶದವರು ನಿರ್ಣಯಿಸಿಕೊಂಡರೆ, (ಸಾಲಮಾಡಿ) ಕುದುರೆ ಜೂಜಿಗೆ ಹೋಗುವುದಿಲ್ಲವೆಂದು ತೀರ್ಮಾನಿಸಿಕೊಂಡರೆ ಅವು ಭ್ರೂಣಾವಸ್ಥೆಯಲ್ಲಿಯೇ ನಾಶವಾಗಬಾರದು ; ಅಬಾರ್ಷನ್ ಆಗಬಾರದು. ಆಗ ಸೋತಷ್ಟೇ ಪರಿಣಾಮ ಉಂಟಾಗುತ್ತದೆ. ಮುಂದೆಯೂ ನಿರ್ಣಯಗಳು ಮೂಡುತ್ತಿದ್ದಂತೆಯೇ ಸಾಯುತ್ತವೆ. ಹಗಲುಗನಸು ಕಾಣುತ್ತಾ ಹಸ್ತಮೈಥುನಕ್ಕಿಳಿಯುವವನಷ್ಟು ನಿಕೃಷ್ಟ ಇನ್ನಿಲ್ಲ. ಭಾವನಾ ಸಾಗರದಲ್ಲಿ ಈಜು ಹೊಡೆದರೇನು, ಸಂವೇದನಾಶೀಲನಾದರೇನು? ಕಾರ್ಯಶೀಲನಾಗದವನು ಅಪ್ಪಾಳೆ ತಿಪ್ಪಾಳೆ ಆಡುತ್ತಾನೆ, ಮಾರ್ಕೆಟ್ಟು ತಲುಪಲಾರ. ಒಂದು ರಾತ್ರಿ ಒಬ್ಬ ಶ್ರೀಮಂತ ರಷ್ಯನ್ ಮಹಿಳೆ ಕುದುರೆ ಗಾಡಿಯಲ್ಲಿ ಕುಳಿತು ಹೋಗುತ್ತಿದ್ದಳಂತೆ. ಅವಳು ಅದೇ ತಾನೇ ಸಿನಿಮಾ

ನೋಡಿ ಹಿಂದಿರುಗುತ್ತಿದ್ದಳು. ಗಾಡಿಯ ಚಾಲಕ ಹುಡುಗ ಛಳಿಯಲ್ಲಿ ಹಲ್ಲುಪದ ಹೇಳುತ್ತಿದ್ದರೆ ಆಕೆ ಸಿನಿಮಾದಲ್ಲಿನ ಒಂದು ದೃಶ್ಯವನ್ನು ನೆನೆದು ದುಃಖಿಸುತ್ತಾ ಕಣ್ಣೀರು ಒರೆಸಿಕೊಳ್ಳುತ್ತಿದ್ದಳಂತೆ. ಹುಡುಗನ ವಾಸ್ತವಿಕ ಕಷ್ಟಕ್ಕಿಂತ ಆಕೆಗೆ ಸಿನಿಮಾದ ಕಾಲ್ಪನಿಕ ನೋವೇ ಹೆಚ್ಚಾಯಿತು. ನಮ್ಮ ಪಕ್ಕದಲ್ಲಿರುವ ಗುಡಿಸಲಿನಲ್ಲಿ ಒಂದು ಮಗು ಕೂಲಿಗೆ ಹೋಗಿರುವ ತಾಯಿ ಬರಲಿಲ್ಲವೆಂದು ಹಸಿವೆ ತಾಳಲಾರದೆ ಅಳುತ್ತಿರುವಾಗ ನಮ್ಮ ಭವ್ಯಬಂಗಲೆಯಲ್ಲಿ ನಮ್ಮ ಮಗು ಏಕೋ ಊಟವಾದ ಮೇಲೆ ಹಾಲು ಕುಡಿಯಲಿಲ್ಲವೆಂದು ರಾತ್ರಿಯೆಲ್ಲ ಕೊರಗುತ್ತೇವೆ. ಕಡೆಯ ಪಕ್ಷ 'ಕುಡಿಯದಿದ್ದರೇನಂತೆ' ಎಂದಾದರೂ ಅಂದುಕೊಳ್ಳಲಾರೆವೇನು?

ಕೆಲವೊಮ್ಮೆ ನಿರ್ನಿಮಿತ್ತವಾಗಿ ಪ್ರಯತ್ನಮಾಡುತ್ತಲೇ ಇರಬೇಕಾಗುತ್ತದೆ. ಇವರಿಂದ ಅಪಾರ ಪ್ರಯೋಜನವಿದೆ. ಕಾರ್ಯರೂಪಕ್ಕಿಳಿಸುವ ಅವಕಾಶ ಸದ್ಯಕ್ಕೆ ಒದಗಲಾರದೆಂದು ತಿಳಿದರೂ ಸರಿಯೆ, ಅಭ್ಯಾಸ ಮಾತ್ರ ಮಾನಸಿಕ ಭೂಮಿಕೆಯಲ್ಲಿ ನಡೆಯುತ್ತಿರಬೇಕು. ಇದು ಹೇಗೆ ಎನ್ನುವಿರಾ. ಅಭ್ಯಾಸವೆಂದರೆ ನಿರ್ದಿಷ್ಟದಿಕ್ಕಿನಲ್ಲಿ ಪ್ರವಹಿಸುವ ಜಿಂತಸ; ಅದೂ ಅನೈಚ್ಛಿಕವಾಗಿ. ಅದು ಆ ದಿಕ್ಕಿನಲ್ಲಿ ಪ್ರವಹಿಸುತ್ತಾ ಇದ್ದು ಅಂತಃಶಕ್ತಿಯನ್ನು ವೃದ್ಧಿಮಾಡಿಕೊಳ್ಳಲಿ. ಸಮಯಬಂದಾಗ ತೀವ್ರಗತಿಯಲ್ಲಿ ಅದು ಅಭಿವ್ಯಕ್ತವಾಗುತ್ತದೆ. ಮುಂದೊದಗುವ ಕಷ್ಟಕ್ಕೆ ಇಂದೇ ಸ್ಥಿರಮನಸ್ಸು ನೆಲೆಗೊಳ್ಳಲಿ. ಷೋಪೆನ್ ಹಾರ್ ಎಂಬ ಜರ್ಮನ್ ಚಿಂತಕ ಉಪನಿಷತ್ತುಗಳನ್ನು ಮೊದಲ ಬಾರಿಗೆ ಓದಿದಾಗ 'It is the solace of my life and it will be the solace of my death' ಎಂದು ಹೇಳಿದರಂತೆ. ಕೆಲಸದ ಕತ್ತಿ ಹಾಗೇ ಇಟ್ಟಿದ್ದರೆ ತುಕ್ಕು ಹಿಡಿಯಬಹುದು. ಕೆಲಸವಿಲ್ಲದ ಯಂತ್ರ ಹಾಳಾಗಬಹುದು. ಪರೀಕ್ಷೆ ಮುಗಿಯಿತು, ರಜೆ ಬಂದಿತು, ಓದುವ ಬರೆಯುವ ಕಾರ್ಯವಿಲ್ಲಪ್ಪ ಎಂದು ಸುಮ್ಮನಿದ್ದರೆ, ರಜೆ ಕಳೆದ ಮೇಲೆ ಮೊದಲಿನಂತೆ ಕೈ ಓಡದು. ಬರೆಯುವ ಅಭ್ಯಾಸವನ್ನು ಬಿಡಬಾರದು. ಯುದ್ಧಬಂದಾಗ ಚಟುವಟಿಕೆಯಿಂದ ಓಡಾಡಿದರಾಯಿತು ಎಂದು ಸೈನಿಕರು ಸೋಮಾರಿಗಳಾಗಿಯೇ ಇದ್ದರೆ ಗತಿ? ಅವರು ನಡೆಸುವ ಪೆರೇಡುಗಳು ; ಕವಾಯತುಗಳು ವ್ಯರ್ಥವೆಂದು ಭಾವಿಸಬಹುದೆ. ಅಥವಾ ಮಾಸಲು ಪಡೆಯುವರನ್ನು ಸಾಕುವುದು ನಿರರ್ಥಕವೆಂದು ತಿಳಿಯಬಹುದೆ? ವ್ಯವಸಾಯಗಾರನಾಗಲೀ, ಮೂಟೆ ಹೊರುವವನಾಗಲೀ ನಿಯತವಾಗಿ ಮಾಡದಿದ್ದರೆ ಏನಾಗುತ್ತದೆಂದು ಕೇಳಿನೋಡಿ.

ಮನೆಯಲ್ಲೇ ಕುಳಿತು ಅಭ್ಯಾಸಗಳ ತಾಲೀಮು ನಡೆಸುವುದರಿಂದ ವಿಮೆಮಾಡಿಸುವುದರಿಂದಾಗುವಂತದ್ದೇ ಲಾಭವಿದೆ. ಇಂದು ನಮಗೆ ಆರೋಗ್ಯವಿದೆ, ಉದ್ಯೋಗವಿದೆ. ಮುಂದೆ ಏನೋ ಅಚಾತುರ್ಯವಾದಾಗ ವಿಮೆ ನೆರವಾಗುತ್ತದೆ ! ತಿಂಗಳು ತಿಂಗಳು ಕಟ್ಟುತ್ತಿರುವ ಹಣ, ಈಗ ನಮಗೆ 'ಎಲ್ಲಪ್ಪಾ ತರುವುದು' ಅನ್ನಿಸಬಹುದು. ಅದಕ್ಕಿಂತಲೂ ವಾಹನಗಳ ಒಡೆಯರು ಕಟ್ಟುವ ವಿಮೆಯ ಹಣ ಹಿಂದಕ್ಕೆ ಬರುತ್ತದೆಯೆ? ಆದರೂ ಭದ್ರತೆಗಾಗಿ ಕಟ್ಟಬೇಕು. ಹಾಗೆಯೇ ಅಭ್ಯಾಸಗಳ ತಾಲೀಮು ಕಾಲಹರಣವಲ್ಲ. ಯಾವ ವ್ಯಕ್ತಿ ಸಂಯಮ ಏಕಾಗ್ರತೆಗಳನ್ನು ಸುಮ್ಮನೆ ಮನಸ್ಸಿಗೆ ತಂದುಕೊಳ್ಳುತ್ತಿರುತ್ತಾನೆಯೋ ಅವನು ಮುಂದೆ ಚಿತ್ತಕಲಕುವ, ಮೋಹಮುಸುಕುವ, ಅಹಂ ತುಂಬುವ ಪ್ರಸಂಗಗಳ, ಸುಳಿಗಳ, ವ್ಯೂಹಗಳ ಮಧ್ಯೆ ಅಚಲ ಧೀರ ಭವ್ಯವಿಗ್ರಹವಂತೆ ನಿಂತು ಇತರರಿಗೆ ಆಶ್ಚರ್ಯವನ್ನುಂಟುಮಾಡುತ್ತಾನೆ. ಅವನ ಕಣ್ಮುಂದೆಯೇ ಇತರರು ತರಗೆಲೆಗಳಂತೆ ತೂರಿಹೋಗುತ್ತಿರುತ್ತಾರೆ. ಇವನಿಗೆ ಸುಳಿಗಾಳಿ, ಮಂದಮಾರುತವಾದದ್ದು ಅವರಿಗೆ ಮೊರೆವ ಬಿರುಗಾಳಿಯಾಗಿರುತ್ತದೆ. ಇವನ ಕೂದಲೂ ಕೊಂಕದಿದ್ದರೆ, ಅವರ ಸಮಸ್ತವೂ ಕೊಚ್ಚಿಹೋಗಿರುತ್ತದೆ.

"ನಾವು ತಿರುಗಾಡುವ ಅಭ್ಯಾಸಗಳು" "ನಾವು ಅಭ್ಯಾಸಗಳ ಮೊತ್ತ" ಮೊದಲಾದ ನುಡಿಗಳನ್ನು ಕೇಳುತ್ತಿರುತ್ತೇವೆ. ನಾವು ಅಭ್ಯಾಸಗಳ ಹಸ್ತದಲ್ಲಿ ಬಿದ್ದಿದ್ದೇವೆ, ಆದರೆ ಅರಿಯೆವು. ನವಿಲಿಗೆ ಈದಿನ ಎರಡು ಗಂಟೆಗೆ ಅಫೀಮು ಕೊಟ್ಟರೆ ನಾಳೆಯೂ ಅದೇ ವೇಳೆಗೆ ಹಾಜರಾಗುತ್ತದಂತೆ. ಕೆಲವರಿಗೆ ಸಿಗರೇಟು

ಸೇದದೆ ಒಂದು ಗಂಟೆಕಾಲ ಕಳೆದರೆ ತಲೆಸಿಡಿತಬರುತ್ತದೆ. ಕೆಲವರು ರಾತ್ರಿ ಊಟವಾದ ಮೇಲೆ ಟೀ ಕುಡಿಯಲೇಬೇಕು. ದಿನಕ್ಕೆ ಹತ್ತು ಕಾಫಿ ಕುಡಿಯದಿದ್ದರಾಗದು ಎನ್ನುವವರಿದ್ದಾರೆ. ಅನೇಕರಿಗೆ ಭಾನುವಾರ ಎಂದರೆ ಮಾಂಸದ ಊಟವೆಂದೇ ಅರ್ಥ. ಇಸ್ಪೀಟಿನ ಅಭ್ಯಾಸವಂತೂ ಕೇಳುವಂತಿಲ್ಲ. "ಪಕ್ಕದಲ್ಲಿ ಪತ್ನಿಯಿಲ್ಲದೆ ರಾತ್ರಿ ನಿದ್ರೆ ಬರುವುದೇ ಇಲ್ಲ" ಎಂದು ಒಂದು ಕಾದಂಬರಿಯ ಪಾತ್ರ ನುಡಿದಿದೆ. (ಸ್ವಪತ್ನಿಗೆ ಮಾತ್ರ ಸೀಮಿತ)

ಅಭ್ಯಾಸಗಳನ್ನು ಬಿಡಲಾರೆವು, ನಿಜ. ಹಾಗಾದರೆ ಒಳ್ಳೆಯ ಅಭ್ಯಾಸಗಳನ್ನೇ ಮನಸ್ಸಿಗೆ ಒದಗಿಸೋಣ. "ಮನಸ್ಸು ಮರ್ಕಟವಿರಬಹುದು, ಆದರೆ ಅದರ ಒಂದು ಮಹಾನ್‌ಗುಣವಿದೆ ನೋಡಿ, ಏನನ್ನೇ ಕೊಡಿ ಮೊಸಳೆಯಂತೆ ಹಿಡಿಯುತ್ತದೆ" ಎಂದು ಚೈತನ್ಯದೇವ್ ಹೇಳಿದ್ದಾರೆ. ಮೊದಲು ಹವ್ಯಾಸ, ನಂತರ ಅಭ್ಯಾಸ, ಕಡೆಗೆ ಚಟ. ತೆಲುಗಿನ ಪಾಲಗುಮ್ಮಿ ಪದ್ಮರಾಜು ಅವರ ಕಾದಂಬರಿಯಲ್ಲಿ 'ಚಟ್ಟವೇರುವವರೆಗೆ ಚಟವಿದ್ದೇ ಇರುತ್ತದೆ' ಎಂಬ ವಾಕ್ಯವಿದೆ. ಸಿನಿಮಾ ಚಟವಿದೆ, ಬಿಡಲಾರೆವು ; ಕೊಂಚ ಉತ್ತಮ ಚಿತ್ರಗಳನ್ನೇ ನೋಡುವ ಎಂದ ಹಾಗೆ. ವೈದ್ಯಕೀಯ ವಲಯದಲ್ಲಿ ನಡೆಯುತ್ತಿರುವ ಸಂಶೋಧನೆಗಳು, ನೀತಿಶಾಸ್ತ್ರವು ಖಂಡಿಸುವ ಚಟಗಳನ್ನು ತಾವೂ ಖಂಡಿಸುತ್ತಿರುವುದನ್ನು ಇಂದು ನೋಡುತ್ತಿದ್ದೇವೆ.

ಕೆಟ್ಟ ಅಭ್ಯಾಸಗಳನ್ನು ಬಿಡುವುದಿದೆಯಲ್ಲ, ಅದು ಅಂತಹ ಅಭ್ಯಾಸಗಳಿಗೆ ಒಳಗಾಗದಿರುವುದಕ್ಕಿಂತಲೂ ಕಷ್ಟಕರ. ಅಂತಹವರು ಸಾಮಾನ್ಯರಲ್ಲ. ಆದರೆ ನಮಗೆ ಕೆಟ್ಟದ್ದೆಂದು ಗೊತ್ತಿದ್ದೂ, ನೋವು ಅನುಭವಿಸುತ್ತಿದ್ದೂ, ಅವುಗಳನ್ನು ಬಿಡಲಾರದ ಸ್ಥಿತಿಯೇ ಒಂದು ದುರಂತ. ಅಭ್ಯಾಸದ ಮಹತ್ವವನ್ನು ವಿದೇಶದ ಕೃತಿಗಳು ನಮಗೆ ತಿಳಿಸಬೇಕಾಗಿಲ್ಲ. ಭಗವದ್ಗೀತೆಯಲ್ಲಿ ಶ್ರೀಕೃಷ್ಣನು "ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಮ್ । ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ" ಎಂದಿರುವುದನ್ನು ನೋಡಿ, 'ವೈರಾಗ್ಯ' ಶಬ್ದವನ್ನು ನೋಡಿ ಲೌಕಿಕವಲ್ಲವೆಂದು ತಿಳಿಯಬಾರದು. ಕೆಟ್ಟಅಭ್ಯಾಸಗಳಿಗೆ ಬೆನ್ನುತೋರಿಸುವುದು 'ವೈರಾಗ್ಯ'ವಲ್ಲವೆ ? (ಈ ಕೃತಿಯನ್ನು ಕೆಲವರು ಲೌಕಿಕಕ್ಕೆ ಅತೀತವಾದುದೆಂದು ತಿಳಿದಿರುವುದು ಸರಿಯಲ್ಲ. ಇದರಲ್ಲಿ ಉದ್ದಕ್ಕೂ ವೈಜ್ಞಾನಿಕ ವಿಶ್ಲೇಷಣೆಯಿದೆ. ಕೆಲವರು ವೈಜ್ಞಾನಿಕವೆಂದರೆ ಫಿಸಿಕ್ಸ್, ಕೆಮಿಸ್ಟ್ರಿ.... ಇತ್ಯಾದಿ ತಿಳಿಯುವುದುಂಟು, ಆದರೆ ಮನಸ್ಸಿನ ಮೇಲೆ ಪ್ರಯೋಗ ಮಾಡಬಹುದೆಂಬ ಅರ್ಥದಲ್ಲಿ ವೈಜ್ಞಾನಿಕವೇ)

ಕಡೆಯದಾಗಿ ಇದನ್ನು ಗಮನಿಸಬೇಕು ; ಅಭ್ಯಾಸ ಸಮಾಜದ ಚಾಲಕಶಕ್ತಿ ಮತ್ತು ಅಮೂಲ್ಯ ಶಕ್ತಿಸಂಗ್ರಹ ಮಾಧ್ಯಮ. ಅದರ ಉದ್ದೇಶ ನಮ್ಮ ನರಮಂಡಲ ನಮಗೆ ಶತ್ರುಗಳಾಗುವ ಬದಲು ಮಿತ್ರರಾಗುವಂತೆ ಮಾಡುವುದೇ ಆಗಿದೆ.

ಸಾಮಾನ್ಯ ಕರ್ತವ್ಯಗಳನ್ನು ಅಸಾಮಾನ್ಯ ರೀತಿಯಲ್ಲಿ ಮಾಡಿ ಮುಗಿಸುವುದೇ ಜೀವನ ಸಂಗ್ರಾಮದ ವಿಜಯ ಸೂಚನೆ.

—ರಾಕ್ ಫೆಲ್ಲರ್

ಬಿ. ವಿ. ದಕ್ಷಿಣಾಮೂರ್ತಿ

ಸಂಸಾರರಥದ ಎರಡು ಚಕ್ರಗಳು

ಪತಿ ಮತ್ತು ಪತ್ನಿ ಕುಟುಂಬದಲ್ಲಿ ಪರಸ್ಪರ ಪೂರಕ ವ್ಯಕ್ತಿಗಳು. ಇಬ್ಬರಿಗೂ ಕುಟುಂಬದಲ್ಲಿ ಸಮಾನಸ್ಥಾನ. ಅವರಿಬ್ಬರ ಅನ್ಯೋನ್ಯತೆಯ ಸಹಜೀವನವೇ ಸಂಸಾರ. ಸಂಸಾರ ಒಂದು ರಥವೆಂದು ಭಾವಿಸಬಹುದಾದರೆ ಪತಿ ಮತ್ತುಪತ್ನಿ ಅದರ ಎರಡು ಚಕ್ರಗಳು. ಅವರಿಬ್ಬರಲ್ಲಿ ಯಾರೊಬ್ಬರಿಲ್ಲದಿದ್ದರೂ ಆ ರಥ ಒಗ್ಗಾಲಿ, ಕುಟುಂಬ ಜೀವನದ ಅಚ್ಚು ಮುರಿದಂತೆ. ಮದುವೆಯ ಸಮಯದಲ್ಲಿ ಇಂತಹ ಸಾಂಕೇತಿಕ ವಿಧಿಗಳನ್ನು ನಾವು ಕಾಣುತ್ತೇವೆ. ಗಂಡಹೆಂಡಿರಾಗುವ ವಧೂವರರ ಕುತ್ತಿಗೆಗಳ ಮೇಲೆ ನೊಗವನ್ನಿಡುವ ರೂಢಿ ಕೆಲವು ಸಂಪ್ರದಾಯಗಳಲ್ಲಿದೆ. ಇದು ಅರ್ಥಪೂರ್ಣವಾದುದು. ಜೋಡೆತ್ತುಗಳು ಹೇಗೆ ನೊಗವನ್ನು ಹೊರುತ್ತವೋ ಹಾಗೆ ಕುಟುಂಬದ ಎಲ್ಲ ಹೊರೆಯನ್ನೂ ಗಂಡು ಹೆಣ್ಣು ಸಹಭಾಗಿಗಳಾಗಿ ಹೊರಬೇಕು ಎಂಬ ಸುಂದರ ಭಾವನೆ ಇದರಲ್ಲಿ ಅಭಿವ್ಯಕ್ತವಾಗಿದೆ. ಗಾಡಿ ಎಳೆಯುವ ಎರಡು ಎತ್ತುಗಳಲ್ಲಿ ಯಾವುದು ಹೆಚ್ಚು ? ಯಾವುದು ಕಡಮೆ ? ಎರಡೂ ಸಮವಾದ ಹೊರೆಯನ್ನು ಹೊರುತ್ತವೆ. ಸಮಾನ ಕರ್ತವ್ಯವನ್ನು ನಿರ್ವಹಿಸುತ್ತವೆ. ಸಮಾನವಾಗಿ ಹೆಜ್ಜೆ ಹಾಕುತ್ತವೆ. ಎರಡಕ್ಕೂ ಏಕ ಧ್ಯೇಯವಿದೆ. ಯಾವ ಒಂದು ಎತ್ತು ಕುತ್ತಿಗೆಯನ್ನು ಕೊಡದಿದ್ದರೂ ನೊಗ ಕೆಳಕ್ಕೆ ಉರುಳುತ್ತದೆ. ಗಾಡಿ ಮುಂದಕ್ಕೆ ಸರಿಯುವುದಿಲ್ಲ. ಇದು ಸಂಸಾರದಲ್ಲಿ ಪತಿ, ಪತ್ನಿಯರ ಸಹಜ ಬಾಂಧವ್ಯ.

ಮನುಷ್ಯನ ಜೀವನದಲ್ಲಿ ಮದುವೆ ಅತಿಮುಖ್ಯ ಘಟ್ಟ. ಅನಂತರ ಅವನು ಗೃಹಸ್ಥ ಜೀವನಕ್ಕೆ ಹೆಜ್ಜೆ ಯಿಡುತ್ತಾನೆ. ಗೃಹಸ್ಥಧರ್ಮ ಸತ್ವಪೂರ್ಣವಾದುದು, ಕ್ರಿಯಾತ್ಮಕವಾದುದು ಮತ್ತು ವಿಶೇಷ ಮಾನವೀಯ ಮೌಲ್ಯಗಳಿಂದ ಕೂಡಿದುದು. ಪತಿ, ಪತ್ನಿ ಇಬ್ಬರೂ ಕೂಡಿ ನಿಷ್ಠೆಯಿಂದ ನಡೆದರೆ ಮಾತ್ರ ಈ ಧರ್ಮದ ಪಾಲನೆ ಯಶಸ್ವಿಯಾಗಲು ಸಾಧ್ಯ. ಇಬ್ಬರೂ ಪರಸ್ಪರ ಆತ್ಮೋದ್ಧಾರಕ್ಕಾಗಿ ಶ್ರಮಿಸುವುದರಲ್ಲಿ ಇವರ ಸಾರ್ಥಕತೆಯಿದೆ.

ಪತಿ, ಪತ್ನಿಯರಲ್ಲಿ ಯಾರೊಬ್ಬರೂ ಇನ್ನೊಬ್ಬರಿಗಿಂತ ಮೇಲಲ್ಲ, ಕೀಳಲ್ಲ. ಅವರು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಸ್ತ್ರೀಪುರುಷರ ಸಮಾನತೆಯನ್ನು ಕುರಿತ ವಾದವಿವಾದಗಳು ಪ್ರಾಚೀನಕಾಲ ದಿಂದ ಬಂದಿವೆ. ಇವು ವಿರೋಧಾಭಾಸಗಳಿಂದ ಕೂಡಿವೆ. ಹೆಂಗಸು ತನ್ನ ಅಧೀನದಲ್ಲಿರತಕ್ಕವಳು ಎಂಬ ಅಭಿಪ್ರಾಯವನ್ನು ಗಂಡಸು ಪ್ರಕಟಿಸಿದ್ದಾನೆ. ಸ್ತ್ರೀ ಅಸಹಾಯಕಳು; ಅವಳು ಅಬಲೆ, ಲತೆಯಂತೆ ಆಶ್ರಯಿಸಿ ಬಾಳುವವಳು; ಅವಳನ್ನು ರಕ್ಷಿಸುವುದು, ಉದ್ಧಾರಮಾಡುವುದು ಗಂಡಸಿನ ಪಾಲಿಗೆ ಬಂದದ್ದು; ಅವಳು ಸ್ವಾತಂತ್ರ್ಯಕ್ಕೆ ಯೋಗ್ಯಳಲ್ಲ; "ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" ಎಂಬ ನುಡಿಯನ್ನು ಘೋಷಿಸಿ ಮಹಿಳೆಯ ಮೇಲೆ ಪುರುಷನು ತನ್ನ ಪಬ್ಬಾಳಿಕೆಯನ್ನು ನಡೆಸಿದ್ದಾನೆ. ಇದು ಪುರುಷ ಪ್ರಧಾನ ಸಮಾಜದ ಧೋರಣೆ.

ಆಗಿನ ಸಮಾಜದಲ್ಲಿ ಮಹಿಳೆ ತನ್ನ ನಾಲಗೆಯನ್ನು ಕಳೆದುಕೊಂಡಿದ್ದಳು, ವ್ಯಕ್ತಿತ್ವ ಶೂನ್ಯಳಾಗಿದ್ದಳು. ಅವಳ ಕರ್ತವ್ಯವೆಂದರೆ ಮನೆಯಲ್ಲಿ ಕಾಯದಂಡನೆಮಾಡಿ ಪುರುಷನನ್ನು ಮೆಚ್ಚಿಸುವುದು, ಅವನಿಗೆ ದಾಸಿಯಾಗಿರುವುದು, ಅವನ ವಂಶವನ್ನು ಬೆಳೆಸುವುದು. ಅವಳೊಂದು ಭೋಗ್ಯವಸ್ತು. ಅವಳು ಅವನ ಆಸ್ತಿಯಿದ್ದಂತೆ. ಸ್ತ್ರೀ ತನ್ನ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಲಾರದೆ ತುಂಬ ನರಳಿದ್ದಾಳೆ. ಅನ್ಯಾಯಪರಂಪರೆಯ ಕಾವು ನೋವುಗಳನ್ನು ಅನುಭವಿಸಿದ್ದಾಳೆ.

ಆದರೆ ಅನಂತರದ ಕಾಲಗಳಲ್ಲಿ ಸ್ತ್ರೀಯರಿಗೆ ಪ್ರಾಧಾನ್ಯ ಕೊಟ್ಟಿರುವುದು ಉಲ್ಲೇಖವಾಗಿದೆ. ಇದಕ್ಕೆ ಪುಷ್ಟಿಕೊಡುವಂತೆ ಉಪನಿಷತ್ಕಾಲದ ಬ್ರಹ್ಮವಾದಿನಿಯರಾದ ಗಾರ್ಗೀ, ಮೈತ್ರೇಯಿ ಅಂತಹವರು ನಕ್ಷತ್ರಗಳಂತೆ ಮಿನುಗುತ್ತಾರೆ. ಪುರಾಣಕಾಲದ ವೀರಮಾತೆ ಕುಂತಿ, ವೀರಪತ್ನಿ ದ್ರೌಪದಿ, ಪತಿವ್ರತಾ ಶಿರೋಮಣಿ ಸೀತೆ ಮುಂತಾದವರು ಸ್ತ್ರೀ ಶ್ರೇಷ್ಠತೆಯನ್ನು ಜ್ವಾಜ್ವಲ್ಯಮಾನವಾಗಿ ಬೆಳಗಿಸುತ್ತಾರೆ. "ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ" ಎಂಬ ಔದಾರ್ಯ ಭಾವನೆ ಅವರಲ್ಲಿ ಪ್ರಚುರವಾಗಿತ್ತು. ಪತಿ, ಪತ್ನಿಯರಲ್ಲಿ ಪತ್ನಿಗೆ ಹೆಚ್ಚು ಮನ್ನಣೆಯನ್ನು ಸೂಚಿಸುವ ಸಂಪ್ರದಾಯ ಪ್ರಕಾರಗಳು ಇಂದಿಗೂ ಸಂಕೇತಗಳಾಗಿ ಉಳಿದಿವೆ. ದಂಪತಿಗಳ ಹೆಸರುಗಳನ್ನು ಹೇಳುವಾಗ ಪತ್ನಿಯ ಹೆಸರನ್ನೇ ಮೊದಲು ಹೇಳುತ್ತೇವೆ. ಸೀತಾರಾಮ, ಲಕ್ಷ್ಮೀನಾರಾಯಣ, ಪಾರ್ವತೀಪರಮೇಶ್ವರ, ರಾಧಾಕೃಷ್ಣ — ಇವೆಲ್ಲ ಇದಕ್ಕೆ ಉದಾಹರಣೆಗಳು.

ಸಂಸಾರದಲ್ಲಿ ಪತಿಯ ಪಾತ್ರ ಹೆಚ್ಚಿನದೆ, ಪತ್ನಿಯ ಪಾತ್ರ ಹೆಚ್ಚಿನದೆ ಎಂಬ ಪ್ರಶ್ನೆಗೆ ಉತ್ತರವಿಲ್ಲ. ಅವರಿಬ್ಬರೂ ಸೇರಿದರೆ ಪೂರ್ಣತ್ವ. ಮಹಾಕಾವ್ಯಗಳಲ್ಲಿ ಇಂತಹ ಭಾವನೆಗೆ ಅನೇಕ ನಿದರ್ಶನಗಳಿವೆ. ಯಜ್ಞಯಾಗಾದಿಗಳನ್ನು ಮಾಡುವಾಗ ಕರ್ತೃ ಸಪತ್ನೀಕನಾಗಿರಬೇಕೆಂಬ ಆಚರಣೆ ಕಂಡುಬರುತ್ತದೆ. ಆಕೆ ಪುರುಷನ ಅರ್ಧಾಂಗಿ. ಆಕೆಯಿಲ್ಲದಿದ್ದರೆ ಆತನಿಗೆ ಪೂರ್ಣತೆಯಿಲ್ಲ. ಆತನಿಗೆ ಕರ್ತೃತ್ವದ ಅಧಿಕಾರವೇ ಲಭಿಸದು ಎಂಬ ಧ್ವನಿಯಿದೆ. ಶ್ರೀರಾಮಚಂದ್ರನು ಅಶ್ವಮೇಧಯಾಗವನ್ನು ಮಾಡುವ ಸಂದರ್ಭ. ಆಗ ಸೀತೆಯು ಪರಿತ್ಯಜಿತಳಾಗಿ ವಾಲ್ಮೀಕಿ ಮಹಾಮುನಿಯ ಆಶ್ರಮದಲ್ಲಿದ್ದಳು. ಪತ್ನಿಯೊಡನೆ ಅಲ್ಲದೆ ಶ್ರೀರಾಮನಿಗೆ ಯಾಗವನ್ನು ಮಾಡುವ ಅಧಿಕಾರ ಇರದು. ಅವನು ಪತ್ನಿಯ ಚಿನ್ನದ ಪ್ರತಿಮೆಯನ್ನು ಪಕ್ಕದಲ್ಲಿರಿಸಿಕೊಂಡು ಯಾಗವನ್ನು ಮಾಡಬೇಕಾಯಿತು. ಪತಿಯು ಆಚರಿಸುವ ಧಾರ್ಮಿಕ ಕ್ರಿಯೆಗಳಲ್ಲಿ ಪತ್ನಿಗೆ ಸಮಭಾಗವಿತ್ತು. ಯಜ್ಞಯಾಗಾದಿಗಳನ್ನು ಮಾಡುವಾಗ ದೇವತೆಗಳಿಗೆ ಹವಿಸ್ಸನ್ನು ಕೊಡುವುದು ಪೂರಕ ವಿಧಿಯಾಗಿತ್ತು. ಹಾಗೆ ಅರ್ಪಿಸುವ ಹವಿಸ್ಸನ್ನು ದೇವತೆಗಳು ಸಪತ್ನೀಕರಾಗಿ ಬಂದು ಸ್ವೀಕರಿಸುವ ಭಾವನೆಯೂ ಇತ್ತು. ಸಪ್ತಋಷಿಗಳಿಗೆ ಪೂಜೆಯನ್ನು ಸಲ್ಲಿಸುವಾಗ ಅವರನ್ನು ಸಪತ್ನೀಕರಾಗಿಯೇ ಆವಾಹಿಸುತ್ತಾರೆ. ಪತಿ ಪತ್ನಿಯರ ಸಂಬಂಧ ಅವರಿಬ್ಬರ ಆತ್ಮೋನ್ನತಿಯನ್ನು ಸಾಧಿಸುವಂತಹದು ಎಂಬ ಆದರ್ಶ ಆ ಜನತೆಯಲ್ಲಿ ಸ್ಫುಟಗೊಂಡಿತ್ತು. ಆಕೆ ಆತನಿಗೆ ದಾಸಿಯಲ್ಲ. ಆತ ಆಕೆಗೆ ದಾಸನೂ ಅಲ್ಲ. ಒಬ್ಬರು ಇನ್ನೊಬ್ಬರ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವುದಿಲ್ಲ. ಒಬ್ಬರಿಗಿಲ್ಲದ ಸ್ವಾತಂತ್ರ್ಯ ಇನ್ನೊಬ್ಬರಿಗಿಲ್ಲ. ಒಬ್ಬರು ಇನ್ನೊಬ್ಬರ ಶ್ರೇಯಸ್ಸಿಗಾಗಿ ಬದುಕಬೇಕು. ಇಬ್ಬರಿಗೂ ಶ್ರೇಯಸ್ಕರವಾದ ಮಾರ್ಗವೇ ಧರ್ಮಮಾರ್ಗ. ಅವರು ಸಹಚರಿಗಳು, ಸಹಯೋಗಿಗಳು ಮತ್ತು ಸಹಭೋಗಿಗಳು.

ನಮ್ಮ ದಿನನಿತ್ಯದ ಕುಟುಂಬ ಜೀವನವನ್ನು ನೋಡಿದಾಗ ಗಂಡ,ಹೆಂಡಿರಲ್ಲಿ ಒಬ್ಬೊಬ್ಬರು ಒಂದೊಂದು ದೃಷ್ಟಿಯಿಂದ ಕೇಂದ್ರವ್ಯಕ್ತಿಯಾಗಿ ನಿಲ್ಲುತ್ತಾರೆ. ಕುಟುಂಬದ ಚೈತನ್ಯಶಕ್ತಿಯೇ ಮಡದಿ. ಮನೆಯಲ್ಲಿ ನೆಮ್ಮದಿ, ಶಾಂತಿ, ಸಂತೋಷಗಳು ಬಹುಮಟ್ಟಿಗೆ ಆಕೆಯನ್ನು ಅವಲಂಬಿಸಿರುತ್ತವೆ. ಆಕೆ ಮನೆಯನ್ನು

ನಗುವ ಸ್ವರ್ಗವನ್ನಾಗಿ ಮಾಡಬಹುದು ಅಥವಾ ಗೋಳಿನ ಬೀಡನ್ನಾಗಿ ಮಾಡಬಹುದು. ನಗುನಗುತ್ತಿದ್ದು ಅಂತಹ ನಗುವನ್ನು ಕುಟುಂಬದ ಇತರ ಸದಸ್ಯರ ಮುಖಗಳ ಮೇಲೂ ಮೂಡಿಸುವ ಶಕ್ತಿ ಆಕೆಗಿದೆ. ಕುಟುಂಬದ ನಲಿವು, ನೆಮ್ಮದಿಗಳು ಸಿರಿತನ ಅಥವಾ ಬಡತನವನ್ನು ಅವಲಂಬಿಸುವುದಿಲ್ಲ. ಸಂತೃಪ್ತ ಮನೋಭಾವನೆ, ಸಹನಾಗುಣ, ತ್ಯಾಗಶೀಲತೆ, ಜೀವನಮೌಲ್ಯಗಳ ಸರಿಯಾದ ಅರಿವು ಇವುಗಳನ್ನು ಅವಲಂಬಿಸುತ್ತದೆ. ಕುಟುಂಬದಲ್ಲಿ ಅನುಕರಣೀಯ ವ್ಯಕ್ತಿಯೆಂದರೆ ತಾಯಿ. "ಮೊದಲು ಇತರರಿಗೆ, ಅನಂತರ ನನಗೆ" ಎಂಬ ಭಾವನೆಯಿಂದಲೇ ಆಕೆ ನಡೆದುಕೊಳ್ಳುತ್ತಾಳೆ. ಆಕೆ ಎಲ್ಲರಿಗಿಂತಲೂ ಮುಂಚಿತವಾಗಿ ಹಾಸಿಗೆಯಿಂದೆದ್ದು ಮನೆಗೆಲಸಗಳಲ್ಲಿ ತೊಡಗುತ್ತಾಳೆ. ಎಲ್ಲರ ರುಚಿಗಳನ್ನೂ ತಣಿಸುವ ಸವಿಯೂಟವನ್ನು ಸಿದ್ಧಪಡಿಸುತ್ತಾಳೆ. ಮೊದಲು ಮಕ್ಕಳಿಗೆ, ಪತಿಗೆ ಊಟಉಪಚಾರಗಳು. ಅವರು ಸಂತೃಪ್ತರಾದರೆ ತನಗೆ ಸಂತಸ. ಕಡೆಯಲ್ಲಿ ತನ್ನ ಊಟ. ಇದು ದೈನಂದಿಕ ಕಾರ್ಯಚಕ್ರ. ಇಂತಹ ಒಂದು ಸರಳ ನಿದರ್ಶನದಲ್ಲಿ ಎಂತಹ ಸ್ವಾರ್ಥತ್ಯಾಗ ಅಡಗಿದೆ! ಉದಾತ್ತ ಧ್ಯೇಯ ಪ್ರಕಟವಾಗಿದೆ! ಆಕೆ ದೇವತೆಯ ಮಟ್ಟಕ್ಕೆ ಏರುತ್ತಾಳೆ. ಔದಾರ್ಯದ ಉತ್ತುಂಗ ಮಟ್ಟವನ್ನು ಮುಟ್ಟುತ್ತಾಳೆ ತನ್ನ ನೈತಿಕ ಅಂತಃಸತ್ವದಿಂದ ಕುಟುಂಬದ ಇತರ ಸದಸ್ಯರ ಮೇಲೆ ಪ್ರಭಾವ ಬೀರುತ್ತಾಳೆ. ಪರಸ್ಪರ ಹೊಂದಾಣಿಕೆ, ಅನ್ಯೋನ್ಯತೆ, ಸ್ವಾರ್ಥತ್ಯಾಗಮನೋಭಾವನೆಗಳ ಪ್ರೇರಕ ಶಕ್ತಿಯಾಗುತ್ತಾಳೆ,

ನಗರ ಜೀವನ ಜಂಜಾಟಮಯ. ಅಶಾಂತಿಯ ಕಡಲಿನಲ್ಲಿಯೇ ಜೀವನದ ದೋಣಿ ಸಾಗಬೇಕಾಗುತ್ತದೆ. ಹೊರಗೆ ದುಡಿದು ಬಂದ ಗಂಡಸಿಗೆ ಮನೆಯೇ ನೆಮ್ಮದಿಯ ತಾಣ. ಆತನ ಬೇಸರ, ದಣಿವುಗಳನ್ನು ದೂರಮಾಡಿ ಉತ್ಸುಕತೆಯನ್ನು ಉಂಟುಮಾಡುವ ಸಾಮರ್ಥ್ಯ ಗೃಹಿಣಿಯಲ್ಲಿದೆ.ಮನೆಯ ವಾತಾವರಣವನ್ನು ನಿರ್ಮಿಸುವುದರಲ್ಲಿ ಆಕೆಯ ಪಾತ್ರ ಪರಿಣಾಮಕಾರಿಯಾದುದು. ಆಕೆಯ ಹೊಣೆಗಾರಿಕೆ ಹೆಚ್ಚಿನದು. ಆಕೆಯ ಪ್ರಭಾವ ವ್ಯಾಪಕವಾದುದು. ಕುಟುಂಬದ ಹಣ ಕಾಸಿನ ಮಂತ್ರಿ ಆಕೆಯೇ. ಯಾವ ವೆಚ್ಚಗಳು ಅನವಶ್ಯಕ, ಯಾವ ವೆಚ್ಚಗಳು ಅನಿವಾರ್ಯ ಎಂಬುದನ್ನು ವಿವೇಚಿಸಿ ಕುಟುಂಬದ ಆಯವ್ಯಯವನ್ನು ಸಮತೂಗಿಸಲು ಸಹಕರಿಸುವ ಕರ್ತೃತ್ವ ಶಕ್ತಿ ಆಕೆಯಲ್ಲಿದೆ. ಇಷ್ಟಲ್ಲದೆ ಆಕೆ ಮಕ್ಕಳ ಆರೋಗ್ಯವನ್ನು ಗಮನಿಸಬೇಕು. ಅವರನ್ನು ಸಾಕಿ ಬೆಳಸಬೇಕು. ಮನೆಯೇ ಮೊದಲ ಶಿಕ್ಷಣಕ್ಷೇತ್ರ. ತಾಯಿಯೇ ಮೊದಲ ಶಿಕ್ಷಕಿ. ತನ್ನ ನೆಮ್ಮದಿಗೆ ಹಾನಿಯಾದರೂ ಮಕ್ಕಳ ನೆಮ್ಮದಿಗಾಗಿ ಶ್ರಮಿಸುತ್ತಾಳೆ. ಆಕೆ ಕರುಣೆಯ ಸಾಕಾರ ಮೂರ್ತಿ. "ದೇವರು ತಾನೇ ಬರಲಾರದೆ ತಾಯಿಯನ್ನು ಕಳಿಸಿದ"ಎಂಬ ನುಡಿಯಿದೆ. ಆದುದರಿಂದಲೆ ಮಕ್ಕಳಿಗೆ ತಂದೆಗಿಂತ ತಾಯಿಯನ್ನು ಕಂಡರೆ ಹೆಚ್ಚು ಪ್ರೀತಿ, ಸಲಿಗೆ ಮತ್ತು ನಂಬಿಕೆ.

ಕುಟುಂಬದಲ್ಲಿ ಮಹಿಳೆಯ ಪಾತ್ರ ಎಷ್ಟು ಸತ್ವಪೂರ್ಣವಾದುದೆಂಬುದನ್ನು ನಾವು ಚಿಂತಿಸುತ್ತಿರುವಂತೆ ಪುರುಷನ ವ್ಯಕ್ತಿತ್ವ ನಮ್ಮ ಕಣ್ಣೆದುರು ಎತ್ತರವಾಗಿ ನಿಲ್ಲುತ್ತದೆ. ಆತನು ಕುಟುಂಬದ ಆಧಾರಸ್ತಂಭ. ಅವರ ಅಸ್ತಿತ್ವ ಆತನ ಕರ್ತವ್ಯನಿರ್ವಹಣೆಯ ಮೇಲೆ ನಿಂತಿದೆ. ಆತನದು ದುಡಿಮೆಯ ಬದುಕು, ತ್ಯಾಗಮಯ ಜೀವನ. ಆತನು ಕುಟುಂಬದ ಅಗತ್ಯಗಳನ್ನೆಲ್ಲ ಪೂರೈಸಬೇಕು. ಅನ್ನ, ಬಟ್ಟೆ, ವಸತಿ, ಮಕ್ಕಳ ವಿದ್ಯಾಭ್ಯಾಸ, ಹೆಣ್ಣು ಮಕ್ಕಳ ಮದುವೆ–ಪಟ್ಟಿಮಾಡಿ ಆತನ ಆರ್ಥಿಕ ಇಕ್ಕಟ್ಟು, ಬಿಕ್ಕಟ್ಟುಗಳನ್ನು ಮುಗಿಸಲು ಸಾಧ್ಯವೆ! ಇಷ್ಟೆಲ್ಲವನ್ನೂ ನಿರ್ವಹಿಸಿ ಹಬ್ಬಗಳು, ಶುಭಾಶುಭಗಳು ಅನಿರೀಕ್ಷಿತ ಘಟನೆಗಳು, ರೋಗರುಜಿನಗಳು–ಇಂತಹ ಸಂದರ್ಭಗಳನ್ನು ತೂಗಿಸಲು ಅಷ್ಟಿಷ್ಟು ಹಣವನ್ನು ಕೂಡಿಟ್ಟಿರಬೇಕಾಗುತ್ತದೆ. ಭವಿತವ್ಯದ ಹೊಣೆಗಾರಿಕೆಯೇ ಆತನ ಬೆನ್ನನ್ನು ಏರುತ್ತದೆ. ಕುಟುಂಬದಲ್ಲಿ ಎಂತಹ ಬಿರುಗಾಳಿ ಎದ್ದರೂ ಅದನ್ನು ಎದೆಗಾರಿಕೆಯಿಂದ ಎದುರಿಸಬೇಕು. ಸಿಡಿಲು ಎರಗಿ ಬಂದರೂ ಅದನ್ನು ತಡೆದುಕೊಳ್ಳಬೇಕು. ದುಃಖದ ಮಡುವಿನಲ್ಲಿಯೆ ಮುಳುಗಿದ್ದರೂ ತಾನು ಅದನ್ನು ದಮಿಸಿಕೊಂಡು ಕುಟುಂಬದ ಇತರ ಸದಸ್ಯರಿಗೆ ಸಮಾಧಾನದ ನುಡಿಗಳನ್ನು ಹೇಳಬೇಕು. ಕಹಿಯಾದುದನ್ನು ತಾನೇ ನುಂಗಿ ಸಿಹಿಯಾದುದನ್ನು ಇತರರೊಡನೆ ಹಂಚಿಕೊಳ್ಳಬೇಕು. ತನ್ನ ಪತ್ನಿ ಮತ್ತು ಮಕ್ಕಳ ಮುಖಗಳ ಮೇಲೆ

ಸಂತಸ ಮೂಡಿಸುವುದರಲ್ಲಿ ಆತ ತನ್ನ ಶ್ರಮದ ಸಾರ್ಥಕತೆಯನ್ನು ಕಾಣುತ್ತಾನೆ. ಪತಿ, ಪತ್ನಿಯರ ಪಾತ್ರಗಳಲ್ಲಿ ಯಾರದು ಹಿರಿದು ! ಯಾರದು ಕಿರಿದು !

ಇಂದಿನ ಭಾರತೀಯ ಕುಟುಂಬಜೀವನದಲ್ಲಿ ಎಷ್ಟೋ ಬದಲಾವಣೆಯ ಅಲೆಗಳು ಉರುಳಿಬಂದಿವೆ. ಜೀವನದ ಹಲವು ಆಯಾಮಗಳಲ್ಲಿ ವಿಚಾರಕ್ರಾಂತಿ ಉಂಟಾಗಿದೆ. ಹೊಸ, ಹಳೆಯ ಅಭಿಪ್ರಾಯಗಳ ತಾಕಲಾಟ ಸಂತತವಾಗಿ ನಡೆದಿದೆ. ಸಂಪ್ರದಾಯದ ಕಟ್ಟುಪಾಡು ಮತ್ತು ವೈಜ್ಞಾನಿಕ ವಿಚಾರವಾದ, ಇವುಗಳ ನಡುವೆ ಘರ್ಷಣೆ ನಡೆದಿದೆ. ಹೆಣ್ಣಿನ ಆರ್ಥಿಕ ಸ್ವಾತಂತ್ರ್ಯ, ಸಮಾನತೆ ಮತ್ತು ಇತರ ನವೀಕರಣ ಪ್ರವೃತ್ತಿಗಳಿಂದಾಗಿ ಕೌಟುಂಬಿಕಜೀವನ ಹೊಸ ಶಕ್ತಿಗಳ ಪ್ರಭಾವಕ್ಕೆ ಒಳಗಾಗಿದೆ. ಹೊಸ ಹೊಂದಾಣಿಕೆ ಅನಿವಾರ್ಯವಾಗಿದೆ. ಗಂಡು, ಹೆಣ್ಣಿನ ಸಹಬಾಳ್ವೆಯು ಶಾಸನದತ್ತ ಹಕ್ಕುಬಾಧ್ಯತೆಗಳಿಂದಲೂ ನಿಯಂತ್ರಿತವಾಗುತ್ತಿದೆ. ಏನೇ ಬದಲಾವಣೆಗಳಾದರೂ ಕೌಟುಂಬಿಕಜೀವನದ ಸುಖ ಮತ್ತು ಸಾರ್ಥಕತೆ ಗಂಡು, ಹೆಣ್ಣಿನ ಅನ್ಯೋನ್ಯತೆಯನ್ನು ಅವಲಂಬಿಸಿದೆ. ಅಂತಹ ಜೀವನಕ್ಕೆ ಇಬ್ಬರೂ ಪರಸ್ಪರ ಪೂರಕಗಳು. ಯಾರೊಬ್ಬರೂ ಪೂರ್ಣವಲ್ಲ. ಪತಿ ಮತ್ತು ಪತ್ನಿ ಸಂಸಾರ ರಥದ ಎರಡು ಚಕ್ರಗಳು ಎಂಬ ಭಾವನೆ ಎಲ್ಲ ಕಾಲಕ್ಕೂ ಅಚಲವಾಗಿ ನಿಲ್ಲುವ ಒಂದು ಜ್ವಲಂತ ಸತ್ಯವಾಗಿದೆ.

ನಾವು ಮಾಡುವ ಪ್ರತಿಯೊಂದು ಕೆಲಸ ಮತ್ತು ಆಲೋಚನೆ ಮನಸ್ಸಿನ ಮೇಲೆ ಒಂದು ಪರಿಣಾಮವನ್ನು ಬಿಡುವುದು. ಇದೇ ಸಂಸ್ಕಾರ. ಈ ಸಂಸ್ಕಾರಗಳ ಮೊತ್ತವೇ ಶೀಲವೆಂಬ ಮಹಾಪ್ರವಾಹವಾಗುವುದು.

ಕೆ. ಬಾಲಸುಂದರಗುಪ್ತ

ಗ್ರಂಥ–ಗ್ರಂಥಾಲಯ

ಅಳುವ ಕಂದನನ್ನು ಸಮಾಧಾನಪಡಿಸಲು ಕೆಲವರು ಮಕ್ಕಳ ಬಣ್ಣದ ಚಿತ್ರಗಳ ಪುಸ್ತಕ ಕೊಟ್ಟು ಸುಮ್ಮನಿರಿಸುವುದನ್ನು ನಾವೆಲ್ಲರೂ ಕಂಡಿದ್ದೇವೆ, ನಮ್ಮಲ್ಲಿ ಕೆಲವರು ಆ ರೀತಿ ಮಾಡಿದ್ದೇವೆ. ಮಗು ಬೆಳೆದಂತೆ ಅದರ ಜ್ಞಾನಾಭಿವೃದ್ಧಿಗೆ ನೆರವಾಗುವುದು ಪುಸ್ತಕ. ಅಂದರೆ ಕೆಲವರ ಜೀವನದಲ್ಲಿ ಪುಸ್ತಕ ಬಾಲ್ಯದಿಂದ ಮುಪ್ಪಿನವರೆಗೂ ಎಡೆಬಿಡದ ಸಂಗಾತಿಯಾಗಿರಬಹುದು; ಕೆಲವರಿಗೆ ಆಗಿರುತ್ತದೆ. ಜ್ಞಾನವಾಹಿನಿಗಳಾದ ಪುಸ್ತಕಗಳ ಉಪಯುಕ್ತತೆ, ಮಹತ್ವ ಇತ್ಯಾದಿ ಕುರಿತು ವಿದ್ವಾಂಸರೂ, ಕವಿಗಳೂ ತಮ್ಮ ಅನುಭವಕ್ಕೆ ತಕ್ಕಂತೆ ಹಾಡಿದ್ದಾರೆ, ಹೊಗಳಿದ್ದಾರೆ.

ಕವಿಗಳು,ವಿಮರ್ಶಕರು,ಲೇಖಕರು, ಕಾದಂಬರಿಕಾರರು,ಶಾಸ್ತ್ರಗ್ರಂಥರಚನಾಕಾರರು ತಾವು ತಿಳಿದಿದ್ದನ್ನು, ಗ್ರಹಿಸಿದ್ದನ್ನು ಪುಸ್ತಕರೂಪದಲ್ಲಿ ಬರೆದು ಆ ವಿಷಯಗಳಿಗೆ ಒಂದು ಶಾಶ್ವತ ರೂಪ ಕೊಟ್ಟರು. ಮಾನವ ತನ್ನ ನಶ್ವರ ಜೀವನದಲ್ಲಿ ಚಿರಂತನವಾದ, ದೀರ್ಘಕಾಲದವರೆಗೆ ತನ್ನ ಕೃತಿ ಉಳಿಯಬೇಕೆಂಬ ಉದ್ದೇಶದಿಂದ ತನ್ನ ಚಿಂತನೆಗಳನ್ನು ಪುಸ್ತಕರೂಪದಲ್ಲಿ ಉಳಿಸಿಹೋಗುತ್ತಾನೆ. ಕೃತಿಕಾರರ ದೇಹ ಕಣ್ಮರೆಯಾದರೂ ಅವರ ಕೃತಿಯಿಂದ ಅವರ ಹೆಸರನ್ನು ಹೆಚ್ಚು ಕಾಲ ಇರುವಂತೆ ಮಾಡುವುದು ಅವರ ಗ್ರಂಥಗಳೇ ಅಲ್ಲವೆ ? ಕೆಲವು ಕೃತಿಕಾರರಿಗಂತೂ ಸಾವೇ ಇಲ್ಲ ಅವರು ಶಾಶ್ವತರು, ಚಿರಂಜೀವಿಗಳು. ಉದಾಹರಣೆಗೆ—ವಾಲ್ಮೀಕಿ, ವೇದವ್ಯಾಸ, ಪಂಪ, ರನ್ನ, ಟಾಗೋರ್, ಬಂಕಿಮ ಚಂದ್ರ ಚಟರ್ಜಿ, ಶರತ್ ಬಾಬು, ತುಳಸಿದಾಸ್, ಷೇಕ್ಸ್‌ಪಿಯರ್, ಮಿಲ್ಟನ್, ಗಯಟೆ, ಎಚ್. ಜಿ. ವೆಲ್ಸ್, ಜಾನ್ಸನ್, ಕಾರ್ಲ್‌ಮಾರ್ಕ್ಸ್, ವರ್ಡ್ಸ್‌ವರ್ತ್, ಅಲೆಕ್ಸಾಂಡರ್ ಡ್ಯೂಮಾ, ಟಾಲ್‌ಸ್ಟಾಯ್, ರಸೆಲ್, ಕೌಟಿಲ್ಯ, ಮುದ್ದಣ, ಇತ್ಯಾದಿ ಮಹನೀಯರನ್ನು ಇಲ್ಲಿ ಸ್ಮರಿಸಬಹುದು. ಇವರೂ, ಇವರ ಗ್ರಂಥಗಳೂ ರಾಷ್ಟ್ರಸಂಸ್ಕೃತಿಯ ಪ್ರತೀಕಗಳು. ರಾಷ್ಟ್ರಸಂಸ್ಕೃತಿಯ ರಕ್ಷಣೆ ಈ ಗ್ರಂಥಗಳ ಸಂರಕ್ಷಣೆ ಎರಡೂ ಒಂದೇ. ತಲೆ ತಲಾಂತರಗಳಿಂದ ರೂಢಿಸಿಕೊಂಡು ಬರುವ ಜನರ ಸಂಸ್ಕೃತಿ ಆಯಾ ಕಾಲದಲ್ಲಿ ಬರೆದಂತಹ ಕೃತಿಗಳಲ್ಲಿ ಪ್ರತಿಬಿಂಬಿಸಿರುತ್ತದೆ. ಆದ್ದರಿಂದ ಪುಸ್ತಕಗಳ, ಅಮೂಲ್ಯಗ್ರಂಥಗಳ ಸಂರಕ್ಷಣೆ ಒಂದು ರೀತಿಯಲ್ಲಿ ರಾಷ್ಟ್ರ ಸಂಸ್ಕೃತಿಯ ರಕ್ಷಣೆಯೇ ಆಗಿರುತ್ತದೆ ಎನ್ನಬಹುದು.

ಕೆಲವು ರಾಷ್ಟ್ರನಾಯಕರು ಕೆಲವೊಂದು ಗ್ರಂಥಗಳಿಂದ ಪ್ರಭಾವಿತರಾಗಿ ಇತಿಹಾಸವನ್ನೇ ಸೃಷ್ಟಿಸಿ ರಾಷ್ಟ್ರ ರೂಪವನ್ನೇ ಬದಲಿಸಿದ್ದಾರೆ. ಲೆನಿನ್‌ಗೆ ಮಾರ್ಕ್ಸ್‌ನ 'ದಾಸ್‌ಕ್ಯಾಪಿಟಲ್' ಮಹಾತ್ಮಗಾಂಧಿಯವರಿಗೆ–ರಸ್ಕಿನ್‌ನ 'ಅಂಟು ದಿಸ್ ಲ್ಯಾಸ್ಟ್' ಪುಸ್ತಕ, ಭಗವದ್ಗೀತೆ, ಕೊರಾನ್,ಬೈಬಲ್ ಹಾಗೇ ಜಗತ್ತಿನ ಉದ್ದಾಮ ಪಂಡಿತರು, ರಾಜಕಾರಣಿಗಳು—ಮುತ್ಸದ್ದಿಗಳೂ ಒಂದಲ್ಲ ಒಂದು ಗ್ರಂಥದಿಂದ ಪ್ರಭಾವಿತರಾಗಿರುತ್ತಾರೆ.

ಗ್ರಂಥಗಳು ಕೃತಿಕಾರರನ್ನು ಶಾಶ್ವತಗೊಳಿಸುವುದಲ್ಲದೆ–ಈ ಕೃತಿಕಾರರು ತಮ್ಮ ಪುಸ್ತಕಗಳಲ್ಲಿ ಕಲ್ಪಿಸುವ ಅಥವಾ ರೂಪಿಸುವ ವ್ಯಕ್ತಿಗಳೂ ಚಿರಂಜೀವಿಗಳಾಗಿ ಬದುಕುತ್ತಾರೆ—ಉಳಿದು ಬೆಳೆದು ಬರುತ್ತಾರೆ. ಉದಾಹರಣೆಗೆ

ಕೃಷ್ಣ, ರಾಮ, ಸೀತೆ, ಲಕ್ಷ್ಮಣ, ಭರತ, ರಾವಣ, ದುರ್ಯೋಧನ, ಕರ್ಣ, ದ್ರೋಣ, ಭೀಷ್ಮ ಇತ್ಯಾದಿ ಪುರಾಣ ಪ್ರಸಿದ್ಧ ವ್ಯಕ್ತಿಗಳಲ್ಲದೆ ಕೆಲವೊಂದು ಶೃಂಗಾರಕಾವ್ಯಗಳ ನಾಯಕ ನಾಯಕಿಯರು, ಉದಾಹರಣೆಗೆ ಕಾಳಿದಾಸನ ಶಕುಂತಲೆ–ದುಷ್ಯಂತ, ಮೇಘದೂತದ ಪುರೂರವ–ಊರ್ವಶಿ, ಬಾಣ ಕಾದಂಬರಿಯ ಮಹಾಶ್ವೇತೆ, ಷೇಕ್ಸ್‌ಪಿಯರನ ನಾಟಕದಲ್ಲಿ ಬರುವ ನಾಯಕ–ನಾಯಕಿಯರು ಹೀಗೆ ಸಾವಿರಾರು ಮಂದಿ ದೇವತೆಗಳು, ಪ್ರೇಮಿಗಳು, ರಾಜ–ರಾಣಿಯರು, ಕಥನಾಯಕ ನಾಯಕಿಯರು ಗ್ರಂಥಗಳಲ್ಲಿ ಉಳಿದು ಬಂದಿದ್ದಾರೆ. ಅಂದರೆ ಒಂದು ಗ್ರಂಥ ಈ ಜಗತ್ತಿನಲ್ಲಿ ಕೃತಿಕಾರನನ್ನೂ ಸಂಬಂಧಪಟ್ಟ ವ್ಯಕ್ತಿಗಳನ್ನೂ ಸದಾಕಾಲ ಜೀವತುಂಬಿ ಕಾಪಾಡುತ್ತದೆ, ಅವರನ್ನು ಶಾಶ್ವತರನ್ನಾಗಿ ಉಳಿಸುತ್ತದೆ.

ಮಾನವದೇಹ ದಷ್ಟಪುಷ್ಟವಾಗಿರಲು ಕ್ರಮಪೂರ್ಣ ವ್ಯಾಯಾಮ ಸಹಾಯ ಮಾಡುತ್ತದೆ. ಹಾಗೇ ಮಾನವನ ಬುದ್ಧಿಯನ್ನು—ವಿಚಾರಶಕ್ತಿಯನ್ನು—ಬಲಗೊಳಿಸಲು ಪುಸ್ತಕಗಳು ಸಹಕಾರಿಯಾಗಿವೆ. ಮಾನವನ ಮನಸ್ಸಿನ ಮೇಲೆ ಉತ್ತಮಗ್ರಂಥಗಳು ಪ್ರಭಾವ ಬೀರಿ ಅದನ್ನು ವಿಕಸಿಸುವಂತೆಯೂ ಮಾಡುತ್ತವೆ. ಗ್ರಂಥ ರೂಪದ ಒಳ್ಳೆಸಾಹಿತ್ಯ ಮಾನವನ ಸಮಚಿತ್ತತೆಗೆ ಸಹಕಾರಿ—ಅವನ ಸರ್ವತೋಮುಖವಾದ ಬೆಳವಣಿಗೆಗೆ, ಬುದ್ಧಿ ಪ್ರಚೋದನೆಗೆ, ಪ್ರಕಾಶಕ್ಕೆ ಬಲನೀಡುತ್ತದೆ. ಉತ್ತಮ ಗ್ರಂಥಾಧ್ಯಯನವು ಒಳ್ಳೆಯ ಮಾರ್ಗಸಾಧಕಸಾಧನ, ಸಿದ್ಧಿದಾಯಕ ಮತ್ತು ಹರ್ಷದಾಯಕವೆನ್ನಬಹುದು. ಮಾನವನ ಜ್ಞಾನಾಭಿವೃದ್ಧಿಗೆ ಉತ್ತಮಗ್ರಂಥಗಳು ಆವಶ್ಯಕ. ಅಂತಹ ಉತ್ತಮಗ್ರಂಥಗಳನ್ನು ಅಭ್ಯಾಸಿಗಳಿಗೆ ಒದಗಿಸಿಕೊಡುವುದು ಗ್ರಂಥಾಲಯಗಳ ಮುಖ್ಯ ಕಾರ್ಯಗಳಲ್ಲಿ ಒಂದು.

ಒಂದು ಒಳ್ಳೆಯ ಪುಸ್ತಕಕ್ಕಿಂತ ಉತ್ತಮ ಗೆಳೆಯ ಇನ್ನೊಬ್ಬನಿಲ್ಲವೆಂದು ಹಿರಿಯರು ಹೇಳುವುದನ್ನು ನಾವು ಆಗಾಗ್ಗೆ ಕೇಳುತ್ತೇವೆ. ಸ್ನೇಹಿತರು ಒಮ್ಮೊಮ್ಮೆ ಕೈಬಿಡಬಹುದು, ತಮ್ಮ ಸ್ವಾರ್ಥ ಸಾಧನೆಯಾದನಂತರ ನಮ್ಮನ್ನು ಮರತೇ ಬಿಡಬಹುದು. ಆದರೆ ಒಂದು ಒಳ್ಳೇ ಗ್ರಂಥ ನಿಮ್ಮ ಹತ್ತಿರವಿದ್ದರೆ ಅದು ನಿಮಗೆ ಒಬ್ಬ ಬಿಟ್ಟು ಹೋಗದ ಒಳ್ಳೇ ಗೆಳೆಯನಿದ್ದಹಾಗೆ. ಉಮರ್‌ಖಯ್ಯಾಂ ಹೇಳಿದ ಹಾಗೆ ಉತ್ತಮ ಪುಸ್ತಕ ಒಂದಿದ್ದರೆ ಸಾಕು, ಕಾಡಿನಲ್ಲೂ ಸಗ್ಗಸುಖವನ್ನು ಪಡೆಯಬಹುದು. ಅಂತೆಯೇ ಉತ್ತಮ ಗ್ರಂಥಗಳನ್ನು ಎಚ್ಚರಿಕೆಯಿಂದ ಕಾಯ್ದುಕೊಳ್ಳಬೇಕಾಗಿರುತ್ತದೆ. ಚೀಣಿಯರು ಹೇಳುವಂತೆ—"ನಿನ್ನ ಕುದುರೆ, ಹೆಂಡತಿ ಮತ್ತು ಪುಸ್ತಕ ಇವನ್ನು ಎಂದಿಗೂ ಯಾರಿಗೂ ಕೊಡಬೇಡ" ಎನ್ನುವ ಅವರ ಮಾತಿನಲ್ಲಿ ಅರ್ಥವಿದೆ. ಉತ್ತಮ ಗ್ರಂಥಗಳನ್ನು ಎರವಲು ಕೊಟ್ಟು ಕಳೆದುಕೊಳ್ಳಬೇಡ, ಗ್ರಂಥಗಳನ್ನು ನಶಿಸಿಹೋಗದಂತೆ ಸಂರಕ್ಷಿಸಿಡುವ ಅನೇಕ ವೈಜ್ಞಾನಿಕ ವಿಧಾನಗಳೂ ಇಂದು ಜಾರಿಯಲ್ಲಿವೆ.

ಗ್ರಂಥಗಳು ದಿನದಿನಕ್ಕೂ ತಮ್ಮ ರೂಪ ಬದಲಿಸಿ ಹೊಸಹೊಸದಾಗಿ ಬರುತ್ತಿವೆ. ಇಂದಿನ ಸ್ಥಿತಿಗೆ ಬರಲು ಅವುಗಳಿಗೆ ಅನೇಕ ಶತಮಾನಗಳೇ ಹಿಡಿದಿವೆ. ಅಗಲ ಕಡಮೆಯಿದ್ದು ಉದ್ದ ಜಾಸ್ತಿ ಇರುವ ಓಲೆಗರಿಗಳಲ್ಲಿ ಪ್ರಾರಂಭಗೊಂಡ ಪುಸ್ತಕರೂಪ ಮುಂದೆ ಲೋಹಗಳ ಮೇಲೆ ಶಾಸನರೂಪಗಳಲ್ಲಿ ಮೂಡಿ ಬಂದು, ಕೆತ್ತನೆಯನ್ನು ಬಳಸಿಕೊಂಡು ಕಲ್ಲುಗಳ ಮೇಲೆ ಉಳಿದು ಬಂತು; ಚರ್ಮಗಳ ಮೇಲೆ ಹರಿದು ಬಂತು ; ಈಗ ವಿವಿಧ ಕಾಗದಗಳ ಮೇಲೆ ಮೂಡಿ ನಾನಾವರ್ಣಗಳಲ್ಲಿ ರಂಜಿಸುತ್ತಿದೆ. ಅಷ್ಟೇ ಅಲ್ಲದೆ ಈಗ ಫಿಲ್ಮ್, ರಿಕಾರ್ಡ್ ಟೇಪು ಮುಂತಾದವುಗಳಲ್ಲೂ ಗ್ರಂಥ ವಿಷಯಗಳನ್ನು ಸಂಗ್ರಹಿಸಿಡಲಾಗುತ್ತಿದೆ. ಸಧ್ಯಕ್ಕೆ ಕಾಗದದ ಪುಸ್ತಕ ಜನಪ್ರಿಯವಾಗಿ ಜನರ ಕೈಗೆ ನಿಲುಕುತ್ತಿದೆ.

ಗ್ರಂಥಗಳನ್ನು ಆಯಾ ವಿಷಯಗಳ ಮೇಲೆ ವಿಂಗಡಿಸುವುದುಂಟು. ಚಾರಿತ್ರಿಕ, ಸಾಹಿತ್ಯಕ, ನಾಟಕ, ಪ್ರಬಂಧ, ವಿಮರ್ಶೆ, ಪದ್ಯ, ಗದ್ಯ, ವೇದಾಂತ, ಹಾಸ್ಯ ಮತ್ತು ಲಘುಸಾಹಿತ್ಯ ಮತ್ತು ಶಾಸ್ತ್ರಸಾಹಿತ್ಯ, ರಾಜಕೀಯ, ಸಾಮಾಜಿಕ, ಆರ್ಥಿಕ, ವಾಣಿಜ್ಯ ಮತ್ತು ಪ್ರಚಾರ ಸಾಹಿತ್ಯ ಇತ್ಯಾದಿ.

ಪುಸ್ತಕಗಳನ್ನು ಒಂದೆಡೆ ವ್ಯವಸ್ಥಿತವಾಗಿ ಸಂಗ್ರಹಿಸಿ ಓದುಗರಿಗೆ ಬೇಕಾದದ್ದನ್ನು ಕಡಮೆ ಸಮಯದಲ್ಲಿ ಒದಗಿಸಿಕೊಡುವ ಮಂದಿರವನ್ನು ಗ್ರಂಥಾಲಯ, ಪುಸ್ತಕಭಂಡಾರ, ಎಂಬುದಾಗಿ ಕರೆಯುತ್ತಾರೆ. ಗ್ರಂಥಾಲಯಗಳ ಮಹತ್ವ ಅರಿತ ಅಮೆರಿಕ, ಸೋವಿಯತ್ ರಷ್ಯಾ, ಬ್ರಿಟನ್, ಗ್ರಂಥಾಲಯಗಳ ಕಾಯಿದೆಗಳನ್ನು ರೂಪಿಸಿವೆ. ನಮ್ಮ ರಾಷ್ಟ್ರವೂ ಗ್ರಂಥಾಲಯದ ಕಾಯಿದೆ ರೂಪಿಸಿದೆ. ಕರ್ನಾಟಕ ಸರ್ಕಾರ ಎಸ್. ಆರ್. ರಂಗನಾಥನ್‌ರವರ ಮಾರ್ಗ ದರ್ಶನದಲ್ಲಿ ಸಾರ್ವಜನಿಕ ಗ್ರಂಥಾಲಯ ಕಾಯಿದೆಯನ್ನು 1965ರಲ್ಲಿ ಅಂಗೀಕರಿಸಿ ಗ್ರಂಥಾಲಯಗಳ ಅಭಿವೃದ್ಧಿಗೆ ಹೊಸ ತಿರುವು ಕೊಟ್ಟಿತು. ಒಂದು ರಾಷ್ಟ್ರದ ಪ್ರಗತಿ ನೋಡಬೇಕಾದರೆ ಅಲ್ಲಿನ ಗ್ರಂಥಭಂಡಾರವನ್ನು ನೋಡಿ ಎನ್ನುವ ವಾಡಿಕೆ ಬೆಳೆದುಬಂದಿದೆ. ಅಂದರೆ ಗ್ರಂಥಾಲಯಗಳ ಮಹತ್ವ ನಿಮಗೆ ಅರಿವಾದೀತು.

ಕಲ್ಕತ್ತದಲ್ಲಿರುವ ರಾಷ್ಟ್ರೀಯ ಗ್ರಂಥಾಲಯ ಭಾರತದ ಮುಖ್ಯ ಗ್ರಂಥಭಂಡಾರ. ದೇಶದಲ್ಲಿ ಪ್ರಕಟ ವಾಗುವ ಎಲ್ಲ ಪುಸ್ತಕ, ಪತ್ರಿಕೆ,ಇತರ ಪ್ರಕಟಣೆ ಎಲ್ಲವೂ ನೊಂದಾಣಿಕೆ ಕಾಯಿದೆ ಪ್ರಕಾರ ಪ್ರಕಾಶಕರು, ಸಂಪಾದ ಕರು ಮುದ್ರಿತ ಪ್ರತಿಗಳನ್ನು ಮುಫತ್ತಾಗಿ ಅಲ್ಲಿಗೆ ಕಳಿಸಿಕೊಡಬೇಕು. ಈ ಗ್ರಂಥಾಲಯ ಭಾರತದ ಸಂಗ್ರಹ ಗ್ರಂಥಾಲಯ. ಇದರ ಜೊತೆಗೆ ಮುಂಬಯಿ, ದೆಹಲಿ, ಬೆಂಗಳೂರು, ಮದ್ರಾಸು, ಕಾನ್ಪುರ, ಹೈದರಾಬಾದ್, ಲಕ್ನೊ, ಕಾಶಿ, ಮುಂತಾದೆಡೆಗಳಲ್ಲಿ ದೊಡ್ಡ ಗ್ರಂಥಾಲಯಗಳ ಜೊತೆಗೆ ತಂಜಾವೂರಿನ ಸರಸ್ವತಿ ಮಹಲ್ ಗ್ರಂಥಾಲಯ, ಪಾಟ್ನಾದ ಖುದಾಭಕ್ಷ್ ಗ್ರಂಥಾಲಯಗಳನ್ನೂ ಹೆಸರಿಸಬಹುದು. ವಿಶ್ವವಿದ್ಯಾನಿಲಯ ಗ್ರಂಥ ಭಂಡಾರಗಳಲ್ಲಿ ದೆಹಲಿ, ಕಾಶಿ, ಮುಂಬಯಿ, ಮದ್ರಾಸ್‌ನಲ್ಲಿರುವ ಭಂಡಾರಗಳು ಪ್ರಮುಖವಾದವೆಂದು ಹೇಳಬಹುದು. ಮುಕ್ತ ವಿಶ್ವವಿದ್ಯಾನಿಲಯ ವಿದ್ಯಾಭ್ಯಾಸ ಪ್ರಚಾರಕ್ಕೆ ಬರುತ್ತಿರುವ ಈ ಕಾಲದಲ್ಲಿ ಗ್ರಂಥಾಲಯಗಳ ಪಾತ್ರವಂತೂ ಹೇಳಲಸದಳ.

ವಿದ್ಯೆಗೆ ಪುಸ್ತಕಗಳ ಆಧಾರ ಬೇಕು. ಓದುಗ ತನಗೆ ಬೇಕಾದಾಗ ಅವುಗಳನ್ನು ಓದಿ ಜ್ಞಾನಾರ್ಜನೆ ಮಾಡಿ ಕೊಳ್ಳಬಹುದು. ಗುರುದೇವೋ ಭವ ಎನ್ನುವ ಬದಲು ಮುಂದೆ ಗ್ರಂಥದೇವೋಭವ ಎನ್ನುವ ಕಾಲ ಬರಬಹುದು. ಗ್ರಂಥಗಳು ತಮ್ಮ ಜ್ಞಾನಭಂಡಾರವನ್ನು ಜಾತಿ, ಮತ, ಮೇಲು, ಕೀಳೆಂಬ ಭಾವನೆ ಇಲ್ಲದೆ ಸರ್ವರಿಗೂ ಸಮವಾಗಿ ಹಂಚುತ್ತವೆ. ಪುಸ್ತಕಗಳಿದ್ದರೆ ಮನೆಯನ್ನೇ ಶಾಲೆಯಾಗಿ-ವಿಶ್ವವಿದ್ಯಾನಿಲಯವನ್ನಾಗಿ ಮಾಡಬಹುದು ಎಂದು ಗ್ರಂಥಪ್ರೇಮಿಗಳು ಹೇಳುವುದುಂಟು. ಇದು ಒಂದು 'ಮುಕ್ತ ವಿಶ್ವವಿದ್ಯಾಲಯ' ಎಂದು ಹೇಳಬಹುದಲ್ಲವೆ ? ಆರ್ಥಿಕ ಮುಗ್ಗಟ್ಟಿನಿಂದ ಹೆಚ್ಚು ಮಂದಿ ಪುಸ್ತಕಕೊಳ್ಳಲಾರರು. ಅಂತಹ ಜ್ಞಾನದಾಹಿಗಳಿಗೆ ಗ್ರಂಥಭಂಡಾರಗಳು ಮಾತ್ರವೇ ಸಹಾಯ ಮಾಡಬಲ್ಲುವು. ಭಗವದ್ಗೀತೆಯಲ್ಲಿ ಹೇಳಿರುವಂತೆ ಜ್ಞಾನಕ್ಕಿಂತ ಮಿಗಿಲಾದ ವಸ್ತು ಇನ್ನಿಲ್ಲ. ಮನೆ ಮನೆಗೂ ಪುಸ್ತಕರೂಪದ ಜ್ಞಾನವನ್ನು ಹಂಚಬೇಕು, ಹರಡಬೇಕು. ನಮ್ಮ ಸಂಸ್ಕೃತಿಯ ಬೆನ್ನೆಲುಬಾದ ಗ್ರಂಥಗಳು ಮತ್ತು ಗ್ರಂಥಭಂಡಾರಗಳ ಮಹತ್ವವನ್ನು ಎಷ್ಟು ಹೇಳಿದರೂ ಕಡಮೆಯೇ ಆದೀತು.

ಹೆಚ್. ಸಿ. ಮುಕುಂದ

ಗ್ರಂಥಾಲಯ ಮತ್ತು ಗ್ರಂಥಪಾಲ

ಗ್ರಂಥಾಲಯ ಇಂದಿನ ಯುಗದ ಕಾಮಧೇನು, ಕಲ್ಪವೃಕ್ಷ, ಮಕ್ಕಳ ದಾರಿದೀಪ, ವಿದ್ಯಾರ್ಥಿಗಳ ಜ್ಞಾನದೇಗುಲ, ರೈತರ ಬಂಧು, ಕಾರ್ಮಿಕರ ಅಭಿವೃದ್ಧಿ ಸ್ಥಾನ, ಅಬಲೆಯರ ವರದಾನ, ಅಂಧರ ದೇವಾಲಯ, ನಾಗರೀಕರ ನಿತ್ಯೋಪಯೋಗಿ, ಸಾರ್ವಜನಿಕರ ವಿಶ್ವವಿದ್ಯಾಲಯ, ದಾರ್ಶನಿಕರ ಆಶ್ರಮ, ವಿಜ್ಞಾನಿಗಳ ಕಾರ್ಯಾಗಾರ, ಉಪಾಧ್ಯಾಯರ ಜ್ಞಾನಮಂದಿರ ; ಸ್ಫೂರ್ತಿಯ ಬುಗ್ಗೆ, ಮನುಕುಲದ ಅನುಭವಗಳ, ಆದರ್ಶಗಳ, ಆನಂದದ ನಿಧಿ, ಶಕ್ತಿ ಉತ್ಸಾಹಗಳ ಚಿಲುಮೆ ; ಸ್ನೇಹ, ಸಹನೆ, ಸಮಾಧಾನ ಗಳ ಕಾರಂಜಿ, ಪ್ರೇಮ ವಿಶ್ವಾಸದ ಪ್ರತೀಕ ; ಸತ್ಯ ಸೌಂದರ್ಯಗಳ ನೆಲೆ, ಸಾಹಸ, ಶೌರ್ಯದ ಚೇತನ, ಚಿತ್ರ, ಕಲೆ, ಸಂಗೀತಗಳ ಕೇಂದ್ರಸ್ಥಾನ, ಚಿಂತನ, ಮಂಥನದ ಮನೆ, ಜೀವನದ ಕೈಗನ್ನಡಿ; ಭಾವನೆ ಆಸೆ, ಆಕಾಂಕ್ಷೆಗಳ ಆಲಯ; ಪರಿಸರವನ್ನು ಸ್ಪಂದಿಸಿ ಬೆಳಗುವ ವಿದ್ಯುತ್ತು, ದೇಶ ವಿದೇಶಗಳ ಸಂಪರ್ಕ ಸಾಧನ, ವಾತಾವರಣವನ್ನು ತಿಳಿಗೊಳಿಸುವ ವಿಧಾನ, ಜ್ಞಾನಸಂಗ್ರಹ ಮತ್ತು ವಿನಿಮಯ ಕೇಂದ್ರ, ಜೀವನವನ್ನು ಉದ್ದೀಪಿಸುವ ಸಂಜೀವಿನಿ, ಹಳ್ಳಿ ದಿಲ್ಲಿಯ ಸೇತುವೆ, ಪ್ರಜಾಸತ್ತೆಯ ಸನ್ಮಿತ್ರ, ಅನಕ್ಷರತೆಯ ಶತ್ರು, ಸಂಪನ್ಮೂಲಗಳನ್ನು ಅಧಿಕಗೊಳಿಸುವ ಶಕ್ತಿ, ಸಮಸ್ತಜೀವಿಗಳ ಏಕೆ, ಏನು, ಎಲ್ಲಿ ಇವುಗಳ ಉತ್ತರಗಳ ಕಣಜ ; ಅಶಾಂತಿ, ಅನೀತಿ, ಅಜ್ಞಾನ, ಅನಾಗರೀಕತೆಗಳ ವೈರಿ, ಸಂಸ್ಕೃತಿ, ನಾಗರೀಕತೆಗಳ ಸಂಗಮ ; ನೆನ್ನೆಯ ಪರಿಣಾಮ, ಇಂದಿನ ಪ್ರಯತ್ನ, ನಾಳೆಯ ಪ್ರಯೋಜನ ಇವುಗಳ ಸಮ್ಮಿಲನ; ಮಾನವತ್ವವನ್ನು ನಿರ್ಮಲಗೊಳಿಸಿ ದೈವತ್ವದ ಕಡೆಗೆ ಕರೆದೊಯ್ಯುವ ಮಾರ್ಗದರ್ಶಿ, ಯುಗಯುಗದ ಸರಪಳಿ ; ಸ್ನೇಹಿತ.

ವಿವಿಧರೀತಿಯ, ವಿವಿಧಸ್ತರಗಳ ಸೇವೆಯನ್ನು ಸಮರ್ಪಕವಾಗಿ ಸಲ್ಲಿಸಲು ಒಂದೇ ಬಗೆಯ ಗ್ರಂಥಾಲಯಗಳಿಂದ ಸಾಧ್ಯವಿಲ್ಲ. ಜ್ಞಾನಸಂಗ್ರಹಣೆ ಮಾತ್ರ ಗ್ರಂಥಾಲಯಗಳ ಕರ್ತವ್ಯವಲ್ಲ. ಅದನ್ನು ಸರಿಯಾದ ವ್ಯಕ್ತಿಗೆ, ಸರಿಯಾದ ಸಮಯದಲ್ಲಿ, ಸರಿಯಾದ ರೀತಿಯಲ್ಲಿ, ಸರಿಯಾದ ಕಾರಣಕ್ಕಾಗಿ ಒದಗಿಸು ವುದು ಗ್ರಂಥಾಲಯಗಳ ಜೀವಾಳ. ಇದನ್ನು ಸಮರ್ಪಕವಾಗಿ ನಿರ್ವಹಿಸಲು ಗ್ರಂಥಾಲಯಗಳು ಸಜ್ಜಾಗ ಬೇಕು. ಪ್ರತಿಯೊಂದು ರೀತಿಯ ಗ್ರಂಥಾಲಯವೂ ತನ್ನ ಪರಿಧಿಯಲ್ಲಿ ಬರುವ ಪೋಷಕರ ಎಲ್ಲಾ ಆಸಕ್ತಿ ಗಳ ಅಗತ್ಯಗಳನ್ನು ಪೂರೈಸಬೇಕು. ಇದಕ್ಕಾಗಿ ಪ್ರತಿ ಗ್ರಂಥಾಲಯವು ತನ್ನದೇ ಆದ ರೀತಿಯಲ್ಲಿ ಬೆಳೆಯ ಬೇಕು. ಗ್ರಂಥಾಲಯ ಕಟ್ಟಡ, ಪುಸ್ತಕಗಳು ಮತ್ತು ನಿಯತಕಾಲಿಕೆಗಳ ಸಂಗ್ರಹಣ, ಶ್ರವಣಗೋಚರ ಸಾಧನಗಳ ಉಪಯೋಗ ಮತ್ತು ಎಲ್ಲಕ್ಕೂ ಮಿಗಿಲಾಗಿ ತಕ್ಕ ಪರಿಶ್ರಮವುಳ್ಳ ಗ್ರಂಥವಿಜ್ಞಾನಿಗಳ, ಗ್ರಂಥಾಧಿಕಾರಿಗಳ ಮತ್ತು ಸಿಬ್ಬಂದಿವರ್ಗದ ನೇಮಕ–ಇವೆಲ್ಲವೂ ಸಮರ್ಪಕವಾಗಿದ್ದು ಗ್ರಂಥಾಲಯಗಳಲ್ಲಿ

ಸಾರ್ವಜನಿಕ ಸೇವಾಸಂಸ್ಥೆಗಳಾಗಬೇಕು. ಈ ದೃಷ್ಟಿಯಿಂದ ಗ್ರಂಥಾಲಯಗಳನ್ನು ಆರು ವಿಧಾನಗಳಲ್ಲಿ ವಿಂಗಡಿಸಬಹುದು :

೧. ಸಾರ್ವಜನಿಕ ಗ್ರಂಥಾಲಯಗಳು
೨. ಶೈಕ್ಷಣಿಕ ಗ್ರಂಥಾಲಯಗಳು
೩. ಮಕ್ಕಳ ಗ್ರಂಥಾಲಯಗಳು
೪. ವಿಶಿಷ್ಟ ಗ್ರಂಥಾಲಯಗಳು
೫. ರಾಷ್ಟ್ರೀಯ ಗ್ರಂಥಾಲಯಗಳು
೬. ಸಂಪರ್ಕ ಗ್ರಂಥಾಲಯಗಳು

೧. ಸಾರ್ವಜನಿಕ ಗ್ರಂಥಾಲಯಗಳು : ಇವು ಶ್ರೀಸಾಮಾನ್ಯನ ವಿಶ್ವವಿದ್ಯಾಲಯಗಳು. ಜನತೆಯ ಅನಕ್ಷರತೆಯನ್ನು ನಿರ್ಮೂಲನೆ ಮಾಡುವುದರ ಜೊತೆಗೆ ಅಕ್ಷರಸ್ಥರಿಗೆ ನಿರಂತರ ಮಾರ್ಗದರ್ಶನ ಮಾಡುವುದು ಇವುಗಳ ಮುಖ್ಯ ಕರ್ತವ್ಯ. ಬಾಲಕರು, ವೃದ್ಧರು, ವಣಿಕರು, ರೈತರು, ಗೃಹಿಣಿಯರು, ಕೈಗಾರಿಕೋದ್ಯಮಿಗಳು, ಉದ್ಯೋಗಿಗಳು, ನಿವೃತ್ತರಾದವರು, ಕಾರ್ಮಿಕರು, ವಿದ್ಯಾರ್ಥಿಗಳು ಇವುಗಳ ಪ್ರಯೋಜನವನ್ನು ಹೆಚ್ಚಾಗಿ ಪಡೆಯುತ್ತಾರೆ. ಇವರಿಗೆ ಬೇಕಾದ ಪುಸ್ತಕಗಳಲ್ಲದೆ ನಿಯತಕಾಲಿಕೆಗಳು, ವೃತ್ತಪತ್ರಿಕೆಗಳು, ಚಿತ್ರಪಟಗಳು, ಸ್ಥಳ ಪರಿಚಯಿಸುವ ಮಾರ್ಗದರ್ಶಿಕೆಗಳು, ಮ್ಯಾಪುಗಳು, ಫಿಲ್ಮುಗಳು, ಧ್ವನಿಮುದ್ರಿಕೆಗಳು, ಟೇಪುಗಳು ಸಾರ್ವಜನಿಕ ಗ್ರಂಥಾಲಯಗಳಲ್ಲಿ ದೊರಕಬೇಕು. ಆಯಾ ಸ್ಥಳದ ಬೆಳೆ, ವಾತಾವರಣ, ಅನುಕೂಲ ಪರಿಸ್ಥಿತಿ, ಸಾಧ್ಯತೆ ಮತ್ತು ಅಲ್ಲಿಯ ಜನರ ಆಸೆ, ಆಕಾಂಕ್ಷೆ ಹಾಗೂ ಅಗತ್ಯಗಳಿಗೆ ತಕ್ಕಂತೆ ಈ ಗ್ರಂಥಾಲಯಗಳು ಬೆಳೆದು ಜೀವಂತ ಸಂಸ್ಥೆಗಳಾಗಬೇಕು.

ವಯಸ್ಕರ ಶಿಕ್ಷಣ ಸಮಿತಿ ಮತ್ತು ಸಾರ್ವಜನಿಕ ಗ್ರಂಥಾಲಯಗಳು ಜೊತೆಗೂಡಿ ಗ್ರಾಮಾಂತರ ಪ್ರದೇಶದ ಅನಕ್ಷರತೆ ಮತ್ತು ಮೌಢ್ಯವನ್ನು ತೊಡೆದುಹಾಕಬೇಕು. ಅನಕ್ಷರಸ್ಥರಲ್ಲಿ ಕಲಿಯುವ ಆಸೆಯನ್ನು ಕಥೆ ಹೇಳುವುದರ ಮೂಲಕ, ಬಾಳ ಸಂಗತಿಗಳನ್ನು ವಾಚನಮಾಡುವುದರ ಮೂಲಕ, ಮಹಾತ್ಮರ ಜೀವನ ಚರಿತ್ರೆಗಳನ್ನು ಪಠನಮಾಡುವುದರ ಮೂಲಕ, ಗ್ರಾಮೋಫೋನ್‌ಗಳ ಮೂಲಕ, ಚಿತ್ರಪ್ರದರ್ಶನಗಳ ಮೂಲಕ, ಭಾಷಣ ಮತ್ತು ನಾಟಕಗಳ ಮೂಲಕ, ಅವರಿಗೆ ಬೇಕಾದ ವ್ಯವಸಾಯ ಮುಂತಾದವುಗಳ ಬಗ್ಗೆ ಮಾಹಿತಿ ಕೊಡುವುದರ ಮೂಲಕ ಕುದುರಿಸಬೇಕು. ಪುಸ್ತಕ, ದೈನಿಕೆ, ವಾರಿಕೆಗಳನ್ನು ಅವರು ಸುಲಭವಾಗಿ ಗ್ರಹಿಸುವ ರೀತಿಯಲ್ಲಿ ಅಚ್ಚುಹಾಕಿಸಿ ಸಾರ್ವಜನಿಕ ಗ್ರಂಥಾಲಯಗಳು ಪುಕ್ಕಟೆಯಾಗಿ ಹಂಚಬೇಕು.

ಪಟ್ಟಣದ ಎಲ್ಲಾ ಕಡೆಯಲ್ಲೂ ಮತ್ತು ಪ್ರತಿಹಳ್ಳಿಯಲ್ಲೂ ಸಾರ್ವಜನಿಕಗ್ರಂಥಾಲಯಗಳು ಸ್ಥಾಪನೆಯಾಗಬೇಕು. ಗ್ರಂಥಾಲಯಗಳು ಸೇವೆ ಸಲ್ಲಿಸಲು ಅನುಗುಣವಾದ ಸುಂದರವಾದ ಕಟ್ಟಡಗಳು ಹುಟ್ಟಬೇಕು. ಇವುಗಳ ಸುತ್ತಲು ಉದ್ಯಾನ ಮತ್ತು ಹುಲ್ಲು ಮೈದಾನಗಳನ್ನು ಬೆಳೆಸಬೇಕು. ಇಲ್ಲಿನ ವಾತಾವರಣ ಮನಸ್ಸಿಗೆ ಆಹ್ಲಾದ ತರಬೇಕು. ಅಲ್ಲದೆ ಸಂಚಾರೀ ಗ್ರಂಥಾಲಯಗಳ ಮುಖಾಂತರ ಮನೆ ಮನೆಗೆ ವಾಚನಸೌಲಭ್ಯ ಈ ಗ್ರಂಥಾಲಯಗಳಿಂದ ಸಿಗಬೇಕು. ಇವು ಸೇವಾಕೇಂದ್ರಗಳಾಗಿ ಜನತೆಯ ಸಕಲ ರಚನಾತ್ಮಕ ಕೆಲಸಗಳಲ್ಲಿ ಭಾಗಿಯಾಗಿ ದುಡಿಯಬೇಕು.

೨. ಶೈಕ್ಷಣಿಕ ಗ್ರಂಥಾಲಯಗಳು : ಇವುಗಳಲ್ಲಿ ಮೂರು ವಿಧ; ಶಾಲಾ ಗ್ರಂಥಾಲಯಗಳು, ಕಾಲೇಜು ಗ್ರಂಥಾಲಯಗಳು ಮತ್ತು ವಿಶ್ವವಿದ್ಯಾನಿಲಯ ಗ್ರಂಥಾಲಯಗಳು. ಶಾಲಾ ಮತ್ತು ಕಾಲೇಜು ಗ್ರಂಥಾಲಯಗಳು ಆಯಾ ಶಾಲೆ ಮತ್ತು ಕಾಲೇಜಿನ ಪಠ್ಯಕ್ರಮವನ್ನು ಅನುಸರಿಸಿ ಸುಸಜ್ಜಿತವಾಗಿರಬೇಕು.

ವಿದ್ಯಾರ್ಥಿಗಳ ವಯೋಮಿತಿಯನ್ನು ಗಮನದಲ್ಲಿಟ್ಟುಕೊಂಡು, ಅದಕ್ಕೆ ಸೂಕ್ತವಾದ ಗ್ರಂಥಾಲಯದ ವ್ಯವಸ್ಥೆ ಮಾಡಬೇಕು. ಈ ಗ್ರಂಥಾಲಯಗಳು ಆಯಾ ತರಗತಿಗಳ ಪಾಠಕ್ರಮಗಳಿಗೆ ಪೋಷಕವಾಗಿರಬೇಕಲ್ಲದೆ, ವಿದ್ಯಾರ್ಥಿಗಳ ಉತ್ತಮ ಹವ್ಯಾಸಗಳನ್ನು ಕುದುರಿಸುವ, ಬೆಳೆಸುವ ಮತ್ತು ಬಳಸುವ ಸಂಸ್ಥೆಗಳಾಗಿ ಸೇವೆ ಸಲ್ಲಿಸಬೇಕು.

ವಿಶ್ವವಿದ್ಯಾನಿಲಯಗಳ ಗ್ರಂಥಾಲಯಗಳ ಬೆಳವಣಿಗೆ ಬಹು ತ್ವರಿತ. ಇದನ್ನು ಗಮನಿಸಿ ವಿಶಾಲ ವಾದ ಬಯಲಿನಲ್ಲಿ ಗ್ರಂಥಾಲಯದ ಕಟ್ಟಡವನ್ನು ನಿರ್ಮಿಸಬೇಕು. ಈ ಗ್ರಂಥಾಲಯಗಳು ಆಯಾ ಪ್ರದೇಶದ ಸ್ನಾತಕೋತ್ತರ ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಆವಶ್ಯಕತೆಗಳನ್ನು ಪೂರೈಸುವುದಲ್ಲದೆ, ಅಲ್ಲಿನ ಕಾಲೇಜಿನ ವಿದ್ಯಾರ್ಥಿಗಳ, ಸಂಶೋಧಕರ ಅಗತ್ಯಗಳನ್ನು ಪೂರೈಸಬೇಕು. ವಿಶ್ವವಿದ್ಯಾನಿಲಯಗಳ ಧ್ಯೇಯ, ಧೋರಣೆ ಮತ್ತು ಕಾರ್ಯಕ್ರಮಗಳನ್ನನುಸರಿಸಿ ಗ್ರಂಥಾಲಯಗಳ ಆಡಳಿತ ಮತ್ತು ಸೇವಾವಿಧಾನಗಳನ್ನು ರೂಪಿಸ ಬೇಕು. ವಿಶ್ವವಿದ್ಯಾನಿಲಯ ಗ್ರಂಥಾಲಯಗಳು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಬೇಕು.

ಪಠ್ಯಪುಸ್ತಕಗಳ ವಿಭಾಗ, ಪರಾಮರ್ಶನ ವಿಭಾಗ, ನಿಯತಕಾಲಿಕೆಗಳ ವಿಭಾಗ, ದೈನಿಕೆಗಳ ವಿಭಾಗ, ಶ್ರವಣಗೋಚರಸಾಧನಗಳ ವಿಭಾಗ, ಮುದ್ರಣ ವಿಭಾಗ—ಇವುಗಳ ಮುಖಾಂತರ ವಿಶ್ವವಿದ್ಯಾನಿಲಯ ಗ್ರಂಥಾಲಯಗಳು ವಾಚಕರ ಸೇವೆ ಸಲ್ಲಿಸಬೇಕು. ಅವರಿಗೆ ಬೇಕಾದ ಸಲಕರಣೆಗಳನ್ನು ಸ್ಥಳೀಯ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಗ್ರಂಥಾಲಯಗಳ ಸಹಕಾರದಿಂದ ಒದಗಿಸಬೇಕು. ಆಗಾಗ್ಗೆ ಪುಸ್ತಕ ಪ್ರದರ್ಶನ, ಭಾಷಣ, ವಿಚಾರವಿನಿಮಯ, ಚಿತ್ರಪ್ರದರ್ಶನಗಳ ಮೂಲಕ ಜನರ ಓದುವಾಸೆಯನ್ನು ತೀವ್ರ ಗೊಳಿಸಿ ಅವರಿಗೆ ತಕ್ಕ ಗ್ರಂಥಗಳನ್ನು ಒದಗಿಸಬೇಕು. ಪುಸ್ತಕಪ್ರೇಮಿಗಳ ಸುಪ್ತಜ್ಞಾನವನ್ನು ಪ್ರಖರ ಗೊಳಿಸುವ ಮಹಾಕಾವ್ಯಗಳು, ಉದಾತ್ತಗ್ರಂಥಗಳು, ಪರಾಮರ್ಶನಗ್ರಂಥಗಳು ಮತ್ತು ಪ್ರಪಂಚದ ಮುಖ್ಯ ಭಾಷೆಗಳ ಶ್ರೇಷ್ಠಗ್ರಂಥಗಳು, ಹಾಗೂ ಹಸ್ತಪ್ರತಿಗಳ ಸಂಗ್ರಹ ವಿಶ್ವವಿದ್ಯಾನಿಲಯಗಳ ಗ್ರಂಥಾಲಯ ಗಳಲ್ಲಿ ದೊರೆಯಬೇಕು.

೩. **ಮಕ್ಕಳ ಗ್ರಂಥಾಲಯಗಳು** : ಇಂದಿನ ಮಗು ಮುಂದಿನ ವಿದ್ಯಾರ್ಥಿ, ಸಾಹಿತಿ, ಉದ್ಯೋಗಿ, ರಾಜಕಾರಣಿ, ಕುಶಲಕರ್ಮಿ, ರೈತ, ಕಾರ್ಮಿಕ, ವ್ಯಾಪಾರಿ ಇತ್ಯಾದಿ. ತಳಪಾಯ ಭದ್ರವಾಗಿದ್ದರೆ ಕಟ್ಟಡ ಗಟ್ಟಿಯಾಗಿದ್ದು ನೂರ್ಕಾಲ ನಿಲ್ಲುತ್ತದೆ. ಮಗುವಿಗೆ ಸರಿಯಾದ ಮಾರ್ಗದರ್ಶನ ನೀಡಿದರೆ, ಅದಕ್ಕೆ ಉತ್ತಮ ಸಾಹಿತ್ಯ ಒದಗಿಸಿ ಸದಭಿರುಚಿಯನ್ನು ರೂಢಿಸಿದರೆ, ಅದು ಜೀವನದ ಯಾವ ರಂಗದಲ್ಲಾದರೂ ದಕ್ಷತೆಯಿಂದ, ಯಶಸ್ವಿಯಾಗಿ ಕೆಲಸಮಾಡಬಲ್ಲದು. ಸ್ವಂತ ತಿಳುವಳಿಕೆಯಿಂದ ಸಮರ್ಥವಾಗಿ ಜೀವನವನ್ನು ನಡೆಸಬಲ್ಲದು. ಅದರ ಜೀವನದಲ್ಲಿ ಅಜ್ಞಾನದ ಅಂಧಕಾರ ಮತ್ತು ಅನಕ್ಷರತೆಯ ಭೀಕರತೆಗೆ ಅವಕಾಶವೇ ಇರುವುದಿಲ್ಲ.

ಸಾರ್ವಜನಿಕ ಗ್ರಂಥಾಲಯಗಳು ಮಕ್ಕಳ ವಿಭಾಗಕ್ಕೆ ವಿಶೇಷ ಮುತುವರ್ಜಿ ವಹಿಸಬೇಕು. ಪ್ರತಿ ನರ್ಸರಿಶಾಲೆಯಲ್ಲಿ ಉತ್ತಮ ಗ್ರಂಥಾಲಯವಿರಬೇಕು. ಸಂಘ ಸಂಸ್ಥೆಗಳು ಮಕ್ಕಳ ಗ್ರಂಥಾಲಯಗಳಿಗೆ ಉದಾರ ಧನ ಸಹಾಯ ನೀಡಬೇಕು. ಏಕೆಂದರೆ ಅವರ ದಾನದ ಹತ್ತುಪಟ್ಟು ಮಕ್ಕಳ ಜ್ಞಾನವಿಕಾಸತೆಯ ಮೂಲಕ ಹಿಂದಕ್ಕೆ ಬರುತ್ತದೆ. ಹಳ್ಳಿ, ಪಟ್ಟಣ ಎಂಬ ಭೇದಭಾವ ಇಲ್ಲದೆ ಎಲ್ಲಾ ಕಡೆಯಲ್ಲೂ ಮಕ್ಕಳ ಗ್ರಂಥಾಲಯಗಳು ಇರಬೇಕು. ಮಗುವಿನ ಏಕೆ, ಏನು, ಹೇಗೆ, ಎಲ್ಲಿ, ಎಷ್ಟು ಎಂಬ ನೂರಾರು ಪ್ರಶ್ನೆಗಳಿಗೆ ಉತ್ತರ ಸಿಗುವ, ವಿವಿಧ ವಿಷಯಗಳಲ್ಲಿ ಮಗು ತೋರುವ ಸಹಜತಾಸಕ್ತಿಯನ್ನು ಬೆಳೆಸುವ, ಅದನ್ನು ಕ್ರಿಯಾಶೀಲ ವನ್ನಾಗಿ ಮಾಡುವ, ಅದರ ಭಾವನೆ, ಕಲ್ಪನೆ, ಬುದ್ಧಿಗಳಿಗೆ ಚೇತನ ಒದಗಿಸುವ ಸುಂದರ ಗ್ರಂಥಗಳು, ನಿಯತ ಕಾಲಿಕೆಗಳು, ಪೋಸ್ಟರುಗಳು, ಫಿಲ್ಮುಗಳು ಈ ಗ್ರಂಥಾಲಯಗಳಲ್ಲಿ ಇರಬೇಕು.

೪. **ವಿಶಿಷ್ಟ ಗ್ರಂಥಾಲಯಗಳು :** ವಿಶಿಷ್ಟವರ್ಗದ ವಿಶಿಷ್ಟಅಗತ್ಯವನ್ನು ವಿಶಿಷ್ಟಕಾರಣಕ್ಕೆ, ವಿಶಿಷ್ಟರೀತಿಯಲ್ಲಿ ಪೂರೈಸುವುದು ಈ ಗ್ರಂಥಾಲಯಗಳ ಉದ್ದೇಶ. ತಾಂತ್ರಿಕ ಗ್ರಂಥಾಲಯಗಳು, ಕೈಗಾರಿಕಾ ಗ್ರಂಥಾಲಯಗಳು, ಹಸ್ತಪ್ರತಿ ಗ್ರಂಥಾಲಯಗಳು, ಕುರುಡರ ಗ್ರಂಥಾಲಯಗಳು, ಜೈಲು ಗ್ರಂಥಾಲಯಗಳು, ಪತ್ರಿಕೆ ಗ್ರಂಥಾಲಯಗಳು, ಚಲನಚಿತ್ರ ಗ್ರಂಥಾಲಯಗಳು, ಚಿಕಿತ್ಸಾ ಗ್ರಂಥಾಲಯಗಳು, ಧ್ವನಿಮುದ್ರಿಕೆಗಳ ಗ್ರಂಥಾಲಯಗಳು ಇತ್ಯಾದಿ ಗ್ರಂಥಾಲಯಗಳು ಈ ವರ್ಗಕ್ಕೆ ಸೇರಿವೆ. ಆಯಾ ಕ್ಷೇತ್ರದ ಪೋಷಕರ ಸಾಮರ್ಥ್ಯವನ್ನು ಹೆಚ್ಚಿಸಿ ಮತ್ತು ಆಯಾ ಕ್ಷೇತ್ರದ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಅಥವಾ ಆಯಾ ಕ್ಷೇತ್ರದ ಸಂಶೋಧನಾ ಚಟುವಟಿಕೆಯನ್ನು ತೀವ್ರಗೊಳಿಸುವ ಸಲುವಾಗಿ ಈ ಗ್ರಂಥಾಲಯಗಳು ಸ್ಥಾಪಿತವಾಗಿರುತ್ತವೆ. ಅಂಧರ ಮತ್ತು ಜೈಲು ಗ್ರಂಥಾಲಯಗಳು ಅಂಧರ ಮತ್ತು ಕೈದಿಗಳ ಕ್ಷೇಮ ಮತ್ತು ಅಭಿವೃದ್ಧಿಗೆ ಸಹಾಯಕವಾಗಿರುತ್ತವೆ.

ಈ ಗ್ರಂಥಾಲಯಗಳು ತಮ್ಮ ವಿಷಯಗಳ ಬಗ್ಗೆ ರಚಿತವಾಗಿರುವ ನಾನಾ ಭಾಷೆಗಳ ಪುಸ್ತಕಗಳನ್ನು ಸಂಗ್ರಹಿಸುವುದರ ಜೊತೆಗೆ ಆ ವಿಷಯಗಳನ್ನು ಕುರಿತ ನಿಯತಕಾಲಿಕೆಗಳನ್ನು ತರಿಸಬೇಕು. ಇವುಗಳು ವಿಶಿಷ್ಟವಾದ ವಿಷಯಸೂಚಿಗಳು, ದಫ್ತರುಗಳು ಮತ್ತು ಪದಸೂಚಿಗಳನ್ನು ತಯಾರಿಸಬೇಕು. ಅಲ್ಲದೆ ಗ್ರಂಥಸೂಚಿಗಳು, ವರದಿಗಳು ಇವುಗಳನ್ನು ಸಂಗ್ರಹಿಸಬೇಕು. ಭಾಷಾಂತರ ಮತ್ತು ಪ್ರತೀಕರಣ ಸೇವೆ ಈ ಗ್ರಂಥಾಲಯಗಳ ಬಹುಮುಖ್ಯ ಅಂಗ. ಆಯಾ ವಿಶಿಷ್ಟಕ್ಷೇತ್ರದಲ್ಲಿ ವಿಶಿಷ್ಟಜ್ಞಾನ ಹೊಂದಿದ ದಕ್ಷ ಸಿಬ್ಬಂದಿಯ ಮೂಲಕ ವಿಶಿಷ್ಟ ವಿಧಾನಗಳನ್ನು ಸೂಕ್ತವಾಗಿ ಅಳವಡಿಸಿಕೊಂಡು ಆಯಾ ವಿಶಿಷ್ಟಕ್ಷೇತ್ರದ ಹಾಗೂ ವಿಶಿಷ್ಟಪೋಷಕರ ಸರ್ವಾಂಗಾಭಿವೃದ್ಧಿಗೆ ಈ ಗ್ರಂಥಾಲಯಗಳು ಸಹಕರಿಸಬೇಕು.

೫. **ರಾಷ್ಟ್ರೀಯ ಗ್ರಂಥಾಲಯಗಳು :** ಇವು ಆಯಾ ರಾಷ್ಟ್ರಗಳ ಜೀವನ, ಸಂಸ್ಕೃತಿ, ನಾಗರೀಕತೆಗಳನ್ನು ಪ್ರತಿಬಿಂಬಿಸಬೇಕು, ರಾಷ್ಟ್ರಗಳ ಹೆಮ್ಮೆಯ ಶಿಖರಗಳಾಗಬೇಕು. ದೇಶದಲ್ಲಿ ಪ್ರಕಟವಾಗುವ ಪ್ರತಿಯೊಂದು ಪುಸ್ತಕ, ಪತ್ರಿಕೆ, ನಿಯತಕಾಲಿಕೆಗಳು ಇಲ್ಲಿ ದೊರೆಯಬೇಕು. ಅವು ಕೃತಿಸ್ವಾಮ್ಯ ಕಾನೂನಾನ್ವಯ ಪ್ರಕಾರ ಇಲ್ಲಿಗೆ ಸೇರಬೇಕು. ರಾಷ್ಟ್ರದ ವಿವಿಧ ಭಾಷೆಗಳ ಉನ್ನತ ಗ್ರಂಥಗಳಲ್ಲದೆ, ವಿದೇಶೀ ಭಾಷೆಗಳ ಶ್ರೇಷ್ಠ ಗ್ರಂಥಗಳು ಇಲ್ಲಿ ದೊರೆಯಬೇಕು. ರಚನಾತ್ಮಕ ಚಟುವಟಿಕೆಗೆ ಬೇಕಾಗುವ ಯಾವುದೇ ಗ್ರಂಥವನ್ನಾದರೂ, ಸಹಕಾರಪದ್ಧತಿಯ ಮೂಲಕ ತರಿಸಿ ಕೊಡುವುದು ಇವುಗಳ ಆದ್ಯ ಕರ್ತವ್ಯ. ಈ ಗ್ರಂಥಾಲಯಗಳು ಅಲಭ್ಯ, ಅಮೂಲ್ಯ ಗ್ರಂಥಗಳ ಕಣಜಗಳಾಗಬೇಕು. ರಾಷ್ಟ್ರೀಯ ಗ್ರಂಥಸೂಚಿ, ವಿಶೇಷ ಗ್ರಂಥಸೂಚಿ, ಪತ್ರಿಕೆ ಮತ್ತು ನಿಯತಕಾಲಿಕೆಗಳ ಸೂಚಿ, ಹಸ್ತಪತ್ರಿಕೆಗಳ ಸೂಚಿಗಳನ್ನು ಈ ಗ್ರಂಥಾಲಯಗಳು ಸಿದ್ಧಪಡಿಸಬೇಕು.

೬. **ಸಂಪರ್ಕ ಗ್ರಂಥಾಲಯಗಳು :** ಒಂದು ರಾಷ್ಟ್ರಕ್ಕೂ ಇನ್ನೊಂದು ರಾಷ್ಟ್ರಕ್ಕೂ ಇವು ಸಂಪರ್ಕ ಸಾಧನಗಳು. ಪುಸ್ತಕ, ಪತ್ರಿಕೆ, ದೈನಿಕೆ, ಮಾರ್ಗದರ್ಶಿಕೆ, ವರದಿ, ಚಲನಚಿತ್ರ, ಛಾಯಾಚಿತ್ರ ಮತ್ತಿತರ ಸಲಕರಣೆಗಳ ಮೂಲಕ ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರಕ್ಕೆ ತನ್ನ ರಾಷ್ಟ್ರದ ಜನಜೀವನ, ಆಡಳಿತ, ನೀತಿ, ಸಂಸ್ಕೃತಿ, ವಿದೇಶಾಂಗ ನೀತಿಗಳನ್ನು ಪರಿಚಯಿಸುತ್ತದೆ. ರಾಷ್ಟ್ರಗಳ ನಡುವೆ ತಲೆದೋರುವ ವೈಮನಸ್ಸನ್ನು ಇವು ಸೂಕ್ತವಾಗಿನಿವಾರಿಸಬಹುದು. ಸಂಬಂಧ ರಾಷ್ಟ್ರಗಳ ಏಳಿಗೆಗೆ, ಬಾಂಧವ್ಯಕ್ಕೆ ಸದಾ ಇವು ಶ್ರಮಿಸಬೇಕು.

ಗ್ರಂಥಾಲಯಶಾಸ್ತ್ರದ ಅಮರ ವಿಜ್ಞಾನಿ ದಿವಂಗತ ಶ್ರೀ ಎಸ್. ಆರ್. ರಂಗನಾಥನ್ ಅವರ ಪಂಚಸೂತ್ರಗಳನ್ನು ಅನುಷ್ಠಾನಕ್ಕೆ ತರುವುದರಲ್ಲಿ ಗ್ರಂಥಪಾಲರ ಪಾತ್ರ ಹಿರಿದಾದುದು.

ಪಂಚಸೂತ್ರಗಳು

೧. ಓದಲು ಪುಸ್ತಕಗಳು

೨. ಪ್ರತಿ ವಾಚಕನಿಗೊಂದು ಪುಸ್ತಕ
೩. ಪ್ರತಿ ಪುಸ್ತಕಕ್ಕೊಬ್ಬ ವಾಚಕ
೪. ವಾಚಕರ ಸಮಯ ಉಳಿಸಿ
೫. ಗ್ರಂಥಾಲಯ ಬೆಳೆಸಿ

ಗ್ರಂಥಪಾಲ ಗ್ರಂಥಾಲಯಗಳ ಚೇತನ. ಗ್ರಂಥಾಲಯಗಳು ಸರ್ವಾಂಗ ಸುಂದರ ಸುವ್ಯವಸ್ಥಿತವಾಗಿ ಬೆಳೆಯಬೇಕಾದರೆ, ವಾಚಕರಿಗೆ ಅವರ ಸಕಲ ಅವಶ್ಯಕತೆಗಳು ದೊರೆಯಬೇಕಾದರೆ, ನಿಷ್ಣಾತ ಗ್ರಂಥಪಾಲರ ಸೇವೆ ಅತ್ಯಾವಶ್ಯಕ. ಪುಸ್ತಕ ಸಂಗ್ರಹ ಅಷ್ಟೇ ಗ್ರಂಥಪಾಲರ ಕೆಲಸ ಅಲ್ಲ. ಗ್ರಂಥಗಳ ತಿರುಳನ್ನು ತಿಳಿದು ಅದನ್ನು ಕ್ರಮಬದ್ಧವಾಗಿ ಹಂಚುವುದು ಇವರ ಜೀವಾಳ. ಗ್ರಂಥಗಳ ಸುಪ್ತಜ್ಞಾನವನ್ನು ಪುಸ್ತಕಪ್ರೇಮಿಯ ಪ್ರಖರ ಜ್ಞಾನವನ್ನಾಗಿ ಪರಿವರ್ತಿಸುವುದರಲ್ಲಿ ಗ್ರಂಥಪಾಲರ ಉದ್ದೇಶ ಸಫಲವಾಗಬೇಕು.

ಗ್ರಂಥಗಳ ಆಯ್ಕೆ ಮತ್ತು ಸಂಗ್ರಹಣೆ, ವರ್ಗೀಕರಣ, ಸೂಚೀಕರಣ, ಪುಸ್ತಕ ಪ್ರದರ್ಶನ, ಪುಸ್ತಕ ಪರಿಚಲನೆ, ತೆರದ ಪದ್ಧತಿ, ಗ್ರಂಥಾಲಯ ಆಡಳಿತ ವ್ಯವಸ್ಥೆ, ಗ್ರಂಥಾಲಯ ಕಟ್ಟಡಗಳ ವಿಶೇಷ ಜ್ಞಾನ, ಗ್ರಂಥಾಲಯ ನಿಯಮಗಳು, ಗ್ರಂಥ ಸಂರಕ್ಷಣೆ—ಇವುಗಳ ಬಗ್ಗೆ ಗ್ರಂಥಪಾಲರು ವಿಶೇಷ ತರಪೇತಿ ಹೊಂದಿರ ಬೇಕು. ಸಮಾಜದ ಅವಶ್ಯಕತೆಗಳನ್ನು ತಿಳಿದು ಅವುಗಳನ್ನು ಸಮರ್ಥವಾಗಿ ಪೂರೈಸುವ ಕೌಶಲ ಇರ ಬೇಕು. ಜನತೆಯ ಬದಲಾವಣೆಯನ್ನು ಗುರುತಿಸಿ, ಅದಕ್ಕೆ ತಕ್ಕ ಮಾರ್ಪಾಟುಗಳನ್ನು ಮಾಡುವ ನೈಪುಣ್ಯ ಇರಬೇಕು.

ಗ್ರಂಥಪಾಲರಲ್ಲಿರಬೇಕಾದ ಮುಖ್ಯ ಗುಣಗಳು

೧. ಗ್ರಂಥಗಳನ್ನು ಓದುವ ಮತ್ತು ಪ್ರೀತಿಸುವ ಸಹಜಾಸಕ್ತಿ.
೨. ಜನರಲ್ಲಿ ಓದುವ ಹವ್ಯಾಸವನ್ನು ಕುದುರಿಸುವ ಸಾಮರ್ಥ್ಯ.
೩. ಸ್ವಜ್ಞಾನ ಮತ್ತು ಸ್ವಸಾಮರ್ಥ್ಯವನ್ನು ನಿರಂತರವಾಗಿ ಅಭಿವೃದ್ಧಿಗೊಳಿಸಿಕೊಳ್ಳುವ ಆಕಾಂಕ್ಷೆ.
೪. ಬೇಗ ಮತ್ತು ನಿಧಾನ ಪರಾಮರ್ಶನ ಸೇವೆಯಲ್ಲಿ ಚತುರತೆ.
೫. ವಾಚಕರ ಅವಶ್ಯಕತೆಗಳನ್ನು ಅರಿತು, ಅವುಗಳನ್ನು ಪೂರೈಸುವ ನಿಷ್ಣತೆ.
೬. ನಿರಕ್ಷರತೆಯನ್ನು ನಿರ್ಮೂಲನ ಮಾಡುವ, ಅಕ್ಷರತೆಯನ್ನು ಉದ್ದೀಪನಗೊಳಿಸುವ ಹವ್ಯಾಸ.
೭. ಜ್ಞಾನ, ಸಂಸ್ಕೃತಿ, ನಾಗರೀಕತೆಗಳ ರಾಯಭಾರಿಯಾಗಿ ಸಾಹಸದ ಪ್ರವೃತ್ತಿಯಿಂದ ಸೇವೆ ಸಲ್ಲಿಸುವ ಉತ್ಸಾಹ.
೮. ಮೃದುಹೃದಯ, ನಲ್ನುಡಿ, ಮಾನವತೆಯ ರೂಪದ ಸಮ್ಮಿಳನ.
೯. ವಿನಯ, ವಿವೇಕ, ವಿಚಾರಗಳ ತ್ರಿವೇಣೀಸಂಗಮ.
೧೦. ತ್ಯಾಗಮನೋಭಾವದಿಂದ, ಗ್ರಂಥಾಲಯ ಪ್ರಜ್ಞೆಯಿಂದ ಸದಾ ದುಡಿಯುವ ಹುಮ್ಮಸ್ಸು.

ಗ್ರಂಥಪಾಲರು ಗ್ರಂಥಾಲಯಗಳ ನಾಡಿ, ಹೃದಯ. ಗಿಡಕ್ಕೆ ಬೇರಿನಂತೆ, ಗ್ರಂಥಾಲಯಗಳಿಗೆ ಗ್ರಂಥಪಾಲರು. ಅವರು ಗ್ರಂಥಾಲಯಗಳ ಚಾಲಕ ಹಾಗೂ ಪ್ರೇರಕ ಶಕ್ತಿ. ಗ್ರಂಥಗಳ ವಿಚಾರಕ್ಕೂ ವಾಚಕರ ಆಕಾಂಕ್ಷೆಗೂ ದಾಂಪತ್ಯ ಕೂಡಿಸುವ ಪುರೋಹಿತರು. ಗ್ರಂಥಾಲಯಗಳು ಜೀವನತೋಟದ ಸುಮಧುರ ಪುಷ್ಪಗಳು. ಪುಷ್ಪಗಳ ಪರಿಮಳವನ್ನು ಪ್ರಸರಿಸುವವರು ಗ್ರಂಥಪಾಲರು. "ನಹಿ ಜ್ಞಾನೇನ ಸದೃಶಂ." ಇದೇ ಗ್ರಂಥಪಾಲರ ವೇದವಾಕ್ಯ. ಪ್ರತಿ ದಿಕ್ಕಿನಿಂದಲೂ ಜ್ಞಾನಜ್ಯೋತಿ ಬೆಳಗಿಸುವವರು ಗ್ರಂಥಪಾಲರು.

ಡಾ|| ಜೆ. ಭರತ್‌ರಾಜ್

ಎಮರ್ಜೆನ್ಸಿ

ನಡುರಾತ್ರಿಯ ನಿಶ್ಶಬ್ದ ವಾತಾವರಣದ ಮಧ್ಯೆ ಜೋಂಯ್....ಜೋಂಯ್ ಸೈರನ್ ಶೀಳಿನ ಶಬ್ದ ಸಿದ್ದಿಯಿಂದೊದ್ದು ಎಲ್ಲರನ್ನೂ ಎದ್ದೇಳಿಸಿತು. ನಿದ್ರಾಭಂಗದಿಂದ ಎಚ್ಚೆತ್ತ ಮನಸ್ಸು ನಿಜಸ್ಥಿತಿಯ ಕಡೆ ವಾಲಿದಂತೆ ಸೈರನ್ನಿನ ಏರಿಳಿತದ ಧ್ವನಿ ಮತ್ತೂ ಹೆಚ್ಚುತ್ತಿತ್ತು. ನಿಲ್ಲದ ಸೈರನ್ ಧ್ವನಿ. ಇದೇನೋ ಗಹನವಾದ ಸಂದರ್ಭವೇ ಇದ್ದೀತು. ರಾಂಚಿಗೆ ಬಂದ ಕಳೆದ ಇಪ್ಪತ್ತು ದಿನಗಳಲ್ಲಿ ಎಂದೂ ಈ ತೆರನಾದ ಧ್ವನಿ ಕೇಳಿದ್ದಿಲ್ಲ. ಏನಿರಬಹುದು? ಹತ್ತಿರವೇ ಇದ್ದ ಹುಚ್ಚಾಸ್ಪತ್ರೆಯೊಳಗೇನಾದರೂ ಬೆಂಕಿ ಆಕಸ್ಮಿಕವೇ ? ಕಳೆದ ಎರಡು ವರ್ಷಗಳಿಂದ ತೆಪ್ಪಗಿದ್ದ ಶತ್ರುದೇಶದ ಹಠಾತ್ತಾದ ಆಕ್ರಮಣದ ಮುನ್ಸೂಚನೆಯೇ ? ಯಾವೊಂದು ಪ್ರಶ್ನೆಗೂ ಸಮಂಜಸವಾದ ಉತ್ತರ ದೊರೆಯಲೊಲ್ಲದು. ಹಾಸಿಗೆಯಿಂದೆದ್ದು ದೀಪ ಹೊತ್ತಿಸಿ ಷರಟು, ಪ್ಯಾಂಟ್ ಹಾಕಿಕೊಂಡಾಯಿತು. ಮನೆಯಿಂದೀಚೆಗೆ ಬಂದಾಗ ಇದುರಿನಲ್ಲಿ ಎಂದಿನಂತೆ ಮಬ್ಬುಗತ್ತಲಿನಲ್ಲಿ ಬೃಹತ್ತಾಗಿ ನಿಂತ ಹುಚ್ಚಾಸ್ಪತ್ರೆ.

ಮಧ್ಯೆ ಮಹಾದ್ವಾರದ ಬಳಿ ಸಾಕಷ್ಟು ಬೆಳಕು ಚೆಲ್ಲುವ ವಿದ್ಯುದ್ದೀಪ. ಎರಡೂ ಪಾರ್ಶ್ವಗಳಲ್ಲಿ ಕಣ್ಣು ಹಾಯಿಸುವವರೆಗೆ ಆವರಿಸಿದ್ದ ಇಪ್ಪತ್ತುಅಡಿ ಎತ್ತರದ ಗೋಡೆಗಳು. ಆಸ್ಪತ್ರೆ ಇದುರಿನಲ್ಲೇ ಸಾಕಷ್ಟು ದೂರ ಈಚೆಗೆ ಸಿಬ್ಬಂದಿ ವರ್ಗದವರಿಗೆ ವಾಸದ ಮನೆಗಳು. ನಾಲ್ಕು ನೂರು ಮಂದಿ ವಾರ್ಡ್‌ಬಾಯ್‌ಗಳು, ಆಯಾಗಳು, ನೌಕರರು ಮತ್ತೆ ಐವತ್ತು ಮಂದಿ ಉನ್ನತ ವರ್ಗದ ತಜ್ಞರು, ತಾಂತ್ರಿಕ ವರ್ಗದವರು ಎಲ್ಲರಿಗೂ ಇಲ್ಲೇ ಸುತ್ತಲೂ ವಾಸದ ಸೌಕರ್ಯ. ಆಸ್ಪತ್ರೆಯ ಒಳಗಿನ ಸುಮಾರು ನಾಲ್ಕುನೂರು ಮಂದಿ ಮಾನಸಿಕ ಅಸ್ವಸ್ಥರ ಆರೋಗ್ಯ ಸುಧಾರಣೆ, ಕ್ಷೇಮ ಚಿಂತನೆ, ಚಿಕಿತ್ಸೆ ಈ ವರ್ಗದವರ ಉಸ್ತುವಾರಿ. ಒಂದೂವರೆ ಚದರ ಮೈಲು ವಿಸ್ತೀರ್ಣ ಪ್ರದೇಶವನ್ನಾಕ್ರಮಿಸಿದ ಆಸ್ಪತ್ರೆ ಸುತ್ತ ಮುತ್ತಲಿನ ವಾತಾವರಣದಲ್ಲಿ ದೈತ್ಯಾಕಾರವಾಗಿ ಶೋಭಿಸುತ್ತಿತ್ತು.

ಸೈರನ್ ಇನ್ನೂ ಕೂಗುತ್ತಲೇ ಇತ್ತು. ಆದೇತಾನೇ ಹೊರಟು ಬರುತ್ತಿದ್ದ ಸಹೋದ್ಯೋಗಿ ಡಾಕ್ಟರ್ ಕುಮಾರ್‌ರವರು 'ಹೆಲೋ' ಎಂದರು. ಸೈರನ್ ಬಗ್ಗೆ ಪ್ರಶ್ನಿಸಲಾಗಿ 'ನನಗೂ ತಿಳಿಯದು. ನಾನೂ ಕೆಲಸಕ್ಕೆ ಬಂದು ಎರಡು ತಿಂಗಳಾಯಿತು. ಆಸ್ಪತ್ರೆಯ ದರ್ವಾನನನ್ನು ವಿಚಾರಿಸೋಣ ಬನ್ನಿ' ಎಂದರು. ನಾವಿಬ್ಬರೂ ಮೌನವಾಗಿ ಆಸ್ಪತ್ರೆಯ ಮಹಾದ್ವಾರದ ಬಳಿಗೆ ನಡೆದಂತೆ ಸುತ್ತಮುತ್ತಲಿನಲ್ಲಿ ಕಾಲುದಾರಿಗಳಿಂದ ಸಿಬ್ಬಂದಿ ವರ್ಗದವರು ನಡೆದುಬರುವುದು ಗೋಚರಿಸಿತು. ಮಹಾದ್ವಾರದ ಬಳಿ ನಾವೆಲ್ಲ ಕಲೆತಂತೆ 'please stand in a line' ಎಂದು ಯಾರೋ ಸ್ವಲ್ಪ ಎತ್ತರದ ಧ್ವನಿಯಲ್ಲಿ ಹೇಳಿದರು. ಸೈರನ್ ಶಬ್ದ ನಿಂತಿತ್ತು.

ವೇಗವಾಗಿ ಬಂದ ಕಾರೊಂದು ಹಠಾತ್ತಾಗಿ ಹಾಕಿದ ಬ್ರೇಕ್‌ನಿಂದಾಗಿ ತನ್ನ ಶರೀರವನ್ನೇ ಅಲುಗಾಡಿಸುತ್ತ 'ಜಪ್' ಎಂದು ನಿಂತಿತು. ಮೆಡಿಕಲ್ ಸೂಪರಿಂಟೆಂಡೆಂಟ್ ಡಾಕ್ಟರ್ ಭಾಸ್ಕರ್‌ರವರು ಇಳಿದುಬಂದರು.

"ಏನು ವಿಷಯ, ಮೇಟ್ರನ್ ?"

“ಸಾರ್, ನಮ್ಮ ಪೇಶಂಟ್ ಗೋಯೆಂಕಾ ಕ್ರೇಪ್‌ಲಿನ್ ವಾರ್ಡಿನಿಂದ ನಾಪತ್ತೆಯಾಗಿದ್ದಾನೆ. ಅವನನ್ನು ಸ್ಟಾಫ್‌ನರ್ಸ್ ವಾರ್ಡಿನಲ್ಲಿ ಕಂಡದ್ದು ರಾತ್ರಿ ಹನ್ನೊಂದರ ವೇಳೆಗೆ. ಅದೇ ಸಮಯಕ್ಕೇ ಡ್ಯೂಟಿಯಲ್ಲಿದ್ದ ಡಾಕ್ಟರ್ ದೇಬ್‌ರವರು ಔಷಧ ಕೊಟ್ಟಿದ್ದರು. ಎರಡು ಘಂಟೆಯ ವೇಳೆಗೆ ಪೇಶಂಟ್ ತನ್ನ ಹಾಸಿಗೆಯಲ್ಲಿರಲಿಲ್ಲ. ವಾರ್ಡಿನ ಎಲ್ಲ ಮೂಲೆಗಳಲ್ಲೂ ಹುಡುಕಲಾಯಿತು. ತತ್‌ಕ್ಷಣ ವಾರ್ಡ್‌ಸಿಸ್ಟರ್ ಬೇರೆ ವಾರ್ಡುಗಳೊಂದಿಗೆ ಟೆಲಿಫೋನ್ ಸಂಪರ್ಕದಲ್ಲಿ ವಿಚಾರಿಸಿದರು. ಎಲ್ಲೂ ಪತ್ತೆಯಾಗಿಲ್ಲ.” “ಪ್ಲೀಸ್ ಗೆಟ್ ಮಿ ಹಿಸ್ ಕೇಸ್‌ಫೈಲ್” ಎಂದರು ಡಾಕ್ಟರ್ ಭಾಸ್ಕರ್. ಅವನ ಕೇಸ್ ಫೈಲಿನ ಮೊದಲನೇ ಪುಟದಲ್ಲಿ ಅವನ ಗುರುತು ಪರಿಚಯಗಳ ಮಾಹಿತಿ, ಅಡ್ರೆಸ್ ಇತ್ತು. ಇದರೊಂದಿಗೇ ಅವನ ಫೋಟೋ ಕೂಡ ಲಗತ್ತಿಸಿತ್ತು. ಭಾವಚಿತ್ರ ನೋಡಿದಾಗ ಕೆಲವೇ ದಿನಗಳ ಹಿಂದೆ ಇವನು ಮಾನಸಿಕ ಪರೀಕ್ಷೆಗಳಿಗಾಗಿ ನನ್ನಲ್ಲಿಗೆ ಬಂದಿದ್ದುದು ನೆನಪಾಯ್ತು. ಸುಮಾರು ಮೂವತ್ತು ವರುಷ ಪ್ರಾಯದ ಗಟ್ಟಿಮುಟ್ಟಾದ ಆಕರ್ಷಕ ವ್ಯಕ್ತಿ. ಅಣ್ಣ ಪಾಟ್ನಾದಲ್ಲಿ ಒಂದು ಲೋಹದ ಗಣಿಯ ಮಾಲೀಕರು. ಇವನೂ ಗಣಿಯ ಕೆಲಸದಲ್ಲಿ ಅಣ್ಣನಿಗೆ ಬೆಂಬಲಿಗನಾಗಿದ್ದ. ಸಂಪ್ರದಾಯಸ್ಥ ಶ್ರೀಮಂತ ಮನೆತನ. ಮದುವೆಗಾಗಿ ಒಪ್ಪಿದ ಹುಡುಗಿ ಕೈತಪ್ಪಿದಂದಿನಿಂದ ಇವನ ವರ್ತನೆಯಲ್ಲಿ ಅಗಾಧ ಬದಲಾವಣೆಗಳಾಗಿದ್ದವು. ತೀರಾ ಮಂಕನಂತಾಗಿ ಯಾವ ಕೆಲಸದಲ್ಲೂ ಸ್ಫೂರ್ತಿಯಿರಲಿಲ್ಲ. ಹತ್ತು ಪ್ರಶ್ನೆಗೆ ಒಮ್ಮೆ ಉತ್ತರ ಕೊಡುವ. ಕುಳಿತಲ್ಲೇ ಕುಳಿತಿರುವ. ನಿಂತಲ್ಲೇ ನಿಂತಿರುವ. ಹೀಗಾಗಿ ಇವನಣ್ಣ ಇವನನ್ನು ಕರೆದುಕೊಂಡು ಬಂದು ವೈದ್ಯರ ಸಲಹೆಮೇರೆಗೆ ಚಿಕಿತ್ಸೆಗಾಗಿ ಬಿಟ್ಟುಹೋಗಿದ್ದರು. “ಅಯ್ಯೋ ಪಾಪಿ, ನಿನಗೆ ನೀನೇ ಏನು ಮಾಡಿಕೊಂಡೆಯೋ” ಎಂದೆನ್ನಿಸಿತು.

ಡಾಕ್ಟರ್ ಭಾಸ್ಕರ್‌ರವರು ಪುಟ ತಿರುವುತ್ತಿದ್ದರು. ಮುಖ್ಯ ವಿಷಯಗಳ ಕಡೆ ಗಮನ ಹರಿಸಿ ಗಟ್ಟಿಯಾಗಿ ಓದುತ್ತಿದ್ದರು “ಇವನು ಸರಿಯಾಗಿ ಆಹಾರ ತೆಗೆದುಕೊಳ್ಳುತ್ತಿದ್ದಿಲ್ಲ. ಸರಿಯಾಗಿ ನಿದ್ರೆಮಾಡುತ್ತಿರಲಿಲ್ಲ. ಬೇರೆ ಪೇಶೆಂಟುಗಳೊಂದಿಗೆ ಬೆರೆಯುತ್ತಿರಲಿಲ್ಲ. ಮಾತು ಹೆಚ್ಚು ಆಡುತ್ತಿರಲಿಲ್ಲ. ಊರಿಗೆ ನನ್ನನ್ನು ಕಳುಹಿಸಿ ಎಂದು ಹೇಳಿದ್ದುಂಟು. ಆಗೊಮ್ಮೆ ಈಗೊಮ್ಮೆ ಆತ್ಮಹತ್ಯೆಯ ಬಗ್ಗೆ ತನಗಿದ್ದ ಇಚ್ಛೆಯನ್ನು ಮುಚ್ಚುಮರೆಯಿಲ್ಲದೆ ವ್ಯಕ್ತಪಡಿಸಿದ್ದ. ಆದರೆ ಧೈರ್ಯ ಸಾಲದೆ ಎಂದೂ ಪ್ರಯತ್ನಪಟ್ಟಿದ್ದಿಲ್ಲ. ಇವನು ವಿಷಣ್ಣಸ್ಥಿತಿಯಿಂದ ನರಳುತ್ತಿದ್ದ ರೋಗಿ” ಎಂದರು. ಓದುವುದು ಮುಗಿಯುತ್ತಿದ್ದಂತೆಯೇ ಒಬ್ಬೊಬ್ಬರಿಗೂ ಅವರವರು ಮಾಡಬೇಕಾದ ಕೆಲಸಕ್ಕೆ ಆದೇಶವಿತ್ತರು.

“ಡಾಕ್ಟರ್ ಶ್ರೀವಾಸ್ತವ, ನೀವು ಈಗಿಂದೀಗಲೇ ಡ್ರೈವರ್ ಕಮ್ಮೂವಿನ ಜೊತೆಗೆ ಆಸ್ಪತ್ರೆ ವ್ಯಾನ್‌ನಲ್ಲಿ ರೈಲ್ವೆ ಸ್ಟೇಶನ್ನಿಗೆ ಹೋಗಿ. ಪಟನಾ ಕಡೆಗೆ ಹೋಗುವ ಪ್ಯಾಸೆಂಜರ್ ರೈಲು ಬೆಳಗಿನ ಝಾವ ನಾಲ್ಕೂವರೆ ಘಂಟೆಗೆ ಹೊರಡುವುದಿದೆ. ಸ್ಟೇಶನ್ನಿನ ಎಲ್ಲ ಮೂಲೆಗಳಲ್ಲೂ ಹುಡುಕಿ. ದಾರಿ ಬಹಳ ದೂರ ಇರುವುದರಿಂದ ರಸ್ತೆಯಲ್ಲೂ ನಿಗಾ ಇಡಿ. ಕೂಡಲೇ ಹೊರಡಿ” ಎಂದು ಆಗ್ರಹಿಸಿದರು. ವ್ಯಾನ್ ತನ್ನ ಮೇಲೆ ಕೆಂಪು ದೀಪ ಹಚ್ಚಿಕೊಂಡು ಹೊರಟಿತು.

“ಡಾಕ್ಟರ್ ಭಟ್ಟಾಚಾರ್ಯ, ನೀವು ಮತ್ತು ಸುಲ್ತಾನ್ ರಾಂಚಿಟ್ಯಾಂಕಿನ ಕಡೆಗೆ ಹೊರಡಿ. ಟ್ಯಾಂಕಿನ ಎಲ್ಲ ಅಂಚಿನಲ್ಲೂ ಗಮನವಿಡಿ. ಜೊತೆಯಲ್ಲೇ ಟಾರ್ಚ್‌ಗಳನ್ನೂ ತೆಗೆದುಕೊಂಡು ಹೋಗಿ. ಹತ್ತಿರವೇ ಇರುವ ಗುಡ್ಡದ ಮೇಲಿನ ಜಗನ್ನಾಥದೇವಾಲಯದ ಸುತ್ತಮುತ್ತಲೂ ಹುಡುಕಿ, ಬೇಗ ಹೋಗಿ ಬನ್ನಿ” ಎಂದರು.

“ಡಾಕ್ಟರ್ ಸದಾನಂದ್, ನೀವು ಈ ಕೂಡಲೇ ಪೋಲಿಸ್ ಠಾಣೆಗೆ ರಿಂಗ್ ಮಾಡಿ ಇವನ ನಾಪತ್ತೆಯ ಬಗ್ಗೆ ತಿಳಿಸಿರಿ. ಅವನನ್ನು ಹುಡುಕಿಸಲು ಅವರು ಏರ್ಪಾಡುಮಾಡಿಸುತ್ತಾರೆ. ಜೊತೆಯಲ್ಲೇ ಅವನ ಮನೆಯವರಿಗೆ ಅವನ ನಾಪತ್ತೆಯ ಬಗ್ಗೆ ಟೆಲಿಗ್ರಾಂ ಕೊಡಿ” ಎಂದರು.

ಮತ್ತೆ ನಾಲ್ಕು ಮಂದಿ ವಾರ್ಡ್ ಬಾಯ್‌ಗಳಿಗೆ ಆಸ್ಪತ್ರೆಯ ಗೋಡೆಗಳ ಹೊರಗೆ ಮತ್ತು ಒಳಗೆ ಸುತ್ತಲೂ ಹುಡುಕಿ ಬರುವಂತೆ ಆಜ್ಞಾಪಿಸಿದರು.

ಸುಮಾರು ಮೂರು ಘಂಟೆ ಝಾವದ ಹೊತ್ತಿಗೆ ಶುರುವಾದ ಗೋಯೆಂಕಾ ಅನ್ವೇಷಣೆ ಬೆಳಗಿನ ಐದು ಘಂಟೆಯವರೆಗೂ ನಡೆದೇ ಇತ್ತು. ಆದರೂ ಗೋಯೆಂಕಾ ನಾಪತ್ತೆ. ಐದುವರೆ ಘಂಟೆ ವೇಳೆಗೆ ಸಿಬ್ಬಂದಿವರ್ಗದ ಷಿಫ್ಟ್ ಬದಲಾವಣೆಯಾಗಿತ್ತು. ಯಾವ ಮರದ ಕೊಂಬೆಗೆ ನೇತು ಹಾಕಿಕೊಂಡನೋ ಎಂದು ಮರದ ಕೊಂಬೆಗಳ ಕಡೆಗೆ ದೃಷ್ಟಿ, ಹಾಯಿಸಿ ಕ್ರೇಪ್‌ಲಿನ್ ವಾರ್ಡ್ ಕಡೆಗೆ ಡ್ಯೂಟಿ ಮೇಲೆ ಹೋಗುತ್ತಿದ್ದ ವಾರ್ಡ್ ಬಾಯ್ ಕಣ್ಣಿಗೆ ಗೋಯೆಂಕಾ ಕಡೆಗೆ ಕಂಡು ಬಿದ್ದ. ಎತ್ತರದ ಮರದ ಕೊಂಬೆಯೊಂದರ ತುತ್ತತುದಿಯಲ್ಲಿ ಗೋಯೆಂಕಾ ಕೊಂಬೆಯನ್ನು ಆತುಕೊಂಡಿದ್ದ. ಸದ್ದುಗದ್ದಲ ಮಾಡದೆ ವಾರ್ಡ್ ಬಾಯ್ ಮರದ ಮೇಲೇರಿ ಗೋಯೆಂಕಾನನ್ನು ಸಾವಧಾನವಾಗಿ ಕೆಳಗೆ ಕರೆದುಕೊಂಡು ಬಂದ. ಸತ್ತವನನ್ನು ಬದುಕಿಸಿದಷ್ಟು ಆನಂದ ವಾರ್ಡ್ ಬಾಯ್ ಪಾಲಿಗಾಯಿತು.

ವಿಷಯ ತಿಳಿದಾಗ ಆಸ್ಪತ್ರೆಯ ಸಿಬ್ಬಂದಿವರ್ಗ ದೀರ್ಘವಾದ ನಿಟ್ಟುಸಿರೊಂದನ್ನು ಬಿಟ್ಟಿತು.

ಪ್ರಪಂಚದಲ್ಲಿ ಬೇಕಾದಷ್ಟು ಮಾತಿನ ಅಬ್ಬರವಿದೆ. ನಮಗಿಂದು ಶ್ರದ್ಧಾಪೂರ್ವಕವಾದ ಕಾರ್ಯ ಹೆಚ್ಚಾಗಬೇಕು. ಮಾತು ಕಡಮೆಯಾಗಬೇಕು.

ಮ. ಶ್ರೀಧರಮೂರ್ತಿ

ಪಂಕ್ತಿ ಮರ್ಯಾದೆ

ಇಂಗ್ಲಿಷ್‌ನಲ್ಲಿ "ಟೇಬಲ್ ಮ್ಯಾನರ್ಸ್"—ಎಂದು ಹೇಳುವ ಪದ್ಧತಿಗಳಿಗೆ ಕನ್ನಡದಲ್ಲಿ ಸಮಾನಾರ್ಥಕ ಪದ ಯಾವುದು ಬಳಕೆಯಲ್ಲಿದೆ ಎಂಬುದು ನನಗೆ ತಿಳಿಯದು. ಸಂಸ್ಕೃತದಲ್ಲೂ ಇದಕ್ಕೆ ತಕ್ಕ ಪದ ನನಗೆ ದೊರೆಯ ಲಿಲ್ಲ. ಆದರೆ ಭೋಜನ ಸಂಬಂಧವಾದ ಪಂಕ್ತಿಲಾಭ, ಪಂಕ್ತಿಭೇದ—ಇತ್ಯಾದಿ ಪ್ರಯೋಗಗಳು ನಮ್ಮಲ್ಲಿ ಉಂಟು. ಇಂಗ್ಲೀಷ್‌ನಲ್ಲಿ 'ಟೇಬಲ್' ಎನ್ನುವ ಪದವನ್ನು 'ಊಟದ'—ಎಂಬ ಅರ್ಥದಲ್ಲೂ ಬಳಸುವಂತೆ, 'ಪಂಕ್ತಿ'—ಎಂಬ ಪದವನ್ನು ನಾವು ಬಳಸಬಹುದಲ್ಲವೆ ಎಂದು 'ಟೇಬಲ್ ಮ್ಯಾನರ್ಸ್'—ಎನ್ನಲಿಕ್ಕೆ 'ಪಂಕ್ತಿ ಮರ್ಯಾದೆ' ಎಂದು ಅನುವಾದಿಸಿದ್ದೇನೆ.

ಈ ಎಲ್ಲ ವಿವರಣೆಯಿಂದ ನಮ್ಮಲ್ಲಿ ಭೋಜನಕಾಲದಲ್ಲಿ ಹೇಗೆ ವರ್ತಿಸಬೇಕು ಎಂಬ ಬಗ್ಗೆ ನೀತಿ—ನಿಯಮಗಳಿರಲಿಲ್ಲ—ಎಂದು ಅರ್ಥವಲ್ಲ. ಸುಮಾರು ಕ್ರಿ. ಪೂ. 800 ರಲ್ಲಿ ರಚಿತವಾಗಿರಬಹುದೆಂದು ಭಾವಿಸಲಾಗಿರುವ ಧರ್ಮಸೂತ್ರಗಳಿಂದಾರಂಭಿಸಿ, ಅರ್ಥಶಾಸ್ತ್ರ, ಮಹಾಭಾರತ, ಪುರಾಣಗಳಲ್ಲಿ ಪಂಕ್ತಿ ಮರ್ಯಾದೆಯ ನಿಯಮಗಳು ಕಾಣಬರುತ್ತವೆ. ಮತ್ತು ಇವು ಕಾಲಕಾಲಕ್ಕೆ ಬದಲಾಗದೆ, ಕಾಲೋಚಿತ ವಾದ ಸುಧಾರಣೆಗಳನ್ನು ಒಳಗೊಂಡು ರೂಢಿಯಲ್ಲಿ ಇದ್ದವೆಂದು ಹೇಳಬಹುದಾಗಿದೆ. ಇಂದಿಗೂ ಸಂಪ್ರದಾಯ ನಿಷ್ಠರ ಮನೆಗಳಲ್ಲಿ ಇಂಥ ಕೆಲ ಪದ್ಧತಿಗಳು ಆಚರಣೆಯಲ್ಲಿ ಉಂಟು. ಹೋಟಲ್‌ಗಳಲ್ಲಿ, ಹಾಸ್ಟಲುಗಳಲ್ಲಿ ಉಂಡು ಬೆಳೆದ ನಮ್ಮ ತರುಣರಿಗೆ 'ಟೇಬಲ್ ಮ್ಯಾನರ್ಸ್'—ಎಂದರೆ ಚಮಚ, ಫೋರ್ಕು, ನ್ಯಾಪ್‌ಕಿನ್‌ಗಳ ಬಳಕೆಗಿಂತ ಹೆಚ್ಚಿನ ವಿಚಾರಗಳ ಅರಿವಿಲ್ಲದಿರುವುದು ಸಹಜವೇ. ಪ್ರಾಚೀನ ಪದ್ಧತಿಗಳೆಂದರೆ ಕೈ ಬಿಡಬೇಕಾದ ಮೂಢ ಆಚಾರ ಗಳು ಎಂಬ ಭಾವನೆ ಬೆಳೆಸಿಕೊಳ್ಳುತ್ತಿರುವ ಜನಕ್ಕೆ ಪಂಕ್ತಿಮರ್ಯಾದೆ ಎನ್ನುವುದೂ ಹಾಸ್ಯಾಸ್ಪದ ಮಡಿವಂತಿಕೆ ಯಾಗಿ ಕಾಣಬಹುದು. ಕೇವಲ ನಮ್ಮಲ್ಲೇ ಅಲ್ಲ, 'ಟೇಬಲ್ ಮ್ಯಾನರ್ಸ್'ಗೆ ವಿಶೇಷ ಆದ್ಯತೆ ಇದ್ದ ಇಂಗ್ಲೆಂಡಿ ನಂಥ ದೇಶಗಳಲ್ಲೂ ತರುಣಜನಾಂಗ ಈ ಬಗ್ಗೆ ನಿರಾಸಕ್ತಿ ತೋರುವುದೂ ಹಿರಿಯರಾದವರು ಕಳವಳ ವ್ಯಕ್ತ ಪಡಿಸುವುದೂ ಆ ದೇಶಗಳ ಪತ್ರಿಕೆಗಳಲ್ಲಿ ಆಗಾಗ ಕಾಣಿಸಿಕೊಳ್ಳುವ ಸಂಗತಿ.

ಭೋಜನ ಎನ್ನುವುದು ಕೇವಲ ಹೊಟ್ಟೆ ತುಂಬಿಸಿಕೊಳ್ಳುವ ಒಂದು ಅನಿವಾರ್ಯ ಕೆಲಸವಲ್ಲ. ಉದ್ದೇಶ ಅದೇ ಆದರೂ ಭೋಜನದ ಪದಾರ್ಥಗಳು ಮತ್ತು ವಿಧಿ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಮೇಲೆ ವಿಶೇಷ ಪ್ರಭಾವ ಬೀರುತ್ತವೆ ಎಂಬುದು ಭಾರತೀಯರ ನಂಬಿಕೆ. ಭಾರತೀಯರ ಆರೋಗ್ಯದ ಜೀವನಕ್ಕೆ ಅವರ ಊಟದ ಪದ್ಧತಿಗಳೇ ಮುಖ್ಯ ಕಾರಣ ಎಂದು ಪ್ರಾಚೀನಕಾಲದ ಗ್ರೀಕ್ ಪ್ರವಾಸಿಗಳು ಪ್ರಶಂಸಿಸಿದ್ದಾರೆ. ಭೋಜನಕ್ಕೆ ಉಪ ಯೋಗಿಸುವ ಧಾನ್ಯವೇ ಮೊದಲಾದ ಪದಾರ್ಥಗಳನ್ನು ಸಂಗ್ರಹಿಸುವುದರಿಂದ ಮೊದಲ್ಗೊಂಡು, ಊಟ ಮಾಡಿ ಮುಗಿಸುವವರೆಗಿನ ವಿಧಿ—ನಿಯಮಗಳೆಲ್ಲ ಮೇಲಿನ ನಂಬಿಕೆಯ ಆಧಾರದ ಮೇಲೆಯೇ ಬೆಳೆದಿವೆ. ಶ್ಮಶಾನಾದಿ

ಪ್ರದೇಶಗಳಲ್ಲಿ ಬೆಳೆದ ಧಾನ್ಯ ಮತ್ತು ಕದ್ದು ತಂದ ಧಾನ್ಯದ ಭೋಜನದಿಂದ ದೈಹಿಕಆರೋಗ್ಯ, ಮಾನಸಿಕ ಪ್ರವೃತ್ತಿಗಳು ಕೆಡುತ್ತವೆ ಎಂದು ನಂಬಿದ್ದ ಹಿಂದೂಗಳು, ಭೋಜನ ಕಾಲದಲ್ಲಿ ಅವಸರ, ಕೋಪ, ಅನೈರ್ಮಲ್ಯಗಳು ಸಹ ಮಾನಸಿಕ, ದೈಹಿಕಸ್ವಾಸ್ಥ್ಯಕ್ಕೆ ಭಂಗ ತರುತ್ತವೆ ಎಂದು ನಂಬಿದ್ದರು.

ಊಟ ಮಾಡುವಾಗ ಶುದ್ಧವಾಗಿ ಗೋಮಯದಿಂದ ಸಾರಿಸಿದ ಪ್ರದೇಶದಲ್ಲಿ ಸಮಾಹಿತ ಮನಸ್ಸಿನಿಂದ ಕುಳಿತುಕೊಳ್ಳಬೇಕು. ದೋಣಿಗಳಲ್ಲಿ ಪ್ರಯಾಣ ಮಾಡುವಾಗ ಊಟ ಮಾಡಬಾರದು. ಮರದ ಹಲಗೆ,'ಪ್ರಾಸಾದ'ಗಳ ಮೇಲೆ ಊಟ ಮಾಡಬಾರದು. ಒಂದು ಕಾಲಕ್ಕೆ ಎತ್ತಿನ ಚರ್ಮವನ್ನು ಭೋಜನಕಾಲದಲ್ಲಿ ಆಸನವಾಗಿ ಉಪಯೋಗಿಸುತ್ತಿದ್ದರೆಂದು ತಿಳಿದುಬರುತ್ತದೆ. ಆದರೆ ಮಂಚದ ಮೇಲೆ, ಚರ್ಮದ ಹೊದಿಕೆಯ ಪೀಠಗಳ ಮೇಲೆ ಕುಳಿತು ಉಣ್ಣಬಾರದು ಎಂಬ ನಿಯಮ ಉಂಟು. ಪೂರ್ವಕ್ಕೆ ಅಥವ ದಕ್ಷಿಣಕ್ಕೆ ಮುಖಮಾಡಿ ಭೋಜನಕ್ಕೆ ಕುಳಿತುಕೊಳ್ಳಬೇಕು. ಪೂರ್ವಕ್ಕೆ ಕುಳಿತು ಊಟ ಮಾಡುವುದು ಆಯುಃಕಾರಕ. ತಾಯಿ ಇರುವವರು ದಕ್ಷಿಣಾಭಿಮುಖವಾಗಿ ಕುಳಿತು ಊಟ ಮಾಡಬಾರದು. ಊಟ ಮಾಡುವಾಗ ಉತ್ತರೀಯವನ್ನು ಹೊದ್ದಿರಬೇಕು. ಆದರೆ ಪಾದರಕ್ಷೆಗಳ ಸಹಿತ ಊಟ ಮಾಡಬಾರದು. ಊಟಕ್ಕೆ ಕುಳಿತಾಗ ತಲೆಯಮೇಲೆ ಪೇಟ, ಟೋಪಿ ಮೊದಲಾದವನ್ನು ಧರಿಸಬಾರದು. ಕುಳಿತುಕೊಂಡೇ ಊಟಮಾಡಬೇಕು. ನಿಂತುಕೊಂಡು ಅಥವಾ ಓಡಾಡುತ್ತಾ ಊಟ ಮಾಡಬಾರದು. ತೊಡೆಯಮೇಲೆ ತಟ್ಟೆ ಇಟ್ಟುಕೊಂಡು ಉಣ್ಣಬಾರದು. ಆದಷ್ಟು ರಹಸ್ಯಸ್ಥಳದಲ್ಲಿ, ಮೌನವಾಗಿ ಊಟಮಾಡಬೇಕು. ಬಯಲಿನಲ್ಲಿ, ಹಸಿದವರ ಎದುರಿನಲ್ಲಿ ಊಟಮಾಡಬಾರದು. ದೇವಾಲಯಗಳಲ್ಲಿ, ನಿರ್ಜನವಾದ ಮನೆಗಳಲ್ಲಿ ಊಟ ಸಲ್ಲ. ಕತ್ತಲಿನಲ್ಲಿ ಊಟಮಾಡಬಾರದು. ಮುರಿದ, ಒಡೆದ, ಶಿಥಿಲವಾದ ತಟ್ಟೆ ಬಟ್ಟಲುಗಳನ್ನು ಉಪಯೋಗಿಸಬಾರದು. ಕೈಗಳನ್ನು ಜೋಡಿಸಿ ಬೊಗಸೆಯಲ್ಲಿ ತಿನ್ನಬಾರದು. ಒದ್ದೆ ಬಟ್ಟೆಗಳನ್ನು ಉಟ್ಟುಕೊಂಡು ಅಥವಾ ತಲೆ ಒದ್ದೆಯಾಗಿರುವಾಗ ಊಟ ಮಾಡಬಾರದು. ಉಣ್ಣುವಾಗ ಕಾಲುಚಾಚಿ ಕುಳಿತುಕೊಳ್ಳಬಾರದು. ಒಂದೇ ತಟ್ಟೆಯಲ್ಲಿ ಹಲವರು ಉಣ್ಣಬಾರದು—ಇವು ಭೋಜನಪೂರ್ವ ಗಮನಿಸಬೇಕಾದ ನಿಯಮಗಳು.

ಊಟಕ್ಕೆ ಕುಳಿತ ಮೇಲೆ ಸಿಹಿಯಾದ ಮತ್ತು ಕೊಬ್ಬಿನ ಅಂಶವುಳ್ಳ ಪದಾರ್ಥಗಳನ್ನು ಮೊದಲು ತಿನ್ನಬೇಕು. ಅನಂತರ ಉಪ್ಪುಕಾರದ ಭೋಜ್ಯಗಳನ್ನು ತಿನ್ನಬೇಕು ಎನ್ನುವುದು ವಿಧಿ.

ಊಟ ಮಾಡುವಾಗ ಶಬ್ದವಾಗದಂತೆ ತಿನ್ನಬೇಕು. ಅನಗತ್ಯವಾದ ಮಾತುಗಳನ್ನಾಡಬಾರದು. ಅಪೂಪಾದಿ ಭಕ್ಷ್ಯಗಳನ್ನು ಕಚ್ಚಿ ತಿನ್ನಬಾರದು, ಮುರಿದುಕೊಂಡು ತಿನ್ನಬೇಕು. ಉಪ್ಪು, ತುಪ್ಪ ಮತ್ತು ನಂಚಿಕೆಗಳನ್ನು ಕೈಯಿಂದ ಬಡಿಸಬಾರದು. ಪಂಕ್ತಿಯಲ್ಲಿ ಕುಳಿತಿರುವಾಗ ಎಲ್ಲರಿಗಿಂತ ಮೊದಲು ಗಬಗಬನೆ ತಿಂದು ಕುಳಿತುಕೊಳ್ಳಬಾರದು ; ತಿಂದಾಯಿತೆಂದು ಎಲ್ಲರೂ ಕುಳಿತಿರುವಂತೆಯೇ ಎದ್ದುಹೋಗುವುದಂತೂ ಶುದ್ಧ ತಪ್ಪು. ಪಂಕ್ತಿಯಲ್ಲಿ ಒಬ್ಬೊಬ್ಬರಿಗೇ ಬೇರೆಬೇರೆಯಾಗಿ ಬಡಿಸಬಾರದು ಮತ್ತು ಸಿಹಿ ಭಕ್ಷ್ಯಗಳನ್ನು ಒಬ್ಬರೇ ಬಡಿಸಿಕೊಂಡು ತಿನ್ನಬಾರದು. ಮೌನವಾಗಿ, ನಿಶ್ಯಬ್ದವಾಗಿ ಊಟಮಾಡಬೇಕು. ಅನಗತ್ಯ ಸಂಕೋಚವನ್ನು ಅಥವ ಆಸೆಬುರುಕತನವನ್ನು ತೋರಬಾರದು.

ಭೋಜನಕಾಲದಲ್ಲಿ ತೇಗುವುದು, ಗಟ್ಟಿಯಾಗಿ ಮಾತನಾಡುವುದು ಮಾತ್ರವಲ್ಲ,ಅಡಿಗೆಯ ಗುಣಾವಗುಣಗಳನ್ನು ರುಚಿ–ಅರುಚಿಗಳನ್ನು ಕುರಿತು ಟೀಕಿಸಬಾರದು. ಅಕ್ಕಪಕ್ಕದವರ ಎಲೆ–ತಟ್ಟೆಗಳನ್ನು ನೋಡುವುದು, ಎಲೆಯಿಂದ ಹೊರಕ್ಕೆ ಚಿಮ್ಮುವಂತೆ ಕಲಸುವುದು, ತುತ್ತು ಮಾಡಿ ಚಂಡಿನಂತೆ ಆಡಿಸುವುದು, ಮತ್ತು ಬಾಯಿಗೆ ಎಸೆದುಕೊಳ್ಳುವುದು ಸಭ್ಯತೆಯ ಲಕ್ಷಣಗಳಲ್ಲ.

ಭೋಜನಕಾಲದಲ್ಲಿ ಪಶು–ಪಕ್ಷಿಗಳಿಗೆಂದು ಕಿಂಚಿತ್ ಅನ್ನಶೇಷವನ್ನು ಬಿಡಬೇಕು. ಆದರೆ ದ್ರವಪದಾರ್ಥಗಳನ್ನು ಚೆಲ್ಲಬಾರದು.

ಅತಿಥಿ ಸತ್ಕಾರವನ್ನು ಗೃಹಸ್ಥನ ಕರ್ತವ್ಯಗಳಲ್ಲಿ ಒಂದೆಂದು ಭಾವಿಸಲಾಗಿತ್ತು. ಅತಿಥಿಗಳನ್ನು ಪ್ರತ್ಯಕ್ಷ ದೇವರೆಂದೇ ಭಾವಿಸಿ ಸತ್ಕರಿಸಬೇಕೆಂಬುದು ಸಂಪ್ರದಾಯ. ಸ್ನಾತಕನಾದ ತರುಣನಿಗೆ ನೀಡುತ್ತಿದ್ದ ಉಪದೇಶಗಳಲ್ಲಿ **'ಅತಿಥಿ ದೇವೋಭವ'** ಎಂಬುದೂ ಒಂದು.

ಅನಿರೀಕ್ಷಿತವಾಗಿ ಬಂದ ಅತಿಥಿಯೇ ಆಗಲಿ, ಆಹ್ವಾನಿಸಿದ ಅಭ್ಯಾಗತನೇ ಆಗಲಿ ವಿಶೇಷ ಗೌರವ ಸತ್ಕಾರಕ್ಕೆ ಯೋಗ್ಯರು. ಹಿರಿಯರು, ಗುರುಸಮಾನರು ಆದರೆ ಗೃಹಸ್ಥನೇ ಅವರ ಕಾಲು ತೊಳೆದು, ಸ್ವಾಗತಿಸಬೇಕು.* ವಿಶಾಲವಾದ ಮಣೆಯ ಮೇಲೆ ಕೂಡಿಸಿ ಗಂಧ, ಪುಷ್ಪಗಳನ್ನು ನೀಡಬೇಕು. ಬಡಿಸಿಯಾದ ಮೇಲೆ ಕೈ ಜೋಡಿಸಿ ನಿಂತು—'ಯಥಾ ಸಾವಕಾಶವಾಗಿ, ಬೇಕಾದುದನ್ನು ಕೇಳಿ ಹಾಕಿಸಿಕೊಂಡು ಊಟಮಾಡಬೇಕು ಎಂದು ಪ್ರಾರ್ಥಿಸಿಕೊಳ್ಳಬೇಕು. ಬೇಸಿಗೆ ಕಾಲವಾದರೆ ಬೀಸಣಿಗೆಯಿಂದ ಗಾಳಿ ಹಾಕಬೇಕು. ಅತಿಥಿಗಳು ಊಟಕ್ಕೆ ಕುಳಿತಾದ ಮೇಲೆ ತಾನು ಕೂಡಬೇಕು. ಭೋಜನಾಂತ್ಯದಲ್ಲಿ ಕೈಗೆ ಗಂಧವನ್ನಿತ್ತು ಕೈ ತೊಳೆಯಲು ಸುಖೋಷ್ಣವಾದ ನೀರನ್ನು ನೀಡಬೇಕು. ತಾಂಬೂಲವಿತ್ತು ಮರ್ಯಾದೆ ಮಾಡಬೇಕು.

ಪ್ರಾಚೀನಕಾಲದ ಹಿಂದುಗಳು ಭೋಜನವನ್ನು ಒಂದು 'ಭೋಗ' ವೆಂದು ಅನುಭವಿಸುತ್ತಿದ್ದರು.

---

* ದಿವಂಗತ ದೇವುಡು ನರಸಿಂಹಶಾಸ್ತ್ರಿ ಅವರು ದಿವಂಗತ ಉತ್ತಂಗಿ ಚನ್ನಪ್ಪನವರನ್ನು ಭೋಜನಕ್ಕೆ ಆಹ್ವಾನಿಸಿ, ಅವರ ಕಾಲು ತೊಳೆದು ಸತ್ಕರಿಸಿದ ಪ್ರಸಂಗವನ್ನು ಸ್ಮರಿಸಿಕೊಳ್ಳಬಹುದು.

ಸಿ. ಬಿ. ಪ್ರಭುದೇವಸ್ವಾಮಿ

ಮಾನವನ ಚಟುವಟಿಕೆಗಳು ಮತ್ತು ಪರಿಸರ

ಮಾನವನು ಸಂಘಜೀವಿ. ಸಾಮಾಜಿಕ, ಆರ್ಥಿಕ, ರಾಜಕೀಯ, ಸಂಘಜೀವನ, ವಸತಿನಿರ್ಮಾಣ, ಜಾತಿಮತ, ಧಾರ್ಮಿಕ ನಡವಳಿಕೆ ಮುಂತಾದುವು ಅವನ ಸಾಮಾಜಿಕ ಚಟುವಟಿಕೆಗಳಾಗಿವೆ ; ಹಣ, ಸಂಪತ್ತಿನ ಗಳಿಕೆಯ ಚಟುವಟಿಕೆಗಳಾದ ಉತ್ಪಾದನೆ, ವಿನಿಮಯ ಮತ್ತು ಉಪಭೋಗ ಆರ್ಥಿಕ ಚಟುವಟಿಕೆ ಎನಿಸುತ್ತದೆ. ದೇಶದ ಭದ್ರತೆ, ಗಡಿಯ ವಿಚಾರ, ರಾಜ್ಯ-ರಾಜ್ಯಗಳ ಸಂಬಂಧ, ಆಡಳಿತ ವ್ಯವಸ್ಥೆ—ಇತ್ಯಾದಿಗಳು ರಾಜಕೀಯ ಚಟುವಟಿಕೆಗಳಾಗಿವೆ.

'ಪರಿಸರ' ಮಾನವನ ಸುತ್ತಮುತ್ತಲ ಅಂಶಗಳನ್ನು ಸೂಚಿಸುವ ಪದ. ಮಾನವನ ಎಲ್ಲ ಬಗೆಯ ಚಟುವಟಿಕೆಗಳೂ ಭೂಮಿಯ ಮೇಲೇ ನಡೆಯಬೇಕು. ಭೂಮಿಯ ಮೇಲ್ಮೈ ಮಾನವನ ಪರಿಸರವಾಗಿದೆ. ಭೂಮಿಯ ಹೊರಕವಚವು ಭೂಭಾಗ, ಸಮುದ್ರಗಳನ್ನು ಮಾತ್ರವಲ್ಲದೆ ಇದರ ಮೇಲಿರುವ ವಾಯುಮಂಡಲವನ್ನೂ ಒಳಕೊಳ್ಳುತ್ತದೆ. ಎಫ್. ಜೆ. ಮಾರ್ಕ ಹೌಸ್ ಅವರ ಪ್ರಕಾರ 'ಪರಿಸರ'ವೆಂದರೆ ಒಂದು ಜೀವಿ, ಒಂದು ಜನಾಂಗ ಅಥವಾ ಒಂದು ವಸ್ತು ಉಗಮಿಸುವ ಸುತ್ತಮುತ್ತಲ ಬಾಹ್ಯ ಅಂಶಗಳ ಸಮೂಹ. ವೆಬ್‌ಸ್ಟರ್ ಶಬ್ದಕೋಶದ ಪ್ರಕಾರ 'ಒಂದು ಜೀವಿಯ ಅಥವ ಜನಾಂಗದ ಮೇಲೆ ಪ್ರಭಾವ ಬೀರುವ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಂಶಗಳ (ಭಾಷೆ, ಜಾತಿ, ಮತ, ಆರ್ಥಿಕ, ರಾಜಕೀಯ ಮುಂತಾದ) ಹೊರವಲಯವೇ ಪರಿಸರ'.

ಮಾನವನ ಚಟುವಟಿಕೆಗಳು ಮತ್ತು ಪರಿಸರದ ಸಹಸಂಬಂಧವನ್ನು ಅರಿಯಲು ಪರಿಸರದ ಬಗೆಗಳನ್ನು ತಿಳಿಯುವುದು ಆವಶ್ಯಕ. ವಿವಿಧ ಪರಿಸರಗಳು ಒಂದರೊಡನೊಂದು ಹೆಣೆದುಕೊಂಡಿವೆಯಲ್ಲದೆ ಒಂದು ಇನ್ನೊಂದರ ಕೊಂಡಿಯೂ ಹೌದು. ಸಾಧಾರಣವಾಗಿ ಈ ಕೆಳಗಿನ ಪರಿಸರದ ಪ್ರಭೇದಗಳನ್ನು ಗುರುತಿಸಬಹುದು :

೧. **ಭೌತಿಕ ಪರಿಸರ :** ಭೌತಿಕ ಪರಿಸರವು ವಾಯುಗುಣವನ್ನೊಳಗೊಂಡ ಭೌಗೋಳಿಕ ಅಂಶಗಳಿಂದ ಕೂಡಿದೆ. ನದಿ, ಸಮುದ್ರ, ಮಣ್ಣು, ಪರ್ವತ, ಮೈದಾನ, ಪೀಠಭೂಮಿ ಇವೆಲ್ಲ ಭೌತಿಕ ಪರಿಸರಗಳು.

೨. **ಜೈವಿಕ ಪರಿಸರ :** ಮಾನವನ ಸುತ್ತಲೂ ಇರಬಹುದಾದ ಪ್ರಾಣಿ ಮತ್ತು ಸಸ್ಯವರ್ಗವೆ ಜೈವಿಕ (Biological) ಪರಿಸರವೆನಿಸುತ್ತದೆ.

೩. **ಸಾಮಾಜಿಕ ಪರಿಸರ :** ಇದು ಸಾಮಾಜಿಕ ಸಂಬಂಧದಿಂದ ಉದ್ಭವಿಸುವ ಎಲ್ಲ ಅಂಶಗಳನ್ನು

ಒಳಗೊಂಡಿದೆ. ಉದಾ : ಸಂಪ್ರದಾಯ, ನಡವಳಿಕೆ, ಸಂಘಸಂಸ್ಥೆಗಳು. ಸಾಮಾಜಿಕ ಪರಿಸರದಲ್ಲಿ ಆರ್ಥಿಕ, ಸಾಂಸ್ಕೃತಿಕ ಮತ್ತು ಮನೋಸಾಮಾಜಿಕ (Psycho-Social) ಪರಿಸರವೆಂಬ ಉಪಭೇದಗಳುಂಟು.

ಆರ್ಥಿಕ ಪರಿಸರವು ಹಣಗಳಿಕೆಯ ಚಟುವಟಿಕೆಗಳಾದ ಉತ್ಪಾದನೆ, ವಿನಿಮಯ, ಮತ್ತು ಉಪಭೋಗ ಗಳನ್ನೊಳಗೊಂಡಿದೆ. ಸಾಂಸ್ಕೃತಿಕ ಪರಿಸರವು ಮಾನವ ನಿರ್ಮಿತವಾದ ಎಲ್ಲ ಅಂಶಗಳನ್ನೂ ಒಳಗೊಂಡಿದೆ. ಉದಾ : ಶೈಕ್ಷಣಿಕ ಸಂಸ್ಥೆಗಳು, ವಿವಿಧೋದ್ದೇಶ ಯೋಜನೆಗಳು, ನಾಗರೀಕತೆ, ಸಂಪ್ರದಾಯರೀತಿನೀತಿ ಮುಂತಾದುವು. ಮನೋಸಾಮಾಜಿಕ ಪರಿಸರವು ಮಾನವನ ಮೇಲೆ ಇನ್ನೊಬ್ಬ ಮಾನವನ ಪ್ರಭಾವ, ದೇವ ದೈತ್ಯರ ಬಗೆಗೆ ಚಿಂತನೆ ಇವುಗಳನ್ನೊಳಗೊಂಡಿದೆ.

ಪರಿಸರಗಳಲ್ಲಿ ಪ್ರಧಾನವಾದುದು ಭೌತಿಕ ಪರಿಸರ. ಮಾನವನ ಜೀವನನಾಟಕದ ರಂಗಮಂದಿರ ಭೂಮಿ. ಭೌತಿಕಪರಿಸರದ ಮುಖ್ಯ ಅಂಶಗಳಾದ ವಾಯುಗುಣ, ಮೇಲ್ಮೈಲಕ್ಷಣಗಳು ಮಾನವನ ಚಟುವಟಿಕೆ ಗಳ ಮೇಲೆ ಪ್ರಭಾವ ಬೀರುವುದು ಅನಿವಾರ್ಯವೇ ಆಗಿದೆ. ಜನಸಾಂದ್ರತೆ : ಮಾನವನ ಭೌದ್ಧಿಕ ಅವಶ್ಯಕತೆ ಗಳು ; ಉದ್ಯೋಗ ; ಮಾನವನ ಭೌತಿಕಲಕ್ಷಣ ಮತ್ತು ನಡತೆ ; ದೈಹಿಕಶಕ್ತಿ ಮತ್ತು ಚಾತುರ್ಯ ; ನಾಗರೀಕತೆ, ಸಂಸ್ಕೃತಿ ಮತ್ತು ಧಾರ್ಮಿಕ ನಡವಳಿಕೆ ಇವುಗಳ ಮೇಲೆ ಆಗುವ ಭೌತಿಕಪರಿಸರದ ಪ್ರಭಾವವನ್ನು ಈಗ ನೋಡೋಣ.

ಜನಸಾಂದ್ರತೆ : ಒಂದು ಪ್ರದೇಶದ ಒಟ್ಟು ಜನಸಂಖ್ಯೆಯನ್ನು, ಅದರ ಒಟ್ಟು ವಿಸ್ತೀರ್ಣದಿಂದ ಭಾಗಿಸಿದಾಗ ಬರುವ ಭಾಗಲಬ್ಧವೇ ಜನಸಾಂದ್ರತೆ. ಬೇರೆಯ ರೀತಿಯಲ್ಲಿ ಹೇಳುವುದಾದರೆ ಆ ಸ್ಥಳದ ಜನದಟ್ಟಣೆಯೇ ಜನಸಾಂದ್ರತೆ ಎನಿಸುತ್ತದೆ. ಜನರ ಕೇಂದ್ರೀಕರಣವು ಆಯಾ ಪ್ರದೇಶದ ವಾಯುಗುಣ ಮತ್ತು ಭೂಮಿಯ ಮೇಲ್ಮೈಲಕ್ಷಣಗಳನ್ನು ಅನುಸರಿಸಿರುತ್ತದೆ. ಮಾನವರು ವಾಯುಗುಣದ ವೈಪರೀತ್ಯಗಳಲ್ಲಿ ವಾಸಿಸಲಾರರು. ಆದುದರಿಂದಲೇ ಕಡಮೆ ಮಳೆ ಬೀಳುವ ರಾಜಾಸ್ಥಾನ, ಸಹಾರಾ ಮರುಭೂಮಿಗಳು ಅತ್ಯಧಿಕ ಮಳೆ ಬೀರುವ ಅಸ್ಸಾಂ, ಅಮೆಜಾನ್ ಕಾಡು ಪ್ರದೇಶಗಳು ಕಡಮೆ (ಅಥವಾ ಇಲ್ಲ) ಜನಸಂಖ್ಯೆಯನ್ನು ಹೊಂದಿವೆ. ಪ್ರಪಂಚದ ಶೇಕಡ 90ರಷ್ಟು ಜನ ಭೂಮಿಯ ಶೇಕಡ 10ರಷ್ಟು ಪ್ರದೇಶವಾದ ಮೈದಾನದಲ್ಲಿ ವಾಸಿಸುತ್ತಾರೆ. ಬೆಟ್ಟ, ಪರ್ವತ ಪ್ರದೇಶಗಳಲ್ಲಿ ಜನಸಂಖ್ಯೆ ಕಡಮೆ. ಇದಕ್ಕೆ ಅಪವಾದಗಳೂ ಉಂಟು. ಒಂದೇ ಬಗೆಯ ಮೇಲ್ಮೈಲಕ್ಷಣ, ವಾಯುಗುಣವುಳ್ಳ ಬೇರೆಬೇರೆ ನಗರಗಳಲ್ಲಿನ ಜನಸಂಖ್ಯೆಯಲ್ಲಿ ವ್ಯತ್ಯಾಸ ಕಾಣಬರಬಹುದು. ಇದಕ್ಕೆ ಮುಖ್ಯವಾದ ಕಾರಣ ಸಾಮಾಜಿಕ ಅಂಶಗಳ ಪ್ರಭಾವ.

ಭೌತಿಕ ಆವಶ್ಯಕತೆಗಳು : ಮಾನವನ ಮುಖ್ಯ ಭೌತಿಕ ಆವಶ್ಯಕತೆಗಳೆಂದರೆ ಅನ್ನ ನೀರು, ಬಟ್ಟೆ ಮತ್ತು ಮನೆ. ಪ್ರದೇಶದಿಂದ ಪ್ರದೇಶಕ್ಕೆ ವಾಯುಗುಣ ಮತ್ತು ಭೂಮಿಯ ಮೇಲ್ಮೈಲಕ್ಷಣದ ವ್ಯತ್ಯಾಸ ವನ್ನು ಕಾಣುತ್ತೇವೆ. ಈ ವ್ಯತ್ಯಾಸವನ್ನನುಸರಿಸಿ ಆಹಾರಕ್ರಮ, ಉಡುಪು, ಗೃಹನಿರ್ಮಾಣದಲ್ಲೂ ವ್ಯತ್ಯಾಸ ವನ್ನು ಕಾಣಬಹುದಾಗಿದೆ.

ಎಲ್ಲ ಪ್ರದೇಶಗಳಲ್ಲಿಯೂ ಎಲ್ಲ ರೀತಿಯ ಬೆಳೆಗಳನ್ನು ಬೆಳೆಯಲಾಗುವುದಿಲ್ಲ. ವಾಯುಗುಣ ಮತ್ತು ಮೇಲ್ಮೈಲಕ್ಷಣಗಳು ಆ ಸ್ಥಳದ ಬೆಳೆಗಳನ್ನು ನಿರ್ಧರಿಸುತ್ತವೆ. ಆದುದರಿಂದ ಅಲ್ಲಿಯ ಜನರು ಅದನ್ನೇ ಮುಖ್ಯ ಆಹಾರವನ್ನಾಗಿಸಿಕೊಳ್ಳುತ್ತಾರೆ. ಉತ್ತರ ಭಾರತದಲ್ಲಿ ಗೋಧಿ ಪ್ರಧಾನವಾದ ಆಹಾರ, ದಕ್ಷಿಣ ಭಾರತದಲ್ಲಿ ಅಕ್ಕಿಯು ಪ್ರಧಾನವಾದ ಆಹಾರವಾಗಿದೆ. ಪರ್ವತ ಮತ್ತು ಕಾಡು ಪ್ರದೇಶಗಳಲ್ಲಿ ಮಾಂಸಾಹಾರಿ ಗಳು ಹೆಚ್ಚಾಗಿ ವಾಸಿಸಿದರೆ, ಮೈದಾನ ಪ್ರದೇಶಗಳಲ್ಲಿ ಸಸ್ಯಾಹಾರಿಗಳು ಹೆಚ್ಚಾಗಿರುತ್ತಾರೆ. ಉಷ್ಣವಲಯದ ಜನರು ತೆಳುವಾದ ಹತ್ತಿಬಟ್ಟೆಗಳನ್ನು ಧರಿಸಿದರೆ ಶೀತವಲಯದ ಜನರು ಉಣ್ಣೆ, ಪ್ರಾಣಿಗಳ ಚರ್ಮದ

ಉಡುಪುಗಳನ್ನು ಧರಿಸುತ್ತಾರೆ.ಅಲ್ಲದೆ ಜನಾಂಗದಿಂದ ಜನಾಂಗಕ್ಕೂ-ಹಿಂದೂ, ಮುಸ್ಲಿಮ್, ಸಿಕ್, ಕ್ರಿಶ್ಚಿಯನ್-ಉಡುಪಿನಲ್ಲಿ ವ್ಯತ್ಯಾಸ ಕಾಣಬಹುದು. ಪರ್ವತ, ಕಾಡುಗಳಲ್ಲಿ ವಾಸಿಸುವ ಜನರು ಮರದ ಹಲಗೆಗಳಿಂದ ಗೃಹ ನಿರ್ಮಿಸಿಕೊಂಡರೆ ಮೈದಾನ ಪ್ರದೇಶದ ಜನರು ಇಟ್ಟಿಗೆ ಗಾರೆಯಿಂದ ಮನೆ ಕಟ್ಟಿಕೊಳ್ಳುತ್ತಾರೆ. ಉತ್ತರ ಭಾರತದಲ್ಲಿ ದೇವಸ್ಥಾನದ ಕಟ್ಟಡ, ವಿಗ್ರಹಗಳು ಬಹುತೇಕ ಅಮೃತಶಿಲೆಯಲ್ಲಿ ಕಡೆಯಲ್ಪಟ್ಟಿದ್ದರೆ; ದಕ್ಷಿಣ ಭಾರತದಲ್ಲಿ ಕೃಷ್ಣಶಿಲೆ ಪ್ರಧಾನವಾಗಿದೆ. ಗೃಹಗಳ ರಚನೆ, ಆಕಾರಗಳೂ ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸ ಹೊಂದುತ್ತವೆ. ಇತ್ತೀಚೆಗೆ ಅಂತರರಾಷ್ಟ್ರೀಯ ಸಂಪರ್ಕದಿಂದಾಗಿ ಈ ವ್ಯತ್ಯಾಸಗಳು ಕ್ಷೀಣಿಸುತ್ತಿವೆ.

ಉದ್ಯೋಗ : ಮಾನವನ ಮೂಲಭೂತವಾದ ಉದ್ಯೋಗವು ಭೌಗೋಳಿಕ ಪರಿಸರವನ್ನವಲಂಬಿಸಿರುತ್ತದೆ. ಹಿತಕರವಾದ ವಾಯುಗುಣವುಳ್ಳ ಮೈದಾನ ಮತ್ತು ನದಿಬಯಲಿನ ಪ್ರದೇಶದ ಮಾನವನು ವ್ಯವಸಾಯವನ್ನು ಮೂಲಭೂತ ಉದ್ಯೋಗವನ್ನಾಗಿ ಹೊಂದುತ್ತಾನೆ. ಪರ್ವತ ಮತ್ತು ಕಾಡು ಪ್ರದೇಶದ ಮನುಷ್ಯ ಬೇಟೆಗಾರನಾಗುತ್ತಾನೆ; ಜೊತೆಗೆ ಚರ್ಮದ ಉದ್ಯಮಿಯಾಗಬಹುದು. ಖನಿಜಸಂಪತ್ತು ಹೇರಳವಾಗಿರುವ ಕಡೆಗಳಲ್ಲಿ ಗಣಿಕೆಲಸ ಪ್ರಧಾನವಾಗಿರುತ್ತವೆ. ಕಬ್ಬಿಣ, ಕಲ್ಲಿದ್ದಲು ದೊರೆಯುವ ಕಡೆಗಳಲ್ಲಿ ಕೈಗಾರಿಕೆ ಸ್ಥಾಪಿಸಲ್ಪಡಬಹುದು. ಭಾರತದ ಆಗ್ನೇಯ ಭಾಗದಲ್ಲಿ ಕೈಗಾರಿಕಾ ಕೇಂದ್ರೀಕರಣಕ್ಕೆ ಖನಿಜ ಸಂಪತ್ತೇ ಕಾರಣ.

ಭೌತಿಕಲಕ್ಷಣ : ಮನುಷ್ಯನ ದೇಹದಾರ್ಢ್ಯತೆ, ಚರ್ಮದ ಬಣ್ಣ, ಆಕಾರ, ಕೂದಲಿನ ಬಣ್ಣ, ಮೂಗಿನ ಆಕಾರ, ತಲೆ ಆಕಾರ ಮುಂತಾದ ಭೌತಿಕ ಲಕ್ಷಣಗಳಮೇಲೂ ಭೌತಿಕ ಪರಿಸರದ ಪ್ರಭಾವವಿದೆ. ಉಷ್ಣವಲಯದ ಜನರ ಬಣ್ಣ ಕಪ್ಪಾಗಿದ್ದರೆ ಶೀತವಲಯದವರ ಬಣ್ಣ ಬಿಳುಪಾಗಿರುತ್ತದೆ. ಗುಡ್ಡಗಾಡಿನ ಜನರು ಕಷ್ಟಸಹಿಷ್ಣುಗಳೂ, ಧೈರ್ಯಶಾಲಿಗಳೂ ಆಗಿರುತ್ತಾರೆ. ಮೈದಾನ ಪ್ರದೇಶದ ಜನರು ಸಹಜವಾಗಿಯೆ ಸುಲಭ ಜೀವನ ಬಯಸುತ್ತಾರೆ.

ಮಾನವನ ದೈಹಿಕಶಕ್ತಿ ಮತ್ತು ಬುದ್ಧಿವಂತಿಕೆಯೂ ಪರಿಸರದಿಂದ ಪ್ರಭಾವಿತವಾಗಿರುತ್ತದೆ. ವಾಯುವಿನಲ್ಲಿರುವ ತೇವಾಂಶದ ಪ್ರಮಾಣವು ಮಾನವನ ಆರೋಗ್ಯ ಮತ್ತು ದೇಹಶಕ್ತಿಯನ್ನು ವೃದ್ಧಿಗೊಳಿಸುತ್ತದೆ. ಯೂರೋಪಿನ ಋತುಮಾನಗಳು ಶ್ರಮಕಾರ್ಯ ನಿರ್ವಹಿಸುವಲ್ಲಿ ಸಹಾಯಕವಾಗಿವೆ. ಆದರೆ ಅದೇ ಕಾರ್ಯವು ಉಷ್ಣವಲಯದ ಪ್ರದೇಶಗಳಲ್ಲಿ ಸಾಧ್ಯವಾಗಲಾರದು.

ನಾಗರೀಕತೆ ಮತ್ತು ಧರ್ಮ : ಪ್ರಪಂಚದ ಎಲ್ಲ ಪ್ರಾಚೀನ ನಾಗರೀಕತೆಗಳಿಗೂ ನದಿಯ ಬಯಲುಗಳೇ ತೊಟ್ಟಿಲುಗಳು. ಹರಪ್ಪ ಮಹೇಂಜೊದಾರೊ ನಾಗರೀಕತೆ ಸಿಂಧೂ-ಗಂಗಾ ನದಿಯ ಬಯಲಿನಲ್ಲಿ; ಈಜಿಪ್ಟ್ ನಾಗರೀಕತೆ ನೈಲ್‌ನದಿಯ ದಡದಲ್ಲಿ. ಸಾಹಿತ್ಯ, ಕಲೆ ತತ್ತ್ವಜ್ಞಾನಗಳ ವೃದ್ಧಿಯೂ ಪರಿಸರದಿಂದಲೇ ಪ್ರಭಾವಿತವಾಗಿರುತ್ತದೆ. ಎಲ್ಲ ಕವಿಗಳೂ ಪ್ರಕೃತಿಯಾರಾಧಕರೆ. ಮರುಭೂಮಿಯಲ್ಲಿ ಹುಟ್ಟಿದ ಕವಿಗಳು ಕಡಮೆ. ಕಾವ್ಯರಚನೆಗೆ ಶಾಂತಿಸಮೃದ್ಧಿಗಳು ಅವಶ್ಯಕ. ಉತ್ತಮವಾಯುಗುಣವುಳ್ಳ ಮೈದಾನ ಪ್ರದೇಶಗಳು ಇದಕ್ಕೆ ಪೋಷಕವಾಗಿವೆ. ಅಹಿಂಸೆ, ಶಾಂತಿಯನ್ನು ಬೋಧಿಸುವ ಧರ್ಮಗಳೂ ಇದೇ ಬಗೆಯ ಪರಿಸರದಲ್ಲಿ ಹುಟ್ಟುತ್ತವೆ. ಭಾರತದ ಭೌಗೋಳಿಕ ಪರಿಸರ ಬೌದ್ಧ ಜೈನ ಧರ್ಮಗಳಿಗೆ ಇಂಬು ಕೊಟ್ಟಿದೆ. ಬೆಟ್ಟಗುಡ್ಡಗಳಲ್ಲಿ ವಾಸಿಸುವ ಜನರು ಹೆಚ್ಚು ಪ್ರಕೃತಿಗೆ ಹತ್ತಿರವಾಗಿರುತ್ತಾರೆ ಅಲ್ಲದೆ ಕಷ್ಟಕ್ಕೆ ಒಳಗಾಗುತ್ತಾರೆ. ಆದುದರಿಂದ ಸೂರ್ಯ, ಗಾಳಿ, ಮರ ಗಿಡಗಳನ್ನೆಲ್ಲ ಅವರು ದೇವರೆಂದು ಆರಾಧಿಸುತ್ತಾರೆ.

ಭೌತಿಕ ಪರಿಸರವು ಮಾನವನ ಆರ್ಥಿಕ ಚಟುವಟಿಕೆಗಳಮೇಲೆಯೂ ಪ್ರಭಾವವನ್ನು ಬೀರುತ್ತದೆ. ಆರ್ಥಿಕ ಚಟುವಟಿಕೆಗಳು ಮುಖ್ಯವಾಗಿ ಹಣಗಳಿಸುವ ಚಟುವಟಿಕೆಗಳೇ ಆಗಿವೆ. ಉತ್ಪಾದನೆ, ವಿನಿಮಯ ಮತ್ತು

ಉಪಭೋಗ–ಆರ್ಥಿಕ ಚಟುವಟಿಕೆಗಳ ಮುಖ್ಯ ಹಂತಗಳು. ಉತ್ಪಾದನೆಗೆ ವ್ಯವಸಾಯ ಕೈಗಾರಿಕೆ ಇತ್ಯಾದಿಗಳು ಆಧಾರ. ಈ ಉತ್ಪನ್ನಗಳು ಉತ್ಪಾದನಾ ಸ್ಥಳದಿಂದ ಉಪಯೋಗಿಸಲ್ಪಡುವ ಸ್ಥಳಕ್ಕೆ ಸಾಗಿಸುವ ಅಥವ ಸ್ಥಳಾಂತರಿಸುವ ಕಾರ್ಯವೇ ವಿನಿಮಯ. ಉತ್ಪಾದನೆಯ ವಸ್ತುಗಳು ಉಪಯೋಗಿಸಲ್ಪಡುವುದೇ ಉಪಭೋಗ.

ವ್ಯವಸಾಯವನ್ನೇ ಆಧಾರವಾಗುಳ್ಳ ಆರ್ಥಿಕವ್ಯವಸ್ಥೆಯ ರಾಷ್ಟ್ರಗಳು ಅನೇಕವಿವೆ. ಭಾರತವೂ ಅವುಗಳಲ್ಲಿ ಒಂದು. ಇಂತಹ ರಾಷ್ಟ್ರಗಳಲ್ಲಿ ವಾಯುಗುಣವೂ ಪರೋಕ್ಷವಾಗಿ ಆರ್ಥಿಕ ವ್ಯವಸ್ಥೆಯ ಮೇಲೆ ಪ್ರಭಾವ ಬೀರುತ್ತದೆ. ಬ್ರೆಜಿಲ್ ದೇಶದಲ್ಲಿ ಹವಾಗುಣ ಅನುಕೂಲವಿಲ್ಲದಿದ್ದರೆ ಆ ವರ್ಷ ಕಾಫಿಬೆಳೆ ನಷ್ಟ ಹೊಂದುವುದರಿಂದ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದನ್ನು ನಿಲ್ಲಿಸುವರೆಂದು ಹೇಳಲಾಗುತ್ತಿದೆ. ಭಾರತದ ಹಿಂಗಾರು ಮುಂಗಾರುಗಳು ತಲೆಕೆಳಗಾದಾಗ ಇಲ್ಲಿಯ ಆರ್ಥಿಕ ವ್ಯವಸ್ಥೆ ತತ್ತರಿಸುವಂತೆ ಆಗುತ್ತದೆ. ಕೈಗಾರಿಕಾ ಕೇಂದ್ರೀಕರಣಕ್ಕೂ ವಾಯುಗುಣದ ಪ್ರಭಾವವಿದೆ. ಭಾರತದ ಮುಂಬಯಿ, ಚೈನಾದ ಶಾಂಗೈ, ಜಪಾನಿನ ಒಸಾಕಗಳಲ್ಲಿ ಹತ್ತಿಯ ಕೈಗಾರಿಕೆಗೆ ತೇವಾಂಶದಿಂದ ಕೂಡಿದ ಹವಾಮಾನವೇ ಕಾರಣ.

ಪ್ರತಿರಾಷ್ಟ್ರದ ಭೌಗೋಳಿಕ ಪರಿಸರವು ತನ್ನದೇ ಆದ ರೀತಿಯಲ್ಲಿ ಅಲ್ಲಿನ ಆರ್ಥಿಕ ವ್ಯವಸ್ಥೆಯ ಮೇಲೆ ಪ್ರಭಾವವನ್ನು ಬೀರುತ್ತದೆ.

ದೇಶದ ಸ್ಥಳನಿರ್ದೇಶನ (Location) **ಗಾತ್ರ ಮತ್ತು ಆಕಾರ** : ಬ್ರಿಟನ್, ನಾರ್ವೆ, ಜಪಾನ್, ನ್ಯೂಜಿಲ್ಯಾಂಡ್ ಇವು ಸಾಗರದಿಂದ ಸುತ್ತುವರಿದಿರುವುದರಿಂದ, ಆ ದೇಶದ ಜನರು ನಾವಿಕವಿದ್ಯೆಯಲ್ಲಿ ನಿಪುಣರಾಗಿರುತ್ತಾರೆ. ಇದರಿಂದ ಅಲ್ಲಿಯ ವ್ಯಾಪಾರೋದ್ಯಮ ಸುಗಮವಾಗಿ ಸಾಗುವಂತಾಗುತ್ತದೆ. 'ಬ್ರಿಟಿಷ್ ಸಾಮ್ರಾಜ್ಯದಲ್ಲಿ ಸೂರ್ಯ ಮುಳುಗುವುದೇ ಇಲ್ಲ' ಎಂಬ ಚರ್ಚಿಲ್ಲರ ಜಂಬದ ಮಾತಿಗೆ ಬ್ರಿಟನ್ನು ಸಮುದ್ರಮಧ್ಯದಲ್ಲಿ ಸ್ಥಾಪನೆಯಾಗಿರುವುದೇ ಕಾರಣ. ಇದರಿಂದ ವ್ಯವಹಾರ ಸುಲಭವಾಯಿತು. ಟಿಬೆಟ್, ಲಾವೊಸ್ ಮತ್ತು ಅಫಗಾನೀಸ್ಥಾನಗಳು ಬೇರೆಬೇರೆ ದೇಶಗಳಿಂದ ಸುತ್ತುವರಿಯಲ್ಪಟ್ಟಿವೆ. ಇಲ್ಲಿಯ ಉತ್ಪನ್ನಗಳು ಹೊರಪ್ರಪಂಚವನ್ನು ತಲುಪಬೇಕಾದರೆ ಬೇರೆ ರಾಷ್ಟ್ರಗಳ ಅನುಮತಿ ಅವಶ್ಯ. ಬೇರೆ ರಾಷ್ಟ್ರಗಳ ದಯೆಯಿಂದ ಬದುಕುವ ಇಂತಹ ರಾಷ್ಟ್ರಗಳ ವ್ಯಾಪಾರ ಸಹಜವಾಗಿಯೆ ಸೊರಗುತ್ತದೆ.

ಕಡಮೆ ವಿಸ್ತೀರ್ಣ ಉಳ್ಳ ಚಿಕ್ಕ ರಾಷ್ಟ್ರಗಳು ಉನ್ನತಮಟ್ಟದ ನಾಗರೀಕತೆ ಮತ್ತು ಆರ್ಥಿಕ ವ್ಯವಸ್ಥೆಯನ್ನು ಹೊಂದಿರುತ್ತವೆ. ಗ್ರೀಸ್, ರೋಂ, ಮೆಸೆಪೊಟೊಮಿಯ, ಸಿರಿಯ, ಪ್ಯಾಲಸ್ಟೈನ್–ಇವೆಲ್ಲ ಆ ಗುಂಪಿಗೆ ಸೇರಿದ ರಾಷ್ಟ್ರಗಳು. ಆದರೆ ಅನೇಕ ಚಿಕ್ಕ ರಾಷ್ಟ್ರಗಳು ಪ್ರಕೃತಿ ಸಂಪತ್ತಿನಿಂದ ವಂಚಿತವಾಗಿರುತ್ತವೆ. ನದಿಗಳಿಲ್ಲದ ಚಿಕ್ಕ ಸ್ವತಂತ್ರ ರಾಷ್ಟ್ರಗಳೂ ಉಂಟು. ಇಂತಹ ರಾಷ್ಟ್ರಗಳಲ್ಲಿ ಅಭಿವೃದ್ಧಿ ಶೀಲತೆಗೆ ಎಡೆಯೇ ಇಲ್ಲದಂತಾಗುತ್ತದೆ.

ಮೇಲ್ಮೈ ಲಕ್ಷಣ : ಆಯಾದೇಶದ ಮೇಲ್ಮೈ ಲಕ್ಷಣವೂ ಅದರ ಆರ್ಥಿಕ ಚಟುವಟಿಕೆಯ ಮೇಲೆ ಪ್ರಭಾವ ಬೀರುತ್ತದೆ. ಪರ್ವತ ಪ್ರಸ್ಥಭೂಮಿ ಮತ್ತು ಮೈದಾನ ಇವು ಮುಖ್ಯವಾದ ಮೇಲ್ಮೈಲಕ್ಷಣಗಳೆನಿಸುತ್ತವೆ.

ಭೂಮಿಯ ಅತ್ಯಂತ ಉನ್ನತ ಭಾಗಗಳೆ ಪರ್ವತಗಳು. ಬಹುತೇಕ ಪರ್ವತಗಳು ಭಾರತದ ಹಿಮಾಲಯದಂತೆ ಖನಿಜಗಳ ಆಗರವಾಗಿರುತ್ತವೆ. ಖನಿಜಗಳು ದೇಶದ ಆರ್ಥಿಕ ವ್ಯವಸ್ಥೆಯಮೇಲೆ ಪ್ರಭಾವ ಬೀರುತ್ತವೆ. ಪರ್ವತಗಳು ವಿವಿಧರೀತಿಯ ಮರಗಳಿಂದ ಕೂಡಿದ ಕಾಡುಗಳನ್ನು ಹೊಂದಿರುತ್ತವೆ. ಇದರಿಂದ ಮರಗೆಲಸದ ಕಾರ್ಖಾನೆ, ಕಾಗದದ ಕಾರ್ಖಾನೆ ಮುಂತಾದ ಕೈಗಾರಿಕೆಗಳು ಸ್ಥಾಪನೆಯಾಗಲು ಸಹಾಯಕವಾಗುತ್ತದೆ. ಪರ್ವತಗಳು ವಾಯುಗುಣದ ಮೇಲೆ ಪ್ರಭಾವ ಬೀರುತ್ತವೆ. ಹಿಮಾಲಯ ಪರ್ವತವಿಲ್ಲದಿದ್ದರೆ ಉತ್ತರ ಭಾರತದ ವಾಯುಗುಣವೆ ಬದಲಾವಣೆಯಾಗಿ ರಾಜಾಸ್ಥಾನದ ಮರುಭೂಮಿಯು ಉತ್ತರ ಭಾರತದಲ್ಲೆಲ್ಲಾ ಹರಡುವ ಸಾಧ್ಯತೆ

ಇತ್ತು. ಪರ್ವತಪ್ರದೇಶಗಳಲ್ಲಿ ಸಾಗಾಣಿಕೆ ವ್ಯವಸಾಯ ಗೃಹನಿರ್ಮಾಣ-ಇತ್ಯಾದಿ ಕೈಗಾರಿಕೆಗಳ ಸ್ಥಾಪನೆ ಕಷ್ಟ ಸಾಧ್ಯ.

ಪ್ರಪಂಚದ ದೊಡ್ಡ ನಗರಗಳೆಲ್ಲ ಮೈದಾನ ಪ್ರದೇಶದಲ್ಲೇ ಇವೆ. ಪ್ರಪಂಚದ ಶೇಕಡಾ ತೊಂಬತ್ತರಷ್ಟು ಜನ ಭೂಮಿಯ ಶೇಕಡ ಹತ್ತರಷ್ಟಿರುವ ಮೈದಾನಪ್ರದೇಶದಲ್ಲಿ ವಾಸಿಸುತ್ತಾರೆ. ಮೈದಾನಗಳಲ್ಲಿಯ ಹಿತಕರ ವಾಯುಗುಣ, ವ್ಯವಸಾಯಯೋಗ್ಯವಾದ ಭೂಮಿ, ಗೃಹನಿರ್ಮಾಣಕ್ಕೆ ಮತ್ತು ಸರಕು ಸಾಗಾಣಿಕೆಗೆ ಇರುವ ಅನುಕೂಲ ಇವೇ ಜನಸಂಖ್ಯೆಯ ಕೇಂದ್ರೀಕರಣಕ್ಕೆ ಕಾರಣಗಳು. ಇದಕ್ಕೆ ಅಪವಾದವೂ ಉಂಟು. ವಾಯುಗುಣದ ವೈಪರಿತ್ಯದ ಅಮೆಜಾನ್ ಪ್ರದೇಶ ಮತ್ತು ಸಹರ ಮರುಭೂಮಿಗಳು ಮೈದಾನ ಪ್ರದೇಶಗಳಾದರೂ ಜನಸಂಖ್ಯೆ ವಿರಳ, ಆರ್ಥಿಕ ಅಭಿವೃದ್ಧಿಯೂ ಇಲ್ಲ. ಮೈದಾನ ಪ್ರದೇಶಗಳಂತೆ ಪ್ರಸ್ಥಭೂಮಿಗಳೂ ಜನವಸತಿಗೆ ಅನುಕೂಲಕರ ವಾಗಿರುತ್ತವೆ. ದಕ್ಷಿಣ ಭಾರತದ ಪ್ರಸ್ಥಭೂಮಿಯಲ್ಲಿ ಕಲ್ಲಿದ್ದಲನ್ನು ಬಿಟ್ಟು ಉಳಿದೆಲ್ಲ ಖನಿಜಗಳೂ ದೊರೆಯುತ್ತವೆ.

ಭೌತಿಕ ಪರಿಸರವು ರಾಜಕೀಯ ಜೀವನದ ಮೇಲೂ ಪ್ರಭಾವ ಬೀರುತ್ತದೆ. ಪರ್ವತವಾಸಿಗಳು ವ್ಯವಸ್ಥಿತ ರೀತಿಯ ರಾಜಕೀಯ ಜೀವನವನ್ನನುಸರಿಸಲಾರರು. ಅನಾಗರೀಕತೆ, ಅನಕ್ಷರತೆ, ಬಡತನಗಳಿಂದಾಗಿ ಪ್ರಜಾಪ್ರಭುತ್ವದ ತತ್ತ್ವಗಳನ್ನೇ ಅರಿಯದ ಅಲ್ಲಿಯ ಜನರ ರಾಜಕೀಯ ಜೀವನ ಅಸ್ತವ್ಯಸ್ತವಾಗಿರುವುದರಲ್ಲಿ ಸಂದೇಹವಿಲ್ಲ. ಮರುಭೂಮಿಯಲ್ಲಿ ವಾಸಿಸುವವರು ಅಲೆಮಾರಿ ಜನರಾಗಿರುತ್ತಾರೆ. ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಸರಕು ಸರಂಜಾಮುಗಳೊಡನೆ ಪ್ರಯಾಣ ಮಾಡುತ್ತಾಹೋಗುವುದೇ ಇವರ ಕೆಲಸ. ವ್ಯವಸ್ಥಿತ ಸರಕಾರ ಒಂದು ಸಮಸ್ಯೆಯೇ ಸರಿ. ಒರಟರಾದ ಇಂತಹ ಜನರಿಂದ ಶಾಂತಿ ಮತ್ತು ಕಾನೂನುಪಾಲನೆ ಅಸಾಧ್ಯ.

ಭೌಗೋಳಿಕ ತಜ್ಞರ ಪ್ರಕಾರ ಮಾನವನ ಎಲ್ಲ ಬಗೆಯ ಚಟುವಟಿಕೆಗಳಿಗೂ ಭೌಗೋಳಿಕ ಪರಿಸರದ ಪ್ರಭಾವವೇ ಕಾರಣ. ಮಾನವನ ಊಟ, ನಿದ್ದೆ, ವಾಸ, ಸಾಹಿತ್ಯರಚನೆ, ಆರೋಗ್ಯ, ಅಪರಾಧಗಳು, ಮದುವೆ ಸಂಸಾರ ಜೀವನ ಎಲ್ಲಕ್ಕೂ ಭೌಗೋಳಿಕ ಪರಿಸರವೇ ಕಾರಣವೆಂದು ಅವರು ನಂಬುತ್ತಾರೆ. ಆದರೆ ಇದು ಸರ್ವಸತ್ಯವಲ್ಲ. ಮಾನವನು ಪರಿಸರದ ಗುಲಾಮನಾಗಬೇಕಾಗಿಲ್ಲ. ವಿಜ್ಞಾನವು ಮಾನವನ ಬಹುಪಾಲು ಸಮಸ್ಯೆಗಳಿಗೆ ಉತ್ತರ ನೀಡಿದೆ. ಮರುಭೂಮಿಗಳು ನೀರಾವರಿಯೋಜನೆಗಳಿಂದ ಹಸಿರುನಂದನವನವಾಗುತ್ತಿವೆ. ಅತಿಚಳಿ ಪ್ರದೇಶಗಳೂ ವಾಸಯೋಗ್ಯವಾಗುತ್ತಿವೆ (ರಷ್ಯಾದ ಸೈಬೀರಿಯ). 'ಅಸಾಧ್ಯ'ವಾದುದು ಇಲ್ಲವೇ ಇಲ್ಲ ಎಂಬುದು ಕೆಲವು ವಿಜ್ಞಾನಿಗಳ ಅಭಿಪ್ರಾಯ. ಸಾಧ್ಯಾಸಾಧ್ಯಗಳೆರಡನ್ನೂ ನಿರ್ಧರಿಸಲಾಗದ ಪರಿಸರದ ಪ್ರಭಾವದ ಚರ್ಚೆ ಕುತೂಹಲಕಾರಿಯಂತೂ ನಿಜ.

ರೋಗದಿಂದ ಬಹುಕಾಲ ನರಳುವುದಕ್ಕಿಂತಲೂ ಬೇಗ ಸಾಯುವುದು ಒಳ್ಳೆಯದು.

—ಪ್ಲೇಟೊ

ಟಿ. ಎಸ್. ಅನಂತರಂಗಾಚಾರ್

ಹೊಸ ವಿಶ್ವಕ್ಕಾಗಿ ಹೊಂಗನಸು

ಪಾಳೆಯಗಾರಿಕೆ, ಬಂಡವಲಶಾಹಿ, ವಸಾಹತುಶಾಹೀ ವ್ಯವಸ್ಥೆಯ ಮೂಲಕ ಪಾಡುಪಡುತ್ತಿದ್ದ ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಈ ಒಂದೆರಡು ಶತಮಾನಗಳ ಕಾಲದಲ್ಲಿ ಶೋಷಣೆ ಮತ್ತು ಅನ್ಯಾಯಗಳಿಂದ ಬಿಡುಗಡೆ ಹೊಂದಲು ರಾಜಕೀಯ, ಆರ್ಥಿಕ,ಸಾಮಾಜಿಕ ಹೋರಾಟಗಳು ನಡೆದವು. ಇಡೀ ವಿಶ್ವದಲ್ಲಿ ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವ ಏರ್ಪಡಬೇಕೆಂಬುದೇ ಎಲ್ಲ ರಾಷ್ಟ್ರಗಳ, ಕ್ರಾಂತಿಯ ಮುಖ್ಯ ಧ್ಯೇಯ. ಆದರೆ ಅನೇಕ ರಾಷ್ಟ್ರ ಗಳಲ್ಲಿ ಸ್ವಾತಂತ್ರ್ಯ ಏರ್ಪಟ್ಟರೆ ಸಮಾನತೆ ಮತ್ತು ಬಂಧುತ್ವ ಏರ್ಪಡದೆ ಇನ್ನೂ ತೊಡಕಿನಲ್ಲೇ ಸಾಗಿವೆ. ಮತ್ತೆ ಕೆಲವು ರಾಷ್ಟ್ರಗಳಲ್ಲಿ ಸಮಾನತೆ ಏರ್ಪಟ್ಟಂತೆ ಸ್ಥೂಲವಾಗಿ ಕಂಡುಬಂದರೂ ಸ್ವಾತಂತ್ರ್ಯವಾಗಲಿ ಬಂಧುತ್ವ-ಪಾರ ಸ್ಪರಿಕತೆಯಾಗಲಿ ಇಲ್ಲದೆ ನಿಯಂತ್ರಣ ಬಂಧನದ ಇಕ್ಕಟ್ಟಿನಲ್ಲಿ ವ್ಯಕ್ತಿ ಇರುವಂತಹ ದುಃಸ್ಥಿತಿ ಸಾಗಿದೆ. ಅಮೆರಿಕೆ ಯಲ್ಲಿ ವ್ಯಕ್ತಿಸ್ವಾತಂತ್ರ್ಯ ಇದೆ. ಸಮಾನತೆ ಮತ್ತು ಬಂಧುತ್ವಕ್ಕಾಗಿ ನಿರಂತರ ಹೋರಾಟಗಳು ಸಾಗುತ್ತಲೇ ಇವೆ. ರಷ್ಯಾದಲ್ಲಿ ಜಡಸಮಾನತೆ ಏರ್ಪಟ್ಟು ಸಮೃದ್ಧಿ ಏರ್ಪಟ್ಟಿದ್ದರೂ ವ್ಯಕ್ತಿಸ್ವಾತಂತ್ರ್ಯ, ವಿಚಾರಸ್ವಾತಂತ್ರ್ಯ ಇಲ್ಲ, ಸಾಲದು ಎಂಬುದು ಅನೇಕ ವಿಚಾರವಂತರು ವಿಮರ್ಶೆಮಾಡಿದ್ದಾರೆ.

ಅಂತೂ ಸ್ವಾತಂತ್ರ್ಯ, ಸಮಾನತೆ, ಬಂಧುತ್ವ ಈ ಮೂರು ಧ್ಯೇಯಗಳಿಗಾಗಿ ಮನುಷ್ಯಸಮಾಜ ಹೋರಾಡುತ್ತಿದ್ದರೂ ಇನ್ನೂ ಈ ಮೂರರ ಸಮಗ್ರ ಸಾಕ್ಷಾತ್ಕಾರ ಎಲ್ಲೂ ವಿಶ್ವದಲ್ಲಿ ಏರ್ಪಟ್ಟಿಲ್ಲ. ತ್ಯಾಗ, ಬಲಿದಾನ ಗಳ ಮೂಲಕ ಧ್ಯೇಯನಿಷ್ಠ ವ್ಯಕ್ತಿಗಳೂ ಸಮೂಹಗಳೂ ಇವಕ್ಕಾಗಿ ವಿಶ್ವದ ಎಲ್ಲ ರಾಷ್ಟ್ರಗಳಲ್ಲೂ ಹೆಣಗುತ್ತಿ ದ್ದಾರೆ, ಪ್ರಯತ್ನಶೀಲರಾಗಿದ್ದಾರೆ.

ಈ ಹೊಸವಿಶ್ವ, ಹೊಸಸಮಾಜದ ಸಾಕಾರಕ್ಕಾಗಿ ನಡೆದಿರುವ ಹೋರಾಟದಲ್ಲಿ ಭಾರತವೂ ತನ್ನ ಪ್ರಯತ್ನವನ್ನು ನಿರಂತರವಾಗಿ ಸಾಗಿಸಿದೆ. ಸ್ವಾತಂತ್ರ್ಯ, ಸಮಾನತೆ ಮತ್ತು ಬಂಧುತ್ವ–ಈ ಮೂರರ ಸಮನ್ವಯ ಸಾಕಾರ ಮಾಡಿ ವಿಶ್ವಕ್ಕೇ ಹೊಸ ಆದರ್ಶವನ್ನು ತೋರಿಸುವ ಹಿರಿಯ ಅಣ್ಣನ ಕೆಲಸವನ್ನು ಭಾರತವೇ ಮಾಡೀ ತೆಂದು ಸ್ವಲ್ಪ ಗಂಭೀರವಾಗಿ ಚಿಂತನ ಮಾಡಿದರೆ ಸ್ಪಷ್ಟವಾಗುತ್ತದೆ.

ಮೂರು ವಿಭೂತಿಗಳು–ಮೂರು ಆದರ್ಶಗಳು : ಭಾರತವು ಎರಡು ಮೂರು ಶತಮಾನಗಳ ಕಾಲ ಬ್ರಿಟಿಷರ ಗುಲಾಮ ರಾಷ್ಟ್ರವಾದಾಗ ಗುಲಾಮತನದ ಬೇಗೆಗೆ ತುತ್ತಾದ ಸಮಾಜದಲ್ಲೇ ಸ್ವಶೋಧನೆ ನಡೆ ಯಿತು. ಭವ್ಯ ಆದರ್ಶಗಳನ್ನು ಇಡೀ ಜಗತ್ತಿಗೆ ನೀಡಿದ ಭಾರತದಂತಹ ರಾಷ್ಟ್ರ ಗುಲಾಮವಾಗಿ ಸರ್ವತೋಮುಖ ವಾಗಿ ಅವನತಿಹೊಂದಲು ಕಾರಣವೇನು–ಎಂಬುದರ ಶೋಧನೆ ಇಡೀ ಭಾರತದಾದ್ಯಂತವೂ ಸಾಗಿತು. ಜೈನ, ಬೌದ್ಧ, ವೈದಿಕ ದರ್ಶನಗಳು, ಮತ್ತೆ ಈ ದರ್ಶನಗಳಲ್ಲಿ ಒಂದೊಂದರಲ್ಲೂ ಶಾಖೆ ಉಪಶಾಖೆಗಳಾದ ದರ್ಶನಗಳು,ಕರ್ಮಕಾಂಡ ಮೊದಲಾದ ಎಲ್ಲವೂ ತನ್ನ ಪ್ರಖರ ಮೂಲ ತೇಜಸ್ಸನ್ನೂ ಸತ್ಯವನ್ನೂ ಸತ್ವವನ್ನೂ ಕಳೆದುಕೊಂಡು ಮತಾಂಧತೆ,

ಪರಸ್ಪರ ವಿದ್ವೇಷ, ಡಂಭಾಚಾರ, ಅಹಂಪಾವಿತ್ರ್ಯವಾದದ ಸೊಕ್ಕು ಮೊದಲಾದ ದೀರ್ಘವೂ ವ್ಯಾಪಕವೂ ಆದ ಬೇನೆಗಳಿಗೆ ಭಾರತ ಬಲಿಯಾಗಿತ್ತು. ಈ ಕಾರಣದಿಂದಲೇ ಮೇಲು ಕೀಳು, ಉತ್ತಮ ಅಧಮ ಎಂಬ ಭೇದಗಳಿಂದ ತುಂಬಿಹೋದ ಸಮಾಜದ ತಲೆಯೇ ಬ್ರಿಟಿಷರ ಪಾದಗಳಿಗೆ ಭದ್ರವಾಗಿ ಇಡಲು ಸರಿಯಾದ ಜಾಗ ಎಂಬಂತಾಗಿ ಭಾರತ ಗುಲಾಮವಾಯಿತು. ಎಲ್ಲರೂ ಬ್ರಿಟಿಷರ ಪಾದತೊಳೆಯುವ ಪಾಳಿ ಬಂತು. ಈ ಅವನತಿಯ ಕಾಲದಲ್ಲೇ ಭಾರತದ ಸಮಾಜದೊಳಗಿಂದ ಶ್ರೀ ರಾಮಕೃಷ್ಣ ಪರಮಹಂಸರಂತಹ ವಿಭೂತಿ ಚೇತನ ಮೂಡಿಬಂತು. ಮಿಕ್ಕೆಲ್ಲ ವಿಭೂತಿಗಳಿಗೂ ಶ್ರೀ ರಾಮಕೃಷ್ಣ ಪರಮಹಂಸರಿಗೂ ಮೂಲಭೂತ ವ್ಯತ್ಯಾಸ ಎಂದರೆ ಉಳಿದೆಲ್ಲ ವಿಭೂತಿಗಳೂ ಒಂದೊಂದು ನಿರ್ದಿಷ್ಟವಾದ, ಸೀಮಿತವಾದ ದರ್ಶನ, ಅದರ ಸಾಕ್ಷಾತ್ಕಾರ, ಅದರ ಸಿದ್ಧಿ, ಅನುಭವ, ಅದರ ಹರಡು ವಿಕೆಗೆ ಕಾರಣರಾದರು. ಆದರೆ ಶ್ರೀರಾಮಕೃಷ್ಣ ಪರಮಹಂಸರು ಮಾತ್ರ ಹಿಂದೂಧರ್ಮ ಮಾತ್ರವಲ್ಲದೆ ಭಾರತದ ನೆಲಕ್ಕೆ ಬಂದಿದ್ದ ಎಲ್ಲ ಧರ್ಮಗಳ ಪ್ರಯೋಗಗಳನ್ನೂ ಒಂದೇ ಜೀವಮಾನದ ಕಾಲದಲ್ಲಿ ಮಾಡಿ, ಎಲ್ಲ ಧರ್ಮಗಳ ಮೂಲಕವೂ ಸಾಕ್ಷಾತ್ಕಾರಗಳನ್ನು ಒಂದೇ ಜೀವಮಾನದ ಕಾಲದಲ್ಲಿ ಮಾಡಿ, ಎಲ್ಲ ಧರ್ಮಗಳ ಸಮನ್ವಯವೇ ಹೊಸ ವಿಶ್ವದ ಅಡಿಗಲ್ಲಾಗಬೇಕೆಂದು ತೋರಿಸಿಕೊಟ್ಟರು. ಶ್ರೀರಾಮಕೃಷ್ಣ ಪರಮಹಂಸರು ವಿಶ್ವವಿಭೂತಿಗಳಲ್ಲಿ ಅದ್ವಿತೀಯರು, ಏಕಮೇವವಾದವರು. ಸರ್ವಧರ್ಮ ಸ್ವರೂಪಿಯಾದ ಧರ್ಮವನ್ನು ಮಾತ್ರ ಸ್ವೀಕರಿಸಲು ಸಾಕ್ಷಾತ್ಕಾರದ ಮೂಲಕವೂ ಸ್ವಾಮಿವಿವೇಕಾನಂದರಂತಹ ಕ್ರಾಂತಿಕಾರಿ ಆಧ್ಯಾತ್ಮಿಕ ವಿಭೂತಿಗಳ ಮೂಲಕವೂ ವಿಶ್ವಕ್ಕೆಲ್ಲಾ ಪಸರಿಸಿದ ಮಹಾಮಹಿಮರು. ಶ್ರೀ ರಾಮಕೃಷ್ಣ ಪರಮಹಂಸರು ಮತ್ತು ಸ್ವಾಮಿವಿವೇಕಾನಂದರ ಒಟ್ಟು ತತ್ತ್ವ ಮತ್ತು ಕಾರ್ಯಕ್ರಮವನ್ನು ಒಂದೇ ಮಾತಿನಲ್ಲಿ ಹೇಳಬಹುದಾದರೆ "ಧರ್ಮ ಸಮನ್ವಯ."

ಧರ್ಮಕ್ಷೇತ್ರದಲ್ಲಿ ಜಡವಾಗಿದ್ದ ಭಾರತ ಉಳಿದ ದಿನದಿನದ ಎಲ್ಲ ವ್ಯವಹಾರದಲ್ಲೂ ಅಧೋಗತಿಗಿಳಿದಿತ್ತು. ಹುಡುಕಿದರೂ ಸತ್ಯಕ್ಕಾಗಿಯೇ ಬದುಕುವ, ಹೋರಾಡುವ ಸತ್ಯನಿಷ್ಠ ನಿರ್ಭೀತ ಜನರ ಅಭಾವ ಭಾರತದಲ್ಲಿದ್ದುದರಿಂದಲೇ ಬ್ರಿಟಿಷರ ಗುಲಾಮತನಕ್ಕೆ ತಕ್ಕ ನೆಲವಾಯಿತು. ಎಲ್ಲಿ ನೋಡಿದರೂ ಅಸತ್ಯ, ಭಯದಿಂದ ಪಾಪಿಗಳಾದ ಜನಸಮೂಹ ಭಾರತದಲ್ಲಿ ಆದಾಗ ಬ್ರಿಟಿಷರ ಗುಲಾಮತನಕ್ಕೆ ಸರಿಯಾದ ಹದ ಏರ್ಪಟ್ಟಿತ್ತು. ಎಂದೋ ಸಾರಿದ್ದ " ಸತ್ಯಾನ್ನಾಸ್ತಿ ಪರೋ ಧರ್ಮಃ " ಎಂಬ ಧ್ಯೇಯ ಕೇವಲ ಹೊತ್ತಿಗೆಗಳಲ್ಲಿ ಹುಳುತಿಂದು ಅಡಗಿತ್ತು, ಬಾಳಿನಲ್ಲಿ ಕಾಣುತ್ತಿರಲಿಲ್ಲ. ಎಲ್ಲೆಲ್ಲೂ ಅಂಜುಗುಳಿತನ, ಕಪಟ, ವಂಚನೆ, ಅಸತ್ಯತುಂಬಿದ ಸಮಾಜ ಭಾರತದಲ್ಲಿ ಮೂಡಿತ್ತು. ಇಂತಹ ಅವನತಿ ಹೊಂದಿದ ಭಾರತದ ಸಮಾಜದ ಮೂಸೆಯೊಳಗಿಂದಲೇ ಮಹಾತ್ಮಾಗಾಂಧಿಯವರು ಮಹಾ ವಿಭೂತಿಗಳಾಗಿ ಹೊಮ್ಮಿಬಂದರು. ಒಬ್ಬ ಸಾಮಾನ್ಯ ಮನುಷ್ಯ ತನ್ನ ದಿನದಿನದ ಬಾಳಿನ ಮೂಲಕ ವ್ಯಕ್ತಿಗತವಾಗಿ ಮತ್ತು ಸಾಮೂಹಿಕವಾಗಿ ಸತ್ಯದಿಂದ, ಧೈರ್ಯದಿಂದ ಬದುಕುವುದು ಕರ್ತವ್ಯ; ಇಂತಹ ಕರ್ತವ್ಯನಿಷ್ಠ, ಸತ್ಯನಿಷ್ಠ ಬದುಕೇ ನಿಜವಾದ, ಸಾರ್ಥಕವಾದ ಬದುಕು. ಉಳಿದದ್ದೆಲ್ಲ ಕೊಳೆತ ಪಾಪಿಬದುಕು, ಅಷ್ಟೇ—ಎಂಬುದರ ಸಂಕೇತ ಮಹಾತ್ಮಾಗಾಂಧೀಜಿ. ಮನುಷ್ಯನ ಬದುಕು ಇರುವುದು ಸತ್ಯಗ್ರಹಣಕ್ಕಾಗಿ. ಯಾವ ಹೊಸ ಸಿದ್ಧಾಂತ, ತತ್ತ್ವಗಳ ಶೋಧನೆಗೂ ತೊಡಗದೆ ನೇರವಾಗಿ ವಿಜ್ಞಾನಿಯ ಪ್ರಯೋಗನಿಷ್ಠೆಯಿಂದ ಸತ್ಯಕ್ಕಾಗಿ ಜೀವನ, ಸತ್ಯದ ಮೂಲಕ ಜೀವನ ಎಂಬುದನ್ನು ಸಾಧಿಸಿ ಸಿದ್ಧಿಪಡೆದ ಮಹಾವಿಭೂತಿ ಗಾಂಧೀಜಿ. ಸತ್ಯಾಗ್ರಹ ನಿಷ್ಠೆಯ ಬದುಕೇ ನೂತನ ಸಮಾಜದ ಅಡಿಗಲ್ಲು, ಅಧಿಷ್ಠಾನ ಎಂದು ಸಾರಿದರು. ಮಹಾತ್ಮಾಗಾಂಧಿಯವರ ಎಲ್ಲ ಪ್ರಯೋಗಗಳ, ಎಲ್ಲ ಚಿಂತನವನ್ನೂ ಒಂದೇ ಶಬ್ದದಲ್ಲಿ ಹೇಳಬಹುದಾದರೆ "ಸತ್ಯಾಗ್ರಹ" ಎನ್ನಬಹುದು. ಮಹಾತ್ಮಾಗಾಂಧೀಜಿ ನೀಡಿದ ಮಹೋನ್ನತವಾದ ತತ್ತ್ವ ಮತ್ತು ಕಾರ್ಯಕ್ರಮವೇ "ಸತ್ಯಾಗ್ರಹ".

ಭಾರತ ಗುಲಾಮವಾಗಲು ಇದ್ದ ಮತ್ತೊಂದು ಪ್ರಬಲ ಕಾರಣ ಒಬ್ಬೊಬ್ಬರೂ, ಒಂದೊಂದು ಸಮೂಹವೂ ತನ್ನ ಮನಸ್ಸಿನ ಒಳಗೇ, ಮಿತಿಯಲ್ಲೇ ತಾನು ಮಾಡಿದ್ದೇ ಶ್ರೇಷ್ಠ, ಸರಿ ಎಂದು ಬಾಳುತ್ತಿದ್ದುದು. ಎಷ್ಟೇ ಪವಿತ್ರವೂ ಸಮರ್ಥವೂ ಆಗಿದ್ದರೂ ಈ ಮನಸ್ಸನ್ನು ಮೀರಿದ ಒಂದು ಸ್ಥಿತಿವಿಶೇಷವಿದೆ. ಆ ಸ್ಥಿತಿವಿಶೇಷ

ಡೆಡೆಗೆ ವ್ಯಕ್ತಿಯೂ ಸಮೂಹವೂ ಪ್ರಯತ್ನಪೂರ್ವಕವಾಗಿ ಸಾಗಿ ಅಂತಹ ಉನ್ಮನಸ್ಥಿತಿಯಿಂದ ಸುಖದೆಡೆಗೆ ಸಾಗಬೇಕು. ಆದಕ್ಕಾಗಿ ಎಲ್ಲ ಪ್ರಯತ್ನಗಳನ್ನೂ ಸಮರ್ಪಿಸಿಕೊಳ್ಳಬೇಕು. ಹೀಗಾದಾಗಲೇ ಬಾಳುವೆ ದಿವ್ಯಜೀವನ ವಾಗುತ್ತದೆ ; ಅಂತಹ ವಿಶ್ವ, ದಿವ್ಯಜೀವನದ ವಿಶ್ವವಾಗುತ್ತದೆ. ಈ ತತ್ತ್ವವನ್ನು ಗುಲಾಮ ಭಾರತದ ಶೋಧಕ ಪ್ರಯೋಗದ ಕಾಲವಲ್ಲೇ ಸಿದ್ಧಿ ಮತ್ತು ಪ್ರಯೋಗಗಳ ಮೂಲಕ ಜಗತ್ತಿಗೇ ತೋರಿಸಿಕೊಟ್ಟವರು ಶ್ರೀ ಅರವಿಂದ ಯೋಗಿಗಳು. ಸಮರ್ಪಣ, ಅತಿಮಾನಸ, ದಿವ್ಯಜೀವನ ಈ ಮೂರು ಮಾತುಗಳಲ್ಲಿ ಶ್ರೀ ಅರವಿಂದರ ಎಲ್ಲವನ್ನೂ ಸಂಕ್ಷೇಪಿಸಬಹುದು. ಒಂದೇ ಮಾತಿನಲ್ಲಿ ಹೇಳಬಹುದಾದರೆ ಅತಿಮಾನಸ ಪ್ರಜ್ಞೆಯ ಅನುಭವ ಮಾಡಿಕೊಳ್ಳ ಬೇಕು.

ಸಮನ್ವಯ, ಸಮರ್ಪಣಕ್ಕಾಗಿ ಸಂಕಲ್ಪ : ಮೇಲೆ ಹೇಳಿದ ಮೂರು ವಿಭೂತಿಗಳು–ಶ್ರೀ ರಾಮ ಕೃಷ್ಣ ಪರಮಹಂಸರು, ಶ್ರೀ ಮಹಾತ್ಮಾ ಗಾಂಧೀಜಿ, ಶ್ರೀ ಅರವಿಂದಯೋಗಿಯವರು–ಭಾರತ ಗುಲಾಮವಾಗಿ ದ್ದಾಗಲೇ ಪ್ರಯೋಗದ ಕಠಿಣ ತಪಸ್ಯೆಯ ಮೂಲಕ ಭಾರತಕ್ಕೂ ಜಗತ್ತಿಗೂ ನೀಡಿದ ತತ್ತ್ವ ಮತ್ತು ಕಾರ್ಯಕ್ರಮ ಗಳೇ ಸಮನ್ವಯ, ಸತ್ಯಾಗ್ರಹ ಮತ್ತು ಅತಿಮಾನಸ.

ಸಮನ್ವಯ ಇಲ್ಲದೆ ಸತ್ಯಾಗ್ರಹ ಮತ್ತು ಅತಿಮಾನಸ ಸಾಧ್ಯವೇ ಇಲ್ಲ. ಸತ್ಯಾಗ್ರಹವನ್ನುಳಿದ ಸಮನ್ವಯ ಮತ್ತು ಅತಿಮಾನಸಕ್ಕೆ ಪ್ರಾಣವಿರುವುದಿಲ್ಲ. ಅತಿಮಾನಸವಿಲ್ಲದ ಸಮನ್ವಯ ಮತ್ತು ಸತ್ಯಾಗ್ರಹಗಳು ಜೀವವಿಲ್ಲದ ಶರೀರದಂತೆ ಮಾತ್ರ. ಆದ್ದರಿಂದ ಸಮನ್ವಯ, ಸತ್ಯಾಗ್ರಹ ಮತ್ತು ಅತಿಮಾನಸ–ಈ ಮೂರರ ಸುಂದರ ಸಮಗ್ರ ಸಮನ್ವಯವೇ ಹೊಸಭಾರತದ, ಹೊಸವಿಶ್ವದ ದಾರಿದೀಪ. ಇದಕ್ಕಾಗಿ ಬಾಳಲು ಸಂಕಲ್ಪಮಾಡೋಣ. ದೇವರು ಬಲ ನೀಡಲಿ.

ಐದನೆಯ ಜಾರ್ಜ್ ಬಕ್ಕಿಂಗ್ ಹ್ಯಾಮ್ ಅರಮನೆಯಲ್ಲಿರುವ ತನ್ನ ಪುಸ್ತಕಭಂಡಾರದಲ್ಲಿ ಹೀಗೆ ಬರೆದು ಹಾಕಿದ್ದಾನೆ :
"ಬಾನತ್ತ ಕೈಚಾಚಿ ಚಂದ್ರನನ್ನು ಹಿಡಿಯಬೇಕೆಂದೋ ಅಥವಾ ಚೆಲ್ಲಿದ ಹಾಲಿಗೆ ಅಳ ಬೇಕೆಂದೋ ಯಾರೂ ನನಗೆ ಇಲ್ಲಿ ಬೋಧಿಸದಿರಲಿ"

ಡಾ. ಎ. ಕೆ. ಶಾಸ್ತ್ರಿ

ಶೃಂಗೇರಿ ಮತ್ತು ವಿಜಯನಗರ

ವಿಶ್ವದ ವಿವಿಧ ದೇಶಗಳಲ್ಲಿಯ ಜನಾಂಗಗಳು ಭೌತಿಕ ವಿಷಯಗಳಲ್ಲಿ ವಿಶೇಷ ಆಸಕ್ತಿ ತೋರಿ, ಆ ದಿಶೆಯಲ್ಲಿಯೇ ಮುಂದಡಿಯಿಡಲು ಪ್ರಯತ್ನಿಸಿರುವದು, ನಮಗೆ ಇತಿಹಾಸದ ಅಧ್ಯಯನದಿಂದ ತಿಳಿದುಬರುವ ಸಂಗತಿಯಾಗಿದೆ. ಆದರೆ ಕೇವಲ ಪ್ರಾಪಂಚಿಕ ಸುಖವು ಮಾನವನಿಗೆ ನಿಜವಾದ ಸುಖವನ್ನು ಕೊಡಲು ಅಸಮರ್ಥ, ಆಧ್ಯಾತ್ಮವೇ ನಿಜವಾದ ಸುಖ-ಶಾಂತಿಯನ್ನು ನೀಡಬಲ್ಲದು ಎಂಬ ಮಾತನ್ನು ಭಾರತದ ಪುಣ್ಯಪುರುಷರು ಪುರಾತನಕಾಲದಿಂದ ಇಲ್ಲಿಯವರೆಗೆ ಸಾರುತ್ತಲೇ ಬಂದಿದ್ದಾರೆ. ಅವರು ತಮ್ಮ ಪವಿತ್ರಜೀವನದಿಂದಾಗಿ ಈ ದೇಶವನ್ನು ಪುಣ್ಯಭೂಮಿಯನ್ನಾಗಿ ಮಾಡಿದ್ದಾರೆ. ಪರಧರ್ಮಸಹಿಷ್ಣುತೆ, ತತ್ತ್ವಜ್ಞಾನ, ಪರಸ್ಪರ ಪ್ರೇಮ, ಆಧ್ಯಾತ್ಮ ಹಾಗೂ ಔದಾರ್ಯಗಳಿಗೆ ತವರಾದ ಈ ದೇಶ, ನಿಜವಾಗಿಯೂ ಧನ್ಯ ! ಜಗತ್ತಿನ ಹಲವಾರು ದೇಶಗಳು ಅಜ್ಞಾನಾಂಧಕಾರದಲ್ಲಿ ಮುಳುಗಿದಾಗ, ಭಾರತದ ಮುನಿವರ್ಯರು ಜ್ಞಾನಜ್ಯೋತಿಯನ್ನು ಬೆಳಗಿಸಿದರು. ಶತಮಾನಗಳ ಉರುಳುವಿಕೆಯಿಂದಾಗಲಿ ಇಲ್ಲವೆ ವಿದೇಶೀಯರ ದಾಳಿಗಳಿಂದಾಗಲಿ ಜ್ಞಾನಜ್ಯೋತಿಯ ವಿವಿಧ ಮುಖಗಳು ಭಗ್ನವಾಗದೆ ಇನ್ನೂ ಹಾಗೆಯೇ ಉಳಿದುಕೊಂಡಿವೆ. ಧರ್ಮಪತನವಾದಾಗಲೆಲ್ಲ ಪುಣ್ಯಪುರುಷರ ಜನನವು ಆಗುತ್ತಲೇ ಇದೆ. ಗಿರಿ, ಕಂದರ, ನದಿ, ಸರೋವರ, ಅರಣ್ಯ ಮತ್ತು ಖನಿಜಸಂಪತ್ತು ಇವುಗಳಿಂದ ಭರಿತವಾದ ಈ ದೇಶ, ಖಚಿತವಾಗಿಯೂ ಸೃಷ್ಟಿ ಸೌಂದರ್ಯದ ತವರೇ ಸರಿ ! ಉತ್ತರದ ಗಂಗಾ, ಯಮುನಾ, ಬ್ರಹ್ಮಪುತ್ರಾ ಮತ್ತು ಸಿಂಧು ನದಿಗಳಂತೆ, ದಕ್ಷಿಣದ ಗೋದಾವರಿ, ಕಾವೇರಿ, ತುಂಗಭದ್ರಾ ಮತ್ತು ಕೃಷ್ಣಾ ನದಿಗಳೂ ಅಷ್ಟೇ ಪವಿತ್ರ.ಆದ್ದರಿಂದ,"ಗಂಗಾಸ್ನಾನಂ ತುಂಗಾಪಾನಂ,"ಎಂಬುದು ಅರ್ಥಪೂರ್ಣವಾದ ಲೋಕೋಕ್ತಿಯಾಗಿದೆ. ಭಾರತದ ಹಲವಾರು ಸ್ಥಳಗಳಿಗೆ ಐತಿಹಾಸಿಕ ಮಹತ್ವವಿದ್ದರೂಕೂಡ, ಕೆಲವೇ ಸ್ಥಳಗಳು ಮಾತ್ರ ಪವಿತ್ರ ಯಾತ್ರಾಸ್ಥಳಗಳೆಂದು ಪ್ರಸಿದ್ಧಿ ಪಡೆದಿವೆ. ಉತ್ತರದಲ್ಲಿ ಬದರಿ, ಕಾಶಿ, ಜಗನ್ನಾಥಪುರಿ ಮತ್ತು ದ್ವಾರಕಾ ಹಾಗೂ ದಕ್ಷಿಣದಲ್ಲಿ ಶೃಂಗೇರಿ, ಉಡುಪಿ, ಧರ್ಮಸ್ಥಳ, ತಿರುಪತಿ, ಕಾಂಚಿ, ರಾಮೇಶ್ವರ ಮುಂತಾದವುಗಳು.

ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯಲ್ಲಿಯ ಶೃಂಗೇರಿ ಸೃಷ್ಟಿಯ ಪ್ರಶಾಂತ ವಾತಾವರಣದಲ್ಲಿ ಧಾರ್ಮಿಕ ಕ್ಷೇತ್ರವಾಗಿ ಕಂಗೊಳಿಸುತ್ತಿದೆ. ತುಂಗೆಯ ಎಡತಟದ ಮೇಲೆ ನಿಸರ್ಗಸೌಂದರ್ಯದ ಮಡಿಲಲ್ಲಿ ಕಂಗೊಳಿಸುವ ಈ ಪುಣ್ಯಕ್ಷೇತ್ರವು ಭಕ್ತರ ಹೃದಯವನ್ನು ತನ್ನತ್ತ ಸೆಳೆಯುತ್ತದೆ. ಶೃಂಗೇರಿಯ ಪ್ರಾಚೀನತೆ ಹಾಗೂ ಘನತೆ ಇವುಗಳನ್ನು ಇತಿಹಾಸ ಪುರಾಣಾದಿಗಳು ನಮಗೆ ಅರುಹುತ್ತವೆ. ಅದ್ವೈತಪೀಠಗಳಿಗೆ ಪ್ರಮುಖ ಕೇಂದ್ರವಾದ ಶೃಂಗೇರಿ ರಾಮಾಯಣ ಕಾಲದಲ್ಲಿಯೇ ಪ್ರಸಿದ್ಧಿ ಪಡೆದಿತ್ತೆಂಬ ವಿಷಯವು, ಸ್ಥಳದ ಪ್ರಾಚೀನತೆಯನ್ನು ಎತ್ತಿ ತೋರಿಸುತ್ತದೆ. ಸ್ಥಳದ ಪ್ರಾಚೀನತೆಯನ್ನು ಕುರಿತು ವಿವರವಾಗಿ ನಿರೂಪಿಸುವ ಐತಿಹಾಸಿಕ ಆಧಾರ ಗ್ರಂಥಗಳು ಉಪಲಬ್ಧವಿಲ್ಲ. ಸ್ಥಳದ ಐತಿಹ್ಯಗಳ ಪ್ರಕಾರ, ಕಾಶ್ಯಪ ವಿಭಾಂಡಕ ಋಷಿಯ ಪುತ್ರ ಋಷ್ಯಶೃಂಗನು

ಜನಿಸಿದ ಸ್ಥಳವಿದು[1]. ಈ ಋಷ್ಯಶೃಂಗಗಿರಿಯೇ ಕಾಲಾಂತರದಲ್ಲಿ 'ಶೃಂಗೇರಿ' ಎಂಬ ಹೆಸರಿನಿಂದ ಪ್ರಸಿದ್ಧಿಗೆ ಬಂದಿತಂತೆ.

ಇತಿಹಾಸಕಾಲದಲ್ಲಿ ಶೃಂಗೇರಿಯು ಪ್ರಸಿದ್ಧಿಗೆ ಬಂದಿದ್ದು ಕ್ರಿ.ಶ. ಎಂಟನೆಯ ಶತಮಾನದ ಕೊನೆಯಲ್ಲಿ. ವೈದಿಕಧರ್ಮಪ್ರತಿಪಾದಕ, ಜ್ಞಾನಮಾರ್ಗಪ್ರವರ್ತಕ ಹಾಗೂ ಅದ್ವೈತಸಿದ್ಧಾಂತಪ್ರತಿಸ್ಥಾಪಕರಾದ ಶ್ರೀ ಆದಿಶಂಕರಾಚಾರ್ಯರು ಶೃಂಗೇರಿಯಲ್ಲಿ ಮಠವನ್ನು ಸ್ಥಾಪಿಸಿ, ಈ ಮಠಕ್ಕೆ ತಮ್ಮ ಶಿಷ್ಯಾಗ್ರೇಸರರಾದ ಶ್ರೀ ಸುರೇಶ್ವರಾಚಾರ್ಯರನ್ನು ಮಠಾಧಿಪತಿಗಳನ್ನಾಗಿ ನಿಯಮಿಸಿದರು. ಶೃಂಗೇರಿಯ ಅದ್ವೈತಪೀಠವನ್ನು ಆದಿಶಂಕರರೇ ಸ್ಥಾಪಿಸಿದರೆಂಬುದು ಶೃಂಗೇರಿಮಠದ ಕಡತಗಳಿಂದ ತಿಳಿದುಬರುವ ಸಂಗತಿಯಾಗಿದೆ[2]. ವೈದಿಕಧರ್ಮವು ಭಾರತದಾದ್ಯಂತ ಅವಿಚ್ಛಿನ್ನವಾಗಿ ನಡೆಯಲೆಂದು ಆದಿಶಂಕರಾಚಾರ್ಯರು ಜಗನ್ನಾಥಪುರಿ, ದ್ವಾರಕಾ ಮತ್ತು ಬದರಿ ಈ ಸ್ಥಳಗಳಲ್ಲಿಯೂ ಮಠಗಳನ್ನು ಸ್ಥಾಪಿಸಿ ತಮ್ಮ ಶಿಷ್ಯರನ್ನು ಮಠಾಧಿಪತಿಗಳನ್ನಾಗಿ ನಿಯಮಿಸಿದರು. ಶೃಂಗೇರಿಯಲ್ಲಿ, ಆದಿಶಂಕರರಿಂದ ಪ್ರಾರಂಭಿಸಲ್ಪಟ್ಟ ಗುರುಪರಂಪರೆಯು ಇಂದಿನವರೆಗೂ ಅವಿಚ್ಛಿನ್ನವಾಗಿ ಸಾಗಿ ಬಂದಿರುವದು ಪೀಠದ ಮಹಿಮೆಯೆಂದೇ ತೋರುತ್ತದೆ.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದಂದಿನಿಂದ (ಕ್ರಿ.ಶ. 1336) ಇಪ್ಪತ್ತನೆಯ ಶತಮಾನದವರೆಗೂ ಅಸ್ತಿತ್ವದಲ್ಲಿದ್ದ ಹಲವಾರು ಅರಸು ಮನೆತನಗಳು ಶೃಂಗೇರಿ ಮಠದೊಂದಿಗೆ ನಿಕಟ ಸಂಬಂಧವನ್ನಿರಿಸಿಕೊಂಡಿದ್ದವೆಂಬುವಕ್ಕೆ ಸಾಕಷ್ಟು ಆಧಾರಗಳಿವೆ. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯು ಕರ್ನಾಟಕದ ಇತಿಹಾಸದಲ್ಲಿ ಎಷ್ಟು ಮಹತ್ವಪೂರ್ಣವಾದ ಘಟನೆಯೋ, ಶೃಂಗೇರಿಯ ಇತಿಹಾಸದಲ್ಲಿಯೂ ಅದು ಅಷ್ಟೇ ಮಹತ್ವದ ಘಟನೆಯಾಗಿ ಪರಿಣಮಿಸಿದೆ. ಹದಿನಾಲ್ಕನೆಯ ಶತಮಾನದವರೆಗೂ ಕೇವಲ ಧಾರ್ಮಿಕ ಕ್ಷೇತ್ರವಾಗಿದ್ದ ಶೃಂಗೇರಿ, ವಿಜಯನಗರ ಸಾಮ್ರಾಜ್ಯ ಸ್ಥಾಪನೆಯಾದಂದಿನಿಂದ ಅದು ಒಂದು ಸಂಸ್ಥಾನವಾಗಿ ಮಾರ್ಪಟ್ಟಿತು. ವಿಜಯನಗರದ ಅರಸುಗಳು ಶೃಂಗೇರಿ ಮಠಕ್ಕೆ ಭೂಮಿಯನ್ನು ದಾನಮಾಡಿ, ಕಾಣಿಕೆಗಳನ್ನು ಸಲ್ಲಿಸಿ, ರಾಜಾಶ್ರಯ ನೀಡಿದ್ದರಿಂದ, ಮಠವು ಭದ್ರಬುನಾದಿಯ ಮೇಲೆ ನಿಂತು ರಾರಾಜಿಸತೊಡಗಿತು. ಶೃಂಗೇರಿಯ ಮಠವು ಆಸ್ತಿಪಾಸ್ತಿಗಳನ್ನು ಹೊಂದಿದ ಇತರ ಸಂಸ್ಥಾನಗಳಂತಿರದೆ, ಧರ್ಮಸಂಸ್ಥಾನವಾಗಿತ್ತೆಂಬುದು, ಮಠದಲ್ಲಿಯೇ ದೊರೆತ ಕಡತಗಳ ಆಧಾರದಿಂದ ಖಚಿತಪಡುತ್ತದೆ.[3] ಭಾರತದ ಮೂಲೆಮೂಲೆಗಳಲ್ಲಿ ಕೀರ್ತಿಪತಾಕೆಯನ್ನು ಹಾರಿಸಿ, ಕನ್ನಡಿಗರ ಕಣ್ಮಣಿಗಳಾದ ವಿಜಯನಗರದ ಅರಸುಗಳನ್ನು ಶೃಂಗೇರಿಯ ಜಗದ್ಗುರುಗಳು ಆಶೀರ್ವದಿಸಿದರು.

ಶೃಂಗೇರಿ ಮತ್ತು ವಿಜಯನಗರ, ಇವುಗಳ ನಡುವಿನ ಸಂಬಂಧವನ್ನರಿಯಲು ಹಲವಾರು ಗ್ರಂಥಗಳು, ಶಿಲಾ ಮತ್ತು ತಾಮ್ರಶಾಸನಗಳು, ಕಡತಗಳು ಹಾಗೂ ಇನ್ನಿತರ ಎಷ್ಟೋ ದಾಖಲೆಗಳು ಉಪಯುಕ್ತವಾಗಿವೆ. ಹದಿನೆಂಟನೆಯ ಶತಮಾನದ ಕೆಳದಿಯ ಮೊದಲನೆಯ ಬಸವಪ್ಪನಾಯಕ ವಿರಚಿತ 'ಶಿವತತ್ತ್ವರತ್ನಾಕರ' ಮತ್ತು ಕಾಶೀ ಲಕ್ಷ್ಮಣಶಾಸ್ತ್ರಿಗಳವರ, 'ಗುರುವಂಶಕಾವ್ಯ' ಹಾಗೂ ಈ ಕೃತಿಗಳಿಗಿಂತಲೂ ಮೊದಲಿನದೆಂದು ಪರಿಗಣಿಸಲ್ಪಟ್ಟ, 'ವಿದ್ಯಾರಣ್ಯಕಾಲಜ್ಞಾನ' (ಕ್ರಿ. ಶ. 1600), ಇವೇ ಕೆಲವು ಅಮೂಲ್ಯ ಆಧಾರ ಗ್ರಂಥಗಳು. ಇವುಗಳ ಹೊರತಾಗಿ 'ಎಪಿಗ್ರಾಫಿಯಾ ಕರ್ನಾಟಿಕಾ'[4] ಮತ್ತು 'ಜಗದ್ಗುರು ಶೃಂಗೇರಿ ಶ್ರೀಮಠೀಯ ಪ್ರಾಕ್ತನ ಲೇಖಮಾಲಾ ಸಂಗ್ರಹ'[5] ಇವುಗಳಲ್ಲಿ ಪ್ರಕಟಪಡಿಸಿದ ಶಿಲಾ ಮತ್ತು ತಾಮ್ರಶಾಸನಗಳು ಬಹಳೇ ಸಹಾಯಕವಾಗಿವೆ. ಲೇಖಕರು ಇತ್ತೀಚೆಗೆ ಬೆಳಕಿಗೆ ತಂದಿರುವ, 'ಶ್ರೀ ಶ್ರೀ ಶೃಂಗೇರಿ ಜಗದ್ಗುರು ಮಹಾಸಂಸ್ಥಾನ ಶಾರದಾ ಪೀಠದ ಫೋಟೋಪ್ರತಿ ತೆಗೆಯಲ್ಪಟ್ಟಿರುವ ಕಡತಗಳ ವಿಷಯಾನುಕ್ರಮಣಿಕೆ'[6] ಹಾಗೂ 'ಎ ಹಿಸ್ಟರಿ ಆಫ್ ಶೃಂಗೇರಿ'[7] ಎಂಬ ಪುಸ್ತಕಗಳು ಈ ವಿಷಯದ ಮೇಲೆ ಹೆಚ್ಚಿನ ಬೆಳಕನ್ನು ಬೀರುತ್ತವೆ.

ಶ್ರೀ ವಿದ್ಯಾತೀರ್ಥ, ಶ್ರೀ ಭಾರತೀತೀರ್ಥ ಮತ್ತು ಶ್ರೀ ವಿದ್ಯಾರಣ್ಯರ ಕಾಲವು ಶೃಂಗೇರಿಯ ಇತಿಹಾಸದಲ್ಲಿಯೇ ವೈಭವಪೂರ್ಣವಾದದ್ದು. ವಿಜಯನಗರ ಸಾಮ್ರಾಜ್ಯಸ್ಥಾಪಕರಾದ ಹರಿಹರ ಮತ್ತು ಬುಕ್ಕಭೂಪತಿಗಳ

ಮೂಲವನ್ನು ಕುರಿತು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿದ್ದರೂ, ವಿಜಯನಗರಸಾಮ್ರಾಜ್ಯಸ್ಥಾಪನೆಗೆ ಶ್ರೀವಿದ್ಯಾರಣ್ಯರು ನೀಡಿದ ನೆರವನ್ನು ಬಹಳಷ್ಟು ವಿದ್ವಾಂಸರು ಒಪ್ಪಿಕೊಂಡಿದ್ದಾರೆ.[8]

ಶ್ರೀ ವಿದ್ಯಾತೀರ್ಥರು : ಶೃಂಗೇರಿಮಠದ ಗುರುಪರಂಪರೆಯಲ್ಲಿ ಶ್ರೀವಿದ್ಯಾತೀರ್ಥ ಇಲ್ಲವೆ ಶ್ರೀವಿದ್ಯಾಶಂಕರತೀರ್ಥರು ಹತ್ತನೆಯವರು. ಅವರ ಕಾಲವೆಂದರೆ ಶೃಂಗೇರಿ ಧರ್ಮಸಂಸ್ಥಾನದ ಉದಯಕಾಲ. ಶೃಂಗೇರಿಯ ಮಠದೊಂದಿಗೆ ವಿಜಯನಗರದ ಸಂಪರ್ಕವನ್ನು ಕಲ್ಪಿಸಲು ಶ. ವ. 1268 (ಕ್ರಿ.ಶ. 1346)ರ ಶಿಲಾಶಾಸನವು ಪ್ರಪ್ರಥಮವಾದದ್ದು.[9] ಈ ಶಾಸನವು, ಮೊದಲನೆಯ ಹರಿಹರಮಹಾರಾಯರು ಭಾರತೀತೀರ್ಥ ಶ್ರೀಪಾದಂಗಳಿಗೆ, ಶ್ರೀ ಪಾದಂಗಳವರು, ಅವರ ಶಿಷ್ಯಾದಿಗಳೂ ಶೃಂಗೇರಿಯ ತೀರ್ಥವಾಸದಲ್ಲಿ ಅನುಷ್ಠಾನಮಾಡಿಕೊಂಡಿರುವ ಉದ್ದಿಶ್ಯ ದಾನಧಾರಾ ಪೂರ್ವಕವಾಗಿ ಕೊಟ್ಟ ಭೂಸ್ವಾಸ್ಥ್ಯ, ಎಂಬುದನ್ನು ಅರುಹುತ್ತದೆ. ಈ ಶಾಸನದ ಪ್ರಾರ್ಥನಾ ಪದ್ಯವು, "ವಿದ್ಯಾತೀರ್ಥಾಯಗುರವೇ ಪರಸ್ಮೈತೇಜಸೇ ನಮಃ |", ಎಂಬ ನಮನದೊಂದಿಗೆ ಪ್ರಾರಂಭವಾಗುತ್ತದೆ.

ಕ್ರಿ.ಶ. 1356ರಲ್ಲಿ ಶ್ರೀ ವೀರಬುಕ್ಕಣ್ಣೊಡೆಯರು ಶೃಂಗೇರಿಗೆ ದಯಮಾಡಿ, ಶ್ರೀವಿದ್ಯಾತೀರ್ಥರ ದರುಶನ ಪಡೆದು ಆ ಮಠದ ಪರಿಚರ್ಯೆ ಹಾಗೂ ಯತಿಗಳ ಭಿಕ್ಷೆಗಾಗಿ ಭೂಸ್ವಾಸ್ಥ್ಯವನ್ನು ಶ್ರೀಭಾರತೀಕೃಷ್ಣ ತೀರ್ಥರಿಗೆ ದಾನಮಾಡಿದರೆಂದು ಇನ್ನೊಂದು ಶಿಲಾಶಾಸನದಿಂದ ತಿಳಿಯಬಹುದಾಗಿದೆ.[10] ಈ ಶಾಸನದ ಪ್ರಾರ್ಥನಾ ಪದ್ಯವೂ ಶ್ರೀವಿದ್ಯಾತೀರ್ಥರ ಘನತೆಯನ್ನು ಎತ್ತಿ ತೋರಿಸುತ್ತದೆ. ಆ ಪದ್ಯವು ಈ ಕೆಳಗಿನಂತಿದೆ

> "ವಿದ್ಯಾತೀರ್ಥಯತೀಂದ್ರೋಯಮತಿಶೇತೇ ದಿವಾಕರಂ |
> ತಮೋಹರತಿ ಯತ್ಪುಂಸಾಮಂತರ್ಬಹಿರಹರ್ನಿಶಂ ||

('ಯತಿರಾಜರಾದ ವಿದ್ಯಾತೀರ್ಥರು ನಿಜವಾಗಿಯೂ ಸೂರ್ಯನಿಗಿಂತ ಮಿಗಿಲು ; ಸೂರ್ಯನು ಕೇವಲ ಹಗಲಿನಲ್ಲಷ್ಟೇ ನಮ್ಮ ಸುತ್ತಲಿನ ಕತ್ತಲನ್ನು ಹೋಗಲಾಡಿಸಿದರೆ, ಶ್ರೀ ವಿದ್ಯಾತೀರ್ಥರು ಹಗಲು ಮತ್ತು ರಾತ್ರಿಯಲ್ಲಿ, ಬಾಹ್ಯ ಹಾಗೂ ಆಂತರಿಕ ಕತ್ತಲನ್ನು ಹೋಗಲಾಡಿಸುವರು).

ಶ್ರೀವಿದ್ಯಾತೀರ್ಥರು ವೇದಶಾಸ್ತ್ರ ಪಾರಂಗತರಾಗಿದ್ದರು. ಶಂಕರಾನಂದ, ವಿದ್ಯಾರಣ್ಯ, ಸಚ್ಚಿದಾನಂದ, ಸಾಂದ್ರಾನಂದ, ಅದ್ವೈತಾನಂದಶೇವಧಿ, ಮಹಾದೇವಶಿವ, ಅದ್ವೈತ ಸುಖಾನಂದ, ಶಿವಯೋಗಿ ಮುಂತಾದವರು ಅವರ ಶಿಷ್ಯಾಗ್ರೇಸರರಾಗಿದ್ದರು.

ಸಿಂಹಗಿರಿಯ ಚತುರ್ಮೂರ್ತಿ ವಿದ್ಯೇಶ್ವರಶಿಲ್ಪವು ಶ್ರೀವಿದ್ಯಾತೀರ್ಥರ ತಪೋಮಹಿಮೆಯನ್ನು ಸೂಚಿಸುವ ಸಂಕೇತವಾಗಿದೆ. ಈ ಶಿಲ್ಪದಲ್ಲಿ ವಿದ್ಯಾತೀರ್ಥ, ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ಮೇಲ್ಗಡೆ ಶ್ರೀಲಕ್ಷ್ಮೀ ನರಸಿಂಹ, ಮತ್ತು ಎಲ್ಲಕ್ಕೂ ಮೇಲ್ಗಡೆಯಲ್ಲಿ ಶಿವಲಿಂಗವನ್ನು ಬಿಂಬಿಸಲಾಗಿದೆ. ಈ ಅಪೂರ್ವ ಶಿಲ್ಪವು ಅದ್ವೈತ ಸಿದ್ಧಿಯ ಪ್ರತೀಕವಾಗಿದೆ. ಶ್ರೀಭಾರತೀತೀರ್ಥರು ಕ್ರಿ. ಶ. 1356 ರ ಸುಮಾರಿಗೆ ತಮ್ಮ ಗುರುವಿನ ಸ್ಮರಣಾರ್ಥವಾಗಿ ಮೊದಲನೆಯ ಹರಿಹರ-ಮಹಾರಾಯರ ನೆರವಿನಿಂದ, ಶೃಂಗೇರಿಯಲ್ಲಿ ಶ್ರೀವಿದ್ಯಾಶಂಕರ ದೇವಾಲಯವನ್ನು ಪ್ರತಿಷ್ಠಾಪಿಸಿದರು.[11] ಶ್ರೀವಿಂದ್ಯಾಶಂಕರ ದೇವಾಲಯದಲ್ಲಿ ಅಂದಿನಿಂದ ಪ್ರಾರಂಭವಾದ ಪೂಜೆ-ಪುನಸ್ಕಾರಗಳು ಇಂದಿಗೂ ನಡೆದುಕೊಂಡು ಬಂದಿವೆ.

ಶ್ರೀ ವಿದ್ಯಾತೀರ್ಥರ ಕಾಲದ ಬಗ್ಗೆ ಪಂಡಿತರಲ್ಲಿ ಭಿನ್ನಾಭಿಪ್ರಾಯಗಳಿವೆ. ಶ್ರೀ ವಿದ್ಯಾತೀರ್ಥರು ಕ್ರಿ.ಶ. 1228ರಲ್ಲಿ ಸಂನ್ಯಾಸ ಸ್ವೀಕರಿಸಿ ಕ್ರಿ.ಶ. 1333 ರಲ್ಲಿ ವಿದೇಹಮುಕ್ತಿ ಹೊಂದಿದರೆಂಬುದನ್ನು ಶೃಂಗೇರಿಮಠದ ಪಟ್ಟಿಯು ಅರುಹುತ್ತದೆ.[12] ಆದರೆ ಈ ಅಭಿಪ್ರಾಯಕ್ಕೆ ವಿರೋಧವಾಗಿ, ವಿಜಯನಗರದ ಮೊದಲನೆಯ ಬುಕ್ಕರಾಯರು ಕ್ರಿ.ಶ. 1356ರಲ್ಲಿ ಶೃಂಗೇರಿಗೆ ಬಂದು ಶ್ರೀ ವಿದ್ಯಾತೀರ್ಥರ ದರುಶನಮಾಡಿ, ಅವರ ಮಠಕ್ಕೆ ಭೂಮಿಯನ್ನು ದಾನಮಾಡಿದರೆಂಬ ವಿಷಯವನ್ನು ಮೊದಲೇ ಅರಿತಾಗಿದೆ. ಶ್ರೀ ವಿದ್ಯಾತೀರ್ಥರು ವಿಜಯನಗರಸಾಮ್ರಾಜ್ಯ

ಸ್ಥಾಪನೆಗಿಂತ ಸ್ವಲ್ಪ ಪೂರ್ವದಲ್ಲಿ ಶೃಂಗೇರಿಯ ಪೀಠವನ್ನು ಆರೋಹಿಸಿ ಕ್ರಿ. ಶ. ಸುಮಾರು 1356 ರಲ್ಲಿ ಯೋಗಸಮಾಧಿ ಹೊಂದಿದರೆಂಬುದಾಗಿ, ದಿವಂಗತ ಶ್ರೀ ಡಿ. ವಿ. ಗುಂಡಪ್ಪನವರು ಅಭಿಪ್ರಾಯಪಟ್ಟಿದ್ದಾರೆ.[13]

ಶ್ರೀ ವಿದ್ಯಾತೀರ್ಥರು ಶೃಂಗೇರಿಮಠದ ಘನತೆಯನ್ನು ಉಚ್ಛ್ರಾಯಗೊಳಿಸಿದರು. ವಿಜಯನಗರ ಸಾಮ್ರಾಜ್ಯ ಸ್ಥಾಪಿಸಲು ಶ್ರೀವಿದ್ಯಾತೀರ್ಥ ಮತ್ತು ಶ್ರೀ ವಿದ್ಯಾರಣ್ಯರು, ಹರಿಹರ ಮತ್ತು ಬುಕ್ಕರಿಗೆ ನೆರವು ನೀಡಿರಲು ಸಾಧ್ಯವೆಂದು ತಿಳಿದು ಬರುತ್ತದೆ. [14]

ಶ್ರೀ ಭಾರತೀತೀರ್ಥ : ಶ್ರೀ ಭಾರತೀತೀರ್ಥರು (ಭಾರತೀಕೃಷ್ಣತೀರ್ಥ) ಶ್ರೀ ವಿದ್ಯಾತೀರ್ಥರ ಶಿಷ್ಯರು. ಶ್ರೀ ವಿದ್ಯಾತೀರ್ಥರ ವಿದೇಹಮುಕ್ತಿಯ ನಂತರ ಅವರು ಶೃಂಗೇರಿಪೀಠವನ್ನು ಆರೋಹಿಸಿ, ಕ್ರಿ.ಶ. ಸುಮಾರು 1380ರ ವರೆಗೆ ಯೋಗಸಾಮ್ರಾಜ್ಯವನ್ನಾಳಿದರು. ಹರಿಹರ ಮತ್ತು ಬುಕ್ಕಣ್ಣೊಡೆಯರು ಶ್ರೀಭಾರತೀತೀರ್ಥರ ಆಶೀರ್ವಾದ ಪಡೆದಿದ್ದರೆಂಬುದು ಮೊದಲೇ ನಮೂದಿಸಲಾಗಿರುವ ಶಾಸನಗಳಿಂದ ತಿಳಿಯಬಹುದಾಗಿದೆ. ಶ್ರೀಭಾರತೀತೀರ್ಥರು ಘನವಿದ್ವಾಂಸರಾಗಿದ್ದರೆನ್ನಲು ಅವರು ರಚಿಸಿದ, 'ವೇದಾಂತ ಪಂಚದಶಿ' ಮತ್ತು 'ವೈಯಾಸಿಕನ್ಯಾಯಮಾಲೆ' ಎಂಬ ಪ್ರೌಢಗ್ರಂಥಗಳೇ ಸಾಕ್ಷಿ. 'ಪಂಚದಶಿಯು' ಭಾರತೀತೀರ್ಥ ಮತ್ತು ವಿದ್ಯಾರಣ್ಯರು ಕೂಡಿ ರಚಿಸಿದ ಗ್ರಂಥವೆಂದು ನಂಬಲಾಗಿದೆ.

ಶ್ರೀ ವಿದ್ಯಾರಣ್ಯರು : ಶ್ರೀವಿದ್ಯಾರಣ್ಯರು ಕ್ರಿ.ಶ. 1331 ರಲ್ಲಿ ಸನ್ಯಾಸ ಸ್ವೀಕರಿಸಿ, ಶ್ರೀಭಾರತೀತೀರ್ಥರ ವಿದೇಹಮುಕ್ತಿಯ ನಂತರ ಶೃಂಗೇರಿಯ ಮಠಾಧಿಪತಿಯಾಗಿ, ಕ್ರಿ.ಶ. ಸುಮಾರು 1386 ರಲ್ಲಿ ಮುಕ್ತಿ ಹೊಂದಿದರು.[15] ಆದಿಶಂಕರಾಚಾರ್ಯರಿಂದ ಪ್ರಾರಂಭಿಸಿ, ಶೃಂಗೇರಿ ಮಠದ ಪೀಠಾರೋಹಣ ಮಾಡಿದವರಲ್ಲಿ ಶ್ರೀ ವಿದ್ಯಾರಣ್ಯರು ಹನ್ನೆರಡನೆಯವರು. ಹರಿಹರ ಹಾಗೂ ಬುಕ್ಕರಿಗೆ ಸಾಮ್ರಾಜ್ಯಕಟ್ಟಲು ನೆರವಾಗಿ ನಿಂತು, ಅವರನ್ನು ಆಶೀರ್ವದಿಸಿದವರು ಶ್ರೀ ವಿದ್ಯಾರಣ್ಯರು. ಕ್ರಿ. ಶ. 1368ರಲ್ಲಿ ಅವರು ಬುಕ್ಕರಾಯರ ಮಹಾಪ್ರಧಾನಿಯಾಗಿದ್ದರೆಂದು ತಿಳಿದುಬರುತ್ತದೆ.[16] ಇಮ್ಮಡಿ ವೀರಹರಿಹರ ಮಹಾರಾಯರು ತಮ್ಮ ಪೂರ್ವಿಕರಂತೆ ಶೃಂಗೇರಿ ಮಠದೊಂದಿಗೆ ನಿಕಟ ಸಂಬಂಧವನ್ನಿರಿಸಿಕೊಂಡಿದ್ದರೆಂಬುದು ಶಾಸನಗಳಿಂದ ಕಂಡುಬರುತ್ತದೆ. ಧಾರ್ಮಿಕ ಹಾಗೂ ರಾಜಕೀಯ ವ್ಯವಹಾರಗಳಲ್ಲಿ ವಿದ್ಯಾರಣ್ಯರು ಇಮ್ಮಡಿ ಹರಿಹರಮಹಾರಾಯರಿಗೆ ಸಹಾಯಕರಾಗಿದ್ದರು. ರಾಯರು, ತಮ್ಮ ಪೂರ್ವಿಕರು ಶೃಂಗೇರಿಮಠಕ್ಕೆ ದಾನವಾಗಿ ಬಿಟ್ಟ ಭೂಸ್ವಾಸ್ಥ್ಯಗಳನ್ನು ಕ್ರೋಡೀಕರಿಸಿ ತಾವೂ ಕೂಡ ಭೂಸ್ವಾಸ್ಥ್ಯವನ್ನು ದಾನಮಾಡಿದರೆಂಬುದು ಕ್ರಿ. ಶ. 1380ರ ತಾಮ್ರಶಾಸನದಿಂದ ತಿಳಿಯಬಹುದಾಗಿದೆ[17]. ಹರಿಹರ, ಬುಕ್ಕ, ಇಮ್ಮಡಿ ಹರಿಹರಮಹಾರಾಯರು ಶೃಂಗೇರಿಮಠಕ್ಕೆ ದಾನ ಮಾಡಿದ ಒಟ್ಟು ಭೂಮಿಯು 3003 ವರಹದ ಭೂಮಿಯಾದ್ದರಿಂದ ಶೃಂಗೇರಿಸೀಮೆಯು, "ಮೂರು ಸಾವಿರದ ಮೂರು ವರಹದ ಸೀಮೆ", ಎಂದು ಪ್ರಸಿದ್ಧಿಗೆ ಬಂದಿತು. ಅದೇ ರೀತಿ ಶ್ರೀ ವಿದ್ಯಾರಣ್ಯರ ಕಾಲದಿಂದ ಶೃಂಗೇರಿ ಜಗದ್ಗುರುಗಳಿಗೆ, "ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ"[18] ಎಂಬ ಬಿರುದು ಸಹಜವಾಗಿಯೇ ಬಂದಿತು. ವಿದ್ಯಾರಣ್ಯರು ಇಮ್ಮಡಿ ಹರಿಹರ ಮಹಾರಾಯರಿಗೆ ಆಧ್ಯಾತ್ಮಿಕ ವಿದ್ಯೆಯ ದೀಕ್ಷೆಯನ್ನು ಕೊಟ್ಟರು.[19]

ಅದ್ವೈತದ ಕೀರ್ತಿಶಿಖರವನ್ನೇರಿದ ವಿದ್ಯಾರಣ್ಯರು ಖ್ಯಾತ ವ್ಯಾಖ್ಯಾನಕಾರರೆಂದೂ ಕೀರ್ತಿ ಸಂಪಾದಿಸಿದರು. ವಿದ್ಯಾರಣ್ಯರೇ ರಚಿಸಿದರೆಂದು ನಂಬಲಾದ ಕೆಲವು ಮುಖ್ಯ ಗ್ರಂಥಗಳ ಪಟ್ಟಿಯೂ ಈ ಕೆಳಗಿನಂತಿದೆ—

1. ನಾಲ್ಕು ವೇದಗಳ ಮೇಲೆ ಭಾಷ್ಯಗಳು
2. ಪಂಚದಶಿ
3. ಜೀವನ್ಮುಕ್ತಿವಿವೇಕ
4. ಅನುಭೂತಿ ಪ್ರಕಾಶಿಕ
5. ಪಂಚಕೋಶ ವಿಚಾರ
6. ಬ್ರಹ್ಮವಿದಾಶೀರ್ವಾದ ಪದ್ಧತಿ

7. ಮಹಾವಾಕ್ಯ ವಿವರಣ
8. ಬಹದಾರಣ್ಯಕವಾರ್ತಿಕಸಾರ
9. ವಾಕ್ಸುಧಾ
10. ವಿವರಣ ಪ್ರಮೇಯ ಸಂಗ್ರಹ
11. ಐತರೇಯ ಉಪನಿಷತ್ ದೀಪಿಕಾ
12. ನೃಸಿಂಹತಾಪಿನಿ ಉಪನಿಷತ್ ದೀಪಿಕಾ
13. ಪರಾಶರ ಮಾಧವೀಯ
14. ದೇವಿ ಅಪರಾಧಸ್ತೋತ್ರಮ್
15. ಇನ್ನಿತರ ಉಪನಿಷತ್‌ಗಳ ಮೇಲೆ ಭಾಷ್ಯಗಳು.

ಆರು ಶತಮಾನಗಳು ಉರುಳಿದರೂ ಬೌದ್ಧಿಕ ಪ್ರಪಂಚದಲ್ಲಿ ಶ್ರೀ ವಿದ್ಯಾರಣ್ಯರ ಹೆಸರು ಇನ್ನೂ ವಿರಾಜಮಾನವಾಗಿ ಶೋಭಿಸುತ್ತದೆ. ವೇದಗಳ ಮೇಲೆ ಅವರು ರಚಿಸಿದ ಭಾಷ್ಯಗಳು ಅಮರವಾದವುಗಳು. ಅವರು ಹಿಂದೂ ಧರ್ಮವನ್ನು ರಕ್ಷಿಸಿ ಅದ್ವೈತಮತದ ಮುಕುಟಪ್ರಾಯರೆನಿಸಿದರು. ಸುಸಂಬದ್ಧ, ಪ್ರಭಾವಿ, ವೈಚಾರಿಕ ಹಾಗೂ ಸ್ಪಷ್ಟವಾದ ಶೈಲಿಯಲ್ಲಿ ಅವರು ಅದ್ವೈತವೇದಾಂತವನ್ನು ಪುನರುಚ್ಚರಿಸಿದರು. ಬ್ರಹ್ಮವು ಸತ್ಯ, ಸಮರೂಪ, ಪರಿಪೂರ್ಣ ಮತ್ತು ಶುದ್ಧ ಚೈತನ್ಯವೆಂದು ಸಾರಿದರು. ಆತ್ಮಸಿದ್ಧಿಯೇ ಮೋಕ್ಷ; ಅದು ನಮ್ಮಲ್ಲೇ ಹುದುಗಿಕೊಂಡಿದೆ; ಅದನ್ನು ಇನ್ನಾವ ಕಡೆ ಹುಡುಕುವ ಅವಶ್ಯಕತೆಯಿಲ್ಲ ಎಂಬುದಾಗಿ ಅರುಹಿದರು. ಸಂಗೀತಶಾಸ್ತ್ರದಲ್ಲಿಯೂ ಅವರು ಅಪಾರಜ್ಞಾನ ಸಂಪಾದಿಸಿದ್ದರೆಂಬುದು ಅವರು ರಚಿಸಿದ ಸಂಗೀತಸಾರದಿಂದ ತಿಳಿಯಬಹುದಾಗಿದೆ. ಹದಿನೈದು ಮೂಲರಾಗಗಳನ್ನು ಅಲ್ಲಿ ಕಾಣಿಸಲಾಗಿದೆ. 'ಜನಕಜನಯ' ರಾಗ ಪದ್ಧತಿಯನ್ನು ಮೊದಲು ತೋರಿಸಿದವರು ಶ್ರೀ ವಿದ್ಯಾರಣ್ಯರು. 'ಕರ್ನಾಟಕ ಸಂಗೀತ'ವು ಅವರ ಕಾಲದಿಂದಲೇ ಪ್ರಚಲಿತವಾಯಿತು. ವಿದ್ಯಾತೀರ್ಥ, ಭಾರತೀತೀರ್ಥ, ಶಂಕರಾನಂದ, ಶ್ರೀಕಂಠನಾಥ, ಸಾಯಣಾಚಾರ್ಯ, ಭೋಗನಾಥಕವಿ, ಕ್ರಿಯಾಶಕ್ತ್ಯಾಚಾರ್ಯ, ಆಂಗೀರಸಮಾಧವ, ಇರುಗಪದಂಡದೇಶ, ಜಯತೀರ್ಥ, ಅಕ್ಷೋಭ್ಯತೀರ್ಥ ಮೊದಲಾದ ಮಹಾಮಹಿಮರು ಹಾಗೂ ಘನಪಂಡಿತರು ಶ್ರೀ ವಿದ್ಯಾರಣ್ಯರ ಸಮಕಾಲೀನರಾಗಿದ್ದರು. ವಿದ್ಯಾರಣ್ಯರ ಕಾಲದಿಂದ ಶೃಂಗೇರಿಯು ಕೇವಲ ಮಠವಾಗಿರದೆ ಹೆಚ್ಚಿನ ಆಸ್ತಿಪಾಸ್ತಿಗಳನ್ನೂ ಹಾಗೂ ರಾಜಾಶ್ರಯವನ್ನೂ ಪಡೆದ ಧರ್ಮಸಂಸ್ಥಾನವಾಗಿ ಶೋಭಿಸಿತು.

ವಿದ್ಯಾರಣ್ಯರ ನಂತರ ಶೃಂಗೇರಿಮಠದೊಂದಿಗೆ ವಿಜಯನಗರ ಅರಸುಗಳ ಸಂಬಂಧ: ವಿದ್ಯಾರಣ್ಯರ ನಂತರವೂ ವಿಜಯನಗರದ ಅರಸುಗಳು ಶೃಂಗೇರಿಮಠದೊಂದಿಗೆ ಸಂಪರ್ಕವನ್ನಿರಿಸಿ ಕೊಂಡಿದ್ದರೆಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಅವುಗಳಲ್ಲಿ ಕೆಲವುಗಳನ್ನು ಮಾತ್ರ ಇಲ್ಲಿ ಉದಾಹರಿಸಲಾಗಿದೆ. ವಿದ್ಯಾರಣ್ಯರ ವಿದೇಹಮುಕ್ತಿಯ ನಂತರ ಚಂದ್ರಶೇಖರಭಾರತೀ, ನರಸಿಂಹ ಭಾರತೀ, ಪುರುಷೋತ್ತಮ ಭಾರತೀ, ಶಂಕರಾನಂದ ಭಾರತೀ, ದ್ವಿತೀಯ ಚಂದ್ರಶೇಖರಭಾರತೀ, ದ್ವಿತೀಯ ನರಸಿಂಹಭಾರತೀ ಹಾಗೂ ದ್ವಿತೀಯ ಪುರುಷೋತ್ತಮಭಾರತೀ ಇವರುಗಳು ಶೃಂಗೇರಿಪೀಠವನ್ನು ಅಲಂಕರಿಸಿದರು. ಇವರುಗಳ ಕಾಲದಲ್ಲಿ (ಕ್ರಿ.ಶ. 1386–ಕ್ರಿ.ಶ. 1517) ಶೃಂಗೇರಿ ಸಂಸ್ಥಾನವು ರೂಪುಗೊಂಡಿತು.

ಶ್ರೀಚಂದ್ರಶೇಖರಭಾರತೀ ಸ್ವಾಮಿಗಳು ಆಳುವ ಕಾಲದಲ್ಲಿ (ಕ್ರಿ.ಶ. 1386–89) ಇಮ್ಮಡಿ ಹರಿಹರ ಮಹಾರಾಯರು ಶೃಂಗೇರಿಯ ಗ್ರಾಮಾಶ್ರಿತ ಮಹಾಜನಂಗಳಿಗೋಸ್ಕರ ವಿದ್ಯಾರಣ್ಯಪುರ ಎಂಬ ಅಗ್ರಹಾರವನ್ನು ನಿರ್ಮಿಸಿದರೆಂಬುದು, ವಿದ್ಯಾರಣ್ಯಪುರದ ದಾನಶಾಸನದಿಂದ ತಿಳಿದು ಬರುತ್ತದೆ.[20] ಶ್ರೀನರಸಿಂಹಭಾರತೀ ಸ್ವಾಮಿಗಳು ವಿಜಯನಗರದ ವಿರೂಪಾಕ್ಷ ಹಾಗೂ ದೇವರಾಯ ಇವರಿಗೆ ಉಪದೇಶನೀಡಿದರೆಂದು ತಿಳಿದುಬರುತ್ತದೆ. ಶ್ರೀ ವಿದ್ಯಾಶಂಕರ ದೇವಾಲಯದಲ್ಲಿ ನಡೆಯುವ ನೈವೇದ್ಯ ಮತ್ತು ನಂದಾದೀಪದ ಸಲುವಾಗಿ ಇಮ್ಮಡಿ ದೇವರಾಯರು ಶ್ರೀಪುರುಷೋತ್ತಮ ಭಾರತೀ ಸ್ವಾಮಿಗಳಿಗೆ ಅಂದವಳ್ಳಿ ಗ್ರಾಮವನ್ನು ದಾನಮಾಡಿದರೆಂದು ಶೃಂಗೇರಿ ಮಠದಲ್ಲಿಯ ಕಡತವೊಂದರ ಆಧಾರದಿಂದ ಹೇಳಬಹುದು.[21]

ಶೃಂಗೇರಿ ಮತ್ತು ವಿಜಯನಗರದ ನಡುವೆ ಸಂಗಮ ಅರಸುಗಳ ಕಾಲದಲ್ಲಿದ್ದಂಥ ನಿಕಟ ಸಂಬಂಧವು ಮುಂದೆ ಬಂದ ಸಾಳುವ, ತುಳುವ ಮತ್ತು ಆರವೀಡು ಮನೆತನಗಳ ಅರಸುಗಳ ಕಾಲದಲ್ಲಿ ಇದ್ದಂತೆ ತೋರುವದಿಲ್ಲ. ಸಂಗಮರ ನಂತರ ವಿಜಯನಗರದಲ್ಲಿ ಶ್ರೀವೈಷ್ಣವರ ಪ್ರಭಾವವು ಹೆಚ್ಚಾದುದೇ ಇದಕ್ಕೆ ಕಾರಣವೆಂದು ತೋರುತ್ತದೆ. ಆದರೂ, ವಿಜಯನಗರದ ಶ್ರೇಷ್ಠ ಸಾಮ್ರಾಟನೆನಿಸಿದ ತುಳು ಮನೆತನದ ಕೃಷ್ಣದೇವರಾಯನು ಕಲಿಂಗದ ವೀರರುದ್ರ ಗಜಪತಿಯೊಂದಿಗೆ ಯುದ್ಧ (ಕ್ರಿ.ಶ. 1515-16) ಮಾಡುವ ಪೂರ್ವದಲ್ಲಿ ದ್ವಿತೀಯ ಶ್ರೀ ಪುರುಷೋತ್ತಮಭಾರತೀ ಸ್ವಾಮಿಗಳಿಂದ (ಕ್ರಿ.ಶ. 1479—ಕ್ರಿ.ಶ. 1517) ಆಶೀರ್ವಾದ ಪಡೆದನೆಂದು ಶಾಸನಗಳಿಂದ ಅರಿಯಬಹುದಾಗಿದೆ.[22]

ರಾಕ್ಷಸತಂಗಡಿಯ ಕಾಳಗದ ನಂತರ ಪೆನುಕೊಂಡದಲ್ಲಿ ರಾಜ್ಯಭಾರ ಮಾಡುತ್ತಿದ್ದ ಆರವೀಡು ಮನೆತನದ ಮೊದಲನೆಯ ಶ್ರೀರಂಗ ಮಹಾರಾಯರು (ಕ್ರಿ.ಶ. 1572-85) ಶೃಂಗೇರಿ ಶ್ರೀನರಸಿಂಹಭಾರತೀ ಸ್ವಾಮಿಗಳ (ಕ್ರಿ.ಶ. 1573–76) ಮಠಕ್ಕೆ ಗೌರವ ತೋರುತ್ತಿದ್ದರೆಂಬುದು ಅವರ ಕ್ರಿ.ಶ. 1573 ರ ಶಾಸನದಿಂದ ಖಚಿತವಾಗುತ್ತದೆ.[23]

ಈ ರೀತಿಯಾಗಿ ಶೃಂಗೇರಿಯ ಜಗದ್ಗುರುಗಳು ಹಾಗೂ ವಿಜಯನಗರ ಸಾಮ್ರಾಟರ ನಡುವಿನ ನಿಕಟ ಸಂಬಂಧವು ಇಬ್ಬರಿಗೂ ಹಿತಕರವಾಗಿ ಪರಿಣಮಿಸಿತು. ವಿಜಯನಗರದ ಪತನದ ನಂತರ ಕೆಳದಿಯ ಅರಸುಗಳು ಶೃಂಗೇರಿ ಮಠದೊಂದಿಗೆ ನಿಕಟ ಸಂಬಂಧವನ್ನು ಮುಂದುವರಿಸಿಕೊಂಡು ಬಂದರು. ಕಾಲಕ್ರಮೇಣ, ಮರಾಠಾ, ಮುಸಲ್ಮಾನ, ಮತ್ತು ಮೈಸೂರು ಅರಸುಗಳು ಹಾಗೂ ಬ್ರಿಟಿಷ್‌ಕಮಿಷನರು ಮತ್ತು ಸಂಸ್ಥಾನಿಕರು ಶೃಂಗೇರಿ ಮಠಕ್ಕೆ ಭೂಮಿ ಮತ್ತು ಕಾಣಿಕೆಗಳನ್ನು ಸಮರ್ಪಿಸಿ, ಜಗದ್ಗುರುಗಳಿಗೆ ಅತ್ಯಂತ ಗೌರವವನ್ನು ಸಲ್ಲಿಸಿದರು. ಇಂಥ ಭವ್ಯ ಪರಂಪರೆಯು ಮುಂದುವರಿಯಲೆಂಬುದೇ ಭಕ್ತಾದಿಗಳ ಸದಿಚ್ಛೆ.

ಟಿಪ್ಪಣಿ

1. ವಾಲ್ಮೀಕಿ ರಾಮಾಯಣದ ಬಾಲಕಾಂಡದಲ್ಲಿ ಋಷ್ಯಶೃಂಗನ ಕಥೆಯನ್ನು ನಿರೂಪಿಸಲಾಗಿದೆ.
2. ಕಡತ, ಸಂಪುಟ, 12, ನಂ 11 ಮತ್ತು 142 ;
   " " 36, " 101 ;
   " " 45, " 40,
3. ಕಡತ, ಸಂಪುಟ, 20, ನಂ 69, 70, 77, 78, 102 ;
   " " 21, 50 ಮತ್ತು 62.
4. ಎಪಿಗ್ರಾಫಿಯಾ ಕರ್ನಾಟಿಕಾ, ಸಂ. VI, ಶೃಂಗೇರಿ ಜಾಗೀರ, ನಂ. 1-38.
5. ಮೈಸೂರು ಅರಮನೆಯ ನಿಯಂತ್ರಣಾಧಿಕಾರಿಗಳಾಗಿದ್ದ ರಾಜಕಾರ್ಯ ಪ್ರಸಕ್ತ ಟಿ. ರಾಮಕೃಷ್ಣರಾವ್ ಅವರು ಸಂಕಲಿಸಿದ್ದು ; ಮೈಸೂರು ಗವರ್ನಮೆಂಟ್ ಪ್ರೆಸ್, 1927.
6. ಶಾಸ್ತ್ರಿ. ಎ.ಕೆ., ಕರ್ನಾಟಕ ರಾಜ್ಯ ಪತ್ರಾಗಾರ ಶಾಖೆ, 1974.
   ಕಡತ, ಸಂಪುಟಗಳು : 34, 45, 50, 66, 70, 72, 79, 86, 92, 101, 129, 134, 141, 147, 175 ಮತ್ತು 190.
7. ಶಾಸ್ತ್ರಿ. ಎ. ಕೆ., ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಮಾರ್ಚ್, 1976 ರಲ್ಲಿ ಸಾದರ ಪಡಿಸಿದ ಪೌಢ ಪ್ರಬಂಧ (ಅಪ್ರಕಟಿತ).
8. ಪುಣ್ಯಶ್ಲೋಕ ಮಂಜರಿ, ಗುರುರತ್ನಮಾಲಾ, ಗುರುವಂಶಕಾವ್ಯ, ರಾಜಕಾಲನಿರ್ಣಯ, ವಿದ್ಯಾರಣ್ಯ ಕಾಲಜ್ಞಾನ, ಪಾರಿಜಾತಾಪಹರಣಮು, ಶಿವತತ್ತ್ವರತ್ನಾಕರ ಮೊದಲಾದ ಗ್ರಂಥಗಳು ದೃಢೀಕರಿಸುತ್ತವೆ. ಆದರೆ ಪಾಶ್ಚಾತ್ಯ ವಿದ್ವಾಂಸ, ಎಚ್. ಹೆರಾಸ್ ಅವರು ಈ ಅಭಿಪ್ರಾಯವನ್ನು ಅಲ್ಲಗಳೆದಿದ್ದಾರೆ.

9. ಜಗದ್ಗುರು ಶೃಂಗೇರಿ ಶ್ರೀಮಠೀಯ ಪ್ರಾಕ್ತನ ಲೇಖಮಾಲಾ ಸಂಗ್ರಹ, ನಂ. 1

10. ಅದೇ ಗ್ರಂಥ, ನಂ. 2.

11. ಆನ್ಯುಅಲ್ ರಿಪೋರ್ಟ್ ಆಫ್ ದಿ ಮೈಸೂರ್ ಆರ್ಕಿಯಾಲಾಜಿಕಲ್ ಡಿಪಾರ್ಟ್‌ಮೆಂಟ್, 1916, ಪುಟಗಳು. 12–15.

12. ಬಿ. ಎಲ್. ರೈಸ್, ಮೈಸೂರ್ ಗೆಜೆಟಿಯರ್, ಪು. 474.

13. ವಿದ್ಯಾರಣ್ಯರ ಸಮಕಾಲೀನರು, ಪುಟಗಳು 17 ಮತ್ತು 54.

14. ಎಸ್. ಶ್ರೀಕಂಠಯ್ಯ—ಫೌಂಡರ್ಸ್ ಆಫ್ ವಿಜಯನಗರ, ಪು. 101.

15. ಎಸ್. ಶ್ರೀಕಂಠಯ್ಯ—"ವಿಜಯನಗರ ಆ್ಯಂಡ್ ವಿದ್ಯಾರಣ್ಯ", ವಿಜಯನಗರ ಸೆಕ್ಸೆಂಟೆನರಿ ಕಮೆಮೊರೇಶನ್ ವಾಲ್ಯೂಮ್, ಪುಟ, 164.

16. ಎಸ್. ಶ್ರೀಕಂಠಯ್ಯ, ಫೌಂಡರ್ಸ್ ಆಫ್ ವಿಜಯನಗರ, ಪು. 118.

17. ಜಗದ್ಗುರು ಶೃಂಗೇರಿ ಮಠೀಯ ಪ್ರಾಕ್ತನ ಲೇಖಮಾಲಾ ಸಂಗ್ರಹ, ನಂ. 3 ; ಆನ್ಯುಅಲ್ ರಿಪೋರ್ಟ್ ಆಫ್ ದಿ ಮೈಸೂರ್ ಆರ್ಕಿಯಾಲಾಜಿಕಲ್ ಡಿಪಾರ್ಟ್‌ಮೆಂಟ್, 1916, ಪು. 56.

18. ಕಾಶೀ ಲಕ್ಷ್ಮಣಶಾಸ್ತ್ರಿ—ಗುರುವಂಶಕಾವ್ಯ, ಸರ್ಗ 6, ಪದ್ಯ 42, 1966.

19. ಅದೇ ಗ್ರಂಥ, ಸರ್ಗ 8, ಪದ್ಯ. 34.

20. ಜ. ಶೃ. ಪ್ರಾಕ್ತನ ಲೇಖಮಾಲಾ ಸಂಗ್ರಹ, ನಂ. 4.

21. ಕಡತ ಸಂ. 70, ನಂ. 4.

22. ಜ. ಶ್ರ. ಪ್ರಾ, ಲೇಖಮಾಲಾ ಸಂಗ್ರಹ, ನಂ. 8 ಮತ್ತು 9.

23. ಆ್ಯನ್ಯುಅಲ್ ರಿಪೋರ್ಟ್ ಆಫ್ ದಿ ಮೈಸೂರ್ ಆ. ಡಿ., 1916, ಪು. 62.

ಎರಡು ಸಂದರ್ಭಗಳಲ್ಲಿ ನೀವು ಪ್ರಯತ್ನಪೂರ್ವಕವಾಗಿ ಬಾಯನ್ನು ಮುಚ್ಚಿಕೊಂಡಿರಬೇಕು—ಈಜುವಾಗ, ಕೋಪಗೊಂಡಾಗ

—ಬರ್ನಾರ್ಡ್ ಷಾ

ಕೆ. ಎನ್. ಚಿಟ್ನೀಸ

ವಿಜಯನಗರೋತ್ತರ ಕರ್ನಾಟಕದ ಬಗ್ಗೆ ಮರಾಠಿ ಕಾಗದ ಪತ್ರಗಳು

ವಿಜಯನಗರದ ಪತನಾನಂತರ ಅವರ ಮಾಂಡಲಿಕರಾಜರು ಕ್ರಮೇಣ ಸ್ವತಂತ್ರರಾಗಿ ತಮ್ಮ ತಮ್ಮ ರಾಜ್ಯಗಳಲ್ಲಿ ವಿಜಯನಗರದ ಆದರ್ಶವನ್ನು ಮುಂದುವರೆಸಿದರು. ಕ್ರಿ. ಶ. 1500ರ ನಂತರ ಬಲಾಢ್ಯವಾದ ಮುಸಲ್ಮಾನೀ ರಾಜ್ಯಗಳಲ್ಲಿ ಅಹಮದನಗರ, ವಿಜಾಪುರ ಮತ್ತು ಗೋವಳಕೊಂಡ ರಾಜ್ಯಗಳು ಮಹತ್ವದ್ದಾಗಿದ್ದವು. ಕ್ರಿ. ಶ 1636ರಲ್ಲಿ ಅಹಮದನಗರ ರಾಜ್ಯವು ನಷ್ಟವಾಯಿತು. 1686ರಲ್ಲಿ ವಿಜಾಪುರ ರಾಜ್ಯವೂ 1687ರಲ್ಲಿ ಗೋವಳಕೊಂಡ ರಾಜ್ಯವೂ ಔರಂಗಜೇಬನಿಂದ ಗೆಲ್ಲಲ್ಪಟ್ಟವು. 1707ರಲ್ಲಿ ಔರಂಗಜೇಬನ ಮರಣಾನಂತರ (1708ರಲ್ಲಿ) ಶಾಹೂನ ಬಿಡುಗಡೆಯಾಯಿತು. ಅವನು ದಿಲ್ಲಿಯಿಂದ ದಕ್ಷಿಣಕ್ಕೆ ಬಂದು ಸಾತಾರೆಯಲ್ಲಿ ತನ್ನ ರಾಜಧಾನಿಯನ್ನು ಮಾಡಿ ಮರಾಠಾ ರಾಜ್ಯವನ್ನು ಆಳತೊಡಗಿದನು. ಶಾಹೂ ಮುಂದೆ 1749ರವರೆಗೆ ರಾಜ್ಯ ಕಾರಭಾರವನ್ನು ಮಾಡಿದನು. ಈ ಕಾಲದಲ್ಲಿ ಬಾಳಾಜಿ ವಿಶ್ವನಾಥ (1713–1720), ಆತನ ಮಗ ಮೊದಲನೆಯ ಬಾಜೀರಾವ (1720–1740) ಮತ್ತು ಬಾಜೀರಾವನ ಮಗ ಬಾಳಾಜಿ (1740–1761) ಇವರು ಪೇಶ್ವೆ ಪದದಲ್ಲಿದ್ದು ಎಲ್ಲ ರಾಜ್ಯಕಾರಭಾರವನ್ನು ತಮ್ಮ ಕೈಯೊಳಗೆ ತೆಗೆದುಕೊಂಡರು. ಶಿವಾಜಿ, ಸಂಭಾಜಿ ಮತ್ತು ರಾಜಾರಾಮ ಇವರ ನಂತರ ಮೊದಲನೆಯ ಬಾಜೀರಾವನು ಕರ್ನಾಟಕದ ಕೆಲವು ಭಾಗಗಳಲ್ಲಿ ಬಂದು ತನ್ನ ವರ್ಚಸ್ಸನ್ನು ಸ್ಥಾಪಿಸುವ ಪ್ರಯತ್ನವನ್ನು ಮಾಡಿದನು. ಇವನ ಕಾಲದಿಂದಲೇ ಕರ್ನಾಟಕದ ಬಗ್ಗೆ ಮೋಡೀ ಲಿಪಿಯಲ್ಲಿಯ ಮರಾಠೀ ಕಾಗದಪತ್ರಗಳು ಸಿಗುತ್ತವೆ. ಶಿವಾಜಿ, ಸಂಭಾಜಿ ಮತ್ತು ರಾಜಾರಾಮರ ಕಾಲದ ಬಗ್ಗೆ ಮರಾಠಿ ಕಾಗದಪತ್ರಗಳು ಅತ್ಯಲ್ಪವಿದ್ದು ಅವುಗಳಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದವು ಒಂದೂ ಸಹ ಇಲ್ಲ. ಇವರ ಆಳಿಕೆಯ ಬಗ್ಗೆ 'ಬಖರ' ಎಂದರೆ ಚರಿತ್ರೆಗಳನ್ನು ಅವರ ಕಾಲದಲ್ಲಿಯೇ ಆಗಲಿ, ಇಲ್ಲವೆ ಅವರ ನಂತರ ಕೊಂಚ ಕಾಲದ ನಂತರವಾಗಲಿ ಬರೆದರು. ಇವು 'ಚಿಕ್ಕದೇವರಾಯ ವಿಜಯಮ್', 'ಕೆಳದಿನೃಪವಿಜಯಮ್' ಮುಂತಾದ ಗ್ರಂಥಗಳಂತೆ ಬರೆದಿವೆ. ಶಿವಾಜಿ, ಸಂಭಾಜಿ, ರಾಜಾರಾಮರ ಜೊತೆಗೆ ಕರ್ನಾಟಕದಲ್ಲಿಯ ಯಾವ ಸ್ಥಳಗಳ ಸಂಬಂಧವು ಬಂದಿತೋ ಅವುಗಳ ಬಗ್ಗೆಯಷ್ಟೇ ಇವುಗಳಲ್ಲಿ ಸ್ವಲ್ಪ ಮಾಹಿತಿಯನ್ನು ಕೊಟ್ಟಿದ್ದಾರೆ. ಇವು ಸಮಕಾಲೀನ ಇಲ್ಲದ್ದರಿಂದ ಅವುಗಳಲ್ಲಿ ಕರ್ನಾಟಕದ ಬಗ್ಗೆ ಕೊಟ್ಟ ಮಾಹಿತಿಯು ಸ್ವೀಕಾರಾರ್ಹವಿಲ್ಲ. ಸ್ವಲ್ಪ ಸತ್ಯವಿದ್ದು ಅಸತ್ಯ ಮಾಹಿತಿಯೇ ಬಹಳಷ್ಟಿರುತ್ತದೆ. ಬೆಳವಡಿ, ಕೊಪ್ಪಳ, ಬಂಕಾಪುರ, ಗದಗ, ಲಕ್ಷ್ಮೇಶ್ವರ ಮುಂತಾದ ಸ್ಥಳಗಳ ಉಲ್ಲೇಖಗಳು ಈ ಪುಸ್ತಕಗಳಲ್ಲಿ ಸಿಗುತ್ತವೆ. ಬೆಳವಡಿ ಮಲ್ಲಮ್ಮನ ಸಂಗಡ ಶಿವಾಜಿಯು ಮಾಡಿದ ಕಾಳಗದ ಬಗ್ಗೆ ಸ್ವಲ್ಪ ಹೆಚ್ಚು ವಿವರಗಳು ಇವೆ. ಬೆಳವಡಿಮಲ್ಲಮ್ಮನಿಗೆ ಸಾವಿತ್ರೀಬಾಯಿ ಎಂದು ಬರೆದಿದ್ದಾರೆ.

ಮೊದಲನೆಯ ಬಾಜೀರಾವನ ಕಾಲದಿಂದ ಸಮಕಾಲೀನ ಕಾಗದಪತ್ರಗಳು ಸಿಗಲಾರಂಭಿಸುತ್ತವೆ. ಅವನು ಚಿತ್ರದುರ್ಗ, ಸಿರ ಮುಂತಾದ ಪ್ರದೇಶಗಳ ಮೇಲೆ ದಾಳಿ ಮಾಡಿದನು. ಅವನು ಈ ಕಾಲದಲ್ಲಿ ಪುಣೆಗೆ ಇಲ್ಲವೆ ಸಾತಾರೆಗೆ ಬರೆದ ವೃತ್ತಪತ್ರಗಳೂ ಅವುಗಳಿಗೆ ಶಾಹೂ ರಾಜನು ಅಥವಾ ಅವನ ಪ್ರತಿನಿಧಿಗಳು ಕೊಟ್ಟ ಉತ್ತರಗಳೂ ಮಹತ್ವದ್ದಿದ್ದು ಕರ್ನಾಟಕದ ಬಗ್ಗೆ ಅವುಗಳಲ್ಲಿ ಕೆಲವು ಮಹತ್ವದ ವಿವರಗಳು ಸಿಗುತ್ತವೆ. ಬಾಜೀರಾವನ ನಂತರ ಅವನ ಮಗ ಬಾಳಾಜಿ (ನಾನಾ ಸಾಹೇಬ) ಇವನ ಕಾಲದಲ್ಲಿ ಕರ್ನಾಟಕದ ಮೇಲಿನ ಮರಾಠೆಯರ ದಾಳಿಗಳು ಹೆಚ್ಚಾದವು. ಉತ್ತರ ಕರ್ನಾಟಕದ ಬಹುಭಾಗವನ್ನು ತಮ್ಮ ವರ್ಚಸ್ಸಿನಲ್ಲಿ ತಂದರು. ಧಾರವಾಡ, ಹುಬ್ಬಳ್ಳಿ, ಬಾಚ್ಛಾಪೂರ, ಮನೋಳಿ ಮುಂತಾದ ಸ್ಥಳಗಳು ಅವರ ಕೈಸೇರಿದವು. ಸವಣೂರ ನವಾಬನು ಮರಾಠೆಯವರ ಸಹಾಯವನ್ನು ತೆಗೆದುಕೊಳ್ಳಲಿಕ್ಕೆ ಹತ್ತಿದನು. ಇದಾದ ಮೇಲೆ ನಾನಾಸಾಹೇಬನ ಮಗ ಮಾಧವರಾಯನ ಕಾಲದಲ್ಲಿ ಕರ್ನಾಟಕ ಮತ್ತು ಮಹಾರಾಷ್ಟ್ರಗಳ ನಡುವೆ ಬಹಳೇ ಸಂಬಂಧ ಬಂತು. ಹೈದರಆಲಿಯ ಸಂಗಡ ಮಾಧವರಾಯನು ನಾಲ್ಕು ಕಾಳಗಗಳನ್ನು ಮಾಡಿದನು. ಧಾರವಾಡ, ಜಡೆಆನವಟ್ಟಿ, ಶ್ರೀರಂಗಪಟ್ಟಣ ಮುಂತಾದ ಸ್ಥಳಗಳಲ್ಲಿ ಯುದ್ಧಗಳಾದವು. ಆಗ ಕರ್ನಾಟಕದಲ್ಲಿಯ ಎಷ್ಟೋ ಸ್ಥಳಗಳಲ್ಲಿ ಮರಾಠೆಯರ ಪ್ರತಿನಿಧಿಗಳಿದ್ದು ಅವರು ಪುಣೆಯಲ್ಲಿಯ ಪೇಶ್ವೆನಿಗೆ ವೃತ್ತಪತ್ರಗಳನ್ನು (News letters) ಕಳಿಸಿ ಕೊಡುತ್ತಿದ್ದರು. ಅದರಂತೆಯೇ ಪುಣೆಯಿಂದ ಅವರಿಗೆ ಪತ್ರಗಳು ಬರುತ್ತಿದ್ದವು. ಇದೇ ಕ್ರಮವು ಕೊನೆಗೆ ನಾನಾಫಡನೀಸನ ಕಾಲದವರೆಗೂ ನಡೆಯಿತು. ಈ ಪತ್ರಗಳಲ್ಲಿ ಕೆಲವು ನಷ್ಟವಾಗಿ ಹೋಗಿದ್ದರೂ ಉಳಿದವುಗಳ ಸಂಗ್ರಹಗಳು ಪುಣೆ, ಕೊಲ್ಹಾಪೂರ, ಔರಂಗಾಬಾದ ಮುಂತಾದ ಊರುಗಳಲ್ಲಿ ಉಪಲಬ್ಧವಿವೆ. ಪುಣೆಯಲ್ಲಿ ಪೇಶವೆ ದಪ್ತರಿನಲ್ಲಿ ಇವುಗಳ ಅತ್ಯಧಿಕ ಸಂಗ್ರಹವಿದ್ದು ಕರ್ನಾಟಕದ ಬಗ್ಗೆ ವಿವರವಾದ ಮಾಹಿತಿಯೂ ಸಿಗುತ್ತದೆ. ಗೋ. ಸ. ಸರದೇಸಾಯಿಯವರು ಈ ಕಾಗದಪತ್ರಗಳಲ್ಲಿ ಕೆಲವನ್ನು ಆರಿಸಿ 45 ಭಾಗಗಳಲ್ಲಿ ಸರಕಾರದ ವತಿಯಿಂದ ಪ್ರಕಟಿಸಿದರು. ಈ ಭಾಗಗಳಲ್ಲಿ ಕೆಲವು ಕರ್ನಾಟಕಕ್ಕೆ ಸಂಬಂಧಿಸಿವೆ. ಮಿರಜಿನಲ್ಲಿ ಪಟವರ್ಧನ ಅವರ ದಪ್ತರಿನಲ್ಲಿಯ ಕಾಗದ ಪತ್ರಗಳನ್ನು ವಾಸುದೇವಶಾಸ್ತ್ರಿಖರೆಯವರು ಮೋಡಿಯಿಂದ ಮರಾಠಿಯಲ್ಲಿ ರೂಪಾಂತರಿಸಿ 14 ಭಾಗಗಳಲ್ಲಿ ಪ್ರಕಟಿಸಿದರು. ಅವರ ನಂತರ 15ನೇ ಭಾಗವೂ ಹೊರಬಂದಿತು. ಈ ಕಾಗದಪತ್ರಗಳಲ್ಲಿ ಕರ್ನಾಟಕದ ಬಗ್ಗೆನೇ ಹೆಚ್ಚು ಮಾಹಿತಿ ಸಿಗುತ್ತದೆ. ಧಾರವಾಡ, ಸವಣೂರ, ಬಂಕಾಪೂರ, ಬೆಳಗಾವ, ಹುಬ್ಬಳ್ಳಿ, ಸಿರ, ಕಿತ್ತೂರ, ಗದಗ, ರಾಮದುರ್ಗ, ನರಗುಂದ, ಶ್ರೀರಂಗಪಟ್ಟಣ ಇವೇ ಮುಂತಾದ ಪ್ರದೇಶಗಳ ಬಗ್ಗೆಯೂ ಮತ್ತು ಹೈದರಆಲಿಯ ಸೈನ್ಯ, ಮರಾಠೆಯರ ಧಾಳಿ, ಅವರ ನಡುವಿನ ಯುದ್ಧ ಮುಂತಾದವುಗಳ ಬಗ್ಗೆಯೂ ಬೇಕಾದಷ್ಟು ವಿವರಗಳಿವೆ. ಪಾರಸನೀಸ ಅವರು ಸಂಗ್ರಹಿಸಿದ ಕಾಗದ ಪತ್ರಗಳ ಪ್ರಚಂಡ ಸಂಗ್ರಹವೂ ಮಹತ್ವದ್ದಿದೆ. ಆ ಸಂಗ್ರಹವು ಈಗ ಮರಾಠಾವಾಡಾ ವಿಶ್ವವಿದ್ಯಾಲಯದ ವಸ್ತುಸಂಗ್ರಹಾಲಯ (ಮ್ಯೂಜಿಯಮ)ದಲ್ಲಿ ಇದೆ. ಮೇನವಳಿ ದಪ್ತರಿನ ಬಹು ಭಾಗವು ಪುಣೆಯಲ್ಲಿಯ ಡೆಕ್ಕನ ಕಾಲೇಜಿನಲ್ಲಿದ್ದು ಅದರಲ್ಲಿ ನಾನಫಡನೀಸನ ಪತ್ರವ್ಯವಹಾರವು ಇದೆ. ಇವುಗಳಲ್ಲಿಯೂ ಕರ್ನಾಟಕದ ಬಗ್ಗೆ ಬೇಕಾದಷ್ಟು ಮಾಹಿತಿ ಸಿಕ್ಕುತ್ತದೆ. ಇದರಂತೆಯೇ ಪುಣೆಯಲ್ಲಿಯ ಭಾರತ ಇತಿಹಾಸ ಸಂಶೋಧಕ ಮಂಡಲದಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದ ಕೆಲವು ಕಾಗದಪತ್ರಗಳಿವೆ. ಸವಣೂರ ನವಾಬರ ಮೇಲೆ ಬರೆದ ಒಂದು ಮೋಡಿ ಹಸ್ತಲಿಖಿತ ಪುಸ್ತಕವೂ ಇದೆ.

ಮದ್ರಾಸ ಸರಕಾರದ 'ಓರಿಯಂಟಲ ಮ್ಯಾನುಸ್ಕ್ರಿಪ್ಟ ಲಾಯಬ್ರರಿ'ಯಲ್ಲಿಯೂ ಕೆಲವು ಮೋಡಿ ಕಾಗದಪತ್ರಗಳು ಉಪಲಬ್ಧವಿದ್ದು ಮೈಸೂರು, ಬೆಂಗಳೂರು-ವಿಶೇಷತಃ ಆಂಧ್ರಪ್ರದೇಶ ಮತ್ತು ಮದ್ರಾಸ-ರಾಜ್ಯಗಳಲ್ಲಿಯ ಕೆಲವು ಭಾಗಗಳ ಬಗ್ಗೆ ಮಾಹಿತಿಯು ಸಿಗುತ್ತದೆ. ಇದಲ್ಲದೆ ಬೆಂಗಳೂರಿನಲ್ಲಿಯೂ ಮೋಡಿ ಕಾಗದಪತ್ರಗಳ ಸಂಗ್ರಹವಿದೆಯೆಂದು ಕೇಳಿದ್ದೇನೆ. ಕನ್ನಡ ರಿಸರ್ಚ ಇನ್ಸ್ಟಿಟ್ಯೂಟನಿಂದ ವಿದ್ಯಾರತ್ನ ಶ್ರೀ

ಪಂಚಮುಖಿಯವರು ಕೆಲವು ವರ್ಷಗಳ ಹಿಂದೆ ಪ್ರಸಿದ್ಧಿಸಿದ ಮರಾಠಿ ಪುಸ್ತಕವೊಂದಿದ್ದು ಅದರಲ್ಲಿ ಕೊಣ್ಣೂರು, ರಾಮದುರ್ಗ, ನರಗುಂದ ಮುಂತಾದ ಸಂಸ್ಥಾನಗಳ ಬಗ್ಗೆ ವಿವರಗಳು ಸಿಗುತ್ತವೆ.

ಇದುವರೆಗೆ ಯಾವ ಯಾವ ಸ್ಥಳಗಳಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದ ಮೋಡಿ ಇಲ್ಲವೆ ಮರಾಠಿ ಕಾಗದ ಪತ್ರಗಳು ಸಿಗುತ್ತವೆಯೆಂಬುದನ್ನು ನೋಡಿದಂತಾಯಿತು. ಇನ್ನು ಈ ಕಾಗದ ಪತ್ರಗಳ ಪ್ರಕಾರಗಳನ್ನೂ ಅವುಗಳಲ್ಲಿ ಯಾವ ವಿವರಗಳು ಸಿಗುತ್ತವೆಯೆಂಬುದನ್ನೂ ನೋಡೋಣ. ಇವುಗಳಲ್ಲಿ ರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ವಿಷಯಗಳ ಬಗ್ಗೆ ಸಾಕಷ್ಟು ಮಾಹಿತಿಯಿದೆ. ಕರ್ನಾಟಕ ರಾಜರೂ ಮತ್ತು ಸಂಸ್ಥಾನಿಕರೂ ಮರಾಠೆಯವರೊಡನೆ ಮಾಡಿದ ಯುದ್ಧಗಳ ಮಾಹಿತಿಯನ್ನು ಕೊಡುವಾಗ ಈ ರಾಜರ ಬಗ್ಗೆ ಅವರ ಸೈನ್ಯ, ಅವರ ಸೀಮೆ, ಅವರ ಸೈನ್ಯದ ಅಧಿಕಾರಿಗಳು, ಅವರ ಮಂತ್ರಿಗಳು ಇತ್ಯಾದಿ ವಿಷಯಗಳ ಬಗ್ಗೆ ನೇರವಾಗಿಯಾಗಲೀ ಇಲ್ಲವೇ ಅಪ್ರತ್ಯಕ್ಷವಾಗಿಯಾಗಲೀ ವಿವರಗಳು ಸಿಗುತ್ತವೆ. ಪೇಶವೆ ದಫ್ತರಿನಲ್ಲಿ ವಿವಿಧ ಪ್ರಕಾರದ ಕಾಗದಪತ್ರಗಳಿವೆ. ತಾಳೇ ಬಂದ, ಖತಾವಣಿ, ಯಾದಿ, ಇನಾಮಪತ್ರ, ಮುಂತಾದ ಪ್ರಕಾರಗಳಿವೆ. ತಾಳೇ ಬಂದದಲ್ಲಿ ಪ್ರತಿವರ್ಷದ ಆಯವ್ಯಯ ವಿವರಗಳಿರುತ್ತವೆ. (Balance sheet). ಬಾಗಲಕೋಟೆ, ಕಿತ್ತೂರು, ಧಾರವಾಡ, ನರಗುಂದ, ರಾಮದುರ್ಗ, ತೊರಗಲ ಮುಂತಾದ ಸಂಸ್ಥಾನಗಳ ತಾಳೇಬಂದಗಳು ಇವೆ. ಇವರಲ್ಲಿ ಸಂಸ್ಥಾನದ ವಾರ್ಷಿಕ ಉತ್ಪನ್ನ, ಉತ್ಪನ್ನದ ಸಾಧನೆಗಳು, ವಾರ್ಷಿಕ ಖರ್ಚು, ಖರ್ಚಿನ ಬಾಬು (ವಿಷಯ)ಗಳು, ಭೂಮಿಗಳ ಪ್ರಕಾರಗಳು, ಭೂಮಿಯಲ್ಲಿಯ ಬೆಳೆಗಳು, ವಿವಿಧಕರಗಳು, ಹಿಡುವಳಿಯ (land tenures) ಪ್ರಕಾರ ಗಳು, ಅವರ್ಷಣ, ಅತಿವರ್ಷಣ, ಕರಸೂಟುಬಿಟ್ಟದ್ದು, ನಾಣ್ಯಗಳು, ಧಾನ್ಯದ ಬೆಲೆಗಳು, ಗುಡಿಗುಂಡಾರಗಳು, ಅವು ಗಳಿಗೆ ದತ್ತಿ ಕೊಟ್ಟ ಭೂಮಿಗಳು, ಜನರ ಸ್ಥಿತಿ ಇವೇ ಮುಂತಾದ ವಿವರಗಳು ಸಿಗುತ್ತವೆ. ಖತಾವಣಿ ಮತ್ತು ಯಾದಿಗಳಲ್ಲಿಯೂ ಭೂಮಿಗಳ ಬಗ್ಗೆ ವಿವರಗಳಿವೆ. ಇನಾಮಪತ್ರಗಳಲ್ಲಿ ಇನಾಮದಾರರ ಹೆಸರುಗಳಿದ್ದು ಅವರಿಗೆ ಕೊಟ್ಟ ಇನಾಮ ಭೂಮಿಗಳ ವಿವರಗಳಿವೆ. ಇದಲ್ಲದೆ ಕರ ಮತ್ತು ಕಂದಾಯ ತೆಗೆದುಕೊಳ್ಳುವ ಅಧಿಕಾರಿಗಳ ಬಗ್ಗೆಯೂ ವಿವರಗಳು ಸಿಕ್ಕುತ್ತವೆ.

ಎಲ್ಲ ವಿವರಗಳನ್ನೂ ಸ್ಪಷ್ಟಮಾಡುವದು ಈ ಚಿಕ್ಕ ಲೇಖನದಲ್ಲಿ ಸಾಧ್ಯವಿಲ್ಲ. ಆದ್ದರಿಂದ ಕೆಳಗೆ ಎರಡು, ಮೂರು ಉದಾಹರಣೆಗಳನ್ನು ಕೊಟ್ಟು ಈ ಲೇಖನವನ್ನು ಮುಗಿಸುತ್ತೇನೆ.

ವಾಡ ಅವರು Selections from the Satara Raja's and the Peshwa's Diaries ಈ ಶೀರ್ಷಿಕೆಯ ಕೆಳಗೆ ಕೆಲವು ಭಾಗಗಳನ್ನು ಪ್ರಸಿದ್ಧಿಸಿದ್ದಾರೆ. ಇವುಗಳಲ್ಲಿ ಪೇಶವೆ ದಫ್ತರಿನಲ್ಲಿಯ ಕಾಗದಗಳನ್ನು ಆಯ್ದು ಪ್ರಸಿದ್ಧಿಸಲಾಗಿದೆ. ಇವುಗಳಲ್ಲಿಯೂ ರಾಜಕೀಯ, ಸಾಮಾಜಿಕ, ಆರ್ಥಿಕ ಮುಂತಾದ ವಿಷಯಗಳ ಬಗ್ಗೆ ಮಾಹಿತಿಯು ಸಿಕ್ಕುತ್ತದೆ. ಈ ಕಾಗದಪತ್ರಗಳಲ್ಲಿಯೂ ಹಾಗೂ ವಾಸುದೇವಶಾಸ್ತ್ರಿಖರೆಯವರು 'ಐತಿಹಾಸಿಕ ಲೇಖ ಸಂಗ್ರಹ' ಈ ಹೆಸರಿನಲ್ಲಿ ಪ್ರಸಿದ್ಧಿಸಿದ ಪಟವರ್ಧನ ದಫ್ತರಿನಲ್ಲಿಯ ಕಾಗದಪತ್ರಗಳಲ್ಲಿಯೂ ಸಿಗುವ ರಾಜಕೀಯ ವಿಷಯಗಳ ಸ್ವರೂಪವನ್ನು ಧಾರವಾಡದ ಬಗ್ಗೆ ಉಪಲಬ್ಧವಿದ್ದ ವಿವರಗಳಿಂದ ತಿಳಿಯಬಹು ದಾಗಿದೆ. ಈ ಕಾಗದ ಪತ್ರಗಳಲ್ಲಿ ಧಾರವಾಡದ ಬಗ್ಗೆ ಕೆಳಗಿನ ವಿವರಗಳು ಸಿಗುತ್ತವೆ. ಧಾರವಾಡವು ಮೊಗಲರ ಕಡೆಯಿಂದ ಪೇಶವೆಯವರ ಅಧಿಪತ್ಯದಲ್ಲಿ 1753ರಲ್ಲಿ ಬಂದು, ಸಾಮಾನ್ಯವಾಗಿ 1818ರವರೆಗೂ ಅವರ ಅಧೀನ ದಲ್ಲಿಯೇ ಇತ್ತು. ಆದರೆ ಮಧ್ಯ ಸ್ವಲ್ಪಕಾಲದವರೆಗೆ ಹೈದರಆಲಿಯ ಆಧಿಪತ್ಯದಲ್ಲಿಯೂ ಅದು ಇತ್ತು. ಧಾರವಾಡದಲ್ಲಿ ಎರಡು ಸಲ–1764 ಮತ್ತು 1791 ರಲ್ಲಿ–ಯುದ್ಧವಾಯಿತು. 1764 ರಲ್ಲಿ ಧಾರವಾಡವು ಹೈದರಆಲಿಯ ಆಧಿಪತ್ಯದಲ್ಲಿತ್ತು. ಧಾರವಾಡದ ಕೋಟೆಯ ಅಧಿಕಾರಿಯು ಫಜಲಉಲ್ಲಾಖಾನನಿದ್ದನು. 1764ರಲ್ಲಿ ಮಾಧವರಾವನು ಈ ಕೋಟೆಗೆ ಮುತ್ತಿಗೆ ಹಾಕಿದಾಗ ಫಜಲಉಲ್ಲಾಖಾನನ ಸಹಾಯಕ್ಕೆ ಮೀರ ಫೈಜುಲ್ಲಾನು 2000 ಕುದುರೆದಳ ಹಾಗೂ 4000 ಕಾಲ್ದಳ ತೆಗೆದುಕೊಂಡು ಬಂದನು. ತುಮುಲ ಯುದ್ಧ

ವಾಗಿ ಕೊನೆಗೆ ಸೋಮವಾರ 15ನೆಯ ನವೆಂಬರ್, 1764 ರಂದು ಈ ಕೋಟೆಯು ಮಾಧವರಾಯನ ಹಸ್ತಗತ ವಾಯಿತು. 1791ರಲ್ಲಿ ಇನ್ನೊಂದು ಯುದ್ಧವಾಗಿ ಪರಶುರಾಮ ಭಾವೂನಿಗೆ ಟೀಪುಸುಲ್ತಾನನ ಕಡೆಯಿಂದ (ಟೀಪೂಸುಲ್ತಾನನು ಈ ಕೋಟೆಯನ್ನು ಮರಾಠೆಯವರಿಂದ ಈ ಮೊದಲೇ ಗೆದ್ದುಕೊಂಡಿದ್ದನು) ಈ ಕೋಟೆಯೂ ಸಿಕ್ಕಿತು.

1754ರಲ್ಲಿ ನಾನಾಸಾಹೇಬ ಪೇಶವೆಯು ಧಾರವಾಡ ಕಸಬಾದ ವ್ಯಾಪಾರಿಗಳಿಗೆ ಒಂದು ಕೌಲಿನಾಮಾ ಕೊಟ್ಟು ಕೋಟೆಯ ಪೂರ್ವಕ್ಕೆ ಪೇಟೆಯನ್ನು ಸುರುಮಾಡಲಿಕ್ಕೆ ಹೇಳಿದನು.[1] ಮೃಗಪಶೆಟ್ಟಿ ಮಠ (ಮುರುಗಾ ಮಠ) ಇದೇ ಕಾಲಕ್ಕೆ ಕಟ್ಟಲ್ಪಟ್ಟಿತು. ಧಾರವಾಡದಲ್ಲಿಯೂ ಹಾಗೂ ನೆರೆಹೊರೆಯ ಕೆಲವು ಸ್ಥಳಗಳಲ್ಲಿಯೂ ಹೊನ್ನು, ಮೊಹರ ಮತ್ತು ರುಪಾಯಿ ತಯಾರಿಸಲಿಕ್ಕೆ ಟಂಕಸಾಲೆಗಳಿದ್ದವು. ವಾಡ ಅವರು ಪ್ರಸಿದ್ಧಿಸಿದ್ದ ಡಾಯರಿಗಳ ಒಂದು ಭಾಗದಲ್ಲಿ (VII, ii No 719, pp 293-97) 11 ಕಮಾವೀಸದಾರ, 21 ಪರಗಣೆ, 19 ಪೇಟೆಗಳ ಸಾಹುಕಾರರು ಹಾಗೂ 21 ಟಂಕಾಸಾಲೆಗಳ ಅಧಿಕಾರಿಗಳನ್ನು ನಮೂದಿಸಲಾಗಿದೆ. ಗದಗ, ಕಿತ್ತೂರ, ಹುಬ್ಬಳ್ಳಿ, ಖಾನಾಪೂರ, ಜಮಖಂಡಿ, ಯಾದವಾಡ, ಗೋಕಾಕ, ನರಗುಂದ, ಮುದಕವಿ, ಮನೋಳಿ, ತೊರಗಲ[2], ಮುರಗೋಡ, ಚಿಕ್ಕೋಡಿ, ರಾಮದುರ್ಗ, ಮುದೋಳ, ಬಾಗಲಕೋಟೆ, ವಂಟಕುರ್ಕಿ, ಶಹಾಪೂರ, ಧಾರವಾಡ, ನವಲಗುಂದ, ಮತ್ತು ಅಥಣಿ ಈ 21 ಪರಗಣೆಗಳೂ ಹಾಗೂ ಧಾರವಾಡ, ಹುಬ್ಬಳ್ಳಿ, ಬೆಟಗೇರಿ, ನವಲಗುಂದ, ನರಕುಂದ, ಗದಗ, ಲಕ್ಷ್ಮೇಶ್ವರ, ಗೋಕಾಕ, ಕಿತ್ತೂರ, ಯಾದವಾಡ, ಬಾಗಲಕೋಟೆ, ಮನೋಳಿ, ಖಾನಾಪೂರ, ಶಹಾಪೂರ, ಸವಣೂರ, ಹಾವೇರಿ, (ಗೋವೆ ಬಂದರ) ಕೊಪ್ಪಳ ಮತ್ತು ಅಥಣಿ ಈ ಪೇಟೆಸ್ಥಳಗಳೂ ಅಥವಾ ವ್ಯಾಪಾರಿ ಕೇಂದ್ರಗಳೂ ಧಾರವಾಡ ಸುಭೆ ಅಥವಾ ಪ್ರಾಂತದಲ್ಲಿ ಒಳಗೊಂಡಿದ್ದವು.

ಇನ್ನೊಂದು ದಾಖಲೆಯಲ್ಲಿ (Vad, VIII, iii, No. 849, PP, 25-27) ಕರ್ನಾಟಕ ಪ್ರಾಂತ್ಯಕ್ಕೆ 1764 ರಲ್ಲಿ ಮೋರೋ ಬಾಪೂಜೀಯನ್ನು ಸರಸುಭಾ ಎಂದು ನೇಮಿಸಲಾಯಿತೆಂದು ಹೇಳಿದೆ. ಸವಣೂರ ತಾಲ್ಲೂಕಿನಲ್ಲಿ ಗುತ್ತಲ, ಆಡೂರ, ಕೆರೂರ, ಬುದ್ರುಕ, ತಿನವಳ್ಳಿ, ಕೋಡ, ಕೆರೂರ ಖುರ್ದ, ರಟ್ಟೆಹಳ್ಳಿ, ಹವಶೆಟ್ಟಿ, ಕುಪೆಲೂರ, ಶಿಗ್ಗಾಂವ, ಐರಣಿ, ನಿಡಸಂಗಿ, ಹಾನಗಲ ಮುಂತಾದ ಪರಗಣೆಗಳಿದ್ದವು.

ಪುಣೆಯಲ್ಲಿಯ ಪೇಶವೆ ದಪ್ತರಿನಲ್ಲಿಯ ಕರ್ನಾಟಕ ಜಮಾವ ಎಂಬ ವಿಭಾಗದಲ್ಲಿಯ 325 ನಂಬರಿನ ರುಮಾಲಿನಲ್ಲಿ (ಗಂಟಿನಲ್ಲಿ) ಕಿತ್ತೂರ ತಾಲ್ಲೂಕಿನ (ಅಪ್ರಸಿದ್ಧ) ತಾಳೆ ಒಂದು ಇದೆ. ಅದರ ವಿವರಗಳ ಸಾರಾಂಶ ವನ್ನು ಕೆಳಗೆ ಕೊಟ್ಟಿದ್ದೇನೆ.

ಈ ತಾಳೇ ಬಂದು ಇ. ಸ. 1793 (ಸಲಾಸತಿ ಸೈನ ಮಯಾ ವ ಅಲಫ್) ನೆಯ ವರ್ಷದ್ದಿದೆ. ಆಗ ಕಿತ್ತೂರು ತಾಲ್ಲೂಕು ಇದ್ದು ಅದರ ಅಧಿಕಾರಿಯು ಆಬಾಜೀ ಬಾಬುರಾವ ಇವನು ಇದ್ದನು. ಈ ತಾಲ್ಲೂಕಿನಲ್ಲಿ ಕಂದಾಯ ತೆರುವ 285 ಹಳ್ಳಿಗಳಿದ್ದು ಅವುಗಳನ್ನು ಕೆಳಗೆ ತೋರಿಸಿದಂತೆ 1 ಕಸಬಾದಲ್ಲಿಯೂ 14 ಕರ್ಯಾತ ಗಳಲ್ಲಿಯೂ ಹಂಚಲಾಗಿತ್ತು. (ಕರ್ಯಾತವು ತಾಲ್ಲೂಕಿನ ಉಪವಿಭಾಗವಿತ್ತು.)

ಕಸಬಾ ಹುಬ್ಬಳ್ಳಿ— 1 ಹಳ್ಳಿ
ಕರ್ಯಾತ ಬೆಳವಡಿ— 54 ಹಳ್ಳಿಗಳು
ಕರ್ಯಾತ ಸಂಪಗಾವ—27 ”
” ಹಲಸಿ— 11 ”

[1] ಇದಕ್ಕೆ ಈಗ ಹಾವೇರಿಪೇಟೆ ಎನ್ನುತ್ತಾರೆ.

[2] ತೊರಗಲ್ಲಿಗೆ ಸರಕಾರದ ದರ್ಜೆಯೂ ಇತ್ತು.

" ಕಾರಲಗೆ— 9 "
ಕರ್ಯಾತ ಕೇಖೋಲಿ— 17 ಹಳ್ಳಿಗಳು
" ನೇಸರಿ— 18 "
" ಗೋಲೆಹಳ್ಳಿ—11 "
" ಅಮರಗಟಿ— 16 "
" ಮನೋಳಿ— 10 "
" ನಂದಗಡ— 14 "
" ಕಾದರವಳಿ— 7 "
" ಫುಟಗಾಂವ— 24 "
" ಕಲೋರಿ— 44 "
" ಬಾಗೇವಾಡಿ—22 "

285

ಈ ಹಳ್ಳಿಗಳಲ್ಲಿ 11 ಇನಾಮು ಹಳ್ಳಿಗಳಿದ್ದು ಚಿಂತಾಮಣರಾವ ಪಾಂಡುರಂಗ ಮಿರಜಕರ, ಶ್ರೀಪತರಾವ ಸರದೇಶಪಾಂಡೆ, ರುದ್ರಪ್ಪಾ ದೇಸಾಯಿ, ಗುರಪ್ಪಾ ದೇಸಾಯಿ ಮುಂತಾದವರಿಗೆ ಕೊಟ್ಟಿದ್ದರು. 22 ಹಳ್ಳಿಗಳು ಸರಂಜಾಮಿ ಹಳ್ಳಿಗಳಿದ್ದು ರಘುನಾಥರಾವ ನೀಲಕಂಠ ಕುರುಂದವಾಡಕರ ಇವನ ಕಡೆ ಇದ್ದವು. 2 ಹಳ್ಳಿಗಳು ಸಿದ್ಧೇಶ್ವರರಾವ ಮಹೀಪತ ಬಿನೀವಾಲೆ ಇವನಿಗೆ ಕಮಾವೀಸಿ ಸಲುವಾಗಿ ಕೊಟ್ಟಿದ್ದರು. 11 ಹಳ್ಳಿಗಳು ದುಮಾಲೆಗಾವ (ಅಂದರೆ ಆವುಗಳಲ್ಲಿಯ ಉತ್ಪನ್ನವು ಇಬ್ಬರು ಹಕ್ಕುದಾರರಿಗೆ ಹಂಚಿಹೋಗುತ್ತಿತ್ತು) ಹಳ್ಳಿಗಳಿದ್ದವು. ಇಬ್ಬರು ಹಕ್ಕುದಾರರಲ್ಲಿ ಮಲ್ಲಪ್ಪ ವೀರಪ್ಪಗೌಡಾ ಸರದೇಸಾಯಿ ಇವನು ಒಬ್ಬನಿದ್ದನು. 1 ಹಳ್ಳಿಯು ಭೀಮಾಜಿ ಬಾಬೂರಾವ ಕಡೆ ಇತ್ತು. ಮತ್ತು 44 ಹಳ್ಳಿಗಳು ಭಿಷ್ಟಪ್ಪ ದೇಸಾಯಿ ಕಲೋರೆಕರ ಆವನಿಗೆ ಹೋಗಿದ್ದು ಅವುಗಳ ಉತ್ಪನ್ನವು ಸರ್ಕಾರಕ್ಕೆ ಬರುತ್ತಿದ್ದಿಲ್ಲ. ಈ ಪ್ರಕಾರ 99 ಹಳ್ಳಿಗಳನ್ನು ಕಳೆಯಲಾಗಿ ಉಳಿದ 194 ಹಳ್ಳಿಗಳಿಂದ ಸರ್ಕಾರಕ್ಕೆ ಉತ್ಪನ್ನವು ಬರುತ್ತಿತ್ತು. ಈ ಉತ್ಪನ್ನವು ಭೂಕಂದಾಯ, ಕರ ಮುಂತಾದ ಸಾಧನೆಗಳಿಂದ ಬರುತ್ತಿತ್ತು. ಮೋಹತರ್ಫಾ ಅಂದರೆ ಅಂಗಡಿಪಟ್ಟಿ, ನದೀಹಾಸೀಲ (ಹೊಳೆ ಪಟ್ಟಿ), ಚಿಂಚರ್ಝೂಡೇ (ಹುಣಸಿಪಟ್ಟಿ) ಬೋರರ್ಝೂಡೆ (ಬಾರಿ ಗಿಡದ ಪಟ್ಟಿ), ಸಿಂದೀರ್ಝೂಡೇ (ಸೆಂದೀ ಗಿಡದ ಮೇಲಿನ ಪಟ್ಟಿ), ಕುರಣ (ಹುಲ್ಲು ಪಟ್ಟಿ), ಆಂಬೆಫಣಸೆ (ಮಾವು ಮತ್ತು ಹಲಸಿನ ಮೇಲಿನ ಪಟ್ಟಿ), ಕಂಬಾರ ಪಟ್ಟಿ, ಗಾಣಿಗೇರಪಟ್ಟಿ, ಕೋರಪಟ್ಟಿ, ಗಣಾಚಾರ, ನಾಡಗೌಡಕಿ, ಕುಂಬಾರಪಟ್ಟಿ, ಲಗ್ನಪಟ್ಟಿ ಮುಂತಾದ ಪಟ್ಟಿಗಳ ಉಲ್ಲೇಖವು ಬಂದಿದೆ.

ಇ. ಸ. 1767 (ಸಬ್ಬಾಸಿತೈನ ಮಯಾವ ಅಲಫ್) ರಲ್ಲಿಯ ಧಾರವಾಡ ಪರಗಣೆಯ ತಾಳೇಬಂದಿನಲ್ಲಿಯೂ ಇದೇ ಪ್ರಕಾರದ ವಿವರಗಳಿವೆ. (ಕರ್ನಾಟಕ ಜಮಾವ, ರುಮಾಲ ನಂಬರ 49). ಆಗ್ಗೆ ವೆಂಕಟರಾವ ನಾರಾಯಣ ಇವನು ಧಾರವಾಡ ಪರಗಣೆಯ ಅಧಿಕಾರಿಯಿದ್ದನು. ಈ ಪರಗಣೆಯಲ್ಲಿ ಕಸಬಾ, ಬಾಗ, ಹೊಸಯಲ್ಲಾಪೂರ, ಲಕಮನಹಳ್ಳಿ, ಮಲ್ಲಾಪೂರ, ಕಮಲಾಪೂರ, ಗುಲಗಂಜೀಕೊಪ್ಪ, ಸೈದಾಪೂರ, ನಾರಾಯಣಪೂರ, ಎತ್ತಿನಗುಡ್ಡ, ದಂಡೀಕೊಪ್ಪ, ಧೋಗಡೀಕೊಪ್ಪ, ನವಲೂರ, ಸತ್ತೂರ, ರಾಯಾಪೂರ, ಕಡಸಿನಕೊಪ್ಪ, ಇಟಿಗಟ್ಟಿ, ಹಣಮಾಪೂರ, ಹೊಸಕಟ್ಟಿ, ಸಪ್ತಾಪೂರ, ದೊಡನಂಬೆಕೊಪ್ಪ, ವಿರೀಕೊಪ್ಪ, ಅತ್ತೀಕೊಳ್ಳ, ಕೆಲಗೇರಿ ಈ ಭಾಗಗಳಿಂದ ಭೂಕಂದಾಯ, ಕರ ಮುಂತಾದ ಸಾಧನೆಗಳಿಂದ ಉತ್ಪನ್ನವು ಬರು

ತ್ತಿದ್ದು ಇ. ಸ. 1767 ರಲ್ಲಿ ಹಿಂದಿನ ವರ್ಷದ ಬಾಕಿಯನ್ನು ಹಿಡಿದು 54, 263 ರೂಪಾಯಿ 11 ಆಣೆ 2 ದುಡ್ಡು ಉತ್ಪನ್ನವು (income) ಬಂದಿತ್ತು. ಪರಗಣೆಯಲ್ಲಿಯ ಅಧಿಕಾರಿಗಳ ಸಂಬಳ, ಸರಕಾರೀ ಕುದುರೆಗಳ ಖರ್ಚು, ದಸರಾ ಖರ್ಚು, ಕೋಟೆಯಲ್ಲಿಯ ಸೈನ್ಯದ ಖರ್ಚು, ದೇವಾಲಯಗಳ ಖರ್ಚು, (ನಂದಾದೀಪ, ಅಭಿಷೇಕ, ನೈವೇದ್ಯ ಮುಂತಾದವುಗಳ ಖರ್ಚು), ದಪ್ತರ ಖರ್ಚು ಈ ಪ್ರಕಾರ ಬೇರೆ ಬೇರೆ ವಿಷಯಗಳ ಮೇಲೆ ವಾರ್ಷಿಕ ಖರ್ಚು ಆಗುತ್ತಿತ್ತು.

ಮೇಲೆ ತೋರಿಸಿದಂತೆ ವಿವಿಧ ವಿವರಗಳು, ಮರಾಠಿ ಕಾಗದಪತ್ರಗಳಲ್ಲಿ ಉಪಲಬ್ಧವಿದ್ದು ಅವುಗಳ ಸಹಾಯದಿಂದ ವಿಜಯನಗರೋತ್ತರ ಕರ್ನಾಟಕದ ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಇತಿಹಾಸವನ್ನು ಬರೆಯಲು ಬರುತ್ತದೆ.

ವಿವೇಕಶಾಲಿಗಳು ಮಾತನಾಡುತ್ತಾರೆ. ಏಕೆಂದರೆ ಅವರು ತಿಳಿಸಬೇಕಾದುದು ಸ್ವಲ್ಪವಿದೆ ;
ಮೂಢರೂ ಮಾತಾಡುತ್ತಾರೆ, ಏಕೆಂದರೆ ಅವರು ಸ್ವಲ್ಪವನ್ನು ಕೇಳಬಯಸುತ್ತಾರೆ.

—ಪ್ಲೇಟೊ

ಎಲ್. ಎಸ್. ಶೇಷಗಿರಿರಾವ್

ಇಂದಿನ ಸಂದರ್ಭದಲ್ಲಿ ವ್ಯಕ್ತಿತ್ವ ವಿಕಸನ

ಗಾಲ್ಸ್‌ವರ್ದಿ ಎಂಬ ಇಂಗ್ಲಿಷ್ ಲೇಖಕ ಒಂದು ಕಥೆ ಬರೆದಿದ್ದಾನೆ : ಕಥೆಯ ಹೆಸರು 'ಕ್ವಾಲಿಟಿ'. ಕಥೆಯ ಕೇಂದ್ರವ್ಯಕ್ತಿ ಪಾದರಕ್ಷೆಗಳನ್ನು ಮಾಡುವ ಚಮ್ಮಾರನೊಬ್ಬ. ಅವನು ಒಂದೊಂದು ಜೊತೆಯನ್ನೂ ಶ್ರದ್ಧೆಯಿಂದ ಮಾಡುವವನು. ಪ್ರತಿ ಜೊತೆಯೂ ತನ್ನ ಕೌಶಲದ ಉತ್ಕೃಷ್ಟ ಸೃಷ್ಟಿಯಾಗಬೇಕು ಎಂದು ಅವನ ಆಸೆ. ತಾನು ಹೊಲಿದ ಪಾದರಕ್ಷೆ ರಿಪೇರಿಗೆ ಬಂದರೆ, ಹೊಲಿದು ಎಷ್ಟು ದಿನಗಳಾದವು ? ಬಹುಬೇಗ ರಿಪೇರಿಗೆ ಬಂದಿತೆ ? ಎಂದು ಪರಿಶೀಲಿಸುತ್ತಾನೆ. ಹೀಗೆ ಹಲವು ವರ್ಷಗಳ ಕಾಲ ಬಡತನದಲ್ಲಿ, ಆದರೆ ತೃಪ್ತಿಯಿಂದ, ಬದುಕುತ್ತಾನೆ. ಆಮೇಲೆ ಒಂದು ದಿನ ಪಾದರಕ್ಷೆಗಳನ್ನು ಮಾಡುವ ಕಂಪೆನಿಯೊಂದರ ಅಂಗಡಿ ತೆರೆಯುತ್ತದೆ. ಅಲ್ಲಿ ಒಂದು ಜೊತೆ ಇನ್ನೊಂದರಂತೆ, ಎಲ್ಲವನ್ನೂ ಮಾಡಿದ್ದು ಯಂತ್ರಗಳು ; ಗಿರಾಕಿಗೂ ಪಾದರಕ್ಷೆ ಮಾಡುವವನಿಗೂ ನೇರಸಂಬಂಧವಿಲ್ಲ, ಆತ್ಮೀಯತೆ ಇಲ್ಲ. ಈ ಅಂಗಡಿಯೊಡನೆ ಬಡಚಮ್ಮಾರ ಸ್ಪರ್ಧಿಸಲಾರ. ಕೆಲವು ದಿನಗಳಲ್ಲಿ ಅವನ ಅಂಗಡಿಯ ಬಾಗಿಲು ಮುಚ್ಚುತ್ತದೆ.

ಒಂದು ಕಾಲವಿತ್ತು—ಮನುಷ್ಯ ತನಗೆ ಬೇಕಾದುದನ್ನು ತಾನೇ ಮಾಡಿಕೊಳ್ಳಬೇಕಾಗಿತ್ತು. ಒಂದೊಂದು ವಸ್ತುವನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಮಾಡಬೇಕಾಗಿತ್ತು. ಒಂದು ಪುಸ್ತಕದ ಪ್ರತಿ ಬೇಕಾದರೆ ಕುಳಿತು ಶ್ರಮವಹಿಸಿ ಪ್ರತಿ ಮಾಡಿಕೊಳ್ಳಬೇಕಾಗಿತ್ತು. ಒಂದೊಂದು ವಸ್ತುವಿಗೂ ಒಂದು ವೈಶಿಷ್ಟ್ಯ ಇರುತ್ತಿತ್ತು. ಅದನ್ನು ಸೃಷ್ಟಿಸಿದವನ ಸಾಮರ್ಥ್ಯ ಅದರಲ್ಲಿ ಪ್ರತಿಬಿಂಬಿತವಾಗುತ್ತಿತ್ತು. ಆದರೆ ಹೀಗೆ ವಸ್ತುಗಳನ್ನು ಮಾಡುವುದು ಶ್ರಮದ ಕೆಲಸ, ನಿಧಾನದ ಕೆಲಸ. ಬೃಹತ್ಪ್ರಮಾಣದಲ್ಲಿ ವಸ್ತುಗಳನ್ನು ಸೃಷ್ಟಿಸುವ ಪ್ರಯತ್ನಮಾಡಿದ ಮನುಷ್ಯ ಯಂತ್ರಗಳನ್ನು ಕಂಡುಹಿಡಿದ. ಯಾವುದೊ ಕಂಪೆನಿಯವರು ಮಾಡಿಕೊಟ್ಟ ವಿದ್ಯುಚ್ಛಕ್ತಿ ಉಪಕರಣದಲ್ಲಿ ಪ್ಲಗ್ ಹೋದರೆ ಬೇರೊಂದು ಕಂಪೆನಿಯವರು ಮಾಡಿದ ಪ್ಲಗ್ ತಂದು ಸಿಕ್ಕಿಸುತ್ತೇವೆ. ಚಕ್ರದ ಟೈರ್-ಟ್ಯೂಬ್ ಹೋದರೆ ಮತ್ತೊಂದನ್ನು ತಂದು ಹಾಕುತ್ತೇವೆ. ದೈತ್ಯಾಕಾರದ ಯಂತ್ರಗಳು ಕೆಟ್ಟರೆ ಅವುಗಳ ಬಿಡಿಭಾಗಗಳಿಗೆ ಸರಿಯಾದ ಬಿಡಿಭಾಗಗಳು ದೊರೆಯುತ್ತವೆ ಎಲ್ಲ 'ಸ್ಟಾಂಡರ್ಡ್ ಸೈಜು' ಗಳು. ಹೀಗಿಲ್ಲವಾದರೆ ಇಂದಿನ ಯಂತ್ರಯುಗ ಸಾಗುತ್ತಿರಲಿಲ್ಲ.

ಮನುಷ್ಯಲೋಕದಲ್ಲಿ ಹೀಗಿಲ್ಲ. ಎಲ್ಲರಿಗೂ ಒಂದೇ ಬಗೆಯ ಅಂಗಾಂಗಗಳು. ಆದರೆ ಒಬ್ಬೊಬ್ಬರ ಆಕಾರ, ಸ್ವರೂಪಗಳಲ್ಲಿ ವ್ಯತ್ಯಾಸವಿರುತ್ತದೆ. ಒಬ್ಬ ತಾಯಿಯ ಮಕ್ಕಳಾಗಿ, ಒಬ್ಬ ತಾಯಿಯ ಮಕ್ಕಳೆಂದು ನೋಡುತ್ತಲೇ ಗುರುತಿಸಬಹುದಾದಷ್ಟು, ತಾಯಿಯ ಪ್ರತಿಬಿಂಬಗಳು ಎನ್ನಬಹುದಾವಷ್ಟು ಒಬ್ಬರನ್ನೊಬ್ಬರು ಹೋಲುವ ಅಕ್ಕತಂಗಿಯರ ಮುಖಗಳಲ್ಲಿ ಸ್ವಲ್ಪಮಟ್ಟಿಗಾದರೂ—ಅವರ ಪ್ರತ್ಯೇಕತೆಯನ್ನು ಗುರುತಿಸುವಷ್ಟು—

ವ್ಯತ್ಯಾಸ ಇರುತ್ತದೆ. ಒಬ್ಬ ಗುರುವಿನ ಶಿಷ್ಯರು, ಒಂದು ಪಂಥದ ನಿಷ್ಠ ಅನುಯಾಯಿಗಳು ಎನ್ನಿಸಿಕೊಂಡವರಲ್ಲಿಯೂ ಯೋಚನೆಯ ರೀತಿಯಲ್ಲಿ ಒಂದು ಸ್ವಲ್ಪ ವ್ಯತ್ಯಾಸ ಇರುತ್ತದೆ.

ಈ ವೈಶಿಷ್ಟ್ಯ, ವೈಯಕ್ತಿಕತೆ ಮನುಷ್ಯನ ಅಮೂಲ್ಯ ಸಂಪತ್ತು. ಮನುಷ್ಯಕುಲ ಜೀವಂತವಾಗಿದೆ, ಯಂತ್ರದ ಸಂತಾನವಾಗಿಲ್ಲ ಎಂಬುದಕ್ಕೆ ಸಾಕ್ಷಿ ಇದು. ಅನಿವಾರ್ಯವಾಗಿ ಸಾಗುವ ದೈಹಿಕ ಬೆಳವಣಿಗೆಯಲ್ಲದೆ ಒಳಗೆ ಚೇತನ ಬೆಳೆಯುವುದು ಸಾಧ್ಯವಾಗುವುದು ಇದರಿಂದ.

ಪ್ರಜಾಪ್ರಭುತ್ವ ವ್ಯಕ್ತಿತ್ವದ ಬೆಳವಣಿಗೆಗೆ ಅವಕಾಶ ಕೊಡುತ್ತದೆ. ಪ್ರತಿ ಪ್ರಜೆಯೂ ತನ್ನ ಸಾಮರ್ಥ್ಯಕ್ಕನುಗುಣವಾದಷ್ಟು ಎತ್ತರ ಬೆಳೆಯಬಹುದು ಎಂಬುದು ಈ ಬಗೆಯ ಪ್ರಭುತ್ವದ ಆಕರ್ಷಣೆಗಳಲ್ಲಿ ಒಂದು. ಆದರೆ ತಾಂತ್ರಿಕಜ್ಞಾನ, ಯಂತ್ರಗಳ ಬಳಕೆ ಇವು ಬೆಳೆಯುತ್ತಿರುವ ಕಾಲದಲ್ಲಿ ವೈಯಕ್ತಿಕತೆಯ ಮೇಲೆ ಸತತವಾಗಿ ಆಘಾತವಾಗುತ್ತಲೇ ಇರುತ್ತದೆ. ಹೀಗೆ ಆಘಾತವಾಗುತ್ತಿದೆ ಎಂಬುದೇ ಅರ್ಥವಾಗದ ರೀತಿಯಲ್ಲಿಯೂ, ನಾವೇ ಸ್ವಾಗತಿಸುವ ರೀತಿಯಲ್ಲಿಯೂ ಆಘಾತವಾಗುತ್ತಿರುವುದುಂಟು.

ಪ್ರಚಾರಸಾಧನಗಳನ್ನು ಬಳಸಿ ಒಂದು ಇಡೀ ದೇಶವೇ ವಿವೇಚನೆ ಕಳೆದುಕೊಳ್ಳುವಂತೆ ಮಾಡಿದ ಹಿಟ್ಲರ್, ಮುಸೋಲಿನಿ ಇವರ ಸಾಧನೆ ವೈಯಕ್ತಿಕ ವಿಚಾರರೀತಿಗೆ ಯಂತ್ರನಾಗರಿಕತೆಯ ಯುಗದಲ್ಲಿ ಎಷ್ಟು ವಿಪತ್ತಿದೆ ಎಂಬುದನ್ನು ತೋರಿಸಿಕೊಟ್ಟಿತು. ಯಹೂದಿ ಜನಾಂಗದ ಬೇಟೆ, ಒಬ್ಬ ಐಕ್‌ಮನ್ ಇಪ್ಪತ್ತು ಲಕ್ಷಮಂದಿ ಯಹೂದ್ಯರನ್ನು ಕೊಂದು ಜರ್ಮನಿಯ ಗೌರವಾನ್ವಿತ ಅಧಿಕಾರಿಯಾದದ್ದು–ಇವೆಲ್ಲ ಸಾಧ್ಯವಾದದ್ದು ವಿಚಾರಶಕ್ತಿ ಸೊರಗಿದುದರಿಂದ.

ನಮ್ಮ ನಿತ್ಯಜೀವನದತ್ತಲೇ ಕಣ್ಣು ಹೊರಳಿಸೋಣ. ಮೂವತ್ತೈದು–ನಲವತ್ತು ವರ್ಷಗಳ ಹಿಂದೆ ಬಹುಮಂದಿ ನೆಹರೂ ಅವರಂತೆಯೇ ಉಡುವು ಧರಿಸಲು ಪ್ರಾರಂಭಿಸಿದರು. ಸುಭಾಷರ ಉಡುಪನ್ನು ಅನುಕರಿಸಿದವರೂ ಇದ್ದರು. (ಅಂದೂ ಗಾಂಧೀಜಿಯ ಉಡುಪನ್ನು ಅನುಕರಿಸಿದವರು ಇರಲೇ ಇಲ್ಲ ಎನ್ನಬೇಕು !) ಆ ಅನುಕರಣೆಯ ಹಿಂದೆ ಜವಾಹರಲಾಲರ ಅಥವಾ ಸುಭಾಷರ ವೈಯಕ್ತಿಕ ಹಿರಿಮೆಯ ಮೆಚ್ಚಿಕೆ ಇತ್ತು. ಜವಾಹರಲಾಲರನ್ನು ಅಥವಾ ಸುಭಾಷರನ್ನು ಧೀರರೆಂದು ಮನಸ್ಸು ಮೆಚ್ಚಿದುದರ ಹೊರ ಅಭಿವ್ಯಕ್ತಿಯಾಗಿತ್ತು, ಅವರ ಉಡುಪಿನ ಅನುಕರಣೆ. ಈಗ ನಮ್ಮ ಉಡುಪಿನ ಶೈಲಿಯನ್ನು ನಿರ್ಧರಿಸುವುದು ಸಮೃದ್ಧಿಯಾಗಿ ಹಣವಿದ್ದು ದೇಶಾದ್ಯಂತ ಪತ್ರಿಕೆಗಳ ಮೂಲಕ, ಚಲನಚಿತ್ರಗಳ ಮೂಲಕ ಜಾಹೀರಾತು ಮಾಡುವ ಕಂಪೆನಿಗಳ ಚಿತ್ರ. ಅವರ ಜಾಹೀರಾತುಗಳಲ್ಲಿ ಬಗೆಬಗೆ ಶೈಲಿಗಳ ಉಡುಪನ್ನು ಧರಿಸಿ ರಾರಾಜಿಸುವವರು ವೈಯಕ್ತಿಕ ಸಾಹಸತ್ಯಾಗಗಳಿಂದ ಜನತೆಗೆ ಪರಿಚಿತರಾದ ನೆಹರೂ, ಸುಭಾಷರಲ್ಲ; ಜನತೆಗೆ ಪರಿಚಿತರೇ ಅಲ್ಲದ ಮುದ್ದು ಮುಖಗಳ ತರುಣತರುಣಿಯರು. ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಉಡುಪುಗಳ ಮಾದರಿಗಳನ್ನೂ ಅವನ್ನು ಧರಿಸುವ ಶೈಲಿಯನ್ನೂ ನಿರ್ಧರಿಸುವವರೂ, ಅಷ್ಟೇ ಅಲ್ಲ, ತರುಣರ ಮೀಸೆಯ ಏರಿಳಿತಗಳನ್ನೂ ತರುಣಿಯರ ಹುಬ್ಬುಗಳ ಬಾಗುಗಾತ್ರಗಳನ್ನೂ ನಿರ್ಧರಿಸುವವರು ಇವರು ಅಥವಾ ಇವರನ್ನು ಆರಿಸಿದ ಕಂಪೆನಿಗಳವರು, ಫೋಟೋ ತೆಗೆಯುವಾಗ ಹೀಗಿರಬೇಕು ಎಂದು ನಿರ್ಧರಿಸಿದ ಫೋಟಾಗ್ರಾಫರುಗಳು. ಗುರುಮುಖೇನ ಕಲಿಯುವ ಸಾಂಪ್ರದಾಯಿಕ ಸಂಗೀತದಲ್ಲಿ ಸಾಧನೆ ಬೆಳದಂತೆ, ಒಂದು ಹಾಡನ್ನು ಹಾಡಲು ಒಂದು ಗಂಟೆ, ಎರಡು ಗಂಟೆ ತೆಗೆದುಕೊಳ್ಳಬಹುದಾಗಿತ್ತು. ಆಲಾಪನೆಯೋ ಸಾಕಷ್ಟು ದೀರ್ಘಕಾಲ ತೆಗೆದುಕೊಳ್ಳುತ್ತಿತ್ತು. ಒಬ್ಬ ಗುರುವಿನ ಶಿಷ್ಯರೇ ಆದವರಲ್ಲಿಯೂ ಸ್ವಂತಿಕೆ ಬೆಳೆಯಲು ಇದರಿಂದ ಸಾಧ್ಯವಿತ್ತು. ಇಂದು ಹಾಡುವ ಬಯಕೆ ಇರುವ ತರುಣತರುಣಿಯರಲ್ಲಿ ನೂರಕ್ಕೆ ತೊಂಬತ್ತು ಮಂದಿ ಕಲಿಯುವುದು ರಿಕಾರ್ಡ್‌ಗಳಿಂದ—ಕೆಲವು ನಿಮಿಷಗಳಲ್ಲಿ ಹಾಡುಮುಕ್ತಾಯವಾಗುವ ರಿಕಾರ್ಡ್‌ಗಳಿಂದ. ರಿಕಾರ್ಡ್‌ನಲ್ಲಿ ಹಾಡು ಹೇಗೆ ಮುದ್ರಿತವಾಗಿದೆಯೋ ಹಾಗೆಯೇ ಚಾಚೂತಪ್ಪದೆ ಹಾಡುವುದು

ಕಲಿಯುವವರ ಗುರಿ. ಪ್ರೇಮವೆನ್ನುವುದು, ಪ್ರೇಮದ ಮಾತುಗಳನ್ನಾಡುವುದು ತೀರ ವೈಯಕ್ತಿಕ ವಿಷಯ. ಆದರೆ ಸ್ಫುರದ್ರೂಪಿಯುವಕ, ಸುಂದರಯುವತಿ ಎನ್ನುವ ಕಲ್ಪನೆ ಎಲ್ಲಕಡೆ ಇಂದು ರೂಪಿತವಾಗುವುದು, ಕೆಲವರು ಚಲನಚಿತ್ರ ನಟನಟಿಯರ ರೂಪ ಆಕಾರಗಳಿಂದ; ಪ್ರೇಮಪತ್ರದ ಭಾಷೆ ಜನಪ್ರಿಯ ಕಾದಂಬರಿಗಳ ಭಾಷೆ. ರೇಡಿಯೊ, ಚಲನಚಿತ್ರ, ಪತ್ರಿಕೆಗಳು—ಇವುಗಳ ಜಾಹೀರಾತುಗಳು ವೈವಿಧ್ಯದ ಶತ್ರುಗಳು. 'ಫ್ಯಾಷನ್' ನಲ್ಲಿರುವ ಬಯಕೆಯನ್ನು ಇವು ಚೆನ್ನಾಗಿ ಉಪಯೋಗಿಸಿಕೊಳ್ಳುತ್ತವೆ.

ಇಂತಹ ವಾತಾವರಣದಲ್ಲಿ ಸಿಕ್ಕಿಕೊಂಡ ಚೇತನ ಆಲಿಕಲ್ಲುಗಳ ಹೊಡೆತಕ್ಕೆ ಸಿಕ್ಕ ಎಳೆಸಸಿಯ ಸ್ಥಿತಿಯಲ್ಲಿರುತ್ತದೆ. ಮನುಷ್ಯನ ಸ್ವಭಾವದಲ್ಲಿ ಎರಡು ಎಳೆಗಳಿರುತ್ತವೆ. ಒಂದು ಆತ್ಮಪ್ರತಿಷ್ಠೆಯದು, ತನ್ನತನದ ಬಗ್ಗೆ ಅಭಿಮಾನ. ಮತ್ತೊಂದು ಇತರರು ಏನೆನ್ನುವರೊ ಎಂಬ ಭಯ. ಈ ಎರಡನೆಯ ಅಂಶವನ್ನು ಬಳಸಿಕೊಂಡು ವ್ಯಕ್ತಿತ್ವವನ್ನು ಮುರುಟುವುದು ಸುಲಭ ಎಂದು ಮನೋವಿಜ್ಞಾನಿಗಳು ಕಂಡು ಹಿಡಿದಿದ್ದಾರೆ. ಒಂದು ಗೆರೆಯನ್ನೆಳೆಯಿರಿ, ಅದರ ಕೆಳಗೆ ಅದಕ್ಕಿಂತ ಸ್ವಲ್ಪ ಉದ್ದವಾದ ಎರಡನೆಯ ಗೆರೆಯನ್ನೆಳೆಯಿರಿ. ಮೊದಲನೆಯ ಗೆರೆಯೇ ಉದ್ದ ಎಂದು ಹೇಳುವಂತೆ ಒಂಬತ್ತು ಜನಕ್ಕೆ ಹೇಳಿಕೊಡಿ. ಅವರೊಡನೆ ಹತ್ತನೆಯವನೊಬ್ಬನನ್ನು ಸೇರಿಸಿ. ನಿಮ್ಮ ಕಡೆಯ ಒಂಬತ್ತು ಜನರನ್ನು ಒಬ್ಬರ ನಂತರ ಒಬ್ಬರನ್ನು ಕರೆದು ಗಟ್ಟಿಯಾಗಿ, "ಮೇಲಿನ ಗೆರೆ ಉದ್ದವೋ ಕೆಳಗಿನ ಗೆರೆ ಉದ್ದವೋ?" ಎಂದು ಕೇಳಿ; ಅವರು ಗಟ್ಟಿಯಾಗಿ, "ಮೇಲಿನದು" ಎನ್ನುತ್ತಾರೆ. ಅನಂತರ ಹತ್ತನೆಯವನನ್ನು ಕೇಳಿ, ಅವನು ಕಕ್ಕಾಬಿಕ್ಕಿಯಾಗುತ್ತಾನೆ. ತನ್ನ ಕಣ್ಣೇ ಕೆಳಗಿನ ಗೆರೆಯೇ ಉದ್ದ ಎಂದು ಹೇಳುತ್ತಿದ್ದರೂ, "ಮೇಲಿನ ಗೆರೆಯೇ ಉದ್ದ" ಎನ್ನುತ್ತಾನೆ. "ಕೆಳಗಿನ ಗೆರೆ" ಎಂದರೂ, ಮೇಲಿನ ಗೆರೆಯೇ ಉದ್ದ ಎಂದು ಅವನನ್ನು ನಂಬಿಸುವುದು ಸುಲಭ. ಹತ್ತು ಜನರೊಡನೆ ನಾವೂ ಇರಬೇಕು, ಎನ್ನುವ ಬಯಕೆ (ದಿ ಡಿಸೈರ್ ಟು ಕನ್‌ಫಾರಂ) ಪ್ರತಿಯೊಬ್ಬನಲ್ಲಿ ಹುದುಗಿರುತ್ತದೆ. ಕೈಗಾರಿಕೆಗಳವರು, ಅಂಗಡಿಗಳವರು ತಮ್ಮ ಸರಕುಗಳನ್ನು ಮಾರಾಟಮಾಡಲು ಉಪಯೋಗಿಸಿಕೊಳ್ಳುವುದು ಈ ಬಯಕೆಯನ್ನೇ.

ಕೈಗಾರಿಕಾಕರಣವಾದಲ್ಲೆಲ್ಲ ವೈಯಕ್ತಿಕತೆ ಹಿಮ್ಮೆಟ್ಟುತ್ತದೆ. ಪುಸ್ತಕಗಳು, ನಿಯತಕಾಲಿಕೆಗಳು, ಪತ್ರಿಕೆಗಳು, ರೇಡಿಯೊ, ಚಲನಚಿತ್ರಗಳು—ಇವೆಲ್ಲವುಗಳ ಮೂಲಕ ಅಮೆರಿಕದ ತರುಣತರುಣಿಯರು ಹೇಗೆ ಕೂದಲು ಬಿಟ್ಟರೆ ಆಫ್ರಿಕದ ತರುಣತರುಣಿಯರು ಹಾಗೆ ಕೂದಲು ಬಿಡುವುದು; ಉಡುಪು-ಪಾದರಕ್ಷೆ ಕನ್ನಡಕಗಳನ್ನು ತಯಾರುಮಾಡುವ ಕಂಪೆನಿಯವರು ಹೇಗೆ ನಿರ್ಧರಿಸಿದರೆ ಹಾಗೆ ದೇಶದವರೆಲ್ಲ ಉಡುಪುಗಳನ್ನು, ಪಾದರಕ್ಷೆಗಳನ್ನು, ಕನ್ನಡಕಗಳನ್ನು ಧರಿಸುವುದು; ಹಣವಂತ ಅಥವಾ ಪ್ರಬಲ ಪಂಥಗಳು ಸೃಷ್ಟಿಸಿದ ಅಭಿಪ್ರಾಯಗಳು ಪದಪುಂಜಗಳು ಎಲ್ಲರ ಬಾಯಿಯಲ್ಲಿ ಓಡಾಡುವುದು ಸಾಧ್ಯವಾಗುತ್ತದೆ. (ಸೆಮಿನಾರ್, ಓರಿಯಂಟ್, ಕೋಆರ್ಡಿನೇಟ್, ಇನ್‌ಫ್ರೆಸ್ಟ್ರಕ್ಚರ್, ಕಾನ್‌ಸೆಪ್‌ಜ್ಯುಯಲೈಜ್, ಎಸ್ಕಲೇಟ್........ಎಷ್ಟೊಂದು ಪದಗಳು ಈಗ ವಿದ್ಯಾವಂತರೆನ್ನಿಸಿಕೊಂಡವರ ನಾಲಿಗೆಯಲ್ಲಿ ಕುಣಿದಾಡುತ್ತವೆ!)

ಇಂತಹ ವಾತಾವರಣದಲ್ಲಿ ಮನುಷ್ಯ ಅತ್ಯಂತ ಜನಪ್ರಿಯವಾದ ಟೂತ್‌ಬ್ರಷ್‌ನಿಂದ ಅತ್ಯಂತ ಜನಪ್ರಿಯವಾದ ಟೂತ್‌ಪೇಸ್ಟ್ ಬಳಸಿ ಹಲ್ಲುತಿಕ್ಕಿ, ಅತ್ಯಂತ ಜನಪ್ರಿಯವಾದ ತಿಂಡಿ ತಿನಿಸುಗಳನ್ನು ತಿಂದು, ಅತ್ಯಂತ ಜನಪ್ರಿಯವಾದ ಉಡುಪು-ಪಾದರಕ್ಷೆಗಳನ್ನು ಧರಿಸಿ, ಅತ್ಯಂತ ಜನಪ್ರಿಯ ಪತ್ರಿಕೆಗಳ ಮತ್ತು ರೇಡಿಯೋ ಕಾರ್ಯಕ್ರಮಗಳ ಪ್ರತಿಧ್ವನಿಯಾಗಿ, ಅತ್ಯಂತ ಜನಪ್ರಿಯ ಹಾಡುಗಳ ರಿಕಾರ್ಡ್‌ಗಳ ಪ್ರತಿಧ್ವನಿಯಾಗಿ, ಅತ್ಯಂತ ಜನಪ್ರಿಯ ನಟನಟಿಯರು ಚುಂಬಿಸುವಂತೆ ಚುಂಬಿಸಿ, ಅತ್ಯಂತ ಜನಪ್ರಿಯ ಕಾದಂಬರಿಗಳ ಪ್ರೇಮಪತ್ರಗಳಿಸಿ, ಪ್ರತಿಮಾಡುತ್ತ, ಈ 'ಅತ್ಯಂತ'ದ ಒಂದು ಭಾಗವಾಗಿ ಅದನ್ನು ಹಿಗ್ಗಿಸುತ್ತ ಬದುಕಿ ಅತ್ಯಂತ ಜನಪ್ರಿಯ ರುದ್ರಭೂಮಿಯಲ್ಲಿ ಪಂಚಭೂತಗಳನ್ನು ಸೇರುವ ಪ್ರಾಣಿಯಾಗದೆ, ವೈಯಕ್ತಿಕತೆಯನ್ನು ಉಳಿಸಿಕೊಳ್ಳಬೇಕಾದರೆ, ಸಮಾಜದ

ಚಿಂತನೆ ಮತ್ತು ಕಲೆಗಳಲ್ಲಿ ವೈವಿಧ್ಯ ಉಳಿಯಬೇಕಾದರೆ, ಶಿಕ್ಷಣ ಮಹತ್ವದಪಾತ್ರ ವಹಿಸಬೇಕಾಗುತ್ತದೆ. ವ್ಯಕ್ತಿಯ ಮನಸ್ಸು ಅರಳುವ ಕಾಲದಲ್ಲಿ ಪತ್ರಿಕೆ–ಚಲನಚಿತ್ರ–ರೇಡಿಯೊಗಳ ಸತತ ಜಾಹೀರಾತುಗಳ ನಡುವೆಯೂ ಅದಕ್ಕೆ ಶಕ್ತಿ ಉಳಿಯಬೇಕಾದರೆ ಶಾಲೆಯಲ್ಲಿ ಸ್ವತಃ ವ್ಯಕ್ತಿತ್ವಉಳ್ಳ ಅಧ್ಯಾಪಕರ ಪ್ರಭಾವ ಅವನ ಮೇಲೆ ಬೀಳಬೇಕಾಗುತ್ತದೆ. ನಾವು ಶಾಲೆಬಿಟ್ಟು ಎಷ್ಟೋ ವರ್ಷಗಳ ನಂತರವೂ ಒಬ್ಬಿಬ್ಬ ಸಮರ್ಥವ್ಯಕ್ತಿತ್ವದ ಉಪಾಧ್ಯಾಯರನ್ನು ಮೆಚ್ಚಿಕೆಯಿಂದ ನೆನೆಸಿಕೊಳ್ಳುತ್ತೇವೆ. ಸಮರ್ಥವ್ಯಕ್ತಿತ್ವದ ವ್ಯಕ್ತಿ ದಂಗೆಕಾರನೇ ಆಗಬೇಕಾಗಿಲ್ಲ. ಅವನು ಹತ್ತು ಜನ ನಡೆದ ಹಾದಿಯಲ್ಲೆ ಹೆಜ್ಜೆ ಹಾಕಬಹುದು, ಆದರೆ ಅದಕ್ಕೆ ಕಾರಣ ಹತ್ತು ಜನ ಅಲ್ಲಿ ಕಂಡರು ಎಂದಲ್ಲ. ಹಾದಿಯನ್ನು ಸ್ಪಷ್ಟವಾಗಿ ಆತ ಕಂಡ ಎಂಬುದು. ಜಗತ್ತಿನ ಎಲ್ಲ ಸಾರ್ಥಕ ಶಿಕ್ಷಣಸಂಸ್ಥೆಗಳು ತನ್ನತನವುಳ್ಳ ಒಬ್ಬ ವ್ಯಕ್ತಿ, ಅವನನ್ನು ಅರ್ಥಮಾಡಿಕೊಂಡು ಅವನ ಬೆಂಬಲಕ್ಕೆ ನಿಂತ ಹತ್ತುಜನ ಇವರಿಂದಲೇ ಬೆಳೆದು ಬಂದಿರುವುದು. ಒಬ್ಬ ಇರ್ಯ್ಯಾಸ್‌ಮನ್, ಒಬ್ಬ ರವೀಂದ್ರನಾಥ ಠಾಕೂರ್, ಒಬ್ಬ ಜಾಕೀರ್‌ಹುಸೇನ್ ಇಂತಹವರಿಂದ ಒಂದು ಶಿಕ್ಷಣಸಂಸ್ಥೆ ಬೆಳೆಯುತ್ತದೆ; ಗಾರೆ–ಕಲ್ಲುಗಳ ಗೋಡೆಗಳ ನಡುವೆ ಹಲವು ವಿಷಯಗಳನ್ನು ಕುರಿತು ಮಾಹಿತಿ ಕೊಡುವ 'ಇನ್‌ಫರ್ಮೇಷನ್ ಸೆಂಟರ್' ಅಥವಾ 'ನಾಲೆಜ್ ಷಾಪ್' ಆಗದೆ, ಚೇತನಗಳನ್ನು ಅರಳಿಸುವ ಶಕ್ತಿಯಾಗರವಾಗುತ್ತದೆ. ದೊಡ್ಡ ಗುರಿಯನ್ನು ಕಂಡುಕೊಂಡು ದೊಡ್ಡ ರೀತಿಗಳಲ್ಲಿ ಬದುಕುವ ಹಿರಿಯರು ನಡೆಸುವ ವಿದ್ಯಾಸಂಸ್ಥೆಗಳು ಮನುಷ್ಯಚೇತನದ ಅಮೂಲ್ಯ ಸಂಪತ್ತಾದ ವೈಯಕ್ತಿಕತೆಯನ್ನು ಉಳಿಸಿಡುವ ದೇವಾಲಯಗಳು.

ನೀವೆಲ್ಲರೂ ಮಹಾಪುರುಷರು ಮಹಾಪುರುಷರಾಗಲೇಬೇಕು ಎಂಬುದೇ ವೇದಾಂತದ ಬೋಧನೆ. ನಿಮ್ಮ ನಡತೆಗೆ ಪ್ರಮಾಣ ಶಾಸ್ತ್ರವಲ್ಲ. ನೀವೇ ಶಾಸ್ತ್ರಕ್ಕೆ ಪ್ರಮಾಣ.

ಎ. ಹಿರಿಯಣ್ಣ

ಮಲೆನಾಡಿನಲ್ಲಿ—ಪ್ರಾಯ ಬರುವಿಕೆ ಸಂಪ್ರದಾಯ

ಮಾನವನ ಜೀವನದಲ್ಲಿ ಲೈಂಗಿಕ ಪಕ್ವತೆ ಒಂದು ಪ್ರಮುಖ ಘಟ್ಟ, ಬಾಲ್ಯಾವಸ್ಥೆಯಿಂದ ಪದೋನ್ನತಿ ಪಡೆದು ಪ್ರೌಢಾವಸ್ಥೆಗೆ ಪ್ರವೇಶಮಾಡಿಸುವ ಪ್ರಧಾನ ಮಜಲು. ಜೀವನದ ಅತ್ಯಂತ ಪ್ರಮುಖ ಮೆಟ್ಟಲನ್ನೇರಿದ ಮಾನವ ಸಂತಾನಶಕ್ತಿಯನ್ನು ಪಡೆಯುವುದು ಲಿಂಗಪ್ರೌಢಿಮೆಯಿಂದ. ಇದರ ಅಂಕುರಾರ್ಪಣವನ್ನು ಕೆಲವು ದೈಹಿಕ ಚಿಹ್ನೆಗಳ ಮೂಲಕ ಮತ್ತು ವ್ಯಕ್ತಿಯ ಮಾನಸಿಕ, ಭೌತಿಕ, ನೈತಿಕ ರಚನಾತ್ಮಕ ಹಾಗೂ ಭಾವಾನಾತ್ಮಕ ಬದಲಾವಣೆಗಳ ಮೂಲಕವೂ ಗುರುತಿಸಬಹುದು.

ಲಿಂಗಪ್ರೌಢಿಮೆ ಆದಿವಾಸಿ ಸಮಾಜಗಳಲ್ಲಿ ಪ್ರಚಲಿತದಲ್ಲಿರುವ ಒಂದು ಸಾಮಾಜಿಕ ಸಂಸ್ಥೆ. ಲಿಂಗಪ್ರೌಢಿಮೆಗೆ ಅರ್ಹರಾದವರನ್ನು ಒಂದು ಗೊತ್ತಾದ ಸ್ಥಾನದಲ್ಲಿರಿಸುತ್ತವೆ, ಆ ಸಮಾಜಗಳು. ಬಾಲ್ಯಾವಸ್ಥೆಯಿಂದ ಮುಕ್ತರಾಗಿ ಈ ಹಂತವನ್ನೇರಿದ ಗಂಡುಹೆಣ್ಣುಗಳು ತಮಗೆ ಅರಿವಿಲ್ಲದಂತೆಯೆ ಸಮಾಜದ ನಿಬಂಧನೆಗಳಿಗನುಗುಣವಾಗಿ ವರ್ತಿಸಲು ಆರಂಭಿಸುತ್ತಾರೆ. ಅಪರಿಚಿತವೂ ವಿಚಿತ್ರವೂ ಆಗಿ ಕಂಡುಬರುವ ಸಾಮಾಜಿಕ ಸ್ಥಿತಿಯನ್ನು ಅನುಭವಿಸಲು ಅನುಮತಿ ಪಡೆಯುತ್ತಾರೆ. ಹೀಗೆ ಲಿಂಗಪ್ರೌಢಿಮೆಯನ್ನು ಹೊಂದಲು ಅರ್ಹರಾಗುತ್ತಿರುವ ವ್ಯಕ್ತಿಯ ದೈಹಿಕ ಹಾಗೂ ಮಾನಸಿಕ ಬದಲಾವಣೆಗಳನ್ನು ಸೂಕ್ಷ್ಮವಾಗಿ ಪರೀಕ್ಷೆಗೊಳಪಡಿಸಿ ಅವರನ್ನು ಒಂದು ಗಮನಾರ್ಹ ಸ್ಥಾನದಲ್ಲಿರಿಸುತ್ತದೆ ಸಮಾಜ. ಕೆಲವು ಸಮಾಜಗಳು ಕೇವಲ ಸ್ತ್ರೀಯ ದೈಹಿಕ ಹಾಗೂ ಮಾನಸಿಕ ಬದಲಾವಣೆಗಳನ್ನಷ್ಟೇ ಗಮನಿಸಿ ಒಂದು ನಿರ್ದಿಷ್ಟ ಸ್ಥಾನದಲ್ಲಿರಿಸಿ ತಮ್ಮ ಪಕ್ಷಪಾತವನ್ನು ಮೆರೆಯುತ್ತವೆ. ಇನ್ನು ಕೆಲವು ಸಮಾಜಗಳು ಗಂಡುಹೆಣ್ಣುಗಳಿಬ್ಬರಲ್ಲಿಯೂ ಈ ಅವಸ್ಥೆಯನ್ನು ತಲುಪುವಾಗ ಉಂಟಾಗಬಹುದಾದಂತಹ ಬದಲಾವಣೆಗಳನ್ನು ಗುರುತಿಸುವುದು ಮಾತ್ರವಲ್ಲದೆ ಅದನ್ನು ಮಾನವಜೀವನದಲ್ಲಿ ಅತ್ಯಂತ ಪ್ರಮುಖ ಘಟ್ಟವೆಂದು ಪರಿಗಣಿಸಿ ಸಾಂಪ್ರದಾಯಿಕ ಆಚರಣೆಗಳೊಂದಿಗೆ ಲೌಕಿಕ ಪ್ರಪಂಚಕ್ಕೆ ಪರಿಚಯಿಸುವ ಕೆಲಸದಲ್ಲಿ ತೊಡಗುತ್ತವೆ.

ಲಿಂಗಪ್ರೌಢಿಮೆ ಎರಡೂ ಲಿಂಗಗಳಲ್ಲಿ ಒಂದೇ ವಯಸ್ಸಿನಲ್ಲಿ ಘಟಿಸುವುದಿಲ್ಲ. ಗಂಡು ಸಾಮಾನ್ಯವಾಗಿ ೧೪ರಿಂದ ೧೬ನೆಯ ವಯಸ್ಸಿನೊಳಗೆ ಲಿಂಗಪ್ರೌಢಿಮೆಯನ್ನು ಹೊಂದುತ್ತಾನೆ. ಈ ಅವಸ್ಥೆ ಸಂಪೂರ್ಣವಾಗಿ ಅವನ ದೈಹಿಕ ಹಾಗೂ ಮಾನಸಿಕ ಗುಣಸ್ವಭಾವಗಳ ಮೇಲೆ ನಿಂತಿರುತ್ತದೆ. ಲಿಂಗಪ್ರೌಢಿಮೆಗೆ ಅರ್ಹನಾದ ವ್ಯಕ್ತಿಯ ದೈಹಿಕ ರಚನೆಯಲ್ಲಿ ಸಂಪೂರ್ಣ ಬದಲಾವಣೆಗಳು ಸಂಭವಿಸುತ್ತವೆ. ಆತನ ಕಂಠನಾಳ ವಿಸ್ತರಿಸಿ ಧ್ವನಿ ಗಡುಸಾಗಿ ಪರಿವರ್ತನೆ ಹೊಂದುತ್ತದೆ. ಗಲ್ಲ ಮತ್ತು ಕೆನ್ನೆಗಳು ರೋಮದಿಂದ ಆವರಿಸುತ್ತವೆ.

ಹೆಣ್ಣು ೧೨ ರಿಂದ ೧೪ವರ್ಷ ವಯಸ್ಸಿನೊಳಗೆ ಬಹುಬೇಗ ಲಿಂಗಪ್ರೌಢಿಮೆಯನ್ನು ಹೊಂದುತ್ತಾಳೆ. ಕೆಲವೊಮ್ಮೆ ಹೆಣ್ಣಿನ ದೈಹಿಕ ರಚನೆ ಹಾಗೂ ಅನುವಂಶಿಕ ವೈಚಿತ್ರ್ಯತೆ ಮುಂತಾದ ಕಾರಣಗಳಿಂದ ಲಿಂಗ ಪ್ರೌಢಿಮೆ ಹೊಂದುವುದು ವಿಳಂಬವಾಗಬಹುದು ಅಥವಾ ನಿರೀಕ್ಷಿತ ವಯಸ್ಸಿಗಿಂತ ಮುಂಚೆಯೇ ಸಂಭವಿಸ

ಬಹುದು. ದೈಹಿಕವಾಗಿ, ಮಾನಸಿಕವಾಗಿ ಪರಿಪಕ್ವಳಾದ ಹೆಣ್ಣಿನಲ್ಲಿ ಗಮನಾರ್ಹ ಭೌತಿಕಬದಲಾವಣೆಗಳುಂಟಾಗಿ ಮಾನಸಿಕಧರ್ಮ ಆರಂಭವಾಗುತ್ತದೆ. ಇದನ್ನೇ ಸಮಾಜ ಲಿಂಗಪ್ರೌಢಿಮೆ ಎಂದು ಕರೆದು ವಿಶೇಷ ಸಮಾರಂಭಗಳನ್ನು ಏರ್ಪಡಿಸಿ ಆಚರಿಸುವುದರ ಮೂಲಕ ಆಕೆಯನ್ನು ಬಾಲ್ಯಾವಸ್ಥೆಯಿಂದ ಎಚ್ಚರಿಸಿ ಸಾಂಸಾರಿಕ ಜೀವನದೆಡೆಗೆ ನಿರ್ದೇಶನ ನೀಡುತ್ತದೆ.

ಮಲೆನಾಡಿನ ಒಕ್ಕಲಿಗ ಜನಾಂಗ ಈ ಲಿಂಗಪ್ರೌಢಿಮೆ ಹೊಂದುವುದು ಅಥವಾ ಪ್ರಾಯ ಬರುವಿಕೆಯನ್ನು ಕಠಿಣಸೂತಕವೆಂದು ಪರಿಗಣಿಸಿ ವಿಶೇಷ ಕಾರ್ಯಾಚರಣೆಗಳ ಮೂಲಕ ಸೂತಕವನ್ನು ಕಳೆದುಕೊಳ್ಳುತ್ತದೆ. ಸಾಮಾನ್ಯವಾಗಿ ಇಲ್ಲಿನ ಹೆಣ್ಣುಮಕ್ಕಳು ೧೨, ೧೩ ವರ್ಷ ವಯಸ್ಸಿಗೆಲ್ಲಾ ಋತುಮತಿಯರಾಗುತ್ತಾರೆ. ನಿರೀಕ್ಷಿತವಯಸ್ಸಿನಲ್ಲಿ ಹೆಣ್ಣು 'ಮೈನೆರೆಯ' ದಿದ್ದರೆ ನಾಟಿ ಔಷಧಕೊಡಿಸಿ ಆದಷ್ಟು ಶೀಘ್ರವಾಗಿ ಹೊರಗೆಕೂರುವಂತೆ ಮಾಡುತ್ತಾರೆ. ಈ ನಾಟಿ ಔಷಧವೂ ಫಲನೀಡದಿದ್ದಲ್ಲಿ ಮನೆದೇವರಿಗೆ ಹರಕೆ ಹೊತ್ತುಕೊಳ್ಳುತ್ತಾರೆ. ಕೊನೆಗೂ ಒಂದು ಶುಭದಿನ ಬಾಲೆ ಲಿಂಗಪ್ರೌಢಿಮೆ ಹೊಂದುತ್ತಾಳೆ.

ಮಾತನಾಡಿಸಿದರೂ ಮಾತನಾಡದ ನಾಚಿಕೆ ವಿಸ್ಮಯಗಳಿಂದ ಮೌನವಾಗಿ ಅಳತ್ತಾ ನಿಂತ ಹೆಣ್ಣುಮಗಳು ಋತುಮತಿ ಹೊಂದಿರುವುದನ್ನು ಖಚಿತಪಡಿಸಿಕೊಂಡು ಫಲಬಿಡುವ ಹಲಸು ಅಥವಾ ಲಿಂಬೆ ಅಥವಾ ತೆಂಗು ಅಥವಾ ಬಾಳೆಯಮರದ ತಳದಲ್ಲಿ ನಿಂತುಕೊಳ್ಳಲು ಸೂಚನೆ ನೀಡುತ್ತಾರೆ. ಪುಷ್ಪವತಿಯಾಗಿದ್ದಾಳೆಂಬುದಕ್ಕೆ ಸಂಕೇತವಾಗಿ ಹಾಗೆ ಮಾಡುತ್ತಾರೇನೊ ? ಹೇಗೋ ಸುದ್ದಿ ಹಬ್ಬಿ ರೆಪ್ಪೆ ಬಡಿಯುವಷ್ಟರಲ್ಲಿ ಊರಿನ ಎಲ್ಲ ಸ್ತ್ರೀಯರು 'ಮೈನೆರೆದ' ಹುಡುಗಿಯ ಮನೆಯಮುಂದೆ ಸೇರುತ್ತಾರೆ. ಸ್ನಾನದ ಮನೆಯಲ್ಲಿ ಬಿಸಿನೀರು ಕಾಯಿಸಿ ಹುಡುಗಿಯ ಸ್ನಾನಕ್ಕೆ ಎಲ್ಲ ಬಗೆಯ ಸಿದ್ಧತೆಮಾಡಿಕೊಂಡು ಹೆಣ್ಣಿನ ಕೈಗೆ ಒಂದು ತಂಬಿಗೆ ನೀರು, ತೆಂಗಿನಕಾಯಿ, ಅರಿಷಿಣ ಕುಂಕುಮ ಕೊಟ್ಟು ಸ್ನಾನದ ಮನೆಗೆ ಕರೆತರುತ್ತಾರೆ. ಐದು ಅಥವಾ ಹನ್ನೊಂದುಮಂದಿ ಮುತ್ತೈದೆಯರು ಆ ಸಂದರ್ಭದಲ್ಲಿ ಮಾತ್ರ ಹಾಡುವ ಹಾಡನ್ನು ಹಾಡುತ್ತಾ ನೀರೆರೆಯುತ್ತಾರೆ.

ಅಂಗಾಳ ಗುಡಸೋದು ಕಂಡೆ
ಗಂಗಾಳ ಬೆಳಗಾದು ಕಂಡೆ
ಹಲಸೀನ ಮರನಾಡಿ ಹಸುಮಗಳ್ನೆರೆದಾಳೆ
ನೆರೆದಾರೆ ನೆರೆಯಾಲಿ ಕರೆದೂ ಬಚ್ಚಲಿಗ್ಬನ್ನಿ
ನಿಂಬೀ ಮರನಡಿ ರಂಬೇಯು ನೆರೆದಾಳೆ
ನೆರೆದಾರೆ ನೆರೆಯಾಲಿ ಕರೆದೂ ಬಚ್ಚಲಿಗ್ಬನ್ನಿ
ತೆಂಗೀನ ಮರದಡಿ ತಂಗ್ಯಮ್ಮ ನೆರೆದಾಳೆ
ನೆರೆದಾರೆ ನೆರೆಯಾಲಿ ಕರೆದೂ ಬಚ್ಚಲಿಗ್ಬನ್ನಿ
ಬಾಳೇಯ ಮರನಾಡಿ ಬಾಲಮ್ಮ ನೆರೆದಾಳೆ
ಬಾಳೇ ಹಣಕೊಟ್ಟು ಕರೆದೂ ಬಚ್ಚಲಿಗ್ಬನ್ನಿ
ಏಳೂ ಕೊಪ್ಪರ್ಗಿ ನೀರು ಕಾದಾವೆ ಮರುಗ್ಯಾವೆ
ಬಾಲಮ್ನ ಜಾಳುಕಾಕೆ
ಬಾಲಮ್ಮ ಮಿಂದ ನೀರು
ಬಾಳೀಗೂ ತಿರುಗ್ಯಾನೆ
ಬಾಲಮ್ನಣ್ಣಯ್ಯ ಬಂದು

ಹೀಗೆ ಹಾಡು ಹೇಳುತ್ತಾ ಸಡಗರದಿಂದ ನೀರೆರೆದು ಆಕೆ ತೊಟ್ಟಿದ್ದ ಬಟ್ಟೆಯನ್ನು ಕಳೆದು (ಕಳೆದಬಟ್ಟೆಯನ್ನು ಅಗಸ ಒಯ್ಯುತ್ತಾನೆ) ಬೆಲೆಬಾಳುವ ವಸ್ತ್ರಾಭರಣಗಳನ್ನು ತೊಡಿಸಿ ಸಮಬೈತಲೆ ಸೀಳಿ ಅಂದವಾಗಿ ತಲೆಬಾಚಿ ಅರಿಷಿಣಕುಂಕುಮ ಇಡಿಸಿಕೊಂಡು ವಾಸದ ಮನೆಯ ಸನಿಹಕ್ಕೆ ಕರೆತರಲಾಗುತ್ತದೆ. ಮನೆಯ ಹೊರಭಾಗದ

ಕೊಠಡಿಯೊಂದರಲ್ಲಿ ಚಾಪೆ ಹಾಸಿ ಕೂರಿಸುತ್ತಾರೆ. ಆಕೆಯ ವಾರಿಗೆಯ ಹೆಣ್ಣು ಮಕ್ಕಳು ಆಕೆಗೆ ಬೇಸರವಾಗದಂತೆ ನೋಡಿಕೊಳ್ಳುತ್ತಾರೆ. ಹಾಸ್ಯ ವಿನೋದಲಹರಿಯಲ್ಲಿ ತೇಲಿಸಿ ಪುಷ್ಪವತಿಯಾದ ಹೆಣ್ಣು ಮಗಳು ಭವಿಷ್ಯದ ಆಶಾ ಗೋಪುರವನ್ನು ನಿರ್ಮಿಸಿಕೊಳ್ಳುವಂತೆ ಪ್ರೇರಣೆ ನೀಡುತ್ತಾರೆ.

ಹೆಣ್ಣು ಲಿಂಗಪ್ರೌಢಿಮೆ ಹೊಂದಿದ ದಿನದಿಂದ ಮೂರುದಿನಗಳವರೆಗೆ ವಿಶೇಷವಾಗಿ ಸಿಹಿ ಅಡಿಗೆಯನ್ನೇ ಮಾಡಿಬಡಿಸುತ್ತಾರೆ. ಮೆಂತೆ ಹುರಿದು ಹುಡಿಮಾಡಿ ಅನ್ನದೊಂದಿಗೆ ಮಿಶ್ರಮಾಡಿ ತುಪ್ಪಬೆಲ್ಲವನ್ನು ಸೇರಿಸಿ ಹದ ವಾಗಿ ಪಾಕಗೊಳಿಸಿ 'ಹುಗ್ಗಿಅನ್ನ' ಎಂದು ಮಾಡಿಕೊಡುತ್ತಾರೆ. ಮೂರುದಿನವೂ ತಪ್ಪದೆ ಸ್ನಾನಮಾಡಿ ತೊಟ್ಟಿದ್ದ ಬಟ್ಟೆಯನ್ನು ಬದಲಿಸಿ ಉಡಬೇಕು. ಹೀಗೆ ಮೂರು ರಾತ್ರಿಗಳನ್ನು ಕಳೆದಮೇಲೆ ನಾಲ್ಕನೆಯ ದಿವಸವೂ ಮೊದಲ ಮೂರುದಿನಗಳಂತೆ ಸ್ನಾನಮಾಡಿಸಿ ಹೊಸ ಸೀರೆರವಿಕೆಗಳನ್ನು ತೊಡಿಸಿ ಮನೆಯ ಒಳಗೆ ಬರಮಾಡಿ ಕೊಳ್ಳುತ್ತಾರೆ. ಹನ್ನೊಂದು ದಿವಸಗಳವರೆಗೆ ಸೂತಕವೆಂದು ಭಾವಿಸುವುದರಿಂದ ಆಕೆಗೆ ದೇವರಮನೆ, ಅಡಿಗೆಮನೆ ಗಳಿಗೆ ಪ್ರವೇಶವಿಲ್ಲ. ಈ ಸೂತಕದ ದಿನಗಳಲ್ಲಿ ನಿತ್ಯಸ್ನಾನ, ಮಲಿನವಾದ ಬಟ್ಟೆಕಳೆದು ಮಡಿಬಟ್ಟೆಯನ್ನು ತೊಟ್ಟು ಕೊಳ್ಳುವುದು, ಹುಗ್ಗಿ ಅನ್ನ ಮತ್ತು ಇತರ ಸಿಹಿಪದಾರ್ಥಗಳನ್ನು ಮಾತ್ರ ಸೇವಿಸುವುದನ್ನು ಮರೆಯದೆ ನಡಸಿ ಕೊಂಡು ಬರಬೇಕು. ಪುರುಷರ ದೃಷ್ಟಿಗೆ ಗೋಚರಿಸಬಾರದು.

ಅಶುದ್ಧಳಾಗಿರುತ್ತಾಳೆಂದು ಭಾವಿಸಿ ಹತ್ತುರಾತ್ರಿಗಳನ್ನು ಮನೆಯ ಒಂದು ಮೂಲೆಯಲ್ಲಿ ಕಳೆಯು ವಂತೆ ಹಾಕಿದ ನಿರ್ಬಂಧವನ್ನು ಹನ್ನೊಂದನೆಯ ದಿವಸ ರದ್ದುಪಡಿಸಿ ಆ ಜಾಗದಿಂದ ಬಿಡುಗಡೆ ದೊರಕಿಸಿ ಕೊಡಲು 'ನೀರೆರೆಯುವ ಮನೆಶಾಸ್ತ್ರ' ಎಂದು ಒಂದು ಸಮಾರಂಭವನ್ನು ಇಟ್ಟುಕೊಳ್ಳಲಾಗುತ್ತದೆ. 'ನೀರೆರೆ ಯುವ ಮನೆಶಾಸ್ತ್ರ' ಇಲ್ಲಿನವರ ಬಾಯಲ್ಲಿ 'ನೀರಾರ್ಸಮನೆ' ಎಂದು ರೂಪಾಂತರ ಹೊಂದಿದೆ.

ಹೆಣ್ಣಿನ ಪೋಷಕರು ಮಗಳು ಲಿಂಗಪ್ರೌಢಿಮೆ ಹೊಂದಿದ ಹರ್ಷದ ಸುದ್ದಿಯನ್ನು 'ಹೋಲುಹೊಂದಿ' ಗೆಲ್ಲಾ ತಿಳಿಸಿ 'ನೀರಾರ್ಸಮನೆ' ಗೆ ಬರುವಂತೆ ಆಹ್ವಾನ ನೀಡುತ್ತಾರೆ. ಸೋದರಮಾವನಿಗೆ ವಿಶೇಷ ಆಮಂತ್ರಣವಿರುತ್ತದೆ.

ಪುಷ್ಪವತಿಯಾದ ಹೆಣ್ಣಿನ ಅಕ್ಕಂದಿರು, ಸೋದರಮಾವಂದಿರು ಹಾಗೂ ತೀರಾ ಹತ್ತಿರದ ಬಂಧು ಗಳೆನಿಸಿಕೊಂಡವರು ಯಥಾಸುಶಕ್ತಿ ಉಡುಗೊರೆ ನೀಡಲು ಎಲ್ಲ ಬಗೆಯ ಏರ್ಪಾಟು ಮಾಡಿಕೊಳ್ಳುತ್ತಾರೆ. ಒಂದು ಕುಕ್ಕೆಯೊಳಗೆ ಸೀರೆ, ರವಿಕೆ, ಹಿಂಗಾರ, ಕೊಬ್ಬರಿ, ತೆಂಗಿನಕಾಯಿ, ಉತ್ತುತ್ತೆ, ದ್ರಾಕ್ಷಿ, ಕಲ್ಲುಸಕ್ಕರೆ, ಚಿಕ್ಕಮಣ್ಣಿನ 'ಚಟಿಗೆ' ಯೊಳಗೆ ತುಪ್ಪ ಬೆಲ್ಲ ಹಾಲು ತುಂಬಿಸಿಕೊಂಡು ಐದೈದು ಬಗೆಯ ಹೂಹಣ್ಣು ಗಳನ್ನಿಟ್ಟು ಒಂದು ಹೊಸ ಚೌಕದಿಂದ ಕುಕ್ಕೆಯ ಬಾಯಿ ಕಟ್ಟಿಡಲಾಗುತ್ತದೆ. (ಕುಕ್ಕೆಗೆ ಬದಲಾಗಿ ಹರಿವಾಣ ವನ್ನೂ ಬಳಸಬಹುದು). ಆ ಉಡುಗೊರೆಯ ಕುಕ್ಕೆಯನ್ನು ನೀರೆರೆಯುವ ಮನೆಗೆ ತರುವ ಸನ್ನಿವೇಶ ವೈಭವಪೂರ್ಣವಾಗಿರುತ್ತದೆ. ಊರಿನ ಚಲುವಾದಿ (ಹೊಲೆಯ) ಯವರ ಕೊಂಬುಕಹಳೆಗಳಿಂದ ಬಳಗಸ್ಥ ರೊಡಗೂಡಿ ಮೆರವಣಿಗೆಯಲ್ಲಿ ವಿಜೃಂಭಣೆಯಿಂದ ತಂದು ಹೆಣ್ಣಿನ ಮನೆಯ ತುಳಸಿಕಟ್ಟೆಯ ಮುಂದೆ ಇರಿಸ ಲಾಗುತ್ತದೆ.

ಹುಡುಗಿಗೆ ನೀರು ಎರೆಯಲು ಬೇಕಾಗುವಷ್ಟು ಬಿಸಿನೀರನ್ನು ಹದವಾಗಿ ಕಾಯಿಸಿ ಸಿದ್ಧಮಾಡಿಟ್ಟು ಕೊಂಡಿರುತ್ತಾರೆ. ಅದಕ್ಕೆ ಮುನ್ನ ಲಿಂಗಪ್ರೌಢಿಮೆ ಹೊಂದಿದ ಹೆಣ್ಣನ್ನು ಒಂದು ಚಾಪೆಯ ಮೇಲೆ ಕೂರಿಸಿ ಅಂದಿನ ಕಾರ್ಯಕ್ರಮಕ್ಕೆ ಆಹ್ವಾನಿತರಾಗಿ ಬಂದ ಮುತ್ತೈದೆಯರೆಲ್ಲಾ ಅಕ್ಷತೆ ಇಡಿಸಿ ಎಣ್ಣೆಅರಿಶಿನ ಮಾಡು ತ್ತಾರೆ. ಹೆಣ್ಣು ಅಕ್ಷತೆ ಇಡಿಸಿದವರ ಪಾದಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾಳೆ. ನಂತರ ಆ ದಿನದ ಮುಖ್ಯ ಕಾರ್ಯಕ್ರಮವಾದ ನೀರೆರೆಯುವ ಶಾಸ್ತ್ರಕ್ಕೆ ಹುಡುಗಿಯನ್ನು ನೀರಿನಮನೆಗೆ ಕರೆದುಕೊಂಡು

ಹೋಗಲಾಗುತ್ತದೆ. ಆಹ್ವಾನಿತ ಮುತ್ತೈದೆಯರು ಹಾಡು ಹೇಳುತ್ತಾ ಎರಡೆರಡು ತಂಬಿಗೆ ನೀರು ಎರೆದು ಸ್ನಾನಮಾಡಿಸುತ್ತಾರೆ.

....
ಬಾಲಸ್ನಾ ಮಿಂದು ಬರುವಾಗ
ಹೊಸ ಜವುಳೀ ಗಂಟೇ
ಸೋದರಮಾವನ ಮನಿಯಿಂದ
ಬಂದು ಎದುರಾದೊ

ಹಸು ಹಾಗಲು ಬಣ್ಣ ಕುಸುಕುಂಬುಳು ಬಣ್ಣ
ಹಸುಮಕ್ಕಳುಡ ಹೊಸಬಣ್ಣ | – ಹೊಸಬಣ್ಣದ ಸೀರೆ
ಹೆರಕ್ಯಾಡೆ ಸೊಸೀಮುದ್ದೆ

........ಎಂದು ಸೋದರತ್ತೆ ಹಾಡುತ್ತಾ ಆ ದಿನದ ಶಾಸ್ತ್ರಕ್ಕೆಂದೇ ತಂದ ಬೆಲೆಬಾಳುವ ವಸ್ತ್ರಾಭರಣಗಳನ್ನು ತೊಡಿಸಿಕೊಂಡು ಮನೆಯ ತುಳಸಿಕಟ್ಟೆಯ ಸಮೀಪಕ್ಕೆ ಸಂಭ್ರಮೋತ್ಸಾಹಗಳಿಂದ ಕರೆತರುತ್ತಾಳೆ. ತುಳಸಿ ಕಟ್ಟೆಯ ಎದುರಿನಲ್ಲಿ ಹೊಸಚಾಪೆಯೊಂದನ್ನು ಹಾಸಿ ಲಿಂಗಪ್ರೌಢಿಮೆ ಹೊಂದಿದ ಹೆಣ್ಣನ್ನು ಕೂರಿಸಿ ಕೈಗೆ ಉಂಗುರ ಕೊರಳಿಗೆ ಚಿನ್ನದ ಸರಗಳನ್ನು ತೊಡಿಸಿ ತಲೆಗೆ ಹೂಮುಡಿಸಿ ಅಲಂಕರಿಸುತ್ತಾರೆ. ಮುಂದಿನದು ಮಡಿಲುದುಂಬುವ ಕಾರ್ಯಕ್ರಮ. ಉತ್ತುತ್ತೆ, ದ್ರಾಕ್ಷಿ, ಹಣ್ಣು, ಹೂ, ಕಾಯಿ, ಸೀರೆ, ರವಿಕೆ ಮುಂತಾಗಿ ಬಂಧುಗಳು ಉಡುಗೊರೆಯಾಗಿ ತಂದಂತಹುದನ್ನು ಮಡಿಲುದುಂಬಿ ಅವಳ ಮಡಿಲಿಗೆ ಮಡಿಸಿ ಕಟ್ಟುತ್ತಾರೆ. ಮಡಿಲು ದುಂಬಿ ಮಿಕ್ಕಿದ್ದ ಮುಯ್ಯಿಪದಾರ್ಥಗಳನ್ನು ಆಕೆಯ ಒಂದು ಪಕ್ಕದಲ್ಲಿಡಲಾಗುತ್ತದೆ.

ಆ ದಿವಸ ಲಿಂಗಪ್ರೌಢಿಮೆ ಹೊಂದಿದ ಹೆಣ್ಣಿನ ಹೆಸರಿನಲ್ಲಿ ತುಳಸಿಪೂಜೆ ವಿಶೇಷವಾಗಿ ಜರುಗುತ್ತದೆ. ತುಳಸಿಯ ಮುಂದೆ ಒಂದು ಕಳಸಸ್ಥಾಪನೆ ಮಾಡಿರಲಾಗುತ್ತದೆ. ಹೆಣ್ಣಿನ ಅಜ್ಜ ಅಥವಾ ಅಜ್ಜಿ ಪೂಜಾಸಾಮಗ್ರಿಗಳಿಂದ ತುಳಸಿಯನ್ನು ಭಕ್ತಿಯಿಂದ ಪೂಜಿಸಿ ಮೊಮ್ಮಗಳಿಗೆ ಶುಭಕೋರುತ್ತಾರೆ. ಮಹಾ ಮಂಗಳಾರತಿ ಮುಗಿದಮೇಲೆ ಹೆಣ್ಣನ್ನು ತುಳಸಿಗೆ ಮೂರುಸುತ್ತು ಪ್ರದಕ್ಷಿಣೆ ಬರಲು ಆದೇಶಿಸಿ ತುಳಸಿಯ ಎದುರಿನಲ್ಲಿ ಸ್ಥಾಪಿಸಿದ್ದ ಕಳಸವನ್ನು ಹೆಣ್ಣಿನ ಕೈಯಲ್ಲಿ ಕೊಟ್ಟು ಮನೆಯ ಒಳಗೆ ಪ್ರವೇಶಮಾಡಿಸಿಕೊಳ್ಳಲಾಗುವುದು. ಹೆಣ್ಣು ತಾನು ಕೈಯಲ್ಲಿ ಹಿಡಿದುತಂದ ಕಳಸವನ್ನು 'ದೇವರ ಹಲಗೆ' ಅಥವಾ 'ನಾಗಂದಿಗೆ'ಯ ಮೇಲೆ ಇರಿಸಿ ಕೈಮುಗಿದುಕೊಳ್ಳಬೇಕು. ಕಟ್ಟಿದ್ದ ಮಡಿಲನ್ನು ಬಿಚ್ಚಿ ಪದಾರ್ಥಗಳನ್ನು ಒತ್ತಟ್ಟಿಗಿಟ್ಟು ತನಗಿಂತ ಹಿರಿಯರಾದ ಸ್ತ್ರೀಪುರುಷರೆಲ್ಲರ ಪಾದಮುಟ್ಟಿ ನಮಸ್ಕರಿಸಿ ಆಶೀರ್ವಾದ ಪಡೆಯುತ್ತಾಳೆ.

ಅಂದಿನ ಸಮಾರಂಭಕ್ಕೆ ಆಗಮಿಸಿದ ಬಂಧುಗಳಿಗೆ ಭರ್ಜರಿ ಕುರಿ ಕಡಿಸಿಯೋ ಸಿಹಿಯಡಿಗೆ ಮಾಡಿಸಿಯೋ ಔತಣ ನೀಡುತ್ತಾರೆ. ಇಲ್ಲಿಗೆ ಅಂದಿನ ಸಮಾರಂಭ ಮುಕ್ತಾಯವಾದಂತೆಯೆ.

ಮಲೆನಾಡಿನಲ್ಲಿ ಪ್ರಾಯಬರುವಿಕೆ ಸಂಪ್ರದಾಯದ ವಿಶಿಷ್ಟತೆಯನ್ನು ಗುರುತಿಸುವಾಗ ಬಯಲುಸೀಮೆ ಪ್ರದೇಶಗಳಲ್ಲಿ ರೂಢಿಯಲ್ಲಿರುವ ಈ ಸಂಪ್ರದಾಯದ ವಿಶಿಷ್ಟ ಆಚರಣೆ ಪದ್ಧತಿಗಳ ಸ್ಥೂಲ ಪರಿಚಯ ಮಾಡಿಕೊಳ್ಳುವುದು ಒಳ್ಳೆಯದು.

ಮೈಸೂರು, ಮಂಡ್ಯಜಿಲ್ಲೆಯ ಒಕ್ಕಲಿಗ ಜನಾಂಗದವರು ಹೆಣ್ಣು ಋತುಮತಿಯಾದಾಗ ಒಂಬತ್ತು ದಿನಗಳಕಾಲ ಮನೆಯಿಂದ ಆಕೆಯನ್ನು ಹೊರಗಿಡುತ್ತಾರೆ. ಆ ಅವಧಿಯಲ್ಲಿ ಆಕೆ ಸಂಪೂರ್ಣ ಅಶುದ್ಧಳೂ ಅಪವಿತ್ರಳೂ ಆಗಿರುತ್ತಾಳೆಂದು ನಂಬಲಾಗುತ್ತದೆ. ಮನೆಯ ಹೊರಭಾಗದಲ್ಲಿ ಸೋದರಮಾವನ ಮಕ್ಕಳು ಪ್ರತ್ಯೇಕವಾಗಿ ನಿರ್ಮಿಸಿಕೊಟ್ಟ ಹಸುರೆಲೆಯ ಗುಡಿಸಲಿನಲ್ಲಿ ಹೆಣ್ಣು ವಾಸಿಸಬೇಕು. ಲಿಂಗಪ್ರೌಢಿಮೆ ಪಡೆದ ಈ ಹೆಣ್ಣು ಪ್ರತಿದಿನವೂ ಸಂಜೆ ಹೊತ್ತಿನಲ್ಲಿ ಅಗಸಗಿತ್ತಿ ತಂದುಕೊಡುವ ಮಡಿಬಟ್ಟೆಯನ್ನು ತೊಟ್ಟುಕೊಂಡು

ಮಣೆಯಮೇಲೆ ಕುಳಿತುಕೊಳ್ಳಬೇಕು. ಆಕೆಯ ಸಂಗಡ ಆಕೆಯ ಬೇಸರ ಕಳೆಯುಲು ಅವಳ ವಯಸ್ಸಿನ ಹೆಣ್ಣುಮಕ್ಕಳು ಮಾತ್ರವಲ್ಲದೆ ಗೃಹಿಣಿಯರೂ ಇರುತ್ತಾರೆ. ದುಷ್ಟಶಕ್ತಿಗಳ ಪೀಡೆಗಳನ್ನು ತೊಲಗಿಸುವ ಉದ್ದೇಶದಿಂದ ಆ ಗುಡಿಸಲಿನ ಮುಂದೆ ಹಳೆಯ ಕಸಪೊರಕೆ, ಮೊರ, ಹರಿದುಚೂರಾದ ಚಪ್ಪಲಿಗಳನ್ನು ಗುಡಿಸಲಿನ ಪ್ರವೇಶದ್ವಾರದಲ್ಲಿ ಇಡಲಾಗುತ್ತದೆ. ಹೆಣ್ಣು ಕನ್ಯತ್ವ ಪಡೆದಿರುವುದರ ಗುರುತಾಗಿ 'ಗುಳ್ಳುವಸಗೆ' ಎಂದು ಹಣ್ಣು ಹೂ ಸಿಹಿತಿಂಡಿಗಳನ್ನು ಮಡಿಲುದುಂಬಿ ಒಂದು ಸಮಾರಂಭವನ್ನು ಆಚರಿಸಲಾಗುವುದು. ಹತ್ತನೆಯದಿನ ಹುಡುಗಿ ಸ್ನಾನಮಾಡಿದ ನಂತರ ಗುಡಿಸಲನ್ನು ಕಿತ್ತುಬಿಸಾಡುತ್ತಾಳೆ. ಆಕೆಯ ಸೋದರಮಾವ ಗುಡಿಸಲಿನ ಎಲ್ಲ ಸಾಮಗ್ರಿಗಳನ್ನೂ ಅಲ್ಲಿಂದ ದೂರ ತೆಗೆದುಕೊಂಡುಹೋಗಿ ಸುಟ್ಟು ಭಸ್ಮಮಾಡಬೇಕು. ಲಿಂಗಪ್ರೌಢಿಮೆ ಹೊಂದಿದ ಹೆಣ್ಣು ಅವಿವಾಹಿತಳಾಗಿದ್ದಲ್ಲಿ ಒಸಗೆಯ ಒಂದು ದಿನದ ಖರ್ಚುವೆಚ್ಚವನ್ನು ಸೋದರಮಾವನೇ ನಿರ್ವಹಿಸಬೇಕು. ವಿವಾಹಿತಳಾಗಿದ್ದರೆ ಗಂಡಿನಮನೆಯವರು ಆ ಜವಾಬ್ದಾರಿಯನ್ನು ಹೊತ್ತುಕೊಳ್ಳಬೇಕಾಗುತ್ತದೆ.

ಮಲೆನಾಡಿನ ಒಕ್ಕಲಿಗ ಜನಾಂಗದವರು ಈ ಪ್ರಾಯಬರುವಿಕೆ ಸಂಪ್ರದಾಯವನ್ನು ಎಷ್ಟು ಸರಳವಾಗಿ ಆಚರಿಸುತ್ತಾರೋ ಅಷ್ಟೇ ಸಂಕೀರ್ಣವಾಗಿ ಆಚರಿಸುವ ಕಾಡುಗೊಲ್ಲ ಜನಾಂಗದ ಸಂಪ್ರದಾಯಗಳು ಇನ್ನೂ ವಿಶಿಷ್ಟ ಬಗೆಯವು.

ಚಿತ್ರದುರ್ಗಜಿಲ್ಲೆಯ ಕಾಡುಗೊಲ್ಲ ಜನಾಂಗದವರಲ್ಲಿ ಹೆಣ್ಣು 'ದೊಡ್ಡವಳಾದ' ಹರ್ಷದ ಸಂಗತಿಯನ್ನು ಹಟ್ಟಿಯವರೆಲ್ಲರಿಗೂ ಬಹಿರಂಗಪಡಿಸಲು ನೆನೆಯಕ್ಕಿ ನೆನೆಗಡಲೆಯನ್ನು ಹಂಚಲಾಗುವುದು. ಹಟ್ಟಿಯಿಂದ ಅನತಿದೂರದಲ್ಲಿ ಚಕ್ರಾಕಾರವಾಗಿ ಹಸಿಗರಿಗಳಿಂದ ನಿರ್ಮಿಸಲಾಗುವ ಗುಡಿಸಲಿನಲ್ಲಿ ಹನ್ನೆರಡರಿಂದ ಇಪ್ಪತ್ತೆರಡು ದಿನಗಳವರೆಗೆ ತಾತ್ಕಾಲಿಕವಾಗಿ ವಾಸಿಸಬೇಕು. ಯಾರಿಗೂ ತನ್ನ ನೆರಳನ್ನೂ ಸೋಂಕಿಸದೆ, ಯಾರನ್ನೂ ಸ್ಪರ್ಶಿಸದೆ ನಿತ್ಯವೂ ಮಡಿಯಲ್ಲಿರಬೇಕು. ಹಲಸಿನ ಎಲೆಯಲ್ಲಿ ಊಟಮಾಡಬೇಕು. ದಿನಕ್ಕೊಂದು ಹೊಸ ಗುಡಿಸಲಿಗೆ ಪ್ರವೇಶಮಾಡಬೇಕು. ಹನ್ನೆರಡು ಅಥವಾ ಇಪ್ಪತ್ತೊಂದು ದಿನಗಳು ಕಳೆದ ಬಳಿಕ ಸ್ನಾನ ಮಾಡಿಕೊಂಡು ಎಲ್ಲ ಗುಡಿಸಲುಗಳನ್ನು ಜಮಾಯಿಸಿ ಸುಟ್ಟುಹಾಕಿ ಸ್ನಾನಮಾಡಿ ಪೂಜಾರಿಯಿಂದ ಪಂಚಗವ್ಯವನ್ನು ಹಾಕಿಸಿಕೊಂಡು ಊರ ಹೊರಗೆ 'ಮುಟ್ಟಾದವರಿಗೆ ಮುಟ್ಟಸೋದು' ಎಂದು ಪುನಃ ಅಲ್ಲಿಯೂ ಮೂರುರಾತ್ರಿ ಕಳೆಯಬೇಕು. ಕೊನೆಯದಿನ ರಾತ್ರಿ ಒಸಗೆ ಸಮಾರಂಭ ಅದ್ದೂರಿಯಿಂದ ನೆರವೇರುತ್ತದೆ. ಮುಯ್ಯಿಸೀಡುವುದು ಇವರಲ್ಲಿಯೂ ಮಾನ್ಯ.

ಮಲೆನಾಡಿನ ಒಕ್ಕಲಿಗ ಜನಾಂಗದವರು ಮೈಸೂರು ಮಂಡ್ಯ ಜಿಲ್ಲೆಯ ಒಕ್ಕಲಿಗರಷ್ಟು ಶಾಸ್ತ್ರೋಕ್ತವೂ ಸಾಂಪ್ರದಾಯಿಕವೂ, ಕಾಡುಗೊಲ್ಲರಷ್ಟು ಕಠಿಣವೂ ಸಂಕೀರ್ಣವೂ ಆದ ರೀತಿಯಲ್ಲಿ ಒಸಗೆ ಸಮಾರಂಭವನ್ನು ಅಥವಾ ಪ್ರಾಯಬರುವಿಕೆ ಸಂಪ್ರದಾಯವನ್ನು ಆಚರಿಸದಿದ್ದರೂ ತಮ್ಮ ಪ್ರದೇಶಕ್ಕೇ ವಿಶಿಷ್ಟವಾದ ರೀತಿಯಲ್ಲಿ ಸೂತಕ, ಪೀಡೆ, ಪಿಶಾಚಿಗಳ ಭಯವಿಲ್ಲದೆ ಅತ್ಯಂತ ನಯವೂ ಸರಳವೂ ಆದ ರೀತಿಯಲ್ಲಿ ಆಚರಿಸುತ್ತಾರೆಂಬುದು ಮೇಲಿನ ವಿವರಗಳಿಂದ ತಿಳಿದುಬರುತ್ತದೆ.

ಮಲೆನಾಡಿನಲ್ಲಿ ಪ್ರಾಯಬರುವಿಕೆ ಸಂಪ್ರದಾಯವನ್ನು ಆಚರಿಸುವ ಸಂದರ್ಭದಲ್ಲಿ ಇನ್ನೊಂದು ವಿಶೇಷ ಪದ್ಧತಿಯನ್ನು ರೂಢಿಯಲ್ಲಿಟ್ಟುಕೊಂಡಿದ್ದಾರೆ. ಹೆಣ್ಣಿನ ಸೋದರಮಾವ ತನ್ನ ಮನೆಗೆ ಆ ದಿನವೇ ಹುಡುಗಿಯನ್ನು ಎತ್ತಿನಗಾಡಿಯಲ್ಲಿ ಕೂರಿಸಿಕೊಂಡು ಹೋಗುತ್ತಾನೆ. ನೀರೆರೆಯುವ ಶಾಸ್ತ್ರದಲ್ಲಿ ಮಡಿಲುದುಂಬಿದ ತೆಂಗಿನಕಾಯನ್ನು ಸೋದರತ್ತೆ ತನ್ನ ಮನೆಯಲ್ಲಿ ಪಾಯಸ ಮಾಡಿ ಬಡಿಸಬೇಕು. ಸತತವಾಗಿ ಐದು ದಿನವೂ ಸಿಹಿಯಡಿಗೆ ಮಾಡಿ ಬಡಿಸಿ ಆರನೆಯ ದಿವಸ ತಂದೆಯ ಮನೆಗೆ ಕಳಿಸಿಕೊಡಬೇಕು. ನೀರೆರೆಯುವ ಸಮಾರಂಭದ ದಿವಸ ಸೋದರಮಾವನಿಗೆ ಉಡುಗೊರೆ ತಂದುಕೊಡಲು ಅನಾನುಕೂಲವಾಗಿದ್ದಲ್ಲಿ, ತಾನು ಕಳಿಸಿಕೊಡುವ ದಿವಸ

ಉದಾರವಾಗಿ ನೀಡಬಹುದು. ಇದೇ ರೀತಿಯಾಗಿ ಮುಂದೆ ಆಕೆ ರಜಸ್ವಲೆಯಾಗುವುದರೊಳಗಾಗಿ ಅಂದರೆ ಸುಮಾರು ಒಂದು ತಿಂಗಳ ಅವಧಿಯೊಳಗೆ ಇಷ್ಟಪಟ್ಟ ಬಂಧುಬಳಗದವರು ಆಕೆಯನ್ನು ಕರೆದು ಮರ್ಯಾದೆಮಾಡಿ ಕಳಿಸಬಹುದು.

ಹೀಗೆ ಲಿಂಗಪ್ರೌಢಿಮೆಯನ್ನು ಹೊಂದಿದ ಹೆಣ್ಣು ಮುಂದೆ ತಿಂಗಳಿಗೊಮ್ಮೆ ಬಹಿಷ್ಠೆಯಾದಾಗ ಮೂರು ಅಥವಾ ನಾಲ್ಕುರಾತ್ರಿಗಳನ್ನು ಮನೆಯ ಹೊರಭಾಗದ ಕೊಠಡಿಯಲ್ಲಿಯೇ ಕಳೆಯಬೇಕು. ಪ್ರತಿ ದಿನವೂ ಮಲಿನಗೊಂಡ ಉಡುಪನ್ನು ಶುಚಿಗೊಳಿಸಿಕೊಂಡು ತಣ್ಣೀರುಸ್ನಾನ ಮಾಡಬೇಕು. ನಾಲ್ಕನೆ ಅಥವಾ ಐದನೆಯ ದಿವಸ ಸ್ನಾನಮಾಡಿಕೊಂಡು ನಕ್ಷತ್ರಗಳನ್ನು ನೋಡಿಕೊಂಡು ಮನೆಯ ಒಳಗೆ ಪ್ರವೇಶಿಸಬೇಕು.

ಹೆಣ್ಣು ಪ್ರಾಯಕ್ಕೆ ಬಂದಾಗ ಆಚರಿಸುವ ಈ ಸಂಪ್ರದಾಯಗಳು, ಕಟ್ಟುಕಟ್ಟಳೆಗಳು ಮೇಲು ನೋಟಕ್ಕೆ ಅರ್ಥಹೀನವೂ ಕುರುಡಾಗಿಯೂ ಕಂಡರೂ ರೂಢಿಗತವಾಗಿರುವ ಇಂತಹ ಪದ್ಧತಿಗಳಲ್ಲಿ ಹಲವು ಬಗೆಯ ಉದ್ದೇಶ-ಪ್ರಯೋಜನಗಳಿವೆ ಎಂಬುದನ್ನು ಅಲಕ್ಷಿಸುವಂತಿಲ್ಲ. ದಿನವೂ ಬಟ್ಟೆ ಬದಲಿಸುವುದು, ತಣ್ಣೀರು ಸ್ನಾನ ಮಾಡುವುದು, ನಿರ್ದಿಷ್ಟ ಆಹಾರಸೇವನೆ ಮಾಡುವುದು, ನಿರ್ದಿಷ್ಟವಾಸಸ್ಥಾನ, ವಿಶ್ರಾಂತಿಬಯಸುವುದು— ಮುಂತಾದ ನಿಯಮ ಪಾಲನೆಗಳಲ್ಲಿ ವೈಜ್ಞಾನಿಕ ದೃಷ್ಟಿ ಇದೆ. ಈ ನಿಯಮಗಳನ್ನು ಕಠಿಣವಾಗಿ ಆಚರಿಸಿದವರು ಸದಾ ಆರೋಗ್ಯಶಾಲಿಗಳಾಗಿರುತ್ತಾರೆಂಬುದು ಅವರ ಅಭಿಮತ.

ಜೀವಿಗಳೆಲ್ಲ ಆಟದಲ್ಲಿ ನಿರತವಾಗಿವೆ. ಕೆಲವರಿಗೆ ಇದು ಗೊತ್ತಿದೆ. ಮತ್ತೆ ಕೆಲವರಿಗೆ ಇದು ಗೊತ್ತಿಲ್ಲ. ಧರ್ಮ ಎಂದರೆ ತಿಳಿದು ಆಟವಾಡುವುದು.

ಪ್ರೊ. ಬಿ. ವಿ. ವೆಂಕಟರಾವ್

ತೀವ್ರ ಬೇಸಾಯದಲ್ಲಿ ಮಣ್ಣಿನ ಫಲವತ್ತು

ಹತ್ತಾರು ಎಕರೆಭೂಮಿ ಬಿತ್ತಿ, ಬಂದಷ್ಟು ಬೆಳೆಯನ್ನು ಲಾಭ ಎಂದು ಪರಿಗಣಿಸುವ ದೃಷ್ಟಿ ನಮ್ಮಲ್ಲಿ ಹಿಂದಿನಿಂದ ಬೆಳೆದುಬಂದ ಸಂಪ್ರದಾಯ. ಆದರೆ, ಇತ್ತೀಚಿನ ದಿನಗಳಲ್ಲಿ ಕೆಲವೇ ಎಕರೆಗಳಲ್ಲಿ ಉತ್ತಮ ಬಿತ್ತನೆ, ನೀರಾವರಿ, ಗೊಬ್ಬರ–ಇನ್ನಿತರ ಸೌಲಭ್ಯಗಳನ್ನು ಒದಗಿಸಿಕೊಂಡು, ಶ್ರಮವಹಿಸಿ ಸೂಕ್ತ ಲಾಭ ಪಡೆಯುವುದು ಜಾಣತನ ಎಂಬ ಮನೋಭಾವ ಪ್ರಗತಿದಾಯಕ ರೈತರಲ್ಲಿ ಉಂಟಾಗಿದೆ. ಇದೊಂದು ಆಶಾದಾಯಕ ಬೆಳವಣಿಗೆ. ಪ್ರಕೃತಿಯ ಅನಿಶ್ಚಿತತೆಗಳೆದುರು ಕೈಕಟ್ಟಿಕೊಂಡು ಕುಳಿತುಕೊಳ್ಳದೆ, ಆಧುನಿಕ ವಿಜ್ಞಾನ, ಬೇಸಾಯಕ್ಕೆ ಒದಗಿಸಿರುವ ಸೌಲಭ್ಯಗಳನ್ನು ಬಳಸಿಕೊಂಡು ಕೃಷಿ ಉದ್ಯಮವನ್ನು ಒಂದು ಭರವಸೆಯಿಂದ ಎದುರಿಸುವ ಮನೋಭಾವ ರೈತನಲ್ಲಿ ಮೂಡಿದೆ.

ಮಾನವ, ಹಿಂದಿನಿಂದ ಪ್ರಕೃತಿಯ ಮೇಲೆ ತನ್ನ ಪ್ರಭುತ್ವವನ್ನು ಸ್ಥಾಪಿಸಲು ಪ್ರಯತ್ನಮಾಡುತ್ತಲೇ ಇದ್ದಾನೆ. ಇದರಲ್ಲಿ ಸಾಕಷ್ಟು ಯಶಸ್ಸು ಸಹ ಗಳಿಸಿದ್ದಾನೆ. ಈ ಯಶಸ್ಸಿನ ಪ್ರಮಾಣ ಸಾಮಾನ್ಯವಾಗಿ ಅವನ ತಿಳಿವಳಿಕೆಯ ಮಟ್ಟಕ್ಕನುಗುಣವಾಗಿದೆ. ಬೇಸಾಯದಲ್ಲಿ ಈಗ ಬಳಕೆಗೆ ಬರುತ್ತಿರುವ ಆಧುನಿಕ ದೃಷ್ಟಿ, ನಿಜವಾಗಿಯೂ ಜಯಪ್ರದವಾಗಬೇಕಾದರೆ ರೈತರ ವಿಷಯಜ್ಞಾನದ ಮಟ್ಟ ಹೆಚ್ಚು ಬೆಳೆದಲ್ಲಿಯೇ ಸಾಧ್ಯ. ಹೆಚ್ಚು ಇಳುವರಿ, ಅನೇಕ ಅಂಶಗಳ ಒಟ್ಟಾರೆ ಫಲಿತಾಂಶ—ಇವುಗಳಲ್ಲಿ ಕೆಲವುಗಳ ಅರಿವು ನಮಗೆ ಇರುತ್ತದೆ. ಇನ್ನೂ ತಿಳಿಯದ ಎಷ್ಟೋ ಅಂಶಗಳಿವೆ. ಈ ಕಾರಣದಿಂದ ಇಳುವರಿ ಹೆಚ್ಚಳಕ್ಕೆ ಧಕ್ಕೆಯಾಗುವ ಸಂಭವ ಉಂಟು. ಈ ಲೇಖನದಲ್ಲಿ ತೀವ್ರಬೇಸಾಯದಲ್ಲಿ ಮಣ್ಣಿನ ಫಲವತ್ತಿನ ನಿರ್ವಹಣೆಯನ್ನು ಕುರಿತ ಕೆಲವು ವಿಷಯಗಳನ್ನು ವಿಚಾರಮಾಡಲು ಪ್ರಯತ್ನಮಾಡಿದೆ.

ಸಸ್ಯ ಪೋಷಣೆ : ಸಸ್ಯಗಳು, ಗಾಳಿ ಮತ್ತು ನೀರಿನಿಂದೊದಗುವ ಇಂಗಾಲ, ಜಲಜನಕ ಮತ್ತು ಆಮ್ಲಜನಕಗಳನ್ನು ಅಲ್ಲದೆ, ಅದರ ಬೆಳವಣಿಗೆಗೆ ಆಗತ್ಯವಾದ ಉಳಿದೆಲ್ಲ ಪೋಷಕಗಳನ್ನು ಮಣ್ಣಿನಿಂದಲೇ ಪಡೆಯಬೇಕು. ಸಾಕಷ್ಟು ಸೂರ್ಯರಶ್ಮಿ ಮತ್ತು ಮಳೆ ಇದ್ದೆಡೆ ಮಣ್ಣಿನಲ್ಲಿ ಈ ಪೋಷಕಗಳು ಒದಗುವ ರೂಪದಲ್ಲಿನ ಅಂಶ, ಮಣ್ಣಿನ ಫಲವತ್ತನ್ನು ನಿರ್ಣಯಿಸುತ್ತದೆ. ಇಳುವರಿ ಸಹಜವಾಗಿ ನೇರವಾಗಿ ಇದಕ್ಕೆ ಸಂಬಂಧಿಸಿದ ವಿಷಯ. ಸಾಧಾರಣವಾಗಿ ಭೂಮಿಯಲ್ಲಿ ಈ ಅನೇಕ ಪೋಷಕಗಳಲ್ಲಿ ಒಂದಲ್ಲ ಒಂದರ ಕೊರತೆ ಬೆಳೆ ಇಳುವರಿಗೆ ಮಿತಿಯುಂಟುಮಾಡುತ್ತದೆ. ಆಧುನಿಕ ಬೇಸಾಯದಲ್ಲಿ ಈ ಮಿತಿ ಅಂಶವನ್ನು ಈ ಪೋಷಕ ವಸ್ತುವನ್ನೊಳಗೊಂಡ ಗೊಬ್ಬರವನ್ನು ಕೊಟ್ಟು ನಿವಾರಿಸುವುದು ಸಾಧ್ಯ.

ಸಸ್ಯ ಬೆಳವಣಿಗೆಯಲ್ಲಿ ಗಾಳಿ ಮತ್ತು ನೀರಿನಿಂದ ದೊರೆಯುವ ಇಂಗಾಲ, ಜಲಜನಕ, ಆಮ್ಲಜನಕಗಳನ್ನಲ್ಲದೆ, ಸಾರಜನಕ, ರಂಜಕ, ಪೊಟ್ಯಾಸಿಯಂ, ಕ್ಯಾಲ್ಸಿಯಂ, ಮೆಗ್ನೀಸಿಯಂ, ಗಂಧಕ,

ಮ್ಯಾಂಗನೀಸ್, ತಾಮ್ರ, ಸತು, ಬೋರಾನ್, ಕಬ್ಬಿಣ, ಮೊಲಿಬ್ಡಿನಂ ಮತ್ತು ಕ್ಲೋರಿನ್ ಅವಶ್ಯ ಪೋಷಕಗಳೆಂದು ಪರಿಗಣಿಸಲಾಗಿವೆ. ಇವುಗಳಲ್ಲಿ, ಸಾರಜನಕ, ರಂಜಕ, ಮತ್ತು ಪೊಟ್ಯಾಸಿಯಂ ಹೆಚ್ಚಿನ ಪ್ರಮಾಣದಲ್ಲಿ ಬೇಕಾಗುತ್ತದೆ. ಮಣ್ಣಿನಲ್ಲಿ ಇವುಗಳ ಅಂಶ ಅಷ್ಟೇನೂ ಹೆಚ್ಚಿಲ್ಲ. ಹೀಗಾಗಿ, ಇವುಗಳ ಮಿತಿಯಿಂದ ಸಸ್ಯ ಬೆಳವಣಿಗೆ ಹಿಂದಾಗುವ ಸಂಭವ ಹೆಚ್ಚು. ಈ ಕಾರಣದಿಂದ ಇವುಗಳನ್ನು ಸಸ್ಯಗಳಿಗೆ ಸರಬರಾಜು ಮಾಡುವುದು ಅನಿವಾರ್ಯವಾಗುತ್ತದೆ. ಕ್ಯಾಲ್ಸಿಯಂ, ಮೆಗ್ನೀಸಿಯಂ ಮತ್ತು ಗಂಧಕ ವಸ್ತುಗಳನ್ನು ಸಾಮಾನ್ಯವಾಗಿ ಮಣ್ಣಿನಹುಳಿ ಇಲ್ಲವೆ ಕ್ಷಾರ ನಿವಾರಣಾ ದೃಷ್ಟಿಯಿಂದ ಸರಬರಾಜು ಮಾಡಲಾಗುತ್ತದೆ. ತಾಮ್ರ, ಮ್ಯಾಂಗನೀಸ್, ಸತು, ಬೋರಾನ್ ಮತ್ತು ಮೊಲಿಬ್ಡಿನಂಗಳು ಬಹಳ ಸೂಕ್ಷ್ಮ ಪ್ರಮಾಣದಲ್ಲಿ ಬೇಕಾಗುತ್ತದೆ. ಆದರೂ, ಅವುಗಳ ಮಹತ್ವ ಅತಿ ಪರಿಣಾಮಕಾರಿ ! ಅಂದರೆ, ಅವುಗಳನ್ನು ಕೊಡುವ ಪ್ರಮಾಣ ಅಲ್ಪವಾದರೂ, ಪ್ರತಿಫಲ ಹೆಚ್ಚಿನ ಮಟ್ಟದಲ್ಲಿರುತ್ತದೆ. ಇವುಗಳ ಪ್ರಮಾಣ ಕಡಮೆಯಾಗಲಿ ಅಥವಾ ಹೆಚ್ಚಾಗಲಿ ಸಸ್ಯಗಳ ಮೇಲಿನ ದುಷ್ಪರಿಣಾಮ ಶತಸ್ಸಿದ್ಧ.

ತೀವ್ರಬೇಸಾಯದಲ್ಲಿ ಪೋಷಕ ವಸ್ತುಗಳ ಆವಶ್ಯಕತೆ : ಇಳುವರಿ ಕಡಮೆ ಬರುವ ವಿಸ್ತಾರ ಬೇಸಾಯದಲ್ಲಿ, ಸಾವಯವ ವಸ್ತುವಿನ ವಿಘಟನೆಯಿಂದ ಬಂಡೆ-ಖನಿಜಗಳ ಶಿಥಿಲತೆಯಿಂದ ಪೈರಿಗೆ ಬೇಕಾದ ಅವಶ್ಯ ಸಸ್ಯ ಪೋಷಕಗಳು ಒದಗುತ್ತವೆ. ಉದಾಹರಣೆಗಾಗಿ, ಸ್ಥಳೀಯ ತಳಿರಾಗಿ ಇಳುವರಿ ಎಕರೆಗೆ 3 (ಮೂರು) ಕ್ವಿಂಟಾಲ್ ಇರುತ್ತದೆ. ಈ ಮೊತ್ತದ ಇಳುವರಿಗೆ ಪೋಷಕ ವಸ್ತುಗಳ ಆವಶ್ಯಕತೆ, ಸಾರಜನಕ 5 ಕೆ. ಜಿ., ರಂಜಕ 2 ಕೆ. ಜಿ., ಮತ್ತು ಪೊಟ್ಯಾಷ್ : 6 ಕೆ. ಜಿ. ಅದೇ ಸ್ಥಳೀಯ ರಾಗಿ ತಳಿ, ನೀರಾವರಿಯಲ್ಲಿ ಮೂರುಪಟ್ಟು ಇಳುವರಿ ಕೊಡುತ್ತದೆ ಮತ್ತು ಅಂಥ ಬೆಳೆಯಲ್ಲಿ 15 ಕೆ. ಜಿ. ಸಾರಜನಕ, 6 ಕೆ. ಜಿ. ರಂಜಕ ಮತ್ತು 18 ಕೆ. ಜಿ. ಪೊಟ್ಯಾಷ್ ಹೊರತೆಗೆಯಲ್ಪಡುತ್ತದೆ. ಸಾಧಾರಣವಾಗಿ ರೈತ, ನೀರಾವರಿ ಬೆಳೆಗೆ ತನಗೊದಗುವ ಎಲ್ಲಾ ಕೊಟ್ಟಿಗೆಗೊಬ್ಬರ ಸಾಧನವನ್ನು ಮೀಸಲಿಟ್ಟು, ಅಪೇಕ್ಷಿಸಿದಷ್ಟು ಪ್ರತಿಫಲವನ್ನು ಪಡೆಯುತ್ತಾನೆ. 20-25 ಕ್ವಿಂಟಾಲ್ ಇಳುವರಿ ಕೊಡುವ ಪೂರ್ಣ ರಾಗಿಯಂಥ ಸುಧಾರಿತ ತಳಿಗಳ ಪೋಷಕಗಳ ಆವಶ್ಯಕತೆ, ಸಹಜವಾಗಿ ಅಧಿಕ. ಇದನ್ನು ಪೂರೈಸುವುದು ಹೆಚ್ಚು ಪ್ರಮಾಣದಲ್ಲಿ ಗೊಬ್ಬರ ಕೊಟ್ಟಲ್ಲಿಯೇ ಸಾಧ್ಯ.

ಪೋಷಕಗಳ ಸಮನ್ವಯ : ಪೋಷಕವಸ್ತುಗಳ ಪರಸ್ಪರ ಪ್ರಮಾಣದಲ್ಲಿ ಒಂದು ಸಮತೆ ಅತ್ಯಗತ್ಯ. ಸಾಧಾರಣವಾಗಿ ಹೆಚ್ಚು ಇಳುವರಿ ಕೊಡುವ ಬೆಳೆಗಳಿಗೆ ಗೊಬ್ಬರ ಸರಬರಾಜಿನಲ್ಲಿ ಸಾರಜನಕಕ್ಕೆ ಹೆಚ್ಚು ಪ್ರಾಧಾನ್ಯ ಕೊಡಲ್ಪಡುತ್ತದೆ. ಕಾರಣ, ಇದರಿಂದ ಬೆಳೆ ಹುಲುಸಾಗಿ ಬೆಳೆದು ಪರಿಣಾಮ ಹೆಚ್ಚು ಎದ್ದು ಕಾಣಬರುತ್ತದೆ. ಹೀಗೆ ಮಾಡದೆ ರಂಜಕ ಮತ್ತು ಪೊಟ್ಯಾಷ್‌ಗಳಿಗೂ ಗಮನ ಕೊಡಬೇಕು. ಇಲ್ಲದಿದ್ದಲ್ಲಿ, ಹೆಚ್ಚು ಹೆಚ್ಚು ಬೆಳೆ ತೆಗೆದಹಾಗೆ ಅವುಗಳ ಕೊರತೆ ಹೆಚ್ಚಾಗಿ, ಅದು ಇಳುವರಿ ಮಿತಿಗೆ ಕಾರಣವಾಗಬಹುದು.

ಸೂಕ್ಷ್ಮ ಪೋಷಕಗಳ ಕೊರತೆ : ಇಳುವರಿ ಕಡಮೆ ಇರುವಾಗ, ಸೂಕ್ಷ್ಮ ಪೋಷಕಗಳ ಆವಶ್ಯಕತೆಯ ಪ್ರಮಾಣ ಸಹ ಕಡಮೆ ಇರುತ್ತದೆ. ಮಣ್ಣಿನಿಂದ ಇಲ್ಲವೇ ಕೆಡುವ ಕೊಟ್ಟಿಗೆ ಗೊಬ್ಬರಗಳ ಮೂಲಕ, ಈ ಆವಶ್ಯಕತೆ ಪೂರೈಕೆಯಾಗುತ್ತದೆ. ಹೆಚ್ಚು ಹೆಚ್ಚು ಬೆಳೆ ತೆಗೆಯುವ ತೀವ್ರಬೇಸಾಯದಲ್ಲಿ, ಈ ಸೂಕ್ಷ್ಮಪೋಷಕ ವಸ್ತುಗಳ ಆವಶ್ಯಕತೆ ಸಹ ಅಧಿಕವಾಗುತ್ತಾ ಹೋಗಿ ಅವು ಇಳುವರಿಗೆ ಮಿತಿಯಾಗಬಹುದು. ಇದಲ್ಲದೆ, ಸೂಕ್ಷ್ಮ ಪೋಷಕ ವಸ್ತುಗಳ ಒದಗುವಿಕೆ, ಉಳಿದ ವಸ್ತುಗಳ ಅತಿರೇಕ ಇಲ್ಲವೇ ಕೊರತೆಯನ್ನವಲಂಬಿಸುತ್ತದೆ. ಮಣ್ಣಿನ ರಸಸಾರ ಸ್ಥಿತಿ,ಅಂದರೆ ಮಣ್ಣಿನ ಗತಿ, ಹುಳಿಮ ಇಲ್ಲವೇ ಕ್ಷಾರವೇ ಎಂಬುವನ್ನು ಸಹ ಅವಲಂಬಿಸಿರುತ್ತದೆ. ಮಣ್ಣಿನಲ್ಲಿ ಇವುಗಳ ಪ್ರಮಾಣ ಅತ್ಯಲ್ಪ.ಈ ಕಾರಣದಿಂದ ಪ್ರಯೋಗಶಾಲೆಯಲ್ಲಿ ವಿಶ್ಲೇಷಣಾ ಕ್ರಮಗಳಿಂದ ಮಣ್ಣಿನಲ್ಲಿ, ಪೈರಿನಲ್ಲಿ ಇವುಗಳ ನಿಖರ ಮೊತ್ತವನ್ನು ಕಂಡುಕೊಳ್ಳುವುದು ಸಹ ಕಷ್ಟ.

ಗೊಬ್ಬರಗಳ ಪರಿಣಾಮ : ತೀವ್ರಬೇಸಾಯದಲ್ಲಿ ಹೆಚ್ಚು ಪ್ರಮಾಣದ ಗೊಬ್ಬರಗಳ ಪ್ರಯೋಗದ ಇನ್ನೊಂದು ಮುಖ್ಯ ಅಂಶ–ಮಣ್ಣಿನ ಮೇಲೆ ಅವುಗಳ ಪರಿಣಾಮ. ಮರಳು ಕಣ, ಗಾತ್ರ ಜೋಡಣೆಯುಳ್ಳ ಕೆಂಪು ಗೋಡು ಅಥವಾ ಕೆಂಪುಮರಳು ಮಣ್ಣುಗಳಲ್ಲಿ, ಪದೇ ಪದೇ ಅಮೋನಿಯಂ ಸಲ್ಫೇಟಿನಂಥ ಗೊಬ್ಬರಗಳನ್ನು ಹೆಚ್ಚು ಪ್ರಮಾಣದಲ್ಲಿ ಕೊಟ್ಟರೆ, ಕೇವಲ 2-3 ವರ್ಷಗಳಲ್ಲೇ ಅವು ಹುಳಿಯಾಗಿಬಿಡುತ್ತವೆ. ಹೆಬ್ಬಾಳದ ವ್ಯವಸಾಯ ಕಾಲೇಜಿನಲ್ಲಿ ಕೆಂಪುಗೋಡುಮಣ್ಣಿಗೆ ಪ್ರತಿ ಬೆಳೆಗೆ 160 ಪೌಂಡ್ ಸಾರಜನಕ, ಅಂದರೆ 800 ಪೌಂಡ್ ಅಮೋನಿಯ ಸಲ್ಫೇಟ್‌ನಂತೆ ಕೊಟ್ಟು 5 ಹೆಚ್ಚು ಇಳುವರಿ ಬೆಳೆಗಳನ್ನು ತೆಗೆದಾಗ ಮಣ್ಣಿನ ಪಿ.ಎಚ್. 6.5 ರಿಂದ 4.5 ಕ್ಕೆ ಇಳಿದದ್ದು ಕಂಡುಬಂದಿದೆ. ಹುಳಿ ತಾಳಲಾರದಂಥ ಬೆಳೆಗಳಿಗೆ, ಪಿ. ಎಚ್. ನಲ್ಲಿ ಇಷ್ಟು ತೀವ್ರ ಇಳಿಮುಖ ಹಾನಿಯನ್ನುಂಟು ಮಾಡುತ್ತದೆ. ಈ ಸ್ಥಿತಿ ಮಣ್ಣಿನಲ್ಲಿ ಪೋಷಕಗಳ ಒದಗುವಿಕೆಗೆ,ಸೂಕ್ಷ್ಮಜೀವಿ ಕ್ರಿಯೆಗೆ ಹಾಗೂ ಮತ್ತಿತರ ಅನೇಕ ಚಟುವಟಿಕೆಗಳಿಗೆ ಕುಂದನ್ನುಂಟು ಮಾಡುತ್ತದೆ. ತೀವ್ರಬೇಸಾಯದಲ್ಲಿ, ಗೊಬ್ಬರ ಕೊಡುವ ದೃಷ್ಟಿಯಿಂದ ಮಣ್ಣಿನ ಪರೀಕ್ಷೆ ಮಾಡಿ ಪೋಷಕಗಳ ಅಂಶವನ್ನು ಕಂಡುಕೊಳ್ಳುವುದು ಒಂದು ದೃಷ್ಟಿ. ಅಲ್ಲದೆ, ಮಣ್ಣಿನ ಸ್ಥಿತಿ ಹೇಗೆ ಬದಲಾಯಿಸುತ್ತದೆ, ದುಷ್ಪರಿಣಾಮಗಳೇನಾದರೂ ಆಗುತ್ತಿದ್ದರೆ ಅದನ್ನು ಹೇಗೆ ತಡೆಗಟ್ಟಬಹುದು–ಎಂಬ ದೃಷ್ಟಿಯಿಂದಲೂ ಆಗಾಗ್ಗೆ ಮಣ್ಣಿನ ಪರೀಕ್ಷೆ ಸೂಕ್ತ.

ಸಾರಾಂಶ : ಬೇಸಾಯದ ಪ್ರಗತಿಗೆ ಭೂಫಲವತ್ತು ಮತ್ತಿತರ ಸಂಬಂಧಪಟ್ಟ ವಿಷಯಗಳನ್ನು ಕುರಿತ ಅವ್ಯಾಹತ ಅಧ್ಯಯನ ಆವಶ್ಯಕ. ಒಂದು ವಿಷಯದಲ್ಲಿ ವಿಕ್ರಮ ಸಾಧಿಸಿದರೆ, ಇನ್ನೊಂದರ ಮಿತಿ ನಮ್ಮ ಮುಂದೆ ಬಂದು ನಿಲ್ಲುತ್ತದೆ. ಸಂಶೋಧನಾ ಶ್ರಮದಿಂದ ಅದರ ಪರಿಹಾರಕ್ಕೆ ಪ್ರಯತ್ನ ನಡೆಯಬೇಕು. ಪ್ರಸ್ತುತ ಸಾಗುತ್ತಿರುವ ಸುಧಾರಣೆ ಗತಿ ಅತಿಶೀಘ್ರ. ಪ್ರಗತಿಗೆ ಮಿತಿ ಒಡ್ಡಬಹುದಾದ ಅಂಶಗಳನ್ನು ಎದುರಿಸಿ, ಅದಕ್ಕೆ ಪರಿಹಾರ ಕಂಡುಕೊಳ್ಳದಿದ್ದರೆ, ಕೃಷಿ ಉದ್ಯಮ ನಷ್ಟದಲ್ಲಿ ಕೊನೆಗಾಣುತ್ತದೆ. ಹೆಚ್ಚು ಗೊಬ್ಬರ ತೆಗೆದುಕೊಂಡು ಹೆಚ್ಚು ಇಳುವರಿ ಕೊಡಬಲ್ಲ ಬೆಳೆಗಳು ಸಾಂಪ್ರದಾಯಿಕ ಬೆಳೆಗಳಿಗೆ ಹೋಲಿಸಿದಾಗ ಅವ್ಯಕ್ತ ಪೋಷಕ ಅಭಾವ ಇಲ್ಲವೇ ರೋಗರುಜಿನಾದಿಗಳಿಂದ ತೊಂದರೆಗೊಳಗಾಗುವ ಸಂಭವ ಹೆಚ್ಚು. ಇದು ನಮ್ಮ ಮುಂದಿರುವ ಸವಾಲು. ಆಧುನಿಕ ವಿಜ್ಞಾನ ನಮಗೆ ಅನೇಕ ಸಾಧನಗಳನ್ನು ಒದಗಿಸಿದೆ. ಅದರ ಸಹಾಯದಿಂದ ನಮ್ಮ ಮುಂದಿರುವ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದಲ್ಲದೆ, ಇನ್ನೂ ಹೆಚ್ಚಿನ ವಿಕ್ರಮ ಸಾಧಿಸಬಹುದೆಂಬ ಭರವಸೆಯೇ ನಮ್ಮ ಭವಿಷ್ಯಕ್ಕೆ ಊರುಗೋಲು.

ಶುದ್ಧಹೃದಯ ಜಗತ್ತಿನಲ್ಲಿರುವ ಎಲ್ಲಾ ಕಲೆಗಳಿಗಿಂತ ಅಮೂಲ್ಯವಾದುದು

—ಬುಲ್‌ವರ್‌ಲೈಟನ್

ಆರ್. ಶ್ರೀನಾಗೇಶ್

ಒಲಂಪಿಕ್ ಪಂದ್ಯಗಳು

ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ವಿಶ್ವದ ಯಾವುದಾದರೊಂದು ದೊಡ್ಡ ನಗರದಲ್ಲಿ 16 ದಿನಗಳಕಾಲ ಕ್ರೀಡೋತ್ಸವ ಜರುಗುತ್ತದೆ. ವಿವಿಧ ಕ್ರೀಡೆಗಳಲ್ಲಿ ನಡೆಯುವ ಈ ಅಂತರರಾಷ್ಟ್ರೀಯಸ್ಪರ್ಧೆಯಲ್ಲಿ ಭಾಗವಹಿಸುವುದೇ ಪ್ರತಿ ಕ್ರೀಡಾಪಟುವಿನ ಹೆಮ್ಮೆಯ ಆಕಾಂಕ್ಷೆ.

ಗ್ರೀಸ್ ದೇಶದ ಒಲಂಪಿಯ ಎಂಬ ಹಳ್ಳಿಯಲ್ಲಿ ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ಬಗೆಬಗೆಯ ಕ್ರೀಡಾಸ್ಪರ್ಧೆಗಳು ನಡೆಯುತ್ತಿದ್ದವು. ದಂತಕಥೆಗಳ ಪ್ರಕಾರ ಈ ಕ್ರಿಡಾಕೂಟಗಳ ಸಂಸ್ಥಾಪಕ ಹರ್ಕ್ಯುಲಿಸ್. ಆದರೆ ದಾಖಲೆಗಳು ದೊರೆತಿರುವುದು ಕ್ರಿ. ಪೂ. 884 ರಿಂದೀಚೆಗೆ ನಡೆದ ಸ್ಪರ್ಧೆಗಳದು ಮಾತ್ರ.

ಧಾರ್ಮಿಕಕ್ಷೇತ್ರವಾಗಿದ್ದ ಒಲಂಪಿಯದಲ್ಲಿ ನಡೆಯುತ್ತಿದ್ದ ನಾಲ್ಕು ವರ್ಷಗಳಂತರದ ಅವಧಿಯ ಕ್ರೀಡಾಕೂಟವೇ ಅಂದಿನ ಜನರಿಗೆ ಕ್ಯಾಲೆಂಡರ್. ಒಂದು ಕ್ರೀಡಾಕೂಟಕ್ಕೂ ಮತ್ತೊಂದು ಕ್ರೀಡಾಕೂಟಕ್ಕೂ ನಡುವಣ ಅಂತರವನ್ನು ಒಲಂಪಿಯಡ್ ಎಂದು ಕರೆಯುತ್ತಿದ್ದರು. ಸುಮಾರು ಒಂದು ತಿಂಗಳು ನಡೆಯುವ ಕ್ರೀಡಾಕೂಟದ ಅವಧಿಯಲ್ಲಿ ಜನ ಎಲ್ಲ ಕಲಹಗಳನ್ನು ಮರೆಯುತ್ತಿದ್ದರು.

ಕ್ರಮೇಣ ಇದು ಇತರ ದೇಶಗಳಿಗೂ ವ್ಯಾಪಿಸಿತು.ಆದರೆ ರೋಮ್ ಗ್ರೀಸ್‌ದೇಶವನ್ನು ಗೆದ್ದಾಗ ನೀರೋನಿನ ದಬ್ಬಾಳಿಕೆಯು ಕ್ರೀಡೆಗಳಿಗೆ,ಕ್ರೀಡಾಮನೋಭಾವಕ್ಕೆ ಮುಳುವಾಯಿತು.ಕಡೆಗೆ ಕ್ರಿ.ಶ. 394 ರಲ್ಲಿ ರೋಮನ್ ದೊರೆ ಥಿಯೊಡಸಿಸ್ ಈ ಕ್ರೀಡಾಕೂಟವನ್ನು ನಿಲ್ಲಿಸಿಬಿಟ್ಟ.

ಸಾವಿರದನಾನೂರು ವರ್ಷಗಳ ನಂತರ ಜರ್ಮನ್ ಹಾಗೂ ಫ್ರೆಂಚ್ ಪ್ರಾಚ್ಯಸಂಶೋಧಕರು ಸಂಶೋಧನೆ ನಡೆಸುತ್ತಿದ್ದಾಗ ಈ ಪ್ರಾಚೀನಕೂಟದ ಅವಶೇಷಗಳು ಅವರಿಗೆ ದೊರೆತವು. ಅನಂತರ ಅಂತರರಾಷ್ಟ್ರೀಯ ಸೌಹಾರ್ದತೆಯ ದ್ಯೋತಕವಾದ ಕ್ರೀಡಾಕೂಟದ ಪುನರುಜ್ಜೀವನಕಾರ್ಯ ಆರಂಭವಾಯಿತು.

ಆಧುನಿಕ ಒಲಂಪಿಕ್ ಕ್ರೀಡೆಗಳ ಜನಕ ಫ್ರೆಂಚ್ ಶಿಕ್ಷಣತಜ್ಞ ಬಾರನ್ ಡಿ ಕೂಬರ್ತಿ. ಈತನ ಸತತ ಪ್ರಯತ್ನಗಳಿಂದಾಗಿ 1894ರಲ್ಲಿ ಪ್ಯಾರಿಸನಲ್ಲಿ ಸುಮಾರು 12 ರಾಷ್ಟ್ರಗಳ ಪ್ರತಿನಿಧಿಗಳು ಸಭೆ ಸೇರಿ ಅಂತರರಾಷ್ಟ್ರೀಯ ಒಲಂಪಿಕ್ ಸಂಸ್ಥೆ ಸ್ಥಾಪಿಸಿದರು. ಕೂಬರ್ತಿ ಅದರ ಪ್ರಪ್ರಥಮ ಅಧ್ಯಕ್ಷನಾದ.

1896 ರಲ್ಲಿ ಗ್ರೀಸ್ ದೇಶದ ಅಥೆನ್ಸ್ ನಗರದಲ್ಲಿ ಪ್ರಪ್ರಥಮ ಒಲಂಪಿಕ್ ಪಂದ್ಯಾವಳಿಗಳು (ಆಧುನಿಕ) ನಡೆದವು.

ಮೊದಮೊದಲು ಒಲಂಪಿಕ್ ಕೂಟಗಳಲ್ಲಿ ಕುಸ್ತಿ, ಮುಷ್ಟಿಯುದ್ಧ, ಪೆಂಟಾಥ್ಲಾನ್ ಹಾಗೂ ಪಾಂಕ್ರೆಷನ್ (pankration) ಕ್ರೀಡೆಗಳು ಇದ್ದವು. (ಪಾಂಕ್ರೇಷನ್ ಅಂದರೆ ಕುಸ್ತಿ, ಮುಷ್ಟಿಯುದ್ಧಗಳ ಮಿಶ್ರವಾದ ಕ್ರೂರ ಆಟ). ಈಗ ಕನಿಷ್ಠ 25 ರಾಷ್ಟ್ರಗಳಲ್ಲಿ ಆಡಲ್ಪಡುವ ಎಲ್ಲ ಕ್ರೀಡೆಗಳೂ ಒಲಂಪಿಕ್ಸ್‌ನಲ್ಲಿ ಸೇರಿವೆ.

ಒಲಂಪಿಕ್‌ಕ್ರೀಡೆಗಳು ಯಾವಾಗಲೂ ದೇಶದ ಮುಖ್ಯಸ್ಥ-ರಾಜ ಅಥವಾ ಅಧ್ಯಕ್ಷ ಅಥವಾ ಸುಲ್ತಾನ-ರಿಂದ ಉದ್ಘಾಟಿಸಲ್ಪಡುತ್ತದೆ. ಸಾಂಪ್ರದಾಯಿಕವಾದ ಮಾರ್ಚ್‌ಪಾಸ್ಟ್‌ನಲ್ಲಿ ಒಲಂಪಿಕ್‌ಧ್ವಜ ಎಲ್ಲಕ್ಕಿಂತ ಮುಂದಿರುತ್ತದೆ. ಈ ಧ್ವಜದಲ್ಲಿ ಬಿಳಿಯ ವರ್ಣದ ಹಿನ್ನೆಲೆಯಲ್ಲಿ ಹಳದಿ, ಕಪ್ಪು, ಹಸುರು, ನೀಲಿ ಹಾಗೂ ಕೆಂಪು ಉಂಗುರಗಳು ಒಂದರೊಳಗೊಂದು ಸೇರಿಕೊಂಡಂತೆ ಇರುತ್ತವೆ. ಐದು ಖಂಡಗಳನ್ನು ಪ್ರತಿನಿಧಿಸುವ ಉಂಗುರಗಳ ಕೆಳಗೆ CITIUS, ALTIUS, FORTIUS—ಮತ್ತಷ್ಟು ವೇಗದಲ್ಲಿ, ಇನ್ನಷ್ಟು ಎತ್ತರಕ್ಕೆ, ಹೆಚ್ಚಿನ ಬಲದಿಂದ-ಎಂಬ ಪದಗಳಿರುತ್ತವೆ. ಈ ಧ್ವಜದ ರೂಪಕ ಕೂಬರ್ತಿ.

ಒಲಂಪಿಕ್‌ಪಂದ್ಯಗಳ ಪ್ರವರ್ತಕರು ಗ್ರೀಕರು. ಈ ಕಾರಣದಿಂದ ಮಾರ್ಚ್‌ಪಾಸ್ಟ್‌ನಲ್ಲಿ ಗ್ರೀಸ್‌ಗೆ ಅಗ್ರಸ್ಥಾನ. ಆತಿಥೇಯರಾಷ್ಟ್ರ ಎಲ್ಲ ರಾಷ್ಟ್ರಗಳಿಗಿಂತ ಹಿಂದೆ. ಉಳಿದೆಲ್ಲ ರಾಷ್ಟ್ರಗಳು ವರ್ಣಮಾಲೆಯ ಕ್ರಮದಲ್ಲಿ.

ಎಲ್ಲರೂ ತಂತಮ್ಮ ನಿಯತ ಸ್ಥಳಗಳನ್ನಾಕ್ರಮಿಸಿಕೊಂಡ ಕೂಡಲೆ ಕುಶಾಲ ತೋಪುಗಳು ಘರ್ಜಿಸುತ್ತವೆ. ಸಹಸ್ರಾರು ಪಾರಿವಾಳಗಳು ರೆಕ್ಕೆಗಳನ್ನು ಬಡಿಯುತ್ತ ಮೇಲು ಮೇಲಕ್ಕೆ ಹಾರುತ್ತವೆ.

ಅನಂತರ ಎಲ್ಲರ ಕಣ್ಣುಗಳೂ ಸ್ಟೇಡಿಯಂನಲ್ಲಿ ಓಡಿಬರುವ ಏಕೈಕ ಓಟಗಾರನತ್ತ ತಿರುಗುತ್ತವೆ. ಆತನ (ಆಕೆಯ) ಕೈಯಲ್ಲಿ ಉರಿಯುತ್ತಿರುವ ಪಂಜು ಇರುತ್ತದೆ. ಒಲಂಪಿಯದಲ್ಲಿ ಸೂರ್ಯರಶ್ಮಿಯಿಂದ ಹೊತ್ತಿಸಿಲ್ಪಟ್ಟ ಈ ಜ್ಯೋತಿಯನ್ನು ನೂರಾರು ರಿಲೇಓಟಗಾರರು ಹೊತ್ತು ಆತಿಥೇಯರಾಷ್ಟ್ರಕ್ಕೆ ತರುವರು. ಅಂತಿಮವಾಗಿ ಕ್ರೀಡಾಂಗಣವಲ್ಲಿಯ ಒಲಂಪಿಕ್‌ಜ್ಯೋತಿಯನ್ನು ಹೊತ್ತಿಸಿದಾಗ ಕ್ರೀಡಾಂಗಣದಲ್ಲಿ ಕರತಾಡನಗಳಿಂದ ಕಿವಿಗಡಚಿಕ್ಕುತ್ತದೆ. ಅನಂತರ ಒಲಂಪಿಕ್ ಪ್ರತಿಜ್ಞಾವಿಧಿಯ ಸ್ವೀಕಾರ :

We swear that we will take part in the olympic games in loyal competition, respecting the regulations which govern them and desirous of participating in them in the true spirit of sportsmanship, for the honour of our country and for the glory of sport.

ಮರುದಿನದಿಂದ ಆರಂಭ ಕ್ರೀಡೆಗಳ ಹಬ್ಬ, ಹದಿನೈದು ದಿನಗಳಕಾಲ ಜಗತ್ತಿನ ಮೂಲೆ ಮೂಲೆಗಳಿಂದ ಬಂದ ಸಹಸ್ರಾರು ಕ್ರೀಡಾಪಟುಗಳು ಅನೇಕ ಕ್ರೀಡೆಗಳಲ್ಲಿ ಸ್ಥಾನಗಳಿಗಾಗಿ ಸೆಣಸಾಡುವರು. ಹಲವರು ತಮ್ಮ ಜೀವನದ ಮಹಾದಾಕಾಂಕ್ಷೆಯಾದ ಒಲಂಪಿಕ್‌ಪದಕ ಪಡೆಯಲು ಮೊದಲನೆಯ ಬಾರಿಗೆ ಗೆಲುವು ಮಂಚವನ್ನೇರಿದರೆ ಮತ್ತೆ ಹಲವರು ಹಿಂದಿನ ನೆನಪನ್ನು ಮಾಡಿಕೊಡುವರೋ ಎಂಬಂತೆ ಎರಡನೆಯ ಬಾರಿ, ಮೂರನೆಯ ಬಾರಿ ಪದಕಗಳನ್ನು ಪಡೆಯುವರು. ಇನ್ನು ಹಲವು ಕ್ರೀಡಾಪಟುಗಳು ಒಂದೇ ಒಲಂಪಿಕ್‌ಕೂಟವಲ್ಲಿಯೇ ಹಲವಾರು ಪದಕಗಳನ್ನು ಪಡೆಯುವರು. ಈ ದಿಸೆಯಲ್ಲಿ ಅಮೆರಿಕದ ಮಾರ್ಕ್‌ಸ್ಪಿಟ್ಸ್ ಮ್ಯೂನಿಚ್‌ನಲ್ಲಿ ಏಳು ಸ್ವರ್ಣಪದಕಗಳನ್ನು (ಈಜುವಿಕೆಯಲ್ಲಿ) ಕಲೆಹಾಕಿ ನೂತನ ದಾಖಲೆ ಸ್ಥಾಪಿಸಿದ.

ಸುಮಾರು ಒಂದು ಲಕ್ಷ ಪ್ರೇಕ್ಷಕರ ಸಮ್ಮುಖದಲ್ಲಿ ಅಗ್ರಸ್ಥಾನಕ್ಕಾಗಿ ತೀವ್ರ ಸೆಣಸಾಟಗಳು ನಡೆದು ಅನೇಕ ದಾಖಲೆಗಳು ಮುರಿದುಬೀಳುತ್ತವೆ. ಗೆಲ್ಲಲಿ, ಸೋಲಲಿ, ಎಲ್ಲಕ್ಕಿಂತ ಮುಖ್ಯವಾಗಿ ಗೆಳೆತನ ಸೌಹಾರ್ದತೆಗಳು ಮೂಡುತ್ತವೆ. ಕೆಲವೊಮ್ಮೆ ಅಂತರರಾಷ್ಟ್ರೀಯ ಕ್ರೀಡಾಸ್ಪರ್ಧಿಗಳು ಒಲಂಪಿಕ್‌ಕೂಟವಲ್ಲಿಯೇ ಮದುವೆಯೂ ಆಗುವುದುಂಟು. ಹದಿನಾರು ದಿನಗಳ ಈ ಕ್ರೀಡಾಕೂಟ ಇದ್ದಕ್ಕಿದ್ದಂತೆ ಮುಗಿದುಹೋಗುವುದು.

ಒಲಂಪಿಕ್‌ಸಂಸ್ಥೆಯ ಅಧ್ಯಕ್ಷರಿಂದ ಒಲಂಪಿಕ್ ಧ್ವಜ ಕೆಳಗಿಳಿಸಲ್ಪಡುವುದು. ಪಂದ್ಯಗಳ ಅವಧಿಯಲ್ಲಿ ಹಗಲೂ ರಾತ್ರಿ ಉರಿದ ಒಲಂಪಿಕ್‌ಜ್ಯೋತಿ ನಂದಿಸಲ್ಪಡುವುದು. ಇಡೀ ಕ್ರೀಡಾಂಗಣ ಕತ್ತಲಲ್ಲಿ ಮುಳುಗಿದಾಗ ದೈತ್ಯಾಕಾರದ ಫಲಕವೊಂದರ ಮೇಲೆ ಮುಂದಿನ ಒಲಂಪಿಕ್‌ಕೂಟ ನಡೆಯುವ ನಗರದ ಹೆಸರು ನಿಯಾನ್‌ದೀಪಗಳಲ್ಲಿ ಕಂಡುಬರುವುದು. ಅಲ್ಲಿಗೆ ಆ ಬಾರಿಯ ಒಲಂಪಿಕ್‌ಕೂಟ ಮುಗಿದಂತೆ.

ಮೊದಲು ಗ್ರೀಕರಿಗೆ ಮಾತ್ರ ಸೀಮಿತವಾಗಿದ್ದ ಒಲಂಪಿಕ್ ಕ್ರೀಡಾಕೂಟ ಕ್ರಮೇಣ ಇತರ ದೇಶೀಯರಿಗೂ ತೆರೆಯಲ್ಪಟ್ಟಿತು. ಆಧುನಿಕ ಒಲಂಪಿಕ್‌ಪಂದ್ಯಗಳಲ್ಲಿ ಅನೇಕ ಬದಲಾವಣೆಗಳು ಬಾರಿಬಾರಿಗೂ ಕಾಣಿಸಲಾರಂಭಿಸಿದವು. ಕೇವಲ ಹವ್ಯಾಸೀ ಕ್ರೀಡಾಪಟುಗಳಿಗೆ ಮಾತ್ರ ಅವಕಾಶವಿರುವ ಒಲಂಪಿಕ್ ಕೂಟದಲ್ಲಿ ಪ್ರತಿಬಾರಿಗೂ ಸ್ಪರ್ಧಿಗಳ ಸಂಖ್ಯೆ ಹೆಚ್ಚುತ್ತಲಿದೆ. 1896ರಲ್ಲಿ 13 ರಾಷ್ಟ್ರಗಳು ಭಾಗವಹಿಸಿದ್ದುವಾದರೆ ಕಳೆದ ಮ್ಯೂನಿಚ್ ಒಲಂಪಿಕ್ಸ್‌ನಲ್ಲಿ ಸುಮಾರು 122 ರಾಷ್ಟ್ರಗಳಿಂದ 10,000 ಕ್ಕೂ ಹೆಚ್ಚಿನ ಸ್ಪರ್ಧಿಗಳು, ನಾಲ್ಕುಸಾವಿರ ಪತ್ರಿಕಾ ಪ್ರತಿನಿಧಿಗಳು ಭಾಗವಹಿಸಿದ್ದರು.

ಒಲಂಪಿಕ್ಸ್ ಯುದ್ಧಗಳನ್ನು ಕೊನೆಗಾಣಿಸಲು, ಸೌಹಾರ್ದತೆ ಬೆಳೆಸಲು ಸಹಾಯಕ. ಆದರೆ ಪವಿತ್ರವಾದ ಒಲಂಪಿಕ್‌ಕ್ರೀಡಾಕೂಟಗಳು ಸಹ ಮಾನವನ ಅನಾಗರಿಕತೆಗೆ ಹೊರತಾಗಿಲ್ಲ. 1916, 1940 ಹಾಗೂ 1944 ರಲ್ಲಿ ಜಾಗತಿಕ ಯುದ್ಧಗಳ ಕಾರಣ ಒಲಂಪಿಕ್‌ಪಂದ್ಯಗಳೇ ನಡೆಯಲಿಲ್ಲ. ಆದರೆ 1972 ರಲ್ಲಿ ಮ್ಯೂನಿಚ್‌ನಲ್ಲಿ ಆದ ದುರಂತ ಪ್ರಾಯಶಃ ಎಂದಿಗೂ ಮರೆಯಲಾಗದಂತಹ ಘಟನೆ. ಕ್ರೀಡಾಮನೋಭಾವ ಗಾಳಿಗೆ ತೂರಲ್ಪಟ್ಟು ಹನ್ನೊಂದು ನಿರಪರಾಧೀ ಇಸ್ರೇಲ್ ಕ್ರೀಡಾಪಟುಗಳು ಕಗ್ಗೊಲೆಗೀಡಾಗಿ ಆಧುನಿಕ ಒಲಂಪಿಕ್‌ಪಂದ್ಯಗಳನ್ನು ಕಳಂಕಗೊಳಿಸಲಾಯಿತು.

ಇಂತಹ ದುರಂತಗಳು 1976 ರ ಮಾಂಟ್ರಿಯಾಲ್ ಒಲಂಪಿಕ್ಸ್‌ನಲ್ಲಿಯಾಗಲೀ ಅಥವಾ ಅನಂತರದ ಯಾವುದೇ ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿಯಾಗಲೀ ನಡೆಯದು ಎಂದು ಆಶಿಸೋಣ.

'ಯಾರಿಂದ ಎಲ್ಲವೂ ಬಂದಿದೆಯೋ, ಯಾರಲ್ಲಿ ಎಲ್ಲವೂ ಜನಿಸಿದೆಯೋ, ಎಲ್ಲಿಗೆ ಕೊನೆಗೆ ಎಲ್ಲವೂ ತೆರಳುವುದೋ ಅದೇ ದೇವರು.'

ತದ್ದಲಸೆ ವಿಶ್ವೇಶ್ವರಯ್ಯ

ಬದುಕಿನಲ್ಲಿ ಹೊಸದೃಷ್ಟಿ

ಬದುಕಿನಲ್ಲಿ ಹೊಸದೃಷ್ಟಿಯ ಆವಶ್ಯಕತೆ ಯಾವಾಗಲೂ ಇರುತ್ತದೆ. ಪ್ರಪಂಚ ಪರಿವರ್ತನಶೀಲವುಳ್ಳದ್ದರಿಂದ ಈ ಪರಿವರ್ತನೆಗೆ ತಕ್ಕಂತೆ ನಮ್ಮ ಬದುಕೂ ರೂಪುಗೊಳ್ಳುತ್ತಹೋಗಬೇಕು. ನಿನ್ನೆ ಇದ್ದಂತೆ ಇಂದು ಯಾವುದೂ ಇರಲಾರದು ; ಹೊಸಹೊಸ ಆವಿಷ್ಕಾರಗಳು ಪರಿಷ್ಕಾರಗಳು ಆಗುತ್ತಲೇ ಇರುತ್ತವೆ. ಹಾಗಾಗಿ ನಾವೂ ಸಹ ಅದರ ಮೂಲ-ನೆಲೆ-ಗುರಿ-ಪರಿಗಳನ್ನು ಅನ್ವೇಷಿಸುವುದರಲ್ಲಿ ಯಶಸ್ವಿಗಳಾದರೆ ಮಾತ್ರ ಬದುಕನ್ನು ಸರಿಯಾಗಿ ಗೆಲ್ಲುವುದರಲ್ಲಿ ಸಮರ್ಥರಾಗುತ್ತೇವೆ. ಇಲ್ಲದಿದ್ದರೆ ಅದರ ಉದ್ದೇಶ ಆದೇಶಗಳು ನಶಿಸಿಹೋಗಬಹುದಾಗಿದೆ.

ಜಗತ್ತು ಹೊಸತನವನ್ನು ಬಯಸಿ ಬೆಳೆಸುತ್ತ ಬಂದಿರುವುದು ಸರ್ವವೇದ್ಯ ; ಮಂಗತನದಿಂದ ಮಾನವತೆಯತ್ತ ಸಾಗಿಬಂದಿರುವುದನ್ನು ನಮ್ಮ ಇತಿಹಾಸ ತಿಳಿಸುತ್ತದೆ. ಶಿಲಾಯುಗದಿಂದ ಲೋಹಯುಗದವರೆಗಿನ ಅವಸ್ಥಾಂತರಗಳನ್ನು ಗಮನಿಸಿದಾಗ ಹೊಸ ಅನ್ವೇಷಣೆ ಹೊಸ ದೃಷ್ಟಿ ಎಷ್ಟು ತೀವ್ರವಾಗಿ ನಡೆಯಿತೆಂಬುದರ ಕಲ್ಪನೆ ಬರುತ್ತದೆ. ಹೊಸ ದೃಷ್ಟಿ ಮೂಡದೇ ಹೊಸತನ್ನು ಸ್ವಾಗತಿಸದೇ ಇದ್ದಿದ್ದರೆ ಇಷ್ಟೆಲ್ಲ ಸುಧಾರಣೆ-ಬದಲಾವಣೆಗಳು, ಬದುಕಿನ ಸಾಧನ-ಸೌಕರ್ಯಗಳು ಉಂಟಾಗುತ್ತಲೇ ಇರಲಿಲ್ಲ. ಇಷ್ಟೇಅಲ್ಲ; ಅದನ್ನು ಸಾಧಿಸಿಕೊಳ್ಳುವಲ್ಲಿ ಮುಂದಾಗಬೇಕೆಂಬ ಭಾವನೆಯಾಗಲೀ, ಬದುಕಿನ ಯತಾರ್ಥ ಅರ್ಥವಾಗಲೀ ನಮಗೆ ಉಂಟಾಗುತ್ತಲೇ ಇರಲಿಲ್ಲವೋ ಎಂಬ ಸಂಶಯವೂ ಬರುತ್ತದೆ.

ಹೊಸ ಅನ್ವೇಷಣೆ : ನೀರು ನಿಂತಲ್ಲಿಯೇ ನಿಲ್ಲುವುದರಿಂದ ಅದು ಮಲಿನವಾಗುತ್ತದಲ್ಲದೆ ಕ್ರಮೇಣ ಬಳಕೆಗೂ ನಿರುಪಯುಕ್ತವೆನ್ನಿಸುತ್ತದೆ. ಅದರಲ್ಲಿ ಚಲನೆ ನಡೆದು ಹೊಸತರ ಉದಯಕ್ಕೆ ಆಸ್ಪದ ನೀಡುವಂತಿರಬೇಕು. ಹಾಗೆಯೇ ನಮ್ಮ ವಿಚಾರದಲ್ಲಿಯೂ ಹೊಸ ಅನ್ವೇಷಣೆ, ಜೀವನಜಿಜ್ಞಾಸೆ-ಮೀಮಾಂಸೆ ನಡೆಯದಿದ್ದರೆ ಮನಸ್ಸು ಜಡವಾಗುವುದರಲ್ಲಿ ಸಂಶಯವೇ ಇಲ್ಲ. ಪ್ರಪಂಚದ ಹೊಸಬೆಳಕು, ಹೊಸಗಾಳಿ ನಮ್ಮ ಚೈತನ್ಯಕ್ಕೊಂದು ಆಹ್ವಾನ ನೀಡಿದಂತೆ, ತನ್ನನ್ನು ಅರ್ಥೈಸಿಕೊಳ್ಳಲು ಕೈಬೀಸಿ ಕರೆದಂತೆ ಇದೆ. ಪ್ರಕೃತಿಯಲ್ಲಿ ಕ್ಷಣಕ್ಷಣಕ್ಕೂ ಬದಲಾಗುತ್ತಿರುವ ಭಾವತರಂಗಗಳ ಪ್ರಜ್ಞೆ ಬೆಳದಷ್ಟು, ಯೋಗಸಾಧನೆಗಳನ್ನು ತಿಳಿದಷ್ಟು ನಾವು ಬದುಕನ್ನು ಗೆಲ್ಲುವುದರಲ್ಲಿ ಮುಂದೆ-ಮುಂದೆ ಸಾಗುತ್ತೇವೆ.

ಯಾವುದೂ ಒಮ್ಮೆಲೇ ಮೇಲಕ್ಕೆ ಸಾಗುವುದಿಲ್ಲ. ಹಂತಹಂತವಾಗಿ ಅದು ಬಲಗೊಳ್ಳುತ್ತ, ನೆಲೆಯೂರುತ್ತ ನಡೆಯಬೇಕು ; ನಿಲ್ಲಬೇಕು. ಶಿಶುತನದಲ್ಲಿ ನಾವು ಅಂಬೆಗಾಲಿಕ್ಕುತ್ತ ಮತ್ತೆ ಕೆಲವು ದಿನಗಳಲ್ಲಿ ಹೆಜ್ಜೆಯಿಡುತ್ತ ಬೆಳೆದಂತೆ ನಮ್ಮ ಬದುಕಿನ ಬೆಳವಣಿಗೆಯೂ ಆಗಾಗ ಮುನ್ನಡೆಯುತ್ತ ಇರಬೇಕು. ನಿನ್ನೆ ಇದ್ದಂತೆಯೇ ಇಂದೂ ಇದ್ದರೆ ನಮ್ಮ ಬದುಕಿನಲ್ಲಿ ಹೊಸ ಆಕರ್ಷಣೆಯೇ ಆಗದು ; ಪ್ರಗತಿ ಶೀಲತೆಯೇ ಬಾರದು. ಹಾಗಾಗಿ

ಬದುಕನ್ನು ಮುನ್ನಡೆಸುವಲ್ಲಿ ಹೊಸ ಅನ್ವೇಷಣೆ ಅತ್ಯಂತ ಆವಶ್ಯಕ. ಆದರೆ ಇದರಲ್ಲಿ ಆಯಾ ವ್ಯಕ್ತಿಗೆ ಕಂಡ ಅಂಶವೇ ಸರಿಯೆಂದು ಯಾವಾಗಲೂ ತಿಳಿಯಬಾರದು. ಅದು ಅಂದಿನ ಪ್ರಪಂಚಕ್ಕೆ ಆವಶ್ಯಕವೇ ? ಅಪೇಕ್ಷಣೀಯವೇ ? ಎಂದು ವಿಚಾರಿಸುವುದೂ ಇಲ್ಲಿ ಮುಖ್ಯ. ನಮ್ಮದು ಪ್ರಗತಿಶೀಲಧರ್ಮ, ಅದರ ವಿಕಾಸ-ವಿಸ್ತಾರಕ್ಕೆ ಹೊಸತನಬೇಕು. ಆದರೆ ಅದು ಲೋಕದ, ಸಮಾಜದ ಸ್ವಾಸ್ಥ್ಯವ್ಯವಸ್ಥೆಗೆ ಎಂದೂ ಆತಂಕಕಾರಿಯಾಗ ಕೂಡದು. ಅಂಥ ರೀತಿ, ನೀತಿಗಳ ಸಮನ್ವಯ ಹೊಸ ದೃಷ್ಟಿ ನಮ್ಮಲ್ಲಿ ಬರಬೇಕಾಗಿದೆ, ಬೆಳೆಯಬೇಕಾಗಿದೆ.

ಪ್ರಕೃತಿ ನೀಡಿದ ಸಂದೇಶ : ಪ್ರಕೃತಿಯಲ್ಲಿ ದಿನವೂ ಹೊಸಚೆಲುವು ಮೂಡುತ್ತಿರುವುದನ್ನು ಎಲ್ಲರೂ ಕಾಣುತ್ತಾರೆ. ಈ ಚೆಲುವಿನಲ್ಲಿ ಹೊಸತನವಿಲ್ಲದಿದ್ದರೆ ಅದರ ಸೌಂದರ್ಯದ ಸವಿಯನ್ನು ಸವಿಯುವಲ್ಲಿ ಆಸಕ್ತಿ, ಆಕರ್ಷಣೆಯೇ ಆಗುತ್ತಿರಲಿಲ್ಲ. ನಿನ್ನೆಯಂತೆಯೇ ಹೂವು ಇಂದು ಅರಳುತ್ತಿದ್ದರೂ ಅದರಲ್ಲಿ ಹೊಸ ಅಂಶ ಇದ್ದೇ ಇದೆ. ಈ ಹೊಸತನಕ್ಕಾಗಿ ಮತ್ತೆ ಮತ್ತೆ ನೋಡುವಾಸೆ. ಬದುಕಿನ ಅರ್ಥವೂ ಹೀಗೆಯೇ ಇದೆ. ಉದಾತ್ತ ಆದರ್ಶಗಳನ್ನು ಅದು ಅನ್ವೇಷಿಸದಿದ್ದರೆ ಅದರ ಪುರುಷಾರ್ಥವೋ, ಪರಮಾರ್ಥವೋ ಹೇಗೆ ಸಾಧಿಸೀತು ? ಜಗತ್ತು ನಿನ್ನೆ ಇದ್ದಂತೆ ಇಂದು ಇರುವಂತಿಲ್ಲ. ಅದರಲ್ಲಿ ಹಲವು ಪರಿವರ್ತನೆ ಆಗುತ್ತಿರುತ್ತದೆ. ಅಂದಾಗ ಜೀವನದ ಪರಿವರ್ತನೆಯ ಅರ್ಥವನ್ನು ಗ್ರಹಿಸದಿದ್ದರೆ ಹೇಗಾದೀತು ?

ಗಿಡದಲ್ಲಿ ಹೊಸ ಹೊಸ ಚಿಗುರು ಆಗದಿದ್ದರೆ ಅದು ಎತ್ತರಕ್ಕೆ ಸಾಗುವಂತಿಲ್ಲ, ನಿಂತಲ್ಲಿಯೇ ಇದ್ದರೆ ಅಲ್ಲಿ ಚೈತನ್ಯವೇ ಇಲ್ಲವೇನೋ ಎಂದೆನಿಸುತ್ತದೆ. ಹಾಗೆ ಬದುಕಿನ ವಾಚನ, ಚೇತನ ಅದನ್ನು ಎತ್ತರಕ್ಕೆ ಏರಿಸುವಹಾಗೆ ಇರಬೇಕು. ದಿನವೂ ಲೋಕದ ಅಪೇಕ್ಷೆಯನ್ನು ಅರ್ಥೈಸಿಕೊಳ್ಳುವ ಹೊಸ ದೃಷ್ಟಿ ಉದಯಿಸಬೇಕು. ನಾವು ಸರಿಯಾಗಿ ಸೂಕ್ಷ್ಮವಾಗಿ ವಿಚಾರಿಸಿದರೆ ಪ್ರಕೃತಿಯ ಪಾಠಶಾಲೆಯಲ್ಲಿ ಇದು ನಿತ್ಯವೂ ಬೋಧನೆಯಾಗುತ್ತಿದೆ.

ಜೀವನ್ ಭದ್ರಾಣಿ ಪಶ್ಯತಿ : ನಮ್ಮ ದರ್ಶನಕಾರರು ಹೇಳಿದ ಒಂದು ಮಾತು ಇದು– "ಜೀವನ್ ಭದ್ರಾಣಿ ಪಶ್ಯತಿ" ಎಂದು. ನೀನು ಜೀವಿಸಿದರೆ ಮಂಗಲಾ ಕಾಣುವಿ ಎಂಬುದು ಇದರ ತಾತ್ಪರ್ಯ. ಆದರೆ ಕೇವಲ ಬದುಕವುದೊಂದೇ ಇದರ ಅರ್ಥವಲ್ಲ. ಮಂಗಲ ಕಾಣುವ ಹಾಗೆ ಬದುಕಬೇಕೆಂಬುದು ಇಲ್ಲಿ ಸೂಚನೆ, ಪ್ರೇರಣೆ. ಅಂದರೆ ಒಳ್ಳೆಯದಕ್ಕಾಗಿ ಬದುಕು, ಒಳಿತಿಗಾಗಿ ದುಡಿ, ಎಂಬ ಅರ್ಥ ಇಲ್ಲಿ ಧ್ವನಿತವಾಗುತ್ತದೆ. ಹೇಗಾದರೂ ಬದುಕು, ಹೇಗೆ ಬದುಕಿದರೂ ಮಂಗಲ ಕಾಣುವಿ ಎಂಬ ಆಶಯ ನಮ್ಮ ದರ್ಶನಕಾರರದು ಇದ್ದಿದ್ದರೆ ಅವರು ಇಷ್ಟೆಲ್ಲ ಬದುಕಿನ ಸೂತ್ರಗಳನ್ನು, ನಿಯಮ-ನಿಷ್ಠೆಗಳನ್ನು ರಚಿಸಲು ಹೋಗುತ್ತಲೇ ಇರಲಿಲ್ಲ. ಅದಕ್ಕೆ ಇಷ್ಟು ಕಟ್ಟುನಿಟ್ಟಾದ ಬಂಧನವನ್ನೂ ಮಾಡುತ್ತಿರಲಿಲ್ಲ.

ಲೋಕವಿರುವುದು ನಮಗಾಗಿ ಮಾತ್ರ[illegible]ಲ್ಲ. "ಸರ್ವೇಜನಾಃ ಸುಖಿನೋ ಭವಂತು" ಎಂಬಂತೆ ಎಲ್ಲರೂ ಸುಖಿಗಳಾಗಿ ಬದುಕಬೇಕೆಂಬುದೇ ನಮ್ಮ ಶಾಸ್ತ್ರಗಳ ಆದೇಶ, ಅಪ್ಪಣೆ ಎಂದರೂ ಸರಿ. ಒಬ್ಬನ ಬದುಕು ಇನ್ನೊಬ್ಬನ ಬದುಕಿಗೆ ತೊಂದರೆ ತರದಂತೆ ಪ್ರಾಮಾಣಿಕವಾಗಿ ಸಾಗುವುದು ಅದರ ಪ್ರಮುಖ ದಾರಿ, ಇದನ್ನು ಹೇಗೆ ನಿರ್ಮಿಸಿಕೊಳ್ಳಬೇಕೆಂಬುದನ್ನು ಹೇಳುವುದಕ್ಕಾಗಿಯೇ ಅಸಂಖ್ಯ ಶಾಸ್ತ್ರಗಳಿವೆ, ಅಸಂಖ್ಯ ಸೂಕ್ತಿಗಳಿವೆ. ಎಲ್ಲದರಲ್ಲಿಯೂ ಮೂಲಸತ್ವ-ತತ್ತ್ವಗಳು ಒಂದೇ: ಬದುಕು ಕೇವಲ ಬದುಕುವುದಕ್ಕಾಗಿ ಮಾತ್ರವಲ್ಲ ; ಅದರ ಮೌಲ್ಯಸಾಧನೆಗಾಗಿ, ಮಂಗಲಕರ ಮಹತ್ತಿಗಾಗಿ. ಈ ದೃಷ್ಟಿ ನಮ್ಮಲ್ಲಿ ಮೂಡಬೇಕು, ಹೃದಯದ ಕಣ್ಣಿಗೆ. ಮನಸ್ಸಿನ ಭಾವನೆಗೆ ತಿಳಿಯಬೇಕು.

ಪ್ರಕೃತಿಯ ಸಂಪತ್ತುಗಳಾದ ಬೆಳಕು, ಗಾಳಿ, ನೀರು ಮುಂತಾದವೆಲ್ಲ ಕೆಲವೇ ಜನಕ್ಕಾಗಿ ಇರುವುದಿಲ್ಲ. ಅದನ್ನು ಬಳಸಿಕೊಳ್ಳತಕ್ಕ ಎಲ್ಲರಿಗೂ ಸಮನಾಗಿಯೇ ಅದರ ಉಪಯೋಗ ದೊರೆಯುತ್ತದೆ. ಲೋಕದ ಕಲ್ಯಾಣವಿಲ್ಲಿ ಸಾಪೇಕ್ಷ್ಯವಾಗಿದ್ದುದು ಗಮನಾರ್ಹ. ಪ್ರಕೃತಿಯ ಉದಾರ ಕೊಡುಗೆಯಲ್ಲಿ ಈ ಪ್ರೇರಣೆ ಹೆಜ್ಜೆ

ಹೆಜ್ಜೆಗೂ ಸಿಗುತ್ತದೆ. ಅದರ ಚರಿತ್ರೆ–ಚಿತ್ರಣದಲ್ಲಿ ಈ ಸಂದೇಶ ಸಾಕಷ್ಟು ವ್ಯಕ್ತವೂ ಆಗುತ್ತದೆ. ಅಂತೆಯೇ ನಮ್ಮ ದುಡಿಮೆಯ ದೃಷ್ಟಿಯಲ್ಲಿಯೂ ಲೋಕಪ್ರಜ್ಞೆಯಿರಬೇಕಾದುದು ಅವಶ್ಯ.

ದುಡಿದು ಉಂಣು : ಮನುಷ್ಯಜೀವನವು ಭೋಗಪ್ರಧಾನವೇ ಅಥವಾ ಕರ್ಮಪ್ರಧಾನವೇ ? ಈ ಜಿಜ್ಞಾಸೆ ಎಂದಿನಿಂದಲೋ ಇದೆ. ಮಾನವ ತನ್ನ ಕರ್ತವ್ಯಪಾಲನೆಗಾಗಿ ಬದುಕುವುದೇ ಅಥವಾ ವಿವಿಧ ಭೋಗಗಳಿಗಾಗಿ ಬದುಕುವುದೇ ಎಂಬ ಪ್ರಶ್ನೆಗೆ ಋಗ್ವೇದದಲ್ಲಿ ಉತ್ತರ ದೊರೆಯುತ್ತದೆ—

"ಮೋಘಮನ್ನಂ ವಿಂದತೆ ಅಪ್ರಚೇತಾಃ" ಸತ್ಯಂಬ್ರವೀಮಿವಧ ಇತ್ಸತಸ್ಯ, ನಾರ್ಯಮಾಣಂ ಪುಷ್ಯತಿನೋ ಸಖಾಯಂ, ಕೇವಲಾಘೋ ಭವತಿ ಕೇವಲಾದೀ ॥

ಬುದ್ಧಿಯಿಲ್ಲದ ಮನುಷ್ಯ ಪರಿಶ್ರಮ ಮಾಡದೇ, ಕರ್ತವ್ಯ ಪಾಲಿಸದೇ ವಿವಿಧ ಭೋಗಗಳನ್ನು ಅನುಭವಿಸಲು ಬಯಸುತ್ತಾನೆ. ಸತ್ಯವಾಗಿ ಹೇಳುವುದಾದರೆ ಹಾಗೆ ಮಾಡತಕ್ಕವನು ತನ್ನನ್ನು ತಾನೇ ನಾಶಮಾಡಿಕೊಳ್ಳುತ್ತಾನೆ. ಯಾರು ಧರ್ಮಕ್ಕಾಗಿ, ಸಮಾಜಕ್ಕಾಗಿ ದೇಶದ ಹಿತಕ್ಕಾಗಿ ಸಂಪತ್ತನ್ನು ವ್ಯಯಮಾಡದೇ ತನ್ನ ಸ್ವಂತ ಸುಖಕ್ಕಾಗಿ ಮಾತ್ರವೇ ಉಪಯೋಗಿಸುವನೋ ಅವನು ಒಳ್ಳೆಯವನು ಆಗಲಾರ, ಗೀತೆಯೂ ಸಹ—"ಬೇರೆಯವರಿಗೆ ನೀಡದೆ ಉಂಣುವುದು ಧರ್ಮಾವೆನಿಸಲಾರದು" ಎಂದು ಎಚ್ಚರಿಸುತ್ತದೆ.

ಈ ಕಾರಣದಿಂದ ನಮ್ಮ ದುಡಿಮೆ, ಬದುಕಿನ ಕ್ಷೇತ್ರದಲ್ಲಿ ನಮ್ಮ ಕೃತಿ ಹೇಗಿರಬೇಕೆಂಬುದನ್ನು ವಿಚಾರಿಸಿಕೊಳ್ಳುವುದು ಅತ್ಯಂತ ಮಹತ್ವದ ಸಂಗತಿ. ನಾವು ಉಂಣುವಾಗ ದುಡಿದೇ ಉಂಣಬೇಕೆಂಬುದು ಶಾಸ್ತ್ರಗಳ ಶಾಸನ. ಅದರಲ್ಲೂ ಒಬ್ಬರ ಅಭಿಮತವೆಂದರೆ—"ದುಡಿಯದೇ ಇರುವವನು ಬದುಕಿರಲೂ ಅಯೋಗ್ಯ" ಎಂದು. ಅಂದಾಗ ಬದುಕಿನ ಮುಖ್ಯ ಸೂತ್ರ ದುಡಿಮೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಹಾಗೂ ದುಡಿಯದೇ ಇರುವುದು ನೈತಿಕವಾಗಿ ದೊಡ್ಡ ಅಪರಾಧವೆಂಬುದೂ ಸೂಚ್ಯವಾಗುತ್ತದೆ.

ನಮ್ಮ ಬದುಕಿಗೆ ಅನೇಕ ವ್ಯಕ್ತಿ-ಶಕ್ತಿ–ಸಂಗತಿಗಳ, ಸಂಬಂಧ–ಸಹಕಾರ, ಸಹಾನುಕೂಲ ಸೇರಿಕೊಂಡಿರುತ್ತದೆ. ಸಮಾಜದ ಸಹಾನುಭೂತಿಯೂ ಒಳಗೊಂಡಿರುತ್ತದೆ. ಇದನ್ನೆಲ್ಲ ಬಳಸಿಕೊಂಡು ಬದುಕುವ ನಾವು ಅವಕ್ಕೆ ಪ್ರತಿಯಾಗಿ ದುಡಿಯದಿದ್ದರೆ ಸಮಾಜದ ಋಣ ನಮ್ಮ ಮೇಲೆ ಅಧಿಕವಾಗುತ್ತದೆ. ಸಾಧ್ಯವಾದಷ್ಟೂ ದುಡಿದೇ ಉಂಣುವ ಒಂದು ಕಟ್ಟುನಿಟ್ಟಾದ ವ್ರತ ಪಾಲಿಸುತ್ತ ಬಂದರೆ ಅಂಥವರಿಂದ ಸಾಮಾಜಿಕವಾಗಿ ತೊಂದರೆ ಅಥವಾ ಶೋಷಣೆಯಾಗುವುದಿಲ್ಲ. ಬದುಕಿನ ಭಾರ ಸಮಾಜಕ್ಕೆ, ಲೋಕಕ್ಕೆ ಆಗದೇ ಇರುವ ಹಾಗೆ ನೋಡುವುದು ಆಯಾ ವ್ಯಕ್ತಿಯ ಹೊಣೆ. ಭೂಮಿಯಿಂದ ಹೆಚ್ಚು ಫಸಲು ಪಡೆಯಬೇಕಾದರೆ ತಕ್ಕ ಪೋಷಣೆ ನೀಡಬೇಕಾಗುತ್ತದೆ. ಇಲ್ಲದಿದ್ದರೆ ಅದು ಕ್ರಮೇಣ ಬರಡಾದಂತೆ ಸಮಾಜದ, ಲೋಕದ ಸಹಕಾರ ಪಡೆಯುವ ನಾವೂ ಅದಕ್ಕೆ ತಕ್ಕ ಸೇವೆ ನೀಡದಿದ್ದರೆ ಅದು ಹೇಗೆ ಬೆಳೆಯುತ್ತದೆ ? ಈಶಾವಾಸ್ಯ ಉಪನಿಷತ್ತಿನ ಒಂದು ಧ್ವನಿತದ ಮಾತು ಶೀರ ಎಚ್ಚರಿಸುತ್ತದೆ. "ತೇನ ತ್ಯಕ್ತೇನ ಭುಂಜೀಥಾಃ" ಅಂದರೆ ಕೃಷಿಯೇ ಈಶ್ವರನ ಸೇವೆ. ಅದರಿಂದ ಲಭ್ಯವಾದದ್ದೇ ಈಶ್ವರನಿಂದ ಕೊಡಲ್ಪಟ್ಟದ್ದು, ಅದನ್ನು ತಿಂದು ಬದುಕುವುದೇ ಇಂದಿನ ಮಾನವ ಧರ್ಮ–ಈ ಸೂಚ್ಯವಾದ ಅಂಶ ನಮಗೆ ಅದರಲ್ಲಿ ಸಿಗುತ್ತದೆ. ಬೆಳಕು, ಹವೆ, ಮಂಣು, ಮುಂತಾದ ನಿಸರ್ಗದ ಸ್ವಭಾವ–ಪ್ರಭಾವಗಳನ್ನು ಧಾರಾಳವಾಗಿ ಉಪಯೋಗಿಸಿಕೊಳ್ಳುವ ನಾವು ನಿಸರ್ಗಕ್ಕೂ ಸೇವೆ ಸಲ್ಲಿಸಿ ಗೌರವಿಸದಿದ್ದರೆ ಅದು ಮುನಿದುಕೊಳ್ಳುವ ಸಂಭವವುಂಟು. ನಿಸರ್ಗದ ಪ್ರಕೋಪ, ಪ್ರತಿಕೂಲಗಳು ಉಂಟಾದರೆ ಬದುಕಿನ ಎಲ್ಲ ವ್ಯವಸ್ಥೆ ಹದಗೆಟ್ಟು ಹೋಗಬಹುದು. ಹಾಗಾಗಿ ಬದುಕಿನಲ್ಲಿ ದುಡಿಮೆಯ ಹೊಸ ದೃಷ್ಟಿ, ಆದರ್ಶದ ಧರ್ಮದೃಷ್ಟಿ ಇರಬೇಕಾದದ್ದು ಅತ್ಯಂತ ಅವಶ್ಯ.

ಆಯ್. ಆಯ್. ಕಳಕಣ್ಣವರ

ಪ್ರಭು ಪ್ರೇರಣೆ

ಮಾನವನು ಇಂದಿನ ವೈಜ್ಞಾನಿಕಯುಗದ ಕ್ಲಿಷ್ಟಮಯವಾದ ಪರಿಸರಣದಲ್ಲಿ ಸಿಲುಕಿ ತನ್ನ ಘನತೆ ಏನು ? ತನಗೆ ಆಂತರಿಕವಾಗಿ ಶಕ್ತಿಯನ್ನು, ಚೇತನವನ್ನೀಯುವ ಪ್ರಭುವಿನ ಪ್ರೇರಣೆಯ ಘನತೆ ಏನು ? ಎಂಬುದನ್ನು ಅರಿಯುವ ತಾಳ್ಮೆ ಅವನಲ್ಲಿ ಉಳಿದಿಲ್ಲ. ಅದೆಲ್ಲವನ್ನೂ ಕುತೂಹಲಿಕವಾಗಿ ನಿರೀಕ್ಷಿಸುತ್ತಿರುವನು. ಅವರ ಬಗ್ಗೆ ಉದ್ವೇಗಾಶ್ಚರ್ಯ ಭಾವನೆಗಳನ್ನು ಹುಟ್ಟಿಸಿಕೊಳ್ಳುತ್ತಾನೆ. ಜಗತ್ತು ಇಂದು ದಿನದಿನಕ್ಕೆ ಬದಲಾಗುತ್ತಿದೆ. ಹೊಸಹೊಸ ಸಾಹಸಗಳ ಜೊತೆಯಲ್ಲಿ ಅನೇಕ ಸಮಸ್ಯೆಗಳು ಉದ್ಭವಿಸುತ್ತ ನಡೆದಿವೆ. ಹಳೆಯ ಮೌಲ್ಯಗಳು ಕಳಚುತ್ತಿವೆ. ಹೊಸಹೊಸ ಸ್ಥಾನಗಳ ಅನ್ವೇಷಣೆಗೆ ಇನ್ನೂ ನೆಲೆ ಪ್ರಾಪ್ತವಾಗಿಲ್ಲ. ಅವುಗಳ ಆವಶ್ಯಕತೆಯೂ ಅನವಶ್ಯವೆಂಬ ನಿರ್ಣಯಕ್ಕೆ ಬರಹತ್ತಿದ್ದಾನೆ. ಅವನಿಗೆ ಸಾಧನಗಳ ಸಾಹಸದ ಫಲವಾಗಿ ವೈಜ್ಞಾನಿಕ ಶಕ್ತಿಗಳು ಕರಗತವಾದಂತೆ ಜೀವನದ ಸೌಲಭ್ಯಗಳು ಒಂದು ಕಡೆಗೆ ಹೆಚ್ಚುತ್ತ ಸಾಗಿವೆ. ಅದರಿಂದ ಅವನ ಆಮಿಷವಿನ್ನೂ ಮುಂದುವರಿಯುತ್ತಿರುವದನ್ನು ಎಲ್ಲರೂ ಕಾಣುತ್ತೇವೆ. ಇದರಿಂದ ಅವನು ಅನೇಕ ಬಗೆಯ ವಿಚಾರಗಳನ್ನಿರಿಸಿ ಅವಿಶ್ರಾಂತ ಪ್ರಯಾಸವನ್ನು ನಡೆಸುತ್ತಲೇ ಇದ್ದಾನೆ. ಇದರಿಂದ ಅವನಿಗೆ ಅತೃಪ್ತಿ, ಆತಂಕ, ಅಭದ್ರತೆಗಳು ಹೆಡೆಯೆತ್ತುತ್ತಿವೆ. ಇಂಥ ಪರಿಸರಣದಿಂದ ಕೂಡಿದ ಇದನ್ನೊಂದು ಸಂದಿಗ್ಧತೆಯ ಯುಗವೆಂದು ಕರೆಯಬಹುದಾಗಿದೆ. ಜೀವನದ ಎಲ್ಲ ರಂಗಗಳೂ ಪರಿವರ್ತನೆಗೆ ಗುರಿಯಾಗಿವೆ, ಸಂಧಿಕಾಲದಲ್ಲಿವೆ. ಈ ಹಿಂದಿನ ಸಾವಿರಾರು ವರ್ಷಗಳಲ್ಲಿ ಆಗದಿರುವ ಬದಲಾವಣೆ, ಈ ನೂರಾರು ವರುಷಗಳಲ್ಲಿ ಸಂಭವಿಸಿದೆ. ಪ್ರಥಮ ಅಲೆಮಾರಿಯಾಗಿದ್ದ ಮಾನವ ಕೃಷಿಯುಗವನ್ನು ಪ್ರವೇಶಿಸಿದಾಗ ಇಂಥ ಒಂದು ಬದಲಾವಣೆ ತಲೆದೋರಿತು. ಆ ಸಮಯದಲ್ಲಿ ಅದು ಆದ ಕ್ರಮೇಣದ ಪರಿವರ್ತನೆ. ಈ ಕೃಷಿಯುಗದಿಂದ ಯಂತ್ರಯುಗಕ್ಕೆ ನೆಗೆದದ್ದು ಮಿಂಚಿನಂತಹ ಕ್ರಾಂತಿ. ಹೊಸಹೊಸ ಯಂತ್ರಗಳ ಆವಿಷ್ಕಾರದಿಂದ ಅಪೂರ್ವ ಶಕ್ತಿಗಳು ಅವನಿಗೆ ಲಭಿಸಿದವು. ಅವನ ಅಗಾಧ ಸಾಹಸದ ಮುಂದೆ ಜಗತ್ತು ಕಿರಿದಾಯಿತು. ಅದರಿಂದ ಅವನ ಜೀವನದ ಸ್ವರೂಪವೇ ಬದಲಾಯಿತು. ಅವನ ಜೀವನದ ಎಲ್ಲ ರಂಗಗಳ ಮೇಲೂ ಅದರ ಪ್ರಭಾವ ವ್ಯಾಪಿಸಿತು. ಧಾರ್ಮಿಕ ವಲಯವೂ ಜ್ಞಾನದ ವಲಯವೂ ಅದಕ್ಕೆ ಹೊರತಾಗಲಿಲ್ಲವೆನ್ನಬಹುದು. ಈ ಯಂತ್ರಗಳು ಅಭಿವೃದ್ಧಿಯನ್ನು ಹೊಂದಿದಂತೆ ಮಾನವನೂ ಒಂದು ಯಂತ್ರವಾಗಿ ಪರಿಣಮಿಸಿದ. ಯಂತ್ರಗಳ ದುಡಿಮೆ ಒಂದು ಕಡೆಗೆ ಕೂಲಿಕಾರರನ್ನು, ಇನ್ನೊಂದು ಕಡೆ ಬಂಡವಾಳಗಾರರನ್ನು ಬೆಳೆಸಿತು. ಈ ವಿಷಮತೆಯ ವಿಷವರ್ತುಲದಿಂದ ಅನೇಕ ಸಾಮಾಜಿಕ ಸಮಸ್ಯೆಗಳೂ ನೂತನ ರಾಜಕೀಯ ಸಿದ್ಧಾಂತಗಳೂ ಹೊರಬಂದವು. ಬಂಡವಾಳಶಾಹಿಯನ್ನು ಪ್ರತಿಭಟಿಸಿ ಸಮಾಜವಾದ ಸಮತಾವಾದಗಳೂ ತಲೆಯೆತ್ತಿದವು. ಧರ್ಮದ ಹೆಸರಿನಲ್ಲಿ ಬೆಳೆದಿದ್ದ ಅಸಮತೆಯನ್ನೂ ಅಸಹಜವಾದ ತಾರತಮ್ಯಗಳನ್ನೂ

ಮೆಟ್ಟಿನಿಂತವು. ದೇವರನ್ನು ಕಿತ್ತೆಸೆದು, ಧರ್ಮವನ್ನು ಗಡಿಪಾರುಮಾಡಲು ಪ್ರಯತ್ನಿಸಿದವು. ಮಾನವಜೀವನದ ಗೊತ್ತುಗುರಿಗಳು ಬದಲಾದವು. ಧರ್ಮಕ್ಕೆ ನೆಲೆಯಿರದ ಹೊಸ ಜೀವನದ ರೂಪರೇಷೆಯು ನಿರ್ಮಾಣಗೊಂಡಿತು. ಆರ್ಥಿಕರಂಗವೇ ಅದರ ಬುನಾದಿಯಾಯಿತು. ರಾಜಕೀಯ ಮತ್ತು ಸಾಮಾಜಿಕವಾದ ಸವಾಲುಗಳನ್ನು ಧರ್ಮ ಎದುರಿಸಬೇಕಾಯಿತು. ಇದರ ಸಂದಿಗ್ಧತೆಯಲ್ಲಿ ಪಾದವಿರಿಸಿ ತನ್ನ ಮಸ್ತಕವನ್ನು ಗಗನದೆಡೆಮಾಡಿ ನಿಂತು, ಮಾನವನು ಒಂದು ಕ್ಷಣ ಹೌಹಾರಿ ವಿಸ್ಮಯವನ್ನೂ ಅಗಾಧ ಸಾಹಸದ ಫಲಸಾಧನೆಯನ್ನೂ ಕಂಡು ಅದರ ಎದುರಿನಲ್ಲಿ ತಾನೇ ಕರ್ತೃವೆಂದು 'ಹೆಮ್ಮೆ' ಪಟ್ಟನು. ಆದರೆ ತನ್ನ ಚರ್ಮಚಕ್ಷುವಿಗೆ ಗೋಚರಿಸುವ ವಿಶ್ವದ ನಿರ್ಮಾಣ ಹೇಗಾಯಿತು ? ತಾನು ಯಾರು ? ತನಗೂ ವಿಶ್ವಕ್ಕೂ ಯಾವ ಸಂಬಂಧವಿದೆ ಎಂಬುದನ್ನು ಮಾತ್ರ ನಿರ್ಲಕ್ಷಿಸಿ, ಕೃತಕವಾದ ತನ್ನ ಕ್ರಿಯೆಗಳ ಸಾಧನ ಫಲವೇ ಅವನಿಗೆ ಅದ್ಭುತವಾಗಿ ಕಾಣಹತ್ತಿದೆ. ಒಂದು ರೀತಿಯ ಅಜ್ಞಾನದ ಪರದೆಯೂ ಅವನಿಗೆ ಆಚ್ಛಾದಿತವಾಗಿದೆಯೆಂದೇ ಹೇಳಬೇಕು. ಈ ಮೂಲಕಾರಣದಿಂದ ಮಾನವನು ತಾನು ಯಾರು ? ತನ್ನ ಕಾರ್ಯವಾವುದು ? ತನಗೂ ವಿಶ್ವಕ್ಕೂ ಯಾವ ಸಂಬಂಧವಿದೆ ? ಎಲ್ಲದಕ್ಕೂ ಪ್ರೇರಣೆಯನ್ನು ನೀಡುವ ವಸ್ತುವಿರುವದೆ ? ಹಾಗಾದರೆ ಅದನ್ನು ಹೇಗೆ ಪಡೆಯಬೇಕು ? ಮುಂತಾದ ಪ್ರಶ್ನೆಗಳಿಗೆ ಇಂದು ಮಾನವರಾದ ನಾವೆಲ್ಲರೂ ಸಮರ್ಪಕವಾದ ಉತ್ತರವನ್ನು ಹುಡುಕಬೇಕಾಗಿದೆ. ಇದಕ್ಕೆ ಈಶೋಪನಿಷತ್ತಿನ ಒಂದೆರಡು ಮಂತ್ರಗಳಿಂದ ಉತ್ತರವನ್ನು ಪಡೆಯಬಹುದಾಗಿದೆ.

> ಓಂ ! ಈಶಾ ವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್ ।
> ತೇನ ತ್ಯಕ್ತೇನ ಭುಂಜೀಥಾ ಮಾಗ್ರಧಃ ತಸ್ಯಸ್ವಿದ್ಧನಮ್ ॥
> ಕುರ್ವನ್ನೇವೇದ ಕರ್ಮಾಣಿ ಜಜೀವಿಷೇಚ್ಛತಂ ಸಮಾಃ ।
> ಏವಂ ತ್ವಯಿ ನಾನ್ಯಥೇತೋऽಸ್ತಿ ನ ಕರ್ಮ ಲಿಪ್ಯತೆ ನರೆ ॥

ಇದೆಲ್ಲ ಈ ವಿಶ್ವದೊಳಗಿನ ಚಲನಾತ್ಮಕ, ಯಚ್ಛಾವತ ವಸ್ತುಗಳೆಲ್ಲ ಪರಮಾತ್ಮನ ವಾಸಸ್ಥಾನಗಳು. ಅವನು ದಯಪಾಲಿಸಿದ ಪದಾರ್ಥಗಳನ್ನು ಅವನು ಕೊಟ್ಟ ಪವಿತ್ರ ಪ್ರಸಾದವೆಂಬ ಭಾವನೆಯಿಂದ ಉಪಭೋಗಿಸು. ಪರಧನವನ್ನು ಕಿಂಚಿತ್ತಾದರೂ ಅಪೇಕ್ಷಿಸಬೇಡ. ಈ ಜಗತ್ತಿನಲ್ಲಿ ಮಾನವನು ಕರ್ಮಶೀಲನಾಗಿಯೇ ಪೂರ್ಣ ಒಂದು ಶತಮಾನದವರೆಗೆ ಬಾಳುವ ಅಭಿಲಾಷೆಯುಳ್ಳವನಾಗಬೇಕು. ಇದೇ ನಿನ್ನ ಮಾರ್ಗವು, ಹಾಗೂ ಜೀವನದ ಗುರಿಯು. ಇಲ್ಲಿಂದ ಪಾರಾಗಲಿಕ್ಕೆ ಬೇರೊಂದು ಮಾರ್ಗವಿಲ್ಲ. ಈ ಭಾವನೆಯಿಂದ ಆಚರಿಸುವ ಮಾನವನಿಗೆ ಕರ್ಮ ಲೇಪನ ಆಗುವದಿಲ್ಲ. ಕರ್ತಾ-ತಾನೆಂಬ ಭಾವನೆಯೂ ಅವನಿಗೆ ಬರುವದಿಲ್ಲ. ಹೀಗೆ ಮಾನವನು ಪ್ರಭುವಿನ ಘನತೆಯನ್ನು ಅವನಿಂದ ಪ್ರೇರಿಸಲ್ಪಟ್ಟ ವಿಶ್ವದ ತಿರುಳನ್ನು ಅರಿಯುತ್ತ, ಅಭ್ಯಾಸಮಾಡುತ್ತ ಹೋದಂತೆ ಅವುಗಳೊಳಗಿನ ಗೂಢರಹಸ್ಯವೂ, ಸ್ಪಷ್ಟವಾಗುತ್ತ ಹೋಗುವದಲ್ಲದೆ ಅವುಗಳಲ್ಲಿಯ ಆಧ್ಯಾತ್ಮಿಕ ರಹಸ್ಯವೂ ಅರಳುವ ಮೊಗ್ಗೆಗಳ ಸುಗಂಧದಂತೆ ದಿನದಿನಕ್ಕೆ ಹೆಚ್ಚು ಆನಂದವನ್ನುಂಟು ಮಾಡುವದು. ಅದನ್ನು ಇನ್ನೂ ಸೂಕ್ಷ್ಮವಾಗಿ ಅರಿಯುತ್ತ ಸಾಧನೆಯನ್ನು ಮಾಡುತ್ತ ಹೋದಂತೆ ಪರಮಾತ್ಮನಿಗೂ ವಿಶ್ವಕ್ಕೂ ಇರುವ ಸಂಬಂಧವು ವಿದಿತವಾಗುವದು. ಪ್ರಥಮ ಪರಮಾತ್ಮನ ಗರ್ಭದಿಂದ ಆಕಾಶವು ಉದಯವಾಯಿತು. ಆಕಾಶದಿಂದ ವಾಯುವಿನ ಉದಯವಾಯಿತು. ವಾಯುವಿನಿಂದ ಅಗ್ನಿಯೂ, ಅಗ್ನಿಯಿಂದ ಉದಕವೂ, ಆ ಉದಕದಿಂದ ಭೂಮಿಯೂ, ನಂತರ ತೃಣಧಾನ್ಯಗಳೂ, ಅವುಗಳ ಗರ್ಭದಿಂದ ರಸಪಾನಾದಿಗಳೂ, ಅವುಗಳ ಸೇವನೆಯಿಂದ ಈ ಕಾಯ ರಚನೆಯುಂಟಾಯಿತು. ಇದಕ್ಕೆ ವೇದಾಂತಗಳು ನಿರ್ಗುಣದಿಂದ ಸಗುಣದ ಉಗಮವೆಂದೂ, ಬ್ರಹ್ಮಾಂಡದಿಂದ ಪಿಂಡಾಂಡದ ಹುಟ್ಟುವೆಂದೂ ಹೇಳುವರು. ಅಂತಹ ಅನಂತ ಪರಮಾತ್ಮನಲ್ಲಿ ಆತನ ಅನಂತ ಶಕ್ತಿಯ ಪ್ರಭಾವದಿಂದ ಅನಂತ ವಿಶ್ವಗಳ ರಚನೆಯಾಗುವದು. ಆದರೆ ಸೃಷ್ಟಿಕಾರ್ಯಗಳಿಂದ ಪರಮಾತ್ಮನು ಯಾವಾಗಲೂ ಅಲಿಪ್ತನಾಗಿಯೇ ಇರುವನು.

ಕೇವಲ ತನ್ನ ಲೀಲಾ ಮಾತ್ರದಿಂದ ಸೃಷ್ಟಿಗಳನ್ನು ಸೃಜಿಸುವ ಪರಮಾತ್ಮನ ಪೂರ್ಣತ್ವಕ್ಕೆ ಇದರಿಂದ ಬಾಧೆ ಬರದು, ಯಾವ ತರದ ಕುಂದುಕೊರತೆಗಳೂ ಉಂಟಾಗವು.

ವಿಶ್ವಗಳನ್ನು ಸೃಜಿಸಿ ಪರಮಾತ್ಮನು ತಾನು ದೂರಾಗುವನೆ ? ಇಲ್ಲ. ಪರಮಾತ್ಮನು ವಿಶ್ವದ ಅಣುರೇಣು ಗಳಲ್ಲಿ ವ್ಯಾಪಿಸಿ ವಾಸಿಸುತ್ತಿರುವನು. ಈ ವಿಶ್ವವೆಲ್ಲವೂ ಅವನ ವಾಸಸ್ಥಾನವು ; ಅವನ ಹೊದಿಕೆಯು. ಈ ವಿಶ್ವ ಗಳನ್ನು ಅವನು ವ್ಯಾಪಿಸಿ ಅವನು ಹೆಚ್ಚಾಗಿ, ಅನಂತನಾಗಿ ಉಳದಿರುವನು. ಯಾಕಂದರೆ ಅವನು ಅನಂತನು, ಅಗಾಧನು. ಇಂತಹ ಪರಮಾತ್ಮನಿಂದ ವ್ಯಾಪ್ತವಾದ ವಿಶ್ವದಲ್ಲಿ ಮಾನವನಿಗೆ "ತನ್ನದು" ಎಂಬ ವಸ್ತುವು ಎಲ್ಲಿಂದ ಬರಬೇಕು ? ಎಲ್ಲವೂ ಆ ಪರಮಾತ್ಮನದೇ, ಆತನು ದಯಪಾಲಿಸಿದ್ದನ್ನು ನಾವು ವೈರಾಗ್ಯಯುಕ್ತರಾಗಿ ತ್ಯಾಗ ಬುದ್ಧಿಯಿಂದ ಉಪಯೋಗಿಸತಕ್ಕದ್ದು. ಇದು ನಮ್ಮದು ಎಂಬ ಭಾವನೆಯಿಂದ ಯಾವದೇ ವಸ್ತುವಿನ ಬಗ್ಗೆ ನಮ್ಮ ಒಡೆತನವನ್ನು ಪ್ರತಿಪಾದಿಸುವುದು ಶುದ್ಧ ಪ್ರಮಾದವಾದ ಮಾತು, ಅದು ಸತ್ಯ ಮಾರ್ಗವಲ್ಲ. ಆದುದರಿಂದ ಜ್ಞಾನವಂತ ಮಾನವನು ಯಾವಾಗಲೂ ಪಾಲಿಗೆ ಬಂದದ್ದೆಲ್ಲ ಈಶನ ಪ್ರಸಾದ ಹಾಗೂ ಅವನ ಪ್ರೇರಣೆಯಿಂದಲೇ ಪ್ರಾಪ್ತವಾದುದೆಂದು ಉಪಭೋಗಿಸಬೇಕು. ಅದರಲ್ಲಿ ಶಿವನ ಆನಂದವನ್ನು ಕಂಡಾತನು 'ಶಿವದತ್ತ' ಪ್ರಸಾದವೆಂದೇ ಭಾವಿಸುವನು. ಮೊದಲು ನಮಗೆ ಲಭ್ಯವಾದ ವಸ್ತುಗಳನ್ನು ಪರಿಪೂರ್ಣವಾದ ಪರಮಾತ್ಮನಿಗೆ ಸರ್ವಾರ್ಪಣ ಭಾವದಿಂದ ಅರ್ಪಿಸಿ ನಂತರ ಭೋಗಿಸಬೇಕು. ಇದು ಯೋಗ್ಯವಾದ ಹಾಗೂ ಶ್ರೇಷ್ಠವಾದ ಮಾರ್ಗವು. ಪರಧನದಲ್ಲಿ ಆಶೆಯನ್ನಿಡದೆ, ಯಾತರಲ್ಲಿಯೂ ಆಸಕ್ತಿಯನ್ನಿಡನೆ, ಈಶ್ವರನ ಸಂಕಲ್ಪದಿಂದ ಲಭಿಸಿದ ವಸ್ತುಗಳನ್ನಷ್ಟೇ ಸ್ವೀಕರಿಸಿ ಈಶ್ವರಾರ್ಪಣ ಬುದ್ಧಿಯಿಂದ ಅವುಗಳನ್ನು ಸೇವಿಸಿ ಸಂತುಷ್ಟರಾಗುವದು ಪರಮಾತ್ಮನ ಅಂಶೀಭೂತರಾದ ನಮ್ಮೆ ಲ್ಲರ ಕರ್ತವ್ಯವು, ಹಾಗೂ ಎಲ್ಲಕ್ಕೂ ಶ್ರೇಯಸ್ಕರ ಮಾರ್ಗವು.ಆದರೆ ನಾವು ಬರಿ ಭಾವನಾ ಜೀವಿಯಾಗದೆ ಅಹಂ, ಮಮಕಾರಗಳಾಧೀನರಾಗದೆ ಆ ಪೂರ್ಣರೂಪನನ್ನು ಎಲ್ಲಡೆಯಲ್ಲಿ ಕಾಣುವದು, ಅವನ ಅಗಾಧ ಶಕ್ತಿಯ ಚಲನೆ ಯನ್ನರಿಯುವದು, ಅವನಲ್ಲಿ ನಾವು ಪೂರ್ಣರಾಗಿ ಸಾಮರಸ್ಯವನ್ನು ಹೊಂದುವದು, ಮುಂತಾದ ಕಾರ್ಯ ಸಾಧನಕ್ಕೆ ಅಣಿಯಾಗಬೇಕಾದರೆ ನಮ್ಮ ಕರ್ತವ್ಯ ಯಾವದು ? ಅದನ್ನು ಸಾಧಿಸುವ ಬಗೆ ಮುಂತಾಗಿ ಸ್ವಲ್ಪ ವಿಚಾರಿಸಬೇಕು.ಯಾವಾತನಿಂದ ನಾವು ಉದಯಿಸಿದೆವೋ, ಯಾವಾತನ ಪ್ರೇರಣೆಯಿಂದ ನಾವು ಬದುಕಿರುವೆವೋ ಕೊನೆಗೆ ಯಾವಾತನ ಅಡಿಯನ್ನು ಸೇರಿ ಸುಖವನ್ನು ಪಡೆಯುವೆವೋ ಆ ವಸ್ತುವೇ ಪರಬ್ರಹ್ಮವು. ಅದರ ರೂಪ ದರ್ಶನ ಸಾಮರಸ್ಯಕ್ಕೆ ಐದು ಸೋಪಾನಗಳಿವೆ. ೧. ಮೊದಲು ಮಾನವನಾಗು ೨. ನೀತಿವಂತನಾಗು ೩. ವಿದ್ಯಾ ವಂತನಾಗು ೪. ಬುದ್ಧಿವಂತನಾಗು ೫. ಕೊನೆಗೆ ಜ್ಞಾನವಂತನಾಗು. ಎಂಬ ಈ ಅಂಶಗಳನ್ನು ಅನುಸರಿಸಿ ಜೀವನ ಸಾಗಿಸಿದಲ್ಲಿ ಮಾನವನು ದೇವನಾಗುತ್ತಾನೆ. ದೇವನಾಗಿ ನಿಮಿತ್ತಮಾತ್ರದಿಂದ ಮಾನವದೇಹಧಾರಿಯಾಗಿ ಕಂಡು ಕರ್ಮವನ್ನು ಮಾಡುತ್ತಿದ್ದರೂ ಅದಕ್ಕೆ ನಿಷ್ಕಾಮ ಕರ್ಮವೆಂದೂ, ಕೇವಲ ಅದು ಪ್ರಭುವಿನ ಪ್ರೇರಣೆ ಯೆಂದೂ ತಿಳಿಯುವನು. ಇದನ್ನೇ ಸ್ಥೂಲವಾಗಿ ವಿವೇಚಿಸೋಣ.

೧. ಮೊದಲು ಮಾನವನಾಗು : ಬ್ರಹ್ಮನಾದರೂ ಆಗು, ವಿಷ್ಣುವಾದರೂ ಆಗು, ರುದ್ರನಾದರೂ ಆಗು, ಇಂದ್ರನಾದರೂ ಆಗು, ಭೂಮಿಗೊಡೆಯನಾದರೂ ಆಗು-ಮೊದಲು ಮಾನವನಾಗು ; ಎನ್ನುವಂತೆ ಮೊದಲು ನಾವೆಲ್ಲರೂ ಮಾನವರಾಗಬೇಕು. ಹಾಗಂದರೆ ನಾವು ಮಾನವರಲ್ಲವೇನೆಂದು ಪ್ರಶ್ನಿಸಬಹುದು ? ಮಾನವರು ಅಹುದು. ಅದು ಯಾವಾಗ ? ಎಂದು ಕೇಳಿದರೆ ನಾವು ಪ್ರಥಮವಾಗಿ ತಾಯಿಯ ಗರ್ಭದಲ್ಲಿ ಪದ್ಮಾಸನ ಬದ್ಧರಾಗಿದ್ದಾಗ, ಒಂದುಕಡೆ ತಾಯಿಯ ಮಲ, ಇನ್ನೊಂದು ಕಡೆ ತಾಯಿಯ ಮೂತ್ರ, ಅಧೊ ಭಾಗದಲ್ಲಿ ತಾಯಿಯ ಜಠರಾಗ್ನಿ, ಊರ್ಧ್ವಭಾಗದ ನಮ್ಮ ಎಳನೆತ್ತಿಯಮೇಲೆ ತಾಯಿಯು ತಿಂದ ಖಾದ್ಯ ವಸ್ತುಗಳ ಸುರಿಮಳೆ-ಇವುಗಳಿಂದ ಪೀಡಿತರಾದ ನಾವು ಮೂರು ಜನ್ಮಗಳ ಅರಿವು ಉದಯವಾಗಿ ಈ ಗರ್ಭತಾಪವನ್ನು ತಾಳಲಾರದೆ ಏಕ-ಮನಸ್ಸಿನಿಂದ ಕರುಣಾಮೂರ್ತಿಯಾದ ಪರಮಾತ್ಮನನ್ನು ಪ್ರಾರ್ಥಿಸಲು

ಪ್ರತ್ಯಕ್ಷನಾಗಿ, ಗರ್ಭದಿಂದ ಹೊರಬಂದ ನಂತರ ನನ್ನ ಸೇವೆಯಲ್ಲಿಯೇ ನಿನ್ನ ಆಯುಷ್ಯವನ್ನು ಕಳೆಯಬೇಕೆಂದು ಆಜ್ಞಾಪಿಸಲು ಒಪ್ಪಿ ಪ್ರಸೂತ ವಾಯುವಿನ ಅಘಾತಕ್ಕೆ ತಳಮುಖರಾಗಿ ಭೂಮಿಗವತರಿಸಿ, ನಂತರ ಪರಮಾತ್ಮನಿಗೆ ವಚನವಿತ್ತಿದ್ದೇನೆಂಬ ಭಾವನೆಯೂ ಬಾರದೆ, ಕೇವಲ ತಂದೆ, ತಾಯಿ, ಬಂಧು, ಬಳಗ, ಐಹಿಕ ಭೋಗಾದಿಗಳೇ ಶಾಶ್ವತವೆಂಬ ಭಾವನೆಯಿಂದ ಮನಾಧೀನರಾಗಿ ಉಪಜೀವಿಸುತ್ತಿರುವ ನಮ್ಮನ್ನು ಮಾನವರೆಂದು ಕರೆಯುವುದು ಅಸಮರ್ಥನೀಯ. ಯಾವನು ತನ್ನ ಮನವೆಂಬ ಹಯವನ್ನೇರಿ ಯುಕ್ತಿ ಎಂಬ ಕಡಿವಾಣದಿಂದ ನಿಯಂತ್ರಿಸಿ ಸನ್ಮಾರ್ಗವೆಂಬ ಪಥದಲ್ಲಿ ಸಾಗಿ, ನಿಷ್ಕಾಮ ಕರ್ಮಾದಿಗಳಿಂದ ಕಾಯವನ್ನು ಕರ್ಪೂರದಂತಾಗಿ, ಮಾಡಿ, ಅರಿಷಡ್ವರ್ಗಗಳೆಂಬ ಮೈಲುಗಲ್ಲುಗಳನ್ನು ದಾಟಿ, ಅಷ್ಟಮದಗಳೆಂಬ ಪುರಗಳನ್ನು ದಾಟಿ, ಸಪ್ತ ವ್ಯಸನಗಳೆಂಬ ನದಿಗಳನ್ನು ಈಸಿ ನವದ್ವಾರಗಳೆಂಬ ಕಂದಕಗಳನ್ನು ನುಗ್ಗಿ, ತ್ರಿಗುಣವೆಂಬ ಕೋಟೆಯನ್ನು ತಲುಪಿ ಧರ್ಮವೆಂಬ ಖಡ್ಗವ ಹಿಡಿದು, ಮಮಕಾರವೆಂಬ ಕಾವಲುಗಾರನನ್ನು ಇರಿದು, ಬುದ್ಧಿಯೆಂಬ ಕನ್ಯೆಯನ್ನು ವರಿಸಿ, ಜ್ಞಾನವೆಂಬ ವೃಷ್ಟಿಯಿಂದ ಆನಂದಮಯನಾದ ಪರಮಾತ್ಮನನ್ನು ಯಾವಾತನು ತಲುಪಿ ಸಮರಸನಾಗುವನೋ ಅವನೇ ಮಾನವನು. ಅಂಥವನ ದೃಷ್ಟಿಯಲ್ಲಿ ಈ ವಿಜ್ಞಾನದ ಸಾಹಸವು ಸೂರ್ಯನ ಪ್ರಖರ ಕಿರಣಗಳ ಎದುರಿನಲ್ಲಿ ಮಂಜುಮೋಡವಿದ್ದಂತೆ. ಕಾರಣ ನಾವು ಮೊದಲು ಮಾನವರಾಗಬೇಕು.

೨. **ನೀತಿವಂತನಾಗು :** ಯಾವ ವಸ್ತುವೂ ನಾನಲ್ಲವೆಂಬ ಭಾವನೆಯು ಬೆಳೆದು, ನಾನು ಕೇವಲ ಚೈತನ್ಯರೂಪ ಪರಮಾತ್ಮನೇ ಎಂಬ ದೃಢಭಾವ ಸ್ಥಿರಗೊಂಡು ಆ ದಿಶೆಯಲ್ಲಿ ತನ್ನ ಸರ್ವಸ್ವವನ್ನು ಶಿವನಿಗೆ ಅರ್ಪಿಸಿ ಜೀವನಯಾನವನ್ನು ಸಾಗಿಸುವ ಮಾನವನಿಗೆ ನೀತಿವಂತನೆಂದು ಕರೆಯುವರು. ಶರೀರದ ಭೋಗವಸ್ತುಗಳ ಪ್ರಾಪ್ತಿಯು, ಆತ್ಮಸಾಧನೆಯು ನೀತಿಯನ್ನೇ ಅವಲಂಬಿಸಿವೆ. ಪಶುಪಕ್ಷಿಗಳಲ್ಲಿಯೂ ನೀತಿಯಿರುವದನ್ನು ಅರಿಯುತ್ತೇವೆ. ಅನೀತಿವಂತನು ಇಂದ್ರನಿಗಿಂತಲೂ ಅಧಿಕನಾಗಿದ್ದರೂ ದೂಷಿತನು. ಅಹಲ್ಯಳ ಕಾಯಸುಖಕ್ಕೆ ಬಯಸಿದ ಇಂದ್ರ ನಿಂದಿತನಾದ. ಶಚಿದೇವಿಯ ಅಂಗಸುಖ ಬಯಸಿ ಕಾಮಾಂಧನಾಗಿ ಸಪ್ತರ್ಷಿಗಳ ಶಾಪಕ್ಕೆ ಗುರಿಯಾದ ನಹುಷ-ಮುಂತಾದ ಅನೇಕ ದೃಷ್ಟಾಂತಗಳನ್ನು ನಿರೀಕ್ಷಿಸುತ್ತೇವೆ. ನೀತಿಯನ್ನನುಸರಿಸಿ ಋಷಿಗಳು ಪೂಜ್ಯರಾದರು. ನೀತಿಯಿಲ್ಲದೆ ಮನುಷ್ಯನ ಜೀವನಕ್ಕೆ ನೆಮ್ಮದಿಯೆಲ್ಲಿ? ನೀತಿಯನ್ನು ನೀಗಿ ಕೌರವರು ನಾಶವಾದರು. ಇದನ್ನೇ ಆಶ್ರಯಿಸಿ ಪಾಂಡವರು ಪೂಜ್ಯಗೊಂಡರು. ಕಾರಣ ಕೆಡುವ ಕಾಯದ ಮೋಹವನ್ನು ತ್ಯಜಿಸಿ ನೀತಿಯಿಂದ ಬಾಳಿದರೆ ಕಾಯದ ಅಂತರದಲ್ಲಿರುವ ನರನಾಡಿಗಳೂ ಪುನೀತವಾಗಿ ಶಿವನ ದರ್ಶನಕ್ಕೆ, ಚಕೋರಪಕ್ಷಿಯು ಚಂದ್ರಮನ ಉದಯವನ್ನು ನಿರೀಕ್ಷಿಸುವಂತೆ ನಿರೀಕ್ಷಿಸುವವು. "ಗುಬ್ಬಿಯು ಹೆರವರ ಮನೆಯ ಧನಕನಕ ತನ್ನದೆಂಬಂತೆ" ಈ ಮಾನವನು ಅನಿತ್ಯ ಸಂಸಾರವನ್ನೇ ನೆಚ್ಚಿ ದುಃಖ ಪಡುತ್ತಿರುವನು. ಆದುದರಿಂದ ಇವನು ಮಾನವನಾಗಿ, ಸಂಕಲ್ಪ ವಿಕಲ್ಪಗಳಿಂದ ದೂರಾಗಿ, ನೀತಿಯನ್ನಾಶ್ರಯಿಸಿ ಮುನ್ನಡೆದಲ್ಲಿ ಶಿವಲಕ್ಷಣಯುಕ್ತ ಶುದ್ಧ ವಿದ್ಯೆಯನ್ನು ಪಡೆಯಲು ಅರ್ಹನಾಗುತ್ತಾನೆ.

೩. **ವಿದ್ಯಾವಂತನಾಗು :** ವಿದ್ಯೆಯು ವಿನಯದಿಂದ ಕೂಡಿರಬೇಕು. ಅಂದರೆ ಅದು ಬುದ್ಧಿಗೆ ವೇದ್ಯವು. ಆತ್ಮವಸ್ತುವಿನ ಬಗ್ಗೆ ಪ್ರತಿಪಾದಿಸುವ ವಿದ್ಯೆಯೇ ನಿಜವಾದ ವಿದ್ಯೆಯು. ಇದಕ್ಕೆ ಇನ್ನೊಂದು ಅರ್ಥವು ಕಲೆಯೆಂದು ಕರೆಯುವರು. ಶ್ರೀಮದ್ ಶಂಕರಾಚಾರ್ಯರು ಅರವತ್ತುನಾಲ್ಕು ವಿದ್ಯೆಗಳಲ್ಲಿ ಪ್ರವೀಣರಿದ್ದು ಅವುಗಳನ್ನೇ ಸಾಧರಿಸಿ ಸೂತ್ರಗಳ ಭಾಷ್ಯ ಬರೆದು ಅದ್ವೈತ-ಮತವನ್ನು ಬೋಧಿಸಿದರೆಂಬುದನ್ನು ಸರ್ವರೂ ಬಲ್ಲರು. ಶ್ರೀ ಭಗವದ್ಗೀತೆಯಲ್ಲಿಯೂ ಶ್ರೀ ಕೃಷ್ಣ ಪರಮಾತ್ಮನು 'ಈ ವಿದ್ಯೆಗಳಲ್ಲಿ ಎರಡು ಪ್ರಕಾರ, ಒಂದು ಲುಪ್ತ ವಿದ್ಯೆ, ಇನ್ನೊಂದು ಅಲುಪ್ತವಿದ್ಯೆ' ಎಂಬುದಾಗಿ ಅರ್ಜುನನಿಗೆ ಬಹು ಸುದೀರ್ಘವಾಗಿ ವಿವೇಚಿಸುವನು. ಅದನ್ನಿಲ್ಲಿ ವಿವೇಚಿಸುವದು ಅನುಚಿತವು. ಭಾರತವು ಅದ್ಭುತವಾದ ಅನೇಕ–ವಿದ್ಯೆಗಳ ಆಗರಸ್ಥಾನ

ವಾಗಿದೆ ಎಂದು ಪಾಶ್ಚಿಮಾತ್ಯರು ಆಶ್ಚರ್ಯದಿಂದ ನುಡಿಯುತ್ತಾರೆ. ಇಂಥ ಕಲೆಗೂ ಅಥವಾ ವಿದ್ಯೆಗೂ ಪರಮಾತ್ಮನು ಅತೀತನೆಂದೂ ಉಪನಿಷತ್‌ಗಳು ಹೇಳುತ್ತಿವೆ. ವಿದ್ಯಾವಂತನಾದ ಮಾತ್ರಕ್ಕೆ ಪರಮಾತ್ಮನನ್ನು ಅರಿಯಲು ಸಾಧ್ಯವಾಗುವದಿಲ್ಲ. ಅದರೊಂದಿಗೆ ನಮ್ಮ ಬುದ್ಧಿಯ ವಿಕಾಸವೂ ಆತ್ಮೋನ್ನತಿಯ ಕಡೆಗೆ ಸಾಗಿ ಬಂದಾಗ ಮಾತ್ರ ನಿಜ ಸುಖದ ನೆಲೆಯು ಸಾಧ್ಯ.

೪. **ಬುದ್ಧಿವಂತನಾಗು :** ಮಾನವನ ಬುದ್ಧಿಯ ವಿಕಾಸವು ತನ್ನ ಆತ್ಮಶೋಧದ ಕಡೆಗೆ ಆಗಿರದೆ, ಘಾತಕ ವಸ್ತುಗಳ ಅನ್ವೇಷಣೆಯ ಕಡೆಗೆ ಬೇಕಾದಷ್ಟು ಆಗಿದೆ. ಹೊಸಹೊಸ ಶಾಸ್ತ್ರೀಯ ಶೋಧಗಳ ಮೂಲಕ ಅವನ ಶಕ್ತಿಯು ಮಿತಿಮೀರಿ ಬೆಳೆದಿದೆ. ಹೀಗಿದ್ದರೂ ಎಲ್ಲೆಲ್ಲಿಯೂ ಅಶಾಂತಿ, ಭಯ, ಆಸುರೀವೃತ್ತಿ, ಹಿಂಸೆ, ಸೂರೆ ಇವುಗಳ ಚೆಲ್ಲಾಟವೇ ಕಂಡುಬರುತ್ತಿದೆ. ಮಾನವನ ಬೇರೆ ಶಕ್ತಿಗಳು ಬೆಳೆಯುತ್ತಹೋದ ಪ್ರಮಾಣದಲ್ಲಿ ಅವನ ನೈತಿಕ ಹಾಗೂ ಆತ್ಮಿಕ ಶಕ್ತಿಗಳು ವಿಕಾಸಹೊಂದಲಿಲ್ಲ. ಆದುದರಿಂದ ಮಾನವನಲ್ಲಿಯ ಪಾಶವೀ ವೃತ್ತಿಗಳೇ ಇನ್ನೂ, ತಾಂಡವನೃತ್ಯವನ್ನು ಮಾಡುತ್ತಿವೆ. ಹಾಗೂ ಹೊಸ ಶಕ್ತಿಗಳನ್ನೆಲ್ಲ ತಮ್ಮ ಆಯುಧಗಳನ್ನಾಗಿ ಉಪಯೋಗಿಸುತ್ತಿವೆ. ಇದರಿಂದ ಬುದ್ಧಿಯ ಸದುಪಯೋಗವಿಲ್ಲದ್ದಕ್ಕೆ ಮಾನವರು ಕಾಮ ಭೋಗಾದಿಗಳ ದಾಸರಾಗಿ, ಭಯ ದುಃಖ ಮುಂತಾದವುಗಳಿಗೆ ಈಡಾಗಿದ್ದಾರೆ. ನಿಜವಾದ ಶಾಂತಿ, ಪುಷ್ಟಿ ತುಷ್ಟಿಗಳ ಸಾಮ್ರಾಜ್ಯವು ಸ್ಥಾಪನವಾಗಬೇಕಾಗಿದ್ದರೆ ಮಾನವನ ಬುದ್ಧಿಯ ಆಂತರಿಕ-ವಿಕಾಸವಾಗಲೇಬೇಕು. ಬುದ್ಧಿಯ ಆಂತರಿಕ ವಿಕಾಸದಿಂದಲೇ ಮಹರ್ಷಿಗಳು ವೇದಗಳನ್ನು, ಆಗಮಗಳನ್ನು, ಉಪನಿಷತ್ತುಗಳನ್ನು, ಇನ್ನೂ ಅನೇಕ ಬಗೆಯ ಜ್ಞಾನ ಸಂಪತ್ತನ್ನು ವಿಶ್ವಕ್ಕೆ ಧಾರೆಯೆರೆದು ಬುದ್ಧಿವಂತರೆಂಬ ಘನಕೀರ್ತಿಗೆ ಅರ್ಹರಾದರು. ಇಂಥ ವಸ್ತು ಪ್ರಾಪ್ತವಾದಾಗ ನಮ್ಮ ಜೀವನದ ಉದಾತ್ತ ಧ್ಯೇಯವು ಪೂರ್ಣವಾದಂತೆ ಆಗಲಿಲ್ಲ. ಇನ್ನೂ ನಾವು ಮುಂದುವರೆದು ಜ್ಞಾನವಂತರಾದಾಗ ಶಿವಸಾಗರದ ಸುಂದರ ಭೋಜನ ಲಭ್ಯವಾಗುವದು.

೫. **ಜ್ಞಾನವಂತನಾಗು :** "ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೆ" ಜ್ಞಾನಕ್ಕೆ ಸರಿ ಸಮಾನವಾದ ಪವಿತ್ರ ವಸ್ತು ಮತ್ತೊಂದಿಲ್ಲ. ಅಂಥ ಜ್ಞಾನವನ್ನು ಪಡೆದ ಜ್ಞಾನಿಗಳು ಮೂರುಲೋಕಗಳಲ್ಲಿಯೂ ದುರ್ಲಭ. ಅಂಥ ಆ ಜ್ಞಾನಿ ಜೀವಿಗಳ ಉದ್ಧಾರಕ್ಕಾಗಿ ತಿಳಿಯಾಗಿ ಹೃದಯದಲಿ ವಿರಮಿಸಲು ಲೋಕೋದ್ಧಾರ ಕಾರ್ಯಕ್ಕಾಗಿ ಸಂಚರಿಸುವನು. ಮೋಕ್ಷಸಾಧನದ ಮಾರ್ಗದಲ್ಲಿ, ಸಾಧನದಲ್ಲಿ ಸಾಗುವಾಗ ಕರ್ಮವೆಂದರೆ ನಮ್ಮ ಕೈಕಾಲುಗಳಿದ್ದಂತೆ, ಭಕ್ತಿಯೆಂದರೆ ನಮ್ಮ ಅಂತಃಕರಣವಿದ್ದಂತೆ, ಜ್ಞಾನವೆಂದರೆ ನಮ್ಮ ಕಣ್ಣುಗಳಿದ್ದಂತೆ. ಇನ್ನು ಅಂತಃ ಶಕ್ತಿಗಳ ದೃಷ್ಟಿಯಿಂದ ನೋಡಲಾಗಿ ಕರ್ಮವೆಂದರೆ ಸಂಕಲ್ಪಶಕ್ತಿಯ ಬಾಹ್ಯ ಪರಿಣಾಮವು, ಭಕ್ತಿಯು ನಮ್ಮ ಪ್ರೇಮಭಾವನೆಯ ಪರಿಣತಿಯು, ಜ್ಞಾನವೆಂದರೆ ನಮ್ಮ ಚಿತ್‌ಶಕ್ತಿಯ ನಿಜ ಸ್ವರೂಪವು. ಪರಮಾತ್ಮನು ದಯಪಾಲಿಸಿದ ಈ ಎಲ್ಲ ಶಕ್ತಿಗಳ ಸಮನ್ವಯದಿಂದ ನಾವು ಆ ಪರಮಾತ್ಮನ ಕಡೆಗೆ ಮೋಕ್ಷಾರ್ಥವಾಗಿ ಧಾವಿಸಬೇಕೆಂಬುದೇ ಆಧ್ಯಾತ್ಮಿಕ ಸಾರವು. ಈ ಪರಮಶ್ರೇಷ್ಠವಾದ ಅಧ್ಯಾತ್ಮಿಕ ಜ್ಞಾನವನ್ನು ನಾವು ಸ್ವತಃ ಸಾಕ್ಷಾತ್ಕರಿಸಿಕೊಳ್ಳಬೇಕು. ಪರಮಾತ್ಮನ ಅಪರೋಕ್ಷ ಜ್ಞಾನದಿಂದ ಅಮರರಾಗಿ ಪುರಾತನ ಋಷಿಗಳು ಪರಮಾತ್ಮನ ಪ್ರೇರಣೆಯ ಪ್ರಸಾದದಿಂದ ಯೋಗಸ್ಥಿತಿಯಲ್ಲಿದ್ದು ಈ ಜ್ಞಾನವನ್ನು ಪಾಮರರ ಉದ್ಧಾರಕ್ಕಾಗಿ ಉಪದೇಶಿಸಿದರು. ಈ ರೀತಿಯ ಜ್ಞಾನನಿಧಿಯಿಂದ ಪರಶಿವನನ್ನು ಪೂರ್ಣತಿಳಿದು ಅವನಲ್ಲಿ ಐಕ್ಯರಾಗಬೇಕು. ಇಂಥ ಸ್ಥಿತಿಯು ಮಾನವ ಜೀವಿಗೆ ಪ್ರಾಪ್ತವಾಗಲು ಸರ್ವಕ್ಕೂ ಅಧಿಷ್ಠಾನದೇವನಾದ ಪ್ರಭುವಿನ ಕರುಣೆ, ಅನುಗ್ರಹ, ಪ್ರೇರಣೆ ಅವಶ್ಯವಾದದ್ದು. ಇದನ್ನೇ ಈಶೋಪನಿಷತ್ತು ಮುಂದೆ ಈ ರೀತಿ ವಿವರಿಸುತ್ತಿದೆ. 'ಒಂದು ಜೀವಂತ ಹೆಣದಂತೆ' ಮಾನವನು ಬದುಕಬಾರದು. ತನ್ನ ಕರ್ಮವನ್ನು ಯಾವಾಗಲೂ ಮಾಡುತ್ತ ಒಳ್ಳೇ ಚಟುವಟಿಕೆಯಲ್ಲಿ ಪೂರ್ಣ ನೂರುವರುಷ ಬಾಳುವ ಇಚ್ಛೆಯುಳ್ಳವನಾಗು. ಮಾನವನಿಗೆ

ಪ್ರಭುವಿನಪ್ರೇರಣೆಯಾಗಬೇಕಾದರೆ ಈ ಐದು ಅಂಶಗಳ ಸಮನ್ವಯ ಮಾರ್ಗ ಒಂದೇ ಎಂಬ ಪ್ರಬಲ ಕಾರಣವನ್ನು ಪ್ರತಿಪಾದಿಸುವುದಾಗಿದೆಯನ್ನಬಹುದು.

ಉಪಸಂಹಾರ : ಅನಾತ್ಮವ್ಯಾಮೋಹದ ಕತ್ತಲೆ ಕರಗಿ, ಪರಮಾತ್ಮನ ದರ್ಶನವಾಗಬೇಕಾದರೆ ಆತ್ಮಜ್ಞಾನಬೇಕು. ಆತ್ಮಜ್ಞಾನ ಉದಯಿಸಲು ದೈವಭಕ್ತಿ ಅವಶ್ಯ. ದೈವಭಕ್ತಿಗೆ ಚಿತ್ತಶುದ್ಧಿ ಅನಿವಾರ್ಯ ಚಿತ್ತಶುದ್ಧಿಯಾಗಬೇಕಾದರೆ ನಿಷ್ಕಾಮಕರ್ಮ ಅತ್ಯಗತ್ಯ. ಸಾಧಕನು ಕರ್ತೃತ್ವ ಬುದ್ಧಿ ಮತ್ತು ಫಲಾಕಾಂಕ್ಷೆಗಳನ್ನು ತೊರೆದು ಅನಾಸಕ್ತ ಕರ್ಮವನ್ನು ಆಚರಿಸಲಿ, ಆಗ ಅವನ ಅಂತರಂಗ ನಿರ್ಮಲಗೊಳ್ಳವದು; ಪರಮಾತ್ಮನಲ್ಲಿ ಅನನ್ಯಭಕ್ತಿ ಹುಟ್ಟುವದು ; ದೇವನ ಕೃಪಾ, ಪ್ರಸಾದ, ಪ್ರೇರಣೆ ಲಭಿಸುವದು. ಆ ಪ್ರಸಾದ ಪ್ರೇರಣೆಯ ಮಹಿಮೆಯಿಂದ ಅಹಂ ಬ್ರಹ್ಮಾಸ್ಮಿಯೆಂಬ ಜ್ಞಾನ ಸಮನಿಸುವದು. ಅಲ್ಲಿಗೆ ಸಾಧಕನು ಜೀವಭಾವ ನೀಗಿ ಅಖಂಡ ಪರಬ್ರಹ್ಮನಲ್ಲಿ ಸಮಾಲೀನಗೊಳ್ಳುವನು. ಅದುವೇ ನಿಜ ಕೈವಲ್ಯ, ಪರಮಮೋಕ್ಷ. ಇಂಥ ಮೋಕ್ಷವನ್ನು ಹೊಂದಿ ಸಕಲ ಜೀವಾತ್ಮರು ಸುಖಿಸಲಿ ಎಂಬುದೇ ಭಗವಂತನ ಆಶೆ ಇಂಥ ಪ್ರಭುವಿನ ಪ್ರೇರಣೆಯಿಂದಲೇ ಮಲ್ಲಾಡಿ ಹಳ್ಳಿಯ ಜಗದೇಕಮಲ್ಲ ಯೋಗೀಶ್ವರ ಶ್ರೀ ಶ್ರೀ ಪರಮಪೂಜ್ಯರಾದ ರಾಘವೇಂದ್ರ ಮಹಾಸ್ವಾಮಿಗಳವರ ಹೆಸರು ಇಂದು ಕರ್ನಾಟಕದ ಮನೆಮನೆಗಳಲ್ಲಿ ಜನಜನಿತವಾಗಿದೆ. ಇಂಥವರೇ ವಿಭೂತಿ ಪುರುಷರು. ಇವರು ನೆಲಸಿದ ನೆಲೆ ಪಾವನ ಕಾಶಿ, ಗೈಯ್ಯುವ ಕಾಯಕ ಕೈವಲ್ಯಧಾಮ, ಸರ್ವಜೀವಾತ್ಮರ ಮುಕ್ತಿದ್ವಾರ. ಅವರಿಗೆ ಪ್ರಭುವಿನ ಪ್ರೇರಣೆಯು ಅಗಾಧವಿರುವಾಗುವಂಥ ಘನಕಾರ್ಯಗಳು ಅವರಿಗೆ ಹೂವಿನಷ್ಟು ಮೃದು. ಅಂಥವರ ಸನ್ನಿಧಿಯಲ್ಲಿರುವವರೇ ಅಮರರು. ಅಂಥವರಿಗೆ ಪರಶಿವನು ಇನ್ನಷ್ಟು ಕರ್ತೃತ್ವಶಕ್ತಿಯನ್ನು ದಯಪಾಲಿಸಲಿ.

ನೀವು ಸ್ವತಂತ್ರರೆಂದು ದೃಢವಾಗಿ ಸಾರಲು ಪ್ರಯತ್ನಪಟ್ಟರೆ, ಈ ಕ್ಷಣವೆ ನೀವು ಮುಕ್ತರು. ನೀವು ಬುದ್ಧನೆಂದು ಹೇಳಿದರೆ ಬದ್ಧರಾಗಿಯೆ ಇರುವಿರಿ. ಇದನ್ನು ಅದ್ವೈತ ಧೈರ್ಯದಿಂದ ಸಾರುವುದು.

ಕೆ. ವೆಂಕಟರಾಮಾಚಾರ್ಯ

ರಕ್ತಾಸುರ ವಧೆ (ಆದಿತ್ಯಪುರಾಣದಲ್ಲಿ)

ದೇವರ ಆರಾಧನೆ : ಬುದ್ಧಿಜೀವಿಯಾದ ಮಾನವ ಕೇವಲ ತನ್ನ ಸುಖಕ್ಕೆಳಸದೆ, ತನ್ನನ್ನು ಹೊಂದಿದವರೂ, ತನ್ನ ಪರಿಸರದವರೂ ಸುಖಾಧಿಕ್ಯವನ್ನು ಹೊಂದುವಂತೆಳಸುವುದು ಸ್ತುತ್ಯವೂ ಅವಶ್ಯಕರ್ತವ್ಯವೂ ಆಗಿದೆ. ಐಹಿಕದಂತೆ ಪಾರಲೌಕಿಕದತ್ತಲೂ ತನ್ನ ಹಾಗೂ ಆಪ್ತರ ಗಮನವಿರುವಂತೆಸಗುವುದು ಅತ್ಯಂತ ಸೂಕ್ತವಾಗಿದೆ. 'ಇಹವೇ ಪರದ ಸೋಪಾನ'ವೆಂಬುದು ಇಲ್ಲಿ ಸುವೇದ್ಯವಿದೆ. ಧಾರ್ಮಿಕ ಮನೋಭಾವನೆಯಿಂದಲೆ ಜನತೆ ಇಹ-ಪರಗಳಲ್ಲಿ ಸುಖಸ್ಥಾನವನ್ನು ಪಡೆಯಬಲ್ಲುದು. ಆ ಧಾರ್ಮಿಕ ಪಥದಲ್ಲಿ ದೇವರ ಆರಾಧನೆಯೂ ಒಂದಾಗಿ ಗಣಿತವಿದೆ. ಸಗುಣ-ಸಾಕಾರ-ದೇವರ ಆರಾಧನೆಯಿಂದ ಮುನ್ನಡೆಯಿಟ್ಟರೆ ನಿರ್ಗುಣ. ನಿರಾಕಾರ-ದೇವರಲ್ಲಿ ಸೇರಲು ಅಧಿಕಾರ, ಅವಕಾಶಬಹುದೆಂದು ಬಲ್ಲವರ ಆಶಯ. ಆ ಅಮಾನುಷ ದೈವಿಕ ಶಕ್ತಿಗಳನ್ನು ವೈವಿಧ್ಯವಾಗಿ ಹೆಸರಿಸಿ, ತಮ್ಮ ಆರಾಧ್ಯವಾಗಿಸಿದ್ದಾರೆ, ಪ್ರಾಚೀನ ಕಾಲದ ಮಹನೀಯರು !

ಶಿವನೇ ಪ್ರಧಾನನೆಂಬವರು ಶೈವರು, ವಿಷ್ಣುವೇ ಮೇಲೆನ್ನುವವರು ವೈಷ್ಣವರು, ದೇವಿಯೇ ಸರ್ವೋತ್ಕೃಷ್ಟೆಯೆನ್ನುವವರು ಶಾಕ್ತರು, ಸೂರ್ಯನೇ ಪ್ರಮುಖನೆನ್ನುವವರು ಸೌರರು, ಗಣಪತಿಯೇ ಉತ್ತಮನೆನ್ನುವವರು ಗಾಣಾಪತ್ಯರೆಂದು ಹೆಸರಿಸಲ್ಪಡುತ್ತಾರೆ. (ಡಾ.ಎಂ. ಚಿದಾನಂದಮೂರ್ತಿ : ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ನೋಡಿ) ಈ ತೆರದ ನಾನಾತ್ವವೂ ಸಮರಸದಿಂದ ವ್ಯವಹೃತವಾದರೇನೇ ಸಾಮಾಜಿಕರು ಒಗ್ಗಟ್ಟಾಗಿ-ಸುಖಿಗಳಾಗಿ ಇರಬಹುದೆಂದು ಜಗದ್ಗುರು ಶ್ರೀಶಂಕರಾಚಾರ್ಯರು 'ಪಂಚಾಯತನ' ಪೂಜೆಯ ಕ್ರಮವನ್ನು ನಿರೂಪಿಸಿದರು. ತಮ್ಮ ಪ್ರಧಾನ ದೈವಿಕ ಶಕ್ತಿಯನ್ನು ನಡುವಿರಿಸಿ, ಇತರ ಚತುರ್ದೈವಿಕ ಶಕ್ತಿಗಳನ್ನು ಸುತ್ತಲಿರಿಸಿ ಪೂಜಿಸುವುದರಿಂದ ಅನ್ಯೋನ್ಯ ಸರಸತೆಯೂ ಸಾಮರಸ್ಯವೂ ಒದಗಬಲ್ಲುದೆಂಬ ಆಶಯವಿದು. ಅನೇಕ ದೇವತಾರಾಧನೆಯ ಬಗೆಗೆ ವೈದಿಕ-ಲೌಕಿಕ-ಕೃತಿಗಳಲ್ಲಿ ಉಲ್ಲೇಖಗಳಿವೆ: 'ಏಕಂ ಸದ್ವಿಪ್ರಾ ಬಹುಧಾ ವದಂತಿ,' ಎಂದು ಋಗ್ವೇದದಲ್ಲಿದೆ. ದೇವನ ವಿವಿಧಾಂಗಗಳಿಂದ ನಾನಾದೇವತೆಗಳು ಜನಿಸಿದರೆಂದು 'ಪುರುಷಸೂಕ್ತದಲ್ಲೂ'ಇತರತ್ರವೂ ಹೇಳಿದೆ.ನಮ್ಮ ಹಾಗೂ ಗೋಮಾತೆಯ ದೇಹದಲ್ಲಿ ಹಲವು ದೇವತೆಗಳ ಆವಾಸಗಳೂ ಉಕ್ತಗಳು. ಲೌಕಿಕಸೃಷ್ಟಿಯಲ್ಲಿ ಹಲವು ದೇವತಾಶಕ್ತಿಗಳ ಸಮಾರೋಪವಿದೆ ; ಅವುಗಳ ಸಮಾರಾಧನೆಯೂ 'ಏಕದೇವೋಪಾಸನೆ'ಯಂತೆ ಕರ್ತವ್ಯವಾಗಿದೆ. ತಮಗೆನ್ನಿಸಿದ ದೈವಿಕ ಶಕ್ತಿಯೆ ಸುಪ್ರಧಾನವೆಂದು ಪೂಜಿಸುವುದು ಸಮುಚಿತ. ತಮ್ಮ ದೇವರಿಗಿಂತ ಇತರ ದೇವರು ಚಿಕ್ಕವೆನ್ನುವುದು ಮಾತ್ರ ಸಾಧುವಲ್ಲ ! ದೈವಿಕಾರಾಧನೆಗೆ ಬೇರೆ ಬೇರೆ ತಿಂಗಳೂ,ಆಯಾ ವಿಧಾನಗಳೂ ಹೇಳಲಾಗಿವೆ. ದಿನವಹಿ ವ್ರತಗಳೂ ತಿಂಗಳುವಾರು ಹಬ್ಬಗಳೂ, ನೈಮಿತ್ತಿಕ ಕಾಮ್ಯಪರ್ವಗಳೂ ಅನೇಕಶಃ ಪ್ರಚಲಿತಗಳಾಗಿವೆ. ಒಂದು ಹಬ್ಬವೂ ನಾನಾ ವರ್ಗದವರಿಗೆ ತಕ್ಕುದೆಂಬಂತೆಯೂ ಇದೆ.ಉದಾಹರಣವಾಗಿ, 'ಶರನ್ನವರಾತ್ರಿ'ಗಳಲ್ಲಿ ಮಹಾಕಾಲೀ,ಮಹಾಲಕ್ಷ್ಮೀ,ಮಹಾಸರಸ್ವತೀ ಎಂಬ ರೂಪಾಂತರ

ಗಳಿಂದ ದೇವಿಯನ್ನು ಸೇವಿಸುತ್ತಾರೆ. ವೀರಕಾಳಗ, ಧನಸಂಪದ, ಜ್ಞಾನರಾಶಿಗಳು ಇಲ್ಲಿ ಸಮಾಂಶದಿಂದ ಫಲಿಸುತ್ತವೆ. 'ವಿಜಯ'ಕ್ಕಾಗಿ ಹೊರಡುವವರು 'ಶಮೀ'ಯನ್ನು ಪೂಜಿಸುತ್ತಾರೆ ; ಅದರೊತ್ತಿಗೆ ಧನಲಕ್ಷ್ಮೀ ಮತ್ತು ಧಾನ್ಯಲಕ್ಷ್ಮೀ ದೇವಿಯರ ಉಪಾಸನೆಗಳು ಒದಗುತ್ತವೆ. ಎಲ್ಲಾ ಜನರ-ಚತುರ್ವರ್ಣದವರ ಅಭ್ಯುದಯಗಳೂ ಇಲ್ಲಿ ಸಾಧ್ಯಗಳಾಗಿವೆ. ಇಹದ ಸತ್ಕ್ರಿಯೆ ಇಹದಲ್ಲೂ, ಪರದಲ್ಲೂ ಒಳಿತನ್ನು ನೀಡುತ್ತದೆ. ಅಂತೆ, ಇಹದ ಅಸತ್ಕ್ರಿಯೆ ಇಹ-ಪರಗಳಲ್ಲಿ ಕೇಡನ್ನು ಒದಗಿಸುತ್ತದೆ.ಈ ಬಗೆಗೆ ಭಾರತೀಯರ ಹಾಗೂ ವಿದೇಶೀಯರ ಅನೇಕ ಪ್ರಾಚೀನ ಕೃತಿಗಳಲ್ಲಿ ನಿದರ್ಶನಗಳಿವೆ. ಆ ಕಥನಗಳ ಅಂತರ್ಯವನ್ನು ತಿಳಿಯಬಯಸುವುದು ಸದ್ಗೃಹಸ್ಥನ ಕಾರ್ಯವಾಗಿದೆ. ಕರ್ಮದಫಲ ದೇವತೆಗಳಿಗೂ ಬಿಟ್ಟಿಲ್ಲವೆಂದು ತಿಳಿಯುತ್ತದೆ !

ಸುರಾಸುರರ ವಿಚಾರ : ಒಬ್ಬ ತಂದೆಯು ದೆಸೆಯಿಂದ ಬೇರೆಬೇರೆ ಮನೋಭಾವದ ಸತಿಯರಲ್ಲಿ ಜನಿಸಿದ ಸಂತತಿ ಪ್ರತ್ಯೇಕವಾದ ಗುಣಕರ್ಮಗಳಿಂದ ಕೂಡಿರುತ್ತದೆ. ಆಯಾ ಕ್ಷೇತ್ರದ ಮನೋಧರ್ಮದ ಪ್ರತ್ಯೇಕತೆಯಿಂದಲೂ, ವಿವಿಧಕಾಲ ಜನಿತ ಕಾರಣದಿಂದಲೂ ಆಯಾ ಸಂತತಿಯ ಪ್ರವೃತ್ತಿ ನಾನಾತ್ವದಿಂದಲೆ ಸಾಗುತ್ತಿದೆಯೆಂಬುದಕ್ಕೆ ದೈತ್ಯರು ದೇವತೆಗಳು ಉದಾಹರಣಾರ್ಹರು.ದಿತಿಯ ಮಕ್ಕಳು ದೈತ್ಯರು;'ಪುಣ್ಯಜನ' ರೆಂದು ಅವರಿಗೆ ಹೆಸರಿದೆ ; ಅವರು 'ಪುಣ್ಯಕರ್ಮಿ' ಗಳಾಗಿಲ್ಲ. ಅದಿತಿಯ ಮಕ್ಕಳು ಆದಿತೇಯರು ; 'ಸುರ'ರೆಂದು ಅವರಿಗೆ ಹೆಸರಿದೆ. ದೈತ್ಯರು ಬಹುಶಃ ದುಷ್ಕರ್ಮಗಳನ್ನು ನಡೆಯಿಸುವವರು ; ಸುರರು ಪ್ರಾಯಶಃ ಸತ್ಕಾರ್ಯಗಳನ್ನು ಕೈಗೊಂಡವರು. (ಇದಕ್ಕೆ ಅಪವಾದವಾಗಿ ಕೆಲವರ ಕೆಲವು ಘಟನೆಗಳಿವೆ ; ಅವು ಅಷ್ಟು ಪ್ರಧಾನ ಗಣನಾರ್ಹವಾಗಿಲ್ಲ.) ದೈತ್ಯರು ದೇವರ ಅವಕೃಪೆಗೆ ಪಾತ್ರರಾಗಿ, ಲೋಕವಿನಾಶಕ್ಕಾಗಿ ಬಾಳಿದರು ; 'ಕ್ರತುನಾಶಕ'ರಾದರು. ಸುರರು ದೇವರ ಸತ್ಕೃಪೆಗೆ ಭಾಜನರಾಗಿ, ಲೋಕಕ್ಷೇಮಕ್ಕಾಗಿ ದುಡಿದರು ; 'ಕ್ರತುಭುಜ'ರಾದರು. ಅದು ಕಾರಣ, ದೈತ್ಯರ ನಾಶಕ್ಕಾಗಿ 'ರಕ್ಷೋಘ್ನ' ಸೂಕ್ತಾದಿಗಳು ಪ್ರಾಚೀನದಲ್ಲಿ ಪ್ರಚುರಗೊಂಡವು. ಈ ಇಬ್ಬಗೆಯ ಬಣಗಳು ಪ್ರಪ್ರಾಚೀನ ಕಾಲದಲ್ಲೂ ಇದ್ದುವೆಂದು ವೇದ್ಯ ! ದೈತ್ಯರ ಉಪಟಳದಿಂದ ಭೂಮಿಯ ಭಾರ ಹೆಚ್ಚುತ್ತದೆ, ಭೂಮಿ ಅಷ್ಟು ಯೋಜನ ಕುಸಿಯುತ್ತದೆ ; ದೈತ್ಯರ ನಾಶವಾದೊಡನೆ ಯಥಾಸ್ಥಿತಿಯೊದಗುತ್ತದೆ (ಕಾಲಿಕಾಪುರಾಣ ನೋಡಿ). ದೈತ್ಯಾಂಶದ ನಾಶಕ್ಕೆ ದೇವಾಂಶದ ಅವತಾರ-ಅವತರಣ-ನಡೆಯುತ್ತದೆ. ಅನೇಕ ದೈವಿಕಾಂಶಗಳ-ಅವತಾರಗಳ ಮಹಿಮೆಗಳು ವ್ಯಾಸಭಾಗವತಾದಿ ಅಷ್ಟಾದಶ ಮಹಾಪುರಾಣಗಳಲ್ಲೂ, ಸೌರಪುರಾಣಾದಿ ಅಷ್ಟಾದಶ ಉಪಪುರಾಣಗಳಲ್ಲೂ ಹೇಳಿವೆ.(ಭೌಗೋಳಿಕ ವಿಚಾರಗಳಲ್ಲೂ ಇಂತಹ ದೈವಿಕಾಂಶಗಳ ಪ್ರಭಾವ ಬರುತ್ತದೆ : ಖರ ರಟ್ಟಾಸುರರ ನಾಶಕ್ಕೆ 'ಶಂಕರ' ಮತ್ತು 'ನಾರಾಯಣ'ರು 'ಶಂಕರನಾರಾಯಣ' ಕ್ಷೇತ್ರದಲ್ಲಿ ಆವಿರ್ಭವಿಸಿದರು. ಅರುಣಾಸುರನನ್ನು ಕೊಲ್ಲಲು ದೇವಿ ಭ್ರಮರಾಂಬೆಯಾಗಿ 'ನಂದಿನೀ' ತಟದ 'ಕಟೀಲು' ಕ್ಷೇತ್ರದಲ್ಲಿ ಅವತರಿಸಿದಳು. ಇ.) ಆದಿತ್ಯಪುರಾಣದಲ್ಲಿ ಹೇಳಿದಂತೆ, ದೇವಿ ರಕ್ತಾಸುರನ ವಧೆಗೆ ಉದ್ಭವಿಸಿದಳು ; ದೇವೇಂದ್ರನ ಕರ್ಮದ ವೈಗುಣ್ಯದಿಂದಾಗಿ ರಾಕ್ಷಸನಿಂದ ಆತನಿಗೆ ಸೋಲುಂಟಾಯಿತೆಂಬುದು ಇಲ್ಲಿ ಬರೆಯಲಿದೆ. ಆ ನೆಪದಲಿಗೆ ಆದಿತ್ಯಪುರಾಣದ ಕವಿಕಾವ್ಯ ಪರಿಚಯವೂ ತುಸ ಹೇಳಬಹುದಾಗಿದೆ. (ಈ ಕೃತಿ ಸುರತ್ಕಲ್ಲು 'ವಿಜಯ ಸಾಹಿತ್ಯ ಮಾಲೆ'ಯವತಿಯಿಂದ ಇದೀಗ ಪ್ರಕಟವಾಗಿದೆ).

'ರಾಮಚಂದ್ರಗುರು ಶಿಷ್ಯ' ಬರೆದ 'ಆದಿತ್ಯಪುರಾಣ'ದ ವಿಚಾರ ಕರ್ಣಾಟಕ ಕವಿಚರಿತೆಯಲ್ಲಿದೆ. (3-360), "ಶೃಂಗಪುರ ಗುರುವರ ನಮಃ. ಶ್ರೀರಾಮಚಂದ್ರ ಕೃಪಾಬ್ಧಿ ಗುಣ ಸಾಂದ್ರರೆಂದು,ಈ ಗುರುಗಳು ಶೃಂಗೇರಿಯವರೆಂದು ಕವಿಯೆ ನಿರೂಪಿಸಿದ್ದಾನೆ (1-6), ಶ್ರೀರಾಮಚಂದ್ರ ಭಾರತೀತೀರ್ಥರು ಇಸವಿ 1508-60 ರಲ್ಲಿದ್ದರೆಂದು ಶೃಂಗೇರಿಯ ಚರಿತ್ರೆಯಲ್ಲಿ ಹೇಳಿದೆ.

ಶ್ರೀರಾಮಚಂದ್ರ ಭಾರತೀತೀರ್ಥರು ಕಾರ್ಕಳಕ್ಕೆ ಬಂದಾಗ, ಅಲ್ಲಿ ಅವರಿಗೆ ಇರಲು ತಕ್ಕ ಮಠ ದೇವಾ

ಉಳಿಸಿದ್ದಿಲ್ಲ. ಜೈನರಾಜನು ಬಸದಿಗಾಗಿ ಕಟ್ಟಿಸಿದ ಕಟ್ಟಡದಲ್ಲಿ, ಅನಂತಶಯನ ಪದ್ಮನಾಭ ದೇವರ ಸುಂದರ ವಾದ ಶಿಲಾವಿಗ್ರಹವನ್ನು ಶ್ರೀರಾಮಚಂದ್ರ ಗುರುಗಳು ಪ್ರತಿಷ್ಠಾಪಿಸಿದರೆಂದೂ ಕೇಳುತ್ತದೆ (ಶೃಂಗೇರಿ ಮಠದ ಚರಿತ್ರೆ ಮತ್ತು ಮೈಸೂರು ರಾಜ್ಯದ ವಿದ್ಯಾಖಾತೆ ಪ್ರಕಟಿಸಿದ ದ.ಕ.ಜಿಲ್ಲೆಯ ಪ್ರಾಥಮಿಕ ದರ್ಜೆಯ ಸಾಮಾಜಿಕ ಪತ್ರ ನೋಡಿ). ಇಸವಿ 1557 ರಲ್ಲಿ ಈ ಘಟನೆ ನಡೆಯಿತು (ಶ್ರೀ ಡಿ. ಪುಟ್ಟಸ್ವಾಮಿ ಕಾರ್ಕಳದ ಚರಿತ್ರೆ) ಕಾರ್ಕಳದ ಚರಿತ್ರೆಯಲ್ಲಿ, ಈ ದೇವರ ಸುಂದರ ವಿಗ್ರಹದ ಸ್ಥಾಪನೆ ಮರೆಯಲಾಗದುದು.

ಆದಿತ್ಯನು ತನ್ನ ಮಗನಾದ ವೈವಸ್ವತನಿಗೆ ಹೇಳಿದ ಶಿವಕಥೆಗಳು 'ಸೌರ ಪುರಾಣ'ದಲ್ಲಿವೆ (ಪ್ರೇಣೆಯ ಆನಂದಾಶ್ರಮದ ಪ್ರತಿ). ಅಲ್ಲಿ ಕೆಲವು ಮತೀಯನಿಂದೆಗಳು ಹೇಳಿವೆ. ಆ ವಿಕ್ಷಿಪ್ತಗಳನ್ನು ಬಿಟ್ಟು, ಮತ್ಸ್ಯಪುರಾಣ ಮತ್ತು ಶಿವಪುರಾಣದ ಕೆಲವು ಕತೆಗಳನ್ನು ಸೇರಿಸಿ, ಕನ್ನಡದಲ್ಲಿ ಈ ಕೃತಿ ಬರೆಯಲಾಗಿದೆ. ಈ ಪ್ರಯುಕ್ತ, ಈ ಕವಿಗೆ ಶೃಂಗೇರಿಯ ಗುರು ಮಠದಿಂದ 'ಕವಿರಾಜ ಕಂಠೀರವ' ನೆಂಬ ಬಿರುದು ದೊರೆಯಿತು (48.86). ಇವರ ಹಸ್ತ ಪ್ರತಿಗಳು ಮಲೆನಾಡಜಿಲ್ಲೆಗಳಲ್ಲಿ, ಹೆಚ್ಚಾಗಿ ದ. ಕ. ಜಿಲ್ಲೆಯಲ್ಲಿ ದೊರಕಿವೆ. ಈ ಕವಿ ಸ್ಮಾರ್ತ–ಭಾಗವತ–ಸಂಪ್ರದಾಯದವನೆಂದು ಸ್ಪಷ್ಟವಾಗಿದೆ (16–23, 18–13, 19–49, 20-67, ಇ).

ಶಕ್ತಿ ಶಿವನ ಮಾಯೆ ಹಾಗೂ ಅರ್ಧಾಂಗಿ ; ಶಿವಶಕ್ತಿಯರ ಅವಿನಾಭಾವದ ಪ್ರತೀಕವಾಗಿ, ಶಿವಕತೆಗಳೇ ತುಂಬಿರುವ 'ಆದಿತ್ಯಪುರಾಣ'ದಲ್ಲಿ ದೇವಿಯೊಂದು ಮಹಿಮೆಯನ್ನು ಸಾರಲು, ದೇವತೆಗಳಿಗೂ ಕರ್ಮದ ವೈಫಲ್ಯ ತಟ್ಟಿತೆಂಬುವನ್ನು ಚಿತ್ರಿಸಲು 'ರಕ್ತಾಸುರವಧೆ' ಅಡಕವಾಗಿದೆ ! ದೇವಿಯ ಮಹಿಮೆಯನ್ನು ಹೇಳೆಂಬ ಮಗನಿಗೆ ಸೂರ್ಯನೆನ್ನುವನು "ನಿನ್ನ ಮಾತುಗೇಳಿ ತೋಷವಾಗಿದೆ, ಲೇಸನಾಡಿದೆ ಮಹೇಶ ಭಕ್ತನಾದ ಮಗನಿರುವುದೆಂದರೆ, 'ಏನು ಜನ್ಮಾಂತರದ ಪುಣ್ಯದ ರಾಸಿಯೇ ಫಲಿಸಿತ್ತು!' ವಿಶ್ವವನ್ನು ಕಲ್ಪಿಸಿ, ವಿಶ್ವರೂಪಿಣಿಯೂ ವಿಶ್ವಧಾರಿಣಿಯೂ, ವಿಶ್ವನಾಟಕಿಯೂ ಆದವಳಾರು? ಈಶ್ವರಾದಿ ದೇವತಾಮೂರ್ತಿಗಳಾಗಿ ನಟಿಸುವವಳಾರು ? 'ಪುರುಷ ಚಿಹ್ನವನೆಲ್ಲ ಪರಮೇಶ್ವರನೆನಿಸಿದವಳೂ, ತರುಣಿ ಚಿಹ್ನೆಗಳೆಲ್ಲ ಅಂಬಿಕಾ ರೂಪೆನಿಸಿದವಳೂ ಯಾರು ? ಸ್ಥಾವರ ಜಂಗಮಪ್ರಪಂಚ ರೂಪವಾರು ? ಖಳಸಂಹರಣೆ-ದಿವಿಜ ರಕ್ಷಣೆಯದಾರು ? ಆವಳಂಘ್ರಿಯ ನೆನೆದರೆ ಅಘರಾಶಿಯಳಿವುದು ಹಾಗೂ ಭಕ್ತಿಜ್ಞಾನ ಸುಖಸಿದ್ಧಿಯಾಗುವುದೊ ಆ ದೇವಿ ಗೌರಿಯ ಭಜಿಸಿದಾತಗೆ ದೇವನ ಭಕ್ತಿ ಕೈ ಗಂಟಹುದು" ಎಂದು (ಎಲ್ಲಾ ದೈವಿಕಾಂಶಗಳಿಗೂ ಬಲುಮಿಕ್ಕಿನವಳು ದೇವಿ ಎಂಬುದೇ ಇಲ್ಲಿನ ತಾತ್ಪರ್ಯ)

ಮಹಿಷಾಸುರನ ಮಗ ರಕ್ತಾಸುರ, ಆತ ಮಾಯಾಬಲದಿಂದ ಸುರನರರನ್ನು ಬಡಿದಟ್ಟಿದನು. 'ಶ್ರೀಲತಾಂಗಿಯ ರಮಣನನ್ನು' ಕಾಳಗದಲ್ಲಿ ಗೆದ್ದನು. ಆತನನ್ನು ಜಗನ್ಮಾತೆ ಕೊಂದಳೆಂಬುದೇ ಇಲ್ಲಿಯ ಕತೆಯ ಸೂಚನೆ ! ಆತನ ಪರಾಕ್ರಮದ ವರ್ಣನೆಯಿದು ; "ಹಿಂದಣಾ ಮಧುಕೈಟಭಾದಿಗಳಿಂದ ಬಲ್ಲಿದನಸುರನ್, ಅವನ ಮುಂದೆ ರಾವಣ ಕುಂಭಕರ್ಣ ಹಿರಣ್ಯಕಾದಿಗಳು ಒಂದು ತೃಣವೆನಲ್, ಅವಗೆ ಮೂವತ್ತೊಂದು ಲಕ್ಷಾಕ್ಷೋಹಿಣೀ ಬಲವೊಂದಿ, ಮಂತ್ರಿ ನಿಕುಂಭ ಮೊದಲಾದೇಳ್ವರವರೆಂದ".

ಅವನೊಮ್ಮೆ ದೈತ್ಯರ ಸಭೆಯಲ್ಲಿ ಹೇಳಿದನು : "ತನ್ನ ಪರಾಕ್ರಮದಿಂದ ಬ್ರಹ್ಮಾದಿ ದೇವತೆಗಳು ಗುಹೆಯಲ್ಲಿ ಅಡಗಿದರು. ಇಂದ್ರಾದಿಯರು ನನ್ನನ್ನು ಓಲಗಿಸುವರು. ತಾನೇ ದೇವರೆಂದು ಪೂಜಿಸಬೇಕೆಂದು". "ಭುವನ ದೇವತೆಯಾಗು, ನೀವೆನ್ನುವನು ಪೂಜಿಸಿ, ಮತ್ತೆ ಕೀರ್ತಿಸಿ....ಭುವನವೆಲ್ಲವು ನನ್ನ ಭಜಿಸಿದಡವರಿಗೀವೆನು ಸಕಲ ಸೌಭಾಗ್ಯವನೆನಲು, ಭಯದಿಂದ ಭಜಿಸಿದರಸುರಕುಲಪತಿಯ". ಈ ದುರುಪಾಯದಿಂದಾದ ಫಲ ವೇನು ? "ವೇದವಡಗಿತು, ಶಾಸ್ತ್ರಪದ್ಧತಿ ಬೂದಿಯಾಯಿತು, ವಾರತಿಥಿಯೋಗಾದಿ ಹರಿಹರ ದೇವತಾಪೂಜಾ ಜಪಸ್ತೋತ್ರ ಆದಿಯಲಿ ಪಿತೃತರ್ಪಣಂಗಳ ಭೇದವಳಿದಾ, ವ್ರತನಿಯಮ ಯಜ್ಞಾದಿಗಳು ಬಯಲಾಯ್ತು ಮದವುಡುಗಿತ್ತು ಸುರಬಲಕೆ" (ಅಮಾನುಷ ಶಕ್ತಿಗಳ ಆರಾಧನೆಯಿಂದ ಈ ಪ್ರಪಂಚಕ್ಕೆ ಸುಖವೊದಗುತ್ತದೆ. ಆ ಆರಾಧನೆಯನ್ನು ಕೈ ಬಿಟ್ಟರೆ, ದೈವಿಕಾನುಗ್ರಹವಿಲ್ಲದೆ, ಜನ ತಾನಾಗಿ ನಿರ್ಬಲವಾಗುತ್ತದೆ ; ದೈತ್ಯಬಲವೇರು

ತ್ತದೆಯೆಂದು ಇಲ್ಲಿನ ಆಶಯ. ಆತ ಮೆಚ್ಚಿದ ಬಗೆಯಿದು : "ದಾನವನ ಭಜಕರಿಗೆ ನಿರ್ಜರ ಮಾನಿನಿಯರನು ದೇಶಕಾಲ. ಮಹಾನುಭವ ಭಾಗ್ಯವನು ಕೊಟ್ಟನು, ಮಿಕ್ಕ ಜೀವರಿಗೆ ದಾನವಪ್ರೇಪಿಗಳಿಗಿತ್ತಾ ಶಾಸನವ, ಕಲಿಯುಗದವೊಲು ಪಾಪಾನುಗತರಿಗೆ ಸೌಖ್ಯ, ಧರ್ಮಿಗೆ ದುಃಖವೆಂದಂತೆ." ಈ ಭಂಗವನ್ನು ಪರಿಹರಿಸಲು, ಇಂದ್ರನು ಗುರುವಿನೊಡನೆ ಬಿನ್ನವಿಸಿದನು : "ಪೊತ್ತೆವಸುರರ ಮನೆಯಮೊಟ್ಟೆಯನೊತ್ತಿದೆವು ಕಾಲುಗಳನವರಿಗೆ, ತೆತ್ತೆವಬಲಾರಾಜ ಕರಿ ರಥ ಧಾನ್ಯಧನಗಳನು, ಮತ್ತೆ ಖಳಗೆಮ್ಮವನು ಬಿಡೆಬೆಂಬತ್ತಿ ಹಿಡಿಹಿಡಿದೊಯ್ದು ಮೊರೆಯಿರಿಸುತ್ತವಿದ್ದ ರುಪಾಯವೇನೈ ಗುರುವೆ ಹೇಳೆಂದ." "ಬಿನುಗು ದಿವಿಜರ ಸಾರುಬಲ್ಲರು? ವನಜನಾಭನಡಂಗಿ ಹೋದನು, ವಿನುತ ಮಂತ್ರಾಕ್ಷತೆಯನಿತ್ತೋಲಗಿಪನಬುಜಭವ, ಅನಿಮಿಷಾಳಿ ಪಿಶಾಚ ವೇಷದಿ ದನುಜನುರೋಳು ತನುವ ಹೊರೆವುತ್ತದೆ, ವಿಚಾರವದಾವುದೆಮಗಿನ್ನೇನು ಗತಿಯೆಂದ". "ಸ್ವರ್ಗದೊಡೆಯನು ಸುಮ್ಮನಿರಲಾಗದು, ಧುರದೊಳಗೆ ಕಾದುವೆ, ಮರಣ ಬಂದರೆ ಬರಲಿ"ಯೆಂದು. ಆಗ ಗುರು ಹಾಸ್ಯಮುಖನಾದನು ! ಇಂದ್ರನ ದುಷ್ಕಾರ್ಯವೇ ಹೀಗೆ ದುಷ್ಫಲಿಸಿತೆಂದು ಬಿತ್ತರಿಸಿದನು. ಇಂದ್ರ ಆತನಿಂದ ಉಪದೇಶವೊಂದಿ ದೇವಿಯುಪಾಸನೆಗೆ ಸಾಗಿದನು.

ಇಂದ್ರನ ತಪೋಬಲ-ಧ್ಯಾನಬಲ-ಮಂತ್ರಬಲಗಳಿಗೆ ದೇವಿ ಮೆಚ್ಚಿ ಪ್ರೈಪೋರಿವಳು : "ಎಡಬಲಂಗಳ ಲಕ್ಷ್ಮಿ ವಾಣಿಯರೊಡನೆ ಬಳಸಿದ ಶಕ್ತಿವೃಂದದ ಸಡಗರದ ಸಂಭ್ರಮದ ಉಪನಿಷದಂಗನಾವ್ರಜದ ನಡುವೆ ಶತ ಕೋಟ್ಯರ್ಕಕಾಂತಿಯನೊಡೆದುಳಿದು ಹೊಳೆವಂಗದಿಂ ಜಗದೊಡತಿ ಸಿಂಹಾರೂಢೆ ಮೆರೆದಳು ಸುರಪತಿಯ ಮುಂದೆ" ದೇವಿಯಲ್ಲಿ ಇಂದ್ರ ತನ್ನ-ತನ್ನವರ-ಸಂಕಷ್ಟಗಳನ್ನು ನಿವೇದಿಸಿದಳು. ದೇವಿ ಉತ್ತರಿಸಿದಳು : "ನಾಡೆನೊಂದೈ ಕಂದ, ದನುಜರು ಮಾಡಿದರೆ ಭಂಗವನು, ಕರ್ಮವೆ ಮಾಡಿತಲ್ಲದೆ, ಖಳರ ಗುಣವಲ್ಲೆಂದಳಗಜಾತೆ." "ಸುಕೃತವನು ನೀ ಮಾಡಿ ಸುರನಾಯಕನು ನೀನಿಂದಾದೆ, ಮಾಡುವ ಸುಕೃತದಲಿ ವೈಗುಣ್ಯವುಂಟಾಯ್ತದರ ದೆಸೆಯಿಂದ ವಿಕೃತಿ ಯಾಯಿತು, ಸಿರಿ ಫಲಾಪೇಕ್ಷಕನು ನೀ ಭೋಗಾಶೆಯಿಂದಲಿ ಸುಕೃತವನು ಮಾಡುವರೆ ಪೂರ್ವದೊಳೆಂದಳಗ ಜಾತೆ."

ಇಂದ್ರನ ಪುಣ್ಯದ ಅನಲಮೂರ್ತಿಯೆ ತಾನು, ಆ ದನುಜಮಹಾರ್ಣವನ್ನು ಈಂಟಲು ದೇವಿಯೆಂಬ ಉಪಾಧಿಯುಂಟಾಗಿದೆ, ಅಂಜಬೇಡೆಂದಳು, ದೇವಿ ! ಇಂದ್ರನಿಗೆ ದೇವಿಯ ಮಾತು 'ಶ್ರೀರಕ್ಷೆ'ಯಾಯಿತು. (ಕರ್ಮದ ವೈಗುಣ್ಯವೇ ಆಂತರಿಕವಾಗಿ ಪ್ರತಿಫಲಿಸಿತೆಂಬುದು ಇಲ್ಲಿನ ಸಾರಾಂಶ.) ರಕ್ತಾಸುರನ ವಧೆಯ ಕಾರಣ ತಿಳಿದ ಮೇಲೆ, ಆ ಕಥಾವಸ್ತು ಹರಿದ ಬಗೆ ಕಾಣಬಹುದು ! ಕಾಳಗ, ತಾತ್ತ್ವಿಕ ವಿಚಾರಗಳುಳ್ಳ ಈ ವಿಭಾಗ ಸರಸ ವಾಗಿದೆ !

ಮಹಾದೇವಿ ಕಾಳಗಕ್ಕೆ ಸಿದ್ಧಳಾದಳು : "ಬಾಲಭಾಸ್ಕರಕಾಂತಿ ತನು, ನಳಿತೋಳಿಸೆಯಲಿಪ್ಪತ್ತು ವಿಡಿದ ತ್ರಿಶೂಲಮುಖ್ಯಾಯುಧಗಳುರಿವುತ ಧಗಧಗಿಸುತಿರಲು-ಕರಾಳರವದಲಿ ನಕ್ಕಳದ್ರಿಜೆ" ಅದನ್ನು ಕೇಳಿದ ರಕ್ಕಸರ ಪಡೆ ಮುನ್ನಡೆಯಿತು: "ಸಿರಿಗಳೊಟ್ಟಾದಂತೆ ಕರಿ ರಥ ತುರಗ ನೆರೆದೈದಿತ್ತು, ವೈರಾಟ್ ಪುರುಷರೊಬ್ಬಳಿ ಯಂತೆ ದೀರ್ಘ ಮಹಾಂಗದಸುರಗಣ." ಅವರಿಗೆ 'ಕಣವಾಯ್ತಾರು ಸಾವಿರ ಗಾವುದದ ಭೂಮಿ ! ಪಾರ್ವತಿಯ ಹುಂಕಾರದಿಂದ ಶಕ್ತಿಕೋಟಿಗಳು ಒಗೆದು, ಅಸುರಪಡೆಯೊಡನೆ ಕಾದಿದವು. ರಕ್ಕಸರು, ಮಂತ್ರಿಗಳು ಮಡಿ ಯಲು, ರಕ್ತಾಸುರನೇ ಮುಂದಾದನು ; ಅವನಲ್ಲಿ ಕಾದಲು ದೇವಿ ಇದಿರಾದಳು. "ಸಿಕ್ಕಿದನು ಖಳನಗಜೆಯೊಡ ಲೊಳು, ಸೊಕ್ಕು ಮುರಿದುದು, ಮುನ್ನಿನಂತಿರೆ ತಕ್ಕ ದೇಹವನಾಂತಡಾಂತಳು ಸೂಕ್ಷ್ಮದೇಹವನು, ಇಕ್ಕಿದಳು ಶೂಲದಲಿ ದನುಜನ ನುಕ್ಕುಗೆಟ್ಟೊರಲುತ್ತ ಬಿದ್ದನು, ಹೊಕ್ಕುದಾತ್ಮಜ್ಯೋತಿ ದೇವಿಯ ನಖದ ಬೆಳಗಿನಲಿ."

"ಉಳಿದ ರಾಕ್ಷಸರೆಲ್ಲ ಹಾಹಾಗಳಿತರವದಿಂದೋಡಿ ದಿಙ್ಮಂಡಲಗಳನು ಗಿರಿಗುಹೆಯ ಪಾತಾಳಗಳ ಮರೆ

ಪೊಕ್ಕು, ಜಲವ ಹೊಕ್ಕುದು, ಹುಲ್ಲಕಟ್ಟಿದು, ತಲೆಯ ಬಿಟ್ಟುದು, ಮರವನೇರಿದ್ದು ಳುಹಿಕೊಂಡುದು ಕೆಲರೊಡಲ ಕಕ್ಕುಲಿತೆಯಲಿ ಖಳರು". ಸೋತವರು ಅಡಗಿಕೊಂಡರು ; ಮರೆಯಾದರು !

ಇನ್ನು ಕೆಲವರ ಬಗೆಯಿಲ್ಲಿದೆ: "ಯತಿಗಳಾಗಿ,ವಿರಕ್ತರಾಗಿ, ಅದ್ಭುತ ದಿಗಂಬರರಾಗಿ, ಮೂರ್ಖವ್ರತಿಗಳಾಗಿ, ಪಾಷಂಡ ಚಾರ್ವಾಕಾದಿ ಪದರಾಗಿ, ಶ್ರುತಿಗಳನು ವೇದಗಳ ಪ್ರಸ್ರುತತಿಯನುವ ವಿಷ್ಣು ಮಾತಾಪಿತೃ ಗುರುವ ನಿಂದಿಸುತಲಿರೆ ಕಂಡುಳುಹಿದಳು ದೇವಿ". ಇಲ್ಲೊಂದು ವಿಶೇಷಾಂಶವೂ ಹೇಳಿದೆ : "ಪಾತಕಿಗಳೆನ್ನಿಂದಲಳಿವರೆ ಪ್ರೂತ ರಹರ್, ಇವದಿರಿಗೆ ನರಕವ್ರಾತವಲ್ಲದೆ ಸುಗತಿ ಸಲ್ಲದು, ಕಲಿಯುಗದೊಳಿವರು ಜಾತರಾಗಿಯೆ ಕುಟಿಲಮಾರ್ಗದ ಅನೀತಿಗಳ ನೆಡಲಿಳೆಯೊಳೆಂದಾ ಮಾತೆಯವದಿರ ಕಡೆಯ ನೋಡದೆ ತಿರುಹಿದಳು ಮೊಗವ".

ದೇವಿ ರಣಭೂಮಿಯನ್ನು ಮಾಯೆಯಿಂದ ಶುದ್ಧ ಸ್ಫಟಿಕಮಯವಾಗಿಸಿದಳು. ಇಪ್ಪತ್ತೆಂಟು ದಿನದ ರಣದ ಕೊನೆಗೆ ಈ ಸಭೆ ಸೇರಿತ್ತು. "ಇಂದ್ರನನು ಕರುಣದಲಿ ನೋಡುತ, ಬಂದರಿಷ್ಟವು ಹೋಯಿತೇ ? ನಾನಿಂದು ಕೊಂದವಳಲ್ಲ, ಕೊಲಿಸಿದ್ದವನು ನೀನಲ್ಲ, ಕೊಂದುದಸುರನ ಕರ್ಮವಿದು, ಬಾಲೇಂದು ಜೂಟನ ಲೀಲೆ, ನಿನಗೇನಗೊಂದರಭಿಮಾನಗಳು ಬೇಡೆನ್ನೆಂದಳಗಜಾತೆ." ಚಂದ್ರಜೂಟನ ಭಕ್ತಿಯಿಲ್ಲದೆ ನೀನು ಮಾಡಿದ ಪುಣ್ಯ ವೈಗುಣ್ಯವಾಗಿ ಹೀಗಾದುದು, ಈಗ ಅದರ ಪರಿಹಾರವಾಗಿದೆ, ನೀನು ಸ್ವರ್ಗಕ್ಕೈದೆಂದಳು. "ವಿತತಭಕ್ತಿಯೆ ಮುಕ್ತಿಯೆಂದಳು ಪಾರ್ವತಾದೇವಿ."

ಇಂದ್ರನಲ್ಲಿಗೆ 88 ಸಾವಿರ ಮುನಿಗಳೈದಿದರು: "ಶರನ್ನವರಾತ್ರಿಯಲ್ಲಿ ದುರ್ಗೀದೇವಿಯನ್ನು ಪೂಜಿಸ ತಕ್ಕುದು, 'ಅಕ್ಕು ಸಿರಿ, ಶತ್ರುಕ್ಷಯಂಗಳು, ಭಕ್ತಿ ಶಂಕರನ." ದೈತ್ಯರಾರೆಂಬುದು ಹೇಳಿದೆ : "ವರ್ಣೋಕ್ತ ಕರ್ಮವ ಬಿಟ್ಟವರು, ಕೌಟಿಲ್ಯ ಕರ್ಮವನು ವರ್ತಿಪರು, ಗುರುಭಕ್ತಿಹೀನರು, ಧೂರ್ತಹಿಂಸಾರತರು ಮತ್ತಾಸಕ್ತರೇ, ರಕ್ಕಸರು ಬೀಳ್ವರು ಘೋರ ನರಕದಲಿ." ಋಗ್ವೇದ, ಕೌಟಿಲ್ಯನ ಅರ್ಥಶಾಸ್ತ್ರ, ವ್ಯಾಸಭಾರತ, ಮುದ್ರಾ ರಾಕ್ಷಸ ನಾಟಕಾದಿಗಳಲ್ಲಿಯ 'ವೃಷಲ' ಶಬ್ದದ ಅರ್ಥವೂ ಇದೇ ಆಗಿದೆ. (ಶ್ರೀ ಡಿ. ಎಲ್. ನರಸಿಂಹಾಚಾರ್ಯರ ಸಂಭಾವನ 'ಉಪಾಯನ'ದಲ್ಲಿ ನನ್ನ ಲೇಖ ನೋಡಿ)

ವರ್ಣಾಶ್ರಮಗಳ ಕಲ್ಪನೆ ಪ್ರಾಚೀನ ಭಾರತೀಯ ಕೃತಿಗಳಲ್ಲಿದೆ. ಅದು ತೀರಾ ವಿಕಲ್ಪವೆಂಬುದು ಸರಿಯಲ್ಲ. ಹಾಗೆಂದು ತಾವೆನ್ನುವ ಶೈವ—ವೈಷ್ಣವಾದಿಗಳೇ ಮೇಲೆಂಬುದೂ ಚೆನ್ನಲ್ಲ. ದೈವಿಕ ಶಕ್ತಿಗಳಲ್ಲಿ ಆವೊಂದನ್ನು-ತನ್ನಿಷ್ಟವಾದುದನ್ನು ಆರಾಧಿಸುವುದು ಆಸ್ತಿಕಮತವಾಗಿದೆ. ಆಸ್ತಿಕ್ಯದಿಂದಲೆ ಸಾಮಾಜಿಕರು ಸಾಮರಸ್ಯದಿಂದ ಸುಖವಾಗಿ ಬಾಳಬಲ್ಲರೆಂಬುದು ಧಾರ್ಮಿಕಸೂತ್ರದ ಜೀವಾಳವಾಗಿದೆ.

ನಮ್ಮ ಕರ್ಮದಿಂದ ನಮಗೆ ನಾವೇ ಮಿತಿಯನ್ನು ಕಲ್ಪಿಸಿಕೊಳ್ಳುತ್ತಿರುವೆವು. ಆ ಕರ್ಮವೇ ನಮ್ಮ ಕೊರಳಿಗೆ ಕಟ್ಟಿದ ಸರಪಳಿಯಂತೆ ನಮ್ಮನ್ನು ಈ ಸ್ಥಿತಿಗೆ ತಂದಿರುವುದು. ಆ ಸರಪಳಿ ಯನ್ನು ಕಿತ್ತುಹಾಕಿ ಸ್ವತಂತ್ರರಾಗಿ.

ಶಂ. ಬಾ. ಜೋಶಿ

ವೇದಕಾಲೀನ ಅದಿತಿ ; ಆದಿತ್ಯ ಸಂಪ್ರದಾಯದ ಸ್ವಲ್ಪ ಪರಿಚಯ*

೧. **ಪ್ರಸ್ತಾಪ** : ವೇದಕಾಲೀನ ಕಣ್ಕಟ್ಟಿನ (black magic) ವಿಚಾರವು ಇಂದೇನು ಪ್ರಯೋಜನ ? ಈ ಕಣ್ಕಟ್ಟಿನ ಪ್ರಭಾವದ ದುಷ್ಪರಿಣಾಮಗಳನ್ನು ಭಾರತೀಯರು ಇಂದಿನ ಈ ಕ್ಷಣದವರೆಗೂ ಅನುಭವಿಸುತ್ತಿದ್ದಾರೆ ! ಇದರ ಅರಿವು ಉಂಟಾಗುವುದು ಕಠಿಣವಿದೆ ; ಇದು ಕಣ್ಕಟ್ಟು= ಭ್ರಮೆ, ಮೋಸ ಎಂಬ ಪ್ರಜ್ಞೆ ತಲೆಯೆತ್ತಿದಲ್ಲಿ ಆ ಕ್ಷಣದಿಂದ ಆ ಕಣ್ಕಟ್ಟಿನ ದುಷ್ಪರಿಣಾಮ ಕಡಮೆಯಾಗುತ್ತದೆ. ಆದರೆ ತಾನು ಕಣ್ಕಟ್ಟಿನ= ಯಾತುಕೃತ್ಯಕ್ಕೆ ಒಳಗಾಗಿದ್ದೇನೆ ಎಂದು ಒಪ್ಪಿಕೊಳ್ಳಲು ವ್ಯಕ್ತಿಗಳ 'ಸ್ವ'ದ ಅಭಿಮಾನ ಅಡ್ಡಬರುತ್ತದೆ !

ವೇದಕಾಲದಿಂದಲೇ ಭಾರತೀಯರ 'ಬ್ರೇನ್‌ವಾಶ್' ಆಗಿದೆ. ಹೀಗೆ ನಮ್ಮ ಪ್ರಜ್ಞೆ ಬಧಿರವಾಗಿರುವುದನ್ನು ಮನಗಾಣಿಸಿಕೊಡುವುದಕ್ಕಾಗಿಯೇ ಈ ಅಲ್ಪ ಪ್ರಯತ್ನ. ಮಾದರಿಗಾಗಿ ಒಂದು ಸಣ್ಣ ಕ್ಷುಲ್ಲಕವೆನಿಸುವ ಮಾತನ್ನೇ ನೋಡಿ ; ಆದಿತ್ಯನ ವಾರ ಎಂದು ನಾವು ಹೇಳುವ ಚಟ ! 'ಆದಿತ್ಯ' ಎಂದರೆ ಯಾರು ? ಭಾನು (ರವಿ) ವಾರವನ್ನು ಆದಿತ್ಯವಾರ ಎಂದು ಹೇಳುವ ವಾಡಿಕೆ ಇದೆ. ಪ್ರವಾಹಪತಿತರಂತೆ ತಿಳಿಗೇಡಿತನದ ಈ ಮಾತಿನ ರೀತಿಗೆ ಎಲ್ಲರೂ ತಲೆಬಾಗಿದ್ದಾಗಿದೆ. ಆದರೆ ಆದಿತ್ಯ ಎಂದರೆ ಭಾನು= ಪ್ರಭಾ, ಪ್ರಕಾಶಯುಕ್ತ ಸೂರ್ಯನಲ್ಲ ! ಇದು ಚಂದ್ರನ ಪರ್ಯಾಯ ನಾಮ ! 'ಆದಿತ್ಯ'ನು ರಾತ್ರೀಸೂರ್ಯ ! ಆದರೆ 'ರಾತ್ರೀಸೂರ್ಯ' ಎಂದರೂ ಈ ಆಶಯ ; ಅರ್ಥವು ಅಪೂರ್ಣವೇ ಉಳಿಯುತ್ತಿದೆ ! ಹಾಗಾದರೆ ಈ 'ಆದಿತ್ಯ' ಎಂದರೆ ಯಾರು ? ಎಲ್ಲಿದ್ದಾನೆ ?

೨. **ಆದಿತ್ಯಾದಿ 'ನವ'ಗ್ರಹ ಎಂಬಲ್ಲಿಯ ಕಣ್ಕಟ್ಟು ಅಥವಾ ಮೋಸ ನೋಡಿಕೊಳ್ಳಿ :** 'ಗ್ರಹಪೀಡೆ'ಯನ್ನು ನಿವಾರಿಸಲು 'ನವಗ್ರಹ' ಗಳ ಶಾಂತಿಯನ್ನು ಹೇಳಲಾಗಿದೆ. ಆದರೆ ಈ 'ನವಗ್ರಹ' ಎಂಬುದನ್ನು, 'ಆದಿತ್ಯಾದಿ ನವಗ್ರಹ ದೇವತಾ' ಎಂದು ಹೇಳುವ ವಾಡಿಕೆ ಇದೆ. ಆದರೆ ನವ (ಒಂಬತ್ತು) ಗ್ರಹಗಳ ಪರಂಪರಾಗತ ನಾಮಾವಳಿಯಲ್ಲಿ ಆದಿತ್ಯನೇ ಇಲ್ಲ !

1) ಸೂರ್ಯ 2) ಚಂದ್ರ 3) ಮಂಗಳ 4) ಬುಧ 5) ಗುರು 6) ಶುಕ್ರ 7) ಶನಿ ನಿಜವಾಗಿ ಈ ಏಳು ಹೆಸರಿನ ಸೂಚಕ ನಕ್ಷತ್ರ (ಸೂರ್ಯ) ಗ್ರಹಗಳು ಉಂಟು. ಆದರೆ 8 ಮತ್ತು 9ನೆಯ ರಾಹು-ಕೇತು ಎಂಬುವು ಇದು ಒಂದು ಕಣ್ಕಟ್ಟು ; ಇವು ಚಂದ್ರನ ಪರ್ಯಾಯಗಳೇ ಆಗಿವೆ ಮೂಲದಲ್ಲಿ ! 'ರಾಹು' ಕಾಲ, ಅನಿಷ್ಟ ಸಂಭವಿಸುವ ಭೀತಿಯ ಕಾಲ, ಎಂದು ಜನರನ್ನು ಪುಕ್ಕರನ್ನಾಗಿ ಮಾಡಿರುವ ಈ ರಾಹುವು ಯಾರು ? ಇದು ಚಾಂದ್ರ ಸಂಪ್ರದಾಯದ ಒಂದು ಮೋಸ ! ಸೂರ್ಯಗ್ರಹಣದಲ್ಲಿ ಸೂರ್ಯನ ತೇಜ ನುಂಗಹೊರಟ ಈ 'ರಾಹು'

---

* ಇದು ಒಂದು ಕಣ್ಕಟ್ಟು ಅಥವಾ ಮೋಸ

ಹೆಸರು ಚಂದ್ರನ ಪರ್ಯಾಯ ನಾಮ ! 'ಸೂರ್ಯನ' ತೇಜಸ್ಸನ್ನು ಕಡಮೆ ಮಾಡಲು ಹೊಂಚುಹಾಕಿದ 'ದುಷ್ಟ ದೈತ್ಯನು,' ಎಂಬ ಅಪವಾದಕ್ಕೆ ಗುರಿಯಾಗುವುದನ್ನು ತಪ್ಪಿಸಲು ಚಂದ್ರನ ಬದಲು 'ರಾಹು' ಎಂಬ ಬೇರೊಂದು ಹೆಸರನ್ನು ಕಲ್ಪಿಸಿದ್ದಾಗಿದೆ. ಆದರೆ 'ಚಂದ್ರ' ಎಂಬ ಆಶಯವನ್ನು 'ರಾ'ಹು ಎಂಬಲ್ಲೂ ಸೂಕ್ಷ್ಮವಾಗಿ ಉಳಿಸ ಲಾಗಿದೆ. ವೇದದಲ್ಲಿ ಚಂದ್ರನಿಗೆ 'ರಾ'ಜನ್ ಎಂದು ಹೆಸರು. 'ರಾ' ಇದು ಬೀಜಾಕ್ಷರ ! ರಜಸ್ಸು, ರೇತ, ರಕ್ತ ಸೂಚಕ ಶಬ್ದ-ಮೂಲ 'ರಾ' ! 'ರಾ'ಹು ಎಂಬಲ್ಲಿಯೂ ರಾ-ಜನ್ ಇದೇ ಅರ್ಥವೇ ಉಂಟು !

ರಾಹು ಮತ್ತು ಕೇತು ಇವು ಒಬ್ಬ ದೈತ್ಯನ ಎರಡು ತುಂಡುಗಳಂತೆ ! ಆದಕಾರಣ ಇವು ನಿಜವಾಗಿ ಎರಡಲ್ಲ ! ಇದೂ ಒಂದು ಕಣ್ಕಟ್ಟು ! ಇಂದಿನ ಗ್ರಹಗಣಿತಶಾಸ್ತ್ರವು ರಾಹು ಕೇತುಗಳು ಎಂಬ ಎರಡು ಬಿಂದುಗಳ ಅಸ್ತಿತ್ವವನ್ನು ಲೆಕ್ಕಿಸಿದೆ. ಆದರೆ ಗಣಿತಶಾಸ್ತ್ರದ ಶೋಧವಾದ ಬಳಿಕ ಈ ಗ್ರಹನಾಮ ತಲೆಯೆತ್ತಿಲ್ಲ. ಚಂದ್ರನ ಬಗೆಗಿನ ಗ್ರಹಿಕೆಗಳಿಗೆ ಕಥಾರೂಪವು ಪ್ರಾಪ್ತವಾದ ಕಾಲದಲ್ಲಿ ಕವಿ ನಿರ್ಮಿತ ನಾಮ ರೂಪಗಳಿವು.

ಈ ವಿವರಣೆಯಲ್ಲಿ ಮೂಲ ಮಾತು ಬದಿಗೇ ಉಳಿಯಿತು ! ನವಗ್ರಹಗಳ ನಾಮಾವಳಿಯಲ್ಲಿ 'ಆದಿತ್ಯಾದಿ' ಎಂಬ ಪದದ ಔಚಿತ್ಯವೇನು ? ಈ ಆದಿತ್ಯನ ಹೆಸರೇ ಒಂಬತ್ತರಲ್ಲಿ ಇಲ್ಲವಲ್ಲ !

ಹಾಗಾದರೆ 'ಆದಿತ್ಯಾದಿ ನವಗ್ರಹ' ಎಂಬ ಮಾತು ತೀರಾ ಸುಳ್ಳೇ ? ತೀರಾ ಸುಳ್ಳು ಎನ್ನಲು ಅವಕಾಶ ವಿಲ್ಲ ! ಆದರೂ ಇದನ್ನು 'ನವಗ್ರಹ' ಎಂದಿರುವಲ್ಲಿ ಒಂದು ಬಗೆಯ ಮೋಸವಿದೆ ! ಏಕೆಂದರೆ ಶ್ರೀಸಾಮಾನ್ಯರ ಗ್ರಹಿಕೆಯ 'ಗ್ರಹ' (ನಕ್ಷತ್ರ) ಇದಲ್ಲ. ಬಸುರಿಯಲ್ಲಿ ಹುಟ್ಟಲಿರುವ 'ಕಂದ' = ನವಗ್ರಹವಂತೆ ! 'ನವ' ಎಂಬ ಪದಕ್ಕೆ 'ಹೊಸ' ಎಂಬ ಅರ್ಥವಿಲ್ಲದೆ. 'ನವ' ಇದಕ್ಕೆ ಒಂಬತ್ತು, ಎಂದು ಇರುವ ಅರ್ಥವೂ ನಿಷ್ಕಾರಣವಲ್ಲ. ನವಮಾಸ ತುಂಬಿ ವತ್ಸ ಜನಿಸುವ ಕಾಲಸೂಚಕ ಸಂಖ್ಯೆ ! ಋಗ್ವೇದದ ನವಮ ಮಂಡಲದಲ್ಲಿ ಸೋಮ ನಾಮಾಂತರದ ಚಂದ್ರನ ಸೂಕ್ತಗಳಿವೆ !

೩. ನವಗ್ರಹ ಎಂಬಲ್ಲಿರುವ ಅರ್ಥವು ಲೈಂಗಿಕ ಸ್ವರೂಪದ್ದಾಗಿದೆ ! ಅದಕ್ಕಾಗಿ ಇಷ್ಟೆಲ್ಲ ಕಣ್ಣುಮುಚ್ಚಾಲೆಯ ಆಟ ! ಸಂಸ್ಕೃತ ಭಾಷೆಯೊಳಗಿನ ಗಾದೆಯ ಹಿನ್ನಲೆಯಲ್ಲಿ 'ಗ್ರಹ' > ಗ್ರಾಹಿಯ ಅರ್ಥವು ಸ್ಪಷ್ಟವಾಗಲಿದೆ. 'ಜಾಮಾತುಃ ದಶಮಗ್ರಹಃ' ಅಳಿಯನು ಹತ್ತನೆಯ ಗ್ರಹವಂತೆ ! 'ಜಾ-ಮಾತೃ' ಈ ಸಾಮಾಸಿಕ ಪದದ ಮೇರೆಗೆ 'ಮಾತೆಯನ್ನು ನಿರ್ಮಿಸುವವನು'—ಮಾತೃತ್ವಕ್ಕೆ ಕಾರಣನು ಆಗುವ (ಲಿಂಗ) ಅಳಿಯನು ಒಂದು 'ಗ್ರಹ' ಎಂದರೇನು ; ಗ್ರಹ > ಗ್ರಾಹಿಃ ಆಲಿಂಗಿಸುವವ, ಅಮುಟುವವ, ಅಪ್ಪುವವ, ವೇದದಲ್ಲಿ ವೃತ್ರ = ಅಹಿ ಎಂದರೂ ಇವನೆ. ನಾಗ = ಲಿಂಗ = ನಾಗ = ಚಂದ್ರ.

ಅಳಿಯನು ಮಗಳ ಗಂಡನು ; ಇವನು ಅಳಿಯನು ಎಂದರೆ ಅಮರನು. ಈ ಅಮರತ್ವ ಅಮೃತಾಂಶು ಚಂದ್ರನಿಗೆ ಉಂಟು ! ಮದುವೆಗೆ ಮುಂಚೆ 'ಚಂದ್ರಮರಾಯ' (ಆದಿತ್ಯ) ಎಂದು ಚಂದ್ರನನ್ನು ಗಂಡನ ಹೆಸರು ಎಂದು ಕಲ್ಪಿಸಿ ಹೇಳುವ ರೂಢಿ ನಮ್ಮ ಜನಪದದಲ್ಲಿದೆ. 'ಮಗಳ ಗಂಡ'ನೆಂದು 'ಅಳಿಯ' ಎನಿಸುವ ಚಂದ್ರಮ ರಾಯ (ಆದಿತ್ಯ) ಚಿಕ್ಕಂದು ತನ್ನ ಗಂಡನೂ ಎನಿಸುತ್ತಾನೆ ! ಬೀಗತನದಲ್ಲಿ 'ಬಳ್ಳಿತಿರುಗುವ' ಈ ಬಳಗ ತನದಲ್ಲಿ ಚಾಂದ್ರ ಸಂಪ್ರದಾಯದ ಪ್ರಭಾವವು ಉಂಟು. 'ಮಾತುಲಕನ್ಯಾವಿವಾಹ' ನಿಷಿದ್ಧವಿದೆ-ಸೌರ ಪರಂಪರೆಯಲ್ಲಿ !

ದಕ್ಷಾತ್ ಅದಿತಿಃ ; ಇದಕ್ಕೆ ಪ್ರತಿಯಾಗಿ 'ಅದಿತೇಃ ದಕ್ಷಃ !' ಗ್ರಹ > ಗ್ರಾಹಿ ಎಂಬ ಈ ವಿಚಾರದ ವ್ಯಾಪ್ತಿಯು ಭಯಾವಹ ಸ್ವರೂಪದ್ದಾಗಿದೆ ! 'ಜರತ್-ಕಾರು' ಇದು ತಕ್ಷಕ = ವಾಸುಕಿ = ನಾಗ ಸಂಪ್ರದಾಯದ ಒಂದು ಸಾಂಕೇತಿಕ ಹೆಸರು. ಬೃಹದಾರಣ್ಯಕದಲ್ಲಿ ಈ ಜರತ್ಕಾರುವಿನ ತತ್ತ್ವಜ್ಞಾನಕ್ಕೆ ಸ್ಥಾನ ದೊರೆತಿದೆ.

'ಅಷ್ಟೌಗ್ರಹಾಃ ; ಅಷ್ಟೌ ಅತಿಗ್ರಹಾಃ' ಎಂದಿರುವಲ್ಲಿ ಅಷ್ಟೌ (ಎಂಟು) ಈ ಸಂಖ್ಯೆಯು ಮೃತ್ಯು ಸ್ಥಾನ ಸೂಚಕವೂ ಇದೆ !

'ಪ್ರಾಣೋ ವೈ ಗ್ರಹಃ ಸಃ ಅಪಾನೇನ ಅತಿ ಗ್ರಾಹೇಣ ಗೃಹೀತಃ !' (3. 2. 1–10) 'ಮಾನವರ ಪ್ರಾಣವು ಒಂದು ಗ್ರಹ'. ಇಲ್ಲಿ 'ಗ್ರಹ' ಎಂದರೇನು ಅರ್ಥವಾಯ್ತು ? 'ಗಂಟು ಬಿದ್ದದ್ದು' ! ಈ ಪ್ರಾಣವನ್ನು ಕಟ್ಟಿರುವ ಗ್ರಹವೂ ಒಂದಿದೆ. ಅದನ್ನು ಅತಿ (ಮೀರಿದ್ದು, ಹೆಚ್ಚಿನದು ಆದ) 'ಗ್ರಹ' ಎಂದು ಬಗೆಯಲಾಗಿದೆ. ಹೀಗೆ ಈ ಯಾದೀ ವಿಚಿತ್ರವಾಗಿ ಬೆಳೆದಿದೆ. 'ಮನೋ ವೈ ಗ್ರಹಃ ಸಃ ಕಾಮೇನ ಅತಿಗ್ರಾಹೇಣ ಗೃಹೀತಃ !' ಮೈದೊಗಲೂ ಗ್ರಹ ! ಇದೆಲ್ಲವೂ ಮೃತ್ಯುವಿನ ಅನ್ನವು ! (ಯತ್ ಇದಂ ಸರ್ವಂ ಮೃತ್ಯೋಃ ಅನ್ನಂ) ಈ ಗ್ರಹವು ಸರ್ಪರೂಪ ! ದೇಹ (ಘಟ) ಸರ್ಪ ! ನರರೆಲ್ಲರೂ ನಾಗರು, ಸರ್ಪಸ್ವರೂಪರು !

'ನವ' (ಹುಟ್ಟಲಿರುವ) ಗ್ರಹ (ಕೂಸು) = ಆದಿತ್ಯ, ಮೃತ್ಯು ಸ್ವರೂಪ ದೈವತ ! ಭಾನು (ರವಿ) = ಪ್ರಕಾಶ ತತ್ತ್ವದ ದೈವತ ! ಇದನ್ನು ಆದಿತ್ಯರೂಪಕ್ಕೆ ಮಾರ್ಪಡಿಸಿದ ಸಂಪ್ರದಾಯವು ಮೃತ್ಯು ದೈವತದ ಉಪಾಸಕರದೇ ಇರಲಿಕ್ಕೆ ಬೇಕು, ಎಂದು ಸಿದ್ಧಪಡಿಸಲು ಇನ್ನೂ ಪ್ರಮಾಣಗಳು ಬೇಕೆ ? 'ಆದಿತ್ಯಾನಾಂ ಅಹಃ" ಎಂಬ ವಿಷ್ಣುರೂಪೀ ಕೃಷ್ಣನನ್ನು ಕೇಳಿರಿ. 'ಕಾಲೋಽಸ್ಮಿ' ಎಂದು ಆತನೇ ಹೇಳಿದ್ದಾನೆ. ಚಂದ್ರಾ = ಸ್ತ್ರೀ [೦]; ಈ ಮಂಡಲದೊಳಗೆ –ಅಂಗನಾ 'ಅಂಗ'ದೊಳಗೆ ಇರುವ ಕೃಷ್ಣ—ನೀಲ ವರ್ಣದ ಚಿಹ್ನ (ವೃಕ್ಷರೂಪ) ಇದು ಗಣ್ತಿನ ಗಣ್ಣು, ಎಂದು ಬಗೆಯಲಾಗಿದೆ. 'ಆದಿತ್ಯ' ಎಂದರೆ ಚಂದ್ರಿಯ ಗರ್ಭದಲ್ಲಿ ಇರುವ–ಇನ್ನೂ ಹುಟ್ಟಲಿರುವ ಗಣ್ತು. (ಛಾಂ. 1–6–6) ಹೀಗಿದು 'ಚಂದ್ರಾ್ರ್ಯದಿತ್ಯ' ರೂಪವು ಮೃತ್ಯು ಸ್ವರೂಪವಿದೆ !

'ಸಂಭೋಗದಲ್ಲಿ' ಗಣ್ಡು, ರೇತಸಿಂಚನದಿಂದ ತನ್ನ ಸಾವನ್ನು ಆಮಂತ್ರಿಸುವುದರೊಡನೆ, ತನ್ನ 'ಮರಿ' 'ಸರೀಸೃಪ' ಮಿಡಿನಾಗಕ್ಕೆ ಜನ್ಮ ಕೊಡುತ್ತದೆ ! ನರರು ಸತ್ತು ಬದುಕುವ ಹಾಗೂ ಸಾಯಲು ಬದುಕುವ ಈ ಬಾಳು ಹಾಳು ಎಂದು ಬೋಧಿಸಲು ವೇದಕಾಲದಲ್ಲಿ ಈ ಆದಿತ್ಯ ಸಂಪ್ರದಾಯವು ತಲೆಯೆತ್ತಿತು.

೪. ಇದು, ಆದಿಶಕ್ತಿ: ಅದಿತಿ : 'ಕುಮಾರೀಮಾತೆಯು' ಉಪಾಸನಾ ಪಂಥ : ಇಂದಿನ ಋಗ್ವೇದವು ಆದಿತ್ಯ ಸಂಪ್ರದಾಯಕ್ಕೆ ಮೀಸಲಾಗಿರುವ ಸಂಹಿತೆ ! ಹತ್ತೂ ಮಂಡಲಗಳಲ್ಲಿ ಆದಿತ್ಯರು ಇದ್ದಾರೆ ; ಇವರ ತಾಯಿ ಎಂಬ ಅದಿತಿ ಆದಿಮಾತೆ. ಹತ್ತೂ ಮಂಡಲಗಳಲ್ಲಿ ಇದ್ದಾಳೆ ! ವರುಣ ವಿವಸ್ವನ್, ಸೂರ್ಯಾದಿ ಸೌರಪ್ರಕಾಶ ತತ್ತ್ವದ ದೈವತಗಳು 'ಆದಿತ್ಯ' ರೂಪಕ್ಕೆ ಮಾರ್ಪಟ್ಟವೆ ಈ ವೇದದಲ್ಲಿ ! 'ಆದಿತ್ಯ' ರೂಪದಲ್ಲಿ ಈ ದೈವತಗಳು ಪೂಜೆಗೊಳ್ಳುವ ಮುಂಚೆ, ಈ ವೇದದಲ್ಲಿ ಅದಿತಿಯಾಗಲೀ ಆದಿತ್ಯರಾಗಲಿ ಇರಲು ಶಕ್ಯವಿಲ್ಲ.

ಸಂಶೋಧಕರಾದ ಮ್ಯಾಕ್‌ಡೊನೆಲ್ಲ, ಓಲ್ಡನ್‌ಬರ್ಗ್ ಇವರು ಕಂಡುಹಿಡಿದಿರುವ ಒಂದು ವಿಚಿತ್ರ ಪ್ರಕಾರದ ಮೂಲಕವಾಗಿಯೂ ಈ ಅದಿತಿ, ಆದಿತ್ಯ ಸಂಪ್ರದಾಯವು ಮೊದಲು ಇದ್ದಿಲ್ಲ, ಎಂಬ ಸಂಗತಿಯು ದೃಢಪಡುತ್ತದೆ.

"Aditi is younger than some of her sons". ಸಂಶೋಧಕರಿಗೆ ಕಂಡುಬಂದಿರುವ ತನ್ನ ಮಕ್ಕಳಿಗಿಂತಲೂ ಚಿಕ್ಕವಳಾದ ಈ ಅದಿತಿಮಾತೆ ವಿವಸ್ವನ್, ಸೂರ್ಯ, ವರುಣಾದಿಗಳ ತಾಯಿ ಅಲ್ಲ, ಎಂಬುದು ನಿಶ್ಚಿತವಿದೆ. ಪ್ರಕಾಶ ತತ್ತ್ವದ ದೈವತಗಳ ತಾಯಿ ಅಲ್ಲ, ಋಗ್ವೇದದ ಭಾಷೆಯನ್ನು 100 % ಹೋಲುವ ಅವೆಸ್ತದಲ್ಲಿ ಆದಿಮಾತೆ ಅದಿತಿಯಲ್ಲ ! ಋಗ್ವೇದದ ವಿವಸ್ವನ್, ವರುಣ, ಇಂದ್ರರು ಅವೆಸ್ತದಲ್ಲ ಉಂಟು ! ಆದಕಾರಣ ಇಂದಿನ ವೇದದೊಳಗಿನ ಈ ಆದಿಮಾತೆ ; ಅದಿತಿ ಸಂಪ್ರದಾಯವು ಒಂದು ಮೋಸ ಎನ್ನಬೇಕಾಗುತ್ತದೆ.

ಮೂಲ ಋಗ್ವೇದವು ಸವಿತೃ, ವಿವಸ್ವನ್ ಮುಂತಾದ ಪ್ರಕಾಶ ತತ್ತ್ವದ ದೈವತಗಳ ಉಪಾಸಕರ

ಸಂಹಿತೆಯೇ ಆಗಿದೆ. ಸೂರ್ಯನು ಆದಿತ್ಯನಾಗುತ್ತಾನೆ, ಇದರ ಅರ್ಥವೇನು ? ಮೊದಲು ಸೌರ ಸಂಪ್ರದಾಯ, ಬಳಿಕ ಆದಿತ್ಯ ಪಂಥ, ಎಂದೇ ಇದರ ಅರ್ಥತಾನೆ ?

ಈ ಆದಿಶಕ್ತಿ, ಅದಿತಿ, ಆದಿತ್ಯ ಉಪಾಸಕರಿಗೆ ಕಣ್ಕಟ್ಟಿನ—ಮೋಸದ—ಕೃತ್ಯವು ಅವಶ್ಯವಾಪಡ್ಡೇಕೆ ? ಸೌರ ಪಂಥದ ಪ್ರಭಾವ ತಗ್ಗಿಸಲು ತಾನೆ ? ಶ್ರೀಮದ್‌ಭಗವದ್ಗೀತೆಯಲ್ಲಿ ಈ ಸಂದೇಹವನ್ನು ದೂರಮಾಡಬಲ್ಲ ಒಂದು ಮೌಲಿಕ ಉಲ್ಲೇಖವು ಉಂಟು.

೫. ಶ್ರೀಕೃಷ್ಣನಿಗೆ ಭಗವದ್ಗೀತೆಯೊಳಗಿನ ತನ್ನ ರಾಜಯೋಗವನ್ನು ವಿವಸ್ವನ್ (ಮನು) ದೈವತ್ವಕ್ಕೆ ಬೋಧಿಸುವ ಆವಶ್ಯಕತೆಯೇನಿತ್ತು ? ಋಗ್ವೇದದೊಳಗಿನ ವಿವಸ್ವನ್ (ಮನು) ಪ್ರಕಾಶ ತತ್ತ್ವದ ದೈವತ. ಇವಕ್ಕೆ 'ಯೋಗ'ದೀಕ್ಷೆ ಕೊಟ್ಟನೆಂಬ ಗೀತೆಯ ಈ ಕೃಷ್ಣನು ಯಾರು ? ಈ ಕೃಷ್ಣನತ್ತ ಯೋಗದ ಸ್ವರೂಪ ಲಕ್ಷಣಗಳೇನು ? ಇದು ಮೊದಲು ಸ್ಪಷ್ಟವಾಗುವ ಆವಶ್ಯಕತೆಯುಂಟು.

ಭಗವತ್‌ಗೀತೆಯ ಕೃಷ್ಣನು ಯಾರು ? 1) ಯದುವಂಶದ ಒಬ್ಬ ಮಹಾಪುರುಷನೆ ? ಅಥವಾ ಅಶ್ವತ್ಥೋಽಸ್ಮಿ (ಸರ್ವವೃಕ್ಷಾಣಾಂ) ಎಂದು ಆತನೇ ಹೇಳುವುದನ್ನು ನಂಬಿ ಈ ಕೃಷ್ಣನನ್ನು 'ಅಶ್ವ-ತ್ಥ' ವೃಕ್ಷರೂಪನು ಎನ್ನುವುದೆ ? ಆದರೆ ಈ 'ಅಶ್ವ-ತ್ಥ' ರೂಪವೇ ಒಂದು ಕಣ್ಕಟ್ಟು ಆಗಿದೆ ! ಇದನ್ನು ಒಂದು 'ವೃಕ್ಷ'ದ ಹೆಸರು ಎಂದು ಬಗೆದಲ್ಲಿ 'ಅಶ್ವ-ತ್ಥ' ಇವೆರಡು ಸಂಕೇತಗಳಲ್ಲಿ 'ವೃಕ್ಷ'ಸೂಚಕ ಸಂಕೇತವು ಯಾವುದು ಇರಬಹುದು ? 'ತ್ಥ'>ಸ್ಥಲ ಸೂಚಕ ಸಂಕೇತವಿರುವುದಾಗಿ ಕೋಶಗಳು ಹೇಳುತ್ತವೆ. ಮರ-ವೃಕ್ಷ ಎಂಬುದು ಪೂರ್ವ ಪದವಿದ್ದರೆ, ಈ 'ವೃಕ್ಷ'ದ ತಳ-ಸ್ಥಳ ಇದುವೆ 'ತ್ಥ' ಇರಬೇಕು.

ಆದರೆ ಸ್ಥಲ>ತ್ಥ = ಭೂಮಿ'ಭೂದೇವಿ' ಎಂದರೂ ವೃಕ್ಷರೂಪ = ಈ ಕೃಷ್ಣ (ಕಪ್ಪು) ರೂಪ 'ಸ್ತಂಭ' ಏನು? 'ಭಗವಾನ್'-(= ಕೃಷ್ಣ) ಎಂಬ ವರ್ಣನೆಯಂತೆ ತ್ಥ-ಭೂಮಿ' ಇದು 'ಭಗ' ಆಗಬಲ್ಲದು, ಈ 'ಭಗ'ಸ್ಥನು ಎಂಬ ಕಾರಣದಿಂದ ಶ್ರೀಕೃಷ್ಣನನ್ನು 'ಭಗವಾನ್' ಎಂದು ಹೇಳುವ ವಾಡಿಕೆಯು ಉಂಟಾಗಿರಬಲ್ಲುದು. ಆದರೂ ಒಂದು ಸಂದಿಗ್ಧತೆಯು ಇಲ್ಲಿ ಉಳಿಯಿತು. '(ಅಶ್ವ-ತ್ಥ)'-ಭಗ-ವಾನ್, ಇವರಲ್ಲಿ ಅಶ್ವ, ವೃಕ್ಷವಿರಲು ಶಕ್ಯವೊ ? ಆದರೆ ಹಯಗ್ರೀವ, ಹಯವದನ ಎಂಬ ಹೆಸರುಗಳಂತೆ ಅಶ್ವವೂ ಒಂದು ಅದೇ ಅರ್ಥ' ಆಕೃತಿಯ ಪರ್ಯಾಯ ನಾಮವಿರುವ ಶಕ್ಯತೆಯಿದೆ. 'ಭಗ-ವಂತ' ಎಂಬಲ್ಲಿ ಈ ಕೃಷ್ಣನು, ಹಯಮುಖದ ನೆನಪನ್ನು ತಂದು ಕೊಡುವ ಸ್ತಂಭಾಕೃತಿಯವನು ಆಗುತ್ತಾನೆ, ಇದು ಶುದ್ಧ ಲೈಂಗಿಕ ಆಕೃತಿ, ಲಿಂಗದ ಪ್ರತಿಮೆ.

ಈ ಮಾತಿನ ಸ್ಪಷ್ಟೀಕರಣವು ಗೀತೆಯ ಇನ್ನೊಂದು ಶ್ಲೋಕದಿಂದ ದೊರೆಯುತ್ತದೆ. ಸೃಷ್ಟಿ ನಿರ್ಮಾಣ ಶಕ್ತಿಯ ದೇವನು, 'ಮಯಾ ಅಧಿಅಕ್ಷೇಣ ಪ್ರಕೃತಿಃ ಸೂಯತೇ ಸಚರಾಚರಂ' [ನನ್ನ ಅಧಿ ಅಕ್ಷ (axle)ದ ಮೂಲಕ ಈ ಸೃಷ್ಟಿದೇವಿ-ಪ್ರಕೃತಿ-ಚರಾಚರವನ್ನೆಲ್ಲ ಹಡೆಯುತ್ತಾಳೆ.] ಈ ಶ್ಲೋಕದಂತೆ ಈ ಭಗ-ವಂತನು ಭೂಮಿಯೆಂಬ ಭಗದಲ್ಲಿ ಇರುವ ಭೂಮಿರೂಪ ಪುರಿಯಲ್ಲಿ ಶಯ(ನ)ನಾಗಿರುವ 'ಗಣ್ಡು' ಎಂದು ಅರ್ಥವಾಗುತ್ತದೆ. ಪುರಿ-ಶಯ(ನ) = ಪುರುಷ—ಎಂಬ ಸ್ಪಷ್ಟೀಕರಣವು ಉಪನಿಷತ್ತುಗಳಲ್ಲಿ ಇದೆ. ಈ ಎಲ್ಲ ಪ್ರಮಾಣಗಳ ಮೂಲಕ ಗೊತ್ತಾಗುವ 'ಗಣಪ' ಗಣ್ಡು ರೂಪದ ಈ ಕರಿಯ = ಕೃಷ್ಣನು ಪ್ರಪಂಚಕ್ಕೆ ಕಲಿಸಬಲ್ಲ 'ಯೋಗವು' ಯಾವುದು ಇರಬಲ್ಲುದು ? ಇದನ್ನು ಬಿಡಿಸಿಹೇಳಬೇಕೆ ? ಕೃಷ್ಣಲೀಲೆಯನ್ನು ಸಮಗ್ರವಾಗಿ ವರ್ಣಿಸಿರುವ ವ್ಯಾಸನು ಈ ಕೃಷ್ಣ = ಭಗವಂತನನ್ನು 'ಯೋಗೇಶ್ವರನೆಂದೂ ಗೀತೆಯ ಕೊನೆಯಲ್ಲಿ ಹೇಳಿದ್ದಾನೆ. ಆದ ಕಾರಣ, ಈ 'ಅಶ್ವತ್ಥ' ರೂಪ 'ಯೋಗೇಶ್ವರ'ನೆಂಬ ಕೀರ್ತಿಯ ಕೃಷ್ಣ ಭಗವಂತನು, ಪ್ರಕಾಶ ತತ್ತ್ವದ ವಿವಸ್ವನ್ ದೈವತಕ್ಕೆ ಕೊಟ್ಟ ಯೋಗದೀಕ್ಷೆಯ ಸ್ವರೂಪವು ಯಾವ ಬಗೆಯದು ಇರಬಲ್ಲುದು ?

ವಿವಸ್ವಂತನಿಗೆ ಭಗವಾನ್ ಕೃಷ್ಣನು ತನ್ನ ಸಂಯೋಗ ದೀಕ್ಷೆಯನ್ನು ಕೊಡುವ ಆವಶ್ಯಕತೆಯು ಏನಿತ್ತು ? ಇದರ ಕಾರಣವನ್ನು ಭಗವಂತನೇ ಹೇಳಿದ್ದಾನೆ ;

ಪರಂಪರಾ ಪ್ರಾಪ್ತವಾದ—ಗುರು ಪರಂಪರೆಯ ಮೂಲಕ = ಅನೇಕ ತಲೆಮಾರುಗಳಿಂದ ನಡೆದು ಬಂದಿದ್ದ ತನ್ನ ಯೋಗ-ಸಂಪ್ರದಾಯವು ನಷ್ಟವಾಯ್ತು. ಬಹುಕಾಲದವರೆಗೆ (ಮಹತಾಕಾಲೇನ ಇಹ ಯೋಗಃ ನಷ್ಟಃ; 4-2.) ತನ್ನ ಯೋಗವು ಬಹುಕಾಲದವರೆಗೆ ನಷ್ಟವಾದರೆ, ವಿವಸ್ವಂತನಿಗೆ (ಪ್ರಕಾಶ ತತ್ತ್ವದ ದೈವತಕ್ಕೆ) ಯೋಗದೀಕ್ಷೆಯನ್ನೀಯುವ ಕಾರಣವೇನು ? ಯೋಗ—ಸಂಯೋಗ ಇದು ಏಕಾಂತ ದೊಳಗಿನ ಸಾಧನ, ಅನುಷ್ಠಾನ, ಉಪಸ್ಥಾನ. ಈ ಯೋಗಕ್ಕೆ, ಪ್ರಕಾಶಃ (ಪ್ರಜ್ಞೆ) ಜಾಗೃತವಿರುವುದು ಎಳ್ಳನಿತೂ ಸಹನವಾಗದು. ಆದಕಾರಣ, ವಿವಸ್ವಂತನನ್ನು ಕತ್ತಲೆಯು ಅಡಸುವಂತೆ ಅವನು ರಜನಿಯ ಆಲಿಂಗನದಲ್ಲಿ ಇರುವಂತೆ, ಚಾಂದ್ರ ಸಂಪ್ರದಾಯದ ದೀಕ್ಷೆಯನ್ನೀಯುವುದು ಅನಿವಾರ್ಯವಾಯ್ತು ಎಂದು ಭಗವಂತನ ಹೇಳಿಕೆಯ ಆಶಯವಾಗುತ್ತಿದೆ. ಆದುದರಿಂದ ಇಲ್ಲಿ ಇನ್ನೊಂದು ಪ್ರಶ್ನೆ ತಲೆಯೆತ್ತುತ್ತದೆ.

ಹಾಗಾದರೆ ವಿವಸ್ವನ್ : ಮನುಪ್ರಣೀತ ಮಾನವಧರ್ಮವು, ಆದಿತ್ಯ ಸಂಪ್ರದಾಯಕ್ಕೂ 'ಭಗವತ್' ಗೀತೆಯ 'ಭಗವಂತ' ಕೃಷ್ಣ (= ನಾರ + ಅಯನ = ವಿಷ್ಣು) ಸಂಪ್ರದಾಯಕ್ಕೂ ಆತಂಕಕಾರಿಯೆನಿಸಿದ ಕಾರಣ ವೇನು ?

೬. 'ಪ್ರಜ್ಞಾ ನೇತ್ರೋ ಲೋಕಃ' ಎಂಬುದು ಸವಿತೃಪಾಸಕ, = ವಿವಸ್ವನ್ ಮನು ಸಂಪ್ರದಾಯದ ಶ್ರದ್ಧೆ : ವಿವಸ್ವನ್ ಮನುಸಂಪ್ರದಾಯವನ್ನು ಹಿಮ್ಮೆಟ್ಟಿಸಿ, ಪ್ರಭಾವಶಾಲಿಯಾಗಿ ಬೆಳೆದು ನಿಂತಿರುವ ಇಂದಿನ ಈ ಸಂಪ್ರದಾಯವು, ಸ್ವಯಂ-ಭೂ > ಸ್ವಾಯಂಭುವ ಮನುವಿನದು : ಈ 'ಸ್ವಯಂಭೂ' ಮನುಸಂಪ್ರದಾಯವು, ವೈಯಕ್ತಿಕ 'ದಿವ್ಯಚಕ್ಷು'-ಸಿದ್ಧಿಯ ಬೆಂಬತ್ತಲು ಬೋಧಿಸುತ್ತದೆ.

'ಪ್ರಜ್ಞಾ ನೇತ್ರಃ ಲೋಕಃ' ಎಂಬ ಈ ಸೂತ್ರದಲ್ಲಿ ಅಡಕವಾಗಿರುವ ಸೂಕ್ಷ್ಮವಿಚಾರವು ಅಭ್ಯಸ ನೀಯವಿದೆ. ಈ ಸೂತ್ರದಂತೆ 'ಪ್ರಜ್ಞೆ' ಇದು ವೈಯಕ್ತಿಕ ಸ್ವರೂಪದ್ದಲ್ಲ, ವ್ಯಕ್ತಿ ನೇತ್ರ ಅಲ್ಲ ! ವ್ಯಕ್ತಿಯು 'ಸ್ವ'ದ ಉಪಜ್ಞನು ನಿಜ. ಆದರೆ ಪ್ರಜ್ಞೆಯು ಲೋಕ ಹೃದಯದಲ್ಲಿದೆ ; ಇಲ್ಲಿ ಪಾಶ್ಚಾತ್ಯ ಪರಂಪರೆಯ 'public conscience' ಎಂಬ ಮಾತನ್ನು ನೆನೆದುಕೊಳ್ಳಬಹುದು. ವ್ಯಕ್ತಿಯಲ್ಲಿ ಪ್ರಜ್ಞಾನೇತ್ರವು (conscience) ತೀರ ಇಲ್ಲವೆಂದಲ್ಲ. ಆದರೆ ಇದು ಲೋಕ (ಪ್ರಜ್ಞಾ) ನೇತ್ರದ ಅಂಗ. ಆದರ ಅಂಶ. ಈ ವಿಚಾರವು 'ವೈಶ್ವಾನರಾಗ್ನಿ'ಯ ಭೂಮಿಕೆಯಿಂದ ಇನ್ನಷ್ಟು ಸ್ಪಷ್ಟವಾಗಲಿದೆ. 'ನರ'-ಮನುಜನು ವೈಶ್ವನರಾಗ್ನಿಯ ಅಂಶವೇ ಹೊರತು, ವ್ಯಕ್ತಿಗೆ ಸಮಾಜದಿಂದ ಭಿನ್ನವಾದ ಅಸ್ತಿತ್ವವಿಲ್ಲ. ಒಂದು ವ್ಯಕ್ತಿಯು ಎಷ್ಟೇ ಹಿರಿಮೆ, ಮಹಿಮೆ, ಮಹಾತ್ಮ್ಯವುಳ್ಳದ್ದೇ ಇರಲಿ, ಇದಕ್ಕೆ ಸಮಾಜ ಸಮಷ್ಟಿಯ = ವೈಶ್ವಾನರಾಗ್ನಿಯ ಯೋಗ್ಯತೆ ಎಂದೆಂದಿಗೂ ಬರಲಾರದು. ಈ ಕಾರಣದಿಂದಲೇ 'ಭಗವಂತ'ನೆಂಬುವನು ವೈಶ್ವಾನರಾಗ್ನಿಯನ್ನು ವ್ಯಕ್ತಿಯ ಜಠರದ ಅಂಗವಾಗಿಸಿ ನಷ್ಟಪಡಿಸಿದ್ದಾನೆ.

ಸ್ವಾಯಂಭುವ ಮನುಸಂಪ್ರದಾಯಕ್ಕೆ ಅಥವಾ ಆದಿತ್ಯ ಉಪಾಸಕರಿಗೆ = ಭಗವದ್ಗೀತೆಯ ಭಗವಂತನ ಭಕ್ತರಿಗೆ 'ಪ್ರಜ್ಞಾನೇತ್ರೋಲೋಕಃ !' ಎಂಬುದು ಅಮಾನ್ಯವಿರಲು ಕಾರಣವೇನು ? ಇದು ಸ್ಪಷ್ಟವಾಗಲು ಸ್ವಯಂಭೂ ಸ್ವಾಯಂಭುವ ಸಂಪ್ರದಾಯದ ಉದ್ಗಮ ಕೇಂದ್ರವನ್ನು ಅರಿಯುವ ಆವಶ್ಯಕತೆಯಿದೆ.

ಸ್ವಾಯಂಭುವ ಮನುಸಂಪ್ರದಾಯವು ಇದು 'ಸ್ವಯಂಭೂ'-ತನ್ನ ತಾನೇ ಹುಟ್ಟಿದ್ದು ! ಇದಕ್ಕೆ ಹಿಂದಿಲ್ಲ ; ಮುಂದೆ ಇಲ್ಲ ! ಈ 'ಸ್ವಯಂ-ಭು'ತ್ವಕ್ಕೆ ಸಂಪೂರ್ಣವಾಗಿ ಅಸಾಮಾಜಿಕ ಮನೋಭಾವದ ಹಿನ್ನೆಲೆಯು ಅನಿವಾರ್ಯವಿದೆ! 'ಸ್ವಯಂಭೂ' ದೈವತದ-ಸ್ವಾಯಂಭೂಮನುವಿನ ಧರ್ಮಶಾಸ್ತ್ರವು ಪ್ರಚಾರದಲ್ಲಿ ಬರುವ ಮೊದಲು, ವೈವಸ್ವತ-ವಿವಸ್ವನ್, ಮನುಪ್ರಣೀತ ಮಾನವಧರ್ಮಶಾಸ್ತ್ರ (ಸ್ಮೃತಿ) ಗ್ರಂಥವು ಪ್ರಭಾವಶಾಲಿಯಾಗಿತ್ತು. ಆದರೆ ಅದರ ಸ್ಥಳದಲ್ಲಿ ಫಕ್ಕನೆ ಹುಟ್ಟಿಬೆಳೆದ ಈ ಸ್ವಯಂಭೂ ಸಂಪ್ರದಾಯದ ಮನಸ್ಮೃತಿಯು ಪ್ರಚಾರದಲ್ಲಿ ಬಂದಿದೆ ! ಮೂಲ ಮನುಸ್ಮೃತಿ ಕಣ್ಮರೆಯಾಗಿದೆ ! ಇಂದಿಗೂ ಅದರ ಪ್ರತಿ ಸಿಕ್ಕಿಲ್ಲ. ಆದರೂ ಈಗಲೂ 'ವೈವ

ಸ್ವತ ಮನ್ವಂತರೇ' ಎಂಬ ಸಂಕಲ್ಪಮಂತ್ರವು ಮಾತ್ರ ರೂಢಿಯಲ್ಲಿದೆ. ಆದರೆ ಈ ವಿವಸ್ವಾನ್ ಮನುವಿನ ವೈಚಾರಿಕ ಭೂಮಿಕೆಯು ತಳಹದಿಯೇ ಕುಸಿದಿದೆ. ಆ ಎಡೆಯಲ್ಲಿ 'ಸ್ವಯಂ-ಭೂ' ಮನುಸಂಪ್ರದಾಯ ತತ್ತ್ವಜ್ಞಾನ ಮಂದಿರವು ಎದ್ದು ಕಾಣುತ್ತಿದೆ ! ಪ್ರಕಾಶತತ್ತ್ವದ ವಿವಸ್ವಾನ್ ಸಂಪ್ರದಾಯವು ನಷ್ಟವಾಗಿ ರಜನಿ ನಾಥನ ಉಪಾಸನೆ ಪ್ರಚಲಿತವಾಗಿದೆ. ಇಂದಿಗೂ ಉಳಿದಿರುವ ನವರಾತ್ರ, ಶಿವರಾತ್ರ, ಪಂಚರಾತ್ರ್ಯಾದಿ ಪ್ರಕಾರಗಳು ಇದಕ್ಕೆ ನಿದರ್ಶನ.

ಈ ತತ್ತ್ವಜ್ಞಾನದ ಸೂತ್ರಗಳೇನು ? 'ಸ್ವಧರ್ಮೇ ನಿಧನಂ ಶ್ರೇಯಃ !' ವೈಯುಕ್ತಿಕ ಮೋಕ್ಷಕಾಮಿ ಸಂಪ್ರದಾಯಗಳಲ್ಲಿ ಅಸಾಮಾಜಿಕ ಮನೋಭಾವವು ತಲೆಯೆತ್ತುವುದು ಅನಿವಾರ್ಯವಿದೆ. 'ಸಮಾಜದ ಉನ್ನತಿ', 'ಸಾಮಾಜಿಕ ನೆಮ್ಮದಿ' ಈ ಶ್ರದ್ಧೆ ಮೋಕ್ಷದ ಬಗೆಗಿನ ತೀವ್ರ ಆತುರದ ಆರ್ತಭಾವಕ್ಕೆ ಆತಂಕಕಾರಿ, ಆದುದರಿಂದ ಈ ಅಮಂಗಳ ಸಂಪ್ರದಾಯಗಳಲ್ಲಿ ಆಪತ್ತನ್ನು ಆಮಂತ್ರಿಸುತ್ತವೆ." ತುರ್ತು ಪರಿಸ್ಥಿತಿಯು ತೀವ್ರ ಸ್ವರೂಪವು ಇದ್ದಷ್ಟೂ 'ಭಗವಂತ'ನ ನೆನಪು ಅಡಿಗಡಿಗೆ ಆಗಬಲ್ಲದು ! ಇದರಿಂದಾಗಿ 'ತುರ್ತುಪರಿಸ್ಥಿತಿ' 'ಇಮರ್ಜನ್ಸಿ' ಇದೇ ಲೇಸು, ಎಂಬ ಪರಿಸ್ಥಿತಿಯನ್ನು ಭಾರತೀಯರು ಆಮಂತ್ರಿಸಿದಂತಾಗಿದೆ !

ಈ ಅಮಂಗಳ 'ಮೋಕ್ಷ'ದ ಕಲ್ಪನೆ ಸಾವಿನ ಸಾಹಚರ್ಯದಲ್ಲಿ ಹುಟ್ಟಿದೆ. ತನ್ನ ಸಾವಿನೊಡನೆ ಪ್ರಪಂಚ ಮುಳುಗಿತು, ಎಂಬ ಹಾಗಿನ ಕ್ಷುದ್ರ ಮನೋಭಾವವು ಮೋಕ್ಷದ ಕಲ್ಪನೆಯನ್ನು ತನ್ನ ಸಮಾಧಾನಕ್ಕಾಗಿ ಕಲ್ಪಿಸಿಕೊಂಡಿದೆ. ಜೀವಿತ ಇದು ವೈಯಕ್ತಿಕ, ಒಬ್ಬನ ಆಯುರ್ಮರ್ಯಾದೆಗೆ ಸೀಮಿತ. ಆದರೆ ಸಮಾಜ ! ಸಮಷ್ಟಿರೂಪ ವೈಶ್ವಾನರಾಗ್ನಿ, ಸಂತತಿರೂಪದಿಂದ ಸಂತತವಾಗಿ ಉಳಿಯಲಿದೆ, ನರ–ಮನುವರ್ಗದ ಜೀವನದ ಸಾರ್ಥಕ್ಯವು ವೈಶ್ವಾನರಾಗ್ನಿ ಸೇವೆಯ ಯಾವುದೊಂದು ಕ್ಷೇತ್ರಕ್ಕೆ ತನ್ನನ್ನು ಅರ್ಪಿಸಿಕೊಳ್ಳುವಲ್ಲಿದೆ.

'ಪ್ರಜ್ಞಾನೇತ್ರೋ ಲೋಕಃ' ಎಂಬ ಸೂತ್ರದ ಸಮ್ಯಕ್ ಸ್ವರೂಪದ ತಿಳುವಳಿಕೆಗೆ ವೈಶ್ವಾನರಾಗ್ನಿಯೊಳಗಿನ ನಿತಾಂತ ಅವಿಚಲ ಶ್ರದ್ಧೆಯ ಅವಶ್ಯವಿದೆ.

ವಿವಸ್ವಾನ್ ಮನುಪ್ರಣೀತ ಮಾನವಧರ್ಮವು ವೈಶ್ವಾನರಾಗ್ನಿಯಲ್ಲಿ ಶ್ರದ್ಧೆಯುಳ್ಳದ್ದು. ಇಂದಿನ ಯಾತುತಂತ್ರಪ್ರಧಾನಸಂಹಿತೆಯಲ್ಲಿಯೂ ಎಂತೂ ಉಳಿದಿರುವ, ಈ ವೇದದ ಕೊನೆಯ (ಜಾತವೇದ) ಅಗ್ನಿಯ ಪ್ರಾರ್ಥನೆಯು ವೈಶ್ವಾನರಾಗ್ನಿ ಶ್ರದ್ಧೆಗೆ ಸಾಕ್ಷಿ. 'ಸಂಗಚ್ಛಧ್ವಂ, ಸಂವದಧ್ವಂ, ಸಂವೋಮನಾಂಸಿ ಜಾನೀಥಃ—'(ಕೂಡಿ ಆಟ ಆಚರಿಸುವಾ, ಕೂಡಿ ಆಡುವಾ, ಒಬ್ಬೊಬ್ಬರ ಮನವನ್ನು ಅರಿತು ಬಾಳುವಾ) ಎಂಬೀ ಮಂತ್ರವು ಸ್ವಧರ್ಮೇ ನಿಧನಃ ಎಂಬ ಭಗವದ್ಗೀತೆಯ ಅಮಂಗಲ ವಿಚಾರಕ್ಕೆ ಆತಂಕಕಾರಿಯಾಗಿದೆ. ಕರ್ಮಾಕರ್ಮದ ಮೀಮಾಂಸೆಗೆ ಪ್ರಾಧಾನ್ಯವಿರುವ ಈ 'ಭಗವದ್ಗೀತೆ'ಯಲ್ಲಿ 'ಕರ್ತವ್ಯ'ದ ವಿಚಾರವನ್ನೇ ಎತ್ತಿಲ್ಲ ! ಕರ್ಮ = ಕಾಯಕ ಇದು ವೈಯಕ್ತಿಕ ; ಇಂದ್ರಿಯಕರ್ಮ ಜೀವಿತಕ್ಕೆ ಸಂಬಂಧಿಸಿದ್ದು. ಇದರ ಅನಿವಾರ್ಯತೆಯನ್ನು ಒಪ್ಪಲೇಬೇಕು. ಆದರೆ ಆಧುನಿಕ ಸಮಾಜಶಾಸ್ತ್ರವು ಸಹ ಮಾನವರಿಗೆ ಎರಡು ಬಗೆಯ-ಎರಡು ಪಾತಳಿಯ ಕ್ರಿಯೆಗಳನ್ನು ಹೇಳುತ್ತದೆ. ಇದು ಅಸ್ತಿತ್ವಕ್ಕೆ ಅನಿವಾರ್ಯವಿರುವ ಕರ್ಮವಾಯು ; ಇದಲ್ಲದೆ ಪ್ರತಿಯೊಂದು ವ್ಯಕ್ತಿಗೂ ought ಎಂಬ ಕಾರ್ಯ = ಕರ್ತವ್ಯವು ತಪ್ಪಿದ್ದಲ್ಲ. 'ought' = ಕರ್ತವ್ಯವು ಸಾಮಾಜಿಕ ಕಾತಳಿಯ ಜೀವನದಲ್ಲಿ ಮಾತ್ರ ಶಕ್ಯ. 'ಜೀವಿತ' ಕರ್ಮವನ್ನು 'ಜೀವನ' ಕರ್ತವ್ಯವನ್ನು ಅಪೇಕ್ಷಿಸುತ್ತದೆ. ಹೀಗಿರುವಾಗ ಈ 'ಭಗವಂತ' ಎಂಬುವನು ನಿಃಸಂಕೋಚವಾಗಿ ಹೇಳುತ್ತಾನೆ. 'ನಮೇ ಅಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ' ! ಈ 'ಭಗವತ್' ರೂಪದ ಉಪಾಸನೆ ರಾತ್ರಿ ಸಮಯಾಚಾರಕ್ಕೆ ಸಂಬಂಧವಿರುವುದರಿಂದ ಇದರಲ್ಲಿ ಹಗಲಿನ ಜೀವನ ರೀತಿಯ ಬಗೆಗೆ ಒಂದು ಮಾತು ದೊರೆಯಲಾರದು.'ಸ್ವಧರ್ಮ' = ರಾತ್ರೀ ಉಪಾಸನೆ; ಧ್ಯಾನ, ಧಾರಣ, ಸಮಾಧಿ, ಸಿದ್ಧಿಯೇ ಗುರಿ ಎಂಬಲ್ಲೂ ಕತ್ತಲೆಯ ಉಪಾಸನೆಯೇ

ಇದೆ. ಈ ಗೀತೆ ಪ್ರಕಾಶ ಪಾತಳಿ ಸಮಾಜ : ಸಮಷ್ಟಿ ಉಪಾಸನಾ ಪ್ರೇರಕ ವಿವಸ್ವನ್ ಮನು ಸಂಪ್ರದಾಯ ವನ್ನು 'ಪರಧರ್ಮೋ ಭಯಾವಹಃ' ಎಂದು ಹೇಳಿದೆ.

'ಪ್ರಜ್ಞಾ ನೇತ್ರೋ ಲೋಕಃ' ಈ ಸೂತ್ರಕ್ಕೆ ತೀರ ವಿಪರೀತವಾದ ಮನೋಭಾವ ಪ್ರೇರಕವಾದ ಅನಿಷ್ಟ ವಿಚಾರವನ್ನು ತುಂಬ ಸಾಧು ರೂಪದಲ್ಲಿ ಗೀತೆ, ಉಪನಿಷತ್ತು ಬೋಧಿಸಿವೆ. 'ಆತ್ಮನಃ ತು ಕಾಮಾಯ ಸರ್ವಂ ಪ್ರಿಯಂಭವತಿ !' 'ಸರ್ವ ಭೂತೇಸು ಚ ಆತ್ಮಾನಂ' ಮತ್ತು 'ಸರ್ವ ಭೂತಾನಿ ಚ ಆತ್ಮನಿ' ಎಂಬಲ್ಲಿ ಈ ಆ–ತ್ಮ-ನ್ ತನ್ನ ತನು (ತನ್ನ) ಶರೀರದ ಹೊರತು, ಸಮಾಜ ಸಮಷ್ಟಿಗೆ 'ಲೋಕ ನೇತ್ರ'ಕ್ಕೆ ಅವಕಾಶ ವಿಲ್ಲ. ತನ್ನಂತೆ ಎಲ್ಲರನ್ನು ಕಾಣುವಲ್ಲಿ, ತಾನೇ ಏನೆಲ್ಲವೂ ಆಗುತ್ತಾನೆ ! ತನ್ನ ಹೊರತು ಇನ್ನೊಬ್ಬರಿಗೆ ಅಸ್ತಿತ್ವ ವಿಲ್ಲ ! ಎಲ್ಲರಲ್ಲಿ ತನ್ನನ್ನೇ ಕಾಣುವಾಗಲೂ ಇನ್ನೊಬ್ಬರ ಸ್ವತಂತ್ರ ಅಸ್ತಿತ್ವ ಉಳಿಯಲಾರದು. ನಾನು ಮತ್ತು ನೀನು ಇಬ್ಬರ ಆಚೆಗೆ ಅವನು (ಅವಳು, ಅದು) ಎಂಬ ಮೂರನೆಯದು ಉಂಟು, ಭೂಃ ಮತ್ತು ಭುವಃ, ಆಚೆಗೆ ಸ್ವಃ ಉಂಟು. ಇದೇ ಪ್ರಕಾಶತತ್ತ್ವ.

೭. **ಉಪಸಂಹಾರ** : ಭಾರತೀಯರು ಮೂಲತಃ ತೇಜಃಪ್ರಕಾಶತತ್ತ್ವದ ಉಪಾಸಕರು. '**ತತ್** ಸವಿತುಃ' ಎಂಬ ಮಂತ್ರದ್ರಷ್ಟಾರನು, ವಿಶ್ವ ಮಿತ್ರನು ! ಈ ಪ್ರಕಾಶತತ್ತ್ವವು ಮಾನವರೊಳಗಿನ 'ಗುಣ' (virtue) ಗಳ ರೂಪದಲ್ಲಿ ಅರಿಕೆಗೆ ಬರುತ್ತದೆ. ಪ್ರಕಾಶತತ್ತ್ವದ ಉಪಾಸನೆ, ಎಂದರೆ ಲೋಕಹೃದಯ ದೊಳಗಿನ ಗುಣಗಳ ಆರಾಧನೆ. 'ಗುಣಾಃ ಪೂಜಾಸ್ಥಾನಂ ಗುಣಿಷು ನ ಚ ಲಿಂಗಂ ನ ಚ ವಯಃ' ಲೋಕದೊಳ ಗಿನ ಗುಣಗಳ ಪೂಜಕನು ಲೋಕಮಿತ್ರ = ವಿಶ್ವಮಿತ್ರನಾಗಲೇಬೇಕು. ಗ್ರೀಕ್ ಸಂಸ್ಕೃತಿಯೊಳಗಿನ ಸಾಕ್ರಟೀಸ್‌ನು 'Virtue is knowledge' 'ಎಂಬ ಶ್ರದ್ಧೆ ಬೋಧಿಸಿದನು. ಆತನು ಇಂದಿಗೂ ವಿಶ್ವಮಿತ್ರ ನೆನಿಸಿದ್ದಾನೆ.

ಆದರೆ 'ವಿಶಿಷ್ಟ'ದ ಪೂಜಕರಿಗೆ ಸಾಮಾನ್ಯ, ಸಮಾನ, ಸಾಧಾರಣ, ಅಮಾನ್ಯವಿರುತ್ತದೆ. ಇದು 'ವ್ಯಕ್ತಿಪೂಜೆ', 'ಲಿಂಗಪೂಜೆ'ಯಾಗಿ ಪರಿಣಮಿಸಲೇಬೇಕು. 'ನಮಗೆ ಭೀಮ, ರಂಗ, ನಾಗ ಎಂದರೆ ಅರ್ಥ ವಾಗುತ್ತದೆ. ಆದರೆ 'ಮನುಷ್ಯ—ಮಾನವ' ಎಂಬ ಈ ಆಸಾಮಿ (ಸಮಾಜ) ಎಲ್ಲಿದೆ ? ಎಂದು ಕೇಳುವ ಸುಸಂಸ್ಕೃತರು ಇಂದು ಪ್ರಭಾವಶಾಲಿಗಳಾಗಿದ್ದಾರೆ. ಇದು ವೇದಕಾಲದಲ್ಲಿಯೇ ತಲೆಯೆತ್ತಿದ ಆದಿತ್ಯ (ಕತ್ತಲೆ, ವಿಶಿಷ್ಟ) ಉಪಾಸಕರ ಪಂಥ.

'ವಿಶಿಷ್ಟದ' 'ವೈಶಿಷ್ಟ್ಯದ' ಉಪಾಸನಾ ಸಂಪ್ರದಾಯದ ಪ್ರಸ್ತಾಪಕನು 'ದಕ್ಷಿಣ ಕಪರ್ದಿ ವಸಿಷ್ಠ' ಎಂಬ ಸಾಂಕೇತಿಕ ಹೆಸರಿನಿಂದ ವಿಖ್ಯಾತನಿದ್ದಾನೆ. ಆದರೆ 'ವಿಶ್ವಮಿತ್ರ' ಹಾಗೂ 'ದಕ್ಷಿಣ ಕಪರ್ದಿ ವಸಿಷ್ಠ' ಇವು. ಸಾಂಕೇತಿಕ ಹಾಗೂ ಸಾರ್ಥಕ ಹೆಸರುಗಳು. ಇವನ್ನು ನಿಜವಾದ ವ್ಯಕ್ತಿಗಳು ಎಂಬ ಹಾಗೆ ಪುರಾಣ ಕಥೆಗಳು ಬೆಳೆದು ನಿಂತಿವೆ. ಇದರಿಂದಾಗಿ, ನಮ್ಮ ಸನಾತನ ಸಂಪ್ರದಾಯದ ನಿಜಸ್ವರೂಪವು ಅರಿಕೆಗೆ ಬರು ವುದು ಅಶಕ್ಯವಾಗಿದೆ. ವಸಿಷ್ಠ, ವ್ಯಾಸ ವಾಲ್ಮೀಕಿ, ಇವು ವ್ಯಕ್ತಿನಾಮಗಳಲ್ಲ ! ಇದನ್ನು ಖಾತ್ರೀ ಮಾಡಿ ಕೊಳ್ಳಲು ಬೃಹದಾರಣ್ಯಕದೊಳಗಿನ ಮಂತ್ರದಿಂದ ಬೆಳಕು ದೊರೆಯಲಿದೆ. ಪ್ರಕಾಶತತ್ತ್ವದ ಋಷಿಗಳು, ಪ್ರಕಾಶತತ್ತ್ವದ ಪ್ರತಿಮೆಗಳೆ ಆಗಿದ್ದಾರೆ. ಉದಾ : ಅಂಗಿರ (ಅಂಗಾರ, ಅಗ್ನಿ), 'ಭೃಗು' (ಭ್ರಾಜ್) ಇದು ಪ್ರಕಾಶ ಸೂಚಕ. ಇದೇ ಮೇರೆಗೆ ಚಾಂದ್ರಪಂಥೀಯ ಆಪ = ರಸ ಉಪಾಸನಾ ಸಂಪ್ರದಾಯದ ಮುನಿಗಳು (ಇವರನ್ನು ಋಷಿ ಎಂದೂ ಕರೆವ ವಾಡಿಕೆ ಗೊಂದಲಕ್ಕೆ ಕಾರಣವಾಗಿದೆ.) ಇವರ ರೂಪ ಆಕೃತಿಯೂ ಈ ಸಂಪ್ರದಾಯದ ಶ್ರದ್ಧೆಗೆ ಸುಸಂಗತವೇ ಇದೆ.

ಮೂಲ ಪ್ರಕಾಶ ತತ್ತ್ವದ ಜಾತವೇದ ಅಗ್ನಿ ಸಂಪ್ರದಾಯದ ಅಂಗಿರ–ಈ ಋಷಿನಾಮವು, 'ಅಂಗಿರಸ' ವಾಗುತ್ತದೆ. ಆದಿತ್ಯ ಸಂಪ್ರದಾಯದ ಪ್ರಭಾವದಲ್ಲಿ, 'ಅಂಗಾನಾಂ ರಸಃ' ಅಂಗಿರಸಃ' (೧೦, ೩) ಈ ವಿವರಣೆ

ಯಲ್ಲಿಯೇ 'ಪ್ರಾಣ' ಮತ್ತು 'ಅಂಗನಾಂರಸ' ಇವೆರಡರೊಳಗಿನ ಅನ್ಯೋನ್ಯವನ್ನು ಸೂಚಿಸಲಾಗಿದೆ. 'ಪ್ರಾಣೋವಾ ಅಂಗಾನಾಂ ರಸಃ' ಇಂದಿನ ವೇದದೊಳಗೆ ಬರುವ (ಸಪ್ತರ್ಷಿ) ಎಂಬ ಸಂಕೇತವು ಒಂದು ಕಣ್ಕಟ್ಟು ! ಮೋಸ ವಾಗಿದೆ. ಬೃಹದಾರಣ್ಯಕದ ಈ ವಾಕ್ಯ ನೋಡಿಕೊಳ್ಳಿ.

"ಪ್ರಾಣಾಃ ವಾ ಋಷಯಃ"! ಈ ಋಷಿ ಎಂಬಲ್ಲಿ ದೇಹರೂಪ ವ್ಯಕ್ತಿಗಳು ಅಭಿಪ್ರೇತವಿಲ್ಲ (೨,೨,೪–೮) ಇಲ್ಲಿ ಈ ಸಪ್ತರ ಹೆಸರುಗಳು ಉಂಟು. ಗೌತಮ = ಭಾರದ್ವಾಜಾ (ಎಡಬಲ ಕಿವಿಗಳು), ವಿಶ್ವಾಮಿತ್ರ ಜಮದಗ್ನೀ (ಎರಡು ಕಣ್ಣು), ವಸಿಷ್ಠ–ಕಶ್ಯಪೌ (ಮೂಗಿನ ಎರಡು ಹೊಳ್ಳೆ), ಅತ್ರಿಃ (ನಾಲಗೆ) ಹೀಗಿದೆ ಈ ಆದಿತ್ಯ–ಅದಿತಿ ಸಂಪ್ರದಾಯದ ಕಣ್ಕಟ್ಟು ಅಥವಾ ಮೋಸ. 'ಅಂಗಾನಾಂ ರಸ'ದ = ಪ್ರಾಣಶಕ್ತಿಯ (ಮುಖ್ಯ ಪ್ರಾಣನ) = ಬೃಹಲ್ಲಾಂಗೂಲ (ಲಾಂಗಲ) ವೃಷಾಕಪಿಯ ಉಪಾಸನೆಗೆ ಪ್ರೇರಿಸುವ ಈ ಆದಿತ್ಯ ಸಂಪ್ರದಾಯದಿಂದಾಗಿ ಭಾರತೀಯರು ಪ್ರಜ್ಞಾಃ ಪ್ರಕಾಶತತ್ತ್ವದ ವೈಶ್ವಾನರಾಗ್ನಿ ಪಾತಳಿಯ ಮಾನವಧರ್ಮ' ಸಂಪ್ರದಾಯಕ್ಕೆ ಎರವಾಗಿದ್ದಾರೆ. ದಕ್ಷಿಣ ಕಪರ್ದವಸಿಷ್ಠ ಪ್ರಣೀತ ನರ–ನಾರ ಅಯನ ಸಂಪ್ರದಾಯದ ಪ್ರಭಾವಕ್ಕೆ ಒಳಗಾಗಿ ತನ್ಮಯಾನಂದೀ ವೃತ್ತಿಯಲ್ಲಿ ಮೈಮರೆತಿದ್ದಾನೆ.

ಮನಸ್ಸು ಒಳಗೆ ಅಥವಾ ಹೊರಗೆ ಸಂಚರಿಸದಂತೆ ಮಾಡಿ, ಆಯಾಯ ಇಂದ್ರಿಯಗಳು ಅವುಗಳ ಕೇಂದ್ರದಲ್ಲಿ ಇರುವಂತೆ ಮಾಡುವುದೇ ಶಮ ಮತ್ತು ದಮ ಎನ್ನುವುದು. ಶಮ ಎಂದರೆ ಮನಸ್ಸನ್ನು ಹೊರಗೆ ಹೋಗದಂತೆ ತಡೆಯುವುದು. ದಮವೆಂದರೆ ಹೊರಗಿನ ಯಂತ್ರವನ್ನು ನಿಗ್ರಹಿಸುವುದು.

ಐದು ವಿಚಾರಗಳು

೧ ಪರಂಪರೆ–ನವ್ಯತೆ : ಯಾವಾಗಲೂ ಎಲ್ಲ ಕ್ಷೇತ್ರಗಳಲ್ಲೂ ಹಳತು-ಜೊಸತರ ನಡುವೆ ಸಂಘರ್ಷ ನಡೆಯುತ್ತಲೇ ಇರುತ್ತದೆ. ಸಾಮಾನ್ಯವಾಗಿ ಹಳೆಯದನ್ನು ಕುರಿತು ತಾತ್ಸಾರ ತಿರಸ್ಕಾರಗಳು ವ್ಯಕ್ತವಾಗುತ್ತವೆ : ಹೊಸತಾದುದಕ್ಕೆ ಪುರಸ್ಕಾರ ಸಲ್ಲುತ್ತದೆ. ತದ್ವಿರುದ್ಧವಾದ ವಿದ್ಯಮಾನವೂ ಒಮ್ಮೊಮ್ಮೆ ಕಂಡುಬರುವುದುಂಟು ; ಹಳೆಯದೆಲ್ಲ ಹೊನ್ನು, ಹೊಸದು ಹುರುಳಿಲ್ಲದ್ದು ಎಂದು ಭಾವಿಸುವವರೂ ಇರಬಹುದು. ಆದರೂ ಹಿಂದಿನದನ್ನು ಅರ್ಥಾತ್ ಪರಂಪರೆಯನ್ನು ಇಂದಿನವರು ನಿಕೃಷ್ಟವಾಗಿ ಪರಿಗಣಿಸುವುದೇ ಹೆಚ್ಚು. ಈ ಹೊತ್ತು ಈ ಪ್ರವೃತ್ತಿ ವಿಶೇಷವಾಗಿ ತೋರಿಬರುತ್ತಿದೆ ; ನವ್ಯತೆಯ ಹೆಸರಿನಲ್ಲಿ ಪರಂಪರೆಯನ್ನು ಕುರಿತ ಅವಜ್ಞೆಯನ್ನು, ಪರಂಪರಾ ವಿಮುಖತೆಯನ್ನು ನೋಡುತ್ತಿದ್ದೇವೆ. ವಾಸ್ತವವಾಗಿ, ಈ ಎರಡೂ ಪ್ರವೃತ್ತಿಗಳು-ಎಂದರೆ ಹಳೆಯದು ಮಾತ್ರ ಶ್ರೇಷ್ಠವೆಂದು ಹೊಗಳುವುದು, ಇಲ್ಲವೆ ಹೊಸತು ಮಾತ್ರ ಪರಮೋತ್ಕೃಷ್ಟವೆಂದು ಪೂಜಿಸುವುದು–ಸರಿಯಲ್ಲವೆಂದು ಹೇಳಬೇಕಾಗುತ್ತದೆ.

ಈ ಸಂದರ್ಭದಲ್ಲಿ ಕಾಳಿದಾಸ ಒಂದೆಡೆ ಆಡಿರುವ ಮಾತನ್ನು ನೆನೆಯಬಹುದು : "ಪುರಾಣಮಿತ್ಯೇವ ನ ಸಾಧು ಸರ್ವಂ". ಅವನ ಪೂರ್ತಿ ಹೇಳಿಕೆಯ ಅನುವಾದವಿದು :

> ಹಳೆಯದೆಂದೇ ಎಲ್ಲವೂ ಒಳ್ಳಿತಲ್ಲ ;
> ಹೊಸತೆಂದ ಮಾತ್ರಕ್ಕೆ ಕೃತಿ ದುಷ್ಟವಲ್ಲ ;
> ಸಜ್ಜನರು ಪರಿಕಿಸಿಯೆ ಒಂದನಾಯುವರು,
> ಮೂಢನಾದರೊ ಪರರ ಮತವ ಹಿಡಿಯುವನು.

ಯಾವುದೇ ಆಗಲಿ, ಹಳೆಯದೆಂಬ ಕಾರಣದಿಂದಲೇ ಮಾನ್ಯವಾಗುವುದಿಲ್ಲ; ಅದರಲ್ಲಿ ಸತ್ತ್ವವಿದ್ದರೆ ಖಂಡಿತ ಉಪಾದೇಯವಾಗುತ್ತದೆ. ಅಂತೆಯೆ, ಹೊಸತೆಂಬ ಕಾರಣದಿಂದಲೆ ಯಾವುದೂ ಉತ್ತಮವಾಗುವುದಿಲ್ಲ ; ಅದರಲ್ಲಿ ತಿರುಳಿದ್ದರೆ ಸ್ವೀಕಾರ್ಯವಾಗುತ್ತದೆ. ಅಂತೆಯೆ, ಹೊಸತೆಂಬ ಕಾರಣದಿಂದಲೆ ಯಾವುದೂ ಉತ್ತಮವಾಗುವುದಿಲ್ಲ ; ಅದರಲ್ಲಿ ತಿರುಳಿದ್ದರೆ ಸ್ವೀಕಾರ್ಯವಾಗುತ್ತದೆ. ನಿರ್ಗುಣವಾಗಿದ್ದರೆ ಯಾವುದೂ ಅಗ್ರಾಹ್ಯವೇ. ಈ ಸತ್ಯವನ್ನು ಅನೇಕರು ಮರೆಯುತ್ತಾರೆ. ದೂರಗತವಾದದ್ದು ಆಗಾಗ ಸಾರವತ್ತಾಗಿ ತೋರಬಹುದು, 'ಹಿತ್ತಲ ಗಿಡ ಮದ್ದಲ್ಲ' ಎಂಬ ಗಾದೆಯಂತೆ. ಆದರೆ ನಮ್ಮ ಕಣ್ಣ ಮುಂದಿರತಕ್ಕದ್ದು, ವರ್ತಮಾನ ಸೀಮಿತವಾದದ್ದು ಸಾಮಾನ್ಯವಾಗಿ ನಮ್ಮ ಗಮನ ಸೆಳೆಯುತ್ತದೆ ಗೌರವಾದರಗಳಿಗೇ ಪಾತ್ರವಾಗುತ್ತದೆ ; ಕಣ್ಣೆದುರಿಗಿಲ್ಲದ್ದು ಔದಾಸೀನ್ಯಕ್ಕೆ ಪಕ್ಕಾಗುತ್ತದೆ, 'out of sight, out of mind' ಎನ್ನುವ ಹಾಗೆ. ಹೀಗಾಗಿ ಪರಂಪರೆ ವಿಸ್ಮೃತವಾಗುತ್ತದೆ ಅಥವಾ ತಿರಸ್ಕಾರ ಭಾಜನವಾಗುತ್ತದೆ. ಈ ದಿಟವನ್ನು ಟಿ. ಎಸ್. ಇಲಿಯಟ್ ಸೊಗಸಾಗಿ ಹೇಳಿದ್ದಾನೆ : "ನಮ್ಮ ಕಾಲ

ದಲ್ಲಿ ಒಂದು ಬಗೆಯ ಪಾರಂಪರೀಯತೆ ಬೆಳೆಯುತ್ತಿದೆ. ಇದು ದೇಶ ಸಂಬಂಧವಾದುದಲ್ಲ, ಕಾಲ ಸಂಬಂಧವಾದುದು. ಬದುಕಿರುವವರಿಗೆ ಮಾತ್ರ ಇದರಲ್ಲಿ ಸ್ಥಾನ, ಸತ್ತವರಿಗಲ್ಲ." ಇಂದು ಎಲ್ಲೆಡೆ ಕಂಡುಬರುತ್ತಿರುವ ಪರಂಪರೆಯ ಬಗೆಗಿನ ಅಲಕ್ಷ್ಯ ಅನಾದರಗಳನ್ನು ಇದಕ್ಕಿಂತ ಪರಿಣಾಮಕಾರಿಯಾಗಿ ಸೂಚಿಸುವುದು ಸಾಧ್ಯವಿಲ್ಲವೆನಿಸುತ್ತದೆ.

ಮಾನವನ ಬದುಕು ನಿಂತ ನೀರಲ್ಲ ; ಸದಾ ಪ್ರವಹಿಸುವ ಜೀವನದಿ. ಇದಕ್ಕೆ ಆಗಿಂದಾಗ ಹೊಸ ನೀರ ಬಂದು ಸೇರುತ್ತಲೆ ಇರಬೇಕು. ಆದ್ದರಿಂದ ಜೀವನದಲ್ಲಿ ಕ್ರಾಂತಿ ಪ್ರಗತಿಗಳು ಆವಶ್ಯಕ ಮಾತ್ರವಲ್ಲ, ಅನಿವಾರ್ಯ. ಆದರೆ ಈ ಕ್ರಾಂತಿ ಪ್ರಗತಿಗಳು ಪರಂಪರೆಯ ತಳಹದಿಯ ಮೇಲೆಯೆ ಘಟಿಸಬೇಕೆಂಬುದನ್ನು ಮರೆಯಲಾಗದು. ಹಾಗೇ ಪರಂಪರೆಯ ಪ್ರಜ್ಞೆ ಇಲ್ಲದಿದ್ದಲ್ಲಿ, ನಿಜವಾದ ಪ್ರಗತಿಯಾಗುವುದಿಲ್ಲ ; ಅದರ ಆಭಾಸವಾಗಬಹುದು, ಇಲ್ಲವೆ ನವ್ಯತೆಯ ಮುಸುಕಿನಲ್ಲಿ ವಿಕೃತಿಯಾಗಬಹುದು. ಪರಂಪರೆಯ ಹಿನ್ನೆಲೆಯಿಲ್ಲವೆ ಶೂನ್ಯದಿಂದ ಯಾವುದನ್ನೂ ಸೃಜಿಸುವುದು ಸಾಧ್ಯವಿಲ್ಲ ; ಪರಂಪರೆಯ ಬೆನ್ನೆಲುಬಿಲ್ಲದೆ ಬದುಕಿಲ್ಲ. ಇಲ್ಲಿ ಪರಂಪರೆಯೆಂದರೆ ಶುಷ್ಕ ಕಂದಾಚಾರಗಳು, ಅಂಧ ರೂಢಿಗಳು, ಜಡಪದ್ಧತಿಗಳು, ಮೂಢನಂಬಿಕೆಗಳು ಎಂದರ್ಥವಲ್ಲ. ಅಂಥವು ಸಂಪೂರ್ಣವಾಗಿ ನಿರುಪಯುಕ್ತ ಎಂತಲೇ ವರ್ಜನೀಯ. ಯಾವಯಾವುದು ತ್ರಿಕಾಲಾಬಾಧಿತವಾದ ಸತ್ತ್ವವನ್ನು ಧಾರಣಮಾಡಿಕೊಂಡಿರುತ್ತದೊ, ಯಾವಯಾವುದು ಬದುಕಿಗೆ ಚಿರಂತನವಾದ ತುಷ್ಟಿಪುಷ್ಟಿಗಳನ್ನೀಯಬಲ್ಲದೊ, ಯಾವಯಾವುದು ಅವಿನಾಶಿಯೋ ಅದು ಮಾತ್ರ ಪರಂಪರೆಯನ್ನು ರೂಪಿಸುತ್ತದೆ. ಅದರಲ್ಲಿ ಹಳತು-ಹೊಸತು ಎಂಬ ಭೇದವಿಲ್ಲ ; ಹಾಗೆ ಭೇದ ಬಗೆಯುವುದು ಹೊಲ್ಲ. ಇಂಥ ಪರಂಪರೆ ಬಾಳಿನ ತಾಯಿಬೇರು.

ನಮ್ಮ ದುರಂತವೇನೆಂದರೆ, ನಾವು ವರ್ತಮಾನದಲ್ಲಿ ಮಾತ್ರ ಬದುಕುತ್ತೇವೆ ; ಭೂತ ಭವಿಷ್ಯಗಳತ್ತ ದೃಷ್ಟಿ ಹರಿಸುವುದಿಲ್ಲ. ವಾಸ್ತವವಾಗಿ ವರ್ತಮಾನವೆಂಬುದು ಪ್ರತ್ಯೇಕವಾದ, ಸ್ವಯಂಪೂರ್ಣ ಘಟಕವಲ್ಲ ; ಅದಕ್ಕೆ ಭೂತದ ಹಿನ್ನೆಲೆಯಿರುತ್ತದೆ, ಭವಿಷ್ಯದ ಮುನ್ನೆಲೆಯಿರುತ್ತದೆ. ಅದು ಭೂತದಿಂದ ಬೇರ್ಪಡುವುದಂತೂ ಶಕ್ಯವೇ ಇಲ್ಲ. ಆದ್ದರಿಂದ ಹಿಂದು ಇಂದು ಮುಂದುಗಳನ್ನು ಬೆಸೆಯುವ ಪೂರ್ಣದೃಷ್ಟಿ ನಮಗೆ ಬೇಕಾಗಿದೆ ; ಅದರ ಅಭಾವವೆ ಬಹುಶಃ ಬದುಕಿನ ಸರ್ವಸಮಸ್ಯೆಗಳಿಗೆ ಕಾರಣ. ನಾವು ಹಿಂದಕ್ಕೆ ನೋಟ ಚಾಚಿ ಅದರ ಸಾರವನ್ನು ಹೀರಿಕೊಂಡು, ಇಂದಿನ ಬದುಕಿಗೆ ಅಳವಡಿಸಿಕೊಳ್ಳಬೇಕು ; ಅದರ ಬಲದಿಂದ ಮುಂದುಮುಂದಕ್ಕೆ ಸಾಗಬೇಕು.

ಎಷ್ಟೋ ಸಲ ಮೇಲು ನೋಟಕ್ಕೆ ಹೊಸತು ಎಂದು ಕಾಣಿಸತಕ್ಕದ್ದು ಒಳಹೊಕ್ಕು ನೋಡಿದಾಗ ಸಾರತಃ ಹಳೆಯದೆ ಆಗಿರುತ್ತದೆ ಎಂಬುದನ್ನು ಗಮನಿಸಬೇಕು. ದ್ರವ, ದ್ರವ್ಯ ಹಳೆಯದು ; ಸೀಸೆ ಹೊಸದು, ಭಾಷೆ ಪರಿಭಾಷೆಗಳು ಹೊಸವು ಅಷ್ಟೆ. ನಾವು ಇಂದಿಗೆ ಸೇರಿದವರು, ನವಮಾನವರು ಎಂದುಕೊಳ್ಳುತ್ತೇವೆ-ಇದು ನಿಜವೆ ? ನಮ್ಮ ಮೈಯಲ್ಲಿ ಹರಿಯುತ್ತಿರುವ ರಕ್ತದಲ್ಲಿ ಎಷ್ಟೊಂದು ಪ್ರಾಚ್ಯ ಸಂಸ್ಕಾರಗಳು, ವಾಸನೆಗಳು ನೆಲೆಗೊಂಡಿಲ್ಲ ! ನಮ್ಮ ಬದುಕು ಹೊಸದೊ, ಹಳೆಯದೊ ? ಎರಡೂ ಹೌದು. ಈ ಸಂದರ್ಭದಲ್ಲಿ ಕಾವ್ಯವನ್ನು ಕುರಿತ ಪಂಪನ ಒಂದು ಉಕ್ತಿ ನೆನಪಿಗೆ ಬರುತ್ತದೆ : 'ನಿತ್ಯಂ ಪೊಸತು, ಅರ್ಣವಂಬೊಲ್ ಅತಿ ಗಂಭೀರಂ". ಸಮುದ್ರ ಹಳೆಯದೊ ಹೊಸದೊ ? ಅದಕ್ಕೆ ಪ್ರತಿನಿತ್ಯವೂ ಹಲವಾರು ಹೊಳೆಗಳು ಬಂದು ಸೇರುತ್ತವೆ ; ಎಂತಲೇ ಅದು "ನಿತ್ಯಂ ಪೊಸತು". ಅದು ಗಂಭೀರವೂ ಹೌದು ; ಆ ಗಾಂಭೀರ್ಯದಲ್ಲಿ ಅದರ ಹಳಮೆಯೂ ಇದೆ. ಎಂದರೆ ಸಾಗರ ಎಷ್ಟು ನೂತನವೋ ಅಷ್ಟೇ ಪುರಾತನ. ನಮ್ಮ ಜೀವನವೂ ಹಾಗೆಯೆ. ಎಂದಮೇಲೆ ಪರಂಪರೆ ಹೇಗೆ ತ್ಯಾಜ್ಯವಾದೀತು ? ಹಳತು-ಹೊಸತುಗಳಲ್ಲಿ ಯಾವುದೇ ಒಂದನ್ನು ಹೊಗಳುವುದಾಗಲಿ ತೆಗಳುವುದಾಗಲಿ ಹೇಗೆ ಉಚಿತವಾದೀತು ? ಸನಾತನ-ನೂತನಗಳ, ಪರಂಪರೆ-ನವ್ಯತೆಗಳ ಸಮನ್ವಯ ಸಾಮರಸ್ಯಗಳೇ ಸಮ್ಯಗ್‌ಜೀವನದ ಸ್ವರೂಪ ; ಎರಡರ ಸಾರಸಂಗಮದಿಂದಲೆ ಶ್ರೇಯಸ್ಸು ; ನಾವು ನೆನಪಿಡಬೇಕು-ಬದುಕಿನ ಯಶಸ್ಸಿನ ಕೀಲಿಕೈಯಿರುವುದು ಸಮನ್ವಯದಲ್ಲಿ, ಪೂರ್ಣದೃಷ್ಟಿಯಲ್ಲಿ ; ಅತಿರೇಕಗಳಲ್ಲಲ್ಲ, ಖಂಡದೃಷ್ಟಿಯಲ್ಲಲ್ಲ.

ಒಂದು ದೃಷ್ಟಾಂತ ಕೊಟ್ಟು ಮುಗಿಸಬಹುದು. ಅಜ್ಜನ ಹೆಗಲ ಮೇಲೆ ಒಬ್ಬ ಮೊಮ್ಮಗ ಕುಳಿತಿದ್ದಾನೆ ಅಜ್ಜನಿಗೆ ಕಾಣಿಸದಿರುವ ಎಷ್ಟೋ ವಸ್ತುಗಳು ಅವನಿಗೆ ಸಹಜವಾಗಿಯೆ ಗೋಚರಿಸುತ್ತವೆ. ಅವನು ಅಜ್ಜನ ಹೆಗಲ ಮೇಲೆ ಕುಳಿತಿರುವುದೇ ಅದಕ್ಕೆ ಕಾರಣ ಎಂಬುದನ್ನು ಮರೆಯಕೂಡದು. ಅಜ್ಜನಿಗೆ ಅವು ಕಾಣಿಸದಿರುವುದೂ ಸಹಜವೆ. ಆದ್ದರಿಂದ, ಮೊಮ್ಮಗ ಅಹಂಕಾರಪಡಬೇಕಾಗಿಯೂ ಇಲ್ಲ, ಅಜ್ಜ ಅವಮಾನಗೊಳ್ಳಬೇಕಾಗಿಯೂ ಇಲ್ಲ ಇಲ್ಲಿ ಅಜ್ಜ ಪರಂಪರೆಯನ್ನೂ ಮೊಮ್ಮಗ ನವ್ಯತೆಯನ್ನು ಪ್ರತಿನಿಧಿಸುತ್ತಾರೆ, ಇಬ್ಬರ ನಡುವೆ ಕಳಚಲಾಗದ ಕೊಂಡಿಯಿದೆ. ಇಬ್ಬರೂ ಒಂದು ಅಖಂಡ ನಿರಂತರವಾಹಿನಿಯ ಭಾಗವಾಗಿದ್ದಾರೆ ; ಅದು ಅವಿಚ್ಛಿನ್ನವಾದ ಸಂಬಂಧ. ವಿಚ್ಛೇದನ ಎಲ್ಲಿಯೂ ಸಲ್ಲದು.

೨. ವಿದ್ಯೆ : ಮಾನವನನ್ನು ಮೃಗಗಳಿಂದ ಬೇರ್ಪಡಿಸತಕ್ಕದ್ದು ಅವನಿಗೆ ದೈವದತ್ತವಾಗಿರುವ ಆಲೋಚನಾಶಕ್ತಿ, ಅದರಿಂದ ಅವನು ಅರ್ಜಿಸಬಹುದಾದ ವಿದ್ಯೆ. ಈ ಕಾರಣದಿಂದಲೆ, ವಿದ್ಯಾವಿಹೀನನಾದ ಮನುಜ ಪಶುವಿಗೆ ಸಮಾನ ಎಂದಿದ್ದಾರೆ ಹಿಂದಿನವರು.

ವಿದ್ಯೆಯೆಂದರೇನು? ಅದು ಬರಿಯ ವಿಷಯಸಂಗ್ರಹವಲ್ಲ ; ಕೇವಲ ಮಾಹಿತಿಗಳ ಮೊತ್ತವಲ್ಲ. ಅದೊಂದು ಆತ್ಮಸಂಸ್ಕಾರ, ಮನಃ ಪರಿಪಾಕ, ಚಿತ್ತದ ಆರ್ದ್ರತೆ. ಸಾಕ್ಷರತೆಯೆ ವಿದ್ಯೆಯೆಂದು ನಾವು ಸಾಂಪ್ರದಾಯಿಕವಾಗಿ ತಿಳಿದಿದ್ದೇವೆ ; ಆದರೆ ಅಷ್ಟೇ ಪೂರ್ಣವಿದ್ಯೆಯಾಗುವುದಿಲ್ಲ ; ನಿಜವಾದ ವಿದ್ಯೆಗೆ ಸೋಪಾನ ಮಾತ್ರವಾಗಬಹುದು. ಮನುಷ್ಯನಲ್ಲಿರುವ ಪಾಶವೀ ಪ್ರವೃತ್ತಿಗಳನ್ನು ಅಳಿಸಿ, ಅವನ ಹೃದಯವನ್ನು ಪರಿಷ್ಕರಿಸಿ ಸಂಸ್ಕರಿಸಿ, ಮಾನವೀಯತೆಯನ್ನು ಪ್ರತಿಷ್ಠಾಪಿಸತಕ್ಕದ್ದು ನಿಜವಾದ ವಿದ್ಯೆ. ಸಾಂಪ್ರದಾಯಿಕಾರ್ಥದ ವಿದ್ಯೆ ಈ ಕೆಲಸವನ್ನು ಮಾಡಬಹುದು, ಮಾಡದಿರಬಹುದು.

ಭಾರತೀಯ ಪರಂಪರೆಯಲ್ಲಿ "ವಿದ್ಯೆ" ಎಂಬ ಮಾತಿಗೆ ವಿಶಾಲತಮವಾದ ಅರ್ಥವಿದೆ. "ಸಾ ವಿದ್ಯಾಯಾ ವಿಮುಕ್ತಯೇ" ಎಂಬುದೊಂದು ಆರ್ಷಸೂಕ್ತಿ. ಇದರ ಪ್ರಕಾರ, ಮಾನವನನ್ನು ಸಂಸಾರಬಂಧನದಿಂದ ಬಿಡುಗಡೆಗೊಳಿಸಿ, ದೈವತ್ವಕ್ಕೇರಿಸಿ, ಮೋಕ್ಷವನ್ನು ದೊರಕಿಸತಕ್ಕದ್ದೇ ವಿದ್ಯೆ, ಈ ದೃಷ್ಟಿಯಿಂದ ಪರಿಭಾವಿಸಿದಾಗ ವಿದ್ಯೆಯೆಂದರೆ ಜ್ಞಾನ ; ಅವಿದ್ಯೆಯೆಂದರೆ ಅಜ್ಞಾನ, ಮಾಯೆ. ಈ ಅರ್ಥದಲ್ಲಿ ವಿದ್ಯಾವಂತರ ಸಂಖ್ಯೆ ಅತಿ ವಿರಳವೆನ್ನಬೇಕಾಗುತ್ತದೆ.

ಅಂತೂ ಕೇವಲ ಹೊಟ್ಟೆಪಾಡಿಗಾಗಿ ಕಲಿಯುವ ಓದುಬರಹವಷ್ಟೆ ವಿದ್ಯೆಯಾಗದು. ಅಂಥ ಸಾಕ್ಷರತೆಯಿಂದ ಒಳಿತಾಗುವುದರ ಬದಲು ಅಪಾಯವೇ ಆಗಬಹುದು. "ಸಾಕ್ಷರಾ ವಿಪರೀತಾಶ್ಚೇತ್ ರಾಕ್ಷಸಾ ಏವ ಕೇವಲಂ" (ಸಾಕ್ಷರರು ವಿಪರೀತರಾದರೇ ರಾಕ್ಷಸರಾಗುತ್ತಾರೆ) ಎಂಬುದು ಬರಿಯ ಚಮತ್ಕಾರೋಕ್ತಿಯಲ್ಲ,ಸತ್ಯಸ್ಯ ಸತ್ಯ.

ಸಂಕುಚಿತಾರ್ಥದಲ್ಲಾಗಲಿ ವ್ಯಾಪಕಾರ್ಥದಲ್ಲಾಗಲಿ ವಿದ್ಯೆ ಮಾನವನ ಒಂದು ಅತ್ಯಮೂಲ್ಯವಾದ ಆಸ್ತಿ. ಅದರ ಹಿರಿಮೆಗರಿಮೆಗಳನ್ನು ಪ್ರತಿಪಾದಿಸುವ ಅನೇಕ ಸುಭಾಷಿತಗಳು ಸಂಸ್ಕೃತದಲ್ಲಿವೆ. "ಸರ್ವೇಂದ್ರಿಯಾಣಾಂ ನಯನಂ ಪ್ರಧಾನಂ" (ಇಂದ್ರಿಯಗಳಲ್ಲೆಲ್ಲ ಕಣ್ಣು ಪ್ರಧಾನ) ಎಂದು ಹೇಳುತ್ತಾರೆ; ಅಂತೆಯೆ "ವಿದ್ಯಾಧನಂ ಸರ್ವಧನ ಪ್ರಧಾನಂ" (ಎಲ್ಲ ಧನಗಳಿಗಿಂತ ವಿದ್ಯಾಧನ ಪ್ರಧಾನ) ಕಣ್ಣು ಬಾಹ್ಯಚಕ್ಷುವಾದರೆ ವಿದ್ಯೆ ಅಂತಶ್ಚಕ್ಷು. ಈ ವಿದ್ಯಾಧನದ ವೈಶಿಷ್ಟ್ಯವೆಂದರೆ, ಅದನ್ನು ಕಳ್ಳರು ಕದಿಯಲಾರರು, ರಾಜರು ಕಿತ್ತುಕೊಳ್ಳಲಾರರು, ಸೋದರರು ಹಂಚಿಕೊಳ್ಳಲಾರರು ; ಅಷ್ಟೆ ಅಲ್ಲ, ಖರ್ಚು ಮಾಡಿದಷ್ಟೂ ಅದು ವೃದ್ಧಿಸುತ್ತ ಹೋಗುತ್ತದೆ. ವಿದ್ಯೆಯಿಂದ ಸಂಪತ್ತನ್ನು ಅರ್ಜಿಸಬಹುದು. ಆದರೆ ಸಂಪತ್ತಿನಿಂದ ವಿದ್ಯೆಯನ್ನು ಅರ್ಜಿಸುವ ಭರವಸೆಯಿಲ್ಲ.ಎಂತಲೇ ವಿದ್ಯಾಧನ ಸರ್ವೋತ್ತಮವಾದುದು.

ವಿದ್ಯೆ ಕಲ್ಪವೃಕ್ಷವಂತೆ ಏನೇನನ್ನು ಸಾಧಿಸುತ್ತದೆ ಎಂಬುದನ್ನು ನಿರೂಪಿಸುತ್ತದೆ ಈ ಸೂಕ್ತಿ :

ಮಾತೆಯೊಲು ಕಾಯುವುದು, ಪಿತನಂತೆ ಹಿತದಿ ಯೋಜಿಪುದು,
ಕಾಂತೆಯೊಲು ದುಃಖವನು ನೀಗಿ ಸಂತೋಷಗೊಳಿಸುವುದು,
ದಿಕ್ಕುದಿಕ್ಕಿಗೆ ಕೀರ್ತಿಯನು ಹರಡುವುದು, ಸುಖವ ತಹುದು–
ಕಲ್ಪಲತೆಯೊಲು ವಿದ್ಯೆ ಯಾವಯಾವುದನು ಸಾಧಿಸದು ?

ವಿದ್ಯೆಯಿಂದ ಏನು ತಾನೆ ಸಿದ್ಧಿಸದು ? ಇಹಪರಗಳೆರಡರ ಲಾಭವೂ ಉಂಟು ಆದರಿಂದ :

ವಿದ್ಯೆ ವಿನಯವನೀಯುವುದು, ಆ ವಿನಯದಿಂದ ಯೋಗ್ಯತೆಯು ಬಹುದು,
ಯೋಗ್ಯತ್ವದಿಂದ ಧನ, ಧನದಿಂದ ಧರ್ಮ, ಆ ಧರ್ಮದಿಂ ಸೌಖ್ಯ.

ವಿದ್ಯೆ ಎಲ್ಲಕ್ಕಿಂತಲೂ ಮಿಗಿಲಾದ ಆಭರಣ:

ನಕ್ಷತ್ರಗಳಿಗೆ ಭೂಷಣ ಚಂದ್ರ, ಸತಿಯರಿಗೆ ಪತಿ ಭೂಷಣ,
ಧರೆಗೆ ಭೂಷಣ ರಾಜ, ವಿದ್ಯೆಯಾದನೊ ಎಲ್ಲಕೂ ಭೂಷಣ.

ವಿದ್ಯಾಶಾಲಿಗಳಿಗೆ ವಸ್ತ್ರಾಭರಣ ವಿಲೇಪನಾದಿಗಳ ಆಡಂಬರದ ಅಗತ್ಯವಿಲ್ಲ. ಆದ್ದರಿಂದಲೆ,

ವಿದ್ಯೆಯನು ಪಂಕಿಪುದು ಅಂಬರಾಡಂಬರದೊಳೇನು ?–
ಶಂಭು ಅಂಬರಹೀನನಾದರೂ ಸರ್ವಜ್ಞನಹುದು.

ವಿದ್ಯೆಯಿಲ್ಲದಿದ್ದಲ್ಲಿ ಉಚ್ಚಕುಲ, ರೂಪ ಯೌವನ ಎಲ್ಲವೂ ವ್ಯರ್ಥ ; ಅಂಥ ಜನ ಮುತ್ತುಗದ ಹೂವುಗಳ ಹಾಗೆ ಎಂದು ಹೇಳಲಾಗಿದೆ :

ದೊಡ್ಡ ಕುಲದೊಳು ಹುಟ್ಟಿ, ರೂಪಯೌವನಗಳನು ಪಡೆದು, ವಿದ್ಯೆಯನು
ಪಡೆಯದಿಹ ಜನ ಗಂಧಹೀನ ಮುತ್ತುಗದ ಹೂಗಳೊಲು ಶೋಭಿಸರು.

ಮುತ್ತುಗದ ಹೂವು ಅಗಲವಾಗಿರುತ್ತದೆ ; ನೋಡುವುದಕ್ಕೆ ಚೆನ್ನು. ಆದರೆ ನಿಷ್ಪ್ರಯೋಜಕ ; ಮಾನವರಿಗೂ ಸಲ್ಲದು, ದೇವರಿಗೂ ಸಲ್ಲದು.

ವಿದ್ಯೆಯನ್ನು ಅತ್ಯಲ್ಪಕಾಲದಲ್ಲಿ ಸಂಪಾದಿಸುವುದು ಸಾಧ್ಯವಿಲ್ಲ ; ಅದು ಶ್ರದ್ಧಾಪೂರ್ವಕವಾಗಿ ಸಾವಕಾಶವಾಗಿ ಸಾಧಿಸಬೇಕಾದ ವಸ್ತು :

ದಾರಿಯನು ಕನ್ನೆಯನು ಬೆಟ್ಟದುದಿಯನು ವಿದ್ಯೆಯನು ಸಂಪದವನು–
ಈ ಐದನೂ ಮನುಜ ದುಡುಕದೆಯೆ ಮೆಲ್ಲಮೆಲ್ಲನೆ ಸಾಧಿಸುವುದು.

ಧನವನ್ನು ಕಣಕಣವಾಗಿಯೂ ವಿದ್ಯೆಯನ್ನು ಕ್ಷಣಕ್ಷಣವಾಗಿಯೂ ಸಂಚಯಿಸಬೇಕಂತೆ :

ಚಣಚಣವಾಗಿಯೆ ವಿದ್ಯೆಯ ಗಳಿಪುದು, ಕಣಕಣವಾಗಿಯೆ ಅರ್ಥವನು ;
ಚಣವನು ಬಿಟ್ಟರೆ ವಿದ್ಯೆಯದೆಲ್ಲಿದೆ, ಕಣವಿಲ್ಲದೆ ಅರ್ಥವದುಂಟೆ ?

ಹನಿಗೂಡಿ ಹಳ್ಳ ನಿಜ. ಆದರೆ ಇದು ಹಿಂದಿನ ಕಾಲದ ಮಾತಾಯಿತು : ಈ ಕಾಲಕ್ಕೆ ಇದು ಪೂರ್ತಿ ಅನ್ವಯಿಸಲಾರದು. ಇಂದು ಲಾಟರಿಯೆ ಮೊದಲಾದ ವಿಧಾನಗಳಿಂದ ವ್ಯಕ್ತಿ ದಿಢೀರನೆ ಶ್ರೀಮಂತನಾಗಿಬಿಡಬಹುದು ; ಆದರೆ ದಿಢೀರ್ ಪಾಂಡಿತ್ಯ ಇಂದಿಗೂ ಸಾಧ್ಯವಿಲ್ಲ. ಜ್ಞಾನಾರ್ಜನೆಗೆ ಈಗ ಹಿಂದಿಗಿಂತ ಹೆಚ್ಚು ಸೌಲಭ್ಯಗಳಿವೆ ; ಹಲ ಬಗೆಯ ಕೋಶಗಳು ಬೇಕಾದ ಮಾಹಿತಿಯನ್ನು ತತ್‌ಕ್ಷಣವೇ ಒದಗಿಸುತ್ತವೆ. ಆದರೂ ಹಣವನ್ನು ಆರ್ಜಿಸುವಷ್ಟು ಸುಲಭವಾಗಿ ವಿದ್ಯೆಯನು ಆರ್ಜಿಸುವುದು ಈಗಲೂ ಅಶಕ್ಯ. ನಿರಂತರ ಶ್ರದ್ಧೆ ನಿಷ್ಠೆ ತದೇಕ ಚಿತ್ತತೆಗಳಿಂದಲೆ ಪರಿಪೂರ್ಣ ವಿದ್ಯಾಸಂಪಾದನೆ. ವಿದ್ಯಾಸಾಧನೆಗೆ ನಿರಂತರ ಪ್ರಯತ್ನಶೀಲತೆ ಬೇಕೆಂಬುದನ್ನು ಈ ಸೂಕ್ತಿಯೂ ತಿಳಿಸುತ್ತದೆ :

ನೆಲವ ತೋಡುತ್ತ ತೋಡುತ್ತ ನರನೇತು ನೀರನು ಪಡೆವನೊ,
ಅಂತು ಗುರುವಿನೊಳಿರುವ ವಿದ್ಯೆಯನು ಶುಶ್ರೂಷೆಯಿಂ ಗಳಿಪನು.

ಒಟ್ಟಿನಲ್ಲಿ ಸದಸದ್‌ವಿವೇಚನೆ, ಸದಾಚಾರ, ಮಾನವೀಯತೆಗಳನ್ನು ಒಳಗೊಳ್ಳುತ್ತದೆ ಸಮೀಚೀನವಾದ ವಿದ್ಯೆ. ಅದು ಒಣವಿದ್ವತ್ತಷ್ಟೆ ಆಗಬಾರದು ; ಪ್ರದರ್ಶನ ಸಾಮಗ್ರಿಯಾಗಬಾರದು. ಸ್ವಾಮಿ ವಿವೇಕಾನಂದರು ಲೋಕಕ್ಕೆ ನೀಡಿದ ಸಂದೇಶವನ್ನಿಲ್ಲಿ ಸ್ಮರಿಸಬಹುದು. "ಆತ್ಮನೋ ಮೋಕ್ಷಾರ್ಥಂ, ಜಗದ್ಧಿತಾಯ ಚ" (ವ್ಯಕ್ತಿಯ ಮೋಕ್ಷಕ್ಕಾಗಿ, ಜಗತ್ತಿನ ಹಿತಕ್ಕಾಗಿ), ವಿದ್ಯೆಯ ಧ್ಯೇಯವೂ ಇದೇ. ಅದು ವ್ಯಕ್ತಿಯನ್ನು ಉದ್ಧರಿಸಬೇಕು ; ಸಮಾಜದ ಹಿತವನ್ನೂ ಸಾಧಿಸಬೇಕು. ಆಗ ಮಾತ್ರವೇ ಅದು ಸಾರ್ಥಕವಾಗುವುದು. ಕೇವಲ ಸ್ವಾರ್ಥಸಾಧಕವಾಗುವ ವಿದ್ಯೆ ನಿಜವಾದ ವಿದ್ಯೆಯಲ್ಲ ; ಅದು ಅವಿದ್ಯೆ ಅಥವಾ ಕುವಿದ್ಯೆಯಷ್ಟೆ.

೩. ದೈವ–ಪುರುಷಕಾರ : ಈ ಸೃಷ್ಟಿಯ ಹಿಂದೆ, ಅತೀತವಾಗಿ ಯಾವುದೋ ಒಂದು ಶಕ್ತಿ, ಅರ್ಥಾತ್ ದೈವ ಎಂಬುದು ಉಂಟೆ ಅಥವಾ ಇಲ್ಲವೆ, ಇದ್ದರೆ ಅದಕ್ಕೂ ಮಾನವನಿಗೂ ಏನು ಸಂಬಂಧ? ಬದುಕಿನಲ್ಲಿ ದೈವದ ಪಾತ್ರ ಎಷ್ಟು, ಪುರುಷಕಾರದ ಪಾಲೆಷ್ಟು ? ಮುಂತಾದುವು ಅನಾದಿಕಾಲದಿಂದಲೂ ಮಾನವನನ್ನು ಕಾಡುತ್ತ ಬಂದಿರುವ ಪ್ರಶ್ನೆಗಳು. ಈ ಹೊತ್ತಿಗೂ ಇವಕ್ಕೆ ಸರ್ವಸಮ್ಮತವಾದ ಉತ್ತರ ಸಿಕ್ಕಿಲ್ಲ ; ಮುಂದೆ ಸಿಕ್ಕುವ ಸಂಭವವೂ ಇಲ್ಲ. ಕಡೆಗೂ ಇದು ಅವರವರ ಅನುಭವಕ್ಕೆ ಸಂಬಂಧಿಸಿದ ವಿಷಯವಾಗಿಯೆ ಉಳಿದೀತು.

ದೈವವನ್ನೆ ನಂಬದ ನಾಸ್ತಿಕ ಯಾವ ಮಾನಸಿಕ ಹೋರಾಟಕ್ಕೂ ಗುರಿಯಾಗಬೇಕಿಲ್ಲ ; ಅವನು ಹೆನ್ಲಿ ಕವಿಯಂತೆ "I am the master of my fate, I am the captain of my soul" ಎಂದು ಆತ್ಮಪ್ರತ್ಯಯದಿಂದ ಉಗ್ಗಡಿಸಬಹುದು. ಸಮಸ್ಯೆಗಳಿಗೆ,ತಾಕಲಾಟಕ್ಕೆ ಗುರಿಯಾಗತಕ್ಕದ್ದು ದೇವರನ್ನುನಂಬುವ ಆಸ್ತಿಕ ಚೇತನ. ದೈವ ದೊಡ್ಡದೆ, ಪುರುಷಕಾರ ದೊಡ್ಡದೆ ? ಎರಡಕ್ಕೂ ಇರುವ ಸಂಬಂಧ ಎಂತಹುದು ? ಇವೇ ಮೊದಲಾದ ಪ್ರಶ್ನೆಗಳು ಅದಕ್ಕೆ ಎದುರಾಗುತ್ತವೆ ; ಶ್ರದ್ಧೆ-ಸಂಶಯಗಳ ನಡುವೆ ತೂಗಾಡುವಂತೆ ಮಾಡುತ್ತವೆ.

ಭಾರತೀಯ ಜ್ಞಾನದ ತವನಿಧಿಯಾದ ಸಂಸ್ಕೃತದಲ್ಲಿ ಈ ಬಗ್ಗೆ ಬೇಕಾದಷ್ಟು ಸುಭಾಷಿತ ಮುಕ್ತಕಗಳು ಸಿಗುತ್ತವೆ. ಇವುಗಳಲ್ಲಿ ಮೂರು ವರ್ಗ : ದೈವದ ಪಾರಮ್ಯವನ್ನು ಅನುಲ್ಲಂಘನೀಯ ಸಾಮರ್ಥ್ಯವನ್ನೂ ಬಿತ್ತರಿಸತಕ್ಕವು ಕೆಲವು ; ಪುರುಷಕಾರದ ಮಹಿಮೆಯನ್ನು ಎತ್ತಿ ಹೇಳತಕ್ಕವು ಇನ್ನು ಕೆಲವು ; ಸುವರ್ಣ ಮಾಧ್ಯಮ ಸೂತ್ರವನ್ನು ಸಾರತಕ್ಕವು ಮತ್ತೆ ಕೆಲವು. ಪ್ರಾಯಶಃ ಇಂದು ನಮಗೆ ಹೆಚ್ಚು ಉಪಾದೇಯವೂ ಮಾರ್ಗದರ್ಶಕವೂ ಆಗತಕ್ಕವು ಮೂರನೆಯ ವರ್ಗದ ಸೂಕ್ತಿಗಳು ; ಪೂರ್ಣಸತ್ಯ ಅವುಗಳಲ್ಲಿದೆ ಎನಿಸುತ್ತದೆ.

ಪುರುಷಕಾರದ ನಿಷ್ಫಲತೆಯನ್ನೂ ದೈವದ ಪ್ರಾಬಲ್ಯವನ್ನೂ ನಿದರ್ಶನಪೂರ್ವಕವಾಗಿ ನಿರೂಪಿಸುತ್ತದೆ ಈ ಸೂಕ್ತಿ :

ರವಿಶಶಿಗಳಿಗೆ ಕೂಡ ಗ್ರಹಪೀಡೆಯುಂಟು ;
ಗಜ ಭುಜಂಗಮಗಳಿಗೆ ಕೂಡ ಸೆರೆಯುಂಟು ;
ಬುದ್ಧಿವಂತರಿಗೆ ದಾರಿದ್ರ್ಯ–ಇದ ನೋಡಿ
ತಿಳಿಯುವೆನು ವಿಧಿಯೆ ಬಹು ಬಲಶಾಲಿಯೆಂದು.

ಅಂತೆಯೇ ಪೌರಾಣಿಕ ಪ್ರತಿಮೆಯೊಂದನ್ನು ಬಳಸಿಕೊಂಡಿರುವ ಈ ಸೂಕ್ತಿಯೂ ಗಮನಾರ್ಹ :

ಎಲ್ಲೆಲ್ಲಿಯೂ ಫಲಿಸುವುದು ದೈವ, ವಿದ್ಯೆ ಪೌರುಷಗಳಲ್ಲ :
ಕಡಲ ಕಡೆಹದಿ ಹರಿಗೆ ಲಕ್ಷ್ಮಿ ಸಿಕ್ಕಿದಳು, ವಿಷ ಹರನಿಗಾಯ್ತು.

ಇಂಥ ಮಾತುಗಳಲ್ಲಿ, ದೈವಬಲದ ಮುಂದೆ ಮನುಷ್ಯಪ್ರಯತ್ನ ನಿರರ್ಥಕವೆಂಬ ಹತಾಶೆಯ ನಿಟ್ಟುಸಿರಿದ್ದರೆ, ಮುಂದಿನ ಸೂಕ್ತಿಯಲ್ಲಿ ಪುರುಷಕಾರದ ಜಯಘೋಷವಿದೆ :

ಉದ್ಯೋಗಶೀಲನಹ ಪುರುಷನಿಗೆ ಒಲಿಯುವಳು ಲಕ್ಷ್ಮಿ ;
ದೈವದಿಂ ಬಹುದೆಂದು ಹೇಳುವುದು ಕಾಪುರುಷವಚನ :
ದೈವವನು ಮೆಟ್ಟುತೆ ಸ್ವಶಕ್ತಿಯೊಳು ಪೌರುಷವನೆಸಗು ;
ಯತ್ನಿಸಿಯು ಸಿದ್ಧಿಸದೆ ಹೋದರೇನುಂಟಲ್ಲಿ ದೋಷ ?

ಈ ದಿಶೆಯಲ್ಲಿ ಈ ನುಡಿಯನ್ನು ಲಕ್ಷಿಸಬಹುದು :

ಸ್ವಪ್ರಯತ್ನದಿ ಹಿಂದೆ ಗೈದ ಕರ್ಮವನೆ ಜನ ವಿಧಿಯೆಂಬರು ;
ಅದರಿಂದ, ಸ್ವಪ್ರಯತ್ನವ ಗೈದು ವಿಧಿಯ ನರ ತೊಡೆಯಬಲ್ಲ.

ಇಂದುತನಕ ನಾವು ನೋಡಿದವು ಎರಡು ವಿಭಿನ್ನ ಪಕ್ಷಗಳು. ನಮಗೆ ಬೇಕಾದದ್ದು ಇವುಗಳ ಹೊಂದಾಣಿಕೆ. ವಾಸ್ತವವಾಗಿ, ದೈವಕೃಪೆ ಮತ್ತು ಪುರುಷಕಾರ ಪರಸ್ಪರ ಪೂರಕವಾದವು. ಎರಡು ಕೈ ಸೇರಿ ಹೇಗೆ ಚಪ್ಪಾಳೆಯೋ ಹಾಗೇ ದೈವಬಲ–ಪುರುಷಕಾರಗಳ ಸಂಗಮವೇ ಮನುಷ್ಯಜೀವನ. ದೈವ ಎಲ್ಲವನ್ನೂ ವಿಧಾರಿದ್ದು, ದೇವ ಸಂಕಲ್ಪವಿಲ್ಲದೆ ಯಾವುದೂ ಆಗದು, ನಿಜ; ಹಾಗೆಂದು ಮಾನವ ಸ್ವಪ್ರಯತ್ನವನ್ನು ಬಿಟ್ಟು ಕೈಕಟ್ಟಿ ಕುಳಿತುಕೊಳ್ಳುವುದು ಸಲ್ಲದು :

ದೈವೇಚ್ಛೆಯಂತಾಗಲೆಂದು ಉದ್ಯೋಗವನು ಬಿಡಬಾರದು :
ಯತ್ನಮಾಡದೆ ಯಾರು ಎಳ್ಳಿನೀದೆಣ್ಣೆಯನು ಪಡೆಯಬಹುದು?

ನರ ದೈವವನ್ನು ನಂಬಬೇಕು ; ದೈವೀಕೃಪೆಗಾಗಿ ಹಾರೈಸಿ ಪ್ರಾರ್ಥಿಸಬೇಕು ; ಜೊತೆಜೊತೆಯಲ್ಲೆ ತನ್ನಿಂದ ಸಾಧ್ಯವಾದುದನ್ನೆಲ್ಲ ಮಾಡಬೇಕು, ಪರಮಾವಧಿ ಪುರುಷಕಾರವನ್ನು ಮೆರೆಯಬೇಕು. ಸನ್ಮಾರ್ಗದಲ್ಲಿ ಪ್ರಯತ್ನಪರನಾದವನಿಗೆ ದೇವರು ಒಲಿಯದಿರುವುದಿಲ್ಲ.

ಪುರುಷಕಾರ ಹಾಗೂ ದೈವದ ಅನ್ಯೋನ್ಯತೆಯನ್ನು ಸೊಗಸಾಗಿ ತಿಳಿಸುತ್ತದೆ, ಈ ಸೂಕ್ತಿ :

ಒಂದೆ ಚಕ್ರದಲಿ ರಥ ಚಲಿಸಲಾರದದೆಂತು,
ಪುರುಷಕಾರನಸುಳಿದು ದೈವ ಸಿದ್ಧಿಸದಂತು

ದೈವ–ಪುರುಷಕಾರಗಳ ಸಾಮರಸ್ಯವನ್ನು ಮುಂದಿನ ಸುಭಾಷಿತವೂ ಮನನಂಬುಗುವಂತೆ ತಿಳಿಸುತ್ತದೆ :

ಪುರುಷಕಾರವೆ ಕ್ಷೇತ್ರ, ದೈವವೇ ಬೀಜ ;
ಕ್ಷೇತ್ರ–ಬೀಜ ಸಮಾಗಮದಿ ಬೆಳೆಯು ಹುಲುಸು.

ಬೆಳೆ ಬರಬೇಕಾದರೆ ಕ್ಷೇತ್ರ, ಬೀಜ ಎರಡೂ ಬೇಕು ; ಒಂದನ್ನುಳಿದು ಮತ್ತೊಂದಿಲ್ಲ. ಈ ಎರಡನ್ನೂ ಹೊಂದಿಸಿಕೊಂಡಾಗ ಮಾನವ ಸುಖಿಯಾಗುತ್ತಾನೆ, ಯಶಸ್ವಿಯಾಗುತ್ತಾನೆ. ಜೀವನರಹಸ್ಯದ ಕೀಲಿಕೈ ಬಹುಶಃ ಈ ಸಮನ್ವಯದಲ್ಲಿದೆ.

೪. ಧರ್ಮ--ಅರ್ಥ : ಮನುಷ್ಯನ ದುರ್ದೈವವೆಂದರೆ,ಅವನ ಬುದ್ಧಿ ಭಾವಗಳ ನಡುವೆ ಸಂಪೂರ್ಣವಾದ ಹೊಂದಾವಣೆ ಸಾಧ್ಯವಾಗುವುದಿಲ್ಲ ಎಂಬುದು. ಬುದ್ಧಿಗತವಾದದ್ದು ಭಾವಗತವಾಗುವುದಿಲ್ಲ ; ಮೆದುಳು ಒಪ್ಪಿದುದನ್ನು ಹೃದಯ ಸ್ವೀಕರಿಸುವುದಿಲ್ಲ ; ಒಂದು ಏರಿಗೆಳೆದರೆ ಇನ್ನೊಂದು ನೀರಿಗೆಳೆಯುತ್ತದೆ.

ಈ ಶರೀರ ನಿತ್ಯವಲ್ಲ, ಐಹಿಕ ಸುಖಭೋಗ ವಿಭವಗಳು ಅಶಾಶ್ವತ ಎಂಬುದನ್ನು ಇದುವರೆಗೆ ಎಷ್ಟು ಜನ ಬೋಧಿಸಿಲ್ಲ? ಯಾರಿಗೆ ತಾನೆ ಈ ಸತ್ಯ ಗೊತ್ತಿಲ್ಲ ? ಆದರೆ ಹಾಗೆಂದು ಹೃತ್ಪೂರ್ವಕವಾಗಿ ನಂಬಿ,ವೈರಾಗ್ಯ ತಾಳಿ, ಸಂಸಾರವನ್ನು ತೊರೆದವರು ಎಷ್ಟು ಮಂದಿ ? ಅಂಥವರ ಸಂಖ್ಯೆಯನ್ನು ಬೆರಳುಗಳಿಂದ ಎಣಿಸಿಬಿಡಬಹುದೇನೊ ! ಶೇಕಡ ತೊಂಬತ್ತೊಂಬತ್ತು ಮಂದಿ ಈ ದೇಹ ನಿತ್ಯವೆಂಬಂತೆ, ಬದುಕಿನ ಸುಖ ಸಂಪತ್ತುಗಳು ಸ್ಥಿರವೆಂಬಂತೆ

ವರ್ತಿಸುವವರೇ, ಹೊನ್ನು ಹೆಣ್ಣು ಮಣ್ಣುಗಳು ಬೇಕು; ಅಧಿಕಾರ ಬೇಕು, ಕೀರ್ತಿಬೇಕು - ಈ ಬಯಕೆಗಳು ಯಾರನ್ನು ತಾನೆ ಬಿಟ್ಟಿವೆ ?

ಆದರೆ ಇವೆಲ್ಲ ನಿಲ್ಲತಕ್ಕವಲ್ಲ, ನಿಜವಾದ ಸುಖವೆಂಬುದು ಇವುಗಳಾಚೆಗಿದೆ ಎಂಬುದನ್ನು ಅನೇಕ ಮಹನೀಯರು ತಮ್ಮ ತಮ್ಮ ವಿಶಿಷ್ಟ ರೀತಿಯಲ್ಲಿ ಸಾರಿದ್ದಾರೆ ; ಇತರರಿಗೆ ದಾರಿ ತೋರಿದ್ದಾರೆ. ಅಂಥವರ ಕೆಲವು ಮಾತುಗಳನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಐಹಿಕವಾದುದೆಲ್ಲ ಅನಿತ್ಯ ಎಂಬುದನ್ನು ಪಂಪಕವಿ ಹೃದ್ಯವಾಗಿ ಉದ್ಘೋಷಿಸಿದ್ದಾನೆ : "ಅಮರೇಂದ್ರೋನ್ನತಿ, ಖೇಚರೇಂದ್ರ ವಿಭವಂ, ಭೋಗೀಂದ್ರಭೋಗಂ, ಮಹೇಂದ್ರ ಮಹದೈಶ್ವರ್ಯಂಗಳಿವೆಲ್ಲಮಧ್ರುವಂ" ಕಾಲರಾಯ ಎಲ್ಲವನ್ನೂ ನುಂಗಿ ನೊಣೆಯುತ್ತಾನೆ ಎಂಬ ಕಟುಸತ್ಯವನ್ನು ಭರ್ತೃಹರಿ ಸ್ವಾರಸ್ಯಪೂರ್ಣವಾಗಿ ನಿರೂಪಿಸುವ ರೀತಿಯಿದು :

ಸಾ ರಮ್ಯಾನಗರೀ ಮಹಾನ್ಸ ನೃಪತಿಸ್ಸಾಮಂತಚಕ್ರಂ ಚ ತ-
ತ್ಪಾರ್ಶ್ವೇ ತಸ್ಯ ಚ ಸಾ ವಿದಗ್ಧ ಪರಿಷತ್ತಾಶ್ಚಂದ್ರಬಿಂಬಾನನಾಃ
ಉದ್ವೃತ್ತಸ್ಸ ಚ ರಾಜಪುತ್ರನಿವಹಸ್ತೇ ಬಂದಿನಸ್ತೇ ಕಥಾಃ
ಸರ್ವಂ ಯಸ್ಯ ವಶಾದಗಾತ್ ಸ್ಮೃತಿಪಥಂ ಕಾಲಾಯ ತಸ್ಮೈನಮಃ

(ಆ ಸುಂದರ ನಗರಿ, ಆ ದೊರೆ, ಆ ಸಾಮಂತರು, ಆ ರಾಜನ ಪಕ್ಕದ ವಿದ್ವಾಂಸರ ಗೋಷ್ಠಿ, ಆ ಚಂದ್ರವದನೆಯರು, ಆ ಉದ್ಧತ ರಾಜಪುತ್ರರು, ಆ ವಂದಿಮಾಗಧರು, ಆ ಕಥೆಗಳು–ಎಲ್ಲವೂ ಯಾರ ದೆಸೆಯಿಂದ ಕೇವಲ ನೆನಪುಗಳಾದುವೋ ಆ ಕಾಲನಿಗೆ ನಮಸ್ಕಾರ).

ನಾವು ನಚ್ಚಿಕೊಂಡಿರುವ ಈ ಶರೀರ ಹೇಯವಾದುದು, ಕ್ಷಣಭಂಗುರವಾದುದು ; ಇದು ಎಂದಿದ್ದರೂ ಮೃತ್ಯುವಿಗೆ ತುತ್ತಾಗಲೇಬೇಕು. ಇದನ್ನು ರಕ್ಷಿಸಿಕೊಳ್ಳುತ್ತೇವೆ ಎನ್ನುವುದು ಮರುಳ್ತನ ಈ ತಥ್ಯವನ್ನು ಒಂದು ಸ್ವಾರಸ್ಯಯುತವಾದ ದೃಷ್ಟಾಂತದ ಮೂಲಕ ಸ್ಪಷ್ಟಪಡಿಸುತ್ತದೆ ಈ ಸುಭಾಷಿತ :

ಸಾವು ನಗುವುದು ದೇಹರಕ್ಷಕನ ಕಂಡು ;
ಧನರಕ್ಷಕನ ಕಂಡು ನಗೆ ವಸುಂಧರೆಗೆ ;
ಮಕ್ಕಳಲಿ ವಾತ್ಸಲ್ಯದಳೆದ ಗಂಡನನು
ಕಂಡು ನಗುವಳು ದುಶ್ಚರಿತೆಯಾದ ಹೆಣ್ಣು

ಮೃತ್ಯು ಯಾರನ್ನೂ ಬಿಡುವುದಿಲ್ಲ ; ನಿಜವಾದ ಸಮತಾವಾದಿ ಯಮನೊಬ್ಬನೇ. ಮಕ್ಕಳು, ತರುಣರು, ವೃದ್ಧರು ಎನ್ನದೆ ಎಲ್ಲರನ್ನೂ ವಿಧಿ ಬಲಿತೆಗೆದುಕೊಳ್ಳುತ್ತದೆಂಬ ದಿಟವನ್ನು ನಾಗಚಂದ್ರ ಕವಿ ಗಿಡಮರಗಳ ಹಾಗೂ ಮದ್ದಾನೆಯ ರೂಪಕಗಳಿಂದ ಪ್ರಕಟಿಸುತ್ತಾನೆ

ಯುವ ಸಪ್ತಚ್ಛದಮುಂ ವಯಃಪರಿಣತಶ್ರೀಖಂಡಮುಂ ಬಾಳಶಾ
ಳಿವನ ಶ್ರೇಣಿಗಳಂ ಪಡಲ್ವಡಿಸಿ ನಾನಾ ದೇಹಭೂಜಂಗಳಂ
ಕವಳಂಗೊಂಡು ಕಲಂಕಿದತ್ತು ಪಲವುಂ ಪಾತಾಳಕಾಸಾರಮುಂ
ಭವಕಾಂತಾರದೊಳದ್ಭುತಂ ವಿಧಿಮದೋನ್ಮತ್ತೇಭವಿಕ್ರೀಡಿತಂ

"ಜಾತಸ್ಯ ಮರಣಂ ಧ್ರುವಂ" (ಹುಟ್ಟಿದವನಿಗೆ ಸಾವು ತಪ್ಪದು) ಎಂಬ ಮಾತು ಸುಪರಿಚಿತ. ಇದನ್ನೆ ಹರ್ಷಕವಿ ಕಾವ್ಯಾತ್ಮಕವಾಗಿ ಹೇಳುತ್ತಾನೆ :

ಹುಟ್ಟಿದಾಗಲೆ ಬಂದು ಮಗುವನು ತಬ್ಬಿಕೊಳ್ಳುವುದನಿತ್ಯತೆ ;
ಬಳಿಕ ತಾಯಪ್ಪುವಳು ದಾದಿಯು ತೆರದಿ—ಶೋಕಿಪುದೇತಕೆ ?

ವಾಸ್ತವವಾಗಿ ಮೃತ್ಯುವೆ ನಮ್ಮ ತಾಯಿ ; ನಾನು ತಾಯಿ ಎಂದು ತಿಳಿಯತಕ್ಕವಳು ದಾದಿ ಮಾತ್ರ.

ಇವೆಲ್ಲ ಸರಿ. ಯಾವುದೂ ಶಾಶ್ವತವಲ್ಲ ನಿಜ. ಹಾಗಾದರೆ ಏನು ಮಾಡಬೇಕು? ಎಲ್ಲರೂ ಸಂಸಾರವನ್ನು ತ್ಯಜಿಸಿ ಕಾಡಿಗೆ ಹೋಗುವುದು ಸಾಧ್ಯವೆ ಅಥವಾ ಸಾಧುವೆ? ಆಗ ಕಾಡು ತಾನೆ ಎಲ್ಲಿದೆ? ಆದ್ದರಿಂದ, ದಾಸರು ಹೇಳಿದಂತೆ, "ಈಸ ಬೇಕು ಇದ್ದು ಜೈಸಬೇಕು" ನಾವು ಮಾಡಬಹುದಾದದ್ದು ಇಷ್ಟೆ: ಪುರುಷಾರ್ಥಗಳಲ್ಲಿ ಧರ್ಮ ಪ್ರಧಾನವೆಂದು ಭಾವಿಸಿ, ಅದನ್ನು ಆಚರಿಸುವುದು; ಧರ್ಮಕ್ಕೆ ವಿರುದ್ಧವಾಗದ ರೀತಿಯಲ್ಲಿ ಅರ್ಥ, ಕಾಮಗಳನ್ನು ಅನುಭವಿಸುವುದು; ತನ್ಮೂಲಕ, ಸಾಧ್ಯವಾದಮಟ್ಟಿಗೆ ಇಹಪರಗಳ ಸಮನ್ವಯವನ್ನು ಸಾಧಿಸುವುದು. ಸುಖ ಬೇಡವೆಂದಲ್ಲ; ಆದರೆ ಧರ್ಮವನ್ನು ಮರೆಯಕೂಡದು. ಬದುಕಿನ ಈ ಗುಟ್ಟನ್ನು ಅರ್ಥಗರ್ಭಿತವಾಗಿ ಅರುಹುವ ಸುಭಾಷಿತವೊಂದಿದೆ:

ಮುಪ್ಪು ಸಾವುಗಳು ತನಗಿಲ್ಲವೆನುವಂತೆ
ವಿದ್ಯೆ ಧನಗಳ ಪ್ರಾಜ್ಞ ಚಿಂತಿಸಲುಬೇಕು
ಮೃತ್ಯು ಕೇಶವ ಹಿಡಿದು ಎಳೆವುದೆನುವಂತೆ
ಬದುಕಿನಲಿ ಧರ್ಮವನು ಆಚರಿಸಬೇಕು

ಇದನ್ನು ಹೇಳುವುದೇನೊ ಸುಲಭ; ಆದರೆ ಅನುಷ್ಠಾನಕ್ಕೆ ತರುವುದು ಕಷ್ಟ. ಸಾವು, ದುಃಖ ಮುಂತಾದುವೆಲ್ಲ ಬೇರೆಯವರಿಗೆ, ನಮಗಲ್ಲ ಎಂದೇ ತಿಳಿಯುತ್ತೇವೆ–ನಮಗೇ ಅವು ಬರುವತನಕ. ಈ ಸೂಕ್ತಿರತ್ನವನ್ನು ಪರಿಭಾವಿಸಬಹುದು.

ದಿನದಿನವು ಪ್ರಾಣಿಗಳು ಅಂತಕಾಲಯವನು ಪ್ರವೇಶಿಸುತ್ತಿಹವು;
ಉಳಿದವರು ನಿತ್ಯತೆಯನೆಳಸುವರು. ಇದಕಿಂತ ಚೋದ್ಯವಿನ್ನೇನು ?

ಹೌದು ಇದಕ್ಕಿಂತ ಸೋಜಿಗ ಇನ್ನಾವುದಿದೆ? ಇದಕ್ಕಲ್ಲವೇ ಮಾಯೆ ಎನ್ನುವುದು?

೫. 'ಸಂಭವಾಮಿ ಯುಗೇ ಯುಗೇ': ಉಪನಿಷತ್ತಿನ ಈ ಪ್ರಾರ್ಥನೆ ಆದಿಕಾಲದ ಸಮಸ್ತ ಮನುಕುಲದ ಪ್ರಾರ್ಥನೆಯೂ ಅಹುದು:

ಅಸತೋಮಾ ಸದ್ಗಮಯ
ತಮಸೋಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂಗಮಯ

(ಅಸತ್ತಿನಿಂದ ಸತ್ತಿಗೆ, ಕತ್ತಲೆಯಿಂದ ಬೆಳಕಿಗೆ, ಸಾವಿನಿಂದ ಅಮರತೆಗೆ ಕರೆದೊಯ್ಯಿ)

ಮನಃಪೂರ್ವಕವಾದ ಪ್ರಾರ್ಥನೆ ಹಾರೈಕೆಗಳು ಫಲಿಸದಿರುವುದಿಲ್ಲ. ಮಾನವೇತಿಹಾಸದ ಸುದೀರ್ಘಪಥವನ್ನು ಅವಲೋಕಿಸಿದಾಗ, ಅಸತ್ತಿನಿಂದ ಸತ್ತಿನೆಡೆಗೆ, ತಮಸ್ಸಿನಿಂದ ಜ್ಯೋತಿಯೆಡೆಗೆ, ಮೃತ್ಯುವಿನಿಂದ ಅಮೃತತ್ತ್ವದೆಡೆಗೆ ನರನ ಯಾತ್ರೆ ಮಂದಗತಿಯಲ್ಲಾದರೂ ನಡೆದಿರುವುದು ಕಂಡುಬರುತ್ತದೆ. ಎಂತಲೇ ಇಂದು ಮನುಜವರ್ಗದ ಸ್ಥಿತಿಗತಿಗಳು ಹಿಂದಿನ ಕಾಲದಲ್ಲಿ ಇದ್ದುದಕ್ಕಿಂತ ಉತ್ತಮವಾಗಿವೆ ಎಂದು ಧಾರಾಳವಾಗಿ ಹೇಳಬಹುದು. ಈಗ ಕಾಲ ಕೆಟ್ಟುಹೋಗಿದೆ, ಹಿಂದಿನ ಕಾಲವೇ ಚೆನ್ನಾಗಿತ್ತು ಎಂದು ಗೊಣಗುವವರು ಇರಬಹುದು; ಅವರ ಮಾತಿನಲ್ಲಿ ಅಷ್ಟಿಷ್ಟು ಸತ್ಯಾಂಶವೂ ಇದ್ದೀತು. ಆದರೂ ಒಟ್ಟಿನಲ್ಲಿ ತೌಲನಿಕವಾಗಿ ನೋಡಿದಾಗ ಇವು ಒಳ್ಳೆಯ ದಿನಗಳು, ಇದು ಪ್ರಗತಿಪರವಾದ ಕಾಲ ಎಂಬುವರಲ್ಲಿ ಸಂದೇಹವಿಲ್ಲ.

ಸರ್ವೋದಯ ಇಂದಿನ ಯುಗಧರ್ಮ; ಎಲ್ಲರೂ, ಎಲ್ಲವೂ ಉದ್ಧಾರಗೊಳ್ಳಬೇಕು ಎಂಬುದು ಇಂದಿನ ಅಭೀಪ್ಸೆ. ಈ ಶತಮಾನದ ಮಹಾಕಾವ್ಯ ಕನ್ನಡದ 'ಶ್ರೀ ರಾಮಾಯಣದರ್ಶನಂ' ಈ ಯುಗಧರ್ಮವನ್ನು ಅಮೋಘವಾಗಿ ಪ್ರತಿಮಿಸುತ್ತದೆ; "ಪಾಪಿಗುದ್ಧಾರಮಿಹುದಾ ಸೃಷ್ಟಿಯ ಮಹದ್‌ವ್ಯೂಹರಚನೆಯೊಳ್" ಎಂಬ

ಮಾತಿನಲ್ಲಿ ಆ ಯುಗಧರ್ಮ ವಾಸ್ಯವಾಗಿಯೂ ಅಭಿವ್ಯಕ್ತಿಗೊಂಡಿದೆ. ಪಾಪಿಗಳಿಗೆ ಮಾತ್ರವಲ್ಲ, ದೀನದಲಿತರಿಗೂ ಉದ್ಧಾರ ಉತ್ಥಾನಗಳುಂಟು ಈ ಮನ್ವಂತರದಲ್ಲಿ ; ಇದು ತತ್ತ್ವಮಾತ್ರವಾಗಿ ಉಳಿಯದೆ ಅನುಷ್ಠಾನ ರೂಪ ತಳೆದಿರುವುದನ್ನು, ತಳೆಯುತ್ತಿರುವುದನ್ನು ಎಲ್ಲೆಡೆ ನೋಡುತ್ತಿದ್ದೇವೆ. ಸರ್ವೋದಯ ಆಗಿಯೇಬಿಟ್ಟಿದೆಯೆಂದಲ್ಲ ; ಆ ನಿಟ್ಟಿನಲ್ಲಿ ದೃಢವಾದ ಹಜ್ಜೆಗಳನ್ನು ಗುರುತಿಸುವುದು ಸಾಧ್ಯ. ಆದ್ದರಿಂದ ಪರಿಪೂರ್ಣವಾದ ಸರ್ವೋದಯ ಸರ್ವೋದ್ಧಾರಗಳು ಮುಂದೆ ಸಿದ್ಧಿಸುತ್ತವೆ, ಕೆಟ್ಟುದು ಪೂರ್ತಿ ನಾಶಗೊಂಡು ಲೇಸು ನೆಲಸುತ್ತದೆ ಎನಿಸುವುದು ಸಹಜ.

ಆದರೆ ಈ ನಂಬಿಕೆಯನ್ನು ತುಸು ಅಲ್ಲಾಡಿಸುವಂತಿದೆ ಶ್ರೀಮದ್ಭಗವದ್ಗೀತೆಯ ಈ ವಾಣಿ :

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ
ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ (೪. ೭–೮)

(ಯಾವಾಗ ಧರ್ಮದ ಅವನತಿಯಾಗುವುದೋ, ಅಧರ್ಮದ ಉನ್ನತಿಯಾಗುವುದೋ ಆಗ ನಾನು ಅವತಾರ ಮಾಡುತ್ತೇನೆ. ಸಾಧುಗಳ ರಕ್ಷಣೆಗಾಗಿಯೂ ದುಷ್ಟರ ವಿನಾಶಕ್ಕಾಗಿಯೂ ಧರ್ಮದ ಸಂಸ್ಥಾಪನೆಗಾಗಿಯೂ ಪ್ರತಿ ಯುಗದಲ್ಲಿಯೂ ಅವತರಿಸುತ್ತೇನೆ.)

ಈ ಭಗವದ್‌ವಾಕ್ಯಗಳಲ್ಲಿರತಕ್ಕದ್ದು ಅಭಯವಾಣಿ ; ಇಲ್ಲಿ ಮೊಳಗುತ್ತಿರುವುದು ಭರವಸೆಯ ಕಹಳೆ–ನಿಜ. ಆದರೆ "ಸಂಭವಾಮಿ ಯುಗೇ ಯುಗೇ" ಎಂಬ ಮಾತನ್ನು ಚೆನ್ನಾಗಿ ಗಮನಿಸಿದಾಗ, ಕೆಲವು ಸಂಶಯಗಳು ಸೂಕ್ಷ್ಮವಾಗಿ ಕಾಡತೊಡಗುತ್ತವೆ. ಭಗವಂತ ಯುಗಯುಗದಲ್ಲೂ ಸಂಭವಿಸಬೇಕಾದರೆ, ಪ್ರತಿಯೊಂದು ಯುಗದಲ್ಲೂ ಅಂಥ ಸಂಭವದ ಆವಶ್ಯಕತೆ ಇರುತ್ತದೆ ಎಂಬುದು ಇದರ ಅರ್ಥವೇ ? ಎಂದರೆ, ಯುಗಯುಗದಲ್ಲೂ ಧರ್ಮಗ್ಲಾನಿಯಾಗುತ್ತಲೆ ಇರುತ್ತದೆಯೆ ? ಲೋಕಕ್ಕೆ ಸ್ಥಾಯಿಯಾದ ಉದ್ಧಾರವಿಲ್ಲವೆ ? ಕೆಟ್ಟದ್ದು ಸಂಪೂರ್ಣವಾಗಿ ಅಳಿದು ಒಳಿತು ಶಾಶ್ವತವಾಗಿ ಬೇರೂರುವುದಿಲ್ಲವೆ ? ಸರ್ವೋದಯ ನಿತ್ಯವಾಗಿ ಸಾಧಿತವಾಗುವುದಿಲ್ಲವೆ? ಸೂರ್ಯೋದಯ ಆಗಾಗ ಗ್ರಹಣಕ್ಕೆ ತುತ್ತಾಗುತ್ತಲೆ ಇರಬೇಕೆ ? ಯಾವುದೋ ಪ್ರಮಾಣದಲ್ಲಿ ಕೆಡುಕು, ಕತ್ತಲು ಸದಾ ಇರುತ್ತದೆಯೆ ? ನೆಳಲು–ಬೆಳಕುಗಳ ಆಟ ನಿರಂತರವಾಗಿ ಜರುಗುತ್ತಿರುತ್ತದೆಯೆ ? ಸದಸತ್ತುಗಳ ಹೋರಾಟವೆ ದೈವೀ ಲೀಲೆಯೆ ? ಎಂದಮೇಲೆ, ರಾಮರಾಜ್ಯ ಸ್ಥಾಪನೆ ಎಂಬುದು ಬರಿಯ ಕನಸೆ ?

ದೈವ ವಾಣಿಯೆ ಇಷ್ಟೆಲ್ಲ ಪ್ರಶ್ನೆಗಳಿಗೆ ಎಡೆಗೊಡುವಂತಿದೆ. ಆದರೆ ಇದೆಲ್ಲ ನಮ್ಮ ವೃಥಾ ಸಂಶಯವಿರಬಹುದು. ದೈವ ಸಂಕಲ್ಪವನ್ನು ಯಾರು ಬಲ್ಲರು ? ಶ್ರೀಕೃಷ್ಣ ಪರಮಾತ್ಮನೆ ಹೇಳಿದ್ದಾನೆ, "ಸಂಶಯಾತ್ಮಾ ವಿನಶ್ಯತಿ" ಎಂದು. ಆದ್ದರಿಂದ ಇಲ್ಲಿ ಸಲ್ಲದ ಸಂಶಯಗಳನ್ನು ಏಕೆ ತಲೆಯಲ್ಲಿ ಹೊಗಿಸಿಕೊಳ್ಳಬೇಕು ? "ನ ಮೇ ಭಕ್ತಃ ಪ್ರಣಶ್ಯತಿ" (ನನ್ನ ಭಕ್ತನಿಗೆ ನಾಶವಿಲ್ಲ), "ಯೋಗಕ್ಷೇಮಂ ವಹಾಮ್ಯಹಂ" (ಯೋಗಕ್ಷೇಮದ ಹೊಣೆ ನನ್ನದು) ಎಂಬ ಭಗವಂತನ ಭಾಷೆಯನ್ನು ಗಟ್ಟಿಯಾಗಿ ನಂಬೋಣ ! ಅದನ್ನವಾದ ಆಶಾವಾದದಿಂದ ಎಂದಿನಂತೆ ಪ್ರಾರ್ಥನೆ ಸಲ್ಲಿಸೋಣ ಆ ಪರಾಶಕ್ತಿಗೆ :

ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾಮೃತಂ ಗಮಯ

(ಮೈಸೂರು ಆಕಾಶವಾಣಿ ಸೌಜನ್ಯದಿಂದ)

ಡಾ. ಎನ್. ಎಸ್. ಅನಂತರಂಗಾಚಾರ್

ಪುರುಷಾರ್ಥ

'ಪುರುಷನ ಪ್ರಯೋಜನಕ್ಕಾಗುವುದು' ಎಂಬ ಅರ್ಥವನ್ನು ಪುರುಷಾರ್ಥ ಶಬ್ದ ಹೊಂದಿದೆ. ಈ ಶಬ್ದ ಸಾಂಖ್ಯದರ್ಶನದಲ್ಲಿ ಆರಂಭವಾಯಿತೆಂದು ಕಂಡುಬರುತ್ತದೆ. ಪ್ರಕೃತಿ ತನಗೋಸ್ಕರ ಯಾವ ವ್ಯಾಪಾರವನ್ನೂ ಮಾಡದೆ ಪುರುಷನಿಗಾಗಿ ವ್ಯಾಪಾರ ಮಾಡುವುದೆಂಬುದನ್ನು ತಿಳಿಸುವಾಗ ಪುರುಷಾರ್ಥಕ್ಕಾಗಿಯೂ ಪರಾರ್ಥಕ್ಕಾಗಿಯೂ ಅದು ಪ್ರವೃತ್ತವಾಗುವುದೆಂದು ಪ್ರತಿಪಾದಿಸಿದ್ದಾರೆ. 'ಪುರುಷಸ್ಯ ದರ್ಶನಾರ್ಥಂ ಕೈವಲ್ಯಾರ್ಥಂ ತಥಾ ಪ್ರಧಾನಸ್ಯ' ಎಂಬಲ್ಲಿಯೂ 'ಪುರುಷವಿಮೋಕ್ಷನಿಮಿತ್ತಂ ತಥಾ ಪ್ರವೃತ್ತಿಃ ಪ್ರಧಾನಸ್ಯ' ಎಂಬಲ್ಲಿಯೂ ಈ ಅಂಶವನ್ನು ಕಾಣಬಹುದು. ಮೊದಲು ಈ ಅರ್ಥವನ್ನು ಹೊಂದಿದ್ದ ರೂಪದ ಮುಂದೆ ಧರ್ಮಶಾಸ್ತ್ರ ಪುರಾಣಗಳಲ್ಲಿ ಬೇರೆ ಅರ್ಥದಲ್ಲಿ ಎಂದರೆ 'ಪುರುಷನು ಅರಸಿ ಸಾಧಿಸಬೇಕಾದುದು' ಎಂಬ ಅರ್ಥದಲ್ಲಿ ಬಳಸಲಾಗಿದೆ. ಮನುಷ್ಯನು ತನ್ನ ಜೀವನದಲ್ಲಿ ಸಾಧಿಸಬೇಕಾದುದನ್ನು ಇದು ಸಮಗ್ರವಾಗಿ ಸೂಚಿಸುತ್ತದೆ. ಮನುಷ್ಯನ ವ್ಯಕ್ತಿತ್ವದ ಪೂರ್ಣ ವಿಕಾಸ ಹಾಗೂ ಸಮಾಜದ ಮಂಗಳಕರವಾದ ಬೆಳವಣಿಗೆಗೆ ಕಾರಣವಾಗುವ ಚತುರ್ವಿಧ ಪುರುಷಾರ್ಥಗಳ ನಿರೂಪಣೆಗೆ ಇದು ಅವಕಾಶವನ್ನು ನೀಡಿದೆ. ವ್ಯಕ್ತಿಯು ಜೀವನ ಪರಿಶುದ್ಧವಾಗಿ ಉನ್ನತವಾದಂತೆಲ್ಲಾ ಸಮಾಜದ ಅಭಿವೃದ್ಧಿಯೂ ಜೊತೆಜೊತೆಯಲ್ಲಿಯೇ ಆಗುತ್ತದೆ. ವ್ಯಕ್ತಿಜೀವನ ಮತ್ತು ಸಮಾಜಜೀವನ ಇವುಗಳಲ್ಲಿ ಪರಿಪೂರ್ಣವಾದ ಸಮನ್ವಯವನ್ನು ಸಾಧಿಸುವ ಅಂಶಗಳನ್ನು ಅತಿ ಪ್ರಾಚೀನವಾದ ವೇದಗಳಲ್ಲಿ ಸೂಚಿಸಿದೆ.

ಕಾರ್ಯಾಕಾರ್ಯ ವಿವೇಚನೆಯ ಶಕ್ತಿಯನ್ನು ಹೊಂದಿರುವ ಪುರುಷನಿಗೆ ಮುಖ್ಯವಾಗಿ ಇದು ಅನ್ವಯಿಸುತ್ತದೆ. ಮನುಷ್ಯನು ತನ್ನ ಮುಂದಿರುವ ಸಮಸ್ಯೆಗಳನ್ನು ಎದುರಿಸುವ ಸಮಗ್ರವಾದ ಒಂದು ಕ್ರಮವನ್ನು ಇದು ಪ್ರತಿಬಿಂಬಿಸುತ್ತದೆ. ಮನುಷ್ಯನಿಗೆ ದೇಹವಿದೆ, ಮನಸ್ಸಿದೆ ಮತ್ತು ಅವಿನಾಶಿಯಾದ ಆತ್ಮವಿದೆ. ಇವೆಲ್ಲದರ ಸಮನ್ವಯವನ್ನು ಸಾಧಿಸಿ ಪರಿಪೂರ್ಣವಾದ ವಿಕಾಸವನ್ನು ಸಾಧಿಸುವ ಉದ್ದೇಶವನ್ನು ಪುರುಷಾರ್ಥದ ತತ್ವ ಹೊಂದಿದೆ. ಮನುಷ್ಯನು ಇವುಗಳ ಮಹತ್ವವನ್ನರಿತು ಬುದ್ಧಿಪೂರ್ವಕವಾಗಿ ಪ್ರಯತ್ನಿಸಿ ಇವುಗಳನ್ನು ಸಾಧಿಸಬೇಕಾಗಿದೆ. ಮನುಷ್ಯನು ಪೂರ್ಣ ಮನುಷ್ಯನಾಗಲೂ ಆದರ್ಶವ್ಯಕ್ತಿಗಳ ಸಮಾಜವು ಉದಯಿಸಲೂ ಆವಶ್ಯಕವಾದುದೇನೆಂಬುದನ್ನು ನಮ್ಮ ಪ್ರಾಚೀನರಾದ ಋಷಿಗಳು ಯೋಚಿಸಿ ನಿರೂಪಿಸಿದ್ದಾರೆ. ಮನುಷ್ಯನಲ್ಲಿನ ಮತ್ತೊಂದು ಮುಖವನ್ನೂ ಎಂದರೆ ಪಾಶವೀಸ್ವಭಾವವನ್ನೂ ಮತ್ತು ಭೌತಿಕಪರಿಸ್ಥಿತಿಯ ಮೇಲಿನ ಅವನ ಅವಲಂಬನೆಯನ್ನೂ ಅವರು ಅರಿತಿದ್ದರು. ಆದುದರಿಂದ ಅಪೇಕ್ಷಿತವಾದ ಗುಣಗಳನ್ನು ಸಾಧಿಸಲು ವಿಧಿಸಿರುವಂತೆ ಅನಪೇಕ್ಷಿತವಾದ ಪ್ರವೃತ್ತಿಗಳನ್ನು ತಡೆಯಲೂ ಅವರು ಬೋಧಿಸಿದರು.

ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಈ ನಾಲ್ಕು ಪುರುಷಾರ್ಥಗಳಲ್ಲಿ ಮೋಕ್ಷವು ಸರ್ವೋನ್ನತವಾದುದೆಂಬುದರಲ್ಲಿ ಸಂಶಯವೇ ಇಲ್ಲ. ತ್ರಿವರ್ಗವನ್ನು ಎಂದರೆ ಧರ್ಮ ಅರ್ಥ ಮತ್ತು ಕಾಮಗಳನ್ನು ಯುಕ್ತವಾಗಿ ಸಾಧಿಸಿದರೆ ಅದು ಅವನನ್ನು ಮೋಕ್ಷದ ಕಡೆಗೆ ತಾನೇ ಒಯ್ಯುವುದೆಂದು ನಮ್ಮ ಪ್ರಾಚೀನರು ತಿಳಿದಿದ್ದರು. ಶರೀರದ ಬೆಳವಣಿಗೆ, ಆರೋಗ್ಯ ಮತ್ತು ಸುಸ್ಥಿತಿ ಧರ್ಮಕ್ಕೆ ಮೊದಲ ಸಾಧನವೆಂದು ತಿಳಿಸಿದ್ದಾರೆ. ಪ್ರಾಣಿಗಳಿಗೂ ಮನುಷ್ಯನಿಗೂ ಸಮಾನವಾಗಿರುವ ಹಸಿವು ಬಾಯಾರಿಕೆಗಳನ್ನು ಮೊದಲು ನಿವಾರಿಸಿಕೊಳ್ಳಬೇಕು. ಮನುಷ್ಯನು ಬುದ್ಧಿಪೂರ್ವಕವಾಗಿ ಇವುಗಳನ್ನು ಸಾಧಿಸಲು ಯತ್ನಿಸುತ್ತಾನೆ. ಮೋಕ್ಷವು ಸರ್ವೋನ್ನತವಾದುದಾದರೂ ಧರ್ಮಕ್ಕೆ ಜೀವನದಲ್ಲಿ ಬಹಳ ಮುಖ್ಯವಾದ ಸ್ಥಾನವಿದೆ. 'ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ'—ಪ್ರಪಂಚವನ್ನು ಒಂದುಗೂಡಿಸಿ ಚರಾಚರವಸ್ತುಗಳೆಲ್ಲದರ ನಡತೆಯನ್ನು ರೂಪಿಸುವುದು ಧರ್ಮವೇ. ಋಗ್ವೇದದಲ್ಲಿ ಧರ್ಮದ ಮೂಲವನ್ನು ಋತದಲ್ಲಿ ಕಾಣಬಹುದು. ಋತ ವಿಶ್ವಸಾಮರಸ್ಯಕ್ಕೆ ಕಾರಣ. ಅದು ನಿತ್ಯವಾದುದು. ಜಗತ್ತನ್ನು ಅದು ಆಳುವುದು. ಜನರೆಲ್ಲರ ನಡತೆಯನ್ನು ರೂಪಿಸುವುದದು. ಋತವೇ ಬ್ರಹ್ಮ; ಸತ್ಯ, ವ್ರತ, ಧರ್ಮ—ಇವು ಅದರ ಮುಖಗಳು.

> ಋತಸ್ಯ ಹಿ ಶುರುಧಃ ಸಂತಿ ಪೂರ್ವೀಃ
> ಋತಸ್ಯ ಧೀತಿರ್ವೃಜಿನಾನಿ ಹಂತಿ ।
> ಋತಸ್ಯ ಶ್ಲೋಕೋ ಬಧಿರಾ ತತರ್ದ
> ಕರ್ಣಾ ಬುಧಾ ನಃ ಶುಚಮಾನ ಆಯೋಃ ॥ (ಋ. ಸಂ. IV–23–8)

ಈ ಮಂತ್ರದಲ್ಲಿ ಋತಕ್ಕೆ ಅನೇಕ ಶಕ್ತಿಗಳಿವೆಯೆಂದೂ ಅದನ್ನು ಧ್ಯಾನಿಸುವುದರಿಂದ ಪಾಪಗಳು ಹೋಗುವುವೆಂದೂ ಅದರ ಪ್ರಶಂಸೆಯು ಜೀಕು ನೀಡಿ ಕಿವುಡಾದ ಕಿವಿಗಳನ್ನು ತೆರೆಯುವುದೆಂದೂ ಹೇಳಿದೆ.

ಭಗವಂತನ ನಿಯಮವೇ ಋತವೆಂದು ಹೇಳಿದೆ. ಆ ವಿಶ್ವನಿಯಮವನ್ನು ಎಲ್ಲ ದೇವತೆಗಳೂ ಪಾಲಿಸುತ್ತಾರೆಂದೂ ಹೇಳಿದೆ. ಲೋಕದಲ್ಲಿರುವ ಸಕಲ ಜೀವರಾಶಿಗಳನ್ನೂ ಅನೇಕಾನೇಕ ರೂಪಗಳಲ್ಲಿ ಧರಿಸಿರುವುದು ಋತವೇ. ಲೋಕವ್ಯವಹಾರಕ್ಕೆ ಧರ್ಮವೇ ಕಾರಣ. 'ಅಯಂ ಧರ್ಮಃ ಸರ್ವೇಷಾಂ ಭೂತಾನಾಂ ಮಧು' ಎನ್ನುವ ಬೃಹದಾರಣ್ಯಕ, ಈ ಧರ್ಮವು ಎಲ್ಲ ಪ್ರಾಣಿಗಳಿಗೂ ಹಿತಕರವಾದುದೆಂದು ತಿಳಿಸುತ್ತದೆ. ಇದರ ಮಾರ್ಗವೇ 'ಋತಸ್ಯ ಪಂಥಾಃ'.

ಧರ್ಮವನ್ನು ಅನುಷ್ಠಿಸುವುದೆಂದರೆ ಎಲ್ಲ ವಸ್ತುಗಳಲ್ಲಿಯೂ ನೆಲೆಸಿರುವ ಆ ವಿಶ್ವಾತ್ಮನನ್ನು ಕಾಣುವುದು. ವಿಶ್ವಪ್ರೇಮದ ಸಂಕೇತ ಇದು. ಅದಕ್ಕೇ

> ಯಸ್ಮಿನ್ಸರ್ವಾಣಿ ಭೂತಾನಿ ಆತ್ಮೈವಾ ಭೂದ್ವಿಜಾನತಃ ।
> ತತ್ರ ಕೋ ಮೋಹಃ ಕಃ ಶೋಕಃ ಏಕತ್ವಮನುಪಶ್ಯತಃ ॥

ಎಂದು ಈಶಾವಾಸ್ಯ ಹೇಳುವುದು.

ನಿಜವಾದ ಧರ್ಮವೆಂದರೆ ಯಾರಿಗೂ ದ್ರೋಹ ಮಾಡದಿರುವುದು. ಎಲ್ಲರಲ್ಲಿಯೂ ಅನುಕಂಪೆಯನ್ನು ತೋರುವುದು. ಎಲ್ಲರ ಹಿತವನ್ನು ಸಾಧಿಸುವುದು. ಮಾತು, ಮನಸ್ಸು ಮತ್ತು ಕ್ರಿಯೆಯಲ್ಲಿ ಸರ್ವಭೂತಗಳ ಒಳ್ಳೆಯದನ್ನು ಎಣಿಸುವುದು. ಮಹಾಭಾರತ ಶಾಂತಿಪರ್ವದಲ್ಲಿ ಧರ್ಮಾಚರಣೆಯ ರೀತಿಯನ್ನು ಮುಂದೆ ಕಂಡಂತೆ ಹೇಳಿದೆ :

> ಯೇ ದಂಭಾನ್ನಾಚರಂತಿಸ್ಮ ಯೇಷಾಂ ವೃತ್ತಿಶ್ಚ ಸಂಯತಾ ।
> ವಿಷಯಾಂಶ್ಚ ನಿಗೃಹ್ಣಂತಿ ದುರ್ಗಾಣ್ಯತಿತರಂತಿ ತೇ ॥
> ಪ್ರತ್ಯಾಹುರ್ನೋಚ್ಯಮಾನಾ ಯೇ ನ ಹಿಂಸಂತಿ ಚ ಹಿಂಸಿತಾಃ ।
> ಪ್ರಯಚ್ಛಂತಿ ನ ಯಾಚಂತೇ ದುರ್ಗಾಣ್ಯತಿತರಂತಿ ತೇ ॥

ನಾಶಯಂತ್ಯತಿಥೀನ್ನಿತ್ಯಂ ನಿತ್ಯಂ ಯೇ ಚಾನಸೂಯಕಾಃ |
ನಿತ್ಯಂ ಸ್ವಾಧ್ಯಾಯಶೀಲಾಶ್ಚ ದುರ್ಗಾಣ್ಯತಿತರಂತಿ ತೇ ||

ಯೇ ನಾ ಪಾಪಂ ನ ಕುರ್ವಂತಿ ಕರ್ಮಣಾ ಮನಸಾ ಗಿರಾ |
ನಿಕ್ಷಿಪ್ತದಂಡಾಭೂತೇಷು ದುರ್ಗಾಣ್ಯತಿತರಂತಿ ತೇ ||

ಯೇ ವದಂತೀಹ ಸತ್ಯಾನಿ ಪ್ರಾಣತ್ಯಾಗೇಽಪ್ಯುಪಸ್ಥಿತೇ
ಪ್ರಮಾಣಭೂತಾ ಭೂತಾನಾಂ ದುರ್ಗಾಣ್ಯತಿತರಂತಿ ತೇ ||

ಯೇ ಚ ಸಂಶಾಂತರಜಸಃ ಸಂಶಾಂತತಮಸಶ್ಚ ಯೇ |
ಸತ್ತ್ವೇ ಸ್ಥಿತಾ ಮಹಾತ್ಮಾನೋ ದುರ್ಗಾಣ್ಯತಿರತಂತಿ ತೇ||

ಸರ್ವಾನ್ ದೇವಾನ್ ನಮಸ್ಯಂತಿ ಸರ್ವಧರ್ಮಾಂಶ್ಚ ಶೃಣ್ವತೇ |
ಯೇ ಶ್ರದ್ಧಧಾನಾಃ ಶಾಂತಾಶ್ಚ ದುರ್ಗಾಣ್ಯತಿತರಂತಿ ತೇ ||

ಯೇ ಕ್ರೋಧಂ ಸಂನಿಯಚ್ಛಂತಿ ಕ್ರುದ್ಧಾನ್ ಸಂಶಮಯಂತಿ ಚ |
ನ ಚ ಕುಪ್ಯಂತಿ ಭೂತಾನಾಂ ದುರ್ಗಾಣ್ಯತಿತರಂತಿ ತೇ ||

ಈಶ್ವರಂ ಸರ್ವಭೂತಾನಾಂ ಜಗತಃಪ್ರಭವಾಪ್ಯಯಂ |
ಭಕ್ತಾ ನಾರಾಯಣಂ ದೇವಂ ದುರ್ಗಾಣ್ಯತಿತರಂತಿ ತೇ ||

ಯಾವುದು ಅಹಿಂಸೆಯಿಂದ ಕೂಡಿದೆಯೋ ಅದು ಧರ್ಮವೆಂದು 'ಯಃ ಸ್ಯಾದಹಿಂಸಾಸಂಯುಕ್ತಃ ಸ ಧರ್ಮ ಇತಿ ನಿಶ್ಚಯಃ' ಎಂಬಲ್ಲಿ ವೇದವ್ಯಾಸರು ಹೇಳಿದ್ದಾರೆ.

ಈ ವಿಧವಾದ ಧರ್ಮಾನುಷ್ಠಾನ ಮೋಕ್ಷದ ಕಡೆಗೆ ಕರೆದೊಯ್ಯುವುದರಲ್ಲಿ ಸಂಶಯವೇನಿದೆ ? ನೀತಿ ಯುಕ್ತವಾದ ನಡತೆ ಧರ್ಮವೆಂದು ಮನು ಹೇಳುತ್ತಾನೆ.

ಧೃತಿಃಕ್ಷಮಾದಮೋಽಸ್ತೇಯಂ ಶೌಚಮಿಂದ್ರಿಯನಿಗ್ರಹಃ |
ಧೀರ್ವಿದ್ಯಾಸತ್ಯಮಕ್ರೋಧೋ ದಶಕಂ ಧರ್ಮಲಕ್ಷಣಂ |

ತೈತ್ತಿರೀಯ ಉಪನಿಷತ್ತು 'ಸತ್ಯಂ ವದ; ಧರ್ಮಂ ಚರ' ಎಂದು ಉಪದೇಶಿಸುತ್ತದೆ. ಪೂರ್ವಮೀಮಾಂಸಾಶಾಸ್ತ್ರದಲ್ಲಿ 'ಚೋದನಾಲಕ್ಷಣಾರ್ಥೋ ಧರ್ಮಃ' ಎಂದು ಹೇಳಿ ವೇದದಲ್ಲಿ ಹೇಳಿರುವ ವಿಧಿಗಳನ್ನು ಅನುಷ್ಠಿಸಿ ಪಡೆಯಬಹುದಾದ ಪ್ರಯೋಜನವೆಂದು ಹೇಳುತ್ತದೆ. ಧರ್ಮವು ವ್ಯಕ್ತಿಗೂ ಸಮಾಜಕ್ಕೂ ನಿಕಟವಾಗಿ ಸಂಬಂಧಿಸಿದೆ. ಆದುದರಿಂದ ವರ್ಣಧರ್ಮ, ಆಶ್ರಮಧರ್ಮ, ವರ್ಣಾಶ್ರಮಧರ್ಮ, ಗುಣಧರ್ಮ, ನೈಮಿತ್ತಿಕಧರ್ಮ ಮತ್ತು ಸಾಮಾನ್ಯಧರ್ಮ ಎಂಬ ಆರು ಬಗೆಯ ಧರ್ಮಗಳನ್ನು ಧರ್ಮಶಾಸ್ತ್ರಕಾರರು ನಿರೂಪಿಸಿದ್ದಾರೆ. ಇವರ ಜೊತೆಗೆ ಕುಲ, ದೇಶ, ಜಾತಿ, ಶ್ರೇಣೀ, ಸಂಘ, ಗ್ರಾಮ, ಆಚಾರ ಮತ್ತು ವ್ಯವಹಾರಧರ್ಮಗಳನ್ನು ವರ್ಣಿಸಿದ್ದಾರೆ. ಸಮಾಜದ ಅಭಿವೃದ್ಧಿಗೆ ಧರ್ಮಾನುಷ್ಠಾನ ಆವಶ್ಯಕ.

ಲೋಕದಲ್ಲಿ ಬಾಳಬೇಕೆಂಬ ಬಯಕೆ, ಬೆಳೆಯಬೇಕೆಂಬ ಹಂಬಲ ಕಾಮದ ಮೂಲ. ಎಲ್ಲ ಆಸೆಗಳ ಮೂಲ ಕಾಮ. ಎಲ್ಲ ಬಗೆಯ ಜೀವನ ಸುಖಗಳಿಗೂ ಅವುಗಳನ್ನು ಪಡೆಯಬೇಕೆಂಬ ನಿರ್ಧಾರಗಳಿಗೂ ಕಾಮ ತಾಯಿಬೇರು. ಮಾನವ ಸಮಾಜದ ನಿರಂತರವಾದ ಮುಂದುವರಿಕೆಗೆ ಆವಶ್ಯಕವಾದುದು ಕಾಮ. ಅರ್ಥ ಮತ್ತು ಕಾಮಗಳು ಮಾನವನ ಅಭ್ಯುದಯಕ್ಕೆ ಆವಶ್ಯಕ. ಆದರೆ ಇವುಗಳು ಅನೇಕ ಅಪಾಯಗಳನ್ನೊಳಗೊಂಡಿವೆ. ವೇದದಲ್ಲಿ 'ಅರ್ಥ' ಎಂಬ ಶಬ್ದವನ್ನು ಒಂದು ಪ್ರಯೋಜನ, ಐಶ್ವರ್ಯ ಎಂಬ ಅರ್ಥದಲ್ಲಿ ಬಳಸಿದೆ. ಐಶ್ವರ್ಯವಿಲ್ಲದೆ, ಹಣದ ಅನುಕೂಲವಿಲ್ಲದೆ ಧರ್ಮಾಚರಣೆ ಮಾಡುವುದೂ ಕಷ್ಟ. ಅದಕ್ಕಾಗಿ ಅರ್ಥಸಂಗ್ರಹ ಆಗಬೇಕು. ದೀರ್ಘವಾದ ಜೀವನವನ್ನು, ಚಿನ್ನ, ಪಶುಸಂಪತ್ತು, ಸತ್ಸಂತಾನ, ಪತ್ನಿಯರು ಮತ್ತು ಇನ್ನೂ ಅನೇಕ ಪ್ರಯೋಜನಗಳನ್ನು ಋಷಿಗಳು ಬೇಡಿದ್ದಾರೆ. ಇವುಗಳನ್ನೆಲ್ಲಾ ಅವರು ಬೇಡಿರುವುದು ದೇವರಿಂದಲೇ.

ಪ್ರಾಮಾಣಿಕವಾದ ರೀತಿಯ ದುಡಿಮೆಯಿಂದ, ಸ್ವಂತ ಪ್ರಯತ್ನದಿಂದ ಇವುಗಳನ್ನು ಪಡೆಯಲಿಚ್ಛಿಸಿದ್ದಾರೆ. ಈ ಅರ್ಥವು ಧರ್ಮದ ಆಚರಣೆಗೆ ಸಹಾಯವಾಗಬೇಕು. ಋಗ್ವೇದದಲ್ಲಿ 'ತ್ವಂ ದೇಹಿ ಸಹಸ್ರಿಣಂ ರಯಿಂ ಅದ್ರೋಘೇಣ ವಚಸಾ ಸತ್ಯಂ ಅಗ್ನೇ', 'ಇಂದ್ರ ಶ್ರೇಷ್ಠಾನಿ ದ್ರವಿಣಾನಿ ದೇಹಿ', 'ಪರಿಚಿನ್ಮರ್ತೋ ದ್ರವಿಣಂ ಮಮ ನ್ಯಾತ್ ಋತಸ್ಯ ಪಥಾ', ಎಂದು ಬೇಡಿ ಐಶ್ವರ್ಯದ ಜೊತೆಯಲ್ಲಿ ನೀತಿ ನಿಯಮವನ್ನೂ ಬೇಡಿದ್ದಾರೆ. 'ಮಾಹಂ ರಾಜನ್ ಅನ್ಯಕೃತೇನಭೋಜಂ' ಎಂಬಲ್ಲಿ ಇತರರನ್ನು ಆಶ್ರಯಿಸಿ ಉಪಜೀವಿಯಾಗದಂತೆ ಮಾಡಬೇಕೆಂದು ಕೇಳಿದ್ದಾರೆ. ಋಗ್ವೇದದಲ್ಲಿ ಬರುವ ದಾನಸ್ತುತಿಗಳು ಹಣದ ಸಂವಿಭಾಗಯುಕ್ತವಾಗಿ ಆಗಬೇಕೆಂಬುವುದನ್ನೂ ಸಮಾಜದಲ್ಲಿ ವಿಷಮತೆ ಇಲ್ಲದಿರಬೇಕೆಂಬುವುದನ್ನೂ ಸೂಚಿಸುತ್ತವೆ. 'ದೇವಾಭಾಗಂ ಯಥಾಪೂರ್ವೇ ಸಂಜಾನಾನಾ ಉಪಾಸತೇ' ಎಂಬಲ್ಲಿ ಐಶ್ವರ್ಯವನ್ನು ಸಮರಸವಾಗಿ ಹಂಚಿಕೊಂಡು ಎಲ್ಲರೂ ಅನುಭವಿಸಬೇಕೆಂದು ವಿಧಿಸಿದೆ. ಕುಟುಂಬ ಮತ್ತು ಆಸ್ತಿ ಇವುಗಳ ಕಲ್ಪನೆ ಋಗ್ವೇದದಲ್ಲಿ ಮೂಡಿಬಂದಿದೆ. ಆದರೆ ಇವುಗಳ ಅಭಿವೃದ್ಧಿ ಋತ, ವ್ರತ, ಧರ್ಮ ಮತ್ತು ಸತ್ಯ ಇವುಗಳ ಆಧಾರದ ಮೇಲೆ ಆಗಬೇಕೆಂದು ಖಚಿತವಾಗಿ ತಿಳಿಸಿದೆ. ಧನಸಂಪಾದನೆ ವಿಹಿತಕರ್ಮಗಳ ಅನುಷ್ಠಾನಕ್ಕಾಗಿ ; ಆ ಕರ್ಮಾನುಷ್ಠಾನದಿಂದ ಪಾಪವನ್ನು ಕಳೆದುಕೊಂಡು ಬ್ರಹ್ಮವಿದ್ಯೆಯ ಪ್ರಕಾಶವನ್ನು ಪಡೆಯುವುದಕ್ಕಾಗಿ. ತೈತ್ತಿರೀಯ ಭಾಷ್ಯದಲ್ಲಿ ಶಂಕರಾಚಾರ್ಯರು 'ಧನಂ ಚ ಕಾರ್ಮಾರ್ಥಂ. ಕರ್ಮ ಚ ಉಪಾತ್ತದುರಿತಕ್ಷಯಾರ್ಥಂ ತತ್ಕ್ಷಯೇ ಹಿ ವಿದ್ಯಾ ಪ್ರಕಾಶತೇ' ಎಂದು ವಿವರಿಸಿದ್ದಾರೆ. ವ್ಯಕ್ತಿ ಧನಸಂಪಾದನೆ ಮಾಡಿ ಆ ಧನದ ಮೂಲಕ ಸಮಾಜದ ಒಳಿತನ್ನು ಸಾಧಿಸಬೇಕೆಂಬ ಧ್ಯೇಯವಿಲ್ಲವೆ, ಆರ್ಥಿಕ ಸಮತೆಯನ್ನು ನಿರಹಂಕಾರ, ಸಮತಾ, ದಯೆ, ಅದ್ರೋಹ, ಅಸ್ತೇಯ, ತ್ಯಾಗ ಮತ್ತು ದಾನಗಳಿಂದ ಸಾಧಿಸುವ ಕ್ರಮವನ್ನು ಇಲ್ಲಿ ನಿರೂಪಿಸಿದ್ದಾರೆ. ವ್ಯಕ್ತಿಯ ಮತ್ತು ಸಮಾಜದ ಪ್ರಗತಿಗೆ ಸಹಾಯಕವಾಗುವುದು ಯಾವುದೋ ಅದು ಅರ್ಥ. ಇಲ್ಲದಿದ್ದರೆ ಆ ಐಶ್ವರ್ಯ ಅನರ್ಥವೇ ಸರಿ.

ಧರ್ಮದ ಆಧಾರವಿಲ್ಲದ ಕಾಮವೂ ಸಹ ಮನುಷ್ಯನ ಅನರ್ಥಕ್ಕೆ ಕಾರಣವಾಗುವುದು. ಈ ಶಬ್ದವನ್ನು ಅನೇಕಾರ್ಥಗಳಲ್ಲಿ ವೇದ ಬಳಸಿದೆ. ಆಸೆ, ಸ್ತ್ರೀ ಪುರುಷರ ಸಂಬಂಧ, ಬಾಳುವ ಹಂಬಲ, ಸೌಂದರ್ಯಾನುಭವ ಇದೆಲ್ಲವನ್ನೂ ವೇದದಲ್ಲಿ ಸೂಚಿಸಿದೆ. ಸೃಷ್ಟಿಕಾರಣವಾದ ಆ ಪರವಸ್ತುವನ್ನೇ ಅಥರ್ವವೇದದಲ್ಲಿ 'ಕಾಮ' ಎಂದು ಕರೆದಿದೆ. 'ಕಾಮಸ್ತದಗ್ರೇ ಸಮವರ್ತತ ಮನಸೋ ರೇತಃ ಪ್ರಥಮಂ ಯದಾಸೀತ್ । ಸ ಕಾಮಕಾಮೇನ ಬೃಹತಾ ಸ ಯೋನೀ ರಾಯಸ್ಪೋಷಂ ಯಜಮಾನಾಯ ಧೇಹಿ ॥' ಕಾಮರೂಪಿಯಾದ ಭಗವಂತನಿಂದ ಜಗತ್ತು ಹುಟ್ಟಿತು. ಕಾಮವೆಂಬುದು ಧರ್ಮ ಮತ್ತು ಶ್ರದ್ಧೆಗಳ ಶಿಶು. ಪ್ರೇಮ,ಮೈತ್ರಿ,ಭಕ್ತಿ, ಸೌಂದರ್ಯ, ನಿಷ್ಠೆ ಮೊದಲಾದುವೆಲ್ಲಕ್ಕೂ ಆಧಾರಭೂತವಾದುದು ಇದೇ. ಸಾಹಿತ್ಯ, ಕಲೆ, ಶಿಲ್ಪ, ಮೊದಲಾದವುಗಳ ಅಭಿವೃದ್ಧಿಗೆ ಇದು ಸಾಧಕ. ಕಾಮಕ್ಕೆ ಈ ಮಹತ್ವ ಇರುವಂತೆ ಅಪಾಯಕರವಾದ ಮತ್ತೊಂದು ಮುಖವೂ ಇದೆ. ಧರ್ಮರಹಿತವಾದ ಕಾಮವು ರಾಗ, ವಿಷಯಲೋಲುಪತೆ, ದುರಾಸೆ, ಅಸೂಯೆ, ದ್ವೇಷ, ಕೋಪ, ಭಯ ಮತ್ತಿತರ ದುಷ್ಟಶಕ್ತಿಗಳಿಗೆ ಕಾರಣವಾಗಿ ಮನುಷ್ಯನ ಅವನತಿಗೆ ಕಾರಣವಾಗುತ್ತದೆ. ಇಂದ್ರಿಯಗಳು ಮನುಷ್ಯನನ್ನು ತಪ್ಪುದಾರಿಗೆ ಎಳೆಯುವುವು ಎಂದು ಮತ್ತೆಮತ್ತೆ ಶ್ರುತಿಗಳೂ ಸ್ಮೃತಿಗಳೂ ಎಚ್ಚರಿಸುತ್ತಲೇ ಇವೆ.

> ಕ್ರತೂಯಂತಿ ಕ್ರತವಃ ಹೃತ್ಸ್ವಧೀಶಯಃ
> ವೇನಂತಿ ವೇನಾಃ ಪತಯಾತ್ಯಾದಿಶಃ

ಎಂದು ಋಗ್ವೇದದಲ್ಲಿ ಇದರ ಪ್ರಭಾವವನ್ನು ಹೇಳಿದೆ. 'ತ್ವಾಂ ಆಗಾಂಸಿ ಕೃಣವತ್ಸಖಾಂ' ಎಂದು ಹೇಳಿ 'ನಾನು ಪಾಪಮಾಡಿಬಿಟ್ಟದ್ದೇನೆ. ಅದನ್ನು ಕ್ಷಮಿಸು' ಎಂದೂ ಬೇಡಿದ್ದಾರೆ. ಕಾಮವನ್ನು ಕಿತ್ತುಹಾಕುವುದಕ್ಕಾಗುವುದಿಲ್ಲ. ಅವನ್ನು ಉದಾತ್ತಗೊಳಿಸಬೇಕು. 'ಪರಿತ್ಯಜೇದರ್ಥಕಾಮೌ ಯೌ ಸ್ಯಾತಾಂ ಧರ್ಮವರ್ಜಿತೌ'

ಎಂದು ಮನು ಎಚ್ಚರಿಕೆ ನೀಡಿದ್ದಾನೆ. 'ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ' ಎಂದು ಭಗವಂತ ಹೇಳಿಕೊಂಡಿದ್ದಾನೆ.

ಮೇಲೆ ನಿರೂಪಿಸಿದ ಈ ಮೂರೂ ತ್ರಿವರ್ಗವೆನಿಸಿ ಪರಮ ಪುರುಷಾರ್ಥವಾದ ಮೋಕ್ಷಕ್ಕೆ ಸಾಧಕವಾಗುತ್ತವೆ. ಮಾನವನ ಪರಮ ಪುರುಷಾರ್ಥ ಆತ್ಮಸಾಕ್ಷಾತ್ಕಾರ ಅಥವಾ ಭಗವತ್ಸಾಕ್ಷಾತ್ಕಾರ. ಐಹಿಕವಾದ ಅಭ್ಯುದಯ ಚೆನ್ನಾಗಿ ನಡೆಯಬೇಕಾದರೆ ಧರ್ಮಾರ್ಥಕಾಮಗಳ ಸಾಮರಸ್ಯ ಆವಶ್ಯಕ. ಆದರೆ ಇವುಗಳನ್ನೂ ಮೀರಿದ ಪುರುಷಾರ್ಥ ಮೋಕ್ಷ. 'ಅಮೃತತ್ವಸ್ಯ ತು ನಾಶಾಸ್ತಿ ವಿತ್ತೇನ' ಎಂದು ಉಪನಿಷತ್ತು ಹೇಳುವಂತೆ ಐಹಿಕವನ್ನು ಕಳೆದುಕೊಂಡು ಅಮೃತತ್ವವನ್ನು ಪಡೆಯುವುದು ಮನುಷ್ಯನ ಜೀವನದ ಗುರಿಯಾದ ಕಾರಣ ಮೋಕ್ಷವು ಪುರುಷಾರ್ಥ ಶಬ್ದಕ್ಕೆ ಮುಖ್ಯಾರ್ಥವಾಗುತ್ತದೆ. 'ತಮೇವೈಕಂ ಜಾನಥ ಆತ್ಮಾನಂ ಅನ್ಯಾ ವಾಚೋ ವಿಮುಂಚಥ ಅಮೃತಸ್ಯೈಷ ಸೇತುಃ', 'ಸರ್ವಂ ಖಲ್ವಿದಂ ಬ್ರಹ್ಮ ತಜ್ಜಲಾನಿತಿ ಶಾಂತ ಉಪಾಸೀತ', 'ಸನ್ಮೂಲಮನ್ವಿಚ್ಛ ಸನ್ಮೂಲಾಃ ಸೋಮ್ಯೇಮಾಃ ಸರ್ವಾಃ ಪ್ರಜಾಃ ಸದಾಯತನಾಃ ಸತ್ಪ್ರತಿಷ್ಠಾಃ' ಎಂದೂ 'ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ' ಎಂದೂ ಉಪನಿಷತ್ತು ಉದ್ಘೋಷಿಸುವಂತೆ ಸರ್ವಕಾರಣವಾದ ಆ ಬ್ರಹ್ಮವಸ್ತುವನ್ನರಿತರೆ ಸಂಸಾರಬಂಧನದಿಂದ ಬಿಡುಗಡೆ ಆಗುವುದು. ಪ್ರಕೃತಿಯ ಸಂಪರ್ಕವನ್ನು ಆತ್ಯಂತಿಕವಾಗಿ ಕಳೆದುಕೊಳ್ಳಬೇಕೆಂಬುದು ಎಲ್ಲರೂ ಒಪ್ಪಿರುವ ಅಂಶ. ಕರ್ಮ, ಭಕ್ತಿ ಮತ್ತು ಜ್ಞಾನಗಳನ್ನು ಬೆಳೆಸಿಕೊಂಡು ಸತತವಾದ ಸ್ವಪ್ರಯತ್ನದಿಂದ ಇಂದ್ರಿಯ ನಿಗ್ರಹವನ್ನು ಸಾಧಿಸಿ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂದು ವೇದಾಂತಗಳು ಉಪದೇಶಿಸುತ್ತವೆ. ವೇದಾಂತದರ್ಶನ ಅನೇಕ ಪ್ರಕಾರವಾಗಿದ್ದು ಅದ್ವೈತ, ದ್ವೈತ ಮತ್ತು ದ್ವೈತಾದ್ವೈತ ಸ್ವರೂಪವನ್ನು ಪ್ರತಿಪಾದಿಸುತ್ತವೆ. ಮುಕ್ತಿಯು ಜೀವನ್ಮುಕ್ತಿ ಮತ್ತು ವಿದೇಹ ಮುಕ್ತಿ ಎಂದು ಎರಡು ಬಗೆ. ಆತ್ಮೈಕ್ಯಜ್ಞಾನವನ್ನು ಸಾಕ್ಷಾತ್ಕರಿಸಿಕೊಂಡವನು ಇಲ್ಲಿದ್ದರೂ ಮುಕ್ತನೇ ಆಗಿ ಜೀವನ್ಮುಕ್ತನೆನಿಸುವನು. ತನ್ನ ಶರೀರವನ್ನು ತ್ಯಜಿಸಿ ಬ್ರಹ್ಮೀಭೂತನಾದಾಗ ವಿದೇಹಮುಕ್ತಿ ಆಗುವುದು.

ಮೋಕ್ಷದಲ್ಲಿ ಆತ್ಮನು ಪರಮಾತ್ಮನ ದಿವ್ಯಾನುಭವ ಮಾಡುವನೆಂಬುದು ದ್ವೈತದರ್ಶನದ ನೆಲೆ. ಉಪನಿಷತ್ತುಗಳಲ್ಲಿ ಈ ಎರಡು ಬಗೆಗಳೂ ಪ್ರತಿಪಾದಿಸಲ್ಪಟ್ಟಿವೆ.

ನಿಷ್ಕಾಮ ಕರ್ಮವನ್ನನುಷ್ಠಿಸಿ ಚಿತ್ತ ಶುದ್ಧಿಯನ್ನು ಸಾಧಿಸಬೇಕೆಂದೂ, ಈಶ್ವರನಲ್ಲಿ ಅನನ್ಯ ಭಕ್ತಿ ಮೂಡಿ ಚಿತ್ತೈಕಾಗ್ರತೆಯನ್ನು ಸಂಪಾದಿಸಬೇಕೆಂದೂ ವೇದಾಂತ ದರ್ಶನದ ಎಲ್ಲ ಪ್ರಕಾರಗಳೂ ಒಪ್ಪುತ್ತವೆ. ಕೆಲವರು ಬ್ರಹ್ಮಾತ್ಮೈಕ್ಯ ಜ್ಞಾನದಿಂದ ಮೋಕ್ಷವೆಂದು ಹೇಳಿದರೆ ಮತ್ತೆ ಕೆಲವರು ಭಗವಂತನಲ್ಲಿ ನಿರತಿಶಯವಾದ ಭಕ್ತಿಯನ್ನು ಮಾಡುವುದರಿಂದ ಉಂಟಾಗುವ ಭಗವತ್ಪ್ರಸಾದದಿಂದ ಮುಕ್ತಿ ಎಂದು ಹೇಳುವರು. ಅಲ್ಪವೂ, ಅಸಾರವೂ ಅನಿತ್ಯವೂ ಆದುದನ್ನು ತ್ಯಜಿಸಿ ಮನುಷ್ಯನು ಅನಂತವೂ ನಿತ್ಯವೂ ನಿರತಿಶಯವೂ ಆದ ಆನಂದವನ್ನು ಪಡೆಯಲಿಚ್ಛಿಸಬೇಕು. 'ಅಸಾರಂ ಅಲ್ಪಸಾರಂ ಚ ಸಾರಂ ಸಾರತರಂ ತ್ಯಜೇತ್ । ಭಜೇತ್ ಸಾರತಮಂ ಶಾಸ್ತ್ರೇ ರತ್ನಾಕರ ಇವಾಮೃತಂ ॥' ಎಂದು ಆ ಕಾರಣದಿಂದಲೇ ಉಪದೇಶ ನೀಡಿದೆ. 'ಯಂ ಜ್ಞಾತ್ವಾ ಮುಚ್ಯತೇ ಜಂತುಃ ಅಮೃತತ್ವಂ ಚ ಗಚ್ಛತಿ', 'ಯದಾ ಸರ್ವೇ ಪ್ರಮುಚ್ಯಂತೇ ಕಾಮಾಯೇಽಸ್ಯ ಹೃದಿಶ್ರಿತಾಃ । ಅಥ ಮರ್ತ್ಯೋಽಮೃತೋ ಭವತ್ಯತ್ರ ಬ್ರಹ್ಮಸಮಶ್ನುತೇ ॥', 'ತೇ ಬ್ರಹ್ಮಲೋಕೇಷು ಪರಾಂತಕಾಲೇ ಪರಾಮೃತಾಃ ಪರಿಮುಚ್ಯಂತಿ ಸರ್ವೇ', 'ಬ್ರಹ್ಮವಿದಾಪ್ನೋತಿಪರಂ' ಎಂದು ಸರ್ವೋನ್ನತವಾದ ಈ ಪುರುಷಾರ್ಥವನ್ನು ಉಪನಿಷತ್ತುಗಳು ತಿಳಿಸುತ್ತವೆ.

ಹೀಗೆ ಪುರುಷಾರ್ಥದ ತತ್ತ್ವ ಮಾನವಸಮಾಜದ ಏಕತೆಯನ್ನು ಸಾಧಿಸುವುದಾಗಿ ಐಹಿಕದ ಅಡಿಮಣೆಯ ಮೇಲೆ ಪಾರಮಾರ್ಥಿಕವಾದ ನಿಃಶ್ರೇಯಸವನ್ನು ಪಡೆಯುವುದಕ್ಕೆ ಸಹಾಯಕವಾಗಿದೆ. ಇದು ಸಾರ್ವಕಾಲಿಕವಾಗಿ ಎಲ್ಲರಿಗೂ ಸಮಾನವಾಗಿ ಅನ್ವಯಿಸುವುದಾಗಿದೆ. ಅನೇಕ ರೀತಿಯಲ್ಲಿ ಛಿದ್ರ ವಿಚ್ಛಿದ್ರವಾಗಿ ತೋರುವ ಮಾನವ ಜೀವನದಲ್ಲಿ ಹಾಗೂ ಸಮಾಜದಲ್ಲಿ ಅಖಂಡವಾದ ಏಕತಾನತೆಯನ್ನು ಪುರುಷಾರ್ಥ ತತ್ತ್ವ ಕಂಡುಹಿಡಿದಿದೆ ಎಂದು ಹೇಳಬಹುದು.

ಕೆ. ಮರುಳಸಿದ್ದಪ್ಪ

ಜನಾಂಗವಾದ

'ಜನಾಂಗ' (Race) ಎನ್ನುವ ಕಲ್ಪನೆ ಇತ್ತೀಚಿನದು. ಸ್ಪಷ್ಟವಾದ ಆನುವಂಶೀಯ ದೈಹಿಕ ವೈಲಕ್ಷಣ್ಯಗಳ ಆಧಾರದ ಮೇಲೆ ಜಗತ್ತಿನ ಜನಸಂಖ್ಯೆಯನ್ನು ಕೆಲವು ಗುಂಪುಗಳನ್ನಾಗಿ ವಿಂಗಡಿಸಬಹುದೆಂದು ಮಾನವಶಾಸ್ತ್ರಜ್ಞರು ಈ ಶತಮಾನದ ಆದಿಭಾಗದಲ್ಲಿ ಕಂಡುಕೊಂಡರು. 'ಜನಾಂಗ'ವೆಂಬ ಕಲ್ಪನೆಗಿಂತ 'ಜನಾಂಗ'ವಾದ ಪ್ರಾಚೀನವಾದುದು; ಸಾವಿರಾರು ವರ್ಷಗಳ ಇತಿಹಾಸವಿರುವಂತಹದು. ಜಗತ್ತಿನ ಹಲವು ದೇಶಗಳಲ್ಲಿ ಈ ವಾದವು ವಿವಿಧ ವೇಷದಿಂದ ಬೇರೆ ಬೇರೆ ಕಾಲಗಳಲ್ಲಿ ಪ್ರಚಾರ ಹೊಂದಿದೆ; ಕ್ರೌರ್ಯ, ಶೋಷಣೆ ಮತ್ತು ದಬ್ಬಾಳಿಕೆಗಳಿಗೆ ಸ್ಫೂರ್ತಿ ಕೊಟ್ಟಿದೆ. ಇಂದಿಗೂ ಜನಾಂಗವಾದದ ಕರಾಳ ಸ್ವರೂಪವನ್ನು ದಕ್ಷಿಣ ಆಫ್ರಿಕಾ, ರೊಡೀಷಿಯಾ ಮುಂತಾದ ದೇಶಗಳಲ್ಲಿಯೂ ಪ್ರಚ್ಛನ್ನವಾಗಿ ಅಮೆರಿಕಾ, ಭಾರತದಲ್ಲಿಯೂ ಗುರುತಿಸಬಹುದು.

ಯುದ್ಧಕಲೆಯಲ್ಲಿ ಎಂದು ಬಿಳಿಯರು ಹೆಚ್ಚು ನಿಷ್ಣಾತರಾದರೋ ಅಂದೇ ಕಪ್ಪು ಜನಕ್ಕಿಂತ ಶ್ರೇಷ್ಠರೆಂದು ಪರಿಗಣಿಸಲ್ಪಟ್ಟರು. ಆಳುವವರು ಎಷ್ಟೇ ಮೂರ್ಖರಾಗಿದ್ದರೂ ಅಸಂಸ್ಕೃತರಾಗಿದ್ದರೂ ಸಹ ಬಲಾಢ್ಯರಾಗಿದ್ದರು! ಕ್ರೌರ್ಯ, ದಬ್ಬಾಳಿಕೆಗೆ ಮುನ್ನುಗ್ಗುವವರಾಗಿದ್ದರು. ಸ್ವಾಭಾವಿಕವಾಗಿಯೇ ಅವರ ಮೈಬಣ್ಣ, ನಡೆ-ನುಡಿ, ಆಚಾರ ವಿಚಾರ, ಪ್ರತಿಭೆ ಎಲ್ಲವೂ ಉಳಿದವರಿಗೆ ಆದರ್ಶಮಯವಾಗಿ, ಅನುಕರಣೀಯವಾಗಿ ಕಂಡುಬಂದವು. ತಮ್ಮ ಕೋವಿಯ ಬಲದಿಂದ ಮತ್ತು ವ್ಯಾಪಾರೀ ಚಾಕಚಕ್ಯತೆಯಿಂದ ಈ ಜನ ಬಹು ಬೇಗನೆ ಏಷ್ಯಾ ಮತ್ತು ಆಫ್ರಿಕನ್ ಜನರನ್ನು ಸಾಮಂತರನ್ನಾಗಿಸಿಕೊಂಡರು. ನೀಗ್ರೋಗಳ ಗುಲಾಮ ಪದ್ಧತಿಗೆ ಕಾರಣರಾದರು. ಪ್ರಾಚೀನ ಕಾಲದಲ್ಲಿಯೇ ಭಾರತಕ್ಕೆ ಬಂದ ಆರ್ಯರು ಅವರಿಗಿಂತ ಹಿಂದಿನ ಕಾಲದಲ್ಲಿಯೇ ಇಲ್ಲಿಗೆ ಬಂದು ನೆಲಸಿದ್ದ ದ್ರಾವಿಡರಿಗೆ ಅಥವಾ ಇಲ್ಲಿನ ಮೂಲನಿವಾಸಿಗಳಿಗೆ ಸಾಂಸ್ಕೃತಿಕವಾಗಿ ಮೇಲುಮಟ್ಟದವರೇನೂ ಆಗಿರಲಿಲ್ಲ. ಆದರೆ ಯುದ್ಧ ಕಲೆಯಲ್ಲಿ ಹೆಚ್ಚು ನಿಷ್ಣಾತರಾಗಿದ್ದರು.

ನೀಗ್ರೋಗಳನ್ನು ಇತ್ತೀಚಿನವರೆಗೂ ಐರೋಪ್ಯರು ಮನುಷ್ಯರೆಂದೇ ಪರಿಗಣಿಸಿರಲಿಲ್ಲ. ನೀಗ್ರೋ ಗುಲಾಮನೆದುರು ಐರೋಪ್ಯ ಮಹಿಳೆಯೊಬ್ಬಳು ಬೆತ್ತಲೆ ಇರುವುದು ಸಾಮಾನ್ಯವಾಗಿತ್ತಂತೆ. ಆತ ಗಂಡಸಾದರೂ ಗುಲಾಮನಾದುದರಿಂದ ಅವನೆದುರು ನಾಚುವ ಅಗತ್ಯವಿರಲಿಲ್ಲವೆಂದು ಅವರು ಭಾವಿಸುತ್ತಿದ್ದರಂತೆ. ಕಾನೂನಿನ ದೃಷ್ಟಿಯಿಂದ ಗುಲಾಮನಿಗೂ ಪ್ರಾಣಿಗೂ ವ್ಯತ್ಯಾಸವಿಲ್ಲ. ಎರಡೂ ಕಡೆ ಕೊಳ್ಳುವ ಮಾರುವ ಹಕ್ಕು ಯಜಮಾನನಾದವನಿಗೆ ಇರುತ್ತಿತ್ತು. ಮನೆಯಲ್ಲಿಯೇ ಹುಟ್ಟಿದ ಪ್ರಾಣಿಗಳಂತೆ ಮನೆಯಲ್ಲಿಯೇ ಹುಟ್ಟಿದ ಗುಲಾಮರೂ ಇರುತ್ತಿದ್ದರು. ಕಾರಣ, ಪ್ರಾಣಿಯೆದುರು ಮನುಷ್ಯರು ನಾಚುವ ಅಗತ್ಯವೇನೂ ಕಂಡು ಬರಲಿಲ್ಲ.

ಪ್ರಪಂಚದ ಇತಿಹಾಸದಲ್ಲಿ ಹಿಟ್ಲರನ ಕಾಲದಲ್ಲಿ ಜರುಗಿದ ಜನಾಂಗವಾದದ ಅಮಾನುಷ ಲೀಲೆಗಳನ್ನು ಸರಿಗಟ್ಟುವಂತಹ ಉದಾಹರಣೆಗಳು ವಿರಳವಾಗಿವೆ. ಆರ್ಯನ್‌ಜನಾಂಗವು ಸರ್ವಶ್ರೇಷ್ಠವೆಂದು ಸ್ಥಾಪಿಸಲು ಹಿಟ್ಲರನ ಸಂಗಡಿಗರು ಇತಿಹಾಸವನ್ನೇ ತಿದ್ದಿ ಬರೆಸಿದರು. ಹಳೆಯ ಗ್ರೀಕ್‌ಸಾಹಿತ್ಯ ಮತ್ತು ತತ್ತ್ವಜ್ಞಾನಿಗಳ ಬರೆಹಗಳಿಗೆ ಹೊಸದಾದ ವ್ಯಾಖ್ಯಾನಗಳನ್ನು ಜೋಡಿಸಲಾಯಿತು. ತಮಗೆ ಹೊಂದಿಕೊಳ್ಳುವ ಪ್ರಾಚೀನ ಸಿದ್ಧಾಂತಗಳು ಮತ್ತು ಆಧುನಿಕ ತತ್ತ್ವಜ್ಞಾನಗಳಿಗೆ ಹೆಚ್ಚು ಪ್ರಚಾರ ದೊರಕಿಸಿದರು. ಪ್ರಾಚೀನ ಗ್ರೀಕ್ ಸಿದ್ಧಾಂತದಂತೆ ಗ್ರೀಕರು ಮಾತ್ರ ಸುಸಂಸ್ಕೃತರು. ಉಳಿದವರೆಲ್ಲಾ ಕ್ಷುದ್ರಜನರು. ಅಸಂಸ್ಕೃತರನ್ನು ಸುಸಂಸ್ಕೃತರು ಗುಲಾಮರನ್ನಾಗಿಸಿಕೊಳ್ಳುವುದರಲ್ಲಿ ತಪ್ಪಿಲ್ಲ ; ಅವರು ಯಜಮಾನನಿಗೆ ಸೇರಿದ ಪ್ರಾಣಿ ಮತ್ತು ವಸ್ತುಗಳಿದ್ದಂತೆ. ಆಧುನಿಕ ತತ್ತ್ವಜ್ಞಾನಿಗಳಲ್ಲಿ ನೀಷೆಯ 'ಅತಿಮಾನವ' (Superman) ಸಿದ್ಧಾಂತವನ್ನು ಹಿಟ್ಲರ್‌ವಾದಿಗಳು ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನಿಸಿಕೊಂಡರು.

ಜನಾಂಗವಾದವು ಕಾಲದಿಂದ ಕಾಲಕ್ಕೆ ದೇಶದಿಂದ ದೇಶಕ್ಕೆ ಭಿನ್ನ ಸ್ವರೂಪದಲ್ಲಿದ್ದರೂ ಅದರ ಮೂಲ ನೀತಿ ಏಕರೀತಿಯದು. ಹುಟ್ಟಿನಿಂದಲೇ ಕೆಲವು ಸಮೂಹಗಳು ಶ್ರೇಷ್ಠ, ಉಳಿದವು ಕನಿಷ್ಠ ಎಂಬ ನಂಬಿಕೆಯನ್ನನುಸರಿಸಿಯೇ ರೋಮನ್ ಸಾಮ್ರಾಜ್ಯ ಮೆರೆದಿದ್ದು, ಕ್ರಿಶ್ಚಿಯನ್ ಪಾದ್ರಿಗಳು ನೀಗ್ರೋಗಳನ್ನು ಮನುಷ್ಯರಿಂದ ಪ್ರತ್ಯೇಕಿಸಿದ್ದು, ಜಗತ್ತಿನಾದ್ಯಂತ ಯಹೂದಿಗಳ ಶೋಷಣೆ ನಡೆದಿದ್ದು.

ಭಾರತದಲ್ಲಿ ಆರ್ಯರ ಕಾಲದಿಂದ ಈಚೆಗೆ ಪ್ರಚಾರದಲ್ಲಿರುವ ವರ್ಣಾಶ್ರಮ ಪದ್ಧತಿಯು ಇದೇ ಮಾದರಿಯದು. ಕೇವಲ ಹುಟ್ಟಿನ ಆಧಾರದ ಮೇಲೆ ಮೇಲುಕೀಳನ್ನು ಇಲ್ಲಿ ನಿರ್ಧರಿಸಲಾಗಿದೆ. ಇದರ ಫಲವಾಗಿಯೇ ಈ ದೇಶದ ಶೇಕಡಾ ತೊಂಬತ್ತು ಭಾಗದ ಜನತೆಗೆ ಶತಶತಮಾನಗಳಿಂದ ಅಕ್ಷರಜ್ಞಾನವನ್ನೇ ನಿರಾಕರಿಸಲಾಯಿತು. ಧಾರ್ಮಿಕ ಗ್ರಂಥಗಳನ್ನೆಲ್ಲಾ ಸಂಸ್ಕೃತದಲ್ಲಿಟ್ಟು, ಆ ಭಾಷೆಯನ್ನು ಇತರರು ಕಲಿಯದಂತೆ ಪ್ರತಿಬಂಧಿಸಲಾಯಿತು. ಈ ದೇಶದಲ್ಲಿ ಕೆಳವರ್ಣದವರು ಮತ್ತು ಅವರ್ಣೀಯರನ್ನು ಮೇಲುಜಾತಿಯವರು ಮತ್ತು ವರ್ಗ[1]ದವರು ನಡೆಸಿಕೊಂಡಿರುವ ರೀತಿ ಯಾವ ನಾಗರಿಕ ಸಮಾಜವೂ ತಲೆತಗ್ಗಿಸುವಂತಿದೆ. ಅಮೆರಿಕೆಯಲ್ಲಿ ಇಂದು ನೀಗ್ರೋಗಳಿಗಿರುವ ಸ್ಥಿತಿಗಿಂತ ನಮ್ಮ ದೇಶದ ಹರಿಜನರ ಪಾಡು ಕನಿಷ್ಠವಾಗಿದೆ. ಸಾವಿರಾರು ವರ್ಷಗಳ ಘೋರ ಪಾಪವನ್ನು ಕೆಲವೇ ದಶಕಗಳ ಕಾನೂನು ಮತ್ತು ಸವಲತ್ತುಗಳು ತೊಳೆಯಲಾರದೇ ಹೋಗಿವೆ.

ಭಾರತದ ಮೇಲು ವರ್ಣದವರಾಗಲೀ ಅಥವಾ ಪಾಶ್ಚಾತ್ಯ ಬಿಳಿಯರಾಗಲೀ ಎಲ್ಲರೂ ಜನಾಂಗವಾದಿಗಳಲ್ಲ. ಅವರಲ್ಲಿಯೂ ಕೆಲವು ಉದಾರವಾದಿಗಳು, ಮಾನವತಾವಾದಿಗಳು ಈಗಲೂ ಇದ್ದಾರೆ, ಹಿಂದೆಯೂ ಇದ್ದರು. ಭಾರತದಲ್ಲಿಯಂತೂ ಕೆಳವರ್ಗದವರ ಉನ್ನತಿಗೆ ಶ್ರಮಿಸಿದ ಗಾಂಧಿ, ಬುದ್ಧ, ಬಸವ, ರಾಮಾನುಜರಂಥ ಮಹಾವ್ಯಕ್ತಿಗಳು ಹಿಂದೂಧರ್ಮದ ಮೇಲು ವರ್ಣದಿಂದಲೇ ಹುಟ್ಟಿದರೆಂಬುದು ಐತಿಹಾಸಿಕ ಸತ್ಯ. ಆದರೆ ಇಂದಿಗೂ ಈ ದೇಶದ ಮೇಲುವರ್ಗ ಮತ್ತು ಜಾತಿಯ ಬಹುಪಾಲು ಜನತೆ ತಾವು ಹುಟ್ಟಿನಿಂದಲೇ

---

1. ಮೇಲುಜಾತಿ, ಶ್ರೀಮಂತಿಕೆ, ಇಂಗ್ಲೀಷ್ ಜ್ಞಾನ—ಇವುಗಳಲ್ಲಿ ಯಾವುವೇ ಎರಡು ಲಕ್ಷಣಗಳಿದ್ದರೂ ಆತ ಆಧುನಿಕ ಭಾರತದಲ್ಲಿ ಮೇಲುವರ್ಗಕ್ಕೆ ಸೇರುತ್ತಾನೆಂದು ಡಾ. ಲೋಹಿಯಾ ಹೇಳುತ್ತಾರೆ. ಪ್ರಾಚೀನ ಭಾರತದಲ್ಲಿ ವರ್ಗ ವ್ಯವಸ್ಥೆಗಿಂತ ವರ್ಣವ್ಯವಸ್ಥೆ ಪ್ರಬಲವಾಗಿತ್ತು. ಶೂದ್ರರನ್ನುಳಿದ ಉಳಿದ ಮೂರು ವರ್ಣಗಳನ್ನು ಅಲ್ಲಿ ಮೇಲು ವರ್ಣದವರೆಂದು ಭಾವಿಸಬಹುದು. ನಾಲ್ಕು ವರ್ಣಗಳಿಗೂ ಹೊರಗಿನವರಾದ ಹರಿಜನರೇ ಮುಂತಾದ ಅವರ್ಣೀಯರು ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಕೆಳಗಿನ ಶ್ರೇಣಿಯವರು. ವರ್ಗ ಮತ್ತು ವರ್ಣ ಎಂಬ ಪದಗಳನ್ನು ಈ ಲೇಖನದಲ್ಲಿ ಬಳಸಿರುವುದನ್ನು ಮೇಲಿನ ವಿವರಣೆಯ ಹಿನ್ನಲೆಯಲ್ಲಿ ಅರ್ಥಮಾಡಿಕೊಳ್ಳಬೇಕು.

ಪ್ರತಿಭಾವಂತರು, ಮಹಾವಸ್ತು ನಿಷ್ಪೃಷ್ಟಿಯುಳ್ಳವರು ಎಂಬ ಭ್ರಾಂತಿಯಲ್ಲಿಯೇ ನರಳುತ್ತಿರುವರೆಂಬುದನ್ನೂ ಮರೆಯುವಂತಿಲ್ಲ.

ಈ ಸಂಗತಿ ನಿಜವೇ ? ಕೆಲವು ಪಂಗಡಗಳ ಜನ, ಸಾರಾಸಗಟಾಗಿ ಹುಟ್ಟಿನಿಂದಲೇ ರಕ್ತಗತವಾಗಿ ಪ್ರತಿಭೆಯನ್ನು ಪಡೆದು ಬಂದಿರುವುದುಂಟೇ ? ಎಂಬಂತಹ ನಂಬಿಕೆಗಳನ್ನು ವೈಜ್ಞಾನಿಕವಾಗಿ ಉದಾಹರಣೆಗಳ ಸಹಿತ ಪರಿಶೀಲಿಸಬೇಕಾಗುತ್ತದೆ. ಪ್ರಸಿದ್ಧ ಮಾನವಶಾಸ್ತ್ರಜ್ಞನಾದ ಕ್ರೋಬರ್[1] ಇಂತಹ ಪರಿಶೀಲನೆಗಳನ್ನು ನಡೆಸಿ ಪ್ರಯೋಗಸಿದ್ಧನಾದ ಕೆಲವು ಸಂಗತಿಗಳನ್ನು ತೋರಿಸಿಕೊಟ್ಟಿದ್ದಾನೆ. ಹೇಗೆ ಈ 'ಜನಾಂಗವಾದ' ಸುಳ್ಳಿನ ತಳಹದಿಯ ಮೇಲೆ ನಿಂತಿದೆಯೆಂಬುದನ್ನು ಸ್ಪಷ್ಟಪಡಿಸಿದ್ದಾನೆ. ಆತನ ಅಭಿಪ್ರಾಯಗಳ ಬೆಳಕಿನಲ್ಲಿ ನಮ್ಮ ಅನುಭವವನ್ನು ನಿಚ್ಚಳಗೊಳಿಸಿಕೊಳ್ಳಬಹುದು.

ಮಾನವನ ದೈಹಿಕಶಕ್ತಿ ಮತ್ತು ಮಾನಸಿಕಸಾಧ್ಯತೆಗಳು ಸಮೂಹದಿಂದ ಸಮೂಹಕ್ಕೆ ಭಿನ್ನವಾಗಿರುತ್ತವೆಯೆಂಬುದನ್ನು ಒಪ್ಪಿಕೊಂಡರೂ, ಈ ವ್ಯತ್ಯಾಸಗಳು ಆನುವಂಶೀಯವೇ ಅಥವಾ ವಾತಾವರಣಜನ್ಯವೇ ಎಂಬುದನ್ನು ನಿರ್ಧರಿಸಬೇಕಾಗುತ್ತದೆ. ಐತಿಹಾಸಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರಣಗಳಿಂದ ಒಂದು ಜನಸಮೂಹ ಹಿಂದುಳಿದಿರಲು ಸಾಧ್ಯವಿಲ್ಲವೇ? ಎಂಬುದನ್ನು ಗಮನಿಸಬೇಕಾಗುತ್ತದೆ. ಮೇಲುನೋಟಕ್ಕೆ ಅಮೆರಿಕೆಯ ನೀಗ್ರೋಗಳು ಮತ್ತು ನಮ್ಮ ದೇಶದ ಹರಿಜನರು ತಮ್ಮ ದೇಶಗಳ ಮೇಲುವರ್ಗದವರಿಗಿಂತ ಕೀಳಾಗಿ ಕಂಡುಬರುವುದೇನೋ ನಿಜ. ಬದುಕಿನಲ್ಲಿ ಅವರು ಯಶಸ್ವಿಗಳಲ್ಲ. ಯಾವುದೇ ವೈಜ್ಞಾನಿಕ ಸಂಶೋಧನೆಗಳನ್ನು ನಡೆಸಿಲ್ಲ. ಮಹಾಸಾಹಿತಿಗಳು ಬುದ್ಧಿಶಾಲಿಗಳು ಹೆಚ್ಚು ಸಂಖ್ಯೆಯಲ್ಲಿ ಅವರಲ್ಲಿ ಹುಟ್ಟಿಲ್ಲ. ಸ್ವತಃ ನೀಗ್ರೋಗಳೇ ಬುದ್ಧಿವಂತಿಕೆಯಲ್ಲಿ ತಾವು ಬಿಳಿಯರಿಗಿಂತ ಕೆಳಮಟ್ಟದವರೆಂದು ಒಪ್ಪಿಕೊಳ್ಳುತ್ತಾರೆ.

ಆದರೆ ಈ ನಂಬಿಕೆ ಸಂಪೂರ್ಣ ಸತ್ಯವೇ ? ಇದೊಂದು ಕೇವಲ ತಪ್ಪು ಕಲ್ಪನೆಯಾಗಿರಬಾರದೇಕೆ ? ಅಕ್ಷರ ಜ್ಞಾನಕ್ಕೂ ಬುದ್ಧಿವಂತಿಕೆಗೂ ಸಂಬಂಧವೇಕಿರಬೇಕು? ಅಕ್ಷರ ಬಲ್ಲವನು ಮತ್ತು ನಾಗರಿಕ ಸಾಧನೋಪಾಯ ಚತುರನು ಮಾತ್ರ ಪ್ರತಿಭಾವಂತನೆಂದು ಹೇಗೆ ಹೇಳಬಹುದು ? ಅಕ್ಷರ ಬಾರದ ಮಹಾನ್ ಬುದ್ಧಿಶಾಲಿಗಳು ಇರಲು ಸಾಧ್ಯವಿಲ್ಲವೆ ? ಇತಿಹಾಸದಲ್ಲಿ ನಾವು ಕೇಳಿರುವ ಅನೇಕ ಜನ ದಕ್ಷಆಡಳಿತಗಾರರು ರಾಜರುಗಳು ನಿರಕ್ಷರಕುಕ್ಷಿಗಳಾಗಿದ್ದರಲ್ಲವೇ ? ಹೀಗೆ ಪ್ರಶ್ನಿಸುತ್ತಾ ಹೋದರೆ ಇಲ್ಲಿಯವರೆಗೆ ಕಣ್ಣುಮುಚ್ಚಿಕೊಂಡು ಒಪ್ಪಲಾಗಿರುವ ಅನೇಕ ಸತ್ಯಗಳು ಸಂದೇಹವನ್ನು ಹುಟ್ಟಿಸುತ್ತವೆ. ಏಕೆಂದರೆ ಈ ಬಗೆಯ ತಪ್ಪುಕಲ್ಪನೆಗಳಿಗೆ ವಿವೇಕಕ್ಕಿಂತ ನಂಬಿಕೆಯೇ ಕಾರಣವಾಗಿರುತ್ತದೆ. ಪರಂಪರಾಗತ ನಂಬಿಕೆಗಳನ್ನು ಯಾರೂ ಪರೀಕ್ಷಿಸುವುದಿಲ್ಲ. ಪಟ್ಟಭದ್ರ ಹಿತಾಸಕ್ತಿಗಳು ಇಂತಹ ಸಂದೇಹವಾದಿಗಳನ್ನು ಹತ್ತಿಕ್ಕಿಬಿಡುತ್ತವೆ. ಆದರೆ ಒಂದು ಕಾಲಕ್ಕೆ ಭೂಮಿ ಚಪ್ಪಟೆಯಾಗಿದೆಯೆಂದೂ ಸೂರ್ಯನೇ ಭೂಮಿಯ ಸುತ್ತ ಸುತ್ತುತ್ತಿರುವನೆಂದೂ ನಂಬಿದ್ದ ಜನ ಮುಂದೆ ಅದು ಸುಳ್ಳೆಂದೂ ಕ್ರಮೇಣ ಒಪ್ಪಿಕೊಳ್ಳಲೇಬೇಕಾಯಿತು. ವೈಜ್ಞಾನಿಕಜಗತ್ತಿನಲ್ಲಿ ಕಾಲಕ್ರಮೇಣ ಸಿದ್ಧಾಂತಗಳು ಹೇಗೆ ತಲೆಕೆಳಗಾಗುತ್ತವೆಯೋ ಹಾಗೆ ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ತಿರುಗುಮುರುಗಾಗುವುದು ಅನಿವಾರ್ಯವಾಗುತ್ತದೆ. ಎಲ್ಲ ಗುಂಪಿನವರೂ ತಮ್ಮಷ್ಟಕ್ಕೆ ತಾವು ಸರ್ವಶ್ರೇಷ್ಠರೆಂದುಕೊಳ್ಳುವುದು ಸಾಮಾನ್ಯ ರೂಢಿ. ವೈಜ್ಞಾನಿಕವಾಗಿ ಪರಿಶೀಲಿಸಿದರೆ ಎಲ್ಲ ಜನಾಂಗಗಳೂ ಸಾಧ್ಯತೆ ಮತ್ತು ಸತ್ತ್ವಗಳ ದೃಷ್ಟಿಯಿಂದ ಸಮಾನವಾಗಿರುವುದು ಕಂಡುಬಂದಿದೆ. ಸಮಾನ ಅವಕಾಶ, ವಾತಾವರಣ, ಅನುಕೂಲಗಳನ್ನು ಕಲ್ಪಿಸಿಕೊಟ್ಟರೆ ನೀಗ್ರೋಗಳು ಶ್ವೇತವರ್ಣೀಯರನ್ನು, ಭಾರತದ ಅತಿ ಹಿಂದುಳಿದವರು ಮುಂದುವರಿದವರನ್ನು ಹಿಂದೆ ಬೀಳಿಸಿಯಾರು ; ಸಮಾನರಂತೂ ಆದಾರು. ನಮ್ಮ ದೇಶದ ಹರಿಜನಮಕ್ಕಳನ್ನು ತಂದೆ ತಾಯಿಗಳಿಂದಲೇ ಬೇರ್ಪಡಿಸಿ ಉತ್ತಮ ಆಹಾರ,

[1] Kroeber : Anthropology

ವಿದ್ಯಾಭ್ಯಾಸವನ್ನು ಸರ್ಕಾರವೇ ಒದಗಿಸಬೇಕು. ಸರ್ಕಾರಿ ಉದ್ಯೋಗ ಮುಂತಾದ ಕ್ಷೇತ್ರಗಳಲ್ಲಿ ಅವರಿಗೆ ಸಂಪೂರ್ಣ ಆದ್ಯತೆ ಕೊಡಬೇಕು. ಮುಕ್ತಸ್ಪರ್ಧೆಯಲ್ಲಿ ಉಳಿದವರೊಂದಿಗೆ ಇವರೂ ಸ್ಪರ್ಧಿಸಲೆಂದು ಹೇಳುವುದಂತೂ ಮಹಾಪಾಪಕರವಾದ ಕೆಲಸ. ಆಹಾರವಿಲ್ಲದೆ ಕೊರಗಿ ಸಣಕಲನಾಗಿದ್ದ ವ್ಯಕ್ತಿಯೊಬ್ಬನನ್ನು ಪುಷ್ಕಳವಾಗಿ ತಿಂದು ಕೊಬ್ಬಿರುವವನೊಡನೆ ಕುಸ್ತಿಗೆ ನಿಲ್ಲಿಸಿ, ಗೆದ್ದವನು ಶ್ರೇಷ್ಠನೆಂದು ಪರಿಗಣಿಸುವುದು ಎಂಥ ನ್ಯಾಯವಾದೀತೆಂಬುದನ್ನು ಎಲ್ಲರೂ ಯೋಚಿಸಬೇಕು.

ಅಮೆರಿಕೆಯ ನೀಗ್ರೋಗಳಿಗೆ ಕೆಲವು ಬಾಹ್ಯ ಅನುಕೂಲಗಳು ಬಿಳಿಯರಿಗಿರುವಂತೆಯೇ ಇವೆ. ಇಬ್ಬರೂ ಇಂಗ್ಲೀಷ್ ಭಾಷೆಯನ್ನು ಹುಟ್ಟಿನಿಂದಲೇ ಕಲಿತವರು. ಸಿನೆಮಾ, ಚರ್ಚ್ ಮುಂತಾದ ಸಾರ್ವಜನಿಕ ಸ್ಥಳಗಳಲ್ಲಿ ಇಬ್ಬರಿಗೂ ಇತ್ತೀಚೆಗೆ ಸಮಾನ ಅವಕಾಶವಿದೆ. ಆದರೂ ಸಾಮಾಜಿಕಮನ್ನಣೆ, ವಿದ್ಯಾಭ್ಯಾಸಕ್ಕಿರುವ ಅವಕಾಶ, ನಾಯಕತ್ವಕ್ಕಿರುವ ಅವಕಾಶ ಬಿಳಿಯರಿಗೆ ಜಾಸ್ತಿ ಇದೆ. ಭಾರತದಲ್ಲಿಯಂತೂ ಒಂದು ಕಾಲಕ್ಕೆ ಸಂಸ್ಕೃತ, ಮುಂದೆ ಇಂಗ್ಲೀಷ್ ಭಾಷೆಗಳು ಹಿಂದುಳಿದವರು ವಿದ್ಯಾಭ್ಯಾಸದ ಹತ್ತಿರ ಸುಳಿಯದಂತೆ ಮಾಡಲು ಕಲ್ಪಿಸಲ್ಪಟ್ಟ ಅಸ್ತ್ರಗಳಾಗಿ ಪರಿಣಮಿಸಿವೆಯೆಂಬ ವಿಚಾರ ಈಗೀಗ ಗೊತ್ತಾಗುತ್ತಿದೆ. ಸಾಂಸ್ಕೃತಿಕವಾಗಿ, ರಾಜಕೀಯವಾಗಿ ಈ ಜನ ಇಪ್ಪತ್ತನೆ ಶತಮಾನದ ದ್ವಿತೀಯಾರ್ಧದವರೆಗೂ ಕತ್ತಲಿನಲ್ಲಿಯೇ ಕೊಳೆಯಬೇಕಾಗಿ ಬಂದದ್ದು ಆಕಸ್ಮಿಕ ಸಂಗತಿಗಳಲ್ಲ. ಹಿಂದಿನ ಕಾಲದಲ್ಲಿ ಸಂಸ್ಕೃತ ಭಾಷೆಯನ್ನು ದೇವಭಾಷೆಯೆಂದು ಪರಿಗಣಿಸಿ ಉಳಿದವರು ಕಲಿಯದಂತೆ ಪ್ರತಿಬಂಧಿಸಿದರು; ಆಧುನಿಕ ಕಾಲದಲ್ಲಿಯೂ ಸಾಮಾಜಿಕವಾಗಿ ದೈನ್ಯಸ್ಥಿತಿಯಲ್ಲಿ, ಆರ್ಥಿಕವಾಗಿ ಹೊಟ್ಟೆಬಟ್ಟೆಗಳ ವಿಚಾರಕ್ಕೆ ಮಾತ್ರ ತಮ್ಮ ಬದುಕನ್ನು ಸೀಮಿತಗೊಳಿಸಿಕೊಂಡಿದ್ದ ಹಿಂದುಳಿದ ಜನತೆ ಎರಡು ಮೂರು ಶತಮಾನಗಳ ಕಾಲ ಇಂಗ್ಲಿಷನ್ನು ಕಲಿಯುವ ಗೊಡವೆಗೇ ಹೋಗಲಿಲ್ಲ. ಇಂದಿಗೂ ಹಳ್ಳಿಯಿಂದ ಬರುವ, ಮಿಂಚಿನಂತೆ ಪ್ರಖರವಾಗಿರುವ ನಮ್ಮ ಹುಡುಗರನೇಕರು ಕಾಲೇಜಿಗೆ ಸೇರಿದ ಎರಡೇ ವರ್ಷಗಳಲ್ಲಿ 'ಕೀಳರಿಮೆ'ಗೆ ತುತ್ತಾಗಿ, ಕಾಲೇಜು ಬಿಡುವ ಹೊತ್ತಿಗೆ ತಾವು ದಡ್ಡರೆಂಬ ನಂಬಿಕೆಯೊಡನೆ ಹೊರಬರುತ್ತಾರೆ. ಈ ದೇಶದಲ್ಲಿರುವ ಇಂಗ್ಲಿಷ್ ಭಾಷಾಮಾಧ್ಯಮ ಮತ್ತು ಶಿಕ್ಷಣ ವ್ಯವಸ್ಥೆಗಳು ಪಟ್ಟಣದ ಮಧ್ಯಮವರ್ಗದವರನ್ನು ಮತ್ತು ಮೇಲು ಜಾತಿಯವರನ್ನು ಉದ್ಧರಿಸಲೆಂದೇ ಕಲ್ಪಿಸಲ್ಪಟ್ಟಿವೆಯೆಂದು ಯಾರಿಗಾದರೂ ಬಹುಬೇಗ ಗೊತ್ತಾಗುತ್ತದೆ. ಅತಿ ಹಿಂದುಳಿದವರಿಗೆ, ಹರಿಜನರಿಗೆ ಈ ದೇಶದಲ್ಲಿ ಕೆಲವು ಸವಲತ್ತುಗಳನ್ನು ಕೊಡಲಾಗಿದೆಯಾದರೂ ಅದರ ಸಾರ್ಥಕ ಉಪಯೋಗವಾಗದಂತೆ ನಮ್ಮ ಶಿಕ್ಷಣ ಕ್ರಮದಲ್ಲಿ ನೋಡಿಕೊಳ್ಳಲಾಗಿದೆ. ಈ ಸವಲತ್ತುಗಳನ್ನು ಪಡೆದೂ ಆತ ಈಗಿನ ಶಿಕ್ಷಣ ವ್ಯವಸ್ಥೆಯಲ್ಲಿ ಮೇಲುವರ್ಗದವರಿಗೆ ಸಮಾನನಾಗಲು ಸಾಧ್ಯವಿಲ್ಲ. ಇಂಥ ಸವಲತ್ತುಗಳ ವಿತರಣೆಯೂ ಮೇಲು ವರ್ಗದವರ ಕೈಯಲ್ಲೇ ಇರುವುದರಿಂದ ಕೆಳವರ್ಗದವರಿಗೆ ಭಿಕ್ಷುಕರ ಸ್ಥಿತಿಯೊದಗಿದೆ. ಮೇಲುನೋಟಕ್ಕೆ ಉತ್ತಮ ಜಾತಿಗಳಲ್ಲಿ ಕೆಲವು ಉದಾರವಾದಿಗಳು ಕಾಣಸಿಗುತ್ತಾರೆ. ವಾಸ್ತವವಾಗಿ ಅವರಲ್ಲಿಯೂ ಬಹು ಸಂಖ್ಯಾತರು ಈ ಸಮಸ್ಯೆಗಳಿಗೆ ತಣ್ಣನೆಯ ಮರುಕವನ್ನೋ ಕ್ರೂರ ಸಾಕ್ಷಿಪ್ರಜ್ಞೆಯನ್ನೋ ತೋರಿಸಿ ತಮ್ಮ ಕರ್ತವ್ಯ ನಿರ್ವಹಿಸಿದ ತೃಪ್ತಿ ಹೊಂದುತ್ತಾರೆ. ಆದುದರಿಂದಲೇ ಸ್ವಾತಂತ್ರ್ಯಪ್ರಾಪ್ತಿಯ ಇಷ್ಟು ವರ್ಷಗಳ ಬಳಿಕವೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ, ಸಂಪರ್ಕಮಾಧ್ಯಮಗಳ ಕ್ಷೇತ್ರಗಳಲ್ಲಿ, ಬ್ಯಾಂಕ್ ಮುಂತಾದ ಆರ್ಥಿಕ ಕ್ಷೇತ್ರಗಳಲ್ಲಿ ಮತ್ತು ಮೇಲ್ತರಗತಿಯ ಅಧಿಕಾರಿಗಳಲ್ಲಿ ಕೇವಲ ಮೇಲುಜಾತಿ ಮತ್ತು ವರ್ಗದ ಅಲ್ಪಸಂಖ್ಯಾತರೇ ತುಂಬಿತುಳುಕುತ್ತಿದ್ದಾರೆ. ಅಕಸ್ಮಾತ್ತಾಗಿ ಒಬ್ಬಿಬ್ಬ ಮಂತ್ರಿಯೋ, ಅಧಿಕಾರಿಯೋ ಅಥವಾ ಸಾಂಸ್ಕೃತಿಕವಾಗಿ ಮಹತ್ವ ಪಡೆಯಬಲ್ಲ ಸೃಜನಶೀಲ ಪ್ರತಿಭಾವಂತನೋ ಬಹುಸಂಖ್ಯಾತ ಹಿಂದುಳಿದ ವರ್ಗದಿಂದ ಬಂದನೆಂದರೆ ಆತನ ಸುತ್ತ ಅಪಪ್ರಚಾರ, ಕುಹಕ ನಿಂದೆಗಳ ಬಲೆಯನ್ನೇ ನೆಯ್ದು ನಿರ್ನಾಮಗೊಳಿಸುವ ವ್ಯವಸ್ಥಿತ ಪ್ರಯತ್ನಗಳೇ ಇರುತ್ತವೆ.

ಮೇಲಿನ ಸ್ಥಿತಿ ಅಮೆರಿಕೆಯ ನೀಗ್ರೋಗಳಿಗೂ ಭಾರತದ ಹಿಂದುಳಿದವರಿಗೂ ಒಂದೇ ಆದರೂ ಅಮೆರಿಕೆ

ಯಲ್ಲಿ ನೀಗ್ರೋಗಳು ಅಲ್ಪಸಂಖ್ಯಾತರು. ಭಾರತದಲ್ಲಿ ಹಿಂದುಳಿದವರೇ ಬಹುಸಂಖ್ಯಾತರು. ಮತ್ತೆ ಕ್ರೋಬರ್ ವಿಚಾರಗಳಿಗೆ ಹಿಂದಿರುಗುವುದಾದರೆ ಇಂದ್ರಿಯಗಳ ಗ್ರಹಣಶಕ್ತಿಯಲ್ಲಿ ನೀಗ್ರೋಗಳು ಬಿಳಿಯರಿಗಿಂತ ಹೆಚ್ಚು ಚುರುಕಾಗಿರುವರಂತೆ ! ರೋಗನಿರೋಧಕ ಶಕ್ತಿಯೂ ಅವರಿಗೇ ಜಾಸ್ತಿ ಇರುತ್ತದೆ. ಜಗತ್ತಿನ ಎಲ್ಲ ಕ್ರೀಡಾ ಸ್ಪರ್ಧೆಗಳಲ್ಲೂ ಮೇಲುಗೈ ಎನಿಸಿಕೊಂಡಿರುವ ನೀಗ್ರೋಗಳ ದೈಹಿಕಶಕ್ತಿ, ಅವರ ಮಾನಸಿಕಸಾಧ್ಯತೆಗಳನ್ನೂ ಸೂಚಿಸುತ್ತದೆ. ಎಂದೂ ಬೆಳೆಯನ್ನೇ ತೆಗೆಯದ ಕನ್ನೆ ನೆಲದಂತಿದೆ ಕರಿಯರ ಬೌದ್ಧಿಕಸಾಧ್ಯತೆ. ಬಿಳಿಯರು ಮತ್ತು ಮೇಲುವರ್ಗದವರಾದರೋ ತಲೆತಲಾಂತರದಿಂದ ಬುದ್ಧಿಯನ್ನು ಬಳಸಿ ಅಸಾರವಾದ ಮುಪ್ಪಿನ ಸ್ಥಿತಿಯನ್ನು ತಲುಪಿದ್ದಾರೆ.

ಪ್ರಾಚೀನ ನಾಗರಿಕತೆಗಳ ಹಿನ್ನೆಲೆಯಲ್ಲಿ 'ಜನಾಂಗವಾದ'ವನ್ನು ಪರಿಶೀಲಿಸುವುದಾದರೆ, ಅತ್ಯಂತ ಪ್ರಾಚೀನ ನಾಗರಿಕತೆಗಳು ಇತಿಹಾಸದಲ್ಲಿ ನಮಗೆ ಗೋಚರಿಸುವುದು ಈಜಿಪ್ಟ್, ಚೀನಾ ಮತ್ತು ಭಾರತದಲ್ಲಿ. ನಮ್ಮ ದೇಶದಲ್ಲಿಯೂ ದ್ರಾವಿಡ ನಾಗರಿಕತೆಯೇ ಹೆಚ್ಚು ಪ್ರಾಚೀನವಾದುದು ಮತ್ತು ಮೇಲ್ತರಗತಿಯದು. ಅತ್ಯಂತ ಹೆಚ್ಚಿನ ಶಬ್ದಸಂಪತ್ತಿಯಿರುವ ಭಾಷೆಗಳೆಂದರೆ ಚೀನಿ ಮತ್ತು ನೀಗ್ರೋ ಭಾಷೆಗಳು. ದ್ರಾವಿಡ ಭಾಷೆಗಳಲ್ಲಿ ಸಿಗುವ ಪ್ರಾಚೀನ ಸಾಹಿತ್ಯ ಯಾವುದೇ ಸಂಸ್ಕೃತಿ ಹೆಮ್ಮೆ ಪಡುವಂತಹುದು. ಜನಪದಸಾಹಿತ್ಯವಂತೂ ಹೇರಳವಾಗಿ, ಸಮೃದ್ಧವಾಗಿ ದೊರಕುವುದು ಕೆಳಸಂಸ್ಕೃತಿಗಳಲ್ಲಿ. ಅಲ್ಲಿ ಸಿಗುವ ದಾಖಲೆಗಳು ಅವರನ್ನು ಇತರರಿಗೆ ಸಮಾನರೆಂದು ಎತ್ತಿ ತೋರಿಸಲು ಸಹಾಯ ಮಾಡುತ್ತವೆ.

ಆದರೂ 'ಬುದ್ಧಿವಂತಿಕೆಯ ಪರೀಕ್ಷೆ' ಗಳಲ್ಲಿ ಮೇಲು ವರ್ಗದವರೇ ಜಯಿಸುತ್ತಾರೆ. ಇದಕ್ಕೆ ಕಾರಣ ಇಂತಹ 'ಬುದ್ಧಿವಂತಿಕೆಯ ಪರೀಕ್ಷೆ'ಗಳ ಪರೀಕ್ಷಾ ವಿಧಾನ. ಅಕ್ಷರಜ್ಞಾನವುಳ್ಳ ಇಂಗ್ಲಿಷ್ ಭಾಷೆಯ ಪರಿಚಯವಿರುವ ಮಧ್ಯಮ ವರ್ಗದಲ್ಲಿ ಹುಟ್ಟಿದವರನ್ನೇ ಗಮನದಲ್ಲಿಟ್ಟುಕೊಂಡು, ಈ ಮೇಲುವರ್ಗಗಳಿಂದಲೇ ಬಂದವರು ಪ್ರಶ್ನೆಗಳನ್ನು ಸಿದ್ಧಪಡಿಸುವುದರಿಂದ, ಪರೀಕ್ಷೆಗಳನ್ನು ರೂಪಿಸುವುದರಿಂದ ಸ್ವಾಭಾವಿಕವಾಗಿಯೇ ಅವರ ವರ್ಗದವರು ಹೆಚ್ಚು ಯಶಸ್ವಿಗಳಾಗುತ್ತಾರೆ. ಈ ಪರೀಕ್ಷಾ ವಿಧಾನವನ್ನು ಬದಲಿಸಿ ಕೆಳವರ್ಗದವರನ್ನು ದೃಷ್ಟಿಯಲ್ಲಿಟ್ಟುಕೊಂಡು ಪರೀಕ್ಷೆಗಳನ್ನು ರೂಪಿಸಿದರೆ ಫಲಿತಾಂಶಗಳು ಬೇರೆ ರೀತಿಯಲ್ಲಿರುವ ಸಾಧ್ಯತೆ ಇದೆ. ಉದಾಹರಣೆಗೆ ಅಮೆರಿಕೆಯಲ್ಲಿಯೇ ನಡೆಸಿದ ಒಂದು ಸಮೀಕ್ಷೆಯಲ್ಲಿ ಸಾಮಾನ್ಯ ವಿದ್ಯಾವಂತ ನೀಗ್ರೋಗಳು ಅವಿದ್ಯಾವಂತ ಬಿಳಿಯರನ್ನು ಇಂಥ ಒಂದು ಪರೀಕ್ಷೆಯಲ್ಲಿ ಸಂಪೂರ್ಣ ಸೋಲಿಸಿಬಿಟ್ಟರಂತೆ. ಅಂದರೆ, ಮೇಲುವರ್ಗದವರ ಬುದ್ಧಿವಂತಿಕೆಯೇನಿದ್ದರೂ 'ಕಲಿಕೆ'ಯಿಂದ ಸಂಪಾದಿಸಿದ್ದು, ಹುಟ್ಟಿನಿಂದಲೇ ಪಡೆದದ್ದಲ್ಲ ಎಂದಾಯಿತು.

ಸಮಾನ ಅವಕಾಶ, ವಾತಾವರಣಗಳನ್ನು ಕಲ್ಪಿಸಿಕೊಟ್ಟು ಆರ್ಥಿಕ ಅಡಚಣೆಗಳನ್ನು ಹೋಗಲಾಡಿಸಿದರೆ ಒಂದೆರಡು ತಲೆಮಾರುಗಳಲ್ಲಿಯೇ ಎಲ್ಲ ಗುಂಪುಗಳಿಂದಲೂ ಎಲ್ಲ ಬಗೆಯ ಜನಗಳೂ ಹೊರಬರುವ ಸಾಧ್ಯತೆಯಿದೆ. ಆದರೆ ಒಂದೊಂದು ಸಮೂಹದ ನಡುವೆಯೂ ಇರುವ ಅಂತರ ಸಂಕೀರ್ಣಸ್ವರೂಪದ್ದು ; ವೈವಿಧ್ಯಮಯವಾದುದು. ಈ ಅಂತರ ಒಂದೇ ದೇಶದಲ್ಲಿ ಬೇರೆ ಬೇರೆ ವರ್ಗಗಳು ಮತ್ತು ಜಾತಿಗಳ ನಡುವೆ ಇರಬಹುದು; ಬೇರೆ ಬೇರೆ ದೇಶಗಳ ನಡುವೆಯೇ ಇರಬಹುದು ; ಒಂದು ದೇಶದ ಬೇರೆ ಬೇರೆ ಪ್ರದೇಶಗಳ ನಡುವೆ ಇರಬಹುದು ; ಸಮಾಜವಾದೀ ರಾಷ್ಟ್ರಗಳ ಹೊರತು ಜಗತ್ತಿನಲ್ಲೆಲ್ಲಾ ಸರ್ವವ್ಯಾಪಿಯಾಗಿ ಕಂಡುಬರುತ್ತಿರುವ ಕೆಳವರ್ಗದವರ ಕಠೋರ ಪರಿಸ್ಥಿತಿಗೆ ವಿಮೋಚನೆಯೇ ಇಲ್ಲವೇನೋ ಎಂದೂ ಒಮ್ಮೊಮ್ಮೆ ಅನ್ನಿಸುತ್ತದೆ. ಇಂಥ ವಿಮೋಚನೆಗಳಿಗಾಗಿ ನಡೆಯುವ ಹೋರಾಟ ಕೇವಲ ಅಹಿಂಸಾತ್ಮಕವಾಗಿದ್ದರೆ ಎಂಥ ಫಲ ದೊರಕಬಹುದೆಂಬುದಕ್ಕೆ ನಮ್ಮ ದೇಶದಲ್ಲಿ 'ಗಾಂಧಿವಾದ'ಕ್ಕೊದಗಿರುವ ದುರ್ಗತಿಯೇ ಸ್ಪಷ್ಟಪಡಿಸುತ್ತದೆ. ಪರ್ಯಾಯಮಾರ್ಗವಂತೂ ಇನ್ನೂ ಭಯಂಕರವಾಗಿದೆ. ಏನಿದ್ದರೂ ಇಂದಿನ ವ್ಯವಸ್ಥೆ ಬದಲಾಗದೆ ಗತ್ಯಂತರವಿಲ್ಲ.

ಶ್ರೀಪತಿ ಸರ್ನಾಡ

ಸಹಜಮಾರ್ಗ ಸಾಧನೆಯಲ್ಲಿ ಹತ್ತು ನಿಯಮಗಳು

ಯೋಗಸಾಧನೆಯಲ್ಲಿ ಯಮ-ನಿಯಮಗಳು ತುಂಬ ಮಹತ್ತ್ವವುಳ್ಳವು. ಅವು ಸಾಧನಾಸೌಧಕ್ಕೆ ಬುನಾದಿಯೆನ್ನಲಡ್ಡಿಯಿಲ್ಲ. ಅವುಗಳನ್ನು ಉಲ್ಲಂಘಿಸಿ ಯಾರೂ ಸಾಧನೆಗೆ ಮೂಲತಃ ಅಧಿಕಾರ ಪಡೆಯಲಾರರು ; ಪ್ರಗತಿಯಂತೂ ದೂರದ ಮಾತಾಯಿತು. ಆದರೆ ಈ ನಿಯಮಗಳು ಸಾಧನೆಗೆ ಸೋಪಾನಪ್ರಾಯವೆಂಬ ಮಾತು ಎಷ್ಟು ಸತ್ಯವೋ, ಅವು ಸಾಧನೆಯ ಪರಿಣಾಮರೂಪವಾಗಿ ಸಾಧಕನಲ್ಲಿ ಬೆಳೆದುಬರಬೇಕೆಂಬ ಮಾತೂ ಅಷ್ಟೇ ಸತ್ಯವಾಗಿದೆ. ಸಾಧನೆ ಮಾಡುತ್ತ ಮಾಡುತ್ತ ಯಮ-ನಿಯಮಗಳು ಶ್ವಾಸ-ಪ್ರಶ್ವಾಸದಂತೆ ಸಹಜವಾಗಿ ಸಾಧಕನಲ್ಲಿ ಮೈಗೂಡಿಹೋಗಬೇಕು.

ಪಾತಂಜಲ-ಯೋಗದರ್ಶನದಲ್ಲಿ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಹಾಗೂ ಅಪರಿಗ್ರಹ ಎಂಬ ಐದು ಯಮಗಳನ್ನೂ ಶೌಚ, ಸಂತೋಷ, ತಪ, ಸ್ವಾಧ್ಯಾಯ ಮತ್ತು ಈಶ್ವರ ಪ್ರಣಿಧಾನ ಎಂಬ ಐದು ನಿಯಮಗಳನ್ನೂ ವಿಧಿಸಲಾಗಿದೆ. ಇವು ಅಷ್ಟಾಂಗಯೋಗದ ಪ್ರಾಥಮಿಕ ಮೆಟ್ಟಿಲುಗಳು. ಇವನ್ನು ಜಾತಿ-ದೇಶ-ಕಾಲಾತೀತವಾದ ಸಾರ್ವಭೌಮ ಮಹಾವ್ರತಗಳೆಂದು ಕರೆಯಲಾಗಿದೆ. ಇವುಗಳ ಅನುಷ್ಠಾನದಿಂದ ಮನುಷ್ಯನ ಅಂತಃಕರಣವು ಶುದ್ಧವಾಗಿ ವಿವೇಕವು ದೀಪ್ತವಾಗುತ್ತದೆ. ಚಿತ್‌ಶಕ್ತಿಯು ಬಲಗೊಂಡು ಅದರಲ್ಲಿ ಪರಮತತ್ತ್ವದ ಅವತರಣವಾಗುತ್ತದೆ.

ಯಮ-ನಿಯಮಗಳನ್ನು ಹೋಲುವ ಹಲವು ಆದೇಶಗಳು ಬಹುಶಃ ಎಲ್ಲ ಧರ್ಮಗಳಲ್ಲಿಯೂ ಕಂಡುಬರುತ್ತವೆ. ಆದರೆ ಧಾರ್ಮಿಕ ಆದೇಶಗಳ ಹಿಂದೆ ಪುಣ್ಯ-ಪಾಪಗಳ ಫಲವನ್ನು ಅಂಟಿಸಲಾಗಿರುವುದರಿಂದ ಅವುಗಳ ಅನುಷ್ಠಾನದಲ್ಲಿ ವ್ಯಕ್ತಿಯ ಉದ್ದೇಶವೇ ಬೇರೆಯಾಗಿಬಿಡುತ್ತದೆ. ಪುಣ್ಯದ ಸಂಚಯ-ವ್ಯಯಗಳ ಲೆಕ್ಕಾಚಾರದ ಭಾವನೆ ಎಲ್ಲಿ ಬರುವುದೋ ಅಲ್ಲಿ ನಿಯಮಾನುಷ್ಠಾನದ ಮಹೋದ್ದೇಶವು ಭ್ರಷ್ಟಹೊಂದಿ ಕೇವಲ ಕರ್ಮಠತನ ಮಾತ್ರ ಉಳಿದುಕೊಳ್ಳುತ್ತದೆ. ಆದುದರಿಂದ ಯೋಗದ ನಿಯಮಗಳು ಧರ್ಮದ ಸ್ತರಕ್ಕಿಂತ ಯಾವಾಗಲೂ ತೀರ ಎತ್ತರದಲ್ಲಿರುತ್ತವೆ. ಧಾರ್ಮಿಕನಾಗುವುದು ಸುಲಭ ; ಆದರೆ ಯೋಗಿಯಾಗುವುದು ಬಹಳ ಕಠಿಣ. ಬಹುಶಃ ಇದೇ ಕಾರಣಕ್ಕಾಗಿ ಯೋಗಮಾರ್ಗವನ್ನನುಸರಿಸಲು ಸಾವಿರದಲ್ಲೊಬ್ಬರು ಧೈರ್ಯತೋರುವರು.

ಸಹಜಮಾರ್ಗ ಯೋಗಸಾಧನೆಯಲ್ಲಿಯೂ ಹತ್ತು ನಿಯಮಗಳನ್ನು ವಿಧಿಸಲಾಗಿದೆ, ಅವು ಈ ಪ್ರಕಾರವಾಗಿವೆ :

೧. ಬೆಳಗುಮುಂಜಾನೆ ಏಳಿರಿ. ಸಂಧ್ಯೋಪಾಸನೆಯನ್ನು ನಿಯಮಿತ ಸಮಯಕ್ಕೆ ಮುಗಿಸಿರಿ. ಸೂರ್ಯೋದಯಕ್ಕಿಂತ ಮುಂಚಿತವಾದರೆ ಬಹಳ ಒಳಿತು. ಪೂಜೆಗಾಗಿ ಪ್ರತ್ಯೇಕ ಸ್ಥಳವನ್ನೂ ಆಸನವನ್ನೂ ಇರಿಸಿಕೊಳ್ಳಿರಿ. ಶಾರೀರಿಕ ಹಾಗು ಮಾನಸಿಕ ಪವಿತ್ರತೆಯ ಕಡೆಗೆ ವಿಶೇಷ ಲಕ್ಷ್ಯವಿರಲಿ.

೨. ನಿಮ್ಮ ಪೂಜೆಯನ್ನು ಆತ್ಮೋನ್ನತಿಯ ಪ್ರಾರ್ಥನೆಯೊಂದಿಗೆ ಆರಂಭಿಸಿರಿ. ಹೃದಯವು ಪ್ರೇಮ-ಭಕ್ತಿಗಳಿಂದ ತುಂಬಿರಲಿ.

೩. ದೇವರಲ್ಲಿ 'ಪೂರ್ಣಸಮರಸ' ವಾಗುವುದೇ ನಿಮ್ಮ ಧ್ಯೇಯವನ್ನಾಗಿಟ್ಟುಕೊಳ್ಳಿರಿ. ಧ್ಯೇಯವು ಪ್ರಾಪ್ತವಾಗುವವರೆಗೆ ನಿಲ್ಲಬೇಡಿರಿ.

೪. ನಿಮ್ಮ ಜೀವನವು ನಿಸರ್ಗದ ಹಾಗೆ ಸರಳ ಮತ್ತು ಸಾಧಾರಣವಾಗಿರಲಿ.

೫. ಸತ್ಯವಂತರಾಗಿರಿ. ಕಷ್ಟಗಳು ನಿಮ್ಮ ಹಿತಕ್ಕಾಗಿಯೆ ಬಂದ ದೈವೀಕೃಪೆಯೆಂದು ತಿಳಿದು ಕೃತಜ್ಞರಾಗಿರಿ.

೬. ಎಲ್ಲರನ್ನೂ ನಿಮ್ಮ ಸಹೋದರರೆಂದು ತಿಳಿದು ಹಾಗೆ ವರ್ತಿಸಿರಿ.

೭. ಯಾರಾದರೂ ಕೇಡುಮಾಡಿದರೆ ಸೇಡು ಬಗೆಯಬೇಡಿರಿ. ಬದಲು, ದೈವೀಸಂಪತ್ತೆಂದು ತಿಳಿದು ಧನ್ಯವಾದಗಳನ್ನರ್ಪಿಸಿರಿ.

೮. ಊಟಮಾಡುವಾಗ ದೇವರನ್ನು ನೆನೆಯುತ್ತ ದೊರೆತದ್ದನ್ನು ಪ್ರಸನ್ನತೆಯಿಂದ ಸ್ವೀಕರಿಸಿರಿ. ಶುದ್ಧ ಹಾಗು ಪವಿತ್ರಗಳಿಕೆಯ ಕಡೆಗೆ ಲಕ್ಷ್ಯವಿರಲಿ.

೯. ಜನರಲ್ಲಿ ಪ್ರೇಮ ಹಾಗು ಪವಿತ್ರ ಭಾವನೆಗಳನ್ನು ಮೂಡಿಸುವ ಹಾಗೆ ನಿಮ್ಮ ಜೀವನವನ್ನು ರೂಪಿಸಿಕೊಳ್ಳಿರಿ.

೧೦. ಮಲಗುವಾಗ ದೇವರು ಎದುರಿನಲ್ಲಿರುವನೆಂದು ತಿಳಿದು, ಮಾಡಿದ ಅಪರಾಧಗಳಿಗಾಗಿ ಪಶ್ಚಾತ್ತಾಪಪಡುತ್ತ ದೈನ್ಯದಿಂದ ಕ್ಷಮೆ ಬೇಡಿರಿ. ಮುಂದೆ ಎಂದಿಗೂ ಅಂಥ ಅಪರಾಧ ಮಾಡದಂತೆ ನಿರ್ಧರಿಸಿ ಪ್ರಾರ್ಥನೆ ಮಾಡಿರಿ.

ಈ ನಿಯಮಗಳಲ್ಲಿ ಯಾವುದೂ ಹೊಸದೆಂಬಂತೆ ಕಾಣುವುದಿಲ್ಲ, ನಿಜ. ಆದರೆ ಅವು ಯಾದೃಚ್ಛಿಕವಾಗಿ ರಚಿತವಾದ ನಿಯಮಗಳಾಗಲಿ, ಸಾಧಕನ ಮೇಲೆ ಅನಾವಶ್ಯಕ ನಿರ್ಬಂಧಗಳನ್ನು ಹೇರಿ ಹೊರೆಯಾಗುವಂಥ ನಿಯಮಗಳಾಗಲಿ ಅಲ್ಲ. ಸಾಧನೆಯ ಅಂತಿಮ ಗುರಿಯಾದ ಭಗವಂತನೊಂದಿಗಿನ ಸಾಮರಸ್ಯವನ್ನು ಲಕ್ಷ್ಯದಲ್ಲಿಟ್ಟುಕೊಂಡು ಅದಕ್ಕೆ ಪೋಷಕವಾಗುವ ಅಂಶಗಳನ್ನೆಲ್ಲ ಅವುಗಳಲ್ಲಿ ಅಳವಡಿಸಲಾಗಿದೆ. ಮೊದಲಿನ ಐದು ನಿಯಮಗಳಲ್ಲಿ ಉಪೇಯವನ್ನೂ ಉಪಾಯಗಳನ್ನೂ ನಿರೂಪಿಸಲಾಗಿದೆ ಪ್ರಾರ್ಥನೆಯು ಕೇವಲ ಆತ್ಮೋನ್ನತಿಗಾಗಿ ಇರಬೇಕೆಂಬುದನ್ನು ಒತ್ತಿಹೇಳಲಾಗಿದೆ. ಸಾಧಕನ ಪ್ರಾರ್ಥನೆ ಸಾಮಾನ್ಯ ಮನುಷ್ಯನ ಪ್ರಾರ್ಥನೆಗಿಂತ ತೀರ ಭಿನ್ನವೆಂಬುದನ್ನು ಮರೆಯಬಾರದು. ಏಕೆಂದರೆ, ಸಾಧಕನು ಅಲ್ಪಕಾಂಕ್ಷೀ ಕೃಪಣನಲ್ಲ. ಆತನು ಇಡೀ ಭಗವತ್-ಸಾಮ್ರಾಜ್ಯವನ್ನೇ ಕೊಳ್ಳೆಹೊಡೆಯಬೇಕೆನ್ನುವ ಧೀರ. ಆದುದರಿಂದ ಆತನು ಭಗವಂತನನ್ನು ಚಿಲ್ಲರೆಯಾದ ಲೌಕಿಕ ವಸ್ತುಗಳಿಗಾಗಿ ಎಂದಿಗೂ ಯಾಚಿಸುವುದಿಲ್ಲ. ತದ್ವಿರುದ್ಧ, ತಾನು ಸಾಧಿಸಹೊರಟ ಮಹಾ ಶ್ರೇಯಸ್ಸಿಗಾಗಿ ಅಲ್ಪ ಪ್ರೇಯಸ್ಸನ್ನು ಬಲಿಕೊಡಲು ಸಹ ಸದಾ ಸಿದ್ಧನಿರುತ್ತಾನೆ. ಆತನ ಪ್ರಾರ್ಥನೆ ಈ ರೀತಿಯಾಗಿರುತ್ತದೆ :

> "ಓ ನಾಥ ! ನೀನೇ ಮಾನವಜೀವನದ ಗುರಿ
> ನಮ್ಮ ಇಚ್ಛೆಗಳು ಆತ್ಮೋನ್ನತಿಯಲ್ಲಿ ಬಾಧಕಗಳಾಗಿವೆ
> ನೀನೇ ನಮ್ಮೆಲ್ಲರ ಏಕಮಾತ್ರಸ್ವಾಮಿ ಹಾಗು ಇಷ್ಟದೈವ
> ನಿನ್ನ ಸಹಾಯವಿಲ್ಲದೆ ನಿನ್ನ ಪ್ರಾಪ್ತಿ ಅಸಂಭವ"

ಈ ಪ್ರಾರ್ಥನೆಯನ್ನು ಕುರಿತು ಸ್ವಲ್ಪ ಆಳವಾಗಿ ಚಿಂತನಮಾಡಿದುದಾದರೆ ಅದರ ಮಹತ್ವ ಮನದಟ್ಟಾಗುವುದು. ಇದರಲ್ಲಿ ಗುರಿಯಿದೆ, ದಾರಿಯಿದೆ. ದಾರಿಯಲ್ಲಿಯ ಅಡ್ಡಿ-ಆತಂಕಗಳೇನೆಂಬುದರ

ಅರಿವಿದೆ. ಅವುಗಳನ್ನು ಪರಿಹಾರ ಮಾಡುವ ವಿಧಾನವೂ ಇದೆ. ಸಾಧಕನಾದವನು ಭಗವಂತನಿಗಿಂತ ಕೆಳಮಟ್ಟದ ಯಾವ ವಸ್ತುವನ್ನೂ ಬಯಸುವುದಿಲ್ಲ. ಅಷ್ಟೇ ಅಲ್ಲ, ಆ ವಸ್ತುಗಳು ಸಾಂಸಾರಿಕ ದೃಷ್ಟಿಯಿಂದ ಎಷ್ಟೇ ಅಪೇಕ್ಷಣೀಯವಾಗಿದ್ದರೂ ಅವು ಭಗವತ್ ಪ್ರಾಪ್ತಿಗೆ ಅಡ್ಡಿಯಾಗಿ ನಿಲ್ಲುವವೆಂಬ ಸತ್ಯವು ಅವನಿಗೆ ತಿಳಿದಿದೆ. ಆದುದರಿಂದ ಅವನು ಪ್ರಾರ್ಥನೆಯ ಮೂಲಕ ತನ್ನ ಹೃದಯವನ್ನು ನಿರ್ವಿಷಯಗೊಳಿಸಿ ಭಗವತ್‌ಪ್ರಾಪ್ತಿಯ ಪ್ರಬಲ ಆಕಾಂಕ್ಷೆಯೊಂದಕ್ಕೇ ಅಲ್ಲಿ ಎಡೆಗೊಡುತ್ತಾನೆ. ನಿರಾಡಂಬರ ಹಾಗೂ ಸತ್ಯನಿಷ್ಠ ಜೀವನವನ್ನು ಸಾಗಿಸುವುದರ ಮೂಲಕ ಆಂತರಿಕ ತೊಡಕುಗಳಾದ ವಿಕಾರ, ವಿಕ್ಷೇಪ, ಆವರಣ ಮುಂತಾದವುಗಳ ವ್ಯೂಹವನ್ನು ಕತ್ತರಿಸಿ ಮೂಲದ ಶುದ್ಧಸ್ಥಿತಿಯನ್ನು ಹೊಂದಲು ಯತ್ನಿಸುತ್ತಾನೆ.

ಜೀವನದಲ್ಲಿ ಕಷ್ಟಗಳು ಬರುವುದು ಸ್ವಾಭಾವಿಕ. ಅವು ಬೇಡವೆನಿಸುವುದು ಆತ್ಮವು ಆನಂದರೂಪವಾಗಿರುವುದರ ಲಕ್ಷಣವೆಂದು ವೇದಾಂತಿಗಳು ಹೇಳುವರಾದರೂ ಕಷ್ಟಗಳು ಪೂರ್ತಿ ಇಲ್ಲದಂತಾಗುವುದು ನಿಸರ್ಗದ ನಿಯಮಕ್ಕೆ ವಿರುದ್ಧವಾದುದು. ಜೀವನದ ಕ್ಲೇಶ ಕಾರ್ಪಣ್ಯಗಳಿಂದ ಪಾರಾಗಲು ಭಗವದ್ಭಕ್ತಿಯನ್ನವಲಂಬಿಸುವ ಜನರು ಪ್ರಪಂಚದಲ್ಲಿರುವರೆಂಬುದು ನಿಜ. ಆದರೆ ಸಾಧಕನು ಆ ಗುಂಪಿಗೆ ಸೇರಿದವನಲ್ಲ. ಆತನ ಭಕ್ತಿ ಅಹೇತುಕವಾಗಿರುತ್ತದೆ. ಸಹಸ್ರಾರು ಅಂತರಾಯಗಳಿದ್ದರೂ ಅಪ್ರತಿಹತವಾಗಿರುತ್ತದೆ. ಭಕ್ತನಿಗೆ 'ಸ್ವಾಮಿ'ಯ ಕಠೋರ ದಯೆಯ ಸ್ಥೂಲರೂಪವೇ ದುಃಖಗಳೆಂಬುದು ಚೆನ್ನಾಗಿ ತಿಳಿದಿದೆ. 'ಪ್ರಿಯತಮ'ನ ಕಠೋರ-ವರ್ತನೆಯಲ್ಲಿಯೂ ಪ್ರೀತಿ ತುಂಬಿರುವಂತೆ ಕಂಡು ಅದು ಆತನಿಗೆ ಸಹ್ಯವೆನಿಸುತ್ತದೆ.

ಇನ್ನುಳಿದ ಐದು ನಿಯಮಗಳು ಬಾಹ್ಯವಾದ ಲೌಕಿಕ ವ್ಯವಹಾರವನ್ನು ತಿಳಿಸಿಕೊಡುವುವು. ಎಲ್ಲರನ್ನೂ ಸೋದರರೆಂದು ತಿಳಿದು ವರ್ತಿಸುವುದೆಂದರೆ ವೈಯಕ್ತಿಕ ಪರಿಮಿತಿಯನ್ನು ನಷ್ಟಗೊಳಿಸಿದಂತೆ. ಅದರಿಂದ ವಿಶ್ವಬಾಂಧವ್ಯವು ತಾನಾಗಿಯೆ ನೆಲೆಗೊಳ್ಳುವುದು. ಎಲ್ಲರೂ ಸೋದರರೆಂದ ಮೇಲೆ ಸೇಡಿಗೆ ಆಸ್ಪದವೆಲ್ಲಿ? ಸೇಡಿನ ಮನೋಭಾವವು ಪ್ರಾಣಿಜೀವನದ ತೀರ ಕೆಳಗಿನ ಸ್ತರದಲ್ಲಿ ಸಹಜವಾಗಿದ್ದು ಸಂಘರ್ಷ ಪ್ರವೃತ್ತಿಯ ರೂಪಾಂತರವಾಗಿದೆ. ಅದರಿಂದ ದುಃಖ ಹೆಚ್ಚುವುದೇ ಹೊರತು ಸುಖ ದೊರೆಯದು. ಸಾಂಸಾರಿಕ ದುಃಖ ಪರಂಪರೆಗಳಲ್ಲಿ ಪ್ರತೀಕಾರಭಾವನೆಯು ಪ್ರಧಾನಪಾತ್ರ ವಹಿಸುವುದೆಂದು ತೋರುತ್ತದೆ. ಮನುಷ್ಯನಲ್ಲಿರುವ ಇಂಥ ದುಷ್ಪ್ರವೃತ್ತಿಗಳನ್ನು ಉದಾತ್ತಗೊಳಿಸಿ ಆತನನ್ನು ದೇವತ್ವದ ಮಟ್ಟಕ್ಕೆ ಕೊಂಡೊಯ್ಯುವುದೇ ಅಧ್ಯಾತ್ಮ ಸಾಧನೆಯ ಸಾರವಾಗಿದೆ. ಆದುದರಿಂದ, ಸಾಧಕನು ಈ ಅಂಶವನ್ನು ಮನಗಂಡು ತನ್ನಲ್ಲಿ ಪ್ರತೀಕಾರ ಭಾವನೆ ಜಾಗ್ರತವಾದಾಗಲೆಲ್ಲ ಸ್ಮರಣೆಯನ್ನು ತಂದುಕೊಳ್ಳಬೇಕು. 'ವಿತರ್ಕಬಾಧನೇ ಪ್ರತಿಪಕ್ಷಭಾವನಮ್' ಎಂಬ ಪಾತಂಜಲ ಯೋಗಸೂತ್ರವಾದರೂ ಇದೇ ಮಾತನ್ನೇ ಹೇಳುತ್ತದೆ.

ನಾವು ಸೇವಿಸುವ ಆಹಾರಕ್ಕೂ ನಮ್ಮ ಮನಸ್ಸಿನ ರೂಪಣಕ್ಕೂ ಬಹಳ ಹತ್ತಿರದ ಸಂಬಂಧವಿದೆ. ಸಾತ್ತ್ವಿಕಾಹಾರದಿಂದ ಸತ್ತ್ವಗುಣವೂ ರಾಜಸಾಹಾರದಿಂದ ರಜೋಗುಣವೂ ತಾಮಸಾನ್ನದಿಂದ ತಮೋಗುಣವೂ ಬೆಳೆಯುತ್ತದೆ. ಅಲ್ಲದೆ, ನಮ್ಮ ಮನಸ್ಸಿನ ಸ್ವಾಸ್ಥ್ಯದ ಮೇಲೆ ಭೋಜನಕಾಲದಲ್ಲಿಯ ನಮ್ಮ ಮನಃಸ್ಥಿತಿಯೂ ಬಹುಮಟ್ಟಿಗೆ ಪರಿಣಾಮ ಬೀರುತ್ತದೆ. ಆದುದರಿಂದಲೇ ಊಟಮಾಡುವಾಗ ಪ್ರಸನ್ನ ಮನಸ್ಕರಾಗಿರಬೇಕೆಂದು ವಿಧಿಸಲಾಗಿದೆ. ಆಹಾರವು ಪವಿತ್ರಗಳಿಕೆಯದಾಗಿರಬೇಕಲ್ಲದೆ ಅಡುಗೆ ಮಾಡುವವರು ಕೂಡ ಭಗವದ್ವಿಚಾರದಲ್ಲಿಯೆ ಮಗ್ನರಾಗಿ ಮಾಡಿದ್ದಾದರೆ ಆ ಅಡುಗೆ ನಿಜವಾಗಿಯೂ 'ಪ್ರಸಾದ'ವಾಗುವುದು. ಇಂಥ ಪ್ರಸಾದವು ಆಧ್ಯಾತ್ಮಿಕ ಉನ್ನತಿಗೆ ತುಂಬ ಸಹಾಯಕವಾಗುವುದು.

ಸಾಧಕನ ಸರಳ ಹಾಗು ಪರಿಶುದ್ಧಜೀವನದಿಂದ ಸಹಜವಾಗಿಯೆ ಇತರರು ಪ್ರಭಾವಿತರಾಗುವರು. ಏಕೆಂದರೆ, ಸಾಮಾನ್ಯವಾಗಿ ಕಾಣಸಿಗದ ಒಂದು ವಿಲಕ್ಷಣಸತ್ತ್ವವು ಆತನ ಜೀವನವಲ್ಲಿ ಎದ್ದುಕಾಣುತ್ತದೆ. ಮಲಗುವ ಮುಂಚೆ ಸಾಧಕನು ಮಾಡುವ ಪ್ರಾರ್ಥನೆ ಆತನಲ್ಲಿ ಸಮರ್ಪಣ ಭಾವವನ್ನು ಹೆಚ್ಚಿಸುತ್ತದೆ. ಅದು ಒಂದು

ರೀತಿಯಿಂದ 'ಕೃತೋ ಸ್ಮರ, ಕೃತಂ ಸ್ಮರ' ಎಂಬ ಉಪನಿಷದಾದೇಶವೆನ್ನಲಡ್ಡಿಯಿಲ್ಲ.

ಸಹಜಮಾರ್ಗಸಾಧನೆಯಲ್ಲಿ ಈ ನಿಯಮಗಳದೇ ಒಂದು ತೂಕವಾದರೆ ಗುರುಗಳಿಂದ ಸಾಧಕನಿಗೆ ದೊರೆಯುವ ಯೌಗಿಕ ಪ್ರಾಣಾಹುತಿಯದೇ ಒಂದು ತೂಕ. ಇಲ್ಲಿ ಮಾರ್ಗದರ್ಶಿಯು ತನ್ನ ಸಂಕಲ್ಪಬಲದಿಂದ ಅಭ್ಯಾಸಿಯ ನಿಮ್ನಪ್ರವೃತ್ತಿಗಳನ್ನು ದುರ್ಬಲಗೊಳಿಸಿ ಅವನ್ನು ಭಗವದಭಿಮುಖವಾಗಿ ತಿರುಗಿಸುವನು. ಅದರಿಂದಾಗಿ ಸಾಧಕನು ಶೀಘ್ರಪ್ರಗತಿಯನ್ನು ಹೊಂದುತ್ತ ಗುರಿಯನ್ನು ಸಮೀಪಿಸುವನು.

ಹೀಗೆ, ಈ ಹತ್ತುನಿಯಮಗಳು ಸಾಧಕನ ಪಾಲಿಗೆ ಆಧ್ಯಾತ್ಮಿಕಜೀವನದ ಅನುಶಾಸನಗಳೆಂದು ತೋರಿದರೂ ನಿಜವಾಗಿ ಅವು ಸಹಜಾವಸ್ಥೆಯ ಕುರುಹುಗಳಾಗಿವೆ. ಭಗವಂತನಿಗೆ ಸಮರ್ಪಿತವಾದ ಬಾಳು ಹೀಗಿರಬೇಕೆಂಬುದನ್ನು ಈ ನಿಯಮಗಳು ಎತ್ತಿ ತೋರಿಸುತ್ತವೆ. ಗುರುಗಳಾದ ಶ್ರೀರಾಮಚಂದ್ರಜಿ ಮಹಾರಾಜರು ಇವುಗಳ ಮೇಲೆ ಅಪೂರ್ವ ಬೆಳಕನ್ನು ಬೀರುವ ಉದ್ಬೋಧಕ ವ್ಯಾಖ್ಯಾನವನ್ನೊಳಗೊಂಡ ಚಿಕ್ಕ ಪುಸ್ತಕವೊಂದನ್ನು ಬರೆದಿದ್ದಾರೆ. ಅದು 'Commentary on Ten Commandments of Sahaj Marg' (ಸಹಜಮಾರ್ಗದ ಹತ್ತು ನಿಯಮಗಳ ವ್ಯಾಖ್ಯಾನ) ಎಂಬ ಹೆಸರಿನಿಂದ ಪ್ರಕಟವಾಗಿದೆ. ತಿರುಪತಿಯ ವೆಂಕಟೇಶ್ವರ ವಿಶ್ವವಿದ್ಯಾಲಯದಲ್ಲಿ ತತ್ತ್ವಶಾಸ್ತ್ರದ ಉಪಾಚಾರ್ಯರೂ ಕೆಲಕಾಲ ಮದ್ರಾಸ್ ವಿಶ್ವವಿದ್ಯಾಲಯದಲ್ಲಿ ತೌಲನಿಕ ಧರ್ಮ, ನೀತಿಶಾಸ್ತ್ರ ಮತ್ತು ದರ್ಶನಗಳ ಪ್ರಾಧ್ಯಾಪಕರೂ ಆಗಿದ್ದ ಸ್ವರ್ಗೀಯ ಡಾ. ಕೆ. ಸಿ. ವರದಾಚಾರಿಯವರು ತಿರುಪತಿಯಲ್ಲಿ ಈ ವ್ಯಾಖ್ಯಾನದ ಮೇಲೆ ಪ್ರವಚನ ಮಾಡಿ ಪುಸ್ತಕರೂಪದಲ್ಲಿ ಪ್ರಕಟಿಸಿದ್ದಾರೆ. ಸಾಕ್ಷಾತ್ಕಾರದಲ್ಲಿ ನಿಜವಾಗಿ ಆಸಕ್ತಿಯುಳ್ಳವರಿಗೆ ಈ ಪ್ರಕಟನೆಗಳು ತುಂಬ ಉಪಯುಕ್ತವಾಗಿವೆ.

ಪ್ರತಿಯೊಬ್ಬನಲ್ಲಿಯೂ ಜ್ಞಾನಾರ್ಜನೆಗೆ ಇರುವ ವ್ಯತ್ಯಾಸಕ್ಕೆ ಕಾರಣವನ್ನು ಪುನರ್ಜನ್ಮ ಸಿದ್ಧಾಂತವಲ್ಲದೆ ಮತ್ತಾವುದೂ ಕೊಡಲಾರದು. ಮೊದಲು ನಾವು ಜ್ಞಾನವನ್ನು ಹೇಗೆ ಪಡೆಯುತ್ತೇವೆ ಎಂಬುದನ್ನು ವಿಚಾರಿಸೋಣ.

ಡಾ. ಕೆ. ಎಸ್. ರಾಮೇಗೌಡ

ಕರ್ನಾಟಕದಲ್ಲಿ ನಗರಯೋಜನೆ

ನಗರ ಮತ್ತು ಗ್ರಾಮೀಣ ಯೋಜನೆಂಬ ಕಲೆ ಇತ್ತೀಚಿನದಾದರೂ ತೀವ್ರತಮ ಔದ್ಯೋಗಿಕರಣ, ತತ್ಪರಿಣಾಮವಾಗಿ ಉಂಟಾದ ನಗರೀಕರಣ, ಇವುಗಳಿಂದಾಗಿ ನಗರ ಯೋಜನೆಗೆ ಈಗ ವಿಶ್ವದಾದ್ಯಂತ ವಿಶೇಷ ಮಹತ್ವ ದೊರಕಿವೆ. ಸ್ವಾತಂತ್ರ್ಯಾನಂತರ ಭಾರತದಲ್ಲಿ ಪಂಚವಾರ್ಷಿಕ ಯೋಜನೆಗಳ ಪರಿಣಾಮದಿಂದಾಗಿ ಎಲ್ಲ ಕ್ಷೇತ್ರಗಳಲ್ಲಿಯೂ ಅಭಿವೃದ್ಧಿಯಾಗಿದೆ. ಔದ್ಯಮಿಕ ಹಾಗೂ ಅರ್ಥಿಕ ರಂಗದಲ್ಲಿ ಹಿಂದೆಂದೂ ಕಾಣದ ಜಾಗೃತಿ ಉಂಟಾಗಿದೆ. ಇದರಿಂದಾಗಿ ಕೆಲವೇ ಪ್ರದೇಶಗಳು ಶೀಘ್ರವಾಗಿ ಅಭಿವೃದ್ಧಿಯಾಗಿವೆ. ಪಂಚವಾರ್ಷಿಕ ಯೋಜನೆಗಳಲ್ಲಿ ಔದ್ಯೋಗಿಕ ಹಾಗೂ ಆರ್ಥಿಕ ಪ್ರಗತಿಗೆ ಮಹತ್ವ ನೀಡಿದ್ದರೂ ಸರ್ವಪ್ರದೇಶಗಳ ಸಮಾನಾಭಿವೃದ್ಧಿಯನ್ನು ಸಾಧಿಸಲಾಗಲಿಲ್ಲ. ಔದ್ಯಮೀಕರಣದಿಂದುಂಟಾದ ಇಂಥ ಸಮತೋಲವಿಲ್ಲದ ಅಭಿವೃದ್ಧಿಯಿಂದಾಗಿ ಹಾಗೂ ಜನಸಂಖ್ಯೆಯ ಏರುವಿಕೆಯಿಂದಾಗಿ, ಗ್ರಾಮೀಣ ಪ್ರದೇಶಗಳಿಂದ ನಗರಪ್ರದೇಶಗಳಿಗೆ ಜನರು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ವಲಸೆ ಬರುವಂತಾಯಿತು. ತತ್ಪರಿಣಾಮವಾಗಿ ನಗರಗಳಲ್ಲಿ ಅವನತವಾದ ಪರಿಸರ, ಕೊಳಚೆ ಪ್ರದೇಶಗಳ ನಿರ್ಮಾಣಕ್ಕೆ ಮೂಲ ಕಾರಣವಾಯಿತು.

ಸುವ್ಯವಸ್ಥಿತ ಹಾಗೂ ಸಮನ್ವಯ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ರಾಷ್ಟ್ರಮಟ್ಟದಲ್ಲೂ ಪ್ರದೇಶಮಟ್ಟದಲ್ಲೂ ಅದರಂತೆ ಸ್ಥಳೀಯವಾಗಿಯೂ ವ್ಯಾಪಕವಾದ ಯೋಜನೆಗಳು ಅತ್ಯವಶ್ಯ. ಇದಕ್ಕಾಗಿ ಪ್ರತಿಯೊಂದು ರಾಜ್ಯವನ್ನೇ ಸ್ವಯಂಪೂರ್ಣ ಘಟಕವೆಂದೂ ಪರಿಗಣಿಸಬಹುದು. ಯೋಜಿತ ಮತ್ತು ವ್ಯವಸ್ಥಿತ ಜೀವನಕೆ ನಗರ ಹಾಗೂ ಗ್ರಾಮೀಣ ಜೀವನಗಳ ನಡುವಣ ಅಸಮತೆಯನ್ನು ನಿವಾರಿಸಲು ಸಹಾಯಕವಾಗುತ್ತವೆ. ಅದರಂತೆ ನಗರ ಹಾಗೂ ಗ್ರಾಮೀಣ ಬೆಳವಣಿಗೆಯಲ್ಲಿ ಸಮತೋಲವನ್ನು ಕಾಪಾಡಿಕೊಳ್ಳಲು ರಾಜ್ಯಮಟ್ಟದಲ್ಲಿಯೂ, ನಗರ ಹಾಗೂ ಹಳ್ಳಿಗಳ ಯೋಜಿತ, ವ್ಯವಸ್ಥಿತ, ಸುಸಂಘಟಿತ ಬೆಳವಣಿಗೆ ಅವಶ್ಯವೇ ಸರಿ. 1972 ಜನಗಣತಿಯ ಅಂಕಿ ಸಂಖ್ಯೆಗಳಿಂದ ಕಂಡುಬರುವುದೇನೆಂದರೆ ಸಣ್ಣ ನಗರಗಳು ದೊಡ್ಡ ಪಟ್ಟಣಗಳಷ್ಟು ಶೀಘ್ರಗತಿಯಿಂದ ಬೆಳೆಯುತ್ತಿಲ್ಲ. ನಗರೀಕರಣದ ಇಂಥ ಪ್ರವೃತ್ತಿಯನ್ನು ಕೂಲಂಕಷವಾಗಿ ಪರಿಗಣಿಸಬೇಕಾಗುವದು. ಸಣ್ಣ ನಗರಗಳಲ್ಲಿ ಹಾಗೂ ಅನಭಿವೃದ್ಧಿ ಅಥವಾ ಅಲ್ಪ ಅಭಿವೃದ್ಧಿ ಹೊಂದಿದ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿ ಚಟುವಟಿಕೆಗಳ ವಿಕೇಂದ್ರೀಕರಣವನ್ನೇ ಗುರಿಯಾಗಿಟ್ಟುಕೊಂಡು ರಾಜ್ಯದ ಸಮತೋಲ ಅಭಿವೃದ್ಧಿಗೆ ಪೂರಕವಾಗುವಂತೆ ನೋಡಿಕೊಳ್ಳಬೇಕು.

ಕರ್ನಾಟಕದಲ್ಲಿ ತುಲನಾತ್ಮಕವಾಗಿ ನೋಡಿದರೆ, ನಗರೀಕರಣ ಹೆಚ್ಚು ಗಮನಾರ್ಹವಾಗಿದೆ. 1971 ರ ಜನಗಣತಿಯ ಪ್ರಕಾರ ರಾಜ್ಯದಲ್ಲಿ 245 ನಗರ–ಪಟ್ಟಣಗಳು 26,821 ಗ್ರಾಮಗಳು ಇದ್ದು ಒಟ್ಟು ಜನಸಂಖ್ಯೆ 2,92,63,334. 1961ರಲ್ಲಿ ಶೇಕಡ 22.3 ಇದ್ದ ನಗರವಾಸಿಗಳ ಪ್ರಮಾಣವು 1971 ರಲ್ಲಿ ಶೇಕಡ 24.3 ರಷ್ಟು

ಯಿತು. ಇದೇ ಅವಧಿಯಲ್ಲಿ ಭಾರತದ ನಗರ ವಾಸಿಗಳ ಪ್ರಮಾಣ ಶೇಕಡಾ 17.99 ರಿಂದ ಶೇಕಡಾ 19.91 ರಷ್ಟು ಮಾತ್ರ ಹೆಚ್ಚಾಯಿತು. 1961ರ ಜನಗಣತಿಯ ಪ್ರಕಾರ ಕರ್ನಾಟಕದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆಯುಳ್ಳ 1ನೇ ವರ್ಗದ ಪಟ್ಟಣಗಳು ಆರು ಮಾತ್ರ ಇದ್ದವು. ಆದರೆ 1971ರ ಜನಗಣತಿಯಂತೆ ಈಗ ಹನ್ನೆರಡು 1ನೇ ವರ್ಗದ ಪಟ್ಟಣಗಳಿವೆ. ಇದೇ ಅವಧಿಯಲ್ಲಿ ನಗರ ಪ್ರದೇಶಗಳ ಸಂಖ್ಯೆ 214 ರಿಂದ 230 ಕ್ಕೆ ಏರಿದೆ.

ಜನಸಂಖ್ಯೆಗೆ ಅನುಗುಣವಾಗಿ ನಗರಗಳನ್ನು ಆರು ವರ್ಗದಲ್ಲಿ ವಿಂಗಡಿಸಲಾಗುತ್ತದೆ. 1961 ಮತ್ತು 1971ರಲ್ಲಿ ಬೇರೆ ಬೇರೆ ವರ್ಗಗಳಲ್ಲಿರುವ ನಗರಗಳ ಸಂಖ್ಯೆ ಮತ್ತು ಕಳೆದ ಎರಡು ದಶಕಗಳಲ್ಲಿ ಆಯಾ ವರ್ಗದ ನಗರಗಳಲ್ಲಿಯ ನಗರವಾಸಿಗಳ ಸಂಖ್ಯೆಯ ಹೆಚ್ಚಳದ ಶೇಕಡಾವಾರು ಪ್ರಮಾಣವನ್ನು ಈ ಕೆಳಗಿನ ಕೋಷ್ಟಕದಲ್ಲಿ ಸೂಚಿಸಲಾಗಿದೆ.

ರಾಜ್ಯದಲ್ಲಿ ನಗರವರ್ಗಗಳು ಮತ್ತು ನಗರವಾಸಿಗಳ ಬೆಳವಣಿಗೆಯ ಸೂಚನೆ

ನಗರಗಳ ವರ್ಗೀಕರಣ	ಜನಸಂಖ್ಯೆ	ಪಟ್ಟಣಗಳ ಸಂಖ್ಯೆ 1961	ಪಟ್ಟಣಗಳ ಸಂಖ್ಯೆ 1971	ಜನಸಂಖ್ಯೆಯ ಶೇಕಡಾವಾರು ಬೆಳವಣಿಗೆಯ ದರ 1951 ರಿಂದ 1961	ಜನಸಂಖ್ಯೆಯ ಶೇಕಡಾವಾರು ಬೆಳವಣಿಗೆಯ ದರ 1961 ರಿಂದ 1972
1 ವರ್ಗ	1,00,000 ಮತ್ತು ಹೆಚ್ಚು	6	12	34.08	61.53
2 ವರ್ಗ	50,000 ದಿಂದ 99,999	9	9	70.38	0.78
3 ವರ್ಗ	20,000 ದಿಂದ 49,999	30	38	42.33	35.40
4 ವರ್ಗ	10,000 ದಿಂದ 19,999	77	99	37.60	32.35
5 ವರ್ಗ	5,000 ದಿಂದ 9,999	57	46	54.20	20.39
6 ವರ್ಗ	5,000 ಕ್ಕಿಂತ ಕಡಮೆ	35	26	26.60	29.97
	ಒಟ್ಟು	214	230		

ಕರ್ನಾಟಕದಲ್ಲಿ ನಗರಯೋಜನೆಗೆ ಆದ್ಯತೆ : ನಗರಯೋಜನೆಯ ಕ್ಷೇತ್ರದಲ್ಲಿ ಕರ್ನಾಟಕ ಒಂದು ಮಾರ್ಗದರ್ಶಕ ರಾಜ್ಯ. ಹಿಂದೆ ರಾಜಮಹಾರಾಜರ ಕಾಲದಿಂದಲೂ ನಗರಗಳ ಅಭಿವೃದ್ಧಿ ಹಾಗೂ ಸೌಂದರ್ಯಾಭಿವೃದ್ಧಿಗೆ ಹೆಚ್ಚು ಗಮನ ಕೊಡಲಾಗುತ್ತಿತ್ತು. ರಾಜ್ಯದಲ್ಲಿರುವ ಅನೇಕ ಆಕರ್ಷಕ ಪಟ್ಟಣಗಳು, ಆಗಿನ ಅರಸರೂ ಆಡಳಿತಗಾರರೂ ಈ ದಿಶೆಯಲ್ಲಿ ವಹಿಸಿದ ಆಸ್ಥೆಯ ಪ್ರತೀಕವೆಂಬಂತೆ, ಈಗಲೂ ಹೆಸರಾಗಿವೆ. ಅತ್ಯುತ್ತಮ ನಗರಗಳನ್ನು ಕಟ್ಟಲು ಬಹಳವಾಗಿ ಶ್ರಮಿಸಲಾಗುತ್ತಿತ್ತು. 1903ನೇ ಇಸವಿಯ 'ಮೈಸೂರು ನಗರಾಭಿವೃದ್ಧಿ ಕಾಯಿದೆ' ನಗರಯೋಜನೆ ಹಾಗೂ ಅಭಿವೃದ್ಧಿಯ ಉದ್ದೇಶದಿಂದ ಇಡೀ ರಾಷ್ಟ್ರದಲ್ಲಿಯೇ ಮೊಟ್ಟಮೊದಲ ಬಾರಿಗೆ ಅಸ್ತಿತ್ವಕ್ಕೆ ಬಂದ ಅಧಿನಿಯಮ. ಅನಂತರ ಇದೇ ಉದ್ದೇಶಕ್ಕಾಗಿ 1945ರಲ್ಲಿ 'ಬೆಂಗಳೂರು ನಗರಾಭಿವೃದ್ಧಿ' ಕಾಯಿದೆಯನ್ನು ಅಂಗೀಕರಿಸಲಾಯಿತು. ರಾಜ್ಯದಲ್ಲಿನ ಇತರೇ ಪಟ್ಟಣಗಳ ನಗರಯೋಜನೆಯ ಕಾರ್ಯಗಳನ್ನು ಆಯಾ ಪಟ್ಟಣಗಳ ಪುರಸಭೆಗಳೇ ನೋಡಿಕೊಳ್ಳುತ್ತಿದ್ದವು.

ರಾಜ್ಯಗಳ ಪುನರ್‌ರಚನೆಗೆ ಮೊದಲು ಮುಂಬಯಿ ಕರ್ನಾಟಕ, ಹೈದರಾಬಾದು ಕರ್ನಾಟಕ ಹಾಗೂ ಮದರಾಸು ಕರ್ನಾಟಕ ಪ್ರದೇಶಗಳಲ್ಲಿ ನಗರ ಯೋಜನಾ ಕಾರ್ಯವನ್ನು ಆಯಾ ಪ್ರದೇಶದ ನಗರಯೋಜನಾ ಮುಖ್ಯಾಧಿಕಾರಿಗಳು ನೋಡಿಕೊಳ್ಳುತ್ತಿದ್ದರು. ಮುಂಬೈ ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ಮುಂಬೈ ನಗರ ಯೋಜನಾ ಕಾಯಿದೆ–1915, ಮದ್ರಾಸ್ ಕರ್ನಾಟಕದ ಜಿಲ್ಲೆಗಳಲ್ಲಿ ಮದ್ರಾಸ್ ನಗರಯೋಜನಾ ಕಾಯಿದೆ, 1920 ಮತ್ತು ಹೈದರಾಬಾದು ಕರ್ನಾಟಕದ ಜಿಲ್ಲೆಗಳಲ್ಲಿ ಹೈದರಾಬಾದು ನಗರಸಭೆಯ ಕಾಯಿದೆಯಲ್ಲಿದ್ದ ನಗರ ಯೋಜನೆ ನಿಯಮಗಳಂತೆ ಯೋಜನಾ ಕಾರ್ಯಗಳನ್ನು ವಹಿಸಿಕೊಳ್ಳಲಾಗುತ್ತಿತ್ತು.

1959ನೇ ಇಸವಿ ನವೆಂಬರ 3 ರಂದು ಪದನಿಮಿತ್ತ ನಗರಯೋಜನಾ ನಿರ್ದೇಶಕರ ಅಧೀನದಲ್ಲಿ ಪ್ರತ್ಯೇಕ ನಗರಯೋಜನಾ ಇಲಾಖೆ ಅಸ್ತಿತ್ವಕ್ಕೆ ಬಂತು. ಕೇಂದ್ರ ಸರಕಾರವೂ ಶೀಘ್ರವಾಗಿ ಬೆಳೆಯುತ್ತಿರುವ ನಗರಗಳಿಗೆ ಮಹಾಯೋಜನೆಗಳನ್ನು ತಯಾರಿಸಲು ಅನುಕೂಲವಾಗುವಂತೆ ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಆರ್ಥಿಕ ಸಹಾಯವನ್ನು ನೀಡಿತು. ಈ ಸದಾವಕಾಶವನ್ನು ಉಪಯೋಗಿಸಿಕೊಂಡು ಕರ್ನಾಟಕ ರಾಜ್ಯವು 9 ಮುಖ್ಯ ನಗರಗಳಲ್ಲಿ ಇಲಾಖೆಯ ಉಪಶಾಖೆಗಳನ್ನು ತೆರೆಯಿತು. ಮುಂದೆ ನಾಲ್ಕನೇ ಹಾಗೂ ಐದನೇ ಪಂಚವಾರ್ಷಿಕ ಯೋಜನೆಗಳಲ್ಲಿ ಇಲಾಖೆಯು ರಾಜ್ಯ ಸರ್ಕಾರದ ಆರ್ಥಿಕ ಸಹಾಯದೊಂದಿಗೆ ಮಹಾಯೋಜನಾ ಘಟಕಗಳನ್ನು, ಜಿಲ್ಲಾ ಯೋಜನಾ ಘಟಕಗಳನ್ನು ಮತ್ತು ಪ್ರಾದೇಶಿಕಾ ಯೋಜನಾ ಘಟಕಗಳನ್ನು ತಯಾರಿಸಲು ಇನ್ನೂ 9 ಉಪಶಾಖೆಗಳನ್ನು ತೆರೆಯಿತು. ಪ್ರಸ್ತುತ ಇಲಾಖೆಯು ಬೆಂಗಳೂರು ನಗರದಲ್ಲಿ ತನ್ನ ಕೇಂದ್ರಕಛೇರಿಯನ್ನು ಹೊಂದಿದ್ದು ಎಲ್ಲ 19 ಜಿಲ್ಲೆಗಳಲ್ಲೂ ತನ್ನ ಉಪಶಾಖೆಗಳನ್ನು ಹೊಂದಿದೆ.

ನಗರ ಹಾಗೂ ಗ್ರಾಮಾಂತರ ಯೋಜನಾ ಕಾಯಿದೆ : 1961ರಲ್ಲಿ ನಗರ ಹಾಗೂ ಗ್ರಾಮಾಂತರ ಯೋಜನೆಯ ವ್ಯಾಪಕ ಶಾಸನವೊಂದನ್ನು ರಚಿಸಿದ ಕರ್ನಾಟಕ ಈ ದಿಶೆಯಲ್ಲಿ ಪ್ರಥಮ ರಾಜ್ಯವಾಗಿದೆ. 'ಕರ್ನಾಟಕ ನಗರ ಹಾಗೂ ಗ್ರಾಮಾಂತರ ಯೋಜನಾ ಕಾಯದೆ—1961' ಎಂಬ ಈ ಅಧಿನಿಯಮ 1965 ನೇ ಜನವರಿ 15 ರಂದು ಜಾರಿಗೆ ಬಂದಿತು. ಈ ಕಾಯಿದೆ ಮೇರೆಗೆ 'ರಾಜ್ಯ ನಗರಯೋಜನಾಮಂಡಲಿಯನ್ನುಸ್ಥಾಪಿಸಲಾಯಿತು. ರಾಜ್ಯದ ನಗರಯೋಜನಾಮಂಡಲಿಯು, ಯೋಜನೆ ಮತ್ತು ಅಭಿವೃದ್ಧಿಯನ್ನು ಕುರಿತು ಹಾಗೂ ಇದಕ್ಕೆ ಸಂಬಂಧಪಟ್ಟ ಕಾರ್ಯ ನೀತಿ, ಸೂತ್ರಗಳ ವಿಚಾರವಾಗಿ ಸರಕಾರಕ್ಕೂ, ಯೋಜನಾ ಪ್ರಾಧಿಕಾರ ವ್ಯವಸ್ಥೆಗಳಿಗೂ ಸಲಹೆ ನೀಡುವ ರಾಜ್ಯಮಟ್ಟದ ಸಂಸ್ಥೆಯಾಗಿದೆ. ನಗರ ಹಾಗೂ ಗ್ರಾಮಾಂತರ ಯೋಜನಾ ಮಂತ್ರಿಯವರು ಅಧ್ಯಕ್ಷರಾಗಿರುವ ಈ ಮಂಡಲಿಗೆ ನಗರಯೋಜನಾ ಇಲಾಖೆಯ ನಿರ್ದೇಶಕರು ಸದಸ್ಯ–ಕಾರ್ಯದರ್ಶಿಯಾಗಿದ್ದಾರೆ.

ಈ ಮಂಡಲಿಯ ಸಲಹೆಯ ಮೇರೆಗೆ ಮುಖ್ಯವಾದ ಪಟ್ಟಣಗಳಿಗೆ ಮತ್ತು ಅವುಗಳ ಸುತ್ತಲಿನ ಹಳ್ಳಿಗಳಿಗೆ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಲು ಯೋಜನಾ ಪ್ರಾಧಿಕಾರ ವ್ಯವಸ್ಥೆಗಳನ್ನು ರಚಿಸಲಾಗಿದೆ. ರಾಜ್ಯದಲ್ಲಿ ತೀವ್ರಗತಿಯಿಂದ ಬೆಳೆಯುತ್ತಿರುವ ಈ ಕೆಳಗೆ ನಮೂದಿಸಿರುವ 11 ಯೋಜನಾ ಪ್ರದೇಶಗಳಿಗೆ ಯೋಜನಾ ಪ್ರಾಧಿಕಾರ ವ್ಯವಸ್ಥೆಗಳನ್ನು ರಚಿಸಲಾಗಿದೆ.

1. ಬೆಂಗಳೂರು ಮಹಾನಗರ
2. ಬೆಳಗಾವಿ
3. ದಾಂಡೇಲಿ ಪ್ರದೇಶ
4. ದಾವಣಗೆರೆ
5. ಗುಲಬರ್ಗಾ
6. ಹುಬ್ಬಳ್ಳಿ–ಧಾರವಾಡ
7. ಕೋಲಾರ ಚಿನ್ನದ ಗಣಿ ಪ್ರದೇಶ
8. ಮಂಗಳೂರು
9. ಮೈಸೂರು.
10. ಶಿವಮೊಗ್ಗ–ಭದ್ರಾವತಿ
11. ವಿಜಯ ನಗರ ಉಕ್ಕು ಪ್ರದೇಶ

ಈ ಕೆಳಕಂಡ ನಗರ ಹಾಗೂ ಪಟ್ಟಣ ಪ್ರದೇಶಗಳಿಗೆ ಸ್ಥಳೀಯ ಯೋಜನಾ ಪ್ರದೇಶವನ್ನು ಶಾಸನಾ ಬದ್ಧವಾಗಿ ನಿರ್ಧರಿಸಿದ್ದು ಇವುಗಳಿಗೆ ಯೋಜನಾ ಪ್ರಾಧಿಕಾರ ವ್ಯವಸ್ಥೆಯನ್ನು ರಚಿಸಲು ಕ್ರಮತೆಗೆದುಕೊಳ್ಳಲಾಗುತ್ತಿದೆ.

1. ಬಾಗಲಕೋಟೆ	6. ಬಿಜಾಪುರ
2. ಬೀದರ	7. ಕಾರವಾರ
3. ಚಿತ್ರದುರ್ಗ	8. ಕೋಲಾರ
4. ಗದಗ-ಬೆಟಗೇರಿ	9. ರಾಯಚೂರು
5. ಹಾಸನ	10. ಉಡುಪಿ-ಮಲ್ಪೆ

ಇದಿಷ್ಟಾದರೆ, ರಾಜ್ಯದಲ್ಲಿನ ಎಲ್ಲ 1ನೇ ವರ್ಗದ ಮತ್ತು 2ನೇ ವರ್ಗದ ನಗರ ಹಾಗೂ ಪಟ್ಟಣಗಳಿಗೆ ಯೋಜನಾ ಪ್ರಾಧಿಕಾರಗಳನ್ನು ರಚಿಸಿದಂತಾಗುವದು.

ನಗರಯೋಜನಾ ಇಲಾಖೆಯು ರಾಜ್ಯ ನಗರಯೋಜನಾಮಂಡಲಿ ಮತ್ತು ಯೋಜನಾ ಪ್ರಾಧಿಕಾರ ವ್ಯವಸ್ಥೆಗಳಿಗೆ ತನ್ನ ಸಹಾಯ ಸಹಕಾರಗಳನ್ನು ನೀಡುತ್ತದೆ. ಇದರ ಜೊತೆಗೆ ಇನ್ನುಳಿದ ಮಹತ್ವದ ನಗರ ಪಟ್ಟಣಗಳಿಗೆ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಲಾಗುತ್ತಿದೆ. ಸಂಪನ್ಮೂಲ ಪ್ರದೇಶ ಹಾಗೂ ನದಿ ಕಣಿವೆ ಪ್ರದೇಶಗಳಿಗೆ, ಹೊಸ ನಗರ ನಿರ್ಮಾಣಕ್ಕೆ, ಪ್ರವಾಸಿ ಕೇಂದ್ರಗಳಿಗೆ, ಯಾತ್ರಾ ಕ್ಷೇತ್ರಗಳಿಗೆ, ಗಿರಿಧಾಮಗಳಿಗೆ, ಪುನರ್ನಿವೇಶನ ಕೇಂದ್ರಗಳಿಗೆ ಅಭಿವೃದ್ಧಿ ಯೋಜನೆಗಳನ್ನೂ ನಗರ ಬಡಾವಣೆ ಹಾಗೂ ವಿಸ್ತರಣಾ ಕಾರ್ಯಕ್ರಮಗಳನ್ನೂ ಮತ್ತು ಸಂಚಾರ ಹಾಗೂ ಸಾಗಾಣಿಕೆ ವಿನ್ಯಾಸ ರೂಪರೇಖೆಗಳನ್ನೂ ತಯಾರಿಸುವ ಕಾರ್ಯಭಾರವನ್ನು ವಹಿಸಿಕೊಂಡಿದೆ.

ನಗರ (ಪಟ್ಟಣ) ಗಳ ಸಮೀಕ್ಷೆ: ಪ್ರಾರಂಭಿಕ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಲು ಇತ್ತೀಚಿನ ನಗರ ನಕ್ಷೆಗಳು ಅತ್ಯಾವಶ್ಯಕವಾಗಿದ್ದು ರಾಜ್ಯದಲ್ಲಿ ಹೆಚ್ಚಿನ ನಗರಗಳಿಗೆ ಇಂತಹ ನಕ್ಷೆಗಳು ಇರಲಿಲ್ಲ. ಇಲಾಖೆಯು ರಾಜ್ಯದಲ್ಲಿನ ಎಲ್ಲ ತಾಲ್ಲೂಕು ಕೇಂದ್ರಗಳಿಗೂ ಇನ್ನುಳಿದ ನಗರಗಳಿಗೂ ಪರಿಶೀಲನಾ ಕಾರ್ಯವನ್ನು ಆರಂಭಿಸಿ 175 ತಾಲ್ಲೂಕು ಕೇಂದ್ರಗಳಿಗೂ ಹಾಗೂ 48 ನಗರಗಳಿಗೂ ಮೂಲ ನಕ್ಷೆಯನ್ನು ತಯಾರಿಸಿದೆ. ಆಯಾ ವರ್ಗದ ನಗರಗಳಿಗೆ ತಯಾರಿಸಿಟ್ಟ ನಕ್ಷೆ ಹಾಗೂ ಅಭಿವೃದ್ಧಿ ಯೋಜನೆಗಳ ವಿವರಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ಕೊಡಲಾಗಿದೆ. (ಪುಟ 340)

ಗ್ರಾಮಾಂತರ ಯೋಜನೆ: ಇಲಾಖೆಯು ತುಂಗಭದ್ರಾ, ಕೃಷ್ಣ ಮೇಲ್ದಂಡೆ, ಘಟಪ್ರಭಾ, ಹೇಮಾವತಿ ಮತ್ತು ಮಂಗಳೂರು ಬಂದರು ಯೋಜನೆಗಳ ಜಲಾವೃತ್ತ ಪ್ರದೇಶಗಳಲ್ಲಿನ ಸುಮಾರು 100 ಗ್ರಾಮಗಳಿಗಾಗಿ ಪುನರ್ನಿವೇಶನಾ ಯೋಜನೆಗಳನ್ನು ತಯಾರಿಸಿದೆ. ಅಲ್ಲದೆ ಉತ್ತರಕನ್ನಡ ಜಿಲ್ಲೆಯ ಮುಂಡಗೋಡಿನಲ್ಲಿನ ಟಿಬೇಟಿನ ನಿರಾಶ್ರಿತರ ಶಿಬಿರಕ್ಕೂ ಯೋಜನೆ ಸಿದ್ಧಪಡಿಸಿದೆ. ಹಳ್ಳಿಗಳ ಸುಧಾರಣೆ ಹಾಗೂ ಅಭಿವೃದ್ಧಿಗೋಸ್ಕರ ಯೋಜನಾ ಪ್ರದೇಶದಲ್ಲಿನ ಸುಮಾರು ಒಂದು ಸಾವಿರ ಹಳ್ಳಿಗಳಿಗೆ ರೂಪರೇಷೆಗಳನ್ನು ಇಲಾಖೆಯು ತಯಾರಿಸಿದೆ.

ಸಂಚಾರ ವಿಭಾಗ (ಕೋಶ): ಪಟ್ಟಣ ಪ್ರದೇಶಗಳಲ್ಲಿ ಮುಖ್ಯವಾಗಿ ಮಹಾನಗರ ಪ್ರದೇಶಗಳಲ್ಲಿ ಸಂಚಾರ ಸಾರಿಗೆಯ ಪ್ರಧಾನ್ಯತೆ ಹೆಚ್ಚುತ್ತಿದೆ. ಬೆಂಗಳೂರಿನಲ್ಲೂ ಅನೇಕ ಸಂಚಾರ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಈ ಸಮಸ್ಯೆಗಳನ್ನು ಅರಿತುಕೊಳ್ಳುವ ಮತ್ತು ಅವುಗಳಿಗೆ ಸೂಕ್ತ ಪರಿಹಾರಗಳನ್ನು ಸೂಚಿಸುವ ಉದ್ದೇಶದಿಂದ ಇಲಾಖೆಯು ನವದೆಹಲಿಯಲ್ಲಿರುವ ಕೇಂದ್ರ ರಸ್ತೆ ಸಾರಿಗೆ ಸಂಶೋಧನಾ ಸಂಸ್ಥೆಯ ಸಹಕಾರ

ದೊಡನೆ ಬೆಂಗಳೂರಿನಲ್ಲಿ ವ್ಯಾಪಕವಾದ ಸಂಚಾರ ಮತ್ತು ಸಾರಿಗೆ ಅಧ್ಯಯನವನ್ನು 1964ರಲ್ಲಿ ಕೈಗೊಂಡಿತು. 'ಮಹಾನಗರಗಳಿಗೆ ಸಂಬಂಧಪಟ್ಟ ಸಾರಿಗೆ ಯೋಜನಾ ನಿಯೋಗ'ದ ಮಾರ್ಗದರ್ಶನದಂತೆ. ಬೆಂಗಳೂರು ಸಾರಿಗೆ ಸಂಚಾರದ ಸಮಸ್ಯೆಗಳನ್ನು ಅಧ್ಯಯನ ಮಾಡುವ ಸಲುವಾಗಿಯೇ ಇಲಾಖೆಯು 1975ರ ಅಕ್ಟೋಬರ ತಿಂಗಳಿನಲ್ಲಿ ಸಂಚಾರ ಕೋಶ (ಟ್ರಾಫಿಕ್ ಸೆಲ್) ಒಂದನ್ನು ಕೇಂದ್ರ ಕಛೇರಿಯಲ್ಲಿ ತೆರೆಯಲಾಗಿದೆ. ಈ ಘಟಕವು ಕೇಂದ್ರ ರಸ್ತೆ ಸಾರಿಗೆ ಸಂಶೋಧನ ಸಂಸ್ಥೆ ಹಾಗೂ ರೈಲ್ವೆಯವರ ಸಹಕಾರದೊಡನೆ ಬೆಂಗಳೂರಿಗೆ ಅವಶ್ಯವಾದ ತೀವ್ರ ಗತಿಯ ರೈಲುಸಂಚಾರ ವ್ಯವಸ್ಥೆಯ ರೂಪರೇಷೆಗಳನ್ನು ತಯಾರಿಸುತ್ತದೆ.

ಕೋಷ್ಟಕ: ನಗರಗಳಲ್ಲಿ ಮತ್ತು ಪಟ್ಟಣಗಳಲ್ಲಿ ನಗರ ಯೋಜನೆಯ ಚಟುವಟಿಕೆಗಳು

1971 ರ ಜನಗಣತಿಯ ಪ್ರಕಾರ ವರ್ಗೀಕರಣ	ನಗರಗಳ ಸಂಖ್ಯೆ	ನಗರ ಯೋಜನಾ ಚಟುವಟಿಕೆ		ಶೇಕಡಾವರು ಪ್ರಮಾಣ
		ಮಹಾ ಯೋಜನೆಗಳನ್ನು ತಯಾರಿಸಿದ್ದು	ನಕ್ಷೆಗಳನ್ನು ತಯಾರಿಸಿದ್ದು	
1	12	12	12	100
2	9	5	9	100
3	38	12	38	100
4	99	5	92	93
5	46	1	38	83
6	26	1	14	54
ಒಟ್ಟು	230	36	203	

ಪ್ರದೇಶಿಕ ಯೋಜನೆ: ರಾಜ್ಯದಲ್ಲಿನ ಸಮತೋಲೀನ ಬೆಳವಣಿಗೆಯನ್ನು ಗಮನಿಸಿ ಇಲಾಖೆಯು ಬೆಂಗಳೂರು ಮಹಾನಗರ ಪ್ರದೇಶ, ದಾಂಡೇಲಿ ಸಂಪನ್ಮೂಲ ಪ್ರದೇಶ ಮತ್ತು ತುಂಗಭದ್ರಾ ಜಲಾಶಯದ ಕೃಷಿ-ಔದ್ಯೋಗಿಕ ಪ್ರದೇಶಗಳಿಗೆ ಪ್ರಾದೇಶಿಕ ಅಭಿವೃದ್ಧಿ ಯೋಜನೆಗಳನ್ನು ತಯಾರಿಸಿದೆ. ಅದರಂತೆ ಕಾವೇರಿನದಿ ಯೋಜನೆ ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಗಳಿಗೂ ಸಹ ಇಲಾಖೆಯು ಪ್ರಾದೇಶಿಕ ಯೋಜನೆಗಳನ್ನು ತಯಾರಿಸುವ ವಿಭಾಗಗಳನ್ನು ನಿರ್ಮಿಸುವ ಪ್ರಸ್ತಾವನೆ ಹೊಂದಿದೆ. ಐದನೇ ಪಂಚವಾರ್ಷಿಕ ಯೋಜನೆಯಲ್ಲಿ ರಾಜ್ಯದಾದ್ಯಂತ ಪ್ರಾದೇಶಿಕ ಅಭಿವೃದ್ಧಿಯೋಜನೆಗಳನ್ನು ರಚಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದೆ. ಇಂಥ ಪ್ರಾದೇಶಿಕ ಯೋಜನೆಗಳು ರಾಜ್ಯದ ಸಾಮಾಜಿಕ, ಆರ್ಥಿಕ ಯೋಜನೆಗಳನ್ನು ಸಮನ್ವಯಗೊಳಿಸಲು ನೆರವಾಗುತ್ತವೆ.

20 ಅಂಶಗಳ ಆರ್ಥಿಕ ಕಾರ್ಯಕ್ರಮ: ರಾಷ್ಟ್ರದಲ್ಲಿ ತುರ್ತುಪರಿಸ್ಥಿತಿ ಘೋಷಿಸಿದ ನಂತರ ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದ ಪಂಗಡದವರಿಗೆ ಸಾಮಾಜಿಕ ನ್ಯಾಯ ಮತ್ತು ಸೌಲಭ್ಯಗಳನ್ನು ಒದಗಿಸಿ

ಕೊಡಲು ಸರಕಾರ ಧೃಡನಿರ್ಧಾರ ಕೈಗೊಂಡಿತು. ಪ್ರಧಾನಿಯವರ 20 ಅಂಶಗಳ ಆರ್ಥಿಕ ಕಾರ್ಯಕ್ರಮದ ಮೇರೆಗೆ ನಗರಾಸ್ತಿಯ ಸಮಾಜೀಕರಣ ನಗರಾಸ್ತಿಯ ಮಿತಿ ಮತ್ತು ಭೂಮಿಹೀನರಿಗೆ ಹಾಗೂ ವಸತಿವಿಹೀನರಿಗೆ ನಿವೇಶಗಳನ್ನು ಹಂಚುವದಕ್ಕೆ ನಿರ್ದಿಷ್ಟ ಮಾರ್ಗದರ್ಶನಗಳನ್ನು ಕೊಟ್ಟಿದೆ. ನಗರಯೋಜನಾ ಇಲಾಖೆಯು ಈ ಕಾರ್ಯಕ್ರಮಗಳ ಅಂಗವಾಗಿ ಬಹಳಷ್ಟು ಸಂಖ್ಯೆಯ ಲೇಔಟುಗಳನ್ನು ಮತ್ತು ಮಾದರಿ ವಿನ್ಯಾಸಗಳನ್ನು ತಯಾರಿಸಿ ಅವುಗಳನ್ನು ಕಾರ್ಯರೂಪಕ್ಕೆ ತರುವ ಸಂಸ್ಥೆಗಳಿಗೆ ಒದಗಿಸಿದೆ. ಇದರ ಜೊತೆಗೆ ಇಲಾಖೆಯು ಸುಮಾರು 600 ಕೊಳಚೆ ಪ್ರದೇಶಗಳ ಅಭಿವೃದ್ಧಿ ಹಾಗೂ ನಿರ್ಮೂಲನ ಯೋಜನೆಗಳನ್ನು ತಯಾರಿಸಿ ಅವುಗಳನ್ನು ಸ್ಥಳೀಯ ಸಂಸ್ಥೆಗಳಿಗೂ ಹಾಗೂ ಕೊಳಚೆ ನಿರ್ಮೂಲನ ಮಂಡಳಿಗೂ ಕೊಟ್ಟು ಕೊಳಚೆ ಪ್ರದೇಶಗಳ ಸುತ್ತ ಮುತ್ತಲಿನ ಪರಿಸರವನ್ನು ಶುಚಿಯಾಗಿಡಲು ಅಣಿ ಮಾಡಿ ಕೊಟ್ಟಿರುತ್ತದೆ.

ರಾಜ್ಯದಲ್ಲಿನ 5 ದೊಡ್ಡ ನಗರಗಳಿಗೆ 1976ರ ನಗರಾಸ್ತಿ ಮಿತಿ ಕಾಯಿದೆ ಪ್ರಕಾರ ನಗರ ಪ್ರದೇಶದಲ್ಲಿ ಭೂ ಹಿಡುವಳಿಗಳ ಬೆಲೆಗಳು ಒಂದು ಸ್ಥಿಮಿತಕ್ಕೆ ಬಂದಿವೆ. ಇಲಾಖೆಯು ಈ ಮೂಲಕ ನಗರಾಸ್ತಿಗಳ ಹಾಗೂ ನಗರೀಕರಣಕ್ಕೆ ಕಾದಿರಿಸಲಾದ ಖಾಲಿ ಜಾಗಗಳ ಪಟ್ಟಿ ಮುಂತಾದವುಗಳನ್ನು ತಯಾರಿಸಿ ರಾಜ್ಯ ಸರಕಾರದಿಂದ ಅಧಿಸೂಚಿತವಾದ ದಕ್ಷ ಪ್ರಾಧಿಕಾರಿಗಳಿಗೆ ಸಹಾಯ ಮಾಡುತ್ತದೆ ಮತ್ತು ಇಲಾಖೆಯು ನಗರ ಪ್ರದೇಶದಲ್ಲಿನ ಹೆಚ್ಚುವರಿ ಭೂಮಿಯನ್ನು ಬಡಬಗ್ಗರಿಗೆ ಹಂಚುವ ಕಾರ್ಯಕ್ರಮದಲ್ಲಿ ದಕ್ಷಪ್ರಾಧಿಕಾರಿಗಳಿಗೆ ಸಹಾಯ ಮಾಡುತ್ತದೆ. 1976ರ ನಗರಾಸ್ತಿ ಮಿತಿಯ ಕಾಯಿದೆಯ 26ನೇ ಪ್ರಕರಣಗಳಿಗೆ ನಿಯಮಿತವಾದ ದಕ್ಷ ಪ್ರಾಧಿಕಾರಿಗಳಿಗೆ ಇಲಾಖೆಯ ಅಧಿಕಾರಿಗಳು ಕಾರ್ಯನಿರ್ವಾಹಕರಾಗಿರುತ್ತಾರೆ.

ನಗರ ಯೋಜನೆಯಲ್ಲಿ ತರಬೇತಿ : ಇಲಾಖೆಯಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿಸೇವೆ ಸಲ್ಲಿಸುತ್ತಿರುವ ನೌಕರರಿಗೆ ನಗರ ಯೋಜನಾ ಕ್ಷೇತ್ರದಲ್ಲಿ ಅವಶ್ಯವಿರುವ ಜ್ಞಾನ ಮತ್ತು ನೈಪುಣ್ಯತೆಯ ಶಿಕ್ಷಣವನ್ನು ಕೊಡುವುದಕ್ಕಾಗಿ 4 ತಿಂಗಳುಗಳ ಅಲ್ಪ ಕಾಲಾವಧಿ ತರಬೇತಿಯನ್ನು ಇಲಾಖೆಯವರು 1968ರ ಮೇ 15 ರಿಂದ ನಡೆಸುತ್ತಿದ್ದಾರೆ. 1976ರ ಆಗಸ್ಟ್ ಮಾಹೆಯವರೆಗೆ 152 ನೌಕರರಿಗೆ ತರಬೇತಿ ನೀಡಲಾಗಿದೆ. ಇದರ ಜೊತೆಗೆ 40 ಜನ ಅಧಿಕಾರಿಗಳಿಗೂ ಸ್ನಾತಕೋತ್ತರ ಶಿಕ್ಷಣಕ್ಕಾಗಿ ಸರ್ಕಾರವು ದೆಹಲಿ, ಖರಗಪೂರ ಹಾಗೂ ಮದ್ರಾಸ್‌ಗಳಲ್ಲಿನ ಶಿಕ್ಷಣ ಕೇಂದ್ರಗಳಲ್ಲಿ ನಗರಯೋಜನೆಯ ವಿಶೇಷ ತರಬೇತಿ ಕೊಡಲಾಗುತ್ತಿದೆ. ಸಧ್ಯಕ್ಕೆ 9 ಜನ ನೌಕರರು ಸ್ನಾತಕೋತ್ತರ ಶಿಕ್ಷಣದಲ್ಲಿ ತರಬೇತಿ ಪಡೆಯುತ್ತಿದ್ದಾರೆ.

ಅಭಿವೃದ್ಧಿ ಸಂಸ್ಥೆಗಳಿಗೆ ಇಲಾಖೆಯ ಸಹಕಾರ : ಇಲಾಖೆಯು ರಾಜ್ಯದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದೆ. ಗೃಹನಿರ್ಮಾಣ ಮತ್ತು ನಗರಾಭಿವೃದ್ಧಿ ನಿಗಮ ಹೊಸದೆಹಲಿ (ಎಚ್. ಯು. ಡಿ. ಸಿ. ಒ) ಇದರ ಸ್ಥಳೀಯ ಅಂಗವಾದ ಕರ್ನಾಟಕ ನಗರಾಭಿವೃದ್ಧಿ ನಿಗಮದಿಂದ ಆರ್ಥಿಕ ಸಹಾಯವನ್ನು ಅಪೇಕ್ಷಿಸುವ ಸ್ಥಳೀಯ ಸಂಸ್ಥೆಗಳಿಗೆ ಯೋಜನೆ ತಯಾರಿಸಿ ಕೊಡಲಾಗುತ್ತಿದೆ. ಹೊಸ ಪಟ್ಟಣಗಳಾದ ದಾಂಡೇಲಿ, ಯಲಹಂಕ, ಕೆಂಗೇರಿ ಈ ಪ್ರದೇಶಗಳಿಗೆ ಕಳೆದ ದಶಕದಲ್ಲಿ ಈ ಇಲಾಖೆಯು ಮಾಡಿಕೊಡಲಾದ ಹೊಸಯೋಜನೆಗಳು ಈಗ ಕಾರ್ಯರೂಪಕ್ಕೆ ತರಲಾಗುತ್ತಿದೆ. ಸ್ಥಳೀಯ ಸಂಸ್ಥೆಗಳ ನಗರಾಭಿವೃದ್ಧಿ ಮಂಡಲಿ, ರಾಜ್ಯಗೃಹ ನಿರ್ಮಾಣ ಮಂಡಳಿ, ಗೃಹ ನಿರ್ಮಾಣ ನಿಗಮ, ಔದ್ಯೋಗಿಕ ಪ್ರದೇಶ ಅಭಿವೃದ್ಧಿ ಮಂಡಲಿ, ಮತ್ತಿತರ ಅಭಿವೃದ್ಧಿ ಸಂಸ್ಥೆಗಳು ಇಲಾಖೆಯಲ್ಲಿ ಲಭ್ಯವಿರುವ ತಾಂತ್ರಿಕ ಅನುಭವ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿವೆ. ಗ್ರಾಮಾಂತರ ಪ್ರದೇಶದಲ್ಲಿ ಪಂಚಾಯಿತಿಗಳು ಹಾಗೂ ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಗೂ ಸಹ ಅಭಿವೃದ್ಧಿ ಕಾರ್ಯಕ್ರಮ ಮತ್ತು ಹೊಸ ಬಡಾವಣೆಗಳ ನಿರ್ಮಾಣ ಕಾರ್ಯಕ್ಕೂ ಸಹ ಇಲಾಖೆಯು ತಾಂತ್ರಿಕ ಸೌಲಭ್ಯಗಳನ್ನು ಒದಗಿಸುತ್ತಲಿದೆ. ಅಲ್ಲದೆ ಬೆಂಗಳೂರಿಗೆ 'ಸರ್ವತೋಮುಖ ಸುಸಜ್ಜಿತ ಅಭಿವೃದ್ಧಿ ಕಾರ್ಯಕ್ರಮ ಒಂದನ್ನು ಇಲಾಖೆಯು ತಯಾರಿಸಿ ಕೇಂದ್ರ ಸರಕಾರದಿಂದ ಆರ್ಥಿಕ ಸಹಾಯ ಯೋಜಿ

ಸಿವೆ. ಇಂಥ ಸುಸಜ್ಜಿತ ಯೋಜನೆಗಳನ್ನು ಮೈಸೂರು, ಹುಬ್ಬಳ್ಳಿ, ಧಾರವಾಡ ಮತ್ತು ಬೆಳಗಾವಿ ನಗರಗಳಿಗೂ ಸಹ ತಯಾರಿಸಲಾಗುತ್ತಿದೆ.

ಆದಾಗ್ಯೂ ಸದ್ಯದ ನಗರ ಮತ್ತು ಗ್ರಾಮೀಣ ಯೋಜನೆಗಳ ಸಾಧನೆ ಸೀಮಿತವಾಗಿದ್ದು ಬದಲಾಗುತ್ತಿರುವ ಪರಿಸ್ಥಿತಿಗೆ ಬೇಕಾಗುವಷ್ಟು ಹೊಂದಿಕೊಳ್ಳಲು ಸಾಧ್ಯವಾಗುತ್ತಿಲ್ಲ. ರಾಜ್ಯದಲ್ಲಿ ಇನ್ನೂ ಶೀಘ್ರಗತಿಯ ಯೋಜನೆಗಳು ಆರಂಭವಾಗಬೇಕಾಗಿವೆ. ರಾಜ್ಯದ ಅಪಾರ ಸಂಪನ್ಮೂಲಗಳನ್ನು ಉಪಯೋಗಿಸಿ ಔದ್ಯೋಗಿಕ ಪ್ರಗತಿಯನ್ನು ಸಾಧಿಸಬೇಕಾಗಿದೆ. ಈ ದಿಶೆಯಲ್ಲಿ ನಾವು ಸಾಧಿಸಿರುವ ಔದ್ಯೋಗಿಕ ಪ್ರಗತಿ ಏನೇನೂ ಸಾಲದು. ಈಚೇಗೆ ಮಾತ್ರ ರಾಜ್ಯ ಸರಕಾರದ ಪ್ರೋತ್ಸಾಹದಿಂದಾಗಿ ವ್ಯಾಪಕವಾಗಿ ಔದ್ಯೋಗೀಕರಣ ಉಂಟಾಗಲಿದೆ. ಇದರ ಪರಿಣಾಮವಾಗಿ ನಗರೀಕರಣ ಚಟುವಟಿಕೆಗಳು ಮುಂಬರುವ ವರ್ಷಗಳಲ್ಲಿ ಹಿಂದೆಂದೂ ಕಾಣದಷ್ಟು ಪ್ರಮಾಣದಲ್ಲಿ ಆಗಬಹುದೆಂದು ಊಹಿಸಬೇಕಾಗಿದೆ. ಆದ್ದರಿಂದಲೇ ಯೋಜಿತ ಮತ್ತು ಸಮನ್ವಯ ಅಭಿವೃದ್ಧಿಗಳಿಗೆ ಎಂದಿಗಿಂತ ಹೆಚ್ಚು ಗಮನ ನೀಡಬೇಕಾಗಿದೆ.

ಸಮಸ್ಯೆ ಸಂಭವಗಳು: ನಗರ ಯೋಜನೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಸ್ಥಳೀಯ ಸಂಸ್ಥೆಗಳ ಪಾತ್ರ ಬಹಳ ದೊಡ್ಡದು. ಆದರೆ ಸ್ಥಳೀಯ ಸಂಸ್ಥೆಗಳು 1964 ಪೌರಸಭೆ ಕಾಯಿದೆಗೆ ಒಳಪಟ್ಟಿದ್ದು ಆ ಶಾಸನದಲ್ಲಿ ನಗರ ಯೋಜನೆಯ ಪ್ರಸ್ತಾಪವೇ ಇರಲಿಲ್ಲ ಮತ್ತು ಈ ಸಂಸ್ಥೆಗಳು ಅಷ್ಟೊಂದು ಆಸಕ್ತಿ ತೋರಿಸುತ್ತಿಲ್ಲ. ಅಲ್ಲದೆ ಜಟಿಲವಾದ ನಗರಯೋಜನೆಗಳ ವಿಷಯಗಳನ್ನು ತಾಂತ್ರಿಕ ಅನುಭವವಿಲ್ಲದ ಸಿಬ್ಬಂದಿಯವರು ನಿರ್ವಹಿಸುತ್ತಾರೆ. ಇಂತಹ ತೊಡಕುಗಳನ್ನು ನಿವಾರಿಸಲು ಮತ್ತು ಸರಿಯಾದ ರೀತಿಯಲ್ಲಿ ಯೋಜನೆ ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೆ ತರಲು ನಗರ ಪಾಲಿಕೆಗಳಲ್ಲಿ ಸರಿಯಾದ ಆಡಳಿತ ವ್ಯವಸ್ಥೆ ಅವಶ್ಯ. ಇದಕ್ಕೋಸ್ಕರವೇ, ದೊಡ್ಡ ನಗರಗಳಲ್ಲಿಯ ಯೋಜನೆ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ಸುಸಜ್ಜಿತವಾಗಿ ನಡೆಸಿಕೊಂಡು ಹೋಗಲು ಒಂದು ಪ್ರತ್ಯೇಕ ಶಾಖೆಯನ್ನು ಏರ್ಪಡಿಸಬೇಕಾಗಿದೆ. ಹಾಗೂ ಇಂತಹ ಕೆಲಸಗಳನ್ನು ಮಾಡುವಾಗ ಮತ್ತಿತರ ಇಲಾಖಾ ಸಿಬ್ಬಂದಿಯವರು ಕೈಹಾಕುವುದನ್ನು ತಡೆಗಟ್ಟಬೇಕಾಗಿದೆ. ಸಣ್ಣ ಸ್ಥಳೀಯ ಸಂಸ್ಥೆಗಳು ಇಂತಹ ಸೌಲಭ್ಯ ಹೊಂದಲು ಅಶಕ್ತವಾದರೂ ಕೊನೆಯಪಕ್ಷ ಗಣನೀಯ ವೆಚ್ಚದಿಂದ ತಯಾರಿಸಿದ ಯೋಜನೆಗಳನ್ನು ಅನುಸರಿಸುವಷ್ಟಾದರೂ ತಾಂತ್ರಿಕ ಅನುಕೂಲತೆಗಳನ್ನು ಹೊಂದಬೇಕು.

ಈ ಉದ್ದೇಶದಿಂದ ಕರ್ನಾಟಕ ನಗರ ಯೋಜನೆಯ ಕಾಯಿದೆಯಲ್ಲಿ ಕೆಲವು ಮಹತ್ವದ ತಿದ್ದುಪಡಿಗಳನ್ನು ಸೂಚಿಸಿರುವುದು ಒಂದು ಸ್ವಾಗತಾರ್ಹ ಚಿಹ್ನೆಯಾಗಿದೆ. ಈ ತಿದ್ದುಪಡಿಗಳು ಶಾಸನವಾದ ಮೇಲೆ ಸ್ಥಳೀಯ ಸಂಸ್ಥೆಗಳು ತಮ್ಮ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳುವಾಗ ನಗರ ಯೋಜಕರ ಲಾಭ ಪಡೆಯುವ ಅನುಕೂಲತೆಯನ್ನು ಕಡ್ಡಾಯಮಾಡಲಾಗುವುದು.

ರಾಜ್ಯದಲ್ಲಿ ನಗರಾಭಿವೃದ್ಧಿ ಕೆಲಸಗಳು ಯೋಜನೆ ಕಾರ್ಯದಷ್ಟು ಮುಂದುವರೆದಿಲ್ಲ. ಇಂತಹ ಅಭಿವೃದ್ಧಿ ಯೋಜನೆಗಳನ್ನು ಸಾಧಿಸುವಲ್ಲಿ ಆರ್ಥಿಕ ಮುಗ್ಗಟ್ಟಿನಿಂದಾಗಿ ಪ್ರಗತಿ ಕುಂಠಿತಗೊಳ್ಳುತ್ತದೆ. ಈಗ ಪ್ರತಿಯೊಂದು ರಾಜ್ಯದಲ್ಲಿಯೂ ನಗರೀಕರಣದಿಂದ ಉದ್ಭವಿಸುವ ಸ್ಥಿತಿಗತಿ ಸಮಸ್ಯೆಗಳನ್ನು ಪರಿಗಣಿಸುವ ಕಾಲ ಬಂದಿದೆ.

ಕರ್ನಾಟಕ ರಾಜ್ಯವು ನಗರ ಹಾಗೂ ಪಟ್ಟಣಗಳನ್ನು ಸುವ್ಯವಸ್ಥಿತವಾಗಿ ಅಭಿವೃದ್ಧಿಗೊಳಿಸಲು ಇತ್ತೀಚಿಗೆ ಕೆಲವು ಸಾಧನೆ ಸುಧಾರಣೆಗಳನ್ನು ಮಾಡಿದೆ.

1976 ಜನವರಿ ತಿಂಗಳಿನಲ್ಲಿ ಸ್ಥಾಪಿಸಲ್ಪಟ್ಟ ಬೆಂಗಳೂರು ಡೆವೆಲಪ್‌ಮೆಂಟ್ ಅಥಾರಿಟಿಯು ಪ್ಲಾನಿಂಗ್ ಅಥಾರಿಟಿಯಾಗಿ ಕೆಲಸಮಾಡುವುದಲ್ಲದೆ, ಪೂರ್ಣ ಸಮಯದ ಒಬ್ಬ ನಗರ ಯೋಜನಾ ಸದಸ್ಯರನ್ನು ಹೊಂದಿದ್ದು ಸುಸಜ್ಜಿತವಾದ ಬೆಂಗಳೂರ ಮಹಾ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲು ನೆರವಾಗುತ್ತದೆ.

ರಾಜ್ಯದಲ್ಲಿ ನಗರ ಪ್ರದೇಶಗಳಿಗೆ ನಗರಾಭಿವೃದ್ಧಿ ಮಂಡಳಿಗಳನ್ನು ಸ್ಥಾಪಿಸುವ ಉದ್ದೇಶದಿಂದ ಇತ್ತೀ

ಚೆಗೆ ಒಂದು ಅಧಿನಿಯಮವನ್ನು ಸರಕಾರ ಅಂಗೀಕರಿಸಿದೆ. ರಾಜ್ಯದ ಕೆಳಕಂಡ ಎಂಟು ನಗರಗಳಿಗೆ ಹೊಸದಾಗಿ ನಗರಾಭಿವೃದ್ಧಿ ಮಂಡಳಿಗಳನ್ನು ಸ್ಥಾಪಿಸಲಾಗಿದೆ.

1. ಬಳ್ಳಾರಿ	5. ಗುಲಬರ್ಗಾ
2. ಬಿಜಾಪುರ	6. ಹುಬ್ಬಳ್ಳಿ–ಧಾರವಾಡ
3. ಬೆಳಗಾಂ	7. ಮಂಗಳೂರು
4. ದಾವಣಗೆರೆ	8. ಶಿವಮೊಗ್ಗ.

ಕರ್ನಾಟಕ ಕೊಳಚೆ ಪ್ರದೇಶ (ಸುಧಾರಣೆ ಹಾಗೂ ನಿರ್ಮೂಲನ) ಕಾಯಿದೆ ಪ್ರಕಾರ ಕೊಳಚೆ ನಿರ್ಮೂಲನ ಮಂಡಳಿಯನ್ನು ರಚಿಸಿ ರಾಜ್ಯದಲ್ಲಿನ ಕೊಳಚೆ ಪ್ರದೇಶಗಳ ಸಮಸ್ಯೆಯನ್ನು ನಿವಾರಿಸಲಾಗುತ್ತಿದೆ. ಅಲ್ಲದೆ ರಾಜ್ಯದ ಮುಖ್ಯಮಂತ್ರಿಯವರು ಅಧ್ಯಕ್ಷರಾಗಿರುವ "ರಾಜ್ಯ ಪರಿಸರ ಯೋಜನೆ ಹಾಗೂ ಸಮನ್ವಯ ಸಮಿತಿ" ಯನ್ನು ರಚಿಸಿಲಾಗಿದೆ.

ಆಗಲೇ ತಿಳಿಸಿರುವಂತೆ ಸವಿಸ್ತಾರವಾದ ತಿದ್ದುಪಡಿಗಳನ್ನು ಕರ್ನಾಟಕ ನಗರ ಹಾಗೂ ಗ್ರಾಮಾಂತರ ಯೋಜನೆ ಕಾಯಿದೆಗೆ ಅಳವಡಿಸಿ ಅದನ್ನು ಎಲ್ಲ ನಗರ, ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶಗಳಿಗೆ ಏಕಕಾಲದಲ್ಲಿ ವಿಸ್ತರಿಸಬಹುದಾಗಿದೆ. ಈ ತಿದ್ದುಪಡಿಗಳು ಪ್ರಾದೇಶಿಕ ಅಭಿವೃದ್ಧಿಗಳನ್ನು ತಯಾರಿಸಲು ಮತ್ತು ಈ ಯೋಜನೆಗಳ ಚೌಕಟ್ಟಿನಲ್ಲಿ ನಗರಗಳಿಗೆ ಮಹಾಯೋಜನೆಗಳನ್ನು ತಯಾರಿಸಲು ಸಹಾಯವಾಗುತ್ತವೆ. ಈ ರೀತಿಯಲ್ಲಿ ರಾಜ್ಯದ ನಗರಗಳ ಹಾಗೂ ಗ್ರಾಮಾಂತರ ಪ್ರದೇಶಗಳ ಸಮಸ್ಯೆಗಳನ್ನು ಸಮಗ್ರವಾಗಿಯೂ ಸ್ಥಳೀಯವಾಗಿಯೂ ನಿವಾರಿಸಲು ಸಾಧ್ಯವಾಗುತ್ತದೆ.

ಒಟ್ಟಿನಲ್ಲಿ ಎಷ್ಟೇ ಅಡ್ಡಿ ಆತಂಕಗಳಿದ್ದರೂ ನಗರಗಳ ಯೋಜನಾ ಕಾರ್ಯಕ್ರಮಗಳು ಪ್ರಗತಿಪಥದಲ್ಲಿ ಮುಂದುವರಿಯುತ್ತಿವೆಯೆಂದು ಹೇಳಬೇಕು. ಇಂಥ ಪ್ರಗತಿಯನ್ನು ಕಣ್ಣಾರೆ ಕಾಣಬೇಕೆಂದರೆ ಬೆಂಗಳೂರು, ಮೈಸೂರು,ಮಂಡ್ಯ,ಕೃಷ್ಣರಾಜನಗರ, ಭದ್ರಾವತಿ,ದಾಂಡೇಲಿ ಮುಂತಾದ ಪಟ್ಟಣಗಳನ್ನು ಕಣ್ಣಾರೆ ನೋಡಬೇಕು. ಏನಿದ್ದರೂ ಸ್ಥಳೀಯ ಸಂಸ್ಥೆಗಳು ಮತ್ತು ಸಾರ್ವಜನಿಕರು ಹೆಚ್ಚು ಆಸಕ್ತಿವಹಿಸಿ ಉತ್ತಮ ನಗರಗಳ ನಿರ್ಮಾಣಕ್ಕೆ ಪ್ರಯತ್ನಿಸಬೇಕು. ಇಲ್ಲವಾದಲ್ಲಿ ಅವ್ಯವಸ್ಥಿತ ಬೆಳವಣಿಗೆಯ ದುಷ್ಪರಿಣಾಮವನ್ನು ಎದುರಿಸಬೇಕಾಗುವುದು.

ನಗರ ಮತ್ತು ಗ್ರಾಮಾಂತರ ಪ್ರದೇಶಗಳು ಸುವ್ಯವಸ್ಥಿತವಾಗಿ ಬೆಳೆದರೆ ಅಲ್ಲಿ ವಾಸಿಸುವ ಜನರಿಗೆ ಒಳ್ಳೆಯ ವಾತಾವರಣ ದೊರೆತು ಸುಖೀ ಜೀವನವನ್ನು ನಡೆಸಲು ಅನುಕೂಲವಾಗುತ್ತದೆ. ತುಂಬು ಜೀವನಕ್ಕೆ ಸಹಕಾರಿಗಳಾದ ವಿದ್ಯಾಕೇಂದ್ರಗಳು, ಔಷಧಾಲಯಗಳು, ಕ್ರಿಡಾಂಗಣಗಳು, ಸಾರ್ವಜನಿಕ ಸೌಲಭ್ಯಗಳು ಹಾಗೂ ಒಳ್ಳೆಯ ಸಂಚಾರ ವ್ಯವಸ್ಥೆಗಳು-ಇವುಗಳನ್ನೆಲ್ಲ ನಾಗರೀಕರು ಪಡೆಯಬೇಕಾದರೆ ಯೋಜಿತ ನಗರಾಭಿವೃದ್ಧಿಯ ಕಡೆ ಹೆಚ್ಚು ಗಮನ ಕೊಡಬೇಕಾಗುತ್ತದೆ.ಇಲ್ಲವಾದಲ್ಲಿ ಭೂಮಿಯಿಂದ ಹೆಚ್ಚು ಲಾಭಗಳಿಸುವ ಉದ್ದೇಶದಿಂದ ಲಾಭಬಡುಕರು ಸಾರ್ವಜನಿಕರಿಗಾಗಿ ಇರಬೇಕಾದ ಜಾಗಗಳನ್ನೆಲ್ಲಾ ತಮ್ಮ ಸ್ವಲಾಭಕ್ಕೆ ಕಬಳಿಸಿ, ನಗರದಲ್ಲಿ ಮಲಿನತೆಯನ್ನು ಸೃಜಿಸಿ ನಾಗರೀಕರ ಜೀವನವನ್ನು ತೊಂದರೆಗೀಡು ಮಾಡಲು ಹವಣಿಸುತ್ತಾರೆ. ಆದ್ದರಿಂದ ಪ್ರತಿಯೊಬ್ಬರೂ ಎಚ್ಚರಿಕೆಯಿಂದಿದ್ದು, ನಮ್ಮ ನಗರಗಳೂ ಮತ್ತು ಗ್ರಾಮಗಳೂ, ಮುಂದೆ ಬರುವ ಪೀಳಿಗೆಗಳಿಗೆ ಉಪಯುಕ್ತವಾಗಿರುವಂತೆ, ಅವುಗಳನ್ನು ನಿರ್ಮಿಸಲು ಸಹಕರಿಸಬೇಕು.

ಬಿ. ಎಸ್. ಕಪನೀಪತಯ್ಯ

ಕುಮಾರೋತ್ಪತ್ತಿ ಕಥನ

'ಕುಮಾರ'ನೆಂದರೆ ಶಿವಪಾರ್ವತಿಯರ ಕುಮಾರ. ಇವನಿಗೆ ಸ್ಕಂದ, ಷಣ್ಮುಖ, ಕಾರ್ತಿಕೇಯ, ಶರವನಭವ, ಶಿಖಿವಾಹ, ದೇವಸೇನಾಪತಿ, ವಲ್ಲೀಶ, ಸುಬ್ರಹ್ಮಣ್ಯ, ತಾರಕಾರಿ, ಕ್ರೌಂಚಾರಿ, ಶಕ್ತಿಧರ, ಗುಹ, ಗಾಂಗೇಯ, ಕುಕ್ಕುಟಧ್ವಜ, ಸೇನಾನಿ, ಪಾವಕಾತ್ಮಜ ಮುಂತಾದ ಅನೇಕ ಹೆಸರುಗಳು ಅನ್ವರ್ಥವಾಗಿ ಬಂದಿವೆ.

ಶಿವಪಾರ್ವತಿಯರ ಪರಸ್ಪರ ಸಮಾಗಮವನ್ನು ವ್ಯಾಜವಾಗಿ ಪಡೆದು, ಶಿವನ ವೀರ್ಯರೂಪಿ ತೇಜೋಬಿಂದುವು, ಲೋಕಕಂಟಕನಾದ ತಾರಕಾಸುರನ ವಧಾರ್ಥವಾಗಿ, ಶಿಶುರೂಪವನ್ನು ಪಡೆಯಲು ಭೂಮಿಯಲ್ಲಿ ಪತನವಾಯಿತು.

ಏಳು ದಿನಗಳ ಮಗುವಿನಿಂದ ಹೊರತಾಗಿ ಮತ್ತಾರಿಂದಲೂ ತಾನು ವಧಾರ್ಹನಾಗಕೂಡದೆಂದು, ಬ್ರಹ್ಮನಿಂದ ವರವನ್ನು ಪಡೆದ ತಾರಕಾಸುರನು ಬಹು ಸೊಕ್ಕಿನಿಂದ ಇದ್ದನು. ಈ ಸೊಕ್ಕನ್ನು ಮುರಿಯಲು ಶಿವ ವೀರ್ಯವು ಶಿಶುವಾಯಿತು. ಪ್ರಥಮದಲ್ಲಿ ಭೂಮಿಯನ್ನು ಸೇರಿದ ಆ ವೀರ್ಯವನ್ನು ಭೂದೇವಿಯು ಹೊರಲಾರದೆ, ಅಗ್ನಿಯಲ್ಲಿ ತ್ಯಜಿಸಿದಳು. ಅಗ್ನಿಯ ದೇಹದಲ್ಲಿ ಪ್ರವೇಶಿಸಿದ ಆ ತೇಜೋಬಿಂದುವು, ಅಗ್ನಿಮುಖರೆನಿಸಿದ ದೇವತೆಗಳ ಉದರಗಳನ್ನು ಹವಿಸ್ಸಿನ ರೂಪದಲ್ಲಿ ಸ್ವಲ್ಪ ಸ್ವಲ್ಪವಾಗಿ ಸೇರಿತು. ಅಗ್ನಿಯಲ್ಲಿಯೇ ಉಳಿದ ತೇಜೋಬಿಂದುವಿನ ಅಂಶದಲ್ಲಿ ಸ್ವಲ್ಪ ಭಾಗವು ಗಂಗಾದೇವಿಯನ್ನು ಸೇರಿತು. ಇಷ್ಟಾದ ಮೇಲೆ ಬ್ರಹ್ಮ, ವಿಷ್ಣು, ಅಗ್ನಿ, ಭೂದೇವಿ, ಗಂಗಾದೇವಿ ಆದಿಯಾದ ಸಕಲ ದೇವತೆಗಳೂ, ಸ್ವರ್ಣರೇಖಾ ನದಿಯ ದಡದಲ್ಲಿರುವ 'ಶರಧಾನ' ವನದಲ್ಲಿ (ಜೊಂಡು ಹುಲ್ಲಿನ ಗುತ್ತಿಯಲ್ಲಿ) ಒಟ್ಟುಗೂಡಿ, ತಮ್ಮಲ್ಲಿದ್ದ ಶಿವವೀರ್ಯ ಕಣಗಳನ್ನು ಒಂದು ಕಡೆ ರಾಶಿಯಾಗಿ ವಿಸರ್ಜಿಸಿದರು. ಆ ಕಣಗಳು ಒಟ್ಟಾಗಿದ್ದು, ಒಂದು ಸಹಸ್ರ ವರ್ಷಗಳು ಕಳೆದ ಮೇಲೆ ಕಠಿಣವಾಗಿ ಆರು ಕವಲುಗಳನ್ನು ಪಡೆದುವು. ಸೌರ ಪುರಾಣದಲ್ಲಿ ಈ ವಿಷಯವಾಗಿ,

> ವರ್ಷಾಣಾಂತು ಸಹಸ್ರೇಣ ಕಠಿಣಂ ಸ್ಕಂದತಾಂಗತಃ ।
> ಸ್ಕಂದ ಇತ್ಯುಚ್ಯತೇ ತೇನ, ತದಾ ಪ್ರಭೃತಿ ಸುವ್ರತಃ ॥

ಎಂದಿದೆ, ಅಂದರೆ ಈ ರೀತಿ ಆರು ಕವಲು ಅಂದರೆ ಸ್ಕಂದಗಳುಳ್ಳದ್ದಾದ ವೀರ್ಯಪಿಂಡವು ಶಿಶುವಾಗಿ ಮಾರ್ಪಟ್ಟು ಆರು ಮುಖಗಳಿಂದ ಕೂಡಿ, ಲೋಕದಲ್ಲಿ 'ಸ್ಕಂದ'ನೆಂದೂ, 'ಷಣ್ಮುಖ'ನೆಂದೂ ಪ್ರಸಿದ್ಧಿ ಪಡೆಯಿತು. ಬ್ರಹ್ಮಕನ್ಯೆಯರಾದ ಆರುಜನ ಕೃತ್ತಿಕಾಮಾತೆಯರು ಆ ಮಗುವಿಗೆ ತಮ್ಮ ಸ್ತನ್ಯಪಾನ ಮಾಡಿಸಿದರು. ಸ್ವಲ್ಪ ಕಾಲದ ಮೇಲೆ, ಆ ಶಿಶುವು 'ಗೌರೀಕುಚಪಯಃ ಪೂರಮಪಿಬತ್ಷಡಾನನೈಃ' ಎಂದು ಹೇಳಿರುವಂತೆ ಪಾರ್ವತಿಯ ಸ್ತನ್ಯಪಾನದಿಂದ ಬೆಳೆಯಲಾರಂಭಿಸಿತು. ಆದಿಶಕ್ತಿಯ ಸ್ತನ್ಯ ಪ್ರಭಾವದಿಂದ ಆ ಶಿಶುವು 6 ದಿನಗಳಲ್ಲಿ

16 ವರ್ಷಗಳ ಬಾಲಕನಂತೆ ಪುಷ್ಟವಾಗಿಯೂ ತೇಜಸ್ವಿಯಾಗಿಯೂ ಕಾಣಿಸಿತು. ಹೀಗೆ ಶಿವನ ವೀರ್ಯದಿಂದಲೂ ಪಾರ್ವತಿಯ ಸ್ತನ್ಯಾಮೃತದಿಂದಲೂ ವೃದ್ಧಿ ಹೊಂದಿದ ಸದಾ ಬಾಲರೂಪಿಯೆನಿಸಿದ ಈ ಶಿಶುವಿಗೆ ಫಾಲನೇತ್ರಸುತ, ಪಾರ್ವತೀ ಪ್ರಿಯನಂದನ, ಕುಮಾರ ಎಂಬ ಹೆಸರುಗಳು ಬಂದುವು.

ಹುಟ್ಟಿದ 6 ದಿನಗಳಲ್ಲಿಯೇ ಮಹಾಪರಾಕ್ರಮಿಯೂ, ತೇಜಸ್ವಿಯೂ ಆಗಿ ತೋರಿದ ಈ ಕುಮಾರನಿಗೆ, ದೇವತೆಗಳೆಲ್ಲರೂ ಸೇರಿ, ದೇವಸೇನಾಪತ್ಯವನ್ನು ಕೊಟ್ಟು ತಾರಕಾಸುರನ ಸಂಹಾರಕ್ಕೆ ಅಂಕುರಾರ್ಪಣ ಮಾಡಿದರು. ಬ್ರಹ್ಮನು ತನ್ನಲ್ಲಿದ್ದ 'ಶಕ್ತಿ' ಎಂಬ ಆಯುಧವನ್ನು ಉಪದೇಶಿಸಿ ಕೊಟ್ಟನು. ವಿಷ್ಣು, ಇಂದ್ರ, ಅಗ್ನಿ ಮೊದಲಾದವರು ಅನೇಕ ಆಯುಧಗಳನ್ನು ಕೊಟ್ಟರು. ಈ ಕುಮಾರನು 'ಸೇನಾನಿ' ಎಂದೂ 'ಶಕ್ತಿಧರ'ನೆಂದೂ ಪ್ರಸಿದ್ಧಿ ಪಡೆದನು. ಶಂಕರನು ಬ್ರಹ್ಮಪುತ್ರಿಯಾದ ವಲ್ಲೀದೇವಿಯನ್ನೂ ಇಂದ್ರ ತನುಜೆಯಾದ ಸೇನಾದೇವಿಯನ್ನೂ ಕರೆಸಿ ಕುಮಾರಸ್ವಾಮಿಗೆ ಕೊಟ್ಟು ವಿವಾಹ ನಡೆಸಿದನು. (ಈ ಸೇನಾದೇವಿಯನ್ನು ದೇವಸೇನಾದೇವಿಯೆಂದೂ ಶಿಶುಸಂರಕ್ಷಕಳಾದ ಮಹಾಷಷ್ಠೀದೇವಿಯೆಂದೂ ಕರೆಯುವರು.) ಮಾರ್ಗಶಿರ ಶುಕ್ಲ ಷಷ್ಠಿಯದಿನ (ಈತನು ಜನಿಸಿದ 7ನೇ ದಿನ) ಈತನ ಮುಂದಾಳುತ್ವದಲ್ಲಿ ದೇವತೆಗಳೆಲ್ಲರೂ ಒಟ್ಟಾಗಿ ಸೇರಿ ತಾರಕಾಸುರನೊಡನೆ ಯುದ್ಧ ಮಾಡಿದರು. ಕೊನೆಗೆ ತಾರಕಾಸುರನು ಹತನಾದನು. ಅನಂತರ ಕುಮಾರನ ಶಕ್ತ್ಯಾಯುಧದಿಂದ ಕ್ರೌಂಚನೆಂಬ ರಾಕ್ಷಸನೂ ಹತನಾದನು. ಇದರಿಂದ ಈತನಿಗೆ 'ತಾರಕಾರಿ', 'ಕ್ರೌಂಚಾರಿ' ಎಂದು ಹೆಸರಾಯಿತು.

ರುದ್ರಸ್ಯ ದೇವ್ಯಾ ಗಂಗಾಯಾಃ ಕೃತ್ತಿಕಾನಾಂ ಚ ತೇಜಸಾ ।
ದೇವಾ, ವಹ್ನೇಶ್ಚ ಜಾತಸ್ತ್ವಂ ತತ್ತೇಜಃ ಸಫಲೀಕುರು ॥

ಎಂದು ಸ್ಕಾಂದಪುರಾಣದಲ್ಲಿ ವಿಷ್ಣುವು, ದೇವಸೇನಾನಿಯೆನಿಸಿದ ಈತನಿಗೆ ಹೇಳಿದಂತೆ, ಈತನು ಶಂಕರ, ಪಾರ್ವತಿ, ಗಂಗೆ, ಕೃತ್ತಿಕಾಮಾತೆಯರು, ದೇವತೆಗಳು, ಅಗ್ನಿ ಇವರೆಲ್ಲರಿಗೂ ಪುತ್ರನೆನಿಸಿದನು.

ಸ್ತನದಾತ್ರೀ, ಗರ್ಭದಾತ್ರೀ, ಭಕ್ಷ್ಯದಾತ್ರೀ ಗುರುಪ್ರಿಯಾ ।
ಅಭೀಷ್ಟದೇವಪತ್ನೀ ಚ ಪಿತುಃ ಪತ್ನೀಚ ಕನ್ಯಕಾಃ ॥
............ಜನಾನಾಂ ವೇದ ವಿಹಿತಾಮಾತರಃ ಷೋಡಶ ಸ್ಮೃತಾಂ ॥

ಎಂದು ಹೇಳಿರುವಂತೆ, ಸ್ತನ್ಯಪಾನ ಮಾಡಿಸಿದ ಕೃತ್ತಿಕಾಮಾತೆಯರೂ, ಸ್ತನ್ಯಪಾನ ಮಾಡಿಸಿದ್ದಲ್ಲದೆ ತಂದೆಯ ಹೆಂಡತಿಯೂ ಎನಿಸಿದ ಪಾರ್ವತಿಯೂ, ಈತನಿಗೆ ಗರ್ಭದಾತ್ರಿಯರಲ್ಲದಿದ್ದರೂ, ಮಾತೆಯರೆನಿಸಿದರು. ಈತನ ಉತ್ಪತ್ತಿಗೆ ಕಾರಣವಾದ ಶಿವವೀರ್ಯವು, ಅಗ್ನಿಯ ಉದರದಿಂದ ಹೊರಬಂದು, 'ಶರಧಾನ'ವನದಲ್ಲಿ ಒಟ್ಟುಗೂಡಿದ್ದರ ಫಲವಾಗಿ, ಈತನು 'ಅಗ್ನಿಜನ್ಮ'ನೆಂದೂ, 'ಶರವನಭವ'ನೆಂದೂ ಹೆಸರಾಂತನು.

ಸುಬ್ರಹ್ಮಣ್ಯ ಸಹಸ್ರನಾಮದಲ್ಲಿ ಈತನನ್ನು 'ಫಣೀಶ್ವರ, ಫಣೀವರ, ಫಣಾಮಣಿವಿಭೂಷಣ, ಬಿಲೇಶಯಾನ, ಬಿಲದ್ವಾರಾಂತರಾಳಸ್ಥ, ದಂದುಶೂಕೇಶ್ವರ, ಉರಗೇಶ್ವರ' ಎಂಬ ನಾಮಗಳಿಂದ ಸ್ತುತಿಸಿದೆ. ಇದನ್ನು ನೋಡಿದರೆ ಈತನೇ ನಾಗರಾಜನೆಂದು ಭಾಸವಾಗುತ್ತದೆ. ಅಲ್ಲದೆ ಸುಬ್ರಹ್ಮಣ್ಯನೆಂದು ಇವನನ್ನು ಸಂಬೋಧಿಸಿದೆ.

ಸುಬ್ರಹ್ಮಣ್ಯನೆಂದರೆ ನಿಘಂಟಿನ ಮೇರೆ 'ಸುಬ್ರಹ್ಮಣ್ಯಃ ಕಾರ್ತಿಕೇಯಃ' ಎಂಬಂತೆ 'ಕುಮಾರ'ನೆಂದು ಹೇಳಿದಂತಾದರೂ, ರೂಢಿಯಲ್ಲಿ ಸುಬ್ರಹ್ಮಣ್ಯನೆಂದರೆ ಸುಬ್ಬರಾಯ, ನಾಗಪ್ಪ ಎಂದು ಸರ್ಪನಾಮಕದಲ್ಲಿ ಪ್ರಚಾರದಲ್ಲಿದೆ. ನಾಗರಚೌತಿ, ನಾಗರಪಂಚಮಿ ದಿನಗಳಂತೆಯೇ ಸುಬ್ಬರಾಯನ ಷಷ್ಠಿಯ ದಿನವೂ ಹುತ್ತಕ್ಕೆ ಪೂಜಿಸಿ ಹಾಲೆರೆಯುವರು (ತನಿ ಎರೆಯುವರು). ಬೆಳ್ಳಿಯ ನಾಗಪ್ಪಗಳನ್ನು ಮಾಡಿಸಿ ಪೂಜಿಸುವರು. ಇದರಿಂದ ಕುಮಾರಸ್ವಾಮಿಯೇ ನಾಗರಾಜನೆಂದು ಹೇಳಿಬಿಡೋಣವೆಂದರೆ ಕುಮಾರಸ್ವಾಮಿಯ ಚಿತ್ರದಲ್ಲಿ ಕುಮಾರಸ್ವಾಮಿಯು ಶಿಖಿವಾಹನನೆನಿಸಿ ನವಿಲಿನ ಮೇಲೆ ಕುಳಿತಿರುವನು. ಶಕ್ತಿ ಆಯುಧವನ್ನು ಧರಿಸಿರುವನು. ಆವನ

ಪತ್ನಿಯರಾದ ವಲ್ಲೀ, ದೇವಸೇನೆಯರು ಎಡಬಲಭಾಗಗಳಲ್ಲಿರುವರು. ಅವನ ವಾಹನವಾದ ನವಿಲಿನ ಪಾದಗಳ ಬಳಿ ಹೆಡೆಯೆತ್ತಿರುವ ಸರ್ಪವು ಚಿತ್ರಿತವಾಗಿರುವುದು. ಸರ್ಪವೇ ಕುಮಾರಸ್ವಾಮಿಯಾಗಿದ್ದಲ್ಲಿ ಆತನು ಏಕೆ ತನ್ನ ವಾಹನವಾದ ನವಿಲಿನ ಪಾದಮೂಲದಲ್ಲಿರಬೇಕು ? ಈ ಸಂಶಯ ನಿವಾರಣೆಗೆ ಘಾಟಿ ಸುಬ್ರಹ್ಮಣ್ಯದ ಸ್ಥಳಪುರಾಣದಲ್ಲಿ ಒಂದು ಆಖ್ಯಾಯಿಕೆಯಿರುತ್ತದೆ. ಕುಮಾರಸ್ವಾಮಿಯು ಬಾಲಚಾಪಲ್ಯದಿಂದ ಚತುರ್ಮುಖ ಬ್ರಹ್ಮನನ್ನು ಸೆರೆಯಲ್ಲಿಟ್ಟು ತಾನೇ ಸೃಷ್ಟಿಕಾರ್ಯದಲ್ಲಿ ತೊಡಗಿದನಂತೆ. ಈ ವಿಷಯವನ್ನು ಶಿವನು ನಾರದರಿಂದ ತಿಳಿದು ಮಗನನ್ನು ಕುರಿತು ಪ್ರಶ್ನಿಸಿದಾಗ, ಆತನು ತನ್ನ ತಪ್ಪಿಗೆ ಸರ್ಪರೂಪಧಾರಣೆಯೇ ತನಗೆ ಶಿಕ್ಷೆಯೆಂದರಿತು, ತಾನು ಸರ್ಪರೂಪಿಯಾಗಿ, ಹುತ್ತದಲ್ಲಿ ವಾಸಿಸಲು ಹೊರಟನಂತೆ. ಸರ್ಪಗಳೆಲ್ಲಾ ಅವನಿಗೆ ಸೇವೆ ಮಾಡಲು ತೊಡಗಿದವಂತೆ. ಆಗಿನಿಂದ ಅವನಿಗೆ ಭುಜಂಗೇಶ, ಗುಹಾಪ್ರೀತ, ಉರಗೇಶ್ವರ ಮುಂತಾದ ಹೆಸರುಗಳು ಬಂದುವಂತೆ. ಮಗನ ಈ ದುರವಸ್ಥೆಯನ್ನು ಕಂಡು ಮರುಗಿದ ಪಾರ್ವತಿಯನ್ನು ಸಮಾಧಾನಪಡಿಸಲು, ಆಕೆಯ ಸಹೋದರನಾದ ವಿಷ್ಣುವು ವೈಕುಂಠದಿಂದ ಬಂದು ಆ ಸರ್ಪರೂಪವನ್ನು ಬಾಚಿ ತಬ್ಬಿಕೊಳ್ಳಲು, ಆ ಸರ್ಪರೂಪ ಹೋಗಿ ಮೊದಲಿನ ಕುಮಾರರೂಪ ಬಂದಿತಂತೆ. ಅಂದಿನಿಂದ ಆ ಕುಮಾರನನ್ನು 'ಬಾಲಸುಬ್ರಹ್ಮಣ್ಯ'ನೆಂದು ಕರೆದರಂತೆ. ಈ ಆಖ್ಯಾಯಿಕೆಯಂತೆ ಸರ್ಪಗಳು ಅವನ ಆಶ್ರಯ ಪಡೆದು ಅವನ ವಾಹನವಾದ ನವಿಲಿನ ಪಾದಗಳ ಅಡಿಯಲ್ಲಿ ನೆಲೆಸಿದಂತೆ ಚಿತ್ರಿಸಿರುವುದು ಸಹಜವೆನಿಸುತ್ತದೆ.

ಇನ್ನು ಶಿವರಹಸ್ಯದಲ್ಲಿ ಕುಮಾರನಾದ ಸುಬ್ರಹ್ಮಣ್ಯನು ಸರ್ಪರೂಪಿಯಾದುದಕ್ಕೆ ಒಂದು ಶ್ಲೋಕವಿದೆ.

ಶರ್ವಾಣೀ ಪ್ರಣವೋಪದೇಶಚತುರಶ್ರೀಕಂಠಕಂಠೀರವ
ಶ್ರೋತಾರಂ ಜನನೀಶುಭಾಂಕವಿಲಸತ್ಸಿಂಹಾಸನಸ್ಥಂ ಗುಹಂ ‖
ಭೂಯಾಸ್ತಚ್ಛ್ರವಣಾಕುಲೋಗ್ರಜನಿತಂ ಸ್ವರ್ಣಾಹಿರಾಜಾಕೃತಿಂ
ಸುಬ್ರಹ್ಮಣ್ಯಮಗಣ್ಯಪುಣ್ಯಚರಿತಂ ವಂದೇ ಪರಂ ದೇಶಿಕಂ ‖

ಅಂದರೆ ಪರಶಿವನು ಪಾರ್ವತಿಗೆ ಪ್ರಣವ ಮಂತ್ರೋಪದೇಶ ಮಾಡುವ ಗಂಭೀರ ಧ್ವನಿಯನ್ನು ಕುಮಾರ ಸುಬ್ರಹ್ಮಣ್ಯನು ಪಾರ್ವತಿಯ ಪವಿತ್ರವಾದ ತೊಡೆಯೆಂಬ ಸಿಂಹಾಸನದ ಮೇಲೆ ಕುಳಿತು, ಆ ಪ್ರಣವನಾದವನ್ನೇ ಅನುಸಂಧಾನ ಮಾಡುತ್ತಾ ಅದರಿಂದ ಸುವರ್ಣರಂಜಿತವಾದ ನಾಗರಾಜನ ಆಕೃತಿಯನ್ನು ಪಡೆದನು. ಅಂತಹ ಸುಬ್ರಹ್ಮಣ್ಯನನ್ನು ನಾನು ನಮಿಸುತ್ತೇನೆ ಎಂದಿದೆ.

ಹೀಗೆ ಕುಮಾರನಿಗೆ ತಾತ್ಕಾಲಿಕವಾಗಿ ಓಂಕಾರಾಕೃತಿಯ ಸರ್ಪರೂಪ ಬಂದಿತು. ಇದರಿಂದ ಅರ್ಥವಾಗುವುದೇನೆಂದರೆ ಕುಮಾರಸ್ವಾಮಿಗೆ ಸರ್ಪರೂಪವು ಪ್ರಾಸಂಗಿಕ. ಶಾಶ್ವತವಾದ ನಿಜರೂಪವಲ್ಲ. ನೈಜ ಸರ್ಪರೂಪದ ನಾಗರಾಜನ ಸಂತತಿಯೇ ಬೇರೆ. ಬ್ರಹ್ಮನ ಮಾನಸ ಪುತ್ರ ಮರೀಚಿಯ ಮಗ ಕಶ್ಯಪ ಮತ್ತು ದಕ್ಷಪುತ್ರಿ ಕದ್ರುವಿನಿಂದ ಜನಿಸಿದ 'ಅನಂತ, ವಾಸುಕಿ, ಕಂಬಲ, ಕರ್ಕೋಟಕ, ಪದ್ಮ, ಮಹಾಪದ್ಮ, ಶಂಖ, ಕುಲಿಕರೆಂಬ, ಅನಂತಾದ್ಯಷ್ಟನಾಗರೂ ವಿಷ್ಣುವಿನ ಪರ್ಯಂಕವಾದ ಆದಿಶೇಷನೂ ಭೂಮಿಯನ್ನು ಹೊತ್ತಿರುವ ವಾಸುಕಿಯೂ ಪರಶಿವನ ಕಂಠಭೂಷಣನಾದ, ಗಣಪತಿಯ ಯಜ್ಞೋಪವೀತವೆನಿಸಿದ, ಸರ್ಪಗಳೂ ಕುಮಾರಸ್ವಾಮಿಯಲ್ಲ. ಸರ್ಪರಾಜನಾದ ಆದಿಶೇಷನ ಆವಾಸಸ್ಥಳ ಪಾತಾಳಲೋಕ. ಅಶ್ವತ್ಥಮರದಡಿಯಲ್ಲಿ ಈ ನಾಗರಾಜನನ್ನು ಪ್ರತಿಷ್ಠಿಸಿ ಪೂಜಿಸುವರು. ಈತನಿಗೆ ಪ್ರೀತಿಯಾದ ನಾಗರಚೌತಿ ನಾಗರಪಂಚಮಿ ದಿನಗಳಲ್ಲಿ ಈತನು ಪ್ರೀತನಾಗಲು ಹುತ್ತಕ್ಕೆ ಪೂಜೆ ಮಾಡಿ ಕ್ಷೀರಾಭಿಷೇಕ ಮಾಡುವರು. ಹುತ್ತದ ಮಣ್ಣನ್ನು ಮನೆಗೆ ತಂದು ಅದರೊಡನೆ ಬೆಳ್ಳಿಯ ನಾಗಪ್ಪನನ್ನಿಟ್ಟು ಪೂಜಿಸುವರು. ಹೀಗೆ ಕುಮಾರಸ್ವಾಮಿಗೆ ಪ್ರಸಂಗವಶಾತ್ ಸರ್ಪರೂಪವೇ ಹೊರತು ಅವನು ಆದಿಶೇಷನಲ್ಲ; ಮತ್ತು ಸುಬ್ರಹ್ಮಣ್ಯ ಪದಕ್ಕೆ ಕುಮಾರನೆಂದರ್ಥವೇ ಹೊರತು ನಾಗರಾಜನೆಂದಲ್ಲ.

'ಬ್ರಹ್ಮಣ್ಯ' ಎಂದರೆ ಬ್ರಹ್ಮದಲ್ಲಿ ಸ್ಥಿತಿ ಪಡೆದವನು ಎಂದರ್ಥ. ಆ ಸ್ಥಿತಿಯು ಸುಸ್ಥಿರವಾಗಿದ್ದರೆ, ಅವನು ಸುಬ್ರಹ್ಮಣ್ಯ. ಕುಮಾರಸ್ವಾಮಿಯು ಈ ತರಹ ಬ್ರಹ್ಮಭಾವವನ್ನು ಹೊಂದಿದ್ದನು. ಅವನನ್ನು ಒಂದುಕಡೆ—

ತ್ವಂ ಬ್ರಹ್ಮವಾದಿ, ತ್ವಂ ಬ್ರಹ್ಮಾ, ಬ್ರಹ್ಮ ಬ್ರಹ್ಮಣವತ್ಸಲಃ ।
ಬ್ರಹ್ಮಣ್ಯೋ ಬ್ರಹ್ಮದೇವಶ್ಚ ಬ್ರಹ್ಮದೋ ಬ್ರಹ್ಮಸಂಗ್ರಹಃ ।
ತ್ವಂ ಪರಂ ಪರಮಂ ತೇಜೋಮಂಗಲಾನಾಂ ಚ ಮಂಗಲಂ ॥

ಅಂದರೆ, ಕುಮಾರಸ್ವಾಮಿಯೇ ಬ್ರಹ್ಮವಾದಿಯು (ವೇದವೇದಾಂತ ಪ್ರತಿಪಾದ್ಯವಾದ ಪರಬ್ರಹ್ಮ ಸ್ವರೂಪವನ್ನು ಉಪದೇಶ ಮಾಡುವವನು), ಅವನೇ ಬ್ರಹ್ಮನು, ಬ್ರಾಹ್ಮಣವತ್ಸಲನು, ಬ್ರಹ್ಮಣ್ಯನು ('ಬ್ರಹ್ಮಣಿ ಸ್ಥಿತಃ), ಬ್ರಹ್ಮದೇವನು, ಬ್ರಹ್ಮದನು (ಬ್ರಹ್ಮಸ್ವರೂಪವನ್ನು ದಯಪಾಲಿಸುವವನು) ಬ್ರಹ್ಮ ಸಂಗ್ರಹನು. ಅವನೇ ಪರಮತೇಜ ಸ್ವರೂಪಿಯು. ಮಂಗಳಕ್ಕೆಲ್ಲಾ ಮಂಗಳನು ಎಂದು ಸುಬ್ರಹ್ಮಣ್ಯ ಭಾವದಿಂದ ಹೇಳಿದೆ.

ಒಟ್ಟಿನಲ್ಲಿ ಕುಮಾರಸ್ವಾಮಿಯನ್ನು ಈ ಕೆಳಗಿನ ಶ್ಲೋಕದಲ್ಲಿ ವಿವರವಾಗಿ ಹೀಗೆ ಹೇಳಿದೆ.

ಗಾಂಗೇಯಂ, ವಹ್ನಿಗರ್ಭಂ, ಶರವನಜನಿತಂ, ಶಕ್ತಿಹಸ್ತಂ, ಕುಮಾರಂ ।
ಬ್ರಹ್ಮಣ್ಯಂ ಸ್ಕಂದದೇವಂ ಗುಹಮಚಲ ಮಭಿದಂ ಮಂತ್ರತೇಜಃಸ್ವರೂಪಂ ॥
ಸೇನಾನೀಂ ತಾರಕಘ್ನಂ ಗಣಗಣಸಹಿತಂ ಕಾರ್ತಿಕೇಯಂ ಷಡಾಸ್ಯಂ ॥
ಸುಬ್ರಹ್ಮಣ್ಯಂ ಮಯೂರಧ್ವಜರಥಸಹಿತಂ ಕಾರ್ತಿಕೇಯಂ ನಮಾಮಿ ।

ಎಂದಿದೆ.

ಅನೇಕ ಪುರಾಣಗಳಲ್ಲಿ ಅನೇಕ ವಿಧವಾಗಿ ಕುಮಾರನ ಉತ್ಪತ್ತಿಯನ್ನು ಹೇಳಿದೆ. ಸೌರ ಪುರಾಣ, ಬ್ರಹ್ಮವೈವರ್ತ ಪುರಾಣ, ನಾರದೀಯ ಪುರಾಣ, ಸ್ಕಾಂದ ಪುರಾಣ, ವರಾಹ ಪುರಾಣ, ಮತ್ಸ್ಯ ಪುರಾಣ, ಕೂರ್ಮ ಪುರಾಣ, ಶಿವರಹಸ್ಯ ಮುಂತಾದುವುಗಳಲ್ಲಿ ಈ ವಿಚಾರವಿದೆ. ಇವುಗಳಲ್ಲಿ ಒಂದು ಕ್ರಮದಿಂದ ಮೇಲೆ ಹೇಳಿರುತ್ತೆ. ವ್ಯಾವಹಾರಿಕವಾಗಿ ಪುರಾಣೋಕ್ತ ಕುಮಾರಸ್ವಾಮಿಯ ಜನನವಿಚಾರವನ್ನು ಇದುವರೆಗೆ ಹೇಳಿದ್ದಾಯಿತು. ಇನ್ನು ಆಧ್ಯಾತ್ಮಿಕ ಮತ್ತು ಯೋಗಿಕ ರೀತಿಯಲ್ಲಿ ವಿಚಾರಮಾಡತಕ್ಕದ್ದು ಉಳಿದಿದೆ. ವರಾಹ ಪುರಾಣದಲ್ಲಿ ಪುರುಷನೇ ಶಿವನೆಂದೂ, ಅವ್ಯಕ್ತವೇ ಪಾರ್ವತಿಯೆಂದೂ, ಶಿವಪಾರ್ವತಿಯರಿಂದ (ಪುರುಷ ಅವ್ಯಕ್ತಗಳ ಸಂಯೋಗದಿಂದ) ಅಹಂಕಾರವೆಂಬ ಕುಮಾರಸ್ವಾಮಿಯು ಜನಿಸಿದನೆಂದೂ ಹೇಳಿದೆ.

ಗೀತಾಭಾಷ್ಯದಲ್ಲಿ ಶ್ರೀಮಚ್ಛಂಕರರು, ಅಹಂಕಾರವನ್ನು 'ಮನಸಃ ಕಾರಣಂ ಅಹಂಕಾರೋ ಗೃಹ್ಯತೇ' ಎಂದು ಹೇಳಿರುವರು. ಅವರು ಹೇಳಿರುವಂತೆ ಮನಸ್ಸಿಗೂ (ಬುದ್ಧಿಗೂ) ಕಾರಣವಾಗಿರುವುದು ಅಹಂಕಾರ. ಇದನ್ನೇ "ಐಶ್ವರೀ ಮಾಯಾಶಕ್ತಿಃ" ಎನ್ನುತ್ತಾರೆ. ಈ ಶಕ್ತಿಯನ್ನು ಪಡೆದದ್ದರಿಂದಲೇ ಕುಮಾರನು 'ಶಕ್ತಿಧರ' ನೆನಿಸಿದನು.

ಮಾಯಾವಿಶಿಷ್ಟವಾದ ಶುದ್ಧಚೈತನ್ಯವು (ಈಶ್ವರನು) ಪ್ರಾಣಿಗಳ ಶರೀರದಲ್ಲಿ ಪ್ರವೇಶಿಸಿ, ಬುದ್ಧಿಯನ್ನು ಆಶ್ರಯಿಸಿರುವ ಅನಾದಿ ಉಪಾಸನಾ, ಕರ್ಮ, ಪೂರ್ವಸಂಸ್ಕಾರಗಳಿಗೆ ತಕ್ಕಂತೆ ಫಲ ಕೊಡಲು, ಆ ಬುದ್ಧಿಯಲ್ಲಿ ಪ್ರತಿಬಿಂಬಿಸಿ, ಬುದ್ಧಿಗೆ ಪ್ರೇರಕವಾಯಿತು ಮತ್ತು 'ಚಿದಾಭಾಸ' ವೆನಿಸಿತು. ಆ ಪ್ರತಿಬಿಂಬ ಚಿದಾಭಾಸಕ್ಕೆ ಬಿಂಬರೂಪವೆನಿಸಿದ ಮಾಯಾವಿಶಿಷ್ಟ ಶುದ್ಧಚೈತನ್ಯವು (ಈಶ್ವರನು) "ಕೂಟಸ್ಥ" ನೆನಿಸಿತು.

ಈ ಕೂಟಸ್ಥ ರೂಪದಲ್ಲಿ ಬುದ್ಧಿಯೊಳಗೆ 'ಅಹಂ, ಅಹಂ' ಅಂದರೆ, 'ನಾನು ನಾನೆಂಬ' ಪ್ರತ್ಯಯಕ್ಕೆ ಕರ್ತೃವಾಗಿ, ಅಂತರ್ಯಾಮಿಯಾಗಿರುವವನೇ ಕುಮಾರಸ್ವಾಮಿಯು. ಪ್ರಾಣಿಗಳ ಬೆನ್ನಿನ ಹುರಿಯೊಳಗೆ ಸರ್ಪಾಕಾರವಾಗಿ ಉದ್ದವಾಗಿ ಇರುವ ಸುಷುಮ್ನಾ ನಾಡಿಯೊಳಗಿನ ನಾಡೀರೂಪ ಷಟ್ಚಕ್ರಗಳಲ್ಲಿ ಸ್ಫುರಿಸಿ, ಕೊನೆಯದಾದ ಏಳನೆಯ 'ಸಹಸ್ರಾರ' ಚಕ್ರದಲ್ಲಿ ನೆಲೆ ನಿಂತಿರುವವನೂ ಇವನೇ. (ಚಕ್ರವೆಂದರೆ ದೇಹದಲ್ಲಿರುವ

ಸ್ಥಾನವಿಶೇಷಗಳಲ್ಲಿ ಜ್ಞಾನತಂತುಗಳ ಸಂಗಮಸ್ಥಾನ. ಜ್ಞಾನತಂತುಗಳು ಬೇರೆ ಬೇರೆ ಸ್ಥಳಗಳಲ್ಲಿ ಕವಲೊಡೆದು ಗ್ರಂಥಿರೂಪದಲ್ಲಿ ಸೇರುತ್ತವೆ. ಪ್ರತಿಯೊಂದು ಗ್ರಂಥಿಯೂ ಒಂದು ಚಕ್ರ.)

ಈ ರೀತಿ ಕೂಟಸ್ಥರೂಪದಲ್ಲಿರುವವನೇ ಕುಮಾರನೆಂಬುದನ್ನು ಸುಬ್ರಹ್ಮಣ್ಯ ಸಹಸ್ರನಾಮದಲ್ಲಿ ಈ ಕೆಳಗಿನ ನಾಮಗಳಿಂದ ಹೇಳಿದೆ.

1) ಕೂಟಸ್ಥಾಯ ನಮಃ
2) ಚಿತ್ಸ್ವರೂಪಾಯ ನಮಃ
3) ತ್ರಿಗುಣಾತ್ಮಕಾಯ ನಮಃ
4) ಪರಬ್ರಹ್ಮಣೇ ನಮಃ
5) ಪರಬ್ರಹ್ಮಸ್ವರೂಪಾಯ ನಮಃ
6) ಬ್ರಹ್ಮಣ್ಯಾಯ ನಮಃ
7) ಯೋಗೀಶಾಯ ನಮಃ
8) ಷಟ್ಚಕ್ರಸ್ಥಾಯ ನಮಃ
9) ಷಟ್ಕೋಣಮಧ್ಯನಿಲಯಾಯ ನಮಃ
10) ಸಚ್ಚಿದಾನಂದಾಯ ನಮಃ

ಈ ಕುಮಾರಸ್ವಾಮಿಯೇ ಪ್ರಾಣಿಗಳ ದೇಹದಲ್ಲಿ ಅಂತರ್ಯಾಮಿಯು. ಬೃಹದಾರಣ್ಯಕೋಪನಿಷತ್ತಿನಲ್ಲಿ ಅಂತರ್ಯಾಮಿತ್ವವನ್ನು ಈ ಕೆಳಗಿನ ಮಂತ್ರದಲ್ಲಿ ಹೇಳಿದೆ.

ಯೋ ವಿಜ್ಞಾನೇ ತಿಷ್ಠನ್, ವಿಜ್ಞಾನಾದಂತರಃ, ಯಂ ವಿಜ್ಞಾನಂ
ನ ವೇದ, ಯಸ್ಯ ವಿಜ್ಞಾನಂ ಶರೀರಂ, ಯೋ ವಿಜ್ಞಾನ ಮಂತರೋ
ಯಮಯತಿ ಏಷತ ಆತ್ಮಾಂತರ್ಯಾಮ್ಯಮೃತಃ

ಅಂದರೆ ಯಾವನು ಬುದ್ಧಿಯಲ್ಲಿ ಕುಳಿತು ಬುದ್ಧಿಯ ಒಳಗಿರುವನೋ, ಯಾವನನ್ನು ಬುದ್ಧಿಯು ತಿಳಿಯದೋ, ಯಾವನಿಗೆ ಬುದ್ಧಿಯು ಶರೀರವೋ, ಯಾವನು ಒಳಗಿದ್ದುಕೊಂಡು ಬುದ್ಧಿಯನ್ನು ನಿಯಮಿಸುವನೋ ಅವನೇ ಅಂತರ್ಯಾಮಿಯು– ನಮ್ಮ ಅಮೃತನಾದ ಆತ್ಮನು ಎಂದು ಹೇಳಿದೆ. ಈ ರೀತಿಯಾದ ಅಂತರ್ಯಾಮಿ ಸ್ವರೂಪನೇ ಕುಮಾರಸ್ವಾಮಿಯು. ಇವನನ್ನೇ

'ಅ'ಕಾರಾತ್ಮಾ 'ಉ'ಕಾರಾತ್ಮಾ 'ಮ'ಕಾರಾತ್ಮಾ ತ್ರಿವರ್ಗಕಃ ।
ಓಂಕಾರಶ್ಚ ವಷಟ್ಕಾರಃ ಸ್ವಾಹಾಕಾರಸ್ಸ್ವಧಾಕೃತಿಃ ॥

ಎಂದೂ

ಓಂಕಾರಕುಂಡನಿಲಯೋ ಓಂಕಾರಾರ್ಥಪ್ರಕಾಶಕೃತ್ ।
ಓಂಕಾರಜಪಸುಪ್ರೀತೋ ಓಂಕಾರಸ್ವರಮಾತೃಕಂ ॥

ಎಂದೂ ಓಂಕಾರರೂಪಿಯಾಗಿ ಹೇಳಿದೆ.

ಇದನ್ನು ವಿವರಿಸುವುದಾದರೆ, ಸೃಷ್ಟಿಗೆ ಆರಂಭದಲ್ಲಿ ನಿರ್ಗುಣ ಬ್ರಹ್ಮಕ್ಕೂ ಅದರ ಅವ್ಯಕ್ತ ಶಕ್ತಿಗೂ ಆ ಬ್ರಹ್ಮದ ಬಹುವಾಗಬೇಕೆಂಬ ಇಚ್ಛಾ ಮಾತ್ರದಿಂದ ಓಂಕಾರನಾದ ಹುಟ್ಟಿತು. ಆ ಓಂಕಾರವೇ ಕುಮಾರನು. ನಿರ್ಗುಣ ಬ್ರಹ್ಮವೇ ಶಂಕರ. ಅವ್ಯಕ್ತಶಕ್ತಿಯೇ ಪಾರ್ವತಿ. ಆ ಬ್ರಹ್ಮದ ಇಚ್ಛೆಯೇ ಶಂಕರ ಪಾರ್ವತಿಯರ ಸಂಯೋಗ. ಅದರಿಂದ ಹುಟ್ಟಿದ ಶಕ್ತಿಯೇ ಶಕ್ತಿಧರನೆನಿಸುವ ಕುಮಾರನು. ಈ ಓಂಕಾರ ನಾದದಿಂದ ಮಹಾಬಿಂದು, ಮಹಾಬಿಂದುವಿನಿಂದ ಇಚ್ಛಾಶಕ್ತಿ, ಕ್ರಿಯಾಶಕ್ತಿ, ಜ್ಞಾನಶಕ್ತಿಗಳು ಉತ್ಪನ್ನವಾದುವು. ಇವುಗಳೇ ಕಾಮಕಲಾ ಎಂಬ ತ್ರಿ ಶಕ್ತಿಗಳು. ಇವುಗಳಿಂದ 'ಅ'ಕಾರ, 'ಉ'ಕಾರ, 'ಮ'ಕಾರ ಬೀಜಾಕ್ಷರಗಳಾದುವು. ಅವುಗಳಲ್ಲಿ ಶಕ್ತಿಯು ಪ್ರತಿಬಿಂಬಿಸಿ ಕ್ರಮವಾಗಿ ಸೃಷ್ಟಿಸ್ಥಿತಿ ಲಯಗಳಿಗೆ ಕಾರಣವಾಯಿತು. ಪ್ರಾಣಶಕ್ತಿ ಸಹಿತ ಸರ್ವಶಕ್ತಿಗಳಿಗೂ ಮೂಲವಾದ ಸೃಷ್ಟಿಶಕ್ತಿಯ ನಿದ್ರಿತ ವಿಶ್ರಾಂತ ರೂಪವೇ ದೇಹದಲ್ಲಿ ಮೂಲಾಧಾರದಲ್ಲಿ 'ಅ'ಕಾರ ರೂಪ ಕುಂಡಲಿನಿ. ಇದು ಸೊಂಟದ ಕೆಳಗೆ ಸುಷುಮ್ನಾನಾಡಿಯ ಮುಖಭಾಗದಲ್ಲಿರುವುದು. ಇದು ಹಾವಿನಂತೆ ಸುರುಳಿಸುತ್ತಿಕೊಂಡಿದೆ. ಇದರಿಂದ ಮೂಲಾಧಾರ ಚಕ್ರದಲ್ಲಿ ಕುಂಡಲಿನೀ ಶಕ್ತಿರೂಪನಾದ ಕುಮಾರನನ್ನು ಸರ್ಪಕ್ಕೆ ಹೋಲಿಸುವರು. ಸೊಂಟದ ಕೆಳಭಾಗದಲ್ಲಿ ಇಡಾ ಪಿಂಗಳಾ ನಾಡಿಗಳು ಪ್ರಾಣಿಗಳ ಬುದ್ಧಿಯನ್ನು

ಪ್ರಪಂಚ ವ್ಯವಹಾರದತ್ತ ಸೆಳೆಯುತ್ತವೆ. ಇವೇ ಕುಂಡಲಿನೀ ಎಂಬ ಸರ್ಪದ ಎರಡು ನಾಲಿಗೆಗಳು. ಇಲ್ಲಿ ಬೆನ್ನು ಮೂಳೆಯ ಮಧ್ಯದಲ್ಲಿ ಸುಷುಮ್ನಾ ಎಂಬ ಅತಿ ಸೂಕ್ಷ್ಮವೂ ದೀರ್ಘವೂ ಮಹಾಶಕ್ತಿಯುಕ್ತವೂ ಆದ ನಾಡಿ ಇದೆ. ಇದು ಹಿಂದೆಯೇ ಹೇಳಿದಂತೆ ಉದ್ದವಾಗಿರುವ ಸರ್ಪದಂತಿದೆ. ಇದರ ತುದಿಯು ನೆತ್ತಿಯಲ್ಲಿರುವ ಸಹಸ್ರಾರ ಚಕ್ರವನ್ನು ಮುಟ್ಟುತ್ತದೆ. ಇದರ ಮೇಲೆಯೇ ಷಟ್ಚಕ್ರಗಳೂ 'ಅ'ಕಾರ, 'ಉ'ಕಾರ, 'ಮ'ಕಾರ ಗಳೂ ಇವೆ. ಚಿದಾಭಾಸನಾದ ಜೀವನು ಸುಷುಮ್ನಾ ನಾಡಿಯ ಬಾಗಿಲೆಂಬ ಬಿಲದ್ವಾರದಿಂದ ತನ್ನನ್ನು ಆವರಿಸಿರುವ ಮಾಯೆಯನ್ನು ಬಿಟ್ಟು 'ಅ'ಕಾರ, 'ಉ'ಕಾರ, 'ಮ'ಕಾರಗಳೊಡನೆಯೂ ಷಟ್ಚಕ್ರಗಳೊಡನೆಯೂ ಒಟ್ಟುಗೂಡಿ 'ಓಂ'ಕಾರ ಷಣ್ಮುಖನಾಗಿ (ಕೂಟಸ್ಥನಾಗಿ) ನೆತ್ತಿಯಲ್ಲಿ ಸಹಸ್ರಾರ ಚಕ್ರಕ್ಕೆ ಏರಿಹೋಗಿ (ಶಿಖಿ ವಾಹನನೆನಿಸಿ) ಪರಬ್ರಹ್ಮನಲ್ಲಿ ನಿಲ್ಲುವುದೇ ಮೋಕ್ಷವು.

ಸಮುದ್ರಮಥನ ಕಾಲದಲ್ಲಿ, ಅಮೃತ ಸಂಪಾದನೆಗಾಗಿ ದೇವತೆಗಳು ವಾಸುಕಿಯ ಬಾಲವನ್ನೂ ರಾಕ್ಷಸರು ಅದರ ಹೆಡೆಯನ್ನು ಹಿಡಿದುಕೊಂಡು ಕ್ಷೀರಸಮುದ್ರವನ್ನು ಕಡೆಯಲಾಗಿ ದೇವತೆಗಳಿಗೆ ಅಮೃತ ಸಿಕ್ಕಿತು, ರಾಕ್ಷಸರು ವಿಷವನ್ನು ಪಡೆದರು–ಎಂಬ ಆಖ್ಯಾಯಿಕೆಯನ್ನು ನೋಡಿದರೆ ಇಲ್ಲಿ ಸರ್ಪದ ಹೆಡೆಯೇ ಕುಂಡಲಿನಿ. ಸರ್ಪದ ವಿಷಜ್ವಾಲೆಯೇ ಕುಂಡಲಿನಿಯ ಎರಡು ಪಕ್ಕಗಳಿಂದ ಬುದ್ಧಿಯನ್ನು ಬಾಹ್ಯ ವಿಷಯಗಳ ಕಡೆಗೆ ಹೊರಡಿಸುವ ಇಡಾ, ಪಿಂಗಳಾ ನಾಡಿಗಳು. ಸರ್ಪದ ಬಾಲವೇ ಅಮೃತಧಾರೆಯ ತಂಪನ್ನು ಅನುಭವಕ್ಕೆ ತಂದು ಕೊಡುವ ಸಹಸ್ರಾರಚಕ್ರ. ಅದೇ ಸುಷುಮ್ನಾ ನಾಡಿಯ ತುದಿ. ವ್ಯವಹಾರ ಪ್ರಪಂಚದ ವಿಷಯ ಗಳೆಂಬ ವಿಷ ಸೇವನೆಯಿಂದ ನಾವು ಹಾಳಾಗುತ್ತಿದ್ದೇವೆ.

ಇದನ್ನೇ ಶ್ರೀಮಚ್ಛಂಕರರು ಕರಾವಲಂಬನ ಸ್ತೋತ್ರದಲ್ಲಿ

> ಸಂಸಾರಸರ್ಪ ವಿಷದಗ್ಧ ಮಹೋಗ್ರತೀವ್ರ
> ದಂಷ್ಟ್ರಾಗ್ರಕೋಟಿಪರಿದಷ್ಟವಿನಷ್ಟಮೂರ್ತೇಃ ।
> ನಾಗಾರಿವಾಹನಸುಧಾಬ್ಧಿನಿವಾಸ ಶೌರೇ ।
> ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಂ ॥

ಎಂದು ಹೇಳಿರುವರು.

ಇಲ್ಲಿ 'ನಾಗಾರಿವಾಹನ'ನೆಂಬುದಕ್ಕೆ ಮಯೂರವಾಹನನೆಂದೂ 'ಸುಧಾಬ್ಧಿ' ಎಂಬುದಕ್ಕೆ ನೆತ್ತಿಯಲ್ಲಿ ಸಹಸ್ರಾರ ಚಕ್ರದಲ್ಲಿ ತೋರುವ ಅಮೃತಧಾರೆಯೆಂದೂ 'ಶೌರೀ' ಎಂಬುದಕ್ಕೆ 'ಶಕ್ತಿ'ಧರನೆಂದೂ ಅರ್ಥ ಮಾಡಿ ದರೆ ಲಕ್ಷ್ಮೀನೃಸಿಂಹನು ಸುಬ್ರಹ್ಮಣ್ಯನಾಗುವನು.

[ಸುಬ್ರಹ್ಮಣ್ಯಾಷ್ಟಕದಲ್ಲಿ ಭಜೇಹಂ ಕುಮಾರಂ ನೃಸಿಂಹಾವತಾರಂ ಎಂದಿದೆ.]

ಕುಮಾರನನ್ನು ಕುಕ್ಕುಟಧ್ವಜನೆನ್ನುವರು. ಕುಕ್ಕುಟವು (ಹುಂಜವು) ತಾನು ಕೂಗುವಾಗ ತನ್ನ ಎರಡು ರೆಕ್ಕೆಗಳನ್ನೂ ಅಗಲಿಸಿ ಕತ್ತನ್ನು ಎತ್ತಿ ನಿಲ್ಲುವುದು. ಆಗ ಅದು ಸಂಸ್ಕೃತದ 'ಓಂ'ಕಾರವನ್ನು ಹೋಲುವುದು.

'ಓಂ'ಕಾರ ಸ್ವರೂಪಿಯೇ ಆದ ಕುಮಾರನು ಓಂಕಾರ ಸೂಚಕ ಕುಕ್ಕುಟವನ್ನು ಧ್ವಜವಾಗಿ ಹೊಂದಿರುವುದು ಸಹಜವಾಗಿದೆ. ದಕ್ಷಿಣ ದೇಶದಲ್ಲಿ 'ಮುರುಗ' ಎನ್ನುವುದು ನವಿಲುವಾಹನನಾದ ಕುಮಾರಸ್ವಾಮಿಯ 'ಮಯೂರಗ' ಎಂಬ ಸಂಸ್ಕೃತ ನಾಮದ ಅರ್ಥವಾಗಿರಬೇಕು.

'ಓಂ'ಕಾರ ಸ್ಥಾನವಾದ ನೆತ್ತಿಯ ಸಹಸ್ರಾರ ಚಕ್ರದಿಂದ ಹೊರಟು 'ಅ'ಕಾರ ಸ್ಥಾನವಾದ ಗುದ ಸ್ಥಾನದ ಮೂಲಾಧಾರ ಚಕ್ರದವರೆಗೆ ಪ್ರಾಣಿಗಳ ಶರೀರದಲ್ಲಿ 'ಮ'ಕಾರ, 'ಉ'ಕಾರ, 'ಅ'ಕಾರ ರೂಪಗಳಾಗಿ ಹರಿದುಕೊಂಡು ಬಂದು ಕೊನೆಗೆ 'ಕುಂಡಲಿನೀ' ರೂಪವಾಗಿ ಮೂಲಾಧಾರವೆಂಬ ಹುತ್ತದಲ್ಲಿ ಮಲಗಿರುವವನೇ ಕುಮಾರ ಸುಬ್ರಹ್ಮಣ್ಯ. ಅವನೇ ಕೂಟಸ್ಥ ಪರಬ್ರಹ್ಮನು.

ಇತಿ ಸುಬ್ರಹ್ಮಣ್ಯೋಂ

ವಿದ್ವಾನ್ ಬಾಲಗಣಪತಿ ಭಟ್ಟ

ಅವತಾರ ರಹಸ್ಯ

ಭಗವಂತ ಸರ್ವಶಕ್ತ ಹಾಗೂ ಸರ್ವಾಂತರ್ಯಾಮಿ. ಅಣುರೇಣು ತೃಣಕಾಷ್ಠ ವ್ಯಾಪಿಯಾದ ಆತ ಸಾಕಾರನೂ ಹೌದು ನಿರಾಕಾರನೂ ಹೌದು. ಇಂತಹ ಪರಮಾತ್ಮನ ಸಾಕಾರ ಸ್ವರೂಪವನ್ನೇ ಅವತಾರವೆಂದು ಕರೆಯುತ್ತ, ನಮ್ಮ ಪುರಾಣ ಗ್ರಂಥಗಳು. ಅವ್ಯಕ್ತ ರೂಪದಲ್ಲಿರುವಾಗ ನಿರಾಕಾರನಾಗಿದ್ದರೂ, ಜೀವರಾಶಿಯನ್ನು ಉದ್ಧರಿಸಲು ಕರುಣಾಳುವಾದ ಅವನು ಸಾಕಾರವಾಗುತ್ತಾನೆ. ಇದನ್ನೇ ಭಗವದ್ಗೀತೆಯು

> ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
> ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ॥

ಎಂದು ಸಾರುತ್ತದೆ. ಸಾಧುಗಳ ಸಂರಕ್ಷಣ, ಅಸಾಧುಗಳ ಅಥವಾ ದುಷ್ಕೃತರ ವಿನಾಶವೇ ಈ ಅವತಾರದ ಗುರಿ. "ನಿರಾಕಾರಿಯಾಗಿಯೇ ಸರ್ವಕರ್ಮ ಸಮರ್ಥನಾದ ಪರಮಾತ್ಮನಿಗೆ ಈ ಸಾಕಾರದ ಅವತಾರವೇಕೆ ?" ಎಂಬ ಪ್ರಶ್ನೆ ಉದಯಿಸಬಹುದು. ಇದರ ಉತ್ತರ "ಯೋಗವಾಶಿಷ್ಠದಲ್ಲಿದೆ". ಶ್ರೀರಾಮನಿಗೆ ವಶಿಷ್ಠರು ವಿವರಿಸಿದ್ದಾರೆ : ಗೋವಿನ ಶರೀರದಲ್ಲಿ ಹಾಲಿದೆ, ಬೆಣ್ಣೆಯಿದೆ. ಆದರೆ ಇವು ಹಸುವನ್ನು ಪೋಷಿಸಲಾರವು. ಅದು ಸಾಕಾರವಾದಾಗ ಮಾತ್ರ ಪೋಷಣ ಸಾಮರ್ಥ್ಯವನ್ನು ಪಡೆಯುತ್ತವೆ. ಕಟ್ಟಿಗೆಯಲ್ಲಿ ಕಾಣಿಸದಂತಿರುವ ಬೆಂಕಿ ಸಾಕಾರವಾದಾಗ ಸುಡುವ ಶಕ್ತಿಯನ್ನು ಪಡೆಯುತ್ತದೆ.

> ಅಜೋಽಪಿಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿಸನ್ ।
> ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥

ಎಂದು ಗೀತೆಯಲ್ಲಿ ಭಗವಂತನ ಅವತಾರರಹಸ್ಯವನ್ನು ವಿವರಿಸಲಾಗಿದೆ.

ಹದಿನೆಂಟು ದಿವಸಗಳು ನಡೆದ ಮಹಾಭಾರತದ ಸಂಗ್ರಾಮದ ಮೂಲಕ, ಶ್ರೀಕೃಷ್ಣನು ಜಗದ್ವಿನಾಶಕನಾದನೆಂದು ಅಹಿಂಸಾಪ್ರೇಮಿಯಾದ ಉತ್ತಂಕಮಹರ್ಷಿ ಶ್ರೀಕೃಷ್ಣನಿಗೆ ಶಾಪಕೊಡಲು ತೊಡಗುತ್ತಾನೆ. ಆಗ ಶ್ರೀಕೃಷ್ಣನು ಆತನಿಗೆ ತನ್ನ ಅವತಾರದ ರಹಸ್ಯವನ್ನು ವಿವರಿಸಿ ವಿಶ್ವರೂಪವನ್ನು ಸಂದರ್ಶಿಸುತ್ತಾನೆ. ಭಗವಂತನ ಜನ್ಮ, ಕರ್ಮಗಳೆರಡೂ ದಿವ್ಯವಾದವು. ಜೀವರಾಶಿಯ ಜನ್ಮ, ಕರ್ಮಪ್ರಭಾವದಿಂದ ಭಗವಂತನ ಅವತಾರ ದಯಾಧೀನತೆಯಿಂದ. ಜೈಲಿನ ಅಧಿಕಾರಿ ಸೆರೆಮನೆಗೆ ಹೋಗುವ ಗುರಿಯೇ ಬೇರೆ, ಅಪರಾಧಿಯ ಲಕ್ಷ್ಯವೇ ಬೇರೆ.

ಅವತಾರ ಎಂಬ ಶಬ್ದಕ್ಕೆ "ಅವತರತೀತಿ ಅವತಾರಃ" ಎಂಬ ಸಂಸ್ಕೃತದ ಶಬ್ದವ್ಯುತ್ಪತ್ತಿಯಂತೆ ಸ್ವರ್ಗಾದಿ ಸ್ಥಾನಗಳಿಂದ ಇಳಿಯುವುದು ಎಂದರ್ಥವಾಗುತ್ತದೆ. ಇದಕ್ಕಿಂತಲೂ ಉತ್ತಮವಾದ ಇನ್ನೊಂದು ರೀತಿಯ

ಅಂದರೆ "ಅವತರಂತಿ ಜನಾಯೇನ" ಎಂಬುದನ್ನು ಆಧರಿಸಿ, ಭಕ್ತರನ್ನು ಭವಸಾಗರದಿಂದ ದಾಟಿಸುವುದು ಎಂಬ ಅರ್ಥವಿದೆ.

"ಅವತಾರಾಃ ಹ್ಯಸಂಖ್ಯೇಯಾಃ ಹರೇಶ್ಚ ಪರಮಾತ್ಮನಃ" ಎಂಬಂತೆ ಪರಮಾತ್ಮನ ಅವತಾರಗಳನ್ನು ಎಣಿಸಲೇ ಸಾಧ್ಯವಿಲ್ಲ. ಶ್ರೀಮದ್ಭಾಗವತದ ಪ್ರಥಮ ಸ್ಕಂದದ ಮೂರನೆಯ ಅಧ್ಯಾಯದಲ್ಲಿ ಭಗವಂತನ ಇಪ್ಪತ್ತೆರಡು ಅವತಾರಗಳನ್ನು ಅವುಗಳ ಉದ್ದೇಶ್ಯವನ್ನೂ ವಿವರಿಸಲಾಗಿದೆ. ಬ್ರಹ್ಮ, ವರಾಹ, ನಾರದ, ನರನಾರಾಯಣ, ಕಪಿಲ, ದತ್ತಾತ್ರೇಯ, ಯಜ್ಞ, ಋಷಭದೇವ, ಪೃಥು, ಮತ್ಸ್ಯ, ಕೂರ್ಮ, ಧನ್ವಂತರಿ, ಮೋಹಿನೀ, ನೃಸಿಂಹ, ವಾಮನ, ಪರಶುರಾಮ, ವೇದವ್ಯಾಸ, ರಾಮ, ಬಲರಾಮ, ಕೃಷ್ಣ, ಬುದ್ಧ, ಕಲ್ಕೀ ಇವೇ ಆ ಇಪ್ಪತ್ತೆರಡು ಅವತಾರಗಳು.

> ಮತ್ಸ್ಯಃ ಕೂರ್ಮೋ ವರಾಹಶ್ಚ ನರಸಿಂಹೋऽಥವಾಮನಃ ।
> ರಾಮೋ ರಾಮಶ್ಚ ರಾಮಶ್ಚ ಬುದ್ಧಃ ಕಲ್ಕೀ ಚ ತೇ ದಶ ॥

ಎಂದು ಭಗವಂತನ ದಶಾವತಾರವನ್ನೂ ಪುರಾಣಾಂತರಗಳಲ್ಲಿ ಉಲ್ಲೇಖಿಸಲಾಗಿದೆ.

ಮೀಮಾಂಸಾಶಾಸ್ತ್ರದಲ್ಲಿ ಭಗವಂತನ ಅವತಾರವನ್ನು ಐದು ಭೇದಗಳೆಂದು ಹೇಳಲಾಗಿದೆ. ಪೂರ್ಣಾವತಾರ, ರಾಮ, ಕೃಷ್ಣ ಇತ್ಯಾದಿಗಳು. ಅಂಶಾವತಾರ ಅನಿರುದ್ಧ, ಪ್ರದ್ಯುಮ್ನ, ಲಕ್ಷ್ಮಣ ಇತ್ಯಾದಿಗಳು. ವಿಶೇಷಾವತಾರ, ನೃಸಿಂಹ, ವಾಮನ, ಪರಶುರಾಮ, ಇತ್ಯಾದಿಗಳು. ಅಶೇಷಾವತಾರ ; ಹಂಸ, ಕಪಿಲ ಇತ್ಯಾದಿಗಳು. ನಿತ್ಯಾವತಾರ ; ವಿಷ್ಣು, ಶಿವ ಇತ್ಯಾದಿಗಳು.

ಇನ್ನು ಕೆಲವು ವಿಮರ್ಶಕರು ಅವತಾರವನ್ನು "ಆವೇಶ, ಪ್ರವೇಶ, ಆವಿರ್ಭಾವ, ಸ್ಫೂರ್ತಿ" ಎಂದು ನಾಲ್ಕು ಭಾಗವಾಗಿ ವಿಂಗಡಿಸಿದ್ದಾರೆ.

ನೀರು ಸ್ವಯಂ ಕುದಿಯಲಾರದು, ಶಾಖದ ಆವೇಶವಾದಾಗ ಕುದಿಯಲಾರದ ನೀರೂ ಕುದಿಯಲಾರಂಭಿಸುವುದು. ಅಂತೆಯೇ ಆವೇಶಾವತಾರದ ರಹಸ್ಯ. ಸಹಸ್ರಬಾಹು ಅರ್ಜುನನು ಜಮದಗ್ನಿಗಳಿಗೆ ಅಪಮಾನಮಾಡಿ ತೊಂದರೆ ಕೊಟ್ಟ. ತಂದೆಯು ಈ ಅಪಮಾನವನ್ನು ಸಹಿಸಿದ ಜಾಮದಗ್ನ್ಯ ಅಥವಾ ಪರಶುರಾಮ ಆವೇಶಪೂರಿತನಾಗಿ, ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣೆ ಮಾಡಿ ಕ್ಷತ್ರಿಯಕುಲವನ್ನೇ ಧ್ವಂಸ ಮಾಡಿದ. ಆವೇಶ ಇಳಿದ ನಂತರ ಉತ್ತಮ ಪ್ರಶಾಂತ ಬ್ರಾಹ್ಮಣನಾಗಿ, ಹಿಮಾಲಯದ ತಪ್ಪಲಿನಲ್ಲಿ ತಪಸ್ವಿಯಾಗಿ ಬಾಳಲಾರಂಭಿಸಿದ.

ಪ್ರವೇಶಾವತಾರಕ್ಕೆ ಉದಾಹರಣೆಯಾಗುವುದು ದ್ರೌಪದೀಮಾನಸಂರಕ್ಷಣ ಪ್ರಸಂಗ. ಶ್ರೀಕೃಷ್ಣನು ದ್ರೌಪದಿಯ ಉಡುಗೆಯಲ್ಲಿ ಪರೋಕ್ಷವಾಗಿ ಪ್ರವೇಶಿಸಿ ಮಹಾಭಕ್ತೆಯಾದ ಆಕೆಯನ್ನು ಕಾಪಾಡುತ್ತಾನೆ.

ದೈವೀ ಸಂಪತ್ತಿಗೂ ಆಸುರೀ ಸಂಪತ್ತಿಗೂ ತಿಕ್ಕಾಟವಾರಂಭವಾದಾಗ ಮೂರನೆಯ ಆವಿರ್ಭಾವಾವತಾರವಾಗುತ್ತದೆ. ದಂಭ, ದರ್ಪ, ಅಭಿಮಾನಾದಿ ರಾಕ್ಷಸೀಗುಣಗಳ ಮನೆಯಾದ ರಾವಣಾದಿಗಳು, ಸತ್ಯ, ಶೌಚ, ತಪ ಆದಿ ದೈವೀಗುಣಗಳ ಋಷಿಮುನಿಗಳೊಡನೆ ಸಂಘರ್ಷ ನಡೆಯಿಸಿದಾಗ ರಾಮಾದಿ ಅವತಾರಗಳಾದವು. ಇಂತಹ ಅವತಾರ ವಿಶೇಷಗಳನ್ನೇ ಆವಿರ್ಭಾವಾವತಾರ ಎಂದು ಕರೆಯಲಾಗಿದೆ.

ಸ್ಫೂರ್ತಿ ಅವತಾರಕ್ಕೆ ಪ್ರಮಾಣ ನೃಸಿಂಹಾವತಾರ. ಎರಡು ವಿರುದ್ಧವಾದ ದಿಕ್ಕುಗಳಲ್ಲಿ ವೇಗದಿಂದ ಸಾಗುತ್ತಿರುವ ಮೇಘಗಳೆರಡು ತೀವ್ರವಾಗಿ ಒಂದಕ್ಕೊಂದು ಹೊಡೆದಾಗ, ಮಿಂಚು ಸ್ಫುರಿಸುವುದಷ್ಟೆ. ಅಂತೆಯೇ ಈ ಸ್ಫೂರ್ತ್ಯವತಾರ. ಭಕ್ತನಿಗೂ, ಅಭಕ್ತನಿಗೂ, ಭಿನ್ನಭಿನ್ನ ಭಾವನೆಗಳ ಪ್ರಭಾವದಿಂದ ಸಂಘರ್ಷ

ವಾಗುವುದು ಸ್ವಾಭಾವಿಕ. ಪ್ರಹ್ಲಾದ ದೈವಭಕ್ತ, ಹಿರಣ್ಯಕಶಿಪು ದೈವದ್ರೋಹಿ. ಇವರೀರ್ವರ ತಿಕ್ಕಾಟದ ಫಲವಾಗಿ ರಾಜನ ಆಸ್ಥಾನದ ಕಂಬದಿಂದ ಮಿಂಚಿನಂತೆ ಹೊರಬಂದವನು ನರಸಿಂಹ.

ಒಟ್ಟಿನಲ್ಲಿ ಭಗವಂತನ ಯಾವ ಅವತಾರವೇ ಆಗಲೀ, ಅದು ಮಾನವನ ಸರ್ವತೋಮುಖವಾದ ಅಭಿವೃದ್ಧಿಗಾಗಿಯೇ. ಆತನನ್ನು ಪ್ರವೃತ್ತಿಮಾರ್ಗಪ್ರವರ್ತಕನನ್ನಾಗಿ ಮಾಡಲೋಸುಗವೇ ಎಂಬುದರಲ್ಲಿ ಸಂಶಯವಿಲ್ಲ.

ಸ್ವಾತಂತ್ರ್ಯ ಮತ್ತು ಮುಕ್ತಿ ಇವುಗಳಲ್ಲಿ ಒಂದನ್ನು ಬಿಟ್ಟು ಮತ್ತೊಂದು ಇರಲಾರದು. ಮುಕ್ತನಾಗಬೇಕಾದರೆ ಪ್ರಕೃತಿಯ ನಿಯಮಗಳಿಗೆ ಅತೀತನಾಗಬೇಕು. ನಾವು ಅಜ್ಞಾನಿಗಳಾಗಿರುವವರೆಗೆ ನಿಯಮವಿರುವುದು. ಜ್ಞಾನ ಬಂದೊಡನೆಯೆ ನಿಯಮವೆಂಬುದಿಲ್ಲ. ನಾವು ಸ್ವತಂತ್ರರು ಎಂದು ಗೊತ್ತಾಗುವುದು.

ವಿದ್ವಾನ್ ಸಾಮಕ ಗಣೇಶಶಾಸ್ತ್ರಿ

ಪುರುಷೋ ವಾವ ಸುಕೃತಮ್

ನರಶರೀರವು ಮಹತ್ತ್ವದ ಮೂಲ. ಭೋಗಕ್ಕೂ ಆಯತನ ; . ಯೋಗಕ್ಕೂ ಆಯತನ. ಇದರ ರಕ್ಷಣೆಯು ಅತ್ಯಂತ ಅಗತ್ಯ. ಕೃಮಿ, ಕೀಟ, ಪಶು, ಪಕ್ಷಿ ಪ್ರಭೃತಿ ಶರೀರಗಳಿಗಿಂತಲೂ ನರಶರೀರವು ಮಹತ್ತ್ವಪೂರ್ಣವಾದುದರಿಂದಲೇ ಉಪನಿಷತ್ತಿನಲ್ಲಿ ಇದನ್ನು 'ಸುಕೃತ' ಎಂದು ಕರೆಯುತ್ತಾರೆ. ಒಂದೇ ಮಾತಿನಿಂದ ಹೇಳುವುದಾದರೆ, ತತ್ತ್ವಜ್ಞಾನದಿಂದ ಮುಕ್ತಿ ಪಡೆಯಬೇಕಾದರೆ, ನರಶರೀರವೇ ಬೇಕು. ಮಾನವನ ಬುದ್ಧಿಬಲದ ಮುಂದೆ ಯಾವ ಬಲವೂ ಅಲ್ಲ.

ಜಗತ್ತಿನಲ್ಲಿ ನಮಗಿಂತ ಬಲಶಾಲಿಗಳಾದ ಪ್ರಾಣಿಗಳೂ, ಮಹಾಕಾಯಗಳಾದ ಪ್ರಾಣಿಗಳೂ, ಭೀಕರಾಕಾರವಾದ ಪ್ರಾಣಿಗಳೂ, ಅಸಂಖ್ಯಾತವಾಗಿವೆಯಷ್ಟೆ? ಅಂತಹ ಸಕಲ ಪ್ರಾಣಿಗಳನ್ನೂ ನಾವು ನಮ್ಮ ವಶದಲ್ಲಿಟ್ಟುಕೊಂಡು, ದುಡಿಸಿಕೊಳ್ಳುತ್ತಿರುವುದು ನಮ್ಮ ಬುದ್ಧಿಬಲಕ್ಕೆ ನಿದರ್ಶನವಾಗಿದೆ. ಬಹುವಿಧ ಪ್ರಾಣಿಗಳಿಂದ ಪ್ರಚುರವಾದ ಈ ಲೋಕಕ್ಕೆ "ನರಲೋಕ" ಎಂಬೀ ಪ್ರಸಿದ್ಧಿಯೂ ನರನ ಶ್ರೇಷ್ಠತೆಯನ್ನೇ ವ್ಯಕ್ತಪಡಿಸುತ್ತದೆ.

ಪರಿಪೂರ್ಣ ಅಂಗವುಳ್ಳ ಈ ಪುರುಷ ಶರೀರವನ್ನು ಪಡೆದ ನಾವು "ಪುಣ್ಯವಂತರು" ಎಂದರೆ, ಅತಿಶಯವಲ್ಲ. ಇದರ ಸಾರ್ಥಕತೆಯು "ಪರೋಪಕಾರ" ಒಂದನ್ನು ಬಿಟ್ಟರೆ, ಇತರ ಯಾವ ವಿಧದಿಂದಲೂ ಒದಗುವುದಿಲ್ಲ. ಪರರಿಗೆ ಉಪಕಾರ ಮಾಡಬೇಕಾದರೆ, ತಾನು ಆರೋಗ್ಯವಂತನಾಗಿರಬೇಕು, ದೀರ್ಘಾಯುವಾಗಿರಬೇಕು. ಹಾಗಾದರೆ ಪರೋಪಕಾರವು ಪರಿಪೂರ್ಣತೆಯನ್ನು ಪಡೆಯುತ್ತದೆ. ಅಯುರಭಿವೃದ್ಧಿಗೂ ಆರೋಗ್ಯ ರಕ್ಷಣೆಗೂ ತಕ್ಕ ಸಾಧನೆ ಬೇಕು. ಸಾಧನೆಗೆ ಮಾರ್ಗದರ್ಶನ ಬೇಕು. ಮಾರ್ಗದರ್ಶನಕ್ಕೆ ಸಾಧಕ ವ್ಯಕ್ತಿಗಳ ಆದರ್ಶವು ಬೇಕು. ಸಾಧನೆಯ ಮಾರ್ಗದರ್ಶನವನ್ನು ನಮಗೆ ಆಯುರ್ವೇದವು ಮಾಡಿಕೊಡುತ್ತಲಿದೆ. ಸಾಧಕ ವ್ಯಕ್ತಿಗಳ ಆದರ್ಶಕ್ಕೆ ನಮ್ಮ ಸ್ವಾಮಿಜೀಯವರೇ ಇದ್ದಾರೆ. ಶ್ರೀಗಳ ದೀರ್ಘಕಾಲದ ಜೀವಮಾನದ ಯೋಗಸಾಧನೆಯ ಸವಿನೆನಪಿಗಾಗಿ ಕೆಲವು ವೈದ್ಯಕೀಯ ಹಿತವಚನಗಳನ್ನೂ ಯೋಗಶಾಸ್ತ್ರದ ಹಿತಸಲಹೆಗಳನ್ನೂ ಪ್ರಕಾಶಪಡಿಸಲು ಉತ್ಸುಕನಾಗಿರುತ್ತೇನೆ. ಕೆಲವು ಸೂತ್ರಗಳನ್ನು ವಿವರಣೆಯೊಂದಿಗೆ ಪ್ರಕಟಿಸುವಲ್ಲಿ ವಿದ್ಯಾರ್ಥಿಗಳಿಗೂ, ವಿದ್ವಾಂಸರಿಗೂ, ಸಕಲರಿಗೂ ಉಪಯೋಗವಾಗುವುದೆಂದು ನಂಬಿರುತ್ತೇನೆ. ಅನುಭವಕ್ಕೆ ಬಂದಿರುವ, ಬರುವ ಉಪಯುಕ್ತ ವಿಷಯಗಳನ್ನೇ ಆರಿಸಿಕೊಡಲಾಗಿದೆ. ಇಂತಹ ಶಾಸ್ತ್ರೀಯ ಹಿತವಚನ ಲೇಖನವು ಸಾರ್ಥಕತೆ ಪಡೆಯುವುದು ಎಂಬ ಭರವಸೆ ಇದೆ.

ಪುರುಷಾರ್ಥ ಸಾಧನೆ : ಧರ್ಮ, ಅರ್ಥ, ಕಾಮಗಳೆಂಬ ಪುರುಷಾರ್ಥಗಳಿಂದ ರಹಿತವಾದ ಕಾರ್ಯ ಮಾಡಬಾರದು. ಪುರುಷಾರ್ಥಗಳಲ್ಲೂ ಪರಸ್ಪರ ವಿರೋಧವಿಲ್ಲದ ಕಾರ್ಯ ಮಾಡಬೇಕು. ಇಂದ್ರಿಯಗಳನ್ನು ಅತಿಯಾಗಿ ಪೀಡಿಸಲೂ ಬಾರದು. ಅತಿಯಾಗಿ ಲಾಲಿಸಲೂ ಬಾರದು.

> ನ ಪೀಡಯೇದಿಂದ್ರಿಯಾಣಿ ನ ಚೈತಾನ್ಯತಿ ಲಾಲಯೇತ್ ॥
> ತ್ರಿವರ್ಗಶೂನ್ಯಂ ನಾರಂಭಂ ಭಜೇತ್‌ತಂ ಚಾವಿರೋಧಯ್ನ ॥

'ತನ್ನ ಶತ್ರು ಇವನು' ಎಂದು ಹೇಳಬಾರದು. "ತಾನು ಇವನಿಗೆ ಶತ್ರು" ಎಂದೂ ಹೇಳಬಾರದು. ಹೇಳಿದರೆ, ಒಡಕಿಗೆ ಅವಕಾಶ ಕೊಟ್ಟಂತಾಗುತ್ತದೆ. ತನ್ನ ಅಪಮಾನವನ್ನು ಯಾರಿಗೂ ಹೇಳಲಾಗದು. ಪ್ರಭುವಿನ ಸಂಬಂಧಪಟ್ಟ ಸ್ನೇಹಹೀನತೆಯನ್ನೂ ಯಾರಿಗೂ ತಿಳಿಸಬಾರದು. ತಿಳಿಸಿದರೆ, ಛಿದ್ರಾನ್ವೇಷಿಗಳಿಗೆ ಸಿಕ್ಕಿ ನರಳಬೇಕಾಗುತ್ತದೆ.

> ನ ಕಂಚಿದಾತ್ಮನಃ ಶತ್ರುಂ ನಾತ್ಮಾನಂ ಕಸ್ಯಚಿದ್ರಿಪುವ್ ।
> ಪ್ರಕಾಶಯೇನ್ನಾಪಮಾನಂ ನ ಚ ನಿಸ್ನೇಹತಾಂ ಪ್ರಭೋಃ ॥

ತಿಂದ ಅನ್ನ ಸರಿಯಾಗಿ ಅರಗಿದ ಮೇಲೆ ತನಗೆ ಹಿತವಾದುದನ್ನು ಕಾಲದಲ್ಲಿ ಮಿತವಾಗಿ ತಿನ್ನಬೇಕು. ಅತಿಯಾಗಿ ತಿನ್ನುವುದೂ ಕುಡಿಯುವುದೂ ಪಾಪಕರವೆಂದು ವೇದ-ಶಾಸ್ತ್ರಗಳು ಸಾರುತ್ತಿವೆ. ಇನ್ನೊಂದು ಮಾತು. ಕಾಮ-ಕ್ರೋಧಾದಿಗಳ ವೇಗವನ್ನು ತಡೆಯುವುದು ಹಿತ. ಮಲ-ಮೂತ್ರ-ವಾತಗಳ ವೇಗವನ್ನು ತಡೆಯುವುದು ಅಹಿತ ; ಅನೇಕ ರೋಗಗಳಿಗೆ ಬೀಜ ; ಶರೀರವೂ ಅಶುಚಿಯಾಗುತ್ತದೆ. ಮಲಮೂತ್ರಾದಿಗಳನ್ನು ಬಲಾತ್ಕಾರವಾಗಿ ಜರಮಾಡಿಕೊಳ್ಳುವುದೂ ಅಹಿತ ; ರೋಗಕ್ಕೆ ನಿದಾನ. ಮಲ-ಮೂತ್ರಾದಿಗಳು ಬಂದಾಗ ಅದನ್ನು ವಿಸರ್ಜನೆ ಮಾಡಿಯೇ ಇತರ ಕಾರ್ಯ ಮಾಡಬೇಕು. ಸುಲಭವಾಗಿ ವಾಸಿಯಾಗುವ ರೋಗವನ್ನು ವಾಸಿಮಾಡಿಕೊಳ್ಳದೆಯೇ ಬೇರೆ ಕಾರ್ಯವನ್ನು ಮಾಡಬಾರದು. "ರೋಗಶೇಷ, ಋಣಶೇಷ, ಶತ್ರುಶೇಷ ಈ ಮೂರು ಬಾಧಕ". ಉಳಿಸಿಕೊಳ್ಳಕೂಡದು. ಒಳ್ಳೆಯದಕ್ಕೆ ಮನಸ್ಸುಮಾಡಬೇಕು. ಕೆಟ್ಟದುದಕ್ಕೆ ಮನಸ್ಸು ಮಾಡಬಾರದು. "ತನ್ಮೇ ಮನಶ್ಶಿವಸಂಕಲ್ಪಮಸ್ತು" ರುದ್ರ ಹೇಳಿ ಪೂಜಿಸುವ ಮೊದಲು ನ್ಯಾಸಮಾಡಿಕೊಳ್ಳುವಾಗ ನನ್ನ ಮನಸ್ಸಂಕಲ್ಪವು ಒಳ್ಳೆಯದಾಗಿರಲಿ ಎಂದು ಪದೇ ಪದೇ ಹೇಳುತ್ತಿರುವುದನ್ನು ಕೇಳುತ್ತಿದ್ದೇವೆ.

ತಿಳಿದುಕೊಂಡು ನಡೆದುಕೊಳ್ಳಬೇಕು. ಇರುವೆ ಮುಂತಾದ ಸಕಲ ಪ್ರಾಣಿಗಳನ್ನೂ ಉಪೇಕ್ಷಿಸದೇ ತನ್ನಂತೆಯೇ ಅವುಗಳನ್ನೂ ನೋಡಿಕೊಳ್ಳಬೇಕು. ಅನಾಥರು, ರೋಗಪೀಡಿತರು, ದುಃಖಕ್ಕೆ ಒಳಗಾದವರು- ಇವರಿಗೆ ಶಕ್ತಿಯರಿತು ಸಹಾಯಮಾಡಬೇಕು. ಅರ್ಥಿಗಳನ್ನು ಅಸಡ್ಡೆಮಾಡಬಾರದು. ಸಂಪತ್ತು ಬಂದಾಗ ಹಿಗ್ಗಬಾರದು. ವಿಪತ್ತು ಬಂದಾಗ ಕುಗ್ಗಬಾರದು. ಸಮಚಿತ್ತನಾಗಿ ಸ್ಥಿರಚಿತ್ತನಾಗಿರಬೇಕು. ಪರರ ಏಳಿಗೆಗೆ ಅಸೂಯೆಪಡಬಾರದು. ಏಳಿಗೆಯ ಸಾಧನೆಯಲ್ಲಿ ಮಾತ್ರ ಪರರನ್ನು ಸ್ಪರ್ಧಿಸಬೇಕು. ತ್ರಿಕರಣ ಶುದ್ಧಿಯ ಕೊನೆಯ ಹಂತವಿದು.

ನಮಗೆ ಅಪಕಾರ ಮಾಡುವ ಹಗೆಗೂ ನಾವು ಅಪಕಾರ ಮಾಡಕೂಡದು. ಕೈಲಾದ ಉಪಕಾರವನ್ನೇ ಮಾಡಬೇಕು. ಇದೇ ಮಾನವೀಯತೆ ; ಮನೋದಾರ್ಢ್ಯ. ಇದನ್ನು ಮಹಾಪಂಡಿತ ಮಾಘಕವಿಯು ಶಿಶುಪಾಲನ ವಿಚಾರದಲ್ಲಿ ಮಾತಾಡುವಾಗ, ಸಹಜಶತ್ರು, ಪ್ರಾಕೃತಶತ್ರು, ಕೃತ್ರಿಮಶತ್ರು-ಎಂದು ವಿಭಾಗಿಸಿ, ಶಿಶುಪಾಲನು, 'ಕೃಷ್ಣ ! ನಿನಗೀಗ ಕೃತ್ರಿಮ ಶತ್ರುವಾಗಿದ್ದಾನೆ. ಅಪಕಾರವು ಅರಿಯ ಲಕ್ಷಣ. ಉಪಕಾರವು ಮಿತ್ರನ ಲಕ್ಷಣ. ನೀವಿಬ್ಬರೂ ಸಂಬಂಧಿಗಳಾದ ಪ್ರಯುಕ್ತ ಸಹಜ ಮಿತ್ರರೆನಿಸಿದ್ದರೂ ಅವನೊಡನೆ ಸಂಧಿಯನ್ನು ಮಾಡುವುದು ಯೋಗ್ಯವಲ್ಲ' ಎಂದು ನೀತಿಶಾಸ್ತ್ರದ ಮೇಲೆ ನಿರ್ಧರಿಸುವಾಗಲೂ, 'ಅರಿಯು ಯಾವಾಗಲೂ ಅರಿಯೇ ಆಗಿರುವುದಿಲ್ಲ. ನಮ್ಮ ಉಪಕಾರದಿಂದ ಹಗೆತನವನ್ನು ಬಿಡಬಹುದು' ಎಂದು ತಿಳಿಸುತ್ತಾ ಅಪಕಾರ ಮಾಡುವ ಅರಿಯಲ್ಲಿಯೂ, ನಾವು ಉಪಕಾರಿಗಳೇ ಆಗಿರಬೇಕು ಎಂದು ಸೂಚಿಸುತ್ತಾನೆ. ಅಪಕಾರ ಹೊಂದುವುದರಿಂದ 'ಕೃತ್ರಿಮಶತ್ರು' ಎಂದರೆ ಪ್ರಬಲ ಶತ್ರುವು ಆಗುವನು.

ಮಾಘಕವಿಯ ಮಾತು—

> ಉಪಕರ್ತ್ರಾರಿಣಾಸಂಧಿಃ ನ ಮಿತ್ರೇಣಾಪಕಾರಿಣಾ ।
> ಉಪಕಾರಾಪಕಾರೌ ಹಿ ಲಕ್ಷ್ಯಂ ಲಕ್ಷಣಮೇತಯೋಃ ॥ (೨ನೇ ಸರ್ಗ)

"ಅಪಕಾರಿಗೂ ಉಪಕಾರ ಮಾಡಿದರೆ ಅಪಕಾರ ತಪ್ಪುವುದು." ಎನ್ನುವುದಕ್ಕೆ ವೈದ್ಯಶಾಸ್ತ್ರದ ಉದಾಹರಣೆಯನ್ನು ಕೊಡಬಹುದು—ವಾತ. ಪಿತ್ತ, ಕಫ ಇವುಗಳು ದೋಷಗಳೇ ಆದರೂ, ರೋಗಕ್ಕೆ ಕಾರಣವಾಗುವುದು ಕೆರಳಿದಾಗ ಮಾತ್ರ. ಅವು ಕೆರಳದಂತೆ ಮಾಡಿಕೊಂಡರೆ ರೋಗಭಯ ತಪ್ಪುತ್ತದೆ. ಅಂತೆಯೇ ಶತ್ರುವು ಕೆರಳದಂತೆ ಮಾಡಿಕೊಂಡರೆ ಶತ್ರುಭಯ ತಪ್ಪುತ್ತದೆ. ಈ ಉಪದೇಶವು ಮಹೋಪದೇಶ. ಇದು ನಮ್ಮ ಭಾರತದವರ ಆಳವಾದ ನೀತಿ ; ಜ್ಞಾನಿಗಳ ಸೂಕ್ತಿ ; ಶಾಂತಿಯ ಮೂಲ ; ದೇವ ಸಂಪತ್ತು.

ಈ ಮೇಲೆ ಹೇಳಿದ ನಿಯಮಗಳನ್ನು ನಿತ್ಯವೂ ಪಾಲಿಸುತ್ತ ಬಂದು, ಹವಾಮಾನವನ್ನು ಹೊಂದಿಕೊಳ್ಳುತ್ತಾ ಬಂದರೆ, ಆರೋಗ್ಯವಂತನಾಗಿ ದೀರ್ಘಾಯುವಾಗಿ ಬಾಳುತ್ತಾ ಧ್ಯೇಯ ಸಾಧನೆಗೆ ತಕ್ಕವನಾಗುತ್ತಾನೆ.

ಆಯುರ್ವೇದವು ರೋಗನಿದಾನವನ್ನು ವಿಮರ್ಶಿಸುವಾಗ ಪಾಪ ಪುಣ್ಯಗಳಿಗೆ ಸ್ಥಾನವನ್ನು ಕೊಟ್ಟು, ನಿವಾರಣೆಯ ಉಪಾಯವನ್ನು ಬೋಧಿಸಿದೆ. ವಿಚಾರ ಮಾಡಿದರೆ ಈ ಅಂಶವು ಸಕಲರಿಗೂ ಗ್ರಾಹ್ಯವಾಗುತ್ತದೆ. ಅದರ ವಿಚಾರ ಈ ರೀತಿ ಇರುತ್ತದೆ.

ಪಾಪರೋಗಗಳು : ಚಿಕಿತ್ಸಕರು ರೋಗನಿದಾನವನ್ನರಿತು, ರೋಗನಿರ್ಣಯ ಮಾಡಿಕೊಂಡು ಶಾಸ್ತ್ರೀಯ ಅನುಭವದಿಂದ ಚಿಕಿತ್ಸೆ ಮಾಡುತ್ತಾ ಬಂದರೂ, ರೋಗ ನಿವೃತ್ತಿಯಾಗದಿರಲು ಕಾರಣವೇನು ? ಎಂದು ವೈದ್ಯರೇ ಪರಸ್ಪರ ಮಿಲಿತರಾಗಿ ವಿಚಾರಮಾಡಿ, ತಮ್ಮ ಅನುಭವವನ್ನು ಈ ವಿಧವಾಗಿ ಬರೆದಿಟ್ಟಿರುತ್ತಾರೆ. ಏನೆಂದರೆ,

> ಜನ್ಮಾಂತರಕೃತಂ ಪಾಪಂ ವ್ಯಾಧಿರೂಪೇಣ ಬಾಧತೇ ।
> ತಚ್ಛಾಂತಿಃ ಔಷಧೈಃ ದಾನೈಃ ಜಪ ಹೋಮ ಸುರಾರ್ಚನೈಃ ॥
> ಪುಣ್ಯೈಶ್ಚ ಭೇಷಜೈಃ ಶಾಂತಾಃ ತೇ ಜ್ಞೇಯಾಃ ಕರ್ಮದೋಷಜಾಃ ॥"

ಪೂರ್ವಜನ್ಮಗಳ ಪಾತಕಗಳು ಈ ಜನ್ಮದಲ್ಲಿ ರೋಗಗಳ ರೂಪದಲ್ಲಿ ಬಾಧಿಸುತ್ತವೆ. ಅದರ ಪರಿಹಾರವು ಕೇವಲ ಔಷಧ ಸೇವನೆಯಿಂದ ಆಗುವುದಿಲ್ಲ. "ಕರ್ಮವಿಪಾಕ" ಗ್ರಂಥದಲ್ಲಿ ಮುನಿಗಳಿಂದ ವಿಹಿತವಾಗಿರುವ–ಮಂತ್ರ–ಜಪಗಳು, ಹೋಮ–ಹವನಗಳು, ದೇವತಾರ್ಚನೆಗಳು, ದಾನಗಳು–ಇವುಗಳನ್ನು ಸಹ ನಡೆಸಬೇಕು. ದಾನಾದಿಗಳಿಂದ ಬರುವ ಪುಣ್ಯಗಳು ಮತ್ತು ಔಷಧಗಳು ಇವೆರಡರಿಂದಲೂ ಗುಣವಾಗುವ ರೋಗಗಳು ಇರುತ್ತವೆ. ಆ ರೋಗಗಳಿಗೆ ರೋಗಿಯ ಪಾಪಕರ್ಮವೂ ದೋಷಪ್ರಕೋಪವೂ ಕಾರಣವಾಗುತ್ತದೆ ; ಆರೋಗ್ಯವಂತನಾಗಿರಲು ಸಾಧ್ಯವಿದೆ ಎಂದು ತಮ್ಮ ಅನುಭವವನ್ನು ಮುಂದಿಟ್ಟಿರುತ್ತಾರೆ.

ಪಾಪಪುಣ್ಯಗಳು : ಅಷ್ಟಾಂಗಹೃದಯದಲ್ಲಿ ವಾಗ್ಭಟರು ಸೂತ್ರ ಸ್ಥಾನದಲ್ಲಿಯೇ ಪಾಪ–ಪುಣ್ಯಗಳಿಗೆ ಅಗ್ರಸ್ಥಾನವನ್ನು ಕೊಟ್ಟಿರುತ್ತಾರೆ. ಅವರ ವಚನ ಹೀಗಿದೆ.

> ಸುಖಾರ್ಥಾಃ ಸರ್ವಭೂತಾನಾಂ ಮತಾಃ ಸರ್ವಾಃ ಪ್ರವೃತ್ತಯಃ ।
> ಸುಖಂ ಚ ನ ವಿನಾ ಧರ್ಮಾತ್ ತಸ್ಮಾತ್ ಧರ್ಮಪರೋ ಭವೇತ್ ॥"
> ಪಾಪಂ ಕರ್ಮೇತಿ ದಶಧಾ ಕಾಯವಾಙ್ಮನಸೈಃ ತ್ಯಜೇತ್ ॥

ಅಂದರೆ ಎಲ್ಲರಿಗೂ ಸುಖಬೇಕು. ಅದಕ್ಕಾಗಿ ಹಗಲಿರುಳು ಶ್ರಮಿಸುತ್ತೇವೆ. ಆದರೆ ಸುಖವು ಸಮಗ್ರವಾಗುತ್ತಿಲ್ಲ. ಕಾರಣವೇನು ? ಧರ್ಮ ಕೈಬಿಟ್ಟದ್ದೇವೆ. ಧರ್ಮಪರನಾಗಿರಬೇಕು ; ಸುಖ ಸಂಪೂರ್ಣವಾಗಿ ಸಿಗುತ್ತದೆ. ಶ್ರಮ ಸಾರ್ಥಕವಾಗುತ್ತದೆ. 'ಧರ್ಮಪರನಾಗಬೇಕು' ಎಂದರೆ, ಕಾಯಿಕ–ವಾಚಿಕ–ಮಾನಸಿಕಗಳೆಂಬ ದಶವಿಧ

ಪಾಪಕರ್ಮಗಳನ್ನೂ ಸಹ ಪರಿಹರಿಸಿಕೊಳ್ಳಬೇಕು, "ಧರ್ಮೇಣ ಪಾಪಂ ಅಪನುದತಿ" ಎಂಬ ವೇದದ ವಚನದಂತೆ ಜನ್ಮಾಂತರ ಪಾಪಗಳನ್ನು ಸಹ ಪರಿಹರಿಸಿಕೊಳ್ಳಬೇಕು. ಹಾಗೆ ಮಾಡಿಕೊಂಡಲ್ಲಿ ಪರಿಪೂರ್ಣ ಸುಖಕ್ಕೆ ಭಾಗಿಗಳಾಗುತ್ತೇವೆ ಎಂದು ಆಯುರ್ವೇದವು ಪ್ರಥಮತಃ ಹಿತವನ್ನು ಉಪದೇಶ ಮಾಡಿರುತ್ತದೆ. ಆಯುಸ್ಸು, ಆರೋಗ್ಯ, ದೇಹದಾರ್ಢ್ಯ, ಬಲ-ಪುಷ್ಟಿ-ತುಷ್ಟಿ-ಉತ್ಸಾಹಗಳಿಗೆ ಸುಕೃತವು ಪರಮ ಸಾಧನ ಎಂದು ಶ್ರೀ ಶಂಕರರೂ ತಿಳಿಸಿರುತ್ತಾರೆ.

ಐಹಿಕಸುಖದ ಪರಿಪೂರ್ಣತೆ : ಸುಖದ ಸ್ವರೂಪವನ್ನು ಮಹಾಭಾರತವು ಬೋಧಿಸುತ್ತದೆ. ಒಂದು ಪದ್ಯ—

ಅರ್ಥಾಗಮೋ ನಿತ್ಯಂ ಅರೋಗತಾ ಚ ಪ್ರಿಯಾ ಚ ಭಾರ್ಯಾ ಪ್ರಿಯವಾದಿನೀ ಚ ॥
ವಶ್ಯಶ್ಚ ಪುತ್ರಃ ಅರ್ಥಕರೀ ಚ ವಿದ್ಯಾ ಷಡ್ ಜೀವಲೋಕಸ್ಯ ಸುಖಾನಿ ರಾಜನ್ ॥

ಇಹಲೋಕದ ಸುಖ ಆರು : ದಿನವೂ ಧನಲಾಭ, ನಿತ್ಯಾರೋಗ್ಯ, ಪ್ರೀತಿಪಾತ್ರಳಾದ ಪತ್ನೀ, ಪ್ರಿಯ ವಚನ ನುಡಿಯುವ ಮಡದಿ, ಮಾತು ಕೇಳುವ ಮಗ, ಹಣ ಕೊಡುವ ವಿದ್ಯೆ—ಈ ಆರು ಯಾರಿಗೆ ಪರಿಪೂರ್ಣವಾಗಿರುವುದೋ ಆತನೇ ಸುಖಿ ಎಂದು ನಿರ್ಧಾರ ಮಾಡುತ್ತ ಸುಖದ ಸ್ವರೂಪದಲ್ಲಿ ವಿಪ್ರತಿಪತ್ತಿಯನ್ನು ತಪ್ಪಿಸಿ ಈ ಮಹಾಭಾರತದ ವಚನವು ಸುಖದ ಸಮಗ್ರತೆಯನ್ನು ತಿಳಿಸಿಕೊಡುತ್ತದೆ.

"ಧರ್ಮ" ಎಂದರೆ ಶ್ರೇಯಸ್ಸಾಧನೆಯ ಕರ್ತವ್ಯಗಳು. ಅದರಲ್ಲಿ ಮಧ್ಯಮಮಾರ್ಗವನ್ನು ಹಿಡಿದು ಬಿಡದೇ ನಡೆಸಬೇಕು. ಆಡಂಬರ ಫಲಕಾರಿಯಲ್ಲ. ವಚನ :

ಅನುಯಾಯಾತ್ ಪ್ರತಿ ಗದಂ ಸರ್ವಧರ್ಮೇಷುಮಧ್ಯಮಾಮ್ ॥

ವ್ಯಾಯಾಮ, ಭಾಷಣ, ಪ್ರಯಾಣ, ಸ್ತ್ರೀಸಂಗ ಆದಿಗಳು ಅತಿಯಾಗಬಾರದು. ವಿರುದ್ಧಾಶನ, ವಿಷಮಾಶನ, ಅಧ್ಯಶನಗಳು, ಮೃತ್ಯುದ್ವಾರಗಳು ಅಥವಾ ಘೋರ ವ್ಯಾಧಿಗಳಿಗೆ ಮುಖ್ಯ ಕಾರಣಗಳು. ದ್ರವ್ಯಗುಣಗಳನ್ನರಿತು ಉಪಯೋಗಿಸಬೇಕು.

ಆಯುರಭಿವೃದ್ಧಿ : ಬಲಪುಷ್ಟಿಗಳಿಗೆ ಮೂಲ:

ಅಗ್ನಿಮೂಲಂ ಬಲಂ ಪುಂಸಾಂ ರೇತೋಮೂಲಂ ತು ಜೀವಿತಮ್ ।

ಆಯುರಭಿವೃದ್ಧಿಗೆ ವೀರ್ಯರಕ್ಷಣೆ ಮುಖ್ಯ. ಬಲ, ಪುಷ್ಟಿಗೆ ಜಠರಾಗ್ನಿಯ ಬಲ ಮುಖ್ಯ. ವ್ಯಾಯಾಮವು ದೇಹದಾರ್ಢ್ಯಕ್ಕೂ, ಆರೋಗ್ಯಕ್ಕೂ, ಮುಪ್ಪುದೂರವಾಗುವುದಕ್ಕೂ, ಆಯುರಭಿವೃದ್ಧಿಗೂ ಮೂಲ, ಬ್ರಹ್ಮಚರ್ಯಾಶ್ರಮವು ಸುಖಮಯ ಜನಜೀವನದ ಮೂಲಾಧಾರ. ಇದು ಭಾರತದಲ್ಲಿ ಕಡ್ಡಾಯವಾಗಿದೆ. ಮುಂಜಾನೆ ಏಳುವುದು, ಕಾಲಕ್ಲುಪ್ತಿಯಿಂದ ಕೆಲಸ ಮಾಡುವುದು, ಕಾಲದ ನಿದ್ದೆ, ಹಿತಕರವಾದ ಹವಾಮಾನ, ಇಷ್ಟ ಜನರ ಸಹವಾಸ, ಸಾಹಸ ವರ್ಜನ ಎಂದರೆ, ಶಕ್ತಿಮೀರಿ ಕೆಲಸಮಾಡದೇ ಇರುವುದು, ಹಿತಮಿತ-ಅನ್ನ-ಪಾನ ಇವು ಮಾನವನ ಸಕಲ ಶ್ರೇಯಸ್ಸಿಗೂ ತಳಪಾಯ.

ತ್ಯಾಗದಿಂದ ಜನ್ಮಸಾರ್ಥಕತೆಯು ಉಂಟಾಗುವಂತೆ ಕೇವಲ ಭೋಗದಿಂದ ಜನ್ಮ ಸಾರ್ಥಕತೆಯು ಉಂಟಾಗುವುದಿಲ್ಲ. ಅನುಭವಿಗಳಾದ ನಮ್ಮ ಹಿರಿಯರು ತ್ಯಾಗ-ಭೋಗಗಳನ್ನು ಹೆಣೆದು ಇಟ್ಟಿರುತ್ತಾರೆ. ಇದು ವೇದದ ಹಿರಿಮೆ. ವೇದಗಳ ಆಸರೆಯಾದ ನಮ್ಮ ಭಾರತವು ಇಹ-ಪರಗಳ ಸಾಧನೆಗೆ-ಮುಕ್ತಿಸಾಧನೆಗೆ ತವರಾಗಿದೆ. ಆದರಿಂದಲೇ "ಭಾರತಂ ಭೂಮಿಜಃ ಸ್ವರ್ಗಃ" ಎಂದು ದೇವತೆಗಳು ಕೊಂಡಾಡಿದ್ದಾರೆ. "ಭಗವಂತನ ಅವತಾರಗಳಿಗೆ ಭಾರತ ಭೂಮಿಯೇ ಸಹಜವಾದ ಕ್ಷೇತ್ರ" ಎಂಬಲ್ಲಿ ಭಿನ್ನಾಭಿಪ್ರಾಯ ಬರಲು ಕಾರಣವಿಲ್ಲ. ಶ್ರೀರಾಮ ಶ್ರೀಕೃಷ್ಣಾದಿ ಸಕಲ ಅವತಾರಗಳೂ ಈ ಭಾರತವರ್ಷದಲ್ಲೇ ಆಗಿವೆ.

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥
ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಮ್ ।
ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇಯುಗೇ ॥

ಎಂಬ ಗೀತಾಚಾರ್ಯನ ಉಕ್ತಿಯೂ, ರಾಮಾಯಣ ಭಾರತಾದಿ ಇತಿಹಾಸ-ಪುರಾಣಗಳು ಭಾರತದವರ ಧರ್ಮಗ್ರಂಥಗಳಾಗಿರುವುದೂ "ಭಾರತವು ಭಗವದವತಾರ ಭೂಮಿ" ಎಂಬುದನ್ನು ನಿರ್ಧರಿಸಿಕೊಡುತ್ತವೆ. ವ್ರತ ನಿಯಮಗಳು ಕಾಯಶುದ್ಧಿಗೆ ಕಾರಣವಾಗಿ ಶ್ರೇಯೋನಿದಾನವಾಗಿರುತ್ತವೆ.

ಉಪವೇದವಾದ ಆಯುರ್ವೇದವು ಉಪದೇಶಿಸುವ ಹಿತವಚನಗಳು ನಮ್ಮನ್ನು ನರತ್ವದಿಂದ ಸುರತ್ವಕ್ಕೆ ಏರಿಸುವ ಸಾಧನೆಗಳಾದ ಕಾರಣ ಸಕಲರೂ ಯಥಾಶಕ್ತಿ ನಿಯಮ ಪಾಲಿಸಿ, ಇಂದು ನರಶ್ರೇಷ್ಠರೂ, ಮುಂದು ಸುರಶ್ರೇಷ್ಠರೂ ಆಗಿ ಸುಖಿಸಲಿ, ಎಂದು ಕೆಲವು ಉಪದೇಶವನ್ನು ಪ್ರಕಟಿಸಿರುತ್ತೆ.

ತ್ರಿಕರಣ ಶುದ್ಧಿ : ಧ್ಯೇಯ ಸಾಧನೆಯ ಪ್ರಥಮ ಸೋಪಾನ ತ್ರಿಕರಣ ಶುದ್ಧಿ, ಕಾಯಶುದ್ಧಿ, ವಾಕ್ ಶುದ್ಧಿ ಮನಃಶುದ್ಧಿ–ಈ ಮೂರೂ ಈ ರೀತಿ ವೈದ್ಯ ಶಾಸ್ತ್ರದಲ್ಲಿ ತಿಳಿಸಲ್ಪಟ್ಟಿದೆ. ಪ್ರಾಣಿಹಿಂಸೆ, ಕಳ್ಳತನ, ಗುರುದಾರ ಗಮನಾದಿ ನಿಷಿದ್ಧಕಾಮಸೇವನೆ, ಈ ಮೂರೂ ಕಾಯಿಕ ಪಾಪಕರ್ಮ. ಚಾಡಿಕೋರತನ, ಬಿರುನುಡಿ, ಸುಳ್ಳು, ತಲೆಹರಟೆ, ಈ ನಾಲ್ಕೂ ವಾಚಿಕಪಾಪಕರ್ಮ. ದ್ರೋಹಚಿಂತನೆ, ಪರೋತ್ಕರ್ಷಾಸಹನೆ, ನಾಸ್ತಿಕತೆ, ಈ ಮೂರೂ ಮಾನಸಿಕ ಪಾಪಕರ್ಮ. ಈ ರೀತಿ ದಶವಿಧ ಪಾತಕಗಳನ್ನು ಮಾಡದಿದ್ದರೆ, ಕಾಯಶುದ್ಧಿ, ವಾಕ್‌ಶುದ್ಧಿ, ಮನಃಶುದ್ಧಿಗಳು ಸಮಗ್ರವಾಗಿ ಧ್ಯೇಯಸಾಧನೆಗೆ ಸೋಪಾನವಾಗುತ್ತದೆ. ಆಧಾರವಚನ ಅಷ್ಟಾಂಗ ಹೃದಯದ ದಿನಚರ್ಯಾಧ್ಯಾಯದಲ್ಲಿದೆ.

ಹಿಂಸಾ ಸ್ತೇಯಾನ್ಯಥಾಕಾಮಂ ಪೈಶೂನ್ಯಂ ಪುರುಷಾನೃತೇ ॥ ೧ ॥
ಸಂಭಿನ್ನಾಲಾಪವ್ಯಾಪಾದಮಭಿದ್ಯಾ ದೃಗ್ವಿಪರ್ಯಯಮ್ ॥ ೨ ॥
ಪಾಪಂಕರ್ಮೇತಿ ದಶಧಾ ಕಾಯವಾಙ್ಮಾನಸೈಃ ತ್ಯಜೇತ್ ॥ ೩ ॥

ಶರೀರವು ನಮ್ಮ ಪೂರ್ವಕರ್ಮದ ಫಲ : ಶರೀರವು ನಮ್ಮ ಪೂರ್ವಕರ್ಮದ ಫಲವಾಗಿ ಪ್ರಾಪ್ತ ವಾಗಿರುತ್ತದೆ. ಸುಕೃತವು ಅಧಿಕವಾಗಿದ್ದರೆ ಅಧಿಕ ಸುಖಪಡೆಯಬಹುದು. ದುಷ್ಕೃತವು ಅಧಿಕವಾಗಿದ್ದರೆ ಅಧಿಕ ದುಃಖ ಅನುಭವಿಸಬೇಕಾಗುವುದು.ಅಂತೂ ಸುಖ–ದುಃಖ ದ್ವಂದ್ವ.ಇದಕ್ಕೆ ಕಾರಣವನ್ನು ವಿಮರ್ಶಿಸುವಾಗ ಎಂತಹ ಬುದ್ಧಿಶಾಲಿಯೂ ಪಾಪ-ಪುಣ್ಯಗಳನ್ನು ಬಿಟ್ಟು ಬೇರೆ ಕಾರಣವನ್ನು ಹೇಳಲಾರ. ಗ್ರಹಗತಿಯೂ ನಮ್ಮ ನಮ್ಮ ಪಾಪ–ಪುಣ್ಯವನ್ನೇ ಸೂಚಿಸುತ್ತದೆ.ವಾತ–ಪಿತ್ತ–ಕಫ ಇವುಗಳು ಪ್ರಸನ್ನವಾಗಿದ್ದು ಈ ಶರೀರವೆಂಬ ಮಹಾರಥವನ್ನು ಸರಿಯಾದ ದಾರಿಯಲ್ಲಿ ಸರಿಯಾದ ರೀತಿಯಲ್ಲಿ ನಡೆಸಿಕೊಡುತ್ತವೆ. ಅದೇ ವಾತಾದಿಗಳೇ ಹೆಚ್ಚು ಕಮ್ಮಿಯಾದರೆ ಈ ರಥದ ಪಥವೂ ಹೆಚ್ಚು ಕಮ್ಮಿಯಾಗುತ್ತದೆ. ಗ್ರಹಗತಿ ಕೆಟ್ಟರೆ ವಾತಾದಿಗಳೂ ಕೆಟ್ಟು ರಕ್ತಾದಿಗಳನ್ನೂ ಕೆಡಿಸುತ್ತದೆ. ಗ್ರಹಚಾರ ಪರಿಹಾರಮಾಡಿಕೊಂಡಾಗ ವಾತಾದಿದೋಷಗಳೂ ರಕ್ತಾದಿ ಧಾತುಗಳೂ ಶುದ್ಧವಾಗಿ ವಿಕಾರ ಪರಿಹಾರ ವಾಗಿ ಪ್ರಕೃತಿ ನೇರವಾಗಿ ಆರೋಗ್ಯಕಾಣುತ್ತದೆ. ಭಗವತ್ಪಾದರು "ಆರೋಗ್ಯವು ಸ್ವಸ್ವರೂಪ. ರೋಗನಿವಾರಣೆಗೆ ಔಷಧಾದಿಗಳ ಸೇವನೆಯೂ ಆಗತ್ಯ. ರೋಗನಿವಾರಣೆಯಾದರೆ ಆರೋಗ್ಯ ತಾನಾಗಿಯೇ ಕಾಣುತ್ತದೆ" ಎಂದೂ ಪ್ರತಿ ಪಾದಿಸಿರುತ್ತಾರೆ. ಪ್ರಪಂಚ ರೋಗಾದಿ ಸಕಲ ದುಃಖಕ್ಕೂ ಪಾಪ ಕಾರಣ. ಆರೋಗ್ಯಾದಿ ಸಕಲ ಸುಖಕ್ಕೆ ಪುಣ್ಯ ಕಾರಣ. "ಸತತ ಸುಖಪಡೆಯಲು ಸತತ ಧರ್ಮ ಸೇವನೆಯು ಅತ್ಯಗತ್ಯ" ಎಂಬ ವೈದ್ಯರ ಹಿತೋಕ್ತಿಯು ಸಂಗತ ವಾಗಿರುತ್ತದೆ. ಸತತ ಧರ್ಮ ಸೇವನೆಯಿಂದ ಪುಣ್ಯ ಲೋಕಗಳಲ್ಲಿ ಪುಣ್ಯ ಶರೀರವನ್ನು ಪಡೆದು ಆನಂದಾತಿಶಯ

ವನ್ನು ಅನುಭವಿಸುತ್ತ, ಉತ್ತರೋತ್ತರ ಮೇಲ್ಮೆ ಪಡೆಯಬಹುದಾಗಿದೆ. ಆಯುರ್ವೇದ ದಿನಚರ್ಯಾದಿಗಳು ಇಹ ಪರಗಳಿಗೆ ಪರಮ ಸಾಧನವಾಗಿದೆ. ಅರಿತು ಅನುಸರಿಸಿ ಆನಂದಿಸಬೇಕು.

ಆಯುರ್ವೇದದ ಬೋಧನದ ಶೈಲಿಯು ಲಲಿತವಾಗಿದೆ. ಉದಾಹರಣೆ

ಕಫಂ ದುರ್ಜನವತ್ ತೀಕ್ಷ್ಣೈಃ ವಾತಂ ಸ್ನೇಹೇನ ಮಿತ್ರವತ್ ।
ಪಿತ್ತಂ ಜಾಮಾತರಮಿವ ಮಧುರೈಃ ಶೀತಲೈಃ ಜಯೇತ್ ॥

ವಾತ-ಪಿತ್ತ-ಕಫಗಳನ್ನು ಜಯಿಸುವ ಬಗೆಯನ್ನು ದೃಷ್ಟಾಂತ ಕೊಟ್ಟು ಹೇಳಿರುತ್ತಾರೆ. ಇನ್ನೊಂದು

ಪಿತ್ತಂ ಪಂಗು, ಕಫಃ ಪಂಗುಃ ಪಂಗವೋ ಮಲ-ಧಾತವಃ ।
ವಾಯುನಾ ಯತ್ರ ನೀಯಂತೇ ತತ್ರಗಚ್ಛಂತಿ ಮೇಘವತ್ ॥

ಇಲ್ಲಿ ಹೊರಗಿನಂತೆ ಒಳಗೂ ವಾತವೇ ಸ್ವತಂತ್ರ, ಉಳಿದವುಗಳೆಲ್ಲವೂ ವಾತಕ್ಕೆ ವಶವಾಗಿ ವರ್ತಿಸುತ್ತವೆ. ಎಂದು ಪ್ರಾಣದ ಪ್ರಬಲತೆ ತಿಳಿಸುತ್ತ, "ಶರೀರದಲ್ಲಿ ಪ್ರಾಣವು ಪ್ರಧಾನಸ್ಥಾನ ಪಡೆದಿದೆ. ಜೀವಾತ್ಮನು ಪ್ರಭುವಿನ ಸ್ಥಾನದಲ್ಲಿದ್ದಾನೆ. ಅಂತಃಕರಣವು ಆತ್ಮ ಚೈತನ್ಯದ ಪ್ರತಿಬಿಂಬಕ್ಕೆ ದರ್ಪಣದಂತಿದೆ" ಎಂದು ತಿಳಿಸುತ್ತದೆ. ಆಹಾರ-ವಿಹಾರಗಳ ನಿಯಮ ಪಾಲನೆಯಿಂದ ಅಂತಃಕರಣವನ್ನು ಅಂತಃಕರಣವನ್ನಾಗಿ ಮಾಡಿಕೊಳ್ಳಬೇಕು.

ಇಲ್ಲಿ ಅಂತಃಕರಣದ ಸ್ಥಿತಿ-ಗತಿಗಳನ್ನು ವಿಚಾರಮಾಡಿಕೊಂಡರೆ ನರಜನ್ಮದ ಮಹತ್ವವು ವ್ಯಕ್ತಪಡುತ್ತದೆ, ಪ್ರಾಣವಾಯುವಿನ ಸ್ಥಿತಿಗತಿಗಳನ್ನು ವಿಚಾರಮಾಡಿಕೊಂಡರೆ ಯೋಗದ ಮಹತ್ವವು ತಿಳಿಯುತ್ತದೆ.

ಅಂತಃಕರಣದ ಸ್ಥಿತಿ-ಗತಿ ಪ್ರಾಣದ ಸ್ಥಿತಿ-ಗತಿ : ಅಂತಃಕರಣವು ಭೌತಿಕವೇ ಆದರೂ ಆಕಾಶಾದಿ ಪಂಚಭೂತಗಳ ಸತ್ತ್ವಗುಣದ ಸಮಷ್ಟಿಯಿಂದ ಸೃಷ್ಟಿಯಾಗಿದೆ. ಜ್ಞಾನೇಂದ್ರಿಯಗಳು ಪಂಚಭೂತಗಳ ಸತ್ತ್ವಾಂಶದಿಂದ ಸೃಷ್ಟಿಯಾಗಿವೆ. ಕರ್ಮೇಂದ್ರಿಯಗಳು ಪಂಚಭೂತಗಳ ರಜೋಗುಣಾಂಶದಿಂದ ಸೃಷ್ಟಿಯಾಗಿವೆ. ಪ್ರಾಣವು ಪಂಚಭೂತಗಳ ರಜೋಗುಣ ಸಮಷ್ಟಿಯಿಂದ ಸೃಷ್ಟಿಯಾಗಿವೆ.

ಅಂತಃಕರಣವು ಸತ್ತ್ವ ಸಮಷ್ಟಿಯಿಂದ ಸೃಷ್ಟಿಯಾದ ಕಾರಣ, ಕನ್ನಡಿಯಂತೆ ಪ್ರತಿಬಿಂಬವನ್ನು ಗ್ರಹಿಸಲು ಶಕ್ತವಾಗಿದೆ. ಕನ್ನಡಿಯ ಕೊಳೆಯನ್ನು ತೊಳೆದು ಸ್ವಚ್ಛಮಾಡಿಕೊಂಡಂತೆಯೇ ಮನಸ್ಸಿನ ಕೊಳೆಯನ್ನು ಕಳೆದು ಸ್ವಚ್ಛಮಾಡಿಕೊಳ್ಳಬೇಕು. ಮನೋಮಲಗಳು ರಾಗದ್ವೇಷಾದಿಗಳು ಅದರ ಮೂಲ ರಜೋಗುಣ; ತಮೋಗುಣ. ಇವನ್ನು ದೂರಮಾಡಿದರೆ, ಮನಸ್ಸು ನಿರ್ಮಲವಾಗುತ್ತದೆ. ಅದಕ್ಕೆ ಮುಖ್ಯ ಸಾಧನ-ವ್ರತ-ಉಪಾಸನಾದಿ ನಿಯಮಗಳು. ನಿಯಮಪಾಲನೆಯು ಅರ್ಥವತ್ತಾಗಿ ನಡೆಯಬೇಕು. ಸಾತ್ವಿಕ-ಆಹಾರ-ವಿಹಾರಗಳಿಂದ ಸತ್ತ್ವ ಗುಣ ವೃದ್ಧಿಯಾಗಬೇಕು. "ಸತ್ವ" ಎಂಬ ಅಂತಃಕರಣದ ನಾಮವು ಅನ್ವರ್ಥವಾಗಬೇಕು. ತಮೋಗುಣವು ಹತ್ತಿರ ಬರಲೇಬಾರದು. ರಜೋಗುಣವು ಸತ್ತ್ವಗುಣಕ್ಕೆ ಅಧೀನವಾಗಿರಬೇಕು.

ಉಪಸಂಹಾರ : ಯೋಗಾಂಗಗಳನ್ನು ಕ್ರಮವಾಗಿ ಸಿದ್ಧಿಸಿಕೊಳ್ಳುತ್ತ, "ಅಹಿಂಸಾಪ್ರತಿಷ್ಠಾಯಾಂ ವೈರತ್ಯಾಗಃ"

ಎಂಬ ಯೋಗಸೂತ್ರದಂತೆ ಸಹಜ ವೈರಿಗಳಾದ-ಗೋ-ವ್ಯಾಘ್ರಾದಿಗಳ ಮೇಲೂ ಪ್ರಭಾವ ಬೀರಬೇಕು. ಪ್ರಶಾಂತ ವಾತಾವರಣದಿಂದ ಆಕರ್ಷಕವಾದ ಆಶ್ರಮವಾಗಿ ಭಾರತದ ಮಹತ್ತ್ವವನ್ನು ಪ್ರದರ್ಶಿಸುತ್ತಿರಬೇಕು. ಇಂತಹ ಉತ್ತಮ ಸಂಸ್ಕೃತಿಗೆ ಗುರುತ್ತ್ವವನ್ನು ಪಡೆದಿರುವ ವೇದಶಾಸ್ತ್ರಗಳು ತಜ್ಞರಲ್ಲಿ ಮೂರ್ತಿವತ್ತಾಗಿ ಪ್ರಕಾಶಿಸುತ್ತಿರಬೇಕು. ಇತ್ಯಾದಿ ಸಕಲ ಮನೋರಥಗಳಿಗೂ ಆದರ್ಶಪ್ರಾಯರಾಗಿರುವ ನಮ್ಮ ಶ್ರೀರಾಘವೇಂದ್ರ ಸ್ವಾಮಿಗಳವರಲ್ಲಿ ಅನಂತ ವಂದನೆಗಳನ್ನು ಹೃತ್ಪೂರ್ವಕವಾಗಿ ಅರ್ಪಿಸುತ್ತೇನೆ.

ಇಂತಹ ಆಶ್ರಮಗಳು ವೃದ್ಧಿಯಾಗಿ ಜಾಡ್ಯವನ್ನು ದೂರೀಕರಿಸಲಿ.

ಡಾ. ಸೂರ್ಯನಾಥ ಕಾಮತ್

ಚಿತ್ರದುರ್ಗ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ

ಮೈಸೂರು ಸಂಸ್ಥಾನದ ಗ್ರಾಮಾಂತರ ಪ್ರದೇಶದಲ್ಲಿ ಆಗಿದ್ದ ರಾಷ್ಟ್ರೀಯ ಜಾಗೃತಿಯನ್ನು ಗಮನಿಸಿದರೆ ಚಿತ್ರದುರ್ಗ ಜಿಲ್ಲೆ ಅತ್ಯಂತ ಗಣ್ಯ ಜಿಲ್ಲೆಯೆನಿಸುತ್ತದೆ. 1939 ರಲ್ಲಿ ಆದ ಅರಣ್ಯ ಸತ್ಯಾಗ್ರಹದಲ್ಲಿ ಈ ಜಿಲ್ಲೆಯ ರೈತಾಪಿ ಜನರು ಇನ್ನೆಲ್ಲ ಜಿಲ್ಲೆಗಳಿಗಿಂತ ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿದ್ದರಲ್ಲದೆ ಸರಕಾರದ (ಪೋಲಿಸರ) ಕೈಯಲ್ಲಿ ಅಪಾರ ದೌರ್ಜನ್ಯಕ್ಕೆ ಒಳಗಾದರು. ಇಷ್ಟಾದರೂ ಈ ಜನ ಧೈರ್ಯಸ್ಥೈರ್ಯ ಕುಗ್ಗಲಿಲ್ಲ. 1942 ರ ಚಳವಳಿಯಲ್ಲೂ ಅವರು ಅಷ್ಟೇ ಉತ್ಸಾಹದಿಂದ ಪಾಲುಗೊಂಡರು.

ರಾಷ್ಟ್ರೀಯ ಚಟುವಟಿಕೆಗೆ ಈ ಜಿಲ್ಲೆಗೆ ದೀರ್ಘವಾದ ಹಿನ್ನೆಲೆ ಇದೆ. 1905ರಲ್ಲಿಯೇ ಚಿತ್ರದುರ್ಗದಲ್ಲಿ ಥಿಯೋಸಾಫಿಕಲ್ ಲಾಜ್ ಸ್ಥಾಪನೆಯಾಗಿ ರಾಷ್ಟ್ರೀಯ ಜಾಗೃತಿಗೆ ಯೋಗ್ಯಹಿನ್ನೆಲೆ ಒದಗಿಸಿತ್ತು. 1906 ರಷ್ಟೊತ್ತಿಗೇ ಹರಿಹರ ದಾವಣಗೆರೆಗಳಲ್ಲಿ ಕೆಲವರಾದರೂ ಟಿಳಕರ "ಕೇಸರಿ" ಪತ್ರಿಕೆ ತರಿಸುವವರಿದ್ದರಲ್ಲದೇ ಅದೇ ವರ್ಷ ಹರ್ಡೆಕರ್ ಮಂಜಪ್ಪನವರು ದಾವಣಗೆರೆಯಿಂದ "ಧನುರ್ಧಾರಿ" ವಾರ ಪತ್ರಿಕೆಯನ್ನು ಹೊರಡಿಸಲಾರಂಭಿಸಿದ್ದರು. ಈ ಪತ್ರಿಕೆ ಆಗಲೇ ಸರಕಾರದ ಕಿಡಿಗಣ್ಣಿಗೆ ಪಾತ್ರವಾಗಿತ್ತು. 1920 ರಲ್ಲಿ ಚಿತ್ರದುರ್ಗದಲ್ಲಿ ಗುಂಡುರಾವ್ ಹರಿಹರ ಅವರು ಕರ್ನಾಟಕ ತಿಲಕ ಸಂಘವೆಂಬ ಸಂಸ್ಥೆಯನ್ನು ಆರಂಭಿಸಿ, ಅದರ ಆಶ್ರಯದಲ್ಲಿ ವಾಚನಾಲಯ, ಗ್ರಂಥಾಲಯಗಳನ್ನು ಸ್ಥಾಪಿಸಿ, ಕರ್ನಾಟಕದ ಗಣ್ಯ ನಾಯಕರನ್ನು ಕರೆಸಿ ಉಪನ್ಯಾಸಾದಿಗಳನ್ನು ನಡೆಸಲಾರಂಭಿಸಿದ್ದರು. ಖಾದಿ, ಸ್ವದೇಶಿ ಕಾರ್ಯಗಳನ್ನು ಈ ಸಂಸ್ಥೆ ಭರದಿಂದ ನಡೆಸಿತ್ತು. ಇವರ ಸಹಕಾರಿಗಳಾದ ಹುಲ್ಲೂರು ಶ್ರೀನಿವಾಸ ಜೋಯಿಸರ ಶ್ರಮದಿಂದ ಹೊರಟ "ವೃತ್ತಾಂತ ರತ್ನಾಕರ" ವಾರ ಪತ್ರಿಕೆಯೂ ಪರೋಕ್ಷವಾಗಿ ರಾಷ್ಟ್ರೀಯ ಜಾಗೃತಿಗೆ ಶ್ರಮಿಸಿತು. 1923 ರಲ್ಲಿ ಹರಿಹರದಲ್ಲಿ ಹರ್ಡೆಕರ್ ಮಂಜಪ್ಪನವರು ಸತ್ಯಾಗ್ರಹಾಶ್ರಮವನ್ನು ಸ್ಥಾಪಿಸಿ ವಿಧಾಯಕ ಕಾರ್ಯಗಳನ್ನು ನಡೆಸಿದರಲ್ಲದೆ, ಅದೇ ವರ್ಷ ದಾವಣಗೆರೆಗೆ ಬಂದಿದ್ದ ಸ್ವರಾಜ್ಯ ಪಕ್ಷದ ಮೌಲಾನಾ ಮೋಜರಿ ಅಲಿಯವರಿಗೆ 151 ರೂ.ಗಳನ್ನು ಪಕ್ಷದ ಕೆಲಸಕ್ಕಾಗಿ ಸಂಗ್ರಹಿಸಿ ಕೊಟ್ಟಿದ್ದರು. ಶೇಟ ರುಸುಮಜಿ ಹಾಗೂ ಶಿರೂರ ಲಕ್ಷ್ಮಣರಾಯರು ಈ ನಿಧಿ ಸಂಗ್ರಹಕ್ಕೆ ಸಹಕರಿಸಿದ್ದರು. 1924ರ ಬೆಳಗಾವಿ ಕಾಂಗ್ರೆಸ್ಸಿಗೆ ಬಸವೇಶ್ವರ ಸೇವಾದಳ ಎಂಬ ಸ್ವಯಂಸೇವಕರ ತುಕಡಿಯನ್ನೂ ಮಂಜಪ್ಪನವರು ಹರಿಹರದಿಂದ ಕರೆದೊಯ್ದಿದ್ದರು. ಬೆಳಗಾವಿ ಕಾಂಗ್ರೆಸ್ಸಿಗೆ ಜಿಲ್ಲೆಯಿಂದ ತೆರಳಿದ್ದ ಅನೇಕರಲ್ಲಿ ಆಗ ಪುಣೆಯಲ್ಲಿ ಕಾನೂನು ಶಿಕ್ಷಣ ಪಡೆಯುತ್ತಿದ್ದ ಸಿದ್ದವನಹಳ್ಳಿ ನಿಜಲಿಂಗಪ್ಪನವರೂ ಒಬ್ಬರು.

ದಾವಣಗೆರೆಯ ಕಾಸಲ ಶ್ರೀನಿವಾಸಶೆಟ್ಟಿ, ಶಿರೂರ ಪಾಂಡುರಂಗರಾವ್, ಬೆಲ್ಲದ ಶಿದ್ದಲಿಂಗಪ್ಪ ಮುಂತಾದವರು ನಡೆಸುತ್ತಿದ್ದ ಪ್ರಾಣಿದಯಾ ಸಂಘವು ರಾಷ್ಟ್ರೀಯ ಚಟುವಟಿಕೆ, ಖಾದಿಕಾರ್ಯಗಳಿಗೂ ಪ್ರೇರಕ

ವಾಯಿತು. ಶ್ರೀನಿವಾಸಶೆಟ್ಟರು ರಾಷ್ಟ್ರೀಯ ಚಟುವಟಿಕೆಗಳಿಗಾಗಿ ಬಿಡುಗೈಯಿಂದ ಖರ್ಚು ಮಾಡಲಾರಂಭಿಸಿದರು. ಚಿತ್ರದುರ್ಗದಲ್ಲಿ ವಿದೇಶಿ ವಸ್ತುಗಳ ಮಾರಾಟದ ವಿರುದ್ಧ ಪಿಕೆಟಿಂಗ್ ಅಲ್ಪಸ್ವಲ್ಪ ಪ್ರಮಾಣದಲ್ಲಿ 1921 ರಿಂದಲೇ ಆರಂಭವಾಗಿತ್ತು. ಎನ್. ಭೀಮರಾವ್, ತಳಕಿನ ರಾಮಸ್ವಾಮಯ್ಯ, ಹರಿಹರ ಗುಂಡುರಾವ್, ಶ್ರೀನಿವಾಸ ಜೋಯಿಸ್ ಇವರು ತಿಲಕ ಸಂಘದ ಆಶ್ರಯದಲ್ಲಿ ರಾಷ್ಟ್ರೀಯ ಜಾಗೃತಿಗೆ ಶ್ರಮಿಸುತ್ತ ಇದ್ದರು.

1927ರಲ್ಲಿ ಗಾಂಧೀಜಿ ಖಾದಿ ಪ್ರಚಾರಕ್ಕಾಗಿ ಪ್ರವಾಸಮಾಡಿದಾಗ ದಾವಣಗೆರೆ ಮತ್ತು ಹರಿಹರಗಳನ್ನು (ಪುಣೆಗೆ ಹೋಗುವ ರೈಲಿನಿಂದ ಇಳಿದು) ಆಗಸ್ಟ 11 ಮತ್ತು 12 ರಂದು ಸಂದರ್ಶಿಸಿದರು. ದಾವಣಗೆರೆಯಲ್ಲಿ ಊರ ಪೌರರು 5000 ರೂ ನಿಧಿಯನ್ನು ಗಾಂಧೀಜಿಗೆ ಅರ್ಪಿಸಿದರು. ಅಲ್ಲದೆ ಲಿಂಗಾಯತ ಮಹಿಳೆಯರು ತಮ್ಮ ಸಭೆಯಲ್ಲಿ 500 ರೂ. ಕೊಟ್ಟರಲ್ಲದೆ ತಮ್ಮ ಒಡವೆಗಳನ್ನೂ ದಾನಮಾಡಿದರು. ಹರಿಹರದಲ್ಲಿ ಹರಿಹರೇಶ್ವರ ದೇವಾಲಯದ ಮುಂದೆ ಗಾಂಧೀಜಿಯವರ ಭಾಷಣ ಆಯಿತು. ಇದರಿಂದ ಖಾದಿ ಕಾರ್ಯಕ್ಕೆ ಜಿಲ್ಲೆಯಲ್ಲಿ ವಿಶೇಷ ಚಾಲನೆ ಸಿಕ್ಕಿತು. ಬೆಲ್ಲದ ಸಿದ್ದಲಿಂಗಪ್ಪ ಹಳ್ಳಿಹಳ್ಳಿಗಳಲ್ಲೂ ಹೋಗಿ ಖಾದಿ ಮಾರಾಟ ಮಾಡಿ ಖಾದಿ ಸಿದ್ದಲಿಂಗಪ್ಪ ಎಂದೇ ಖ್ಯಾತರಾದರು. ದಾವಣಗೆರೆಯಲ್ಲಿ ಒಂದು ಖಾದಿಭಂಡಾರ ಸ್ಥಾಪಿತವಾಯಿತಲ್ಲದೆ, ಮುಂದೆ 1932 ರಲ್ಲಿ ಐಮಂಗಲದಲ್ಲಿ ಒಂದು ಖಾದಿ ಉತ್ಪಾದನಾ ಕೇಂದ್ರವೇ ಏರ್ಪಟ್ಟಿತು.

1930 ರಷ್ಟೊತ್ತಿಗೇ ಜಿಲ್ಲೆಯ ಅನೇಕ ಕಾರ್ಯಕರ್ತರು ಸೇವಾದಳದಲ್ಲಿ ಸೇರಿ ಅನೇಕ ಕಡೆ ರಾಷ್ಟ್ರೀಯ ಚಟುವಟಿಕೆಗಳಲ್ಲಿ ಮಗ್ನರಾಗಿದ್ದರು. ದೊಗ್ಗನಾಳಿನ ಕೊಟ್ರಿನಂಜಪ್ಪ, ಚಿತ್ರದುರ್ಗದ ಎಸ್. ವಾಸುದೇವರಾವ್, ದಾವಣಗೆರೆಯ ಮೌನೇಶ್ವರಪ್ಪ, ಹಾಗೂ ವೀರಬಸಯ್ಯ ಪುರಾಣಿಕಮಠ, ಹರಿಹರದ ಕೆ. ಎಂ. ಅಣಜಿಮಠ ಮುಂತಾದ ಕೆಲವರನ್ನಾದರೂ ಇಲ್ಲಿ ಹೆಸರಿಸಬೇಕು. 1930 ರಲ್ಲಿ ಅಂಕೋಲೆಯಲ್ಲಿ ಏಪ್ರಿಲ್ 13ಕ್ಕೆ ಆದ ಉಪ್ಪಿನ ಸತ್ಯಾಗ್ರಹದ ಕಾಲಕ್ಕೆ ಕಾನೂನು ಬಾಹಿರ ಉಪ್ಪನ್ನು ಕೊಂಡವರಲ್ಲಿ, ಅಲ್ಲಿ ಹಾಜರಿದ್ದ ಕಾಸಲ ಶ್ರೀನಿವಾಸ ಶೆಟ್ಟರೂ ಒಬ್ಬರು.

ಹಳೆಯ ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ಸನ್ನು ಬ್ರಾಹ್ಮಣರ ಸಂಸ್ಥೆಯೆಂದು ಟೀಕಿಸಿ ಬ್ರಾಹ್ಮಣೇತರ ಸಮಾಜಗಳ ಗಣ್ಯರನೇಕರು ಕಾಂಗ್ರೆಸ್ಸಿನಿಂದ ದೂರವಿದ್ದರೂ ಚಿತ್ರದುರ್ಗಜಿಲ್ಲೆಯಲ್ಲಿ ಈ ಪರಿಸ್ಥಿತಿ ಇರಲಿಲ್ಲ. ಸಕಲ ಜಾತಿಯ ಜನರೂ ಇಲ್ಲಿ ಕಾಂಗ್ರೆಸ್ಸಿನ ಚಟುವಟಿಕೆಯಲ್ಲಿ ಹೃತ್ಪೂರ್ವಕ ಪಾಲುಗೊಳ್ಳುತ್ತಿದ್ದರು. ಹುಲ್ಲೂರು ಶ್ರೀನಿವಾಸ ಜೋಯಿಸರು ನಡೆಸಿದ ಚಿತ್ರದುರ್ಗದ ಪಾಳಯಗಾರರ ಬಗೆಗಿನ ಇತಿಹಾಸ ಸಂಶೋಧನೆ ರಾಷ್ಟ್ರೀಯ ಜಾಗೃತಿಯಲ್ಲಿ ಗಣ್ಯ ಕೊಡುಗೆ ನೀಡಿತು. 1931 ರಲ್ಲಿ ದಾವಣಗೆರೆಯಲ್ಲಿ ವಿದೇಶಿ ಬಟ್ಟೆ ಅಂಗಡಿಗಳ ಮುಂದೆ ಭಾರೀ ಪಿಕೆಟಿಂಗ್ ನಡೆದು, ವಿದೇಶಿ ಬಟ್ಟೆಗಳನ್ನು ಗಂಟುಕಟ್ಟಿಸುವಂತೆ ಆಯಿತು. “1930ರ ಚಳವಳಿ ಕಾಲದಲ್ಲಿ ಅಂಕೋಲ, ಸಿದ್ದಾಪುರ ಚಳವಳಿಗೆ ಸಾಧ್ಯವಿದ್ದಷ್ಟು ಹಣ ಸಂಗ್ರಹಿಸಿ ಕಳುಹಿಸುತ್ತಿದ್ದವು. 1930 ರಿಂದಲೇ ಪ್ರತಿ ಶನಿವಾರ ಕೆಲವು ಮಿತ್ರರು ಸೇರಿ ಚಿತ್ರದುರ್ಗದಲ್ಲಿ ರಾಷ್ಟ್ರಧ್ವಜ ವಂದನೆ ನಡೆಸುತ್ತಿದ್ದವು. ಸರ್ಕಾರದವರು ಈ ಬಗ್ಗೆ ಏನೂ ಕ್ರಮಕೈಗೊಳ್ಳಲಿಲ್ಲ” ಎಂದು ಅಂದಿನ ವಿಚಾರಗಳನ್ನು ಎಸ್. ನಿಜಲಿಂಗಪ್ಪ ತಿಳಿಸಿದ್ದಾರೆ. ಡಿಸೆಂಬರ್ 1931 ರಲ್ಲಿ ಡಿ. ಎಸ್. ಮಲ್ಲಪ್ಪ (ತಿಪಟೂರು) ಹಾಗೂ ಹರ್ಡೇಕರ್ ಮಂಜಪ್ಪನವರು ಚಿತ್ರದುರ್ಗದಲ್ಲಿ ಜವಾಬ್ದಾರಿ ಸರಕಾರದ ಬೇಡಿಕೆಯನ್ನು ಬಲವಾಗಿ ಮಂಡಿಸಿ ಭಾಷಣ ಮಾಡಿದರು. 1932 ರಲ್ಲಿ ಚಿತ್ರದುರ್ಗ, ದಾವಣಗೆರೆಗಳಲ್ಲಿ ವಿದೇಶಿ ವಸ್ತ್ರಗಳ ಹೋಳಿಕೂಡ ಆಯಿತು. ಕೊಟ್ರಿ ನಂಜಪ್ಪ ಎಂಬ ತರುಣ ಕಾರ್ಯಕರ್ತರು ಆ ಕಾಲದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ವಿಶೇಷವಾಗಿ ಪ್ರಚಾರಾದಿ ಕಾರ್ಯಗಳಲ್ಲಿ ಅಹರ್ನಿಶಿ ನಡೆಸಿದರು. ಇವರ ಹಾಗೂ ಡಿ. ಆರ್. ಮೌನೇಶ್ವರಪ್ಪನವರ ಪ್ರಯತ್ನದ ಫಲವಾಗಿಯೇ 1935 ರ ಸುಮಾರಿಗೇ ದಾವಣಗೆರೆಯಲ್ಲಿ ಕಾಂಗ್ರೆಸ್ ಸಮಿತಿಯ ಸ್ಥಾಪನೆ ಆಯಿತು. 1934ರಲ್ಲಿ ಗಾಂಧೀಜಿ ದಾವಣಗೆರೆಗೆ

ಭೇಟಿ ನೀಡಿ ಅಲ್ಲಿ ಹರಿಜನ ವಿದ್ಯಾರ್ಥಿನಿಲಯಕ್ಕೆ ಶಂಕುಸ್ಥಾಪನೆ ಮಾಡಿದರು. ಕೌಸಲ ಶ್ರೀನಿವಾಸಶೆಟ್ಟರು ಆಗ ಹರಿಜನರ ಕಾರ್ಯದ ಬಗ್ಗೆ ಅಪಾರ ಆಸೆ ತಳೆದು ದುಡಿಯುತ್ತಿದ್ದರಲ್ಲದೆ ಅನಂತಶರ್ಮ ಎಂಬ ಸದನೀಥರ ಕಾರ್ಯಕರ್ತರು ಹರಿಜನಕೇರಿಯಲ್ಲೇ ಇದ್ದು ಅವರ ಸೇವೆಯಲ್ಲಿ ನಿರತರಾಗಿದ್ದರು.

1935 ರಲ್ಲಿ ಕಾಂಗ್ರೆಸ್ಸಿನ ರಜತಮಹೋತ್ಸವವನ್ನು ದಾವಣಗೆರೆ, ಚಿತ್ರದುರ್ಗಗಳೆರಡರಲ್ಲೂ ಆಚರಿಸಲಾಯಿತು. ಆ ವರ್ಷ ಸ್ಥಾಪನೆಯಾದ ಚಿತ್ರದುರ್ಗ ಪುರಕಾಂಗ್ರೆಸ್‌ಸಮಿತಿಗೆ ಎ. ಭೀಮಪ್ಪ ನಾಯಕರು ಅಧ್ಯಕ್ಷರೂ ಎ. ಎಸ್. ಶ್ರೀನಿವಾಸಮೂರ್ತಿ ಆಚಾರ್ಯರು ಕಾರ್ಯದರ್ಶಿಗಳೂ ಆದರು. ಸೇವಾದಳದ ಗಣ್ಯ ಕಾರ್ಯಕರ್ತರಾಗಿದ್ದ ಎಸ್. ವಾಸುದೇವರಾಯರು 1935ರಲ್ಲಿ ತಮ್ಮ ಹುಟ್ಟೂರಿಗೆ ಮರಳಿ ಅಲ್ಲಿ ಖಾದಿಭಂಡಾರವನ್ನು ಸ್ಥಾಪಿಸಿದರು. ಆಗ ಎಸ್. ನಿಜಲಿಂಗಪ್ಪ, ಎ. ಭೀಮಪ್ಪ ನಾಯಕ, ಕೆ. ಕೆಂಚಪ್ಪ, ಎಸ್. ರಂಗರಾವ್, ಎಂ. ಆನಂದಮೂರ್ತಿ, ಶ್ರೀನಿವಾಸಮೂರ್ತಿ ಆಚಾರ್ಯ, ಹಂ. ಶ್ರೀ ಜೋಯಿಸ್, ಗುಂಡುರಾವ್ ಹರಿಹರ ಇವರೆಲ್ಲ ಊರಲ್ಲಿ ಕಾಂಗ್ರೆಸ್ಸಿನ ಪ್ರಮುಖರಾಗಿದ್ದರೆಂದು ಅವರು ಹೇಳುತ್ತಾರೆ. 1934 ರಲ್ಲಿ ದಾವಣಗೆರೆಯಲ್ಲಿ ಮೌನೇಶ್ವರಪ್ಪ ಅವರು ಸ್ಥಾಪಿಸಿದ ಜವಾಹರ ವ್ಯಾಯಾಮ ಶಾಲೆ, 1937ರಲ್ಲಿ ಅದೇ ಊರಲ್ಲಿ ಪುರಾಣಿಕಮಠ ಅವರ ಶ್ರಮದಿಂದ ಸ್ಥಾಪನೆಯಾದ ತಿಲಕ ತರುಣಸಂಘ ಮುಂತಾದ ಸಂಸ್ಥೆಗಳು ರಾಷ್ಟ್ರೀಯ ಚಟುವಟಿಕೆಗೆ ಪೂರಕವಾದ ಕೆಲಸ ಮಾಡಿದವು.

1935–36ರ ಅವಧಿಯಲ್ಲಿ ಡಾ॥ ಹರ್ಡಿಕರರು ಚಿತ್ರದುರ್ಗ ಜಿಲ್ಲೆಯಲ್ಲಿ ಅನೇಕ ಬಾರಿ ಪ್ರವಾಸ ಮಾಡಿ, ಕಾಂಗ್ರೆಸ್‌ನ ಚಟುವಟಿಕೆಗಳಿಗೆ ಚಾಲನೆ ಇತ್ತರು. ಅವರ ಜೊತೆ ಹುಬ್ಬಳ್ಳಿಯ ಉಮಾಬಾಯಿ ಕುಂದಾಪುರ ಅವರೂ ಬಂದಿದ್ದು ಇದರ ಪರಿಣಾಮ ಮಹಿಳೆಯರ ಮೇಲೆ ವಿಶೇಷವಾಗಿ ಆಯಿತು. "ಹೆಣ್ಣೊಬ್ಬಳು ಅಷ್ಟು ಜನರ ಎದುರಿಗೆ ಮಾತನಾಡಿದ್ದು ನನ್ನನ್ನು ಬೆರಗುಗೊಳಿಸಿತ್ತು", ಎಂದು ಮಹಿಳೆಯೊಬ್ಬರು ಉಮಾಬಾಯಿಯವರ ಭಾಷಣವನ್ನು ಉಲ್ಲೇಖಿಸಿ ಹೇಳಿದ್ದಾರೆ. ಇದರಿಂದ ಬಳ್ಳಾರಿ ಸಿದ್ದಮ್ಮ, ನಾಗರತ್ನಮ್ಮ ಹಿರೇಮಠರಂಥ ಗಣ್ಯ ಕಾರ್ಯಕರ್ತಿಯರು ಕಾಂಗ್ರೆಸ್ ಸೇರುವಂತಾಯಿತು.

1936ರಲ್ಲಿ ಚಿತ್ರದುರ್ಗ ಜಿಲ್ಲಾ ಕಾಂಗ್ರೆಸ್‌ಸಮಿತಿ ಆರಂಭವಾಯಿತು. ಇದಕ್ಕೆ ನಿಜಲಿಂಗಪ್ಪ ಅಧ್ಯಕ್ಷರು. ಕೊಟ್ರೆ ನಂಜಪ್ಪ ಹಾಗೂ ಎಸ್. ವಾಸುದೇವರಾವ್ ಕಾರ್ಯದರ್ಶಿಗಳು. ಆರಂಭದಲ್ಲಿ ದಾವಣಗೆರೆಯಲ್ಲಿ ಇದ್ದ ಇದರ ಕಾರ್ಯಾಲಯ ಮುಂದೆ ಚಿತ್ರದುರ್ಗಕ್ಕೆ ವರ್ಗಾಯಿಸಲ್ಪಟ್ಟಿತು. ಜನವರಿ 26ಕ್ಕೆ ಆಚರಿಸಲಾಗುತ್ತಿದ್ದ ಸ್ವಾತಂತ್ರ್ಯದಿನದ ಅಂಗವಾಗಿ 1937 ರಲ್ಲಿ ಚಿತ್ರದುರ್ಗದ ಹೈಸ್ಕೂಲು ವಿದ್ಯಾರ್ಥಿಗಳು ಮೆರವಣಿಗೆಯನ್ನು ನಡೆಸಿದರು. ಕಾಂಗ್ರೆಸ್ಸಿನ ಚಟುವಟಿಕೆಗಳ ಕಾವು ಹೆಚ್ಚಾದಂತೆ 1937 ರಲ್ಲಿ ಡಾ॥ ಹರ್ಡಿಕರ್ ಮತ್ತು ಉಮಾಬಾಯಿ ಕುಂದಾಪುರ್ ಅವರು ಕೆಲವು ತಾಲ್ಲೂಕುಗಳಲ್ಲಿ ಭಾಷಣ ಮಾಡಬಾರದೆಂದು ಸರಕಾರ ಆಜ್ಞೆ ಹೊರಡಿಸಿತು. ಅಲ್ಲದೆ ಜಿಲ್ಲೆಯಾದ್ಯಂತ ಕಾಂಗ್ರೆಸ್ಸಿಗರು ನಡೆಸಿದ ರೈತಸಂಘಟನೆಯ ವಿರುದ್ಧ ಕೂಡ ಗದಾಪ್ರಹಾರ ಮಾಡಿತು. 16–5–1937 ರ ದಾವಣಗೆರೆ ಮ್ಯಾಜಿಸ್ಟ್ರೇಟರ ಒಂದು ಆಜ್ಞೆಯಂತೆ ಡಾ॥ ಹರ್ಡಿಕರ್, ಕಾಸಲ ಶ್ರೀನಿವಾಸಶೆಟ್ಟಿ, ಜೊಂದಾಡೆ ಹನುಮಂತರಾವ್, ಡಿ. ಮೌನೇಶ್ವರಪ್ಪ, ಕೊಟ್ರೆ ನಂಜಪ್ಪ, ಎಸ್. ನಿಜಲಿಂಗಪ್ಪ ಹಾಗೂ ಎಸ್. ವಾಸುದೇವರಾವ್ ಇವರು ದಾವಣಗೆರೆ, ಹರಿಹರಗಳ ಹತ್ತು ಮೈಲು ಫಾಸಲೆಯಲ್ಲಿ ಭಾಷಣ ಮಾಡಬಾರದು ಎಂದು ಹೇಳಲಾಗಿದೆ. "ತೆರಿಗೆ ಕೊಡುವುದರ ವಿರುದ್ಧ ಹಳ್ಳಿಗರಿಗೆ ಶಿಕ್ಷಣ"ವನ್ನು ಈ ವ್ಯಕ್ತಿಗಳು ನೀಡುತ್ತಿದ್ದಾರೆಂದು ಆಜ್ಞೆ ಹೇಳಿದೆ.

1936ರ ಸುಮಾರಿಗೆ ಚಳ್ಳಕೆರೆಯಲ್ಲಿ ಸಿ. ಕೃಷ್ಣಮೂರ್ತಿಯವರು ಅಧ್ಯಕ್ಷರಾಗಿಯೂ 'ಸಿ. ವಿ. ಕೃಷ್ಣಮೂರ್ತಿಯವರು ಕಾರ್ಯದರ್ಶಿಯಾಗಿಯೂ ಇರುವ ಡಿ. ಸಿ.ಸಿ ಯನ್ನು ಸ್ಥಾಪಿಸಲಾಗಿತ್ತು. ಚಳ್ಳಕೆರೆ, ಹಿರಿಯೂರು, ಹೊಳಲ್ಕೆರೆಗಳು ಕಾಂಗ್ರೆಸ್ಸಿನ ಗಣ್ಯ ಕೇಂದ್ರಗಳಾಗಿ ಬೆಳೆದವು.

ಸಂಸ್ಥಾನದಲ್ಲಿನ ಸಂಯುಕ್ತ ಪ್ರಜಾಪಕ್ಷವು 1937ರ ಅಕ್ಟೋಬರ್‌ನಲ್ಲಿ ಕಾಂಗ್ರೆಸ್ಸಿನೊಡನೆ ಲೀನವಾಗು ವುದಕ್ಕೆ ಕೆಲವು ತಿಂಗಳ ಮೊದಲು ಈ ಬಗ್ಗೆ ಒಂದು ಕನ್‌ವೆನ್‌ಶನ್ ಚಿತ್ರದುರ್ಗದಲ್ಲಿ ಅನಂತಯ್ಯಶೆಟ್ಟಿ ಹಾಸ್ಟೆಲ್‌ ನಲ್ಲಿ ಏಪ್ರಿಲ್ 17ಕ್ಕೆ ಕೆ. ಸಿ. ರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ನಿಜಲಿಂಗಪ್ಪನವರು ಇದರ ಸ್ವಾಗತಾಧ್ಯಕ್ಷರು. "ಮುಂದೆ ಸಂಸ್ಥಾನಾದ್ಯಂತ ನಡೆದ ಜವಾಬ್ದಾರಿ ಸರಕಾರದ ಹೋರಾಟಕ್ಕೆ ಚಿತ್ರದುರ್ಗದ ಈ ಸಮಾರಂಭ ನಾಂದಿಯಾಯಿತು."

ಕೊಟ್ರೆ ನಂಜಪ್ಪನವರು ಗ್ರಾಮಾಂತರ ಪ್ರದೇಶಗಳಲ್ಲಿ ನಡೆಸಿದ ತೀವ್ರ ಚಟುವಟಿಕೆಗಳಿಂದಾಗಿ 1938ರಲ್ಲಿ ಹೊಳಲ್ಕೆರೆ ತಾ॥ ರಂಗಾಪುರದಲ್ಲಿ ಎಚ್. ಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ ರೈತ ಸಮ್ಮೇಳನವು 10,000 ಜನರ ಹಾಜರಾತಿಯಲ್ಲಿ ನಡೆಯಿತು. ಅದೇ ವರ್ಷ ರಂಗಾಪುರದಲ್ಲಿ ಒಂದು ರಾಷ್ಟ್ರೀಯ ವಸತಿಶಾಲೆಯನ್ನು ಆರಂಭಿಸಿ ದರು. ಬಿ. ಗಂಗಾಧರ ಆಚಾರ್ಯರು ಇದರ ಮುಖ್ಯೋಪಾಧ್ಯಾಯರು. ಹಳ್ಳಿಗಳಲ್ಲೂ ನೂಲುವುದೇ ಮುಂತಾದ ವಿಧಾಯಕ ಕಾರ್ಯಗಳು ಭರದಿಂದ ನಡೆದವು.

ಈ ನಡುವೆ 1937 ರಲ್ಲಿ ಮೈಸೂರು ಕಾಂಗ್ರೆಸ್ ನೇಮಿಸಿದ ತ್ರಿಮೂರ್ತಿಕ್ರಿಯಾಸಮಿತಿ ಸಂಸ್ಥಾನದ ಇತರ ಊರುಗಳಂತೆ ಚಿತ್ರದುರ್ಗ ಜಿಲ್ಲೆಯಲ್ಲೂ ಸಂಚರಿಸಿತ್ತು. ಚಿತ್ರದುರ್ಗಕ್ಕೆ ಇವರು ಬಂದಾಗ ಎನ್. ಭೀಮರಾಯರ ಅಧ್ಯಕ್ಷತೆಯಲ್ಲಿ ಸಭೆ ಆಯಿತು. ಡಿ. ಎಂ. ಗುರುಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಹರಿಹರ ಜಿ.ಸಿ.ಸಿ. ಸ್ಥಾಪಿತವಾಯಿತು. ಮುಂದೆ ಈ ತ್ರಿಮೂರ್ತಿಗಳ ಬಂಧನ ಆಗಿ ಮೈಸೂರು ಕಾಂಗ್ರೆಸ್ ಅಕ್ಟೋಬರ್‌ನಲ್ಲಿ ಉಡಿಸಿದ ನಂತರ ಎಚ್. ಕೆ. ವೀರಣ್ಣಗೌಡರು ಸಂಸ್ಥಾನಾದ್ಯಂತ ಪ್ರಚಾರ ಪ್ರವಾಸ ಕೈಕೊಂಡಾಗ "ಚಿತ್ರದುರ್ಗ ಜಿಲ್ಲೆಯಲ್ಲಂತೂ ಹಳ್ಳಿಹಳ್ಳಿಯಲ್ಲೂ ಸಾವಿರಾರು ಮಂದಿ ಸ್ತ್ರೀಪುರುಷರು ಸಭೆಗೆ ಬರುತ್ತಿದ್ದರು," ಎಂದು ತಮ್ಮ ಅನುಭವವನ್ನು ಹೇಳಿದ್ದಾರೆ. ಬಳ್ಳಾರಿ ಸಿದ್ದಮ್ಮ ತಮ್ಮ ಜೊತೆ ಜಿಲ್ಲೆಯ ಎಲ್ಲೆಡೆ ಪ್ರವಾಸಕ್ಕೆ ಬಂದಿದ್ದರು, ಹೊಳಲ್ಕೆರೆಯಲ್ಲಿ ಎ. ಎಸ್. ಕೃಷ್ಣಮೂರ್ತಿ ಎಂಬಾತನನ್ನು ಆಗ ಒಂದುದಿನ ಬಂಧಿಸಿ ಇಟ್ಟಿ ದ್ದರು, ಎಂಬ ವಿಚಾರವನ್ನೂ ಅವರು ತಿಳಿಸಿದ್ದಾರೆ. ಇವರೇ ಜಿಲ್ಲೆಯಲ್ಲಿ ಪ್ರಪ್ರಥಮವಾಗಿ ಬಂಧಿತರಾದ ರಾಜಕೀಯ ಕೈದಿ.

ಇದರ ಹಿಂದೆ ಶಿವಪುರಕಾಂಗ್ರೆಸ್‌ನ ನಂತರ ನಡೆದ ಧ್ವಜಸತ್ಯಾಗ್ರಹದಲ್ಲಿ ಕೊಟ್ರೆ ನಂಜಪ್ಪ, ಮುಲ್ಲಿಂಗಿ ಗೋವಿಂದ ರೆಡ್ಡಿ ಇವರ ಬಂಧನ ಆಯಿತು. ಚಳ್ಳಕೆರೆಯಲ್ಲೂ ಧ್ವಜಸತ್ಯಾಗ್ರಹ ಮಾಡಿದರು. ಆ ತಾಲ್ಲೂಕಿನಲ್ಲಿ ಆ ವರ್ಷ ಏರ್ಪಡಿಸಿದ್ದ ತಾ॥ ರೈತ ಸಮ್ಮೇಳನದ ವಿರುದ್ಧ 144ನೆಯ ಸೆಕ್ಷನ್ ಜಾರಿಮಾಡಿದರು. 1939 ರ ವಿದುರಾಶ್ವತ್ಥ ಕಾಂಗ್ರೆಸ್ಸಿನ ನಂತರ ಜಗಳೂರು ತಾ॥ ತೋರಣಗಟ್ಟೆ ಗ್ರಾಮದಲ್ಲಿ ಎಚ್. ಸಿ. ದಾಸಪ್ಪ ನವರ ಅಧ್ಯಕ್ಷತೆಯಲ್ಲಿ ತಾ॥ ಕಾಂಗ್ರೆಸ್ ಸಮ್ಮೇಳನವು ಬೃಹತ್ ಪ್ರಮಾಣದಲ್ಲಿ ನಡೆಯಿತು. ಇಂಥ ಕಾರ್ಯಕ್ರಮ ಗಳು ಗ್ರಾಮಾಂತರ ಪ್ರದೇಶಗಳಲ್ಲೆಲ್ಲ ನಡೆದು ಜಿಲ್ಲೆಯ ರೈತರಲ್ಲಿ ಭಾರೀ ಜಾಗೃತಿಯಾಯಿತು. ಜಿಲ್ಲೆ ಯಲ್ಲೆಲ್ಲ ಪಾನನಿರೋಧ ಪಿಕೆಟಿಂಗ್ ಆರಂಭಿಸಿದರು.

ಈ ಹಿನ್ನೆಲೆಯಲ್ಲಿ ಜವಾಬ್ದಾರಿ ಸರಕಾರದ ಬೇಡಿಕೆಯನ್ನು ಬಲವಾಗಿ ಮಂಡಿಸಲು ಜಂಗಲ್ ಸತ್ಯಾಗ್ರಹ ಹೂಡುವ ನಿರ್ಣಯವನ್ನು ಡಿ.ಸಿ.ಸಿ. ಕೈಕೊಂಡು ಮೈಸೂರು ಕಾಂಗ್ರೆಸ್ಸಿನ ಅನುಮತಿ ಕೇಳಿತು. ಈ ಸತ್ಯಾಗ್ರಹ ಮೊದಲ ಕಾರ್ಯಕ್ರಮ ಚಿತ್ರದುರ್ಗ ತಾ॥ ತುರುವನೂರಲ್ಲಿ 3-9-1939ಕ್ಕೆ ಭಾರೀ ಜನಸಂದಣಿಯ ನಡುವೆ ಆಯಿತು. ಈಚಲ ಮರ ಕಡಿದು ರಾಜಶೇಖರಯ್ಯ ಹಿರೇಮಠ, ನಿಜಲಿಂಗಪ್ಪ, ಶ್ರೀನಿವಾಸ ಮೂರ್ತಿ ಆಚಾರ್, ಎಂ ರಾಮರೆಡ್ಡಿ, ಬಳ್ಳಾರಿ ಸಿದ್ದಮ್ಮ, ನಾಗರತ್ನಮ್ಮ ಹಿರೇಮಠ ಮುಂತಾದ 15 ಜನ ಮೊದಲ ಬಾರಿ ಬಂಧಿತರಾದರು. ಈ ಸತ್ಯಾ ಗ್ರಹ ಅನೇಕ ದಿನ ತುರುವನೂರಲ್ಲಿ ಸತತವಾಗಿ ನಡೆದು ಅನೇಕರು ಬಂಧಿತರಾದರು. ರಂಗಾಪುರದಲ್ಲಿ ಕೊಟ್ರೆ ನಂಜಪ್ಪನವರ ಜೊತೆ ಮೊದಲ ದಿನ 30 ಜನರ ಬಂಧನ ಆಯಿತು. ಚಿತ್ರಹಳ್ಳಿ, ಮಾಯಕೊಂಡ, ಕಸ್ತೂರಿ

ರಂಗಪ್ಪನ ಹಳ್ಳಿ, ಕೊಳದಾಳು, ಮಾಲೇನೂರು, ವಡೇರಹಳ್ಳಿ, ಕಾಟನಾಯಕನಹಳ್ಳಿ, ಮರಡಿಹಳ್ಳಿ, ಕೊಪಗನೂರು, ಸೋಮಗುದ್ದು, ಬಾಗೆನಾಳು ಹೀಗೆ ಅನೇಕ ಊರುಗಳಲ್ಲಿ ಸತ್ಯಾಗ್ರಹವಾಗಿ ಸಾವಿರಾರು ಸ್ತ್ರೀಪುರುಷರು ಅದರಲ್ಲಿ ಪಾಲುಗೊಂಡರು. 500 ಕ್ಕೂ ಹೆಚ್ಚು ಜನ ಚಿತ್ರದುರ್ಗ ಜಿಲ್ಲೆಯಲ್ಲಿ ಬಂಧಿತರಾಗಿ ದೀರ್ಘ ಕಾಲದ ಶಿಕ್ಷೆ, ಭಾರೀ ದಂಡಗಳಿಗೆ ಒಳಗಾದರು. ಕೆಲವರಿಗೆ ಎರಡರಿಂದ ಮೂರುವರ್ಷದ ಶಿಕ್ಷೆ, ಎರಡರಿಂದ ನಾಲ್ಕು ಸಾವಿರ ರೂ. ದಂಡ ಆಯಿತು. ಚಿಕ್ಕಜಾಜೂರಿನ ಸಿದ್ದಪ್ಪನವರು ರಂಗಾಪುರದಲ್ಲಿ ತಮ್ಮ ಅನುಭವವನ್ನು ಹೀಗೆ ಹೇಳಿದ್ದಾರೆ: "ಅನೇಕರಿಗೆ ನಾಲ್ಕುವರ್ಷಗಟ್ಟಲೆ ಶಿಕ್ಷೆ, ಸಾವಿರ, ಎರಡು ಸಾವಿರ ರೂಪಾಯಿ ದಂಡವಾಗಿ, ಅನೇಕರ ಎತ್ತು, ಎಮ್ಮೆಗಳ ಹರಾಜು ಆಯಿತು. ನಾನೂ ನನ್ನ ಹೆಂಡತಿ ಸಾಂತಮ್ಮನೂ ಮನೆಗೆ ಬೀಗಹಾಕಿ ಈಚಲ ಮರ ಕಡಿದು ಜೈಲಿಗೆ ಹೋಗಿರಲು, ಆಗಿನ ಸರಕಾರ ನನ್ನ ಮನೆಯ ಬಾಗಿಲನ್ನು ಒಡೆಸಿ ಮನೆಯಲ್ಲಿದ್ದ ಸಾಮಾನು, ಸೂರಿನ 32 ಜಿಂಕ್‌ಷೀಟ್ ತಗಡುಗಳು, ಬಾಗಿಲು ಇವುಗಳನ್ನೆಲ್ಲ ಹರಾಜುಮಾಡಿಸಿದರೂ ಆ ಸೊತ್ತುಗಳು ಹುಲ್ಲುಕಡ್ಡಿಗೆ ಸಮಾನವೆಂದು ಎಣಿಸಿ ಜೈಲುವಾಸ ಅನುಭವಿಸಿದ್ದೇವೆ. ನಾನು ಜೈಲಿನಲ್ಲಿದ್ದಾಗ ನನ್ನ ಹೆಂಡತಿ ಗರ್ಭಿಣಿ ಇದ್ದು, ಒಂದುದಿನ ರಾತ್ರಿ ಕಾಲದಲ್ಲಿ ಟ್ರೈನಿನಿಂದ ಅವಳನ್ನು ರಂಗಾಪುರಕ್ಕೆ (ಜೈಲಿನಿಂದ) ಕರೆತಂದು ಬಿಟ್ಟುಹೋದರು. ಆದಿನ ಮಧ್ಯಾಹ್ನವೇ ಒಂದು ಮರದ ಕೆಳಗೆ ಅವಳು ಗಂಡುಮಗು ಹೆತ್ತಳು."

ಈ ಕಾಲದಲ್ಲಿ ಬಂಧಿತ ಸತ್ಯಾಗ್ರಹಿಗಳ ಮೇಲೆ ಪೋಲೀಸರು ನಡೆಸಿದ ದೌರ್ಜನ್ಯಕ್ಕೆ ಮಿತಿ ಇರಲಿಲ್ಲ. ಶೌಚ, ಸ್ನಾನಗಳಿಗೆ ವ್ಯವಸ್ಥೆ ಇಲ್ಲದ ಚಿಕ್ಕ ಕೊಠಡಿಯ ಲಾಕ್‌ಅಪ್‌ಗಳಲ್ಲಿ ವಿಚಾರಣೆಗೆ ಒಳಪಟ್ಟ ಕೈದಿಗಳನ್ನು ವಾರಗಟ್ಟಲೆ ಇಟ್ಟಿದ್ದರು. ಅಮಾನುಷವಾಗಿ ಹೊಡೆದರು. ನೀರಡಿಸಿದ ಕೈದಿಗಳಿಗೆ ಮೂತ್ರವನ್ನೇ ಕುಡಿಯಕೊಟ್ಟರು ! ಅಮಾನುಷ ದೌರ್ಜನ್ಯ ನಡೆದರೂ ಈ ಕೈದಿಗಳು ಜಗ್ಗಲಿಲ್ಲ ; ಸತ್ಯಾಗ್ರಹ ನಿಲ್ಲಲಿಲ್ಲ. ತುರವನೂರಿಗೆ ಪುಂಡುಗಂದಾಯ ಹೇರಿ, ಅದರ ವಸೂಲಿಗೂ ಅಪಾರ ದೌರ್ಜನ್ಯ ನಡೆಸಿದರು. ಈ ದೌರ್ಜನ್ಯಗಳ ವರದಿ ಗಾಂಧೀಜಿಗೂ ತಲಪಿ, ಇದರ ಬಗ್ಗೆ ವಿಚಾರಣೆ ನಡೆಸಿ ಹೋಗಲು ಗಾಂಧೀಜಿಯವರ ಕಾರ್ಯದರ್ಶಿ ಮಹಾದೇವಭಾಯಿ ದೇಸಾಯಿ ಚಿತ್ರದುರ್ಗ ಜಿಲ್ಲೆಗೆ ಬಂದು ತುರವನೂರು, ರಂಗಾಪುರ ಮುಂತಾದ ಅನೇಕ ಹಳ್ಳಿಗಳನ್ನು ಸಂದರ್ಶಿಸಿದರು. 1939ರ ಜಂಗಲ್ ಸತ್ಯಾಗ್ರಹ ಜಿಲ್ಲೆಯಲ್ಲಿ ಆದ ರಾಷ್ಟ್ರೀಯ ಜಾಗೃತಿಯ ವಿರಾಟ್ ದರ್ಶನ ಮಾಡಿಸಿತು.

ಬಂಧಿತರೆಲ್ಲರೂ 1940 ರ ಸೆಪ್ಟೆಂಬರ್‌ನಲ್ಲಿ ಜಯಚಾಮರಾಜರ ಪಟ್ಟಬಂಧೋತ್ಸವದ ಕಾಲಕ್ಕೆ ಬಿಡುಗಡೆಯಾದರು. 1940 ರಲ್ಲಿ ಜಿಲ್ಲಾ ಬೋರ್ಡ್ ಚುನಾವಣೆ ನಡೆದು ಕಾಂಗ್ರೆಸ್ ಬಹುಮತಗಳಿಸಿತು. ಎಸ್. ವೀರಬಸಪ್ಪ ಅಧ್ಯಕ್ಷರೂ ಕೆ. ಕೆಂಚಪ್ಪ ಉಪಾಧ್ಯಕ್ಷರೂ ಆದರು.

ಇದರ ಹಿಂದೆಯೇ ಏಪ್ರಿಲ್ 1941 ರಲ್ಲಿ ಮೈಸೂರು ಕಾಂಗ್ರೆಸ್ಸಿನ ವಾರ್ಷಿಕಾಧಿವೇಶನವು ಎಚ್.ಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ ಹರಿಹರದ ಬಳಿಯ ಹರಳಾಪುರದಲ್ಲಿ ನಡೆಯಿತು. ಈ ಅಧಿವೇಶನಕ್ಕೆ ಬಾಬೂ ರಾಜೇಂದ್ರ ಪ್ರಸಾದರು ಖಾದೀಗ್ರಾಮೋದ್ಯೋಗ ಪ್ರದರ್ಶನದ ಉದ್ಘಾಟನೆಗೆ ಬಂದಿದ್ದರು.

1942ರ ಚಳವಳಿ ದಾವಣಗೆರೆ, ಚಿತ್ರದುರ್ಗ, ಹಿರಿಯೂರುಗಳಲ್ಲಿ ಉಗ್ರರೂಪ ತಾಳಿತು. ವಿಧ್ವಂಸಕ ಕೃತ್ಯಗಳು ಭಾರೀ ಪ್ರಮಾಣದಲ್ಲಿ ನಡೆದವು. ದಾವಣಗೆರೆ, ಚಿತ್ರದುರ್ಗ, ಮಾಯಕೊಂಡ, ಚಿಕ್ಕ ಜಾಜೂರು, ಕೊಪಗನೂರು, ಹೊಸದುರ್ಗ ರೋಡ್ ಇವು ಕರ್ನಾಟಕದಲ್ಲಿ ಹಾನಿಗೊಳಗಾಗಿದ್ದ ಒಟ್ಟು 26 ರೈಲ್ವೇ ಸ್ಟೇಶನ್‌ಗಳಲ್ಲಿ ಆರು. ದಾವಣಗೆರೆಯಲ್ಲಿ ಈ ಕಾಲದಲ್ಲಿ ರೊಚ್ಚಿಗೆದ್ದ ಭಾರೀ ಜನಜಂಗುಳಿಯ ಮೇಲೆ ಗೋಳೀಬಾರ್ ಆಗಿ (17–8-1942 —ಮಹಾದೇವ ದೇಸಾಯಿ ಅವರ ನಿಧನವಾರ್ತೆ ಬಂದಾಗ ಈ ಘಟನೆ ಆಯಿತು) ಐವರು ಹುತಾತ್ಮರಾದರಲ್ಲದೆ ಅನೇಕರು ಗಾಯಗೊಂಡರು. ಮಲ್ಲಾಡಿಹಳ್ಳಿಯ ಸ್ವಾಮಿಜಿ, ಕೃಷ್ಣರೆಡ್ಡಿ ಪಂಡಿತ, ಇಡಗಿ ವೇದಮೂರ್ತಿ, ಶಿವಾನಂದಯ್ಯ, ಕೊಟ್ಟಿಗೆ ಶಿದ್ಲಿಂಗಪ್ಪ, ಪಿ. ಚನ್ನಾರೆಡ್ಡಿ, ಕೆ. ಸಂಜೀವರೆಡ್ಡಿ, ರಾಮಗಿರಿ ಹನುಮಂತಪ್ಪ, ಚಿತ್ರಹಳ್ಳಿಯ ಎಂ. ಲಿಂಗಪ್ಪ, ಕೊಟ್ರೆ ನಂಜಪ್ಪ, ಶಾಮನೂರ ಕಲ್ಲಪ್ಪ, ಬಿ. ಎನ್. ನರಸಿಂಹರೆಡ್ಡಿ (ಬಾಗೂರು), ಸಿ. ವಿ. ಕೃಷ್ಣಮೂರ್ತಿ

ಹೀಗೆ ಅನೇಕರು ಎಲ್ಲೆಡೆ ವಿಧ್ವಂಸಕ ಕೃತ್ಯಗಳನ್ನು ಸಂಘಟಿಸಲು ಮುಡಿದರು. ಕೆ. ಎಚ್, ರಂಗನಾಥ್, ಎಚ್. ಸಿ. ನಾರಾಯಣಯ್ಯಂಗಾರ್, ಜಯರಾಮ ರೆಡ್ಡಿ, ಜಿ. ಆಂಜನಪ್ಪ, ಕೃಷ್ಣಶೆಟ್ಟಿ, ಮುಂತಾದ 150 ಕ್ಕೂ ಮೇಲ್ಪಟ್ಟವಿದ್ಯಾರ್ಥಿಗಳು ಚಳವಳಿಯಲ್ಲಿ ಪಾಲುಗೊಂಡು ಚಿತ್ರದುರ್ಗದಿಂದ ಜೈಲುಕಂಡರು. ಆಗ ನಡೆದ ಇತರ ಪ್ರಮುಖ ವಿಧ್ವಂಸಕ ಕೃತ್ಯಗಳೆಂದರೆ, 1) ಚಿತ್ರದುರ್ಗ ವೆಂಕಟೇಶ್ವರ ಬಡಾವಣೆಯ ಶಾಲೆ ಸುಟ್ಟದ್ದು 2) ಬಾಗೂರು ಸೇಂದಿ ಅಂಗಡಿ ಸುಟ್ಟದ್ದು 3) ಚಿತ್ರದುರ್ಗ ವಿದ್ಯಾ ಇಲಾಖೆಯ ಆಫೀಸಿನ ಪೀಠೋಪಕರಣ, ಕಾಗದಪತ್ರ ಸುಟ್ಟದ್ದು, 4) ತರುವನೂರು ಮಿಡ್ಲ್ ಸ್ಕೂಲಿನ ದಾಖಲೆಗಳನ್ನು ಸುಟ್ಟದ್ದು 5) ಹೇಮಾವತಿ ಸೇಂದಿ ಅಂಗಡಿ ಸುಟ್ಟದ್ದು. ರೈಲು ಕಂಬಿ ಕೀಳುವುದು, ತಂತಿಕತ್ತರಿಸುವುದು, ಸರಕಾರಿ ಕಚೇರಿ ಪಿಕೆಟಿಂಗ್ ಇವು ಎಲ್ಲೆಡೆ ನಡೆದುವು. ಕೆಲವು ಕಡೆ ಪಟೇಲರು ನೌಕರಿಗೂ ರಾಜೀನಾಮೆ ಕೊಟ್ಟರು. ಉದಾ: ಚಳ್ಳಕೆರೆ ತಾ|| ಕುರಡಿಹಳ್ಳಿಯ ಹನುಮಂತರೆಡ್ಡಿ ಹಾಗೂ ಲಕ್ಷ್ಮೀಪುರದ ಸುಬ್ರಹ್ಮಣ್ಯಯ್ಯ. 'ಪ್ರಳಯ'ಎಂಬ ಭೂಗತ ಬುಲೆಟಿನ್ ಅನ್ನು ಎಸ್. ವಾಸುದೇವರಾವ್, ಕೆ. ಎಚ್. ಸತ್ಯನಾರಾಯಣರಾವ್, ಟಿ. ಚನ್ನರೆಡ್ಡಿ, ಜಿ. ನಾರಾಯಣರಾವ್ ಮುಂತಾದವರು ಚಿತ್ರದುರ್ಗದಿಂದ ಪ್ರಕಟಿಸುತ್ತಿದ್ದರು. ಎಲ್ಲೆಡೆ ಚಳವಳಿ ತಣ್ಣಗಾಗಿದ್ದರೂ ಮಾರ್ಚ್ (1943)ಕ್ಕೆ ಬಾಗೂರಿನ ನರಸಿಂಹ ರೆಡ್ಡಿ ಹಾಗೂ ಡಿ. ಸಿ. ಕೃಷ್ಣಪ್ಪ ಮುಂತಾದ ಐವರು ಹೊಸದುರ್ಗ ರೋಡ್ ಬಳಿ ರನ್ನರ್ ಒಯ್ಯುತ್ತಿದ್ದ ಅಂಚೆ ಚೀಲವನ್ನು ಅಪಹರಿಸಿದರು. ಮುಂದೆ ದೀರ್ಘ ಕಾಲದ ನಂತರ ಇವರುಗಳ ಬಂಧನವಾಯಿತು. ಇಡೀ ಜಿಲ್ಲೆಯ ಕುತೂಹಲ ಕೆರಳಿಸುವಂತೆ ಈ ಪ್ರಕರಣದ ಖಟ್ಲೆ 1944ರಲ್ಲಿಲ್ಲ ನಡೆಯಿತು. ಇಡೀ ಜಿಲ್ಲೆಯಿಂದ ಬಂಧಿತರಾದವರ ಸಂಖ್ಯೆ ನೂರಾರು. 1945ರಲ್ಲಿ ಜಿಲ್ಲೆಯ ನಾಯಕ ಎಸ್. ನಿಜಲಿಂಗಪ್ಪ ಮೈಸೂರು ಕಾಂಗ್ರೆಸ್‌ನ ಅಧ್ಯಕ್ಷರಾದರು.

ಚಳವಳಿಯ ಕೊನೆಯ ಹಂತ 1947ರ "ಮೈಸೂರು ಚಲೋ". ಆಗ ಹಿಂದೂಪುರ, ರಾಣಿಬೆನ್ನೂರು ಶಿಬಿರಗಳಿಂದ ಜಿಲ್ಲೆಯ ಗಡಿಗಳಲ್ಲಿ ಸತ್ಯಾಗ್ರಹ ವಿಧ್ವಂಸಕ ಕೃತ್ಯ ನಡೆದವು. ಜಿಲ್ಲೆಯ ಹೊರಗಡೆಯ ಸ್ವತಂತ್ರ ಭಾರತದ ಪ್ರದೇಶಗಳಿಂದ ನೂರಾರು ತರುಣರು ಸತ್ಯಾಗ್ರಹ ಪಿಕೆಟಿಂಗ್‌ಗಳಲ್ಲಿ ಪಾಲುಗೊಳ್ಳಲು ದಾವಣಗೆರೆ, ಹರಿಹರಗಳಿಗೆ ತಂಡತಂಡವಾಗಿ ಬಂದರು. ಎಲ್ಲ ತಾಲ್ಲೂಕು ಕಚೇರಿಗಳು ಹಾಗೂ ಜಿಲ್ಲಾ ಕಚೇರಿಯ ಎದುರು ಸಾವಿರಾರು ಜನ ಪಿಕೆಟಿಂಗ್ ನಡೆಸಿ ಸರಕಾರೀಯಂತ್ರ ನಡೆಯದಂತೆ ಆಯಿತು. ಸೇಂದಿ, ಸಾರಾಯಿ ಮಾರಾಟ, ಸಾಗಾಟಗಳ ವ್ಯವಸ್ಥೆಯ ವಿರುದ್ಧ ಉಗ್ರ ಪ್ರತಿಭಟನೆ ಆಯಿತು. ಈ ಕಾಲದಲ್ಲಿ ಹೊಸದುರ್ಗದಲ್ಲಿ ಸೋಮವಾರ ಸಂತೆಗೆ ಬಂದ ಸಾವಿರಾರು ಹಳ್ಳಿಗರು ಪಿಕೆಟಿಂಗ್‌ನಲ್ಲಿ ಪಾಲುಗೊಂಡು, ಗೋಳಿಬಾರ್ ಆಗಲು (29–9–47) ಏಳು ಜನ ಅಸುನೀಗಿದ ದುರಂತ ಪ್ರಕರಣ ಉಲ್ಲೇಖನೀಯ. ಅದೇ ರೀತಿ ಚಳ್ಳಕೆರೆಯಲ್ಲಿ ಆದ ಗೋಳಿಬಾರಿನಿಂದಾಗಿ ಇಬ್ಬರು ಅಸುನೀಗಿದರು. ಚಿತ್ರದುರ್ಗ ಕಚೇರಿಯ ಮೇಲೆ ಪೈಲ್ವಾನ್ ನಂಜಪ್ಪ ಎಂಬವರು ತ್ರಿವರ್ಣ ರಾಷ್ಟ್ರಧ್ವಜವನ್ನು ಹಾರಿಸಿದ ಅಪೂರ್ವ ಪ್ರಸಂಗಕೂಡ ಈ ಕಾಲದಲ್ಲಿ ಆಯಿತು. ಬಂಧನಕ್ಕೆ ಸಾವಿರಾರು ತರುಣರು ಒಳಗಾದರು.

ಭಾರತದಲ್ಲಿ ನಡೆದ ಸ್ವಾತಂತ್ರ್ಯ ಚಳವಳಿಗೂ ಮೈಸೂರಲ್ಲಿ ನಡೆದ ಜವಾಬ್ದಾರಿ ಸರಕಾರ ಚಳವಳಿಗೂ ಚಿತ್ರದುರ್ಗ ಜಿಲ್ಲೆಯ ಸ್ತ್ರೀಪುರುಷರು ತಮ್ಮದೇ ಆದ ತ್ಯಾಗ, ಬಲಿದಾನ, ಸಾಹಸಗಳ ಕೊಡುಗೆ ನೀಡಿದುದರ ಒಂದು ಸೂಕ್ಷ್ಮ ಚಿತ್ರ ಇದು. (ಈ ಸಂಕ್ಷಿಪ್ತ ಪಕ್ಷಿನೋಟದಲ್ಲಿ ಎಲ್ಲ ವ್ಯಕ್ತಿಗಳ, ಎಲ್ಲ ಘಟನೆಗಳ ವಿಚಾರ ಹೇಳುವುದು ಅಸಾಧ್ಯವೆಂದು ಬೇರೆಯಾಗಿ ಹೇಳಬೇಕಾಗಿಲ್ಲ).

ಆಧಾರ ಗ್ರಂಥಗಳು

1. ಸೂರ್ಯನಾಥ ಕಾಮತ್, "ಕರ್ನಾಟಕದ ಸಂಕ್ಷಿಪ್ತ ಇತಿಹಾಸ" 1973

2. ಸೂರ್ಯನಾಥ ಕಾಮತ್ (ಸಂ), "ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು" II 1976
3. ಸಿದ್ದವನಹಳ್ಳಿ ಕೃಷ್ಣಶರ್ಮ (ಸಂ), "ಗಾಂಧೀ ಮತ್ತು ಕರ್ನಾಟಕ" 1970
4. ಎಚ್. ಕೆ. ವೀರಣ್ಣಗೌಡ, "ಬದುಕು ಮೆಲುಕು" 1974
5. ಬಿ. ಪುಟ್ಟಸ್ವಾಮಯ್ಯ. "ಭಾರತವ ಬೆಳಗುತಿದೆ ಕನ್ನಡದ ಜ್ಯೋತಿ" 1968
6. ತಿ. ತಾ. ಶರ್ಮ, (ಸಂ), ಸಿದ್ಧಹಸ್ತ, 1973
7. ಗ. ಸ. ಹಾಲಪ್ಪ (ಸಂ), ರಾಷ್ಟ್ರಧರ್ಮದ್ರಷ್ಟಾರ ಹರ್ಡೇಕರ್ ಮಂಜಪ್ಪ, 1966
8. Mysore State Gazetteer, Chitradurga District,

ಆತ್ಮ ಅನಂತವಾದುದು. ದೇಹನಾಶದಿಂದ ಅದು ಯಾವ ವಿಕಾರಕ್ಕೂ ಒಳಗಾಗುವುದಿಲ್ಲವೆಂದು ವೇದ ಬೋಧಿಸುವುದು. ಆತ್ಮ ಒಂದು ವೃತ್ತದಂತೆ, ಅದಕ್ಕೆ ಸುತ್ತಳತೆ ಎಲ್ಲೂ ಇಲ್ಲ. ಆದರೆ ಅದರ ಕೇಂದ್ರಬಿಂದು ದೇಹದಲ್ಲಿದೆ. ಮೃತ್ಯುವೆಂದರೆ ಕೇವಲ ಒಂದು ಕೇಂದ್ರದ ಬದಲಾವಣೆ ಮಾತ್ರ. ದೇವರು ಎಲ್ಲೂ ಸುತ್ತಳತೆ ಇಲ್ಲದ, ಎಲ್ಲೆಲ್ಲೂ ಕೇಂದ್ರಗಳಿರುವ ಒಂದು ವೃತ್ತದಂತೆ, ನಾವು ದೇಹವೆಂಬ ಸಂಕುಚಿತ ಕೇಂದ್ರದಿಂದ ಪಾರಾದರೆ, ನಮ್ಮ ನಿಜಸ್ವರೂಪವಾದ ಬ್ರಹ್ಮನನ್ನು ಕಾಣುತ್ತೇವೆ.

ಒಂಬತ್ತು

ಅಂಕಿಗಳು ಮಾನವಜೀವನದ ಮೇಲೆ ಪ್ರಭಾವ ಬೀರುತ್ತವೆ ಎಂಬುದು ಪುರಾತನ ಕಾಲದಿಂದಲೂ ಪ್ರಚಲಿತವಾಗಿರುವ ವಿಷಯ. ಅದು ಒಂದು ಶಾಸ್ತ್ರವಾಗಿಯೇ ಬೆಳೆದುಬಿಟ್ಟಿದೆ. ಅದರ ವಿಷಯ ಹಾಗಿರಲಿ, ಕೇವಲ ಒಂದು ಅಂಕಿಯನ್ನು ಮಾತ್ರ ತೆಗೆದುಕೊಂಡು ಮಾನವಜೀವನದ ಮೇಲೆ ಅದರ ಪ್ರಭಾವ ಎಷ್ಟರಮಟ್ಟಿಗೆ ಇದೆ ಎಂಬುದನ್ನು ನೋಡೋಣ.

ಅಂಕಿ ಒಂಬತ್ತು. ಇದಕ್ಕೂ ಮಾನವನಿಗೂ ಬಹಳ ಹತ್ತಿರದ ಸಂಬಂಧ !

ಮಾನವ ಹುಟ್ಟುವುದೇ ಒಂಬತ್ತು ತಿಂಗಳ ಗರ್ಭವಾಸ ಆದ ಮೇಲೆ. ಮಾನವರೂಪಿಯಾಗಿ ಶ್ರೀರಾಮ ಚಂದ್ರ ಭೂಮಿಯಲ್ಲಿ ಜನಿಸಿದ್ದು ನವಮಿಯ ದಿನ.

ಮಾನವನ ಆಗುಹೋಗುಗಳನ್ನು ನಿರ್ದೇಶಿಸುವ ಗ್ರಹಗಳು ಒಂಬತ್ತು. ಆದ್ದರಿಂದಲೇ ಮಾನವರು ಆಗಾಗ ನವಗ್ರಹ ಹೋಮ, ಶಾಂತಿ ಮಾಡುವುದು.

ಅಂಕಿಗಳಲ್ಲಿ ೯ ಕೊನೆಯದು. ಜೀವಿಗಳಲ್ಲಿ ಮಾನವಜನ್ಮ ದೊಡ್ಡದು, ಅದೇ ೯ ರಂತೆ ಕೊನೆಯದು. ಅದನ್ನು ಸರಿಯಾಗಿ ಅನುಭವಿಸಿ ಮುಕ್ತಿಯನ್ನು ಪಡೆಯಬೇಕು ಎಂಬುದನ್ನು ತೋರಿಸುವುದಕ್ಕಾಗಿಯೇ ಈ ಕೊನೆಯ ಅಂಕಿ ಮಾನವ ಜೀವನದ ಮೇಲೆ ಪ್ರಭಾವ ಬೀರುತ್ತಿದೆ.

ಕಲಿಯುಗದಲ್ಲಿ ಮುಕ್ತಿಸಾಧನೆಗೆ ಭಕ್ತಿ ಮಾರ್ಗವೇ ಶ್ರೇಷ್ಠ ಎಂಬುದನ್ನು ಕೇಳಿದ್ದೇವೆ. ಭಕ್ತಿ ಮಾರ್ಗ ದಲ್ಲಿಯೂ ನಾವು ಕಾಣುವುದು ನವವಿಧಭಕ್ತಿ,

ಇದನ್ನರಿತೋ ಏನೊ ಕರ್ನಾಟಕ ಸಂಗೀತ ಸಾರ್ವಭೌಮ ಮುತ್ತುಸ್ವಾಮಿದೀಕ್ಷಿತರು 'ಶ್ರೀ ಕಮಲಾಂಬಾ ನವಾವರಣ ಕೀರ್ತನೆ'ಯನ್ನು ರಚಿಸಿದ್ದಾರೆ. ಪ್ರಧಾನಶಕ್ತಿಯ ಸುತ್ತ ಒಂಬತ್ತು ಚಕ್ರಗಳು; ಒಂದೊಂದು ಚಕ್ರಕ್ಕೂ ಒಂದೊಂದು ಹೆಸರು. ಒಂದೊಂದು ಚಕ್ರದ ಅಧಿದೇವತೆಯನ್ನೂ ಆರಾಧಿಸಿ, ಅಂಥ ಒಂಬತ್ತು ಚಕ್ರಗಳನ್ನು ದಾಟಿ ಮುಂದೆ ಹೋದರೆ ಪ್ರಧಾನ ಶಕ್ತಿ ಮಹಾಮಾತೆಯ ದರ್ಶನ.

ವರುಷಕ್ಕೊಮ್ಮೆ ಈ ಮುಕ್ತಿಸಾಧನೆಯ ಸಂಕೇತವಾಗಿ ನವರಾತ್ರಿ ಹಬ್ಬವನ್ನು ಆಚರಿಸುತ್ತೇವೆ. ಮಹಾ ನವಮಿಯನ್ನು ದಾಟಿದರೆ ಲಭಿಸುವುದು ವಿಜಯದಶಮಿ, ಪಂಚೇಂದ್ರಿಯಗಳ ಪ್ರತೀಕದಂತಿದ್ದ ಪಂಚ ಪಾಂಡವರು ಭಗವದನುಗ್ರಹದಿಂದ ವಿಜಯವನ್ನು ಗಳಿಸಿದ್ದು ಮಹಾನವಮಿಯ ನಂತರವೇ.

ಉಪಾಸನಾತತ್ತ್ವದಲ್ಲಿಯೂ ಆಚಮನ, ಪ್ರಾಣಾಯಾಮ, ಮಾರ್ಜನ, ಅಘಮರ್ಷಣ, ಅರ್ಘ್ಯ ಪ್ರದಾನ, ಗಾಯತ್ರೀಜಪ, ಸೂರ್ಯೋಪಸ್ಥಾನ, ದಿಗುಪಸ್ಥಾನ ಮತ್ತು ಒಂಬತ್ತನೆಯದಾಗಿ ಅಭಿವಾದನ ಮುಗಿದ ನಂತರವೇ ಬ್ರಹ್ಮಾರ್ಪಣ.

ಜಪಮಾಡುವಾಗಲೂ ಅರ್ಚನೆ ಮಾಡುವಾಗಲೂ 108, 1008 ಎಂಬುವನ್ನು ಬಳಸುತ್ತೇವೆ. ಅದೂ ಒಂಬತ್ತೇ. 8 ಮತ್ತು 1ನ್ನು ಕೂಡಿದರೆ ಬರುವುದು 9, 1+0+8= 9, 1+0+0+8= 9).

ಮಾನವನ ಮೇಲೆ ಪ್ರಭಾವ ಬೀರುವ ನಕ್ಷತ್ರಗಳೂ ಅಷ್ಟೆ—27. ಅಂದರೆ 2+7= 9.

ಜಾತಕ ಬರೆಯುವಾಗ ರಚಿಸುವ ಕುಂಡಲಿಯಲ್ಲಿ 12 ಮನೆಗಳಿವೆ. ಅವುಗಳಲ್ಲಿ 9 ನೆಯದು ದೇವರು, ಗುರು, ತಂದೆ, ಪ್ರಯಾಣ, ದೈವಶ್ರದ್ಧೆ-ಇವುಗಳನ್ನು ಸೂಚಿಸುತ್ತದೆ. ಮಾನವಜನ್ಮ ಸಾರ್ಥಕ್ಯವನ್ನು ಪಡೆಯ ಬೇಕಾದರೆ ಹೇಗೆ ಬಾಳಬೇಕೆಂಬುವನ್ನು ಅರಿತಿರುವವರಿಗೆ ಈ 9 ನೆಯ ಮನೆ ಎಷ್ಟು ಮುಖ್ಯವಾದುದು ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ.

ತಾರಾಬಲವನ್ನು ನೋಡುವಾಗಲೂ ಜನ್ಮನಕ್ಷತ್ರದಿಂದ ನಿತ್ಯ ನಕ್ಷತ್ರದವರೆಗೆ ಎಣಿಸಿ ಬಂದ ಸಂಖ್ಯೆ ಯನ್ನು 9 ರಿಂದ ಭಾಗಿಸಿ ನಿಂತ ಶೇಷದ ಮೇಲೆ ಶುಭ ಅಶುಭಗಳನ್ನು ನಿರ್ಧರಿಸುತ್ತಾರೆ. ವಿವಾಹೋಪಯುಕ್ತ ದ್ವಾದಶಕೂಟಗಳನ್ನು ನೋಡುವಾಗಲೂ ಅಷ್ಟೆ. ದಿನಕೂಟವನ್ನು ನೋಡುವಾಗ ಕನ್ಯೆಯ ನಕ್ಷತ್ರದಿಂದ ವರನ ನಕ್ಷತ್ರದವರೆಗೆ ಒಂಬತ್ತೊಂಬತ್ತಾಗಿ ಎಣಿಸಬೇಕು. ಗಣಕೂಟ ನೋಡುವಾಗಲೂ ನಕ್ಷತ್ರಗಳನ್ನು ತಲಾ ಒಂಬತ್ತೊಂಬತ್ತರಂತೆ—ದೇವಗಣ, ಮನುಷ್ಯಗಣ, ರಾಕ್ಷಸಗಣ ಎಂದು ಮೂರು ಗುಂಪುಗಳಾಗಿ ವಿಂಗಡಿಸಿದ್ದಾರೆ.

60 ಸಂವತ್ಸರಗಳಲ್ಲಿ ಬರುವ ಒಟ್ಟು ಮಾಸಗಳನ್ನು ಸೇರಿಸಿದರೆ 720 ಆಗುತ್ತದೆ. ಅದೂ ಕೊನೆಯಲ್ಲಿ ಒಂಬತ್ತು (7+2+0= 9).

ಇನ್ನು ನಮ್ಮ ಉಪನಿಷತ್ತು, ಪುರಾಣಗಳು, ಉಪನಿಷತ್ತುಗಳಲ್ಲಿ 12 ಮುಖ್ಯವಾದರೂ ಇರುವುದು ಒಟ್ಟು 108 ಉಪನಿಷತ್ತುಗಳು (1+0+8= 9).

ಮಹಾಪುರಾಣಗಳೂ ಸಹ ಅಷ್ಟಾದಶ ಪುರಾಣಗಳೇ (1+8= 9). ಒಂದೊಂದು ಮಹಾಪುರಾಣಕ್ಕೂ ಒಂದೊಂದು ಉಪಪುರಾಣ ಇದೆ. ಆದ್ದರಿಂದ ಒಟ್ಟು 36 ಪುರಾಣಗಳಾಗುತ್ತವೆ. ಹಾಗೂ 9, (3+6=9).

'ಭಗವದ್ಗೀತೆ' ಬರುವ 'ಮಹಾ ಭಾರತದಲ್ಲಿ' ಒಟ್ಟು 18 ಪರ್ವಗಳಿವೆ. 'ಭಗವದ್ಗೀತೆ'ಯಲ್ಲಿ ಇರುವ ಅಧ್ಯಾಯಗಳೂ 18 (1+8= 9).

ಹೀಗೆ ಪಟ್ಟಿ ಮಾಡುತ್ತಾ ಹೋದಂತೆಲ್ಲ 9 ರ ಜಾಲ ಬೆಳೆಯುತ್ತಾ ಹೋಗುತ್ತದೆ.

ಮನುಷ್ಯನ ದೈಹಿಕ, ಮಾನಸಿಕ, ಸಾಮಾಜಿಕ ಜೀವನದಲ್ಲಿಯೂ 9 ರ ಪ್ರಭಾವ ಕಾಣುತ್ತದೆ. ಜೀವಿಯ ಮುಕ್ತಿಸಾಧನೆಯಲ್ಲಿ ಸಹಾಯಕವಾಗುವ ಈ ಶರೀರಕ್ಕೆ ನವದ್ವಾರಗಳುಂಟು. ದೇಹಕ್ಕೆ ಹಿತಕರವಲ್ಲದ್ದನ್ನು ಹೊರಗೆ ತಳ್ಳಿಬಿಡಬೇಕೆಂಬ ಪಾಠವನ್ನು ಈ ನವರಂಧ್ರಗಳು ಕಲಿಸುತ್ತವೆ. ಒಳ್ಳೆಯದನ್ನು ಸ್ವೀಕರಿಸಿ. ಕೆಟ್ಟದ್ದನ್ನು ವಿಸರ್ಜಿಸಿ, ಈ ಶರೀರವನ್ನುಶುದ್ಧವಾಗಿ, ಆರೋಗ್ಯಕರವಾಗಿ ಇಡುವ ಕೆಲಸ ಇವುಗಳದು. ಈ ಪಾಠ ಕಲಿತರೆ ಸಾಕು, ದೇಹಧಾರಣ ಮಾಡಿದ್ದು ಸಾರ್ಥಕವಾಗುತ್ತದೆ.

ನಮ್ಮ ಮನಸ್ಸಿಗೆ ಹರುಷವನ್ನುಂಟುಮಾಡುವ ನವರಸಗಳು, ಬಳಸುವ ನವಧಾನ್ಯ, ನವನಿಧಿ, ನವರತ್ನ —ಎಲ್ಲೆಲ್ಲೂ ಒಂಬತ್ತೆ.

ಸಾಮಾನ್ಯ ಗ್ರಾಮೀಣರೂ ಈ ಒಂಬತ್ತರ ಬಗ್ಗೆ ಎಷ್ಟು ತಿಳಿದುಕೊಂಡಿದ್ದಾರೆ ಎಂಬುದನ್ನು ನೋಡಿದಾಗ ಆಶ್ಚರ್ಯವಾಗುತ್ತದೆ.

ಹಳ್ಳಿಯ ಹಿರಿಯರೊಬ್ಬರು 'ಮನುಷ್ಯ ಒಂಬತ್ತರ ಮಗ್ಗಿ ಇದ್ದ ಹಾಗಿರಬೇಕಪ್ಪ, ಆರಕ್ಕೆ ಹಿಗ್ಗಬಾರದು ಮೂರಕ್ಕೆ ಕುಗ್ಗಬಾರದು' ಎನ್ನುತ್ತಾರೆ. ಅದರಲ್ಲೂ 9 (6+3 = 9).

ಈ ಪಾಠ ಹೇಳುವ ಒಂಬತ್ತರ ಮಗ್ಗಿ ಹೇಗಿದೆ ನೋಡಿ : ಇದನ್ನು ರಾಗವಾಗಿ, ತಾಳ ಬದ್ಧವಾಗಿ ಹಾಡು ತ್ತಾರೆ :

ಒಂಬತ್ತೊಂದಲ ಒಂಬತ್ತು
ಒಂಬತ್ತೇ ಒಂಬತ್ತು.
ಒಂಬತ್ತೆರಡಲ ಹದಿನೆಂಟು
ಒಂದು ಎಂಟು ಒಂಬತ್ತು.
ಒಂಬತ್ತ ಮೂರಲ ಇಪ್ಪತ್ತೇಳು
ಎರಡು ಏಳು ಒಂಬತ್ತು.
ಒಂಬತ್ತು ನಾಲ್ಕಲ ಮೂವತ್ತಾರು
ಮೂರು ಆರು ಒಂಬತ್ತು.
ಒಂಬತ್ತೈದಲ ನಲವತ್ತೈದು
ನಾಲ್ಕು ಐದು ಒಂಬತ್ತು.
ಒಂಬತ್ತಾರಲ ಐವತ್ತ ನಾಲ್ಕು
ಐದು ನಾಲ್ಕು ಒಂಬತ್ತು.
ಒಂಬತ್ತೇಳಲ ಅರುವತ್ತಮೂರು
ಆರು ಮೂರು ಒಂಬತ್ತು.
ಒಂಬತ್ತೆಂಟಲ ಎಪ್ಪತ್ತೆರಡು
ಏಳು ಎರಡು ಒಂಬತ್ತು.
ಒಂಬೊಂಬತ್ತಲ ಎಂಬತ್ತೊಂದು
ಎಂಟು ಒಂದು ಒಂಬತ್ತು.
ಒಂಬತ್ ಹತ್ತಲ ತೊಂಬತ್ತು
ಸೊನ್ನೆ ತೆಗೆದರೆ ಒಂಬತ್ತು.

ಜ್ಞಾನಿ ಎಲ್ಲಾ ಆಕಾರಗಳಿಂದ, ಎಲ್ಲಾ ನಿಯಮಗಳಿಂದ, ಶಾಸ್ತ್ರಗಳಿಂದ ಪಾರಾಗಬೇಕು. ಅವನು ತಾನೇ ಸ್ವತಃ ಶಾಸ್ತ್ರವಾಗಬೇಕು.

ಭೂಖಂಡ ಚಲನೆ*

ವಿಶಾಲ ಭೂಭಾಗಗಳನ್ನು ಖಂಡಗಳು ಎಂದು ಕರೆಯುತ್ತೇವೆ. ಇವುಗಳ ಭೇದಾತ್ಮಕ ಹಾಗೂ ಅಗಾಧ ಪ್ರಮಾಣದ ಚಲನೆಗೆ ಭೂಖಂಡ ಚಲನೆ ಎಂದು ಹೆಸರು. ಭೂಮಿಯ ಹೊರಪದರದ ಚಲನೆಯಲ್ಲಿ ಸಾಗರಗಳೂ ಭಾಗವಹಿಸುವುದರಿಂದ ಈ ಪದವು ಅಷ್ಟು ಸೂಕ್ತವಾದುದಲ್ಲ (ಹೋಮ್ಸ್, 1965).

ಖಂಡಗಳು ಮತ್ತು ಸಾಗರಗಳ ವಿಕಾಸವನ್ನು ವಿವರಿಸಲು ಭೂಖಂಡಚಲನಾವಾದವನ್ನು ಮೊರೆ ಹೋಗಲಾಯಿತು. ಈ ವಿವರಣೆಯನ್ನು ಒದಗಿಸಲು ಪ್ರಯತ್ನಿಸುವ ಯಾವ ವಾದವೇ ಆಗಲಿ, ಎಲ್ಲಾ ಲಕ್ಷಣಗಳು ರೂಪುಗೊಂಡ ವಿಧಾನಗಳನ್ನು ಸಮಾಧಾನಕರವಾಗಿ ತಿಳಿಸಬೇಕು. ಇವುಗಳಲ್ಲಿ ಕೆಲವು ಸ್ವತಸ್ಸಿದ್ಧ (ಸ್ಫುಟವಾಗಿ ಗೋಚರಿಸುವ) ವಾದವು; ಉಳಿದವು ಅಸಂಬದ್ಧವಾದವು. ಅಟ್ಲಾಂಟಿಕ್ ಸಾಗರದ ತೀರಗಳ ಸಾಮ್ಯವು ಮೊದಲನೆಯ ವರ್ಗದ ಲಕ್ಷಣಗಳ ಉದಾಹರಣೆ. ಪ್ರಾಚೀನ ಜೀವಾವಶೇಷಗಳು, ವಾಯುಗುಣ ಮತ್ತು ಭೂಕಾಂತಗುಣಗಳು ಎರಡನೆಯ ವರ್ಗಕ್ಕೆ ಸೇರಿದ ಲಕ್ಷಣಗಳು. ವಾಸ್ತವವಾಗಿ ಎರಡನೆಯ ವರ್ಗದ ಲಕ್ಷಣಗಳಿಗೆ ವಿವರಣೆಯನ್ನು ಒದಗಿಸುವುದಕ್ಕಾಗಿಯೇ ಭೂಖಂಡಚಲನಾವಾದವನ್ನು ರೂಪಿಸಲಾಯಿತು. ಇದರ ಬಗ್ಗೆ ವಿಪುಲವಾದ ವಾದವಿವಾದ, ಪುರಾವೆಸಂಗ್ರಹ ಮತ್ತು ಗೋಚರ ವಿಷಯಗಳನ್ನು ಯಾಂತ್ರಿಕ ಕಾರ್ಯ ಫಲಗಳನ್ನಾಗಿ ಊಹಿಸಿ ವಿವರಿಸುವ ಕೆಲಸವು ಬೇಕಾದಷ್ಟು ನಡೆದಿದೆ. ಇದರಿಂದ ಭೂಖಂಡಚಲನಾವಾದವು ತತ್ತ್ವದ ಮಟ್ಟಕ್ಕೆ ಏರಿದೆ ಎಂದು ಕೆಲವರು ನಂಬಿದ್ದಾರೆ.

ಕ್ರಮಾನುಸಾರ ವೃತ್ತಾಂತ : 1620 ರಲ್ಲಿಯೇ ಭೂ ಇತಿಹಾಸ ಕಾಲದಲ್ಲಿ ಪಶ್ಚಿಮಾರ್ಧಗೋಳವು ಯೂರೋಪು ಮತ್ತು ಆಫ್ರಿಕಾ ಖಂಡಗಳೊಂದಿಗೆ ಸೇರಿದ್ದಿತು–ಎಂದು ಸರ್ ಫ್ರಾನ್ಸಿಸ್ ಬೇಕನ್ ಚರ್ಚಿಸಿದ್ದಾರೆ. 1668ರಲ್ಲಿ ಪಿ.ಪ್ಯಾಸೆಟ್,ಅಮೆರಿಕಾ ಖಂಡಗಳು ಬೈಬಲ್ಲಿನ ಜಲಪ್ರಳಯಕ್ಕಿಂತ ಮುಂಚೆ ಉಳಿದ ಭೂಭಾಗಗಳಿಂದ ಬೇರೆಯಾಗಿರಲಿಲ್ಲ ಎಂಬ ಕಾಲ್ಪನಿಕ ಪ್ರೌಢ ಪ್ರಬಂಧವನ್ನು ಬರೆದಿದ್ದಾರೆ (''The Corruption of the Great and Little world''—translated from French to English) ಇನ್ನೂರು ವರ್ಷಗಳ ನಂತರ ಆಂಟೋನಿಯೊ ಸ್ನೈಡರ್‌ರವರು ಯೂರೋಪು ಮತ್ತು ಅಮೆರಿಕಾ ಖಂಡಗಳಲ್ಲಿರುವ ಕಾರ್ಬಾನಿಫೆರಸ್ ಯುಗದ (30ಕೋಟಿ ವರ್ಷಗಳ ಹಿಂದಿನ) ಸಸ್ಯಾವಶೇಷಗಳ ಸಾಮ್ಯದಿಂದ ಪ್ರಭಾವಿತರಾಗಿ, ಪ್ರಪಂಚದ ಭೂಭಾಗಗಳೆಲ್ಲ ಒಟ್ಟು ಒಂದೇ ಖಂಡವಾಗಿದ್ದುವು ಎಂಬ ಅಭಿಪ್ರಾಯವನ್ನು 'ಸೃಷ್ಟಿ ಮತ್ತು ಅದರ ಗುಟ್ಟುಗಳ ರಟ್ಟು' (The Creation and its mysteries revealed; 1858–translated from French to English) ಎಂಬ ಗ್ರಂಥದಲ್ಲಿ ಸೂಚಿಸಿದ್ದಾರೆ.

*Continental drift

ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಭೂವೈಜ್ಞಾನಿಕ ಅಂಶಗಳು ಪ್ರಾಮುಖ್ಯಯುಕ್ತ ಚರ್ಚೆಗೆ ಒಳಗಾದುವು. ಆಸ್ಟ್ರಿಯಾದೇಶದ ಭೂವಿಜ್ಞಾನಿ ಎಡ್ವರ್ಡ್‌ಸೂಯೆಸ್ ದಕ್ಷಿಣಾರ್ಧ ಗೋಳದ ಶಿಲಾಶ್ರೇಣಿಗಳ ನಿಕಟ ಸಾಮ್ಯವನ್ನು ಗುರುತಿಸಿದ್ದರು. ಈ ಭೂಭಾಗಗಳನ್ನೆಲ್ಲ ಒಟ್ಟಿಗೆ ಜೋಡಿಸಿ (ಅವುಗಳ ನಕ್ಷೆಗಳನ್ನು ರೊಟ್ಟಿನಲ್ಲಿ ಕತ್ತರಿಸಿ,ಜೋಡಿಸಿ) ಒಂದೇ ಖಂಡವನ್ನು ಮಾಡಿದರು. ಇದಕ್ಕೆ ಗೊಂಡವಾನ ಖಂಡ ಎಂದು ಹೆಸರಿಟ್ಟರು (ಗೋಂಡ್ ಎಂಬ ಹೆಸರಿನ ಜನಾಂಗದವರು ವಾಸವಾಗಿರುವ ಮಧ್ಯಪ್ರದೇಶದ ಭೂವಿಜ್ಞಾನ ಪ್ರಾಂತದಿಂದ ಈ ಹೆಸರು ರೂಪಿತವಾಗಿದೆ). 1908 ರಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಭೂ ವಿಜ್ಞಾನಿ ಎಫ್. ಬಿ. ಟೈಲರ್ ಮತ್ತು 1910 ರಲ್ಲಿ ಜರ್ಮನಿಯ ಆಲ್‌ಫ್ರೆಡ್ ಎಲ್ ವೆಗೆನರ್–ಇವರಿಬ್ಬರು ಸ್ವತಂತ್ರ ವಿಚಾರಧಾರೆಯಿಂದ ಭೂಮಿಯ ಹೊರಪದರದ ವಿಶಾಲಭಾಗಗಳ ಪಾರ್ಶ್ವಪಲ್ಲಟವು ಯಾಂತ್ರಿಕ ರೀತಿಯಲ್ಲಿ ಸಂಭವಿಸುವ ವಿಧಾನಗಳನ್ನು ಸೂಚಿಸಿ, ಅವು ಪರಸ್ಪರ ಹೇಗೆ ದೂರ ಸರಿಯಬಲ್ಲವೆಂಬುವನ್ನು ತೋರಿಸಿದ್ದಾರೆ. ವೆಗೆನರ್‌ರವರ ನಿರೂಪಣೆಯು ವಿಪುಲವಾದ ವಾದವಿವಾದಕ್ಕೆ ಎಡೆ ಮಾಡಿಕೊಟ್ಟದೆ ; ಅದು ಇಂದಿನವರೆಗೂ ಸಾಗಿದೆ.

ಹತ್ತುವರ್ಷಗಳ ಹಿಂದಿನವರೆಗೂ ಖಂಡಗಳು ಪರಸ್ಪರ ದೂರಸರಿದಿವೆ ಎಂಬ ಅಭಿಪ್ರಾಯದ ವಿಚಾರವಾಗಿ ಭೂ ವಿಜ್ಞಾನಿಗಳು—ಅವರಲ್ಲೂ ಅಮೆರಿಕಾದ ವಿಜ್ಞಾನಿಗಳು ಸಂದೇಹ ದೃಷ್ಟಿಯನ್ನು ಹೊಂದಿದ್ದರು. ಹೊಸ ಸಂಶೋಧನೆಗಳು ಈ ವಾದಕ್ಕೆ ಪುಷ್ಟೀಕರಿಸುವ ಅಂಶಗಳನ್ನು ಸಾಕಷ್ಟು ಒದಗಿಸಿ, ಸಂದೇಹವಾದಿಗಳನ್ನು ಪೇಚಿಗೆ ಈಡುಮಾಡಿವೆ.


ಭೂಖಂಡ ಚಲನಾವಾದವನ್ನು ರೂಪಿಸಲು ಪ್ರೇರಕವಾದ ಪುರಾವೆಗಳು : ಇವನ್ನು ಐದು ವಿಧಗಳಾಗಿ ವರ್ಗೀಕರಿಸಬಹುದು : 1) ಅಟ್ಲಾಂಟಿಕ್ ಸಾಗರದ ತೀರಗಳ ಸಮಾಂತರ ಹಾಗೂ ಎಲ್ಲಾ ಖಂಡಗಳನ್ನು ಜೋಡಿಸಿ ಒಂದೇ ಖಂಡವನ್ನಾಗಿ ಮಾಡುವ ಸಾಧ್ಯತೆ 2) ಭೂ ವೈಜ್ಞಾನಿಕ ಪುರಾವೆಗಳು 3) ಜೀವಾವಶೇಷಗಳ ಪುರಾವೆಗಳು 4) ಪ್ರಾಚೀನ ವಾಯುಗುಣಗಳ ಪುರಾವೆಗಳು 5) ಭೂಗಣಿತ ಹಾಗೂ ಪ್ರಾಚೀನ ಭೂಕಾಂತಗುಣಗಳ ಪುರಾವೆಗಳು.

ಅಟ್ಲಾಂಟಿಕ್ ಸಾಗರದ ತೀರಗಳ ಸಮಾಂತರ ಮತ್ತು ಖಂಡಗಳ ಜೋಡಣೆ : ಪ್ರಾಚೀನ ಜೀವಕಲ್ಪದಲ್ಲಿ ಪ್ರಪಂಚದ ಭೂಭಾಗಗಳೆಲ್ಲ ಒಂದುಗೂಡಿದ್ದು, ಅನಂತರ ಪರಸ್ಪರ ದೂರ ಸರಿದಿವೆ ಎಂಬ ಅಭಿಪ್ರಾಯವನ್ನು ಸೂಚಿಸಲು ಪ್ರೇರಕವಾದ ಪುರಾವೆಗಳಲ್ಲಿ ಇದೇ ಪ್ರಧಾನವಾದುದು. ಪ್ರಪಂಚದ ನಕ್ಷೆಯು ಸಿದ್ಧವಾದ ಕೂಡಲೇ ದಕ್ಷಿಣ ಅಮೆರಿಕಾ ಮತ್ತು ಆಫ್ರಿಕಾ ಖಂಡಗಳ ಅಟ್ಲಾಂಟಿಕ್ ತೀರಗಳ ಸಮಾಂತರವು ಪರಿಶೋಧಕರಲ್ಲಿ ಖಂಡಜೋಡಣೆಯ ಸಾಧ್ಯತೆಯ ಕಲ್ಪನೆಯನ್ನು ಮೂಡಿಸಿತು. ವಿಜ್ಞಾನಿಗಳು ದಕ್ಷಿಣಾರ್ಧಗೋಳದ ವಿವಿಧ ಖಂಡಗಳಲ್ಲಿರುವ ಶಿಲಾಶ್ರೇಣಿಗಳ ಸಾಮ್ಯವನ್ನು ವಿವರಿಸಲು, ಖಂಡಗಳನ್ನು ನಾನಾ ರೀತಿಯಲ್ಲಿ ಜೋಡಿಸಲು ಪ್ರಾರಂಭಿಸಿದರು.

1912 ರಲ್ಲಿ ವೆಗೆನರ್ ಭೂಖಂಡ ಚಲನಾವಾದವನ್ನು ಗ್ರಾಹಕ ಹಾಗೂ ಸಮಗ್ರರೂಪದಲ್ಲಿ ಮಂಡಿಸಿದರು. ಭೂ ಇತಿಹಾಸದ ವಿವಿಧ ಯುಗಗಳಲ್ಲಿ ಭೂಭಾಗಗಳು ವಿವಿಧ ರೀತಿಯಲ್ಲಿ ಜೋಡಣೆಯಾಗಿದ್ದುವೆಂಬುವನ್ನು ಪುಷ್ಟೀಕರಿಸಲು ನಾನಾ ಕಡೆಗಳಲ್ಲಿ ದೊರೆಯುವ ಜೀವಾವಶೇಷಗಳ ಹೋಲಿಕೆ, ಶಿಲಾಶ್ರೇಣಿಗಳ ಸಾಮ್ಯ ಮೊದಲಾದ ಅಂಶಗಳನ್ನು ವಿಜ್ಞಾನಿಗಳ ಅವಗಾಹನೆಗೆ ತಂದರು. ಅಚ್ಚು ಹಾಕಿದ ಕಾಗದವೊಂದನ್ನು ಹರಿದು, ಹರಿದ ಅಂಚುಗಳನ್ನು ಪುನಃ ಜೋಡಿಸಿದಾಗ ಸಾಲುಗಳು ಹೇಗೆ ಕೂಡಿಕೊಳ್ಳುವುವೋ ಅದೇ ರೀತಿ ಅಟ್ಲಾಂಟಿಕ್ ಸಾಗರದ ಎದುರು ತೀರಗಳ ಶಿಲಾಏಟ ಮತ್ತು ರಚನೆಗಳು ಕೂಡಿಕೊಳ್ಳುತ್ತವೆಂಬುದನ್ನು ತೋರಿಸಿದರು. ಸುಮಾರು 20-30 ಕೋಟಿ ವರ್ಷಗಳ ಹಿಂದೆ ಪ್ರಪಂಚದ ಭೂಭಾಗಗಳೆಲ್ಲ ಒಂದೇ ಖಂಡವಾಗಿದ್ದುವೆಂದು ಪ್ರತಿಪಾದಿಸಿ ಆ ಖಂಡಕ್ಕೆ ಪ್ಯಾಂಜಿಯ ಎಂಬ ಹೆಸರನ್ನು ಕೊಟ್ಟರು. (ಚಿತ್ರ 1,2 ಪುಟ 371, ಚಿತ್ರ 3 ಪುಟ 372)




ಚಿತ್ರ 1. ವರ್ತಮಾನಕಾಲದ ಪ್ರಪಂಚ ನಕ್ಷೆ (ಭೂಖಂಡ ಚಲನೆ, ವಿಲ್ಸನ್ 1963)



ಚಿತ್ರ 2. ಇಪ್ಪತ್ತು ಕೋಟಿ ವರ್ಷಗಳ ಹಿಂದೆ ಇದ್ದಿರಬಹುದಾದ ಏಕೈಕ ಬೃಹತ್ ಖಂಡದ ನಕ್ಷೆ (ಭೂಖಂಡ ಚಲನೆ, 1963)

ಅಟ್ಲಾಂಟಿಕ್ ಸಾಗರದ ತೀರಗಳು ಹೊರನೋಟಕ್ಕೆ ಕಾಣುವಷ್ಟು ಸಮಾಂತರವಾಗಿಲ್ಲ ಎಂಬುದನ್ನು ಕೆಲವರು ತೋರಿಸಿದ್ದಾರೆ. ಜೆಫರಿಯವರು ಈ ಜೋಡಣೆಯು ಕನಿಷ್ಟ 10° ಯಷ್ಟು ವ್ಯತ್ಯಾಸವನ್ನು ಸೂಚಿಸುವುದನ್ನು ತೋರಿಸಿದರು. ಖಂಡಜೋಡಣೆಯಲ್ಲಿ ತೋರಿಬರುವ ವ್ಯತ್ಯಾಸವು, ಅಂಚುಗಳ ಹಿಗ್ಗುವಿಕೆ, ಸ್ತರಭಂಗ, ಸಾಗರ



ಚಿತ್ರ 3. 900 ಮೀಟರ್ ಆಳದಲ್ಲಿ ಉತ್ತರ ಮತ್ತು ದಕ್ಷಿಣ ಅಮೆರಿಕಾಗಳು, ಯೂರೋಪ್ ಮತ್ತು ಆಫ್ರಿಕಾಗಳನ್ನು ಒಂದುಗೂಡಿಸುವ ಸಂಖ್ಯಾಶಾಸ್ತ್ರೀಯ ಜೋಡಣೆ. ಸೇರುರೇಖೆಯ ಉದ್ದಕ್ಕೂ ಕಪ್ಪಾಗಿ ತೋರಿಸಿರುವ ಪ್ರದೇಶಗಳು ಒಂದರ ಮೇಲೊಂದು ಪ್ರಸರಿಸಿರುವಿಕೆಯನ್ನೂ, ಚುಕ್ಕೆ ಕೊರೆದ ಪ್ರದೇಶಗಳು ಸಂದುಗಳನ್ನೂ ಪ್ರತಿನಿಧಿಸುತ್ತವೆ. (ಎಡ್ವರ್ಡ್ ಬುಲಾರ್ಡ್, ಲಂಡನ್ನಿನ ರಾಯಲ್ ಸೊಸೈಟಿಯ ನಡವಳಿಕೆಗಳು, 1965)

ಶಿಥಿಲೀಕರಣ ಕ್ರಿಯೆ ಮುಂತಾದುವುಗಳಿಂದ ಆಗಬಹುದಾದ ಸ್ವಾಭಾವಿಕ ವ್ಯತ್ಯಾಸವೇ. ಆದುದರಿಂದ ವಾರೆನ್ ಕ್ಯಾರೆಯವರು ಕರಾರುವಾಕಾದ ಜೋಡಣೆಯನ್ನು ಭೂಮಿಯ ಮೇಲ್ಮೈಯಲ್ಲಿ ನಿರೀಕ್ಷಿಸಬಾರದೆಂದೂ, ಸಮುದ್ರ ಮಟ್ಟಕ್ಕೆ ಸುಮಾರು 200 ಮೀಟರ್ ಆಳದಲ್ಲಿ ಅಂದರೆ ಖಂಡಾವರಣ ಇಳಿಜಾರಿನ ಮೇಲ್ಭಾಗದಲ್ಲಿ ನಿರೀಕ್ಷಿಸಬಹುದೆಂದೂ ಸೂಚಿಸಿದರು. 1964ರಲ್ಲಿ ಬುಲಾರ್ಡ್‌ರವರು ಗೊತ್ತಿರುವ ಅಂಶಗಳನ್ನು ಗಣಕ ಯಂತ್ರಕ್ಕೆ ಒದಗಿಸಿ, ಕರಾರುವಾಕಾದ ಖಂಡ ಜೋಡಣೆಯನ್ನು 200-2000 ಮೀಟರುಗಳ ಮಧ್ಯ ಆಳದಲ್ಲಿ ನಿರೀಕ್ಷಿಸಬಹುದೆಂದು ತಿಳಿದರು. ಭೂಖಂಡಗಳ ಜೋಡಣೆ ಹಾಗೂ ಇದನ್ನು ತಿದ್ದಿ ಉತ್ತಮ ಪಡಿಸುವುದರಲ್ಲಿ ನಿರತರಾದವರ ಪೈಕಿ ಎ.ಎಲ್ ಡುಟಾಯ್ಟ್ (1937), ವಾರೆನ್ ಕ್ಯಾರೆ (1955), ಎಫ್. ಅಹಮದ್ (1961) ಟೂರ್ಝೊ ವಿಲ್ಸನ್ (1963), ಬಲಾರ್ಡ್ (1964), ಡಿಯರ್ನ್ಲಿ (1966) ಮತ್ತು ಪಿ.ಎಂ. ಹರ್ಲೆ (1968) ಇವರನ್ನು ಹೆಸರಿಸಬಹುದು.


ಭೂವೈಜ್ಞಾನಿಕ ಪುರಾವೆಗಳು: ಹೋಮ್ಸ್ (1965) ರವರು ಹೇಳಿರುವ ಹಾಗೆ ಭೂಖಂಡ ಚಲನೆಯ ಪ್ರಮುಖ ಭೂವೈಜ್ಞಾನಿಕ ಪುರಾವೆಗಳ ಮೌಲ್ಯವನ್ನು ಕೆಳಗಿನ ಆಧಾರಗಳ ಮೇಲೆ ನಿರ್ಣಯಿಸಬಹುದು.

1) ಪ್ರಾಚೀನ ಯುಗಗಳಲ್ಲಿ ಬೇರ್ಪಟ್ಟದ್ದು, ಈಗ ಒಂದುಗೂಡಿರುವ ಭೂಭಾಗಗಳಲ್ಲಿ ಭಿನ್ನ ಭೂವೈಜ್ಞಾನಿಕ ಲಕ್ಷಣಗಳಿರುವುದು ಸಹಜವಲ್ಲವೇ ? ವಾಯುಗುಣ, ಶಿಲಾಪರಂಪರೆ, ಭೂಇತಿಹಾಸ ಮೇಲಾಗಿ ಜೀವಾವಶೇಷಗಳ ಭಿನ್ನತೆಗಳು, ಈ ಭೂಭಾಗಗಳು ಪರಸ್ಪರ ದೂರವಿದ್ದುದರ ಪುರಾವೆಗಳು.

2) ಈಗ ಬೇರ್ಪಟ್ಟಿರುವ ಭೂಭಾಗಗಳು ಪ್ರಾಚೀನಯುಗಗಳಲ್ಲಿ ಒಂದುಗೂಡಿದ್ದರೆ ಅವುಗಳಲ್ಲಿ ಉಭಯ ಸಾಮಾನ್ಯ ಭೂವೈಜ್ಞಾನಿಕ ಲಕ್ಷಣಗಳಿರಬೇಕಲ್ಲವೇ ? ಜೋಡಿಸಿದಾಗ ಒಂದುಗೂಡುವ, ತೀರದಲ್ಲಿ ಕತ್ತರಿಸಿದ ಹಾಗೆ ಕಾಣುವ ಪರ್ವತ ಸಾಲುಗಳು, ಏಕರೀತಿಯ ಶಿಲಾಪರಂಪರೆ ಹಾಗೂ ಭೂಇತಿಹಾಸ ಮತ್ತು ಖಂಡಾಂತರ ನಿಕ್ಷೇಪಗಳಲ್ಲಿರುವ ಜೀವಾವಶೇಷಗಳ ಸಾಮ್ಯ–ಅದರಲ್ಲೂ ಭೂಮಿಯ ಮೇಲೆ ನಿರರ್ಗಳವಾಗಿ ವಲಸೆ ಹೋಗಬಲ್ಲ ಭೂವಾಸಿಗಳು ಮತ್ತು ಖಂಡಾಂತರ ಜಲಾಶಯವಾಸಿಗಳ ಅವಶೇಷಗಳ ಸಾಮ್ಯ—ಇವೆಲ್ಲ ಈ ಖಂಡಗಳು ಪ್ರಾಚೀನ ಯುಗಗಳಲ್ಲಿ ಒಂದುಗೂಡಿದ್ದುದನ್ನು ಸಾರುತ್ತವೆ.


ಪರ್ಮೊಕಾರ್ಬಾನಿಫೆರಸ್ ಯುಗದ ನೀರ್ಗಲ್ಲು ನದಿಗಳ ಕ್ರಿಯೆ ಮತ್ತು ಭೂಖಂಡ ಚಲನೆ: 1856 ರಷ್ಟು ಹಿಂದೆ ಒರಿಸ್ಸಾ ಪ್ರಾಂತದ,ಹಿಂದಿನ ತಾಲ್ಚೀರ್ ಸಂಸ್ಥಾನದಲ್ಲಿ ಕಾರ್ಬಾನಿಫೆರಸ್ ಯುಗದ ಅಂತ್ಯಕಾಲದ ನೀರ್ಗಲ್ಲು ಗುಂಡುಶಿಲಾ ನಿಕ್ಷೇಪವನ್ನು ಬ್ಲಾಂಫರ್ಡ್ ಗುರುತಿಸಿದರು. ಇದೇ ರೀತಿಯ ನಿಕ್ಷೇಪಗಳನ್ನು 1859 ರಲ್ಲಿ ದಕ್ಷಿಣ ಆಸ್ಟ್ರೇಲಿಯದಲ್ಲಿಯೂ, 1870 ರಲ್ಲಿ ದಕ್ಷಿಣ ಆಫ್ರಿಕಾದಲ್ಲೂ,1888 ರಲ್ಲಿ ದಕ್ಷಿಣ ಅಮೆರಿಕಾದಲ್ಲೂ ಕೊನೆಗೆ 1962 ರಲ್ಲಿ ಅಂಟಾರ್ಟಿಕ ಖಂಡದಲ್ಲೂ ಗುರುತಿಸಲಾಯಿತು. ಇವು ಗೊಂಡವಾನ ಖಂಡವು ನೀರ್ಗಲ್ಲುನದೀ ಕಾರ್ಯಾಚರಣೆಗೆ ಒಳಪಟ್ಟಿತ್ತೆಂಬುದನ್ನು ದೃಢಪಡಿಸುತ್ತವೆ. ಆದರೆ ಉತ್ತರ ಅಮೆರಿಕಾ, ಯೂರೋಪು ಮತ್ತು ಏಷ್ಯಾ (ಅರೇಬಿಯಾ ಮತ್ತು ಇಂಡಿಯಾ ಪರ್ಯಾಯ ದ್ವೀಪ ಭಾಗಗಳನ್ನು ಬಿಟ್ಟು)ಗಳನ್ನೊಳಗೊಂಡ ಲಾರೇಷಿಯ ಖಂಡದಲ್ಲಿ ಉಷ್ಣವಾಯುಗುಣ ಮತ್ತು ಮರುಭೂಮಿ ವಾಯುಗುಣವಿದ್ದುದಕ್ಕೆ ಪುರಾವೆಗಳಿವೆ. ಬ್ರಿಟೀಷ್ ದ್ವೀಪಗಳ ಹೊಸಕೆಂಪು ಮರಳುಶಿಲೆಗಳು, ಉತ್ತರ ಅಮೆರಿಕಾದ ಅರಿಜೋನ,ಯೂಟಾ ಮತ್ತು ವಯೋಮಿಂಗ್ ಪ್ರದೇಶಗಳಲ್ಲಿ ನಿಕ್ಷೇಪವಾಗಿರುವ ಮರಳುಶಿಲೆಗಳ ಈ ಪ್ರದೇಶಗಳು ಉಷ್ಣವಲಯದಲ್ಲಿದ್ದುದನ್ನು ಸೂಚಿಸುತ್ತವೆ. ಈ ನಿಕ್ಷೇಪಗಳ ಬಗ್ಗೆ ಷಾಟನ್ (1937), ರನ್‌ಕಾರನ್ ಮತ್ತು ಆಪ್‌ಡೈಕ್ (1960) ಮತ್ತು ಹೋಮ್ಸ್ (1965) ರವರ ಪರಿಶೋಧನೆಗಳು, ಲಾರೇಷಿಯ ಖಂಡದ ಈ ಭಾಗಗಳು ಭೂ ಮಧ್ಯರೇಖೆಯಿಂದ 30° ಅಕ್ಷಾಂಶಗಳ ಎಲ್ಲೆಯಲ್ಲಿಯೇ ಇದ್ದಿರಬೇಕೆಂಬುದನ್ನು ದೃಢಪಡಿಸುತ್ತವೆ. ಆದುದರಿಂದ ಬ್ರಿಟಿಷ್ ದ್ವೀಪಗಳು 25° ಯಷ್ಟು ಉತ್ತರಕ್ಕೆ ಚಲಿಸಿವೆ ಎಂದಾಯಿತು. ಅರಿಜೋನ ಪರ್ಮಿಯನ್‌ಯುಗದಲ್ಲಿ ಭೂಮಧ್ಯರೇಖೆಗೆ 30° ಅಕ್ಷಾಂಶದಷ್ಟು ಸಮೀಪವಿತ್ತೆಂದಾಯಿತು. (ಚಿತ್ರ 4 ಪುಟ 374, ಚಿತ್ರ 5 ಪುಟ 375)

3–24*



ಚಿತ್ರ 4. ಹಿಮನದಿ ಚಲನಾ ದಿಕ್ಕು, ಪ್ರಾಚೀನ ಅಯಸ್ಕಾಂತ ಧೃವನೆಲೆಗಳು ಮತ್ತು ಪರ್ಮೋಕಾರ್ಬಾನಿಫೆರಸ್ ಯುಗದ ಹಿಮನದೀ ಕಾರ್ಯಾಚರಣೆಯ ಎಲ್ಲೆಗಳು (ಭಾರತದ ನಕ್ಷೆಯಲ್ಲಿ ಹಿಮನದಿ ನಿಕ್ಷೇಪಗಳ ಹಂಚಿಕೆಯ ದಿಕ್ಕನ್ನು ಗಮನಿಸಿ.

ಇದಕ್ಕೆ ಪೂರಕವಾಗಿ ಉಷ್ಣವಲಯದ ಜೌಗು ಪ್ರದೇಶಗಳು ದಟ್ಟವಾದ ಕಾಡುಗಳಿಂದ ಕೂಡಿದ್ದುವು. ಈ ಕಾಡುಗಳು ಉತ್ತರ ಅಮೆರಿಕಾದಿಂದ ಯೂರೋಪು ಮಾರ್ಗವಾಗಿ ಚೀಣಾದವರೆಗೂ ವಿಸ್ತರಿಸಿದ್ದಂತೆ ಕಾಣುವುದು. (ಅದೇ ಕಾಲದಲ್ಲಿ ಗೊಂಡವಾನ ಖಂಡವು ನೀರ್ಗಲ್ಲು ನದೀ ಕಾರ್ಯಾಚರಣೆಗೊಳಪಟ್ಟಿದ್ದುದನ್ನು ನೆನಪಿಡಿ) ಲ್ಯಾಟರೈಟ್ ಮತ್ತು ಬಾಕ್ಸೈಟ್ ನಿಕ್ಷೇಪಗಳು ಸ್ಪಷ್ಟ ಮಳೆಗಾಲ ಮತ್ತು ಬೇಸಿಗೆ ಋತುಗಳಿರುವ ಉಷ್ಣವಲಯ ಪ್ರದೇಶಗಳಲ್ಲಿ ರೂಪುಗೊಳ್ಳುತ್ತವೆ. ಅಮೆರಿಕಾದ ಕೆಂಟುಕಿ ಮತ್ತು ಓಹಿಯೊ ಪ್ರಾಂತಗಳು, ಸ್ಕಾಟ್ಲೆಂಡಿನ ಏರಿಷೈರ್, ಜರ್ಮನಿ, ರಷ್ಯಾದ ಮಾಸ್ಕೊ ಕಣಿವೆ ಮತ್ತು ಚೀಣಾದ ಷಾಟುಂಗ್ ಪ್ರದೇಶಗಳಲ್ಲಿ ಕಾರ್ಬಾನಿಫೆರಸ್ ಅಂತ್ಯದಲ್ಲಿ ಲ್ಯಾಟರೈಟ್ ಮತ್ತು ಬಾಕ್ಸೈಟುಗಳು ರೂಪುಗೊಂಡಿವೆ. ಭೂಮಧ್ಯರೇಖೆಯು ಕಲ್ಲಿದ್ದಲು ಮತ್ತು ಲ್ಯಾಟರೈಟ್-ಬಾಕ್ಸೈಟು ನಿಕ್ಷೇಪಗಳಿರುವ ಕಡೆಯೇ ಹಾಯ್ದು ಹೋಗುತ್ತದೆ ಎಂದು ನಿರೂಪಿಸಲೂ ಯಾವ ಅಡ್ಡಿಯೂ ಇಲ್ಲ. ಅಂದರೆ ಪರ್ಮೋಕಾರ್ಬಾನಿಫೆರಸ್ ಯುಗದಲ್ಲಿ ಭೂ ಮಧ್ಯರೇಖೆಯು ಈಗಿರುವುದಕ್ಕಿಂತ ಬಹು ಉತ್ತರಕ್ಕೆ ಇತ್ತು ಎಂದ ಹಾಗಾಯಿತು. ಅಂದರೆ ಧೃವ ಪ್ರದೇಶಗಳು ಬೇರೆ ಕಡೆಗಳಲ್ಲಿದ್ದುವೆಂದು ತೀರ್ಮಾನಿಸಬೇಕು. ಗೊಂಡವಾನ ಖಂಡವು ಧೃವಪ್ರದೇಶದ ಸುತ್ತ ಹಂಚಿಕೆಯಾಗಿದ್ದುದರಿಂದ ಅದು ಖಂಡಾಂತರ ನೀರ್ಗಲ್ಲು ನದಿಗಳಿಂದ ಮುಚ್ಚಿದ್ದಿತೆಂದು ವಿವರಣೆ ಕೊಡಬಹುದು. ಈ ಅಭಿಪ್ರಾಯವನ್ನು 1915 ರಲ್ಲಿ ವೆಗೆನರ್ ವ್ಯಕ್ತಪಡಿಸಿದ್ದಾರೆ. ಅಂದರೆ ಭೂ ಇತಿಹಾಸದ ವಿವಿಧ ಯುಗಗಳಲ್ಲಿ ಧೃವಗಳು ತಮ್ಮ ನೆಲೆಯನ್ನು ಬದಲಾಯಿಸಿವೆ ಎಂದು ಅರ್ಥ. ಪ್ರಿಕೇಂಬ್ರಿಯನ್,



ಚಿತ್ರ 5. I ಪರ್ಮಿಯನ್ ಯುಗದ ಶಿಥಿಲೀಕರಿಸಿದ ಅಥವಾ ನಿಕ್ಷೇಪರಹಿತ ಪ್ರದೇಶಗಳ ಶಕ್ಯವ್ಯಾಪ್ತಿ (ಚುಕ್ಕೆಕೊರೆತ ಪ್ರದೇಶ) ಮತ್ತು ನಿಕ್ಷೇಪ ಪ್ರದೇಶಗಳು (ಖಾಲಿ)

II ಭಾರತದ ಪರ್ಮಿಯನ್ ಶಿಲೆಗಳು ಹೊರಕಂಡಿರುವ ಪ್ರದೇಶಗಳು.

III ಭಾರತ ಮತ್ತು ಆಸ್ಟ್ರೇಲಿಯಾಗಳ ಪರ್ಮಿಯನ್ ನಿಕ್ಷೇಪಗಳು ವ್ಯಕ್ತಪಡಿಸುವ ತೋರಿಕೆಯ ಸಾಮ್ಯ–ಈ ಎರಡು ಖಂಡಗಳು ಆ ಕಾಲದಲ್ಲಿ ಒಂದುಗೂಡಿದ್ದುದನ್ನು ಸೂಚಿಸುತ್ತದೆ.

ಪ್ಲೀಸ್ಟೋಸಿನ್ ಮುಂತಾದ ಯುಗಗಳಲ್ಲಿ ನೀರ್ಗಲ್ಲು ನದೀ ಕಾರ್ಯಾಚರಣೆಯಾಗಿರುವ ದಾಖಲೆಗಳಿವೆ. ಪ್ರತಿಯೊಂದು ಯುಗದಲ್ಲಿ ಪ್ರಪಂಚದ ಒಂದೊಂದು ಭಾಗವು ನೀರ್ಗಲ್ಲು ನದೀ ಕಾರ್ಯಾಚರಣೆಗೊಳಪಟ್ಟಿರುವುದು, ಧೃವ ಪರ್ಯಟನೆಯನ್ನು ಸಮರ್ಥಿಸುತ್ತದೆ. ಪಿ. ಎಂ. ಎಸ್ ಬ್ಲ್ಯಾಕೆಟ್ ಮತ್ತು ರನ್‌ಕಾರನ್‌ರವರು ಭೂಕಾಂತ ಗುಣ ಸಂಶೋಧನೆಗಳಿಂದ ವಿವಿಧ ಯುಗಗಳ ಧೃವನೆಲೆಯನ್ನು ನಿರ್ಧರಿಸಿರುವರು. ಈ ಸಂಶೋಧನೆಗಳಿಂದ ಭೂಖಂಡ ಚಲನಾವಾದಕ್ಕೆ ನಿಸ್ಸಂದಿಗ್ಧವಾದ ಕುರುಹುಗಳು ಒದಗಿವೆ.

ದಿಬ್ಬಗಳನ್ನು ರಚಿಸುವ ಹವಳಗಳು ನಿರ್ದಿಷ್ಟ ವಾತಾವರಣ ಮತ್ತು ಉಷ್ಣಾಂಶವಿರುವ ಸಾಗರ ಪ್ರದೇಶಗಳಲ್ಲಿ ಜೀವಿಸುವುದು ಸರಿಯಷ್ಟೆ. ಈ ಹವಳಗಳಿಗೆ 23°c ಯಿಂದ 25°c ಉಷ್ಣಾಂಶವಿರುವ ನೀರು ಬೇಕು. 18°c ಉಷ್ಣಾಂಶವಿರುವ ನೀರಿನಲ್ಲಿ ಹೇಗೋ ಬದುಕಬಲ್ಲವು, ಆದರೆ ಬಹುಕಾಲ ಬದುಕಿರಲಾರವು. ಆದುದರಿಂದ ಹವಳದಿಬ್ಬಗಳು ಭೂಮಧ್ಯ ರೇಖೆಯ ಉತ್ತರ ಮತ್ತು ದಕ್ಷಿಣ 30° ಅಕ್ಷಾಂಶಗಳೊಳಗಿರುವ ಪ್ರದೇಶಗಳಿಗೆ ಸೀಮಿತವಾಗಿವೆ. ಗ್ರೀನ್‌ಲ್ಯಾಂಡ್ ಮತ್ತು ಕೆನಡಾದ ಆರ್ಕ್‌ಟಿಕ್ ಪ್ರದೇಶದ ದ್ವೀಪಗಳಲ್ಲಿ ಪ್ರಾಚೀನ ಜೀವಕಲ್ಪದ ಪೂರ್ವಾರ್ಧ ಕಾಲದ ಹವಳದಿಬ್ಬಗಳಿವೆ. ಆದುದರಿಂದ ಆ ಪ್ರದೇಶಗಳು ಆ ಕಾಲದಲ್ಲಿ ಉಷ್ಣವಲಯದಲ್ಲಿದ್ದುವೆಂದು ಅರ್ಥ.

ಈಗ ಪರಸ್ಪರ ದೂರವಿರುವ ಭೂಭಾಗಗಳು ಹಿಂದೆ ಒಟ್ಟಾಗಿದ್ದುದಕ್ಕೆ ಒಂದು ಭಾಗದ ಪರ್ವತಸಾಲುಗಳು ಮತ್ತೊಂದರಲ್ಲಿ ಮುಂದುವರೆದಿರುವುದೇ ಸಾಕ್ಷಿ. ಖಂಡಜೋಡಣೆಯಲ್ಲಿ ನಿರತರಾಗಿರುವವರಿಗೆಲ್ಲ ಈ ಅಂಶ ಮನದಟ್ಟಾಗಿದೆ. 1966 ರಲ್ಲಿ ಡಿಯರ್ನ್ಲಿ ಅವರು ವಿವಿಧ ಯುಗಗಳಲ್ಲಿ ರೂಪುಗೊಂಡ ಪರ್ವತಗಳನ್ನು ಒಟ್ಟುಗೂಡಿಸುವ ಆಧಾರದ ಮೇಲೆ ಖಂಡಜೋಡಣೆಯನ್ನು ಮಾಡಿರುವರು. ಈ ಪರಿಶೋಧನೆಯ ಫಲಿತಾಂಶವನ್ನು ತಮ್ಮ ಪ್ರಸಿದ್ಧ ಗ್ರಂಥವಾದ “ಪರ್ವತ ಜನ್ಯ ಪ್ರದೇಶಗಳು ಮತ್ತು ಭೂಪ್ರಳಯವಾದ”ವಲ್ಲಿ ಪ್ರಕಟಿಸಿದ್ದಾರೆ. ಡಿಯರ್ನ್ಲಿ ಅವರು 20-30 ಮೂಲಗಳಿಂದ ಒದಗಿದ ಸುಮಾರು 3,400 ಪ್ರಕರಣಗಳಲ್ಲಿ ವಿವಿಧ ಭಾಗಗಳ ಪರ್ವತಶ್ರೇಣಿಗಳು ರೂಪುಗೊಂಡ ಕಾಲವನ್ನು ವಿದ್ಯುತ್ ವಿಕಿರಣ ಖನಿಜಗಳ ವಯೋನಿರ್ಧಾರದಿಂದ ಗೊತ್ತುಹಚ್ಚಿರುವ ಪುರಾವೆಗಳನ್ನು ತಮ್ಮ ಪರಿಶೋಧನೆಗೆ ಆಧಾರವಾಗಿಟ್ಟುಕೊಂಡಿದ್ದಾರೆ. ಈ ಭೂಭಾಗಗಳ ನಕ್ಷೆಗಳು ಮತ್ತು ಪ್ರಲಂಬತೆಗಳು ಭೂಇತಿಹಾಸದ ಒಂದು ಕಾಲದಲ್ಲಿ ಪ್ರಪಂಚದ ಭೂಭಾಗವೆಲ್ಲ ಒಟ್ಟುಗೂಡಿದ್ದುದನ್ನು ಸ್ಪಷ್ಟಪಡಿಸುತ್ತವೆ. 1968 ರಲ್ಲಿ ಪಿ. ಎಂ.ಹಾರ್ಲೆಯವರು ಸಂಕಲಿಸಿದ ಆಫ್ರಿಕಾದ ಪರ್ವತ ಪಂಕ್ತಿಗಳು ದಕ್ಷಿಣ ಅಮೆರಿಕಾದಲ್ಲಿ ಮುಂದುವರೆದಿರುವುದು ಸ್ಪಷ್ಟವಾಗಿದೆ.

ಪರ್ಮೊಕಾರ್ಬಾನಿಫೆರಸ್ ಶಿಲಾಶ್ರೇಣಿಯಲ್ಲಿರುವ ಜೀವಾವಶೇಷಗಳು ಸಹ ಖಂಡಚಲನೆಯನ್ನು ಪುಷ್ಟೀಕರಿಸುತ್ತವೆ. ಜೀವಾವಶೇಷಗಳ ಸಾಕ್ಷ್ಯವು ವೆಗೆನರ್ (1928) ಮತ್ತು ಡುಟಾಯ್ಟ್ (1937) ರವರ ಕಾಲದಿಂದ ವರ್ತಮಾನ ಕಾಲದವರೆಗೂ ವಿಜ್ಞಾನಿಗಳ ಗಮನವನ್ನು ಸೆಳೆದಿದೆ. ಗೊಂಡವಾನ ಖಂಡದ ವಿವಿಧ ಭಾಗಗಳಲ್ಲಿರುವ ಗ್ಲಾಸಾಪ್ಟೆರಿಸ್ ಸಸ್ಯವರ್ಗ ಮತ್ತು ಮಿಸೊಸಾರಿಡೆ ಸರೀಸೃಪಗಳ ಅವಶೇಷಗಳು ಅಂಟಾರ್ಟಿಕ್ ಖಂಡವಲ್ಲೂ ಇರುವುದು (ಡುಮನಿ ಮತ್ತು ಲಾಂಗ್, 1962), ಪರ್ಮೊಕಾರ್ಬಾನಿಫೆರಸ್ ಯುಗದಲ್ಲಿ ಈ ಭಾಗಗಳೆಲ್ಲ ಒಟ್ಟುಗೂಡಿದ್ದುವು ಅಥವಾ ಅಗಲವಾದ ಭೂಶಿರಗಳಿಂದ ತಾಕುಹಾಕಲ್ಪಟ್ಟಿದ್ದುವು ಎಂಬ ನಿರ್ಣಯವನ್ನು ಸಮರ್ಥಿಸುತ್ತವೆ. ಮೊದಲನೆಯದನ್ನು ವೆಗೆನರ್ ಟೈಲರ್, ಡುಟಾಯ್ಟ್ ಮೊದಲಾದ ಭೂಚಲನಾವಾದಿಗಳೂ, ಎರಡನೆಯದನ್ನು ಡಾನಾ, ಷೂಷರ್ಟ್ ಮೊದಲಾದ ಸ್ಥಿರತಾವಾದಿಗಳೂ ಸಮರ್ಥಿಸುತ್ತಾರೆ. ಸ್ಥಿರತಾವಾದಿಗಳು ಗೊಂಡವಾನಾ ಖಂಡದ ವಿವಿಧಭಾಗಗಳು ಸೇತುವೆಯಂತಹ ಭೂಶಿರಗಳಿಂದ (Land brigdes) ಒಂದುಗೂಡಿದ್ದುವೆಂದೂ, ಈ ಭೂಶಿರಗಳು ಸಾಗರಗಳಲ್ಲಿ ಮುಳುಗಿ ವಿವಿಧ ಭಾಗಗಳು ಪರಸ್ಪರ ಬೇರ್ಪಟ್ಟವೆಂದೂ ವಾದಿಸುತ್ತಾರೆ. ಭೂಶಿರಗಳ ಮುಳುಗಡೆಯು, ಭೂಮಿಯ ಸಮಸ್ಥಿತಿ ಭಾವ (Isostatic Concept) ಕ್ಕೆ ವ್ಯತಿರಿಕ್ತವಾಗಿರುವುದರಿಂದ, ಅಸಾಧ್ಯವೆನಿಸುವುದು. ಚಲನಾವಾದದ ಕಡೆಗೆ ವಾಲುವುದೊಂದೇ ನಮಗೆ ಉಳಿದಿರುವ ಮಾರ್ಗ. ಗೊಂಡವಾನ ಖಂಡದ ವಿವಿಧ ಭಾಗಗಳು ಕೇವಲ ಕೆಲವೇ ಮೈಲಿ ಅಗಲದ ಸಾಗರಗಳಿಂದ ಬೇರ್ಪಟ್ಟಿದ್ದರೂ ಗ್ಲಾಸಾಪ್ಟೆರಿಸ್ ಸಸ್ಯವರ್ಗದ ಏಕರೀತಿಯ ವಿಕಾಸ ಸಾಧ್ಯವಾಗುತ್ತಿರಲಿಲ್ಲ. ಒಂದೊಂದು ಭಾಗದಲ್ಲಿ ಒಂದೊಂದು ದಿಶೆಯಲ್ಲಿ ವಿಕಾಸ ಸಾಗುತ್ತಿತ್ತು. ಈ ಎಲ್ಲ ಭಾಗಗಳಲ್ಲಿ ಮಧ್ಯಜೀವಕಲ್ಪದ ಅಂತ್ಯವವರೆಗೆ ಏಕರೀತಿಯ ಜೀವವಿಕಾಸವನ್ನು ಕಾಣುತ್ತೇವೆ; ಅನಂತರ ಒಂದೊಂದು ಭಾಗದಲ್ಲಿ ಒಂದೊಂದು ದಿಶೆಯಲ್ಲಿ ವಿಕಾಸ ಸಾಗಿದೆ. ಆದುದರಿಂದ ಇವೆಲ್ಲ ಮಧ್ಯಜೀವಕಲ್ಪದ ಅಂತ್ಯದವರೆಗೆ ಒಂದುಗೂಡಿದ್ದು, ಅನಂತರ ಪರಸ್ಪರ ಬೇರ್ಪಟ್ಟವೆ ಎಂದು ಡುಟಾಯ್ಟ್ ವಾದಿಸುತ್ತಾರೆ.

ಭೂಭೌತಿಕ ಪುರಾವೆಗಳು : ಈ ಪುರಾವೆಗಳನ್ನು ಸಹ ಖಂಡಗಳ ಚಲನಾವಾದಕ್ಕೆ ಉಪಯೋಗಿಸಿಕೊಂಡವರು ವೆಗೆನರೇ ! ಇದನ್ನು "ಖಂಡಗಳ ಹುಟ್ಟು" ಎಂಬ ಅವರ ಗ್ರಂಥದಲ್ಲಿ ಕಾಣಬಹುದು. ಗ್ರೀನ್‌ಲ್ಯಾಂಡ್ ಪರಿಶೋಧನೆಗೆ (1917) ಹೊರಟಿದ್ದ ಮೈಲಿಯಸ್ ಎರಿಕ್‌ಸನ್ ನೌಕೆಯಲ್ಲಿ ವೆಗೆನರ್ ಸಹ ಇದ್ದರು. 1869–70 ರಲ್ಲಿ ಈ ಕಾರ್ಯಾರ್ಥವಾಗಿ ಜರ್ಮನಿಯ ನೌಕೆಯೊಂದು ಹೋಗಿದ್ದಿತು. ಈ ಎರಡು ಸಂದರ್ಭಗಳಲ್ಲಿ ದೊರೆತ ಆಧಾರಗಳ ಮೇಲೆ ಗ್ರೀನ್‌ಲ್ಯಾಂಡಿನ ರೇಖಾಂಶ ಸ್ಥಾನವನ್ನು ಕೊಚ್ (Koch)ರವರು ಲೆಖ್ಖಾಚಾರ ಹಾಕಿದ್ದಾರೆ. ಇವೆರಡಕ್ಕೆ ವ್ಯತ್ಯಾಸವಿದೆ. 1922 ರಲ್ಲಿ ಕೋಪೆನ್ ಹೇಗನ್‌ನ ಭೂಗಣಿತಶಾಸ್ತ್ರಜ್ಞ ಗ್ರೀನ್‌ಲ್ಯಾಂಡಿನ ರೇಖಾಂಶ ಸ್ಥಾನವನ್ನು ಲೆಖ್ಖಾಚಾರ ಹಾಕಿದರು. ಇದರಿಂದ ಗ್ರೀನ್‌ಲ್ಯಾಂಡ್ 1917 ರಿಂದ 1922 ರ ಮಧ್ಯೆ, 5 ವರ್ಷಗಳಲ್ಲಿ 0.9 ಸೆಕೆಂಡುಗಳಷ್ಟು, ಅಂದರೆ ವರ್ಷಕ್ಕೆ 36 ಮೀಟರುಗಳಷ್ಟು ಯೂರೋಪಿನಿಂದ ದೂರ ಚಲಿಸುತ್ತಿದೆ ಎಂದು ತಿಳಿಸಲಾಗಿದೆ. ಇದು ಖಂಡಗಳು ಈಗಲೂ ಚಲಿಸುತ್ತಿವೆ ಎಂಬುದಕ್ಕೆ ವಾಸ್ತವಾಂಶವನ್ನು ಒದಗಿಸಿದೆ. ಹೀಗೆ ಭೂವೈಜ್ಞಾನಿಕ, ಭೂಗಣಿತ ಮತ್ತು ಜೀವಾವಶೇಷಗಳ ಪುರಾವೆಗಳಿದ್ದಾಗ್ಯೂ, ಪ್ಯಾಂಜಿಯಾ ಎಂಬ ಒಂದೇ ಬೃಹತ್ ಖಂಡವಿದ್ದಿತೆಂದು ಹೇಳುವ ಈ ಭೂಚಲನಾವಾದವು, ಪರ್ಮೊಕಾರ್ಬಾನಿಫೆರಸ್ ಯುಗದಲ್ಲಿ ಅಗಾಧ ಪ್ರಮಾಣದ ನಿಕ್ಷೇಪಗಳು ಹೇಗೆ ಸಂಚಯನವಾದುವು ಎಂಬುದಕ್ಕೆ ವಿವರಣೆ ಕೊಡಲು ಅಶಕ್ತವಾಗಿದೆ. ವೆಗೆನರ್‌ರವರು ಆಲ್ಪ್ಸ್–ಹಿಮಾಲಯ ಮತ್ತು ರಾಕೀಸ್–ಆಂಡೀಸ್ ಪರ್ವತ ಶ್ರೇಣಿಗಳು ರೂಪುಗೊಂಡ ವಿಧಾನವನ್ನು ವಿವರಿಸಲು ಭೂಖಂಡ ಚಲನಾವಾದವನ್ನು ಮಂಡಿಸಿದರು. ಈ ಪರ್ವತ ಶ್ರೇಣಿಗಳು ತೃತೀಯ ಭೂ ಕಾಲಯುಗದಲ್ಲಿ ಪಶ್ಚಿಮಾಭಿಮುಖವಾಗಿ ಚಲಿಸಿದ ಅಮೆರಿಕಾ ಖಂಡಗಳ ಅಂಚಿನಲ್ಲಿಯೂ, ಇಂಡಿಯಾ ಪರ್ಯಾಯ ದ್ವೀಪವು ಏಷ್ಯಾಖಂಡದ ಭೂಭಾಗಕ್ಕೆ ಡಿಕ್ಕಿ ಹೊಡೆದುದರಿಂದಲೂ ರೂಪುಗೊಂಡವು.ಅಂದರೆ ಖಂಡಗಳು ಕ್ರಮವಾಗಿ ಪಶ್ಚಿಮ ಮತ್ತು ಉತ್ತರಾಭಿಮುಖವಾಗಿ ಚಲಿಸಿದುವು. ಪಶ್ಚಿಮಾಭಿಮುಖ ಚಲನೆಗೆ ಚಂದ್ರನ ಭೇದಾತ್ಮಕ ಆಕರ್ಷಣೆಯೂ, ಉತ್ತರಾಭಿಮುಖ ಚಲನೆಗೆ ಭೂಮಧ್ಯರೇಖೆಯ ಉಬ್ಬಿನಿಂದುಂಟಾದ ಗುರುತ್ವಾಕರ್ಷಣೆಯೂ ಶಕ್ತಿದಾಯಕಗಳೆಂದು ಪ್ರತಿಪಾದಿಸಿದರು. ಈ ಶಕ್ತಿಗಳೇನೋ ಅಸ್ತಿತ್ವದಲ್ಲಿವೆ; ಆದರೆ ಮೇಲೆ ಹೇಳಿದ ಪ್ರಮಾಣದ ಚಲನೆಯನ್ನುಂಟು ಮಾಡುವಷ್ಟು ಶಕ್ತಿಯುತವಾದುವುಗಳಲ್ಲ. ಮೇಲಾಗಿ ಈ ಪರ್ವತಗಳ ರೂಪುಗೊಳ್ಳುವಿಕೆಗೆ ಪಾರ್ಶ್ವಚಲನೆಯ ಅಗತ್ಯವೇ ಇಲ್ಲ ; ಭೂಮಿಯ ಸಮತೋಲನ ಘಟನೆಗಳು ಮತ್ತು ಪರ್ವತಜನ್ಯ ಸಾಗರಪ್ರದೇಶಗಳ ಚಲನೆಗಳೇ ಸಾಕಷ್ಟು ಶಕ್ತಿಯನ್ನು ಒದಗಿಸಬಲ್ಲವು. (ಬೆಲೌಸಾರ್,1962).

ಅಂದ ಹಾಗೆ ಪರ್ವತಗಳನ್ನು ರೂಪಿಸುವ ಶಕ್ತಿಯೇ ಭೂಖಂಡಚಲನೆಗೆ ಶಕ್ತಿಯನ್ನು ಒದಗಿಸುತ್ತದೆ ಎಂಬುದನ್ನು ಚಲನಾವಾದಿಗಳೆಲ್ಲ ಒಪ್ಪುತ್ತಾರೆ.ಭೂಖಂಡ ಚಲನೆ,ಸ್ತರಭಂಗ,ಸಂಕೋಚ್ಯಗಳು,ಭೂಕಂಪ,ಸಮುದ್ರಾಕ್ರಮಣ ಪುನರಾವೃತ್ತಿ, ಧೃವ ಪರ್ಯಟನೆ–ಇವೆಲ್ಲ ಆ ಶಕ್ತಿಯ ವಿವಿಧ ರೂಪಗಳು.ಈ ಕ್ರಿಯೆಗಳು ಭೂ ಇತಿಹಾಸದ ಕೆಲವು ಅವಧಿಗಳಲ್ಲಿ ಅಗಾಧ ಪ್ರಮಾಣದಲ್ಲಿ ನಡೆದಿರುವುದು, ಇದು ಸತ್ಯವೆಂಬುದನ್ನು ತೋರಿಸುತ್ತವೆ. ಭವಿಷ್ಯತ್ ಕಾಲದ ಸಂಶೋಧನೆಗಳು ಈ ವಿಚಾರವಾಗಿ ಹೆಚ್ಚು ಬೆಳಕನ್ನು ಚೆಲ್ಲುತ್ತವೆ (ವೆಗೆನರ್ 1928)

ಭೂಚಲನಾವಾದದ ಪರ ಮತ್ತು ವಿರುದ್ಧ ಕ್ರಮವಾಗಿ ಟುಝೊ ವಿಲ್ಸನ್ ಮತ್ತು ವಿ.ವಿ. ಬೆಲೌಸಾರ್ (1968) ವಾದಗಳನ್ನು ಗಮನಿಸಬಹುದು. ಟುಝೊ ವಿಲ್ಸನ್ ಈಗ ಭೂಖಂಡ ಚಲನಾವಾದದ ಅಪ್ರತಿಮ ಪ್ರತಿಪಾದಕರಾಗಿದ್ದಾರೆ. ಕೇವಲ 10–15 ವರ್ಷಗಳ ಹಿಂದೆ ಇತರ ಅಮೆರಿಕಾ ವಿಜ್ಞಾನಿಗಳಂತೆ ಈ ವಾದವನ್ನು ಅಲ್ಲಗಳೆಯುತ್ತಿದ್ದರು. ಪ್ರಾಚೀನ ಭೂಕಾಂತಗುಣ ಮತ್ತು ಸಾಗರ ತಳಗಳ ಪರಿಶೋಧನೆಗಳು ಅವರನ್ನು ಮತ್ತು ಅವರ ಸಂಗಡಿಗರನ್ನು ಪರಿವರ್ತಿಸಿವೆ. ಈಚಿನ ಪರಿಶೋಧನೆಗಳು ಭೂಖಂಡಚಲನೆಯನ್ನು ಪರ್ವತಜನ್ಯ ಶಕ್ತಿಯ ವಿವಿಧ ರೂಪಗಳ ಘಟನೆಗಳೊಡನೆ ಸಂಬಂಧಕ ಹಾಗೂ ಸಂಯೋಜಕ ರೀತಿಯಲ್ಲಿ ನಡೆದಿವೆ. ಇವು ಭೂ ವಿಜ್ಞಾನದಲ್ಲಿ ಕ್ರಾಂತಿಯನ್ನೇ ಎಬ್ಬಿಸಿವೆ. ಸಾಗರ ತಳಗಳು ಅಗಲವಾಗುತ್ತಿರುವಿಕೆ, ಪ್ರಾಚೀನ ಭೂಕಾಂತ ಗುಣ, ಮೇಲಾಗಿ

ಜಗದ್ವ್ಯಾಪಿ ಪರ್ವತ ಕಾಂರ್ಯಾಚರಣೆ ಇವುಗಳನ್ನೆಲ್ಲಾ "ಭೂಖಂಡ ಚಲನೆಯ ಆಧುನಿಕ ವಿಚಾರ ಧಾರೆ" ಎಂಬ ಶಿರೋನಾಮೆಯಲ್ಲಿ ಚರ್ಚಿಸಬಹುದು.

ಭೂಖಂಡ ಚಲನೆಯ ಆಧುನಿಕ ವಿಚಾರಧಾರೆ : ವೆಗೆನರ್‌ರವರ ಭೂಖಂಡ ಚಲನಾವಾದಕ್ಕೆ ಭೂಭೌತಿಕವಿಜ್ಞಾನದ ಕಡೆಯಿಂದ ತೀವ್ರತಮ ಅಭ್ಯಂತರಗಳನ್ನು ಒಡ್ಡಲಾಗಿದೆ. ಇತ್ತೀಚೆಗೆ ಜೀವಾವಶೇಷಗಳ ಮತ್ತು ಪ್ರಾಚೀನ ವಾಯುಗುಣಗಳ ಸಾಕ್ಷ್ಯಗಳ ಔಚಿತ್ಯವನ್ನೂ ಪ್ರಶ್ನಿಸಲಾಗಿದೆ. (Discussion on Bencott et al's paper 'The crust of the Earth from the lower palaeozoic point of view ; J. C. Briden's paper 'palaeo climatic evidence of a Geocentric axial dipole field' presented at 'The History of the Earth's crust—A symposium, 1966 where in the palaeo latitudes for the Glossopteris flora have been extended up to 75^0!) ಈ ಅಭ್ಯಂತರಗಳು ಮತ್ತು ಹಿಂದೆಯೇ ವ್ಯಕ್ತಪಡಿಸಿದ ಅಭ್ಯಂತರಗಳು ಇದ್ದಾಗ್ಯೂ, ವೆಗೆನರ್‌ರವರ ಭೂಖಂಡ ಚಲನಾವಾದಕ್ಕೆ ಕಳೆದ ಹತ್ತು ವರ್ಷಗಳಿಂದ ಹಿಂದೆಂದೂ ಇರದ ಹೊಸಕಳೆ ತುಂಬಿದೆ.

1950ರಿಂದ ಈಚಿನ ಪ್ರಾಚೀನ ಭೂಕಾಂತಗುಣ ಪರಿಶೋಧನೆಗಳ ಫಲಿತಾಂಶವು ಭೂಭೌತವಿಜ್ಞಾನಿಗಳ ಬಣವನ್ನು ಇಬ್ಬಾಗಿಸಿ, ವೆಗೆನರ್‌ರವರ ಅಭಿಪ್ರಾಯವನ್ನು ಪುನರ್ ಪರಿಶೀಲಿಸುವಂತೆ ಮಾಡಿದೆ. ಭೂಖಂಡ ಚಲನೆಗೆ ಆಧಾರವಾದ ಶಕ್ತಿಯನ್ನು ಭೂವಿಜ್ಞಾನಿಗಳಿಗೆ ಪ್ರಿಯವೆನಿಸಿದ್ದ ಭೂಸಂಕುಚಿತ ವಾದದಲ್ಲಿ ಅರಸುವುದನ್ನು ಬಿಟ್ಟು, ಭೂವಿಸ್ತರಣಾವಾದ ಮತ್ತು ಅಥವಾ ಕಣಗಳ ಚಲನೆಯಿಂದಾಗುವ ಶಾಖ ಪ್ರಸರಣಗಳಲ್ಲಿ ಅರಸುವಂತೆ ಮಾಡಿದೆ.

ಭೂವಿಸ್ತರಣಾ ವಾದವು ಭೂವಿಜ್ಞಾನಿಗಳಿಗೆ ಗೊತ್ತಿರುವ ಭೂಮಿಯ ಹೊರಪದರದ ಎಲ್ಲಾ ಲಕ್ಷಣಗಳಿಗೂ ವಿವರಣೆ ಒದಗಿಸಲು ಸಮರ್ಥವಾಗಿದೆ. 1965 ರಲ್ಲಿ ಹೋಮ್ಸ್‌ರವರು ನಿರೂಪಿಸಿದ ಹಾಗೆ ಒಟ್ಟುಗೂಡಿದ ಭೂಭಾಗವು (Sialic crust) ಭೂ ವಿಸ್ತರಣೆಯ ಪರಿಣಾಮವಾಗಿ ಖಂಡಗಾತ್ರದ ಭಾಗಗಳಾಗಿ ಒಡೆಯುವುದು ಮೊದಲ ಹಂತ. ವಿಸ್ತರಣೆಯು ಮುಂದುವರಿದ ಹಾಗೆಲ್ಲಾ ಈ ಭಾಗಗಳು ತ್ರಿಜ್ಯಾನುಗಾಮಿಯಾಗಿ ದೂರ ಸರಿಯುವುವು. ಖಂಡಗಳು ಚಲಿಸಿದ ಹಾಗೆಲ್ಲಾ ಕ್ಷಾರ ಮತ್ತು ಮಹಾಕ್ಷಾರ ಶಿಲಾವಸ್ತುವು ಮ್ಯಾಂಟಲಿನಿಂದ ಖಂಡಗಳ ನಡುವಣ ಪ್ರದೇಶಕ್ಕೆ ಹರಿಯುವುವು. ಹೀಗೆ ವಿಸ್ತಾರಗೊಳ್ಳುತ್ತಿರುವ ಸಾಗರ ತಳಗಳು ಹೆಚ್ಚು ಸಾಪೇಕ್ಷ ಸಾಂದ್ರತೆಯ ಶಿಲೆಗಳಿಂದ ರೂಪಿತವಾಗಿವೆ. ಈ ಅಭಿಪ್ರಾಯವು ಅಷ್ಟು ಪ್ರಚಾರದಲ್ಲಿಲ್ಲದಿದ್ದರೂ, 1957ರಲ್ಲಿ ಭೂಭೌತ ವರ್ಷ ಪ್ರಾರಂಭವಾದಾಗಿನಿಂದ ನಡೆದಿರುವ ಪರಿಶೋಧನೆಗಳು ಈ ಅಭಿಪ್ರಾಯವನ್ನು ಪುಷ್ಟೀಕರಿಸುತ್ತವೆ.

ಕಣಚಲನಾ ಶಾಖ ಪ್ರಸರಣವು ಕಾಲ್ಪನಿಕವಾದುದಾದರೂ ಅದು ಅಸ್ತಿತ್ವದಲ್ಲಿಲ್ಲವೆಂದು ಅಲ್ಲಗಳೆಯುವಂತಿಲ್ಲ. ಹೆಸ್ (1962) ಮತ್ತು ಡಿಯಟ್ಜ್ (1961,1962) ರವರು ಸಾಗರ ತಳಗಳ ವಿಸ್ತರಣೆಯು ಕಣಚಲನಾ ಶಾಖಪ್ರಸರಣದಿಂದ ನಡೆಯುವುದೆಂದು ಸೂಚಿಸಿರುವರು. ಈ ಅಭಿಪ್ರಾಯವು ಭೂಮಿಯ ಹೊರಪದರಿನ ಇತಿಹಾಸದ ನೂತನ ಚರ್ಚೆಗೆ ಉತ್ತೇಜನವನ್ನು ಕೊಟ್ಟಿದೆ. ಈ ಚರ್ಚೆಯಲ್ಲಿ ಪೂರ್ವ ಪೆಸಿಫಿಕ್ ಸಾಗರ ದಿಂಡು, ಅಟ್ಲಾಂಟಿಕ್ ಸಾಗರದ ನಡು ದಿಂಡು, ಕಾರಲ್‌ಬರ್ಗ್ ದಿಂಡು ಮುಂತಾದ ಸಾಗರಗಳ ನಡು ದಿಂಡು ತಂಡಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡಲಾಗಿದೆ. ಕಣಚಲನಾ ಶಾಖಪ್ರಸರಣವು ಇಡೀ ಮ್ಯಾಂಟಲಿಗೆ ವ್ಯಾಪಕವಾದ ಘಟನೆ ಎಂದು ರನ್‌ಕಾರನ್ (1962) ರವರು ಅಭಿಪ್ರಾಯಪಟ್ಟಿದ್ದಾರೆ; ಆದರೆ ಎಲಾಸರ್ (1963) ಮತ್ತು ಒರೊವಾನ್ (1964) ರವರು ಕಣಚಲನಾ ಪ್ರಸರಣವು ಮ್ಯಾಂಟಲಿನ ಮೇಲ್ಭಾಗಕ್ಕೆ ಮಾತ್ರ ಸೀಮಿತವಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಸ್ಫಟಿಕೀಕೃತ ಘನವಸ್ತುಗಳಲ್ಲಿ ಕಂಡುಬರುವ ಜಿಗುಪಿಕೆಯ ವಿಚಾರವಾಗಿ ಉತ್ತಮಗೊಂಡಿರುವ ನಮ್ಮ ತಿಳುವಳಿಕೆಯಿಂದ ಈ ಕಲ್ಪನೆಯು ಮೆಚ್ಚಿಕೆಯನ್ನು ಪಡೆಯುವ ಅರ್ಹತೆಯನ್ನು ಹೊಂದಿದೆ ಎಂದು ಹೇಳಬಹುದು. ಪೆಸಿಫಿಕ್ ಸಾಗರದ ಸುತ್ತಲೂ ಇರುವ ಸ್ಟ್ರಿಂಕ್

ಸ್ಲಿಪ್ ಸ್ತರಭಂಗಗಳಲ್ಲಿ ಕಂಡುಬರುವ ವಿಶೇಷ ಪ್ರಮಾಣದ ಪಲ್ಲಟವು ಮ್ಯಾಂಟಲಿನ ಪ್ರತ್ಯಕ್ಷಚಲನೆಯನ್ನು ಸೂಚಿಸುತ್ತದೆ. ಭೂಕಂಪಗಳ ಮೇಲ್ಮೈ ತರಂಗಗಳು ಮತ್ತು ನಿರ್ಬಾಧಿತ ತರಂಗಗಳ ಓಲಾಟವು ಮ್ಯಾಂಟಲಿನ ಮೇಲ್ಭಾಗವು ಕಡಮೆ ವೇಗದ ಕಂಪನ ಮತ್ತು ಹೆಚ್ಚು ಬಲ ತಗ್ಗಿಸುವ ವಲಯವೆಂದು ತೋರಿಸುವುದು (ಆಂಡರ್ಸನ್, 1967). ಹೀಗೆ ಗೂಟೆನ್‌ಬರ್ಗ್‌ರವರ ಕಡಮೆ ವೇಗದ ವಲಯ ಕಲ್ಪನೆಯು ಡೇಲಿಯವರ ಆಸ್ತೆನೊಸ್ಫಿಯರ್ ಅಥವಾ ಅಶಕ್ತ ವಲಯ ಕಲ್ಪನೆಯ ಉರ್ಜಿತಕ್ಕೆ ಎಡೆಮಾಡಿಕೊಡುವುದು. ಆಧುನಿಕ ಶಾಖಪ್ರಸರಣದ ಅಳತೆಗಳು (ಮ್ಯಾಕ್‌ಡೆನಾಲ್ಡ್ 1963) ಕಣಚಲನಾ ಪ್ರಸರಣವಾದಕ್ಕೆ ಹಾಗೂ ಸಾಗರ ತಳವಿಸ್ತರಣೆಗೆ ಪ್ರಮುಖ ಅಭ್ಯಂತರಗಳನ್ನು ಒಡ್ಡಿವೆ. ಭೂಖಂಡಗಳು ಮತ್ತು ಸಾಗರ ತಳಗಳ ಹೊರ ಪದರುಗಳ ಮೂಲಕವೂ ಶಾಖಪ್ರಸರಣದ ಸರಾಸರಿಯು 1.2 μ cal/cm/se ಇರುವುದು. ಶಾಖವನ್ನು ಉತ್ಪತ್ತಿಮಾಡುವ ರೇಡಿಯೋ ಆಕ್ಟಿವ್ ಧಾತುಗಳು ಸಾಗರತಳಗಳ ಹೊರಪದರಿಗಿಂತಲೂ ಭೂಖಂಡಗಳ ಹೊರಪದರಿನಲ್ಲಿ ಹೆಚ್ಚಾಗಿ ಸಾಂದ್ರೀಕರಿಸಿವೆ. ಆದುದರಿಂದ ಶಾಖಪ್ರಸರಣವು ಎರಡರಲ್ಲೂ ಒಂದೇ ಪ್ರಮಾಣದಲ್ಲಿರಬೇಕಾದರೆ ಸಾಗರ ಭಾಗಗಳ ಕೆಳಗಿರುವ ಮ್ಯಾಂಟಲಿನ ಮೇಲ್ಭಾಗದಲ್ಲಿ ಭೂಭಾಗಗಳ ಕೆಳಗಿರುವ ಮ್ಯಾಂಟಲಿನ ಮೇಲ್ಭಾಗದಲ್ಲಿರುವುದಕ್ಕಿಂತಲೂ ಶಾಖೋತ್ಪತ್ತಿ ಮೂಲಗಳು ಅಧಿಕವಾಗಿರಲೇಬೇಕು. ಭೂಖಂಡಗಳು ಕೆಳಗಿರುವ ಮ್ಯಾಂಟಲಿನಲ್ಲಿ ಅಚಲವಾಗಿ ನೆಲೆಗೊಂಡಿರುವುವೆಂದು ಕಾಣುತ್ತದೆ. ಭೂಚಲನೆಯಾಗುವ ಕಾಲದಲ್ಲಿ ಈ ಭಾಗಗಳು ಆಗಿನ ಸಾಗರ ತಳಗಳ ಕೆಳಗಿದ್ದ ಮ್ಯಾಂಟಲಿನ ಮಟ್ಟಕ್ಕಿಂತ ಮೇಲಕ್ಕೆ ನುಗ್ಗಿ ವಿಶೇಷ ಶಾಖಪ್ರಸರಣವನ್ನು ಉಂಟುಮಾಡುವುದು. ಇದರ ಪ್ರಕಾರ ಭೂಖಂಡಗಳ ಮ್ಯಾಂಟಲ್ ಸದಾ ಮೇಲಕ್ಕೆ ನುಗ್ಗುವುದರಿಂದ ಖಂಡಗಳು ಆಗಾಗ್ಗೆ ಮೇಲೆತ್ತಲ್ಪಡುತ್ತವೆ. ಹಾಗೂ ಸಾಗರ ತಳಗಳಲ್ಲಿ ಸಂಚಯಿಸಿದ ನಿಕ್ಷೇಪಗಳು ಆಗಾಗ್ಗೆ ಕೆಳಕ್ಕೆ ಕುಸಿಯುತ್ತಿರುವುವು. ಇದರಲ್ಲಿ ಖಂಡಗಳ ಪಾರ್ಶ್ವಚಲನೆ ಇಲ್ಲ.

ಏನೇ ಆಗಲಿ, ಸಾಗರಗಳ ತಳ ವಿಸ್ತರಣೆ ಅಥವಾ ಸಮುದ್ರ ತಳಗಳು ಅಗಲವಾಗುವಿಕೆಯು ಅಲ್ಲಗಳೆಯಲಾಗದ ಸತ್ಯಾಂಶ. ಕೆಳಗಿನ ಅಂಶಗಳು ಇವನ್ನು ಪುಷ್ಟೀಕರಿಸುತ್ತವೆ.

1. ಸಾಗರಗಳಲ್ಲಿ ನಡುದಿಂಡುಗಳಿರುವುದು ಮತ್ತು ಅಲ್ಲಿ ಸಾಗರ ತಳಗಳಿಗೆ ಮ್ಯಾಂಟಲಿನಿಂದ ಹೊಸ ಶಿಲಾವಸ್ತುವು ಒದಗುತ್ತಿರುವುದು.

2. ಈ ದಿಂಡುಗಳ ಎರಡು ಪಕ್ಕಗಳಲ್ಲಿಯೂ ಶಿಲಾರಸ ಪದರಗಳು ಹಾಗೂ ಜಲಜನಿಕ್ಷೇಪಗಳು ಪಟ್ಟಿಗಳಾಗಿ ರೂಪುಗೊಂಡಿರುವುದು. ಶಿಲಾರಸವು ಹೊರಹೊಮ್ಮುವಾಗ ಅಥವಾ ನಿಕ್ಷೇಪಗಳು ಸಂಚಯನವಾಗುವಾಗ ಇದ್ದ ಅಯಾಸ್ಕಾಂತ ದ್ವಿಧ್ರುವತೆಗೆ ಅನುರೂಪವಾದ ಕಾಂತಧೃವತೆಯು ಆಚುಗಳು ಈ ನಿಕ್ಷೇಪಗಳಲ್ಲಿವೆ. ಪ್ರಾಚೀನ ಭೂಕಾಂತಗುಣ ಪರಿಶೀಲನೆಯಿಂದ ಕೆಲವು ಶಿಲಾರಸ ಪದರಗಳು ಪ್ರಾಕೃತಿಕವಾಗಿ ಕಾಂತಗುಣ ಹೊಂದಿದವುಗಳೆಂದೂ ಉಳಿದವುಗಳು ವ್ಯತಿರಿಕ್ತ ಕಾಂತಗುಣ ಹೊಂದಿದವುಗಳೆಂದೂ ಗೊತ್ತಾಗಿದೆ. ವ್ಯತಿರಿಕ್ತ ಕಾಂತಗುಣವು ಅನೇಕ ಸಾರಿ (ನಡುವೆ ಬಿಡುವು ಕೊಟ್ಟು) ಪುನರಾವೃತ್ತಿಯಾಗಿವೆ. ರೇಡಿಯೋ ಆಕ್ಟಿವ್ ವಯೋನಿರ್ಧಾರದಿಂದ ವ್ಯತಿರಿಕ್ತ ಕಾಂತಗುಣವು ದಿಂಡಿನ ಇಕ್ಕೆಲಗಳಲ್ಲಿ ಸೌಷ್ಟವ ಹಂಚಿಕೆಯಾಗಿರುವುದು ಕಾಣುತ್ತದೆ. ಶಿಲಾರಸ ಪದರಗಳು ಹಾಗೂ ಅವುಗಳ ಮೇಲಿರುವ ನಿಕ್ಷೇಪಗಳು ಕ್ರಮಾನುಸಾರವಾಗಿ ಹಂಚಿರುವುವು. ದಿಂಡಿನ ಹತ್ತಿರ ಅತ್ಯಂತ ಕಿರಿಯ ವಯಸ್ಸಿನ ಶಿಲೆಗಳಿವೆ; ದಿಂಡಿನಿಂದ ಭೂಖಂಡಗಳ ಕಡೆಗೆ ದೂರ ಹೋದ ಹಾಗೆಲ್ಲಾ ಹಿರಿಯ ವಯಸ್ಸಿನ ಶಿಲೆಗಳಿರುವುವು. ಈ ಅಂಶವು ಮತ್ತು ಹತ್ತರಿಂದ ಇಪ್ಪತ್ತು ಕೋಟಿ ವರ್ಷಗಳ ವಯಸ್ಸಿನ ಸಾಗರ ತಳಗಳಲ್ಲಿ ನಿಕ್ಷೇಪಗಳಿಲ್ಲದಿರುವುದು (3000 ಕೋಟಿ ವರ್ಷಗಳ ವಯಸ್ಸಿನ ಸಾಗರ ತಳಗಳಿಗೆ ಹೋಲಿಸಿದರೆ) ಹೆಸ್ ಮತ್ತು ಡಿಯಟ್ಜ್‌ರವರನ್ನು ಸಾಗರ ದಿಂಡುಗಳು ಮತ್ತು ನೆಲ ಬಿರಿತ ತಂಡಗಳು ಮೇಲ್ಮುಖ ಕಣಚಲನೆಯ ಶಾಖಪ್ರಸರಣದಿಂದ ಆಗುವುದೆಂದೂ, ಅನಂತರ ಅವು ಪಾರ್ಶ್ವಕ್ಕೆ ಹರಡಿ ಹೊಸ

ಸಾಗರಗಳು ರೂಪುಗೊಳ್ಳುವುವು ಎಂಬ ಅಭಿಪ್ರಾಯವನ್ನು ಮಂಡಿಸಲು ಪ್ರೇರಕವಾದುವು. ಈ ಅಭಿಪ್ರಾಯದ ಪ್ರಕಾರ ಸಾಗರ ತಳಗಳು ಪುನರುಜ್ಜೀವನಗೊಂಡು ಅವುಗಳ ಮೇಲೆ ಸಂಚಯನಗೊಂಡ ನಿಕ್ಷೇಪಗಳ ಸಹಿತ ಸರಿದು ವಿಸ್ತಾರಗೊಳ್ಳುವುವು. ಈ ಮಾದರಿ ಯಾಂತ್ರಿಕಶಕ್ತಿಯು ಇರುವುದು ನಿಜವಾದರೆ ಸಾಗರ ತಳಗಳ ಯಾವ ಭಾಗವೂ ಪ್ರಾಚೀನವೆಂದು ಹೇಳಲಾಗುವುದಿಲ್ಲ.ಅಲ್ಲದೆ ಸಾಗರ ನಡು ದಿಂಡುಗಳ ಹತ್ತಿರ ಮೇಲಕ್ಕೆ ಬರುವ ಶಿಲಾವಸ್ತುವು ಕಣಚಲನಾ ಪ್ರಸರಣ ದಾರಿಯಲ್ಲಿ ದೂರದೂರ ಸಾಗುವುದು. (ಕಣಚಲನಾ ಪ್ರಸರಣವು ಸಾಗರ ನಡು ದಿಂಡುಗಳ ಹತ್ತಿರ ಮೇಲ್ಮುಖವಾಗಿ ಪ್ರವಹಿಸಿ, ಚಿಲಿ, ಅಲ್ಯೂಷಿಯನ್ಸ್ ಮತ್ತು ಜಪಾನ್ ತೀರಗಳ ಅಚೆ ಇರುವ ಭೂಖಂಡ ಕಂದಕಗಳಲ್ಲಿ (trenches) ಕೆಳಮುಖವಾಗಿ ಪ್ರವಹಿಸಿ, ಹೊಸದಾಗಿ ರೂಪುಗೊಂಡ ಪರ್ವತಗಳು ಮತ್ತು ಸಾಗರಗಳ ಆಳ ಪ್ರದೇಶಗಳಲ್ಲಿರುವ ಕಂದಕಗಳ ಕೆಳಗಿರುವ ಮ್ಯಾಂಟಲಿನಲ್ಲಿ ಐಕ್ಯವಾಗುವುವು.)

1963ರಲ್ಲಿ ವಿಲ್ಸನ್‌ರವರು ಸೂಚಿಸಿದ ಸಾಗರಗಳ ತಳ ವಿಸ್ತರಣೆಗೆ ಸಂಬಂಧಿಸಿದ ಟ್ರಾನ್ಸ್‌ಫಾರಂ ಸ್ತರಭಂಗಗಳು ಮತ್ತು ಅವುಗಳಿಗೆ ಸಂಬಂಧಿಸಿದ ಭೂಕಂಪನ ಘಟನೆಗಳು ಮೇಲೆ ವರ್ಣಿಸಿದ ಅಭಿಪ್ರಾಯಗಳಿಗೆ ಹೊಂದಿಕೆಯಾಗುವ ದಿಶೆಯಲ್ಲಿ, ಅಂದರೆ ಸಾಗರ ನಡು ದಿಂಡುಗಳಿಂದ ಖಂಡಗಳ ಅಂಚುಗಳ ಕಡೆಗೆ, ಚಲನೆ ನಡೆದಿರುವುದನ್ನು ತೋರಿಸುತ್ತವೆ. (Skyes 1967). ಪೂರ್ವ ಪೆಸಿಫಿಕ್ ಮೇಲೆತ್ತುವಿಕೆಗೆ ಉದಾಹರಣೆಯಾಗಿ ತೆಗೆದುಕೊಳ್ಳಲಾಗಿರುವ ಸ್ಯಾನ್ ಆಂಡ್ರಿಯಾಸ್ ಸ್ತರಭಂಗದಲ್ಲಿ ಕಾಣುವ ಹಾಗೆ, ಟ್ರಾನ್ಸ್‌ಫಾರಂ ಸ್ತರಭಂಗಗಳಲ್ಲಿ ನೂರಾರು ಮೈಲಿಗಳಷ್ಟು ಪಾರ್ಶ್ವಚಲನೆ ಆಗುವುದು. ಅಂದರೆ ಟ್ರಾನ್ಸ್‌ಫಾರಂ ಸ್ತರಭಂಗಗಳಿಂದಾಗುವ ಪಾರ್ಶ್ವ ಚಲನೆಯು ಭೂಖಂಡ ಚಲನೆಯಷ್ಟೇ ಹೆಚ್ಚು ಪ್ರಮಾಣದ್ದು ಎಂದು ಅರ್ಥ. ಟ್ರಾನ್ಸ್‌ಫಾರಂ ಸ್ತರಭಂಗದ ಚಲನೆಯು ಭೂಖಂಡ ಚಲನೆಯ ಒಂದು ವಿಧ ಮಾತ್ರ ; ಇದು ವೆಗೆನರ್‌ರವರು ಸೂಚಿಸಿದ ಭೂಖಂಡ ಚಲನೆಯ ಮಾದರಿಯದಲ್ಲ. ಭೂಖಂಡಗಳು ಸಾಗರಗಳ ಮೂಲಕ ತೆಪ್ಪದ ಹಾಗೆ ಚಲಿಸುವುವೆಂದು ವೆಗೆನರ್‌ರವರು ಭಾವಿಸಿದ್ದರು. ನೀರ್ಗಲ್ಲಿನಲ್ಲಿ ಸೇರಿರುವ ಮರದ ದಿಮ್ಮಿಯು ಚಲಿಸುವ ಹಾಗೆ ಭೂಖಂಡಗಳು ಸಾಗರ ತಳಗಳೊಡಗೂಡಿ ಚಲಿಸಿವೆ ಎಂಬುದು ಈ ಕಲ್ಪನೆಯ ಅರ್ಥ.


ಸಾಗರ ತಳ ವಿಸ್ತರಣೆ ಮತ್ತು ಅದಕ್ಕೆ ಸಂಬಂಧಿಸಿದ ಭೂಖಂಡಚಲನೆ–ಈ ಹೊಸ ಕಲ್ಪನೆಗಳು ಜಗದ್ವ್ಯಾಪಿ ಪರ್ವತ ಕಾರ್ಯಾಚರಣೆ ಮತ್ತು ಖಂಡ–ಸಾಗರಗಳ ವಿಕಾಸವನ್ನು ಕುರಿತು ಹೊಸ ವಿಚಾರಧಾರೆಗೆ ದಾರಿ ಮಾಡಿಕೊಟ್ಟಿವೆ. ಅಗಾಧ ಪ್ರಮಾಣದ ಪರ್ವತ ಕಾರ್ಯಾಚರಣೆ, ಭೂಖಂಡ ಚಲನಾವಾದ (ವೆಗೆನರ್ 1928, ಇಂಗ್ಲೀಷಿಗೆ ಭಾಷಾಂತರ 1966), ಸಮುದ್ರ ತಳ ವಿಸ್ತರಣೆ (ಹೆಸ್ ಡಿಯಟ್ಜ್) ಮತ್ತು ಟ್ರಾನ್ಸ್‌ಫಾರಂ ಸ್ತರಭಂಗಗಳು (ವಿಲ್ಸನ್ 1965) ಮತ್ತು ಅವುಗಳ ಸಂಸ್ಕರಣ ಹಾಗು ಬೆಳವಣಿಗೆಗಳಿಗೆ ಸಂಬಂಧಿಸಿದ ಎಲ್ಲಾ ಕಲ್ಪನೆಗಳನ್ನು ಪ್ರತಿನಿಧಿಸಲು ಹೊಸ ಜಗದ್ವ್ಯಾಪಿ ಪರ್ವತ ಕಾರ್ಯಾಚರಣೆ (New Global Tectonics) ಎಂಬ ಪದವನ್ನು ಬಳಸಲಾಗಿದೆ.

ಜಗದ್ವ್ಯಾಪಿ ಪರ್ವತ ಕಾರ್ಯಾಚರಣೆ ಮತ್ತು ಖಂಡ ಸಾಗರಗಳ ವಿಕಾಸ : ಸಾಗರ ದಿಂಡುಗಳಲ್ಲಿ ಗಡುಸಾದ ಶಿಲಾ ಹಲಗೆಗಳು ರೂಪುಗೊಳ್ಳುತ್ತವೆ ಮತ್ತು ಅವುಗಳು ಸಾಗರ ಕಂದಕಗಳಲ್ಲಿ ಜೀರ್ಣಗೊಳ್ಳುತ್ತವೆ ಎಂಬ ಕಲ್ಪನೆಯು ಪ್ರವರ್ತ ಪ್ರದೇಶಗಳು ಹಾಗೂ ಖಂಡಗಳ ರೂಪುಗೊಳ್ಳುವಿಕೆ ಮತ್ತು ಅವುಗಳ ವಿಕಾಸಕ್ಕೆ ಅತ್ಯುತ್ತಮವಾದ ಆಧಾರಗಳನ್ನು ಒದಗಿಸುತ್ತದೆ. (ಜೆ. ಎಸ್. ಡ್ಯೂವಿ. ಪೆ. 1970). ಭೂಮಿಯ ಮೇಲ್ಮೈಯ ಕೆಳಗಿರುವ ಹಲವು ಶಿಲಾಹಲಗೆಗಳು ಡಿಕ್ಕಿಹೊಡೆದು ಪರಸ್ಪರ ಗಟ್ಟಿಯಾಗಿ ಮುಚ್ಚಿಕೊಳ್ಳುವುದರಿಂದ ಖಂಡಗಳು ರೂಪುಗೊಳ್ಳುವುವು.

ಶಿಲಾಗೋಳವು ನಿರ್ದಿಷ್ಟ ಆಕಾರರಹಿತ ಶಿಲಾಹಲಗೆಗಳನೇಕವಾಗಿ ವಿಭಜಿಸಲ್ಪಟ್ಟಿದೆ ಎಂಬುದು ಇತ್ತೀಚಿನ ಪರಿಶೋಧನೆಯ ಫಲಿತಾಂಶದ ಮೇಲೆ ರೂಪಿತವಾಗಿದೆ. (Issacks et al op cit).

ಅನೇಕ ಮೈಲಿ ದಪ್ಪ ಮತ್ತು ಸಾವಿರಾರು ಮೈಲಿ ಉದ್ದವಿರುವ ಈ ಶಿಲಾಹಲಗೆಗಳು ಕೆಳಗಿನ ಕಣ ಚಲನಾ ಶಾಖ ಪ್ರಸರಣದಿಂದ ಪಾರ್ಶ್ವಕ್ಕೆ ಚಲಿಸುತ್ತವೆ. ಕಣಚಲನಾ ಪ್ರಸರಣಕ್ಕೆ ಭೂ ಅಂತರಾಳದ ಶಾಖವು ಶಕ್ತಿದಾಯಕವಾಗಿದೆ.

ಆರು ವಿಶಾಲವಾದ ಶಿಲಾಹಲಗೆಗಳು ಮತ್ತು ಶಿಲಾಗೋಳದಲ್ಲಿ ಅಡಕವಾಗಿರುವ ಅನೇಕ ಚಿಕ್ಕ ಹಲಗೆಗಳು ಖಂಡಗಳು ಮತ್ತು ಸಾಗರಗಳನ್ನು ಹೊತ್ತು ಸಾಗುತ್ತವೆ. ಹಲಗೆಗಳು ಪರಸ್ಪರ ಎದುರು ಚಲಿಸಿದಾಗ, ಒಂದು ಕೆಳಗಿರುವ ಮಾಂಟಲಿನೊಳಗೆ ಚಾಚುವುದು. ಮತ್ತೊಂದರ ಮುಂದಿನ ಅಂಚು ಕಿವಿಚಿ, ಸುಕ್ಕಾಗಿ, ಒಡೆದು ಜಪಾನ್ ಮಾದರಿಯ ದ್ವೀಪಸ್ತೋಮ ರೂಪುಗೊಳ್ಳುವುದು ಅಥವಾ ಮುಂದುಗಡೆ ವಿಶಾಲವಾದ ಭೂಖಂಡವಿದ್ದರೆ ಪರ್ವತಶ್ರೇಣಿಯಾಗಿ ಮಾರ್ಪಡುವುದು ; ಉದಾ : ದಕ್ಷಿಣ ಅಮೆರಿಕಾದ ಆಂಡೀಸ್ ಪರ್ವತಶ್ರೇಣಿ.



ಚಿತ್ರ 6. ಶಿಲಾಹಲಗೆಗಳು ಪರಸ್ಪರ ಡಿಕ್ಕಿಹೊಡೆದಾಗ, ಅವುಗಳ ವಿವಿಧ ವರ್ತನೆಗಳು (ಕ್ರಿಯಾತ್ಮಕ ಭೂಮಿ, ಲೆವ್, 1973)

I ಒಂದು ಶಿಲಾಹಲಗೆಯು ಮತ್ತೊಂದರ ಕೆಳಗೆ ಬಾಗಿ, ಕಿವಿಚಿ ಮ್ಯಾಂಟಲಿನಲ್ಲಿ ಜೀರ್ಣವಾಗುತ್ತಿರುವುದು.

II ಮಂದಗತಿ ಡಿಕ್ಕಿಯಾದಾಗ ಅಲ್ಪಸಾಂದ್ರತೆಯ ಭೂಭಾಗಗಳು ಅಧಿಕಸಾಂದ್ರತೆಯ ಮ್ಯಾಂಟಲಿನೊಳ ಹೊಗಲು ಪ್ರತಿರೋಧ ವ್ಯಕ್ತಪಡಿಸುವುದು.

1. ಭೂಖಂಡಗಳು 2. ಮತ್ತು 6. ಸಾಗರದ ಹೊರಪದರ. 3. ಮ್ಯಾಂಟಲ್ 4. ಆಳರಹಿತ ಭೂಕಂಪ ಮತ್ತು ಜ್ವಾಲಾಮುಖಿ ಕ್ರಿಯೆ 5. ಪುರಾತನ ಪದರ ಪ್ರದೇಶದಲ್ಲಿ ಆಳ ಭೂಕಂಪಗಳ ಐಕ್ಯ.

ಹಲಗೆಯ ಅಂಚು ಮ್ಯಾಂಟಲಿನೊಳಗೆ ಚಾಚಿದಾಗ, ಹೊಸ ಶಿಲಾವಸ್ತುವು ಹಲಗೆಯ ಹಿಂಬದಿಯಲ್ಲಿ ಮೇಲುಬ್ಬಿ ನಡುವಣ ಪ್ರದೇಶವನ್ನು ಆಕ್ರಮಿಸುವುದು. 20 ಕೋಟಿ ವರ್ಷಗಳ ಹಿಂದೆ ಆಫ್ರಿಕಾ ಮತ್ತು

ದಕ್ಷಿಣ ಅಮೆರಿಕಾ ಖಂಡಗಳು ಬೇರ್ಪಟ್ಟು, ನಡುವೆ ಅಟ್ಲಾಂಟಿಕ್ ಸಾಗರವು ರೂಪುಗೊಂಡಾಗ ಆ ಸಾಗರದ ನಡುವಿಂದಿನ ಇಕ್ಕೆಲಗಳಲ್ಲಿ ಹೊಸ ಶಿಲಾ ಹಲಗೆಗಳು ರೂಪುಗೊಂಡುವು.

ಎರಡು ಶಿಲಾಹಲಗೆಗಳ ಪೈಕಿ, ಒಂದು ಇನ್ನೊಂದರ ಕೆಳಕ್ಕೆ ಚಾಚುವುದರಿಂದ ಖಂಡ ವಿಕಾಸದ ವಿವರಣೆ ಕೊಡಬಹುದೆಂದು ಡ್ಯೂವಿ ಮತ್ತು ಹಾರ್ಸ್‌ಫೀಲ್ಡ್ ಭಾವಿಸಿದ್ದಾರೆ. ಇದರಿಂದ ವಿಶೇಷ ಜ್ವಾಲಾಮುಖಿ ಕಾರ್ಯಾಚರಣೆ ನಡೆದು ಒಂದು ಮತ್ತೊಂದರ ಕೆಳಗೆ ಚಾಚಿರುವ ಕಡೆ, ಕಾಲಾನುಕ್ರಮದಲ್ಲಿ ದ್ವೀಪಸ್ತೋಮವು ರೂಪುಗೊಳ್ಳುವುದು.

ಭೂ ಇತಿಹಾಸದ ಆದಿಯಲ್ಲಿ ಭೂಭಾಗಗಳೆಲ್ಲ ಸಾಗರಗಳಿಂದ ಮುಚ್ಚಿದ್ದಾಗ, ಈ ರೀತಿ ಕೆಲವು ದ್ವೀಪ ಸ್ತೋಮಗಳು ಉಂಟಾಗಿರಬೇಕು. ಅನಂತರ, ಅವೆಲ್ಲ ಒಂದುಗೂಡಿ ವಿಶಾಲ ಭೂಭಾಗವಾಗಿರಬೇಕು. ಇವು ಖಂಡಗಳ ಬೆಳವಣಿಗೆಗೆ ಕೇಂದ್ರಗಳಾದುವು. ಉಳಿದವುಗಳ ಶಿಥಿಲೀಕರಣದಿಂದ ಈ ಭೂಭಾಗಗಳ ಸುತ್ತ ಶಿಲಾ ಸಂಚಯನ ಕಾರ್ಯ ಪ್ರಾರಂಭವಾಯಿತು. ನಿಕ್ಷೇಪಗಳ ಕೆಳಗೆ ಶಿಲಾಹಲಗೆಗಳು ಮುಳುಗಿದ ಕಡೆ, ವಿಶೇಷ ಶಾಖೋತ್ಪತ್ತಿಯಾಗಿ, ನಿಕ್ಷೇಪಗಳು ಶಿಲೆಗಳಾಗಿ ಮಾರ್ಪಟ್ಟು, ಹೊಸ ಖಂಡ ಅಥವಾ ಪರ್ವತಶ್ರೇಣಿಯಾಗಿ ಮೇಲೆದ್ದುವು ಎಂದು ವಿಚಾರಧಾರೆ ನಡೆದಿದೆ.

ನಿಕ್ಷೇಪಗಳನ್ನು ಹೊತ್ತು ಶಿಲಾಹಲಗೆಗಳು ಪರಸ್ಪರ ಹತ್ತಿರಕ್ಕೆ ಚಲಿಸಿ, ಡಿಕ್ಕಿ ಹೊಡೆದು, ಅವುಗಳ ನಡುವಣ ನಿಕ್ಷೇಪಗಳು ಕಿವಿಚಿ ಮಡಿಕೆಗಳಾಗಿ ಪರ್ವತ ಶ್ರೇಣಿಗಳಾಗುವುದು ಮತ್ತೊಂದು ವಿಧಾನ. ಆಫ್ರಿಕಾ ದೊಡನೆ ಒಂದುಗೂಡಿದ ಇಂಡಿಯಾ ಪರ್ಯಾಯ ದ್ವೀಪಭಾಗವು ಉತ್ತರಕ್ಕೆ ಚಲಿಸಿ, ಏಷ್ಯಾಖಂಡಕ್ಕೆ ಡಿಕ್ಕಿ ಹೊಡೆದುದರ ಪರಿಣಾಮವಾಗಿ ಹಿಮಾಲಯ ಪರ್ವತಗಳು ರೂಪುಗೊಂಡುವು ಎಂದು ಭಾವಿಸಲಾಗಿದೆ. ಈ ವಾದದ ಪ್ರಕಾರ ಭೂಖಂಡಗಳು ವಿವಿಧ ಯುಗಗಳಲ್ಲಿ ರೂಪುಗೊಂಡ ಭೂಭಾಗಗಳ ಮಿಲನವಾಗಿರಬೇಕು ಮತ್ತು ಬೇರ್ಪಡೆಯಾದಾಗ ಪುನರ್ ಹಂಚಿಕೆಗೊಂಡಿರಬೇಕು. ಶಿಲಾಹಲಗೆಗಳು ಪರ್ವತಗಳ ಕೆಳಗೆ ಹಾಗೂ ಸಾಗರಗಳ ಕಂದಕಗಳಲ್ಲಿ ಜೀರ್ಣಗೊಳ್ಳುವುದರಿಂದ, ಅವುಗಳ ಕಾಲಾವಧಿ ಸೀಮಿತಗೊಳ್ಳುವುದು. ಈಗಿರುವ ಶಿಲಾಹಲಗೆಗಳಲ್ಲಿ ಅತ್ಯಂತ ಪ್ರಾಚೀನವಾದುದು 30 ಕೋಟಿ ವರ್ಷಗಳ ಹಿಂದೆ ರೂಪಿತವಾದುದು.

ಈ ವಿಚಾರಧಾರೆಯು ಎಲ್ಲಾ ವಿಷಯಗಳ ಬಗ್ಗೆ ವಿವರಣೆಯನ್ನು ಕೊಡುತ್ತದೆ ಎಂದು ಹೇಳಲಾಗುವುದಿಲ್ಲ. ಅದರಲ್ಲೂ ಪ್ರಾಚೀನ ಮೇಲ್ಮೈ ಲಕ್ಷಣಗಳಿಗೆ ವಿವರಣೆ ಒದಗಿಸಬಲ್ಲದೇ ಎಂಬುದನ್ನು ಕಾದು ನೋಡಬೇಕಾಗಿದೆ. ಇದರ ಅನುಮತಿಯಿಂದ ಅರ್ಥಕೊಡುವ ಸಾಧ್ಯತೆಗಳನ್ನು ಎರಡನೇ ಪೆನ್‌ರೋಸ್ ಸಮ್ಮೇಳನದಲ್ಲಿ (15–20, ಡಿಸೆಂಬರ್ 1969) ಚರ್ಚಿಸಲಾಗಿದೆ.

ಕೃತಜ್ಞತೆ ಸಲ್ಲಿಕೆ : ಈ ಲೇಖನಕ್ಕೆ ಉತ್ತಮ ಚಿತ್ರಗಳನ್ನು ತಯಾರಿಕೆ, ಹಾಗೂ ಲೇಖನ ತಿದ್ದುವಿಕೆಯಲ್ಲಿ ಸಹಕರಿಸಿದ ನನ್ನ ಸಹೋದ್ಯೋಗಿಗಳಾದ ಶ್ರೀ ನಯಾಜ್ ಅಹಮದ್ ಷರೀಫ್ ಮತ್ತು ಎಂ. ಎಸ್. ಅನಂತ ಅವರಿಗೆ ನನ್ನ ವಂದನೆಗಳು.

ನಾವು ಭಗವಂತನ ಮಕ್ಕಳೆಂದು ಭಾವಿಸುವುದೆ ಮೇಲೆ ಹೋಗಲು : ಮೊದಲ ಮೆಟ್ಟಿಲು,
ನಾವೆಲ್ಲ ಒಂದು, ನಾವೆಲ್ಲ ಆತ್ಮ, ಎಂದು ಭಾವಿಸುವುದೇ ಕೊನೆಯ ಮೆಟ್ಟಿಲು.

ಜಿ. ಟಿ. ನಾರಾಯಣರಾವ್

ಕರ್ತಾರನ ಕಮ್ಮಟದಲ್ಲಿ ಕೃಷ್ಣವಿವರಗಳು

ಸಹಸ್ರ ಶೀರ್ಷಾ ಪುರುಷ: ಕರ್ತಾರನ ಕಮ್ಮಟ ಎಂದರೆ ವಿಶ್ವ–ಭೂಮಿ, ಚಂದ್ರ, ಗ್ರಹೋಪಗ್ರಹಗಳು, ಉಲ್ಕೆ, ಧೂಮಕೇತು, ಸೂರ್ಯ, ನಕ್ಷತ್ರಗಳು, ಆಕಾಶಗಂಗೆ, ಬ್ರಹ್ಮಾಂಡಗಳು, ನೀಹಾರಿಕೆಗಳು, ಅಗೋಚರ ಆಕಾಶಕಾಯಗಳು ಮುಂತಾದವೆಲ್ಲವೂ ಸೇರಿರುವ ಊಹಾತೀತವಾದ ಮಹಾಪ್ರದೇಶ.

ಕೃಷ್ಣವಿವರವೆಂದರೆ ಬ್ಲ್ಯಾಕ್ ಹೋಲ್ (ಕಪ್ಪುತೂತು) ಎಂದರ್ಥ. ಆದರೆ ಇತಿಹಾಸ ಕುಪ್ರಸಿದ್ಧವಾದ ಕಲ್ಕತ್ತದ ಬ್ಲ್ಯಾಕ್‌ಹೋಲನ್ನು ಕುರಿತು ಈ ಲೇಖನದಲ್ಲಿ ಪ್ರಸ್ತಾವಿಸುತ್ತಿಲ್ಲ. ಬದಲು, ನಕ್ಷತ್ರಲೋಕದಲ್ಲಿ ಇದೆ ಎಂದು ನಂಬಲಾಗಿರುವ ಕಪ್ಪುತೂತುಗಳ ಬಗ್ಗೆ ಇಲ್ಲಿ ಬರೆದಿದೆ.

ಈಚೆಗೆ ಅಂದರೆ ಕಳೆದ ಒಂದು ದಶಕದಲ್ಲಿ ಕೃಷ್ಣವಿವರಗಳ ಬಗ್ಗೆ ವಾರ್ತಾಪತ್ರಿಕೆಗಳಲ್ಲಿ ತೆಳುಸುದ್ದಿ ಆಗ ಈಗ ಬರಲು ತೊಡಗಿದೆ. ಇಂಥ ಸುದ್ದಿ ಸಾಮಾನ್ಯವಾಗಿ ಅದ್ಭುತ ರಮ್ಯ ಆಗಿರುವುದೇ ವಾಡಿಕೆ. ಅದರ ವರ್ಣನೆಯ ಧಾಟಿ ಸರಿಸುಮಾರಾಗಿ ಈ ತೆರನಾಗಿರುವುದು."ಗಗನದ ಅಂತರಾಳದಲ್ಲಿರುವ ಕಪ್ಪುತೂತು ಎಲ್ಲವನ್ನೂ ಗುಳುಂಕರಿಸಬಲ್ಲುದು, ಏನನ್ನೂ ಹೊರಬಿಡಲೊಲ್ಲದು. ಅಲ್ಲಿ ಹೋದವರ ಪಾಡು ಏನೆಂಬುದರ ಬಗ್ಗೆ ಯಾರಿಗೂ ಮಾಹಿತಿ ಲಭಿಸದು. ಅಲ್ಲಿ ಕಾಲ ಮತ್ತು ಆಕಾಶ (ಟೈಮ್ ಅಂಡ್ ಸ್ಪೇಸ್) ಯದ್ವಾತದ್ವಾ ತಿರುಚಿಕೊಂಡು ಇಂದು ನಿನ್ನೆ ಆದೀತು, ಸ್ವರ್ಗ ಪಾತಾಳವಾದೀತು—ಎಲ್ಲವೂ ಕಣ್ಣು ಮಿಟಕಿಸುವುದರೊಳಗೆ!"

ಕಲ್ಪನೆಯ ಬೆನ್ನೇರಿ ಬಂದ ಭೃಂಗ ಲಾಸ್ಯ : ಆಧುನಿಕ ವಿಜ್ಞಾನ ಕೃಷ್ಣವಿವರದ ಬಗ್ಗೆ ಏನು ಹೇಳುತ್ತದೆ ಎಂಬುದನ್ನು ಅರಿಯಲು ಕೆಲವೊಂದು ಪೂರ್ವಸಿದ್ಧತೆಗಳು ನಮ್ಮಲ್ಲಿ ಅವಶ್ಯ. ಅವನ್ನು ಎಳೆ ಎಳೆಯಾಗಿ ಇಲ್ಲಿ ಮುಂದೆ ವಿವರಿಸಿದೆ.

"ಭೂಮಿಯಷ್ಟು ಸಾಂದ್ರತೆ ಮತ್ತು ಸೂರ್ಯನಿಗಿಂತ 250 ಮಡಿ ಹಿರಿದಾದ ವ್ಯಾಸ ಇರುವ ಒಂದು ಮಿನುಗುತಾರೆ ಸ್ವಂತಾಕರ್ಷಣೆಯ ಪರಿಣಾಮವಾಗಿ ತನ್ನ ಒಂದಿಸಿತು ಕಿರಣಗಳನ್ನೂ ನಮ್ಮಲ್ಲಿಗೆ ಬರಗೊಡದು. ವಿಶ್ವದ ಬಲು ದೊಡ್ಡ ಮಿನುಗು ವಸ್ತುಗಳು ಈ ಕಾರಣದಿಂದ ನಮಗೆ ಕಾಣದಿರುವ ಸಾಧ್ಯತೆ ಉಂಟು" ಎಂಬುದಾಗಿ ಫ್ರೆಂಚ್ ಗಣಿತ ಮತ್ತು ಖಗೋಳ ವಿಜ್ಞಾನಿ ಪಿ. ಎಸ್. ಲಾಪ್ಲಾಸ್ (1749–1827) ಬರೆದಿದ್ದಾನೆ (1798). ಲಾಪ್ಲಾಸನ ಅತ್ಯಂತ ಫಲವಂತ ಬುದ್ಧಿ ಈ ಸೂತ್ರರೂಪದ ಹೇಳಿಕೆಯಲ್ಲಿ ಎಷ್ಟು ವ್ಯಾಪಕ ಮತ್ತು ಕ್ರಾಂತಿಕಾರಕ ಅರ್ಥವನ್ನು ಹಿಡಿದಿಟ್ಟಿದೆ ಎನ್ನುವುದರ ಅರಿವಾಗಲು ವಿಜ್ಞಾನದ ಕೆಲವೊಂದು ಮೂಲಭಾವನೆಗಳು ನಮಗೆ ಸ್ಪಷ್ಟವಾಗಿ ತಿಳಿದಿರುವುದು ಅವಶ್ಯ. ವಿಜ್ಞಾನದಲ್ಲಿ ಕಲ್ಪನೆಯ ಬೆನ್ನೇರಿ ಬರುವ ಭೃಂಗಲಾಸ್ಯಕ್ಕೆ ಲಾಪ್ಲಾಸನ ಊಹೆ ಒಂದು ಜ್ವಲಂತ ನಿದರ್ಶನ. ಮುಂದಿನ ಪರಿಚ್ಛೇದಗಳಲ್ಲಿ ಲಾಪ್ಲಾಸನ ಪ್ರಾಚೀನ ಚಿಂತನೆಗೆ ಆಧುನಿಕ ವೈಜ್ಞಾನಿಕ ಪ್ರವೇಶವನ್ನು ಒದಗಿಸಲು ಪ್ರಯತ್ನಿಸಿದೆ.

"ಒಂದು ನಕ್ಷತ್ರ ನಮಗೆ ಗೋಚರಿಸುತ್ತದೆ" ಎನ್ನುವ ವಾಕ್ಯದಲ್ಲಿ ಹುದುಗಿರುವ ಮುಖ್ಯ ವೈಜ್ಞಾನಿಕ ಅರ್ಥವಿಷ್ಟು : ಅದು ಬೆಳಕಿನ ಕಿರಣಗಳನ್ನು ಹೊರಸೂಸುತ್ತದೆ ; ಅದರ ಕೆಲವು ಕಿರಣಗಳಾದರೂ ನಮ್ಮನ್ನು ತಲುಪುತ್ತವೆ ; ನಾವು ಅದನ್ನು ಗುರುತಿಸುವೆವು. ಈ ಮೂರರ ಪೈಕಿ ಯಾವುದೇ ಒಂದು ಸಾಧು ಆಗದಿದ್ದರೂ ನಕ್ಷತ್ರ ನಮಗೆ ಕಾಣಿಸದು. ಉದಾಹರಣೆಗೆ ನಮ್ಮ ಸಮೀಪತಮ ನಕ್ಷತ್ರ ಸೂರ್ಯನನ್ನೇ ಪರಿಶೀಲಿಸೋಣ. ಸೂರ್ಯ ಇದ್ದಲ ಮೂಟೆ ಆಗಿದ್ದರೆ ಅದು ಬೆಳಕಿನ ಕಿರಣಗಳನ್ನು ಹೊರಸೂಸುತ್ತಿರಲಿಲ್ಲ. ಭೂಮಿ–ಸೂರ್ಯ ಅಂತರ ಬಲು ಹೆಚ್ಚಾಗಿದ್ದರೆ ಕಿರಣಗಳು ನಮ್ಮನ್ನು ತಲುಪುತ್ತಿರಲಿಲ್ಲ. ನಾವು ಕಣ್ಣು ಮುಚ್ಚಿಕೊಂಡಿದ್ದರೆ (ನಮಗೂ ಸೂರ್ಯನಿಗೂ ನಡುವೆ ಅಪಾರದರ್ಶಕ ಅಡಚಣೆ ಅಡ್ಡವಾಗಿದ್ದರೆ) ಸೂರ್ಯನನ್ನು ಗುರುತಿಸುತ್ತಿರಲಿಲ್ಲ.

ವಿಶ್ವದಲ್ಲಿರುವ ಎಣಿಕೆಗೆ ನಿಲುಕದ ಮತ್ತು "ನಿಗಮಕ್ಕೆ ಸಿಲುಕದ" ನಕ್ಷತ್ರಗಳು ಎಲ್ಲವೂ ನಮಗೆ ಗೋಚರವಾಗದಿರಲು ಮುಖ್ಯ ಕಾರಣ ಎರಡನೆಯದು. (ಲಾಪ್ಲಾಸನ ಕಾಲದಲ್ಲಿ ತಿಳಿದಿದ್ದ ಕಾರಣ ಇದೊಂದೇ.) ಅವು ಸೂರ್ಯನಿಗಿಂತ ಅದೆಷ್ಟೋ ಪಟ್ಟು ಹೆಚ್ಚು ಬೆಳಕನ್ನು ಚೆಲ್ಲಿದರೂ ನಾವು ಅತ್ಯಂತ ನಾಜೂಕಾದ ದೂರದರ್ಶಕ ಮುಂತಾದ ಪ್ರಕಾಶೀಯ ಉಪಕರಣಗಳ ನೆರವಿನಿಂದ ಅವನ್ನು ನೋಡಲು, ಅಂದರೆ ಅವುಗಳಿಂದ ಹೊರಟು ನಮ್ಮೆಡೆಗೆ ಧಾವಿಸುವ ಕಿರಣ ರಾಯಭಾರಿಗಳನ್ನು ಬರಮಾಡಿಕೊಂಡು ಗುರುತಿಸಲು, ಪ್ರಯತ್ನಿಸಿದರೂ ನಮ್ಮೀರ್ವರ ನಡುವಿನ ಅಗಾಧ ದೂರದಿಂದಾಗಿ ಆ ರಾಯಭಾರಿಗಳು ನಮ್ಮನ್ನು ತಲುಪುವುದೇ ಇಲ್ಲ. ನಡುಹಾದಿಯಲ್ಲಿ ಅವು ಮಾಸಿ ನಶಿಸಿ ಹೋಗುತ್ತವೆ–ಸುದೂರ ಬೆಟ್ಟದ ಕೊಡಿಯ ಮೇಲೆ ಉರಿಸಿದ ಹಣತೆಯ ಮಸಕು ಮಿನುಗು ನಮ್ಮಲ್ಲಿ ವರೆಗೆ ಐದದಂತೆ.

ಇವೆಲ್ಲ ಸಾಮಾನ್ಯ ನಕ್ಷತ್ರಗಳಿಗೆ ಅನ್ವಯವಾಗುವ ನಿಯಮಗಳು ; ನಮ್ಮ ಬದುಕಿನ ಅನುಭವದ ಮಿತಿಯೊಳಗೆ ತಿಳಿಯಬಹುದಾದ ವಿದ್ಯಮಾನಗಳು. ಲಾಪ್ಲಾಸನ ವಿಶೇಷ ನಕ್ಷತ್ರ ಈ ಸಾಲಿಗೆ ಸೇರುವುದಿಲ್ಲ. ಅದರ ಲಕ್ಷಣ ಅರಿಯಲು ಬೆಳಕಿನ ಹೂರಣವನ್ನು "ಸವಿ"ಯುವುದು ಅವಶ್ಯ.

ಬೆಳಕಿನ ಹೂರಣ : ಬೆಳಕಿನ ಕಿರಣ ಫೋಟಾನುಗಳೆಂಬ (ಅಂದರೆ ದ್ಯುತಿಕಣಗಳು) ಹೆಸರಿನ ಅನಂತ ಸೂಕ್ಷ್ಮ ಕಣಗಳ ಧಾರೆ. ಫೋಟಾನಿನ ರಾಶಿ 8×10^{-49} ಗ್ರಾಮ್ ಎಂದು ಈಗಿನ (1977) ಅಂದಾಜು. ಇದಕ್ಕಿಂತ ಲಘುವಾದ ಕಣ ತಿಳಿದಿಲ್ಲ. ಸಾಮಾನ್ಯವಾಗಿ ಬಲು ಹಗುರ ಕಣವೆಂದು ಪರಿಗಣಿಸಲಾಗಿರುವ ಎಲೆಕ್ಟ್ರಾನ್ (ರಾಶಿ $= 10^{-27}$ ಗ್ರಾಮ್) ಫೋಟಾನಿಗಿಂತ 125×10^{19} ಮಡಿ ಭಾರವಾಗಿದೆ. ನಮ್ಮ ಇಡೀ ಭೂಮಿಗೂ ಒಂದು ಮೋಟರ್ ಕಾರಿಗೂ ನಡುವೆ ಇರುವ ತೂಕ ನಿಷ್ಪತ್ತಿ ಸುಮಾರು ಇಷ್ಟೇ ಉಂಟು. ಸೂರ್ಯ-ಭೂಮಿ ನಿಷ್ಪತ್ತಿ (3,33, 200) ಇದರ ಮುಂದೆ ತೀರ "ಹುಡುಗಾಟ"ದ ಅತ್ಯಲ್ಪ ಸಂಖ್ಯೆ ಆಗುತ್ತದೆ. ಬೆಳಕಿನ ಆಕರ ಫೋಟಾನುಗಳನ್ನು ಅವಿಚ್ಛಿನ್ನವಾಗಿ ಅತಿವೇಗದಿಂದ ಎರಚುತ್ತಿರುವುದು. ಹೀಗಾಗಿ ಕಿರಣ ನಮಗೆ ಅಖಂಡವಾದ ಕಂಬಿಯಂತೆ ಭಾಸವಾಗುತ್ತದೆ. ಬೆಳಕಿನ "ಅತಿವೇಗ"ದ ಮೌಲ್ಯ ಲಾಪ್ಲಾಸನ ಕಾಲಕ್ಕೇ ತಿಳಿದಿತ್ತು : ಸೆಕೆಂಡಿಗೆ 2.99793×10^{10} ಸೆಂ.ಮೀ. ಭೂಮಿಯ ಸಮಭಾಜಕೀಯ ತ್ರಿಜ್ಯ 6.37824×10^{10} ಸೆಂ.ಮೀ Q ಎಂದು ಗಮನಿಸಿದರೆ ಬೆಳಕಿನ ಕಿರಣ 1 ಸೆಕೆಂಡಿನಲ್ಲಿ ಧಾವಿಸುವ ದೂರ 7 ಭೂಪ್ರದಕ್ಷಿಣೆಗಳಿಗಿಂತ ಕೊಂಚ ಜಾಸ್ತಿ. ಬೆಳಕಿನ ವೇಗವನ್ನು C ಎಂಬ ಪ್ರತೀಕದಿಂದ ನಿರೂಪಿಸುವುದು ವಾಡಿಕೆ.

ರಾಶಿ, ಗಾತ್ರ, ಸಾಂದ್ರತೆ: ಫೋಟಾನಿನಿಂದ ತೊಡಗಿ ಮಹಾ ನಕ್ಷತ್ರಗಳ ವರೆಗೆ ಪ್ರತಿಯೊಂದು ವಸ್ತುವೂ ದ್ರವ್ಯದ ಕೂಡಿಕೆಯಿಂದ ಆದದ್ದು. ಇದರ ಅಳತೆಗೆ ದ್ರವ್ಯರಾಶಿ ಅಥವಾ ಸರಳವಾಗಿ ರಾಶಿ ಎಂದು ಹೆಸರು. ತಂಬಿಗೆ ಒಳಗಡೆ ತುಂಬಿದ ನೀರು ಬಿಂದಿಗೆ ಒಳಗಡೆ ಹಿಡಿಸಿದ ನೀರಿಗಿಂತ ಹಗುರವಾಗಿದೆ ಎನ್ನುವಾಗ

ನಾವು ಭೌತವಾಗಿ ಆ ರಾಶಿಗಳನ್ನು ತುಲನೆ ಮಾಡಿರುವೆವು. ಅರ್ಥಾತ್ ತಂಬಿಗೆ ನೀರಿನ ರಾಶಿ ಬಿಂದಿಗೆ ನೀರಿನ ರಾಶಿಗಿಂತ ಕಡಮೆ. ಭೂಮಿಯ ರಾಶಿ 5.977×10^{27} ಗ್ರಾಮ್. ಸೂರ್ಯನದು 1.991×10^{33} ಗ್ರಾಮ್. ಆದ್ದರಿಂದ ಭೂಮಿ "ತಂಬಿಗೆ"ಗಿಂತ ಸೂರ್ಯ "ಬಿಂದಿಗೆ" 3,33,200 ಪಟ್ಟು ಭಾರವಾಗಿದೆ.

ದ್ರವ್ಯ ಆಕ್ರಮಿಸಿರುವ ಜಾಗಕ್ಕೆ ಅದರ ಘನಗಾತ್ರ ಅಥವಾ ಸರಳವಾಗಿ ಗಾತ್ರ ಎಂದು ಹೆಸರು. ಗಾತ್ರರಹಿತ ದ್ರವ್ಯವಿಲ್ಲ, ದ್ರವ್ಯರಹಿತ ಗಾತ್ರವಿಲ್ಲ. ಗೋಳಾಕಾರದ ವಸ್ತುವೊಂದರ ತ್ರಿಜ್ಯ ತಿಳಿದಾಗ ಅದರ ಗಾತ್ರವನ್ನು ಗಣಿಸಲು ಸುಲಭ ಸೂತ್ರ ಉಂಟು. ಈಗ, ಸೂರ್ಯ-ಭೂಮಿ ತ್ರಿಜ್ಯಗಳ ನಿಷ್ಪತ್ತಿ ಸುಮಾರು 108 (ಅಂದರೆ ಸೂರ್ಯಗೋಳದ ತ್ರಿಜ್ಯ ಭೂಗೋಳದ ತ್ರಿಜ್ಯದ 108 ಪಟ್ಟು ದೊಡ್ಡದು) ಆಗಿರುವುದರಿಂದ ಸೂರ್ಯನೊಳಗೆ 10 ಲಕ್ಷಕ್ಕಿಂತಲೂ ಜಾಸ್ತಿ ಭೂಮಿಗಳನ್ನು ಒಟ್ಟಬಹುದು. ರಾಶಿಯನ್ನು ಗಾತ್ರದಿಂದ ಭಾಗಿಸಿದಾಗ ದೊರೆಯುವ ಸಂಖ್ಯೆಗೆ ಆ ವಸ್ತುವಿನ ಸರಾಸರಿ ಸಾಂದ್ರತೆ ಎಂದು ಹೆಸರು. ವಸ್ತುವಿನಲ್ಲಿ ದ್ರವ್ಯದ ಸರಾಸರಿ ಹಂಚಿಕೆಯನ್ನು ಸೂಚಿಸುವ ಮಾನಕವಿದು. ಸಾಂದ್ರತೆಯನ್ನು ಘನಸೆಂಟಿಮೀಟರ್ ಗಾತ್ರಕ್ಕೆ ಇಂತಿಷ್ಟು ಗ್ರಾಮ್‌ಗಳೆಂದು ನಿರೂಪಿಸುವುದು ವಾಡಿಕೆ. ಸೂರ್ಯನ ಸಾಂದ್ರತೆ 1.41; ಭೂಮಿಯದು 5.52. ಮಹಾಗಾತ್ರನೂ ಮಹಾರಾಶಿಯುತನೂ ಆಗಿರುವ ಸೂರ್ಯನ ಸಾಂದ್ರತೆ ಭೂಮಿಯದಕ್ಕಿಂತ ಕಡಮೆ ; ಸೂರ್ಯ ಅನಿಲಮಯ (ನಿಖರವಾಗಿ ಪ್ಲಾಸ್ಮಾಮಯ) ಆಗಿ ಅತಿ ವ್ಯಾಪ್ತಿ ಪಡೆದಿರುವುದರಿಂದ ಈ ತೋರ್ಕೆ ಅಸಾಂಗತ್ಯ ತಲೆದೋರಿದೆ. ವಾಸ್ತವವಾಗಿ ಸಾಮಾನ್ಯ ದರ್ಜೆಯ ಎಲ್ಲ ನಕ್ಷತ್ರಗಳಿಗೂ ಅನ್ವಯಿಸುವ ನಿಯಮವಿದು.

ವಿಶ್ವಬಾಂಧವ್ಯದ ಮೂಲ ಸೂತ್ರ: ದ್ರವ್ಯದ ಒಂದು ಮುಖ್ಯ ಗುಣ ಇತರ ದ್ರವ್ಯವನ್ನು ತನ್ನೆಡೆಗೆ ಸೆಳೆಯುವುದು. A ಮತ್ತು B ಎಂಬವು ಎರಡು ಗೋಳಗಳೆಂದೂ Aಯ ರಾಶಿ Bಯದಕ್ಕಿಂತ ಹೆಚ್ಚು ಇದೆಯೆಂದೂ ಭಾವಿಸುವ. ಇವನ್ನು ಮಟ್ಟಸ ಮತ್ತು ನುಣುಪು ನೆಲದ ಮೇಲೆ ಇರಿಸೋಣ. ಈಗ A ಮತ್ತು B ಗಳಲ್ಲಿ ಒಟ್ಟೈಸಿರುವ ರಾಶಿಗಳ ಪರಿಣಾಮವಾಗಿ ಒಂದು ಇನ್ನೊಂದನ್ನು ತನ್ನ ರಾಶಿಕೇಂದ್ರದೆಡೆಗೆ ಸೆಳೆಯುತ್ತದೆ. ಉದಾಹರಣೆಗೆ ಈ ಪುಸ್ತಕವನ್ನು ಓದುತ್ತಿರುವ ನೀವು ರಾಶಿಯುತರಾದ್ದರಿಂದ ಇದನ್ನು ನಿಮ್ಮ ರಾಶಿಕೇಂದ್ರದೆಡೆಗೆ ಸೆಳೆಯುತ್ತಿದ್ದೀರಿ. ಅದೇ ವೇಳೆ ಪುಸ್ತಕವಾದರೂ ಸುಮ್ಮನಿರುವುದೇ ? ರಾಶಿಯುತವಾದ ಅದು ಸಹ ಯಥಾಶಕ್ತಿ ನಿಮ್ಮನ್ನು ತನ್ನ ರಾಶಿಕೇಂದ್ರದೆಡೆಗೆ ಆಕರ್ಷಿಸುವುದು. ಆದರೆ ಈ ಪರಸ್ಪರ ಆಕರ್ಷಕ ಬಲಗಳು ಸೂಕ್ಷ್ಮಾತಿಸೂಕ್ಷ್ಮವಾದ್ದರಿಂದ ವ್ಯಾವಹಾರಿಕವಾಗಿ ಇವುಗಳ ಪರಿಣಾಮಗಳನ್ನು ಅಳೆಯಲು ಬಲು ನವುರಾದ ಪ್ರಯೋಗಗಳನ್ನು ಮಾಡಬೇಕಾಗುತ್ತದೆ. ಎರಡು ವಸ್ತುಗಳ ನಡುವಿನ ಈ ಸೆಳೆತಕ್ಕೆ ಗುರುತ್ವಾಕರ್ಷಣ ಬಲ ಅಥವಾ ಸರಳವಾಗಿ ಗುರುತ್ವಬಲ ಎಂದು ಹೆಸರು. ಇದರ ಅಳತೆಗೆ ಒಂದು ಸುಲಭ ಸೂತ್ರವಿದೆ : A ಮತ್ತು B ವಸ್ತುಗಳ ರಾಶಿಗಳು ಅನುಕ್ರಮವಾಗಿ m ಮತ್ತು M ಆಗಿದ್ದು ಅವುಗಳ ರಾಶಿಕೇಂದ್ರಾಂತರ γ ಆಗಿದ್ದರೆ ಆಗ ಒಂದು ಇನ್ನೊಂದನ್ನು ತನ್ನ ರಾಶಿಕೇಂದ್ರದೆಡೆಗೆ ಸೆಳೆವ ಬಲದ ಪರಿಮಾಣ GMm/γ^2. ಇಲ್ಲಿ G ಎನ್ನುವುದು ವಿಶ್ವದ ಎಲ್ಲೆಲ್ಲೂ ಒಂದೇ ಬೆಲೆ ಪಡೆದಿರುವ ಒಂದು ಸ್ಥಿರಾಂಕ. ಆದ್ದರಿಂದ Gಗೆ ಗುರುತ್ವಾಕರ್ಷಣದ ವಿಶ್ವಸ್ಥಿರಾಂಕ ಎಂಬ ಹೆಸರುಂಟು. Gಯ ಬೆಲೆಯನ್ನು ನಿರ್ಧರಿಸಲಾಗಿದೆ. ಸರ್ ಐಸಾಕ್ ನ್ಯೂಟನ್ (1642–1727) ಆವಿಷ್ಕರಿಸಿ ನಿರೂಪಿಸಿದ ಈ ಸೂತ್ರಕ್ಕೆ ವಿಶ್ವಗುರುತ್ವಾಕರ್ಷಣ ನಿಯಮ ಎಂದು ಹೆಸರು. ಎರಡು ಆಕಾಶಕಾಯಗಳ ಪರಸ್ಪರ ವರ್ತನೆಯನ್ನು ಇದು ವಿವರಿಸಬಲ್ಲುದು. ಉದಾಹರಣೆಗೆ ಭೂಮಿ ಮತ್ತು ಚಂದ್ರರ (ರಾಶಿ$=7\ 35 \times 10^{25}$ ಗ್ರಾಮ್ ; ಅಂದರೆ ಭೂರಾಶಿಯ 0.0123 ಅಂಶ) ಪರಸ್ಪರಾಕರ್ಷಣೆಯಲ್ಲಿ ಭೂಮಿಯದು ಮೇಲುಗೈ ಆಗುತ್ತದೆ. ಸೂರ್ಯ ಮತ್ತು ಭೂಮಿಗಳ (ರಾಶಿನಿಷ್ಪತ್ತಿ 3,33,200:1) ಪರಸ್ಪರಾಕರ್ಷಣೆಯಲ್ಲಿ ಸೂರ್ಯನಿಗೆ ಅಗ್ರಪದವಿ ಲಭಿಸುವುದು. ಈ ಕಾರಣದಿಂದಾಗಿ ಚಂದ್ರ ಭೂಮಿಯ ಸುತ್ತಲೂ ಮತ್ತು

ಭೂಮಿ (ಚಂದ್ರನ ಸಮೇತ) ಸೂರ್ಯನ ಸುತ್ತಲೂ ಪರಿಭ್ರಮಿಸುತ್ತದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವಿದು : ಗುರುತ್ವರಹಿತ ರಾಶಿ ಇಲ್ಲ, ರಾಶಿರಹಿತ ಗುರುತ್ವ ಇಲ್ಲ; ರಾಶಿ ಹಿರಿದಾದಂತೆ ಗುರುತ್ವ ಹಿರಿದಾಗುತ್ತದೆ ; ಹಿರಿರಾಶಿಗೆ ಹಿರಿಗುರುತ್ವ ಬಲ ; ಕಿರಿರಾಶಿಗೆ ಕಿರಿಗುರುತ್ವ ಬಲ.

ಈಗ ನಮ್ಮ ಮನೆಯಾದ ಭೂಮಿಗೆ ಮರಳೋಣ. ಇದರ ಅಗಾಧ ರಾಶಿಯೊಡನೆ (ಮತ್ತು ಗಾತ್ರದೊಡನೆ ಕೂಡ) ಹೋಲಿಸುವಾಗ ನಾವೂ ನಮ್ಮ ಬೃಹದ್ರಚನೆಗಳೂ ಅನಂತಾಲ್ಪತ್ವವನ್ನು ಪಡೆಯುತ್ತವೆ. ಗೌರೀಶಂಕರದ ಮಹೋನ್ನತಿಯನ್ನು ಭೂವ್ಯಾಸದೊಂದಿಗೆ ಹೋಲಿಸುವಾಗ ದೊರೆಯುವ ನಿಷ್ಪತ್ತಿ ಅಲ್ಪ ಸಂಖ್ಯೆಯಾದ 0.000625. ಭೂಮಿಯನ್ನು ಕಾಲ್ಚೆಂಡಿನ ಗಾತ್ರಕ್ಕೆ ಕುಗ್ಗಿಸಿದರೆ ಈ ನಗಾಧಿರಾಜನಿಗೆ ಅದರ ಮೇಲೆ ಒಂದು ಸೂಕ್ಷ್ಮ ರೇಣುಸ್ಥಾನವೂ ಲಭಿಸದು ; ಇನ್ನು ಶಾಂತಸಾಗರದ ಹಿರಿ ಆಳ ಹಗುರ ಗೀರಾಗಿ ಕೂಡ ಮೂಡದು. ಆದ್ದರಿಂದ ಭೂಮಿ–ನಾವು ಸಂಬಂಧದಲ್ಲಿ ಭೂಗುರುತ್ವದ ಪ್ರಭಾವ ನಮ್ಮ ಮೇಲೆ ಅತ್ಯಂತ ಪ್ರಬಲವಾಗಿದೆ. ಭೂ ತೊಗಟೆಯ ಮೇಲೆ ಅನಂತಸೂಕ್ಷ್ಮ ಗಾತ್ರದ ಕ್ರಿಮಿಗಳಂತೆ ಅಂಟಿಕೊಂಡು ಅತ್ತ ಇತ್ತ ಹರಿಯುತ್ತಿರುವ ನಾವು ಇದರ ಗುರುತ್ವಬಲದ ದಿವ್ಯಾಲಿಂಗನದಿಂದ ಸುಲಭವಾಗಿ ತಪ್ಪಿಸಿಕೊಂಡು ಹೋಗಲಾರೆವು. ನೆಲದಿಂದ ಮೇಲಕ್ಕೆ ನೆಗೆದವರು ಮತ್ತೆ ಹಿಂದಕ್ಕೆ ಬೀಳುವುದು, ಸಮತೋಲ ತಪ್ಪಿದ ವಿಮಾನ ಧರೆಗೆ ಕೆಡೆಯುವುದು, ಉಲ್ಕೆಗಳು ಭೂತಳದೆಡೆಗೆ ಮಹಾರಭಸದಿಂದ ಧಾವಿಸುವುದು ಎಲ್ಲದಕ್ಕೂ ಕಾರಣ ಭೂಮಿಯ ಗುರುತ್ವಾಕರ್ಷಣೆ.

ವಿಮೋಚನ ವೇಗ : ನೆಗೆತದ ಅಥವಾ ಅದರಷ್ಟು ಅಪಾಯಕಾರಿ ಅಲ್ಲದ ಎಸೆತದ ಉದಾಹರಣೆಯನ್ನು ಸ್ವಲ್ಪ ವಿವರವಾಗಿ ಪರಿಶೀಲಿಸೋಣ. ನೆಲದಿಂದ ಮೇಲೆಸೆದ ಕಲ್ಲು ಒಂದಷ್ಟು ಎತ್ತರ ಏರಿ ಮತ್ತೆ ನೆಲಕ್ಕೆ ಬೀಳುವುದು ಸರಿ ಅಷ್ಟೆ. ಎಸೆವಾಗ ವಸ್ತುವಿಗೆ ಒದಗಿಸುವ ನೂಕುಬಲ ಹೆಚ್ಚು ಆದಂತೆ (ಇದು ನಮ್ಮ ರಟ್ಟೆ ತ್ರಾಣವನ್ನು ಅವಲಂಬಿಸಿದೆ) ಅದು ಏರುವ ಎತ್ತರವೂ ಜಾಸ್ತಿ ಜಾಸ್ತಿ ಆಗುತ್ತದೆ ಎಂದು ಅನುಭವದಿಂದ ಅರಿತಿದ್ದೇವೆ. ಇದು ತಿಳಿಯದವರು ಪ್ರತ್ಯಕ್ಷ ಪ್ರಯೋಗ ಮಾಡಿನೋಡಲು ಅಡ್ಡಿ ಇಲ್ಲ. ಆದರೆ ಗಾಜಿನ ಮನೆಯಲ್ಲಿ ವಾಸಿಸುವವರು ಮಾತ್ರ ಈ "ಕಲ್ಲು ತೂರಾಟ" ಪ್ರಯೋಗ ಮಾಡುವಾಗ ತುಂಬ ಎಚ್ಚರ ವಹಿಸುವುದು ಅಪೇಕ್ಷಣೀಯ. ಕಲ್ಲು ಕೆಳಕ್ಕೆ ಕೆಡೆಯಬೇಕು ಏಕೆ ? ಎಸೆದದ್ದು ಹಾಗೆಯೇ ರಟ್ಟೆ ಚಂದ್ರನೆಡೆಗೋ ಸೂರ್ಯ ನಕ್ಷತ್ರಗಳೆಡೆಗೋ ತೊಲಗಿ ಹೋಗುವುದಿಲ್ಲವೇಕೆ ? ಭೂಮಿ ಅದನ್ನು ತನ್ನ ಕೇಂದ್ರದೆಡೆಗೆ ಸೆಳೆಯುವುದೇ ಇದರ ಕಾರಣ. ಕಲ್ಲಿನ ಹಾರಾಟದ ವೇಳೆ ಅಲ್ಲಿ ಎರಡು ವಿರುದ್ಧ ಬಲಗಳ ನಡುವೆ ಜಗ್ಗಾಟ ನಡೆದಿರುವುದು : ಒಂದು ಕಲ್ಲಿಗೆ ನಾವು ನೀಡಿದ ಪ್ರಾರಂಭಿಕ ನೂಕುಬಲ—ಇದು ಕಲ್ಲನ್ನು ಮೇಲೆ ಮೇಲೆ ಒಯ್ಯಲು ಹೋರಾಡುತ್ತದೆ ; ಎರಡು, ಭೂಮಿಯ ಆಕರ್ಷಣ ಬಲ—ಇದು ಕಲ್ಲನ್ನು ನೆಲಕ್ಕೆ ಹತ್ತಿರ ಹತ್ತಿರ ಸೆಳೆಯಲು ಹವಣಿಸುತ್ತದೆ. ಸಮಷ್ಟಿಯ (ಭೂಮಿ) ಎದುರಿಗೆ ವ್ಯಷ್ಟಿಯ (ಕಲ್ಲು) ಈ ಹೋರಾಟ ಎಷ್ಟು ಹೊತ್ತು ತಾನೇ ಮುಂದುವರಿದೀತು? ನೂಕುಬಲ ಸೋಲುತ್ತದೆ. ಕಲ್ಲು ಮತ್ತೆ ಮೇಲೇರಬಾರದು. ಆ ಸಂಧಿಸ್ಥ ಮುಹೂರ್ತದಲ್ಲಿ ಅದು ತಾತ್ಕ್ಷಣಿಕ ವಿರಾಮಸ್ಥಿತಿಯಲ್ಲಿ (ತ್ರಿಶಂಕು ಸ್ವರ್ಗ ?) ಇರುತ್ತದೆ. ಮರುಕ್ಷಣ ಭೂಮ್ಯಾಕರ್ಷಣೆಗೆ ಮಣಿದು ಇಳೆಗೆ ಇಳಿಯಲು ತೊಡಗುವುದು. ಇದು ಸಾಧಾರಣ ಪರಿಸ್ಥಿತಿ. ಹಾಗಾದರೆ ಅಸಾಧಾರಣ ಪರಿಸ್ಥಿತಿ ಏನು ? ನೂಕುಬಲ–ಗುರುತ್ವಬಲ ಜಗ್ಗಾಟದಲ್ಲಿ ನೂಕುಬಲದ ಕೈಮೇಲಾಗುವುದು—ಕೊಕ್ಕೆಯ ಹಿನ್ಸೆಳೆತದಿಂದ ಪಾರಾಗಿ ಕವಣೆ ಮುನ್ನೆಗೆಯುವುದು. ಗುರುತ್ವಬಲದ ಪ್ರಮಾಣ ಹಾಗೂ ಪ್ರಭಾವ ತಿಳಿದಿರುವುದರಿಂದ ಕಲ್ಲಿಗೆ ಸಾಕಷ್ಟು ಪಾಥೇಯವನ್ನು (ನೂಕುಬಲ) ಒದಗಿಸಿ ಅದು ಈ ಜಗ್ಗಾಟದಲ್ಲಿ ಸೋಲದಂತೆ, ಬದಲು ಭೂಮಿಯ ಅಗೋಚರ "ಬಂಧನ"ದಿಂದ ವಿಮೋಚನೆಗೊಂಡು ಸಿಡಿದು ಹೋಗುವಂತೆ, ಮಾಡುವುದು ಸಾಧ್ಯವಾದೀತೇ ಎಂಬ ಪ್ರಶ್ನೆ ಮೊಳೆಯುತ್ತದೆ. ಇದಕ್ಕೆ ಉತ್ತರ ಸಾಧ್ಯ. ನೆಲದಿಂದ ನೇರ ಮೇಲಕ್ಕೆ ಕಲ್ಲನ್ನು ಸೆಕೆಂಡಿಗೆ 11–19 ಕಿ.ಮೀ.ಯಾ

ಹೆಚ್ಚು ವೇಗದಿಂದ ಕವಣೆ ಬೀರಿದ್ದಾದರೆ ಅದು ಧರೆಗೆ ಮರುಳುವುದಿಲ್ಲ. ಈ ವೇಗ ಅದೆಷ್ಟು ಅಗಾಧವಾದದ್ದು ಎನ್ನುವುದರ ಅರಿವಾಗಲು ಒಂದು ನಿದರ್ಶನ ಪರಿಶೀಲಿಸೋಣ. 20–21 ಶತಮಾನ ಸಂಧಿಕಾಲದ ಪರಮೋತ್ಕೃಷ್ಟ ವಿಮಾನವೆಂದು ಹೆಸರಾದ ಕಾನ್‌ಕಾರ್ಡ್ ಇದೀಗ (1977) ಪ್ರತ್ಯಕ್ಷ ಹಾರಾಟ ಆರಂಭಿಸಿದೆ. ಇದರ ಅತಿರಭಸದ ಹಾರಾಟವೇಗ ಕೂಡ ಸೆಕೆಂಡಿಗೆ 0.6 ಕಿ.ಮೀ ಮಾತ್ರ. (ಇದು 11.19ರ 0.053 ಅಂಶ) ಆದ್ದರಿಂದ ಭೂಮಾತೆ ಅದೆಂಥ ಪ್ರಬಲ ಅಪ್ಪುಗೆ ಬಲದಿಂದ ತನ್ನ ಸರ್ವಸ್ವವನ್ನೂ ಬರಸೆಳೆದು ಬಿಗಿ ಹಿಡಿದು ಜೋಪಾನವಾಗಿ ಕೂಡಿ ಕಾಪಾಡಿಕೊಂಡು ಬರುತ್ತಿದ್ದಾಳೆ ಎಂಬುದನ್ನು ಭಾವುಕರು ಗಮನಿಸಿ ವೈಜ್ಞಾನಿಕವಾಗಿ ಕೂಡ ಸಂತಸ ತಳೆಯಬಹುದು. ಭೂಗುರುತ್ವದ ದಿವ್ಯಾಲಿಂಗನದಿಂದ ಬಿಡುಗಡೆಗೊಂಡು ಪಾರಾಗಲು ಕಲ್ಲಿಗೆ ಅಥವಾ ಯಾವುದೇ ವಸ್ತುವಿಗೆ ನೀಡಬೇಕಾದ ಪ್ರಾರಂಭಿಕ ಕನಿಷ್ಠ ವೇಗಕ್ಕೆ ವಿಮೋಚನವೇಗ ಎಂದು ಹೆಸರು. ಆದ್ದರಿಂದ ಭೂಮಿಯ ವಿಮೋಚನ ವೇಗ ಸೆಕೆಂಡಿಗೆ 11.19 ಕಿ.ಮೀ.

ಮುಂದಿನ ಯಾದಿಯಲ್ಲಿ ಸೌರವ್ಯೂಹದ ಪ್ರಮುಖ ಕಾಯಗಳ ಕೆಲವು ವಿವರಗಳನ್ನು ಬರೆದಿದೆ. ಇಳಿಯುತ್ತಿರುವ ರಾಶಿಯ ಅನುಸಾರ ಈ ಕಾಯಗಳನ್ನು ಅಳವಡಿಸಲಾಗಿದೆ ಎಂಬುದನ್ನು ಗಮನಿಸಬೇಕು. (ಪುಟ 388)

ಹಿರಿರಾಶಿಗೆ (ಅಥವಾ ಹಿರಿಗಾತ್ರಕ್ಕೆ) ಎಲ್ಲವೂ ಹಿರಿಯದೇ ಆಗಿರಬೇಕು ಎಂದು ಲೋಕ ಪ್ರಜ್ಞೆ(=ಪೂರ್ವಗ್ರಹಗಳ ಸಂಕಲನ) ನಮಗೆ ಹೇಳುತ್ತದೆ. ಆದರೆ ಬದುಕು ಹೇಗೋ ಈ ಯಾದಿ ಹಾಗೆ. ಹಲವಾರು ಅಪವಾದಗಳನ್ನು (ಅಚ್ಚರಿಗಳನ್ನು ಅನ್ನಿ, ಬೇಕಾದರೆ) ನಮ್ಮ ಎದುರು ಪ್ರಕಾಶಿಸುತ್ತದೆ. ಗಾತ್ರಕ್ಕೆ ಬನ್ನಿ (ಇದನ್ನು ತ್ರಿಜ್ಯ ನಿರ್ಧರಿಸುತ್ತದೆ): ನೆಪ್ಚೂನ್, ಯುರೇನಸ್ ಅಪಸ್ವರ ಮಿಡಿಯುತ್ತವೆ. ಸಾಂದ್ರತೆಯ ನೀಟ ಸಾಲಂತೂ ಲೋಕಪ್ರಜ್ಞೆಯ ಅಭಿಪ್ರಾಯವನ್ನೇ ಹಂದಾಡಿಸಿ ಬಿಡುವುದು. ಮೇಲ್ಮೈ ಗುರುತ್ವದ ನೀಟ ಸಾಲಿನಲ್ಲಿ ತಾಳ ತಪ್ಪಿದೆ. ವಿಮೋಚನವೇಗದ ನೀಟಸಾಲು ಅಪವಾದವಾಗದೇ ವಿಧೇಯವಾಗಿರುವುದು ಆಕಸ್ಮಿಕ ಹೊಂದಾಣಿಕೆ ಮಾತ್ರ. ಇಂಥ "ಅಸಾಂಗತ್ಯ"ಗಳಿಂದ ತಿಳಿಯುವ ಒಂದು ಮುಖ್ಯಾಂಶ ಎಂದರೆ ರಾಶಿ (M) ತ್ರಿಜ್ಯ (R) ಗಾತ್ರ (V)ವಿಮೋಚನ ವೇಗ (v) ಇವುಗಳ ನಡುವೆ ನಾವು ಸುಲಭವಾಗಿ ಊಹಿಸಬಹುದಾದ ಯಾ ಗ್ರಹಿಸಬಹುದಾದ ನೇರ ಸಂಬಂಧವೊಂದಿಲ್ಲ. ಲೆಕ್ಕದ ಸಾಮುವಿನಲ್ಲಿ ಪಳಗಿದವರ ಪ್ರೀತ್ಯರ್ಥ ಈ ಮುಂದಿನ ಪ್ರತೀಕಾತ್ಮಕ ಭಾಷೆಯನ್ನು ಬರೆದಿದೆ :

$$V=\frac{4}{3}\pi R^3, \quad M=Vd, \quad g=\frac{GM}{R^2}, \quad v^2=\frac{2GM}{R}$$

ಇಲ್ಲಿ πಯ (ಗ್ರೀಕ್ ಅಕ್ಷರ ಪೈ) ಸ್ಥೂಲ ಬೆಲೆ 3.14159 ; ಮತ್ತು G ಈ ಮೊದಲೇ ವಿವರಿಸಿರುವ ಗುರುತ್ವಾಕರ್ಷಣದ ವಿಶ್ವಸ್ಥಿರಾಂಕ (ಇದರ ಬೆಲೆಯೂ ತಿಳಿದಿದೆ). ಈ ಸಮೀಕರಣಗಳನ್ನು ಗಣಿತಗಣನೆ ಸಾಧನೆಗಳಿಂದ ಸ್ಥಾಪಿಸುವ ಸಂತೋಷ (?) ಲೆಕ್ಕ ಕಲಿತವರ ಪಾಲಿಗಿರಲಿ, ನಮಗೆ ಫಲಿತಾಂಶದ ಗುಳ ಮಾತ್ರ ಸಾಕು.

ಲಾಪ್ಲಾಸನ ಕಾಲ್ಪನಿಕ ನಕ್ಷತ್ರ : ಈಗ ನಾವು ಲಾಪ್ಲಾಸನ ಕಾಲ್ಪನಿಕ ನಕ್ಷತ್ರವನ್ನು ಕಂಡು ಧನ್ಯರಾಗಲು ಸಿದ್ಧರಾಗಿದ್ದೇವೆ. ಅದಕ್ಕೆ ಅವನು ಮಹಾಗಾತ್ರದ ಸೂರ್ಯನ ತ್ರಿಜ್ಯವನ್ನೂ ಗರಿಷ್ಠ ಸಾಂದ್ರತೆ ಇರುವ ಭೂಮಿಯ ಸಾಂದ್ರತೆಯನ್ನೂ ಆಧಾರವಾಗಿ ತೆಗೆದುಕೊಂಡು ಉಭಯಲಾಭವನ್ನು ಒದಗಿಸಿದ್ದಾನೆ.ಈ ಸೈದ್ಧಾಂತಿಕ ನಕ್ಷತ್ರದ ವಿಮೋಚನವೇಗವನ್ನು ಮೇಲಿನ ಸೂತ್ರಾನುಸಾರ ಗಣಿಸಿ ಪಡೆಯಬಹುದು. ಅದು ಸೆಕೆಂಡಿಗೆ 3.056×10^{10} ಸೆಂ.ಮೀ. ಬೆಳಕಿನ ವೇಗ C ಗಿಂತ ಇದು ಹೆಚ್ಚು ; ಆದ್ದರಿಂದ ಇದೊಂದು ವಿಚಿತ್ರ ಕಾಯ. ಇಂಥ ಆಕಾಶವೈಚಿತ್ರ್ಯದ ವರ್ತನೆ ಹೇಗಿರುವುದೆಂದು ಈಗ ನೋಡೋಣ. ಇದರಿಂದ, ನಮ್ಮ ಸೂರ್ಯ ಮತ್ತು

ಕಾಯದ ಹೆಸರು	ರಾಶಿ (ಭೂಮಿ =1) M	ತ್ರಿಜ್ಯ (ಭೂಮಿ = 1) R	ಸರಾಸರಿ ಸಾಂದ್ರತೆ (ಘನ ಸೆಂ.ಮೀ.ಗೆ ಗ್ರಾಮ್) d	ಮೇಲ್ಮೈ ಗುರುತ್ವ (ಭೂಮಿ = 1) g	ವಿಮೋಚನ ವೇಗ (ಸೆಕೆಂಡಿಗೆ ಕಿ.ಮೀ.) v
ಸೂರ್ಯ	3,33,200	108	1.41	28.57	618
ಗುರು	318	11.19	1.33	2.64	57.5
ಶನಿ	95.2	9.47	0.69	1.13	35.4
ನೆಪ್ಚ್ಯೂನ್	17.3	3.5	2.27	1.41	24.4
ಯುರೇನಸ್	14.6	3.69	1.56	1.07	21.9
ಭೂಮಿ	1	1	5.52	1	11.19
ಶುಕ್ರ	0.82	0.95	5.3	0.91	10.3
ಮಂಗಳ	0.108	0.53	3.94	0.38	5.1
ಬುಧ	0.056	0.38	5.1	0.39	4.3
ಚಂದ್ರ	0.0123	0.27	3.34	0.17	2.38

ಇತರ ದೃಗ್ಗೋಚರ ನಕ್ಷತ್ರಗಳ ತೆರದಲ್ಲಿಯೇ, ಬೆಳಕಿನ ಕಂಬಿಗಳು (ಅಂದರೆ ಫೋಟಾನ್ ಕಣಗಳ ಸತತ ಹೊನಲು) ಹೊರಹೊಮ್ಮುತ್ತವೆ. ಇವು ವೈಚಿತ್ರ್ಯದ ಮೇಲ್ಮೈಯಿಂದ ನೆಗೆವ (ಅಂದರೆ ಉಡಾವಣೆಗೊಳ್ಳುವ) ವೇಗ C. ವೈಚಿತ್ರ್ಯದ ಗುರುತ್ವಬಂಧನದಿಂದ ಇವು ಬಿಡುಗಡೆಗೊಂಡು ಹೊರಲೋಕಕ್ಕೆ ತೆರಳಬೇಕಾದರೆ ಈ ವೇಗ ಅವರ ವಿಮೋಚನ ವೇಗಕ್ಕಿಂತ ಜಾಸ್ತಿ ಆಗಬೇಕು. "ದುರದೃಷ್ಟವಶಾತ್" ಪರಿಸ್ಥಿತಿ ತದ್ವಿರುದ್ಧವಾಗಿದೆ. ಆದ್ದರಿಂದ ಫೋಟಾನ್ ಕಣಗಳು (ಬೆಳಕಿನ ಕಂಬಿಗಳು) ಈ ಮೊದಲು ಉದಾಹರಿಸಿದ ಕಲ್ಲಿನಂತೆ, "ಸೋತು" ವೈಚಿತ್ರ್ಯದ ಮೈಗೆ ಮರಳುತ್ತವೆ. ಅರ್ಥಾತ್, ವೈಚಿತ್ರ್ಯದಿಂದ ಬೆಳಕು ಉತ್ಸರ್ಜಿಸಿದರೂ ಅದು ಅಲ್ಲಿಂದ ಹೊರಸಾಗಲಾರದು: "ರಾಯಭಾರಿಗಳೇನೋ ವಿಪುಳ ಸಂಖ್ಯೆಯಲ್ಲಿ ಅಧಿಕೋತ್ಸಾಹದಿಂದ ಹೊರ ತೆರಳಲು ಸಿದ್ಧರಾಗಿದ್ದಾರೆ. ಆದರೆ ಅವರಿಗೆ ಪರದೇಶ ಪ್ರಯಾಣ ಮಾಡಲು ಕೇಂದ್ರಸರ್ಕಾರದ ರಹದಾರಿ ದೊರೆತಿಲ್ಲ" ಎನ್ನುವ ಸನ್ನಿವೇಶಕ್ಕೆ ಸಮಾನವಾದದ್ದು ನಕ್ಷತ್ರ ವೈಚಿತ್ರ್ಯದ ಈ ಸ್ಥಿತಿ. ಹೀಗಾಗಿ ವಿಶ್ವದ ಬಲು ದೊಡ್ಡ ಮಿನುಗು ವಸ್ತುಗಳು ನಮಗೆ ಕಾಣದಿರುವ ಸಾಧ್ಯತೆ ಉಂಟು.

ಕೃಷ್ಣವಿವರಗಳು — ಆಕಾಶಗರ್ತಗಳು : ಇಂಥ ವೈಚಿತ್ರ್ಯಗಳಿಗೆ ಆಧುನಿಕ ವಿಜ್ಞಾನಿಗಳು ಕೃಷ್ಣವಿವರಗಳು ಎಂಬ ಹೆಸರನ್ನು ನೀಡಿದ್ದಾರೆ. ಕೃಷ್ಣ ಎಂದರೆ ಕಪ್ಪು, ವಿವರ ಎಂದರೆ ತೂತು ಎಂದರ್ಥ. ಸ್ವತಃ ವೈಚಿತ್ರ್ಯದಿಂದ ಒಂದಿನಿತು ಬೆಳಕೂ ಹೊರಬರುವುದಿಲ್ಲ. ಇನ್ನು (ಸೈದ್ಧಾಂತಿಕವಾಗಿ) ನಾವು ಅದರ ಮೇಲೆ ಬೀರಬಹುದಾದ ಬೆಳಕಿನ ಮೂಲ ಪ್ರತಿಫಲನಗೊಂಡು ನಮ್ಮೆಡೆಗೆ ಮರಳಿ ವೈಚಿತ್ರ್ಯದ ಅಸ್ತಿತ್ವವನ್ನು ಸ್ಥಿರೀಕರಿಸುವುದು ಸಾಧ್ಯವಾದೀತೇ ಎಂದರೆ ಇದೂ ಸಂಭವಿಸದು. ಏಕೆಂದರೆ ಪ್ರತಿಫಲಿತ ದೂಲವಾದರೂ ಫೋಟಾನುಗಳ ಹೊನಲೇ. ಇದು ವೈಚಿತ್ರ್ಯದಿಂದ ಹೊರಸಾಗುವಂತಿಲ್ಲ. ಹೀಗೆ ಅಚ್ಚ ಕಪ್ಪು ಬಣ್ಣದ, ತನ್ನಿಂದ ಯಾವುದನ್ನೂ ಹೊರಬಿಡದ ಮತ್ತು ತನ್ನಲ್ಲಿಗೆ ಬಂದ ಪ್ರತಿಯೊಂದನ್ನೂ ಸ್ವಾಹಾಕರಿಸಿ "ಕೃಷ್ಣಾರ್ಪಣಮಸ್ತು" ಮಾಡುವ ಆಕಾಶಗರ್ತಕ್ಕೆ ಕೃಷ್ಣವಿವರ ಎಂಬ ಹೆಸರು ಅನ್ವರ್ಥನಾಮವಾಗಿದೆ.

ಲಾಪ್ಲಾಸನ ಕಾಲದಲ್ಲಿ ತಿಳಿದಿದ್ದುದು ದೃಗ್ಗೋಚರ ಖಗೋಳವಿಜ್ಞಾನ ಮಾತ್ರ — ಅಂದರೆ ಕಣ್ಣಿಗೆ ಕಾಣುವ ಆಕಾಶಕಾಯಗಳನ್ನು ಕುರಿತ ಅಧ್ಯಯನ ಮಾತ್ರ. ಆಧುನಿಕ ದೃಷ್ಟಿ ಖಗೋಳ ವಿಜ್ಞಾನದಲ್ಲಿ ಮೂರು ಮುಖ್ಯ ವಿಭಾಗಗಳನ್ನು ಗುರುತಿಸಿ ಹೆಸರಿಸಿದೆ: ರೇಡಿಯೊ ವಿಭಾಗ, ದೃಗ್ಗೋಚರ ವಿಭಾಗ, ಎಕ್ಸ್ ಕಿರಣ ವಿಭಾಗ. ನಮ್ಮ ಕಣ್ಣುಗಳ ರಚನೆಯ ಪರಿಣಾಮವಾಗಿ ಈ ಮೂರು ವಿಭಾಗಗಳು ಏರ್ಪಟ್ಟಿವೆ, ಅಷ್ಟೆ. ಆಕಾಶಕಾಯಗಳಿಂದ ಬರುವ ರೇಡಿಯೊ ತರಂಗಗಳನ್ನು (ವ್ಯಾಪಕವಾಗಿ ಅತಿರಕ್ತ ವಿಕಿರಣವನ್ನು) ರೇಡಿಯೊ ಖಗೋಳ ವಿಜ್ಞಾನ ಅಭ್ಯಸಿಸುತ್ತದೆ; ಬೆಳಕನ್ನು (ದೃಗ್ಗೋಚರ ವಿಕಿರಣವನ್ನು) ದೃಗ್ಗೋಚರ ಖಗೋಳವಿಜ್ಞಾನ ಅಭ್ಯಸಿಸುತ್ತದೆ; ಎಕ್ಸ್ ಕಿರಣಗಳನ್ನು (ವ್ಯಾಪಕವಾಗಿ ಅತಿನೇರಿಳೆ ವಿಕಿರಣವನ್ನು) ಎಕ್ಸ್ ಕಿರಣ ಖಗೋಳವಿಜ್ಞಾನ ಅಭ್ಯಸಿಸುತ್ತದೆ. ಅತಿರಕ್ತ, ದೃಗ್ಗೋಚರ ಮತ್ತು ಅತಿನೇರಿಳೆ ಎಂಬ ಈ ಮೂರೂ ಬಗೆಯ ವಿಕಿರಣಗಳಿಗೆ ಒಟ್ಟಾಗಿ ವಿದ್ಯುತ್ಕಾಂತ ವಿಕಿರಣವೆಂದು ಹೆಸರು. ಆದ್ದರಿಂದ ಆಕಾಶಕಾಯ ಎಂಬುದೊಂದು ವಿದ್ಯುತ್ಕಾಂತ ವಿಕಿರಣವನ್ನು ಉತ್ಸರ್ಜಿಸುವ ಆಕರ ಎಂದೂ ಅದಕ್ಕೂ ನಮಗೂ ನಡುವೆ ರಾಯಭಾರಿ ಸಂಬಂಧ ಏರ್ಪಡುವುದು ವಿದ್ಯುತ್ಕಾಂತ ವಿಕಿರಣದಿಂದ ಎಂದೂ ಈಗ ಹೇಳಬಹುದು. ವಿದ್ಯುತ್ಕಾಂತ ವಿಕಿರಣ ವಿಶ್ವದ ಬಹ್ವಂಶ ನಿರ್ವಾತ ಪ್ರದೇಶವನ್ನು ಬೆಳಕಿನ ವೇಗ C ಯಿಂದ ಗಮಿಸುತ್ತದೆ. ಆದ್ದರಿಂದ ಆಧುನಿಕ ಪರಿಭಾಷೆಯಲ್ಲಿ "ಒಂದು ನಕ್ಷತ್ರ ನಮಗೆ ಗೋಚರಿಸುತ್ತದೆ" ಎನ್ನುವ ವಾಕ್ಯಕ್ಕೆ ಹೆಚ್ಚಿನ ಅರ್ಥ ಮತ್ತು ಹೊಸ ಆಯಾಮ ಪ್ರಾಪ್ತವಾಗಿವೆ: ಅದರಿಂದ ಹೊರಟ ವಿದ್ಯುತ್ಕಾಂತ ವಿಕಿರಣ ನಮ್ಮನ್ನು ತಲಪಿದಾಗ ಮತ್ತು ನಾವು ಅದನ್ನು ಕಲೆಹಾಕಿ ಗುರುತಿಸಿದಾಗ ಅದು ನಮಗೆ ಗೋಚರಿಸುತ್ತದೆ.

ಕೃಷ್ಣವಿವರವನ್ನು ಈ ಹಿನ್ನೆಲೆಯಲ್ಲಿ ಪರಿಶೀಲಿಸೋಣ. ಅದರಿಂದ ಫೋಟಾನುಗಳ ಹೊನಲಾದ

ಬೆಳಕು ಒಂದೇ ಅಲ್ಲ, ಯಾವುದೇ ವಿಧವಾದ ವಿದ್ಯುತ್ಕಾಂತ ವಿಕಿರಣವೂ ತಪ್ಪಿಸಿಕೊಂಡು ಹೊರಬರಲಾರದು. ಆದ್ದರಿಂದ ಲಾಪ್ಲಾಸನ ಹೇಳಿಕೆಯ ಆಧುನಿಕ ರೂಪ ಹೀಗಿರಬಹುದು : "ವಿಮೋಚನವೇಗ C ಗಿಂತ ಹೆಚ್ಚು ಇರುವ ಆಕಾಶಕಾಯದಿಂದ ಹೊರಲೋಕಕ್ಕೆ ಯಾವುದೇ ವಿಧವಾದ ವಿದ್ಯುತ್ಕಾಂತ ವಿಕಿರಣವೂ ತೆರಳುವುದಿಲ್ಲ. ಇಂಥ ಒಂದು ಕಾಯದ ಅಸ್ತಿತ್ವ ಪ್ರತ್ಯಕ್ಷ ವಿಧಾನಗಳಿಂದ ಎಂದೂ ನಮಗೆ ತಿಳಿಯಲಾರದು."

ತಾತ್ತ್ವಿಕವಾಗಿ ಕೃಷ್ಣವಿವರಗಳ ಇರವನ್ನು ಬಹುಮಂದಿ ವಿಜ್ಞಾನಿಗಳು ಅಂಗೀಕರಿಸುವರು. ಕೆಲವೊಂದು ಬಗೆಯ ನಕ್ಷತ್ರಗಳ ಕೊನೆಯ ಘಟ್ಟ ಅಂದರೆ ಚರಮಸ್ಥಿತಿ ಕೃಷ್ಣವಿವರ ಸ್ಥಿತಿ ಎಂದು ಅವರು ನಂಬಿದ್ದಾರೆ. ಕವಿ ಗೋಪಾಲಕೃಷ್ಣ ಅಡಿಗರ ಮಾತಿನಲ್ಲಿ.

ದಿನ ದಿನವು ಲಗ್ಗೆ ನಡೆದಿವೆ ಇವನ ದುರ್ಗಕ್ಕೆ
ಕದ ತೆರೆಯಲಾರ.
ಹೊರಗೆ ವಿದ್ಯುದ್ದೀಪ ಲಹರಿ ಲಹರಿ ವಿಲಾಪ
ಅಂತಃಪುರದಿ ಮಾತ್ರ ಅಂಧಕಾರಾಲಾಪ.

ಭೂಮಿ ಕೃಷ್ಣವಿವರ ಆದೀತೇ? ಕಿಪ್ ಎಸ್. ತೋರ್ನ್ ಎನ್ನುವ ಖಭೌತ ವಿಜ್ಞಾನಿ ಒಂದು ವಿನೂತನ ಕಾಲ್ಪನಿಕ ಪ್ರಯೋಗವನ್ನು ಸೂಚಿಸಿದ್ದಾರೆ. ಸುದೂರ ಭವಿಷ್ಯದಲ್ಲಿ ಮನುಕುಲದ ಮನೆ ಭೂಮಿ ಮಾತ್ರ ಆಗಿರುವುದಿಲ್ಲ. ಬ್ರಹ್ಮಾಂಡದ ವಿವಿಧ ನಕ್ಷತ್ರಗಳನ್ನು ಸುತ್ತುತ್ತಿರುವ ಅಸಂಖ್ಯಾತ ಗ್ರಹಗಳ ಪೈಕಿ ಅನುಕೂಲವಾದವುಗಳಲ್ಲೆಲ್ಲ ಮನುಷ್ಯ ಸಂತತಿಯನ್ನು ಅಂದು ಕಾಣಬಹುದು. ಅಂಥ ದಿವಸ ಬಂದಾಗ ಆ ವಿಶ್ವಮಾನವನಿಗೆ ಭೂಮಿ ಕೇವಲ ಪ್ರಾಗೈತಿಹಾಸಿಕ ಸ್ಮಾರಕವಾಗಿ ಕಂಡೀತೇ ವಿನಾ ತನ್ನ ಬಾಳ್ವೆಗೆ ಅತ್ಯಾವಶ್ಯಕ ರಸಪೋಷಕ ಸಗ್ಗಳಿಯಾಗಿ ಅಲ್ಲ. ಅವನಿಗೊಂದು ಮಿದುಳಲೆ ಸ್ಫುರಿಸುತ್ತದೆ : "ನನ್ನ ಮೂಲ ವೇದಿಕೆ ಆದ ಭೂಮಿಗೆ ನಕ್ಷತ್ರಗಳ ಚರಮಸ್ಥಿತಿ ಕೃಷ್ಣವಿವರ ಅಂತಸ್ತನ್ನು ಅನುಗ್ರಹಿಸಬೇಕು."

"ಸನ್ನೆಯನ್ನು ಊರಲು ಎಡೆ ತೋರಿಸಿ, ಸಾಕ್ಷಾತ್ ಧರೆಯನ್ನೇ ಎತ್ತಿ ಮಗುಚಿ ಹಾಕಿಬಿಡುತ್ತೇನೆ" ಎಂಬುದಾಗಿ ಭೌತಶಾಸ್ತ್ರಾಧಾರದಿಂದ ಉದ್ಗರಿಸಿದ ಆರ್ಕಿಮಿಡೀಸನ ವಂಶಜನಾದ ಈತನಿಗೆ ಇದು ಅಸಾಧ್ಯ ಸಾಹಸ ಏನೂ ಅಲ್ಲ. ಇಡೀ ಭೂಮಿಯನ್ನು ಕಚ್ಚಿ ಅಮರಿಸಿ ಹಿಡಿಯುವಂಥ ಭಾರೀ ತಿರುಡಿಯನ್ನು ನಿರ್ಮಿಸಿ ಅದರ ಧೃತರಾಷ್ಟ್ರಾಲಿಂಗನಕ್ಕೆ ಇದನ್ನು ಒಳಪಡಿಸುವನು. ತಿರುಡಿಗೆ ಜೋಡಿಸಿರುವ ಬೃಹದ್ವಿದ್ಯುತ್ಕೋಶಗಳು ಅದರ ಕಾರ್ಯನಿರ್ವಹಣೆಗೆ ಅವಶ್ಯವಾಗುವ ಶಕ್ತಿಯನ್ನು ಒದಗಿಸುತ್ತವೆ. ಕ್ರಮೇಣ ತಿರುಡಿಯ ಅಪ್ಪುಗೆ ಬಿಗಿಬಿಗಿ ಆದಂತೆ ಭೂಮಿ ಹಿಸುಕಿ ಹಿಂಡಲ್ಪಟ್ಟು ನುಚ್ಚು ನೂರಾಗಿ ಗಾತ್ರ ಕುಗ್ಗಿ ಬಲು ಸಿಬಿಡವಾದ ಚಿಕ್ಕ ಮುದ್ದೆ ಆಗುತ್ತದೆ. ಪ್ರಯೋಗಾರಂಭದಲ್ಲಿ ಭೂಮಿಯ ವಿಮೋಚನ ವೇಗ ಸೆಕೆಂಡಿಗೆ 11 ಕಿ.ಮೀ. ಸನಿಹದಲ್ಲಿತ್ತು. ತಿರುಡಿಯ ಅಮರಿಕೆಯ ಫಲವಾಗಿ ಭೂವ್ಯಾಸ ಅದರ ಮೊದಲ ಉದ್ದದ ಕಾಲಂಶಕ್ಕೆ ಕುಗ್ಗುವುದೆಂದು ಭಾವಿಸೋಣ. ಈಗ ವಿಮೋಚನ ವೇಗ ಸೆಕೆಂಡಿಗೆ 22 ಕಿ.ಮೀ ಆಗಿರುವುದು. (ಅಂದರೆ ಈ ಸಂಕೋಚಿತ ಭೂಮಿಯ ಮೇಲ್ಮೈಯಿಂದ ಉಡಾಯಿಸಲ್ಪಟ್ಟ ರಾಕೆಟ್ ಸೆಕೆಂಡಿಗೆ 22 ಕಿ.ಮೀ. ವೇಗದಿಂದಾದರೂ ಜಿಗಿಯದಿದ್ದರೆ ಅದು ಭೂಗುರುತ್ವ ಬಲದ ಬಂಧನದಿಂದ ಬಿಡಿಸಿಕೊಂಡು ಹೊರಸಾಗಿ ಹೋಗಲಾರದು.) ಆದ್ದರಿಂದ ಭೂಗಾತ್ರವನ್ನು ಕುಗ್ಗಿಸಿದಾಗ ವಿಮೋಚನ ವೇಗ ಏರುತ್ತದೆ ಎಂದು ಸಿದ್ಧವಾಯಿತು. ತಿರುಡಿ ತುಂಬ ದೃಢವಾಗಿದ್ದು ಅದಕ್ಕೆ ಪೂರೈಕೆ ಆಗುವ ಶಕ್ತಿ ಸಾಕಷ್ಟು ಇದ್ದರೆ ಈ ಸಂಕೋಚನ ಕ್ರಿಯೆಯನ್ನು ಮುಂದುವರಿಸಲು ಬೇರೆ ಯಾವ ಅಡ್ಡಿಯೂ ಇಲ್ಲ. ಸರಿ, ಪ್ರಯೋಗ ಸಾಗುತ್ತದೆ, ಭೂಮಿ ಕುಗ್ಗುತ್ತದೆ, ಆರಂಭದ ಪರಿಧಿ 40,000 ಕಿ.ಮೀ. ಇದ್ದುದು ಕೇವಲ 10 ಕಿ.ಮೀ. ಗೆ ತಗ್ಗುತ್ತದೆ–ಈಗ ವಿಮೋಚನ ವೇಗ ಸೆಕೆಂಡಿಗೆ 708 ಕಿ.ಮೀ. ಮತ್ತೆ ಅಮರಿಕೆಯನ್ನು ಮುಂದುವರಿಸಿ ಭೂಮಿಯನ್ನು ಗೋಲಿ ಗಾತ್ರಕ್ಕೆ ಕುಗ್ಗಿಸಲಾಗುತ್ತದೆ : ಈಗ ಅದರ ಪರಿಧಿ ಕೇವಲ 5.58 ಸೆಂ.ಮೀ. ಅಕೋ ! ವಿಮೋಚನ ವೇಗ

ಸೆಕೆಂಡಿಗೆ 3,00,000 ಕಿ.ಮೀ.ಗೆ ನೆಗೆದೇ ಬಿಟ್ಟಿತು. ಇದು ಬೆಳಕಿನ ವೇಗ C ಗಿಂತ (C = ಸೆಕೆಂಡಿಗೆ 2,99,793 ಕಿ.ಮೀ.) ಜಾಸ್ತಿ. ವಿಶ್ವದಲ್ಲಿನ ಗರಿಷ್ಠ ಸಾಧ್ಯ ವೇಗ C. ಅಂದರೆ ಯಾವ ವಸ್ತುವೂ ಶಕ್ತಿಯೂ ಸೆಕೆಂಡಿಗೆ 2,99,793 ಕಿ ಮೀ. ಜವವನ್ನು ಮೀರಿ ಚಲಿಸಲಾರದು. ಆದ್ದರಿಂದ ಗೋಲಿಗಾತ್ರದ ನವಧರಿತ್ರಿಯಿಂದ ಹೊರಜಗತ್ತಿಗೆ ಬೆಳಕು ಮುಂತಾದ ವಿದ್ಯುತ್ಕಾಂತ ವಿಕಿರಣಗಳನ್ನೂ ಒಳಗೊಂಡಂತೆ ಯಾವುದೇ ವಿಧವಾದ ಮಾಹಿತಿಯೂ ತೆರಳುವುದಿಲ್ಲ. ಇದರ ಮಹಾ ಪ್ರಬಲ ಗುರುತ್ವಬಲ ಇವೆಲ್ಲ ವಿಕಿರಣಗಳನ್ನೂ, ಸರ್ಕಸಿನಲ್ಲಿ ರಿಂಗ್ ಮಾಸ್ಟರ್ ಕ್ರೂರ ಮೃಗಗಳನ್ನು ಪಳಗಿಸಿ ನಿಶ್ಚಿತ ವರ್ತುಳದೊಳಗೆ ಹಿಡಿದಿಟ್ಟಿರುವಂತೆ, ತನ್ನೊಳಗೇ ನಿಯಂತ್ರಿಸಿ ಇಟ್ಟುಕೊಂಡಿರುವುದು. ಅಲ್ಲಿಗೆ ನಮ್ಮ ಭೂಮಿಗೆ ಕೃಷ್ಣವಿವರ ಅಂತಸ್ತು ಪ್ರಾಪ್ತವಾದಂತಾಯಿತು. ಇದಕ್ಕೂ ಬಾಹ್ಯವಿಶ್ವಕ್ಕೂ ಸಂಪರ್ಕ ಶಾಶ್ವತವಾಗಿ ಕಡಿದು ಹೋಗಿ ಇದರ ಮಾಜಿ ಸ್ಥಾನದ ಪ್ರತೀಕವಾಗಿ 5.58 ಸೆಂ.ಮೀ. ಸುತ್ತಳತೆಯ ಕಿರಿ ಕಪ್ಪು ತೂತು ಮಾತ್ರ ಉಳಿದಿರುತ್ತದೆ.

ನಿರ್ದಿಷ್ಟ ಗಾತ್ರಕ್ಕೆ ಸಂಕೋಚಿಸಲ್ಪಟ್ಟ ಯಾವುದೇ ರಾಶಿ ಕೃಷ್ಣವಿವರ ಆಗುವುದು ಸಾಧ್ಯ ಎಂಬ ಅಂಶ ಮೇಲಿನ ಕಾಲ್ಪನಿಕ ಪ್ರಯೋಗದಿಂದ ತಿಳಿಯುತ್ತದೆ. ಇದಕ್ಕೆ ಸಮಾನವಾದ ವಾಸ್ತವಿಕ ಪ್ರಯೋಗಗಳು ಕರ್ತಾರನ ಕಮ್ಮಟದ ಮಹಾಪ್ರಯೋಗ ಮಂದಿರದಲ್ಲಿ ವಿಪುಳವಾಗಿ ನಡೆಯುತ್ತಿವೆ ; ಆದ್ದರಿಂದ ವಿಶ್ವದ ಮಹಾವಿಸ್ತಾರದಲ್ಲಿ ಕೃಷ್ಣವಿವರಗಳನ್ನು ಅಧಿಕ ಸಂಖ್ಯೆಯಲ್ಲಿ ಗುರುತಿಸಬಹುದು ಎಂದು ಖಭೌತ ವಿಜ್ಞಾನಿಗಳು ಲಭ್ಯ ಮಾಹಿತಿಗಳ ಹಾಗೂ ಸೈದ್ಧಾಂತಿಕ ಗಣನೆಗಳ ಆಧಾರದಿಂದ ದೃಢವಾಗಿ ನಂಬಿದ್ದಾರೆ.

ಕೃಷ್ಣವಿವರವಾಗಲು ಅರ್ಹತೆ ಏನು ? ಭೂಮಿಯಂಥ "ಮೃತನಕ್ಷತ್ರ"ಗಳು ಎಂದೂ ಕೃಷ್ಣವಿವರಗಳಾಗಲಾರವು. ಆ ಮಟ್ಟದ ಆಂತರಿಕ ಕ್ಷೋಭೆ ಇವುಗಳಲ್ಲಿ ಜನಿಸದಿರುವುದೇ ಇದರ ಕಾರಣ. ಅಂಥ ಕ್ಷೋಭೆಯನ್ನು ನಿರೀಕ್ಷಿಸಬಹುದಾದ ಆಕಾಶಕಾಯಗಳೆಂದರೆ ನಕ್ಷತ್ರಗಳು ಮಾತ್ರ. ಆದ್ದರಿಂದ ಪ್ರವೇಶಾರ್ಹತೆಯ ಮೊದಲ ಷರತ್ತು ನಕ್ಷತ್ರತ್ವ.

ಉರಿಯುತ್ತಿರುವ ಪ್ಲಾಸ್ಮಾರಾಶಿ ನಕ್ಷತ್ರ. ಅದೊಂದು ಜೀವಂತ ಕುಲುಮೆ. ಅಲ್ಲಿ ವೆಚ್ಚವಾಗುವ ಉರುವಲು ಸಾಧಾರಣವಾಗಿ ಹೈಡ್ರೊಜನ್.ಅತಿಯಾದ ಶಾಖ ಹಾಗೂ ಒತ್ತಡಗಳಿಗೆ ಸಿಲುಕಿದ ಈ ಅನಿಲದ ಪರಮಾಣುಗಳ ನಡುವೆ ತೀವ್ರ ಉಷ್ಣ ಬೈಜಿಕ ಕ್ರಿಯೆಗಳು ಪುಂಖಾನುಪುಂಖವಾಗಿ ನಡೆದು ಪರಮಾಣುಗಳು ಸಂಲಯನಗೊಂಡು ಉಷ್ಣ ಬೆಳಕು ಮುಂತಾದ ವಿದ್ಯುತ್ಕಾಂತ ವಿಕಿರಣಗಳು ಹೊರಕ್ಕೆ ಎರಚಲ್ಪಡುತ್ತವೆ. (ಸುಲಭ ಭಾಷೆಯಲ್ಲಿ, ಹೈಡ್ರೊಜನ್ ಬಾಂಬುಗಳು ಅಲ್ಲಿ ಆಸ್ಫೋಟಿಸುತ್ತಿರುವುವು.) ಇದೇ ನಕ್ಷತ್ರದ "ಉರಿತ". ಇದರಲ್ಲಿ ದೊರೆಯುವ "ಬೂದಿ" ಹೀಲಿಯಮ್. ಈ ಉರಿತದ, ಅಂದರೆ ಹೈಡ್ರೊಜನ್ ಬಾಂಬುಗಳ ನಿರಂತರಾಸ್ಫೋಟನೆಯ, ಪರಿಣಾಮವಾಗಿ ಹುಟ್ಟುವ ಹೊರತಳ್ಳುವ ಬಲವನ್ನು ನಕ್ಷತ್ರದ ಮಹಾರಾಶಿಯ ದೆಸೆಯಿಂದ ಅದಕ್ಕೆ ಒದಗಿಬರುವ ಒಳಸೆಳೆವ ಗುರುತ್ವಬಲ ವಿರೋಧಿಸುವುದು. ಇವೆರಡರ ಜಗ್ಗಾಟದಲ್ಲಿ ಸಮತೋಲ ಉಂಟಾದಾಗ ನಕ್ಷತ್ರದ ಆಕಾರ ಸ್ತಿಮಿತವಾಗುತ್ತದೆ. ಯಾವ ನಕ್ಷತ್ರವೂ ಶಾಶ್ವತ ಸ್ತಿಮಿತ ಸ್ಥಿತಿಯಲ್ಲಿ ಇರುವುದಿಲ್ಲ. ನಿರಂತರ ಉಷ್ಣ ಬೈಜಿಕ ಕ್ರಿಯೆಗಳ ಪರಿಣಾಮವಾಗಿ ಅದರ ರಾಶಿ ಕ್ರಮೇಣ ನಶಿಸಿ ಒಳಸೆಳೆವ ಗುರುತ್ವಬಲ ತಗ್ಗುವುದು. ಆಗ ಹೊರತಳ್ಳುವ ಬಲದ್ದು ಮೇಲುಗೈ ಆಗುತ್ತದೆ. ಇಂಥ ನಕ್ಷತ್ರ ಅತಿಯಾಗಿ ವ್ಯಾಕೋಚಿಸಿ ಮಹಾಗಾತ್ರ ಪಡೆದು ಕೆಂಬಣ್ಣ ತಳೆದು ಆ ಕಾರಣಗಳಿಂದ ರಕ್ತದೈತ್ಯ ಎಂಬ ಅನ್ವರ್ಥನಾಮದ ನಕ್ಷತ್ರ ಆಗಬಹುದು. ಒಂದು ಘಟ್ಟದಲ್ಲಿ ವ್ಯಾಕೋಚನ ಕ್ರಿಯೆ ನಿಂತು ಮತ್ತೆ ಸಂಕೋಚನ ಕ್ರಿಯೆ ತೊಡಗುತ್ತದೆ–ಅಂದರೆ ಆಗ ಗುರುತ್ವ ಬಲದ ಕೈ ಮೇಲಾಗುವುದು. ಮೂಲ ವ್ಯಾಸದ ತೀರ ಅಲ್ಪಾಂಶದ ತನಕವೂ ಈ ಕ್ರಿಯೆ ಸಾಗುವುದುಂಟು. ಈಗ ನಕ್ಷತ್ರದ ಗಾತ್ರ ತುಂಬ ಚಿಕ್ಕದು ಮತ್ತು ಅತಿ ಕಾವಿನ ಪರಿಣಾಮವಾಗಿ ಅದರ ಬಣ್ಣ ಬಲು ಬಿಳಿ. ಇದಕ್ಕೆ ಶ್ವೇತಕುಬ್ಜ ಎಂಬ ಅನ್ವರ್ಥನಾಮವಿದೆ. ಒಂದು ನಕ್ಷತ್ರ ಕೃಷ್ಣವಿವರ ಆಗಬೇಕಾದರೆ ಅದು ಶ್ವೇತಕುಬ್ಜಸ್ಥಿತಿ ಎಡೆಗೆ ಸಂಕೋಚಿಸುವ ಪ್ರವೃತ್ತಿ

ಪ್ರದರ್ಶಿಸಬೇಕು. ಆದ್ದರಿಂದ ಪ್ರವೇಶಾರ್ಹತೆಯ ಎರಡನೆಯ ಷರತ್ತು ಗುರುತ್ವಬಲದ ಅತ್ಯಾಧಿಕ್ಯ.

ಎಲ್ಲ ನಕ್ಷತ್ರಗಳೂ ಮೇಲೆ ವಿವರಿಸಿದ ರೀತಿಯಲ್ಲಿ–ಅಂದರೆ ಸಾಧಾರಣ ನಕ್ಷತ್ರ, ರಕ್ತ ದೈತ್ಯ, ಶ್ವೇತ ಕುಬ್ಜ ಈ ಧಾಟಿಯಲ್ಲಿ–ಅಭಿವರ್ಧಿಸುತ್ತವೆಂದು ತೀರ್ಮಾನಿಸುವಂತಿಲ್ಲ. ಹಲವಾರು ಭೌತ ಪರಿಮಿತಿಗಳು ಅಭಿವರ್ಧನೆಯ ಈ ಘಟ್ಟಗಳನ್ನು ನಿಯಂತ್ರಿಸುತ್ತವೆ. ನಾವಿಲ್ಲಿ ಮುಖ್ಯವಾಗಿ ಹೆಸರಿಸಬೇಕಾದದ್ದು ಚಂದ್ರಶೇಖರ್ ಪರಿಮಿತಿ ಎಂಬ "ಲಕ್ಷ್ಮಣನ ಗೀಟನ್ನು." ಭಾರತ ಸಂಜಾತ ಸುಬ್ರಹ್ಮಣ್ಯಮ್ ಚಂದ್ರಶೇಖರ್ ಅವರು ಗಣನೆಗಳ ಆಧಾರದಿಂದ ಈ ಪರಿಮಿತಿಯನ್ನು ನಿರ್ಧರಿಸಿದ್ದಾರೆ (1931); ಯಾವ ಶ್ವೇತಕುಜ್ಜದ ರಾಶಿಯೂ ಸೂರ್ಯರಾಶಿಗಿಂತ 1.4 ಪಟ್ಟು ಜಾಸ್ತಿ ಇರುವಂತಿಲ್ಲ. ಈಚೆಗೆ ಈ ಪರಿಮಿತಿಯನ್ನು ಸುಮಾರು 1.2 ಎಂದು ಪರಿಷ್ಕರಿಸಲಾಗಿದೆ. ಇಂಥ ಒಂದು ಶ್ವೇತಕುಬ್ಜದ ತ್ರಿಜ್ಯ ಸುಮಾರು 5000. ಕಿ.ಮೀ (ಸೂರ್ಯತ್ರಿಜ್ಯ ಇದರ 139 ಮಡಿ ದೊಡ್ಡದು) ಮತ್ತು ಸಾಂದ್ರತೆ ಘನ ಸೆಂಟಿಮೀಟರಿಗೆ 10^6 ಗ್ರಾಮ್ (ಇದು ಸೂರ್ಯಸಾಂದ್ರತೆಗಿಂತ 7,09,220 ಮಡಿ ಹಿರಿಯದು). ಸೂರ್ಯರಾಶಿಯ 1.2 ಮಡಿಗಿಂತ ಅಧಿಕ ರಾಶಿ ಇರುವಂಥ ನಕ್ಷತ್ರಗಳು ಕೃಷ್ಣವಿವರಗಳಾಗಿ ಕೊನೆಗೊಳ್ಳುವ ಸಂಭಾವ್ಯತೆ ಉಂಟು. ಆದ್ದರಿಂದ ಪ್ರವೇಶಾರ್ಹತೆಯ ಮೂರನೆಯ ಷರತ್ತು ನಕ್ಷತ್ರ ರಾಶಿ ಚಂದ್ರಶೇಖರ್ ಪರಿಮಿತಿಗಿಂತ ಅಧಿಕವಾಗಿರಬೇಕು.

ಶ್ವೇತಕುಬ್ಜಗಳು ವಿಶ್ವದಲ್ಲಿ ಇವೆಯೇ ಎಂಬ ಪ್ರಶ್ನೆಗೆ ಉತ್ತರ, ಹೌದು. ಸೂರ್ಯರಾಶಿಯ 1.5 ಪಟ್ಟು ರಾಶಿ ಇರುವ (ಚಂದ್ರಶೇಖರ್ ಪರಿಮಿತಿಯನ್ನು ಮೀರಿರುವ) ಶ್ವೇತಕುಬ್ಜಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಪತ್ತೆ ಮಾಡಲಾಗಿದೆ. ಈ ಜಾತಿಯ "ಹದ್ದು ಮೀರಿದ" ಒಂದು ನಕ್ಷತ್ರ ಸ್ವಂತ ಉಷ್ಣತೆ ಹಾಗೂ ಸಾಂದ್ರತೆಗಳ ತೀವ್ರಾಧಿಕ್ಯವನ್ನು ತಾಳಿಕೊಳ್ಳಲಾರದೆ ಸರ್ವನಾಶಾತ್ಮಕವಾದ ಮಹಾಸ್ಫೋಟಕ್ಕೆ ಈಡಾಗುವುದು. ನಕ್ಷತ್ರದ ಈ ಸ್ಥಿತಿಗೆ ಮಹಾನೋವ ಎಂದು ಹೆಸರು. ಮಹಾ ದೂರದ ತಾರಾ ಪ್ರಪಂಚದಲ್ಲಿ ನಡುಹಗಲ ನೇಸರು ಧಿಡೀರನೆ ಮೂಡಿದಂಥ ದೃಶ್ಯವನ್ನು ಇದು ನಮಗೆ ಪ್ರದರ್ಶಿಸಬಹುದು. ನಮ್ಮ ನಕ್ಷತ್ರ ವಲಯವಾದ ಆಕಾಶಗಂಗೆಯಲ್ಲಿಯೇ ಮಹಾನೋವವನ್ನು ಕಂಡದ್ದಕ್ಕೆ ದಾಖಲೆಗಳಿವೆ. ತೀರ ಈಚಿನದು ಎಂದರೆ ಯೋಹಾನ್ ಕೆಪ್ಲರ್ ಕ್ರಿ. ಶ. 1604 ರಲ್ಲಿ ಕ್ರ್ಯಾಬ್ ನೀಹಾರಿಕೆಯಲ್ಲಿ (ಇದು ವೃಷಭ ರಾಶಿಯಲ್ಲಿದೆ) ಗುರುತಿಸಿದ್ದು. ಈ "ದುರ್ಘಟನೆ"ಯಿಂದ ಹೊರ ಬರುವಷ್ಟರಲ್ಲಿ ನಕ್ಷತ್ರ ತನ್ನ ರಾಶಿಯ ಶೇಕಡಾ 90 ರಷ್ಟು ಅಂಶವನ್ನು ತೆತ್ತಿರುತ್ತದೆ. ಶೇಷವೇನಿದ್ದರೂ ಕುಸಿದು ಕುಕ್ಕರಿಸಿ ನಿಬಿಡವಾಗಿ ಗಿಡಿದುಕೊಂಡಿರುವ ಕೇಂದ್ರೀಯ ತಿರುಳು ಮಾತ್ರ. ಈಗ ಅದರ ಹೆಸರು ನ್ಯೂಟ್ರಾನ್ ನಕ್ಷತ್ರ. ಇಂಥ ಒಂದು ವಿಚಿತ್ರ ನಕ್ಷತ್ರ ಮಾತ್ರ ಕೃಷ್ಣವಿವರವಾಗುವುದು ಸಾಧ್ಯ ಎಂದು ಗಣನೆಗಳು ತಿಳಿಸುತ್ತವೆ. ಆದ್ದರಿಂದ ಪ್ರವೇಶಾರ್ಹತೆಯ ನಾಲ್ಕನೆಯ ಷರತ್ತು ನ್ಯೂಟ್ರಾನ್ ನಕ್ಷತ್ರತ್ವ ಪ್ರಾಪ್ತಿ.

ನ್ಯೂಟ್ರಾನ್ ನಕ್ಷತ್ರ ಅಂದರೇನು? ನೀರನ್ನು ವಿಭಜಿಸಿದಾಗ ಅದು ಹೈಡ್ರೊಜನ್ ಮತ್ತು ಆಕ್ಸಿಜನ್ ಎನ್ನುವ ಎರಡು ರಾಸಾಯನಿಕ ಧಾತುಗಳ ಸಂಯುಕ್ತ ಎಂದು ತಿಳಿಯುವುದು ಸರಿಯಷ್ಟೆ. ವಿಶ್ವದ ಎಲ್ಲ ವಸ್ತುಗಳನ್ನೂ ಹೀಗೆ ವಿಭಜಿಸಿ ಅವುಗಳ ನಿರ್ಮಾಣ ಘಟಕಗಳಾದ ಧಾತುಗಳನ್ನು ಪತ್ತೆ ಮಾಡಲಾಗಿದೆ: 92 ಭಿನ್ನ ಬಗೆಯ ನೈಸರ್ಗಿಕ ಧಾತುಗಳಿವೆ. ಇಂಥ ಒಂದು ಧಾತುವಿನ ಸೂಕ್ಷ್ಮತಮ ತುಣುಕಿಗೆ ಅದರ ಪರಮಾಣು ಎಂದು ಹೆಸರು. ಈ ಪರಮಾಣುವನ್ನೂ ವಿಭಜಿಸಿದುದಾದರೆ ಆಗ ಆ ಧಾತು ತನ್ನ ವ್ಯಕ್ತಿತ್ವವನ್ನು ಕಳೆದುಕೊಳ್ಳುತ್ತದೆ. ಪರಮಾಣುವಿನ ಆಲೇಖ್ಯ ಸ್ಥೂಲವಾಗಿ ಹೀಗಿದೆ: ಪ್ರೋಟಾನ್ ಮತ್ತು ನ್ಯೂಟ್ರಾನ್ ಕಣಗಳ ಒಂದು ಮುದ್ದೆ—ಇದು ಪರಮಾಣುವಿನ ಬೀಜ; ಇದರ ಸುತ್ತ ಬೇರೆ ಬೇರೆ ದೂರಗಳಲ್ಲಿ ಕಕ್ಷಿಸುತ್ತಿರುವ ಎಲೆಕ್ಟ್ರಾನುಗಳೆಂಬ ಕಣಗಳು.

ಈಗ ನಕ್ಷತ್ರಕ್ಕೆ ಬರೋಣ. ಇದೊಂದು ಅತ್ಯಂತ ಉದ್ರಿಕ್ತ ಸ್ಥಿತಿಯಲ್ಲಿರುವ ಪರಮಾಣುಗಳ ಭಾರೀ ಸಮುದಾಯ ಎಂದು ಭಾವಿಸಬಹುದು. ಇಲ್ಲಿ ಪರಮಾಣುಗಳು ನಿರಂತರ ಪರಸ್ಪರ ತಾಡನೆ ಸಂಘಟ್ಟನೆ ಸಂಘರ್ಷ

ಗಳಿಗೆ ಒಳಪಟ್ಟುಕೊಂಡೇ ಇರುವುವು. ಹೀಗಾಗಿ ಪ್ರತಿಯೊಂದು ಪರಮಾಣುವಿನ ಮೇಲೆಯೂ ಅಗಾಧ ಒತ್ತಡ ಬಿದ್ದೇ ಬೀಳುವುದು. ಈ ಒತ್ತಡ ಒಂದು ಮಿತಿಯನ್ನು ಮೀರುವಾಗ ಪರಮಾಣುಗಳಿಗೆ ಇವನ್ನು ತಾಳಿಕೊಂಡು ತಮ್ಮ ವ್ಯಕ್ತಿತ್ವವನ್ನು ಕಾಪಾಡಿಕೊಂಡು ಇರುವುದು ಅಸಾಧ್ಯವಾಗುತ್ತದೆ. ಆಗ ಕಕ್ಷೆಗಳಲ್ಲಿನ ಎಲೆಕ್ಟ್ರಾನುಗಳು ಬೀಜಗಳೊಳಕ್ಕೆ ಸುರಿಯಲ್ಪಡುವುವು. ಇವು ಅಲ್ಲಿನ ಪ್ರೋಟಾನುಗಳೊಡನೆ ಸೇರಿ ನ್ಯೂಟ್ರಾನುಗಳು ಮೈವಳೆ ಯುತ್ತವೆ. ಹೀಗೆ ಇಡೀ ನಕ್ಷತ್ರವೇ ನ್ಯೂಟ್ರಾನುಗಳ ಭಾರೀ ಒಂದು ಮುದ್ದೆ ಆಗುತ್ತದೆ. ಇದೇ ನ್ಯೂಟ್ರಾನ್ ನಕ್ಷತ್ರ. ಇಂಥ ಒಂದು ತಾರೆಯ ರಾಶಿ ಸುಮಾರು ಸೂರ್ಯನಷ್ಟೇ ಇರುವುದು; ತ್ರಿಜ್ಯ ಸುಮಾರು 10 ಕಿ.ಮೀ. (ಸೂರ್ಯತ್ರಿಜ್ಯ ಇದರ 69,600 ಪಟ್ಟು ದೊಡ್ಡದು); ಸಾಂದ್ರತೆ ಘನಸೆಂಟಿಮೀಟರಿಗೆ ಸುಮಾರು 10^{14} ಗ್ರಾಮ್ (ಇದು ಸೂರ್ಯಸಾಂದ್ರತೆಗಿಂತ 7.09×10^{13} ಮಡಿ ಹಿರಿಯದು). ನ್ಯೂಟ್ರಾನ್ ನಕ್ಷತ್ರಗಳ ಅಸ್ತಿತ್ವವನ್ನು ಸಿದ್ಧಾಂತ 1934ರಲ್ಲಿ ಮುನ್ನುಡಿಯಿತು. 1968 ರಲ್ಲಿ ಪಲ್ಸಾರುಗಳ ಶೋಧನೆ ಇದನ್ನು ಸ್ಥಿರೀಕರಿಸಿತು. ಆಕಾಶದ ಕೆಲವು ಎಕ್ಸ್ ಕಿರಣಾಕರಗಳಿಂದ ಕ್ಲುಪ್ತ ವೇಳೆಗಳಲ್ಲಿ, ಅಲ್ಲಿ ಬುದ್ಧಿವಂತ ಜೀವಿಗಳು ಇರಬಹುದೇ ಎನ್ನುವ ಸಂದೇಹ ಮೂಡುವಂತೆ, ಆಗಮಿಸುವ ರೇಡಿಯೊ ಸ್ಪಂದಗಳನ್ನು (ಪಲ್ಸಸ್) 1968 ರಲ್ಲಿ ಮೊದಲಿಗೆ ಗುರುತಿಸಿದರು. ಇವು ಕೆಲವು ಬಗೆಯ ನ್ಯೂಟ್ರಾನ್ ನಕ್ಷತ್ರಗಳಿಂದ ಉತ್ಸರ್ಜಿತವಾಗುವುವೆಂದು ಮುಂದೆ ಸ್ಥಿರಪಟ್ಟಿತು. ಈ ಬಗೆಯ ನಕ್ಷತ್ರಗಳಿಗೆ ಪಲ್ಸಾರುಗಳೆಂಬ ಹೆಸರಿದೆ.

ನ್ಯೂಟ್ರಾನ್ ನಕ್ಷತ್ರಗಳಿಂದ ಮುಂದೇನು? ಒಂದು ನಕ್ಷತ್ರ ಕಾಲಾಂತರದಲ್ಲಿ ಶ್ವೇತಕುಬ್ಜವಾಗಿ ವಿಕಾಸಗೊಳ್ಳಲು ಅದರ ರಾಶಿ ಸೂರ್ಯ ರಾಶಿಯ 1.2 ಮಡಿಗಿಂತ (ಚಂದ್ರಶೇಖರ್ ಪರಿಮಿತಿ) ಜಾಸ್ತಿ ಇರಬಾರದು ಎಂದು ನೋಡಿದೆವು. ಜಾಸ್ತಿ ಇರುವಂಥವು ನ್ಯೂಟ್ರಾನ್ ನಕ್ಷತ್ರಗಳಾಗುವುದು ಸಾಧ್ಯ ಎಂದೂ ತಿಳಿದಿದ್ದೇವೆ. ಇಲ್ಲಿಯೂ ಒಂದು ಪರಿಮಿತಿ ಇರಬಹುದಲ್ಲವೇ ? ತಮ್ಮ ರಾಶಿ ಸೂರ್ಯರಾಶಿಯ 3 ಮಡಿ ಒಳಗೆ ಇರುವ ನಕ್ಷತ್ರ ಗಳು ಸ್ಥಿರ ನ್ಯೂಟ್ರಾನ್ ನಕ್ಷತ್ರಗಳಾಗುವ ಸಂಭಾವ್ಯತೆ ಉಂಟೆಂದು ಈಗಿನ ಅಂದಾಜು. ಈ ಪರಿಮಿತಿಯನ್ನು ಮೀರಿದವು ಏನಾಗುತ್ತವೆ ? ಉದಾಹರಣೆಗೆ ವಿಶ್ವದಲ್ಲಿ ಸೂರ್ಯರಾಶಿಯ 50 ಪಟ್ಟು ರಾಶಿ ಇರುವ ತಾರೆಗಳುಂಟು. ಇವುಗಳ ಭವಿಷ್ಯ ಏನೆಂಬುದು ಮುಂದಿನ ಪ್ರಶ್ನೆ. ಇವು ಯಾವುದೇ ಬಗೆಯ ಹರಾಕಿರಿಗೆ ತುತ್ತಾದರೂ ಶ್ವೇತಕುಬ್ಜ ಯಾ ನ್ಯೂಟ್ರಾನ್ ನಕ್ಷತ್ರವಾಗಿ ಸಮಾಧಿ ಹೊಂದುವುದಿಲ್ಲ ಎಂದು ಸಿದ್ಧಾಂತ ಅರುಹುತ್ತದೆ. ಕೊನೆಗಾಲದಲ್ಲಿ ಇವು ಊಹೆಗೆ ನಿಲುಕದಷ್ಟು ನಿಬಿಡವಾಗಿರುವುದೂ ಇವುಗಳ ಸಾಂದ್ರತೆಗಳು ಈ ಮೇಲಿನ ಯಾವುದೇ ಬಗೆಯ ನಕ್ಷತ್ರಗಳಲ್ಲಿ ಕೂಡ ಇಲ್ಲದಷ್ಟು ಅತ್ಯಧಿಕವಾಗಿರುವುದೂ ಸಂಭಾವ್ಯ. ರಿಲೆಟಿವಿಟಿ ಸಿದ್ಧಾಂತ (ಬೃಹದ್ವಿಶ್ವವನ್ನು ಕುರಿತು ಆಲ್ಬರ್ಟ್ ಐನ್‌ಸ್ಟೈನ್, 1879–1955, ಮಂಡಿಸಿರುವ ವ್ಯಾಖ್ಯಾನ) ಸ್ಪಷ್ಟವಾಗಿ ದಾರಿ ತೋರಿಸುವುದು ಈ ತೆರನಾದ ಆಕಾಶ ವೈಚಿತ್ರ್ಯಗಳೆಡೆಗೆ, ಅತೀತ ನ್ಯೂಟ್ರಾನ್ ನಕ್ಷತ್ರಗಳೆಡೆಗೆ, ನಕ್ಷತ್ರ ಲೋಕದ ವೈಕುಂಠದೆಡೆಗೆ. ಇಂಥ ಒಂದು ವೈಚಿತ್ರ್ಯದಲ್ಲಿ ಪಟ್ಟೈಸಿರುವ ದ್ರವ್ಯದ ನಿಬಿಡತೆ, ಮಹಾರಾಶಿ ಹಾಗೂ ಇದು ಆಕ್ರಮಿಸಿರುವ ಜಾಗದ ಅತ್ಯಲ್ಪತೆ ಅದಾವ ಮಟ್ಟದವೆಂದರೆ ಇದರ ವಿಮೋಚನ ವೇಗ C ಗಿಂತ ಅದೆಷ್ಟೋ ಜಾಸ್ತಿ ಇರುವುದು. ಈ ವೈಚಿತ್ರ್ಯ ಬೇರೆ ಯಾವುದೂ ಅಲ್ಲ- ಸಾಕ್ಷಾತ್ ಕೃಷ್ಣ ವಿವರವೇ.

ಸಿದ್ಧಾಂತ ಕೃಷ್ಣವಿವರದ ಸ್ವರೂಪ ಮತ್ತು ಲಕ್ಷಣಗಳನ್ನು ಗಣಿಸಿ ಸಮೂದಿಸಿದೆ. ಅವುಗಳ ಪೈಕಿ ಮುಖ್ಯವಾದ ಕೆಲವನ್ನು ಇಲ್ಲಿ ಪರಿಶೀಲಿಸೋಣ.

ಸಾಧಾರಣ ವರ್ಗದ ನ್ಯೂಟ್ರಾನ್ ನಕ್ಷತ್ರವೊಂದನ್ನು ಅದರ ವ್ಯಾಸದ ಮೂರನೆಯ ಒಂದು ಅಂಶಕ್ಕೆ ಕುಗ್ಗಿಸಿದರೆ ಸಾಕು, ಅದು ಕೃಷ್ಣ ವಿವರವಾಗಿಬಿಡುತ್ತದೆ. ಇಂಥ ಒಂದು ಪ್ರರೂಪೀ ಕೃಷ್ಣವಿವರದ ವ್ಯಾಸ 6.436 ಕಿ.ಮೀ ಗಿಂತ (ಸೂರ್ಯ ವ್ಯಾಸ ಇದರ 2,16,000 ಮಡಿ ದೊಡ್ಡದು) ಜಾಸ್ತಿ ಇರುವುದಿಲ್ಲ.

ಕೃಷ್ಣವಿವರದ ತ್ರಿಜ್ಯ ರಾಶಿಗೆ ಅನುಪಾತೀಯವಾಗಿದೆ. ಅಂದರೆ ಸಾಂದ್ರತೆ ತ್ರಿಜ್ಯದ ವಿಲೋಮ ವರ್ಗಾನು

ಪಾತವಲ್ಲಿ ಉಂಟು. ಆದ್ದರಿಂದ ವಿವರದ ಕೇಂದ್ರದೆಡೆಗೆ ಸಾಗಿದಂತೆ ಸಾಂದ್ರತೆ ಬಲು ತ್ವರೆಯಿಂದ ಮತ್ತು ಕಡಿದಾಗಿ ಅನಂತದೆಡೆಗೆ ಏರುವುದು.

ಹೆಚ್ಚಿನ ಕೃಷ್ಣ ವಿವರಗಳ ಪರಿಧಿ 1000 ಕಿ.ಮೀ ಒಳಗೆ ಇರುವುದರಿಂದ ಆಕಾಶದ ಮಹಾ ಆಳಗಳಲ್ಲಿ ಇವು ನಮಗೆ ಪುಟ್ಟ ಬಿಂದುಗಳಾಗಿ ಕಾಣುವುದು ಕೂಡ ದುಸ್ತರ (ನಮ್ಮಿಂದ ಕೇವಲ 14,96,00,000 ಕಿ.ಮೀ ದೂರದಲ್ಲಿರುವ ಸೂರ್ಯನ ಪರಿಧಿ 40,000 ಕಿ.ಮೀ ಇದ್ದರೂ ಅದು ನಮಗೆ ಕಿರಿಯ ಒಂದು ಬಿಲ್ಲೆಯಾಗಿ ಕಾಣುವುದೆಂಬುದನ್ನು ಗಮನಿಸಬೇಕು)

ಕೃಷ್ಣವಿವರ ಮತ್ತು ಇತರ ಯಾವುದೇ ಆಕಾಶಕಾಯ ಇವೆರಡರ ನಡುವಿನ ಗುರುತ್ವಾಕರ್ಷಣೆ ನ್ಯೂಟನ್ನನ ವಿಶ್ವಗುರುತ್ವಾಕರ್ಷಣ ನಿಯಮಾನುಸಾರ ಉಂಟು.

ಕೃಷ್ಣವಿವರ ತೀವ್ರ ವೇಗದಿಂದ ತನ್ನ ಸುತ್ತ ಆವರ್ತಿಸುತ್ತಿರುವುದು–ವಿಭಿನ್ನ ವೇಗಗಳಿಂದ ಬಂದು ಒಂದೆಡೆ ಸೇರುವ ಹೊನಲುಗಳ ಸಂಗಮ ಸ್ಥಾನದಲ್ಲಿ ತಿರುಗಣೆ ಮಡು ಘೂರ್ಣಿಸುವಂತೆ. ಹೀಗಾಗಿ ಅದರ ಆಸುಪಾಸಿನ ಶೂನ್ಯಾಕಾಶದಲ್ಲಿ ಭಾರೀ ಸುಳಿ ಉತ್ಪನ್ನವಾಗಿರುವುದು. ಅದನ್ನು ಸಮೀಪಿಸುವ ಕಣಗಳನ್ನೂ ಅನಿಲವನ್ನೂ ಈ ಸುಳಿ ತನ್ನೆಡೆಗೆ ಸೆಳೆದು ವಿವರದ ಗಭೀರ ಗಹ್ವರದೊಳಕ್ಕೆ ಬುದ್ಧಿವಂತಿಸಿ ಬಿಡುವುದು.

ನಾವು ರೂಢಿಯಲ್ಲಿ ತಿಳಿದಿರುವ ಮತ್ತು ಆ ಪ್ರಕಾರ ನಮ್ಮ ಸಮಸ್ತ ವ್ಯವಹಾರಗಳನ್ನೂ ನಿರ್ವಹಿಸುವ ಆಕಾಶ, ಕಾಲ ಎಂಬ ಭಾವನೆಗಳೆಲ್ಲವೂ ಕೃಷ್ಣ ವಿವರದ ಸನಿಹದಲ್ಲಿ ತಲೆಕೆಳಗಾಗುತ್ತವೆ. ಅದು ಆಕಾಶವನ್ನು ವಕ್ರಗೊಳಿಸುತ್ತದೆ ಮತ್ತು ಕಾಲವನ್ನು ತಿರುಚುತ್ತದೆ.

ಕೃಷ್ಣ ವಿವರಕ್ಕೆ ಸ್ಪಷ್ಟವಾಗಿ ಗುರುತಿಸಬಹುದಾದ ಕ್ಷಿತಿಜ ಉಂಟು. ಅದರ ಒಳಕ್ಕೆ ಯಾವುದು ಬೇಕಾದರೂ ಬೀಳಬಹುದು. ಆದರೆ ಅಲ್ಲಿಂದ ಏನೂ ಹೊರಬರಲಾರದು. ಆಕಾಶದಲ್ಲಿರುವ ಗೋರಿಗಳೇ ಕೃಷ್ಣ ವಿವರಗಳು.

ಕೃಷ್ಣ ವಿವರದ ಸಮಭಾಜಕವೃತ್ತದ ಪರಿಧಿ 19M/m ಕಿ.ಮೀ (ಇಲ್ಲಿ M ಕೃಷ್ಣ ವಿವರದ ರಾಶಿ, m ಸೂರ್ಯನ ರಾಶಿ). ಪ್ರರೂಪೀ ಕೃಷ್ಣ ವಿವರಗಳ ರಾಶಿಗಳು 30 ರಿಂದ 50 ಸೂರ್ಯರಾಶಿಗಳಷ್ಟೂ, ಪರಿಧಿಗಳು 60ರಿಂದ 1000 ಕಿ.ಮೀ ತನಕವೂ ಇರುವುವು.

ಕೃಷ್ಣ ವಿವರಗಳಿಗಾಗಿ ಶೋಧ: 1963 ರ ತನಕ ಕೃಷ್ಣ ವಿವರಗಳು ಏನಿದ್ದರೂ ಪುಸ್ತಕಗಳೊಳಗಿನ ಕೌತುಕದ ಪ್ರಮೇಯಗಳಾಗಿದ್ದುವು, ಸಿದ್ಧಾಂತಗಳು ಸೂಚಿಸುತ್ತಿದ್ದ ವಿಚಿತ್ರ ವಸ್ತುಗಳಾಗಿದ್ದುವು. ವೀಕ್ಷಣೆ ಮಾಡಿ ಅವುಗಳ ಇರವನ್ನು ಸ್ಥಿರೀಕರಿಸಲು ಇದ್ದ ಪ್ರಬಲ ಅಡಚಣೆ ಎಂದರೆ ಭೂಮಿಯನ್ನು ಆವರಿಸಿರುವ ವಾಯುಮಂಡಲದ ದಟ್ಟ ಹಚ್ಚಡ. ಅತಿ ದೂರದ ಆಕಾಶಕಾಯಗಳಿಂದ ನಮ್ಮೆಡೆಗೆ ಬರುವ ವಿಕಿರಣಗಳು ಈ ಕವಚವನ್ನು ದಾಟಿ, ಆ ಪ್ರಕ್ರಿಯೆಯಲ್ಲಿ ಸಾಕಷ್ಟು ವಿರೂಪಗೊಂಡು, ಅನೇಕವೇಳೆ ವಿನಷ್ಟಗೊಂಡು, ಕೂಡ, ನಮ್ಮ ಸೂಕ್ಷ್ಮೋಪಕರಣಗಳನ್ನು ತಲಪುತ್ತವೆ. ಉದಾಹರಣೆಗೆ ಬಹುಪಾಲು ಅತಿ ನೇರಿಳೆ ವಿಕಿರಣಕ್ಕೆ, ಎಕ್ಸ್ ಕಿರಣಗಳನ್ನೂ ಒಳಗೊಂಡಂತೆ, ವಾಯುಮಂಡಲ ಅಪಾರದರ್ಶಕವಾಗಿದೆ. ಅಂದರೆ ಆಕಾಶದ ನಾನಾ ಭಾಗಗಳಲ್ಲಿ ಉತ್ಸರ್ಜಿತವಾಗಿ ಭೂಮಿ ಎಡೆಗೆ ಬರುವ ಅತಿ ನೇರಿಳೆ ವಿಕಿರಣ ವಾಯುಮಂಡಲದ ಹೊರವಲಯದಲ್ಲಿ ತಡೆಹಿಡಿಯಲ್ಪಡುತ್ತದೆ ಈ ವಿಕಿರಣದ ವಿಚಾರದಲ್ಲಿ ನೆಲದ ಮೇಲಿರುವ ನಾವೂ ನಮ್ಮ ಉಪಕರಣಗಳೂ ಸದಾ ಕುರುಡರೇ. ಆದ್ದರಿಂದ ನಮಗೆ ದೊರೆಯುವ ಆಕಾಶಚಿತ್ರವಾದರೂ ಪರಿಪೂರ್ಣವಲ್ಲ. ಆಕಾಶಯುಗ ಆರಂಭವಾಗಿ (1957) ಕೃತಕ ಉಪಗ್ರಹಗಳು ಭೂವಾಯುಮಂಡಲದ ಆಚೆಗೆ ಭೂಮಿಯನ್ನು ಪರಿಭ್ರಮಿಸತೊಡಗಿದ ಮೇಲೆ ವಿಶ್ವಶೋಧನೆಗೆ ಹೊಸ ಆಯಾಮ ಲಭಿಸಿತು.

1870ರಲ್ಲಿ ಅಮೆರಿಕ ಸಂಯುಕ್ತಸಂಸ್ಥಾನ ಮತ್ತು ಇಟಲಿ ಸಂಯುಕ್ತವಾಗಿ ಉಡಾಯಿಸಿದ ಉಹುರು ಎಂಬ

ಹೆಸರಿನ ಉಪಗ್ರಹ ವಿಶೇಷವಾಗಿ ವಿಶ್ವದಲ್ಲಿನ ಎಕ್ಸ್ ಕಿರಣಾಕರಗಳನ್ನು ಸತತ "ನೋಡುವ ಕಣ್ಣಾಗಿ" ಕೆಲಸ ಮಾಡಿ ಹೊಸ ಮಾಹಿತಿಗಳನ್ನು ಒದಗಿಸಿದೆ. ನಮ್ಮ ಆರ್ಯಭಟಕ್ಕೆ (ಉಡಾವಣೆ 19-4-1975) ವಿಧಿಸಿದ ಮೂರು ಮುಖ್ಯ ಕರ್ತವ್ಯಗಳ ಪೈಕಿ ಮೊದಲನೆಯದು ವಿಶ್ವದಲ್ಲಿನ ಪ್ರಮುಖ ಎಕ್ಸ್ ಕಿರಣಾಕರಗಳ ಅಧ್ಯಯನ ಎಂದು ಇಲ್ಲಿ ಸ್ಮರಿಸಬಹುದು.

ಸಿದ್ಧಾಂತದ ಚಿಗರೆ ಓಟದ ಮುಂದೆ ಪ್ರಯೋಗ ಮತ್ತು ವೀಕ್ಷಣೆಗಳ ಆಮೆ ನಡಿಗೆ ಇಂದು (1977) ಕೃಷ್ಣವಿವರಗಳ ವಾಸ್ತವಿಕ ಅಸ್ತಿತ್ವವನ್ನು ಕುರಿತು ನೀಡಿರುವ ತೀರ್ಮಾನವಿಷ್ಟು : ಯಮಳ ನಕ್ಷತ್ರಗಳ ಮೇಲೆ ನಮ್ಮ ಲಕ್ಷ್ಯವನ್ನು ಸಾಂದ್ರೀಕರಿಸುವುದು ಅಪೇಕ್ಷಣೀಯ. ಸಾಧಾರಣವಾಗಿ ಸಮರಾಶಿಯ ಎರಡು ನಕ್ಷತ್ರಗಳು ಒಂದರ ಸುತ್ತ ಇನ್ನೊಂದು ಪರಿಭ್ರಮಿಸುತ್ತಿರುವ ಜೋಡಿ ನಕ್ಷತ್ರಗಳಿವು—ಆಕಾಶದಲ್ಲಿ ನಡೆಯುವ ಅಪ್ಪಾಲೆ ತಿಪ್ಪಾಲೆ ಆಟ ! ಇಂಥ ನಕ್ಷತ್ರಗಳ ಎರಡು ಸಮುದಾಯಗಳೇ ಇರಬಹುದು. ಇವುಗಳಲ್ಲಿ ವೀಕ್ಷಣೆಗೆ ಒಳಪಡುವುಗಳ ಸಮಸ್ತ ವಿವರಗಳನ್ನೂ—ರಾಶಿ, ಗಾತ್ರ, ಚಲನವೇಗ ಇತ್ಯಾದಿ—ತಿಳಿಯಬಹುದು. ಒಳಪಡದವುಗಳ ಇವೇ ವಿವರಗಳನ್ನು ಗಣಿಸಿ ನಿರ್ಧರಿಸಬಹುದು. ಬಳಿಕ ಈ ಎರಡನೆಯದು ಕೃಷ್ಣವಿವರವಾಗಲು ಅರ್ಹತೆ ಪಡೆದಿದೆಯೇ ಎಂದು ಗಣನೆಯಿಂದ ತೀರ್ಮಾನಿಸುತ್ತಾರೆ.

ಈ ದೃಷ್ಟಿಯಿಂದ ಕೃಷ್ಣವಿವರ ಅಂತಸ್ತನ್ನು ಪಡೆಯಲು ಸಾಕಷ್ಟು "ಅಭ್ಯರ್ಥಿಗಳು" ದೊರೆತಿದ್ದಾರೆ. ಅವೆಲ್ಲವೂ ಎಕ್ಸ್‌ಕಿರಣಾಕರಗಳಲ್ಲಿ ಇರುವ ನ್ಯೂಟ್ರಾನ್ ನಕ್ಷತ್ರಗಳೇ. ಇಲ್ಲಿ ಮುಖ್ಯವಾಗಿ ಹೆಸರಿಸಬೇಕಾದದ್ದು ಸಿಗ್ನಸ್ ನಕ್ಷತ್ರ ಪುಂಜದ (ಕುಂಭ, ಮೀನ ರಾಶಿಗಳು ಸುಮಾರಾಗಿ ನೆತ್ತಿ ಮೇಲೆ ಇರುವಾಗ ಆಕಾಶದ ಉತ್ತರ ಭಾಗದಲ್ಲಿ ಈ ಪುಂಜವನ್ನು ಗುರುತಿಸಬಹುದು) ಕೇಂದ್ರದಲ್ಲಿ ಹುದುಗಿರುವ ಅವ್ಯಕ್ತ ಬಲಕೇಂದ್ರವನ್ನು. ಇದು ಶೇಕಡ 90 ಕೃಷ್ಣವಿವರವೇ ಎಂಬುದಾಗಿ ಆ ವಲಯವನ್ನು ವಿಶೇಷವಾಗಿ ಅಭ್ಯಸಿಸಿರುವ ಕಿಪ್ ಎಸ್. ತೋರ್ನ್ ಮತ್ತು ಇತರ ವಿಜ್ಞಾನಿಗಳು ತೀರ್ಮಾನಿಸಿರುವರು. ಮುಂಬರುವ ವರ್ಷಗಳಲ್ಲಿ ಇದು ಅಂತಿಮವಾಗಿ ಇತ್ಯರ್ಥವಾಗಲಿದೆ.

ಇಪ್ಪತ್ತನೆಯ ಶತಮಾನದ ಖಗೋಳ ವಿಜ್ಞಾನದ ಸೀಮಾವಲಯದಲ್ಲಿ ಕೃಷ್ಣವಿವರಗಳಿವೆ. ಆದ್ದರಿಂದ ಇವನ್ನು ಕುರಿತ ಯಾವುದೇ ಬರವಣಿಗೆ ಒಂದಿಷ್ಟು ಕನಸು, ಒಂದಿಷ್ಟು ನನಸು, ಒಂದಿಷ್ಟು ಕಲ್ಪನೆ, ಒಂದಿಷ್ಟು ಊಹೆಗಳ ಮಿಶ್ರಣವಾಗಿರುವುದು ಸಹಜವೇ. ಸಾವಧಾನದಿಂದ ಮುಂದುವರಿವಾತನಿಗೆ ಹೊಸ ಹಸಿರು ಈ ದಿಶೆಯಲ್ಲಿ ಕೈಬೀಸಿ ಕರೆಯುತ್ತಿದೆ. ಮನುಕುಲದ ಈ ಆಸೆ ಆಕಾಂಕ್ಷೆಗಳನ್ನು ಕವಿ ಗೋಪಾಲಕೃಷ್ಣ ಅಡಿಗರು ಬಲು ಸೊಗಸಾಗಿ ಪ್ರತಿಮಿಸಿದ್ದಾರೆ :

ನನ್ನ ಮನವು ಹಾಯಬೇಕು ದಿಗ್ದಿಗಂತದಾಚೆಗೂ
ಏರಬೇಕು ಮುಗಿಲಿನಾಚೆ ತಾರೆಯಾಚೆಯಾಚೆಗೂ
ಇಳಿಯಬೇಕು ಪಾತಾಳದ ಗಹನ ತಿಮಿರದಾಳಕೂ
ಇನ್ನು ಇನ್ನು ಅಗಲಕೂ ಮೇಲಕೂ ಆಳಕೂ

ಡಾ. ಡಿ. ಎಸ್. ಶಿವಪ್ಪ

ನಮಗೆಂತಹ ವೈದ್ಯರು ಬೇಕು ?

ನಮ್ಮ ದೇಶಕ್ಕೆ ಈಗ ಅಗತ್ಯವೆನಿಸಿರುವ 'ಮೂಲ (ಬೇಸಿಕ್) ವೈದ್ಯ'ನ ಕಲ್ಪನೆ ಈಗಾಗಲೇ ಕೆಲವು ವರುಷಗಳಿಂದಲೂ ಉನ್ನತ ಸರಕಾರಿ ವಲಯಗಳ ತಲೆತಿನ್ನುತ್ತಿದೆ. ಇಷ್ಟಾದರೂ, ಒಬ್ಬೊಬ್ಬರಿಗೂ ಈ ವಿಚಾರದಲ್ಲಿ ಬೇರೆ ಬೇರೆ ಕಲ್ಪನೆಗಳಿವೆ. ಭಾರತ ಸರಕಾರ ನೇಮಿಸಿದ ವೈದ್ಯಶಿಕ್ಷಣಸಮಿತಿ (1969), ಹಳ್ಳಿಗಳ ನಗರಗಳ ಜನರ ದಿನದಿನದ ಆರೋಗ್ಯ ಸಮಸ್ಯೆಗಳನ್ನು ಚೆನ್ನಾಗಿ ಅರಿತ, ಪ್ರಾಂತೀಯ ಮತ್ತು ರಾಷ್ಟ್ರೀಯ ಆರೋಗ್ಯ ಸಮಸ್ಯೆಗಳ ಗುಣಕಾರಕ ಮತ್ತು ನಿರೋಧಕ ವಿಷಯಗಳಲ್ಲಿ ಪರಿಣಾಮಕಾರಿ ಪಾತ್ರ ವಹಿಸುವ, ವೈದ್ಯನನ್ನು 'ಮೂಲ ವೈದ್ಯ'ನೆಂದು ನಿರೂಪಿಸಿತು. ಈ ಲಕ್ಷಣ ನಿರೂಪಣೆಯಂತೆ, ಭಾರತದ ವೈದ್ಯಕೀಯ ಕಾಲೇಜುಗಳಿಂದ ಹೊರಬಿದ್ದ ಪದವೀಧರರು ಆ ಮಟ್ಟಕ್ಕೇರುವುದೇ ಇಲ್ಲ. ಮೂಲವೈದ್ಯನನ್ನು ತಯಾರಿಸುವುದನ್ನು ಬಿಟ್ಟು ತೀವ್ರ ಕಾಯಿಲೆಯಿಂದ ನರಳುವ ರೋಗಿಗಳ ಇಲ್ಲವೇ 'ಕುತೂಹಲಕಾರಿ ರೋಗಿಗಳು' ಎನಿಸಿಕೊಳ್ಳುವವರಿಗೆ ಪಾಲನೆ, ಚಿಕಿತ್ಸೆಗಳನ್ನು ಯತ್ನಿಸಲನುವಾಗಿರುವ ದೊಡ್ಡ ಸುಸಜ್ಜಿತ ಆಸ್ಪತ್ರೆಯಲ್ಲಿ ಗುಣಕಾರಕ ವೈದ್ಯಗಾರಿಕೆಯನ್ನು ನಡೆಸಲು ಹೆಚ್ಚು ಅರ್ಹನಾದವನನ್ನು ತಯಾರಿಸುವುದೇ ಅವರ ಶಿಕ್ಷಣದ ಗುರಿಯಾಗಿದೆ.

ಹೀಗೇಕೆಂದು ಅರ್ಥಮಾಡಿಕೊಳ್ಳುವುದು ಕಷ್ಟವೇನೂ ಅಲ್ಲ. ರೋಗಿಯೊಬ್ಬನಿಗೆ ಅತ್ಯುತ್ತಮ ಗುಣಕಾರಿ ವೈದ್ಯವನ್ನು ನೀಡಲೆಂದೇ ಅವನ ನಿಪುಣತೆ, ಆಸಕ್ತಿ ಎಲ್ಲವನ್ನೂ ವಿನಿಯೋಗಿಸುವಂತೆ ಅವನ ತರಪೇತಾಗುತ್ತದೆ. ಸಾಧಾರಣವಾದ ತೀವ್ರರೋಗಿಗಳ ಮೇಲೂ ಮತ್ತು ಗುಣಪಡಿಸಲು ನೈದಾನಿಕ ಮತ್ತು ರೋಗ ಚಿಕಿತ್ಸಕ ಪ್ರಯತ್ನಗಳೇನೂ ಕೈಗೂಡದೆ ಕೊನೆಗೆ ಬೋಧಕಆಸ್ಪತ್ರೆಗೆ ವರ್ಗಾಯಿಸಿರುವ ಅಸಾಧಾರಣ ರೋಗಿಗಳ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸುವ ದೊಡ್ಡ ಬೋಧಕಆಸ್ಪತ್ರೆಗಳಲ್ಲಿ ಅವನು ಶಿಕ್ಷಣ ಪಡೆಯುವನು. ಆರೋಗ್ಯ ಮತ್ತು ರೋಗದ ಬಹುಮುಖದ ಸಮಸ್ಯೆಯ ಕೆಲವೇ ವಿಚಾರಗಳಲ್ಲಿ ಮಾತ್ರ ತರುಣವೈದ್ಯ ತರಪೇತಾಗುವನು. ಬಹು ಜಟಿಲವಾದ ಮತ್ತು ತೀರ ಅಪೂರ್ವ ಸಂಭವದ ಸಮಸ್ಯೆಗಳಿಗೇ ಇದು ಮಿತಿಗೊಂಡಿರುವುದು. ಆಸ್ಪತ್ರೆಯ ಹೊರರೋಗಿಗಳ ಶಾಖೆಯಲ್ಲಿ ಕೆಲವರು ಕಾಣಬಹುದಾದರೂ, ಸಮಾಜದ ಸಾಧಾರಣ ಮತ್ತು ಜಟಿಲವಾದ ಆರೋಗ್ಯಸಮಸ್ಯೆಗಳ ಪೂರ್ಣಚಿತ್ರ ಆಸ್ಪತ್ರೆಯಲ್ಲಿ ಸೇರಿರುವ ರೋಗಿಗಳಲ್ಲಿ ಸಿಗುವುದಿಲ್ಲ. ಶಿಕ್ಷಕರ ಅನುಭವವೂ ಅಷ್ಟಕ್ಕೇ ಮಿತಿಗೊಂಡಿರುತ್ತದೆ. ಅವರು ವಿಶೇಷ ಪರಿಣತಿ ಪಡೆದಷ್ಟೂ, ಹಳ್ಳಿಗಳ, ಪಟ್ಟಣಗಳ ದಿನದಿನದ ಅಗತ್ಯಗಳನ್ನು ಮತ್ತು ಆರೋಗ್ಯದ ರಾಷ್ಟ್ರೀಯಸಮಸ್ಯೆಗಳನ್ನೂ ಯೋಜನೆಗಳನ್ನೂ ಅವರು ಪರಿಚಯ ಮಾಡಿಕೊಳ್ಳುವುದೇ ಅಸಾಧ್ಯವಾಗುತ್ತದೆ. ಆದ್ದರಿಂದ, ಶಿಕ್ಷಣ ಸಂಸ್ಥೆಯಿರುವ ಪ್ರದೇಶದ ಜನರ ಇಲ್ಲವೇ ರಾಷ್ಟ್ರೀಯ ಸಮಸ್ಯೆಗಳನ್ನು ಗಮನಿಸುವ, ಮತ್ತು ವ್ಯಾಪಕ ಆಧಾರದ ಶಿಕ್ಷಣವನ್ನು ಅವರು ನೀಡಲಾರರು. ಬಗೆಬಗೆಯ ಅನುಕೂಲಕರ ಸಾಧನಗಳನ್ನೂ ಸುಧಾರಿತ ಸೂಕ್ಷ್ಮ ಉಪಕರಣಗಳನ್ನೂ ನೆಚ್ಚಿಕೊಂಡಿ

ರುವ ದೊಡ್ಡ ಬೋಧಕ ಆಸ್ಪತ್ರೆಗಳು ಆರೋಗ್ಯಪಾಲನೆಯ ವಿಚಾರವಾಗಿ ಅವರ ದೃಷ್ಟಿಯನ್ನೂ ಅಭಿಪ್ರಾಯ ಗಳನ್ನೂ ಸಾಧನ ಸಲಕರಣೆಗಳಿಗೆ ದಾಸರಾಗುವಂತೆ ರೂಪಿಸುತ್ತವೆ. ಅಲ್ಲಿ ಶಿಕ್ಷಣಕ್ಕಾಗಿ ಬರುವವರಿಗೆ ದಕ್ಕುವ ತರಪೇತೂ ಇದೇ. ಬೋಧಕ ಆಸ್ಪತ್ರೆಯಲ್ಲಿ ಸೇರಲು ಆಯ್ಕೆಯಾಗಿರುವ ರೋಗಿಗಳನ್ನು ಮಾತ್ರ ಗಮನಿಸು ವುದರಲ್ಲಿ ವಿದ್ಯಾರ್ಥಿಯೂ ಶಿಕ್ಷಕನೂ ಆಳವಾಗಿ ಮಗ್ನರಾಗಿರುವುದರಿಂದ, ತರುಣವೈದ್ಯ ಪಡೆಯುವ ಅನುಭವ ದಲ್ಲಿ ಗುಣಾಯಕವಾಗೂ, ಪ್ರಮಾಣಾತ್ಮಕವಾಗೂ ವಿಪರೀತ ಕೊರತೆಗಳೇಳಬಹುದು. ಇದರಿಂದ ನಾಡಿನ ಜನ ರೆಲ್ಲರಿಗೂ ಪರಿಪೂರ್ಣವಾದ ಮತ್ತು ಅಡ್ಡಾಡುವ ರೋಗಿಗಳಿಗೆ ಪ್ರಾಥಮಿಕ ಆರೋಗ್ಯಪಾಲನೆ ಒದಗಿಸುವ ಕರ್ತವ್ಯ, ಜವಾಬ್ದಾರಿಗಳನ್ನು ಪಾಲಿಸಲು ಅವನಿಗೆ ಕಷ್ಟವಾಗುತ್ತದೆ.

ರೋಗಿಗೆ ವಿಶೇಷಿತ ಶುಶ್ರೂಷೆ, ಪಾಲನೆಗಳನ್ನು ಒದಗಿಸುವ ಸಾಮರ್ಥ್ಯವನ್ನು ಬೋಧಕಆಸ್ಪತ್ರೆಗಳು ಬಲಪಡಿಸುತ್ತಿವೆ. ಅಲ್ಲದೆ, ಹಲವು ಬಗೆಗಳ ವಿಶೇಷ ವೈದ್ಯಶಾಖೆಗಳ ಬೇಕುಗಳನ್ನೂ ಬಲು ಚೆನ್ನಾಗಿ ಪೂರೈಸಿ, ವಿಶೇಷಜ್ಞರ ತರಪೇತಿಗಾಗಿ, ಮಾದರಿ ಯೋಜನೆಗಳನ್ನೂ ರೂಪಿಸಿವೆ. ಆದರೆ, ಇದೇ ಸಫಲತೆಯಿಂದಲೇ, ಮುಂದೆ ಸಾಮಾನ್ಯ ವೈದ್ಯವೃತ್ತಿಗಾರನೋ, ಕುಟುಂಬ ವೈದ್ಯನೋ, ಸಮಾಜ ವೈದ್ಯನೋ ಆಗುವ ಮೂಲ ವೈದ್ಯನ ತರಪೇತಿಗೆ ಆಸ್ಪತ್ರೆಗಳು ತಕ್ಕವಾದುವಾಗಿಲ್ಲ. ಶಿಕ್ಷಕ ವೃಂದದಲ್ಲಿ ಮಾದರಿಗಳಾಗಿ ಯಾವ ಸಾಧಾರಣ ವೈದ್ಯವೃತ್ತಿಗಾರನಾಗಲೀ, ಸಮಾಜ ಆರೋಗ್ಯದ ವೈದ್ಯನಾಗಲೀ ಇಲ್ಲವೇ ಇಲ್ಲ. ಸಮಾಜ ವೈದ್ಯದಲ್ಲಿ ಆಸ್ಪತ್ರೆ ಯವರಿಗಂತೂ ಏನೇನೂ ಆಸಕ್ತಿಯಿಲ್ಲ. ಬೋಧಕ ಆಸ್ಪತ್ರೆಯಲ್ಲಿ ವಿಶೇಷಜ್ಞತೆಯ ಕಡೆಗೇ ಓಲುವ ಪರಿಸರ ವನ್ನು ಮತ್ತೆ ಸೃಷ್ಟಿಸಲು ವಿಶೇಷಜ್ಞರು ಯತ್ನಿಸುತ್ತಿರುವ ಈ ಆಸ್ಪತ್ರೆಗಳಿಗೇ ಇನ್ನಷ್ಟು, ಮತ್ತಷ್ಟು ಮಂದಿ ಮುನ್ನುಗ್ಗುತ್ತಿರುವ, ವಿಶೇಷಜ್ಞರ ತರಪೇತಿಯ ಯೋಜನೆಗಳಲ್ಲಿ ಪರಿಣತಿ ಪಡೆದವರಿಂದ ಸಣ್ಣ ಆಸ್ಪತ್ರೆಗಳಲ್ಲಿ ಏನಾದರೂ ನಡೆಸುತ್ತಿದ್ದ, ಇಲ್ಲವೇ ಇನ್ನೂ ನಡೆಸುತ್ತಿರುವ ಸಮಾಜ ವೈದ್ಯವೂ ಇಳಿಮುಖವಾಗುತ್ತಿದೆ.

ಒಳ್ಳೆಯ ಹೆಸರುಪಡೆದು ಚೆನ್ನಾಗಿ ಯಶಸ್ವಿಯಾದ ಬೋಧಕ ಆಸ್ಪತ್ರೆಗಳೂ ಆ ಪ್ರದೇಶದ ಎಲ್ಲೆಡೆ ಗಳಿಂದಲೂ ಆಯ್ದ ರೋಗಿಗಳನ್ನು ಮಾತ್ರ ಆಕರ್ಷಿಸುವಂತಾದುವು. ಜಾಗ ಮತ್ತು ಹೊತ್ತಿನ ಮಿತಿಗಳಿಂದಾಗಿ ಈ ಆಸ್ಪತ್ರೆಗಳು ಬರಬರುತ್ತ ಸ್ಥಳೀಯ ಜನರಿಂದ ಬಹಳ ದೂರವಾದುವು. ಆಸ್ಪತ್ರೆಯಲ್ಲಿ ಸೇರುವ ಪುಣ್ಯ ಪಡೆದವ ರಿಗೆ ಮಾತ್ರ ಅವರು ಅತ್ಯುತ್ತಮ ವೈದ್ಯ ಚಿಕಿತ್ಸೆ ನೀಡಿದರೂ, ಅವರೆ ಸುತ್ತಮುತ್ತಲಿನ ಜನರ ವಿಚಾರವಾಗಿ ಮಾತ್ರ ಆತ್ಯಲ್ಪ, ಇಲ್ಲವೇ ಏನೂ ಜವಾಬ್ದಾರಿಯನ್ನೇ ಹೊರಲಿಲ್ಲ.

ಇಂದಿನ ಸಂಪ್ರದಾಯ ಪದ್ಧತಿಯಲ್ಲಿ ರೋಗಕ್ಕೆ ತಕ್ಕಂತೆ ಶುಲ್ಕ ತೆರಬೇಕು ; ಹೆಚ್ಚು ರೋಗವನ್ನು ಚಿಕಿತ್ಸೆ ಮಾಡಿದಷ್ಟೂ ವೈದ್ಯನಿಗೆ ಆದಾಯವೂ ಹೆಚ್ಚು. ಜನರನ್ನು ಆರೋಗ್ಯವಾಗಿರಿಸಲು, ವೈದ್ಯನಿಗೆ ಆರ್ಥಿಕ ವಾಗಿ ಯಾವ ಉತ್ತೇಜನವೂ ಇಲ್ಲ. ಇಷ್ಟಾದರೂ ವೈದ್ಯರು ಉತ್ತಮವಾಗಿ ವೈದ್ಯಗಾರಿಕೆ ನಡೆಸಿ, ಜನರನ್ನು ಆರೋಗ್ಯವಾಗಿರಿಸಲು ಯತ್ನಿಸುತ್ತಿದ್ದಾರೆ. ಅವರ ಕಸಬಿನ ಸಮಗ್ರ ಉದಾತ್ತತೆ ಮತ್ತು ಆಸಕ್ತಿಗಳ ಹೆಚ್ಚಳಿಕೆ ಯನ್ನು ಇದು ತೋರುತ್ತದೆ. ಆದರೆ, ಕಾಯಿಲೆಯಾದವನನ್ನು ಚಿಕಿತ್ಸೆ ಮಾಡಿ ಗುಣಪಡಿಸಿ ಇಲ್ಲವೇ ಪಾಲಿಸು ವುದನ್ನು ಮಾತ್ರ ಅವನ ತರಪೇತಿ ಕಲಿಸಿದೆ.

ಬೋಧಕ ಆಸ್ಪತ್ರೆ ಮತ್ತು ರೋಗಗಳ ಮೇಲಿನ ಅಂತಹ ಶಿಕ್ಷಣ ನೀಡುತ್ತಿರುವಾಗ, ತರುಣ ಪದವೀ ಧರನ ವ್ಯಕ್ತಿತ್ವ ನಾವೀಗ ನಿರೀಕ್ಷಿಸುತ್ತಿರುವುದಕ್ಕಿಂತಲೂ ತೀರ ಬೇರೆಯಾಗಿರುವುದು ಆಶ್ಚರ್ಯವೇನೂ ಅಲ್ಲ. ವೈದ್ಯಗಾರಿಕೆಯ ವೈಜ್ಞಾನಿಕ ಆಧಾರವೀವ ಮೂಲ ವೈದ್ಯಕೀಯ ವಿಷಯಗಳಲ್ಲಿ ಬೇಕಾದ ಕುಶಲತೆಯನ್ನೂ ತಿಳಿವಳಿಕೆಯನ್ನೂ ತರುಣವೈದ್ಯ ಗಳಿಸಿದ್ದಾನೆ. ಸಾಂಕ್ರಾಮಿಕಶಾಸ್ತ್ರ, ವೈದ್ಯಕೀಯ ಸಮಾಜಶಾಸ್ತ್ರ, ಜೀವಂತ ಗಣನೆ ಶಾಸ್ತ್ರಗಳಂತಹ ಇನ್ನೂ ಹೊಸ ಮೂಲವಿಷಯಗಳು ಬಹುಮಟ್ಟಿಗೆ ಅವನನ್ನು ಮುಟ್ಟಿಯೇ ಇಲ್ಲ. ಏಕೆಂದರೆ, ಈ ವಿಷಯಗಳ ಹೆಚ್ಚಳಿಕೆಯನ್ನು ಒತ್ತಿ ಹೇಳಿದವರೇ ಇಲ್ಲ. ಅದೇ ಹೊತ್ತಿನಲ್ಲಿ ಕಲಿಸಿದ ರೋಗಿ

ಚಿಕಿತ್ಸಕ ವಿಷಯಗಳ ನಡುವೆ ಇವು ಕೊಚ್ಚಿ ಹೋದುವು. ಆಸ್ಪತ್ರೆಯಲ್ಲಿ ಚಿಕಿತ್ಸೆಯಾಗುವ ಜಟಿಲ ಕಾಯಿಲೆಗಳ ನಿದಾನದ ಮತ್ತು ರೋಗಚಿಕಿತ್ಸಕ ಕ್ರಮಗಳ ಮಾಹಿತಿ ಅವರಿಗೆ ಸಾಕಷ್ಟಿದೆ. ಆದರೆ, ಅವನು ಚಿಕಿತ್ಸೆ ಪಡೆದ ರೋಗಿಯ, ಕುಟುಂಬದ ಇಲ್ಲವೇ ಅವನು ವೈದ್ಯಗಾರಿಕೆ ನಡೆಸುವ ಸಮಾಜದ ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯ ವಿಚಾರವಾಗಿ ಇಂದಿನ ಪದವೀಧರನಿಗೆ ತರಪೇತು ಏನೂ ಇಲ್ಲ.

ನಮ್ಮ ಮುಂದಿರುವ ಉದ್ದೇಶಗಳು ನೆರವೇರಬೇಕಾದರೆ, ಈ ತರಪೇತಿನಲ್ಲಿ ವಿಪರೀತ ಬದಲಾವಣೆಗಳು ಆಗಲೇಬೇಕು. ಪ್ರೇರಕ, ನಿರೋಧಕ, ಗುಣಕಾರಕ ಮತ್ತು ಮರುಪಾಟಣಿಕ ಪಾಲನೆಯೂ ಸೇರಿರುವ ಸಮಗ್ರ ಆರೋಗ್ಯ ಸೇವೆಯನ್ನು ನೀಡುವಂತಹ ತರಪೇತನ್ನು ತರುಣ ವೈದ್ಯನಿಗೆ ನೀಡಬೇಕು. ಆಗ ಈ ಬೇರೆ ಬೇರೆ ಕ್ಷೇತ್ರಗಳ ಮೂಲಸೂತ್ರಗಳನ್ನು ಚೆನ್ನಾಗಿ ಅರಿತ ಈ ತರುಣ ವೈದ್ಯ, ಇನ್ನಷ್ಟು ತರಪೇತಿನೊಂದಿಗೆ, ವೈದ್ಯ ಕಸಬಿಗೆ ತೆರೆದಿರುವ ಮಾರ್ಗಗಳಲ್ಲಿ ಒಂದರಲ್ಲಿ ಹೊಂದಿಕೊಳ್ಳಬಲ್ಲ. ಇದು ಸಾಧಾರಣ ವೈದ್ಯಗಾರ ಇಲ್ಲವೇ ಸಮಾಜ ವೈದ್ಯನಾಗಿ ಪ್ರಾಥಮಿಕ ವೈದ್ಯ ಸೇವೆ ಆಗಿರಬಹುದು. ವಿಶೇಷ ವೈದ್ಯಚಿಕಿತ್ಸೆ ನೀಡುವ ವಿಶೇಷಜ್ಞನಾಗಬಹುದು ; ಆರೋಗ್ಯ ತಂಡದ ಬೇರೆ ಬೇರೆ ಜನರಿಗೆ ತರಪೇತು ಕೊಡುವ ಶಿಕ್ಷಕನಾಗಬಹುದು ; ಅನ್ವಯಿಕ ಗುಣದ ಆರೋಗ್ಯದ ಸಮಸ್ಯೆಗಳನ್ನು ಎದುರಿಸುವುದರಲ್ಲಿ ಇಲ್ಲವೇ ಜೀವಕ್ರಿಯಾಗತಿಗಳ ಮೂಲಸೂತ್ರಗಳನ್ನು ಬಿಡಿಸುವುದರಲ್ಲಿ ನಿರತನಾದ ಸಂಶೋಧಕನಾಗಬಹುದು. ಬಹಳ ಮಂದಿಯನ್ನು ಬಹಳ ಸಾರಿ ಕಾಡುವ ಹೆಚ್ಚಿನ ಸಂಭವವಿರುವ ಆರೋಗ್ಯ ಸಮಸ್ಯೆಗಳ ತಂಡಗಳ ಸಂಪೂರ್ಣ ಮಾಹಿತಿ ಮೂಲವೈದ್ಯನಿಗೆ ಇರಬೇಕು. ಸಾಧಾರಣವಾದ, ಕೆಲವೇಳೆ ವಿಶಿಷ್ಟವಲ್ಲದ ಆರೋಗ್ಯ ಸಮಸ್ಯೆಗಳಿಗಾಗಿ, ಪ್ರಾಥಮಿಕ ಆರೋಗ್ಯಕೇಂದ್ರಗಳಲ್ಲಾಗಲಿ, ಅವುಗಳ ಉಪಕೇಂದ್ರಗಳು, ಔಷಧಾಲಯಗಳು, ಖಾಸಗಿ ಚಿಕಿತ್ಸಾಲಯಗಳು, ಇಲ್ಲವೇ ವೈದ್ಯರ ಚಿಕಿತ್ಸೆ ಕೋಣೆಗಳಲ್ಲಾಗಲಿ, ಅವನು ಪ್ರಾಥಮಿಕ ವೈದ್ಯ ಸೇವೆ ಸಲ್ಲಿಸುವಂತಿರಬೇಕು. ಈ ಪ್ರಾಥಮಿಕ ಆರೋಗ್ಯಪಾಲನೆಯ ಸೇವೆಯಲ್ಲಿ ಎಡೆಬಿಡದ ಉಸ್ತುವಾರಿ, ಮತ್ತಷ್ಟು ಕಾಯಿಲೆಯ ನಿರೋಧ, ಮತ್ತು ಆರೋಗ್ಯ ಪಾಲನೆಯೂ ಸೇರಿರಬೇಕು. ಇದರಲ್ಲಿ ಅಪಘಾತಗಳ, ಗಾಯ ಪೆಟ್ಟುಗಳ ಮತ್ತು ಇತರ ಆಕಸ್ಮಿಕಗಳ ಚಿಕಿತ್ಸೆಯೂ ಇರಬೇಕು. ಪ್ರಾಥಮಿಕ ಆರೋಗ್ಯಸೇವೆಗೆ ಜವಾಬ್ದಾರನಾದ ಮೂಲವೈದ್ಯ ರಾಷ್ಟ್ರದ ಮತ್ತು ಪ್ರದೇಶದ ಮುಖ್ಯ ಆರೋಗ್ಯ ಸಮಸ್ಯೆಗಳನ್ನು ಚೆನ್ನಾಗಿ ಅರಿತಿರಬೇಕು. ನಿಯಂತ್ರಣ ಮತ್ತು ನಿರ್ಮೂಲನೆಯ ರಾಷ್ಟ್ರೀಯ ಯೋಜನೆಗಳನ್ನು ಚೆನ್ನಾಗಿ ತಿಳಿದು ಅವುಗಳಲ್ಲಿ ಚುರುಕಾಗಿ ಭಾಗವಹಿಸಬೇಕು. ವೈದ್ಯಕೀಯ ಕಾಲೇಜಿಗೂ ಆಸ್ಪತ್ರೆಗೂ ಮಾತ್ರ ತರಪೇತು ಸೀಮಿತವಾಗಿದ್ದರೆ, ಇದನ್ನು ಸಾಧಿಸುವಂತಿಲ್ಲ. ಅವನ ತರಪೇತಿನಲ್ಲಿ ಬಹುಭಾಗ ಅವನು ಸೇವೆ ಸಲ್ಲಿಸುವ ಸಮಾಜದಲ್ಲಿಯೇ ಆಗಬೇಕು. ಸಮಗ್ರ ಆರೋಗ್ಯ ಸೇವೆಯನ್ನು ಸಲ್ಲಿಸುವ ಸರಿಯಾದ ರೀತಿಯನ್ನು ತರುಣ ತರಪೇತದಾರರಿಗೆ ತೋರಿಸಿಕೊಡಬಲ್ಲ, ನಮ್ಮ ಅತ್ಯುತ್ತಮ ಶಿಕ್ಷಕರಿರುವ, ಹಳ್ಳಿಯ ಮತ್ತು ಪಟ್ಟಣಗಳ ತರಪೇತಿನ ಕೇಂದ್ರಗಳ ಬಳಕೆಯಿಂದ ಇದನ್ನು ಸಾಧಿಸಬಹುದು.

ಈ ವೈದ್ಯನ ತರಪೇತು ಸಾಮಾಜಿಕ ಮತ್ತು ಆರ್ಥಿಕ ವಿವೇಚನೆಯೂ ಸೇರುವಷ್ಟು ವ್ಯಾಪಕವಾಗಿರಬೇಕು. ಸಮಾಜ ಕಲ್ಯಾಣದ ಒಲವಿನ ಅರಿವನ್ನು ಮೂಡಿಸಬೇಕು. ಒದಗಿಸುವ ಆರೋಗ್ಯ ಸೇವೆಯ ಬಗೆ ಮತ್ತು ವ್ಯವಸ್ಥೆ, ಜನರ ರಾಜಕೀಯ ಮತ್ತು ಆರ್ಥಿಕ ಒಲವುಗಳು, ಆದ್ಯತೆಗಳನ್ನು ಅನುಸರಿಸುತ್ತವೆ. ಈ ಒಲವುಗಳೂ ಆದ್ಯತೆಗಳೂ ಏನೇ ಇರಲಿ, ಜನರ ಎಲ್ಲ ವರ್ಗಗಳಿಗೂ ಈಗಿರುವ ಆಕರಗಳಿಂದಲೇ ಆರೋಗ್ಯಸೇವೆಯನ್ನು ಒದಗಿಸುವುದು ಈಗ ಅಗತ್ಯವೆನಿಸಿದೆ. ರಾಷ್ಟ್ರದ ಆಕರಗಳಿಗೂ ಮಿತಿಯಿರುವುದರಿಂದ, ಆರೋಗ್ಯವರ್ಧನೆ ಮತ್ತು ರೋಗ ನಿರೋಧ ರೀತಿಗಳನ್ನು ಒತ್ತಿ ಹೇಳುವುದರಿಂದ ಮಾತ್ರ ಇನ್ನೂ ಒಳ್ಳೆಯ ಫಲಗಳನ್ನು ಪಡೆಯಬಹುದು. ಸೇವೆ ಅಗತ್ಯವಿರುವ ಜನರ ಸಂಖ್ಯೆಯನ್ನು ನೋಡಿದರೆ,ಗುಣಕಾರಕ ಮತ್ತುಮರುಪಾಟಣಿಕ ಸೇವೆ ದುಬಾರಿ ಖರ್ಚಿನದು. ವೈಯುಕ್ತಿಕ ಗುಣಕಾರಿ ಚಿಕಿತ್ಸೆಯನ್ನು ಬಿಟ್ಟು, ಅಂತಹ ವೈಯಕ್ತಿಕವಲ್ಲದ ಆರೋಗ್ಯವರ್ಧಕ ಮತ್ತು ನಿರೋಧಕ

ಸೇವೆಗಳಿಂದ, ಮೊಟ್ಟಮೊದಲಾಗಿ, ಜನರ ಏರುತ್ತಿರುವ ಆಕಾಂಕ್ಷೆಗಳನ್ನು ತಣಿಸಲಾರೆವು ; ಆಡಳಿತಗಾರರಾಗಲಿ ರಾಜಕೀಯ ತಜ್ಞರಿಗಾಗಲಿ ಹಿಡಿಸುವುದೂ ಇಲ್ಲ. ಆರೋಗ್ಯ ವಿಚಾರಗಳನ್ನು ಅವರಿಗೆ ವಿವರಿಸಿ ತಿಳಿವಳಿಕೆ ನೀಡುವುದು ವೈದ್ಯನ ಕರ್ತವ್ಯ. ಸಮಾಜಕ್ಕೆ ಪರಿಪೂರ್ಣ ಆರೋಗ್ಯ ಸೇವೆಯನ್ನು ಸಲ್ಲಿಸುವುದರಲ್ಲಿ ಬೇರೆ ಆರೋಗ್ಯ ಕಸಬುದಾರರೊಂದಿಗೆ ವೈದ್ಯ ಕೆಲಸಮಾಡುವನು.

ಪರಿಣಾಮಕರವಾಗೂ ಸಮರ್ಥವಾಗೂ ಕೆಲಸ ಮಾಡಲು, ತಂಡದ ನಾಯಕನಾಗಿ ವೈದ್ಯ, ತಂಡದ ಜಾಣ್ಮೆಯನ್ನೂ ಜನರೊಂದಿಗಿನ ಸಂಪರ್ಕ ಕುಶಲತೆಯನ್ನೂ ಸಂಪಾದಿಸಿಕೊಳ್ಳಬೇಕು. ವೈದ್ಯ ತನ್ನ ಶಿಕ್ಷಣದಲ್ಲಿನ ಕೊರೆಗಳನ್ನೇ ಗುರುತಿಸುವಂತಿದ್ದು, ಅಂತಹ ಕೊರೆಗಳನ್ನು ಪರಿಹರಿಸಲು ಹುಡುಕಿ ತಕ್ಕ ವ್ಯವಸ್ಥೆಗಳನ್ನು ಏರ್ಪಡಿಸಬೇಕು. ಜೀವನ ಪರ್ಯಂತದ ಶಿಕ್ಷಣವೇ ಕಲಿಯುವ ಸಮಾಜದ ಅಡಿಗಲ್ಲು. ದಿನದಿನವೂ ಹೊಸ ಹೊಸ ವಿಧಾನಗಳು ಬರುತ್ತಿರುವಾಗ, ಅಂತಹ ಎಡೆಬಿಡದ ಶಿಕ್ಷಣ ವೈದ್ಯನ ವಿಷಯದಲ್ಲಂತೂ ಬಹಳ ಮುಖ್ಯ. ಬಾಳಿನುದ್ದಕ್ಕೂ ಒಬ್ಬೊಬ್ಬ ವೈದ್ಯನೂ ತಾನೇ ಕಲಿಯುವ ಸ್ಥಿತಿಯಲ್ಲಿದ್ದು ಮುಂದುವರಿಸುವ ಪ್ರೇರಣೆಯೂ ಅವನಿಗಿರಬೇಕು. ಈ ಮುಂದುವರಿದ ಶಿಕ್ಷಣಕ್ಕೆ ಪ್ರೇರೇಪಣೆಯನ್ನು ಮೂಲ ವೈದ್ಯನ ತರಪೇತಿನ ಅವಧಿಯಲ್ಲಿ ಬೆಳೆಸಬೇಕು. ಬಹುಬೇಗನೆ ಅಪ್ರಕೃತವಾಗಿಬಿಡುವ ಒಂದಷ್ಟು ವಿಷಯಗಳನ್ನು ಕಲಿಯುವುದಕ್ಕಿಂತಲೂ ಈ ಧೋರಣೆ ಇನ್ನೂ ಬಹಳ ಮುಖ್ಯ.

ನಮ್ಮ ತರಪೇತಿನ ಯೋಜನೆಗಳೆಲ್ಲ ಎಲ್ಲರೂ ಒಂದೇ ತೆರನಾಗಿರುವ ವೈದ್ಯರನ್ನು ಹೊರಪಡಿಸಲು ಯತ್ನಿಸುತ್ತದೆ. ಈಗಿನ ಕಾಲದ ಅನಾನಸು ಬೆಳೆವ ರೈತನ ಯಂತ್ರಗಳಂತಿವೆ ಇವು. ಅವನ್ನು ಸಂಸ್ಕರಿಸಿ ಕತ್ತರಿಸಿದ ಮೇಲೆ ಡಬ್ಬಿಯಲ್ಲಿಡಲು ತಕ್ಕನಾದ ಗಾತ್ರಕ್ಕೆ ಇರುವ ಹಾಗೆ ಎಲ್ಲ ಅನಾನಸು ಹಣ್ಣುಗಳೂ ಒಂದೇ ಗಾತ್ರಕ್ಕಿರಬೇಕೆಂದು ಅವನು ಬಯಸುವನು. ಸೇರಿಸಿಕೊಳ್ಳುವ ವಿದ್ಯಾರ್ಥಿಗಳೂ ಒಂದೇ ತೆರನಾಗಿರುವುದೂ ಇಲ್ಲ ; ಅವರ ಜಾಣ್ಮೆಯೂ ಬಗೆಬಗೆಯಾಗಿರುತ್ತದೆ ; ಅವರ ಸಾಮರ್ಥ್ಯವೂ ಆಕಾಂಕ್ಷೆಗಳೂ ಬೇರೆ ಬೇರೆ. ಆದ್ದರಿಂದ, ವೈದ್ಯಕೀಯವಾಗಿ ತರಪೇತಾದವರೂ ಭಿನ್ನವಿಲ್ಲದಿರಲು ಯಾವ ಕಾರಣವೂ ಇಲ್ಲ. ಪ್ರಾಥಮಿಕ ಆರೋಗ್ಯ ಸೇವೆಯನ್ನು ನೋಡಿಕೊಳ್ಳುವ ವೈದ್ಯರೂ, ಇಲ್ಲವೇ ಸಮಾಜವೈದ್ಯರಾಗುವವರೂ ನಮಗೆ ಬೇಕು. ವಿಶೇಷಜ್ಞರೂ, ಶಿಕ್ಷಕರೂ, ಸಂಶೋಧಕರೂ ಆಗುವ ವೈದ್ಯರೂ ನಮಗೆ ಬೇಕು. ಒಬ್ಬೊಬ್ಬ ವೈದ್ಯನೂ ಒಟ್ಟು ಒಳ್ಳೆಯ ವೈದ್ಯ ವೃತ್ತಿಗಾರನಾಗಲಾರ. ವಿಶೇಷಜ್ಞ, ಶಿಕ್ಷಕ, ಸಂಶೋಧಕ ಇವರ ವಿಚಾರವೂ ಅಷ್ಟೇ. ಪಾಠಕ್ರಮದ ಮೂಲತತ್ತ್ವಗಳ ಹೊರಗಡೆ ಐಚ್ಛಿಕಗಳನ್ನು ಒದಗಿಸುವುದರಿಂದ, ಅವನು ಚೆನ್ನಾಗಿ ಕೆಲಸ ಮಾಡುವ ಒಂದು ಕ್ಷೇತ್ರದಲ್ಲಿ ಸಮಾಜಸೇವೆ ನಡೆಸುವಂತೆ ವೈದ್ಯನಿಗೆ ತರಪೇತುಕೊಡಲು ಸಾಧ್ಯವಾಗಬೇಕು. ಒಬ್ಬೊಬ್ಬನೂ ಯಾವ ತಡೆಯೂ ಇಲ್ಲದೆ ತನ್ನ ದಾರಿಯನ್ನು ತಾನು ಆರಿಸಿಕೊಳ್ಳುವಂತಿದ್ದರೂ, ಇನ್ನೂ ಹಿಗ್ಗ ಬಹುದಾದ ಚೌಕಟ್ಟಿನಿಂದ, ಒಂದು ಕ್ಷೇತ್ರದಲ್ಲಿನ ಅನುಭವವನ್ನು ಇನ್ನೊಂದರ ಕೇಳಿಕೆಗಳೊಂದಿಗೆ ಒಂದಕ್ಕೊಂದು ಪ್ರಭಾವ ಬೀರುವಂತೆ, ಕಸಬಿನ ಒಂದು ಶಾಖೆಯಿಂದ ಇನ್ನೊಂದಕ್ಕೆ ಬದಲಾಯಿಸುವಂತಿರಬೇಕು.

ಈ ಉದ್ದೇಶಗಳನ್ನು ಇಟ್ಟುಕೊಂಡು, ತರಪೇತಿನ ಯೋಜನೆಗಳನ್ನು ನಾವು ಏರ್ಪಡಿಸಿದರೆ, ವೈದ್ಯ ಕಸಬಿನಲ್ಲಿರುವ ನಾವೂ ರಾಷ್ಟ್ರವೂ ಬಯಸುವ, ನಿರೀಕ್ಷಿಸುವ ಈ ಕೆಳಗಿನ ಗುಣಲಕ್ಷಣಗಳುಳ್ಳ ಮೂಲ ವೈದ್ಯನ ಪಾರ್ಶ್ವನೋಟ ನಮಗೆ ಸಿಗುತ್ತದೆ.

1. ಇನ್ನಷ್ಟು ತರಪೇತು ಕೊಟ್ಟರೆ ಸಮಾಜದ ಆರೋಗ್ಯ ಸೇವೆ, ವಿಶೇಷಜ್ಞನ ಸೇವೆಗಳ ಕರ್ತವ್ಯಗಳನ್ನೂ ಜವಾಬ್ದಾರಿಗಳನ್ನೂ ತೆಗೆದುಕೊಳ್ಳಬಲ್ಲ, ಇಲ್ಲವೇ ತನ್ನ ಒಲವು ಇಲ್ಲವೇ ಸಹಜಪ್ರವೃತ್ತಿ ಮತ್ತು ಹಿಂದಿನ ತರಪೇತಿಗೆ ಅನುವಾಗಿ ಶಿಕ್ಷಕ ಕಸಬನ್ನೋ ಸಂಶೋಧನೆಯನ್ನೋ ಅವನು ಆರಿಸಿಕೊಳ್ಳುವಷ್ಟು, ಮೂಲವೈದ್ಯ ಬುದ್ಧಿವಂತನಾಗಿ ಅವಕ್ಕೆ ಬೇಕಿರುವ ನಿಪುಣತೆಯನ್ನೂ ಪಡೆದಿರುವನು. ಅವನು ವೈಜ್ಞಾನಿಕ ವೈದ್ಯವನ್ನು

ನಡೆಸುವಷ್ಟು ಮೂಲ ವೈದ್ಯಶಾಸ್ತ್ರಗಳಲ್ಲಿ ಸಾಕಷ್ಟು ತಿಳಿವಳಿಕೆ ಇರುತ್ತದೆ. ರೋಗಗಳ ವ್ಯತ್ಯಾಸಗಳನ್ನು ಗ್ರಹಿಸಿ, ದೇಹವನ್ನು ಮತ್ತೆ ಆರೋಗ್ಯಸ್ಥಿತಿಗೆ ತಂದು ಆರೋಗ್ಯವನ್ನು ಉಳಿಸುವ ಕ್ರಮಗಳನ್ನು ಕೈಗೊಳ್ಳಲು ಆರೋಗ್ಯದೇಹದ ಸಹಜ ನಿಜಗೆಲಸಗಳನ್ನು ಅವನು ತಿಳಿಯಲು ಇದು ನೆರವಾಗುತ್ತದೆ. ಅಂತಹ ತಿಳಿವಳಿಕೆಯಿಂದ ವ್ಯಕ್ತಿಗಳ ಮತ್ತು ಜನತಂಡಗಳ ಆರೋಗ್ಯಸಮಸ್ಯೆಗಳನ್ನು ಗುರುತಿಸಿ ಅಳೆಯುವುದೂ ಅವನಿಗೆ ಸಾಧ್ಯ. ರಾಷ್ಟ್ರೀಯ ಮತ್ತು ಪ್ರಾಂತೀಯ ಆರೋಗ್ಯ ಯೋಜನೆಗಳು ಅವನಿಗೆ ಚೆನ್ನಾಗಿ ತಿಳಿದಿರುತ್ತವಲ್ಲದೆ, ಅವುಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲೂ ಸಜ್ಜಾಗಿರುವನು.

ಕಾಕುಪುಷ್ಟಿ, ಅಂಟು ರೋಗಗಳು, ಪರಪಿಂಡಿ ಸೋಂಕುಗಳು, ಅಲ್ಲದೆ ನಮ್ಮ ಅನಾರೋಗ್ಯಕ್ಕೆ ಮುಖ್ಯ ಕಾರಣಗಳಾಗಿ ನಮ್ಮಲ್ಲಿ ಇನ್ನೂ ಇರುವ ಬೇರೆ ರೋಗಗಳಂತಹ ಸಮಸ್ಯೆಗಳು ಅವನಿಗೆ ಚೆನ್ನಾಗಿ ಗೊತ್ತಿದೆ.

2. ಆರೋಗ್ಯಶಿಕ್ಷಣ ತನ್ನ ಮೊದಲ ಜವಾಬ್ದಾರಿಯೆಂದು ಮೂಲವೈದ್ಯ ಭಾವಿಸುವನು. ಡಾಕ್ಟರೆಂಬ ಪದಕ್ಕೆ ಮೂಲದಲ್ಲಿ ಶಿಕ್ಷಕನೆಂದೇ ಅರ್ಥವಿತ್ತು. ಸಕ್ರಿಯವಾಗಿ ಆರೋಗ್ಯವನ್ನು ಉತ್ತೇಜಿಸುತ್ತ, ಎಲ್ಲರೂ ಚುರುಕಾಗಿ ಭಾಗವಹಿಸುವುದರಿಂದ ಆರೋಗ್ಯ ಕ್ರಮಗಳನ್ನು ಯಶಸ್ವಿಗೊಳಿಸುವ ಯತ್ನದಲ್ಲಿ ರೋಗಿಗಳೊಂದಿಗೂ ಜನರೊಂದಿಗೂ ಸಂಪರ್ಕ ಬೆಳೆಸುತ್ತ, ನಮ್ಮ ಮೂಲವೈದ್ಯನೂ ಆರೋಗ್ಯ ಶಿಕ್ಷಕನಾಗಿ ತನ್ನ ಜವಾಬ್ದಾರಿಗಳನ್ನು ನಿರ್ವಹಿಸಬಲ್ಲ. ಆರೋಗ್ಯ ತಂಡದ ನಾಯಕತ್ವವನ್ನು ವಹಿಸಿಕೊಳ್ಳಲೂ ಅವನು ಸಜ್ಜಿತನಾಗಿರುವನು.

3. ವರ್ತನೆಯ ವಿಜ್ಞಾನಿಗಳೂ ಸೇರಿದಂತೆ, ಮೂಲವೈದ್ಯನಿಗೆ ವಿಶಾಲವ್ಯಾಪ್ತಿಯ ತರಪೇತಾಗಿರುತ್ತದೆ. ನೈತಿಕ, ಸಾಮಾಜಿಕ, ಮಾನವೀಯ ಮೌಲ್ಯಗಳ ಅರಿವು ಅವನಿಗಿರುವುದು. ಕಳವಳವನ್ನೂ ಸಹಿಸಿಕೊಂಡು, ಅವನು ಅನುಕಂಪ, ಕರುಣೆ ತೋರುವನು. ಅವನು ಜನರ ಹಿತವನ್ನೇ ಕೋರುವನು. ಪೂರ್ತಿ ಗುಣಪಡಿಸಲಾಗದಿದ್ದರೂ ಕಾಯಿಲೆ ಬಿದ್ದವರನ್ನು ಸಂತೈಸಿ ನೋಡಿಕೊಳ್ಳುವನು.

4. ಅನಿರ್ದಿಷ್ಟತೆಯ ಎದುರಾಗಿ, ಮೂಲವೈದ್ಯ ನಿರ್ಧಾರಗಳನ್ನು ಕೈಗೊಳ್ಳಬಲ್ಲ. ಪ್ರಾಥಮಿಕ ಆರೋಗ್ಯ ಪಾಲನೆಯಲ್ಲಿ ರೋಗಿಯ ಪ್ರಾಣವೋ ಸಮಾಜದ ಆರೋಗ್ಯವೋ ಅವಲಂಬಿಸಿರುವ ನಿರ್ಧಾರಗಳನ್ನು ಮಾಡಬಲ್ಲ. ಅವನು ತನ್ನ ಸಾಮರ್ಥ್ಯದ ಮಿತಿಯನ್ನೂ ಬಲ್ಲ. ಕೈಕೆಳಗಿನ ಸಿಬ್ಬಂದಿ ಮತ್ತು ಅತಿ ಸೂಕ್ಷ್ಮ ಉಪಕರಣಗಳ ಆಸರೆಯೊಂದಿಗೆ ತರಪೇತಾದ ವಿಶೇಷಜ್ಞರ ನೆರವನ್ನು ಯಾವಾಗ, ಎಲ್ಲಿ ಪಡೆಯಬಹುದೆಂದೂ ಅವನಿಗೆ ಗೊತ್ತು.

5. ಇನ್ನೂ ಹೊಸ ತಿಳಿವಳಿಕೆಯಿಂದೇಳುವ ಹೊಸಹೊಸ ಕ್ರಮಗಳನ್ನು ಬಳಸಿ, ಹೊಸ ಸಮಸ್ಯೆಗಳನ್ನೂ ಅಪಾಯಗಳನ್ನೂ ಇನ್ನೂ ಚೆನ್ನಾಗಿ ಎದುರಿಸುವಂತೆ ತಾನು ಸಜ್ಜಾಗಲು ಎಡೆಬಿಡದ ಶಿಕ್ಷಣವನ್ನು ಪಡೆಯಲು ಪ್ರೇರಿತನಾಗುವಂತೆ ಮೂಲವೈದ್ಯ ತರಪೇತಾಗಿರುವನು. ಭವಿಷ್ಯದ ಬದಲಾಗುವ ಅಗತ್ಯಗಳಿಗೆ ಅವನು ಹೊಂದಿಕೊಳ್ಳುತ್ತಾನೆ.

ವೇಣುಗೋಪಾಲ ಸೊರಬ

ವೈಜ್ಞಾನಿಕ ದೃಷ್ಟಿ–ಒಂದು ವಿವೇಚನೆ

'ವೈಜ್ಞಾನಿಕ ದೃಷ್ಟಿ' ಎನ್ನುವುದು ಇತ್ತೀಚಿನ ದಿನಗಳಲ್ಲಿ ಬಹಳಷ್ಟು ಬಳಕೆಯಲ್ಲಿದೆ. ವೈಜ್ಞಾನಿಕ ದೃಷ್ಟಿ ಪರಿಪೂರ್ಣದೃಷ್ಟಿಗೆ ಪರ್ಯಾಯವಾಗಲು ಸಾಧ್ಯವಿಲ್ಲ. ವೈಜ್ಞಾನಿಕದೃಷ್ಟಿಗೆ ಅವಶ್ಯಕವಾಗಿ ಬೇಕಾಗಿರುವುದು ನಿಷ್ಪಕ್ಷಪಾತ ದೃಷ್ಟಿ, ಆಳವಾದ ಅಧ್ಯಯನ ಮತ್ತು ಸೂಕ್ಷ್ಮಗ್ರಹಿಕೆ. ನೀತಿಶಾಸ್ತ್ರಜ್ಞ ಪರಿಸರವನ್ನು ಬದಲಾಯಿಸಲು–ಅವನು ತಿಳಿದಂತೆ ಉತ್ತಮಪಡಿಸಲು–ಯತ್ನಿಸಿದರೆ, ವಿಜ್ಞಾನಿ ಇರುವ ಪರಿಸರದಲ್ಲಿಯೇ ನಡೆಯಬಹುದಾದ, ನಿಜವಾಗಿಯೂ ನಡೆಯುತ್ತಿದ್ದರೂ ನಮ್ಮ ಕಣ್ಣಿಗೆ ಗೋಚರಿಸದೆ ಇರುವ ಕ್ರಿಯೆಗಳನ್ನು ಅಭ್ಯಸಿಸುತ್ತಾನೆ. ನೀತಿಶಾಸ್ತ್ರಜ್ಞ ಮತ್ತು ವಿಜ್ಞಾನಿ ಇವರುಗಳ ಕಾರ್ಯವಿಧಾನ ಹೇಗೆ ಬೇರೆ ಬೇರೆಯಾಗಿದೆಯೊ, ಅವುಗಳ ಪರಿಣಾಮದಲ್ಲಿಯೂ ವ್ಯತ್ಯಾಸವಿದೆ. ಆದರೆ ವಿಚಿತ್ರವಾದ ಅಂಶವೆಂದರೆ, ನೀತಿಶಾಸ್ತ್ರಜ್ಞ ಪರಿಸರ ಬದಲಾವಣೆಯನ್ನು ಉದ್ದೇಶಿಸಿದರೂ, ವ್ಯಕ್ತಿಯ ಬದಲಾವಣೆಯನ್ನು ಇಷ್ಟಪಡುವುದಿಲ್ಲ. ವಿಜ್ಞಾನಿ ತನ್ನ ಸುತ್ತಣ ಪರಿಸರದ ಬಗ್ಗೆ ನಿರ್ಲಕ್ಷ್ಯದಿಂದಿದ್ದರೂ ಅವನ ಕಾರ್ಯ ಇಡೀ ಪರಿಸರವನ್ನು ಬದಲಾಯಿಸುವುದರಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ಇದೇ ಕಾರಣದಿಂದಾಗಿ ಇಂದಿನ ಮಾನವನ ಜೀವನ ಕೋಲಾಹಲಗಳಿಂದ ತುಂಬಿ, ಜೀವನಾವಶ್ಯಕವಾದ ಮೌಲ್ಯಗಳು ಪಲ್ಲಟಗೊಂಡಿವೆ.

ಇದರ ಅರ್ಥ ವೈಜ್ಞಾನಿಕದೃಷ್ಟಿ ಜೀವನ ವಿಮುಖತೆಯನ್ನು ಕಲ್ಪಿಸುತ್ತದೆ, ಎಂದಲ್ಲ. ಅಂತಹ ವಿಮುಖತೆಗೆ ಹಲವಾರು ಕಾರಣಗಳಿರುವುದು ಗೊತ್ತಿರುವ ವಿಷಯವೇ. ಆದರೆ ವೈಜ್ಞಾನಿಕ ದೃಷ್ಟಿ–ಬೇರೆ; ಅನೇಕ ವಿಷಯಗಳಂತೆ ಮಾರಕವಾಗುವುದರ ಜತೆಗೆ ಪೋಷಕವೂ ಆಗಬಲ್ಲದು. ಯಾವಾಗ ನಾವು ವೈಜ್ಞಾನಿಕದೃಷ್ಟಿಯೊಂದನ್ನೇ ಬೆಂಬಲಿಸಿ, ನೈತಿಕ ವಿಷಯಗಳನ್ನು–ಆತ್ಮ ವ್ಯವಸಾಯಕ್ಕೆ ಪೋಷಕವಾದುದನ್ನು–ಕಡೆಗಣಿಸುತ್ತೇವೆಯೊ, ಆಗ ವೈಜ್ಞಾನಿಕ ದೃಷ್ಟಿ–ಅದು ಎಷ್ಟೇ ಆರೋಗ್ಯಕರವಾಗಿರುವುದಾದರೂ–ಮಾರಕವಾಗುತ್ತದೆ. ಜೀವನದ ಬಗೆಗಿನ ನಿರ್ಲಕ್ಷ್ಯಕ್ಕಿಂತ ಹೆಚ್ಚಿನ ಮಾರಕವಾದದ್ದು ಬೇರೆ ಇನ್ನೇನು ತಾನೆ ಇರಲು ಸಾಧ್ಯ ?

ನಮಗೆ ಇಷ್ಟವಿರಲಿ ಬಿಡಲಿ, ವಿಜ್ಞಾನ ಇಂದು ನಮ್ಮನ್ನು ಸುತ್ತುಗಟ್ಟಿರುವಾಗ, ಅದರ ಪ್ರಭಾವದಿಂದ ತಪ್ಪಿಸಿಕೊಳ್ಳುವುದು ಅಸಾಧ್ಯ. ಆದರೆ, ಶುದ್ಧವಿಜ್ಞಾನದಿಂದ ದೂರವಾದ, ಕೇವಲ ತಾಂತ್ರಿಕಜ್ಞಾನದಿಂದ ಮಾತ್ರ ತೃಪ್ತಿಪಟ್ಟುಕೊಳ್ಳುವ ನಮ್ಮ ಅಲ್ಪಕಾಮನೆಗಳು ವಿಜ್ಞಾನದ ಬಗ್ಗೆ ನಮ್ಮಲ್ಲಿ ತಪ್ಪು ತಿಳುವಳಿಕೆಯನ್ನು ಮೂಡಿಸಿವೆ. ಆದ್ದರಿಂದಲೇ 'ವೈಜ್ಞಾನಿಕ ದೃಷ್ಟಿ' ಎಂಬ ಮಾತೂ ತಪ್ಪು ಅಭಿಪ್ರಾಯವನ್ನು ಮೂಡಿಸುವಂತಾಗಿದೆ.

ಯಾವುದೇ ಕಾಲಖಂಡದಲ್ಲಿ, ಯಾವುದೇ ದೇಶದಲ್ಲಿ ಎಲ್ಲ ಜನಗಳೂ ಒಂದೇ ಮಟ್ಟದಲ್ಲಿರುತ್ತಾರೆ ಎಂದು ಭಾವಿಸುವುದು ಅಸಂಬದ್ಧ. ಎಲ್ಲ ನಾಗರಿಕತೆಗಳ ಅಳಿವು–ಉಳಿವುಗಳನ್ನು ಲಕ್ಷ್ಯವಿಟ್ಟು ಗಮನಿಸಿದಾಗ, ಯಾವುದೇ

ನಾಗರಿಕತೆಯ ಇಡೀ ಚಟುವಟಿಕೆಗಳು ಕೇವಲ ಕೆಲವು ವ್ಯಕ್ತಿಗಳ ಕೆಲಸವಾಗಿ ಕಾಣುತ್ತದೆ. ಇದು ವ್ಯಕ್ತಿಪೂಜೆಗೆ ದಾರಿ ಮಾಡಿಕೊಡುತ್ತದೆ. ಎಲ್ಲಿ ವ್ಯಕ್ತಿನಿಷ್ಠೆ ಬೆಳೆಯುತ್ತಾ ಹೋಗುತ್ತದೆಯೊ, ಅಲ್ಲಿ ಪತನ ಸನ್ನಿಹಿತ ವಾಗುತ್ತದೆ. ವೈಜ್ಞಾನಿಕದೃಷ್ಟಿ ವ್ಯಕ್ತಿಪೂಜೆಯ ವಿರೋಧಿ. ಇದು ವ್ಯವಸ್ಥೆಯನ್ನು ವಿರೋಧಿಸುವ ವೈಜ್ಞಾನಿಕ ಮನೋಧರ್ಮದ ಮತ್ತೊಂದು ರೂಪ, ಅಷ್ಟೆ. ಆದರೆ ಅಧಿಕಾರಸ್ಥ ಜನಗಳ ಕೈಗೆ ಸಿಕ್ಕಿಕೊಂಡ ವಿಜ್ಞಾನಿಗಳು ತಮ್ಮ ನಿಜವಾದ ವೈಜ್ಞಾನಿಕ ಮನೋಧರ್ಮಕ್ಕೆ ವಿರೋಧಿಯಾದ ರೀತಿಯಲ್ಲಿ ಕೇವಲ ಅಲ್ಪ ವಿಷಯಗಳಿಗಾಗಿ ಸಂಶೋಧನೆಗೆ ತೊಡಗುವುದು ವಿಜ್ಞಾನಕ್ಷೇತ್ರದಲ್ಲಿನ ಅನೀತಿಯ ಬೆಳವಣಿಗೆಗೆ ಸಾಕ್ಷಿ. ಇಂತಹ ಭ್ರಷ್ಟವಿಜ್ಞಾನಿಗಳನ್ನು ತಮ್ಮ ಲಾಭಕ್ಕಾಗಿ ಬಳಸಿಕೊಳ್ಳುವ ಅಧಿಕಾರಸ್ಥಜನ ಸಾಮ್ರಾಜ್ಯಶಾಹಿ ಅಥವಾ ಪುರೋಹಿತಶಾಹಿಗಳಿಗಿಂತ ಹೇಗೆ ಭಿನ್ನವಾದಾರು ?

ಇಂತಹ ಸಂದರ್ಭದಲ್ಲಿ ವೈಜ್ಞಾನಿಕದೃಷ್ಟಿಗೆ ಪೂರಕವಾಗಿ ಇರಬೇಕಾದ ನೈತಿಕದೃಷ್ಟಿಯ ಮಹತ್ವದ ಅರಿವಾಗುತ್ತದೆ. ಇಡೀ ಜನಾಂಗದ ಆರೋಗ್ಯಕರವಾದ ಬೆಳವಣಿಗೆಗೆ ವಿಜ್ಞಾನ ತನ್ನ ಕಾಣಿಕೆಯನ್ನು ಕೊಡಲೇ ಬೇಕಾಗಿದೆ. ಅಲ್ಲದೆ ವಿಜ್ಞಾನದ ಕೊಡುಗೆಗಳನ್ನು ಬೃಹತ್‌ಪ್ರಮಾಣದಲ್ಲಿ ಉಪಯೋಗಿಸುವುದು ಬಹಳ ಸುಲಭ. ಆದರೆ, ವಿಜ್ಞಾನದ ಕೊಡುಗೆಗಳನ್ನು ತಮ್ಮ ಲಾಭಕ್ಕಾಗಿ ಬಳಸುವವರು, ಅದರ ತಂತ್ರಜ್ಞಾನದ ಬಗ್ಗೆ ಕಿಂಚಿತ್ತು ಆಲೋಚನೆಯನ್ನೂ ಮಾಡಬೇಕಾಗಿಲ್ಲ. ಪರಿಣಾಮವಾಗಿ ವಿಜ್ಞಾನ ವಿನಮ್ರಸೇವಕ ಎಂಬ ಟೀಕೆಗೆ ಒಳಗಾಗಿದೆ.

ಮುಖ್ಯವಾಗಿ 'ವೈಜ್ಞಾನಿಕದೃಷ್ಟಿ'ಯ ಆವಶ್ಯಕತೆಯ ಬಗ್ಗೆ ಹೇಳುವಾಗ, ವೈಜ್ಞಾನಿಕದೃಷ್ಟಿಯ ಇತಿ-ಮಿತಿಗಳನ್ನು ತಿಳಿದುಕೊಳ್ಳಬೇಕು. ಇಂದಿನ ನಮ್ಮ ಸಮಸ್ಯೆಗಳು ಹಿಂದೆಂದಿಗಿಂತಲೂ ಜಟಿಲವಾಗಿವೆ. ಆರ್ಥಿಕ ವಾಗಿ, ಸಾಮಾಜಿಕವಾಗಿ ನಾವು ಹೊಸ ಸೂತ್ರವೊಂದನ್ನು ಆಚರಣೆಗೆ ತರುತ್ತಿದ್ದೇವೆ. ಹೀಗೆ ಮಾಡುವ ಭರದಲ್ಲಿ ಯಾವುದು ದೀರ್ಘಕಾಲದ ಪರಿಣಾಮವನ್ನುಂಟು ಮಾಡುವಂಥಾದ್ದು, ಮತ್ತು ಯಾವುದು ಅಲ್ಪಕಾಲದ ಮಹತ್ವ ಉಳ್ಳದ್ದು ಎನ್ನುವುದನ್ನು ನಾವು ಲಕ್ಷಿಸಲಾರದೆ ಹೋಗಿದ್ದೇವೆ. ಸಂದರ್ಭದ ಇನ್ನೊಂದು ವಿಕೃತಅಂಶವೆಂದರೆ, ಎಂದಿನಂತೆ, ಸ್ವಾರ್ಥಿಗಳು ತಮ್ಮ ಲಾಭಕ್ಕಾಗಿ ಎಲ್ಲವನ್ನೂ ಬಳಸಿಕೊಳ್ಳುತ್ತಿರುವುದು. ಇಂತಹ ಸ್ವಾರ್ಥಿಗಳಿಗೆ ನೈತಿಕ ವಾದ ಹೊಣೆಯಾಗಲೀ, ಜವಾಬ್ದಾರಿಯಾಗಲೀ ಇಲ್ಲ. ಮೇಲಾಗಿ ಶಿಕ್ಷೆಯನನ್ನನುಭವಿಸುವ ಅಥವಾ ಮರುಕವನ್ನು ವ್ಯಕ್ತಪಡಿಸುವ ಮನೋಭಾವ ಇವರಲ್ಲಿಲ್ಲ. ಪಶ್ಚಾತ್ತಾಪ ಅತ್ಯಂತ ಪ್ರಭಾವಕಾರೀ ಅಸ್ತ್ರ. ವ್ಯಕ್ತಿಯ ಬಾಳಿನಲ್ಲಿ ಒಂದಲ್ಲ ಒಂದು ಸಮಯದಲ್ಲಿ ತನ್ನ ತಪ್ಪುಗಳಿಗಾಗಿ ಅಥವಾ ತನ್ನ ದೌರ್ಜನ್ಯಕ್ಕಾಗಿ ಪಶ್ಚಾತ್ತಾಪ ಪಡುವ ಕಾಲ ಬಂದೇ ಬರುತ್ತದೆ, ಎಂದು ಭಾವಿಸಿದ್ದ ಕಾಲವಿತ್ತು. ಆದರೆ, ಈಗ ತಪ್ಪೊಪ್ಪಿಕೊಳ್ಳುವುದು, ಇನ್ನೊಬ್ಬರಿಗಾಗಿ ಅನು ಕಂಪ ತೋರಿಸುವುದು ದೌರ್ಬಲ್ಯದ ಕುರುಹಾಗಿದೆ. ನಾವು ಹಳೆಯ ಕಟ್ಟುಕಟ್ಟಳೆಗಳನ್ನು ಆಚಾರವಿಚಾರಗಳನ್ನು ಬದಿಗೊತ್ತಿ, ಅವುಗಳ ಜಾಗದಲ್ಲಿ ಹೊಸದೇನನ್ನೂ ಕಂಡುಕೊಳ್ಳದೆ, ದಾರಿಕಾಣವಾಗಿದ್ದೇವೆ. ಹೀಗಿರುವಾಗ, ವೈಜ್ಞಾನಿಕ ದೃಷ್ಟಿಯನ್ನು ಬೆಳಸಿಕೊಳ್ಳುವುದೊಂದೇ ಎಲ್ಲ ಸಮಸ್ಯೆಗಳಿಗೂ ಪರಿಹಾರವಾಗಲಾರದು.

ವಿಜ್ಞಾನದ, ತಂತ್ರಜ್ಞಾನದ ಪರಿಣಾಮವಾಗಿ ಪ್ರಪಂಚ ಕುಗ್ಗಿಹೋಗಿದೆ. ಸಾಹಸಪ್ರಿಯರಿಗೆ ವಿಶ್ವದ ಮೂಲೆಮೂಲೆಗಳೂ ಕೈಮಾಡಿ ಕರೆಯುತ್ತಿವೆ. ಮನುಷ್ಯನ ಸಾಮರ್ಥ್ಯ ಹೊಸ ಆಯಾಮಗಳನ್ನು ಪಡೆದಿದೆ. ಅನ್ನ ಬಟ್ಟೆ ವಸತಿಗಳ ಸಮಸ್ಯೆ ಅಪರಿಹಾರ್ಯ ಎನ್ನುವಂತಿಲ್ಲ. ರೋಗರುಜಿನಗಳನ್ನು ಬಹಳಮಟ್ಟಿಗೆ ತಹಬಂದಿಗೆ ತರ ಲಾಗಿದೆ. ಜೊತೆಜೊತೆಗೇ ನಿಸರ್ಗಸಂಪತ್ತಿನ ಎಚ್ಚರದಪ್ಪಿದ ಬಳಕೆಗೆ ಕಾರಣವಾದ ನಿರ್ಲಕ್ಷ್ಯಶೋಷಣೆ ಹವಾ ಮಾನದಿಂದ ಹಿಡಿದು, ಪ್ರತಿಯೊಂದು ವಸ್ತುವಿನ ಮಾಲಿನ್ಯ, ಕಲಬೆರಕೆ-ಇವುಗಳು ಮಾನವನನ್ನು ದಿಕ್ಕುಗೆಡಿಸಿವೆ ಇಂತಹ ಸಂದರ್ಭದಲ್ಲಿ ಹಳೆಯ ಮಾರ್ಗಕ್ಕೇ ಹಿಂತಿರುಗುವುದು ಸಾಧ್ಯವಿಲ್ಲ. ಆದರೆ ಮತ್ತಷ್ಟು ಹದಗೆಡುವ ಮುನ್ನ ಪರಿಸ್ಥಿತಿಯನ್ನು ಹತೋಟಿಗೆ ತರಬೇಕಾಗಿದೆ.

ಈ ದಿಕ್ಕಿನಲ್ಲಿ ಪ್ರತಿಯೊಬ್ಬನೂ ಮಾಡಬೇಕಾದದ್ದು ಗುಡ್ಡದಷ್ಟಿದೆ. ಪ್ರತಿಯೊಬ್ಬನೂ ತನ್ನ ಕ್ಷೇತ್ರದಲ್ಲಿ

ದುಡಿಯುವುದರ ಜತೆಗೆ ಇಡೀ ಮಾನವಕಲ್ಯಾಣವನ್ನೂ ಲಕ್ಷ್ಯದಲ್ಲಿಡಬೇಕಾಗಿದೆ. ಆದರೆ ವ್ಯಕ್ತಿಗತ ಸ್ವಾತಂತ್ರ್ಯ ಸೀಮಿತವಾಗಿರುವುದರಿಂದ ಸಾಮಾನ್ಯ ಪ್ರಜೆ ಏನನ್ನೂ ಸಾಧಿಸಲಾರದವನಾಗಿದ್ದಾನೆ. ಅಧಿಕಾರಸ್ಥ ಜನಗಳ ಶಕ್ತಿ ಸಾಮರ್ಥ್ಯಗಳು ಖಗೋಲ ವಿಸ್ತಾರದಲ್ಲಿ ಅಧಿಕವಾಗುತ್ತಿರುವಾಗ, ಕೇವಲ ಒಬ್ಬ ಸಾಮಾನ್ಯ ವ್ಯಕ್ತಿ ಏನನ್ನುತಾನೆ ಮಾಡಲು ಸಾಧ್ಯ ? ಅಂದರೆ ಈ ದಿಕ್ಕಿನಲ್ಲಿ ಏನು ನಡೆಯಬೇಕಾಗಿದ್ದರೂ ಅದು ಅಧಿಕಾರದಲ್ಲಿರುವವರ ವಿವೇಚನೆ ಯಿಂದ ಮಾತ್ರ ಸಾಧ್ಯ.

ಇಂತಹ ಜನಗಳಲ್ಲಿ ಸ್ವಾರ್ಥವಿಲ್ಲ ಎಂದು ಹೇಳುವುದಾದರೂ ಹೇಗೆ? ಅಥವಾ ಇನ್ನೂ ಸ್ಪಷ್ಟಗೊಳಿಸಬೇಕಾ ದರೆ, ಅವರು ಸ್ವಾರ್ಥಿಗಳಾಗಬಾರದು ಎಂದು ಆಶಿಸುವುದಾದರೂ ಹೇಗೆ? ಆದರ್ಶಗಳನ್ನು ಕುರಿತು ಆಡಿದ ಮಾತೆಲ್ಲ ಒಣವೇದಾಂತವಾಗುತ್ತದೆ. ಅದು ಜೀವಸ್ಪಂದನದಿಂದ ಹೊರತಾಗಿರುತ್ತದೆ. ಆದ್ದರಿಂದಲೇ ಚಾಣಕ್ಯ ನಂತಹವರು ಗೆಲ್ಲುವಲ್ಲಿ ಪ್ಲೇಟೋನಂತಹವರು ಸೋಲುತ್ತಾರೆ. ಮೆಕಿಯವೆಲ್ಲಿ ನೀತಿಶಾಸ್ತ್ರ ಬರೆಯಲಿಲ್ಲ, ಆದರೆ ಅವನ ಬರವಣಿಗೆಯನ್ನು ಅರ್ಥಮಾಡಿಕೊಂಡವರಿಗೆ ನೀತಿಶಾಸ್ತ್ರದ ಅವಶ್ಯಕತೆಯೇ ಇಲ್ಲ. ಪಂಚತಂತ್ರದ ಕಥೆಗಳು ಒಂದು ಜನಾಂಗ ತಲೆಮಾರುಗಳಿಂದ ಭಟ್ಟಿಯಿಳಿಯಿಸಿಕೊಂಡು ಬಂದ ರೀತಿ, ನೀತಿ, ನಂಬಿಕೆ, ನಡವಳಿಕೆಗಳನ್ನು ಪ್ರತಿ ಬಿಂಬಿಸುತ್ತವೆಯೇ ಹೊರತು, ನೀತಿಬೋಧೆ ಮಾಡುವುದಿಲ್ಲ. ಆದ್ದರಿಂದಲೆ ಅವು ಇಂದಿಗೂ ಮಾನ್ಯತೆಯನ್ನು ಪಡೆ ದಿವೆ. ಅಂದರೆ ನಾವು ಏನೇ ಸುಧಾರಣೆಯನ್ನೇ ಮನಸ್ಸಿನಲ್ಲಿಟ್ಟುಕೊಂಡಿದ್ದರೂ, ನಾವು ವಾಸ್ತವತೆಯನ್ನು ಮರೆತರೆ, ನಮ್ಮ ಆಲೋಚನೆಗಳೆಲ್ಲ ನಿಷ್ಪ್ರಯೋಜಕವಾಗುತ್ತವೆ.

ವಾಸ್ತವತೆಯನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವುದೇ ವೈಜ್ಞಾನಿಕದೃಷ್ಟಿಯ ಅತ್ಯಂತ ಅಪಾಯ ಕಾರೀ ಲಕ್ಷಣ. ಅದರ ವಾಸ್ತವತೆ ಎಲ್ಲಿಯವರೆಗೂ ನಮ್ಮನ್ನು ಎಳೆದೊಯ್ಯುತ್ತದೆ ಎಂದರೆ, 'ಸಾಮರ್ಥ್ಯವೊಂದೇ ಸರಿ' ಎಂಬ ಅಮಾನುಷ ತತ್ತ್ವವನ್ನು ನಾವು ಎದುರಿಸಬೇಕಾಗುತ್ತದೆ. 'ಬಾಯಿದ್ದವನು ಬರಗಾಲದಲ್ಲಿ ಬದುಕಿದ' ಎಂಬ ಧೋರಣೆಯ–'ಸಾಮರ್ಥ್ಯಶಾಲಿಯೊಬ್ಬನೇ ಊರ್ಜಿತಗೊಳ್ಳುತ್ತಾನೆ'–ಎಂಬ ನಿರ್ಧಾರಣವಾದ ನಮ್ಮನ್ನು ತತ್ತರಗೊಳಿಸುತ್ತದೆ.

ಆದರೆ ಈ ಶುದ್ಧ ವಿಜ್ಞಾನ ದೃಷ್ಟಿಗೆ ಸಂಸ್ಕಾರದ ಸಾಣೆ ಹಿಡಿದಾಗ, ಅದರಿಂದ ಅಮೂಲ್ಯವಸ್ತುಗಳು ಮಾನವ ಕೋಟಿಗೆ ಲಭ್ಯವಾಗಿವೆ. ಬಹಳಷ್ಟು ವೈಜ್ಞಾನಿಕ ಸಂಶೋಧನೆಗಳು ಕೇವಲ ಆಕಸ್ಮಿಕಗಳ ಫಲ. ಆದರೆ ವಿಜ್ಞಾನ ಅಲ್ಲಿಗೇ ಸೀಮಿತವಾಗಿಲ್ಲ. ಅಲ್ಲಿಂದ ಒಂದು ಹೆಜ್ಜೆ ಮುಂದೆ ಹೋಗಿ, ತನ್ನ ಕಾರ್ಯವಿಧಾನವನ್ನು ಅನು ಕ್ರಮಗೊಳಿಸಿ, ವಿಜ್ಞಾನ ಪ್ರಕೃತಿಯ ರಹಸ್ಯಗಳನ್ನು ಬಯಲಿಗೆಳೆಯುವ ಸತತ ಹಾಗೂ ಕ್ರಮಬದ್ಧ ಮಾರ್ಗ ವಾಗುತ್ತದೆ. ಇದೂ ಸಹ ವಿಜ್ಞಾನದ ಇನ್ನೊಂದು ಹೆಜ್ಜೆ ಅಷ್ಟೇ. ಯಾವಾಗ ವಿಜ್ಞಾನ ಮಾನವನ ಮನಸ್ಸನ್ನು ವಿಶ್ಲೇಷಿಸ ಹೊರಟಿತೊ ಆಗಲೇ, ಅದರ ಮೂರನೆಯ ಹಂತದ ಅನ್ವೇಷಣೆ ಪ್ರಾರಂಭ. ಇದರ ಗೊತ್ತು ಗುರಿಗಳು ಇನ್ನೂ ನಿಶ್ಚಿತವಾಗಿ ಗೊತ್ತಾಗಿಲ್ಲ. ಹಾಗೆ ನಿರ್ಧರಿಸುವುದು ಅಷ್ಟು ಸುಲಭಸಾಧ್ಯವೂ ಅಲ್ಲ.

ಈ ಅಂಶಗಳು ಹಗಲ ಬೆಳಕಿನಷ್ಟು ಸ್ಪಷ್ಟವೇ ಆಗಿದ್ದರೂ, ವೈಜ್ಞಾನಿಕದೃಷ್ಟಿ ಮತ್ತು ವೈಜ್ಞಾನಿಕ ಮಾರ್ಗ–ಎರಡರಲ್ಲೂ ಸಾಕಷ್ಟು ಭೇದಗಳಿವೆ ಎಂದು ಒಪ್ಪಲೇಬೇಕು. ವೈಜ್ಞಾನಿಕಮಾರ್ಗ ನಮ್ಮಲ್ಲಿ ಶಿಸ್ತನ್ನು ರೂಪಿಸುವಲ್ಲಿ ಒಳ್ಳೆಯ ಪ್ರಭಾವ ಬೀರಬಹುದಾಗಿದೆ. ಯಾವುದು ವಸ್ತುನಿಷ್ಠ ರೀತಿ ಎನ್ನುತ್ತೇವೆಯೊ, ಅದು ಇಲ್ಲಿ ಪ್ರಧಾನವಾಗುತ್ತದೆ. ವೈಜ್ಞಾನಿಕದೃಷ್ಟಿ ವಸ್ತುಸ್ಥಿತಿ ಇರುವಂತೆ, ಅದನ್ನು ಅಭ್ಯಸಿಸುವಲ್ಲಿಗೆ ಸೀಮಿತವಾಗಿದ್ದರೆ, ವೈಜ್ಞಾನಿಕ ಮಾರ್ಗ ವಾಸ್ತವತೆಗೆ ಸವಾಲನ್ನೊಡ್ಡುವ ಕೃತಕವಸ್ತುಗಳ, ರೀತಿನೀತಿಗಳ ನಿರ್ಮಾಣದಲ್ಲಿ ತೊಡಗು ತ್ತದೆ. ಪ್ರತಿಯೊಂದಕ್ಕೂ ಪ್ರತಿವಸ್ತುವೊಂದನ್ನೂ ಸಂಶ್ಲೇಷಣೆಯ ಮೂಲಕ ತಯಾರಿಸಿಕೊಡುವ ವೈಜ್ಞಾನಿಕ ಮಾರ್ಗ ಮೂಲವಸ್ತುವಿನ ನೈಸರ್ಗಿಕ ಹಾಗೂ ನೈಜ ಅಸ್ತಿತ್ವವನ್ನೇ ತೊಡೆದುಹಾಕುವಷ್ಟು ಶೀಘ್ರವೇಗದಿಂದ

ಮುಂದೆ ಸಾಗುತ್ತಿದೆ. ಇದು ಹೀಗೇ ಮುಂದುವರಿದರೆ, ಮಾನವ ಕೂಡ ತನ್ನ ಪ್ರಕೃತಿದತ್ತ ಗುಣಗಳನ್ನು ಕಳೆದು ಕೊಂಡು, (ಈಗಾಗಲೇ ಬಹಳ ಮಟ್ಟಿಗೆ ಆಗಿರುವಂತೆ) ನಿರ್ವೀರ್ಯಪಶುವಾಗುವುದರಲ್ಲಿ ಸಂದೇಹವಿಲ್ಲ.

ಅಂದರೆ ವೈಜ್ಞಾನಿಕಮಾರ್ಗ–ವಿಜ್ಞಾನ ಈಗ ಹೆಚ್ಚು ಹೆಚ್ಚಾಗಿ ಬೆಳೆಸಲ್ಪಡುತ್ತಿರುವ ರೀತಿ–ಆಶಾದಾಯಕ ವಾಗಿಲ್ಲ. ಅಂದ ಮಾತ್ರಕ್ಕೆ ವೈಜ್ಞಾನಿಕದೃಷ್ಟಿಯನ್ನೇ ಕೈಬಿಡಬೇಕೆಂದಲ್ಲ. ವಿಜ್ಞಾನವನ್ನು ಮತ್ತೊಮ್ಮೆ ಅದರ ಸಹಜವಾದ–ಅನ್ವೇಷಣಾ ಪ್ರಧಾನ ಕ್ಷೇತ್ರಕ್ಕೆ ಹಿಂತಿರುಗಿಸಬೇಕಾಗಿದೆ. ಅರ್ಥಾತ್ ವಿಜ್ಞಾನ ತನ್ನ ಕ್ಷೇತ್ರದ ಮೂಲ ಭೂತ ಕಾಳಜಿಗಳತ್ತ ನಿಜವಾಗಿ ಗಮನ ಹರಿಸಬೇಕಾಗಿದೆ.

ವಿಜ್ಞಾನ ಬದುಕನ್ನು ನಮ್ಮ ಮುಂದೆ ಬಿಚ್ಚಿ ತೋರಿಸಲು ಪ್ರಯತ್ನಿಸುತ್ತಿದೆ. ಬದುಕಿಗೆ ಒಂದು ಉದ್ದೇಶ ವಿದೆಯೆ ? ಎಂಬ ಬಗ್ಗೆ ಸಂದೇಹ ಮೂಡಿಸಿಬಿಟ್ಟಿದೆ. ಬದುಕಿಗೆ ಉದ್ದೇಶವಿಲ್ಲ ಎಂದಾದರೆ, ಬದುಕು ಭೌತಿಕ–ರಸಾ ಯನಿಕ ಕ್ರಿಯೆ ಎಂದಷ್ಟೇ ಆದರೆ,ಬುದ್ಧಿಶಕ್ತಿಯ ಬಗೆಗೆ ಯಾವ ವಿವರಣೆ ಕೊಡಬೇಕು ? ಅಥವಾ ಬದುಕಿಗೆ ಬದುಕು ವುದಷ್ಟೇ ಉದ್ದೇಶವಾದರೆ ತುರೀಯಆನಂದ ಎಂದು ಯಾವುದನ್ನು ಕರೆಯಬೇಕು ?

ಅನ್ವೇಷಣೆ ಬದುಕನ್ನು ನವೀಕರಿಸುತ್ತದೆ. ವೈಜ್ಞಾನಿಕದೃಷ್ಟಿ ಅನ್ವೇಷಣೆಗೆ ಹಾಕಿಕೊಟ್ಟ ರಾಜಮಾರ್ಗ ವಾಗಿದೆ. ವಿಜ್ಞಾನದ ಈ ರಾಜಮಾರ್ಗ ಅಭಿಪ್ರಾಯಗಳ, ಆಲೋಚನೆಗಳ, ಅನಿಸಿಕೆಗಳ ಶಿಖರದತ್ತ ಮುನ್ನಡೆಯು ತ್ತದೆ. ಅನಿಸಿಕೆ, ಆಲೋಚನೆ, ಅಭಿಪ್ರಾಯ–ಈ ಮೂರು ಎಳೆಗಳಿಂದ ಕೂಡಿದ ಸೂತ್ರವನ್ನು ಮರೆತಾಗ ಬದುಕು ಗೋಜಲು ಗೋಜಲಾಗುತ್ತದೆ. ಅಂತಹ ಸಂದರ್ಭದಲ್ಲಿ ಅನಿಸಿಕೆಗಳ ನಿರ್ಭಯ ಪ್ರಕಟಣೆ, ಆಲೋಚನೆಗಳ ನಿಖರ ನಿರೂಪಣೆ ಮತ್ತು ಅಭಿಪ್ರಾಯಗಳ ನಿಶ್ಚಿತ ಧೋರಣೆಯನ್ನು ರೂಪಿಸುವಲ್ಲಿ ವೈಜ್ಞಾನಿಕದೃಷ್ಟಿ ಸಹಾಯಕವಾಗ ಬೇಕಾಗಿದೆ.

ಮಾನವನ ಮುಂದೆ ಇಂದು ಮುಖ್ಯವಾಗಿರುವ ಪ್ರಶ್ನೆ–ನಮ್ಮ ಗುರಿ ಏನು? ಎಂಬುದು. ವಿಜ್ಞಾನ ಗುರಿಯ ಬಗ್ಗೆ ಏನನ್ನೂ ಹೇಳುವುದಿಲ್ಲ. ಆದ್ದರಿಂದಲೇ ನಮ್ಮ ಜೀವನಾವಶ್ಯಕ ಮೌಲ್ಯಗಳನ್ನು ರೂಪಿಸುವಲ್ಲಿ ವಿಜ್ಞಾನವನ್ನು ಬಳಸಿಕೊಳ್ಳುವಾಗ ಎಚ್ಚರದಿಂದಿರಬೇಕಾಗಿದೆ. ಅದರಲ್ಲೂ ಪಕ್ಷಪಾತ, ಗುಂಪುಗುಳಿತನ, ಶೋಷಣೆಗಳನ್ನು ಆಚರಿ ಸುತ್ತಿರುವ ವ್ಯಕ್ತಿಗಳೇ ವೈಜ್ಞಾನಿಕ ದೃಷ್ಟಿಯ ಬಗ್ಗೆ ಬಹುವಾಗಿ ಕೊಚ್ಚಿಕೊಳ್ಳುವುದರಿಂದ ನಾವು ಎಚ್ಚರದಿಂದಿರ ಬೇಕಾಗಿದೆ.

ಕೊನೆಯದಾಗಿ,ವಿಜ್ಞಾನವೇ ಬೇರೆ ಜೀವನವೇ ಬೇರೆ ಎಂಬ ಭೇದಮಾಡುವುದು ಸಹ ಶುದ್ಧಮೂರ್ಖತನ. ವಿಜ್ಞಾನ ಜೀವನದ ಎಲ್ಲ ಅಂಗಾಂಗಗಳನ್ನೂ ಪ್ರವೇಶಿಸಿದೆ, ಪ್ರವೇಶಿಸಲೂ ಬೇಕು. ಆದರೆ ವಿಜ್ಞಾನ ಎಲ್ಲವನ್ನೂ ಆವರಿಸುವುದರ ಜತೆಗೆ, ಅದರ ಇತಿಮಿತಿಗಳನ್ನು ಅರಿತು, ಅದರ ಸೂಕ್ಷ್ಮ ಅನ್ವೇಷಣಾಕ್ರಮವನ್ನು ಮಾನವನ ಹಿತಕ್ಕೆ ಬಳಸುವುದು ಅತ್ಯಂತ ಮುಖ್ಯ. ಈ ಬಗ್ಗೆ ನಾವು ಕೊಂಚ ಗಲಿಬಿಲಿಗೊಂಡರೂ, ನಾವು ಬದುಕನ್ನು ಅದರ ಯಥಾರ್ಥತೆಯಲ್ಲಿ, ಸಂಕೀರ್ಣತೆಯಲ್ಲಿ, ಸುಭಗತೆಯಲ್ಲಿ–ಕಾಣದೆ ಹೋಗುತ್ತೇವೆ. ಆದ್ದರಿಂದಲೇ ವಿಜ್ಞಾನದ ಬಗೆ ಗಿನ ಎಲ್ಲ ಮಾತಿನಲ್ಲಿಯೂ ನಾವು ಬದುಕಿಗೆ ಆದ್ಯತೆಯನ್ನು ಕೊಡುವುದನ್ನು ಮರೆಯಬಾರದು.

ಎನ್. ಕೃಷ್ಣಸ್ವಾಮಿ

ಸೂರ್ಯಶಕ್ತಿ

ಶಾಲೆಯಲ್ಲಿ ಉಪಾಧ್ಯಾಯರು ಮಕ್ಕಳಿಗೆ ಸೂರ್ಯನ ವಿಷಯವಾಗಿ ಪಾಠಮಾಡಿದರು. ಬಳಿಕ ಶಿಷ್ಯರನ್ನು ಪ್ರಶ್ನಿಸಿದರು–"ನಮಗೆ ಸೂರ್ಯನಿಂದ ಹೆಚ್ಚು ಉಪಯೋಗವೋ, ಚಂದ್ರನಿಂದಲೋ, ಹೇಳಿ!" ಎಂದು. ತರಗತಿಯ ಬುದ್ಧಿವಂತ ಹುಡುಗ ನಿಂತು ಹೇಳಿದ "ಚಂದ್ರನಿಂದ, ಸಾರ್" "ಅದು ಹೇಗೆ?" ಹುಡುಗನಿಂದ ಉತ್ತರ ಬಂದಿತು "ಸೂರ್ಯನಾದರೆ ನಮಗೆ ಚೆನ್ನಾಗಿ ಬೆಳಕು ಇರುವ ಹಗಲು ಹೊತ್ತಿನಲ್ಲಿ ಬರುತ್ತಾನೆ, ಆದರೆ ಚಂದ್ರನು ನಮಗೆ ಹೆಚ್ಚು ಬೆಳಕು ಬೇಕಾದ ಕಾಲದಲ್ಲಿ, ರಾತ್ರಿಯ ಕತ್ತಲಿನಲ್ಲಿ ಬೆಳಕನ್ನು ಕೊಡುತ್ತಾನೆ, ಆದುದರಿಂದ ಚಂದ್ರನೇ ಹೆಚ್ಚು ಉಪಯೋಗಕಾರಿ !"

ಹೀಗೆ ನಾವು ಸೂರ್ಯನಿಗೆ ಹೇಗೆ ಹೊಂದಿಕೊಂಡು ಹೋಗಿಬಿಟ್ಟಿದ್ದೇವೆಯೆಂದರೆ ಸೂರ್ಯನ ಉಪಕಾರವನ್ನೂ ಅವನ ಶಕ್ತಿಯನ್ನೂ ಮರೆಯುತ್ತೇವೆ. ಇದನ್ನು ಮರೆಯದಿರಲೆಂದೇ ಹಿಂದೂ ಧರ್ಮದಲ್ಲಿ ಸೂರ್ಯನಿಗೆ ಒಂದು ಮುಖ್ಯ ಸ್ಥಾನವಿದೆ. ನಮಗೆ ತಿಳಿದಿರುವ ವಸ್ತುಗಳಲ್ಲೆಲ್ಲಾ ಅತ್ಯಂತ ಜಾಜ್ವಲ್ಯಮಾನವಾಗಿ ಸದಾ ಬೆಳಕನ್ನೂ ಕಾವನ್ನೂ ಕೊಡುವ ಸೂರ್ಯನನ್ನು ನಾವು ದೇವರ ಒಂದು ಮುಖ್ಯವಾದ ಪ್ರತೀಕವನ್ನಾಗಿ ಮಾಡಿಕೊಂಡಿದ್ದೇವೆ. ಸೂರ್ಯ ಹಿಂದೂಗಳ ಪಂಚದೇವತೆಗಳಲ್ಲಿ ಒಬ್ಬ. ಷಣ್ಮತಗಳಲ್ಲಿ ಸೂರ್ಯೋಪಾಸನೆಯ ಮತವೂ ಮುಖ್ಯವಾದುದು. ಹಿಂದೆ ಸೂರ್ಯನ ಉಪಾಸನೆ ಇನ್ನೂ ಹೆಚ್ಚಾಗಿ ಪ್ರಚಲಿತವಾಗಿದ್ದಿತೆಂಬುವಕ್ಕೆ ಕೋಣಾರ್ಕದ ಸೂರ್ಯದೇವಸ್ಥಾನ ಸಾಕ್ಷಿಯಾಗಿದೆ. ಈಗಲೂ ಸಂಧ್ಯಾವಂದನೆಯಲ್ಲಿ ಸೂರ್ಯನನ್ನು ನಮಿಸುತ್ತೇವೆ, ಗಾಯತ್ರೀ ಮಂತ್ರದಲ್ಲಿ ಸೂರ್ಯನನ್ನು ಆರಾಧಿಸುತ್ತೇವೆ, ನವಗ್ರಹಗಳಲ್ಲಿ ಕೇಂದ್ರ ಸ್ಥಾನವನ್ನು ಕೊಟ್ಟು ಪೂಜಿಸುತ್ತೇವೆ, ಸೂರ್ಯನಮಸ್ಕಾರವನ್ನು ಮಾಡುವುದರಿಂದ ಆರೋಗ್ಯವನ್ನು ಪಡೆಯುತ್ತೇವೆ.

ಸೂರ್ಯಶಕ್ತಿಯ ಪ್ರಯೋಗ : ಉದ್ದೇಶ ಪೂರ್ವಕವಾಗಿಯೋ, ಸ್ವಾಭಾವಿಕವಾಗಿ ಯೋಚಿಸದೆಯೋ ನಾವು ಸೂರ್ಯಶಕ್ತಿಯನ್ನು ಅಸಂಖ್ಯಾತ ಮಾರ್ಗಗಳಲ್ಲಿ ಉಪಯೋಗಿಸಿಕೊಳ್ಳುತ್ತೇವೆ. ಹಗಲಿನಲ್ಲಿ ಸೂರ್ಯನ ಬೆಳಕಿಗೆ ಬದಲಾಗಿ ದೀಪಗಳನ್ನು ಉಪಯೋಗಿಸಬೇಕಾಗಿ ಬಂದರೆ ಅದಕ್ಕೆ ಅಪಾರವಾದ ಇತರ ರೀತಿಯ ಶಕ್ತಿಯ ವ್ಯಯವಾದೀತು. ವ್ಯವಸಾಯದಲ್ಲಿ ದವಸಧಾನ್ಯಗಳನ್ನು ಒಣಗಿಸಲು ಬಿಸಿಲನ್ನು ಸಾರ್ವತ್ರಿಕವಾಗಿ ಉಪಯೋಗಿಸುತ್ತೇವೆ. ಗೃಹಕೃತ್ಯದಲ್ಲಿಯೂ ಒಗೆದು ಮಡಿಮಾಡಿದ ಬಟ್ಟೆಗಳಿಂದ ಹಿಡಿದು ಅನೇಕ ವಸ್ತುಗಳನ್ನು–ಉದಾಹರಣೆಗೆ ಹಪ್ಪಳ, ಸಂಡಿಗೆಗಳು–ಒಣಗಿಸಲು ಬಿಸಿಲನ್ನೇ ಉಪಯೋಗಿಸುತ್ತೇವೆ. ಸೂರ್ಯನ ಉಪಕಾರವನ್ನು ನಾವು ಮರೆಯದಿರಬೇಕಾದರೆ ಛಳಿಯ ಕಾಲದಲ್ಲಿ ಛಳಿಯದೇಶಗಳಲ್ಲಿರಬೇಕು, ಅಥವಾ ಅಲ್ಲಿಗೆ ಪ್ರಯಾಣ ಮಾಡಬೇಕು. ಅಲ್ಲಿ ಪ್ರತಿದಿನವೂ ಸೂರ್ಯನ ಬರವನ್ನು ಹಾತೊರೆಯುತ್ತಾ ನಿರೀಕ್ಷಿಸುತ್ತೇವೆ; ಸೂರ್ಯೋದಯವಾದೀತೇ, ಬಿಸಿಲಿನ ಹಿತವಾದ

ಕಿರಣಗಳು ದೊರೆತಾವೇ ಎಂದು ಎಣಿಸುತ್ತಿರುತ್ತೇವೆ. ಜನ ಛಳಿಗಾಲದಲ್ಲಿ ಉಷ್ಣ ದೇಶಗಳಿಗೆ ಯಾತ್ರೆ ಹೋಗುತ್ತಾರೆ; ಅಲ್ಲಿನ ಪಕ್ಷಿಗಳೂ ಹೀಗೆಯೇ ಛಳಿ ದೇಶಗಳನ್ನು ಬಿಟ್ಟು ಸಾವಿರಾರು ಕಿಲೋ ಮೀಟರುಗಳ ದೂರವನ್ನೂ ಹಾರಿ ಉಷ್ಣ ಪ್ರದೇಶಗಳಿಗೆ ಬರುತ್ತವೆ.

ಕಲ್ಲಿದ್ದಲು, ಪೆಟ್ರೋಲಿಯಂ: ನಮಗೆ ಭೂಮಿಯಲ್ಲಿ ಖನಿಜರೂಪದಲ್ಲಿ ಕಲ್ಲಿದ್ದಲು, ಪ್ರಾಕೃತಿಕ ಎಣ್ಣೆ ಮತ್ತು ಗ್ಯಾಸ್ ದೊರೆಯುತ್ತವೆ. ಎಣ್ಣೆಯನ್ನು ಶುದ್ಧಿಗೊಳಿಸಿ ಡೀಸೆಲ್, ಕೆರೋಸೀನ್ (ಸೀಮೆ ಎಣ್ಣೆ) ಮತ್ತು ಪೆಟ್ರೋಲಿಯಂ ಇತ್ಯಾದಿಗಳನ್ನಾಗಿ ಪರಿವರ್ತಿಸಿಕೊಂಡು ಉಪಯೋಗಿಸುತ್ತೇವೆ. ಆದರೆ ಈ ಉತ್ಪನ್ನಗಳು ಎಲ್ಲಿಂದ ಬಂದವು ? ಲಕ್ಷಾಂತರ ವರ್ಷಗಳ ಹಿಂದೆ ಭೂಮಿಯ ಮೇಲೆ ಬೆಳೆದಿದ್ದ ವೃಕ್ಷರಾಶಿ ಮತ್ತು ಪ್ರಾಣಿಗಳ ಅವಶೇಷಗಳು ಕಾರಣಾಂತರದಿಂದ ಭೂಮಿಯಲ್ಲಿ ಹೂತು ಹೋಗಿ ಕಲ್ಲಿದ್ದಲು, ಎಣ್ಣೆ ಮತ್ತು ಗ್ಯಾಸ್‌ಗಳ ರೂಪವನ್ನು ತಳೆಯುತ್ತವೆ. ಹೀಗೆ ಸೌರಶಕ್ತಿಯಿಂದ ಉತ್ಪನ್ನವಾದ ಸಸ್ಯ-ಪ್ರಾಣಿಗಳ ಅವಶೇಷಗಳೇ ಕಲ್ಲಿದ್ದಲು-ಪೆಟ್ರೋಲ್ ಇತ್ಯಾದಿಗಳು.

ಕಲ್ಲಿದ್ದಲಿನ ಉಪಯೋಗ ಬಹಳ ಹಿಂದಿನಿಂದಲೂ ಆಗುತ್ತಿದ್ದಿತಾದರೂ ಪೆಟ್ರೋಲ್ ಮತ್ತು ತತ್ಸಂಬಂಧವಾದ ಎಣ್ಣೆಗಳು ಇಂಟರ್ನಲ್ ಕಂಬಶ್ಚನ್ ಎಂಜಿನ್ (I C ಎಂಜಿನ್) ಗಳ ನಿರ್ಮಾಣವಾದ ಮೇಲೆ ಮೋಟಾರ್ ಕಾರು, ಬಸ್ಸು, ಲಾರಿ, ರೈಲು ಮತ್ತು ಇತರ ಕೈಗಾರಿಕೆ-ವ್ಯವಸಾಯಗಳಿಗೆ ಬೇಕಾದ ಎಂಜಿನ್, ಮೋಟಾರ್‌ಗಳ ಉಪಯೋಗಕ್ಕಾಗಿ ಈ ಶತಮಾನದಲ್ಲಿ ಮಾತ್ರ ಹೆಚ್ಚು ಹೆಚ್ಚಾಗಿ ಬಳಸಲ್ಪಡುತ್ತವೆ. ವಿಮಾನ ಮತ್ತು ಯುದ್ಧ ಯಂತ್ರಗಳಿಗೆ ಪೆಟ್ರೋಲ್ ಇತ್ಯಾದಿಗಳು ಬೃಹತ್ಪ್ರಮಾಣದಲ್ಲಿ ಖರ್ಚಾಗುತ್ತವೆ. ದಿನೇ ದಿನೇ ಹೆಚ್ಚುತ್ತಿರುವ ಬಳಕೆಯನ್ನು ಸೀಮಿತವಾದ ಪೆಟ್ರೋಲಿಯಂ ನಿಕ್ಷೇಪಗಳೊಡನೆ ಹೋಲಿಸಿದರೆ ಈಗ ಭೂಗರ್ಭದಲ್ಲಿರುವ ಎಣ್ಣೆ ಇನ್ನು ನೂರು-ಇನ್ನೂರು ವರ್ಷಗಳು ಕೂಡ ಉಳಿಯಲಾರದೆಂದು ಎಣಿಸಲಾಗಿದೆ.

ಪ್ರಪಂಚದಲ್ಲಿ ಬದಲುತ್ತಿರುವ ರಾಜಕೀಯ ಬಣಗಳ ತಿಕ್ಕಾಟದಿಂದ, ಮುಖ್ಯವಾಗಿ ಇಸ್ರೇಲ್-ಅರಬ್-ಅಮೆರಿಕಾ ರಾಜಕೀಯದಿಂದಲೂ, ಇಳಿಯುತ್ತಿರುವ ಎಣ್ಣೆಗಳ ನಿಕ್ಷೇಪಗಳಿಂದಲೂ ಪೂರ್ವಏಷ್ಯದ ಪೆಟ್ರೋಲಿಯಂ ಉತ್ಪಾದನೆಯಲ್ಲಿ ತೊಡಗಿದ ರಾಜ್ಯಗಳು ಒಂದುಗೂಡಿ ಪೆಟ್ರೋಲ್ ಎಣ್ಣೆಯ ದರಗಳನ್ನು ಹಂತಹಂತವಾಗಿ ಒಂದಕ್ಕೆ ಹತ್ತರಷ್ಟು ಹೆಚ್ಚಿಸಿದ ಮೇಲೆ ಪೆಟ್ರೋಲ್ ಬೆಲೆ ಅತಿ ದುಬಾರಿಯಾಗಿ ಪರಿಣಮಿಸಿದೆ. ರಾಷ್ಟ್ರಗಳು ಶಕ್ತಿಯ ಇತರ ಮೂಲಗಳನ್ನು ಅರಸಲಾರಂಭಿಸಿವೆ.

ಕಲ್ಲಿದ್ದಲನ್ನು ಹೆಚ್ಚಾಗಿ ಉಪಯೋಗಿಸಬೇಕೆಂಬ ಪ್ರಯತ್ನಗಳೂ ಎಲ್ಲೆಡೆಯಲ್ಲಿಯೂ ನಡೆಯುತ್ತಿವೆ. ಈಚೆಗೆ ನ್ಯೂಕ್ಲಿಯರ್ ರಿಆಕ್ಟರ್‌ಗಳಿಂದಲೂ ಹೆಚ್ಚು ಹೆಚ್ಚಾಗಿ ವಿದ್ಯುಚ್ಛಕ್ತಿಯನ್ನು ಪಡೆಯಲಾಗುತ್ತಿದೆ. ಜಲ ವಿದ್ಯುಚ್ಛಕ್ತಿ (ಹೈಡ್ರೋಎಲೆಕ್ಟ್ರಿಕ್ ಪವರ್) ಯಂತೂ ಮೊದಲಿನಿಂದಲೂ ಇದ್ದಿತಾದರೂ ಇದರ ಉತ್ಪಾದನೆಗೆ ಸ್ವಾಭಾವಿಕವಾದ ಮಿತಿಗಳುಂಟು- ನದಿಗಳಲ್ಲಿ ಹರಿಯುವ ನೀರಿಗೆ ಮಿತಿಗಳು ಇವೆಯಷ್ಟೆ ?

ಶಕ್ತಿಯ ಇತರ ಮೂಲಗಳು : ನ್ಯೂಕ್ಲಿಯರ್ (ಪರಮಾಣು) ಶಕ್ತಿಯನ್ನು ಬಿಟ್ಟರೆ ಬೇರೆ ಎಲ್ಲ ಶಕ್ತಿಯೂ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಸೂರ್ಯನಿಂದಲೇ ದೊರೆಯುತ್ತದೆ. ಇವುಗಳಲ್ಲಿ ಗಾಳಿಯ ಶಕ್ತಿಯನ್ನು ವಿಂಡ್‌ಮಿಲ್ (wind mill) ಗಳ ಉಪಯೋಗದಿಂದ ಯೂರೋಪಿನಲ್ಲಿ ಮೊದಲಿನಿಂದಲೂ ಬಳಸುತ್ತಿದ್ದಾರೆ. ಈಗ ಹೊಸದಾಗಿ ಸಮುದ್ರದ ಉಬ್ಬರವಿಳಿತಗಳ (ಟೈಡ್) ಶಕ್ತಿಯನ್ನು ಪಡೆದುಕೊಳ್ಳಲೂ, ಸಮುದ್ರದ ಅಲೆಗಳ ಶಕ್ತಿಯನ್ನು ಪಡೆಯಲೂ ಪ್ರಯತ್ನಗಳು ನಡೆಯುತ್ತಿವೆ.


ಸೂರ್ಯಶಕ್ತಿ : ಈಚೆಗೆ ಎಲ್ಲ ಕಡೆಗಳಲ್ಲಿಯೂ ಸೂರ್ಯನ ಕಿರಣಗಳ ಶಕ್ತಿಯನ್ನು ನೇರವಾಗಿ ಬಳಸುವುದು ಹೇಗೆ ಹೇಗೆ ಸಾಧ್ಯವೆಂಬ ಪ್ರಶ್ನೆಯನ್ನು ವಿಜ್ಞಾನಿಗಳು ಎದುರಿಸುತ್ತಿದ್ದಾರೆ. ಇದಕ್ಕಾಗಿ ಹೆಚ್ಚು ಪ್ರಯತ್ನಗಳನ್ನು

ವ್ಯಯಿಸಲಾಗುತ್ತಿದೆ. ಸೂರ್ಯಶಕ್ತಿಯ ಶೋಧಗಳಿಗಾಗಿ ಅಮೆರಿಕದ ಸಂಯುಕ್ತ ಸಂಸ್ಥಾನವು (USA) 1975ರಲ್ಲಿ ಸುಮಾರು 12 ಮಿಲಿಯನ್ ಡಾಲರುಗಳನ್ನು ವ್ಯಯಿಸಿದೆ. 1976 ರಲ್ಲಿ 67 ಮಿಲಿಯನ್ ಡಾಲರ್‌ಗಳನ್ನು ಖರ್ಚು ಮಾಡುವ ಕಾರ್ಯಕ್ರಮವಿದೆ. ಕೆಲವು ಮುಖಂಡರು ಇದನ್ನು 150 ಮಿಲಿಯನ್ ಡಾಲರ್‌ಗಳಿಗೆ ಏರಿಸಬೇಕೆಂದು ಒತ್ತಾಯ ಮಾಡುತ್ತಿದ್ದಾರೆ.

ಸೂರ್ಯಶಕ್ತಿಯ ಅತಿ ವ್ಯಾಪಕವಾದ ಉಪಯೋಗ ಬಾಹ್ಯಕಾಶ ವಾಹನಗಳಲ್ಲಿ ಆಗಿದೆ. ಬಾಹ್ಯಾಕಾಶದಲ್ಲಿ ಸೂರ್ಯಕಿರಣಗಳು ನಿರಂತರವಾಗಿ ದೊರೆಯುತ್ತವೆ–ಅಲ್ಲಿ ಮೋಡ, ಮಳೆ, ರಾತ್ರಿ ಇತ್ಯಾದಿ ಅಡಚಣೆಗಳು ಇರುವುದಿಲ್ಲ ವಷ್ಟೆ ? ಕಳೆದ ಎರಡು ದಶಕದಲ್ಲಿ ಟ್ರಾನ್ಸಿಸ್ಟರ್ ಮತ್ತು ಅದರ ಸಂಬಂಧದ ಇತರ ಉಪಕರಣಗಳ ಅಭಿವೃದ್ಧಿ ಅವ್ಯಾಹತವಾಗಿ ನಡೆದಿದೆ.ಇದರ ಫಲಗಳಲ್ಲಿ ಮುಖ್ಯವಾದುದೊಂದು ಸೋಲಾರ್‌ಸೆಲ್ (ಸೂರ್ಯಕೋಶ). ಸಿಲಿಕಾನ್ ನಿಂದ ತಯಾರಿಸಲ್ಪಟ್ಟ ಸೋಲಾರ್ ಸೆಲ್‌ಗಳು ಸೂರ್ಯನ ಕಿರಣಗಳನ್ನು ವಿದ್ಯುಚ್ಛಕ್ತಿಯನ್ನಾಗಿ ಪರಿವರ್ತಿಸುತ್ತವೆ. ನೂರಾರು ಸೋಲಾರ್ ಸೆಲ್‌ಗಳನ್ನು ಒಟ್ಟಿಗೆ ಜೋಡಿಸಿ ಬಿಸಿಲಿಗೆ ಒಡ್ಡಿ ಅವು ಉತ್ಪಾದಿಸುವ ವಿದ್ಯುಚ್ಛಕ್ತಿ ಯಿಂದಲೇ ಬಾಹ್ಯಾಕಾಶ ನೌಕೆಯ ಎಲ್ಲ ಎಲೆಕ್ಟ್ರಾನಿಕ್ ಯಂತ್ರಗಳನ್ನೂ ನಡೆಸಲಾಗುತ್ತದೆ. ಈಚೆಗೆ ಸೋಲಾರ್ ಸೆಲ್‌ಗಳಿಂದ ಸೂರ್ಯಶಕ್ತಿಯ ಉಪಯೋಗವನ್ನು ಭೂಮಿಯ ಮೇಲೆಯೂ ಪರಿಣಾಮಕಾರಿಯಾಗಿ ಪಡೆಯಲು ಯತ್ನಗಳು ನಡೆದಿವೆ. ಸೋಲಾರ್ ಸೆಲ್‌ಗಳ ವಿಷಯವನ್ನೂ ಮುಂದೆ ಮತ್ತಷ್ಟು ವಿವರಿಸಲಾಗುತ್ತದೆ.

ಸೂರ್ಯಶಕ್ತಿಯ ಪರಿಮಿತಿಗಳು : ಸೂರ್ಯಶಕ್ತಿಯ ಅತಿಮುಖ್ಯವಾದ ಕೊರತೆಯೆಂದರೆ ಅದು ನಮಗೆ ಸದಾ ಸರ್ವದಾ ದೊರೆಯುವುದಿಲ್ಲ; ಚಕ್ರರೂಪದಲ್ಲಿ (ಸೈಕ್ಲಿಕ್) ದೊರೆಯುತ್ತದೆ. ಹಗಲಿನಲ್ಲಿ ಉಂಟು, ರಾತ್ರಿಯಲ್ಲಿ ಇಲ್ಲ. ಹಗಲಿನಲ್ಲೂ ಬೆಳಗ್ಗೆ ಕ್ಷೀಣವಾಗಿದ್ದು, ಮಧ್ಯಾಹ್ನವಾಗುತ್ತಾ ಹೆಚ್ಚಿ, ಸಂಜೆಗೆ ಮತ್ತೆ ಕ್ಷಯಿಸುತ್ತದೆ. ಇಡೀ ವರ್ಷವನ್ನು ತೆಗೆದುಕೊಂಡರೆ ಬೇಸಗೆಯಲ್ಲಿ ಹೆಚ್ಚಾಗಿದ್ದು ಛಳಿಗಾಲದಲ್ಲಿ ಕಡಮೆಯಾಗುತ್ತದೆ. ಹಗಲು ರಾತ್ರಿಗಳ, ಋತುಗಳ ವ್ಯತ್ಯಾಸಗಳಿಗೆ ಕಾರಣ ಭೂಮಿ ಸೂರ್ಯನ ಸುತ್ತ ಚಲಿಸುತ್ತಿರುವುದೇ ಆಗಿದೆ. ತನ್ನ ಅಕ್ಷ (axis)ದ ಸುತ್ತ ಭೂಮಿ 24 ಗಂಟೆಗಳಿಗೊಂದು ಸಲ ಸುತ್ತುವುದರಿಂದ ಹಗಲು–ರಾತ್ರಿ, ಬೆಳಗು–ಮಧ್ಯಾಹ್ನ–ಸಂಜೆಗಳು ಉಂಟಾ ಗುತ್ತವೆ. ಸೂರ್ಯನ ವಾರ್ಷಿಕ ಪ್ರದಕ್ಷಿಣೆಯಿಂದ ಋತುಗಳು ಉಂಟಾಗುತ್ತವೆ.

ಸೂರ್ಯ ಅಗಾಧವಾದ ದೂರದಲ್ಲಿರುವುದರಿಂದ ಸೂರ್ಯನ ಕಿರಣಗಳು ನಮ್ಮನ್ನು ತಲಪುವಾಗ ಸಮಾನಾಂತರ



ಚಿತ್ರ 1

ವಾಗಿರುತ್ತವೆ (ಎಂದರೆ ಪರಸ್ಪರ ಪ್ಯಾರಲಲ್ ಆಗಿರುತ್ತವೆ). ಹೀಗೆ ಸಮಾನಾಂತರವಾಗಿರುವ ಕಿರಣಗಳ ಪಥದಲ್ಲಿ ಯಾವುದಾದರೂ ಒಂದು ಆಯವನ್ನು ಇರಿಸಿದರೆ ಆಯದ ಮೇಲೆ ಬೀಳುವ ಶಕ್ತಿಯ ಪ್ರಮಾಣ ಕಿರಣ-ಆಯಗಳ ನಡುವಿನ ಕೋಣ (ಆಂಗಲ್) ವನ್ನು ಅವಲಂಬಿಸುತ್ತದೆ. ಚಿತ್ರ 1 ರಲ್ಲಿ ಸೂರ್ಯಕಿರಣಗಳು ಮೂರು ಆಯಗಳ ಮೇಲೆ ಯಾವ ಪ್ರಮಾಣದಲ್ಲಿ ಬೀಳುತ್ತವೆಯೆಂಬುದನ್ನು ತೋರಿಸಲು ಆಯಗಳ ಕ್ರಾಸ್‌ಸೆಕ್ಷನ್‌ಗಳನ್ನು ತೋರಿಸಿದೆ. A ಆಯದ ಮೇಲೆ ಕಿರಣಗಳು ನೇರವಾಗಿ ಬೀಳುತ್ತಿವೆ.ಕಿರಣ-ಆಯಗಳ ನಡುವಿನ ಕೋಣ 90^0 ಆದುದರಿಂದ A ಅತಿ ಹೆಚ್ಚಿನ ಕಿರಣಗಳನ್ನು ಸಂಧಿಸುತ್ತದೆ, ಅತಿ ಹೆಚ್ಚಿನ ಶಕ್ತಿಯನ್ನು ಪಡೆಯುತ್ತದೆ. B-ಕಿರಣಗಳ ನಡುವೆ O-90^0ಗಳ ನಡುವಿನ ಒಂದು ಮೂಲ್ಯದ ಕೋಣ θ ಇರುತ್ತದೆ, ಶಕ್ತಿ ಕಡಮೆಯಾಗುತ್ತದೆ. C ಎಂಬ ಆಯ ಕಿರಣಗಳಿಗೆ ಪ್ಯಾರಲಲ್ ಆಗಿರುವುದರಿಂದ ಅವುಗಳ ನಡುವಿನ ಕೋಣ O^0. Cಗೆ ದೊರೆಯುವ ಶಕ್ತಿಯೂ O, ದೊರೆಯುವ ಶಕ್ತಿ.

$$E = E_{max} \sin \theta$$

ಇಲ್ಲಿ Emax ಎಂಬುದು ದೊರೆಯಬಹುದಾದ ಅತಿ ಹೆಚ್ಚಿನ ಶಕ್ತಿಯ ಮೂಲ್ಯ θ (ತೀಟ) = ಆಯ-ಕಿರಣಗಳ ನಡುವಿನ ಕೋಣ, θ ದ ಮೂಲ್ಯ O ಯಿಂದ 90^0 ಗೆ ಹೆಚ್ಚಿದಾಗ Sin θ ದ ಮೂಲ್ಯ O ಯಿಂದ 1 ರವರೆಗೆ ಹೆಚ್ಚುತ್ತದೆ.

ಇದು ಒಂದು ದಿಕ್ಕಿನಲ್ಲಿ ಮಾತ್ರ. ಆಯದ ಮೇಲೆ ಬೀಳುವ ಕಿರಣಗಳು ಇನ್ನೊಂದು ದಿಕ್ಕಿನಲ್ಲಿಯೂ ಒಂದು ಕೋಣದಲ್ಲಿ ಬಿದ್ದು ಮತ್ತಷ್ಟು ಕಡಮೆಯಾಗುವ ಅವಕಾಶ ಇರುತ್ತದೆ.

ಸೂರ್ಯ ಆಕಾಶದ ನಟ್ಟನಡುವೆ ಇರುವಾಗ, ಎಂದರೆ ನಡುಮಧ್ಯಾಹ್ನದಲ್ಲಿ ಮತ್ತು ನಡು-ಬೇಸಗೆಯಲ್ಲಿ ನಮಗೆ ಅತಿ ಹೆಚ್ಚಿನ ಸೌರಶಕ್ತಿ ದೊರೆಯುತ್ತದೆ. ಬೆಳಗು-ಸಂಜೆಗಳಲ್ಲಿ ಸೂರ್ಯ ಕಿರಣಗಳು ಒಂದು ಸಣ್ಣ ಕೋಣದಲ್ಲಿ ಭೂಮಿಯ ಮೇಲೆ ಬೀಳುವುದರಿಂದ (ವಾತಾವರಣದಲ್ಲಿ ಹೆಚ್ಚಾಗಿ ಜೀರ್ಣವಾಗುವುದರಿಂದಲೂ ಸಹ) ಶಕ್ತಿ ಕಡಮೆಯಾಗುತ್ತದೆ. ಬೇಸಗೆಯ ಕಾಲದಲ್ಲಿ ಸೂರ್ಯನ ಸ್ಥಿತಿ ಆಕಾಶದ ಮಧ್ಯಭಾಗದಲ್ಲಿರುವುದರಿಂದ ಶಕ್ತಿ ಹೆಚ್ಚಾಗಿ ದೊರೆಯುತ್ತದೆ. ಉಳಿದ ಋತುಗಳಲ್ಲಿ ಬೇರೆ ಕೋಣಗಳಲ್ಲಿರುವುದರಿಂದ ಕಡಮೆಯ ಶಕ್ತಿ ದೊರೆಯುತ್ತದೆ.

ಉಷ್ಣವಲಯದ ಹೊರಗೆ ಇರುವ ಪ್ರದೇಶಗಳಲ್ಲಿ ಸೂರ್ಯ ಎಂದೂ ಆಕಾಶದ ಮಧ್ಯಭಾಗಕ್ಕೆ ಬರುವುದಿಲ್ಲ. ಆರ್ಕ್‌ಟಿಕ್ ಪ್ರದೇಶಗಳಲ್ಲಿ (ಉತ್ತರ ಧ್ರುವ, ದಕ್ಷಿಣ ಧ್ರುವಗಳ ಪ್ರದೇಶಗಳಲ್ಲಿ) ಸೂರ್ಯ ಆಕಾಶದ ಅಂಚಿನಲ್ಲಿಯೇ ಇರುತ್ತಾನೆ. ಆದುದರಿಂದ ಇಲ್ಲಿ ದೊರೆಯುವ ಶಕ್ತಿ ಅಲ್ಪವಾದುದು. ಇದಲ್ಲದೆ ಧ್ರುವ ಪ್ರದೇಶಗಳಲ್ಲಿ ಆರು ತಿಂಗಳು ಸೂರ್ಯನ ದರ್ಶನವೇ ಇರುವುದಿಲ್ಲ, ವರ್ಷದ ಇನ್ನು ಆರು ತಿಂಗಳಲ್ಲಿ ಆಕಾಶದ ಅಂಚಿನಲ್ಲಿಯೇ ಸುತ್ತುತ್ತಿರುತ್ತಾನೆ-ಆರು ತಿಂಗಳ ರಾತ್ರಿ, ಆರು ತಿಂಗಳ ಹಗಲು.

ಸೂರ್ಯಶಕ್ತಿಯ ಪ್ರಮಾಣ : ಭೂಮಿಯಮೇಲೆ ಪ್ರತಿ ಸೆಕೆಂಡೂ ಅಗಾಧವಾದ ಪ್ರಮಾಣದಲ್ಲಿ ಸೂರ್ಯಶಕ್ತಿ ಬೀಳುತ್ತಿರುತ್ತದೆ. ನವದೆಹಲಿಯಲ್ಲಿ ಒಂದೇ ದಿನ ಬೀಳುವ ಬಿಸಿಲಿನ ಶಕ್ತಿಯನ್ನು ಕ್ರೋಢೀಕರಿಸಿದರೆ ಅದು ಇಡೀ ಭಾರತದಲ್ಲಿ ಒಂದು ವರ್ಷ ಉಪಯೋಗಿಸಲ್ಪಡುತ್ತಿರುವ ಶಕ್ತಿಗೆ ಸಮಾನಾಗುತ್ತದೆ.

ನವದೆಹಲಿಯಲ್ಲಿ ಡಿಸೆಂಬರ್, ಜನವರಿ ತಿಂಗಳುಗಳಲ್ಲಿ ನಡು ಮಧ್ಯಾಹ್ನ ಪ್ರತಿ ಚದುರ ಅಡಿಗೆ, ಪ್ರತಿ ಘಂಟೆ 240 ಬಿ. ಟಿ. ಯು. (B.T.U = British Thermal Unit) ಗಳಷ್ಟು ಸೂರ್ಯಶಕ್ತಿ ದೊರೆಯುತ್ತದೆ. ಜೂನ್, ಜುಲೈ ತಿಂಗಳುಗಳಲ್ಲಿ ಇದರ ಮೂಲ್ಯ 365 ಬಿ. ಟಿ. ಯು. ಆಗಿರುತ್ತದೆ. ದಿನದ 24 ಘಂಟೆಗಳ ಸರಾಸರಿಯನ್ನು ತೆಗೆದುಕೊಂಡರೆ ಡಿಸೆಂಬರ್-ಜನವರಿಯಲ್ಲಿ ಪ್ರತಿ ಘಂಟೆ, ಪ್ರತಿ ಚದುರ ಅಡಿಗೆ 65 ಬಿ. ಟಿ. ಯು. ಜೂನ್—ಜುಲೈ ತಿಂಗಳುಗಳಲ್ಲಿ 130 ಬಿ. ಟಿ. ಯು. ದೊರೆಯುವುದು. ವರ್ಷದ ಸರಾಸರಿಯನ್ನು ತೆಗೆದುಕೊಂಡಾಗ ಇದು 100 ಬಿ.ಟಿ.ಯು. ಆಗುತ್ತದೆ.


100 ಬಿ. ಟಿ. ಯು/ಚದರ ಅಡಿ/ಘಂಟೆ = 1,050×10×100 ಜೌಲ್/ಮೀ²/ಘಂಟೆ (ಒಂದು ಜೌಲ್ = 1 ವಾಟ್×1ಸೆಕೆಂಡ್). ಒಂದು ದಿನದಲ್ಲಿ, ಎಂದರೆ 24 ಘಂಟೆಯಲ್ಲಿ ದೊರೆಯುವ ಶಕ್ತಿ = 1,050×10×100×24 ಜೌಲ್ ಚದರ ಮೀಟರ್ = 25×10^6ಜೌಲ್/ಮೀ².

ನವದೆಹಲಿಯ ವಿಸ್ತೀರ್ಣ 300 ಚದರ ಕಿಲೋ ಮೀಟರ್, ಸುಮಾರು. ಆದುದರಿಂದ ಇಡೀ ದೆಹಲಿಯಲ್ಲಿ ಪ್ರತಿದಿನ ದೊರೆಯುವ ಶಕ್ತಿ ಸರಾಸರಿ = $25\times300\times10^6\times10^6$ ಜೌಲ್, ಏಕೆಂದರೆ 1 ಚದರ ಕಿಲೋ ಮೀಟರ್ =1000×1000 ಚದರ ಮೀಟರ್ = 10^6 ಮೀ². ಆದುದರಿಂದ ದೆಹಲಿಯಲ್ಲಿ ಒಂದು ದಿನ ದೊರೆಯುವ ಸರಾಸರಿ ಸೂರ್ಯಶಕ್ತಿ = 7.5×10^{15} ಜೌಲ್.

ಭಾರತದಲ್ಲಿ ಒಂದು ವರ್ಷ ಉಪಯೋಗವಾಗುವ ಒಟ್ಟು ಶಕ್ತಿ ಸುಮಾರು 35 ಕಿ. ಮಿಲಿಯನ್ ಟನ್ ಕಲ್ಲಿದ್ದಲಿಗೆ ಸಮನಾಗಿದೆ (ಇದರಲ್ಲಿ 70 ಮಿ. ಟ. ಕಲ್ಲಿದ್ದಲು ,2.2 ಮಿ.ಟ. ಲಿಗ್ನೈಟ್, 84-3 ಮಿ.ಟ.ಗೆ ಸಮನಾದ ಎಣ್ಣೆ, 15 ಮಿಲಿಯನ್ ಟನ್ ಕಲ್ಲಿದ್ದಲಿಗೆ ಸಮಾನವಾದ ಹೈಡ್ರೋಎಲೆಕ್ಟ್ರಿಕ್ ಶಕ್ತಿ, 20 ಮಿ.ಟ. ಕಲ್ಲಿದ್ದಲಿಗೆ ಸಮನಾದ ಬೆರಣಿ, 135 ಮಿ.ಟ. ಸಮನಾದ ಸೌದೆ, 32 ಮಿ.ಟ. ಸಮನಾದ ತರಗೆಲೆಗಳು ಸೇರಿವೆ.) 1ಪೌಂಡ್ ಕಲ್ಲಿದ್ದಲು ಸುಮಾರು 10 ಬಿ.ಟಿ.ಯು.ಗಳಿಗೆ ಸಮನಾಗಿದೆ ಎಂದು ತೆಗೆದುಕೊಂಡು ಈ ಶಕ್ತಿಯನ್ನು ಗಣಿಸಿದರೆ ಅದು ಸುಮಾರು = 7.5×10^{15} ಜೌಲ್‌ಗಳಷ್ಟಾಗುತ್ತದೆ. ಹೀಗೆ ಬರೀ ನವದೆಹಲಿಯಲ್ಲಿ ಒಂದೇ ಒಂದು ದಿನ ದೊರೆಯುವ ಸೌರಶಕ್ತಿ ಭಾರತದಲ್ಲಿ ಇಡೀ ವರ್ಷ ಬಳಸಲ್ಪಡುವ ಎಲ್ಲಾ ಶಕ್ತಿಗೆ ಸಮನಾಗುತ್ತದೆ.

ಸೂರ್ಯಶಕ್ತಿಯ ನೇರವಾದ ಬಳಕೆ : ಸೂರ್ಯಶಕ್ತಿ ದೊರೆಯುವುದು ಚಕ್ರರೂಪದಲ್ಲಿ. ಆದುದರಿಂದ ಇದು ನಮಗೆ ನಿರಂತರವಾಗಿ ದೊರೆಯಬೇಕಾದರೆ ಅದನ್ನು ಸಂಚಯಿಸಿಕೊಳ್ಳುವ ವಿಧಾನಗಳನ್ನು ಹುಡುಕಬೇಕು. ಅದೂ ಅಲ್ಲದೆ ಸೂರ್ಯಶಕ್ತಿಯ ಟೆಂಪರೇಚರ್ ಸಾಮಾನ್ಯವಾಗಿ ಕಡಮೆಯಾಗಿರುವುದರಿಂದ ಇದನ್ನು ಹೆಚ್ಚಿಸಲೂ ಪ್ರಯತ್ನಿಸಬೇಕು. ಈ ಎರಡೂ ದಿಕ್ಕುಗಳಲ್ಲಿ ಹೆಚ್ಚಿನ ಸಂಶೋಧನೆಯ ಕೆಲಸ ನಡೆಯುತ್ತಿದೆ.

ಗೃಹಕೃತ್ಯದ ಕೆಲವು ಕಾರ್ಯಗಳಲ್ಲಿ ಸೂರ್ಯಶಕ್ತಿಯನ್ನು ಬಿಸಿಲಿನ ರೂಪದಲ್ಲಿ ಹಲವು ಮಾರ್ಗಗಳಲ್ಲಿ ಬಳಸುತ್ತಿದ್ದೇವೆ. ಛಳಿಯ ದೇಶಗಳಲ್ಲಿ ಮನೆಗಳ ಮತ್ತು ಇತರ ಕಟ್ಟಡಗಳ ಒಳಭಾಗಗಳನ್ನು ಕಾಯಿಸಬೇಕಾಗುತ್ತದೆ. ಇದಕ್ಕೆ ಸೂರ್ಯಶಕ್ತಿಯನ್ನು ಉಪಯೋಗಿಸುವ ಹಲವು ವಿಧಾನಗಳು ಈಗ ದೊರೆಯುತ್ತಿವೆ. ಸಾಮಾನ್ಯವಾಗಿ ಈ ಯತ್ನಗಳಲ್ಲಿ ನೀರನ್ನು ಸೂರ್ಯಶಕ್ತಿಯಿಂದ ಕಾಯಿಸಿ ಅದನ್ನು ಕೊಳವೆಗಳ ಮೂಲಕ ಕಟ್ಟಡಗಳ ಒಳಗೆ ತಂದು ಆ ಕಾವನ್ನು ಉಪಯೋಗಿಸಿಕೊಳ್ಳಲಾಗುತ್ತಿದೆ. ನೀರನ್ನು ಸ್ನಾನ ಇತ್ಯಾದಿಗಳಿಗಾಗಿ ಕಾಯಿಸಲು ಕೆಲವು ಉಪಕರಣ



ಚಿತ್ರ 2. ವಕ್ರವಾದ ಕನ್ನಡಿಯಿಂದ ಬಿಸಿಲನ್ನು ಕೇಂದ್ರೀಕರಿಸುವಿಕೆ.


ಗಳನ್ನು ಭಾರತದಲ್ಲಿಯೂ ತಯಾರಿಸಲಾಗಿದೆ. ಒಂದು ಉಪಕರಣದಲ್ಲಿ ಕಬ್ಬಿಣದ ಕೊಳವೆಗಳಲ್ಲಿರುವ ನೀರನ್ನು ಬಿಸಿಲಿನಿಂದ ಕಾಯಿಸಲಾಗುತ್ತದೆ. ಇನ್ನೊಂದರಲ್ಲಿ ಒಂದು ಸಣ್ಣ ಪಾತ್ರೆಯಲ್ಲಿರುವ ನೀರಿನ ಮೇಲೆ ಬಿಸಿಲನ್ನು ವಕ್ರವಾದ ಕನ್ನಡಿ (ಲೋಹ ರಚಿತವಾದವು)ಗಳಿಂದ ಪ್ರತಿಫಲಿಸಿ ಫೋಕಸ್ ಮಾಡುವುದರಿಂದ ಹೆಚ್ಚಿನ ಟೆಂಪರೇಚರನ್ನು ಪಡೆಯಲಾಗುತ್ತದೆ. (ಚಿತ್ರ 2) ಭೂತಕನ್ನಡಿ (ಲೆನ್ಸ್)ಯಿಂದ ಹೀಗೆ ಬಿಸಿಲನ್ನು ಫೋಕಸ್ ಮಾಡಿ ಕಾಗದ ಇತ್ಯಾದಿಗಳನ್ನು ಸುಡುವಷ್ಟು ಹೆಚ್ಚಿನ ಟೆಂಪರೇಚರನ್ನು ಪಡೆಯಬಹುದಲ್ಲವೆ ?

ಬೇರೆ ಪ್ರಯತ್ನಗಳಲ್ಲಿ ಸೂರ್ಯಶಕ್ತಿಯನ್ನು ಎಲೆಕ್ಟ್ರಿಕ್ ಕರೆಂಟನ್ನಾಗಿ ಪರಿವರ್ತಿಸಿ ಅದನ್ನು ಸ್ಟೋರೇಜ್ ಬ್ಯಾಟರಿಗಳಲ್ಲಿ ಶೇಖರಿಸಿ ಕರೆಂಟನ್ನು ನೀರು ಕಾಯಿಸುವುದಕ್ಕೂ, ಇತರ ಕಾರ್ಯಗಳಿಗೂ ಉಪಯೋಗಿಸಿಕೊಳ್ಳಲಾಗುತ್ತದೆ.

ಸೆಮಿಕಂಡಕ್ಟರ್‌ಗಳು : ಸೋಲಾರ್ ಸೆಲ್‌ಗಳ ನಿರ್ಮಾಣದಲ್ಲಿ ಸೆಮಿಕಂಡಕ್ಟರ್ ಸಾಧನಗಳನ್ನು ಉಪಯೋಗಿಸಲಾಗುತ್ತದೆ. ಸುಮಾರು 25 ವರ್ಷಗಳ ಹಿಂದೆ ಕಂಡುಹಿಡಿಯಲ್ಪಟ್ಟ ಟ್ರಾನ್ಸಿಸ್ಟರ್‌ಗಳಿಂದ ಸೆಮಿಕಂಡಕ್ಟರ್‌ಗಳು ಪ್ರಾಮುಖ್ಯತೆಯನ್ನು ಗಳಿಸಿದವು. ಜರ್ಮೇನಿಯಂ, ಸಿಲಿಕಾನ್ ಮೊದಲಾದ ಕೆಲವು ವಸ್ತುಗಳು ಶುದ್ಧವಾದ ರೂಪದಲ್ಲಿರುವಾಗ ಅಲೋಹಗಳಂತೆ ಇನ್ಸುಲೇಟರ್‌ಗಳಾಗಿರುತ್ತವೆ, ಎಂದರೆ ಎಲೆಕ್ಟ್ರಿಕ್ ಕರೆಂಟ್ ಹರಿಯುವುದಕ್ಕೆ ಅತಿ ಹೆಚ್ಚಿನ ವಿರೋಧವನ್ನು ತೋರುತ್ತವೆ. ಆದರೆ ಈ ಶುದ್ಧ ವಸ್ತುಗಳಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಬೇರೆ ಕೆಲವು ವಸ್ತುಗಳನ್ನು ಬೆರಸುವುದರಿಂದ ಇವುಗಳಲ್ಲಿ ಎಲೆಕ್ಟ್ರಿಕ್ ಕರೆಂಟ್ ಸುಲಭವಾಗಿ ಹರಿಯಬಹುದು. ಬೆರಸುವ ವಸ್ತುಗಳನ್ನು ಇಂಪ್ಯೂರಿಟಿ ಎಂದು ಕರೆಯಲಾಗುವುದು. ಸಿಲಿಕಾನ್ ಇತ್ಯಾದಿಗಳನ್ನು ಸೆಮಿಕಂಡಕ್ಟರ್ (ಅರ್ಧ-ವಾಹಕ) ಎಂದು ಕರೆಯಲಾಗುತ್ತದೆ. ಇಂಪ್ಯೂರಿಟಿಗಳಲ್ಲಿ ಎರಡು ವಿಧಗಳುಂಟು. N (ಎನ್ = ನೆಗೆಟಿವ್) ಇಂಪ್ಯೂರಿಟಿಗಳಲ್ಲಿ ಸುಲಭವಾಗಿ ದೊರೆಯಬಹುದಾದ ಎಲೆಕ್ಟ್ರಾನ್‌ಗಳು ಹೆಚ್ಚಾಗಿ ಇರುತ್ತವೆ—ಈ ಎಲೆಕ್ಟ್ರಾನ್‌ಗಳೇ ಸೆಮಿಕಂಡಕ್ಟರಿನಲ್ಲಿ ಕರೆಂಟನ್ನು ಒಯ್ಯುತ್ತವೆ. P (ಪಿ = ಪಾಸಿಟಿವ್) ಇಂಪ್ಯೂರಿಟಿಗಳಲ್ಲಿ ಪ್ರತಿ ಆಟಂ (ಪರಮಾಣು) ನಲ್ಲಿಯೂ ಒಂದು ಎಲೆಕ್ಟ್ರಾನ್ ಸೇರಬಹುದಾದ ಅವಕಾಶವಿದ್ದು ಇದನ್ನು ಹೋಲ್ ಎಂದು ಕರೆಯಲಾಗಿದೆ. P ಇಂಪ್ಯೂರಿಟಿಯನ್ನು ಸೇರಿಸಿದ ಸೆಮಿಕಂಡಕ್ಟರಿನಲ್ಲಿ ಹೋಲ್‌ಗಳ ಸ್ಥಾನಪಲ್ಲಟದಿಂದಲೇ ಕರೆಂಟ್ ಒಯ್ಯಲ್ಪಡುತ್ತದೆ. ಜರ್ಮೇನಿಯಂ, ಸಿಲಿಕಾನ್‌ಗಳಲ್ಲದೆ ಇತರ ಹಲವು ಮಿಶ್ರವಸ್ತು (ಅಲಾಯ್) ಗಳಲ್ಲಿಯೂ ಸೆಮಿಕಂಡಕ್ಟರ್‌ಗಳಿರುತ್ತವೆ.

ಸೋಲಾರ್ ಸೆಲ್‌ಗಳು: P ಮತ್ತು N ಸೆಮಿಕಂಡಕ್ಟರುಗಳ ಎರಡು ಬಿಲ್ಲೆಗಳನ್ನು ಚಿತ್ರ 3 ರಲ್ಲಿರುವಂತೆ ಜೋಡಿಸಿ ಅವುಗಳಿಗೆ R ಎಂಬ ಲೋಡ್ ರೆಸಿಸ್ಟೆನ್ಸ್‌ನ್ನು ಜೋಡಿಸಿ P–N ಜಂಕ್ಷನ್ನಿನ ಒಂದು ಭಾಗವನ್ನು ಸೂರ್ಯಕಿರಣಗಳಿಂದ ಕಾಯಿಸಿದರೆ ಅಲ್ಲಿ ಅನೇಕ ಎಲೆಕ್ಟ್ರಾನ್-ಹೋಲ್ ಜೋಡಿಗಳು ಉತ್ಪತ್ತಿಯಾಗಿ ವಿರುದ್ಧ ದಿಕ್ಕುಗಳಲ್ಲಿ ಹರಿದು, ಎಲೆಕ್ಟ್ರಿಕ್‌ಕರೆಂಟ್ R ನಲ್ಲಿ ಹರಿಯುವಂತೆ ಆಗುತ್ತದೆ. ಸೂರ್ಯನ ಕಿರಣಗಳಿಂದ ಹೀಗೆ ಎಲೆಕ್ಟ್ರಿಕ್ ಶಕ್ತಿಯನ್ನು ಉತ್ಪಾದಿಸಬಹುದು. ಉತ್ಪನ್ನವಾದ ಎಲೆಕ್ಟ್ರಿಕ್‌ಶಕ್ತಿ R ನಲ್ಲಿ ಹರಿಯುವಾಗ ಮತ್ತೆ ಶಾಖವನ್ನು ಜನಿಯಿಸುತ್ತದೆ. ಅಥವಾ Rನ ಸ್ಥಾನದಲ್ಲಿ ಸ್ಟೋರೇಜ್ ಸೆಲ್‌ಗಳನ್ನು ಇರಿಸಿದರೆ ಅವು ಛಾರ್ಜ್ ಆಗಿ ಎಲೆಕ್ಟ್ರಿಕ್ ಶಕ್ತಿಯನ್ನು ಶೇಖರಿಸಿಇಡುತ್ತವೆ. ಮುಂದೆ ಅವನ್ನು ಇಷ್ಟಬಂದ ರೀತಿಯಲ್ಲಿ ಉಪಯೋಗಿಸಿಕೊಳ್ಳಬಹುದು.

1954 ರಲ್ಲಿ ಮೊದಲು ನಿರ್ಮಿತವಾದ ಸಿಲಿಕಾನ್ ಸೋಲಾರ್ ಸೆಲ್‌ಗಳು 6% ಎಫಿಷಿಯೆನ್ಸಿಯನ್ನು ಹೊಂದಿದ್ದವು—ಎಂದರೆ ಉಪಯೋಗಿಸಿದ ಸೂರ್ಯಶಕ್ತಿಯ 6%ನ್ನು ಎಲೆಕ್ಟ್ರಿಕ್ ಶಕ್ತಿಯನ್ನಾಗಿ ಪರಿವರ್ತಿಸುತ್ತಿದ್ದವು, ಉಳಿದ 94% ವ್ಯರ್ಥವಾಗಿ ಹೋಗುತ್ತಿದ್ದಿತು. ಇಂದಿನ ಸಿಲಿಕಾನ್ ಸೆಲ್‌ಗಳು ಸುಮಾರು 16% ರಷ್ಟು ಎಫಿಷಿಯೆನ್ಸಿಯನ್ನು ಕೊಡುತ್ತವೆ.16% ಎಫಿಷಿಯೆನ್ಸಿ ಸಾಲದು. ಅದೂ ಅಲ್ಲದೆ ಸಿಲಿಕಾನ್ ಸೆಲ್‌ಗಳನ್ನು ತಯಾರಿಸುವುದು



ಚಿತ್ರ 3. ಸೋಲಾರ್ ಸೆಲ್.

ಬಹು ದುಬಾರಿಯಾದ ಕೆಲಸ. ಆದುದರಿಂದ ಇನ್ನೂ ಅಗ್ಗವಾದ, ಹೆಚ್ಚು ಎಫಿಷಿಯೆನ್ಸಿಯನ್ನು ಹೊಂದಿದ ಸೆಲ್‌ಗಳ ಅನ್ವೇಷಣೆ ನಡೆದೇ ಇದೆ.

ಗ್ಯಾಲಿಯಂ ಆರ್ಸೆನೈಡ್ ಸೋಲಾರ್ ಸೆಲ್ : ಅಮೆರಿಕದ ವೇರಿಯನ್ ಅಸೋಸಿಯೇಟ್ಸ್ ಸಾಲಿಡ್ ಸ್ಟೇಟ್ ಲ್ಯಾಬ್‌ನವರು ಈಚೆಗೆ ಒಂದು ಹೊಸ ಸೆಲ್‌ನ್ನು ತಯಾರಿಸಿದ್ದಾರೆ.8 ಮಿಮಿ. ವ್ಯಾಸದ ಈ ಸಣ್ಣ ಸೆಲ್ ಸುಮಾರು 29% ಎಫಿಷಿಯೆನ್ಸಿಯನ್ನು ಕೊಡುತ್ತದೆ. ಗ್ಯಾಲಿಯಂ ಆರ್ಸೆನೈಡ್ (GaAs)ನ್ನು ಉಪಯೋಗಿಸಿ ತಯಾರಿಸಿದ ಈ ಸೆಲ್ಲಿನಷ್ಟೇ ಶಕ್ತಿಯನ್ನು ಉತ್ಪಾದಿಸಲು ಸಿಲಿಕಾನ್ ಸೆಲ್ಲನ್ನು ಬಳಸಿದರೆ ಅದು GaAs ಗಿಂತ ಸಾವಿರದಷ್ಟು ಹೆಚ್ಚಿನ ಆಯವನ್ನು ಹೊಂದಿರಬೇಕಾಗುತ್ತದೆ! ಇದಕ್ಕೆ ಕಾರಣವೇನೆಂದರೆ GaAs ಸೆಲ್ ಹೆಚ್ಚಿನ ಟೆಂಪರೇಚರ್‌ನಲ್ಲಿ ಹೆಚ್ಚು ಎಫಿಷಿಯೆನ್ಸಿಯನ್ನು ಕೊಡುತ್ತದೆ, ಆದುದರಿಂದ ಕಾನ್ಕೇವ್ ಮಿರರ್ (ವಕ್ರ ಕನ್ನಡಿ)ಗಳ ಉಪಯೋಗದಿಂದ ಸೂರ್ಯನ ಶಕ್ತಿಯನ್ನು ಸಾಂದ್ರೀಕರಿಸಿ ಹೆಚ್ಚಿನ ಶಕ್ತಿಯನ್ನು ಪಡೆಯಬಹುದು. ಹೆಚ್ಚಿನ ಟೆಂಪರೇಚರ್ ಮತ್ತು ಹೆಚ್ಚಿನ ಕರೆಂಟ್‌ಗಳಲ್ಲಿ ಸಿಲಿಕಾನ್ ಎಫಿಷಿಯೆನ್ಸಿಯನ್ನು ಹೆಚ್ಚಿಸಕೊಳ್ಳಲಾರದು. ಒಂದೇ ಒಂದು ವೇರಿಯಾನ್ ಸೋಲಾರ್ ಸೆಲ್ 10 ವಾಟ್‌ಗಳಷ್ಟು ಎಲೆಕ್ಟ್ರಿಕ್ ಶಕ್ತಿಯನ್ನು ಕೊಡುತ್ತದೆ. ಇಂತಹ ನೂರು ಸೆಲ್‌ಗಳನ್ನು ಜೋಡಿಸಿದರೆ ಒಂದು ಕಿಲೋವಾಟ್ ಶಕ್ತಿ ದೊರೆಯುತ್ತದೆ. ಮರುಭೂಮಿಗಳಲ್ಲಿ ಇಂತಹ ಹಲವು ಸೆಲ್‌ಗಳನ್ನು ಉಪಯೋಗಿಸಿ ಮೆಗಾವಾಟ್‌ಗಳಷ್ಟು ಶಕ್ತಿಯನ್ನು ಉಂಟುಮಾಡಬಹುದು. ವಿವಿಧ ಅಲಾಯ್‌ಗಳನ್ನು ಉಪಯೋಗಿಸಿ ಹೆಚ್ಚು ಹೆಚ್ಚು ಶಕ್ತಿಯುತವಾದ ಸೆಲ್‌ಗಳನ್ನು ತಯಾರಿಸುವ ಯತ್ನ ಸದಾ ನಡೆದೇ ಇದೆ.

ಅಮೋನಿಯಾ ಸೆಲ್: ಕ್ಯಾನ್‌ಬೆರಾ(Canberra)ದ ಆಸ್ಟ್ರೇಲಿಯನ್ ನ್ಯಾಷನಲ್ ಯೂನಿವರ್ಸಿಟಿಯಲ್ಲಿ ಸೂರ್ಯಶಕ್ತಿಯನ್ನು ಶೇಖರಿಸಲು ಹೊಸದೊಂದು ಪ್ರಯತ್ನ ನಡೆದಿದೆ. ಇಲ್ಲಿ ಸೂರ್ಯಶಕ್ತಿಯನ್ನು ಅಮೋನಿಯಾ (NH_3) ಮೇಲೆ ಕೇಂದ್ರೀಕರಿಸಿ ಅಮೋನಿಯಾದಿಂದ ನೈಟ್ರೋಜನ್(N_2)ಮತ್ತು ಹೈಡ್ರೋಜನ್ (H_2) ಗಳನ್ನು ಪಡೆಯಲಾಗುತ್ತದೆ. ಹೈಡ್ರೋಜನ್‌ನ್ನು ಇಂಧನವನ್ನಾಗಿ ಉಪಯೋಗಿಸಬಹುದು—ಹೈಡ್ರೋಜನ್ 'ಉರಿ' ಯುವುದರಿಂದ ಆಕ್ಸಿಜನ್ನನ್ನು ಉಪಯೋಗಿಸಿಕೊಂಡು ನೀರು ಉತ್ಪತ್ತಿಯಾಗುತ್ತದೆಯೇ ವಿನಾ ಯಾವ ವಿಷಪೂರಿತ ವಸ್ತುಗಳೂ ಉಂಟಾಗವು. ನೈಟ್ರೋಜನ್ನನ್ನು ಉಪಯೋಗಿಸಿಕೊಂಡು ಗೊಬ್ಬರವನ್ನು ತಯಾರಿಸಬಹುದು.

ಸೂರ್ಯಶಕ್ತಿಯನ್ನು ಕೇಂದ್ರಿಕರಿಸಲು ಪ್ಯಾರಬಲಾಯ್ಡ್ ಕನ್ನಡಿಗಳನ್ನು ಉಪಯೋಗಿಸಲಾಗಿದೆ. ಕನ್ನಡಿಗಳನ್ನು ಸ್ಟೈನ್‌ಲೆಸ್ ಸ್ಟೀಲ್‌ನಿಂದ ತಯಾರಿಸಲಾಗಿದೆ. 3-4 ಮೀಟರ್ ವ್ಯಾಸದ ಇಂತಹ ಸಾವಿರಾರು ಕನ್ನಡಿಗಳನ್ನು ಉಪಯೋಗಿಸಿ, ಅವು ಸದಾ ಸೂರ್ಯನಿಗೇ ಮುಖಮಾಡಿಕೊಂಡಿರುವಂತೆ ತಿರುಗಿಸುತ್ತಿದ್ದು ಅಗಾಧವಾದ ಶಕ್ತಿಯನ್ನು ಈ ವಿಧಾನದಿಂದ ಶೇಖರಿಸಲಾಗುತ್ತದೆ. ಕನ್ನಡಿಗಳನ್ನು ನಿಯಂತ್ರಿಸಲು ಕಂಪ್ಯೂಟರ್‌ನ ಸಹಾಯವನ್ನು ಪಡೆಯಲಾಗುತ್ತದೆ.

ಉಪಸಂಹಾರ : ಹೀಗೆ ಶೀಘ್ರವಾಗಿ ಖರ್ಚಾಗಿ ಹೋಗುತ್ತಿರುವ ಪೆಟ್ರೋಲಿಯಂ-ಕಲ್ಲಿದ್ದಲುಗಳ ಸ್ಥಾನವನ್ನು ಸೂರ್ಯಶಕ್ತಿ ಸುಲಭವಾಗಿ ತುಂಬಬಲ್ಲುದು. ಆದರೆ ಹಾಗೆ ಮಾಡುವ ಮೊದಲು ಹೆಚ್ಚಿನ ಸಂಶೋಧನೆಗಳನ್ನು ನಡೆಸಿ ಈ ಶಕ್ತಿಯನ್ನು ಶೇಖರಿಸುವ ವಿಧಾನಗಳನ್ನು ರೂಪಿಸಬೇಕಾಗಿದೆ. ಸೂರ್ಯಶಕ್ತಿಯ ಒಂದು ಹೆಚ್ಚುಗಾರಿಕೆ ಏನೆಂದರೆ ಇದರ ಉಪಯೋಗದಿಂದ ವಾತಾವರಣದ ಮಾಲಿನ್ಯ ಉಂಟಾಗುವುದಿಲ್ಲ. ಕಲ್ಲಿದ್ದಲು, ಪೆಟ್ರೋಲ್, ಸೌದೆ, ನ್ಯೂಕ್ಲಿಯರ್ ಶಕ್ತಿಗಳೆಲ್ಲವೂ ನಮ್ಮ ಪರಿಸರವನ್ನು ಕಲುಷಿತಗೊಳಿಸುತ್ತವೆ, ಭೂಮಿಯ ಕೆಲವು ಭಾಗಗಳನ್ನು ಇವು ವಾಸಿಸಲು ಅಯೋಗ್ಯವನ್ನಾಗಿ ಪರಿವರ್ತಿಸಿಬಿಟ್ಟಿವೆ. ಸೂರ್ಯಶಕ್ತಿಯನ್ನು ನಾವು ಎಷ್ಟು ಬೇಗ ಬಳಸಿದರೆ ಮಾನವನಿಗೆ ಅಷ್ಟು ಕ್ಷೇಮ.

"ಹೇ ರಾಮ, ನಾನು ದೇಹವೆಂದು ಭಾವಿಸಿದಾಗ ನಿನ್ನಿಂದ ಎಂದೆಂದಿಗೂ ಬೇರೆ ಇರುವ ಸೇವಕ. ನಾನು ಜೀವನೆಂದು ಭಾವಿಸಿದಾಗ ನಿನ್ನ ಪರಂಜ್ಯೋತಿಯ ಅಂಶ. ನಾನು ಆತ್ಮವೆಂದು ಭಾವಿಸಿದಾಗ ನಾನೂ ನೀನೂ ಒಂದೇ !"

ಬಿ. ಎ. ಸತ್ಯನಾರಾಯಣರಾವ್

ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು

ನೆಲದ ಮೇಲೆ ಭವ್ಯ ಕಟ್ಟಡಗಳನ್ನು ಕಟ್ಟಿಸಿದ; ಪಟ್ಟಣಗಳನ್ನು ನಿರ್ಮಾಣ ಮಾಡಿದ ; ವಿವಿಧ ಯಂತ್ರಗಳನ್ನು ರೂಪಿಸಿದ ; ಒಂದು ಕಡೆಯಿಂದ ಮತ್ತೊಂದು ಕಡೆಗೆ ಪ್ರಯಾಣವನ್ನು ಸುಗಮಗೊಳಿಸಿದ ; ಪರ್ವತಾರೋಹಣ ಮಾಡಿದ ; ಸಾಗರದಲ್ಲಿ ಓಡಾಡಿದ ; ಬೆಳೆ ಬೆಳೆದ ; ಚಿತ್ರವಿಚಿತ್ರ ಉಡುಪು ತಯಾರಿಸಿದ ; ಆಳಿದ ; ಅರಸನಾದ; ಚಕ್ರವರ್ತಿಯಾದ ; ಸಾಹಸಿಯಾದ ; ಉಪಕಾರಿಯಾದ; ಅಪಕಾರಿಯಾದ; ಭೋಗಿಯಾದ ; ತ್ಯಾಗಿಯಾದ...ತಾನಾಯಿತು, ತನ್ನ ಬದುಕಾಯಿತು ಎಂದೇ ತಿಳಿದಿದ್ದ ಮಾನವನಿಗೆ ನೂತನ ಪ್ರಪಂಚದ ಪರಿಚಯ ಮಾಡಿದ–ಈ ಕೀರ್ತಿ ಡಚ್ ವ್ಯಾಪಾರಿ 'ಲೀವನ್ ಹೋಕ್'ಗೆ ಸೇರಿದೆ. ಯಾರ ಕಣ್ಣಿಗೂ ಬೀಳದೆ, ಯಾರೊಬ್ಬರಿಂದಲೂ ಮೆಚ್ಚುಗೆ ಪಡೆಯದೆ, ಯಾರ ಅಪಕೀರ್ತಿಗೂ ಒಳಗಾಗದೆ, ಎಲ್ಲ ಕಡೆಯೂ ವಾಸಿಸುವ, ಅಗೋಚರವಾಗಿರುವ ಸೂಕ್ಷ್ಮಜೀವಿಯ ಪ್ರಪಂಚವೇ ಆ ಹೊಸ ಪ್ರಪಂಚ. ಭೂಮಿಯ ಮೇಲೆ, ಒಳಗೆ, ವಾಯುಮಂಡಲದಲ್ಲಿ, ಸಾಗರದ ತಳದಲ್ಲಿ, ಪರ್ವತದ ಮೇಲೆ, ಮಣ್ಣಿನಲ್ಲಿ, ಹಣ್ಣುತರಕಾರಿಗಳ ಮೇಲೆ, ಪ್ರಾಣಿಗಳ ಚರ್ಮದ ಮೇಲೆ, ಹಲ್ಲಿನ ಮೇಲೆ, ಕರುಳಿನಲ್ಲಿ–ಹೀಗೆ ಎಲ್ಲ ಕಡೆಯೂ ಹರಡಿರುವ ಸೂಕ್ಷ್ಮಜೀವಿಗಳನ್ನು ಸ್ಥೂಲವಾಗಿ 'ಬ್ಯಾಕ್ಟೀರಿಯಾ', 'ಯೀಸ್ಟ್', 'ಫಂಜೈ', 'ಆಕ್ಟಿನೋಮೈಸಿಟಿಸ್' ಹಾಗೂ 'ವೈರಸ್' ಎಂಬುದಾಗಿ ವಿಂಗಡಿಸಬಹುದು. ವೈರಸ್ ಹೊರತು ಮಿಕ್ಕವುಗಳನ್ನು 'ಮೈಕ್ರೋಸ್ಕೋಪ್' ಸಹಾಯದಿಂದ ಮಾತ್ರ ನೋಡಬಹುದು. ವೈರಸನ್ನು ನೋಡಲು 'ಎಲೆಕ್ಟ್ರಾನ್‌ಮೈಕ್ರೋಸ್ಕೋಪ್' ಅಗತ್ಯ.

ಸೂಕ್ಷ್ಮಜೀವಿಗಳ ಇರುವಿಕೆಯು ತಿಳಿದಂದಿನಿಂದ, ಆಹಾರ ಕೆಡಲು ಸೂಕ್ಷ್ಮಜೀವಿಗಳು ಕಾರಣ ಎಂದು ಪ್ರಯೋಗ ನಡೆಸಿ, ತೋರಿಸಿ, ಅದುವರೆವಿಗೆ ನಂಬಿಕೆಯಿದ್ದ 'ಸ್ವಯಂಜನನ' ಸಿದ್ಧಾಂತ, ಅಂದರೆ, ಜೀವಿಗಳು ತಾವಾಗೇ ಉದ್ಭವಿಸುತ್ತವೆ ಎಂಬ ಮೂಢನಂಬಿಕೆಯನ್ನು ತೊಡೆದು ಹಾಕಿದವರು ಲೂಯಿ ಪಾಶ್ಚರ್, ಸ್ಫಲಂಜನಿ, ನೀಡ್‌ಹಾಮ್, ಶ್ವಾನ್, ಟಿಂಡಲ್ ಮುಂತಾದ ವಿಜ್ಞಾನಿಗಳು. ಅವರ ಸತತಶ್ರಮ ಹಾಗೂ ನ್ಯಾಯಬದ್ಧತರ್ಕ, ಅಲ್ಲದೆ, ಅವರು ನಡೆಸಿದ ಪ್ರಯೋಗಗಳು ಜನರಲ್ಲಿ ಹೊಸ ನಂಬಿಗೆಯನ್ನು ಮೂಡಿಸಿದವು.

ಸೂಕ್ಷ್ಮಜೀವಿಗಳ ಗಾತ್ರ ಕಲ್ಪನೆಗೆ ಮೀರಿದುದು. ಒಂದು ಗುಂಡುಸೂಜಿಯ ತಲೆಯ ಮೇಲೆ ಸಾವಿರಾರು ಬ್ಯಾಕ್ಟೀರಿಯಾಗಳು ಆರಾಮವಾಗಿ ಕುಳಿತುಕೊಳ್ಳಬಲ್ಲವು ! 25,000 'ಕಾಕೈ' ಎಂಬ ದುಂಡನೆಯ ಬ್ಯಾಕ್ಟೀರಿಯಾಗಳನ್ನು ಒಂದರ ಪಕ್ಕದಲ್ಲಿ ಒಂದನ್ನು ಜೋಡಿಸಿದರೆ ಆಗುವ ಉದ್ದ ಕೇವಲ ಒಂದು ಅಂಗುಲ ! ಬ್ಯಾಕ್ಟೀರಿಯಾ ಕಡ್ಡಿಯಂತಿರಬಹುದು, ಗೋಳಾಕಾರವಿರಬಹುದು ಇಲ್ಲವೇ ಸುರುಳಿಯಾಕಾರವಿರಬಹುದು. ಬ್ಯಾಕ್ಟೀರಿಯಾ ಎಂದೊಡನೆ ಜನರ ಮನಸ್ಸಿಗೆ ಹಿತವಾಗುವುದಿಲ್ಲ. ಕಾರಣ ಆಹಾರ ಕೆಡಿಸುವ

ಇಲ್ಲವೇ ರೋಗವನ್ನುಂಟುಮಾಡುವ ಶತ್ರುಗಳೇ ನೆನಪಿಗೆ ಬರುತ್ತವೆ. ಆಹಾರಬೆಳೆ ಹೆಚ್ಚಿಸುವ ಇಲ್ಲವೇ ರೋಗವನ್ನು ತಡೆಗಟ್ಟಬಲ್ಲ ಮಿತ್ರಜೀವಿ ಬ್ಯಾಕ್ಟೀರಿಯಾಗಳೂ ಇವೆ ಎಂಬುದು ಸಮಾಧಾನಕರ ವಿಷಯ. ಒಂದು ಚಮಚೆ ಮಣ್ಣಿನಲ್ಲಿ ಲಕ್ಷಾಂತರ ಬ್ಯಾಕ್ಟೀರಿಯಾಗಳಿರಬಹುದು. ಅವುಗಳಲ್ಲಿ ಎಲ್ಲೋ ಅಲ್ಪಸಂಖ್ಯೆ ಮಾತ್ರ ರೋಗತರುವ, ಇಲ್ಲವೇ ಆಹಾರ ಕೆಡಿಸುವ ಬ್ಯಾಕ್ಟೀರಿಯಾಗಳಿರಬಹುದು; ಮತ್ತೆ ಅಲ್ಪಸಂಖ್ಯೆ ಮಿತ್ರಜೀವಿಗಳಾಗಿರಬಹುದು. ಬಹುಪಾಲು ಏನೂ ಕೆಡಕನ್ನುಂಟುಮಾಡದ ಸಾಧುಜೀವಿಗಳು. ಮಿತ್ರ ಜೀವಿ ಬ್ಯಾಕ್ಟೀರಿಯಾಗಳು ಹೇಗೆ ಮಾನವನಿಗೆ ಉಪಕಾರಿಗಳಾಗಿವೆ ಎಂಬುದನ್ನು ಪರಿಶೀಲಿಸೋಣ.

ಸಸ್ಯಗಳ ಬೆಳವಣಿಗೆಗೆ ಉತ್ತಮಸಾರವುಳ್ಳ, ಫಲವತ್ತಾದ ಭೂಮಿ ಅಗತ್ಯ. ಗಾಳಿಯಲ್ಲಿರುವ ಸಾರಜನಕವನ್ನು ಸಸಾರಜನಕವನ್ನಾಗಿ ಪರಿವರ್ತಿಸುವ ಬ್ಯಾಕ್ಟೀರಿಯಾಗಳು ಸಸ್ಯಗಳ ಬೇರಿನಲ್ಲಿ ಅಡಗಿರುತ್ತವೆ. ಅಲ್ಲದೆ, ನಿರ್ಜೀವ ಸಸ್ಯಗಳನ್ನೂ, ಪ್ರಾಣಿಗಳನ್ನೂ ವಿಭಜಿಸಿ ಭೂಮಿಯ ಸಾರವನ್ನು ಹೆಚ್ಚಿಸುವ ಬ್ಯಾಕ್ಟೀರಿಯಾಗಳು ಭೂಮಿಯಲ್ಲಿರುತ್ತವೆ. ಅಧಿಕಸಂಖ್ಯೆಯಲ್ಲಿ ಸೂಕ್ಷ್ಮಜೀವಿಗಳು ಇದ್ದರೆ ಅಂತಹ ಭೂಮಿ ಫಲವತ್ತಾದ ಭೂಮಿ. ಭೂಮಿಯ ಸಾರವನ್ನು ಹೆಚ್ಚಿಸುವ ಮಿತ್ರಬ್ಯಾಕ್ಟೀರಿಯಾ ಉತ್ತಮಬೆಳೆ ತೆಗೆಯಲು ಸಹಾಯಮಾಡುತ್ತವೆ.

ಕಾದಾರಿದ ಹಾಲಿಗೆ ಹಿಂದಿನ ದಿನದ ಮೊಸರನ್ನು 'ಹೆಪ್ಪು' ಹಾಕುವುದು ವಾಡಿಕೆ. ಲಕ್ಷಾಂತರ ಬ್ಯಾಕ್ಟೀರಿಯಾಗಳನ್ನು ಹಾಲಿಗೆ ಬೆರಸುವುದೇ ಇದರರ್ಥ. ಹಾಲಿನಲ್ಲಿರುವ 'ಲ್ಯಾಕ್ಟೋಸ್' ಎಂಬ ಸಕ್ಕರೆಯನ್ನು 'ಲ್ಯಾಕ್ಟಿಕ್ ಆಮ್ಲ'ವನ್ನಾಗಿ ಪರಿವರ್ತಿಸುವ ಸಾಮರ್ಥ್ಯ ಈ ಬ್ಯಾಕ್ಟೀರಿಯಾಗಳಿಗಿವೆ. ಉತ್ತಮ ತಳಿಯ ಬ್ಯಾಕ್ಟೀರಿಯಾ ಬಳಸಿದರೆ ಒಳ್ಳೆಯ ಮೊಸರು ದೊರಕುತ್ತದೆ. 'ಸಿಹಿ' ಮೊಸರು ಅಥವಾ 'ಹುಳಿ' ಮೊಸರು ಉಂಟುಮಾಡುವ ಬ್ಯಾಕ್ಟೀರಿಯಾಗಳನ್ನು ಬಳಸಿ ಮೊಸರಿನ ವೈವಿಧ್ಯವನ್ನು ಹೆಚ್ಚಿಸಬಹುದು. ಸಿಂಡರು ವಾಸನೆ ಬರುವ ಮೊಸರಿದ್ದರೆ, ಹಾಲಿಗೆ ಸಿಂಡರು ವಾಸನೆಯುಂಟುಮಾಡುವ ಬ್ಯಾಕ್ಟೀರಿಯಾಗಳನ್ನೂ ಹೆಪ್ಪುಹಾಕಿದೆಯೆಂದು ತಿಳಿಯಬೇಕು.

ಹಸು, ಕುರಿ, ಮೇಕೆ ಮುಂತಾದ ಸಸ್ಯಾಹಾರಿಗಳಿಗೆ ಬ್ಯಾಕ್ಟೀರಿಯಾ ಸಹಾಯ ಮಾಡುತ್ತವೆ. ಅವುಗಳ ಅನ್ನಾಶಯದಲ್ಲಿರುವ ಸೂಕ್ಷ್ಮಜೀವಿಗಳು, ನಾರಿನಂಶವೇ ಹೆಚ್ಚಾಗಿರುವ ಹುಲ್ಲು, ಎಲೆ, ಇತ್ಯಾದಿ ಆಹಾರವನ್ನು ಪಚನಗೊಳಿಸುತ್ತವೆ. ಅಲ್ಲದೆ ಪ್ರೋಟೀನ್ ಮತ್ತು ಅನ್ನಾಂಗಗಳನ್ನು ಉತ್ಪಾದನೆ ಮಾಡುತ್ತವೆ. ಉತ್ತಮ ಆರೋಗ್ಯವುಳ್ಳ ಪ್ರಾಣಿಗಳು ಉತ್ತಮ ಹಾಲನ್ನು ಕೊಡುತ್ತವೆ. ಹಾಲು ಉತ್ಪಾದನಾ ಕೇಂದ್ರಗಳಲ್ಲಿ ಗಿಣ್ಣಿನ ತಯಾರಿಕೆಯೂ ಒಂದು. ಗಿಣ್ಣನ್ನು ತಯಾರಿಸಲು ಹಾಗೂ ಗಿಣ್ಣಿಗೆ ಮಧುರ ವಾಸನೆ ಕೊಡಲು ಸೂಕ್ಷ್ಮಜೀವಿಗಳು ಬಲು ಅಗತ್ಯ. ಹಾಲನ್ನು ಮೊಸರು ಮಾಡಲು ಒಳ್ಳೆಯ ವಾಸನೆ ಕೊಡುವ ಉತ್ತಮ ಲ್ಯಾಕ್ಟಿಕ್ ಆಮ್ಲ ತಯಾರಿಸುವ ಲ್ಯಾಕ್ಟಿಕ್ ಬ್ಯಾಕ್ಟೀರಿಯಾಗಳನ್ನು ಬಳಸುತ್ತಾರೆ.

ಔಷಧಗಳ ತಯಾರಿಕೆಯಲ್ಲಿ ಸೂಕ್ಷ್ಮಜೀವಿಗಳ ಪಾತ್ರ ಹಿರಿದು. 'ಪೆನಿಸಿಲಿನ್', 'ಸ್ಟ್ರೆಪ್ಟೋಮೈಸಿನ್' ಮುಂತಾದ 'ಆಂಟಿಬಯಾಟಿಕ್' ಉತ್ಪಾದನೆಯಲ್ಲಿ ಮಣ್ಣಿನಲ್ಲಿ ದೊರಕುವ ಸೂಕ್ಷ್ಮಜೀವಿಗಳನ್ನು ಬಳಸುತ್ತಾರೆ. ಪ್ರಯೋಗಶಾಲೆಗಳಲ್ಲಿ ಅಥವಾ ಕಾರ್ಖಾನೆಗಳಲ್ಲಿ ಸಾಧಿಸಲಾಗದ ಅನೇಕ ರಾಸಾಯನಿಕ ಕ್ರಿಯೆಗಳನ್ನು ಸರಳವಾಗಿ, ಸುಲಭವಾಗಿ ಪರಿವರ್ತಿಸುವ ಜಾಣ್ಮೆ ಸೂಕ್ಷ್ಮಜೀವಿಗಳಿಗಿದೆ. 'ಆಂಟಿಬಯಾಟಿಕ್'ಗಳು ರೋಗವನ್ನುಂಟುಮಾಡುವ ಸೂಕ್ಷ್ಮಜೀವಿಯನ್ನು ನಾಶಪಡಿಸುತ್ತವೆ.

ಜೀವರಾಸಾಯನಿಕ ಕಿಣ್ವಗಳನ್ನು 'ಎನ್‌ಜೈಮ್' ಎನ್ನುತ್ತಾರೆ. ಇವುಗಳ ಉಪಯೋಗ ಎಲ್ಲ ಕಾರ್ಖಾನೆಗಳಲ್ಲೂ, ಅದರಲ್ಲೂ ಆಹಾರ ಉತ್ಪಾದನೆ ಕಾರ್ಖಾನೆಗಳಲ್ಲೂ ಇದೆ. ಕಿತ್ತಲೆ ಹಣ್ಣಿನ ತೊಳೆಗಳಿಂದ ರಸವನ್ನು ಸುಲಭವಾಗಿ ತೆಗೆಯಬಹುದು. ಆದರೆ ಬಾಳೆಹಣ್ಣಿನಿಂದಲಾಗಲೀ, ಸೀಬೆಹಣ್ಣಿನಿಂದಾಗಲೀ ಸುಲಭವಾಗಿ ರಸ ತೆಗೆಯಲಾಗುವುದಿಲ್ಲ. ಇದಕ್ಕೆ ಕಾರಣವೆಂದರೆ ರಸ ತುಂಬಿರುವ ಭಾಗದ ಸುತ್ತ 'ಪೆಕ್ಟಿನ್' ಎಂಬ ಕವಚವಿದೆ. ಈ

ಕವಚವನ್ನು ತೆಗೆದುಹಾಕಿದರೆ ಆಗ ಹಣ್ಣಿನ ರಸ ಹೊರಸೂಸುತ್ತದೆ. ಸೂಕ್ಷ್ಮಜೀವಿಗಳಲ್ಲಿ ಕೆಲವು ಇಂತಹ 'ಪೆಕ್ಟಿನ್' ವಸ್ತು ಕರಗಿಸುವ 'ಪೆಕ್ಟಿನೇಸ್' ಎಂಬ ಕಿಣ್ವವನ್ನು ಹೊರಸೂಸುತ್ತವೆ. ಇಂತಹ ಸೂಕ್ಷ್ಮಜೀವಿಗಳನ್ನು ಹುಡುಕಿ, ಬೆಳಸಿ, ಈ ಬಗೆಯ ಕಿಣ್ವವನ್ನು ಉತ್ಪಾದಿಸಿ ಹಣ್ಣಿಗೆ ಬೆರಸಿಟ್ಟರೆ ಸ್ವಲ್ಪ ಕಾಲದನಂತರ ಹಣ್ಣಿನ ರಸ ಹೊರ ಬರುತ್ತದೆ. ಅದನ್ನು ಹಿಂಡಿ ತೆಗೆಯಬಹುದು. ಬಳಕೆಯಲ್ಲಿಲ್ಲದ ಹಣ್ಣಿನ ರಸವನ್ನೂ, ದ್ರಾಕ್ಷಿಹಣ್ಣಿನ ರಸವನ್ನು ಹೆಚ್ಚಿಸುವ ಕಾರ್ಯವನ್ನೂ ಸೂಕ್ಷ್ಮಜೀವಿಯು ಸಾಧಿಸುತ್ತದೆ.

'ಪ್ರೋಟಿನೇಸ್' ಎಂಬ ಮತ್ತೊಂದು ರಾಸಾಯನಿಕ ಕಿಣ್ವವನ್ನು ಹೊರಸೂಸುವ ಸೂಕ್ಷ್ಮಜೀವಿಗಳಿವೆ. 'ಪ್ರೋಟಿನೇಸ್' ಕಿಣ್ವವು ಆಹಾರ ಉತ್ಪಾದನೆಯಲ್ಲಿ ಮತ್ತು ಜಟಿಲ ಪ್ರೋಟಿನನ್ನು ವಿಭಜಿಸಿ ಸರಳರಚನೆಯುಳ್ಳ ಅಂಗಗಳನ್ನು ಉಂಟುಮಾಡುವುದರಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಈ ಕಿಣ್ವವನ್ನು ಚರ್ಮ ಹದಮಾಡುವ ಕಾರ್ಖಾನೆಗಳಲ್ಲಿ, ಬಟ್ಟೆಯ ಕಾರ್ಖಾನೆಗಳಲ್ಲಿ, ಬೀರ್ ಮುಂತಾದ ಮಾದಕ ಪಾನೀಯ ತಯಾರಿಕೆಯಲ್ಲಿ ಬಳಸುತ್ತಾರೆ. ಬಟ್ಟೆಯಲ್ಲಿ ಪ್ರೋಟಿನ್ ಕಲೆಯಿದ್ದರೆ 'ಪ್ರೋಟಿನೇಸ್' ಇರುವ ಸಾಬೂನನ್ನು ಬಳಸಿದರೆ ಕರೆ ಹೋಗುತ್ತದೆ. ಅಲ್ಲದೆ ಪಾತ್ರೆ ಶುಭ್ರಮಾಡುವಾಗ ಬಳಸುವ ಬೂದಿಯಾಗಲೀ ಇಲ್ಲವೇ ಕೃತಕ ರಸಾಯನಗಳಾಗಲೀ 'ಪ್ರೋಟಿನೇಸ್' ಕಿಣ್ವ ಮಿಶ್ರಿತವಾಗಿದ್ದರೆ ಪಾತ್ರೆಯಲ್ಲಿನ ಪ್ರೋಟಿನ್ ಕಲೆ ಮರೆಯಾಗುತ್ತದೆ. ಪಿಷ್ಟಪದಾರ್ಥವನ್ನು ವಿಭಜಿಸಿ ಗ್ಲೂಕೋಸ್ ತಯಾರಿಸಲು ಅನುಸರಿಸುವ ಕಿಣ್ವ ವಿಧಾನದಲ್ಲಿ 'ಅಮೈಲೇಸ್' ಎಂಬ ಕಿಣ್ವವನ್ನೂ, 'ಅಮೈಲೋಗ್ಲೂಕೋಸಿಡೇಸ್' ಎಂಬ ಮತ್ತೊಂದು ಬಗೆಯ ಕಿಣ್ವವನ್ನೂ ತಯಾರಿಸುವುದು ಸೂಕ್ಷ್ಮಜೀವಿಗಳ ಕಾರ್ಯ. ಎಲ್ಲರಿಗೂ ಪ್ರಿಯವಾದ ಚಾಕೋಲೇಟ್ ಮತ್ತು ಪೆಪ್ಪರಮಿಂಟ್ ಮುಂತಾದ ಸಿಹಿ ತಿನಿಸುಗಳಲ್ಲಿ 'ಗ್ಲೂಕೋಸ'ನ್ನು ಬಳಸುತ್ತಾರೆ. 'ಗ್ಲೂಕೋಸ್' ಎಂಬುದು ಒಂದು ಬಗೆಯ ಸಕ್ಕರೆ. ಕಬ್ಬಿನ ಹಾಲಿನಿಂದ ತಯಾರಿಸುವ, ನಿತ್ಯ ಬಳಕೆಯ ಸಕ್ಕರೆಯನ್ನು (ಇದನ್ನು 'ಸುಕ್ರೋಸ್' ಎನ್ನುತ್ತಾರೆ) ರಾಸಾಯನಿಕವಾಗಿ ಜಲ ವಿಶ್ಲೇಷಣ ಮಾಡಿದರೆ ಉಂಟಾಗುವುದು 'ಗ್ಲೂಕೋಸ್' ಮತ್ತು 'ಫ್ರಕ್ಟೋಸ್' ಎಂಬ ಸರಳ ಸಕ್ಕರೆಗಳು. ಇವುಗಳಲ್ಲಿ 'ಫ್ರಕ್ಟೋಸ್', 'ಗ್ಲೂಕೋಸ್' ಅಥವಾ 'ಸುಕ್ರೋಸ್' ಗಿಂತ ಸಿಹಿ ಹೆಚ್ಚು.

ಮೇಲೆ ಹೇಳಿದ ತಿನಿಸುಗಳಲ್ಲಿ 'ಗ್ಲೂಕೋಸ್' ಗಿಂತ 'ಫ್ರಕ್ಟೋಸ್' ಬಳಸಿದರೆ ಎರಡು ಕೆಲಸಗಳನ್ನು ಸಾಧಿಸಿದಂತೆ. ಮೊದಲನೆಯದಾಗಿ ಅಲ್ಪ ಪ್ರಮಾಣದಲ್ಲಿ 'ಫ್ರಕ್ಟೋಸ್' ಬಳಸಬಹುದು. ಏಕೆಂದರೆ ಅದರ ರುಚಿ ಜಾಸ್ತಿ. ಎರಡನೆಯದಾಗಿ ಸಿಹಿ ಅಂಶವನ್ನು ಕೂಡ ಹೆಚ್ಚಿಸಿದಂತಾಗುತ್ತದೆ. 'ಗ್ಲೂಕೋಸ್' ಸಕ್ಕರೆಯನ್ನು 'ಫ್ರಕ್ಟೋಸ್' ಆಗಿ ಪರಿವರ್ತಿಸುವ ಕಿಣ್ವವನ್ನು ಕೆಲವು ಬಗೆಯ ಸೂಕ್ಷ್ಮಜೀವಿಗಳು ಹೊರಸೂಸುತ್ತವೆ. ಇಂತಹ ಉಪಕಾರಿ ಜೀವಿಗಳನ್ನು ಹುಡುಕಿ, ಬೆಳಸಿ, ಕಿಣ್ವವನ್ನು ತಯಾರಿಸಬಹುದು.

ಇವುಗಳೇ ಅಲ್ಲದೆ ಲ್ಯಾಕ್ಟಿಕ ಆಮ್ಲ (lactic acid), ಅಸಿಟಿಕ್ ಆಮ್ಲ (acetic acid), ಅಸಿಟೋನ್ ಬ್ಯುಟನಾಲ್ (acetone butanol), ಬ್ಯೂಟೇನ್‌ಡಯಾಲ್ (butanediol), ಡೆಕ್ಸ್ಟ್ರಾನ್ (Dextran), ಸಾರ್‌ಬೋಸ್ (sorbose), ಕೋಬಾಲಮೀನ್ (cobalamine) ಮುಂತಾದ ರಾಸಾಯನಿಕ ಉತ್ಪಾದನೆಯಲ್ಲಿ ಸೂಕ್ಷ್ಮಜೀವಿಗಳು ಅಪಾರ ಸೇವೆ ಮಾಡುತ್ತವೆ. 'ಸಾರ್‌ಬೋಸ್' ಎಂಬುದು 'ಸಿ' ಅನ್ನಾಂಗ ಉತ್ಪಾದನೆಯಲ್ಲಿ ಬೇಕಾದ ರಾಸಾಯನಿಕ. ರಕ್ತಹೀನರಿಗೆ ಅಗತ್ಯವಾದ ವಸ್ತು 'ಕೋಬಾಲಮೀನ್'. ಲ್ಯಾಕ್ಟಿಕ್ ಆಮ್ಲ, ಅಸಿಟಿಕ್ ಆಮ್ಲ ಆಹಾರ ಉತ್ಪನ್ನಗಳಲ್ಲಿ ಅವಶ್ಯಕ ವಸ್ತುಗಳು.

ಕೆಲವು ಬಗೆಯ ಬ್ಯಾಕ್ಟೀರಿಯಗಳು 'ಮೀಥೇನ್' (Methane), ಇಂಗಾಲದ ಡೈಆಕ್ಸೈಡ್ (carbondioxide) ಜಲಜನಕ (hydrogen) ಮುಂತಾದ ಅನಿಲಗಳನ್ನು ಕಲ್ಲಿದ್ದಲು ಮತ್ತು ಪೆಟ್ರೋಲಿಯಂ ಉತ್ಪಾದನೆಗಳಲ್ಲಿ ಬಿಡುಗಡೆ ಮಾಡುತ್ತವೆ. ಮೀಥೇನ್ ಮತ್ತು ಜಲಜನಕಗಳನ್ನು ಇಂಧನಗಳನ್ನಾಗಿ ಬಳಸಬಹುದು. ಖನಿಜಗಳ ಶೇಖರಣೆಯಲ್ಲಿ ಸಹ ಸೂಕ್ಷ್ಮಜೀವಿಗಳು ಪಾತ್ರವಹಿಸುವುವೆಂದು ಕಂಡುಬಂದಿದೆ. ಕಬ್ಬಿಣ, ತಾಮ್ರ, ಯುರೇನಿಯಂ

ಮುಂತಾದ ಲೋಹಗಳನ್ನೂ ಮತ್ತು ಗಂಧಕದಂಥ ಅಲೋಹಗಳನ್ನೂ ಶೇಖರಿಸುವ ಜಾಣ್ಮೆ ಕೆಲವು ಬಗೆಯ ಸೂಕ್ಷ್ಮ ಜೀವಿಗಳಿಗಿದೆ.

ನಮ್ಮ ನಿತ್ಯ ಬಳಕೆಯಲ್ಲೂ ಸಹ ನಮಗರಿವಿಲ್ಲದಂತೆ ಸೂಕ್ಷ್ಮಜೀವಿಗಳ ಸಹಾಯ ಪಡೆಯುತ್ತಿದ್ದೇವೆ. ಇಡ್ಲಿ, ದೋಸೆ ತಯಾರಿಸುವ ಮೊದಲು, ಉದ್ದಿನಬೇಳೆ ಮತ್ತು ಅಕ್ಕಿಯನ್ನು ನೀರಿನೊಡನೆ ಬೆರಸಿ ನುಣ್ಣಗೆ ರುಬ್ಬುವುದು ವಾಡಿಕೆ. ನುಣುಪಾದ ಈ ಸ್ಥಿತಿಯಲ್ಲಿ ಲ್ಯಾಕ್ಟಿಕ್‌ಆಮ್ಲ ತಯಾರಿಸುವ ಸೂಕ್ಷ್ಮಜೀವಿಗಳು ಲ್ಯಾಕ್ಟಿಕ್ ಆಮ್ಲ ಮತ್ತು ಇಂಗಾಲದ-ಡೈ-ಆಕ್ಸೈಡ್‌ನ್ನು ಉಂಟುಮಾಡುತ್ತವೆ. ಇಂತಹ ರುಬ್ಬಿದ ಹಿಟ್ಟನ್ನು ಆವಿಯಲ್ಲಿ ಬೇಯಿಸಿಯಾದಾಗ ಮೃದುವಾದ ತಿಂಡಿ ತಯಾರಾಗುತ್ತದೆ. ಹೀಗೆ ಗೋಧಿ ಹಿಟ್ಟನ್ನು ನಾದಿ 'ಯೀಸ್ಟ್' ಎಂಬ ಸೂಕ್ಷ್ಮಜೀವಿಯನ್ನು ಬೆರಸಿ ಸ್ವಲ್ಪಕಾಲ ಇಟ್ಟರೆ ಇಂಗಾಲದ-ಡೈ-ಆಕ್ಸೈಡ್ ಅನಿಲವನ್ನು ಬಿಡುಗಡೆ ಮಾಡುತ್ತದೆ. ಹಿಟ್ಟನ್ನು ಬೇಯಿಸಿದಾಗ ಈ ಅನಿಲವು ಉಬ್ಬುವಂತೆ ಮಾಡಿ, ಮೃದುವಾದುವನ್ನಾಗಿ ಮಾಡುತ್ತದೆ.

ಮಾದಕ ಪಾನೀಯಗಳಾದ 'ಬೀರ್', 'ವೈನ್', 'ಸಾಕೆ' ಮುಂತಾದುವುಗಳ ತಯಾರಿಕೆಯಲ್ಲಿ ಸೂಕ್ಷ್ಮ ಜೀವಿಗಳು ಅಮೋಘ ಪಾತ್ರವಹಿಸುತ್ತವೆ. ಹಣ್ಣಿನರಸವನ್ನು, ಅಂದರೆ, ಹಣ್ಣಿನಲ್ಲಿರುವ ಸಕ್ಕರೆಯನ್ನು ಹುದುಗಿಸಿ 'ಆಲ್ಕೋಹಾಲ್' ಆಗಿ ಪರಿವರ್ತಿಸುವ ಕಾರ್ಯ 'ಯೀಸ್ಟ್' ಸೂಕ್ಷ್ಮಜೀವಿಯದು. ಹೀಗೆಯೇ 'ಆಲ್ಕೋಹಾಲ'ನ್ನು 'ಅಸಿಟಿಕ್ ಆಮ್ಲ'ವನ್ನಾಗಿ ಪರಿವರ್ತಿಸುವ ಕಾರ್ಯ 'ಅಸಿಟಿಕ್ ಬ್ಯಾಸಿಲಿ' ಎಂಬ ಸೂಕ್ಷ್ಮಜೀವಿಗೆ ಸೇರಿದೆ. 'ವಿನಿಗರ್' ಎಂದು ಮಾರಾಟವಾಗುವುದೇ 'ಅಸಿಟಿಕ್ ಆಮ್ಲ'. ಆಹಾರ ವಸ್ತು ಹುಳಿ ರುಚಿ ಉಂಟಾಗಲು ಮತ್ತು 'ವಿನಿಗರ್' ಉಪ್ಪಿನ ಕಾಯಿಗಳನ್ನು ತಯಾರಿಸಲು 'ವಿನಿಗರ್' ಅಗತ್ಯ. ಇವುಗಳು ಹೊರದೇಶಗಳಲ್ಲಿ ಜನಪ್ರಿಯವಾಗಿದೆ.

ಸೋಯಾ ಅವರೆಯನ್ನು ಬಳಸಿ, ಸೂಕ್ಷ್ಮಜೀವಿಗಳ ಸಹಾಯದಿಂದ, ವೈವಿಧ್ಯಮಯ ಆಹಾರ ತಯಾರಿಕೆ ಸಾವಿರಾರು ವರ್ಷಗಳಿಂದ ಜಪಾನ್, ಚೈನಾ, ಇಂಡೋನೇಷಿಯ, ಫಿಲಿಪೀನ್ಸ್ ಮುಂತಾದ ದೇಶಗಳಲ್ಲಿ ಬಳಕೆಯಲ್ಲಿದೆ. ಸೂಕ್ಷ್ಮಜೀವಿಗಳು ಹೊರಸೂಸುವ ಕಿಣ್ವಗಳು, ಸೋಯಾ ಅವರೆ ಮುಂತಾದ ಧಾನ್ಯಗಳಲ್ಲಿರುವ ಪಿಷ್ಟ, ಪ್ರೋಟೀನ್ ಅಂಶಗಳನ್ನು ಭಾಗಶಃ ವಿಭಜಿಸಿ, ಪಚನಗೊಳಿಸಿರುತ್ತದೆ. ಅಂತಹ ಆಹಾರ ದೇಹದಲ್ಲಿ ಹೆಚ್ಚು ಶ್ರಮವಿಲ್ಲದೆ ಪಚನವಾಗುತ್ತದೆ.

ಸೂಕ್ಷ್ಮಜೀವಿಗಳು ಕೈಗಾರಿಕಾ ಕ್ಷೇತ್ರಗಳಿಂದ ಹೊರಬರುವ ಕಲ್ಮಶ ನೀರು ಹಾಗೂ ಮನೆಗಳಿಂದ ಬರುವ ಕಲ್ಮಶ ನೀರನ್ನು ಶುದ್ಧ ಮಾಡಲು ಸಹಾಯಮಾಡುತ್ತವೆ. ಕಾರ್ಖಾನೆಗಳಿಂದ ಹೊರಬರುವ ರಾಸಾಯನಿಕ ಮಿಶ್ರಿತ, ಕಲ್ಮಶ ನೀರು ಹರಿಯುವ ನದಿಯನ್ನುಸೇರಿದರೆ ಅಥವಾ ಕೆರೆ, ಕುಂಟೆಗಳನ್ನು ಸೇರಿದರೆ ಒಳ್ಳೆಯ ನೀರನ್ನು ಮಲಿನಗೊಳಿಸುತ್ತದೆ. ಆದ್ದರಿಂದ ನದಿ ಅಥವಾ ಕೆರೆ, ಕುಂಟೆಗಳಿಗೆ ಹರಿಯುವ ಮೊದಲು ಶುದ್ಧಮಾಡಬೇಕು. ಇದಕ್ಕೆ ಸೂಕ್ಷ್ಮಜೀವಿಗಳ ನೆರವು ಅಗತ್ಯ.

ಮುಂದುವರೆದ ದೇಶಗಳಲ್ಲಿ 'ಪ್ಲಾಸ್ಟಿಕ್' ಮುಂತಾದ ಕೃತಕ ವಸ್ತುಗಳು ಹೇರಳವಾಗಿ ಶೇಖರವಾಗಿ ಅವುಗಳನ್ನು ಹೇಗೆ ವಿತರಣೆ ಮಾಡಬೇಕು ಎಂಬುದೇ ಭಾರಿ ಸಮಸ್ಯೆಯಾಗಿದೆ. 'ಪ್ಲಾಸ್ಟಿಕ್' ನೀರಿನಲ್ಲಿ ಮುಳುಗುವುದಿಲ್ಲ; ಆದ್ದರಿಂದ ಸಮುದ್ರಕ್ಕೆ ಎಸೆಯಲಾಗುವುದಿಲ್ಲ. ಸುಟ್ಟರೆ ವಾತಾವರಣವೆಲ್ಲ ಮಲಿನಗೊಳ್ಳುತ್ತದೆ. ಜನರ ಆರೋಗ್ಯಕ್ಕೆ ಊನವಾಗುತ್ತದೆ. ಭೂಮಿಯಲ್ಲಿ ಹೂಳಿಟ್ಟರೆ ಅಂತಹ ಜಾಗದಲ್ಲಿ ಏನನ್ನೂ ಬೆಳೆಯಲಾಗುವುದಿಲ್ಲ. ಇಂತಹ ನೈಜ ಸಮಸ್ಯೆಗೆ ಉತ್ತರ ಒಂದೇ. ಸೂಕ್ಷ್ಮಜೀವಿಗಳ ನೆರವು ಪಡೆಯುವುದು. ಈ ಬಗೆಯ ವಸ್ತುಗಳನ್ನು ಕಬಳಿಸುವ ಸೂಕ್ಷ್ಮಜೀವಿಗಳನ್ನು ಪತ್ತೆಹಚ್ಚುವುದು ವಿಜ್ಞಾನಿಗಳ ಚಿಂತನೆಯಾಗಿದೆ. ಸೂಕ್ಷ್ಮಜೀವಿಗಳ ವೈಶಿಷ್ಟ್ಯವೆಂದರೆ ಒಳ್ಳೆಯ ತಳಿಗಳನ್ನು ಪ್ರಯೋಗ ಶಾಲೆಗಳಲ್ಲಿ ಉಂಟುಮಾಡಬಹುದು; ಅಲ್ಲದೆ ತಾಳ್ಮೆ, ಜಾಣ್ಮೆಯಿಂದ ನಮ್ಮ

ಇಚ್ಛೆಯಂತೆ ವರ್ತಿಸುವ ತಳಿಗಳನ್ನೂ, ಪಳಗಿಸಿ ಬೆಳಸಬಹುದು. ಪ್ರಾಯಶಃ 'ಪ್ಲಾಸ್ಟಿಕ್' ವಸ್ತುಗಳನ್ನು ಇತರ ಉಪಯುಕ್ತ ರೂಪಕ್ಕೆ ಪರಿವರ್ತಿಸುವ ಸೂಕ್ಷ್ಮಜೀವಿ ದೊರಕಬಹುದು.

ವಿಶ್ವದ ಆಹಾರಸಮಸ್ಯೆಯನ್ನು ಭಾಗಶಃ ಬಗೆಹರಿಸಲು ಸೂಕ್ಷ್ಮಜೀವಿಗಳು ನೆರವಾಗಬಹುದು. ತಜ್ಞರ ಎಚ್ಚರಿಕೆಯಂತೆ ಪ್ರತಿವರ್ಷವೂ 70 ಲಕ್ಷ ಹೆಚ್ಚು ಮಂದಿಗೆ ಆಹಾರ ಒದಗಿಸಬೇಕಾಗುತ್ತದೆ. ಈಗಿನ ಆಹಾರ ಉತ್ಪಾದನೆಯು ಸಾಕಾಗುವುದಿಲ್ಲ. ಆಹಾರ ಉತ್ಪಾದನೆಯನ್ನು ಹೆಚ್ಚಿಸಲು ಮಾರ್ಗಗಳನ್ನು ಹುಡುಕಬೇಕು. ಇರುವ ಜಾಗದಲ್ಲಿ ಹೆಚ್ಚಿನ ಬೆಳೆಯನ್ನು ತೆಗೆಯುವುದು; ಹೆಚ್ಚುಹೆಚ್ಚು ಜಾಗಗಳಲ್ಲಿ ಬೆಳೆವು ಬೆಳೆಯುವುದು; ಪ್ರಾಣಿ ಸಂಪತ್ತನ್ನು ಹೆಚ್ಚಿಸುವುದು ; ಮೀನು ಮುಂತಾದ ಜಲಪ್ರಾಣಿಗಳ ಸಂಖ್ಯೆಯನ್ನು ವೃದ್ಧಿಸುವುದು ; ನೂತನ ಆಹಾರವನ್ನು ಹುಡುಕುವುದು ಇತ್ಯಾದಿ. ಇವುಗಳಿಗೆಲ್ಲ ಕಾಲಬೇಕು, ಬೇಗನೆ ಆಗದ ಕೆಲಸ. ಆದರೆ ಕೋಟ್ಯಂತರ ವರ್ಷಗಳಿಂದ ಮೊಸರಿನ ರೂಪದಲ್ಲೋ,ಹುದುಗಿದ ಪಾನೀಯ ಸೇವನೆಯಿಂದಲೋ, ಇಚ್ಛೆಪಟ್ಟೋ,ಗೊತ್ತಿಲ್ಲದೆಯೋ ಮನುಷ್ಯ ಸೂಕ್ಷ್ಮಜೀವಿಗಳನ್ನು ಸೇವಿಸುತ್ತಿದ್ದಾನೆ. ಆಹಾರಕ್ಕೆ ಪೋಷಕವಾಗಿ, ಸೇವಿಸಲು ಯೋಗ್ಯವಾದ ಸೂಕ್ಷ್ಮ ಜೀವಿಗಳನ್ನು ಬೆಳಸಿ ಏಕೆ ಸೇವಿಸಬಾರದು ಎಂಬುದು ವಿಜ್ಞಾನಿಗಳ ಮತ. ನಾವು ಸೇವಿಸುವ ಆಹಾರದಲ್ಲಿ ಸಾಕಷ್ಟು ಪ್ರೋಟೀನಿನಂಶವಿಲ್ಲವೆಂಬ ದೂರು ಕೇಳಿಬರುತ್ತಿದೆ. ಆದ್ದರಿಂದ ಉತ್ತಮ ಬೇಳೆ, ಕಾಳುಗಳನ್ನು ಬೆಳಸಿ ಸೇವಿಸುವುದಕ್ಕಿಂತ ಅಧಿಕ ಪ್ರಮಾಣದಲ್ಲಿ ಅಷ್ಟೇ ಉತ್ತಮಾಂಶಗಳನ್ನುಳ್ಳ ಸೂಕ್ಷ್ಮಜೀವಿಗಳನ್ನು ಬೆಳಸಬಹುದೆಂದು ಕಂಡುಬಂದಿದೆ. ಏಕಕಣ ಜೀವಿಗಳಾದ ಬ್ಯಾಕ್ಟೀರಿಯಾ ಅಥವಾ ಯೀಸ್ಟ್ ಬೆಳವಣಿಗೆ ಕುತೂಹಲಕಾರಿಯಾಗಿದೆ. ಕೇವಲ ಇಪ್ಪತ್ತು ನಿಮಿಷಗಳಲ್ಲಿ ಒಂದು ಕಣ ಎರಡಾಗುತ್ತದೆ ; ಎರಡು ನಾಲ್ಕಾಗುತ್ತದೆ. ಹೀಗೆ ಕೇವಲ 12ಗಂಟೆಗಳಲ್ಲಿ 7000 ಲಕ್ಷ ಕಣಗಳಾಗುತ್ತವೆ ! ಅಂದರೆ ಅವುಗಳ ಬೆಳವಣಿಗೆ ಅಷ್ಟು ತೀವ್ರ. ಸೇವಿಸಲು ಯೋಗ್ಯವಾದ ಯೀಸ್ಟ್ ಆಹಾರದಲ್ಲಿ ಉತ್ತಮ ಆಹಾರಾಂಶಗಳಿದ್ದು ನಾವು ಸೇವಿಸುವ ಆಹಾರದಲ್ಲಿನ ಆಹಾರಾಂಶದ ಕೊರತೆಯನ್ನು ನಿವಾರಿಸಬಲ್ಲದೆಂದು ಕಂಡುಬಂದಿದೆ.ಅಲ್ಲದೆ 'ಬಿ' ಗುಂಪಿನ ಅನ್ನಾಂಗಗಳನ್ನೂ ಒದಗಿಸುತ್ತದೆ. ಕೆಲವು ಬಗೆಯ ಬ್ಯಾಕ್ಟೀರಿಯಾಗಳು ಪೆಟ್ರೋಲಿಯಂ ಉತ್ಪಾದನೆಯಲ್ಲಿನ ಜಲಜನಕ-ಇಂಗಾಲ (hydrocarbons)ಗಳನ್ನು ಬಳಸಿಕೊಂಡು ಪ್ರೋಟೀನ್ ಭರಿತ ಜೀವಿಗಳಾಗುತ್ತವೆ. ಇದರಲ್ಲಿ ಪೋಷಕ ಅಗತ್ಯ ಅಮಿನೋಆಮ್ಲಗಳಿದ್ದು, ಪ್ರೋಟೀನ್ ಅಭಾವನ್ನು ತಡೆಗಟ್ಟುವಲ್ಲಿ ಸಹಾಯಕವಾಗುತ್ತವೆ. ಈ ಬಗೆಯ ಜೀವಿಗಳನ್ನು ಬೆಳಸಲು ಸೂರ್ಯನ ಬೆಳಕಿನ ವಾತಾವರಣದ, ಫಲವತ್ತಾದ ಭೂಮಿಯ, ಅಗತ್ಯವಿಲ್ಲ. ಇಂತಹ ಜೀವಿಗಳನ್ನು ಬೆಳಸಿ, ಪರಿಷ್ಕರಿಸಿ, ಸೇವಿಸಲು ಯೋಗ್ಯವಾಗುವಂತೆ ಮಾಡುವ ಕಾಲ ದೂರವಿಲ್ಲ. ಕೊಬ್ಬಿನ ಅಭಾವವಿದ್ದರೆ, ಕೊಬ್ಬನ್ನು ಉತ್ಪಾದಿಸುವ ಸೂಕ್ಷ್ಮಜೀವಿಗಳನ್ನು ಬೆಳಸಬಹುದು. ಹೀಗೆ ಸೂಕ್ಷ್ಮಜೀವಿಗಳು ಮಾನವನ, ಪ್ರಾಣಿಗಳ ನೆರವಿಗೆ ಬರುತ್ತವೆ. ಮಾನವ ಸಾಹಸಿ. ಆಕಾಶಯಾನ ಮಾಡಿದ್ದಾನೆ ; ಅಲ್ಲಿ ತೇಲಾಡಿದ್ದಾನೆ. ಕವಿಗಳಿಗೇ ಮೀಸಲಾಗಿದ್ದ ಚಂದ್ರಲೋಕಕ್ಕೆ ಜಿಗಿದಿದ್ದಾನೆ ; ಅಲ್ಲಿ ಕಾಲ ಕಳೆದಿದ್ದಾನೆ. ಅವನಿಗೆ ಬೇಕಾದ ಆಹಾರವನ್ನು ಒದಗಿಸಲು ಸೂಕ್ಷ್ಮಜೀವಿಗಳಿಗಿಂತ ಬೇರೆ ಇಲ್ಲವಷ್ಟೆ ! ಚಂದ್ರಲೋಕದಿಂದ ಕಲ್ಲು ಹೊತ್ತು ತಂದ; ಕುಳಿತೆಡೆಯಿಂದ ಅಲ್ಲಿಗೆ ಯಂತ್ರ ಕಳುಹಿಸಿ, ಸೂಚನೆಕೊಟ್ಟು ಕಲ್ಲನ್ನು ತರಿಸಿದ ; ಇತರ ಗ್ರಹಗಳಿಗೆ ಯಂತ್ರಕಳಿಸಿ ಸಂದೇಶ ತರಿಸಿದ ಮಾನವನಿಗೆ, ಜಾಣ್ಮೆ, ತಾಳ್ಮೆ ಇದ್ದರೆ ಸೂಕ್ಷ್ಮ ಜೀವಿಯ ನೆರವನ್ನು ಪಡೆದು ಇತರ ಗ್ರಹಗಳಿಗೂ ಹೋಗಿ ಬರಬಲ್ಲ.

ಮೂರ್ತಿ ಚಿಕ್ಕದಾದರೂ ಸೂಕ್ಷ್ಮಜೀವಿಯ ಕೀರ್ತಿ ದೊಡ್ಡದಲ್ಲವೆ ?

ಡಾ. ಎಂ. ಸಿರಸಿ

ವಿಳಂಬಿತ ಗರ್ಭಧಾರಣೆ ಯುಕ್ತವೇ ?

ಸ್ತ್ರೀಯರು ತಮ್ಮ ಮತ್ತು ಜನಿಸುವ ಮಗುವಿನ ಆರೋಗ್ಯದೃಷ್ಟಿಯಿಂದ ಗರ್ಭಧರಿಸಲು ಯುಕ್ತ ವಯಸ್ಸು ಯಾವುದು ? ತಮಗೆ ಸಂತಾನಶಕ್ತಿ ಸಾಧ್ಯವಿರುವ ವಯಃಪರಿಮಾಣದಲ್ಲಿ, ಎಂದರೆ ರಜಸ್ವಲೆ ಯಾದಾಗಿನಿಂದ ಋತುಕ್ರಮವು ನಿಲ್ಲುವವರೆಗೂ–ಸುಮಾರು 15 ವರ್ಷ ವಯಸ್ಸಿನಿಂದ 45 ವರ್ಷ ವಯಸ್ಸಿನ ಅವಧಿಯಲ್ಲಿ-ಯಾವಾಗಲಾದರೂ ಗರ್ಭಧಾರಣೆ ಮಾಡಬಹುದೆ ? ಸ್ತ್ರೀಯು ಗರ್ಭ ಧರಿಸುವ ವಯಸ್ಸಿಗೂ, ಹುಟ್ಟುವ ಮಗುವಿನ ಆಕಾರ, ಬೆಳವಣಿಗೆ, ಬುದ್ಧಿಶಕ್ತಿ ಮತ್ತು ಇತರ ಚಟುವಟಿಕೆಗಳಿಗೂ ಏನಾದರೂ ಸಂಬಂಧ ಉಂಟೆ ? ಇದುವರೆಗಿನ ವೈಜ್ಞಾನಿಕ ತಿಳುವಳಿಕೆಗಳಿಂದ, ಆರೋಗ್ಯವಂತರೂ, ದೃಢಕಾಯರೂ ಆದ ಮಕ್ಕಳನ್ನು ಪಡೆಯಲು ಸ್ತ್ರೀಯ ಉತ್ತಮ ವಯೋಪರಿಮಿತಿಗಳು ಯಾವುವು ? ಈ ವಿಷಯಗಳನ್ನೆಲ್ಲಾ ಕೂಲಂಕಷವಾಗಿ ವಿಮರ್ಶಿಸಿ, ನಮ್ಮ ಸಮಾಜವು ಯಾವ ಅಭಿಪ್ರಾಯವನ್ನೂ ಸೂಚಿಸಿಲ್ಲ. ಮಧ್ಯವಯಸ್ಸಾದನಂತರ ಗರ್ಭವತಿ ಯರಾಗುವ ಸ್ತ್ರೀಯರಲ್ಲಿ ಗರ್ಭಸ್ರಾವ ಅಥವಾ ಅಕಾಲಪ್ರಸವ ಸಂಘಟಿಸಿದರೂ ಅಥವಾ ಸಕಾಲದಲ್ಲಿ ಜನಿಸಿದ ಅಂತಹ ಮಕ್ಕಳಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯ ಸ್ಥಿತಿಗಳಲ್ಲಿ ಪ್ರಬಲವಾದ ನ್ಯೂನತೆಗಳು ಕಂಡುಬಂದರೂ, ಈ ಘಟನೆಗಳು ತಮ್ಮ ಕರ್ಮಫಲವೆಂದು ಭಾವಿಸುತ್ತಿದ್ದರೇ ಹೊರತು, ಈ ಸ್ಥಿತಿಗಳಿಗೂ, ತಾಯಿಯ ಗರ್ಭಧಾರಣ ವಯಸ್ಸಿಗೂ ಸಂಬಂಧವಿರಬಹುದೆಂಬ ಕಲ್ಪನೆಯು ಕೂಡ ಇರಲಿಲ್ಲ.

ಕಳೆದ ಇಪ್ಪತ್ತು ವರ್ಷಗಳಲ್ಲಿ ತಳಿವಿಜ್ಞಾನ ಶಾಖೆಯು ಸಾಧಿಸಿರುವ ಪ್ರಗತಿಪರ ತಿಳುವಳಿಕೆಗಳಿಂದ, ಮಕ್ಕಳ ಆರೋಗ್ಯಕ್ಕೂ ಮತ್ತು ತಾಯಂದಿರ ಗರ್ಭಧಾರಣಾ ವಯಸ್ಸಿಗೂ ನಿಕಟ ಸಂಬಂಧವಿರುವಂತೆ ಕಾಣು ತ್ತದೆ. ಪ್ರಸಕ್ತ ಸಾಮಾಜಿಕ ಸ್ಥಿತಿಯಲ್ಲಿ, ಹೆಣ್ಣುಮಕ್ಕಳು ಪ್ರಾಯದಾಟಿದ ನಂತರವೇ ವಿವಾಹವಾಗುತ್ತಿರು ವುದು ಸರ್ವೆ ಸಾಮಾನ್ಯ. ಮಿತಸಂತಾನ ಪದ್ಧತಿ ಅನುಸರಿಸುವುದು, ಚೊಚ್ಚಲ ಮಗುವಿನ ಜನನಕ್ಕೂ ಮುಂದಿನ ಮಗುವಿಗೂ ಇರಬೇಕಾದ ಅಂತರವನ್ನು ನಿರ್ಧರಿಸುವುದು, ಇವೇ ಮುಂತಾದ ಸಮಸ್ಯೆಗಳು ಸ್ತ್ರೀಯರ ಗರ್ಭಧಾರಣ ವಯಸ್ಸನ್ನು ಮುಂದೂಡುತ್ತಿವೆ. ಇಂತಹ ಸಂದರ್ಭಗಳಲ್ಲಿ, ಮಕ್ಕಳನ್ನು ಪಡೆಯಲು ತಾಯಿಗೆ ಪ್ರಾಪ್ತವಯಸ್ಸು ಯಾವುದು ? ಸಂತಾನಶಕ್ತಿ ಇರುವ ವಯಃಪರಿಮಾಣದ ಪ್ರಾರಂಭದಲ್ಲಿಯೇ ಆಗಲೀ ಅಥವಾ ಕೊನೆಯ ಹಂತದಲ್ಲೇ ಆಗಲಿ ಮಕ್ಕಳನ್ನು ಪಡೆದರೆ ಅದರ ಸಾಧಕ ಬಾಧಕಗಳೇನು ? ಇವುಗಳನ್ನು ಪ್ರತಿ ದಂಪತಿಗಳೂ ಸವಿಸ್ತಾರವಾಗಿ ತಿಳಿದುಕೊಳ್ಳಬೇಕಾದದ್ದು ಅತಿ ಅವಶ್ಯಕ.

ಚೊಚ್ಚಲಮಗುವನ್ನು ಪಡೆಯಲು ಸ್ತ್ರೀಗೆ ಸೂಕ್ತವಯಸ್ಸು ಯಾವುದು ಎಂಬ ವಿಚಾರದಲ್ಲಿ ಅನೇಕ ಚರ್ಚೆಗಳೂ, ವಿಚಾರ ಗೋಷ್ಠಿಗಳೂ ನಡೆದಿವೆ. ಋತುಮತಿಯಾದಾಗಿನಿಂದ–13–14 ವರ್ಷ ವಯಸ್ಸಿನಿಂದ–ಗರ್ಭ ಧರಿಸಲು ಸಮರ್ಥಳಾದರೂ, ಪ್ರೌಢಾವಸ್ಥೆಯ ಬೆಳವಣಿಗೆಗಳು ಪೂರ್ಣಹೊಂದಿ ದೇಹಶಕ್ತಿಯೂ ಮನಃಶಕ್ತಿಯೂ

ವಿಕಸನಗೊಂಡ ನಂತರವೇ ಚೊಚ್ಚಲು ಮಗುವನ್ನು ಪಡೆಯುವುದು ಒಳ್ಳೆಯದು ಎನ್ನುವುದು ವೈಜ್ಞಾನಿಕರ ಅಭಿಪ್ರಾಯ. ಈ ಸ್ಥಿತಿಯನ್ನು ಹೊಂದಲು ಋತುಮತಿಯಾದಮೇಲೆ 6–7 ವರ್ಷಗಳು ಬೇಕಾಗಬಹುದು. ಎಂದರೆ ಸುಮಾರು 20 ವರ್ಷ ವಯಸ್ಸು ಸೂಕ್ತವೆಂದು ಹೇಳಬಹುದು. ಈ ವೈಜ್ಞಾನಿಕ ಕಾರಣಗಳಲ್ಲದೆ, ಈಗಿನ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಯಲ್ಲಿ, ಮಹಿಳೆಯರು ಕೂಡ ಪುರುಷರಂತೆಯೇ, ತಮ್ಮ ವಿದ್ಯಾಭ್ಯಾಸವನ್ನು ಮುಗಿಸಿ ತಮ್ಮ ಭವಿಷ್ಯಜೀವನದ ಮಾರ್ಗವನ್ನು ನಿರ್ಧರಿಸಿದ ನಂತರವೇ ದಾಂಪತ್ಯಜೀವನವನ್ನು ಪ್ರವೇಶಿಸಿ ತಾಯ್ತನವನ್ನು ಹೊಂದುವುದು ಒಳ್ಳೆಯದು. ವಿವಾಹ ವಯಸ್ಸನ್ನು ಕಡ್ಡಾಯವಾಗಿ ಶಾಸನದ ಮೂಲಕ ಮುಂದೂಡಬೇಕು ಎಂದು ಬರುತ್ತಿರುವ ಬೇಡಿಕೆಗಳನ್ನು ಗಮನಿಸಿದರೆ ಚೊಚ್ಚಲು ಮಗುವಿಗೆ ಗರ್ಭಧಾರಣೆ ವಯಸ್ಸು 20 ವರ್ಷಗಳಿಗೆ ಮೀರಿರಬೇಕು ಎಂಬ ವೈಜ್ಞಾನಿಕ ಸಲಹೆಗೆ ಸಾರ್ವಜನಿಕ ಅನುಮೋದನೆಯೂ ಇದೆ ಎಂದು ಖಚಿತವಾಗುತ್ತದೆ.

ಇದೇ ರೀತಿ ಋತುಬಂಧನವಾಗುವವರೆಗೂ (ಸುಮಾರು 45 ವರ್ಷಗಳವರೆಗೂ) ಸ್ತ್ರೀಯರು ಮಕ್ಕಳನ್ನು ಪಡೆಯಬಲ್ಲರಾದರೂ, ತಮ್ಮ ಮತ್ತು ಮಕ್ಕಳ ಪುರೋವೃದ್ಧಿಯನ್ನು ಗಮನಿಸಿ, ಯಾವ ವಯಸ್ಸಿನವರೆಗೆ ಮಾತ್ರ ಇದು ಸೂಕ್ತ? ಈ ರೀತಿ ನಿರ್ಧರಿಸಲು ವೈಜ್ಞಾನಿಕ ಕಾರಣಗಳಿವೆಯೇ? ಇಳಿ ವಯಸ್ಸಿನಲ್ಲಿ ಮಕ್ಕಳನ್ನು ಹೊಂದುವುದರ ಸಾಧಕ ಬಾಧಕಗಳೇನು? ಈ ವಿಷಯಗಳಲ್ಲಿ ಜನಸಾಮಾನ್ಯಕ್ಕೆ ಸಾಕಷ್ಟು ತಿಳುವಳಿಕೆ ದೊರೆತಿಲ್ಲವೆಂದು ಕಂಡುಬರುತ್ತದೆ. ಈ ವಿಚಾರವನ್ನು ವಿನಿಮಯ ಮಾಡುವುದೇ ಈ ಲೇಖನದ ಉದ್ದೇಶ.

ಸಾಮಾಜಿಕ ಮತ್ತು ಆರ್ಥಿಕ ದೃಷ್ಟಿಯಿಂದ ನೋಡುವುದಾದರೆ ಆರೋಗ್ಯವಂತರೂ ಮತ್ತು ಸಂಪಾದನೆ ಶಕ್ತಿಯುಳ್ಳವರೂ ಆಗಿರುವಾಗಲೇ, ಪಡೆದ ಮಕ್ಕಳ ವಿದ್ಯಾಭ್ಯಾಸವನ್ನು ಪೂರೈಸಿ, ಹೆಣ್ಣು ಮಕ್ಕಳ ವಿವಾಹವನ್ನು ನಡೆಸಿ ತಮ್ಮ ಕರ್ತವ್ಯವನ್ನು ಪೂರ್ತಿಗೊಳಿಸುವುದು ಪ್ರತಿಯೊಬ್ಬ ತಂದೆತಾಯಿಯರ ಜವಾಬ್ದಾರಿ. ವಿಶ್ರಾಂತಿ ಪಡೆಯುವ ವಯಸ್ಸು 55ರಿಂದ 60 ವರ್ಷಗಳು ಎಂದು ಪರಿಗಣಿಸಿದರೆ ಮಕ್ಕಳನ್ನು ಒಂದು ಹಂತಕ್ಕೆ ತರಲು 20 ವರ್ಷಗಳಾದರೂ ಬೇಕಾಗುವುದರಿಂದ, ಕಡೆಯ ಮಗುವಿನ ಜನನಕಾಲಕ್ಕೆ ತಂದೆಯ ವಯಸ್ಸು 40 ವರ್ಷಗಳಿಗೆ ಮೀರಿರಕೂಡದೆಂದು ಹೇಳಬಹುದು. ಈಗಿನ ವೈವಾಹಿಕ ಜೀವನ ಸ್ವರೂಪದಲ್ಲಿ ಗಂಡಹೆಂಡಿರ ವಯಸ್ಸುಗಳ ಅಂತರವು ಸುಮಾರು 5ರಿಂದ 10 ವರ್ಷಗಳಿರುವುದರಿಂದ ತಾಯಿಯ ವಯಸ್ಸು ಸುಮಾರು 30–35 ವರ್ಷಗಳಾಗಿರಬಹುದು. ಈ ವಯಸ್ಸನ್ನು ದಾಟಿದ ನಂತರವೂ ಮಕ್ಕಳನ್ನು ಪಡೆದಲ್ಲಿ ಅವುಗಳ ಪೋಷಣೆ ಮತ್ತು ಮುಂದಕ್ಕೆ ತರುವ ಜವಾಬ್ದಾರಿಯು, ಇನ್ನೂ ತಾವೇ ಜೀವನದ ಹೊಸಿಲನ್ನು ಮೆಟ್ಟುತ್ತಿರುವ, ಮುಂಚೆ ಜನಿಸಿರುವ ಮಕ್ಕಳ ಮೇಲೋ ಅಥವಾ ಇತರ ಸಂಬಂಧಿಕರ ಮೇಲೋ ಬಿದ್ದು ಎಲ್ಲರಿಗೂ ಒಂದು ಹೊರೆಯಾಗಿ ಪರಿಣಮಿಸುವುದು ಖಂಡಿತ. ಇದರಿಂದ ಸ್ತ್ರೀಯ ಕಡೆಯ ಗರ್ಭಧಾರಣೆ 35 ವರ್ಷ ವಯಸ್ಸನ್ನು ಮೀರಿರಕೂಡದು ಎಂದು ನಿಸ್ಸಂದೇಹವಾಗಿ ಹೇಳಬಹುದು.

ಈ ಸಾಮಾಜಿಕ ಕಾರಣಗಳು ಮಾತ್ರವೇ ಅಲ್ಲದೆ ಇತ್ತೀಚಿಗೆ ದೊರೆತಿರುವ ಆನುವಂಶೀಯ ಮತ್ತು ತಳಿಶಾಸ್ತ್ರಗಳ ತಿಳುವಳಿಕೆಗಳಿಂದ, ತಡವಾಗಿ ಗರ್ಭಧರಿಸುವುದು, ತಾಯಿ ಮತ್ತು ಮಗು ಇಬ್ಬರ ಆರೋಗ್ಯದೃಷ್ಟಿಯಿಂದಲೂ ಹಾನಿಕರವೆಂದು ಸಿದ್ಧಾಂತಪಡಿಸಲಾಗಿದೆ. ತಾಯ್ತನದ ಮುಂದೂಡಿಕೆಯಿಂದ ಆಗುವ ಬಾಧಕಗಳನ್ನು ಪ್ರಪಂಚದ ಅನೇಕ ಭಾಗಗಳಲ್ಲಿ ದೊರೆತಿರುವ ಅಂಕಿ ಅಂಶಗಳಿಂದ ವ್ಯಕ್ತಪಡಿಸಲಾಗಿದೆ.

"ತಾಯಿಗೆ 35 ವರ್ಷಗಳು ಮೀರಿದ ನಂತರ ಜನಿಸುವ ಮಕ್ಕಳಲ್ಲಿ ದೇಹವಿಕಲತೆಗಳೂ, ಮಾನಸಿಕ ವಿಲಂಬನೆಗಳನ್ನು ಒಳಗೊಂಡ ರೋಗ ಲಕ್ಷಣಗಳೂ, ಮುಂಚೆ ಹುಟ್ಟಿದ ಮಕ್ಕಳಿಗಿಂತ ಹೆಚ್ಚಾಗಿ ಕಾಣಿಸಿಕೊಳ್ಳುವುವು" ಎಂಬುದೇ ಈ ಶೋಧನೆಗಳ ಮುಖ್ಯ ತಿಳಿವು. ಗರ್ಭಧಾರಣೆಯ ವಯಸ್ಸು ಹೆಚ್ಚಿದಂತೆಲ್ಲಾ ಮಕ್ಕಳಲ್ಲಿ ಹೆಚ್ಚು ಹೆಚ್ಚಾಗಿ ಕಂಡುಬರುವ ರೋಗಗಳಲ್ಲಿ ಮುಖ್ಯವಾದುವು :


i) ಡೌನ್ ಸಿಂಡ್ರೋಮ್ ಅಥವ ಮಂಗೋಲಿಸಂ.

ii) ಸ್ವವರ್ಣ ತಂತುಗಳ ಜೋಡಣೆಯ ಅಪಸರಣೆಯಿಂದ ಕಾಣಬರುವ ಇತರ ತ್ರಿವರ್ಣ ದಂಡತೆಗಳು (Trisomy)

iii) ಕ್ಲೈನ್ ಫೆಲ್ಟರ್ ಸಿಂಡ್ರೋಮ್ ಮತ್ತು

iv) ನೀರ್ದಲೆ ವಿಕಾಸತೆ (hydrocephalus)

i) ಡೌನ್ ಸಿಂಡ್ರೋಮ್‌ನಲ್ಲಿ ದೇಹದ ವಿಶೇಷ ಲಕ್ಷಣಗಳು ಈ ರೀತಿ ಕಾಣಿಸಿಕೊಳ್ಳುತ್ತವೆ: ಗಿಡ್ಡಾದ ದೇಹರಚನೆ, ಮೋಟಾದ ಕೈಕಾಲುಗಳು, ಕಣ್ಣುರೆಪ್ಪೆಗಳ ಮಡಿಕೆಗಳಲ್ಲಿ ಕಾಣಬರುವ ವಿಶಿಷ್ಟತೆ ಮತ್ತು ಸಂಜನಕ (congenital)ಯಲ್ಲಿ ವಿರೂಪಗಳು—ಅದರಲ್ಲೂ ಮುಖ್ಯವಾಗಿ ಹೃದಯದ ಬೆಳವಣಿಗೆಯಲ್ಲಿ ಕಾಣಬರುವ ನ್ಯೂನತೆಗಳು ಮತ್ತು ಬುದ್ಧಿಶಕ್ತಿಯ ಮಂದತೆ.



ಚಿತ್ರ 1 : ಡೌನ್ ಸಿಂಡ್ರೋಮ್ ಅಥವಾ ಮಂಗೋಲಿಸಂ. ಗಿಡ್ಡಾದ ದೇಹರಚನೆ, ಮೋಟಾದ ಕೈಕಾಲುಗಳು ಮುಂತಾದ ಲಕ್ಷಣಗಳನ್ನು ನೋಡಬಹುದು.



ಚಿತ್ರ 2 : ಡೌನ್ ಸಿಂಡ್ರೋಮ್ ಲಕ್ಷಣಗಳನ್ನು ಹೊಂದಿರುವ ಮಗು.

ಹುಟ್ಟುವಾಗಲೇ ಮಗುವಿನಲ್ಲಿ ಕಾಣಬರುವ ಕೆಲವು ಲಕ್ಷಣಗಳಿಂದ ಈ ಕಾಹಿಲೆಯನ್ನು ಗುರುತಿಸಬಹುದು. ಕಣ್ಣುರೆಪ್ಪೆಗಳು ಮೇಲ್ಭಾಗಕ್ಕೂ ಮತ್ತು ಹೊರಕ್ಕೂ ಚಾಚಿಕೊಂಡಿರುವುದು, ಸಣ್ಣಗೆ ಗುಂಡಗೆ ಇರುವ ತಲೆ, ನಾಲಗೆಯು ದಪ್ಪವಾಗಿದ್ದು ಸ್ತನ್ಯಪಾನ ಮಾಡಲು ಮತ್ತು ನುಂಗಲು ಪ್ರಯಾಸಪಡುವುದು.

ದಿನಗಳು ಕಳೆದಂತೆ ಮಗುವಿನ ಸ್ಥಿತಿ ಉತ್ತಮಗೊಂಡಂತೆ ಕಂಡುಬಂದರೂ, ಶೀಘ್ರದಲ್ಲಿಯೇ ಬೆಳವಣಿಗೆ ಮತ್ತು ವಿಕಸನಗಳಲ್ಲಿ ಸರ್ವತ್ರ ನಿಧಾನತೆ ತೋರುವುದು. ಉಳಿದ ಮಕ್ಕಳಿಗಿಂತ ನಡೆನುಡಿಗಳನ್ನು

ಕಲಿಯುವುದು ನಿಧಾನವಾಗುತ್ತದೆ. ವಯಸ್ಸಾದಂತೆಲ್ಲಾ ಬುದ್ಧಿಮಂದತೆಯು ಹೆಚ್ಚುತ್ತಾ ಹೋಗುವುದು. ವರ್ಣತಂತುಗಳ ಅಸಹಜ ಜೋಡಣೆಯೇ ಈ ರೋಗಕ್ಕೆ ಮುಖ್ಯ ಕಾರಣ. ಸಾಧಾರಣವಾಗಿ ಎಲ್ಲಾ ಮನುಷ್ಯರ ಜೀವಕೋಶಗಳಲ್ಲಿ ಇರಬೇಕಾದ 46 ವರ್ಣತಂತುಗಳಿಗೆ ಬದಲಾಗಿ ಇಂತಹ ಮಕ್ಕಳಲ್ಲಿ 47 ವರ್ಣತಂತುಗಳಿರುವುವು. 21ನೇ ವರ್ಣತಂತುವಿನ ಜೋಡಣೆಯಲ್ಲಿ ಒಂದು ಹೆಚ್ಚಾಗಿ, ಮೂರು ವರ್ಣತಂತುಗಳ ಒಟ್ಟಿಗೆ ಇರುವಿಕೆಯೇ ಇದಕ್ಕೆ ಮುಖ್ಯ ಕಾರಣ. ವರ್ಣತಂತುಗಳ ಭಾಗದಿಳಿಕೆ (meiosis) ಕಾಲದಲ್ಲಿ ಸಂಪೂರ್ಣ ಬೇರ್ಪಡಿಕೆಯಾಗದೆ ಈ ಮೂರರ ಜೋಡಣೆಯು ಉಂಟಾಗುವುದು. ಈ ಅಸಂಪೂರ್ಣ ಬೇರ್ಪಡಿಕೆಯು ಅಂಡಾಶಯದಲ್ಲೇ ಸಂಘಟಿಸಿರಬಹುದು ಅಥವಾ ತೆಕ್ಕೆಕಣದ (zygote) ಬಿರಿಕೆಯ (cleavage) ಮೊದಲಲ್ಲೇ ಸಂಭವಿಸಿರಬಹುದು.

21 ಮತ್ತು 15ನೇ ವರ್ಣತಂತುಗಳ ಎಡೆ ಬದಲಾಗುವಿಕೆಯೂ (translocation) ಮಂಗೋಲಿಸಂ ತರಹದ ಹುಟ್ಟುಮರುಳುತನಕ್ಕೆ ಕಾರಣವಾಗಬಲ್ಲದು.

ಈ ತರಹದ ಹುಟ್ಟುಮರುಳುತನ ಮಕ್ಕಳಲ್ಲಿ ಕಾಣಬರುವುದು ಅಪರೂಪವೇನೂ ಅಲ್ಲ. ಸಜೀವ ಜನನಗಳನ್ನೆಲ್ಲಾ ಪರಿಶೀಲಿಸಿದರೆ 600 ಮಕ್ಕಳಲ್ಲಿ ಒಂದರಲ್ಲಿ ಈ ಲಕ್ಷಣಗಳನ್ನು ಕಾಣಬಹುದು; ಆದರೆ ಬುದ್ಧಿ ಮದಡಾಗಿರುವವರನ್ನು ಮಾತ್ರ ಗಣನೆಗೆ ತೆಗೆದುಕೊಂಡರೆ 600 ಪೈಕಿ 60 ಮಕ್ಕಳಲ್ಲಿ (ಶೇಕಡಾ 10) ಇವನ್ನು ನೋಡಬಹುದು. ಈ ರೋಗ ಲಕ್ಷಣಗಳುಳ್ಳ ಮಕ್ಕಳು ಜನಿಸುವಾಗ ತಾಯಿಯ ವಯಸ್ಸು 35 ವರ್ಷಗಳು ಮೀರಿರುತ್ತೆಂದು ಅಂಕಿ ಅಂಶಗಳಿಂದ ದೃಢಪಡಿಸಲಾಗಿದೆ.

ಈ ಡೌನ್‌ಸಿಂಡ್ರೋಮಿನಲ್ಲಿ ಕಾಣಬರುವ ಇನ್ನೊಂದು ವೈಶಿಷ್ಟ್ಯವೇನೆಂದರೆ, ಈ ಮಕ್ಕಳಲ್ಲಿ ಲ್ಯೂಕೇಮಿಯಾ ಎಂಬ ರಕ್ತದ ಕ್ಯಾನ್ಸರ್ ರೋಗವೂ ಶೇಕಡಾ 30 ರಷ್ಟು ಜಾಸ್ತಿ ಇರುವಿಕೆ. ಬುದ್ಧಿ ಮಾಂದ್ಯತೆ ಮಾತ್ರವಲ್ಲದೆ ಕ್ಯಾನ್ಸರ್ ರೋಗಕ್ಕೂ ಈ ಮಕ್ಕಳು ತುತ್ತಾಗುವರು.

ii) ತಾಯಿಯ ವಯಸ್ಸಿಗೆ ಸಂಬಂಧಿಸಿದಂತೆ ಮಕ್ಕಳಲ್ಲಿ ಕಾಣಬರುವ ಇನ್ನೊಂದು ವಿಧದ ಸಿಂಡ್ರೋಮಿನಲ್ಲಿಯೂ 47 ವರ್ಣತಂತುಗಳಿರುವುವು. ಆದರೆ ಡೌನ್‌ಸಿಂಡ್ರೋಮಿನಲ್ಲಿ ಕಾಣುವ 21ನೆ ವರ್ಣತಂತುಗಳ ವ್ಯತ್ಯಾಸಗಳ ಬದಲು 18ನೆ ವರ್ಣತಂತುವಿನಲ್ಲಿ ಮೂರರ ಜೋಡಣೆ ಇರುತ್ತದೆ. ಈ ರೋಗದ ಲಕ್ಷಣಗಳೂ ಮೊದಲಿನದರಂತೆಯೇ ಇರುತ್ತವೆ. ಹುಟ್ಟುವಾಗಲೇ ಮಗುವಿನ ರೂಪ ತೀರ ಶೋಚನೀಯ. ಚಿಕ್ಕ ಗಾತ್ರ, ಅಂಗವಿಕಾರ, ಕ್ರಮೇಣ ತೋರುವ ಬುದ್ಧಿಮಾಂದ್ಯತೆ ಎಲ್ಲವನ್ನೂ ಕಾಣಬಹುದು. ಗಂಡುಮಕ್ಕಳುಗಳಿಗಿಂತ ಹೆಣ್ಣುಮಕ್ಕಳಲ್ಲಿ ಈ ರೋಗವು ಸಂಭವಿಸುವ ಸಾಧ್ಯತೆಯು ಮೂರರಷ್ಟು ಹೆಚ್ಚು. ಈ ರೋಗ ವಾಸಿಯಾಗುವ ಖಾಯಿಲೆ ಅಲ್ಲ. ಹಸುಗೂಸಾಗಿರುವಾಗಲೇ ಮರಣ ಸಂಭವಿಸುವುದು ಈ ರೋಗದ ಲಕ್ಷಣ.

ಇವಲ್ಲದೆ ಇತರ ವರ್ಣತಂತುಗಳ ಜೋಡಣೆಗಳ ವ್ಯತ್ಯಾಸದಿಂದ ಬರುವ ಇನ್ನೂ ಕೆಲವು ರೋಗಗಳನ್ನು ತಾಯಿಯ ಇಳಿವಯಸ್ಸಿನಲ್ಲಿ ಹುಟ್ಟುವ ಮಕ್ಕಳಲ್ಲಿ ಕಾಣಬಹುದು. 13ರಿಂದ 15ನೆ ಜೊತೆ ವರ್ಣತಂತುಗಳಲ್ಲಿ ಒಂದು ವರ್ಣತಂತುವಿನ ಹೆಚ್ಚುವರಿ ಜೋಡಣೆಯಿಂದ ಈ ತರಹದ ರೋಗಗಳು ಕಾಣಬರುತ್ತವೆ. ಬುದ್ಧಿಶಕ್ತಿಯು ವಿಪರೀತವಾಗಿ ಕುಂಠಿತವಾಗಿರುವುದು, ಹರಕು ತುಟಿ, ಸೀಳಿದ ಅಂಗಳು ಮತ್ತು ಇತರ ಸಂಜನಕ ಅಸಹಜತೆಗಳು ಈ ಮಕ್ಕಳಲ್ಲಿ ಕಾಣುವುದು ಸರ್ವೆ ಸಾಮಾನ್ಯ. ಪ್ರತಿಯೊಂದು ರೀತಿಯ ವರ್ಣತಂತುಗಳ ಅಸ್ವಾಭಾವಿಕ ಜೋಡಣೆಯಿಂದ ಕಾಣಬರುವ ರೋಗಗಳು ತಮ್ಮದೇ ಆದ ವೈಶಿಷ್ಟ್ಯವನ್ನು ಹೊಂದಿದ್ದರೂ, ಕೆಲವು ಲಕ್ಷಣಗಳು ಸಾಮಾನ್ಯವಾಗಿ ಎಲ್ಲದರಲ್ಲಿಯೂ ಕಂಡುಬರುತ್ತವೆ. ಕುಂದಿದ ಬುದ್ಧಿ, ಹಸ್ತ ಮತ್ತು ಪಾದ ಸಾಮುದ್ರಿಕೆಗಳ ಭಿನ್ನತೆಗಳು, ಕಿವಿಗಳ ವಿರೂಪ ಇವುಗಳು ಪ್ರಮುಖ ಲಕ್ಷಣಗಳು.

iii) ತಾಯ್ತನದ ವಯಸ್ಸು ಹೆಚ್ಚಿದಂತೆ, ಆಗ ಜನಿಸುವ ಮಕ್ಕಳಲ್ಲಿ ಕಾಣಬರುವ ಇನ್ನೊಂದು

ರೋಗಕ್ಕೆ ಕ್ಲೈನ್‌ಫೆಲ್ಟರ್ ಸಿಂಡ್ರೋಮ್ ಎಂದು ಕರೆಯುತ್ತಾರೆ. ಶಿಖಂಡಿ ರೂಪದ ದೇಹದ ಆಕಾರ; ಸ್ತ್ರೀ ಸ್ವಾಭಾವಿಕವಾದ ಎದೆ ಮತ್ತು ಮೊಲೆಗಳ ಬೆಳವಣಿಗೆ, ವಿವಿಧ ಪ್ರಮಾಣದ ಬುದ್ಧಿಯ ಕುಂಠಿತತನ ಇವುಗಳು ಈ ರೋಗದ ಲಕ್ಷಣಗಳು. ಈ ರೋಗವೂ ಸಹ ವರ್ಣತಂತುಗಳ ಭಿನ್ನಜೋಡಣೆಗೆ ಸಂಬಂಧಿಸಿದ್ದು. ಆದರೆ ಡೌನ್ ಸಿಂಡ್ರೋಮಿನಲ್ಲಿ ಕಾಣುವ ಸ್ವವರ್ಣತಂತುಗಳಿಗೆ ಬದಲಾಗಿ ಲಿಂಗ ವರ್ಣತಂತುವಿನ ಅಸ್ವಾಭಾವಿಕ ಜೋಡಣೆಯೇ ಈ ರೋಗಕ್ಕೆ ಮುಖ್ಯ ಕಾರಣ.

iv) ಈ ರೋಗಗಳಲ್ಲದೆ ಮಕ್ಕಳಲ್ಲಿ ಕಾಣುವ ನೀರ್ದಲೆಯೂ (hydrocephalus) ಸಹ ತಾಯಿಯ ವಯಸ್ಸಿಗೆ ಸಂಬಂಧಿಸಿದೆ ಎಂದು ಗೊತ್ತಾಗಿದೆ.

ಈ ವಿವಿಧತೆಗಳು ಏತಕ್ಕೆ ಸಂಭವಿಸುತ್ತವೆ? ವಿಳಂಬಿತ ತಾಯ್ತನಕ್ಕೂ ಮಕ್ಕಳಲ್ಲಿ ಕಂಡುಬರುವ ಈ ರೋಗಗಳಿಗೂ ಇರುವ ಸಂಬಂಧ ಯಾವ ರೀತಿಯದು? ವಯಸ್ಸು ಹೇಗೆ ತನ್ನ ಪ್ರಭಾವವನ್ನು ಬೀರುತ್ತದೆ? ಇವೆ ಮುಂತಾದ ವಿಷಯಗಳನ್ನು ತಿಳಿಯಲು ಮನುಷ್ಯರ ಸಂತಾನಶಾಸ್ತ್ರಕ್ಕೆ ಸಂಬಂಧಿಸಿದ ಕೆಲವು ಮೂಲ ಅಂಶಗಳನ್ನು ಅರಿತುಕೊಳ್ಳುವುದು ಆವಶ್ಯಕ. ಪ್ರಸಕ್ತ ಸಂಬಂಧದಲ್ಲಿ ನಮಗೆ ಬೇಕಾಗಿರುವುದು ಅಂಡಗಳ ಬೆಳವಣಿಗೆ ಮತ್ತು ಆನುವಂಶೀಯ ಗುಣಗಳು ವರ್ಗಾವಣೆಯಾಗುವ ರೀತಿ.

ಸ್ತ್ರೀಯ ಜನನೇಂದ್ರಿಯಗಳಲ್ಲಿ ಬಾದಾಮಿ ಆಕಾರದ ಮತ್ತು ಗಾತ್ರದ ಎರಡು ಅಂಡಾಶಯಗಳೂ ಮತ್ತು ಅವುಗಳ ಅನುಷಂಗಿಕ ಅವಯವಗಳೂ ಇವೆ. ಜನಿಸುವಕಾಲದ ಹೊತ್ತಿಗೆ, ಆಗಲೇ ಅಂಡಾಶಯಗಳಲ್ಲಿ ಕದಿರುರೂಪಿನ ಜೀವಕಣಗಳ ರಚನಾಂಶ ಮತ್ತು ಅದರ ಹೊರ ಸುತ್ತಲೂ ಘನತೆರನ ಜೀವಕುಡಿಯ ಮೇಲ್ಪೊರೆಗಳು (cuboidal germinal epithelium) ಕಂಡುಬರುತ್ತವೆ. (ಚಿತ್ರ 3, ಪು. 423)


ಈ ಮೇಲ್ಪೊರೆಯ ಜೀವಕಣಗಳ ಇಳಿಬೆಳತದಿಂದ ಉದ್ಭವಿಸಿದ ಮೂಲಕೋಶಿಕಗಳು (primordial follicles) ರಚನಾಂಶದಲ್ಲಿ ಹುದುಗಿರುವುವು. ಇಂತಹ ಪ್ರತಿಯೊಂದು ಕೋಶಿಕವೂ ಸುಮಾರು 200-300μ ಅಡ್ಡಗಲವಿದ್ದು, ಮಧ್ಯದಲ್ಲಿ 45μ ಅಡ್ಡಗಲವುಳ್ಳ ದೊಡ್ಡ ಜೀವಕಣವನ್ನು ಹೊಂದಿರುತ್ತದೆ.

20 ವರ್ಷ ವಯಸ್ಸಿನ ಕನ್ಯೆಯ ಎರಡು ಅಂಡಾಶಯಗಳಲ್ಲಿ ಸುಮಾರು 4,20,000 ಇಂತಹ ಮೂಲ ಕೋಶಿಕಗಳು ಇರುತ್ತವೆ. ಒಬ್ಬ ಹೆಂಗಸಿನ ಸಂತಾನಶಕ್ತಿಯ ವಯಃಪರಿಮಾಣದಲ್ಲಿ—14 ವರ್ಷಗಳಿಂದ 45ವರ್ಷಗಳವರೆಗೆ—ಕೇವಲ 400 ಕೋಶಿಕಗಳು ಮಾತ್ರ ಬಲಿತು ಅಂಡಾಣುಗಳನ್ನು ಹೊರಗೆಡವುತ್ತವೆ. ಮಿಕ್ಕವು ಬೆಳವಣಿಗೆಯ ವಿವಿಧ ಘಟ್ಟಗಳಲ್ಲಿ ಬತ್ತಿಹೋಗಿ ಒಣ ಕುಹರಗಳಾಗಿ ನಶಿಸಿಹೋಗುತ್ತವೆ.


ಹುಟ್ಟಿದಾಗಿನಿಂದ ಸುಪ್ತಾವಸ್ಥೆಯಲ್ಲಿದ್ದ ಈ ಕೋಶಿಕಗಳು ಸ್ತ್ರೀಯು ಋತುಮತಿಯಾದಾಗಿನಿಂದ ಬಲಿತು ಪಕ್ವವಾಗಲು ಪ್ರಾರಂಭಿಸುವುವು. ಬಲಿತ ಕೋಶಿಕಗಳು, ಕ್ರಮೇಣ ದೊಡ್ಡವಾಗುತ್ತಾ, ಅಂಡಾಶಯದ ಹೊರ ಪೊದರಿಕೆಯ ಹತ್ತಿರ ಚಲಿಸಿ, ಒಡೆದು ಅಂಡಾಣುವನ್ನು (peritoneum) ಕೋಶದ ಒಳಗೆ ಬಿಡುಗಡೆ ಮಾಡುವುವು. ಈ ಕ್ರಮಗತಿಯನ್ನು ಅಂಡಾಣು ಫಲನೆ (ovulation) ಎಂದು ಕರೆಯುವರು.

ಮುಂದಿನ ಪೀಳಿಗೆಯ ವಂಶಲಕ್ಷಣಗಳನ್ನು ಸಾಗಿಸುವ ಸಾಧನವು ಜೀವಕಣದಲ್ಲಿನ ವರ್ಣತಂತುಗಳಲ್ಲಿ ಕೇಂದ್ರೀಕೃತವಾಗಿರುತ್ತದೆ. ಮನುಷ್ಯರಲ್ಲಿ 22 ಜೊತೆ ಸ್ವವರ್ಣತಂತುಗಳೂ (autosome) ಒಂದು ಜೊತೆ ಲಿಂಗ ವರ್ಣತಂತುಗಳೂ (sex chromosome) ಇರುತ್ತವೆ. (ಚಿತ್ರ 4, ಪು. 423 ; ಚಿತ್ರ 5, ಪು. 424)

ಬೆಳೆಯುವಾಗ ಜೀವಕಣಗಳು ಕಣಪಾಲಿಡಿಕೆ (mitosis) ವಿಧಾನದ ಮೂಲಕ ವಿಭಜಿಸುವುವು. ಈ ವಿಧಾನದಲ್ಲಿ, ವರ್ಣತಂತುಗಳು ದ್ವಿಗುಣಿಸಿ ಸರಿಸಮಾನವಾಗಿ ಪ್ರತ್ಯೇಕಿಸುವುದರ ಮೂಲಕ ಪ್ರತಿಜೀವಕಣದಲ್ಲಿಯೂ ಮೂಲಕಣದಲ್ಲಿನಂತೆಯೇ 23 ಜೊತೆ ಇರುವಂತೆ ವ್ಯವಸ್ಥೆಯಾಗುತ್ತದೆ. ಈ ರೀತಿಯ ವಿಭಜನೆ ದೇಹದ ಅಂಗಾಂಗಗಳ ವೃದ್ಧಿಗೆ ಕಾರಣವಾದ ಎಲ್ಲಾ ಜೀವಕಣಗಳಿಗೂ ಅನ್ವಯಿಸುತ್ತದೆ. (ಚಿತ್ರ 6, ಪು. 424)




ಚಿತ್ರ 3: ಪೂರ್ತಿಯಾಗಿ ಬಲಿತ ಅಂಡಾಶಯಕೋಶಿಕೆ
ಗಳ ಮುನ್ವಿಕಾಸದಲ್ಲಿ ಕಾಣುವ ಏರುವಣಿಕೆ
ಘಟ್ಟಗಳನ್ನು ತೋರಿಸುವ ಚಿತ್ರ. ಚಕ್ರ
ಗತಿಯು ಚಿತ್ರದ ಎಡಗಡೆಯ ಕೆಳಭಾಗ
ದಿಂದ ಪ್ರಾರಂಭಿಸಿರುವುದು.



ಚಿತ್ರ 4: ಮಾನವನ ಕಣಪಾಡಿಲಿಕೆಯ ವರ್ಣತಂತು
ಗಳು.




ಚಿತ್ರ 5: ವರ್ಣತಂತು ಬಿಡಿಪರೀಕ್ಷೆ. ಸ್ತ್ರೀಯರಲ್ಲಿ ಇರುವ 22 ಜೊತೆ ಸ್ವವರ್ಣತಂತುಗಳನ್ನು ಮತ್ತು ಎರಡು X ಲಿಂಗ ವರ್ಣತಂತುಗಳನ್ನು ತೋರಿಸುವ ಚಿತ್ರ.



ಚಿತ್ರ 6: ಕಣಪಾಲಿಡಿಕೆ. (mitosis) ಜೀವ ಕೋಶ ವಿಭಜನೆಯಿಂದ ಜನಕದ ತದ್ವತ್ ಲಕ್ಷಣಗಳನ್ನುಳ್ಳ ಎರಡು ಕೋಶಗಳ ಉತ್ಪಾದನೆ.


ಆದರೆ ಪುರುಷರ ವೀರ್ಯಾಣು ಮತ್ತು ಸ್ತ್ರೀಯರ ಅಂಡಾಣುಗಳು ಬೇರೆ ರೀತಿಯ ವಿಭಜನೆಯಿಂದ ಉತ್ಪತ್ತಿಯಾಗುತ್ತವೆ. ಅಂಡಾಣು ಮತ್ತು ವೀರ್ಯಾಣುಗಳ ಜನನಕಣಗಳು (gametes) ಫಲವಂತ ವಾಗಲು ಒಂದುಕೂಡುವಾಗ ಅವುಗಳ ನಡುಬೀಜಗಳು (nuclei) ಒಂದಾಗುತ್ತವೆ. ಪ್ರತಿಯೊಂದರಲ್ಲೂ 23 ಜೊತೆ ವರ್ಣತಂತುಗಳಿದ್ದರೆ ಫಲವಂತವಾದ ಅಂಡಾಣುವಿನಲ್ಲಿ 46 ಜೊತೆ ವರ್ಣತಂತುಗಳು ಇರಬೇಕಾಗುತ್ತದೆ. ಇದರಿಂದ ಇಂತಹ ಅಂಡವಲ್ಲಿ ಉಳಿದ ಜೀವಕೋಶಗಳಿಗಿಂತ ಎರಡರಷ್ಟು ವರ್ಣತಂತುಗಳು ಇದ್ದು ಜನಕರ (parental) ಮಾದರಿಗಿಂತ ತೀರ ವಿಭಿನ್ನವಾಗುವುವು. ಆದ್ದರಿಂದ, ಗಂಡು ಹೆಣ್ಣುಗಳ ಮೂಲಕ ಸಂತಾನೋತ್ಪತ್ತಿಯಾಗುವ ಜೀವಿಗಳಲ್ಲಿ, ವರ್ಣತಂತುಗಳ ಗುಣ ವಿಶೇಷ ಸಂಖ್ಯೆಗಳನ್ನು ಉಳಿಸಿಕೊಳ್ಳಲು, ಜನನ ಕಣಗಳು ಉತ್ಪಾದನೆಯಾಗುವಾಗ ವೀರ್ಯಾಣು ಮತ್ತು ಅಂಡಾಣುಗಳಲ್ಲಿ, ಮೊದಲಿನ ಅರ್ಧದಷ್ಟು ವರ್ಣತಂತುಗಳು ಮಾತ್ರ ಇರುವಂತೆ ಮಾಡುವ ಬೇರೆ ಒಂದು ರಚನೆ ಇರುತ್ತದೆ. ಈ ವಿಧಾನವನ್ನು 'ಕ್ಷೀಣತಾ ವಿಭಜನೆ' (meiosis) ಎಂದು ಕರೆಯುವರು. (ಚಿತ್ರ 7) ಈ ವಿಭಜನೆಯ ವೈಶಿಷ್ಟ್ಯವೇನೆಂದರೆ ಈ ವಿಭಜನಾ



ಚಿತ್ರ 7 : ಭಾಗದಿಳಿಕೆ (meiosis) ವೀರ್ಯಾಣು ಅಥವಾ ಅಂಡಾಣುಗಳ ಉತ್ಪಾದನೆ

ಕಾಲವಲ್ಲಿ ಜನಕಗಳ (genes) ಜಿರಕೆ (crossing over) ಮತ್ತು ಮರುವಿಂಗಡಿಕೆಯ (reassortment) ನಡೆಯುವಿಕೆಯ ಸಾಧ್ಯತೆ. ಇದರಿಂದ, ಮೂಲಜೀವಕೋಶಗಳಿಂದ ವ್ಯತ್ಯಾಸಹೊಂದಿರುವ ವರ್ಣತಂತು ಗಳನ್ನುಳ್ಳ ಜೀವಕಣಗಳನ್ನು ಉತ್ಪಾದಿಸಬಹುದು.

ಪುರುಷರಲ್ಲಿ, ಈ ವಿಭಜನಾಕಾಲದಲ್ಲಿ ಮೂಲಜೀವಕೋಶದಿಂದ ಉತ್ಪತ್ತಿಯಾಗುವ ನಾಲ್ಕು ಜನನ ಕಣಗಳೂ ವೀರ್ಯಾಣುಗಳಾಗಿ ಪರಿಣಮಿಸುವುವು. ಆದರೆ ಸ್ತ್ರೀಯರಲ್ಲಿ ಅಂಡವಿಕಾಸದಿಂದ (oogenesis) ನಾಲ್ಕು ಜನನಕಣಗಳು ಉತ್ಪತ್ತಿಯಾದರೂ, ಅದರಲ್ಲಿ ಮುಂದೆ ಫಲವಂತಿಸುವ (fertilization) ಸಾಮರ್ಥ್ಯ ವುಳ್ಳ ಒಂದೇ ಒಂದು ಅಂಡಾಣು ಮಾತ್ರ ಉಳಿಯುವುದು. ಮಿಕ್ಕ ಮೂರು ಕಣಗಳೂ ಧೃವ ಭಾಗವಾಗಿ (polar bodies) ನಶಿಸಿಹೋಗುವುವು. (ಚಿತ್ರ 8)



ಚಿತ್ರ 8 : ಅಂಡಾಣು ಮತ್ತು ವೀರ್ಯಾಣುಗಳ ನಿರ್ಮಾಣ ಮತ್ತು ಅಂತ್ಯದ ತೆಕ್ಕೆಕಣಗಳ (zygote) ಉತ್ಪಾದನೆ.

ಗರ್ಭದಲ್ಲಿ ಬೆಳೆಯುತ್ತಿರುವ ಹೆಣ್ಣು ಶಿಶುವಿನ ಅಂಡಾಶಯದಲ್ಲಿ, ಮೊದಲಿನ ಕೆಲವು ತಿಂಗಳುಗಳಲ್ಲಿಯೇ ಅಂಡ ಮೂಲಜೀವಕೋಶಗಳ ತೀವ್ರ ಬೆಳವಣಿಗೆ ಕಂಡುಬರುತ್ತದೆ. ಭ್ರೂಣದ 5ನೇ ಅಥವಾ 6ನೇ ತಿಂಗಳ

ಹೊತ್ತಿಗೆ ಇವುಗಳ ವಿಭಜನೆ ನಿಂತು ಹೋಗಿ, ಸ್ತ್ರೀಯ ಜೀವಮಾನದ ಪೂರ್ತಿ, ಸಂತಾನೋತ್ಪತ್ತಿಗೆ ಬೇಕಾಗುವ ಎಲ್ಲಾ ಅಂಡಾಣುಗಳೂ ಮಗುವಿನ ಜನನದ ಹೊತ್ತಿಗೆ ಅಂಡಾಶಯದಲ್ಲಿ ಸಿದ್ಧವಾಗಿರುತ್ತವೆ. ಈ ಅಂಡಾಣುಗಳು ಕ್ಷೀಣತಾ ವಿಭಜನೆಯ ಒಂದು ಹಂತವನ್ನು ಪೂರೈಸಿ, ಇನ್ನೂ ಸಂಪೂರ್ಣ ಬಲಿಯದೆ ಇರುವ ಘಟ್ಟಕ್ಕೆ ಬಂದಿರುತ್ತವೆ. ಈ ಸ್ಥಿತಿಯು, ಋತುಮತಿಯಾಗುವವರೆಗೂ ಇದ್ದು, ನಂತರ ಸ್ತ್ರೀಯ ಋತುಬಂಧನದವರೆಗೂ ತಿಂಗಳಿಗೆ ಒಂದರಂತೆ ಪಕ್ವವಾಗುತ್ತಾ ಬರಲು ಪ್ರಾರಂಭಿಸುತ್ತದೆ.

ಇದಕ್ಕೆ ವ್ಯತಿರಿಕ್ತವಾಗಿ, ವೀರ್ಯಾಣುಗಳ ಉತ್ಪತ್ತಿಯು ಪ್ರೌಢಾವಸ್ಥೆಗೆ ಬರುವವರೆಗೂ ಗಂಡಸರಲ್ಲಿ ಪ್ರಾರಂಭಿಸುವುದಿಲ್ಲ. ಪ್ರೌಢಾವಸ್ಥೆಯಿಂದ, ಈ ಕಾರ್ಯವು ಸತತವಾಗಿ, ಸಮೃದ್ಧಿಯಾಗಿ ಪುರುಷರ ಜೀವಮಾನದ ಕಡೆಯ ಹಂತದವರೆಗೂ ನಡೆಯುತ್ತಲೇ ಇರುತ್ತದೆ.

ಮುಂಚೆ ವಿವರಿಸಿದಂತೆ, ಕ್ಷೀಣತಾ ವಿಭಜನೆಯಿಂದ, ವರ್ಣತಂತುಗಳ ವ್ಯತ್ಯಾಸವುಳ್ಳ ಅಂಡಾಣುಗಳು ಮತ್ತು ವೀರ್ಯಾಣುಗಳು ಉದ್ಭವಿಸಲು ಸಾಧ್ಯ. ವಿಭಜನಾಕಾಲದಲ್ಲಿ ಸಮಜನಿಕ ವರ್ಣತಂತುಗಳು ಬೇರ್ಪಡದೇ ಎರಡು ವರ್ಣತಂತುಗಳೂ ಅಂಟಿಕೊಂಡು ಒಟ್ಟಾಗಿಯೇ, ಜನಿಸುವ ಕಣಗಳಿಗೆ ಹೋಗುವುದರಿಂದ ಒಂದು ಕಣದಲ್ಲಿ 24, ಇನ್ನೊಂದರಲ್ಲಿ 22 ವರ್ಣತಂತುಗಳು ಇರಬಹುದು. ಇಂತಹ ಅಂಡಾಣುಗಳು ಸಹಜಸ್ಥಿತಿಯ ವೀರ್ಯಾಣುಗಳಿಂದ ಫಲವಂತವಾದರೆ 46 ವರ್ಣತಂತುಗಳ ಬದಲಾಗಿ 47 ಅಥವಾ 45 ವರ್ಣತಂತುಗಳನ್ನು ಹೊಂದಿರುವ ಗರ್ಭಾಣುಗಳಾಗಿ ಪರಿಣಮಿಸಬಹುದು.

ಇಂತಹ ವರ್ಣತಂತುಗಳ ಅಸಹಜತೆಯೇ ಗರ್ಭಿಣಿಯರಲ್ಲಿ ಕಾಣಿಸುವ ಗರ್ಭಸ್ರಾವ (abortion) ಗಳಿಗೆ ಒಂದು ಮುಖ್ಯಕಾರಣ. ಮೂರು ವರ್ಣತಂತುಗಳನ್ನು ಹೊಂದಿರುವ ಭ್ರೂಣಗಳಲ್ಲಿ ಶೇಕಡಾ 80 ರಷ್ಟು ಗರ್ಭಸ್ರಾವದಲ್ಲಿ ಪರಿಣಮಿಸುವುವು. ಈ ಅಪಘಾತಕ್ಕೆ ಒಳಗಾಗದೆ ಜನಿಸಿದರೂ, ವರ್ಣತಂತು ದೋಷಗಳಿರುವ ಎಲ್ಲ ಮಕ್ಕಳಲ್ಲೂ ಮುಂಚೆ ವಿವರಿಸಿದಂತೆ ಅಂಗವಿಕಲತೆ, ಬುದ್ಧಿಮಾಂದ್ಯತೆ ಮುಂತಾದ ರೋಗಗಳು ಕಾಣಿಸುವುವು. ವರ್ಣತಂತುಗಳ ಅಸಹಜತೆಗೂ ರೋಗಲಕ್ಷಣಗಳ ತೋರುವಿಕೆಗೂ ನಿಕಟ ಸಂಬಂಧವಿದೆ ಎಂಬುದು ಖಚಿತವಾಗಿ ಗೊತ್ತಾಗಿರುವ ಅಂಶ.

ತಾಯಿಯ ಗರ್ಭಧಾರಣಾ ವಯಸ್ಸು ನಿಧಾನಿಸಿದಂತೆಲ್ಲಾ, ಅಂಡಾಣುಗಳಲ್ಲಿ ವರ್ಣತಂತುಗಳ ದೋಷಗಳೂ ಅವುಗಳ ಅಸ್ವಾಭಾವಿಕ ಜೋಡಣೆಗಳೂ ಹೆಚ್ಚುತ್ತಾ ಹೋಗುವುವು ಮತ್ತು ಇದರ ಪ್ರಭಾವ ಬೆಳೆಯುತ್ತಿರುವ ಭ್ರೂಣಗಳಲ್ಲಿ ಕಂಡುಬರುವುದು. ಇದರ ಪರಿಣಾಮವೇ ಹೆಚ್ಚು ಹೆಚ್ಚಾಗಿ ಕಂಡುಬರುವ ಗರ್ಭಸ್ರಾವ, ಹುಟ್ಟಿದ ಮಕ್ಕಳಲ್ಲಿ ಅಂಗವಿಕಲತೆ ಮುಂತಾದ ವಿಶಿಷ್ಟ ರೋಗಗಳು.

ಸ್ತ್ರೀಯ ವಯಸ್ಸು ಹೆಚ್ಚಿದಂತೆಲ್ಲಾ, ಅಂಡಾಣುಗಳಲ್ಲಿ ವರ್ಣತಂತು ಜೋಡಣೆಯ ನ್ಯೂನತೆಗಳು ಹೆಚ್ಚಾಗಿ ಕಾಣಲು ಮುಖ್ಯ ಕಾರಣ, ಅಂಡಾಣುಗಳ ಬೆಳವಣಿಗೆಗೆ ಸಂಬಂಧಿಸಿದೆ. ಅಂಡಾಣುಗಳು ಮೈಯೋಸಿಸ್ ವಿಭಜನೆಯ ಒಂದು ಹಂತವನ್ನು ಮಾತ್ರ ಮುಗಿಸಿ, ಪೂರ್ತಿಯಾಗಿ ಬಲಿಯದ ಈ ಸ್ಥಿತಿಯಲ್ಲಿ ಹುಟ್ಟಿದಾಗಿನಿಂದಲೂ ಸ್ತ್ರೀಯ ಅಂಡಕೋಶಗಳಲ್ಲಿ ಇರುವುವು ಎಂದು ಹಿಂದೆ ತಿಳಿಸಿದೆ. ಪಕ್ವವಾಗಲು ಪ್ರಾರಂಭಿಸುವ— ಋತುಮತಿಯಾಗುವ—ಸುಮಾರು 15 ವರ್ಷಗಳಿಂದ ಋತು ನಿಲ್ಲುವ 45 ವರ್ಷಗಳವರೆಗೂ. ಇಷ್ಟು ದೀರ್ಘಕಾಲ, ಅಂಡಕಣಗಳು ದೇಹದ ಪ್ರತಿಕೂಲ ವಾತಾವರಣಗಳಿಗೆ ಗುರಿಯಾಗಿ, ಕ್ಷೀಣಿಸಿ, ಮುಂದಿನ ವಿಭಜನೆಯಲ್ಲಿ ವರ್ಣತಂತುಗಳು ವೈವಿಧ್ಯ ತೋರಿಸುವ ಸಂಭವ ಜಾಸ್ತಿ. ವರ್ಷಗಳು ಕಳೆದಂತೆಲ್ಲಾ ದೋಷಗಳ ಬೆಳವಣಿಗೆಯೂ ಹೆಚ್ಚುವುದು. ಇಂತಹ ಅಂಡಕಣಗಳ ಫಲವಂತಿಕೆಯೇ ವಯಸ್ಸಾದನಂತರ ಗರ್ಭಿಣಿಯರಾಗಿ ಹೆರುವವರ ಮಕ್ಕಳಲ್ಲಿ ಕಾಣುವ ರೋಗಗಳಿಗೆ ಮುಖ್ಯ ಕಾರಣ.

ಪುರುಷರಲ್ಲಿ, ವೀರ್ಯಾಣುಗಳು ಸತತವಾಗಿ ವಿಕಸಿಸುತ್ತಿರುವುದರಿಂದ ಮತ್ತು ಅಂಡಾಣುಗಳಂತೆ ಬಹಳ

ದೀರ್ಘಕಾಲ ಪ್ರತಿಕೂಲ ವಾತಾವರಣಗಳಿಗೆ ಗುರಿಯಾಗದೇ ಇರುವುದರಿಂದ, ಅವುಗಳಲ್ಲಿ ವಿಭಜನೆಯ ಕಾಲದ ವರ್ಣತಂತು ಜೋಡಣೆಯ ವೈಪರೀತ್ಯಗಳು ಹೆಚ್ಚು ತೋರುವುದಿಲ್ಲ. ಆದುದರಿಂದ ಇಳಿವಯಸ್ಸಿನಲ್ಲಿ ಜನಿಸಿದ ಮಕ್ಕಳಲ್ಲಿ ಕಾಣುವ ರೋಗಗಳು ತಾಯಿಯ ವಯಸ್ಸನ್ನು ಅವಲಂಬಿಸಿರುತ್ತವೆಯೇ ಹೊರತು ತಂದೆಯ ವಯಸ್ಸನ್ನಲ್ಲ.

ಸ್ತ್ರೀಯು ಯಾವ ವಯಸ್ಸನ್ನು ಮೀರಿದನಂತರ ಗರ್ಭಿಣಿಯಾದರೆ, ಮಕ್ಕಳಲ್ಲಿ ಈ ರೋಗಗಳು ಕಾಣುವುವು ಎಂದು ನಿಖರವಾಗಿ ಹೇಳುವುದು ಸಾಧ್ಯವಿಲ್ಲ. ಆದರೆ, 35 ವರ್ಷಗಳು ಮೀರಿದನಂತರ ಇಂತಹ ಗರ್ಭದೋಷಗಳು ಉಂಟಾಗುವುದು ಜಾಸ್ತಿ. ಗರ್ಭಧಾರಣೆ ವಯಸ್ಸು ಇನ್ನೂ ಹೆಚ್ಚಿದಂತೆಲ್ಲಾ ಮಕ್ಕಳಲ್ಲಿ ಕಾಹಿಲೆಗಳೂ ಜಾಸ್ತಿಯಾಗುತ್ತಾ ಹೋಗುವುವು. ಆದುದರಿಂದ 35 ವರ್ಷ ವಯಸ್ಸಾದನಂತರ ಸ್ತ್ರೀಯು ಗರ್ಭಧಾರಣೆಯನ್ನು ಪೂರ್ಣವಾಗಿ ನಿಲ್ಲಿಸುವುದು ಸೂಕ್ತ.

ಗರ್ಭಧಾರಣಾ ವಯಸ್ಸು ಹೆಚ್ಚಿದಂತೆಲ್ಲಾ, ಹೆಚ್ಚು ಹೆಚ್ಚಾಗಿ ಕಂಡುಬರುವ ಮೈಯಿಳಿತ, ಗರ್ಭಸ್ರಾವ, ಅಕಾಲಪ್ರಸವತೆ, ಜೀವರಹಿತ ಮಕ್ಕಳ ಹುಟ್ಟುವಿಕೆ ಮತ್ತು ಇಂತಹ ಸನ್ನಿವೇಶಗಳಲ್ಲಿ ಜನಿಸಿದ ಮಕ್ಕಳಲ್ಲಿ ಕಂಡುಬರುವ ಅಂಗವಿಕಲತೆ ಮತ್ತು ಬುದ್ಧಿಮಾಂದ್ಯತೆ ಮುಂತಾದವುಗಳನ್ನು ವಿಚಾರಾತ್ಮಕವಾಗಿ ಪರಿಶೀಲಿಸಿದರೆ, ಬೇರೆ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳು ಇಲ್ಲದೆ ಹೋದರೂ "ತಾಯಿಯ ಆರೋಗ್ಯದೃಷ್ಟಿಯಿಂದಲೂ ಮತ್ತು ಮಕ್ಕಳ ಭವಿಷ್ಯದ ಹಿತಕ್ಕಾಗಿಯೂ ಸ್ತ್ರೀಯು 35 ವರ್ಷ ವಯಸ್ಸಾದ ನಂತರ ಗರ್ಭಧರಿಸದಿರುವುದೇ ಒಳ್ಳೆಯದು" ಎಂಬ ಅಭಿಪ್ರಾಯವನ್ನು ವಿಪುಲ ವೈಜ್ಞಾನಿಕ ಆಧಾರಗಳು ಸಮರ್ಥಿಸಿವೆ. ಆದುದರಿಂದ ಗರ್ಭಧಾರಣೆಗೆ ಆದರ್ಶವಾದ ವಯೋಮಿತಿಯೆಂದರೆ 20 ವರ್ಷದಿಂದ 30 ವರ್ಷದವರೆಗೆ ಎಂದು ಹೇಳಬಹುದು.

ಶ್ರೇಷ್ಠವಾದುದನ್ನು ಅರಸಿ. ಯಾವಾಗಲೂ ಶ್ರೇಷ್ಠವಾದುದನ್ನೇ ಅರಸಿ, ಅನಂತಾನಂದವಿರುವುದು ಶ್ರೇಷ್ಠವಾದ ವಸ್ತುವಿನಲ್ಲೆ. ನಾನು ಬೇಟೆಯಾಡಬೇಕಾದರೆ ಸಿಂಹವನ್ನು ಬೇಟೆಯಾಡುವೆನು. ದರೋಡೆ ಮಾಡಬೇಕಾದರೆ ರಾಜನ ಬೊಕ್ಕಸವನ್ನು ದರೋಡೆ ಮಾಡುತ್ತೇನೆ.

ಎಲ್. ಸಂಜೀವಯ್ಯ

ರಾಜಾಸ್ಥಾನದ ನ್ಯೂಕ್ಲಿಯರ್ ಸ್ಫೋಟ

೧. ಪೀಠಿಕೆ : ರಾಜಾಸ್ಥಾನದ ಮರುಭೂಮಿಯಲ್ಲಿ 1974 ರ ಮೇ 18 ರಂದು ಸ್ಫೋಟಗೊಂಡ ನ್ಯೂಕ್ಲಿಯರ್‌ಸಾಧನ ಇಂಡಿಯ ದೇಶವನ್ನು ಪ್ರಪಂಚದ ನ್ಯೂಕ್ಲಿಯರ್ ಭೂಪಟದ ಮೇಲೆ ಚಿರಸ್ಥಾಯಿಯಾಗಿ ಸ್ಥಾಪಿಸಿತು. ಎಲ್ಲ ದೇಶಗಳ ಸೀಸ್ಮೋಗ್ರಾಫುಗಳು ಅಂದು ಭೂಮಿ ನಡುಗಿದುದನ್ನು ಆಲೇಖಿಸಿದವು. ಅದು ನಮ್ಮ ವಿಜ್ಞಾನಿಗಳ ವಿಜಯದ ಸಂದೇಶ. ಸ್ಫೋಟ ಭಯಂಕರವಾಗಿಯೇ ಇತ್ತು ; ಬಿಡುಗಡೆಯಾದ ಒಟ್ಟು ಶಕ್ತಿ ಹಿರೋಷಿಮ ನಗರವನ್ನು ಆಹುತಿತೆಗೆದುಕೊಂಡ ಬಾಂಬಿಗೆ ಸರಿಸಮವಾಗಿತ್ತು.

೨. ನ್ಯೂಕ್ಲಿಯರ್ ಶಕ್ತಿ : ಸದಾಕಾಲ ಉರಿಯುತ್ತಿರುವ ಸೂರ್ಯ ಮತ್ತು ನಕ್ಷತ್ರಗಳಿಗೆ ಪೂರೈಕೆಯಾಗುತ್ತಿರುವ ಅಪಾರವಾದ ಶಕ್ತಿಗೆ ಮೂಲಸಮ್ಮಿಳನ (fusion)–ಕಬ್ಬಿಣದ ನ್ಯೂಕ್ಲಿಯಸ್ಸಿಗಿಂತ ಕಡಿಮೆ ದ್ರವ್ಯಾಂಶವುಳ್ಳ ಎರಡು ನ್ಯೂಕ್ಲಿಯಸ್ಸಗಳು ಸಮ್ಮಿಳನಗೊಂಡು ಹೆಚ್ಚು ಭಾರವಾದ ಬೇರೊಂದು ನ್ಯೂಕ್ಲಿಯಸ್ ಸೃಷ್ಟಿಯಾದರೆ ಸ್ವಲ್ಪ ನ್ಯೂಕ್ಲಿಯರ್ ವಸ್ತು ಶಕ್ತಿಯಾಗಿ ಪರಿವರ್ತನೆಗೊಳ್ಳುತ್ತದೆ. ಸೂರ್ಯನಲ್ಲಿ ಪ್ರೋಟಾನುಗಳು ಸಮ್ಮಿಳನಗೊಂಡು ಹೀಲಿಯಂ ನ್ಯೂಕ್ಲಿಯಸ್‌ಗಳಾಗುತ್ತವೆ. ಇನ್ನೂ ಭಾರವಾದ ನಕ್ಷತ್ರಗಳಲ್ಲಿ ಸ್ವಲ್ಪ ಹೆಚ್ಚು ದ್ರವ್ಯಾಂಶವುಳ್ಳ ನ್ಯೂಕ್ಲಿಯಸ್ಸುಗಳೆ ಸಮ್ಮಿಳನಗೊಂಡು ಶಕ್ತಿಯನ್ನು ಬಿಡುಗಡೆಮಾಡುತ್ತವೆ. ಕಟ್ಟಿಗೆ ಉರಿಯುವಾಗ, ಕಲ್ಲಿದ್ದಲು ಸುಡುವಾಗ, ದೀಪ ಬೆಳಗುವಾಗ ದೊರೆಯುವ ಶಕ್ತಿಗೆ ಹೋಲಿಸಿದರೆ ಸಮ್ಮಿಳನದಿಂದ ದೊರೆಯುವ ಶಕ್ತಿ ಮಿಲಿಯಪಾಲು ಹೆಚ್ಚಾಗಿರುತ್ತದೆ.

ಯುರೇನಿಯಂ ಮತ್ತು ಪ್ಲುಟೋನಿಯಂಗಳಂಥ ಹೆಚ್ಚು ಭಾರವಾದ ನ್ಯೂಕ್ಲಿಯಸ್‌ಗಳು ವಿದಳನಗೊಂಡು (fission) ಸ್ವಲ್ಪ ನ್ಯೂಕ್ಲಿಯರ್ ವಸ್ತು ಶಕ್ತಿಯಾಗಿ ಪರಿವರ್ತನೆಗೊಳ್ಳುತ್ತದೆ. ವಿದಳನ ಮತ್ತು ಸಮ್ಮಿಳನ ಕ್ರಿಯೆಗಳಲ್ಲಿ ನ್ಯೂಕ್ಲಿಯರ್ ವಸ್ತು ಶಕ್ತಿಯಾಗಿ ಪರಿವರ್ತನೆಗೊಳ್ಳುವುದರಿಂದ ಅದನ್ನು ನ್ಯೂಕ್ಲಿಯರ್ ಶಕ್ತಿ ಎಂದು ಕರೆಯುತ್ತೇವೆ. ಕಟ್ಟಿಗೆ, ಕಲ್ಲಿದ್ದಲು, ಎಣ್ಣೆ ಮುಂತಾದ ವಸ್ತುಗಳು ಉರಿಯುವಾಗ ದೊರೆಯುವ ಶಕ್ತಿ ರಾಸಾಯನಿಕ ಕ್ರಿಯೆಯಿಂದಾಗಿ ಬಿಡುಗಡೆಯಾಗುತ್ತದೆ. ರಾಸಾಯನಿಕ ಕ್ರಿಯೆಗಳು ಪ್ರಮುಖವಾಗಿ ಹೊರವಲಯದ ಎಲೆಕ್ಟ್ರಾನುಗಳಿಗೆ ಮಾತ್ರ ಸೀಮಿತವಾಗಿರುತ್ತವೆ; ಅವುಗಳಲ್ಲಿ ನ್ಯೂಕ್ಲಿಯಸ್‌ಗಳ ಪಾತ್ರವೇನೂ ಇರುವುದಿಲ್ಲ.

ಯೂರೇನಿಯಮ್ಮಿಗಿಂತ ಭಾರವಾದ ಧಾತುಗಳನ್ನು ಸೃಷ್ಟಿಸಿಲು ಫ್ರಾನ್ಸ್, ಇಟಲಿ ಮತ್ತು ಜರ್ಮನಿಗಳಲ್ಲಿ ವಿಜ್ಞಾನಿಗಳು ಅನೇಕ ಪ್ರಯೋಗಗಳನ್ನು ನಡೆಸಿದರು. ಅವುಗಳೆಲ್ಲ ಯುರೇನಿಯಂ ನ್ಯೂಕ್ಲಿಯಸ್‌ಗಳ ಮೇಲೆ ನ್ಯೂಟ್ರಾನುಗಳನ್ನು ಬೀರುವ ಪ್ರಯೋಗಗಳೇ ಆಗಿದ್ದವು. ಯೂರೇನೋತ್ತರ (transuranium)

ಧಾತುಗಳು ಸೃಷ್ಟಿಯಾಗುತ್ತಲೂ ಇದ್ದವು, ನ್ಯೂಟ್ರಾನುಗಳನ್ನು ನುಂಗಿದ ಕೆಲವು ನ್ಯೂಕ್ಲಿಯಸ್‌ಗಳು ವಿದಳನ ಗೊಳ್ಳುತ್ತಲೂ ಇದ್ದವು. ವಿದಳನ ಕ್ರಿಯೆಯನ್ನು ನಿಸ್ಸಂಶಯವಾಗಿ ಪತ್ತೆಹಚ್ಚಿ ಜಗತ್ತಿಗೆ ತಿಳಿಸಿದ ಕೀರ್ತಿ ಜರ್ಮನಿಯ ಹಾನ್ ಮತ್ತು ಸ್ಟ್ರಾಸ್‌ಮನ್ ಎಂಬ ರಾಸಾಯನಿಕ ವಿಜ್ಞಾನಿಗಳಿಗೆ ಸಲ್ಲುತ್ತದೆ (1939). ಮೀಟ್ನರ್, ಫ್ರಿಷ್, ಬೋರ್ ಮತ್ತು ವೀಲರ್ ಅವರು ವಿದಳನಕ್ರಿಯೆಯ ಸ್ವರೂಪವನ್ನು ಬಿಡಿಸಿ, ಒಂದು ಯುರೇನಿಯಂ ನ್ಯೂಕ್ಲಿಯಸ್ ವಿದಳನಗೊಂಡಾಗ ಸುಮಾರು 200 ಮಿಲಿಯನ್ ಎಲೆಕ್ಟ್ರಾನ್ ವೋಲ್ಟ್ ಶಕ್ತಿ ಬಿಡುಗಡೆಯಾಗುತ್ತದೆಂದು ತೋರಿಸಿದರು.

ವಿದಳನ ಕ್ರಿಯೆಯಲ್ಲಿ ಅಪಾರವಾದ ಶಕ್ತಿ ಬಿಡುಗಡೆಯಾಗುವುದಷ್ಟೆ ಆಗಿದ್ದರೆ ಅದಕ್ಕೆ ಅಂಥ ಮಹತ್ವ ವೇನೂ ದೊರೆಯುತ್ತಿರಲಿಲ್ಲ. ನ್ಯೂಟ್ರಾನನ್ನು ನುಂಗಿದ ಒಂದು ಯುರೇನಿಯಂ ನ್ಯೂಕ್ಲಿಯಸ್ ಅಥವಾ ಒಂದು ಪ್ಲುಟೋನಿಯಂ ನ್ಯೂಕ್ಲಿಯಸ್ ವಿದಳನಗೊಂಡರೆ ಶಕ್ತಿ ಬಿಡುಗಡೆಯಾಗುವುದರ ಜೊತೆಗೆ ಎರಡು ಅಥವಾ ಮೂರು ನ್ಯೂಟ್ರಾನುಗಳು ಹೊರಬರುತ್ತವೆ. ಈ ನ್ಯೂಟ್ರಾನುಗಳು ಅವುಗಳ ಸರದಿಯಲ್ಲಿ ವಿದಳನ ಕ್ರಿಯೆ ಯನ್ನು ನಡೆಸಬಹುದು. ನಿಯಂತ್ರಿತ ವಿದಳನ ಸರಪಳಿ ಕ್ರಿಯೆಯಿಂದ (chain reaction) ಉಪಯುಕ್ತ ಶಕ್ತಿಯನ್ನು ಪಡೆಯಬಹುದೆಂದು ಊಹಿಸಿಕೊಂಡವರು ಎನ್ರಿಕೊ ಫರ್ಮಿ. ಇಟಲಿಯಿಂದ ತಪ್ಪಿಸಿಕೊಂಡು ಬಂದು ಅಮೆರಿಕಾದೇಶದಲ್ಲಿ ನೆಲೆಸಿದ ಅವರು ಚಿಕಾಗೊ ನಗರದಲ್ಲಿ ಮೊದಲು ಒಂದು ನ್ಯೂಕ್ಲಿಯರ್ ರಿಯಾಕ್ಟರನ್ನು ನಿರ್ಮಿಸಿದರು (1942).

೩. **ರಿಯಾಕ್ಟರುಗಳು** : ನ್ಯೂಕ್ಲಿಯರ್ ಸರಪಳಿ ಕ್ರಿಯೆಯನ್ನು ನಿಯಂತ್ರಿಸಿ ಶಕ್ತಿಯನ್ನು ಉತ್ಪಾದಿ ಸಲು ಬಳಸುವ ಉಪಕರಣವೇ ರಿಯಾಕ್ಟರು. ರಿಯಾಕ್ಟರಲ್ಲಿ ಉರಿಸಲು ಬೇಕಾದ ಇಂಧನಗಳು ಯುರೇನಿಯಂ ಮತ್ತು ಪ್ಲುಟೋನಿಯಂ. ಯುರೇನಿಯಂ ಅದಿರು ಭೂಮಿಯಲ್ಲಿ ಸಿಕ್ಕುತ್ತದೆ. ಪ್ಲುಟೋನಿಯಂ ಧಾತು ವನ್ನು ರಿಯಾಕ್ಟರುಗಳಲ್ಲೇ ಉತ್ಪಾದಿಸಬೇಕು. ಬಾಂಬಿನಲ್ಲಾಗಲಿ ಅಥವ ರಿಯಾಕ್ಟರಿನಲ್ಲಾಗಲಿ ಉರಿಸಲು ಯೋಗ್ಯವಾದ ಐಸೊಟೋಪುಗಳು ಯುರೇನಿಯಂ–233, ಯುರೇನಿಯಂ–235 ಮತ್ತು ಪ್ಲುಟೋನಿಯಂ 239. ಪ್ರಕೃತಿಯಲ್ಲಿ ಯುರೇನಿಯಂ–233 ದೊರೆಯುವುದಿಲ್ಲ ; ಅದನ್ನೂ ರಿಯಾಕ್ಟರಿನಲ್ಲಿ ಉತ್ಪಾದಿಸಬೇಕು. ಪ್ರಕೃತಿಯಲ್ಲಿ ದೊರೆಯುವ ಯುರೇನಿಯಂನಲ್ಲಿ ಅಪಾರವಾಗಿರುವ ಐಸೊಟೋಪು ಯುರೇನಿಯಂ–238. ಇದು ನ್ಯೂಟ್ರಾನುಗಳನ್ನು ಬಹುಪಾಲು ವಿದಳನರಹಿತ ಕ್ರಿಯೆಗಳಲ್ಲಿ ನುಂಗುತ್ತದೆ. ಆದುದರಿಂದಲೆ ಎಷ್ಟೇ ಗಾತ್ರದ ಪ್ರಾಕೃತಿಕ (natural) ಯುರೇನಿಯಂ ಮುದ್ದೆಯಾಗಲಿ ಅದು ಸಿಡಿಯುವುದಿಲ್ಲ. ಯುರೇನಿಯಂ–233, ಯುರೇನಿಯಂ–235 ಮತ್ತು ಪ್ಲುಟೋನಿಯಂ-239 ಈ ಐಸೊಟೋಪುಗಳ ಬಗ್ಗೆ ಹಾಗೆ ಹೇಳು ವುದಕ್ಕಾಗುವುದಿಲ್ಲ. ಇವುಗಳಲ್ಲಿ ಯಾವುದರ ಒಂದು ಗಟ್ಟಿಯಾಗಲಿ ಅದು ಒಂದು ಕನಿಷ್ಠ ಗಾತ್ರವನ್ನು ಮೀರಿದರೆ ಸಾಕು, ಭಯಂಕರವಾದ ಸ್ಫೋಟವಾಗುತ್ತದೆ. ಇವು ಮಂದ (slow) ಮತ್ತು ಕ್ಷಿಪ್ರ (fast) ನ್ಯೂಟ್ರಾನುಗಳಿಂದ ವಿದಳನಗೊಳ್ಳುತ್ತವೆ. ಪ್ರಾಕೃತಿಕ ಯುರೇನಿಯಂಅನ್ನು ಉಪಯೋಗಿಸಿದರೆ ಹೆಚ್ಚಾಗಿ ಮಂದ ನ್ಯೂಟ್ರಾನುಗಳಿಂದಲೆ ವಿದಳನ ನಡೆಯುವಂತೆ ವ್ಯವಸ್ಥೆ ಮಾಡಬೇಕು. ಆದುದರಿಂದಲೆ ನ್ಯೂಟ್ರಾನು ಗಳ ಶಕ್ತಿಯನ್ನು ಕುಂದಿಸಲು ರಿಯಾಕ್ಟರುಗಳಲ್ಲಿ ಭಾರನೀರು, ಗ್ರಾಫೈಟು ಮುಂತಾದ ಮಂದಕಗಳನ್ನು (moderators) ಉಪಯೋಗಿಸುವುದು. ಮಂದಕಗಳನ್ನು ಉಪಯೋಗಿಸದೆ ವಿದಳನ ಕ್ರಿಯೆಯನ್ನು ನಿಯಂತ್ರಿಸಿ ಶಕ್ತಿಯನ್ನು ಉತ್ಪಾದಿಸುವ ರಿಯಾಕ್ಟರುಗಳೂ ಇವೆ ; ಅಂಥವುಗಳಲ್ಲಿ ಪ್ರಾಕೃತಿಕ ಯುರೇನಿಯಂ ಅನ್ನು ಬಳಸುವುದಿಲ್ಲ.

ವಿದಳನದಿಂದ ಹೊರಕ್ಕೆ ಬರುವ ನ್ಯೂಟ್ರಾನುಗಳ ಸರಾಸರಿ ಶಕ್ತಿ 2 ಮಿ. ಎ. ವೋ. ರಿಯಾಕ್ಟರಿ ನಲ್ಲಿ ಅಂಥ ಒಂದು ನ್ಯೂಟ್ರಾನು, ನ್ಯೂಕ್ಲಿಯರ್ ಡಿಕ್ಕಿಗಳಿಂದ ಶಕ್ತಿಯನ್ನು ಕಳೆದುಕೊಂಡು, ಅವರಣದ

ತಾಪಕ್ಕನುಗುಣವಾದ ಶಕ್ತಿಯನ್ನು ಪಡೆದು ಮತ್ತೆ ವಿದಳನಕ್ರಿಯೆಯಲ್ಲಿ ತೊಡಗುವವರೆಗಿನ ಕಾಲವನ್ನು ಒಂದು ನ್ಯೂಟ್ರಾನಿನ ತಲೆಮಾರು ಎಂದು ಕರೆಯುತ್ತೇವೆ. ಒಂದು ತಲೆಮಾರಿನಲ್ಲಿ ವಿದಳನವನ್ನು ನಡೆಸುವಷ್ಟು ನ್ಯೂಟ್ರಾನುಗಳು ಮುಂದಿನ ತಲೆಮಾರಿನಲ್ಲಿ ವಿದಳನವನ್ನು ನಡೆಸಲು ದೊರಕಿದರೆ ಸರಪಳಿಕ್ರಿಯೆ ಅಬಾಧಿತವಾಗಿ ನಡೆಯುತ್ತದೆ. ಎಲ್ಲ ರಿಯಾಕ್ಟರುಗಳಲ್ಲೂ ಇಂಥ ಪರಿಸ್ಥಿತಿ ಇರುವಂತೆ ವ್ಯವಸ್ಥೆ ಮಾಡಿರುತ್ತಾರೆ. ಒಂದು ತಲೆಮಾರಿನಿಂದ ಇನ್ನೊಂದು ತಲೆಮಾರಿಗೆ ನ್ಯೂಟ್ರಾನುಗಳ ಸಂಖ್ಯೆ ಹೆಚ್ಚುತ್ತ ಹೋದರೆ ಸ್ಫೋಟ ಸಂಭವಿಸುತ್ತದೆ; ಅದು ಅಷ್ಟು ಭಯಂಕರವಾಗಿಯೇನು ಇರುವುದಿಲ್ಲ. ಹೆಚ್ಚೆಂದರೆ ರಿಯಾಕ್ಟರು ಒಡೆದು ಚೂರುಚೂರಾಗುತ್ತದೆ, ಅಷ್ಟೆ.

೪. ಇಂಡಿಯಾ ದೇಶದ ಅಣುಶಕ್ತಿ ಯೋಜನೆ: ನಮ್ಮ ದೇಶದಲ್ಲಿ ನ್ಯೂಕ್ಲಿಯರ್ ಶಕ್ತಿಯ ಕನಸು ಕಂಡವರು ದಿವಂಗತ ಡಾ. ಹೋಮಿ ಭಾಭಾ ಅವರು. ತಮ್ಮ ಕನಸನ್ನು ಕೃತಿಗಿಳಿಸಲು ಅವರು ಅರ್ಪಣ ಭಾವವುಳ್ಳ ತರುಣ ವಿಜ್ಞಾನಿಗಳ ಒಂದು ತಂಡವನ್ನು ತಮ್ಮ ಸುತ್ತ ಕಲೆಹಾಕಿಕೊಂಡು ಕಾರ್ಯೋನ್ಮುಖರಾದರು. ಅವರ ಕೆಲಸದಲ್ಲಿ ಆಸಕ್ತಿ ತೋರಿಸಿ ಬೇಕಾದ ಸಹಕಾರವನ್ನು ಕೊಟ್ಟವರು ದಿವಂಗತ ಪ್ರಧಾನಿ ಜವಹರ್‌ಲಾಲ್ ನೆಹರು. ಪರಮಾಣುಶಕ್ತಿ ಕಮಿಷನ್ 1948 ರಲ್ಲಿ ಅಸ್ತಿತ್ವಕ್ಕೆ ಬಂತು; ಪರಮಾಣುಶಕ್ತಿ ಇಲಾಖೆ 1954 ರಲ್ಲಿ ರೂಪುಗೊಂಡಿತು. ಈಗ ಭಾಭಾ ಅಣುಶಕ್ತಿ ಸಂಶೋಧನ ಕೇಂದ್ರ ಎಂದು ಕರೆಯುವ ಅಣುಶಕ್ತಿ ಕ್ರಿಯಾಗಾರ 1956 ರಲ್ಲಿ ಟ್ರಾಂಬೆಯಲ್ಲಿ ತಲೆ ಎತ್ತಿ ನಿಂತಿತು. ನಮ್ಮ ಪ್ರಥಮ ರಿಯಾಕ್ಟರು "ಅಪ್ಸರ" ಅದೇ ವರ್ಷ ಆಗಸ್ಟ್ ತಿಂಗಳಲ್ಲಿ ಕ್ರಿಯಾಶೀಲವಾಯಿತು. ಕೆನಡ ದೇಶದ ಸಹಕಾರದಿಂದ ಕಟ್ಟಿದ ಸಂಶೋಧನ ರಿಯಾಕ್ಟರು "ಸೈರಸ್" 1960 ರ ಜುಲೈ ತಿಂಗಳಲ್ಲಿ ಕಾರ್ಯಾಚರಣೆಗೆ ತೊಡಗಿತು. ನಮ್ಮ ವಿಜ್ಞಾನಿಗಳು ರಿಯಾಕ್ಟರುಗಳ ಕಲೆ, ವಿನ್ಯಾಸ, ರಚನೆ ಮುಂತಾದ ವಿಚಾರಗಳಲ್ಲಿ ಪರಿಣತಿ ಹೊಂದಿ, ಹೊರಗಿನ ಸಹಾಯ ಮತ್ತು ನೆರವನ್ನು ಒಂದು ಕನಿಷ್ಠ ಮಿತಿಗೆ ತಂದುಕೊಂಡು, ಶಕ್ತಿ ರಿಯಾಕ್ಟರುಗಳನ್ನು (power reactors) ನಿರ್ಮಿಸುತ್ತಿದ್ದಾರೆ. ತಾರಾಪುರ ಮತ್ತು ರಾಣಾ ಪ್ರತಾಪಸಾಗರದ ಬಳಿ ಒಂದೊಂದು ಶಕ್ತಿ ರಿಯಾಕ್ಟರು ಕೆಲಸಮಾಡುತ್ತಿವೆ. 1960 ರಿಂದ ಯುರೇನಿಯಂ–235 ನ್ನು ಮತ್ತು 1964 ರಿಂದ ಪ್ಲುಟೋನಿಯಂ–239 ನ್ನು ಉತ್ಪಾದಿಸುವ ಕೆಲಸ ಪ್ರಾರಂಭವಾಗಿದೆ. ಸಂಶೋಧನ ಕ್ಷಿಪ್ರ ರಿಯಾಕ್ಟರು (fast reactor) "ಪೂರ್ಣಿಮ" 1972 ರಲ್ಲಿ ಕಾರ್ಯಾಚರಣೆಗೆ ತೊಡಗಿತು. ಇದರಲ್ಲಿ ಕ್ಷಿಪ್ರ ನ್ಯೂಟ್ರಾನುಗಳ ವೃದ್ಧಿಯ ಸ್ವರೂಪವನ್ನು ನಿರ್ಧರಿಸುವ ಪ್ರಯೋಗಗಳನ್ನು ನಡೆಸುತ್ತಿದ್ದಾರೆ. ಕಲ್ಪಾಕಂ ಅಲ್ಲಿ ಸ್ಥಾಪಿಸುತ್ತಿರುವ ಕ್ಷಿಪ್ರ ತಳಿವೃದ್ಧಿ ರಿಯಾಕ್ಟರಿನ (fast breeder reactor) ತಿರುಳಿಗೆ ಬೇಕಾದ ಪ್ಲುಟೋನಿಯಂ ರಾಣಾ ಪ್ರತಾಪಸಾಗರ ರಿಯಾಕ್ಟರಿಂದ ದೊರೆಯುತ್ತದೆ.

ಡಾ. ಭಾಭಾ ಮತ್ತು ಅವರ ಉತ್ತರಾಧಿಕಾರಿಗಳಾಗಿ ಕೆಲಸ ಮಾಡಿದ ಡಾ. ವಿಕ್ರಮ್ ಸಾರಾಭಾಯಿ ಅವರ ಅವಿಶ್ರಾಂತ ದುಡಿಮೆಯ ಫಲವಾಗಿ ನಮ್ಮ ದೇಶದ ಅಣುಶಕ್ತಿ ಯೋಜನೆ ಸಾಕಷ್ಟು ಬೆಳೆದಿದೆ. ಇಂದಿನ ಅಣುಶಕ್ತಿ ಕಮಿಷನ್ನಿನ ಅಧ್ಯಕ್ಷ ಡಾ. ಹೋಮಿ ಸೇತ್ನ ಮತ್ತು ಭಾಭಾ ಅಣುಶಕ್ತಿ ಸಂಶೋಧನ ಕೇಂದ್ರದ ಅಧ್ಯಕ್ಷ ಡಾ. ರಾಜಾರಾಮಣ್ಣ ಅವರು ಅತಿ ಸಾಮರ್ಥ್ಯದಿಂದ ಆ ಕೆಲಸವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಡಾ. ಸೇತ್ನ ಅವರು ಅಂತರರಾಷ್ಟ್ರೀಯ ಖ್ಯಾತಿ ಪಡೆದ ರಾಸಾಯನಿಕ ಇಂಜಿನಿಯರಾಗಿದ್ದಾರೆ. ಪ್ಲುಟೋನಿಯಂ ಉತ್ಪಾದನೆಗೆ ಅವರ ಸಂಶೋಧನೆಗಳೆ ಕಾರಣ. ನಮ್ಮಲ್ಲಿ ನಡೆಯುತ್ತಿರುವ ಅಣು ಶಕ್ತಿ (ನ್ಯೂಕ್ಲಿಯರ್ ಶಕ್ತಿ) ಗೆ ಸಂಬಂಧಪಟ್ಟ ಎಲ್ಲ ಕಾರ್ಯಕ್ರಮಗಳಿಗೂ ಅವರೇ ನಾಯಕರು. ಡಾ. ರಾಜಾರಾಮಣ್ಣ ಅವರು ಈ ದೇಶದ ಅಗ್ರಮಾನ್ಯ ಭೌತ ವಿಜ್ಞಾನಿಗಳು. ನ್ಯೂಟ್ರಾನುಗಳ ಮಂದನೀಕರಣದ (slowing down) ಬಗ್ಗೆ ವಿಜ್ಞಾನಿಗಳಿರುವ ಅರಿವಿಗೆ ಅವರು ನಡೆಸಿದ ಪ್ರಯೋಗಗಳು ಬಹುಮಟ್ಟಿಗೆ ಕಾರಣ. ರಾಜಾಸ್ಥಾನದ ಮರುಭೂಮಿಯಲ್ಲಿ ನ್ಯೂಕ್ಲಿಯರ್ ಸಾಧನ ಸಿಡಿಯಲು ಈ ಇಬ್ಬರು ಮಹನೀಯರೆ ಕಾರಣಕರ್ತರು.

೫. **ಭೂಗರ್ಭ ನ್ಯೂಕ್ಲಿಯರ್ ಸ್ಫೋಟ:** ಬಾಂಬಾಗಲಿ ಅಥವಾ ನ್ಯೂಕ್ಲಿಯರ್ ಸಾಧನವಾಗಲಿ ಸ್ಫೋಟಗೊಂಡಾಗ ನಿಯೋಜಿತವಾದ ಇಂಧನವೆಲ್ಲ ಉರಿಯಬೇಕು ಮತ್ತು ಅದು ಬಹುಬೇಗ ($< 10^{6}$ sec) ಆಗಬೇಕು. ಹೀಗಾಗಬೇಕಾದರೆ ವಿದಳನ ಸರಪಳಿ ಕ್ರಿಯೆ ದಿಗ್ಗನೆ ವೃದ್ಧಿಯಾಗಬೇಕು. ಇದು ಕ್ಷಿಪ್ರ ನ್ಯೂಟ್ರಾನು ಗಳಿಂದ ಮಾತ್ರ ಸಾಧ್ಯ. ಕ್ಷಿಪ್ರ ನ್ಯೂಟ್ರಾನುಗಳು ವಿದಳನ ಸರಪಳಿಯನ್ನು ಬೆಳೆಸಲು ಅನುಕೂಲವಾದ ಇಂಧನ ಗಳು ಯುರೇನಿಯಂ–233, ಯುರೇನಿಯಂ–235 ಮತ್ತು ಪ್ಲುಟೋನಿಯಂ–239.

ನ್ಯೂಕ್ಲಿಯರ್ ಸಾಧನವನ್ನು ಎರಡು ರೀತಿಯಲ್ಲಿ ಸಿಡಿಸಬಹುದು: ಎರಡು ಅಥವಾ ಹೆಚ್ಚು ಚಿಕ್ಕಗಾತ್ರದ ನ್ಯೂಕ್ಲಿಯರ್ ಇಂಧನದ ಮುದ್ದೆಗಳನ್ನು, ರಾಸಾಯನಿಕ ಮದ್ದಿನ ನೆರವಿನಿಂದ, ಥಕ್ಕನೆ ಒಂದುಗೂಡಿಸಿ ಆ ಸಂಯುಕ್ತ ಮುದ್ದೆ ಬೇಕಾದ ಕನಿಷ್ಠ ಗಾತ್ರಕ್ಕಿಂತ ದೊಡ್ಡದಾಗುವಂತೆ ಮಾಡಿ, ಅದಕ್ಕೆ ತತ್‌ಕ್ಷಣ ಒಂದು ನ್ಯೂಟ್ರಾನ್ ಆಕರ ಸಿಕ್ಕುವಂತೆ ಮಾಡುವುದು—ಒಂದು ರೀತಿ. ಆಗ ಭಯಂಕರ ಸ್ಫೋಟವುಂಟಾಗುತ್ತದೆ. ನ್ಯೂಕ್ಲಿಯರ್ ಇಂಧನವನ್ನು ಅಧಿಕತಮ ಒಳಕುಸಿತದ ಒತ್ತಡಕ್ಕೆ ಗುರಿಮಾಡಿ, ಅದರ ಗಾತ್ರ ಕಿರಿದಾಗಿ ಒಂದು ಮಿತಿಗೆ ತಲುಪಿದಾಗ, ತತ್‌ಕ್ಷಣ ಅದಕ್ಕೆ ಒಂದು ನ್ಯೂಟ್ರಾನ್ ಆಕರ ಸಿಕ್ಕುವಂತೆ ಮಾಡುವುದು—ಎರಡನೆಯ ರೀತಿ. ಒಳಕುಸಿತದ ಒತ್ತಡದಿಂದ ಸಂಕುಚಿಸಿದ ಇಂಧನದ ಸಾಂದ್ರತೆ ಹೆಚ್ಚಾದಂತೆ ನ್ಯೂಟ್ರಾನು ಮತ್ತು ನ್ಯೂಕ್ಲಿಯಸ್‌ಗಳ ಡಿಕ್ಕಿಯ ಸಂಭಾವ್ಯತೆ ಬೆಳೆದು ಸ್ಫೋಟವುಂಟಾಗುತ್ತದೆ. ಈ ವಿಧಾನಗಳನ್ನು ಕ್ರಮವಾಗಿ ಗನ್‌ಬ್ಯಾರೆಲ್ ವಿಧಾನ (Gun-barrel method) ಮತ್ತು ಒಳಕುಸಿತ ವಿಧಾನ (implosion method) ಎಂದು ಕರೆಯುತ್ತಾರೆ. ಆಲಮೊ ಗೋರ್ಡೊ ಮರುಭೂಮಿಯಲ್ಲಿ ಅಮೆರಿಕದ ವಿಜ್ಞಾನಿಗಳು ಮತ್ತು ಮಿಲಿಟರಿ ಅಧಿಕಾರಿಗಳು ಒಳಕುಸಿತದ ವಿಧಾನದಿಂದಲೇ ಮೊಟ್ಟಮೊದಲು ಪರೀಕ್ಷಾರ್ಥವಾಗಿ ಅಣುಬಾಂಬನ್ನು ಸ್ಫೋಟಿಸಿ ದುದು (1945). ಅದು ಸಿಡಿದಾಗ ಸಾವಿರ ಸೂರ್ಯರು ಒಮ್ಮೆಗೇ ಪ್ರಕಾಶವಾದಂತೆ ಬೆಳಕು ಚೆಲ್ಲಿತು ; ತದನಂತರ ಪ್ರಳಯವನ್ನು ಸಾರುವ ಬರಸಿಡಿಲಿನ ಅಬ್ಬರ ಕೇಳಿಸಿತು. ರಾಜಾಸ್ಥಾನದಲ್ಲಿ ಸಿಡಿದ ನ್ಯೂಕ್ಲಿಯರ್ ಸಾಧನ 350 ಮೀ.ಗಿಂತ ಆಳದಲ್ಲಿ ಭೂಮಿಯ ಒಳಗೆ ಸಿಡಿಯಿತು. ಆದುದರಿಂದ ಅದು ಚೆಲ್ಲಿದ ಬೆಳಕು ಕಾಣ ಲಿಲ್ಲ. ಅದರ ಆರ್ಭಟ ಕೇಳಲಿಲ್ಲ.

ಕೀಳುದರ್ಜೆ ಅದಿರನ್ನು ಹೊರಕ್ಕೆ ತೆಗೆಯಲು, ಎಣ್ಣೆ ಮತ್ತು ಅನಿಲಗಳನ್ನು ಸಂಚಯಿಸಲು, ಬಂದರುಗಳನ್ನು ನಿರ್ಮಾಣ ಮಾಡಲು, ಕಾಲುವೆಗಳನ್ನು ತೋಡಲು, ಭೂಗರ್ಭದಲ್ಲಿ ನೀರು, ಎಣ್ಣೆ ಮತ್ತು ಅನಿಲಗಳನ್ನು ಶೇಖರಿಸಲು ಪ್ರತಿವರ್ಷ ಲಕ್ಷಾಂತರ ಟನ್ ರಾಸಾಯನಿಕ ಮದ್ದನ್ನು ಪ್ರಪಂಚದ ಬೇರೆಬೇರೆ ಕಡೆಗಳಲ್ಲಿ ಸ್ಫೋಟಿಸುತ್ತಾರೆ. ನ್ಯೂಕ್ಲಿಯರ್ ಮದ್ದು ರಾಸಾಯನಿಕ ಮದ್ದಿಗಿಂತ ಹೆಚ್ಚು ಪರಿಣಾಮಕಾರಿ ಯಾದುದು. ಭೂಮಿಯ ಒಳಗೆ ತೀರ ಆಳದಲ್ಲಿ ನ್ಯೂಕ್ಲಿಯರ್ ಮದ್ದು ಸ್ಫೋಟಗೊಂಡರೆ ಆಗ ಉತ್ಪತ್ತಿ ಯಾಗುವ ಅಪಾರವಾದ ಶಕ್ತಿ ಷಾಕ್ ತರಂಗಗಳ (shock waves) ರೂಪದಲ್ಲಿ ಪ್ರಸಾರವಾಗುತ್ತದೆ. ಇದರಿಂದ ಭೂಗರ್ಭದ ರಚನೆ ಶಿಥಿಲಗೊಂಡು ತತ್ಫಲವಾಗಿ ಸ್ವಲ್ಪಕಾಲಾನಂತರ ಭೂಕಂಪ ಸಂಭವಿಸಬಹುದು. ರಾಜಾಸ್ಥಾನದಲ್ಲಿ ಸಿಡಿದ ನ್ಯೂಕ್ಲಿಯರ್ ಸಾಧನ ಇಂಥ ಪರಿಣಾಮಗಳನ್ನು ಕುರಿತಾದ ಅಧ್ಯಯನಕ್ಕಾಗಿಯೇ ಮೀಸಲಾಗಿತ್ತು. ನ್ಯೂಕ್ಲಿಯರ್ ಮದ್ದು (nuclear charge) ತೀರ ಆಳದಲ್ಲಿ ಸ್ಫೋಟವಾಗದಿದ್ದರೆ ಅದು ಭೂಮಿಯ ಹೊರಪದರವನ್ನು ಹರಿದು ನಭೋಮಂಡಲಕ್ಕೆ ವಿಕಿರಣ ಧೂಳನ್ನು ಚೆಲ್ಲಬಹುದು. ಅಂಥ ಧೂಳೇನೂ ರಾಜಾಸ್ಥಾನದಲ್ಲಿ ಕಾಣಿಸಿಕೊಳ್ಳಲಿಲ್ಲ ; ಕಾಣಿಸಿಕೊಂಡದ್ದು 150 ಮೀ. ವ್ಯಾಸವುಳ್ಳ ಸುಂದರವಾದ ಒಂದು ದೊಡ್ಡ ಗುಳಿ ಮಾತ್ರ. ಭೂಮಿಯೊಳಗಿನ ನೀರಿನ ಪಾತ್ರಗಳಲ್ಲಿ ವಿಕಿರಣ ವಸ್ತುಗಳು ಬೆರೆಯ ಬಹುದು. ಇದರಿಂದ ಜನಜೀವನದ ಮೇಲೆ ಭೀಕರ ಪರಿಣಾಮಗಳುಂಟಾಗುತ್ತವೆ. ರಾಜಾಸ್ಥಾನದ ಮರಳುಗಾಡಿ ನಲ್ಲಿ ಬಹಳ ಆಳದವರೆಗೆ ಹೋದರೂ ಜಲದ ದರ್ಶನವಾಗುವುದಿಲ್ಲ. ಆದುದರಿಂದ ಜನಜೀವನದ ಮೇಲೆ

ಸ್ಫೋಟದ ಪರಿಣಾಮವೇನೂ ಆಗಿಲ್ಲ. ಹೃದಯಸ್ತಂಭನದಿಂದ ಒಂದು ಕಾಗೆ ಅಲ್ಲಿ ಸತ್ತುಬಿದ್ದಿತ್ತುಅಷ್ಟೆ.

ಭೂಗರ್ಭದಲ್ಲಿ ನ್ಯೂಕ್ಲಿಯರ್ ಮದ್ದು ಸಿಡಿದಾಗ ಅದರ ಸುತ್ತ ಇರುವ ವಸ್ತುಗಳೆಲ್ಲ ಕರಗಿ ಆವಿಯಾಗಿ ಒಂದು ಗೋಳಾಕಾರದ ಕಂದಕ ನಿರ್ಮಾಣವಾಗುತ್ತದೆ. ಆವಿಯ ಒತ್ತಡ ಮೇಲಿನ ಮಣ್ಣಿನ ಹೊದಿಕೆಯನ್ನು ಕಿತ್ತು ಹಾಕುವಷ್ಟಿರದಿದ್ದರೆ, ಅದು ಸ್ವಲ್ಪ ಕಾಲದಲ್ಲಿ ಆರಿ ಹೆಪ್ಪುಗಟ್ಟಿಕೊಳ್ಳುತ್ತದೆ ; ಕಂದಕ ಹಾಗೇ ಉಳಿಯುತ್ತದೆ. ಅದರಲ್ಲಿ ನೀರು, ಎಣ್ಣೆ ಅಥವ ಅನಿಲವನ್ನು ತುಂಬಿ ಸುರಕ್ಷಿತವಾಗಿಡಬಹುದು. ಇಂಥ ಪ್ರಯೋಗಗಳನ್ನು ಅಮೆರಿಕ ಮತ್ತು ರಷ್ಯಾದೇಶಗಳೂ ನಡೆಸುತ್ತಿವೆ.

ರಾಜಾಸ್ಥಾನದಲ್ಲಿ ಸ್ಫೋಟಿಸಿದ ನ್ಯೂಕ್ಲಿಯರ್ ಸಾಧನಕ್ಕೆ ಉಪಯೋಗಿಸಿದ ಇಂಧನ ಪ್ಲುಟೋನಿಯಂ–239. ಇದು ರಿಯಾಕ್ಟರಿನಲ್ಲಿ ಯುರೇನಿಯಂ–238 ಒಂದು ನ್ಯೂಟ್ರಾನನ್ನು ವಿದಳನರಹಿತ ಕ್ರಿಯೆಯಲ್ಲಿ ನುಂಗುವುದರಿಂದ ಸೃಷ್ಟಿಯಾಗುತ್ತದೆ. ಇದರ ಜೊತೆಗೆ ಅಲ್ಪಪ್ರಮಾಣದಲ್ಲಿ ಪ್ಲುಟೋನಿಯಂ–240 ಕೂಡ ಸೃಷ್ಟಿಯಾಗುತ್ತದೆ. ಸ್ಫೋಟಕ್ಕಾಗಿ ಉಪಯೋಗಿಸುವ ನ್ಯೂಕ್ಲಿಯರ್ ಮದ್ದಿನಲ್ಲಿ ಪ್ಲುಟೋನಿಯಂ-240ರ ಅಂಶ ತೀರಾ ಕಡಮೆ ಇರಬೇಕು. ಕಾರಣ ಪ್ಲುಟೋನಿಯಂ–240 ಅದಾಗಿಯೆ ವಿದಳನಗೊಳ್ಳುವ ಜೀವಿತ ಕಾಲ ಬಹಳ ಕಡಮೆ. ಅದು ವಿದಳನಗೊಂಡಾಗ ಹೊರಬರುವ ನ್ಯೂಟ್ರಾನುಗಳು ಭೌತಿಕವಾಗಿ ವೃದ್ಧಿ ಹೊಂದುವ ವಿದಳನ ಸರಪಳಿಯನ್ನು ಪ್ರಾರಂಭಿಸಬಹುದು. ಹೀಗಾಗುವುದನ್ನು ತಡೆಯಬೇಕಾದರೆ ಪ್ಲುಟೋನಿಯಂ–240 ರ ಅಂಶವನ್ನು ಆವಶ್ಯಕವಾಗಿ ತಗ್ಗಿಸಬೇಕು. ಈ ದಿಶೆಯಲ್ಲಿ ಡಾ. ಸೇತ್ನ ಮತ್ತು ಅವರ ಸಂಗಡಿಗರು ತೋರಿರುವ ತಂತ್ರಕೌಶಲ ಅದ್ಭುತವಾದುದು.

೬. **ಉಪಸಂಹಾರ** : ರಾಜಾಸ್ಥಾನದ ಸ್ಫೋಟ ನಮ್ಮ ದೇಶ ಅಣುಶಕ್ತಿಕ್ಷೇತ್ರದಲ್ಲಿ ಸಾಧಿಸಿರುವ ಪ್ರಗತಿಯನ್ನು ಸಹಜವಾಗಿಯೇ ಪ್ರತಿಬಿಂಬಿಸುತ್ತದೆ. ಅಣುಶಕ್ತಿಯೋಜನೆ ಅನೇಕ ವೈಜ್ಞಾನಿಕ ಮತ್ತು ಕೈಗಾರಿಕಾ ಚಟುವಟಿಕೆಗಳಿಗೆ ನೆರವಾಗಿದೆ. ಟ್ರಾಂಬೆಯಲ್ಲಿರುವ ವಾನ್‌ಡಿಗ್ರಾಫ್ ಉತ್ಪಾದಕ, ನಂಗಲ್ಲಿನಲ್ಲಿರುವ ಭಾರಜಲ ಪ್ಲಾಂಟ್, ಗೋರಿಬಿದನೂರಿನಲ್ಲಿರುವ ಸೀಸ್ಮೋಗ್ರಾಫುಗಳ ಕೇಂದ್ರ, ತುಂಬದಲ್ಲಿರುವ ಅಂತರಿಕ್ಷ ಸಂಶೋಧನ ಕೇಂದ್ರ ಹೈದರಾಬಾದಿನಲ್ಲಿರುವ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಮತ್ತು ಕಲ್ಕತ್ತದಲ್ಲಿರುವ ವ್ಯತ್ಯಸ್ತಶಕ್ತಿ ಸೈಕ್ಲೊಟ್ರಾನ್—ಇವುಗಳೆಲ್ಲ ಒಂದಲ್ಲ ಒಂದುರೀತಿ ಅಣುಶಕ್ತಿ ಯೋಜನೆಯ ಶಾಖೆಗಳೆ ಆಗಿವೆ.

ಈಗ ಪ್ರಪಂಚದಲ್ಲಿ ನ್ಯೂಕ್ಲಿಯರ್ ಸಾಧನಗಳ ಸ್ಫೋಟ ರಾಷ್ಟ್ರೀಯ ಹೆಗ್ಗಳಿಕೆಯ ಚಿಹ್ನೆಯಾಗಿದೆ. ನಮ್ಮ ದೇಶ ಪೈಪೋಟಿಯಿಂದ ನ್ಯೂಕ್ಲಿಯರ್ ಸಾಧನವನ್ನು ಸ್ಫೋಟಿಸಿಲ್ಲ. ಇಲ್ಲಿನ ಗುರಿ ಮಾನವ ಕಲ್ಯಾಣ, ಆಧುನಿಕ ನಾಗರಿಕತೆಯ ಸವಲತ್ತುಗಳು ಬಹುಸಂಖ್ಯಾತ ಜನರಿಂದ ದೂರವೆ ಉಳಿದಿವೆ. ಅವುಗಳು ಈ ಜನರಿಗೆ ಎಟುಕಲು ಸಂಪತ್ತು ಬೆಳೆಯಬೇಕು. ವ್ಯವಸಾಯ, ಕೈಗಾರಿಕೆ, ತಂತ್ರವಿದ್ಯೆ—ಹೀಗೆ ಜನಹಿತದ ಗುರಿಯುಳ್ಳ ಅನೇಕ ಕಾರ್ಯಕ್ಷೇತ್ರಗಳಲ್ಲಿ ಬೆಳವಣಿಗೆಗೆ ನ್ಯೂಕ್ಲಿಯರ್ ಸಾಧನದ ಸ್ಫೋಟ ಹೇತುವಾಗುತ್ತದೆಂದು ನಮ್ಮ ನಂಬಿಕೆ.

ಕೋಟಿ ಸೂರ್ಯಸಮಪ್ರಭಾ
ಓ ! ದಿವ್ಯಾಗ್ನಿ, ಸಕಲಚೇತನ
ತಲೆಬಾಗು ಲೋಕಹಿತಕೆ

ಬಿ. ಎಸ್. ನರಿಹರಿರಾವ್

ತಾಳೆಹೂವಿನ ಸ್ವಾರಸ್ಯ ಬಳಕೆಗಳು

ಹೂವುಗಳನ್ನು ಕಂಡರೆ ಯಾರಿಗೆ ಸಂತೋಷವಾಗುವುದಿಲ್ಲ ? ಅದರಲ್ಲೂ, ವಿವಿಧ ವರ್ಣರಾಗಗಳಲ್ಲಿ ಸೊಬಗನ್ನು ಬೀರುವ ಹೂವುಗಳಾದರೆ ಈ ಆನಂದ ಮತ್ತಷ್ಟು ಹೆಚ್ಚಾಗುತ್ತದೆ. ಇವರ ಜತೆಗೆ ಮಧುರ ಹಾಗೂ ಆಕರ್ಷಕ ಪರಿಮಳ ನೀಡುವ ಹೂವುಗಳಿಗಂತೂ ಈ ದೃಷ್ಟಿಯಿಂದ ಅಗ್ರಸ್ಥಾನವಿದೆ. ಗುಲಾಬಿ, ಮಲ್ಲಿಗೆ, ಸಂಪಿಗೆ ಮುಂತಾದುವು ಈ ಗುಂಪಿಗೆ ಸೇರಿವೆ.

ಎಲೆಯ ಮರೆಯ ಕಾಯಿಯಂತೆ, ವನಸುಮಗಳಾಗಿ ಮಾನವ ಕುಲಕ್ಕೆ ವಿಶಿಷ್ಟ ಸೇವೆ ಸಲ್ಲಿಸುವ ಇತರ ಕೆಲವು ಹೂವುಗಳಿವೆ. ಈ ಪೈಕಿ ತಾಳೆ ಅಥವಾ ಕೇದಗೆ ಹೂವಿನ ಹೆಸರನ್ನು ಹಲವರು ಕೇಳಿರಬಹುದು ; ಕೆಲವರು ಬಳಸಿರಲೂಬಹುದು. ವ್ಯಾಘ್ರಮುಖಗೋವಿನಂತಿದೆ—ಇದರ ರೂಪ. ಹೊರಗಡೆ ನೋಡಿದರೆ ಮುಳ್ಳುಗಳಿಂದ ಆವೃತವಿರುವ ಹಸಿರು ಎಲೆಯ ಕವಚ ; ಆದರೆ ಇದರ ಒಳಗಡೆ ಹಲವು ತೆಳುಹಳದಿ ಅಥವಾ ಬಿಳಿಯ ಪದರಗಳ ಸುಗಂಧ ಪರಿಮಳ ಬೀರುವ ಹೂವಿರುವುದು ಅದನ್ನು ಬಿಡಿಸಿದಾಗ ಮಾತ್ರ ತಿಳಿಯುತ್ತದೆ.

ತಾಳೆ ಅಥವಾ ಕೇದಗೆ ಅಥವಾ ಕೇತಕಿ ಎಂಬ ಹೆಸರಿನ ಈ ಹೂವಿಗೆ ಪ್ರಬಲ ಸುವಾಸನೆಯಿದೆ. ಕೆಲವರಿಗೆ ಈ ವಾಸನೆ ಅಷ್ಟು ಪ್ರಿಯವಲ್ಲವಂತೆ ! ಏನೇ ಇರಲಿ, ಶ್ರಾವಣ-ಭಾದ್ರಪದ ಮಾಸಗಳಲ್ಲಿ ಬರುವ ಹಬ್ಬ-ಹರಿದಿನಗಳಲ್ಲಿ ಈ ಹೂವು ದೇವತಾರಾಧನೆಗೆ ಬೇಕು. ಇದಲ್ಲದೆ, ಈಗ ಕಡಮೆಯಾಗುತ್ತಿರುವ ಹಿಂದಿನ ಸಂಪ್ರದಾಯವಾದ ಹೆಣ್ಣುಮಕ್ಕಳ ಕೇಶಾಲಂಕಾರಕ್ಕೂ ಇದರ ಅಗತ್ಯವಿದೆ. ಈ ಸುಂದರ ಹಾಗೂ ವಿಚಿತ್ರ ಹೂವು ಕೇವಲ ಅಲಂಕಾರಕ್ಕೆ ಮೀಸಲಾಗಿಲ್ಲ. ಇದರ ಹಣ್ಣು ಸೇವನೆಗೆ ಸಿದ್ಧವಾಗುವಂತೆ, ಈ ಹೂವು ಪರಿಮಳ ದ್ರವಗಳನ್ನು ನೀಡುತ್ತದೆ. ಇಷ್ಟೇ ಅಲ್ಲದೆ ಈ ಗಿಡದ ಎಲೆಗಳು ನಮಗೆ ಹಲವು ರೂಪದಲ್ಲಿ ಉಪಕಾರಿಯಾಗಿವೆ.

ಅರಣ್ಯ, ಹೊಲ, ಗದ್ದೆ, ಮತ್ತು ಕೊಳ, ಸರೋವರ, ಸಮುದ್ರ ತೀರಗಳಲ್ಲಿ ತಾಳೆ ವ್ಯಾಪಕವಾಗಿ ಬೆಳೆಯುತ್ತದೆ. ಸುಮಾರು ಆರು ಅಡಿ ಎತ್ತರವಿರುವ ಈ ಗಿಡ ಭೂಮಿಯಲ್ಲಿ ಸುಭದ್ರವಾಗಿ ನಿಲ್ಲಲು ಅದರ ಬಿಳಲು ಬೇರುಗಳೇ ಕಾರಣ. ಎಂದಿನಂತೆ ಎಲೆಗಳ ಬಣ್ಣ ಹಸಿರು. ಸುಮಾರು 0.9–1.5 ಸೆಂ. ಮೀ. ಇರುವ ಈ ಎಲೆಗಳ ಅಂಚು ಮತ್ತು ಮಧ್ಯನಾಳದಲ್ಲಿ ಮುಳ್ಳುಗಳಿವೆ. ಹೂವುಗಳು ಎರಡು ರೀತಿಯವು. ಗಂಡು ಹೂವು ಗಾತ್ರದಲ್ಲಿ ದೊಡ್ಡದು. ಹೊಂಬಾಳೆಯಂತಿರುವ ಈ ಹೂವಿನ ಉದ್ದ 25–30 ಸೆಂ. ಮೀ. ಈ ದೃಷ್ಟಿಯಿಂದ ಹೆಣ್ಣು ಹೂವಿನ ಗಾತ್ರ ತೀರ ವ್ಯತಿರಿಕ್ತವೆನಿಸಬಹುದು. ಕೇವಲ 5 ಸೆಂ. ಮೀ. ಉದ್ದವಿರುವ ಹೆಣ್ಣು ಹೂವುಗಳು ಈ ರೀತಿ ಎರಡನೆಯ ಗುಂಪಿಗೆ ಸೇರಿವೆ.

ಹಲವು ಬಗೆಯ ತಾಳೆ ಗಿಡಗಳಿವೆ. ಕೆಲವು ನಿರ್ದಿಷ್ಟ ಬಳಕೆಗಳಿಗೆ ಇವು ಸೀಮಿತವಾಗಿರುವುದೂ ಉಂಟು. 'ಸಮಾಕ್' ಎಂಬ ಒಂದು ಬಗೆಯ ತಾಳೆ ಗಿಡವಿದೆ. ಇದರ ಎಲೆಗಳು ನಾರಿನಿಂದ ಕೂಡಿ ಬಹು ಕಠಿಣವಾಗಿವೆ.

ಚಾಪೆಹೆಣೆಯಲು ಈ ಎಲೆಗಳನ್ನು ಬಳಸಬಹುದು. ಇದಕ್ಕಿಂತ ಸ್ವಾರಸ್ಯ ಮತ್ತು ಉಪಯುಕ್ತ ತಾಳೆಗಿಡದ ಬಗೆಯೊಂದಿದೆ. ಇದು ಮಾರ್ಷಲ್ ದ್ವೀಪಗಳಲ್ಲಿ ಮಾತ್ರ ದೊರೆಯುತ್ತದೆ. ಅಲ್ಲಿನ ತಾಳೆಗಿಡ ಮಧುರರುಚಿ ಹಾಗೂ ವಾಸನೆಯಿರುವ ಸೇಬಿನಂತಹ ಹಣ್ಣನ್ನು ನೀಡುತ್ತದೆ. ಅಲ್ಲಿನ ನಿವಾಸಿಗಳು ಈ ಹಣ್ಣನ್ನು ಆಹಾರವಾಗಿ ಬಳಸುವ ಪದ್ಧತಿಯಿದೆ.

ವ್ಯವಸ್ಥಿತ ರೀತಿ ತಾಳೆಗಿಡ ಬೆಳೆಯುವ ಪದ್ಧತಿ ಹಲವು ದೇಶಗಳಲ್ಲಿದೆ. ಕತ್ತರಿಸಿದ ಗೆಡ್ಡೆಗಳ ಭಾಗವನ್ನು ನೆಟ್ಟು ಸಸ್ಯ ಪ್ರಸಾರ ಮಾಡಬಹುದು. 3–4 ವರ್ಷಗಳ ನಂತರ ಇಂತಹ ಗಿಡಗಳಲ್ಲಿ ಹೂವುಗಳು ಕಾಣಿಸಿಕೊಳ್ಳುವುವು. ಮಳೆಗಾಲದ ಅವಧಿಯಲ್ಲಿ, ಎಂದರೆ ಜುಲೈ–ಅಕ್ಟೋಬರ್ ತಿಂಗಳುಗಳಲ್ಲಿ ಸಾಮಾನ್ಯವಾಗಿ ಈ ಹೂವು ವಿಪುಲವಾಗಿ ದೊರೆಯುತ್ತದೆ. ಪೂರ್ಣವಾಗಿ ಮತ್ತು ಸುಪುಷ್ಟ ರೀತಿ ಬೆಳೆದ ಗಿಡವೊಂದರಿಂದ 30–40 ಗಂಡು ಹೂವುಗಳು ದೊರೆಯುತ್ತವೆ.

ಕೇವ್ಡ ಅತ್ತರ್ ಮತ್ತು ಪನ್ನೀರು: ಉತ್ತರ ಭಾರತದಲ್ಲಿ ತಾಳೆಹೂವಿನಿಂದ 'ಕೇವ್ಡ ಅತ್ತರ್' ಮತ್ತು 'ಕೇವ್ಡ ಪನ್ನೀರು' ಎಂಬ ಸುಗಂಧ ವಸ್ತುಗಳನ್ನು ತಯಾರಿಸುತ್ತಾರೆ. ಪೂರ್ಣವಾಗಿ ಬೆಳೆದಿರುವ ತಾಳೆಹೂವಿನ ದಳಗಳನ್ನು 3–4 ಚೂರುಗಳಾಗಿ ಕತ್ತರಿಸಿ, ಅವುಗಳನ್ನು ನೀರಿನೊಡನೆ ಮಿಶ್ರಮಾಡಿ, ಭಟ್ಟಿಯಿಳಿಸಿ, ಹೊರಬರುವ ಸುಗಂಧ ಅನಿಲವನ್ನು ಗಂಧದೆಣ್ಣೆ ಅಥವಾ ಶುದ್ಧಿಗೊಳಿಸಿದ ಪ್ಯಾರಾಫಿನ್ ದ್ರವದಲ್ಲಿ ಇಂಗಿಸಿದಾಗ 'ಕೇವ್ಡ ಅತ್ತರ್' ಸಿದ್ಧವಾಗುತ್ತದೆ. ಉತ್ತಮ ಗುಣ–ಲಕ್ಷಣಗಳಿರುವ ಅತ್ತರ್‌ತಯಾರಿಸಲು ಹಾಲಿನ ಕೆನೆ ಬಣ್ಣದ ತಾವರೆ ಹೂವನ್ನು ಮಾತ್ರ ಬಳಸಬೇಕು. ಕೇವ್ಡ ಪನ್ನೀರು ತಯಾರಿಸುವುದು ಬಹುಪಾಲು ಅತ್ತರ್‌ನಂತೆಯೇ ಇದೆ. ಭಟ್ಟಿಯಿಳಿಸಿದಾಗ ಹೊರಬರುವ ಅನಿಲವನ್ನು 'ಪ್ಯಾರಾಫಿನ್' ಅಥವಾ ಗಂಧದೆಣ್ಣೆಯ ಬದಲು ನೀರಿನಲ್ಲಿ ಇಂಗಿಸುವುದೇ ಈ ವಿಧಾನದ ವೈಶಿಷ್ಟ್ಯವಾಗಿದೆ. ಆಗ ಸಿದ್ಧವಾಗುವುದೇ ಜನಪ್ರಿಯತೆಗಳಿಸಿರುವ 'ಪನ್ನೀರ್'.

ಭಾರತದಲ್ಲಿ ಪರಿಮಳದ್ರವಗಳು ಪ್ರಾಚೀನಕಾಲದಿಂದ ಜನಜೀವನದಲ್ಲಿ ಹಾಸುಹೊಕ್ಕಾಗಿ ಬೆಳೆದುಬಂದಿವೆ. ಈ ಗುಂಪಿಗೆ 'ಕೇವ್ಡ ಅತ್ತರ್' ಸೇರಿದೆ. ಅಲಂಕಾರ ಸಾಧನಗಳು, ಕೇಶಾಲಂಕಾರ ತೈಲಗಳು, ಅಗರಬತ್ತಿ,ಸುಗಂಧ ಸಾಬೂನುಗಳು ಮತ್ತು ಸುಗಂಧದ್ರವಗಳನ್ನು ತಯಾರಿಸಲು ಈ ಅತ್ತರ್ ಬಳಸುವುದುಂಟು. ಇದಲ್ಲದೆ, ಹಲವಾರು ಸಿಹಿತಿಂಡಿ ಮತ್ತು ಪಾನೀಯಗಳಿಗೆ ಮಧುರ ಕಂಪನ್ನೀಯಲು 'ಕೇವ್ಡ ಅತ್ತರ್' ಸೇರಿಸುವುದೂ ಉಂಟು.

ಇತರ ಉಪಯೋಗಗಳು : ತಾಳೆಯ ಗಿಡದ ತುದಿ ಮೊಗ್ಗು ಎಳೆಯದಾಗಿದ್ದರೆ ಕೆಲವರಿಗೆ ಸಂತೋಷ. ಏಕೆಂದರೆ, ಅದು ಅವರಿಗೆ ರುಚಿಯಾದ ತರಕಾರಿಯಾಗುವುದು. ಎಳೆಯ ಎಲೆಗಳನ್ನು ಹಾಗೆಯೇ ಅಥವಾ ಬೇಯಿಸಿ ಸಂಬಾರು ವಸ್ತುಗಳೊಡನೆ ಸೇರಿಸಿ, ಸೇವಿಸುವ ಪದ್ಧತಿ ಅಪರೂಪವೇನಲ್ಲ. ಅಭಾವ ಕಾಲದಲ್ಲಿ ಸಾಮಾನ್ಯ ಬಗೆಯ ಹಣ್ಣಿನ ತಿರುಳು ಆಹಾರವಾಗಿ ಹಲವರಿಗೆ ಹಸಿವನ್ನು ಇಂಗಿಸುತ್ತದೆ. ಆದರೆ ಇದರಲ್ಲಿ 'ರಾಫೈಡ್' ಎಂಬ ಗಂಟಲಿನಲ್ಲಿ ತುರಿಕೆಯುಂಟುಮಾಡುವ ರಾಸಾಯನಿಕವಿದೆ. ಆದರೂ ದೂರ ಪ್ರಾಚ್ಯದ ಕೆಲವುದೇಶಗಳಲ್ಲಿ ಸಮೃದ್ಧಿಯ ವರ್ಷಗಳಲ್ಲಿ ಸಹ ಇದು ಜನಪ್ರಿಯ ಆಹಾರವೆನಿಸಿದೆ.


ತಾಳೆಯ ಗಿಡದ ಎಲೆಗಳಿಂದ ಚಾಪೆಹೆಣೆಯಬಹುದು. ಇದರಂತೆಯೇ ಹಲವಾರು ನಿತ್ಯೋಪಯೋಗಿ ವಸ್ತುಗಳನ್ನು ಈ ಎಲೆಯಿಂದ ತಯಾರಿಸಬಹುದು. ಹ್ಯಾಟ್, ಹಗ್ಗ, ಬುಟ್ಟಿ, ಛತ್ರಿ, ಕಾಫಿಬೀಜ, ಸಕ್ಕರೆ ಮತ್ತು ಧಾನ್ಯಗಳನ್ನು ತುಂಬಲು ಬಳಸುವ ಚೀಲಗಳು–ಈ ಪೈಕಿ ಪ್ರಧಾನವಾಗಿದೆ. ಕಾಗದ ತಯಾರಿಸಲು ಈ ಎಲೆ ಅತ್ಯುಪಯುಕ್ತ ಮೂಲವಸ್ತುವೆನಿಸಿದೆ. ಗಿಡದ ಬೇರುಗಳಲ್ಲಿ ನಾರಿನ ಅಂಶ ಅಧಿಕ ಪ್ರಮಾಣದಲ್ಲಿದೆ. ಸುಣ್ಣ ಹೊಡೆಯುವ ಹಾಗೂ ಬಣ್ಣ ಬಳಿಯಲು ಬೇಕಾದ ಬ್ರಶ್‌ಗಳನ್ನು ಇಂತಹ ಬೇರುಗಳಿಂದ ತಯಾರಿಸಬಹುದು. ತಾಳೆಗಿಡ ಮತ್ತು ಅದರ ಉತ್ಪನ್ನಗಳಿಗೆ ಸ್ವಾರಸ್ಯ ಇತಿಹಾಸವಿದೆಯೆಂಬುದು ಈಗ ಖಚಿತವಾಯಿತು, ತಾನೇ !

ಕೆ. ಎಸ್. ಲಕ್ಷ್ಮಣರಾವ್

ಚೋದಕಸ್ರಾವಗಳು*

ಒಂದು ಬಗೆಯ ರಾಸಾಯನಿಕ ವಸ್ತುಗಳಾದ ಚೋದಕಸ್ರಾವಗಳು ದೇಹದ ಕೆಲವು ಭಾಗಗಳಲ್ಲಿ ಉತ್ಪತ್ತಿಯಾಗಿ ರಕ್ತವನ್ನು ಸೇರಿ, ದೇಹದ ನಾನಾ ಭಾಗಗಳಲ್ಲಿ ಅನೇಕ ಬಗೆಯ ಚಟುವಟಿಕೆಗಳು ನಡೆಯುವುದಕ್ಕೆ ಸ್ಫೂರ್ತಿದಾಯಕವಾಗಿವೆ. ಕೆಲವು ನಾಳಗಳುಳ್ಳ ರಸಗ್ರಂಥಿಗಳಿಂದ ಬೆವರು, ಜೊಲ್ಲು ಮುಂತಾದುವು ಉತ್ಪತ್ತಿಯಾದರೆ, ಚೋದಕಸ್ರಾವಗಳು ಉತ್ಪತ್ತಿ ಮಾಡುವ ರಸಗ್ರಂಥಿಗಳು ನಾಳಗಳನ್ನೊಳಗೊಂಡಿಲ್ಲವಾದ್ದರಿಂದ, ಅವುಗಳನ್ನು ನಿರ್ನಾಳ ರಸಗ್ರಂಥಿಗಳೆಂದು ಕರೆಯುತ್ತಾರೆ. ಈ ನಿರ್ನಾಳ ರಸಗ್ರಂಥಿಗಳು ಸ್ರವಿಸುವ ಅಂತಃಸ್ರಾವಗಳಲ್ಲಿ ಚೋದಕ ಸ್ರಾವಗಳು ಸೇರಿರುತ್ತವೆ. ಅನೇಕ ಜೀವ ಸತ್ತ್ವಗಳು ಇವುಗಳ ಉತ್ಪತ್ತಿಗೆ ಸಹಾಯಕರ. ಈ ವಸ್ತುಗಳ ಸಮಾನತೆ ಇಲ್ಲದಿದ್ದಾಗ, ದೇಹವು ಅನೇಕ ರೋಗಗಳಿಗೆ ಬೀಡಾಗುವುದರ ಜೊತೆಗೆ, ಇವು ದೇಹವನ್ನು ಚುರುಕುಗೊಳಿಸಿ, ಭೌತಿಕ ಮತ್ತು ಮಾನಸಿಕ ಸ್ಥಿತಿಗಳನ್ನು ಉತ್ತಮಗೊಳಿಸಬಲ್ಲವು. ನಮ್ಮ ರಕ್ತನಾಳಗಳ ಒಟ್ಟು ಉದ್ದ 62000 ಮೈಲಿಗಳು. 8 ಸೆಕೆಂಡಿನಲ್ಲಿ ಇಷ್ಟು ದೂರ ರಕ್ತಚಲನೆ ಸಾಮಾನ್ಯವಾಗಿ ನಡೆಯಬಲ್ಲದು. ಇದಕ್ಕೆ ಇವುಗಳ ಚಲನೆಯೂ ಸಾಕ್ಷಿ.

ದೇಹದ ನಿಯಂತ್ರಣ ವ್ಯವಸ್ಥೆಗಳು




ಪಿಟ್ಯುಟರಿ ರಸಗ್ರಂಥಿಯ ವ್ಯಾಸೋಪ್ರೆಸ್ಸಿನ್ : "ವ್ಯಾಸೋಪ್ರೆಸ್ಸಿನ್" ಎಂಬ ಸಸಾರಜನಕ ವಸ್ತುವು ಒಂದು ಚೋದಕಸ್ರಾವ. ಇದು ಪಿಟ್ಯುಟರಿ ರಸಗ್ರಂಥಿಯಲ್ಲಿ ಉತ್ಪತ್ತಿಯಾಗಿ ರಕ್ತಕ್ಕೆ ಹರಿಯುತ್ತದೆ. ಇಲ್ಲಿ ಜಾಗ್ರತೆ ಹರಿದಾಗ ರಕ್ತನಾಳಗಳನ್ನು ಸಂಕುಚಿಸಿ, ಮೂತ್ರ ಜನಕಾಂಗವು ಹೆಚ್ಚು ನೀರನ್ನು ಹೀರುವಂತೆ ಮಾಡುತ್ತದೆ. ಇದರಿಂದ ಮೂತ್ರದ ಮೂಲಕ ಹೆಚ್ಚು ನೀರು ಹರಿಯಲು ಸಾಧ್ಯವಿಲ್ಲ. "ವ್ಯಾಸೋಪ್ರೆಸ್ಸಿನ್" ಎಂಬ ವಸ್ತುವನ್ನು ಕೃತಕವಾಗಿಯೂ ತಯಾರಿಸಿದ್ದಾರೆ. ಇದು 8 ಅಮೈನೋ ಆಮ್ಲ


* Harmones

ಗಳಿಂದ ರಚಿತವಾದ 'ಪಾಲಿಪೆಪ್ಟೈಡ್' ಅನಿಸಿಕೊಂಡ ವಸ್ತು. ಇದರಿಂದ ಪ್ರೋಟೀನು ತಯಾರಾಗಬೇಕಾದರೆ, 30 ಅಮೈನೋ ಆಮ್ಲಗಳು ಹೆಣೆಯಲ್ಪಡಬೇಕು. ಇದರಲ್ಲಿರುವ 8 ಅಮೈನೋಆಮ್ಲಗಳ ಪೈಕಿ, 2 ಅಮೈನೋ ಆಮ್ಲಗಳು ಬದಲಾವಣೆ ಹೊಂದಿದರೆ, "ಆಕ್ಸಿಟಾಸಿನ್"ಎಂಬ ಮತ್ತೊಂದು ಚೋದಕವಸ್ತು ಉಂಟಾಗುತ್ತದೆ. ಈ ವಸ್ತುವು ಶಿಶುಜನನವಾದನಂತರ ತಾಯಿಯ ಗರ್ಭಕೋಶವನ್ನು ಸಂಕುಚಿಸಿ, ಸ್ತನಗಳಲ್ಲಿ ಹಾಲುಉತ್ಪತ್ತಿಯಾಗುವಂತೆ ಮಾಡುತ್ತದೆ. ಇವರಲ್ಲಿರುವ ಅಮೈನೋ ಆಮ್ಲಗಳು ಯಾವುವೆಂದರೆ ಲೈಸೀನ್, ಅರ್ಜಿನಿನ್ ಮತ್ತು ಐಸೋಲ್ಯೂಸೀನ್ ಮೂತ್ರಜನಕಾಂಗವನ್ನು ಮತ್ತು ರಕ್ತಗಳನ್ನು ಹರಿಸುವ ಉಕ್ಕಡ ಅಂದರೆ ತಪ್ಪಾಗಲಾರದು. ಸಿಹಿಮೂತ್ರ ರೋಗದವರು (Diabetes Inspidus) ಪ್ರತಿದಿವಸ 20 ಲೀಟರ್‌ಗಳಷ್ಟು ನೀರನ್ನು ಮೂತ್ರದ ಮೂಲಕ ಹರಿಸಬೇಕಾಗುತ್ತದೆ. ಅವರ ಬಾಯಾರಿಕೆ ಹೆಚ್ಚಾಗಿ ಹೆಚ್ಚು ನೀರನ್ನು ಕುಡಿಯುತ್ತಾರೆ. ಅವರ ಬಾಯಿರುಚಿ ಕೆಡುತ್ತದೆ. ಪಳಗಿದ ಪ್ರಾಣಿಗಳ ಪಿಟ್ಯುಟರಿ ರಸಗ್ರಂಥಿಯಿಂದ ಪಡೆದ ವ್ಯಾಸೋ ಪ್ರೆಸ್ಸಿನ್ನನ್ನು ಇಂಜೆಕ್ಷನ್ ಮೂಲಕ ಸೇವಿಸುವುದರಿಂದ ಈ ರೋಗ ನಿವಾರಣೆಯುಂಟಾಗುತ್ತದೆ. ವ್ಯಾಸೋ ಪ್ರೆಸ್ಸಿನ್ನಿಗೆ ಕಪಿಗಳೇ ಆಧಾರ. ಪ್ರಾಣಿಗಳ ರಸಗ್ರಂಥಿಯಿಂದ ಪಡೆದ ಪ್ರೋಟೀನ್ ಚೋದಕಸ್ರಾವಗಳ ಪೈಕಿ, ವ್ಯಾಸೋ ಪ್ರೆಸ್ಸಿನ್ ಮೊದಲನೆಯದು. ದೇಹದಲ್ಲಿ ಉತ್ಪತ್ತಿಯಾಗುವ ಅನೇಕ ಚೋದಕಸ್ರಾವಗಳು ಲವಣಗಳ ಸಮಾನತೆಯನ್ನುಂಟುಮಾಡುತ್ತವೆ.

ಥೈರಾಯ್ಡ್ ರಸಗ್ರಂಥಿ : ಥೈರಾಯ್ಡ್ ರಸಗ್ರಂಥಿಯು ಉತ್ಪತ್ತಿಮಾಡುವ 'ಥೈರಾಕ್ಸಿನ್' ಎಂಬ ಚೋದಕಸ್ರಾವದಲ್ಲಿ ಅಯೋಡಿನ್ ಮೂಲವಸ್ತುವಿದೆ. ಥೈರಾಯ್ಡ್ ರಸ ಗ್ರಂಥಿಯು ಗಂಟಲಿನಲ್ಲಿ ಚಾಚಿರುವ ಭಾಗ. ನಮ್ಮ ಆಹಾರದಲ್ಲಿ ಅಯೋಡಿನಿನ ಕೊರತೆಯುಂಟಾದಾಗ, ಇದರಿಂದ ಮಾನಸಿಕ ಮತ್ತು ದೈಹಿಕ ಚಟುವಟಿಕೆಗಳು ಕುಗ್ಗಿಹೋಗಿ, ನಮ್ಮ ಚೈತನ್ಯವೇ ಕಡಿಮೆಯಾಗುತ್ತದೆ. ಹೆಂಗಸರು ಹೆಚ್ಚಾಗಿ ಈ ಕೊರತೆಗೊಳಗಾಗುತ್ತಾರೆ. ಕತ್ತಿನ ಗಂಟು (Adam's apple) ಊದಿದರೆ, ಇದರಿಂದ ಥೈರಾಯ್ಡ್ ರಸಗ್ರಂಥಿಯ ಚಟುವಟಿಕೆ ಕಡಿಮೆಯಾಗಿದೆ ಎಂದು ಊಹಿಸಬಹುದು. ಸ್ತ್ರೀಯರಲ್ಲಿ ಈ ಸ್ಥಿತಿಯುಂಟಾದರೆ, ಅವರಲ್ಲಿ ಗೊಗ್ಗರ ಧ್ವನಿಯುಂಟಾಗುತ್ತದೆ.




ಡೈಅಯಡೋ ಟೈ[illegible]




ಥೈರಾಕ್ಸಿನ್

ಸಂಧಿವಾತ ಅಥವಾ ಕೀಲುನೋವು ಕಡಮೆಯಾಗಬೇಕಾದರೆ, 'ಕಾರ್ಟಿಸೋನ್' ಎಂಬ ಚೋದಕವಸ್ತುವನ್ನು ಬಳಸುತ್ತಾರೆ. ಆದರೆ ಸ್ತ್ರೀಯರಲ್ಲಿ ಉತ್ಪತ್ತಿಯಾಗುವ ಕಾಮುಚಟುವಟಿಕೆಯ ಚೋದಕಸ್ರಾವವಾದ "ಅಯಿಸ್ಟ್ರೋನ್" ಎಂಬುವುದರಿಂದಲೇ ಶಿಶುಜನನ ನಂತರ ಕೆಲವು ಬದಲಾವಣೆಗಳುಂಟಾಗಿ, ಹಾಲಿನ ಉತ್ಪತ್ತಿಯೂ ನಿಲ್ಲುತ್ತದೆ. ಇದನ್ನು ಮುಂಚೆ ಗಂಡುಕುದುರೆಗಳ ಮೂತ್ರದಿಂದ

ಸ್ವಾಭಾವಿಕವಾದ ಮತ್ತು ಕೃತಕ ಸ್ತ್ರೀ ಚೋದಕ ಸ್ರಾವಗಳು



ಅಯಿಸ್ಟ್ರೋನ್



ಸ್ಟಿಲ್‌ಬೋಸ್ಟ್ರಾಲ್


ಮಾತ್ರ ಉತ್ಪತ್ತಿ ಮಾಡಬೇಕಾಗಿತ್ತು. ಈಗ ಅದರ ಬದಲು 'ಸ್ಟಿಲ್‌ಬೋಇಸ್ಟ್ರಾಲ್' ಎಂಬ ವಸ್ತುವನ್ನು ಬಳಸುತ್ತಿದ್ದಾರೆ. 'ಆಯಿಸ್ಟ್ರೋಜನ್' ಎಂಬುದನ್ನು ಸ್ಟೆರಾಲ್ ವಸ್ತುಗಳ ಗುಂಪಿಗೆ ಸೇರಿಸಬಹುದು. ಇವು "ಡಿ" ಜೀವಸತ್ವದಂತೆಯೇ ವರ್ತಿಸುತ್ತದೆ. ಇದರ ಪ್ರಮಾಣ ಹೆಚ್ಚಾದರೆ, ಸ್ತನಗಳ 'ಕ್ಯಾನ್ಸರ್' ಆಘನಾ ಹುತ್ತದ ಹುಣ್ಣು ಸಂಭವಿಸುತ್ತದೆ.

ಸ್ಟೆರಾಯ್ಡ್ ಚೋದಕ ಸ್ರಾವಗಳು : ಪುರುಷ ಬೀಜಗಳಲ್ಲೂ, ಸ್ತ್ರೀ ಅಂಡಾಶಯಗಳಲ್ಲೂ ಇವು ಉತ್ಪತ್ತಿಯಾಗುತ್ತವೆ. ಸ್ಟೆರಾಯ್ಡ್ ವಸ್ತುಗಳಲ್ಲಿ 17 ಇಂಗಾಲದ ಪರಮಾಣುಗಳುಂಟು. ಇವು ನಾಲ್ಕು ಉಂಗುರಗಳಲ್ಲಿ ಹರಡಿವೆ. ರಚನೆ ಬದಲಾಯಿಸಿದಂತೆಯೂ, ಬೇರೆ ಬೇರೆ ವಸ್ತುಗಳು ಉಂಟಾಗುತ್ತವೆ.

ಅಡ್ರೆನಲ್ ರಸಗ್ರಂಥಿಗಳು : ಪ್ರತಿ ಮೂತ್ರಜನಕಾಂಗದ ಮೇಲೆಯೂ ಒಂದೊಂದು ಮಾಂಸದ ಮುದ್ದೆ ಇದೆ. ಇವೇ 'ಅಡ್ರೆನಲ್' ರಸಗ್ರಂಥಿಗಳು. ಇವು ಅಡ್ರೆನಲ್ ಕಾರ್ಟೆಕ್ಸ್ ತೊಗಟೆಯಲ್ಲಿ ಹೆಣೆಯಲ್ಪಟ್ಟಿವೆ. ಈ ತೊಗಟೆಯೇ ಅನೇಕ ಸ್ಟೆರಾಯ್ಡ್ ಚೋದಕಸ್ರಾವಗಳಿಗೆ ಮೂಲ. ಇವುಗಳ ಪೈಕಿ ಕಾರ್ಟಿಕಾಯ್ಡ್‌ಗಳು ಒಂದು ಜಾತಿ. ಕಾರ್ಟಿಕಾಯ್ಡ್‌ಗಳು ಸರಿಯಾದ ಪ್ರಮಾಣದಲ್ಲಿ ಉತ್ಪತ್ತಿಯಾಗದಿದ್ದರೆ, 'ಅಡಿಸನ್ ವ್ಯಾಧಿ'ಯುಂಟಾಗಿ ನರದಲ್ಲಿ ಶಕ್ತಿ ಕಡಿಮೆಯಾಗುತ್ತದೆ. ಚರ್ಮದ ಬಣ್ಣ ಕಂದು ತಿರುಗುತ್ತದೆ. Nat ಅಥವಾ ಸೋಡಿಯಮ್ ಅಯಾನುಗಳು ಕಡಮೆಯಾಗುವುದರಿಂದ ಉಪ್ಪನ್ನು ಸೇವಿಸಿ ಅದರ ಸಮಾನತೆಯನ್ನು ಏರ್ಪಡಿಸಬೇಕು. 'ಅಲ್ಡೋಸ್ಟೆರೋನ್' ಎಂಬ ಚೋದಕಸ್ರಾವವು ಈ ಸಮಾನತೆಯನ್ನುಂಟು ಮಾಡುವುದಕ್ಕೆ ಕಾರಣ.

ಪಿಟ್ಯುಟರಿ ರಸಗ್ರಂಥಿಯ ಹಿಂದಿನರ್ಧದಲ್ಲಿ ವ್ಯಾಸೋಪ್ರೆಸ್ಸಿನ್ ಮುಂತಾದ ಚೋದಕ ಸ್ರಾವವು ಉತ್ಪತ್ತಿಯಾದರೆ, ಮುಂದಿನರ್ಧದಲ್ಲಿ ಅನೇಕ ಪ್ರೊಟೀನ್ ಚೋದಕ ಸ್ರಾವಗಳು ಉತ್ಪತ್ತಿಯಾಗುತ್ತವೆ. ಇವೆಲ್ಲವೂ ಇತರ ರಸಗ್ರಂಥಿಗಳ ಮೇಲೆ ಪ್ರಭಾವಬೀರುವುದರಿಂದ, ಒಬ್ಬ ನಿರ್ದೇಶಕನ ರೀತಿಯಲ್ಲಿ ವರ್ತಿಸುತ್ತವೆ. ಕೀಲು ನೋವಿನಿಂದ ಜ್ವರ ಸಂಭವಿಸಿದರೆ, ಅದನ್ನು ACTH (Adreno Corticotropic hormone) ಎಂಬ ಚೋದಕ ಸ್ರಾವದಿಂದ ಸರಿಪಡಿಸುತ್ತಾರೆ.

ಪಿಟ್ಯುಟರಿ ರಸಗ್ರಂಥಿಯ ಕ್ರಿಯೆಗಳು.




ಬೈಯಾಲಿಸ್ ಮತ್ತು ಸ್ಟಾರ್ಲಿಂಗ್ ಎಂಬ ಇಬ್ಬರು ಬ್ರಿಟಿಷ್ ಜೀವ ವೈಜ್ಞಾನಿಕರು ಪ್ರಾಣಿಗಳ ನರಗಳನ್ನು ಕತ್ತರಿಸಿ, ಪ್ರಯೋಗ ನಡೆಸಿದಾಗ, ಒಂದು ಸಂಗತಿಯನ್ನು ಕಂಡರು. ಮೇಧೋಜೀರಕ ರಸಗ್ರಂಥಿಯು ರಕ್ತಕ್ಕೆ ವಸ್ತುಗಳನ್ನು ಸುರಿಸಿದ್ದನ್ನು ಇವರು ಕಂಡರು. ಇದರಿಂದ ಇಲ್ಲಿ "ಸೆಕ್ರೆಟಿನ್" ಉತ್ಪತ್ತಿಯಾಗುತ್ತದೆ, ಎಂದು ತಿಳಿಯಿತು. ನೆಣವು (Bone marrow) ಉತ್ಪತ್ತಿ ಮಾಡುವ ಚೋದಕಸ್ರಾವವು

ರಕ್ತದ ಉತ್ಪತ್ತಿಗೆ ಸಹಾಯಕರ. ನರಸಂಬಂಧ ಚೋದಕಸ್ರಾವವು ನರಸಂಬಂಧ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತವೆ. ಈ ರಾಸಾಯನಿಕ ಕಿಣ್ವಗಳ ಚಟುವಟಿಕೆಯನ್ನು ಈ ಚೋದಕವಸ್ತುಗಳು ನಿರ್ಧರಿಸುತ್ತವೆ; ಒಳಗಿನ ಸನ್ನಿವೇಶವನ್ನು ಸಮಪಡಿಸುತ್ತವೆ; ದೇಹದ ಚಟುವಟಿಕೆಗಳನ್ನು ಕ್ರಮವಾಗಿ ನಡೆಸುತ್ತವೆ. ಇದರಿಂದ ಹೊರ ನೋಟ, ಬೆಳವಣಿಗೆ ಇವೆಲ್ಲಾ ಮಾರ್ಪಾಡಾಗಿ, ಕಾಮ ಚಟುವಟಿಕೆ, ಚೈತನ್ಯ, ಭಾವೋದ್ರೇಕ, ಚರ್ಮದ ವರ್ಣ, ಪುನರೋತ್ಪತ್ತಿ, ಮಾನಸಿಕಕ್ರಿಯೆ, ರೋಗವನ್ನು ತಡೆಯುವ ಶಕ್ತಿ ಇವೆಲ್ಲದರ ಮೇಲೆ ಹತೋಟಿಯುಂಟಾಗುತ್ತದೆ. ಚೋದಕಸ್ರಾವಗಳು ಸ್ವಲ್ಪ ಪ್ರಮಾಣದಲ್ಲಿ ಇದ್ದರೂ ಚೈತನ್ಯವುಳ್ಳದ್ದಾಗಿವೆ. ಥೈರಾಯ್ಡ್ ಚೋದಕಸ್ರಾವವು ಸರಿಯಾದ ಪ್ರಮಾಣದಲ್ಲಿ ಸೇರಿರಬೇಕು. ಜೀವಮಾನದಲ್ಲೀ, ಒಬ್ಬ ಸ್ತ್ರೀ ಒಂದು ಚಮಚದಷ್ಟು ಚೋದಕಸ್ರಾವವನ್ನು ತಯಾರಿಸುತ್ತಾಳೆ. ಔಷಧಗಳ ಕಾರ್ಯ ಸಮರ್ಪಕವಾಗಿ ನಡೆಯದಿದ್ದಾಗ, ಅದನ್ನು ಪೂರ್ಣಗೊಳಿಸುವುದು ಚೋದಕಸ್ರಾವಗಳು. ಥೈರಾಯ್ಡ್, ಪಿಟ್ಯುಟರಿ, ಗೋನಾಡ್, ಪ್ಯಾರಾ ಥೈರಾಯ್ಡ್, ಅಡ್ರೆನಲ್, ಮೇಧೋಜೀರಕ, ಥೈಮಸ್, ಪೀನಿಯಲ್ ಇವೆಲ್ಲವೂ ನಿರ್ನಾಳ ಗ್ರಂಥಿಗಳು.


ಕಾಮಚಟುವಟಿಕೆಯ ಚೋದಕಸ್ರಾವಗಳು : ಸ್ಟೆರಾಯ್ಡ್ ಚೋದಕ ವಸ್ತುಗಳಲ್ಲಿ ಕಾಮ ಚಟುವಟಿಕೆಯ ಮತ್ತು ಅಡ್ರೆನಲ್ ಎಂಬ ಎರಡು ಬಗೆಯ ಚೋದಕ ಸ್ರಾವಗಳುಂಟು. ಅಡ್ರೆನಲ್ ಮತ್ತು ಬೀಜ ಮತ್ತು ಅಂಡಾಶಯಗಳಿಂದ ಕಾಮಚಟುವಟಿಕೆಯ ಚೋದಕಗಳು ಹರಿಯುತ್ತವೆ. ಸ್ತ್ರೀಯರು ಸ್ವಲ್ಪ ಪುರುಷರ ಚೋದಕಸ್ರಾವಗಳನ್ನೂ, ಪುರುಷರು ಸ್ವಲ್ಪ ಸ್ತ್ರೀ ಚೋದಕಸ್ರಾವಗಳನ್ನೂ ಉತ್ಪತ್ತಿಮಾಡುವುದು ವಾಡಿಕೆ. ಮೂತ್ರಜನಕಾಂಗದ ಮೇಲಿನ ಒಂದೊಂದು ರಸಗ್ರಂಥಿಯ ತೂಕವು $\frac{1}{4}$ ಔನ್ಸ್ ಆಗಿದೆ. ಕೆಲವು ಸ್ತ್ರೀಯರ ಅಡ್ರೆನಲ್ ಭಾಗದಿಂದ ಹೆಚ್ಚು ಜೈವಿಕ ಶಕ್ತಿಯುಳ್ಳ ಆಂಡ್ರೋಜನ್ ಉತ್ಪತ್ತಿಯಾದರೆ, ಅವರ ದೇಹದ ನಾನಾಭಾಗಗಳಲ್ಲಿ ಕೇಶ ಬೆಳವಣಿಗೆ ಅಧಿಕವಾಗಿರುತ್ತದೆ. ಕೆಲವು ಕಣ್ಣಿನ ಉರಿ ಮುಂತಾದ ರೋಗಕ್ಕೆ ಸ್ಟೆರಾಯ್ಡ್ ವಸ್ತುಗಳು ಮದ್ದು. ಉರಿ, ನವೆ, ಮರ್ಚದ ಊತ, ಚರ್ಮರೋಗ–ಇವುಗಳಿಗೆಲ್ಲಾ ಸ್ಟೆರಾಯ್ಡ್ ಲೇಪನವನ್ನು ಸವರುತ್ತಾರೆ. ಕೃತಕ ಸ್ಟೆರಾಯ್ಡ್‌ಗಳನ್ನು 150 ಬಗೆ ಕಾಯಿಲೆಗಳ ಪರಿಹಾರಕ್ಕಾಗಿ ಬಳಸುತ್ತಾರೆ. ಮಾನಸಿಕ ಸ್ಥಿತಿಯನ್ನೂ ಇವು ಉತ್ತಮಗೊಳಿಸಬಲ್ಲವು. ಮನುಷ್ಯರನ್ನು ಸುಖವಾಗಿ ಇರುವಂತೆ ಕಾಣುವ ಹಾಗೆ ಮಾಡಬಲ್ಲವು.

ಅಡ್ರೆನಲ್‌ನ ಇತರ ಅರ್ಧಭಾಗದಿಂದ 'ಅಡ್ರೆನಲಿನ್' ಎಂಬ ಚೋದಕಸ್ರಾವವು ಉಂಟಾಗುತ್ತದೆ. ಇದು ಚರ್ಮಸುಟ್ಟಾಗ, ರಕ್ತಸ್ರಾವವಾದಾಗ ಚುರುಕಾಗಿ ವರ್ತಿಸುತ್ತವೆ. ಅಪಾಯ ಸಂಭವಿಸಿದಾಗ ಇದು ಸಿದ್ಧವಾಗಿರುವುದರಿಂದ ಇದನ್ನು ತುರ್ತಿನ ಚೋದಕಸ್ರಾವ (emergency hormone) ಎಂದು ಕರೆಯುತ್ತಾರೆ. ಅಡ್ರೆನಲೀನ್ ಸ್ಫಟಿಕರೂಪಕ್ಕೆ ತಂದ ಚೋದಕಸ್ರಾವಗಳ ಪೈಕಿ ಒಂದು ಎಂದು ತಿಳಿಸಬಹುದು.

ಅಡ್ರೆನಲ್ ತೊಗಟೆಯ ಚೋದಕ ಸ್ರಾವಗಳು




ಅಡ್ರೆನಲೀನ್




ಕಾರ್ಟಿಕೋಸ್ಟೆರೋನ್ ಕಾರ್ಟಿಸೋನ್ ಡೆಸಾಕ್ಸಿ ಕಾರ್ಟಿಕೋಸ್ಟೆರೋನ್

ಕಾಮ ಚಟುವಟಿಕೆಯ ಚೋದಕ ಸ್ರಾವಗಳು.




ಟೆಸ್ಟೋಸ್ಟರೋನ್




ಆಂಡ್ರೋಸ್ಟರೋನ್

ಕಾಮಚಟುವಟಿಕೆಯ ಚೋದಕ ಸ್ರಾವಗಳ ಪೈಕಿ, ಪುರುಷರಲ್ಲಿ 'ಆಂಡ್ರೋಜನ್' ಗಳೂ,ಸ್ತ್ರೀಯರಲ್ಲಿ 'ಎಸ್ಟ್ರೋಜನ್' ಗಳೂ ಮುಖ್ಯವಾದುವು. ಪುನರೋತ್ಪತ್ತಿಗೆ ಇವು ಸಹಾಯಕರ. 'ಪ್ರೊಜೆಸ್ಟೆರೋನ್' ಎಂಬ ಸ್ತ್ರೀ ಚೋದಕ ಸ್ರಾವವೇ ಗರ್ಭಧಾರಣೆಗೆ ಸಿದ್ಧಗೊಳಿಸಿ, ಸಂತಾನಕ್ಕೆ ತಯಾರು ಮಾಡುತ್ತದೆ. ಈ ಚೋದಕಸ್ರಾವವನ್ನು ಪುರುಷರು ತಯಾರಿಸಲಾರರು. ಇವುಗಳ ಗುಳಿಗೆಗಳನ್ನು ಸೇವಿಸಿ ಸ್ತ್ರೀಯರು ನಾನಾ ರೀತಿಯಲ್ಲಿ ಉಪಯೋಗ ಪಡೆದಿದ್ದಾರೆ. ಗರ್ಭಸ್ರಾವ ತಪ್ಪಿಸುವುದು, ಅಂಡೋತ್ಪತ್ತಿಯನ್ನು ಕಡಮೆ ಮಾಡುವುದು, ಮುಂತಾದ ಕೆಲವು ಉಪಯೋಗಗಳನ್ನು ಇಲ್ಲಿ ಉದಾಹರಿಸಬಹುದು.


ಅಂಡಾಶಯದ ಚೋದಕ ಸ್ರಾವಗಳು.




ಆಯಿಸ್ಟ್ರಿಯಾಲ್



ಆಯಿಸ್ಟ್ರಡಯಾಲ್



ಪ್ರೊಜೆಸ್ಟರೋನ್



ಆಯಿಸ್ಟ್ರೋನ್


ಪುರುಷರಲ್ಲಿ ಟೆಸ್ಟೋಸ್ಟೆರೋನ್ ಎಂಬ ಚೋದಕಸ್ರಾವವು ಉತ್ಪತ್ತಿಯಾಗಿ ಇದು ಗಡ್ಡದ ಬೆಳವಣಿಗೆ, ಆಳವಾದ ಕಂಠ, ಗಂಡಸುತನ ಇವಕ್ಕೆ ಕಾರಣವಾಗಿ ಹಸಿವನ್ನು ಹೆಚ್ಚಿಸಿ ತೂಕವೂ ಹೆಚ್ಚುವಂತೆ ಮಾಡುತ್ತದೆ. ವೃದ್ಧಾಪ್ಯವನ್ನು ದೂರ ಮಾಡುತ್ತದೆ. ಹೆಚ್ಚು ಟೆಸ್ಟೋಸ್ಟೆರೋನ್ ಉತ್ಪತ್ತಿಯಾದರೆ ಅಪಾಯಕರ. ಸ್ತ್ರೀಯರಲ್ಲಿ ಉತ್ಪತ್ತಿಯಾಗುವ ಚೋದಕ ಸ್ರಾವವು ಅವರು ಹೃದಯಾಘಾತ ಕ್ಕೀಡಾಗದಂತೆ ಅವರನ್ನು ಕಾಪಾಡುತ್ತದೆ. ಗಂಡಸರಿಗೂ ಇದನ್ನು ಕೊಡುತ್ತಾರೆ. ಕೊಲೆಸ್ಟೆರಾಲಿನ ಪ್ರಮಾಣವನ್ನು ಇದು ಕಡಮೆಮಾಡುತ್ತದೆ. ಇದರಿಂದ ಮೊಲೆಗಳು ದೊಡ್ಡದಾಗಿ, ಕಾಮಚಟುವಟಿಕೆಯ ಅಭಿಲಾಷೆ ಕಡಮೆಯಾಗಲೂ ಬಹುದು. ಮೂತ್ರಕೋಶ ಗ್ರಂಥಿಯ ಕ್ಯಾನ್ಸರ್ ತಾತ್ಕಾಲಿಕವಾಗಿ ಸ್ತ್ರೀ ಚೋದಕವಸ್ತುವಿನಿಂದ ಕಡಮೆಯಾಗುತ್ತದೆ. ಕೆಲವು ಸಲ ಪುರುಷರ ಚೋದಕ ಸ್ರಾವಗಳು ಸ್ತ್ರೀಯರ ಸ್ತನದ ಕ್ಯಾನ್ಸರನ್ನು ನಿವಾರಿಸುತ್ತವೆ.

ಕೆಲವು ಪರೀಕ್ಷೆಗಳು: ಥೈರಾಯ್ಡ್ ರಸ ಗ್ರಂಥಿಯಲ್ಲಿಯ ಥೈರಾಕ್ಸಿನ್ ಚೋದಕ ವಸ್ತುವು ಸರಿಯಾದ ಪ್ರಮಾಣದಲ್ಲಿ ಇಲ್ಲದಿದ್ದರೆ, ಮನುಷ್ಯ ಮಂಕಾಗುತ್ತಾನೆ ಅವನಲ್ಲಿ ಕುಬ್ಜಾವತಾರಬರುತ್ತದೆ, ಅದರ ಪ್ರಮಾಣ

ಹೆಚ್ಚಾದರೆ ಕಣ್ಣು ಮುಂದೆ ಬರುತ್ತದೆ, ಆಹಾರಾಪೇಕ್ಷೆ ವಿಪರೀತ ಹೆಚ್ಚುತ್ತದೆ. ನಿದ್ರಾಭಂಗ ಉಂಟಾಗುತ್ತದೆ. ಮಕ್ಕಳಲ್ಲಿ ಥೈರಾಯ್ಡ್ ಪ್ರಮಾಣ ಕಡಿಮೆಯಾದರೆ "ಕ್ರೆಟನಿಸಮ್" ಎಂಬ ಸ್ಥಿತಿಯುಂಟಾಗಿ, ಮಕ್ಕಳು ಮೂಢರಾಗುತ್ತಾರೆ. ಥೈರಾಯ್ಡ್ ಜೀವಕೋಶಗಳನ್ನು ರೇಡಿಯೋ ವಿಕಿರಣ ಅಯೋಡಿನ್ ನಾಶಗೊಳಿಸುತ್ತದೆ. ಥೈರಾಯ್ಡ್ ಕಾಯಿಲೆಗಳನ್ನು ಇದರಿಂದ ಗುರ್ತಿಸಬಹುದು. ಥೈರಾಯ್ಡ್, ರಕ್ತದ ಕೊಲೆಸ್ಟ್ರಾಲಿನ ಮಟ್ಟವನ್ನು ಇಳಿಸುತ್ತದೆ. ಪ್ಯಾರಾ ಥೈರಾಯ್ಡ್ ರಸ ಗ್ರಂಥಿಯ ಚೋದಕ ಸ್ರಾವವು ಕ್ಯಾಲ್ಸಿಯಮ್ಮಿನ ಪ್ರಮಾಣ ವನ್ನು ಹತೋಟಿಯಲ್ಲಿರಿಸುತ್ತವೆ.

ಹೊಸದಾಗಿ ತಯಾರಾದ ಪಿಟ್ಯುಟರಿ ಚೋದಕಸ್ರಾವವು (Melanin stimulating hormone) ಮೆಲನಿನ್ ಎಂಬ ಬಣ್ಣವನ್ನು ಉತ್ಪತ್ತಿಮಾಡುತ್ತದೆ. ಚರ್ಮಕ್ಕೆ ಮೆಲನಿನ್ನಿಂದ ಬಣ್ಣ ಬರುತ್ತದೆ. ಚರ್ಮವನ್ನು ಕಾಮಚಟುವಟಿಕೆಯಚೋದಕ ಸ್ರಾವದಿಂದ ಉದ್ರೇಕಿಸಿ, ಮೆಲನಿನ್ನನ್ನು ಬಳಸುತ್ತಾರೆ.

ಥೈರಾಯ್ಡ್ ರಸಗ್ರಂಥಿಯ ಚಟುವಟಿಕೆ.



ಥೈರಾಯ್ಡ್ ರಸ ಗ್ರಂಥಿಯ ಚಟುವಟಿಕೆಯನ್ನು ಅಳೆಯುವುದಕ್ಕಾಗಿ ರೇಡಿಯೋ ವಿಕಿರಣ ಶಕ್ತಿಯುಳ್ಳ ಅಯೋಡೀನಿನ ಬಳಕೆ.

ಸಿಹಿಮೂತ್ರ ರೋಗ : ಬ್ಯಾಂಟಿಂಗ್ ಮತ್ತು ಬೆಸ್ಟ್ ಎಂಬ ವಿಜ್ಞಾನಿಗಳು ಟೊರಾಂಟೋ ವಿಶ್ವವಿದ್ಯಾಲಯದಲ್ಲಿ ಪ್ರಯೋಗಶಾಲೆಯ ಪ್ರಾಣಿಗಳಿಂದ ತೊಟ್ಟನಷ್ಟು ಇನ್ಸುಲಿನ್ನನ್ನು ಪಡೆದರು. ಇದು Diabetes Mellitas ಅಥವಾ ಸಿಹಿಮೂತ್ರ ರೋಗನಿವಾರಕ ವಸ್ತು. Mellitus ಅಂದರೆ ಜೇನುತುಪ್ಪ. ರಕ್ತದಲ್ಲಿ ಹೆಚ್ಚು ಸಕ್ಕರೆ ಸೇರಿ, ಅದು ಮೂತ್ರದ ಮೂಲಕ ಹರಿದು ಹೋಗುವುದರಿಂದ ಈ ರೋಗ ಸಂಭವಿಸುತ್ತದೆ. ಇನ್ಸುಲಿನ್ನು ಇದನ್ನು ನಿವಾರಿಸುತ್ತದೆ. ನರಗಳಿಗೂ, ನಿರ್ನಾಳಗ್ರಂಥಿಗಳು ಸುರಿಸುವ ಚೋದಕಸ್ರಾವಗಳಿಗೂ ಸಂಬಂಧವಿದೆ. ಈ ವಸ್ತುಗಳ ಕ್ರಿಯೆಗಳು ಪ್ರತಿಕ್ರಿಯೆಗಳಿಂದ ನಿರ್ಧರಿಸಲ್ಪಡುತ್ತವೆ.

ನಿರ್ವೀರ್ಯಗೊಳಿಸುವುದರಿಂದ ಕಾಮಚಟುವಟಿಕೆಯ ಲಕ್ಷಣಗಳನ್ನು ಬದಲಾಯಿಸುವುವನ್ನು ಹಿಂದೆಯೇ ಕಂಡಿದ್ದರು. ಒಂದು ಪ್ರಾಣಿಯಿಂದ ನಿರ್ನಾಳಗ್ರಂಥಿಯನ್ನು ತೆಗೆದು ಮತ್ತೊಂದು ಪ್ರಾಣಿಗೆ ಸೇರಿಸುವುದನ್ನೂ ಹಿಂದೆ ಕಂಡಿದ್ದರು. ಈಗ ಇದರ ಬದಲು ರಾಸಾಯನಿಕ ವಸ್ತುಗಳನ್ನು ಬಳಸುತ್ತಾರೆ. ನಿರ್ನಾಳಗ್ರಂಥಿಗಳು ಕ್ಷಯರೋಗ, ಹುಣ್ಣು ಮುಂತಾದ ರೋಗಗಳು ಸಂಭವಿಸಿದಾಗ ಸರಿಯಾಗಿ ವರ್ತಿಸುವುದಿಲ್ಲ. ಥೈರಾಯ್ಡ್ ರಸಗ್ರಂಥಿಯಲ್ಲಿರುವ ವಸ್ತುವೇ ಥೈರಾಕ್ಸಿನ್. ಇದು ಚೋದಕಸ್ರಾವ. ಥೈರೋಗ್ಲಾಬ್ಯುಲಿನ್ ಎಂಬ ಅಯೋಡಿನನ್ನೊಳಗೊಂಡ ವಸ್ತು ಜಲವಿಶ್ಲೇಷಣ ಹೊಂದಿದಾಗ, ಡೈಅಯೋಡೋಟೈರೋಸಿನ್ ಮತ್ತು ಥೈರಾಕ್ಸಿನ್‌ಗಳು ಉತ್ಪತ್ತಿಯಾಗುತ್ತವೆ.

ನಾಲ್ಕು ಕೋಳಿ ಮೊಟ್ಟೆಯಾಕಾರದ ಪ್ಯಾರಾಥೈರಾಯ್ಡ್ ರಸಗ್ರಂಥಿಗಳು, ಥೈರಾಯ್ಡಿನ ಅಂಚಿನ ಭಾಗದಲ್ಲಿವೆ. ಕೆಲವು ಪ್ರಾಣಿಗಳಲ್ಲಿ ಅವು ಥೈರಾಯ್ಡ್ ರಸಗ್ರಂಥಿಯ ಹೊರಭಾಗದಲ್ಲಿವೆ. ಇದರ ತೂಕ ಮನುಷ್ಯರಲ್ಲಿ 0.1 ಗ್ರಾಂ. ಇದು ಪ್ರೋಟೀನ್ ವಸ್ತು.

ಲ್ಯಾಂಗರ್‌ಹಾನ್ಸ್ ದ್ವೀಪಗಳು : ಮೇದೋಜೀರಕ ರಸಗ್ರಂಥಿಗಳ ಈ ಭಾಗದಲ್ಲಿ ತಯಾರಾಗುವ ಇನ್ಸುಲಿನ್ನು ಸಿಹಿಮೂತ್ರರೋಗನಿವಾರಕ. ಇದು 12000 ಅಣು ತೂಕ ಹೊಂದಿರುವ ಪ್ರೋಟೀನು. ಅಡ್ರೆನಲ್‌ಗಳು ಎರಡು ಸಣ್ಣದಾದ 5–8 ಗ್ರಾಂ ತೂಕವುಳ್ಳ ಗ್ರಂಥಿಗಳು. ಇವುಗಳಿಂದ ಅಡ್ರೆನಲೀನ್, ನಾರ್ ಅಡ್ರೆನಲೀನ್. ಕಾರ್ಟಿಕೋಸ್ಟೆರೋನ್ ಚೋದಕಸ್ರಾವಗಳು ಸ್ರವಿಸುತ್ತವೆ.

ಪ್ರಾಣಿಗಳ ಚರ್ಮವರ್ಣ ಬದಲಾವಣೆಗಳು : ಗಡಸುಚರ್ಮವುಳ್ಳ ಪ್ರಾಣಿಗಳಲ್ಲಿ (crustacea) ಉಂಟಾಗುವ ಚರ್ಮದ ವರ್ಣ ಬದಲಾವಣೆಗಳಿಗೆ ಇವು ಕಾರಣ. ಒಂದು ವಿಧದಲ್ಲಿ ವರ್ಣದ್ರವ್ಯಗಳು, ರಶ್ಮಿಗ್ರಾಹಕವಾಗಿದ್ದು, ಅವರ ದೆಸೆಯಿಂದ ಉಬ್ಬುತ್ತವೆ. ಬೆಳಕು ಬಿದ್ದಷ್ಟು ವಿಸ್ತರಿಸುವುದು ಜಾಸ್ತಿ. ಬೆಳಕಿಲ್ಲದಿದ್ದಾಗ, ಅವು ಸಂಕುಚಿತವಾಗುತ್ತವೆ. ಮೂಲದಲ್ಲಿಯೇ ಈ ರೀತಿ ಪ್ರತಿಕ್ರಿಯೆ ಉಂಟಾಗಬಹುದು. ಇತರ ವಿಧದಿಂದಲೂ ಬಣ್ಣಬದಲಾಯಿಸುವ ಸಂಭವವುಂಟು. ಇದು ನೇರವಾಗಿ ಉಂಟಾಗುವುದಿಲ್ಲ. ದ್ವಿತೀಯ ಹಂತದಲ್ಲಿಯೇ ಇದು ಉಂಟಾಗುವುದು. ಬೆಳಕು ಪ್ರಾಣಿಗಳ ಕಣ್ಣಿನ ಮೇಲೆ ಬಿದ್ದಾಗ, ಅವರ ನರವ್ಯೂಹಕ್ಕೆ ಉದ್ದೀಪಕವೊಂದು ಹರಿದು ಇವರ ದೆಸೆಯಿಂದ ರಕ್ತಕ್ಕೆ ಒಂದು ಚೋದಕಸ್ರಾವವು ಸೇರುತ್ತದೆ. ಇದರಿಂದ ವರ್ಣದ್ರವ್ಯಗಳು ಸಂಕುಚಿಸಬಹುದು ಅಥವಾ ವಿಸ್ತರಿಸಬಹುದು. (hermit crab) ನಳ್ಳಿಗಳು ಈ ಬದಲಾವಣೆಗಳಿಗೊಳಗಾಗಿ, ಅವುಗಳ ಚರ್ಮದಲ್ಲಿ ವರ್ಣ ಬದಲಾವಣೆಯುಂಟಾಗುತ್ತದೆ.

ಮೂತ್ರೋತ್ಪಾದಕ ನಿರೋಧಿಯಾದ ಚೋದಕಸ್ರಾವವು (A D H) ನೀರಿನ ಪ್ರಮಾಣವನ್ನು ನಿರ್ಧರಿಸುತ್ತದೆ. ಇತರ ಚೋದಕ ಸ್ರಾವಗಳು ವರ್ತಿಸುವುದರ ಮೇಲೆ ಇದರ ಹತೋಟಿ ಇರುತ್ತದೆ. ಕ್ರಿಯಾರೂಪದಲ್ಲಿ ನ್ಯೂನತೆ ಕಂಡುಬಂದರೆ, ದ್ರವದಲ್ಲಿ ವಿಷ ಸೇರಿ, ಜೀವಿಗಳು ಸಾಯುತ್ತವೆ.

ಇತರ ಚೋದಕ ಸ್ರಾವಗಳು : ಸ್ತ್ರೀ ಜನ್ಮದಲ್ಲಿ ಆಕೆಯ 30 ವರ್ಷ ತಾಯಿತನದ ಅವಧಿಯಲ್ಲಿ ಆಕೆಯ ಅಂಡಾಶಯದಿಂದ ಆಯಿಸ್ಟ್ರೋಜನ್ ಉತ್ಪತ್ತಿಯಾಗುವುದರ ಮೊತ್ತ ಒಂದು ಸ್ಟಾಂಪಿನ ತೂಕದಷ್ಟು ಮಾತ್ರ. ಪ್ರವರ್ಧಮಾನಕ್ಕೆ ಬಂದಾಗ, ಸ್ಟಾಂಪಿನ ತುದಿಯಲ್ಲಿರುವಷ್ಟು ಮಾತ್ರ ಚೋದಕಸ್ರಾವವು ವಿಶೇಷ ಬದಲಾವಣೆಗಳಿಗೆ ಕಾರಣವಾಗುತ್ತದೆ. ಸ್ತ್ರೀಯಲ್ಲಿ ಪ್ರಾಯ ತುಂಬುತ್ತದೆ. ಅನೇಕ ಕಾಮ ಚಟುವಟಿಕೆಯ ಚೋದಕಸ್ರಾವಗಳು ಬೇರೆ ಬೇರೆ ಕಡೆ ಹರಡಿದ್ದರೂ, ಅವುಗಳ ಪ್ರಭಾವ ಬೀರುತ್ತವೆ. ತಿಮಿಂಗಲದಲ್ಲೂ ಸಿನಿಮಾ ತಾರೆಯಲ್ಲೂ ಒಂದೇ ಕಾಮಚಟುವಟಿಕೆಯ ಚೋದಕಸ್ರಾವವಿರುತ್ತದೆ. ದೇಹದ 8 ನಿರ್ನಾಳಗ್ರಂಥಿಗಳ ಒಟ್ಟು ತೂಕ ಎರಡು ಔನ್ಸ್‌ಗಳಷ್ಟು ಮಾತ್ರ. ನಮ್ಮ ದೇಹದ ಪೀನಿಯಲ್ ರಸ ಗ್ರಂಥಿಯನ್ನು ಮಾನವನ ಮೂರನೆಯ ಕಣ್ಣೆಂದು ಭಾವಿಸಬಹುದು. ಪಿಟ್ಯುಟರಿ ರಸಗ್ರಂಥಿಯಿಂದ ಶಿಶುಜನನವಾದ ತಕ್ಷಣವೇ ಹರಿಯುವ ಪ್ರೋಲ್ಯಾಕ್ಟಿನ್ ಎಂಬ ಚೋದಕಸ್ರಾವವು ಸ್ತನಗಳಿಂದ ಹಾಲಿನ ಉತ್ಪತ್ತಿಗೂ, ಗರ್ಭಕೋಶ ಸಂಕುಚಿತವಾಗಿ ರಕ್ತಸ್ರಾವ ನಿಲ್ಲಿಸುವುದಕ್ಕೂ ಕಾರಣ. ಕಾಯಕಲ್ಪ ನಿರ್ಮಿಸುವುದರಲ್ಲಿ ಚೋದಕ ಸ್ರಾವಗಳಿಗೆ ಪಾತ್ರವುಂಟು. ಚಿಟ್ಟೆಗಳಲ್ಲಿರುವ 'juvenilehormone' ಎಂಬ ಒಂದು ಬಗೆಯ ಚೋದಕಸ್ರಾವವು ಪ್ರಾಯವನ್ನು ಮುಂದುವರಿಸುತ್ತದೆ. ಇದನ್ನು ಮೂಳೆ, ಪಿತ್ತಜನಕಾಂಗ, ಮಾಂಸಖಂಡ ಮತ್ತು ಕರುಗಳ ಅಡ್ರೆನಲ್ ರಸಗ್ರಂಥಿ, ಜರಾಯು ಇವುಗಳಲ್ಲಿ ಕಾಣಬಹುದು. ಮನುಷ್ಯರ ವೃದ್ಧಾಪ್ಯವನ್ನೂ ಈ ಚೋದಕ ಸ್ರಾವಗಳ ಸಹಾಯದಿಂದ ಮುಂದೆ ಹಾಕಬಹುದು.

ಸಸ್ಯಗಳಲ್ಲಿರುವ ಕೆಲವು ಚೋದಕ ವಸ್ತುಗಳು : ಪ್ರಾಣಿಗಳ ದೇಹಗಳಲ್ಲಿ ವರ್ತಿಸುವ ಚೋದಕಸ್ರಾವಗಳಿಗೆ ಹೋಲಿಸಬಹುದಾದ ಕೆಲವು ವಸ್ತುಗಳು ಸಸ್ಯಗಳ ಬೆಳವಣಿಗೆಯಲ್ಲಿ ಪಾತ್ರವಹಿಸಿವೆ.

ಸಸ್ಯಗಳು ಚೆನ್ನಾಗಿ ಬೆಳೆದು, ಹೂವುಗಳು ಹರಡಿ, ಹಣ್ಣುಗಳು ಪುಷ್ಟಿಕರವಾಗಿದ್ದು, ಹೆಚ್ಚು ಕಾಲ ಕಾಪಾಡುವಂತಾಗುತ್ತದೆ. ಹೆಚ್ಚು ಸಾರದಲ್ಲಿ ಈ ವಸ್ತುಗಳನ್ನು ಬಳಸಿದರೆ, ಬೆಳವಣಿಗೆ ಕುಗ್ಗುತ್ತವೆ. ಅಲಂಕಾರಕ್ಕಾಗಿ ಫಲಪುಷ್ಪಗಳನ್ನು ಬೆಳೆಸಬೇಕಾದರೆ, ಇವು ಆವಶ್ಯಕ. ಹೀಗೆ ಬಳಸುವ ವಸ್ತುಗಳನ್ನು ಆಕ್ಸಿನ್‌ಗಳೆನ್ನುತ್ತಾರೆ. (plant hormones) ಇವುಗಳ ಪೈಕಿ, ಇಂಡೋಲ್ ಅಸೆಟಿಕ್ ಆಮ್ಲ, ನ್ಯಾಫ್ಥಲೀನ್ ಅಸೆಟಿಕ್ ಆಮ್ಲ ಇವು ಮುಖ್ಯವಾದುವು.

ಪ್ರಕೃತಿಯೆಲ್ಲ ಆತ್ಮನೆದುರಿಗೆ ಒಂದು ಪುಸ್ತಕದಂತೆ. ಅಧ್ಯಾಯಗಳ ಅನಂತರ ಅಧ್ಯಾಯಗಳನ್ನು ಓದಿ ಮುಗಿಸುತ್ತಿರುವೆವು. ಪದೇ ಪದೇ ಹೊಸ ದೃಶ್ಯ ಪ್ರಾರಂಭಿಸುವುದು. ಅದನ್ನು ಓದಿ ಮುಗಿಸುವೆವು. ಹೊಸದೊಂದು ಬರುವುದು. ಆದರೆ ಆತ್ಮ ಮಾತ್ರ ಅನಂತ. ಪ್ರಕೃತಿ ಬದಲಾಗುತ್ತಿರುವುದು, ಆತ್ಮನಲ್ಲ ಆತ್ಮ. ಎಂದಿಗೂ ವಿಕಾರ ಹೊಂದುವುದಿಲ್ಲ. ಜನನಮರಣಗಳು ಪ್ರಕೃತಿಯಲ್ಲಿವೆ, ನಿನ್ನಲ್ಲಿ ಇಲ್ಲ.

ನ. ರತ್ನ

ವಾಗ್ದೋಷಗಳು

ಪುಟ್ಟ ಮಕ್ಕಳು ಪುಟ್ಟ ಪುಟ್ಟ ಹೆಜ್ಜೆ ಇಡುತ್ತಾ ತೊದಲು ಮಾತಾಡುತ್ತಿದ್ದರೆ ನಮಗೆಲ್ಲಾ ಖುಷಿಯೋ ಖುಷಿ. ಆ ಮುದ್ದು ಮಾತುಗಳನ್ನು ಕೇಳುತ್ತಾ, ಮಕ್ಕಳಿಗೆ ಕೇಳಿದ ಪ್ರಶ್ನೆಗಳನ್ನೇ ಕೇಳುತ್ತಾ ಎಷ್ಟು ಘಂಟೆಗಳಾದರೂ, ಎಷ್ಟು ದಿವಸಗಳಾದರೂ ಕಳೆದೇವು. ಆದರೆ ಹಾಗೆ ಕೇಳುತ್ತಾ, ಆ ಮುದ್ದು ತೊದಲುಮಾತುಗಳನ್ನು ಮೆಲುಕು ಹಾಕುತ್ತ ಇದ್ದಂತೆಯೇ ಮಗುವು ತನ್ನ ತೊದಲುಮಾತುಗಳನ್ನು ಬಿಟ್ಟು ಭಾಷೆಯನ್ನೂ, ಮಾತನ್ನೂ ಸ್ಪಷ್ಟಗೊಳಿಸಿಕೊಂಡುಬಿಟ್ಟಿರುತ್ತಾನೆ. ಎಷ್ಟೋ ವೇಳೆ ದೊಡ್ಡವರು ಮಗುವಿನ ನೆಪದಲ್ಲಿ ಮುದ್ದು ಮಾತಾಡುವ ತಮ್ಮ ಚಪಲವನ್ನು ಬಿಡುವಷ್ಟರಲ್ಲಿ ಮಗುವು ಸ್ಪಷ್ಟ ಉಚ್ಚಾರಣೆಯನ್ನು ಕಲಿತುಬಿಟ್ಟಿರುತ್ತಾನೆ. ಸಾಧಾರಣವಾಗಿ ಮಗುವಿಗೆ ನಾಲ್ಕು ನಾಲ್ಕೂವರೆ ವರ್ಷ ವಯಸ್ಸಾಗುವುದರಲ್ಲಿ ಮಗುವು ದೊಡ್ಡವರಂತೆಯೇ ಭಾಷೆಯನ್ನು ಉಪಯೋಗಿಸಲು ಕಲಿಯುತ್ತಾನೆ. ಕೆಲವು ಮಕ್ಕಳಲ್ಲಿ, ಕೆಲವು ಶಬ್ದಗಳು ಸ್ವಚ್ಛವಾಗುವುದು ಸ್ವಲ್ಪ ನಿಧಾನವಾಗುತ್ತದೆ. ಮುಖ್ಯವಾಗಿ ರ, ಶ, ಷ, ಳ, ಮತ್ತು ಒತ್ತಕ್ಷರಗಳು. ಒಟ್ಟಿನಲ್ಲಿ ಒಂದು ಮಗುವು ಭಾಷೆಯನ್ನೂ ಮಾತನ್ನೂ ಎಷ್ಟು ಸರಾಗವಾಗಿ ಕಲಿತುಬಿಡುತ್ತಾನೆ ಎಂದರೆ ನಮಗೆ ಅವನ ಕಲಿಕೆಯ ಹಂತಗಳಾಗಲೀ ಶ್ರಮವಾಗಲೀ ತಿಳಿಯುವುದೇ ಇಲ್ಲ. ಹೀಗಾಗಿ ಒಂದು ಭಾಷೆಯನ್ನು ಕಲಿಯುವುದು ಎಂತಹ ಮಹತ್ಸಾಧನೆ ಎಂದು ನಮಗೆ ಅರಿವಾಗುವುದಿಲ್ಲ. ನನ್ನ ಮನಸ್ಸಿನಲ್ಲಿ ಪ್ರಪಂಚದ ಅತಿ ದೊಡ್ಡ ಪವಾಡವೆಂದರೆ ಒಂದು ಆರೋಗ್ಯ ಶಿಶುವಿನ ಜನನ. ಅದನ್ನು ಬಿಟ್ಟರೆ, ಆ ಮಗುವು ಇರುವ ಅಡಚಣೆಗಳನ್ನೆಲ್ಲಾ, ತೊಡರುಗಳನ್ನೆಲ್ಲಾ ಮೀರಿ ಸರಾಗವಾಗಿ ಭಾಷೆ ಮತ್ತು ಮಾತನ್ನು ಕಲಿಯುವುದೇ ದೊಡ್ಡ ಪವಾಡ.

ಈ ಪವಾಡ ನಮಗೆ ಸ್ಪಷ್ಟವಾಗಿ ಅರಿವಾಗುವುದು ಮಾತಿನಲ್ಲಿ ತೊಂದರೆ ಇರುವ ಮಕ್ಕಳನ್ನು ಕಂಡಾಗ, ಅವರಿಗೆ ಭಾಷೆ ಕಲಿಸಲು, ಮಾತು ಕಲಿಸಲು ಪ್ರಯತ್ನ ಮಾಡಿದಾಗ. ಹಾಗೆ ನೋಡಿದರೆ ಮಾತಿನಲ್ಲಿ ತೊಂದರೆ ಇರುವವರು ನಮ್ಮ ದೇಶದಲ್ಲಿ ಬಹಳ ಜನರಿದ್ದಾರೆ. ನಾವು ಬೇರೆ ಬೇರೆ ಲೆಖ್ಖಗಳ ಆಧಾರದಿಂದ ನಮ್ಮ ದೇಶದಲ್ಲಿ ಶೇಕಡಾ ಆರು ಮಂದಿಗೆ ಮಾತಿನ ಅಥವಾ ಕಿವಿಯ ದೋಷಗಳಿರುತ್ತವೆ ಎಂದು ಅಂದಾಜು ಮಾಡಿದ್ದೇವೆ. ನಾನೊಮ್ಮೆ ಮಲ್ಲಾಡಿಹಳ್ಳಿಯಲ್ಲಿ ಭಾಷಣಕ್ಕೆ ಹೋಗಿದ್ದೆ. ಸಂಜೆಯ ಭಾಷಣಕ್ಕೆ ಬೆಳಿಗ್ಗೆಯೇ ಮಲ್ಲಾಡಿಹಳ್ಳಿಯನ್ನು ತಲುಪಿದ್ದೆ. ಸ್ವಾಮಿಗಳನ್ನು ಭೇಟಿ ಮಾಡಿದ ಮೇಲೆ, ಸುತ್ತಮುತ್ತ ಓಡಾಡಿದ ಮೇಲೆ, ಬೇರೆ ಏನೂ ಮಾಡಲು ತೋಚದ್ದರಿಂದ, ಅವರ ಶಾಲೆಗೆ ಹೋಗಿ ಅಲ್ಲಿಯ ವಿದ್ಯಾರ್ಥಿಗಳಲ್ಲಿ ಮಾತಿನ, ಕಿವಿಯ ದೋಷಗಳಿದ್ದವರನ್ನು ಸಂಧಿಸಬಹುದೆಂಬ ನನ್ನ ಆಸೆಯನ್ನು ಅಲ್ಲಿನ ಹೆಡ್‌ಮಾಸ್ಟರವರಿಗೆ ತಿಳಿಸಿದೆ. ಅದಕ್ಕೆ ಅವರು ವ್ಯವಸ್ಥೆ ಮಾಡಿದರು. ಆಗ ಶಾಲೆಯಲ್ಲಿ ನಾನೂರು ವಿದ್ಯಾರ್ಥಿಗಳಿದ್ದರು. ನಾನು ಅಂದಾಜು ಮಾಡಿದೆ ಒಂದು ಇಪ್ಪತ್ತು ನಾಲ್ಕು ಜನ ಇರಬಹುದೆಂದು. ನನ್ನನ್ನು ನೋಡಲು ಬಂದ ವಿದ್ಯಾರ್ಥಿಗಳ

ಸಂಖ್ಯೆ ಇಪ್ಪತ್ತೈದು. ಅದರಲ್ಲಿ ಒಬ್ಬನಿಗೆ ಕಣ್ಣಿನ ದೋಷವಿದ್ದಿತು. ಅಂದರೆ ನಾನು ಅಂದು ನೋಡಿದ ವಿದ್ಯಾರ್ಥಿಗಳ ಸಂಖ್ಯೆ ಶೇಕಡಾ ಆರಕ್ಕೆ ಸಮನಾಗಿತ್ತು.

ಹಾಗೆ ಮಲ್ಲಾಡಿಹಳ್ಳಿಯಲ್ಲಿ ಅಂದಾಜಿಗೆ ಮೂಗಿನ ಮೇಲೆ ಹೊಡೆದಂತೆ ಸರಿಯಾಗಿ ಜನ ಬಂದುದು ಒಂದು ಆಕಸ್ಮಿಕ ನಿಜ. ಆ ಶಾಲೆಯಲ್ಲಿ ಇನ್ನೂ ಅನೇಕರು ತೊಂದರೆ ಇದ್ದೂ ಬರದಿರಬಹುದು. ಬೇರೆ ಶಾಲೆಗಳಲ್ಲಿ ಕಡಮೆ ಹುಡುಗರಿಗೆ ತೊಂದರೆ ಕಾಣಬಹುದು. ಆದರೆ ಸಾಧಾರಣವಾಗಿ ನಮ್ಮ ದೇಶದಲ್ಲಿ ಶೇಕಡ ಆರುಮಂದಿಗೆ ಮಾತಿನ, ಕಿವಿಯ ತೊಂದರೆ ಇರುತ್ತದೆಂದು ಅಂದಾಜು ಮಾಡಬಹುದು. ಅಂದರೆ 6,0000,000 ಜನರಿರುವ ನಮ್ಮ ದೇಶದಲ್ಲಿ 3600000 ಜನರಿಗೆ ಕಿವಿಯ ಮಾತಿನ ತೊಂದರೆ ಇದೆ ಎಂದಾಯಿತು. ಅದರಲ್ಲಿ ಅರ್ಧದಷ್ಟು ಜನರಿಗೆ ಮಾತಿನ ತೊಂದರೆ ಇದೆ ಎಂವರೆ ಉತ್ಪ್ರೇಕ್ಷೆಯಲ್ಲ—ಅಂದರೆ 1800000 ಜನರಾಯಿತು.

ಇಷ್ಟು ಹೆಚ್ಚು ಜನರಿಗೆ ತೊಂದರೆಯಿದ್ದರೂ, ಮಾತಿನ ತೊಂದರೆಗಳನ್ನು ಹತೋಟಿಗೆ ತರುವ, ನಿವಾರಿಸುವ ಪ್ರಯತ್ನಗಳು ನಮ್ಮ ದೇಶದಲ್ಲಿ ಇತ್ತೀಚೆಗೆ ಆರಂಭವಾದುವು. ವಾಕ್‌ಶ್ರವಣತಜ್ಞರ ಶಿಕ್ಷಣ ಈಗ ಹತ್ತು ವರ್ಷಗಳಿಂದ ಮೈಸೂರಿನಲ್ಲಿರುವ ಅಖಿಲಭಾರತ ವಾಕ್‌ಶ್ರವಣಸಂಸ್ಥೆಯಲ್ಲಿ ನಡೆಯುತ್ತಿದೆ. ಬೊಂಬಾಯಿಯಲ್ಲಿ, ಅಹಮದಾಬಾದಿನಲ್ಲಿಯೂ ಶಿಕ್ಷಣ ದೊರೆಯುತ್ತದೆ.

ಮಾತಿನ ತೊಂದರೆಗಳು ಹಲವು ವಿಧ. ಕೆಲವು ಅಕ್ಷರಗಳನ್ನು ಸ್ಪಷ್ಟವಾಗಿ ಉಚ್ಚಾರ ಮಾಡದಿರುವುದು. ತಡವಾಗಿ ಮಾತು ಕಲಿಯವುದು, ಮಾತು ಆಡದೆಯೇ ಇರುವುದು, ಕೆಟ್ಟ ಧ್ವನಿಯಿಂದ ಹಿಡಿದು ಧ್ವನಿಯೇ ಇಲ್ಲದಿರುವುದು, ತಡೆದು ತಡೆದು ಉಗ್ಗಿ ಮಾತನಾಡುವುದು, ತೀರ ಬೇಗ ಬೇಗ ಮಾತನಾಡುವುದು, ವಯಸ್ಸಿಗೆ ತಕ್ಕಂತೆ ತನ್ನ ಸುತ್ತಮುತ್ತಲಿನ ಸಂಸ್ಕೃತಿಗೆ ತಕ್ಕಂತೆ, ತನ್ನ ವಿದ್ಯಾಭ್ಯಾಸಕ್ಕೆ ತಕ್ಕಂತೆ ಮಾತನಾಡದಿರುವುದು ವಾಕ್ ದೋಷಗಳೇ. ವಾಕ್ ದೋಷಗಳಿಂದ ಇತರರೊಡನೆ ಅರ್ಥಪೂರ್ಣ ಸಂಪರ್ಕಸಾಧನೆ ಕಷ್ಟವಾಗಬಹುದು. ಅಲ್ಲದೆ ಮಾತನಾಡುವವರ, ಕೇಳುವವರ ಮನಸ್ಸಿಗೆ ಆತಂಕ, ಅಸಂತೃಪ್ತಿ ಉಂಟಾಗಬಹುದು. ಮಾತು ಕೇಳುವವರು ಏನು ಹೇಳುತ್ತಿದ್ದೇನೆ ಎನ್ನುವುದಕ್ಕಿಂತ ಹೆಚ್ಚಾಗಿ ಹೇಗೆ ಮಾತನಾಡುತ್ತೇವೆ ಎನ್ನುವುದರ ಬಗೆಗೆ ಹೆಚ್ಚು ಗಮನ ಕೊಡಬಹುದು.

ವಾಗ್ದೋಷಗಳಿಗೆ ಅನೇಕ ಕಾರಣಗಳಿರುತ್ತವೆ. ಕೆಲವು ಶರೀರದಲ್ಲಿ, ಅಂಗಾಗಗಳಲ್ಲಿನ ತೊಂದರೆಗಳು, ಅವುಗಳಲ್ಲಿ ಬಹಳಷ್ಟನ್ನು ಕಿವಿ, ಮೂಗು, ಗಂಟಲಿನ ತಜ್ಞವೈದ್ಯರುಗಳು ಸರಿಪಡಿಸಬಹುದು. ಕೆಲವೊಮ್ಮೆ ಮಿದುಳಿನ ತೊಂದರೆಯಿಂದಾಗಿ ಮಾತಿನ ತೊಂದರೆಯುಂಟಾಗಬಹುದು. ನರಮಂಡಲ ವೈದ್ಯರುಗಳು ಅವುಗಳಲ್ಲಿ ಕೆಲವಕ್ಕೆ ಸಹಾಯ ಮಾಡಬಹುದು. ಕಿವಿಯ ತೊಂದರೆಯಿಂದಲೂ, ಅಂದರೆ ಸರಿಯಾಗಿ ಕೇಳದಿರುವುದರಿಂದಲೂ ಮಾತಿಗೆ ಅಡಚಣೆಯಾಗುತ್ತದೆ. ಕೆಲವು ತರಹ ಕಿವಿ ಮಂದವಾದಾಗ ಜನರು ತೀರ ಸಣ್ಣದಾಗಿ ಮಾತಾಡುತ್ತಾರೆ, ಮತ್ತು ಕೆಲವು ತರಹ ಕಿವಿ ಮಂದವಾದಾಗ ಬಹಳ ದೊಡ್ಡದಾಗಿ ಮಾತಾಡುತ್ತಾರೆ. ಕೆಲವು ತರಹ ಕಿವುಡಾದರೆ ಔಷಧಿಯಿಂದಾಗಲೀ ಶಸ್ತ್ರಚಿಕಿತ್ಸೆಯಿಂದಾಗಲೀ ಗುಣ ಬರುತ್ತದೆ. ಇತರ ಬಗೆಯ ಕಿವುಡನ್ನು ಗುಣಪಡಿಸುವ ಕ್ರಮ ಇನ್ನೂ ಎಲ್ಲೂ ಕಂಡು ಹಿಡಿದಿಲ್ಲ. ಸಣ್ಣ ಮಕ್ಕಳಲ್ಲಿ ತುಂಬ ಕಿವುಡಾದರೆ ಅವು ಮಾತು ಕಲಿತುಕೊಳ್ಳುವುದೇ ಕಷ್ಟ. ಕೆಲವು ಮಕ್ಕಳು ಭಾಷೆ ಮತ್ತು ಮಾತು ಕಲಿಯುವುದೇ ಇಲ್ಲ. ಇಂತಹ ಮಕ್ಕಳನ್ನೇ ಜನ ತಪ್ಪಾಗಿ 'ಮೂಗ' ಎಂದು ಕರೆಯುತ್ತಾರೆ. ನಿಜವಾಗಿ ನೋಡಿದರೆ ಆ ಮಕ್ಕಳು 'ಕಿವುಡ' ರಷ್ಟೆ. ಅವರ ಮಾತಿನ ಅಂಗಾಂಗಗಳಲ್ಲಿ ಯಾವ ದೋಷವೂ ಇರುವುದಿಲ್ಲ. ಅವರ ಧ್ವನಿ ಚೆನ್ನಾಗಿರುತ್ತದೆ. ಅವರಲ್ಲಿ ಮಾತು ಕಲಿಯುವ ಶಕ್ತಿ ಇರುತ್ತದೆ. ಆದರೆ ಅವರು ಮಾತು ಕಲಿಯದಿರುವುದಕ್ಕೆ ಕಾರಣ, ಅವರು ಸುತ್ತಮುತ್ತಲಿನ ಮಾತು ಕೇಳದೇ ಇರುವುದು. ಎಲ್ಲ ಮಕ್ಕಳು ಭಾಷೆ, ಮಾತು ಕಲಿಯುವುದು ಆಸುಪಾಸಿನವರ ಮಾತನ್ನು ಕೇಳಿ. ಹಾಗೆ ಕೇಳದಿದ್ದರೆ, ಏನು ಮಾತು ಆಡುವುದು ? ಹೇಗೆ ಮಾತಾಡು

ವುದು ? ಕಲಿಯುವುದು ಕಷ್ಟ. ಆದುದರಿಂದಲೇ ಕಿವುಡು ಮಕ್ಕಳು ಸರಿಯಾದ ತರಪೇತಿ ಸಿಗದಿದ್ದರೆ ಮಾತು ಕಲಿಯುವುದಿಲ್ಲ. ಅಷ್ಟು ಕಿವುಡಾದಾಗ ಯಾವ ವೈದ್ಯರೂ ಸಹಾಯಮಾಡಲಾಗುವುದಿಲ್ಲ. ಆದರೆ ಆ ಮಕ್ಕಳಿಗೂ ಕೂಡ ಸರಿಯಾದ ಶ್ರವಣೋಪಕರಣಗಳನ್ನು ಕೊಟ್ಟರೆ, ಸರಿಯಾಗಿ ಶಿಕ್ಷಣ ಕೊಟ್ಟರೆ ಮಾತು ಕಲಿಯಬಹುದು. ಹೀಗಾಗಿ ಒಬ್ಬ ಕಿವುಡು ಮಗು ಮಾತು ಕಲಿಯದಿದ್ದರೆ, ಆ ತಪ್ಪು ಸಮಾಜದ್ದು, ಶಿಕ್ಷಕರದ್ದು, ಆ ಮಗುವಿನ ತಂದೆತಾಯಿಯರದ್ದು. ಮತ್ತೆ ಕೆಲವು ಮಾತಿನ ತೊಂದರೆಗಳು, ಬಹಳಷ್ಟು ಮಾತಿನ ತೊಂದರೆಗಳು, ಕಲಿತ ಅಭ್ಯಾಸಗಳು—ಅಂದರೆ ಸರಿಯಾದ ಅಭ್ಯಾಸ ಕಲಿಯದುದರಿಂದ ಅಥವಾ ತಪ್ಪು ಅಭ್ಯಾಸ ಕಲಿಯುವುದರಿಂದ ಉಂಟಾಗುತ್ತವೆ.

ಅಂದರೆ ಒಟ್ಟನಲ್ಲಿ ಮಾತಿನ ತೊಂದರೆಗಳನ್ನುಂಟುಮಾಡುವ ಅನೇಕ ತೊಂದರೆಗಳಿಗೆ ವೈದ್ಯರು ಚಿಕಿತ್ಸೆ ಮಾಡಬಹುದು. ಆದರೆ ಮತ್ತೆ ಕೆಲವು ತೊಂದರೆಗಳಿಗೆ ವೈದ್ಯರು ಏನೂ ಮಾಡಲಾಗುವುದಿಲ್ಲ.

ಅಂತಹ ಮಕ್ಕಳಲ್ಲಿ ಬಹಳಷ್ಟು ಜನರಿಗೆ ವಾಕ್‌ಶ್ರವಣತಜ್ಞರು ಸಹಾಯಮಾಡಬಹುದು. ಅವರು ಸೂಕ್ಷ್ಮವಾಗಿ ಪರೀಕ್ಷಿಸಿ, ಸ್ವತಃ ಮಗುವಿಗೆ ತರಬೇತಿ ಕೊಡಬಹುದು. ಅವರೊಡನೆ ಸಮಾಲೋಚಿಸಿ, ಅವರು ಹೇಳಿದಂತೆ ತಂದೆ ತಾಯಂದಿರೂ ಮನೆಯಲ್ಲಿ ಮಗುವಿಗೆ ಸಹಾಯ ಮಾಡಿದರೆ ಮಾತಿನ ತೊಂದರೆಗಳು ಬಹು ಪಾಲು ಕಡಮೆ ಆಗುತ್ತವೆ. ಮಕ್ಕಳ ಮಾತಿನ ಬೆಳವಣಿಗೆಯಲ್ಲೂ, ಮಾತಿನ ತೊಂದರೆಗಳನ್ನು ಗುರುತು ಹಚ್ಚುವುದರಲ್ಲೂ, ತಕ್ಕ ತಜ್ಞರಲ್ಲಿಗೆ ಮಕ್ಕಳನ್ನು ಬೇಗ ಕರೆದೊಯ್ಯುವುದರಲ್ಲೂ ಮತ್ತು ಅವರು ಕೊಟ್ಟ ಸಲಹೆಗಳನ್ನು ಪಾಲಿಸುವುದರಲ್ಲೂ ತಂದೆ ತಾಯಂದಿರ ಪಾತ್ರ ಬಹು ಮುಖ್ಯವಾಗುತ್ತದೆ.

ಮುಖ್ಯವಾಗಿ ತಂದೆತಾಯಂದಿರು ಮಕ್ಕಳೊಡನೆ ಹೆಚ್ಚು ಹೆಚ್ಚು ಮಾತನಾಡಬೇಕು. ನಾನು ಸಾಧಾರಣವಾಗಿ ಎಲ್ಲರಿಗೂ ಹೇಳುವುದು–ಮಕ್ಕಳೊಡನೆ ತಂದೆತಾಯಂದಿರು ಎಷ್ಟು ಮಾತನಾಡಬೇಕೆಂದರೆ ಅವರುಗಳ ಸ್ನೇಹಿತರಿಗೆ ಬೇಸರ ಬರಬೇಕು ಅಷ್ಟೆ. ನಾವು ಮಕ್ಕಳೊಡನೆ ಎಷ್ಟು ಮಾತನಾಡುತ್ತೇವೆಯೋ, ಅಂದರೆ ಮಕ್ಕಳು ಎಷ್ಟು ಮಾತು ಕೇಳಿಸಿಕೊಳ್ಳುತ್ತವೆಯೋ ಅಷ್ಟೂ ಒಳ್ಳೆಯದು. ಈ ಮಾತು ಮಾತಿನ ತೊಂದರೆ ಇರುವ ಮಕ್ಕಳಿಗಷ್ಟೇ ಅಲ್ಲ ; ಎಲ್ಲ ಮಕ್ಕಳಿಗೂ ಅನ್ವಯಿಸುತ್ತದೆ. ಅನೇಕ ತಂದೆ ತಾಯಂದಿರು ಮಕ್ಕಳೊಡನೆ ಸಾಕಷ್ಟು ಮಾತಾಡುವುದೇ ಇಲ್ಲ. ಹಿಂದಿನ ಕಾಲದಲ್ಲಿ ಅಜ್ಜ, ಅಜ್ಜಿಯರು ಮಕ್ಕಳೊಡನೆ ಮಾತನಾಡುತ್ತಿದ್ದರು. ಆದರೆ ಈಗಿನ ಕಾಲದಲ್ಲಿ ನಾವುಗಳು ಅಜ್ಜ, ಅಜ್ಜಿಯರನ್ನು ದೂರ ಇಡುತ್ತೇವೆ. ನಾವು ಗಂಡಹೆಂಡಿರು ಜೊತೆಜೊತೆಯಾಗಿ ಅಥವ ಬೇರೆಬೇರೆಯಾಗಿ ತಿರುಗಾಡಿ, ಮಕ್ಕಳೊಡನೆ ಮಾತನಾಡಲು ಸಮಯವಿಲ್ಲವೆಂದುಕೊಳ್ಳುತ್ತೇವೆ. ಹೀಗಾಗಿ ನಮ್ಮ ಮಕ್ಕಳು ಕೇಳುವ ಮಾತುಗಳು ಕೇವಲ 'ಅಲ್ಲಿ ಹೋಗು' 'ಇಲ್ಲಿ ಬಾ' 'ಊಟ ಮಾಡು' 'ಆಟ ಸಾಕು' 'ಪಾಠ ಓದಿಕೋ ಹೋಗು' 'ಬಾಯಿ ಮುಚ್ಚು' ಮತ್ತಿತರ ಆಜ್ಞೆಗಳಷ್ಟೇ ಆಗಿಬಿಡುತ್ತವೆ. ಮಾತು ಖುಷಿಯ ಸಂಪರ್ಕಸಾಧನ ಎನ್ನುವುದನ್ನು ಕಲಿಯಲು ಮಕ್ಕಳಿಗೆ ಅವಕಾಶವೇ ಸಿಗುವುದಿಲ್ಲ. ತಂದೆತಾಯಂದಿರು ಮಕ್ಕಳೊಡನೆ ಆಟ ಆಡಬೇಕು. ಖುಷಿಯಾಗಿ ಮಕ್ಕಳೊಡನೆ ಬೆರೆತು, ಹರಟೆ ಹೊಡೆಯುತ್ತಾ ಸ್ವಲ್ಪವಾದರೂ ಕಾಲಕಳೆಯಬೇಕು. ಹಾಗೆ ಮಾತಾಡುವಾಗ ಮಕ್ಕಳಂತೆ ಮುದ್ದುಮಾತನಾಡಬಾರದು. ಅವರಿಗೆ ನಾವು ಶುದ್ಧ ಭಾಷೆಯ ಮಾದರಿಯನ್ನು ಕೊಡಬೇಕು. ಪೂರ್ಣ ವಾಕ್ಯಗಳಲ್ಲಿ, ಎಲ್ಲರಲ್ಲೂ ಹೇಗೆ ಮಾತನಾಡುತ್ತೇವೆಯೋ ಹಾಗೆಯೇ ಮಾತನಾಡಬೇಕು. ಮಗುವು ಸರಿಯಾಗಿ ಮಾತನಾಡದಿದ್ದರೆ ಅವನನ್ನು ಟೀಕಿಸಬಾರದು; ನಿರ್ಬಂಧಮಾಡಬಾರದು. ನಾವು ಸರಿಯಾದ ಮಾದರಿಯನ್ನು ತೋರಿಸಿಕೊಟ್ಟರೆ ಸಾಕು. ತೊಂದರೆ ಬದಲಾಗದಿದ್ದರೆ ತಜ್ಞರಲ್ಲಿ ತೋರಿಸಬೇಕು. ಮಕ್ಕಳಿಗೆ ಕಥೆಗಳನ್ನು ಹೆಚ್ಚುಹೆಚ್ಚು ಹೇಳಬೇಕು. ಮಕ್ಕಳೊಡನೆ ಹಾಡಬೇಕು. ಕುಣಿಯಬೇಕು. ಆಗ ಮಕ್ಕಳಿಗೂ ಮಾತನಾಡಲು ಖುಷಿಯಾಗುತ್ತದೆ. ಅವರ ಖುಷಿಯಲ್ಲಿ ಬೆರೆತು, ಅವರ ಮಾತಿನ ಚಕಮುಕಿಯನ್ನು ಕೇಳಿ, ಬೆಳವಣಿಗೆಯನ್ನು ನೋಡಿ, ನಾವೂ ಖುಷಿಪಡಬಹುದು.

ಡಾ. ಎಂ. ರಾಜೇಶ್ವರಿ

ಮಹಿಳೆಯರ ಮನೋದೈಹಿಕ ರೋಗಗಳು

ಮಾನವನು ಸೃಷ್ಟಿಯ ಅತ್ಯಂತ ಶ್ರೇಷ್ಠನೆಂಬುದು ಸರ್ವವಿದಿತವಾದುದು. ಆದರೆ ಸೃಷ್ಟಿಯ ಕಿರೀಟವಾದ ಮಾನವನ ಶ್ರೇಷ್ಠತೆಗೆ ಕಾರಣವಾದ ಅವನ ಚಿತ್ತವು ಅವನನ್ನು ಸುಖಿಯನ್ನಾಗಿ ಮಾಡಿರುವುದಲ್ಲದೆ ಅವನ ಕಷ್ಟಗಳಿಗೂ ದುಃಖಕ್ಕೂ ಕಾರಣವಾಗಿದೆ. ಮನುಷ್ಯದೇಹವನ್ನು ಮುತ್ತಿ ಕಾಡುವ ಅಸಂಖ್ಯಾತ ರೋಗಗಳಿಗೆ ಬಾಹ್ಯದ ಅಂಶಗಳಲ್ಲದೆ ಆಂತರಿಕ ಅಂಶಗಳೂ ಕಾರಣವಾಗಿವೆ. ಮಾನವನ ಮನಸ್ಸಿನಲ್ಲಿ ಹುದುಗಿರುವ ಕಾಮ, ಕ್ರೋಧ, ಭಯ, ಬೇಸರ, ಆತಂಕ, ಆವೇಶಗಳು ದೇಹದ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ಪರಿಣಾಮ ಬೀರುತ್ತವೆ.ಪ್ರಸಿದ್ಧ ವೈದ್ಯ ಪಾಲ್‌ಕುಹನ್ ಅವರು ಮನುಷ್ಯನ ಎಲ್ಲ ರೋಗಗಳಿಗೂ ಮಾನಸಿಕ ಅಂಶಗಳ ಸಂಬಂಧವಿದೆ ಎಂದು ಹೇಳುತ್ತಾರೆ. ನಾಗರಿಕತೆ ಹೆಚ್ಚಿದಂತೆ ಮಾನವ ವಿಜ್ಞಾನದ ನೆರವಿನಿಂದ ಸಾಂಕ್ರಾಮಿಕ ಹಾಗೂ ಸಾಮಾನ್ಯ ರೋಗಗಳನ್ನು ನಿವಾರಿಸುವುದರಲ್ಲಿ ಯಶಸ್ವಿಯಾಗಿದ್ದರೂ, ನಾಗರಿಕತೆಯ ಬೆಳವಣಿಗೆಯಿಂದ ಅತಿಯಾದ ಒತ್ತಡ,ಕಳವಳ, ಆತಂಕಗಳು ಉಂಟಾಗಿ ಮನೋದೈಹಿಕ ಅಥವಾ ಮಾನಸಿಕ ರೋಗಗಳು ಬರಲು ಕಾರಣವಾಗಿದೆ. ಪ್ರಾಪಂಚಿಕ ಸುಖದ ಹಂಬಲ, ಅದರಲ್ಲೂ ಲೈಂಗಿಕ ಪ್ರವೃತ್ತಿ ಈ ತೆರನಾದ ರೋಗಗಳ ಬೆಳವಣಿಗೆಗೆ ಬಹುಮಟ್ಟಿಗೆ ಕಾರಣ. ಮಾನಸಿಕ ಸ್ಥಿತಿ ದೈಹಿಕ ಕ್ರಿಯೆಗಳ ಮೇಲೆ ಪರಿಣಾಮವನ್ನುಂಟುಮಾಡುತ್ತವೆ ಎಂಬ ಅಂಶವನ್ನು ವೈದ್ಯವಿಜ್ಞಾನ ಬಹುಕಾಲ ನಿರ್ಲಕ್ಷಿಸಿದ್ದಿತು. ಆಧುನಿಕ ವೈದ್ಯಶಾಸ್ತ್ರದಲ್ಲಿ ಮನೋದೈಹಿಕ ಖಾಯಿಲೆಗಳಿಗೆ (psychosomati diseases) ಹೆಚ್ಚು ಗಮನವನ್ನು ಕೊಡಲಾರಂಭಿಸಿದೆ. ಈ ಸ್ಥಿತಿಯಲ್ಲಿ ಮಾನಸಿಕ ಅಸ್ವಸ್ಥತೆ ಅನೈಚ್ಛಿಕ ನರಗಳ ಮೇಲೆ ಮತ್ತು ಗ್ರಂಥಿಗಳ ಮೇಲೆ ಪರಿಣಾಮವನ್ನು ಬೀರಿ ಕೆಲವು ಅಂಗಗಳಿಗೆ ಹಾನಿ ಮಾಡಿ ಅವುಗಳು ನಿಷ್ಕ್ರಿಯೆಯಾಗುವಂತೆ ಮಾಡುತ್ತದೆ. ಈ ರೀತಿಯ ರೋಗ ದೇಹದ ಯಾವ ಭಾಗಕ್ಕೂ ವ್ಯಾಪಿಸಬಹುದು. ಸಾಮಾನ್ಯವಾಗಿ ಮಾನಸಿಕ ತುಮುಲ ಒತ್ತಡಗಳಿಂದ ಹೃದಯನಾಳಗಳಿಗೆ, ಶ್ವಾಸಕೋಶಗಳಿಗೆ ಸಂಬಂಧಿಸಿದ ರೋಗ–ಆಸ್ತಮ, ಕರಳುಬೇನೆ, ಅಜೀರ್ಣ, ಮಲಬದ್ಧತೆ, ಮೈಕೈ ತಲೆನೋವು, ಬೊಜ್ಜು ಮೊದಲಾದ ಬೇನೆಗಳು ಉದ್ಭವಿಸುವುವು.

ಮನೋರೋಗಗಳಿಗೆ ತುತ್ತಾಗುವವರಲ್ಲಿ ಪುರುಷರಿಗಿಂತ ಸ್ತ್ರೀಯರೇ ಹೆಚ್ಚು ಎಂದು ಹೇಳಬಹುದು. ಕವಿ, ಕಲಾವಿದನಿಗೆ ಸ್ಫೂರ್ತಿಯಾಗಿದ್ದು, ಸೃಷ್ಟಿಯ ಅತ್ಯಂತ ಸುಂದರ ಕಲಾಕೃತಿ ಎನ್ನಿಸಿಕೊಂಡಿರುವ ಸ್ತ್ರೀಯ ದೇಹ ಮಾನಸಿಕ ತುಮುಲಕ್ಕೆ ಸಿಕ್ಕಿ ತತ್ತರಿಸುತ್ತದೆ.ಮಾನಸಿಕ ಮೂಲದ ರೋಗಗಳಿಂದ ನರಳುತ್ತದೆ.ಜಗನ್ಮನೋಹರವಾಗಿರುವ ಹೆಣ್ಣು ಮೇಲುನೋಟಕ್ಕೆ ಸೌಂದರ್ಯದ ಗಣಿಯಾಗಿ ಕಂಡರೂ, ಅವಳ ದೇಹದಲ್ಲಿ ಆಸೆ, ನಿರಾಶೆ, ಆತಂಕ, ಆವೇಶಗಳೂ ಅಡಿಗಡಿಗೂ ಅಲೆಅಲೆಯಾಗಿ ಬಂದು ಅಪ್ಪಳಿಸಿ ಅವಳ ಮನಶ್ಶಾಂತಿಯನ್ನು ಕದಡಿ, ಹಲವಾರು ರೋಗಗಳಿಗೆ ಆಹ್ವಾನವೀಯುತ್ತವೆ. ಬಹು ಸೂಕ್ಷ್ಮ ಸ್ವಭಾವದ ಸ್ತ್ರೀ ಬಹು ಬೇಗನೆ ಭಾವೋದ್ವೇಗಕ್ಕೆ ಒಳಗಾಗು

ವುದರಿಂದ ಒಂದಲ್ಲ ಒಂದು ಬಗೆಯ ಆತಂಕ, ಭಯ, ಬೇಸರಗಳು ಅವಳ ಮನದಲ್ಲಿ ಸ್ಫೋಟಗೊಳ್ಳುತ್ತಿದ್ದು ದೇಹವನ್ನು ಝರ್ಜರಗೊಳಿಸುತ್ತವೆ. ಅದರಲ್ಲಿಯೂ ಶತಶತಮಾನಗಳಿಂದ ಗಂಡಸಿನ ದಬ್ಬಾಳಿಕೆಗೆ ಸಿಕ್ಕು ನರಳುತ್ತಿರುವ ಹೆಣ್ಣು ಸಮಾಜದಲ್ಲಿ ಅನೇಕ ವಿಧವಾದ ಒತ್ತಡ ಪಕ್ಷಪಾತ ಅನ್ಯಾಯಗಳಿಗೆ ಸಿಕ್ಕಿ ಮನಸ್ವಾಸ್ಥ್ಯವನ್ನು ಕಳೆದುಕೊಂಡು ಅದರ ಪರಿಣಾಮವಾಗಿ ಒಂದಲ್ಲ ಒಂದು ರೋಗರುಜಿನಕ್ಕೆ ಸಿಕ್ಕಿ ನರಳುತ್ತಾಳೆ.

ನಾನು ಕಾಣುವ ಮಹಿಳೆಯರಲ್ಲಿ ಮೂಢನಂಬಿಕೆ ಅಜ್ಞಾನ ಮತ್ತು ಮನೋವೈಪರೀತ್ಯದಿಂದ ಸಂಭವಿಸುವ ರೋಗಗಳಿಂದ ನರಳುವವರೇ ಹೆಚ್ಚು. ಬುದ್ಧಿಭ್ರಮಣೆ, ಚಿತ್ತೋದ್ರೇಕ, ಮನೋವಿಕಾರ, ಹುಚ್ಚು ಇವುಗಳಿಗೆ ಸ್ತ್ರೀಯರೇ ಅಧಿಕ ಸಂಖ್ಯೆಯ ಆಶ್ರಯದಾತರು. ನಿಸರ್ಗವೂ ಸ್ತ್ರೀ ಹೆಚ್ಚು ಭಾರವನ್ನು ಹೊರುವಂತೆ ಮಾಡಿದೆ. ಮಾಸಿಕ, ಗರ್ಭಧಾರಣೆ, ಬಾಣಂತಿತನ, ಋತುಬಂಧ ಮೊದಲಾದ ಪರಿಸ್ಥಿತಿಗಳಲ್ಲಿ ಮಹಿಳೆ ದೈಹಿಕವಾಗಿ ದುರ್ಬಲವಾಗಿ ಸಾಧಾರಣವಾದ ನೋವು ಆಘಾತಗಳನ್ನೂ ಸಹಿಸಲು ಸಾಧ್ಯವಾಗದೆ ಚಿತ್ತಸಮತೆಯನ್ನು ಕಳೆದುಕೊಳ್ಳುವಳು. ಮಾನಸಿಕ ಒತ್ತಡ ಹೆಂಗಸರಲ್ಲಿ, ವಿಶೇಷವಾಗಿ ಬಹಿಷ್ಠೆಗೆ ಸಂಬಂಧಿಸಿದ ತೊಂದರೆ, ಬಂಜೆತನ, ಲೈಂಗಿಕ ಜೀವನಕ್ಕೆ ಸಂಬಂಧಿಸಿದ ತೊಂದರೆಗಳನ್ನೂ ಉಂಟುಮಾಡುತ್ತವೆ.

ಸ್ತ್ರೀಯ ಜೀವನಚಕ್ರವನ್ನು ಗಮನಿಸಿದರೆ ಪ್ರತಿ ಹಂತದಲ್ಲೂ ಅವಳ ಮನಸ್ಸಿನ ಮೇಲೆ ಹಲವಾರು ಅಂಶಗಳು, ಶಕ್ತಿಗಳು ಒತ್ತಡ ಹೇರುವ ಸಂಭವವನ್ನು ಕಾಣಬಹುದು. ಬಾಲ್ಯ, ಕೌಮಾರ್ಯ, ಯೌವನ, ಗಾರ್ಹಸ್ಥ್ಯ, ವಾರ್ಧಿಕ್ಯ, ಮುಪ್ಪು ಎಲ್ಲ ಘಟ್ಟಗಳಲ್ಲೂ ಒಂದಲ್ಲ ಒಂದು ರೀತಿ ಒತ್ತಡ, ನೋವು, ಭಯ, ಕಳವಳ ಇವುಗಳನ್ನು ಅನುಭವಿಸಿ, ತನ್ನೆಲ್ಲ ಕಷ್ಟಗಳನ್ನು ನುಂಗಿ, ತನ್ನ ನಗುಮೊಗದ ಹಿಂದೆ ಅಪಾರವಾದ ವೇದನೆಯನ್ನು ಹುದುಗಿಸಿಕೊಳ್ಳಲು ಯತ್ನಿಸುತ್ತಿರುವ ಮಹಿಳೆಯ ಮನೋಸ್ಥಿತಿ ಎಷ್ಟು ಕರುಣಾ ಜನಕ !

ಬಾಲ್ಯದಲ್ಲಿ ಸಾಮಾನ್ಯವಾಗಿ ಮಕ್ಕಳು ಹೆಚ್ಚು ತೊಂದರೆ ಕಷ್ಟಗಳಿಗೆ ಒಳಗಾಗುವುದಿಲ್ಲವಾದರೂ ಮಗುವಿನ ಮನಸ್ಸು ಬಹು ಸೂಕ್ಷ್ಮವಾಗಿದ್ದು ಕುಟುಂಬದಲ್ಲಿನ ಅಥವಾ ಹೊರಗಿನ ಘಟನೆಗಳು ಅವರ ಮನಸ್ಸನ್ನು ಕಲಕಬಲ್ಲವು. ಭೀತಿ, ತೀವ್ರವೇದನೆ, ಕಷ್ಟಗಳಿಗೆ ತುತ್ತಾದ ಮಕ್ಕಳ ಹಾರ್ಮೋನ್ ಮತ್ತಿತರ ಗ್ರಂಥಿಗಳ ಮೇಲೆ ದುಷ್ಪರಿಣಾಮವಾಗಿ ಹೆಣ್ಣುಮಕ್ಕಳ ದೇಹದ ಬೆಳವಣಿಗೆ ಕುಂಠಿತವಾಗಬಹುದು. ಶೈಶವದಲ್ಲಿ ಅದುಮಿಟ್ಟ ಅತೃಪ್ತಿ ಹತ್ತಾರು ವರ್ಷಗಳಾದ ಮೇಲೂ ಅವಕಾಶ ದೊರಕಿದಾಗ ಅಂಗಾಂಗಗಳ ಕಾರ್ಯಕ್ಕೆ ಭಂಗ ತರಬಹುದು. ಬಾಲ್ಯದಲ್ಲಿಯ ಭಯ, ನಿರ್ಬಂಧ, ಕಳವಳ ಇವು ಮಕ್ಕಳಲ್ಲಿ ಮಲಬದ್ಧತೆ ಮೊದಲಾದ ಮನೋದೈಹಿಕ ರೋಗಗಳು ಬರಲು ಕಾರಣವಾಗುತ್ತವೆ. ಕೌಮಾರ್ಯದಲ್ಲಿ ಮಕ್ಕಳು ಮುಗ್ಧರಾಗಿರುವುದರಿಂದ ಅವರ ಮಾನಸಿಕ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಬೇಕು. ಮಕ್ಕಳಿಗೆ ಲೈಂಗಿಕಶಿಕ್ಷಣ ಅವಶ್ಯಕವೇ ಎಂಬ ಬಗ್ಗೆ ಅನೇಕ ವಾದಗಳಿವೆ. ಹಲವು ವೇಳೆ ಅಜ್ಞಾನದ ಪರಿಣಾಮವಾಗಿ, ಕುತೂಹಲದಿಂದ ದುಷ್ಟಟಗಳಿಗೆ ಸಿಕ್ಕಿ ಅದರ ಪರಿಣಾಮವಾಗಿ ತೊಂದರೆಗೊಳಗಾದ ಬಾಲಕಿಯರೂ ಉಂಟು. ಹೆಣ್ಣುಮಕ್ಕಳ ಮಾನಸಿಕ ಆರೋಗ್ಯಕ್ಕೆ ಗಮನಕೊಟ್ಟು ಅವರು ಅಹಿತ ಶಕ್ತಿಗಳಿಗೆ ತುತ್ತಾಗದಂತೆ ನೋಡಿಕೊಳ್ಳಬೇಕು.

ಯೌವನಕ್ಕೆ ಕಾಲಿಟ್ಟೊಡನೆ ಹೆಣ್ಣಿಗೆ ಮೋಹಕ ರೂಪು ಬರುವಂತೆ ಮಾನಸಿಕ ತುಮುಲ ಒತ್ತಡಗಳೂ ಹೆಚ್ಚಾಗುತ್ತವೆ. ಇಲ್ಲಿಯೂ ಸಂಪ್ರದಾಯಬದ್ಧವಾದ ನಮ್ಮ ಸಮಾಜದಲ್ಲಿ ಹೆಣ್ಣು ಸದಾ ತನ್ನ ಪ್ರವೃತ್ತಿ ವಯೋಧರ್ಮಗಳಿಗನುಸಾರವಾದ ಹಂಬಲ, ಆಸೆ, ಆಮಿಷಗಳನ್ನು ಅದುಮಿಟ್ಟುಕೊಂಡು ಬಾಳಬೇಕು. ಮಾನವ ಸಹಜವಾದ ಲೈಂಗಿಕ ತೃಷೆಯನ್ನು ನೀಗಿಸುಕೊಳ್ಳಲು ಅವಕಾಶವಿಲ್ಲದಾಗ ಅದುಮಿಟ್ಟ ಭಾವನೆಗಳು ಆಸೆ ಆಕಾಂಕ್ಷೆಗಳು ದೈತ್ಯಾಕಾರವನ್ನು ತಳೆದು ಅವಳನ್ನು ಕಾಡಿಸುತ್ತವೆ. ಅವಿವಾಹಿತ ಸ್ತ್ರೀಗೆ ಸಮಾಜದಲ್ಲಿರುವ ನಿರ್ಬಂಧಗಳು, ಸರಿಯಾದ ವಯಸ್ಸಿಗೆ ಮದುವೆಯಾಗದಿರುವುದು, ಮನಸ್ಸನ್ನು ಬೇರೆ ಕಡೆ ತಿರುಗಿಸಲು ಉತ್ತಮವಾದ ಅವಕಾಶವಿಲ್ಲದಿರುವುದು ಇಂಥ ದುಸ್ಥಿತಿಗೆ ಕಾರಣವಾಗುತ್ತದೆ. ವರದಕ್ಷಿಣೆ ಮತ್ತಿತರ ಕಾರಣಗಳಿಗಾಗಿ ಹುಡುಗಿಯರಿಗೆ ವಿವಾಹಮಾಡದೆ

ಹೋದರೆ ಅದರಲ್ಲಿಯೂ ಅವಿಭಕ್ತ ಕುಟುಂಬದಲ್ಲಿದ್ದುಕೊಂಡು ಇತರರು ವೈವಾಹಿಕ ಜೀವನವನ್ನು ನಡೆಸುವುದನ್ನು ಕಂಡಾಗ ಅನೇಕ ಯುವತಿಯರ ಚಿತ್ತಸ್ವಾಸ್ಥ್ಯವು ಕೆಡುತ್ತದೆ. ಅವಿಭಕ್ತ ಕುಟುಂಬಗಳು ಬಹುಮಟ್ಟಿಗೆ ಮನೋರೋಗಗಳ ಆಗರವಾಗಿರುತ್ತವೆ. ಹತ್ತಿರದ ಬಂಧುಗಳಲ್ಲಿ ವಿವಾಹವಾಗುವುದು ಮಾನಸಿಕ ತುಮುಲಗಳಿಗೆ ಅವಕಾಶವಾಗುತ್ತದೆ. ಮಾನಸಿಕ ತಳಮಳದಿಂದ ಮನೋದೈಹಿಕ ಬೇನೆಗಳು ಬರುತ್ತವೆ. ತಲೆನೋವು, ಹೃದಯ ಡಬಡಬ ಬಡಿದುಕೊಳ್ಳುವುದು ಮೊದಲಾದವು ಯುವತಿಯರಲ್ಲಿ ಕಾಣಿಸಿಕೊಳ್ಳುವ ಸಾಮಾನ್ಯ ಮನೋರೋಗ ಲಕ್ಷಣಗಳು. ನನ್ನ ಬಳಿಗೆ ಚಿಕಿತ್ಸೆಗೆಂದು ಬಂದ ಹಲವಾರು ಯುವತಿಯರು ಇಂತಹ ವ್ಯಾಧಿಗೆ ಸಿಕ್ಕಿ ನರಳುತ್ತಿದ್ದರು. ಮುಷ್ಟಿ ಬಿಗಿ ಹಿಡಿಯುವುದು, ಹಲ್ಲುಕಚ್ಚಿಕೊಂಡಿರುವುದು ಇತರರೊಡನೆ ಉಗ್ರವಾಗಿ ವರ್ತಿಸುವುದು ಈ ಸ್ಥಿತಿಯಲ್ಲಿರುವ ಕೆಲವು ತರುಣಿಯರ ಲಕ್ಷಣಗಳು. ಅದುಮಿಟ್ಟ ಲೈಂಗಿಕ ಇಚ್ಛೆಗಳೇ ಈ ರೋಗಗಳ ಮೂಲಕಾರಣ.

ವಿವಾಹಕ್ಕೆ ಮುನ್ನ ಒಂದು ರೀತಿಯ ಚಿಂತೆಯಾದರೆ ವಿವಾಹವಾದಮೇಲೆ ಕೆಲವು ಸ್ತ್ರೀಯರಿಗೆ ಹಲವು ಬಗೆಯ ತೊಂದರೆಗಳು ಎದುರಾಗುತ್ತವೆ. ಸಾಮಾನ್ಯವಾಗಿ ಒಟ್ಟು ಕುಟುಂಬಗಳಲ್ಲಿ ಅತ್ತೆ, ಅತ್ತಿಗೆ ನಾದಿನಿಯರ ಕಿರುಕುಳ, ಹಿಂಸೆ ಇವುಗಳನ್ನು ಸಹಿಸಬೇಕಾಗುತ್ತದೆ. ಇವುಗಳ ಜೊತೆಗೆ ತನ್ನ ಪತಿಯ ದೌರ್ಜನ್ಯಕ್ಕೆ ತುತ್ತಾಗುವ ಹತಭಾಗಿನಿಯರು ಇರುತ್ತಾರೆ. ಪತಿಯಾದವನು ದುರಭ್ಯಾಸಗಳಿಗೆ ಸಿಕ್ಕಿಬಿದ್ದಿದ್ದರೆ ಅವಳ ಜೀವನ ನರಕವಾಗುತ್ತದೆ. ಮಕ್ಕಳಿಲ್ಲವೆಂದು ಕೆಲವರು ಕೊರಗಿದರೆ, ಹೆಚ್ಚು ಮಕ್ಕಳನ್ನು ಪಡೆದ ತಾಯಿಯ ಗೋಳು ಅಷ್ಟೇ ಕರುಣಾಜನಕವಾದುದು. ಕುಟುಂಬಯೋಜನೆ ಹೆಚ್ಚು ಹೆಚ್ಚು ಜಾರಿಗೆ ಬರುತ್ತಿದ್ದು ಹೆಣ್ಣಿಗೆ ಇದರಿಂದ ಬಹುಮಟ್ಟಿನ ಕಷ್ಟ ನರಳಾಟ ತಪ್ಪಿದಂತಾಗಿದೆ. ಒಟ್ಟಿನಲ್ಲಿ ಬಹುತೇಕ ಸ್ತ್ರೀಯರು ಮನೋರೋಗಗಳಿಗೆ ತುತ್ತಾಗಿ ಅದರಿಂದ ಉದ್ಭವಿಸುವ ಹಲವಾರು ರೀತಿಯ ಬೇನೆಗಳನ್ನು ಅನುಭವಿಸುತ್ತಾರೆ. ಮಾನಸಿಕಅಂಶಗಳು ದೈಹಿಕಕ್ರಿಯೆಗಳ ಮೇಲೆ ಎಷ್ಟು ಪ್ರಭಾವವನ್ನು ಬೀರುತ್ತವೆಂದರೆ ಕೆಲವು ಸ್ತ್ರೀಯರು ತಾವು ಗರ್ಭಿಣಿಯರೆಂದು ಭಾವಿಸಿಕೊಂಡಾಗ ಅಂಥವರಿಗೆ ಗರ್ಭಿಣಿಸ್ತ್ರೀಯ ದೈಹಿಕಲಕ್ಷಣಗಳೆಲ್ಲ ಕಂಡುಬರುತ್ತವೆ. ತಜ್ಞವೈದ್ಯರು ಪರೀಕ್ಷೆ ನಡೆಸಿ ಆ ಸ್ತ್ರೀಯು ಗರ್ಭವನ್ನು ಧರಿಸಿಲ್ಲವೆಂದು ವಿವರಿಸಿದಾಗ ಆ ಲಕ್ಷಣಗಳೆಲ್ಲಾ ಮಾಯವಾಗುತ್ತವೆ. ದಾರಿದ್ರ್ಯ, ಅಜ್ಞಾನ, ದಬ್ಬಾಳಿಕೆ, ದೌರ್ಜನ್ಯ ಇವುಗಳಿಗೆ ಸಿಕ್ಕಿ ಮಹಿಳೆ ಮೂಕಪಶುವಿನಂತೆ ತನ್ನ ಬಾಳನ್ನು ಸಾಗಿಸುತ್ತಾಳೆ.

ಕೆಲವೊಮ್ಮೆ ಉನ್ಮಾದರೋಗಗಳಿಗೆ ಗುರಿಯಾದ ಸ್ತ್ರೀಯರಿಗೆ ಸೂಕ್ತ ಪರೀಕ್ಷೆ, ಚಿಕಿತ್ಸೆ ನಡೆಸುವುದರ ಬದಲು ಮೈಮೇಲೆ ದೆವ್ವ ಬಂದಿದೆ ಎಂಬ ಮೂಢನಂಬಿಕೆಯಿಂದ ಅವರಿಗೆ ಚಿತ್ರಹಿಂಸೆ ನೀಡುವುದೂ ಸಾಮಾನ್ಯ. ಇನ್ನೂ ಚಿಕ್ಕವಯಸ್ಸಿನಲ್ಲಿಯೇ ವಿಧವೆಯಾದವರು, ಕಾರಣಾಂತರಗಳಿಂದ ಪತಿಯಿಂದ ದೂರವಾದವರು ಅನುಭವಿಸುವ ಯಾತನೆ ಊಹಾತೀತ. ಗಂಡಸಾದವನು ಯಾವ ನಿರ್ಬಂಧವೂ ಇಲ್ಲದೆ ಮತ್ತೊಮ್ಮೆ ವಿವಾಹವಾಗುತ್ತಾನೆ. ವಿವಾಹವಿದ್ದರೂ ಪರಸ್ತ್ರೀ ಸಂಗವನ್ನು ಮಾಡಿದರೂ ಅವನು ಸಮಾಜದಲ್ಲಿ ಪ್ರತಿಷ್ಠಿತ ವ್ಯಕ್ತಿಯಾಗಿಯೇ ಇರುತ್ತಾನೆ. ಆದರೆ ನಮ್ಮ ಸಮಾಜದಲ್ಲಿ ಸ್ತ್ರೀಗೆ ಈ ಅವಕಾಶವಿಲ್ಲ. ಮಾನವಸಹಜವಾದ ವಯೋಧರ್ಮಕ್ಕನುಗುಣವಾದ ಪ್ರವೃತ್ತಿ ಆಸೆ ಆಕಾಂಕ್ಷೆಗಳನ್ನು ಅದುಮಿಟ್ಟುಕೊಳ್ಳಬೇಕು. ಈ ರೀತಿ ಸಹಜಪ್ರವೃತ್ತಿಯನ್ನು ದಮನಮಾಡಲೆತ್ನಿಸಿದಾಗ ಅವರು ಮನೋರೋಗಗಳಿಗೆ ತುತ್ತಾಗುವುದು ಹೆಚ್ಚು.

ಮಧ್ಯವಯಸ್ಸು ಮೀರಿದ ಸ್ತ್ರೀಗೆ ಇನ್ನೂ ಕೆಲವು ತೊಂದರೆಗಳಿವೆ. ಋತುಬಂಧದ ಸಮಯದಲ್ಲಿ ಅನೇಕರು ಚಿತ್ತಕ್ಷೋಭೆಗೆ ಒಳಗಾಗುತ್ತಾರೆ. ವೃದ್ಧಳಾದಮೇಲೆ ತನ್ನವರಿಂದ ಶೋಷಣೆ, ಅಲಕ್ಷ್ಯ ಇವುಗಳಿಗೆ ಸಿಕ್ಕಿ ಸ್ತ್ರೀ ಪರಿತಪಿಸುತ್ತಾಳೆ.

ಹೀಗೆ ಜೀವನದುದ್ದಕ್ಕೂ ಹೆಣ್ಣು ಮಾನಸಿಕಯಾತನೆಗೆ ಸಿಕ್ಕಿ ತೊಳಲಾಡುತ್ತಾಳೆ, ಸದಾ

ಕ್ಷೋಭೆ ಭೀತಿ ಯಾತನೆಯಿಂದ ತತ್ತರಿಸುವ ಅವಳ ದೇಹ ರೋಗಗಳ ಗೂಡಾಗುತ್ತದೆ. ಬಹುಮಂದಿ ತಮ್ಮ ಅಸ್ವಸ್ಥತೆಯ ಕಾರಣ ಲಕ್ಷಣಗಳನ್ನು ಅರ್ಥಮಾಡಿಕೊಳ್ಳದೆ ನೋವಿನಿಂದ ಬಿಡುಗಡೆಹೊಂದದೆ ನರಳು ತ್ತಾರೆ.

ಶತಶತಮಾನಗಳಿಂದ ಹೀಗೆ ಮಾನಸಿಕ ಮೂಲವಾದ ರೋಗಗಳಿಂದ ತೊಳಲಿ ಬಳಲುತ್ತಿರುವ ಅಬಲೆ ಯರಿಗೆ ಮುಕ್ತಿ ಎಂತು? ಮನೋದೈಹಿಕರೋಗಗಳು ಇಷ್ಟು ವ್ಯಾಪಕವಾಗಿದ್ದರೂ ಅವಕ್ಕೆ ಸರಿಯಾದ ಚಿಕಿತ್ಸೆ ಸಿಗುತ್ತಿಲ್ಲ. ಹಿಂದೆ ಇಂತಹ ಬೇನೆ ಬಂದವರನ್ನು ಸಜೀವ ಸುಡುತ್ತಿದ್ದರಂತೆ. ಈಗಲೂ ಈ ರೋಗಗಳಿಗೆ ದೆವ್ವ ಪೀಡೆ ಬಂದಿದೆ ಎಂದು ಚಿತ್ರಹಿಂಸೆ ಕೊಡುತ್ತಾರೆ. ನಮ್ಮ ಸಮಾಜ ಸ್ತ್ರೀಯ ಮೂಕವೇದನೆಯನ್ನು ನಿವಾರಿಸಲು ಸೂಕ್ತಕ್ರಮ ಕೈಗೊಳ್ಳಬೇಕು. “ನಾರಿಯರು ಎಲ್ಲಿ ಪೂಜಿಸಲ್ಪಡುವರೋ ಅಲ್ಲಿ ದೇವತೆಗಳು ಹರ್ಷಿಸುತ್ತಾರೆ” ಎಂದು ಪುರಾತನರು ಸಾರಿದ ಈ ನಾಡಿನಲ್ಲಿ ಹೆಣ್ಣಿನ ಸ್ಥಿತಿಗತಿ ಸುಧಾರಿಸಲು ಅಗತ್ಯ ಸುಧಾರಣೆ ಯಾಗಬೇಕು.

ಬಹುಸಂಖ್ಯಾತ ಸ್ತ್ರೀಯರು ಅಜ್ಞಾನದಿಂದ ತಮ್ಮ ಸ್ಥಿತಿಯನ್ನು ಸುಧಾರಿಸಿಕೊಳ್ಳಲಾರದೆ ಪರಿತಪಿಸ ಬೇಕಾಗುತ್ತದೆ. ಕಡ್ಡಾಯಶಿಕ್ಷಣವು ಜಾರಿಗೆ ಬಂದು, ಅನಕ್ಷರತೆ, ಅವಿದ್ಯೆ ಮಾಯವಾದರೆ ಸ್ತ್ರೀಯರ ಹಲವಾರು ಕಷ್ಟಗಳು ನಿವಾರಣೆಯಾಗುತ್ತವೆ. ಮೂಢನಂಬಿಕೆಗಳು, ಅವೈಜ್ಞಾನಿಕ ಪದ್ಧತಿಗಳು ತೊಲಗಿದರೆ ಸ್ತ್ರೀಯರ ಸ್ಥಿತಿ ಮತ್ತಷ್ಟು ಉತ್ತಮಗೊಳ್ಳುತ್ತದೆ. ಮನೋರೋಗಗಳನ್ನು ವಿಶ್ಲೇಷಿಸಿ ಮದ್ದು ಕಂಡುಹಿಡಿಯು ವುದು ಅಷ್ಟು ಸುಲಭವಾಗಿಲ್ಲ. ವ್ಯಕ್ತಿಯ ಸಾಮಾಜಿಕ ಹಿನ್ನೆಲೆಯನ್ನು ತಿಳಿದುಕೊಂಡು ಅನಂತರ ರೋಗ ಲಕ್ಷಣಗಳನ್ನು ಗಮನಿಸಿ ಪರಿಹಾರವನ್ನು ನೀಡಬೇಕಾಗುತ್ತದೆ.

ಹಲವಾರು ಉದ್ರೇಕ ಶಮನಕಾರಕ ಔಷಧಿಗಳ ಸಹಾಯದಿಂದ ಹದಗೆಟ್ಟ ಮಾನಸಿಕ ಸ್ಥಿತಿಯನ್ನು ಸುಧಾರಿಸಲು ಸಾಧ್ಯ. ಸೆರನೀಸ್, ಸ್ಟೆಮೆಟಲ್, ಲಾರ್‌ಗಾಕ್ಟಿಲ್ ಮೊದಲಾದವುಗಳ ಸಹಾಯದಿಂದ ಉದ್ವೇಗ ಶಮನವಾಗಿ ಮನಸ್ವಾಸ್ಥ್ಯವು ದೊರಕುವುದು. ವಿದ್ಯುಚ್ಛಕ್ತಿಯ ಷಾಕ್ ಕೊಡುವುದರಿಂದಲೂ ಕೆಲವುವೇಳೆ ಪರಿಹಾರ ದೊರೆಯುತ್ತದೆ. ಔಷಧಗಳಲ್ಲದೆ ಕಾರ್ಯೋನ್ಮುಖ ಚಿಕಿತ್ಸೆ ರೋಗಿಗೆ ಸಹಾಯಕವಾಗ ಬಲ್ಲದು. ಪ್ರತಿ ವ್ಯಕ್ತಿಗೂ ಪ್ರಿಯವಾದ ಕೆಲಸ ಮಾಡಲು ಅವಕಾಶ ನೀಡಿದರೆ ಅವರ ಮನಸ್ಸಿನಲ್ಲಿದ್ದ ದುಃಖ, ಆತಂಕ ಸ್ವಲ್ಪವಾದರೂ ಕಡಮೆಯಾಗುತ್ತದೆ. ಮಾನಸಿಕತುಮುಲ, ಒತ್ತಡದಲ್ಲಿರುವವರಿಗೆ ತೋಟಗಾರಿಕೆ, ಚಿತ್ರರಚಿಸುವುದು, ಹಾಡುವುದು ಮೊದಲಾದ ಕಲೆಗಳಲ್ಲಿ ಆಸಕ್ತರಾಗಲು ಅವಕಾಶ ಒದಗಿಸಿ ದರೆ, ಈ ಹವ್ಯಾಸ ಅಥವಾ ಕಲೆಗಳು ಅವರಿಗೆ ಸಮಾಧಾನವನ್ನು ನೀಡಬಲ್ಲವು.

ಹೆಣ್ಣುಮಕ್ಕಳಿಗೆ ಸರಿಯಾದ ವಯಸ್ಸಿಗೆ ವಿವಾಹವಾಗಬೇಕು. ವರದಕ್ಷಿಣೆಯ ಭೂತ ಅಸಂಖ್ಯಾತ ಹೆಣ್ಣುಮಕ್ಕಳ ಜೀವನವನ್ನು ಮಣ್ಣುಪಾಲು ಮಾಡಿದೆ. ಈ ಅನಿಷ್ಟಪದ್ಧತಿ ತೊಲಗಿದರೆ ನಮ್ಮ ಸಮಾಜದಲ್ಲಿ ಸುಖಶಾಂತಿ ಲಭಿಸುತ್ತದೆ. ಅದರಂತೆ ನಮ್ಮ ಸಮಾಜದ ಮೂಢನಂಬಿಕೆಗಳೂ, ಗೊಡ್ಡು ಆಚಾರಗಳೂ ಹೋಗ ಬೇಕು. ವಿಧವಾವಿವಾಹ, ಅಂತರ್ಜಾತೀಯವಿವಾಹ ಮೊದಲಾದ ದಿಟ್ಟಕ್ರಮಗಳನ್ನು ಅನುಸರಿಸುವುದ ರಿಂದ ಸ್ತ್ರೀಯರ ಕಷ್ಟಗಳು ಬಹುಮಟ್ಟಿಗೆ ನಿವಾರಣೆಯಾಗುತ್ತವೆ. ಕೆಲವುವೇಳೆ ವಾತಾವರಣವನ್ನು ಬದಲಾಯಿಸುವುದರಿಂದ ಪರಿಸ್ಥಿತಿ ಹಗುರವಾಗುತ್ತದೆ. ಅತಿಯಾದ ವ್ಯಾಕುಲ ಕ್ಷೋಭೆಗೊಳಗಾದ ವ್ಯಕ್ತಿ ಬೇರೆ ಊರಿಗೆ, ಸ್ಥಳಕ್ಕೆ ಹೋಗುವುದರಿಂದ, ಪ್ರವಾಸ, ತೀರ್ಥಯಾತ್ರೆ ಕೈಗೊಳ್ಳುವುದರಿಂದ ತನ್ನನ್ನು ಕಾಡುವ ಸಮಸ್ಯೆಗಳನ್ನು ಮರೆತು ನೆಮ್ಮದಿ ಪಡೆಯಲು ಸಾಧ್ಯವಾಗುತ್ತದೆ.

ಮನೋದೈಹಿಕ ಬೇನೆಗಳಿಗೆ ಒಂದು ಉತ್ತಮ ಪರಿಹಾರವೆಂದರೆ ಯೋಗಾಸನಗಳು. ಯೋಗಾಸನ ಗಳನ್ನು ಅಭ್ಯಾಸಮಾಡುವುದರಿಂದ ಮನಸ್ಸಿಗೆ ನೆಮ್ಮದಿ, ಶಾಂತಿ ದೊರಕುವುದಲ್ಲದೆ ಮನಸ್ಸಿನ ಆರೋಗ್ಯವಂತೆ

ದೇಹದ ಆರೋಗ್ಯವೂ ಸುಧಾರಿಸುವುದು. ಹಲವಾರು ವಿಚಿತ್ರ ಮನೋದೈಹಿಕ ಖಾಯಿಲೆಗಳಿಗೆ ತುತ್ತಾಗಿ ನರಳುತ್ತಿದ್ದ ಒಬ್ಬ ಬ್ರಿಗೇಡಿಯರ್‌ನ ಪತ್ನಿ ಯಾವ ಔಷಧಿಗಳಿಂದಲೂ ಗುಣ ಕಾಣದೆ ಕಡೆಗೆ ಯೋಗಾಸನ ಗಳನ್ನು ಅಭ್ಯಾಸಮಾಡಲು ತೊಡಗಿದಾಗ ಅವಳ ರೋಗಗಳೆಲ್ಲ ಒಂದೊಂದಾಗಿ ವಾಸಿಯಾಗಿ ಅವಳು ತುಂಬು ಆರೋಗ್ಯದಿಂದ ಬಾಳುತ್ತಿದ್ದಾಳೆ. ಈ ಆಸನ ಕಲಿಯುವುದು ಕಷ್ಟವಲ್ಲ. ಪ್ರತಿಯೊಬ್ಬ ಮಹಿಳೆ ಇಪ್ಪತ್ತು ನಿಮಿಷ ಅಥವಾ ಮೂವತ್ತು ನಿಮಿಷ ಅಭ್ಯಾಸ ಮಾಡುವುದರಿಂದ ಅವರ ದೈಹಿಕ ಆರೋಗ್ಯ ವೃದ್ಧಿಗೊಳ್ಳುವುದಲ್ಲದೆ ಮನಃಸ್ವಾಸ್ಥ್ಯವನ್ನೂ, ಇಂದ್ರಿಯನಿಗ್ರಹವನ್ನೂ ಸಾಧಿಸಬಹುದು.

ಆಧುನಿಕ ಸಮಾಜದಲ್ಲಿ ಸ್ತ್ರೀಗೆ ಹಿಂದಿಗಿಂತಲೂ ಹೆಚ್ಚಿನ ಸ್ಥಾನಮಾನಗಳು ಲಭಿಸಿದ್ದರೂ ಸ್ತ್ರೀಯ ಮಾನಸಿಕಸ್ಥಿತಿ ವಿಷಮಗೊಳ್ಳುತ್ತ ಬಂದಿದೆ. ದೈಹಿಕವಾಗಿ ಹೆಚ್ಚು ಭಾರವನ್ನು ಹೊರುತ್ತಿರುವ ಸ್ತ್ರೀಯು ಮಾನಸಿಕ ಹೊರೆಯೂ ಅಧಿಕವಾಗಿ ಆಕೆ ಹಲವಾರು ರೋಗಗಳಿಗೆ ತುತ್ತಾಗುತ್ತಿದ್ದಾಳೆ. ರೋಗಪೀಡಿತ ಮನಸ್ಸಿನ ಮಹಿಳೆ ಸಂಸಾರಕ್ಕೆ ಹಾಗೂ ಸಮಾಜಕ್ಕೆ ಹೊರೆಯಾಗುತ್ತಾಳೆ. ಸ್ತ್ರೀಯ ಮಾನಸಿಕ ಆರೋಗ್ಯದ ಮೇಲೆ ಸಮಾಜದ ಪ್ರಗತಿ ಅವಲಂಬಿಸಿದೆ. ಮಹಿಳೆಯರ ಮನೋದೈಹಿಕ ರೋಗಗಳನ್ನು ನಿವಾರಣೆ ಮಾಡುವು ದರ ಜತೆಗೆ ಅವುಗಳಿಗೆ ಕಾರಣವಾದ ಪರಿಸ್ಥಿತಿಯನ್ನು ಹತೋಟಿಗೆ ತರಬೇಕು. ಸಮಾಜದಲ್ಲಿರುವ ಅಂಧ ಶ್ರದ್ಧೆಗಳೂ ಮೂಢನಂಬಿಕೆಗಳೂ ತೊಲಗಿ ನಿರ್ಬಂಧಗಳು ತೊಡಕುಗಳಿಲ್ಲದ ವಾತಾವರಣದಲ್ಲಿ ಹೆಣ್ಣು ಬಾಳು ವಂತಾಗಬೇಕು. ಎಲ್ಲಕ್ಕೂ ಮೊದಲು ನಮ್ಮಲ್ಲಿರುವ ಅಜ್ಞಾನ ಮೌಢ್ಯ ಇವುಗಳನ್ನು ನಿವಾರಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದಲ್ಲದೆ ಮನೋದೈಹಿಕ ರೋಗಗಳನ್ನು ಗುರುತಿಸಿ ಅವುಗಳನ್ನು ಸೂಕ್ತ ಚಿಕಿತ್ಸೆ ನೀಡು ವುದರ ಮೂಲಕ ಗುಣಪಡಿಸಬೇಕು.

ಇಬ್ಬರು ದೇವರ ವಿಷಯದಲ್ಲಿ ಜಗಳ ಕಾಯುತ್ತಿದ್ದರೆ ಅವರನ್ನು "ನೀನು ದೇವರನ್ನು ಕಂಡಿರು ವೆಯಾ ? ಆಧ್ಯಾತ್ಮಿಕ ಅನುಭವ ನಿನಗೆ ಆಗಿದೆಯೆ" ಎಂದು ಪ್ರಶ್ನೆ ಹಾಕಿ. ಒಬ್ಬ ಕ್ರೈಸ್ತ ನೊಬ್ಬನೇ ದೇವದೂತನೆನ್ನುವನು. "ಆಗಲಿ, ಅವನು ಕ್ರೈಸ್ತನನ್ನು ನೋಡಿರುವನೆ ? "ಇಲ್ಲ ಸ್ವಾಮಿ " "ನೀನು ಕ್ರೈಸ್ತನನ್ನು ನೋಡಿರುವೆಯಾ ?" "ಇಲ್ಲ ಸ್ವಾಮಿ". ಹಾಗಾದರೆ ನೀವೆಲ್ಲ ಜಗಳ ಕಾಯುವುದೇತಕ್ಕೆ? ಹಣ್ಣುಗಳೆಲ್ಲ ಚರಂಡಿಗೆ ಬಿದ್ದುಹೋಗಿವೆ. ನೀವು ಕುಕ್ಕೆಯ ವಿಷಯದಲ್ಲಿ ಹೋರಾಡುತ್ತಿರುವಿರಿ". ವಿವೇಚನೆಯುಳ್ಳ ಸ್ತ್ರೀಪುರುಷರು ಯಾರಾದ ರಾಗಲಿ ಹೀಗೆ ಜಗಳ ಕಾಯುವುದಕ್ಕೆ ನಾಚಿಕೆಪಡಬೇಕು.

ಡಾ|| ಬಿ. ಎಂ. ಪಶುಪತಿ

ನೆತ್ತರಿನೊತ್ತಡದಲ್ಲಿ ನವ್ಯತೆಯೇನು ?

ರಕ್ತದೊತ್ತಡದ ಉಗಮವೆಂತು ? ಮಾನವ ಅನೇಕ ರೋಗರುಜಿನಗಳ ತವರುಮನೆ. ವೈದ್ಯ ಶಾಸ್ತ್ರವು ಅನೇಕ ಖಾಯಿಲೆಗಳ ಹುಟ್ಟಡಗಿಸಿದ್ದರೂ ಕೂಡ, ಕೆಲವು ರೋಗಗಳು ತಮ್ಮ ಇರುವಿಕೆಯನ್ನು ಸಾರುತ್ತ ತಮ್ಮ ಮೇಲೆ ಪೂರ್ಣಪ್ರಭುತ್ವ ಸಾಧಿಸಲಾಗದಂತೆ ಅನೇಕ ಕವಲೊಡೆಯುತ್ತ ವೈದ್ಯಕೀಯಕ್ಕೆ ಸವಾಲಾಗಿ ತಲೆ ಎತ್ತಿ ಇನ್ನೂ ನಿಂತಿವೆ. ಸಾಮಾನ್ಯವಾಗಿ ಪಟ್ಟಣಗಳಲ್ಲಿ ವಾಸಿಸುವ ನಾಗರೀಕರ ಸಮುದಾಯದಲ್ಲಿ ಕಂಡುಬರುವ ರೋಗಗಳೆಂದರೆ, ಗುಂಡಿಗೆ ರೋಗ, ರಕ್ತದೊತ್ತಡ, ಧಮನಿಗಳು ಗಟ್ಟಿಯಾಗುವಿಕೆ, ಸಂಧಿವಾತ, ಹೊಟ್ಟೆಹುಣ್ಣು, ಮಧುಮೇಹ, ತೊಡೆವಾಳೆ (ಶಾಂಕ್ರಾಯಿಡ್), ಪರಂಗಿಹುಣ್ಣು (ಸಿಫಿಲಿಸ್), ನರದೌರ್ಬಲ್ಯ, ಮತ್ತು ಮೂತ್ರ ಪಿಂಡಕ್ಕೆ ಸಂಬಂಧಿಸಿದ ಖಾಯಿಲೆಗಳು. ಇವನ್ನು ಮೆಟ್ಟಿ ವಿಜಯ ಸಾಧಿಸಬೇಕಾಗಿದೆ. ಈತ್ತೀಚಿನ ದಿನಗಳಲ್ಲಂತು, ಈ ಖಾಯಿಲೆಗಳು ಸರ್ವೆಸಾಮಾನ್ಯವಾಗಿವೆ. ಅದೇ ಶ್ರಮಜೀವಿಗಳು ಮತ್ತು ಅನಾಗರೀಕ ಮೂಲ ನಿವಾಸಿಗಳಲ್ಲಿ ಈ ವ್ಯಾಧಿಗಳು ತುಂಬ ಅಪರೂಪ.

ಆಧುನಿಕ ಮಾನವನು ತನ್ನ ಮೇಲೆ ಬೀಳುವ ಮಿತಿಮೀರಿದ ಒತ್ತಡಗಳ ಮಧ್ಯೆ ಬದುಕುತ್ತಿರುವುದರಿಂದಲೇ ಅವನ ಶರೀರದಲ್ಲಿ ರಾಸಾಯನಿಕ ವಿಷಮತೆಯುಂಟಾಗಿ, ರಕ್ತದೊತ್ತಡ ತಲೆದೋರಿ ರೋಗಗಳ ಆಗರವಾಗುತ್ತಾನೆ. ನಮ್ಮ ಶರೀರದಲ್ಲಿ ಅವಸರದ ಪರಿಸ್ಥಿತಿಯನ್ನುಂಟುಮಾಡುವುದೆಲ್ಲವೂ ಒತ್ತಡ ಎನಿಸುತ್ತದೆ. ಅದು ನರಗಳನ್ನು ಉದ್ರೇಕಿಸುವ ಔಷಧ ಸೇವನೆಯಾಗಿರಬಹುದು, ಮಾದಕ ದ್ರವ್ಯವಾಗಿರಬಹುದು, ಕರ್ಕಶ ಶಬ್ದ, ಉಸಿರುಗಟ್ಟಿಸುವ ವೇಗ, ಚಿಂತೆ, ಕೋಪ, ಗದ್ದಲ, ಭಯ, ಅಪಘಾತ, ಗಾಯ, ವಿಷಕ್ರಿಮಿಗಳ ಒಳಪ್ರವೇಶ–ಹೀಗೆ ಯಾವುದರಿಂದ ಬೇಕಾದರೂ ಆಗಬಹುದು.

ಒತ್ತಡ ಉಂಟಾದಾಗ ಅದನ್ನೆದುರಿಸಲು ಶರೀರ ಅದ್ಭುತ ರೀತಿಯಲ್ಲಿ ಅಣಿಯಾಗುತ್ತದೆ. ಅಂತಹ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ ಮೆದುಳಿನ ತಳದಲ್ಲಿರುವ ತೆಮಡಿಕ (ಪಿಟುಟರಿ) ಎಂಬ ಒಂದು ಗ್ರಂಥಿ ಮತ್ತು ಮೂತ್ರ ಪಿಂಡಗಳ ಮೇಲಿರುವ ಅಡ್ರಿನಲ್ ಎಂಬ ಎರಡು ಗ್ರಂಥಿಗಳು ಪ್ರಚೋದಿಸುತ್ತವೆ. ಇವು ಒಳಸುರಿಕ ಗ್ರಂಥಿಗಳು. ಈ ಗ್ರಂಥಿಗಳು ಸ್ರವಿಸುವ ಚೋದನೀಕವೆಂಬ ರಾಸಾಯನಿಕ ದ್ರವ್ಯಗಳು (ಹಾರ್ಮೋನುಗಳು) ಪ್ರಮಾಣದಲ್ಲಿ ಕೊಂಚವಾದರೂ ಶಕ್ತಿಯಲ್ಲಿ ಪ್ರಬಲವಾದುವುಗಳು.

ಒಬ್ಬ ವ್ಯಕ್ತಿ ಒತ್ತಡಕ್ಕೊಳಪಟ್ಟೊಡನೆ ಆ ವ್ಯಕ್ತಿಯ ಶರೀರದಲ್ಲಿ ಮುಂದಣ ತೆಮಡಿಕ ಗ್ರಂಥಿಯಿಂದ ಹಲವಾರು ಚೋದನಿಕಗಳು ಸ್ರವಿಸುತ್ತವೆ. ಅವು ಲಿಂಗ ಸಂಬಂಧ ಚೋದನಿಕಗಳು, ಜನನಾಂಗಗಳ ಬೆಳವಣಿಗೆಯಲ್ಲೂ, ಮುಟ್ಟಿನ ವ್ಯತ್ಯಾಸಗಳಲ್ಲೂ, ಸ್ತನ, ವ್ಯಕ್ತಿಯ ಬೆಳವಣಿಗೆ, ಹೀಗೆ ಹಲವಾರು ಕ್ರಿಯೆಗಳಲ್ಲಿ ಪಾತ್ರ ವಹಿಸುತ್ತವೆ. ಅವುಗಳಲ್ಲಿ ACTH. ಮತ್ತು STH ಚೋದನಿಕಗಳು ಒತ್ತಡ ಹೆಚ್ಚಿಸುವ ಪಾತ್ರದಲ್ಲಿ ಕಡಮೆ

ಇಲ್ಲ. ಈ A C T H (ಅಡ್ರಿನೊ ಕಾರ್ಟಿಕೋ ಟ್ರೋಫಿಕ್ ಹಾರ್ಮೋನು) ಮತ್ತು S T H (ಸೊಮೆಟೊ ಟ್ರೋಫಿಕ್ ಹಾರ್ಮೋನು)ಗಳೆಂಬ ಚೋದನಿಕಗಳು ಸ್ರವಿಸಿ, ಅವು ಅಡ್ರಿನಲ್ ಗ್ರಂಥಿಯನ್ನು ಉತ್ತೇಜನಗೊಳಿಸಿ ಅವುಗಳಿಂದ ಮಿನರಲೊ ಕಾರ್ಟಿಕಾಯ್ಡ್, ಗ್ಲೂರೊ ಕಾರ್ಟಿಕಾಯ್ಡ್ ಮತ್ತು ಕಾರ್ಟಿಸೋನ್ ಎನ್ನುವ ಚೋದನಿಕಗಳನ್ನು ಹೊರಚೆಲ್ಲಿಸುತ್ತವೆ. ಅದು ತಕ್ಷಣ ರಕ್ತದಲ್ಲಿ ಪಸರಿಸಿ ಸಕ್ಕರೆ, ಲವಣ, ಮತ್ತು ಶಾಖದ ಅಂಶವನ್ನು ಏರಿಸಿ ರಕ್ತದ ಒತ್ತಡವನ್ನು ಉಂಟುಮಾಡುತ್ತದೆ.

ಆಗ ನಮ್ಮ ದೇಹಕ್ಕೆ ಒದಗಬಹುದಾದ ಗಂಡಾಂತರಗಳನ್ನು ನಿಗ್ರಹಿಸಿ ಅವು ನಿಸ್ತೇಜವಾಗುತ್ತವೆ. ರಕ್ತದಲ್ಲಿ ಸಕ್ಕರೆ ಅಂಶ ಏರುವುದರಿಂದ ಶಕ್ತಿಬರುತ್ತದೆ. ಒತ್ತಡ ಏರುವುದರಿಂದ ಶಾಖ ಹೆಚ್ಚಿ ಬೆಚ್ಚಗಾಗುತ್ತದೆ. ಶರೀರದಲ್ಲಿ ವಿಷಕ್ರಿಮಿಗಳು ಆಕ್ರಮಿಸಿದ್ದರೆ, ಆ ಶತ್ರುಗಳನ್ನು ಸದೆಬಡೆಯಲು ಉರಿಯು ಉತ್ಪನ್ನವಾಗಿ ಕ್ರಿಮಿಗಳನ್ನು ನಾಶಮಾಡುತ್ತದೆ, ಗಾಯವಾಗಿದ್ದರೆ ರಕ್ತದ ಒತ್ತಡ ಕುಗ್ಗಿ ರಕ್ತಸ್ರಾವ ಕಡಮೆಯಾಗುತ್ತದೆ.

ಹಾಗೆ ಸ್ರವಿಸಿದ ಚೋದನಿಕಗಳು ಅಳತೆ ಮೀರದಿದ್ದರೆ ಜೀವರಕ್ಷಣೆಗೆ, ಇವೆಲ್ಲ ಸಂಜೀವಿನಿಯಾಗುತ್ತವೆ. ಈ ಚೋದನಿಕಗಳು ಮಿತಿಮೀರಿ ಸ್ರವಿಸಿದರೆ ಶರೀರದ ರಾಸಾಯನಿಕ ಸಮತೋಲನ ತಪ್ಪಿ ಏರುಪೇರಾಗುತ್ತದೆ.

ಹೀಗೆ ಸ್ರವಿಸಿದ ಅಡ್ರಿನಲ್ ಗ್ರಂಥಿಯ ಚೋದನಿಕಗಳು ಮುಂದಣ ತೆಮಡಿಕದ ಚೋದನಿಕಗಳಾದ A C T H ಮತ್ತು S T H ಗಳು ರಕ್ತದಲ್ಲಿ ಮಿತಿಮೀರದಂತೆ ತಡೆದು ಉಪಶಮನಮಾಡುತ್ತವೆ. ಹೀಗಿರುವುದರಿಂದಲೆ ರಾಸಾಯನಿಕ ಸಮತೋಲನ ತಪ್ಪುವುದಿಲ್ಲ.

ಈ ಸಮತೋಲನ ವ್ಯತ್ಯಾಸವಾದರೆ ಒತ್ತಡದಿಂದ ಹುಟ್ಟಿದ ಚೋದನಿಕದ ಅತಿರೇಕವಾಗಿ ಮಾರಕ ರೋಗಗಳಾದ ನೆಫ್ರೊಸ್ಕಿರೋಸಿಸ್ ಎಂಬ ವ್ಯಾಧಿ, ಮತ್ತು S T H ನಿಂದ ಹೃದಯರೋಗ, ಹೃದಯಸ್ತಂಭನ, ಮತ್ತು ಮೂತ್ರಪಿಂಡಗಳ ರೋಗದ ಹುಟ್ಟಿಗೆ ಕಾರಣವಾಗುತ್ತದೆ.

ಇದೇ A C T H ಚೋದನಿಕದಿಂದ ಕೀಲುವಾತದ ಕೀಲುರಿತ, ಸಂಧಿವಾತ, ಅಸ್ಥಮಾ, ತೀವ್ರತರ ಕೆಲವು ಚರ್ಮವ್ಯಾಧಿಗಳನ್ನು ಸುಲಭವಾಗಿ ಗುಣಪಡಿಸಲು ಇದು ರಾಮಬಾಣವಾಗಿದೆ.

ರಕ್ತದೊತ್ತಡದ ದುಷ್ಪರಿಣಾಮ : ಐದು ವರ್ಷಗಳ ಹಿಂದೆ ನಲವತ್ತೈದು ವರ್ಷದ ಒಬ್ಬ ರೋಗಿ ಭರತಚಂದ್ರ (ನಿಜವಾದ ರೋಗಿಯ ಹೆಸರನ್ನು ಬದಲಾಯಿಸಿದೆ) ಪಾರ್ಶ್ವವಾಯುವಿನ ಪ್ರಹಾರದಿಂದ ತತ್ತರಿಸಿದ. ಆಗ ಅವನ ಮೆದುಳಿನ ಅಪಧಮನಿಯು ರಕ್ತದೊತ್ತಡದಿಂದ ಬಲಗುಂದಿ ಬಲೂನಿನಂತೆ ಉಬ್ಬಿ ಒಡೆಯಿತು. ಅವನ ಬಲ ಪಾರ್ಶ್ವದ ಕಾಲು ಮತ್ತು ಕೈ ಮರಗಟ್ಟಿದವು (ಹೆಮಿಪ್ಲೀಜಿಯಾ).

ಹೊಡೆತ (stroke), ಮೂತ್ರಪಿಂಡ ಸೋಲುವಿಕೆ, ಮತ್ತು ಗುಂಡಿಗೆ ನೆರೆತ ರೋಗ (congestive heart disease) ಇವೆಲ್ಲ ಅತಿ ರಕ್ತದೊತ್ತಡದ ಬಹುರೂಪಗಳು.

ಬಹುಕಾಲದ ಅತಿರಕ್ತದೊತ್ತಡಕ್ಕೆ essential hypertension ಎಂಬುದು ವೈದ್ಯಕೀಯದ ಮತ್ತೊಂದು ಹೆಸರು. ಇತ್ತೀಚಿನ ಕೆಲವು ವರ್ಷಗಳವರೆವಿಗೂ ಈ ಖಾಯಿಲೆಗೆ ನಿಖರವಾದ ಚಿಕಿತ್ಸೆ ಇರಲಿಲ್ಲ. ಇದರಿಂದ ಸಾವು ಕಟ್ಟಿಟ್ಟ ಬುತ್ತಿಯಾಗಿತ್ತು.

ಹಿಂದೆ ಭೀತಿ ಹುಟ್ಟಿಸುತ್ತಿದ್ದ ಈ ಅತಿರಕ್ತದೊತ್ತಡವನ್ನು ಉಪಶಮನಗೊಳಿಸುತ್ತ, ಹೊಸಹೊಸ ಔಷಧಗಳಿಂದ ವಶಪಡಿಸಿಕೊಳ್ಳುತ್ತಿದ್ದೇವೆ. ಮೃತ್ಯು ಜಾಗಟೆಯಾಗಿ ಪ್ರಾಣಕ್ಕೆ ಸಂಚುಕಾರವನ್ನು ತರುತ್ತಿದ್ದ ಈ ಒತ್ತಡವೆಂಬ ರಾಕ್ಷಸನನ್ನು ತಹಬಂದಿಗೆ ತಂದು, ನಿಗ್ರಹಿಸಲು, ದಿನೇ ದಿನೇ ವೃದ್ಧಿಸುತ್ತಿರುವ ಔಷಧಗಳ ಸಂಸಾರವು ಆಶ್ಚರ್ಯಕರವಾಗಿ ಗುಂಡಿಗೆಯ ರೋಗಗಳನ್ನು, ಅತಿರಕ್ತದೊತ್ತಡವನ್ನು, ಜೊತೆಗೆ ಸಾವಿನ ಸಂಖ್ಯೆಯನ್ನು ತಗ್ಗಿಸುತ್ತಿದೆ. ಮದ್ದುಗಳು ರೋಗಿಗಳ ಅತಿರಕ್ತದೊತ್ತಡವನ್ನು ಸಹಜ ರಕ್ತದೊತ್ತಡಕ್ಕೆ ತರುವಲ್ಲಿ ಅಣಿಮಾಡುತ್ತವೆ.

ರೋಗಿ ಭರತಚಂದ್ರನ ಹೆಚ್ಚಾದ ಅಪಾಯಕಾರಕ ರಕ್ತದೊತ್ತಡವು ಹಿಂದೆ $\frac{220}{140}$ mm of Hg. ಇದ್ದದ್ದು, ಈಗ $\frac{140}{90}$ mm of Hg. ಗೆ ಇಳಿದಿದೆ. ಆತನ ರೋಗ ಪೂರ್ತಿಗುಣಕಾಣದಿದ್ದರೂ ಕೂಡ ಮತ್ತೆ ಉಲ್ಬಣಿಸಿಲ್ಲ. ಇಂದು ಆತ ಪಾರ್ಶ್ವವಾಯುವಿನಿಂದ ವಿಮುಕ್ತನಾಗಿ ಚುರುಕು ಕೆಲಸದಲ್ಲಿ ತೊಡಗಿದ್ದಾನೆ.

ರಕ್ತದೊತ್ತಡವನ್ನು ಅಳೆಯುವ ವಿಧಾನ : ತಲೆನೋವು, ತಲೆಸುತ್ತುವುದು, ಬೆವರು ಮತ್ತು ಸುಸ್ತಾಗುವಿಕೆ, ಇನ್ನು ಕೆಲವರಲ್ಲಿ ಓಕರಿಕೆ, ಮೈ ಕೈನೋವುಗಳೆಲ್ಲ ಅತಿರಕ್ತದೊತ್ತಡದ ಚಿಹ್ನೆಯಾಗಿದ್ದರೂ ಕೂಡ ಅಂತಹ ಕೆಲವು ಚಿಹ್ನೆಗಳು ಕಾಣಿಸಿಕೊಂಡ ತಕ್ಷಣವೇ, ಹಲವರು ನಿರ್ಭಾಗ್ಯರೆಂದು ತಾವೇ ಊಹಿಸುತ್ತಾರೆ. ಕಾರಣ ಅವರಿಗೆ ಅತಿರಕ್ತದೊತ್ತಡಕ್ಕೆ ಕಾರಣವೇನೆಂದು ಸರಿಯಾಗಿ ಇನ್ನೂ ಅರಿಯದಿರುವುದೇ ಆಗಿದೆ. ಮತ್ತೆ ಕೆಲವರು ಸ್ವಲ್ಪ ತಿಳಿದಿದ್ದರೆ ಎಲ್ಲ ಅರಿತವರಂತೆ ತಮಗೆ ತಾವೇ ಔಷಧಸೇವನೆ ಮಾಡುತ್ತಾರೆ. ಇದು ಶುದ್ಧ ತಪ್ಪು. ಖಾಯಿಲೆಯ ಗುಣಮಟ್ಟವನ್ನು ವೈದ್ಯರು ನಿರ್ಧರಿಸಿ, ನಿಗದಿಮಾಡಿದ ನಂತರವೇ ಔಷಧಸೇವನೆ ನಡೆಸಬೇಕು.

ಪ್ರತಿಯೊಬ್ಬರ ದೇಹದ ರಕ್ತವನ್ನು ಗುಂಡಿಗೆಯ ಸ್ನಾಯುಗಳು ಸಂಕುಚಿಸಿ ನೆತ್ತರನ್ನು ಹೊರಚೆಲ್ಲಿ ಶರೀರದ ಎಲ್ಲಾ ಅಂಗಾಂಗಗಳಿಗೂ ಹರಿಸಿದಾಗ ವೈದ್ಯರು ಅದರ ಒತ್ತಡವನ್ನು ಅಳೆಯುತ್ತಾರೆ. ಇದಕ್ಕೆ 'ಸಂಕುಚಿತ ಒತ್ತಡ' ವೆನ್ನುತ್ತಾರೆ. ಆಗ ಗುಂಡಿಗೆಯು ಕಠಿಣಕ್ರಿಯೆಯ ಉತ್ತುಂಗ ಮಟ್ಟದಲ್ಲಿರುತ್ತದೆ. ಮತ್ತೆ ಎರಡನೆಯ ಸಂಖ್ಯೆಯನ್ನು ಗುಂಡಿಗೆಯ ಬಡಿತಗಳ ಮಧ್ಯಾಂತರದ ವಿಶ್ರಾಂತಿಯಲ್ಲಿ ಅಳೆಯುತ್ತಾರೆ. ಆಗ ಗುಂಡಿಗೆಯ ಸ್ನಾಯುಗಳು ವಿಕಸಿತಗೊಳ್ಳುತ್ತಿರುತ್ತವೆ. ಇದನ್ನು ಕಡಮೆ ಒತ್ತಡ ಅಥವ "ವಿಕಸಿತ ಒತ್ತಡ" ಎಂದು ಕರೆಯುತ್ತಾರೆ. ಈ ಎರಡು ಅಂಕಿಗಳನ್ನುಸಂಕುಚಿತ ಒತ್ತಡದ ಕೆಳಗೆ ವಿಕಸಿತ ಒತ್ತಡವನ್ನು ಬರೆಯುತ್ತಾರೆ. ಉದಾಹರಣೆಗೆ $\frac{120}{80}$ mm of Hg. ಈ ಒತ್ತಡವನ್ನು ಅಳೆಯುವ ಸಾಧನಕ್ಕೆ "ಸ್ಪಿಗ್ಮೋ ಮಾನೋಮೀಟರ್" ಎಂದು ಹೆಸರು. ಬಹಳ ಜನ ಮೇಲಿನ ಹೆಚ್ಚಿನ ಅಂಕಿಯನ್ನು ಕಂಡರೆ ಹೆದರುತ್ತಾರೆ. ನಿಜವಾಗಿ ಹೇಳಬೇಕೆಂದರೆ ಕಡಮೆ ಅಂಕಿಯೇ ಕೆಂಪು ಸಂಕೇತ. ಎಂದರೆ "ವಿಕಸಿತ ಒತ್ತಡ"ವು ಕೆಂಪು ಸಂಕೇತವೆಂದಂತಾಯಿತು. ಆಗ ಗುಂಡಿಗೆಯ ಬಡಿತಗಳ ಮಧ್ಯಾಂತರದ ಕಾಲಾವಧಿಯ ಶ್ರಮವೆಂದು ತಿಳಿದಂತಾಯಿತು. ಈ ಅಂತರವೇ ಗುಂಡಿಗೆಗೆ ಸಿಗಬಹುದಾದಂಥ ಚೈತನ್ಯದಾಯಕ ವಿಶ್ರಾಂತಿ. ಸಹಜ ಸ್ಥಿತಿಯ ರಕ್ತದೊತ್ತಡವು ವಯಸ್ಸು ಮತ್ತು ಲಿಂಗಗಳಿಗನುಗುಣವಾಗಿ ಹೊಂದಿಕೊಂಡಿರುತ್ತದೆ. ಆದರೆ ನಿರಂತರ ರಕ್ತದೊತ್ತಡವು $\frac{150}{100}$ mm of Hg. ಗಿಂತ ಹೆಚ್ಚಿನದಿದ್ದು, 1೦೦ ಕ್ಕಿಂತ ಹೆಚ್ಚಿನದಿದ್ದಾಗ ವೈದ್ಯರ ಗಮನ ಸೆಳೆಯುತ್ತದೆ.

1972 ರಲ್ಲಿ ರೋಗಿ ಭರತಚಂದ್ರ ಮೊಟ್ಟಮೊದಲಿಗೆ ಕಣ್ಣಿನ ಒಳಪೊರೆಯಾದ ಮೋತಿಬಿಂದು (cataract) ವಿನ ಶಸ್ತ್ರಕ್ರಿಯೆಗೆ ಬಂದಾಗ ಈ ವ್ಯಾಧಿಯು ವೇದ್ಯವಾಯಿತು. ಅರುಹಿದ ವೈದ್ಯರ ಮಾತಿಗೆ ಕಿವಿಗೊಡದೆ ಉಪೇಕ್ಷೆಮಾಡಿದ. ತತ್ಫಲವಾಗಿ ಕೆಲವು ವರ್ಷಗಳು ಚೆನ್ನಾಗಿದ್ದ ನಂತರ ಹೊಡೆತ ಬಂದೊದಗಿ ಪಾರ್ಶ್ವವಾಯುವಿಗೆ ತುತ್ತಾದ.

ಮದ್ದುಗಳ ಉಗಮ ಮತ್ತು ಕ್ರಿಯೆ : 195೦ರಿಂದೀಚೆಗೆ ಹಲವು ಒಳ್ಳೆಯ ಔಷಧಗಳು ಬೆಳಕಿಗೆ ಬಂದುವು. ಹಿಂದೆ ದಕ್ಷಿಣ ಅಮೇರಿಕದ ಕೆಂಪುಜನಗಳು ಒಂದು ಜಾತಿಯ ಮರದ ತೊಗಟೆಯಿಂದ ತೆಗೆದ ಪಾಷಾಣವನ್ನು ಬಾಣಗಳ ತುದಿಗೆ ಹಚ್ಚಿ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಅಂತಹ ಬಾಣತಗುಲಿದ ಪ್ರಾಣಿಗಳ ಸ್ನಾಯುಗಳು ಬಲಕುಂದಿ ಸಾವಪ್ಪುತ್ತಿದ್ದುವು, ಆ ಪಾಷಾಣವೇ "ಕ್ಯೂರಾರೆ" ಎಂಬ ವಿಷವಸ್ತು. ಇಂತಹ ತೀಕ್ಷ್ಣವಾದ ವಿಷವಸ್ತುವಿಗೆ ಬದಲಾಗಿ ಬೇರೊಂದು ವಸ್ತುವನ್ನು ಬ್ರಿಟನ್ನಿನ ವೈದ್ಯಕೀಯ ಸಂಸ್ಥೆಗಳಲ್ಲೊಂದಾದ 'ಪ್ರಾಪಂಚಿಕ ಸಂಸ್ಥೆ' ಎಂಬ ವೈದ್ಯಕೀಯ ಸಂಸ್ಥೆಯ ವಿಜ್ಞಾನಿಗಳು ಹಲವು ತಂಡಗಳೊಡಗೂಡಿ ಸಂಶೋಧಿಸುತ್ತಿ

ದ್ದುವು. ಆಗಿನ ಶಸ್ತ್ರಪ್ರವೀಣರು ಅತಿ ಸೂಕ್ಷ್ಮವಾದ ಶಸ್ತ್ರಕ್ರಿಯೆಗಳನ್ನು ಮಾಡುವಾಗ ಕೆಲವು ಘಳಿಗೆಗೆ ಮಾತ್ರ ಸೀಮಿತವಾಗಿ, ಸ್ನಾಯುಗಳ ವಿಕಸಿತಕ್ಕೆ ಅಲ್ಪಪ್ರಮಾಣದಲ್ಲಿ ಈ ಕ್ಯೂರಾರೆಯನ್ನು ಉಪಯೋಗಿಸುತ್ತಿದ್ದರು. ಅಲ್ಲದೆ ಮೆದುಳಿನ ಪ್ರಹಾರದ ವ್ಯತ್ಯಾಸಗಳನ್ನು ಉಪಶಮನಮಾಡಲು ರೋಗಿಗಳ ಮೇಲೆ ಪ್ರಯೋಗಿಸುತ್ತಿದ್ದರು.

ಬ್ರಿಟಿಷ್ ಸಂಸ್ಥೆಯು ಕ್ಯೂರಾರೆಗೆ ಬದಲಾಗಿ ಹೆಚ್ಚು ಅಪಾಯವಿಲ್ಲದೆ ಪರಿಣಾಮಕಾರಿಯಾಗಿ ಸ್ನಾಯುಗಳನ್ನು ವಿಕಸಿಸುವ ಮತ್ತೊಂದು ಮದ್ದಿಗಾಗಿ ಹುಡುಕುವಾಗ ಕ್ಯೂರಾರೆಯಷ್ಟೇ ರಾಸಾಯನಿಕವಾಗಿ, ಅದೇ ತರಹದ ಬೇರೊಂದು ವಸ್ತು ಬೆಳಕಿಗೆ ಬಂದಿತು. ಅದನ್ನು ರೋಗಿಯ ಅಪಧಮನಿಗೆ ಚುಚ್ಚುಮದ್ದಾಗಿ ಕೊಟ್ಟ ಕೆಲವೇ ಕ್ಷಣಗಳಲ್ಲಿ ರಕ್ತದ ಒತ್ತಡವು ಇಳಿಯುತ್ತಿತ್ತು. ಆದರೆ ಅದರ ದುಷ್ಪರಿಣಾಮಗಳು ಮಿತಿಮೀರಿದ್ದವು. ಅದನ್ನು ಪರಿಷ್ಕರಿಸಿದ ಮೇಲೆ ಅದರ ತೀಕ್ಷ್ಣತೆಯು ತಗ್ಗಿ, ಹೆಚ್ಚು ತಡೆದುಕೊಳ್ಳಬಹುದಾದ ವಸ್ತುವಾಗಿ "ಹೈಡ್ರಲಜೈನ್" ಎಂಬ ನಾಮಕರಣ ಹೊಂದಿದ ಔಷಧವಾಯಿತು.

ಇದೇ ಸಮಯದಲ್ಲಿ ಸ್ವಿಟ್ಜರ್‌ಲ್ಯಾಂಡ್ ದೇಶದ ಬಾಸ್ಲೆಯಲ್ಲಿರುವ ರಾಸಾಯನಿಕ ಶಾಸ್ತ್ರಜ್ಞರಾದ ಡಾ. ಎಮಿಲ್ ಸ್ಲೀಟ್ಲರ್‌ರವರು ಸರ್ಪಗಂಧಿ ಎಂಬ ಗಿಡದ ಒಣಗಿದ ಬೇರುಗಳಿಂದ "ರಿಸರ್ಪಿನ್" ಎಂಬ ಮದ್ದನ್ನು ಬೇರ್ಪಡಿಸಿದ್ದರು. ಇದನ್ನೆ ಭಾರತದೇಶದಲ್ಲಿ ನೂರಾರು ವರ್ಷಗಳಿಂದಲೂ ಮಕ್ಕಳನ್ನು ಶಮನಮಾಡಲು ಸರ್ಪಗಂಧಿಯ ರಸವನ್ನು ಕುಡಿಸುತ್ತಿದ್ದರು. ಮುಂಜಾನೆಯಿಂದ ಸಂಜೆಯವರೆವಿಗೆ ದುಡಿಯುವಾಗ ತಮ್ಮ ಕಾರ್ಯಕ್ಕೆ ಅಡಚಣೆ ಬರದಿರಲೆಂದು ಹೀಗೆ ಮಾಡುತ್ತಿದ್ದರು. ನಂತರ ಪ್ರಯೋಗಶಾಲೆಗಳಲ್ಲಿ ಪ್ರಾಣಿಗಳ ಮೇಲೆ ಪ್ರಯೋಗಿಸಿ ಪರಿಣಾಮಕಾರಿಯಾದ ಶಾಮಕವಾದ ಮದ್ದೆಂದು ಕಂಡುಹಿಡಿದರು. ಬಾಸ್ಟ್ರ ವಿಶ್ವವಿದ್ಯಾನಿಲಯದ ಔಷಧಶಾಸ್ತ್ರ ಶಾಲೆಯ ಪ್ರಮುಖ ವೈದ್ಯರಾದ ಡಾ. ರಾಬರ್ಟ್ ವೆಲ್‌ಕಿಪ್ಸ್‌ರವರು ಮೊತ್ತಮೊದಲಿಗೆ ಅತಿರಕ್ತದೊತ್ತಡದ ತಮ್ಮ ರೋಗಿಗಳ ಮೇಲೆ ಇದನ್ನು ಪ್ರಯೋಗಿಸಿದರು. ಆ ರೋಗಿಗಳಲ್ಲಿ ಕೊಂಚ ಅಲಸಿಕೆ ತೋರಿದ್ದರ ಜೊತೆಗೆ, ರಕ್ತದ ಒತ್ತಡವೂ ಕೂಡ ಕಡಮೆ ಇರುವುದನ್ನು ಮನಗಂಡರು. ಅಂದು ಶುರುವಾದುದು ಈ ಮದ್ದಿನ ಉಪಯೋಗ. ಇಂದಿಗೂ ಕೂಡ ಪ್ರಪಂಚದ ಎಲ್ಲಾ ಕಡೆಯ ವೈದ್ಯರೂ ಅವರ ಪದ್ಧತಿಯನ್ನೇ ಅನುಸರಿಸುತ್ತಿದ್ದಾರೆ.

ಹೀಗೆ ರೂಢಿಯಲ್ಲಿರುವ ಹಳೇ ಮದ್ದುಗಳ ಮುಂದೆ ಹೊಸ ಹೊಸ ಮದ್ದುಗಳ ಕವಾಯಿತು ನಡೆಯುತ್ತಲೇ ಇದೆ.

ಅವುಗಳ ಸಮಕಾಲೀನ ಮತ್ತೆರಡು ಮದ್ದುಗಳ್ಯಾವುವೆಂದರೆ ಗ್ವಾನತಡೀನ್, ಮತ್ತು ಥಯಜೈಡ್ ಮೂತ್ರಿಕಗಳು.

ಗ್ವಾನತಡಿನ್ ಮದ್ದು : ಈ ಮದ್ದನ್ನು ಅತಿರಕ್ತದೊತ್ತಡದ ಶತ್ರುವೆಂದು ಬೇಕಾದರೂ ಕರೆಯಬಹುದು. ಅಡ್ರಿನಲ್ ಗ್ರಂಥಿಯಿಂದ ಶಕ್ತಿಯುತವಾದ "ನಾರ್ ಎಪಿನೆಫ್ರಿನ್" ಎಂಬ ಚೋದನಿಕದ ಸ್ರಾವವು ಹೆಚ್ಚಿ ಧಮನಿಗಳನ್ನು ಸಂಕುಚಿತಗೊಳಿಸಿದಾಗ ಗುಂಡಿಗೆಯ ಶ್ರಮ ಹೆಚ್ಚಾಗಿ, ಒತ್ತಡವನ್ನು ಸೃಜಿಸಿ, ಶರೀರದಲ್ಲಿ ರಭಸವನ್ನುಂಟುಮಾಡುತ್ತದೆ. ಈ ಮದ್ದು ದೇಹಪ್ರದಕ್ಷಿಣೆಗೆ ಹೊರಡುವ ರಕ್ತದೊಳಕ್ಕೆ 'ನಾರ್ ಎಪಿನೆಫ್ರಿನ್' ಚೋದನಿಕವು ತಲೆ ಇಣುಕದಂತೆ ತಡೆಹಿಡಿಯುತ್ತದೆ.

ಈ ಪ್ರಯೋಗ ನಡೆದ ಹಲವು ವರ್ಷಗಳ ನಂತರ ಸಿಬಾ ಔಷಧ ಕಾರ್ಖಾನೆಯ ಡಾ. ರಾಬರ್ಟ್ ಮುಲ್ ಮತ್ತು ಆತನ ಗುಂಪಿನವರು ಗ್ವಾನತಡೀನ್ ಮದ್ದನ್ನು ಹೆಚ್ಚಿನ ಪ್ರಮಾಣದಲ್ಲಿ ಉತ್ಪತ್ತಿಮಾಡುತ್ತ, ಇದನ್ನು "ಇಸ್ಮಿಲೀನ್" ಎಂಬ ಹೊಸ ನಾಮಧೇಯದಿಂದ ಹೊರತಂದರು. ಇದನ್ನು ಸಾಮಾನ್ಯರಕ್ತದೊತ್ತಡ, ಅತಿರಕ್ತದೊತ್ತಡ, ದಿನೇ ದಿನೇ ಉಲ್ಬಣಾವಸ್ಥೆಗೇರಿ ಸಾವಿನಲ್ಲಿ ಪರ್ಯವಸಾನವಾಗುವ ಹತ್ತಾರು ವ್ಯಾಧಿ

ಗಳಿಗೆ ಉಪಯೋಗಿಸುತ್ತಾರೆ. ಇದು ಸುಮಾರು 8)%ರಷ್ಟು ರಕ್ತದೊತ್ತಡವನ್ನು ಕಡಮೆಮಾಡುತ್ತದೆ. ಅತಿ ಹೆಚ್ಚಾದ ನೆತ್ತರಿನೊತ್ತಡದಿಂದ ನರಳುವ ಸುಮಾರು 1.5 ಕೋಟಿ ರೋಗಿಗಳ ಮೇಲೆ ಪ್ರಯೋಗಿಸಿ ಪರಿಣಾಮಕಾರಿಯಾದ ಫಲಿತಾಂಶ ಪಡೆಯಲಾಗಿದೆ.

ಥಯಜೈಡ್ ಮೂತ್ರಿಕಗಳು : ಹೃದ್ರೋಗದಿಂದ ನರಳುವ ರೋಗಿಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಚಿತ್ರಣವೆಂದರೆ ಕಾಲೂತ. ಈ ಊತವನ್ನು ತಗ್ಗಿಸಲು ಕೊಡುವ ಮೂತ್ರಿಕಗಳನ್ನು ಡೈಯುರಿಟಿಕ್ಸ್‌ಗಳೆಂದು ಕರೆಯುತ್ತಾರೆ. ಇವು ಕಾಲೂತದ ದ್ರವವನ್ನು ಮೂತ್ರರೂಪದಲ್ಲಿ ಶರೀರದಿಂದ ಹೊರದೂಡುತ್ತವೆ. ರೋಗಿಗಳ ಅತಿರಕ್ತದೊತ್ತಡಕ್ಕೆ ಚಿಕಿತ್ಸೆನೀಡುವಾಗ ಈ ಸಂಯುಕ್ತ ಮದ್ದನ್ನು ಹೆಚ್ಚಿನ ಪ್ರಮಾಣದಲ್ಲಿ ಉಪಯೋಗಿಸುತ್ತಾರೆ. ಇವುಗಳನ್ನು ಜಲರೂಪದ ರಸತುಂಬಿ ಊದಿಕೊಂಡಿರುವ ಸ್ಥಿತಿ ಅಥವ ಅಂಗಾಂಶ (ಎಡಿಮಾ)ವನ್ನು ಕಡಮೆಮಾಡಲು 195) ರಿಂದೀಚೆಗೆ ಹೆಚ್ಚಾಗಿ ಬಳಕೆಗೆ ತಂದಿದ್ದಾರೆ. ಈ ಅಸ್ವಾಭಾವಿಕವಾಗಿ ಕಣಕಣಗಳಲ್ಲಿ ದ್ರವ ಶೇಖರಣೆಯಾದ ಅಂಗಾಂಶವು ಗುಂಡಿಗೆ ನೆರೆತ ರೋಗ (congestive cardiac failure)ದಲ್ಲಿ ಕಾಣಿಸಿಕೊಂಡಾಗ ಥಯಜೈಡ್ ಮೂತ್ರಿಕಗಳು ದ್ರವದ ಜೊತೆಯಲ್ಲೇ ಲವಣವನ್ನೂ, ಶರೀರದಿಂದ ಹೊರಹಾಕಿ ಊತವನ್ನು ಕಡಮೆಮಾಡುತ್ತವೆ. ಈ ಮೂತ್ರಿಕಗಳನ್ನು ಬಹಳಷ್ಟು ಪ್ರಯೋಗಿಸಿ ಪರೀಕ್ಷಿಸಿದುದರಿಂದ ಗೊತ್ತಾದ ಮುಖ್ಯವಾದ ಒಂದಂಶವೆಂದರೆ, ಅಂಗಾಂಶ ತಗ್ಗಿಸುವುದರ ಜೊತೆಗೆ, ಇವು ರಕ್ತದೊತ್ತಡಕ್ಕೆ ಪ್ರತಿಕೂಲವಾಗಿ ವರ್ತಿಸುತ್ತವೆ ಎಂದು ವಿದಿತವಾಯಿತು. ಆದ್ದರಿಂದ ಇವನ್ನು ಬಹಳ ಎಚ್ಚರಿಕೆಯಿಂದ ಉಪಯೋಗಿಸಬೇಕು.

ಅತಿರಕ್ತದೊತ್ತಡವಿರುವ ಕೆಲವು ರೋಗಿಗಳು ಬರಿ ಮೂತ್ರಿಕಗಳಿಂದಲೇ ಗುಣ ಹೊಂದುತ್ತಾರೆ. ಆದರೆ ಉಲ್ಬಣಿಸಿದ ವ್ಯಾಧಿಗೆ ಈ ಮದ್ದಿನ ಜೊತೆಗೆ ತೀಕ್ಷ್ಣವಾದ ಅತಿರಕ್ತದೊತ್ತಡದ ಪ್ರತಿಕೂಲ ಮದ್ದನ್ನು ಕೊಟ್ಟಾಗ ಮಾತ್ರ ಒಳ್ಳೆಯ ಫಲಿತಾಂಶ ದೊರೆಯುತ್ತದೆ. ಸರ್ಪಗಂಧಿ ಅಥವಾ ಗ್ವಾನತಡೀನ್ ಎರಡರಲ್ಲಿ ಒಂದನ್ನೇ ಏನಾದರೂ ಉಪಯೋಗಿಸಿದರೆ ಕೆಲವು ದುಷ್ಪರಿಣಾಮಗಳು ಖಂಡಿತ. ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಥಯಜೈಡ್ ಮೂತ್ರಿಕಗಳಂತಹ ಮದ್ದನ್ನು ಕೊಟ್ಟದ್ದೇ ಆದರೆ ಅರ್ಧದಷ್ಟು ಅನಾಹುತಗಳನ್ನು ತಡೆಗಟ್ಟಬಹುದು. ಈ ಮದ್ದುಗಳೆಲ್ಲ ಸಂಯೋಜನೆ ಹೊಂದಿ, ಶಕ್ತಿವೃದ್ಧಿಸಿ, ಸಂಕಟವನ್ನು ಶಮನಮಾಡುತ್ತವೆ.

ಸ್ವಾಧೀನದ ದಾರಿ ಮರಳಿ ಪಡೆವ ಹೆದ್ದಾರಿ : ಪ್ರತಿಯೊಬ್ಬ ಅತಿರಕ್ತದೊತ್ತಡದ ರೋಗಿಗೂ ಆತನ ಶರೀರಕ್ಕನುಗುಣವಾಗಿ ನಿಖರವಾದ ಮದ್ದಿನ ಹೊಂದಾಣಿಕೆ ಹೊಂದಿಸುವುದು ಬಹಳ ಪ್ರಾಮುಖ್ಯವಾದದ್ದು. ಆಸ್ಪತ್ರೆಯಲ್ಲಿದ್ದ ರೋಗಿ ಭರತಚಂದ್ರನಿಗೆ ವೈದ್ಯರು ಮೊದಲಿಗೆ ದಿನ ಒಂದಕ್ಕೆ 30 mg ನಷ್ಟು ಇಸ್ಮಲೀನ್ ಮತ್ತು 5)0 mg ನಷ್ಟು ಥಯಜೈಡ್ ಮೂತ್ರಿಕಗಳನ್ನು ಕೊಟ್ಟರು. ರಕ್ತದೊತ್ತಡದ ಸಂಖ್ಯೆ ಮತ್ತು ರಾಸಾಯನಿಕ ಪ್ರಯೋಗಗಳನ್ನು ದಿನಕ್ಕೆ ಹಲವಾರು ಬಾರಿ ಮಾಡುತ್ತಿದ್ದರು.

"ನೀವು ಹೇಗಿದ್ದೀರಾ" ಎಂದು ದಿನನಿತ್ಯದಂತೆ ವೈದ್ಯರು ವಿಚಾರಿಸಿದಾಗ ಆತ "ನನ್ನ ರಕ್ತದೊತ್ತಡ ಇಳಿಮುಖವಾಗುತ್ತಿದೆ, ಆದರೆ ಏನೋ ! ವರ್ಣಿಸಲಾಗದ ಅನುಭವ ! ನಾನು ನಿಂತರೆ ನಿಶ್ಶಕ್ತಿಯಿಂದೇನೊ ನನ್ನ ತಲೆ ತಿರುಗುತ್ತದೆ" ಎನ್ನುತ್ತಿದ್ದ. ನಿಜವಾದ ಕಾರಣ ಅದಲ್ಲ, ಮೂತ್ರಿಕಗಳು ಆತನ ಶರೀರದಿಂದ ಪೊಟಾಸಿಯಂ, ಲವಣ ಮತ್ತು ದ್ರವವನ್ನು ಮೂತ್ರರೂಪದಲ್ಲಿ ಹೆಚ್ಚಿನ ಪ್ರಮಾಣದಿಂದ ಹೊರಹಾಕಿದ್ದರ ಪರಿಣಾಮ. ಅದರ ಪ್ರಯುಕ್ತ ರೋಗಿಗೆ ಬೆಟ್ಟ ಹತ್ತುವ ಅನುಭವವಾಗುತ್ತಿತ್ತಂತೆ. ಆದಕ್ಕೆ ವೈದ್ಯರು ಆತನ ಊಟದ ಜೊತೆಯಲ್ಲಿ ಪೊಟಾಸಿಯಂ ಕ್ಲೋರೈಡ್ ಮತ್ತು ಅಲ್ಪ ಪ್ರಮಾಣದಲ್ಲಿ ಅಡಿಗೆ ಉಪ್ಪಿನಹರಳುಗಳನ್ನು ಸೇವಿಸುವಂತೆ ತಿಳಿಸಿದರು.

ಹೀಗೆ ಹಲವು ವಾರಗಳವರೆವಿಗೆ ದಿನಂಪ್ರತಿ ರಕ್ತದೊತ್ತಡದ ತನಿಖೆ ನಡೆಯುತ್ತಿತ್ತು. ಇಷ್ಟಾದರೂ

ರೋಗಿಗೆ ದಮ್ಮು ಕಾಣಿಸಿಕೊಂಡು, ಕೊಂಚ ಶ್ರಮವಹಿಸಿದರೂ ಎದೆಗೂಡಿನ ಶ್ವಾಸೋಚ್ಛ್ವಾಸ ಏರುತಿತ್ತು. ಅದಕ್ಕೆ ಗುಂಡಿಗೆಯ ಕ್ರಿಯೆ ನಿಖರವಾಗಿ ಕಾರ್ಯ ನಿರ್ವಹಿಸಲು “ಡಿಜಿಟಾಲಿಸ್” ಎಂಬ ಮದ್ದನ್ನು ಸರಿಯಾಗಿ ಪ್ರತಿದಿನ ಸೇವಿಸುವಂತೆ ನಿಗದಿಪಡಿಸಲಾಯಿತು. ದಿನ ಒಂದಕ್ಕೆ ಒಟ್ಟು ಹತ್ತು ಮಾತ್ರೆಗಳಂತೆ ಕಡಮೆ ಖರ್ಚಿನವುಗಳಾದ ಗ್ವಾನತಡೀನ್ ಮೂತ್ರಿಕಗಳು, ಪ್ರೊಟಾಸಿಯಂ ಕ್ಲೋರೈಡ್ ಮತ್ತು ಡಿಜಿಟಾಲಿನ್ ಎಲ್ಲ ಮಾತ್ರೆಗಳನ್ನು ನೀಡುತ್ತ ಮೂರುತಿಂಗಳು ಸತತವಾಗಿ ಹೆಣಗಿದ ಮೇಲೆ ರಕ್ತದೊತ್ತಡ ತಹಬಂದಿಗೆ ಬಂದಿತು. ಈ ತೆರನಾದ ಔಷಧಗಳು ಆತನಿಗೆ ಖಚಿತವಾದ ಸಂಯೋಜನೆಗಳಾಗಿ, ಆತನಿಗೆ ನೋವು ದೂರವಾಗಿ ಸಂಪೂರ್ಣ ಗುಣಕಂಡಿತು. ಅಂತೂ ಭರತಚಂದ್ರನಿಗೆ ಪುನರ್‌ಜನ್ಮವಾಗಿ ತನ್ನ ಸಾವನ್ನು ಮುಂದೆ ತಳ್ಳಿ ಮುನ್ನಿನಂತೆ ಜೀವನ ಸಾಗಿಸುವವನಾದ.

ಇತ್ತೀಚಿನ ವರದಿಗಳಂತೆ ವಂಶಪಾರಂಪರ್ಯ ಕೂಡ ಕಡುವೈರಿ ಎಂದು ಖಚಿತಪಟ್ಟಿದೆ. ಅಂದರೆ ತಂದೆ, ತಾಯಿಗಳಿಬ್ಬರೂ ಅತಿರಕ್ತದೊತ್ತಡದ ಖಾಯಿಲೆಯಿಂದ ಬಳಲುತ್ತಿದ್ದರೆ, ಅಂತಹವರಿಗೆ ಹುಟ್ಟುವ ಮಕ್ಕಳು ಖಂಡಿತವಾಗಿಯೂ ಅದೇ ರೋಗಕ್ಕೆ ತುತ್ತಾಗುವರೆಂದು ಗೊತ್ತಾಗಿದೆ. ಈ ಖಾಯಿಲೆಯು ಮದುವೆಗೆ ಮೊದಲೇ ಗೊತ್ತಾಗಿದ್ದರೆ ಅಂತಹವರ ಮದುವೆ ತಡೆಹಿಡಿಯುವುದು ಸೂಕ್ತ. ಅಥವಾ ಮದುವೆಯ ನಂತರ ತಿಳಿದರೆ ಅವರಿಗೆ ಮಕ್ಕಳೇ ಆಗದಂತೆ ಮುನ್ನೆಚ್ಚರಿಕೆ ವಹಿಸುವುದರಲ್ಲಿ ಅರ್ಥವಿದೆ.

ಇವೆಲ್ಲದರ ಜೊತೆಗೆ ಅತಿರಕ್ತದೊತ್ತಡಕ್ಕೆ ಮತ್ತೊಂದು ಕಾರಣವೇನೆಂದರೆ ಮೂತ್ರಪಿಂಡಗಳಿಂದ “ಏಂಜಿಯೋಟೆರ್ಸಿನ್” ಎಂಬ ಪ್ರಭಾವಶಾಲಿ ದ್ರವವು ರಕ್ತಕ್ಕೆ ಜಿನುಗಿ ನೇರವಾಗಿ ಅಭಿಧಮನಿಗಳ ಮೇಲೆ ಅತ್ಯಂತ ಪ್ರಭಾವ ಬೀರಿ ಅವುಗಳನ್ನು ಸಂಕುಚಿತಗೊಳಿಸುತ್ತವೆ. ಇದರ ಪ್ರಯುಕ್ತ ಅತಿರಕ್ತದೊತ್ತಡ ಶೀಘ್ರವಾಗಿ ತಲೆದೋರುತ್ತದೆ. ಈ ಏಂಜಿಯೋಟೆರ್ಸಿನ್ನಿನ ಪ್ರಮಾಣವು ಸಾಧಾರಣವಾದ ಪ್ರಮಾಣಕ್ಕಿಂತ ಮೂತ್ರಪಿಂಡಗಳಿಗೆ ಹರಿಯುವ ರಕ್ತವನ್ನು ತಡೆಹಿಡಿಯುತ್ತಿರುವ ಅತಿರಕ್ತದೊತ್ತಡದಂತಹ ರೋಗಿಗಳ ನೆತ್ತರಿನಲ್ಲಿ ಜಾಸ್ತಿಯಿದ್ದು ಪರಿಣಾಮ ವಿಷಮಿಸುವಂತೆ ಮಾಡುತ್ತದೆ.

ವೈದ್ಯವಿಜ್ಞಾನಿಗಳು ಏಂಜಿಯೋಟೆರ್ಸಿನ್ನಿನಂತಹ ವಸ್ತುವನ್ನು ದಿನನಿತ್ಯದ ಆಹಾರದ ವೈಪರಿತ್ಯದಲ್ಲಿ ಕಂಡುಹಿಡಿಯುತ್ತಿದ್ದಾರೆ.

ಈಗ ಬಳಕೆಯಲ್ಲಿರುವ ಥಯಜೈಡ್ ಮೂತ್ರಿಕಗಳಿಗೆ ನೂರುಪಟ್ಟು ಪ್ರಭಾವಯುಕ್ತ ಮೂತ್ರಿಕೆ “ಸೈಕ್ಲೋಪೆಂಥಯಜೈಡ್” ಎಂಬುದು, ಅವುಗಳಲ್ಲೊಂದು. ಅಲ್ಲದೆ ಈ ಪೃಥ್ವಿಯ ಕೆಲವೇ ಪಟ್ಟಣಗಳಲ್ಲಿ ಮಾತ್ರ “ಡೆಬ್ರಿಸೋಕ್ವಿನ್” ಎಂಬ ಮತ್ತೊಂದು ಮದ್ದನ್ನು ಉಪಯೋಗಿಸುತ್ತಿದ್ದಾರೆ. ಇದು ಗ್ವಾನತಡೀನ್‌ಗೆ ಹೋಲಿಕೆಯಾದರೂ, ಇದರಲ್ಲಿ ಹೆಚ್ಚಿನ ಹಲವು ದೋಷಗಳಿವೆ.

ರೋಗಿ ಅನುಭವಿಸಿದ ವಿಧಾನ : ಕ್ಷಣಕ್ಷಣಕ್ಕೂ ಮೂಡುವ ಪ್ರಜಾಕೋಟಿಯಲ್ಲಿ ಅದೆಷ್ಟೋ ನಿರ್ಭಾಗ್ಯರು ತಮ್ಮ ಜೀವಿತದ ಪರಿಸರದಲ್ಲಿ ಹಲವುವೇಳೆ ಅತಿರಕ್ತದೊತ್ತಡದ ಪ್ರಹಾರಕ್ಕೆ ಸಿಲುಕಿ ಬಾಹ್ಯ ಪ್ರಪಂಚಕ್ಕೆ ಕಳೆಗುಂದಿದವರಂತಿರುತ್ತಾರೆ; ಶಾಪಗ್ರಸ್ತರೆಂದು ತಿಳಿಯುತ್ತಾರೆ. ರೋಗಿಗಳು ತಾವು ವಿಷಪೂರಿತ ಹುತ್ತ ಎಂದೆಲ್ಲಾ ನೆನೆಯುತ್ತಾರೆ.

ಅವರ ನೋವಿನ ಚಿತ್ರಣವನ್ನು ನಮ್ಮ ಸಲ್ಕ್ರಿಯ ರೋಗಿ ಭರತಚಂದ್ರನಿಗೆ ಹೋಲಿಸುವುದಾದರೆ....! ಅವನ ಕೈಕಾಲುಗಳು ಮುನ್ನಿನಂತೆ ಚಲಿಸತೊಡಗಿ ಪುನಃ ನಡೆದಾಡುವಂತಾಗಲು ವೈದ್ಯರು ಪಟ್ಟ ಶ್ರಮ ಕಡಮೆಯೇನಲ್ಲ. ಆತ ಆಸ್ಪತ್ರೆಯಲ್ಲಿದ್ದಾಗ ಅತಿರಕ್ತದೊತ್ತಡವನ್ನು ನೇರಮಾಡಲು ಅತ್ಯಂತ ಪರಿಣಾಮಕಾರಿಯಾದ ಜೊತೆ, ಜೊತೆಯಾದ ಮದ್ದುಗಳನ್ನು ವೈದ್ಯರು ವಿಧಿಸುತ್ತಿದ್ದರು. ಆತ ಆರು ತಿಂಗಳ ಮೇಲೆ ಆಸ್ಪತ್ರೆ ಬಿಟ್ಟ. ಬಿಟ್ಟ ಮೇಲೂ ಚಾಚೂತಪ್ಪದೆ ವೈದ್ಯರು ಹೇಳಿದಂತೆ ಪಾಲಿಸುತ್ತಿದ್ದಾನೆ.

ಇಂದು ಆತ "ಖಾಯಿಲೆ ಇದ್ದರೂ ರೋಗಿಯಲ್ಲ", ಕಾರಣ ರೋಗ ಆತನಿಗೆ ಒಗ್ಗಿಹೋಗಿದೆ. ಪಾರ್ಶ್ವ ವಾಯುವಿನ ಪ್ರಹಾರದಿಂದೀಚೆಗೆ ಆತ ಸುಮಾರು ಐವತ್ತು ಸಾವಿರಕ್ಕಿಂತ ಜಾಸ್ತಿ ಮೈಲಿಗಳಷ್ಟು ವಾಹನ ಚಾಲಕನಾಗಿ ದಕ್ಷಿಣ ಭಾರತವನ್ನೆಲ್ಲಾ ಸುತ್ತಿ ಪ್ರಯಾಣ ಬೆಳೆಸಿದ್ದಾನೆ.

ಈಗ ವರ್ಷಕ್ಕೆ ಎರಡು ಅಥವಾ ಮೂರು ಬಾರಿ ಮಾತ್ರ ವೈದ್ಯಪರೀಕ್ಷೆಗೆ ಒಳಗಾಗುತ್ತಿದ್ದಾನೆ. ಕಳೆದ ಜುಲೈ ತಿಂಗಳಿನಲ್ಲಷ್ಟೇ, ಆತ ತನ್ನ ಐವತ್ತನೆ ವರ್ಧಂತಿಯನ್ನು ನಂದಿಬೆಟ್ಟ ಹತ್ತಿ ಆಚರಿಸಿದ್ದಾನೆ.

ರೋಗವನ್ನು ತಡೆಹಿಡಿಯುವ ವಿಧಾನ: ರಕ್ತದೊತ್ತಡ ಬರದಂತೆ ತಡೆಗಟ್ಟುವ ವಿಧಾನಗಳೆಂದರೆ, ಚಿಂತೆ, ಉದ್ರೇಕ, ಉತ್ತೇಜನ, ವೇಗ, ಕೋಪ, ಸದ್ದು, ಗದ್ದಲ, ಮಿತಿಮೀರಿದ ಸಂತೋಷ....ಹೀಗೆ ಅತಿಹೆಚ್ಚು ಎನ್ನುವ ಎಲ್ಲವನ್ನು ವರ್ಜಿಸಬೇಕು.

ಶರ್ಕರ ಪಿಷ್ಟ, ಕೊಬ್ಬು, ಜಿಡ್ಡು ಪದಾರ್ಥ, ಬೆಣ್ಣೆ, ಗಿಣ್ಣು, ತುಪ್ಪ, ಎಣ್ಣೆಯಲ್ಲಿ ಕರಿದ ತಿಂಡಿಗಳು, ಸಿಹಿ ಪದಾರ್ಥಗಳನ್ನು ಆದಷ್ಟು ತ್ಯಜಿಸುವುದರ ಜೊತೆಗೆ, ಶರೀರದ ತೂಕವನ್ನು ವಯಸ್ಸಿಗನುಗುಣವಾದ ತೂಕಕ್ಕಿಂತ ಹೆಚ್ಚಾಗದಂತೆ ಮುನ್ನೆಚ್ಚರಿಕೆ ವಹಿಸುವುದು. ಕಾರಣ ಮೇಲೆ ಹೇಳಿದ ಪದಾರ್ಥಗಳಲ್ಲಿ "ಕೊಲೆಸ್ಟರಾಲ್" ಎಂಬ ವಸ್ತುವು ಧಮನಿಗಳ ಒಳಪದರಕ್ಕೆ ಅಂಟಿಕೊಂಡು, ನಾಳಗಳನ್ನು ಹಿಗ್ಗಿ, ಕುಗ್ಗದಂತೆ ಘನಿಭೂತಗೊಳಿಸಿ ಹೃದಯದ ಕ್ರಿಯೆಯನ್ನು ದ್ವಿಗುಣಗೊಳಿಸಿ ರಕ್ತದ ಒತ್ತಡವನ್ನು ಹೆಚ್ಚಿಸುತ್ತದೆ.

ಲವಣದ ಅಂಶವನ್ನು ಆದಷ್ಟು ಕಡಮೆ ಪ್ರಮಾಣದಲ್ಲಿ ಸೇವಿಸಿ, ಪ್ರತಿದಿನ ತಪ್ಪದೆ ಸರಳವ್ಯಾಯಾಮ ದಿಂದ, ಸ್ಥೂಲಕಾಯದ ಶರೀರವನ್ನು ಕುಗ್ಗಿಸುವುದು.

ಚೋದನಿಕವನ್ನು ಹರಿಸುವ ಒಳಸುರಿಕ ಗ್ರಂಥಿಯಾದ ಅಡ್ರಿನಲ್ ಗ್ರಂಥಿಯನ್ನು ಶಸ್ತ್ರಕ್ರಿಯೆಯಿಂದ ಕತ್ತರಿಸಿ ಹಾಕಿ, ರೋಗವನ್ನು ಗುಣಪಡಿಸುವುದು.

ರೋಗಿಗಳಿಗೆ ಅಮೋನಿಯಂ ಕ್ಲೋರೈಡ್, ಪೊಟಾಸಿಯಂ ಕ್ಲೋರೈಡ್, ಮತ್ತು ಮೆಗ್ನೀಷಿಯಂ ಕ್ಲೋರೈಡ್ ಮುಂತಾದುವುಗಳನ್ನು ಕೊಟ್ಟು ಹೃದಯ ಸ್ತಂಭನವನ್ನು ತಡೆಗಟ್ಟುವುದು.

ಈ ಖಾಯಿಲೆಯನ್ನು ಹಲವು ಯೋಗಾಸನಗಳನ್ನು ಮಾಡುವುದರಿಂದ ಅದರಲ್ಲೂ, ಶಿರಸಾಸನ ಮಾಡು ವುದರಿಂದಲೂ, ಗುಣಪಡಿಸಬಹುದೆಂದು ಬಲ್ಲವರು ಹೇಳುತ್ತಾರೆ.

ಅಂತೆಯೆ ಶವಾಸನ ಮಾಡುವುದರಿಂದಲೂ ರಕ್ತದೊತ್ತಡವನ್ನು ತಡೆಯಬಹುದೆಂಬುದನ್ನು ಪಾತಂಜಲಿ ಯೋಗದ ಕರ್ತೃ ಮತ್ತು ಹಕ್ಕುದಾರರಾದ ಶ್ರೀ ಶ್ರೀ ರಾಘವೇಂದ್ರ ಸ್ವಾಮಿಜಿಯವರ ಗ್ರಂಥದಿಂದ ವೈದ್ಯರು ಊಹಿಸುವಂತಾಗಿದೆ. ಈ ಆಸನಗಳನ್ನು ಮಾಡುವಾಗ ಹೆಚ್ಚಿನ ಪ್ರಮಾಣದ ರಕ್ತವು ಮೆದುಳಿಗೆ ತಲುಪಿ, ಅಲ್ಲಿಂದ ಕ್ರಿಯಾವಾಹಿನಿ ನರಗಳ ಮುಖಾಂತರ ಗುಂಡಿಗೆಯ ಬಡಿತವನ್ನು ನಿಯಂತ್ರಿಸುತ್ತದೆ ಎಂದು ವೇದ್ಯವಾಗುತ್ತದೆ. ಆದ್ದರಿಂದ ಯೋಗಾಭ್ಯಾಸವನ್ನು ಸರಿಯಾಗಿ ಮಾಡುವುದರಿಂದ ಸಕಲರೋಗ ನಿವಾರಣೆಯನ್ನು ಮಾಡಬಹು ದೆಂದಂತಾಯಿತು.

ಕೊನೆಯದಾಗಿ ರಕ್ತದೊತ್ತಡಕ್ಕೆ ಪ್ರಪಂಚದ ಹಕ್ಕುದಾರರಾದ ಹೃದಯತಜ್ಞ ಡಾ. ಇರ್ವಿನ್ ಪೇಜ್ ರವರು ಅತಿರಕ್ತದೊತ್ತಡದ ಹಿಡಿತಕ್ಕೆ ಕರೆಕೊಟ್ಟಿದ್ದಾರೆ. "ಇದೊಂದು ಪ್ರಶಾಂತ ಕ್ರಾಂತಿ" "ಒಂದು ದೊಡ್ಡ ಹಾಡ ಲಾಗದ ವಿಜಯದ ವೀರಗಾನಕ್ಕೆ ಹೋಲುತ್ತದೆ" ಅಲ್ಲದೆ "ಅತಿರಕ್ತದೊತ್ತಡವು ಪಳಗಿಸಿದ ಮಹಾ ಕಟುಕ" ಎಂದೆಲ್ಲ ಅವರು ಹೇಳಿದ್ದಾರೆ.

ಇಷ್ಟೆಲ್ಲಾ ಆದರೂ ಈ ಚಿದಂಬರ ರಹಸ್ಯವನ್ನು ಭೇದಿಸಲು ಪ್ರಪಂಚದಾದ್ಯಂತ ಇಂದಿಗೂ ಹೊಸಹೊಸ ಪ್ರಯೋಗಗಳು ನಿರಂತರವಾಗಿ ನಡೆಯುತ್ತಲೇ ಇವೆ.

ಕೆಳದಿ ಪ್ರಾಚ್ಯವಸ್ತು ಸಂಶೋಧನಾಲಯ

ವಿಜಯನಗರದ ಅಧೀನ ರಾಜ್ಯವಾಗಿದ್ದು ಅದರ ಧ್ಯೇಯ ಧೋರಣೆಗಳಿಗೆ ಯಾವರೀತಿಯೂ ಚ್ಯುತಿಬಾರದಂತೆ ಕ್ರಿ. ಶ. 15ನೆಯ ಶತಮಾನದಲ್ಲಿ (ಕ್ರಿ. ಶ. 1499) ಕೆಳದಿಯ ಪಾಳೆಯ ಪಟ್ಟೊಂದು ಜನ್ಮತಾಳಿತು. ಈ ಸಂಸ್ಥಾನವು ತನ್ನ ಅಸ್ತಿತ್ವದ ಕೊನೆಯವರೆಗೂ ವಿಜಯನಗರಕ್ಕೆ ಬೆನ್ನೆಲುಬಾಗಿದ್ದುದು ಐತಿಹಾಸಿಕ ಸತ್ಯಸಂಗತಿಯಾಗಿದೆ. ಕ್ರಿ. ಶ. 1565 ರಲ್ಲಿ ವಿಜಯನಗರದ ಪತನಾನಂತರ ಕೆಳದಿಯು ಸ್ವತಂತ್ರವಾಗಿ ರಾಜ್ಯವಾಳತೊಡಗಿತು.

ಕ್ರಿ. ಶ. 15 ರಿಂದ 18ನೆಯ ಶತಮಾನದವರೆಗೆ ಕೆಳದಿಯು ಈ ಕೆಳಗಿನಂತೆ ಹದಿನೆಂಟು ಅರಸರನ್ನು ಪಡೆದುಕೊಂಡು ರಾಜ್ಯಭಾರ ಮಾಡಲ್ಪಟ್ಟಿತು. ವೆಂಕಟಾದ್ರಿಜೋಯ್ಸರು, ಚೌಡಗೌಡ-ಭದ್ರಗೌಡರಿಂದ ಸಂಸ್ಥಾಪನೆಗೊಂಡು ಅಂತ್ಯದಲ್ಲಿ ವೀರಮ್ಮಾಜಿಯವರೆಗೂ ಆಳ್ವಿಕೆ ನಡೆಸಿದ ಈ ರಾಜ್ಯವು ವಿವಿಧ ರೀತಿಗಳಲ್ಲಿ ಐತಿಹಾಸಿಕ ಪರಂಪರೆಗಳನ್ನು ಹೊಂದಿರುತ್ತದೆ. ಉಪಲಬ್ಧವಿರುವ ಈ ನಾಯಕರ ಕಾಲದ ಅನೇಕ ಪ್ರಾಚ್ಯ ಅವಶೇಷಗಳು ಇತಿಹಾಸ ಸಂಶೋಧನೆಯಲ್ಲಿ ಮಹತ್ವ ಪಾತ್ರಗಳನ್ನು ವಹಿಸುತ್ತಿವೆ.

ನಂ.	ಅರಸರು	ಕಾಲ.	
೧.	ಚೌಡಗೌಡ	ಕ್ರಿ.ಶ.	1500–1514
೨.	ಸದಾಶಿವನಾಯಕ	"	1514–1546
೩.	ದೊಡ್ಡ ಸಂಕಣ್ಣ ನಾಯಕ	"	1546-1559
೪.	ಚಿಕ್ಕಸಂಕಣ್ಣ ನಾಯಕ	"	1559–1571
೫.	ರಾಮರಾಜನಾಯಕ	"	1571–1583
೬,	ಹಿರಿಯ ವೆಂಕಟಪ್ಪನಾಯಕ	"	1583–1630
೭.	ವೀರಭದ್ರನಾಯಕ	"	1630–1646
೮.	ಶಿವಪ್ಪ ನಾಯಕ	"	1646–1661
೯.	ಚಿಕ್ಕವೆಂಕಟಪ್ಪ ನಾಯಕ	"	1661–1662
೧೦.	ಭದ್ರಪ್ಪನಾಯಕ	"	1662–1664

೧೧.	ಸೋಮಶೇಖರ ನಾಯಕ	”	1664-1672
೧೨.	ಕುತ್ಸಿತ ಶಿವಪ್ಪನಾಯಕ ?	“	— —
೧೩.	ಚೆನ್ನಮ್ಮಾಜಿ	”	1672-1698
೧೪.	ಹಿರಿಯ ಬಸಪ್ಪನಾಯಕ	”	1698-1715
೧೫.	ಇಮ್ಮಡಿ ಸೋಮಶೇಖರನಾಯಕ	”	1715-1740
೧೬.	ಬೂದಿ ಬಸಪ್ಪನಾಯಕ	”	1740-1755
೧೭.	ಚೆನ್ನ ಬಸಪ್ಪನಾಯಕ	”	1755-1757
೧೮.	ವೀರಮ್ಮಾಜಿ ಮುಮ್ಮಡಿ ಸೋಮಶೇಖರನಾಯಕ	”	1757-1763

ಕೆಳದಿ ನಾಯಕರ ಕಾಲದ ಅವಶೇಷಗಳು, ಕೋಟೆಗಳು, ದೇಗುಲಗಳು, ಕೆರೆಕಾಲುವೆಗಳು, ಶಾಸನಗಳು ಇತ್ಯಾದಿಯಾಗಿ ಹೇರಳವಾಗಿ ಉಪಲಬ್ಧವಿದ್ದು, ಸಂಶೋಧನೆಯಲ್ಲಿ ಆಸಕ್ತಿಯನ್ನು ಹುಟ್ಟಿಸುತ್ತಿವೆ. ಇವುಗಳನ್ನು ವಿವಿಧ ರೀತಿಗಳಲ್ಲಿ ವಿಶ್ಲೇಷಿಸಿ ಇತಿಹಾಸ ಸಂಶೋಧನೆಗೆ ಎಡೆಮಾಡಿಕೊಡುವುದು ಆದ್ಯಕರ್ತವ್ಯವಾಗಿದೆ. ಕೆಳದಿ ಅರಸರ ಕಾಲದ ಚಾರಿತ್ರಿಕ ಹಾಗೂ ಪ್ರಾಚ್ಯ ಪರಿಸರಗಳನ್ನು ಹೀಗೆ ವಿಂಗಡಿಸಲು ಅರ್ಹವಾಗಿವೆ.

೧. ದೇವಾಲಯಗಳು
೨. ಕೋಟೆ ಹಾಗೂ ಇತರ ಅವಶೇಷಗಳು.
೩. ಶಾಸನಗಳು.
೪. ಪ್ರಾಚ್ಯ ಪರಿಸರಗಳು.
೫. ನಾಣ್ಯಗಳು.
೬. ಸಾಹಿತ್ಯಗಳು
೭. ಚಾರಿತ್ರಿಕ ದಾಖಲೆಗಳು.
೮. ವಿದೇಶೀಯ ಪ್ರವಾಸೀ ಕಥನಗಳು.
೯. ಇತರೇ ಐತಿಹಾಸಿಕ ಅಂಶಗಳು.
೧೦. ಸಂಶೋಧನೆಗಳು (Research Library of) Keladi History and Literature

ದೇವಾಲಯಗಳು : ಕೆಳದಿ ಅರಸರ ಕಾಲದ ದೇವಾಲಯಗಳು ವಿಪುಲವಾಗಿವೆ. ಕೆಳದಿ ರಾಮೇಶ್ವರ ಹಾಗೂ ವೀರಭದ್ರದೇವಾಲಯಗಳು, ಇಕ್ಕೇರಿಯ ಅಘೋರೇಶ್ವರ, ನಗರದ ನೀಲಕಂಠೇಶ್ವರ, ಕೊಲ್ಲೂರಿನ ಶ್ರೀಮೂಕಾಂಬಾ ಮುಂತಾದ ಪ್ರಸಿದ್ಧ ದೇವಸ್ಥಾನಗಳು ಇತ್ಯಾದಿಯಾಗಿ ಈ ಅರಸರ ಕಾಲದ ನಿರ್ಮಾಣಕ್ಕೆ ಪ್ರಮುಖ ಸಾಕ್ಷಿಗಳೆನಿಸಿವೆ. ಇವಲ್ಲದೆ ಸಂಶೋಧಿಸಲ್ಪಡಬಹುದಾದ ಇವರ ಕಾಲದ ಇನ್ನೂ ಹಲವಾರು ದೇವಾಲಯಗಳಿವೆ. ಇವುಗಳೆಲ್ಲದರ ಛಾಯಾಚಿತ್ರಗಳು, ನಕ್ಷೆಗಳು (Ground plan) ಮುಂತಾದುವುಗಳನ್ನು ವಿವಿಧ ರೀತಿಗಳಲ್ಲಿ ಸಂಗ್ರಹಿಸಿ, ಮಾರ್ಪಡಿಸಿ ಸರ್ವೆ ನಡೆಸುವುದು ಅಗತ್ಯ. ಪ್ರಸಿದ್ಧ ವಿದ್ವಾಂಸರಾದ ಲ್ಯೂಯೀ ರೈಸ್ ಸಾಹೇಬರೇ ಉಲ್ಲೇಖಿಸಿರುವಂತೆ ಈ ನಾಯಕರ ಕಾಲದ ಇಂತಹ ನಿರ್ಮಾಣಗಳು “ಇಕ್ಕೇರಿಯ (ಕೆಳದಿಯ) ವಾಸ್ತುಶಿಲ್ಪ (Ikkeri School of Architecture) ಎಂಬುದಾಗಿ ಪ್ರಸಿದ್ಧವಾಗಿ ಹೆಸರು ಗಳಿಸಿದೆ. ಇವುಗಳ ಹಲ ಮಾದರಿಗಳನ್ನು ಕೆಳದಿ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಸಂಶೋಧನೆಗೆ ಸಹಕಾರಿಯಾಗುವಂತೆ ಪ್ರದರ್ಶಿಸಲು ಉದ್ದೇಶಿಸಲಾಗಿದೆ.

ಕೋಟೆ ಹಾಗೂ ಅವಶೇಷಗಳು : ಕೆಳದಿ ನಾಯಕರಿಂದ ನಿರ್ಮಿಸಲ್ಪಟ್ಟ ವಿವಿಧ ಕೋಟೆಗಳು ಅರಮನೆಗಳು ಹಾಗೂ ಇತರ ನಿರ್ಮಾಣಗಳು ಸಂಶೋಧನೆಯನ್ನು ಕೈಗೊಳ್ಳಲು ಹೇರಳ ಅವಕಾಶವನ್ನು ನೀಡಿವೆ. ವಿವಿಧ ಅವಶೇಷಗಳು (ಕೆಳದಿ ಅರಸರದ್ದು). ಭಾರತದ ಇತರ ರಾಜ್ಯಗಳಲ್ಲೂ ಇರುವುದು ಕಂಡು ಬರುತ್ತದೆ. ಇಕ್ಕೇರಿ ಕೋಟೆಯು ಕ್ರಿ. ಶ. 16ರಿಂದ 17ನೆಯ ಶತಮಾನದವರೆಗೂ ಬಹು ವೈಭವವನ್ನು ಹೊಂದಿದ್ದುದನ್ನು ಆ ಕಾಲದ ವಿದೇಶೀಯ ಪ್ರವಾಸಿಗಳಾದ ಪಿಯತ್ರೋ ಡೆಲ್ಲಾ ವಾಲ್ಲೆ ಹಾಗೂ ಪೀಟರ್‌ಮುಂಡಿ ಮುಂತಾದವರು ತಮ್ಮ ಪ್ರವಾಸೀ ಕಥನದಲ್ಲಿ ಶ್ಲಾಘಿಸಿದ್ದಾರೆ. ಶಿವಪ್ಪನಾಯಕನ ದರ್ಬಾರಹಾಲನ್ನು ಹೊಂದಿದ್ದ ಈಗಿನ ಹಳೆಯ ನಗರದ ಕೋಟೆಯೂ ಗಮನಾರ್ಹ ಅವಶೇಷವಾಗಿದೆ. ಬೇಕಲ, ಬಸರೂರು, ದಕ್ಷಿಣಕನ್ನಡದ ಹಲವಾರು ಕೋಟೆಗಳು (ಕೇರಳದಲ್ಲಿಯೂ ಕೆಳದಿ ಅರಸರ ಕಾಲದ ಕೋಟೆಗಳಿವೆಯೆಂಬ ಉಲ್ಲೇಖಗಳಿವೆ) ಈ ಅರಸರ ಹಾಗೂ ರಾಜ್ಯದ ಪರಮಾಧಿಕಾರದ ಕುರುಹುಗಳೆನಿಸಿವೆ. ಕೆಳದಿ ನೃಪ ವಿಜಯದಲ್ಲಿನ

........ಡಿಳ್ಳಿಯೊಳ್ ಚಾವಲಿಕೆ ಮಂಡ್ವೆ ಎಂಬ ಸ್ಥಳದೊಳ್ ಮನೋಹರಮಾದ ಮಠಮಂ ಕಟ್ಟಿ ರೆ ಶಿವ ಜಂಗಮಧರ್ಮಕ್ಕೆ ಶಿವಾರ್ಪಣಂಗೈದನಂತರದೊಳ್........

ಎಂಬ ಈ ಉಲ್ಲೇಖವು ದೆಹಲಿಯಲ್ಲಿಯೂ ಅವಶೇಷಗಳಿರುವುದನ್ನು ಪರಿಶೀಲಿಸಲು ಅವಕಾಶವನ್ನು ನೀಡಿದೆ. ಇವುಗಳೆಲ್ಲದರ ಸಮೀಕ್ಷೆ ಹಾಗೂ ಪರಿಷ್ಕೃತ ಸಂಶೋಧನೆಯು ಅಗತ್ಯವಾಗಿದೆ. ಈ ಕಾರಣಗಳಿಂದ ಇವುಗಳ ಮಾದರಿ (ಕೆಳದಿ ಅರಸರ ಕಾಲದವು ಮಾತ್ರ) ಹಾಗೂ ಛಾಯಾಚಿತ್ರಗಳನ್ನು ಸಂಶೋಧನೆಯಲ್ಲಿ ಅಳವಡಿಸಿ ಪ್ರದರ್ಶಿಸುವುದು ಸೂಕ್ತ.

ಶಾಸನಗಳು : ಕೆಳದಿ ಅರಸರ ಕಾಲದ ಶಾಸನಗಳು ಸರಿ ಸುಮಾರಾಗಿ ಆರುನೂರಕ್ಕೂ ಮಿಕ್ಕಿರು ವುದು ಕಂಡುಬರುತ್ತದೆ. ಸಂಶೋಧನೆಗೆ ನಿಲುಕದ ಈ ಅರಸರ ಕಾಲದ ಅಪ್ರಕಟಿತ ಶಾಸನಗಳೂ ಇನ್ನೂ ಇರುವುದು ಕಂಡುಬರುತ್ತದೆ. ಪರ್ಷಿಯನ್ ಗುಣಸ್ವರೂಪವನ್ನು ಹೊಂದಿರುವ ಈ ನಾಯಕರ ಶಾಸನಗಳು ಕಾಶಿಯಲ್ಲಿಯೂ ಇದ್ದು ಅಪ್ರಕಟಿತವಾಗಿವೆ. ಇದನ್ನು ಪ್ರಸಿದ್ಧ ಶಾಸನ ತಜ್ಞರಾದ ಡಾ. ಗಾಯಿಯವರು ಪರಿಶೋಧಿಸಿದ್ದಾರೆ. ಭಾರತದ ಅನೇಕ ಮ್ಯೂಜಿಯಂನಲ್ಲಿ ಕೆಳದಿ ಅರಸರ ಕಾಲದ ಶಿಲಾಲಿಪಿಗಳು, ತಾಮ್ರ ಶಾಸನಗಳು ಉಪಲಬ್ಧವಿವೆ. ಶಾಸನಗಳು ಆಯಾ ಕಾಲದ ಅರಸರ ರಾಜ್ಯಭಾರಕ್ರಮ, ಆದರ ಸ್ವರೂಪಗಳು ಮುಂತಾದವುಗಳನ್ನು ಸಂಶೋಧಿಸಲು ಸಹಕಾರಿಗಳಾಗಿವೆ. ಸಾಮಾಜಿಕ, ಧಾರ್ಮಿಕ ಹಾಗೂ ಆರ್ಥಿಕ ಬೆಳವಣಿಗೆಯಲ್ಲಿನ ಘಟನೆಗಳನ್ನು ಪ್ರತಿಬಿಂಬಿಸುವ ಇಂತಹ ಶಾಸನಗಳನ್ನು ಸೂಕ್ತರೀತಿಯಲ್ಲಿ ಪರಿಷ್ಕರಿಸಿ ಸಂಶೋಧಿಸುವುದು ಅಗತ್ಯ. ಕೆಳದಿ ನಾಯಕರ ಶಾಸನಗಳನ್ನು ಬೇರ್ಪಡಿಸಿ ಒಂದೆರಡು ಬೃಹತ್ ಸಂಪುಟನನ್ನಾಗಿ ರಚಿಸುವುದು ಅಗತ್ಯಗಳಲ್ಲೊಂದು. ಇದು ಇತಿಹಾಸ ಸಂಶೋಧನೆಗೆ ಕೈದೀವಿಗೆಯಂತಿರಬೇಕಾಗುತ್ತದೆ. ಶಿಲಾ ಲಿಪಿಗಳ ಹಾಗೂ ತಾಮ್ರ ಶಾಸನಗಳನ್ನು ಒಳಗೊಂಡು ಹಲವು ಈ ಅರಸರ ಕಾಲದ ಮಾದರಿಗಳನ್ನು ಕೆಳದಿ ಪ್ರಾಚ್ಯ ಸಂಶೋಧನಾಲಯದಲ್ಲಿ ವ್ಯವಸ್ಥಿತ ರೀತಿಯಲ್ಲಿ ಪ್ರದರ್ಶಿಸಲು ಉದ್ದೇಶಿಸಲಾಗಿದೆ.

ಪ್ರಾಚ್ಯ ಪರಿಕರಗಳು : ಭಾರತದ ಅನೇಕ ವಸ್ತುಸಂಗ್ರಹಾಲಯದಲ್ಲಿ ಕೆಳದಿ ಅರಸರ ಕಾಲದ ಪ್ರಾಚ್ಯ ಪರಿಕರಗಳು ವಿವಿಧ ರೂಪಗಳಲ್ಲಿ ಕಾಣ ಸಿಗುತ್ತವೆ. ಇವುಗಳನ್ನು ಸಮೀಕ್ಷಾ ಮೂಲಕ ಸಂಶೋಧಿಸಿ, ಪರಿಷ್ಕರಿಸಿ ಕೆಳದಿ ಅರಸರ ಕಾಲದ ಪರಿಕರಗಳನ್ನು ಪ್ರತ್ಯೇಕವಾಗಿ ವಿಭಾಗಿಸಿ, ಯಾದಿಯೊಂದನ್ನು ಸಿದ್ಧಪಡಿಸು ವುದು ಅಗತ್ಯ. ಕೆಳದಿ ಇತಿಹಾಸಸಂಶೋಧನೆಗೆ ಇದು ಕೈದೀವಿಗೆಯಂತಿರಬೇಕಾಗುತ್ತದೆ. ಉದಾಹರಣೆಗೆ ಕೆಳದಿ ಅರಸರ ಕಾಲದ ಕಲ್ಲಿನ ಮಂಚವೊಂದು ವಿಕ್ಟೋರಿಯಾ ಇನ್‌ಸ್ಟಿಟ್ಯೂಟ್‌ಗೆ ವರ್ಗಾಯಿಸಲಾಗಿದೆ ಎಂಬು ದಾಗಿ ಪ್ರಸಿದ್ಧ ವಿದ್ವಾಂಸರೂ ಹಾಗೂ ಹಿಂದಿನ ಸರಕಾರದ ಗೆಜೇಟರ್‌ನ ಸಂಪಾದಕರೂ ಆದ ರೈಸ್ ಸಾಹೇಬರು

ವಿಶದೀಕರಿಸಿದ್ದಾರೆ. ಹಲವು ಇಂತಹ ಅವಶೇಷಗಳ ಅಲಕ್ಷ್ಯಗಳಿಂದ ಮಹತ್ವಪೂರ್ಣವಾದ ವಿವಿಧ ಪರಿಸರಗಳೂ ನಾಮಾವಶೇಷವಾಗಿರುವುದೂ ಕಂಡುಬರುತ್ತದೆ. ಇವುಗಳು ಐತಿಹಾಸಕ್ಕೆ ದೊಡ್ಡ ಲೋಪವಾಗಿವೆ. ಉದಾಹರಣೆಗೆ ಇಟಲಿಯ ಪ್ರವಾಸೀ ಪ್ರಿಯತೋ ಡೆಲ್ಲಾ ವಾಲ್ಲೆಯು ಕ್ರಿ. ಶ. 1623ನೆಯ ನವೆಂಬರ್‌ನಲ್ಲಿ ತಾನು ಇಕ್ಕೇರಿಯಲ್ಲಿ ನೋಡಿದ ಬೃಹದಾಕಾರದ ರಥವೊಂದನ್ನು ಹೀಗೆ ಉಲ್ಲೇಖಿಸಿದ್ದಾನೆ. (ಅದರ ಕನ್ನಡ ಅನುವಾದ).

...ಪಕ್ಕದಲ್ಲಿಯೇ ಇದ್ದ ದೇವಸ್ಥಾನದ ಆವಾರದಲ್ಲಿ ಬೃಹದಾಕಾರದ ರಥವೊಂದನ್ನು ನೋಡಿದೆ. ಕೆಲವೊಂದು ಹಬ್ಬಗಳಲ್ಲಿ ತಮ್ಮ ದೇವತಾಮೂರ್ತಿಗಳನ್ನು ಇದರಲ್ಲಿರಿಸಿ ಜನರು ವೈಭವದ ಮೆರವಣಿಗೆಯನ್ನು ತೆಗೆಯುವುದುಂಟು. ಈ ರಥದಲ್ಲಿ ಬೇರೆ ಅನೇಕ ಜನರೂ ಕುಣಿಯುವ ಹೆಂಗಸರೂ ವಾದ್ಯ ಕುಣಿತಗಳನ್ನು ಮಾಡುವರು. ರಥದ ನಾಲ್ಕು ಗಾಲಿಗಳಲ್ಲಿ ಪ್ರತಿಯೊಂದರ ವ್ಯಾಸ 14 ಅಡಿಗಳಷ್ಟು ಇದ್ದು ಬದಿಯ ಹಲಗೆ ಒಂದಡಿ ದಪ್ಪವಾಗಿತ್ತು. ಹಲಗೆಯ ಅಕ್ಕಪಕ್ಕದಲ್ಲಿ ಸ್ತ್ರೀ ಪುರುಷ ಮೂರ್ತಿಗಳಿದ್ದವು. ರಥವು ಬಹಳ ಎತ್ತರವಾಗಿದ್ದು, ಸಾಕಷ್ಟು ಜನ ಹಿಡಿಸುವಷ್ಟು ಪ್ರಶಸ್ತವಾಗಿತ್ತು. ಒಟ್ಟಿನಲ್ಲಿ ಹೇಳುವುದಾದರೆ ರೋಂಪಟ್ಟಣದಲ್ಲಾದರೆ ಅತಿ ವಿಶಾಲ ಮಾರ್ಗಗಳಲ್ಲಿ ಮಾತ್ರ ರಥ ಹಾಯ್ದಾಡಲು ಅವಕಾಶವಿದೆ....

ಇದನ್ನು ಪರಿಶೋಧಿಸಲಾಗಿ ನನಗೆ ಇದು ಇಕ್ಕೇರಿಯಲ್ಲಿ ಕಂಡುಬಂದಿಲ್ಲ; ಏನಾಯಿತೋ ತಿಳಿಯದು ! ಕೆಳದಿ ಇತಿಹಾಸವನ್ನು ರಚಿಸಲು ದೊಡ್ಡ ಲೋಪಗಳಲ್ಲಿ ಇದೂ ಒಂದು. ಇಂತಹ ಪರಿಸರಗಳು ವಸ್ತುಸಂಗ್ರಹಾಲಯದಷ್ಟೇ ಅಲ್ಲದೆ ಇತರೆಡೆಗಳಲ್ಲಿಯೂ ಹೇರಳವಾಗಿ ಉಪಲಬ್ಧವಿವೆ. ಇವುಗಳ ಮಾದರಿಗಳನ್ನೂ ಛಾಯಾಚಿತ್ರಗಳೊಡನೆ ಪ್ರದರ್ಶನಕ್ಕೆ ಇಡಲು ಪ್ರಯತ್ನಿಸಲಾಗುತ್ತಿದೆ.

ನಾಣ್ಯಗಳು : ಕೆಳದಿ ಅರಸರ ರಾಜ್ಯಭಾರ ಕ್ರಮವು ಯಾವ ಅಡೆತಡೆಗಳೂ ಇಲ್ಲದೆ ಶಾಂತಿ ಹಾಗೂ ಸುವ್ಯವಸ್ಥೆಗಳಿಂದ ಸಾಗುತ್ತಿತ್ತೆಂಬುದನ್ನು ಐತಿಹಾಸಿಕ ಆಧಾರಾಂಶಗಳು ಸ್ಪಷ್ಟಪಡಿಸುತ್ತವೆ. ಇಲ್ಲಿಯ ಪ್ರಜೆಗಳು ಸದಾಕಾಲವೂ ನೆಮ್ಮದಿಯಿಂದ ಬಾಳಿ ಬೆಳಗುತ್ತಿದ್ದು, ರಾಜ್ಯವು ಸಂಪದ್ಭರಿತವಾಗಿ, ರಾಜಭಂಡಾರವು ಯಾವ ಕೊರತೆಯೂ ಇಲ್ಲದೆ ಭರ್ತಿಯಾಗಿರುತ್ತಿದ್ದುದನ್ನು ವಿದೇಶೀಯ ಚರಿತ್ರೆಕಾರರು ಹಾಗೂ ವಿದ್ವಾಂಸರು ಉಲ್ಲೇಖಿಸಿ ಶ್ಲಾಘಿಸಿದ್ದಾರೆ. ಈ ನಾಯಕರ ಕಾಲದ ನಾಣ್ಯಗಳು ಹಾಗೂ ಟಂಕಸಾಲೆಗಳು ಅವಶೇಷಗಳಲ್ಲಿ ಪ್ರಮುಖ ಐತಿಹಾಸಿಕ ಸಾಮಗ್ರಿಗಳೆನಿಸಿವೆ. ಡಾ. ಚಿಟ್ನೀಸ್‌ರವರೇ (poona university) ಪ್ರತಿಪಾದಿಸಿರುವಂತೆ ಹದಿನಾಲ್ಕು ಪರಿಣಾಮಗಳನ್ನು ಹೊಂದಿರುವ ಇಂತಹ ವಿವಿಧ ನಾಣ್ಯಗಳನ್ನು ಪರಿಶೋಧಿಸಿ, ಪರಿಷ್ಕರಿಸಿ ಹಲವಾರು ಮಾದರಿಗಳನ್ನು ಕೆಳದಿ ಪ್ರಾಚ್ಯ ಸಂಶೋಧನಾಲಯದಲ್ಲಿ ಶೇಖರಿಸಿ ಪ್ರದರ್ಶಿಸಲು ಪ್ರಯತ್ನಿಸಲಾಗಿದೆ. ದೇಶದ ವಿವಿಧೆಡೆಗಳಲ್ಲಿ ದೊರಕುವ ಈ ಅರಸರ ಹಾಗೂ ನೆರೆ ಪ್ರಾಂತ್ಯಗಳ ನಾಣ್ಯಗಳ ಯಾದಿಯೂ ಈ ಇತಿಹಾಸ ಸಂಶೋಧನೆಯಲ್ಲಿ ಮಾರ್ಗದರ್ಶಿಯಾಗಲು, ಪ್ರಕಟಿಸಲು ಹಾಗೂ ಯೋಗ್ಯ ಕೈದೀವಿಗೆಯಂತಿರಲು ಪ್ರಯತ್ನಿಸಲಾಗುತ್ತಿದೆ. ಇದಲ್ಲದೆ ಈ ನಾಯಕರ ಕಾಲದ ತೂಕದ ಬಟ್ಟುಗಳು, ಅಳತೆಗಳ ಪರಿಸರಗಳು, ಮೌಲ್ಯಮಾಪನಗಳನ್ನೊಳಗೊಂಡ ವಿವರಣೆಗಳ ನಕ್ಷೆಗಳು ಮುಂತಾದವುಗಳನ್ನು ಪ್ರದರ್ಶಿಸಿ ಸಂಶೋಧನೆಗೆ ಅಳವಡಿಸಲು ಯೋಗ್ಯಕ್ರಮ ಕೈಗೊಳ್ಳಲಾಗುತ್ತಿದೆ.

ಸಾಹಿತ್ಯಗಳು : ಕ್ರಿ. ಶ. 16 ರಿಂದ 18ನೆಯ ಶತಮಾನದವರೆಗೂ ಕೆಳದಿ ಅರಸರು ಸಾಹಿತ್ಯ ಹಾಗೂ ಕಲೆಗೆ ನೀಡಿದ ಪ್ರೋತ್ಸಾಹವು ಗಣನೀಯವಾದುದು. ಈ ಅರಸರು ಸ್ವತಃ ವಿದ್ವಾಂಸರೂ ಕವಿಗಳೂ ಆಗಿದ್ದು, ಇತರೆ ಕವಿಗಳಿಗೂ ಪ್ರೋತ್ಸಾಹವಿತ್ತು ಅನೇಕ ಉದ್ಗ್ರಂಥಗಳನ್ನು ರಚಿಸಲು ಅವಕಾಶ ನೀಡಿದರು. ಶಿವತತ್ವ ರತ್ನಾಕರ, ಸುಭಾಷಿತ ಸುರದ್ರುಮ, ಕೆಳದಿ ನೃಪವಿಜಯ ಮುಂತಾದ ಕೃತಿಗಳು ಶ್ರೇಷ್ಠ ಕೃತಿಗಳೆನಿಸಿವೆ. ಇಂತಹ ಹಲವಾರು ಪ್ರತಿಕೃತಿಗಳು ತಾಡಯೋಲೆಯೋಪಾದಿಯಲ್ಲಿ ಲಂಡನ್‌ನಲ್ಲಿ ಇಂಡಿಯಾ

ಆಫೀಸ್ ಲೈಬ್ರರಿಯಲ್ಲಿಯೂ ಉಪಲಬ್ಧವಿವೆ. ಇವಲ್ಲದೆ ಅಪ್ರಕಟಿತ ಹಸ್ತಪ್ರತಿಗಳಂತೂ ಬೇಕಷ್ಟಿವೆ. (ಕವಿ ಲಿಂಗಣ್ಣ ಹಾಗೂ ವೆಂಕಣ್ಣನ ಇಂತಹ ತಾಳೆಗರಿಯಲ್ಲಿರುವ ಹಸ್ತಪ್ರತಿಗಳನ್ನು ಕೆಳದಿ ಪ್ರಾಚ್ಯ ಕೋಶಾಗಾರ ದಲ್ಲಿ ಅವಲೋಕಿಸಬಹುದು.) ಹಿರಿಯ ವೆಂಕಟಪ್ಪನಾಯಕನು ಕಲೆಗೆ ನೀಡಿದ ಪ್ರೋತ್ಸಾಹವನ್ನು ವಿದೇಶೀಯ ಪ್ರವಾಸಿ ಪಿಯತ್ರೋಡೆಲ್ಲಾವಾಲ್ಲೆ ಹಾಗೂ ಪೀಟರ್‌ಮಂಡಿ ಮುಂತಾದವರು ಉಲ್ಲೇಖಿಸಿ ಶ್ಲಾಘಿಸಿದ್ದಾರೆ. ಪ್ರಕಟಿತ ಹಾಗೂ ಅಪ್ರಕಟಿತ ಕೆಳದಿ ಇತಿಹಾಸ ಹಾಗೂ ಸಾಹಿತ್ಯ ಸೂಚೀಯನ್ನು ಹೊರ ತರಲು ಉದ್ದೇಶಿಸಲಾಗಿದೆ. ಅಂತೆಯೇ ಈ ನಾಯಕರ ಕಾಲದ ಸಾಹಿತ್ಯ ಕೃತಿಗಳ ಮಾದರಿಗಳನ್ನು ವ್ಯವಸ್ಥಿತ ವಾಗಿ ಪ್ರದರ್ಶಿಸಲೂ ಪ್ರಯತ್ನಿಸಲಾಗುತ್ತಿದೆ.

ಚಾರಿತ್ರಿಕ ದಾಖಲೆಗಳು : ಇತಿಹಾಸವನ್ನು ರೂಪಿಸುವಲ್ಲಿ ಚಾರಿತ್ರಿಕ ದಾಖಲೆಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಕೈಫಿಯತ್ತುಗಳು, ಬಖೈರುಗಳು, ಮೆಕಂಜೀ ಸಂಗ್ರಹಗಳು, ಕಾಗದ ಪತ್ರಗಳು, ಕಡತಗಳು ಮುಂತಾದವುಗಳು ಈ ಮಾಲೆಗೆ ಸೇರುತ್ತವೆ. ಕೆಳದಿ ಅರಸರೊಡನೆ ಬ್ರಿಟಿಷರು, ಫ್ರೆಂಚರು ಡಚ್ಚರು ಹಾಗೂ ಪೋರ್ತುಗೀಸರು ನಡೆಸುತ್ತಿದ್ದ ಪತ್ರವ್ಯವಹಾರಗಳು ಗಮನಾರ್ಹ ಅಂಶಗಳನ್ನು ಹೊರ ಗೆಡಹುತ್ತವೆ. ಇಂತಹ ಚಾರಿತ್ರಿಕ ದಾಖಲೆಗಳು ಹೇರಳವಾಗಿದ್ದು ಮೈಸೂರು ದೊರೆಗಿಂತಲೂ ಕೆಳದೀ ಅರಸರು ವಿದೇಶೀಯರೊಡನೆ ನೇರವಾಗಿ ಸಂಪರ್ಕವನ್ನು ಹೊಂದಿರುವುದು ಆಸಕ್ತಿಯನ್ನು ಕೆರಳಿಸುತ್ತವೆ. ವಿಸ್ತೀರ್ಣದಲ್ಲಿ ಮೈಸೂರಿಗಿಂತಲೂ ಕೆಳದಿ ಅರಸರ ಪ್ರದೇಶಗಳು ಅಧಿಕವಿತ್ತೆಂಬುದನ್ನು ಪ್ರತಿಪಾದಿಸಲು ಐತಿಹಾಸಿಕ ಸಾಕ್ಷ್ಯಾಧಾರಗಳು ಪುಷ್ಟಿಯನ್ನು ನೀಡುತ್ತವೆ. ವಿದೇಶೀಯರು ಕೆಳದಿ ಅರಸರೊಡನೆ ನಡೆಸು ತ್ತಿದ್ದ ಪತ್ರವ್ಯವಹಾರಗಳು ಅಧ್ಯಯನ ಯೋಗ್ಯವಾಗಿವೆ. ಪ್ರಾಂತ್ಯ ಹಾಗೂ ನೆರೆ ಪ್ರಾಂತ್ಯಗಳ ಚಾರಿತ್ರಿಕ ದಾಖಲೆಗಳ ಮಾದರಿಗಳನ್ನೊಳಗೊಂಡು, ಅವುಗಳ ಮೂಲಪ್ರತಿ, ಛಾಯಾಪ್ರತಿ ಇತ್ಯಾದಿಗಳ ರೂಪಗಳಲ್ಲಿ ಪ್ರದರ್ಶನಕ್ಕೆ ಪ್ರಯತ್ನಿಸಿ ಶೇಖರಿಸಲಾಗುತ್ತಿದೆ. ಇವುಗಳ ವ್ಯವಸ್ಥೆಯಿಂದ ಸಂಶೋಧನೆಯನ್ನು ಕೈಗೊಳ್ಳಲೂ ಉದ್ದೇಶಿಸಲಾಗಿದೆ.

ಪ್ರವಾಸೀ ಕಥನಗಳು : ಭಾರತಕ್ಕೆ ಅನೇಕ ಶತಮಾನಗಳಿಂದಲೂ ವಿದೇಶೀಯ ಪ್ರವಾಸಿಗಳು ಆಗಮಿಸಿ ತಾವು ನೋಡಿದ, ಕೇಳಿದ ವಿವಿಧ ಸಂಗ್ರಹಗಳನ್ನು ಪ್ರವಾಸೀ ಕಥನದ ರೂಪದಲ್ಲಿ ಉಲ್ಲೇಖಿಸಿ ದ್ದಾರೆ. ಇವುಗಳು ಇತಿಹಾಸ ರಚನೆಗೆ ಹಾಗೂ ಅಧ್ಯಯನಕ್ಕೆ ಯೋಗ್ಯ ಸಾಮಗ್ರಿಗಳೆನಿಸಿವೆ. ಕ್ರಿ. ಶ. 16ರಿಂದ 18ನೆಯ ಶತಮಾನದವರೆಗೆ ಎಲ್ಲ ರಾಜ್ಯಗಳಂತೆ ಕೆಳದಿ ಸಂಸ್ಥಾನಕ್ಕೂ ವಿದೇಶೀಯ ಪ್ರವಾಸಿ ಗಳು ಭೇಟಿ ನೀಡಿ ಪ್ರವಾಸಿ ಕಥನಗಳನ್ನು ರಚಿಸಿದ್ದಾರೆ. ಪಿಯತ್ರೋ ಡೆಲ್ಲಾ ವಾಲ್ಲೆ, ಪೀಟರ್ ಮಂಡಿ, ಅಲೆಗ್ಝಾಂಡರ್, ಹ್ಯಾಮಿಲ್‌ಟನ್, ಜಾನ್ ಫ್ರೈಯರ್, ಅಬೇಕರಿ, ಪಿಂಕರ್‌ಟನ್, ಜಾಕೋಲಿಸ್ ಕ್ಯಾಂಟರ್ ವಿಶ್ಚರ್ ಇತ್ಯಾದಿಯಾಗಿ ಪ್ರಮುಖ ವಿದೇಶೀಯ ಪ್ರವಾಸಿಗಳು ಕೆಳದಿ ರಾಜ್ಯದ ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಗತಿಗಳನ್ನು ಉಲ್ಲೇಖಿಸಿ ಇತಿಹಾಸಾಭ್ಯಾಸಿಗಳಿಗೆ ಮಹೋಪಕಾರವನ್ನೆಸಗಿದ್ದಾರೆ. ಇವುಗಳೆಲ್ಲವೂ ಕುತೂಹಲಕರ ಅಂಶಗಳೆನಿಸಿದ್ದು ಸಂಗ್ರಹಯೋಗ್ಯವಾಗಿವೆ. ಇವುಗಳ ಮಾದರಿಗಳ ಪ್ರದರ್ಶನ, ಸಂಪಾದನೆ, ಸಂಶೋಧನೆ ಹಾಗೂ ಸಂಸ್ಕರಣಗಳಿಗೆ ಪ್ರಯತ್ನಿಸಲಾಗುತ್ತಿದೆ.

ಇತರ ಐತಿಹಾಸಿಕ ಅಂಶಗಳು ಹಾಗೂ ಸಂಶೋಧನೆಗಳು : ಇವಲ್ಲದೆ ವಿಪುಲವಾದ ದಂತಕಥೆ ಗಳು, ಜಾನಪದ ಸಂಗ್ರಹಗಳು, ಕೋಲಾಟಪದಗಳು, ಘಟನಾವಳಿಗಳು, ವರ್ಣಚಿತ್ರಗಳು ಮುಂತಾದವುಗಳು ಚಾರಿತ್ರಿಕ ಸಂಗತಿಗಳನ್ನು ಕಲೆಹಾಕಲು ಬೇಕಷ್ಟು ಅವಕಾಶಗಳಿವೆ.

ವಸ್ತು ಸಂಗ್ರಹಾಲಯವು ಪ್ರಾಯೋಗಿಕ ಸಂಶೋಧನಾಗಾರವಿದ್ದಂತೆ (experimental research laboratory). ಇದನ್ನು ಮುಂದು ಮಾಡಿಕೊಂಡು ಸಂಶೋಧನೆಯನ್ನು ಕೈಗೊಳ್ಳುವುದು ಸಂಶೋಧಕರ ಆದ್ಯ

ಕರ್ತವ್ಯ. ಈ ಧ್ಯೇಯವನ್ನು ರೂಪಿಸಿಕೊಂಡ ಕೆಳದಿ ಪ್ರಾಚ್ಯ ಹಾಗೂ ಇತಿಹಾಸ ಸಂಶೋಧನಾಲಯವು ಈ ನಿಟ್ಟಿನಲ್ಲಿ ಸಂಶೋಧನೆ ನಡೆಸಲು ವಿವಿಧ ಬೃಹದ್ಯೋಜನೆಗಳನ್ನು ಕೈಗೊಳ್ಳಲು ಪ್ರಯತ್ನಿಸುತ್ತಿದೆ. ಇವುಗಳು ಕೆಳದಿ ಇತಿಹಾಸ ಹಾಗೂ ಸಂಸ್ಕೃತಿಯನ್ನು ವಿಸ್ತೃತಗೊಳಿಸಿ ಶ್ರೀಮಂತವನ್ನಾಗಿಸಲು ಪ್ರಾಚ್ಯ ಹಾಗೂ ಇತಿಹಾಸ ಸಂಶೋಧನೆಗೆ ಮೈಲಿಗಲ್ಲುಗಳಾಗಿವೆ. ಇದಕ್ಕೆ ಸರಕಾರದ, ಸಾರ್ವಜನಿಕರ ಹಾಗೂ ವಿದ್ವಾಂಸರ ಸಹಕಾರಗಳು ಹೆಚ್ಚಿನ ದಿಸೆಯಲ್ಲಿ ಒದಗಿದಲ್ಲಿ ಕೆಲವೇ ವರ್ಷಗಳಲ್ಲಿ ಇಂತಹ ಯೋಜನೆಗಳು ಫಲಕಾರಿಯಾಗುವುದರಲ್ಲಿ ಸಂದೇಹವಿರುವುದಿಲ್ಲ.

ವರ್ತಮಾನವೆಂಬುದು ಭೂತಭವಿಷ್ಯತ್ತುಗಳ ಮಧ್ಯದಲ್ಲಿರುವ ಒಂದು ಗುರುತು. ಆದಕಾರಣ ನಾವು ವರ್ತಮಾನವನ್ನು ಮಾತ್ರ ಲೆಕ್ಕಿಸುತ್ತೇವೆ ಎಂದು ಯುಕ್ತಿಪೂರ್ವಕವಾಗಿ ಹೇಳಲಾಗುವುದಿಲ್ಲ. ಏಕೆಂದರೆ ಭೂತಭವಿಷ್ಯತ್ತುಗಳಿಲ್ಲದ ವರ್ತಮಾನ ಮಾತ್ರ ನಿಲ್ಲಲಾರದು. ಇದೆಲ್ಲ ಒಂದು, ಅಖಂಡವಾದುದು.

ಮಹಾ ದಾನಿಗಳು



ಶ್ರೀ ಆರ್. ಚಂದ್ರಶೇಖರಯ್ಯರವರು ಮೈಸೂರಿನ ಶ್ರೀ ವರಲಕ್ಷ್ಮೀ ಅಕಾಡೆಮಿಯ ಸಂಸ್ಥಾಪಕರು. ಮೈಸೂರು ಸಹೋದರರೆಂದು ಪ್ರಖ್ಯಾತರಾಗಿರುವ ನಾಲ್ವರು ಸಹೋದರ-ಸಂಗೀತ ವಿದ್ವಾಂಸರಲ್ಲಿ ಹಿರಿಯರು. ತ್ರಿಭಾಷಾವಾಗ್ಗೇಯಕಾರರು, ವಿದೇಶ ಪ್ರವಾಸಮಾಡಿದ್ದಾರೆ. ಸಂಗೀತ ರತ್ನಾಕರ ಮೊದಲಾದ ಎಂಟು ಬಿರುದುಗಳನ್ನು ಹಲವು ಪ್ರಶಸ್ತಿಗಳನ್ನೂ ಗಳಿಸಿ ಇತರ ಹಲವು ಕ್ಷೇತ್ರಗಳಲ್ಲಿ ವಿಶೇಷ ಆಸಕ್ತಿಯನ್ನು ತಳೆದಿದ್ದಾರೆ. ಅನೇಕ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.



ಡಾ. ಎಂ. ರಾಜೇಶ್ವರಿಯವರು ಚಿತ್ರದುರ್ಗದಲ್ಲಿ ಖ್ಯಾತಿವೆತ್ತ ವೈದ್ಯರು. ಸ್ತ್ರೀ ನರ್ಸಿಂಗ್‌ಹೋಂ ಎಂಬ ವೈದ್ಯಕೀಯ ಶುಶ್ರೂಷಾಸಂಸ್ಥೆಯನ್ನು ಸ್ಥಾಪಿಸಿ ನಡೆಸುತ್ತಿದ್ದಾರೆ. ಆಶ್ರಮದ ನಿಕಟವರ್ತಿಗಳು



ಶ್ರೀ ಡಿ. ಹನುಮಂತಪ್ಪರವರು ಬೆಂಗಳೂರಿನ ದೇವಾಂಗ ಸಂಘದ ಅಧ್ಯಕ್ಷರಾಗಿಯೂ ಹಲವಾರು ಸಹಕಾರ ಸಂಸ್ಥೆಗಳ ನಿರ್ದೇಶಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಬೆಂಗಳೂರಿನ ಹನುಮಾನ್ ಸಿಲ್ಕ್‌ಫ್ಯಾಕ್ಟರಿಯ ಒಡೆಯರು.



ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಶ್ರೀಕ್ಷೇತ್ರಧರ್ಮಸ್ಥಳದ ಧರ್ಮಾಧಿಕಾರಿಗಳು. ಪದವಿಪೂರ್ವ ಶಿಕ್ಷಣವನ್ನು ಪಡೆದಿದ್ದಾರೆ ; ಆದರೆ ದೈವದತ್ತವಾದ ಪ್ರತಿಭೆ, ವಿಶಾಲವಾದ ಲೋಕಾನುಭವಗಳಿಂದ ಇವರು ಗಳಿಸಿರುವ ಪಾಂಡಿತ್ಯವು ಆಳವಾದುದು, ಸರಳತೆ, ಔದಾರ್ಯ, ಗಾಂಭೀರ್ಯ, ಸರ್ವಸಮತಾದೃಷ್ಟಿಗಳಿಂದ ರೂಪುಗೊಂಡ ವ್ಯಕ್ತಿತ್ವವನ್ನು ಪಡೆದಿರುವ ಹೆಗ್ಗಡೆಯವರು ಧಾರ್ಮಿಕ ಹಾಗೂ ಆಧ್ಯಾತ್ಮಿಕ ಕ್ಷೇತ್ರಗಳಲ್ಲಿ ಮುಖಂಡರಾಗಿದ್ದಾರೆ.



ಡಾ. ಕೆ ಎಸ್. ರಾಮೇಗೌಡ, ಬಿ.ಇ., ಪಿ.ಎಚ್.ಡಿ. ರವರು ಗೃಹ ನಿರ್ಮಾಣ ಯೋಜನೆಯ ಅಂತರರಾಷ್ಟ್ರೀಯ ಖ್ಯಾತಿಪೆತ್ತ ತಜ್ಞರಾಗಿದ್ದು ಚಿಕಾಗೋವಿನ ಇಲಿನಾಯ್ ಇನ್ಸ್ಟಿಟ್ಯೂಟಿನ ಸ್ನಾತಕೋತ್ತರ ಪದವಿಯನ್ನು ಗಳಿಸಿದ್ದಾರೆ. ಬರ್ಲಿನ್ನಿನ ಅಂತರರಾಷ್ಟ್ರೀಯ ನಗರಯೋಜನಾ ವಿಚಾರಗೋಷ್ಠಿಯಲ್ಲಿ ಭಾರತೀಯ ತಂಡದ ನಾಯಕರಾಗಿಯೂ ಭೂಪಾಲದ ರಾಷ್ಟ್ರೀಯ ನಗರ ಹಾಗೂ ನಗರೇತರ ಯೋಜನಾ ಸಮ್ಮೇಳನದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರು ಅಭಿವೃದ್ಧಿ ಯೋಜನಾ ಶಾಸನವನ್ನು ರೂಪಿಸುವುದರಲ್ಲಿ ಶ್ರೀಯುತರು ಪ್ರಭಾವಪೂರ್ಣಪಾತ್ರವನ್ನು ವಹಿಸಿದ್ದಾರೆ. ಈಗ ಭಾರತಸರ್ಕಾರದ ನಗರಯೋಜನಾಸಮಿತಿಯ ನಿರ್ದೇಶಕರಾಗಿದ್ದಾರೆ.

ಶ್ರೀ ಟಿ. ಎಸ್. ಗಂಗಾಧರಪ್ಪರವರು ಬಡಕುಟುಂಬದಲ್ಲಿ ಜನಿಸಿ ಸ್ವಾವಲಂಬಿಗಳಾಗಿ ಬಿ.ಇ. ಪದವಿಯನ್ನು ಗಳಿಸಿ ಕರ್ಣಾಟಕದ ಮರಾಮತ್ತು ಇಲಾಖೆಯಲ್ಲಿ ಸಹಾಯಕ ಅಸಿಸ್ಟೆಂಟ್ ಇಂಜನಿಯರ್ ಆಗಿ ಸೇವೆಸಲ್ಲಿಸುತ್ತಿದ್ದಾರೆ.





ಶ್ರೀ ಆರ್. ರಾಜಪ್ಪ ಬಿ.ಇ., ಎ.ಎಂ.ಐ.ಇ. ರವರು ದಾವಣಗೆರೆಯ ಆಂಜನೇಯ ಕಾಟನ್‌ಮಿಲ್ಸ್‌ನ ಸ್ಥಾಪನೆಯಲ್ಲಿ ಸಹಕರಿಸಿ, ಡಿ. ಆರ್. ಆರ್ ಪಾಲಿಟೆಕ್ನಿಕ್ಕಿನಲ್ಲಿ ಉಪನ್ಯಾಸಕರಾಗಿ ಸೇವೆಸಲ್ಲಿಸಿ ಕರ್ಣಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯಲ್ಲಿ ಅಸಿಸ್ಟೆಂಟ್ ಇಂಜನಿಯರ್ ಹುದ್ದೆಯಲ್ಲಿ ಈಗ ರಾಷ್ಟ್ರೀಯ ಹೆದ್ದಾರಿಯ ವಿಭಾಗದಲ್ಲಿದ್ದಾರೆ. ಹಲವು ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಗೃಹನಿರ್ಮಾಣ ಯೋಜನೆಯಲ್ಲಿ ವಿಶೇಶ ಪ್ರತಿಭಾನ್ವಿತರು.

ಶ್ರೀ ಬಿ. ವಿ. ರಾಮಚಂದ್ರಪ್ಪರವರು ಅಲ್ಯೂಮಿನಿಯಂ, ಹಿತ್ತಾಳೆ, ಸತು ಮುಂತಾದ ಲೋಹಗಳ ವಸ್ತುಗಳಲ್ಲಿ ಪ್ರಮುಖ ವ್ಯಾಪಾರಿಗಳು, ಬಿ.ವಿ. ರಾಮಚಂದ್ರಪ್ಪ ಅಂಡ್‌ಕೊ. ಉದ್ಯಮದ ಮುಖ್ಯಸ್ಥರು.





ಶ್ರೀ ಎಸ್. ಜಿ. ಶೇಷಗಿರಿಯವರು ಬೆಂಗಳೂರಿನ ರವಿ ಫೈನ್‌ಆರ್ಟ್ಸ್ ಸಂಸ್ಥೆಯ ಒಡೆಯರು. ಆವನಿ ಶೃಂಗೇರಿಮಠದ ಕೋಶಾಧ್ಯಕ್ಷರಾಗಿಯೂ ಗೋಖಲೆ ಸಾರ್ವಜನಿಕ ವಿಚಾರಸಂಸ್ಥೆಯ ಸದಸ್ಯರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ.



ಶ್ರೀ ಎಂ. ಮುದ್ದಪ್ಪರವರು ಬೆಂಗಳೂರಿನ ಶ್ರೀ ಪರಪ್ಪಸ್ವಾಮಿ ಸಿಲ್ಕ್ ವೀವಿಂಗ್ ಫ್ಯಾಕ್ಟರಿಯ ಒಡೆಯರು.



ಶ್ರೀ ಸಿ. ಎಂ. ಪ್ರಸಾದ್ ಬಿ.ಇ. (ಮೆಕ್ಯಾನಿಕಲ್), ಎಂ.ಐ.ಇ. ರವರು ಕರ್ನಾಟಕ ಸರ್ಕಾರದ ಫ್ಯಾಕ್ಟರಿ ಮತ್ತು ಬಾಯ್ಲರ್‌ಗಳ ಮುಖ್ಯ ಅಧೀಕ್ಷರಾಗಿದ್ದಾರೆ. ಇದಕ್ಕಾಗಿ ಅವರು ದೆಹಲಿಯಲ್ಲಿಯೂ ನಂತರ ಇಂಗ್ಲೆಂಡಿನಲ್ಲಿಯೂ ವಿಶೇಷ ತರಪೇತಿಯನ್ನು ಪಡೆದಿದ್ದಾರೆ. ಬಾಂಬ್ ನಿವೃತ್ತಿಯಲ್ಲಿ ವಿಶೇಷ ಶಿಕ್ಷಣವನ್ನು ಪಡೆದಿದ್ದಾರೆ.



ಶ್ರೀ ಅಯ್ಯಣ್ಣ, ಬಿ.ಇ., ಎ.ಎಂ.ಐ.ಇ. ರವರು ಕರ್ನಾಟಕ ರಾಜ್ಯ ಸರ್ಕಾರದ ಲೋಕೋಪಯೋಗಿ ಇಲಾಖೆಯಲ್ಲಿ ಈಗ ದಾವಣಗೆರೆಯಲ್ಲಿ ಎಕ್ಸಿಕ್ಯೂಟಿವ್ ಇಂಜನಿಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.



ಶ್ರೀ ಕೆ. ಅನಂತನಾಗರಾಜ್‌ರವರು ಮಲ್ಲಾಡಿಹಳ್ಳಿಯ ಅನಾಥಸೇವಾಶ್ರಮ ವಿಶ್ವಸ್ತಸಮಿತಿಯ ಸದಸ್ಯರು, ಅರಸೀಕೆರೆಯ ಮಾಜಿ ಪುರಸಭಾಧ್ಯಕ್ಷರು; ಮಲೆನಾಡು ತಾಂತ್ರಿಕ ಶಿಕ್ಷಣಸಮಿತಿ, ಆರ್ಯವೈಶ್ಯಮಂಡಲಿ, ಮೈಸೂರು ಚೇಂಬರ್‌ಆಫ್ ಕಾಮರ್ಸ್ ಮುಂತಾದ ಹಲವು ಸಂಸ್ಥೆಗಳಲ್ಲಿ ಸೇವೆಸಲ್ಲಿಸಿದ್ದಾರೆ. ಅರಸೀಕೆರೆಯ ರತ್ನಾ ಚಿತ್ರಮಂದಿರ, ಎ. ಎಸ್. ಕೃಷ್ಣಶೆಟ್ಟಿ ಅಂಡ್ ಸನ್ಸ್, ಎ. ಎಸ್. ಕೆ. ಇನ್‌ವೆಸ್ಟ್‌ಮೆಂಟ್ಸ್ (ಬೆಂಗಳೂರು) ಇತ್ಯಾದಿಗಳ ಪಾಲುದಾರರು.



ಡಾ. ರಾಜಲಕ್ಷ್ಮಿಯವರು ಬೆಂಗಳೂರು ಜಯನಗರದಲ್ಲಿ ರಾಜಲಕ್ಷ್ಮಿ ನರ್ಸಿಂಗ್ ಹೋಮ್ ಎಂಬ ವೈದ್ಯಕೀಯ ಶುಶ್ರೂಷಾ ಕೇಂದ್ರವನ್ನು ಸ್ಥಾಪಿಸಿ ನಡೆಸುತ್ತಿದ್ದಾರೆ; ಆಶ್ರಮದ ನಿಕಟವರ್ತಿಗಳು.



ಶ್ರೀ ಆರ್. ಗೋವಿಂದರವರು ಬಿ.ಇ. ಪದವೀಧರರು, ರಾಷ್ಟ್ರೀಯ ಹೆದ್ದಾರಿಗಳ ಬೆಂಗಳೂರು ವೃತ್ತದ ಸೂಪರಿಂಟೆಂಡಿಂಗ್ ಇಂಜಿನಿಯರ್ ಹುದ್ದೆಯಲ್ಲಿದ್ದಾರೆ.

ಶ್ರೀ ಎಚ್. ನಂಜಪ್ಪಯ್ಯರವರು ಮೈಸೂರಿನ ಅರವಿಂದ ಪರಿಮಳ ಸಂಸ್ಥೆಯ ಸಂಸ್ಥಾಪಕರು. ಬಡಕುಟುಂಬದಲ್ಲಿ ಜನಿಸಿ ಉಜ್ವಲವೂ ಶ್ರೀಮಂತವೂ ಆದ ಬಾಳ್ವೆಯನ್ನು ರೂಪಿಸಿಕೊಂಡಿದ್ದಾರೆ. ಸಾಹಿತ್ಯ, ಕಲೆ, ಆಧ್ಯಾತ್ಮವಿದ್ಯೆ ಮುಂತಾದ ಹಲವುಕ್ಷೇತ್ರಗಳಲ್ಲಿ ಕ್ರಿಯಾಶೀಲವಾದ ಆಸಕ್ತಿಯನ್ನು ಬೆಳೆಸಿಕೊಂಡಿದ್ದಾರೆ. ಧಾರ್ಮಿಕಕ್ಷೇತ್ರದಲ್ಲಿಯೂ ಸೇವೆ ಸಲ್ಲಿಸುತ್ತಿದ್ದಾರೆ.